ಕನ್ನಡ ಸಾಹಿತ್ಯ ಪರಿಷತ್ತಿನ

ಕನ್ನಡ ನಿಘಂಟು

ನಾಲ್ಕನೆಯ ಸಂಪುಟ

"ಶಬ್ದಪಾರಮಾರ್ಗಮಶಕ್ಯಂ"
–ಕೇಶಿರಾಜ

ಪ್ರೊ. ಜಿ. ವೆಂಕಟಸುಬ್ಬಯ್ಯ
ಪ್ರಧಾನ ಸಂಪಾದಕ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು–೧೮

೧೯೭೯

KANNADA NIGHANTU - VOL-IV
Second Edition : 2010
Published by : Kannada Sahitya Parishat
Pampa Mahakavi Road, Chamarajapet, Bangalore - 560 018
Pages : X+3483 to 4490 Price : Rs. 350=00

ಎರಡನೆಯ ಮುದ್ರಣ – ೨೦೧೦
ಪ್ರತಿಗಳು : ೨೦೦೦
ಬೆಲೆ : ಮುನ್ನೂರು ಐವತ್ತು ರೂಪಾಯಿಗಳು
@ ಹಕ್ಕುಗಳನ್ನು ಕಾಯ್ದಿರಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು (೨೦೧೦)

ಅಧ್ಯಕ್ಷರು

ಡಾ. ಸಲ್ಲೂರು ಪ್ರಸಾದ್. ಆರ್.ಕೆ.

ಗೌರವ ಕಾರ್ಯದರ್ಶಿಗಳು

ಪ್ರೊ ಎಚ್.ಕೆ. ಮಳಲಿಗೌಡ

ಶ್ರೀ ಟಿ.ಎಸ್. ದಕ್ಷಿಣಾಮೂರ್ತಿ

ಗೌರವ ಕೋಶಾಧ್ಯಕ್ಷರು

ಶ್ರೀ ಪುಂಡಲೀಕ ತಾಲಂದಿ

ಮುದ್ರಣ: ರಾಜಾ ಪ್ರಿಂಟರ್ಸ್
ನಂ.೫೯, ೪ನೆ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು- ೫೬೦ ೦೨೭.

ಕನ್ನಡ ನಿಘಂಟು ಸಂಪಾದಕ ಸಮಿತಿ

(೧೯೭೯ನೆಯ ಆಗಸ್ಟ್ ತಿಂಗಳಿನಲ್ಲಿ ಇದ್ದಂತೆ)

ಅಧ್ಯಕ್ಷರು

ಪ್ರೊ. ಎಂ. ಮರಿಯಪ್ಪಭಟ್ಟ, ಎಂ.ಎ., ಎಲ್.ಟಿ.

ಉಪಾಧ್ಯಕ್ಷರು ಮತ್ತು ಪ್ರಧಾನ ಸಂಪಾದಕರು

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

ಸದಸ್ಯರು

ಪ್ರೊ. ಸ. ಸ. ಮಾಳವಾಡ, ಎಂ.ಎ.
ಪ್ರೊ. ಡಿ. ಜವರೇಗೌಡ, ಎಂ.ಎ.
ಡಾ. ಆರ್. ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.
ಡಾ. ಸಿದ್ಧಯ್ಯಪುರಾಣಿಕ, ಬಿ.ಎ., ಎಲ್.ಎಲ್.ಬಿ.
ಡಾ. ಜಿ.ಎಸ್. ಗಾಯಿ, ಎಂ.ಎ., ಪಿಎಚ್.ಡಿ.
ಡಾ. ಹಾ. ಮಾ. ನಾಯಕ, ಎಂ.ಎ., ಪಿಎಚ್.ಡಿ.
ಡಾ. ಜಿ.ಎಸ್. ಶಿವರುದ್ರಪ್ಪ, ಎಂ.ಎ., ಪಿಎಚ್.ಡಿ
ಶ್ರೀ ವಿ. ಬಿ. ನಾಯಕ, ಎಂ.ಎ., ಎಲ್.ಎಲ್.ಬಿ.
ಶ್ರೀ ಬಸವರಾಜ ಕಟ್ಟೀಮನಿ
ಡಾ. ಎಂ. ಚಿದಾನಂದಮೂರ್ತಿ, ಎಂ.ಎ., ಪಿಎಚ್.ಡಿ.
ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ, ಎಂ.ಎ., ಪಿಎಚ್.ಡಿ.

ಪರಿಷತ್ತಿನ ಅಧ್ಯಕ್ಷರು

ಶ್ರೀ ಹಂಪ. ನಾಗರಾಜಯ್ಯ, ಎಂ.ಎ.

ಪರಿಷತ್ತಿನ ಕಾರ್ಯದರ್ಶಿಗಳು

ಶ್ರೀ. ಡಿ. ಲಿಂಗಯ್ಯ, ಎಂ.ಎ.

ಪರಿಷತ್ತಿನ ಕೋಶಾಧಿಕಾರಿಗಳು

ಶ್ರೀ ಎಂ. ಪಿ. ದೇವರಾಜ್, ಬಿ.ಕಾಂ., ಬಿ.ಎಲ್.

ಸಂಪಾದಕ ವರ್ಗ

ಪ್ರಧಾನ ಸಂಪಾದಕರು

ಪ್ರೊ. ಜಿ. ವೆಂಕಟಸುಬ್ಬಯ್ಯ, ಎಂ. ಎ., ಬಿ.ಟಿ.

ಉಪಸಂಪಾದಕರು

ಶ್ರೀ ಹೀ. ಚಿ. ಶಾಂತವೀರಯ್ಯ, ಎಂ.ಎ., ಬಿ.ಇಡಿ.

ಶ್ರೀ ಆರ್. ವಿ. ಕುಲಕರ್ಣಿ, ಎಂ.ಎ.,ಬಿ.ಇಡಿ.

ಶ್ರೀ ಟಿ. ಆರ್. ಮಹದೇವಯ್ಯ, ಎಂ. ಎ.

ಸಹಾಯಕ ಸಂಪಾದಕರು

ವಿದ್ವಾನ್ ಎಚ್. ವಿ. ನಾರಾಯಣಶಾಸ್ತ್ರೀ

ಶ್ರೀಮತಿ ಮಂಜುಳಾರಾವ್, ಎಂ.ಎ.

ಶ್ರೀಮತಿ ಎಂ. ಎನ್. ಜಾನಕಮ್ಮ, ಎಂ.ಎ.

ಶ್ರೀಮತಿ ಬಿ. ಶಕುಂತಲ, ಎಂ.ಎ.

ಶ್ರೀಮತಿ ಉಮಾದೇವಿ, ಎಂ.ಎ

ಶ್ರೀಮತಿ ವಿಜಯಲಕ್ಷ್ಮಿ, ಎಂ.ಎ

ಶ್ರೀಮತಿ ಎಂ.ಎಸ್. ಸುಜಯ, ಎಂ.ಎ

ಶ್ರೀ ಬಿ. ಆರ್. ಬಸವರಾಜ, ಎಂ.ಎ.

ಕಚೇರಿಯ ಸಿಬ್ಬಂದಿವರ್ಗ

ಬೆರಳಚ್ಚುಗಾರ್ತಿಯರು : ಶ್ರೀಮತಿ ಎ. ನೇತ್ರಾವತಿಬಾಯಿ, ಶ್ರೀಮತಿ ಸಿ. ಎನ್. ವಿಜಯಲಕ್ಷ್ಮಿ

ಪಟ್ಟಿಕೆ ವಿಂಗಡಣೆಕಾರರು : ಶ್ರೀ ಎನ್. ಎಸ್. ರಾಮಸ್ವಾಮಿ ಅಯ್ಯರ್, ಎಂ.ಎ., ಬಿ.ಟಿ.

ಸೇವಕರು : ರಾಘವೇಂದ್ರ, ಮಾದಪ್ಪ, ಶಂಕರಪ್ಪ, ರೇವಯ್ಯ, ವಿ. ಸತ್ಯನಾರಾಯಣ

ಅಧ್ಯಕ್ಷರ ನುಡಿ

'ನಿಘಂಟು ಎಂದರೆ ಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟು' ಎಂದೇ ಖ್ಯಾತವಾಗಿರುವ ಈ ಮಹಾನಿಘಂಟಿನ ಎಂಟು ಸಂಪುಟಗಳನ್ನು ಅದು ಪ್ರಕಟವಾದ ೧೫ ವರ್ಷಗಳ ನಂತರ ಮತ್ತಷ್ಟು ಸುಂದರವಾಗಿ ಮರುಮುದ್ರಣಗೊಳಿಸಿ ಕನ್ನಡ ಕುಲಕೋಟಿಗೆ ಅರ್ಪಿಸಲು ನನಗೆ ಸಂತೋಷವೆನಿಸುತ್ತದೆ. ಕನ್ನಡ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ಪಡೆದುಕೊಂಡಿರುವುದು ಅದರ ಸಂಪನ್ನತೆ ಮತ್ತು ಅರ್ಹತೆಗಳಿಂದಾಗಿಯೇ ಎಂಬುದನ್ನು ಲೋಕದೆದುರು ಬಿಚ್ಚಿತೋರಿಸುವ ಸಾಧನಗಳಲ್ಲಿ ಮುಖ್ಯವಾದದ್ದು ಈ ಬೃಹತ್ ನಿಘಂಟು. ಕನ್ನಡದ ಸಮಸ್ತ ಜ್ಞಾನವನ್ನೂ ತನ್ನೊಳಗೆ ಐಕ್ಯಗೊಳಿಸಿಕೊಂಡಿರುವ ಈ ನಿಘಂಟಿನ ವಿವಿಧ ಸಂಪುಟಗಳಲ್ಲಿ ಶಬ್ದವೊಂದರ ಅರ್ಥ, ವಿವರಣೆ, ಉದಾಹರಣೆ ಒಮ್ಮೊಮ್ಮೆ ಅರ್ಥಪುಟವನ್ನು ದಾಟಿ ಒಂದು ಪುಟವನ್ನು ಆವರಿಸಿಕೊಂಡಿರುವುದುಂಟು.

ಕ್ರಿ.ಶ.೪೫೦ರ ಹಲ್ಮಿಡಿಶಾಸನದಿಂದ ಪ್ರಾರಂಭವಾಗಿ ಈ ಸಂಪುಟ ಯೋಜನೆ ಅನುಷ್ಠಾನಗೊಂಡ ೧೯೯೫ರವರೆಗೆ ಕನ್ನಡದಲ್ಲಿ ಪ್ರಕಟವಾದ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳಿಂದಲೂ ಉಲ್ಲೇಖಗಳನ್ನು ನೀಡಲಾಗಿರುವುದು, ಕೆಲವೊಮ್ಮೆ ಒಂದೇ ಶಬ್ದಕ್ಕೆ ಬೇರೆ ಬೇರೆ ಅರ್ಥಗಳು ಪ್ರಾಪ್ತವಾಗುವ ಸಂದರ್ಭಗಳನ್ನು ಜೊತೆಗಿರಿಸಿ ಕೊಟ್ಟಿರುವುದು, ಪ್ರತಿಯೊಂದು ಶಬ್ದವನ್ನೂ ನಾಮಪದ ಅಥವಾ ಕ್ರಿಯಾಪದವೆಂದು ಖಚಿತವಾಗಿ ವಿಂಗಡಿಸಿಕೊಂಡಿರುವುದು, ಅರ್ಥ ಸ್ಪಷ್ಟೀಕರಣಕ್ಕೆಂದು ಉದಾಹರಣೆಯಾಗಿ ಕೊಟ್ಟಿರುವ ವಾಕ್ಯ ಅಥವಾ ವಾಕ್ಯತುಂಡುಗಳೇ ಮೂಲಕಾವ್ಯವನ್ನು ಓದಬೇಕೆನ್ನುವ ಆಸಕ್ತಿಯನ್ನು ಹುಟ್ಟಿಸುವುದು – ಈ ಎಲ್ಲ ಅಂಶಗಳು ಇದರ ಅಪೂರ್ವತೆಯನ್ನು ಎತ್ತಿ ಹಿಡಿಯುವ ಸಾಕ್ಷಿಕಲ್ಲುಗಳಾಗಿವೆ. ನಿಘಂಟು ಎನ್ನುವುದೇ ತುಂಬ ವೈಜ್ಞಾನಿಕವಾದ, ಒಂದು ಭಾಷೆಯ ಸೃಜನ ಸಾಹಿತ್ಯದಷ್ಟೇ ಪ್ರಮುಖವಾದ, ಭಾಷೆಯಲ್ಲಿರುವ ಶಬ್ದಗಳನ್ನು ಶುದ್ಧವಾಗಿ ಉಚ್ಚರಿಸಬೇಕೆಂದು ತಿಳಿಸಿಕೊಡುವ ರಚನೆಯಾಗಿರುವುದರಿಂದ ಜ್ಞಾನೇಂದ್ರಿಯಗಳೆಲ್ಲದರ ಎಚ್ಚರದ ದುಡಿಮೆಯನ್ನು ಬಯಸುತ್ತದೆ. ಕನ್ನಡದ ಅಭಿಮಾನವನ್ನು ಮೈತುಂಬಿಕೊಂಡ ಘನ ವಿದ್ವಾಂಸರ ಸತತ ಪರಿಶ್ರಮದಿಂದ ಈ ಯೋಜನೆ ಶಿಸ್ತುಬದ್ಧವಾಗಿ ಯಶಕಂಡಿದೆ. ಮೊದಲ ಮುದ್ರಣದ ೧೦,೦೦೦ ಪ್ರತಿಗಳು ಕೆಲವೇ ವರ್ಷಗಳಲ್ಲಿ ಕನ್ನಡಿಗರ ಮನೆಯ ಕಪಾಟುಗಳನ್ನು, ಗ್ರಂಥಭಂಡಾರಗಳನ್ನು, ಶಾಲೆಕಾಲೇಜುಗಳನ್ನು ಅಲಂಕರಿಸಿದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು ಧನ್ಯತಾಭಾವವನ್ನು ತಳೆಯುವಂತಾಯಿತು. ಆದರೆ ನಿಘಂಟುವಿನ ಉಪಯುಕ್ತತೆಯನ್ನು ತಡವಾಗಿ ಅರ್ಥಮಾಡಿಕೊಂಡವರು ಅಂದಿನಿಂದ ಇಂದಿನವರೆಗೆ ಸಾಹಿತ್ಯ ಪರಿಷತ್ತಿಗೆ ದೂರವಾಣಿ ಕರೆ ಮಾಡಿ, ಮಾರಾಟ ವಿಭಾಗದಲ್ಲಿ ವಿಚಾರಿಸಿ, ಪುಸ್ತಕ ಮಳಿಗೆಗಳಲ್ಲಿ ಹುಡುಕಾಡಿ ಸಿಗದೆ ನಿರಾಶರಾಗಿದ್ದಾರೆ. ಮರುಪ್ರಕಟಿಸುವಂತೆ ಒತ್ತಾಯ ಮಾಡಿದ್ದಾರೆ.

ಎಂಟು ಸಂಪುಟಗಳಲ್ಲಿ, ಒಂಬತ್ತು ಸಾವಿರಕ್ಕಿಂತಲೂ ಅಧಿಕ ಪುಟಗಳ ವಿಸ್ತಾರದಲ್ಲಿ ಹರಡಿಕೊಂಡಿರುವ, ಎಲ್ಲರ ಮನೆಯನ್ನೂ ಬೆಳಗಬೇಕಾಗಿರುವ ಈ ನಿಘಂಟನ್ನು ಮುದ್ರಿಸುವುದಾಗಲೀ, ಮುದ್ರಿತ ಪ್ರತಿಗಳನ್ನು ಒಂದೆಡೆ ಜೋಡಿಸಿಡುವುದಾಗಲೀ, ಮಾರಾಟದ ವ್ಯವಸ್ಥೆ ಮಾಡುವುದಾಗಲೀ, ಹೆಚ್ಚಿನ ಪ್ರಮಾಣದಲ್ಲಿ ಒಂದು

ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸುವುದಾಗಲೀ ಅಷ್ಟೊಂದು ಸುಲಭವಾದ ಕೆಲಸವಲ್ಲ. ಈ ಅಸಾಧ್ಯವನ್ನು ಸಾಧ್ಯವಾಗಿಸುವ ಧೈರ್ಯೋತ್ಸಾಹಗಳು ಪರಿಷತ್ತಿನೊಡಲಲ್ಲಿ ಚಿಮ್ಮುವುದಕ್ಕೆ ಕರ್ನಾಟಕ ರಾಜ್ಯ ಸರ್ಕಾರ ಕಾರಣವಾಯಿತೆಂದರೆ ಅದನ್ನು ಯಾರೂ ಅತಿಶಯೋಕ್ತಿಯೆಂದು ಭಾವಿಸಬೇಕಾಗಿಲ್ಲ. ಕರ್ನಾಟಕ ರಾಜ್ಯ ಸರ್ಕಾರ ಕನ್ನಡ ಸಾಹಿತ್ಯ ಪರಿಷತ್ತಿನ ಮಾತುಗಳನ್ನು ಪ್ರೀತಿಯಿಂದ ಆಲಿಸುತ್ತಿರುವುದು, ಕನ್ನಡ ಸಾಹಿತ್ಯ ಪರಿಷತ್ತನ್ನು ಕನ್ನಡದ ಸಾರ್ವಭೌಮ ಪ್ರತಿನಿಧಿಯೆಂದೇ ಭಾವಿಸುತ್ತಿರುವುದು ಕನ್ನಡದ ಭಾಗ್ಯವೆಂದೇ ಹೇಳಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹಲವು ಒತ್ತಡಗಳ ನಡುವೆಯೂ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಅತ್ಯಂತ ಪ್ರೀತಿಯಿಂದ ಭಾಗವಹಿಸುತ್ತಿರುವುದು, ಸಮಾರಂಭಗಳಲ್ಲಿ ಕೊಟ್ಟ ಆಶ್ವಾಸನೆಗಳನ್ನು ಅತಿಶೀಘ್ರವಾಗಿ ಅನುಷ್ಠಾನಗೊಳಿಸುತ್ತಿರುವುದು, ಪರಿಷತ್ತಿನ ಎಲ್ಲಾ ಯೋಜನೆಗಳಿಗೂ ಹಸಿರು ನಿಶಾನೆ ತೋರುತ್ತಿರುವುದು, ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಮುಖ್ಯಮಂತ್ರಿ – ಕನ್ನಡ ಸಂಸ್ಕೃತಿ ಮಂತ್ರಿಗಳ ಕಚೇರಿಯ ಹೊರಗೆ ಕಡತಗಳೊಂದಿಗೆ ಗಂಟೆಗಟ್ಟಲೆ ಕಾಯುತ್ತಿದ್ದುದನ್ನು ತಪ್ಪಿಸಿರುವುದು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಿಂದ ತಾಲ್ಲೂಕು ಸಮ್ಮೇಳನಗಳವರೆಗೆ ಎಲ್ಲವೂ ಅದ್ಧೂರಿಯಾಗಿ ನಡೆಯಲು ಬೇಕಾದಷ್ಟು ಪ್ರಮಾಣದಲ್ಲಿ ಹಣ ಬಿಡುಗಡೆ ಮಾಡುತ್ತಿರುವುದು – ಇಂಥವನ್ನೆಲ್ಲಾ ಕಂಡಾಗ ಪರಿಷತ್ತಿನ ಅಧ್ಯಕ್ಷನಾಗಿ ನನಗೆ ಮನಸ್ಸು ತುಂಬಿ ಬರುತ್ತದೆ. ಆರುಕೋಟಿ ಕನ್ನಡಿಗರ ಪರವಾಗಿ ಅವರಿಗೆ ಕೃತಜ್ಞತಾ ಕುಸುಮಗಳನ್ನು ಅರ್ಪಿಸಬೇಕೆನ್ನಿಸುತ್ತದೆ. 'ಕನ್ನಡದ ಮುಖ್ಯಮಂತ್ರಿ' 'ಕನ್ನಡಿಗರ ಮುಖ್ಯಮಂತ್ರಿ' ಎಂದು ಅಭಿಮಾನದಿಂದ ನುಡಿಯಬೇಕೆನ್ನಿಸುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳ ಕನ್ನಡದ ಮೇಲಿನ, ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗಿನ ಈ ಅಖಂಡ ಪ್ರೀತಿ ಹೀಗೇ ಮುಂದುವರಿಯಲೆಂದು ಆಶಿಸುತ್ತೇನೆ.

ಕರ್ನಾಟಕ ಸರ್ಕಾರ ನಿಘಂಟು ಯೋಜನೆಯ ಮಹತ್ವವನ್ನು ಮನಗಂಡು ಒಂದು ಕೋಟಿ ರೂಪಾಯಿಗಳನ್ನು ಸಾಹಿತ್ಯ ಪರಿಷತ್ತಿಗೆ ಉದಾರವಾಗಿ ನೀಡಿದೆ. ಸರ್ಕಾರ ಹಣ ನೀಡಿರುವುದು ಪರಿಷತ್ತಿಗಾದರೂ ಇದು ಜನತೆಯ ಹಣ ಮತ್ತು ಇದರ ಅಂತಿಮ ಫಲಾನುಭವಿಗಳೂ ಜನತೆಯೇ. ಈ ಎಚ್ಚರವನ್ನಿರಿಸಿಕೊಂಡೇ ಸಾಹಿತ್ಯ ಪರಿಷತ್ತು ಬಹುಬೇಡಿಕೆಯ ಬೃಹನ್ನಿಘಂಟಿನ ಎಂಟು ಸಂಪುಟಗಳನ್ನು ಪುನರ್ಮುದ್ರಣಗೊಳಿಸುತ್ತಿದೆ. ಸರ್ಕಾರದ ಉದಾರ ಆರ್ಥಿಕ ನೆರವಿನ ಪರಿಣಾಮವಾಗಿ ನಿಘಂಟಿನ ಬೆಲೆಯನ್ನು ಸಾಮಾನ್ಯರೂ ಕೊಳ್ಳಲು ಮನಸ್ಸು ಮಾಡುವಂತೆ ಕಡಿಮೆಗೊಳಿಸಲಾಗಿದೆ. ಭಾಷೆ ಮತ್ತು ಸಾಹಿತ್ಯಾಭಿಮಾನದ ಸಂಕೇತವೆಂಬಂತೆ ಈ ಯೋಜನೆಯ ಯಶಸ್ಸಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸಿರುವ ರಾಜ್ಯ ಸರ್ಕಾರವನ್ನು ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಮತ್ತು ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರುಗಳನ್ನು ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ. ನಿಘಂಟು ಯೋಜನೆ ಪ್ರಾರಂಭವಾದಾಗ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರಿಂದ ಮೊದಲಗೊಂಡು ಮುಕ್ತಾಯವಾದಾಗ ಅಧ್ಯಕ್ಷರಾಗಿದ್ದ ಡಾ. ಸಾ.ಶಿ. ಮರುಳಯ್ಯನವರವರೆಗೆ ಇದನ್ನು ಆಸಕ್ತಿಯಿಂದ ಮುನ್ನಡೆಸಿಕೊಂಡು ಬಂದ ಎಲ್ಲ ಅಧ್ಯಕ್ಷರುಗಳಿಗೂ ನಿಘಂಟು ಸಮಿತಿಯ ಅಧ್ಯಕ್ಷರು, ಸದಸ್ಯರುಗಳು, ಸಂಪಾದಕರು, ಸಿಬ್ಬಂದಿ ವರ್ಗದವರಿಗೂ ಅಂದವಾಗಿ ಮುದ್ರಿಸಿಕೊಟ್ಟ ರಾಜಾ ಪ್ರಿಂಟರ್ಸ್‌ನವರಿಗೂ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ಕನ್ನಡ ಸಾಹಿತ್ಯ ಪರಿಷತ್ತು ತುಂಬಾ ಆಭಾರಿಯಾಗಿದೆ. ಮರುಮುದ್ರಣದ ಈ ನಿಘಂಟಿನ ಸಂಪುಟಗಳನ್ನು ಕನ್ನಡ ಜನತೆ ಪ್ರೀತಿ ವಿಶ್ವಾಸಗಳಿಂದ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಬೆಂಗಳೂರು
೫-೬-೨೦೧೦

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು

ಅರಿಕೆ

ಕನ್ನಡ-ಕನ್ನಡ ನಿಘಂಟಿನ ಮೂರನೇ ಸಂಪುಟ ೧೯೭೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವದ ಶುಭಸಂದರ್ಭದಲ್ಲಿ ಬಿಡುಗಡೆಯಾಯಿತು. ಅದಾದ ಎರಡು ವರ್ಷಗಳ ತರುವಾಯ, ಈಗ, ನಾಲ್ಕನೇ ಸಂಪುಟ ರಾಜ್ಯೋತ್ಸವದ ಮಂಗಳಮುಹೂರ್ತದಲ್ಲಿ ಬಿಡುಗಡೆಯಾಗುತ್ತಿದೆ. ನಿಘಂಟಿನ ಪ್ರಧಾನ ಸಂಪಾದಕರಾದ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಅವಿರತಶ್ರಮ, ದಕ್ಷತೆ ಇವುಗಳನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನೆನೆಸಿಕೊಳ್ಳಬೇಕು. ನಿಘಂಟು ಕಛೇರಿಯ ಸಮರ್ಥ ಸಿಬ್ಬಂದಿವರ್ಗದ ಕಾರ್ಯತತ್ಪರತೆ, ಹಾಗೂ ಸರ್ಕಾರಿ ಮುದ್ರಣಾಲಯದವರ ಸಹಕಾರ, ಇವುಗಳಿಲ್ಲದರ ಪ್ರತಿಫಲವಾಗಿ ಈ ನಾಲ್ಕನೇ ಸಂಪುಟ ಅತಿಕ್ಷಿಪ್ರವಾದ ಅವಧಿಯಲ್ಲಿ ಅಚ್ಚಾಗಿ ಹೊರಬರಲು ಸಾಧ್ಯವಾಗಿದೆ. ಅದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಈ ಎಲ್ಲ ಮಹನೀಯರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ತಿಳಿಸುತ್ತದೆ.

ಪ್ರಧಾನ ಸಂಪಾದಕರಾದ ಪ್ರೊ. ಜಿ. ವೆಂಕಟಸುಬ್ಬಯ್ಯನವರು ೧೯೭೯ರ ರಾಜ್ಯೋತ್ಸವದ ವೇಳೆಗೆ ಈ ನಾಲ್ಕನೇ ಸಂಪುಟವನ್ನು ತಂದೇತೀರಬೇಕೆಂದು ದೃಢಸಂಕಲ್ಪ ಮಾಡಿದರು. ಈ ಸಂಪುಟದ ಮುದ್ರಣಕಾರ್ಯವನ್ನು ಸರ್ಕಾರಿ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಬಿ. ಎನ್. ರಾಮಮೂರ್ತಿ ಅವರು ವಹಿಸಿಕೊಂಡರು. ಅವರ ನಿರ್ದೇಶನವನ್ನೆಲ್ಲಾ ಕಾರ್ಯಗತಗೊಳಿಸಿ, ಉಪನಿರ್ದೇಶಕರಾದ ಶ್ರೀ ಎಂ. ಎಸ್. ಹಿರಿಯಣ್ಣಯ್ಯನವರು ಮತ್ತು ಅವರ ಸಿಬ್ಬಂದಿ ವರ್ಗದವರು ವಿಶೇಷವಾಗಿ ಆಸಕ್ತಿವಹಿಸಿ ತ್ವರಿತಗತಿಯಲ್ಲಿ ಮುದ್ರಿಸಿಕೊಟ್ಟರು. ಅವರ ವೈಯಕ್ತಿಕ ಆಸಕ್ತಿ ಮತ್ತು ಉತ್ಸಾಹಗಳ ಕಾರಣದಿಂದಾಗಿ ಈ ಸಂಪುಟ ರಾಜ್ಯೋತ್ಸವ ಸಮಯದಲ್ಲಿ ಬಿಡುಗಡೆಗೆ ಅಣಿಗೊಳ್ಳಲು ಸಾಧ್ಯವಾಗಿದೆ. ಈ ಮೂವರು ಮಹನೀಯರಿಗೆ ಪರಿಷತ್ತಿನ ಪರವಾಗಿ ಹಾಗೂ ವೈಯಕ್ತಿಕವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಸರ್ಕಾರದ ನೆರವು ಇಲ್ಲದಿದ್ದರೆ ಈ ನಿಘಂಟು ಕನಸಿನ ಗಂಟಾಗಿರುತ್ತಿತ್ತು. ಸರ್ಕಾರದ ಉದಾರ ಸಹಾಯದಿಂದ ಇದು ಇಷ್ಟುಬೇಗ, ಇಷ್ಟು ಅಚ್ಚುಕಟ್ಟಾಗಿ ಕನ್ನಡಿಗರ ಕೈಸೇರುವಂತಾಗಿದೆ. ಅದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತು ಎಲ್ಲಾ ಕನ್ನಡಿಗರ ಪರವಾಗಿ ರಾಜ್ಯಸರ್ಕಾರಕ್ಕೆ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಕರ್ನಾಟಕದ ರಾಜ್ಯಸರ್ಕಾರಕ್ಕೂ ಪರಿಷತ್ತಿಗೂ ಆದ ಒಪ್ಪಂದದ ಪ್ರಕಾರ ೧೯೭೭ರ ಮಾರ್ಚಿ ತಿಂಗಳ ಕಡೆಯಲ್ಲಿ ಇಡೀ ನಿಘಂಟಿನ ಕಾರ್ಯ ಮುಗಿಯಬೇಕಾಗಿತ್ತು. ನಿಘಂಟು ರಚನೆಯ ಕಾರ್ಯ ಆರಂಭವಾದಾಗ ಕಾಗದದ ಅಭಾವ, ಮುದ್ರಣ ಸೌಕರ್ಯದ ಕೊರತೆ, ಸಮರ್ಥ ಸಿಬ್ಬಂದಿ ಸಕಾಲದಲ್ಲಿ ಒದಗದಿದ್ದುದು-ಹೀಗೆ ಹಲವು ತೊಡಕುಗಳು ಕಂಡುಬಂದು ನಿಘಂಟನ್ನು ಸಂಪೂರ್ಣವಾಗಿ ಮುದ್ರಿಸುವುದು ವಿಳಂಬವಾಯಿತು. ಈ ಸಂಗತಿಯನ್ನು ಹಿಂದಿನ ಸಂಪುಟಗಳ ಅರಿಕೆಯಲ್ಲಿ ನಿರೂಪಿಸಲಾಗಿದೆ. ಈಗ ಈ ತೊಡಕುಗಳಲ್ಲಿ ಬಹುಪಾಲು ನಿವಾರಣೆಯಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ನೆನಪಿಡಬೇಕಾದುದು ಅಗತ್ಯ. ನಿಘಂಟಿನ ಕಾರ್ಯ ಅವಸರದ ಕೆಲಸವಲ್ಲ. ಅದರಲ್ಲಿಯೂ ಈಗ ಸಿದ್ಧಪಡಿಸುತ್ತಿರುವ ನಿಘಂಟಿನ ಸ್ವರೂಪದ ಸಂಕೀರ್ಣತೆಯನ್ನು ಗಮನಿಸಿದರೆ ವೇಗವನ್ನು ಎಷ್ಟೇ ಅಪೇಕ್ಷಿಸಿದರೂ ಆ ಬಯಕೆಯನ್ನು ಕಾರ್ಯಗತಗೊಳಿಸಲು ಅಷ್ಟು ಸಾಧ್ಯವಾಗುವುದಿಲ್ಲ.

ಎರಡನೆಯದಾಗಿ, ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸುತ್ತಿರುವ ಈ ನಿಘಂಟು ಭಾರತೀಯ ಭಾಷೆಗಳಲ್ಲಿಯೇ ವಿಶಿಷ್ಟ ಸ್ವರೂಪ ದ್ದಾಗಿದೆ. ಚಾರಿತ್ರಾರ್ಹ ಆಧಾರಗಳಿಂದ ಆಧುನಿಕ ವೈಜ್ಞಾನಿಕ ಪದ್ಧತಿಗಳನ್ನು ಅಳವಡಿಸಿಕೊಂಡು, ಶಾಸ್ತ್ರೀಯವಾಗಿ ಸಿದ್ಧವಾಗುತ್ತಿರುವ ಈ ನಿಘಂಟನ್ನು ಕನ್ನಡೇತರ ವಿದ್ವಾಂಸರೂ ಕೂಡ ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಇದು ಕನ್ನಡದೇಶಕ್ಕೂ ಭಾಷೆಗೂ ಗೌರವವನ್ನು ಸಂಪಾದಿಸಿ ಕೊಡುವ ಅನನ್ಯಕೃತಿಯಾಗಿದೆ. ಆದ್ದರಿಂದ ಆತುರಪಡಿಸಿ ಇದರ ಅಚ್ಚುಕಟ್ಟುತನವನ್ನು ಸಡಿಲಿಸುವುದು ಸಾಧುವಾಗುವುದಿಲ್ಲ. ಹಾಗೆಂದು ಅನಾವಶ್ಯಕವಾಗಿ ನಿಧಾನವನ್ನು ಆಶ್ರಯಿಸುತ್ತಿಲ್ಲ. ನಿಘಂಟು ಸಂಪಾದಕ ಸಮಿತಿಯವರಿಗೂ ಈ ಕಾರ್ಯವನ್ನು ಎಷ್ಟು ಬೇಗ ಪೂರೈಸಲು ಸಾಧ್ಯವೋ ಅಷ್ಟು ಬೇಗ ಮುಗಿಸುವ ಅಪೇಕ್ಷೆಯಿದೆ.

ಈ ನಿಘಂಟಿನ ಮಹತ್ವವನ್ನು ಮನಗಂಡ ನಮ್ಮ ಸರ್ಕಾರದವರು ಪ್ರಾರಂಭದಲ್ಲಿ ಈ ಯೋಜನೆಗೆ ಮಂಜೂರುಮಾಡಿದ ಹಣ ಸಾಲದೆ ಬಂದಾಗಲೆಲ್ಲಾ ಮತ್ತೆ ಮತ್ತೆ ಮರುಪರಿಶೀಲನೆಮಾಡಿ ಅಗತ್ಯವಾದ ಹಣವನ್ನು ಉದಾರವಾಗಿ ಪೂರೈಸುತ್ತಾ ಬಂದಿದ್ದಾರೆ. ಈ ನಿಘಂಟಿನ ಕಾರ್ಯ ಪೂರೈಸಲು ಅಂಗೀಕೃತವಾಗಿದ್ದ ಅವಧಿಯನ್ನು ಕೂಡ ಅನಿವಾರ್ಯವಾಗಿ ವಿಸ್ತರಿಸಲು ಸರಕಾರ ತನ್ನ ಅಂಗೀಕಾರವನ್ನು ನೀಡುತ್ತಾ ಬಂದಿದೆ. ಈ ನಿಘಂಟಿನ ಕಾರ್ಯ ೧೯೮೨ರ ಮಾರ್ಚಿ ತಿಂಗಳ ವೇಳೆಗೆ ಪೂರೈಸುವ ನಿರೀಕ್ಷೆಯಿದೆ.

ಈ ವರ್ಷದ ರಾಜ್ಯೋತ್ಸವ ಅಪೂರ್ವವಾದ ಸಂದರ್ಭವಾಗಿದೆ. ಈ ರಾಜ್ಯೋತ್ಸವದ ದಿನದಿಂದ ಕನ್ನಡಭಾಷೆಯನ್ನು ರಾಜ್ಯವಂಟ್ಟದ ಆಡಳಿತಭಾಷೆಯನ್ನಾಗಿ ಸರ್ಕಾರ ಅಂಗೀಕರಿಸಿರುವುದನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸು ಅವರು ಘೋಷಿಸಿದ್ದಾರೆ. ಇಷ್ಟು ಮಹತ್ವದ ಶುಭ ಸಮಯದಲ್ಲಿ ನಿಘಂಟಿನ ನಾಲ್ಕನೇ ಸಂಪುಟ ಬಿಡುಗಡೆ ಆಗುತ್ತಿರುವುದು ಸಂತೋಷದ ವಿಷಯ ವಾಗಿದೆ. ಈ ನಿಘಂಟನ್ನು ಎಂದಿನಂತೆ ಕನ್ನಡಿಗರು, ಅದರಲ್ಲಿಯೂ ವಿದ್ವಾಂಸರು ಆದರದಿಂದ ಬರಮಾಡಿಕೊಂಡು ಇದರ ಪೂರ್ಣ ಪ್ರಯೋಜನವನ್ನು ಪಡೆಯಬೇಕೆಂದು ಕೋರುತ್ತೇನೆ.

ಬೆಂಗಳೂರು-೧೮
೩೧-೧೦-೧೯೭೯

ಹಂಪ. ನಾಗರಾಜಯ್ಯ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಮುನ್ನುಡಿ

೧೯೭೮ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ನಡೆದ ಕನ್ನಡ-ಕನ್ನಡ ನಿಘಂಟಿನ ಸಂಪಾದಕ ಸಮಿತಿಯ ಸಭೆಯಲ್ಲಿ ನಾಲ್ಕನೇ ಸಂಪುಟವನ್ನು ೧೯೭೯ನೇ ಇಸವಿಯಲ್ಲಿ ನೆರವೇರುವ ರಾಜ್ಯೋತ್ಸವ ಸಮಯದಲ್ಲಿ ಬಿಡುಗಡೆ ಮಾಡಬೇಕೆಂದು ತೀರ್ಮಾನವನ್ನು ಕೈಗೊಳ್ಳಲಾಯಿತು. ಕಳೆದ ಮೂರನೇ ಸಂಪುಟವು ಪ್ರಕಟವಾದ ಎರಡು ವರ್ಷಗಳ ತರುವಾಯ ಸಾವಿರ ಪುಟಗಳ ನಾಲ್ಕನೇ ಸಂಪುಟವು ಪ್ರಕಟವಾಗುತ್ತಿರುವುದು ನನಗೆ ತುಂಬ ಸಂತೋಷವನ್ನು ಉಂಟುಮಾಡಿದೆ. ಇಷ್ಟು ಶೀಘ್ರವಾಗಿ ನಾಲ್ಕನೇ ಸಂಪುಟವನ್ನು ಪ್ರಕಟಪಡಿಸುವುದು ಬಹು ಪ್ರಯಾಸದ ಕಾರ್ಯವಾದರೂ ಈ ತೀರ್ಮಾನವನ್ನು ಕೈಗೊಂಡು ಪ್ರತಿ ತಿಂಗಳು ನಡೆಯುತ್ತಿದ್ದ ಸಂಪಾದಕ-ಸಮಿತಿಯ ಸಭೆಗಳಲ್ಲಿ ಆ ಸಂಪುಟಕ್ಕೆ ಬೇಕಾದಷ್ಟು ಸಾಮಗ್ರಿಯನ್ನು ಪರಿಶೀಲಿಸಲು ಸಹಾಯಮಾಡಿದ ನಿಘಂಟು ಸಂಪಾದಕ ಸಮಿತಿಯ ಸದಸ್ಯರೆಲ್ಲರಿಗೂ ನಾನು ನನ್ನ ಗೌರವವನ್ನು ಸಮರ್ಪಿಸುತ್ತೇನೆ.

ಈ ಸಂಪುಟದಲ್ಲಿ ತಿಮಿರ್ಶ ಎಂಬ ಶಬ್ದದಿಂದ ನಾಭಿ ಎಂಬ ಶಬ್ದದವರೆಗೆ ನಿಘಂಟು ಮುಂದುವರಿದಿದೆ. ಈ ಸಂಪುಟವು ಸಿದ್ಧವಾಗುತ್ತಿದ್ದಾಗ ಹಿಂದಿನ ಸಂಪುಟಗಳಿಗಿಂತ ಹೆಚ್ಚಾಗಿ ಆಕರಗ್ರಂಥಗಳನ್ನು ಉಪಯೋಗಿಸಿಕೊಳ್ಳಲಾಗಿದ್ದು ಆ ಆಕರಗ್ರಂಥಗಳ ಸಂಕ್ಷಿಪ್ತಸೂಚಿಯನ್ನು ಈಗ ಪ್ರತ್ಯೇಕವಾಗಿ, ಅನುಬಂಧ III ರಲ್ಲಿ ಸೇರಿಸಲಾಗಿದೆ. ಪಾರಿಭಾಷಿಕ ಶಬ್ದಗಳ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ. ಮೂರನೇ ಸಂಪುಟದಲ್ಲಿ ಸೂಚಿಸಿದ್ದಂತೆ ಅದನ್ನು ಕೊನೆಯ ಸಂಪುಟದಲ್ಲಿ ಅನುಬಂಧವನ್ನಾಗಿ ಕೊಡಲಾಗುವುದು.

ನಿಘಂಟು ಕಾರ್ಯಕ್ಕೆ ಮುಂಕ್ತಾಯವೆಂಬುದು ಭಾಷೆ ಇರುವತನಕ ಸಲ್ಲದ ಮಾತು. ಭಾಷೆ ಬೆಳೆಯುತ್ತಲೇ ಇರುತ್ತದೆ. ಹೊಸ ಶಬ್ದಗಳು ಸೃಷ್ಟಿಯಾಗುತ್ತಲೇ ಇರುತ್ತವೆ. ಆದುದರಿಂದ ಹೊಸ ಶಬ್ದಗಳ ಪಟ್ಟಿಯನ್ನು ಸಿದ್ಧಪಡಿಸುತ್ತಲೇ ಇರಬೇಕು. ಜೊತೆಗೆ ಅಭ್ಯಾಸವು ಮುಂದುವರಿದಂತೆಲ್ಲ ಹಿಂದಿನ ಸಂಪುಟಗಳಲ್ಲಿ ಬಿಟ್ಟು ಹೋಗಿರುವ ಶಬ್ದಗಳೂ ಸಿಕ್ಕುತ್ತವೆ. ಅವುಗಳನ್ನೂ ಜೊತೆಗೂಡಿಸಬೇಕು. ಈ ಎಲ್ಲ ಕಾರ್ಯಗಳನ್ನೂ ಈಗ ಮುಂದುವರಿಸಲಾಗುತ್ತಿದೆ. ಸಾಹಿತ್ಯದಲ್ಲಿಯೂ ಭಾಷಾಶಾಸ್ತ್ರದಲ್ಲಿಯೂ ವಿದ್ವಾಂಸರಾದ ಮಹನೀಯರು ಈ ನಾಲ್ಕನೇ ಸಂಪುಟವನ್ನು ಪರಿಶೀಲನೆ ಮಾಡಿ ಪ್ರಮಾದವಶದಿಂದ ಸೇರಿರಬಹುದಾದ ತಪ್ಪುಗಳನ್ನು ಸರಿಪಡಿಸಲು ನನಗೆ ಸಹಾಯಮಾಡಬೇಕಾಗಿ ಕೋರುತ್ತೇನೆ.

ಕರ್ನಾಟಕ ರಾಜ್ಯದ ಸರ್ಕಾರಿ ಮುದ್ರಣಾಲಯದ ಮಾನ್ಯ ನಿರ್ದೇಶಕರೂ ನನ್ನ ಪರಮಮಿತ್ರರೂ ಆಗಿರುವ ಶ್ರೀ ಬಿ. ಎಸ್. ರಾಮಮೂರ್ತಿ ಅವರು ಈ ಸಂಪುಟದ ಮುದ್ರಣ ಕಾರ್ಯದಲ್ಲಿ ತೋರಿಸಿದ ಆಸಕ್ತಿಯೂ ವಹಿಸಿದ ಶ್ರಮವೂ ನಮಗೆ ತುಂಬ ನೆರವು ನೀಡಿದವು. ಆ ಮುದ್ರಣಾಲಯದ ಸಿಬ್ಬಂದಿವರ್ಗದವರು ತುಂಬ ಆತ್ಮೀಯತೆಯಿಂದ ದುಡಿದರು. ಅವರೆಲ್ಲರಿಗೂ ಸಾಮೂಹಿಕವಾಗಿ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹಂಪ. ನಾಗರಾಜಯ್ಯನವರು ನಾಲ್ಕನೇ ಸಂಪುಟದ ಮುದ್ರಣವನ್ನು ಪ್ರಾರಂಭಿಸಿದ ಕಾಲದಿಂದ ಅದು ಪ್ರಕಟವಾಗುವವರೆಗೂ ಸಂಪೂರ್ಣ ಆಸಕ್ತಿಯನ್ನು ವಹಿಸಿ ನನಗೆ ಬೇಕಾದ ಎಲ್ಲಾ ಸಹಾಯಗಳನ್ನು ನೀಡಿ ನೆರವಾದರು. ಅವರ ಆತ್ಮೀಯತೆಗೆ ನಾನು ಮಾರು ಹೋಗಿದ್ದೇನೆ. ಅವರಿಗೆ ಕೃತಜ್ಞತೆ ಅರ್ಪಿಸುವುದು ನನಗೆ ಆನಂದದ ವಿಷಯ.

ಈ ಸಲದ ಮುದ್ರಣ ಕಾರ್ಯದಲ್ಲಿ ಕರಡನ್ನು ತಿದ್ದುವ ಕೆಲಸ ಸಂಪಾದಕವರ್ಗದ ಮೇಲೆ ಅಧಿಕವಾಗಿ ಬಿದ್ದಿತು. ನನ್ನ ಆರೋಗ್ಯದ ಸ್ಥಿತಿಯು ಸೂಕ್ಷ್ಮವಾದುದರ ಪರಿಣಾಮವಾಗಿ ನಾನು ಆ ಕಡೆ ಹೆಚ್ಚು ಕೆಲಸ ಮಾಡಲಾಗಲಿಲ್ಲ. ನಿಘಂಟಿನ ಉಪಸಂಪಾದಕರುಗಳಾದ ಶ್ರೀ ಹೀ. ಚಿ. ಶಾಂತವೀರಯ್ಯ, ಶ್ರೀ ಆರ್. ವಿ. ಕುಲಕರ್ಣಿ, ಶ್ರೀ ಟಿ. ಆರ್. ಮಹದೇವಯ್ಯ-ಈ ಮೂವರೂ ಅದರ ಸಂಪೂರ್ಣ ಭಾರವನ್ನು ಹೊತ್ತು ನನ್ನ ಕೆಲಸವನ್ನು ಹಗುರ ಮಾಡಿದ್ದಾರೆ. ಎಲ್ಲ ಸಹಾಯಕ ಸಂಪಾದಕರೂ ನಿರ್ವಂಚನೆಯಿಂದ, ಬಿಡುವಿಲ್ಲದೆ, ಈ ಕಾರ್ಯದಲ್ಲಿ ನೆರವು ನೀಡಿದ್ದಾರೆ. ಇವರೆಲ್ಲರಿಗೂ ಮತ್ತು ನಿಘಂಟಿನ ಇತರ ಸಿಬ್ಬಂದಿವರ್ಗದವರಿಗೂ ನಾನು ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಇವರೆಲ್ಲರ ಆತ್ಮೀಯವಾದ ವಿಶ್ವಾಸದಿಂದ ಇಂದಿನ ನನ್ನ ದೇಹಸ್ಥಿತಿಯಲ್ಲಿ ನಾನು ಈ ಕೆಲಸವನ್ನು ಮುಂದುವರಿಸುತ್ತಿರುವುದು ಸಾಧ್ಯವಾಗಿದೆ.

ಕನ್ನಡ ನಿಘಂಟಿನ ಈ ಮಹಾಕಾರ್ಯದಲ್ಲಿ ನಮ್ಮ ಸರ್ಕಾರದವರು ತೋರಿಸುತ್ತಿರುವ ವಿಶಾಲದೃಷ್ಟಿಯನ್ನೂ ನೀಡುತ್ತಿರುವ ಅಪಾರ ಧನಸಹಾಯವನ್ನೂ ಕುರಿತು ವಿದ್ವಾಂಸರೆಲ್ಲ ಮೆಚ್ಚಿಗೆಯನ್ನು ತೋರಿಸಿದ್ದಾರೆ. ಶತಮಾನಕ್ಕೊಮ್ಮೆ ಕೈಗೊಳ್ಳಬಹುದಾದ ಇಂಥ ಮಹಾಕಾರ್ಯಗಳ ಬಗ್ಗೆ ಸರ್ಕಾರದ ಈ ನಿಲುಮೆಯನ್ನು ಕನ್ನಡಿಗರೆಲ್ಲ ಪ್ರೀತಿ ವಿಶ್ವಾಸಗಳಿಂದ ಸ್ವಾಗತಿಸಿತುವುದಲ್ಲದೆ ಮನಸಾರ ಕೊಂಡಾಡಿದ್ದಾರೆ.

ಈ ಎಲ್ಲ ಅನುಕೂಲಗಳೂ ಒದಗಿರುವುದರಿಂದ ಐದನೇ ಸಂಪುಟವನ್ನು ಅದಷ್ಟುಬೇಗ, ೧೯೮೨ರ ವೇಳೆಗೆ ಸಂಪೂರ್ಣವಾಗಿ ಸಿದ್ಧಪಡಿಸಲು ಸಾಧ್ಯವಾಗುತ್ತದೆಂದು ನಂಬಿದ್ದೇನೆ.

ನಿಘಂಟು ಸಿದ್ಧವಾದ ಮೇಲೆ ಅದರ ಪ್ರಯೋಜನವನ್ನು ಎಷ್ಟು ಹೆಚ್ಚು ಜನ ಪಡೆದರೆ ನಿಘಂಟು ಸಿದ್ಧಪಡಿಸಿದವರಿಗೆ ಅಷ್ಟೂ ಸಂತೋಷ ಸಮಾಧಾನಗಳು ಉಂಟಾಗುತ್ತವೆ. ನಿಘಂಟಿನ ಇಂಥ ಪ್ರಯೋಜನ ಅಧಿಕಗೊಳ್ಳಲೆಂದು ಆಶಿಸುತ್ತೇನೆ.

ಬೆಂಗಳೂರು
ದಿನಾಂಕ : ೩೧-೧೦-೧೯೭೯

ಜಿ. ವೆಂಕಟಸುಬ್ಬಯ್ಯ
ಪ್ರಧಾನ ಸಂಪಾದಕ.

ಸಂಕ್ಷಿಪ್ತ ನೊಚಿ

ಅನಂಬಂಧ III

ಕ್ರಮ ಸಂಖ್ಯೆ	ಸಂಕ್ಷಿಪ್ತ	ಹೆಸರು	ಕರ್ತೃ	ಕಾಲ	ಇತರ ವಿವರಗಳು
೧	ಕಜಕ.	ಕರ್ನಾಟಕ ಜನಪದ ಕಲೆಗಳು	ಸಂ. ಗೊ.ರು. ಚನ್ನಬಸಪ್ಪ	೧೯೭೭	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರ
೨	ಕಜಕಾ.	ಕರ್ನಾಟಕ ಜನಪದ ಕಾವ್ಯಗಳು	ಡಿ. ಲಿಂಗಯ್ಯ	೧೯೭೬	ದಿನಕರ ಪ್ರಕಾಶನ, ಬೆಂಗಳೂರು
೩	ಕರ್ನಾಸಂ.	ಕರ್ನಾಟಕ ಸಂಸ್ಕೃತಿಯ ಸಂಶೋಧನೆ	ಕಪಟರಾಳ ಕೃಷ್ಣರಾಯ	೧೯೭೦	ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
೪	ಕಾವೇಮ.	ಕಾವೇರಿ ಮಹಾತ್ಮೆ	ಕವಿರಂಗ	ಸು. ೧೭೩೦	ಹಸ್ತಪ್ರತಿ ಕೆ. ೫೭೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೫	ಕಾಶೀಮ.	ಕಾಶೀಮಹಿಮಾರ್ಥದರ್ಪಣ	ಕಳಲೆನಂಜರಾಜ	೧೭೪೦	ಹಸ್ತಪ್ರತಿ ಕೆ. ೧೮೬, ೧೮೭ ,,
೬	ಕೊಳಲು.	ಕೊಳಲು	ಕುವೆಂಪು	೧೯೭೦	ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು-೨
೭	ಗುರುಚ.	ಗುರುದತ್ತ ಚರಿತ್ರೆ	ದೇವರಸ ಪಂಡಿತ	೧೬೫೦	ಹಸ್ತಪ್ರತಿ ಕೆ.ಬಿ. ೨೫೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೮	ಗೋವೈದ್ಯ.	ಗೋವೈದ್ಯ	?	?	,, ಕೆ. ೨೧೨/೩ ,,
೯	ಜ್ಞಾಪಕ.	ಜ್ಞಾಪಕ ಚಿತ್ರಶಾಲೆ ಸಂಪುಟ I, II ಮತ್ತು III	ಡಿ.ವಿ.ಜಿ.	೧೯೬೯	ಕಾವ್ಯಾಲಯ, ಮೈಸೂರು
೧೦	ಚತುಪ್ರ.	ಚತುರ್ದಂಡಿ ಪ್ರಕಾಶಿಕಾ	ಮೂಲ : ವೆಂಕಟಮುಖಿ ಅನು : ಪ್ರೊ. ರಾ. ಸತ್ಯನಾರಾಯಣ	೧೯೭೮	ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ
೧೧	ಚಾಮುಂಡಾ.	ಶ್ರೀ ಚಾಮುಂಡಾ ಲಘುನಿಘಂಟು	—	—	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮
೧೨	ಜಲಶಿ	ಜಲಶಿಲ್ಪಿ	?	?	ಹಸ್ತಪ್ರತಿ ಕೆ. ೨೮೩/೩, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೧೩	ಜ್ಯೋತಿಸಂ.	ಜ್ಯೋತಿಷ್ಯ ಸಂಗ್ರಹ	?	?	,, ಕೆ. ೪೧೧/೧ ,,
೧೪	ದೀದಕಾ.	ದೀಪದ ಕಲಿಯರ ಕಾವ್ಯ	ಚನ್ನಮಲ್ಲೇಶ	೧೭೦೦	?
೧೫	ದೀಪಧಾ.	ದೀಪಧಾರಿ	ಚೆನ್ನವೀರ ಕಣವಿ	೧೯೬೫	ಸುರುಚಿ ಪ್ರಕಾಶನ, ಸರಸ್ವತೀಪುರಂ, ಮೈಸೂರು-೫
೧೬	ದೇವಪು.	ದೇವಾಂಗ ದಾಸಿಮಯ್ಯನ ಪುರಾಣ	?	?	ಹಸ್ತಪ್ರತಿ ಕೆ.ಎ. ೩೧೯, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೧೭	ನಂಶತ.	ನಂಜುಂಡಶತಕ	ಕಪ್ಪಣ	ಸು. ೧೮೦೦	,, ಕೆ.ಬಿ. ೧೩, ,,
೧೮	ನಕ್ಷಚೂ.	ನಕ್ಷತ್ರಚೂಡಾಮಣಿ	?	?	,, ಕೆ.ಬಿ. ೨೪೭, ,,
೧೯	ನನ್ನಚ.	ನನ್ನಯ್ಯಗಳ ಚರಿತ್ರೆ	ಕವಿ ಮಾದಣ್ಣ	೧೬೫೦	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೨೦	ನಾಗಪ.	ನಾಗಕುಮಾರ ಪಟ್ಟದ	ಬೊಮ್ಮಣಕವಿ	೧೮ನೆಯ ಶತ	ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ
೨೧	ನೋಂಪಿಕ.	ನೋಂಪಿಯ ಕಥೆಗಳು	?	?	ಹಸ್ತಪ್ರತಿ ಕೆ. ೨೩/೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೨೨	ಪಂಚಲೀ.	ಪಂಚವಿಂಶತಿಲೀಲೆ	ಲಿಂಗರಾಜ	೧೮೫೦	,, ಕೆ.ಬಿ. ೨೦೩, ,,
೨೩	ಪಕ್ಷಿ.	ಪಕ್ಷಿಗಳು	ಶ್ರೀ ಜೆ.ವಿ.ಬಿ. ನಾಯ್ಡು ಮತ್ತು ಶ್ರೀಮತಿ ಚಂದ್ರಾ ಬಿ. ನಾಯ್ಡು	೧೯೭೦	ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
೨೪	ಪಕ್ಷಿಕಾ.	ಪಕ್ಷಿಕಾಶಿ	ಕುವೆಂಪು	೧೯೪೬	ಕಾವ್ಯಾಲಯ, ಮೈಸೂರು
೨೫	ಪರಪ್ರ.	ಪರಮಾತ್ಮಪ್ರಕಾಶ	ಯೋಗೀಂದ್ರದೇವ ಟೀಕೆ— ಬಾಲಚಂದ್ರದೇವ	?	ಹಸ್ತಪ್ರತಿ, ಕೆ.ಎ. ೩೩೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೨೬	ಪುರಂದ.ಧಾ	ಶ್ರೀ ಪುರಂದರದಾಸರ ಸಾಹಿತ್ಯ I, II, III, IV ಮತ್ತು V	ಸಂ. ಬೆಟಗೇರಿ ಕೃಷ್ಣಶರ್ಮ ಮತ್ತು ಹುಚ್ಚರಾವ ಬಿ. ಬೆಂಗೇರಿ	೧೯೬೫	ಪುರಂದರದಾಸರ ಆರನೇ ಶತಮಾನೋತ್ಸವ ಸಮಿತಿ, ಧಾರವಾಡ
೨೭	ಪ್ರಕರ್ಣಾ.	ಪ್ರಬುದ್ಧ ಕರ್ಣಾಟಕ	ತ್ರೈಮಾಸಿಕ ಪತ್ರಿಕೆ	—	ಮೈಸೂರುವಿಶ್ವವಿದ್ಯಾನಿಲಯ,ಮೈಸೂರು
೨೮	ಬೊಜೋಗಿ.	ಬೊಮ್ಮನಹಳ್ಳಿಯ ಕಿಂದರಿಜೋಗಿ	ಕುವೆಂಪು	೧೯೬೧ ಎರಡನೆಯ (ಮುದ್ರಣ)	ಉದಯರವಿ, ವಾಣೀವಿಲಾಸಪುರಂ, ಮೈಸೂರು

ಕ್ರಮ ಸಂಖ್ಯೆ	ಸಂಕ್ಷಿಪ್ತ	ಹೆಸರು	ಕರ್ತೃ	ಕಾಲ	ಇತರ ವಿವರಗಳು
೨೯	ಬೋರೆದೇ.	ಬೋರೇದೇವರು	ಡಿ. ಲಿಂಗಯ್ಯ	೧೯೭೬	ದಿನಕರ ಪ್ರಕಾಶನ, ಬೆಂಗಳೂರು
೩೦	ಭೂರಣೆ.	ಭೂವಿವರಣೆ ಭಾಗ I, II	ಕೆ. ಶ್ರೀನರಸಿಂಹಯ್ಯ	೧೯೩೧	ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ಸರ್ಕಾರ
೩೧	ಭೈರಪು.	ಭೈರವೇಶ್ವರ ಪುರಾಣ	ಸಿದ ಲಿಂಗ ಶಿವಯೋಗಿ	ಸು. ೧೬೦೦	ಹಸ್ತಪ್ರತಿ ಕೆ.ಎ. ೨೫೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೩೨	ಮದಚ.	ಮದಕರಿನಾಯಕನ ಚರಿತ್ರೆ	?	೧೮ನೆಯ ಶತ	,, ಕೆ.ಬಿ. ೪೮೨ ,,
೩೩	ಮಹಾಬ್ರಾ.	ಮಹಾಬ್ರಾಹ್ಮಣ	ದೇವುಡು	೧೯೭೬ (ಐದನೆಯ ಮುದ್ರಣ)	ಆನಂದ ಬ್ರದರ್ಸ್, ಬೆಂಗಳೂರು–೨
೩೪	ಮೂಕಜ್ಜಿ.	ಮೂಕಜ್ಜಿಯ ಕನಸುಗಳು	ಡಾ. ಶಿವರಾಮ ಕಾರಂತ	೧೯೭೮ (ಮೂರನೆಯ ಮುದ್ರಣ)	ರಾಜಲಕ್ಷ್ಮಿ ಪ್ರಕಾಶನ, ಬಳೇಪೇಟೆ ಚೌಕ, ಬೆಂಗಳೂರು
೩೫	ವರ್ಧಮಾ.	ವರ್ಧಮಾನ ಪುರಾಣಂ	ಎರಡನೇ ನಾಗವರ್ಮ ಸಂ. ಬಿ. ಎಸ್. ಸಣ್ಣಯ್ಯ	೧೦೪೨	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೩೬	ಶರೀಫ.	ಶರೀಫರ ಜನಪ್ರಿಯ ಪದಗಳು	ಸಂ. ಡಾ. ಡಿ. ಎಸ್. ಕರ್ಕಿ ಮತ್ತು ಶ್ರೀ ತಲ್ಲೂರ ರಾಯನಗೌಡರು	೧೯೬೩	ಶ್ರೀ ಶರೀಫ ಸಾಹಿತ್ಯ ಸಮಿತಿ, ಶಿಶುವಿನಾಳ ಧಾರವಾಡ
೩೭	ಶಾಸಗಿ.	ಶಾಸನಗಳಲ್ಲಿ ಗಿಡಮರಗಳು	ಡಾ. ಬಿ. ಜಿ. ಎಲ್. ಸ್ವಾಮಿ	೧೯೭೫	ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ
೩೮	ಶಿವಸಂ.	ಶಿವಶರಣ ಸಂಪುಟ	ಸಂ. ಎಚ್. ದೇವೀರಪ್ಪ	೧೯೭೩	,,
೩೯	ಷಡಕಂ.	ಷಡಕ್ಷರ ಕಂದ	ಕೊಂಡುಗೂಳಿ ಕೇಶಿರಾಜ	೧೧೬೦	ಹಸ್ತಪ್ರತಿ ಕೆ.ಬಿ. ೮೭/೩, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೪೦	ಸಸ್ಯನಿ.	ಸಸ್ಯಗಳ ನಿಘಂಟು	ಪೆಚ್. ಕೆ. ಮಲ್ಲಿಕಾರ್ಜುನಪ್ಪ	೧೯೭೩	ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ
೪೧	ಹಸುಹೊ.	ಹಸುರು ಹೊನ್ನು	ಡಾ. ಬಿ. ಜಿ. ಎಲ್. ಸ್ವಾಮಿ	೧೯೭೬	ಕಾವ್ಯಾಲಯ, ಮೈಸೂರು

ಸಂಕೇತಗಳು

ಅನುಬಂಧ III

[ಚಿತ್ರಶಾ] ... ಚಿತ್ರಶಾಸ್ತ್ರ
[ತರ್ಕಶಾ] ... ತರ್ಕಶಾಸ್ತ್ರ
[ಭಾಷಾಶಾ] ... ಭಾಷಾಶಾಸ್ತ್ರ
[ಭೌತವಿ] ... ಭೌತವಿಜ್ಞಾನ
[ಯೋಗ] ... ಯೋಗಶಾಸ್ತ್ರ
[ವಾಸ್ತು] ... ವಾಸ್ತುಶಿಲ್ಪ
[ಸಾಮುದ್ರಿ] ... ಸಾಮುದ್ರಿಕಶಾಸ್ತ್ರ

ತಿಗುರು$_1$: ೨. ಉಳ್ಳಿಯ ಸಿಪ್ಪೆ ಬೇವಿನೆಲೆ ತಗರ ಕೋಡು ಮೈಯ ತಿಗುರಿದ ತಿಗುರು ಬಿಳಿಯ ಸಾಸವೆ . . . ಇವಂ ಸಮಂಗೊಂಡು ಧೂಪವಿಕ್ಕುವುದು (ಬಾಲಚಿ. ೧೩೦-೫) ; ಪಂಕರುಹದಳನೇತ್ರೆಯರು ಕಾಂತೆಯ ಹೊರೆಗೆ ನಡೆತಂದೆಸೆವ ಕುಂಕುಮರಜದೊಳವಯವವ ಉರುತರದೆ ತಾಂ ತಿಗುರುತತಿ ವಿಸ್ತರದಿ ಮಜ್ಜನವೆಸಗಿ (ಜೀವಂಚಿ. ೮-೨) ; ಎನಗೆ ಬಂದೆಡಱೀ ವಿರಾಟನ ವನಿತೆಯರುಗಳ ಮುಡಿಯ ಕಟ್ಟುವ ತನುವ ತಿಗುರುವ ಕಾಲನೊತ್ತುವ ಕೆಲಸದುತ್ಸಾಹ (ಕುಪ್ಯಾವಿ. ೩-೬೦) ; ನವದುಕೂಲವನಲ್ಲದುಡದ ಮೃಗಮದಕುಂಕುಮವನಲ್ಲದಂಗದೊಳು ತಿಗುರದ ಸುವಾಸನೆಯೊಳು . . . ಒಪ್ಪುವ ಲತಾಂಗಿಯರು ನಡೆತಂದರು (ಸೌಂದಪು. ೭-೩೬) ; ಶ್ರೀಗಂಧ ಚೀನಿಕರ್ಪೂರ ಇವೆಲ್ಲವಂ ಹಸಿ ಹಾಲಲ್ಲಿ ಅರೆದು ಮೈಯ್ಯಂ ತಿಗುರೆ ತದ್ವರ್ತಿ ಕರಕುಮಾಣ್ಗುಂ (ವಿಪ್ರವಿ. ೯೨) ; ಘಸೃಣಪಂಕವನಾ ಕುವರಿಗೆ ತಿಗುರಿದರಾಳಿಯರು (ಶ್ರೀಪಾಲ. ೦೦-೩೪) ; ಪರಿಮಳವನು ತಿಗುರುವ ಹೆಂಗಳೊಡನೈತಂದರರ್ತಿಯಲಿ (ಕಂನವಿ. ೯-೭೯). ತಿಮಿರು$_1$: ೨. "ಉದ್ವರ್ತನಂ, ಉನ್ಮರ್ದನಂ, ಸೋತ್ಪಾದನಂ, ಭುರಿತಂ—ಈ ೪ ತಿಮಿರುವುದು" (ಹಲಾಯು. ೧೨೦-೪೬) ; ಲಲಿತಾಂಗಕೆ ನವಚಂದನಪಂಕವನೊಲವಿಂ ತಿಮಿರಿ (ಜಯಕಾ. ೫-೪) ; ಸುಮನಸುಗಂಧಕದಂಬದ ಕಂಪನು ತಿಮಿರಿ ತೆಗೆಯಲಾಗಿ (ಭರಕ. ೦-೩೬). ತಿವುರು$_1$: ೨. ದಿನ ಚತುರ್ಥಿಯ ಕಳೆದು ಮೃದು ಚಂದನವ ತನುವಿಗೆ ತಿವುರಿ (ಮದೇಪು. ೦೬-೪).

[ದೇ.॥ ತಮಿ. ತಿಮಿರ್, ತುವರ್ ; ಮಲ. ತಿಮಿರ್, ತುವರ]

ತಿಮಿರ್$_2$, ತಿಗುರು$_2$, ತಿವಿರ್, ತಿವುರ್, ತಿವುರು$_2$ (ನಾ). ೧. ಸಂಗಂಧ ವಸ್ತು ; ಲೇಪನ ವಸ್ತು ; ಪರಿಮಳ ದ್ರವ್ಯ ; ಅಣ್ಪು : ಪೂಸಿದದೊಂದು ಕುಂಕುಮಮೆ ತಾಂ ತಿಮಿರಾಗೆ (ಧರ್ಮಾಮ್ಯ. ೪-೦೪೪) ; ಏಱಿಸಿದ ತಿಮಿರೊಳುಮಿಟ್ಟ ತಿಲಕದೊಳಂ ಕಟ್ಟಿದ ದಂಡೆಯೊಳಂ (ಅನಂಪು. ೦೦-೮೨ ಪ) ; ನಿಜ ಮಕಾರದ ವಕಾರಕ್ಕೆ—ತಾಮರೆ, ತಾವರೆ; ಸಾಮಂತಂ, ಸಾವಂತಂ; ತಿಮಿರ್, ತಿವಿರ್ ; ತೆಮರ್, ತೆವರ್ (ಶಮದ. ೧೦೪ ಪ್ರಯೋ). ತಿಗುರು$_2$: ೧. ವೀರಪಟ್ಟೆಯ ಕಟ್ಟಿ ತಿಗುರನೇಱಿಸಿಕೊಂಬೆ (ಬಸವ. ೭೦೦) ; ಶಂಖರಸದರಿದಾಳದ ಪಸುರ ತಿಗುರೊಳಂ (ಜಗವಿ.೪-೮೦ ಪ) ; ತಿಗುರ ಗೆಲಿದಳು ತಿಲಕವನು (ಕುಪ್ಯಾಅ. ೮-೩) ; ಸಿಂಗರಿಸಿದ ಸಿರಿಗಂದದ ತಿಗುರು (ಗೀತಗೋ. ೦೩-೩); ಘಮಘಮ ಅಗುರು ಗಂಧದ ತಿಗುರು (ಹಾಡುಪಾ. ೪೪-೦೫). ತಿವಿರ್ : ೧. ಮೇಲಿನ 'ಶಮಂದ' ಪ್ರಯೋಗವನ್ನು ನೋಡಿ. ತಿವಿರು: ೧. ಮುಂಬಯಸಿ ಕೈಗೈದ ಸೊಬಗಿನ ಕೆಂಬಲರ ಮೈವಚ್ಚೆ ಕೆಂಬಲು ತುಂಬುಗುಂಕುಮ ತಿವಿರು ಚೆಂದುಟಿಯುಟ್ಟರುಣವಸನ (ಸಾಳ್ವಭಾ. ೩-೩೪). ತಿವುರ್: ೧. ಎಲೆಲೆ ತಿವುರಾಗಿ ಸಿತಭಸಿತಮಿರೆ ದೇಹದೊಳ್ (ಮೊನೆರ. ೧೪೦-೮) ; ಪ್ರಲಂಬ ಪಲ್ಲವಂಗಳನಿರಿಸಿದ ನಾನಾವರ್ಣದ ತಿವುರ್ಗಳ ನೊಸಲೊಳೆಸೆವ ಕುಂಕುಮದ . . . ಕಾಂತಿಗಳಿಂ (ಮಹಾನೇ. ೧೨-೪೬ ಪ). ೨. ವಿಷವನ್ನು ಹೋಗಲಾಡಿಸುವ ಒಂದಂ ವಿಧವಾದ ಲೇಪ : ಕಾಡವರೆ ಮಣಲು ಸುಣ್ಣಮಿವೀಡಿತ ವಜ್ರೋಪಮಾನ ತಿವುರೆನಿಸಿರ್ಕುಂ ಮಾಡಿದ ಸುಣ್ಣದೊಳಂ ಮಳಲೂಡಿರೆ ರವಿದುಗ್ಧಮಿವಱ ತಿವುರೆ ವಿಷಘ್ನಂ (ಖಮದ. ೧೬-೨೬). ತಿವುರು$_2$: ೧. ತಿವುರಿನ ಹೊಂಬಳೆಗಳ ಭಾಳದ ಚಂದ್ರದ ಚಿತ್ರದ ಮೊಗರಂಬದ . . . ಕರಿಘಟೆ ನೆರೆದುವು (ವೀರೇಚಿ. ೨-೨೮).

[<ತಿಮಿರ್$_1$]

ತಿಮಿರ$_1$, ತಿಮರು$_1$, ತಿಮಿರು$_2$, ತಿಮುರು (ನಾ). ೧. ತೀಟೆ ; ತುರಿಕೆ ; ನವೆ : "ಆ ಮೆಯ್ಯ ತಿಮಿರ ಕಂಡೂ ಖರ್ಜುಮೆನಿಸಿಕ್ಕು" (ಮಂಗರಾ. ೦೦೩-೧) ; ನಿಮ್ಮಯ ಭುಜದ ತಿಮಿರವು ಶೂನ್ಯವಹುದೆಂದ (ಸಂಭಪ. ೭-೨೭) ; ಮೈಯ ಸರ್ವ ತಿಮಿರ ಮಾಣ್ಗುಂ (ವಿಪ್ರವಿ. ೬೯) ; ತೋಳ ತಿಮಿರವದುಳ್ಳೊಡೆಮ್ಮೊಳು ಕಾಳಗವ ಮಾಡಲ್ಲದಿದ್ದರೆ ಹೇಳಿದಾ ಕಪ್ಪವನು ತೆತ್ತೀ ತಲೆಯನುಳುಹಿಕೊಳು (ಸಾಳ್ವಭಾ. ೦೯-೧೦) ; ಶರೀರ ಬಹು ತಿಮಿರವಾಗಿರ್ದಪುದು ಬೆನ್ನೀರ ತ್ವರಿತದೊಳಗೆತ್ತೆನಲು (ಪ್ರಭುಪು. ೯-೦೦೨). ತಿಮರು$_1$: ೧. ಕಜ್ಜಿ ತಿಮರು ಇಸಬು ಗಜಕರ್ಣ ಇಂಥ ರೋಗಗಳು ಆಗುವವು (ಕೃಷಿಪ್ರ. ೨೬೯) ; ತಿಮರು ತುರಿಸಿದರೆ ಅರಸಿನ ಹಾಗೆ (ಗಾದೆ). ತಿಮಿರು$_2$: ೨. ಸೊಕ್ಕು; ಪೊಗರು; ಗರ್ವ; ಅಹಂಕಾರ: ತಾನು ಕಲಿತುದನ್ನು 'ತೋರಿಸಿಕೊಳ್ಳಬೇಕು' ಎಂಬ ತಿಮಿರು ತೀರಿ . . . 'ತಿಳಿಸಿಕೊಡಬೇಕು' ಎಂಬ ವಿವೇಕ ಉದಯಿಸಿದಾಗ (ರಾಮರಾ. ೮೦). ತಿಮುರು: ೨. ಒಬ್ಬೊಬ್ಬರಿಗೆ ತಿಮುರು ಇಳಿಸಿಬಿಟ್ಟೇನು, ತಿಮುರು (ದಾಕೂಟ. ೮೨). ೩. ಸೊಕ್ಕಿದವನು ; ಬಲಿಷ್ಠನಾದವನು : ಒಳ್ಳೇ ತಿಮುರಾಗಿದ್ದ ಮಗ, ಬಲಿಷ್ಠಳಾದ ಮಗಳು, ಆನೆಯಂಥ ಎರಡು ಎತ್ತುಗಳು (ಜಿಳುಮ. ೫೯).

[ದೇ.॥ ತಮಿ. ಮಲ. ತಿಮಿರ್; ತೆಲು. ತಿಮ್ಮಿರಿ, ತಿಮಿರಿ, ತಿಮುರು]

ತಿಮಿರ$_2$ (ನಾ). ೧. ಕತ್ತಲೆ ; ಅಂಧಕಾರ : "ತಿಮಿರಂ ಸಂತಮಸಂ ಧ್ವಾಂತಮಂಧಕಾರಂ ತಮಂ ತಮಿಸ್ರಮದಕ್ಕುಂ" (ವಸ್ತುಕೋ. ೧೧-೬೩) ; "ತಿಮಿರಮವನಿಚ್ಛಾಯೆಯಂಧಕಾರಂ . . . ಧ್ವಾಂತವಮರ್ದ ಕತ್ತಲೆಯೆನಿಕು" (ಮಂಗರಾ. ೨೦-೮) ; ಭವರೋಗವೆಂಬ ತಿಮಿರ ಹರಿಯದನ್ನಕ್ಕ ಕೂಡಲಸಂಗಯ್ಯನೆತ್ತ ನೀನೆತ್ತ ಮರುಳೆ (ಬಸವ. ೦೩೦) ; ತರಣಿ ಪ್ರಭನರ್ಭಕನೀ ತರುಣಿಯ ಹೃತ್ತಿಮಿರಮಂ ನಿರಾಕರಿಸಿ ಬಹಿಷ್ಕರಿಸಿದನೆನಲೆಸೆಗುಂ ಕುಚಭರ ಚೂಚುಕಯುಗಳ ಕಾಳಿಮಂ ದೇವಕಿಯಾ (ಜಗವಿ. ೨-೯೨) ; ಏಳು ಜನ್ಮದಿಂ ಮಾಡಿರ್ದ ಪಾತಕವು ತರಣಿಯುದಯದ ಮುಂದೆ ನಿಂದ ತಿಮಿರದ ತೆಱದೆ ಹರೆಯುತಿಹುದು (ಹಚಕಾ. ೦೪-೩೨); ಆರು ಕಂಡರು ತಿಮಿರಜನಿತ ವಿಕಾರವನು ಹೇಳಿಗೆಯ ಮುಚ್ಚುಳ ಜಾಱಿಸಿದ ಫಣಿಯಂತೆ ಭುಲ್ಲವಿಸಿತ್ತು ಕುರುಸೇನೆ (ಕುಪ್ಯಾಕ. ೨೩-೩೮); ಹರಿಗಿರಿ... ಕರಿಗಳೆನ್ನಿಂದಂ ದಲ್ ಕರಿದಾದವೆನಗೆ ನೋಳ್ಪೊಡೆ ಸರಿಯಿಲ್ಲೆಂಬಂತೆ ಘೋರ ತಿಮಿರಂ ಮೆಱಿಗುಂ (ಹಮ್ಮೀರ. ೨-೦೦೧); ತಿಮಿರಕ್ಕೆ ರವಿ ದಸ್ಯು, ಜ್ಞಾನಮಜ್ಞಾನಕ್ಕೆ ದಸ್ಯು (ಶ್ರೀರಾಮಾ. ೦೮೬-೨೮೦). ೨. ಕಣ್ಣಿನ ಒಂದಂ ರೋಗ; ಕುರುಡುತನದ ರೋಗ: ಅಂಜನಂ ಗಳಿಂದಮದೆಂತು ಪರಿಹರಿಸಲರಿದೆನಿಪ್ಪುದು ಪರಮೈಶ್ವರ್ಯ ಪ್ರಭೂತ ತಿಮಿರಾಂಧತ್ವಂ (ಕಾದಂಪೂ. ೫೩೦) ; ಗುರುಗುಂಜೆಯ ಬೇರಂ ಕೊಂಡರೆ ದಾಡಿನ ಮೂತ್ರದಿಂದಮೆಚ್ಚುಗೆ ಜಳದಿಂದರೆದೆಚ್ಚುಗೆ ಮುಸ್ತೆಯನಂತರಿದೆನಿ ಪಾಸನ್ನ ತಿಮಿರಮಿವಱಿಂ ಕಿಡುಗುಂ (ಲೋಕೋಪ. ೯-೭೧) ; ಆಲಿ ನೊಂದುದೊ ಕಣ್ಣ ಬೇನೆಯೊ ಮೈಲಗೆಯೊ ಹೂ ಹುಟ್ಟಿದುದೊ . . . ತಿಮಿರವೊ ಟೊಳ್ಳೆ ಪೋದಪುದೋ (ಬಸಪು. ೦೮-೬೬); ಇಂತೀ ದೋಷತ್ರಯದಿಂದಂ ತಿಮಿರಂ ಕಾವ ಪುಷ್ಪಪಟಲಾದಿಗಳುಂ ಭ್ರಾಂತಿಲ್ಲದಕ್ಕುಮಱಿ ಕಡೆಗಂ ತುರಗವಿಲೋಚನಾದಿಯೊಳೆ (ಅಶ್ವಶಾ. ೧೫-೧೧); ತಿಮಿರವೆಂಬ ಕಣ್ಣುಬೇನೆ ಇರುವಾತನಿಗೆ ಕೂದಲಗಂಟು ಕಾಣುವಂತೆ (ತತ್ವಪ್ರಾ. ೧೮೪). ೩. ತಮೋಗುಣ. ೪. ದುಃಖ; ಶೋಕ. ೫. ರಾಹು. ೬. ದಡ್ಡತನ; ತಿಳಿಗೇಡಿತನ. ೭. ಠಕ್ಕತನ ; ಕುಟಿಲತಂತ್ರ ; ಕುಯುಕ್ತಿ. ೮. ತಪ್ಪು ; ದೋಷ. ೯. ಕುರುಡುತನ; ಅಂಧತ್ವ. 'ತಿಮಿರಾಕ್ಷ' ಪರಾ. "ಕತ್ತಲೆ ಶೋಕ ರಾಹು ಗುಣಸತ್ವರಜಸ್ತಮ ಮೂಢ ದೋಷಮುಂ ಕೃತ್ರಿಮವೆಂಬಿವುಂ ತಿಮಿರ ಶಬ್ದ" (ನಾನಾರ. ೧೩). [ಸಂ.]

ತಿಮಿರಗಣ್ಣು (ನಾ). ೧. ಕುರುಡಾದ ಕಣ್ಣು; ದೃಷ್ಟಿಹೀನವಾದ ಕಣ್ಣು. ೨. = ತಿಮಿರ ರೋಗ : ಅಂಕೋಲೆಯ . . . ಬೇರಿನ ತಿಗುಡಂ ಮೊಲೆ ಹಾಲಲ್ಲಿ ತೇದು ಹಚ್ಚಲು ತಿಮಿರಗಣ್ಣು ಮಾಣ್ಗುಂ (ವಿಪ್ರವಿ. ೧) ; ತಿಮಿರಗಣ್ಣು, ನೀರುಗಣ್ಣು, ಜಾರುಗಣ್ಣು...ಕೊಳೆಗಣ್ಣು (ಶುಕಸ.೩೨೮).

[ತಿಮಿರ$_2$ + ಕಣ್ಣು (<ಕಣ್)]

ತಿಮಿರಪಟಲ (ನಾ). ಕತ್ತಲೆಯ ರಾಶಿ : ಉದಯಗಿರಿಶಿಖರಕ್ಕೆ ರಾಗದಿಂ ಬಂದನಂಬುಜಮಿತ್ರನೆಂದೆನಿಪನಪವಿತ್ರತಿಮಿರಪಟಲಾಮಿತ್ರನು (ಹಜಕಾ. ೦೩-೧೧). [ತಿಮಿರ$_2$ + ಪಟಲ$_2$]

ತಿಮಿರಪೂಗ (ನಾ). = ತಿಮಿರಪಟಲ : ಬಿರಿಯೆ ಮೃದುಸರೋಜಂ ಬಿಂಕಮಂ ಬಿಟ್ಟು ರಾಜಂ ಜರಿಯೆ ತಿಮಿರಪೂಗಂ ಜಾಱೆ ಜಾರಾನುರಾಗಂ ಸರಿಯೆ (ರಾಜಶೇ. ೦೨-೨೯). [ತಿಮಿರ$_2$ + ಪೂಗ]

ತಿಮಿರರೋಗ (ನಾ). ಕಣ್ಣಿನ ಒಂದು ರೋಗ ; ಕುರುಡುತನವನ್ನುಂಟು ಮಾಡುವ ರೋಗ : ಕುಂಕುಮದ ಹೂವನ್ನು ತಿಲಕವಾಗಿ ಧರಿಸಿದರೆ . . . ತಿಮಿರರೋಗ, ಮೂಗಿನ ರೋಗ, ಶಿರೋರೋಗ ಮೊದಲಾದುವುಗಳನ್ನು ಕೆಡಿಸಿ . . . ಕಿವಿಯಲ್ಲಿ ಹುಟ್ಟಿದ ರೋಗಂಗಳಂ ಹಾಳುಮಾಡುವುದು (ಸಕವೈ. ೪೨). [ತಿಮಿರ$_2$ + ರೋಗ]

ತಿಮಿರವಾತ (ನಾ). ವಾತರೋಗಗಳಲ್ಲಿ ಒಂದು ಬಗೆ : ಏಳು ಸೆರೆ ಉದ್ದಿನ ಹಿಟ್ಟು, ಏಳು ಸೆರೆ ಹುರುಳಿಯ ಹಿಟ್ಟು, ಅಂಗುರದ ಹಿಟ್ಟು ಏಳು ಸೆರೆ, ಎಳ್ಳುಹಿಟ್ಟು ಏಳು ಸೆರೆ, ಈ ನಾಲ್ಕು ಬಗೆ ಹಿಟ್ಟನ್ನು . . . ಕಲಿಸಿ ಕೊಂಡರೆ ರಕ್ತ ಹೋಗುವುದು, ತಿಮಿರವಾತ, ಏಳುವಾಗ ನೋವು, ಸಂದು ವಾತಶೂಲೆ . . . ಎಲುಬಿನೊಳಗೆ ಹರಿವ ಬೇನೆ ಇವು ಎಲ್ಲವೂ ಮಾಣ್ಗುಂ (ವಿವೈವಿ. ೦೨೬). [ತಿಮಿರ$_1$ + ವಾತ]

ತಿಮಿರಾಕ್ಷ (ನಾ). ಕುರುಡ ; ದೃಷ್ಟಿಹೀನ : ಉದಯಸ್ಥಂ ದಿನನಾಥನಾಗೆ ವಿಕಲಾಕ್ಷಂ . . . ಮೇಷಲಗ್ನಕ್ಕೆ ಪೂರ್ದಿದೊಡಾಢ್ಯಂ ತಿಮಿರಾಕ್ಷಂ (ಜಾತತಿ. ೧೮-೧); ಕೋಪಶಿಖಿತಿಮಿರಾಕ್ಷನಾ ಜಮದಗ್ನಿಮುನಿಪನ ನುಡಿಯನನುಕರಿಸಿ ರಕ್ಷಿಸಿದೆ ರೇಣುಕೆಯನು (ಕುಮ್ಯಾಸ. ೧೪-೦೦೪).

[ಸಂ. (ತಿಮಿರ + ಅಕ್ಷಿ + –)]

ತಿಮಿರಾಪಹ (ಗು). ಕುರುಡುತನವನ್ನು ಕಳೆಯ ಬಲ್ಲ ; ಅಂಧತ್ವವನ್ನು ಹೋಗಲಾಡಿಸ ಬಲ್ಲ : ಇದು ತಿಮಿರಾಪಹಾಂಜನಮುಲೂಕಕುಲಕ್ಕಿದು ಪುಂಶ್ಚಲೀರತಕ್ಕುದಿತ ತಮಾಲಮಂಡಪಮಿದು (ಡಂದ್ರಪು. ೮-೧೯).

[ಸಂ.]

ತಿಮಿರಾರಿ (ನಾ). ಕತ್ತಲೆಯ ಶತ್ರು ; ಸೂರ್ಯ : ತಿಮಿರಾರಿ ಮೈ ದೋರಿದನು (ಶ್ರೀರಾಮಾ. ೪೫-೪೮೭). [ತಿಮಿರ$_2$ + ಅರಿ$_6$]

ತಿಮಿರಾಸ್ತ್ರ (ನಾ). ಕತ್ತಲೆಯನ್ನುಂಟುಮಾಡುವ ಬಾಣ : ತಿಮಿರಾಸ್ತ್ರ ದಿನಿಸೆ ಕರ್ಣಂ ... ಕಮಲಪ್ರಿಯಬಾಣದಿನೆಚ್ಚಮರೇಂದ್ರಾತ್ಮಜನದಂ ವಿಭೇದಿಸಿ ಕಳೆದಂ (ಬಂಹರಿ. ೦೨-೩೬) ; ಹಗಲನೊಂದೇ ತುತ್ತು ಮಾಡಿದ ವಿಗಡ ತಿಮಿರಾಸ್ತ್ರದಲಿ ತಿಮಿರವ ತೆಗೆಸಿದನು ಸೂರ್ಯಾಸ್ತ್ರದಲಿ ಬೆಱಗಾಗೆ ಸುರನಿಕರ (ಕುಮ್ಯಾಅ. ೭-೪೪). [ತಿಮಿರ$_2$ + ಅಸ್ತ್ರ]

ತಿಮಿರು$_1$ 'ತಿಮಿರ್$_1$' ನೋ.

ತಿಮಿರು$_2$ 'ತಿಮಿರ$_1$' ನೋ.

ತಿಮಿಸರಟ (ನಾ). "ಪಳೆಯುಳಿಕೆಯಾಗಿ ದೊರೆಯುವ ಹಲ್ಲಿಯ ವರ್ಗದ (ಪ್ರಾಣಿ) : ತಿಮಿಸರಟ" (Cetesaur. ಇಂಕನಿ).

[ತಿಮಿ + ಸರಟ]

ತಿಮಿಳ, ತಿಮುಟ, ತಿವುಳ (ನಾ). ತಮಿಳ ; ಅರವ. 'ತಿಮಿಳವಡೆ' ಪರಾ. ತಿಮುಟ : 'ತಿಮುಟನಾಡು' ಪರಾ. ತಿವುಳ : ಸಾಮನ್ತ ಗರುಡಂ ತಿವುಳಬಳಜಳಧಿಮಥನಮನ್ದನೋದ್ಭವ ಜಯಾಂಗನಾಲಿಂಗಿತ ವಿಶಾಳಭುಜದಣ್ಡಂ (ಎಕ. VII, ಶಿಕಾರಿ. ೩೦-೦೬ ; 1081) ; ಏಗೊಳಿಸಿ ತಿವುಳನಂ ಗಂಡುದೊತ್ತಾಳ್ದನ್ (ಮೈಅರಿ. ೦೯೨೯, ೬೫-೦೮; 1081) ; ತಿವುಳದೇಶದವರೆಲ್ಲರುಮಂ ಕಾಣಲಾಗದು (ಧರ್ಮಾಮೃ. ೯-೦೯) ; ಇವನು ಕನ್ನಡಿಗನವನು ಕೇರಳನು ಮತ್ತಿವನು ಕೊಂಕಣನಿವ ತಿವುಳ (ನೇಮಿಸಂ. ೨೩-೨೫೬). [<ತಮಿಳ]

ತಿಮಿಳವಡೆ (ನಾ). ತಮಿಳರ ಸೈನ್ಯ : ಪಾಂಡ್ಯಾದಿಗಳು ಕಾದಿ ಗೆಲ್ದಂ ನರಸಿಂಹ್ವಂ ಚೂಣಿಯಾಳೊಳಾ ತಿಮಿಳವಡೆ ಪಡಲ್ವಟ್ಟಡಳ್ಳಾಡೆ (ಎಕ. XVI, ಚಕ್ಕಣಾ. ೭೦-೬; 1235). [ತಿಮಿಳ + ಪಡೆ$_2$]

ತಿಮೀನ (ನಾ). ೧. ದೊಡ್ಡ ತಿಮಿಂಗಿಲ. ೨. [ಜ್ಯೋತಿ] ಒಂದು ನಕ್ಷತ್ರ ರಾಶಿ ; ಮತ್ಸ್ಯರಾಶಿ ; ಮೀನರಾಶಿ. ೧, ೨ : ದ್ರೋಣಂ ತಿಮೀನಂ ಗಳಿಂದೊಪ್ಪುತಕಳಂಕಮೆನೆ ಧನುಷ್ಕೋಟಿಯಿಂ ಬೆರೆದತುಳವೃಷಕ ನೆಲೆವನೆಯಿದೆನಿಸಿ (ಶ್ರೀರಾಮ. ೩-೨೯). [ತಿಮಿ+ಇನ$_2$]

ತಿಮುರು 'ತಿಮಿರ$_1$' ನೋ.

ತಿಮುಟ 'ತಿಮಿಳ' ನೋ.

ತಿಮುಟನಾಡು, ತಿವುಟ್ನಾಡು (ನಾ). ತಮಿಳುದೇಶ; ತಮಿಳರ ಪ್ರದೇಶ: ಇತ್ತ ತಿಮುಟನಾಟ್ಗೆ [ಪಾಠಾಂ. ದ್ರವಿಳನಾಳ್ಕೆ, ದ್ರವಿಳನಾಡಿಂಗೆ] ಪೋದ ಋಷಿಸಮುದಾಯಮೆಲ್ಲಂ ಪನ್ನೆರಡು ವರುಷಂಬರೆಗಂ ಸುಖ ದೊಳಿರ್ದು (ಪಡ್ಡಾರಾ. ೯೦-೦೪). ತಿವುಟ್ನಾಡು : ಕದಂಬಳಿಗೆ ನಾಡು ಸಾಯಿರಮುಂ ತಿವುಟ್ನಾಡೊಳಯ್ದು ನಾಡುಮಂ (ಎಕ. XI, ಹೊಳಲ್ಕೆ. ೩೩-೧೦ ; 966). [ತಿಮುಟ (<ತಿಮಿಳ) + ನಾಡು]

ತಿಮೊಗ (ನಾ). ಮೂರು ಮುಖವುಳ್ಳವನು ; ದತ್ತಾತ್ರೇಯ : ತಿಮೊಗಂ–ತ್ರಿಮುಖಂ (ಶಬ್ದಾನು. ೩೭೬ ಪ್ರಯೋ). [<ಸಂ. ತ್ರಿಮುಖ]

ತಿಮ್ಮ, ತಿಮ್ಮಣ್ಣ (ನಾ). ಕಪಿ ; ಕೋತಿ ; ಮಂಗ : ಇತ್ತಲಿತ್ತಲು ನಿನಗೆ ಮಿತ್ತುವು ಹತ್ತಿರೈದಿತು ತಿಮ್ಮ ನೀನಿನ್ನೆತ್ತಲಡಗುವೆಯೆನ್ನುತಂಬುಗಳಿಂದೆ ಬಿಡದಿಸಲು (ರಾಮಾಸಂ. ೫-೩-೫೩). ತಿಮ್ಮಣ್ಣ : ಗೇರ್ ಗೇರ್ ತಿಮ್ಮಣ್ಣ (ರೂಢಿ). [ದೇ.॥ ತಮಿ. ತಿಮ್ಮಣ್ = ಗಂಡು ಮಂಗ ; ತೆಲು. ತಿಮ್ಮ]

ತಿಮ್ಮಣ್ಣ 'ತಿಮ್ಮ' ನೋ.

ತಿಮ್ಮಪ್ಪ (ನಾ). ತಿರುಮಲೆಯ (ವೆಂಕಟೇಶ)ದೇವರು.–ಒಡೆಯ : ದಾಸನೆಂದರೆ ಬಿಡ ಗಟ್ಟಿ ನಮ್ಮ ಕೇಸಕ್ಕಿ ತಿಮ್ಮಪ್ಪಶೆಟ್ಟಿ (ಪುರಂದ. ೧-೬೭-೯).

[<ತಿರುಮಲೆ + ಅಪ್ಪ$_1$]

ತಿರು (ಗು). ೧. ಸ್ಥಿರವಾದ ; ಶಾಶ್ವತವಾದ ; ನಿತ್ಯವಾದ : "ಸಲೆ ತಿರ ಮೆನ್ನಲ್ ನಿಲ್ಲದೆ ತಾಂ ಸುಸ್ಥಿರಾರ್ಥಮಕ್ಕುಮಮೋಘಂ" (ಕವಿಕಂ. ೨೦೩); ನರನೆಚ್ಚೊಡೆ ಪಱಿದು ಕರಂ ಕರವಾಳೊಡನಮರೆ ಕಾಸಿ ಬೆಚ್ಚಂತೆ ವಸುಂಧರೆಯೊಳ್ ಬಿಟ್ಟುರ್ದುದದೇಂ ತಿರವೋ ಪೂಣಿಸಿದ ಮುಷ್ಟಿ ಭೂರಿಶ್ರವನಾ (ಪಂಪಭಾ. ೧೦-೦೪೧) ; ಈತನ ಸತಿಯ ಕಿವಿಯೋಲೆಗಳು ತಿರವಲ್ಲೆಂದನಸುರಾರಿ [ಪಾಠಾಂ. ಭೂಪನ ಸತಿಯ ಕಿವಿಯೊಳಗೋಲೆಯ ಸ್ಥಿರವಱಿವೆ ತಾನೆಂದ] (ಕುಮ್ಯಾಉ. ೯-೩೬) ; ಸಿರಿಯು ಬಂದರೆ ಲೇಸು ತಿರದ ಜವ್ವನ ಲೇಸು (ಸರ್ವಜ್ಞ. ೧೨೯). (ನಾ). ೨. ಸ್ಥೈರ್ಯ : ತಿರದಿಂದಂ ತಿಳಿದೆತ್ತಿ ಕಾದುವುದು (ಕಬ್ಬಿಕಾ. ೧೫೯). ೩. ಶಿವ : "ಗೊರವಂ ... ತಿರ ಗೊಂದೆವಟವಿಗೆಯ ... ಮಾದೇವ ಗನಹನಿಂಗಳಕಣ್ಣ ಕಿಡಿಗಣ್ಣನು" (ಕಬ್ಬಿಕೈ. ೪). [<ಸಂ. ಸ್ಥಿರ]

ತಿರಗಂಚಿ (ನಾ). ತೇರಂ ಅಥವಾ ಮಂದುವೆಯ ಮೆರವಣಿಗೆಯಂ ಒಂದಂ ಗುರಿಮುಟ್ಟಿ ತಿರುಗುವುದು : (ಕಿ). [?]

ತಿರಗಾಸು 'ತಿರುಗಾಸ್' ನೋ.

ತಿರಜೀವಿ (ನಾ). ಚಿರಂಜೀವಿ : ನಿಶ್ಚಲನಾಗಿ ತಿ[ಪಾಠಾಂ.ಸ್ಥಿ]ರಜೀವಿ ಯಾಗಿ ಜಟಿಯಾಗಿ . . . ಪರಮಯೋಗೀಂದ್ರನೆನೆ ಹೇಮಕೂಟಾಚಲಂ ಕಣ್ಗೆಸೆದುದು (ಜಿಬಪು. ೩೪-೦೪). [ತಿರ + ಜೀವಿ$_1$]

ತಿರನೆಳಲ್ (ನಾ). ಸ್ಥಿರವಾದ ನೆರಳು ; ಶಾಶ್ವತವಾದ ಛಾಯೆ : ಹರಿದಶ್ವನ ತುರಗಂಗಳ ತಿರನೆಳಲೊ ಭೂಮಿದೇವಿ ಪೊದೆದತಿಹರಿದಂಬರ ಮೆಂಬಂತಿರೆ ಪಸುರಾದುರು ಶಾಳೀಕ್ಷೇತ್ರವೆಸೆಗುಮಿಳೆಗತಿಭಾಗ್ಯಂ (ಹಮ್ಮೀರ. ೧-೫೦). [ತಿರ + ನೆಳಲ್ (<ನೆಟಲ್$_1$)]

ತಿರಮಂಡಗವುಂಡ (ನಾ). ಒಬ್ಬಾತನ ಹೆಸರಂ: ಕುನ್ದತೂರ ತೋರ ಬಿವಿನೊಳ್ ×× ಸಳಗ ತಿರಮಣ್ಣ ಗವುಣ್ಡರ ಮುದ್ದಯಂ ಕಾದಿ ಸ್ವರ್ಗಸ್ಥನಾದ (ಎಕ. ೪, ಮುಳದಾ. ೨೬೬-೬ : ಸು. ೮೦೦).

[ತಿರಮಂಡ್ಯ + ಗವುಂಡ (<ಗಾಮುಂಡ]

ತಿರವಿ (ನಾ). (?) : ತಳಗು ಕಲೆ ಕಚರಿ ಜರ್ಝರಿ ವುಳಕಂ ತಿಳಿಗಾರೆ ತಿರವಿ ವರ್ಣಮಣಂ ಸಂಗಳಿಸದೆ ಪಳುಕಿನ ಕುಟ್ಟಿಮತಳಮದು ತಳತಳಿಸಿ ತೊಳಗುವುದು ತನಿವೆಳಗಿಂ (ಕುಸುಮಾ. ೧-೦೧೩). [?]

ತಿರಶ್ಚೀನ (ನಾ). ೧. ಅಡ್ಡಡ್ಡವಾಗಿರಂವುದು. ೨. [ನಾಟ್ಯ]"ಜಂಘೆಯಂ ಹೊರಪಾರ್ಶ್ವವನ್ನಿ ನೆಲಕ್ಕೆ ತಾಕಿಸುವುದು " (ಶಾಸ್ಕರಂ. ೨೬೪ ಗದ್ಯಾನುವಾದ) : ಮುಂದಕ್ಕೆ ನೀಡೆ ನಿಸೃತಂ ಚಂದದಿ ಪೆಱಗೆಯ್ದಿ ಧರೆಯನೊಂದ ಪರಾವೃತಬೊಂದಿ ಬಹಿಃಪಾರ್ಶ್ವಂ ಧರೆಯಿಂದಿನಿಸುವ ಜಂಘೆಯೇ ತಿರಶ್ಚೀನಾಖ್ಯಂ (ಶಾಸ್ಕರಂ. ೪-೦೪೭). ೩. ಅಂಗಾಲಿನ ಆರು ನ್ಯಾಸಗಳಲ್ಲಿ ಒಂದು : ಪತಿತಾಗ್ರವಂಚ್ಚೈತಾಗ್ರಂ ನುತಭೂಮಿವಿಲಗ್ನಮೊಳ್ಪ ವೆತ್ತುದ್ವೃತ್ತಂ ಅತಿಶಯಕುಂಚನ್ಮಧ್ಯಂ ಸತಿಯೆ ತಿರಶ್ಚೀನಮಾಜು ಪದತಳಭೇದಂ (ಶಾಸ್ಕರಂ. ೩-೦೩೦). [ಸಂ.]

ತಿರಸಟ, ತಿರಸಪ್ಪ (ನಾ). ೧. ಸಿಡಿವಿಂಡಿಯ ಸ್ವಭಾವದವನು ; ಸಿಡುಕ : 'ತಿರಸಟ' ಎಂದರೆ ಸಿಡುಕಿನವನು (ಕರ್ನಾಟ. ೩೩). **ತಿರಸಪ್ಪ** : ೧. ನೀ ಎಷ್ಟು ತಿರಸಪ್ಪ ಇದ್ದರೂ ತುಡುಗಿಲೆ ಕಳವು ಮಾಡಲಾರಿ, ಹೇಳಿಕೇಳಿ ಕಸ ಕತ್ತರಿಸುವ ವಸ್ತಾದ ನೀ (ಧನಂಜ. ೩೯). (ಗು). ೨. ಒರಟಾದ ; ವಕ್ರವಾದ ; ಸಿಡುಕಿನ : ಇನ್ನೊಮ್ಮೆ ಆ ತಿರಸಪ್ಪ ಹೆಣ್ಣುಮಗಳ್ನ ಇಲ್ಲಿ ಒಳಗೆ ಬಿಡಬ್ಯಾಡ (ಸಮುಜೀ. ೨೦೬). [← ಮರಾ. ತಿರಸಟ]

ತಿರಸಪ್ಪ 'ತಿರಸಟ' ನೋ.

ತಿರಸೆ 'ತೀರಸಿ' ನೋ.

ತಿರಸ್ಕರ (ಗು). ೧. ಕೆಳಗೆ ತಳ್ಳುವ. ೨. ಧಿಕ್ಕರಿಸುವ ; ವಿಮಾರುವ ; ಅತಿಕ್ರಮಿಸುವ : ಭೀಮವಿಕ್ರಮ ಸಿಂಧುರಮನಭರಾಮದಾನಗಜೇಶನಂ ಸುತ್ರಾಮದಂತಾವಳ ತಿರಸ್ಕರ ದಂತಿಯಂ ತನ್ನಿ (ಬಸಪು. ೫೯-೩೦).

[ಸಂ.]

ತಿರಸ್ಕರಣ (ನಾ). ಕಡೆಗಣಿಸುವಿಕೆ ; ಅವಹೇಳನ ; ಅಪಮಾನಗೊಳಿಸುವಿಕೆ ; ತಾತ್ಸಾರ : ಎನ್ನೊಡನೇಕೆ ನಿನ್ನ ಮತಿ ನಿನ್ನ ಮದಾಂಧತೆ ... ನಿನ್ನ ಬಗೆ ನಿನ್ನ ತಿರಸ್ಕರಣಂ ಬೃಹಸ್ಪತೀ (ಗಿರಿಕ. ೬-೩೭). [ಸಂ.]

ತಿರಸ್ಕರಣಿ (ನಾ). ತೆರೆ ; ಪರದೆ : ತಿರೆಯ ಮಜಿಯಲಿ ಸಮರ್ಪಿಸಿದ ಧೂಪಾರತಿಯನಿರಿಸಲ್ತದಂಗಾರ ಸಂಸ್ಪರ್ಶನದಿ ತಿರಸ್ಕರಣಿ ದೇವುತ್ತಿರಲ್ಕೆ (ರಾಳಿಚ. ೧೪-೫೯) ; ತಿರಸ್ಕರಣಿಯು ನಿಶ್ಶಬ್ದವಾಗಿ ಮುಂದೆ ಸರಿದು ... ಒಂದು ಕೋಣೆಯನ್ನು ಮಾಡಿತು (ನಡದಾ. II, ೦೪೭೩).

[ಸಂ. ತಿರಸ್ಕರಣೀ]

ತಿರಸ್ಕರಿಣಿ (ನಾ). ೧. ತೆರೆ ; ಪರದೆ. ೨. ಅದೃಶ್ಯತೆಯನ್ನುಂಟುಮಾಡುವ ಮಾಯಾಶಕ್ತಿಯುಳ್ಳ ಮೇಲ್ಮುಸುಕು : ಎಲಾ ತಿರಸ್ಕರಿಣೀ ಗರ್ವಿತನೆ, ನನ್ನ ಅಸ್ತ್ರವು ನಿನ್ನನ್ನು ಕಾಣುವುದು (ಶಾಕುಂತ. ೯೬-೩೦).

ತಿರಸ್ಕರಿಣೀ ವಿದ್ಯೆ = ಇತರರ ಕಣ್ಣಿಗೆ ಬೀಳದಂತೆ ಮರೆಯಾಗಬಹುದಾದ ಒಂದಂ ವಿದ್ಯೆ ; ಅದೃಶ್ಯವಾಗುವ ವಿದ್ಯೆ : ಈ ಉದ್ಯಾನ ಪಾಲಿನಿಯರ ಪಾರ್ಶ್ವದಲ್ಲಿ ತಿರಸ್ಕರಿಣೀವಿದ್ಯೆಯಿಂದ ಒಬ್ಬರಿಗೂ ಕಾಣಿಸದಂತೆ ಇದ್ದುಕೊಂಡು ನೋಡುವೆನು (ಶಾಕುಂತ. ೬೯-೦೦). [ಸಂ. ತಿರಸ್ಕರಿಣೀ]

ತಿರಸ್ಕರಿಣಿಕೆ (ನಾ). = ತಿರಸ್ಕರಣಿ : "ತಿರಸ್ಕರಿಣಿಕಾಖ್ಯೆ ಜವನಿಕೆಯಕ್ಕುಂ" (ವಸು.ಕೋ. ೪೯-೨೩). [ಸಂ. ತಿರಸ್ಕರಿಣಿಕಾ]

ತಿರಸ್ಕರಿಸು (ಕ್ರಿ). ಕಡೆಗಣಿಸುಂ ; ಧಿಕ್ಕರಿಸುಂ ; ಅವಹೇಳನಮಾಡುಂ : ಮಹಾಋಷಿಯರಂ ನಿಮಗೆ ಪಟಿಯಲುಂ ಬಯ್ಯಲುಂ ತಿರಸ್ಕರಿಸಿ ನುಡಿಯಲುಮಕ್ಕುಮೆ (ನಡಾ.ರಾ. ೯-೦೩) ; ತಥಾಗತಮತಮಂ ತಿರಸ್ಕರಿಸಿ ತನ್ನೊಳಶಕ್ಯಾನುಷ್ಠಾನಕ್ಕೆ ಪೊಣರ್ದ ಲೋಕಾಯತಶಾಕ್ಯಮತಾವಲಂಬಿಯನವಿಲಂಬಿತಂ ಗೆಲ್ದು (ಶಾಂತಿಪು. ೯-೦೪೭ಪ) ; ಮತಿಗೆಟ್ಟು ಬಾಯ್ಗೆ ವಂದಂತೆ ತಿರಸ್ಕರಿಸುವುದು ವುರುಷಾಕಾರಮೆ ಗುರುವಂ (ಸುಳುಮಾ. ೪-೩೭). [ತಿರಸ್ಕರಣ + – ಇಸ್ಕು]

ತಿರಸ್ಕಾರ (ನಾ). = ತಿರಸ್ಕರಣ : ಅವರ ರೀತಿ ಅನೇಕ ಶಿಕ್ಷಕರಲ್ಲಿ ತಿರಸ್ಕಾರವನ್ನೇ ತಂದಿತು (ರಂಗಕೋ. ೩೨) ; ಪ್ರಾಚೀನ ಸಂಪ್ರದಾಯ ಪಾಲಿಸಿದ ಭಾರತೀಯರಿಗೆ ಸಮಾಜದಲ್ಲಿ ತಿರಸ್ಕಾರ, ಸರ್ಕಾರದಲ್ಲಿ ನಕಾರ, ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಧಿಕ್ಕಾರ (ಹುಣ್ಣಾ.ರ. ೦೦೩ ಪೀಠಿಕೆ) ; ನಮಸ್ಕಾರ ಇದ್ದಲ್ಲಿ ತಿರಸ್ಕಾರ ಇದ್ದೀತು (ಗಾದೆ). [ಸಂ.]

ತಿರಸ್ಕೃತ (ಗು). ೧. ಧಿಕ್ಕಾರಕ್ಕೊಳಗಾದ ; ಹೀಯಾಳಿಕೆಗೆ ಗುರಿಯಾದ: ಸಿಂಗರಿಸಿ ಬಂದಡರ್ದಂ ಜಯರವದೊಳಾ ಸುಧನ್ವಂ ತಿರಸ್ಕೃತ ಕುಸುಮ ಧನ್ವನು (ಚಿಮಿಧಾ. ೦೨-೪). ೨. ಮೂದೆಮಾಡಿದ ; ಮುಂಚ್ಚಿದ. ೩. ನಿರಾಕರಿಸಿದ; ಅಸ್ವೀಕೃತ. (ನಾ). ೪. ಧಿಕ್ಕಾರಕೊಳ್ಳಗಾದುದು; ಹೀಯಾಳಿಕೆಗೆ ಗುರಿಯಾದುದು: ೧೯ನೆಯ ಶತಮಾನದ ಅಂತ್ಯದೊಳಗೆ ಭಾರತೀಯ ಸಂಸ್ಕೃತಿ ಪೂರ್ಣವಾಗಿ ತಿರಸ್ಕೃತವಾದ ವಿಷಯ ವಾಯಿತು (ಹುಣ್ಣಾ.ರ. ೦೦೩ ಪೀಠಿಕೆ). [ಸಂ.]

ತಿರಸ್ಕೃತಿ (ನಾ). = ತಿರಸ್ಕರಣ : ತನಗೆ ವೇಳ್ದುದನಾಲಿಸದನಾ ತ್ರಿಕೂಟ ಲಂಕಾಧಿಪಂ ಕಟುತಿರಸ್ಕೃತಿ ಗದೆಯ ಘಾತಕ್ಕೆ ಕಣ್ಮುಚ್ಚಿದನ್ (ಶ್ರೀರಾಮಾ. ೪೪೪-೨೩೦). [ಸಂ.]

ತಿರಸ್ಕೃತೆ (ನಾ). ನಿಂದೆಗೊಳಗಾದವಳಂ ; ತಿರಸ್ಕರಿಸಲ್ಪಟ್ಟವಳಂ : ಕೈಕೆಯುಂ ನರ ತಿರಸ್ಕೃತೆ ವಿಕೃತ ಮಂಥರಾದಾಸಿಯುಂ . . . ಪ್ರೀತಿಸುತೆ (ಶ್ರೀರಾಮಾ. ೨೪-೨೩೩). [ಸಂ. ತಿರಸ್ಕೃತಾ]

ತಿರಾಯತ, ತಿರ್ಯಾಹಿತ (ನಾ). ವಂಧ್ಯಸ್ಥ ; ತೀರ್ಪುಗಾರ; "ಹಿರಿಯಂ, ತೀರ್ಪುಕೊಡುವವ, ನ್ಯಾಯಾಧೀಶ" (ಶಾನಕೋ. ೬೬). **ತಿರ್ಯಾಹಿತ:** ನಿಮ್ಮ ತಾಯಿಯ ಸುಖದುಃಖಗಳ ದ್ರಷ್ಟಾರರು ನೀವಾಗುತ್ತಿದ್ದರೆ ನಾನಂ ತಿರ್ಯಾಹಿತ ಯಾಕೆ ನಿಮ್ಮೆದುರಿಗೆ ಉಪಸ್ಥಿತ ಆಗುತ್ತಿದ್ದೆ (ರಕ್ತಧ್ವ. ೨೦೩) : ತಿರ್ಯಾಹಿತರ ಹಾಗೆ ಮಾತಾಡಬ್ಯಾಡ (ರಕ್ತಧ್ವ. ೨೩೭).

[←ಮರಾ. ತಿರಾಯತ, ತಿರ್ಯಾಹಿತ]

ತಿರಿ1 (ಕ್ರಿ). ೧. ತಿರುಗುಂ ; ಸುತ್ತಾಡುಂ ; ಸುತ್ತುಂ : ಕೆಲವು ಕಾಲದಿಂ ಬಬ್ಬುಕ್ಕೆ ಸತ್ತು ತಾನುಂ ಮಕ್ಕಳುಂ ಸಂಸಾರದೊಳ್ ತಿರಿಯುಂ [ಶಾಕಾಂ. ರುಗು] ಶ್ರಿರ್ದರ್ (ನಡಾ.ರಾ. ೯-೨೨) ; ಜಯಾಸ್ತ್ರಮನುರ್ಚಿಕೊಂಡು ಭೋಂಕೆನೆ ದೊಣೆಯಿಂ ಶರಾಸನದೊಳಂತದನಾಗಡೆ ಪೂಡಿ ಧಾತ್ರಿ ಕಿಱ್ದನೆ ತಿರಿವನ್ನೆಗಂ ತೆಗೆದು (ಪಂಚಭಾ. ೧೨-೦೬೮) : ಎನಿತಂ ಸಂಸಾರದೊಳಗೆ ಕಿಱ್ದನೆ ತಿರಿವೈ (ಅಜಿಪು. ೩-೬೦) : ಗಾಣದೆತ್ತು ಮೆಟ್ಟಿದುದನೆ ಮೆಟ್ಟಿ ಕೂಡೆ ತಿರಿವಂದದೊಳೀ ತ್ರಿಜಗಂಗಳೊಳ್ಕೊಟಲ್ದುದು (ಸಮಪ. ೦೩-೧೯) : ವಿಪನಾಂತರದೊಳಗೆ ತೊಳಲಿದೆವು ತಿರಿದೆವು ಹೊರೆದೆವೊಡಲುಗಳ (ಕುವ್ಯಾಆ. ೧೭-೮). ೨. ತಿರುಪೆ ಎತ್ತುಂ ; ಭಿಕ್ಷೆ ಬೇಡುಂ ; ಯಾಚಿಸುಂ : ತಾರ್ಬರುಂ ತಿರಿದು ತಂ [ಶಾಕಾಂ. ತಿರಿತಂ] ದಿಕ್ಕಿದೆಂದಲೆವುಮಂ ತಿಂದು (ಆದಿಪು. ೩-೪೪ ಪ) ; ತಾಂ ತಿರಿವ ಗೊರವಿ ಬೆನಕನುಮಂ ತಿರಿಯಪೆಳೆಂಬ ತೆಱದೆ (ಶಾಂತಿಪು. ೯-೦೩೦) ; ತಿರಿಯಲ್ಬಂದವರಂ ಕೂಬನಡಿಮೆಂಬಂತೆ (ಧರ್ಮಾಮೃ. ೬-೪೭) ; ಹರ ತನ್ನ ಭಕ್ತರ ತಿರಿವಂತೆ ಮಾಡುವ (ದೀದಾವ. ೪೬-೯೦) ; ತಿರಿವ ಹಾರಂವರೊಡನೆ ಭೂಮೀಶ್ವರರಿಗೆತ್ತಣ ಮೈತ್ರಿ (ಕುವ್ಯಾಆ.೬-೩೦) ; ಕಣ್ಣು ಮೂಜಿಗಳ್ಳವಗೆ ತಿರಿದುಂಬ ಚಿಂತೆ (ಪುರಂದ. ೦-೦೭೪-೦) ; ಕೊಟ್ಟು ಕೆಟ್ಟವನಿಲ್ಲ ತಿರಿದು ಬದುಕಿದವನಿಲ್ಲ (ಗಾದೆ) ; ತಿರಿಕೊಂಡು ಉಂಡರೂ ಕರಕೊಂಡು ಉಣ್ಣು (ಗಾದೆ).

೨. ಹೊಸೆ ; ತಿರುಗಿಸು. 'ತಿರಿಚು' ಪರಾ. ೪. (?) : ತಿರಿವುದ ದೊಂದು ಚಕ್ರದೊಳೆ ನಿಂದು ದಿವಾಕರನೆ ಮತ್ತಱಿದು ಕಳೆವೊಡಂತದ ನಾವೆಡೆಯಿಂದರಮೆಯಾಗಿ ನೆಲಸಿ ಕೆಲಕಾಲದಿಂ ಪೊರೆದಿರದಱಿದ ಬಱಿಕ ತಾ ನೆಲದೊಳ್ (ಕವಿರಾ. ೨-೦೪೪).

ತಿರಿದಾಡು=ಸುತ್ತಾಡು ; ಅಲೆದಾಡು : ಕೈರವವಾರಿಜಂಗಳಲರಂ ತಿರಿದಾಡುವ ಭೃಂಗಮಾಲೆಯಂ ಬಾರಿಸಿ (ವರ್ಧಪು. ೧-೪೦). ತಿರಿದುಣ್= ಭಿಕ್ಷೆಬೇಡಿ ತಿನ್ನು ; ಯಾಚಿಸಿ ಹೊಟ್ಟೆಹೊರೆ : ತಿರಿದುಂಡಂದಲ್ಲದೆ ಮೆಯ್ಮಣಿಯದು ಸಂದೆಯಮಿನ್ನೇಕೆ (ಧರ್ಮಾಮೃ. ೦೩-೪೬) ; ತಿರಿದುಂಬ ಮಾರಯ್ಯ ಬೀರಯ್ಯ...ಕೇತಯ್ಯಗಳೆಂಬ ನೂಱು ಮಡಕೆಗೆ . . . ದೇವ ಶರಣೆಂಬುದೊಂದು ದಡಿ ಸಾಲದೆ (ಬಸವ. ೫೫೨) ; ಪರಿಪರಿಯಲಿ ಹಿರಿಯರ ದೂಷಿಸುವವ ತಿರಿದುಂಬುವುದೆ ಸಾಕ್ಷಿ (ಪುರಂದ. ೨-೦೭-೭) ; ಹಂಚನೆ ಹಿಡಿದು ತಿರಿದುಂಬ ಜ್ಞಾನಿ ತಾ ಹಂಚುಹಱಿಯಹನು (ಸರ್ವಜ್ಞ. ೩೪೮) ; ಹರಸೋದು ತಪ್ಪೋದಿಲ್ಲ ತಿರಿದುಂಬುವದು ಹೋಗೋದಿಲ್ಲ (ಗಾದೆ). ತಿರಿದುಣಿಸು=ತಿರಿಯುವಂತೆ ಮಾಡು ; ಭಿಕ್ಷೆಬೇಡಿಸು : ಈಶಾನ್ಯನ ನಿಳೆಯೊಳು ತಿರಿದುಣಿಸಿದನದಟಿಂದ (ತ್ರಿಪುಸಾಂ.೬-೬೬).

[ದೇ. ॥ ತಮಿ. ಮಲ. ತುಳು. ತೆಲು. ತಿರಿ]

ತಿರಿ$_2$ 'ತಿಱಿ' ನೋ.

ತಿರಿ$_3$ (ನಾ). ೧. ಹೊಸೆದುದು ; ಹುರಿಮಾಡಿದುದು : ಜಟಾ, ಸಟಾ . . . ೨ ವ್ರತನಿಯಮವುಳ್ಳವರ ಜಡೆಗಳ ಹೆಸರು, ಮಣುಕು ಕೂದಲು, ಜಡೆತಿರಿಗಳು (ಸಿದ್ಧಾಂತಿ.೦೭೦). ೨. (ಕರಾ) ಕಾಳು, ಬತ್ತ ಮುಂತಾದುವನ್ನು ರಕ್ಷಿಸಿ ಇಡಲು ಹುಲ್ಲಿನಿಂದ ಹೊಸೆದು ಮಾಡಿದ ಸಾಧನ : ಕೊಯಿಲು ಮುಗಿಯಿತು ; ಬತ್ತ ಚಾವಡಿಯಲ್ಲಿ ರಾಶಿಗೊಂಡಿತು ; ತಿರಿಯ ಕೆಲಸ ವಾಯಿತು (ನಂಬಿನಾ. ೫೯). 'ತಿರಿಮನೆ' ಪರಾ. [<ತಿರಿ$_1$]

△ **ತಿರಿಂಪು** 'ತಿರಿಪು$_1$' ನೋ.

ತಿರಿಕ$_1$, ತಿರುಕ (ನಾ). ೧. ತಿರುಗುವವನು ; ಅಲೆದಾಡುವವನು ; ಸುತ್ತುವವನು : ತ್ರಿಜಗದ ತಿರಿಕಂ ವಿದ್ಯಾಭಿಜಾತಗಂಧಂ (ಶಾಂತಿಪು.೮-೨೪) ; ಸತ್ತು ತಿರಿಕರೊಳ್ ತಿರಿಯದೆ (ಧರ್ಮಾಮೃ. ೦೪-೩೩) ; ತಿರ್ಯಗ್ಗತಿಯೊಳ್ ತಿರಿಕರ್ಗೆ ಮಿಥ್ಯಾದೃಷ್ಟ್ಯಾದಿ ಸಂಯತಾಸಂಯತ ಗುಣಸ್ಥಾನಂಬರಂ ಸಾಮಾನ್ಯೋಕ್ತಭಾವಂ (ತತ್ತ್ವಪ್ರ. ೪೭). ೨. ಭಿಕ್ಷುಕ ; ತಿರುಪೆ ಎತ್ತುವವನು : ಸಂದ ತಿರಿಕಂಗೆ ತೊವೆ ತುಪ್ಪಂ ದೊರೆಕೊಳಲುಣ್ಮಿ ನಲಿವ ತೆಱದಿಂ . . . ರೌರವದಿಂದಂ ಬಂದಂಗೆ ಮೋಹಮಕ್ಕುಂ ಸಿರಿಯೊಳ್ (ಧರ್ಮಾಮೃ. ೯-೩೦) ; ಮಸಣದ ದೇವನು ಮಾರಿಯ ದೇವನು . . . ತಿರಿ [ಪಾಠಾಂ. ರು] ಕ ಗೊರವನೆಂದು ಅಲ್ಲಲ್ಲಿ ಒಂದೊಂದನಾಡುತ್ತಿಪ್ಪರಯ್ಯ (ಅವಚಂ.೧೨೦-೫೪೫) ; ಹೊನ್ನರಾಶಿಯ ಪುರದೊಳಿಹ ಬಡವರಿಗೆ ತಿರಿಕರಿಗೆರೆವರ್ಗೆ ವೆಚ್ಚಿಸು ಹೋಗು (ಭರಚ. ೪-೬) ; ತಿರಿಕನನು ಕರತಂದು ಧರಣಿಯ ಚರಿತದೊಳಗಿರಿಸಿದರೆ ಮರ್ಕಟ ಸೆರೆಯ ಸೇವಿಸಿದಂತೆ (ಬಿಜ್ಜಪು. ೬೨-೫೪) ; ಬೇಡುವೊಡೇಂ ತಿರಿಕನೆ (ರಾಮಾಶ್ವ. ೧೬೭-೫). ತಿರುಕ : ೨. ತಂಗಿಯ ತಿರುಕಗಿತ್ತಿರೆ ಮಱಿದು (ಕುವ್ಯಾಆ. ಓರಿಇ. ೩೬-೬೮) ; ತಿರುಕನೆಂದರು ಬಿಡೆ ತಿಳಿದು ತಾಯ ಕೊರಳ ತಱಿಕನೆಂದರು ನಿನ್ನ ನಾ ಬಿಡೆನೋ (ಪುರಂದ. ೦-೨೩-೨) ; ತಿರುಕನೋರ್ವನೂರ ಮುಂದೆ ಮುಱುಕುಧರ್ಮಶಾಲೆಯಲ್ಲಿ ಒಱಗಿ ಇರಲು ಅಲ್ಲೆ ಒಂದು ಕನಸ ಕಂಡನು (ಕನಕ. ೨೦೩-೦) ; ಒಂದು ದುಡ್ಡು ಇತ್ತು, ಅದನ್ನು ಇಂದು ಒಬ್ಬ ಕುರುಡ ತಿರುಕನಿಗೆ ಕೊಟ್ಟನು (ಮುಂಬಯಿ. ೪-೩).

ತಿರುಕಮುರುವ=ದಡ್ಡನಾದ ಭಿಕ್ಷುಕ ; ಹೆಡ್ಡಭಿಕ್ಷುಕ : ತಾರೇ ಬಡ್ಡಿ ನೀರಾ ಎಂದರೆ ತರುವೆನು ನಿಲ್ಲೊ ತಿರುಕಮುರುವ (ಗಾದೆ).

[ತಿರಿ$_1$ + – ಕ$_3$]

ತಿರಿಕ$_2$ 'ತಿರಿಯಕ್ಕು' ನೋ.

ತಿರಿಕಣ್ಣು (ನಾ). ತಿರುಗಣೆ (?) : ಹರಿತೆಗೆಯೊ ಸೂಚಿಯೊ ಕೊಳವಿಗೆಯೊ ಚವುಕುಳಿಯೊ ಅರನೋ ಪಟ್ಟಣೆಯೊ ಭಿತ್ತಿಯೊರವೆಯೊ ಪುರುವೊ ತಿರಿಕಣ್ಣೊ ಸಪುರವೊ ಕೊನಿವಾರವೊ ರಟ್ಟಿಗೆಯೊ ನಾಳವೊ ಪನ್ನಾಳವೊ (ಕುಮುರಾ. ೧೩-೨೯). [?]

ತಿರಿಕತ್ವ (ನಾ). = ತಿರ್ಯಗ್ಗತಿ : ನರಕದೊಳು ದುಃಖಮುಗ್ರಂ ತಿರಿಕತ್ವದೊಳಂತೆ ನರರೊಳು ದೇವರೊಳಂ (ಪರಮಾ. ೨೭-೬೮).

[<ಸಂ. ತಿರ್ಯಕ್ತ್ವ]

ತಿರಿಕಲ್ಲಾಟ 'ತಿಱಿಕಲ್ಲಾಟ'ನೋ.

ತಿರಿಕಲ್ಲು 'ತಿಱಿಕಲ್'ನೋ.

ತಿರಿಕವ್ರಾತ (ನಾ). ತಿರ್ಯಗ್ಗತಿಯಲ್ಲಿರುವ ಪ್ರಾಣಿವರ್ಗದ ಗುಂಪು : ನರಿ ನಾಯ್ . . . ಕಾಡೆಮ್ಮೆ ಕಾಟ್ಕೋಟಿಯೆಂಬೀ ತಿರಿಕವ್ರಾತಂಗಳೊಳ್ ಸಂಭವಿಸಿ ದುರಿತದಿಂ ದುಃಖಮಂ ಪೇಟಲಾಱೆಂ (ಧರ್ಮಾಮೃ. ೧೩-೧೫೭).

[ತಿರಿಕ$_2$ (<ತಿರಿಯಕ್ಕು) + ವ್ರಾತ]

ತಿರಿಕುಳಿ, ತಿರುಕುಳಿ (ನಾ). ೧. ತಿರುಪೆ ಬೇಡುವ ವ್ಯಕ್ತಿ ; ಭಿಕ್ಷುಕ : ತಿರಿಕುಳಿಗಳ ಬರವಂ ಬಯಸಿಯುಂ ಪೆಱರಂ ಬಯಸದರುಂ ... ಎನಿಸಿರ್ಪರ್ (ಚಿಕವಿ. ೩-೦೪೩); ಬೇಳ್ಪ ತಿರಿಕುಳಿಯಲ್ಲದರ ಚೆಲ್ಲವೆತ್ತನೆಂ (ಸಂಸಪ. ೨೪-೦೦). ೨. ದರಿದ್ರ ; ಬಡವ ; ಭಿಕಾರಿ : ಮುನ್ನೋಡಲೊಂದು ಗೆಯ್ಮೆಯ ನೋಂಪಿಯೆಸಕವೊಡರ್ಚೆ ತಿರಿಕುಳಿಯೊಳಮರವೆಂಡಿರ ಭೋಗಮನುಣ್ಗುಂ (ರಾಮಾಶ್ವ. ೬೮-೦೩). ತಿರುಕುಳಿ : ೧. ತಿರುಕುಳಿಗೆ ಮಾನವೆತ್ತಣದು ತೆಗೆ ತಲೆಮಾಲೆಗೊರಲಂಗೆ ಮಹಿಮೆಯೆಲ್ಲಿಯದು (ಚಿಬಪು. ೦೮-೦೦) ; ನನ್ನದು ತಿರುಕುಳಿ ಬಾಳು (ಅನಾಥ. ೧೭೪). ೨. ನೀವರಸುಗಳು ತಿರುಕುಳಿಗಳಾವು (ಕುವ್ಯಾವಿ. ೮-೨೯). ೩. ತುಚ್ಛನಾದವನು ; ಕ್ಷುದ್ರ ; ಹೀನ : ತಿರುಕುಳಿ ಸಿರಂಗರಾಯಂ . . . ನೆರಪಿದ ಪಡೆ ತಾನೇಂ ಪಡಿಬರಿಸುಗುಮೇದೇವ ರಡಿಯ ಪಟ್ಟೆಯರ ಪಡೆಯೊಳ್ (ಚಿಕವಿ. ೫-೬೪). 'ತಿಱಿಕುಳಿ' ಪರಾ.

[ತಿರಿ$_1$ + – ಕುಳಿ$_3$]

ತಿರಿಕೂಳು 'ತಿರಿಕೂಟ್' ನೋ.

ತಿರಿಕೂಟ್, ತಿರಿಕೂಳು, ತಿರಿಗೂಳು (ನಾ). ತಿರಿದು ತಂದ ಅನ್ನ ; ಭಿಕ್ಷಾನ್ನ : ಹರಿಕೀರ್ತನೆಯಂ ಸ್ವರರಾಗತಾಳಲಯಮೂರ್ಧನಾದಿ ವಿಧಿಯಿಂ ಪಾಡುತೆ ದೈವನ್ಯಸ್ತಭರಂ ತಿರಿಕೂಟಿಂ ಜೀವಿಸುತಿರ್ದಂ (ಅದ್ಭುತ. ೦೬-೦೬). ತಿರಿಕೂಳು : ಆ ತಿರಿಕೂಳ ತೆಲುಂಗರೊಡೆಯನಿಗೆ ಉತ್ತರವೇನು (ಮಂತ್ರಶ. ೦೯-೦೫). ತಿರಿಗೂಳು : ಇಱಿದರೆಯು ಏಱಿಲ್ಲ ಹಱಿದರೆಯು ಸೀಳಿಲ್ಲ ತಿರಿಗೂಳ ಕೊಂಡು ಋಣವಿಲ್ಲ (ಸರ್ವಜ್ಞ. ೨೦೩೦).

[ತಿರಿ$_1$ + ಕೂಟ್$_1$]

ತಿರಿಕೆ, ತಿರುಕೆ (ನಾ). ಭಿಕ್ಷೆಗೆಂದು ತಿರುಗುವಿಕೆ ; ಭಿಕ್ಷಾಟನೆ : "ಭಿಕ್ಷಾ ...ಭೈಕ್ಷಂ-ಈ ೬ ತಿರಿಕೆ" (ಕಾಶಕ್ಯ. ೧೧೭); ಕೆಡುವುದೇ ಉದರಾರ್ಥಮಾಗಲು ಬಿಡದೆ ತಿರಿಕೆಗೆ ಹೋಗೆನೆನುವುದು ಮೃಡನಡಿಗಳಂ ನೆನೆವುದರಿದೇ ಕೇರಿ ಕೇರಿಯಲಿ (ಬಸಪು. ೪೩-೫೯); ತಮ್ಮ ನಿನ್ನಯ ತಿರಿಕೆಗಾವಂಜುವೆವುಯೆಂದರೆ ಮರುತಸುತ ತಾನುಂಬ ಪರಿಯೆಂತೆಂದು ಬೆಸಗೊಂಡ (ಕುವ್ಯಾಆ. ಓರಿಇ. ೨೩-೨೦) ; ತಿರಿಕೆಯ ಕೂಳು ತಿಂದು ಹರಕೆಯ ಕೋಣನಾದ (ಗಾದೆ). ತಿರುಕೆ : ಇವರು ಬ್ರಾಹ್ಮಣರ ವೇಷವನ್ನು ಹಾಕಿಕೊಂಡು ತಿರುಕೆಯಿಂದ ಜೀವನ ಮಾಡುತ್ತಾ ಇದ್ದರು (ನೀತಿಚಂ. I. ೧೮). [ತಿರಿ$_1$ + – ಕೆ]

ತಿರಿಕೊರೆ 'ತಿರಿಕೊಱೆ' ನೋ.

ತಿರಿಕೊಱೆ, ತಿರಿಕೊರೆ (ನಾ). ಭಿಕ್ಷೆ ಬೇಡಲು ತಿರುಗುವಿಕೆ ; ಬದುಕಿಗೆ ಯಾಚಿಸುವಿಕೆ. 'ತಿರಿಕೊಱೆಗೊಳ್' ಪರಾ. ತಿರಿಕೊರೆ : ತಿರಿಕೊರೆ ಕಬ್ಬಿಗಂ ಪಣಮನಾರ್ಜಿಸಲಾರನ್ (ಸಂಸಪ. ೧೩-೧). 'ತಿಱಿಕೊಱೆ' ಪರಾ. [ತಿರಿ$_1$ + ಕೊಱೆ$_6$]

ತಿರಿಕೊಱೆಗೊಳ್ (ಕ್ರಿ). ಭಿಕ್ಷೆ ಬೇಡುಂ; ಯಾಚಿಸಿ ಪಡೆದುಂಕೊಳ್ಳುಂ: ಅರಿದಾದಂ ಕನ್ನಡದೊಳ್ತಿರಿಕೊಱೆಗೊಂಡಱಿಯೆ ಪೇಟ್ವೆನೆಂಬುದಿದಾರ್ಗಂ (ಕವಿರಾ. ೧-೪೨). [ತಿರಿಕೊಱೆ + ಕೊಳ್1]

ತಿರಿಕೋಪಸರ್ಗ (ನಾ). [ಜೈನ] ಪಶು, ಪಕ್ಷಿ ಮೊದಲಾದುವುಗಳಿಂದ ತಪಸ್ವಿಗಳಿಗೆ ಉಂಟಾಗುವ ಉಪದ್ರವ.—ತೊಂದರೆ: ಸೈರಿಸಲುಮಾಗದ ತಿರಿಕೋಪಸರ್ಗಮನವಂತಿ ಸುಕುಮಾರಸ್ವಾಮಿ ಮೂಱು ದಿವಸಮಿರುಳುಂ ಪಗಲುಂ ಸೈರಿಸಿ (ವಡ್ಡಾರಾ. ೩೦-೦೮); ನಿಷ್ಪಂದಶರೀರನಾಗಿ ಮುನಿ ಸೈರಿಸಿದಂ ತಿರಿಕೋಪಸರ್ಗಮಂ (ಸುಕುಮಾ. ೧೨-೪೧).

[<ಸಂ. ತಿರ್ಯಗುಪಸರ್ಗ]

ತಿರಿಗಂಚಿ (ನಾ). ಒಂದು ಸ್ಥಳದ ಹೆಸರು: ಕಚ್ಚವಿಯ ಗಳೆಯೊಳ್ ಬಿಟ್ಟ ಮತ್ತಪ್ಪರ್ದಿನಯ್ದು ರಟ್ಟಹಳ್ಳಿ ೭೦ ಬಳಿಯ ತಿರಿಗಂಚಿ ೧ (ಎಕ. VII. ಶಿಕಾರಿ. ೧೫೦-೬೩; 1047). [?]

ತಿರಿಗಟ್ಟು (ಕ್ರಿ). ಸುತ್ತಿಕೊಳ್ಳು; ಸಿಕ್ಕಾಗು: ತನ್ನ ರಕ್ತದ ಕೆಸರಲ್ಲಿ, ಕಣ್ಣು ತುಟಿ ಮೆತ್ತಿಕೊಂಡು, ತಲೆಗೂದಲು ತಿರಿಗಟ್ಟಿ ನರಳುತ್ತ ಬಿದ್ದಿರುವ ಕೌರವ ಸಾರ್ವಭೌಮನನ್ನು ನೋಡಿ ಕಲ್ಲು ಕರಗೀತು (ಅಗ್ರಹ. ೩೦).

[ತಿರಿ3 + ಕಟ್ಟು1]

ತಿರಿಗುತ್ತ (ನಾ). ಭಿಕ್ಷೆ ಬೇಡುವ ಕಷ್ಟ; ಭಿಕ್ಷಾಟನೆಯ ದುಃಖ (?): ಸಂಸಾರದೊಳಾದ ಬಡತನದ ಕುತ್ತದ ತಿರಿಗುತ್ತದ ರಾಜಬಾಧೆಯ ...ಕಂಡು (ಧರ್ಮಾಮೃ. ೬-೦೭೫). [ತಿರಿ1 + ಕುತ್ತ]

ತಿರಿಗೂಳು 'ತಿರಿಕೂಟ್' ನೋ.

ತಿರಿಗೊಂಬು (ನಾ). ಬಾಗಿದ ಕೋಡು; ತಿರುಗಿಕೊಂಡ ಕೋಡು: ಮುದ್ದಿ ಮಣ್ಣನು ತಂದು ತಿದ್ದಿ ಬಸವನ ಮಾಡಿ ಮುದ್ದುಮುಖ ಚೆಲುವ ತಿರಿಗೊಂಬು ನಂ ಬಸವ ಗದ್ದುಗೆ ಮ್ಯಾಗ ಮಲಗ್ಯಾನ (ಲೋಕಗೀ. ೧೧೬).

[ತಿರಿ1 + ಕೊಂಬು1]

ತಿರಿಚು, ತಿರುಚು1 (ಕ್ರಿ). ತಿರುಗಿಸು; ತಿರುವು: ತುಂದಶೂಲೆಯು ಕೆರಳಿಯಲಗ ತಿರಿಚಿದವೊಲಾಗೆ (ಪ್ರಭುಪು. ೫-೮೩); ಶತ್ರುಗಳ ಮೇಲೆ ಮೀಸೆಯಂ ತಿರಿಚುವ ವೀರನಂದದಿ ಚಾಣಿಕ್ಯನು ಬಿಚ್ಚಿರುವ ತನ್ನ ಜುಟ್ಟಂ ಕೈಯಿಂದ ನೇವರಿಸುತ್ತ ತೆರಳುತ್ತಿರಲು (ಮುದ್ರಾಮಂ. ೩೫); ರಿಷ್ಟನ ಹೃದಯ ತಿರಿಚಿದಂತಾಗಿ ಕಾಲುಗಳು ಒಂದಕ್ಕೊಂದು ಹೊಡೆಯುವಂತೆ ನಡುಗಿದವು (ಯೋಧಪು. ೮೨). ತಿರುಚು1 : ಸೆರಗಿನ ತುದಿಯನ್ನು ತಿರುಚೇ ತಿರುಚಿದಳು ಸೀತೆ (ಮಾಮನೆ. ೨).

ತಿರಿಚುಮುರಿಚು = ವಕ್ರವಾಗಿರುವುದು: ವೇರದುಖೋವ ತಿರಿಚು ಮುರಿಚುಗತ್ತಿನಿಂದ ಆ ಕೊಟಡಿಯ ಹಿಂದಿನ ಬಾಗಿಲಿಂದ ಒಳಗೆ ಪ್ರವೇಶಿಸಿದಳು (ಪುನರು. ೨೩೯). ತಿರುಚಿಕೊಳ್ಳು = ಸುರುಳಿಯಾಗು; ನುಲಿದುಕೊಳ್ಳು: ದೋರ್ದಿಯಂತೆ (ತೆಂಗಿನ ನಾರಿನ ಹಗ್ಗದಂತೆ) ಯಾಕೆ ತಿರುಚಿಕೊಂಡು ಸುತ್ತುತ್ತಿದ್ದೀಯೆ? (ದಾದಾನ. ೪).

[ತಿರಿ1 + – ಚು1]

ತಿರಿಚೆ (ನಾ). ೧. (ಆನೆಗೆ ಕಟ್ಟುವ) ಹೊಸೆದ ಹಗ್ಗ: ಜೊತ್ತಿಗೆ ಜಾನುವಂಕಣ ತಿರಿಚೆ ತೊಡರುರಘಂಟೆಗಳ...ವಿಲಾಸದಿನೆಸೆದುದಾ ದಂತಿ (ತೊರರಾ. ೬-೨೯-೦೬). ೨. ಪಿಚಕಾರಿಯಿಂದ ನೀರನ್ನು ಹೊರಪಡಿಸಲು ಒತ್ತುವ ಸಾಧನ: ನಿಖಿಳರಾಣಿಯರನಂದವನೀಶನು ಅಟ್ಟಿ ಹಿಡಿದಂಡೆಯಂ ಹೊಯ್ದು ತಿರಿಚೆಯನೊತ್ತೆ ಹೆಟ್ಟುಗೆಯರೆಲ್ಲ ಮೂದಲಿಸಿ ಮುಮ್ಮಳಿಗೊಂಡು ನೆಟ್ಟೋಟದಿಂದೋಡುವವನಿವನ ತಮ್ಮಾಣೆಯಿಟ್ಟು ನಿಲಿಸಿದರಾಗಳು (ಹಡಕಾ. ೩-೫೦). [<ತಿರಿಚು]

ತಿರಿತರ್1, ತಿರಿತರು (ಕ್ರಿ). ೧. ಅಲೆದಾಡುಂ; ಸುತ್ತುಂ; ತಿರುಗುಂ: ತಿರಿತರ್ಕುಮಮಳಜಳನಿಧಿಪರಿಖಾವೃತಭೂಮಿಭಾಗಮಂ (ಕವಿರಾ. ೩-೫೫); ಕಟಲ್ದೆರ್ದಗೆಟ್ಟರಣ್ಯದೊಳ್ ತಿರಿತರುತಿರ್ದ ಕಣ್ಬಡಿಗರಿಂ ರಾಜ್ಯದೊಳೇಂ ನೆರೆಯಲ್ಕೆ ತೀರ್ಗುಮೋ (ಪಂಪಭಾ. ೮-೮೫); ಉಸಿರ ಗಾಳಿಯೊಳ್ ತಿರಿತಂದರ್ ತಲೆಗೆಲೆವೊಲಮರರಂಬರತಳದೊಳ್ (ಶಾಂತಿಪು.೦೦-೧೩); ಭವಾಂಬುನಿಧಿಯೊಳ್ ತಿರಿತಪ್ಪುವು ಜೀವರಾಶಿಗಳ್ (ಸುಕುಮಾ. ೫-೩೨); ಪರದೇಸಿತನದಲಿಯಿದು ತಿರಿತಂದು ಹನುಮಂತದೇವರ ಗುಡಿಗೆ ಕಟು ಮಂಜರವ ಮಾಡಿಸಿ (ಎಕ. VII, ಚನ್ನಗಿ. ೦೭-೬ : 1120?). ೨. ಭಿಕ್ಷೆ ಬೇಡು: ಪವನಸುತ . . . ಬಹುಭಿಕ್ಷಭಕ್ಷ್ಯವನವರ ನಾಲ್ವರ ಸರಿಯ ಭಿಕ್ಷವನೊಬ್ಬ ತಿರಿತಹನು (ಕುಮಾಅ. ೬ರಿಇ. ೨೩-೧೩). ತಿರಿತರು: ೨. ಹೇಳಿ ಕೇಳಿ ತಿರಿತಂದು ತಿನ್ನೊ ಜಂಗಮ ನೀನು (ಅನಜೀ. ೧೫).

[ತಿರಿ1 + ತರ್]

ತಿರಿತರ್2 'ತಿಱಿತರ್' ನೋ.

ತಿರಿತರಿಸು 'ತಿಱಿತರಿಸು' ನೋ.

ತಿರಿತರು 'ತಿರಿತರ್' ನೋ.

ತಿರಿತಿನ್ (ಕ್ರಿ). ತಿರಿದು ತಿನ್ನು; ಭಿಕ್ಷೆಬೇಡಿ ತಿನ್ನು: ಕುಪ್ರತರ್ಕಿಗ ನಾವನಾದೊಡೆ . . . ತಿರಿತಿಂಬಪ್ರಸಿದ್ಧನಶುದ್ಧನಲ್ಲದೆ ಭಕ್ತನೆಂತಹನು (ಬಸಪು. ೪೩-೬೨). [ತಿರಿ1 + ತಿನ್]

ತಿರಿದಾನ (ನಾ). ಮಂಸುಕಂ; ಆಚ್ಛಾದನ: ಪೊಂಬಾಟೆಯ ತಿರಿದಾನದಿಂ ಪಾದರಿಯ ಪರ್ಯಂಕದಿಂ . . . ಶಿಶಿರೋಪಚಾರಮಂ ಮಾಡುತ್ತುಮಿರೆ (ದಶಕು. ೬-೦೦೭ಎ). [< ಸಂ. ತಿರೋಧಾನ]

ತಿರಿನಾಳ್ 'ತಿರುನಾಳ್' ನೋ.

ತಿರಿಪ (ನಾ). ಒಂದು ಬಗೆಯ ಬತ್ತ: "ತಿರಿಪ — ತಿರಿಪ, ರಾಜಾನ್ನ" (ಓಷಧಿ. ೬೮). [?]

ತಿರಿಪ್ಪು1, ತಿಪ್ಪು, ತಿರಿಂಪು, ತಿರಿಪ್ಪು, ತಿರಿವು1, ತಿರಿಹಂ, ತಿರುಂಪು1, ತಿರುಪ್ಪು1, ತಿರುಪ್ಪು, ತಿರುವು1, ತಿರುಹು1 (ಕ್ರಿ). ೧. ಸುತ್ತು ತಿರುಗಿಸು; ಚಕ್ರಾಕಾರವಾಗಿ ಸುತ್ತಿಸು: ತಿರಿಪಿ [ಪಾಕಾಂ. ರುಪೆ] ಕರ ಚಕ್ರಮಂ ದನುಜರ ತಲೆಗಳನಸುರವೈರಿ ಮುಳಿದಿಡೆ . . . ನೆಲಕೆ ಬೀಳವೆ ತಲೆಗಳ್ (ಪಂಪಭಾ. ೬-೬೫); ಕರ್ಪುರದ ಪರಲ್ಗೆ ಬರ್ದರಲ್ಗೆ . . . ದರ್ಪಕಂ ತಿರಿಪುವ ಚಕ್ರದಂತೆ ತಿರಿಯುತ್ತಿರೆ ಮೇಲೆ ಮದಾಳಿಮಾಲೆಗಳ್ (ಅರ್ಧನೇ. ೨-೩೭); ತಿರಿವ ಕುಲಾಲಚಕ್ರಮೆನೆ ಭೂವಳಯಂ ತಿರಿವನ್ನಮಸ್ತ್ರಮಂ ತಿರಿಪಿದಂ (ಜಗವಿ. ೦೨-೩೨); ಕಣ್ಮುಸುಕಿ, ತಿರಿಪಿ ನಿಮ್ಮ ನಡುಬೀಡಿನಿನ್, ಪೊಱವೀಡ ಮಂದಿ ಇರ್ದೆಡಗಳೊಳೆ ಬಿಟ್ಟೆನ್ (ಅಶ್ವತ್ಥಾ. ೩-೪೧). ೨. ಅಲೆಯುವಂತೆ ಮಾಡು; ಸುತ್ತಾಡಿಸು: ಶಾರ್ದೂಲಾಭೀಲವನಂಗಳೊಳ್ ತಿರಿಪಿದೀಯುರ್ಕೊಂದೆ ಲೆಕ್ಕಂಗೊಳಲ್ (ಪಂಪಭಾ. ೯-೨೨); ಕೌಂತೇಯರಂ ಮಚ್ಚರದಿಂ ಕಾಂತಾರದೊಳ್ ತಿಱ್ಱನೆ ತಿರಿಪಿದ ಸೊರ್ಕಿಗಳೇನಾದುದು (ಗದಾಯು. ೭-೦೪). ೩. ಹೊರಳಿಸು; ಬೇರೆ ಕಡೆಗೆ ತಿರುಗಿಸು: ಅರಸುಮಾನೆಯುಂ ತಿರಿಪುವರಿಚ್ಛೆ ಎಂಬ ಲೋಕಗಾದೆಯೋಕೆ ಪುಸಿಯಾಕ್ಕು (ಪಂಚತಂ. ೯೫-೭); ಮೋಕ್ಷಸುಖಕ್ಕೆ ಚಿತ್ತಮಂ ತಿರಿಪುತುಮಿರ್ದ ಜೈನಮುನಿಪುಂಗವರಿಂ ಮಿಗಿಲಾರೊ (ಧರ್ಮಾಮೃ. ೧೨-೫೦). ೪. ನುಲಿ; ತಿರುಗಿಸು: ಕಟ್ಟಿದ ನೂಲ ಕೊಂಗಲಂ ತಿರಿಪುವ ಕೆಯ್ತದೊಂದು ನೆವದಿಂ ಲಲಿತಾಂಗಿಯ ಶಂಕೆಯಂ ಭಯಂ ಬೆರಸಿದ ನಾಣುಮಂ ಕ್ರಮದೆ ಪಿಂಗಿಸು (ಪಂಪಭಾ. ೩-೭೭); ಆವಂ ತಿರಿಪಿದಂ ನಿಜ ನಿಷ್ಠುರ ಕಾಷ್ಠದಂಡಮಂ (ಚಂದ್ರಪು. ೫-೭೪). ತಿಪ್ಪು: ೫. ಹಿಮ್ಮೆಟ್ಟು; ಹಿಂದಿರುಗು: ಮದಾನ್ಧಸಿನ್ಧುರಂ ತೆಗೆಯಲ್ ಜೈಮಿನಿ ತಿಪ್ಪಿಕೊಣ್ಡು ಪರಿಯಲ್ (ಎಕ. II, ೬೯-೧೨ ; 1100). △ತಿರಿಂಪು: ೧. ಮತ್ತೋರ್ವಂ ... ಮುಂಗೆಯ್ಯ ಕಂಕಣಮಂ ತಿರಿಂಪಿ ನೂಂಕುತುಂ ಜಾಱುವಳ್ಳುಳವಟ್ಟಿಗೆಯನೇಱೆ ಸಾರ್ಚುತ್ತುಮೆಟ್ಟು (ಅನಂಪು. ೦೩-೭೯ ಪ). ತಿರಿಪ್ಪು: ೧. ಧರೆಯುಂ ದಿಕ್ತಟಮುಂ ವಿಯತ್ಪಟಲಮುಂ

ಧಾರಾಕರೋಶ್ವಾತದಿಂ ತಿರಿಗುತ್ತಿರ್ಪನೆಗಂ ತಿರಿಪ್ಪಿ ಮಱು ಕೋಪಾಟೋಪದಿಂದಿಟ್ಟೊಡೆ (ಅಸಂಪು. ೦೪-೦೯). ತಿರಿವು1 : ೩. ದನಗಾಹಿಯು ಹುಲ್ಲುಗಾವಲಿನಿಂದ ದನಗಳನ್ನು ಊರ ಕಡೆಗೆ ತಿರಿವಿದನು (ರೂಢಿ). ತಿರಿಹು : ೧. ಏಕನಿಷ್ಠೆಯಿಂದ ತಿರಿಹಿ ಮುರಿಹಿ ಹಿಳಿದು ಹಿಂಡಿ (ತಿರುತೊಂ. ದೇ. ೨೩೩-೦೦). ೬. ಗೊಟಾಯಿಸು ; ತೊಳಸು : ಅದಱೊಳಗೆ ಮೊಸರ ಸಂಭಾರಮಂ [ಮಿಗೆ] ತಳಿದು ಹದನಱಿದದಂ ತಿರಿಹಿ ತಿರಿಹಿ ಪಾಕವ ಮಾಡಿ (ಸೂಪಶಾ. ೪-೮೦). ೭. ಮಂಗುಚಿ ಹಾಕು; ಬುಡಮೇಲು ಮಾಡು : ಸಂಪಳೆಯನು .... ಎಱಿದು ಬೆಂದ ಬಳಿಕಂತದಂ ತಿರಿಹಿ ದೋಸೆಯ ಬೇಯಿಸುವುದು (ಸೂಪಶಾ. ೦-೭೪). △ ತಿರುಂಪು1 : ೮. ತೊಡಿಸು ; ಅಳವಡಿಸು : ಉರಗಕಂಕಣಮಂ ಕಳೆದು ರತ್ನಕಂಕಣಮಂ ತಿರುಂಪಿ (ಗಿರಿಕ. ೧೦-೬೦ ಪ) ; ಬಾಹುಪೂರಯಮಂ ತೋಳ್ಗೆ ಕೈಕೊಳಿಸಿ ಕಂಕಣಮಂ ತಿರುಂಪಿ (ಬಸರ. ೮-೨೦). ತಿರುಪ್ಪು1: ೧. "ತಿರುಪು-ಭ್ರಮಣೇ" (ಶಮುಧಾ) ; ಅಲರಂಬಿಂದುಱದೆನ್ನ ಮೆಲ್ಲರ್ದೆಯನಿಂ[ತುರ್ಚಿ]ತ್ತಿದೆಂಬಂತೆ ನೆಯ್ದಿಲ ಕಾವಂ ತಿರುಪುತ್ತುಂ (ಪಂಪಭಾ. ೩-೩೩) ; ತೋರಹತ್ತದೊಳಂ ತಿವಿದು ತಿರುಪುವ ಮಲ್ಲರ ನೆರವಿಗಳೊಳಂ (ಗಿರಿಕ. ೨-೦೦೩ ವ) ; ರಾಕ್ಷಸ ಕಾಳುಗತ್ತಿಯ ತಿರುಪಿಯಿಡಲು (ಸಂಭಪ. ೭-೪೨) ; ಅಲಗಿಕ್ಕಿ ತಿರುಪಿದವೊಲಾಯ್ತೊಡಲೊಳು (ಶೃಮಿಭಾ. ೦೯-೦೪). ೩. ಬಾಣಮಂ ತಿರುಪಿ ತಿರ್ದುವ... ವನೇಚರರಿಂ ಬಗೆಗೊಂಡುಟಾ ವನಂ (ಜಗವಿ. ೦೬-೦೬). ೪. ತಿರುಪಿದ ಮಾಸೆ ಕೊಂಕಿದ ಸಟಂ (ಪಂಪಭಾ. ೧೨-೭) ; ಮುಗ್ಧೆ ... ಮಸಗಿದ ಲಜ್ಜೆಯಿಂದೆಱಗಿದಳ್ ಕರದಿಂ ತಿರುಪುತ್ತೆ ಹಾರಮಂ (ಶಬಶಂ. ೧-೪೦). ತಿರುಪ್ಪು : ೧. ದೇಶದೇಹವನಂತೆ ತನ್ನ ಸಂದೇಹಮಂ ಕೊರೆದಳ್, ತಿರುಪ್ಪಿ ಕೊರೆದಳ್, ಮರಳಿ ಮರಳಿ! (ಶ್ರೀರಾಮಾ. ೨೬೯-೦೬೦). ತಿರುವು1 : ೧. ಮಹಾಸಿಂಹಂಗಳನೆರಡುಂ ಕೈಯೊತ್ತಿರುವುತೆ (ವೀರವಿ. ೮-೩೯) ; ಕಂಕಣ ಕೈಯ ತಿರುವುತ ಬಾರೆ (ಪುರಂದ. ೦-೨೦೨-೯). ೬. ಭಂಗಾರ ಅಳದೀರ ಬಾಯ್ಮೇಲೆ ಹೊಯ್ದಾರ ... ಹುಟ್ಟಿದಾ ಮನೇ ತಿರುವೀರ (ಜಳ್ಳಿಬಾ. ೨೩). ೯. (ಒರಳಂಕಲ್ಲಿಗೆ ಅಕ್ಕಿ, ಬೇಳೆ, ಕಾರ ಮುಂತಾದುವನ್ನು ಹಾಕಿ) ರುಬ್ಬು ; ನುರಿಸು : ಈ ತಿರುಳನ್ನು ನೀರಿನಲ್ಲಿ ಹಾಕಿ ಚೆನ್ನಾಗಿ ತಿರುವಿ... ತಿನ್ನುತ್ತಾರೆ (ಪ್ರಬಾಇ. II, ೨೦). ತಿರುಹು1 : ೧. ನೆತ್ತಿಯಲ್ಲಿ ಅಲಗ ತಿರುಹುವಂತಪ್ಪ ವೇದನೆಯುಹುದೆನಗೆ (ಬಸವ. ೩೦೩) ; ಹೊರಜಿ ಹೊಸೆವ ತಿರುಹುವ ಮುರುಹುವೆಳೆವ ... ಕೋಳಾಹಳದೊಳಾ ರೌರವಂ ಭಯಂಕರವಾದುದು (ಸಿದ್ಧರಾ. ೮-೨೯). ೨. ತುರಗವನು ಬೋಳಯಿಸಿ ವಾಳೆಯ ತಿರುಹಿ (ಕುಮಾಧೀ. ೩-೨) ; ತುಱುಗಳ ತಿರುಹಿ ಕೊಂಡೊಯ್ಯುವಾ ಬೇಡರ ತುಱುಗಾಹಿಗಳು ಕಂಡು (ಜೀವಂಸಾಂ. ೮-೨೪) ; ನಮ್ಮನು ಕರಕರಿಸಬೇಡೇಳಿಯಂದವ ತಿರುಹಿದನು ಮುಖವ (ತೊರರಾ. ೬-೦೨-೦೬). ೪. ಕುಸುಮ ಮಾಲೆಯ ತಿರುಹುತೆತ್ತಿದ ಮುಸುಡಿನರೆನೋಟದಲಿ...ನೋಡುತಿರ್ದಳು ಸೀತೆ ರಘುಪತಿಯ (ತೊರರಾ. ೧-೧೩-೩೯) ; ತಿಱ್ಱನೆ ತಿರುಹುವೆ ಧರಣಿಯ (ಮೋಹಶ. ೦೨-೦೦).

ತಿರಿತಿರಿಹು (ದ್ವಿರುಕ್ತಿ) : ಕರ್ಬೊನ್ನ ಸಲಗೆಯೊಳು ಕೆಂಪೊಗೆವಂತೆ ಕೆಂಡದೊಳು ತಿರಿತಿರಿಹಿ ಕಾಸಿ (ಸೂಪಶಾ. ೪-೮೬). ತಿರುವಿಹಾಕು = ೧. ಮಗುಚಿಹಾಕು : ಕಾವಲಿಯ ಮೇಲಿರುವ ದೋಸೆಯನ್ನು ತಿರುವಿಹಾಕು (ರೂಢಿ). ೨. ಪರಿಶೀಲಿಸು : ಕೆಲವು ಕಾಗದಪತ್ರಗಳನ್ನೊಮ್ಮೆ ತಿರುವಿ ಹಾಕಿ ... ಪೈದಿಗಳನ್ನು ಒಳಗೆ ಕರೆತರಬಹುದೆಂದು ಅಧ್ಯಕ್ಷರು ಆಜ್ಞೆ ಮಾಡಿದರು (ಪುನರು. ೩೩). ೩. ಮನನಮಾಡು ; ಚಿಂತನೆಮಾಡು : ಅವಳು ಹೇಳಿದುದನ್ನು ಅವನು ಮನಸಿನಲ್ಲೇ ತಿರುವಿಹಾಕುತ್ತಿದ್ದ (ದೂರಸ. ೪೩). ೪. ಪುನರಾವರ್ತನೆಮಾಡು : ಪರೀಕ್ಷೆ ಹತ್ತಿರ ಬಂತು. ಎಲ್ಲ ಪಾಠಗಳನ್ನೂ ತಿರುವಿಹಾಕಬೇಕು (ರೂಢಿ).

[ತಿರಿ1 + -ಪ್ಪು1./ ತಮಿ. ತಿರುಪ್ಪು, ತಿರುಮ್ಬು ; ಮಲ. ತಿರಿ, ತಿರಿಪ್ಪು, ತಿರುಮ್ಬು ; ತುಳು. ತಿರ್ಪು ; ಕೊಡ. ತಿರ್ ; ತೆಲು. ತ್ರಿಪ್ಪು ; ಕೊಲಾ. ತಿಪ್ಪ್ ; ನಾಯ್ಕಿ. ತಿಪ್]

ತಿರಿಪ್ಪು2, ತಿರಿವ್ವು2, ತಿರುಂಪ್ಪು, ತಿರುಂಪ್ಪು, ತಿರುವ್ವು, ತಿರುಹ್ಹು2 (ನಾ). ೧. ಸುತ್ತು ತಿರುಗುವಿಕೆ ; ಆವರ್ತನೆ : ಮಹೇಶ್ವರನ ತಿರುಪಿನೊಳುರುಭುಜೋದ್ಭೂತ ವಾಯುವಿಂದ ಚೇಗೆಯಾದುವು ಚರಾಚರವಿಶಸಂಗದೊಳು (ಕಬಪು. ೦೨-೨೦). ೨. [ಸಂಗೀತ] ಒಂದು ಬಗೆಯ ಗಮಕ; ಧ್ವನಿಯ ಭೇದ : ವಳಿ ವಿಳಾಸುಬಡೆಯೆ ವಹಣಿ ಬಹಳಂಬಡೆಯೆ ತಿರಿವು ಕೊಮ್ಮೆ ವಡೆಯೆ ... ಪಾಡುತ್ತಿರೆಯುಂ (ಶಾಂತೀಶ್ವ. ೦೬-೬೭ ವ). ತಿರಿವ್ವು2 : ೩. ಅಲೆದಾಡಿಸುವಿಕೆ ; ಸುತ್ತಾಡಿಸುವಿಕೆ ; ತಿರುಗಾಡಿಸುವಿಕೆ ; ಕರ್ಮಮೆ ಕಡುಬಲ್ಲಿತ್ತದಱ ತಿರವದೇಂ ಬಹುವಿಧಮೋ (ಆದಿಪು. ೫-೯೭). △ ತಿರುಂಪ್ಪು: ೪. [ನಾಟ್ಯ] ವೃತ್ತಾಕಾರವಾಗಿ ತಿರುಗುವ ಒಂದು ಭಂಗಿ : ಪಯಪಾಡು ನಿಚ್ಚವಣೆ ಚಾಳೆಯಮುಲ್ಲಾಸಂ ತಿರುಂಪು ತಡವಿತ್ತಡಮುನ್ನಯನ ವಿಶೇಷಂ ಡಿಳ್ಳಾಯಿಯ ಲುಳಿ ಪುದಿದುಸುರಮೆಸೆವಿನಂ ನರ್ತಿಸಿದಳ್ (ಧರ್ಮಪ. ೨-೨೬). ತಿರುಪ್ಪು2 : ೨. ಕಾಕು ಖಚರಂ ಗಮಕಂ ತಿರುಪಿಂಪು ... ಕಳೆಯಂಬಿವಂ ಮೆಱೆದು ಬಾಜಿಸಿದಂ ಮುರವೈರಿ ವಾಸವಂ (ಜಗವಿ. ೫-೩) ; ವಳಿ ವಕ್ರತೆಯನೀವ ವಹಣಿ ತರಂಗಿಸುವ ತಿರುಪು ಸುಳಿಗೊಳ್ಳ ಹೆಂಪು ಇಂಪಂ ಕಱೆವ ಸುಧಾರಸಗಾನಂ (ಗಿರಿಕ. ೨-೦೦೫ ವ). ೪. ಬೆಡಗು ಬಿನ್ನಣ ರಾಮಣೀಯತೆ ರೇಖೆಯಂತರಕರಣ ತಿರುಪಿನಲಿ ... ಮಾಯಾದೇವಿ ಮೋಹಿಸಿ ಪಾತ್ರವಾಡಿದಳು (ಪ್ರಭುಲೀ. ೪-೫೭) ; ತಿರುಪುಗತ್ತರಿ ಲವಣಿ ಲಾಗು ಮುಖಚಾರಿ ... ಬಿಂಕ ಬಿನ್ನಣದ ಗರುವಿಕೆಯ ಪಾತ್ರದೊಳು ನಿಲಲು (ಗುಭಕ. ೨-೨೯) ; ಲವಣಿಯಡವು ತಿರುಪು ಕೈಮಱೆ ಕಳಾಸ ಕೂಟಮಾನಂಗಳಂ ಸಂಗಳಿಸಿ ... ಚತುರಜನ ಮಚ್ಚುವಂತೆ ತೋರ್ಪ ನರ್ತಕಿಯರಿಂ (ರಾಜಶೇ. ೫-೦೯ ವ). ೫. ಮಲಸೂತ್ರ ; ಮರಸುತ್ತು : ಕೊಪ್ಪು ತಂದೀವಿ ಭರಣೀನು ತಂದೀವಿ ಕೊಪ್ಪಿಗೆ ತಿರುಪ ಮರೆತೇ ಬಂದ್ಯು (ನಾಪದ. ೦೦೭) ; ತಿಳಿದವ ತಿರುಪಿನಂತಿರಬೇಕು (ಗಾದೆ). ' ತಿರುಪು ಹೂ' ಪರಾ. ೬. ಬಾಗು ; ತಿರುಗು : ವಿಷ್ಣುಕಾಮರ ಸಂವಾದದಲ್ಲಿ ನಯವು ಕಡಿಮೆಯಾಗಿದೆ. ವಿಸಂಗತಿಯೂ ತೋರಿದೆ. ಆದರೂ ಕೊನೆಗೆ ಅದು ಪಡೆದ ತಿರುಪು ಮೆಚ್ಚುವಂತಿದೆ (ಕಸಾಚ. ೦೭೩) : ಅಂಗದನೆದೆಯಲ್ಲಿ ಆವೇಶಗೊಂಡ ಹುರುಪಿನ ತಿರುಪನ್ನು ನಿರೂಪಿಸಲಳವಲ್ಲ (ಪಾರ್ಶಿಸು. ೯೮). ೭. ತಿರುಗಾಟ ; ಸುತ್ತಾಟ : ಉರಗನರಸಿಯ ಕಂಡು ತನ್ನಯ ತಿರುಪ ಮಾಣದೆ ಸೋತು ವೀರ್ಯವ ಸುರಿಸಲು (ಸಂಭಪ. ೨೬-೩). ೮. ಖಡ್ಗಯುದ್ಧದ ಒಂದು ವರಸೆ : ಮೀಱೆ ತಳಸಂಚದೊಳು ಮೊನೆಯನು ತೋಱೆ ತಿರುಪಿನೊಳಣೆದು ಕಳಚುವರೇಱುಗಾಣದೆ ಪಂಧ್ಯಸಂಚಕಿಸಲುಕಿ ಕೈಮಾಡಿ (ಕುಮಾಧೀ. ೪-೨೨). ೯. ಒಂದು ಬಗೆಯ ತೆರಿಗೆ (?) : ನಲ್ಲೇರು ನಲ್ಲೆಮ್ಮೆ ಹೊಡಕೆ ತಿರುಪು ಮಗ್ಗ ... ಮುಂತಾಗಿ ಯೇನುಳ ಸರ್ವಸ್ವಾಮ್ಯವನೂ ನೀಱು ಆಗುಮಾಡಿಕೊಂಡು (ಸೌಇಇ. XI—11. ೪೪೦-೨೫ ; 1419). ತಿರುವ್ವು2 : ೪. ಮೈಯ ನುಲಿವು, ಹೆಜ್ಜೆಯ ಲಘುವು, ಕೈಯ ತಿರುವು ... ಮನಸ್ಸನ್ನು ಮುತ್ತುತ್ತಿದ್ದಿತು (ಸವಚ. ೫). ೬. ಆ ತಿರುವಿನಲ್ಲಿ ಮರದ ಮರೆಯಲ್ಲಿ ಅನತಿದೂರ ಕೆಳಗೆ ಹರಿಯುತ್ತಿತ್ತು ಝರಿ (ಸಿಡಿಲು. ೮೫) ; ಅದರ ತಿರುವೊಂದರಲ್ಲಿ ಎರಡು ಕಾರುಗಳು ಒಂದಕ್ಕೊಂದು ಡಿಕ್ಕಿಹೊಡೆದು (ಗೋಪುರ. ೮೫). ತಿರುಹ್ಹು : ೧. ಕುಱಿಯ ನೇಱೆ ಬರುತಿರಲು ನಡುಪಥದಿ ಸಂಧಿಸಿ ತಿರುಹ ಮುರುಹಲು ತೆಱವ ಕಾಣದೆ ಹರಣ ಹವ್ವನೆ ಹಾಱೆ (ಸಾಳ್ವಭಾ. ೦೬-೭೮). ೪. ಮುರುಹು ತಿರುಹು ಚಾರಿ ಕೈಲಾಗು ನೇವಣೆ ಕರಣ ಭ್ರಮರಿಗಳನಱಿದು ತರುಣ ರಂಗಸ್ಥಲದಿ ನರ್ತಿಸಿದಳು (ಜೀವಂಸಾಂ. ೯-೯೨).

ತಿರುಪಿನ ಚೆಂಬು=ತಿರುಗಣಿ ಚೆಂಬು; ರೈಲುಚೆಂಬು: ರೈಲಿಗೆ ಹೊರಡುವಾಗ ಮರೆಯದಂತೆ ತಿರುಪಿನ ಚೆಂಬು ತೆಗೆದುಕೊಂಡು ಹೋಗು (ಕೂಡಿ).
ತಿರುಪಿನ ಬಲ್ಲೆ = ಹೂವಿನ ಆಕಾರದ, ತಿರುಪು ಇರುವ ಆಭರಣ: ಅವಳು ತುರುಬಿಗೆ ತಿರುಪಿನ ಬಲ್ಲೆಯನ್ನು ಹಾಕಿಕೊಂಡಿದ್ದಾಳೆ (ಕೂಡಿ).
ತಿರುಪು ಹಾಕು=ಹೆಣೆದುಕೊಳ್ಳು; ಹೊಸೆದುಕೊಳ್ಳು: ಅನತಿದೂರದಲ್ಲಿ ತಿರುಪು ಹಾಕಿದ, ಹಗ್ಗಗಳಂತೆ ಸುತ್ತಿದ . . . ಎರಡು ಕೇರೆಹಾವುಗಳ ದೃಶ್ಯ ಕಾಣಿಸಿತು (ಸ್ವಪ್ನಹೊ. ೨೩೭).
[<ತಿರಿಪು₁./ತಮಿ. ತಿರಿಪು, ತಿರುವು, ತಿರುಪ್ಪ, ತಿರುಟ್ಟು; ಮಲ. ತಿರಿಪ್ಪು,ತಿರಿವು; ತುಳು. ತಿರುಪು, ತಿರ್ಪು]

ತಿರಿಪೆ 'ತಿರುಪ' ನೋ.

ತಿರಿಪ್ಪ ' ತಿರಿಪ್ಪು₁ ' ನೋ.

ತಿರಿಭುವನ (ನಾ). ಮೂರಂ ಲೋಕ: ಅಕ್ರಮವ ತಿರಿಭುವನ ವಿದ್ಯಾಚಕ್ರವರ್ತಿಗಳೆಂದು ನೀವೀ ವಿಕ್ರಮದ ಮಾತಿನಲಿ ಮೇಗರ ಮೆಱೆವ ಭಟರುಗಳೆ (ಕುಮ್ಮಾವಿ. ೪-೪೦). [< ಸಂ. ತ್ರಿಭುವನ]

ತಿರಿಮನೆ (ನಾ). (ಕರಾ) ಭತ್ತ ಮುಂತಾದಂವನ್ನು ರಕ್ಷಿಸಿ ಇಡಲು ಹಂಲ್ಲಿನಿಂದ ಹೊಸೆದು ಮಾಡಿದ ಗೋಪುರಾಕಾರದ ಸಾಧನ.
[ತಿರಿ₃ + ಮನೆ]

ತಿರಿಮುರಿ, ತಿರಿವುರಿವು (ನಾ). ೧. ತಿರುಗಿ ಮುರುಗು; ಅಂಕುಡೊಂಕಾಗಿರುವುದು: ತಮ್ಮ ಕುದುರೆಯ ಚದುರಿನಿಂದ ಕುಣಿಸುತೆಯ್ದುವರು ಅಡ್ಡವಡ್ಡಕೆ ತೆಗೆವರು ತಿರಿಮುರಿಯೆನಲಡ್ಡ ಹರಿವ ಹೊಳೆಯಂತೆ (ಧರಕ. ೨೬-೨೮). ತಿರಿಮುರಿವು: ೨. ಮಲ್ಲಯುದ್ಧದ ಒಂದು ವರಸೆ: ತಿರಿಮುರಿವುಗಳ ಇಕ್ಕಿದರು ಗಳಹತ್ತದಲಿ ಸಲೆ ಮಿಕ್ಕು ಸತ್ರಾಣದಲಿ ಮುಂಡಿಗಳ ಎಗೆ ಸರಿವೊಕ್ಕು ಹಿಡಿದರು (ಕುಮ್ಮಾಸ. ೩-೧೬). [ತಿರಿ₃ + ಮುರಿ₂]

ತಿರಿಮುರಿವು 'ತಿರಿಮುರಿ' ನೋ.

ತಿರಿಯಂಚ (ನಾ). ತಿರ್ಯಗ್ಗತಿಯಲ್ಲಿರುವ ಪಶು, ಪಕ್ಷಿ ಮೊದಲಾದ ಪ್ರಾಣಿವರ್ಗ: ನಾರಕ ನರ ಸುರ ತಿರಿಯಂಚಗತಿ [ಪಾಕಾಂ. ಯಗ್ಗತಿ] ಯೆಂಬ ಚಾರು ಹೆಸರುಗಳ ಪಡೆದು (ತ್ರಿಪುಸಾಂ. ೫೪); ಪರಿವ್ರಾಜವಾದದಿ ಸೋಲ್ತು ಸತ್ಪಲ್ಲಿಯೇ ತಿರಿಯಂಚವಾಗಿ (ಶಾಂತೀಚ. ೮-೬೯); ತಿರಿಯಂಚಗಳು ಮನವುಳ್ಳವಿಲ್ಲದುವೆಂದು ಎರಡಂಗವಾದುವು (ಧರಚ. ೬೭-೧೦೩).
[< ಸಂ. ತಿರ್ಯಂಚ್]

ತಿರಿಯಕ್ಕು, ತಿರಿಕ್ಕ (ನಾ). ೧. ಜೀವನಂ ಅನುಭವಿಸುವ ನಾಲ್ಕುಗತಿಗಳಲ್ಲಿ ಒಂದು; ತಿರ್ಯಗ್ಗತಿ: ಪಾಟಗಳು ಉರುಳುವರು ತಿರಿಯಕ್ಕುಗಳಲಿ (ನಿಡಾಗ. ೫-೦೦-೦). ತಿರಿಕ್ಕ: ೧. ತಿರಿಕದೊಳು ಕೆಲರ್ಗೆ ಜಾತಿಸ್ಮರಣಂ ಕೆಲರ್ಗೆ ಧರ್ಮಶ್ರವಣಂ ಕೆಲರ್ಗೆ ಜನಮಹಿಮಾದರ್ಶನಮುಂ (ತಸಾವ್ಯ.೦೬). ೨. = ತಿರಿಯಂಚ: ಪಂಚತ್ವಮನ್ಯೆದಿದ ವಜ್ರಜಂಘಂಗಂ ಶ್ರೀಮತಿಗಮಾ ತಿರಿಕಂ [ಪಾಕಾಂ. ತಿರಿಯಂಚಂ]ಗಳ್ಗಂ...ಉತ್ತರಕುರುವೆಂಬುತ್ತಮಭೋಗಭೂಮಿಯೆ ಜನ್ಮಭೂಮಿಯಾದುದು (ಆದಿಪು.೫-೨೭ ಪ); ತಿರಿಕನಾರಕಮಾನವಾಮರಲೋಕದೊಳ್ ನೆಲೆಗೊಂಡು ವಿಸ್ತರಿಸದೆಲ್ಲಿಯುಂ (ಧರ್ಮಾಮೃ. ೧-೬೩); ಒರ್ವನೆ ನರಕದೊಳಿರ್ದಂದೊರ್ವನೆ ತಿರಿಕಂಗಳಾಗಿ [ಪಾಕಾಂ. ತಿರಿಯಂಚನಾಗಿ, ತಿರ್ಯಂಚನಾಗಿ] ತಿರಿತರುತಿರ್ದಂದು (ಜೀವಸಂ. ೪೩-೦); ಸಮ್ಯಗ್ದರ್ಶನಂ ತನ್ನೊಳುಳ್ಳ ಕೃತಾರ್ಥಂ ನರಕಂಬುಗಂ ತಿರಿಕನಾಗಂ (ಅನಂಪು. ೩-೫೯). [<ಸಂ. ತಿರ್ಯಕ್]

ತಿರಿಯಜ್ಜುಖಿ (ನಾ). [ನಾಟ್ಯ] ದೇಶೀಯ ಭೌಮಚಾರಿಗಳಲ್ಲಿ ಒಂದು; ವರ್ಧಮಾನಸ್ಥಾನಕದಲ್ಲಿ ನಿಂತುಕೊಂಡು ಬಲಕ್ಕೂ ಎಡಕ್ಕೂ ದ್ರುತಕ್ಕನುಗುಣವಾಗಿ ಜಾಗ್ರತೆ ಚಲಿಸುವುದಂ: ಉರು ವರ್ಧಮಾನಮಂ ಪಡೆದರಡುಂ ಪದಮೆಯ್ದೆ ನಿಂದು ಬಲನೆಡನಿಂದಂ ತ್ವರಿತದಿ ಚರಿಸಲ್ ಮತ್ತಂ ತಿರಿಯಜ್ಜುಖಚಾರಿಯೆಂಬ ಪೆಸರಂ ಪಡೆಗುಂ (ಲಾಸ್ಯರಂ. ೬-೬೩).
[<ಸಂ. ತಿರ್ಯಜ್ಮುಖ]

ತಿರಿವು₁ 'ತಿರಿಪು₁' ನೋ.

ತಿರಿವು₂ 'ತಿರಿಪು₂' ನೋ.

ತಿರಿವೈಸಣೆ (ನಾ). (?): ಶ್ರೀಮಹ ಆಯ್ಕವರಸನಾ ತಿರಿವೈಸಣರ ಮೇಲಿಂಗೆ ನಿಗೆ ಹೊಲಗಂದೆಯು ಆಳಿಪದವರಿಗೆ ... ವಾವಕೆ ಹೋಹರು (ಎಕ. XI, ಹೊಳಕ್ಕೆ. ೦೩೩-೩ : ?). [?]

ತಿರಿಸುತ್ತು (ನಾ). ಸಂತ್ತಿಕೊಂಡುದಂ; ತಿರಿಚಿಕೊಂಡುದಂ: ಜನ್ನಿವಾರಮಂ ಮೇಲೆತ್ತಿ ತಿರಿಸುತ್ತು [ಪಾಕಾಂ. ತಲೆಸುತ್ತು]ಮಂ ತೆಗೆದು ಸಿಡಿಲಿಸಿ ಧೋತ್ರಮಂ ಚಿನ್ನಾಗಿಯಾಪೋಷಣಮನೆತ್ತಿ ಕುಳ್ಳಿರ್ದು (ಸಮ್ಯಕ್ತಾ. ೭-೨೬).
[ತಿರಿ₃ + ಸುತ್ತು₂]

ತಿರಿಹು 'ತಿರಿಪ್ಪು₁' ನೋ.

ತಿರೀಟ (ನಾ). ೧. ಕಿರೀಟ; ಮುಂಕುಟ: ಪೊಸತಲರ್ದಲರಂ ತಾಮೆ ಸಾಲ್ವನ್ನೆಗಂ ಸೂಸಿದುವೇಕಾಯ್ತಾ ತಿರೀಟಕ್ಕವನತಿಯೆನೆ ದೇವೋತ್ತಮಾಂಗಂಗಳುಂ ಬಾಗಿದುವು (ಆದಿಪು. ೭-೩೮) : ಛತ್ರತ್ರಯಯುತವಿನಮಿತ ಸುತ್ರಾಮ ತಿರೀಟಮಣಿಗಣಾರ್ಚಿತ ಪದ (ಜಿನಾಕ್ಷ. ೪). ೨. ಲೋಧ್ರದ ಗಿಡ. [ಸಂ.]

ತಿರು₁ 'ತಿರುವು₃' ನೋ.

ತಿರು₂ (ಗು). ಪೂಜ್ಯವಾದ; ಪವಿತ್ರವಾದ. ' ತಿರುನಕ್ಷತ್ರ ' ಪರಾ.
[<ಸಂ. ಶ್ರೀ./ತಮಿ. ತಿರು]

Δತಿರುಂಗಿಸು 'ತಿರುಗಿಸು' ನೋ.

Δತಿರುಂಗು 'ತಿರುಗು' ನೋ.

Δತಿರುಂಪು₁ 'ತಿರಿಪು₁' ನೋ.

Δತಿರುಂಪು₂ 'ತಿರಿಪು₂' ನೋ.

ತಿರುಕ 'ತಿರಿಕ್ಕ₁' ನೋ.

ತಿರುಕಣಾಮಡೆ (ನಾ). ಅಕ್ಕಿ, ತಂಪ್ಪ, ಸಕ್ಕರೆ ಹಾಗು ಬಾಳೆ ಹಣ್ಣು ಮುಂತಾದಂವುಗಳಿಂದ ಮಾಡುವ ಒಂದು ಬಗೆಯ ಸಿಹಿ ಖಾದ್ಯ: ನಯವೇದ್ಯಕೆ ಹರಿವಾಣ ಯಿಪ್ಪತ್ತಾರೂ ಅಪಪಡಿ ಹರಿವಾಣವೊಂದು ತಿರುಕಣಾಮಡೆ [೧] ೧ಕೆ ಯರಡರ ಲೆವಿದಲೂ ದೇವರ ನಯವೇದ್ಯ ನಡವ ಹಾಗೆ ಕಟ್ಟಳೆಯ ಮಾಡಿದ (ಸಾತಿಇ. IX-ii, ೪೬೨-೩ ; 1467).
[←ತಮಿ. ತಿರುಕ್ಕಣ್ಣಾಮಟ್ಟೈ]

ತಿರುಕತನ (ನಾ) ತಿರುಪೆ; ಯಾಚಕವೃತ್ತಿ: ಹೋಗಲಾಡಿಸಿಕೊಂಡು ತಿರುಕತನವನ್ನು ನೀಗಲಾಡಿಸುತ ಮನೆಮುರುಕುತನವನ್ನು (ಗಿರಿ. ೪೦-೭).
[ತಿರುಕ (<ತಿರಿಕ್ಕ₁) + – ತನ]

ತಿರುಕಿ (ನಾ). ತಿರುಪೆಯವಳು: (ಕ). [ತಿರುಕ (< ತಿರಿಕ್ಕ₁) + – ಇ₃]

ತಿರುಕು (ನಾ). ತಿರುಪೆ; ಭಿಕ್ಷಾನ್ನ: ಸಾರ್ವಭೂಪಾಲನ ಸೂನು ಎನಿಸಿದವಗೆ ಸೂಱೆಗೂಳಿನ ತಿರುಕೆ (ಪುರಂದ. ೦-೫೫-೩).
[ತಿರುಕ (<ತಿರಿಕ್ಕ₁) + – ಉ₄]

ತಿರುಕುಳಿ 'ತಿರಿಕಂಳಿ' ನೋ.

ತಿರುಕುಳಿಗ (ನಾ). ಭಿಕ್ಷುಂಕ: ದೆಸೆಯನುಟ್ಟು ಬಾಂಬಟ್ಟೆಗೂದಲಿನೊಳಿರುಳಾಳ್ದನಂ ತಳೆದ ... ತಿರುಕುಳಿಗನರವೆಣ್ಣನು (ನಂದಿಮ. ೫೧-೫೪).
[ತಿರುಕುಳಿ (< ತಿರಿಕುಳಿ) + – ಗ್ಗ]

ತಿರುಕುಳಿದಾಸ (ನಾ). ಭಿಕ್ಷೆ ಬೇಡುವ ದಾಸ; ಭಕ್ತ: ×× ವನಾಥದೇವರಿಗೆ ತಿರುಕುಳಿದಾಸರ ನಂದಾವಗ (ಎಕ. XIV, ನಾಗಮು. ೦೫೬-೪; ?).
[ತಿರುಕುಳಿ (< ತಿರಿಕುಳಿ) + ದಾಸ]

ತಿರುಕೆ 'ತಿರಿಕೆ' ನೋ.

ತಿರುಕೋಲು 'ತಿರುಗೋಲು' ನೋ.

ತಿರುಗ 'ತಿರುಗಿ' ನೋ.

ತಿರುಗಣಿ 'ತಿರುಗಣೆ' ನೋ.

ತಿರುಗಣಿತಂಬಿಗೆ (ನಾ). ತಿರುಪಿನ ಚೆಂಬು; ಸುತ್ತುಗಳನ್ನುಳ್ಳ ಮುಚ್ಚಳದ ಚೆಂಬು; ರೈಲುಚೆಂಬು: ಏನಾರ ಫರಾಳ ತಂದು ಬಿಡ್ರಿ ಸಾಕು ... ಶೇಷಣ್ಣ ತಿರುಗಣಿತಂಬಿಗೆ ತೆಗೆದುಕೊಂಡು ಹೋದ (ಪೈನಿ. ೨).
[ತಿರುಗಣಿ (< ತಿರುಗಣೆ) + ತಂಬಿಗೆ (< ತಂಬುಗೆ)

ತಿರುಗಣಿಮಡು 'ತಿರುಗಣೆಮಡು' ನೋ.

ತಿರುಗಣೆ, ತಿರುಗಣಿ, ತಿರುಗಾಣೆ, ತಿರುಗುಣಿ (ನಾ). ೧. ತಿರುಗುವಿಕೆ; ಸುತ್ತಾಟ: ಸುಳಿಯ ತಿರುಗಣೆಗೆ ಸಿಲುಕಿ ಮಡುವಿನ ಆಳಕ್ಕೆ ಇಳಿದಳು (ಹುಲಿಹಾ. ೫೪). ೨. ಬಾಗು; ತಿರುವು: ಒಂದು ದೃಷ್ಟಿಯಿಂದ ಈ ತಿರುಗಣೆಯು ಮನೋರಂಜಕವಾಗಿದೆ (ಸಾಸಮಾ. ೭೦); ರಸ್ತೆ ದಾಟಿ ತಿರುಗಣೆಯ ಬಳಿ ಬಂದೊಡನೆ ಆ ನರಹರಿಯು ಜ್ಞಾಪಕಕ್ಕೆ ಬಂದ (ಸಾಹೇಬ್. ೬೭). ೩. ತಿರುಪು; ಮಲಸೂತ್ರ: ಸಡಲಿದ ತಿರುಗಣೆಯ ತಿಳಿಯದವಳ ಬಲದ ಕಿವಿಯ ಗಿಳಿಯ ವಾಲೆ ಜಗುಳುವೊಡನೆ ಹೊಳೆಯ ಗುಳುಗುಳೊರೆದುದು (ಗಿಳಿವಿಂ. ೭೬-೨೪); ಈ ಸೂಜಿಯನ್ನು ನಾದ ಸಂಪುಟವೆಂಬ ಭಾಗದಲ್ಲಿರುವ ಸನ್ನೆಯ ಕೆಳತುದಿಗೆ ಒಂದು ತಿರುಗಣೆಯಿಂದ ಜೋಡಿಸಿರುತ್ತಾರೆ (ವಿಜ್ಞಾವಿ. ೪); ನೀರನ್ನು ಹಾಕಿಡುವ ಪಾತ್ರೆಗೆ ತಿರುಗಣೆಯಿದ್ದರೆ ಚೆನ್ನಾಗಿರುತ್ತದೆ (ಅಡುಸೌ. ೦೪). ತಿರುಗಣೆ: ೩. ರೈಲು ತಂಬಿಗೆಯ ತಿರುಗಣೆ ತೆಗೆದು ತಂದೆಗೆ ನೀರು ಕೊಟ್ಟಳು (ಬದುಜ. ೦೮). ೪. ಸುಳಿ; ಆವರ್ತ: ತಿರುಗಣೆಯಲ್ಲಿ ಸಿಕ್ಕಿರುವಂತೆ ಎಲ್ಲಿ ಸಾಗಿರುವೆವೋ ಏನೋ? (ಜಿಲುನಿ. ೦೦೫); ತಾಯಿ–ತಂಗಿ ತಿರುಗಣೆಯಲ್ಲಿ ಸಿಕ್ಕುಬಿಟ್ಟಿದ್ದರು, ತಂದೆ ನಡುನೀರನ್ನು ಮುಟ್ಟಿದಾಗ ಕೈಸಾಗದೆ ದುರ್ಬಲರಾಗಿ ಅಲ್ಲಿಯೇ ದೈವದ ಮೇಲೆ ಭಾರಹಾಕಿ ಉಳಿದುಬಿಟ್ಟರು (ಹೊಸಕ್ಷಿ. ೨೦೭); ಈ ಸಂಸಾರದ ತಿರುಗಣೆಯಲ್ಲಿ ಸಾಕಷ್ಟು ತಿರುಗಿ ದಣಿದದ್ದಾಯಿತು (ಹಬ್ಬಿಬ. ೩೭). ೫. ವ್ಯಾಯಾಮದಲ್ಲಿ ಬಳಸುವ ಒಂದು ಬಗೆಯ ಸಾಧನ: ಮಟ್ಟಿಯ ಬಲಭಾಗದಲ್ಲಿ ಗದೆ, ಡಂಬಲ್, ಲಾಠಿ, ದೊಣ್ಣೆ, ತಿರುಗಣಿ, ಗರ್ದನ್‌ಪಟ್ಟು ಗುಂಡು ಇತ್ಯಾದಿ ವ್ಯಾಯಾಮ ಸಾಧನಗಳು (ಭೀಮಕಾ. ೨೦). ತಿರುಗಾಣೆ: ೩. ಮಧ್ಯದಲ್ಲಿ ತಿರುಗಾಣಿಯ (pivot) ಮೇಲೆ ನಿಂತಿರುವ ಮರದ ತೊಲೆಯ ಒಂದು ಕೊನೆಗೆ ಆಡುಬೆಣೆಯನ್ನು ಜೋಡಿಸಿದೆ (ಶಿಲ್ಪನಾ. ೨೦೪). ತಿರುಗುಣಿ: ೪. ಪಚ್ಚೆಯದ ಕಡಗಮಂ ತಿರುಗುಣಿಯ ಮಡುವಿಗಿಟ್ಟು (ಪಚಸಂ. ೦೯೯-೫೮); ವಿಚಾರವಿಪ್ಲವದ ತಿರುಗುಣಿಯಲ್ಲಿ ಸಿಕ್ಕು ದಿಕ್ಕುತೋಚದಂತಾಗಿತ್ತು (ಪೈನಿ. ೩೩೯). ೬. ಒಂದು ಬಗೆಯ ಆಯುಧ: ಹಾರೆ ಬಿರಿ ಕೊಱಡು ಪೆಟಲ ತಿರುಗು [ಪಾಠಾಂ. ಗ]ಣಿ ಬೀಸುವಲೆ ತಳಿಯಮರದ ಗೊಂದಣದ ಸಂವರಣೆಯಿಂದಾ ಕೋಂಟೆ ಕಣ್ಗೊಟ್ಟಿತು (ಸಮ್ಯಕೌ. ೮-೨೮); ಬಲಿವ ಪೆಟಲ ಬೆಣೆ ಡೆಂಕಣಿಗೈ ಪಂದಿದಲೆ ತಿರುಗುಣಿ ಭೀಮಗದೆಯ ಬಲಿದು ಕೆತ್ತುವ ಬಡಗಿಗಳಿಂದಾ ದುರ್ಗ ಸಲೆ ಮೆಱೆದುದು (ಕುರಾಸಾಂ. ೩೭-೫೮); ಗುಂಡು ಪೆಟಲ ತಿರುಗುಣಿ ... ಬಿಲ್ಲಂಬು ಗರಗಸ (ಚಂಪ್ರಸಾಂ. ೮-೦೦).

ತಿರುಗಣಿಯ ಮಡು = ತಿರುಗಣೆಮಡು: ತಿರುಗಣಿಯ ಮಡುವಿನಲ್ಲಿ ಸಿಕ್ಕು ಬೊಗರಿಯಂತೆ ಗಿರಿಗಿರಿ ತಿರುಗಿದಂತೆ ಅವಳಿಗೆ ಭಾಸವಾಯಿತು (ಹೊಸಕ್ಷಿ. ೦೮೩).
[ತಿರುಗು$_1$ + – ಅಣ್ಣೆ./ತಮಿ. ತಿರುಕಣಿ, ತಿರುಕಾಣಿ; ಮಲ. ತಿರುಗಣಿ; ತುಳು. ತಿರುಗಣೆ, ತಿರ್ಗಣೆ, ತಿಂರ್ಗಣೆ]

ತಿರುಗಣೆಕೀಲು (ನಾ). ತಿರುಗುವ ಕೀಲು; ಸುತ್ತುವ ಕೀಲು: ಕಾಲಿನ ಇತರ ಭಾಗಗಳು ತಿರುಗಣೆಕೀಲುಗಳಿಂದ ಕೂಡಿವೆ (ಕೀಟಬೆ. ೦೬).
[ತಿರುಗಣೆ + ಕೀಲು (< ಕೀಲ್)]

ತಿರುಗಣೆಚೂರಿ (ನಾ). ಸೀಸದ ಕಡ್ಡಿಯನ್ನು ಒಳಗಿಟ್ಟು ತಿರುಗಿಸಿದಂತೆಲ್ಲ ಹೆರೆಯುವ ಸಾಧನ: ಇದು ಪೆನ್ಸಿಲು ಕೊಯ್ಯುವ ತಿರುಗಣೆ ಚೂರಿ (ಪ್ರಾಚಿಪ್ರ. ೦೩). [ತಿರುಗಣೆ + ಚೂರಿ]

ತಿರುಗಣೆಮಡು, ತಿರುಗಣಿಮಡು, ತಿರುಗುಣಿಮಡು (ನಾ). ನೀರಿನ ಸುಳಿಗಳುಳ್ಳ ಆಳವಾದ ಪ್ರದೇಶ: ಇವನು ಬಿದ್ದದ್ದು ತಿರುಗಣೆಮಡುವಿಗೆ (ಹೇಮಕೂ. ೬೯). ತಿರುಗಣಿಮಡು: ಅವನು ಸೆಳವಿಗೆ ಸಿಕ್ಕಿ ಹರಿದು ಹೋಗಿ ತಿರುಗಣೇ ಮಡುವಿಗೆ ಬಿದ್ದು (ಮುಂಬಯಿ. ೪-೩೮); ತಿರುಗಣಿ ಮಡುವಿನಲ್ಲಿ ಸಿಕ್ಕ ನಾವಿನಂತೆ ಚಕ್ಕರ ಹೊಡೆಯಹತ್ತಿತು (ನಾಕಥ. ೫೦). ತಿರುಗುಣಿಮಡು: "ಚಕ್ರ = ತಿರುಗುಣಿಮಡು" (ಗಂಗಾಮ. ೧೨೭).
[ತಿರುಗಣೆ + ಮಡು$_2$]

ತಿರುಗಮುರುಗ 'ತಿರುಗುಮುರುಗು$_2$' ನೋ.

ತಿರುಗಾಟ (ನಾ). ಅಲೆದಾಟ; ಸುತ್ತಾಡುವಿಕೆ; ತಿರುಗುವಿಕೆ: ಹೋದ ಕೆಲಸ ಎಲ್ಲ ಆಯಿತೇ? ... ಇನ್ನೂ ಉಳಿದಿದೆಯೆ ತಿರುಗಾಟ? (ಪಾತ್ಸಲ್ಯ. ೩೩೦); ಮಗ ಮನೆಗೆ ಬಾರದೆ ಎಲ್ಲಿ ತಿರುಗಾಟಕ್ಕೆ ಹೋಗಿದ್ದನೋ (ಮುಂಗಾಮು. ೪೯); ಅವರು ಇಂಥ ತಿರುಗಾಟಗಳಿಗೆ ಆಳಲ್ಲ (ಒಂಟಿದ. ೪೬).
[ತಿರುಗು$_1$ + ಆಟ]

ತಿರುಗಾಡು (ಕ್ರಿ). ಅಲೆದಾಡು; ಸಂಚರಿಸು; ಸುತ್ತಾಡು: ಸುಮ್ಮನೆ ತಿರುಗಾಡಿ ಹೊತ್ತುಗಳೆಯಲಾರೆ (ಮುಂಬಯಿ. ೪-೫೭); ಉಂಡು ತಿರುಗಾಡಿ ಕಾಲ ಕಳೆದ (ತ್ಯಾಗಮ. ೭೦); ನೇಮ ಹೆಚ್ಚಿ ಹೋಮ ಮೀರಿ ಶ್ವಾನನ ಹಾಗೆ ತಿರುಗಾಡುವದಾಯಿತು (ಗಾದೆ). [ತಿರುಗು$_1$ + ಆಡು$_1$]

ತಿರುಗಾಣಿ 'ತಿರುಗಣೆ' ನೋ.

ತಿರುಗಾಸ್, ತಿರಗಾಸು, ತಿರ್ಗಾಸು (ನಾ). (ಕರಾ) ರಸ್ತೆಯ ತಿರುವು: ಕೆಲವು ಸಾರಿ ತಿರುಗಾಸ್‌ಗಳಲ್ಲಿ ಬಸ್ಸು ಓರೆಯಾದಾಗ ನನ್ನ ಭಾರ ಪಕ್ಕದವರ ಮೇಲೆ ಬೀಳುತ್ತಿತ್ತು (ಪಂಚಭ. ೭೦). ತಿರಗಾಸು: ಮೋಟಾರುಕಾರು ವೇಗವಾಗಿ ಓಡುತ್ತ ಆ ತಿರಗಾಸನ್ನು ಒಂದು ನಿಮಿಷದೊಳಗೆ ದಾಟಿಕೊಂಡು ...ಬಹಳ ದೂರವಾಯಿತು (ಮೃಜಲ. ೧೩೦). ತಿರ್ಗಾಸು: ತಿರ್ಗಾಸುಗಳು ಹಲವಾರು ಸಿಕ್ಕುತ್ತಿದ್ದವು (ಪಣವ. ೦೫೧). [←ತುಳು. ತಿರ್ಗಾಸ್]

ತಿರುಗಿ, ತಿರುಗ (ಅ). ೧. ಮತ್ತೆ; ಇನ್ನೊಮ್ಮೆ; ಪುನಃ: ತಿರುಗಿ ಭೀಮನನೆಚ್ಚನು (ಕುಪ್ಯಾದ್ರೋ. ೦೮-೫೬); ತಿರುಗಿ ನೀವಿನ್ನೆನ್ನ ದೆಸೆಗುಬ್ಬರದ ಚಿಂತೆಯ ತಾಳದಿರಿ (ತೊರರಾ. ೨-೪-೪); ಇಂತು ಜೂಜೊಳು ಸೋತು ತಿರುಗಿನ್ನೆಂತು ರಾಜ್ಯದಿ ನಿಲುವಿರಿ (ನಳಚ. ೪-೪೦). ೨. ಪ್ರತಿಫಲವಾಗಿ: ತಿರುಗಿ ಬಯಸದನ ಶಿವಪೂಜೆ ಶಿವನಿಂದ ಹಿರಿದೆಂದು ಅಱಿಗು (ಸರ್ವಜ್ಞ. ೨೬೩). ತಿರುಗ: ೧. ಬಾಣಮನ್ನೊಂದನಿವಗಂ ತೊಡಲು ತಿರುಗ ಗತಿ ಬೇರಿಲ್ಲ ನರನಿಗಂ ಮರಣವಾಗಲಿಕ್ಕೆ (ತುರಂಗ. ೫೭-೫೦); ಕೆಟ್ಟು ನೆಂಟರ ಸೇರ ಬೇಡ, ಕೊಟ್ಟ ಧರ್ಮ ತಿರುಗ ಕೇಳಬೇಡ (ಗಾದೆ).

ತಿರುತಿರುಗಿ (ದ್ವಿರುಕ್ತಿ): ಸೋಲ್ದೆಱಗಿ ತಿರುತಿರುಗಿ ಬರುತಿರ್ಪ ತುಂಬಿಗಳ ಸಾಲ್ (ಚೈಮಿಭಾ. ೩-೭). [< ತಿರುಗು$_1$]

ತಿರುಗಿಮುರುಗಿ 'ತಿರುಗುಮುರುಗು$_2$' ನೋ.

ತಿರುಗಿಸು, ತಿರುಂಗಿಸು (ಕ್ರಿ). ೧. ಸುತ್ತುವಂತೆ ಮಾಡು; ಸುತ್ತಿಸು; ಅಲೆಸು: ತನ್ನ ವಿನೋದಕ್ಕೆ ತಾನೇ ತಿರುಗಿಸಿದನನಂತಭವದುಃಖಂಗಳಲ್ಲಿ ಇಂತೆನ್ನ ಚೆನ್ನಮಲ್ಲಿಕಾರ್ಜುನದೇವನೆಂಬ ಪರಶಿವನು (ಮಹಾದೇ.ಲ. ೨-೪); ಇತ್ತ ಬಲದಲಿ ಬಲಕೆ ಮೊಗವಿಡಲತ್ತಲೆಡದಲಿ ಮರಳಲಲ್ಲಿಂದತ್ತ ತಿರುಗಿಸಿ ಬಳಲಿಸಿದನಸುರಾರಿ ದಿಗ್ಗಜವ (ಕುಪ್ಯಾದ್ರೋ. ೩-೫೩). ೨. ಚಕ್ರಾಕಾರವಾಗಿ ಸುತ್ತಿಸು: ನೋಟ ವಿಷಯದಿಂದೊಳಗಾದ ಪುರುಷರ ಕೋಟಲೆಗೊಳಿಸಿ ಸುತ್ತಿಸುತೆ ಆಟವಿದೆಂಬಂತೆ ತಿರುಗಿಸುತಿರ್ದರು ಚಾಟಳದುಯ್ಯಾಲೆಗಳನು (ಮೋಹತ. ೧೪-೮೯); ಕರ್ಣಜಂ ಬಳಿಕ ನಸುನಗೆಯೊಳೆಡಗೈಯ

ಕೋದಂಡಮಂ ತಿರುಗಿಸುತ್ತಿಂತೆಂದನು (ಕೈಮಿಥಾ. ೦೨-೦೭). ೩. ಬದಲಿಸು; ಬೇರೆ ಕಡೆಗೆ ಹೊರಳಿಸು : ಜನರ ತಾಮಸ, ಮೂಢಪದ್ಧತಿಗಳನ್ನು ಸಾತ್ವಿಕಭಕ್ತಿಗೆ ತಿರುಗಿಸುವ ಕಾರ್ಯವನ್ನು ಇವರು ಹೆಚ್ಚಾಗಿ ಮಾಡಿರ ಬೇಕೆನ್ನಿಸುತ್ತದೆ (ಜಗದಾ. ೦೧೬) : ನಾವು ಮೊದಲು ಆಡಿದ ಮಾತು ತಿರುಗಿಸ ಲಿಕ್ಕೆ ಏನೇನು ಹಿಂದೆ ಮುಂದೆ ನೋಡುವದಿಲ್ಲ (ಮುಂಬಯಿ. ೫-೦೩); ಯಾವ ಆಕಾರಕ್ಕಾದರೂ ತಿರುಗಿಸಬಹುದು (ಹಂಪ್ರ. ೦೬). ೪. ಮಗುಚು; ಬುಡ ಮೇಲು ಮಾಡು : ಉಂಡೆಯಂ ಕೊಯಿದು ಮುಖವ ಮೇಲಾಗಿ ತಿರುಗಿಸಿ ಕೊಂಡು (ಸೂಪಶಾ. ೧-೪೮); ಚಪ್ಪಟೆಯಾದ ಸೌಟಿನಿಂದ ಬಾಣಲೆಗೆ ಹಾಕಿದ ಪೂರಿಯನ್ನು ತಿರುಗಿಸುತ್ತಿರಬೇಕು (ಅಡುಸಾ. ೦೦೬). △ ತಿರುಂಗಿಸು : ೩. ಹರಿಣಾಕ್ಷಿ ... ತಿರುಂಗಿಸಿದಾಸ್ಯಪದ್ಮಮಂ ಪಿಡಿದತಿಕಪ್ಪದಿಂ ನೆಗಪಿಯುಂ ನೆರೆ ಚುಂಬಿಸದಾದ ನಾನದಂ (ಶಾಕುಂತ. ೪೩-೭೬). [ತಿರುಗು$_1$ + – ಇಸು$_3$]

ತಿರುಗು$_1$, ತಿರುಂಗು (ಕ್ರಿ). ೧. ಸುತ್ತು ; ಅಲೆದಾಡು ; ಓಡಾಡು : ಸುಟ್ಟುರೆಯ ತಱಗೆಲೆಯಂತೆ ತಿಱ್ಱನೆ ತಿರುಗಿ ಬೀಟ್ಟಲ್ಲಿ (ಕಾದಂಪೂ. ೦೧೬) ; ತಿಟ್ಟನೆ ತಿರುಗುವ ಗಾಣದೆತ್ತಿನಂತೆ (ಬಸವ. ೩೦೦); ಶೋಕಾತುರದೊ ಳೊಂದೆಡೆಯೊಳುಂ ಕಾಲ್ ನಿಲ್ಲದೆ ಭ್ರಮಿಗೊಂಡು ತಿರುಗುತ್ತ (ಬಸಪು. ೪೫-೩೪) ; ಕಾಡಿನಲಿ ತಿರುಗುವಗೆ ಕನಕಭೂಷಣವೇಕೆ (ಪುರಂದ. ೨-೬೨-೦) ; ಪಡೆ ತಿರುಗುವುದು ದುರ್ಗದಲಿ (ಕಂನವಿ. ೦೦-೦೪೦) ; ಮೂಡ ಪಡವಲಾ ತಿರುಗು, ಬಡಗ ತೆಂಕಲು ತಿರುಗು (ಹೊಂಗಳು. ೦೫-೦೫) ; ಗಂಡಸು ಕೂತು ಕೆಟ್ಟ, ಹೆಂಗಸು ತಿರುಗಿ ಕೆಟ್ಟಳು (ರೂಢಿ). ೨. ಹಿಂದಕ್ಕೆ ಹೋಗು; ಹಿಂಜರಿ ; ಹಿಮ್ಮೆಟ್ಟು : ದೊರೆಯಳಿದನೇ ಸ್ವಾಮಿದ್ರೋಹರು ತಿರುಗಿ (ಕುಮ್ಮಾಡ್ರೋ. ೦೭-೩೯) ; ಅಸಿತಧ್ವಜಂ ಬವರದೊಳ್ಮುರಿದು ಭಂಗಿತವಾಗಿ ತಿರುಗಿದಂ ತನ್ನ ಪಟ್ಟಣಕೆ (ಕೈಮಿಥಾ. ೮-೪೯). ೩. ಹೊರಳಂ : ಅಟ್ಟಿ ದೊಡೆ ತಿರುಗಿ ಮುರಿಮುರಿದೊಟ್ಟೈಸುತೆ ಕೊಂಕಿ ... ಓಡಿತೆಸೆವ ಮಸಕದ ಶಶಕಂ (ಗಿರಿಕ.೦-೮೬); ಕೊಂಚ ದೂರ ಹೋಗಿ ಬಲಕ್ಕೆ ತಿರುಗಬೇಕು (ರೂಢಿ). ೪. ಹೊರಳಿಸು ; ತಿರುಗಿಸು : ಭೀಮಗಜ ಕಟ್ಟಿದುದು ಬೀದಿಗಳ ತಿರುಗ ಲಾಪರೆ ಸಮಯವಿದು (ಕುಮ್ಮಾಡ್ರೋ. ೩-೦): ತನ್ನಿರವ ಸುಜ್ಞಾನದೃಷ್ಟಿ ಯೊಳು ತಿರುಗಿ ನಿಟ್ಟಿಸಬೇಕು ಮುಕ್ಕಣ್ಣನಲ್ಲದೆಲ್ಲರಿಗೆ ಬಹುದೆ ಸುಖಸಿದ್ಧಿ (ಧರಪ.೫-೭೭). ೫. ಗಿರಕಿ ಹೊಡೆ; ಚಕ್ರಾಕಾರವಾಗಿ ಸುತ್ತು : ಇಟ್ಟಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ (ಬಸವ. ೫೭೮). ೬. ಕೆಳೆ : ಮೇದಿನಿಯಲೊಂದಬುದ ತಿರುಗಲು ಸುರರಿಗೊಂದು ದಿನ (ಸಂಭಪ. ೪-೯). △ ತಿರುಂಗು : ೩. 'ತಿರುಂಗಿಸು' ಪರಾ.

ತಿರುತಿರುಗು (ದ್ವಿರುಕ್ತಿ) : ನರನ ರಥ ಸುಳಿಗಾಳಿಯಂತಿರೆ ತಿರುತಿರುಗಿ ದುದು ವಿಶ್ವತೋಮುಖದಿ (ಕುಮ್ಮಾಡ್ರೋ. ೦೪-೨೬). ತಿರುಗದ ದಾರಿ = ಹಿಂದಕ್ಕೆ ಬರದ ದಾರಿ; ಯಮಲೋಕದ ಹಾದಿ: ವಾರಿಜಗಂಧಿ ನಿನ್ನಯ ಕಾಂತ ತಿರುಗದ ದಾರಿಯ ಹೋದಾತ ಬಹನೆ (ಮೋಹತ.೯-೦೮). ತಿರುಗದ ಹಾದಿಯ ಹತ್ತು = ಸತ್ತುಹೋಗು : ಕಾದಿ ... ತಿರುಗದ ಹಾದಿಯ ಹತ್ತಿ ದರ್ (ಮೋಹತ. ೦೨-೩೮). ತಿರುಗಿ ನೋಡು = ಗವನಿಕೊಡು ; ಲಕ್ಷಿಸು : ಆ ಕಡೆ ನಾನು ತಿರುಗಿ ನೋಡಲೂ ಇಲ್ಲ (ಪುನರು. ೦೯೨). ತಿರುಗಿ ಬರು = ಬಳಸಿಬರು; ಸುತ್ತಿಬರು : ತಿರುಗಿ ಬಾಹೆನೊ ಧರೆಯನೆಲ್ಲವನುರಿವ ಬೇಗೆ ಯೊಳೆಯ್ದೆ ಬೇವೆನೊ (ಬಸಪು. ೬೦-೫೮). ತಿರುಗಿ ಬೀಳು=ಎದುರು ಬೀಳು; ಪ್ರತಿಭಟಿಸು : ಸುಂದರಾಂಗನ ದುರ್ವರ್ತನವೆಲ್ಲ ಪ್ರಜೆಗಳಿಗೆ ತಿಳಿಯಲು ಅವರು ತಿರುಗಿ ಬಿದ್ದು...ಸತ್ಯವಿಕ್ರಮನನ್ನು ಬಿಡಿಸಿಬಿಟ್ಟರು (ಕವಿಕ. ೪೩). ತಿರುಗಿ ಹೂಡು = ತಿರುಂಗಿಬೀಳು : ಆದರೆ ಕೆಲಸ ಬಿದ್ದಾಗ ಅವರೊಡನೆ ಸ್ನೇಹ ಬೆಳಸುತ್ತಿದ್ದನು. ತಕ್ಷಣ ತಿರುಗಿ ಹೂಡುತ್ತಿದ್ದನು (ಹಿಂಮುಸ. ೭೮). ತಿರುತಿರುಗಿ ಅನ್ನು = ಪ್ರತಿಯಾಗಿ ಹೇಳು ; ಎದುರುತ್ತರ ಕೊಡು : ದೊಡ್ಡವರ ಮಾತಿಗೆ ತಿರುತಿರುಗಿ ಅನ್ನಬಾರದು (ರೂಢಿ).

[ದೇ. ತುಳು. ತಿರ್ಗು, ತಿರ್ಗು ; ತೆಲು. ತಿರುಗು]

ತಿರುಗು$_2$ (ನಾ). ೧. ಸುತ್ತುವಿಕೆ ; ಚಕ್ರಾಕಾರವಾಗಿ ಚಲಿಸುವಿಕೆ. 'ತಲೆ ತಿರುಗು$_2$' ಪರಾ. ೨. ತಲೆಕೆಳಗಾಗುವಿಕೆ. 'ತಿರುಗು ಮುರುಗು$_1$' ಪರಾ. [< ತಿರುಗು$_1$]

ತಿರುಗುಣಿ 'ತಿರುಗಣಿ' ನೋ.

ತಿರುಗುಣಿಮಡು 'ತಿರುಗಣಿಮಡು' ನೋ.

ತಿರುಗುತ್ತ (ನಾ). (ದನಗಳಿಗೆ ಬರುವ) ತಿರುಗಿ ತಿರುಗಿ ಬೀಳುವ ಒಂದು ಬಗೆಯ ರೋಗ; ತಲೆದೂಗ ರೋಗ : ಎಡದತ್ತ ತಿರಿಗಿ ತೊಟ್ಟನೆ ಕೆಡೆವೊಡೆ ಬಲದೊಳ್ ... ಮೂಗಿನ ಸೆರೆಯಂ ಬಿಡುವುದು ತಿರುಗುತ್ತದವ ಕಮಂ ಪಿಂಗಿಸುಗುಂ (ಲೋಕೋಪ. ೯-೨೦೦). [ತಿರುಗು$_1$ + ಕುತ್ತ]

ತಿರುಗುಪ್ಪು (ನಾ). ೧. ತಿಳ್ಳಿ ಮೊದಲಾದ ಆಟಗಳಲ್ಲಿ ಮಾಡುವ ಪ್ರತಿ ಧಾಳಿ : ಈ ಸರತಿ ರಾಮನ ಕಡೆಯವರು ಬಹಳೇ ಜಾಗ್ರತೆಯಿಂದ ಆಟ ವನ್ನು ಆಡಿದ್ದರಿಂದ ತಿರುಗುಪ್ಪಾಗಿ ತಿರುಗಿ ಎರಡನೆಯ ಮನೆಯವರೆಗೆ ಉಪ್ಪು ಏರಿ ಬಂದಿತ್ತು (ನಿರಾಧ. ೯೬). ೨. (ಆಲಂ) ತಿರುಗಿ ಬೀಳುವಿಕೆ ; ತಿರುಮಂತ್ರ : ತನ್ನ ಶಿಷ್ಯನೇ ತನಗೆ ತಿರುಗುಪ್ಪು ಕೊಟ್ಟನು (ಶರಪ. ೫೪೯); ನೀನು ಭಾಗೀರಥಿಗೆ ಮಾಡಿದ ಮೋಸವೇ ಈಗ ತಿರುಗುಪ್ಪು ಹೂಡಿದೆ (ಭಾರತಿ. ೦೯೦) ; ರಾಯರ ಮೇಲೆಯೆ ಖಟ್ಲೆಯು ತಿರುಗುಪ್ಪಾಗಿ, ಐನೂರು ರೂಪಾಯಿ ದಂಡ, ಆರುತಿಂಗಳ ಸಶ್ರಮ ಶಿಕ್ಷೆಯಾಯಿತು (ಹೂಬಿಸಿ. ೬೨). [ತಿರುಗು$_1$ + ಉಪ್ಪು$_2$]

ತಿರುಗುಮುರುಗು$_1$ (ನಾ). ಹಿಂದುಮುಂದಾಗುವಿಕೆ : ನಡು ಸಣ್ಣದಾದರೆ ಮನ ದೊಡ್ಡದಾದರೆ ಕಾಂತೆ ಮೆಚ್ಚಾಗುವೆ ನೀನು ನಡು ಮನಗಳ ಗಾತ್ರ ತಿರುಗುಮುರುಗಾದರೆ ಮತ್ತೆ ನಾ ಹೇಳುವುದೇನು (ಇಂಜಾಪ. ೦೦೬-೦೭) ; ನುಲೋ ಎಂಬ ಪರ್ವತದ ಮೇಲೆ ತಿರುಗುಮುರುಗು ಪಾದಗಳುಳ್ಳ ಎಂಟು ಬೆರಳುಳ್ಳ ಜನರಿದ್ದಾರೆ (ಪ್ರಬಾಇ. I, ೨೮). [ತಿರುಗು$_2$ + ಮುರುಗು]

ತಿರುಗುಮುರುಗು$_2$, ತಿರುಗಮುರುಗ, ತಿರುಗಿಮುರುಗಿ (ಅ). ಮತ್ತೆ ಮತ್ತೆ ; ಪುನಃ ಪುನಃ : ಅವರು ಅದೇ ಮಾತನ್ನು ತಿರುಗೂಮುರುಗೂ ಆಡುತ್ತ ಹೊರಬಿದ್ದರು (ಮೂಪಾಶಾ. ೦೩). ತಿರುಗಮುರುಗ : ತಿರುಗ ಮುರುಗ ಮತ್ತೆ ಅದೇ ಇದ್ದಕಿದ್ದ ಹಾಗೆ ಇದೆ (ಹೃದಸ. ೩೬-೦). ತಿರುಗಿ ಮುರುಗಿ : ಆ ರಭಸಕಸುರದಳಗಳ್ ... ಕಂಗೆಟ್ಟು ದೆಸೆಗೆಟ್ಟು ಸುಳಿಸುತ್ತಿ ದುವು ಮರಳಿ ತಿರ್ಪನೆ ತಿರುಗಿಮುರುಗಿ (ಶ್ರೀರಾಮಾ. ೬೩೩-೦೦೦). [< ತಿರುಗುಮುರುಗು$_1$]

ತಿರುಗುಹ (ನಾ). (ಸಾಲ ಮುಂತಾದುವನ್ನು) ಹಿಂದಿರುಗಿಸುವಿಕೆ,– ಮರಳಿ ಕೊಡುವಿಕೆ ; "ನಿಷ್ಕೃತಿ" (ನಾಶಿರಾ. ೬). [ತಿರುಗು$_1$ + – ಹ$_2$]

ತಿರುಗುಳಿ (ನಾ). "ತಿರುಪು ಮೊಳೆಯನ್ನು ತಿರಂಗಿಸಿ ಬಿಗಿಸುವ ಸಲ ಕರಣೆ : ತಿರುಪುಳಿ, ತಿರುಗುಳಿ" (Screw-driver. ಇಂಕನಿ). [ತಿರುಗು$_1$ + ಉಳಿ$_5$]

ತಿರುಗೊಂಬು (ನಾ). ತಿರುಚಿಕೊಂಡಿರುವ ಕೊಂಬು; ಹೊಸೆದುಕೊಂಡಿ ರುವ ಕೊಂಬು : ಕಾಳ್ಕೋಣ ಕಡವೆ ಸಾರಗ ಜಿಂಕೆಗಳ ಕವಲ್ಗೊಂಬುಗಳ್ ತಿರುಗೊಂಬುಗಳ್ ನೀಳ್ದ ಕೊಂಬುಗಳ್ (ಶ್ರೀರಾಮಾ. ೪೫೫-೨೬೨). [< ತಿರಿ$_1$ + ಕೊಂಬು$_1$]

ತಿರುಗೋಲು, ತಿರುಕೋಲು (ನಾ). ೧. ವೃತ್ತಾಕಾರವಾಗಿ ಸುತ್ತುವ ಕೋಲು : ಇದರ ನಡುವೆ ಒಂದು (Rotor) ತಿರುಗೋಲು ಚಲಿಸುವುದು (ಬಾಲಪ್ರ. II, ೬೩೨). ತಿರುಕೋಲು : ೨. ಸುತ್ತಿ ಆಡುವ ಕೋಲಾಟ ; ಜಡೆಕೋಲಾಟ : ಸುರದಂತಿಯುರುದಂತಮಂ ಮುಱಿದು ತಿರುಕೋಲ ನಾಡುವರು (ಗುರುಚಾ.೨-೬೦).. [< ತಿರುಗು$_1$ + ಕೋಲು$_1$ (<ಕೋಲ್$_1$)]

ತಿರುಚು$_1$ 'ತಿರಿಚು' ನೋ.

ತಿರುಚು$_2$ (ನಾ). ೧. ನುಲಿದುಕೊಂಡಿರುವಿಕೆ ; ಹೊಸೆದುಕೊಂಡಿರುವಿಕೆ : ಪೆರ್ನರದ ತಿರುಚಿನಿಂ (ಪರಶು. ೨೮-೨೮). ೨. ಸುರುಳಿ : ಮೇಸನ್ ಎಂಬುವವರಿಗೆ ಆಫ್ಘಾನಿಸ್ಥಾನದ ಸ್ತೂಪಗಳಲ್ಲಿ ದೊರೆತ ತಿರುಚುಗಳು. ದಾರ ಬಿಗಿದಿರುವ ಈ ತಿರುಚುಗಳಲ್ಲಿ ಬರೆಹವಿದೆ (ಧಾರವ.೦೩).

[<ತಿರುಚು$_1$]

ತಿರುಚೂರ್ಣ (ನಾ). ಶ್ರೀವೈಷ್ಣವರು ನಾಮದ ಮಧ್ಯರೇಖೆಗೆ ಉಪಯೋಗಿಸುವ ಕೇಸರಿಬಣ್ಣದ ಹುಡಿ : ಮುಟ್ಟಬೇಡ ... ತಿರುಮಣಿ ತಿರುಚೂರ್ಣ ಶೃಂಗಾರ ಧರಿಸುವರ (ಕನಕ. ೮೩-೨) ; ಹರಿದಾಸರುಗಳು ... ತಿರುನಾಮ ತಿರುಚೂರ್ಣಗಳ ಪಣೆಯೊಳಗಿಟ್ಟು ತಿರಿಗಿ ಹರಿಯ ಧ್ಯಾನಿಪರು (ಕಂನವಿ. ೩-೩೭) ; ತಿರುಮಣ್ ಶ್ರೀಚೂರ್ಣ (ತಿರುಚೂರ್ಣ) ಇವುಗಳನ್ನು ಧರಿಸಿದಲ್ಲಿ ... ದೇಹಕ್ಕೆ ಕಾಂತಿಯನ್ನುಂಟುಮಾಡಿ ಸಕಲ ದೋಷಂಗಳನ್ನೂ ಹೋಗಲಾಡಿಸುವುದು (ಸಕವೃ. ೪೦).

[←ತಮಿ. ತಿರುಚ್ಚೂರಣ ; ತೆಲು. ತಿರುಚೂರ್ಣ]

ತಿರುಚೊಂ (?). (?) : ಬೇಳಿಊರು ಎಣ್ಬತ್ತು ಗದ್ಯಾಣ ಪೊನ್ನುಂ ಎಣ್ಬುನೂಱು ಬತ್ತಮುಮ್ ತಿರುಚೊಂ (ಇಆ. VI, ೧೦೩-೧೪ ; 887 ?).

[?]

ತಿರುಣಾಳು 'ತಿರುನಾಳ್' ನೋ.

ತಿರುಣಿ (ನಾ). ೧. ಕಂಬಾರನ ಚಕ್ರ : ಅನುವಿನಿಂ ಕುಂಬಱಂ ಪಿಡಿದ ದಂಡದಿನಚೇತನಮಾದ ಚಕ್ರಮಂ ತಿರುಪಲಾ ತಿರುಣಿ ತಿರ್ರನೆ ತಿರುಗುವಂತೆ (ಪಾಸೋಪು. ೯-೪೩). ೨. ಮಲ್ಲಯುದ್ಧದ ಒಂದು ವರಸೆ : ತಿರುಣಿ ಕುಳಾಡೆ ಬಾಹುಗೆಣೆ ಸಂದ ಸುಭಾಹುಡೆ ... ಕತ್ತರೆಗಳೆನಿಪ್ಪ ಜಟ್ಟಿಗರ ಬಿನ್ನಣವೊಪ್ಪೆ ಕಡಂಗಿ ಕಾದಿದರ್ (ತ್ರಿಪುವಿ.೨೬-೧೮). [< ತಿರುಗಣಿ]

ತಿರುತುಳಸಿ (ನಾ). ತುಳಸಿಯಲ್ಲಿ ಒಂದು ಬಗೆ ; ಶ್ರೀತುಳಸಿ : ತಿರುಪತಿ ಹಾದೀಲಿ ತಿರುತುಳಸಿಮರ ಹುಟ್ಟಿ ಬೇಲೂರ್ಗೆ ಬೇರು ಹರಿದಾವೊ, ತಿಮ್ಮಪ್ಪ ಕಲ್ಯಾಣ್ಕೆ ಮಗ್ಗು ಸುರಿದಾವೊ (ಹಳ್ಳಿಯ. ೨೨).

[ತಿರು$_2$ + ತುಳಸಿ (= ತುಲಸಿ)]

ತಿರುದಳ (ನಾ). ಮೂರು ಎಸಳುಗಳುಳ್ಳ ಪತ್ರೆ ; ಬಿಲ್ವ : ೪೪ ತಿರುದಳದ ಹುವು ೧೪೪ ಭಂಡಿ ಚಕ್ರಕ್ಕೆ ಅಷ್ಟದಳ ಹುವು (ಎಕ. XIV, ನಂಜನ. ೨೮೯-೩ನೇ ಕಲಂ ; 1847). [<ಸಂ. ತ್ರಿದಲ]

ತಿರುನಕ್ಷತ್ರ (ನಾ). ಮಹಾತ್ಮರು ಹುಟ್ಟಿದ ನಕ್ಷತ್ರವು ಬರುವ ದಿನ; ಜಯಂತಿ : ಈ ದಿನ ರಾಮಾನುಜ ತಿರುನಕ್ಷತ್ರ (ಈದಕೆ. ೯೦).

[ತಿರು$_2$ + ನಕ್ಷತ್ರ]

ತಿರುನಱುಂಗೊಂಡೆ (ನಾ). ಒಂದು ಊರಿನ ಹೆಸರು : ಪಞ್ಚಮಹಾಪಾತಕದ ಫಲ (ಂ) ಮಿನೆಬರ್ಗ್ಗಮಪ್ಪುದು ತಿರುನಱುಂಗೊಣ್ಡೆಯ ಕಿಟ್ಟಪ್ಪಳ್ಳಿ ಬಟಿ (ಸಾಇಇ. IX-i, ೦೯-೦೩ ; ೨ನೆಯ ಶತ). [?]

ತಿರುನಾಮ (ನಾ). ಶ್ರೀವೈಷ್ಣವರು ಧರಿಸುವ ನಾಮ : ಹರಿದಾಸರುಗಳು ತಿರುನಾಮ ತಿರುಚೂರ್ಣಗಳ ಪಣೆಯೊಳಗಿಟ್ಟು ತಿರಿಗಿ ಹರಿಯ ಧ್ಯಾನಿಪರು (ಕಂನವಿ. ೩-೩೭).

ತಿರುನಾಮ ಹಾಕು = ಮೋಸಮಾಡು : ನಾಲ್ಕು ದಿವಸ ಕಾಲ ವಿಳಂಬವಾದರೂ ನಾವೇನು ತಿರುನಾಮ ಹಾಕಿ ನಿಮ್ಮ ಹಣ ನುಂಗುವುದಿಲ್ಲ (ಕಾವೇರಿ. ೩೦). [← ತಮಿ. ತೆಲು. ತಿರುನಾಮ]

ತಿರುನಾಮಧಾರಿ (ನಾ). ತಿರುನಾಮವನ್ನು ಧರಿಸಿದವನು ; ಶ್ರೀವೈಷ್ಣವ : ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೆ ಜನ್ಮಸಾರ್ಥಕವಿಲ್ಲದವರೆಲ್ಲ ಭಾಗವತರೆ (ಕನಕ. ೦೨೬ ಪಲ್ಲವಿ).

[ತಿರುನಾಮ + – ಧಾರಿ]

ತಿರುನಾಳ್, ತಿರಿನಾಳ್, ತಿರುಣಾಳು, ತಿರುನಾಳು (ನಾ). ಹಬ್ಬದ ದಿನ ; ಪರ್ವದಿನ : ದಿನವು ಬೇಱೊಲ್ಲ ತಿರುನಾಳೆ ದಿನವಾ ಪುರಕೆ (ತಿರುರ. ದೇ. ೩-೦೪) ; ತಿರುನಾಳೆಂಬುದು ತನಗಂ ನಿರುತಂ ತಾಯ್ತಂದೆ ಬಂಧು ಗತಿಮತಿಯೆನುತಂ ... ಜಾನಿಸುತಿರ್ಪಂ (ತ್ರಿಪುವಿ. ೫೬-೭). **ತಿರಿನಾಳ್** : ಹರನ ಭಕ್ತರ್ಗೆ ಹರುಷಂ ಬಪ್ಪ ಮಾಳ್ಕೆಯಿಂ ತಿರಿನಾಳ್ಪರಲು ಪುರವನರ್ತಿಯಿಂ ಕಯ್ಗೆಯ್ದು (ಮುಱಿ. ದೇ. ೭೦-೦೩). **ತಿರುಣಾಳು** : ವೇದಗಿರಿಪೆರುಮಾಳಿಗೆ ತಿರುಣಾಳನು ಸಾಗಿಸಿ ಪೂಜೆಯನು ಮಾಡಿಸೊದು (ಸಾಇಇ. IX-ii, ೫೩೬-೧ ; 1529). **ತಿರುನಾಳು** : ತಿರುವಧ್ಯಾನ ತಿರುನಾಳು ತಿರುವಿಶಾಖ ನಿತ್ಯಸಮಾರಾಧನೆ ನೈಮಿತ್ತಿಕಸಮಾರಾಧನೆ ನಡೆವಂತಾಗಿ (ಎಕ.XIV, ಶ್ರೀರಂಗ. ೮೭-೦೬ ; 1370); ನಂಮ ಸ್ಥಾನದಿಂದ ಬಂದ ತಿರುನಾಳ ಕಾಣಿಕೆ (ಸಾಇಇ. ೦೯೩೪, ಪುಂಗನೂರು. ೧೫೬-೦೪ ; 1419) ; ಕರಿರಾಜ ತಿರುನಾಳು ಭಾಸುರವಿಡಿದಿಹ ಪಿರಿಯ ಸಂಕ್ರಮ ತಿರುನಾಳು ವರರಥಸಪ್ತಮಿಯುತ್ಸವ ತಿರುನಾಳು ಮೆಱೆದವು ರಂಗೇಶಗಾಗ (ಕಂನವಿ. ೭-೧೦೯).

[← ತಮಿ. ತಿರುನಾಳ್ ; ತೆಲು. ತಿರುನಾಳ್ಲು]

ತಿರುನಾಳು 'ತಿರುನಾಳ್' ನೋ.

ತಿರುನೀರು 'ತಿರುನೀಱು' ನೋ.

ತಿರುನೀಱು, ತಿರುನೀರು (ನಾ). ಪವಿತ್ರವಾದ ಬೂದಿ; ಭಸ್ಮ ; ವಿಭೂತಿ: ನೀವು ಮಂತ್ರಿಸೆನುತ್ತ ತಿರುನೀಱೋವಿ ಮಂತ್ರಿಸಿ ಹಾಯ್ಕಲು (ಬಸಪು. ೫೦-೨೮). **ತಿರುನೀರು** : "ತಿರುನೀರು-ವಿಭೂತಿ (ಈ ಮಾತು ತಮಿಳುನಾಡಿನಲ್ಲಿ ರೂಢಿಯಲ್ಲಿದೆ)" (ಶರಶಾ. ೨೪-೮).

[←ತಮಿ. ತಿರುನೀಱು; ತೆಲು. ತಿರುನೀಱು, ತಿರುನೀರು, ತಿರ್ನೀರು]

ತಿರುಪ, ತಿರಿಪೆ, ತಿರುಪೆ (ನಾ). ೧. ಅಲೆತ ; ಭಿಕ್ಷಕ್ಕಾಗಿ ಸುತ್ತುವಿಕೆ. ೨. ಭಿಕ್ಷೆ ; ಯಾಚನೆ : ತಿರುಪಕ್ಕೆ ಬಂದಿರೋ ಹಾಗಿದೆ (ಉಡುಗೊ. ೫೮) ; ತಿರುಪದ ಪುಟ್ಟಯಲ್ಲಿ ಶನೇಶ್ವರ ಕೂತ (ಗಾದೆ). **ತಿರಿಪೆ** : ೩. ಭಿಕ್ಷೆ ಎತ್ತಿದ ಆಹಾರ ಅಥವಾ ಧಾನ್ಯ : ಬಡವರಲ್ಲಿ ಅನೇಕರು ತಿರಿಪೆ ತಿಂದೇ ಬದುಕುತ್ತಾರೆ (ರೂಢಿ). **ತಿರುಪೆ** : ೨. ಅಕ್ಕರವು ಲೇಖಕ್ಕೆ ತರ್ಕ ಕಾವಾದಕ್ಕೆ ಮಿಕ್ಕ ಓದುಗಳು ತಿರುಪೆಗೆ (ಸರ್ವಜ್ಞ. ೪೭೦) ; ನಾಲ್ಕು ಜನ ಸರೀಕರಲ್ಲಿ ತಿರುಪೆಗೆ ಕೈಯೊಡ್ಡಿದೆ (ಕಾಮಿಕಾಂ. ೨೦೭) ; ತಿರುಪೆಗೆ ಹೊರಟವರಂತಿತ್ತು (ದೀಪದ. ೨೨). ೩. ನಿನ್ನನ್ನು ನಂಬಿದರೆ ತಿರುಪೆಯೂ ಹುಟ್ಟಲೊಲ್ಲದು ಕೇಳೊ ಹರಿಯೆ (ಪುರಂದ. ೪-೯೭-೩).

ತಿರುಪವೆತ್ತು, ತಿರುಪೆಎತ್ತು=ಭಿಕ್ಷೆಬೇಡು: ನಿನ್ನಂತಹ ಮಗನನ್ನು ಹೆತ್ತು ಅವರು ಗೋಳಿಡುತ್ತ ತಿರುಪವೆತ್ತಿ ಹೊಟ್ಟೆ ಹೊರೆಯುತ್ತ ಭೂಮಿಯ ಮೇಲೆ ಇರಬೇಕಾಗುವುದಲ್ಲ (ಭೀಷ್ಮದ. ೧೫೫) ; ತಿರುಪೆ ಎತ್ತಬಹುದಿತ್ತು (ಮುಂಗಾಮು. ೧೮). [ದೇ.೩ ತುಳು. ತಿರುಪ, ತಿರುಪೆ ; ತೆಲು. ತಿರಿಪ]

ತಿರುಪಕೂಡೆ (ನಾ). ಮಡಿಬಟ್ಟೆಗಳನ್ನು ಇಡುವುದಕ್ಕಾಗಿ ಶ್ರೀವೈಷ್ಣವರು ಬಳಸುವ ಓಲೆಗರಿಯ ಬುಟ್ಟಿ, – ಗೂಡೆ : ಮೊದಲ ರಾತ್ರಿಯೇ ತಿರುಪಕೂಡೆಗೆ ಮಡಿಬಟ್ಟೆಯನ್ನು ಹಾಕಿಟ್ಟು ಬೆಳಗಾದ ಒಡನೆಯೇ ಅದನ್ನು ಹೆಗಲಿಗೆ ಹಾಕಿಕೊಂಡು ನದಿಗೆ ಸ್ನಾನಕ್ಕೆ ಹೋಗುತ್ತಿದ್ದರು (ನಮ್ಮೂರ. ೦೨೪) ; ಜೋಡಿದಾರರು, ಓಲೆಗರಿ ಪುಸ್ತಕಗಳೂ ತಿರುಪಕೂಡೆಗಳೂ ನಾಮದ ಗೆಡ್ಡೆಗಳೂ ತುಂಬಿದ್ದ ಒಂದು ಕೊಠಡಿಯನ್ನು ಧೂಳು ಹೊಡೆಸಿ ಅವರಿಗಾಗಿ ಸಿದ್ಧಮಾಡಿದ್ದರು (ಬೈಗರ್ವ. ೨೦) ; ಪಾರುಪತ್ತೇಗಾರರು ಸ್ನಾನ ಮಾಡಿ ಹೆಗಲಿನ ಮೇಲೆ ತಿರುಪಕೂಡೆಯನ್ನೂ ತಲೆಯ ಮೇಲೆ ಒಗೆದ ಪಂಚೆಗಳನ್ನೂ ಬಲಗೈಯಲ್ಲಿ ಚೊಂಬಿನಲ್ಲಿ ತೀರ್ಥವನ್ನೂ ತೆಗೆದುಕೊಂಡು (ಗರುದಾ. ೦೩೭).

[←ತಮಿ. ತಿರುಪ್ಪುಕೂಟ್ಟೆ ; ತೆಲು. ತಿರಿಪಗೂಡ, ತಿರಿಪುಗೂಡ]

ತಿರುಪಣಿ$_1$ 'ತಿರುಪುಳಿ' ನೋ.

ತಿರುಪಣ್ಣೆ, ತಿರುಪ್ಪಣ್ಣೆ (ನಾ). ೧. ದೇವಾಲಯದ ಸೇವೆ ; ದೇವ ಸ್ಥಾನದ ಕೆಲಸ. ೨. ದೇವಾಲಯದ ಜೀರ್ಣೋದ್ಧಾರ : ಯಿಷ್ಟು ಸ್ವಾಸ್ಥ್ಯವನು ಗುರುಮೂರ್ತಿ ತ್ರಿಯಂಬಕಲಿಂಗಗೆ ಅಂಗಭೋಗ ರಂಗ ಭೋಗ ತಿರುಪಣಿ ಕೆಱೆ ಕಾಲುವೆಗೆ ಯಿಷ್ಟಕೆ ಶಲವಾಗಿ ಸಮರ್ಪಿಸ್ತನು (ಎಕ. XIV, ಗುಂಡ್ಲುಪೇ. ೦೨೮-೦೦೬ ; 1510) ; ತೇರು ತಿರು ನಾಳು ತಿರುಪಣಿ ಮಾಸೋತ್ಸವ (ಎಕ. IX, ಹನ್ಸಪ. ೫೩-೦೨ ; 1534). ೩. ದೇವಾಲಯದಿಂದ ಬರುವ ವರಮಾನ : ತಿರುಪಣಿಗೆ ಸಮರ್ಪಿಸ್ತ ರಾಯದುರ್ಗದ ಸೀಮೆಗೆ ಸಲ್ಲುವ [ಬ್ರ]ಹ್ಮಸಮುದ್ರದ ಗ್ರಾಮ (ಸೌಇಇ. IV, ೨೫೫-೦೩ . 1513). **ತಿರುಪ್ಪಣ್ಣೆ** : ೨. ಯೇಳು ನಿಲೆಯ ಗೋಪುರದ ತಿರುಪ್ಪಣ್ಣೆಗೆ ಕಲ್ಲು ಹಚ್ಚಿಸಿದ ಗ ೭೨೫೦ (ಸೌಇಇ. IX-II. ೫೫೦-೪; 1532). [←ತಮಿ. ತಿರುಪ್ಪಣಿ]

ತಿರುಪತಿ (ನಾ). ೧. ದೇವಾಲಯ : ತಿರುಪತಿ ನೂಱೆಂಟರೊಳಂ ಪರಮಾತ್ಮನ ದಿವ್ಯಮೂರ್ತಿಗಳ್ ಸ್ಫುರಿಕುಂ (ದಿವ್ಯಕ. ೬-೪೪). ೨. ದಕ್ಷಿಣ ಭಾರತದ ಆಂಧ್ರಪ್ರದೇಶದಲ್ಲಿರುವ ಒಂದು ಪ್ರಸಿದ್ಧ ಹಿಂದೂ ಯಾತ್ರಾಸ್ಥಳ ; ವೆಂಕಟೇಶ್ವರಸ್ವಾಮಿಯು ನೆಲಸಿರುವ ಬೆಟ್ಟ : ತಿರುಪತಿ ವೇಂಕಟರಮಣ ನಿನಗೇತಕೆ ಬಾರದು ಕರುಣ (ಪುರಂದ. ೦-೬೬ ಪಲ್ಲವಿ) ; ತಿರುಪತಿ ಕರೆವುದು ಶ್ರೀಶೈಲವನಗೊ ಉಡುಪಿಗೆ ಕೆವಿಗೊಡೆ ಗೋಕರ್ಣ (ಅರಳು. ೩೦೪-೦೩) ; ತಿರುಪತಿ ಕ್ಷೌರಿಕರು ತಲೇ ಬೋಳಿಸಿದ ಹಾಗೆ (ಗಾದೆ).

ತಿರುಪತಿ ಆಗು=ನಷ್ಟಹೊಂದು ; ಕಳೆದುಕೊಳ್ಳು ; ಮೋಸ ಹೋಗು: ನನಗೆ ಒಂಬತ್ತಾಣೆ ತಿರುಪತಿ ಆದುದರ ವಿನಾ ಇನ್ನಾವ ಒಳ್ಳೆಯ ಪರಿಣಾಮವೂ ಉಂಟಾಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ (ನಾಡಿಗೇ. ೨೮೫). ತಿರುಪತಿಕ್ಷೌರ = ಅರ್ಧಂಬರ್ಧ ಮಾಡಿ ನಿಲ್ಲಿಸಿದ ಕೆಲಸ ; ಅಪೂರ್ಣವಾದ ಕೆಲಸ : ಮಾಡೋ ಕೆಲಸ ಸರಿಯಾಗಿ ಮಾಡು , ತಿರುಪತಿ ಕ್ಷೌರ ಮಾಡಬೇಡ (ರೂಢಿ).

[← ತಮಿ. ತಿರುಪ್ಪತಿ ; ತುಳು. ತೆಲು. ತಿರುಪತಿ]

ತಿರುಪಳಿ ' ತಿರುಪುಳಿ ' ನೋ.

ತಿರುಪಾಟ$_1$ (ನಾ). ಸುತ್ತು ತಿರುಗಿಸುವಿಕೆ : ರಂಗುರಂಗಿನಾ ಸೀರೆ, ಕಣ್ಣ ತಿರುಪಾಟವಾಡೆ ಮಧುವು (ಕಮೇಶ. ೨೦-೦೦).

[ತಿರುಪ್ಪು$_1$ (<ತಿರಿಪ್ಪು$_1$)+ ಆಟ]

ತಿರುಪಾಟ$_2$ ' ತಿರುಪಾಟು ' ನೋ.

ತಿರುಪಾಟು, ತಿರುಪಾಟ$_2$, ತಿರುಪಾಟ್ಟು, ತಿರುಪಾಡು (ನಾ). ಶಿವನನ್ನು ಕುರಿತು ಮಾಡುವ ಸ್ತೋತ್ರ ; ತೇವಾರ : ನಂಬ್ಯಣ್ಣನುಸುರ್ದುರುತರವೆನಿಪ್ಪ ತಿರುಪಾಟುಗಳ ಪಾಡುತ್ತಿರಲ್ (ಆರಾಪ. ೬-೩) ; ಶ್ರೀಗಿರಿಜಾರಮಣಿಗೆ ನಲಿದಾನತನಾಗಿ ಪಾಡಿದ ನಂಬಿ ತಿರುಪಾಟ (ತ್ರಿಭುತಿ. ೯೭-೦೬); ಸೌಂದರಂ ಪ್ರೇಮದಿಂ ವಾಲ್ಮೀಕ ನಾಥನಲ್ಲಿಗೆ ಬಂದು ತಿರುಪಾಟ ಪಾಡುವಲ್ಲಿ (ಚೀರಮ. ೦೦-೪); ಇರ್ವರುಂದು ತಿರುಪಾಟುಗಳ ಪಾಡಲ್ (ಪಾಸೋಪು. ೭-೦೦೦). **ತಿರುಪಾಟ$_2$** : ಭಕ್ತರ ಚರಿತೆಗಳನಾನಂದದಿಂ ತಿರುಪಾಟ ರೀತಿಯೊಳೊಂದಿ ಪಾಡುತ (ಬಸವು. ೨೭-೭೦) ; ಬಾಗಿಲ ತೆಗಸಿ ಲಿಂಗವ ಪೂಜಿಸಿ, ತಿರುಪಾಟವಂ ಪಾಡಿ (ಭೈರಸೂ. ೨೨೦). **ತಿರುಪಾಟ್ಟು** : ಪುರಾಣ ನಿತ್ಯಹೋಮ ವೇದ ಪಾರಯಣ ಶ್ರೀತಿರುಪಾಟ್ಟುಯಿಷ್ಟು ಶ್ರೀಕಾರ್ಯ್ಯಕೆಉ ಕೂಡಿ ಮಾಡಿದ ಕಡಕಟ್ಟು (ಮೈಅರಿ. ೦೯೫೮, ೭೫-೦೦ ; 1381). **ತಿರುಪಾಡು** : ಶಂಕರನಂ ಕರೆಯೆ ಕರೆವ ತಿರುಪಾಡಿನ ನಾದಕ್ಕೆ ನಾಗಕುಲವೆಲ್ಲಂ ಮಱೆದು ತಲೆದೂಗಿ (ಪಾಗೀರ.ದೇ. ೨೬೬-೦೯) ; ತಾಳವನಿತ್ತು ತಿರುಪಾಡ ಪಾಡೆಂದು ಬೆಸಸಿ (ಸೌಂದಪು. ೬-೪೪); ಹಂಪೆಯ ತೇರಿನ ತಿರುಪಾಡು ಪಂಪಾದೇವಿಯುಂ ವಿರೂಪಾಕ್ಷನನ್ನು ಒಲಿದು ಒಲಿಸಿಕೊಂಡ ಆ ಸುಮನೋಹರ ನಿತ್ಯಕಲ್ಯಾಣ (ತುಂಗಭ. ೬೯). [← ತಮಿ. ತಿರುಪ್ಪಾಟ್ಟು]

ತಿರುಪಾಟ್ಟು ' ತಿರುಪಾಟು ' ನೋ.

ತಿರುಪಾಡು ' ತಿರುಪಾಟು ' ನೋ.

ತಿರುಪ್ಪು$_1$ ' ತಿರಿಪ್ಪು$_1$ ' ನೋ.

ತಿರುಪ್ಪು$_2$ ' ತಿರಿಪ್ಪು$_2$ ' ನೋ.

ತಿರುಪುಗೊಳು (ಕ್ರಿ). ತಿರುಗುವ ಒಂದು ಭಂಗಿಯನ್ನು ಹೊಂದು : ನಡೆದು ನಡೆದು ಲಾಗಿನಲೋಲಾಡುತೆ ತಡೆದು ತಡೆದು ತೂಗುತೆ ಲೋಲಾಡುತೆ ತಿರುಪುಗೊಳುತೆ ಕಾಳಾಸದಿ ನಿಲುತಂ [ಪಾಶಾಂ. ಪಿರಿದುಂ ನೆಗೆದಾಕಾಶದಿ ನಿಲುತಂ] (ಕೃಂಗೀರ. ಹ. ೪೬೮-೦೮) ; ಸುಟಿಯೊಳಾವರ್ತ ತಿರುಪುಗೊಂಡು ನಾಟ್ಯವ ಪಟಂಗೊಳಿಸಿದರೇವೇಳ್ವೆ (ಕಂನವಿ. ೨೦-೧೦೪).

[ತಿರುಪ್ಪು$_2$ (< ತಿರಿಪ್ಪು$_2$) + ಕೊಳು (< ಕೊಳ್$_1$)]

ತಿರುಪುಟ್ಟಿ (ನಾ). ಶ್ರೀವೈಷ್ಣವರು ಮಡಿಬಟ್ಟೆ, ಜಪಸರ, ಸಾಲಿಗ್ರಾಮ ಮೊದಲಾದುವುಗಳನ್ನು ಇಡುವ ಪೆಟ್ಟಿಗೆ ಅಥವಾ ಬುಟ್ಟಿ : ಇವನ ತಿರುಮಣ್ಣಿಡಲು ಅವನ ತಿರುಪುಟ್ಟಿ; ಬೇಹಾರವೆಷ್ಟರಲಿ ಬಂದಿಲ್ಲ ಬಟ್ಟಿ (ಗಜೇಶ. ೬೯-೧). [←ತಮಿ. ತಿರುಪ್ಪುಟ್ಟಿಲ್]

ತಿರುಪುನಿಚ್ಚಣಿಕೆ (ನಾ). ಚಕ್ರಾಕಾರವಾಗಿ ಇರುವ ಸೋಪಾನ : ಕತ್ತಲೆ ಗೂಡಿನಂತಿದ್ದ ಭಯಾನಕವಾದೊಂದು ಆಕೃತಿ, ಪಾತಾಳದಿಂದ ಸ್ವರ್ಗದ ವರೆಗೆ ಬೆಳೆದು ನಿಂತ ತಿರುಪುನಿಚ್ಚಣಿಕೆ ... ಆ ಚಿತ್ರಶತಕ್ಕೆ ಏಕಸೂತ್ರ ವಾಗಿತ್ತು (ಧರ್ಮಸಿ. ೦೮). [ತಿರುಪ್ಪು$_2$ (<ತಿರಿಪ್ಪು$_2$) + ನಿಚ್ಚಣಿಕೆ]

ತಿರುಪುಹೂ (ನಾ). (ಹೆಂಗಸರು) ತುರುಬು ಅಥವಾ ಜಡೆಗೆ ತಿರುಗಿಸಿ ಕೊಳ್ಳುವ ಒಂದು ಬಗೆಯ ಚಿನ್ನದ ಹೂವು ; ಜಡೆಯ ಬಿಲ್ಲೆ ; ಜಡೆಹೂವು : (ಕ).

[ತಿರುಪ್ಪು$_2$(<ತಿರಿಪ್ಪು$_2$)+ಹೂ$_2$(<ಪೂ$_2$)./ ತೆಲು. ತಿರುಗುಡುಪುವ್ವು]

ತಿರುಪುಳಿ, ತಿರುಪಣ್ಣೆ$_1$, ತಿರುಪಳಿ (ನಾ). ೧. "ತಿರುಪುಮೊಳಿಯನ್ನು ತಿರುಗಿಸಿ ಬಿಗಿಸುವ ಸಲಕರಣೆ: ತಿರುಪುಳಿ, ತಿರುಗುಳಿ" (Screw-driver. ಇಂಇನಿ). **ತಿರುಪಣ್ಣೆ$_1$** : ೨. ತಿರುವುಗಳಿಂದ ಕೂಡಿರುವುದು ; ಸುತ್ತುಗಳನ್ನುಳ್ಳುದು : ಯುಗದ ಜುಗದ ತಿರುಪಣಿಯ ದಾರಿಯನ್ನು ಸಾವಕಾಶ ಹತ್ತಿ (ಅರಳು. ೨೦೬-೪). **ತಿರುಪಳಿ** : ೩. ತಿರುಪು ; ಮಲಸೂತ್ರ : ಹಾಕಿರುವ ತಿರುಪಳಿ ಎಲ್ಲಿಯೊ ಸಡಿಲಾದ ಹಾಗಿದೆ (ಉಡುಗೊ. ೦೨೪). [ತಿರುಪ್ಪು$_2$ (<ತಿರಿಪ್ಪು$_2$) + ಉಳಿ$_5$./ತಮಿ. ತಿರುಪ್ಪುಳಿ; ತುಳು. ತಿರ್ಪುಳಿ, ತಿಪ್ಪಿಳಿ]

ತಿರುಪೆ ' ತಿರುಪ ' ನೋ.

ತಿರುಪೆಕೊಳು (ನಾ). ತಿರಿದು ತಂದ ಆಹಾರ ; ಭಿಕ್ಷಾನ್ನ : ಹರಿವಾಣ ದೊಳಗಮೃತಾನ್ನವು ಇರುತಿರೆ ತಿರುಪೆಕೊಳನು ತಿನ್ನಲ್ಯಾಕಯ್ಯ (ಕನಕ. ೦೬೬-೨). [ತಿರುಪೆ (<ತಿರುಪ) + ಕೊಳ್ಳು$_2$ (<ಕೊಟ್$_1$)]

ತಿರುಪೆಗಾರ (ನಾ). ತಿರುಕ ; ಭಿಕ್ಷುಕ : (ಕ).

[ತಿರುಪೆ (<ತಿರುಪ) + – ಕಾರ$_1$ (< – ಕಾಱ)]

ತಿರುಪೆಗಾರ್ತಿ (ನಾ). ತಿರುಕಿ ; ಭಿಕ್ಷುಕಿ : (ಕ).

[ತಿರುಪೆಗಾರ + – ತಿ$_1$ (< – ಇತ್ತಿ)]

ತಿರುಪೆರಿಭಟ್ಟ (ನಾ). ಒಬ್ಬಾತನ ಹೆಸರು : ತಿರುಪೆರಿಭಟ್ಟರ್ಗ್ಗೆ ಸೆಟ್ಟಿ ಕೊಟ್ಟ ಸರ್ಬಾಪದ ಪರಿಹಾರ (ಎಕ. X (೮), ಬಾಗೇಪ. ೦೦೨-೦ ; ಸು. 10 ನೆಯ ಶತ). [ತಿರುಪೆರಿ ? + ಭಟ್ಟ]

ತಿರುಪ್ಪಣ್ಣೆ ' ತಿರುಪಣ್ಣೆ ' ನೋ.

ತಿರುಪ್ಪಾಯಿ (ನಾ). ತಮಿಳುಭಾಷೆಯಲ್ಲಿರುವ ಒಂದು ಧಾರ್ಮಿಕ ಗ್ರಂಥದ ಭಾಗ ; ಆಂಡಾಳ್ ಬರೆದಿರುವ ನಾಲಾಯಿರ ಪ್ರಬಂಧದ

ಒಂದಂ ಭಾಗ : ವೇದಪಾರಾಯಣ ತಿರುಪ್ಪಾಯಿ ಶ್ರೀಕಾರಕ್ಕೆ ಊರ ಮೂಡಣ ಮಾಯಣ್ಣನ ಭೂಮಿಯೊಳಗೆ ಇರ್ಕ್ಕಣ್ಣುಗ ಗದ್ದೆ ಹೊಲ ತೋಟ ಸಹ . . . ಧಾರಾಪೂರ್ವಕವಾಗಿ ಕೊಟ್ಟರು (ಮೈಆರಿ. ೦೯೨೦, ೩೬-೨ ; 1890). [← ತಮಿ. ತಿರುಪ್ಪಾವೈ]

ತಿರುಪ್ಪು ' ತಿರಿಪ್ಪು[1] ' ನೋ.

ತಿರುಪ್ರಬಂಧ (ನಾ). ವಿಷ್ಣುವಿನ ಪಾರಮ್ಯವನ್ನು ಕುರಿತ ಹಾಡು : ವಾಸುದೇವನ ತಿರುವಡಿಗಳನ್ನು ನುತಿಸಿ ಪೂಜಿಸಿ ತಿರುಪ್ರಬಂಧಾದಿಗಳ ಪಾರಾಯಣವ ಮಾಡುತಲಿ (ಗಗಚಾ. ೦೯-೪೯). [ತಿರು[2] + ಪ್ರಬಂಧ]

ತಿರುಬೊಬ್ಬೆ (ನಾ). ಇನ್ನೊಬ್ಬರ ಮೇಲೆ ತಿರುಗಿಸಿ ಮಾಡುವ ಗದ್ದಲ, -ಕೂಗಾಟ : ಅಂದರೆ ಇದು ಕಳ್ಳನ ತಿರುಬೊಬ್ಬೆ (ಸ್ಕ,ತಿಚ. ೩೪೨).

[< ತಿರುಗು[1] + ಬೊಬ್ಬೆ[1]]

ತಿರುಬೋಕಿ (ನಾ). ೧. ತಿರಂಕನ ಓಡು ; ಭಿಕ್ಷಾಪಾತ್ರೆ : (ಕ). ೨. ತಿರುಕ ; ಭಿಕ್ಷುಂಕ. ೩. ದರಿದ್ರ ; ಬಡವ : ತಿರುಬೋಕಿಗಳನ್ನು ಕಟ್ಟಿ ಕೊಂಡು ನಾಟಕ ಮಾಡು (ನಟಸಾ. ೭೪). [< ತಿರಿ[1] + ಬೋಕಿ]

ತಿರುಮಂತ್ರ (ನಾ). ೧. ಪವಿತ್ರವಾದ ಮಂತ್ರ : ಮುಟ್ಟಬೇಡ ಮುಟ್ಟಬೇಡ . . . ತಿರುಮಂತ್ರ ತೀರ್ಥಪ್ರಸಾದಕೊಳಗಾದವರ (ಕಪಕಿ. ೮೩-೨). ೨. (ಆಲಂ) ಪ್ರತಿಯಾಗಿ ಹೇಳುವ ಮಂತ್ರ ; ತಿರುಗುಬಾಣ : ಸ್ವಾತಂತ್ರ್ಯದ ಚಳುವಳಿ ತೀವ್ರವಾಯಿತು. ತಿರುಮಂತ್ರಕ್ಕೆ ಗುರುವೇ ತಲೆಬಾಗಿದನು (ಛಾರದ. ೪೫೮).

ತಿರುಮಂತ್ರ ಹಾಕು = ಎದುರಿಸು ; ಪ್ರತಿಭಟಿಸು ; ಪ್ರತೀಕಾರ ಮಾಡು: ಎಷ್ಟೋ ಜನರಿಗೆ ನೀನು ತಿರುಮಂತ್ರ ಹಾಕಿದೆ (ಮುಂಗಾಮು. ೫): ಅಪ್ಪಣ್ಣ ಗುರುವಿಗೆ ತಿರುಮಂತ್ರ ಹಾಕಬೇಡ (ವ್ಯಡ್ಡವಿ. ೦೦೩). ತಿರುಮಂತ್ರ ಹೇಳು = ತಿರುಮಂತ್ರ ಹಾಕು : ಗುರುವಿಗೆ ತಿರುಮಂತ್ರ ಹೇಳಿದ ಹಾಗೆ (ನೀತಿಚಿಂ. VI. ೨೨): ಈ ಅಸಭ್ಯರೇ ಕಬ್ಬಿಣವನ್ನು ಮಾಡುವುದನ್ನು ಕಲಿತು ಯಜಮಾನರಿಗೆ ತಿರುಮಂತ್ರ ಹೇಳಿದರು (ಶಿಲ್ಪಣಾ. ೬೭).

[ತಿರು[2] + ಮಂತ್ರ./ತಮಿ. ತಿರುಮನ್ತಿರ ; ತೆಲು. ತಿರುಮಂತ್ರ]

ತಿರುಮಣ್, ತಿರಂಮಣ್ಣು (ನಾ). ಶ್ರೀವೈಷ್ಣವರು ಹಣೆಯ ಮೇಲೆ ಧರಿಸುವ ತಿರುಚೂರ್ಣದ ಅಕ್ಕಪಕ್ಕದಲ್ಲಿ ನಾಮ್ಮ ಹಾಕಿಕೊಳ್ಳಲು ಉಪಯೋಗಿಸುವ ಪವಿತ್ರವಾದ ಬಿಳಿಯ ಪುಡಿ: ತಿರುಮಣ್ ಶ್ರೀಚೂರ್ಣ (ತಿರುಚೂರ್ಣ) ಇವುಗಳನ್ನು ಧರಿಸಿದಲ್ಲಿ . . . ಸಕಲದೋಷಂಗಳನ್ನೂ ಹೋಗಲಾಡಿಸುವುದು (ಸಪವ್ಯ. ೯೦). ತಿರುಮಣ್ಣು : ಶರಣರ ಮೊಗಮೊತ್ತ ಹರಿಯ ಚರಣಮದಚ್ಚುವಡೆದು ತಿರುಮಣ್ಣಾಯ್ತಕ್ಕುಂ (ಮೃ ಸೂಮ. ೨-೩೬).

[← ತಮಿ. ತಿರುಮಣ್ ; ತೆಲು. ತಿರುಮನ್ನು]

ತಿರುಮಣಿ (ನಾ). = ತಿರುಮಣ್ : ನೋಟಕಾಶ್ಚರ್ಯವಾದ ನಗಮುಖ ನೊಸಲೊಳಗೆ ತಿರುಮಣಿಯ ಕಂಡನು (ಪುರಂದ. ೦-೦೦೯-೦) ; ತಿರುಮಣಿ ತಿಲುಕವ ತಿದ್ದಿ (ಗೀತಗೋ. ೬-೦) : ತಿರುಮಾಣಿಯನಿಡದ ಮೋರೆಯು ಸ್ಮಶಾನಕೆ ಸರಿಯು (ತಿರುಶ. ೬-೦೩).

[<ತಿರುಮಣ್. / ತೆಲು. ತಿರುಮಣಿ]

ತಿರುಮಣ್ಣು 'ತಿರಂಮಣ್' ನೋ.

ತಿರುಮಲೆ (ನಾ). ಪವಿತ್ರವಾದ ಬೆಟ್ಟ ; ತಿರುಪತಿ : ಶ್ರೀನಿವಾಸನು ಕೂಡ ತಿರುಮಲೆಗೆ ನೆಲೆ ನಿಂತ ಮಣ್ಣಲ್ಲ ಈ ಭೂವಿದೇವನೊಲುಮೆ (ಅರಳು. ೧೪೦.೩೪) ; ತೀಟೆಗೆ ಮಕ್ಕಳ ಹೆತ್ತು ತಿರುಮಲೆದೇವರ ಹೆಸರಿಟ್ಟ ಹಾಗೆ (ಗಾಡ). [←ತಮಿ. ತಿರುಮಲೈ ; ತೆಲು. ತಿರುಮಲ]

ತಿರುಮಾಲೆ (ನಾ). ೧. ದೇವತಾಮೂರ್ತಿಗಳಿಗೆ ಹಾಕುವ ಹೂವಿನ ಹಾರ : ತಿರುಮಾಲೆ ಜೋಡು ೪ (ಸೌಇಇ. IX-II, ೪೪೦-೪ : 1532). ೨. ಭಕ್ತರಿಗೆ ಪ್ರಸಾದರೂಪವಾಗಿ ಕೊಡುವ ದೇವರ ವಿಗ್ರಹದ ಮೇಲಿನ ಹಾರ : ವರಕಾಲಸ್ವಾಮಿಗಳವರಿಗೆ ಮೊದಲು ತೀರ್ಥ ತಿರುಮಾಲೆ ವರಶೆ ವಿನಿಯೋಗ ಶ್ರೀಶಟಗೋಪ ಮುಂತಾದ ಸಕಲ ಮರಿಯಾದೆಗಳಂನ್ನು ಪ್ರಥಮತಾ ಕೊಡುವಂತೆ (ಮೈಆರಿ. ೦೯೩೮, ೦೯-೭ ; 1811).

[←ತಮಿ. ತಿರುಮಾಲೈ ; ತೆಲು. ತಿರುಮಾಲ]

ತಿರುಮಾಳಿಗೆ (ನಾ). ೧. ದೇವಸ್ಥಾನದ ಪ್ರಾಕಾರದ ಸುತ್ತಲೂ ಇರುವ ಮನೆಗಳ ಸಾಲು. ೨. ದೇವರ ಮನೆ ; ದೇವರ ವಿಗ್ರಹವಿರುವ ಕಿರುಮನೆ. ೩. ಗೌರವಸ್ಥರ ಮನೆ : ತಿರುಮಾಳಿಗೆ ಹರಿದಾಸರು ಅಟ್ಟುವಣೆ ಗಂಡು ಹೆಣ್ಣು ಎಲ್ಲರಿಗೂ ಇದು ದೊಡ್ಡ ಉತ್ಸವವಾಗಿದ್ದಿರಬೇಕು (ಗರುಡಾ. ೧೩೪).

[←ತಮಿ. ತಿರುಮಾಳ್ಗೈ ; ತೆಲು. ತಿರುಮಾಳಿಗ]

ತಿರುಮಿಸೆ (ನಾ). ತಿರಿಚಿದ ಮಿಸೆ ; ಹಂರಿಮಾಡಿದ ಮಿಸೆ : ಹೊಂಬಣ್ಣ ತಿರುಮಿಸೆಯಬ್ಬರಕೆ ಮಣ್ಣಕ್ಕಿ ಸವುತೆಯನು ಮೆಲುವ ನಾಲಗೆಗೆ ಸುಣ್ಣವನು ತೀಡಿ ! (ಕಎಪು. ೪-೩). [<ತಿರಿ[1] + ಮಿಸೆ]

ತಿರುಮು (ನಾ). ಜ್ಞಾನ ; ಪ್ರಜ್ಞೆ : ಅಳತೆ ಮಿಸಿ ಒಂದು ಚಿಮಿಟ ನಸ್ಯವನ್ನು, ಅವರು ನನ್ನ ಮುಂದೆ ಬಿಡಿಸಿ ಹಿಡಿದ ಬಾಳೆಪೊಟ್ಟಣದಿಂದ ಎತ್ತಿ, ಮೂಗಿಗೆ ಏರಿಸಿದೆ. ಏರಿಸಿದ್ದೇ ತಡ ತಿರುಮೇ ಹೋಯಿತು (ಪಟ್ಟಜೀ. ೦೦). [?]

ತಿರುಮುಡಿ (ನಾ). ಹಿಂದಲೆಯಲ್ಲಿ ಬಿಟ್ಟ ಮುಡಿ, — ಶಿಖೆ : ನಾಡೊಳಗೆ ಸಾಮ್ರಾಜ್ಯಮುಮನೀಡಾಡಿ ತಿರುಮುಡಿಯಂ ಧರಿಸಿ ರತಿ ಮೂಡೆ ಶಿವನಂ ಮೆಚ್ಚಿಸಿದ ಕಲಿಪಾಲನಾಳಾನು (ಬಸಪು. ೩೭-೬೮).

[← ತೆಲು. ತಿರುಮುಡಿ]

ತಿರುಮುರಿ 'ತಿರುವುಮುರುವು' ನೋ.

ತಿರುಮುರುವು 'ತಿರುವುಮುರುವು' ನೋ.

ತಿರುಮುರುಹು 'ತಿರುವುಮುರುವು' ನೋ.

ತಿರುಮೂರ್ತಿ (ನಾ). ಪವಿತ್ರವಾದ ಶರೀರವುಳ್ಳವನು : ತಿರುಮೂರ್ತಿ ಮಾಡು ನನ್ನನ್ನು ನಿನ್ನ ಚನ್ನೋದ ಬೋಧ ಬಿತ್ತಿ (ಹೃದಸ. ೩-೭).

[ತಿರು[2] + ಮೂರ್ತಿ]

ತಿರುರಾಜ್ಯ (ನಾ). ಶುಭಕರವಾದ ರಾಜ್ಯ : ಶ್ರೀಮದುರಾಳಕ್ಕಳವರ ತಿರುರಾಜ್ಯದಲ್ (ಎಳ. IX. ಹೊಸಳೂ. ೦೩-೨ ; 900 ?).

[ತಿರು[2] + ರಾಜ್ಯ]

ತಿರುವ (ನಾ). ಒಂದು ಬಗೆಯ ಔಷಧದ್ರವ್ಯ : ಜಂಬೆ, ತಿರುವ, ಹಿಲ್ಲೆ, ಇರುಳ್ (ಮೃಚಿಗಿ. ೭೯-೦೬೦೮). [?]

ತಿರುವಂದಿಕಾಪು (ನಾ). ದೇವತಾಪೂಜೆಯಂ ಕೊನೆಯಲ್ಲಿ ದೃಷ್ಟಿದೋಷ ನಿವಾರಣಾರ್ಥವಾಗಿ ಮಾಡುವ ಕ್ರಿಯೆ : ತಿರುವಂದಿಕಾಪು ತಿರುಣಾಳು ವೈಗಾಶಿ x x x ಲೂ ನಡವಂಥಾ ತಿರುನಾಳಿಗೆ (ಸೌಇಇ. IX-i, ೪೮೯-೪೦ ; 1513). [←ತಮಿ. ತಿರುವನ್ತಿಕ್ಕಾಪ್ಪು]

ತಿರುವಡಿ (ನಾ). ಪವಿತ್ರವಾದ ಪಾದ ; ಪೂಜ್ಯವಾದ ಪಾದ : ಚೊಕ್ಕ ಪೆರುಮಾಳು ದೇವರ ಮುಂಸಿನ ತಿರುವಡಿಯಾದ್ದಡಳರಿಗೆ ಮೂಡಲು . . . ಕಲ್ಲು ನೆಟ್ಟು ಕೊಟ್ಟ ಗದ್ದೆ (ಎಳ. XII, ತುಮಳೂ. ೦೬-೨೦ ; 1287) ; ನವಗೆ ನಿಂಮ ಚಿಂನ್ನಾದ ತಿರುವಡಿ ಪದವ ಕೊಡಿ (ಮೈಆರಿ. ೦೯೩೩, ೫೩-೩ ; 1593) ; ಬುದ್ಧನ ತಿರುವಡಿಗೆ ಶರಣೆಂದು ಬಂದ ಅಶೋಕನಾದರೂ ತನ್ನ ಶಾಸನದಲ್ಲಿ ಹೇಳಿದ ಮಾತು ಹೊಸದೇನಲ್ಲ (ರಾಮಣಾ. ೬೩).

[←ತಮಿ. ತಿರುವಟಿ ; ತೆಲು. ತಿರುವಡಿ]

ತಿರುವತ್ತಿಸಾಮ (ನಾ). ಧನುರ್ಮಾಸದಲ್ಲಿ ದೇವರಿಗೆ ಅರ್ಪಿಸುವ ಒಂದು ಬಗೆಯ ನೈವೇದ್ಯ: ಏಕಾಂತ ಅವಸರ ನೈವೇದ್ಯ ಕಟ್ಟಳೆ ತಿರುವತ್ತಿಸಾಮ ಹರಿವಾಣ ೨ಕಂ ಸಂಣಕ್ಕಿ (ಸೌಇಇ. IX-ii, ೫೬೨-೪; 1529). [< ತಿರುವದಿ + ಸಾಮ ?]

ತಿರುವದಿ (ನಾ). ಧನುರ್ಮಾಸದಲ್ಲಿ ಆರ್ದ್ರಾನಕ್ಷತ್ರದ ದಿನ ಶಿವಾಲಯಂಗಳಲ್ಲಿ ಮಾಡುವ ಉತ್ಸವ: ಶ್ರೀಮತು ದುಗಂಣದೇವರು ತಿರುವದಿಯು ಮೊದಲೀಸ್ವರಮೊ[ಡ]ಯನಾಯನಾರುಗೆ ಆಸ್ಥಾನಕರಿಗೆ ಕೊಟ್ಟ ಸಂಸ್ತೆ (ಸೌಇಇ. IX-ii, ೪೦೩-೬; 1370). [←ತಮಿ. ತಿರುವಾತಿರೈ]

ತಿರುವಧ್ಯಾನ (ನಾ). ಪವಿತ್ರಗ್ರಂಥಗಳ ಚಿಂತನೆ: ತಿಂಮರಾಜಯ್ಯನವರು ಮಾಡಿಸಿದ ಪುಲ್ಲಿವೇಟು ತಿರುವಧ್ಯಾನ ತಿರುನಾಳ ಚೆರವು ದಿನ ೧೦ (ಸೌಇಇ. IV, ೨೭೫-೪; 1560). [←ತಮಿ. ತಿರುವತ್ತಿಯಾಯನ]

ತಿರುವಮುದು (ನಾ). ದೇವರಿಗೆ ಅರ್ಪಿಸುವ ಅನ್ನದ ನೈವೇದ್ಯ; ಅಮೃತಪಡಿ: ಕೆಱೆಗೆ ಬಿತ್ತುವಟ್ಟಮು ದೇವರ್ಗೆ ತಿರು[ವ]ಮುದಿಱ್ಗೆ ಬಿಟ್ಟ ಭೂಮಿಯುಮಂ ಕಲ್ಪಟ್ಟ ಕೊಡುವುದಕ್ಕೆ . . . ಒಡೆಯಾರ್ ಧಾರಾವರ್ಷಕಂ ಈವನು (ಪ್ರಸ್ತಾರಿ. ೦೯೪೬, ೨೮-೬; 1032).

[← ತಮಿ. ತಿರುವಮುತು]

ತಿರುವಯ್ಯ (ನಾ). ಒಬ್ಬಾತನ ಹೆಸರು: ತಿರುವಯ್ಯನ ಮಗಂ ಚನ್ದ್ರಸೇಕರಂ ಮೃಣ್ಡಗಲ್ಲ ಕೆಱೆಗೆ ಬಿತ್ತುಕಟ್ಟು ಬಿಟ್ಟಂ (ಎಕ. X, ಮುಳಬಾ. ೦೯೮-೨; ಸು. 950). [ತಿರು$_2$ + ಅಯ್ಯ$_1$]

ತಿರುವರಿಯಾಟ (ನಾ). ದೇವರಿಗೆ ತೊಡಿಸುವ ಬಟ್ಟೆ: ಶ್ರೀ ಆದಿಗುಂಜಿಯ ನಾರಸಿಂಹ್ವದೇವರ ತಿರುವರಿಯಾಟ ಅಂಗರಂಗಬೋ ××× ಲಂಬಲರ ಗ್ರಾಮ (ಎಕ. XIV, ತಿರುಮ. ೦೪೮-೮; 1556).

[← ತಮಿ. ತಿರುಪ್ಪರಿವಟ್ಟ; ತೆಲು. ತಿರುಪಾವಡ]

ತಿರುವಳಿ (ನಾ). ಒಂದು ಬಗೆಯ ವನಸ್ಪತಿ: "ಗ್ರಂಥಿಲಃ—ಹಲುಮಾಣಿಕ, ತಿರುವಳಿ, ವಿಟಂಕ" (ಓಷಧಿ. ೪೭). [?]

ತಿರುವಳೆಯಾಟ (ನಾ). ದೇವರ ಲೀಲೆಗಳನ್ನು ಪ್ರದರ್ಶಿಸುವ ಒಂದು ಬಗೆಯ ಉತ್ಸವ: ದೇವಸ್ಥಾನಕ್ಕೆ ಉಭಯಕಟ್ಟಳೆ ಮೊದಲಾಗಿ ತಿರುವಳೆಯಾಟಕಂ ಕಟ್ಟಳೆಯು ಮಾಡೆ ಚಿತ್ತಯಿಸ್ತ ಶೀಮೆಗಳು ಪೊಂದರಲೂ ಕಡಿಮೆಯಿಲ್ಲದ ಹಾಗೆ ನಡಸೂದು (ಸೌಇಇ. IX-ii, ೫೨೬-೨; 1529).

[←ತಮಿ. ತಿರುವಿಳೈಯಾಟಲ್]

ತಿರುವಾಯ್ (ನಾ). ಬಿಲ್ಲಿನ ಹಗ್ಗದ ಮಧ್ಯಭಾಗ; ಹೆದೆಯ ಬಾಯಿ: ಬಿಲ್ಗಳನೇಱಿಸಿ ತಿರುವಾಯೊಳಂಬನಿಟ್ಟಸಲೆಂದು ತೆಗೆದಿಸುವನ್ನೆಗಂ (ಪಡ್ಮಾರಾ. ೯೬-೬); ಅಂಬಂ ತಿರುವಾಯ್ಗೆ ತಂದಱಿವರೇ ತಾಮಿರ್ವರುಂ ಕಯ್ದುವಂ ಬಿಸುಟರ್ (ಗದಾಯು. ೨-೦೦); ಪೇಚರಬಲಂ ಪೆಳಱತ್ತು ಕರುತ್ತು ದಿವ್ಯಚಾಪದ ತಿರುವಾಯ್ಗೆ ದಿವ್ಯಶರಮಂ ತರೆ ದೋರ್ಬಲಶಾಲಿ ಲಕ್ಷ್ಮಣಂ (ಪಂರಾಮಾ. ೫-೦೦೨); ತಿರುವಾಯನೊದೆದು ಬ್ಬನಲಿ ಬೊಬ್ಬಱಿದಂಬು ಸುರಪನ ವನವ ಮುತ್ತಿತು (ಕುವ್ಯಾಅ. ೨೦-೨೬); ಬಿಲ್ಗೆ ಕೊಪ್ಪನೇಱಿಸಿ ತಿರುವಾಯ್ಗೆ ಕಣಿಯಂ ಪೂಡಿ ತೇರನೇಱಿ . . . ಪಗೆಯೊಳೆತ್ತಿ ನಡೆದಂ (ರಾಮಾಶ್ವ. ೯೦-೦೬). [ತಿರು$_1$ (< ತಿರುವು$_3$)+ಬಾಯ್]

ತಿರುವಾಯ್ಗೊಳಿಸು (ಕ್ರಿ). ಹೆದೆಯೇರಿಸು: ಬಿಲುದುಡುಕಿ ಬಲುಸರಳ ತಿರುವಾಯ್ಗೊಳಿಸಿ ಮಲೆತನು ಮಾರ್ಬಲಕೆ (ಕುವ್ಯಾಪ್ರೂ. ೦೮-೬೪).

[ತಿರುವಾಯ್ + ಕೊಳ್$_1$ + – ಇಸು$_3$]

ತಿರುವಾಯ್ವೊಣರ್ಚು (ಕ್ರಿ). ಹೆದೆಗೆ ಬಾಣವನ್ನು ಹೂಡುಂ: ದೊಣಗಳಿನುರ್ಚುವ ತಿರುವಾಯ್ವೊಣರ್ಚಿ ತೆಗೆನೆಱೆವ ಬೇಗಮಂ ಕಾಣದೆ ಕೂರ್ಗಣೆಗಳ ಪಂದರನೆ ನಭೋಂಗಣದೊಳ್ ಕಂಡತ್ತು ದೇವಗಣಮಿನಸುತನಾ (ಪಂಪಭಾ. ೧೨-೦೮೪). [ತಿರುವಾಯ್ + ಪೊಣರ್ಚು]

ತಿರುವಾಸಿಲು (ನಾ). ದೇವತಾಮೂರ್ತಿಯನ್ನು ತರುವ ಗರ್ಭಗುಡಿಯ ಮುಂಭಾಗದ ಬಾಗಿಲು; ಶ್ರೀದ್ವಾರ: ಬೆಳಿಯೂ ಸೋಮಯ ದೇವರ ಸೇವೆ ತಿರುವಾಸಿಲ ಮಂಟಪವನೂ ಲ್ಲಾಕವಾಗಿ ಮಾಡಿಸಿ (ಎಕ. X(೫), ಮಾಲೂರು. ೦೪೭-೦೨; 1498). [←ತಮಿ. ತಿರುವಾಚಲ್]

ತಿರುವಿಡು (ಕ್ರಿ). = ತಿರುವಾಯ್ಗೊಳಿಸು: ಬಳಿಕ ತಿರುವಿಟ್ಟಾಗಲಸ್ತ್ರವ ಸೆಳೆದು ಬಿಲುವಿದ್ಯಾಚಮತ್ಕೃತಿಯಳವ ತೋಱಿದಡೆ (ಕುವ್ಯಾಪ್ರೂ. ೯-೯).

[ತಿರು$_1$ (< ತಿರುವು$_3$) + ಇಡು$_1$]

ತಿರುವಿಸು, ತಿರುಹಿಸು (ಕ್ರಿ). ಬೇರೆ ಕಡೆಗೆ ತಿರುಗಿಸು,–ಹೊರಳಿಸು: ಮನುಷ್ಯ ಕಾಲವನ್ನತಿಕ್ರಮಿಸಬಲ್ಲನೆಂದರೆ ಅದೊಂದು ಕಲ್ಪನೆಯೆಂದು ಈಗ ಜನರು ಮೊಗ ತಿರುವಿಸುವರು (ಕಾಲಯಾ. ೪). ತಿರುಹಿಸು: ಪಾರ್ಥನ ಸೂನು ರಣದಲಿ ಬೀದಿವರಿದನು ಗದೆಯ ತಿರುಹಿಸುತ (ಕುವ್ಯಾಪ್ರೂ. ೬ರಿಇ. ಪರ್ವ. ೨೮೦). [ತಿರುವು$_1$ (<ತಿರಿಪು$_1$) + –ಇಸು$_3$]

ತಿರುವೀಥಿ (ನಾ). ದೇವರ ಉತ್ಸವದ ಬೀದಿ; ರಥದ ಬೀದಿ: ಕೆಲಂಬರು ಬಂಡಿಯ ಮುಂಕಣಿಯಂ ಪಿಡಿದು ಪುರದ ತಿರುವೀಥಿಯೊಳು ನಡೆತಪ್ಪಾಗಳು (ನಂಬಿರ. ೨-೦೯). [← ತಮಿ. ತಿರುವೀತಿ; ತೆಲು. ತಿರುವೀಥಿ]

ತಿರುವು$_1$ 'ತಿರಿಪು$_1$' ನೋ.

ತಿರುವು$_2$ 'ತಿರಿಪು$_2$' ನೋ.

ತಿರುವು$_3$, ತಿಬ್ಬು, ತಿರು$_1$, ತಿರ್ಪು, ತಿರ್ಬು, ತೆಬ್ಬು$_2$, ತೆರ್ಬು (ನಾ). ಬಿಲ್ಲಿನ ಹಗ್ಗ; ಹೆದೆ: "ನಯದಿಂ ತಿರುವದುವೆ ತಿರ್ಬು ಹೆದೆ ನಾರಿಯು ಮೌರ್ವಿಯ ಪೆಸರಕ್ಕುಂ" (ಕವಿಕಂ. ೮೦); ಮತ್ತೊರ್ವಳ್ ಕರ್ವಿನ ಬಿಲ್ಲ ತಿರುವಿಂ ಬರ್ದುಂಕಿ ಬರ್ಪಲರಂಬು ಬರ್ಪಂತೆ ಬಂದು (ಪಂಪಭಾ. ೪-೩೭ಪ); ತಿರುವಂ ಮುಪ್ಪುರಿಗೊಂಡು ಮಿಳ್ಳಿಸುವ ಮಿಂಚಂ ಮಾಡಿ . . . ಬೆಂಕೊಂಡತ್ತು ಮೇಘಾಗಮಂ (ಕಾದಂಬ. ೫೩೦); ಮಲ್ಲಿಗೆಯ ತಿಸರಮಂ ತೊಟ್ಟು ತಾವರೆಯ ನೂಲ ತಿರುವಂ ತೀಡೆ (ಅರ್ಧನೇ. ೫-೫೫ ವ); ಬಿಗಿದ ತಿರುವಿನ ಬೆರಳ ಕೋಲುಗಳ . . . ಬೆನ್ನಲೆವ ಬತ್ತಳಿಕೆಗಳಲ್ಕೆದಿತ್ತು ಬಲ್ಲಾಳುಭಯಸೇನೆಯಲಿ (ಕುವ್ಯಾಫೀ. ೪-೦೦); ತಿರುವಿನೊಳ್ ನನೆಗಣೆ ದೊಟ್ಟು (ಸೌಂದಪು. ೦೭-೪೩); ತಿರುವಿಗಂಬನು ಹೂಡಿ (ಸಾಳ್ವಭಾ. ೧೮-೭೦); ತುಂಬಿಗಳ ಪೊಸ ತಿರುವನಳವಡಿಸಿ (ಚಿಬಪು. ೩೫-೬); ಬಿಲ್ಲ ತಿರುವಿಂದ ಜೀವಮನುಣಲ್ ಬರ್ಪ ಕೋಲ್ಗಳ್ (ಪಾರಸಿ. ೧೭-೪೦೦). ತಿಬ್ಬು: "ತಿರುವೆಂದುಂ ತಿಬ್ಬೆಂದುಂ ಬಿಲ್ಲ ನಾರಿ" (ಕಶಸಾ. ೫೨-೦೦೫); ಕರಿಗಳ ಹೊದಱ ಮದೆಗೆಡಹಿ ತಿಬ್ಬ [ಪಾಠಾಂ.ತೆಬ್ಬ] ನೊದೆದುಱ್ ಬಳಿಕ ಗಱ್ ಮೊಱ್ದಬ್ಬರಿಸಿ . . . ಮಸಗಿದವು ಫಲುಗುಣನ ಶರಜಾಲ (ಕುವ್ಯಾವಿ. ೭-೩೬); ಕಬ್ಬಿನ ಬಿಲ್ಲಲರ್ವಕ್ಕಿಯ ತಿಬ್ಬಂ ಬಲಿದ ತನು ಪೂಸರಂಗಳನಿಸಲು (ಶಬ್ದಾನು. ೫೦ ಪ್ರಯೋ); ಕೋಪದಿಂ ಧನುವಂ ಕೊಂಡು ಸಿಡಿಲಂ ಸರಂಗೊಳಿಸಿದಂತೆ ತಿಬ್ಬಿನಬ್ಬರಂ ಸೈನ್ಯಕಲಕಲಮಂ ನುಂಗಿ ದಿಗಂತಮಂ ನೀಡಿರಿವುತ್ತಿರೆ (ಸಕವೃ. ೨ ಪ್ರಸ್ತಾವನೆ); ತಿಬ್ಬನೊದರಿಸಿ ಮುನಿದು ನಾರಾಯಣಾಸ್ತ್ರಮನ್ನುಬ್ಬಿದರೆ ಹರಿ ಕರುಣಿಸಲು (ತುರಂಗ. ೬೯-೫೦). ತಿರು$_1$: "ತಿರುವೆಂದುಂ ತಿಬ್ಬೆಂದುಂ ಬಿಲ್ಲ ನಾರಿ" (ಕಶಸಾ. ೫೨-೦೦೫); ಅಲರಂಬು ಕರ್ಬುವಿಲ್ ಕೋಮಲ ಸರಸಿಜನಾಳತಂತು ತಿರು ತ್ರಿಲೋಕಮಂ ಕಂತು ಬಸಕೆ ಬರಿಸುವನೆಂತುಂ (ಕವಿರಾ. ೨೨-೦೨೦); ಉನ್ಮತ್ತಭೃಂಗವ್ರಜಂ ತಿರು ತಳ್ತೊಪ್ಪುವ ನುಣ್ದಳಿರ್ದೊಣೆ ಲತಾಂತಶ್ರೇಣಿ ಬಾಣೌಘಮಾಗಿ ರತೀಶಂ ಪರಿಪಂಥಿರೂಪದಿಸು ತಿರ್ಪಂ (ಶಾಂತೀಶ್ವ. ೦೩-೧೩೦). ತಿರ್ಪು: "ತಿರು ತಿರ್ಪು ಹೆದೆಯೆನೆ ಬಿಲ್ಲ ನಾರಿ" (ಶಬ್ದಮಂ. ೪೪). ತಿರ್ಬು: "ತಿರುವದುವೆ ತಿರ್ಬು ಹೆದೆ ನಾರಿಯು ಮೌರ್ವಿಯ ಪೆಸರಕ್ಕುಂ" (ಕವಿಕಂ. ೮೦). ತೆಬ್ಬು$_2$: ಅರಿ ಮಿಡಿದನು ತೆಬ್ಬಿನಸ್ತ್ರವ ತೂಗಿ ತುಳುಕಿದನಂಬಿನಂಬುಧಿಯ (ಕುವ್ಯಾಶ. ೩-೫೨); ಬಿಲುಗಳ ತೆಬ್ಬುಗಳನಾರೈದು ಲುಳಿವಡೆದೆಬ್ಬಿಸಿದರಂಬುಗಳ

ಲಂಬರ ತುಂಬಲಗಲದಲಿ (ತೊರರಾ. ೬-೪೩-೧೫) ; ಕಬ್ಬಿನ ಬಿಲ್ಲಿಗಂಗಜನೆಳೆ ದುಂಬಿಯ ತೆಬ್ಬನೇಱಿಸಿ ಜೇವಡೆದು . . . ಎಚ್ಚನವರನು (ಕುರಾಸಾಂ. ೧೭-೯೫) ; ತೆಬ್ಬನೊದರಿಸಿ ಪಾರ್ಥ . . . ಅರಿಗಳಂ ಗೆದ್ದ ಪರಿ ಇದೆ (ತುರಂಗ. ೬೪-೨೫); ತೆಬ್ಬನ್ನೇರಿಸಿ ಗುರಿಯಿಟ್ಟು ಹೂಡಿದನು (ಪಾರ್ತಿಸು. ೯೦). **ತೆರ್ಬು** : ಪುರ್ಬು, ತೆರ್ಬು, ಕೊರ್ಬು (ಕಬ್ಬಾನು. ೮೦ ವ್ಯಾಖ್ಯಾ).

ತೆಬ್ಬಿನ ಧ್ವನಿ = ಹೆದೆಯ ಟಂಕಾರ : ಬ್ರಹ್ಮಾಂಡವು ಗುಮ್ಮಿಡುವ ಹಾಗೆ ತನ್ನ ಬಿಲ್ಲಿನ ತೆಬ್ಬಿನ ಧ್ವನಿಯನ್ನು ಮಾಡಿದನು (ಮುಂಬಯಿ. ೬-೨೯೮).

[ದೇ.ಕ ತುಳು. ತಿರು, ತೆಬ್ಬು]

ತಿರುವುಗಿವಿ (ನಾ). ತಿರಂಗಿಸಿದ ಕಿವಿ ; ಹೊರಳಿಸಿದ ಕಿವಿ : ತಿರುವುಗಿವಿಯ ಮಾಡಿ ಆವು ನಿಂತವಕ್ಕ ನಿಂತಲ್ಲೇನ (ಹಾಡುಪಾ. ೨೮-೩).

[ತಿರುವು$_1$ (<ತಿರಿಪು$_1$) + ಕಿವಿ$_3$]

ತಿರುವುಮುರುವು, ತಿರಂಮುರಿ, ತಿರುಮುರುವು, ತಿರಂಮುರಂಹು, ತಿರುಹುಮುರುಹು (ನಾ). ೧. ಹಿಂದಂಮುಂದಾಗಿರುವುದಂ ; ತಿರಿಚಿಕೊಂಡುದು : ಅವಳ ಜಡೆ ತಿರುವುಮುರುವಾಗಿದೆ (ರೂಢಿ). ೨. ತಲೆಕೆಳಗು ; ಅಡಿಮೇಲು : ಒಬ್ಬರ ದುಡಿತದಲ್ಲಿ ಸಾವಿರ ಜನ ಕುಳಿತು ತಿನ್ನುವುದು ಜೀವನ ಅಲ್ಲ. ಅದು ಜೀವನದ ತಿರುವುಮುರುವು (ಮಣ್ಣಮ. ೫೫) ; ಬಂಡವಾಳವೆಂದು ಧನವು ವ್ಯವಹರಿಸಲು ತೊಡಗಿದಾಗ, ಸರಕು ಮತ್ತು ಹಣ ಇವುಗಳ ಸಂಬಂಧ ತಿರುವುಮುರುವಾಗಿ ಬಿಡುತ್ತದೆ (ಮಾವಾದ. ೧೧೮). **ತಿರುಮುರಿ** : ೧. ತಿರುಮುರಿಯ ಕೊಂಬುಗಳುಳ್ಳ ಒಂದು ಜಾತಿಯ ಜಿಂಕೆ (Addax.ಇಂಕನಿ). **ತಿರುಮುರುವು**: ೩. ಹಿಂದಿರುಗಿಸುವಿಕೆ : ನಗು ಕಾಟ ಅಳುವು ಹಿರಿದಾಟ ಕುಡಿನೋಟ ಮೋಸ ನುಸುಳಾಟ ತಿರುಮುರುವು (ಗರಿ. ೧೦೮-೨) ; ಕಣ್ಣುಕಣ್ಣು ತಿರುಮುರುವು ನೋಟ ನೋಡುವನ ಗೊಂಬೆಯಹುದು (ಮುಕ್ತಕಂ. ೧೩-೫). **ತಿರುಮುರುಹು** : ೨. ಸಂಚನೆಯ ತಿರುಮುರುಹು ಮೋಹದದಂಚಿಗೆಯ ವೆಡೆಯಲ್ಲಿ . . . ನಡೆತಂದ (ಕೃಷ್ಣಾಕ. ೬-೨೦). **ತಿರುಹುಮುರುಹು** : ೪. ಮಲ್ಲಯಂದ್ದದ ಒಂದಂ ವರಸೆ : ತಿರುಹುಮುರುಹಿನಲೌಕುವಳ್ಳೆಯ ಭರದ ಬವರದ ಬಿನ್ನಣಿಗರಚ್ಚರಿಯ ಸಮರೋಚಿತವ ಮೆಱೆದರು (ತೊರರಾ. ೪-೪-೨೨). ೫. [ನಾಟ್ಯ] ವೃತ್ತಾಕಾರವಾಗಿ ಚಲಿಸುವ ಒಂದು ನೃತ್ಯಭಂಗಿ. ೨, ೫ : ತಿರುಹುಮುರುಹುಂಟು ನೃತ್ಯದೊಳು.... ಗುಣವಿರಹಿತತ್ವಂ ಬಿಂದುಗಳೆಯದೆಳಮುತ್ತುಗಳ ಪರಿವಿಡಿಯೊಳುಂಟಲ್ಲದಾ ದೇಶದೊಳಗಿಲ್ಲ (ಸೌಂದಪು. ೨-೭). [ತಿರುವು$_2$(<ತಿರಿಪು$_2$) + ಮುರುವು]

ತಿರುವುವೊಯ್, ತಿರುವೊಯ್ (ಕ್ರಿ). ಜ್ಯಾರವ ಮಾಡು ; ಜೇವೊಡೆ ; ಧನುಷ್ಟಂಕಾರಮಾಡು : ನನೆವಿಲ್ಲಂ ಬಿಟ್ಟು ವಿದ್ಯುಲ್ಲತೆಯ ತಿರುವುವೊಯ್ದಿಂದ್ರಕೋದಂಡಮಂ ಕೊಂಡು ನಿಜಾಗ್ರಸ್ಕಂಧದೊಳ್ ಕೇದಗೆಯೆಸೆ ವರಲೆಂದೆಂಬ ಕೂರಂಬು ತೀವಿ (ಜಗವಿ. ೪-೨೦). **ತಿರುವೊಯ್** : ಮದನಂ ತಿರುವೊಯ್ದು ಕರ್ಬುವಿಲ್ಲಂ ಪಿಡಿಯಲ್ (ದಶಕು. ೪-೧೨೭) ; ವಿರಹಿಯ ಹೃದಯಸ್ಥ ವಿರಹವಹ್ನಿಗೆ ಕಯ್ಯಂ ಸ್ಮರನೊಡ್ಡಿ ಕಾಸಿ ಬಿಲ್ಲಂ ತಿರುವೊಯ್ದಿ ಸುತಿರ್ಪನಸಿತ ಶರರುಹ ಶರದಿಂ (ರಾಜಶೇ. ೯-೨೧). [ತಿರುವು$_3$+ಪೊಯ್$_1$]

ತಿರುವೂರ್ (ನಾ). ಒಂದಂ ಊರಿನ ಹೆಸರು : ಚೋಟ ಧನಞ್ಜಯನ ಆಳು ಆದಿತ್ಯಕುಮಾರನ್ ತಿರುವೂರ ಕಾಳೆಗದುಳೆಱಿದು ಸುರಲೋಕಂ ಪೋದನ್ (ಎಕ. XII, ಮದ್ಯಗಿ. ೧೦೧-೨ ; 750 ?). [ತಿರು$_2$+ಊರ್]

ತಿರುವೆ (ನಾ). ಕಂಠಪಾಠಮಾಡುವುದು ; ಒರಲುಸಂತೆ ಹೇಳುವುದು : ಮತ್ತಮಾ ಕಾಲದೋಳ್ಪಾರ್ವರು ನಡೆಯುವ ನಡತೆಯೆಂತೆಂದೊಡೆ ಕೆಲರು ಮಕ್ಕಳನೆಬ್ಬಿಸಧ್ಯಯನ ತಿರುವೆಯಂ ಕೆಲವರಂಬುಜನೇತ್ರನಾಸ್ತೋತ್ರಪಾಠಮಂ . . . ಮಾಡಿಸುತ್ತಿರುವರಾಗ (ಅರ್ಜಾವಿ. ೩೦-೪೧).

[←ತಮಿ. ತಿರುವೈ]

ತಿರುವೆಂಗಡಯ್ಯ (ನಾ). ಒಬ್ಬಾತನ ಹೆಸರು : ಶ್ರೀಮಙ್ಗಲ ಸಿಙ್ಗ ಪರಾಕ್ರಮನ ಮಗಂ ತಿರುವೆಙ್ಗಡಯ್ಯ ಎರೆಡಿಯೂರ ಪೆಟ್ಟುಱುಗೊಳೊಳಾನ್ತಿಱಿದು ಸತ್ತನ್ (ಎಕ. X, ಮುಳಬಾ. ೧೦೮-೩; ಸು. 950).

[< ತಿರುವೆಂಗಳ + ಅಯ್ಯ$_1$]

ತಿರುವೆಂಗಳ (ನಾ). ತಿರಂಪತಿಯ ವೆಂಕಟೇಶ್ವರ ದೇವರು : ಕೊಂಮನ ಹಳ್ಳಿ ತಿರುವೆಂಗಳದೇವನಾಥಗೆ ಕೊಟ್ಟ ಮಾನ್ಯಹೂಲ ಆಱು ಕೊಳಗ (ಮೈಅರಿ. ೧೯೩೦, ೧೦-೩; 1645) ; ಚೆಲುವ ತಿರುವೆಂಗಳ ವಿಜಯವಿಠಲ ವೆಂಕಟ ನೆಲೆಯಾಗಿ ಇಪ್ಪ ಶುದ್ಧಭಕ್ತರ ವಶನಾಗಿ (ತೀರ್ಥಮ. ೮೦).

[← ತಮಿ. ತಿರುವೇಙ್ಕಟ]

ತಿರುವೆಂಗಳೇಶ (ನಾ).=ತಿರಂವೆಂಗಳ: ಅಜರಾಮರಣಸಿದ್ಧಿ ತ್ರಿಜಗದೋಳ್ ಪ್ರಸಿದ್ಧಿ ವಿಜಯವಿಠ್ಠಲ ಶ್ರೀನಿವಾಸನ ತಿರುವೆಂಗಳೇಶನ (ವಿದಾಕ್ಯ. ೩೦-೩).

[ತಿರುವೆಂಗಳ + ಈಶ]

ತಿರುವೆಟ್ಟ (ನಾ). ಪವಿತ್ರವಾದ ಬೆಟ್ಟ : ವಾಯವ್ಯಕ್ಕೆ ಬಸುರಿಯ ಕೊಳ . . . ಈಶಾನ್ಯಕ್ಕೆ ತಿರುವೆಟ್ಟ ಇನ್ತೀ ಚತುರಾಶ್ರಯ ಸೀಮೆ (ಕಇ. I, ೧೭-೪೩; 1055). [ತಿರು$_2$ + ಬೆಟ್ಟ (<ಬೆಟ್ಟು$_2$)]

ತಿರುವೆಡೆ (ನಾ). ಧನುರ್ಮಾಸದಲ್ಲಿ ದೇವರಿಗೆ ಅರ್ಪಿಸುವ ನೈವೇದ್ಯ : ಧನುಪರ್ವ ತಿರುವೆಡೆ (ಎಕ. XV, ಬೇಲೂರು. ೨೪೮-೧; 1297). 'ತಿರುವತ್ತಿ ಸಾವಂ' ಪರಾ. [ತಿರು$_2$ + ಎಡೆ$_4$]

ತಿರುವೆಳಕು (ನಾ). ದೇವಾಲಯದಲ್ಲಿ ಹಚ್ಚುವ ಮಂಗಳದೀಪ ; ನಂದಾದೀಪ : ಪಲ್ಲಕ್ಕಿಸೇವೆಗೆ ಬಿಜಯ ಮಾಡುಸೂ × ಸಂವಂಧ ತಿರುವೆಳಕು ಪಂಜಿಗೆ (ಸೌಇಇ. IX-ii, ೫೬೨-೩; 1259).

[←ತಮಿ. ತಿರುವಿಳಕ್ಕು ; ತೆಲು. ತಿರುವಿಳಕ, ತಿರ್ವಿಳಕ]

ತಿರುವೇರಿಸು (ಕ್ರಿ). ಬಿಲ್ಲಿನ ಹೆದೆಯನ್ನು ಏರಿಸು : ಎನ್ನೀ ತಿರುವೇರಿಸಿದ ಶರಾಸನೆಮಿರದಾದತ್ತಿತರಕಾರ್ಯದೊಳಗಾಸಕ್ತಂ (ಶಾಕುಂತ. ೯೮-೧೬೩) ; ಅನುಗಾಲ ಬಿಲ್ಲಿಗೆ ತಿರುವೇರಿಸಿಟ್ಟರೆ ಮುರಿಯದೆ ಉಳಿವುದೆ ಧನುವು (ಇಂಜಾಪ. ೧೧೦-೩೭).

[ತಿರುವು$_3$ + ಏರಿಸು (<ಏಱಿಸು)]

ತಿರುವೊಡೆ (ನಾ). ಬಿಲ್ಲುಗಾರನು ಬಿಲ್ಲಿನ ಹೆದೆ ತಾಗದಂತೆ ಎಡದ ಮುಂಗೈಗೆ ಕಟ್ಟುವ ಚರ್ಮದ ಪಟ್ಟೆ ; ಕೈಪೊಡೆ ; ಗೋಧೆ : ವರ ರಥವ ಬಲಗೊಂಡು ಕವಚವ ಬರಿಗೆ ಬಿಗಿದನು ಕೈಗೆ ವಜ್ರದ ತಿರುವೊಡೆಯನವಚಿದನು ರಥವೇಱಿದನು ಕಲಿಪಾರ್ಥ (ಕುವ್ಯಾದ್ರೋ. ೯-೩೬) ; ಕರದ ತಿರುವೊಡೆ ಜೋಡುಸೀಸಕ . . . ಪೆಂಡೆಯಂಗಳ ಬೆನ್ನ ಹೊದೆಗಳಲಿ ನೆರೆದುದತಿದಲ (ಕೌತಿರಾ. ೨೦-೭). 'ಕೆಯ್ಪೊಡೆ' ಪರಾ.

[ತಿರು$_1$ (<ತಿರುವು$_3$) + ಪೊಡೆ$_3$]

ತಿರುವೊಯ್ 'ತಿರುವುವೊಯ್' ನೋ.

ತಿರುವೊಯ್ಲು (ನಾ). ಹೆದೆಯ ಹೊಡೆತ.-ಪೆಟ್ಟು : ಮರಕತ ಕಂಕಣಮೆಸೆದುವು ತಿರುವೊಯ್ಲಿಂ ಕರ್ಪುವೆತ್ತ ತತ್ಕರಯುಗದೊಳ್ (ಚಂದ್ರಪು. ೬-೬೦) ; ತಿರುವೊಯ್ಲಿಂದಾದ ದಡ್ಡುಬ್ಬರಿಸಿ ಮೆಱೆವ ಮುಂಗೆಯ್ಗಳಿಂ ವನ್ಯಮಾತಂಗರದಾಘಾತಕ್ಷತಂ...ಕಾನನಕುಬ್ಬರಮಾಗಲ್ (ಶಾಂತೀಶ್ವ. ೩-೭೫). [ತಿರು$_1$ (<ತಿರುವು$_3$) + ಪೊಯ್ಲು]

ತಿರುಸು (ಗು). ವಕ್ರವಾದ ; ಓರೆಯಾದ. 'ತಿರುಸುಗಣ್ಣು' ಪರಾ.

[<ತಿರಿಚು ?]

ತಿರುಸುಗಣ್ಣು (ನಾ). ಮೆಳ್ಳೆಗಣ್ಣು ; ಮಾಲುಗಣ್ಣು ; ಒರಚುಗಣ್ಣು : ದೃಷ್ಟಿದೋಷವು ಹುಬ್ಬುಗಂಟಿಕ್ಕುವುದನ್ನು ತಿರುಸುಗಣ್ಣನ್ನು ಉಂಟುಮಾಡಬಹುದು (ನಿಮ್ಮರ್ಯ. ೪೦).

[ತಿರುಸು + ಕಣ್ಣು (<ಕಣ್)]

ತಿರುಹಾಡು (ನಾ). ಎಲ್ಲವೂ ಶ್ರೇಷ್ಠವೆಂದು ಹೇಳುವ ಹಾಡು; ಸ್ತುತಿಪಾಠ: ಭೀಮಏಕ್ರಮವಲ್ಲ! ಹಾಹಾದಿ ಹೂಹುಗಳ ಸ್ತೋಮ ವಿದು–ತಿರುಹಾಡು ಸಾಕು! ದೊರೆವಾಡುಗಳ ಸೀಮೆಗಳ ಸಮ್ರಾಟನಾಗಿ ಆಳುವವರಿಗೆ ಏನಾದರೇನು ನನಗೆ? (ಗಿರಿ. ೦೨-೨). 'ತಿರುಪಾಟು' ಪರಾ. [ತಿರು$_2$+ಹಾಡು$_2$ (<ಪಾಡು$_2$)]

ತಿರುಹಿಸು 'ತಿರುವಿಸು' ನೋ.

ತಿರುಹು$_1$ 'ತಿರಿಪು$_1$' ನೋ.

ತಿರುಹು$_2$ 'ತಿರಿಪು$_2$' ನೋ.

ತಿರುಹುಮುರುಹು 'ತಿರುವುಮುರುವು' ನೋ.

ತಿರುಳ್, ತಿರಂಳು, ತಿಳಲು, ತಿಳಿಲಂ (ನಾ). ೧. ಹಣ್ಣು, ಕಾಯಿ ಮುಂತಾದುವುಗಳ ಒಳಭಾಗ: ಬಾಟಿಯ ದಿಂಡಿನ ತಿರುಳೊಳ್ ಮತ್ಸ್ಯಕ್ಷಿ ಮೂಲಮಂ ಸುನ್ನಮುಮಂ ಬೆರಸಿ ಹದವಜ್ಜಿದು ಕುದಿಯಿಸೆ (ಲೋಕೋಕ. ೯-೦೯); ಳಕಾರಕ್ಕೆ . . . ಕುರುಳ್, ತಿರುಳ್, ಮುಗುಳ್ (ಶಮುದ. ೪೪ ಪ್ರಯೋ). ೨. ಹುರುಳು; ಸಾರ; ಸತ್ತ್ವ; ಕೆಚ್ಚು: ಸದಭಿಸ್ತುತಮಪ್ಪೊಕ್ಕುಂದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ (ಕವಿರಾ. ೦-೩೭): ಕಾರಿರುಳ ತಿರುಳ ಬಣ್ಣಂ ಕೂರಿದುವೆನೆ ತೊಳಪ ದಾಡೆ ವಿಭಿರ್ವರಿಂಗೇಸಂ ಪೇರೊಡಲಸೆದಿರೆ ಪುಟ್ಟಿದಂ . . . ಘಟೋತ್ಕಚಂ (ಪಂಪಭಾ. ೩-೫೦); ಎಲ್ಲಾ ಧರ್ಮದ ತಿರುಳಂ ಕೇಳ್ವುದು (ಪಂಚತಂ. ೩೬-೮); ತಿಳಿವೊಡಿದಲ್ತೆ ತತ್ತ್ವದ ತಿರುಳ್ (ದಶಕು. ೮-೪೬). **ತಿರುಳು**: ೧. ತೆಂಗಿನಕಾಯ ತಿರುಳುಂ ನಾರುಂ ... ಕೆಯ್ಯೊಳು ಸಸಿಯುಂ ಪುಲ್ಲುಂ ಬೆರಸಿರ್ದೊಡಂ ಮುಖ್ಯಮುಪ್ಪುದನೆ ಪೆಸರ್ಗೊಳುವಂತೆ (ಧರ್ಮಾಮೃ. ೯-೦೦೬ ಆಡಿಟಿ); ಹೆಸುವಿನ ಹಾಲಿನಲ್ಲಿ ಬೆಲ್ಲವತ್ತದ ತಿರುಳನಿಕ್ಕಿ ಕಾಯಿಸಿ (ಶಶಿಪ್ರ. ೬): ತಿರುಳು ತಿಂದರೂ ಮರುಳು ಹೋಗಲಿಲ್ಲ (ಗಾಡ). ೨. ಕಡೆದ ತಾರೆಗಳ ತಿರುಳ ಚಂದದೋಗರದೊಳಗೆ ಚಂದ್ರಿಕೆಯ ಹೊಸ ಹಳುಕಿನಂದದೆಮ್ಮೆಯ ಮೊಸರು (ಸಿದ್ಧರಾ. ೨-೩೩); ಕುಲಿಶದ ತಿರುಳ ಮಸೆದಂತೆ . . . ಅಹಿತರಿಜ್ಜಿದಾಡಿದರು (ಕುಮಾಭೀ. ೪-೩೦); ಇದು ಪರಮಾರ್ಥ ಹಿತೋಪದೇಶದ ತಿರುಳಿದನು ಸತಿಯರೋದುವುದು (ಹದಿಬ. ೦-೬೦); ಏಷ್ಮದ ತಿರುಳೆಲ್ಲ ವೈೇಯ್ತು (ಪಾಠಸಿ. ೦-೦೯). **ತಿಳಲು**: ೧. ನಾರಿವಾಳದ ಕಾಯೊಳಗಣ ತಿಳಲು ಒಡೆ [ಪಾಣಾಂ. ತಿರುಳ ನೊಡೆ]ಯದೆ ಮೆಲಬಲ್ಲಡೆ ಬೆಡಗು (ಅವಚಂ. ೦೨೬-೩೭೨); ಇದರೊಳಗಿನ ತಿಳಲು ಬಲು ರುಚಿಕರವು (ಮುಂಬಯಿ. ೪-೭೦). ೨. ಸುರರ ಬನದ ಹೂವುತನದ ತಿಳಲು, ಮನದ ಅರಿವಿದು (ನಾದಲೀ. ೪೨-೦೬). **ತಿಳಿಲು**: 'ತಿಳಲುಮಾತಂ' ಪರಾ.

ತಿರುಳ್ ಕನ್ನಡ = ತಿರುಳ್ಗನ್ನಡ: ರಾಜದ್ರಾಜಕಮೆನಿಸಿದ ಸಾಜದ ವುಲಿಗೆಱೆಯ ತಿರುಳ ಕನ್ನಡದೊಳ್ (ಪಂಪಭಾ. ೦೪-೩೪): ಆ ತಿರುಳ ಕನ್ನಡಂ ಮಧುರಮೊೇತ್ಕನ್ನಂ ಸಂಸ್ಕೃತಮೆನೆ ಸಂಪನ್ನಂ ನೆಗಟ್ಟುದ ಭಯಕವಿತೆಯೊಳ್ ಕವಿ ರನ್ನಂ (ಗದಾಯು. ೦-೪೨). ತಿರುಳಾಯ್ಕೆ= ಉತ್ತಮವಾದ ಆಯ್ಕೆ: ಮೊಳ್ಕಾಸೆಯಿಂದವನ್ ತಿರುಳಾಯ್ಕೆಯಾಯ್ದು ಆ ಬೀಯೋಷಿಯದ ಬಯಂಲ ತಣ್ಕೊಳೆ ಆ ಸೋಪಸಿನ ದಡದಲ್ಲಿ ಬಳಿಗಾಲವನ್ ನೂಂಕೆ ಬಿಡಿಸುವನ್ (ಹಾಠಸಿ. ೩೦-೬೯೦). [ದೇ.॥ ತುಳು. ತಿರ್ಳ್]

ತಿರುಳಿಳಿ (ಕ್ರಿ). ನಿಸ್ಸಾರವಾಗಂ; ಸತ್ತ್ವಹೀನವಾಗಂ: ತಿರುಳಿಳಿದ ಕಾವಂನ ಸೊಗಕ್ಕಳೆವ ಬಗೆಯಂ ಮಾಣ (ಸಾಸಂದ. ೫-೨೬).

[ತಿರುಳ್ + ಇಳಿ$_1$ (<ಇಟ್ಟು$_1$)]

ತಿರುಳಿ$_1$, ತಿರುಳಿಗೆ (ನಾ). ಒಂದಂ ಬಗೆಯ ಔಷಧಿ ಸಸ್ಯ; P ಕಣ್ಣನ್ನು ತಂಪುಗೊಳಿಸಲು ಇದರ ರಸವನ್ನು ಉಪಯೋಗಿಸುತ್ತಾರೆ: "ತಿರುಳಿ-ಗ್ರುಸ್ಥಲ, ಕ್ರಕರ, ಕರೀರ" (ನಾಚಿಠಾ. ೫): "ಕರೀರಃ -ಮೊಳಕೆ, ಆಗಸೆ, ಕಳಲೆ, ತಿರುಳಿ" (ಓಷಧಿ. ೩೦); ಕೆಂಗಂಂ ತಿರುಳಿ ತಗ್ಗಿ ತುಗ್ಗಿಲು ತುಂಬುರ ಬಿಡೆ ತೊಟ್ಟಿ . . . ಬೆಲುವ ಭೂಜಂಗಳಿಂದ ವಿಗೆ ಕಾನನಂ ಕಣ್ಗಸೆದುದು (ಹಡಕಾ. ೫-೦೬). **ತಿರುಳಿಗೆ**: ಕ(ತಿ)ರುಳಿಗೆ ಕಾಗೆದೊಂಡೆ...ರಜವನಟ್ಟು ಕಟ್ಟಿ ಕಳಿದಿಕ್ಕುಗುಮಾವಗಮಸ್ಥಿವೃದ್ಧಿಯಂ (ಕೋಳೂಪ. ೯-೦೫೯). [?]

ತಿರುಳಿ$_2$ 'ತೆರಳಿ$_2$' ನೋ.

ತಿರುಳಿಗ (ನಾ). (?): ಬಟ್ಟ ಗದೆ ಕಂವ್ಮಂ ೩೦೦ ತಿರುಳಿಗ ಕಂವಮ್ಮಂ ೩೨ ಎಳ×× ×ಕ×××ಕಮ್ಮ ೨೩ (ಎಳ. VII, ಶಿವಮೊ.೦೦೬-೨೦; 1179). [?]

ತಿರುಳಿಗೆ 'ತಿರುಳಿ$_1$' ನೋ.

ತಿರುಳು 'ತಿರಂಳ್' ನೋ.

ತಿರುಳುಣಿಸು (ನಾ). ಪೌಷ್ಟಿಕ ಆಹಾರ; ಸತ್ವಾಂಶಗಳುಳ್ಳ ತಿನಿಸು: ಪೌಷ್ಟಿಕವಾದ ಅಥವಾ ಕಸುವನ್ನು ಕೊಟ್ಟು ಮೈ ಬಿಳಿಗೆ ಮಾಡುವ ತಿನಿಸು. ಇವಕ್ಕೆ ತಿರುಳುಣಿಸು (Concentrated food) ಎನ್ನಬಹುದು (ಗೋಗ್ರಾಸ. ೩೪).

[ತಿರುಳು (<ತಿರುಳ್) + ಉಣಿಸು$_2$]

ತಿರುಳುದೋಜು (ಕ್ರಿ). ತಿರುಳು ಉಂಟಾಗಿದೆಯೆಂದು ಕಾಣಿಸು: ತಿರುಳು ದೋರ್ವ ಮಿಡಿಗಾಯಿ ಕೋಮಳಂ ಶಲಾಟುಗಳೊಣಗುದೋರ್ವಕಾಯಿ ವಾನಂಗಳಕ್ಕು (ಪುಂಗಡಾ. ೩೩-೭). [ತಿರುಳು (<ತಿರುಳ್) + ತೋಜು]

ತಿರುಳೆತ್ತು (ಕ್ರಿ). ಸಾರವನ್ನು ತೆಗೆ,– ಸಂಗ್ರಹಿಸು: ಸಾರಶಶಿಬಿಂಬ ದೊಟ್ಟಲ ತೆಗೆದು ತಿರುಳೆತ್ತಿ ಕೋರೈಸಿ ಪುಟವಿಟ್ಟ ಪುಣ್ಮದೊಬ್ಬಳಿಯೊ (ಸಿದ್ಧರಾ. ೦-೦೪). [ತಿರುಳ್ + ಎತ್ತು$_1$]

ತಿರುಳೆಲೆ (ನಾ). ಮಧ್ಯಭಾಗದ ಎಲೆ; ಸುಳಿಯೆಲೆ: ಬಾಟಿಯ ತಿರುಳೆಲೆಯ ಬಿಜ್ಜಣಿಗೆಗಳೊಳಂ . . . ಸಂತಾಪಮಂ ಸಂತಯಿಸಲಾಜಿದೆ (ಕಾದಂಬ. ೭೭೩): ಎಳವಾಟಿಯ ತಿರುಳೆಲೆಯ ತೆರಸುತ್ತಿನೊಳಮೆಸೆವ ಪಸುರ್ವಂದರೊಳಗೆ (ಲೀಲಾವ. ೦೦-೩೦ ಪ). [ತಿರುಳ್ + ಎಲೆ$_1$]

ತಿರುಳ್ಗನ್ನಡ (ನಾ). ಸತ್ತ್ವಶಾಲಿಯಾದ ಕನ್ನಡ ಭಾಷೆ; ಸಾರವತ್ತಾದ ಕರ್ಣಾಟಕ ಭಾಷೆ: ತಿರುಳ್ಗನ್ನಡದ ಬೆಳ್ನುಡಿಯೊಳಿ ಪುರುಳೊಂದೆ ಪೇಟ್ದುದು (ರಾಮಾಶ್ವ. ೩-೦೨). [ತಿರುಳ್ + ಕನ್ನಡ$_1$]

ತಿರುಳ್ಗಾಣ್ಕೆ (ನಾ). ಸತ್ತ್ವವನ್ನು ಕಾಣುವಿಕೆ; ಸಾರಗ್ರಹಣ: ಇದು ಬರಿ ಬುದ್ಧಿಯ ತಿರುಳ್ಗಾಣ್ಕೆಯನ್ನಾಗಲೀ . . . ಐಂದ್ರಿಯಕ ಪ್ರಜ್ಞೆಯ ಅನಿಸಿಕೆಗಳನ್ನಾಗಲಿ ನಿರೂಪಿಸುವ ಹವಣಿಕೆಯಲ್ಲಿ ನಿಂತುಬಡಬಾರದು (ನವ್ಯಕಾ. ೩೦). [ತಿರುಳ್ + ಕಾಣ್ಕೆ]

ತಿರುಳ್ನುಡಿ (ನಾ). ಸಾರವತ್ತಾದ ಮಾತು; ಕೆಚ್ಚುಳ್ಳ ನುಡಿ: ತಿರುಳ್ನುಡಿಯೂ ಸಂಯಮವೂ ಇಂಥ ಭಾಷೆಯಲ್ಲಿ ಸಹ ತುಂಬಿರುವುದರಿಂದ ಈ ಶೈಲಿಯಲ್ಲಿ ಒಂದು ಹೊಸ ಕಾಂತಿಯನ್ನೂ ಕಳೆಯನ್ನೂ ಕಾಣಬಹುದು (ನವ್ಯಕಾ. ೩೬). [ತಿರುಳ್ + ನುಡಿ$_2$]

ತಿರೆ (ನಾ). ನೆಲ; ಭೂಮಿ: "ಎಳೆ, ಪೊಡವಿ, ತಿರೆ, ದರೆ, ರನ್ನವಸಿಟಿಳ್, ಬೂವಿ, ಬುವಿ–ಈ ೭ ಭೂಮಿ" (ಕಶಾ. ೦೦-೨೦೦): ತಿರೆಯಂ ಪದೆದೆತ್ತಿ ದೈತ್ಯನಂ ಪೊಳಕಿ ಬಲೀಂದ್ರನಂ ತಗುಳ್ದು ಮಟ್ಟಿಸಿ (ಜಕವಿ. ೫-೦೪೫): ತಿರೆಯೊಳ್ ಪೆಱರ ಸಿರ್ಕಿನೊಳ್ ಮಱುಕಮುಳ್ಕರೊಳ್ ನಿನ್ನನ್ನರೊಳರೇ? (ರಾಮಾಶ್ವ. ೦-೦೪): ಕತ್ತಲಂಜುತೋಡುತಿಹುದು, ಬೆಳಕು ತಿರೆಯ ತುಂಬುತಿಹುದು (ಮಾಂಡಲ. ೯-೬). [<ಸಂ. ಸ್ಥಿರಾ]

ತಿರೆಮಗಳ್ (ನಾ). ಭೂಮಿಯ ಮಗಳು; ಸೀತೆ: ತಿರೆಮಗಳ ಚೆಲುವಲರ ಬಂಡಿಡಿದ ಬಟ್ಟಲಂ ಪೀರ್ದನೆರ್ದೆತುಟಿಯಿಂದೆ ತಣಿವಿನಂ ತನ್ನಾತ್ಮತೃಷ್ಣೆ (ಶ್ರೀರಾಮಾ. ೫೫-೭೬). [ತಿರೆ + ಮಗಳ್]

ತಿರೆಹರವು (ನಾ). ಭೂಮಿಯ ಹರವು; ಭೂವಿಸ್ತಾರ: ಹೊಟ್ಟೆ ನೋವಿಳಿಯುತಿರೆ ರಟ್ಟೆ ನೋವೆನ್ನುವುದು ಮಟ್ಟಸವೆ ತಿರೆಹರವು? (ಮಂಕುಳ. ೩೩೯). [ತಿರೆ + ಹರವು$_2$ (<ಪರಪ್ಪು$_2$)]

ತಿರೋಧಾನ (ನಾ). ೧. ಅಡಗಿಸಿಡುವುದಂ; ಮುಚ್ಚಿಡುವುದು: "ವ್ಯವಧಾನಂ, ತಿರೋಧಾನಂ, ಅಂತರ್ಧಿ, ಅಪವಾರಣಂ—ಈ ೪ ಅಪವಾರಣಂ" (ಹಲಾಯು. ೦೦೯-೩೪). ೨. ಮರೆಯಾಗುವಿಕೆ; ಕಾಣದಾಗುವಿಕೆ; ಅಂತರ್ಧಾನ: ಆಗಳ್ ತಿರೋಧಾನಮಂ ಶ್ರೀನಾಥಂ ಪದೆದಿಯ್ದುದಂ (ವಿಷ್ಣು. ೪-೦೨೪). ೩. ಮರೆಮಾಡುವುದಂ; ತೆರೆಹಾಕುವುದಂ: ತಿರೋಧಾನೋತ್ಥಾನಾಂಬರಮದನೆ ತದ್ವ್ಯವಸಿಸಗುಂ (ಚಂದ್ರಪು. ೦೦-೭೪). ೪. ನೆವ; ನೆಪ: "ವ್ಯವಧಾನಮುಪವಾರಣಂ ತಿರೋಧಾನಮೆನೆ ನೆವನಕ್ಕುಂ" (ಮಂಗರಾ. ೦೨೯-೦೩). ೫. ಐದಂ ವಿಧವಾದ ಕೃತ್ಯಗಳಲ್ಲಿ ಒಂದು; ಬಂಧ: ಪರಮೇಶ್ವರನು . . . ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ, ಅನುಗ್ರಹಗಳೆಂಬ ಪಂಚಕೃತ್ಯಗಳನ್ನು . . . ನೆರವೇರಿಸುತ್ತ ಭಕ್ತಾನುಗ್ರಹಮಾಡುತ್ತಾನೆಂಬುದು ಶೈವಾಗಮದ ಸಿದ್ಧಾಂತ (ಧಾರವ. ೬೫). 'ತಿರೋಧಾನಮೂರ್ತಿ' ಪರಾ. [ಸಂ.]

ತಿರೋಧಾನತೆ (ನಾ). = ತಿರೋಧಾನ ೧: ಏತಕೀ ನರನಾಟಕದ ಮಾಯಾತಿರೋಧಾನತೆಯುಂ (ತೂರಾ. ೬-೪-೪೦). [ಸಂ. ತಿರೋಧಾನತಾ]

ತಿರೋಧಾನಪಾಶ (ನಾ). ಐದಂ ವಿಧವಾದ ಪಾಶಗಳಲ್ಲಿ ಒಂದು: ಪಾಶಪದಾರ್ಥವು . . . ಮಲಪಾಶ ಮಾಯಾಪಾಶ ಕರ್ಮಪಾಶ ಬಿಂದು ಪಾಶ ತಿರೋಧಾನಪಾಶವೆಂದು ಪಂಚಪ್ರಕಾರಮಾಗಿರ್ಪುದು (ವಿಜೇಳ. ೦೬೫). 'ಪಂಚಪಾಶ' ಪರಾ. [ತಿರೋಧಾನ + ಪಾಶ]

ತಿರೋಧಾನಮೂರ್ತಿ (ನಾ). ಐದು ವಿಧವಾದ ಶಿವನ ಮೂರ್ತಿಗಳಲ್ಲಿ ಒಂದು; ಪ್ರಳಯಂಕಾಲದಲ್ಲಿ ಜ್ಞಾನ ಹಾಗೂ ಕ್ರಿಯಾಶಕ್ತಿಗಳನ್ನು ಅಡಗಿಸಿಕೊಳ್ಳುವ ಪುರ್ತಿ: ಶಿವಮೂರ್ತಿಗಳಲ್ಲಿ ಸೃಷ್ಟಿ ಮೂರ್ತಿ, ಸ್ಥಿತಿಮೂರ್ತಿ, ಸಂಹಾರಮೂರ್ತಿ, ತಿರೋಧಾನಮೂರ್ತಿ, ಅನುಗ್ರಹಮೂರ್ತಿಗಳೆಂದು ಐದು ವಿಧ (ಧಾರವ. ೬೯). [ತಿರೋಧಾನ + ಮೂರ್ತಿ]

ತಿರೋಧಾನಶಕ್ತಿ (ನಾ). ಪುರುಷನ ಜ್ಞಾನ ಹಾಗೂ ಕ್ರಿಯಾಶಕ್ತಿಗಳನ್ನು ತನ್ನಲ್ಲಿ ಅಡಗಿಸಿಕೊಳ್ಳುವ ಶಕ್ತಿ: ಈಶ್ವರನಲ್ಲಿ ರಾಗತತ್ವವನೇಳಿಪುದು ತಿರೋಧಾನಶಕ್ತಿ (ವೀಶೈಪು. ೬-೬-೬೬); ಷಡ್ವಿಧಾವಸ್ಥೆಯನ್ನುಳ್ಳ ಜೀವರು ಆಹಾರ ವ್ಯವಹಾರ ವಿಷಯ ಜ್ಞಾನಯುಕ್ತರಾಗಿ ಈಶ್ವರನ ತಿರೋಧಾನಶಕ್ತಿಯಲ್ಲಿ ಶಿಕ್ಷೆಗೊಳಗಾಗಿರ್ಪರು (ವಡಸಂ. ೫೫೬-೦೩ ಟೀಳ್); ವಿಮರ್ಶರೂಪವಾದ ಅಹಂ ಎಂಬ ಸ್ವರೂಪದಲ್ಲಿ . . . ಪರಾವಾಕ್ ಶಕ್ತಿಮಯವಾದ ಚಿತ್ ಶಕ್ತಿಯೇ ತಿರೋಧಾನಶಕ್ತಿ (ಧಾತತ್ತ್ವ. ೬೮೬). [ತಿರೋಧಾನ + ಶಕ್ತಿ]

ತಿರೋಧಾನಿಸು (ಕ್ರಿ). ಅಡಗಿಸಿಡು; ಮುಚ್ಚಿಡು: ಭಾನುವಿಗೆ ದುರ್ದಿವಸವಾದಭ್ರದೊಲು ತಿರೋಧಾನಿಸಿರ್ಪಾವರಣಶಕ್ತಿಯಿಂ ಮಱೆಗೊಂಡು (ಕೃಕವ. ೫-೬೩-೧). [ತಿರೋಧಾನ + -ಇಸು]

ತಿರೋಧಾಯಿಕ (ನಾ). ಸುಖವನ್ನುಂಟುಮಾಡುವುದು: ತಿರೋಧಾಯಿಕ (ಭೋಗವನ್ನುಂಟುಮಾಡುವುದು), ಬಿಂದು (ಮೋಕ್ಷವನ್ನು ಕೊಡುವ ಈಶ್ವರತತ್ತ್ವ—ಮೋಕ್ಷವನ್ನು ಕೊಡುವದು ಈಶ್ವರನಧೀನವೆಂಬುದೂ ಒಂದು ಪಾಶವೆ) ಇವು ಪಂಚಪಾಶಗಳು (ಅಮೃತ. ೩-೧೫೦ ಟೀಳ್). [ಸಂ.]

ತಿರೋಭಾವ (ನಾ). ೧. ಮರೆಯಾಗುವಿಕೆ; ಕಾಣದಾಗುವಿಕೆ: ಆಯಾ ಪಶುಗಳ ಭೋಗಾದೃಷ್ಟ ತೀರಿದ ಬಳಿಕ ಕಾರ್ಯಮಿಲ್ಲಾಗಿ ಅದು ತೋಱದಿರ್ಪುದೇ ತಿರೋಭಾವಮಕ್ಕುಂ (ವಿಜೇಳ. ೦೬೬). ೨. = ತಿರೋಧಾನ ಪಾಶ: ಶುದ್ಧಾಶುದ್ಧವೆಂಬ ಎರಡು ವಿಧ ಸೃಷ್ಟಿಗಳಲ್ಲೂ ಸೃಷ್ಟಿ, ಸ್ಥಿತಿ, ಸಂಹಾರ, ಅನುಗ್ರಹ, ತಿರೋಭಾವವೆಂದು ಐದುವಿಧ ವ್ಯಾಪಾರಗಳಿರುವುವು . . . ತಿರೋಭಾವವೆಂದರೆ ಬಂಧ (ಹಿಂದಸಾ. ೩೦೦). [ಸಂ.]

ತಿರೋಹಿತ (ನಾ). ೧. ಮರೆಯಾದವನು; ಮಾಯವಾದವನು: ತಿರೋಹಿತನಾಗಿ ಪುರಂದರನು ಪೋದನತ್ತ ತಪದೊಳ್ ನರನಂತೊಂದಿ ನಿಲೆ (ಪಂಪಭಾ. ೮-೪೯): ಪುರಾರಿಯ ಪದಯುಗಕೆ ಗುರುತನುಜ ಮೈಯಿಕ್ಕಿದನು ಬೀಳ್ಕೊಂಡನು ತಿರೋಹಿತನಾದನೀಶ್ವರನೀತನನು ಕಳುಹಿ (ಕುಪ್ಪಾಗ. ೯-೩೫). ೨. [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು; ಒಂದು ಪದಾರ್ಥವನ್ನು ಪ್ರಬಲವಾದ ಇನ್ನೊಂದಂ ಪದಾರ್ಥವು ಅಡಗಿಸಿತೆಂದಂ ವರ್ಣಿಸುವುದು: ಒಂದು ಗುಣದತಿಶಯಂ ತಿರೋಹಿಸೆ ತಿರೋಹಿತಂ ತಾನಕ್ಕುಂ . . . ಉದಾ:— ಕಾಳಿಂದಿಯ ಸಿತಜಲದೊಳ ಗೋಲಾಡುವ ಕೃಷ್ಣನಂ ಸವರ್ಣತೆಯಿಂ ಗೋಪಾಲಕುಮಾರರ್ ನೋಡಿಯುಮಾಲೋಲಮನಸ್ಕರಱಿಯದಾಕುಲಮುತ್ತರ್ (ಕಾವ್ಯಾವ. ೬೩೬). [ಸಂ.]

ತಿರೋಹಿತವೇಷ (ನಾ). ಬೇರೆ ವೇಷವನ್ನು ತೊಟ್ಟವನಂ; ಛದ್ಮವೇಷವನ್ನು ಧರಿಸಿದವನು: ವಸುದೇವನಾದೇಶದಿಂ ದ್ವಾದಶದಿನಕ್ಕೆ ನಾಮಕರಣೋತ್ಸವಮಂ ಮಾಡಲೆಂದು ಗಾರ್ಗ್ಯನೆಂಬ ಪುರೋಹಿತಂ ತಿರೋಹಿತವೇಷನಾಗಿ ಬಂದು (ಜಗವಿ. ೩-೩೬ ಪ). [ತಿರೋಹಿತ + ವೇಷ]

ತಿರೋಹಿಸು (ಕ್ರಿ). ಅಡಗು; ಮರಿಚ್ಚು: ಕ್ರಿಯೆಯಂ ಪ್ರತಿಷೇಧಂಗೆಯ್ಯನಿಯತಫಲವ್ಯಕ್ತಿಯದು . . . ಒಂದಂ ಗುಣದತಿಶಯಂ ತಿರೋಹಿಸೆ ತಿರೋಹಿತಂ ತಾನಕ್ಕುಂ (ಕಾವ್ಯಾವ. ೬೩೬). [<ತಿರೋಹಿತ + – ಇಸು]

ತಿರ್ಗಾಸು 'ತಿರಂಗಾಸ್' ನೋ.

ತಿರ್ದಿಸು, ತಿದ್ದಿಸು (ಕ್ರಿ). ೧. ಸರಿಪಡಿಸು; ನೇರಗೊಳಿಸು: ರಸಿಕರಿನೆಯ್ದೆ ತಿರ್ದಿಸಿದೊಡಲ್ಲದೆ ನಿಲ್ಲದು ಚಿತ್ರಮಂತೆ ತಿರ್ದಿಸುವುದೆನಲ್ ನಯಂ (ಜಗವಿ.೦-೦೩); ಕವಿಗಳಂ ತನ್ನ ಕೃತಿಯಂ ನಾಡೆ ತಿರ್ದಿಸಿದೊಡೆ (ಆರಾಚ. ೦-೪೬). ೨. ತರಬೇತುಗೊಳಿಸು; ಸಾಧುಮಾಡು; ಪಳಗಿಸು: ಮೊದಲೊಳಭಿನವತುರಂಗಮನೊದವಿದ ಸಹಣಗಳನ್ನೆದೆ ತಿರ್ದಿಸಿ ಬಸ ಮಾದುದನಱಿದೇಱುವುದು (ರಾಜಶೀ. ೦೩-೩). ತಿದ್ದಿಸು: ೧. ಉಗುರ ತಿದ್ದಿಸುವದು ಮುಗುಳನಗೆ ನಗಿಸುವದು...ಬೋನದ ಬಗೆಯ ನೋಡೆಂದ (ಸರ್ವಜ್ಞ. ೦೯೮೭). ೩. ಅಕ್ಷರಗಳನ್ನು ಬರೆದಂ ಕೊಟ್ಪಂತೆಯೇ ಅದರ ಮೇಲೆ ಮತ್ತೆ ಮಂತ್ತೆ ಬರೆಸು,—ತೀಡಿಸು: ಉಪಾಧ್ಯಾಯನು ಮಕ್ಕಳಿಗೆ ಅಕ್ಷರ ತಿದ್ದಿಸುತ್ತಾ ಇದ್ದಾರೆ (ಕೂಡಿ). ೪. ಹಂಚು; ವಿತರಣೆಮಾಡು: ಬಡವ ಬಲ್ಲಿದ ಬುಧ ಯಾಚಕರೆನ್ನದೆ...ಪೆಟ್ಟಿಗೆ ಪೆಟ್ಟಿಗೆಗಳ ತಣಿಯಿತ್ತು,ಒಡನೆ ಶರ್ಕರೆಯ ತಿದ್ದಿಸಿದ (ಕ್ಯಾನಡ. ೩೭-೦೩೮); ಪ್ರತಿ ಗೃಹಂ ತಪ್ಪದೆ ಸಕ್ಕರೆಯಂ ತಿದ್ದಿಸಿ (ಕೆಳನ್ಯ. ೧೦-೭೧). [ತಿರ್ದು1 + – ಇಸು3]

ತಿರ್ದು1, ತಿದ್ದು1, ತಿಟ್ಟು (ಕ್ರಿ). ೧. ಸರಿಪಡಿಸು; ನೇರಮಾಡು; ಸರಿಮಾಡು: "ತಿರ್ದು—ಋಜೂಕರಣೇ (ನೆಟ್ಟಗೆ ಮಾಡು)" (ಕಪುಧಾ); ಕಬ್ಬಿದ ನೀರ್ಗೆ ಬಂದವುದೆ ಬಬ್ಬಿಕ ಜರೆಗಂ ತಿರ್ದಲ್ (ಅಚಿಪು. ೩-೫೯); ವನರುಹಭವನೆನಿಸಿದ ದಂಡನಾಯಕಂ ಕೇಶಿ ತಿರ್ದೆ ಪೇಬ್ದಂ ಕವಿರನ್ನಂ (ಗದಾಯು. ೧-೩೧); ನಾಯ ಬಾಲಮಂ ಕಾಸಿ ತಿರ್ದಿದೊಡಂ ಕೊಂಕು ಮಾಣದು (ಪಂಡತಂ. ೧೦೩-೨); ಕರಮಿಂಬಾಗಿರೆ ತಿರ್ದಿ ಬೈತಲೆಯಂ (ಸಮಪ. ೬-೩೬); ಪರರು ಕೈಯಿಕ್ಕದಂತೆ ಸಸಿನೆ ಮಾಡುವುದು ತಿರ್ದುವುದು (ಹಕಕಾ. ೦-೩೦); ನುಡಿ ತಪ್ಪದೊಡೆ ತಿರ್ದುವುದೆನ್ನಪು ಸಂಗಡಿಗರು ಸಲೆ ಬಲ್ಲವರು (ಪೋಷತ. ೦-೦೯); ಬುಧರೆಲ್ಲರೊಲ್ದು ಕೈಕೊಳ್ಗೆ ತಿರ್ದುಗೆ ಕೃತಿಯೊಳಧಿಕದೋಷಂಗಳೇನಾಸುಮುಳ್ಕೊಡೆ (ಶ್ರೀಕಾಮ. ೨-೦೦). ೨. ಹಸನುಮಾಡು; ಸುಧಾರಣೆಮಾಡು; ಶುದ್ಧಪಡಿಸು: ಬಗೆದರ್ಥಮನಱಿಪದೆ ಮೆಲ್ಲಗೆ ತಿರ್ದುವ ಬಗೆಯನದಱನೆವದಿಂ ಪೆಱತಂ ನಿಗದಿಸುವುದು (ಕವಿರಾ.೩-೦೩೩).೩. ಪಳಗಿಸು; ದಾರಿಗೆ ತರು: ವಿರಾಟನಂ ಕಂಡೆಂತಪ್ಪ ದುಷ್ಪಾಶ್ವಂಗಳುಮನೇಱಲುಂ ತಿರ್ದಲುಂ ಬಲ್ಲೆನೆಂದು ಪೇಬ್ದಾಳಾಗಿ ತಂತ್ರಪಾಳವೆಸರೊಳ್ ಮಾಸಾದಿಯಾಗಿರ್ದಂ (ಪಂಪಭಾ. ೮-೩೪ ವ); ಮೂವತ್ತಿವರ್ ರ್

ನಯಕಾರರೀತನ ಗಜವ್ರಾತಂಗಳಂ ತಿರ್ದುವರ್ (ಶಾಂತಿಪು. ೫-೧೦೩) ; ಅವರ್ಕೆ ಪುಟ್ಟಿದ ಪೋರಿಗಳಂ ತಿರ್ದಿಯಾರುಂಬಂಗೆಯ್ದು (ಪಂಚತಂ. ೦೪೬-೮) : ವಿರೂಪಾಕ್ಷನಡರೆ ಬೊಮ್ಮಂ ತಿರ್ದಿ ತೋರ್ಪ ಪಟ್ಟಿದ ದಂತಿಯಿಂದೆನಲ್ ಕನಕಾಚಲಂ ಮೆಱಿದುದು (ಹರಿಪು. ೨-೪) . ೪. ಒಪ್ಪಗೊಳಿಸು ; ಓರಣಗೊಳಿಸು ; ಅಂದಗೊಳಿಸು : ಲೋಚು ದೋಷಮೆಂದೊಡೆ ತಿರ್ದಿದ ವುರ್ವಿನವರಂ ತಿರ್ದಿದ ವಿಾಸೆಯವರಂ ಕಾಣಲಾಗದು (ಧರ್ಮಾಮೃ. ೯-೮೯) ; ಕಚಭರಮನತಿಭರದಿಂ ತಿರ್ದುತ್ತವಿರ್ದರ್ (ಗಿರಿಕ. ೧೦-೧೬) ; ವೃಗತೃಷ್ಣಾಭೋಗಮಂ ತಿರ್ದಿದ ನಿಡುಮಡುವೆಂದೆಯ್ದುವಾಭೀಳ ಕಾಳೋರಗನಂ ನೇವಾಳಮೆಂದತ್ತುವ (ಕಂದ್ರನಾ. ೬) : ಗಳಕರ್ಣ ಭೂಷಣಾಂಗಳ ತಿರ್ದುತುಸಿರ ಬಿಡದೊಳಗೊಳಗೆ ನಲ್ಲನಂ ಪಲ್ಲುಗುರ್ಗಳ ಚುಟುಕುಗಳನಜ್ಜಿದು ಬೈವುತಂ (ಹರಿಪು. ೯-೧೬). ೫. ಅಣಿಗೊಳಿಸು ; ಸಿದ್ಧಗೊಳಿಸು : ಕರಗಮನೆತ್ತು ಶೀತಳಿಕೆ ಕಾಲ್ದೊಳೆ ಮಾಲಿನಿ ತಿರ್ದು ಬೋನಮಂ ತರಳಿಕೆ (ಅನಂಪು ೪-೮೫).೬. ಮಾರ್ಗದರ್ಶನ ಮಾಡು: ಗೌಳ ನೀಂ ಸಂತೈಸು ಗಾಯಕರ ತಿರ್ದು ಪಾಂಚಾಳ ನೀಂ ಚಿಪ್ಪಿಗಳ ಗುರ್ಜರನೆ ಕಾದಿರ್ವುದರವನಿಯೊಳೊಳವಾಗಿಲಂ (ಭಾವಚಿಂ. ೫-೨೮). ೭. ಸರಿಯಾಗು; ಅನುಕೂಲವಾಗು : ಅದಂ ಸುಕೃತಾನುರೂಪಮದು ನಮ್ಮ ಮನೋರಥದಂತೆ ತಿರ್ದಿ ಬರ್ಪುದೆ (ಅನಂಪು. ೦೨-೬೫). ೮. (ಶುಭವನ್ನು) ಸೂಚಿಸು ; (ಶುಭದ)ಸೂಚನೆ ಕೊಡು : ಬಿಡೆ ತಿರ್ದಿದ ಶಕುನದ ನಯದಡಿವಿಡಿದು ಪುರೋಹಿತಂ ನೃಪಂಗೀ ನುಡಿಯಂ ನುಡಿದುಂ (ಆದಿಪು. ೫-೬);ಶಕುನಂಗಳೆಲ್ಲಮುತ್ತರೋತ್ತರಂ ತಿರ್ದುವಿನಮುತ್ತರಾಭಿಮುಖರಾಗಿ ಪಯಣಂಬೋಗಿ (ಪಂಪಭಾ.೩-೫೫ ವ) : ತಿರ್ದಿದ ದಿವಸಂ ಮಾಣ್ದಿರ್ದು ಬಟ್ಟಿಕ್ಕಮಾ ತಿರ್ದನೆ ತಿರ್ದಿಂದು ಪಯಣಂಬೋಪಾತಂಗೆ ಪೊರ್ದದು ರಾಭಂ ಬುಧಬಂಧು (ಶೋಕೋಪ. ೦೨-೮). ೯. (ಕಲಹ, ಜಗಳ ಮುಂತಾದುವನ್ನು) ನಿವಾರಿಸು ; ಬಗೆಹರಿಸು ; ತೀರಿಸು ; ಕಳೆ : ಬಂಧುಗಳಂ ಬರಿಸಿ ನಿಮ್ಮಿರ್ವರೊಳಗಾರನೀ ಕನ್ನೆಯೊಲ್ದಪಳೋ ಕೈಕೊಳ್ವುದೆಂದು ತಿರ್ದಿ ಕಳೆಯೆ (ಜಾಪುಂಪು. ೧೦೭-೦೯) : ಧರ್ಮಾಧಿಕರಣರ್ ನಡೆಯುಂ ನಿಮ್ಮಿರ್ವರ ಬವರಮಂ ತಿರ್ದುವೆಮೆಂದು ವಟವೃಕ್ಷದ ಸಮೀಪಕ್ಕೆ ವಂದು (ಪಂಚತಂ. ೧೭೬-೨). ೧೦. ನಿವಾರಣೆಯಾಗು; ಪರಿಹಾರವಾಗು: ಇತ್ತ ಗಾಂಧಾರಿಯುಂ ಕುಬೇರಕಾಂತಂಗೆ ತನ್ನಳಿಪಂ ಪ್ರಕಟಂ ಮಾಡೆ ಕುಬೇರ ಕಾಂತಂ ನಾಂ ನಪುಂಸಕನೆನೆ ವಿರಕ್ತಿಯಾಗಿರ್ಪಿನಂ ರತಿಷೇಣಂ ಬರೆ ನಿಮ್ಮ ಮುನ್ನಿನೌಷಧಪ್ರಯೋಗದೊಳ್ ತಿರ್ದಿತ್ತೆಂದು ನಿಜವಾಸಕ್ಕೆ ಪೋದರ್ (ಜಾಪುಂಪು. ೯೩-೦೯). ೧೧. (ನೀರನ್ನು) ಎರೆ ; ಬಿಡು ; ಹಾಯಿಸು : ಕುಚಾಂತರದೊಳ್ ಕೊಳಗೊಂಡು ಮೋಹವಲ್ಲಿಗೆ ಬಿದಿ ತಿರ್ದಿ ಸುತ್ತಿಸಿದ ನೀರ್ಗೆಣೆಯಾದುದು ಬಾಪ್ಪಮೋಪಳಾ (ಶಾಂತಿಪು. ೯-೯೨) ; ಬಿಂಬಾಧರ ಕಾಂತಿಯಿಂ ಕಂತುರಾಗರಸದ ಪೊನಲಂ ತಿರ್ದುವಂತೆ (ಮಲ್ಲಿಪು. ೪-೭೨). ೧೨. ತೋಡು ; ಅಗೆ : ಮೊಗೆಯಲ್ ಕೊಡಗೊಂಡು ತಿರ್ದಿ ಬಚ್ಚಲ ನೆಲೆದೋಂಟದೊಳ್ ಪರಿಯಿಸಲ್ (ಅಜಿಪು. ೬-೪೩) ; ಅವ್ಯಾಕಾರ್ಣವವನೆ ಮೇರುವಿನ ಮೇಖಳಾವನಕೆ ತಿರ್ದಿ ಪರಿಯಿಸಲ್ (ಪುಷ್ಪಪು. ೦೦-೯). ತಿದ್ದು$_1$: ೧. ಕೃತಿಯಂ ಕಿಡೆನುಡಿವರಲ್ಲದೆಂ. ಜಡರೊಡಂಬಡಲ್ತಿದ್ದು ನುಡಿಯ ಬಲ್ಲರೆ ಕವಿಪೋರ್ (ಧರ್ಮಾಮೃ. ೦-೪೮); ಲೋಕದ ಡೊಂಕ ನೀವೇಕೆ ತಿದ್ದುವಿರಿ (ಬಸವ. ೦೩೪) ; ಸುಜನರ್ಕಳೀ ಶತಕದೊಳ್ ತಪ್ಪಿರ್ದೂಡಂ ತಿದ್ದಿ ತೋರ್ಪುದು (ಸೋಮೇಶ. ೫); ಇದರಿದರಿದು ತಿದ್ದುವೊಡೆ ಹರನೆ ಬಲ್ಲಂ ನಮ್ಮ ವಶವಲ್ಲ ತಿದ್ದುವೊಡೆ (ತಿರುರ. ದೇ. ೦೯-೭); ದೇಸದೊಳಗೆ ಸಮಯ ಸಂಹಾಡವಾದರೆ ಅವರ ಮುಂದಿಟ್ಟು ತಿದುಹುದು ಅವರು ತಿದ್ದಿದ ಹಾಗೆ ಸಡೆಯುದು (ಎಕ. XII, ಶಿಕಾ. ೭೭-೦೯ ; 1370); ಕಾರಣಿಕನೆನೆ ಪರೀಕ್ಷಕನೆನಲು ಸರ್ವರ ವಿಚಾರವಂ ತಿದ್ದುವವ ನೆನಿಕು (ಮಂಗರಾ. ೭೨-೫೩); ಗರಿಯು ತಿದ್ದಿ ಬೆಡಗಿ ಶಕ್ತಿಯು ಕೊರಲ ಕೊಂಕಿದೆ (ಹೂದಿಳಿ. ೦೦-೦). ೨. ನೀತಿಶ್ಲಿತ ಜಡರನು ತಿದ್ದಿ ತಿಳುಹುವ ಸುಲಭತನದಲಿ ದೇವಮುನಿ ನಿನಗಾರು ಸರಿಯೆಂದ (ಕುವ್ಯಾಸ. ೦-೯೪). ೩. ಮುದಿಗುದುರೆ ತಿದ್ದೆ[ಪಾಕಾಂ. ತಿರ್ದಿ] ಬಡವಾದುದೆಂಬ ತೆಱದಿಂ (ಸಮಪ. ೦೩-೭೧); ಅಡವಿಸಿಂಗವ ತಿದ್ದಲಕ್ಕು (ಸೋಮೇಶ. ೪೯). ೪. ಜವನುಂ ತಂನಯ ಗಂಡುಲಚ್ಚಣಮೆನಿಪ್ಪಾ ವಿಾಸೆಯಂ ತಿದ್ದಲಂಜುವಿನಂ(ಎಕ.೪. ಹಾಸನ. ೫೩-೦೩; 1170); ಕುಂಕುಮ ಕಸ್ತೂರಿ ಕರಿನಾಮ ತಿದ್ದಿ (ಪುರಂದ. ೧-೦೪೦-೩); ಸಿರಿನೊಸರೊಳು ಕಸ್ತೂರಿಯ ತಿದ್ದುತ ಹೆಂಗಳರಸಿಯರೆಸೆದರರ್ತಿಯಲಿ (ಕಂನವಿ. ೨೪-೪೬). ೫. ಬಿಲುಗಣೆಗಳನು ತಿದ್ದಿದನು ಫಲುಗುಣ ಹೂಡಿದನು ರಥವ (ಕುವ್ಯಾಆ. ೨೨-೦೪). ೬. ಮದ್ದು ಮಂತ್ರವು ವಾದ ತಿದ್ದುವವು ಕುತ್ತಗಳ (ಸರ್ವಜ್ಞ. ೨೪೬). ೧೦. ತಿದ್ದಿ ಹೋಹುದು ನಿನ್ನ ವಾಪಕೆ ಮದ್ದು ತಾನೊಂದಿಹುದು (ಸಂಧಪ. ೩-೩೪), ೧೧. ಅಖಂಡಮಂಡಲವೆಂಬ ಭಾವಿ ಪವನವೆ ಜಾಟಾಳ ಸುಮುಮ್ಮನಾಳದಿಂದವೆ ಉದಕವ ತಿದ್ದಿ (ಅಪಕಂ. ೦೪೦-೮೧೩) ; ದಯವನತ್ತಲು ತಿದ್ದಿ ನಮ್ಮನು ಭಯಮಹಾಬ್ಧಿಯೊಳದ್ದಿ . . . ನಯವ . ನೀವೊಡ್ಡುವರೆ (ಕುವ್ಯಾಭೀ. ೧-೩೪); ಎದ್ದು ಬಳಿಕವನಸುರನಕ್ಷಿಗೆ ತಿದ್ದಿದನು ಹೊಂಗಲಶ ವಾರಿಯನುದ್ದಿದನು ಘಾಯದಲಿ ಶುಕ್ರಾಚಾರ್ಯನೌಷಧಿಯ (ತ್ರಿಪುರಾ. ೬-೨೪-೨೦); ಆರಂಭಕೃತಿಯನು ಮಾಳ್ಪರು ಗದ್ದೆಗೆ ನೀರ ಹರಿಯೆ ತಿದ್ದೆನಲು ನಾರ ಹಂಗಡಪ ಮಾಡೆನಲಾಗಿ ಪಾಪದ ಬೇರ ಕೀಳುವ ಕೃಷ್ಣ ಜಯತು (ಮೋಹಕ. ೪೧-೨೦); ಕೀಳೇರಿಯಲ್ಲಿ ಅಚ್ಚುಕಟ್ಟನೂ ಕಟ್ಟಿ ತಿದ್ದಿದ ಗದ್ದೆವೊಳಗೆ ದೇವರ ಭಂಡಾರಕೆ ಎರಡು ಭಾಗೆ (ಎಕ. X(೪). ಕೋಠಾರ. ೩೦೦-೮; 17ನೆಯ ಕತೆ). ೧೨. ಮೂಢರಂದದೊಳೂರ ಗುದ್ದಲಿಯನು ಕೊಂಡು ನಾಡ ಕಾಲುವೆಯು ತಿದ್ದುವರೆ (ಮೋಹಕ. ೬-೮). ೧೩. (ತಿವಿದು) ಸಾಯಿಸು ; ಕೊಲ್ಲು : ಮೈಮಾರಿಗಳ ಮುಕ್ಕುಱಿಕಿದಿವದಿರ ತಿದ್ದಿ ಬಹೆನಿದೆಯೆನುತ ತೆಗೆದೆಚ್ಚ (ಕುವ್ಯಾದ್ರೂ.೯. ೨-೪೪). ೧೪. ಬರೆ ; ರೇಖಿಸು ; ಚಿತ್ರಿಸು : ಬರೆಯಬಾರದ ತಿದ್ದಬಾರದ ಕಡಿದರೆ ದೊರೆಯಬಾರದ ರೂಪಿನಭವಾ (ಭರಕ. ೪-೦೫೩). ೧೫. ಅಕ್ಷರಗಳನ್ನು ಬರೆದುಕೊಟ್ಟಂತೆಯೇ ಅದರ ಮೇಲೆ ಮತ್ತೆ ಮತ್ತೆ ಬರೆ: ಮಕ್ಕಳು ತಿದ್ದಿದಷ್ಟೂ ಅಕ್ಷರ ಚನ್ನಾಗುತ್ತದೆ (ಕೂಥಿ). ೧೬. (ಬರಹ ಮೊದಲಾದುವನ್ನು) ವ್ಯತ್ಯಾಸ ಮಾಡು ; ಬದಲಾಯಿಸು : ಕೆಲಬಲದ ಮಾಮರದೊಳಿಪ್ಪ ನಿರ್ಯಾಸಮಂ ತೆಗೆದು ಕಿಱುವೆರಳುಗುರ್ಗೊನೆಯಿಂದೆ ತಿದ್ದಿ ಬರೆದು (ಜ್ಯಮಿಭಾ. ೩೦-೩೯); ಆ ಲೇಖನವನ್ನು ಅವರು ತಮ್ಮ ಇಷ್ಟಕ್ಕನುಸಾರವಾಗಿ ತಿದ್ದಿದರು (ಕೂಥಿ). ೧೭. ಕಂಡರಿಸು ; ಕೆತ್ತು : ಕೊರೆ : ಚಿಕ್ಕಸುಣಗಿಲು ಗುಡ್ಡದ ಮೇಲೆ ವಾಮನಮುದ್ರೆ ತಿದ್ದಿಯಿರುವ ಪುಟ್ಟುಗಲ್ಲು (ಎಕ. XIV, ಕ್ಯುಸೂರು. ೦೦೫-೭೫೪ ; 1674); ಶುದ್ಧ ಸ್ಫಟಿಕದ ಶಿಲೆಯೊಳು ತಿದ್ದಿದ ಜಿನಬಿಂಬದಂತೆ (ಧರ್ಮಾಮೃ. ೩೮). ೧೮. (ಸಾಲ) ತೀರಿಸು ; ಮುಗಿಸು : ಎಂದು ಕೊಟ್ಟೆಹೆನಿನ್ನು ಸಾಲವನೆಂದು ತಿದ್ದುವೆವಕ್ಕಟಕಟ (ಬಸಪು. ೪೨-೦೩) ; ಆಗಲೀ ನಾಲಗೆಯ ಸಾಲವನೀಗ ಕೈಯಲಿ ತಿದ್ದಿ ಕೊಡುವರೆ (ಕುವ್ಯಾಳ. ೨-೦೯); ಇಂತಪ್ಪ ಋಣಂಗಳ ತಿದ್ದಿ ಸಿರಿವಂತನಾಗಿ ಭವರಾಜನ ಬಲವ ಗೆದ್ದೆ (ಹನವ. ೪೭-೩೮) : ಕೊಂಡ ಸಾಲಗಳನ್ನು ತಿದ್ದದಾತನೆ ಹೊಲೆಯ (ಪುರಂದ. ೧-೦೭೮-೩) ; ಏಸು ಜನ್ಮದಿ ನಿನ್ನ ರಿಣವ ತಿದ್ದುವೆನೆಂದಾ ಸುಗುಣೆಯ ನಪ್ಪಿದಳು (ಮೋಹಕ. ೩೦-೩೯) : ದ್ರವ್ಯವಿದ್ದವನು ತಿಂದು ಸಾಯಲಿಲ್ಲ. ಸಾಲಾ ಮಾಡಿದವ ತಿದ್ದಿ ಸಾಯಲಿಲ್ಲ (ಗಾಡಿ). ೧೯. ತೀರು ; ಮುಗಿ : ತಿದ್ದಿತೆಮ್ಮಯ ದೆಸೆ ದಶಾನನುದ್ಧುರುಟುತನದಿಂದ ನಾವ್ ಬಂದಿದ್ದ ಹದನಿದು ಜೀಯ ರಕ್ಷಿಸಬೇಕು ನೀವೆಂದ (ತ್ರಿಪುರಾ. ೦-೪-೩೮) : ತಿದ್ದಿತೇ

ಭವದೀಯ ಕರ್ಣದ ಹೊದ್ದಿಗೆಯ ಸೌಭಾಗ್ಯವಿಂದ್ರನ ಗದ್ದುಗೆಯ ನಡರಿದನೆ ಪಿತನೆನುತೆಱಗಿದನು ಪದಕೆ (ತೊರರಾ. ೨-೬-೨೫). ೨೦. (ಭಾರವನ್ನು) ಇಳಂಹು ; ಕಡಮೆ ಮಾಡು : ನೆಲನ ತಿಣ್ಣನೆ ತಿದ್ದ ಲೋಸುಗ ಸುಳಿದನಱಿಯಾ ಕೃಷ್ಣನು (ಕುಮ್ಯಾಜ್ರೋ. ೨-೬೨) ; ಭೂಮಿಯ ತಿಣ್ಣವನು ತಿದ್ದಲಿಕೆ ಹರಿ ನರನಾಗಿ ರೂಹಿಸಿದ (ತೊರರಾ. ೬-೨-೨೦). ೨೧. ಸಮಾಧಾನ ಪಡಿಸು ; ಸಾಂತ್ವನ ನೀಡು : ಮುಳಿಸ ತಿದ್ದಿ ತೋಱಿ ನಿರೂಪಿಸಿದ ಪ್ರಸ್ಥಾವದ ವಚನ (ಶೂನ್ಯಸಂ. ೦೦೯-೦೦) ; ಕೇಳಿಯವರ ಸಂವಾದವ ತಿದ್ದಲು ಕಾಳಿ ನಿರ್ವಾಣಾಕೃತಿಯ ತಾಳಿ ಬಂದಿದಿರಾಗಿ ನಿಲಲಚ್ಯುತ ನೋಡಿ ಹೂಳಿದ ದೃಗ್ಯುಗಳವನು (ಮೋಹತ. ೩೮-೨೪). ೨೨. ಹಂಚು ; ವಿತರಣೆ ಮಾಡು : ವರಿಷವೊಂದಕ್ಕೆ ತಿದ್ದುವ ಸಮುದಾಯ ಗದ್ಯಾಣ ೧೮೦ ಸಮುದಾಯ (ಸೌಇಇ. IX-i, ೩೯೫-೨೦ ; 1261) ; ಪರಿವಾರಕುಚಿತವನೆತ್ತು ಪರಿಸೆಯ ತಿದ್ದಿರೈಯೆಂದು ಭರತೇಶ ನೇಮವನಿತ್ತ (ಭರಜೆ. ೬೩-೦೦೮) ; ಧಾನ್ಯಗಳ ಬಿತ್ತಿ ಬೆಳೆದುಂ ಕೊಯ್ದು ತುಳಿಸಿಯಲ್ಲವ ರಾಶಿಯಾ ಮಾಡ್ಯಾಯಗಳ ತಿದ್ದಿ ರಾಯರಿಗೆ ಸರಿಭಾಗ ಗೂಡೆಯಿಂದಳೆದಿತ್ತು (ನವಮೋ. ೨-೪೨). Δ ತಿಟ್ಟು : ೧. ಹೊಸಕೆರೆಯ ಕಟ್ಟಿಸಿ ತೂಬನಿಕ್ಕಿಸಿ ಭೂಮಿಯಂ ತಿಟ್ಟಿ ಸೋಮೇಶ್ವರದೇವರ ದೇಗುಲವ ಅಳಿವಂ ಸೋದಿಸಿ (ಎಕ. X, ಜಂತಾಮ.೩೦-೦೦ ; 1047) ; (ಎಇ. V, ೨೦೭-೦೦ ; 1047 ನೋ).

ತಿದ್ದಿಕೊಳ್, ತಿದ್ದಿಕೊಳ್ಳು = ೧. (ಶಕುನವನ್ನು) ನೋಡಿಕೊಳ್ಳು ; ಗಮನಿಸು : ಆವ ಶಕುನವ ತಿದ್ದಿಕೊಂಡೆಲೆ ಭಾವ ಬಂದೆಯೊ ಅಲ್ಲ ದಿರ್ದೊಡದಾವ ಮೋಹನವಶ್ಯವಿದ್ಯೆಯ ಕಲಿತೆಯೊ (ಪ್ರಭುಲೀ. ೫-೩೯). ೨. ಸರಿಪಡಿಸು ; ಸುಧಾರಿಸು : ರಾಯರು ಎತ್ತಿ ತೋರಿಸುವ ತಪ್ಪುಗಳನ್ನು ಹೋಟೇಲಿನವರು ಸಹ ತಿದ್ದಿಕೊಳ್ಳುವುದಕ್ಕೆ ಸಾಧ್ಯವಿಲ್ಲದಂತಾಗಿದೆ (ರಾಯಕ. ೯೮). ತಿದ್ದಿ ತೀಡು = ೧. ಪರಿಷ್ಕಾರಮಾಡು ; ಸುಧಾರಣೆ ಮಾಡು : ತಿದ್ದಿ ತೀಡಿ ಗೊಂಬಿ ಹಾಂಗ ಮಾಡಿ (ಜಾನಗೀ. ೪೫). ೨. ಪರಿಷ್ಕಾರವಾಗು ; ಸುಧಾರಣೆಯಾಗು : ನವಜನಾಂಗ ಮೂಡಿ ಮೊಳಗಿ ಬದುಕು ತಿದ್ದಿ ತೀಡಿವೆ (ನೆಲಮು. ೨೪-೦೦). ತಿದ್ದುಮಿದ್ದು = ಸರಿಪಡಿಸಿ ನಯಗೊಳಿಸು ; ಸಂಸ್ಕರಿಸು ; ಮಾರ್ಪಾಡುಗೊಳಿಸು : ನಮ್ಮನ್ನು ತಿದ್ದುಮಿದ್ದಲು ತಿಂಮತನ ತನ್ನ ವರ್ಗದೊಡನೆ ಟಿಸಿಲೊಡೆದ ಹಲವು ಟೊಂಗೆಗಳಲ್ಲಿ ಕುಳಿತು ಅಣಕಿಸಲೆಂದೇ ನನ್ನ ಅವಸರದ ಆಶಯ (ತಿಂಮತ. ೧೨೯) ; ಪರಮಾತ್ಮನ ಗುಪ್ತಹಸ್ತವು, ಕಾಣದಂತೆ ವ್ಯಕ್ತಿಯನ್ನು ತಿದ್ದುಮಿದ್ದುವ ಕೆಲಸವು ಆರಂಭಗೊಳ್ಳುತ್ತದೆ (ಬಾಳಬ. ೫೦). ತಿರ್ದಾನೆಮಲ್ಲ = ಒಂದು ಬಿರುದು : ರಾಜಮನೋಜಂ ದ್ರೋಹಚಲಿಕ್ಕಂ ಕೊಮರವಿಳಾಸಂ ತಿಱ್ದಾನೆಮಲ್ಲ ನೊಟಮ್ಬರ ಭೀಮಂ (ಸೌಇಇ. IX-i, ೩೦-೩೦ ; 965).

[ದೇ. ॥ ತಮಿ. ತಿರುತ್ತು, ತಿರುನ್ತು; ಮಲ. ತಿರುತ್ತು ; ತುಳು. ತಿರ್ದು, ತಿದ್ದು ; ಕೊಡ.ತಿದ್ದ್ ; ತೆಲು.ದಿದ್ದು]

ತಿರ್ದು$_2$, ತಿದ್ದು$_2$ (ನಾ). ೧. ಸರಿಪಡಿಸುವಿಕೆ ; ನೇರಮಾಡುವಿಕೆ : ವಿಚಾರಮಱಿಯದೆ ತಿರ್ದುವ ತಿರ್ದುಂ (ಧರ್ಮಾಮೃ. ೦೦-೪೨) ; ಪೂಗಳ್, ಓದುಗಳ್, ಮೋಡುಗಳ್, ತಿರ್ದುಗಳ್ (ಶಬ್ದಾನು. ೫೪೯ ಪ್ರಯೋ). ೨. ಸರಿಯಾದುದು ; ಯೋಗ್ಯವಾದುದು ; ಉಚಿತವಾದುದು. 'ತಿರ್ದುವರ್' ಪರಾ. ೩. ಶಕುನ : ತಿರ್ದಿದ ದೆವಸಂ ಮಾಣ್ದಿರ್ದು ಬಱಿಕ್ಕಮಾ ತಿರ್ದನೆ ತಿರ್ದೆಂದು ಪಯಣಂಬೋಪಾತಂಗೆ ಪೊರ್ದದು ಲಾಭಂ (ಲೋಕೋಪ. ೦೨-೮) ; ಅನುಕೂಲಪವನನುಂ ಹಸ್ತಿನಿಕಾಯದ ಶೋಧನಾವಯವಸೂಚನಮುಂ ಸುನಯದ ಶಕುನನಿಕಾಯಸ್ವನಮುಂ ದಂಷ್ಟ್ರಿಗಳ ತಿರ್ದುಮೊದವಿಸೆ ಮುದಮಂ (ಮಹಾನೇ. ೦೨-೦೩). ತಿದ್ದು$_2$: ೧. 'ತಿದ್ದುಪಡಿ', 'ತಿದ್ದುಪಾಟು' ಪರಾ. ೩. ಹರಿಣ ಭಾರದ್ವಾಜನುಡಿಕೆಯ ಸರಟ ನಕುಲನ ತಿದ್ದುಗಳ [ಪಾಠಾಂ. ತಿರಿದುಗಳ] ಕುಕ್ಕುರನ ತಾಳಿನ ಶಕುನವನು ಕೈಕೊಳುತ ನಡೆತಂದ (ಕುಮ್ಯಾಅ. ೪-೩೩).

[<ತಿರ್ದು$_1$./ ತಮಿ. ತಿರುತ್ತ, ತಿರುತ್ತಲ್ ; ಮಲ. ತಿರುತ್ತು; ತುಳು. ತಿರ್ದು, ತಿದ್ದಿಗೆ ; ತೆಲು. ದಿದ್ದು]

ತಿರ್ದುಂಬೋರಿ (ನಾ). ಪಳಗಿಸಬೇಕಾದ ಹೋರಿ : "ದಮ್ಯಃ, ವತ್ಸತರಃ– ಈ ೨ ತಿರ್ದುಂಬೋರಿ" (ಹಲಾಯು. ೪೪-೦೦೯).

[ತಿರ್ದು$_1$ + ಪೋರಿ$_2$]

ತಿರ್ದುವಡು (ಕ್ರಿ). ತಿದ್ದಿಕೊಳ್ಳು ; ಸಾವರಿಸಿಕೊಳ್ಳು : ಸೇನಾಪತಿಗಳು (ತಿರ್ದುವಟ್ಟು, ಕತ್ತು ಬಾಗುವರು) (ಬೆಟ್ಟಅ. ೬೮-೨೩).

[ತಿರ್ದು$_2$ + ಪಡು$_1$]

ತಿರ್ದುವರ್ (ಕ್ರಿ). ಉಚಿತವಾಗು ; ಯೋಗ್ಯವಾಗು : ಪೇಟ್ದಪೆಂ ಚರಿತ ಪುರಾಣಮಂ ಬಱಿದೆ ಪೇಟ್ದಪನೆಂದೊಡೆ ತಿರ್ದುವಪ್ಪುದೇ (ಅನಂಪು. ೦-೩೬). [ತಿರ್ದು$_2$ + ಬರ್$_1$]

ತಿರ್ದುಹ (ನಾ). ಸರಿಪಡಿಸುವಿಕೆ; ನೇರಗೊಳಿಸುವಿಕೆ: ನಾಯ ಬಾಲಮಂ ಕಾಸಿ ತಿರ್ದುಹವುಂ . . . ಮೂರ್ಖನಂ ಬುದ್ಧಿವಂತನೋಲೈಸುಹವುಂ ಇವಱೋಪಾದಿ (ಪಂಚತಂ. ೦೩೬-೯). [ತಿರ್ದು$_1$ + – ಹ$_2$]

ತಿರ್ಪಡ (ನಾ). ಒಂದು ಊರಿನ ಹೆಸರು : ಚನ್ದ್ರಾರ್ಕ್ಕಂ ತಿರ್ಪ್ಪಡ ಊರಾನೆಯಿದಿ ದೇಸತ್ಥರ್ಮ್ಮನಟಿತ್ಪಾಪ ಎಯಿದವೊನ್ (ಎಕ. IV, ಹೆಗ್ಗಡ. ೮೬-೫ ; ಸು. 915). [?]

ತಿರ್ಪು 'ತಿರುವ್ವು' ನೋ.

Δ ತಿರ್ಪೆ 'ತಿಪ್ಪೆ' ನೋ.

Δ ತಿರ್ಪೆಸುಂಕ 'ತಿಪ್ಪೆಸುಂಕ' ನೋ.

ತಿರ್ಬು 'ತಿರುವ್ವು' ನೋ.

ತಿರ್ಬೂರ್ (ನಾ). ಒಂದು ಊರಿನ ಹೆಸರು : ತಿರ್ಬೂರ ಮಾರಗವುಣ್ಡ ಕೆಱೆಗೂಡಲ ದೋರಗವುಣ್ಡ (ಮೈಆರಿ. ೧೯೦೯, ೦೦-೭೪ ; 900).

[? + ಊರ್]

ತಿರ್ಮರಿ (ನಾ). ಒಂದು ಊರಿನ ಹೆಸರು : ಶ್ರೀಯಂಬಾಟಕ ತಿರ್ಮ್ಮರಿ ... ಪ್ರಭೃತಿ ದಶಗ್ರಾಮ (ಇಆ. XIX, ೦೮-೦೪; 602). [?]

ತಿರ್ಯಂಚ (ನಾ). ೧.=ತಿರ್ಯಗ್ಗತಿ : ಜೀವನಿಗೆ ನರಕ, ತಿರ್ಯಂಚ, ಮನುಷ್ಯ, ದೇವ ಎಂಬ ನಾಲ್ಕು ಗತಿಗಳಿರುತ್ತವೆ (ಜೈನಪ. ೨೯೫). ೨. ತಿರ್ಯಗ್ಗತಿಯಲ್ಲಿರುವ ಜೀವ : ತಿರ್ಯಂಚರುಂ ಮನುಷ್ಯರುಮೆಂದಿ ವರ್ಗಳ ರಸ ರುಧಿರ ವರ್ಣ ಗಂಧ ಮೊದಲಾದುವಂ ನೋಡಿ . . . ಶುಭಾ ಶುಭಂಗಳಂ ಪೇಟ್ವುದಂಗನಿಮಿತ್ತಮೆಂಬುದು (ಪಸಾರ. ೩೮೭).

[ಸಂ. ತಿರ್ಯಂಚ್]

ತಿರ್ಯಕ್ಕು (ಗು). ೧. ಅಡ್ಡವಾಗಿ ತಿರುಗುವ; ಓರೆಯಾಗಿ ಚಲಿಸುವ; ವಕ್ರವಾಗಿ ನಡೆಯುವ. (ನಾ). ೨. ಪಶು, ಪಕ್ಷಿ ಮೊದಲಾದ ಪ್ರಾಣಿ ವರ್ಗ : ನಿರುತ ನೀ ಕೇಳುವರೆ ತಿರ್ಯಕ್ ನರ ಸುರಾದಿಗಳೆಂಬ ಸಚರಾ ಚರವಿದಾನಲ್ಲದೆ ವಿಚಾರಿಸಲನ್ಯವಿಲ್ಲೆಂದ (ಕುಮ್ಯಾಭೀ. ೩-೫೬); ಈ ರೀತಿ ಬೇರೆ ಬೇರೆ ಪ್ರವೃತ್ತಿಗಳಿಂದ ದೇವ, ಮನುಷ್ಯ, ತಿರ್ಯಕ್, ನರಕ—ಈ ಲೋಕಗಳಲ್ಲಿ ಪುನಃ ಪುನಃ ಸಂಸಾರಬಂಧ ಬರುವುದು (ಹಿಂದಸಾ. ೦೨೩). ೩. [ನಾಟ್ಯ] ನೃತ್ಯದಲ್ಲಿ ಪಕ್ಕಕ್ಕೆ ತೋಳನ್ನು ನೀಡುವುದು; ಹದಿನಾರು ಬಗೆಯ ತೋಳಿನ ಅಭಿನಯ ಭೇದಗಳಲ್ಲಿ ಒಂದು : ಬರಿಯಲ್ಲಿರ್ದುಂ ಕೆಲನಂ ಸರಿಸದೆ ತೋಱಲ್ಕೆ ತಿರ್ಯಗೆನಿಕ್ಕುಂ (ಲಾಸ್ಯರಂ. ೨-೦೨೪). ೪. [ಕಾಮಶಾ] ಚುಂಬನದಲ್ಲಿ ಒಂದು ವಿಧ : ರಸನಾಗ್ರದಿಂ ಕೋಮಲೆ ವಲ್ಲಭನಧರವೀಂಟೆ ತಿರ್ಯಗ [ಪಾಠಾಂ. ಗೆ] (ಮೆ) ನಿಕ್ಕುಂ (ಮನ್ಮವಿ. ೦೨-೦೨); ಇದುವೆ ತಿರ್ಯಕ್ ಪ್ರಕಾರಂ (ಜನವ. ೯-೪೨). [ಸಂ. ತಿರ್ಯಂಚ್]

ತಿರ್ಯಕ್ಕುಂಚಿತ (ನಾ). [ನಾಟ್ಯ] ದೇಶೀಯಂ ಭೌಮಂಚಾರಿಗಳಲ್ಲಿ ಒಂದು; "ಒಂದು ಕಾಲನ್ನು ಕುಂಚಿತಮಾಡಿ ಅನೇಕಾವರ್ತಿ ಜಾಗ್ರತೆ ನೆಲದ ಮೇಲೆ ಅಡ್ಡಲಾಗಿ ಇರಿಸುವುದು" (ಶಾಸ್ಕರಂ. ೩೨೨ ಗದ್ಯಾನುವಾದ) : ರಥಚಕ್ರ...ತಿರ್ಯಕ್ಕುಂಚಿತ, ಮದಾಲಸ...ಸಮಸ್ಖಲಿತ ಈ ಮೂವತ್ತೈದು ದೇಶೀಯ ಸಂಬಂಧದ ಭೌಮಚಾರಿಗಳು (ಶಾಸ್ಕರಂ. ೬-೦೭ ಪ). [ಸಂ.]

ತಿರ್ಯಕ್ಚಂದ್ರ (ನಾ). ಹಣೆಯಂ ಮೇಲೆ ಶೈವರು ಅಡ್ಡಲಾಗಿ ಧರಿಸುವ ವಿಭೂತಿಪಟ್ಟೆ. [ಸಂ.]

ತಿರ್ಯಕ್ಪ್ರಾಣಿ (ನಾ). ಪಶು, ಪಕ್ಷಿ ಮುಂತಾದ ಜೀವಿ: ಮಾನು ಮೋಕ್ಷರ ಪರ್ವತದ ಹೊರಗೆ ತಿರ್ಯಕ್ ಪ್ರಾಣಿಗಳಿರುತ್ತವೆ (ಕೈನಪ. ೪೪೯). [ಸಂ.]

ತಿರ್ಯಗುನ್ನತ (ನಾ). [ನಾಟ್ಯ] ನೃತ್ಯದ ಒಂದು ಭಂಗಿ; ಮುಖವನ್ನು ಅಡ್ಡಲಾಗಿ ಮಾಡಿ ಮೇಲಕ್ಕೆತ್ತುವುದು: ಚದುರೆ ಪರಾವೃತ್ತೋತ್ಕ್ಷಿಪ್ತಪ್ರದಘೋಮುಖಿಮೊಳ್ಪವೆತ್ತ ಲೋಲಿತಮಾದಂ ವಿದಿತವಹ ತಿರ್ಯಗುನ್ನತಮದಧಸ್ಕಂಧಾನತಂ ಸಮಾರಾಶ್ರಿಕಗಳ್ (ಶಾಸ್ಕರಂ. ೦-೭೭) [ಸಂ.]

ತಿರ್ಯಗ್ಗತಿ (ನಾ). [ಜೈನ] ದೇವ, ಮನುಷ್ಯ, ತಿರ್ಯಕ್ ಮತ್ತು ನಾರಕ ಎಂಬ ಚತುರ್ಗತಿಗಳಲ್ಲಿ ಒಂದು: ತತ್ಪ್ರಾಯೋಗ್ಯಾನುಪೂರ್ವತಿರ್ಯಗ್ಗತಿ ತತ್ಪ್ರಾಯೋಗ್ಯಾನುಪೂರ್ವೇಕೇಂದ್ರಿಯ ... ಸೂಕ್ಷ್ಮಂಗಳೆಂಬ ಪದಿನಾಱು ಪ್ರಕೃತಿಗಳುಮಂ ನಿರವಶೇಷಂ ಕೆಡಿಸಿ (ಆದಿಪು. ೦೦-೦೪ ಪ); ನೀನತಿಲೋಭದೊಳಾರ್ತಧ್ಯಾನದೊಳ್ ಸತ್ತು ತಿರ್ಯಗ್ಗತಿಯೊಳ್ ಪುಟ್ಟಿ ನಮೆದಪ್ಪೆ (ಜಾಪುಂಪು. ೦೪-೫೧); ಯಶೋಧರನು ಚಂದ್ರಮತಿಯಿಂತಿರ್ಬರ್ ಗೂಡಿನ ಕೋಟಿಗಳಾವರ್ ನೋಡ್ಕೆ ಮತ್ತೊರ್ಮೆ ಬಟಲಿ ತಿರ್ಯಗ್ಗತಿಯೊಳ್ (ಯಶೋಕ. ೪-೩೩). [ಸಂ.]

ತಿರ್ಯಗ್ಜಂತು (ನಾ). ಪಶು, ಪಕ್ಷಿ ಮೊದಲಾದ ಪ್ರಾಣಿ. [ಸಂ.]

ತಿರ್ಯಗ್ಜಾತಿ (ನಾ). ಪಶು, ಪಕ್ಷಿ, ಪ್ರಾಣಿಗಳ ಜಾತಿ: ಪಕ್ಷಿ ಚತುಷ್ಪದ ಸರೀಸೃಪಾದಿ ತಿರ್ಯಗ್ಜಾತಿಗಳುಂ (ಆದಿಪು. ೦೬-೪೦ ಪ); ತಿರ್ಯಗ್ಜಾತಿಯೋಳ್ ಚಾತುರ್ಯಮಿದೇಂ (ಕಾದಂಪೂ. ೫೯). [ಸಂ.]

ತಿರ್ಯಗ್ಜೀವ (ನಾ). =ತಿರ್ಯಗ್ಜಂತು: ತಿರ್ಯಗ್ಜೀವಂಗಳಪ್ಪ ಚೇತನಾಚೇತನವಸ್ತುಗಳೆಲ್ಲಂ ನವುಂಸಕಮೆ (ಶಮದ. ೫. ೯೦ ಪ್ರಯೋ). [ಸಂ.]

ತಿರ್ಯಗ್ಧೀನ (ನಾ). ಅಡ್ಡವಾಗಿ ಹಾರುವುದಂ; ಓರೆಯಾಗಿ ಹಾರಾಡುವುದಂ: ಉದ್ಧೀನ ಸಂಧೀನ ತಿರ್ಯಗ್ಧೀನೋದ್ಧೀನಾವಧೀನ ಪ್ರಕೃತಿಗರುಡನೇಂ ವಿಸ್ಮಯಂ ಸೌಭವೇಗಂ (ಜಗವಿ. ೦೮-೯೪). [ಸಂ.]

ತಿರ್ಯಗ್ಯೋನಿ (ನಾ). ಪ್ರಾಣಿಜನ್ಮವನ್ನು ಹೊಂದಿರಂವುದು: ಶ್ಲೇಷ್ಮ ಕರ್ಮದಿಂ ಭೀಕರತೆವೆತ್ತುದಾ ವಿಕೃತ ತಿರ್ಯಗ್ಯೋನಿ (ಶ್ರೀರಾಮಾ.೫೭೪-೪೦). [ಸಂ.]

ತಿರ್ಯಗ್ಲೋಕ (ನಾ). ಭೂಲೋಕ: ಅಧೋಲೋಕ ತಿರ್ಯಗ್ಲೋಕಂಗಳರ್ದ ಸ್ವರೂಪಮಂ ಪ್ರಮಾಣಮುಮನೋದಿ (ಪಡ್ಡಾರಾ. ೫೮-೦೦); ಅಸಂಖ್ಯೆಯೊಳ್ಪ ತ್ಪರ್ಯಂಗೆಯ್ದನ್ನವೆಂಬಗ್ಗಳಿಕೆಯಿನೆಸೆದತ್ತೀಕರಜ್ಜು ಪ್ರಮಾಣಂ ತಿರ್ಯಗ್ಲೋಕಂ ಸ್ವಯಂಭೂರಮಣ ಜಳಧಿಪರ್ಯಂತಮಂ ತಾಗುವನ್ನಂ (ಆದಿಪು. ೦-೪೪); ನಾಡೆ ಸೊಗಯಿಸುವುದು ತಿರ್ಯಗ್ಲೋಕ ಮೇಕರಜ್ಜು ವಿಶಾಲಂ (ಪಂಪ್ರಪು. ೦-೭೦). [ಸಂ.]

ತಿರ್ಯಗ್ವಣಿಜ್ಜೆ (ನಾ). ೧. ಪ್ರಾಣಿಗಳ ಮಾರಾಟ. ೨. [ಜೈನ] ನಾಲ್ಕು ರೀತಿಯ ಪಾಪೋಪದೇಶಗಳಲ್ಲಿ ಒಂದು; ಪ್ರಾಣಿಗಳನ್ನು ಕೊಂಡು ಲಾಭಕ್ಕೆ ಮಾರೆಂದು ಸಲಹೆ ಮಾಡುವುದು: ಗೋಮಹಿಷ್ಯಾದಿಗಳಂ ಇಲ್ಲಿ ಕೊಂಡು ಪೆಜವೂರಿಂಗೆ ಮಾಱಿದೊಡೆ ಪಿರಿದರ್ಥಲಾಭಮಕ್ಕುಮೆಂದು ಉಪದೇಶಂಗೆಯ್ವುದು ತಿರ್ಯಗ್ವಣಿಜ್ಜೆ(ಶತ್ಕೃಪ್ರ. ೨೭೭).

[ಸಂ. ತಿರ್ಯಗ್ವಣಿಜ್ಯಾ]

ತಿರ್ಯಗ್ವರ್ತಿತ (ಗು). ಅಡ್ಡಲಾಗಿ ಹೋದ; ಓರೆಯಾಗಿ ಹೋದ: ಮನವನೊಲಿಸೆ ತಿರ್ಯಗ್ವರ್ತಿತಸ್ಮೇರತಾರಂ ಜನಪತಿಸುತನಾಗಳ್ ಕಾಂತೆಯಂ ನೋಡಿದಂ (ಕಂದ್ರಪು. ೭-೭೫). [ಸಂ.]

ತಿರ್ಯಗ್ವಳಿತ (ಗು). ಪಕ್ಕಕ್ಕೆ ಅಥವಾ ಅಡ್ಡವಾಗಿ ಬಾಗಿಸಿದ: ಶ್ರೀಕಮಳೆಲೋಚನಂ ... ತಿರ್ಯಗ್ವಳಿತ ವ್ಯಾಕುಂಚಿತಕಂಠನೊದುತ್ತಿರ್ದಂ ಕೊಬಲಂ (ಜಗವಿ. ೫-೧). [ಸಂ. ತಿರ್ಯಗ್ವಲಿತ]

ತಿರ್ಯಜ್ಮುಖ (ನಾ). [ನಾಟ್ಯ] ದೇಶೀಯಂ ಭೌಮಚಾರಿಗಳಲ್ಲಿ ಒಂದಂ; "ವರ್ಧಮಾನಸ್ಥಾನಕದಲ್ಲಿ ನಿಂತಂಕೊಂಡು ಬಲಕ್ಕೂ ಎಡಕ್ಕೂ ದ್ರುತಕ್ಕನುಗುಣವಾಗಿ ಜಾಗ್ರತೆ ಚಲಿಸುವುದಂ" (ಶಾಸ್ಕರಂ. ೩೨೦ ಗದ್ಯಾನುವಾದ): ಎಸೆವ ರಥಚಕ್ರವೊಳ್ಪಿಂ ಎಸುವ ಪರಾವೃತ್ತತಲವುದುಂ ನೂಪುರಮುಂ ಸಸಿಮುಖ ತಿರ್ಯಜ್ಮುಖಮುಂ ವಸರಿಸುವ ಮುರಾಳಮೆಯ್ದೆ ಕರಿಹಸ್ತಾಖ್ಯಂ (ಶಾಸ್ಕರಂ. ೬-೮). [ಸಂ.]

ತಿರ್ಯಾಹಿತ 'ತಿರಾಯಂತ' ನೋ.

ತಿರ್ವನೆ 'ತಿಜ್ಜನೆ' ನೋ.

ತಿಲ, ತಿಳ (ನಾ). ೧. ಎಳ್ಳಿನ ಕಾಳು; ಎಳ್ಳು: "ತಿಲಮನಲ್ಕಳ್ಳು" (ಮಂಗರಾ. ೦೦೦-೫); ತಿಲಮಗಸೆ ವಿಳಂಗಂ ಸಿಂಧು ಲವಣಮಿವನರೆದು (ಕೋಕೋಪ. ೬-೩೭); ತಿಲೆಯ ಮಜ್ಜಿಯ ಹೇಮದಂತೆ ತಿಲದ ಮಜ್ಜಿಯ ತೈಲದಂತೆ (ಮಹಾದೇ.ಬ. ೯-೨) ; ನರಕವಾಲದ ಪಾತ್ರೆಗಳ ತಿಲದೊರಳಿಗಳ ಕೇಶೌಘ ದರ್ಭಾಂಕುರದಲಾಹವಯಜ್ಞದೀಕ್ಷಿತನಹೆನು ತಾನೆಂದ (ಭುವ್ಯಾಉ. ೦೦-೦೯). ೨. ಉದ್ದಳತೆಯ ಒಂದಂ ಪ್ರಮಾಣ ; ಎಂಟು ಕೂದಲಿನ ತುದಿಯಷ್ಟು ಅಳತೆ (?): "ಕರಿಯೆಂಟು ಕೂದಲ ಮೊನೆಯು ಕರಿ (ಕೂದಲ್)ಯ ಮೊನೆಗೆ ನೋಡೆ ತಿಲವೊಂದಕ್ಕುಂ" (ವ್ಯವಹಾ.ಅನುಬಂಧ ೧, ೭-೨) : ಮೂಜು ತಿಲಕೊಂದು ಯವೆಯೆನಿವಂದಾ ಯವೆ ಮೂಜಿ ಸೇರಿಸಲದಂಗುಲವ ನಾಲ್ಕ ಕೂಡಲು ಮುಷ್ಟಿ (ಶಾಸ್ಕರ. ೫೨-೯), ತಿಳ : ೧. "ತಿಲಂ = ತಿಳಂ" (ಕಪದ. ೦೬ ಪ್ರಯೋ); ಫಲವಾಕವಿರಾಮಂಗಳಪ್ಪ ... ತಿಳಾ [ಪಾಠಾಂ. ಲಾ] ತಸೀಕುಸುಂಭಾದಿ ದೀಪ್ತೌಷಧಿಗಳುಂ (ಆದಿಪು. ೯-೭೦ ಪ); ತಿಳಮುಂ ಪರಿಕಿಸಿ ವಾಸಿಸು (ಕೋಕೋಪ. ೭-೫೫); ಉರ್ವೀವಲಯಕ್ಕಾಶ್ಚರ್ಯಮವ್ವಂದದಿನನುದಿನಮೆಂದಾಗಿಯುಂ ಮುನ್ನಿನಂತಾ ತಿಳಮಾ ಕಾಯೊಳ್ ಕ್ರಮಂದಪ್ಪದೆ ನೆಲಸುವವೊಲ್ ದುರ್ಲಭಂ ಮರ್ತ್ಯಜನ್ಮಂ (ಸುಳುಮಾ. ೫-೩೪).

ತಿಲಕಾಪ್ಪಮಹಿಷಬಂಧನ = ೧. ಎಳ್ಳಿನ ಕೊದಳಿಗಳನ್ನು ಎಮ್ಮೆ ಕಟ್ಟುವ ಹಗ್ಗದಿಂದ ಕಟ್ಟಿದ ಹೊರೆ. ೨. ಹುರುಂಬಿಲ್ಲದ ಆಡಂಬರ. **ತಿಲಮಾತ್ರ** = ಎಳ್ಳುಕಾಳಿನಷ್ಟು; ತೀರಸ್ವಲ್ಪ : ತಿಲಮಾತ್ರವೊ ಎಂಬಾ ಪ್ರಯೋಗಾತ್ಪದಿ (ಕೋಗಿಲೆ. ೫೭-೫) ; ಕೆಲವು ವಾಶ್ಚಾತ್ಯ ರಾಷ್ಟ್ರಗಳು ಅದಕ್ಕೆ ತಿಲಮಾತ್ರವೂ ಗೌರವವನ್ನು ಕೊಡುತ್ತಿರಲಿಲ್ಲ (ಜಗಸಂ. ೫೩). **ತಿಲಾಂಶ** = ಎಳ್ಳಿನಷ್ಟು; ಲೇಶಮಾತ್ರ; ಅಲ್ಪಪ್ರಮಾಣ : ರಿಪುಕೌಂತೇಯರಿಗೆ ಕೊಡಬೇಡವಿನ್ನು ತಿಲಾಂಶ ಭೂತಳವ (ಭುವ್ಯಾಉ. ೫೦-೬೫) ; ಹೆಂಡದಿಂದ ಹೆಣಕ್ಕೆ ತಿಲಾಂಶವೂ ಉದ್ರೇಕವಾಗುವುದಿಲ್ಲ (ಜೀವಾತ್ಮ. ೬೦). **ತಿಲಾರ್ಪಣೆ ಮಾಡು** = ತಿಲಾಂಜಲಿಕೊಡಂ; ಕೈಬಿಡು : ತಂದೆಯಂತೂ ಸಾಂಸಾರಿಕ ಜೀವನಕ್ಕೆ ಎಂದೋ ತಿಲಾರ್ಪಣೆಮಾಡಿದ್ದರು (ಹೊಸಕ್ಷಿ. ೧೯೬). [ಸಂ.]

ತಿಲಂಗ್ (ನಾ). [ಸಂಗೀತ] ಒಂದಂ ರಾಗದ ಹೆಸರುಂ: ಪೂರ್ವರಾಗವು ರಕ್ತದ ಒತ್ತಡವನ್ನೂ ತಿಲಂಗ್, ಬಿಲಾವಲ್, ಮುಲ್ತಾನಿ, ರಾಮಕಲಿ ರಾಗಗಳು ಕ್ಷಯರೋಗವನ್ನೂ ... ಗುಣಪಡಿಸುವುದೆಂಬ ಭಾವನೆ ಉತ್ತರ ಭಾರತದಲ್ಲಿದೆ (ಕಾಕದ. ೫೪೪). [←ಮರಾ. ತಿಲಂಗ್]

ತಿಲಕ, ತಿಳಕ (ನಾ). ೧. ಸುಂದರವಾದ ಹೂವುಗಳನ್ನು ಬಿಡುವ ಒಂದು ಬಗೆಯ ಮರ : "ತಿಲಕಂ ಕ್ಷುರಕಾಖ್ಯಂ" (ವಸ್ತುಕೋ. ೩೩-೨); ಕಮಲತಿಲಕ ಚಂಪಕ ಪಾಟಲಿ ... ಮಲ್ಲಿಕಾದ್ಯನೇಕ ಸುರಭಿಕುಸುಮಂಗಳಂ ಸಜ್ಜುಕಮಪ್ಪುವಂ ಪುಟ್ಟಿಯೊಳ್ ತೀವಿಕೊಂಡು (ಪಂಚತಂ. ೧೧೭-೫) ; ತಿಲಕ ತರುವಿಂ ನಿಶಾಚರಬಲಮಂ ಬಿಡೆ ಪೊಯ್ದು ಕೊಂದು (ಪಂರಾಮಾ.೧೧-೧೨೧); ಪೂತುದು ಪಕ್ಷ್ಮಳೇಕ್ಷಣಾಲೋಕದಿನುದ್ಯಾನದ್ರುಮೈಕತಿಲಕಂ ತಿಲಕಂ (ಜಗವಿ. ೧೪-೩೧) ; ತಿಲಕಂ ಕಾಣಲೊಡಂ ಭೂತಿಲಕನನೊಲವಿಂದಮಲರ್ದು ದಂತುಟೆ ವಸುಧಾತಲದೊಳ್ ಸ್ವಪಕ್ಷದರ್ಶನ ವಿಲಾಸಮೊದವಿಸದೆ ಮುದ ಮನಾರ್ಗಂ ಮನದೊಳ್ (ಚಂದ್ರಪು. ೨-೯೩) ; ತಿಲಕವಶೋಕೆ ಚಂಪಕ ಪೂಗ ಪುನ್ನಾಗ ನೆಲ್ಲಿ ನೇಱಿಲು ... ಕದಳಿಗಳಲ್ಲಿ ನೋಡಿವೆ (ತೊರರಾ. ೩-೧-೨೯) : ಸಾಳ ರಸಾಳ ತಾಳ ತಿಲಕಾಮಳ ಪಿಪ್ಪಲ (ಯಾದವ. ೦-೩೫). ೨. ಮೈ ಮೇಲಿನ ಚಿಕ್ಕ ಮಚ್ಚೆ ; ಮತ್ತಿ : ವಾಮದೊಳತೊಡೆಯಲ್ಲಿ ಅತಿತಿಲಕ ವಿಹುದೆಂದು ನುಡಿಯಲು (ಪ್ರೌಢರಾ. ೮-೬೪). ೩. ಹಣೆಯ ಮೇಲೆ ಇಟ್ಟುಕೊಳ್ಳುವ ಕಸ್ತೂರಿ, ಕುಂಕುಮ ಮೊದಲಾದುವುಗಳ ಬೊಟ್ಟು : "ತಿಂಗಳಿಗೆಯೆಂದು ತಿಲಕಂ" (ಕೆಶಸಾ. ೬೩-೪೦೨) ; ತಿಲಕಾಕಾರ ದಿನಿರ್ಕೆ ನಿನ್ನ ನೊಸಲೊಳ್ ಸಾಮ್ರಾಜ್ಯಪಟ್ಟಂ (ಪಂರಾಮಾ. ೬-೮೦) : ಮನ ಮೊಲಿದುಡಿಸಿ ತೊಡಿಸಿ ತಿಲಕಂಗಳನನುಗೈದಾದರವೆರಸಿ ... ಎಱಗಿಪುದು (ಹದಿಬ. ೮-೦೦). ೪. ಶ್ರೇಷ್ಠವಾದುದು ; ಭೂಷಣವಾದುದು : ಪೇಟ್ಟಂ ಮನಮೊಸೆದು ಪುರಾಣತಿಲಕಮಂ ಕವಿತಿಲಕಂ (ಅಜಿಪು. ೦-೭೯). ೫. ಶ್ರೇಷ್ಠ ನಾದ ವ್ಯಕ್ತಿ ; ಅಲಂಕಾರಪ್ರಾಯನಾದವನು : ಕುಲಕ್ಕೆ ತಿಲಕ ನಮ್ಮ ಮಾದಾರ ಚನ್ನಯ್ಯ ನಿಮ್ಮಿಂದಧಿಕ (ಬಸವ. ೭೩೦) ; ಎಮ್ಮಾರಾಧ್ಯ ವರ ಮುನಿತಿಲಕ ವೇದವ್ಯಾಸ ದೇವರು (ಕುಮ್ಯಾಗ. ೪-೪). ೬. ಒಂದು ಬಗೆಯ ಕಂದುರೆ ; ಹಣೆ ಬೆಳ್ಳಗಿರುವ ಕುದುರೆ : "ತುರುಗವರ್ಣಂ ಬಿಳಿಯದಾಗೆ ಕರ್ಕನೆನಿಕ್ಕು ... ಭಾಳ ಬೆಳ್ಳಾಗೆ ತಿಲಕಂ" (ಮಂಗರಾ. ೮೨-೧೫) ; ಅಳರಿ ಯೆಲೆಯಂತೆ ನೊಸಲೊಳ್ ತೊಳಗುವ ಬೆಳ್ಪೆಸೆದು ತೋರ್ಪೊಡಂತದು ತಿಲಕಂ (ಅಶ್ವಶಾ. ೨-೦೨). ೭. ಹೊಟ್ಟೆಯಲ್ಲಿರುವ ನೀರಿನ ಚೀಲ : "ತಿಲಕಂ, ಕ್ಲೋಮ — ಹೊಟ್ಟೆಯ ಬಲದ ಅಳ್ಳೆಯೊಳಗಿರುವ ನೀರು ಚೀಲದ ಹೆಸರುಗಳು" (ಸಿದ್ಧಾಂತಿ. ೧೬೩). ೮. =ತಿಲಕಿತ ೩. 'ತಿಳಕೆ' ಪರಾ. ೯. [ಛಂದ] ಒಂದು ವೃತ್ತದ ಹೆಸರು : ವ್ಯೋಮಂ ಹರಿಯಿಂದೇ ಮಾರಹರಂ ತಾಮಾಗೆ ಸತೀನಾಮಂ ತಿಲಕಂ (ಛಂದೋಂಬು. ೨-೭೦). ತಿಳಕ : ೧. "ನಂದ್ಯಾವರ್ತಃ ... ತಿಳಕಃ, ಪದ್ಮಃ, ಸ್ಯಂದನಃ, ಮೋಕ್ಷಃ— ಎಂಬಿವು ಮರಂಗಳುಮಪ್ಪುವು" (ಹಲಾಯು. ೧೩೫-೨೬) ; ತಿಳಕಾಮ್ರಾತ (ಪ)ಕ ಬೆಲ್ಲ (ಪ)ವತ್ತ ಸಿರಿಸಾಂಕೋಲಾಖ್ಯ ಭಲ್ಲಾತಕಾಮಳಕಾದ್ಯಂಘ್ರಿಪ ಮೂಳಮಂ ಬಳಸಿ ಪುತ್ತಾದಂದು (ಲೋಕೋಪ. ೫-೨೭) ; ತಿಳಕಂ ತಾಳಂ ತಮಾಳಂ ... ವನದೊಳೊದವಿ ಚೆಲ್ವಾದುದೆತ್ತಂ (ಶಾಂತೀಶ್ವ. ೦೫-೯೯) ; ತಿಳಕ ಬಕುಳಾದಿ ತರುನಿವಹದಾರವೆಗಳೊಳ್ ... ಪೂಗೊಯ್ಯಲೆಂದಬಲೆ ಯರ್ನೆರೆದು (ರಾಜಶೇ. ೦೦-೫೨ ರಗಳೆ). ೩. "ತಿಳಕಂ ... ಲಲಾಟಿಕಾ— ಈ ೬ ಬೊಟ್ಟು" (ಹಲಾಯು. ೮೯-೩೮೭) ; ತಿಳಕಮದಿಲ್ಲದ ಬೆಳ್ದಿಂಗಳೊಳಗೆ ನಿಂದಿರದಿರಬಲೆ (ಗಿರಿಕ. ೬-೧೨೬) ; ತಿಳಕಮನಿಟ್ಟು ... ಮಂಜುಳ ಕಟಿ ಸೂತ್ರಮಂ ತುಡಿಸಿ ಕೆಯ್ಗೆಯೆ ಕಣ್ಗೆಸೆದಂ ಜಿನಾರ್ಭಕಂ (ಪುಷ್ಪಪು. ೧೧-೬೩). ೧, ೩ : ಮತ್ತಮದು ... ಕಾಮಿನೀಜನದಂತೆ ಮೃಗಮದ ಪರಿಮಳಾಮೋದಿತಮುಂ ಕೃಷ್ಣಾಗರು ತಿಳಕ ಭೂಷಿತಮುಂ ವಿರಹಿಜನದಂತೆ ವಿವಿಧಪಲ್ಲವಾನಿಲವೀಜ್ಯಮಾನಮುಂ ಮದನಾಕ್ರಾಂತಮುಂ (ಕಾದಂಪೂ. ೦೦೦); ತಿಳಕಂ ವರವನಲಕ್ಷ್ಮೀತಿಳಕಂ ದತ್ತ ಪ್ರಿಯಾಸಮನ್ವಿತ ಜನ ಸತ್ಪುಳಕಂ (ವರ್ಧಪು. ೨-೮). ೫. ತಿಳಕಂ ವಶ್ಯಮೆ ಜಡಜನಮೊಳಗ ಱಿಯದು (ಆದಿಪು. ೦೦-೬೦) ; ಸತ್ಯಾಶ್ರಯಕುಳತಿಳಕಂ ಚಾಳುಕ್ಯಾಭರಣಂ ... ಅಭಿವೃದ್ಧಿಗೆ ಸಲುತ್ತಮಿರೆ (ಎಇ. XX, ೬-೩ ; 1012).

ತಿಲಕಪ್ರಾಯ = ತಿಲಕದಂತೆ ಇರುವವನು ; ಭೂಷಣವಾದವನು : ಭಾರತಜನನಿಗೆ ತಿಲಕಪ್ರಾಯನೇ ನಿರಂತರ ಹಿತ ಗಣಿಸಿದನೇ (ಕರ್ನಾಕ.೩೯೧).

[ಸಂ.]

ತಿಲಕಗುದುರೆ (ನಾ). = ತಿಲಕ ೬ : ಹೊಳೆವ ಹೇಮದ ರಥಕೆ ಹೊಡಿದ ತಿಲಕಗುದುರೆಯ ನೆಗಹಿ ... ದ್ರೋಣ ಹೊಕ್ಕನು ಕಾಳೆಗದ ಕಳನ (ಕುಮ್ಯಾದ್ರೋ. ೨-೨೦). [ತಿಲಕ + ಕುದುರೆ]

ತಿಲಕರೇಖೆ (ನಾ). ಮಚ್ಚೆಯ ಗೆರೆ : ಹೊಕ್ಕಳ ಕೆಳಗೆ ತಿಲಕರೇಖೆ ಆಗಲಿ ಬಿಂದುವಾಗಲಿ ಮತ್ತಿ ಆಗಲಿಯಿರಲು ಶುಭ (ಸಾಮುಲ. ೦೪೦-೬).

[ತಿಲಕ + ರೇಖೆ]

ತಿಲಕಾಲಕ (ನಾ). ಶರೀರದಲ್ಲಿಯ ಕಪ್ಪುಮಚ್ಚೆ,—ಚುಕ್ಕಿ ; ಹುಟ್ಟು ಮಚ್ಚೆ ; ಸಂಗಾತಿ : "ಜಟುಲಃ, ಕಾಲಕಃ, ಪಿಪ್ಲುಃ, ತಿಲಕಃ, ತಿಲಕಾಲಕಃ— ೫ ತಿಲಕಾಕಾರಗಳಾದ ಕರೀಮಚ್ಚೆಗಳ ಹೆಸರುಗಳು, ಸಂಗಾತೀಮಚ್ಚೆ, ಹುಟ್ಟುಮಚ್ಚೆ" (ಸಿದ್ಧಾಂತಿ. ೦೫೯). [ತಿಲ + ಕಾಲಕ]

ತಿಲಕಿತ (ಗು). ೧. ತಿಲಕವುಳ್ಳ. ೨. ತಿಲಕಪ್ರಾಯನಾದ : ತಿಲಕಿತ ಭುವ ನಂಗೆನ್ನಯ ಬೆಳಗು ಸಲೆ ಮಾಟ್ಟಿನೆಂದು. . . ಮಂಗಳ ಧವಳಚ್ಛತ್ರಮೆಸೆದು ತೋಱಿದತ್ತು (ಕಾದಂಉ. ೪೨೬). (ನಾ). ೩. ಆನೆಯ ವಂದದ ಸಪ್ತಾವಸ್ಥೆಗಳಲ್ಲಿ ಒಂದು: ಸಂಚಿತ ತಿಲಕಿತ ಅರ್ಧಕಪೋಳಿತ ಅತಿವರ್ತಿತ ಅಧೋನಿಬಂಧಿನಿ ಕ್ರೋಧಿನಿ ಗಂಧಚಾರಿಣಿಯೆಂಬ ಸಪ್ತಾವಸ್ಥೆಯ ಮದದಿಂ . . . ಬರ್ಪ ಮತ್ತೆಗಜಮಂ ಭೋಂಕನೆ ಕಂಡು (ನಂಬಿರ. ೨-೨೦). [ಸಂ.]

ತಿಲಕಿಸು, ತಿಳಕಿಸು (ಕ್ರಿ). ೧. (ತಿಲಕವಿಡುವಂತೆ) ಗುರುತಿಸು; ರೇಖಿಸು : ಲಲನಾಜನಕ್ಕೆ ತಾನೀ ಲಲನೆ ದಿಟಂ ತಿಲಕಮೆಂದು ವರ್ಣಿಸುತೊಲವಿಂ ತಿಲಕಿಸುವ ತೆಱದಿನೊರ್ವಳ್ ತಿಲಕಮನಿಟ್ಟಳ್ ತನೂದರಿಯ ಪೆಱತೆನೊಸಲೊಳ್ (ಶಾಂತೀಶ್ವ. ೪-೨೪೨). ೨. ತಿಲಕದಂತೆ ಕಪ್ಪಾದ ಮದಜಲವು ಹೊಮ್ಮು ; ಮದವೇರು : ತಿಲಕಿಸೆ ಮದನದ್ವಿರದಂ ತಿಲಕಮನೀ ಕನ್ನೆಗಿಡುವೆನೆನುತುಮದೊರ್ವಳ್ ತಿಲಕಮನಿಡೆ (ಜಗವಿ. ೧೦-೧೨೬). ತಿಳಕಿಸು : ೧. ಗೌತಮ ಸುಧರ್ಮ ಜಂಬೂಗಣಭೃತ್ತಿಳಕರ ಚಳನನಖದ್ಯುತಿ ತಿಳಕಿಸುಗೋರಂತೆ ಭವ್ಯಭಾಳಸ್ಥಳಮಂ (ಧರ್ಮನಾ.೦-೧೬). ೨. ಇಲ್ಲಿಂ ಮುನ್ನಮೆ ತಿಳಕಿಸದಿರ್ಕುಮೆ ಮನೋಜ ವಿಜಯ ಗಜೇಂದ್ರಂ (ಮಲ್ಲಿಪು. ೫-೧೭). [ತಿಲಕ + – ಇಸ್ಸು]

ತಿಲಕುಸುಮ (ನಾ). ಎಳ್ಳಿನ ಹೂವು : ತಿಲಕುಸುಮಘ್ರಾಣಿಯರ್ಸಂಪಗೆಯ ನನೆಗಳಂ ಜಲಜಾತಗಂಧಿಯರ್ಮಾಲತಿಯ ನನೆಗಳಂ . . . ತಿಱಿದರಿನಿ ಗಂಪಮರ್ದ ಸಕಲ ಪುಷ್ಪಂಗಳಂ (ಉದ್ಯಟ. ೯-೫೨). [ತಿಲ + ಕುಸುಮ]

ತಿಲಕುಸುಮನಾಸಿಕ (ನಾ). ಎಳ್ಳಿನ ಹೂವಿನಂತಿರುವ ಮೂಗು : ತಿಲಕುಸುಮನಾಸಿಕದ ತೆಳುರ್ವಸುರು ಸುಳಿನಾಭಿ ಕಲಶಕುಚದಿಂದಲೆಸೆವಾ ನಳಿನಸಾಯಕನರಸಿಯಳ ಚಲುವ ಬಣ್ಣಿಪರು (ನವಮೋ. ೯-೪).

[ತಿಲಕುಸುಮ + ನಾಸಿಕ]

ತಿಲಕೋಪಶೋಭಿ (ಗು). ೧. ತಿಲಕದ ಮರಗಳಿಂದ ಶೋಭಿಸುವ. ೨. ಹಣೆಬೊಟ್ಟಿನಿಂದ ಶೋಭಿಸುವ. ೧, ೨ : ಅಲಕಾಳಿರುಚಿರಮಾ ವನವಲಯಂ ತಿಲಕೋಪಶೋಭಿ ಸರದಚ್ಛವಿಮಂಜುಲಮಿಂದುಕಾಂತರುಚಿ ರೋಜ್ಜ್ವಲಾಧರಸ್ಥಾನಮಾಸ್ಯಮೆನೆ ನೆಲಸಿರಿಯಾ (ರಾಜಶೇ. ೨-೭೯).

[ಸಂ. ತಿಲಕೋಪಶೋಭಿನ್]

ತಿಲಗಾತಕ (ನಾ). ಎಣ್ಣೆ ತೆಗೆಯುವವನು ; ಗಾಣಿಗ : ಗಂದಿಗ ಬೋಗಾರ ತಿಲಗಾತಕ ನಾಯಿಂದರ ತಾಮ್ರಮರ್ದಕರ ಮುಂದೊಪ್ಪುತಿಹ ಮಲ್ಲ ಜಾಲಗಾಱರ ಗೃಹ ಚೆಂದದಿಂದೊಪ್ಪಿದುವು (ಕಂನವಿ. ೬-೫೪).

[<ಸಂ. ತಿಲಘಾತಕ]

ತಿಲಘಾತ (ನಾ). = ತಿಲಗಾತಕ (?) : ರಾಮನಿಂತೀಶಪೂಜಾತಿಶಯಮಂ ಮಾಡಿ ಬಳಿಕಯೋಧ್ಯೆಯ ಪೊಕ್ಕ ಭೂತಳದ ಗುಪ್ತಚರರಿಂದೋರ್ವ ತಿಲಘಾತ ವಾರ್ತೆಯಂ ಕೇಳ್ದು (ವೀಶೈಪು. ೩-೧೦-೬೦). [< ತಿಲಘಾತಕ]

ತಿಲಘಾತಕ (ನಾ). = ತಿಲಗಾತಕ. [ತಿಲ + ಘಾತಕ]

ತಿಲಜ, ತಿಳಜ (ನಾ). ಎಳ್ಳಿನಿಂದ ತೆಗೆದ ಎಣ್ಣೆ ; ಎಳ್ಳೆಣ್ಣೆ : ತಿಲ [ಪಾಶಾಂ. ೪] ಜಾಭ್ಯಂಗಮನಳ್ಕಱಿಂ ರಚಿಸಿ ಮಂದೋಷ್ಣಾಂಬುವಿಂ ಮಜ್ಜನಂಗೊಳಿಸುತ್ತ (ವೃಷವಿ. ೯-೧೧೦). ತಿಳಜ : ಗುರುಮಧ್ಯವಲ್ಪ ನಿಟಲಂ ರೋಮಾನ್ವಿತಂ ಜಂಘೆಗಳ್ತಿಳಜಾಮೋದಮಿದಾಗೆ ಶಂಕಿನಿಯವಳ್ (ಮದಪಿ. ೨.೨). [ಸಂ.]

ತಿಲತಂಡುಲಕ (ನಾ). ೧. ಎಳ್ಳು ಮತ್ತು ಅಕ್ಕಿ ಕೂಡಿದಂತೆ, ಬೆರೆತ ಪದಾರ್ಥಗಳು ಬೇರೆಬೇರೆಯಾಗಿ ಕಾಣುವಿಕೆ. ೨. [ಕಾವಂಶಾ] ಸ್ಪೃಷ್ಟಕ, ವಿದ್ಧಕ, ಉದ್‌ಘೃಷ್ಟಕ, ಪೀಡಿತಕ, ಲತಾವೇಷ್ಟಿತಕ, ವೃಕ್ಷಾಧಿರೂಢಕ, ತಿಲತಂಡುಲಕ, ಕ್ಷೀರನೀರಕ, ಊರೂಪಗೂಹನ, ಜಘನೋಪಗೂಹನ, ಸ್ತನಾಲಿಂಗನ ಮತ್ತು ಲಲಾಟಿಕ ಎಂಬ ಆಲಿಂಗನದ ಹನ್ನೆರಡು ಪ್ರಕಾರಗಳಲ್ಲಿ ಒಂದು ; ತೊಡೆ ಮತ್ತು ತೋಳುಗಳು ಕೂಡಿದ್ದರೂ ತಿಲ ಹಾಗೂ ತಂಡುಲದಂತೆ ಬೇರೆ ಬೇರೆಯಾಗಿರುವುದು : ಕಟಿಯೊಳಿಟ್ಟರ್ದ ಕರದ್ವಯಮಂ ತೆಗೆದೊಡ ನೋರೊರ್ಮೆಯಿಡುತ್ತಿರೆಯದುವೆ ತಳ್ಕೆ ತಿಲತಂಡುಲಕಂ (ಮನ್ಮವಿ. ೦೦-೦೩). [ಸಂ.]

ತಿಲತಂಡುಲಿತ (ನಾ). = ತಿಲತಂಡುಲಕ : ತಿಲತಂಡುಲಿತ ಪಾಲು ಜಲ ವಲ್ಲಿವೇಷ್ಟಾದಿಲಲಿತಾಲಿಂಗನ ಭ್ರಾಂತಾಂತ್ಯರಿತ (ಭೃರಸೂ. ೨೯೬). [ಸಂ.]

ತಿಲತೈಲ, ತಿಳತೈಳ (ನಾ). ಎಳ್ಳೆಣ್ಣೆ : ತಿಲತೈಲದೊಳದ ಮಂದಾನಲನಿಂದ ಟ್ಟೆಟಿಪಿ (ಲೋಕೋಪ. ೭-೨೦). ತಿಳತೈಳ : ತಿಳತೈಳದೊಳುತ್ತರಣೆಯ ಳಳಮಂ ... ಅಟ್ಟು(ಲೋಕೋಪ. ೯-೫೯). [ತಿಲ + ತೈಲ]

ತಿಲಪರ್ಣ (ನಾ). ಕೆಂಪು ಗಂಧದ ಮರ ; ರಕ್ತಚಂದನ ; ಕೆಂಪುಚಂದನ : " ತಿಲಪರ್ಣೀ, ಪತ್ರಾಂಗಂ, ರಂಜನಃ, ರಕ್ತಚಂದನಂ, ಕುಚಂದನಂ–೫ ಕೆಂಪುಬಣ್ಣದ ಚಂದನದ ವೃಕ್ಷದ ಹೆಸರುಗಳು " (ಸಿದ್ಧಾಂತಿ. ೦೮೦).

[ಸಂ. ತಿಲಪರ್ಣೀ]

ತಿಲಪಿಂಜ (ನಾ). ಗೊಡ್ಡೆಳ್ಳು ; ಜಳ್ಳೆಳ್ಳು : " ತಿಲಪಿಂಜಃ, ತಿಲಪೇಜಃ–ಈ ೨ ನ್ನು ನಿಷ್ಪಲೇತಿಲೇ–ಜಳ್ಳು ಎಳ್ಳು ... ಕಾಡೆಳ್ಳು ಎಂಬುವರು " (ಸಿದ್ಧಾಂತಿ. ೨೩೯). [ಸಂ.]

ತಿಲಪುಷ್ಪ (ನಾ). = ತಿಲಕುಸುಮಃ ಸುಲಿಪಲ್ಕೆಂಬವಳಂಬೊಲೊಪ್ಪುವಧರಂ ಭೃಂಗಾಳಕಂ ನುಣ್ಣೊಸಲ್ತಿಲಪುಷ್ಪೋಪಮನಾಸಿಕಂ ನಗೆಮೊಗಂ (ರಾಜಶೇ. ೩-೦೭). [ತಿಲ + ಪುಷ್ಪ]

ತಿಲಪೇಜ (ನಾ). = ತಿಲಪಿಂಜ : " ತಿಲಪಿಂಜಃ, ತಿಲಪೇಜಃ–ಈ ೨ನ್ನು ನಿಷ್ಪಲೇ ತಿಲೇ–ಜಳ್ಳುಎಳ್ಳು ... ಕಾಡೆಳ್ಳು ಎಂಬುವರು" (ಸಿದ್ಧಾಂತಿ. ೨೩೯).

[ಸಂ.]

ತಿಲಬಲಿ (ನಾ). ಎಳ್ಳುಸಹಿತವಾದ ಬಲಿ: ಗುರುಗೆ ತನ್ನ ಜಗೆ ತಿಲಬಲಿಯ ನೀಯಲುಂ...ಗರಿ ಮಿಂಚೆ ರೆಂಕೆಗದರಿದನಂತರಿಕ್ಷಕ್ಕೆ (ಶ್ರೀ ಮಾ. ೩೯೩-೮೮೮).

[ತಿಲ+ಬಲಿ$_3$]

ತಿಲಮ (ನಾ). ಒಬ್ಬಾತನ ಹೆಸರು (?) : ಬಾಣರನದ ××× ಸೇನೆಯಂ ತಿಲಮನಿಱಿಯೆ ದುಗಿಚೇರಕ್ಕನಟ್ಟಿ ಸತ್ತನ್ (ಎಕ. X, ಚಂತಾಮ. ೧೨೪-೪ ; ಸು. ೫೦೦). [?]

ತಿಲಯಂತ್ರ (ನಾ). ಎಣ್ಣೆ ತೆಗೆಯುವ ಯಂತ್ರ; ಗಾಣ : " ಗಾಣಃ –ತಿಲ ಯಂತ್ರಂ " (ಕಾಶಕೃ. ೩೯); " ತಿಲಯಂತ್ರ–ಗಾಣ " (ಗಂಗಾಮ. ೧೫೩).

[ತಿಲ + ಯಂತ್ರ]

ತಿಲಯಂತ್ರಪೇಷಣ (ನಾ). ೧. ಎಣ್ಣೆ ತೆಗೆಯುವ ಗಾಣಕ್ಕೆ ಹಾಕಿ ಅರೆ ಯುವುದು. ೨. ಒಂದು ವಿಧವಾದ ನರಕ : ಮತ್ತಂ ತಿಲಯಂತ್ರ ಪೇಷಣಂ ... ಇಕ್ಷುಯಂತ್ರ ಸಮ್ಮರ್ದನವೆಂಬೈದು ಮಂತ್ರಿನರಕಂಗಳಿಂ ಸಹಿತಮಾಗಿ ತ್ರಿಕೋಣಪಾತವೆಂಬರಸುನರಕವಿಹುದು (ವಿವೇಕ. ೦೯೦).

[ತಿಲಯಂತ್ರ + ಪೇಷಣ]

ತಿಲವಿಘಾತಕ (ನಾ). = ತಿಲಗಾತಕ : ತಿಲವಿಘಾತಕ ಕಾಳಸಿಗ ತಂಬುಲಿಗ ಜಂಗಮ ಜೋಗಿಗಳ ಜಂಗುಳಿಗಗೇರಿಗಳೊಳಗೆ ಝಾಡಿಸಿದನು ಶಿಖಾಳಿಗಳ (ತೊರರಾ. ೩-೮-೫೩). [ತಿಲ + ವಿಘಾತಕ]

ತಿಲವಿಷ್ಟೆ (ನಾ). ಎಳ್ಳಿನ ಹಿಂಡಿ,–ಚರಟ : ತಿಲವಿಷ್ಟೆ, ಗಾಣದ ಹಿಂಡಿ ಳ ಪಡಿಯನ್ನು ಪುಡಿಮಾಡಿ ಶೋಧಿಸಿಕೊಂಡು ... ಸೇವಿಸೆ (ಸಳವೈ. ೨೩೫).

[ತಿಲ + ವಿಷ್ಟೆ]

ತಿಲಸ್ಮಾತಿ (ನಾ). ಜಾದೂವಿದ್ಯೆ ; ಇಂದ್ರಜಾಲ ; ಮಾಯಾವಿದ್ಯೆ: ನನ್ನ ದುರಾಶೆಯಿಂದ ನನ್ನ ಅಮೂಲ್ಯ ತಿಲಸ್ಮಾತಿ ಕಳೆಕೊಂಡೆ (ಮಾಂಗಲ್ಯ. ೫೦).

[← ಅರ. ತಿರಸ್ಮಾತ್ ; ಹಿಂ. ತಿಲಸ್ಮಾತೀ, ತಿಲಸ್ಮಾತ್, ತಿಲಿಸ್ಮಾತ್, ತಿಲಿಸ್ಮಾತೀ]

ತಿಲಾಂಜಲಿ (ನಾ). ೧. ಎಳ್ಳುನೀರು ಬಿಡುವುದು ; ಪಿತೃಗಳಿಗೆ ತರ್ಪಣ ಕೊಡುವುದು. ೨. (ಆಲಂ) ಬಿಟ್ಟುಬಿಡುವುದು; ತ್ಯಾಗ : ನಮ್ಮ ಸಂಸ್ಕೃ ತಿಯು ತನ್ನೊಳಗಿನ ದಿವ್ಯನೂತನ ಸೃಜನಶಕ್ತಿಗೆ ತಿಲಾಂಜಲಿಯನ್ನಿತ್ತಿದ್ದುದು ಬೆಳಕಿಗೆ ಬರುತ್ತದೆ(ಕರ್ಣಾಟ. ೫೮೮); ಕೆಲವು ದಿನಗಳ ಹಿಂದೆ ತನ್ನ ಮೇಲೆ ತಾನೇ ಹೊರಿಸಿಕೊಂಡಿದ್ದ ನೈತಿಕನಿರ್ಬಂಧಗಳಿಗೆ ತಿಲಾಂಜಲಿಯಿತ್ತನು (ಪುನರು. ೬೩); ಇಲ್ಲವಾದರೆ ಇಂದೇ ಈ ಅವ್ಯವಹಾರಕ್ಕೆ ತಿಲಾಂಜಲಿ (ರಕ್ತಧೃ. ೦೮೩).

ತಿಲಾಂಜಲಿ ಕೊಡು = ಮರೆತುಬಿಡು ; ಕೈಬಿಡು : ಅವರು ತಮ್ಮ ಆಕಾಂಕ್ಷೆಗೇ ತಿಲಾಂಜಲಿಕೊಟ್ಟುಬಿಟ್ಟರು(ಕೂಥಿ). ತಿಲಾಂಜಲಿ ಬಿಡು=ತಿಲಾಂ ಜಲಿ ಕೊಡು : ಪೌರಸತ್ತಾತ್ಮಕತತ್ತ್ವಕ್ಕೆ ತಿಲಾಂಜಲಿ ಬಿಟ್ಟಂತೆಯೇ (ಶಿಸ್ಥದ. ೦೭೩). [ತಿಲ + ಅಂಜಲಿ]

ತಿಲಾಂಬು (ನಾ). = ತಿಲಾಂಜಲಿ ೧ : ಕುಂಬಿನಿಯೊಳೆಮ್ಮ ಕುಲದ ತಿಲಾಂ ಬುವ ಮುಂದಕಟ ಕುಡುವನಾವನೆನುತ್ತುಂ ನಾಂ ಬಿಡೆ ಪುತ್ರವಿಹೀನಂ ಕಂಬನಿ ದೊಳೆದುಳಿದ ಜಲವ ಪಿತೃಗಳ್ ಪೀರ್ವರ್ (ಶಾಕುಂತ. ೯೪-೧೫೬).

[ತಿಲ + ಅಂಬು$_3$]

ತಿಲಾನ (ನಾ). (?) : ಸಕತಿಯಿಂದೆ ತಿಲಾನವೆಂಬೀ ವಾಜದಿ ಭಕುತವತ್ಸಲ ತಾನೆ ಪೇಳ್ದ (ಶೃಷ್ಣಗೋ. ೫-೭೦). [?]

ತಿಲಾಸ್ಥಿ (ನಾ). ಎಳ್ಳಿನ ಆಕಾರದಲ್ಲಿರುವ ಎಲುಬು ; ಸಣ್ಣ ಎಲುಬು : "ಎಳ್ಳಿನಾಕಾರದ ಎಲುಬು ; ತಿಲಾಸ್ಥಿ" (Sesamoid. ಇಂಕನಿ).

[ತಿಲ + ಅಸ್ಥಿ]

ತಿಲಿಗರುದಲಿ ? (ನಾ). (?) : ಆ ಮಹಾಜನಂಗಳ ಸಂನಿಧಾನದಲು ಆ ಊರ ಸನಗಸರ ××× ಬಿಟ್ಟ ಬಲಿಸಿದ್ದು ಗ ೧ ತಿಲಿಗರುದಲಿಯ ನಂದದೀವಿಗೆಂದು ಹಾಡ ××× ಪಣ್ಣ ಸೌಡಿ ಗ ೧ (ಕಕುಲ. ೪-೨೦ ; 12ನೆಯ ಶತ). [?]

ತಿಲಿತ್ಸ (ನಾ). ದೊಡ್ಡಹಾವು ; ಹೆಬ್ಬಾವು ; ಅಜಗರ : "ತಿಲಿತ್ಸ–ಒಂದು ತರದ ಹಾವು" (ಗಂಗಾಮ. ೧೫೩). [ಸಂ.]

ತಿಲು (ನಾ). ತೆಲುಗುಭಾಷೆ : ನಿಜಾಂಕಮಾಲೆಯಂ ಮಾನವಮನ್ಮಥಂ ಬರೆದನಾದರದಿಂ ವಿಟಚಕ್ರವರ್ತಿ ಧಾತ್ರೀನುತಮಾಗಿ ತಿಲು ತಿವುಳ ಕಂನಡ ನಾಗರದಕ್ಕರಂಗಳ (ಸೌಇಇ. XI–i, ೧೦೮-೪೨ ; 1057).

[P ಇದು 'ತೆಲುಗು' ಎಂಬುದರ ಅಪಲಿಖಿತವಿರಬಹುದು]

ತಿಲುವನಿ (ನಾ). ಒಂದು ಬಗೆಯ ಸಸ್ಯ: "ಬೇಳ ಪುಂಗಳೆ ತಿಲುವನಿ [ಪಾಶಾಂ. ತಿಳುವನಿ, ತಿಲುವಗ, ತಲುವರಿ]ಯೆನಿಕ್ಕು" (ಮಂಗರಾ. ೪೦-೩೦). 'ತಿಲೋಣಿ' ಪರಾ. [?]

ತಿಲೋಣೆ (ನಾ). ಒಂದು ಬಗೆಯ ಸಸ್ಯ: ತಿಲೋಣಿ, ಶ್ರೀಕಲ, ಸೂರ್ಯಾವರ್ತ, ನಿರಿಡಿಬಿತ್ತ (ಮೃಡಿಗಿ. ೪೦-೬೨೦). [?]

ತಿಲೋತ್ತಮೆ (ನಾ). ಒಬ್ಬ ಅಪ್ಸರೆಯ ಹೆಸರು. P ಪ್ರಕೃತಿಯ ಸರ್ವ ಸೌಂದರ್ಯದಲ್ಲಿಯೂ ತಿಲಾಂಶದಷ್ಟನ್ನು ತೆಗೆದು ರೂಪಿಸಿದ ಅಪ್ಸರೆಯಾದಂದರಿಂದ, ಎಲ್ಲ ಅಪ್ಸರೆಯರಿಗಿಂತಲೂ ಎಳ್ಳಿನಷ್ಟಾದರೂ ಹೆಚ್ಚು ಚೆಲುವುಳ್ಳವಳಾದ್ದರಿಂದ ಈ ಹೆಸರು ಬಂದಿತೆಂದು ಹೇಳುತ್ತಾರೆ: "ಘೃತಾಚೀ, ಮೇನಕಾ, ರಂಭಾ, ಊರ್ವಶೀ, ತಿಲೋತ್ತಮಾ, ಸುಕೇಶೀ, ಮಂಜುಘೋಷಾ—ಇವರು ಮೊದಲಾದವರ್ ಅಚ್ಚರಸಿಯರ್" (ಹರಿವಂ. ೧೫-೬೬) : ರಂಭಾತಿಲೋತ್ತಮೋರ್ವಶೀಸುಕೇಶಿಯೆಂಬ ಕೇಶಿಯುಮಂ (ಜಗವಿ. ೩-೨೩೮) ; ತಿಲೋತ್ತಮೆ ಮಂಜುಘೋಷೆಯೆಂಬೀ ನೆಗಟ್ಟಿಗ್ಗದಚ್ಚರಿಯರಚ್ಚರಿಯಪ್ಪ ವಿಳಾಸಮಂ ನಿಜಭೂನಟನೈಕದೇಶಮೆ ತಜುಂಬಿದುದೆಂಬ ಸರೂಪವಿಭ್ರಮಶ್ರೀ ನಿಜಮಾಗೆ (ಪುಷ್ಪಪು. ೩-೭೭).

[ಸಂ. ತಿಲೋತ್ತಮಾ (ತಿಲ + ಉತ್ತಮ + –)]

ತಿಲೋದಕ (ನಾ). = ತಿಲಾಂಜಲಿ ೧: "ಪ್ರೇತತರ್ಪಣಮನೆ ನಿವಾಪ ಮೆಂದೆನೆ ಕರ್ಮದಾ ತಿಲೋದಕಮಕ್ಕು" (ಮುಂಗರಾ. ೦೦೭-೪); ತಾಯಿಗೆ ವಾಸೋದಕ ತಿಲೋದಕಗಳನ್ನು ಕೊಡಲು ತಾನು ಅನರ್ಹನೆಂದು ಪ್ರಭುವು ನಿಶ್ಚಯಿಸಿಬಿಟ್ಟರು (ಶಾಂತಲಾ. ೦೭೦).

ತಿಲೋದಕ ಕೊಡು=೧. ತರ್ಪಣಕೊಡು. ೨. ತೊರೆ; ಆಸೆಬಿಡು: ಹಾಗಾದರೆ ಕೀರ್ತಿಗೆ ತಿಲೋದಕ ಕೊಡುವೆಯಾ ? (ರೂಪಸಿ. ೭). ತಿಲೋದಕವನ್ನು ಬಿಡು = ತರ್ಪಣವನ್ನು ಬಿಡು : ನನ್ನಲ್ಲಿ ಆ ರಾಜಋಷಿಗೆ ದಯೆಯುಂಟಾಗುವಂತೆ ಯತ್ನಿಸಿರಿ; ಇಲ್ಲದ ಪಕ್ಷದಲ್ಲಿ, ಅವಶ್ಯವಾಗಿ ನನಗೆ ತಿಲೋದಕವನ್ನು ಬಿಡಿ (ಶಾಕುಂತ. ೫೬-೭). [ತಿಲ + ಉದಕ$_2$]

ತಿಲೌದನ (ನಾ). ತುಪ್ಪ, ಎಳ್ಳು, ಅನ್ನ ಮುಂತಾದುವುಗಳನ್ನು ಬೆರಸಿ ಮಾಡಿದ ಒಂದಂ ಬಗೆಯ ಆಹಾರಪದಾರ್ಥ : "ಎಳ್ಳುಹೊಗ್ಗೆ" (ಶಾಚಿಂಗ. ೪). [ತಿಲ + ಓದನ]

ತಿಲ್ಯ (ನಾ). ಎಳ್ಳು ಬೆಳೆಯುವ ಭೂಮಿ : "ತಿಲ್ಯಂ, ತೈಲೀನಂ – ೨ ಎಳ್ಳು ಬೆಳೆಯುವ ಭೂಮಿಯ ಹೆಸರುಗಳು" (ಸಿದ್ಧಾಂತಿ. ೨೫೬). [ಸಂ.

ತಿಲ್ಲ (ನಾ). ಒಂದು ಬಗೆಯ ಸಸ್ಯ: ತಿಲ್ಲ, ಹಾರೋಗಿಡ (ಮೃಡಿಗಿ ೫೬-೭೦೩). [?]

ತಿಲ್ಲವೆಡಂಗ (ನಾ). ಒಂದಂ ಬಿರುದು; P ಚಿದಂಬರತೀರ್ಥಕ್ಷೇತ್ರದ ತಿಲ್ಲೈಗೆ ಬೆಡಗನ್ನು ತಂದವನು: ತಿಲ್ಲವೆಡಂಗಂ ಗಿರಿಜಾವಲ್ಲಭಪದ ಕಮಳಭೃಂಗನವನಿತ[ರಿ]ಪುಭೂವಲ್ಲಭವಿದಳನಪಟುವೆನೆ ... ಪೆಸರ್ವಡೆದ (ಸಾಇಇ. IX–i, ೨೫೪-೨೮; 1148).

[ತಿಲ್ಲ$_0$ (P ← ತಮಿ. ತಿಲ್ಲೈ) + ಬೆಡಂಗ]

ತಿಲ್ಲಾಣ ' ತಿಲ್ಲಾನ ' ನೋ.

ತಿಲ್ಲಾಣಿಸು (ಕ್ರಿ). ೧. ತಿಲ್ಲಾನದಂತೆ ಇಂಪಾಗಿ ವಿಧವಿಧವಾಗಿ ಸ್ವರವನ್ನು ಕೂಡಿಸು. ೨. ಸುಖಪಡು; ಸಂತೋಷಿಸು : ತಿಲ್ಲಣಿಸಿತಾಹರಣ ತಿಲ್ಲಾಣಿಸಿತವನೆದೆಬಂತಃಕರಣ (ದ್ರಾಪಾಪ್ರ. ೨೫-೬).

[ತಿಲ್ಲಾಣ (< ತಿಲ್ಲಾನ) + – ಿಸು$_3$]

ತಿಲ್ಲಾನ, ತಿಲ್ಲಾಣ (ನಾ). ೧. [ಸಂಗೀತ] ಒಂದು ಬಗೆಯ ಸಂಗೀತ ಕೃತಿ; (ಅರ್ಥಕೊಡದ) ಧ್ವನಿಗಳ ಬಹು ಇಂಪಾದ ಹೊಂದಾಣಿಕೆ: ತಾನವರ್ಣಗಳಾಗಲಿ ದಾಸರ ತಿಲ್ಲಾನಗಳಾಗಲಿ ಈಗ ಉಪಲಬ್ಧವಿಲ್ಲ (ಕಳವಿ. I, ೩೦೭): ತಿಲ್ಲಾನ – ಉತ್ತರಾದಿ ಸಂಗೀತದ 'ತರಾನ' ಎಂಬ ರಚನೆಯ ಅನುಕರಣವೇ ಈ ರಚನೆ. ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳುಂಟು. ಪಲ್ಲವಿ ಮತ್ತು ಅನುಪಲ್ಲವಿಗಳ ಸಾಹಿತ್ಯ 'ಕೊನೆಗೋಲು' ಅಥವಾ ಮೃದಂಗ ಜತಿಗಳಿಂದ ಕೂಡಿರುತ್ತದೆ ... ನರ್ತನಕ್ಕೆ ಏರ್ಪಾಟಾದ ರಚನೆಯಿದು (ಸಂಗೀತಂ. ೭೮): ಮಹಾವೈದ್ಯನಾಥಅಯ್ಯರ್ ಅವರು ರಚಿಸಿರುವ 'ಗೌರೀ ನಾಯಕ' ತಿಲ್ಲಾನವು ಮಹತ್ತರ ಕೃತಿ (ಸಂಗೀತ. ೧೪೪). ೨. [ನಾಟ್ಯ] ಒಂದು ಬಗೆಯ ನರ್ತನ : ತಿಲ್ಲಾನದಲ್ಲಿ ಆಕರ್ಷಕವಾದ ಭಂಗಿಗಳೂ . . . ವೈವಿಧ್ಯವೂ ಇರುವುದರಿಂದ ತುಂಬಾ ಪ್ರೇಕ್ಷಣೀಯವಾಗಿರುತ್ತದೆ (ಆಧಾನೃ. ೫೬) : ತಿಲ್ಲಾನ : – ಪ್ರದರ್ಶನದ ಮುಕ್ತಾಯಾಂಶ ಪದವಿನ್ಯಾಸಗಳಿಂದಲೂ ಭಂಗಿಗಳಿಂದಲೂ ರಮ್ಯವಾದ ರಚನಾವಿಶೇಷ (ಕಾರದ. ೫೫೫). **ತಿಲ್ಲಾಣ** : ೧. ಕೈಯ ತಾರಮ್ಯಯ್ಕೆಕ್ಕೆ ತೊದಲುನುಡಿಯ ತಿಲ್ಲಾಣ(ಆಚಾಮೃ. ೦೦೯-೫).

ತಿಲ್ಲಾನತಿಗುಳು = ಅರ್ಥವಾಗದ ತಮಿಳುಭಾಷೆ : ನಾನಿರುವಾಗ ನಿಮ್ಮ ತಿಲ್ಲಾನತಿಗುಳಲ್ಲಿ ಮಾತಾಡಕೂಡದು (ಮುಂಕ್ರಶ. ೩೬-೦೦).

[ದೇ. ॥ ತಮಿ. ತಿಲ್ಲಾನಾ ; ತುಳು. ತಿಲ್ಲಾಣ, ತಿಲಾನ]

ತಿಲ್ಲಿ (ನಾ). ಎಳ್ಳು. 'ತಿಲ್ಲಿಎಣ್ಣೆ' ಪರಾ. [< ಸಂ.ತಿಲ]

ತಿಲ್ಲಿಎಣ್ಣೆ (ನಾ). ಎಳ್ಳೆಣ್ಣೆ : ಕೆಂಪು ಶೇಷಿಗೆ ಅಗಸೀಎಣ್ಣೆಯನ್ನು ಹಸುರು ಶೇಷಿಗೆ ತಿಲ್ಲಿಎಣ್ಣೆಯನ್ನು ಹಾಕಬೇಕು (ಬಚಿಕ. ೮). [ತಿಲ್ಲಿ + ಎಣ್ಣೆ]

ತಿಲ್ವ (ನಾ). ಒಂದು ಬಗೆಯ ಸಸ್ಯ ; "ಲೋಧ್ರ, ರಕ್ತಲೋಧ್ರ" (ಪಂಡಿತ. ೨೯೯). [ಸಂ.]

ತಿವಂಚ (ನಾ). ಐದೈದರ ಮೂರು ಗರ: ಚೌಕ ದುಗ ನಟ್ಟ ಭದ್ರ ತಿವಂಚದೊಚ್ಚೌಕ...ಇನಿತುಮಂ ಬೇಗದಿಂ ಹಾಯಿಸು (ಕುರಾಡ. ೧೩-೫೯).

[< ಸಂ. ತ್ರಿಪಂಚ]

ತಿವಟ (ನಾ). ಒಂದು ಬಗೆಯ ವಸ್ತ್ರ : ಕುಡುಗುಂ ಚಿತ್ರಾವಟ ಪಟ್ಟಿಯುಡವಟ್ಟೆ ಸುವರ್ಣಚೇಲಮುಂ ತಿವಟಂ ಪೂವಡೆ ಕರ್ಮಂ ನೆರೆವಂ ಮಣಲೆಡೆಯಂ ರತ್ನಂಗವಸನವುಂ ವಸನಾಂಗಂ (ಶಾಂತಿಪು. ೬-೧೦೧). [?]

ತಿವಟಿಗೆ 'ತಿವದಿಗೆ' ನೋ.

ತಿವಡಿ (ನಾ). (?) : ಹೊಚ್ಚು ತಿವಡಿ ವಿಷಮಗಳೆಂಬ ಚೌಕಳಾಸಚ್ಚಿತಾಭೃಂಗಿ ನಾಟ್ಯಗಳು (ದೇವಾಂಪು. ೫-೦೩೯). [?]

ತಿವದಿ, ತಿವಿದಿ, ತಿವುಡೆ$_1$, ತ್ರಿಪುಡೆ, ತ್ರಿವದಿ, ತ್ರಿವಿಧಿ, ತ್ರಿವುಡ್ಯೆ (ನಾ). [ಛಂದ] ಮೂರು ಪಾದಗಳುಳ್ಳ, ಅಂಶಗಣಬದ್ಧವಾದ ಒಂದು ಪದ್ಯ ಜಾತಿ ; ತ್ರಿಪದಿ : "ತ್ರಿಪದಿಯೆನೆ ತಿವದಿಯಕ್ಕುಂ" (ಮುಂಗರಾ. ೬೨-೫೧) : ಅಕ್ಕರಂ ಚವ್ವಪದಿ ಮತ್ತಂ ದಲ್ ಗೀತಿಕೆ ತಿವ [ಪಾಕಾಂ. ವಿ] ದಿಗಳಂದಂಬೆತ್ತೆಸೆಯೆ ವೇಲ್ದೊಡದು ಚತ್ತಾಣಂ (ಕವಿರಾ. ೧-೩೫) : ಮಾದನವತಿಯಕ್ಕರಂ ಚೌವದಿ ಗೀತಿಕೆಯೇಳೆ ತಿವದಿಯುತ್ಸಾಹಂ (ಛಂದೋಂಬು. ೦-೪೭) : ಡೊಂಬಿಯ ತಂಬಟಿಗರ್ ಪಾಡುವ ತಿವದಿಯನಿರ್ಮಡಿಸಿ ಷಟ್ಪದಿಯಾದುದು (ಚಳವಿ. ೬-೧೩೪ ವ). **ತಿವದಿ** : ಮೇಲಿನ 'ಕವಿರಾ' ಪ್ರಯೋಗದ ಪಾಠಾಂತರವನ್ನು ನೋಡಿ. **ತಿವುಡೆ$_1$** : ತ್ರಿಪದಿಗೆ ತಿವದಿ, ತಿವುಡೆ, ತ್ರಿವುಡೆ, ತ್ರಿಪದಿಕಾ ಎಂಬ ಹೆಸರುಗಳೂ ಬಳಸಲ್ಪಟ್ಟಿವೆ (ಛಂದೋವಿ. ೯೮) : ಕ್ರಿ.ಶ. ೧೧೭೦ನೆಯ ಕಾಲದ ಕವಿ ನೇಮಿಚಂದ್ರನು ಒನಕೆವಾಡನ್ನು "ತಿವುಡೆ" ಎಂದು ಕರೆದಿದ್ದಾನೆ (ಸಂಕೋಛಂ. ೦೪೦). **ತ್ರಿವುಡೆ** : ತ್ರಿಪುಡೆಯು ಹೊಸಗನ್ನಡ ಕವನಗಳಲ್ಲಿ ಆದಿಪ್ರಾಸವನ್ನು ಕಳೆದುಕೊಂಡು ಆಗಾಗ ಬಳಕೆಯಾಗುತ್ತದೆ (ಛಂದೋವಿ. ೨೭೩) ; ಈ ಬಗ್ಗೆ ತ್ರಿಪುಡೆ ಎಂಬ ಹೆಸರುವಾಸಿಯಾದ ತಾಳಕ್ಕೆ ಒಡಗೂಡಿರುವುದರಿಂದ ತ್ರಿವುಡೆ ಎಂಬ ಹೆಸರಾದ ಛಂದಸ್ಸಿನ ... ಉದಾಹರಣೆಯ ಸಾಂಪ್ರದಾಯಿಕ ಬೆಂಬಲವೂ ಬೇಕಾದಷ್ಟಿವೆ (ಗೊಲ್ಕೊಥಾ. X, ಮುನ್ನುಡಿ). 'ತ್ರಿಪುಡೆ' ಪರಾ. **ತ್ರಿವದಿ** : ತ್ರಿವದಿ ಎಂಟುಂ ದಿಗ್ದಂತಿಗಳ್ ಕಂಟೀರವಕೆದಿರ್ವನ್ನೆ ಟ್ರಿಂಟಿಣಿಪಹಿತರ್ ತಲೆದೋಱರ್ (ಎಳ. VI, ಚಿಕ್ಕಮು. ೯೪-೦೯ : ಸು. 1060 ?). **ತ್ರಿವಿಧಿ** : ತ್ರಿವದಿಗೆ ತಿವದಿ, ತ್ರಿವಿಧಿ, ತಿವುಡೆ—ಎಂಬ ಹೆಸರುಗಳೂ ಕಾಣಿಸಿವೆ (ಸಂಕೋಛಂ. ೦೪೩) : 'ತ್ರಿವಿಧಿ' ಎಂಬುದು ಮಹಾದೇವಿಯಕ್ಕನ "ಯೋಗಾಂಗತ್ರಿವಿಧಿ"ಯೆಂಬಲ್ಲಿ ಕಾಣುತ್ತದೆ (ಸಂಕೋಛಂ.೦೪೩). **ತ್ರಿವುಡ್ಯೆ** : ಪ್ರಾಸಗಳು ಮಾಲಾಜಾಗಿ ಲೇಸಿನಿಂ

ಬರುತಿರಲು ಮಾಸದ ಮಾತ್ರೆಗಳ ತ್ರಿವುಡೆ ತಾನೊಗೆಗುಂ (ಛಂದಶ್ಶಾ. ೫-೧೩); ತ್ರಿಪದಿಗೆ ತಿವದಿ, ತಿವುಡೆ, ತ್ರಿವುಡೆ, ತ್ರಿಪದಿಕಾ ಎಂಬ ಹೆಸರುಗಳೂ ಬಳಸಲ್ಪಟ್ಟಿವೆ (ಛಂದೋವಿ. ೮೪). [<ಸಂ. ತ್ರಿಪದೀ]

ತಿವದಿಗೆ, ತಿವಟಿಗೆ, ತಿವಿಗೆ, ತಿವುಟಿಗೆ, ತೀವಟಿಗೆ, ತೆವಟಿಗೆ, ತೇವಟಿಗೆ, ತೌಂಟಿಗೆ, ತೌಟಿಗೆ(ನಾ). ಮೂರು ಕಾಲಿನ ಮಣೆ.–ಪೀಠ; ಮುಕ್ಕಾಲು ಮಣೆ; ಅಡ್ಡಣಿಗೆ: "ತಿವದಿಗೆ (ತಿವಟಿಗೆ)–ತ್ರಿಪದಿಕಾ" (ತದ್ಭವೋ. ೦೭). **ತಿವಟಿಗೆ**: ಒಂದು ಕಟ್ಟಿಗೆಯ ತಿವಟಿಗೆಯ ಮೇಲೆ ಪ್ರಕ್ಷೇಪಕಯಂತ್ರವನ್ನು ಇಟ್ಟು (ಮುಂಬಯಿ. ೫-೨೨). **ತಿವಿಗೆ**: ಲಂಕರೊಕ್ಕಲಲ್ಲಿ ಆಲು ತಿಂಗಳ್ಗೆ ಮಣೆ ತಿವಿಗೆ ಮರವಿಯೆಂಬಿವೊಂದಕ್ಕುಂ (ಎಇ. XIX, ೫೩-೨೮: 1135). **ತಿವುಟಿಗೆ**: 'ತಿವುಟಿಗೆಬುಲ್ಲು' ಪರಾ. **ತೀವಟಿಗೆ**: ಗ್ರೀಸ್ ದೇಶದ ಅರಿಸ್ಟಾಟಲನೆಂಬ ತತ್ವಜ್ಞಾನಿಯು ತಮಗೆ ತಾವೇ ನಡಿಯುವಂಥ ತ್ರಿಪಾದಗಳನ್ನು(ತೀವಟಿಗೆಗಳನ್ನು)ತನ್ನ ದೊಂದು ಗ್ರಂಥದಲ್ಲಿ ವರ್ಣಿಸಿದ್ದಾನೆ (ಮುಂಬಯಿ. ೬-೨೮). **ತೆವಟಿಗೆ**: ಅಡ್ಡಣಿಗೆ ಬಿಳ್ಳಿಯಲಿ ಕೆಲಬರು ದೊಡ್ಡ ಸುವರ್ನದ ತೆವಟಿಗೆಗಳಲ್ಲಿ ಅಡ್ಡಮಡಿಯನು ಸಿಕ್ಕಿ ಭರದ ಸೆಳ್ಕುಗುರಲಿಣ್ಣಿಯನೂ ಅಡ್ಡಹೋದರೆ ಮೇಲೆ ಚಮ್ಮುತ (ರೇವಣಾ. ೨-೨೦); ತೆವಟಿಗೆಯ ಮೇಲೆ ತಣಿಗೆ ಇಟ್ಟು ಬಡಿಸು (ಕೂಡಿ). **ತೇವಟಿಗೆ**: ಮೂರು ಕಾಲಿನ ತೇವಟಿಗೆಯನ್ನೂ (ತ್ರಿವಟಿಗೆ) ಅದರ ಮೇಲೆ ಚಿನ್ನದ ತಟ್ಟಿಯನ್ನೂ ಇಟ್ಟುಕೊಂಡು ಊಟ ಮಾಡುತ್ತಾರೆ (ಪ್ರವಾಇ. I, ೩೦). **ತೌಂಟಿಗೆ**: ಮುಂದೆ ತೌಂಟಿಗೆ ಇಟ್ಟುಕೊಂಡು ಅದರ ಮೇಲೆ ಪುಸ್ತಕ ಇಟ್ಟುಕೊಂಡರೆ ಸರಿಯಾಗ್ತದೆ (ಹಂಗಾಳ್ಕ. ೨೫೩). **ತೌಟಿಗೆ**: ಕಾರ್ಚಿಯ ಬದಿಯಲ್ಲಿದ್ದ ತೌಟಿಗೆಯ ಮೇಲೆ ನೀರಿನ ಹೂಜಿಯಿತ್ತು (ಪುನರು. ೭೪೫). [< ಸಂ. ತ್ರಿಪದಿಕಾ]

ತಿವದೆ (ನಾ). [ಛಂದ] ಮೂರು ಪಾದಗಳುಳ್ಳ ಪದ್ಯ; ತ್ರಿಪದಿ: ತ್ರಿಪದಾ–ತಿವದೆ (ಶಮುದ. ೨೫೮ ಪ್ರಹೋ). [<ಸಂ. ತ್ರಿಪದಾ]

ತಿವರಿಸು (ಕ್ರಿ). ತೀವ್ರಗೊಳಿಸು; ಅಧಿಕಗೊಳಿಸು (?): ಒಗು ಮಿಗೆ ಯುರವಣೆಗುಬ್ಬರಿಸುವ ಸುಯ್ಯ ತೆಗೆಬಗೆಯೊಳು ತಿವರಿವುದು (ಚಳವಿ. ೩-೭೮ ಸಾಂಗತ್ಯ). [< ತೀವ್ರ ? + – ಇಸು]

ತಿವಳಿ1 (ನಾ). ೧. ಸ್ತ್ರೀಯ ಹೊಕ್ಕುಳಿನ ಮೇಲುಭಾಗದಲ್ಲಿ ಅಡ್ಡಲಾಗಿರುವ ಮೂರು ಮಡಿಕೆಗಳು: ಮಸುಳೆ ತಿವಳಿ ಕರ್ಪಂ ಬಾಸೆ ಪೆತ್ತೊಪ್ಪೆ ... ಪೆರ್ಚಿತ್ತು ಗರ್ಭಂ (ಚಂದ್ರಪು. ೩-೮೩); ತಿವ[ಳಿಯೊ]ಳೊಳುವು ನಿಜಂ ತಳುಪು (ಬಂಹರಿ. ೭-೨೯); ತೆಳ್ವಸಿಱೊಳಿಸೆವ ತಿವಳಿಗಳ್ (ಕಬ್ಕಾಕಾ. ೭೭); ಸುರನರನಾಗಲೋಕದಿ ನರ್ತಿಸುವ ಸೌಂದರವೆಣ್ಣು ಬಾಣನಂದನೆಯ ಸರಿಯಿಲ್ಲವೆಂದು ಮೂವೆರಲಿಂದೆ ರತಿರಾಜ ಬರೆದಂತೆ ತಿವಳಿ ರಾಜಿಸಿತು (ಪೋಹಕ. ೫೩-೨೦). ೨. ಕಾಡಿನಲ್ಲಿ ಆನೆ ಮುಂತಾದ ಪ್ರಾಣಿಗಳು ಸಂಚರಿಸುವಾಗ ತಮ್ಮ ದಾರಿಯಲ್ಲಿ ಬಿಟ್ಟು ಹೋಗುವ ಮೂರು ಬಗೆಯ ಗುರುತುಗಳು: ಸೊವಡಿಂಗೇವಯ್ಸು ಪುಲ್ವುಟ್ಟೆಯ ತಿವಳಿಯನಾರಯ್ದು ಘರ್ಮದ್ರವಂ ಮೆಯ್ನವಿರುಂ ಮೆಯ್ಯೆರ್ಚಿ...ಮರವಾಯ್ದತ್ತು ಮತ್ತದ್ವಿಪೇಂದ್ರಂ(ಪಾರ್ಶ್ವಪು. ೧೦-೯೦); ತಿವಳಿಯೊಳ್ ವಿಡುಕಾಜಿದ ಮಣ್ಣಿಂದಿಕ್ಕಿದ ಲಂಡದ ಬೆಂಕೆಯಿಂ ಕವಿವ ... ಬಟ್ಟೆಯೊಳೊಕ್ಕ ಪಲ್ಲವನಿಕಾಯದಿನಂದಱಿದಂ ಕಾಡಾನೆಗಳಾಗಡೆ ಪೋದುದಂ (ಕಾವ್ಯಾವ. ೬೫೬); ತಿವಳಿವಿಡಿದುಗ್ರೇಭಂ ಪೋದತ್ತು (ಪಂದ್ರಪು. ೯-೧೦೩); "ಹೆಜ್ಜೆಯ ಗುರುತಂ" (ಪ್ರಭಾ.). [< ಸಂ. ತ್ರಿವಲಿ]

ತಿವಳ್ಳಿ, ತಿವಳೆ, ತಿವಿಳಿ, ತ್ರಿವಳೆ (ನಾ). ಒಂದು ಬಗೆಯ ವಾದ್ಯ: ಪಳವದ ತಿವಳಿಯ ಜುಂಕದ ವೊಳಸಿನ ಜೀಕಿರದ ಸಿವಿಜಿ ಸಿಪ್ಪನ ಲಯದಿಂದೆಳಲದೆ ಕಾಣಿದರ್ ಕೆಲಬರ್ (ಅಚಿಪು. ೫-೩೨); ಈಶಾನ ಈಶ್ವರಮುಡಿಯಾರ್ಗೆ ಕೊಟ್ಟ ತಿವಳಿ ೧ ದಟ್ಟಿ ೨ ಖಣ್ಡಿಕೆ ೩ ಫಲ ೬ (ಮ್ಯೈಡಿ. ೦೯೪೬, ೩೮-೦೪: 1032). **ತಿವಳೆ. ತಿವಿಳಿ. ತ್ರಿವಳೆ.**

ತಿವಳೆಪಜಿಘೋಷಣ, ತಿವಿಳಿಪಜಿಘೋಷಣ, ತ್ರಿವಳಿಪಜಿಘೋಷಣ = ತಿವಳಿಯೇ ಮೊದಲಾದ ವಾದ್ಯಗಳ ಮರ್ಯಾದೆಯುಳ್ಳವನು; ಒಂದು ಬಿರುದು: ತಿವಳಿಪಜಿಘೋಷಣ ಪರಬ ××× ಮಾದಿ ಸಮಸ್ತ ಪ್ರಶಸ್ತಿಸಹಿತಂ (ಸೌಇಇ.XX, ೩೩-೧೦ : 1048); ತಿವಿಳಿ ಪಜಿಘೋಷಣಂ ಲತ್ರಲೂರ ಪುರವರಮೇಶ್ವರಂ (ಎಇ. VII, ೨೦೬-೦೩ : 866); ತ್ರಿವಳಿ ಪಜಿಘೋಷಣ ರಣರಂಗಭೀಷಣ ರಟ್ಟವಂಶೋದ್ಭವಂ (ಸೌಇಇ. XI-1 : ೭೪-೯ : 1041); P ತಿವಳಿಯೇ ಮೊದಲಾದ ಮಹಾವಾದ್ಯಗಳ ಮರ್ಯಾದೆಯುಳ್ಳವನು ಎಂಬರ್ಥದ ಬಿರುದಾವಳಿಯಲ್ಲಿ ತಿವಳಿ, ತಿವಿಳಿ, ತ್ರಿವಳಿ ಶಬ್ದಗಳು ಪ್ರಯೋಗವಾಗಿವೆ.

[<ಸಂ. ತ್ರಿವಲೀ]

ತಿವಳಿವಟ್ಟ (ನಾ). (?): ಪೊಯ್ದ ತಾಳವಟ್ಟದೊಳಂ ತಿವಳಿವಟ್ಟವಾದ ತೇರ ತಕ್ಕೆಗಳ್ ಕಲ್ಲಗಾಣದ ಕಣಿಯ ಬಾಯ್ಗೆ ಬಿಟ್ಟ ಕಳಿಕೆಯ ಬೆಂಡಿನಂತೆ ನುರ್ಗುನುಜಿಯಾಗಿರ್ದುವು (ಅನಂಪು. ೦೪-೭೫). [?]

ತಿವಳೆ 'ತಿವಳ್ಳಿ' ನೋ.

ತಿವಾಶಿ 'ತಿವಾಸಿ' ನೋ.

ತಿವಾಸಿ, ತಿವಾಶಿ (ನಾ). ೧. ರತ್ನಗಂಬಳಿ; ಕಸೂತಿ ಹಾಕಿದ ಮೇಲ್ಹಾಸು: ಮುಹೂರ್ತಕ್ಕೆ ಮೊದಲೇ ಆಮಂತ್ರಿತ ಸ್ತ್ರೀಪುರುಷವೃಂದವು ಬಂದು ತಿವಾಸಿಗಳ ಮೇಲೆ ಮಂಡಿಸಿತ್ತು (ವಿಧಿವ್ಯ. ೦೭೦). ೨. ಒರಗುದಿಂಬು; ಲೋಡು: ಎರಡು ಸಿಂಹಾಸನಗಳ ಮೇಲೂ ಸುವರ್ಣಖಚಿತವಾದ ತಿವಾಸಿಗಳು (ದೀವೀಪಾ. ೦೪೩); ಕಣ್ಣಮ್ಮನನ್ನು ರತ್ನಕಂಬಳಿ ತಿವಾಸಿಗಳಿಂದ ಅಲಂಕೃತವಾಗಿದ್ದ ಕೋಣೆಯೊಂದರಲ್ಲಿ ಕುಳ್ಳಿರಿಸಿ (ರೂಶೇಖಾ. ೪೩); ತಿವಾಸಿಯಾತಕ್ಕೆ ತಿಪ್ಪೇ ಮೇಲಣವಗೆ? (ಗಾದೆ). **ತಿವಾಶಿ**: ೧. ಫಲಹಾರಾನಂತರ ಸುಸಜ್ಜಿತವಾದ ಹೆದಾರದಲ್ಲಿ ಫಕೀರನು ತಿವಾಶಿಯ ಮೇಲೆ ಸುಖಾಸನದಲ್ಲಿ ಬಂದು ಕುಳಿತನು (ದ್ರಾಂತ್ರ. ೭).

[←ಪಾರ. ತಿವಾಸೀ ; ಮರಾ. ತಿವಾಸೀ, ತಿವಾಶಾ, ತಿವಾಶೀ, ತಿವಾಸಾ]

ತಿವಿ1 (ಕ್ರಿ). ೧. ಮುಷ್ಟಿಯಿಂದ ಹೊಡೆ, –ಪ್ರಹಾರಮಾಡು; ಗುದ್ದು: "ತಿವಿ–ಮುಷ್ಟಿಪ್ರಹರಣೇ" (ಶಮುಧಾ); ನೆಲದಿಂದುರ್ಬಿ ಬಂದಾಕಾಶಕ್ಕೆ ನೆಗೆಪಿದೊನ ಸ್ಕಂಧಮಂ ತಿವಿದೊಂ (ಪದ್ಮಾಠಾ. ೫೦-೨೮); ತೊಡರೆ ತಡಂಗಾಲ್ ಪೊಯ್ದೊಡೆ ಕೆಡದುಂ ತಿವಿದೊಡೆ ಸುರುಳ್ದು ... ಬಿಟ್ಟುವು (ಪಂಪಭಾ. ೧೦-೬೮); ಓರೋರ್ವರಂ ತಿವಿಯೆ ನೆಗ್ಗಿರ್ದ ಕದಪಿಂದೆ (ಕಾದಂಉ. ೫೭೦); ಪಿತ್ತಾಧಿಕನಂತೆ ಬೀಸೆನುತ್ತುಂ [ಬಿಕ್ಕಿಗನಂತೆ ತಿವಿಯೆನುತ್ತುಂ] (ಧರ್ಮಾಮೃ. ೫-೭೦). ೨. ಇರಿ; ಚುಚ್ಚು: ತಿವಿದು ಸತ್ಪಂ ಕಡುಗಲಿತನದಿ (ಸೌಇಇ. XI–1, ೯೦-೦೪ ; 1049); ತಂಬುಲದಂತೆ ಪಲ್ಲ ಪತ್ರಿ ತಿವಿದರ್ (ಧರ್ಮಾಮೃ. ೩-೭೩); ಜೋಡಿಯಿಂ ಕವಿದು ಹೊಕ್ಕು ಹೆಂದಿಯ ತಿವಿದರು (ಹಡಕಾ. ೬-೦೧); ಪಂದಿ ಪೊಱಮಟ್ಟುದಿದೆ ತಿವಿಯೆಂದೆನುತುಂ ಮುಸುಱಿ (ಅಧ್ಯಟು. ೫-೭೪); ಪ್ರಳಯದಿನದಲ್ಲಿ ತಿವಿವ ಸಿಡಿಲವ್ವಳಿಸುವಂತಿರೆ ರೌದ್ರರವ ಘಳಿಘಳಿಸಿ ತಲ್ಲಣಿಸುತ್ತು ಕೌರವರಾಯ ಪರಿವಾರ (ಕುವ್ಯಾದ್ರೋ. ೯-೪೦); ಬಾಗಿಲ ತಿವಿದು ನೂಂಕುವ ದಂತಿಶಿರವ ವಿಭಾಗಿಸಿ ಕೊರ್ಗಣೆಯಿಂದೆ ತಾಗಿಸಿ . . . ಸಾಗಿಸಿದನು (ಪೋಹಕ. ೩೪-೭); ಕುಟ್ಟಿ ಕೆಡಹಿ ಕಾಲಾಳ್ಗಳನಾಜಿ ಬೆನ್ನೆಟ್ಟಿ ತಿವಿದರುರವಣಿಸಿ (ಕಂನವಿ. ೩-೭೦); ಪೆಚ್ಚಾದನನ್ನ ವೋರೆಯ ತಿವಿದು ನೋಡಿ (ಕೋಗಿಕ. ೨-೪೦); ಅನಂತರ ತಾಯಿಯನ್ನು ತಿವಿದು "ಹೋಗೋಣಮ್ಮ" ಎಂದಳು (ದೂಪಟ್ಟ. ೦೫). ೩. ಹಬ್ಬು; ಚಾಚು; ವ್ಯಾಪಿಸು: ಪೂರ್ಣಶಶಿಮಂಡಲದವೊಲು ತನು ಕಾಂತಿ ತಿವಿದುದು ನಿಖಿಳ ದಿಗಂತಪಟಕೆ (ಕುವ್ಯಾಳ. ೮-೦೪). ೪. ಓಡಿಸು; ಹರಿಸು; ಮುನ್ನುಗ್ಗಿಸು: ಕರಿಘಟೆಗಳೇಱುದವು ಕುದುರೆಗಳುರವಣಿಸಿದವು ತೇರ ತಿವಿದರು ಹೊಂತಕಾಱಿಗಳು (ಕುವ್ಯಾಳ. ೦೦-೪).

೫. (ಬೇಟೆ) ನಾಯಿಯ ಕೊರಳ ಪಟ್ಟಿಯನ್ನು ಬಿಚ್ಚು : "ತಿವಿಯೆಂದು ಹಾಸಂ ಕಟಲ್ಚುವುದು" (ಕಶಸಾ. ೬-೧೦೯) ; "ತಿವಿಯೆನೆ ಹಾಸುಗಳೆಯ[ವು]ದು" (ಶಬ್ದಮಂ. ೩೨). ೬. [ಗಣಿತ] ಗುಣಿಸು : ತಿವಿ, ಪೊಯ್ ಪೆರ್ಚಿಸು, ನೂಂಕು, ಅರಂಕು, ಕುಂಕು, ಕುಸಿ ... ಬೆಳಸೆಂದು ಇಂತಿನಿತುಂ ಗುಣಿಸೋದಕ್ಕೆ ಹೆಸರು (ವ್ಯವಹಾ. ೧೦-೮).

ತಿವಿದಾಟ = ಪರಸ್ಪರ ಇರಿದಾಡುವಿಕೆ : "ಅಡುಪಾಡೆನೆ ತಿವಿದಾಟದ ನುಡಿ" (ಭಾರನಿ. ೬೪). ತಿವಿದಾಡು = ಚಾಚಿಕೊಳ್ಳು : ಅಶ್ವಮೇಧದ ಬೇಳುವೆಯ ಸಂಭ್ರಮದ ಧಾಳಾಧೂಳಿಯಲಿ ತಿವಿದಾಡಿದವು ಜಿಹ್ವೆಗಳಾ ಹುತವಹನ (ತೂರರಾ. ೧-೭-೪೮). ತಿವಿದುಕೊಳ್ = ಅಂಟಿಕೊಳ್ಳು ; ಹೊಂದಿಕೊಳ್ಳು : ಬಾಡಿಗೆಯ ಮನೆಗೆ ತಿವಿದುಕೊಳ್ವ ಚತ್ರದ ಕೂಟ್ಗೆ ಮೈಯಾಂಪ... ಕಟ್ಟಿಗ್ಗರಂತೆ (ಧರ್ಮಾಮೃ. ೯-೧೬೨). [ದೇ.ಕ ತೆಲು. ತಿವಿಯು]

ತಿವಿ₂ (ನಾ). ಹೊಡೆತ ; ತಿವಿತ : ತಿವಿವ ತಿವಿಗಳ್ಗೆ ದನಿದೋಱೆ ಭಟರ ಕಾಯಂ ... ಪೊಯ್ದಾಡಿದರ್ ಮಹಾಸಂಗರದೊಳು (ಜಿಬಪು. ೧೬-೩೮); ಅಸಿಯಿಂದ ಕರದಿಂದ ತಿವಿಯಿಂದ ಹೊಯ್ದೊರಸಿತೇನೆಂಬೆನು (ತುರಂಗ. ೫೬-೪೮); ದ್ರುಪದಸುತೆಯು ಕಂಡು ದೂರದಿ ತಿವಿಗಳನ್ನು ಕೇಳುತಿರಲು (ಯವಿಪ. ೨೬).

[< ತಿವಿ₁]

ತಿವಿಗತ್ತಿ (ನಾ). (ಬಂದೂಕಿನ ತುದಿಗೆ) ಇರಿಯುವುದಕ್ಕಾಗಿ ಸಿಕ್ಕಿಸಿದ ಕತ್ತಿ,-ಖಡ್ಗ : ತಿವಿಗತ್ತಿಯ ಬಂದೂಕು ಹಿಡಿದುಕೊಂಡು ಪಹರೆ ಮಾಡುವ ಪೋಲೀಸರು ... ಕಲ್ಲುಹೊಡೆಯುವ ಕೈದಿಗಳು (ಮಣ್ಣುಹೆ. ೧೫).

[ತಿವಿ₁ + ಕತ್ತಿ]

ತಿವಿಗುಳು (ನಾ). ಹೊಡೆತ ; ಪ್ರಹಾರ ; ತಿವಿತ : ರವಿಯ ಕೈ ಕತ್ತಲೆಯ ಹೊರಳಿಯ ತಿವಿಗುಳಿಗೆ ತೆರಳುವುದೆ (ಕುವ್ಯಾಕ. ೧೦-೪೬) ; ಸಿಡಿಲ ತಿವಿಗುಳ ತಾಯಿಮನೆಯೋ ಪವನಜನ ಬಲುಘಾಯವೋ (ಕುವ್ಯಾಕ. ೧೯-೪೪) ; ತೋಳ ನೆಗಹಿನ ತಿರುಹುದಿವಿಗುಳ ತೀವ್ರತೆಯಲಬ್ಬರಿಸುತಿರ್ದುದಜಾಂಡ ಮಂಡಲ (ತೂರರಾ. ೪-೩-೧೦). [ತಿವಿ₁ + ?]

ತಿವಿಗೆ 'ತಿವದಿಗೆ' ನೋ.

ತಿವಿಗೋಲು (ನಾ). ಚುಚ್ಚುವ ಕೋಲು ; ಇರಿಯುವ ಕೋಲು : "ಪ್ರಾಜನಂ, ತೋದನಂ, ತೋತ್ರಂ-೩ ತಿವಿಗೋಲು" (ಸಿದ್ಧಾಂತಿ. ೨೩೮).

[ತಿವಿ₁ + ಕೋಲು₁ (< ಕೋಲ್₁)]

ತಿವಿಟಿಕೆಬುಲ್ಲು 'ತಿವುಟಿಗೆಬುಲ್ಲು' ನೋ.

ತಿವಿತ (ನಾ). ಚುಚ್ಚುವಿಕೆ ; ಇರಿಯುವಿಕೆ : ಕರ್ಣನ ಈಟಿಗಳ ತಿವಿತಗಳಿಂದ (ಕೃಪಾಕ. ೭೦) ; ಅದರ ಕೊಂಬುಗಳ ತುದಿಗಳು, ಎದುರು ಬರುವ ಶತ್ರುಗಳನ್ನು ಒಂದೇ ತಿವಿತಕ್ಕೆ ಸೀಳಿಬಿಡುವಷ್ಟು ಹದನಾಗಿದ್ದವು (ಬಂಗಾಹೆ. ೩೧).

[ತಿವಿ₁ + – ತ₂]

ತಿವಿದಿ 'ತಿವದಿ' ನೋ.

ತಿವಿನುಡಿ (ನಾ). ಚುಚ್ಚುಮಾತು ; ಮರ್ಮಭೇದಕವಾದ ಮಾತು. 'ತಿವಿನುಡಿಗಾರ' ಪರಾ. [ತಿವಿ₁ + ನುಡಿ₂]

ತಿವಿನುಡಿಗಾರ (ನಾ). ಚುಚ್ಚುಮಾತನಾಡುವವನು ; ಮರ್ಮಭೇದಕ : ಅರುಂತದಃ, ಮರ್ಮಸ್ಪೃಕ್-೨ ಮರ್ಮವನ್ನು ಭೇದಿಸಿ ಹೃದಯವ್ಯಥೆಯನ್ನುಂಟುಮಾಡುವ, ಹಂಗಣಿ ಮುಂತಾದ ಮಾತುಗಳ ಹೆಸರುಗಳು, ಗುಟ್ಟನ್ನು ಎತ್ತಿ ಆಡುವಿಕೆ ಮೊದಲಾದದ್ದು, ತಿವಿನುಡಿಗಾರ (ಸಿದ್ಧಾಂತಿ. ೨೯೭).

[ತಿವಿನುಡಿ + – ಗಾರ (< – ಕಾಱ)]

ತಿವಿರ್ 'ತಿಮಿರ್₂' ನೋ.

ತಿವಿರು 'ತಿಮಿರ್₂' ನೋ.

ತಿವಿಸು (ಕ್ರಿ). ಚುಚ್ಚುವಂತೆ ಮಾಡು ; ಇರಿಯುವಂತೆ ಮಾಡು. 'ತಲೆ ದಿವಿಸು' ಪರಾ.

ತಿವಿಸಿಕೊಳ್ = ಚುಚ್ಚಿಸಿಕೊಳ್ಳು : ಕಣ್ಣುಬೇನೆಗಾಱದೆ ತಲೆಯಂ ತಿವಿಸಿಕೊಂಡರೆಂಬಂತೆ ಪಱಮೆಗಾಱದೆ ಪೂಗಿಡುಗಡಿದರೆಂಬಂತೆ (ಲೀಲಾವ. ೧೪-೪೭ ವ). [ತಿವಿ₁ + – ಇಸು₃]

ತಿವಿಳಿ 'ತಿವಳಿ₂' ನೋ.

ತಿವುಟಿಗೆ 'ತಿವದಿಗೆ' ನೋ.

ತಿವುಟಿಗೆಬುಲ್ಲು, ತಿವಿಟಿಕೆಬುಲ್ಲು, ತಿವುಟಿಗೆಹುಲ್ಲು, ತೆವಟಿಗೆಬುಲ್ಲು (ನಾ). ತೆವಟಿಗೆ ಆಕಾರದಲ್ಲಿ ತೆನೆಬಿಡುವ ಒಂದು ಬಗೆಯ ಹುಲ್ಲು : "ಮಧೂಲಕಃ-ತಿವುಟಿಗೆಬುಲ್ಲು" (ಓಷಧಿ. ೧೧೪). ತಿವಿಟಿಕೆಬುಲ್ಲು : "ನೃಪಘೋಂಟಕಾರಿ-ತಿವಿಟಿಕೆಬುಲ್ಲು" (ಓಷಧಿ. ೮೯). ತಿವುಟಿಗೆಹುಲ್ಲು : "ಮಂಡಿಕಃ - ತಿವುಟಿಗೆಹುಲ್ಲು" (ಓಷಧಿ. ೧೧೪). ತೆವಟಿಗೆಬುಲ್ಲು : "ಶಬಲಃ-ಕ್ಷವ, ತೆವಟಿಗೆಬುಲ್ಲು" (ಓಷಧಿ. ೧೫೯).

[ತಿವುಟಿಗೆ (< ತಿವದಿಗೆ) + ಪುಲ್ಲು (< ಪುಲ್)]

ತಿವುಟಿಗೆಹುಲ್ಲು 'ತಿವುಟಿಗೆಬುಲ್ಲು' ನೋ.

ತಿವುಡು₁ 'ತೀಡು₂' ನೋ.

ತಿವುಡು₂ 'ತವುಡು' ನೋ.

ತಿವುಡುಗಳೆ (ಕ್ರಿ). ಹೊಟ್ಟನ್ನು ತೆಗೆದುಹಾಕು : ಕಟವೆಯ ಕೂಟ್ಮಗಮಗಿಸುವ ತಿಳಿದುಪ್ಪಂ ತಿವುಡುಗಳೆದ ಪೊಂಬೆಸಱ ... ಸವಿಯಿನೊದವಿದ ತೊವೆಯಂ (ಧರ್ಮಾಮೃ. ೦-೧೪೯) ; ಪಟಗಟವೆಯ ಕೂಟ್ ತಿವುಡುಗಳೆದ ತೊವರಿಯ ತೊವೆ (ಕಾವ್ಯಾವ. ೨೪೦). [ತಿವುಡು₂ (< ತವುಡು) + ಕಳೆ₁]

ತಿವುಡೆ₁ 'ತಿವದಿ' ನೋ.

ತಿವುಡೆ₂ 'ತ್ರಿಪುಡ' ನೋ.

ತಿವುರ್ 'ತಿಮಿರ್₂' ನೋ.

ತಿವುರ 'ತಿಪುರ' ನೋ.

ತಿವುರಾಂತಕ 'ತಿಪುರಾಂತಕ' ನೋ.

ತಿವುರಿ (ನಾ). ಒಂದು ಬಗೆಯ ಡೇರೆ (?) : ತಿವುರಿ ಗುಡಿ ಗೂಡಾರಂ ಝುಂಪಾಳಿ ... ಮೊಗಸಾಲೆಯೆಂಬಿವಱ ಪಸುರಿಂ ಕರ್ಪಿಂ ಕೆಂಪಿಂ ಬಸಂತನ ಬೀಡಿನಿಂತವಱ ಪೊಱವೀಡೆತ್ತಂ ಮಾಡಿತ್ತು ಕಣ್ಗನುರಾಗಮಂ (ಅನಂಪು. ೧೩-೭೩) ; ಬೀಗಿ ಪಟಪಟನೆ ಬೆಳೆದ ಬಾಟೆಯ ತಿವುರಿಯೊಳಂ ... ಬಿಟ್ಟ ಬೀಡು ಬರೆದಂತೆ ಕಂಡರಿಸಿದಂತೆ ಕಣ್ಗೆಸೆದಿರ್ದುದು (ಕಬ್ಬಿಕಾ. ೨೩೮) ; ತಿವುರಿ ಗುಡಿಯು ಗೂಡಾರ ಚಾಪಾಳಿಕೆಯ ನಿವಹ ... ಜಂಪೆಯ ಮಂಡಪವು ಕವಿನುತ ಬಾಗಿಲ್ವಾಡದ ಮೊಗಸಾಲೆಯವಿರಳಮಾದುವು (ಅನಂಪ. ೨೨-೬೦).

[?]

ತಿವುರು₁ 'ತಿಮಿರ್₁' ನೋ.

ತಿವುರು₂ 'ತಿಮಿರ್₂' ನೋ.

ತಿವುರೇಱು (ಕ್ರಿ). ಲೇಪಿಸಿದ ಸುಗಂಧದ್ರವ್ಯ ಮೇಲೇಳು : ಅನುರಾಗ ವಿಮ್ಮಡಿಸಿ ತಿಳಿದು ಮುಖವಿದಿರಾಗಿ ಪುಳಕದ ತಿವುರೇಱಿ ಪರಿಮಳದಂಕದ ಸರಸಗಾಳಿಗಕ್ಕಂ ಮೃದುವಾಸಿಕ್ಕಿದ ಕಳನಾಗೆ (ನಂಬರ. ೧೦-೦೦೪).

[ತಿವುರು₂ (< ತಿಮಿರ್₂) + ಏಱು₁ (< ಏಱ್₁)]

ತಿವುಳ 'ತಿಮಿಳ' ನೋ.

ತಿವುಳ್ಳೆಲ (ನಾ). ತಮಿಳು ದೇಶ (?) : ಕೊಂಕಣಮೆಟ್ಟಿಯಿಕ್ಕೆ ಬೆಂಗಿ ಬೆಱಗಾಗೆ ತಿವುಳ್ಳೆಲನಳ್ಕೆ ... ಭೀಷಣಮತಿರೌದ್ರಮದ್ಭುತಮಗುರ್ವ್ವಿನ ತೇಜದಳುರ್ಕ್ಕೆ ಧಲ್ಲನ (ಸೌಇಇ. XI-i, ೫೨-೯ ; 1007).

[P ಇದು 'ತಿವುಳ್ಳೆಲ' ಎಂಬುದರ ಅಪಲಿಖಿತವಿರಬಹುದು]

ತಿವುಟ್ನಾಡು 'ತಿಮಂಳನಾಡು' ನೋ.

ತಿಶ್ರ 'ತಿಸರ್₃' ನೋ.

ತಿಷ್ಠಿಸು (ಕ್ರಿ). ತಳವೂರು ; ಭದ್ರವಾಗಿ ನಿಲ್ಲು : (ಕ). [ತಿಷ್ಠೆ + – ಇಸು₃]

ತಿಷ್ಠೆ (ನಾ). ನಿಲ್ಲುವಿಕೆ.

ತಿಷ್ಠೆಯೂರು = ನೆಲೆಯಾಗಿ ನಿಲ್ಲುಂ : ಇಲ್ಲೇ ಭದ್ರವಾಗಿ ತಿಷ್ಠೆಯೂರಿದರು (ಕಾಮಿಕಾಂ. ೨೫೧). **ತಿಷ್ಠೆಹಾಕು**=ತಂಗು; ನಿಲ್ಲು; ಬಿಡಾರ ಮಾಡು : (ಕ). [P ಇದು ಷ್ಠಾ (ತಿಷ್ಠ್) ಎಂಬ ಸಂಸ್ಕೃತ ಧಾತುವಿನಿಂದ ರೂಪುಗೊಂಡಿದೆ]

ತಿಷ್ಯ (ನಾ). ೧. ಇಪ್ಪತ್ತೇಳಂ ನಕ್ಷತ್ರಗಳಲ್ಲಿ ಎಂಟನೆಯದಂ ; ಪುಷ್ಯ ನಕ್ಷತ್ರ : "ಪುಷ್ಯಃ, ತಿಷ್ಯಃ–ಈ ೨ ಪುಷ್ಯನಕ್ಷತ್ರದ ಪೆಸರ್" (ಹಲಾಯು. ೦೦-೩೦). ೨. ಪುಷ್ಯಮಾಸ. ೩. ಕಲಿಯುಗ : "ಕಲಿಃ–ತಿಷ್ಯಯುಗವುಂ. ಪಾಪವುಂ, ತಿಳಿಯುಂ" (ಕಾಶಕ್ಕ. ೨೬೩). [ಸಂ.]

ತಿಷ್ಯಫಲ (ನಾ). ನೆಲ್ಲಿಗಿಡ : "ತಿಷ್ಯಫಲಾ, ಆಮಲಕೀ, ಅಮೃತಾ, ವಯಸ್ಥಾ–ಳ ನೆಲ್ಲೀಮರ" (ನಿಘಂ.೨೩. ೦೦೯). [ಸಂ. ತಿಷ್ಯಫಲಾ]

ತಿಸರ1 (ನಾ). ಮೂರೆಳೆಯ ಸರ, – ಹಾರ. ಪಂಚರತುನದೊಳೆ ನೆಜಿದ ಪಸರದಿಂ ತೋರಣಂಗಳೊಳೆ ತೊಡರ್ದ ತಿಸರದಿಂ (ಪಂಪಭಾ.೩-೨೨) ; ಸಿರಿ ಕಂಡದಣ್ಪು ಮುತ್ತಿನ ತಿಸರಂ ಮೃಣಾಳಿಕೆಯ ಮುದ್ರಿಕೆ ಪೂವಿನ ಓಡು ಗಂಕಣಂ (ಪಂರಾಮಾ. ೩-೦೦೩) ; ಸತಿಯ ಕುಚಯುಗಮದ್ಯಂ ತಿಸರಕ್ಕೆಡೆಗುಡದೆಂದಾ ಅಸಿಯಳ್ಗೆಸೆವಕ್ಕಸರಮನಿಕ್ಕಿದಳಿರ್ವರ್ (ಆಗವಿ. ೦೦-೦೦೪) : ಎರ್ದೆವತ್ತಿದ ಮಲ್ಲಿಗೆಯ ತಿಸರವೇಂ ಸೊಗಯಿಸಿತೊ (ಕಬ್ಬಿಕಾ. ೦೪೦).

[< ಸಂ. ತ್ರಿಸರ]

ತಿಸರ2 (ನಾ). ಮೂರು ಬಾಣ : ತ್ರಿಶರ—ತಿಸರ ; ತ್ರಿಶೂಲ—ತಿಸುಳ (ಶಸುದ. ೨೯೦ ಪ್ರಹೋ). [< ಸಂ.ತ್ರಿಶರ]

ತಿಸರ3, ತಿಶ್ರ, ತಿಸರು, ತಿಸ್ರ (ನಾ). ೧. ತಿಕ್ಕಾಟ ; ಜಗಳ ; ಕಲಹೆ ; ಮನಸ್ತಾಪ : ರಾತ್ರಿಯೆಲ್ಲ ಗಂಡಹೆಂಡಿರ ತಿಸರ (ಅವತಂ. ೦೩೦). **ತಿಶ್ರ** : ೧. ಸಂಸಾರದಲ್ಲಿ ಏನು ತಿಶ್ರ ಬಂದಿತ್ತೊ (ಕಲನ. ೩೪೭). ೨. ಗೊಂದಲ; ತೊಂದರೆ ; ಕಷ್ಟ : ಈ ಚಿಲ್ಲರೆ ನಾಣ್ಯದ ಎಣಿಕೆ ಮುಗಿಯದು, ಲೆಕ್ಕ ಸರಿಬೀಳದು, ಈ ತಿಶ್ರದಲ್ಲಿ ಬೆಳಗಾಯಿತು (ಅಡೂಟ. ೦೦). **ತಿಸರು** : ೧. ಮೊದಲಿನಲ್ಲಿ ಸ್ವಲ್ಪ ತೊಂದರೆ ತಿಸರುಗಳಿದ್ದರೂ ಮುಕ್ತಾಯದಲ್ಲಿ ಸುಖ ಸಂತೋಷಗಳೇ ತುಂಬಿದ್ದುವು (ರಂಗಳ. ೯೧). **ತಿಸ್ರ** : ೧. ಯುವಕ ಮಕ್ಕಳೊಡನೆ ಒಂದೇ ಮನೆಯಲ್ಲಿರುವಾಗ. ತಿಸ್ರವು ಅನಿವಾರ್ಯ (ಪುನೋನಂ. ೩೪೧). [?]

ತಿಸರಿ (ನಾ). ಒಂದಂ ಬಗೆಯ ತಂತಿವಾದ್ಯ: ಬಾಜಿಪ ಬೀಣೆಯಂ ತಿಸರಿಯಂ [ಹಾಣಾಂ. ತಿಸರಮುಂ] ಕೊಳ್ಕೆಂದು ಬಲ್ಲಂಗಿವಂ ಕುಡಿಂ (ಅಜಿಪು. ೬-೦೦೮) ; ವೀಣೆಯ ಕಿಳಿಯ ಕಳೆಯೊಳ್ದಳವೇಱಿ ಲುಳಿಯ ಪಿರಿಯ ದನಿಯೊಳ್ತಿಸರಿಯ ಸುಸರತನಮುಂ ಮುಹರಿಯ ಮಧುರತೆಯುಂ ಬೀಣೆಯ ಬಹುಲಿಕೆಯುಂ ಎಸೆಯೆ (ವರ್ಧಪು. ೯-೪೩ ವ) ; ಬಾಜಿಸುವಮರರಮಣಿಯರ್ಕಳ ತಿಸರಿಯ ಕಿನ್ನರಿವೀಣೆಯ ನವವಿಧದ ರವಂ (ಅನಂಪು. ೪-೮೭) ; ವಿಪಂಚಿಕೆ ... ತಿಸರಿ ... ರಾಗಮಾಲಿನೀ, ಕಾಲಕೀಯೆಂಬ ಮೂವತ್ತು ಮೂಱು ತಂತ್ರೀ ವಾದ್ಯಂಗಳಲ್ಲಿ (ವಿವೇಕ. ೨೩೭). [?]

ತಿಸರು 'ತಿಸರ3' ನೋ.

ತಿಸು (ನಾ). ಒಂದಂ ಅನುಕರಣ ಶಬ್ದ. 'ತಿಸುಗುಟ್ಟು' ಪರಾ.

ತಿಸುಗುಟ್ಟು (ಕ್ರಿ). ಗೊಣಗೊಣ ಶಬ್ದವಾಡು ; ಗೊಣಗಾಡು : (ಕ).

[ತಿಸು + ಕುಟ್ಟು1]

ತಿಸುಳ (ನಾ). ಮೂರು ಮೊನೆಯನ್ನುಳ್ಳ ಒಂದಂ ಬಗೆಯ ಆಯುಧ ; ತ್ರಿಶೂಲ : "ತಿಸುಳಮೆನಲ್ ತ್ರಿಶೂಲಂ" (ಕರ್ಣಾನಿ. ೬೦) ; ತಿಸುಳದೊಳು ಚ್ಚಳಿಪ ಪೊಸನೆತ್ತರೆ ಕೆಂದಳಿರಾಗೆ (ಪಂಪಭಾ.೦-೬) ; ಬಂದುಗೆಗಳ ತಿಸುಳದ ಮೊಲ್ಲೆಯಿಟ್ಟಿಗಳ ಕಾಮಿನಿಯರ್ (ಗಿರಿಕ. ೬-೩೩) ; ಬಿಸುವಮರ್ದ ನೊಸಲ ಕಣ್ಣಂ ತಿಸುಳಂಗಳನಾಂತ ಕೈಗಳುಂ ನೋಟ್ಪರನಂಜಿಸೆ (ಕಬ್ಬಿಕಾ. ೨೫೫) ; ನೋಡುತೆ ತಿಸುಳಮಂ ತಿರುಪುತೆ (ಜಿಪು. ೧೯-೩೪). [< ಸಂ. ತ್ರಿಶೂಲ]

ತಿಸುಳಪಾಣಿ (ನಾ). ಕೈಯಲ್ಲಿ ತ್ರಿಶೂಲವುಳ್ಳ ವ್ಯಕ್ತಿ : ಒಂದಂಟಿನಲ್ಲಿ ತಿಸುಳಪಾಣಿಯಾಗಿ ನಿಂತು, ಸುತ್ತ ತನ್ನ ಬೆದಕುಗಣ್ಣುಗಳಿಂದ ಅಭೀಕ್ಷಿಸು ತ್ತಿರುವಳು (ನಡಂತಾ. I, ೪೪೯). [< ಸಂ. ತ್ರಿಶೂಲಪಾಣಿ]

ತಿಸುಳಿ1 (ನಾ). ತ್ರಿಶೂಲವನ್ನು ಹಿಡಿದವನು ; ಶಿವ : "ಗಿರೀಶಂ ತಿಸುಳಿ" (ಕರ್ಣಾನಿ. ೪೮) ; ಗಂಡುತನಮುಂ ಮೆಱೆ ತಿಸುಳಿಯೊಳಿಜಗು ಪಿರಿಯವರ್ಗೆಳೆಯೊಡೆಯಾ(ಕಬ್ಬಿಕಾ. ೨೩೧) ; ನಿಸಿಗಡೆಯೊಳಿದ್ದರಸು ಕನಸಾದ ಹೆದೆಯ ದೊಳ್ ತಿಸುಳಿಯಾಡಿದ ನುಡಿಯು ಮನದೆಗೊಂಡಾಗ (ಹೇಡಮ. ೯-೦೧) ; ತಿಸುಳಿಯೊಳ್ ಬಿನ್ನವಿಸುತಿರ್ದರಾ ಬೇಹಿಗಳ್ ಲೀಲೆಯಿಂದೋಲಗದೊಳು (ನಂದಿಮಾ. ೫-೪೬) ; ಕೆದರ್ದ ಕವರ್ದದಿಂ ತಿಸುಳಿ ಮುಪ್ಪೊಲೆಂದು ಕನಲ್ದು ಪಾಯ್ದಿನಂ (ಗೀತಗೋ. ೩೩-೩೪) ; ತಿಸುಳಿ ಪಣೆಗಣ್ಣಿರಿಯನುರ್ವಿಸೆ (ಕಮಮಾ. ೦೫-೪೩). 'ತ್ರಿಸೂಲಿ' ಪರಾ [< ಸಂ. ತ್ರಿಶೂಲಿನ್]

ತಿಸುಳಿ2 (ನಾ). ಮೂರು ಶೂಲಗಳು ಒಟ್ಟಿಗೆ ಇರುವ ಆಯುಧ. 'ತಿಸುಳಿಗೆಯ್ಕೆ' ಪರಾ. [< ಸಂ. ತ್ರಿಶೂಲೀ]

ತಿಸುಳಿಗೆಯ್ಕೆ (ನಾ). ತ್ರಿಶೂಲವನ್ನು ಹಿಡಿದವನು ; ಶಿವ : ತಪಮನಾಚರಿಸುತಿರಲೊಡಂ ಕೆಲವಾನುಂ ದಿನಕ್ಕೆ ತಿಸುಳಿಗೆಯ್ಕಂ ಮೆಯ್ದೋಱಿದಂ (ರಾಮಾಶ್ವ. ೦೩೭-೦೩). [ತಿಸುಳಿ2 + ಕೆಯ್2 + – ಅ7]

ತಿಸುಳಿಗೆಳೆಯ (ನಾ). ಶಿವನ ಸ್ನೇಹಿತ ; ಕುಬೇರ : "ಪೊನ್ನೆಱೆಯ ತಿಸುಳಿಗೆಳೆಯಂ ಕಿನ್ನರಪತಿ" (ಕರ್ಣಾನಿ. ೦). [ತಿಸುಳಿ1 + ಕೆಳೆಯ]

ತಿಸುಳಿಯಣುಗ (ನಾ). ೧. ಶಿವನ ಮಗ ; ಷಣ್ಮುಖ. ೨. ಶಿವಭಕ್ತ : ಪಾವಕಂ ತಿಸುಳಿಯಣುಗನ ಪಾದಕೆಱಗಿ (ಗುರುಚಾ. ೦೦-೩೪).

[ತಿಸುಳಿ1 + ಅಣುಗ (< ಅಣುಂಗ)]

ತಿಸ್ರ 'ತಿಸರ3' ನೋ.

ತಿಹುರ 'ತಿಪುರ' ನೋ.

ತಿಹುರಾಂತಕ 'ತಿಪುರಾಂತಕ' ನೋ.

ತಿಹುರಿ 'ತಿಗುರಿ' ನೋ.

ತಿಳ 'ತಿಲ' ನೋ.

ತಿಳಕ 'ತಿಲಕ' ನೋ.

ತಿಳಕಿಸು 'ತಿಲಕಿಸು' ನೋ.

ತಿಳಕೆ (ನಾ). ಆನೆಯ ಸಪ್ತಮದಾವಸ್ಥೆಗಳಲ್ಲಿ ಒಂದು ; ತಿಲಕಿತ : ನವಯೌವನಲಕ್ಷ್ಮಿಯೊಳಾಗೆ ವಿವಾಹಂ ತಿಳಕಮಿಟ್ಟವೋಲ್ ತಿಳಕೆಯದೊಪ್ಪುವ ಕತ್ತುರಿಯಂ ತೊಡದಂತೆವೊಲರ್ದಕಪೋಳೆ ಪುಟ್ಟಿದುದು ಗಜಪತಿಯೊಳ್ (ಪಾರ್ಶ್ವಪು. ೪-೦೦೭). [ಸಂ. ತಿಲಕ]

ತಿಳಜ 'ತಿಲಜ' ನೋ.

ತಿಳತೈಳ 'ತಿಲತೈಲ' ನೋ.

ತಿಳಲು 'ತಿರುಳ್' ನೋ.

ತಿಳಿ1 (ಕ್ರಿ). ೧. ನಿರ್ಮಲವಾಗು ; ಶುದ್ಧವಾಗು ; ಸ್ವಚ್ಛವಾಗು : ದಿಸೆಗಳ್ ವಿಳಾಸಮಾದುವು ಕೆಸಱಂ ಪಿಂಗಿತ್ತು ಧರಣಿ ತಿಳಿದುವು ಕೊಳಗಳ್ (ಕವಿರಾ. ೨-೬೧) ; ಬಟ್ಟಲ ನೀರು ತಿಳಿದಲ್ಲಿ ಫಲವೇನು (ಬಸವ. ೧೩೦) : ತಿಳಿದ ತಡಿದಡಿಯ ಮಡಿಗಳ ಜಳದೊಳ್ ರಂಜಿಸುವ ಧಾನ್ಯಮಂಜರಿಯ ನೆಲಲ್ ಪೊಳೆಯೆ (ಕಂದ್ರಪು. ೦-೯೨) : ತಿಳಿದುದು ನೀರ್ಗಳಂತೆ ಗಗನಂ (ಅನಂಪು. ೦೦-೬) : ಪಾವಸೆ ಕಿದಲೊಡಂ ನೀರ್ತಿಳಿದುದು (ಕಮುರ. ೩೪೭ ಪ್ರಹೋ) : ನೀರ್ ತಿಳಿದುದು ಪೂಗೊಳದೊಳ್ ದಾಂಗುಡಿ ತೋಱುದುದು ಲತಾಳಿಯೊಳು (ಆದುಗಾ. ೦೦-೪) : ತಿಳಿಯ ಕಾಸಿದ ತುಪ್ಪವಳಿದು ಹಾಲ ಪ್ಪುದೆ (ಸರ್ವಜ್ಞ. ೩೫೮). ೨. ಶುಭ್ರವಾಗಿ ಪ್ರಕಾಶಿಸು,–ಹೊಳೆ : ಸೆಳ್ಳು ಗುರ್ಗಳ ತೆಳ್ಳನೆ ತಿಳಿದ ಕಾಂತಿ ಕುಸುಮಿಸುವಿನೆಗಂ (ಅನಂಪು. ೬-೬೪) : ತಿಳಿದ ಜೊನ್ನಕೆ ಜೊನ್ನವಕ್ಕಿಗಳೆಳಸುವಂತೆಳಸುವುದೆ ಕೆರಳದೆ ರಾತ್ರಿಜಾಗರನು

(ಸಾಳ್ವಭಾ. ೦-೪೨) ; ಭಸಿತಲೇಖೆ ಬೆಳ್ವಕ್ಕದ ಬಿದಿಗೆಯ ಚಂದವನೊಂದಂದದ ತಿಳಿದ ಕಳೆಯನಿಳಿಕೆಯ್ಯೆ (ರಾಮಾಶ್ವ. ೦೩೯-೦೦) ; ತಿಳಿದು ನೀಳ್ದುವು ದಿಶಾಳಿ (ಶ್ರೀರಾಮಾ. ೫೪೨-೫೦). ೩. ಕೋಪವನ್ನುಳಿ ; ಪ್ರಸನ್ನವಾಗು ; ಸಮಾಧಾನಗೊಳ್ಳು : ಮುಳಿದಿರೆ ಪಾದಪಂಕಜಮನಾಂ ತಲೆಯೊಳ್ ನಿಲೆ ತಾಳ್ದಿ ನಲ್ಲಳೇ ತಿಳಿಯೆನೆ ನಲ್ಲಳೆನ್ನ ಪೆಸರಲ್ತೆಮಗಾ ಪೆಸರಾಕೆಯುಳ್ಳೊಡಂ ತಿಳಿಪೆನೆ ಮತ್ತಮಾ ಪೆಸರ್ಗೆ ನೀನಿರೆ ನೋಂತವಳಾವಳೆಂಬುದುಂ ತಿಳಿದಮರ್ದಪ್ಪಿದಂದಂ (ಆದಿಪು. ೪-೦೦) ; ಮುನಿಸಿನೊಳಾದಮೇವಯಿಸಿ...ಬಯ್ದನುವಿಸಿ ಕಾಡಿ ನೋಡಿ ತಿಳಿದಟ್ಕಿಱನಿಟ್ಕುಳಿಗೊಂಡಲಂಪುಗಳ್ ಕನಸಿನೊಳಂ ಪಳಂ ಚಲೆವು[ವೆ]ನ್ನೆರ್ದೆಯೊಳ್ (ಪಂಪಭಾ. ೪-೧೦೬) ; ಕಿನಿಸಿ ಕಡುಪಿನಿಂದಂ ನದುಗಿದಪುದು ತಿಳಿಯದೆಂತುಮಾರ್ತಿಳುಪಿದೊಡಂ (ಕಾದಂಉ. ೬೬) ; ಮುಳಿದಾಗಡೆ ಕೂರ್ಪ್ಪವರೊಳ್ತಿಳಿವುದು ತಿಳಿವುದು ಗಡೆನ್ದು ಸಾಱುವ ತೆಱದಿಂ ಗಳಪುವ ಗಿಳಿವಿಂಡಿನ ಕಳಕಳಂ (ಮೃಆರಿ. ೧೯೨೮, ೦೦-೪೬ ; 1189) ; ಬಱಿದೆ ಮುಳಿದು ತಿಳಿಪೆ ತಿಳಿದು ನೆರೆವ ಬೇಡವೆಂಡಿರಿಂ (ಕಬ್ಬಿಕಾ. ೨೦೮) ; ಬಲುಮುನಿಸು ನಿಮ್ಮಿಂದವಲ್ಲದೆ ತಿಳಿಯದೆನುತಂ (ಬಸಪು. ೪೭-೪೭) ; ತರುಣಿ ಕರ ಬಡವಾದೆಯಿನ್ನೂ ತಿಳಿಯದೇ ಮುನಿಸು (ಕೌಶಿರಾ. ೧೦-೬೫). ೪. ಅರಿ; ಕಲಿ ; ಗ್ರಹಿಸು ; ವಿಷಯವನ್ನು ಗೊತ್ತುಮಾಡಿಕೊಳ್ಳು,—ಸಂಗ್ರಹಿಸು : ಏದೊರೆತು ತಾನೆಮ್ಮಯ್ಯನೈಶ್ವರ್ಯಮಿಂತಿವನೆಲ್ಲಂ ತಿಳಿವಂತುಟಾಗಿ ಬೆಸಸಿಂ (ಪಂಪಭಾ. ೬-೦೫) ; ನೀಂ ತಿಳಿದಿರ್ದುಂ ಮದ್ವೃತ್ತಾಂತಮನೇನೆಂದು ಕೆಳೆಯ ಬೆಸಗೊಂಡಪೆ (ಕಾದಂಪೂ. ೮೪೪) ; ಜಿನೇಂದ್ರಧರ್ಮಮಂ ಸಾರಮೆನಿಪ್ಪುದಂ ತಿಳಿದು ನಂಬಿದರನ್ಯರನೇಕೆ ಪೊರ್ದುವರ್ (ಧರ್ಮಾಮೃ. ೦-೦೭೯) ; ಬೆಳೆದ ಭೂಮಿಯಲೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು ಎಚ್ಚಱಲೀಯದು (ಬಸವ. ೫೦) ; ಆ ಶಬ್ದಶಾಸ್ತ್ರ ವ್ಯವಹಾರಮಂ ತಿಳಿಯಲ್ಕೆ ಅಕ್ಷರಸಂಜ್ಞಾಸ್ವರೂಪಂ . . . ಪೇಟಲ್ಪಡುಗುಂ (ಶಮದ. ೦ ವೃತ್ತಿ) ; ಕಳುಹಲತ್ತಲು ಹೋಗಿ ಸಾತ್ಯಕಿ ತಿಳಿದು ಮರಳಿದುದಿಲ್ಲ ಫಲುಗುಣನಳಿದನೋ ಮೇಣುಳಿದನೋ (ಕುಪ್ಯಾದ್ರೋ. ೦೨-೨). ೫. ಗೊತ್ತಾಗು ; ಸ್ಪಷ್ಟವಾಗು : ಅಷಡಕ್ಷೀಣಃ . . . ಮೂರನೆಯವನು ಮೊದಲಾಗಿ ಯಾರಿಗೂ ತಿಳಿಯದಂತೆ ನಡೆದ ಇಬ್ಬರ ಏಕಾಂತ ವಿಚಾರಕ್ಕೆ ಹೆಸರು (ಸಿದ್ಧಾಂತಿ. ೨೦೮) ; ನೀನು ಹೇಳಿದ್ದು ನನಗೆ ತಿಳಿಯಲಿಲ್ಲ (ರೂಢಿ). ೬. ವಿಚಾರಮಾಡು ; ಯೋಚಿಸು : ಆ ಸುಜ್ಞಾನದೃಷ್ಟಿಯಿಂ ತಿಳಿದು ನೋಡಿ . . . ಪ್ರಭುದೇವರು ನಿರೂಪಿಸುತಿರ್ದರು (ಶೂನ್ಯಸಂ. ೪-೦೯) ; ತಿಳಿವೊಡೆ ಶಶಿ ರವಿ ರವಿ ಶಶಿ (ಗಿರಿಕ. ೯-೭೪) ; ಎಮ್ಮ ಶರಣರ್ಗೆ ಸಂಸಾರಸಂಗಂ ತಿಳಿಯೆ ಬಂಧವಲ್ತಲ್ತು (ಪದ್ಮರಾ. ೩-೮) ; ತಿಳಿಯಲೆಮ್ಮೈವರಿಗೆ ಜೀವನದುಳಿವು ನಿನ್ನದು (ಕುಪ್ಯಾದ್ರೋ. ೯-೪೮) ; ನಿನ್ನೊಳಗೆ ನೀನೇ ತಿಳಿದು ನೋಡು (ಪುರಂದ. ೦-೮೨-೨೮) ; ತಪ್ಪದಾರದು ತಿಳಿದು ನೋಡೆ ತಪ್ಪದಾರದು (ಗೀತಗೋ. ೬೦-೬). ೭. ಭಾವಿಸು ; ಬಗೆ : ವಿನೀತನಂ ದೂರದಿಂ ನೋಡಿ ಪಾತಕನಿವನೆಂದು ತಿಳಿದು ಪೋಗಳಿಂದಿರೆ ನಂಬದಿರ್ (ಕಾದಂಪೂ. ೫೪೯); ಬರೆದಿಹ ಲಿಪಿಯನೆತ್ತಿ ವಾಚಿಸಿಕೊಂಡು ತರಳಾಕ್ಷಿ ತಾನದಕೆ ಮತ್ತೊಂದಭಿಪ್ರಾಯಮಂ ತಿಳಿದಳು (ಜೈಮಿಭಾ. ೩೦-೨೬) ; ಅವನಂ ಪುಲ್ಲಂ ತಿಳಿದಂ (ಶಬ್ದಾನು. ೨೦೯ ಪ್ರಯೋ) ; ನನ್ನನ್ನು ಕಳ್ಳನೆಂದು ತಿಳಿದೆಯಾ ? (ರೂಢಿ). ೮. (ನಿದ್ರೆಯಿಂದ ಅಥವಾ ಮೂರ್ಛೆಯಿಂದ) ಎಚ್ಚರವಾಗು ; ಎಚ್ಚರಹೊಂದಂ : ಸುಗ್ಗವ್ವೆ ಕಡುಸುಖದ ಸೊಗಸಿನ ಜೊಮ್ಮು ತಿಳಿದು ಮೈಮುರಿದೆದ್ದಳು (ಸಿದ್ಧರಾ. ೦-೬೦) ; ತಿಳಿದುದು ಝೊಮ್ಮಿನುಮ್ಮೋಹ (ಕುಪ್ಯಾದ್ರೋ. ೦೭-೧೩). ೯. (ಸೊಕ್ಕು, ಅಮಲು) ಇಳಿ : ಸಿರಿಯೆಂಬ ಸೊರ್ಕು ತಿಳಿಯದು ಪರಿಣಾಮದಿನಂಜನಂಗಳಿಂದಂ (ಕಾದಂಪೂ. ೫೩೦) ; ಕಳ್ಳಂ ಕುಡಿದಂ ತಿಳಿದಂ ದೊಳ್ಳಿತು ಹೊಲ್ಲೆಂದುಮಱಿವಂ (ಸಮಪ. ೪-೦೫೨) ; ಮರುಳಾಗಿರ್ದನ ಮರುಳ್ತನಂ ತಿಳಿದವೋಲೋಸರಿಸಿರೆ ಮಿಥ್ಯಾತ್ವಂ (ವರ್ಧಪು. ೦೨-೩) ; ಅವಧರಿಸು ಧೃತರಾಷ್ಟ್ರನೃಪ ನಿನ್ನವಗೆ ತಿಳಿದುದು ಸೊಕ್ಕು (ಕುಪ್ಯಾಕ. ೨೦-೧). ೧೦. (ಬರ) ಹಿಂಗು ; ಇಲ್ಲದಂತಾಗು : ಧರಾಜನದ ಕಣ್ಣ ಬಱ ತಿಳಿದವು (ಸಿದ್ಧರಾ. ೬-೪೫). ೧೧. ಕಾಣು; ನೋಡು: ದೇವರ್ಕಳಂ ತುಂಬಿಯಂ ತಿಳಿಯಲ್ ಸ್ವಪ್ನದಿ ಲೇಸಲೈ (ಸೋಮೇಶ. ೬೯). ೧೨. ಅನುಭವಿಸು : ಮನವರಿಯದ ಪಾಪವಿಲ್ಲ, ತನು ತಿಳಿಯದ ನೋವಿಲ್ಲ (ಗಾದ).

[ದೇ. ॥ ತಮಿ. ತೆಳಿ, ತೆಳ್, ತಳಿ ; ಮಲ. ತೆಳಿಯು ; ತುಳು. ತೆಲಿ, ಸೆಲಿ ; ಕೊಡ. ತೇಳಿ ; ತೆಲು. ತೆಲಿ]

ತಿಳಿ$_2$ (ನಾ). ೧. ಸ್ವಚ್ಛತೆ; ನೈರ್ಮಲ್ಯ; ಪರಿಶುದ್ಧತೆ: "ತಿಳಿ–ನೈರ್ಮಲ್ಯೇ, ಜ್ಞಾನ, ಪ್ರಸನ್ನಭಾವಯೋಃ (ಒಲಿ), ಕಾಂಜಿಕೇ ಚ (ಗಂಜಿ)" (ಶಮಧಾ). ೨. ಗಂಜಿ, ಮಜ್ಜಿಗೆ, ಸಾರು, ಹೆಂಡ ಮೊದಲಾದುವುಗಳ ನೀರಾದ ಭಾಗ,—ಮಂದವಲ್ಲದ ಭಾಗ : ಒಡೆವ ಸಮಯದೊಳು ಹಾಲೊಳಗೆ ಸುಣ್ಣದ ತಿಳಿಯ ಬಿಡಲು ಚುಮ್ಮನೆ ತಿಳಿವುದದು (ಸೂಪಶಾ. ೨-೫) ; ಬಡಿಸಿದರ್ ಮಂದನೆ ಮಜ್ಜಿಗೆ ಕೆಲಬರ್ಗೆ ನಿಡಿವೆತ್ತ ತಿಳಿ ಕೆಲಬರ್ಗೆ (ಮೋಹತ. ೦೪-೦೫) ; ಕೆಟ್ಟ ಹಾಲಿಂದ ಹುಳಿಯಿಟ್ಟರ್ದ ತಿಳಿ ಲೇಸು (ಸರ್ವಜ್ಞ. ೦೦೦೦) ; ಮೇಲಿನ ಕೆನೆಯನ್ನೆಲ್ಲಾ ಚೆಲ್ಲಿಬಿಟ್ಟು ಉಳಿದ ತಿಳಿಗೆ ಈ ಔಷಧಿ ಹಾಕಿ ಕುಡಿ (ಬೈಸರ್ವ. ೭೭) 'ತಿಳಿಸುಣ್ಣ' ಪರಾ. ೩. ತಿಳಿಯಾಗಿರುವುದು ; ಲಘುವಾಗಿರುವುದು ; ಮಂದವಲ್ಲದುದು. 'ತಿಳಿನಿದ್ರೆ', 'ತಿಳಿನೀಲಿ' ಪರಾ. ೪. ಪ್ರಸನ್ನತೆ ; ಕೋಪ ಇಳಿಯುವಿಕೆ. ೫. ತಿಳಿವಳಿಕೆ ; ಜ್ಞಾನ : "ನಿರ್ಮಲ ಚಷಕ ಜ್ಞಾನ ಪ್ರಸನ್ನತ್ವಗಳೊಳುಂ ತಿಳಿಯೆಂದೆನಿಕ್ಕು" (ಶಬ್ದಮಂ. ೦೦೪) ; ಈ ಬಾಳ್ವೆಯೆಂಬ ಮುಗಿಲಲ್ಲಿ ತಿಳಿಯೆಂಬ ಹೊತ್ತು ಮೂಡಲಿ (ಕಗದ್ಯ. ೪೩). 'ತಿಳಿಗೇಡಿ', 'ತಿಳಿವುಟ್ಟು' ಪರಾ. (ಗು). ೬. ಸ್ವಚ್ಛವಾದ ; ಪರಿಶುದ್ಧವಾದ : ಸಂಗಮೇಶ್ವರಂಗೆ ಹೊಸ ಪುಷ್ಪಮಂ ತಿಳಿಯಗ್ಘವಣಿಯಂ ತಂದು ಓಜೆಯಿಂ ಪೂಜೆಗೈದು (ಬಸರ. ೨-೬೭). 'ತೆಳ್' ಪರಾ.

ತಿಳಿಯಾಗು = ೧. ಸ್ವಚ್ಛವಾಗು ; ನಿರ್ಮಲವಾಗು : ಬಾವಿ ನೀರು ತಿಳಿಯಾಗಿದೆ (ರೂಢಿ). ೨. ನೀರಾಗು : ಸಟ್ಟುಗದಿ ತೊಳಸಿ ಮಂದಮಂದನೆ ಘಟ್ಟಿಯಾಗುತಿಹ ಸಮಯದೊಳಗೊಂದಿನಿಸ ತೆಗೆತೆಗೆದು ತಿಳಿಯಾಗುವಾ ಹದಂ ಬಂದಾಗಲಿಳುಹಿ (ಸೂಪಶಾ. ೦-೪೦). ೩. ಶಾಂತವಾಗು ; ಸಮಾಧಾನ ಸ್ಥಿತಿಗೆ ಬರು : ಮನೆಯಲ್ಲಿ ನೆಲಸಿದ ಕಾತರತೆಯ ವಾತಾವರಣ ಮೆಲ್ಲನೆ ತಿಳಿಯಾಗುತ್ತಿದ್ದಂತೆ ಒಬ್ಬೊಬ್ಬರೇ ಚೇತರಿಸಹತ್ತಿದರು (ಮೂರುದಾ. ೨೭೩). ೪. ಸ್ಪಷ್ಟವಾಗು ; ಸರಳವಾಗು : ಗೀತೆಯು ಜೀವನ ಸಾರಸರ್ವಸ್ವವನ್ನು ತಿಳಿಯಾಗಿ ಸುಲಭವಾಗಿ ಹೇಳುವುದು (ಧರ್ಮಸಾ. ೧೧೦).

[<ತಿಳಿ$_1$. / ತಮಿ. ಮಲ. ತೆಳಿ, ತೆಳಿವು ; ತುಳು. ತಿಳಿ, ತೆಲಿ, ತೆಳಿ, ಸೆಲಿ, ಸೆಳಿ]

ತಿಳಿ$_3$ (ನಾ). ಪಾನಪಾತ್ರೆ ; ಚಷಕ : "ನಿರ್ಮಲ ಚಷಕ ಜ್ಞಾನ ಪ್ರಸನ್ನತ್ವಗಳೊಳು ತಿಳಿಯೆಂದೆನಿಕ್ಕು" (ಶಬ್ದಮಂ. ೦೦೪) ; ಏಳಿ ಮಕ್ಕಳೆ ತುಂಬಿಸೀ ತಿಳಿಗೆ ತೀವೆ ಮದಿರೆ ಬತ್ತದ ಮುನ್ನ ಬಾಳ ತಿಳಿಯೆಡೆಯಿಂ (ಗಿಳಿವಿಂ. ೧೧೬-೨) ; ಹಿಂದಣನುತಾಪ ಮುಂದಣ ಭಯವ ಮರಸಿ ಇಂದನೊಸೆಯಿಪ ತಿಳಿಯ ತುಂಬು ನನ್ನರಸಿ (ಗಿಳಿವಿಂ. ೦೦೮-೦೫).

[? . / ತೆಲು. ತೆಲೆ, ತೆಲಿಯು = ತಟ್ಟೆ . /ಸಂ. ಸ್ಥಾಲೀ]

ತಿಳಿಗಂಪು (ನಾ). ಶುದ್ಧವಾದ ಪರಿಮಳ ; ಸುವಾಸನೆ : ಕತ್ತುರಿಗಂಪು ಸಿರಿಕಂಡದ ತಿಳಿಗಂಪು ಪೊಂಬಾಳೆ ಕರ್ಪುರಗಂಪುಗಳೆ ಸುಯ್ಯೊಳುಣ್ಮುವ ಬೆಮರ್ಗಳೊಳ್ ಮೆಯ್ಗಳೊಳ್ ಸಲೆ ಸಾಮಜಗಮನೆಯರ್ (ಜೆಲಪು. ೩೭-೪೭). 'ನಱುಗಂಪು' ಪರಾ. [ತಿಳಿ$_2$ + ಕಂಪು]

ತಿಳಿಗಚ್ಚು (ನಾ). ತೆಳ್ಳಗಿರುವ ಗಾರೆ ; ಗಾರೆಯ ತಿಳಿ : "ಗೋಡೆಯ ಮೇಲ್ಪೈಗೆ ಬಳಿಯುವುದಕ್ಕೂ ಶಿಲ್ಪಾಲಂಕಾರ ಕೆಲಸಕ್ಕೂ ಉಪಯೋಗಿಸುವ ಹಲವು ಬಗೆಯ ಗಾರೆ ಅಥವಾ ಸಿಮೆಂಟು : ತಿಳಿಗಚ್ಚು" (Stucco. ಇಂಗ್ಲಿ). [ತಿಳಿ$_2$ + ಗಚ್ಚು$_2$]

ತಿಳಿಗಣ್ಣು (ನಾ). ತಿಳಿವಳಿಕೆಯಿಂದ ಕೂಡಿರುವ ದೃಷ್ಟಿ ; ಜ್ಞಾನದೃಷ್ಟಿ : ತಿಳಿಗಣ್ಣಿಗೆ ಎಲ್ಲ ಜೀವನವು ರಸಮಯವಾದ ನಾಟಕವಾಗಿ ಅನುಭವಕ್ಕೆ ಬರುವದು (ಸಾಹಿವಿ. ೧೪೪); ತಿಳಿಗಣ್ಣಿನಿಂದ ಎಲ್ಲವನ್ನು ತಿಳಿದವರಾದ ಶರಣರು (ಶರಚ. ೬೫೯). [ತಿಳಿ$_2$ + ಕಣ್ಣು (< ಕಣ್)]

ತಿಳಿಗನ್ನಡ (ನಾ). ಶುದ್ಧವಾದ ಕನ್ನಡ: ಇವರು 'ಜ್ಯೋತಿಶಾಸ್ತ್ರ', 'ಪ್ರಾಕೃತಿಕ ಭೂಗೋಲ', 'ಉಪನ್ಯಾಸವಿದ್ಯೆ' ಎಂಬ ಶಾಸ್ತ್ರೀಯಗ್ರಂಥಗಳನ್ನು ತಿಳಿಗನ್ನಡದಲ್ಲಿ ಬರೆದರು (ಕಗದ್ಯ. II. ೧೨); ತಿಳಿಗನ್ನಡದ ನುಡಿಗಳಲ್ಲಿಯೇ ವಿರಚಿತವಾದ ಪದ್ಯಗಳು ಓದಲು ಇಂಪಾಗಿವೆ (ಕಾಲೂರ. ೦೬ ಮುನ್ನುಡಿ). [ತಿಳಿ$_2$ + ಕನ್ನಡ$_1$]

ತಿಳಿಗಳ್ (ನಾ). ಚೊಕ್ಕವಾದ ಮದ್ಯ ; ಬೆರಕೆಯಿಲ್ಲದ ಹೆಂಡ.—ಕಳ್ಳು : ತಿಳಿಗಳ್ಳಿಜಿಯಲ್ ಕುಡಿಯಳ್ಳಿ ಪಿಟ್ಲಿಲಾಗಳೆ ಕುಡಿದು (ದಶಕು. ೮-೩೦೩). [ತಿಳಿ$_2$ + ಕಳ್$_2$]

ತಿಳಿಗಾಸು (ಕ್ರಿ). ಶುದ್ಧವಾಗುವವರೆಗೆ ಕಾಯಿಸು ; ತಿಳಿಯಾಗುವಂತೆ ಕಾಯಿಸು : ಕಾರ್ಬೊನ್ನ ತಿಳಿಗಾಸುತ್ತ ಜಲದೊಳಿದ್ದುವ ತೆರದಿ ಚುಯಿ ಚರ್ಮಿಂದನುತೆ (ನವಮೋ. ೬-೫೯). [ತಿಳಿ$_2$ + ಕಾಸು$_1$]

ತಿಳಿಗೇಡಿ (ನಾ). ಅರಿವಿಲ್ಲದವನು ; ಬುದ್ಧಿಗೇಡಿ ; ಅವಿವೇಕಿ : ಜಡರು ನಿನ್ನವೊಲಾರು ಪೊಡವಿಲಿ ಗೆಡಹದಿರು ತಿಳಿಗೇಡಿ ನೀ ಹೋಗೆಂದ ದಶಕಂಠ (ಕಾತಿರಾ. ೨೪-೨೯) ; ತಿಳಿಗೇಡಿ ಕಂದನು ಕೇಳದಲೆ ಬೆಟ್ಟಿದ ಕೊಳ್ಳ ಕಮರಿಯಡೆ ಹೊರಳಿದನು (ಸಿದ್ಧಪು. ೫-೭೦) ; ಈ ಜನರು ಎಂಥಾ ತಿಳಿಗೇಡಿಗಳು (ಮುಂಬಯಿ. ೪-೨೦). [ತಿಳಿ$_2$ + ಕೇಡಿ$_1$]

ತಿಳಿಗೇಡಿತನ (ನಾ). ಮೂರ್ಖತನ ; ಅವಿವೇಕ : ಕೈಯಲ್ಲಿ ಹಿಡಿಯ ಬಹುದಾದುದಕ್ಕೆ ತಲೆಯನ್ನು ಕೊಡುವುದು ತಿಳಿಗೇಡಿತನ (ದಾಲುತ್ತ. ೦೪); ಪತಂಗವು ತಿಳಿಗೇಡಿತನದಿಂದಲೇ ದೀಪದ ಮೇಲೆ ಬಿದ್ದು ಸುಟ್ಟುಕೊಂಡು ಸಾಯುವುದು (ಬ್ರಹ್ಮಜೀ. ೭೦). [ತಿಳಿಗೇಡಿ + – ತನ]

ತಿಳಿಗೈ (ಕ್ರಿ). ಚೊಕ್ಕಗೊಳಿಸು ; ಶುದ್ಧಗೊಳಿಸು ; ಸ್ವಚ್ಛಮಾಡು: ಅನಂತು ಅದನ್ನು ಮರಳಿ ತಿಳಿಗೈಯಲು ಎಷ್ಟೊಂದು ಯತ್ನಿಸಿದರೂ ಸಾಧ್ಯವಾಗಲಿಲ್ಲ (ಒಡ್ಡಿಆ. ೧೦೩). [ತಿಳಿ$_2$ + ಗೈ (< ಕೆಯ್$_1$)]

ತಿಳಿಗೊಳ (ನಾ). ಚೊಕ್ಕವಾದ ನೀರುಳ್ಳ ಸರೋವರ ; ಶುದ್ಧವಾದ ನೀರಿನ ಕೊಳ : ತಿಳಿಗೊಳನಂ ಪೊಲ್ತಿರ್ದುಂ ತಿಳಿಯದಿದೇನೆಂಬುದುಂ (ಕವಿಗಾ. ೦-೮೯) ; ಸುಭದ್ರೆ ... ಅಲರಿಂ ತುಂಬಿಗಳಿಂ ತಣ್ಣೆಲರಿಂ ತುಂಬಿದ ತಿಳಿಗೊಳದಿನೆಸೆವ ಬನಮಂ ಪೊಕ್ಕಳ್ (ಪಂಪಭಾ. ೫-೨) ; ತಿಳಿದ ತಿಳಿಗೊಳದ ತಳಿತ ತಾವರೆಯರಳ ತಂಡುಲದ ರುಚಿಯ ಕಳಹಂಸೆ ಬಯಸುವಂತೆ (ಅದವ. ೧೬–೩೬) ; ತೊಳತೊಳಗಿ ಹೊಳೆವ ತಿಳಿಗೊಳನ ತಡಿವಿಡಿದು (ಜಡಭಾ. ೩-೪೪) ; ಲಲಿತ ತನುಕಾಂತಿಗಳ ಮೊಗೆದರು ತಿಳಿಗೊಳನ ಜಲವೆಂದು (ಕುವಾಳ. ೦೦-೨೮) ; ತಿಳಿಗೊಳಂಗಳೊಳಲರ್ದ ಪೊಚ್ಚ ಪೊಂದಾವರೆ (ಚೈಮಿಧಾ. ೩-೮); ಸ್ಫಟಿಕಶಿಲೆಗಳಿಂ ಕಟ್ಟರುವ ಮೆಟ್ಟಿಲೆಗಳನ್ನೊಳಕೊಂಡ ತಿಳಿಗೊಳಂ (ಸೌಗಂಧಿ. ೪-೦೭). [ತಿಳಿ$_2$ + ಕೊಳ$_2$]

ತಿಳಿಗೊಳು, ತಿಳಿಗೊಳ್ಳು (ಕ್ರಿ). ೧. ಸ್ವಚ್ಛವಾಗು ; ಶುದ್ಧವಾಗು ; ತಿಳಿಯಾಗು : ಮಳೆಗಾಲದೊಳು ನೀರು ಕದಡಿತೆಂದಳಲೇಕೆ ತಿಳಿಗೊಳುವುದು ನೀರು ಮುಂದೆ (ಇಂಡಾಪ. ೨೦೦-೮೮). **ತಿಳಿಗೊಳ್ಳು** : ೨. ಅರಿತುಕೊಳ್ಳು ; ಅರ್ಥಮಾಡಿಕೊಳ್ಳು : ತನ್ನನೆ ತಾನೇ ತಿಳಿಗೊಂಡುಂತೆ ಶಿವನ ಶಕ್ತಿಯೇ ಎಳಿಗೊಂಡಂತೆ (ಸೂರ್ಯಪಾ. ೩೨-೯). [ತಿಳಿ$_2$ + ಕೊಳು (<ಕೊಳ್$_1$)]

ತಿಳಿಗೊಳ್ಳು 'ತಿಳಿಗೊಳು' ನೋ.

ತಿಳಿಜಲ (ನಾ). ಶುಚಿಯಾದ ನೀರು : ತೆರೆ ಪರಂಪರೆ ತೊರೆದು ಹರಿಯುವ ಹೊನಲಿಗೆಲ್ಲಿದೆ ಜೀವನ? ನೊರೆಯ ಸರಿಸುತ ಬದಿಗೆ ತಿಳಿಜಲವೀಂಟೆ ಸ್ಫೂರ್ತಿಯ ಕೇತನ (ಸಂಮು. ೫೩-೦೮). [ತಿಳಿ$_2$ + ಜಲ$_2$]

ತಿಳಿಜೊನ್ನ (ನಾ). ಸ್ವಚ್ಛವಾದ ಬೆಳುದಿಂಗಳು : ಸಡಗರದಿಂ ಪಗಲೆಂಬಂ ತೊಪ್ಪಂಬಡೆದಿಳೆಯಂ ತೀವಿತು ತಿಳಿಜೊನ್ನಂ (ಜಯಕಾ. ೦೪-೦೫); ತಿಳಿಜೊನ್ನದ ನಟ್ಟನಡುವೆ ಸಂಪೂರ್ಣೇಂದು ಥಳಥಳಿಸುವ ಮೂಳ್ಕಿಯೊಪ್ಪ (ಕುಡಾಸಾಂ. ೫-೨೦) ; ತನ್ನ ಮಹಾಮನೆಯ ಪ್ರಾಂಗಣದಲ್ಲಿ ಮಂಡಿಸಿ ಹುಣ್ಣಿಮೆಯ ತಿಳಿಜೊನ್ನದ ಸವಿಸೋಂಕಿನ ಸುಖವನ್ನು ಅರ್ಧನಾರೀಶ್ವರನಿಗೆ ಅರ್ಪಿಸುತ್ತಿದ್ದಾರೆ (ತುಂಗಭ. ೮೬). [ತಿಳಿ$_2$ + ಜೊನ್ನ]

ತಿಳಿತಳ (ನಾ). ತಂಪು : ಈ ಮಂತ್ರಮಾಸುಚ್ಚರಿಸುತ್ತೆ ಮುಚ್ಚಿದ ಕಣ್ ಚಂದ್ರಕರಸ್ಪರ್ಶದಿಂದೆ ತಿಳಿತಳಮಪ್ಪುದುಂ (ಚಳವಿ. ೬-೩೦೩ ವ). [?]

ತಿಳಿದುಪ್ಪ (ನಾ). ಕರಗಿದ ತುಪ್ಪ ; ದ್ರವವಾದ ತುಪ್ಪ : ಶ್ರಾವಕರಪ್ಪ ವರ್ನರಿದು ನಿಶ್ಚಯದಿಂ ಮುನಿಗಳ್ಗೆ ಕೂರ್ತು ನಾನಾವಿಧ ಭಕ್ಷ್ಯದಿಂ ಪಲವು ಬಾಡುಗಳಿಂ ತಿಳಿದುಪ್ಪದಿಂ ಸಮಂತಾವಗಮಿಸಿರೊಳ್ಕುಣಿಸಂ (ಧರ್ಮಾಮೃ. ೪-೦೦೦) ; ಗಟ್ಟಿದುಪ್ಪಕ್ಕೆ ತಿಳಿದುಪ್ಪಕ್ಕೆ ಭೇದವುಂಟೇ ಅಯ್ಯ (ಮಹಾದೇ.ಬ. ೭೩-೦೫೦) : ಎಳೆಮಿಂಚನೆಜ್ಜೆವಂತೆ ತಿಳಿದುಪ್ಪವೆಜ್ಜೆದಳು (ಧರಚ. ೦೦-೩೯) : ಅವರೆ ತಂದವರೆಟ್ಟು ಅವರಿಕ್ಕಿ ಇವರುಣಲು ಅವರೆ ತಿಳಿದುಪ್ಪವೆಜ್ಜೆದಿಹರೆ ಇವರಿಂಗೆ ಅವರೆ ತಾಯ್ತಂದೆ (ಸರ್ವಜ್ಞ. ೬೦೦). [ತಿಳಿ$_2$ + ತುಪ್ಪ]

ತಿಳಿನಗೆ (ನಾ). ಶುಭ್ರವಾದ ನಗೆ ; ಕಪಟವಿಲ್ಲದ ನಗೆ : ಮುಖದಲ್ಲಿ ಯಾವಾಗಲೂ ತೇಲಾಡುತ್ತಿದ್ದ ತಿಳಿನಗೆಯು ಜಾರಿ ಮ್ಲಾನತೆಯು ನೆಲಸಿತ್ತು (ಚಿತಸ. ೦೬೦). [ತಿಳಿ$_2$ + ನಗೆ]

ತಿಳಿನಿದ್ರೆ (ನಾ). ತೆಳುವಾದ ನಿದ್ರೆ ; ಗಾಢವಲ್ಲದ ನಿದ್ರೆ ; ಲಘುವಾದ ನಿದ್ರೆ : (ಕ). [ತಿಳಿ$_2$ + ನಿದ್ರೆ]

ತಿಳಿನೀರ್, ತಿಳಿನೀರು (ನಾ). ೧. = ತಿಳಿಜಲ : ಆ ಮರಕತವರ್ಣಂ ಕರಿಕತ ಪರಿಘದಿನೊಡನೊಡನೆ ತುಳುಕಿದಂ ತಿಳಿನೀರಂ (ಆದಿಪು. ೦೪-೦೦೭) : ತಿಳಿನೀರ ತುಂತುರ್ವನಿಗಳಂ ಪೊರೆದಳವಾಟಿಯ ಸುಟಿಯ ಬಿಜ್ಜಣಗೆ ಗಳನಡಿಗಡಿಗೆ ಬೀಸಿಯುಂ (ಕಾದಂಪೂ. ೦೫೫) ; ಅಂತು ರಾಗರಸದಿಂ ಪೊಂಗಿ ತಡೆದು ತಿಳಿನೀರನುಂಡುದೆಂಬ ನಾಟ್ನುಡಿಯಂತೆ (ಧರ್ಮಾಮೃ. ೬-೮೨) : ತಿಳಿನೀರಿಂದಂ ತೆಂಗಂ ಬಳೆಯಿಸೆ ನದನದಿಯಿನೊಸರ್ವ ತಿಳಿನೀರಿಂದಂ ಬಳೆಯಿಸೆ ತೆಂಗೊಪ್ಪಿದವವಿರಳಮೊಂದಱ ಕಡವನೊಂದು ನೀಗುವ ತೆಱದಿಂ (ಹಾರ್ಕೃಪು. ೯-೦೦). **ತಿಳಿನೀರು** : ೧. ಪೊಜೆವಾಱ ಪುಳಿನದ ತನುಚ್ಛವಿಯ ತಿಳಿನೀರ ಮೆಜೆವ ಮಧ್ಯದ ಮೃಣಾಳದ ಬಗೆಯ ಭೇದಮಂ ಕುಡುಪಿಡು ವೊಡರಿದೆನಲ್ಸರಸಿಯೊಳ್ಕರಳಿಯರ ಜಲಕೇಳಿ ಕಣ್ಗೆಸೆದುದು (ಕೃಮಿಭಾ. ೩೦-೬) ; ಕೆಂದಾವರೆಯ ಪೊಟ್ಟಣದೊಳು ತಿಳಿನೀರ ತಂದು ರಂಗೇಶನ ಮೇಲೆ . . . ಬಂಧುರದಿಂದ ಸೂಸಿದರು (ಕಂನವಿ. ೨೬–೦೨೦) : ತಿಳಿನೀರುಗಳಿಂದ ಕರಚರಣಂಗಳಂ ತೊಳೆಮು (ಸೌಗಂಧಿ. ೦೯೫-೦೯) : ತೆಂಗಿನಕಾಯ ತಿಳಿನೀರ ತಕ್ಕೊಂಡು ಬಂಗಾರ ಮಾರಿ ತೊಳದೇನ (ಗರಚ. ೬೬). ೨. ಮೊಸರು, ತುಪ್ಪ, ಗಂಜಿ ಮುಂತಾದುವುಗಳ ಮೇಲಿನ ತಿಳಿ.—ಮಂದವಲ್ಲದ ಭಾಗ: ಅಂಬಲಿಯ ತಿಳಿನೀರಿನಲ್ಲಿ ಅರಿಸಿನವನ್ನರೆದು ಪಾನ ಮಾಡಿಸಲು ಶೀತಜ್ವರ ಕೆಡುವುದು (ಸಳವ್ಯ. ೬೩) : ಮಸ್ತು=ಮೊಸರಿನ ಮೇಲಿನ ತಿಳಿನೀರು (ಗಂಗಾಮ. ೫೬೨). [ತಿಳಿ$_2$ + ನೀರ್$_1$]

ತಿಳಿನೀರು 'ತಿಳಿನೀರ್' ನೋ.

ತಿಳಿನೀಲಿ (ನಾ). ತೆಳುವಾದ ನೀಲಿಬಣ್ಣ: ತಿಳಿನೀಲಿ ಬಾನೊಳು ಬೆಳ್ಳನೆ ಮುಗಿಲೊಂದು ಮೆಲ್ಲನೆ ತೇಲುತಲಿಹುದು (ಇಂಡಾಪ. ೯೬–೭೦).

[ತಿಳಿ$_2$ + ನೀಲಿ]

ತಿಳನುಡಿ (ನಾ). ಸ್ವಚ್ಛವಾದ ಭಾಷೆ ; ಸರಳವಾದ ನುಡಿ : ಕನ್ನಡ ಶಬ್ದಸಂಪತ್ತನ್ನುಳಿಸಿ ಕನ್ನಡಿಗರ ತಿಳನುಡಿಯಾಗಿ ಬೆಳೆಯಿಸಲು ಈ ಕೃತಿಯು ಸಹಾಯಕವಾಗಬಹುದು (ಕಾಂಒರ. ೦೦ ಮುನ್ನುಡಿ). [ತಿಳಿ$_2$+ನುಡಿ$_1$]

ತಿಳಿಪು$_1$, ತಿಳಿಹು, ತಿಳುಪು$_1$, ತಿಳುಹು$_1$ (ಕ್ರಿ). ೧. ಶುಭ್ರವಾಗು ; ತಿಳಿಯಾಗು : ತಿಳಿಪುವೊಡೆ ಮೊಗ್ಗೆ ಮುದ್ದುಂ ಕಳಂಕಮುಂ ತಿಳಿಯದಿರ್ಪ ದೆಸೆಗಳುಮಂ ನೀರ್ಗಳುಮಂ ತಿಳಿಪಿದ ಸರಮುಂ ತಿಳಿಪಿದುದೆ ಕಳಂಕಗತಿಯ ನವ್ಯತದ್ಯುತಿಯಂ (ಲೀಲಾವ. ೦೪-೫೧). ೨. ಸಮಾಧಾನ ಪಡಿಸು ; ಸಾಂತ್ವನಗೊಳಿಸು ; ಶಾಂತಗೊಳಿಸು : "ತಿಳಿಪು–ಕ್ರೋಧೋತ್ಸರ್ಜನೇ (ಕೋಪವನ್ನು ಬಿಡಿಸು)" (ಶಮಧಾ) ; ತಿಳಿಪಲಡಿಗೆಱಗಿದೋಪನ ತಳಂಗಳಾ ತೀಟದಿಂ ಪದಂಗಳೊಳೊಗೆದಾ ಪುಳಕಚಯಂಗಳ್ ಕಳೆದುವು ಮುಳಿಸಂ (ಕವಿಕಾ. ೩-೧೦೯) ; ಪುರುಡಿಸಿ ಮುಳಿದಿರ್ದ ಮಹಾದೇವಿಯಂ ತಿಳಿಪಲೆಂದು ಕಾಲ್ಗೆಱಗೆ (ಕಾವುಂಪು. ೮೩-೦೩); ವನಿತೆಯರೊಲವಿನ ಕಲಹದ ಮುನಿಸುಗಳಂ ತಿಳಿಪುವೆಡೆಯೊಳತಿಚತುರಂ (ಕಾದಂಪು. ೫೬) ; ಇಂತಪ್ಪವಸ್ಥೆಯಿಂದಿವಳಿಂ ತಿರೆಯುಂ ದುರ್ವಿದಗ್ಧವೆನ್ನ ಮನಂ ಮತ್ತೆಂತುಂ ನಂಬಿದುದಿಲ್ಲಾನಿಂ ತಿಳಿವೆಂ [ಪೆಂ] ನಿವುಣವಚನದಿಂ ಕಾಮಿನಿಯುಂ (ಕಾದಂಉ. ೨೪೩) ; ಮುಕುಂದಂ ತದಿಂದುವದನೆಯಂ ಪೆಱವೊಳ್ನುಡಿಗಳಿಂ ತಿಳಿಪಿ (ನೇಮಿಪು. ೯-೩೮ವ) ; ಬಱಿದೆ ಮುಳಿದು ತಿಳಿಪೆ ತಿಳಿದು ನೆರೆವ ಬೇಡವೆಂದಿರಿಂ (ಕಬ್ಬಿಕಾ. ೩೦೮) ; ನುಡಿಯಲಿಲ್ಲದಹಂಗೆ ಹೆದುಳಿಸಿ ಕಡೆಯೊಳಾಂ ತಿಳಿಪಿ [ಪಾಣಾಂ-ತಿಳುಹಿ]ದಪೆನೆಲೆ ನೀ ನಿದ್ರಿಗೆಯ್ವುತಿರು (ಲಸಪು. ೪೭-೩೨) ; ಮುನಿದೊಡೆ ಕಡುತವಕದಿಂ ತಿಳಿಪುವಂ (ಚಿಬಪು. ೧೦-೩೯). ೩. ಸಂತುಷ್ಟಿಪಡಿಸು ; ತೃಪ್ತಿಗೊಳಿಸು ; ಮುದಗೊಳಿಸು : "ಪ್ರಸಾದಃ, ಪ್ರಣಯಃ– ಈ ೨ ತಿಳಿ(ಪು)ಹುವುದು" (ಹಲಾಯು. ೧೩೭-೮೯) ; ಜಲನಿಧಿಯಂ ಮುಂಗಿಲ್ವನಿಗಳಿಂದವಮಗುರ್ವಿಸುವಂತೆ ನಿಮ್ಮನಾಂ ತಿಳಿಪಿದಪೆ ಗಡ (ಕಾದಂಉ. ೪೨೬) ; ಅಗಜೆಯಂ ತಿಳಿಪಿದಮರಗುಂಡದ ಮಲ್ಲಿನಾಥ ಶರಣು (ಧಾವಚಂ. ೨-೦). ೪. ತಿಳಿಸು ; ಸ್ಪಷ್ಟಪಡಿಸು ; ವಿಶದೀಕರಿಸು : ಅವರಂ ತಿಳಿಪಲಾಱದೆ ಮತ್ತೆ ಪೂರ್ವವಿದೇಹಕ್ಕೆ ಪೋಗಿ ... ಭಟಾರರ್ಗೆ ಪೇಟ್ದು (ಪಡ್ಡಾರಾ. ೦೦೪-೩೦) ; ಉಳ್ಕೊಂದುಗಳೊಳಗೆನಿತೆಜ್ಜೆವುಳ್ಕರ್ಗಂ ತಿಳಿವಲರಿಯದೆನಿಪೆಡೆಗಳುಮಂ ತೆಳ್ಕಗಿರೆ ತಿಳಿಪುಗುಂ (ಪಂಪಭಾ. ೨-೩೫); ಸ್ಥಾವರಾದ್ಯನ್ಯಲಿಂಗದ ಭಜನೆಯ ಮುನ್ನಮೇ ಬಿಡಿಸಿ ಷಟ್ಸ್ಥಳಮಾರ್ಗಮಂ ತಿಳಿಪಿ (ಚಿಬಪು.೧-೦೩). ೫. ಕಲಿಸು ; ಹೇಳಿಕೊಡು ; ಶಿಕ್ಷಣಕ್ಕೊಳಪಡಿಸು : ಇವರಂ ನೀತಿವಿದರಪ್ಪಂತು ತಿಳಿಪುವಂದು ಮುದುಗುದುರೆಯಂ ತಿರ್ದುವಂತಕ್ಕುಂ (ಪಂಚತಂ. ೧೭-೧೦); ಇದು ಶಬ್ದಾಗಮನಿರ್ಣಯಂ . . . ಇಂತಿದು ಮರ್ಮಂ ಕಲಿಗಾಗಮಾನ್ವಯಮಿದೆಂಬಾಮ್ನಾಯದಿಂ ದಾರಕ ಶ್ರಿದಶ ಪ್ರಶ್ನಕರಾಗೆ ತಾಂ ತಿಳಿವುವಂ ತ್ರಿಜ್ಞಾನರತ್ನಾಕರಂ (ಅನಂಪು. ೬-೦೦) ; ಮತ್ಸ್ಯಭೂವರ ಕುಮಾರಿಗಂ ತಿಳಿವುತಿರ್ದನು ನೃತ್ಯಮನಾ ತೀರೀಟಿ (ಪಂಚಕ. ೬೯-೦೪). ೬. ಜ್ಞಾಪಕಮಾಡು ; ನೆನಪಿಗೆ ತರು : "ಜ್ಞಾಪಯತಿ=ತಿಳಿಪಿದಪಂ" (ಶಾಶಕ್ಕ. ೦೪೨). **ತಿಳಿಹು** : ೪. ಮಂಗಳೋದಯಲಿಂಗಕರತಳಸಂಗತ ಸ್ಥಿತಿಯಂ ತಿಳಿಹಿಯಾಸಂಗದುಃಪ್ರಾಪಂಚಿಕಾಶಾಬಂಧವಂ ಪಜ್ಜುದು (ಲಸಪು. ೪೯-೩೩). **ತಿಳುಪು$_1$** : ೨. ಕಿನಿಸಿ ಕಡುಪಿನಿಂದಂ ನದುಗಿದವುದು ತಿಳಿಯದೆಂತುಮಾರ್ತಿಳು [ಪಾಣಾಂ. ೪] ಪಿದೊಡಂ (ಕಾ ದ ಂ ಉ. ೬೬) ; ಅಂಗಜಾತನ ಮಡುಹಿದನೆಂದು ಪಾರ್ವತಿ ಸಂಗಕೇಱಿದಿರಲು ತಿಳುಪಿ ಹೊಂಗೊಡದೊಳು ನೀರ ಹೊತ್ತ ಧೂರ್ಜಟಿಯಂತೆ ತೇಂಗಾಯ ಮರ ಗಳೊಪ್ಪಿದುವು (ಮೋಹತ. ೪೪-೪೨). ೪. ನಿರ್ಮಳದ ಧರ್ಮಸ್ಥಿರಹಸ್ಯವ ತಿಳುಪಿದವರಾರೆನುತ ತಲೆದೂಗಿದನು ಮುರವೈರಿ (ಕುವ್ಯಾಕ. ೦೭-೦೨). **ತಿಳುಹು$_1$** : ೨. ದೇವಪ್ರಸರವನು ತಿಳುಹಿದನು ಕಾರುಣ್ಯದಲಿ ಕಾಮಾರಿ (ಕುವ್ಯಾಳ. ೬-೩೦) : ಕುಳಿರುವೆಟ್ಟಿನ ಕುವರಿಯ ಶ್ರೀಪದಯುಗನಿಳನ ಸುಗುಂಧವಿದ್ದೆಡಗೆ ಅಳಿ ಬಂದೆಱಗುವಂತೆಱಗಲ್ಕೆ ತೆಗೆದಪ್ಪಿ ತಿಳುಹಿದಳವಳ ದುಕ್ಕವನು (ಮೋಹತ. ೯-೪೬). ೩. ಲಲನೆಯಂ ... ತಿಳುಹಿ ಮಱಹಾದಲ್ಲಿ ಜಾಣ್ಕೆಯನಲರಿಸುತ್ತೊಯ್ಯಾರದಲಿ ಸುಳಿಸುಳಿದು (ಲಸಪು. ೪೨-೦೬) ; ವೇದ ವ್ಯಾಸದೇವರು ... ಕಾಲಜ್ಞಾನವಾದುದನು ತಿಳುಹಲೋಸುಗ ತಮ್ಮಯಾಶ್ರಮ ನೆಲೆಯ ಠಾವಿಂದಾಗ ಬಂದರು (ಸಂಭಕ. ೩-೨) : ತಿಳುಹಿ ಹೋದರು ಮುನಿಗಳೀತನ ತಿಳಿವು ತೊಟ್ಟುದು ಪುಱಿವೆಯನು (ಕುವ್ಯಾರ್ಜು.ಗೀ. ೧೪-೬೪).

[ತಿಳಿ$_1$ + – ಪು$_1$]

ತಿಳಿಪು$_2$, ತಿಳುಪು$_2$, ತಿಳುಹು$_2$ (ನಾ). ೧. ಗಟ್ಟಿಯಲ್ಲದುದು ; ನೀರಾದುದು : ತಿಳಿ [ಪಾಣಾಂ. ೪೫] ಪಿನಂಬಲಕುಪ್ಪ ನೀರುಳ್ಳಿ ಹಸಿಯಲ್ಲಗಳನು ಸೋದಿಸಿ ಹಾಕಿ (ಸೂಪಶಾ. ೩-೩೩). **ತಿಳುಪು$_2$** : ೨. ತೆಳುವು ; ತೆಳುವಾದುದು. 'ತಿಳಂಪೇಱು' ಪರಾ. **ತಿಳುಹು$_2$** : ೩. ಸ್ವಚ್ಛತೆ ; ಶುಚಿತ್ವ : ನೀರ ದಾರಿಯಲ್ಲಿ ನೀರ ತಿಳುಹ ನೋಡಿ (ಶಿವಗೀ. ೧೪೬-೬೪). ೪. ಜ್ಞಾನ ; ತಿಳಿವಳಿಕೆ : ನಡವಳಿಯಲಧಮನೆ ನೀನು ಶಿವಪೂಜಾಪ್ರಸಿದ್ಧನಲ ತಿಳುಹಿ [ಪಾಣಾಂ. ತಿಳಿವಿ]ನಲಿ ಬಱಿಡನೆ ಬಹುಶ್ರುತಿಗಳು ಮುಟ್ಟೋದ್ಗತ ನಿನಗೆ (ತೊರಠಾ. ೬-೨-೩೪). [<ತಿಳಿಪು$_1$]

ತಿಳಿಬಗೆ (ನಾ). ಶುದ್ಧವಾದ ಅಂತಃಕರಣ ; ನಿಷ್ಕಪಟವಾದ ಮನಸ್ಸು : ಕಾವ ತಿಳಿಬಗೆಯರ್ಪ ನಾಡ ಹೆಣ್ಣಿಲ್ಲಿ (ಕಾಂಒರ. ೨೭-೦೫).

[ತಿಳಿ$_2$ + ಬಗೆ$_3$]

ತಿಳಿಬಣ್ಣ (ನಾ). ತೆಳುವಾದ ಬಣ್ಣ ; ನಸುಬಣ್ಣ : "ಹೂಬಣ್ಣತಿಳಿಬಣ್ಣ" (ಗಂಗಾಮ. ೩೫೧). [ತಿಳಿ$_2$ + ಬಣ್ಣ]

ತಿಳಿಬೆಳಕು ' ತಿಳಿವೆಳಗು ' ನೋ.

ತಿಳಿಬೆಳಗು ' ತಿಳಿವೆಳಗು ' ನೋ.

ತಿಳಿಬೆಳುದಿಂಗಳು (ನಾ). ಶುಭ್ರವಾದ ಬೆಳುದಿಂಗಳು ; ಶುಭ್ರ ಜ್ಯೋತ್ಸ್ನೆ : ನೀನು ಚಿಲುಮೆಯರರಸಿ ತಿಳಿಬೆಳುದಿಂಗಳ ತಿರುಳ ಪುತ್ಥಳಿ ! (ಕುಂಗಶ. ೮೫). [ತಿಳಿ$_2$ + ಬೆಳುದಿಂಗಳು (<ಬೆಳ್ದಿಂಗಳ್)]

ತಿಳಿಮಜ್ಜಿಗೆ (ನಾ). ನೀರಾದ ಮಜ್ಜಿಗೆ : ಪಾತ್ರೆಯಲ್ಲಿ ತಿಳಿಮಜ್ಜಿಗೆ ಇದೆ (ಕೂಂ). [ತಿಳಿ$_2$ + ಮಜ್ಜಿಗೆ]

ತಿಳಿಮಣ್ಣು (ನಾ). ಸೂಸಂಮಣ್ಣು ; ರೇವೆಮಣ್ಣು ; ಮೆಂಕ್ಕಲು : ಜಗವೆಲ್ಲ ತೊಯ್ದು ಹೋಗಿದೆ, ತಿಳಿಮಣ್ಣು ತೇಲಿಹೋಗಿದೆ (ನಂಮು. ೦೬-೨೩).

[ತಿಳಿ$_2$ + ಮಣ್ಣು (< ಮಣ್)]

ತಿಳಿಮುತ್ತು (ನಾ). ಶುಭ್ರವಾದ ಮುತ್ತು ; ಬೊಕ್ಕವಾದ ಮುತ್ತು ತಳತಳಿಪ ವಜ್ರಗಳ ಗಣಗಳಿಂದೆಸೆವ ತಿಳಿಮುತ್ತುಗಳ ನಗೆಯ ಬೆಳಕಿಂದ ಹೊಳೆವ (ಕಎಪು. ೪೭-೫). [ತಿಳಿ$_2$ + ಮುತ್ತು$_5$]

ತಿಳಿಮೆ (ನಾ). ೧. ಸ್ವಚ್ಛವಾಗಿರುವಿಕೆ ; ಶುದ್ಧವಾಗಿರುವಿಕೆ : ಮಣಿಗೆಯೊಳು ಮದವಳಿದು ಋಣಗಳಿಲ್ಲವ ನೆನೆದು ತಿಳಿಮೆಯೊಳು ಹರಿವೆನ್ನ ಚೇತನದ ಜತೆಗೆ (ಮಲಿದೇ. ೫೧-೪). ೨. ತಿಳಿವಳಿಕೆ ; ಅರಿವು ; ಜ್ಞಾನ : ಕ್ಷಾಂತಿಯೇಂ ನಿನ್ನ ಕಡುಸಂತಸದ ತಿಳಿಮೆಗಿನ್ನೆಂತು ನಿನ್ನಯ ಬಳಿಗೆ ತಸ್ಸ ನೆಳಲಂ ಬಿಂತೆ ಸಾರ್ಚಿತು (ಗಿಳಿವಿ. ೬-೯೨). [ತಿಳಿ$_2$ + – ಮೆ$_1$]

ತಿಳಿಮೆಗೊಳ್ಳು (ಕ್ರಿ). ಸ್ವಚ್ಛವಾಗು ; ಶುದ್ಧವಾಗು : ಆ ಕಾರಣದಿಂದಲೇ ವಿಷಯೋದ್ಭವವಾದ ಜುಗುಪ್ಸೆಯೂ ಕಾವ್ಯದಲ್ಲಿ ತಿಳಿಮೆಗೊಂಡು ಭೋಗ್ಯ ರಸ ಪದವಿಗೇರುತ್ತದೆ (ಕಾವ್ಯಳ. ೩).

[ತಿಳಿಮೆ + ಕೊಳ್ಳು$_1$ (< ಕೊಳ್$_1$)]

ತಿಳಿಮೆಯಡಿಕೆ (ನಾ). ಜ್ಞಾನದ ದಾಹ ; ಅರಿವಿನ ಆಸೆ : ಆ ಕ್ಷಚಿದ್ದರ್ಶನ ದೊಳಹುದೆಲ್ಲ ಚೇತನಕು ರಸದ ನೀರಡಿಕೆ ಅದರಿನೀ ದುಃಖಿಶಮದೈವ ನಮನಂ, ಅದರಿನೀ ತಿಳಿಮೆಯಡಿಕೆ (ಮಲಿದೇ. ೨೩-೧೦). 'ನೀರಡಿಕೆ$_1$' ಪರಾ. [< ತಿಳಿಮೆ]

ತಿಳಿಯಿಡು (ಕ್ರಿ). ಶುದ್ಧಗೊಳಿಸು ; ಹಸನುಗೊಳಿಸು : ಪೂಗೊಳನಂ ತಿಳಿಯಿಟ್ಟು ನೀರ್ವಕ್ಕಿಗಳಂ ನೆಲೆವೆರ್ಚಿಸುತ್ತುಂ (ಗಿರಿಕ. ೭-೮೨ ಪ).
[ತಿಳಿ$_2$ + ಇಡು$_1$]

ತಿಳಿಯೆಣ್ಣೆ (ನಾ). ಅಪ್ಪಟವಾದ ಎಣ್ಣೆ ; ಶುದ್ಧವಾದ ಎಣ್ಣೆ : ನೇಱೆಲ ಪಣ್ಣಂ ತಿಳಿಯೆಣ್ಣೆಯೊಳ್ ಬಯಸಿ ತೊಯ್ದಂತಪ್ಪ ನುಣ್ಗಪ್ಪುರ್ (ಕಾವ್ಯಾವ. ೩೦೬). [ತಿಳಿ$_2$ + ಎಣ್ಣೆ]

ತಿಳಿರಕುತ (ನಾ). ಶುದ್ಧವಾದ ರಕ್ತ ; ಹೊಸರಕ್ತ : ಎಲೆ ಮರುಳೆ ನಿನ್ನೊಡಲ ಸೀಳಿಯೆ ತಿಳಿರಕುತದಲಿ ತಾಯ ತುಱುಬನು ನಾದಿಸುವೆನೆಂದ (ಕುವ್ಯಾದ್ಯೂರ. ೫-೪೪). [ತಿಳಿ$_2$ + ರಕುತ]

ತಿಳಿರಸ (ನಾ). ಶುದ್ಧವಾದ ದ್ರವ ; ನಿರ್ಮಲವಾದ ರಸ : ಎಳೆನೀರ್ಗಳ ತನಿಗರ್ಬಿನ ತಿಳಿರಸದ ... ಬಹುವಿಧದ ಪಾನಂಗಳನಲ್ಲಲ್ಲೆಱೆವರಾ ಪ್ರಪಾಪಾಲಿಕೆಯರ್ (ವ್ಯಸವಿ. ೪-೨೯). [ತಿಳಿ$_2$ + ರಸ]

ತಿಳಿಲು 'ತಿರುಳ್' ನೋ.

ತಿಳಿಲುಮಾತು (ನಾ). ಸಾರವತ್ತಾದ ನುಡಿ ; ತಿರುಳುನುಡಿ : ತಿಳಿಲುಮಾತಿಲಿ ಬಳಗರೆದು ... ತಕ್ಕೈಸಿ (ವಿಸ್ತೃಸು. ೦೯-೫).
[ತಿಳಿಲು (< ತಿರುಳ್) + ಮಾತು$_1$]

ತಿಳಿವಟ್ಟಲ್ (ನಾ). ಮದ್ಯವನ್ನು ಕುಡಿಯಲು ಬಳಸುವ ಬಟ್ಟಲು ; ಪಾನಪಾತ್ರೆ ; ಚಷಕ : "ಗರ್ಹಕಃ, ಅನುತರ್ಷಃ, ಚಷಕಃ, ಸರಕಃ—ಈಳ ತಿಳಿವಟ್ಟಲ್" (ಹಲಾಯು. ೫೪-೧೭೨) ; ಸೊಗಯಿಪ ಘಂಟೆಯಡ್ಡಣಿಗೆ ಯಾರುತಿ...ತಿಳಿವಟ್ಟಲೆಸಪ್ಪ ಚಂದನಂ (ಸೌಇಇ. IV, ೨೬೦-೬೫ ; 1199) ; ಕಡುವುಱುಗಳ್ಳನೊಂದು ತಿಳಿವಟ್ಟಲನಿಟ್ಟೆಱೆಯಲ್ಕೆ (ದಶಕು. ೮-೨೦೪).
[ತಿಳಿ$_2$ + ಬಟ್ಟಲ್]

ತಿಳಿವಡೆ (ಕ್ರಿ). ಶುಭ್ರತೆಯನ್ನು ಹೊಂದು ; ಶುದ್ಧವಾಗು : ಮುಂದೆ, ಲೌಕಿಕರಸದಿಂದತ್ತ ಸರಿದು ಅಲೌಕಿಕವೆನ್ನಿಸುವ ಮಹಾಬಲನಈ ಸ್ಥಾಯಿಯೇ ಕ್ರಮೇಣ ತಿಳಿವಡೆಯುತ್ತಾ ಹೋಗಿ ಕಡೆಗೆ ಶೀರ್ಥಂಕರಭವದಲ್ಲಿ ಅಲೌಕಿಕ ರಸವೆನ್ನಿಸುವುದು (ನಾಡೋಜ. ೩೬೮). [ತಿಳಿ$_2$ + ಪಡೆ$_1$]

ತಿಳಿವಳಿಕಸ್ತ, ತಿಳುವಳಿಕಸ್ತ (ನಾ). ವ್ಯವಹಾರಜ್ಞಾನವನ್ನು ಹೊಂದಿರುವವನು ; ಬುದ್ಧಿವಂತ : ಅವನೇನು ಅಂಥ ತಿಳಿವಳಿಕಸ್ತನಲ್ಲ (ರೂಢಿ). **ತಿಳುವಳಿಕಸ್ತ** : ವೆನೀಸ್‌ನಗರದ ಮರ್ಯಾದಸ್ತರೂ, ತಿಳುವಳಿಕಸ್ತರೂ ಅದನಿಕೊಲೊಪ್ಪೋಲೊ ... ಕಾನಸ್ಟಾಂಟಿನೋಪಲಿಗೆ ಹೋದರು (ಪ್ರವಾಇ. II, ೪) ; ಓದುಬರಹ ಕಲಿತು ತಿಳುವಳಿಕಸ್ತನಾದರೆ, ನಿನ್ನ ಬಾಳು ಎಷ್ಟು ಚೆನ್ನಾಗಿ ಆಗ್ತದೋ ನೀನೇ ನೋಡುವಂತೆ (ನಮ್ಮಕೃಷಿ. ೩೫).
[ತಿಳಿವಳಿಕೆ + – ಸ್ತ]

ತಿಳಿವಳಿಕೆ, ತಿಳುವಳಿಕೆ (ನಾ). ೧. ಅರಿವು ; ಜ್ಞಾನ : ಅಱಿತದ = ತಿಳಿವಳಿಕೆಯ (ಶಮದ. ೦೯೬ ಟೀಕೆ) ; ಚಲೋ ತಿಳಿವಳಿಕೆ ಇರಬೇಕು (ಮುಂಬಯಿ. ೪-೭೪) ; ಎಲ್ಲಿಹುದು ತಿಳಿವಳಿಕೆ ಜೀವನದ ಸಲುವಳಿಕೆ (ನಾದಲೀ. ೬೩-೬). ೨. ವಿವೇಕ ; ವಿವೇಚನಾಜ್ಞಾನ : ಆ ತಿಳಿವಳಿಕೆ ಅವರಿಗಿಲ್ಲಿಯದು (ಅಶ್ರಮ. ೫೮). ೩. ತಿಳಿಯಬೇಕಾದಂದು; ಸೂಚನೆ : ವಿದ್ಯಾರ್ಥಿಗಳ ತಿಳಿವಳಿಕೆಗಾಗಿ ಇದನ್ನು ಪ್ರಕಟಿಸಲಾಗಿದೆ (ರೂಢಿ). **ತಿಳುವಳಿಕೆ** : ೧. ತಿಳುವಳಿಕೆಗೆ ಸಹಾದೇವ ಸತ್ಯಕ್ಕೆ ಹರಿಶ್ಚಂದ್ರ ಚಿಲ್ಲಿಗೆ ಮನ್ಮಥ (ಮ್ಯಾಅರಿ. ೦೯೩೫, ೨೮-೬ ; 1751) ; ಹಳೆಯ ದೇವಾಲಯಗಳೂ ಶಿಲ್ಪಗಳೂ ... ಅಜ್ಞಜನರ ತಿಳುವಳಿಕೆಯ ಅಭಾವದ ಮೂಲಕವಾಗಿಯೂ ನಾಶವಾಗುತ್ತ ಬಂದಿವೆ (ಪೂರುಲು. ೩ ಮುನ್ನುಡಿ). [ತಿಳಿ$_2$ + – ವಳಿ$_1$ + – ಕೆ]

ತಿಳವಳ್ಳಿ (ನಾ). ಒಂದಂ ಊರಿನ ಹೆಸರು ; ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಈಗಿನ ತಿಳವಳ್ಳಿ : ಶ್ರೀಮದಗ್ರಹಾರಂ ತಿಳವಳ್ಳಿಯ ಸಕಲ ಸಾಸಿರ್ವ್ವರ ಬೆಸದಿ...ಪಣವಂ ಬಿಟ್ಟರ್ (ಕಇ. II, ೮-೧೦ ; 1072) ; ತಿಳವಳ್ಳಿಯುತ್ತವಸೆಟ್ಟಿ ಕಂಚಯನ ಮಲ್ಲಿಸೆಟ್ಟಿ ... ಇಂತಿನಿಬರು ಮಿರ್ದ್ದು ಮೂಲಸ್ಥಾನದೇವರ್ಗ್ಗೆ ಬಿಟ್ಟ ಧರ್ಮ್ಮ (ಕಇ. I, ೧೯-೦೨; 1108).
[? + ಪಳ್ಳಿ$_1$]

ತಿಳಿವಿಕೆ, ತಿಳುವಿಕೆ (ನಾ). ಜ್ಞಾನ ; ಅರಿವು : ತತ್ವವಿದ್ಯೆಯ ತಿಳಿವಿಕೆಯ ಹುಸಿಯೆಂದು ಕಂಡಡೆ ಹಾನಿಯೇ ತನಗೆ (ನಿಧಾಗೆ. ೫-೧-೧೨೯). **ತಿಳುವಿಕೆ** : ತಿಳುವಿಕೆಲ್ಲದೆ ನೆಲೆಯುಯಿಲ್ಲದೆ ತಿರುಗುವರು (ಜ್ಞಾನಸಿಂ. ೨೨-೩೦).
[ತಿಳಿವು + – ಇಕೆ]

ತಿಳಿವಿಗ (ನಾ). ಅರಿವಿರುವವನು ; ತಿಳಿವಳಿಕೆಯುಳ್ಳವನು ; ಜ್ಞಾನಿ : ಪಾದರಸ ಕರತಳದಲಿರುತದನಂಟದಂದದಿ ತಿಳಿವಿಗರು ಸಂಸ್ಕೃತಿಯಲಿರೆ ನಿರ್ಲೇಪರು (ಗಗತಾ. ೦೫-೨೫). [ತಿಳಿವು + –ಇಗ]

ತಿಳಿವು, ತಿಳಂವು (ನಾ). ೧. ಸಮಾಧಾನಗೊಳ್ಳುವಿಕೆ ; ಸಾಂತ್ವನ ಪಡೆಯುವಿಕೆ ; ಮುಳಿಸು ತಿಳಿಯುವಿಕೆ ; ಕೋಪ ಕಡಿಮೆಯಾಗುವಿಕೆ : "ಪ್ರಣಯಂ ಪ್ರಸಾದವನೆ ತಿಳಿವಕ್ಕುಂ" (ಮಂಗರಾ. ೦೩೪-೩೩) ; ಆಕೆಯ ತಿಳಿವಾಕೆಯ ಮುಳಿಸಾಕೆಯ ಕೂಟಮೆ ದಲಿರ್ದುದರಸನ ಮನದೊಳ್ (ಕಾದಂಉ. ೬೭೨). ೨. ಅರಿವು ; ಬುದ್ಧಿ ; ಜ್ಞಾನ ; ತಿಳಿವಳಿಕೆ : ತಿಳಿವಿಲ್ಲದೆ ಶಶಿಕಾಂತದ ಕಳಶಮನೇಕಾಂತೆ ಕಾಂತೆ ನಿನ್ನ ಮುಖೇಂದೂಜ್ವಳ ಕೌಮುದಿಯಿಂದೊಸರ್ದಪುದಿಳಿಪಿಳಿಪೆಂದೊರ್ವ ಮುಗ್ಧೆಯಂ ಸಖಿ ನುಡಿದಳ್ (ಗಿರಿಕ. ೪-೦೨೪) ; ಮುಸುಡ ತಿರುಹಿತು ತಿಳಿವು (ಕುವ್ಯಾಸ. ೦೩-೪೪) ; ತಿಳಿವೆ ಶರೀರ ತಿಳಿವೆ ರೂಪು ಬೆಳಗೆ ಮೈಯೊಳಗೆ ತಾನಾಗಿರುತಿಹುದು (ಧರಕ. ೦-೧೦೯) ; ಬೇರೆ ಏತಕು ಮಣಿಯೆ ನಾ ಇಗೊ ಬಂತು ತಿಳಿವಿನ ಗಳಿಗೆ (ಅರಳು. ೧೪-೩) ; ಜೀವನದಲ್ಲಿ ನಮ್ಮ ತಿಳಿವನ್ನು ಮರೆಯಿಸಿ ಸರಿಯುವ ಗಳಿಗೆಗಳಿಗೂ ಕಡಿಮೆಯಿಲ್ಲ (ಬಾಶೃಚಿ. ೧೨). **ತಿಳುವು** : ೨. "ಮನು—ಅವಬೋಧನೇ, ತಿಳುವಿನೊಳ್" (ಶಾಕಶ. ೨೪೦) ; ದೇವ ಬೆಳಗಿನ ಬೆಳಗೆ ದೇವ ತಿಳುವಿನ ತಿಳುವೆ (ಕಲಿಕಾ. ದೇ. ೨೯೯-೦೮). [ತಿಳಿ$_1$ + – ವು]

ತಿಳಿವುಟ್ಟು (ಕ್ರಿ). ಅರಿವುಂಟಾಗು ; ಬುದ್ಧಿಬರು ; ಜ್ಞಾನೋದಯವಾಗು : ಸಯಂದಿಂದಂ ತಿಳಿವುಟ್ಟರಲ್ಕೆನಗೆ ಪೇಱಲ್ಕೇಳ್ದು ಚಂಡಾಲಜಾತಿಯೊಳೀ ವಾಕ್ಯಮುಮಾ ವಿವೇಕಮುಮದೆಂತಾದತ್ತೊ ಪೇಱೆಂದು (ಕಾದಂಉ. ೭೫೬). [ತಿಳಿ$_2$ + ಪುಟ್ಟು$_1$]

ತಿಳಿವೆಳಕು 'ತಿಳಿವೆಳಗು' ನೋ.

ತಿಳಿವೆಳಗು, ತಿಳಿಬೆಳಕು, ತಿಳಿಬೆಳಗು, ತಿಳಿವೆಳಕು (ನಾ). ನಿರ್ಮಲವಾದ ಪ್ರಕಾಶ ; ಸ್ವಚ್ಛವಾದ ಹೊಳಪು : ಅಕ್ಕ ನೀನೇಳೇಳು ನೇಸಱ ತಿಳಿವೆಳಗುಕ್ಕುತಲಿದೆ ಮೂಡಲಾಗಿ (ಶ್ರೀಪಾಲ. ೨-೨೯) ; ಎಳೆ ಮಿಂಚಿನಂದದ ಬೊಂಬೆಯೊ ತಿಂಗಳ ತಿಳಿವೆಳಗಿನೊಳಾದ ರೂಪೋ (ಧರಕ.೨-೭೭); ತಿಳಿವೆಳಗಿನ ತೆಳ್ವೆಳಗಿನ ... ಬೆಳಸಿನ ಸಿರಿಯೆನೆ ತೊಳತೊಳ ತೊಳಗಿದುದು ಮೂರ್ತಿ ಚಂದ್ರಪ್ರಭನಾ (ಶಬ್ದಾನು. ೦೪೦ ವ್ಯಾಖ್ಯಾ). **ತಿಳಿಬೆಳಕು** : ಅಶಾಂತಿಯೆಲ್ಲಾ ಅಳಿದು ಶಾಂತಿಯ ತಿಳಿಬೆಳಕು ದೇಶವನ್ನೆಲ್ಲಾ ತುಂಬಲಿ (ಅಮಗಾಂ. ೮). **ತಿಳಿಬೆಳಗು** : ತನುವಿನಲ್ಲಿ ಹುಸಿ ತುಂಬಿದ ಕತ್ತಲೆಯ ಕಣ್ಣಿಗೆ ಸತ್ಯದ ತಿಳಿಬೆಳಗು ಕಾಣುವುದು ಅಸಾಧ್ಯವೆಂದೇ ಹೇಳಬೇಕು(ಮೋಳಿಮಾ. ೦ ಪ್ರಸ್ತಾವನೆ). **ತಿಳಿವೆಳಕು** : ತಿಳಿವೆಳಕು ರೂಪಾನ ಮುಖವಡರಿ ಒಂದು ಅಭೂತಪೂರ್ವ ಶೋಭೆಯನ್ನು ತಂದಿದೆ (ಜಯಂತ. ೫೦). [ತಿಳಿ$_2$ + ಬೆಳಗು$_2$]

ತಿಳಿಪೊನಲ್ (ನಾ). ನಿರ್ಮಲವಾದ ಹೊಳೆ : ಅಪ್ ತೇಜಗಳು ಬೆರೆದ ತಿಳಿಪೊನಲನನುಕರಿಸಿ ನನ್ನೊಳಗು ಬಾಹ್ಯಾಂತರ್ಯಭೇದವಳಿಯೆ (ಮಲೆದೇ. ೨೬-೫). [ತಿಳಿ$_2$ + ಪೊನಲ್]

ತಿಳಿಸಾರು (ನಾ). ತೆಳ್ಳಗಿರುವ ಸಾರು : ನಮ್ಮ ಯಜಮಾನ್ರಿಗೆ ಅದರ ತಿಳಿಸಾರು ಮಾಡಿದ್ರೆ ತುಂಬ ಹಿಡಿಸುತ್ತೆ (ರೂಪಸಂ. ೧೨).
[ತಿಳಿ$_2$ + ಸಾರು$_3$ (<ಸಾಱು$_2$)]

ತಿಳಿಸು (ಕ್ರಿ). ಸ್ಪಷ್ಟಪಡಿಸು ; ಅರಿಯಂತಂತೆ ಮಾಡಂ : ಶಿಕ್ಷಕನು ಹುಡುಗರಿಗೆ ಚೆನ್ನಾಗಿ ತಿಳಿಸಿಕೊಡಬೇಕು (ಮುಂಬಯಿ. ೪-೮೪); ದಯವಿಟ್ಟು ತಿಳಿಸೋಣವಾಗಲಿ (ಜಂಗಾಳ್ಳ. ೦೪೧).

ತಿಳಿಸಿಕೊಳ್ಳು = ಶಂದ್ದಮಾಡಿಕೊಳ್ಳು ; ಹಸನುಮಾಡಿಕೊಳ್ಳು : ಕೆಟ್ಟಣಿಸದಿನ್ನು ಮನವಂ ತಿಳಿಸಿಕೊಳ್ಳಯ್ಯ (ಹಡ್ಡರ. ೫೦-೦೩).

[ತಿಳಿ$_1$ + – ಇಸು$_3$]

ತಿಳಿಸುಣ್ಣ (ನಾ). ೧. ಸುಣ್ಣ ಅರಳಿದ ಬಳಿಕ ಅದರ ಮೇಲೆ ನಿಲ್ಲುವ ನೀರು ; ಸುಣ್ಣದ ನೀರು : (ಕ). ೨. ಕೆನೆಸುಣ್ಣ : (ಕ).

[ತಿಳಿ$_2$ + ಸುಣ್ಣ]

ತಿಳಿಹು 'ತಿಳಿಪು$_1$' ನೋ.

ತಿಳಿಹೇಳು (ಕ್ರಿ). ಸ್ಪಷ್ಟವಾಗುವಂತೆ ಹೇಳು; ತಿಳಿಸಿ ಹೇಳಂ : ಬೇರೆ ಬೇರೆ ವಿಷಯಗಳ ಮೇಲೆಯೂ ವಿವರವಾಗಿ ತಿಳಿಹೇಳಿ ಅವರೆಲ್ಲರಲ್ಲಿಯೂ ಆ ವಿಷಯಗಳನ್ನು ತಿಳಿದುಕೊಳ್ಳುವ ಲವಲವಿಕೆ ಹುಟ್ಟಿಸಿದ್ದರು (ಪ್ರಬಂಧ. ೯೪).

[ತಿಳಿ$_1$ + ಹೇಳು (<ಪೇಱ್)]

ತಿಳಿಹೊಳೆ (ನಾ). = ತಿಳಿವೊನಲ್ : ಪರಮಶಾಂತಿಯು ಪಡೆದಿಹೆ ; ಪಡೆಯದಿರಲಿಂತಂತು ಹರಿವುದು ರಾಗ ತಿಳಿಹೊಳೆಯಂದದೆ? (ಇಂಗೀತ. ೦೪-೦೫). [ತಿಳಿ$_2$ + ಹೊಳೆ$_4$ (<ಪೊಱಿ$_1$)]

ತಿಳುಪು$_1$ 'ತಿಳಿಪು$_1$' ನೋ.

ತಿಳುಪು$_2$ 'ತಿಳಿಪು$_2$' ನೋ.

ತಿಳುಪೇಱು (ಕ್ರಿ). ತೆಳುವಾಗು; ತೆಳ್ಳಗಾಗಂ; ಕೃಶವಾಗಂ : ಬಳುಪೇಱುತು ಮೊಗ ತಿಳುಪೇಱುತು ಕೆನ್ನೆ ಹೊಳವೇಱುತು ಕುಡಿನೋಟ (ಚೀಪಂಸಾಂ. ೪-೭೦). 'ತೆಳುಪೇಱು' ಪರಾ.

[ತಿಳುವು$_3$ (<ತಿಳಿವು$_2$) + ಏಱು$_1$ (<ಏಱ್$_1$)]

ತಿಳುವಳಿಕಸ್ತ 'ತಿಳಿವಳಿಕಸ್ತ' ನೋ.

ತಿಳುವಳಿಕೆ 'ತಿಳಿವಳಿಕೆ' ನೋ.

ತಿಳುವಿಕೆ 'ತಿಳಿವಿಕೆ' ನೋ.

ತಿಳುವು 'ತಿಳಿವು' ನೋ.

ತಿಳುಹಿಸು (ಕ್ರಿ). ೧. ಶಮನಗೊಳಿಸು ; ಶಾಂತಗೊಳಿಸು; ಸಾಂತ್ವನಗೊಳಿಸು; ಸಮಾಧಾನಗೊಳಿಸು : ಈ ಗಿಣಿಯು ಸಂಗೀತ ಸಾಹಿತ್ಯವ ಬಲ್ಲುದು . . . ಅಂತಃಪುರಸ್ತ್ರೀಯರುಗಳ ಕೋಪವ ತಿಳುಹಿಸಿ ಅನುಗೊಳಿಸಬಲ್ಲುದು (ವಡಕಾ. ೦). ೨. ತಿಳಿಸು ; ಅರುಹು.

[ತಿಳುಹು$_1$ (<ತಿಳಿಪು$_1$) + – ಇಸು$_3$]

ತಿಳುಹು$_1$ 'ತಿಳಿಪು$_1$' ನೋ.

ತಿಳುಹು$_2$ 'ತಿಳಿಪು$_2$' ನೋ.

ತಿಳ್ಳಿ (ನಾ). (ಉಕ) ಒಂದು ಬಗೆಯ ಆಟ ; ಉಪ್ಪಾರಪಟ್ಟಿ : ಪ್ರಳಯು ಜಯಿಸಿ ತಾನೀಸಿಯೇ ಬರಲೀ ಆಡುತಿರಲು ತಿಳ್ಳೀ ಇಗೋ ಓಡಿ ಬಂದಿತಿಲ್ಲಿ (ಆರಳು. ೦೫೫-೪) ; ಸಂಜೆಯಲ್ಲಿ ಮಾಡುವ ವ್ಯಾಯಾಮದಲ್ಲಿ ತಿಳ್ಳಿ, ಓಡುವುದು, ಜೋಜೋ ಮೊದಲಾದವುಗಳೂ ಬರುತ್ತವೆ (ಬ್ರಹ್ಮಚೀ. ೨೦೦) ; " ಹುಡುತುತ್ತು " " ತಿಳ್ಳಿ " ಮುಂತಾದ ಆಟಗಳನ್ನು ಆಡುತ್ತಿರುವರು (ವಿಠಾಭ. ೯೫).

ತಿಳ್ಳಿಯಾಡು = ಉಪ್ಪಾರಪಟ್ಟಿಯಾಟ ಆಡು : ಅವನ ಅಂತರ್ಯದ ಭೋರ್ಗರವ ಕಡಲಿನ ಭಾವನೆಗಳ ಅಲೆಗಳ ಮೇಲೂ ಆಕೆಯ ಮಂಗಲ ಮೂರ್ತಿ 'ತಿಳ್ಳಿ'ಯಾಡುತ್ತಿದೆ (ಬಸಸಿ. ೨) ; ಗಾಳಿಯೊಡನೆ ತಿಳ್ಳಿಯಾಡು ತಾಡುತದರ ಓಟಾ (ಸಾದಲೀ. ೮೬-೦). **ತಿಳ್ಳಿಹಾದಾಡು**=ತಿಳ್ಳಿಯಾಡು : ಜೋ ಆಡಲಿಕ್ಕೂ ತಿಳ್ಳಿ ಹಾದಾಡಲಿಕ್ಕೂ ಹೆಚ್ಚು ಮಂದಿ ಬೇಕು (ಮುಂಬಯಿ. ೦-೫೬). [?]

ತಿಱಿ, ತಿರಿ$_2$ (ಕ್ರಿ). ೧. (ಹೂವು, ಹಣ್ಣು ಮೊದಲಾದುವನ್ನು) ಕೊಯ್ಯು; ಬಿಡಿಸು ; ಆರಿಸು ; ಎತ್ತು : " ತಿಱಿದುದನಲ್ ತಾಂ ಕೊಯ್ದುದು " (ಪಶುನಿ. ೦೦೬) ; ಮುಳಿದು ತನಗರ್ಘ್ಯಮೆತ್ತಿದ ತಳಿಗೆಯೊಳಿಡೆ ತಿಱಿದ ತೆಱದೆ ತಲೆ ಪಱಿದಾಗಳ್ (ಪಂಪಭಾ. ೬-೬೪) ; ಬದರಿಯ ಬನ್ನಿಯ ರಥ ಚಕ್ರದೆಲೆಗಳಂ ತಿಱಿದು ತಲೆಯೊಳಿಟ್ಟಾತಂಗಭ್ಯುದಯಮುಂ...ಸುಖಮುಂ ಕೂಡಿಬಕ್ಕುಮೆಂಬರ್ ಮೂಢರ್ (ಸಮುಪ. ೦೫-೬); ಕುಸುಮನಿಕಾಯಮಂ ತಿಱಿವ ಕೈತವದಿಂದೆ (ಅಧ್ಯಟ. ೭-೨೨); ಪಣ್ಣಂ ತಿಱಿದಿಟ್ಟಿಯಿಂದೆ ಕುಡುತುಂ (ಕಲ್ಕಿಕಾ. ೦೫೬) ; ಕುಸುಮತತಿಯಂ ತಿಱಿದುಕೊಂಡು ತಾಂ ಬರುತ್ತಿರೆ (ಲಸಪು. ೦೦-೯); ಕುಸುಮಾಳಿಯಂ ತಿಱಿದು ತನ್ನಮೆನೆ (ಪದ್ಮಕಾ. ೮-೫೬); ನಳನಿಳಿಪ ಗಜವುಪ್ಪವಮಾಲಿಕೆಯ ತಿಱಿದು ತುಳಸಿಯ ದಳವನಘಶತಹರವ ನೆಡೆಗೆಡಿಗಿಱಿಕೆ ವೈರಿಯ ಧುರವ ಜಯಿಸೆಂದಿಕ್ಕಿದನು ಕೊರಳಲಿ (ತೊಡಕಾ. ೪-೪-೩) ; ತಿಱಿದ ಚೆಂವಳಿರ್ಗಳಂತೊಪ್ಪುವದರಂಗಳಿಂ...ಸುರವನಿತೆಯರ್ ಕಂಗೆಸೆದರ್ (ಚಿಬಪು. ೦೯-೪೪). 'ಪೂದಿಱಿ' ಪರಾ. ೨. ಎಸೆ ; ಬಿಸಾಡು. ' ತಿಱಿಕಲ್ 'ಪರಾ. **ತಿರಿ$_3$** : ೧. ಹಲವಾರು ತೋಟದೊಳಸವಸದೊಳು ನುಗ್ಗಿ ಹೂಗಳ ತಿರಿದೆನು ಹಿಗ್ಗಿ (ಇಂಕಾಪ. ೦೦-೦೮). ೨. 'ತಿರಿಕಲ್ಲರಿ' ಪರಾ.

[ದೇ. ॥ ತಮಿ. ಮಲ. ತೆಱಿ ; ತೆಲು. ತೆಗು, ತ್ರೆಗು, ತ್ರೆಯ್ಯು]

ತಿಱಿಕಲ್, ತಿರಿಕಲ್ಲು, ತಿಱಿಕಲ್ಲು (ನಾ). (ಆಟವಾಡುವಾಗ) ಮೇಲಕ್ಕೆ ಹಾರಿಸಿ ಕೈಯೊಡ್ಡಿ ಹಿಡಿದು ಕೊಳ್ಳುವ ಸಣ್ಣ ಕಲ್ಲು ; ಅಣ್ಣೆಕಲ್ಲು : "ತಿಱಿಕಲ್ಲೆಂದು ಅಣ್ಣೆಕರ್" (ಕಶಸಾ. ೨೭-೫೫೨) ; "ತಿಱಿಕಲ್ [ಪಾಠಾಂ. ತಿಱಿಗಲ್, ತಿಱುಕಲ್] ಎನಲ್ಕೆ ಪಾಸಣ್ಣೆಕಲ್ಲಕ್ಕು" (ಶಬ್ದಕ್ಕ.೫೯); ವಾಮೇತ ರಾಯತಹಸ್ತಾಗ್ರದೊಳಾಂತು ತಾಳ್ದಿದುದಱಿಂ ಬಾಳತ್ವದೊಳ್ ಕೋಟಿ ಕಾಂತಿತಮಾ ಕಲ್ ತಿಱಿಕಲ್ ಶ್ರೀವೃಷ್ಣಮಹಿಪಂಗಕ್ಕುಂ ಪೆಱಿಂಗಕ್ಕುಮೇ (ಶಾಂತಿಪು. ೫-೨೬) ; ಮಿಱುಗುವ ನೀಲದ ಬಟ್ಟಿಂ ತಿಱಿಕಲ್ಗಳನಾಡುವಂತೆ ಕಣ್ಗಳ್ ಸೆದಿರ್ದಳ್ (ಕಾದಂಕಾ. ೨೬); ತದ್ಗೃಹದೇವತಾಜನಂ ಸೊಗಯಿಸುವಿಂದ್ರ ನೀಲ ಮಣಿಯಿಂ ತಿಱಿಕಲ್ಗಳನಾಡುವಂತೆವೋಲ್ (ಪಂಡಾಪು. ೩-೭೭) ; ತಿಱಿಕಲ್ಲಾದುವು ವಿಷ್ಣುಭೂಭುಜಭುಜಶ್ರೀಗಾವಗಂ ಪೆಂಪಿನೊಳ್ನೆಱೆದಾ ಸಹ್ಯನಗೇಂದ್ರ ನೀಳ ××× ಗಳ್ ಪೆಜತೇನಾ ಭುಜಲಕ್ಷ್ಮಿಗೀ ನೆಗಳ್ದ ಪಾನುಂಗಲ್ (ಎಳ. ೪. ಬೇಲೂರು. ೦೭-೭; 1180). **ತಿರಿಕಲ್ಲು**: 'ತಿರಿಕಲ್ಲಾಟ' ಪರಾ. **ತಿಱಿಕಲ್ಲು**: ಕುಳಿಲ್ಲಂಡು ಬಟ್ಟು ತಿಱಿಕಲ್ಲಟ್ಟುಂಗರೆ ಹೊಣಗುಂಡಂಬಿವನಾ ಮುರಹರನಲ್ಲಲ್ಲಿಗಾಡುತುಂ ಬರಲಿದಿರೊಳ್ (ಜಗವಿ. ೪-೪೪) : ಸಪ್ತ ಕುಲಪರ್ವತಂಗಳನೊರ್ಮೆ ಬಾಚಿಯಂಗೈಯೊಳಾಂತು ಓರಂತೆ ತಿಱಿಕಲ್ಲ ನಾಡುತ (ವೀಕೃಪು. ೩-೫೦-೪೪) ; ಚಂಡಪ್ರತಾಪಿಯ ಜಯವಧು ತಿಱಿಕಲ್ಲ ಕೊಂಡಾಡುವಂತೆ ಚಿಮ್ಮಿದನು (ಪೋಚಿತ. ೩೪-೯) ; ಅವಿಳ ಕುಲಗಿರಿಗಳಂ ತಿಱಿಕಲ್ಲನಾಡಿ ಸಾರಿಪ ವಸುಂಧರೆಯನಾಕಾಶಮಂ ಪಿಡಿದು ತಾಳವ ಪೊಯ್ವ ...ಮಹಾಪ್ರಮಥವರರೊಪ್ಪುತಿರ್ದರು (ಸಿದ್ಧೇಪು. ೦-೩೪). 'ಅಣ್ಣೆಕಲ್$_1$' ಪರಾ. [ತಿಱಿ + ಕಲ್$_3$]

ತಿಱಿಕಲ್ಲಾಟ, ತಿರಿಕಲ್ಲಾಟ (ನಾ). ಕಲ್ಲುಗಳನ್ನು ಎಸೆದು ಹಿಡಿಯುವ ಆಟ ; ಅಣ್ಣೆಕಲ್ಲಾಟ : ಮತ್ತಮವರ ವಸುಳಿಗಳ್ ಪಕ್ಕೆಯ ಸಿಡಿದಲೆಯೊಳ್ ತಿಱಿಕಲ್ಲಾಟಮುಂ . . . ಕಲ್ವರ್ (ಚಿಕವಂ. ೮-೦೩) ; ಪಂದಲೆಯ ತಿಱಿಕಲ್ಲಾಟದಿಂ ಮರುಳ್ಪಡೆಗೆ ನಲವೆರ್ಚಿಸುತುಂ (ಕಾಪುಶ್ಯ. ೪೯-೦೯). **ತಿರಿಕಲ್ಲಾಟ**: ಕವಣೆ ತಿರಿಕಲ್ಲಾಟ ಹೆಗ್ಗಕೆ ಸೆಳೆದರೋ ಹೆಬ್ಬಾವನು (ಶಪು. ೬-೦೫೨). [ತಿಱಿಕಲ್ + ಆಟ]

ತಿಱಿಕಲ್ಲಾಡು (ಕ್ರಿ). ಕಲ್ಲುಗಳನ್ನು ಮೇಲೆ ಎಸೆದು ಹಿಡಿ; ಅಣ್ಣೆಕಲ್ಲಾಡು : ತಿಱಿಕಲ್ಲಾಡುವ ಬೊಟ್ಟುವೋರಿಸುವ ಸೆಂಡಂ ಪೊಯ್ವ ... ನಾನಾಕ್ರೀಡೆಯಿಂದಿರ್ವರುಂ ತಱಿಸಂದು (ಸುಕುಮಾ. ೩-೬) ; ತಿಱಿಕಲ್ಲಾಡುವೆನೋ ಕುಲಾದ್ರಿಚಯಮಂ (ಜಗವಿ. ೭-೩೫); ಕೋಡೊಳ್ಕೋಡೊತ್ತುತುಂ

ದಂತಿಗಳನೆ ತಿಱಿಕಲ್ಲಾಡುವಂತಂಬರಕ್ಕೀಡಾಡುತ್ತುಂ ತುಂಗಶೈಳಂಗಳನೆ ... ಎಯ್ತುಂದುದು ಪವನಜವಂ ರುಂದ್ರಗಂಧದ್ವಿಪೇಂದ್ರಂ (ಪಾರ್ಶ್ವಪು. ೪-೦೩೬); ಆಲಿವರಲಂ ಪೊಯ್ದುಣ್ಣಿಕಲ್ಲಾಡಲುಂ ತಿಱಿಕಲ್ಲಾಡಲದೇಂ ತಗುಳ್ದವೊ ಮನಸ್ಸಂಪ್ರೀತಿಯಿಂ ಚಾತಕಂ (ಅನಂಪು. ೯-೯); ತಲೆಗಳ ತಱಿದು ತಿಱಿಕಲ್ಲಾಡುತಿರ್ದನು ವೀರವಿಹಗೇಂದ್ರ (ತೊರಗಾ. ೩-೧೦-೦೮); ಗಿರಿಗಳಂ ಕಿತ್ತು ತಿಱಿಕಲ್ಲಾಡುವ ಕಾಲಮೇಘದ ಸಿಡಿಲ ತೊಡಿಗೆಯಂ ಸಲೆ ತೊಡುವ ... ಕಾಲರಾಕ್ಷಸರೈದಿ ಸಂದಣಿಸಿ ನಿಂದಿರ್ದರ್ (ಜಿಲಪು. ೨೩-೦೫).

[ತಿಱಿಕಲ್ + ಆಡು$_1$]

ತಿಱಿಕಲ್ಲು 'ತಿಱಿಕಲ್' ನೋ.

ತಿಱಿಕುಳಿ (ನಾ). = ತಿಱಿಕೊಱ^3 : "ತಿಱಿಕುಳಿ [ಪಾಠಾಂ. ತಿಱಿಕೊಱ^3] ಯೆನಲ್ಕೆಯಾಯ್ಕುಳಿಯಕ್ಕು" (ಶಬ್ದಮಂ. ೫೪). 'ತಿರಿಕುಳಿ' ಪರಾ.

[ತಿಱಿ + – ಕುಳಿ$_3$]

ತಿಱಿಕೊಱ^3 (ನಾ). (ಗದ್ದೆ ಮುಂತಾದ ಕಡೆ ಕಾಳನ್ನು) ಆಯ್ದು ಕೊಂಡು ಜೀವಿಸುವವನು; ಆಯ್ಕುಳಿ: "ತಿಱಿಕೊಱ^3 = ಆಯ್ಕುಳಿ" (ಶಮದ. ಪರಿ. ೨). [ತಿಱಿ + ಕೊಱ$_6$]

ತಿಱಿಕೊಱ^{3}ಗೊಳ್ (ಕ್ರಿ). ಆಯ್ದು ಕೊಳ್ಳು; ಆರಿಸಿಕೊಳ್ಳು: ಕೊಲ್ಗುಂ ಕುಱಿಯಂ ಕೊಲ್ವಂತಿರೆ ತಿಱಿಕೊಱ^{3}ಗೊಂಡು ಜಗಜ್ಜನಂಗಳಂ ಯಮರಾಜಂ (ಅಜಿಪು. ೧೦-೨೮). [ತಿಱಿಕೊಱ^3 + ಕೊಳ್$_1$]

ತಿಱಿಗದಿರ್ (ನಾ). ಆಯ್ದ ಕಿರಣ,—ರಶ್ಮಿ: ತಿಱಿಗದಿರಂ ಮಱಿವಕ್ಕಿಗೆ ನೂಂಕಿ ತನಿಗದಿರನಿನಿಯಂಗೆ ನೀಡಿ (ಅನಂಪು. ೭-೮೦ ವ). [ತಿಱಿ+ಕದಿರ್$_2$]

ತಿಱಿಚು (ಕ್ರಿ). ವಿಭಾಗಿಸು; ಭಾಗಮಾಡು (?): ಮೂಱಱವೊಳ ದಸವಂದದ ಮರ್ಯಾದೆಯಲೂ ಕಟುಗೊಡೆಗೆಯನೂ ತಿಱಿಚಿ ಆ ಕಟುಗೊಡಗೆಯ ಗದೆಗೆ ಉತ್ತಮ ಮಧ್ಯಮ ಕನಿಷ್ಠವಾಗಿ ತ್ರಿಸ್ತಾನದಲೂ ಸಿಲಾಸ್ತಾಪನವನು ಮಾಡಿಸಿ ಕೊಡುವೆವು (ಎಕ. X, ಮುಳಬಾ. ೧೭೨-೧೦; 1496). [ತಿಱಿ + –ಚು$_1$]

ತಿಱಿತರ್, ತಿರಿತರ್$_2$ (ಕ್ರಿ). (ಹೂವು, ಹಣ್ಣು, ಕಾಯಿ ಮುಂತಾದುವನ್ನು) ಕೊಯ್ದು ತರು; ಕಿತ್ತು ತರು: ಕಂಪುಳ್ಳ ಸಂಪಗೆಯ ಪೂಗಳಂ ತಿಱಿತಂದು ಹೆಂಪಿನಿಂ ಶಶಿಧರನ ಸಿರಿಮುಡಿಗೆ ಬೇಕೆಂದು (ಬಸರ. ೧-೨೭); ತಳಿರ ತಿಱಿತಂದಂದು ಮನೆ ಮಾಡಿದರು ಭೂಸುರತತಿಗೆ (ಕುಪ್ಯಾಅ. ಓರಿಇ. ೪-೫). ತಿರಿತರ್$_2$. 'ತಿರಿತರಿಸು' ಪರಾ. [ತಿಱಿ + ತರ್]

ತಿಱಿತರಿಸು, ತಿರಿತರಿಸು (ಕ್ರಿ). ಕೊಯ್ದು ತರಿಸು; ಕಿತ್ತು ತರಿಸು: ಎಳವುಲ್ಗಳಂ ತಿಱಿತರಿಸಿ ಮುಂದಿಟ್ಟನು (ಜೈಮಿಭಾ. ೨೯-೪೭). ತಿರಿತರಿಸು: ತಣ್ಣೆಳಲಿನ ತರುಮೂಲಕ್ಕೆ ತುರಂಗವನ್ನು ನೀರು ಕುಡಿಸಿ ಕಟ್ಟಿ, ಎಳಹುಲ್ಲನ್ನು ತಿರಿತರಿಸಿ ಅದರ ಮುಂದಿಟ್ಟು (ಬಿದುರೆ. ೦೬೮).

[ತಿಱಿತರ್ + – ಇಸು$_3$]

ತಿಱಿಸೇವಗೆ (ನಾ). ಒಂದು ಬಗೆಯ ಸೇವಗೆ; "ಕತ್ತರಿಸಿ ಚೂರುಮಾಡಿದ ಸೇವಗೆ" (ಸಿದ್ಧರಾ. ಕೋಶ): ಬಳ್ಳಿಯಲ್ಲಿ ತಿಱಿಸೇವಗೆಯ ರಾಶಿಗಳ ಮಾಡಿ ಹಳ್ಳಿಕಾರ್ತಿಯರಲ್ಲದರಸುಮಕ್ಕಳು ಮಾಡಿದರು ಪರಡಿ ಸರವಳಿಗೆಯ (ಸಿದ್ಧರಾ. ೮-೫೦). [ತಿಱಿ + ಸೇವಗೆ (< ಸೇವಿಗೆ)]

ತಿಱು (ಕ್ರಿ). ೧. ಕೊಡು; ನೀಡು: ಮಾನ್ಯಕಾಱರ್ಮೂಱು ಶ್ರಾಹೆಗೆ ಪರಿಯರ ಗದ್ಯಾಣವನ್ತಿಱುವರ್ (ಸೌಇಇ. IX – i, ೭೭-೨೯; 992); ಹೊಲಗೇರಿಯ ಪಡುವಣ ಕರುವಗೆಯ್ಯಿಂದಂ ತೆಂಕಲಾಱುಮತ್ತರು ಕೆಯಿಂಗಮಱವಣಮಯ್ದು ಗದ್ಯಾಣಮಂ ತಿಱುವರು (ಸೌಇಇ. XI–i, ೫೦-೨೦; 1005). ೨. ಸಲ್ಲಿಸು; ಸಂದಾಯಮಾಡು: "ತಿಱು – (ದ್ರವ್ಯ) ವಿನಿಮಯೇ" (ಶಮಧಾ). 'ತೆಱು$_1$' ಪರಾ.

[ದೇ. ‖ ತಮಿ. ಇಱು; ಮಲ. ಇಱ = ಕಾಣಿಕೆ]

ತಿಱುಕೆ (ನಾ). ಕೊಡುವಿಕೆ; ತೆರುವಿಕೆ: ಕಿಱುಕೆ, ತಿಱುಕೆ, ಪೊಱುಕೆ (ಶಬ್ದಾನು. ೫೫೭ ಪ್ರಯೋ). [ತಿಱು + – ಕೆ]

ತಿಱುಗೆ (ನಾ). ಒಂದು ಬಗೆಯ ತೆರಿಗೆ (?): ಉಂಬರವಾಣಿಯ ತಿಱುಗೆಯ ಹಿರಿಯ ಕೋಲಲು ಹಂನೆರಡು ಮತ್ತರು (ಕಇ. II, ೨೬-೭೪; 1174): ಹಾರಣೆದಂಳ ದೋಷದಿಂ ಪಾದ ತಿಱುಗೆಯಂ ಕೊಂಬುದಿಲ್ಲೆಂದು ಒಂದು ಹೊಂನ ಪಾದಪೂಜೆಯಂ ಕೊಂಡು (ಕಕುಲ. ೬-೭೪; 1218).

[ತಿಱು + – ಗೆ]

ತಿಱುನಂದೀಶ್ವರ (ನಾ). [ಜೈನ] ಒಂದು ಹಬ್ಬ; ನಂದೀಶ್ವರ ದಷ್ಟವಿಂ: P ಜ್ಯೇಷ್ಠ, ಆಷಾಢ ಮತ್ತು ಫಾಲ್ಗುಣ ಮಾಸಗಳಲ್ಲಿ ಅಷ್ಟಮಿಯಿಂದ ಹುಣ್ಣಿಮೆಯವರೆಗೆ ಎಂಟು ದಿನಗಳು ಜೈನರು ಆಚರಿಸುವ ಒಂದು ವ್ರತ,—ಹಬ್ಬ. ಇದನ್ನು 'ಅಷ್ಟಾಹ್ನಿಕ' ಎಂದೂ ಕರೆಯುತ್ತಾರೆ: ತಿಱುನಂದೀಶ್ವರದಂದು ದಾನಮಾಡಿಯುಂ ಪೊಯ್ಸಳನ ಗುರುಗಳ್‌ಮುಳ್ಳೂರ ಶ್ರೀಗುಣಸೇನಪಂಡಿತದೇವರ್ಗ್ಗೆ ಧಾರಾಪೂರ್ವಕದಿಂ ಸ್ಥಾನಮಂ ಕೊಟ್ಟರ್ (ಎಕ. VI, ಮೂಡಗೆ. ೦೩-೨೮; 1068). 'ನಂದೀಶ್ವರ' ಪರಾ. [P ಇದು 'ತಿರುನಕ್ಷತ್ರ' 'ತಿರುನಾಮ' ಮುಂತಾದ ಶಬ್ದಗಳಂತೆ, ತಮಿಳು ಪದಗಳ ಹೋಲಿಕೆಯ ಮೇಲೆ ರೂಪಿಸಿಕೊಂಡಿರುವ ಒಂದು ಶಬ್ದವಿರಬಹುದು.]

ತಿಱುನೀರಿಕ್ಕು (ಕ್ರಿ). (?): ಮಂಡಲಮಿನ್ನುಂ ತಿಱುನೀರಿಕ್ಕು [ಪಾಠಾಂ. ಕಿಱುನೀರುಕ್ಕು] ವುದೆನಿಸಿದ ತಱಿಸಲವಿನ ಚಲದ ಬಲದ ಕಲಿನರಸಿಂಹಂ (ಪಂಪಭಾ. ೧-೩೩); "ತರ್ಪಣೋದಕವನ್ನು ಕೊಡು" (ಪಂಪದೀ. ೧೭).

[P ಇಲ್ಲಿ ಪಾಠಾಂತರವೇ ಹೆಚ್ಚು ಗ್ರಾಹ್ಯವೆಂದು ತೋರುತ್ತದೆ]

ತಿಱುವಂಗಡಿ (ನಾ). = ತಿರುಮಾಳಿಗೆ: ವಿದ್ಯಾರ್ತ್ಥಿತಪೋಧನರಾಹಾರ ದಾನಕ್ಕಮೆನ್ದು ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಉತ್ತಮದ ಬಳಕ್ಕೆ ತಿಱುವಂಗಡಿ ೧ ಮತ್ತಮಂಗಡಿಗಳೊಳ್ಪಣ ೧ . . . ಕೊಟ್ಟರ್ (ಎಇ. V, ೩೪೩-೩೦; 1093). [< ತಿರು$_2$ + ಅಂಗಡಿ (< ಅಂಗಾಡಿ)]

ತಿಱುವಂತ (ನಾ). ಒಬ್ಬಾತನ ಹೆಸರು: ಪತ್ತುಗದ್ಯಾಣ ಪೊನ್ನುಂ ಇಟ್ಟಾಱು ಭತ್ತವುಂ ತಿಱುವನ್ತಗೆ ಕಾದಿಯಣ್ಣಂ ಕೊಟ್ಟಂ (ಎಕ. IX, ಮುಳಬಾ. ೨೦೮-೩೪; 1000). [< ತಿರು$_2$ + – ವಂತ]

ತಿಱ್ಱಂದಿರಿ (ಕ್ರಿ). ವೇಗವಾಗಿ ತಿರುಗು; ಭರದಿಂದ ಸುತ್ತು: ಜಳಧಿಯ ನೀರ್ತುಳುಂಕಿದವು ಧಾತ್ರಿ ತಿಱ್ಱಂದಿರಿದತ್ತು ದಿಗ್ಗಜಂ ಮದವೆತ್ತಿ ಕಟ್ಟಿದುದು (ಮಹಾನೇ. ೧೦-೦೨೯). [< ತಿಱ್ಱನೆ + ತಿರಿ$_1$]

ತಿಱ್ಱಗೆ (ಅ). ತಿರುಗುವುದನ್ನು ಸೂಚಿಸುವ ಒಂದು ಅನುಕರಣಾವ್ಯಯ: ಅಸುರು ಗದೆಯುಂ ತಿಱ್ಱಗೆ ತಿರುಪಿದೊಡೊಡನೆ ತಿರುಗುಗುಂ ಭೂಚಕ್ರಂ (ಜಗವಿ. ೯-೬೩). [ತಿಱ್ಱ್$_0$ + – ಅಗೆ$_8$]

ತಿಱ್ಱನೆ, ತಿರ್ರನೆ (ಅ). ೧. = ತಿಱ್ಱಗೆ: ಬಾಣಗಳ್ಬಂದರಿಗಳನೆತ್ತಿ ತಿಱ್ಱನುದ್ದದೊಳು ತಿರುಗಿಸಿ (ಪಂಪ್ರಸಾಂ. ೮-೫೨). ತಿರ್ರನೆ: ೨. ಶೀಘ್ರವಾಗಿ; ವೇಗವಾಗಿ: "ತಿರ್ರನೆನೆ ತಿಬ್ಬಮೆನೆ ಶೀಘ್ರವಾಚಿಯಕ್ಕು" (ಕಶರ. ೪೫).

ತಿಱ್ಱನೆತಿರಿ=ಗಿರ್ರನೆ ಸುತ್ತು,—ಅಲೆ: ಆ ಗಾಲಿಯುಂ ಪದಿನಯ್ದುದಿವಸಂ ಬರೆಗಂ ತನಗೆ ತಾನೆಯಂತರಿಕ್ಷದೊಳ್ ನೆಲನಂ ಮುಟ್ಟದೆ ತಿಱ್ಱನೆ ತಿರಿಯುತ್ತಿರ್ದುದಂ ಕಂಡು (ಪದ್ಮಾರಾ. ೦೪೭-೧೫); ತಿರಿಪಿದೊಡದನೆಳೆ ತಿಱ್ಱನೆ ತಿರಿದುದು ತಿರುವಾಯೊಳಿಡೆ ಸುರರ್ ಮೊಱೆಯಿಟ್ಟರ್ (ಪಂಪಭಾ. ೧೨-೦೯೨); ಕುಧರ್ಮೋಪದೇಶದಿಂ ಸಂಸಾರಚಕ್ರದೊಳ್ ತಿಱ್ಱನೆ ತಿರಿದು (ಜಾಪುಂಪು. ೫೦-೨೮); ಸಂಸಾರದೊಳಗೆ ತಿಱ್ಱನೆ ತಿರಿವಯ್ (ಅಜಿಪು. ೨-೬೦); ಕರಟದ ಕದಿರಂತೆ ತಿರ್ಯಗ್ಜಾತಿಯೊಳ್ ತಿಱ್ಱನೆ ತಿರಿದುಂ (ಧರ್ಮಾಮ್ಯ. ೬-೦೭೫). ತಿಱ್ಱನೆ ತಿರಿಪು, ತಿಱ್ಱನೆ ತಿರುಹು = ಗಿರ್ರನೆ ಸುತ್ತುವಂತೆ ಮಾಡು; ಅಲೆಯುವಂತೆ ಮಾಡು: ಕೌಂತೇಯರಂ ಮಚ್ಚರದಿಂ ಕಾಂತಾರದೊಳ್ತಿಱ್ಱನೆ

ತಿರಿಪಿದ ಸೊರ್ಕೀಗಳೇನಾದುದು (ಗದಾಯು. ೭-೧೪) ; ತಿಱ್ಱನೆ ತಿರಿಪಿದಪಂ ಸುತ್ತಿಪಂ ಮುತ್ತಿಪಂ ಸಂಗರದೊಳ್ (ಎಕ. VIII, ಸಾಗರ. ೧೦೯-೨೫; 1042); ಗಱ್ಱನೆ ಪರಿತಂದು ಮಾಣದಚ್ಚುಳಕೋಲಿಂ ತಿಱ್ಱನೆ ತಿರಿಪಿ ದುರಾತ್ಮರ್ ...ಬಡಿದರ್ (ಧರ್ಮಾಮೃ. ೩-೧೯೦) ; ಸಱ್ಱನೆ ಸೀಳ್ವ ದಿಗ್ಗಜದ ಮಂಡೆಯ ಮೆಟ್ಟಿ ಸುಱ್ಱನೆ ಸುರಿವೆನೇಳ್ಗಡಲ ತಿಱ್ಱನೆ ತಿರುಹುವೆ ಧರಣಿಯ (ಮೋಹತ. ೧೨-೦೦). ತಿಱ್ಱನೆ ತಿರುಗು, ತಿರ್ರನೆ ತಿರುಗು=ತಿಱ್ಱನೆ ತಿರಿ: ಆನುಂ ತೊಡೆಯೆಡೆಯೊಳಿರ್ದೊಡಸಂದು ಸುಟ್ಟುರೆಯ ತಱಗೆಲೆಯಂತೆ ತಿಱ್ಱನೆ ತಿರುಗಿ ಬೀಳ್ವಲ್ಲಿ (ಕಾದಂಪೂ. ೦೮೫) ; ಕರಟದ ಕದಿರಂತೆ ತಿಱ್ಱನೆ ತಿರುಗುತ್ತುಂ (ಧರ್ಮಾಮೃ. ೨-೦೦೨); ಮಿಸುಗುವ ಡಮರುಗ ಢಂ ಢಂ ಡಣಲೆನೆ ತಿಸುಳದಿ ಹರಿಯುವ ತಾರಂ ತಿಱ್ಱನೆ ತಿರುಗುತ್ತಿರೆ (ಕುಂಬರ. ಹ. ೨೫೮-೭); ಕರಹತಿಗೆ ಧಡಧಡಿಸಿ ತಿಱ್ಱನೆ ತಿರುಗಿ ಬೀಳುತ (ಕುವ್ಯಾದ್ರೋ. ೬-೫೯) ; ನಭೋಗ್ರದಲಿ ರಥದ ಗಾಲಿ ತಿಱ್ಱನೆ ತಿರುಗುತಿರ್ದವು (ತೊರರಾ. ೩-೬-೦೩) ; ದೈತ್ಯ ಪೀತಾಂಬರನ ಮೊಮ್ಮನನೆಚ್ಚು ಕೆಡಹಿದ ಭೂತಲ ತಿಱ್ಱನೆ ತಿರುಗೆ (ಮೋಹತ. ೩೫-೪೬) ; ಶನಿಗ್ರಹಕ್ಕೆ...ತನ್ನ ಅಕ್ಷದ ಮೇಲೆ ತಾನೊಂದು ಬಾರಿ ತಿರ್ರನೆ ತಿರುಗುವುದಕ್ಕೆ ಕೇವಲ ೧೦ ಗಂಟೆಗಳಾದರೆ ಸಾಕು (ಆಕಾಶ. ೨೪). ತಿಱ್ಱನೆಯ್ತರ್=ವೇಗವಾಗಿ ಬರು : ಚತುರಂಗಂ ಚತುರಂಗಸೈನ್ಯದೊಳಡು [ರ್ತುಂ] ತಿಱ್ಱನೆಯ್ತಂದು ತಾಗಿ ತಡಂಮೆಟ್ಟದೆ ಕಾದೆ (ಪಂಪಭಾ. ೦೦-೭) ; ಮಿಂಚಂ ತಟ್ಕೈಸಿದ ಕಾರ ಕಾರ್ಮುಗಿಲಂತೆ ತಿಱ್ಱನೆಯ್ತರ್ಪ ದಮಿತಾರಿಯಂ ನೋಡಿ (ಶಾಂತಿಪು. ೪-೫೨ವ). [ತಿಱ್$_0$ + – ಅನ್$_1$]

ತಿಟ್ಟಿಲೂರ್ (ನಾ). ಒಂದು ಊರಿನ ಹೆಸರು : ಬಿನಯಾದಿತ್ಯರಸರ್ ಕೊಱಿಕುನ್ದಾಳ್ಕೆ ಮೂನೂಱು ಆಳುತ್ತಿಟ್ಟು ತಿಟ್ಟಿಲೂರ ತಾಯನ್ದೆಯರ ಪೂರ್ವ್ವಜರಾ ಪಡದೊದು ಉತ್ತಮಮೆಣ್ಡ ಎಮ್ಬಾ ಕಟನಿ (ಎಕ. XI (s), ಹೊಳಲ್ಕೆ. ೦೯೦-೪ : 800). [? + ಊರ್]

ತಿಟ್ತಮ್ಮ (ನಾ). ಒಬ್ಬಾತನ ಹೆಸರು : ಸಡಗರರ ತಿಟ್ತಮ್ಮಂ ವಿಕ್ರಮಮೆಂಬ ವರ್ಷದೊ[ಳ್] ಗೋಶಹಶ್ರಮಿಟ್ಟೊ[ಂ] ಪೂದಾರುಂ ಬೆಳೆವತ್ತರುಂಗೊಟ್ಟೊ[ನ್] (ಸೌಇಇ. XX, ೦೬-೩ : 930). [? + ಅಮ್ಮ$_1$]

Δ ತಿಟ್ಟು 'ತಿರ್ದು$_1$' ನೋ.

ತೀಂಗಿಡಿಸು (ಕ್ರಿ). ನವೆಯನ್ನು ನಿವಾರಿಸು, – ಕಳೆ : ಕೋಡನಿಟ್ಟು ತೀಂಗಿಡಿಪುವ ಕರ್ಣತಾಳದೆಲರಿಂ ಬೆಮರಾಱಿಪ ಕೆಯ್ತಮೊಪ್ಪೆ ಬಲ್ಪಿಡಿಪಿಡಿ ದಿರ್ದುದಂಗಜನ ಕಯ್ಪಿಡಿಯಂ ಪಿಡಿಯಂ ಮತಂಗಜಂ (ಪುಷ್ಪಪು. ೫-೮೦).

[ತೀನ್ + ಕಿಡಿಸು (<ಕಿಡಿಸು$_1$)]

ತೀಂಟು, ತೀಟು, ತೀಡು$_1$ (ಕ್ರಿ). ೧. ಮುಟ್ಟು ; ತಾಕಂ ; ತಗಲು : ಉಚ್ಚಳಚ್ಚೀಕರತತಿ ನಭವಂ ತೀಂಟುವನ್ನಂ . . . ಶೋಭಿಸುವುದು ಮಣಿಮಾಲಾಂಶುಭದ್ರಂ ಸಮುದ್ರಂ (ಕುಸುಮಾ. ೧-೨೨). ತೀಟು : ೧. ಆರು ಮೀಟುವರೆನ್ನ ತೋಟಿಯನಿಂತು ಕಾಣದ ಕೈಯಲಿ ? ಆರು ತೀಟುವರೆನ್ನ ಬಾಗಿಲನಿಂತು ಕೇಳದ ಕರೆಯಲಿ ? (ಕವಿಕ. ೮೮-೭). ತೀಡು$_1$: ೧. ಗಾಡಿ ಒಂದು ಸಾರಿ ಬಲವಾಗಿ 'ಜಟಕ' ಹಾಕಿದಾಗ ನಾಗವೇಣಿಯ ಮೂಗು ಶಂಕರನ ಹೆಗಲಿಗೆ ತೀಡಿತು (ಗಿರಿಪಾ. ೨೩). ೨. (ಗಾಳಿಯಂತೆ) ಬೀಸು; ಸುಳಿ: "ತೀಡು-ವಾಯು ಸ್ಪರ್ಶನೇ" (ಶಮಧಾ) ; ಹರಿಚಂದನ ಕಾಳಾಗರು ಮಲಯಜ ತುರುಷ್ಕಾದಿಗಳ ಕಂಪು ಬಂದು ತೀಡಿದೊಡೆ (ವಡ್ಡಾರಾ. ೫೫-೩) ; ನೀಂ ಮೆಲ್ಲಮೆಲ್ಲನೆ ಮಂದಾನಿಳ ತೀಡು ಕೋಗಿಲೆ ಸರಂದೋಱು (ಆದಿಪು. ೧೨-೪೪) ; ಭ್ರಮರರವಂಗಳೊಳ್ ಬೆರಸಿ ಮಾರುತನೊಯ್ಯನೆ ಬಂದು ತೀಡಿದತ್ತು (ಕಾದಂಪೂ. ೬೩೩) ; ತೀಡಿತ್ತು ಬಂದು ಮಂದಸಮೀರಂ (ಪಂರಾಮಾ. ೦೬-೮೩) ; ಲೋಭದ ಗಾಳಿ ತೀಡದು ಮೋಹಕೆ ತೆಱಹಿಲ್ಲ (ಬಸರ. ೮-೫೩) ; ತಾವರೆಯ ತನಿ ಪರಿಮಳದ ವಿಸರದ ಹಸರದಲಿ ತೀಡಿದುದು ತಂಗಾಳಿ (ತೊರರಾ. ೨-೭-೩); ಪರಿಪರಿ ಕಜ್ಜಾಯಗಳ ಪರಿಮಳದಿಂಪು ಬೀದಿಯೊಳೆಡೆಯಾಡುತಿಪ್ಪರ ಮುಖಾಬ್ಜಕೆ ತೀಡುತಿಹುದು (ಕಂನವಿ. ೬-೫೦).

[ದೇ.॥ ತಮಿ. ತೀಣ್ಬು ; ಮಲ. ತೀಣ್ಡು ; ಕೊಡ. ತೀಂಡ್]

ತೀಂಟೆ$_1$, ತಿಂತಿ, ತಿಂತೆ, ತೀಂತೆ, ತೀಟ್ಟ$_3$, ತೀಟೆ (ನಾ). ೧. ನವೆ ; ಕಡಿತ; ತಿಮಿರು; ತುರಿಕೆ : "ಕಂಡೂ:-ತೀಂಟೆ" (ಕಾಶಕ್ಕ. ೨೫); ಮದಕರಿ ತೀಂಟೆಗೊಲ್ದೊರಸೆ ಭೂರುಹಕಂಧರದೊಳ್ ಜಿಗಿಲ್ತು ಪತ್ತಿದ ಮದ ಸೌರಭಕ್ಕೆ ಸುಳಿಗೊಳ್ವಳಿಮಾಲೆ (ಕುಸುಮಾ. ೧೪-೦೨೦); ಸುರಾಸುರಾವಳಿಗಳ ಮಹಾಗರ್ವವೆಂಬ ತೀಂಟೆಯ ತೀರ್ಚುವಾ . . . ನೆವದೊಳ್ (ವೀಶ್ಕೃಪು. ೨-೩-೫); ಪುಲ್ಲಂ ಮೇಯಲೆಳಸಿ ಬಂದು ಮೆಯ್ಯ ತೀಂಟೆ [ಪಾತಾಂ. ತಿಂಟೆ, ತಿಂತಿ]ಗೆ ಪುಲಿ ಪೊರಳ್ದು ಪೋದ ತಾಣದೊಳ್ ನಿಂದು . . . ಹಮ್ಮದುಂಬೋದ ಹರಿಣಂಗಳಿಂ (ರಾಜಶೇ. ೫-೫೫ವ). ೨. ಚಾಪಲ್ಯ; ತೀವ್ರವಾದ ಆಸೆ, —ಅಪೇಕ್ಷೆ : ಪುಲಿಯಂ ತೊಟ್ಟನೆ ಕಂಡು . . . ಪಾಯ್ದು ಪೊಯ್ದು ಕೋಡಿಟ್ಟು ಜಲ್ಲಿಸಿ ಬಿಸುಟ್ಟು ನೊಸಲ ತೀಂಟೆ ತೀರದೆ ಕೊಣಕಿಟ್ಟು (ಗಿರಿಕ. ೦-೦೨೮ವ) ; ಖಡ್ಗವಾಯ್ದಣಿಯೆ ನಿಜಭುಜದ ತೀಂಟೆ ಹರೆಯೆ ಹಗೆಗಳ ಕೊಂದು (ಹಚಕಾ. ೦೦-೧೪). 'ನಾಲಗೆದೀಂಟೆ' ಪರಾ. ತಿಂತಿ: ೧. ಮೆಯ್ಯೊಳೋರಂತಮರ್ದ ಕುಷ್ಠಾಮಯದ ತಿಂತಿಯಂ ತುಱಿಸುತ (ಪದ್ಮರಾ. ೪-೬೪). ತಿಂತೆ : ೩. (ಆಲಂ) ನಾಲಗೆಯ ತುರಿಕೆ ; ಬೇರೆಯವರನ್ನು ನಿಂದಿಸಬೇಕೆಂಬ ಲವಲವಿಕೆ, – ಆತುರ : ಜಗಳವ ಹತ್ತಿಸುವೆನೆಂದು ಚಿಂತಿಸುವ ಮನ ಕೊಂಡಯಕ್ಕೆಳಸಿ ಗದಗದನೆ ತಿಂತೆ [ಪಾತಾಂ. ತಿ] ಮಸಗುವ ಬಾಯಿ (ಸೋಮಚ. ೦-೨೯) ; ಬಾಯಿ ತಿಂತೆ [ಪಾತಾಂ. ತಿ] ಪರವಂತೆ ಪೊಗಳುತೆ ನೇಹದಿಂ ನೋಡು ತಿರ್ಪಾಗಳ್ (ಪದ್ಮರಾ. ೩-೭೨). ತೀಂತೆ : ೨. 'ನಾಲಗೆತೀಂತೆ' ಪರಾ. ತೀಟ್ಟ$_2$: ೧. ಆ ಕುಣಿಕೆಯ ತೀಟದಿಂದೊಮ್ಮೆ ಆಶ್ರಮದ ಪರಿಸರದಲ್ಲಿ ಅಲೆಯತ್ತಿದ್ದನು (ನಾಡೋಜ. ೪). ತೀಟೆ : ೧. ಮೇಣೊಂದನೊಂದೊದೆದು ಹಿಂದಣ ಖುರಂಗಳಿಂ ಮಾಣದಡಿಗಡಿಗೆ ಕಂದದ ತೀಟೆಗಳ ತೀಡಿ . . . ಬಿಱುಗೊಂಡವು (ಚೈಮಿಭಾ. ೨೫-೮) ; ಪೀಠ ಮೂಢಗೆ ಹೊಲ್ಲ ಕೀಟ ನಿದ್ದೆಗೆ ಹೊಲ್ಲ ತೀಟೆಯದು ಹೊಲ್ಲ ಕಜ್ಜಿಯ (ಸರ್ವಜ್ಞ. ೮೨೦); ಕೂರ್ಮಾವತಾರ ಮಾಡಿದ ಸ್ವಾಮಿಯ ಬೆನ್ನಿನ ತೀಟೆಯ ನಿವಾರಿಸುವನ: (ಕೇಷಧ. ೨೫-೩೨); ಮಂಡೆಯ ತೀಟೆ, ಸೀನು . . . ಇವು ಜ್ವರ ಬಿಡುವವನ ಲಕ್ಷಣ (ವೈದ್ಯಸಾ. I, ೪೯). ೨. ಭಕ್ತರಿಗೆನ್ನ ಕೈಗಳ ತೀಟೆ ಹೋಗಲ್ಕೆ ತೊತ್ತುಗೆಲಸಂಗೆಯ್ಯಲನುವಾಯಿತ್ತೆನುತ (ಬಸಪು. ೨೦-೭) ; ತೋಳ ತೀಟೆಯನವನ ನೆತ್ತಿಯ ಮೇಲೆ ಕಳೆವೆನು (ಕುವ್ಯಾಭೀ. ೧-೬೦) ; ನಿನ್ನ ಯುದ್ಧದ ತೀಟೆಯನ್ನು ತೀರಿಸಿಬಿಡುತ್ತೇನೆ (ಪಚಭಾ. ೩೦೭). ೪. ಬೆದೆ ; ನಸೆ : ಆ ತೀಟೆ ತೀರಿಸಿಕೊಳ್ಳುವ ಅಭಿಲಾಷೆಯಿಂದ ಅವನು ಪಾತರ ಪಾರಿಯನ್ನು ಸಂಧಿಸಬಹುದಾಗಿತ್ತು (ದೀಪಹ. II, ೦೯೨) ; ತೀಟೆಗೆ ಮಕ್ಕಳ ಹೆತ್ತು ತಿರುಮಲದೇವರ ಹೆಸರಿಟ್ಟ ಹಾಗೆ (ಗಾದ). ೫. ಕೀಟಲೆ ; ಚೇಷ್ಟೆ ; ತುಂಟತನ: ನನ್ನ ತಮ್ಮ ತೀಟೆಯವ (ಚಿಂಗೂಲಿ. ೧೪೦). ೬. ಕೋಟಲೆ; ತೊಂದರೆ ; ಪೀಡೆ : ಇನ್ನೊಂದು ವರ್ಷದ ತನಕ ತೀಟೆ . . . ತಪ್ಪಿತು (ನನ್ನೂರು. ೦೪೮). ೭. ಅಗತ್ಯ ; ಆವಶ್ಯಕತೆ : ಅಲ್ಲಿಗೆ ಬರೋಕೆ ನನಗೇನು ತೀಟೇನೆ ? (ಮುನಿಮಾ. ೮೦) ; ತೀಟೆಯಾದರೆ ತಾನೇ ಬರುತ್ತಾನೆ (ರೂಢಿ).

[ದೇ.॥ ತೆಲು. ತೀಟ, ತೀಂಟ್ರ]

ತೀಂಟೆ$_3$ 'ತಿಟ್ಟು$_3$' ನೋ.

ತೀಂಟೆತ್ತು (ಕ್ರಿ). ನವೆಯುಂಟಾಗು ; ತುರಿಕೆಯಾಗು : ಪಿರಿದುಂ ತೀಂಟೆತ್ತಿ ಗಂಡಸ್ಥಳಮನನುದಿನಂ ಕಾಡ ಸೊಕ್ಕಾನೆಗಳ್ಬಂದೊರಸಲ್ (ಕಾದಂಪೂ. ೨೨೨).

[ತೀಂಟೆ$_1$ + ಎತ್ತು$_1$]

ತೀಂತೆ 'ತೀಂಟೆ$_1$' ನೋ.

ತೀಂತೇರಾ 'ತೀನತೇರ' ನೋ.

ತೀಕು 'ದೇಕು' ನೋ.

ತೀಕ್ಷ್ಣ (ಗು). ೧. ಚೂಪಾದ; ಹರಿತವಾದ: ಸುರಶರಾಸನದಂತೆ ನಿರ್ಗುಣರುಂ ತೀಕ್ಷ್ಣಕೌಕ್ಷೇಯದಂತೆ ನಿಸ್ತ್ರಿಂಶಭಾವರುಂ (ಸುಕುಮಾ. ೨-೫ಪ); ಉತ್ಪಾತ ತೀಕ್ಷ್ಣಕೌಕ್ಷೇಯಕಸನಾಥಶಯನ ಪಾರ್ಶ್ವಭಿತ್ತಿಭಾಗಮುಂ (ಚಂದ್ರಪು. ೩-೯೭ ಪ). ೨. ಬಿಸುಪಾದ; ಉಷ್ಣವಾದ. 'ತೀಕ್ಷ್ಣಾಂಶು' ಪರಾ. ೩. ಕ್ರೂರವಾದ; ನಿರ್ದಯವಾದ: ಅನ್ನೆಗಮಿತ್ತ ವಿಭೀಷಣಾದೇಶದಿಂಬಂದ ತೀಕ್ಷ್ಣಪುರುಷರ್ ಪುರಮಂ ಪೊಕ್ಕು (ಪಂರಾಮಾ. ೩-೨೭ಪ); ತನ್ನಂ ಕೊಲಲರಸನಟ್ಟಿದ ತೀಕ್ಷ್ಣಪುರುಷಂ ಬಂದು (ಪಂರಾಮಾ. ೧೦-೯೩ ಪ). ೪. ಕಟುವಾದ; ಖಾರವಾದ. ೫. ಬಲವುಳ್ಳ; ಶಕ್ತಿಯುಳ್ಳ. ೬. ತವಕಿಸುವ; ಆತುರವುಳ್ಳ. (ನಾ). ೭. ಹರಿತವಾದುದು; ಚುರುಕು: "ತಿಕ್ಕೆನೆ ತೀಕ್ಷ್ಣಂ" (ಕವಿಕಂ. ೫೪); ಅವನ ಕಣ್ಣು ಹದ್ದಿನ ಕಣ್ಣಿನ ಹಾಗೆ ಬಲು ತೀಕ್ಷ್ಣ (ಮುಂಬಯಿ. ೪-೪೩); ಅವಳ ಬುದ್ಧಿ ತೀಕ್ಷ್ಣ (ಮಲೆನಾ. ೧೫). ೮. ಉಷ್ಣತೆ; ಬಿಸಿ: "ತಿಗ್ಮಂ, ತೀಕ್ಷ್ಣಂ, ಖರಂ–ಈ ೩ ಬಿಸಿಯ ಹೆಸರು" (ಸಿದ್ಧಾಂತಿ. ೩೩) ೯. ಕಠಿನವಾದುದು; ನಿಷ್ಠುರವಾದುದು: "ತೀಕ್ಷ್ಣಂ ಪರುಷಾಹ್ವಯಂ" (ನಾನಾರ. ೧೨೦). ೧೦. ತೀವ್ರತೆ. ೧೧. ಉಗ್ರತೆ. ೧೨. ಆಯುಧ. ೧೩. ವಿಷ; ನಂಜು: "ಬ್ರಹ್ಮಪುತ್ರಃ ... ತೀಕ್ಷ್ಣಃ–ಈ ೭ ವಿಷಂ" (ಹಲಾಯು. ೦೦೬-೨೪); "ರಸಂ ತೀಕ್ಷ್ಣಪ್ರದೀಪನ ಮದೋರಂತೆ ವಿಷಮಕ್ಕು" (ಮಂಗರಾ. ೦೦೯-೫). ೧೪. ಕಬ್ಬಿಣ; ಉಕ್ಕು: "ಶಸ್ತ್ರಂ, ತೀಕ್ಷ್ಣಂ, ಅಯಃ, ಪಾರಸವಂ–ಈ ೪ ಉಕ್ಕು" (ಹಲಾಯು. ೨೮-೧೭). ೧೫. ಕಾಳಗ; ಯುದ್ಧ. [ಸಂ.]

ತೀಕ್ಷ್ಣಗಂಧಕ (ನಾ). ಒಂದು ಬಗೆಯ ಮರ; ನುಗ್ಗೆ: "ಶೋಭಾಂಜನಃ, ಶಿಗ್ರುಃ, ತೀಕ್ಷ್ಣಗಂಧಕಃ...ನುಗ್ಗೆಮರದ ಹೆಸರು" (ಸಿದ್ಧಾಂತಿ. ೦೦೫). [ಸಂ.]

ತೀಕ್ಷ್ಣಗು (ನಾ). ಬಿಸುಪಾದ ಕಿರಣಗಳುಳ್ಳವನು; ಸೂರ್ಯ: ಏಟನೆಯ ಗೇಹಂ ಕನ್ನೆಯಾದಂಶು . . . ತೀಕ್ಷ್ಣಗು ಲಗ್ನಸ್ಥಿತನಾಗೆ ಪೆಣ್ಣ ಕತದಿಂ ಸಾಯ್ಗುಂ ನಿಜಾವಾಸದೊಳ್ (ಜಾತತಿ. ೨೩-೮). 'ತೀಕ್ಷ್ಣಗುಜ' ಪರಾ. [ಸಂ. (ತೀಕ್ಷ್ಣ + ಗೋ + –)]

ತೀಕ್ಷ್ಣಗುಜ (ನಾ). ಸೂರ್ಯನ ಮಗ; ಶನಿ: ಪಗಲೊಳ್ ತಂದೆ ದಿವಾಕರಂ ಜನನಿ ಶುಕ್ರಂ ರಾತ್ರಿಯೊಳ್ ತಂದೆ ತೀಕ್ಷ್ಣಗುಜಂ ಮಾತೃ ಸುಧಾಮರೀಚಿ (ಜಾತತಿ. ೩-೬). [ಸಂ.]

ತೀಕ್ಷ್ಣಗೊಳಿಸು (ಕ್ರಿ). ಉಜ್ವಲವಾಗುವಂತೆ ಮಾಡು; ಹರಿತಗೊಳಿಸು: ಯಾವುದರ ಮೇಲೆ ಗಮನವಿಡಬೇಕೋ ಅದರ ಹೊಳಪು, ಬಣ್ಣ, ಆಕಾರ, ಶಬ್ದ ಮುಂತಾದ ಗುಣಗಳನ್ನು ತೀಕ್ಷ್ಣಗೊಳಿಸುವುದರಿಂದ ಮಕ್ಕಳ ಅವಧಾನ ಅದರ ಕಡೆ ಚೆನ್ನಾಗಿ ಬೀಳುತ್ತದೆ (ಶಿಕ್ಷದ. ೪೭೮).

[ತೀಕ್ಷ್ಣ + ಕೊಳ್$_1$ + – ಇಸು$_3$]

ತೀಕ್ಷ್ಣತೆ (ನಾ). ಚುರುಕು: ಗಮನ ವಿಸ್ತರಿಸುವ ಪರಿಮಾಣಕ್ಕೆ ವಿಲೋಮವಾಗಿ ಅದರ ತೀವ್ರತೆ ತೀಕ್ಷ್ಣತೆಗಳು ಕಡಿಮೆಯಾಗುತ್ತವೆ (ಶಿಕ್ಷದ. ೩೧೪); ಸಹಜವಾದ ದೃಷ್ಟಿಯ ತೀಕ್ಷ್ಣತೆ ಎಂದರೆ . . . ಓದುವ ಚಾರ್ಟಿನ ಸಾಲನ್ನು ಗುರುತಿಸುವ ಶಕ್ತಿ (ನಿಮ್ಮದೃ. ೬೩). [ಸಂ. ತೀಕ್ಷ್ಣತಾ]

ತೀಕ್ಷ್ಣಧಾರೆ (ನಾ). ಹರಿತವಾದ ಅಲಗುಳ್ಳ ಕತ್ತಿ: ಸಾಲದೀವಿಗೆಗಳನು ಶಸ್ತ್ರಜ್ವಾಲೆ ಮಿಕ್ಕವು ತೀಕ್ಷ್ಣಧಾರಾಭೀಳವಿಕ್ರಮವಿಸ್ಫುಲಿಂಗಿತವಾದವಡಿಗಡಿಗೆ (ಕುಮ್ಮಾಕ. ೮-೭). [ಸಂ. ತೀಕ್ಷ್ಣಧಾರಾ]

ತೀಕ್ಷ್ಣಬುದ್ಧಿ (ನಾ). ೧. ಚುರುಕಾದ ಬುದ್ಧಿ; ಹರಿತವಾದ ಬುದ್ಧಿ: ವಿಜ್ಞಾನಿಗಳಲ್ಲಿ ವಿಚಾರಪರತೆ, ತೀಕ್ಷ್ಣಬುದ್ಧಿ . . . ಇಂತಹ ಹಲವು ಉತ್ತಮಗುಣಗಳಿದ್ದರೂ (ಪುಕ್ಕಾರ. ೨೬ ಪೀಠಿಕೆ). ೨. ಚುರುಕಾದ ಬುದ್ಧಿಯುಳ್ಳವನು. [ತೀಕ್ಷ್ಣ + ಬುದ್ಧಿ]

ತೀಕ್ಷ್ಣಮತಿ (ನಾ). ೧. ಚುರುಕಾದ ಬುದ್ಧಿ: ಈ ಸಣ್ಣ ವಿಷಯನಿನ್ನ ತೀಕ್ಷ್ಣಮತಿಗೆ ಹೊಳೆಯಲಿಲ್ಲವೆ? (ರೂಢಿ). ೨. ಚುರುಕಾದ ಬುದ್ಧಿಯನ್ನುಳ್ಳವನು: ನೆಕ್ಲುದೋವ್ ತೀಕ್ಷ್ಣಮತಿಯೆಂದು ಗಣ್ಯನಾಗಿದ್ದುದರಿಂದ . . . ಅವಳ ಆಪ್ತವರ್ಗದಲ್ಲೊಬ್ಬನಾಗಿದ್ದನು (ಪುನರು. ೧೨೦); ಪ್ರತಿಯೊಂದು ಹೊಸಗ್ರಂಥವನ್ನು ತೀಕ್ಷ್ಣಮತಿಯಾಗಿ ತೀವ್ರಗತಿಯಿಂದ ಅವಲೋಕಿಸಬೇಕು (ಗ್ರಂಥಾಲ ೬೯). [ತೀಕ್ಷ್ಣ + ಮತಿ]

ತೀಕ್ಷ್ಣಾಂಶು (ನಾ). = ತೀಕ್ಷ್ಣಗು: ತೀಕ್ಷ್ಣಾಂಶುವಿಂ ಸೌಮ್ಯನಿಂ ತ್ವರಿತಂ ಶುಕ್ರನೆ ಮಿಕ್ಕು ಪೋಗೆ ಮಜಿಗಳ್ ಕೊಳ್ಗುಂ ಧರಾಚಕ್ರದೊಳ್ (ಇಟ್ಟಮ. ೭-೦೨೪). [ತೀಕ್ಷ್ಣ + ಅಂಶು]

ತೀಕ್ಷ್ಣಾಗ್ನಿ (ನಾ). ಜಠರಾಗ್ನಿಯ ನಾಲ್ಕು ಸ್ಥಿತಿಗಳಲ್ಲಿ ಒಂದು; ಪಿತ್ತಾಗ್ನಿಯಿಂದ ಉಂಟಾಗುವ ಉಷ್ಣ: ತೀವ್ರವಾದ ಜಠರಾಗ್ನಿ ವಿಷಮಾಗ್ನಿಯಲ್ಲಿ ವಾತಹರ ಚಿಕಿತ್ಸೆಯನ್ನೂ, ತೀಕ್ಷ್ಣಾಗ್ನಿಯಲ್ಲಿ ಪಿತ್ತಶಮನ ಕ್ರಿಯೆಯನ್ನೂ ಮಾಡುವುದು (ಸಕವೈ. ೦೬). [ತೀಕ್ಷ್ಣ + ಅಗ್ನಿ]

ತೀಕ್ಷ್ಣಾಪಾಂಗ (ನಾ). ಮೊನಚಾದ ಕಟಾಕ್ಷ: ತಿಮಿರಚಿಕುರಂ ತೀಕ್ಷ್ಣಾಪಾಂಗಂ ಘನಂ ಜಘನಸ್ಥಳಂ ಕಮಳಚರಣಂ ಕಣ್ಗೊಪ್ಪಿತಾ ಧರಾಧಿಪಕಾಂತೆಯಾ (ರಾಜಶೇ. ೩-೧೮). [ತೀಕ್ಷ್ಣ + ಅಪಾಂಗ]

ತೀಕ್ಷ್ಣೀಕರಣ (ನಾ). ಹರಿತಗೊಳಿಸುವಿಕೆ: "ತಿತಿಕ್ಷ—ಶಾತನೇ, ಕ್ರಮಾಯಾಂಚ, ತೀಕ್ಷ್ಣೀಕರಣದೊಳಂ, ತಾಳ್ಮೆಯೊಳಂ, ದೀಪ್ತಿಯೊಳಂ" (ಕಾಶಕೃ. ೯೭). [ಸಂ.]

ತೀಕ್ಷ್ಣೀಕರಿಸು (ಕ್ರಿ). ತೀಕ್ಷ್ಣಗೊಳ್ಳುವಂತೆ ಮಾಡು: "ತಿತಿಕ್ಷತೇ–ತೀಕ್ಷ್ಣೀಕರಿಸಿದಪಂ" (ಕಾಶಕೃ. ೯೭). [ತೀಕ್ಷ್ಣೀಕರಣ + – ಇಸು$_3$]

ತೀಕ್ಷ್ಣೋಪಾಯ (ನಾ). ಪ್ರಬಲವಾದ ಉಪಾಯ; ಉಗ್ರವಾದ ಉಪಾಯ; ಕಟುವಾದ ಉಪಾಯ: (ಕಿ).

[ತೀಕ್ಷ್ಣ + ಉಪಾಯ]

ತೀಕ್ಷ್ಣೌಷಧ (ನಾ). ಕಟುವಾದ ಔಷಧ; ಕಹಿಯಾದ ಮದ್ದು: ಕೊಲುತಿರ್ಪಯ್ಯಗಳೋದು ಬೇನೆಯಳಿವಾ ತೀಕ್ಷ್ಣೌಷಧಂ...ಮುಂ ಪಲಕಷ್ಟಂ ಕಡೆಗೊಳ್ಳಿತೈ (ಸೋಮೇಶ.೯೬). [ತೀಕ್ಷ್ಣ + ಔಷಧ]

ತೀಗ 'ತಿಕ' ನೋ.

ತೀಟ$_1$ (ನಾ). ೧. ಮೃದುವಾದ ಸ್ಪರ್ಶ,—ಸೋಂಕು: ತಿಳಿಪಲಡಿಗೆಱಗಿ ದೋಪನ ತಳಂಗಳಾ ತೀಟದಿಂ ಪದಂಗಳೊಳೊಗೆದಾ ಪುಳಕಚಯಂಗಳ್ ಕಳೆದುವು ಮುಳಿಸಂ ನಲ್ಲಳ್ಗೆ (ಕವಿರಾ. ೩-೦೦೮); ಅಲರ್ದಲರ್ಗಣ್ಗಳ್ ನೋಟದೆ ಸುಲಲಿತ ತನು ಶಿಶುವ ಮೈಯ್ಯ ತೀಟದೆ ತನಗಗ್ಗಲಿಸಿದಲಂಪಂ ಕುಡೆ (ಆದಿಪು. ೭-೪೭). ೨. (ಗಾಳಿ) ತೀಡುವಿಕೆ; ಬೀಸುವಿಕೆ: "ತೀಟ ಮೆಂದುಂ ತೀಡೆಂದುಂ ತೀಡುವುದೆಂದುಂ ಊದುವುದೆಂದುಂ ವಾಯು ಸಂಚಾರಂ" (ಕಶಸಾ. ೩೦-೬೬೧); ಒದವಿ ಬಸಂತದೊಳ್ಬಯಸಿದಂದದ ತೆಂಬೆಲರೊಂದು ತೀಟಮಿಲ್ಲದ ಸಹಕಾರವಲ್ಲರಿಯ ತೋರ್ಕೆಗಮೊಪ್ಪುವ ಭೃಂಗ ಸಂಗಮಿಲ್ಲದ ನವಪದ್ಮಿನೀಮುಕುಳದಿಕ್ಕೆಗಮೆನೆ ನೆಱಿಯಾಗಿ ಶೋಭೆವೆತ್ತುದೊ ಪರಿಶೋಭೆವೆತ್ತಿರೆ ವಿಲಾಸದ ವಿಭ್ರಮದೇಟ್ಗೆ ಕನ್ನೆಯಾ (ಸುಕುಮಾ. ೫-೬೦); ದಿನಕರನ ಹಯಂ ಗಗನಾಧ್ವಖೇದಮಂ ಪಟಯಿಗೆಗಳ ತಣ್ಣೆಲರ ತೀಟದಿಂ ತೊಲಗಿಸುಗುಂ (ಪಂರಾಮಾ. ೧-೦೦೬); ತೆಂಕಣಗಾಳಿಯ ತೀಟದಿ ವನತರುಸಂಕುಳ ಚಿಗುರೇಱುವಂತೆ (ಭರಪ. ೫೫-೮೧); ಮರಗಳ ದಟ್ಟೈಸುವಿಕೆಯಿಂದ ತಂಗಾಳಿಯ ತೀಟಕ್ಕೆ ಅಡಚಣೆಯಾಗಿದ್ದರೂ ಅದರ ಕುಳಿರ್ಪು ಎಲ್ಲ ಕಡೆಯೂ ಹೆಸರಿಸಿತ್ತು (ಕಾನೂರು. ೪೨). ೩. ಚೇಷ್ಟೆ; ವಿನೋದ: ನಾಟಕಸತಿಯರಲ್ಲವೆ ನೀನು ತಾನೆಂದು ಚಾಟಾಗಿ ನುಡಿದರೆ ನೃಪಗೆ ತೀಟವೇಳುತಿದೆ ಸುಮ್ಮನೆ ನೋಡುತಿಹವಿವರಾಟವನೆಂದೆಣಿಸಿದರು (ಭರಪ. ೦೪-೯೦). [<ತೀಡು$_1$]

ತೀಟ್$_2$ 'ತೀಂಟ್$_1$' ನೋ.

ತೀಟಕಸಂದಿ 'ತೀಟಕಸಿಂಧ' ನೋ.

ತೀಟಕಸಂಧಿ 'ತೀಟಕಸಿಂಧ' ನೋ.

ತೀಟಕಸಿಂಧ, ತೀಟಕಸಂದಿ, ತೀಟಕಸಂಧಿ (ನಾ). ತುರುಚೆಯ ಬಳ್ಳಿ; ನಸುಗುನ್ನಿಗಿಡ: ತೀಟಕಸಿಂಧ ಬೇರಿನ ನಾರು ಒಂದು ಹಿಡಿ...ಕುಡಿಯಲು ಬಹುಮೂತ್ರ ನಿಲ್ಲುವುದು (ಶಕವೈ. ಪರಿ. ೫೦೦). ತೀಟಕಸಂಧಿ: ತೀಟಕ ಸಂದಿಬೇರು, ಬೆಲ್ಲವತ್ತದ ಬೇರು ಇವುಗಳನ್ನು ಸಮಭಾಗವಾಗಿ ಕಷಾಯವಿಕ್ಕಿ ಕೊಡಲು ಸದ್ಯದಲ್ಲಿ ಬರುವ ಜ್ವರಂ ಗುಣಮಕ್ಕುಂ (ಶಕವೈ. ೧೧೦). ತೀಟಕಸಂಧಿ: "ಯಾಸಃ, ಯಾವಾಸಃ...೧೦ ತೀಟಕಸಂಧಿ ಹೆಸರುಗಳು" (ಸಿದ್ಧಾಂತಿ. ೦೦೬); ತೀಟಕಸಂಧಿಬೇರು, ಕಕ್ಕೇಪಟ್ಟೆ ಇವುಗಳ ಕಷಾಯವನ್ನು ಹಾಕಿ ತೆಗೆದುಕೊಳ್ಳಲು ವಾತಶ್ಲೇಷ್ಮ ಜ್ವರಪರಿಹಾರವಾಗುವುದು (ಶಕವೈ.೯೬).

[← ತೆಲು. ತೀಟಕಸಿಂದ]

ತೀಟಕೋಗಿಲ (ನಾ). = ತೀಟಕಸಿಂಧ: ತೀಟಕೋಗಿಲಬೇರು, ತಳಸಿಂಗ ... ಧಾನ್ಯ ಪುಟವಿಟ್ಟು ಪ್ರಾತಃಕಾಲದಲ್ಲಿ ಒಂದು ದುಡ್ಡು ತೂಕ ಸೇವಿಸಿದರೆ (ಶಕವೈ. ಪರಿ. ೪೫೨). [← ತೆಲು. ತೀಟಕೋವಿಲ]

ತೀಟು 'ತೀಂಟು' ನೋ.

ತೀಟೆ 'ತೀಂಟ್$_1$' ನೋ.

ತೀಟೆಗಾರ (ನಾ). ೧. ಚಾಪಲ್ಯವುಳ್ಳವನು. 'ಬಾಯಿತೀಟೆಗಾರ' ಪರಾ. ೨. ಕುಚೇಷ್ಟೆ ಮಾಡುವವನು; ಕೀಟಲೆ ಮಾಡುವವನು.

[ತೀಟೆ (< ತೀಂಟ್$_1$) + – ಗಾರ (< – ಕಾಱ)]

ತೀಟೆಜಗಳ (ನಾ). ೧. ಕೀಟಲೆ ಜಗಳ. ೨. ಕೆಲಸಕ್ಕೆ ಬಾರದ ಜಗಳ; ವ್ಯರ್ಥವಾದ ಜಗಳ: (ಕಿ).

[ತೀಟೆ (< ತೀಂಟ್$_1$) + ಜಗಳ (< ಜಗಟ)]

ತೀಡಿಸು (ಕ್ರಿ). ಉಜ್ಜಿಸು; ತಿಕ್ಕಿಸು; ನೀವಿಸು: ನೋವು ಹೊರಟು ಹೋದ ನಂತರ ಕೈಕಾಲುಗಳನ್ನು ಚಲಿಸಬೇಕು, ಮಾಂಸಖಂಡಗಳನ್ನು ತೀಡಿಸಬೇಕು (ಕಲರೋ. ೪೮). [ತೀಡು$_2$ + – ಇಸು$_3$]

ತೀಡು$_1$ 'ತೀಂಟು' ನೋ.

ತೀಡು$_2$, ತಿವುಡು$_1$ (ಕ್ರಿ). ೧. ಮಸೆ; ಉಜ್ಜು; ತಿಕ್ಕು; ಹರಿತಮಾಡು: "ಧಾವನಂ ತೀಡುವುದೆನಿಕ್ಕುಂ" (ಮಂಗರಾ. ೧೦೦-೨೫); ದಾಡೆಗಳನಱ ಯೊಳಿಂಬಿಂ ತೀಡುತ್ತುಂ ತೀವ್ರಮಾಗೆ ಬಂಡಿಯ ಬರವಂ ನೋಡುತ್ತಿರ್ದಾ ಬಕನಂ ... ಕಂಡು ಮುಳಿದಂ ಭೀಮಂ (ಪಂಪಭಾ. ೩-೨೮); ತೀಡುತ್ತೆ ಕಲ್ಲಿಂದುರುದಂಷ್ಟ್ರಾಗ್ರಂಗಳಂ ಭೂಮಿಯನಿರದೆ ಬೆರಂಟುತ್ತೆ ಮುಂಗಾಲ್ಗ ಳಿಂದಂ (ಗಿರಿಕ. ೦-೦೦೫); ಕುಸುಮಶರಾಸ್ತ್ರಮಂ ಸಸಿಯ ಸಾಣೆಯೊಳೀ ಮಧುವೆಂಬ ಕಮ್ಮಱಂ ಮಸೆಯಲೆವೇಡಿ ತೀಡಿದನೋ (ಪಾರ್ಶ್ವಪು. ೯-೯೮); ಮುಮ್ಮೊನೆಯ ಸೂನಗೆಯ ಹೊಗರುಗಳ ತೀಡಿದರು (ಕುವ್ಯಾಭೀ. ೪-೯೧); ಗಂಡ ಹಂಡಿರ ಜಗಳಾ ಗಂಧ ತೀಡಿಧಾಂಗ (ಗರತಿ. ೭೬); ಚೌಕಟ್ಟಿನ ಮೇಲೆ ನೀರು ಹಚ್ಚಿ ಸಣ್ಣ ಹಲಗೆಯ ತುಂಡಿನಿಂದ ಅದನ್ನು ತೀಡುತ್ತಿದ್ದನು (ಕಪಪು. ೪-೧೩). ೨. ಅನುಲೇಪನಮಾಡು; ಲೇಪಿಸು; ಸವರು; ಬಳಿ: ನಲ್ಲರ ಶಿಖೆಗಾಗ ಪೂಮಾಲೆಗಳ ಸುತ್ತಿ ಮೆಲ್ಲೆದೆಗನುಲೇಪನವ ಸೆಳ್ಳು ಗುರೊಳು ತೀಡಿ (ಕಂನವಿ. ೨೫-೦೩೫); ಸವುತೆಯನು ಮೆಲುವ ನಾಲಗೆಗೆ ಸುಣ್ಣವನು ತೀಡಿ (ಕಎಪು. ೪೨-೫). ೩. ರೇಖಿಸು; ಬರೆ: ವಿಶಾಲಫಾಲದಲ್ಲಿ ಗೀರುಚಂದನರೇಖೆ ತೀಡಿಕೊಂಡು (ದೀಪಹ. II, ೮೯). ೪. ನೇವರಿಸು; ನೀವು: ಆತನ ಸರಳ ಸಾರವಂ ನಾಲ್ಕೆಂಟು ಕೂರಂಬಿನಿಂ ಕಡಿದು ನಾರಿಯಂ ತೀಡುತೆ (ಜೆಬಪು. ೫೦-೩೪); ತೀಡಿದಂ ತಿರುವನೇಱಿಸಿ ಮಿಡಿದು ಚಾಪಮಂ ತಾಗಿದಂ (ಜೈಮಿಭಾ. ೧೨-೪೬); ಪಿಡಿದೆತ್ತಿ ತಲೆಯ ಕೊರಲ ತೀಡಿ ಕೈಗಳಿಂ (ಕಾಲೂರ. ೧೭೩-೩೮೭). ೫. ಒತ್ತು; ಅದುಮು: (ಕಿ). ೬. ಹೊಡೆ; ಬಡಿ; ಥಳಿಸು: ಕುದುರೆ ಲಗಾಮು ಜಗ್ಗಿಸಿ, ಚಾಪಟಿ ಯಿಂದ ತೀಡಿ ... ಕುಳಿತುಕೊಂಡನು (ಪುನರು. ೫೫೮); ಕೆನ್ನೆಗೆ ತೀಡಿ ಕೊಡೆ ದಿದ್ದರೆ ಹೇಗೆ (ಹುಚ್ಚುಹು. ೧೮); ಅವನಿಗೆ ನಾಲ್ಕು ತೀಡು, ಆಗ ತಾನೇ ದಾರಿಗೆ ಬರುತ್ತಾನೆ (ರೂಢಿ). ೭. ಆರಿಸು; ನಂದಿಸು: ಅಂತು ನೋಡೆ ನೋಡೆ ಗಾಳಿ ತೀಡಿದ ದೀಪ ರೂಪದಂದದಿಂ ಶಾರದನೀರದಾಕಾರದಂದ ದಿಂದದೃಶ್ಯಾಕಾರನಾಗಿ(ಸುಕುಮಾ. ೧೦-೮೮); ಸಿಡಿಲಂ ದುರ್ಗುವ ಶೇಷ ನಂ ತುಡುವ ಕಲ್ಪಾಂತಾಗ್ನಿಯಂ ತೀಡಿ ಬೊಟ್ಟಿಡುವ...ಗಣಾಧಿನಾಥರೊಡ ನೇಳ್ತಂದರ್ (ಶಬಶಂ. ೩-೦೯). ೮. ಉಂಟಾಗು; ವ್ಯಕ್ತವಾಗು; ಪ್ರಕಟ ವಾಗು: ಎಮಗೀ ಕೂಸಂ ಕಾಣಲೊಡಮತಿಸ್ನೇಹಂ ಮನಕ್ಕೆ ತೀಡಿದಪುದು (ಸುಕುಮಾ. ೬-೪); ಪದಾರ್ಥನಿಶ್ಚಯಂ ತನ್ನ ಮನಕ್ಕೆ ತೀಡೆ ಖಳಸಂಸರಣಕ್ಕೆ ವಿರಕ್ತಿಯಾಗಿ ... ತಾಳ್ದಿದಳಂದು ದೀಕ್ಷೆಯಂ (ಸುಕುಮಾ. ೮-೪೦). ೯. (ಉಕ) ಬರೆದುದರ ಮೇಲೆ ಬರೆ; ತಿದ್ದು: ಮರುದಿನದಿಂದರಮಾ ಬಾಯರು ಕಾಗದದ ಮೇಲೆ ಎ.ಬಿ.ಸಿ.ಡಿ. ತೀಡ ಹತ್ತಿದರು (ಸಮಜೀ. ೨೨೪); ಅ ದಿಂದ ಜ್ಞದ ವರೆಗಿನ ಅಕ್ಷರಗಳನ್ನು ತೀಡ ಹಚ್ಚಿದರು (ಸ್ಮೃತಿಚಿ. ೧೨೦). ೧೦. ಸರಿಪಡಿಸು; ಪರಿಷ್ಕರಿಸು: ಆಗಾಗ ಇದನ್ನು ತಿದ್ದಿ, ತೀಡಿ ... ಆಶೀರ್ವದಿಸಿದ್ದಾರೆ (ಸೌಂದಸ. ii, ಮೊದಲ ಮಾತು). ೧೧. ಉಂಟು ಮಾಡು; ಉಂಟಾಗಿಸು: ಕೂಡಿ ವಿಪಿನದ ಬಟ್ಟೆ ಸುಖವನೆ ತೀಡುತಿರಲ್ (ಪ್ರಭುಲೀ. ೧೪-೬); ಸೂಡುವರ್ ಜಂತ್ರಮಂ ನೀರ್ ಸೂಸಲಾಡುವರ್ ತೀಡುವರ್ ನಗೆಯನಗಜೆಗೆ (ಜೆಬಪು. ೪೫-೫೯). ೧೨. ಹೊರಹೊಮ್ಮು; ಹೊರಸೂಸು: ವಿಭೂಷಣಂಗಳೊಳ್ ತೀಡುವ ರಶ್ಮಿಗಳ್ ಮಸುಳ್ದುವು (ಆದಿಪು. ೩-೩); ಮಣಿಮಯದ ಕಳಶದ ಝಾಡಿವೆಳಗಿನ ಹೇಮರಸದಲಿ ತೀಡಿ ತೊಳಗುವ ಸುಧೆಯ ಸೊಂಪಿನ ಸೂಸಕಂಗಳಲಿ (ತೊರರಾ. ೫-೨-೨೫); ರಸೋಕ್ತಿಗಳನಾಡುತ್ತ ತೀಡುತ್ತ ಬೆಳ್ನಗೆಯ ಬೆಡಗುಗಳನು (ಜೈಮಿಭಾ. ೩೦-೦೮); ಕಂಗೊಳಿಸುವ ದಿವ್ಯಕಾಂತಿಯ ತೀಡುತ ಬಂಗಾರಚೌಕಿಯೊಪ್ಪಿ ದುದು (ಕಂನವಿ. ೭-೩೮). ೧೩. ಇಚ್ಛಿಸು; ಬಯಸು: ಆಡುವರಂ ಕಂಡಾ ಡುವ ಪಾಡುವರಂ ಕಂಡು ಪಾಡುವಂದಾನಂದಕ್ರೀಡೆಗೆ ಮಘವನ ಬಗೆಯುಂ ತೀಡಿದುದೇಂ ಪಿರಿದೊ ಜನನ ಪುಣ್ಯಾತಿಶಯಂ (ಪುಷ್ಪಪು. ೧೨-೨೩). ೧೪. ಘರ್ಷಿಸು; ತಾಕು: ಒಂದು ನುಡಿ, ಒಂದು ಕಿಡಿ–ಕೊನೆಗೆ ಕಾಟ್ಕಿಚ್ಚು: ಬೀರರಿರ್ದರ್ ತೀಡೆ, ಬಿದಿರ ಮೆಳೆಗಿಚ್ಚು (ಅಶ್ವತ್ಥಾ. ೪೩-೮೫೫). ತಿವುಡು$_1$: ೪. ಚಿಂದಿಯ ಮುರುಹಿಟ್ಟು ಧೋತ್ರವ ತಿವುಡುತ ಕುಂದು ಪೆಚ್ಚರಿದು ಬಯಿವುತಲಿ ಸಂದ ಜಗಳ ಕಾಳಗದಂತೆ ಕೈಮುಟ್ಟಿ ಕೊಂಡಾಡುವರು ದಿಂಡಿ ಯರು (ತರ್ಕಕೌ. ೧-೯೭).

ತೀಡಿ ತಿದ್ದು = ರೂಪುಕೊಡು; ನಯಗೊಳಿಸು: ಸುಳಿಗಾಳಿಯು ಸುಳಿದು ಹೂಗಂಪಿನೊಡನೆ ತೀಡಿ ತಿದ್ದುವುದು (ಕನ್ನಜಾ. ೧೪೦).

[ದೇ. ॥ ತಮಿ. ತೀಟ್ಟು, ತೀಱ್ಱು; ತುಳು. ತೀಂಟು, ತೀಡು; ತೆಲು. ತೀಡು; ನಾಯ್ಕಿ. ಧೀಟ್]

ತೀಡು$_3$ (ನಾ). = ತೀಂಟ್$_1$ ೧: ಎನ್ನ ದೋರ್ದ್ವಯದ ತೀಡಂ ರೂಢಿಪೆಂ ಸಂಗರಾವನಿಯೊಳ್ ಬೇಗದೊಳೀಗಳೆಂದು ಬಗೆದಂ (ಕುಸುಮಾ. ೧೧-೦೩).

[< ತೀಡು$_1$]

ತೀದ 'ತೀರ್' ಪರಾ.

ತೀದು 'ತೀರ್' ಪರಾ.

ತೀನ್ (ನಾ). ೧. ತಿನಿಸು; ಆಹಾರ: ಈತನಂ ವಾಸುಗಿ ಗರುಡನ ತೀಂಗೊಡ್ಡಿದಂ (ಕಾವ್ಯಾವ. ೮೧೪). ೨. ಕೆರೆತ; ನವೆ: ಅಂತುಮಿಾ ತೋಳ ತೀನ್ ಕರಗಲ್ಕಾರ್ತಪುದಿಲ್ಲ (ಪಂಪಭಾ.೧೨-೧೩೫); ತೀನೆರ್ದೊಡುರ್ದೆ ಕರಟಮನಾನೆಗಳೊಱ್ದುಗುವ ಪಾಲ್ ಜಿಗಿಲ್ತಿರೆ (ಲೀಲಾವ. ೮-೪೫); ಸೊರ್ಕಿದಾನೆಯ ಕಟಿಯೊಳ್ ನೆಲೆಸಿದ ತೀನಂ [ಪಾಠಾಂ. ತಿಮರಂ]

ತುರಿಸಿಯೆ ತೊಲಗಿಸಿದವು ನಖಮುಖಂಗಳಿಂ ಸಿಂಹಂಗಳ್ (ಪಾರ್ಶ್ವಪು. ೧೫-೯೯). ೩. ನಸೆ; ಬೆದೆ. 'ತೀನ್ಮಸಗು' ಪರಾ. [< ತಿನ್]

ತೀನತೇರ, ತೀಂತೇರಾ, ತೀನುತೇರಾ (ನಾ). ಚಲ್ಲಾಪಿಲ್ಲಿ; ದಿಕ್ಕಾಪಾಲು; ಮೂರಾಬಟ್ಟೆ: ಈ ಕಾಲದಲ್ಲಿ ಚೀಣಾರಾಜ್ಯದ ಸ್ಥಿತಿಯು ಬಹಳ ಗಲಭೆಯಾಗಿ ತೀನತೇರವಾಗಿತ್ತು (ಕಾಂಪೂಚ. ೮). **ತೀಂತೇರಾ**:(ಕ). **ತೀನುತೇರಾ**: ಅಲ್ಲಿ ರೈತರು ಹಲಾಕಾಗಿ ತೀನುತೇರಾ ಆಗಿಹೋದರು. ಗ್ರಾಮಗಳಲ್ಲಿ ದೀಪ ಉರಿಯಲಿಲ್ಲಾ. ಹಾಳುಬಿದ್ದು ಹೋಯಿತು (ರಾಚೇಂದ್ರ. ೨೨೯). [← ಮರಾ. ತೀನ್‌ತೇರಾ; ಹಿಂ. ತೀನ್‌ತೇರಹ್]

ತೀನಾಳಿ 'ತಿನ್ನಾಳಿ' ನೋ.

ತೀನಿ 'ತಿನಿ$_1$' ನೋ.

ತೀನಿಗ (ನಾ). = ತಿನ್ನಾಳಿ: "ಗ್ರಸಕಃ, ಗ್ರಸಮಾನಃ – ಈ ೨ ತೀನಿಗಂ" (ಕಾಶಕ್ಕ.೧೨೨). [ತೀನಿ (<ತಿನಿ$_1$) +–ಗ$_2$]

ತೀನು (ನಾ). ಬೇಲಿ ಅಥವಾ ತಡಿಕೆಗೆ ಆಧಾರವಾಗಿ ಕೊಡುವ ಕಂಬ, — ದಸಿ: ಆಳು ಬೇಲಿ ಕಟ್ಟಲು ತೀನು ನೆಡುತ್ತಿದ್ದಾನೆ (ರೂಢಿ). [?]

ತೀನುತೇರಾ 'ತೀನತೇರ' ನೋ.

ತೀನೆ 'ತಿನಿ$_1$' ನೋ.

ತೀನ್ಮಸಗು (ಕ್ರಿ). ನಸೆ ಹೆಚ್ಚು; ಕಾಮಾತುರ ಹೆಚ್ಚು: ಮೈ ಪಱಿ ವಱಿಯಾಗಿ ತೀನ್ಮಸಗಿ ಸೋಲಮಗುಂದಲೆಯಾಗಿ ಕೂಡುವಟ್ಟಱಿ ಮಿಗೆ (ಸೂಕ್ತಿಸು. ೦೪-೩೩). [ತೀನ್ + ಮಸಗು$_1$]

ತೀನ್ಮಸೆ, ತೀಮ್ಮಸೆ (ಕ್ರಿ). ನವೆ ಹೆಚ್ಚಾಗು; ತಂರಿಕೆ ಉಂಟಾಗು: ಮೆಯ್ಯ ತೀನ್ಮಸೆದೊಡೆ ಕೋಡೊಳಿಟ್ಟೊರಸಿ ನೀರ್ಗೆಳಸಿದೊಡೆ ತಂದು ನೀರನೂಡಿಸಿ (ಚಂದ್ರಪು. ೫-೬೪). **ತೀಮ್ಮಸೆ**: ತೀಮ್ಮಸಪ ರಸನೆ ಯಸಕಮದೆಮ್ಮೊಡನೇಕಿನಿತು ಬಿಡಿಮಿದೇತಱ ಬಿಂಕಂ (ವೃಷವಿ. ೪೦-೪೪).

[ತೀನ್ + ಮಸೆ$_1$]

ತೀಬನು (ನಾ). ಒಂದಂ ಬಗೆಯ ಔಷಧಿದ್ರವ್ಯ: ಅಜಮೋದ, ತೀಬನು, ಕೊಡಸಿಗನ ತಿಗಡು...ಇಷ್ಟನ್ನೂ ಸಮಾನವಾಗಿ ಚೂರ್ಣವ ಮಾಡಿ (ವಿವೈವಿ. ೩೩). [?]

ತೀಬು (ನಾ). ಲವಂಗ: "ಲವಿ ಲವಂಗಂ ದೇವಕುಸುಮಮೆನೆ ತೀಬು" (ಮಂಗರಾ. ೪೩-೪೦). 'ತಿಬ್ಬ$_2$' ಪರಾ. [?]

ತೀಬ್ರಕರ (ನಾ). ೧. ಅಧಿಕವಾದ ಕಾಂತಿಯುಳ್ಳವನು. ೨. ಸೂರ್ಯ. ೧, ೨: ಜಿತಪಂಚೇಷುತ್ವದಿಂದೀಶ್ವರನೆನಿಸಿಯುಮುದ್ಯತ್ಸುಧಾಕಾಂತ ನತ್ಯೂರ್ಜ್ಜಿತತೇಜೋಲಕ್ಷ್ಮಿಯಿಂ ತೀಬ್ರಕರನೆನಿಸಿಯುಂ ದೃಶ್ಯರೂಪಂ (ಎಕ. V, ಹಾಸನ. ೦೩೦-೮; 1147). [< ಸಂ. ತೀವ್ರಕರ]

ತೀಬ್ರಕಿರಣ (ನಾ). = ತೀಬ್ರಕರ ೨: ವಿಜಯಲಕ್ಷ್ಮೀಕಾನ್ತನಹಿತಕೃತಾನ್ತ ರಿಪುಸುದತೀವದನಕುವಳಯ ತೀಬ್ರಕಿರಣಂ (ಎಕ. XI, ಚಿತ್ರದು.೦೩-೧೪; 1224?). [< ಸಂ. ತೀವ್ರಕಿರಣ]

ತೀಬ್ರತೇಜ (ನಾ). ಅಧಿಕವಾದ ತೇಜಸ್ಸುಳ್ಳವನು: ಆ ಬ್ರಹ್ಮನೊತ್ತಿಗರ್ ಭಸಿತಸಂಪತ್ತಿಗರ್ ತೀಬ್ರತೇಜರ್ (ಚಿಬಪು.೨೯-೨೦). [<ಸಂ. ತೀವ್ರತೇಜಸ್]

ತೀಬ್ರಪಾತ (ನಾ). ಉಗ್ರವಾದ ದಾಳಿ: ತನ್ನಯ ತೀಬ್ರಪಾತದಿಂದಿ ಟ್ಟೊರಸಲ್ಕೆ ಬರ್ಪನಿನನೆಂಬಿನಿತುಮ್ಮಳಮಾಗೆ (ಶಾಂತೀಶ್ವ. ೦೦-೯೦).

[< ಸಂ. ತೀವ್ರಪಾತ]

ತೀಬ್ರಪ್ರತಾಪ (ನಾ). ಉಗ್ರವಾದ ಪರಾಕ್ರಮ; ಅತಿಯಾದ ಶೌರ್ಯ: ಮೆಯ್ಗಲಿ ಬಲ್ಲಾಳನೃಪಂಗಂ ಅಂಗಜಜಯೋತ್ತುಂಗ ಧ್ವಜಾಕಾರ ಪದ್ಮಲ ಮಾದೇವಿಗಂ ಅಗ್ರಸೂನು ನರಸಿಂಹೋರ್ವ್ವೀಶ್ವರಂ ಪುಟ್ಟಿದಂ ದೆಸೆಯಂ ತಳ್ಪೊಯ್ಯೆ ಕೀರ್ತ್ತಿಪ್ರಸರದೊಡನೆ ಕಾಲ್ಗೂಡಿ ತೀಬ್ರಪ್ರತಾಪಂ (ಎಕ. V, (ಚನ್ನರಾ. ೨೦೩; 1228). [< ಸಂ. ತೀವ್ರಪ್ರತಾಪ]

ತೀಬ್ರರುಗ್ಮಂಡಳ (ನಾ). ಸೂರ್ಯಮಂಡಲ; ರವಿಮಂಡಲ: ಉದ್ಧತರ ನೆತ್ತಿಯಬತ್ತಿವೊಲಾಯ್ತು ತೀಬ್ರರುಗ್ಮಂಡಳಮಂ ದಿಟಂ ಮಿಗುವ ತೇಜದ ದಳ್ಳುರಿ (ಎಕ. V, ಅರಸೀ. ೧೨೭-೨೫; 1132).

[< ಸಂ. ತೀವ್ರರುಙ್ಮಂಡಲ]

ತೀಮ್ಮಸೆ 'ತೀನ್ಮಸೆ' ನೋ.

ತೀಯ (ನಾ). ಬಯಕೆ; ಬೆದೆ. 'ತೀಯಕಾರ್ತಿ' ಪರಾ.

[← ತೆಲು. ತೀಯ]

ತೀಯಕಾರ್ತಿ (ನಾ). ತೀಟೆಯುಳ್ಳವಳು; ಬೆದೆಕಾರ್ತಿ: ತೀಯ [ಪಾಠಾಂ. ಅತಿಯ, ತಿಯ, ತಿಯ್ಯ]ಕಾರ್ತಿಯರ್ತಾಯಿಲ್ಲದ ಕೂಸಿನಂತೆ ಬಾಯಂ ಬಿಡೆಯುಂ (ಅರ್ಧನೇ. ೫-೨ ವ).

[ತೀಯ + – ಕಾಱ + – ತಿ$_1$ (< – ಇತ್ತಿ]

ತೀಯಾಟ (ನಾ). ತಿಕ್ಕಾಟ; ಎಳೆದಾಟ; ಜಗಳ: ತೀಯಾಟವೂ ಇದ್ದೇ ಇರುವುದು (ಪಾಳಗಾ. ೨೩); ಬದೋಡೆ ಸರ್ಕಾರಕ್ಕೂ ನಮ್ಮ ಅಂಗಡಿಗೂ ಮೊದಲಿನಿಂದಲೂ ಇರತಕ್ಕ ತೀಯಾಟ ತಿಳಿದೇ ಇದೆಯಷ್ಟೆ (ಅದೂಟ. ೬).

[ತೀಯ್ಯು$_0$ (←Pತೆಲು. ತೀಯು) + ಆಟ]

ತೀರ್, ತೀರು$_1$ (ಕ್ರಿ). ತೀದ, ತೀರ್ದ (ಭೂತಕೃ), ತೀದು, ತೀರ್ದು (ಭೂತನ್ಯೂ). ೧. ಮುಗಿ; ಪೂರೈಕೆಯಾಗು: ಪರಮ ಜಿನಾಭಿಷೇಕ ವಿಧಿ ತೀರದು ಕೂಪಜಲಂಗಳಿಂ . . . ಇಲ್ಲಿಗೆ ವೇಟ್ಟುದಗಾಧ ದುಗ್ಧ ಸಾಗರಜಲಂ (ಅಜಿಪು. ೪-೪೫); ಎನ್ನ ಯಜ್ಞಂ ತೀರ್ವನ್ನೆಗಂ ಋಷಿಯರೀ ಪೊಟಲೊಳಿರವೇಡಮೆಂದು ಘೋಷಣೆ ನೆಗಟ್ಟುದುಂ (ಧರ್ಮಾಮೃ. ೯-೧೫೪); ಚಿತ್ರವನಿತ್ಯನಾಟಕದ ಜೋಹಂ ತೀರ್ದುದಿಂ ಸಾಲದೇ (ಅನಂಪು. ೩-೭೭); ಹೋದುದೊಂದಪಮೃತ್ಯು ಲೋಕಕೆ ತೀದುದಿಲ್ಲಾಯುಷ್ಯ (ಕುವ್ಯಾಭೀ. ೬-೪೭). ೨. ನಿಶ್ಶೇಷವಾಗು; ಉಳಿಯದಂತಾಗು: ಎನಿತು ಭುಜಂಗಳಂ ತಳೆದನಿಂದ್ರನನಿತ್ತು ಘಟಂಗಳಂ ಸಮಂತನಿಮಿಷಕೋಟಿ ನೀಡಿದುದನಿತ್ತಮೃತಾಬ್ಧಿಯ ವಾರಿ ತೀರ್ದುವೆಂದನುಮಿಸಲಾವನುಂ ನೆಱೆಯನೆಂಬಿನಮದ್ಭುತಮಾದ ಜನ್ಮಮಜ್ಜನದೊಳೆ (ವರ್ಧಪು. ೦೪-೩೫). ಬಂದು ಬಂದು ಮಿಗೆ ಪೀರುತಮಿರ್ಪ ಚಕೋರಪಕ್ಷಿಜಾಲಂಗಳಿನೊಮೆ; ತೀರ್ಗುಮಿರದೀ ಶಶಿಚಂದ್ರಿಕೆಯೆಂದು (ಕುಸುಮಾ. ೦೦-೭); ಸಂಚಿತಸಲಿಲಂ ತೀರ್ದುದು (ಉದ್ಭಟ. ೪-೩೨); ಮತ್ಕಾವ್ಯರಚನೆ ಸ್ವಾದು ರಸಾಯನ ತವ ಕರ್ಣಯುಗಳಕ್ಕೆ ತೀದರೆ ಮಗುಳೆ ತುಂಬಿಸದೆ (ಮೋಹತ. ೩೦-೨); ಆದಡೇನಾ ಸರಳು ಹೋದರೆ ತೀದುದೆ ತನ್ನಧಟು (ಕೋಗಯ. ೧೦-೬೩). ೩. ಕೊರೆಯಾಗು; ಕ್ಷೀಣವಾಗು; ಕ್ಷಯಿಸು: "ತೀರ್ದುದು ಬೀತುದು ಸವೆದುದೆನಲ್ ಕ್ಷಯಮನೈದಿತೆಂದಱಿಗೆ ಬುಧರ್" (ಭಾರನಿ ೪೨); ವನರುಹಗರ್ಭನೆಂಬವನ ಮುನ್ನಿನ ಗೆಯ್ದ ತಪಂ ತಿಲೋತ್ತಮಾಂಗನೆ ಯಿನದಂತುಟಾದುದೆನೆ ಮತ್ತಿನ ಬೂತು ತಪಂಗಳೆಮ್ಮ ಪುರ್ವಿನ ಕಡೆಯೊಂದು ಜರ್ವಿನೊಳೆ ತೀರ್ವುವು (ಪಂಪಭಾ. ೭-೮೧); ತೀದುದೆಮ್ಮಯ ಸೇನೆ ನಸುಸೊಪ್ಪಾದುದಿಲ್ಲರಿಸೇನೆ (ಕುವ್ಯಾಭೀ. ೭-೨೨); ಓದಿದರೆ ವಾಕ್ಪದವು ಸಾರವನಾದರಿಸೆ ಮತಸಿದ್ಧಿ ಕೇಳಲು ತೀದುದಾತನ ಕರ್ಮಬಂಧನ ತಾವ ಭವಭಯವು (ಕೌಶಿರಾ. ೧-೧೨); ತೋದುದಂಬರತಳಂ ವಿಷದ ಲೋಳೆ ಗಳಿಂದೆ ತೀದುದಮರರ ಹರುಷ (ಚಿಬಪು. ೪೨-೨೩). ೪. ಸಾಯು; ಮರಣವನ್ನು ಹೊಂದು: ದಶರಥನ ಬಲ್ಲೈ ಕೇಳಿ ಪೂರ್ವದಲ್ಲಿ ತೀದನಾತನು ಬಳಿಕ ಭರತಂಗಾದುದೀ ಧರೆ ವನಪರಿಭ್ರಮಣೋದಯವು ನಮಗಾಯ್ತು (ತೊರರಾ. ೩-೧-೩೭); ಶಿವಯೋಗನಿಜಸಮಾಧಿಯಲಿ ನಿಂದು ಲೀಲೆಯಿಂದಿರಲಾಗಲಲ್ಲಿರ್ಪ ಭಕ್ತಜನಜಾಲಮಿಾತಂ ತೀರ್ದನೆಂದು ತೆಗೆಯಲ್ಕೆ (ಚಿಬಪು. ೬೩-೩೬). ೫. ನಿವಾರಣೆಯಾಗು; ಕಳೆ: ಕಿಚ್ಚಿ ನೊಳಾದ ವೇದನೆಯುಂ ಮನದೊಳಾದ ಸಂಕ್ಲೇಶಮುಂ ತೀದರ್ತಿದು

(ಧರ್ಮಾಮೃ. ೧೨-೫೭) ; ಮೋಹಮುಂ ಗರ್ವಮುಂ ತಲ್ಲಣಮುಂ ತೀರ್ಗುಂ (ಪಂಚಾಶ. ೪೫) ; ತೀರ್ದುದು ಹೃದಯಕಲಂಕಂ ಸಾರ್ದುದು ಪುಣ್ಯಾನುಬಂಧಂ (ಅನಂಪು. ೩-೬೪) ; ತೀರುದೆವುಗೆ ವನಪ್ರವಾಸದ ಖೇದ (ಕುಮಾ.ಅ. ೧೦-೨೫). ೬. (ಕಾಯಿಲೆ, ಬೇನೆ, ಹುಣ್ಣು ಮೊದಲಾದುವು) ವಾಸಿಯಾಗು ; ಗುಣವಾಗು : ಬೆಜ್ಜಿಯಿಲ್ಲದ ಬೇನೆಯಂತೆ ತೀರಲಱಿಯದು (ಪಂಚತಂ. ೧೭-೨) ; ಶುಂಠಿ, ಹಿಪ್ಪಲಿಮೂಲ, ಅಮರದವಳ್ಳಿ ಇವಂ ಕಷಾಯವಿಟ್ಟು ಕುಡಿಯೆ ವಾತಜ್ವರಂ ತೀರ್ಗುಂ (ಸಳ್ವೈ. ೬೭) ; ತೀರುದಿಲ್ಲವು ಬೇನೆ (ಜ್ಞಾನಸಿಂ. ೧-೨). ೭. ಸಾಧ್ಯವಾಗು ; ಶಕ್ಯವಾಗು : ಜವಂಗಿಡದೆ ಮುಟ್ಟಿ ಬರ್ಪ ಜವನಂ ಜವಂಗುಂದಿಸಲ್ ಜವಂಗೆ ಜವನಾಗಲಿಂ ಪೆಱರ್ಗೆ ತೀರ್ಗುಮೇ (ಆದಿಪು. ೦೩-೮೮) ; ಅಂತವರಾಗಿ ಪುಟ್ಟಲೇನಾಗಿಯುಮೇನೊ ತೀರ್ದಪು [ದೆ] ತೀರದೊಡಂ ಮಱುದುಂಬಿಯಾಗಿ ...ಪುಟ್ಟುವುದು (ಪಂಪಭಾ. ೪-೨೯) ; ತ್ರಿದಶನದೀಸುತನಿಂ ತೀರದ ಕಜ್ಜಂ ...ದ್ರೋಣಪುತ್ರನಿಂ ತೀರ್ದಪುದೇ (ಗದಾಯು. ೩-೬೦) ; ಅಪ್ರತಿಮ ಪರಾಕ್ರಮನಪ್ಪ ನಿಮಗೆ ತೀರದ ಕಜ್ಜಮಾವುದಾನುಮಿಲ್ಲ (ಪಂಚತಂ. ೩೪-೦೯) ; ಶರ್ವಾಣಿಯ ಸೌಂದರ್ಯಮನೊರ್ವಂ ಬಣ್ಣಿಸುವೆನೆಂಬವಂ ಗಾಂಪಂ ... ಸಾಸಿರ್ವರ್ ಫಣಿರಾಜರಾದೊಡಂ ತೀರ್ದಪುದೇ(ಗಿರಿಕ. ೪-೦೦) ; ಜಿನಗುಣಮೆಲ್ಲಮಂ ಕೊಱತೆಯಿಲ್ಲದೆ ಪೇಳ್ದಪೆನೆಂಬಿದುದ್ವಾಗ್ವನಿತೆಗೆ ತೀರದು (ಪಾಧಪು. ೧-೫೪) ; ನಿರ್ಮಲ ಶಿವನವನ ನಿರ್ಮಾಲ್ಯಮಿಕ್ಷಿಸಲ್...ನಿರ್ಮಲರ್ಗಲ್ಲದುಳಿದರ್ಗೆ ತೀರ್ಗುಮೆ (ಪದ್ಮರಾ. ೦೦-೦೨೮). ೮. ಕೈಗೂಡು ; ಫಲಿಸು ; ಈಡೇರು : ಬಯಕೆ ತೀರದ ಕಾರಣದಿಂ (ಕವಿರಾ. ೦-೧೪೫) ; ಪಗೆ ತೀರ್ಗುಂ ಬಗೆ ತೀರ್ಗುಮಾ ಕುರುಕುಳ ಪ್ರಖ್ಯಾತನಂ ಕಾದಿ (ಪಂಪಭಾ. ೮-೦೦೩) ; ತನ್ನ ಬಯಕೆ ತೀರ್ದುದೆಂದು ಪೆರ್ಚಿ (ಧರ್ಮಾಮೃ. ೬-೪೭); ಕಡುಗಟ್ಟಲೆಯೊಳ್ ... ಪೊಱಮಟ್ಟಡಿಯಿಡಲಣ್ಮದೆ ಮಱುಗುವ ಮಡದಿಗೆ ಬಗೆ ತೀರೆ ಮಿಂಚು ಮಿಂಚೆದುದಾಗಳ್(ರಸರ. ೦-೯೦). ೯. ಸಾಕಾಗು ; ತೃಪ್ತಿಯಾಗು ; ಸಮಾಧಾನವಾಗು: ನುಡಿಯಲ್ ಬಾರದು ತೀರದು ನುಡಿಯದೊಡೆ (ಅನಂಪು. ೦೦-೩೦). ೧೦. (ಕಾಲದಂತೆ) ಕಳೆದುಹೋಗು ; ಮುಗಿದು ಹೋಗು : ವೇದಮಾರ್ಗದೊಳೊಂದು ದಿನ ಪರಿ ತೀದು ಹೋದುದು (ಸಂಭವ. ೪-೯). ೧೧. (ಜಗಳ, ವಾಗ್ವಾದ, ಸಮಸ್ಯೆ ಮೊದಲಾದುವುಗಳು) ತೀರ್ಮಾನವಾಗು ; ಬಗೆಹರಿ : ನಿನತೊಂದೋಲೆಗೆ ತೀರ್ಪುದೊಂದು ಮನೆವಾರ್ತೆಗಿದೇನರಸ ಬಳೆಯೆ ನುಡಿದಪೆ (ಆದಿಪು. ೧೪-೩೦) ; ನಮ್ಮ ಜಗಳ ತೀರಿತು (ರೂಢಿ). ೧೨. ಹೊಳಪಾಗು ; ನಯಗೊಳ್ಳು (?). 'ತೀರಿಸು' ಪರಾ.

ತೀರು₁ : ೧. ಸಮಸಪ್ತಕರ ಬಲ ನಿಜಪಾಳೆಯಕೆ ತಿರುಗಿದುದು ತೀರಿತು ತರಣಿಯೂಟೋಪ (ಕುಮಾರ್ಯಾ. ೮-೧) ; ಮಿಂಡಗಾಱಿಕೆಯಲ್ಲಿ ಗಳಿಸಿದ ಸೌಖ್ಯವನುಂಡಲ್ಲದೆ ತೀರದೆಂದ (ಪೋಹತ. ೩೫-೬೮) ; ರಾಜಪುತ್ರಿಗೆ ತನಗೆ ಸೆರೆ ತೀರುವುದೆಂದು ಎಲ್ಲೂ ಸಂತೋಷವಾದರೂ (ಪಂಚಾಮೃ.೬) : ಊರು ಸೇರಿದ ಮೇಲೆ ದಾರಿ ತೀರಿತು(ಗಾದೆ). ೨. ತೀರಿತಾತನ ಶಕ್ತಿ (ಕುಮಾರ್ಯಾ. ೩-೭೩) ; ತೀರೆ ಕೈದುಗಳಿಳಿದು ಬೊಜ್ಜೆಯ ತೋಱ ಕಡಿಗೊರಳಿನಲಿ ಕೋಪಿಸಿ ತೇರಿನಗ್ರವ ಪಿಡಿದು ತಿರುಹಿಟ್ಟುದು ಕಬುಧಕವು (ತೊರರಾ. ೩-೬-೨೫) ; ತೀರಿದ ಅಡಿಗೆ ತಿರುಗಿ ಜಯಸಿದರೆ ಬಂದೀತೇ ? (ಗಾದೆ). ೩. ತೀರಿದುದು ತಮದೊಬ್ಬುಳಿತ ಚಂದ್ರನ ತಾರಕಿಯ ಮೈವೆಳಗು ಮಸುಳಿದವು (ತೊರರಾ. ೧-೦೪.೧). ೪. ಮಾರಹರ ನಿಮಗುಚಿತವೇ ಮತ್ತಾರಿಗಾಱದೆ ಕುಂಟವೇವತೆ ಸೇರಿ ಮನೆಯವರ್ಗಾಪನೆನ್ನದೆ ಸೂನು ತೀರಿದಡೆ (ಬಸಪು. ೪೮-೦೮) ; ತಂದೆ ತೀರ್ದ ಬಳಿಕ ನೀನೆ ತಂದೆ (ತೊರರಾ. ೨-೬-೨೮). ೫. ಕ್ರೂರವಂತ ತ್ರಿತಯವೂಱಲು ಭಾರವದು ಪಲ್ಮಾಲ್ಕು ನಟ್ಟಡೆ ತೀರಗೆಂತಾ ಮಂತ್ರತಂತ್ರೌಷಧವಿಧಿಗಳಿಂದ (ಬಸಪು. ೪೬-೩೨) ; ವಿಶ್ವಾಸವುಳ್ಳೊಡೆ ಸಕಲ ಪಾತಕವು ತೀರುವುದಲೆ (ಸಂಭವ. ೩-೩೬) ; ತೀರಿತು ಹೃದಯದ ತಾಪ (ಪೋಹತ. ೨೮-೩) ; ತನ್ನ ಕೊರಗು ತೀರುವುದು ಕಷ್ಟವೇ ? (ಬಿತಂಬಾ. ೧೬). ೮. ತನ್ನ ಆಕಾಂಕ್ಷೆ ತೀರುವುದಕ್ಕೊಂದು ದಾರಿಯಿದೆ (ಬಿತಂಬಾ. ೩೫). ೧೦. ಆಯುಷ್ಯ ತೀರಿದಲ್ಲದೆ ಮರಣವಿಲ್ಲ (ಬಸವ. ೬೮೯). ೧೧. ಸಂದೇಹ ತೀರಿತು (ಬಿತಂಬಾ. ೩೪). ೧೩. (ಋಣ, ಹಂಗು, ಸಾಲ, ಮುಂತಾದುವು) ಸಂದಾಯವಾಗು ; ಸಲ್ಲು : ಮುಯ್ಯಕ್ಕೆ ಮುಯ್ಯಿ ತೀರಿತು (ಪುರಂದ. ೧-೬೫ ಪಲ್ಲವಿ) ; ಅವರ ಹಂಗೂ ತೀರದು (ಮೂರುಳು. ೭, ಮುನ್ನುಡಿ).

ತೀರಿಕೊಳ್ಳು=ಸಾಯು ; ಮರಣವನ್ನು ಹೊಂದು : ಒಬ್ಬ ಬಡ ರೈತ . . . ಅರ್ಬುದರೋಗದಿಂದ ತೀರಿಕೊಂಡ (ಚಿಕಿತ್ಸ. ೩೦) ; ಅವರು ತೀರಿಕೊಂಡಾಗಿನಿಂದ ಇಂಥ ಕೆಲಸ-ಕಾರ್ಯಗಳ ಬಗ್ಗೆ ಜನರು ನಿನ್ನನ್ನೇ ಕೇಳುತ್ತಿರುವುದು ತಪ್ಪಲ್ಲ (ಭಾರತಿ.೦).

[ದೇ.? ತಮಿ. ತೀರ್ ; ಮಲ. ತುಳು. ತೆಲು. ತೀರು./ಸಂ. ತೀರ್]

ತೀರ₂. ತೀರಾ (ಗು). ಬಹಳ ; ತುಂಬ ; ಸಂಪೂರ್ಣ : ಈಗ ಅವನು ಹಾಗೆಲ್ಲ ಮಾಡುವುದಿಲ್ಲ. ಆಗ ತೀರ ಚಿಕ್ಕವನಿದ್ದ (ಭಾರತಿ. ೩) ; ಅಂಡಯ್ಯನು ನುತಿಸಿದ ಕವಿಗಳಲ್ಲಿ ಅವನಿಗೆ ತೀರ ಸಮೀಪದವನಾದ ಜನ್ನ (ಸಾಹಿಸ. ೦೩೦) ; ಈ ಎರಡು ತೆರನಾದ ಕಂಪನಗಳ ಸ್ವಭಾವವು ಪರಸ್ಪರ ತೀರ ಭಿನ್ನವಾಗಿರುತ್ತದೆ (ಜೀವಾತ್ಮ. ೦೦೦).ತೀರಾ : ಹೊಱಸವಿ ಒಳಸವಿ ತೀರಾ ಸವಿ ... ತೀರಾ ಸವಿಯಿಂದ ರುದ್ರಸತ್ತ (ಪಚಶಾ. II, ೨೫೦) ; ಪ್ರಾಚೀನ ಕನ್ನಡ ಗ್ರಂಥಗಳಿಂದ ಆಯ್ದುಕೊಂಡ ಪದ್ಯಗಳು ತೀರಾಕಡಿಮೆ (ಕಎಪು. I, ಪೀಠಿಕೆ). [< ತೀರ್]

ತೀರ₃ (ಅ). ಬಹಳವಾಗಿ ; ಅತಿಯಾಗಿ ; ಸಂಪೂರ್ಣವಾಗಿ : ಕೊಳುಗುಳದೊಳಗೈನೂಱಕ್ಷೋಹಿಣಿ ಬಲವನೊಬ್ಬನೇ ತೀರ [ಪಾಣಾಂ. ತಿರಿ] ಕೊಂದ (ಕುರುಶಾಂ. ೬-೬೩); ತೀರ ಜಗ್ಗಿದರೆ ಅಧಿಕಾರದ ಹಗ್ಗವೇ ಹರಿವುದೆಂದು ಅದಕ್ಕೆ ಗೊತ್ತಿತ್ತು (ಎಕೃಸಾ. ೩೬). [< ತೀರ₁./ತಮಿ. ತೀರ]

ತೀರ₃ (ನಾ). ದಡ ; ದಂಡೆ ; ಕರೆ : "ತೀರಮೆಂದು ತಟಂ" (ಕಕಸಾ.೮-೦೪೨); ತಣ್ಣಾವೆತ್ತಿರ್ಪ ತೀರ ಜಲಂಗಳೊಳಮೆಡವಿಡದಿಡಿದ ತಮಾಲವೀಥಿಯೊಳೊಗೆವ ಕತ್ತಲೆಯಿಂ (ಕಾದಂಪೂ. ೦೦೭); ತೊಱೆಗಳ ತೀರದೊಳ್ಗಿರಿಯ ತಪ್ಪಲೊಳಗ್ಗಳಮಪ್ಪ ಕೊಳ್ಳದೊಳ್... ಮಱುಗಿ ತೊಱಲ್ದು (ಧರ್ಮಾಮೃ. ೮-೨೦) ; ಎಱಗದ ತೀರಭೂರುಹಮನೆಯ್ದೆ ಮೊದಲ್ಗಿಡೆ ಕೀಟ್ಟ ಬೆಂಗೆ ಬಿಟ್ಟೆಱಗಿದ ಮಂಜುಳಪ್ರಕರಮಂ ಪರಿವರ್ಧಿಪ ಸಿಂಧುತೋಯದಂತೆ (ಪುಷ್ಪಪು. ೦೩-೬); ನಗುತನಿಲಶರದಿಂದೂದಿದನು ಜಲನಿಧಿಯ ತೆಂಕಣತೀರಕಾಖಳನ (ತೊರರಾ. ೧-೧೦-೨೦); ತೀರಕ್ಕೆ ಬಂದ ಮೇಲೆ ತೆರೆಯ ಭಯವೆ ? (ಗಾದೆ). [ಸಂ.]

ತೀರಂಬಿಡಿ (ಕ್ರಿ). ದಡವನ್ನು ಹೊಂದಿಕೊಳ್ಳು ; ತೀರವನ್ನು ಅನುಸರಿಸು : ಅಂತಾ ಪ್ರಭಾಸಾಮರಸಂ ನಿಜವಿಜಯಯಶಃಪ್ರಭಾಸಮೂಹದಿಂದಂ ಪುದಿದು ಸಿಂಧುನದೀತೀರಂಬಿಡಿದು ಬರ್ಪಲ್ಲಿ (ಆದಿಪು. ೧೩-೪೫); ದೂತಂ ಜೀಮೂತನಾದನೆಂಬಂ ಕೂಪಾರ ತೀರಂಬಿಡಿದು ನಡೆತರ್ಪ ಕಾಳಿಯಸರ್ಪದರ್ಪದಳನನದಿರೆದಿದಿರೊಳ್ ಕಂಡು (ಜಗವಿ. ೯-೩೩೫).

[ತೀರ₃ + ಪಿಡಿ₁]

ತೀರದಾಣ (ನಾ). ತಪ್ಪಲು ಪ್ರದೇಶ (?): ಗಿನಿತಲದಾ ಮೇಲತಿ ××× ಸ್ಥಲಮಾನ್ ತೀರದಾಣಮಾ ಕೆಳಗೆ ನೆಲದಿ ಮಾನದಾ ಸದ್ದಮದಾಗೇಟಿ ಸಸಾನದಿ ಪತಾನ್ (ಎಕ. II, ೨೯-೩; 700). [ತೀರ₃ + ತಾಣ]

ತೀರವೆ (ನಾ). ೧. ತೀರದೆ ಇರುವಿಕೆ : ಅಪೂರ್ಣತೆ ; ಕೊರತೆ : ಅಮೆಗೆ—ತೀರವೆ, ಅಱ್ಕಮೆ (ಕಮರ. ೨೦೦ ಪ್ರಯೋ). ೨. (ಪ್ರಯಾಣದಲ್ಲಿ) ತಡೆದಿರುವಿಕೆ ; ಮುಂದುವರೆಯದಿರುವಿಕೆ : ಆಲೋಕನಾ

ಮಾತ್ರದಿಂ ಮಱೆದು ಪಾಂಥಶ್ರೇಣಿ ನೀರಚ್ಛಾಯಂ ಶ್ರಮಮಂ ತೀರಮೆಯಂ ಪ್ರಪಾಂಗನೆಯರಂ ಕಣ್ಗಾವುದಾ ದೇಶದೊಳ್ (ಪಂಪಾಮಾ. ೧-೧೦೩); ಜಾನಪದಾಂಗನಾಜನದ ಗಾಡಿಗೆ ಸೋಲ್ತಳಿನೀನಿನಾದಮಂ ಜಾನಿಸಿ ಕೇಳ್ದು . . . ಉದ್ಯಾನದೊಳಾಡೆ ತೀರಮೆಯುಮಂ ಪಥಿಕರ್ ಮಱೆದಿಲ್ಲೆನಲ್ ಪರಿಮ್ಲಾನತೆ ಸೈತು ಬಟ್ಟೆ ನಡೆಯಲ್ಪಡೆಯರ್ ವಿಷಯಾಂತರಾಳದೊಳ್ (ಪುಲಿಪು. ೨-೨೮); ಬಾಱೆಯೊಳೆಯರನೇಱಿಲ ಮಾವಿನಪಣ್ಣಳಂ ಮನಂ ನಿಲೆ ಸವಿದಲ್ಲಿ ತೀರಮೆಯುಮಂ ಮಱೆದಿರ್ವುದು ಪಾಂಥಸಂಕುಳಂ (ಪುಷ್ಪಪು. ೨-೪೬). [ತೀರ್ + – ಅಮ್ಬೆ]

ತೀರರುಹ (ಗು). ದಡದಲ್ಲಿ ಬೆಳೆದಿರುವ; ದಂಡೆಯ ಮೇಲಿರುವ: ತೀರರುಹ ಫಲಪುಷ್ಪಸಮೃದ್ಧಿಸಲಯರಮ್ಯಗುಲ್ಮತರುಪಂಕ್ತಿಮಾಲಾಸಹ್ಯ ಜಾತಿಯಂ ದರ್ಶಿಸಿದೊಡನೆ (ಶ್ರೀರಾಮಾ. ೯೬-೩೨೩). [ಸಂ.]

ತೀರಸ್ಥ (ಗು). ದಡದಲ್ಲಿರುವ: ತೀರಸ್ಥಲವಂಗಚೂತಲವಲೀಪುಷ್ಪಾಸವಾಸ್ವಾದಿತೋದಯುತೋನ್ಮಾದೆಯ . . . ಪೋಲ್ದೆಗಿಲ್ಲ ತೊಱೆಗಳ್ ವಿಶ್ವಂಭರಾಭಾಗದೊಳ್ (ಆದಿಪು. ೧-೩೪). [ಸಂ.]

ತೀರಾ 'ತೀರ್$_1$' ನೋ.

ತೀರಿ (ನಾ). ೧. ಅಂಬು; ಸರಳು, ಬಾಣ: "ತೀರೀ, ತದ್ಬಳ, ದಂಡಾಸನಃ –ಇವು ಮೊದಲಾದುವು ಅಂದಿನ ಭೇದಂಗಳ್" (ಹಲಾಯು. ೭೭-೩೧೩). ೨. ಒಂದು ಬಗೆಯ ಬಿಲ್ಲು: "ದಂಡಾಸನಂ ತೀರಿ ತದ್ಬಳಮೆಂದು ಬಿಲ್ಲಭೇದಂಗಳಕ್ಕುಂ" (ಮಂಗರಾ. ೮೭-೩೩); P ಮಂಗರಾಜನು 'ಬಾಣ' ಎಂಬುದಕ್ಕೆ 'ಬಿಲ್ಲು' ಎಂದು ಹೇಳಿರುವಂತೆ ಕಾಣುತ್ತದೆ. [ಸಂ.]

ತೀರಿಕೆ (ನಾ). ತೀರಿಸುವಿಕೆ: "ತೀರಂ, ತೀರಣಂ, ತೀರಣೀಯಂ–ಈ ೩ ತೀರಿಕೆ" (ಕಾಶಕ್ಷ. ೨೮೮). [ತೀರ್ + – ಇಕೆ]

ತೀರಿಕೆ$_2$, ತೀರಿಗೆ (ನಾ). ಒಂದು ಬಗೆಯ ಬಾಣ: ಕದುರೆಯ ಮೇಲೆ ಬಿಲ್ವರಸು ಸೂಲಿಗೆ ತೀರಿಕೆ ಭಿಣ್ದಿವಾಳವೆತ್ತಿದ ಕರವಾಳಮಾಟಿಡುವ ಕರ್ಕಡೆ . . . ಎಂತು ಲಕ್ಷ್ಮಣನೊಳಾಂತು ಬರ್ದುಂಕುವರನ್ಯಭೂಭುಜರ್ (ಎಳ. VII, ಶಿಕಾರಿ. ೧೩೬-೨೮; 1068). **ತೀರಿಗೆ:** ಕುದುರೆಯ ಮೇಲೆ ಬಿಲ್ವರಶು ತೀರಿಗೆ ಸೂಲಿಗೆ ಪಿಡಿವಾಳವೆತ್ತಿದ ಕರವಾಳ (ಎಇ. XV, ೩೪೦-೦೨; 1071). [< ತೀರಿ./ಸಂ. ತೀರಿಕಾ]

ತೀರಿಗೆ 'ತೀರಿಕೆ$_2$' ನೋ.

ತೀರಿಚು 'ತೀರ್ಚು' ನೋ.

ತೀರಿತ (ಗು). ತೀರ್ಮಾನವಾದ; ಮುಗಿದ; ನಿರ್ಣಯಿತವಾದ. [ಸಂ.]

ತೀರಿಸು (ಕ್ರಿ). ೧. ಮುಗಿಸು; ಪೂರ್ಣಮಾಡು: ದಣಿ ಮ್ಯೂಗ ಸೇದು ತೀರಿಸಿಕೊಣ್ಣಾಕ ನಿನಗೊಂದು ಅಪರೂಪ ಪರಸಂಗ ಒದಗಿ ಬಂದರ ಹ್ಯಾಗಲೇ (ಮೂಡಿಮು. ೧೩); ಆರಿ ದೂರಕೆ ಅಲೆದ ಕಡಲಿನ ನೀರೆ ಕಡಲನೆ ಕೂಡಿತು, ಬೇರೆ! ಹಾ! ಹಾ! ಎಂದು ಡೊಂಬನು ತೀರಿಸದೆ ಕಣ್ಮುಚ್ಚಿದ (ಕಏಪು. ೪೦-೩೭); ತನ್ನ ಕೆಲಸವನ್ನು ಮಾಡಿ ತೀರಿಸಿದ್ದನು(ರೂಢಿ). ೨. ನಾಶಮಾಡು; ಕೊನೆಗಾಣಿಸು: ತೀರಿಸುವೆನೀ ರಕ್ಕಸರ ರಣ ಹೋರಟೆಯನೆನುತ...ತಿರುಹಿಟ್ಟನು ನಭಸ್ಥಳಕೆ (ತೊರಥಾ. ೬-೩೦-೧೭). ೩. ಕೊಲ್ಲು; ಸಾಯಿಸು: ಕೌರವನ ಖಡ್ಗ ಹಿಂಗೆ ಸುಭಟಕೋಟಿಯನು ತೀರಿಸಿಯೆ ಪತಿಯವಸರಕ್ಕೆ ಶರೀರವನು ನೂಕುವೆನು (ಕುಪ್ಪಾಉ. ೧೧-೨೦); ಈಗಲೆ ಇವರನ್ನೂ ನಿನ್ನನ್ನೂ ತೀರಿಸಿಬಿಡುತ್ತೇನೆ (ವಚಥಾ. ೩೮). ೪. ನಿವಾರಿಸು; ಪರಿಹರಿಸು: ತಾರಕನಿಂದೆ ನೊಂದಮರರು ತಮ್ಮ ಸಂಸಾರದುಃಖವ ತನಗುಸಿರೆ ತೀರಿಸಲಜಿಯದಾನೈತಂದೆ ಶ್ರೀ ವೀರ ನಾರಾಯಣ ಪೊರೆಯೆಂದ (ಪೋಹತ. ೫-೦೫); ಹೆತ್ತ ತಾಯಿಯ ಸಂಕಟವನ್ನು ತೀರಿಸುವವರ್ಯಾರು (ಮನೋನಂ. ೧೪೨). ೫. ಈಡೇರಿಸು; ಕೈಗೂಡಿಸು: ಬಂದು ಕಾದಿಹ ದ್ವಿಜರನುಮತಪ ತೀರಿಸದೆ ನಿಜಲೋಭಿ ಶತವೆಂಬಂದದಿ ಸಾಲ್ಗಟ್ಟಿ ಕುಜವಿರ್ತುದಾ ಬನಬನದಿ (ಪೋಶತ. ೨೪-೪೮). ೬. ಬಗೆಹರಿಸು; ತೀರ್ಮಾನಮಾಡು: ಅವರಿಬ್ಬರೂ ಬಂದು ನಮ್ಮ ದಿಷ್ಟು ವ್ಯಾಜ್ಯ ತೀರಿಸು ಎಂದು ನನ್ನ ಬೇಡಿಕೊಂಡರು (ಮುಂಬಯಿ. ೪-೮೮). ೭. (ಋಣ, ಉಪಕಾರ ಮೊದಲಾದುವನ್ನು) ಕೊಟ್ಟು ಮುಟ್ಟಿಸು; ಮರಳಿ ಸಲ್ಲಿಸು; ಸಂದಾಯಮಾಡು: ಉಂಡು ತೀರಿಸಬೇಕು ತಾ ಮುಂಕೊಂಡು ಮಾಡಿದ ಪುಣ್ಯ ಪಾಪದ ತಂಡವನು ತರಹರಣವಿಲ್ಲದೆ (ಕುಪ್ಪಾಉ. ೩-೦೨೦); ಎನ್ನ ಪೀಡಿಸಿ ಪರಮಭಂಡನ ಮಾಡಿ ನಿನ್ನ ಮುಯ್ಯಕೆ ಮುಯ್ಯ ತೀರಿಸಿಕೊಂಡಯ್ಯ (ಪುರಂದ ೦-೬೩-೨). ೮. ದಾಟು; ಕ್ರಮಿಸು: ದೂರೀಕೃತಮಾರ್ಗವನಂತರಿಕ್ಷದೆ ತೀರಿಸಿಯಾಕ್ಷಣದಲ್ಲಿ ದ್ವಾರಕಿ ಬಹಿರ್ಭಾಗದೊಳಿಳಿದಾಗ (ಪೋಹತ. ೩೦-೦೩). ೯. ಮೆರುಗುಕೊಡು; ನಯಗೊಳಿಸು (?): ಕಾರ್ಗಾಲದ ಕಾಡುಮಿಂಚಿನ ತಿರುಳಂ ತೀರಿಸಿ ತಿರ್ದಿದ ರೂಪಿನೆ ಪೊಸಮುತ್ತಿಂ ಕಡೆದಾ ಪರಿಜೆನೆ .... ಕರಮೆಸೆದಂ ಭೂಪತಿ ಪುರಸತಿಯರ ಕಣ್ಗಳ ಕದಿರಿಂದ (ಜಯಕಾ. ೧೦-೩೬). [ತೀರ್ + – ಇಸು$_3$]

ತೀರು$_1$ 'ತೀರ್' ನೋ.

ತೀರು$_2$ (ನಾ). ೧. ತೀರ್ಮಾನ; ತೀರ್ಪು: (ಕ). ೨. ಅಂತ್ಯ; ಸಮಾಪ್ತಿ; ಮುಕ್ತಾಯ: ಆ ಮಹಾನಾಟ್ಯದೇರಂ ತೀರಂ . . . ಭಾವಿಸಿ (ಗಚಿಕ. ೨೩-೬೦೦). ೩. ರೀತಿ; ಕ್ರಮ: ಮಾರುತ ಸುತನ ಶರೀರವ ಕಾಣದ ತೀರಿನೊಳಸ್ತದ ಕೂರಲಗುಗಳಂ ಭೋರನೆ ಸುರಿಯಲು (ಹನುಮ. ೬೨); ನಳ ನಾಳಿಗಳಿಗೆ ಘೋಷಿಸಿ ಪೇಳ್ದ ತೀರಿನಿಂ ಪಟ್ಟರಣನೀಕ ಜೇಂಕರಿಸುತ್ತೆ ಜಲಜಾತಗಳಿಗರಗಲು (ನವಪೋ.೧೧-೪೨); ದೊಡ್ಡಮಳೆ ಬಂದರೆ ಹಾಗಲ್ಲ; ಅದರ ರೀತಿ ಬೇರೆ ... ಎಷ್ಟಾದರೂ ಅದರದು ದೊಡ್ಡ ತೀರು (ಬಾಲಪ್ರ. II. ೧೦೬೩). ೪. ಹಿಂತಿರುಗಿಸುವಿಕೆ; ಸಂದಾಯಮಾಡುವಿಕೆ. 'ತೀರುವಳಿ' ಪರಾ. ೫. ಒಪ್ಪ; ಮೆರುಗು: (ಕ). [< ತೀರ್]

ತೀರು$_3$ (ನಾ). ೧. ಅಂಬು; ಸರಳು; ಬಾಣ: ಸಾಣೆಯೊಳ್ ತೀಡಿದ ಮೂರನ ತೀರಿನಂತಿರುವ ಕೊರೆನೋಟ (ಸಾಗಂಧಿ. ೨೨೪-೬); ಬೆಳ್ಳಿ ಮೇಲೆ ಚಿನದ ಮುಲಾಂ ಕಮಾನು ೧ ತೀರು ೧ (ಎಳ. XIV, ನಂಜನ. ೨೯೨- ಪುಟ. ೧೪೦; 1847). ೨. ತೊಲೆ; ಆನಿಕೆ: ಛಾವಣಿಗೆ ಹಾಕಿರುವುದು ತೆಂಗಿನ ತೀರು (ರೂಢಿ). ೩. ಗುಡಿಸಲು; ಚಪ್ಪರ: ತೀರಿಲ್ಲ ತಿಟುವಟವಿಲ್ಲ ಜಾಥ ಮಾತ್ರತೊಂಬೆಯಷ್ಟು (ಗಾದೆ). [< ಸಂ. ತೀರ]

ತೀರುಕಣೆ 'ತೀರ್ಕಣೆ' ನೋ.

ತೀರುಗಡೆ 'ತೀರ್ಗಡೆ' ನೋ.

ತೀರುಗಾಲ (ನಾ). ಅಂತ್ಯಕಾಲ; ಸಾಯುವ ಹೊತ್ತು; ಕೊನೆಗಾಲ: ಬಲ ಬಿಟ್ಟು ಹೊಡೆದು ಕರ್ಣನನ್ನು ಕೊಲ್ಲು . . . ಅವನಿಗೆ ತೀರುಗಾಲ ಬಂದಿದೆ (ವಚಥಾ. ೨೯೮). [ತೀರು$_1$ (< ತೀರ್) + ಕಾಲ]

ತೀರುತ, ತೀರ್ಥ (ನಾ). ೧. = ತೀರ್ಥ ೧: ಅಲ್ಲ ಜಲಮಯವಿದುವೆ ತೀರು [ಪಾಶಾಂ. ೦]ತ (ನಿಘಾಗ. ೧೦-೬೫-೧೪). Δ **ತೀರ್ಥ:** ೨. = ತೀರ್ಥ ೩: ಸ್ವಸ್ತಿಶ್ರೀ ಜಮ್ಬು ನಾಯ್ಗಿರ್ ತೀರ್ಥದೊಳ್ನೋನ್ತು ಮುಡಿಪ್ಪಿದರ್ (ಎಳ. II, ೧೮; 700); ಶ್ರೀಮದ್ ಬೆಟ್ಟದ×ಪೊ×ನ ಮಗ್ಗ ವೈಜಬ್ಬೆ [ಕ]ಬ್ಬಪ್ಪು ತೀರ್ಥದೊಳ್ ನೊನ್ತು ಸಂನ್ಯಸನಂ (ಎಳ. II, ೬೮-೩; 10ನೆಯ ಶತ ?). [< ಸಂ. ತೀರ್ಥ]

ತೀರುಪಡಿ 'ತೀರ್ಪಡಿ' ನೋ.

ತೀರುವಳಿ (ನಾ). ೧. ತೀರಿಸುವಿಕೆ; ಸಂದಾಯಮಾಡುವಿಕೆ: ವೇದ ರೂಪವಾದ ಸಾಲದ ತೀರುವಳಿಯ ಕ್ರಮವು ಹೀಗೆ (ನೀಗಟ್ಟು. ೭೭) ೨. ಇತ್ಯರ್ಥಪಡಿಸುವಿಕೆ: "ತೀರುವಳಿ; ತೀರ್ವೆ" Settlement (ಪತ್ರಿನಿ. ೭೪). [ತೀರು$_2$ + – ವಳಿ$_1$]

ತೀರುವೆ 'ತೀರ್ವೆ' ನೋ.

ತೀರೆ (ನಾ). ೧. ಒಂದು ಬಗೆಯ ಹುಳು; ಜಂತುಹುಳು: ಸಾಂಟೊನಿನ್, ಜಠರಕ್ರಿಮಿನಾಶಿನಿ, ತೀರೆಹುಳುವಿನ ಮದ್ದು (ಮೃಡಿಗಿ. ೯-೦೫೫). ೨. ಜಂತು ಹಂಳುವಿನಿಂದುಂಟಾಗುವ ಒಂದಂ ಬಗೆಯ ರೋಗ: (ಕ). [?]

ತೀರ್ಕಡೆ 'ತೀರ್ಗಡೆ' ನೋ.

ತೀರ್ಕಣಿಸು, ತೀರ್ಗಣಿಸು (ಕ್ರಿ). ೧. ಕೊನೆಗೊಳಿಸಂ; ನಾಶಗೊಳಿಸು: ಪ್ರಕಟಿತ ರಜಸ್ತಮೋಗುಣ ತೀರ್ಕಣಿಸಿ ಸಾತ್ವಿಕಫಲ ರೂಪಾದುದೆನುತ ಅಕಳಂಕಸಿತಹರ್ಮ್ಯವೆಸೆದುದು (ಮೋಹತ. ೩-೬೬). ೨. ನಿವಾರಿಸು; ಪರಿಹರಿಸಂ: ಹಲವು ದಾಯದಲಿ ಬುದ್ಧಿಯ ಪೇಳಿ ಮದನವ್ಯಾಕುಲವ ತೀರ್ಕಣಿಸಿ (ಮೋಹತ.೨೯-೬); ತೀರ್ಕಣಿಸು ದುಃಖಮಂ ಶಿವನ ಮರೆಯೊಕ್ಕು (ನಡವೋ. ೬-೩೭). ೩. ದಾಟು; ಕ್ರಮಿಸಂ: ಆಕಾಶಪಥವ ತೀರ್ಕಣಿಸಿ ಗೋಕರ್ಣರಿಪು ವೈನತೇಯ ಬಂದನು (ಮೋಹತ. ೪೨-೦೩). ೪. ಇಲ್ಲವಾಗು; ಅಂತ್ಯವಾಗು; ನಾಶವಾಗು: ಉಂಟಾದ ಧೈರ್ಯ ತೀರ್ಕಣಿಸಿತು (ಮೋಹತ. ೨೮-೦೨); ಬೋಧಾರುಹನಾದ ಪರಮೇಶ ನಿಮ್ಮೊಳು ಭೇದವಿಲ್ಲಿಂದು ಸೂಚಿಸಲು ರೋದನ ತೀರ್ಕಣಿಸಿತು (ಮೋಹತ. ೪೦-೯೩). **ತೀರ್ಗಣಿಸು**: ೫. ರಚಿಸು; ನಿರ್ಮಿಸಂ: ಸೌರಭ ಸದ್ಮವೆಂದೆನಿವ ಕೇರ್ಗಳಿಂ ಪುಂಡ್ರೇಕ್ಷುದಂಡದಿ ತೀ [ಪಾಠಾಂ. ಕೇ] ರ್ಗಣಿಸಿ ದೊಳ್ಳಪ್ಪರಂಗಳಿಂದಾರ್ಗೆ ಬಣ್ಣಿಸಲರಿದೆನಿಸಿ ಮೆಱೆದಿಹವು ಪ್ರಪಾಶಾಲೆ (ಮುದೇಪು. ೨-೦೨). [ತೀರ್ಕಣಿ + – ಇಸ್ಯ್]

ತೀರ್ಕಣೆ, ತೀರುಕಣೆ (ನಾ). ೧. ಅಂತ್ಯ; ವಂಂಕ್ಯಾಯಂ; ಕೊನೆ: ಯಜ್ಞದ ತೀರ್ಕಣೆ ಅವಭೃತಮೆಂಬುದು (ಹಲಾಯು.೬೯-೨೬೩): ವಿವಾದ ಸಮಾಪ್ತಿ = ತೋಟಿಯ ತೀರ್ಕಣೆ (ನೀತಿವಾ. ೨೬-೩೦). ೨. ನೆರವೇರಿಕೆ: ಕಾರ್ಯಸಿದ್ಧಿಶ್ಚೇತಿ = ಕಾರ್ಯದ ತೀರ್ಕಣೆಯು (ನೀತಿವಾ. ೯-೨೫). ೩. ತೀರ್ಮಾನ;ತೀರ್ಪು:ಸುವ್ಯಕ್ತವೂ ಅವಶ್ಯಕವೂ ತಪ್ಪದುದೂ ಸುಲಭವೂ ಎಂದು ಭಾಸವಾಗುವ ತೀರ್ಕಣೆಯನ್ನು ಬಾಯ್ದುಡುಕಿ (ಮುಂತ್ರಶ. ೭೨-೨೨). **ತೀರುಕಣೆ**: ೩. ನಿಮ್ಮ ಬಗೆಯ ದ್ರೋಹಿ ದುರಾತ್ಮರಿಗೆ ತಕ್ಕುಮೆಗಿಡದ ಒಂದೇ ದಣ್ಣನೆ ಎಂದು ತರಿಸಂದು ತೀರುಕಣಿ[ಣೆ]ಗೊಟ್ಟರುವರು (ಬಬ್ಬಅ. ೨೦೪-೨೩). ೪. ವ್ಯಯ; ಖರ್ಚು: "ಅರ್ಥದ ತೀರುಕಣಿ[ಣೆ] ಅರ್ಥಾಪಗಮ, ವ್ಯಯ, ವೆಚ್ಚ" (ನಾಜಿರಾ. ೫). [ತೀರ್ಕ + – ಅಣ್ಕೆ]

ತೀರ್ಕಣಿಗೆಯ್ (ಕ್ರಿ). (ಆಲಂ) ರಕ್ಷಣೆಮಾಡು; ಕಾಪಾಡು (?): ನಕ್ರ ಕಂಟಕವನುತ್ತರಿಸಿ ಗಜೇಂದ್ರನ ವಕ್ಕವ ತೀರ್ಕಣಿಗೆಯ್ದ ಚಕ್ರವಾಣಿಯ ಕೊರ್ತು ಕೃತಿವೇಳು (ಮೋಹತ. ೨೬-೦). [ತೀರ್ಕಣಿ + ಕೆಯ್]

ತೀರ್ಕೆ (ನಾ). ಇತ್ಯರ್ಥ; ನಿರ್ಣಯ; ತೀರ್ಮಾನ. 'ತೀರ್ಕಣೆ' ಪರಾ. [ತೀರ್ + – ಕೆ]

ತೀರ್ಗಡೆ, ತೀರಂಗಡೆ, ತೀರ್ಕಡೆ (ನಾ). ೧. ತೀರಿಸಂವಿಕೆ; ಪೂರೈಕೆ: ತನ್ನ ಪ್ರಜೆಗಳ ಕಾರ್ಯಗಳನುರೆ ಮುನ್ನ ತೀರ್ಗಡೆ ಮಾಡಿ (ರಘುವಂ. ೧೩೪-೩೪). **ತೀರುಗಡೆ**: ೨. ಸಲ್ಲುವಿಕೆ; ಸಂದಾಯವಾಗುವಿಕೆ: ಆತ್ಮಸಖಿಯೆ ನಿನಗೇನನಿತ್ತೊಡೆ ನಿನ್ನ ರಿಣ ತೀರುಗಡೆಯಪ್ಪುದೇ (ನವಮೋ. ೨೭-೫೫). **ತೀರ್ಕಡೆ**: ೩. ಮುಕ್ತಾಯ; ಅಂತ್ಯ; ಕೊನೆ: ತೀರ್ಕಡೆಯೋಳ್ ಬಳಿಕ್ಕಮಾ ತತ್ವಮುಸೀತಿ ವಾಕ್ಯಪದಮಪ್ಪುದು (ಕತಳ. ೧-೪೪). [ತೀರು1 (<ತೀರ್) + ಕಡೆ್]

ತೀರ್ಗಣಿಸು 'ತೀರ್ಕಣಿಸು' ನೋ.

ತೀರ್ಚಿಸು (ಕ್ರಿ). ಮುಗಿಸು; ಕೊಲ್ಲಿಸಂ; ನಾಶಗೊಳಿಸು: ಷಡಾನನನಿಂ ತಾರಕಾಸುರನಂ ತೀರ್ಚಿಸಿ . . . ವರಮಂ ಕರುಣಿಸುತಿರ್ದಂ (ಗಿರಿಕ. ೩ ಕಥಾಗರ್ಭ). [ತೀರ್ಚು + – ಇಸ್ಯ್]

ತೀರ್ಚು, ತೀರಿಚು, ತೀಚ್ಚು (ಕ್ರಿ). ೧. ಮುಂಗಿಸಂ; ಪೂರೈಸು: ತೀರ್ಚಿ ಸಂಧ್ಯಾನಿಯಮಂಗಳನೆಯ್ದಿ ಭಸ್ಮಶಯ್ಯಾತಳದೊಳ್ ಬಿಸುಸುಯ್ದು ಮೆಯ್ಯ ನಿಕ್ಕಿದಳಾಗಳ್ (ಕಾದಂಪೂ. ೯೬೯) ; ಮಜ್ಜನ ಭೋಜನಾದಿ ದಿವಸವ್ಯಾಪಾರಮಂ ತೀರ್ಚಿ (ಮುದ್ದಿಪು. ೪-೯೬೮). ೨. ಕೊಲ್ಲು; ಸಾಯಿಸು: ಕುರು ನಂದನರಂ ಕೊಂದೆಂ ಕುರುಶಾಖಾನುಜನ ನೆತ್ತರಂ ಕುಡಿದೆಂ ಪೂಣ್ದೆರಡಂ ತೀರ್ಚಿದೆನಿರ್ದಪುವೆರಡುಮವಂ ತೀರ್ಚಿ ತೀರ್ಚದಿರ್ಪನೆ ಪಗೆಯಂ (ಗದಾಯು. ೦-೬೯); ನೀಂ ಪಂಪೆಗೆ ಬಂದು ವಂದ್ಗುರುವಿನುದ್ಯಾಗವಂ ನುರ್ಗುವಾ ದನುಜಾಧೀಶನನೊಲ್ದು ತೀರ್ಚಿ ಮಖಮಂ ರಕ್ಷಿಪ್ಪುದು(ಉದ್ಯೋ. ೨-೨೭); ಶರಭತ್ವದಿಂದವೆ ತೀರ್ಚಿ ತತ್ ಸಿಂಹಮಂ (ಧಾವಬಂ. ೩-೦೪); ಸೀಳುವೆಂ ಪುಲಿಯೊಡಲ ತೀರ್ಚುವೆಂ ಪಗೆಯಂ (ಕಾಲೂರ. ೪೪-೦೫೯). ೩. ನಾಶಮಾಡಿಸು; ಕೊಲ್ಲಿಸು: ಸ್ಕಂದನಿಂ ತಾರಕಾಸುರನಂ ತೀರ್ಚಿ ಸಮಸ್ತಲೋಕಜನತಾಸಂತುಷ್ಟಿಯಂ ಮಾಡಿ (ಗಿರಿಕ. ೧೦-೧೦೦). ೪. ಕೊನೆಗಾಣಿಸು; ಇಲ್ಲದಂತೆ ಮಾಡು: ಲೋಭತ್ವದ ಬೇರಂ ಕಿಳ್ತು ಮಾತ್ಸರ್ಯಮನುಡುಗಿ ಮದಾಲೇಪಮಂ ತೀರ್ಚಿ (ರತ್ನಾಕ. ೬೯). ೫. ನಿವಾರಿಸು; ಪರಿಹರಿಸಂ; ಕಳೆ: "ಪರಿಪರಿಪುದಕೆ ತೀರ್ಚಿನಿಕ್ಕುಂ" (ಕಬಿರ. ೪೬) ; ಉಳ್ಳಿಯಂ ಕಿನ್ನರಯ್ಯಗಾದ ಮುಳಿಸುವಂ ಉಳ್ಳಿಯಿಂದವೆ ತೀರ್ಚಿ ಕಳೆವುದು ನಿರೋಧವಂ (ಬಸರ. ೦೦-೯೪) ; ಅಜ್ಞಾನತಿಮಿರಮಂ ತೀರ್ಚಿ (ಧಾವಬಂ. ೩-೩೩). ಒಲಿದೆನಗೆ ಕ್ಷುತ್ಪಿಪಾಸೆಗಳ ತೀರ್ಚಿದರಿಲ್ಲ (ವಂಕಾರಾ. ೫-೦-೫೫). ೬. (ಖಾಯಿಲೆ, ಬೇನೆ, ಹುಣ್ಣು ಮೊದಲಾದುವು) ವಾಸಿಯಾಗು; ಗುಣವಾಗು: ಎಕ್ಕೆ ಸಾಸಿವೆ ಹರಿದ್ರಾ ದ್ವಂದ್ವಮಿಾ ಪೇಟ್ದ ಮರ್ದುಗಳಂ ಪುತ್ತಿನ ಮಣ್ಣುಮಂ ಕದಡಿ ಕಾಸಿಟ್ಟೆಯ್ದೆ ಪೊಯ್ಯಾವ ಬಾವುಗಳುಂ ತೀರ್ಚುಗುಂ (ಲೋಕೋಪ. ೯-೩೪೦). ೭. (ಖಾಯಿಲೆ ಮೊದಲಾದುವನ್ನು) ವಾಸಿಮಾಡು; ಗುಣಪಡಿಸು: ಗುರುಭಕ್ತಿ ಭೇಷಜನಾಗಿ ರುಜೆಯಂ ತೀರ್ಚುವುದು (ಬಸಪು. ೪೯-೩೪). ೮. ಈಡೇರಿಸು; ಕೈಗೂಡಿಸು; ಪೂರ್ಣಗೊಳಿಸು: ನೀನಿದರ್ಕೇನುಮಂ ಬಗೆಯಲ್ವೇಡ ನಿನ್ನ ಬಗೆಯಂ ಬಗೆದಂತೆ ತೀರ್ಚುವೆಂ (ಪಂಪಭಾ. ೪-೬೯ ವ) ; ನಾಥ ನೀಂ ಕರುಣದಿನೊರ್ಮೆ ಕಣ್ದೆಱೆದು ತೀರ್ಚು ಮದೀಯ ಮನೋರಥಂಗಳಂ (ಕಾದಂಪೂ. ೯೩೪) : ನಿಮ್ಮ ಸ್ವಾರ್ಥಮೆಲ್ಲಮಂ ತೀರ್ಚಿ ಕೊಳ್ಳಿಂ (ಪಂಪಭಾ. ೦೦೩-೬) ; ಎನ್ನ ಬಂಧುಗಳ್ಗಕ್ಕೆ ಗಂಡಂಗಕ್ಕೆ ಪೇಟ್ಕೊಂಡ ಮವರೀ ಬಯಕೆಯಂ ತೀರ್ಚುವರಲ್ಲಂ (ಧರ್ಮಾಮೃ. ೯-೦೩). ೯, ೮ : ಪಗೆಗೊಂಡ ತುಂಬಿಯಂ ನಸುನಗುವಪೊಲುಳ್ಳಲರ್ದು ಪೊಂಗಿ ಕಂಪಾದುದೆನಲ್ ಸೊಗಯಿಸಿ ಕಾಮನ ಪಗೆಯಂ ಬಗೆಯಂ ತೀರ್ಚಿದವು ಸುಗ್ಗಿಯೊಳ್ ಸಂಪಗೆಗಳ್ (ಮುದ್ದಿಪು. ೫-೦೬). ೯. ಜರುಗಿಸು ; ಮಾಡು; ನಡೆಸು: ಬಂದ ಮರರಿರ್ವರವನತರಿಂದರ್ ಭೂಪೇಂದ್ರ ಬೆಸಸು ಬೆಸಸೆವ್ಮಂ ನೀನೆಂದುದನೆ ಬಯಸಿ ತೀರ್ಚಲ್ ಬಂದೆವು ಜಾತೋಪಕಾರ ವಿಕ್ರಯಮತಿಯಿಂ (ಶಾಂತಿಪು. ೯-೭೦) ; ತನ್ನರಸಿಯ ಕೆಯ್ಯೊಳ್ ನಂಬಿಯಣ್ಣನಂ ಕೊಟ್ಟು . . . ಜಾತ ಕರ್ಮಂ ನೆನೆದು ತೀರ್ಚಿ [ಪಾಠಾಂ. ನಿವಿರ್ಚಿಸಿ] (ನಂರಿಕ. ೩-೯೬) ; ಹರುಷಂಬೊತ್ತು ಲಿಂಗಸ್ಪರುಶನದ ನಿಯಮಂಗಳಂ ತೀರ್ಚಿ (ಬಸಪು. ೭೦-೩೩) : ದೇವಂಗೆ ಸರ್ವಮಂಗಳಕಾರ್ಯಮಂ ತೀರ್ಚಿ (ಅಶಿಚಂ. ೩೭-೪೭). ೧೦. ವ್ಯಯವಮಾಡು ; ಕಳೆದುಬಿಡಂ ; ನೀಗಂ : ತನ್ನ ಸಹಾಯನಪ್ಪ ವಿಪ್ರನ ಕೈಯೊಳ್ ಪಸ್ತುವಂ ಕೊಟ್ಟು ಪೋಪುದುಮಾತನದೆಲ್ಲಮಂ ಸ್ತ್ರೀ ದ್ಯೂತ ವ್ಯಸನದಿಂ ತೀರ್ಚಿ (ಮಹಾನೇ. ೩-೦೪೭೪). ೧೧. ದಾಟುಂ ; ಕ್ರಮಿಸಂ : ಆ ತ್ರಿದಿವದಾಧುರಬ್ಧಿಯನಾ ತ್ರಿದಶಂ ತೀರ್ಚಿ (ಕಬ್ಬಾನು. ೧೩೭ ಪ್ರಯೋ). ೧೨. ನಿರ್ಮಿಸು ; ರಚಿಸು : ಈಕ್ಷಣಕಾಂಶು ಮಂಡಳಿಸಿದುದಿಂದುರಶ್ಮಿಯೊಳೆ ತೀರ್ಚಿ ತೊಡರ್ಚಿದ ಕೀಟ ನೇಣವೋಲ್ (ಪಂಪಾಪು. ೪-೦೦೩). ೧೩. ಕಳಚು : ಬೇರೆಮಾಡಂ : ತಿಲರಸವಾರಿಯ ಭೇದದಂತೆ ಮನೆಯೊಳಗಿರ್ದ ಸೂತ್ರದಂತೆ ಅಂಗವ ತೀರ್ಚಿ ವಾಯಿದುನಿಂದ ಅಹಿಯ ಅಂಗದಂತೆ (ಸರ್ವಜ. ೬೭-೩೬೦). **ತೀರಿಚು**: ೨. ತೀರದೀತನ

ಸಮರ ಗರುಡನ ತೀರಿಚಿದಡದಲ್ಲದೆ (ನಿಧಾಗ. ೦೦-೬೦-೪೦). △ ತೀಟ್ಟು : ೧೨. ವಿಶ್ವಕರ್ಮ್ಮಮ್ ಮುದದಿಮ್ ಮೇಣನ್ರಿದಮ್ ತೀಟ್ಟಿದನೊ (ಎಇ. XVIII, ೩೦೬-೦ : ?). [ತೀರ್ + – ಚ್ಚು$_1$]

ತೀರ್ಣ (ಗು). ೧. ದಾಟಿದ; ಹಾದುಹೋದ. ೨. ತೇಲಿದ. ೩. ಹರಡಿದ. ೪. ಮೀರಿದ; ಅತಿಕ್ರಮಿಸಿದ. ೫. ಪೂರ್ಣಗೊಂಡ; ಈಡೇರಿದ : ತನ್ನಾಸೆ ಏನೊಂದು ಮಿಲ್ಲದೆಯೆ ಸಲಿಸಿದೀ ಶುಭಮತಿ ವಿಭೀಷಣೌದಾರ್ಯದಿಂ ಕ್ಷಾತ್ರದಿಂ, ನಾನಿಂದು ತೀರ್ಣಪ್ರತಿಜ್ಞನೆಂ (ಶ್ರೀರಾಮಾ. ೪೪೨-೪೩೩). (ನಾ). ೬. ತೀರ್ಮಾನವಾದುದಂ; ನಿರ್ಣಯಿಸಿದುದಂ: ವಿಧಾನಮಂಡಲದಿಂದ ... ಈ ಸಂವಿಧಾನವು ಆರಂಭವಾಗುವುದಕ್ಕೆ ಮುಂಚಿತವಾಗಿ ತೀರ್ಣವಾಗಿದ್ದ ಅಥವಾ ರಚಿತವಾಗಿದ್ದ ... ವಿಧಿಗಳು (ಭಾಧಾಸ. ೬). [ಸಂ.]

ತೀರ್ಥ (ನಾ). ೧. ಪವಿತ್ರವಾದ ಜಲ, – ನೀರು : ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೆ (ಕನಕ. ೦೫೬ ಪಲ್ಲವಿ); ನೀಂ ಗೈದ ಕುಕೃತಮಂ ತವಿಸುವೆನು, ಕೇಳ್, ವಿಪಿನಾಶ್ರಮದ ತಪೋಜೀವನದ ಸುಕೃತ ತೀರ್ಥದಲಿ (ಶ್ರೀರಾಮಾ. ೧೧೦-೩೬೬); ಶಂಖದಿಂದ ಬಿದ್ದರೆ ತೀರ್ಥ (ಗಾಡ). ೨. ಅಭಿಷೇಕಮಾಡಿದ ಪವಿತ್ರವಾದ ನೀರು : ಹರಿವಾಣದಲ್ಲಿ ತೀರ್ಥ ಇದ್ದರೆ ಕೊಡಿ (ಪದ್ಮಸ. ೫೩೦); ಗಿಂಡಿಯಲ್ಲಿ ತೀರ್ಥವನ್ನು ತುಂಬಿಕೊಂಡು (ಒಡಕ. ೧೬); ತೀರ್ಥಕ್ಕಿಂತ ಶ್ರೇಷ್ಠವಿಲ್ಲ, ಪಾರ್ಥಗಿಂತ ದೊರೆಯಿಲ್ಲ (ಗಾಡ). ೩. (ಕೊಳ, ನದಿ ಮೊದಲಾದ ಜಲಪ್ರದೇಶವಿರುವ) ಪವಿತ್ರಕ್ಷೇತ್ರ; ಪುಣ್ಯಸ್ಥಳ: ಗ್ರಾಮ ನಗರ ಖೇಡ ಖರ್ವಡ ತೀರ್ಥ ಪುಣ್ಯಾರಣ್ಯಂಗಳಂ ತೊಟಲ್ದುಂ ವಿಹರಿಸುತ್ತುಮುತ್ತರಮಧುರೆಗೆ ವಂದು (ಶಾಂತಿಪು. ೬-೫೯೮); ಕೈಲಾಸವಿದ್ದಲ್ಲಿ ಅಷ್ಟಷಷ್ಟಿತೀರ್ಥಂಗಳೆಪ್ಪುವು (ಅವಚಂ. ೦೬೨-೭೩೫); ಸತ್ಯರಾನುಡಿ ತೀರ್ಥ (ಸರ್ವಜ್ಞ. ೪೦೦); ನಾನು ಶಕ್ರಾವತಾರತೀರ್ಥದಲ್ಲಿ ವಾಸ ಮಾಡತಕ್ಕ ಅಂಬಿಗನು (ಶಾಕುಂತ.೭೫-೯); ಕಾಶಿಯಲಿ ನೀನರಿವೆ ಯಾತ್ರೆಯೇ ತೀರ್ಥಕಿಂ ಶ್ರೇಷ್ಠವೆಂದು (ಪಾಂಡಜ. ೪೫-೯). ೪. ಶಾಸ್ತ್ರ ; ದರ್ಶನ. ೫. ಸ್ನಾನಘಟ್ಟ ; ನೀರಿಗೆ ಇಳಿಯುವ ವೆಂಟ್ಟಿಲುದಾರಿ ; ಸೋಪಾನ ಮಾರ್ಗ. ೬. ದಾನವನ್ನು ತೆಗೆದುಕೊಳ್ಳಲು ಯೋಗ್ಯನಾದವನಂ ; ಸತ್ಪಾತ್ರ. ೭. ಒಳ್ಳೆಯ ವಂಶಕ್ಕೆ ಸೇರಿದವನಂ ; ಸದ್ವಂಶಸ್ಥ ; ಬ್ರಾಹ್ಮಣ. ೮. ರಾಜನ ಹದಿನೆಂಟು ಜನ ಮಂತ್ರಿಪ್ರಧಾನರು. 'ಅಷ್ಟಾದಶತೀರ್ಥ' ಪರಾ. ೯. ಮುನಿ ; ಯತಿ. ೧೦. ಪಂಡಿತ ; ವಿದ್ವಾಂಸ. ೧೧. ಜಿನ ; ಅರ್ಹಂತ. ೧೨. ಪತಿವ್ರತೆಯಾದ ಹೆಂಗಸು. ೧೩. ಧರ್ಮಗುರು ; ಆಚಾರ್ಯ. ೧೪. ಸ್ತ್ರೀಯ ಗುಹ್ಯಾಂಗ ; ಭಗ ; ಯೋನಿ. ೧೫. ಧ್ವಜ ; ಪತಾಕೆ. ೧೬. ನದಿ. ೧೭. ಬಾವಿ ; ಕೂಪ. ೧೮. ಕೆರೆ. "ಕಾಂತೆಯರ ಯೋನಿಯೊಳು ನದಿ ಬಾವಿ ಕೆಱೆಗಳೊಳು ಮಂತ್ರಿ ಮೊದಲಾದ ಪದಿನೆಣ್ಬರ್ ಪ್ರಧಾನರೊಳು ಸಂತ ಪಡು ದರ್ಶನಂಗಳೊಳು ತೀರ್ಥಕ್ಷೇತ್ರದೊಳು ತೀರ್ಥಾರ್ಥವಕ್ಕುಂ" (ಮಂಗರಾ. ೦೫೪-೬೮) ; "ಜಿನ ವಿದ್ವಾಂಸ ಪತಿವ್ರತಾವಗೆಗೆ ಪಶಾಕಾಮ್ನಾಯ ಸತ್ಪಾತ್ರ ದರ್ಶನ ಸೋಪಾನ ತಟಾಕ ಮಂತ್ರಿ ಮೊದಲಾದಷ್ಟಾದಶಾಮಾತ್ಯರು ಮುನಿ ಕೂಪಂ ಭಗ ಪುಣ್ಯತೀರ್ಥಮಿನಿತುಂ ತೀರ್ಥಾಭಿಧಾನಂ"(ನಾನಾರ್ಥ .೪೮). ೧೯. ಯತಿಗಳ ಹೆಸರಿನೊಡನೆ ಸೇರಿಸುವ ಒಂದು ಪೂಜ್ಯವಾಚಕ ಪದ: ಈಗಿನ ಶೃಂಗೇರಿ ಸ್ವಾಮಿಗಳು ಅಭಿನವ ವಿದ್ಯಾತೀರ್ಥರು (ಕೂಡ್ಲಿ). ೨೦. ನೀರು; ಜಲ. ೨೧. ಅಗ್ನಿ ; ಬೆಂಕಿ. ೨೨. [ಜೈನ] ಜಿನನ ಚರಿತ್ರೆ : ತೀರ್ಥಮೆಂಬುದು ಜಿನಪತಿಚರಿತಂ (ಚಾವುಂಪು.೬).

ತೀರ್ಥಪ್ರಸಾದ = ದೇವರಿಗೆ ಅಭಿಷೇಕಮಾಡಿದ ನೀರಂ ಮತ್ತು ಅರ್ಪಿಸಿದ ನೈವೇದ್ಯ: ಮಠದಲ್ಲಿ ತೀರ್ಥಪ್ರಸಾದವಾಗಿ ಊಟದ ಸಿದ್ಧತೆ ನಡೆದಿದೆ (ಹೂಸಕ್ಷಿ. ೨೦೩). [ಸಂ.]

ತೀರ್ಥಂಕರ (ನಾ). [ಜೈನ] ಅರ್ಹಂತ ; ಜಿನ : ಜಿನನಿಗೆ ... ಜಿನೇಶ್ವರ, ತೀರ್ಥಂಕರ ... ವೀತರಾಗ, ಪರಮಾತ್ಮ ಮೊದಲಾದ ಹೆಸರುಗಳುಂಟು (ಧಾತತ್ತ್ವ. ೩೩೭) ; ಜೈನರೂ ತಮ್ಮ ಬಸದಿಗಳಲ್ಲಿ ತೀರ್ಥಂಕರರನ್ನು ಪೂಜಿಸುವಂತೆ ... ರಚಿಸಿಕೊಂಡರು (ಸಾಹಿಸ. ೧೩೪) ; ತೀರ್ಥಂಕರರೆಂದರೆ ಪ್ರವಚನಶಾಸ್ತ್ರಪ್ರವರ್ತಕರು (ಹಿಂದಸಾ.೭೫). [ಸಂ.]

ತೀರ್ಥಕ (ಗು). ೧. ಪವಿತ್ರವಾದ. (ನಾ). ೨. ತಪಸ್ವಿ. ೩. ಧರ್ಮಪ್ರವರ್ತಕ : ಪ್ರತಿ ತೀರ್ಥಕರರ ಅನುಯಾಯಿಗಳೂ ತೀರ್ಥಕರೆನಿಸಿಕೊಳ್ಳುತ್ತಾರೆ (ತೀರ್ಥಕ. ೨೦); ತೀರ್ಥದಲ್ಲಿ ಹುಟ್ಟಿದವನು ತೀರ್ಥಕ (ತೀರ್ಥಕ. ೮೦). [ಸಂ.]

ತೀರ್ಥಕರ (ನಾ). = ತೀರ್ಥಂಕರ : ತೀರ್ಥಕರ ಪ್ರತಿಕೃತಿಗಳಂ ಪಂಚರತ್ನ ಮಯಂಗಳಂ ಮಾಡಿಸಿ (ಆದಿಪು. ೦೬-೦೪) ; ಅವಿವೆನ್ನದೆ ರೂಢಿಯ ತಾಣ ಮುಮೆಲ್ಲಮಂ ತೀರ್ಥಕರರ ಕೇವಳಿಗಳ ಮುನ್ನ ವಿಹಾರಿಸಿದೆಡೆಗಳೆವೆಲ್ಲ ಮೆಂದು ನಂಬುವುದು ಬೇಱೆ ಪೆಸರಿಟ್ಟಡವೇಂ (ಸಮುಚ. ೨-೭೫) ; ಅತ್ಯಂತ ಭಕ್ತಿಯಿಂ ಪದನತ್ಯಂತದೊಳೆಯ್ದಿ ತಾಳ್ದಿದಂ ತೀರ್ಥಕರಸ್ತುತ್ಯೋದ್ಯಮಮಂ (ದಂದ್ರಪು. ೭-೬); ನಿರವದ್ಯಾಚರಣಕ್ಕೆ ತೀರ್ತ್ಥಕರನಿವ್ರಂತಿಪ್ಪನಂ ಬೊಪ್ಪನಂ ಧರೆ ಬಣ್ಣಿಪ್ಪುದು (ಎಕ. VIII, ಸೊರಬ. ೦೪೦-೩೮ ; 1198) ; ತೀರ್ಥವನ್ನು ಮಾಡಿದವನು ತೀರ್ಥಕರ (ತೀರ್ಥಕ. ೮೦). [ಸಂ.]

ತೀರ್ಥಕರಚಕ್ರ (ನಾ). [ಜೈನ] ಜಿನಾರ್ಚನೆಯ ಮಂತ್ರ : ಈ ಮಂತ್ರದಿಂ ಜಿನಾರ್ಚನಮಂ ಮಾಟ್ಟುದು ತೀರ್ಥಕರಚಕ್ರಮೆಂಬುದಿದಱ ಪೆಸರು (ಪ್ರತಿಷ್ಠಾ. ೦೦-೪೫). [ತೀರ್ಥಕರ + ಚಕ್ರ$_1$]

ತೀರ್ಥಕರತ್ವ (ನಾ). [ಜೈನ] ತೀರ್ಥಂಕರ ಪದವಿ : ಭಾಸುರದೇವ ಕೋಟಿವಿಭುವಪ್ಪ ಮಹರ್ಧಿಕನಪ್ಪ ವಾಸವಂಗಾಸನಕಂಪಮಂ ಪಡೆದು ತೀರ್ಥಕರತ್ವಮನಿತ್ತಂ (ಆದಿಪು. ೦೬-೮೦) ; ಸಕಲೋರ್ವೀತಲ ಚಕ್ರವರ್ತಿ ಪದಮಂ ಕೈಕೊಂಡದಂ ಬಿಟ್ಟು ತೀರ್ಥಕರತ್ವಂಬಡೆದಿರ್ಪುದುಂ (ಪಂರಾಮಾ. ೦೬-೭೪). [ಸಂ.]

ತೀರ್ಥಕ್ಷೇತ್ರ (ನಾ.) ಪುಣ್ಯಕ್ಷೇತ್ರ ; ಪವಿತ್ರಸ್ಥಳ : ಎವಗೆ ತೀರ್ಥಕ್ಷೇತ್ರ ಯಾತ್ರಾವ್ಯವಸಿತಕೆ ಮನವಾದುದು (ಕುಮಾಗ. ೬-೯); ತನ್ನ ದಾರಿಯುದ್ದಕ್ಕೂ ಅನೇಕ ಜನಜಂತುಗಳನ್ನು ತೃಪ್ತಿಪಡಿಸಿ ... ತೀರ್ಥಕ್ಷೇತ್ರಗಳನ್ನು ಸೃಷ್ಟಿಸಿ (ಕೂನ್ಕಳು. ೦೦೫). [ತೀರ್ಥ + ಕ್ಷೇತ್ರ]

ತೀರ್ಥಗೊಳ (ನಾ.) ಪವಿತ್ರವಾದ ಕೊಳ ; ತೀರ್ಥ ಸರೋವರ : ಕಾವಾಲಿ ತ್ರಿಣಯನ ತೀರ್ಥಗೊಳದೆ ಪಂಚರೂಪಿನಾವಲುಗಳೊಪ್ಪುವು (ಕಂನವಿ. ೨-೧೦೯). [ತೀರ್ಥ + ಕೊಳ್ಳ]

ತೀರ್ಥಜಲ, ತೀರ್ಥಜಳ (ನಾ). ೧. ಪುಣ್ಯಕ್ಷೇತ್ರದ ಜಲ,—ನೀರು ; ಪವಿತ್ರವಾದ ಜಲ. ೨. ಪುಣ್ಯಪುರುಷರ ಪಾದಗಳನ್ನು ತೊಳೆದ ನೀರು ; ಮಹಾತ್ಮರ ಪಾದೋದಕ : ಸತಿಯುಂ ಪತಿಯುಂ ಯತಿಪದ ಶತದಳಮಂ ತೊಳೆದು ತೀರ್ಥಜಲಮಂ ತಳೆದುಂ (ವೃಜವಿ. ೦೪-೭೫). ತೀರ್ಥಜಳ : ೧. ತೀರ್ಥಜಳಂಗಳಂ ತರಿಸಿ ನಿರ್ಮಳಭರ್ಮಘಟಂಗಳಿಂದೆಮಾ ತೀರ್ಥಕರಂಗೆ ಸಂಗಳಿಸಿ ಮಂಗಳಮಜ್ಜನಮಂ (ವರ್ಧಪು. ೦೪-೧೦೦); ತೀರ್ಥಜಳಂ [ಪಾಣಾಂ. ನಂ] ಗಳಿನೆ(ಸ)ಗೆ ಚತುರ್ಥಸ್ನಾನಮಂ (ಪಾರ್ಶ್ವಪು. ೦೩-೦೩೨). ೨. ಭದ್ರಾಸನದೊಳ್ ಭರದಿಂ ಕುಳ್ಳಿರಿಸುತ್ತುಂ ಚರಣಂ ದೊಳೆಯುತ್ತೆ ತೀರ್ಥಜಳಮಂ ತಳೆದರ್ (ಗಿರಿಕ. ೪-೩೯). [ತೀರ್ಥ + ಜಲ್ಲ]

ತೀರ್ಥಜಳ ' ತೀರ್ಥಜಲ ' ನೋ.

ತೀರ್ಥನಾಥ (ನಾ). = ತೀರ್ಥಂಕರ : ತೀರ್ಥನಾಥಸಮುದಾಯದ ಶಾಸನ ದೇವಿಯರ್ಕಳಿರ್ವತ್ತುನಾಲ್ವರ್ (ಅಜಿಪು. ೦-೬) : ಜವ್ವನದ ಜಸೆಗದೇಂ ಬಂದನೋ ಪಾರಿಜಾತಾಂಕುರಮಿಂದ್ರೋದ್ಯಾನದೊಳ್ ಬಳ್ವಳಮೆ ಬಳೆದು ಕೈವಂದಪೊಲ್ ತೀರ್ಥನಾಥಂ (ಆನಂಪು. ೬-೨೦). [ತೀರ್ಥ + ನಾಥ]

ತೀರ್ಥಪಾದ (ನಾ). ೧. ಪೂಜ್ಯವಾದ ಪಾದ ; ಪವಿತ್ರವಾದ ಪಾದ : ಭೃಗುವೈತಂದು ಲಕ್ಷ್ಮೀಧರನ ವಕ್ಷಸ್ಥಳವನೊದೆಯಲು . . . ಮೆಱೆದನು ತೀರ್ಥಪಾದವ ಧರೆಯೊಳಗೆ ಬುಧರಿಂದಧಿಕವಹ ತೀರ್ಥವಿಲ್ಲಿಂದ (ಕುವ್ಯಾಉ. ೪-೬೨). ೨. ಪವಿತ್ರವಾದ ಪಾದಗಳನ್ನುಳ್ಳವನು ; ಪೂಜ್ಯನಾದವನು. ೩. ಕಾಲಿನಲ್ಲಿ ಗಂಗೆಯನ್ನು ಹೊಂದಿರುವವನು ; ಹರಿ ; ವಿಷ್ಣು.

[ತೀರ್ಥ + ಪಾದ]

ತೀರ್ಥಪ್ರವರ್ತಕ (ನಾ). = ತೀರ್ಥಂಕರ : ಈ ಭವಕ್ಕಿಂಟನೆಯ ಭವದೊಳ್ ಭರತದೊಳ್ ನೀನಾದಿತೀರ್ಥಪ್ರವರ್ತಕನಾದಂದೀ ಶ್ರೀಮತಿ . . . ಶ್ರೇಯಾಂಸನಕ್ಕುಂ (ಆದಿಪು. ೩-೧೩ ಪ).

[ತೀರ್ಥ + ಪ್ರವರ್ತಕ]

ತೀರ್ಥಮಸ್ತಕ (ನಾ). ತಲೆಯಲ್ಲಿ ಗಂಗೆಯನ್ನುಳ್ಳವನು ; ಶಿವ ; ಈಶ್ವರ : ಶಬರವೇಷದೊಳೊಂದು ಹಂದಿಯಂ ತೀರ್ಥಮಸ್ತಕನೆಚ್ಚ (ಗುರುಚ. ೪-೨೫).

[ತೀರ್ಥ + ಮಸ್ತಕ]

ತೀರ್ಥಮೃತ್ತಿಕೆ (ನಾ). ಪವಿತ್ರವಾದ ಮಣ್ಣು : ಅಪ್ಪರಲ್ಲಿ ನಾನೂ ಕೂಡ ಶಕುಂತಳೆಗೋಸ್ಕರ ಗೋರೋಚನ, ತೀರ್ಥಮೃತ್ತಿಕೆ, ದೂರ್ವಾಕಿಸಲಯಗಳ ವಂಗಳಾನುಲೇಪಗಳನ್ನು ಮಾಡುವೆನು (ಶಾಕುಂತ. ೪೯).

[ತೀರ್ಥ + ಮೃತ್ತಿಕೆ]

ತೀರ್ಥಯಾತ್ರೆ (ನಾ). ಪುಣ್ಯಕ್ಷೇತ್ರಗಳಿಗೆ ಹೋಗಿ ಬರುವಿಕೆ ; ಪವಿತ್ರ ಸ್ಥಳಗಳ ದರ್ಶನಕ್ಕಾಗಿ ಮಾಡುವ ಯಾತ್ರೆ. – ಪ್ರಯಾಣ : ಸಂಪ್ರೀತಿಯಿಂದಿವರಾದರರಸಿಯರ್ನೀನೆಂದು ತೀರ್ಥಯಾತ್ರೆಗೆ ಬಂದಿರೆ (ಕೃಮಿಭಾ. ೧೭-೪೯); ಭ್ರಾಂತಿವಿಡಿದೇ ತೀರ್ಥಯಾತ್ರೆಗಳಂತವಿಲ್ಲದೆ ತಿರುತಿರುಗಿ ಬೇಸತ್ತು (ಗಗಣಾ.೯-೪೪) ; ಪರಮಾತ್ಮನ ಸಾಕ್ಷಾತ್ಕಾರಪ್ರಯತ್ನಕ್ಕಿಂತ ಮಿಗಿಲಾದ ತೀರ್ಥಯಾತ್ರೆಯಿಲ್ಲ (ಧಾರವಿ.೩೨೮) ; ಒಬ್ಬ ಸನ್ಯಾಸಿಯು ತೀರ್ಥಯಾತ್ರೆಗಾಗಿ ದೇಶಾಟನ ಮಾಡುತ್ತಿರುವಾಗ (ಮುಂಬಮು. ೪-೦೫೧).

[ತೀರ್ಥ + ಯಾತ್ರೆ]

ತೀರ್ಥಯಾನ (ನಾ). = ತೀರ್ಥಯಾತ್ರೆ : ಪ್ರವಚನಪರಿಪಠನಕ್ಷಮತೆ ವಾಗ್ಮಿಯಂ ತೀರ್ಥಯಾನದಕ್ಷತೆ ಪದವಂ ಕವಿಯಂ ಜಿನಪರಚರಿತ ಶ್ರವಣ ಪಟುತೆ ಱಂಗದನ್ನಮಾರ್ಜಪೆಂ (ಚಂದ್ರಪು. ೪-೦೭).

[ತೀರ್ಥ+ಯಾನ]

ತೀರ್ಥರೂಪ (ನಾ). ೧. ತಂದೆ : ನಮ್ಮ ತೀರ್ಥರೂಪರು ಮನೆಯಲ್ಲಿ ಇಲ್ಲ (ರೂಢಿ). ೨. ಪೂಜ್ಯವ್ಯಕ್ತಿ ; ಸತ್ಪಾತ್ರ : ತೀರ್ಥರೂಪ, ತೀರ್ಥಸ್ವರೂಪ... ಮೊದಲಾದ ಶಬ್ದಗಳನ್ನು... ಪತ್ರಸ್ವೀಕರಿಸತಕ್ಕವರ ಹೆಸರಿನ ಹಿಂದೆ ಜೋಡಿಸಿ ಬರೆಯುವ ಸಂಪ್ರದಾಯ ಉಂಟು (ಮುಂಬಯಿ. ೪-೮೪).

[ತೀರ್ಥ + ರೂಪ]

ತೀರ್ಥರೂಪು (ನಾ). = ತೀರ್ಥರೂಪ ೧ : ನಾನಾಗಲೀ, ನಮ್ಮ ತೀರ್ಥರೂಪುಗಳಾಗಲೀ, ಅಪ್ಪೇಕೆ ನಮ್ಮ ವಂಶದಲ್ಲಿ ನನಗೆ ತಿಳಿದ ಮಟ್ಟಿಗೆ ಯಾರಿಗೂ ಇಂತಹ ಕೃಪಣಬುದ್ಧಿ ಇರಲಿಲ್ಲ (ಹೇಮಳಕ. ೦೬).

[<ತೀರ್ಥರೂಪ]

ತೀರ್ಥವಿಧಿ (ನಾ). ಕ್ಷೇತ್ರಸ್ಥಳಗಳಲ್ಲಿ ಮಾಡಬೇಕಾದ ಧಾರ್ಮಿಕ ಕರ್ಮ : ಅವರ ತಾತ ರಾಮೇಶ್ವರಕ್ಕೆ ಹೋಗಿ ತೀರ್ಥವಿಧಿಗಳನ್ನು ಪೂರೈಸಿ ಬಂದರು (ರೂಢಿ).

[ತೀರ್ಥ + ವಿಧಿ]

ತೀರ್ಥಶ್ರಾದ್ಧ (ನಾ.) ಪುಣ್ಯಕ್ಷೇತ್ರಗಳಲ್ಲಿ ಮಾಡಲಾಗುವ ಒಂದು ಬಗೆಯ ಶ್ರಾದ್ಧ. – ತಿಥಿ : ಕಲಿಮಿತ್ರನು ಮಾಡತಕ್ಕ ತೀರ್ಥಶ್ರಾದ್ಧ ಮೊದಲಾದ ಸತ್ಕರ್ಮಕ್ಕೆ ಭೋಕ್ತೃವಾದನು (ಆರ್ಯಮಾ.೧೪೬).

[ತೀರ್ಥ + ಶ್ರಾದ್ಧ]

ತೀರ್ಥಸ್ನಾನ (ನಾ). ಪವಿತ್ರಜಲದಲ್ಲಿ ಮೈತೊಳೆಯುವುದು : ತೀರ್ಥಸ್ನಾನಾನಂತರ ದೇವರ ಸೇವೆ ಮಾಡುವುದು ಪುಣ್ಯಕರ (ರೂಢಿ).

[ತೀರ್ಥ + ಸ್ನಾನ]

ತೀರ್ಥಸ್ವರೂಪ (ನಾ). =ತೀರ್ಥರೂಪ ೨ : ಅರ್ಥವನ್ನು ತೀರ್ಥಸ್ವರೂಪರಾದ ಉದಾತ್ತಜೀವಿಗಳಿಗೆ ವಿನಿಯೋಗಿಸಬೇಕು ಎಂದು ಕೌಟಿಲ್ಯನು ವಿಧಿಸಿರುವನು (ಧಾರವಿ ೩೫೦). [ತೀರ್ಥ + ಸ್ವರೂಪ]

ತೀರ್ಥಾಂಗಿ (ನಾ). ಪವಿತ್ರವಾದ ದೇಹವುಳ್ಳವನು ; ಪುನೀತ : ಪಾವನ ಪ್ರಸಾದ ತೀರ್ಥಾಂಗಿಯುಷ್ಮಮಳಸದೃಕ್ಕನಂ ಬತ್ತರಿಸಿದಂ (ವೀಕೃಪು. ೦-೨ ಸೂಚನೆ). [ಸಂ. ತೀರ್ಥಾಂಗಿನ್]

ತೀರ್ಥಾಂಬು (ನಾ). =ತೀರ್ಥಜಲ ೧: ಪದೆದರ್ಹದ್ಬಿಂಬಮಂ ಪೂಜಿಸಿದನಮಲ ತೀರ್ಥಾಂಬುವಿಂ (ಚಂದ್ರಪು. ೪-೦೦೬). [ತೀರ್ಥ + ಅಂಬು]

ತೀರ್ಥಾಖ್ಯಾನ (ನಾ). ಧರ್ಮವನ್ನು ಕುರಿತ ವಿವರಣೆ; ತತ್ವಜಿಜ್ಞಾಸೆ : ತೀರ್ಥಾಖ್ಯಾನಮೆಂಬುದು ದುರಿತವಿನಾಶಕಾಂಕ್ಷಿಗಳ್ ಸಂಸಾರಸಮುದ್ರಮನೀಸಲೆಂದು ಜಿನಪತಿಮುಖಕಮಲವಿನಿರ್ಗತಧರ್ಮಸಂತತಿ ಪ್ರಕಟೀಕರಣಂಗೆಯ್ಯುದು (ಜಾವುಂಪು. ೦೩). [ತೀರ್ಥ + ಆಖ್ಯಾನ]

ತೀರ್ಥಾಧಿನಾಥ (ನಾ). = ತೀರ್ಥಂಕರ : ಯೌವನಪ್ರಾಪ್ತನಾಗಿ ಕುಮಾರಕಾಲದೊಳಿಪ್ಪತಯ್ದಾಸಿರವರ್ಷಂ ನೆಜಿಯೆ ಪದಿನಾಜನೆಯ ತೀರ್ಥಾಧಿನಾಥನವ್ವರ್ವರಾಸ್ಯತಿಲಕಂ (ಶಾಂತಿಪು. ೦೦-೯೪ವ).

[ತೀರ್ಥ + ಅಧಿನಾಥ]

ತೀರ್ಥಾಭಿರತಿ (ನಾ). ತೀರ್ಥಯಾತ್ರೆಯಲ್ಲಿ ಆಸಕ್ತಿ, – ಪ್ರೀತಿ : ಸೌಮನಸ್ಯನುರಾಗಹರದ ಮಹಾಮಹಿಮ ತೀರ್ಥಾಭಿರತಿಯಲಿ ಗೋಮಹಿಷ ಧನ ವಸ್ತ್ರದಿಂ ದ್ವಿಜವರರರ್ಚಿಸಿದ (ಕುವ್ಯಾಗ. ೬-೦೦).

[ತೀರ್ಥ + ಅಭಿರತಿ]

ತೀರ್ಥೇಶ (ನಾ). = ತೀರ್ಥಂಕರ : ಪಗೆವಂಗಂ ಕೆಳೆಯುಂಗಮಾರ್ದ್ರಮತಿಯಂ ತ್ವನ್ಮೂರ್ತಿ ತೀರ್ಥೇಶ ಮಾಡುಗುಮಾಳೋಚಿಸೆ ನಿನ್ನ ತತ್ವವು [ವಿ]ಸಂವಾದಂ ದುರಾಪಂ ಗುಣಾಬ್ಧಿಗಭೀರಂ (ಶಾಂತಿಪು. ೪-೦೫೮).

[ತೀರ್ಥ + ಈಶ]

ತೀರ್ಥೇಶ್ವರ (ನಾ). = ತೀರ್ಥಂಕರ : ಬಂದಂ ಲೋಕನಾಥಂ ಸ್ವಯಂಪ್ರಭ ತೀರ್ಥೇಶ್ವರನಾ ನೃಪೇಶ್ವರನ ರಾಜ್ಯಂ ಪೂಜ್ಯಮಪ್ಪನ್ನೆಗಂ (ಶಾಂತಿಪು.೦-೯೦): ಬಬ್ಬುಕ್ಕಂತೆ ಬೀಬ್ಕೊಂಡು ತೀರ್ಥೇಶ್ವರನಂ ಪೋದಂ ಶಚೀಲೋಚನಚಪಳ ಚಕೋರೀಶರಶ್ಚಂದ್ರನಿಂದ್ರಂ (ಪುಷ್ಪಪು. ೦೩-೦೧೩). [ತೀರ್ಥ + ಈಶ್ವರ]

ತೀರ್ಥೋದಕ (ನಾ). = ತೀರ್ಥಜಲ ೧ : ಅಗಣ್ಯಪುಣ್ಯತೀರ್ಥೋದಕಂಗಳಿಂದು (ಪಂಪಭಾ. ೦೦-೪೭ವ) ; ಪುಣ್ಯವತಿ ವಸಂತಸಮಯದ ಸಹಕಾರ ಲತೆಯಂತೆ ಪುಷ ವತಿಯಾಗಿ ತೀರ್ಥೋದಕಂಗಳಿಂ ಪವಿತ್ರೀಕೃತಗಾತ್ರೆಯಾಗಿ (ಶುಕುಮಾ. ೯-೧೦೦೩ವ). [ತೀರ್ಥ + ಉದಕ]

ತೀರ್ಥೋಪವಾಸ (ನಾ). ಪುಣ್ಯಕ್ಷೇತ್ರದಲ್ಲಿ ಮಾಡುವ ಉಪವಾಸ ; ಕ್ಷೇತ್ರೋಪವಾಸ : ಅಂತಲ್ಲಿಯ ಚೈತ್ಯಾಲಯಂಗಳಂ ವಂದಿಸಿ ತದ್ಯಾಸರದೊಳ್ ತೀರ್ಥೋಪವಾಸಂಗೆಯ್ದು (ಶುಕುಮಾ. ೪-೨೨೨ವ).

[ತೀರ್ಥ + ಉಪವಾಸ]

ತೀರ್ದ 'ತೀರ್' ಪರಾ.

ತೀರ್ದು 'ತೀರ್' ಪರಾ.

ತೀರ್ಪಡಿ, ತೀರುಪಡಿ (ನಾ). ೧. ಬಿಡುವು; ಅವಕಾಶ. ೨. ಇತ್ಯರ್ಥ; ನಿರ್ಣಯ : (ಕ). ೩. ಮುಗಿದು ಹೋಗಿರುವಿಕೆ : ಮನೆಯಲ್ಲಿ ಅಕ್ಕಿ ತೀರ್ಪಡಿಯಾಗಿದೆ (ರೂಢಿ). **ತೀರುಪಡಿ** : (ಕ). [ತೀರ್ + – ಪಡಿ$_3$]

ತೀರ್ಪಱಿ (ಕ್ರಿ). ಪೂರ್ಣವಾಗಿ ಈಡೇರು : ಅವರಿವರೆನ್ನೆದೆ ಮೊಗ ನೋಡದೆ ಕೊಟ್ಟು ಎರೆವಣ್ಣೆ [ಟ್ಟಿ]ಯ ತೀರ್ಪಱಿದುಂ ವಿತರಣಸುರಗಿರಿ ಮನೆಮನೆದಪ್ಪದೆ ಬಂದಿರೆ (ಕುಮುಂಗಾ. ೪-೫೭). [ತೀರ್$_1$ + ಪಱಿ$_1$]

ತೀರ್ಪು (ನಾ). ತೀರ್ಮಾನ ; ನಿರ್ಣಯ ; ಅಂದು ನ್ಯಾಯಾಧೀಶರು ತೀರ್ಪು ಹೇಳುವವರಿದ್ದರು (ಸ್ಕೂಲಮಿ. ೩೩೨) : ವಿಚಾರಣಾಸವಿತಿಯವರು ಕೊಟ್ಟಿರುವ ತೀರ್ಪನ್ನು ಜಾರಿಗೆ ತರಕೂಡದೆಂದು ಈಗಲೇ ಅವರಿಗೆ ಬರೆದ ಕಳುಹಿಸುತ್ತೇನೆ (ಪ್ರತಾಪ. ೬೪).

ತೀರ್ಪುಕೊಡು=ತೀರ್ಮಾನ ಮಾಡು ; ನಿರ್ಣಯ ಕೊಡು ; ತೀರ್ಮಾನಿಸು : ಅನ್ಯಾಯವಾದ ತೀರ್ಪುಕೊಟ್ಟುದರ ಮೂಲಕವಾಗಿ ಗುರುಗಳು ನನಗೆ ಯೋಗ್ಯವಾದ ಶಿಕ್ಷೆಯನ್ನು ಕೊಟ್ಟರು (ಮುಂಬಯಿ. ೪-೮೮); ಕೂಲಂಕಷವಾಗಿ ವಿಚಾರಿಸಿ ನ್ಯಾಯಬದ್ಧವಾದ ತೀರ್ಪುಕೊಡುತ್ತೇವೆ (ಪ್ರತಾಪ. ೬೪) [ತೀರ್ + -ಪ್ಪು₂/ತುಳು. ತೀರ್ಪು]

ತೀರ್ಪುಗಾರ (ನಾ). ತೀರ್ಪನ್ನು ಕೊಡುವವನು ; "ನ್ಯಾಯಾಧೀಶ ; ನ್ಯಾಯಾಧಿಪತಿ ; ತೀರ್ಪುಗಾರ" (Judge ಪತ್ರಿನಿ. ೪೮).

[ತೀರ್ಪು + – ಗಾರ (< – ಕಾಱ)]

ತೀರ್ಮಾನ (ನಾ). = ತೀರ್ಪು : "ತೀರ್ಪು, ತೀರ್ಮಾನ, ಗೊತ್ತು, ಗೊತ್ತುವಳಿ, ಠರಾವು" (ಕಂನುಹು. ೮೫) ; ಇಬ್ಬರೂ ಕೊನೇ ತೀರ್ಮಾನ ಹೇಳಿಬಿಟ್ಟರು (ದಾನಚಿಂ. ೮೫) ; ಈಚೆಗೆ ನಡೆದ ಸಂಶೋಧನೆಯ ಫಲವಾಗಿ ಕೈಗೊಂಡ ತೀರ್ಮಾನ (ದ್ರಾವಿವಿ. ೧೦೧) ; ಪಂಚಾಯಿತರ ತೀರ್ಮಾನಗಳು ನಿಷ್ಪಕ್ಷಪಾತವಾಗಿರುತ್ತಿದ್ದವು (ಕಗಹು. ೯೪).

[ದೇ. ॥ ತಮಿ. ತೀರ್ಮಾನ ; ಮಲ. ತುಳು. ತೀರುಮಾನ]

ತೀರ್ಮಾನಿಸು (ಕ್ರಿ). ನಿರ್ಧರಿಸು : ಒಂದು ನಿರ್ಣಯಕ್ಕೆ ಬರು ; ಗೊತ್ತುಮಾಡಿಕೊಳ್ಳು : ಅದನ್ನು ದಿನವೂ ಮಾಡಿಯೇ ತೀರಬೇಕು ಎಂದು ತೀರ್ಮಾನಿಸಿದೆ (ಶಾಲೆಮ. ೬೪) ; ಧರ್ಮಗುಂಬಕ್ಕೆ ದಿನವೂ ಕಳುಹಿಸಿ ವಿದ್ಯಾಭ್ಯಾಸ ಮಾಡಿಸಬೇಕೆಂದು ತೀರ್ಮಾನಿಸಿದ್ದೇನೆ (ಚಂಗಾಳ್ವ. ೪) : ನಾನೇ ನಮ್ಮ ಗ್ರಾಮಕ್ಕೆ ಹೋಗಿ ಜನರನ್ನು ಕರೆದುಕೊಂಡು ಬರುವುದು ಎಂದು ತೀರ್ಮಾನಿಸಿದೆ (ಪ್ರತಾಪ. ೪೯) : ಇವಳಿಗೆ ತಲೆ ಕೆಟ್ಟಿದೆ ಎಂದೂ ಅವರು ತೀರ್ಮಾನಿಸಿದರು (ಹೃಹಾ. ೦೦೯). [ತೀರ್ಮಾನ + – ಇಸ್ಯು₃]

ತೀರ್ವೆ, ತೀರುವೆ (ನಾ). ೧. ಮುಟ್ಟಿಸುವಿಕೆ ; ಸಲ್ಲಿಸುವಿಕೆ. ಸಾಲವನ್ನು ತೀರ್ವೆಮಾಡು (ರೂಢಿ). ೨. ನಿರ್ಣಯ; ತೀರ್ಮಾನ : ಭೂಕಂದಾಯದ ಸಲುವಾಗಿ ತೀರ್ವೆ ಮಾಡುವಲ್ಲಿ (ಭಾಧಾನ. ೨೬೮). ೩. ತೆರಿಗೆ ; ಸುಂಕ ; ಕಂದಾಯ : ಭಾವೀಕೇರಿಯಲ್ಲಿ ಮಾಮಲೇದಾರರು ಅಡ್ಡಾಡಿ ಜನರಿಗೆ ತೀರ್ವೆ ಕೊಡಲು ನಾನಾ ರೀತಿಯಿಂದ ಬೋಧಿಸಿದರು (ಕರವೀ. ೬೯) ; ಆದರೆ ಶ್ಯಾನಭಾಗರು ಹಿಂದಿನ ತೀರ್ವೆಯನ್ನೆಲ್ಲ ಕೊಡಬೇಕು ಅನ್ನುತ್ತಿದ್ದಾರೆ (ಬೆಟ್ಟಶೀ. ೧೬) ; ಯಾರದಾದರೂ ಒಬ್ಬರದು ಸರಕಾರಿ ರಿಕಾರ್ಡು ಪ್ರಕಾರ ಯಾರಾದಾದರೂ ಒಬ್ಬರ ತೀರ್ವೆ ತರುವ ಸ್ಥಳವೆಂಬುದು ನಿರ್ವಿವಾದವಷ್ಟೆ (ಮಡ್ಡಿನಂ. ೮). **ತೀರುವೆ** : ೧. ಆಹಾರಸಾಮಗ್ರಿಯನ್ನು ಕೊಳ್ಳಲು ನೇಮಕಗೊಂಡಿದ್ದ ಖೈದಿ ಆ ಸಾಲ ತೀರುವೆಗಾಗಿ ದಿನಭತ್ಯದಿಂದಲೇ ಹಣ ಮುರಿದು ಕೊಡುತ್ತಿದ್ದನೆಂತಲೂ . . . ವಿವರಿಸಿದನು (ಪುಸರು. ೫೦೬) ; ಈ ಎಲ್ಲ ಸಾಲಗಳ ಪರತ್ತುಗಳೂ ಒಂದೇ ಆಗಿವೆ. ಬಡ್ಡಿ ಇರುವುದಿಲ್ಲ ; ತೀರುವೆಯ ಕಾಲಾವಧಿ ೫೦ ವರ್ಷಗಳು (ಅಂತಸಂ. ೦೩೦).

[ತೀರ್ + – ವೆ./ತಮಿ. ತೀರ್ವೈ ; ತುಳು. ತೀರ್ವೆ ; ತೆಲು. ತೀರುವ, ತೀರ್ವ]

ತೀವಟಿಗೆ 'ತಿವದಿಗೆ' ನೋ.

ತೀವರ 'ತಿಬ್ಬ₁' ನೋ.

ತೀವರಿಸು (ಕ್ರಿ). ಅವಸರ ಮಾಡು : ಆ ವೀರಭದ್ರನಾಲಯವ ಸರ್ವಂ ಪೊಕ್ಕು ದೇವರೊಳು ವ್ಯಾಪಿಸುತ್ತಿರೆ ಪೂಜಕಂ ಕಂಡು ತೀವರಿಸಿ ಕಲ್ಲೊಳಿಡೆ (ಗುರುಚಾ. ೧೦-೨೯). [ತೀಪರ (< ತಿಬ್ಬ₁) + – ಇಸ್ಯು₃]

ತೀವಿಸು (ಕ್ರಿ). ೧. ಗಿಡಿ ; ತುಂಬು : ತೊಟ್ಟನೆ ಪಱಿಸೀರೆಗಳಂ ಬೆಟ್ಟಾಗಿರೆ ಗುಹೆಯ ಬಾಗಿಲೊಳ್ ತೀವಿಸಿದಂ (ಧರ್ಮಾಮೃ. ೯-೦೭೨). ೨. ನುಗ್ಗಿಸು ; ಹಾಯಿಸು : ಈ ಮತ್ತಗಜವನ್ನು ಮಲ್ಲಗಾಳಗದ ರಂಗದ್ವಾರದೆಡೆಯೊಳು ತೀವಿಸಿ ಬಲಕೃಷ್ಣರೀರ್ವರೂ . . . . ಬಂದವರು (ಕಗವಿ. ೭೪ ವಿಷ್ಣುಪು). [ತೀವು + – ಇಸ್ಯು₃]

ತೀವು (ಕ್ರಿ). ೧. ತುಂಬು ; ಭರ್ತಿಮಾಡು : "ತೀವು—ಪೂರಣೇ" (ಕಮಧಾ); ಬಂಡಿಗಳೊಳ್ ಪಟ್ಟಿಯುಂ ಧಾನ್ಯಮಂ ತೀವಿಕೊಂಡು ಪೊಟಲ್ಗೆ ಮಾಡಲೆಂದು ಪೋಪನ್ನೆಗಂ (ವಡ್ಡಾರಾ. ೭೬-೧೨) ; ನೀರಟ್ಟೆ ಪೋಪಿನಂ ನೀರಂ ಕುಡಿದು ಪದ್ಮಪತ್ರೌಘಂಗಳಿಂ ತಮ್ಮಣ್ಣಂಗೆ ನೀರಂ ತೀವಿಕೊಂಡು (ಪಂಪಭಾ. ೯-೯೯ವ) ; ತಾಪಸರ್ತೀವುವ ಕಮಂಡಲುಗಳಿನುಣ್ಮುವ ಕಳಕಳ ಧ್ವನಿಗಳೊಳ್ (ಶಾಡಂಪೂ. ೧೦೨) ; ಕೆಱೆಯನೊಡೆದು ತೊಱೆಯಂ ತೀವುವ ಮನೆಯನಟಿದು ಬೇಲಿಯನಿಕ್ಕುವ ... ಎಗ್ಗನಂ ಪೋಲ್ವೆ ನೀ (ಧರ್ಮಾಮೃ. ೩-೨೦) ; ಗುರುಪದಾಬ್ಜದೊಳ್ವೆಸರಾಂತು ತೀವಿದೆರ್ದೆಯ ಕಳಂಕನಳಿವೆನೆಂ ದೊಗೆದನೋಯೆನಲಬ್ಜನುದಯವಾದು (ಪದ್ಮರಾ. ೬-೯೮) ; ಶಾರ್ಙ್ಗದಲಿ ಶರವ ತೀವಿ ತೊಟ್ಟನಿಬರ ... ಎಚ್ಚಳು (ನಿಶಾಗ.೧೦-೭೦-೨). ೨. ತುಂಬಿರು; ಭರ್ತಿಯಾಗಿರು : ತುಂಗೆ ನೀ ಬಸಿಱ್ ತೀವೆ ಬಡ್ಡಿಸದಿರ್ (ವಡ್ಡಾರಾ.೭೭-೫); ತೀವಿದ ನರೆಯುಂ ಡೊಳ್ಳುಂ ದೇವವ್ರತನೆನಿಸಿ ನೆಗೞ್ದ ಯಶಮುಂ ಬೆರಸಿ (ಪಂಪಭಾ. ೬-೪೮); ಸೋರ್ವ ಸಹಕಾರದೆ ತೀವಿದ ಬಾವಿ ಕಾಮದೇವನ ರಸಕೂಪದಂತೆ ... ಕಣ್ಗೆಸೆಗುಂ ಸಹಕಾರನಂದನಂ (ಅಜಿಪು. ೨-೧೩) ; ತೀವಿದ ತನ್ನ ಯೌವನದ ಸೊರ್ಕಿನೊಳುರ್ಕಿ (ಮಲ್ಲಿಪು. ೬-೭೭) ; ನರಕಪಾಲದೊಳು ತೀವಿದ ಹಸಿಯ ಗೋಮಾಂಸವ ಮೆಲುತ (ಪಚಕಾ.೦೦-೩೦); ಅನಿಲ ತನಯನ ಬೆರಳ ಸನ್ನೆಗೆ ತೀವಿದಂಬಿನ ತೇರ ಚಾಚಿದರು (ಕುಮ್ಮಾದ್ರೋ. ೦೨-೫) ; ತನಿರಸ ತೀವಿದ ಪಣ್ಗಳ ತಿನಿಸಿ (ಮೋಹತ. ೯-೨೪); ಅವಗಂ ಸರಸಕರುಣಾಮೃತದ ಕಳೆಗಳಿಂ ತೀವಿದೆಳನಗೆಯ ಬೆಳ್ಮಿಂಗಳಂ ಪಸರಿಸುವ ದೇವಪುರಲಕ್ಷ್ಮೀರಮಣನಾಸ್ಯಚಂದ್ರನಾನಂದಮಂ ನಮಗೀಯಲಿ (ಶ್ರೀಮಿಭಾ. ೧-೧). ೩. ಇಡಂಗು ; ವ್ಯಾಪಿಸು ; ಪಸರಿಸು : ತೆಗೆದೆಚ್ಚರ್ಜನನಂಬು ತೀವೆ ತುದಿಯಿಂ ಬಾಲಂಬರಂ ಪುದಿ ಸೌಳಗೆಪೋಪಂತಿರೆ ನೋಡ ಸಂಬಳಿಗೆಪೋಯ್ತೆಂಬನ್ನೆಗಂ (ಪಂಪಭಾ. ೯-೧೬) ; ರೌದ್ರಾರಾವಂ...ಬನವನಿತುಂ ತೀವುವಿನಂ ಪೊಣ್ಮಿದಪುದು (ಪಂಚತಂ. ೩೬-೧೨) : ಉಘೇ ಚಾಂಗು ಭಲಾ ಎಂಬ ಹೊಗೆ ಗಗನವ ತೀವೆ (ಬಸವ. ೬೪೩) ; ಚಂಡಕರನರುಣಕಿರಣವು ಹೊಗುವ ಠಾವೆಲ್ಲವಂ ತೀವಿತವನ ಸತ್ಯ (ಹಚಕಾ. ೩-೮) ; ಜಸವೆತ್ತೆಸಗುವ ಗುರುವರನ ವಾರತೆ ದಿಗಂತಂಗಳೊಳ್ತೀವೆ (ಪದ್ಮರಾ. ೯-೪) ; ಕಾರ್ಬೊಗೆ ಕಮರುಗಂಧ ಹತ್ತು ದಿಕ್ಕನು ತೀವಿತು (ಕೌಶಿರಾ. ೦೯-೩೭) ; ಶ್ರಮಗಳ ಗಾವಳಿಯನು ಪಱಿದವೆನೆಂದು ನಱುಗಂಪು ತೀವಿದ ಪಾಟಲಿಯಿಹವು (ಕಂನವಿ. ೭-೫೩). ೪. ಮೇರೆ ಮೀರಿ ಹರಿ ; ತುಂಬಿ ಹೊರಸೂಸು : ತೊಱೆ ತೀವುಗುಮಿದೊಂದು ಸಾಭಿಜ್ಞಾನಂ (ವಡ್ಡಾರಾ. ೧೦೦-೧೩); ಅಮೃತದ ತೊಱೆಯುಬ್ಬರ ಮಾಗಲ್ ತೀವಿ ಬಂದುದು (ಧರ್ಮಾಮೃ. ೫-೬೦) ; ತೀವಿ ಬರೆ ಭೋಂಕನಾನದಿ ರಾವಣನತಿಸಂಭ್ರಮಾಕುಲಂ...ವಿಸ್ಮಿತನಾದು (ಪಂಚಾಮಾ. ೦೦-೧೯೦); ಓವಿ ಸಾಗಿಸಿ ಬೆಳಯಿಸುವಳಲ್ಲಿ ಭಕ್ತಿಯಂ ತೀವಿ ತುಳುಕಾಡೆ ಮುಚ್ಚುವಳಲ್ಲಿ ಭಕ್ತಿಯಂ (ಶಾರಿರ. ದೇ. ೨೮೨-೧೦) ; ಇರ್ಕೋಡಿಯಂ ತೀವಿ ನಾಲ್ದೆಸೆಗಂ ಸೂಸಿ (ಶಮದ. ೬೬ ಪ್ರಯೋ). ೫. (ಕಾಲ) ಮುಗಿ ; ಪೂರ್ಣವಾಗು ; ಪೂರೈಸು : ಕಾಂತೆಗೆ ಪೊಟ್ಟು ತೀವಿದುದು (ಜಾತಕಿ. ೩-೦೮) ; ಮೂವತ್ತು ದಿವಾರಾತ್ರಂ ತೀವಿದೊಡದು ಮಾಸವು (ಪಸುತ್ಕೋ. ೦೬-೦೦) ; ತೀವಿದುದು ಶಪನಶತಮಿಂ ತೀವಿದುದದಱೊಡನೆ ಚೈದ್ಯ ನಿನ್ನಾಯುಷ್ಯಂ (ಜಗವಿ. ೦೭-೫೦) ; ಕೆಲವು ದಿನಕ್ಕೆ ಗರ್ಭಮುದಯಿಸಿ ನವಮಾಸಂ ತೀವಿ ಕನ್ಯಾರತ್ನಮಂ ಪಡೆದು (ಗಿರಿಕ. ೧, ಕಥಾಗರ್ಭ) ; ತೀವಿದವು ನವಮಾಸ . . . ಗಾಂಡೀವಿ ಜನಿಸಿದನೊಡನೆ (ಕುಮ್ಮಾಅ. ೪-೬೦) ; ಕಾವನ ಕೆಯ್ಯ ರಕ್ಕಸರಾಯನಾಯುಷ್ಯ ತೀವಂತೆ ಮಾಡಿದ ಮುನಿವ (ಮೋಹತ. ೧೨-೨೬). ೬. ಸುತ್ತುಗಟ್ಟು ; ಸುತ್ತುವರಿ ; ಆವರಿಸು : ದಿಕ್ಕುಟಮಂ ಶರವೃಂದದೆ ತೀವುತೆ ಸೃಗಾಲರಥಿ ಬರ್ಪನೆಗಂ (ಜಗವಿ. ೮-೭೦) ; ಎತ್ತಲು ತೀವಿದರು ಸೃಂಜಯರು(ಕುಮ್ಮಾಭೀ. ೯-೩೨) ; ತತ್ಸೈನ್ಯವರಮನೆಯ ತೀವಿ ಬಳಸಿದೆ

ತಕ್ಕುಪಾಯವ ನೀವು ಕಾಣಲು ಬೇಕು (ಜೀವಂಜ. ೪-೭) : ಕೋವಿದ ಕೋಮಲಾಂಗಿಯರು ದೇವಕಿಯಾತ್ಮಸಂಭವನೆಡಬಲದಲಿ ತೀವಿರ್ದರೇನ ಬಣ್ಣಿಪೆನು (ಮೋಹಶ. ೪-೪). ೭. ಸೇರು ; ಕೂಡು : ದಿವಿಜಪಾವಕಂ ಸುರಪಪಾವಕಂ ತೀವಿ ಬಂದು ಪದೆದಾವ ಮೆಯ್ಯೊಳಮದಾವಗಂ ನೆಲೆಸಿ ನಿಲ್ವಿನಂ (ಧಂಪೋಂಬು. ೨-೧೪೦). ೮. ಹೊರಿಸು ; ಆರೋಪಿಸು : ಈತನಿಗೆ ನಿಂದೆಯನು ತೀವಬೇಕೆಂದಾಗ ವಿಪ್ರರು ಕಪಟದ ಗೋವ ನಿರ್ಮಿಸಿದರು (ಕಂನವಿ. ೫-೦೬). ೯. ಹರಡು ; ಪ್ರಸಾರವಾಗು : ಪೊಱಮಡಲ್ ಬಗೆಗೊಂಡು ಇಳೆಗೆ ಶಿವಭಕ್ತಿಯಂ ತೀವಲ್ ವಂನಂ ಗೊಂಡು (ಬಸರ. ೦-೦೨೪). ೧೦. ಒದಗಿ ಬರು ; ಕೂಡಿ ಬರು : ತಿರುಗಿ ತೀವಿತು ಲಾಸ್ಯ ಮಧುಕೇಶ್ವರನ ಸಮ್ಮುಖದಿಂದಲಿ (ಪ್ರಭುಲಿ. ೭-೩೫) ; ಆವ ಜನ್ಮದ ಸುಕೃತಫಲವಿದು ತೀವಿತೋ ಫಲುಗುಣನೆನುತ್ತವೆ ದೇವತತಿ ಕೊಂಡಾಡುತಿರ್ದುದು (ಕುವ್ಯಾಅ. ೬೦೫. ೭-೦೦೭) ; ದೇವ ತವ ದರ್ಶನದ ಮಾತ್ರದಿ ತೀವಿದುದು ಸಾಮ್ರಾಜ್ಯಸುಖ (ಅನಂಚಾ. ೪-೦-೩೪). ೧೧. ಪರಿಪೂರ್ಣವಾಗು ; ಸಂಪೂರ್ಣವಾಗು : ನೀಂ ಕೇಳ್ದೀ ಮಹಾಪ್ರಶ್ನೆ ಶಕ್ರಗುರುಗಂ ಓಪೊ ತಿಳಿಸಲ್ ತೀರ್ಗುಮೇಯಂತುಟಾದೊಡಂ ತೀವಿ ನಿಶ್ಶೈಸಿ ಪೇಳ್ವೆಂ (ಪದ್ಮಚ. ೦೦-೯).

ತೀವಿರ್= ತುಂಬಿರು ; ವ್ಯಾಪಿಸಿರು ; ಭರ್ತಿಯಾಗು : ತೀವಿರ್ಪಶ್ವಾವಳಿಯ ಗಜಾವಳಿಯ ನರಾವಳಿಗಳ...ದೂಸಿಗವಸರಂ (ಗಿರಿಕ. ೩-೯೪) ; ಆತ್ಮಂಗಾವುದು ಕುಱುಪೆಂದೊಡಂಗಿಯಂಗದೊಳಿಲ್ಲಂ ತೀವಿರ್ಪಂ (ಯಶೋಚ. ೪-೦೭) : ಜೀವನದ ಮೂಲ ಮೇಲಿಹುದು ಪರಮೋರ್ದ್ವದಲಿ ತೀವಿರ್ದುದು ಕೆಳಗೆ ನಮ್ಮ ಲೋಕದಲಿ, ಸಾವದರ ಕಡ್ಡಿಯೆಲೆ (ಮಂಳಿಳ. ೫೬೦).

ತೀವ್ರ (ಗು). ೧. ಹರಿತವಾದ ; ಚೂಪಾದ. ೨. ನಿಷ್ಠುರವಾದ. ೩. ಉಗ್ರವಾದ ; ತೀಕ್ಷ್ಣವಾದ ; ಕಟುವಾದ : "ತೀವ್ರಕ್ಕೆ ತಿಬ್ಬಮೆಂಬರು ಕವಿಗಳ್ " (ಕವಿಕಂ. ೩೦೦) ; ಎನ್ನಯ ತೀವ್ರಶಾಪ ವಾಙ್ಮಹಿಮೆಯಿನಾತನಂದು ಕಡಿದಿಕ್ಕಿದ ವೆರ್ಮರನಂತೆವೋಲ್ ... ಕೆಡದು ಪೊಂದಿದನಾಯಿಳೆಯಲ್ಲಚೇತನಂ (ಕಾದಂಉ. ೫೭೬) ; ಸುಣ್ಣದಂತೆ ತೀವ್ರಮಪ್ಪ ಕತ್ತುರಿವಾಟಿಯಂತೆ ಸಾರಲರಿದಪ್ಪ (ಧರ್ಮಾಮೃ. ೩-೧೫೬). ೪. ಅತಿಯಾದ; ಆಳವಾದ. ಚತುರ್ವೇದಪಾಠ ತೀವ್ರವಾದಡೇನು (ಬಸರ.೫೪೬); ಶಕುಂತಲೆಯಲ್ಲಿ ಭಾವ ತೀವ್ರ; ಮಾತು ವಿತ (ಧರ್ಮಾಶಾ. ೬೮). ೫. ಉಷ್ಣವಾದ ; ಬಿಸುವಾದ· 'ತೀವ್ರಕಿರಣ' ಪರಾ. ೬. ವೇಗವಾದ ; ತ್ವರಿತವಾದ. 'ತೀವ್ರಗತಿ' ಪರಾ. ೭. ಬಿರುಸಾದ ; ಒರಟಾದ. ೮. ಉದ್ರೇಕವುಳ್ಳ; ದುಡುಕಿನ ಸ್ವಭಾವದ. 'ತೀವ್ರಗಾಮಿ' ಪರಾ. (ನಾ). ೯. ತೀಕ್ಷ್ಣವಾದುದು ; ಹರಿತವಾದುದು : ದಾಡೆಗಳನಱಿಯೊಳಿಂಬಿಂ ತೀಡುತ್ತುಂ ತೀವ್ರಮಾಗೆ (ಪಂಪಭಾ. ೩-೨೮). ೧೦. ಕ್ರೂರವ್ಯಕ್ತಿ : ಶ್ರೀಯುಕ್ತಂ ವಿಜಿಗೀಷು ಚಂಡ ಕರತೇಜಂ ತೀವ್ರನಕ್ಕುಂ (ಕೋಕೋಪ. ೦೦-೪೧). ೧೧. ಬೇಗ ; ಶೀಘ್ರ : ತೀವ್ರವೇ ನಿಂಗಪ್ಪನೂ ಅವನ ಮುಕ್ಕಳೂ ವಿಪತ್ಪಿನಿಂದ ಮುಕ್ತರಾದರು (ಮುಂಬಹು. ೪-೭೪). ೧೨. ವೇಗವಾದುದು ; ತ್ವರಿತವಾದುದು : ಆ ಹರಿಣನಿಂ ಮರುತನಿಂ ಸರಳಧಿಕ ತೀವ್ರವು (ಹಡಕಾ. ೬-೩೩) ; ಮಾನವನ ಯೋನಿಯಲ್ಲಿ ವಿಕಾಸವು ಬಹಳ ತೀವ್ರ (ಜೀವಾತ್ಮ. ೨೬೮). [ಸಂ.]

ತೀವ್ರಕಿರಣ (ನಾ). ಉಷ್ಣವಾದ ಕಿರಣಗಳನ್ನು ಉಳ್ಳವನು ; ಸೂರ್ಯ: ಶರಧಿಯನುರ್ಚಿ ಪಿಂಗಿದುದು ಭೋಂಕನೆ ಕಟ್ಟಲಿ ದಿವ್ಯಬಾಣಮಂ ತರೆ ತಿರುವಿಂಗೆ ತೀವ್ರಕಿರಣಂ ತಲೆದೋಱಿದಂ (ಪಂರಾಮಾ. ೦೪-೦೬೭).

[ತೀವ್ರ + ಕಿರಣ]

ತೀವ್ರಗತಿ (ನಾ). ಚುರುಕಾದ ಗಮನ ; ಶೀಘ್ರವಾದ ಗತಿ : ತೀವ್ರಗತಿಯ ಸಂಭಾಷಣೆಯ ಶೈಲಿ ಒಂದನೆಯ ಮತ್ತು ಎರಡನೆಯ ಶೂನ್ಯ ಸಂವಾದನೆಗಳಲ್ಲಿ ಕಂಡುಬರುವುದಿಲ್ಲ (ಶೂನ್ಯಳು. ೯೭) ; ಪ್ರತಿಯೊಂದು ಹೊಸಗ್ರಂಥವನ್ನು ತೀಕ್ಷ್ಣಮತಿಯಾಗಿ ತೀವ್ರಗತಿಯಿಂದ ಅವಲೋಕಿಸ ಬೇಕು (ಗ್ರಂಥಾಲಿ. ೬೯). [ತೀವ್ರ + ಗತಿ]

ತೀವ್ರಗಮನ (ನಾ). ೧. =ತೀವ್ರಗತಿ : " ಗಾಧಂ = ತೀವ್ರಗಮನಂ " (ಕಾಶಕ್ಕ. ೨೭). ೨. ಹೆಚ್ಚಿನ ಲಕ್ಷ್ಯ : ಆ ಕಡೆ ತೀವ್ರಗಮನ ಕೊಡಲಾಗು ತ್ತಿದೆ (ರೂಢಿ). [ತೀವ್ರ + ಗಮನ]

ತೀವ್ರಗಾಮಿ (ಗು). ೧. ದುಡುಕಿನ ; ರಭಸದ ; ಅತಿವೇಗದ : ಕಾರ್ಯದರ್ಶಿ ಪ್ರಗತಿಪರ, ತೀವ್ರಗಾಮಿ ಅಭಿಪ್ರಾಯವುಳ್ಳವನು (ಪುಸಕು. ೩೮). (ನಾ). ೨. ತೀಕ್ಷ್ಣವಾಗಿ ಮುನ್ನುಗ್ಗುವವನು ; ಉಗ್ರಗಾಮಿ : ತೀವ್ರಗಾಮಿ ತಂಡುಲಧ್ವಂಸಿಯಾದ ಕೇಶವನಿಗೂ ಸಹ ಭೀಮು ಸ್ವಾವಲಂಬನದ ಪಾಠವನ್ನು ಕಲಿಸುತ್ತಾನೆ (ಸಮಜೀ. ೧೦ ಬೀಠಿ). [ಸಂ. ತೀವ್ರಗಾಮಿನ್]

ತೀವ್ರಗೊಳ್, ತೀವ್ರಗೊಳ್ಳು (ಕ್ರಿ). ೧. ಹರಿತವಾಗು ; ಚುರುಕಾಗು ; ತೀಕ್ಷ್ಣಗೊಳ್ಳು. 'ತೀವ್ರಗೊಳಿಸು' ಪರಾ. ತೀವ್ರಗೊಳ್ಳು : ೨. ಉಲ್ಬಣವಾಗು : ರೋಗ ಬಹಳ ತೀವ್ರಗೊಂಡಿದೆ (ರೂಢಿ). ೩. ಪ್ರಖರವಾಗು : ಚುನಾವಣೆ ಹತ್ತಿರ ಬಂದಂತೆಲ್ಲಾ ಪ್ರಚಾರ ತೀವ್ರಗೊಳ್ಳುತ್ತದೆ (ರೂಢಿ). [ತೀವ್ರ + ಕೊಳ್[1]]

ತೀವ್ರಗೊಳಿಸು (ಕ್ರ). ಹರಿತಗೊಳಿಸು; ಚುರುಕಾಗಿಸು ; ತೀಕ್ಷ್ಣಗೊಳಿಸು: ಇದೇ ಸೋಮವು ಬುದ್ಧಿಯನ್ನೂ ಸಹ ಆಕರ್ಷಕವಾಗಿ ತೀವ್ರಗೊಳಿಸುತ್ತದೆ (ಪುಶ್ಯಾರ. ೪೫). [ತೀವ್ರಗೊಳ್ + ಇಸು]

ತೀವ್ರಗೊಳ್ಳು 'ತೀವ್ರಗೊಳ್' ನೋ.

ತೀವ್ರತೆ (ನಾ). ೧. ಪ್ರಖರತೆ ; ಪ್ರಚಂಡತೆ ; ಉಗ್ರತೆ : ಪ್ರಳಯರುದ್ರನ ಕಾಯ್ದು ವಡಬಾನಳನ ತೀವ್ರತೆ ಸಿಡಿಲ ಕಡುಪಗ್ಗಳಿದನೊಡಗೂಡಿರ್ದ ವುಲಿಯೊಡಲಿಟ್ಟುದೋಯೆನಿಸಿ (ಸಾಳ್ಕಥಾ. ೫-೩೦) : ಗಮನ ವಿಸ್ತರಿಸುವ ಕ್ಷೇತ್ರದ ಪರಿಮಾಣಕ್ಕೆ ವಿಲೋಮವಾಗಿ ಆದರ ತೀವ್ರತೆ ತೀಕ್ಷ್ಣತೆಗಳು ಕಡಿಮೆಯಾಗುತ್ತವೆ (ತಿಕ್ಷದ. ೩೦೪). ೨. ವೇಗ ; ಶೀಘ್ರತೆ ; ರಭಸ : ಶಕ್ಷಣವೃತ್ತಿಯಲ್ಲಿ ... ಇತರೆಲ್ಲ ವೃತ್ತಿಗಳಿಗಿಂತಲೂ ಹೆಚ್ಚು ತೀವ್ರತೆಯನ್ನು ಇಲ್ಲಿ ಕಾಣಬಹುದು (ತಿಕ್ಷದ. ೬೬೩) ; ತಲೆಗೆ ಬೆಂಕಿ ಹಿಡಿದರೆ ನೀರಿನಲ್ಲಿ ಧುಮುಕುವದರಲ್ಲಿರುವ ತೀವ್ರತೆಯಂತೆ ದುಃಖನಿವೃತ್ತಿಯಲ್ಲಿ ತೀವ್ರತೆಯಿರಬೇಕು (ಛಾರದ. ೨೩೭). ೩. ಹೆಚ್ಚಳ ; ಆಧಿಕ್ಯ : ತನ್ನ ಮುನ್ನಿನ ನಿರ್ಬುದ್ಧಿಯುಮಂ ವಿಖ್ಯಾತ್ಯದ ತೀವ್ರತೆಯುಮಂ ವಾತ್ಸಲ್ಯರತ್ನಾಕರನ ಮಾಡಿದುವಕಾರ ಮುಮಂನೆನೆದು ವಿಸ್ಮಯಂಬಟ್ಟು ಶುದ್ಧಹೃದಯನುಮಾಗಿ (ಧರ್ಮಾಮೃ ೭-೨೩೯). [ಸಂ. ತೀವ್ರತಾ]

ತೀವ್ರಪಾತ (ನಾ). ತೀವ್ರವಾಗಿ ಎರಗುವಿಕೆ ; ಉಗ್ರವಾದ ದಾಳಿ : ಕ್ಷತ್ರತೇಜದ ತೀವ್ರಪಾತ ನಿಮಿತ್ತ ನಿಮಗಂಜನು ಸುರೇಶ್ವರ ಸತ್ಯ ಕೆಡುವೊಡೆ ಸಾರೆಯಿದೆಲಾ ಕೌರವನ ನಗರ (ಕುವ್ಯಾಅ. ೦೭-೦೯).

[ತೀವ್ರ + ಪಾತ[1]]

ತೀವ್ರಮದಿರೆ (ನಾ). [ನಾಟ್ಯ] ನೃತ್ಯದ ದೃಷ್ಟಿಭೇದಗಳಲ್ಲಿ ಒಂದು ; "ಹೊರಕ್ಕೆ ಕಾಣದಂತೆ ಅಲಿಗಳನ್ನು ಸ್ವಲ್ಪ ಒಳಕ್ಕೆ ಮಾಡಿ ಕೆಳಗಡೆ ನೋಡಿ ರೆಪ್ಪೆಗಳನ್ನು ಬಡಿಯದೇ ಇರುವುದು ಅಥವಾ ರೆಪ್ಪೆಗಳನ್ನು ಬಡಿಯುತ್ತಲೇ ಇರುವುದು" (ಲಾಶ್ಯರಂ. ೩೭೦ ಗದ್ಯಾನುವಾದ) : ತೀವ್ರ ಮದಿರೆ–ಕೆಳಗುಂ ನೋಡುತ್ತೊಂದಿನಿತೊಳಗೊಂದಿದ ತಾರೆ ಪಾಯ್ಮ ಲೊಂದದಯೆವೆಗಳ್ ಎಳೆಯಳೆ ತೆಱೆಯದ ಎವೆ ಸಂಚಲ ತೀವ್ರದ ಮದಿರೆಯೆನಿಪುದಿಳೆಯೊಳ್ (ಲಾಶ್ಯರಂ. ೩-೪೦). [?]

ತೀವ್ರಾಂಶು (ನಾ). ತೀಕ್ಷ್ಣವಾದ ಕಿರಣಗಳುಳ್ಳವನು ; ಸೂರ್ಯ : ವಿಧುವಿಂದಂ ವಿಬುಧೋತ್ಕರ ಪ್ರಿಯಕರಂ ತೀವ್ರಾಂಶುವಿಂದಂ ಪ್ರತಾಪಧನಂ (ಪುಷ್ಕಪು. ೩-೦೩೩). [ತೀವ್ರ + ಅಂಶು]

ತೀವ್ರಾಸಕ್ತಿ (ನಾ). ಅಧಿಕವಾದ ಆಸಕ್ತಿ ; ಹೆಚ್ಚಾದ ಆಸಕ್ತಿ : ಫೋಟೋವನ್ನು ಲಕೋಟೆಯಿಂದ ತುಸು ಹೊರಗೆಳೆದು ತೀವ್ರಾಸಕ್ತಿಯಿಂದ ನೋಡುತ್ತಿದ್ದಳು (ಪುನರು. ೬೨೬). [ತೀವ್ರ + ಆಸಕ್ತಿ]

ತೀವ್ರಾಸ್ತ್ರ (ನಾ). ಉಗ್ರವಾದ ಆಯುಧ ; ಭಯಂಕರವಾದ ಅಸ್ತ್ರ: ತುರಾಷಾಟ್ ತೀವ್ರಾಸ್ತ್ರ = ಇಂದ್ರನ ಹದವಾದ ವಜ್ರಾಯುಧ (ಸಾನಾರ. ೦೩೦ ಟೀಳು). [ತೀವ್ರ + ಅಸ್ತ್ರ]

ತೀಜು (ಕ್ರಿ). ನುಂಗು ; ಕಬಳಿಸು : "ತೀಜು–ಕಬಳನೇ (ನುಂಗು)" (ಶಮಧಾ). [ದೇ.॥ ತಮಿ. ಮಲ. ತೀಜು]

△ **ತೀಟ್ಟು** 'ತೀರ್ಚು' ನೋ.

△ **ತೀಟ್ಟು** 'ತೀರುತ' ನೋ.

ತುಂಗ1, ತುಂಗೆ1 (ನಾ). = ತುಂಗಗಡ್ಡೆ : (ಕ).

ತುಂಗೆ1. 'ತುಂಗೆಮುಸ್ತೆ' ಪರಾ. [←ತೆಲು. ತುಂಗ]

ತುಂಗ2 (ಗು). ೧. ಎತ್ತರವಾದ ; ಉನ್ನತವಾದ : ತುಂಗಗಿರಿಶಿಖರದಿಂದಂ ಲಂಗಿಸಿ ಶೂದ್ರಕನ ಪೊಳಿವ ಸುರಿಗೆಯ ಮೊನೆಯೊಳ್ ... ಪಾಯ್ದು ಬರ್ದುದು ಸಿಂಗಂ (ಕಾವ್ಯಸಾ. ೧೧೦೪ ಶೂದ್ರಕ); ತುಂಗವನ್ಯಮತಂಗಜ ದಂತಾಘಾತನಿಪಾತಿತ ಸಲ್ಲಕೀಭಂಗಮಂ (ಪಂಪಭಾ. ೦–೧೧೩); ತುಂಗತರಂಗಂ ಸುಬ್ಬಿವ ತುರಂಗಂ ನೊರೆವಿಂಡು ನೃಪರ ಬೆಳ್ಗೊಡೆಯಾಗಲ್ (ಪುಷ್ಪಪು. ೨-೬೮) ; ರಾಮಸೀತಾಪುಣ್ಯಸಂಗಮಂಗಲ ತುಂಗಶೃಂಗವನರಂಗಮಂ ಚರಿಸಲ್ಯಾನುತ್ಯಂತಿತಂ (ಶ್ರೀರಾಮಾ. ೧೨೩-೬). ೨. ಹೆಚ್ಚಾದ ; ಅತಿಶಯವಾದ ; ಶ್ರೇಷ್ಠತೆಯಿಂದ ಕೂಡಿದ : ತುಂಗಬಲ ಕಲಿ ನೀಲನುರು ಸಮರಾಂಗಣ ದೊಳಹಿತ ಪ್ರಹಸ್ತನ ನುಂಗಿ (ತೂರಕಾ. ೬-೦೯-೬೯) ; ಮಾದನನಜವಾಸಿಷ್ಠ ತುಂಗಹರಿಗಳ ಜಱುವ ಸತ್ಕೀಂದ್ರಚೋಳಂಗೆ ಸತಿಯಮೃತಮತಿಯಾದಳು (ಧಾವಜಂ. ೨-೦೭). ೩. ದೊಡ್ಡ ; ತೋರ ; ದಪ್ಪ. (ನಾ). ೪. ಸುರಗಿ ಮರ : "ವುನ್ನಾಗಃ, ಪುರುಷಃ, ತುಂಗಃ, ಕೇಸರಃ, ದೇವವಲ್ಲಭಃ–೫ ಸುರಗೀಮರ" (ನಿಘಂ೦ತಿ. ೦೦೩). [ಸಂ.]

ತುಂಗಗಡ್ಡೆ, ತುಂಗೆಗಡ್ಡೆ (ನಾ). ದುಂಡಾದ, ಮಣಿಗಳಂತಿರುವ ಗಡ್ಡೆಗಳನ್ನು ಬಿಡುವ ಒಂದಂ ಬಗೆಯ ಹುಲ್ಲಂ; ಕೊನ್ನಾರಿಗಡ್ಡೆಯ ಜಾತಿಗೆ ಸೇರಿದ ಒಂದು ಬಗೆಯ ಗಡ್ಡೆ ; ತುಂಗವಂಸ್ತೆ : (ಕ). **ತುಂಗೆಗಡ್ಡೆ** : "ಕುಟನ್ನಟಂ, ದಾಶಪುರಂ, ವಾನೇಯಂ, ಪರಿವೇಲವಂ, ಪ್ಲವಂ, ಗೋಪುರಂ, ಗೋನರ್ದಂ, ಕೈವರ್ತಿಮುಸ್ತಕಂ ೮ ತುಂಗಮುಸ್ತಕದ ಹೆಸರುಗಳು, ತುಂಗೆಗಡ್ಡೆಗಳು, ಗೇಕಿನಗಡ್ಡೆಯಿಂತಲೂ ಅನ್ನುವರು." (ನಿಘಂ೦ತಿ. ೦೨೫).

[ತುಂಗ1 + ಗಡ್ಡೆ]

ತುಂಗಫೋಣ (ನಾ). ೧. ಉದ್ದವಾದ ಮೂಗು ; ನೀಳವಾದ ಮೂಗಂ. ೨. ನೀಳವಾದ ಮೂಗುಳ್ಳವನು ; ನಿಡುಮೂಗಿ : ಕುವಲಯನಯನಂ ತುಂಗಫೋಣಂ . . . ನೃಪಸುತಂ ನೋಡೆ ಕಣ್ಗೆಡ್ಡ ಮಾದಂ (ಪುಷ್ಪಪು. ೪-೬೮). [ತುಂಗ2 + ಫೋಣ]

ತುಂಗತನ (ನಾ). ದೊಡ್ಡತನ ; ಹಿರಿಮೆ : ಮಂಗಳಪುರುಷನೆಂದು ಅನ್ಯರಿಂದ ತುಂಗತನದಲಿ ಪೊಗಳಿಸಿಕೊಂಡು (ವಿಜಾಸು. ೪೭-೦). [ತುಂಗ2 + – ತನ]

ತುಂಗತೆ (ನಾ). ೧. ಹಿರಿಮೆ; ಅಧಿಕ್ಯ ; ಶ್ರೇಷ್ಠತೆ : ತುಂಗತೆಯಿಂ ಕನಕಾಂಶು ಪಿಶಂಗತೆಯಿಂದಱಿಯಲಾದುದಿಲ್ಲ (ಅಜಿಪು. ೪-೪೯) ; ತುಂಗತೆಯಿಂ ಸಿಂಹಾಸನಸಂಗತಿಯುಂ ಕಣ್ಗೆವರೆ (ವರ್ಧಪು. ೪-೨೮). ೨. ದಪ್ಪವಾಗಿರುವುದು : ಘನಜಘನಂಗಳುನ್ನತಿ ಕುಚಂಗಳ ತುಂಗತೆ ಚೆಲ್ವನಾಳ್ದ ಕಣ್ಗೊನೆಯ ವಿಳಾಸಂ (ರಾಜಶೇ. ೦೩-೯೦). [ಸಂ. ತುಂಗತಾ]

ತುಂಗತೆವೆಱು (ಕ್ರಿ). ಶ್ರೇಷ್ಠತೆಯನ್ನು ಪಡೆ : ತುಂಗತೆವೆತ್ತ ಚಿತ್ರಮಯ ಕೂಟ ಕಲಾಪದ ಬಳ್ಕಿಮಾಡಂಗಳ (ಶಾಂತೀಕ್ಷ. ೨-೦೫೫); ಈ ಲೋಕ ತುಂಗತೆವೆತ್ತಿರ್ಪುದು ಗದ (ಶತಸಾಂ. ೨-೧೦). [ತುಂಗತೆ + ಪೆಱು1]

ತುಂಗನಾಸ (ನಾ). = ತುಂಗಫೋಣ ೨ : ತುಂಗನಾಸಂ ... ತೆತ್ತಿಗ ನೆನಿಕ್ಕುಂ ಕೌಲಗೇಹೋದ್ಯವಂ (ಜಾತಕ. ೦೭-೭). [ಸಂ. (ತುಂಗ + ನಾಸಾ + –)]

ತುಂಗಭದ್ರ (ನಾ). ೧. ಹೆಚ್ಚಾದ ಮಂಗಳ, — ಶುಭ. ೨. ಮದವೇರಿದ ಆನೆ. [ತುಂಗ2 + ಭದ್ರ]

ತುಂಗಭದ್ರೆ (ನಾ). ಕನ್ನಡನಾಡಿನಲ್ಲಿಯ ಒಂದು ನದಿ : ಗಂಗೆ ತುಂಗಭದ್ರೆಗಳೊಪ್ಪವಡೆದು ಮಹಿಮೆಯೊಳಿಸವ ತೆಱದಿ (ಹಡಕಾ. ೨-೩) ; ಮೈಸೂರಿನ ವಾಯವ್ಯದಲ್ಲಿ ಹುಟ್ಟುವ ತುಂಗ, ಭದ್ರಾ ಈ ಎರಡು ನದಿಗಳೂ ಕೂಡ್ದಿ ಎಂಬ ಊರ ಬಳಿ ಸಂಯುಕ್ತವಾಗಿ ತುಂಗಭದ್ರಾ ಎಂಬ ಹೆಸರನ್ನು ಹೊಂದುತ್ತವೆ (ಭೂಗೋಳ. ೮೮): ತುಂಗಭದ್ರೆಗೆ ಮುಂಗ ಹೋದರೆ ಭಂಗ ಪಡೋದು ತಪ್ಪೀತೆ ? (ಗಾಡ). [ಸಂ. ತುಂಗಭದ್ರಾ]

ತುಂಗಮಹಿಮೆ (ನಾ). ಹೆಚ್ಚಾದ ಪ್ರಭಾವ ; ಮಿಗಿಲಾದ ಮಹಿಮೆ : ತುಂಗಮಹಿಮಾಧಿಕಂ ಸಕಲದೇಶಿಕನಿಕರಪುಂಗವಂ (ವೀಶ್ಯಪು. ೬-೦-೫); ತುಂಗಮಹಿಮೆವೆತ್ತು ದೋಷವಳಿದು ಮುನಿಪುಂಗವನೊರ್ವನೆಸೆದನು (ಹರಿಚ. ೨-೩೦). [ತುಂಗ2 + ಮಹಿಮೆ]

ತುಂಗಮುಸ್ತೆ, ತುಂಗೆಮುಂಸ್ತೆ (ನಾ). = ತುಂಗಗಡ್ಡೆ : "ಕುರುವಿಂದಃ, ಮೇಘನಾಮಾ . . . ಉದ್ದಾನೆ ತುಂಗಮುಸ್ತೆ, ಭದ್ರಮುಸ್ತೇ ಹೆಸರು" (ನಿಘಂ೦ತಿ. ೦೩೦): ಕರ್ಕಾಟಕಶೃಂಗಿ, ಮರದರಿಸಿನ, ನೆಲಗುಳ್ಳ, ರಾಮಗುಳ್ಳ, ತುಂಗಮುಸ್ತೆ, ಅಗುಳುಶುಂಠಿ . . . ಇವಂ ಕಷಾಯವಿಟ್ಟು ಕೊಡಲು ವಾತಜ್ವರ ನಿಲ್ಲುವುದು (ಸಳವ್ಯ. ೬೯). **ತುಂಗೆಮುಸ್ತೆ** : (ಕ).

[ತುಂಗ1 + ಮುಸ್ತೆ]

ತುಂಗವಂಶ (ನಾ). ೧. ಎತ್ತರವಾದ ಬಿದಿರಂ. ೨. ಶ್ರೇಷ್ಠವಾದ ಕುಲ. ೧, ೨ : ಇಭಖಡ್ಗಿವ್ರಾತ ನಾನಾಹರಿಮಯಕಟಕಭ್ರಾಜಿತಂ ತುಂಗವಂಶಪ್ರಭವಂ . . . ಚಕ್ರಾಧೀಶನೊಳ್ ಮಚ್ಚರಿಪಪೊಲಿಸದಿರ್ದತ್ತು ರೌಪ್ಯಾಚಲೇಂದ್ರಂ (ಆದಿಪು. ೦೩-೪೬). [ತುಂಗ2 + ವಂಶ]

ತುಂಗವಿಕ್ರಮ (ಗು). ೧. ಅತಿಶಯವಾದ ಪರಾಕ್ರಮವುಳ್ಳ ; ಬಹಳ ಶಕ್ತಿಯುಳ್ಳ : ತುಂಗವಿಕ್ರಮ ಕರಿಯ ಭಂಟ ನೃಪಗೆ (ಶಶಿ. ೦೩-೯). (ನಾ). ೨. ಅತಿಶಯವಾದ ಶಕ್ತಿಯುಳ್ಳವನು ; ಪ್ರಬಲ ವ್ಯಕ್ತಿ : ತುಂಗವಿಕ್ರಮನೀ ಸಮಸ್ತಜನಂಗಳೊಡನೆ ಸುತೀರ್ಥಯಾತ್ರಾಸಂಗತಿಯಲೀ ಬಳಸಿದನು ಭೂಮಿಪ್ರದಕ್ಷಿಣವ (ಕಾವ್ಯಾಗ. ೬-೦೧); ತುಂಗವಿಕ್ರಮದನುಜರಬ್ಬರವ ಕೇಳಿ ಬಾಣಂಗಳಿಂದೆಸೆದವರ ಶರಗಳಂ ಕತ್ತರಿಸೆ (ಪ್ರಾಢಕಾ. ೧೧-೫೮). [ತುಂಗ2 + ವಿಕ್ರಮ]

ತುಂಗಾಕಾರ (ನಾ). ಮಹತ್ತರವಾದ ಆಕಾರ,—ರೂಪ : ದೂರದೊಳೀಕ್ಷಿಸಿ ತುಂಗಾಕಾರದೊಳೊಂದಿದ ಋಜುತ್ವಮಂ ಪದೆದೇಳಿಸಿತು . . . ಶುಕ ಶಾಖಂ (ಹಂರಾಮಾ. ೬-೦೬೯). [ತುಂಗ2+ಆಕಾರ2]

ತುಂಗಾಕೃತಿ (ನಾ). ಎತ್ತರವಾದ ಆಕಾರ ; ಬೃಹದಾಕಾರ : ಅತಿ ತುಂಗಾಕೃತಿಯಾದೊಡಾಗದದಱೊಳ್ ಸೌಂದರ್ಯವೆನ್ನತ್ಯಮುಂ (ಎಳ. II, ೨೩೪-೦೭ ; 1180). [ತುಂಗ2+ಆಕೃತಿ]

ತುಂಗಿ (ನಾ). ಒಂದಂ ಬಗೆಯ ಗಿಡ ; ನಾರಂಬೇಳೆ ಗಿಡ ; ಅಜಗಂಧಿಕೆ : ಹೊಂಗಿಯುಂ ತುಂಗಿಯುಂ . . . ಕಾಡಸೆದುದು (ನಂದಿವಾ. ೦೩-೦೭) : ತುಂಗೀಗಿಡಗಳಂ ಲಾವಂಚವಂ ತಗರವಂ ಸಹಾ ಚೂರ್ಣವಂ ಮಾಡಿ (ಸೌಗಂಧಿ. ೪೩೫-೨). [ಸಂ. ತುಂಗೀ]

ತುಂಗಿಮ (ನಾ). ಎತ್ತರ ; ಔನ್ನತ್ಯ : ಅಮರಗಣಸೇವ್ಯತಿತುಂಗಿಮಶಿಖರ ಭ್ರಾಜಿ...ಮಂದರಾಚಲಂ ರಂಜಿಸುಗುಂ (ಎಳ. XI, ದಾವಪ.೪೮-೮ : 1164).

[ಸಂ. ತುಂಗಿಮನ್]

ತುಂಗೆ1 'ತುಂಗ1' ನೋ.

ತುಂಗೈ$_2$ (ನಾ). ಕನ್ನಡನಾಡಿನಲ್ಲಿ ಹುಟ್ಟಿ ಹರಿಯುವ ಒಂದು ನದಿ : ಅಂದು ತುಂಗೆಯ ತಡಿಯಲಾ ಗುರನಂದನರ ನೆಱೆ ನುಂಗಿ ರಾಕ್ಷಸವೃಂದ ಗೂಡಿದನಾ ಸುದಾಸನ ಸುತನು (ಕುಪ್ಪಾಳ. ೬೧೩. ೨೫-೨೨).

[ಸಂ. ತುಂಗಾ]

ತುಂಗೆಗಡ್ಡೆ 'ತುಂಗಗಡ್ಡೆ' ನೋ.

ತುಂಗೆಮುಸ್ತೆ 'ತುಂಗಮುಸ್ತೆ' ನೋ.

ತುಂಗೆಹುಲ್ಲು (ನಾ). ತುಂಗಮುಸ್ತೆಯ ಹುಲ್ಲು : (ಕೃ).

[ತುಂಗೈ$_1$ (<ತುಂಗ್ಗ) + ಹುಲ್ಲು (<ವುಲ್)]

ತುಂಟ (ನಾ). ೧. ಕೀಟಲೆ ಮಾಡುವವನು; ತಂಟೆಕೋರ. ೨. ನೀಚ; ದುಷ್ಟ ; ಧೂರ್ತ : ಎನ್ನೊ[ಡೆ] ಹಿತಾನೀಕಕ್ಕೆ ಪುಲ್ಲಯ್ಯ ತುಂಟರ ಮುಂಬರ್ಪ್ಪವ (ಸೌಇಇ. XI-1, ೪೦-೩೨ ; ೪೮೨) ; ಪೊಡವಿವಿಶ್ರುತನುದಯಿ ಸುವನುಗ್ಗಡದ ಬಂಟನು ತುಂಟನಪ್ರತಿ ವೀರ್ಯನವನೆಂದು (ಸಾಳ್ವಭಾ. ೨೦-೯೩) ; ತುಂಟರನು ಮರ್ದಿಸಿದ ಕದನ ಕಲಿಭೇರುಂಡ (ಬೀಚವಂ. ೦-೪) : ತುಂಟನ ಕೈಯಲ್ಲಿ ಗಂಟು ಕೊಟ್ಟರೆ ಬಂಟ ನಂತಿರುವನು (ಗಾದೆ); ತುಂಟನಿಗೆ ನಂಟರೆಲ್ಲ ಬಂಟರ ಹಾಗೆ (ಗಾದೆ). ೩. ಪೋಲಿ ; ಪೋಕರಿ : ಹೆಂಗಳೆಯರು ಸ್ವಾವಲಂಬಿಗಳಾಗಿ ಆರ್ಥಿಕ ಸ್ವಾತಂತ್ರ್ಯ ಪಡೆದ ಬಳಿಕ ಗಂಡನೆಂಬ ತುಂಟನ ಕಾಟದಲ್ಲಿ ಏಕೆ ಸಿಲುಕಬೇಕು (ಯಕ್ಷಪ್ರ. ೦೩೬) : ತಾವು ತಪ್ಪುಗಾರರಾದರೂ ಒಪ್ಪದೆ ಕುಳಿತುಕೊಂಡ ಹಳ್ಳಿಯ ತುಂಟರ ನೆರವಿ (ಗಾಳಿಗು. ೩). ೪. ಕುತ್ಸಿತವಾದ ಕೆಲಸ ಮಾಡುವವನು ; ಪಾಪಿ : ತುಂಟನವೋಲ್ಪೆ ಚ್ಚಡಿಗಳನಿಡುತಂ ಹೆಳವನವೋಲ್ಮೊಳಕಾಲಿಕ್ಕುತ್ತಂ (ಪೃಂಗೀರ.ಹ. ೪೭೪-೧). (ಗು). ೫. ಕುಚೋದ್ಯದ ; ಚೇಷ್ಟೆಯಿಂದ ಕೂಡಿದ. 'ತುಂಟ ನೋಟ' ಪರಾ. ೬. ದುಷ್ಟತನದಿಂದ ಕೂಡಿದ. ತುಂಟಕುದುರೆ ಪರಾ.

[ದೇ.॥ ತಮಿ. ತುಣ್ಟ ; ಮಲ. ತುಣ್ಡ ; ತುಳು. ತೆಲು. ತುಂಟ]

ತುಂಟಕ (ನಾ). = ತುಂಟ$_1$. 'ತುಂಟಕತನ' ಪರಾ. [<ತುಂಟ]

ತುಂಟಕತನ (ನಾ). = ತುಂಟತನ ೧ : ನೀನು ಆಡುವುದು ತುಂಟಕತನದ ಮಾತು (ಮುಂಬಯಿ. ೩-೮೨). [ತುಂಟಕ + – ತನ]

ತುಂಟಕುದುರೆ (ನಾ). ಪಳಗದ ಕುದುರೆ ; ಸಾಧುವಲ್ಲದ ಕುದುರೆ : ತುಂಟ ಕುದುರೆಗೆ ಗಂಟುಲಗಾಮು (ಗಾದೆ). [ತುಂಟ + ಕುದುರೆ]

ತುಂಟಗಜ (ನಾ). ಪಳಗದ ಆನೆ ; ಉಪದ್ರವಕಾರಿಯಾದ ಆನೆ : ಆ ತುಂಟಗಜವಂ ಹಿಡಿದು ತಾರದಿದ್ದರೆ ನನಗೆ ನಿದ್ರಾಹಾರ ರುಚಿಸದು (ಸೌಗಂಧಿ. ೨೪೩-೧೫). [ತುಂಟ + ಗಜ]

ತುಂಟತನ (ನಾ). ೧. ಕುಚೇಷ್ಟೆ ; ಕೀಟಲೆ ; ತಂಟೆ ; ಗುರುದೈವದ ಹೊರೆ ತುಂಟತನದಿ ಹುಸಿದಾ ಹುಸಿ ತನಗೇಳೆಂಟು ದಿವಸದೊಳಗೆ ಕಂಟಕಮಂ ಮಾಳ್ಪುದು (ಜಯಕಾ. ೦೦-೦೦) : ತುಂಟತನಗಳ ಬಲಿಸೋದು ರೊಕ್ಕ (ಪುರಂದ. ೨-೪೯-೨). ೨. ದುಷ್ಟತನ : ಕಾಕಾಸುರನ ತುಂಟತನವನ್ನು ಕೇಳಿ ರಾಮನು ಕೋಪದಿಂದ ಹತ್ತಿರಿದ್ದ ಒಂದು ದರ್ಭೆಯನ್ನು ತೆಗೆದು ಮಂತ್ರಿಸಿ ಆ ರಾಕ್ಷಸನ ಮೇಲೆ ಬಿಟ್ಟನು (ನೀತಿಚಿಂ. VIII, ೦೦). [ತುಂಟ + – ತನ]

ತುಂಟನಗೆ (ನಾ). ಕುಚೋದ್ಯದ ನಗು ; ಚೇಷ್ಟೆಯ ನಗು : ಮಾತಿನಲ್ಲಿ ತುಂಟನಗೆ ಲಾಸ್ಯವಾಡುತ್ತಿತ್ತು (ಮರೆಳಿ. ೪೬). [ತುಂಟ + ನಗೆ]

ತುಂಟನೋಟ (ನಾ). ಕುಚೋದ್ಯದ ದೃಷ್ಟಿ ; ಚೇಷ್ಟೆಯ ನೋಟ : ಅವನು ತುಂಟನೋಟ ಬೀರುತ್ತ ನಿಂತಿದ್ದನು (ರೂಢಿ). [ತುಂಟ + ನೋಟ]

ತುಂಟಲ್ (ನಾ). ಬಿದಿರು : ಶಿಲೆಯೊಳ್ ನೀರೇಜಮೇಂ ನಾಂಟುವುದೆ ಮಳಲೊಳೀ ಗಾಣಮಂ ಪೊಯ್ಯೆ ತೈಲಂ ತಲೆದೋಱಲ್ ಬಲ್ಲುದೇ ನೀರ್ಗಡೆಯೆ ಪಡೆವಿರೇ ಬಣ್ಣೆಯಂ ತುಂಟಲುಂ [ಪಾಕಾಂ. ಕುಟ್ಟಲುಯ್] ತಂಡುಲಮಂ ತಾನೀವುದೇ (ಪಾಣಾನೇ. ೧೬-೭೩). [←ತಮಿ. ತುಣ್ಟಲ್]

ತುಂಟಾಟ (ನಾ). = ತುಂಟತನ$_1$ ೧ : ತುಂಟಜನರೊಡನೆ ಸೇರಿ ತುಂಟಾಟಗಳನ್ನು ಆಡಿಕೊಂಡು ಇರುವರೆಂದು ತಿಳಿದು (ಜಾಮವಂ. ೯೭) : ಅತ್ಯಂತ ಕ್ಷುಲ್ಲಕವಾದ ಈ ಸಿಟ್ಟು ... ಹೋಗುವುದಿಲ್ಲ ಎಂದು ತುಂಟಾಟ ಮಾಡಿದರೆ, ನಾಲ್ಕು ಪೆಟ್ಟು ಕೊಟ್ಟರೆ ಹೇಳದೇ ಕೇಳದೇ ಓಡಿಹೋಗುತ್ತದೆ (ಬಿತಂಜಾ. ೨೬) ; ಮಕ್ಕಳ ಸ್ವಾಭಾವಿಕ ಆಸಕ್ತಿಗಳಿಗೆ ಅಡ್ಡಿ ಬಂದು ಮೊಂಡಾಟ ಮಾಡುವುದು ತುಂಟಾಟ ಮಾಡುವುದು ಮೊದಲಾದವು ಆರಂಭವಾಗುತ್ತವೆ (ಶಿಕ್ಷದ. ೬೩೬). [ತುಂಟು + ಆಟ]

ತುಂಟಿ (ನಾ). ೧. ಕೀಟಲೆ ಮಾಡುವವಳು : ಶುದ್ಧ ತುಂಟಿ, ಅವಳನ್ನು ಸೇರಿಸಬೇಡಿ (ರೂಢಿ). ೨. ಕೆಟ್ಟವಳು; ದುಷ್ಟೆ: ಸುಡುಗೀ ಸುಂದರಿ ತುಂಟಿ ತುಡುಗುಣಿ ನಿನ್ನುರದೆಡೆಯ ತೋಱುಗೆ (ಅಂಜಪ. ೯-೩೦). [ತುಂಟ+–ಇ$_2$]

ತುಂಟು (ನಾ). = ತುಂಟತನ ೧ : ಮುತ್ತಮ್ಮಗೀಗೀಗ ಮುದಿಕಳೆ ಬಂದರು ...ನಗೆಯೊಳು ತುಂಟುಂಟು ಕಣ್ಣೊಳು ಕೊಂಕುಂಟು (ಇಂಜಾಪ.೧೯೬-೬೭).

[ತುಂಟ + – ಉ$_4$]

ತುಂಟುಗಾತಿ (ನಾ). = ತುಂಟಿ ೧ : ಎಲೈ... ತಂಟೆಗಳಂ ಮಾಡುವ ತುಂಟುಗಾತಿಯರೆ (ಸಾಗಂಧಿ. ೫೦೪-೧೦). [ತುಂಟು + – ಕಾತಿ$_5$]

ತುಂಟೆ (ನಾ). = ತುಂಟಿ ೨ : ಮನೆಯ ಗೊಂಟಿನೊಳವಳ ಕೆಡಹಿ ನಡುವಿರುಳೊಳು ತುಂಟೆ [ಪಾಶಾಂ. ೬] ಮನೆಯ ಪೊಜಮಟ್ಟು (ಪ್ರಥಂಜ. ೩-೧೧೭) : ಸಿತಗೆ . . . ಚದುರೆ . . . ತುಂಟೆ (ಶಬ್ದಾನು. ೧೯೭ ಪ್ರಯೋ).

[ತುಂಟ + –ಎ$_2$]

ತುಂಡ$_1$ 'ತೊಂಡ$_2$' ನೋ.

ತುಂಡ$_2$ (ನಾ). ೧. ಆನನ ; ಮುಖ : "ವದನಮಾನನಮಾಸ್ಯಂ ಮುಖಂ ತುಂಡಂ ಲಪನಂ ವಕ್ತ್ರಂ ಮೊಗಕ್ಕೆ ನಾಮಂ" (ವಸ್ತುಕೋ. ೬೯-೦೫) ; "ವದನಂ...ಲಪನಮಾ ತುಂಡಮಾಸ್ಯಂ ಮೋಱ" (ಮಂಗರಾ. ೯೩-೧); ತುಂಡದೊಳಗಟ್ಟಹಾಸಂ ನಿಮಿರೆ (ಸಿದ್ಧೇಶ್ವ. ೨೦-೬೪). ೨. ಹಕ್ಕಿಗಳ ಕೊಕ್ಕು : ಚಂಚು: "ಚಂಚೂಃ, ತುಂಡಃ, ತ್ರೋಟಿಃ – ಈ ೩ ಹಕ್ಕಿಯ ಮುಖಂ" (ಹಲಾಯು. ೪೦-೮೭) ; ವಿನತಾಪುತ್ರನ ವಜ್ರತುಂಡಹತಿಗಂ ಮೆಯ್ಯೊಂತು ... ಶಂಖಚೂಡನನಾನಂದದೆ ಕಾದ ಪೆಂಪೆಸೆಯ ನಾಗಾನಂದಮಂ ಮಾಡಿದಂ (ಪಂಪಭಾ. ೪-೨೬) ; ಸಿಂಹಾರಿಯಂ ತುಂಡದೊಳ್ ಪಿಡಿದು ಪಾಱುತ್ತು ಭೇರುಂಡನಾಗಳ್ (ಜಗವಿ. ೧೬-೦೪) ; ಚರಿಸುತಾಕಾಶದೊಳು ಪಕ್ಷಿ ತುಂಡದೊಳು ಮಾಂಸವ ಕಚ್ಚಿ ಪಾಱುತಿರಲು (ಲಿತಿಚಿಂ. ೩೯-೭೨) ; ಹಂಸ ತುಂಡದ ತುದಿಯ ತಾವರೆಗಚ್ಚಿನಲಿ ಬೆಚ್ಚಿದವು (ತೊರರಾ. ೪-೦೦-೯). ೩. ಮೂತಿ ; ಮುಸುಡಿ : ಬಲನ ನೇಗಿಲ ಪೋಲ್ವ ತುಂಡ . . . ಮೆಱೆವ ಸೂಕರ ನಿರಲು ಕಂಡರಂತಾ ಬೇಡರು (ಹಡಪಾ. ೬-೪) ; ಚಂಡವಿಕ್ರಮ ವಿಹಗೇಶ ನೆಂದೆನಿಸುವ ಗಂಡಭೇರುಂಡನ ತೆಱದೆ ತುಂಡಗಳೆರಡಾಗಲೊಡಲೊಂದು ನಮ್ಮಿತ್ತಂಡಕೆ ಭೇದವೆಲ್ಲಿಯದು (ಪೋಹಕ. ೩೦-೪೨). ೪. ಆನೆಯ ಸೊಂಡಿಲು : ಬಳಿಕ ದಾರಕಭಕ್ತರು . . . ಪೋಗಿ ಗಜತುಂಡಮಂ ಖಂಡಿಸಿ (ಪುರಾವಿ. ೭೮). ೫. ಬಾಣ ಮೊದಲಾದ ಆಯುಧಗಳ ತುದಿ. ೬. ತಲೆ ; ಶಿರಸ್ಸು : "ತುಂಡಮೆನೆ ಮುಂಡಮಕ್ಕು" (ಮಂಗರಾ. ೧೧೭-೬). ೨. ಬಾಯಿ. [ಸಂ.]

ತುಂಡಂಗಿ$_1$ (ನಾ). ತೋಳುಗಳಿಲ್ಲದ ಅಂಗಿ : ಮೈಗೆ ಕೈಗಳಿಲ್ಲದ ತುಂಡಂಗಿ. ಅದರ ಮೇಲೆ ದಪ್ಪನಾದ ಹಳೆ ದುಪ್ಪಟಿ (ನಿಷ್ಕಾಮ. ೨೯) ; ತುಂಬಿದ ಸಂತೇಲಿ ನನ್ನ ತುಂಡಂಗಿ ಮಗನ್ನ ಕಂಡ್ರಾ ಅಂದಳಂತೆ (ಹುಟ್ಟಿಹ. ೧೦೩). [ತುಂಡು$_1$ + ಅಂಗಿ$_2$]

ತುಂಡಂಗಿ$_2$ 'ತೊಂಡಂಗಿ' ನೋ.

ತುಂಡಕೇರಿ (ನಾ). = ತುಂಡಿಕೇರಿ. [ಸಂ. ತುಂಡಕೇರೀ]

ತುಂಡತನ 'ತೊಂಡತನ' ನೋ.

ತುಂಡಮಾಣಿಕ (ನಾ). ಕೆಂಪುಬಣ್ಣದ ಕೊಕ್ಕುಳ್ಳ ಹಕ್ಕಿ ; ಗಿಳಿ ; ಶುಕ : ಮಂಡಳಿಸಿದ ಪುಷ್ಪರಥ...ಚೈತ್ರಸೂತ ತುಂಡಮಾಣಿಕ ವಾಜಿ ಕುಣಿಯಲ್ಕೆ ಕುಸುಮಕೋದಂಡ ಬಂದಡರ್ದನಳ್ತಿಯಲಿ (ಮೋಹತ. ೬-೦೩).
[ತುಂಡ$_2$ + ಮಾಣಿಕ]

ತುಂಡರಸ, ತುಂಡರಸು (ನಾ). ಪಾಳೆಯಗಾರ ; ಮಾಂಡಲಿಕ : ಅಲ್ಲಲ್ಲಿ ತುಂಡರಸರ ಉಪಟಳ ಬಹಳ (ಬಾಲಪ್ರ. II, ೯೯೦) ; ಒಂದು ಕಾಫಿತೋಟ ವೆಂದರೆ ಒಂದು ತುಂಡರಸನ ರಾಜ್ಯವೆಂದೇ ಹೇಳಬಹುದು (ರಕ್ತರೂ. ೬೪). **ತುಂಡರಸು** : ಮೂರನೆಯ ಗೋವಿಂದನು ರಾಯಭಾರಿಯನ್ನು ಕಳುಹಿ ದುದು ... ತುಂಡರಸುಗಳಾಗಿರಬಹುದಾದ ಮೂಡಣ ಚಾಳುಕ್ಯರಾಜರಲ್ಲಿ ಗಾಗಿರಲಾರದು (ನಾಡೋಜ. ೩೪). [ತುಂಡು$_1$ + ಅರಸ$_1$]

ತುಂಡರಸು 'ತುಂಡರಸ' ನೋ.

ತುಂಡರಿಸು (ಕ್ರಿ). ತುಂಡುಮಾಡು ; ಭಾಗಮಾಡು ; ಕತ್ತರಿಸು : ತುಂಡರಿಸಿ ಹುಲಿಯೊಡಲ ಸುಂಟಿಗೆಯ ನೋಳ್ಪಂ (ಶಾಲೂರ. ೮೪-೦೬೧) ; ಕೈಗೊಡಲಿಯಿಂದಿಕ್ಕಿದೆನ್ : ತುಂಡರಿಸಿ ಕೆಡೆದುದಿಳೆಗೆ (ಚಂದ್ರಸ. ೨೯-೦೯) ; ಹಾವುಗಳನ್ನು ಸಿಕ್ಕಿದಲ್ಲಿ ತುಂಡರಿಸಲು ರಾಜನು ಏರ್ಪಾಡು ಮಾಡಿದನು (ಮಡಿಸ. ೪೨). [< ತುಂಡು$_1$ + – ಇಸು$_3$]

ತುಂಡಾಂಡಿ 'ತುಂಡಾಡಿ' ನೋ.

ತುಂಡಾಡಿ, ತುಂಡಾಂಡಿ (ನಾ). ೧. ದಷ್ಟಪುಷ್ಟವಾಗಿರುವವನು ; ದಾಂಡಿಗ ; ಧಡಿಯ : ತುಂಡಾಡಿಗಳು ಊರಿನಲ್ಲಿರುವವರ ಪೈಕಿಯೆಲ್ಲಾ ಹೆಚ್ಚು ಶಕ್ತರಾದವರು (ಗರುಧಾ. ೫೯). ೨. ಕೆಲಸಕ್ಕೆ ಬಾರದವನು ; ಪೋಲಿ ; ಪೋಕರಿ : ದೇವರ ದರ್ಶನಕ್ಕೆ ಬರಿಗೈಯಿನ ತುಂಡಾಡಿಗಳಾಗಿ ಹೋದರೆ ಪೂಜಾರಿಗಳು ಪ್ರಸಾದ ಕೊಟ್ಟಾರೆ ? (ಶ್ರೀರಾಯ. ೩). **ತುಂಡಾಂಡಿ** : ೧. ಅನೇಕ ಜನ ತುಂಡಾಂಡಿಗಳು ನನ್ನನ್ನು ಹಿಡಿಯು ವುದಕ್ಕೆ ಬಂದರು (ಮುಸುಗ. ೦೪೭). ೨. ತುಂಡಾಂಡಿಯಾಗಿ ಸಿಳ್ಳು ಹಾಕುತ್ತ ಚಪ್ಪಾಳೆ ಬಡಿಯುತ್ತಾ ಮಲಗಿದ್ದನು (ಪುಟ್ಟರ. ೬೪).
[ತುಂಡು$_2$ (< ತೊಂಡು$_1$) + – ಆಡಿ$_1$]

ತುಂಡಾಡಿಗ (ನಾ). = ತುಂಡಾಡಿ ೧ : ಆ ಗುಂಪಿನಲ್ಲಿ ನೆಕ್ಲುದೋವ್ . . . ವಿಕಾರಾಕೃತಿಯ ತುಂಡಾಡಿಗನನ್ನೂ ಗಮನಿಸಿದನು (ಪುನರು. ೫೦೬).
[ತುಂಡು$_2$ (< ತೊಂಡು$_1$) + – ಆಡಿಗ]

ತುಂಡಿ$_1$ (ನಾ). ಕೆಟ್ಟವಳು ; ದುಷ್ಟೆ : ಖಂಡಗ ತಿನ್ನಂದ್ರ ಇಖ್ಖಂಡ್ಗ ತಿನ್ನಂಥ ತುಂಡಿನ ತಂದ್ಹೂಡೊ ನಮ ಜೀವ ಹೋದಾವೊ ಕೈಲಾಸಕ (ಮಲ್ಲಿಗೆ. ೨೬). [ತುಂಡ$_1$ (< ತೊಂಡ$_2$) + – ಇ$_2$]

ತುಂಡಿ$_2$ (ನಾ). ೧. ಕೊಕ್ಕು. ೨. ಬಾಯಿ. ೩. ಹೊಕ್ಕುಳು ; ನಾಭಿ. ೪. ಚಾಚಿಕೊಂಡಿರುವ ಹೊಕ್ಕುಳು ; ಎದ್ದು ಕಾಣುವ ಹೊಕ್ಕುಳು : "ತುಂಡಿ[ಪಾಠಾಂ.ದಿ]ಯೆನೆ ಬುಗುಡುಹೊಕ್ಕುಬುಮೆನಿಕ್ಕು" (ಮಂಗಠಾ. ೧೦೪-೫). [ಸಂ.]

ತುಂಡಿಕ (ಗು). ೧. ಸೊಂಡಿಲುಳ್ಳ. ೨. ಮೂತಿಯುಳ್ಳ. [ಸಂ.]

ತುಂಡಿಕೆ (ನಾ). ತೊಂಡೆಗಿಡ ; ಬಿಂಬದ ಬಳ್ಳಿ : "ಓಷ್ಠಿ ತುಂಡಿಕೆ ಬಿಂಬೆ ತೊಂಡೆಯಕ್ಕುಂ" (ಮಂಗಠಾ. ೩೮-೨೫). [ಸಂ. ತುಂಡಿಕಾ]

ತುಂಡಿಕೇರಿ (ನಾ). ೧. ಹತ್ತಿಗಿಡ : "ತುಂಡಿಕೇರೀ, ಸಮುದ್ರಾಂತಾ, ಕಾರ್ಪಾಸೀ, ಬದರಾ ಈ ೪ ಹತ್ತೀಗಿಡದ ಹೆಸರು" (ಸಿದ್ಧಾಂತಿ. ೧೨೦). ೨. ತೊಂಡೆಬಳ್ಳಿ : "ತುಂಡಿಕೇರೀ, ರಕ್ತಫಲಾ, ಬಿಂಬಿಕಾ, ಪೀಲುಪರ್ಣೀ ೪ ತೊಂಡೇಗಿಡದ ಹೆಸರು, ಕೆಂಪು ತೊಂಡೇಗಿಡ" (ಸಿದ್ಧಾಂತಿ. ೦೨೬). ೩. ಒಂದು ಬಗೆಯ ಗಂಟಲುರೋಗ : ಉರಿ, ನೋವು, ಬಾವುಗಳಿಂದ ಕೂಡಿ ಇದ್ದರೆ ತುಂಡಿಕೇರಿ ಎಂಬ ತಾಲುರೋಗವೆಂದಱಿವುದು (ವೈದ್ಯಸಾ. II, ೧೧೪). [ಸಂ. ತುಂಡಿಕೇರೀ]

ತುಂಡಿಕೇಶಿ (ನಾ). ತೊಂಡೆಬಳ್ಳಿ : "ತುಂಡಿಕೇಶಿ=ತೊಂಡೀಬಳ್ಳಿ" (ಗಂಗಾಮ. ೧೫೪). [ಸಂ. ತುಂಡಿಕೇಶೀ]

ತುಂಡಿಕ್ಕು (ಕ್ರಿ). ಸೊಂಡಿಲನ್ನು ನೀಡು (?) : ತಾರಾಮಂಡಲಕೆ ತುಂಡಿಕ್ಕುವಂತೆ ಒಲ ಭೂರಿ ಸೂರ್ಯಸಮಾನದೇಳ್ಗೆಯಲಿ (ಸೌಂದಕಾ. ೫-೦೫). [ತುಂಡ$_2$ + ಇಕ್ಕು]

ತುಂಡಿಗೆ (ನಾ). = ತುಂಡಿ$_2$ ೩ : ಖಂಡ ಕರುಳೆಲು ತೊವಲ್ಲರ ತುಂಡಿಗೆ ಮಿದುಲಡಗು ತೊರಳೆ ನೆಣವಸೆ ನೆತ್ತರ್ಗೊಂಡ ಕಾಳಿಜಿಗಳಿಂ (ಕೆಳನ್ನ. ೨-೪೬). [< ಸಂ. ತುಂಡಿಕಾ]

ತುಂಡಿಭ (ನಾ). = ತುಂದಿಲ. [ಸಂ.]

ತುಂಡಿಲ (ನಾ). = ತುಂದಿಲ. [ಸಂ.]

ತುಂಡಿಸು$_1$ (ಕ್ರಿ). ೧. = ತುಂಡರಿಸು : ನಟ್ಟಡವಿಯೊಳಗೆ ಮುಳಿಸಿಂ ಮುಟ್ಟುವ ನಾಯ್ಗಳನೆ ತುಂಡಿಸಲ್ಕೆಂದು (ಗಿರಿಕ. ೦-೦೦೨) ; ನೋಟಮ ನಿಕ್ಕಡಿ ಮಾಡುವಂತೆ ಕಂಡ ಸುಖಮಂ ತುಂಡಿಸುವಂತೆತ್ತಿದ ಜವನಿಕೆಯಂ ಭೋಂಕನೆ ಸಡಿಲ್ಚಿ (ನಂಬಿರ. ೦೨-೫೭); ಅಂಬಿನಿಂದಾ ಹಣ್ಣನೆಚ್ಚು ತುಂಡಿಸಿದ ನೇನೆಂಬೆನವನ ಚಮತ್ಕೃತಿಯಾ (ಭರಜ. ೩೦-೭೭) ; ಖಂಡೆಯಗಳ ಪೆಟ್ಟಿ ನೊಳಗೆ ಗುರಾಣಿಗಳ್ತುಂಡಿಸಿ ತಲೆ ಸೀಳಾಗಿ ಖಂಡಿಸಿ (ಕಂನವಿ. ೦೪-೭೪) ; ನಾಶಮಾಡಿ ಈಷಣಂಗಳನು ಕ್ಲೇಶ ತುಂಡಿಸಿ ಹಾಕಿದರಿಗೆ (ಜಿದಾವ.೦೬೨-೦೩). ೨. ಖಂಡಿಸು : ಪರಮತಮಂ ತುಂಡಿಸಿ ಕರಕರನೆ ಜಯವ ಪಡೆದ ನಿಲ್ಲಿ ಲಕ್ಷ್ಮಣಮುನಿಪಂ (ಮೈಸೂಮ. ೨-೬೯). [ತುಂಡು$_1$ + – ಇಸು$_3$]

ತುಂಡಿಸು$_2$ (ಕ್ರಿ). ಕೊಕ್ಕಿನಿಂದ ಕುಕ್ಕು,–ಕುಟುಕು : ಹೆಚ್ಚದ ಹೆಱ್ ಗಿಳಿ ತುಂಡಿಸದಾಲದ ಪಣ್...ಎನೆಯಿನಿದುಟಿ ಸೊಗಯಿಸಿತು (ಜಯಕಾ. ೩-೧೦).
[ತುಂಡ$_2$ + – ಇಸು$_3$]

ತುಂಡು$_1$ (ನಾ). ೧. ಚೂರು ; ಹೋಳು ; ತುಣುಕು ; ಭಾಗ : "ತುಂಡಿನಲ್ಲಿ ಕಂಡಿಕೆಯೆಂಬುದಕ್ಕು" (ಕಬ್ಬಿಳ್ಳ. ೭೩); ಈರಾಱು ತುಂಡಹ ಬಿಳಿಯೆಲೆಯ ತಂದಿಟ್ಟಣಿಸಿದರಬಲೆಯರು (ಅಂಜಡ. ೮-೪೯); ಬಾಳೆಯ ಕಾಯ ತುಂಡಿನೊಳು ಸಕ್ಕರೆ ಹುರಿದ ಮೆಣಸು ಹುರಿದೆಳ್ಳು ತುಪ್ಪ ದೊಳಗಿಕ್ಕಿ (ಸೂಪಶಾ. ೪-೮೭); ಶರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು (ಕನಕ. ೫೦-೨). ೨. (ದಂಡಿನಲ್ಲಿ) ಒಂದು ದಳ ; ತುಕಡಿ : ಮುಂದಿನ ತುಂಡು ಮಾತ್ರ ಮುಂದೆ ಸಾಗಿತು. ನಾವು ಅಲ್ಲೆ ಬಿದ್ದುಕೊಂಡೆವು (ಮೇದಿಮ. ೧೯೨). ೩. ಬಟ್ಟೆಯ ಸಣ್ಣಭಾಗ ; ಚೂರುಬಟ್ಟೆ : ತುಂಡಿಲ್ಲ ದವನಿಗೆ ತುಂಟನ ಭಯವೇಕೆ ? (ಗಾದೆ) : ನನ್ನ ಗೆಳೆಯ ಮನೆಯೊಳಗೆ ಯಾವಾಗಲೂ ಒಂದು ತುಂಡು ಕಟ್ಟಿಕೊಂಡು ಇರುತ್ತಾನೆ (ರೂಢಿ). ೪. ಹೊಲ, ಗದ್ದೆ ಮೊದಲಾದುವುಗಳ ಭಾಗ,–ಸೀಳು : ಅವರಿಗೆ ಕೆರೆ ಹಿಂದೆ ಎರಡು ತುಂಡು ಗದ್ದೆ ಇದೆ (ರೂಢಿ). ೫. ಮಾಂಸ : ಮುಖಂಡರಿಗೆಲ್ಲಾ ಚೆನ್ನಾಗಿ ತುಂಡು ಕಡುಬು ಕಳ್ಳುಗಳ ಹಬ್ಬ ಮಾಡಿಸಿ ಬಾಯಿಗೆ ಬೀಗಮುದ್ರೆ ಮಾಡಿ ಕಳುಹಿಸಿದ್ದನು (ಮಲಿಮ. ೧೨).

ತುಂಡಾಗು = ಹೋಳಾಗು ; ಭಾಗವಾಗು ; ಕತ್ತರಿಸಿಹೋಗು : ದ್ವಿಜರಾಜಂಗೆಣೆವಂದು ಚಕ್ರಹತಿಯಿಂ ಸ್ವರ್ಭಾನು ತುಂಡಾಗನೇ (ಸೋಮೇಶ. ೪೫) ; ಬಲರಾಮನ ಕೆಯ್ಯ ಕಾರ್ಮುಕ ಕೆಡೆದುದು ತುಂಡಾಗಿ ನೆಲಕೆ (ಮೋಹತ. ೩೮-೫೮). **ತುಂಡುಮಾಡು** = ಚೂರುಮಾಡು ; ಭಾಗಮಾಡು : "ಖಂಡಿಸು=ತುಂಡುಮಾಡು" (ಗಂಗಾಮ. ೦೦೭) ; ತರಕಾರಿ ಮತ್ತು ಮಾಂಸಗಳನ್ನು ತುಂಡುಮಾಡಲು ಹಾಗೂ ಮೀನು ತೊಳೆಯಲು ಹಲಿಗೆಗಳು ಬೇಕಾಗುವುವು (ಅಡುಸೌ ೩೪) ; ತುಂಡು ಮಾಡಿದರೂ ನೀರು ಒಂದಾಗದೆ ಇರದು (ಗಾದೆ).

[ದೇ.II ತಮಿ. ತುಣ್ಟ ; ಮಲ. ತುಣ್ಡ ; ತುಳು. ತುಂಪು ; ಕೋತ. ತುಂಡ್ ; ತೆಲು. ತುಂಡು]

ತುಂಡು$_2$ 'ತೊಂಡು$_1$' ನೋ.

ತುಂಡು$_3$ (ನಾ). ಒಂದು ಬಗೆಯ ವಂಠ : ತುಂಡು, ದೇವದಾರ — ಎತ್ತರವಾಗಿ ಬೆಳೆಯುತ್ತದೆ. ತೊಲೆ ನಸುಗೆಂಪು. ಹಗುರು (ಕಫಾಗೆ. ೪೦).

[?]

ತುಂಡುಕೊಡಲಿ (ನಾ). ಸಣ್ಣಕಾವುಳ್ಳ ಕೊಡಲಿ ; ಕೈಗೊಡಲಿ : ಅಗಲವಾದ ಅಲಗಿನ ತುಂಡುಕೊಡಲಿ ; ಕಟುಕನ ಕಡಿಗತ್ತಿ : ಮಚ್ಚು ಕತ್ತಿ (Chopper. ಇಂಳಿ). [ತುಂಡು$_1$ + ಕೊಡಲಿ]

ತುಂಡುಗ (ನಾ). ಮಲೆತವನಂ ; ಹಗೆ : ಗಂಡುಗಲಿ ರವಿತನಯ ಮಿಟ್ಟೆಯಂ ಕೊಂಡಸಲ್ ತುಂಡುಗರು ಮುರಿದೋಡಿ ಬೀಳುತ್ತ ಕರದ ಕೋದಂಡಮಂ ಬೀಸಾಕಿ (ತುರಂಗ. ೬೯-೧೦).

[ತುಂಡು$_2$ (<ತೊಂಡು$_1$) + – ಗ$_2$]

ತುಂಡುಗಂಬಳಿ (ನಾ). ಕಂಬಳಿಯ ಒಂದು ಭಾಗ, – ಸೀಳು : ಮಂಡೆ ಬೋಳಿಸಿಕೊಂಡು ತುಂಡುಗಂಬಳಿ ಹೊದ್ದು ಹಿಂಡನಗಲಿದ ಮದಗಜ ದಂತಿಹರ ಕಂಡು ನಂಬುವುದು (ಸರ್ವಜ್ಞ. ಬ. ೯೩೮).

[ತುಂಡು$_1$ + ಕಂಬಳಿ]

ತುಂಡುಗಡಿ (ಕ್ರಿ). ೧. ಹೋಳಾಗುವಂತೆ ಕತ್ತರಿಸು, —ಭಾಗಮಾಡು. ೨. ಕತ್ತರಿಸಿಹೋಗು ; ಭಂಗವಾಗು ; ನಿಂತುಹೋಗು : ತುಂಡು ಗಡಿದಿದ್ದ ವಿನೋದವಿಚಾರವನ್ನು ಪ್ರಸ್ತಾಪಿಸಿ ಗಂಡನ ಮನಸ್ಸನ್ನು ರಮಿಸಲೆಳಸಿದಳು (ಪುಠಮ. ೪೭೪). [ತುಂಡು$_1$ + ಕಡಿ$_2$]

ತುಂಡುಗಿಡಿ (ನಾ). ಸಣ್ಣ ಕಿಡಿ ; ಸ್ಫುಲಿಂಗ ; ಅಗ್ನಿಕಣ : ತುಂಡು ಗಿಡಿಗಳ ತೂಜುಗಿಡಿಗಳ ಗುಂಡುಗಿಡಿಗಳ ಘಾಡಣೆಯ ಕಿಡಿ ಚಂಡಿಯಾಯ್ತು ಚತುರ್ವದನನಿರ್ಮಿತ ಮಹಾಭವನ (ತೊರಠಾ. ೫-೮-೮೨).

[ತುಂಡು$_1$ + ಕಿಡಿ]

ತುಂಡುಗೂದಲು (ನಾ). ಮೋಟಾದ ಕೂದಲು ; ಮೊಂಡುಕೂದಲು : ಆ ತುಂಡುಗೂದಲಿನ ಹೆಂಗಸರಿಗೆ ತಮ್ಮ ವಿಚಾರವಲ್ಲ ಗೊತ್ತು (ಪುನರು. ೩೩೦). [ತುಂಡು$_1$ + ಕೂದಲು (<ಕೂದಲ್)]

ತುಂಡುಗೆಯ್, ತುಂಡುಗ್ಗೈ (ಕ್ರಿ). ತುಂಡುಮಾಡು ; ಚೂರುಮಾಡು : ಹವಣಿಲ್ಲದು ಮಾಂಸಮಂ ತುಂಡುಗೆಯ್ದುಪ್ಪಾಡಿದವಲ್ಲಿ ವಲ್ಲೂರ ಮೆನಿಸಿಕ್ಕು (ಪುಂಗಠಾ. ೬೫-೫). **ತುಂಡುಗ್ಗೈ** : ಬಾಲವನಕಾಲದಲಿ ಖಂಡಿಸಿದ – ಕಾಲನೇ ಲೀಲೆಯಾ ಚಾಮರವ ತುಂಡುಗೈದೆ (ಕಎಪು. ೪೩-೨).

[ತುಂಡು$_1$ + ಕೆಯ್$_1$]

ತುಂಡುಗ್ಗೈ ' ತುಂಡುಗೆಯ್ ' ನೋ.

ತುಂಡುತನ ' ತೊಂಡುತನ ' ನೋ.

ತುಂಡುದೇವರು (ನಾ). ಕೆಟ್ಟ ದೇವರು ; ಕಿರುಕಂಳ ದೈವ ; ಕ್ಷುದ್ರ ದೇವತೆ : ತುಂಡುದೇವರಿಗೆ ಪುಂಡುಪೂಜಾರಿ (ಗಾಡ).

[ತುಂಡು$_2$ (<ತೊಂಡು$_1$) + ದೇವರು (<ದೇವರ್)]

ತುಂಡುದೊರೆ (ನಾ). ಸಣ್ಣರಾಜ ; ಪಾಳೆಯಗಾರ : (ಕ).

[ತುಂಡು$_1$ + ದೊರೆ$_3$]

ತುಂಡುಪಂಚೆ (ನಾ). ೧. ಮೋಟಾದ ಪಂಚೆ : ಕುಳ್ಳಾಗಿರುವವರಿಗೆ ಉಡುವುದಕ್ಕೆ ತುಂಡುಪಂಚೆಯೇ ಸರಿ (ರೂಢಿ). ೨. ಸ್ನಾನದ ಪಂಚೆ ; ಪಾಣಿಪಂಚೆ : ಅವರಾಗಲೇ ತುಂಡುಪಂಚೆಯುಟ್ಟು ನೀರಿಗೆ ಇಳಿದಿದ್ದಾರೆ (ರೂಢಿ). [ತುಂಡು$_1$ + ಪಂಚೆ]

ತುಂಡುಪದ (ನಾ). ಚಿಕ್ಕಹಾಡು ; ಸಣ್ಣಗೀತೆ ; ಕುರಂಕುಪದ : ಇಂಥ ದೇಶಿಗಳೊಳಗೆ ನಮ್ಮ ಯಕ್ಷಗಾನ–ತುಂಡುಪದ–ಜೋಗುಳ ಮೊದಲಾದ ಹಾಡುಗಳೂ ಸೇರುತ್ತಿವೆ ಎನ್ನಬೇಕು (ನಾಡೋಜ. ೩೩೦).

[ತುಂಡು$_1$ + ಪದ$_2$]

ತುಂಡುಮನ್ನೆಯ (ನಾ). ಕೆಟ್ಟವನಾದ ಸಾಮಂತ ; ದುಷ್ಟ ಸಾಮಂತ: ಮತ್ತಂ ಕೆಲಂಬರ್ ತುಂಡುಮನ್ನೆಯರುಮೊಂದಾಗಿ ಪುಂಡೆದ್ದು ದಾಳಿವಱ ದಾರುಮಂ ಬಗೆಯದೆ ರಾಜ್ಯಮಂ ಬಾಧಿಸುತ್ತುಮಿರಲು (ಕಳಸ್ಕ. ೦-೪೦ಪ).

[ತುಂಡು$_2$ (< ತೊಂಡು$_1$) + ಮನ್ನೆಯ]

ತುಂಡುಮೂಳ (ನಾ). ಆಲ್ಪನಾದ ವ್ಯಕ್ತಿ ; ತುಚ್ಛವ್ಯಕ್ತಿ : ಕಂಡ ಕಂಡೂರುಗಳ ತಿರುಗುತ ಕಂಡಕಂಡರ ಮನೆಗೆ ಹೊಕ್ಕರೆ ತುಂಡುಮೂಳನು ಆಗಿ ಸುಮ್ಮನೆ ಕೆಟ್ಟೆನಕಟಕಟ (ಸುಸಾರ. ೧೦೦-೦).

[ತುಂಡು$_2$ (< ತೊಂಡು$_1$) + ಮೂಳ (< ಮೂಬ)]

ತುಂಡುಲಂಗ (ನಾ). ಮೋಟಾದ ಲಂಗ : ಪಾಶ್ಚಿಮಾತ್ಯಸ್ತ್ರೀಯರು ಹೆಚ್ಚಾಗಿ ತುಂಡುಲಂಗ ಧರಿಸುತ್ತಾರೆ (ರೂಢಿ). [ತುಂಡು$_1$ + ಲಂಗ]

ತುಂಡುವಕೀಲ (ನಾ). ವಕೀಲನಾಗಿ ವೃತ್ತಿ ನಡೆಸಲು ತಕ್ಕ ಅರ್ಹತೆ ಯಿಲ್ಲದಿದ್ದರೂ ವಕೀಲನಂತೆ ವ್ಯವಹರಿಸುವವನು; ಪೂಟಲಾಯರು: ಕಾನೂನುಗಳ ಅಲ್ಪ ಸ್ವಲ್ಪ ಪರಿಚಯ ಪಡೆದ ಆತನು ಹಳ್ಳಿಯ ಮಟ್ಟಿಗೆ ಒಬ್ಬ ತುಂಡುವಕೀಲನೇ ಆಗಿದ್ದನು (ಕುರುಡಾ. ೧೪೦).

[ತುಂಡು$_1$ + ವಕೀಲ]

ತುಂಡುವಡೆ (ಕ್ರಿ). ಭಾಗವಾಗು ; ಬೇರ್ಪಡು ; ಪ್ರತ್ಯೇಕವಾಗು : ಬಂಗಾಳಿಗಳು ವಾಸಮಾಡುತ್ತಿರುವ ಪ್ರಾಂತವು ಬಹುಕಾಲದಿಂದ ಭರತ ಖಂಡದ ಏಕ್ಯ ಪ್ರದೇಶದಿಂದ ತುಂಡುವಡೆದು ಬೇರೆಯಾಗಿದೆ (ನಿಬಂಧ. II, ೦೯೦). [ತುಂಡು$_1$ + ಪಡೆ$_1$]

ತುಂಡುಸೀರೆ (ನಾ). ೧. ಸೀರೆಯ ಚೂರು : ಉಪಯೋಗಕ್ಕೆ ಬರುತ್ತದೆ ಎಂದು ಹೆಂಗಸರು ತುಂಡುಸೀರೆಯನ್ನೂ ಬಿಡದೆ ಎತ್ತಿಡುವುದುಂಟು (ರೂಢಿ). ೨. ಕಿರಿಗೆ : ಕುಳ್ಳಗಿರುವುದರಿಂದ ಇವಳಿಗೆ ತುಂಡುಸೀರೆಯೇ ಸಾಕು (ರೂಢಿ). [ತುಂಡು$_1$ + ಸೀರೆ$_3$]

ತುಂತಕ (ನಾ). ತೊಂದರೆ ; ವ್ಯಥೆ ; ನೋವು : ಈ ಮಹಾಪರೂತ ದುಳ್ ಅಕ್ಷಯಕೀರ್ತ್ಯಿ ತುನ್ನಕದ ವಾರ್ದ್ಧಿಯ ಮೇಲದು ನೋನ್ನು ಭಕ್ತಿಯಿಮ್ ಅಕ್ಷಿಮಣಿಕ್ಕೆ ರಮ್ಮಸುರಲೋಕಸುಕಕ್ಕೆ ಭಾಗಿ ಆ × × × (ಎಳ. II ೨೦-೩ ; 700). [?]

ತುಂತುಗೆಯ್ (ಕ್ರಿ). ತುಂತ್ಕುಮಾಡು : ಅಬ್ಬೆ ತಿಳಿದೊಡೆ ತಾನಲಸ ದೆಳ್ಕಂದೋದನಮನಿಕ್ಕಿ ತುಂತುಗೆಯ್ದೂಡುವಂ ಮನದಣಿವಿನಂ (ಅರಾಚ. ೦೦-೨೮). [ತುಂತ್ಕು (< ತುತ್ತು$_2$) + ಕೆಯ್$_1$]

ತುಂತುಣಿ, ತುಣ್ತುಣಿ (ನಾ). ಒಂದಂ ಬಗೆಯ ತಂತಿವಾದ್ಯ : ಎಲ್ಲವ್ವ ದೇವತೆಯ ಭಕ್ತರು ... ಚೌಡಕಿ, ತುಂತುಣಿ, ಸೂರು, ಗೆಜ್ಜೆ, ತಾಳ ಮೊದಲಾದುವುಗಳ ಸಂಗಜೋಡಣೆ ಹಾಡಿ ವರುಷದಲ್ಲೆಲ್ಲ ಕಂಣಿಯುವರು (ಕನ್ನಜಾ. ೩೦) ; ಸಪ್ಪಾ ತುಂತುಣ್ಣಾಯ ಟಿಂವ್ ಟಿಂವ್ ಮಾಡಿದ (ದೀಪಜ. II, ೩೮೯). **ತುಣ್ತುಣಿ** : ಈಗಿನ ಲಾವಣಿಕಾರರು ದಪ್ಪ ಹಾಗೂ ತುಣ್ತುಣಿಗಳನ್ನು ಜೋಡಣೆಮಾಡಿ ಹಾಡುತ್ತಾರೆ (ಕನ್ನಜಾ. ೯೩).

[← ಮರಾ. ತುಣ್‌ತುಣೇ]

ತುಂತುರು ' ತುಂತುಱ್ ' ನೋ.

ತುಂತುರುಮಳೆ (ನಾ). ಸಣ್ಣಸಣ್ಣ ಹನಿಗಳಿಂದ ಕೂಡಿದ ಮಳೆ ; ಸೋನೆಮಳೆ ; ತೂಪರು : ತುಂತುರುಮಳೆಯಿಂದ ತೂಬಿನ ಕೆರೆ ತುಂಬೀತೆ ? (ಗಾಡ). [ತುಂತುರು (< ತುಂತುಱ್)+ಮಳೆ (< ಮೞೆ^{3})]

ತುಂತುರುಹನಿ 'ತುಂತುರ್ವನಿ' ನೋ.

ತುಂತುರ್ಗಿಡಿ (ನಾ). ಸಣ್ಣಸಣ್ಣ ಬೆಂಕಿಯ ಕಣ : ಹೊಗೆಯ ಹೊರಳಿಯ ಬಾಯ ಧಾರೆಯಲಿಗವ ತುಂತುರ್ಗಿಡಿಯ ಮುಮ್ಮೊನೆ ನೆಗೆವ ದಳ್ಳುರಿ ಮಸಗೆ (ಕಾತಿರಾ. ೫೦-೬೦). [ತುಂತುಱ್ + ಕಿಡಿ]

ತುಂತುರ್ಪನಿ ' ತುಂತುರ್ವನಿ ' ನೋ.

ತುಂತುರ್ವನಿ, ತುಂತುರುಹನಿ, ತುಂತುರ್ಪನಿ (ನಾ). ಬಹಳ ಸಣ್ಣ ಹನಿ ; ಶೀಕರ ; ಸೋನೆ : "ಪೃಷತ್, ಪೃಷತಃ—ಈ ೨ ತುಂತುರ್ವ [ಪಾಠಾಂ. ರ್ಪ]ನಿ" (ಹಲಾಯು. ೧೧೨-೫೫) ; ತಿಳಿನೀರ ತುಂತುರ್ವನಿಗಳಿಂ ಪೊರೆದಳಿವಾಟಿಯ ಸುಟಿಯ ಬಿಜ್ಜಣಗೆಗಳಿಂ ಅಡಿಗಡಿಗೆ ಬೀಸಿಯುಂ (ಕಾದಂಪು. ೮೫೫); ಒಡನಾಡಿಗಳಡಿಗಡಿಗೆ ತಳಿವ ಪನ್ನೀರ ತುಂತುರ್ವನಿಗಳಿಂ (ಕಬ್ಬಿಗಾ. ೩೦೫); ಜಡಿವ ತುಂತುರ್ವನಿಗಳನು ಬಿಜ್ಜುಗಾಳಿ ಮೊಗೆವವೊಲನಿತು ಸೆಲ್ಲಹ ಶರವಳಿಯ ಗದೆಯಿಂದ ಘಟ್ಟಿಸಿದ (ಕುವಾ.ಗ. ೦-೫೫) ; ಸುಖಜಲ ಕ್ರೀಡೆಯೊಳ್ಚೆಲ್ವ ತಿಳಿನೀರ ತುಂತುರ್ವನಿಗಳೆಸೆದಿರ್ದುವು (ಜೈಮಿಭಾ. ೩೦-೧೧). **ತುಂತುರುಹನಿ :** ಅವರ ಹಣೆ ಮತ್ತು ಮೂಗಿನ ಮೇಲೆ ಕಾಣುತ್ತಿದ್ದ ಸೆಕೆಯ ನೀರಿನ ತುಂತುರುಹನಿಗಳು ಅವರ ಮುಖದ ಸೌಂದರ್ಯಕ್ಕೆ ಕಳೆ ಗೂಡಿಸುತ್ತಿದ್ದವು (ಕ್ರೀವಿದ್ಯಾ. ೭೬); ಬೆಳಗಾಗ ತುಂತುರುಹನಿ ಉದುರುತ್ತಿತ್ತು (ಪುನರು. ೨೬೮). **ತುಂತುರ್ಪನಿ :** ಮಂಜಿನ ತುಂತುರ್ಪ [ಪಾಠಾಂ. ರ್ವ]ನಿಯೊಳ್ಪೊದೆದ್ದಲರ್ದ ಚೆನ್ನೆಯ್ದಿಲ್ಲಗಳ್ (ಕಾದಂಪು. ೪೨೮) : ಕೂರ್ವ ನಲ್ಲನ ತನುವಿನೊಳು ತುಂತುರ್ಪನಿಗಳುಗೆ ತೂಪಿಯಿವರೇ (ಲಸಪು. ೧೩-೫೦).

[ತುಂತುರ್+ಪನಿ]

ತುಂತುಱ್, ತುತುರಂ, ತುಂತಂಱು (ನಾ). ಸಣ್ಣ ಹನಿ,—ತೊಟ್ಟು ; ಹಂಡು ; ಶೀಕರ : "ತುಂತುಱಿನೆಲ್ಕೆ ಸೀಕರಂ" (ಕರ್ಣಾಸಿ. ೫೯) ; ಅಲ್ಲಲ್ಲಿಗೆ ನಾಂದಱಿಕೆಗಳಂ ಬಿದಿರೆ ಕೆದಱುವ ತುಂತುಱಿಂ (ಕಾದಂಪು. ೨೧೬) ; ಹರಿಭೇದಂಗೆಯ್ಕೆ ಬಿರ್ದೋಪನ ಪಡಿವೊಗದೊಳ್ ತುಂತುಱಿಂ ತೂಱಿ (ಲೀಲಾವ. ೯-೨೦) ; ನೊರೆಯಿಂ ಬಾದ್ದುದದಿಂ ... ತುಂತುಱಿಂ (ಗಿರಿಕ. ೦-೪೭) ; ಕುಡಿಪಾಲವುಪ್ಪಳಿಸಲೊಗೆದ ತುಂತುಱ್ ಜಗಕೆ ಕಡೆಗಾಲವುಂ ಮಾಡಲು (ಚಿಬಪು. ೨೦-೫). 'ತುಂತುರ್ವನಿ' ಪರಾ. **ತುಂತುರು :** ಕಾಂತಿ ವ್ರಜ್ವಲಮಾಗೆ ಪರುಷದ ತುಂತುರೆರಗಿದ ಲೋಹಮೆನೆ (ಗಗಣಾ. ೦೩-೪೨). 'ತುಂತುರುಮಳೆ', 'ತುಂತುರುಹನಿ' ಪರಾ. **ತುಂತುಱು :** ಊಕೆಯ ಮಾಡುವಾತನ ಕೈಯ ಕುಂಚಿಕೆಯ ತುಂತುಱು ನುಂಗಿತ್ತು ನೆಯ್ಮಣ್ಣನ ಕಣ್ಣ ಕಯ್ಯ ಲಳಿಗೆ ನುಂಗಿತ್ತು (ಗುಪ್ತಮಂ. ೧೪೩-೪) ; ಸಿರಿ ಪುಲ್ಲಗ್ರದ ತುಂತುಱಿ (ಸೋಮೇಶ. ೪೦) ; ಅಲರ್ಗಳ ಬಿಱುವಳೆಯೆಸಳ್ಗಳ ಸೋನೆ ಪರಾಗಪರಿಮಳದ ತುಂತುಱುಗಳ್ (ಗಿರಿಕ. ೩-೭೧) ; ತಿಳಿಗೊಳಸುಱುಬು ದೆಱಿಗಳ ತಿವಿಗುಳಿನ ತುಂತಂಱು ತುಷಾರದಲಿ (ಕುವಾ.ಆ. ೧೦-೩) ; ಪೊಳೆವ ತುಂತುಱಿನ ಸೀರ್ವನಿಗಳಿಂ...ಆ ಕಡಲ್ಕಣ್ಗೆಸೆದುದು (ಜೈಮಿಭಾ. ೭-೩) ; ನೆಗೆವ ತುಂತುಱುಗಳಿಂದೇಳ್ವ ಬೆಳ್ನೊರೆಗಳಿಂ (ನಂದಿಮಾ. ೨-೪).

ತುಂತುಱು 'ತುಂತುಱ್' ನೋ.

ತುಂದ (ನಾ). ೧. ಹೊಟ್ಟೆ ; ಉದರ : "ಜಠರಃ, ಉದರಃ, ತುಂದಃ, ಕುಕ್ಷಿಃ, ಗರ್ಭಃ— ಈ ೫ ಹೊಟ್ಟೆ" (ಹಲಾಯು. ೮೫-೩೬೧); ಬೆಂದ ತುಂದವ ಹೊರೆಯಲೆಂದಾಸೆಯಿಂದೆ ಪರಿತಂದು (ಸಿದ್ಧೇಪು. ೨೨-೦೭೩) ; ಗಿರಿವೈರಿ ನನ್ನ ತಂದೆಯ ಕೊಂದ ಕೊಲೆಯನತಿಹರನ ತುಂದವ ಪೊಕ್ಕರೇ ಬಿಡುವೆನೇ ಯೆಂದು ಕರಶಾಖೆಯಿಂದೆ ವಿಘಾಸೆಯ ತಿರ್ದಿಕೊಳುತೆ (ಪ್ರಭುಪು. ೬-೩೯). ೨. ಬೊಜ್ಜು ಹೊಟ್ಟೆ ; ಡೊಳ್ಳುಹೊಟ್ಟೆ. [ಸಂ.]

ತುಂದವಡೆ (ಕ್ರಿ). ಗರ್ಭಸ್ಥವಾಗಂ ; ಹೊಟ್ಟೆಯಂಲ್ಲಿರಂ : ಕಡಲ ದಾಂಟ ಬಂದು ಕೊಱಡನೆಡಹಿ ಬಿದ್ದನಂತೆ ತುಂದವಡೆದು ಬಳಲಿ ಯೋನಿ ಹಲವಱಿಂದಲೆ (ವೃಷಗೀ. ೩೫). [ತುಂದ + ಪಡೆ$_1$]

ತುಂದಶೂಲೆ (ನಾ). ಹೊಟ್ಟೆನೋವು : ತುಂದಶೂಲೆಯು ಕರ್ಕಳಿಯಲಗ ತಿರಿಚಿದವೊಲಾಗೆ (ಪ್ರಭುಪು. ೩-೮೩). [ತುಂದ + ಶೂಲೆ]

ತುಂದಿ (ನಾ). ದೊಡ್ಡ ಹೊಕ್ಕುಳಂಳ್ಳವನು ; ಉಬ್ಬಿದ ಹೊಕ್ಕುಳುಳ್ಳವನು : "ತುಂದಿಯಂಬವಂ ಬಗುಡಂ" (ಹಲಾಯು. ೧೦೦-೪೫೬).

[ಸಂ. ತುಂದಿನ್]

ತುಂದಿಕ (ನಾ). = ತುಂದಿಲ ೩ : "ತುಂದಿಲಃ, ತುಂದಿಕಃ [ಪಾಠಾಂ. ತುಂದಿಭಃ], ತುಂದೀ, ಬೃಹತ್ಕುಕ್ಷಿಃ, ಪಿಚಂಡಿಲಃ—೫ ದೊಡ್ಡ ಹೊಟ್ಟೆಯುಳ್ಳವನು" (ಸಿದ್ಧಾಂತಿ. ೦೫೭). [ಸಂ.]

ತುಂದಿಭ (ನಾ). = ತುಂದಿಲ.

ತುಂದಿಲ, ತುಂದಿಳ (ಗು). ೧. ದೊಡ್ಡ ಹೊಟ್ಟೆಯುಳ್ಳ. ೨. (ಆಲಂ) ಹೆಚ್ಚಾದ ; ತುಂಬಿದ ; ಅತಿಶಯವಾದ : ಪಟಹ ನಿಸ್ಸಾಣ ಡಿಂಡಿಮ ಗೋಮುಖಿಂಗಳಿಂದ ತುಂದಿಲ ಧ್ವನಿಯುಳ್ಳ ಕರಡೆ ವಿರಣ ಡೋಳ್ಗಳಿಂದ ಲೋಲೈಸುತ್ತ ... ಪಾಡಿದರ್ ಮಂಗಳವನು(ಚತುಪು. ೦-೯-೪೪). (ನಾ). ೩. ದೊಡ್ಡ ಹೊಟ್ಟೆಯುಳ್ಳವನು ; ಡೊಳ್ಳುಹೊಟ್ಟೆಯಂವನು : "ತುಂದಿಲಃ, ತುಂದಿಭಃ, ತುಂದೀ, ಬೃಹತ್ಕುಕ್ಷಿಃ, ಪಿಚಂಡಿಲಃ—೫ ದೊಡ್ಡ ಹೊಟ್ಟೆಯುಳ್ಳವನು" (ಸಿದ್ಧಾಂತಿ. ೦೫೭). ೪. ತುಂಬಿದಂದಂ ; ಪರಿಪೂರ್ಣ : ನನ್ನ ಹೃದಯವಾನಂದತುಂದಿಲವು (ಅರಳು. ೦೯೦-೧೦). 'ಆನಂದ ತುಂದಿಲ' ಪರಾ. ೫. ದೊಡ್ಡ ಹೊಕ್ಕುಳಂಳ್ಳವನಂ. **ತುಂದಿಳ :** ೨. ಚತುರಂಗಬಲಂಬೆರಸಿ...ಬರ್ಪಂತು ಕೂರ್ಚಾಳ ತುಂದಿಳ [ಪಾಠಾಂ. ತುಂದಿಲ, ದೀಕ್ಷಾಳ್] ಜರತ್ಸಾಮಂತಸಂದೋಹಕ್ಕವ್ಪಯಿಸಿ ಶುಭದಿನಮುಹೂರ್ತದೊಳ್ ಪ್ರಯಾಣಭೇರಿಯಂ ಪೊಯಿಸಿ ಪೊಱಮಟ್ಟಾಗಳ್(ಆದಿಪು. ೪-೯೦ವ); ೫. "ಪಿಚಂಡಿಳಃ, ಬೃಹತ್ಕುಕ್ಷಿಃ, ತುಂದಿಳಃ, ಉದರಿಳಃ—ಈ ೪ ಹೊಟ್ಟೆಗಂ" (ಹಲಾಯು. ೯೯-೪೫೪). 'ತುಂಡಿಲ' ಪರಾ. [ಸಂ.]

ತುಂದಿಲೋದರ (ಗು). ೧. ಬೊಜ್ಜುಳ್ಳ : ತುಂದಿಲೋದರ ಭೈರವಾಕಾರ ದಾನವಂ ಬಂದು (ವಂಕಾಶಾ. ೦-೦೨-೨೨). (ನಾ). ೨. ಬೊಜ್ಜುಹೊಟ್ಟೆಯುಳ್ಳವನು ; ದಪ್ಪವಾದ ಹೊಟ್ಟೆಯವನು. [ತುಂದಿಲ + ಉದರ

ತುಂದಿಳ 'ತುಂದಿಲ' ನೋ.

ತುಂಬ$_1$ (ನಾ). ಹೆಚ್ಚಳ ; ಅತಿಶಯ ; ಸಮೃದ್ಧಿ : ಬಳಿಯ ಕಂಜದ ಬಣ್ಣ ಮುಮೊಂದಳುಂಬಮಂ ತುಂಬಮುಮಾಗೆ ತಿಂಬಿದುದು (ಲೀಲಾವ.೫-೬೨); ಪೊಗಟ್ಟಿಗಳುಂಬಮುಂ ತುಂಬಮುಮಾದ ಮಜ್ಜನಮಂಡಪದ ತೋರಣ ದ್ವಾರೋಪಕಂಠದೊಳ್ ನಿಂದು (ಆನಂಪು. ೫-೫೩ ವ). [ತುಂಬು$_1$+–ಅ$_6$]

ತುಂಬ$_2$, ತುಂಬಾ (ಅ). ಬಹಳವಾಗಿ ; ಹೆಚ್ಚಾಗಿ ; ಅಧಿಕವಾಗಿ ; ಸಂಪೂರ್ಣವಾಗಿ : ತೋಳುಗಳಿಗೆ ತೋಳಬಂದಿ ಕೆನ್ನೆ ತುಂಬ ಮುತ್ತು (ನಾದಲೀ. ೫೯-೦೬) ; ಪೆಟ್ಟಿಗೆ ತುಂಬ ಹಣವಿದ್ದರೂ ಕಟ್ಟಿಗೆ ಹೊರ್ತು ಗತಿಯಿಲ್ಲ (ಗಾಡ). **ತುಂಬಾ :** ನಿನಗೆ ಹಿತವಾಗಬೇಕೆಂದು ತುಂಬಾ ಅವೇಕ್ಷಿಸುತ್ತೇನೆ (ಮುಂಬಯಿ.. ೪-೩೯) ; ನನಗೆ ತುಂಬಾ ಸಂತೋಷವಾಗಿದೆ (ರಾಯಳ. ೮೧) : ಬಾಯಿ ತುಂಬಾ ಮಾತು, ಹೊಟ್ಟೆ ತುಂಬಾ ಊಟ (ಗಾಡ) ೧ವತ್ತು ಸಾರು ತುಂಬಾ ಚೆನ್ನಾಗಿತ್ತು (ರೂಢಿ).

ತುಂತುಂಬಾ (ದ್ವಿರುಕ್ತಿ) : ದೇವರು ನಿಮಗೆ ಏನನ್ನು ಕೊಡದಿದ್ದರೂ ಈ ವಿನಯಸಂಪತ್ತಿಯನ್ನು ತುಂತುಂಬಾ ಕೊಟ್ಟಿರುವನು (ಜಯಂತ. ೧೪).

[< ತುಂಬು$_1$]

ತುಂಬ$_3$ (ನಾ). ಕಂಂಬಳಕಾಯಿ : "ತುಂಬ = ಕರೇಕಂಬಳಕಾಯಿ" (ಗಂಗಾಮು. ೦೫೪). [ಸಂ.]

ತುಂಬಕ (ನಾ). ೧. = ತುಂಬಕಿ. ೨. ದೋಷಪೂರ್ಣವಾಗಿ ಹಾಡುವವನಂ : ತುಂಭ[ಬ]ಕ –ಗಲ್ಲ ಉಬ್ಬಿಸಿ ಹಾಡುವವನು (ಸಂಗೀಪಾಂ.೧೦೩). [ಸಂ.]

ತುಂಬಕಿ (ನಾ). [ಸಂಗೀತ] ಹಾಡಂವಾಗ ಸಂಭವಿಸಬಹುದಾದ ಒಂದು ದೋಷ ; ಸೋರೆಬುರುಡೆಯಂತೆ ಕೆನ್ನೆಯನ್ನು ಉಬ್ಬಿಸಿಕೊಂಡಂ ಹಾಡುವುದಂ ; ಘಾತ್ಕಾರದೋಷ : ಅಕಬಳಮನವ್ಯವಸ್ಥಿತಮಕಾಕ ಸಂದಿಷ್ಟ ತುಂಬಕೀರಹಿತಂ ಗಾಯಕಗಣಕಂಠರವಂ ಶ್ರಾವಕಮಧುರಸ್ನಿಗ್ಧ ವೆಸೆದುದಾಸ್ಥಾಯಿಕೆಯೊಳ್ (ಆದಿಪು. ೫-೦೦). [ಸಂ. ತುಂಬಕೀ]

ತುಂಬಕುಂಟೆ (ನಾ). ಒಂದು ಪ್ರದೇಶದ ಹೆಸರು : ತೆಂಙ್ಕಣದೆಸೆ ಗುಡ್ಡೆಗಲ್ಲು ತುಮ್ಬಕುಣ್ಟೆ ರೇವುಕುಣ್ಟೆ ಪಾಮ್ಬುಳಕುಣ್ಟೆ (ಎಕ. XII, ಶಿರಾ. ೩೮-೩೫ ; 878). [ತುಂಬ್ಯ + ಕುಂಟ್ಯೆ]

ತುಂಬಡ (ನಾ). ಒಂದು ಬಗೆಯ ವಿಷ (?) : ಚೋಳ ತುಂಬಡ ಕನಕ ಮಿಹಿರ ತಪನ ಕ್ಷೇಡ ತಾಳುಜಂತ್ರಿಕಪತನಫಲಕುಟಜ ಪ್ರಕ್ಷಲಕಧೂಳ ಮಾರಾಷ್ಟ್ರ ನಂಜಂ ತರಿಸಿ ಹಿಂಡಿದಂ ಭಾಳನೇತ್ರಂ ಬಸವನು (ಲಿಂಗಪು. ೩೩-೦೦). [?]

ತುಂಬಡವಿ (ನಾ). ತುಂಬಿದ ಕಾಡು ; ದಟ್ಟವಾದ ಕಾಡು : ತುಂಬಡವಿ ಕಳಕಳಿಸಿ ಮೆರೆಯುತಿದೆ ದೀವಿಗೆಯೊಡಲಂ ಮುಚ್ಚಿ ಸಿಂಗರಿಸಿ (ಶ್ರೀರಾಮಾ. ೧೬೬ ೩೭೮). [ತುಂಬ್ಯು + ಅಡವಿ]

ತುಂಬಡಿ 'ತುಮ್ಮಡಿ' ನೋ.

ತುಂಬರ (ನಾ). = ತುಂಬುರು$_2$: "ತಿಂದುಕಃ ...ತುಂಬರಗಿಡ" (ಸಿದ್ಧಾಂತಿ. ೦೦೬). [ಸಂ.]

ತುಂಬಾ 'ತುಂಬ್ಯ' ನೋ.

ತುಂಬಿ$_1$, ತುಂಬೆ$_1$, ದುಂಬಿ, ದುಂಬೆ$_1$ (ನಾ). ಭ್ರಮರ ; ಅಳಿ ; ಮಧುಕರ : "ಮಧುಕರಃ, ಮಧುಪಃ, ಮಧುವ್ರತಃ, ಶಿಳೀಮುಖಃ, ಭ್ರಮರ, ಭೃಂಗಃ . . . ದ್ವಿರೇಫಃ— ಈ ೧೩ ತುಂಬಿ" (ಹಲಾಯು. ೪೩-೧೦೦) ; ಕಂಪಿಂಗೆಱಗಿದ ತುಂಬಿಯ ಸಮೂಹಮಂ ಮೇಗೆ ಸುಱಿವುದಂ ಕಂಡು (ವಡ್ಡಾರಾ. ೩೦-೫) ; ಮದಗಜಗಂಡಸ್ಥಳಂಗಳೊಳೆಱಗಿ ಮೊರೆವ ತುಂಬಿಯ ಬಂಬಲ್ಗಳೆ ವಿಮುಖೀಭೂತಂಗಳಾದುವು (ಪಂಪಭಾ. ೪-೪೯ ವ) ; ನಿಮ್ಮ ಚರಣಕಮಲದಲಾನು ತುಂಬಿ (ಬಸವ. ೪೯೨) ; ಕಾಳಕೂಟದ ಕಮಲ ತುಂಬಿಗೆ ಪಥ್ಯವಲ್ಲೆಂದ (ಕುಷ್ಠಾದ್ರೋ. ೯-೪೨) ; ಅಲರ ಪರಿಮಳದೆಡೆಗೆ ತುಂಬಿಗಳೊಲಿದು ಪೋಪಂದದಲಿ ಲೋಕದೊಳಲರು ವಿಕಸಿತವಾಗಿ ಹೋಹುದೇ ತುಂಬಿಯಿದ್ದೆಡೆಗೆ (ನಳಚ. ೩-೩೨) ; ಕರಿಕಪೋಲದ ಮದ ಸೊಗಡೆಂದು ತುಂಬಿಯ ನೆರವಿಗೆ ಪರಿಮಳವೀವ ಅರಳುಮಲ್ಲಿಗೆಗೊಂಚಲೆನೆ ಗಜಕರ್ಣದೆ ಮೆಱೆದುವು ಮುತ್ತಿನ ಕುಚ್ಚು (ಕಂನವಿ. ೨೩-೯೯). **ತುಂಬೆ$_1$** : ಸರಸವಾದ ಗಾನವಂ ಮಾಡುತ್ತಲಿರುವ ತುಂಬೆಗಳಿಂ ತುಂಬಿ (ಸೌಗಂಧಿ. ೩೩೮-೮) ; ನಿಂಬೆಗಿಂ ಹುಳಿಯಿಲ್ಲ ತುಂಬೆಗಿಂ ಕರಿದಿಲ್ಲ ನಂಬಿಗೆಯಿಂದಧಿಕ ಗುಣವಿಲ್ಲ (ಸರ್ವಜ್ಞ. ೨೩೫) ; ಮರಿದುಂಬೆ ಚೊಕ್ಕ ಕೆಂದಾವರೆಗೆ ಕವಿವಂತೆ ಸರಳು ಸರ್ವಾಂಗಕಂ ಪೊಕ್ಕಿರ್ದುದು (ತುರಂಗ. ೫೦-೩೩). **ದುಂಬಿ** : "ಭ್ರಮರ—ದುಂಬಿ, ಗರುಗ" (ಓಷಧಿ. ೧೦೦) ; ಅಲರ್ಗೊಂಚಲ್ಗೆಱ ಪುಂಚ ದುಂಬಿಗಳ ಶುಂಭದ್ಗಾನದಿಂ ... ಎಸೆದುದಾಮ್ರವ್ರಾತಮಾ ಚೈತ್ರದೊಳ್ (ಉದ್ಯಟ. ೯-೮) ; ಮಲ್ಲಿಗೆಯಲರ್ದಂಡವಿಡಿಯೆ ಬಾದೆಱಗುವ ಜಿಲ್ಲಿದುಂಬಿಗೆ ಬೆರ್ಚಿ ನಿಂದು ಸೊಲ್ಲಿಪ ಪೂಮಾಲೆಗಾರ್ತಿ (ಪೋಹತ. ೩-೦೭). **ದುಂಬೆ$_1$** : "ಮಧುವ್ರತಃ, ಮಧುಕರಃ, ... ಬಂಭರಃ ೧೫ ತುಂಬಿಯ ಹೆಸರುಗಳು. ತುಂಬೆಹುಳ, ದುಂಬೆ, ಕಚ್ಚುವ ಜೀರಜಿಂಬೆ, ಭೃಂಗ" (ಸಿದ್ಧಾಂತಿ. ೦೪೨).

[ದೇ.॥ ತಮಿ. ತುಮ್ಬಿ ; ಮಲ. ತುಮ್ಬಿ ; ಕೊಡ. ತುಳು. ತುಂಬಿ ; ತೆಲು. ತುಮ್ಮೆದ ; ಪರ್ಜಿ. ದುಂಬಿ]

ತುಂಬಿ$_2$ 'ತುಂಬ್ಯೆ' ನೋ.

ತುಂಬಿ$_3$ (ನಾ). ೧. ಉದ್ದನೆಯ ಸೋರೆಕಾಯಿ ; ಸಿಹಿಸೋರೆ : "ಅಲಾಬು ತುಂಬೀನಾಮಂ" (ವಸ್ತುಕೋ. ೩೬-೨೦). ೨. ಒಂದು ಬಗೆಯ ಗಿಡ ; ಕೋಕಿಲಾಕ್ಷ. ೩. ತಂಬೂರಿ ಅಥವಾ ವೀಣೆಯ ಬುರುಡೆ : ಚಂದ್ರಬಿಂಬಮಂ ತುಂಬಿ ಮಾಡಿ ಬಿಸತಂತುಸಿಂಜಿನಿಯಂ ತಂತಿ ಮಾಡಿ ಇಕ್ಷುಚಾಪದಂಡಮಂ ದಂಡಿಗೆ ಮಾಡಿ . . . ಬೀಣೆಯಂ ಬಾಜಿಸುವ ರತಿಯಂತಿರ್ದಳಂ . . . ಕಂಡು (ಅರ್ಧನೇ. ೬-೦೬ ವ).

[ಸಂ. ತುಂಬಿ, ತುಂಬೀ./ತಮಿ. ತುಮ್ಬಿ ; ಮಲ. ತುಮ್ಬ ; ತೆಲು. ತುಂಬಿ, ತುಂಬು, ತುಮ್ಮಿ]

ತುಂಬಿ$_4$ (ನಾ). ಒಂದು ಬಗೆಯ ಆಭರಣ : ಕಿವಿಯೊಳೊಪ್ಪುವ ಚೌಕುಳಿ ತುಂಬಿಯ ತಾಲಿ ತವೆ ಗಂಟೆ ಸರಪಣಿಯಿಂದ ಸುವಿಲಾಸದೆ ಚಿತ್ರವಿಡಿದೈತಹನಾರೆ (ಕಂನವಿ. ೨೫-೭೬). 'ಚಳತುಂಬು' ಹೋ. [?]

ತುಂಬಿ$_5$ (ನಾ). (?) : "ಅಲಸ್ವಜೆ—ನೆಲಗುಳ್ಳ, ಅಲಮೂಲ—ತುಂಬಿ, ಅಲ್ಪಫಲ -ಕಿರುಗುಳ್ಳ, ನಾಯಿನೇರಿಲು" (ಅಕಾನಿ. ೨-೦೬). [?]

ತುಂಬಿಕೆ (ನಾ). ತುಂಬಿಕೊಂಡಿರುವುದು ; ಸಂಗ್ರಹಿಸಿರುವುದು : ತುಂಬಿಕೆಯೊಳಿಂಬುಗೊಂಡ ತುಂಬುನೀರಂ ಪೂತ್ಕರಿಸಿದವುವೆಂಬಂತಿರೆ ಎಡೆವಿಡದೆ ಬಲ್ಸರಿ ಸುರಿಯೆ ಮಟೆಗಾಲಂ ಚೆಲ್ಪಾಯ್ತು (ರಾಮಾಶ್ವ. ೩-೦೦).

[ತುಂಬ್ಯು + – ಇಕೆ]

ತುಂಬಿಗುರುಳ್, ತುಂಬಿಗುರುಳು, ದುಂಬಿಗುರುಳು (ನಾ). ತುಂಬಿಯಂತೆ ಕಪ್ಪಾದ ಕೂದಲು ; ಕಪ್ಪುಗೂದಲು: ಮೆಱೆಹರ್ ... ನಿಡುಗುರುಳುರುಳಿಗುರುಳ್ ತುಂಬಿಗುರುಳ ಗೋಪಸ್ತ್ರೀಯರ್ (ಜಗವಿ. ೪-೦೨೫) ; ತುಱುಗಿ ತುಂಬಿಗುರುಳ ಬಂಬಲಿದೆ ಕಪೋಲರಂಗದೊಳ್ (ಲೀಲಾವ. ೭-೨೩) ; ಮಧ್ಯಪದಲೋಪಕ್ಕೆ ... ತೊಂಗಲ್ಗುರುಳ್, ತುಂಬಿಗುರುಳ್ (ತಮದ. ೦೭೮ ಪ್ರಯೋ) ; ತುಂಬಿಗುರುಳ ತುಱುಬಿಕ್ಕಿ ದಾದಿಯರು ನಿತಂಬಿನಿಯೊಡನೆ ಪೇಳಿದರು (ಪೋಹತ. ೯-೦೬) ; ತುಂಬಿಗುರುಳಬಲೆ ಪೇಳು (ಚಿಬಪು. ೦೦-೫೫). **ತುಂಬಿಗುರುಳು** : ತುಂಬುದಿಂಗಳ ಮೊಗ ತುಱುಗೆವೆಯಲರ್ಗಣ್ ತುಂಬಿಗುರುಳು (ಶ್ರೀಪಾಲ. ೩-೨೪). **ದುಂಬಿಗುರುಳು** : ಶ್ರೀಮಂತೆ ಸೋಫಿಯಾವ್ಯಾಸಿಲ್ಯೇನಾ ದುಂಬಿಗುರುಳ . . . ಉದ್ದವಾದ ತೆಳ್ಳನೆಯ ಹೆಂಗಸು (ಪುನರು. ೧೨೨). [ತುಂಬಿ$_1$ + ಕುರುಳ್$_1$]

ತುಂಬಿಗುರುಳು 'ತುಂಬಿಗುರುಳ್' ನೋ.

ತುಂಬಿಗುರುಳೆ (ನಾ). ತುಂಬಿಯಂತೆ ಕಪ್ಪಾದ ಕೂದಲುಳ್ಳವಳು ; ನೀಲಕೇಶಿ ; ಸುಂದರಿ : ತುಂಬಿಗುರುಳೆಯರೇಕೆ ಬಾರರೆಮ್ಮಂ ಬೇಗ ವಂಬಿಕೇಶಂಗೊಯ್ವೊಡೆಂದಿದು ಬಯಸಿ ಬಾಯಂ ಬಿಟ್ಟುಕೊಂಡಿರ್ಪವೋಲ್ ಬಿರಿದ ತಾವರೆಗಳಂ . . . ಕೊಂಡೊಯ್ವುದು (ಪದ್ಮರಾ. ೮-೫೭).

[ತುಂಬಿಗುರುಳ್ + – ಎ$_2$]

ತುಂಬಿತುರುಬು (ನಾ). ತುಂಬಿಯಂತೆ ಕಪ್ಪಾದ ತುರುಬು, – ಗಂಟು : ತಂದೇನಿ ನಿನಗೆಂದ ತುಂಬಿತುರುಬಿನವಳ ಕಾಮಕಸ್ತೂರಿಯ ತೆನಿಯೊಂದ (ಮೂರ್ತಿಕಾ. ೩೬-೨). [ತುಂಬಿ$_1$ + ತುರುಬ್ಯು (< ತುಱುಂಬ್ಯು)]

ತುಂಬಿಬಾಳು (ನಾ). ತುಂಬಿಯಂತಿರುವ ಜೀವನ ; ದುಂಬಿಯಂತೆ ಅನೇಕ ಕಡೆಗಳಿಂದ ರಸವನ್ನು ಸಂಗ್ರಹಿಸುವುದು : ಈ ತುಂಬಿಬಾಳು ಇರುವ ತನಕ ತುಂತುಂಬಿ ಕುಡಿಯಬೇಕು (ಮುಕ್ತಕಂ. ೨೯-೮).

[ತುಂಬಿ$_1$ + ಬಾಳ್ಯು (<ಬಾಟ್ಯ್$_2$)]

ತುಂಬಿಮೊರೆ (ನಾ). ತುಂಬಿಯ ಧ್ವನಿ ; ಗುಂಜಾರವ : ತುಂಬಿಮೊರೆ ತುಂಬಿ ಝೇಂಕರಿಸಿತೋಂಕಾರಮಂ (ಶ್ರೀರಾಮಾ. ೩೭-೨೫೭).

[ತುಂಬಿ$_1$ + ಮೊರೆ$_2$]

ತುಂಬಿವಾಡು (ನಾ). = ತುಂಬಿಮೊರೆ : ತುಂಬಿವಾಡ ನೊಲವಿಂ ಕೇಳ್ವಂದದಿಂ ನಿಂದು (ಕಬ್ಬಿಕಾ. ೬೯). [ತುಂಬಿ$_1$ + ಪಾಡ್ಯು]

ತುಂಬಿವಿಂಡು, ತುಂಬೆವಿಂಡು (ನಾ). ದುಂಬಿಗಳ ಗುಂಪು ; ಅಳಿಗಳ ತಂಡ ; ಭ್ರಮರಸಮೂಹ : ನೋಡುವ ಪಾರ್ವತಿ ಮುದಮಂ ಕೂಡುತ್ತಿರೆ ತುಂಬಿವಿಂಡು ಪಾಡುತ್ತಿರೆ (ಗಿರಿಕ. ೪-೩೨) ; ತುಂಬಿವಿಂಡಿನಂತೆ ಪಾಡಿ ಜಕ್ಕವಕ್ಕಿಯಂತೆ ಕೂಡಿ (ಕಬ್ಬಿಕಾ. ೩೪೪) ; ತಾವರೆಗೆ ತುಂಬಿವಿಂಡೆಱಗಿದುದು ಕೊರಗಿದುವು ನೈದಿಲೆಗಳು (ಚೈಮಿಭಾ. ೨೬-೨೪) ; ಮದಂಗಳಿಗಂಗೈಸುವ ತುಂಬಿವಿಂಡ ಹಿಂಗದೆ ಕರ್ಣತಾಳದಲಿ ಸೋವುತ

ಮಾತಂಗ ನೀರ್ಗೈದುವುವು (ಕಂನವಿ.೨-೫೬). ತುಂಬೆವಿಂಡು : ಝೇಂಕರಿಸಿ ತುಂಬೆವಿಂಡೆಯ್ದು ಮುಸುಱಲು (ವೀಶ್ಯಪು.೩-೧೬-೬).

[ತುಂಬಿ$_1$ + ಪಿಂಡು$_2$]

ತುಂಬಿವೆಣ್ (ನಾ). ಹೆಣ್ಣುದುಂಬಿ ; ಭ್ರಮರಿ : (ಕಿ).

[ತುಂಬಿ$_1$ + ವೆಣ್]

ತುಂಬಿವೆದೆ (ನಾ). ದುಂಬಿಗಳಿಂದಾದ ಹೆದೆ ; (ಮನ್ಮಥನ ಬಿಲ್ಲಿನ) ಹೆದೆ ; P ಮನ್ಮಥನಿಗೆ ಕಬ್ಬಿನ ಬಿಲ್ಲು, ಅದಕ್ಕೆ ದುಂಬಿಗಳ ಸಾಲೇ ಹೆದೆ ಎಂಬುದು ಕವಿಸಮಯ : ಕಬ್ಬುವಿಲ್ತುಂಬಿವೆದೆ ಪೂಸರ ಲ್ಪೂಣ್ದಿಸಲ್ ನಿಬ್ಬರಮಿದೆಂದು ಮದನಂ...ಸಾಹಸದೊಳಳವಡಿಸಿಕೊಂಡು (ಜೈಮಿಭಾ. ೬-೧೭). [ತುಂಬಿ$_1$ + ಪೆದೆ]

ತುಂಬಿಸು (ಕ್ರಿ). ೧. ತುಂಬುವಂತೆ ಮಾಡು; ಭರ್ತಿಮಾಡು : ಭಕ್ತಪ್ರತತಿಗಳ ಚರಣಂಗಳಂ ತೊಳೆದು ಅವರ ತತ್ಪಾದಾಂಬುಗಳನಭಿನವಕಳಶವಿಸರದೊಳು ತುಂಬಿಸಿ (ಬಸಪು. ೪೬-೫೩); ಸುಗುಣೆ ಕೇಳ್ ತಾಟಂಕ ಸೂಡಿದ ತವ ಕಿವಿಗೊಳನ ಕೋಡಿಬೀಳ್ವಂತೆ ತುಂಬಿಸುವೆನು ಕಡುರುಚಿಮಾಡಿ ಮೋಹನ ತರಂಗಿಣಿಯ (ಮೋಹತ.೭-೨); ಅಂಬರವನಂಬಿನಿಂ ತುಂಬಿಸಿದರು (ಜೈಮಿಭಾ. ೪-೨೦); ಮುಖದ ಮೇಲೆ ದೀಪದ ಬೆಳಕು ಬಿದ್ದು ಕಾಂತಿಯಿಂದ ತುಂಬಿಸಿತ್ತು (ಜೆಂಗಾಳ್ವ. ೧೪೭). ೨. ಪರಿಪೂರ್ಣವಾಗುವಂತೆ ಮಾಡು ; ಸಫಲಗೊಳಿಸು : ಕೃಪೆಯನು ಬಿಂಬಿಸಿ, ಬಾಳನು ತುಂಬಿಸಿ, ತೋಟದೊಳರಳಿದ ಹೂ ತಾನಾದುದು ಶ್ರೀಮದ್‌ಭಗವದ್ಗೀತೆ (ಅನಿಕೇ. ೩೨-೦೪). ೩. ಹೋದುದನ್ನು ಸರಿಪಡಿಸಿಕೊಳ್ಳು ; ನಷ್ಟವನ್ನು ಸರಿಗಟ್ಟು : ಆದರೇನು ? ನಾವು ವೆಚ್ಚ ತುಂಬಿಸಿಕೊಳ್ಳುತ್ತೇವೆ (ಸ್ಮೃತಿಚಿ. ೨೦೫). ೪. ಹಸು, ಎಮ್ಮೆ ಮೊದಲಾದ ಹೆಣ್ಣುಪ್ರಾಣಿಗಳಿಗೆ ಗರ್ಭಧಾರಣೆ ಮಾಡಿಸು ; ಹೋರಿಕೊಡಿಸು ; ಗೂಳಿಹಾರಿಸು ; ಕಟ್ಟಿಸು; ಜೋಡಿಯಾಗಿಸು (ಕರಾ) : ಈ ಹಿಂಡಿಯು ಬಹಳ ಉಷ್ಣವಿರುವುದರಿಂದ ಗಬ್ಬಿದ್ದ ದನಗಳಿಗೆ ಮತ್ತು ಅದೇ ತುಂಬಿಸಿದ ದನಗಳಿಗೆ ಕೊಡುವುದು ಒಳ್ಳೆಯದಲ್ಲ (ಗೋಗ್ರಾಸ. ೮೦). ೫. (ಆಲಂ) ಹೋಗಲಾಡಿಸು ; ಕಳೆ ; ನಿವಾರಿಸು : ಸತಿಯ ದುಗುಡವೆನಿಪ್ಪ ಕತ್ತಲೆಯಾ ತುಂಬಿಸುವ ಮಣಿಜ್ಯೋತಿ ಬಂದಪುದೆಂಬವೊಲು ಮಣಿಭೂಷಣದ್ಯುತಿ ಮುಂಬರಿವುತಿರೆ ಬಂದನಾಕೆಯ ಹರಣ ಬಂದಂತೆ (ಸಾಳ್ವಭಾ. ೩-೦೬). [ತುಂಬು$_2$ + – ಇಸು$_3$]

ತುಂಬೀಫಲ (ನಾ). = ತುಂಬಿ$_3$ ೧ : ಮಣ್ಣೊಳ್ ಮೆತ್ತಿದ ತುಂಬೀಫಲಂ ನೀರೊಳಿಕ್ಕಿದಾಗಳಟ್ಟು ಅಡಿಯೊಳಿರ್ದ ಮಣ್ ಕರಗೆ (ಜೀವಸಂ. ೦೮೮-೯ ವ).

[ಸಂ.]

ತುಂಬು$_1$ (ಕ್ರಿ). ೧. ಭರ್ತಿಯಾಗು; ಪೂರ್ಣವಾಗು: "ತುಂಬು-ಪೂರಣೇ, ವೃಂತ (ಹೂವಿನ ಕಾವು), ಜಲಪ್ರಣಾಲ್ಯೋಃ (ತೂಬು)" (ಕಮಧಾ); ಗಗನದ ಮೇಘಂಗಳು ಸುರಿದಲ್ಲಿ ಒಂದು ಹಿರಿಯ ಕೆಱೆ ತುಂಬಿತ್ತು (ಅವಜಂ. ೦೦೯-೪೯೪) ; ಎಲ್ಲ ಪುರಾತನರು ಕರೆದು ಭಕ್ತಿಭಿಕ್ಷೆಯನಿಕ್ಕಿದಡೆ ಎನ್ನ ಪಾತ್ರೆ ತುಂಬಿತ್ತು (ಬಸವ. ೩೪೯) ; ಭಾಂಡ ತುಂಬಿತು ಮತ್ತೆ (ಕುಪ್ಯಾಅ. ಓರಿಇ. ೧೭-೪೦) ; ಮಂಜು ಸುರಿಯಲೊಡನೆ ಕೆಱೆ ತುಂಬುವುದೆ (ನಳಚ. ೨-೦೯). ೨. ಆವರಿಸಲ್ಪಡು ; ಆವೃತವಾಗು : ಎಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಲ್ದು ತುಂಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್ (ಪಂಪಭಾ. ೦-೮) ; ಮನೆಯೊಳಗೆ ರಜ ತುಂಬಿ ತನುವಿನೊಳಗೆ ಹುಸಿ ತುಂಬಿ (ಬಸವ. ೯೭). ೩. ಹರಡು ; ವ್ಯಾಪಿಸು : ವರಕಪೀಂದ್ರನ ರಭಸವೇ ತುಂಬಿತು ಜಗತ್ರಯವ (ಕುಪ್ಯಾಬ್ರೋ. ೦೨-೪) ; ಸವೆಯದ ಕರ್ಗತ್ತಲೆಯ ತುಂಬಿದಳು ಹುಣ್ಣವೆಯ ಬೆಳ್ದಿಂಗಳ ಕಿಡಿಸಿ (ಮೋಹತ. ೨೯-೮). ೪. ಕಾಲ ಕಳೆದುಹೋಗು ; ಅವಧಿಯು ಮುಗಿ ; ಗಡುವು ಪೂರ್ಣವಾಗು,—ಪೂರೈಸು : ಪಾಂಡವರು ಬಂಧು ದ್ರೋಹಿಗಳು ತಮ್ಮವಧಿ ತುಂಬಲು ಕೇಡ ತಹರು (ಕುಪ್ಯಾಅ. ೦೭-೦೬) ತುಂಬಿದವು ನವಮಾಸ (ತೊರಣಾ. ೦-೮-೪); ತುಂಬಲು ನವಮಾಸ ಶುಭವಾದ ನರಸಿಂಹಗಿಂಬಾದ ವರಜಯಂತಿಯಲಿ ಕುಂಭಿನಿಗಧಿಕ ಶೂರನ ಕುವರನ ಗುರುವಂಬೆ ಪಡೆದಳು (ಕಂನವಿ. ೪-೬೨). ೫. ಸೂಸು ; ತುಳುಕು: ಅಂಬೆ ಕಣ್ಣ ನೀರಂ ತುಂಬೆ (ಪಂಪಭಾ. ೧-೭೬ ವ) ; ಕಂಗಳು ತುಂಬಿದ ಬಳಿಕ ನೋಡಲಿಲ್ಲ (ಬಸವ. ೮೫೨); ಕೊಂಡು ಕೊನೆವುತ್ತಿರ್ಪ ತಾಯ್ತಂದೆಗಳಂ ಕಂಡು ಕಂಡ ನೆರವಿಯೆಲ್ಲಂ ಘುಳುಘುಳನೆ ಕಣ್ಣ ನೀರಂ ತುಂಬುತ್ತಿರಲ್ (ನಂಬಿರ. ೨-೬೧); ತುಂಬಿದನು ಕಂಬನಿಯನಾತ್ಮನಿತಂಬಿನಿಯ ಮೊಗ ನೋಡಿ (ತೊರಣಾ. ೨-೪-೦೮). ೬. ಒದಗಿಸು ; ಉಂಟುಮಾಡು : ಅಂಬುಜನೇತ್ರೆಯ ಪೊಂಬಾಳೆದೊಡೆಗಳು ತುಂಬಿದುವು ಕಣ್ಗೆ ಕೌತುಕವ (ಕಂನವಿ. ೯-೨೦). ೭. ದಪ್ಪವಾಗು ; ಪುಷ್ಟವಾಗು : ಮಗು ಮೈಕೈ ತುಂಬಿಕೊಂಡು ಚೆನ್ನಾಗಿದೆ (ರೂಢಿ). ೮. ಗರ್ಭ ಕೂಡು ; ಗರ್ಭ ನಿಲ್ಲು: ಪುಳುಂಬಮವನೆಸೆ ತಾಗೆ ಗಬ್ಬವು ತುಂಬಿದೆರಲೆಯನೊಡಲ ಶಿಶುವುಚ್ಚಳಿಸಿ ಬಿರ್ದು ನಿಲೆ (ಸಾಳ್ವಭಾ. ೫-೨೮). ೯. (ದೈವ, ಭೂತಗಳ ವಿಷಯದಲ್ಲಿ) ಆವೇಶ ಉಂಟಾಗು : ಅವನ ಮೇಲೆ ದೇವರು ತುಂಬಿ ಬಂದಿದೆ (ರೂಢಿ). ೧೦. ರಚಿಸು ; ಮಾಡು ; ಹಾಕು : ಕಂಭಕ್ಕಿದಿರಾಗಿ ತುಂಬಿರಿ ಹಸೆಗೊಳ ಕಂಭದಲ್ಲಾವೆ ಅರಗಿಣಿ (ಹಳ್ಳಿಬಾ. ೫೮). ೧೧. ಹಣ ಪಾವತಿ ಮಾಡು ; ಹಣ ಕಟ್ಟು: ಸಾಲದ ಹಣ ತುಂಬಬೇಕೆಂದು ನೋಟೀಸು ಬಂದಿದೆ (ರೂಢಿ). ೧೨. (ಆಲಂ) ನಂದಿಸು ; ಆರಿಸು ; ನಿವಾರಿಸು : ಚಾಪೇಯ ಹಾಸೀತೆ ದೀಪವ ತುಂಬೈತೆ ನೀಲವೆ ತೋಳಾಗೆ ಮಲಗೈತೆ (ನಾಪದ. ೯೫) ; ಒಬ್ಬರ ಕೊರತೆಯನೊಬ್ಬರು ತುಂಬಿದರಿಬ್ಬರಿಗೂ ಸುಖವುಂಟು (ಇಂಜಾಪ. ೨೦೦-೯೪). ೧೩. (ಆಲಂ) ಮುಗಿದುಹೋಗು : ಕುಂಕುಮ ತುಂಬಿದೆ. ಅಂಗಡಿಯಿಂದ ತರಬೇಕು (ರೂಢಿ). 'ಹೆಚ್ಚು$_1$' ಪರಾ.

ತುಂಬಿಕೊಡು=ಕೊರತೆಯನ್ನು ಹೋಗಲಾಡಿಸು : ತಮ್ಮಿಂದಾದ ನಷ್ಟವನ್ನು ತುಂಬಿಕೊಡಲು ಅವರು ತಯಾರಿದ್ದರು (ರೂಢಿ). ತುಂಬಿಗರೆ= (ತುಂಬಿಯಂತೆ ಇಂಪಾಗಿ)ಧ್ವನಿಮಾಡು: ಪಂಬಲಿಸುತ ಪಾಲ್ಮೊಲೆವೂಡು ತೆಳೆವೆಟ್ಟು ಚುಂಬಿಸುತವೆ ಮೊಗ ನೋಡಿ ತುಂಬಿಗರೆವ ತೊಟ್ಟಿಲ ಹಸುಳೆಯ ನೆತ್ತದಂಬುಜಮುಖಿಯ ಬಾಳೇನೊ (ಶ್ರೀಪಾಲ. ೨-೩೫) ; ಭರದಿಂದಂಬೆ ಗಾಲಿಡುತೊಯ್ಯನೆ ತುಂಬಿಗರೆವುತ ದಾದಿಯ ಕೈಯ ಬೆರಳ ಪಿಡಿದು ತಳರ್ನಡೆಯನು ನಡೆವೆನ್ನ ತರುಣನನೆಂದಿಗೀಕ್ಷಿಪೆನೊ (ದಂಪ್ರಸಾಂ. ೩-೦೦೬). ತುಂಬಿಡು=೧. ಭರ್ತಿಮಾಡಿ ಇಡು : ಮೊನ್ನೆ ಬೇಸಿಗೆಯಲ್ಲಿ ಲಟ್ಟಿಸಿದ ಹಪ್ಪಳ, ಇಟ್ಟ ಸಂಡಿಗೆ, ತುಂಬಿಟ್ಟ ಉಪ್ಪಿನಕಾಯಿ ಭರಣಿ ಎಲ್ಲ ತೆರೆದಿಡು (ನೆಲಮು. ೦೬-೮) ; ಹಾಲ್ಜೇನನ್ನೇ ತನ್ನ ಮೈಯಲ್ಲಿ ತುಂಬಿಟ್ಟುಕೊಂಡು ಬೆಳೆದಳು ಅವಳು (ಹೊಸಕ್ಷಿ. ೩).೨. ಮೀಸಲಾಗಿಡು : ಹೊರಗೆ ಹೋಗಿದ್ದ ಮಗನಿಗೆಂದು ತಿಂಡಿಯನ್ನು ತುಂಬಿಟ್ಟಿದ್ದರು (ರೂಢಿ). ತುಂಬಿ ತುಳುಕು = ಭರ್ತಿಯಾಗಿ ಹೊರಚೆಲ್ಲುವಂತಿರು ; ಸಂಪೂರ್ಣವಾಗಿ ತುಂಬಿರು : ದೇವ ಸಂಗನಬಸವ ತುಂಬಿ ತುಳುಕದ ಬಸವ (ಬಸರ. ೯-೮೮); ನಿಮಗೆಲ್ಲ ರಕ್ತ ತುಂಬಿ ತುಳುಕುತ್ತದೆ (ಕಾಲೂರ. ೦೫ ಕಥಾಸಾರ). ತುಂಬಿದ ಕೊಡ = ೧. ಭರ್ತಿಯಾದ ಕೊಡ : ಎದುರಿನಿಂದ ಹೆಂಗಸೊಬ್ಬಳು ತುಂಬಿದ ಕೊಡವನ್ನು ಹೊತ್ತು ತರುತ್ತಿದ್ದುದನ್ನು ಕಂಡು ಸಂತುಷ್ಟರಾದರು (ರೂಢಿ). ೨. ಸದ್ಗುಣ, ಧನ ಮೊದಲಾದುವುಗಳಿಂದ ತುಂಬಿದ ವ್ಯಕ್ತಿ; ಗಂಭೀರತೆಯಿಂದ ಕೂಡಿದ ವ್ಯಕ್ತಿ : ತುಂಬಿದ ಕೊಡ ತುಳುಕುವುದಿಲ್ಲ (ಗಾದೆ) ; ಅವರು ತುಂಬಿದ ಕೊಡ (ರೂಢಿ). ತುಂಬಿದ ಸಂಸಾರ = ಹೆಚ್ಚು ಮಕ್ಕಳಿಂದ ಕೂಡಿದ ಕುಟುಂಬ; ಸಮೃದ್ಧ ಸಂಸಾರ: ಅವರದು ತುಂಬಿದ ಸಂಸಾರ (ರೂಢಿ). ತುಂಬಿ ಬರು=೧. ಕೂಡಿಕೊಳ್ಳು: ಮೊಘಲ್ ಕಲೆಯಲ್ಲಿ ಅಷ್ಟೊಂದು ಸೊಬಗು, ವೈಭವ ತುಂಬಿ ಬರಲು ಇವರುಗಳು ಬಹುಮಟ್ಟಿಗೆ

ಕಾರಣರಾದರು (ಭಾರದ. ೩೨೮). ೨. ನಷ್ಟ ಪರಿಹಾರವಾಗು ; ಸರಿದೂಗು : ನುಡಿಯಂತೆ ನಡೆಯದಿದ್ದರೆ ನಡೆಯಂತೆ ನುಡಿಯದಿದ್ದರೆ ದಿವ್ಯ ಜೀವನದಲ್ಲಿ ಅದೊಂದು ದೊಡ್ಡ ಕುಂದು, ತುಂಬಿಬಾರದ ಕೊರತೆ (ಮೋಳಿಮಾ. ೬ ಪ್ರಸ್ತಾವನೆ) ; ಅವನ ಕಾಲಿನ ಕುಂಟುತನದ ಊನವು ಅವನ ಪ್ರಸಂಗಾವಧಾನದ ಚತುರತೆಯಲ್ಲಿ ತುಂಬಿ ಬಂದಿತ್ತು (ಕಂಬಹು. ೧೩). ತುಂಬಿರು = ಭರ್ತಿಯಾಗಿರು ; ಹರಡಿರು : ವಂದಿತಾಮಳಮಕುಟ ವರ್ಧನರಿಂದ ತುಂಬಿಹುದೆಂಟುಯೋಜನದಂದವದು (ಸಂಭಪ. ೩-೮೬) ; ಅದಱಿನಾ ತಱುವಾಯ ಮನೆಯೊಳು ಗದೆ ಶರಾಸನ ಖಡ್ಗ ಮುದ್ಗರವಧಟು ಚಕ್ರ ತ್ರಿಶೂಲ ತುಂಬಿರೆ (ಕುಪ್ಯಾಅ. ಓರಿಇ. ೩೨-೩೨).

[ದೇ. ॥ ತುಳು. ತುಂಬು ; ಕೊಡ. ದುಂಬ್]

ತುಂಬ್ಯು₂ (ನಾ). ಸಂಪೂರ್ಣವಾಗಿರುವಿಕೆ ; ಪೂರ್ಣತೆ ; ಅತಿಶಯ ; ಬಾಹುಳ್ಯ : ಅವ ತುಂಬಿಹುದಿಲ್ಲಿ ಎರೆವವರಿಗೆರೆವಷ್ಟನೀವ ಮನ ತುಂಬುವಷ್ಟರಿವ ಎದೆ ತುಂಬುವಷ್ಟೊಲವ ಪಡೆಯೆ ಜೀವ ? (ಮಲೆದೇ. ೩೦-೯).

[<ತುಂಬು₁]

ತುಂಬ್ಯು₃ 'ತೂಂಬು' ನೋ.

ತುಂಬ್ಯು₄, ತುಂಬ್ಯೆ₃ (ನಾ). ೧. ಹಣ್ಣು, ಕಾಯಿ, ಹೂವು ಮೊದಲಾದುವುಗಳ ತೊಟ್ಟು,—ನಾಳ ; ವೃಂತ ; ತೊಡಂಬೆ : "ತುಂಬು—ಪೂರಣೇ, ವೃಂತ (ಹೂವಿನ ಕಾವು), ಜಲಪ್ರಣಾಲ್ಯೋಃ (ತೂಬು)" (ಶಮಧಾ) ; "ತೊಟ್ಟು ತುಂಬೆನೆ ವೃಂತನಾಮವೆಂದೇ ತಿಳಿವುದು" (ಶಬ್ದಮಂ. ೨೩); ಉದುರಿಹೋದ ಹೂವಿನ ತುಂಬಿನತ್ತ ಲಲಿತಾ ತದೇಕ ಚಿತ್ತದಿಂದ ನಿಟ್ಟಿಸತೊಡಗಿದಳು (ಕನಸಿ. ೧); ಕಿತ್ತಳೇಹಣ್ಣು ಬುಡದಲ್ಲಿಯೂ ತುಂಬಿನಲ್ಲಿಯೂ ತುಸು ಕುಗ್ಗಿರುವಂತೆ ಪೃಥ್ವಿಯಾದರೂ ಉತ್ತರ ದಕ್ಷಿಣ ಧ್ರುವಗಳೆಡೆಗೆ ಸ್ವಲ್ಪ ಕುಗ್ಗಿಯದೆ (ಮುಂಬಯಿ. ೪-೬೪); ಮೆಣಸಿನಕಾಯಿಯ ತುಂಬು ಮುರಿದು ಅವನ್ನಾದರೂ ತಾಟಿನ ಬದಿಗಿರಿಸಿದಳು (ರಕ್ತಧೃ. ೨೨೦). ೨. ಒಂದು ಬಗೆಯ ಆಭರಣ. 'ಚಳತುಂಬು' ಪರಾ. ತುಂಬ್ಯೆ₃ : ೧. "ತುಂಬೆಯೆನೆ ತೊಟ್ಟು" (ಕಶರ. ೪೭).

[ದೇ. ॥ ತಮಿ. ಮಲ. ತುಮ್ಪು = ತುದಿ, ಅಂಚು]

ತುಂಬುಕಣ್ಣು 'ತುಂಬುಗಣ್ಣು' ನೋ.

ತುಂಬುಗ (ನಾ). ಭರ್ತಿಮಾಡುವವನು ; ತುಂಬುವವನು : "ಪ್ರಾಯನ್, ಪ್ರಾಪಕಃ, ಪ್ರಾತಾ ಈ ಮೂರು ತುಂಬುಗಂ" (ಕಾಶಕ್ಯ. ೦೬೭).

[ತುಂಬು₂ + – ಗ₂]

ತುಂಬುಗಣ (ನಾ). (ಧಾನ್ಯಗಳನ್ನು) ರಾಶಿ ಹಾಕಿರುವ ಕಣ : ಇವೊತ್ತು ತುಂಬುಗಣದ ಪೂಜೆ ಇದೆ (ರೂಢಿ). [ತುಂಬು₂ + ಕಣ₁ (<ಕಳ₃)]

ತುಂಬುಗಣ್ಣು, ತುಂಬುಕಣ್ಣು (ನಾ). ೧. ಅಗಲವಾದ ಕಣ್ಣು ; ದೊಡ್ಡಕಣ್ಣು : ತುಂಬುಗಣ್ಣಲ್ಲಿ ನೋಡಿದಳು (ಪೈದ್ಯವಿ. ೦೨೫) ; ತನ್ನ ತುಂಬುಗಣ್ಣುಗಳನ್ನು ಹೊರಹೊರಳಿಸಿ ನೋಡುತ್ತ ಮೆರವಣಿಗೆಯ ಹಿಂದೆ ಸಾಗಿದಳು (ಫಲಸಂ. ೮೮). ತುಂಬುಕಣ್ಣು : ೨. (ಕಣ್ಣೀರು) ತುಂಬಿದ ಕಣ್ಣು : ಪಾಳುರಾಜಧಾನಿಯನ್ನು ತುಂಬುಕಣ್ಣಿನಿಂದ ನೋಡಿ ... ನಿಟ್ಟುಸಿರಿಟ್ಟು ಪಂಡಿತನನ್ನು ಹಿಂಬಾಲಿಸಿದ (ಚಿದೇವ. ೩).

[ತುಂಬು₂ + ಕಣ್ಣು (< ಕಣ್)]

ತುಂಬುಗಲ್ಲ (ನಾ). ತುಂಬಿಕೊಂಡಿರುವ ಗಲ್ಲ ; ದುಂಡನೆಯ ಕೆನ್ನೆ : ಮೊದಲಿನ ತುಂಬುಗಲ್ಲದ ನಗುಮುಖದ ರಮಾ ಎಲ್ಲಿ, ಒಣಗಿದ ಕೃಶಳಾದ ಅಳುಮುಖದ ನೀನೆಲ್ಲಿ ? (ಕುಂಕುಮ. ೫೫). [ತುಂಬು₂ + ಗಲ್ಲ₁]

ತುಂಬುಗಾಂಭೀರ್ಯ (ನಾ). ಅಧಿಕವಾದ ಹಿರಿಮೆ ; ದೊಡ್ಡತನ : ತುಂಬುಗಾಂಭೀರ್ಯದಲಿ ಸತ್ಯವನೆ ಎತ್ತಿ ನಿಲಿಸುವನು ಪ್ರಜೆಯ ತಂದೆ (ಹೊಂಗಳು. ೬-೮). [ತುಂಬು₂ + ಗಾಂಭೀರ್ಯ]

ತುಂಬುಗಾಯಿ (ನಾ). ಬದನೆಕಾಯಿ ಮೊದಲಾದ ಇಡಿಕಾಯಿಯೊಳಗೆ ಸಂಭಾರವನ್ನು ತುಂಬಿ ಬೇಯಿಸಿ ಮಾಡಿದ ಪಲ್ಯ : "ತುಂಬುಗಾಯಿ—ಇಡಿಗಾಯಿಪಲ್ಲೆ ; ಬದನೇಕಾಯಿಯ ಪಲ್ಲೆ" (ಜಾನಕೋ. ೬೭); ಅವಳು ಬದನೆಯ ತುಂಬುಗಾಯಿ ಮಾಡುವುದರಲ್ಲಿ ಎತ್ತಿದ ಕೈ (ರೂಢಿ).

[ತುಂಬು₂ + ಕಾಯಿ₄ (< ಕಾಯ್₄)]

ತುಂಬುಗುಂಕುಮ (ನಾ). ಹಣೆಯಲ್ಲಿ ಇಟ್ಟುಕೊಂಡಿರುವ ಅಗಲವಾದ ಕುಂಕುಮ : ಮುಂಬಯಸಿ ಕೈಗೈದ ಸೊಬಗಿನ ಕೆಂಬಲರ ಮೈವಚ್ಛೆ ಕೆಂಬಲು ತುಂಬುಗುಂಕುಮ ತಿವಿರು ಚೆಂದುಟಿಯುಟ್ಟರುಣವಸನ (ಸಾಳ್ಯಭಾ. ೩-೩೪).

[ತುಂಬು₂ + ಕುಂಕುಮ]

ತುಂಬುಗೂದಲು (ನಾ.) ದಟ್ಟವಾದ ಕೂದಲು : ಇವನು ತುಂಬುಗೂದಲಿನ ಕುಮಾರನಂತೆ ಕಣ್ಣಿಗೆ ಮುದ್ದಾಗಿ ... ಸುಳಿಯುತ್ತಾನೆ (ಭಾರದ. ೨೮).

[ತುಂಬು₂ + ಕೂದಲು (<ಕೂಂದಲ್)]

ತುಂಬುಗೆ (ನಾ). ತುಂಬುವಿಕೆ ; ಭರ್ತಿಯಾಗುವಿಕೆ : "ಪೂರ್ತಿಃ, ಪೂರ್ತಂ ... ಈ ೧೦ ತುಂಬುಗೆ" (ಕಾಶಕ್ಯ. ೦೭೬). [ತುಂಬು₂ + –ಗೆ]

ತುಂಬುಗೆಡು (ಕ್ರಿ). ತುಂಬದೆ ಇರು ; ಪೂರ್ಣತೆಯಿಲ್ಲದಿರು : ತುಂಬುಗೆಟ್ಟ ಅರೆಯಾದ ಬರಿದುವೋದ ಬಟ್ಟಲ್ಗಳನ್ನು ... ಭರಿಸುತ್ತಿರುವರು (ಬೆಟ್ಟಅ. ೮೩-೧೦). [ತುಂಬು₂ + ಕೆಡು₁]

ತುಂಬುಗೆನ್ನೆ (ನಾ). = ತುಂಬುಗಲ್ಲ : ತುಂಬುಗೆನ್ನೆ ; ನೀಳವಾದ ಮಾಟವಾದ ಮೂಗು (ಕಳಹು. ೨). [ತುಂಬು₂ + ಕೆನ್ನೆ]

ತುಂಬುಗೆಯ್ (ನಾ). ಪುಷ್ಟವಾದ ತೋಳು, – ಬಾಹು, – ಭುಜ : ತನ್ನುಳ್ಳ ಬಲ್ಪನಿತಱೂಳಂ ಮುಂತಣ್ಗೆ ನಿಂತಂ ತುಂಬುಗೆಯ್ಯಿಕ್ಕುವಿನಂ (ಚಿಕವಂ. ೦೬೪-೧೪). [ತುಂಬು₂ + ಕೆಯ್₂]

ತುಂಬುಗೊಳ್ಳು (ಕ್ರಿ). ಭರ್ತಿಯಾಗು; ಅಧಿಕಗೊಳ್ಳು; ಅತಿಶಯವಾಗು: ಮನುವ ಮನವು ಹರುಷಪಡಲಿ ಎಂಬ ಬಯಕೆ ತುಂಬುಗೊಂಡು ಆಸೆ ಬಲಿತು ಕನಸ ಕಲಿತು (ಮೂರ್ತಿಕಾ. ೦೬-೦೩). [ತುಂಬು₂ + ಕೊಳ್ಳು₁ (<ಕೊಳ್₁)]

ತುಂಬುಗೋಡಿ (ನಾ.) ೧. ತುಂಬಿ ಹರಿಯುವ ಕೋಡಿ: ಕೆರೆಯಲ್ಲಿ ತುಂಬುಗೋಡಿ ಹರಿಯುತ್ತಿದೆ (ರೂಢಿ). ೨. (ಆಲಂ) ಅತ್ಯಧಿಕ ; ಅತಿಶಯ : ಬೊಕ್ಕಸ ಭಂಡಾರಗಳ ತುಂಬುಗೋಡಿಯ ಮಹಾನಿಧಿಯದನ್ನು ಪರಿಪಾಲಿಸಿಕೊಳ್ಳಬೇಕೆಂಬ ಆ ಬೆಳ್ಳಳಿಯ ಅರಿವು ನಿನಗೆ ನಿಶ್ಚಯವಾಗಿ ಇಲ್ಲ (ಮಂತ್ರಶ. ೦೦೨-೨೫). [ತುಂಬು₂ + ಕೋಡಿ₁]

ತುಂಬುಚೀಲ (ನಾ). ತುಂಬಿರುವ ಚೀಲ ; ಭರ್ತಿಯಾಗಿರುವ ಚೀಲ : ಎದ್ದುಹೋಗಿ ಪೆಟ್ಟಿಗೆದೆರೆದು ನಾಲ್ಕು ತುಂಬುಚೀಲಗಳನ್ನು ಅವರತ್ತಣ್ಗೆ ... ಬಿಸಾಡುವನು (ಬೆಟ್ಟಅ. ೫೪-೧೮). [ತುಂಬು₂ + ಚೀಲ]

ತುಂಬುಚ್ಚು 'ತೂಂಬುರ್ಚು' ನೋ.

ತುಂಬುಜವ್ವನ (ನಾ). ತುಂಬಿದ ಹರಯ ; ಪೂರ್ಣವಾದ ಯೌವನ,-ತಾರುಣ್ಯ : ತುಂಬುಜವ್ವನದ ನಿತಂಬಿನಿಯರ ಕುಂಭಕುಚದಿಱುಂಬಿ ನೊಳಿಂಬುವಡೆದು (ರಾಜಶೇ. ೨-೮ವ) ; ಅವನು ತುಂಬುಜವ್ವನವನ್ನು ಧರಿಸಿದನು (ಮಚಿಸ. ೬೪). [ತುಂಬು₂ + ಜವ್ವನ]

ತುಂಬುಜವ್ವನೆ (ನಾ). ೧. ತುಂಬು ಹರೆಯದ ಹೆಂಗಸು; ನವತರುಣಿ ; ಯುವತಿ : ನನೆಯಂಬುವಿಡಿದಂಜಿಸುವ ಬೆಡಗಿನ ತುಂಬುಜವ್ವನೆ ನಾಲ್ಕು ನೀರನು ಮಿಂದಳೊಲವಿಂದ (ಸಾಳ್ಯಭಾ. ೦೩-೩೪). ೨. ತುಂಬಿದ ಎದೆಯುಳ್ಳವಳು. 'ಕಕ್ಕಸಜವ್ವನೆ' ಹೋ. [ತುಂಬುಜವ್ವನ + – ಎ₂]

ತುಂಬುಜೀವನ (ನಾ). ಪರಿಪೂರ್ಣವಾದ ಜೀವನ ; ತೃಪ್ತಿಯ ಬಾಳು: ತುಂಬುಜೀವನದ ತುಂಬನುಭಾವದ ಬಿಂಬಾಧರೆ ಶಿವಶಾಂಭವಿಯ ಮಗಳು (ಸಿದ್ಧಪು. ೨-೯೮) ; ಇದು ತುಂಬುಜೀವನದ ಭಾವಾನುಭಾವಗಳ ಪರಿಪಕ್ವತೆಯ ಫಲ (ಸಾಹಿಸ. ೩೪) : ವೇದಕಾಲದ ತುಂಬುಜೀವನದಲ್ಲಿ ಬ್ರಹ್ಮ

ವಾದಿನಿಯರಾದ ಮಹಿಳೆಯರು ತಮ್ಮ ಭಾವನೆಗಳನ್ನು ಸಾಹಿತ್ಯದ ಮೂಲಕ ವ್ಯಕ್ತಗೊಳಿಸಿದರು (ಕರ್ನಾಕ. ೩೯). [ತುಂಬು$_2$ + ಜೀವನ]

ತುಂಬುಣ್ಣು (ಕ್ರಿ). ಚೆನ್ನಾಗಿ ಊಟಮಾಡಂ ; ಹೊಟ್ಟೆತುಂಬ ತಿನ್ನು : ಉಂಬ ಬಾಯ್ ತಾನಾಗಿ ಉಂಡೆಲ್ಲರಂ ತಣಿಪಿ ತುಂಬುಂಡು [ಪಾಠಾಂ. ಬಲದು] ಪಲವು ಕದಳಿಗಳೆಲ್ಲ ದಣಿದವೆಂದೆಂಬುದಂ ಮಾಡಿ ತೋಱಿದ ಮಹಾಪ್ರಭುವರನ (ಲಶಿಚಿಂ. ೩೨-೩೩). [ತುಂಬು$_2$ + ಉಣ್ಣು (<ಉಣ್)]

ತುಂಬುದಣ್ಗದಿರ (ನಾ). ಪೂರ್ಣಚಂದ್ರ; ಹುಣ್ಣಿವೆಂಚಂದ್ರ: ನುಣ್ಗುರುಳ ನೀಱಿಗೆ ಬೆಡಂಗಮರ್ದೆಸೆವ ತುಂಬುದಣ್ಗದಿರನಂದದ ಮೊಗದ ಚೆಲ್ವೆಗೆ ... ಪೆಣ್ಗಳರಸಿಗೆ ಗರ್ಭಚಿಹ್ನವಂಕುರಿಸಿದುದದಂ ಪೊಗಳ್ವ ಕವಿ ಯಾವನೋ (ಪದ್ಮಕಾ. ೨-೩೮). [ತುಂಬು$_2$ + ತಣ್ಗದಿರ]

ತುಂಬುದಿಂಗಳು (ನಾ). =ತುಂಬುದಣ್ಗದಿರ: ತುಂಬುದಿಂಗಳ ಮೊಗ ತುಱುಗೆವೆಯಲರ್ಗಣ್ ತುಂಬಿಗುರುಳು (ಶ್ರೀಪಾಲ. ೩-೨೪) ; ತುಂಬುದಿಂಗಳು ಮೊಗದ ನಸುನಗೆಯೆಂಬ ಬಾಂದೊಱೆದೆರೆವೊಯಿದು ... ಅಂಬುವೆಱೆವರು ಪಥಿಕರಿಗೆ (ಸಾಳ್ವಭಾ. ೦-೬೨) ; ತುಂಬುದಿಂಗಳ ಕನಕಬಿಂಬಕ್ಕೆ ಪೊನ್ ತನಂ ಬಾಡಿ, ಮೂಡಿದುದು ಬೆಳ್ಳಿಯತನಂ (ಶ್ರೀರಾಮಾ. ೪೮೦-೦೬೩).

[ತುಂಬು$_2$ + ತಿಂಗಳು (<ತಿಂಗಳ್)]

ತುಂಬುದೆರೆ (ನಾ). ಸಂಪೂರ್ಣವಾಗಿ ಮಂಚ್ಚಿರುವ ತೆರೆ, - ಪರದೆ : ಚಂದ್ರಗಾವಿಯ ಮೇಲ್ಕಟ್ಟಿನೊಳುವಣ್ಣದ ತುಂಬುದೆರೆಯ... ಮಂಚದೆ ಸೆಳೆದಪ್ಪೊ ಮೋಹನರೂಪ (ಕಂನವಿ. ೯-೦೮೮). [ತುಂಬು$_2$ + ತೆರೆ$_4$]

ತುಂಬುನಂಬಿಗೆ (ನಾ). ಪೂರ್ತಿನಂಬಿಕೆ ; ಸಂಪೂರ್ಣವಿಶ್ವಾಸ : ತಂದೆ ಬಂದೆವಿದೊ ತುಂಬುನಂಬಿಗೆಯ ಹಡಗದಲ್ಲಿ ಕುಳಿತು (ನೆಲಮು. ೩೬-೦೫).

[ತುಂಬು$_2$ + ನಂಬಿಗೆ (<ನಂಬುಗೆ)]

ತುಂಬುನಗೆ (ನಾ). ಪೂರ್ಣವಾದ ನಗೆ : ಆಗಸದ ಗಂಟುಮೋರೆಯಲಿ ಹೊಂಬಿಸಿಲ ತುಂಬುನಗೆ ಹರಿಸಿ ಹರಿದಿಹುದು ನೀರು (ನೆಲಮು. ೦೫-೦೩) ; ಸವಿಹಸಿವೆ ಕಂಬನಿಯು ತುಂಬುನಗೆಯೊಮ್ಮೆ (ಕಾಲೂರ. ೩೦-೨೬).

[ತುಂಬು$_2$ + ನಗೆ]

ತುಂಬುನೀರು (ನಾ). ಅಣೆಕಟ್ಟು ಮೊದಲಾದ ಜಲಾಶಯಗಳು ಭರ್ತಿಯಾದಾಗ ಇರುವ ನೀರು : ಮುಂದುಗಡೆಯ ಕೊಳದ (Forebay) ತುಂಬುನೀರಿನ ಮಟ್ಟ ೧೬೪೦ ಅಡಿ (ಶಿಲ್ಪನಾ. ೨೪೭).

[ತುಂಬು$_2$ + ನೀರು$_1$ (<ನೀರ್$_1$)]

ತುಂಬುನೊಸಲ್ (ನಾ). ವಿಸ್ತಾರವಾದ ಹಣೆ ; ವಿಶಾಲವಾದ ಹಣೆ : ಸುಱಿಗುರುಳ ತುಂಬುನೊಸಲ ಅಸಿಯ ಬೊಟ್ಟಿನ ನೀಳ್ದ ಪುರ್ವಿನ ... ವಿದ್ಯಾಧರವಾರನಾರೀಕದಂಬಂ (ಧರ್ಮಾಮೃ. ೯-೦೯೬).

[ತುಂಬು$_2$ + ನೊಸಲ್]

ತುಂಬುಪಾಂಡಿತ್ಯ (ನಾ). ಸಂಪೂರ್ಣವಾದ ವಿದ್ವತ್ತು : ತುಂಬುಪಾಂಡಿತ್ಯ, ಕವಿಸಹಜವಾದ ಕೋಮಲಹೃದಯ (ಕನ್ನಸು. I, ೦೨) ; ಉಪನ್ಯಾಸಕರ ತುಂಬುಪಾಂಡಿತ್ಯವು ಕೇಳುವವರನ್ನು ಆಶ್ಚರ್ಯಪಡಿಸಿತು (ರೂಢಿ).

[ತುಂಬು$_2$ + ಪಾಂಡಿತ್ಯ]

ತುಂಬುಪೆರೆ 'ತುಂಬುವೆಱೆ' ನೋ.

ತುಂಬುಬಸಿರ್ (ನಾ). ಹೆರಿಗೆಕಾಲ ಸಮೀಪಿಸಿರುವ ಗರ್ಭ ; ಪೂರ್ಣಗರ್ಭ : ದಶರಥಸತಿಯರಿಂತು ತುಂಬುಬಸಿರಿಂದೆಸೆಯೆ ನಲಿದತ್ತಯೋಧ್ಯೆ (ಶ್ರೀರಾಮಾ. ೦೫-೩೯೨). [ತುಂಬು$_2$ + ಬಸಿರ್ (<ಬಸಿಱ್)]

ತುಂಬುಬಸಿರಿ (ನಾ). ಹೆರಿಗೆಯ ಕಾಲ ಸಮೀಪಿಸಿರುವ ಗರ್ಭಿಣಿ ; ನವಮಾಸ ತುಂಬಿರುವ ಬಸಿರಿ ; ಪೂರ್ಣಗರ್ಭಿಣಿ : ತುಂಬುಬಸಿರಿಯರು, ಹಾಲುವಂಕ್ಕಳು ಸತ್ತ ಲೆಕ್ಕವ ದೇವರೆ ಬಲ್ಲ (ಇಂಗೀತ. ೩೩-೨೦).

[ತುಂಬುಬಸಿರ್ + - ಇ$_3$]

ತುಂಬುಬಾಳ್ (ನಾ). = ತುಂಬುಜೀವನ : ನೆಗೆಯುತಿದೆ ಮತ್ತೊಮ್ಮೆ ನಮಗದೋ ತುಂಬುಬಾಳ್ ಬೀರಿ ಹಿರಿಯ ಬೆಳಕೊಂದು ಸಿರಿ ಸಾರಿ (ಹೊಂಗಳು. ೩೩-೦೧). [ತುಂಬು$_2$ + ಬಾಳ್$_2$ (< ಬಾಱ್$_2$)]

ತುಂಬುಬಿಂಬ (ನಾ). ಸಂಪೂರ್ಣವಾಗಿರುವ ಮಂಡಲ,-ಆಕಾರ,-ಸ್ವರೂಪ : ತುಂಬುಬಿಂಬಂ ತೋರಿದುದು ಪಾಡಿವದ ಪೆರೆಗೆ (ಶ್ರೀರಾಮಾ. ೬೩೯-೨೬೬). [ತುಂಬು$_2$ + ಬಿಂಬ]

ತುಂಬುಬೆಳೆ (ನಾ). ಅಧಿಕವಾದ ಬೆಳೆ ; ಹೆಚ್ಚಾದ ಬೆಳಸು : ಬಯಲಲಿ ಪಚ್ಚೆಯ ಪಯಿರಿನ ತುಂಬುಬೆಳೆ (ಹೊಂಗಳು. ೦೦-೦೧). [ತುಂಬು$_2$ + ಬೆಳ್$_2$]

ತುಂಬುಮೊಲೆ (ನಾ). (ಹಾಲಿನಿಂದ) ತುಂಬಿಕೊಂಡಿರುವ ಕುಚ,-ಸ್ತನ: ತಾಯಿ ಚೊಚ್ಚಲಮಗುವ ನಲ್ಮೆಯಲಿ ಹೆತ್ತು, ತುಂಬುಮೊಲೆಯನು ಕೊಟ್ಟು, ಕೆನ್ನೆಯಲಿ ಮುತ್ತಿಟ್ಟು (ಪಾಂಚಜ. ೨೯-೯). [ತುಂಬು$_2$ + ಮೊಲೆ$_1$]

ತುಂಬುಯೌವನ (ನಾ). = ತುಂಬುಜವ್ವನ : ಕೆಲವರು ತುಂಬುಯೌವನದಲ್ಲಿ ಸಾಯುತ್ತಾರೆ (ವಚಭಾ. ೩೪೩). [ತುಂಬು$_2$ + ಯೌವನ]

ತುಂಬುರ್, ತುಮರಿ, ತುಮ್ರಿ$_1$ (ನಾ). = ತುಂಬುರು$_2$: ಅರನೇಱಿಲ್ ತಾಱೆ ತುಂಬುರ್ ತದುಕಳಿಲೆ ಲವಂ ನೆಲ್ಲಿ ಬಿಲ್ವಾರ್ಜುನಂ ... ತಱಿಯದಿಂದೊಪ್ಪುತಿರ್ದತ್ತರಣ್ಯಂ (ಗಿರಿಕ. ೦-೬೨). **ತುಮರಿ** : ತುಮರಿಯ ಕೊಳ್ಳಿಯಂತೆ ಉರಿವಾತ ಭಕ್ತನೆ (ಸರ್ವವ. ೧೮೫-೮೫೦). **ತುಮ್ರಿ$_1$** : ಕಣ್ತುಮ್ರಿ, ತುಮ್ರಿ (ಮೃಜಿಗಿ. ೩೦-೫೯೮). 'ಕಣ್ತುಮ್ರಿ' ಪರಾ.

[< ಸಂ. ತುಂಬುರು./ತಮಿ. ತುಮ್ಪಿ, ತುಮ್ಪಿಲಿ ; ತೆಲು. ತುಬಿಕಿ. ತುಮಿಕಿ, ತುಮ್ಮಿಕಿ ; ಕೊಲಾ. ನಾಯ್ಕಿ. ತುಮ್ಕಿ ; ಪರ್ಜಿ. ತುಂಬ್ರಿ]

ತುಂಬುರ$_1$, ತುಂಬುರಿ (ನಾ). [ಸಂಗೀತ] ಒಂದು ಬಗೆಯ ವೀಣೆ : ತುಂಬುರವಿಡಿದು ಗಾನಾಮೃತವನು ಕಿವಿಗಿಂಬಾಗಿ ಸವಿದೋಱಿಸುತ (ಕಂನವಿ. ೮-೩೩) ; ಬಾಲಶಾರದೆಗಳೆನಲು ತುಂಬುರವನಾಂತು ಲೋಲಾಕ್ಷಿಯರಿರ್ವರಾಗ ... ಪಾಡಿದರೊಲಿದು (ಕಂನವಿ. ೮-೭೫). **ತುಂಬುರಿ** : ಸುರಮುನಿಯ ತುಂಬುರಿಯೊ, ನಂದಿಯ ಮೃದಂಗವೊ (ದುಂಬಿನಾ. ೦).

[< ಸಂ. ತುಂಬರೀ]

ತುಂಬುರ$_2$ (ನಾ). = ತುಂಬುರು$_3$: ತೌಂಬುರವೀಣೆಯ ತುಂಬುರರಿಂ ಕಿನ್ನರವೀಣೆಯ ಕಿಂಪುರುಷರಿಂದಂ ... ಒಪ್ಪಿದತ್ತಾ ಮಹಾಲಿಂಗದಾಸ್ಥಾನಂ (ಹಮ್ಮೀರ. ೮-೪೦ವ); ವಿಷ್ಣುದೂತರಾ ತುಂಬುರನಂ ಕಯ್ವಿಡಿದು ಕರದುಯ್ಯೆ (ಅದ್ಭುತ. ೨೦-೦೦). [ಸಂ.]

ತುಂಬುರ$_3$ (ನಾ). = ತುಂಬುರು$_2$: "ತಿಂದುಕಃ, ಸ್ಫೂರ್ಜಕಃ, ಕಾಲಸ್ಕಂಧಃ, ಸಿತಸಾರಕಃ – ಈ ೪ ತುಂಬುರ" (ನಾಚಿರಾ. ೦೦೭) ; ಮಾಳಿಕಬ್ಬರಸಿ ತುಂಬುರ ಬೆಳದ ಬೋಗಿನಲು ಎಡೆಯೂರ ಪೊಲದೊಳ್ ಬಿಟ್ಟ ಮತ್ತರ್ಪ್ಪನ್ನೆರಡು (ಎಕ. XI, ಮೊಳಕಾ. ೪೦-೬ ; 987) ; ತಾಳಫಲಂಗಳೊಂದು ರುಚಿ ತುಂಬುರಪಣ್ಣೊಳಗುಂಟೆ ಲೋಕದೊಳ್ (ಧರ್ಮಾಮೃ. ೪-೦೨೭) ; ಬಸುರಿ ಬಿಳುನೆತ್ತಿ ತುಂಬುರ ಬಿಕ್ಕಿ ನೆಲ್ಲ ಚಂದಣವತ್ತಿ ... ಕಣ್ಗೆಸೆದುದು (ಸಿಂಗಿರಾ. ೩೦-೯). [ಸಂ.]

ತುಂಬುರಕಾಯಿ (ನಾ.) ತುಂಬುರುಮರದ ಕಾಯಿ : "ತಿಂದುಫಲಃ-ತುಂಬುರಕಾಯಿ" (ಓಷಧಿ. ೬೯). [ತುಂಬುರ$_3$ + ಕಾಯಿ$_4$ (<ಕಾಯ್$_4$)]

ತುಂಬುರಕೊಳ್ಳಿ 'ತುಂಬುರಗೊಳ್ಳಿ' ನೋ.

ತುಂಬುರಗುತ್ತಿ (ನಾ). ತುಂಬುರಗಿಡದ ಪೊದರು,—ಮೆಳೆ : ಹಡಿಲ ಬೆಂಚೆಯ ಮುಂದಣ ಕೆಬೆಯ ತೆವರ ತುಂಬುರಗುತ್ತಿ ಮೇಳೆಗಳೊಳಗಣ ತೆಂಕಣದಿಕ್ಕಿನ ಕಲ್ಲವೊಂದು (ಎಕ. XII, ತುಮಕೂ. ೧೦-೬೨ ; 1426).

[ತುಂಬುರ$_3$ + ಗುತ್ತಿ$_1$]

ತುಂಬುರಗೊಳ್ಳಿ, ತುಂಬುರಕೊಳ್ಳಿ (ನಾ). = ತುಂಬುರುಗೊಳ್ಳಿ : ತುಂಬುರಗೊಳ್ಳಿಯಂದದಿ ಛಿಟಛಿಟಲೆಂದು ಕಣ್ಗಳ ಸೋಗೆಯೊಳು ಒಂದಿದ

ಕೆಂಪಿನಿಂದಾ ಚಕ್ರಪತಿಯಿಂತೆಂದು ಬೆಟ್ಟೆಯನಾಡಿದನು (ನೇಮಿಸಂ. ೨೬-೨೦) : ಹಲ್ಲ ಕಡಿದು ಕಣ್ಣು ಕೆಂಪೇಱಿ ತುಂಬುರಗೊಳ್ಳಿಯಂತುರಿ ಛಿಟಛಿಟಿಸಿ (ಭರಿಪ. ೨೪-೪೫). ತುಂಬುರಕೊಳ್ಳಿ : ಚರವಚನಮನಾಲಿಸಿ ತುಂಬುರ ಕೊಳ್ಳಿಯ ತೆಱದಿನಂಬರಕ್ಕೆ ಸಿಡಿಲ್ದು (ಪಂಠಾಮಾ. ೪-೩೯) ; ಕೋಪಾಗ್ನಿ ಭೋಂಕೆನುಣ್ಮೆ ತುಂಬುರಕೊಳ್ಳಿಯ ತೆಱದಿಂದಂಬರಮಂ ಮುಟ್ಟೆ (ನೇಮಿಪು. ೦೧-೧೯) ; ರಜಕನಂಬರಂಬರಂ ತುಂಬುರಕೊಳ್ಳಿಯಂತೆ ಸಿಡಿದಿಂತಪ್ಪ ಸಿತಗನನೆಲ್ಲಿಯುಂ ಕಾಣಂ . . . ಅತ್ತ ಸಾರೆಂದು ಮುಂದೀಡಾಡಿ (ಅರ್ಧನೇ. ೯-೬೬ವ). [ತುಂಬುರ್ಯ+ಕೊಳ್ಳಿ$_1$]

ತುಂಬುರವೀಣೆ (ನಾ). ಒಂದು ಬಗೆಯ ವೀಣೆ : ರುದ್ರವೀಣೆ ತುಂಬುರ ವೀಣೆ . . . ಮೊದಲಾದ ತಂತಿ ಕಟ್ಟಿ ನುಡಿವ ವಾದ್ಯವನಱಿವುದು ಪ್ರಸಾದ ಲಿಂಗದಲ್ಲಿಯ ಗುರುಲಿಂಗ (ಅದವ. ೬-೦೨) : ಕೋಣನಿದಿರಲಿ ಪಾಡಿ ತುಂಬುರವೀಣೆಯಂ ಝೇಗೈದ ಪರಿ (ಗಗಶಾ. ೦೨-೮೪); ವಾಸುಗಿಯು ನಾಗಸರವೀಣೆ ತುಂಬುರವೀಣೆಯಾ ಸುನಾರದವೀಣೆ (ನವಮೋ. ೧೭-೪೨).

[ತುಂಬುರ್ಯ + ವೀಣೆ]

ತುಂಬುರಿ 'ತುಂಬುರ$_1$' ನೋ.

ತುಂಬುರು$_1$ (ನಾ). ಒಂದು ಬಗೆಯ ಧಾನ್ಯ ; ಲವಣ ಪಂಚಕಮಿಂಗು ಪಿಪ್ಪಲಿ ಶುಂಠಿ ತುಂಬುರುಧಾನ್ಯಕಂ ಶಿವೆ ದುರಾಲಭೆ ಪಾಥೆ ಚಿತ್ರಕಮೋವ ಮೆಂಬಿವನೆಲ್ಲಮಂ ಸವನೆ ಕೊಂಡು (ಲೋಕೋಪ. ೯-೨೨೯) ; ತುಂಬುರು ಪೆರ್ಚಲ್ ಜೋಳವಳುಂಬಂ (ಜಟ್ಟಮ. ೪-೦೨).

[<ಸಂ. ತುಂಬುರೀ]

ತುಂಬುರು$_2$ (ನಾ). ಬಿಗಿಯಾದ ಅಂಟುಳ್ಳ ಹಣ್ಣುಗಳನ್ನೂ ಬೀಡಿ ಕಟ್ಟಲು ಉಪಯೋಗಿಸುವ ಎಲೆಗಳನ್ನೂ ಬಿಡುವ ಮರ ; ತಿಂದುಕ; ℙ ಕೆಲವು ಕೋಶಗಳಲ್ಲಿ ತಿಂದುಕ ಮತ್ತು ತುಂಬುರು ಬೇರೆ ಬೇರೆ ಎಂದು ಹೇಳಿದೆ : "ತುಂಬುರು ತಿಂದುಕಮೆನಿಪ್ಪುದಕ್ಕುಂ ಪೆಸರಿಂ" (ವಸ್ತುಕೋ. ೩೪-೦೦) : ಗುಳವತ್ತಿ ತುಂಬುರು ನಗರೆ ಮುಂತಾದ ಪಣ್ಗಳ ತಂದರಾಳ್ದನ ಬಳಿಗೆ (ಮೋಹತ. ೦೯-೫೬). 'ತುಂಬುರುಗೊಳ್ಳಿ' ಪರಾ.

[ಸಂ.]

ತುಂಬುರು$_3$ (ನಾ). ಒಬ್ಬ ಗಂಧರ್ವನ ಹೆಸರು : ಪುಷ್ಪಕೇತುಪರ್ವತ ದಲ್ಲಿ ನಾರದ ತುಂಬುರು ... ದೇವಮುನಿಗಳ ದಿವ್ಯಾಲಯಂಗಳುಂ (ವಿವೇಕ. ೨೦೭); ತುಂಬುರು ನಾರದರು ಪಾಡುತಿಹರೋ ದೇವ (ಪುರಂದ. ೨-೬೭-೦).

[ಸಂ.]

ತುಂಬುರುಕೊಳ್ಳಿ 'ತುಂಬುರುಗೊಳ್ಳಿ' ನೋ.

ತುಂಬುರುಗೊಳ್ಳಿ, ತುಂಬುರಂಕೊಳ್ಳಿ (ನಾ). ತೂಪರೆಗಿಡದ ಸೆಳ್ಳಿನಿಂ ದಾದ ಕೊಳ್ಳಿ ; ℙ ತೂಬರದ ಮರ ಚೆನ್ನಾಗಿ ಉರಿಯುವುದಿಲ್ಲ. ಒಲೆಗೆ ಹಾಕಿದರೆ ಸಶಬ್ದವಾಗಿ ಕಿಡಿ ಹಾರುತ್ತದೆ : ಬಲಿ ತನ್ಮುನೀಂದ್ರರ ವಚನಕ್ಕೆ ತುಂಬುರುಗೊಳ್ಳಿಯಂತೆ ಸಿಡಿಲ್ದು (ಧರ್ಮಾಮ್ಯ. ೯-೬೩); ಒಮ್ಮೆ ತುಂಬುರುಗೊಳ್ಳಿಯೆನೆ ಚಿಮ್ಮಿ ... ಹರಿತಂದುದಾ ಗಾಳಿ (ಶ್ರೀರಾಮಾ. ೨೪೨-೪೦೦). ತುಂಬುರುಕೊಳ್ಳಿ: ಹಿಡಿಂಬನಾಡಂಬರಂಗೆಯ್ದು ತುಂಬುರು ಕೊಳ್ಳಿಯಂತಂಬರಂಬರಂ ಸಿಡಿಲ್ದು (ಪಂಪಭಾ. ೩-೦೭ ವ).

[ತುಂಬುರ್ಯ$_2$ + ಕೊಳ್ಳಿ$_1$]

ತುಂಬುರುಸು (ನಾ). ಒಂದು ಬಗೆಯ ಮರ : ಮಲ್ಲಾಳಿ. ಅಬನಾಸಿ. ತುಂಬುರುಸು (ಮೃಜಿಗಿ. ೩೦-೬೦೦). [?]

ತುಂಬುವರಯ (ನಾ). = ತುಂಬುಜವ್ವನ : ನಿನ್ನ ತುಂಬುವರಯದ ಗಂಡ ದೋಳ್ಗಳ ತಳ್ತಪ್ಪುಗೆಯಲ್ಲಿ ... ಕರ್ಕಶಾಹಂಕಾರವನ್ನೊಡೆದು ಮಣ್ಮಳಿ ಗಿಳಿಱಿ ಬಾಗಿಸಿಕೊ ! (ಬಟ್ಟಅ. ೮೭-೨).

[ತುಂಬು$_2$ + ಹರಯ (< ಪರಯ)]

ತುಂಬುವರಿಯಿಸು (ಕ್ರಿ). ಭರ್ತಿಯಾಗಿ ಹರಿಯುವಂತೆ ಮಾಡು : ಚಂದ್ರ ಕಾಂತದ ನೆಗೆದ ಮುಗಿಲಟ್ಟಣೆಗಳಂ ಮೆಟ್ಟಿ ಬಡಹಮನೊಡರ್ಚಿ ಬಳಸಿದ ಗಟನೊಗುಮಿಗೆ ತಿಂಬಿ ತುಂಬುವರಿಯಿಸಿಯುಂ (ಚಂದ್ರಪು. ೮-೪೩ವ).

[ತುಂಬು$_2$ + ಪರಿಯಿಸು]

ತುಂಬುವಾಳೆಗಾಯ್ (ನಾ). ಬಾಳೆಯಕಾಯಿಯಿಂದ ಮಾಡುವ ಒಂದು ಬಗೆಯ ಪಲ್ಯ: ಪಿರಿದಾಗಿ ಬಲಿದ ಬಾಳೆಯಕಾಯಿಗಳನು ತಂದು . . . ಪೊಗ್ಗರಣೆಮಾಡಿ ಹೂವಿಂದ ಪೊರೆಯಿಟ್ಟು ಮಡಕೆಯೊಳಿರಿಸಲದು ತುಂಬು ವಾಳೆಗಾಯ್ವೆಸರಾದವು [ಪಾಠಾಂ. ಬಾಳೆಯಕಾಯಿವೆಸರಾದುದು] (ಸೂಪಶಾ. ೪-೭೪). [ತುಂಬು$_2$ + ಬಾಳೆ$_1$ (<ಬಾಱೆ) + ಕಾಯ್$_4$]

ತುಂಬುವೆರೆ 'ತುಂಬುವೆಱೆ' ನೋ.

ತುಂಬುವೆಱೆ, ತುಂಬುಪೆರೆ, ತುಂಬುವೆರೆ, ತುಂಬುಹೆರೆ (ನಾ). ತುಂಬಿದ ಚಂದ್ರ ; ಪೂರ್ಣಚಂದ್ರ : ಆ ತುಂಬುವೆಱೆಯ ತಿಳಿವೆಳಗು ವಿರಹಿವ್ರಜಕೆ ಮಾತೇನವಸ್ಥೆಯಂ ಮಾಡುತಿರಲು (ಸಮ್ಯಕ್ತಾ. ೧-೪೧); ಕಱೆಯೆಂಬ ನುಡಿ ತುಱುಗಾರ್ತಿಯರೊಳು ತುಂಬುವೆಱೆಯೊಳು (ಕುರಾಸಾಂ. ೨-೬೮); ತುಂಬುವೆಱೆಯಿಂ ಪೊಱಪೊಣ್ಮುವ ಜೊನ್ನದಂತೆ (ರಾಜಶೇ. ೧-೮೪); ಬೆಳ್ವಕ್ಕದ ತುಂಬುವೆಱೆಗಳನೊಟ್ಟಿಸಿ ... ಸಮೆದುದೆಂಬಂತಿರೆ (ರಾಮಾಶ್ವ. ೫೨-೧೬). ತುಂಬುಪೆರೆ: ತುಂಬುಪೆರೆಯನು ಕಂಡು ಕಡಲುಬ್ಬಿ ಹರಿವಂತೆ (ಮಲೆದೇ. ೪೫-೦); ಸುಗ್ಗಿಯಲಿ ತುಂಬುಪೆರೆ ತೆಂಗಾಳಿ ಹೂಗಣೆಯರೊಡ್ಡಿ ದುರುಳಿಗೆ ಸಿಲುಕಿ ಅಳುಕದೆ ಇಹರು ಉಂಟೇ ? (ಚಂದ್ರಸ. ೮೬-೦೭). ತುಂಬುವೆರೆ: ತುಂಬುವೆರೆ ಮೋರೆಯಂ ಮೆಚ್ಚಿ ಬಂದಿಹ ಕೆಚ್ಚು ಕುಂಬಿಡುವುದೆನೆ (ಕಾಲೂರ. ೦೪೯-೩೨೫) ; ಕಡಲಾಳವನುಗಿದುಬಂದ ತುಂಬುವೆರೆ ತಾನು ! (ಚಂತನ ೨-೫).ತುಂಬುಹೆರೆ : ಎಳೆಯ ಹೆರೆಯೊಳೆ ತೊಳಗಿ ತುಂಬುಹೆರೆಯಾಗಿ ... ಒಂದು ದಿವ್ಯ ಮಣಿ ಬೆಳಕು, ಮೂಡಿ (ಹೊಂಗಳು. ೩೪-೨೦). [ತುಂಬು$_2$ + ಪೆಱೆ]

ತುಂಬುವೇಱು (ನಾ). (ಬಂಡಿಯಲ್ಲಿ) ತುಂಬಿರುವ ಹೇರು,– ಹೊರೆ : ಸಂಬುಕ ಪಡಗು ಜೋಗುಗಳಿಗೆ ಸುಂಕವು ಕೊಂಬ ರಾಜೇಂದ್ರನಿದಿರೊಳು ತುಂಬುವೇಱಿಗೆ ಸುಂಕವ ಕೊಂಬ ನೃಪರಾಡಂಬರ ನೆರೆಯಲಾರ್ತವುದೆ (ಕುರಾಸಾಂ. ೦೦-೨೧). [ತುಂಬು$_2$ + ಪೇಱು$_3$]

ತುಂಬುಸಭೆ (ನಾ). ಜನರಿಂದ ತುಂಬಿರುವ ಸಭೆ : ನಿನ್ನ ಮೇಲೊಂದು ಪದ್ಯವ ಬರೆದು, ಕನ್ನಡಿ ಕಟ್ಟುಹಾಕಿ ತುಂಬುಸಭೆಯೊಳು ಮಾನಪತ್ರ ಸಲಿಸುವೆವು (ನೆಲಮು. ೨೬-೦೯). [ತುಂಬು$_2$ + ಸಭೆ]

ತುಂಬುಹೆರೆ 'ತುಂಬುವೆಱೆ' ನೋ.

ತುಂಬುಱು (ನಾ). ಒಂದು ಬಗೆಯ ಹುಳು : ಸ್ಪರ್ಶರಸಗಂಧಂಗಳೆಂಬೀ ಮೂಱನಱಿವ ... ಬೆದೆವುಱು ತುಂಬುಱು ಮೊದಲಾದವಱೊಳಂ (ಪಸಾರ. ೯೫-೦೮). [ತುಂಬು$_0$ + ಪುಱು]

ತುಂಬೆ$_1$ 'ತುಂಬಿ$_1$' ನೋ.

ತುಂಬೆ$_2$, ತುಂಬಿ$_2$ (ನಾ). ಬಿಳಿಯ ಸಣ್ಣಹೂವುಗಳನ್ನು ಬಿಡುವ ಒಂದು ಬಗೆಯ ಗಿಡ ಮತ್ತು ಅದರ ಹೂವು : "ಅತಿಚ್ಛತ್ರ = ತುಂಬೆಯ ಗಿಡ" (ಅಕಾನಿ. ೧-೨೭); ತಿಲತೈಲಮಂಬಿಲಂ ತುಂಬೆ ಲೊಕ್ಕಿ ಸೊರೆ ಸುಣ್ಣಮೆರ್ಕೆ ಯೆಲೆ ಸಾಸಿವೆ ತಂಬುಲದೆಲೆಯಿವನಿಕ್ಕುಗೆ ಗೋಕುಲಕ್ಕೆ ರುಜೆ ತೀರ್ಗುಂ (ಲೋಕೋಪ. ೯-೨೦೮) ; ತುಂಬೆ ಲೊಕ್ಕಿ ಸಹ (ಸೌಇಎ. ೦೯೨೯, ಮಂಗಳೂರು. ೪೬೯-೦೭ : 1870) ; ಜಾಜಿ ಬಕುಳಂ ತುಂಬೆ ... ಇವು ಶುಭ್ರಪುಷ್ಪಂಗಳೊಳು ಫಲಾಧಿಕಮಪ್ಪವು (ವೀಶ್ವಪು. ೬-೧೦-೧೬) ; ಭ್ರಮರ ನೆರೆದೊಂದಾಗಿ ತುಂಬೆ [ಪಾಠಾಂ.ಬಿ]ಯ ಹೂವ ನೆಱೆ ಬಿಟ್ಟು ನಿಮಿರ್ದ ಪಾದರಿವೂಗೆಱಗಿದಂತೆ (ಸಾಳ್ವಭಾ. ೪-೦೮) ; ತುಂಬೆ ಹೂವಿನ ಪೂಜೆ (ಮೈಅರಿ. ೦೯೩೯, ೩೩-೧೨ ; 1560). ತುಂಬಿ$_2$: ಪಲ್ಲವಿಪ ಕಕ್ಕೆ ಬಿಳಿಯೆಕ್ಕೆಗಳ ಮೊತ್ತಮಂ ರುದ್ರ

ಜಟೆಯಂ ತುಂಬಿ [ಪಾಠಾಂ.ಬೆ] ಯಂ ಕಂಚಿವಾಳಮಂ ಭದ್ರಮುಖಿ ಮೊದಲಾದ ನವಪತ್ರಜಾಲಮಂ ಕಂಡು (ಪುಷ್ಪರ. ಹ. ೫೨೩-೫); ಲೋಲತರ ಕಿರುಕಸಾಲೆಯ ಪುಂಡಿ ತುಂಬಿ ಬಸಳೆಯ ಭಂಗಿಸೊಪ್ಪುಗಳನು (ಮಹಾವಿ. ೧೦-೩೫). [ದೇ.॥ ತಮಿ. ತುಮ್ಬೈ; ಮಲ. ತುಮ್ಬ; ತುಳು. ತುಂಬೆ, ತುಂಬಿ; ತೆಲು. ತುಮ್ಮಿ]

ತುಂಬೆ$_3$ 'ತುಂಬು$_4$' ನೋ.

ತುಂಬೆಗಿಡ (ನಾ). = ತುಂಬೆ$_2$: "ದ್ರೋಣಃ – ಕರೀಕಾಗಿ, ನಾಗಳ, ತುಂಬೇಗಿಡ" (ಸಿದ್ಧಾಂತಿ. ೩೩೨); ಯಾವ ಕೈಗಳ ಸ್ಪರ್ಶದಿಂದ ತುಂಬೆಗಿಡವೂ ತಾಳೆಯಂತೆ ಬಾನಿನೆತ್ತರ ಬೆಳೆಯಬಹುದೋ (ಅರರೋ.೨).

[ತುಂಬೆ$_2$ + ಗಿಡ (< ಗಿಡು)]

ತುಂಬೆದೆ (ನಾ). ತುಂಬಿದ ಎದೆ: ಹರಿಯುತ್ತಿರುವಳು ಕನ್ನಡತಾಯಿಯ ತುಂಬೆದೆ ಸೂಸಿದ ಸುಕುಮಾರಿ! (ಅಗ್ನಿಹಂ. ೩೨-೨).

[ತುಂಬು$_2$ + ಎದೆ (<ಎರ್ದೆ)]

ತುಂಬೆಪಾದಿ (ನಾ). ಒಂದು ಊರಿನ ಹೆಸರು: ತುಮ್ಬೆಪಾದಿಯೊಳ್ಕಾದಿ ಕಾಳೆಗಮಿಮ್ಬಟಿದೊಡೆ ಆನೆಯೊಳಾನ್ತಿಱುದು ಸತ್ತೊಡೆ (ಎಳ. IX, ಬೆಂಗಳೂ. ೮೩-೪; ಸು. 890). 'ತುಂಬೆವಾಡಿ' ಪರಾ. [?]

ತುಂಬೆಮರ (ನಾ). ಒಂದು ಬಗೆಯ ಮರ: ಬಿಳೀಜಾಲಿ, ತೊಪ್ಪಾಲೆ, ಸಾರಾಯಿಬೇಲ, ತುಂಬೆಮರ (ಮೈಜಿಗಿ. ೦-೦೬). [ತುಂಬೆ$_0$ + ಮರ$_1$]

ತುಂಬೆವಾಡಿ (ನಾ). ಒಂದು ಊರಿನ ಹೆಸರು: ಬಿದಿರೂರಲು ಬೂತುಗನಂ ತುಮ್ಬೆವಾಡಿಯ ಗಡ್ಡಯ್ಯನ ಮಗಂ ಪೊನ್ನಿಗಂ ಕಾದಿ ಸತ್ತು ಸ್ವರ್ಗ್ಗದಲಿಟ್ಟಂ (ಎಳ. XII, ಮದ್ದಗಿ. ೨೬-೦೮; ಸು. 950). [ತುಂಬೆ$_0$ + ಪಾಡಿ$_1$]

ತುಂಬೆವಿಂಡು 'ತುಂಬಿವಿಂಡು' ನೋ.

ತುಂಬೆಹುಳ (ನಾ). ಅಳಿ; ತುಂಬಿ: "ಮಧುವ್ರತಃ ... ರೋಲಂಬಃ, ಬಂಭರಃ ಈ ೧೫ ತುಂಬಿಯ ಹೆಸರುಗಳಂ. ತುಂಬೆಹುಳ" (ಸಿದ್ಧಾಂತಿ. ೦೪೨).

[ತುಂಬೆ$_1$ (<ತುಂಬಿ$_1$) + ಹುಳ (<ಪುಟು)]

ತುಂಬೊಲುಮೆ (ನಾ). ಹೆಚ್ಚಾದ ಪ್ರೀತಿ; ಅಧಿಕವಾದ ಅಕ್ಕರೆ: ಮರದೊಳೆಂತೋ ಅಂತೆ ತುಂಬೊಲುಮೆ ಸಂತನೆಡೆ ನಿಶ್ಶಂಕೆಯೊಳು ನೆರೆವ ಹಕ್ಕಿಗಳ ತೆರದಿ (ಮಲೆದೇ. ೪೫-೧). [ತುಂಬು$_2$ + ಒಲುಮೆ (<ಒಲ್ಮೆ)]

ತುಕಡಾ 'ತುಕಡಿ$_2$' ನೋ.

ತುಕಡಿ$_1$ (ನಾ). (ಕರಾ) ಗೋದಿಯ ಹಿಟ್ಟಿನಿಂದ ಕರಿದಂ ಮಾಡುವ ಒಂದಂ ಬಗೆಯ ತಿಂಡಿ; ಶಂಕರಪೋಳಿ. [← ತುಳು. ತುಕುಡಿ]

ತುಕಡಿ$_2$, ತುಕಡಾ, ತುಕ್ಕಡ, ತುಕ್ಕಡಿ (ನಾ). ೧. ತುಂಡು; ಚೂರು; ತುಣುಕು: ಅವನ ಮೈಮೇಲಿನ ಅರಿವೆಯ ತುಕಡಿಯನ್ನು ಹರಿದುಕೊಂಡು ಅದರಿಂದ ಅವನ ಮುಖವನ್ನು ಒರೆಸಿದನು (ಬಂಗಾಹೆ. ೬೪); ಆ ಕೋಳಿಯ ಕೊಂದು ತುಕಡಿಯ ಮಾಡಿ ರುಚಿಯನು ನೋಡಿ (ತುಪದ. ೫೩). ೨. ರೊಟ್ಟಿ. ಚಪಾತಿ: 'ತುಕಡಿಮುರಕ' ಪರಾ. ೩. ಸೈನ್ಯದ ಒಂದು ಭಾಗ; ಒಬ್ಬ ಅಧಿಕಾರಿಯ ಹತೋಟಿಗೆ ಒಳಪಟ್ಟ ಸೇನಾ ವಿಭಾಗ: ಭಾರಿಯಾದ ಒಂದು ದುಡಿನ ತುಕಡಿಯು ಈ ಊರಲ್ಲಿ ಠಾಣ್ಯ ಹಾಕಿಕೊಂಡು ಇರುತ್ತಿತ್ತು (ಮುಸುಗ. ೯); ನಿಯಾರ್ಕಸನು ಅಲೆಕ್ಸಾಂಡರನ ಒಂದು ತುಕಡಿ ಸೈನ್ಯವನ್ನು ತೆಗೆದುಕೊಂಡು ... ಕಾರ್ಮೇನಿಯ ಮುಟ್ಟಿದನು (ಪ್ರವಾಇ. I, ೭೩). ೪. ದೇಶದ ಒಂದಂ ಭಾಗ; ಪ್ರಾಂತ; ಜಿಲ್ಲೆ: ಪ್ರತಿ ತಾಲ್ಲೂಕಿಗೂ ಒಬ್ಬೊಬ್ಬ ಆಮೀಲರನ್ನು ನೇಮಿಸಿದರು. ಅವರೆಲ್ಲಾ ಆಯಾ ತುಕಡಿ (ಡಿಸ್ಟ್ರಿಕ್ಟು) ಸುಬೇದಾರರುಗಳ ಅಧಿಕಾರಕ್ಕೆ ಒಳಪಟ್ಟಿದ್ದರು (ಮಹಾವಂ. II, ೩೨). **ತುಕಡಾ**: ೧. ಇದ್ದಲಿನ ತುಕಡಾಗಳು, ಒಂದು ಬೆಂಕಿಕಡ್ಡಿಯ ಪೆಟ್ಟಿಗೆ ಎಲ್ಲಾ ಹೊರಗೆ ಬರುತ್ತವೆ (ಸಾಹೇಬ್. ೨೦). **ತುಕ್ಕಡ**: ೧. ಮುಸಲ್ಮಾನರು ರಾಜಧಾನಿಗೆ ಮುತ್ತಿಗೆ ಹಾಕಿ ತಮ್ಮೆಲ್ಲರನ್ನೂ ತುಕ್ಕಡ ತುಕ್ಕಡ ಮಾಡಿಬಿಡುವರೆಂದುಕೊಂಡಳು (ಬಂಕಿಮ. ೩೦೪). **ತುಕ್ಕಡಿ**: ೩. ಅದು ಹೆಚ್ಚುಕಡಿಮೆ ಯುದ್ಧಕಾಲದ ತಮ್ಮದೊಂದು ತುಕ್ಕಡಿಯನ್ನೇ ಹೋಲುತ್ತದೆ (ಹೇಮಳೂ.೦೬); ಕಾಮನಾಯಕ ಎಂಬಾತನು...ಹದಿನಾರು ಮದದ ಆನೆಗಳ ತುಕ್ಕಡಿಗೂ ಅಧಿಪತಿಯಾಗಿದ್ದನು (ರಾವಿಜ. ೦೫೩). ೫. ಊರು, ಪಟ್ಟಣ ಮೊದಲಾದುವುಗಳ ಒಳವಿಭಾಗ; ಮೊಹಲ್ಲ; ಹರವು: ಯಾವ ಗ್ರಾಮವನ್ನಾದರೂ ತುಕ್ಕಡಿಗಳನ್ನಾಗಿ ವಿಭಾಗಿಸಿ ಅಂಥ ಪ್ರತಿ ಒಂದು ತುಕ್ಕಡಿಗೂ ಬೇರೆಬೇರೆ ಗ್ರಾಮಕೋರ್ಟನ್ನು ಸ್ಥಾಪಿಸಬಹುದು (ಗ್ರಾಮಾಳ. ೦೫). ೬. ಗುಂಪು; ವಿಭಾಗ; ಬಣ: ನಮ್ಮಲ್ಲಿಯ ನಾಲ್ವತ್ತು ಆಳುಗಳು ನಾಲ್ಕು ತುಕ್ಕಡಿಗಳಾಗಿ ಕೆಲವರು ಸಾಮಾನು ಚೊಕ್ಕಟವಾಗಿಸಿದರು (ರಕ್ತಧ್ಯ. ೨೬೦).

[← ಮರಾ. ತುಕಡಾ; ಹಿಂ. ಟುಕಡೀ, ಟುಕಡಾ]

ತುಕಡಿಮುರಕ (ನಾ). ೧. ಬರೀ ಚಪಾತಿ ತಿನ್ನುವವನು; ಉಂಡಾಡಿ ಭಟ್ಟ. ೨. (ಆಲಂ) ಶಕ್ತಿಹೀನ: ಇವರೇನು ತುಕಡಿಮುರಕ ಹಾರವರೆಂದು ಯವನರು ತಿಳಿದಿರಬಹುದು (ಮಾಧವ. ೫).

[ತುಕಡಿ$_2$ + ಮುರಕ (< ಮುರಿಕ)]

ತುಕಲಿ (ನಾ). ಒಂದು ಬಗೆಯ ಗಿಡ: (ಕಿ). [?]

ತುಕ್ಕಡ 'ತುಕಡಿ$_2$' ನೋ.

ತುಕ್ಕಡಿ 'ತುಕಡಿ$_2$' ನೋ.

ತುಕ್ಕಡಿದಾರ (ನಾ). ಜಿಲ್ಲೆಯ ಅಧಿಕಾರಿ; ಜಿಲ್ಲೆಯ ಆಡಳಿತ ನಡಸುವವನು: ತುಕ್ಕಡಿಯಲ್ಲಿ ತುಕ್ಕಡಿದಾರ ಸೇರಿ ತುಕ್ಕಡಿಯೆಲ್ಲ ಸುಡಿಸಿದ (ಗಾದೆ).

[ತುಕ್ಕಡಿ (<ತುಕಡಿ$_2$) + – ದಾರ$_4$]

ತುಕ್ಕಡಿಸು (ಕ್ರಿ). ತುಂಡರಿಸು; ಚೂರಂಚೂರಂ ಮಾಡು; ಭಾಗ ಮಾಡು: ಅವಱಡಂಗುಗಳ ತುಕ್ಕಡಿಸಿ ಬಗೆಯಱಿದು ಭಾಗೆಯಂ ಮಾಳ್ಪದೀವದ ಖಗಮೃಗಾವಳಿಯನು ಹಕ್ಕೆಗೆಯ್ದಿಸುವ...ಬೇಡರ ಬಿಂದವೊಪ್ಪಿತು (ಸಮ್ಯಕೌ. ೦೦-೨೬). [ತುಕ್ಕಡಿ (< ತುಕಡಿ$_2$) + – ಇಸು$_3$]

ತುಕ್ಕಿಡಿ (ನಾ). (?): ಎಚ್ಚಡ್ಡಾಯುಧಮಂ ಕಿಟ್ಟಚ್ಚರಿಯೆನೆ ನೂಂಕೆ ತುರಗಮಂ ತುಕ್ಕಿಡಿಗಳ್ ಪಚ್ಚವಳದೆಡೆಗಳಂ ಮುನ್ನೆಚ್ಚ ಸರಲ್ ತಾಗೆ ಪಱಿದುವುಱ್ ಚೆಚ್ಚಱದಿಂ (ಚಂದ್ರಪು. ೦೦-೬೯). [?]

ತುಕ್ಕಿಸು (ಕ್ರಿ). ತಿರುಗಿಸು; ಅಲೆದಾಡಿಸು; ಅಲೆಯುವಂತೆ ಮಾಡು: ಸರ್ವಜೀವಿಗಳೊಳೇತಕ್ಕೆ ಎನ್ನೊಬ್ಬನ ತುಕ್ಕಿಸುವಿಯೊ ಬಕ್ಕದಾಸನೊ ನಾನು (ವಿದಾಕ್ಯ. ೦೫೭). [ತುಕ್ಕು$_1$ + – ಇಸು$_3$]

ತುಕ್ಕು$_1$ (ಕ್ರಿ). ೧. ಗುಂಪುಗೂಡು; ಕಿಕ್ಕಿರಿ; ಒಟ್ಟುಸೇರು: (ಕಿ). ೨. ಮೇಲೆ ಬೀಳು; ಆವರಿಸು; ಮುತ್ತು: ಅಕ್ಕಱಿಂದವರ ವರತನು ಪರಿಮಳಂಗಳ್ಗೆ ತುಕ್ಕುವೆಳದುಂಬಿಗಳ ಬಳಗಂಗಳೆಂಬಂತೆ (ಜೈಮಿಭಾ. ೨೮-೪೩); ಅಡವಿಗಿಡವ ತುಕ್ಕಿ ಅಗಳಿ ತರುವದಲ್ಲ (ವಿಸ್ತೋಸು. ೫೫-೨); ಎಕ್ಕಲಗಳಂ ತುಕ್ಕಿ ಮುಕ್ಕುಳಿಸಿ (ಪರಶು. ೩೦-೫). ೩. ಸುತ್ತು; ತಿರುಗು; ಅಲೆದಾಡು; ಎಡೆತಾಕು: ವೃಥಾ ಭವಂಗಳ ತುಕ್ಕುತೆನ್ನ ಮಹತ್ವವೆಲ್ಲವ ಮುಕ್ಕುಗಳದೆನಲಾ (ಸದ್ಯುರು. ೩-೩೦); ಅಕ್ಕ ನೀನೆನ ಗೋಸುಗ ಮೂಜಗವನು ತುಕ್ಕಬೇಹುದು ರಾತ್ರಿಯಲಿ (ಮೋಹತ. ೨೮-೩೪); ಪಾಂಡವರ ಕಾಣೆ ರಾಜ್ಯಮಂ ತುಕ್ಕಿದೆವು ಭೂಪತಿಯ ಕುರುಹಿಲ್ಲ (ತುರಂಗ. ೩೬-೪); ಲೆಕ್ಕವಿಲ್ಲದೆ ದೇಶ ತುಕ್ಕಿದರೆ ಫಲವೇನು (ಜಗದಾ. ೩೦೫).

ತುಕ್ಕು$_2$ (ನಾ). ಕಬ್ಬಿಣಕ್ಕೆ ಹತ್ತುವ ಕಿಟ್ಟ; ಜಂಗು: ಧಾತುಗಳ ಆಮ್ಲಜ ವಿಕಾರಗಳಿಗೆ ಕನ್ನಡದಲ್ಲಿ ಭಸ್ಮ, ಜಂಗು, ಖತಿ, ತುಕ್ಕು ಎಂಬ ಹೆಸರುಗಳನ್ನು ಕೊಡುವರು (ಮುಂಬಯಿ. ೬-೩೨); ಆಗ ಕಬ್ಬಿಣವಾಗಿ ಉಳಿಯುವ ಬದಲು, ಕಬ್ಬಿಣದ ತುಕ್ಕು ಉಂಟಾಗುವುದು (ಬಾಲಪ್ರ. I, ೪೫೩).

[ದೇ. ॥ ತಮಿ. ತುಕ್ಕು, ತುಪ್ಪು ; ಮಲ. ತುರುಮ್ಬು, ತುರುವು ; ತುಳು. ತುಕ್ಕ್ ; ತೆಲು. ತುಪ್ಪು, ತ್ರುಪ್ಪು]

ತುಕ್ಕುಗೊಳ್ (ಕ್ರಿ). ಜಂಗು ತಿನ್ನು ; ತುಕ್ಕುಹಿಡಿ : ಮಸೆದ ಕೆಯ್ದುಗಳ್ ತುಕ್ಕು(ಳ್ಪು)ಗೊಳ್ವೊಡಂ (ಅಟ್ಟಮ. ೨-೦). [ತುಕ್ಕು$_2$ + ಕೊಳ್$_1$]

ತುಕ್ಕುಹಿಡಿ (ಕ್ರಿ). ೧. = ತುಕ್ಕುಗೊಳ್ : ಕಬ್ಬಿಣಕ್ಕೆ ತುಕ್ಕುಹಿಡಿಯುವುದು (ಮುಂಜಯಿ. ೪-೧೪೯) ; ಅಲ್ಯುಮಿನಿಯಮ್ಮಿನ ಪ್ರಯೋಜನಗಳು ಹಲವು. ಅದು ಹಗುರವಾಗಿರುತ್ತದೆ. ತುಕ್ಕುಹಿಡಿಯುವುದಿಲ್ಲ (ಅಡುಸಾ. ೪೨) ; ತುಕ್ಕುಹಿಡಿದ ಖಡ್ಗ ಮಿಕ್ಕಿದವನಿಗೂ ಆಗದು (ಗಾದೆ). ೨. (ಆಲಂ) ದೋಷಗ್ರಸ್ತವಾಗು ; ಮಂಕಾಗು ; ಹೀನವಾಗು ; ಹಿರಿಯರ ತುಕ್ಕು ಹಿಡಿದ ದೃಷ್ಟಿಗೆ ಕಿರಿಯರ ಪ್ರೇಮವು ಅರ್ಥವಾಗುವುದಿಲ್ಲ (ದೂರಶ. ೧೭೮) ; ಮೇಧಾಶಕ್ತಿಗೆ ತುಕ್ಕುಹಿಡಿಯುವ ಸ್ಥಿತಿ ಒದಗಿತು (ಕಾಮಿಕಾಂ. ೩) ; ಈ ರೀತಿಯಲ್ಲಿ ಮಕ್ಕಳ ಶಿಕ್ಷಣದ ಅಮೂಲ್ಯಸಾಧನವೊಂದು ತುಕ್ಕುಹಿಡಿದು ನಶಿಸಿ ಹೋಗುತ್ತಿರುವುದು (ಸಮಾಲೋ. ೧೦೯).

[ತುಕ್ಕು$_2$ + ಹಿಡಿ$_1$ (< ಪಿಡಿ$_1$)]

ತುಗಚು (ಕ್ರಿ). ಬೀಡಿಸುವವರನ್ನು ತೊಲಗಿಸಲು, ಇಷ್ಟವಿಲ್ಲದಿದ್ದರೂ ಕೊಡು : ಒಂದು ಎಳೆನೀರು ಬುರುಡೆ, ಒಂದು ಪಾವಲಿ ತುಗಚಿದ (ಅದೂಟ. ೪೪). [?]

ತುಗಿ (ನಾ). ಒಂದು ಬಗೆಯ ಮರ : ಸುಜ್ಜಲು . . . ಬೀಳ್ಕಂಬಿ, ತುಗಿ (ಮೃಚ್ಛಕಿ. ೪-೬೨). [?]

ತುಗಿಲ 'ತುಗ್ಗಿಲ್' ನೋ.

ತುಗ್ಗಲಿ 'ತುಗ್ಗಿಲ್' ನೋ.

ತುಗ್ಗಿಲ್, ತಗ್ಗಿಲು, ತುಗಿಲ, ತುಗ್ಗಲಿ, ತುಗ್ಗಿಲು (ನಾ). ಒಂದು ಬಗೆಯ ಮರ : "ಅಗ್ನಿಯೆನೆ ತುಗ್ಗಿಲಕ್ಕುಂ" (ಮಂಗರಾ. ೩೬-೦೮) ; ಕೊಗ್ಗಿ ವರಲಕ್ಷ್ಮಿ ವುನರ್ನವಿಯೆಂಬ ಮೂಱುಮಂ ಬೆರಸಿರೆ ಕಲ್ಲೊಳಿಟ್ಟರೆದು ತುಗ್ಗಿಲಣಂಬೆಯುಮಂ . . . ಈಂಟೆ ವಿಷಂ ಕಿಡುಗುಂ (ಐಮದ. ೦೩-೦೮). **ತಗ್ಗಿಲು** : ತಂಡಸ ತಡಸ ತ[ಪಾಠಾಂ. ತು]ಗ್ಗಿಲು ತದಿಕು ತಪಸಿಗಳ . . . ವನಭೂಜಾಳಿಯಲಿ ಹೂಳಿದರಕಂಪನನಸಮರಣರಥವ (ತೊರಣಾ. ೬-೧೮-೦೮). **ತುಗಿಲ** : ಮೂಡಲು ತುಗಿಲಮರದ ಮೇಲು ಗಡೆಯ ಬೆಟ್ಟದ ಬಂಡೆ ಮೇರೆ (ಸೌಇಇ. IX — ii, ೫೩೫-೨೯ ; 1531). **ತುಗ್ಗಲಿ** : ಜಾಲೆ ಜಾನೆಯು ಬೋರೆ ತರೆಯು ತುಗ್ಗಲಿಯುಯಂ ಕೋಲೆಯುಂ (ನಪಮೋ. ೮-೯). **ತುಗ್ಗಿಲು** : ಬಡಗಣ ತೆವರ ಮೇಲಣ ತುಗ್ಗಿಲ ಮರದಲ್ಲಿ ನಟ್ಟ ಕಲ್ಲು (ಮೈಅರಿ. ೦೯೪೦, ೪೮-೦೭೮ ; 1335) ; ಯೀಶಾನ್ಯದಲ್ಲು ಮಾತ್ರವೇ ತುಗ್ಗಿಲು ಹುತ್ತಹಾರೆ ಗ್ರಾಮಕೆ ಮೂಡಲು (ಎಕ. XI, ಹೊಳೆಲ್ಕೆ. ೯೪-೦೦೬ ; 1511). [?]

ತುಗ್ಗಿಲು 'ತುಗ್ಗಿಲ್' ನೋ.

ತುಚ್ಚ (ಗು). = ತುಚ್ಛ : ತುಛ್ಯ – ತುಚ್ಚ (ಕಮದ. ೨೫೬ ಪ್ರಯೋ).

[<ಸಂ. ತುಚ್ಛ]

ತುಚ್ಚತನ (ನಾ). ನೀಚತನ ; ಅಲ್ಪತನ : ಎನಗೆ ನಟವೃತ್ತಿ ಕರಂ ತುಚ್ಚತನವೆನ್ನದಾಡಿದನಚ್ಚರಿಯೆನೆ ವಚ್ಚಿ (ಪುಷ್ಪಪು. ೦೨-೫೨).

[ತುಚ್ಚ + – ತನ]

ತುಚ್ಚಿಂಗೆಱ^3 (ನಾ). ಒಂದು ಊರಿನ ಹೆಸರು : ತುಚ್ಚಿಂಗೆಱ^{3}ಯ ಹೊಲ್ಲಿ ಸೆಟ್ಟಿ . . . ಚವುಣ್ಡಯ್ಯಸೆಟ್ಟಿಯಿನ್ತಿನಿಬರುಂ ತಂಬುಲಿಗಸಾಸಿರ್ವ್ವರುಂ (ಸೌಇಇ. XI — ii, ೧೪೮-೧೯ ; 1099). [? + ಕೆಱ^3]

ತುಚ್ಛ (ಗು). ೧. ಜೊಳ್ಳಾದ ; ಬರಿದಾದ ; ಶೂನ್ಯವಾದ. ೨. ಅಲ್ಪವಾದ ; ಸಣ್ಣ ; ಚಿಕ್ಕ. ೩. ಕೆಳದರ್ಜೆಯ ; ತಿರಸ್ಕಾರಕ್ಕೆ ಯೋಗ್ಯವಾದ ; ನೀಚವಾದ ; ಕ್ಷುಲ್ಲಕವಾದ : ತುಚ್ಛಮಾತು ಆಡುವವನು ಹುಚ್ಚನಿಂದ ಕಡೆ (ಗಾದೆ). (ನಾ). ೪. ಬರಿದಾದುದು ; ಖಾಲಿ ; ಶೂನ್ಯ : ವಂಧ್ಯಾಪುತ್ರ ಶಶವಿಷಾಣಾದಿಗಳೇ ಅಸತ್ತಾದ ತುಚ್ಛ ಮೆಂದು ತಿಳಿಯಲಪ್ಪುದು (ವಿವೇಕ. ೨೦) ; ತುಚ್ಛ (ಶೂನ್ಯ) ದಿಂದ ಮುಚ್ಚಿದ ಅದು ತಪಸ್ಸಿನ ಮಹಿಮೆಯಿಂದ ಆವಿರ್ಭಾವವಾಯಿತು (ಭಾರದ. ೨೬). ೫. ಕಡಮೆಯಾದುದು ; ಕೀಳು ; ಹೀನ : ವ್ಯೋಮಯಾನಂ ತುಚ್ಛ ಮೆನೆಯುಂ ಗ್ರಾಮಯಾನಮತುಚ್ಛಮೆನೆಯುಂ (ಶಾಂತಿಪು. ೧೨-೨೩೮) ; ಹಿಂದೆ ಲಂಕೆಯ ಸುಟ್ಟ ಕೋಡಗ ಬಂದ ಕಪಿಭಟರೊಳಗೆ ತುಚ್ಛವು (ಕಾಶಿರಾ. ೦೫-೨೮) ; ಎಷ್ಟು ಹೇಳಲಿ ಬಹಳ ತುಚ್ಛವನೆ ಮಾಡುವರು (ಪುರಂದ. ೦-೦೪೮-೩). ೬. ಅಲ್ಪವ್ಯಕ್ತಿ ; ಕೀಳುಮನುಷ್ಯ : ತುಚ್ಛನ ಸಂಗಡ ಬಾಳೋದಕ್ಕಿಂತ ಹುಚ್ಚನ ಸಂಗಡ ಬಾಳೋದು ವಾಸಿ (ಗಾದೆ). [ಸಂ.]

ತುಚ್ಛಾಜಿ (ನಾ). ಕೀಳುಮಟ್ಟದ ಕಾಳಗ ; ಹುಲುಗಾಳಗ : ತುಚ್ಛಾಜಿ ಲಜ್ಜಾಸ್ಮಿತನಾಂತಂ ಚೋಳಗೌಳಾಸುರಸಮರಜಯಶ್ರೀಸಮಾಲಿಂಗಿತಾಂಗಂ (ಎಕ. V, ಬೇಲೂರು. ೦೭-೪ ; 1136). [ತುಚ್ಛ + ಆಜಿ$_1$]

ತುಚ್ಛಿಸು (ಕ್ರಿ). ಕಡೆಗಣಿಸು ; ತಿರಸ್ಕರಿಸು : ವಂಶಕೆ ಈತನೊಬ್ಬನಾದರು ನಮಗೆ ಶಿಷ್ಟನಾಗಿರಲೆಂದು ಪೇಳಿ ಗಂಗಾದೇವಿ ತುಚ್ಛಿಸಿದ ಮಾತನೆಂದು ಮೀರಿದನು ತಾನುಯಿನ್ನಿಹುದಿಲ್ಲವೆಂದಾಡಿ ಸಾರಿದಳು (ತುರಂಗ. ೯-೩೨).

[ತುಚ್ಛ + – ಇಸ್ಸು$_3$]

ತುಚ್ಛೀಕರಿಸು (ಕ್ರಿ). = ತುಚ್ಛಿಸು : ನೀನು ಚೌಡಪ್ಪನವರನ್ನು ಹಾಗೆ ತುಚ್ಛೀಕರಿಸಬಾರದು (ಹಳ್ಳಿಹಾ. ೦೦೫). [ತುಚ್ಛೀಕರಣ್ಯ + – ಇಸ್ಯ$_3$]

ತುಜಾವಂತು (ನಾ). [ಸಂಗೀತ] ಒಂದು ರಾಗದ ಹೆಸರು : ರಾಗ ತುಜಾವಂತು ಅಷ್ಟತಾಳ (ದೇವೀಪ್ರ. ೧೮). [?]

ತುಟಾಗ್ರತೆ (ನಾ). ಕೊರತೆ ; ಅಭಾವ : ಕೆಲವು ಹಳ್ಳಿಗಳಲ್ಲಿ ನೀರಿನ ತುಟಾಗ್ರತೆ ವಿಪರೀತವಾಗುತ್ತಿತ್ತು (ಮಹಿಮ. ೦೦೩) ; ಎಲ್ಲೆಲ್ಲಿಯೂ ಕಾಳಿನ ತುಟಾಗ್ರತೆ (ಗಾಳಿಗು. ೨೨) ; ಅಲ್ಲಿ ನೀರಿನ ತುಟಾಗ್ರತೆ ಎನಿಸ ತೊಡಗಿತು (ಸ್ಮೃತಿಚಿ. ೨೬೮). [<ತುಟ್ಟಗ್ರ]

ತುಟಾಯಿಸು (ಕ್ರಿ). ಬೇರೆಯಾಗು ; ಭಾಗವಾಗು ; ಪಾಲಾಗು : ಅಲ್ಲಿ ಜೀವನಕ್ಕೆ ಸಾಲದೆ ತುಟಾಯಿಸಿ ಕೋಲಾರಕ್ಕೆ ಬಂದನು (ಮಹಾಪಂ. I, ೦೭೬) ; ಕೆಲವು ದಿವಸದ ಮ್ಯಾಲೆ ಯೀ ವಂಶದ ಜನರ ಪೈಕಿ ತುಟಾಯಿಸಿ ಅಲ್ಲಿಂದಾ ಹೊರಟು (ಹೈದರ. ೨೯).

[ತುಟ್ಯಾ$_0$ (P ← ಮರಾ. ತುಟಣೇ) + – ಇಸ್ಯ$_3$]

ತುಟಾರ, ತುಠಾರ (ನಾ). ೧. ವಿಚಾರಮಾಡದಿರುವಿಕೆ ; ದುಡುಕು ; ಅವಿವೇಕ ; ಉದ್ಧಟತನ : ತುಟಿಮೀರಿದ ಹಲ್ಲು, ತುಟಾರದ ಮಾತು ಸರಿಮಾಡಲಾಗದು (ಗಾದೆ). ೨. ದುಡುಕಿ ಕೆಲಸ ಮಾಡುವವನು ; ಅವಿವೇಕಿ ; ಉದ್ಧಟ : ಆ ತುಟಾರ [ಪಾಠಾಂ. ತುಠಾರ, ತವಕಿಗ]ನ ಕಂಡು ನಿಮ್ಮಯ ತಾತ ಸೈರಿಸುವನೆ (ತೊರಣಾ. ೩೦-೯೯). 'ದೊಠಾರ' ಪರಾ. **ತುಠಾರ** : ೧. ಎಲವೊ ರಕ್ಕಸ ನಾವು ರಣಕತಿಬಲರೊ ದುರ್ಬಲರೋ ತುಠಾರದಿನಿಳಿಕೆಗಂಡೆಯಲಾ ಮೃಗಾಧಮ (ತೊರಣಾ. ೬-೨೨-೦೩).

[← ತೆಲು. ತುಟಾರ]

ತುಟಾರಿಸು, ತುಠಾರಿಸು (ಕ್ರಿ). ದುಡುಕಿ ಮಾತನಾಡು ; ವಿಚಾರ ಮಾಡದೆ ಹರಟು : ಎಲವೊ ಘಡ ಮಾವನ ತುಟಾರಿಸಿ [ಪಾಠಾಂ. ತುಠಾರಿಸಿ, ದೊಠಾರಿಸಿ, ವಿಭಾಡಿಸಿ] ಗಳಹುವೀ ನಾಲಗೆಯ ಕೀಳುವೆ (ಕುಮಾರವ್ಯ. ೦೫-೦೦) ; ಪಾಂಡವರ ತೊಡಕಿನ್ನು ಲೇಸಲ್ಲ ಸಂಧಿಯ ಮಾಡಿಕೊಳಿ ಎಂದರೆನ್ನನು ತುಟಾರಿಸಿದನೈ ಪಾಪಿ (ತುರಂಗ. ೪೮-೬). **ತುಠಾರಿಸು** : ಸಹಜವೇನ್ನುಡಿದಡೆ ತುಠಾರಿಸಿಯಹಿತರಾ ಕೌರವರು ನಿನಗೆ (ಗಿಳಿವಿಂ. ೯೯-೦೬). 'ದೊಠಾರಿಸು' ಪರಾ.

[ತುಟಾರ + – ಇಸ್ಯ$_3$./ತೆಲು. ತುಟಾರಿಂಚು]

ತುಟಿ (ನಾ). ಬಾಯ್ದೆರೆ; ಅಧರ; ಓಷ್ಠ: "ಅಧರಃ, ದಂತಚ್ಛದಃ, ಓಷ್ಠಃ, ದಂತವಾಸಃ—ಈಳಿ ತುಟಿ" (ಹಲಾಯು. ೬೬-೬೭); ಪಶ್ಚಿಮ ಪದ್ಮಾಸನದಲ್ಲಿ ಕುಳಿತು ನೆಟ್ಟಿಲುವ ಮುಖದು ತುಟಿ ಮಿಡುಕದೆ ಅಟ್ಟಿಯಾಡಿತ್ತಲ್ಲಾ (ಬಸವ. ೯೦೪); ತುಟಿ ವಿದ್ರುಮಮಂ ಸುಧಾಂಶುವಂ ನಿರ್ಮಳವಕ್ತ್ರಬಿಂಬವಿರದೇಳಿಸೆ (ಉದ್ಯಟಿ. ೨-೦೦೩); ಶಶಿಕಳೆಗೆ ಸದರವೆ ರಾಹು ರಚಿಸಿದ ತುಟಿಯ ತೋಟಿಯದು (ಕುವ್ಯಾಸ. ೦೪-೦೧೦); ಕೂಡೆ ಕದಪು ತುಟಿ ನಿಟಿಲವ ಚುಂಬಿಸಿ (ಕಂನವಿ. ೯-೦೯೩); ನಗೆಯ ಬೆಲುವ ತುಟಿಯ ಚಾಚಿ (ಅನಿಳೀ. ೦೬-೩); ತುಟಿಗೆ ತುಪ್ಪವಿಲ್ಲ, ಕಟಿಗೆ ಪಂಚಾರ್ತಿ ಬಯಸಿದ ಹಾಗೆ (ಗಾದ).

ತುಟಿ ಎರಡು ಮಾಡು=ಬಾಯಿಬಿಡು; ಮಾತನಾಡು: ಧರ್ಮಪತ್ನಿ ತುಟಿ ಎರಡು ಮಾಡದೆ ಪಣತಿಯಲ್ಲಿ ತುಪ್ಪ ಸುರುವಿದಳು (ಹಬ್ಬಿಬ. ೬೬); ಇನ್ನು ಯಾವ ವಿಷಯದಲ್ಲೂ ತುಟಿ ಎರಡು ಮಾಡುವ ಹಾಗಿಲ್ಲ (ಸುವಸಂ. ೦೫). ತುಟಿಗಟ್ಟಿ = ತುದಿಯವರೆಗೆ: ವಿಷಯ ತುಟಿಗಟ್ಟಿಕ್ಕೆ ಬಂದು ವಿಷಮಾವಸ್ಥೆಗೆ ಇಳಿಯುವಂತಿದ್ದಾಗ ಹಣವನ್ನು ಹಿಂದಿರುಗಿಸುವುದು ಮೊದಲಾಯಿತು (ರಂಗಸಾ. ೫೪). ತುಟಿಪಿಟಕ್ಕೆನ್ನು=ತಂಟೆ ಎರಡುಮಾಡು: ನೀನು ಇದೆಲ್ಲವನ್ನೂ ಕಣ್ಣಾರ ನೋಡುತ್ತಿದ್ದರೂ ತುಟಿಪಿಟಕ್ಕೆನ್ನದೆ ಕುಳಿತಿದ್ದೀಯೆ? (ವಡಕಾ. ೭೦); ಯಾರೂ ತುಟಿಪಿಟಕ್ಕೆನ್ನುವುದಿಲ್ಲ (ಪ್ರವಾಣ. II, ೨೮೩). ತುಟಿಮಿಾರಿದ ಹಲ್ಲು, ತುಟಿಮಿಾಱಿದ್ದಲ್ಲು = ತುಟಿಯನ್ನು ಮಿಾರಿ ವಂಂದಕ್ಕೆ ಚಾಚಿಕೊಂಡಿರುವ ಹಲ್ಲು; ಉಬ್ಬುಹಲ್ಲು: ನುಂಗಲಾಗದ ತುತ್ತೂ, ತುಟಿಮಿಾರಿದ ಹಲ್ಲೂ ಒಂದೇ ಸಮ (ಗಾದ); ತುಟಿ ಮಿಾಱಿದ್ದಲ್ಲಿನಂತ ದೂತ ಎಂದಿಗು ಬೇಡ (ಕನಕ. ೧೯೦-೪). ತುಟಿಯ ಭಾಷೆ = (ಮೂಕರಿಗೆ) ತಮ್ಮ ಆಶಯವನ್ನು ತಿಳಿಸುವಾಗ ಮಾಡುವ ತುಟಿಯಾ ಅಲುಗಾಟದ ಪ್ರಯೋಗ: ''ತುಟಿಗಳ ನಿಶ್ಶಬ್ದ ಚಲನೆಯಿಂದ, ಮೂಕರು ಮಾತನಾಡುವ, ಮೂಕರೊಂದಿಗೆ ಮಾತನಾಡುವ, ಮಾತನಾಡಿದ್ದನ್ನು ಅರ್ಥಮಾಡಿಕೊಳ್ಳುವ ಭಾಷೆ: ತುಟಿಯ ಭಾಷೆ; ಮೂಕರ ಭಾಷೆ'' (Lip_Language. ಇಂಳಿ). ತುಟಿಹೊಲಿದುಕೊಳ್ಳು = ಮಾತನಾಡದೆ ಇರು: ಮಾತಿಗೆ ಬೆಲೆಯಿಲ್ಲವಾದಾಗ ತುಟಿಹೊಲಿದು ಕೊಂಡಿರುವುದೇ ವಾಸಿ (ಕೂಧಿ).

[ದೇ.ಪ ತಮಿ. ತುಟ; ಮಲ. ಚೊಡಿ; ತುಳು. ತುಡಿ, ದುಡಿ; ಗೊಂಡಿ. ಟೊಟಿ]

ತುಟಿಕಚ್ಚು 'ತಂಟಿಗಚ್ಚು' ನೋ.

ತುಟಿಕಡಿ (ಕ್ರಿ). ೧. ತುಟಿಯಂನ್ನು ಹಲ್ಲಿನಿಂದ ಕಚ್ಚು. ೨. ತುಟಿಯನ್ನು ಕಚ್ಚಿಕೊಳ್ಳುವುದರ ಮೂಲಕ ದುಃಖ, ನಾಚಿಕೆ ಮೊದಲಾದ ಭಾವವನ್ನು ಸೂಚಿಸು: ತುಟಿಕಡಿದು ಅಧೋಮುಖಿಯಾದಳು (ಜಯಂತ. ೦೩೨).

[ತುಟಿ + ಕಡಿ1]

ತುಟಿಗಚ್ಚು, ತುಟಿಕಚ್ಚು (ಕ್ರಿ). = ತುಟಿಕಡಿ ೨: ''ಏನೂ ಇಲ್ಲ ಸುಮ್ಮನೆ'' ಎಂದು ತುಟಿಗಚ್ಚಿದಳು ಪ್ರಮಿಾಳ (ಪುರಂ. ೮೧). ತುಟಿ ಕಚ್ಚು: ಎವೆ ಬಡಿಸಿ ಕೆಡವು, ಬರಿಗಣ್ಣು ಬ್ಯಾಡ, ತುಟಿಕಚ್ಚಿ ಹಿಡಿಯದಿರು ಬಿಕ್ಕ (ನಾದಲೀ. ೩೮-೫೨); ಕಣ್ಮುಚ್ಚಿ ತುಟಿಕಚ್ಚಿ ಶೋಕವನದುಮಿಟ್ಟು ಹೋದೆನು (ಇಂದಾಪ. ೩೦-೩೮). [ತುಟಿ + ಕಚ್ಚು1 (<ಕರ್ಚು1)]

ತುಟಿಗೊಂಕು (ನಾ). ತಂಟೆಯಂನ್ನು ಕೊಂಕಿಸುವುದಂ: ಆಗಾಗ್ಗೆ ಒಂದು ಕಣ್ಣಿನ ವಿಂಚೊ, ಒಂದು ಮುಗುಳುನಗೆಯ ತುಟಿಗೊಂಕಿನ ಹೊಂಚೊ . . . ಇಣಿಕಿ (ಪುರಮ. ೨೫೯). [ತುಟಿ + ಕೊಂಕು2]

ತುಟಿತ (ನಾ). [ಜೈನ] ಒಂದು ಬಹು ದೊಡ್ಡ ಕಾಲಪರಿಮಾಣ: ಆತನಿಂ ಬಟಿಯಮೆನಿತಾನುಂ ಕಾಲದಿಂ . . . ತುಟತಾ [ಪಾಕಾಂ. ಕಾ] ಬ್ದಪ್ರಮಿತಜೀವಿತನುಮಾಗಿ (ಆದಿಪು. ೬-೫೬ ಪ). [<ಸಂ. ತ್ರುಟಿತ]

ತುಟಿತೆರೆ 'ತಂಟಿದೆರೆ' ನೋ.

ತುಟಿದೆರೆ, ತುಟಿತೆರೆ (ಕ್ರಿ). ೧. ತುಟಿಯನ್ನು ಬಿಚ್ಚು; ಬಾಯಿಬಿಡು. ೨. ಮಾತನಾಡು: ಇಬ್ಬರೂ ಮೈಯೆಲ್ಲ ಕವಿಯಾಗಿ ಕೇಳುತ್ತಿದ್ದರೂ ತುಟಿದೆರೆಯಲಿಲ್ಲ (ಪುನರು. ೩೦೦). ತುಟಿತೆರೆ: ೨. ಈವರೆಗೆ ತುಟಿತೆರೆಯದಿದ್ದ ವೀರಣ್ಣ ಈಗ ನಡುವೆ ಬಾಯಿ ಹಾಕಿದ (ಹಾಹುತ್ರ. ೯೫); ಪೂವಮ್ಮನೂ ತುಟಿತೆರೆಯಲಿಲ್ಲ (ನಡದಾ. II, ೦೧೩೮).

[ತುಟಿ + ತೆರೆ1 (<ತೆಱ್1)]

ತುಟಿಬಿಚ್ಚು (ಕ್ರಿ). = ತಂಟಿದೆರೆ ೧: ತುಟಿಬಿಚ್ಚಿ ಪೇಳು ಮೇಲ್ಗತೆಯ (ಕೋಚಿತ. ೨೨-೧); ಮಾಸ್ಲೋವ ತುಟಿಬಿಚ್ಚಲಿಲ್ಲ (ಪುನರು. ೪೦).

[ತುಟಿ + ಬಿಚ್ಚು1]

ತುಟಿಬೆರಳು 'ತುಟಿವೆರಳು' ನೋ.

ತುಟಿಮುತ್ತು(ನಾ). ೧. ತಂಟಿಗೆ ಕೊಡುವ ಮುತ್ತು; ಅಧರಚುಂಬನ. ೨. (ಆಲಂ) ಪ್ರೀತಿಗೆ ಪಾತ್ರ: ನಿರ್ಭಯದ ನಿಃಸೀಮದಲಿ ನೀ ನಮ್ಮ ತುಟಿಮುತ್ತಾದವ (ಹಾಡುಹಾ. ೩೭-೧೦). [ತುಟಿ + ಮುತ್ತು4]

ತುಟಿರಂಗು (ನಾ). ಅಲಂಕಾರಕ್ಕಾಗಿ ತುಟಿಗೆ ಬಳಿದಂಕೊಳ್ಳುವ ಬಣ್ಣ: ಕಾಂತಿಯಿಂದ ಚಿನ್ನಾಗಿ ಕಾಣಿಸಲು ಹುಡಿ, ತುಟಿರಂಗು (ಲಿಪ್‌ಸ್ಟಿಕ್), ಕುಸುಂಬೆ (ರೂಜ್), ಉಗುರುಮೆರುಗುಗಳು (ಕವಿಕೋ. I, ೩೩).

[ತುಟಿ + ರಂಗು]

ತುಟಿವೆರಳು, ತಂಟಿಬೆರಳು (ನಾ). ಎಚ್ಚರಿಕೆಯನ್ನು ಸೂಚಿಸಲು ತಂಟಿಯ ಮೇಲಿಟ್ಟ ಬೆರಳು; ಮೌನವಾಗಿರಲು ಸೂಚಿಸುವ ಬೆರಳು: ತೋಳ್ವೊಯ್ಲ ತುಟಿವೆರಳ ಬೊಟ್ಟಿಗಳ . . . ಸಂಭ್ರಮವನರದೆ ಪಡೆಯಿರಡೀಕ್ಷಿಸುತ್ತಿರ್ದುವು (ಕಬಪು. ೨೬-೦೬). ತುಟಿಬೆರಳು: ಸದ್ದಿರದೆ ತುಟಿಬೆರಳಿನೊಳು ಸುಳಿವ ಮಾರುತದ (ಪುಶಿದೀ. ೩೪-೩).

[ತುಟಿ + ಬೆರಳು (< ಬೆರಲ್)]

ತುಟಿಸನ್ನೆ(ನಾ). ತಂಟಿಯ ಅಲುಂಗಾಟದಿಂದಲೇ ಇಂಗಿತವನ್ನು ತಿಳಿಯಪಡಿಸುವುದು: ಮನ್ನಗೆ ತುಟಿಸನ್ನೆ ಕೆವ್ಪಗೆ ಕೈಸನ್ನೆ ಹಡ್ಡಗೆ ಬಡಿಗೆಯ ಸನ್ನೆ (ಇಂದಾಪ. ೯೦-೩೬). [ತುಟಿ + ಸನ್ನೆ3]

ತುಟಿಸು (ಕ್ರಿ). ನುಡಿ; ಹೇಳು: ಜಗದೊಳಗೆ ಕೌತುಕ ವಿಚಿತ್ರವೇನೆಂಬೆನುಱಿ ತುಟಿಸಬಾರದು ಸೂಂಟಿಸಲು ಬಾರದಮ್ಮಮ್ಮ (ನಾಚರ. ೦೩೭-೦೯).

[ತುಟಿ + – ಇಸು3]

ತುಟುಕರಿಸು (ಕ್ರಿ). ೧. ಹಾತೊರೆ; ಅಪೇಕ್ಷಿಸು; ಕಾತರಿಸು: ನಟಣೆಯೊಳಗೈದುವರನೀಕ್ಷಿಸಿ ತುಟುಕರಿಸುತಿಹವಕ್ಷಿಯುಗವದನಪರಿಗೊಳಿಂದ (ಜಿನಧಾ, ೦೯-೩೪). ೨. ತಳವಂಳಿಸಂ; ಕ್ಷೋಭೆಗೊಳ್ಳು: ಅರುಹನೇ ಗತಿಯೆಂದು ಮನ ತುಟುಕರಿಸುತ್ತೈದಿದರಾ ವಿರಾಟನ ಚರರು (ಜಿನಧಾ. ೫೮-೫೮). [<ತುಡಿ + – ಇಸು3]

ತುಟುಕು1 'ತಟಕಂ1' ನೋ.

ತುಟುಕು2 'ತಟಕು2' ನೋ.

ತುಟುಕುಹನಿ 'ತಟಕುವನಿ' ನೋ.

ತುಟ್ಟ (ನಾ). ಒಂದು ಬಗೆಯಂ ಗಿಡ ಮತ್ತು ಅದರ ಹೂವು: ಬಲ್ಲಗಿ, ಬಂದಿಗೆ, (ದೊಡ್ಡ, ಸಣ್ಣ) ತುಟ್ಟ, ದಾಸಾಳ (ನಮ್ಮಸು. ೨೩೮). [← ತಮಿ. ತುಟ್ಟಲಿ]

ತುಟ್ಟಗ್ರ (ನಾ). ತೊಂದರೆಯ ಕಾಲ; ದುರ್ಭಿಕ್ಷ: "ತುಟ್ಟಗ್ರ-ಅಡಚಣೆ ಕಾಲ" (ಜಾನಪೋ. ೬೬). 'ತಂಟಾಗ್ರತೆ' ಪರಾ. [<ತುಟ್ಟಿ1]

ತುಟ್ಟಿ1 (ನಾ). ೧. ಧಾರಣೆ ಹೆಚ್ಚಾಗಿರುವಿಕೆ; ದುಬಾರಿ: ನೂರಿಪ್ಪತ್ತು ರೂಪಾಯಿಗಳಲ್ಲಿ ಈ ಎಲ್ಲ ಖರ್ಚುಗಳೂ ನಡೆಯಬೇಕು . . . ತುಟ್ಟಿಯ ಕಾಲ. ಕಾಳು, ಕಡ್ಡಿ, ಸೌದೆ, ಹಾಲು, ಬಟ್ಟೆ ಎಲ್ಲವೂ ತುಟ್ಟಿ (ಅನಿದಾ. ೬);

ಹೂವುಗಳನ್ನು ತುಟ್ಟಿ ಮಾಡಿದ ಹಿಮಂತರುತುವಿಗೆ ದೋಷ ಕೊಡಿರಿ (ಮೋಹಿನೀ. ೨೦). ೨. ಅಭಾವ : ಗೋವಿಂದಭಟ್ಟನ ಉತಾವಿಳತನ ಅವನಲ್ಲಿ ಔಷಧಕ್ಕೂ ತುಟ್ಟಿ (ದೀಪಹ. II, ೦೬೯). ೩. (?) : ತುಟ್ಟಿಯ ದಿನಮಂ ಪಣದಿಂದೊಟ್ಟಜೆಯಿಂದಿಱಿದು ದ್ವಿಗುಣಿಸಿ (ವ್ಯವಹಾ. ಉಪಮಾನ).

ತುಟ್ಟಿಯಾಗು = ೧. (ಮಾರಾಟದ ಸರಕಂ) ಹೆಚ್ಚು ಬೆಲೆಯುಳ್ಳುದಾಗಂ ; ಅಧಿಕಮೌಲ್ಯವುಳ್ಳುದಾಗು ; ದಂಬಾರಿಯಾಗಂ : ದೇಶದೊಳಗೆ ದುರ್ಭಿಕ್ಷ ಬಿದ್ದು ಕಾಳು ಬಹಳ ತುಟ್ಟಿಯಾದವು (ಮುಂಬಯಿ. ೪-೭೫); ಚಹವು ಆಗಿನ್ನೂ ತುಟ್ಟಿಯಾಗಿದ್ದಿತು (ಪತ್ರಿಕಾ. ೦೩). ೨. ಹೀನವಾಗು ; ಬೆಲೆಯಿಲ್ಲವಾಗು : ನಾನಿಂದು ಒಂದು ತುಪ್ಪದ ಬಟ್ಟಲಿನಷ್ಟು ಅನ್ನಕ್ಕೆ ತುಟ್ಟಿಯಾದೆನಲ್ಲವೆ ? (ಸ್ಮೃತಿಜಿ. ೦೩೦).

ತುಟ್ಟಿ₂ (ನಾ). ತೃಪ್ತಿ ; ಸಂತೋಷ ; ಆನಂದ ; ತಣಿವು : ಶರಣಸಂಗಂ ತನಗೆ ಪರಮತುಟ್ಟಿಯನೀಯೆ (ಜೊಮ್ಮರ. ೦೦೦-೦೨); ತುಟ್ಟಿ ಸಮ್ಮೋಹ ಸಮುದ್ರಕೆ ಹೊಂಬೆಟ್ಟದೊಟ್ಟ ಸೇತುವೆಗಟ್ಟಿದಂತೆ (ಭರಜ. ೦೩-೪೨). 'ತುಟ್ಟಿವಡೆ' ಪರಾ. [< ಪ್ರಾ. ತುಟಿ. /ಸಂ. ತುಷ್ಟಿ]

ತುಟ್ಟಿ₃ (ನಾ). ಒಂದಂ ಬಗೆಯ ತರಕಾರಿ ಸೊಪ್ಪು : ಸೊಪ್ಪುಗಳು : ಅಗಸೆ . . . ನಾರೋಬೇಡ, ತುಟ್ಟಿ, ಕೊತ್ತನಗೊರಜಿ, ಕೊತ್ತಂಬರಿ (ನಮ್ಮನು. ೨೩೭). [?]

ತುಟ್ಟಿಭತ್ತೆ 'ತುಟ್ಟಿಭತ್ಯ' ನೋ.

ತುಟ್ಟಿಭತ್ಯ, ತುಟ್ಟಿಭತ್ತೆ (ನಾ). ಪದಾರ್ಥಗಳ ಬೆಲೆ ಏರಿಕೆಯನ್ನು ಸರಿಗಟ್ಟಲು ನೌಕರರಿಗೆ ಸಂಬಳದ ಮೇಲೆ ಕೊಡುವ ಹೆಚ್ಚಿಗೆ ಮೊಬಲಗು, —ಹಣ : ರೈಲ್ವೆಯಲ್ಲಿ ಹದಿನೈದುರೂಪಾಯಿ ತುಟ್ಟಿಭತ್ಯ ಕೊಡುತ್ತಿದ್ದರು (ಸರ್ವಮಂ. ೨೬೮). ತುಟ್ಟಿಭತ್ತೆ : ಆ ಕಾರಕೂನರಿಬ್ಬರೂ ತುಟ್ಟಿಭತ್ತೆಯ ಆಸೆಗಾಗಿ ಭೂಲೋಕಕ್ಕೆ ಓಡಿಹೋದರು (ಹನ್ನೊಂದ. ೦೪೩). [ತುಟ್ಟಿ + ಭತ್ಯ (< ಭತ್ತಾದಾಯ)]

ತುಟ್ಟಿವಡೆ (ಕ್ರಿ). ತೃಪ್ತಿಯನ್ನು ಹೊಂದಂ ; ಸಂತೋಷವನ್ನು ಪಡೆ : ಜಟ್ಟಿಗರ ಡೊಕ್ಕರಂ ಗಳಹತ್ತಂ ಮೊದಲೆನಿಸಿದ ಪಲವುಂ ಪಟ್ಟುಗಳಂ ಕಿರಿದು ಪೊಳ್ತು ನಿಟ್ಟಿಸಿ ತುಟ್ಟಿವಡೆದು (ಮಠಾಜ. ೦೦-೪೯ ವ).

[ತುಟ್ಟಿ₂ + ಪಡೆ₁]

ತುಟ್ಟಿಸು (ಕ್ರಿ). ೧. ಶಕ್ತಿಗುಂದಂ ; ಬಲಹೀನವಾಗು ; ಕಂಗ್ಗು : "ತುಟ್ಟಿಸು—ಶಕ್ತಿಕ್ಷಯೇ" (ಕಮಧಾ); ಪೊಯ್ಯುತುಂ ತುಡುಕಿ ತುಟ್ಟಿಸಿ ಕತ್ತರಿವಾಣಿಯಲ್ಲಿ ಕೆಯ್ದುಡುಕಿದವೊಲ್ ಬೆರಲ್ಪಱಿದುವು (ಆರ್ಧನೇ. ೮-೦೦೯); ತುಟ್ಟಿಸಿದ ಹರುಷದಲಿ (ತೊರಠಾ. ೬-೦೫-೩); ಕಿಸುಕುಳದ ಹುಳುವಾಗಿ ಮತಿ ತುಟ್ಟಿಸಿ ವಿನಿರ್ಗಮನವಾಗಿ . . . ಮೂರ್ಛಿತನಹನು (ನಿಭಾಗ. ೩-೦೪-೨೮); ನಮಗೆ ತ್ರಾಣಗಳ್ ತುಟ್ಟಿಸಿತು ನಾಳೆ ಮಧ್ಯಾಹ್ನಕ್ಕೆ ಜೀವವಂ ಬಿಟ್ಟಪೆನು (ತುರಂಗ. ೭೯-೦೫). ೨. ಕಡಮೆಯಾಗು ; ಕುಂದು : ನಿಜಹರುಷ ತುಟ್ಟಿಸಲೈದಿ ನೋಡಿದನಾಗ ಕೆಲಬಲನ (ಮೈರಾಕಾ. ೨-೬೪). ೩. ನಾಶವಾಗು : ತುಟ್ಟಿಸಲಿ ಧನ ಮಾನಗರ್ವದ ಬೆಟ್ಟ ಮುಱಿಯಲಿ (ಕುಪ್ಯಾಸ. ೦೪-೮೫); ಕೆಟ್ಟು ನುಡಿದರೆ ತನ್ನನೇನೆಂದಟ್ಟಿದರು ನಿನ್ನುವನು ತನುವಿದು ತುಟ್ಟಿಸದ ಮುನ್ನಿದ್ದುದನು ಹೇಳಯ್ಯ ತನಗೆ (ತೊರಠಾ. ೨-೫-೪). ೪. ಅವಹೇಳನ ಮಾಡು ; ಕಡೆಗಣಿಸು : ಎಲ್ಲವರು ತುಟ್ಟಿಸುತಲಿಹಿರಿ ನಾವೆಂದುದಂ (ತುರಂಗ. ೪೦-೦೫); ಕುರುನೃಪತಿ ಮಾತೆಯಂ ತುಟ್ಟಿಸಲ್ ಗಾಂಧಾರಿ ತೆರಳಿದಳ್ (ತುರಂಗ. ೪೦-೨೪). ೫. ತಗ್ಗಿಸು ; ಶಾಂತಗೊಳಿಸು; ಸಮಾಧಾನಮಾಡು: ದುಷ್ಟದುರ್ಜನನಿವಂಗಳಲದಿರಿ ಬಹಳ ಪಾಪಿಷ್ಠ ಗುರುಗೋತ್ರಘಾತಕನೆಂದು ಶೋಕವಂ ತುಟ್ಟಿಸಿಯೆ ಮುಂದಕಂ ತೆರಳಿದರು (ತುರಂಗ. ೯೫-೦೫). ೬. ಸಿಲುಕಂ ; ಬೀಳು : ತೋಹಿನಲಿ ತುಟ್ಟಿಸಿದ ಮೃಗದವೊಲೂಹೆಯಳಿದುದು (ಕುಪ್ಯಾಸ. ೦೪-೨೩). ೭. ಬಳುಕು ; ಕಂಪಿಸು : ಮಣಿಮುದ್ರಿಕೆಯ ನೂಪುರದ ತುಟ್ಟಿಸುವ ಬಡನಡುವಿನ ... ದೃಷ್ಟಿಮೋಹನಮೂರ್ತಿಯೆಸೆದಳು ಮೊಸರ ಕಡೆವುತ್ತ (ನಿಭಾಗ. ೦೦-೯-೦೬). ೮. ಬೀಳಂ ; ಕುಸಿ : ದುಷ್ಟನೃಪಕುಲಭಾರದಲಿ ಕಂಗೆಟ್ಟು ಕುಸಿದು ರಸಾತಳಕೆ ಧರೆ ತುಟ್ಟಿಸುತ (ನಿಭಾಗ. ೦೦-೩೦-೦೦).

[ತುಟ್ಟಿ₁ ? + – ಇಸು₃]

ತುಟ್ಟು (ಕ್ರಿ). ೧. ನಿರ್ದೇಶಿಸು ; ಗುರಿಯಿಂಡು : ಬಿಟ್ಟಲ್ಲಿ ಬೀಡ ಬಿಡದೆ ಬೇಗದೊಳು ತಾವು ತುಟ್ಟಿದ ಪೊಳಲ ಗಡಿಯಲಿ ಬಿಟ್ಟರಲಾ ವಾರ್ತೆ ಗಡಿಯ ನಾಯಕರಿಂದ ಮುಟ್ಟಿದುದಾ ನೃಪವರಗೆ (ರಾಮವಿ. ೯-೩೦). ೨. ಪಣತೊಡಂ ; ಪ್ರತಿಜ್ಞೆಮಾಡಂ : ಕಟ್ಟುವೆ ಲಂಕೆಯ ಪಟ್ಟವ ನಿನಗೆಂದು ತುಟ್ಟಿ ನುಡಿದ ಮನಮುಟ್ಟಿ (ರಾಮವಿ. ೦೬-೬೩). [< ತೊಡು₁]

ತುಟ್ಟೈಸು (ಕ್ರಿ). ತುದಿಗೆ ಬರಂ : ನಿಟ್ಟುಸುರ್ಸೂಸೆ ಕಂಗಳು ಪೈಸರಿಸೆ ಜೀವ ತುಟ್ಟೈಸಿ (ಲಕ್ಷ್ಮಭಾ. ೨೭-೦೪). [< ತುಟಿ + – ಇಸು₃]

ತುಟ್ಯಂಗ (ನಾ). [ಜೈನ] ಒಂದಂ ದೊಡ್ಡ ಕಾಲಪರಿಮಾಣ : ಕಮಲಾಂಗಂ ಕಮಲಂ ತುಟ್ಯಂಗಂ ತುಟಿಕಂ ಅಟಟಾಂಗಂ ಅಟಟಂ ಅಮಮಾಂಗಂ ಅಮಮಂ (ಪಸಾರ. ೦೩೮-೫). [< ಸಂ. ತ್ರುಟಿತಾಂಗ]

ತುಠಾರ 'ತುಟಾರ' ನೋ.

ತುಠಾರಿ (ನಾ). ದುಡಂಕುಸ್ವಭಾವದ ಹೆಂಗಸು : ಘೋರಕರ್ಮಾಚಾರಿ ವಂಶಕುಠಾರಿ ಬಹಳ ತುಠಾರಿ ದಿವಿಜರ ಮಾರಿ ಜನಿಸಿದಳಾ ಬಳಿಕ ಶೂರ್ಪನಖೀ (ಆನಂಠಾ. ೦-೭-೦೨). [ತುಠಾರ (< ತುಟಾರ) + – ಇ₂]

ತುಠಾರಿಸು 'ತುಟಾರಿಸು' ನೋ.

ತುಡಕೆ 'ತುಡಿಕೆ' ನೋ.

ತುಡರು 'ತೊಡರ್₁' ನೋ.

ತುಡಿ, ದುಡಿ₂ (ಕ್ರಿ). ೧. ಮಿಡಿ ; ಸ್ಪಂದಿಸಂ : ಸಾವಿತ್ರಿಗೆ . . . ನಾರದನು ಹೇಳಿದ್ದ ಮಾತೇ ಮನಸ್ಸಿನಲ್ಲಿ ತುಡಿಯುತ್ತಿತ್ತು (ವಜಭಾ. ೦೬೯) : ಯಾವುದೋ ಆಶಂಕೆ ತುಡಿಯುತ್ತಲೇ ಇತ್ತು (ಮಣ್ಣುಹೆ. ೦೭೮) : ಕನ್ನಡಸಂಸ್ಕೃತಿಯ ಪ್ರತೀಕ ಒಂದೇ ! ಇಲ್ಲಿ ತುಡಿಯುತ್ತಿರುವ ಹೃದಯ ಒಂದೇ ! (ಕರ್ನಾಕ. ೩೫೬). ೨. ತವಕಿಸು ; ಹಾತೊರೆ ; ಆತುರಪಡು : ನಾರಣಪ್ಪನ ಮನಸ್ಸು ಆ ಹತಭಾಗ್ಯರಿಗೆ ನೆರವಾಗಲು ಸದಾ ತುಡಿಯುತ್ತಿರುವುದು (ಅನಾಥ. ೩೬) : ಇಡೀ ಮಾನವಪ್ರಕೃತಿಯೇ ಸೌಂದರ್ಯದತ್ತ ತುಡಿಯುತ್ತಿದೆ (ಕಾವ್ಯಕು. ೦೩೩). ೩. ನೋಯು ; ವ್ಯಥೆಪಡು ; ತಳಮಳಿಸಂ : ನಿಸರ್ಗದ ಪಶುಪಕ್ಷಿಗಳಿಗೆ ಇರುವ ಸ್ವಾತಂತ್ರ್ಯ ತಮಗೆ ಇಲ್ಲವಲ್ಲಾ ಎಂದು ಮನಸ್ಸು ತುಡಿಯುತ್ತಿತ್ತು (ರಾಜ್ಯೋದ. ೦೭೨) : ಮುದವಾರಲು, ಅಳಲೇರಲು, ಭಯ ಮಸಗಲು —ತುಡಿದು, ಮನ ದೇವಗೆ ಮೊರೆಯಿಡುವುದು (ಮಾಂದಳಿ. ೨೦-೨). ೪. ಅಲ್ಲೋಲಕಲ್ಲೋಲವಾಗು; ಹೊಯ್ದಾಡು ; ಕ್ಷೋಭೆಗೊಳ್ಳು: ಆವ ತವಕದಲೇನೊ ಬಾನಂಚುಗಳ ತಬ್ಬಿ ತುಡಿವೀ ಅಧೀರಜಲ (ನವ್ಯಧ್ವ. ೦-೫). ೫. ವಿಂನಂಗು ; ಹೊಳೆ : ಶಿವಜಟೆಯ ತುಳುಕಿ ತುಡಿವ ತಾರೆಯ ಬೆಳಕಿಗೀ ಬೆಳಕೆ ಚರಿತಾರ್ಥ (ಮಲೆದೇ. ೨೩-೫). ದುಡಿ₂ : ೧. ಇನಿಯಂ ಬಂದು ನಿಂದು ರಾಧೇ ಎನಲೇಪರಿ ದುಮುದುಮುಂ ದುಡಿಯುವ ಹೃದಯವ ತಡೆವೆನೆ (ಗೋಕುನಿ. ೨೩-೪).

ತುಡಿದುಕೊಳ್ಳು = ಆತುರಪಡು ; ಕುತೂಹಲಗೊಳ್ಳು : ಅವನೊಂದಿಗೆ ಮಾತನಾಡತೊಡಗಿದಂತೆಲ್ಲ ನನ್ನ ಹೃದಯವು ತುಡಿದುಕೊಳ್ಳತೊಡಗಿತು (ಎಳೆಕ. ೮೬); ದೂರದಲ್ಲಿ ಅವನನ್ನು ಕಂಡೊಡನೆಯೇ ಮನಸ್ಸು ತುಡಿದುಕೊಳ್ಳುತ್ತಿತ್ತು (ಆಲಹೂ. ೫೭).

[ದೇ.ಕ ತಮಿ. ತುಟಿ ; ಮಲ. ತುಡಿ]

ತುಡಿಕಿ 'ತುಡಿಕೆ' ನೋ.

ತುಡಿಕೆ, ತಂಡಕೆ, ತಂಡಿಕ, ತುಡುಂಕೆ, ತೊಡಿಕೆ (ನಾ). ೧. ತೋಟದ ಒಂದು ಭಾಗ : ದೇವರ್ಗ್ಗೆ ಮಾನ್ಯಂ ತುಡಿಕೆ ೧ (ಸೌಇಇ.IX-i, ೦೫೯-೫೬; 1092); ತೆಂಕಲು ತುಡಿಕೆಯ ಮುನ್ತಣ ಬಟ್ಟೆ ನೀರೊಕ್ತಿಂಗೆ ದೇವಣ ಭಟ್ಟರು ಕೊಟ್ಟ ಬೆದ್ದಲೆ (ಎಕ. V, ಹಾಸನ. ೧೦೬-೪೯; 1123); ತೋಟ ತುಡಿಕೆ ಮುಂತಾಗಿ ಆಗಾಮಿಯಾಗಿ . . . ಸರ್ವಸ್ವಾಮ್ಯವನು ಆಗುಮಾಡಿ ಕೊಂಡು (ಎಕ. IX, ಕಂಗಳೂ. ೦೨೬-೫೨; 1431); ಅವರ ತೋಟ ತುಡಿಕೆಗಳು ಹಣ್ಣು ಹಂಪಲುಗಳಿಂದ ತುಂಬಿ ತುಳುಕಲಿ (ಹುಬ್ಬಹ. ೦೬೦). ೨. ಹಣ್ಣುಗಳನ್ನು ಸಂಗ್ರಹಿಸಿ ಇಡುವ ಮನೆ ; ಫಲಸಂಗ್ರಹಾಲಯ : (ಕ). ೩. ಅಡಕೆಯ ಫಸಲನ್ನು ಸುಲಿದು ಬೇಯಿಸಿ ರೇಪೆ ಮಾಡುವ ಸ್ಥಳ. **ತುಡಕೆ** : ೧. ಗದ್ದೆ ಬೆದಲು ತೋಟ ತುಡಕೆ (ಮೈಆರ. ೦೯೩೦, ೩೮-೦೩ : 1512). **ತುಡಿಕೆ** : ೧. ಗ್ರಾಮಕ್ಕೆ ಸಲುವ ಗದ್ದೆ ಬೆದ್ದಲು ತೋಟ ತುಡಿಕೆ ಆಡುಮನೆವಣ (ಎಕ. XIV, ಚಾಮರಾ. ೩೬೬. ೮ ; ?). **ತುಡುಂಕೆ** : ೧. ಊರಿಂ ತೆಂಕದಿಸವಂದದ ತುಡುಂಕೆಯೊಳಗಣ ತುಡುಂಕೆ ಒಂದು (ಹೈಆಸ. ೮-೩೩; 1088); ಊರಡೆದಡದ ಬಡಗಣ ಮೂಡಣ ಗೋಟಿನಲ್ಲಿ ಬ್ರಹ್ಮದೇವಪಟ್ಟವರ್ದ್ಧನರು ಕೊಟ್ಟ ತೆಂಕವಾಗಿಲ ತುಡುಂಕೆಯೊಂದು (ಸೌಇಇ. IX-i, ೩೩೩-೫೨ : 1225). **ತೊಡಿಕೆ** : ೧. ಅಯ್ಕದೇವಪರವಿಟ್ಟ ತೊಡಿಕೆ ಅಱವಿಟ್ಟೊರ್ (ಮೈಆರಿ. ೦೯೩೪, ೪೨-೫ ; 10ನೆಯ ಶತ?). [←ತಮಿ. ತುಟವೈ=ತೋಟ]

ತುಡಿಗೆ 'ತೊಡುಗೆ' ನೋ.

ತುಡಿತ, ದುಡಿತ್ತ (ನಾ). ೧. ಮಿಡಿತ; ಸ್ಪಂದನ : ಪ್ರಭುಗಳ ಉಕ್ತಿಯನ್ನು ಕೇಳಿದಾಗ ಬೆಂಗುಮಣಿಯ ಎದೆಯ ತುಡಿತ ನಿಧಾನವಾಯಿತು (ಹುಂಜಾ. ೦೫೯). ೨. ಆತ್ಯಾಸಕ್ತಿ ; ಆತುರ ; ಲವಲವಿಕೆ ; ತವಕ : ಶ್ರೀವಿರೂಪಾಕ್ಷನ ಪಂಪಾವುರಕ್ಕೆ ಹೋಗಬೇಕೆಂಬ ತುಡಿತ ದಿನದಿನಕ್ಕೂ ಬಲಿಯುತ್ತಿದೆ (ತುಂಗಳ. ೦೩); ಎದೆಧಾರ ಎಪ್ಪೋ ಇಳಿಯುತ್ತದೆ : ತನ್ನೊಳಗಿನ ತುಡಿತ ಹಿಡಿತಕ್ಕೆ ಬರುತ್ತದೆ (ಬನಸಿ. ೦೬೦) ; ನವೋದಯ ಕವಿಗಳಲ್ಲಿ ನೂತನಚೈತನ್ಯವನ್ನು ತುಂಬಿದುದು ಬಂಧನದಲ್ಲಿ ಸಿಲುಕಿದ ಭರತಮಾತೆಯ ಬಿಡುಗಡೆಯ ತುಡಿತ (ಸೌಂದಸ. ೩೬೩). **ದುಡಿತ್ತ** : ೩. ಬೊಕ್ಕೆಯಿಂದಂಟಾಗುವ ನೋವು : "ಅಯಾವು = ನೋವು, ಆಕ್ಷೇಪಕ = ದುಡು{ಡಿ}ತ, ಸ್ತಂಬಾ = ಬಿಗಿಯೂದು" (ಚಾಡಬೀ. ೨-೪). [ತುಡಿ + – ತ್ತ]

ತುಡಿಸು 'ತೊಡಿಸು' ನೋ.

ತುಡು$_1$ 'ತೊಡು$_1$' ನೋ.

ತುಡು$_2$ 'ತೊಡು$_2$' ನೋ.

ತುಡು$_3$ (ನಾ). ಒಂದು ಬಗೆಯ ಮರ : ಅರುಟಾಳಂ ಹಾರಿವಾಳಂ ತುಡು ತಡಸೊಡವಂ ಲೊಕ್ಕಿ (ಗಿರಿಕ. ೦೬೭). [?]

ತುಡುಂಕು$_1$ 'ತೊಡುಂಕು$_1$' ನೋ.

ತುಡುಂಕು$_2$ 'ತುಡುಕು$_3$' ನೋ.

△ **ತುಡುಂಗುಣಿ** 'ತುಡಂಗುಣಿ' ನೋ.

ತುಡುಕಿಸು (ಕ್ರಿ). ಧರಿಸುವಂತೆ ಮಾಡು ; ಹಿಡಿಯುವಂತೆ ಮಾಡು: ಹರಿಯ ಚಕ್ರವ ತುಡುಕಿಸುವೆ ವಾನವಪತಾಕನ ರಥವ ಹಿಂದಕೆ ಮುರಿಯಲಿಸುವೆನು (ಕುವಾ.ಭೀ. ೦-೪೦). [ತುಡುಕು$_1$ (<ತೊಡಂಕು$_1$) + –ಇಸು$_3$]

ತುಡುಕು$_1$ 'ತೊಡಂಕು$_1$' ನೋ.

ತುಡುಕು$_2$ 'ತೊಡಂಕು$_3$' ನೋ.

ತುಡುಕು$_3$, **ತುಡುಂಕು**$_2$ (ನಾ). ವಾದ್ಯವಾದನದಲ್ಲಿ ಒಂದು ಪ್ರಕಾರ : ಜತಿ ಜೋಕೆ ತುಡುಕು . . . ಬೆಡಂಗಿನಿತುಂ ಸಂಗತಿವಡೆಯೆ ವಾದನ ಕಳಾವತಿ ಬಾಜಿಸುತಿರ್ದಳ್ (ಶಾಂತೀಶ್ವ. ೦೩-೩೩೬) ; ಆ ಸಮಯದೊಳ್: ಮದ್ದಳಿಗಂ ಮದ್ದಳೆಯಂ . . . ಚಮತ್ಕಾರ ತುಡುಕು ರಿಗ್ಗ್ವಣಿ ಪಹರಣಿ ಗಳೆಂಬ ನಾನಾಶಬ್ದಂಗಳಂ ಬಾಜಿಸಿ (ಧರ್ಮಪ. ೨-೨೩ ವ) : ಪಲತೆಱದ ತಾಳಗಳ ಜತಿಗಳನೆಳವಡಿಸಿ ತುಡುಕ{ಕು}ಗಳ ಕತ್ತರಗಳನು ಮೂಡೆಱನಾದ ಲಯದಲಿ ಕುಡುಪಡರೆ ನುಡಿಸೆ (ಸಾಕ್ಷಾ. ೦೬-೫೬); ತುಡುಕು ಪಹರಣಿ . . . ತೋಱಿ ನುಡಿಸಿದ ಮಾರ್ದಂಗಿಕನು (ಗೋಮಟೇ. ೭-೦೭). **ತುಡುಂಕು**$_2$: ಕವುತಂದೆಂಕಾರಂ ಮುಲವವದೆ ತುಡುಂಕೊತ್ತು ಜೋಕೆಯಂತರಿ ಜತಿ ರಿಗ್ಗವಣಿ ಪಹರಣಿಯೆನಿಪ್ಪೀ ಪ್ರಬಂಧಮಂ (?) ಶ್ರೋತ್ರ ಬಂಧವೆನೆ ಬಾಜಿಸಿದರ್ (ಪಾರ್ಶ್ವಪು. ೦೨-೨೦). [Pಭರತಕೋಶದಲ್ಲಿ 'ತುಡುಕಾ' ಎಂಬ ಶಬ್ದಕ್ಕೆ 'ವಾದ್ಯಪ್ರಬಂಧ' ಎಂದು ಹೇಳಿದೆ.]

ತುಡುಕುಗಾಯು (ನಾ). ಬಿಗಿಯಾದ ಹಿಡಿತದಿಂದ ಉಂಟಾಗುವ ಗಾಯು : ಜಾಡಿಸುವ ಮಣಿಮಯದ ಗದೆಯಲಿ ತೋಡುವೊಯ್ಲಿನ ತುಡುಕುಗಾಯದ ನೀಡುವೊನೆಗಳ ವಿಗಡನಿಕ್ಕಿದನದಟರಕ್ಕಸರ (ಕುವಾ.ಅ. ೦೦-೫೨). [ತುಡುಕು$_1$ (<ತೊಡಂಕು$_1$) + ಗಾಯು]

ತುಡುಕುಗುದುರೆ (ನಾ). ಮುನ್ನುಗ್ಗುವ ಕುದುರೆ : ಕಡಿದು ಬಿಸುಟನು ತಲೆವಂಗೆಗಳಲಡಿಸಿದಾ ಪಜುದಳವನೊಗ್ಗಿನ ತುಡುಕುಗುದುರೆಯ ಖುರವ ತಜಿದನು (ಕುವಾ.ಶ. ೨-೪೫). [ತುಡುಕು$_1$ (<ತೊಡಂಕು$_1$) + ಕುದುರೆ]

ತುಡುಕುವೆಳಗು (ನಾ). ಬೆರೆತುಕೊಂಡ ಬೆಳಕು ; ಅಧಿಕವಾದ ಪ್ರಕಾಶ : ಜಡಿವ ಕೈದೀವಿಗೆಯ ಸಾಲಿನ ತುಡುಕುವೆಳಗಿನ ವಂದಿಜನದುಗ್ಗಡದ ರಾಜಕುಮಾರಕರು ನಡತಂದರೊಲವಿನಲಿ (ಕೊರಕಾ. ೧-೦೬-೪೦).

[ತುಡುಕು$_1$ (<ತೊಡಂಕು$_1$) + ಬೆಳಗು$_2$]

ತುಡುಕೆ 'ತುಡಿಕೆ' ನೋ.

ತುಡುಕೆವಟ್ಟು, ತುಳಂಕೆವಟ್ಟು (ನಾ). ಒಂದು ಪ್ರದೇಶದ ಹೆಸರು : ದೇವರ ಮೂಡಣದೆಸೆಯಲ್ ಪಳಕೆಯ ಮತ್ತರು ಳ ತುಡುಕೆವಟ್ಟನಲ್ಲಿ ಅಱುವಣದೇ ತುಣ್ಬದು ಮಣಲಕೆಯ ಮತ್ತ ೬ (ಸೌಇಇ. IX-i, ೦೨೦-೦೫ : 1058). **ತುಳುಕೆವಟ್ಟು** : ದುದ್ದಿಮಯ್ಯನ ಮಗಂ ಪದ್ಮ ನಾಭನ್ಗೊಱಿಯ ಹಸ್ತಿರಲೀಶ್ವರಯ್ಯನ ಮಾರ್ಕ್ಕಿಯಿಂ ಪಡುವಲು ಕೊಟ್ಟ ತುಳುಕೆವಟ್ಟನ ಮಾರ್ಕ್ಕ ಕವ್ಮ ಳಿಕೆ (ಸೌಇಇ. IX-i, ೧೬೫-೫೯; 1099). [?]

ತುಡುಗ (ನಾ). ಕಳ್ಳ ; ಚೋರ; ತಸ್ಕರ : ಕೂಗಿಯಾಡುವಾನು ಬರಿದೆ ತುಡುಗನು (ಚಿದಾಶ. ೦೪೬-೯) : ಯಾರಿಗೂ ಕಾಣದಂತೆ ಕಳವು ಮಾಡುವ ಚತುರ ತುಡುಗನಂತೆ (ಗಾಳಗು. ೪೭) ; ನಿಮ್ಮ ಹುಡುಗರು ಕೆಲವರು ತುಡುಗರು ಅಷ್ಟೆ (ಬಿಳುಮು. ೨೦೨). [ತುಡುಗು + – ಅ$_7$]

ತುಡುಗತನ (ನಾ). ಕಳ್ಳತನ ; ಚೌರ್ಯ : ಆಗ ತುಡುಗತನ ತನ್ನ ತಾನೇ ಹೊರಬೀಳುತ್ತದೆ (ರಂಗರೋ. ೦೨). [<ತುಡುಗು + – ತನ]

ತುಡುಗದನ (ನಾ). = ತುಡುಗುಣಿದನ : ಬೇಸಿಗೆಯಲ್ಲಿ ತುಡುಗದನಗಳು ತೋಟಕ್ಕೆ ಬಾರದಂತೆ ಮಾಡುವುದೇ ಕಷ್ಟ (ರೂಢಿ).

[<ತುಡುಗು+ದನ]

ತುಡುಗಾಡು (ಕ್ರಿ).ಕಳ್ಳತನ ಮಾಡು ; ಕದಿ : ತುಡುಗಾಡುವ ಬಸವ ನಾರಂಬಿಗನ ಕಯ್ಯೊಳ್ . . . ಸಿಕ್ಕುವಂತೆ (ಧರ್ಮಾಮೃ. ೦೩-೦೮೫).

[ತುಡುಗು + ಆಡು$_1$]

ತುಡುಗಿ (ನಾ). ಕಳ್ಳಿ : ಅವಳೇನು ಬೀದಿಯ ಮೇಲಿನ ತುಡುಗಿಯೆ (ಸ್ವತಿಜಿ. ೨೯೬). [ತುಡುಗ + –ಇ$_2$]

ತುಡುಗು (ನಾ). ಕಳ್ಳತನ ; ಚೌರ್ಯ : ಮೊನ್ನಿನ ದಿನ ನಮ್ಮ ಗಣಿಯಲ್ಲಿ ಇಂಥದೇ ಒಂದು ತುಡುಗು ಸಂಭವಿಸಿತ್ತು (ರಂಗರೋ. ೦೦) : ತುಡುಗಿನಿಂದ ... ಕಳ್ಳಗಂಟು ಮಾಡಿಕೊಂಡಿದ್ದಳು (ಹೊಸಕ್ಷಿ. ೨೭೮) : ವಿಸ್ಮಯಕಾರಕ ತುಡುಗುಗಳಲ್ಲಿ ಪ್ಯೂತ್ವಾನ ಕೈಚಳಕವಿದ್ದೇ ಇದೆ (ಡೋಡಾಳ. ೧೦).

ತುಡುಗುಮಾಡು = ಕಳವು ಮಾಡು ; ಕದಿ : ತುಡುಗುಮಾಡಬಾರದೆಂದು ಸಾಲೆಯ ಆಯ್ಯನವರು ಹೇಳಿದ್ದನ್ನು ಮರೆತೆಯೇ ? (ಮುಂಬಯಿ. ೨-೩೬) ; ಅವುಗಳು ಸಿಕ್ಕ ಪದಾರ್ಥಗಳನ್ನು ತಿಂದು ಹಾಕುತ್ತಿದ್ದವು. ತುಡುಗುಮಾಡಿ ಒಯ್ಯುತ್ತಿದ್ದವು (ಪೊಪಾಸಾ. ೨೫) ; ತುಡುಗುಮಾಡಿ ಗಂಡಸು ಕೆಟ್ಟ, ಹಾದರಮಾಡಿ ಹೆಂಗಸು ಕೆಟ್ಟಳು (ಗಾದೆ).

[ದೇ.॥ ತಮಿ. ತಿರುಟು, ತಿರುಟ್ಟು ; ಮಲ. ತಿರಿಡ=ಕಳ್ಳ]

ತುಡುಗುಗೊಳ್ (ಕ್ರಿ). = ತಂಡುಗಾಡಂ : ಮಹಾಮಾಯಾವಿಯ ತುಡುಗುಗೊಂಡ ತೊಟ್ಟಿನಂತೆ (ಧರ್ಮಾಮೃ. ೬-೦೦೫) ; ತುಡುಗುಗೊಂಡು ಕುಡಿಯದಿರ್ (ಅದ್ಭುತ. ೩೦-೦೮). [ತುಡುಗು + ಕೊಳ್$_1$]

ತುಡುಗುಣ್ (ಕ್ರಿ). ಕದ್ದು ತಿನ್ನು : ತುಡುಗುಣ್ಬ ತೊಟ್ಟಿನಂತೆ ಕೊಲ್ಲದ ವ್ರತಕ್ಕಲಸಿ ನಡುಗದೆ (ಧರ್ಮಾಮೃ. ೦೪-೮೪). [ತುಡುಗು+ಉಣ್]

ತುಡುಗುಣಿ, ತಂಡುಂಗುಣಿ (ನಾ) ೧. ಕಳವಿನಿಂದಲೇ ಜೀವಿಸುವ ವ್ಯಕ್ತಿ ; ಕಳ್ಳತನದಿಂದ ಹೊಟ್ಟೆ ಹೊರೆಯುವ ವ್ಯಕ್ತಿ : ತುಡುಗುಣಿ ಗೊರವರ ಮೆಚ್ಚಂ ಪೊಡವಿಗೆ ಶಿವಸಕ್ತಿ ತಾನೆ ನೈಷ್ಟಿಕಮುನಿವಾ (ಎಕ. XII, ಚಿಕ್ಕನಾ. ೩೦-೨೯; 1149); ಮನೆಮನೆದಪ್ಪದೆ ತಿರುಗುವ ತುಡುಗುಣಿಯಂತೆ ಕಾಡಲಾಗದು ಭಕ್ತನ (ಅವಚಂ. ೦೦೩-೪೬೮) ; ತುಡುಗುಣಿಯೆ ನಿನಗುಂಟು ವೀರ್ಯದ ಕಡುಹು (ನಿಭಾಗ. ೯-೧೦-೪೬); ಊರೂರುಗಳ ಹೊಕ್ಕ ತುಡುಗುಣಿ ತುರುಕಮಾರ್ಬಲವ ಕಡುತವಕದೆ ಮುತ್ತಿಕೊಂಡು (ಕಂನವಿ. ೧೩-೫೨). △ ತುಡುಂಗುಣಿ : ಆನೆ ತುಡುಂಗುಣಿಯಾದೊಡೆ ಭೂನಾಥಂ ಜಾರನಾದೊಡಂ...ಏನೆಂದೆನಬಹುದು ನೀತಿತಾಂ ಭೂತಳದೊಳ್ (ನೀತಿಸಾಂ. ೫೪೯). ; ೨. ಕದ್ದು ತಿನ್ನುವ ನಾಯಿ : "ತುಡುಂ ಗುಣಿಯೆ ಹಾಟ್ಟನೆಯ ಹಾಟನಕ್ಕುಂ" (ಸಂಜೀವ. ೬).

ತುಡುಗುಣಿಯಾಗು= ಕಳ್ಳಬುದ್ಧಿಯಿಂದ ಕೂಡಿರಂ : ಸಾರಮೇಯ ಶಿಶುವಂ ಕಂಡು ಪ್ರೀತಿವಟ್ಟು ನಡಪುತ್ತಿರ್ಪುದುಮದು ಗಂಡುನೆರೆದು ಕೊಂಡು ತುಡುಗುಣಿಯಾಗಿ ಭಾಂಡಸಂಕರಂಗೆಯ್ಯುತ್ತಿರ್ಪುದುಂ (ಪಂಚತಂ. ೨೬೦-೧೯). [ತುಡುಗು + –ಉಣಿ]

ತುಡುಗುಣಿಕ (ನಾ). = ತುಡುಗುಣಿ ೧ : ಕೊಡಗೂಸು ತೊತ್ತು ಸಯ್ಯಮಿ ತುಡುಗುಣಿಕ ಕುಷ್ಟಾಂಗಿ ರಂಡೆ (ಶಾಸ್ತ್ರಬೀ. ೫೧-೩೬).

[ತುಡುಗುಣಿ + – ಕ$_3$]

ತುಡುಗುಣಿಗೆಯ್ತ (ನಾ). ೧. ಕಳ್ಳತನದ ಕೆಲಸ. ೨. ಕಳ್ಳತನದಲ್ಲಿ ಕೂಡುವುದು ; ಚೋರಸುರತ : ನಾಣಿಲಿ ಮಾಣಲಾಗದೇ ತುಡುಗುಣಿಗೆಯ್ತಮಂ (ರಸರ. ೩-೦೭೨). [ತುಡುಗುಣಿ + ಕೆಯ್ತ$_1$]

ತುಡುಗುಣಿತನ (ನಾ). ೧. ಕಳ್ಳತನ : ಕದ್ದು ತಿಂದರೆ ಕೈಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯಾ (ಬಸವ. ೪೩೩). ೨. ಕಪಟವೃತ್ತಿ ; ಮೋಸ ; ವಂಚನೆ : ಎನ್ನ ಸೀಮೆಯಂ ತುಡುಗುಣಿತನದಿ ಹೊಕ್ಕ ತುಂಟ ಬಂಟಿಕೆಯುಮಂ ಬಿಡಿಸಿದೊಡೆ (ಸಮ್ಮಕೌ. ೨-೭) ; ಸಾಂಬಳ್ಳಿಯ ಭೂಪ ತುಡುಗುಣಿತನದಲಾಲಂಬಾಡಿಯ ಕೊಂಡ ಕಡೆಗೆ ಠಾಣೆಯವಿಕ್ಕಿದನು (ಕಂನವಿ. ೦೭-೨೨). [ತುಡುಗುಣಿ + – ತನ]

ತುಡುಗುಣಿತೊಟ್ಟು (ನಾ). ಕಳ್ಳತನ ಮಾಡುವ ತೊತ್ತು : ಗರ್ದಭನೆರ್ದೆಯುಮಂ ಕಿವಿಯುಮಂ ತಿಂದು ತುಡುಗುಣಿತೊಟ್ಟಿನಂತೆ ಬಾಯಂ ತೊಡೆದುಕೊಂಡು ತಾನಲ್ಲದಂತಿರ್ಪುದುಂ (ಪಂಚತಂ. ೨೮೪-೨೨).

[ತುಡುಗುಣಿ + ತೊಟ್ಟು]

ತುಡುಗುಣಿದನ (ನಾ). ಹೊಲ, ಗದ್ದೆ, ತೋಟಗಳಿಗೆ ನುಗ್ಗಿ, ಕದ್ದು ಮೇಯುವ ಸ್ವಭಾವವುಳ್ಳ ಪಶು ; ಕಳ್ಳಹಸು ; ತೊಂಡುದನ : ಹಂದಿ ಹರಿದಾಡುವಂತೆ ತುಡುಗುಣಿದನ ತಿರುಗುವಂತೆ (ಉದ್ಯೋಪ್ರ. ೧೦-೨೯-೦೯). [ತುಡುಗುಣಿ + ದನ]

ತುಡುಗುಣಿನಾಯ್, ತಂಡುಗುಣಿನಾಯಿ (ನಾ). ಕದ್ದು ತಿನ್ನುವ ನಾಯಿ : "ಹಾಟ್ಟನೆಹಾಟಂ=ತುಡುಗುಣಿನಾಯ್" (ಕಮದ. ಪರಿ. ೦) ; ತುಡುಗುಣಿನಾಯ್ ಮನೆಯವರ ಕಯ್ಯೊಳ್ ... ಸಿಕ್ಕುವಂತೆ (ಧರ್ಮಾಮೃ. ೧೩-೦೮೫); ಒಡೆಯರ ಕಣ್ತಪ್ಪುವುದೆನೆ ತುಡುಗುಣಿನಾಯಳಿಪಿ ನೋಡುವಂತೆ (ಪಾರ್ಶ್ವಪು. ೩-೫೯); ತುಡುಗುಣಿನಾಯನು ಹಿಡಿತಂದು ಸಾಕಿದರೆ ತನ್ನೊಡೆಯಂಗೆ ಬಗುಳುವಂತೆ (ಬಸವ. ೫೬೬). ತುಡುಗುಣಿನಾಯಿ : ತುಡುಗುಣಿ ನಾಯಿಗೆ ಮಡಕೇ ಮೇಲೆ ಕಣ್ಣು (ರೂಢಿ). [ತುಡುಗುಣಿ + ನಾಯ್]

ತುಡುಗುಣಿನಾಯಿ 'ತುಡುಗುಣಿನಾಯ್' ನೋ.

ತುಡುಗುತಿನ್, ತುಡುಂಗುತಿನ್ನು (ಕ್ರಿ). ಕದ್ದು ತಿನ್ನು : ನನ್ನದೊಂದಾಕಳು ಒಕ್ಕಲಿಗನ ಹೊಲದಲ್ಲಿ ತುಡುಗುತಿಂಬುವದಕ್ಕೆ ಹೋಗಲದ ಮನೆಗೆ ಹೊಡತರುವಲ್ಲಿ (ಭೃರಸೂ. ೧೮೯). ತುಡುಗುತಿನ್ನು : ಲಕ್ಷ್ಮೀ ತುಡುಗುತಿನ್ನುತ್ತಾಳೆ (ಸ್ಮೃತಿಚಿ. ೫೯). [ತುಡುಗು + ತಿನ್ನು (<ತಿನ್)]

ತುಡುಗುತಿನ್ನು 'ತುಡುಗುತಿನ್' ನೋ.

ತುಡುಗುತೀನಿ (ನಾ). ಕದ್ದ ತಿನಿಸಂ : ಅಡಕವಿಲ್ಲದ ಹೆಣ್ಣ ನಡತೆ ತಪ್ಪಿದ ಹೆಣ್ಣ ತುಡುಗುತೀನಿಯ ತಿಂಬ ಹೆಣ್ಣ (ಪುಷ್ಕಚ. ೮-೪೦).

[ತುಡುಗು + ತೀನಿ (<ತಿನ್$_1$)]

ತುಡುಗುನಾಯ್ (ನಾ). ಕಳ್ಳತನ ಮಾಡುವ ನಾಯಿ : ಒಡೆಯರಿಲ್ಲದ ಮನೆಯ ಹೊಕ್ಕಾ ತುಡುಗುನಾಯ್ ತುಡುಗೊಳಲು ವೀರವೆ (ಕೌಶಿರಾ. ೦೦-೬೯). 'ತುಡುಗುಣಿನಾಯ್' ಪರಾ. [ತುಡುಗು + ನಾಯ್]

ತುಡುಗುಪಶು (ನಾ). = ತಂಡುಗುಣಿದನ : ಸಡಿಲು ಬಿಟ್ಟಡೆ ಮನಂ ಮನುಜನಂ ಮೂಜಗದೆ ತುಡುಗುಪಶುವಿನ ಕೊರಳ ಗುದ್ದಿಯಂತೆಳದಾಡಿ ಕೆಡಿಸುವದು (ಮಲ್ಲಚ. ೧೩-೯). [ತುಡುಗು + ಪಶು]

ತುಡುಗುಮೇಯಿಸು (ಕ್ರಿ). ಕದ್ದು ಮೇಯಿಸು : ಊರ ತುಂಟ ತರುಣರು ತಮ್ಮ ದನಕರುಗಳನ್ನು ಇನ್ನೊಬ್ಬರ ಬಣಬೆಗೆ ನೂಕಿ ತುಡುಗುಮೇಯಿಸಲು ಮರೆಯಲಿಲ್ಲ (ಜಯಂತ. ೨೭೩). [ತುಡುಗು + ಮೇಯಿಸು]

ತುಡುಗುವ್ಯಾಪಾರ (ನಾ). ಕಳ್ಳವ್ಯಾಪಾರ : ಅರ್ಥದಾಸೆಗಾಗಿ ಬಡ್ಡಿಯ ತೆಗೆದುಕೊಂಡು ಬಡವರ ಬಂಧನಕಿಕ್ಕಿ ತುಡುಗುವ್ಯಾಪಾರವ ಮಾಡಿ (ವಚಸಂ. ೩೨೨-೦೦೦). [ತುಡುಗು + ವ್ಯಾಪಾರ]

ತುಡುಗೆ 'ತೊಡಂಗೆ' ನೋ.

ತುಡುಗೊಳ್ (ಕ್ರಿ). ಕಳ್ಳತನ ಮಾಡು : ಒಡೆಯರಿಲ್ಲದ ಮನೆಯ ಹೊಕ್ಕಾ ತುಡುಗುನಾಯ್ ತುಡುಗೊಳಲು ವೀರವೆ (ಕೌಶಿರಾ. ೦೦-೬೯).

[<ತುಡುಗು + ಕೊಳ್$_1$]

ತುಡುಜೊಡರ್ (ನಾ). ಹತ್ತಿಸಿರುವ ಸೊಡರು ; ಉರಿಯುತ್ತಿರುವ ದೀಪ : ತುಡುಜೊಡರಱುಗೆಱಯೆಂಬಿವು ಪಡೆಯವು ಬಿಂದುವನುದಂತ ವೃತ್ತಿಯನಾಳ್ದುಂ (ಶಮದ. ೧೭೦). [ತುಡು$_1$ (<ತೊಡು$_1$)+ಸೊಡರ್]

ತುಡುತಿನ್ (ಕ್ರಿ). ಕದ್ದು ತಿನ್ನು : ಬಿಡದೆ ಕಳವಿಂದೆ ಲೋಗರ ಮನೆಗಳಂ ಪೊಕ್ಕು ತುಡು[ಪಾಠಾಂ. ಡಿ] ತಿಂದವನ ಭೋಜನಕ್ಕೆ ಮೃಷ್ಟಾನ್ನಮಾದೊಡೆ ಕೆಲಬಲಂಗಳಂ ನೋಡುವನೆ (ಚೈಮಿಭಾ. ೬-೫೩); ತುಡುತಿಂದವಳಿವಳೆನುತ ದೂಱಿಕ್ಕುವರು (ಕೃಷ್ಣಗೋ. ೨-೫); ಕೆನೆಕೆನೆವೊಸರನು ದಿನ ತುಡುತಿಂಬನು (ಪ್ರಸಭಾ. ೦೬-೨೧). [< ತುಡುಗು + ತಿನ್]

ತುಡುತಿನಿ (ಗು). ಕದ್ದು ತಿನ್ನುವ : ಯಮನ ಭಟರು ತುಡುತಿನಿ ನಾಯ ಬಡಿವುದಕೆ ಕೋಟಿಮಡಿಯೆನೆ ಬಡಿವರು (ವೀಶ್ವಪು. ೭-೧೩-೪೭).

[<ತುಡುಗು + – ತಿನ್$_2$]

ತುಡುಪು (ನಾ). ೧. ದೋಣಿ, ಹಡಗು ಮೊದಲಾದುವನ್ನು ನಡೆಸಲು ಉಪಯೋಗಿಸುವ ಹುಟ್ಟು : (ಕ್ರಿ). ೨. ಮರದ ಸವುಟು : (ಕ್ರಿ).

[ದೇ.॥ ತಮಿ. ತುಟುಪ್ಪು ; ಮಲ. ತುಡುಪ್ಪು]

ತುಡುಬು 'ತುಡುಮು' ನೋ.

ತುಡುಬೆ, ತುಡುವೆ (ನಾ). ಒಂದು ಬಗೆಯ ಜೇನುಹುಳು : ನಿನ್ನ ಈ ರೂಪವು ಹೆಜ್ಜೇನು ಕಣ್ಣಿಗೆ ದನಿ ತುಡುಬೆಯ ಜೇನು ಕಿವಿಗೆ (ಚಂದ್ರವೀ. ೧೭೪-೯೫); ಮಲೆನಾಡಿನಲ್ಲಿ ತುಡುಬೇಯ ಜೇನುತುಪ್ಪ ನನಗೆಂದು ತಾಯಿ ಕಳುಹೀದ (ಹಳ್ಳಿಯ. ೯೬). **ತುಡುವೆ** : ಅವಳು ಕಚ್ಚಿಸಿಕೊಂಡೂ ಹೆದರದೆ ಹುತ್ತದಲ್ಲಿದ್ದ ತುಡುವೆ ಜೇನನ್ನು ಕಿತ್ತುಕೊಟ್ಟಿದ್ದಳು (ಮಲಿಮ. ೧೬೬); ದುಂಬಿ, ಹೆಸುರುದುಂಬಿ, ತುಡುವೆ, ತೊರಿಗ (ನಮ್ಮನು. ೨೪೦). [?]

ತುಡುಮು, ತುಡುಂಬು (ನಾ). ಒಂದು ಬಗೆಯ ವಾದ್ಯ : ಗಿಡಿಬಿಡಿ ನುಡಿಯಲೊದಱ ಕಾಳೆ ರಣಭೇರಿ ಬಿಡದೆ ಮೊಳಗೆ ತುಡುಮುಗಳ ಗಡಣದ ಗರ್ಜಿತ ಮಸಗೆ ನಿಂದನು ರಾಮ ಪಡೆಗಿದಿರಾಗಿ (ಕುರಾಸಾಂ. ೪೩-೫೯); ಢಕ್ಕೆ ನಾಟ್ಯಾನಕ ಚಂಪೆ ಕಿಂಕಿಣಿ ಡೌಡೆ ಕುಕ್ಕುರು ತುಡುಮು ರಿಂಚೆಯವ . . . ಕೇಳಿಸಿದರು (ಭರಕ. ೧೨-೪೦); ಎಲ್ಲಿ ನೋಡಲು ವಾದ್ಯಗಳ ಘಲ್ಲಣೆ ತುಡುಮುಗಳಬ್ಬರ ಮೊಱೆದುವಲ್ಲಲ್ಲಿ (ಕಂನವಿ. ೧೭-೪೩); ತುಡುಮುಗಳ್ ದುಂದುಭಿಯು ತೂರ್ಯತ್ರಯಂಗಳಿಂದೈತಂದು (ಪರಶು. ೮-೨೧). **ತುಡುಬು** : ತುಡುಬು ಬಡಿಯದೆ ದನಿಯ ಕೊಡುವುದೇನೊ (ದಾಸಪ. ೬). [ದೇ.॥ ತಮಿ. ತುಟುಮ್ಮೆ ; ತೆಲು. ತುಡುಮು]

ತುಡುರು 'ತೊಡರ್$_1$' ನೋ.

ತುಡುವೆ 'ತುಡುಬೆ' ನೋ.

ತುಡುವೊಗು (ಕ್ರಿ). ತುಡುಂಗಿನಿಂದ ಹೊಗು; ಕಳ್ಳತನದಿಂದ ಪ್ರವೇಶಿಸು : ಕೊಂಕಣದಂತೆಯಲ್ಲಿ ತುಡುವೊಕ್ಕ ತುರುಂಕರ ನೂಂಕಿ . . . ನೀನಪರಶಂಕರನಂತೆಡೆಗೊಂಡೆ ಮಾಧವಾ (ಗಿಳಿವಿಂ. ೫೨-೭).

[<ತುಡುಗು + ಪೊಗು (<ಪುಗು)]

ತುಡುಸೆಂಡು (ನಾ). ಹಿಡಿದುಕೊಳ್ಳುವ ಚೆಂಡು : ತುಡುಸೆಂಡೆಂದು ಮಾರ್ತಂಡಮಂಡಳಕ್ಕೆ ಶುಂಡಾದಂಡಮನೆತ್ತಿ . . . ಆಕಾಶಮಂ ಬೆರಂಟುವುದು (ಪುಷ್ಯಾಸ್ರ. ೬-೫೦ ವ). [< ತುಡುಂಕು$_1$ + ಸೆಂಡು]

ತುಡೆಚುಳ್ಳಿ (ನಾ). ಒಂದು ಬಗೆಯ ಮರ ; "ರಬ್ಬರವೃಕ್ಷ" (ಪಂಡಿತ. ೨೨೭) : ಹೊಳೆಚುಳ್ಳಿ, ಮುಳ್ಳಿಚುಳ್ಳಿ, ಹರಿಕುಶ, ತುಡೆಚುಳ್ಳಿ (ಮೈಜಿಗಿ. ೨-೨೪). [ತುಡೆ$_0$ + ಚುಳ್ಳಿ$_1$]

ತುಡೆಮದರಂಗಿ (ನಾ). ಒಂದು ಬಗೆಯ ಗಿಡ ; "ವರಂಣ" (ಪಂಡಿತ. ೨೪೪) : ಆದಿರಾಜ . . . ತುಡೆಮದರಂಗಿ, ಹೊಡ್ಡೆಲೆನಗೆ (ಮೈಜಿಗಿ. ೨೫-೪೬೬). [ತುಡೆ$_0$ + ಮದರಂಗಿ]

ತುಡ್ಡಿಲ (ನಾ). (?) : ಅಮ್ಮಗೌಡ ಎರ್ಬ್ಬಾಗಿಲ ಸ್ತಾನೀಕತನ ಮುಕ್ಕವಾಗಿ ನಡ್ಸಿ ತುಡ್ಡಿಲ ಸಮುಟಿ ತುಷ್ಟಿ ಏನಾದಡೆ ಅಲ್ಲಿ (ಎಕ. XIV, ತಿರುಮ. ೧೪೫-೩ ; 1090). [?]

ತುಣಗೆಣಸು (ನಾ). ಒಂದು ಬಗೆಯ ಗೆಣಸು : ತೂನಗೆಣಸು, ಮುಡಿಗೆಣಸು, ನೂರೆಲೆಗೆಣಸು, ತುಣಗೆಣಸು, ದಂಡಾಲು (ಮೈಜಿಗಿ. ೩೦-೫೯೨).

[ತುಣ್$_0$ + ಗೆಣಸು (<ಗೆಬಸು)]

ತುಣವ (ನಾ). ಒಂದು ಬಗೆಯ ವಾದ್ಯ : ಪಟುಪಟಹತುಣವಭಂಭಾಮರ್ದಳೆ ಝಲ್ಲರಿಮುಕುಂದತಾಳಕಾಹಳಶಂಖವಂಶವೀಣಾಸ್ವರಂಗಳೆಸೆಯೆ (ವಡ್ಡಾರಾ. ೮೩-೨೮). [< ಪ್ರಾ. ತುಣಯ]

ತುಣಿ (ನಾ). ಒಂದು ಬಗೆಯ ಮರ; ನಂದಿಮರ. [ಸಂ.]

ತುಣುಕು, ತುನಕು, ತುನುಕು (ನಾ). ತುಂಡು ; ಚೂರು; ಖಂಡ ; ಶಕಲ : ರೊಟ್ಟಿಯ ತುಣುಕೊಂದು ಕೈಯೊಳಗಿದ್ದರೆ ನಾಯಿಗಳಾರೇಳು ಬಹವು (ಇಂಜಾಪ. ೧೯೬-೬೮); ಬೆರಳು ಮೂಡಿಸುವಾಗ ಅಲ್ಲಿ ಒಂದು ದಾರದ ತುಣುಕು ಬಿದ್ದಿರಬೇಕು (ಕೃತಕೃ. ೧೭೮) ; ಕನ್ನದ ಕಾಲದಲ್ಲಿ ನಾಯಿಯು ಬೊಗಳಬಾರದೆಂದು ಅದಕ್ಕೊಂದು ರೊಟ್ಟಿಯ ತುಣುಕನ್ನು ಚೆಲ್ಲಿ (ಯಕ್ಷಪ್ರ. ೩೬). **ತುನಕು** : ಮುನಿಸಿನಿಂ ಪರಶುವಂ ಬೀಸಲ್ಕೆ ಬಾಹುಗಳ್ ತುನಕಾಗಿ ನೆಲಕುದರ್ದವು (ಪರಶು. ೨೮-೪). **ತುನುಕು** : ಕನಕವನು ಪಂಚಾಳಗೆ ಕೊಡೆ ತುನುಕು ತುನುಕನು ಮಾಡಿ ಕಡಿದೇ ಜಿನಿಸುಜಿನಿಸಿನ ವಡವೆ ಮಾಡಿದ (ಜ್ಞಾನಸಿಂ. ೬-೮).

ತುಣುಕುಬಿಣುಕು=(ಹಾಡಿನಲ್ಲಿ)ಕೆಲವೊಂದು ಭಾಗ: ಭತ್ತಕುಟ್ಟುವಾಗ, ಹೆಣ್ಣುಮಕ್ಕಳು, ಕಲಹುಂಕಾರಸಹಿತವಾಗಿ ಗಮಕದ ತುಣುಕುಬಿಣುಕಿನಿಂದ ಹಿತವಾಗಿ ... ಪದ್ಯ ಹೇಳುತ್ತಿದ್ದರಂತೆ (ಮಸಾಹಿ. ೧೨). ತುಣಕುಮಿಣಕು = ಅತ್ಯಲ್ಪ ; ಅಲ್ಪಸ್ವಲ್ಪ : ಅವನ ವಿಷಯವಾಗಿ ಪ್ರಸಿದ್ಧಮಾಡಿದ ತುಣುಕುಮಿಣಕು ಮಾಹಿತಿಯಿಂದಲೇ ನಮ್ಮ ದಾಹವನ್ನು ಹಿಂಗಿಸಿಕೊಳ್ಳಬೇಕಾಗುವುದು (ಪ್ರಬಂಧ. ೧೦೧).

[ದೇ.॥ ತಮಿ. ತುಣುಕ್ಕು, ತುಣುಕ್ಕೈ, ತುಣಿಕ್ಕೈ ; ತೆಲು. ತುನುಕ, ತುನಕ, ತುನ್ಕ ; ನಾಯ್ಕಿ. ತುನ್ಕೆ]

ತುಣ್ಣಿ 'ತುಣ್ಣೆ' ನೋ.

ತುಣ್ಣೆ, ತುಣ್ಣಿ (ನಾ). ಗಂಡಸಿನ ಜನನೇಂದ್ರಿಯ ; ಶಿಶ್ನ : ಅವನ ಬಾಯಿಗೆ ಸುರಾಪಾನ ಕತ್ತೆ ತುಂಣೆ (ಸೌಇಇ. IX-ii, ೫೧೩-೫೫ ; 1521). **ತುಣ್ಣೆ** : ಕತ್ತೆ ತುಂಣೆಯ ತಾನು ತಂನ ಹೆಂಡತಿಯುಂ ತಾಯಿ ತಂದೆಯು ತಿಂದವರು (ಸೌಇಇ. IX-i, ೩೬೬-೨೩ ; 1225) ; ಇದಕೆ ಅಣಿಪಿದವನು ಕತ್ತೆಯ ತುಂಣೆಯನು ಕಲುಪ್ಪನು ತಿಂದ ನಾಯಿದರ ಕಸಿಗೆ ಆಸೆ ಮಡಿದವ (ಮೈಅರಿ. ೧೯೩೦, ೨೩-೧೩ ; 1519).

[ದೇ. ॥ ತಮಿ. ಚುಣ್ಣೆ ; ಮಲ. ಕುಣ್ಣೆ, ಚುಣ್ಣೆ ; ತುಳು. ತುಣ್ಣೆ ; ತೆಲು. ಚುಲ್ಲಿ, ಚುಲ್ಲ]

ತುಣ್ತಣಿ 'ತುಂತುಣಿ' ನೋ.

ತುತಿ (ನಾ). ಹೊಗಳಿಕೆ ; ಪ್ರಶಂಸೆ ; ಸ್ತೋತ್ರ : ಸ್ತುತಿ – ತುತಿ (ಶಮದ. ೨೭೨ ಪ್ರಯೋ) : ಪುಷ್ಪಸರನ ರಾಣಿಗೆ ಮೆಯ್ದೊಡವನುಪ್ಪಿಸಿ ತುತಿಯ ಮಾಡಿದರು (ಮೋಹತ. ೧೭-೪೩) ; ಮುರಹರನ ಸನಿಯದಲಿ ಪಾರ್ಥನು . . . ಉರುತರದ ತುತಿಯಿಂದ ಪೊಗಳುತ (ಕೋಗಯ. ೨೭-೯೦).

[<ಸಂ. ಸ್ತುತಿ]

ತುತಿಗೆಯ್ಯು (ಕ್ರಿ). = ತುತಿಸು : ತ್ರಿಣಯನ ಸಭಾಂಗಣದೊಳು ಭಕ್ತಿ ರಕ್ತಿಯಿಂ ತುತಿಗೆಯ್ಯುತಳ್ತಿಯಿಂದ (ನಂದಿಮಾ. ೫-೩೭).

[ತುತಿ + ಗೆಯ್ಯು (<ಕೆಯ್$_1$)]

ತುತಿಯಿಸು 'ತುತಿಸು' ನೋ.

ತುತಿಸು, ತುತಿಯಿಸು (ಕ್ರಿ). ಹೊಗಳು ; ಸ್ತೋತ್ರಮಾಡು ; ಪ್ರಶಂಸಿಸು : ತುತಿಸುವ ಪುಣ್ಯಪಾಠಕರೊಳೊಪ್ಪುತುಂ (ನಂಬಿರ. ೩-೬೬) ; ತ್ರಿಕರಣಂಗಳಿಂ ನಂಬಿ ದೃಢಭಕ್ತಿಯಿಂ ತಾಂ ತುತಿಸುತ (ಪದ್ಮರಾ. ೧೦-೬೪) ; ಮುನಿಪನ ಚರಣಗಳನು ತುತಿಸಿದನು (ಚಂಪ್ರಸಾಂ. ೬-೪೭) ; ಬಗೆವಗೆಯೊಳ್ ತುತಿಸುತುಮಡಿಗೆಱಗಿದಂ (ರಾಮಾಶ್ವ. ೬೨-೧೪). **ತುತಿಯಿಸು** : ತುತಿಯಿಸಿ ಪೊಡೆವಟ್ಟು (ಪಂಚತಂ. ೨೭೨-೨೨) ; ದುರ್ಜನರಂ ದೂಷಿಸಿ ನೀತಿನಿಪುಣರೆನಿಸುವ ಸಜ್ಜನರಂ ಪ್ರೀತಿ ಮಿಗಲು ತುತಿಯಿಸಿ (ಜಯಕಾ. ೧-೨೩).

[ತುತಿ + – ಇಸ್ತು$_3$]

ತುತೂರಿ 'ತಿತ್ತಿರಿ$_1$' ನೋ.

ತುತ್ತ, ತುತ್ತಿ$_2$, ತುತ್ತು$_3$, ತುತ್ತೆ (ನಾ). ಒಂದು ಬಗೆಯ ರಾಸಾಯಯನಿಕ ವಸ್ತು ; ಮೈಲುತುತ್ತ ; ಗಂಧಕಾಮ್ಲ : "ತುತ್ತಂ–ಪಾಷಾಣ ಭೇದಂ" (ಕಾಶಕ್ಯ. ೨೦೨) ; "ಮಯೂರಗ್ರೀವಃ–ತುತ್ತ" (ಓಷಧಿ. ೧೨೨) ; ತುತ್ತವನ್ನು ಕರಿಹುರಳಿಯ ರಸದಿಂದ ಕುಡಿಯಲು ಗರ್ಭನಾಶ (ವಿವೈವಿ. ೧೦೯). **ತುತ್ತಿ$_2$** : "ಕೂಪಾರೋದಿತಂ ತುತ್ತಿ [ಪಾಠಾಂ. ರ್ತ]" (ಮಂಗರಾ ೪೩-೪೨). **ತುತ್ತು$_3$** : (ಕಿ). **ತುತ್ತೆ** : (ಕಿ). [< ಸಂ. ತುತ್ಥ]

ತುತ್ತರಾಟು (ನಾ). ಅಭದ್ರವಾಗಿರುವುದು ; ಅಸ್ಥಿರವಾಗಿರುವುದು : ತಾನು ತುತ್ತರಾಟನ ಮೇಲೆ ಕೂತಿದ್ದ ಬಂಡೆಯಿಂದ ಉರುಳುವುದನ್ನು ಹೇಗೋ ತಡೆದುಕೊಂಡು (ಮಲೆಮ. ೨೦೨). [?]

ತುತ್ತಲ್ (ನಾ). ಪ್ರಾಕಾರ; ಸುತ್ತುಗೋಡೆ: ಬಟಲ್ದ ಮದಿಲಂ ಮಣ್ಗೊಂಡ ತುತ್ತಲ್ಗಳಿಟ್ಟೆಡೆಯಂ ಬಿಟ್ಟಟಿಡೇಗುಲಂಗಳೆಡೆಯಂ ಕಾದಿರ್ಪ ಪಾಣ್ಬರ್ಕಳುಂ (ಸೂಕ್ತಿಸು. ೮-೦೩೫). [←ತಮಿ. ಚುಱ್ಱು]

ತುತ್ತಾರಿ ' ತಿತ್ತಿರಿ$_1$ ' ನೋ.

ತುತ್ತಿ$_1$ (ನಾ). ಒಂದು ಬಗೆಯ ಗಿಡ : "ತುತ್ತ–ತುತ್ತಿ, ತುರುಮೆ" (ಓಷಧಿ. ೭೦); ಶ್ರೀಮುದ್ರೆಗಿಡ, ತುತ್ತಿ, ಕಿಸಂಗಿ, ತುರುಬೀಗಿಡ, ಗಿಡುತಿಂಗಿ (ಮೃಜಿಗಿ. ೦-೬). [ದೇ.॥ ತಮಿ. ಮಲ. ತೆಲು. ತುತ್ತಿ]

ತುತ್ತಿ$_2$ ' ತುತ್ತ ' ನೋ.

ತುತ್ತಿಕ್ಕು (ಕ್ರಿ). ಆಹಾರವನ್ನು ಕೊಡು ; ಅನ್ನ ಹಾಕು : ಜೈನರ ತತಿಯ ನೀರೈದುವಾಸರಂ ತುತ್ತಿಕ್ಕದರಿದಿಱಿದೆ (ಮದೇಪು. ೨೫-೬).
[ತುತ್ತು$_2$ + ಇಕ್ಕು]

ತುತ್ತಿಡು (ಕ್ರಿ). ೧. ತುತ್ತುಮಾಡಿ ನುಂಗು; ಕಬಳಿಸು; ತಿನ್ನು; ಉಣ್ಣು : ತುತ್ತಿಡದ ಮುನ್ನ ಪ್ರಾಣ್ಯಂಗಮಂ ಕಂಡೊಡಾ ಅಶನಮಂ ಬಿಟ್ಟು ಮತ್ತೊಂ ದಶನಮನುಣ್ಗೆ (ಪಸಾರ. ೩೩೩) ; ಭವಿಯ ಮನೆಯಲ್ಲಿ ಹೊಕ್ಕು ತುತ್ತಿಡುವ ನರಕಿ ಜೀವಿಗಳಿಗೊಲಿವನೇ ನಮ್ಮ ಶಂಭುಜಕ್ಕೇಶ್ವರ (ಗಣಭಾ. ೦೬೦-೫). ೨. ತುತ್ತು ನೀಡು ; ಉಣಿಸು : ಹರಿಸರಿದು ತು [ಪಾಠಾಂ. ಸು] ತ್ತಿಟ್ಟು ಕುಣಿವುತಿರ್ಪರ್ ಕೆಲರು (ಬಸರ. ೭-೦೬೦) ; ದಾನಂ ದ್ರವ್ಯವೆಂಬ ಬೀಜವ ನಾತ್ಮಗಂ ತುತ್ತಿಡಲುವಾ ಧರ್ಮವೆಂಬ ಬೆಳೆಯುಂಬುದಕೆ ಸತ್ತು ಮಗುಳ್ದುಂ ದೇಹವೆತ್ತಿ ಬಂದು (ಪ್ರಭುಪು. ೭-೨೦೪). ೩.(ಆಲಂ) ನಾಶಮಾಡು ; ಪರಾಜಯಗೊಳಿಸು ; ಅಡಗಿಸು : ಅವಷ್ಟಂಭದಿಂ ತೂಗಿದ ಬಾಳ್...ಉಗ್ಗಡದ ಬಿರುದರಂ ತೂಗಿ ತುತ್ತಿಟ್ಟುದೇಂ (ಎಕ. VI, ತರೀಕೆ. ೪೫-೪೦; 1196).
[ತುತ್ತು$_2$ + ಇಡು$_1$]

ತುತ್ತಿದ (ನಾ). ಜಾಣ ; ಪ್ರೌಢ : "ಬಿತ್ತಗಂ=ತುತ್ತಿದಂ" (ಶಮದ. ಪರಿ. ೨); " ಬಿತ್ತೆಗನೆನಲ್ ತುತ್ತಿದಂ ಪ್ರೌಢನುಂ " (ಕಬ್ಬಿಕ್ಕೆ. ೮೦). [?]

ತುತ್ತಿಸು (ಕ್ರಿ). ೧. ನುಂಗು ; ಕಬಳಿಸು : ಬಳಿಕ ತುತ್ತಿಸಿದ ರಾಹು ತೊಲಗಿದ ಶಶಿವೊಲಿರ್ದನವನು (ಚೈಮಿಭಾ. ೨೮-೩೪). ೨. ಊಟ ಮಾಡಿಸು ; ಉಣಿಸು ; ತಿನ್ನಿಸು : ಕಜ್ಜಾಯ ತುಪ್ಪ ಸಕ್ಕರೆಯ ಕೊಜ್ಜೆಯರಿಗೆ ಮೆಲ್ಲಿಸುತೆ ಮಿಕ್ಕುದ ಬಾಗಿಲಜ್ಜಿಯರಿಗೆ ತುತ್ತಿಸಿದ (ಮೋಹತ. ೧೮-೦೯) ; ಮಾರೀಚನಂ ಮಾರಿಗೆ ತುತ್ತಿಸಿ (ರಾಮಾಶ್ವ. ೧೨೦-೨).
[ತುತ್ತು$_1$ + – ಇಸು$_3$]

ತುತ್ತು$_1$ (ಕ್ರಿ). ೧. ತಿನ್ನು ; ನುಂಗು ; ಕಬಳಿಸು : " ತುತ್ತು–ಕಬಲನೇ " (ಶಮಭಾ) ; ಅಂತು ತನ್ನ ತಂದ ಬಂಡಿಯ ಕೂಟ^{3}ಲ್ಲಮಂ ಪತ್ತೆಂಟು ತುತ್ತಿನೊಳೆ ಸಮೆಯೆ ತುತ್ತುವುದಂ ಕಂಡು (ಪಂಪಭಾ. ೩-೨೯ವ) ; ಪಗೆಯ ಬೆನ್ನಂ ಪತ್ತುವೆನೊ ದಿಶಾಗಜಂಗಳಂ ತುತ್ತುವೆನೋ (ಗದಾಯು. ೬-೦೮) : ತವೆ ದಿಕ್ಭುಂಡಾಲಮಂ ತುತ್ತುವ ದಶದಿಶೆಯಂ ಸುತ್ತುವಾಕಾಶಮಂ ಮುತ್ತುವ ... ಅಗುರ್ವಂ ತೋಱುದಪ್ಪೆಂ (ಜಗವಿ. ೦೩-೩೮) : ಕೋಟಿ ಮುಖದಲಿ ನೀಡಿದೆಲ್ಲವನು ತುಂಬಿ ತುತ್ತಿದ ಹೊಟ್ಟೆ (ಪ್ರಭುಲೀ. ೨೩-೨೭). ೨. (ಆಲಂ) ನಾಶಮಾಡು : ಅಡಗಿಸು ; ಪರಾಜಯಗೊಳಿಸು : ಧಾಳಿಯಿಟ್ಟಂ ಪರಿಯಿಟ್ಟಂ ಮುತ್ತಿದಂ ತೋಟ್ಟುಳಿದುಳಿದನಡಂಗೊತ್ತಿದಂ ತುತ್ತಿದಂ (ಎಕ. VII, ಶಿಕಾತಿ. ೧೧೦-೧೨ ; ಸು. 1070) ; ಧುರದೊಳ್ ಬಂದಿದಿರೊಡ್ಡೆ ಕಂಸಹರನೊಡ್ಡಂ ತುತ್ತುವೆಂ ತುತ್ತುವೆಂ (ಜಗವಿ. ೭-೩೭) ; ಹತ್ತಿದರಂದು ಕಾಲವರಾ ದುರ್ಗವ ತುತ್ತುವಂತೇನ ಬಣ್ಣಿಪೆನು (ಕುರಾಸಾಂ. ೩೯-೦೫) ; ಮೃಡಲೋಚನಂಗಳಿಂದೊಗೆದ ಹರುಷಾಶ್ರುಜಲಂ...ತು [ಪಾಠಾಂ. ಕು]ತ್ತಿದುದು ಸಕಲಲೋಕಂಗಳಂ ತಿಂಗಳಂ ಪೊತ್ತವಂ ಬೆಱಗಾಗಲು (ಜಿಬಪು. ೪೬-೨೯); ಸಾವಿನ ನೋವಿಗೆ ಕಲಮಲವೆದ್ದು ನೆಲವನ್ನೆಲ್ಲಾ ತುತ್ತುವೆನೆಂದು ಗದರುತ್ತಿಹುದು (ಗರಿ. ೬೧-೧೦). [ದೇ. ॥ ತಮಿ. ತುಱ್ಱು]

ತುತ್ತು$_2$ (ನಾ). ೧. ಒಂದು ಸಲಕ್ಕೆ ನುಂಗುವಷ್ಟು ಆಹಾರ ; ಕವಳ ; ಗ್ರಾಸ : "ಗ್ರಾಸಂ ಕಬಳಂ ತುತ್ತು" (ವಸ್ತುಕೋ. ೯೩-೮) ; "ಕಬಳ ಮಾಹುತಿಯೆನಲ್ ತುತ್ತೆನಿಕ್ಕುಂ" (ಮಂಗರಾ. ೬೫-೭) ; ತನ್ನ ಕೆಯ್ಯ ತುತ್ತ ನರಸಂ ವಿಷಮಿಶ್ರಮೆಂದಱಿಯದೆ ಕೊಟ್ಟಂ (ವಡ್ಡಾರಾ. ೦೯೦-೨) ; ಅಂತು ತನ್ನ ತಂದ ಬಂಡಿಯ ಕೂಟ^{3}ಲ್ಲಮಂ ಪತ್ತೆಂಟು ತುತ್ತಿನೊಳೆ ಸಮೆಯೆ ತುತ್ತುವುದಂ ಕಂಡು (ಪಂಪಭಾ. ೩-೨೯ ವ) ; ತುತ್ತಿಗೊಮ್ಮೆ ಶಿವಶರಣೆನುತ್ತಿರಬೇಕು (ಬಸವ. ೭೮೬) ; ಚಿತ್ತವಲರಿಸಿ ತೋರ ತೋರದ ತುತ್ತುಗಳನೊಡನೊಡನೆ ತಾ ಮಾಡುತ್ತ (ಬಸಪು. ೮-೧೫) ; ಹಾಗೆಯೇ ಮಲಗಬಾರದು...ಎರಡು ತುತ್ತಾದರೂ ಉಂಡು ಬಾ (ತ್ಯಾಗಮ.೯೦); ಕೈಗೆ ಬಂದ ತುತ್ತು ಬಾಯಿಗಿಲ್ಲ (ಗಾದೆ). ೨. ಆಹಾರ; ಊಟ : ಹೊತ್ತು ಹೋಗದ ಮುನ್ನ ತನುವಿನ ತುತ್ತ ನೀಡುವೆ ಗುರುವಿಗೆ (ಪ್ರಭುಲೀ. ೨೩-೪೭); ಹೊತ್ತಿ ಹೊಗೆವ ಪರಾಕ್ರಮಾಗ್ನಿಯ ತುತ್ತು ಪದ್ಮವ್ಯೂಹ (ಕುವ್ಯಾದ್ರೋ. ೪-೪೫) ; ಜನಕ್ಕೆ ದುಡಿಮೆಯೂ ಇದೆ. ಹಾಗೇ ತುತ್ತು, ಅಭಿವೃದ್ಧಿಗೆ ಅವಕಾಶ ಎರಡೂ ಬೇಕಾದಷ್ಟಿದೆ (ಮುನಿಮಾ. ೨೩). ೩. ಸಾಧ್ಯವಾದುದು ; ದಕ್ಕುವ ವಸ್ತು : ಅಣಕವಾಡು ಎಲ್ಲರ ತುತ್ತು ಅಲ್ಲ ; ಸಾಮಾನ್ಯರ ತುತ್ತೂ ಅಲ್ಲ (ನಿಶಾಭ. ೧೨ ಮುನ್ನುಡಿ). ೪. (ಆಲಂ) ಅನುಭವ: ದುಃಖ, ನಿರಾಶೆ, ಸೋಲು, ಕಷ್ಟ-ಇವು ನಮ್ಮ ಬಾಳಿನ ನಿತ್ಯದ ತುತ್ತುಗಳಾದವು (ಮುಂಗಾಮು. ೦೭).

ತುತ್ತಾಗು = ೧. ಆಹಾರವಾಗು ; ಬಲಿಯಾಗು : ಇಲ್ಲಿ ಕಾಳೋರಗಂಗಳ್ಗೆ ತುತ್ತಾದಂ (ರಾಮಾಶ್ವ. ೦೦೬-೨೮). ೨. ಈಡಾಗು ; ವಶವಾಗು ; ಅಧೀನವಾಗು : 'ರಾಮಾನುಜನ್' ಅಲ್ಲಿಯೇ ಕ್ಷಯರೋಗಕ್ಕೆ ತುತ್ತಾದುದರಿಂದ, ಆತನ ಸೇವೆ ... ಸಹನಿಯ ಪಾಲಿಗೆ ಬಿತ್ತು (ಸಸ್ಯಕ. ೦೩೦). ತುತ್ತಿನ ಚೀಲ=ಹೊಟ್ಟೆ; ಉದರ: ಸಾಲವನು ಮಾಡುವದು ಹೇಲ ತಾ ಬಳಿಸುವದು ಕಾಲಿನ ಕೆಳಗೆ ಹಾಕುವುದು ತುತ್ತಿನ ಚೀಲ ನೋಡಯ್ಯ (ಸರ್ವಜ್ಞ. ೦೯೮೨); ಬರಿದೋ ಬರಿದು ಬಡವರ ಬಗ್ಗರ ತುತ್ತಿನ ಚೀಲ (ಗರಿ. ೬೦-೦೭) : ತೋಟದಲ್ಲಿ ದುಡಿದು ಸಿಗುವ ಕೂಲಿಯಿಂದ ಈ ದಂಪತಿಗಳು ತಮ್ಮ ತುತ್ತಿನ ಚೀಲಗಳನ್ನು ತುಂಬಿಸಿಕೊಳ್ಳುತ್ತಿದ್ದರು (ನವನೀ. ೨೦). ತುತ್ತು ಹಾಕು=೧. ಊಟಕ್ಕೆ ಹಾಕು. ೨. ತುತ್ತು ಮಾಡಿ ಕೈಗೆ ಹಾಕು : ಮದುಮಕ್ಕಳಾಟವೆಂದು ಅಡಿಕೆ ಹಿಡಿಯುವುದು, ತುತ್ತು ಹಾಕುವುದು ಮುಂತಾದ ವಿನೋದ ಪ್ರಸಂಗಗಳು (ಸ್ಮೃತಿಚಿ. ೨೫). [<ತುತ್ತು$_1$./ತಮಿ. ತುಱ್ಱು]

ತುತ್ತು$_3$ 'ತುತ್ತ' ನೋ.

ತುತ್ತುಗೂಳ್ (ನಾ). ನುಂಗುವ ಅನ್ನ ; ತಿನ್ನುವ ಆಹಾರ : ನಿನ್ನ ಮೆಯ್ಯಿದನೆಂತು ಪೇಳೆ ಕಾಂತಾರರಾಕ್ಷಸಿಗೆ ತುತ್ತುಗೂಳ್ ಕೊಡಲಿ ? (ಶ್ರೀರಾಮಾ. ೭೯-೫೦). [ತುತ್ತು$_1$ + ಕೂಳ್ (<ಕೂಟ್$_1$)]

ತುತ್ತುಗೆಯ್ಯು (ಕ್ರಿ). ಊಟ ಮಾಡು ; ಆಹಾರವನ್ನು ಸ್ವೀಕರಿಸು ; ಭುಂಜಿಸು : ಸವಿಯೂಟಕ್ಕೆ ಮನವಿಟ್ಟು ತುತ್ತುಗೆಯ್ವುತ್ತಿರ್ದ ಲೋಚನ ನಿಮೀಲನಾಗಿ (ವೀಶ್ವಪು. ೩-೪-೨೦). [ತುತ್ತು$_2$ + ಗೆಯ್ಯು (<ಕೆಯ್$_1$)]

ತುತ್ತುಗೊಳ್, ತುತ್ತುಗೊಳ್ಳು (ಕ್ರಿ). ೧. =ತುತ್ತುಗೆಯ್ಯು : ತುತ್ತುಗೊಂಬುದೆನುತ್ತ ಕೈವೀಸಿದಳು ಕೆಲಬಲಕೆ (ನಿಭಾಗ. ೫-೬-೩೨) ; ಪಣ್ಣಿಡಿದ ಬಿತ್ತರದ ಪೊಲಗಳನ್ ರೌದ್ರದಂಷ್ಟ್ರಂಗಳಿನ್ ತುತ್ತುಗೊಂಡಟ್ಟಾಡೆ (ಬದ್ಧಪ್ರ. ೨೦-೪೨೫). ೨. (ಆಲಂ)ನಾಶಮಾಡು; ಧ್ವಂಸಗೊಳಿಸು: ನಾಡಪಡೆಯಂ ತುತ್ತುಗೊಂಬ ಲಂಬೋದರಿಯನುಳಿದಸುರಿಯರ ಕೃತ್ಯವನೋಡಿ (ಚೈಮಿಭಾ. ೦೬-೪೪). ತುತ್ತುಗೊಳ್ಳು : ೨. ತುತ್ತಿನ ಚೀಲದಲ್ಲಿ ವಿಶ್ವವನ್ನೇ ತುತ್ತುಗೊಳ್ಳಲು ಹೊಂಚುತ್ತಿರುವ ಬಡಬಗ್ಗರ ಹಸಿವೆಯ ಭೀಷಣ ಗರ್ಜನೆಯಿದೆ (ಸಮಾಲೋ. ೨೮). [ತುತ್ತು$_2$ + ಕೊಳ್$_1$]

ತುತ್ತುಗೊಳ್ಳು 'ತುತ್ತುಗೊಳ್' ನೋ.

ತುತ್ತುರಿ 'ತಿತ್ತಿರಿ$_1$' ನೋ.

ತುತ್ತುಱಂ (ಅ). ಅತಿಶಯವಾಗಿ ; ವಿಶೇಷವಾಗಿ : ತೆಱೆಯೆ ವಿಮಾನ ವರ್ಗಧರರೀ ಪ್ರಕರಂ ನವಸಾರಸೌರಭಂ ಪೊಱಮಡೆ ಚೀನದೊಳ್ಗುಡಿಗಳಗ್ರ ವಿಯತ್ತಳದಲ್ಲಿ ತುತ್ತುಱಂದುಱುಗೆ (ಮಹಾನೇ. ೨-೪೭). [<ತುಱುಗು$_1$]

ತುತ್ತೂರಿ 'ತಿತ್ತಿರಿ$_1$' ನೋ.

ತುತ್ತೆ 'ತುತ್ತ' ನೋ.

ತುತ್ಥ (ನಾ). ೧. ಮೈಲುತುತ್ತ ; ಗಂಧಕಾಮ್ಲ : ತಾಳಕ, ತುತ್ಥ ... ಇವಿಷ್ಟನು ಸಮಾಂಶವಾಗಿ ಎಮ್ಮೆಯ ಹಾಲಿಂದ ಮರ್ದಿಸಿ ಏಳುದಿನ ಮುಖಕ್ಕೆ ಲೇಪವಂ ಮಾಡಲು ಮುಖದ ಕಪ್ಪು ತಿಳಿವದು (ವೈದ್ಯಸಾ. II, ೦೪೭). ೨. ಕಲ್ಲು ; ಶಿಲೆ. [ಸಂ.]

ತುತ್ಥೆ (ನಾ). ೧. ನೀಲಿಗಿಡ. ೨. ಸಣ್ಣ ಏಲಕ್ಕಿ. [ಸಂ. ತುತ್ಥಾ]

ತುತ್ಯ (ನಾ).= ತುತ್ಥ೧: ನೆಲದೊಳಗೆ ಸಂಬಳಕಾರ, ತುತ್ಯ...ಮುಂತಾದ ವಿಷರೂಪ ಕ್ಷಾರಾದಿಗಳಿರುತ್ತವೆ (ಮುಂಬಯಿ. ೫-೦೫೬) ; ಉಪ್ಪು, ಸೈಂಧವ ಲವಣ, ಸೋರುಪ್ಪು, ನವಸಾಗರ, ತುತ್ಯ ಇವೆಲ್ಲ ಲವಣಜಾತಿಗಳಿವೆ (ಮುಂಬಯಿ. ೬-೩೬).

[←ಮರಾ. ತುತಿಯಾ ; ಹಿಂ. ತೂತಿಯಾ./ಸಂ. ತುತ್ಥಕ]

ತುದಾ (ಅ). ಅಥವಾ ; ಇಲ್ಲವೆ : ಎರಡು ಗಳಿಗೆ ತುದಾ ಮೂರು ಗಳಿಗೆ ಇವರನ್ನ ನಾ ತಡೀಶೀನಿ (ಜಿಕರಾ. ೪೭೦). [?]

ತುದಿ (ನಾ). ೧. ಅಗ್ರ ; ಮೇಲ್ಭಾಗ ; ಶಿಖರ : "ಶಿಖರಮೆನಲಗ್ರಮೆನೆ ತುದಿಯೆನಿಕ್ಕುಂ" (ಮಂಗರಾ.೩೨-೨) ; ಗಿಡುಗಂ ತಂದತ್ತೊ ಮೇಣ್ ಪೆರ್ಮರನ ತುದಿಯಿನೇಱಿ ಬಿರ್ದುದೊ (ಕಾದಂಪೂ. ೨೦೦) ; ಕೊರ್ಬಿ ಬೆಳೆದ ಪೆರ್ಬಿದಿರ ತುದಿ ತಾಗಿ ತಱಿದ ಕಿಱುಮುಗಿಲ್ಗಳಿಂದವನೀತಳಕ್ಕಾಲಿಕಲ್ಲೊಕ್ಕು ಚೆಲ್ಲಿದಂತಿರ್ಪ ಮುಕ್ತಾಫಲಗಳಂ ವಂಶತಂಡುಲಂ ಗೆತ್ತು (ಗಿರಿಕ. ೧-೦೨೮ ವ); ನಡುಗುವ ತನುವಲ್ಲಿಯ ತುದಿಯಿಂ ಪೊಡೆಗೊಡನುದಿರ್ವಲರಂದದಲಿ (ಕಂನವಿ. ೦೦-೩೭). ೨. ಕಡೆ ; ಅಂತ್ಯ ; ಕೊನೆ : "ಅಂತ್ಯಮಂತಿಮಮಗ್ರ್ಯಮಗ್ರಿಮಂ ತುದಿಯಕ್ಕು" (ಮಂಗರಾ. ೦೩೫-೩೭) ; ನಿಲಿಸಿ ಲಘುಪದಮನದ ನಗ್ಗಲಿಸಿರೆ ಮತ್ತೊತ್ತಿ ಬರ್ಪ ಪದಮಂ ತುದಿಯೊಳ್ ನಿಲೆ...ಅಸುಖಕರಂ (ಕವಿರಾ.೨-೬) ; ಕೈದವಮಿಲ್ಲದೆ ನಲ್ಮೆಯಿಂ ನಾಲಗೆಯ ತುದಿಗೆ ತಂದು ನುಡಿದಳ್ (ಪಂಪಭಾ. ೧೦-೪೫ ವ) ; ಸಮ್ಯಕ್ತ್ವಮಾರ್ಗಮಂ...ಕೈಕೊಳ್ ನಿನಗದು ತುದಿಯೊಳ್ ಮಾಡುಗುಮನಂತಮುಕ್ತಿಶ್ರೀಯಂ (ಸುಕುಮಾ. ೫-೩೮) ; ಹುಬ್ಬುಗಳನುಱಿ ಬಿಗಿದೌಡನೊಡೆಯೊತ್ತಿ ಬೆರಳ ತುದಿಯಲಿ ಬೊಬ್ಬಿಱಿದು ಹರಿಶರಕೆ ಕೈನೀಡಿದನು (ಕುಮ್ಯಾದ್ರೋ. ೦೯-೦೩); ತುದಿಯಲ್ಲಿ ಕಾಣುವುದು ಮದುವೆ ಗುಣ (ಗಾದೆ). ೩. ಕೊನೆಯ ಮಟ್ಟ ; ಪರಾಕಾಷ್ಠೆ : ಅಂತು ಕೈತವಮಿಲ್ಲದೆ ವಿಧೇಯತ್ವದ ತುದಿಯನೆಯ್ದೆ (ಶಾಂತಿಪು. ೦೦-೫೫ ವ). ೪. ಗುರಿ; ಉದ್ದೇಶ : ಕಜ್ಜದ ತುದಿಯನಱಿಯದೆ ನುಡಿವುದಿದು ನಿನಗೆ ಹಿರಿಯತನವೇ (ಬಸಪು. ೨೮-೩೪).

ತುಟ್ಟ ತುದಿ; ತುತ್ತ ತುದಿ (ದ್ವಿರುಕ್ತಿ)=೧. ಕೊಟ್ಟಕೊನೆ ; ಕಟ್ಟಕಡೆ : ಮಾರ್ಕೇಟಿನ ತುಟ್ಟ ತುದಿಗೆ ಬಂದರು (ಹೂಬಿಸಿ. ೩) ; ಅಂತರಿಕ್ಷದ ತುಟ್ಟ ತುದಿಗೆ ಕೂಡ ಹಾರಿ (ಜ್ಯೋತಿರ್ವಿ. ೪). ೨. ಬಹಳ ಎತ್ತರ : ಮರದ ತುತ್ತ ತುದಿಯೊಳಿರ್ದೆಟಲ್ವ ಗುಂಡಿಗೆಯಂ ಕಂಡು (ವಡ್ಡಾರಾ. ೬೦-೦೨) ; ತುತ್ತ ತುದಿಯ ಮೇಲೆ ನಿಂದು ನೋಡುವನ್ನಕ್ಕ ನಾನೆತ್ತ ಹೋದೆನೆಂದಱಿಯೆ ನಯ್ಯಾ (ಲಿಂಗವ. ೮೩-೯೫). ೩. ತೀರ ಕೊನೆ ; ಅಂತಿಮಾವಸ್ಥೆ : ಪರಿಭವದೊಂದು ತುತ್ತ ತುದಿ ಕೃಷ್ಣೆಯ ಬನ್ನದೊಳಾಗೆ (ಪಂಪಭಾ. ೮-೮೫); ಸಕಲೇಂದ್ರಿಯಂಗಳ ಸಂತೋಷದ ತುತ್ತತುದಿಯನೆಯ್ದಿಸುವುದು ಕಾಮವೆಂಬುದು ಶಾತ್ಪರ್ಯಂ (ನೀತಿವಾ.೩-೦); ತುದಿ ಮೊದಲೆಂಬ ದಕಾರಕ್ಕುದಯಿಸುಗುಂ ದ್ವಿತ್ವವೃತ್ತಿಯಿಂದೆ ತಕಾರಂ ... ತುತ್ತತುದಿ, ಮೊತ್ತಮೊದಲ್ (ಶಮದ.೦೯೪ಪ್ರಯೋ). ೪. ಶ್ರೇಷ್ಠತೆ; ಸರ್ವೋಚ್ಚತೆ : ಆ ನೃಪನುದಾತ್ತ ಗುಣಗಣರ ತುತ್ತ ತುದಿಯೊಳನೂನಂ (ಶಾಂತಿಪು. ೧-೬೦). ತುದಿಗೆ ಬರು = ತುದಿಗೆಯ್ದು ೧: ಎಲ್ಲಾ ತುದಿಗೆ ಬಂತಲ್ಲ, ಇನ್ನೇನು? (ರೂಢಿ). ತುದಿಗೆಯ್ದು = ೧. ಕೊನೆಮುಟ್ಟು; ಸಮಾಪ್ತವಾಗು : ತುದಿಗೆಯ್ದು [ಪಾಕಾಂ. ಗೈದ] ದುದಂ ಫಲಮಿಲ್ಲದುದಂ...ಕಾರ್ಯಮನುದಾರಮತಿ ನೆಗಳ್ದಪನೇ (ಣಜಿ:ಸಿ. ೧೩-೦೨). ೨. ಅತ್ಯಧಿಕವಾಗು : ಭೀತಿಗದ್ಗದಕಂಠಂ ತುದಿಗೆಯ್ದೆ ಬಿನ್ನವಿಸಿದಂ ವಾಕ್ಕೋವಿದಂ ಸೌವಿದಂ (ಶಾಂತಿಪು. ೩-೬೫). ತುದಿಗೇಱು = ತುದಿಗೆಯ್ದು ೨ : ತ್ವರಿತಂ ತುದಿಗೇಱಿ ಮತ್ತೆ ಮತ್ತೆ ಮನಂ ಸುಖದಱಲು ಪತ್ತಿ (ನಂಬರ. ೧೪-೫೫). ತುದಿಬುಡವಾಗು = ಆದ್ಯಂತವೂ ತಿಳಿದುಬರು; ಸಂಪೂರ್ಣ ಅರಿವಾಗು: ಇದೇ ರೀತಿಯ ಇನ್ನೂ ಅನೇಕ ಪ್ರದರ್ಶನ ವಸ್ತುಗಳು ಇದ್ದುವು. ಅದರ ವಿವರ ಹೇಳಿದರೆ ತುದಿಬುಡವಾಗದು (ಪ್ರವಾಸಿ. ೪೭). ತುದಿಹಾಕು = (ಜಡೆಬಿಚ್ಚಿ ಹೋಗದಂತೆ) ತುದಿಗೆ ದಾರ ಮೊದಲಾದುವನಂ ಕಟ್ಟು : ಮಂದಾ ತನ್ನ ಕೋಣೆಯಲ್ಲಿ ಕುಳಿತು ಹೆಳಲು ಹಾಕಿಕೊಂಡು ಕೂದಲಿಗೆ ತುದಿಹಾಕಿ ಹೆಣೆದುಕೊಳ್ಳುತ್ತಿದ್ದಳು (ಇಪ್ಪಕ. ೨೪೬).

[ದೇ.॥ ತಮಿ. ತುತಿ ; ಮಲ. ತುಞ್ಞ, ತುಮ್ಬಿ ; ತುಳು. ತುದಿ ; ತೆಲು. ತುದಿ, ತುದ, ಸುದ]

ತುದಿಕಂಬಿ (ನಾ). (ಹೆಗಲಿನಲ್ಲಿ ಹೊರುವ) ಅಡ್ಡೆಯ ತುದಿ : ಸಂಗಶರಣೆನುತೆ ಹೆಗಲೊಳಗಿಕ್ಕಿ ತುದಿಕಂಬಿಯೊಳು ಕರಂಡಗೆಯನೊಲಿದಳವಡಿಸಿ (ಬಸರ. ೩-೦೦). [ತುದಿ + ಕಂಬಿ$_1$]

ತುದಿಕರ (ನಾ). (ಆನೆಯ) ಸೊಂಡಿಲಿನ ಕೊನೆ,—ಅಗ್ರಭಾಗ; ಪುಷ್ಕರ: ತುದಿಕರದೊಳೆಳಲುವ ತಲೆಗಳಂಘ್ರಿಯೊಳೊರೆದ ನೆಣನಡಗಿನ ಮಹಾಗಜ ಮೊಗೆದುದರಿಬಲವ (ಕುಮ್ಯಾದ್ರೋ. ೩-೨೯). [ತುದಿ + ಕರ$_3$]

ತುದಿಕಳಿ (ಕ್ರಿ). ಕೊನೆಗೆ ಬರು, – ಸಾಗು. 'ತುದಿಕಳಿಸು' ಪರಾ.

[ತುದಿ + ಕಳಿ$_1$ (< ಕಟ್ಟಿ$_1$)]

ತುದಿಕಳಿಸು (ಕ್ರಿ). ತುದಿಗೆ ಬರು ; ಕೊನೆಗೆ ನಿಲ್ಲು : ತುದಿಕಳಿಸಿ ಬಂದಿದ್ದ ಕಣ್ಣೀರ ತಳಿಯಿಂದ ಕಣ್ಣೆಂಜಲು ಮಾಡಿ ಮಸಣದೊಳೆ (ಸಖೀಗೀ. ೦೦-೮೩); ಭೂತಜಾತದ ವೇದ ತುದಿಕಳಿಸಿ ನಾಲಗೆಗೆ ಇಮ್ಮು ಚಿಮ್ಮಲಿ (ಉಯ್ಯಾಲೆ. ೧೫-೦೨). [ತುದಿಕಳಿ + – ಇಸ್ಸು$_3$]

ತುದಿಕಾಲ್ 'ತುದಿಗಾಲ್' ನೋ.

ತುದಿಕುಂಡೆ 'ತುದಿಗುಂಡೆ' ನೋ.

ತುದಿಕೆಯ್ 'ತುದಿಗೆಯ್' ನೋ.

ತುದಿಕೊಳಿಸು 'ತುದಿಗೊಳಿಸು' ನೋ.

ತುದಿಕೋಡು 'ತುದಿಗೋಡು' ನೋ.

ತುದಿಖುರ (ನಾ). ಗೊರಸಿನ ತುದಿ; ಖುರಾಗ್ರ : ಬಾಯ ಲೋಳೆಗಳಿಳಿಯೆ ಮೈಹಳುವಾಯಿ ಮಿಗೆ ತುದಿಖುರವನೂಱಿ...ವಾನಾಯುಜದ ಸಾಲೆಸೆದುದು (ಕುಮ್ಯಾದ್ರೋ. ೦೭-೯). [ತುದಿ + ಖುರ]

ತುದಿಗಟ್ಟೆ (ನಾ). ಕಟ್ಟೆಯ ಅಂಚು,—ತುದಿ ; ಜಗುಲಿಯ ಕೊನೆಯ ಭಾಗ : ವದನೆ ಯೋಗಿಗೆ ಹೊಲ್ಲ ಬದನೆ ರೋಗಿಗೆ ಹೊಲ್ಲ ಕದನವದು ಹೊಲ್ಲ ನೆರೆಯಲಿ ನಿದ್ದೆಗೆ ತುದಿಗಟ್ಟೆ ಹೊಲ್ಲ (ಸರ್ವಜ್ಞ. ೧೨೯೩) ; ಹಡೆದವ್ವ ನಿದ್ದಾಗ ನಡುಮನೆ ನನಗಿತ್ತು ಕಡಗದ ಕೈಯ ಸೊಸೆ ಬಂದು ನಡೆದಾಗ ತುದಿಗಟ್ಟೆ ನನಗೆ ಎರವಾಯ್ತು (ಹಳ್ಳಿಯ. ೧೫೯). [ತುದಿ + ಕಟ್ಟೆ$_1$]

ತುದಿಗಡೆ (ನಾ). ಕೊನೆಯ ಭಾಗ ; ಅಗ್ರಪ್ರದೇಶ : ಮೈದೋಱಿದವು ಹೃತ್ತಿಮಿರ ತವಕದಲಿ ಪೊಡರ್ವ ಪೀನಪಯೋಧರದ ತುದಿಗಡೆಯ ಲಕ್ಕುಡಿಸಿದವು ಗತಿ ಬೆಳ್ಪಡಿಸಿದವು ಮುಖಮಂಡಲಗಳಾ ಮಾನಿನೀತ್ರಯದ (ತೊರರಾ. ೧-೮-೩). [ತುದಿ + ಕಡೆ$_3$]

ತುದಿಗಾಣಿಸು (ಕ್ರಿ). ಕಡೆಗಾಣಿಸು ; ಕೊನೆಮುಟ್ಟಿಸು : ಅದಱಿಂದಲಿದು ಸಾಮಾನ್ಯವಲ್ಲೆಂಬುದ ತುದಿಗಾಣಿಸಿ ನೋಡಿ ಕಡೆಗೆ (ಅಂಚಪ. ೦-೧೦೦).
[ತುದಿ + ಕಾಣಿಸು]

ತುದಿಗಾಲ್, ತುದಿಕಾಲ್, ತುದಿಗಾಲು (ನಾ). ಕಾಲಿನ ತುದಿ ; ಪಾದಾಗ್ರ : ತುದಿಗಾಲಂ ಧರೆಗೂಱಿ . . . ಕಂಕೆಲ್ಲಿಭೂಜದ ಪುಷ್ಪ ಸ್ತಬಕಂಗಳಂ . . . ತಾಂ ಕುಯ್ದುಳ್ (ತ್ರಿಪುವಿ.೨೪-೩೬) ; ತುದಿಗಾಲ್ಗಳಿಂದೆ ನಿಂದು ಬಣ್ಣವಳಿಯದ ಪೂಗಳಂ ಕೊಯ್ದು (ಶೃಮಿಭಾ. ೮-೧೮). **ತುದಿಕಾಲ್ :** "ಪಾದಾಗ್ರಂ, ಪ್ರಪದಂ – ಈ ೨ ತುದಿಕಾಲ್" (ಹಲಾಯು. ೮೭-೩೭೫). **ತುದಿಗಾಲು :** ತುದಿಗಾಲುಗಳ ಹೊರಿಗೆಯ ತಪದ ನಿಱಿಗೆಯ . . . ಹೊಸತಪಸಿ ತೊಡಗಿದನು ಬಲುತಪವ (ಕುವಾ೨ಅ. ೪-೪೩) ; ಓರುಗುಡಿಸಿದುದವನಿ ರಾಜಕುಮಾರಕಂಠೀರವನು ತುದಿಗಾಲೂಱಿ ನಿಂದಾ ದೆಸೆಗೆ (ವಿಭಾಗ. ೪-೭-೩೦) ; ಕಾಮದೇವನ ಪೂಜೆಗಾಗಿ ತುದಿಗಾಲಲ್ಲಿ ನಿಂತು ಚೂತಾಂಕುರವನ್ನು ಕೊಯ್ದುವೆನು (ಶಾಕುಂತ.೮೦-೭) ; ತುದಿಗಾಲೊಳೆಲ್ಲರು ನಿಂತಿರುವೆವು ನಾವು ಅಲ್ಲಿಗೆ ಹೋಗುವೆವೆಂದು (ಇಂಶಾಪ. ೨೦೯-೯೦).

ತುದಿಗಾಲಿನಲ್ಲಿ ನಿಲ್ಲು = ಆತುರಪಡಂ; ತವಕಿಸು : ದಮಯಂತಿ ಅತ್ತೆ ಮನೆಗೆ ಹೊರಡಲು ತುದಿಗಾಲಿನಲ್ಲಿ ನಿಂತಿದ್ದಳು (ದೂಶಿಟ್ಟ. ೩೫).
[ತುದಿ + ಕಾಲ್$_1$]

ತುದಿಗಾಲು 'ತುದಿಗಾಲ್' ನೋ.

ತುದಿಗಿವಿ (ನಾ). ಕಿವಿಯ ಕೊನೆ, — ತುದಿ : ತುದಿಗಿವಿ ಮೊದಲ್ಗಣ್ಣು . . . ನಿಡಾಸನದೊಳ್ ಸುಱಿ ಪುಟ್ಟೆ ಕಷ್ಟಮಕ್ಕುಂ (ಮಂಗರಾ. ೮೩-೧೯).
[ತುದಿ + ಕಿವಿ$_3$]

ತುದಿಗುಂಡು (ನಾ). ಬೆಟ್ಟದ ತುದಿಯಲ್ಲಿರುವ ಕಲ್ಲು ; ಕೋಡಂಗಲ್ಲುಂ ; ಶೃಂಗ : ಕೂಟಃ, ಶಿಖರಂ, ಶೃಂಗಂ ೩ ಪರ್ವತಶಿಖರದ ಹೆಸರು, ಬೆಟ್ಟದ ತುದಿಗುಂಡು (ಸಿಧ್ಧಾಂತಿ.೯೪). [ತುದಿ + ಗುಂಡು]

ತುದಿಗುಂಡೆ, ತುದಿಕುಂಡೆ (ನಾ). ಪಿರ್ರೆಯ ತುದಿ ; ಕೂರುವ ಭಾಗ : "ಆ ಕಟಿಃ, ಕಟಿಶೀರ್ಷಮೆನಲುವಾ ತುದಿಗುಂಡೆಯೆನಿಸಿಕ್ಕು" (ಮಂಗರಾ. ೯೮-೧೭). **ತುದಿಕುಂಡೆ :** "ಕಟಿಃ, ಕಟಿಶೀರ್ಷಕಃ — ಈ ೨ ತುದಿಕುಂಡೆ" (ಹಲಾಯು. ೮೭-೩೭). [ತುದಿ + ಕುಂಡೆ$_1$]

ತುದಿಗೆಯ್, ತುದಿಕೆಯ್, ತುದಿಗೈ (ನಾ). ೧. ಕೈಯ ತುದಿ; ಹಸ್ತಾಗ್ರ : (ಕಿ). **ತುದಿಕೆಯ್ :** ೨. ಆನೆಯ ಸೊಂಡಿಲಿನ ತುದಿ: "ಕರಿಹಸ್ತಾಗ್ರ, ಪುಷ್ಕರ–ಆನೆಯ ತುದಿಕೆಯ್" (ನಾಚರಿ.೫). **ತುದಿಗೈ :** ೨. "ಕರಾಗ್ರಂ, ಪುಷ್ಕರಂ–ಈ ೨ ತುದಿಗೈ" (ಹಲಾಯು. ೩೭-೩೭). [ತುದಿ + ಕೆಯ್$_2$]

ತುದಿಗೈ 'ತುದಿಗೆಯ್' ನೋ.

ತುದಿಗೊಂಬು (ನಾ). ೧. ಕೊಂಬೆಯ ತುದಿ ; ಶಾಖಾಗ್ರ : ಮದಕರಿಗಳ ಮದಜಳದೊಳ್ ನಿರ್ಮಿರ್ದರ ಮರದ ತುದಿಗೊಂಬುಗಳೊಳ್ ಪೊಳೆವುವು . . . ಕುಸುಮಾವಳಿಗಳ್ (ಕಾದಂಪೂ. ೯೪) ; ಅದಱ ಶಿಖರಮಂ ಮೆಟ್ಟಿ ಮರದ ತುದಿಗೊಂಬಿಂಗೆ ಪಾಯ್ದು (ಪಂಪಕಂ. ೨೦೦-೯) ; ಮರದ ತುದಿಗೊಂಬಿನಲಿ ತೋಱುವ ವರತಳಿರ ನೆಲೆನಿಕರವೊಂದೊಂದಱಲಿ ಛಿದ್ರವ ಮಾಡಲೆಸುವುದು (ಸಂಭಪ. ೦೮-೯). ೨. ಪ್ರಾಣಿಗಳ ಕೋಡಿನ ತುದಿ ; ಶೃಂಗಾಗ್ರ : ಅಗುಟ್ಟು ತುದಿಗೊಂಬಿನೊಳ್ಮೆಲ್ಲಗೆ ಪೊತ್ತಭಿಷೇಕಮೃತ್ತಿಕೆಯ ನೊಡಸಂದತ್ತಗಲದಿನಿಸುಂ ತಪೋವನಮೃಗಮಾ ಮುನಿವರನೊಳಾದ ಪರಿಚಯದಿಂದಂ (ಕಾದಂಪೂ. ೨೦೭). [ತುದಿ + ಕೊಂಬು$_1$]

ತುದಿಗೊನೆ (ನಾ). ತುದಿಯಲ್ಲಿರುವ ಗೊಂಚಲು,—ಗೊನೆ : ಕೆಡೆದವು ಕದಳಿಗಳು ಗೊನೆಸಹಿತ . . . ತುದಿಗೊನೆಯ ಚೆಂದೊಂಗು ಖರ್ಜೂರದಲಿ ಕಾಣೆನು ಹುರುಳ (ಕುವಾ೨ಅ.೦೮-೩೭). [ತುದಿ + ಕೊನೆ$_3$ (<ಗೊಲೆ$_2$)]

ತುದಿಗೊಳಿಸು, ತಂದಿಕೊಳಿಸಂ (ಕ್ರಿ). ತುದಿಯನ್ನು ತಾಕಿಸು,—ಊರು, —ಮೆಟ್ಟು : ತುದಿಗೊಳಿಸಿದಂಘ್ರಿಯಿಂದೆತ್ತಿದ ಭುಜದಿಂ ನಿಮಿರ್ದ ದೇಹದಿಂ (ಶಬಕಂ. ೨-೮೦). **ತುದಿಕೊಳಿಸು :** ತುದಿಕೊಳಿಸಿರ್ದ ವಾಮಚರಣಂ ಮಣಿಯಂ ಬಲದಂಘ್ರಿ ಮೆಟ್ಟೆ . . . ಉಯ್ಯಲೇಱಿದಳಮೃತಾಂಶುವಕ್ತ್ರೆ (ಅನಂಪು. ೮-೪). [ತುದಿ+ಕೊಳ್$_1$+–ಇಸು$_3$]

ತುದಿಗೋಟೆ (ನಾ). ಕೋಟೆಯ ತುದಿ ; ದುರ್ಗದ ಮೇಲ್ಭಾಗ : ದಾಟುವೆನು ಕಡಲೇಳನವನಿಯ ಮಿಾಟ ಸಪ್ತರಸಾತಳದ ತುದಿಗೋಟೆ ಗಿಳಿವೆನು (ತೊರರಾ. ೪-೧೨-೩೦). [ತುದಿ + ಕೋಟೆ$_1$ (<ಕೋಂಟೆ)]

ತುದಿಗೋಡು, ತಂದಿಕೋಡಂ (ನಾ). = ತುದಿಗೊಂಬು ೧ : ಮರದ ತುದಿಗೋಡುಗಳೊಳುಲಿವ ಪಕ್ಕಿಗಳುಮಂ (ಕಾದಂಉ. ೨೬೬) ; ಪಕ್ಕಿಗಳ್ ಮರಂಗಳ ತುದಿಗೋಡ ಮೇಲೆ ದನಿಗೆಯ್ಯುತುಮಿರ್ದುವು ಮುಂಬಗಲ್ವರಂ (ಜಗವಿ. ೦೪-೦೦) ; ಮರದ ತುದಿಗೋಡುಗಳ್ ಕೊಳೆ ಧರೆಗಲ್ಲುಗುತಿರ್ಪ ತರಳತಾರೆಗಳಿನಿಕುಂ ಖರಸೂಕರದಂಷ್ಟಾಹತಿಪರಿಸ್ಫುಟದ್ಫೇಣಮುಕ್ತ ಮುಕ್ತಾನಿಕರಂ (ಪಂದ್ರಪು. ೫-೪೮) ; ತುದಿಗೋಡಂ ಮೆಟ್ಟಿ ಕೊಂಬಂ ಪಿಡಿದು ಜಡಿದು ತೂಗಾಡಿ . . . ಕುಳ್ಳಿರ್ದುದು ಕೋಡಂ (ಸೂಕ್ತಿಸು. ೩-೦೯೫). **ತುದಿಕೋಡು :** ಬೇರಿಂ ತುದಿಕೋಡಂ ಮುಟ್ಟಿ ಕಾಯ್ಪೇಱಿದ ಪಲಸು ಪುರೋದ್ಯಾನದೊಳ್ ಕುಂದವೆಂದುಂ (ಸೂಕ್ತಿಸು. ೪-೩೮).
[ತುದಿ + ಕೋಡು$_5$]

ತುದಿನಾಲಗೆ, ತಂದಿನಾಲಿಗೆ (ನಾ). ನಾಲಗೆಯ ತುದಿ ; ಜಿಹ್ವಾಗ್ರ : ಅಂತು ಕುಡಿಯೆ ಕಕ್ಕರಗೆಯ್ದುದಿಂ ತುದಿನಾಲಗೆಯೊಳ್ ತೊದಳ್ಪೆರಸು ನುಡಿವ ನುಡಿಗಳುಂ (ಪಂಪಭಾ. ೪-೮೮೮) ; ಉಗಿದಡಾಯ್ದದ ಮೊನೆಯ ತುದಿನಾಲಗೆಗಳಲಿ ಮಾತಾಡಬಲ್ಲರೆ ಸೊಗಸುವೆವು ನಾವು (ಕುಪ್ಪಾಳ. ೦೦-೪೫) ; ತುದಿನಾಲಗೆಗೆ ನರಸುಕ್ಕನಿಕ್ಕಿದಳು (ತೊರರಾ. ೨-೨-೩೮) ; ನಾರಣಪ್ಪನ ಭಾರತದಲ್ಲಿ ಪ್ರತಿಯೊಂದು ಪದ್ಯವೂ ಈಕೆಯ ತುದಿನಾಲಗೆಯಲ್ಲಿದೆ (ದೂರಸ. ೬೫). **ತುದಿನಾಲಿಗೆ :** ಹೃದಯಂದ ಕತ್ತರಿ ತುದಿ [ಪಾಠಾಂ. ಕುಡಿ] ನಾಲಿ[ಪಾಠಾಂ. ಲ]ಗೆಯ ಬೆಲ್ಲೇಂ ಬೊ (ಬಸವ. ೨೭೯).
[ತುದಿ + ನಾಲಗೆ]

ತುದಿನಾಲಿಗೆ 'ತಂದಿನಾಲಗೆ' ನೋ.

ತುದಿನೆಲೆ (ನಾ). ಕೊನೆಯ ಅಂತಸ್ತು ; ಉಪ್ಪರಿಗೆಯ ಮೇಲುಭಾಗ: ಹಂಸದ ಗಿಳಿಯ ಕೋಗಿಲೆಯ ಕರ್ಕಶಕೆ ನಿಲಲಱಿಯದುಪ್ಪರಿಗೆದುದಿನೆಲೆಯ ಚಂದ್ರಶಾಲೆಗೆ ಬಂದಳಂಬುಜಾಕ್ಷಿ (ಶೃಮಿಭಾ. ೩೦-೩೬). [ತುದಿ + ನೆಲೆ]

ತುದಿಪದ (ನಾ). ಕೊನೆಯ ಮಟ್ಟ ; ಮೇಲ್ಮಟ್ಟದ ಘನತೆ ; ಪರಮಪದ : ಭಕ್ತರ ಕುಲಂಗಳನಹಗೆಯಿಹಗೆಂದಱಸದದು ತುದಿಪದವಲಾ (ಬಸಪು. ೪-೬೩). [ತುದಿ + ಪದ$_2$]

ತುದಿಪದವಿ (ನಾ). = ತುದಿಪದ : ನಮಃಶಿವಾಯಯೆನಿಪ್ಪ ನುಡಿಯಂ ಮಱೆಯದಿರು ತುದಿಪದವಿ ನಿನಗೆನುತ (ಬಸಪು. ೨೪-೦೯). [ತುದಿ+ಪದವಿ]

ತುದಿಬಾಲ 'ತುದಿವಾಲ' ನೋ.

ತುದಿಮಿಾಸೆ (ನಾ). ಮಿಾಸೆಯ ಕೊನೆ : ಬೆರಳ ತುದಿಮಿಾಸೆಯಲಿ ರಾಘವ ತಿರುವಿ ಭಕುತನ ಮುಖವ ನೋಡಲು (ಕೌಶಿರಾ. ೩೨-೩೩). [ತುದಿ+ಮಿಾಸೆ]

ತುದಿಮುಟ್ಟ (ಅ). ಕೊನೆಯವರೆಗೆ ; ಸಂಪೂರ್ಣವಾಗಿ : ಕೈಕೊಂಡ ಕೆಲಸವನ್ನು ತುದಿಮುಟ್ಟ ನಿರ್ವಹಿಸಬೇಕು (ರೂಢಿ). 'ತುದಿಮುಟ್ಟೆ' ಪರಾ. [ತುದಿ + ಮುಟ್ಟ]

ತುದಿಮುಟ್ಟಿಸು (ಕ್ರಿ). (ಹಿಡಿದ ಕೆಲಸವನ್ನು) ನೆರವೇರಿಸು ; ಗುರಿ ಮುಟ್ಟಿಸು ; ಪೂರೈಸು : ಇವೆಲ್ಲವಂ ತುದಿಮುಟ್ಟಿಸುವ ಭಾಪೆ (ಬಸಪು. ೬-೭) ; ಜನರು ಸರಕಾರವನು ಜಗ್ಗಿ ಬುಡಮೇಲುಗೈದರು ಚಳುವಳಿ ತುದಿಮುಟ್ಟಿಸಿದರು (ಇಂಶಾಪ. ೩೯-೮೦). [ತುದಿಮುಟ್ಟು + – ಇಸು$_3$]

ತುದಿಮುಟ್ಟು (ಕ್ರಿ). ಕೊನೆಗಾಣು ; ಮುಗಿ ; ಪರಿಸಮಾಪ್ತಿಯಾಗು : ನನ್ನ ವಿದ್ಯಾಭ್ಯಾಸ ತುದಿಮುಟ್ಟಿತು (ರೂಢಿ). 'ತುದಿಮುಟ್ಟಿಸು' ಪರಾ. [ತುದಿ + ಮುಟ್ಟು$_1$]

ತುದಿಮುಟ್ಟೆ (ಅ). ತುದಿಯವರೆಗೆ ; ಕೊನೆಯವರೆಗೆ : ಬೇರಿಂ ತುದಿ ಮುಟ್ಟೆ ಕಾಯ್ತು ಪಲಸೆಂಬಿವು ಕುಂದವು ನಂದನಂಗಳೊಳ್ (ಜಗವಿ. ೨-೧೫). 'ತುದಿಮುಟ್ಟ' ಪರಾ. [ತುದಿ + ಮುಟ್ಟೆ]

ತುದಿಮುಱಿ (ಕ್ರಿ). ಕೊನೆ ಮುರಿದುಹೋಗು,—ಕ್ಷತವಾಗು : ಪೊಸಗಂಧವಕ್ಷತೆ ತುದಿಮುಱಿದವೆಂದೊ (ಬಸಪು.೪೭-೧೪). [ತುದಿ + ಮುಱಿ$_1$]

ತುದಿಮೂಗು (ನಾ). ಮೂಗಿನ ತುದಿ ; ನಾಸಾಗ್ರ : ತುದಿಮೂಗು ತುದಿಗಿವಿ ಮೊದಲ್ಗಣ್ಣು ಕಣ್ಣಡಿಗಳೊಳು . . . ಸುಱಿ ಪುಟ್ಟೆ ಕಷ್ಟಮಕ್ಕುಂ (ಮಂಗರಾ. ೮೩-೦೯) ; ಏನೆಲವೊ ತುದಿಮೂಗಿನಲಿ ಬಿಳುಪೇನು (ಕುಮ್ಯಾವಿ. ೫-೮). [ತುದಿ + ಮೂಗು$_1$]

ತುದಿಮೊದಲ್, ತುದಿಮೊದಲು (ನಾ). ೧. ಮೂಲ ; ಪ್ರಾರಂಭ ; ಮೊತ್ತಮೊದಲು. ೨. ಕೊನೆ ಮತ್ತು ಬುಡ ; ಆದಿ ಮತ್ತು ಅಂತ್ಯ : ತುದಿಮೊದಲಪ್ಪುದಿಂಪಡರೆ ಕೂಡುವ ಕೂಟದೊಳ್ (ಅರ್ಧನೇ. ೬-೬). **ತುದಿಮೊದಲು** : ೨. ನಿಮ್ಮ ಭಕ್ತಿಯ ತುದಿಮೊದಲಿದೆಂದೊಮ್ಮೆಯುಂ ಸಲೆ ತೋಱದಾರಿಗೆ (ಬಸಪು. ೦-೫೮) ; ವಿಧಿಯಿಂದೆ ಶುಕ್ರದೇವರು ತನಗಱುಹಿದ ಹದಿನಾಱುಶತವಿದ್ಯವನು ತುದಿಮೊದಲಿಂದೆ ವಿಸ್ತರಿಸಿದ ಕೌಟಿಲ್ಯನಿಧಿ ಶಂಬರಾಸುರ ಖಳನು (ಮೋಹತ. ೦೦-೬೯) ; ತನ್ನೊಳಗೆ ತಾನೆ ವಿಸ್ಮಿತನಾಗಿ ಪಾರ್ಥನದಱುನ್ನತಿಯ ತುದಿಮೊದಲನಱುಹೆನಲ್ (ಜೈಮಿಭಾ. ೦೦-೨೨) ; ಅವನ ರಗಳೆಗೆ ತುದಿಮೊದಲೇ ಇಲ್ಲ (ರೂಢಿ). [ತುದಿ + ಮೊದಲ್]

ತುದಿಮೊದಲು 'ತುದಿಮೊದಲ್' ನೋ.

ತುದಿಮೊನೆ (ನಾ). ತುದಿಯ ಹರಿತವಾದ ಭಾಗ; ನಿಶಿತಾಗ್ರ : ದಿನಪಕೋಟಿಯ ರಶ್ಮಿಯನು ತುದಿಮೊನೆಯೊಳುಗುಳುವ ಬಾಯಿಧಾರೆಯ ತನಿಯುರಿಯ ತೆಕ್ಕೆಯಲಿ ಥಳಥಳಿಸುವ ಮಹಾಂಕುಶವ (ಕುಮ್ಯಾದ್ರೋ. ೩-೫೫). [ತುದಿ + ಮೊನೆ$_1$]

ತುದಿಮೊಲೆ (ನಾ). ಮೊಲೆಯ ತುದಿ ; ಕುಚಾಗ್ರ ; ಚೂಚುಕ : ಕುರವಕಕೆ ತುದಿಮೊಲೆಯ ಸೋಂಕಿನಲಿ ಹೂದೋಱುದೆವು ಕಣ್ಣೋರೆಯಲಿ ತಿಲಕವ ಕದುಕಿದೆವು (ಕುಮ್ಯಾಅ. ೦೮-೧೩); ಈ ಕೋತಿಯಂ ತನ್ನ ತುದಿಮೊಲೆ ಗಳಿಂದಪ್ಪಳಿಸಿ ನರನ ಸೈನ್ಯವಂ ಸದೆದು ಕೆಡಪುವೆನು (ಜೈಮಿಭಾ. ೧೬-೩೫). [ತುದಿ + ಮೊಲೆ$_1$]

ತುದಿಯಂಬು (ನಾ). ಬಾಣದ ತುದಿ ; ಬಾಣಾಗ್ರ : ಕೈನೀಡಿದನು ತುದಿಯಂಬಿನಲಿ ತುಱುಗಿದ ಕಿಡಿಯ ಬಿಱುಕೇಸುರಿಯ ಧಾಳಿಗಳ . . . ನಾರಾಯಣಮಹಾಶರಕೆ (ಕುಮ್ಯಾದ್ರೋ. ೧೯-೧೪). [ತುದಿ + ಅಂಬು$_2$]

ತುದಿಯೆಯ್ದು (ಕ್ರಿ). ೧. ತುದಿಮುಟ್ಟು; ಪೂರ್ಣವಾಗು. ೨. ಈಡೇರು; ನೆರವೇರು : ತುದಿಯೆಯ್ದಿತ್ತೆನಗೆನ್ನ ಪೂಣ್ಕೆ ನಿನಗಂ ಪುಣ್ಯೋದಯಂ ಸಾರ್ಚಿ ಬಂದುದು (ಆದಿಪು. ೪-೧೮). [ತುದಿ + ಎಯ್ದು]

ತುದಿವರ (ನಾ). ಮರದ ತುದಿ : ಮೊದಲ ಬಲುಹನು ಕಂಡೆನಿನ್ನೀ ತುದಿವರನ ತನಿಗೆಚ್ಚು ನಮ್ಮನು ಬೆದಱಿಸುವುದೋ ಶಿವಶಿವಾ ತಪ್ಪೇನು ತಪ್ಪೇನು (ಕುಮ್ಯಾಕ. ೨೦-೧೮). [ತುದಿ + ಮರ$_1$]

ತುದಿವರಂ (ಅ). ತುದಿಯವರೆಗೆ ; ಕೊನೆಯವರೆಗೆ : ಮೊದಲಿಂದೆ ತುದಿವರಂ ಬೇಱೊಂದು ರೀತಿಯಾಗದೆ (ಪದ್ಮರಾ. ೮-೨೯) ; ಬೇರ್ವೆರಸಿ ತುದಿವರಂ ಕಾಯ್ತು ಪನಸಂಗಳ್ . . . ನಾಡೆ ಸಾರ್ವಕಾಲಂ ಕುಂದವು (ಜಿಲಪು. ೦೦-೨೨). [ತುದಿ + – ವರಂ]

ತುದಿವಲಗೆ (ನಾ). ಧ್ವಜದ ಮೇಲಿರುವ, ಲಾಂಛನವನ್ನಿಡುವ ಹಲಗೆ,-ಫಲಕ,-ಚೌಕಟ್ಟು : ನವಹೇಮದಂಡದ ಹಳವಿಗೆಯ ತುದಿವಲಗೆಯಲಿ ಹಾಯ್ಕಿದರು ಪನ್ನಗನ (ಕುಮ್ಯಾದ್ರೋ. ೦೦-೪೦). [ತುದಿ + ಪಲಗೆ]

ತುದಿವಾಲ, ತುದಿಬಾಲ (ನಾ). ಬಾಲದ ತುದಿ,—ಕೊನೆ : ತುಱುಕಿದನು ತುದಿವಾಲದಗ್ನಿಯನು . . . ಭದ್ರಭವನದಲಿ (ತೊರರಾ. ೫-೮-೩೬) ; ಪುದಿದಿರ್ಪುದು ತೇಟ್ಗಿ ವಿಷಂ ತುದಿವಾಲದೊಳ್ (ಜಿಕವಿ. ೪-೩೬). **ತುದಿಬಾಲ** : ಹುಲಿಯ ತುದಿಬಾಲವು ಕಪ್ಪಿರುತ್ತದೆ (ಮುಂಬಯಿ. ೪-೩೬). [ತುದಿ + ಬಾಲ$_1$]

ತುದಿವೆರಳು (ನಾ). ಬೆರಳಿನ ತುದಿ ; ಬೆಟ್ಟಿನ ಕೊನೆ : ಹರಹರ ಮಹಾದೇವಾ ಎನುತ ತುದಿವೆರಳಲಾಲಿಯ ನೀರ ಮಿಡಿದಳಲಿದನು ಕಲಿ ಭೀಮ (ಕುಮ್ಯಾಕ. ೧೨-೯) ; ಅಲ್ಲಾಡಿದನು ತುದಿವೆರಳನು (ತೊರರಾ. ೪-೪-೩೩) ; ತುದಿವೆರಳೊಳು ಜಪಸರವ ನೂಂಕುತ ಪಂಚಪದವ ಜಪಿಸಿದ ರೊಪ್ಪದೊಳು (ಭರಜ. ೧೮-೧೪೦). [ತುದಿ + ಬೆರಳು (< ಬೆರಲ್)]

ತುದಿಸೆಱಗು (ನಾ). ಸೆರಗಿನ ಕೊನೆ,—ತುದಿ : ಕಂಡಳವನಂಗದೊಳೆಸೆವ ರುಚಿರಕಂಚುಕದ ತುದಿಸೆಱಗಿನೊಳ್ಕಟ್ಟಿಕೊಂಡಿರ್ದ ಪತ್ರಿಕೆಯನು (ಜೈಮಿಭಾ. ೩೦-೨೪). [ತುದಿ + ಸೆಱಗು (<ಸೆಱಂಗು)]

ತುನಕು 'ತುಣುಕು' ನೋ.

ತುನಿ$_1$ (ಕ್ರಿ). (?) : ಗಿಂಡಿಯಲ್ಲುದಕವಂ ಕಯ್ಯೆತ್ತಿ ಕಯ್ಯೆತ್ತಿ ಬೇರ್ಗರೆಯಲ್ ಕಣ್ ತುನಿದೀಂಟೆ ತೇಗಿ ನಿಮಿಷಂ ಸಂತೈಸಿಕೊಂಡಿರ್ದು . . . ಏಂ ಸುಖಂಬಡೆದರೋ ಕಯ್ಗಟ್ಟಿಕೊಂಡೆಲ್ಲರು (ನಳಜಂ. ೪೬೮).

[P ಇದು 'ಕುನಿ' ಎಂಬುದರ ಅಪಲಿಖಿತವಿರಬಹುದೆ ?]

ತುನಿ$_2$ (ನಾ). ಒಂದು ಬಗೆಯ ವಾಯುರೋಗ : ಪಕ್ವಾಶಯದಿಂದ ಕೆಳಕ್ಕಾಗಿ ಅಪಾನಪ್ರದೇಶ, ಗುಹ್ಯಪ್ರದೇಶಕ್ಕಾಗಿ ಕೀಳು ಮುಂತಾಗಿ ತೀವ್ರವಾದ ವೇದನೆಯುಂಟಾಗಿ ಚರಿಸುವಂಥಾ ವಾಯು ತುನಿಯೆನಿಸಿಕೊಂಬುದು (ವೈದ್ಯಸಾ. I, ೩೨೫). [ಸಂ.]

ತುನುಕು 'ತುಣುಕು' ನೋ.

ತುನ್ನ (ಗು). ೧. ನೋವುಗೊಂಡ ; ಗಾಸಿಗೊಂಡ. ೨. ಪೀಡೆಗೊಂಡ ; ತೊಂದರೆಗೊಳಗಾದ. ೩. ಕತ್ತರಿಸಿಹೋದ. (ನಾ). ೪. ನೋವು ; ಬಾಧೆ : "ಪೀಡಿತಂ ತುನ್ನಮೆನೆ ನೋವಕ್ಕು" (ಮಂಗರಾ. ೧೩೨-೨೬). ೫. ಒಂದು ಬಗೆಯ ಮರ ; ನಂದಿಮರ : "ತುನ್ನಃ, ಕುಬೇರಃ . . . ನಂದಿವೃಕ್ಷಃ—೬ ನಂದೀ ಎಂಬುವ ಮರದ ಹೆಸರು" (ಸಿದ್ಧಾಂತಿ. ೧೨೪). [ಸಂ.]

ತುನ್ನವಾಯ (ನಾ). ಹೊಲಿಗೆ ಕೆಲಸದಿಂದ ಜೀವನ ಮಾಡುವವನು; ಚಿಪ್ಪಿಗ ; ಸಿಂಪಿಗ ; ದರ್ಜಿ : "ತುನ್ನವಾಯಃ, ಸೌಚಿಕಃ—ಈ ೨ ಚಿಪ್ಪಿಗಂ" (ಹಲಾಯು. ೯೭-೪೩೬) ; "ಚಿಪ್ಪಿಗನು ಚೇಳಿಕಂ ಸೂಚಿಕಂ ತುನ್ನವಾಯನೆನಿಕ್ಕು" (ಮಂಗರಾ. ೦೧೦-೨). [ಸಂ.]

ತುಪಟ 'ತುಪ್ಪುಟು' ನೋ.

ತುಪರ 'ತೂಪರ' ನೋ.

ತುಪಾಕ 'ತುಪಾಕಿ' ನೋ.

ತುಪಾಕಸೇನೆ (ನಾ). ಬಂದೂಕಿನಿಂದ ಯುದ್ಧಮಾಡುವ ಸೈನ್ಯ : ಭಾಮನಾಯಕನ ಸಹಾಯಕ್ಕೆ ಶ್ರೀರಂಗಪಟ್ಟಣದಿಂದ ತುಪಾಕಸೇನೆಯು ...ಬರುವಂತಿಲ್ಲ (ಸುಗುಗಂ. ೧೨೪-೫). [ತುಪಾಕ (<ತುಪಾಕಿ) + ಸೇನೆ]

ತುಪಾಕಿ, ತುಪಾಕ, ತುಬಾಕಿ (ನಾ). ೧. ಗುಂಡುಂಗಳನ್ನಿಟ್ಟು ಮದ್ದು ತುಂಬಿ ಪ್ರಯೋಗಿಸುವ ಒಂದು ಬಗೆಯ ಆಯುಧ ; ಕೋವಿ ; ಬಂದೂಕು: ಹೊಗೆಯಂತೆ ಪೆಟಲು ತುಪಾಕಿಯ ಬಲಗೂಡಿ ಧಿಗಿಧಿಗಿನಿದಿರಿಗೆ ಬಂದು ನಗೆಮೊಗದರಸಗೆ ಕೈಮುಗಿದೊಲೆದನು (ಭರಜ. ೨೨-೧೯) ;

ಎಡೆವಿಡದಿಡುವ ತುಪಾಕಿಯ ಗುಂಡಿನ ಕಡುಹಿಂದ . . . ಕೂಡಿದ ರಿವುಬಲ ಕಡಿಖಂಡವಡೆದುದೇವೆಳ್ವೆ (ಕಂನವಿ. ೬-೭೬) ; ನಮ್ಮಲ್ಲಿದ್ದ ತುಪಾಕಿಗಳನ್ನು ಅವರ ಮೇಲೆ ಪ್ರಯೋಗಿಸಿದೆವು (ಪ್ರತಾಪ. ೩೦); ತುಪಾಕಿ ಹೊಟ್ಟೇಲಿ ಫಿರಂಗಿ ಹುಟ್ಟಿದ ಹಾಗೆ (ಗಾಡ). **ತುಪಾಕ :** ೧. ವೀರಡಿ ಬಡಿಗೋಲ್ತುಪಾಕಮಿಡುಗಲ್ಲೆರೆ ವೆರ್ಬಲೆ ಕೂಳೆ ಗಾಳಂ . . . ಪಿಡಿದು ಬೇಂಟೆಗೆ ಸಂದ ವುಳಿಂದರೆಯ್ದುದರ್ (ರಾಜಕೀ. ೫-೩೨) : ಧಮ ಧಮಧ್ವಾನಮಾದಂ ತುಪಾಕಂಗಳವೀಗಳ್ . . . ಸಾರ್ತರ್ಪಿನಂ (ಚಳವಿ. ೬-೩೬) ; ಮಿಂಟೆ ವೇರಡಿ ತುಪಾಕಂ . . . ಕೊಂಡೊಡನಾ ಲುಬ್ಧಕಸಂಚಯಂ ನಡೆದುದು (ಯಾದಪಂ. ೪-೩೧). ೨. ಕೋವಿ ಹಿಡಿದಂ ಯುದ್ಧ ಮಾಡುವ ಸೈನಿಕ : ಹಲ್ಲಣಗಳನ್ನಾಳಬಲ್ಲ ಬಿಲ್ಲಾಳ್ಗಳ ತುಪಾಕರ ಪಡೆಗಳನ್ನೂ . . . ಅಲ್ಲಿಗೆ ಕಳಿಹಿರಿ (ಪಟ್ಟಿಉ. ೪೩-೪). **ತುಬಾಕಿ :** ೧. ತುಬಾಕಿಯಲ್ಲಿ ಮದ್ದು ತುಂಬಿ . . . ಹೊಂಚು ಹಾಕಿ ಕುಳಿತುಕೊಂಡನು (ಪಟ್ಟಿಹೊ. ೩೪); ತುಬಾಕಿಗಳು ಹಾರಿದವು (ಫಲಸಂ. ೮೦); ರಾಯಚೂರುರಾಯುದ್ಧ ನಡೆಯುವ ತನಕ ತುಬಾಕಿಯುಂಥ ಮದ್ದಿನ ಆಯುಧ ದಕ್ಷಿಣದೇಶದವರಿಗೆ ಗೊತ್ತಿರಲಿಲ್ಲ (ಸಂಚುಂದ. ೩೮).

ತುಪಾಕಿಯವರು, ತುಪಾಕದವರ್ = ಕೋವಿ ಹಿಡಿದಂ ಯುದ್ಧ ಮಾಡುವ ಸೈನಿಕರು: ಚಕ್ಕಮುಕ್ಕಿಕಲ್ಲಿನ ತುಪಾಕಿಯವರು ತಮ್ಮ ಆಯುಧ ಸಲಕರಣ ಸಮೇತ ತೆರಳಲಿ (ಪೇಟಿಮಾ. ೨) : ಅಲ್ಲಿ ತುಪಾಕದ ವರ್ಗಂ ಪೇಟದೆ ನಿಟ್ಟೋಟದಿಂ ಕಿರುಚನಾವಳ್ಳಿಯಂ ಸಾರ್ವುದುಂ (ಅಪ್ರತಿ. ೦೪೩-೩೨). 'ತೋಪ್ಪು' ಪರಾ.

[← ಹಿಂ. ತುರ್ಕಿ. ತುಪಕ್ ; ಮರಾ. ತುಬಕ್]

ತುಪಾಕಿಗುಂಡು (ನಾ). ತುಪಾಕಿಗೆ ಹಾಕಿ ಉಡಾಯಿಸುವ ಗುಂಡು : ಬಹು ಜನರು ಹತರಾಗುವಂತೆ ಮಾಡಿರುವ ತೊಳ್ಕುಗುಂಡುಗಳನ್ನೂ ತುಪಾಕಿಗುಂಡುಗಳನ್ನೂ ಇರಿಸುವುದಕ್ಕೆ . . . ಉಗ್ರಾಣಗಳನ್ನು ಮಾಡಿಸಿದರು (ಚಾಮುವಂ. ೮೯). [ತುಪಾಕಿ + ಗುಂಡು]

ತುಪಾನು 'ತುಫಾನು' ನೋ.

ತುಪ್ಪ (ನಾ). ೧. ಬೆಣ್ಣೆಯನ್ನು ಕಾಯಿಸಿ ತೆಗೆದ ಸಾರ, _ಸತ್ತ್ವ ; ಘೃತ ; ಆಜ್ಯ : "ಸರ್ಪಿಃ, ಘೃತಂ, ಆಜ್ಯಂ, ಆಘಾರಃ —ಈ ೪ ತುಪ್ಪ" (ಹಲಾಯು. ೪೭-೦೫೦) ; ತುಪ್ಪಮಂ ಕೊಟ್ಟು ನೀರಂ ಕೊಳ್ವ... ಗಾವಿಲನಂತಾಗಿ (ಧರ್ಮಾಮೃ. ೦೪-೦೦೬) ; ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ (ಬಸವ. ೩೩) ; ರಾಮನಾಮು ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ಎಟ್ಟಿಲನಾಮ ತುಪ್ಪವ ಕಲಸಿ ಬಾಯಿ ಚಪ್ಪರಿಸಿರೊ (ಪುರಂದ. ೩-೧೭ ಪದ್ಧವಿ) : ತುಪ್ಪ ಸಕ್ಕರೆ ಪಾಲ ಸವಿವ ಮನುಜರ ತಂದೊಪ್ಪಿಸುವುದು ದೊಡ್ಡಿತಲ್ಲ (ಕಂನವಿ. ೦೦-೮೪); ತುಪ್ಪದ ಆಶೆಗೆ ಎಂಜಲು ತಿಂದ (ಗಾಡ.) ೨. ತುಪ್ಪವನ್ನು ಹೋಲುವ ಜಿಡ್ಡುಗುಣವನ್ನು ಹೊಂದಿರುವ ವಸ್ತುವಿಶೇಷ ; ಸಸ್ಯದ ಕೊಬ್ಬು ; ವನಸ್ಪತಿಯ ಕೊಬ್ಬು. ೧, ೨ : ತುಪ್ಪಮೆಂಬ ಪೆಸರಾವಿನ ತುಪ್ಪಕ್ಕಂ ಗೇರತುಪ್ಪಕಮಂಟಪ್ಪೊಡಂ ತುಪ್ಪ ದಂತಿನಿದಕ್ಕುಮೇ (ಧರ್ಮಾಮೃ. ೦-೧೯೩). ೩. ಪ್ರಾಣಿಗಳ ಕೊಬ್ಬು : ಉಡುವಿನ ತುಪ್ಪ ಲೇಪನ ಮಾಡಿದರೆ ಮೂಳೆ ಕೂಡಿಕೊಳ್ಳುತ್ತದೆ (ಕೂಡಿ). ೪. ಬಟ್ಟಿ ಇಳಿಸಿದ ದ್ರವ ; ಅರ್ಕ ; ಹಸಿಶುಂಠಿಯ ಒಂದು ಕೊಳಗದಲ್ಲಿ ರಸ . . . ಕಾಸಿ ಹದದಲ್ಲಿ ಇಳುಹಿಕೊಂಡು ಉದಯಕಾಲದಲ್ಲಿ ನಾಲ್ಕುವರಹ ತೂಕ ತುಪ್ಪವ ಸೇವಿಸಲು ಶೋಭೆ, ಕಾಸ, ಅಗ್ನಿಮಾಂದ್ಯ, ಪಾಂಡು, ಇವಿಷ್ಟೂ ಪರಿಹರವಹವು (ಪ್ರದ್ಯಸಾ. I, ೩೩೮). ೫. [ವೈದ್ಯಶಾ] ಬೇರೆ ಬೇರೆ ಬಗೆಯ ಔಷಧಿದ್ರವ್ಯಗಳನ್ನು ಸೇರಿಸಿ ತುಪ್ಪದಲ್ಲಿ ಪಾಕಮಾಡಿ ತಯಾರಿಸಿದ ಔಷಧ ; ಘೃತ: ಅಶ್ವಗಂಧಿಯ ತುಪ್ಪವ ಆರೋಗ್ಯಕ್ಕೆ ಒಳ್ಳೆಯದು (ಕೂಡಿ).

ತುಪ್ಪದ ದೋಸೆ=ತುಪ್ಪ ಹೆಚ್ಚಿ ತಯಾರಿಸುವ ದೋಸೆ:ಈ ತುಪ್ಪೊ ಸಂಜೆ, ಹೋಟಲಲ್ಲಿ ತುಪ್ಪದ ದೋಸೆ, ಕಾಫಿ ಕೊಡಿಸು (ಕೂಡಿ). **ತುಪ್ಪದನ್ನ** = ತುಪ್ಪದ ಒಗ್ಗರಣೆ ಮತ್ತು ಹಪ್ಪಳ, ತೆಂಗಿನ ತುರಿ ಮುಂತಾದಂವನ್ನು ಹಾಕಿ ಮಾಡುವ ಒಂದಂ ಬಗೆಯ ಕಲಸನ್ನ : ತುಪ್ಪದನ್ನ ಉಣ್ಣೋಕೆ ಕೊಚ್ಚೆನೀರಲ್ಲಿ ಕೈ ತೊಳೆಸಿದ (ಗಾಡ).

[< ಪ್ರಾ. ತುಪ್ಪ-/ತಮಿ. ತುಪ್ಪ, ತುಪ್ಪಕ, ತುಪ್ಪು-/ ಮರಾ. ತುಪ್, ತೂಪ್]

ತುಪ್ಪಕೀರೆ 'ತುಪ್ಪಗೀರೆ' ನೋ.

ತುಪ್ಪಗಾಯ್ (ನಾ). ಬದನೆಕಾಯಿಗೆ ತುಪ್ಪ ಮೊದಲಾದುವನ್ನು ಸೇರಿಸಿ ಮಾಡುವ ಒಂದು ಬಗೆಯ ವ್ಯಂಜನಪದಾರ್ಥ : ಬಟ್ಟ ಬದನೆಯ ಕಾಯ ನಸುನೀರ ತೀದುಪ್ಪವಿಟ್ಟು . . . ತುಪ್ಪಮಂ ಬಿಟ್ಟು ಪೊಡ್ಡಣಿಗೆಗೊಡೆ ತುಪ್ಪಗಾಯಾಯಿತು(ಸೂಪಶಾ. ೪-೦೩).

[ತುಪ್ಪ + ಕಾಯ್[4]]

ತುಪ್ಪಗಾರಿಗೆ (ನಾ). ತುಪ್ಪದಲ್ಲಿ ಕರಿದ ಗಾರಿಗೆ : ಕಾಯ್ದು ತುಪ್ಪದಲ್ಲಿ ಹಾಕಿ ಗಾರಿಗೆಯನ್ನು ತಯಾರಿಸುವುದು. ಇದರ ಹೆಸರು ತುಪ್ಪಗಾರಿಗೆ (ಸೂಪಶಾ. ೦-೩೪ ಟೀಕೆ). [ತುಪ್ಪ + ಗಾರಿಗೆ[1]]

ತುಪ್ಪಗೀರೆ, ತುಪ್ಪಕೀರೆ (ನಾ). ಆಹಾರಕ್ಕಾಗಿ ಮತ್ತು ಔಷಧಕ್ಕಾಗಿ ಉಪಯೋಗಿಸುವ ಒಂದಂ ಬಗೆಯ ತರಕಾರಿ ಗಿಡ ; ಹರಿತ ಮಂಜರಿ : ತುಪ್ಪಗೀರೆಸೊಪ್ಪಿನ ರಸದಲ್ಲಿ . . . ಪಾಕವ ಮಾಡಿ ಹದದಲ್ಲಿ ಇಳುಹಿ ಆ ತೈಲದಲ್ಲಿ ವಸ್ತಿಯ ಕಟ್ಟಲು ಗುಲ್ಮ, ಮಹೋದರಗಳು ಪರಿಹರ (ಪ್ರದ್ಯಸಾ. I, ೩೦೪). **ತುಪ್ಪಕೀರೆ :** "ಮಾರುತಘ್ನಃ —ತುಪ್ಪಕೀರೆ" (ಓಷಧಿ. ೦೩೩) ; ನಾಗರ ತುಪ್ಪಕೀರೆ ಲಶುನಂ ರಸರಾಮಠವೆಂಬಿವೆಲ್ಲಮಂ ರಾಗದೊಳೊಂದುಗೂಡಿ...ಕೊಳಲ್ (ಜಮದ. ೬-೩); ತುಪ್ಪಕೀರೆ ಬೇರ ನಾದರು ತುಲಶಿ ಬೇರನಾದರು. . .ಅದು ಕುಡಿಯು ಕೊಡಿಸಲು ದುಷ್ಟ ಕೀಟ ಹರವಹುದು (ವಿಷಚಿ. ೩೨-೪). [ತುಪ್ಪ + ಕೀರೆ]

ತುಪ್ಪಗೆಣಸು (ನಾ). ಒಂದು ಬಗೆಯ ಗೆಣಸು : (ಕ).

[ತುಪ್ಪ + ಗೆಣಸು (<ಗೆಟಸು)]

ತುಪ್ಪಗೊಡ (ನಾ). ತುಪ್ಪ ತುಂಬಿದ ಕೊಡ : ತುಪ್ಪಗೊಡಂಗಳಿಂ ಧರಣಿಯೊಟ್ಟಿದೆಯಿಂ . . . ಒಪ್ಪಿದುದಂದಸೂನವಿಭವಂಬಡೆದಾ ವರ ಯಜ್ಞಮಂಟಪಂ (ಉದ್ಭಟ. ೪-೪೪). [ತುಪ್ಪ + ಕೊಡ[4]]

ತುಪ್ಪಟ 'ತುವ್ವೆಟ್' ನೋ.

ತುಪ್ಪಟಮಣ್ (ನಾ). ಒಂದು ಬಗೆಯ ಸುಗಂಧದ್ರವ್ಯ : "ಹನುಃ, ಹಟ್ಟವಿಲಾಸಿನಿ ಇವು ತುಪ್ಪಟಮಣ್ಣೆಂಬ ಗಂಧದ್ರವ್ಯಂ" (ನಾಜಿರಾ. ೦೦೦).

[ತುಪ್ಪಟ? + ಮಣ್[1]]

ತುಪ್ಪಡರ್ (ಕ್ರಿ). =ತುವ್ವೇಱು ೧ : ದಿನಪತಿ ಮಾಸಿದಡ್ಡಣದ ಕನ್ನಡಿಯಂತವೊಲಿರ್ದನಭ್ರದೊಳ್ ದಿನಕರರಶ್ಮಿ ತುಪ್ಪಡರ್ದ ಶಸ್ತ್ರದ ಮಾಟ್ಕೆ ವೊಲಾದುದು . . . ತತ್ತುಮುಳಿಯುದ್ಧಸಮುದ್ಧತಧೂಳಿಜಾಲದೊಳ್ (ಸೂಕ್ತಸು. ೦೮-೩೨). [ತುಪ್ಪ + ಆಡರ್]

ತುಪ್ಪದೆಱೆ[1] (ನಾ). ತುಪ್ಪದ ಮೇಲಿನ ತೆರಿಗೆ,—ಸುಂಕ : ರವಿ ಕಯ್ಯಂ ಕಾಲಂ ಕಟ್ಟಿ ತುಪ್ಪದೆಱೆಯಂ ಬಿಟ್ಟೊಮ್ (ಎಇ. VII, ೩೦೬-೩೦; ೩೮೮); ಮಹಾಜನದ ಕಾಲಂ ಕಟ್ಟಿ ತುಪ್ಪದೆಱೆಯಂ ಸಭೋಗಸಾಧಕಮಾಗಿ ಬಿಟ್ಟರ್ (ಎಇ. VI, ೦೦೪-೩೬ ; ಸು. ೩೮೮ ?); ತುಪ್ಪದ[ಱೆ]ಸುಟು ದೋನ್ (ಸಾಇಇ. XI-i , ೦೨-೦೩ ; ೩೮೭); ಪೆರ್ಮ್ಮಾಡಿಯುಂ ಪ್ರಭ ಕಾಲಯ್ಯನುಮಿಟ್ಟು ತುಪ್ಪದೆಱೆಯನೆಲ್ಲಂ ಕಾಲಕಯ್ಯಂಟು ಮಹಾಜನದ ಕಯ್ಯೊಳ್ಪಾರೆಯನೆಱೆದುಕೊಟ್ಟನು (ಎಇ. XV, ಹೊಳೆನ. ೦೦೯-೦೦; ೮೭೦).

[ತುಪ್ಪ + ತೆಱೆ[3]]

ತುಪ್ಪದೇವದಾರು (ನಾ). ಒಂದು ಬಗೆಯ ಮರ : "ಅಮರದಾಮ-ತುಪ್ಪದೇವದಾರು" (ಓಷಧಿ. ೪); ತುಪ್ಪದೇವದಾರು, ಅಳಲೆಕಾಯಿ . . . ಸೇವಿಸಲು ಕಲ್ಲುಕಟ್ಟು, ಮೂತ್ರಕೃಚ್ಛ್ರ...ಗುಣಮಕ್ಕುಂ (ಸಳಪ್ರ. ೩೪೦).

[ತುಪ್ಪ + ದೇವದಾರು]

ತುಪ್ಪನ್ನ (ನಾ). ತುಪ್ಪದಲ್ಲಿ ಕಲಸಿದ ಅನ್ನ : ನನ್ನ ತಮ್ಮನಿಗೆ ತುಪ್ಪನ್ನ ಕಂಡರೆ ಇಷ್ಟ (ಕೂಡಿ). 'ತುಪ್ಪೋಗರ' ಪರಾ. [ತುಪ್ಪ + ಅನ್ನ]

ತುಪ್ಪಹೀರೆ, ತುಪ್ಪೀರೆ (ನಾ). ಒಂದು ಬಗೆಯ ತರಕಾರಿ ಬಳ್ಳಿ ವಂತ್ತು ಅದರ ಕಾಯಿ : "ಗಾಂಗೇರುಕೀ, ನಾಗಬಲಾ, ಝಷಾ. ಹ್ರಸ್ವ ಗವೇಧುಕಾ ಳ ಹೀರಿಗಿಡದ ಹೆಸರು. ಇವು ಹೀರೆ, ತುಪ್ಪಹೀರೆ, ಕಾಡುಹೀರೆ ಇವುಗಳೆಲ್ಲಕ್ಕೂ ಹೆಸರುಗಳು" (ನಿದ್ಯಾಂತ. ೧೩೦); ಕಾಯಿಗಳು : ಅಗಸೆ . . . ಹೀರೆ, ತುಪ್ಪಹೀರೆ (ನಪ್ಪುಸು. ೨೩೭). **ತುಪ್ಪೀರೆ :** ತುಪ್ಪೀರೆಕಾಯಿ ಬಂದಾವಂತ ವ್ಯಾಟ್ಯಾಗ (ಗಂಮಾಯಿ. ೦೫೧).

[ತುಪ್ಪ + ಹೀರೆ$_1$ (<ಪೀರೆ)]

ತುಪ್ಪಹೊಂಗೆ (ನಾ). ಒಂದಂ ಬಗೆಯ ಮರ : "ಘೃತವರ್ಣಕಃ—ತುಪ್ಪಹೊಂಗೆ" (ಓಷಧಿ. ೫೨). [ತುಪ್ಪ + ಹೊಂಗೆ$_1$]

ತುಪ್ಪಳ 'ತುಪ್ಪುಟಿಂ' ನೋ.

ತುಪ್ಪಳತಿಗಣೆ (ನಾ). ಮೈಮೇಲೆ ಹಿಟ್ಟಿನಂಥ ಬಿಳಿಯ ಪುಡಿಯಂಳ್ಳ ಒಂದು ಬಗೆಯ ಹುಳು, — ಕೀಟ : ತುಪ್ಪಳತಿಗಣೆ, ಸಸ್ಯಹೇನು (Mealy Bugs. Aphids). ಸಂಘಜೀವಿ ಕೀಟಗಳು ವಿವರವಾದ ಗೂಡುಗಳನ್ನು ಕಟ್ಟುತ್ತವೆ (ಕೀಟಪ. ೨೨).

[ತುಪ್ಪಳ (<ತುಪ್ಪುಟಿಂ) + ತಿಗಣೆ (<ತಗುಣಿ)]

ತುಪ್ಪಳು 'ತುಪ್ಪುಟಿಂ' ನೋ.

ತುಪ್ಪಟಿಂ 'ತಂಪ್ಪುಟಿಂ' ನೋ.

ತುಪ್ಪೀರೆ 'ತುಪ್ಪಹೀರೆ' ನೋ.

ತುಪ್ಪು (ಕ್ರಿ). ಉಗುಳು; ಉಗಿ : ಗಂಟಲ ಹತ್ತಿರದ ವರೆಗೆ ಹೋಗಿರುವ ಕಾಫಿಯನ್ನು ಹಿಂದಕ್ಕೆ ತುಪ್ಪಿ ಎದ್ದು ಕೂರಲು ಪ್ರಯತ್ನಪಟ್ಟಳು (ಗಂಗಾಳ.೨೯); ತೊಯ್ದಿದ್ದ ಬೌರಿವಿಾಸೆಗಳನ್ನು ನೀವಿಕೊಳ್ಳುತ್ತಾ ಗಂಟಲು ಕ್ಯಾಕರಿಸಿ ಅಂಗಳಕ್ಕೆ ತುಪ್ಪಿ (ಮಲಿಮ. ೦೪); ಬಾಯಲ್ಲಿನ ಉಗುಳನ್ನು ತುಪ್ಪಿದ (ಸಂಸ್ಕಾರ. ೫೮).

[ದೇ.॥ ತಮಿ. ಮಲ. ತುಪ್ಪು; ಕೊಡ.ತುಪ್ಪ್, ತುಪ್ಪಿ; ತೆಲು. ತುಪ್ಪು ತುಪುಕ್ಕು ; ಕುಗಿ. ಸೂಪ ; ಕುವಿ. ಹೂಪಲಿ ; ಕುರುಖ್. ತುಪ್ನಾ ; ಮಲ್ತೊ. ತುವೆ]

ತುಪ್ಪುಳ್ 'ತಂಪ್ಪುಟಿಂ' ನೋ.

ತುಪ್ಪುಳಂಚು (ನಾ). ತುಪ್ಪಟದಿಂದ ಮಾಡಿರುವ ಅಂಚು ; ಉಣ್ಣೆಯ ಆರಾಗು : ಎಲ್ಲರೂ ನಾಗರಿಕರೀತಿಯಲ್ಲಿ ಜಾಕೀಟುಗಳನ್ನೂ, ತುಪ್ಪುಳಂಚಿನ ಮೇಲಂಗಿಗಳನ್ನೂ ಧರಿಸಿದ್ದರು (ಪುನರು ೫೦೯).

[ತುಪ್ಪುಳ್ (<ತುಪ್ಪುಟಿಂ) + ಅಂಚ್ಯು]

ತುಪ್ಪುಳಾಸನ (ನಾ). ತುಪ್ಪಳದಿಂದ ನಿರ್ಮಿಸಿದ ತಲ್ಪ : ಶೀಘ್ರದೊಳು . . . ಮಲಗಿಸಿ ತುಪ್ಪುಳಾಸನದಿ (ಶಿಜ್ಞಪು. ೩೦-೦೪).

[ತುಪ್ಪುಳ್ (<ತುಪ್ಪುಟಿಂ) + ಆಸನ]

ತುಪ್ಪುಳು 'ತಂಪ್ಪುಟಿಂ' ನೋ.

ತುಪ್ಪುಳುಗೂದಲು (ನಾ). ತುಪ್ಪಟದಂತೆ ನವಿರಾಗಿರುವ ಕೂದಲು : ತುಟಿಯ ವೇಲುಭಾಗದಲ್ಲಿ ತುಪ್ಪುಳುಗೂದಲ ಕರಿಯ ಗೆರೆಗಳು ಮೊಳೆಯ ತೊಡಗಿ ಮುಖಕ್ಕೊಂದು ಮುಗ್ಧ ಮನೋಹರತೆಯನ್ನುಂಟುಮಾಡಿದ್ದುವು (ಮಲಿಮ. ೯೪).

[ತುಪ್ಪುಳು (< ತುಪ್ಪುಟಿಂ) + ಕೂದಲು (<ಕೂಂದಲ್)]

ತುಪ್ಪುಳುಮಿಾಸೆ (ನಾ). ತುಪ್ಪಟದಂತೆ ನವಿರಾಗಿರುವ ಮಿಾಸೆ. ಚಿಗುರು ಮಿಾಸೆ : ಬೆಳಿವ ತುಪ್ಪುಳುಮಿಾಸೆ ಹಳಹಳಿಸೆ ನಳನಳಿಸೆ (ಇಹಪ. ದೀ. ೩೨-೦೩); ಮುಪ್ಪಾದ ನರರೊಮ್ಮೆ ಕೊಂಡರಾ ಕ್ಷಣದೊಳು ತುಪ್ಪುಳು ಮಿಾಸೆಯ ಮಾಡಿ ದವ್ವವೇಱಿಸುವ ಶಕ್ತಿಯ ಧರಿಸಿದ ಹೆಱಿದುಪ್ಪವ ನೆಱಿದಳು ಪತಿಗೆ (ಧರಿಚ. ೦೦-೩೩); ಇನ್‌ಸ್ಪೆಕ್ಟರ ಸಹಾಯಾಧಿಕಾರಿ ತುಪ್ಪುಳುಮಿಾಸೆಯ, ಸುಂದರ ತರುಣ (ಪುನರು. ೨೩೦).

[ತುಪ್ಪುಳು (< ತುಪ್ಪುಟಿಂ) + ಮಿಾಸೆ]

ತುಪ್ಪುಟಿಂ, ತಿಪ್ಪುಳ್, ತಿಪ್ಪುಳ, ತಿಪ್ಪುಳಂ, ತಿಪ್ಪುಟಿಂ, ತುಪಟ, ತುಪ್ಪಟ, ತುಪ್ಪಳ, ತುಪ್ಪಳು, ತುಂಪ್ಪುಟಿಂ, ತುಪ್ಪುಳ್, ತುಪ್ಪುಳು, ತಂಪುಟ್ಟಿಂ, ತಂಬಟ (ನಾ). ೧. (ಕಂರಿ, ಮೊಲ ಮೊದಲಾದ ಪ್ರಾಣಿಗಳ) ಮೃದಂವಾದ ಹಾಗಂ ಗುಂಗುರಂಗುಂಗುರಾದ ವೈರಿಗೂದಲುಂ,—ರೋಮಂ ; ಉಣ್ಣೆ : ನಖದ ಮಾಂಸದಂತೆ [ಪೂವಿನ ಕಂಪಿನಂತೆ] ತುಪ್ಪುಟ ಬಣ್ಣದಂತೆ (ಧರ್ಮಾಮೃ. ೫-೦೨೫). ೨. ಹಕ್ಕಿಗಳ ಪುಕ್ಕ ; ಗರಿ : "ತುಪ್ಪುಟಿಂ = ಪಕ್ಕಿಯ ರೋಮಂ" (ಶಮದ. ಪರಿ. ೦); "ತುಪ್ಪುಟಿನೆ ಖಗದ ರೋಮಂ" (ಸಂಜೀವ. ೫); ಮನಹನುರಾಗದಿಂ ನೆಗೆದು ನೀಡಿದ ಕಂಠಮರಲ್ದ ತುಪ್ಪುಟಿಂ . . . ರಂಜಿಸಿತ್ತೆನೆ (ಜಗವಿ. ೪-೦೬); ವೆಱಿಯಂಚಿಯ ತುಪ್ಪುಟ್ಟಗಳೊ . . . ಜೊನ್ನದ ಪೊನಲೋ (ಚಳವಿ. ೬-೨೬). **ತಿಪ್ಪುಳ್ :** ೨. ನಲವಿಂದೆ ತಿಪ್ಪುಳ್ಗರ್ಚಿ ಸಂದುಗಾಣದೆ ತೆರೆಯೊಳ್ಪಿ ಕಡುವೋಹದಿಂದ ಕಂದರ್ಪಕೇಳಿಯನನಾರತಂ ಬಿಡದೆ ಯಾನಂದದಿಂದೆಸಗುತಿಹ ಜಕ್ಕವಕ್ಕಿಗಳಿಂದ (ಸಿದ್ಧೇಪು. ೨-೬). 'ಅಂಚೆ ದಿಪ್ಪುಳ್' ಪರಾ. **ತಿಪ್ಪುಳಂ:** ೨. ಮರಗಳ ದಟ್ಟೈಸುವಿಕೆಯಿಂದ ತಂಗಾಳಿಯ ಶೀಟಕ್ಕೆ ಅಡಚಣೆಯಾಗಿದ್ದರೂ ಅದರ ಕುಳಿರ್ವು ಎಲ್ಲಕಡೆಯೂ ಹಸರಿಸಿತ್ತು ; ಹುಂಜನ ಬೆಟ್ಟನೆಯ ತಿಪ್ಪುಳದ ಒಳಗೂ ನುಗ್ಗಿಹೋಗಿತ್ತು (ಶಾನೂರು. ೪೨). **ತಿಪ್ಪುಳು :** ೨. ಒಂದು ಕಡೆ ತಿಪ್ಪುಳು ಉದುರಿದ್ದು ಕಾಣಿಸುತು (ಮಲಿಮ. ೦೪೭). **ತಿಪ್ಪುಟಿಂ :** ೨. "ತಿಪ್ಪುಟಿಂದು ಗಜಂ" (ಳಕಸಾ. ೬-೦೦೨) : "ಗಜಂ ತಿಪ್ಪುಟಿಂ" (ಕರ್ಣಾನಿ. ೩೬); "ಪಕ್ಕಿಗಳ ಗಜಿಯೆ ತಿಪ್ಪುಟಿಂ" (ಳವಿಕಂ. ೬೩) **ತುಪಟ :** ೧. ಕುರಿಯ ತುಪಟದಿಂದ ಯಾವಾಗಲೂ ಕದರಿನಲ್ಲಿ ನೂಲುತ್ತಿರುತ್ತಾನೆ (ಕೃಸರ್ವ. ೪೫) ; ತುಪಟದ ಕಾಲುಚೀಲಗಳನ್ನು ಹಾಕಿಕೊಂಡು (ಪ್ರಾಳತ. ೩೦) ; ತುತೂರೀ ಊದಿದರೆ ತುಪಟ ಬಾದೀತೇ ? (ಗಾಡ). **ತುಪ್ಪಟ :** ೧. ಕುರಿಯ ಬೆನ್ನಿನ ಚರ್ಮದಿಂದ ಬೆಳೆದ ತುಪ್ಪಟದಿಂದ ಕತ್ತರಿಸಲ್ಪಡುವ ಕೂದಲೇ ಉಣ್ಣೆ (ಗೃಹವಿ. ೬೪) : ಎಲ್ಲಾ ಕಡೆಗಳಲ್ಲಿಯೂ ವೈದ್ದರಂಕುಮೃಗದ ತುಪ್ಪಟದ ಬಣ್ಣವೆಳ್ಳ ಬಿಳುಪು ಕ್ರಮಕ್ರಮವಾಗಿ ಹರಡುತ್ತಿತ್ತು (ಸೌಂದಸ. ೦೪೫). ೨. " ಗರುತ್, ಗರಿ ಈ ೨ ಹಕ್ಕಿಯ ತುಪ್ಪಟಂ" (ಕಾಕಳ್ಳ. ೬೪). **ತುಪ್ಪಳ :** ೨. " ತುಪ್ಪಳಮೆನಲ್ ಪಕ್ಷಿರೋಮಂ " (ಳಕರ. ೪೬) ; ಅಂಚೆಯ ತುಪ್ಪಳಕ್ಕಿಂತ ನವುರಾದ ಆಕಾಶ ವರ್ಣದ ಕಿಂಕಾಬುವಸ್ತ್ರ (ಸುವಸಂ. ೪); ಅಲ್ಲಲ್ಲಿ ಉದುರಿದ್ದ ಹಕ್ಕಿಗಳ ತುಪ್ಪಳವನ್ನು ಆರಿಸಿ ತಂದು ಒಳಗೆ ಹರಡಿ ಹಾಸಿಗೆಯಂತೆ ಮಾಡಿತು (ಳಕಪು. VII. ೩೪). **ತುಪ್ಪಳು :** ೨. ಗಿಣಿಯ ತುಪ್ಪಳು ನೋಡಲು ಬಹಳ ಚೆನ್ನಾಗಿರುತ್ತದೆ (ಕೂಡಿ). **ತುಪ್ಪಟಿಂ :** ೨. ಕೆದಱುತುಂ ತುಪ್ಪಟ್ಟಿಗಳಂ . . . ವಿನೊಪ್ಪಿರ್ದುವೋ ಕೇತಕಿಗಳ್ (ಕಾದ್ಯಟ. ೯-೦೪೧). **ತುಪ್ಪುಳ್ :** ೨. " ತುಪ್ಪುಳಿನಲ್ ಖಗದ ರೋಮಮೆಂದಱಿಗೆ ಬುಧರ್ " (ಧಾರನಿ. ೯); ಹಂಸೆಯ ತುಪ್ಪುಳಹಾಸಿನ ಮೇಲೆ ವಿಜಯಂಗೆಯ್ದಿ (ನಂಬಿರ. ೨-೬೮). **ತುಪ್ಪುಳು :** ೨. ಪಕ್ಷಿ ಮುಱುಗಳನಿಕ್ಕಿತ್ತ ಕಂಡೆ ತುಪ್ಪುಳು ದಾರದು (ಅವಕಂ. ೦೭೦-೭೬೮) ; ಅರೆಮುಗಿದ ಲೋಚನದ ಸಂಪುಟವರಳಿ ಚಲಿಸುದ ಚಂಚುಪುಟದುಪ್ಪರಿಸಿದಂಪ್ರಯ ಕೆದಱುದೆಱಕೆಯ ಬರಿತ ತುಪ್ಪುಳಿನ... ಸುರಿವ ನೆತ್ತರ ಪತಿಯ ಸುತ್ತಲು ತಿರುಗಿ ಚೀಱುವ ವಿಹಗಸತಿಯನು

ಕಂಡನಾ ಮುನಿಪ (ತೊರರಾ. ೦-೨-೦೪); ಗಲ್ಲದಲ್ಲಿ ತುಪ್ಪುಳೆದ್ದು ಉಗ್ಗಿ ಹಿಗ್ಗಿ ನನೆಯುತಿರುವಿ (ಹಾಡುಪಾ. ೨೯-೫). ತುಪ್ಪುಟು : ೧. ಮೊಲದ ತುಪ್ಪುಟು–ಶಶೋರ್ಣ (ನಾಜಿರಾ. ೬). ೨. "ತುಪ್ಪುಟಿಂದು ಪಕ್ಕಿಯ ರೋಮಂ" (ಕಶಸಾ. ೬-೦೦೩); ಅಪಾರತನೂರುಹವ್ರಜಂ ಮಿಂಚುವ ತುಪ್ಪುಟಾಗೆ (ಉದ್ಕಟ. ೫-೦೦೫). ತುಬಟ : ೧. ಕುರಿಗಳ ಸಂತಾನ ಬೆಳೆಯಿತು. ಒಳ್ಳೆ ತಳಿ. ಅವುಗಳ ತುಬಟವಾದರೊ ಬಹಳ ನಯವೂ, ಉಣ್ಣೆ ಬಟ್ಟೆಬರೆಗಳ ಕೈಗಾರಿಕೆಗೆ ಬಹಳ ಉಪಯೋಗಕರವೂ ಆದದ್ದು (ಗಲಿಪ್ರ. ೦೦೩).

ತುಪ್ಪುಳ್ದೂರಾಗು= ತುಪ್ಪುಳದಂತೆ ಹಗುರವಾಗಿ ತೂರಿಹೋಗು : ಹಿಂದಕ್ಕೆ ಬೀಳುತ್ತಿದ್ದು, ಮೆಯ್ವಳಿಯ ಲುಳಿಯ ಬಿನ್ನಣದಿಂದ ತುಪ್ಪುಳ್ದೂರಾಗಿ ನಿಕ್ಕುಳಿಸಿ ನಿಂತು...ಪುದಿಗೆ ಒರಗಿಸಿ ನಿಲಿಸಿ (ಮಂತ್ರಶ. ೩೦-೪).

[ದೇ.॥ ತಮಿ. ತೂವಲ್, ತೂವಿ ; ಮಲ. ತೂವಲ್, ತೊಪ್ಪಲ್, ತೊಪ್ಪ, ಚೊಪ್ಪೆ ; ತುಳು. ತುಯಿ, ಸುಯಿ ; ಕೊಡ. ತೊಪ್ಪಿಟ ; ತೆಲು. ತುಪ್ಪುಡು, ತ್ರುಪ್ಪುಡು]

ತುಪ್ಪುಟು 'ತುಪ್ಪುಟು' ನೋ.

ತುಪ್ಪೂರು (ನಾ). ಒಂದು ಊರಿನ ಹೆಸರು : ಇರ್ವ್ವರುಂ ತುಪ್ಪೂರಾಳ ಅರಸರಾನನುಮತಪ್ಪಡಿಸಿ (ಪ್ರುಆರಿ. ೧೯೨೫. ೧೦೬-೨೭ ; ?).

[ತುಪ್ಪ + ಊರು$_3$ (<ಊರ್)]

ತುಪ್ಪೆ 'ತೊಂಬೆ$_2$' ನೋ.

ತುಪ್ಪೆನ್ (ಕ್ರಿ). ಉಗುಳು ; ಕಾರು ; ಕಕ್ಕು : ಸುರರುಂ ದೈತ್ಯರುಮ ಬ್ಧಿಯಂ ಕಡೆವುತಿರ್ಪ್ಪಂದುಗ್ರಶೇಷಾಹಿ ಭೀಕರಕೋಪಾಗ್ರಹಿ ಕಾಳಕೂಟ ವಿಷಮಂ ತುಪ್ಪೆಂದಡೆ (ಕಇಅ. ೯೭ -೪-೫೬ ; 12ನೆಯ ಶತ).

[ತುಪ್ಪು + ಎನ್$_1$]

ತುಪ್ಪೇಱು (ಕ್ರಿ). ೧. ತುಪ್ಪದಿಂದ ಲೇಪನ ಹೊಂದು, -ಜಿಡ್ಡಾಗು : ತುಪ್ಪೇಱಿದ ದರ್ಪಣದೊಳ್ ಪಜ್ಜಳಿಸಲಾರ್ಪುದೇ ಪ್ರತಿಬಿಂಬಂ (ಯಶೋಚ. ೦-೬೬). ೨. (ಆಲಂ) ಕುಗ್ಗು ; ಕವ್ಮಿಯಾಗು: ಇನಿತು ಸುಡುನುಡಿಯೇಕೆ ತುಪ್ಪೇಱಿದೊಲವಿಂಗೆ ತಪ್ಪು ಕರಸಾಣೆ ಮತ್ತೆ ಪೊಸತಪ್ಪುದನಱಿಯೆ (ಅನಂಪು. ೮-೧೭ ಪ). [ತುಪ್ಪ + ಏಱು$_1$ (< ಏಱ್$_1$)]

ತುಪ್ಪೊಡೆ (ನಾ). ತುಪ್ಪದಲ್ಲಿ ಕರಿದ ವಡೆ : ಮಾಡಿದ ಪುಳ್ಗೆ ಕಜ್ಜ ತೊಗೆ ತುಪ್ಪೊಡೆ . . . ಮೊದಲಾದವೆಲ್ಲಮುಂ ಜೋಡಿಸಿ ತೋರ್ಪವಿಂತಿವರ ಭೋಜನಕಾರ್ ಗುಱಿಯೈ ಮದೀಶ್ವರಾ (ಹಾಲಾಸ್ಯ. ೦-೮-೫).

[ತುಪ್ಪ + ಒಡೆ$_3$ (< ವಡೆ$_2$)]

ತುಪ್ಪೋಗರ (ನಾ). ತುಪ್ಪದಲ್ಲಿ ಕಲಸಿದ ಅನ್ನ : ಉತ್ತರಾನಕ್ಷತ್ರದಲ್ಲಿ ಜ್ವರ ಬರಲು ಏಳುದಿವಸ ಕಾಡುವುದು. ಆ ನಕ್ಷತ್ರಾಧಿದೈವನಾದ ಭಗದೇವತೆಗೆ ತುಪ್ಪೋಗರವ ಬಲಿಯ ಹಾಕಿಸುವುದು (ವೈದ್ಯಸಾ. I, ೦೩೨).

[ತುಪ್ಪ + ಓಗರ]

ತುಫಾನ್ 'ತುಫಾನು' ನೋ.

ತುಫಾನಿ 'ತುಫಾನು' ನೋ.

ತುಫಾನು, ತುಪಾನು, ತುಫಾನ್, ತುಫಾನಿ, ತೂಫಾನು (ನಾ). ೧. ಬಿರುಗಾಳಿ ; ಚಂಡಮಾರುತ : ಕಾನಡಾಜಿಲ್ಲೆಯ ಸಮುದ್ರತೀರದಲ್ಲಿ ಬಹುತರ ತುಫಾನುಗಳಾಗುವುದಿಲ್ಲ (ಕಭಾಗ. ೦೨); ಸಮುದ್ರದಲ್ಲಿ (ಉಬ್ಬರ) ತುಫಾನು ಏಕೆ ನಿಲ್ಲಲಿಲ್ಲ (ಕಮಕ. ೦೬೩); ಈ ತುಫಾನಿನಲ್ಲಿ ಎಷ್ಟೋ ಹಡಗುಗಳು ಮುಳುಗಲಿವೆ (ಕೈಲಾಕ. ೭೦). ೨. ದೂರು ; ಅಪವಾದ ; ದೂಷಣೆ : ತುಫಾನು ಬಂದರೂ ಬರಬಹುದು (ದೌಲತ್. ೩೦೨). ತುಪಾನು : ೨. ಇಂತಹ ತುಪಾನು ಮಾಡುತ್ತಲೇ ಇರುತ್ತಾಳೆ (ದೌಲತ್. ೧೩೫); ತುಪಾನು ಬಂದ ಮೇಲೆ ತಬ್ಬಿಕೊಂಡರೆ ಆದೀತೆ ? (ಗಾದೆ). ತುಫಾನ್: ೧. ಲಕ್ಷದ್ವೀಪದ ಕಡೆಗೆ ಹೋಗುತ್ತಿರುವಾಗ ದೊಡ್ಡದಾಗಿ ತುಫಾನ್ ಗಾಳಿ ಎದ್ದು ಹಡಗು ಮುಳುಗಿಹೋಗುವ ಸಮಯವಾಯಿತು (ಪೇಟಿಮಾ. ೩೩). ತುಫಾನಿ : ೨. ನಿನ್ನ ಮ್ಯಾಗ ಏನ ತುಫಾನಿ ಹೊರಸ್ಯಾಳು (ನಡದಾ. I, ೨೯೮); ನನ್ನ ಮ್ಯಾಲೇ ತುಫಾನಿ ಹೊರಸತೀರಲ್ಲ ? (ಗ್ರಾಮಾಯ. ೩೩). ತೂಫಾನು : ೧. ಇವತ್ತು ಹೋಗುವುದು ಬೇಡ, ತೂಫಾನು ಉಂಟು (ಹೊಸಕ್ಷಿ. ೫೭)

[← ಮರಾ. ತುಫಾನ್ ; ಅರ. ಹಿಂ. ತೂಫಾನ್]

ತುಬಟ 'ತುಪ್ಪುಟು' ನೋ.

ತುಬಾಕಿ 'ತಂಪಾಕಿ' ನೋ.

ತುಬ್ಬರಿಕೆ (ನಾ). ಕಳವನ್ನು ಪತ್ತೆ ಹಚ್ಚುವಿಕೆ ; ಅಪರಾಧಿಗಳನ್ನು ಕಂಡುಹಿಡಿಯುವಿಕೆ : ತುಬ್ಬರಿಕೆಯ ಪಾತೆಗೆ ಸೇರಿ, ಯಾವುದೊಂದು ರಹಸ್ಯಮಯ ತುಬ್ಬನ್ನು ಭೇದಿಸುತ್ತಾ (ಕಾಬಝಾ. ೩೦).

[ತುಬ್ಬು$_1$ + ಅರಿಕೆ (< ಅಱಿಕೆ)]

ತುಬ್ಬರಿವಿಕೆ (ನಾ). = ತುಬ್ಬರಿಕೆ : ರಾತ್ರಿ ೧೦ ಘಂಟೆಯಿಂದ ಈಗ ೨ ಘಂಟೆಯವರೆಗೆ ನಡೆದ ತುಬ್ಬರಿವಿಕೆಯಲ್ಲಿ ಅವನು ಯಶಸ್ವಿಯೇ ಆಗಿದ್ದನು (ಕಾಬಝಾ. ೩೦). [ತುಬ್ಬು$_1$ + ಅರಿವು (< ಅಱಿವು) + – ಇಕೆ]

ತುಬ್ಬಿಸು (ಕ್ರಿ). ೧. ಪತ್ತೆಮಾಡಿಕೊಡು ; ಹುಡುಕಿಕೊಡು : ಗಬ್ಬಿ ತನದೊಳಾತ ಹೊಕ್ಕಿರ್ದುದ ಕಂಡು ತುಬ್ಬಿಸಿಕೊಟ್ಟವರಾವು (ಮೋಹತ. ೩೬-೦೭). ೨. ಹರಡು ; ಪ್ರಕಟಪಡಿಸು : ನಿನಗೊಂದು ಲಂಚವನೀವೆ ತುಬ್ಬಿಸದಿರೀ ಮಾತ ಭಕ್ತರೊಳಗೆ (ಪ್ರಭುಪು. ೮-೯೬).

[ತುಬ್ಬು$_1$ + – ಇಸು$_3$]

ತುಬ್ಬು$_1$, ತೆಬ್ಬು$_1$ (ಕ್ರಿ). ೧. ಕಳ್ಳನನ್ನು ಪತ್ತೆಹಚ್ಚು,—ತೋರಿಸು,—ಶೋಧಿಸು : "ತುಬ್ಬು–ಚೋರಸೂಚನೇ (ಕಳ್ಳನನ್ನು ತೋರಿಸು), ತಲ್ಲಂಚೇ ಚ (ಸಿಕ್ಕಿಬಿಡು)" (ಶಮಧಾ). ೨. ಹೊರಗೆಡಹು ; ಬಯಲು ಮಾಡು ; ಪ್ರಕಟಿಸು ; ತಿಳಿಸು : ನಾಲಗೆ ಕುಲಮಂ ತುಬ್ಬುವವೊಲುಱದೆ ನೀಂ ಕೆಡೆನುಡಿವೈ (ಪಂಪಭಾ. ೧೦-೨೦); ತುಬ್ಬಿಕೊಟ್ಟುದವಿದ್ಯೆಯ ಸುಧೆಗೊಬ್ಬುಗಳ ಗಂಡಿಗರ ಗಾಢದ ಗರ್ಭವನು ಹೊಳ್ಳಿಸಿತು ಗರಳಗ್ರೀವ ನುಪದೇಶ (ಕುವ್ಯಾಕ. ೬-೩೦). ೩. ಹೊರಬೀಳು ; ಬಯಲಾಗು : ಪುಡುಕೆಯ ಮೊಲನಂತೆ ತುಬ್ಬು [ಪಾಠಾಂ. ಕುಂಬು] ತಿರ್ಪರ್ ಪಗೆವರ್ (ಚಾವುಂಪು. ೪); ಸಾಕಿನ್ನು ಹೇಳದೊಡೆ ಮಾಣಲಂತಸ್ಥಮದು ತಾನೆ ತುಬ್ಬುವುದೆಂದು ನಗುತಿರ್ದರು (ಚೈಮಿಭಾ. ೩೦-೩೧). ೪. ಹರಡು ; ವ್ಯಾಪಿಸು : ಸರ್ಬಜನರಿಗೆ ವಿರೋಧ ತುಬ್ಬದೆ ಬಿಡದು (ಅಂಜಚ. ೪-೮೨); ತುಬ್ಬುವುದೊ ತಾ ಬಂದ ಬರವಿದು (ಕುವ್ಯಾವಿ. ೩-೩೯) ; ಸಂಜೆಗೆಂಪಾದುದು ದಿಶಾವಳಯ ತು [ಪಾಠಾಂ. ತ] ಬ್ಬಿದಲಗಿನ ಬೆಳಗಿನಲಿ (ತೊರರಾ. ೬-೨೫-೦೦); ನಾಳೆ ತುಬ್ಬುವುದು ಈ ಸುದ್ದಿ (ಚಂದ್ರಹಾ. ೩-೩೯). ೫. ತಳ್ಳು ; ನೂಕು : ನರಕದತ್ತಲು ತುಬ್ಬ ಹೇಳೋ ಖಳರನು (ಕೌಶಿರಾ. ೨೧-೪೪) ; ಉಬ್ಬಿದಳು ಹರುಷದಲಿ ದುರಿತವನೆಬ್ಬಿದಳು ಕಳವಳದ ಹಸರವ ತುಬ್ಬಿದಳು (ನಿಭಾಗ. ೮-೧೫-೭) ; ಅಬ್ಬರಿಸಿ ತೋಳ್ಗಳಲಿ ನಭವನು ಗಬ್ಬರಿಸುತೈತರಲು ಚಕ್ರವ ತುಬ್ಬಿದನು ತುದಿವೆರಳ ಸನ್ನೆಯಲಿ (ನಿಭಾಗ. ೦೦-೬೯-೦೭). ೬. ಉತ್ಸಾಹಿಸು: ಬೀಕಲಿನ ಭಟರುಬ್ಬಿದರೆ ಸುವ್ಯಾಕುಲರು ತುಬ್ಬಿದರೆ ತಪ್ಪೇನೀ ಕಳಂಬವ ಕಾಯ್ದುಕೊಳ್ಳೆನುತೆಚ್ಚನಾ ಪಾರ್ಥ (ಕುವ್ಯಾಶ. ೨-೫೨). ೭. ಅಪಹರಿಸು : ರಾಜದ್ರವ್ಯವನು ಬಯಸಿ ತುಬ್ಬಿದರೆ ... ಕಾಲಿಗೆ ಕಬ್ಬುನದ ಕಡೆಯವನು ತೊಡಿಸುವರು (ನಿಭಾಗ. ೦೦-೩೭-೫). ತೆಬ್ಬು$_1$: ೪. ಕೋಪದಿಂದುಬ್ಬಿ ಕೊಬ್ಬಿಱಿದು ಕುಬುಬುಬುಬೆಂದು ಕೂಗಿಟ್ಟಡೊಡನಂಬರಂ ಕೂಗಲು ತೆಬ್ಬುತೆಣ್ದೆಸೆಯ ಮೂಲೆಯ ಕರ್ಣ ಕೋಟರಗಳಾರ್ಭಟದೆ ಕಿವುಡುವಡೆದವು (ಲಶಿಜಿಂ. ೦೮-೨೯) : ಅಬ್ಬರಕೆ

ಹಿಂಡೊಡದು ಹಾಯ್ದವು ಸೂಸಿದವು ದೆಸೆಗೆ ತೆಬ್ಬಿದವು . . . ವೇಡೆಯ ವರಿಗೆ ಹಬ್ಬವಾಯ್ತು (ಕುಪ್ಯಾಅ. ೦೩-೨೫). ೮. ತೂರು ; ಎಸೆ : ತೆ [ಪಾಕಾಂ. ತು] ಬ್ಬಿ ತುಳುಕುವ ಕಣೆಯ ಕಣೆಯಲಿ ಹಬ್ಬಿ ಹರೆದುದು ತೋರದಲಿ ಬಲಿದುಬ್ಬುಗವಳದ ಕಣ್ಣುಗಳು ಕರ್ಣಾವಸಾನದಲಿ (ಕುಪ್ಯಾಕ. ೨೬-೫೦). [ದೇ.॥ ತಮಿ. ತುರುವು]

ತುಬ್ಬು2 'ತೊಬ್ಬು' ನೋ.

ತುಬ್ಬು3 (ನಾ). ೧. ಕಳ್ಳತನ ಮೊದಲಾದ ಅಪರಾಧವನ್ನು ಕಂಡು ಹಿಡಿಯುವಿಕೆ,-ಅಪರಾಧದ ಪತ್ತೆ : ಕಳವುಗಳು ನಿಲ್ಲಲಿಲ್ಲ. ಒಂದಾದರೂ ತುಬ್ಬು ಆಗಲಿಲ್ಲ (ವಾಗ್ಯೇವಿ. ೦೪೦) ; ಆದರೂ ಕಳ್ಳರ ತುಬ್ಬು ಆಗಲಿಲ್ಲ (ಈಕಥ. ೦೦೨). ೨. ಬೇಹುಗಾರಿಕೆ ; ಗೂಢಚರ್ಯೆ : ಪೋಲೀಸರು ಇತ್ತೀಚೆಗೆ ನಡೆದ ಕೊಲೆಯ ಬಗ್ಗೆ ತುಬ್ಬು ನಡೆಸುತ್ತಿದ್ದಾರೆ (ರೂಢಿ). ೩. ಪ್ರೋತ್ಸಾಹ : ಉಬ್ಬಿದನು ನಿನ್ನಾತನಾತನ ತುಬ್ಬಿನಲಿ (ಕುಪ್ಯಾಕ. ೨೬-೫೦).

ತುಬ್ಬಾಗು=ಗೊತ್ತಾಗು ; ಪತ್ತೆಯಾಗು : ಎದ್ಯುನ್ಮಾಲಿವೆಸರ ರಕ್ಕಸನ ಪೆರ್ವಡೆ ತುಬ್ಬಾದತ್ತು (ರಾಮಾಶ್ವ. ೦೦೦-೦೬) ; ಇಷ್ಟು ದಿನಗಳ ಅಭಾವದ ಹೊಲಬು ತುಬ್ಬಾಗಿ (ವೀರಬಂ. ೩೯) ; ತೋಟದ ಏಲಕ್ಕಿ ಕದ್ದುಹೋದದ್ದು ಮಾತ್ರ ತುಬ್ಬಾಗದೆ ಉಳಿಯಿತು (ಕುಡಿಕೊ. ೦೮೦) ; ತುಬ್ಬಾಗದ ಕಳವು ಮಬ್ಬಾದ ಮೇಲೆ ಸಿಕ್ಕೀತೆ ? (ಗಾಬೆ). ತುಬ್ಬಿನವದಿರು = ಗೂಢಚರ್ಯೆ ಮಾಡುವವರು ; ಗೂಢಚಾರರು : ಉಬ್ಬಿದನಲೈ ಮಧುರವಚನದ ಹಬ್ಬದಲಿ ನಿನ್ನಾತನಿತ್ತಲು ತುಬ್ಬಿನವದಿರು ತಂದು ಬಿಸುಟರು ನಿಮ್ಮ ಪಾಳೆಯದ ಸರ್ಬವೃತ್ತಾಂತವನು (ಕುಪ್ಯಾಶ. ೦-೨೮). ತುಬ್ಬುಮಾಡು = ಪತ್ತೆಮಾಡು; ಕಂಡುಹಿಡಿ : ಹುಲಿಯ ಹೆಜ್ಜೆಗಳ ಜಾಡನ್ನು ಹಿಡಿದು ಹುಲಿ ಹೋದ ದಾರಿಯನ್ನು ತುಬ್ಬುಮಾಡಿದ (ಹುಲಿಹಾ. ೦೮) ; ನೋಡಿ ತುಬ್ಬುಮಾಡ ಬೇಕಾದವನು ನೀನು (ಕುಡಿಕೊ.೨೬೪). ತುಬ್ಬುಹಚ್ಚು = ತುಬ್ಬುಮಾಡು : ಸರಲಾಕ್ಷರಾಯರು ಅಪರಾಧಿಗಳ ತುಬ್ಬುಹಚ್ಚುವುದರಲ್ಲಿ ಒಳ್ಳೇನಿಪುಣರೂ, ದಕ್ಷರೂ ಆಗಿರುವರು (ತೊಳಮು. ೨೫೦).

[<ತುಬ್ಬು1./ತಮಿ. ತುಪ್ಪು ; ಮಲ. ತುನ್ಬು ; ತುಳು. ತುಬ್ಬು]

ತುಬ್ಬುಕಾಱ, ತುಬ್ಬುಗಾರ (ನಾ). ರಹಸ್ಯಗಳನ್ನು ಪತ್ತೆಹಚ್ಚುವವನು; ಪತ್ತೇದಾರ ; ಗೂಢಚಾರ : ಆಕರಿಸಿ ಬೆಸಗೊಂಡು ಬಿಟ್ಟರನೇಕ ನೃಪರನು ಬೇಹು ಹರಿದುದು ನಾಕುಮಯ್ಯಲಿ ತುಬ್ಬುಕಾಱರಿಗಿತ್ತು ಬಹುಧನವ (ತೊರರಾ. ೪-೯-೦೦). ತುಬ್ಬುಗಾರ : ತುಬ್ಬುಗಾರರ ಶೋಧಕ್ಕೆ ತುಬ್ಬುಗಾರರನ್ನು ನಿಯಮಿಸುವ ಸಮಯ ಬಂದಿದೆ (ಕೃತಕ್ಕೆ. ೦೩೦) ; ನರಸಿಂಗರಾಯರಂತಹ ಚಾಣಾಕ್ಷ ತುಬ್ಬುಗಾರ ಮಂಕು ಹಿಡಿದು ಕುಳಿತಿರುವಾಗ ನನ್ನಂತಹವನಿಂದ ಏನು ತಾನೇ ಆದೀತು ? (ಕರ್ಣಪಿ. ೮೩). [ತುಬ್ಬು3 + – ಕಾಱ]

ತುಬ್ಬುಗಾರ 'ತುಬ್ಬುಕಾಱ' ನೋ.

ತುಬ್ಬುಗಾರಿಕೆ (ನಾ). ಬೇಹುಗಾರಿಕೆ ; ಗೂಢಚರ್ಯೆ : ತುಬ್ಬುಗಾರಿಕೆಯ ಸನ್ನಿವೇಶಗಳಲ್ಲಿ ಅವನ ಮತವನ್ನು ವಿಚಾರಿಸುತಲಿದ್ದರು (ಕೃತಕ್ಕೆ. ೮೨).

[ತುಬ್ಬುಗಾರ (<ತುಬ್ಬುಕಾಱ) + – ಇಕೆ]

ತುಬ್ಬುಗೊಡು (ಕ್ರಿ). ಗುರುತುಮಾಡಿ ತೋರು : ಉಬ್ಬಿ ರಣದೇವತೆಗೆ ಮಿಕ್ಕಿನ ಕರ್ಬುರರ ತೋಱಿಸಲಿಕಸುರನ ತುಬ್ಬುಗೊಟ್ಟನು ತೋಟಿ ನಿಂದುದು ತಾಮಸೀಚರನ (ತೊರರಾ. ೬-೩೯-೨೩).

[ತುಬ್ಬು1 + ಕೊಡು1]

ತುಮಕಿ (ನಾ). ಒಂದು ಬಗೆಯ ಮರ ; ತಿಂದುಕ : ಕುಷರಥ, ಹಿಗೆ, ತುಮಕಿ, ತಿಂಡುಕ,ಹೊಳೆತುಮ್ರಿ, ಬಂಧ (ಮೈಜಿಗಿ. ೩೦-೬೦೩).

[← ತೆಲು. ತುಮಿಕಿ, ತುಮ್ಮಿಕಿ, ತ್ರುಮ್ಮಿಕಿ]

ತುಮರಿ 'ತುಂಬುರ್' ನೋ.

ತುಮರು 'ತುಮುರು' ನೋ.

ತುಮಾನ್ (ನಾ). ಸಡಿಲವಾದ ಹಾಗು ನೀಳವಾದ ಚಲ್ಲಣ : ಅವನ ತುಮಾನ್, ಅವನ ಶೇರವಾನ್, ಅವನ ಮಂದೀಲ ಮುಂತಾದವುಗಳನ್ನು ನೋಡಲಾಗಿ ಅವನು ಒಳ್ಳೇ ಮನೆತನಸ್ಥನಾಗಿ ತೋರಿದನು (ತೊಳಮು.೨೮೪).

[← ಮರಾ. ತುಮಾನ್ ; ಪಾರ. ತುಂಬಾನ್]

ತುಮಿಸು (ಕ್ರಿ). (?) : ಮೇಲ್ವಲ ಮುಚ್ಚಿ ತುಮಿಸಿ ತಳವೆಳಗಾಗುವಂತೆಸಗೆ (ಜಿನಮು. ೦೭-೦೪). [? + – ಇಸ್ಸು3]

ತುಮುಕು1 (ಕ್ರಿ). "ತುಳುಕು" (ಜಾನಕೋ. ೬೬): ಕೆರೆ ತುಂಬಿ ತುಮುಕುತ್ತಿದೆ (ರೂಢಿ). [← ತುಳು. ತುಮುಕು,ತಿಮುಕು,ದಿಮುಕು]

ತುಮುಕು2 'ಟುಮುಕು' ನೋ.

ತುಮುರು, ತುಮರು (ನಾ). ೧. ಚೂರು ; ಭಾಗ ; ಖಂಡ : ಹುರಿದ ಬಡಗಸಂಡಗೆಯ ತುಮುರಿತ್ತು ಬಿಳಿಯುಪ್ಪುಳ್ಳಿಯಿಕ್ಕಿ (ಸೂಪಶಾ. ೩-೦೭); ಸಬಳಚಕ್ರಮಾಕ್ಷಣಂ ತುಮುರಾದುವು (ಜಿಬಪು. ೪೪-೦೩) ; ತುಮುರೆದ್ದೊಡೆದ ನಿಸ್ಸಾಳಗಳ ವಾದ್ಯದ ಗಡಣದಿಂದಲಿ ರೂಢಿ ಮಿಗೆ ರಂಜಿಸಿತು ರಣಭೂಮಿ (ಪ್ರಹ್ಲಾಜ. ೦೫-೫೩); ಹಡಗನು ಕೀಲಿಸಿ, ತುಮುರನು ತೇಲಿಸಿ, ದಡದಲಿ ಝಾಡಿಸಿ...ಬರುತಿದೆ (ಕಎಪು. ೨೬-೩). ೨. (ಕರಾ) ತಾಳೆಗರಿ ಛತ್ರಿಯ ಬಿದಿರಿನ ಕೀಲುಕಡ್ಡಿ : ಸ್ವತಃ ಐತಾಳರು ಹಿಡಿದ ಕಾಲುಕೊಡೆ, ಮದುವೆಯ ಮನೆಯನ್ನು ಏರುವಾಗ ತುಮುರು ಮಾತ್ರ ಉಳಿದಿತ್ತು (ಮರಮ. ೩). ತುಮರು : ೧. ಆ ಸಂಘಟ್ಟನದಲ್ಲಿ ಅವರಿಬ್ಬರ ಭರ್ಜಿಗಳೂ ತುಮರು ತುಮರಾಗಿ ಒಡೆದುಹೋದವು (ಧಾರವೀ. ೦೨೪).

ತುಮುರು ತುಮುರು, ತುತ್ತುಮುರು, ತುಮುರ್ತುಮುರು (ದ್ವಿರುಕ್ತಿ): ಅವರು ಎಸೆದ ಆಯುಧಗಳಂ ತಮ್ಮ ಬಾಣಗಳಿಂ ತುಮುರುತುಮುರಾಗಿ ಮಾಡುತ (ಸೌಗಂಧಿ. ೨೯೬-೦೫) ; ಸೂತನಂ ರಥ ರಥಾಂಗಂಗಳಂ ತುಮುರು ತುಮುರಾಗಿಸಿದರು (ಶೇಷರಾ. ೦೭೫-೩೫) ; ಆ ಕುಲಿಶದೇಹಿಯನು ಶರಹತಿ ತಾಕೆ ತುತ್ತುಮುರಾಗಿ ಬೀಳಲನೇಕ ನಿಶಿತಾಯುಧಂಗಳಿಂದಬ್ಬರಿಸಿ ಘಾತಿಸಲು (ಅನಂರಾ. ೪-೫-೯) ; ಅರ್ಜುನನು ಹತ್ತು ಬಾಣಗಳನ್ನು ಪ್ರಯೋಗಿಸಿ ಅದರ ತಲೆಯನ್ನು ತುತ್ತುಮುರು ಮಾಡಿದನು (ಕೃವಾಅ. ೨೪೯) ; ಅವನ ತೇರ್ತುಮುರ್ತುಮುರಾಗಲೆಚ್ಚು ವಸುಮತಿಗೆ ಕೆನ್ನೀರ್ ತುಳ್ಕೆ ತುಳ್ಕಿದಂ (ಜಿಬಪು. ೪೯-೪೦); ಪುಷ್ಪಾಸ್ತ್ರದಿಂದಂ ರತಿಕಾಂತಂ ರೋಷವಾಂತೆನ್ನೆರ್ದೆ ತುಮುರ್ತುಮುರಪ್ಪಂತೆ ಪೊಯ್ದಪ್ಪಂ (ದಮಸ್ವ.೦-೦೨೪). ತುಮುರುಮಾಡು = ಚೂರು ಮಾಡು; ತುಂಡುಮಾಡು: ಅವು ಕಾಣದ ರೀತಿಗೆ, ಆ ಸರ್ಪಂಗಳಂ ಹಿಡಿದು ತುಮುರುಮಾಡಿ (ಕೃವಾಅ. ೫೬).

[ದೇ.॥ ತುಳು. ತಿಬುರು ; ತೆಲು. ತುಮುರು]

ತುಮುಲ, ತುಮುಳ (ಗು). ೧. ಗಡಿಬಿಡಿಯಿಂದ ಕೂಡಿದ ; ದೊಂಬಿಯಿಂದ ಕೂಡಿದ; ಗಲಾಟೆಯುಳ್ಳ: ಆಶ್ರಮದ್ರುಮಶಿಖರನೀಡ ನಿಕಟಾಭಿಮುಖ ಕಲಕಲ ತುಮುಲ ಪಕ್ಷಿಗಾನಂ (ಶ್ರೀರಾಮಾ. ೦೭೬-೫). ೨. ತೀಕ್ಷ್ಣವಾದ ; ಘೋರವಾದ : ತುಂಬೆಪಾಡಿಯಲ್ಲಿ ಇವೆರಡು ಪಕ್ಷದವರಿಗೂ ತುಮುಲವಾದ ಯುದ್ಧವಾಯಿತು (ಕರ್ಣಾಅ.೦೮೩). (ನಾ). ೩. ಗೊಂದಲ; ಗಲಿಬಿಲಿ; ಗಲಭೆ; ಹುಯಿಲು : ಎಲ್ಲಾ ಕಲೆಗಳೂ ಕ್ಷಣಿಕವಾದ ತುಮುಲಗಳನ್ನು ಹಿಡಿದಿಡಲು ಯತ್ನಿಸದೆ...ಸಾರ್ವಕಾಲಿಕವಾದ ಭಾವಗಳನ್ನೇ ಅಭಿವ್ಯಕ್ತಿಗೊಳಿಸಲು ಹೊರಟಿದ್ದು ಒಂದು ವಿಶೇಷ (ಸೌಂದಸ. ೦೩೩) ; ಆಕೆಯ ಮಾನಸದಲ್ಲಾವುದೋ ಭಯಂಕರ ತುಮುಲವೊಂದು ನಡೆಯುತ್ತಿದೆ (ಬಾಡಅ. ೨೦); ಪ್ರಶ್ನೋತ್ತರಗಳ ತುಮುಲ ಮನದಲ್ಲಿ ಭರದಿಂದ ಸಾಗುತ್ತಿದ್ದಿತು (ತ್ಯಾಗಮ.೦೨೫). ೪. ಗುಂಪುಗೂಡಿ ನಡೆಸುವ ಕಾಳಗ; ದೊಂಬಿಯುದ್ಧ : "ತುಮುಲ, ರಣಸಂಕುಲಂ-೨ ಸೇನೆಗಳೂ ದೊಂಬಿಯಾಗಿ ಸೇರಿ ಹರಡುವ

ದ್ವಂದ್ವಯುದ್ಧದ ಹೆಸರು" (ಸಿದ್ಧಾಂತಿ. ೨೩೦). ತುಮುಳ : ೧. 'ತುಮುಳ ಕೇಳಿ' ಪರಾ. [ಸಂ.]

ತುಮುಲಕಾಳಗ (ನಾ). = ತುಮುಲ ೪ : ಕುದುರೆ ಕುದುರೆಯೊಳ್ಕಿಟ್ಟೆ ಅತಿತುಮುಲಕಾಳಗ ಪೆಟ್ಟು (ಎಕ. VIII, ಸೂರಬ. ೧೦-೫ ; ಸು.800).

[ತುಮುಲ + ಕಾಳಗ (< ಕಾಳೆಗ)]

ತುಮುಲಕೇಳಿ, ತುಮುಳಕೇಳಿ (ನಾ). ಗಲಭೆಯಿಂದ ಕೂಡಿರುವ ಸಾಮೂಹಿಕ ಕ್ರೀಡೆ, – ಆಟ : ಅನಂತರಂ ತುಮುಲಕೇಳಿಯಿಂದೋ ರೊರ್ವರಂ ತುಳುಂಕಾಡುವಾಗಳ್ (ಚಂದ್ರಪು. ೭-೧೪೨ ವ). ತುಮುಳಕೇಳಿ : ಲಲಿತ ಲತಾಂಗಿಯರ್ ತುಮುಳಕೇಳಿಯ ವಾರಿವಿಹಾರದೊಳ್ ... ಒಡ್ಡಿದರ್ ಪೊದಟ್ಟಲರ್ಗಣೆಗೊಡ್ಡಿದಡ್ಡಣಮಿದೆಂಬಿನಮಬ್ಬವಿಚಿತ್ರಪತ್ರಮಂ (ಶಾಂತಿಪು. ೮-೩೮) ; ಶಾತಕುಂಭಕುಂಭಂಗಳಿಂ ಜಂಭಾರಿ ಶಂಭುಗಭಿಷವಮಂ ತುಮುಳಕೇಳಿಯಿನೊಡರ್ಚಿದಾಗಳ್ (ಚಂದ್ರಪು. ೦೨-೦೨೦ ವ).

[ತುಮುಲ + ಕೇಳಿ$_2$ (= ಕೇಲಿ)]

ತುಮುಲಯುದ್ಧ, ತುಮುಳಯುದ್ಧ (ನಾ). = ತುಮುಲ ೪ : ತುಮುಲಯುದ್ಧದೊಳ್ ಪಟುಭಟರಂ ನೂಂಕುವ ಸಮರಂಗಾಱನ ಮಾಂಕರಣೆಯೆ ಗಂಡುತನದ ತಿರುಳೆನವೇಟ್ಕುಂ (ಶಬ್ದಾನು. ೩೮೪ ವ್ಯಾಖ್ಯಾ); ತುಮುಲಯುದ್ಧದಲ್ಲಿ ಪಾಂಡವರ ಕೈ ಮೇಲಾಯಿತು (ವಜಧಾ.೧೬೨): ಇಬ್ಬರಿಗೂ ತುಮುಲಯುದ್ಧವಾಯಿತು (ಶ್ರೀರಾಯ. ೨೦೪). ತುಮುಳಯುದ್ಧ : ತುಮುಳಯುದ್ಧದೊಳಿಂತೆ ನಿರಂತರಂ ತೆಮಟ್ಟು (ನೇಮಿಪು. ೦೨-೨) ; ಅನಿಮಿಷಮಾರ್ಗದೊಳ್ ನೆರೆದ ದೇವಗಣಂ ಪೊಗೆಗೊಂಡ ಚಿತ್ರಮಂ ನೆನೆಯಿಸಿದತ್ತು ತತ್ತುಮುಳಯುದ್ಧಸಮುದ್ಧತಧೂಳಿಜಾಲದೊಳ್ (ಸೂಕ್ತಿಸು. ೧೮-೫೨). [ತುಮುಲ + ಯುದ್ಧ]

ತುಮುಲರಂಗ (ನಾ). ಕ್ಷೋಭೆಯ ರಂಗ,–ಪ್ರದೇಶ; ಘರ್ಷಣೆಯ ಸ್ಥಳ: ಅವನ ಹೃದಯ ಮಿಶ್ರಭಾವಗಳ ತುಮುಲರಂಗವಾಗಿತ್ತು (ಪುನರು. ೧೮೫);

[ತುಮುಲ + ರಂಗ]

ತುಮುಳ್ (ನಾ). ದೊಂಬಿಯಂದ್ಧ (?) : ಅಂತು ಮುಂಬಗಲ್ವರಂ ತುಮುಟ^3[ಳೆ] ಕಾದುವ ಸಮ[ರಭರಂ] ಮನೋರಾಗಮಂ ಮಾಡೆಯುಂ (ಪಂಪಭಾ. ೦೩-೭೭ವ) ; "ತುಮುಟ^3 ಕಾದುವ = ತುಮುಲಯುದ್ಧವನ್ನು ಮಾಡುವ?" (ಪಂಪದೀ. ೫೨೩). [?]

ತುಮುಳ 'ತುಮುಲ' ನೋ.

ತುಮುಳಕೇಳಿ 'ತುಮುಲಕೇಳಿ' ನೋ.

ತುಮುಳಯುದ್ಧ 'ತುಮುಲಯುದ್ಧ' ನೋ.

ತುಮುಟ್ (ಕ್ರಿ). ೧. (ಕಣ್ಣು) ಅರ್ಧ ಮುಚ್ಚು : ನೊರೆವುಲ್ಲಂ ಮೇದೆ ರಟ್ಕಣ್ ತುಮುಟ^3 ಕುಡಿದು ಪೂರಾಂಬುವಂ (ಚಂದ್ರಪು. ೪-೪೮) ; ನೀಟ್ಟ ಕಣ್ ತುಮುಟ^3 ಚಂದ್ರಿಕೆಯಂ ಪದೆಪಿಂದಮಿಂಟಿ . . . ದಂಪತಿ ಚಕೋರಚಯಂ ನಲಿದು (ಕುಸುಮಾ. ೪-೫೫) ; ಶಿಥಿಲದ್ವಿತ್ವಕ್ಕೆ — ತುಮುಟ್ಟಿಂ, ನುಸುಟ್ಟಂ (ಶಮದ. ೩೬ ಪ್ರಯೋ); ತೀವಿದ ಕೀಲಾಲಾಂಬುವಂ ಕಣ್ತುಮುಟ^3 ಪದೆಪಿನಿಂದೀಂಟಿ (ರಸರ. ೨-೦೨೪). ೨. ಅಡಗು ; ನಾಶವಾಗು : ಅಮಟ್ಟ[ತ್ತ]ತ್ಯುಗ್ರತೇಜಪ್ರಸರಮರಿಬಳಧ್ವಾನ್ತಪಿಣ್ಡಪ್ರಕಾಣ್ಡಂ ತುಮುಟ್ಟಿತ್ತು (ಸೌಇಇ. XI-i, ೭೮-೭೦; 1045). ೩. ಅಡಗಿಸಿಕೊಳ್ಳು; ಮುಚ್ಚಿಟ್ಟುಕೊಳ್ಳು : ತುಮುಟಲ್ಕೈರಾವತಂ ದರ್ಪಮನೆರ್ದೆಯೊಡೆಯಲ್ಪುಂಡರೀಕಂ (ಲೀಲಾವ. ೬-೪). ೪. (?) : ಧಾತ್ರಿಯ ಬಿಣ್ಟೆ ನಗೆಂದಿನಂದವಲ್ತಣಕಮಿದೆಂದು ಕಣ್ ತುಮುಟ^3 (ಪಂಪಭಾ. ೯-೯೯); "ಕಣ್ತುಮುಟ^3=ಕಣ್ಣು ಹೊರಕ್ಕೆ ಬರಲು" (ಪಂಪದೀ. ೩೩೮) ; "ವಿಕಾರವಾಗು" (ಪಂಪನಿ.) ; ಕೂರ್ಮಶಿರಂ ಪೊಱಪಾಯ್ದು ಕಣ್ತುಮುಟ್ಟೊಡೆ ವನಿತಾಗೆ ತನ್ನ ಭರದಿಂ ತಳರ್ದತ್ತು ನರೇಂದ್ರಸೈನಿಕಂ (ಮಲ್ಲಿಪು. ೮-೧೪೦) ; ಪೆರ್ವುಲಿ ಪಾಯೆ ಕಯ್ದು ಕೆಯ್ಯದೆ ಕೆಲಸಾರ್ದು ಮೆಯ್ವೊಣರ್ದು ಬಂಚಿಸಿ ಗಂಟಲನೊತ್ತಿ ಕಿರ್ಬಸಿರ್ತಿದಿಯವೊಲಾಗೆ ಕಣ್ತುಮುಟ^3 [ಪಾಶಾಂ. ಕಣ್ಮಗುಳೆ] ಬಿರ್ದು ಮಸುಂಬಿ ಜವಂಗೆ ಬಿರ್ದನಿಕ್ಕಿದಂ . . . ಶಬರಂ (ಮಲ್ಲಿಪು. ೦೦-೭೩) ; ಕಣ್ಗಳ್ ತುಮುಟ್ಟ ಸಱಿಯಿದಱಂಚೊಳ್, ಸಂಕಲೆ ಬಿಗಿದಾನಾವಗಮಿರ್ದುಂ ಆರುಂ ಕಱಿಬದ ಕಾಪನ್ ನಿಲ್ವೆನ್ (ಬದ್ಧಪ್ರ. ೯-೧೮೦) ; "ತೇಲುಮೇಲಾಗು ; ವಿಕಾರಗೊಳ್ಳು" (ಬದ್ಧಪ್ರ. ಕೋಶ).

ತುಮ್ಮಡಿ, ತುಂಬಡಿ (ನಾ). (ಉಕ) ಶರೀರದಿಂದ ರಕ್ತ ತೆಗೆಯುವ ಒಂದು ಬಗೆಯ ಸಾಧನ : ನಾದಿಗರ ಬಳಿಯಲ್ಲಿ ರಕ್ತ ತೆಗೆಯುವ ತುಮ್ಮಡಿ ಇರುತ್ತದೆ (ಮುಂಬಯಿ. ೫-೭೭) ; ಈ ಗೊಲ್ಲರಲ್ಲಿ ಕೆಲವರು ... ತುಮ್ಮಡೀ ಹಚ್ಚಿ ರಕ್ತ ತೆಗಿಯುವದರಲ್ಲಿಯೂ ಕುಶಲರಿರುತ್ತಾರೆ (ಕಭಾಗೆ. ೧೭೩). ತುಂಬಡಿ : ಹೊಟ್ಟೆಯೊಳಗಿನ ಹವೆಯು ತುಂಬಡಿಯೊಳಗಿನ ನಿರ್ವಾತಸ್ಥಲವನ್ನು ತುಂಬಲಿಕ್ಕೆ ಯತ್ನೈಸುವದರಿಂದ (ಮುಂಬಯಿ. ೫-೭೭).

[←ಮರಾ. ತುಮಡೀ, ತುಂಬಡೀ]

ತುಮ್ಮಲಿ (ನಾ). ಒಂದು ಸ್ಥಳದ ಹೆಸರು : ಮಹಾರಾಜರ್ ತುಮ್ಮಲಿ ತೊಱುವಾ ಸವ್ವಪರಿಹಾರಂಗೊಟ್ಟರ್ (ಎಕ. X, ಬಾಗೇಪ. ೬೨-೧೦ ; ಸು. 900?). [?]

ತುಮ್ಮೆಗೂರ್ (ನಾ). ಒಂದು ಊರಿನ ಹೆಸರು; P ಈಗಿನ ತುಮಕೂರು: ತುಮ್ಮೆಗೂರ ಕೆಱೆಯ ವೊಳೆದೊ × × ಱೆಣ್ಬರ ಬೆಸದೊಳೆ (ಎಕ. XII, ತುಮಕೂ. ೫-೨ ; 955). [? + ಊರ್]

ತುಮ್ರಿ$_1$ 'ತುಂಬುರ್' ನೋ.

ತುಮ್ರಿ$_2$ 'ಠುಮರಿ' ನೋ.

ತುಯ್$_1$ (ಕ್ರಿ). ಒದ್ದೆಯಾಗು ; ಹಸಿಯಾಗು ; ತೊಯ್ಯು : "ತೊಯ್ (ತುಯ್) – ಸಾರ್ದ್ರತ್ವೇ" (ಶಮಧಾ). 'ತೋ$_1$' ಪರಾ.

[ದೇ.॥ ತಮಿ. ತುವೈ ; ಮಲ. ತುವೆ]

ತುಯ್$_2$, ತುಯಿ, ತುಯ್ಯು, ತೂಯ್ (ಕ್ರಿ). ತುಯ್ದು, ತೂದು (ಭೂತನ್ಯೂ). ೧. ಎಳೆ ; ಸೆಳೆ ; ಜಗ್ಗು : ವಲ್ಗನವಾಡುವ ಬಿಲ್ಗಳ ಪೆದೆಗೆ ಸರಲ್ಗಳ ಸಾರ್ಚಿ ತುಯ್ದೆಸೆವ (ಚಂಪ್ರಸಾಂ. ೮-೪೨) ; ದೊರೆಗಳು ಸೇನೆವೆರಸಿ ಸನ್ಮತಿಯ ತುಯ್ದೆದ್ದಾ ನಯದಿಂದ ತಹೆನೆಂದು ನುಡಿದು (ಭರಜ. ೫೬-೨೨) ; ಪರಿಮಳೋದಕವ ಜಳಯಂತ್ರದಿಂ ತೂದೆಸೆಯಲ್ (ಪ್ರಭುಪು.೪-೧೦೦) ; ತೆಂಕಣ ಬಿಱುಗಾಳಿಗಳೊಳ್ ತುಯ್ದು, ನರೆಗಡಲನ್ ತಾನ್ ದಾಂಟಿದವನ್ (ಅಂತಿಗೊ.೧೬-೩೧೨). ತುಯಿ : ೧. ಪಾಳೆಯಗಾರನು . . . ಹೆದೆಗೆ ಅಂಬನ್ನೇರಿಸಿ ಆನೆಯ ಹಣೆಗೆ ಗುರಿಗಟ್ಟಿ ಎಡಗಯ್ಯಿಂದ ತುಯಿದು (ಎಳೆದು) ಬಿಟ್ಟನು (ಕವೀರ. ೧೩೬). ತುಯ್ಯು: ೧. ಮನಸ್ಸನ್ನು ಯಾವೆಡೆಗೋ ತುಯ್ಯುವ ಆ ಏಕನಾದ (ರೂಪಸ. ೧); ಆಚೆ ದಡದೆಡೆ ಸದಾ ತುಯ್ಯುತಿರಲಿ (ಚಂಡಮ. ೫೭-೧೨). ೨. ತುಡಿ ; ಮಿಡಿ ; ಸ್ಪಂದಿಸು : ನಮ್ಮ ಭಾರತೀಯ ಹೃದಯವೂ ತುಯ್ಯುತ್ತದೆ (ನಿಬಂಧ. II, ೧೦೭). ತೂಯ್: ೧. ಆಡ ಮೇಯಿಸುವ ಮಕ್ಕಳುಗಳೆಲ್ಲರು ಬಂದು ಕೂಡಿ ತೂಯ್ದೊಡೆ ಬಾರದಿರಲು (ನೇಮಿಸಂ. ೦೦-೨೩೨) ; ಪದೆದು ತೂಯ್ವಾಗ ನೂಱೆಸೆವಾಗ ಸಾಸಿರ (ಚಂಪ್ರಸಾಂ. ೦೧-೭೧) ; ನಮ್ಮೆತ್ತು ಮುಂದೆ ಮೂರ್ಹೆಜ್ಜೆ ತೂಯೊಲ್ಲೊ (ಹಳ್ಳಿಲಾ. ೩೫).

ತುಯ್ದಾಡು=ಎಳೆದಾಡು; ಜಗ್ಗಾಡು: ನೆಂಟರ ಮೇರೆಯನ್ನು ಮೀರಿ ಮಿತ್ರಮಂಡಲಿಯವರೆಗೂ ಈ ವಿಚಾರ ತುಯ್ದಾಡಿತ್ತು (ಶ್ರೀಷ್ಠಪ್ರ. ೨೪೦). ತುಯ್ದೊಗೆ=ಎಳೆದು ಬಿಸಾಡು : ತಲೆವೊಯ್ದನ್ ಒಂದನ್ ತುಯ್ದೊಗೆದನ್ ಒಂದನ್ (ಅಶ್ವತ್ಥಾ. ೧೨-೨೫೬). ತೂದು ಹಿಡಿ=ಎಳೆದು ಹಿಡಿ : ಕುದುರೆಯಲಗಾಮನ್ನು ತೂದು ಹಿಡಿದರು (ಚಂಗಾಳ್ವ. ೪೮).

[ದೇ.॥ ತೆಲು. ದುಯ್ಯು, ದೂಯು]

ತುಯಿ 'ತುಯ್' ನೋ.

ತುಯಿತ 'ತುಯ್ತ' ನೋ.

ತುಯ್ತ, ತುಯಿತ (ನಾ). ಎಳೆತ; ಸೆಳೆತ; ಎಳೆದಾಟ; ಜಗ್ಗಾಟ: ಅದರ ತುಯ್ತವನ್ನು ನಾನು ಬಲ್ಲೆ (ಈಚಕ. ೩೪); ಆನಂದದೀ ತುಯ್ತ ಕನುವಾಗುವಾ ಮತಿಗೆ ಇಂಥ ನಡೆಯೇ ಸಹಜ (ಗಚೇಕ. ೦೩-೩೦); ಇಂಥ ತುಯ್ತಗಳ ಆಯಕಟ್ಟಿಗೆ ಸಿಕ್ಕಿದ ಜೀವಾತ್ಮಸಂಸ್ಥೆ ಕಾವ್ಯಕ್ಕೂ ಕಲೆಗೂ ಮಾತೃಕೆಯಾಗುತ್ತದೆ (ಕಾವ್ಯಕು. ೦). **ತುಯಿತ**: ಎಂಥ ವಿದ್ವಾಂಸನಾದರೂ ಇಂದ್ರಿಯಗಳ ತುಯಿತಕ್ಕೆ ಸಿಕ್ಕುವವನೇ (ಬಂಕಮು. ೨೬೭); ಎಲ್ಲಿಯೂ ಈ ಜೇಡನ ನೂಲಿನ ಮೇಲೆ ಸ್ವಲ್ಪವೂ ತುಯಿತವಿಲ್ಲ (ನಿಬಂಧ. II, ೩೫೮).

[ತುಯ್ + – ತ್]

ತುಯ್ಯ (ನಾ). ಒಂದಂ ಬಗೆಯ ಹಕ್ಕಿ: ಗಿಡುಗ ಸಾಳುವ ತು [ಪಾತಾಂ. ಕಾ] ಯ್ಯ ಓರಣ ... ಹಕ್ಕಿಗಳನವರು ಪಿಡಿದು (ಸಾಳ್ವಭಾ. ೫-೨೦). [?]

ತುಯ್ಯಲ್, ತುಯ್ಯಲು (ನಾ). ಹಾಲು, ಸಕ್ಕರೆ ಮೊದಲಾದ ಪದಾರ್ಥಗಳಿಂದ ತಯಾರಿಸುವ ಒಂದು ಬಗೆಯ ಸಿಹಿ ಪದಾರ್ಥ; ಪಾಯಸ: "ಕ್ಷೀರೇಯಂ ತುಯ್ಯಲ್" (ವಸ್ತುಕೋ. ೬೩-೦೦): "ಕ್ಷೀರೇಯಂ, ಪಾಯಸಂ, ಪರಮಾನ್ನಂ–ಈ ೩ ತುಯ್ಯಲ್" (ಹಶಾಯು. ೫೩-೦೬೫); ಪೊನ್ನ ತಳಿಗೆಯೊಳ್ ನಾಯ್ ತುಯ್ಯಲನುಣ್ಬುದಂ ಕಂಡು (ವಡ್ಡಾರಾ. ೧೬-೨೭); ತವುಡಂ ತಿಂದು ತುಯ್ಯಲನುಂಡೆನೆಂಬಂತೆ (ಧರ್ಮಾಮೃ. ೧೩-೦೧೦); ಕಾಚ್ಪಿಕ್ಕಿಗೂಡುವವೊಲ್ತುಯ್ಯಲಂ (ಆನಂಪು. ೦-೬೦); ಅಣ್ಣಿವಾಲಿಂ ಬೆರಸಿದ ಸಕ್ಕರೆಯ ತುಯ್ಯಲಿಕ್ಕಿದರರೆಬರ್ (ನಳದಂ. ೪೪೦). **ತುಯ್ಯಲು**: ತುಯ್ಯಲಾದಡೆ ಉಂಬೆ ಹುಯ್ಯಲಾದಡೆ ಓಡುವೆ (ಜಸವ. ೦೩೦); ತುಯ್ಯಲು ತಪ್ಪವ ಬಡಿಸಿ ಬಳಿಕ ನಮ್ಮ ಕೈಯ ಪರಿಯನೀಕ್ಷಿಸದೆ ... ಉಸುರುವರೇ ಬಲುಗೈಯರಿಗಾಗದ ಬೆಸನ (ನೇಮಿಸಂ. ೫೯-೨೭೦); ತುಯ್ಯಲನು ತನ್ವಂಗಿ ತನ್ನಯ ಕೈಯಲೇ ಬಡಿಸಿದಳು (ವಿಧಾಗ. ೦೦-೦೫-೪೭); ಹುಯ್ಯಲಿನ್ನಿಲ್ಲ ಸಂತಸವೆಂದು ನಲಿದುದು ತುಯ್ಯಲನುಂಡಂತೆ ಕಟಕ (ಧರಕ. ೫೦-೦೨೬); ತುಯ್ಯಲೂಟಕೆ ಲೇಸು ಬಯ್ಯದ ಸೊಸೆ ಲೇಸು ಅಯ್ಯ ಬಾರೆಂಬ ಮಗ ಲೇಸು ಧರ್ಮವದು ಕೈಯಾರ ಲೇಸು (ಸರ್ವಜ್ಞ. ೬೨೬).

ತುಯ್ಯಲಚಂದಯ್ಯ (ನಾ). ಒಬ್ಬಾತನ ಹೆಸರು: ಉಬ್ಬ ಕಾವಮಾಣ ಸೆಟ್ಟಿಯ ತಮ್ಮಂ ತುಯ್ಯಲಚನ್ದಯ್ಯಂ ಪ್ರಸ(ಶ)ಸ್ತಿಯಂ ಬರೆಯಿ [ಸಿ] ದಂ (ಎಇ. XIX, ೪೯೦-೪೫: ೧೮೩). 'ತುಯ್ಯಲಬೇಗೂರ್' ಪರಾ.

[<ತುಯ್ಯಲ್ ? + ಚಂದಯ್ಯ]

ತುಯ್ಯಲಬೇಗೂರ್ (ನಾ). ಒಂದಂ ಊರಿನ ಹೆಸರು: ಆ ನಾಗರಖಂಡದೊಳಗಣ ತುಯ್ಯಲಬೇಗೂರ ಗೌಂಡನ ವಂಶಾವತಾರವೆಂತೆಂದಡೆ (ಕಇ. IV, ೨೨-೦೩: 1024). [<ಗುಯ್ಯಲ್ ? + ಬೇಗೂರ್]

ತುಯ್ಯಲು 'ತುಯ್ಯಲ್' ನೋ.

ತುಯ್ಯಲುಗೆಯಿ (ನಾ). ನೀರಾವರಿಭೂಮಿ; ಗದ್ದೆ: ಎಲವಸೆಗಜ್ಜಿಯ ಕೆಳಗೆ ತುಯ್ಯಲುಗೆಯಿ ಮತ್ತರು ನಾಲ್ಕು ಕಂಭ ನಾನುಜಯ್ಯತ್ತು (ಸೌಇಇ. IX-1, ೩೫೯-೬೩: 1206). [P ಇದು 'ಗುಯ್ಯಲುಗೆಯಿ' ಇರಬಹುದು]

ತುಯ್ಯಾಟ (ನಾ). ಎಳೆದಾಟ; ಸೆಳೆದಾಟ; ತುಯ್ತ: ಇಬ್ಬರ ತುಯ್ಯಾಟವನ್ನೂ, ವಿಚಾರದ ಅರಿವಿಲ್ಲದೆ ನೋಡುತ್ತಾ ನಿಂತಿದ್ದ ಕಿಟ್ಟಯ್ಯ (ನಿಕಊ. ೧೫೬); ಈ ತುಯ್ಯಾಟದಲ್ಲಿ ಅವಳು ಬಂದಾಗ ... ತನ್ನ ಪಾಡಿಗೆ ತಾನು ಇದ್ದನು (ಕಾಬೀಮು. ೯೯). [ತುಯ್ಯು (<ತುಯ್) + ಆಟ]

ತುಯ್ಯು 'ತುಯ್' ನೋ.

ತುಯ್ಲಾಟ (ನಾ). = ತುಯ್ಯಾಟ: ಈ ಯೋಚನೆಗಳ ತುಯ್ಲಾಟದೊಡನೆ ಶೇಷ, ಸುಬ್ರಾಯರೊಂದಿಗೆ ಹೊಸನಗರ ತಲುಪಿದ್ದನು (ಬಾಳಿವ್ಯ. ೦೯೯).

[ತುಯ್ಲು + ಆಟ]

ತುಯ್ಲು (ನಾ). = ತುಯ್ತ. 'ತುಯ್ಲಾಟ' ಪರಾ.

[ತುಯ್ + – ಅಲು (< – ಅಲ್)]

ತುರ$_1$ (ನಾ). ಕುದುರೆ; ಅಶ್ವ: ತೆಱಿಗೆ ತಪ್ಪದು ಒಂದು ಕಾಲಕೆ ಬರೆದ ಲಿಪಿಗಳು ಇರುವ ತನಕವು ತುರದ ಬಾಲಕೆ ತೆಱಿಗೆ ಮಾಳ್ಪರು (ಕಾಲಸಂ. ೨೨-೩); ಯಾವತ್ತು ಬಲಜಲಧಿಯಿಂದೈದಿದಂ ಕರಿಘಟೆ ತುರಂಗಳಿಂ ತೇರ್ಗಳಿಂದ (ತುರಂಗ. ೦೦-೩೪). 'ತುರಗ' ಪರಾ.

[<ಪ್ರಾ. ತುರಯ. / ಹಿಂ. ತುರ, ತುರಾ. / ಸಂ. ತುರಗ]

ತುರ$_2$ (ನಾ). ವೇಗ: "ತುರ – ತ್ವರಣೇ, ತವಕದೊಳ್" (ಕಾಶಕ್ಕ. ೦೬೭).

[ಸಂ.]

ತುರಂಗ$_1$ (ನಾ). ೧. ಕುದುರೆ; ಅಶ್ವ: ಭಾಸುರ ತುರಂಗಮನೇಱಿದನೊಲ್ದು ಭೂಭುಜಂ (ಹಮ್ಮೀರ. ೩-೩೬); ಕಟ್ಟಾಯದಿಂ ಬಲಿವೋಪ ರಾಮನಧ್ವರ ತುರಂಗಮಂ ತಡೆದು ನಡೆಗಿಡಿಪಯ್ (ರಾಮಾಶ್ವ. ೧೩೦-೨): ತುರಂಗಕ್ಕೂ ಕುರಂಗಕ್ಕೂ ಸಮವೇ? (ಗಾಡ). ೨.=ತುರಂಗಪ್ರಾಸ: ಹರಿ ಕರಿ ವೃಷಭ ತುರಂಗಂ ಶರಭಮಜಂಗಳುಮೆನಿಪ್ಪ ಷಟ್ಪ್ರಾಸಕ್ಕುಂ ತರುಣಿ ನಿಜದೀರ್ಘ ಬಿಂದುವಿನಿರದೊತ್ತುಂ ವ್ಯಂಜನಂ ವಿಸರ್ಗದಿ ಬರ್ಕುಂ (ಛಂದೋಂಬು. ೬. ೦-೪೨). ೩. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ. ೪. [ಕಾವ್ಯವಿಮಾ] ಒಂದು ಬಗೆಯ ಚಿತ್ರಕಾವ್ಯ; ಕುದುರೆಯ ಆಕಾರದಲ್ಲಿರುವ ಪದ್ಯಬಂಧ: ಶರಶೂಲಚಾಪಚಕ್ರಾಸಿರೂಪವಿಭರಥ ತುರಂಗ ಪದಗತವಾತಂ ... ಸರ್ವತೋಭದ್ರಂಗಳ್ (ಕಾವ್ಯಾವ. ೩೬೯). [ಸಂ.]

ತುರಂಗ$_2$ (ನಾ). ಸೆರೆಮನೆ; ಕಾರಾಗೃಹ: ಇನ್ನೊಮ್ಮೆ ಹೀಗೆ ಮಾಡಿದೆಯೆಂದರೆ ತುರಂಗಕ್ಕೆ ಕಳಿಸುತ್ತೇನೆಂದು ನಾನವನಿಗೆ ಒಳ್ಳೇ ಹೆದರಿಕೆ ಹಾಕಿದ್ದೇನೆ (ಸ್ಮೃತಿಚಿ. ೨೮೩); ಎಷ್ಟೋ ಜನ ತುಡುಗರನ್ನು ಹಿಡಿದು ತುರಂಗಕ್ಕೆ ಕಾಣಿಸಿರುವೆನು (ಕಳ್ಳಕಾ. ೩).

[←ಮರಾ. ತುರಂಗ, ತುರುಂಗ. / ಇಂ. Tronk. / ಪೋರ್ಚ್. ಡಚ್. Tronco. / ಮಲ. ತುರುಜ್; ತುಳು. ತುರುಂಗು]

ತುರಂಗತಾನಕ (ನಾ). ಏಡ್ಗಯುದ್ಧದಲ್ಲಿ ಒಂದು ಪರಸೆ: ಮುಂದುಗತೆಯಲ್ಲಿ ಬಲದ ಪಾದವನ್ನು ಬಾಚಿ ಪಾರ್ಶ್ವಗಳಲ್ಲಿ ಆ ಬಲಪಾದದ ಪೆಜ್ಜೆಯು ನಿಕ್ಕುವುದೂ ಮುಂದುಗಡೆಯಲ್ಲಿ ಗತಿಯೂ ಆವದು ಆದು ತುರಂಗತಾನಕಯಂದು ನುಡಿಯಲ್ಪಡುವುದು (ಏಡ್ಗಲೇ. ೫-೦೪). [ತುರಂಗ$_1$ + ತಾನಕ]

ತುರಂಗತ್ವ (ನಾ). ಕುದುರೆಯ ಸ್ವರೂಪ,–ಆಕಾರ: ತುರಂಗತ್ವಮೆನಗೆ ಮೂಡಿದೊಡಮೆನ್ನ ಕೆಳೆಯನೊಡಗೂಡಿ ಕಾಲಮಂ ಕಳಿವುದಂತು ನಿನ್ನ ದಿವ್ಯಚಕ್ಷುಗಳಿಂ ನೋಡಿ ಬೆಸಸೆಂಬುದುಂ (ಕಾದಂಬಾ. ೬೦೬). [ಸಂ.]

ತುರಂಗದಳ (ನಾ). ಕುದುರೆಯ ಸೈನ್ಯ: ತುರಗಂ ನೂಱನಿತುಂ ತುರಂಗದಳಮೊಂದೊಂದರ್ಕೆ ನೂಱಾಳ್ ತಗುಳ್ದಿರೆ ಬಲ್ಲರ್ ನಡೆ ನೋಡಿ ಕೂಡೆ ಪಡೆದತ್ಯಕ್ಷೋಹಿಣೀಸಂಖ್ಯೆಯಂ (ಪಂಚಭಾ. ೯-೧೩).

[ತುರಂಗ$_1$ + ದಳ$_2$ (= ದಲ)]

ತುರಂಗಪ್ರಾಸ (ನಾ). [ಛಂದ] ಆರು ಬಗೆಯ ಪ್ರಾಸಗಳಲ್ಲಿ ಒಂದು; ಪ್ರತಿ ಪಾದದ ಮೊದಲೆರಡು ಸ್ವರಗಳ ನಡುವೆ ಒಂದೇ ವಿಧದ ಸಂಯುಕ್ತವ್ಯಂಜನಗಳು ಬರುವ ಪ್ರಾಸ: ತುರಂಗಪ್ರಾಸಕ್ಕೆ ಲಕ್ಷಣಂ ಮತ್ತಚಕೋರರೋಚನೆ ಚಿತ್ರಜರಾಜಧಾನಿ ಇದು ಲಕ್ಷಣದಲ್ಲಿ ಭಗಣಂ (ಛಂದೋಂಬು. ೬. ೦-೪೩ ಆಡಿ). [ತುರಂಗ$_1$ + ಪ್ರಾಸ]

ತುರಂಗಮ (ನಾ). ೧.=ತುರಂಗ$_1$ ೧: ಮದಗಜಬ್ಯೂಹಿತಧ್ವನಿ ತುರಂಗಮ ಹೇಷಿತಘೋಷನಾದವೊರ್ವೊದಲೆ ಪಯೋಧಿಮಂಥನಮಹಾರವಮಂಗೆಲೆ (ಪಂಪಭಾ. ೩-೩೮); ಇಕ್ಕುವುದೆಲ್ಲಮಂ ತುರಂಗಮಕೆಂದುಂ (ಕೋಕೋಪ. ೯-೨೨೦): ಮೇಲು ಸುಯಿಧಾನದ ತುರಂಗಮಜಾಲಸಹಿತಗಲದಲಿ ... ಅಱಿಸಿದನು ನೃಪನ (ಕುಮಾಗ. ೩-೦). ೨. [ಛಂದ] ಒಂದು ವೃತ್ತದ

ಹೆಸರು : ಪಾವಕಂ ತ್ರಿದಶಪಾವಕಂ...ನೆಲಸಿ ನಿಲ್ದಿನಂ ದೇವದೇವಕೃತಮಿಾ ವಿಧಾನದೊಳಿಳಾವಿನೂತಯತಿ ರಂಧ್ರದೊಳ್ ಭಾವಿಸುತ್ತುವಿರೆ ಭಾವಿಸಿಂತಿದನೆ ಬೀವರಸ್ತನೆ ತು[ಪಾಠಾಂ. ತ] ರಂಗಮಂ (ಧಂದೋಂಬು. ೨-೧೪೦). [ಸಂ.]

ತುರಂಗಮದಟ (ನಾ).=ತುರಂಗದಳ : ದನುಜಬಳಜಳಧಿ ಬಾಡಬಾನಲನ ಬಾಣಂಗಳೌರ್ವಶಿಖಿಯಂತೆ ತುರಂಗಮದಟತರಂಗಿತಾರ್ಣವಮನಟ್ಟೂಡಿಸೆಯುಂ (ಜಗವಿ. ೭-೮೪ ವ). [ತುರಂಗಮ + ದಟ]

ತುರಂಗವಕ್ತ್ರ (ನಾ). = ತುರಂಗವದನ : (ಕ). [ತುರಂಗ$_1$ + ವಕ್ತ್ರ]

ತುರಂಗವದನ (ನಾ). ೧. ಕುದುರೆಯ ಮುಖದಂತೆ ಮುಖವುಳ್ಳವನು; ವಿಷ್ಣುವಿನ ಒಂದು ಅವತಾರ ; ಹಯಗ್ರೀವ : ಮಾತಂಗವರದ ವಿಹಂಗಗಮನ ಭುಜಂಗಶಯನ ತುರಂಗವದನ (ವಿದಾಕೃ. ೪೭-೧). ೨. ಕುದುರೆಯಂತೆ ಮುಖವೂ ಮನುಷ್ಯನಂತೆ ಉಳಿದ ಅಂಗಗಳೂ ಉಳ್ಳ ಒಂದು ದೇವತಾವರ್ಗಕ್ಕೆ ಸೇರಿದವನು ; ಕಿನ್ನರ : "ಕಿನ್ನರಃ. ಕಿಂಪುರುಷಃ. ತುರಂಗವದನಃ. ಮಯ್ಯುಃ-೪ ಕಿನ್ನರರ ಹೆಸರುಗಳು" (ಸಿದ್ಧಾಂತಿ. ೨೬).

[ತುರಂಗ$_1$ + ವದನ]

ತುರಂಗವದನೆ (ನಾ). ಕಿನ್ನರಸ್ತ್ರೀ ; ಕಿನ್ನರಿ : ಗುರುಕುಚಭರಕ್ಕೆ ಮನದೊಳ್ ಕರಮೆ ಕನಲ್ವರ್ ತುರಂಗವದನೆಯರದಱೊಳ್ (ಚಂದ್ರಪು. ೧೦-೩೭).

[ಸಂ. ತುರಂಗವದನಾ]

ತುರಂಗವಾಹಳಿ (ನಾ). ಕಂದುರೆಗಳ ಸಾಲು: ಸುಱಿವ ತುರಂಗವಾಹಳಿಯ ಪೂವಲಿಯೊಳ್ ಪೊರೆದಂಕದಾನೆಯಗ್ಗಱಿಯ ಮದಾಂಬುಕರ್ದಮದೊಳರ್ದು ... ತೀಡುವುದು ತತ್ಪುರಬಾಹಿರ ಮಂದಮಾರುತಂ (ಅನಂಪು. ೩-೦೬) [ತುರಂಗ$_1$ + ವಾಹಳಿ]

ತುರಂಗಸಂಗರ (ನಾ). ಕಂದುರೆಯ ದಳದ ಯುದ್ಧ ; ಅಶ್ವಸೈನ್ಯದ ಕದನ : ಭಯಂಕರಮಾಯ್ತು ತುರಂಗಸಂಗರಂ (ಪಂರಾಮಾ. ೧೩-೬೩).

[ತುರಂಗ$_1$ + ಸಂಗರ]

ತುರಂಗಸಾಧನ (ನಾ). ಕುದುರೆಯ ದಳ; ಅಶ್ವಸೈನ್ಯ : ಪದಿನೆಂಟು ಕೋಟಿವರೆಗಂ ತಳರ್ದತ್ತು ತುರಂಗಸಾಧನಂ (ಆದಿಪು. ೧೦-೩೦).

[ತುರಂಗ$_1$ + ಸಾಧನ]

ತುರಂಗಿ$_1$ (ನಾ). ಕುದುರೆಯ ಸವಾರ ; ಅಶ್ವಾರೋಹಿಯಾದ ಸೈನಿಕ : ಓರ್ವರೊರ್ವರಂ ಪೊಯ್ದುರ್ ಮಾಮಸಕದೆ ಪಣೆದಂಬೊಯ್ವಂತಸಿಯಂ ಪಿಂಗದೆ ತುರಂಗಿಗಳ್ ಸಂಗರದೊಳ್ (ಚಂದ್ರಪು. ೧೦-೮೧); ಮುತ್ತಿನ ಸತ್ತಿಗೆ ಮೊತ್ತಂಬೆತ್ತಿರೆ ಸುತ್ತಿ ತುರಂಗಿಗಳೊತ್ತರಿಸುತ್ತಿರೆ (ರಾಜಶೇ. ೯-೪೧ ರಗಳೆ).

[ಸಂ. ತುರಂಗಿನ್]

ತುರಂಗಿ$_2$ (ನಾ). ೧. = ತುರಗಿ. ೨. [ಸಂಗೀತ] ಒಂದು ರಾಗದ ಹೆಸರು: ತುರಂಗಿ [ಪಾಠಾಂ. ತರಂಗಿಣಿ] ಗಾಂಧಾರಿ...ವಸಂತ ಬಂಗಾಳವೆಂಬಿಪ್ಪತ್ತೆರಡು ರಾಗಂಗಳು ಕ್ರಿಯಾಂಗದಿಂದ ಪುಟ್ಟಿದವು (ವಿವೇಕ. ೨೩೪). [ಸಂ. ತುರಂಗೀ]

ತುರಂಜಿ, ತೋರಂಜಿ (ನಾ). ೧. ಈಳೆ ಜಾತಿಗೆ ಸೇರಿದ ಎಂದು; ಚಕ್ಕೋತ, ಹೇರಳೆ ಅಥವಾ ನಿಂಬೆ. ೨. ಮಾದಲ ; "ಮಾತುಲುಂಗ" (ಪಂಡಿತ. ೨೪೧). ೩. ಸೊಗಸಾದುದು; ಶ್ರೇಷ್ಠವಾದುದು: (ಕ). **ತೋರಂಜಿ**: (ಕ). [← ಪಾರ. ಹಿಂ. ಮರಾ. ತುರಂಜ್./ಕೊಂಕಣಿ. ತೋರಂಜ./ತಮಿ. ತುರಿಞ್ಚಿ]

ತುರಂತ (ನಾ). ವೇಗ ; ಶೀಘ್ರತೆ : ಈ ಸಂದರ್ಭದಲ್ಲಿ ತುರಂತವಾಗಿ ಜನರನ್ನು ಒಂದುಗೂಡಿಸುವುದು ದುಷ್ಕೃತವಾಗಬಹುದು (ಝೂರಾಂಹಿ. ೨೦೧). 'ತುರಿತ$_2$' ಪರಾ. [← ಹಿಂ. ಮರಾ. ತುರಂತ್]

ತುರಃಕ 'ತುರುಕ' ನೋ.

ತುರಕ (ನಾ). ೧. ತುರ್ಕಿದೇಶದವನು. ೨. ಮುಸಲ್ಮಾನ ; ತುರುಕ. 'ತುರಕವಿಗ್ರಯಂ' ಪರಾ. [ಸಂ.]

ತುರಕಬೇವು (ನಾ). = ತುರುಕಬೇವು : ನಮ್ಮ ಹೊಲದ ಬದುವಿನಲ್ಲಿ ಒಂದು ತುರಕಬೇವಿನ ಮರವಿದೆ (ರೂಢಿ). [ತುರಕ + ಬೇವು]

ತುರಕವಿಗ್ರಯ (ನಾ). ಮುಸಲ್ಮಾನರೊಂದಿಗೆ ಮಾಡುವ ಕಾಳಗ,-ಹೋರಾಟ : ಹೊಯಿಸಣಶ್ರೀವೀರಬಲ್ಲಾಳ ದೇವರ್ಸರು ಸುಖರಾಜ್ಯಂಗೆಯುತ್ತವಿರೆ ತುರಕವಿಗ್ರಯಾದಲ್ಲಿ ... ವೀರಬಲ್ಲಾಳರಾಯ ಪಟ್ಟಣ ಪ್ರವೇಶ ಮಾಡು ವವಸರದಲ್ಲಿ (ಎಕ. VII, ಶಿವಮೊ. ೬೮-೧ ; 1313).

[P ಇದು 'ತುರಕವಿಗ್ರಹ'ದ ಅಪಲಿಖಿತವಿರಬಹುದೆ ?]

ತುರಕಿ 'ತುರ್ಕಿ' ನೋ.

ತುರಗ (ನಾ). ೧. ಕುದುರೆ ; ಅಶ್ವ : "ತುರಗಂ ಯಯ್ಯು ಸಪ್ತಿ ಹಯಂ ತುರಂಗಮಂ ವಾಜಿ ... ತುರಂಗಮೆನೆ ಕುದಿರೆ" (ವಸ್ತುಕೋ. ೮೩-೨೨) : ಕರಿತುರಗರಥಪದಾತಿಯ ಚರಣಾಸಂಘಾತಜಾತರಜಮಾಜಸ್ರಂ ನೆರೆದಂಬರ ಕೊಗೆಯಲ್ (ಪಂಪಭಾ. ೧೦-೬೮) ; ತುರಗಮಯಂ ನೆಲಂ ಚಮರಜಾಲಮಯಂ ದಿನಂ ... ಮದಗಂಧಮಯಂ ಸಮೀರಣಂ (ಕಾದಂಪು. ೬೦೧). ೨. = ತುರಂಗಪ್ರಾಸ ; ಹರಿ ... ತುರಗಂ ಶರಭಮಜಂಗಳುಮೆನಿಪ್ಪ ಷಟ್ಪ್ರಾಸಕ್ಕಂ ತರುಣ ನಿಜದೀರ್ಘ ಬಿಂದುವಿನಿರದೊತ್ತುಂ ವ್ಯಂಜನಂ ವಿಸರ್ಗಂ ಬಕ್ಕುಂ (ಕವಿಜಿ. ೨-೨). ೩. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : ವಿಶ್ರಮಣಂ ತುರಗವ್ರಾತ ಗಜವ್ರಜದೊಳ್ ಬರೆ (ಧಂದೋಂಬು. ೨-೧೮೫) ; ತುರಗ ಹೆಯಂ ಏಱಱ ನಾಮಂ (ವೃವಹಾ. ೯-೬) ; ತಾನೆಳೆಯೂರ ಮೂಱುಸಾಸಿರಮೆನೆ ಮತ್ತೆ ಬಾಣ ತುರಗೇಂದ್ರಿಯ ಖಂಡುಗದ (ಭಾಸ್ಕರ. ೩೧-೧).

ತುರಗಗೊಳ್ಸಾಗಿ = (?) : ಶ್ರೀಮತ್ ನಗರಮಪ್ಪ ವಯಚಯನ್ ತುರಗಗೊಳ್ಸಾಗಿ ದುಗ್ಗದರಸನುಂ ತೊದಳ್ದು ವೇಳೆಯವನಾಳು × ಪಱಿಯುತ್ತಂ ಬಪ್ಪುದಂ (ಸೌಇಇ. IX-I, ೨೨-೪ ; 923). **ತುರಗರೇವಂತ** = ಕುದುರೆಯ ಸವಾರಿಯಲ್ಲಿ ರೇವಂತನಂತೆ ಪ್ರಸಿದ್ಧನಾದವನು; ಒಂದು ಬಿರುದು : ಕಲಿಗಳಾಭರಣನಣ್ಣನಸಿಂಗಂ ತುರಗರೇವಂತಂ (ಎಕ. XI, ಚಿತ್ರದು. ೪೭-೧೬ ; 1067) ; ಮಣಲರ ಭೀಮಂ ತುರಗರೇವನ್ತಂ ಪರಬಳ ಕ್ರಿ ತಾನ್ತಂ (ಸೌಇಇ. XX, ೪೭-೨೨: 1074); ವಿಬುಧ ವರದಾಯಕಂ ಸುಜನ ಪ್ರಸನ್ನಂ ಗೋತ್ರಪವಿತ್ರಂ ವರಾಂಗನಾಪುತ್ರಂ ತುರಗರೇವನ್ತಂ ವೈರಿ ಕೃತಾಂತಂ (ಕಇಆ. ೩೭-೪೪-೧೦: 1197). **ತುರಗವೆಡೆಂಗ** = ಕುದುರೆಸವಾರಿಯಲ್ಲಿ ಪ್ರವೀಣ ; ಒಂದು ಬಿರುದು : ಚಾಲಿವಂಶೋದ್ಭವಂ ಶ್ರೀಮತ್ತುರಗವೆಡೆಂಗಂ ಕಾಳೆಗಕೆ ನಡವುತ್ತು (ಎಇ. XIII, ೧೮೭-೨ ; ಸು. 875) ; ಸಮಧಿಗತಪಂಚಮಹಾಶಬ್ದ ಮಹಾಸಮನ್ತ ತುರಗವೆ[ಡೆ]ಙ್ಗಬಿಳಿಯಂಬಿನಾತನಾಹವಸೂದ್ರಕಂ (ಸೌಇಇ. IX-I, ೬೪-೩ ; 944). [ಸಂ.]

ತುರಗಗಳ (ನಾ). ಕುದುರೆಯ ಕತ್ತಿನಂತೆ ನೀಳವಾದ ಕತ್ತುಳ್ಳವನು : ತುರಗಗಳಂ ಕಾನನಮಲಯರುಹಗತಂ ... ಕರ್ಕಟಾದಿಮದ್ರೇಕ್ಕಾಣಂ (ಜಾತಕಿ. ೧೯-೦೦). [ತುರಗ + ಗಳ್ಳ (= ಗಲ)]

ತುರಗಚಯ (ನಾ). ಕುದುರೆಗಳ ಸಮೂಹ : ತುರಗಚಯಂಗಳಂತಿರೆ ತರಂಗಚಯಂ ... ರಾಜಗೇಹದಂತಿರೆ ಕೊಳನಲ್ಲಿ ತಾಮರಸರಂತಿರೆ ತಾಮರಸಂಗಳೊಪ್ಪುಗುಂ (ಪಂಪಭಾ. ೫-೫೮). [ತುರಗ + ಚಯ]

ತುರಗಘಟ್ಟು (ನಾ). ಕುದುರೆಗಳ ಸೈನ್ಯ ; ಅಶ್ವದಳ : ಅಗಣಿತ ತುರಗಘಟ್ಟುಗಳೈದೆ ಕವಿದುವು ಚತುರಗತಿಗಳಲಿ (ಕಾಶಿರಾ. ೨೦-೫).

[ತುರಗ + ಘಟ್ಟು$_2$]

ತುರಗದಳ (ನಾ). = ತುರಗದಟ : ರಾವಣನು ಮರುಳುಗೊಂಡನು ತುರಗದಳವನು ನೆರಹಿ ತಾನಿವ ನೆಚ್ಚಿ ಕೆಟ್ಟನು (ಕಾಶಿರಾ. ೨೦-೨೫) : ತುರಗದಳವ ಕೂಡಿ ಕೊಟ್ಟು ಕರ್ಣಾಟವನಿರದೆ ಸಾಧಿಸು ಹೋಗೆಂದ (ಕಂನವಿ. ೧೦-೮).) [ತುರಗ + ದಳ್ಳ (= ದಲ)]

ತುರಗದಟ (ನಾ). ಚತುರಂಗಬಲದಲ್ಲಿ ಒಂದು ಅಂಗ; ಕುದುರೆಗಳ ಸೈನ್ಯ; ಅಶ್ವದಳ: ಮಾಪಾತಕಂ, ತುರಗದಟಂ, ಮಂಗಳಾರತಿ (ಭಾಷಾಭೂ. ೬-೧೩೨ ಪ್ರಯೋ); ಆಟಿಜನಂ, ತುರಗದಟಂ (ಶಮದ. ೧೭೪ ಪ್ರಯೋ).
[ತುರಗ + ದಟ]

ತುರಗಮನೆ (ನಾ). (ಚದುರಂಗದ ಆಟದಲ್ಲಿ) ಕುದುರೆ ನಿಲ್ಲುವ ಮನೆ: ಉಕ್ಕುವಾ ತುರಗಮನೆಯಿಂದಾಳುಮಂ ನೂಂಕೆ ದಕ್ಕಿತರಸಿನ ಹಿಂದೆ ಬಂದಾನೆ (ಚಿಬಪು. ೦೦-೪೬). [ತುರಗ + ಮನೆ]

ತುರಗಮೇಧ (ನಾ). ಅಶ್ವಮೇಧಯಾಗ: ತರುಣ ಕೇಳೈ ತುರಗ ಮೇಧಾಧ್ವರದ ಮೇಲಾರೈಕೆ ನಡೆದುದು (ತೊರರಾ. ೦-೬-೨೪); ಅವನಾದಿಯೊಳ್ತುರಗಮೇಧಂಗಳೇಳಂ ಮಾಡಿ ನರ್ಮದಾತಟಕೆ ಬಂದು (ಚೈಮಿಭಾ. ೨೫-೬). [ತುರಗ + ಮೇಧ]

ತುರಗರತ್ನ (ನಾ). [ಜೈನ] ಏಳು ಜೀವರತ್ನಗಳಲ್ಲಿ ಒಂದು; ಶ್ರೇಷ್ಠವಾದ ಕುದುರೆ: ದ್ವಾದಶಯೋಜನೋಲ್ಲಂಘನ ರಂಹೋನಿವಾಸಭೂಮಿಯುಮಪ್ಪ ಪವನಂಜಯಮೆಂಬ ತುರಗರತ್ನಮುಂ (ಆದಿಪು. ೧೧-೩ ವ).
[ತುರಗ + ರತ್ನ]

ತುರಗರಶ್ಮಿ (ನಾ). ಕುದುರೆಗೆ ಕಟ್ಟಿರುವ ಲಗಾಮು: ಪಿಡಿ ತುರಗರಶ್ಮಿಯ ನಿನಿತು ದೃಢಮುಷ್ಟಿಯಿಂ (ಶ್ರೀರಾಮಾ. ೮೦೭-೧೪೪).
[ತುರಗ + ರಶ್ಮಿ]

ತುರಗಾಟ (ನಾ). ಮಕ್ಕಳು ಆಡುವ ಒಂದು ಬಗೆಯ ಆಟ: ಸುಳಿದಾಟ ಚಿಣಿಕೋಲು ಕುಣಿಗಳು ತುರಗಾಟ (ವಿಸ್ತೋಸು. ೧೯-೩). 'ತುರಿಗೆ' ಪರಾ.
[ತುರಗ ? + ಆಟ]

ತುರಗಾರೂಢ (ನಾ). ಕುದುರೆಯನ್ನು ಹತ್ತಿರುವವನು; ಅಶ್ವಾರೋಹಿ: ತುರಗಾರೂಢನೀ ಬರ್ಪನಸ್ಮದ್ಧರಣೀಶಂ (ಶಾಂತಿಪು. ೫-೩೯).
[ತುರಗ + ಆರೂಢ]

ತುರಗಾರೋಹ (ನಾ). ಕುದುರೆಯನ್ನು ಹತ್ತುವುದು; ಕುದುರೆ ಸವಾರಿ: ಮುಂತೆ ತುರಗಾರೋಹಮಂ ಕಲಿಸಿ ವಿಸ್ತರಂ ಮತ್ತಂ ಗಜಾರೋಹಣಾದ್ಯಖಿಳವಿದ್ಯೆಯಂ ಪುತ್ರಂಗೆ ಮಾಡಿಸಿ (ನಂಬಿರ. ೩-೪೫).
[ತುರಗ + ಆರೋಹ]

ತುರಗಾರೋಹಣ (ನಾ). = ತುರಗಾರೋಹ: ತುರಗಾರೋಹಣದಿಂದಮೊರ್ಮೆ ಗಜಶಿಕ್ಷಾಲೀಲೆಯಿಂದೊರ್ಮೆ ... ಪೊಟ್ಟುಗಳೆವಂ ಶ್ರೀಗೋಮಿನೀವಲ್ಲಭಂ (ಚಂದ್ರಪು. ೪-೨೮). [ತುರಗ + ಆರೋಹಣ]

ತುರಗಾಸ್ಯ (ನಾ). ೧. = ತುರಂಗವದನ. ೨. [ಜ್ಯೋತಿ] ಕುದುರೆಯ ಮುಖದಂತೆ ಇರುವ ನಕ್ಷತ್ರ; ಅಶ್ವಿನಿ: ತುರಗಕ್ಕೆ ನೆಗಟ್ಟ ಪಕ್ಷಿಗೆ ... ಕರವೊಳ್ಳಿತು ಪತ್ತುವರಂ ತುರಗಾಕ್ಷಂ [ಸ್ಯಂ] ಕಱೆಯೆ ನೆಱೆಯೆ (ಜಟ್ಟಿಮ. ೦-೩೭). [ತುರಗ + ಆಸ್ಯ]

ತುರಗಿ (ನಾ). ಹೆಣ್ಣುಕುದುರೆ: ಗುರುಗುಂಜೆಯ ಬೇಳೆಯಂ ... ತುರಗಿಯ ಕೊರಲೊಳ್ ಕಟ್ಟಿದೊಡೆ ಮಾಸನಿಕ್ಕುಗುಮನಿಶಂ (ಲೋಕೋಪ. ೯-೧೯೨); ಸಮವೃತ್ತಮರುಣಚವಿಯುಂ ಸಮನಿಸೆ ತಾಂ ತುರಗಿ ನೋಡಲುತ್ತಮ ಮಕ್ಕುಂ (ಅಶ್ವಶಾ. ೧-೩೯). [ಸಂ. ತುರಗೀ]

ತುರಚಿ 'ತುಱುಚೆ' ನೋ.

ತುರಚಿಅವರೆ (ನಾ). ಒಂದು ಬಗೆಯ ಬಳ್ಳಿ; ನಸುಗುನ್ನಿ: ನಸುಗುನ್ನಿ, ನಾಯಿಸೊಂಕುಬಳ್ಳಿ, ತುರಚಿಅವರೆ (ಮೈಜಿಗಿ. ೫೫-೦೦೦೪).
[ತುರಚಿ (< ತುಱುಚೆ) + ಅವರೆ$_1$]

ತುರಚಿಬಳ್ಳಿ (ನಾ). = ತುರಚಿಅವರೆ: ಅಂಟುಸುರುಸುರಿಗೆಬಳ್ಳಿ, ತುರಚಿಬಳ್ಳಿ, ಚೇಳುರಿಗಿಡ (ಮೈಜಿಗಿ. ೭೫-೦೫೩೨).
[ತುರಚಿ (< ತುಱುಚೆ) + ಬಳ್ಳಿ]

ತುರಚೆ 'ತುಱುಚೆ' ನೋ.

ತುರನ (ನಾ). "ನಿರಂಕುಶಾಧಿಕಾರಿ" (ಅಂತಿಗೊ. ಕೋಶ): ತುರನರಾ ಜಾತಿಯದು ಒಲ್ದುದಟಿಲಾಭಮನ್ (ಅಂತಿಗೊ. ೪೩-೯೭೨).
[← ಇಂ. Tyrant]

ತುರವ (ನಾ). ಒಂದು ಬಗೆಯ ವಾದ್ಯ: ವೇದಗಳ ಕಾಲದಲ್ಲಿ ಉಪಯೋಗದಲ್ಲಿದ್ದ ಬಕುರ, ನಾಡಿ, ತುರವ...ಮೊದಲಾದ ವಾದ್ಯಗಳ ರೂಪರಚನೆಗಳನ್ನೂ ... ಶಿಲ್ಪಕಲಾಭಿತ್ತಿಗಳಿಂದ ನಾವು ಗ್ರಹಿಸಬಹುದು (ಸಂಗೀಚಂ. ೦೯೫). 'ತುರ್ಕಿ' ಪರಾ.
[?. /ಮರಾ. ತುರ. ತುರೇ./ಪ್ರಾ. ತೂರ./ತಮಿ. ತುರ]

ತುರಸು (ಕ್ರಿ). (?): ಅರಸು ಪರಶಗಳೇನು ಪ್ರಯೋಜನ ತುರಸಿ ಹೋಹವು ತುಟ್ಟಿಮನಸಿನ ಕೇಳು ಸಜ್ಜನವೇ ಮನಸು ನಿಂದಡೆ ಮೋಹ ನಿಲ್ಲುವುದು (ಉದ್ಯೋಪ್ರ. ೦-೪-೨೨). [?]

ತುರಾ, ತುರಾಯ, ತುರಾಯಿ, ತೂರಾಯ, ತೂರಾಯಿ (ನಾ). ೧. ಪೇಟ, ಟೋಪಿ, ಕಿರೀಟ ಮುಂತಾದುವುಗಳಿಗೆ ಸಿಕ್ಕಿಸುವ ಹೂವಿನ ಅಥವಾ ಮುತ್ತಿನ ಆಭರಣ, -ಅಲಂಕಾರದ ಕುಚ್ಚು. ೨. ಲಾವಣಿಗಳಲ್ಲಿ ಒಂದು ಪ್ರಕಾರ; ೯ ಪ್ರಕೃತಿಗಿಂತ ಪುರುಷನೇ ಹೆಚ್ಚು ಎಂಬ ತತ್ತ್ವದಿಂದ ರೂಪುಗೊಂಡ, ಹೆಣ್ಣಿಗಿಂತ ಗಂಡೇ ಹೆಚ್ಚು ಎಂಬ ಅಭಿಪ್ರಾಯವನ್ನು ಸಮರ್ಥಿಸುವ ಲಾವಣಿ: ಈ ಜಾತಿಯ ಹಾಡುಗಳಲ್ಲಿ 'ತುರಾ', 'ಕಲ್ಗಿ' (ಕಲ್ಕಿ) ಎಂಬವು ಮುಖ್ಯವಾದ ಪ್ರಭೇದಗಳು (ಕರ್ಣಾಸಂ. ೨೩); ಈ ಲಾವಣಿಗಳು ವಿಶೇಷವಾಗಿ 'ತುರಾ' ಮತ್ತು 'ಕಲ್ಕಿ'ಗಳೆಂಬ ಲಾವಣಿಕಾರರ ಸಂವಾದಗಳಾಗಿ ಬಳಕೆಯಲ್ಲಿ ಬಂದಿವೆ (ಕನ್ನಜಾ. ೯೦); ತಗೋ ಷುರು ಆಯ್ತು ವಾಗ್ವಾದ. 'ತುರಾ' ನೇ ಎಚ್ಚೂಂತ ಅವ್ರು ಕಲ್ಕಿ ತುರಾನ ನುಂಗ್ಬುಡ್ತು ಅಂತ ರಂಗಸಾಮಪ್ಪ (ಬೆಯ್ಯಮ. ೨೨). 'ಕಲ್ಗಿ' ಪರಾ. **ತುರಾಯ**: ೧. "ಶೇಖರಃ = ತುರಾಯಂ" (ಕಾಶಕೃ. ೯೦); ರತ್ನ ತುರಾಯ ಸಹಿತಂ ಮುತ್ತಿನ ಸತ್ತಿಗೆಯ ಘಂಟೆ ನೃಪವರಗಿತ್ತಂ (ಬೀಳವಂ. ೦-೯೫); ಸುತ್ತಿದನು ಚಿಮ್ಮುರಿಯ ಸತ್ಯಪಾಲಕ ಬಸವ ಮತ್ತದರ ಮೇಲಿಟ್ಟ ಮುತ್ತಿನ ತುರಾಯ (ಶರಲೀ. ೦೩೩-೨). ೩. ಒಂದು ವಿಶೇಷ ರೀತಿಯ ಹೂದಂಡೆ,-ಪುಷ್ಪಗುಚ್ಛ: ಅತಿಥಿಗಳಿಗೆ ಹಾರ ತುರಾಯಗಳನ್ನು ಅರ್ಪಿಸಲಾಯಿತು (ರೂಢಿ). ೪. ಕೆಲವು ಬಗೆಯ ಹೂವು, ತರಕಾರಿಗಳ, ಕುಚ್ಚಿನಂತಿರುವ ತುದಿ,-ಅಗ್ರ: (ಕಿ). **ತುರಾಯಿ**: ೧. ನವರತ್ನಖಚಿತದ ಸಿರವೇಷ್ ತುರಾಯಿ ಕಲ್ಲಿಯನು ಸರಸಿಜಮುಖಿಯೊರ್ವೆ ಪಿಡಿದು ನಿಂದಿರ್ದಳು (ಕಂನವಿ. ೨೪-೬೯); ಮುತ್ತಿನ ತುರಾಯಿಗಳು ಮುದದಿಂದ ಧರಿಸಿ (ಯನಳ. ೫೪). ೨. ಕಲ್ಗಿ, ತುರಾಯಿ ಎರಡು ಪಕ್ಷಗಳ ಮೇಳಗಳನ್ನು ಕರೆಯಿಸುವದಪರೂಪ (ದಾಸಹು. ೫೨); ಲಾವಣಿಗಳಲ್ಲಿ ಎರಡು ವಿಧ. ಗಂಡಿನ ಪಕ್ಷಕ್ಕೆ ನಿಂತು ಹಾಡುವ ಲಾವಣಿ; ಹೆಣ್ಣಿನ ಪಕ್ಷಕ್ಕೆ ನಿಂತು ಹಾಡುವ ಲಾವಣಿ...ತುರಾಯಿ ಕಲ್ಗಿ ಎಂಬ ಬೇರೆ ಹೆಸರುಗಳೂ ಉಂಟು (ಸುವರ್ಣ. ೪೦). ೩. ರಾಯರಿಗೆ ಹಾರ, ತುರಾಯಿ ಅರ್ಪಿಸಬೇಕಾಗಿತ್ತು (ರಾಯಕ. ೮೩). ೫. ನವಿಲು, ಕೋಳಿ ಮೊದಲಾದ ಹಕ್ಕಿಗಳ ಜುಟ್ಟು, — ಕೊಟ್ಟು: ಹುಂಜದ ತುರಾಯಿ ಬಲು ಮೋಜು (ನವ್ಯಧ್ವ. ೮೯); ಜುಟ್ಟೇ ಎಂಬ ಪಾರಿವಾಳಗಳಿಗೆ ತುರಾಯಿ ಇರುತ್ತದೆ (ಮುಂಬಯಿ. ೩-೦೦೪); **ತೂರಾಯ**: ೧. ಮುತ್ತಿನ ತೂರಾಯ ಕೆತ್ತಾನೆ ಬಾವಿಲಿ ಕಡುಕು (ಸೌಂದಕಾ. ೩-೦೦೫); ಮುತ್ತೀನ ತೂರಾಯ ಹಿಡ್ಕೋಂಡು ರಾಮಣ್ಣ ಧೊರ್ಗಾಳಿಗುಲೂಪೆ ಕಳಿಸಾನು (ಹುಟ್ಟಹ. ೨೭). **ತೂರಾಯಿ**: ೧. ವಾರೆ ತೂರಾಯಿಗಳ ಸಿಕ್ಕಿಸಿ (ಜ್ಞಾನಸಿಂ. ೦-೩೫) ಹೊಳೆವ ಯಂತ್ರಗಳು ಮುಂದಲೆಗೆ ಕಟ್ಟಿ ಥಳಥಳಿಸುವ ಪಿಂಭ ತೂರಾಯಿಗಳನಿಟ್ಟು ಸುಳಿನಾಭಿಯಲ್ಲಿ ಕಟ್ಟಿದಳ್ಹೊನ್ನಘಂಟೆ (ಶ್ರೀಕೃಪಾ. ೫೫).

ತುರಾಯದ ಹಕ್ಕಿ = ಒಂದು ಬಗೆಯ ಚುಂಗುಳ್ಳ ಹಕ್ಕಿ; ಕುಕ್ಕುಟಿ : ಭೃಂಗ = ೧. ಗುಂಗೀಹುಳ. ೨. ತುರಾಯದ ಹಕ್ಕಿ" (ಗಂಗಾಮ. ೨೪೪).

[ಅರ. ತುರ್ರಾ = ಜೋಲಾಡುವ ಮುಂಗುರುಳು, ಅಲಕ ; ಮರಾ. ತುರಾ ; ಹಿಂ. ತುರೀ./ತಮಿ. ತುರಾಯ್ ; ಮಲ. ತುರ ; ತುಳು. ತುರಾಯಿ; ತೆಲು. ತುರಾ. ತುರಾಯಿ]

ತುರಾಮ್ಮ (ನಾ). ಒಬ್ಬಾತನ ಹೆಸರು : ಗೋಸಾಸಿಯ ಪೆಣ್ಡತಿ ಪೊನ್ನಬ್ಬೆ ಮಗಂ ತುರಾಅಮ್ಮ ತುರಾಮ್ಮನ ಪೆಣ್ಡತಿ ಮಾಳಕ್ಕ (ಮೈಆರಿ. ೧೯೨೯. ೭೯-೨; 964). [? + ಅಮ್ಮ$_1$]

ತುರಾಯ 'ತುರಾ' ನೋ.

ತುರಾಯಿ 'ತುರಾ' ನೋ.

ತುರಾಯಿಮರ (ನಾ). ಒತ್ತಾದ ಎಲೆಗಳನ್ನುಳ್ಳ ಒಂದು ಬಗೆಯ ಮರ : (ಕಿ). [ತುರಾಯಿ (< ತುರಾ) + ಮರ$_1$]

ತುರಾಷಾಟ್ಬಡ್ಗ (ನಾ). ಇಂದ್ರನ ಕತ್ತಿ ; ವಜ್ರಾಯುಧ : ತುರಾಷಾಟ್ಬಡ್ಗೋಪಮಮಪ್ಪ ತೀಕ್ಷ್ಣತರಚಕ್ರಂ ಸಾರ್ಗುಮಿನ್ನಾತನಂ (ಚಂದ್ರಪು. ೫-೩೫).

[ಸಂ. (ತುರಾಸಾಹ್ + ಖಡ್ಗ)]

ತುರಿ$_1$ 'ತುರುವು$_1$' ನೋ.

ತುರಿ$_2$ 'ತುರುವು$_2$' ನೋ.

ತುರಿ$_3$ 'ತುಱಿ' ನೋ.

ತುರಿ$_4$ (ನಾ). = ತೂರ್ಯ$_2$: (ಕಿ). 'ತುರವ' ಪರಾ.

[< ಪ್ರಾ. ತುರಿಅ./ಸಂ. ತೂರ್ಯ]

ತುರಿ$_5$ (ನಾ). ೧. ನೆಯ್ಗೆಯವನ ಮಗ್ಗದ ಕೋಲು ; ನೆಯ್ಗೆಯ ಎಳೆಗಳುಳ್ಳ ಮಗ್ಗದ ಕೋಲು; ಮಗ್ಗದಲ್ಲಿರುವ ಹಾಸುಹೊಕ್ಕುದಾರಗಳ ಸುಕ್ಕುಗಳನ್ನು ಸರಿಪಡಿಸಿ ಪ್ರತ್ಯೇಕಗೊಳಿಸುವ ಒಂದು ತಂತುಮಯದಂಡ. ೨. ಲಾಳಿ : "ತುರೀ-ಲಾಳಿಯುಂ, ಕಜ್ಜಿಯುಂ" (ಕಾಶಕ್ಯ. ೧೭೮).

[ಸಂ. ತುರೀ]

ತುರಿಕಡ್ಡಿ (ನಾ). ಒಂದು ಬಗೆಯ ಹುಲ್ಲು : ಜೇನುಕಡ್ಡಿ, ತುರಿಕಡ್ಡಿ (ಮೈಜಿಗಿ. ೧೩-೨೩೫). [ತುರಿ ? + ಕಡ್ಡಿ]

ತುರಿಕೆ 'ತುಱಿಕೆ' ನೋ.

ತುರಿಗಜ್ಜಿ (ನಾ). ತುರಿಕೆಯಿಂದ ಕೂಡಿರುವ ಕಜ್ಜಿ ; ನವೆಯುಳ್ಳ ಕಜ್ಜಿ : ಕಣಜದಂತೆ ಮೈಯೆಲ್ಲ ಕೋಪ ಹರಿದು ... ತುರಿಗಜ್ಜಿಯಾಗಿ ಇನ್ನಷ್ಟು ಮತ್ತಷ್ಟು ಕೋಪ (ಹೊಸಕ್ಷಿ. ೨೨೦) ; ಹೆಗ್ಗಡೆ ಇನ್ನು ಕಜ್ಜಿ ತುರಿಸಿ ಮುಗಿಸಿರಲಿಲ್ಲ. ತುರಿಗಜ್ಜಿಯ ಹಣೆಯ ಬರಹವೆ ಹಾಗೆ (ಮಲೆಮ. ೩೮೫).

[ತುರಿ$_3$ (< ತುಱಿ) + ಕಜ್ಜಿ]

ತುರಿಗೆ (ನಾ). ಒಂದು ಬಗೆಯ ಆಟ : ಕವಿಲು ಗಜಲು ಭೈತು ತುರಿಗೆ ಆಂದೋಳಿತ [ಪಾಠಾಂ. ತುತುಕಿ ಆರಭಿ] ಮೊದಲಾದ ಆಟಗಳಿಂ ... ಮೆಚ್ಚನಚ್ಚೊತ್ತಿರ್ದಳ್ (ವಿರೂಪಾ. ೯೦). 'ತುರಗಾಟ' ಪರಾ. [?]

ತುರಿಚೆ 'ತುಱುಚೆ' ನೋ.

ತುರಿತ$_1$ (ನಾ). ತುರಿ ; ಕೆರೆತ ; ಕಡಿಯುವಿಕೆ ; ನವೆ : ಅಯ್ಯಪ್ಪಾ ಮೈಯಲ್ಲಾ ತುರಿತ (ರೂಢಿ). [ತುರಿ$_3$ (<ತುಱಿ) + – ತ$_2$]

ತುರಿತ$_2$, ತುರುತು, ತುರ್ತ$_1$, ತುರ್ತು (ನಾ). ೧. ಜಾಗ್ರತೆ ; ಬೇಗ ; ಶೀಘ್ರತೆ ; ತ್ವರೆ ; ಆತುರ : "ತು [ಪಾಠಾಂ. ತ್ವ, ದು] ರಿತದಲಿ ದಿಟದಲಿ ಅಂಜಸಾಹ್ವಯಮೆನಿಕು" (ಮಂಗರಾ. ೧೫೬-೭೩); ತುರಿತದಿನನಂತವೀರ್ಯಂ ಬೆರಸು ನೃಪಾಸನ್ನವರ್ತಿಗಳ್ ಕರ್ಪೂರಾಗುರುಮಳಯರುಹವಿಮಿಶ್ರಿತ ಕರಕಾಂಭಸ್ಸೇಕಪೂರ್ವಕಂ ಬೀಸುವುದುಂ (ಶಾಂತಿಪು. ೨-೨೪) ; ಕಣೆಗಳಂ ತುರಿತದಿಂ ತೆಗೆದೆಸುತ (ತುರಂಗ. ೭೦-೨೭) ; ಬರಲೊಡನೆ ಸುರಭಿಸಮಯಂ ತುರಿತದಿನೈತರ್ಪುವಲ್ತೆ ದಾಂಗುಡಿಗಳ್ ಮಾಮರದೊಳ್ (ಧೃನ್ಯಾಲೋ. ೨೪೫). ತುರುತು : ೧. ತನ್ನ ತುರುತನ್ನು ತಾನೇ ತಡೆದುಕೊಂಡಳು (ಕಲ್ಯಾಣಿ. ೨೨೧) ; ಕೆಲಸದ ತುರುತಿನಲ್ಲಿ ಅವಳನ್ನು ಕಂಡು ಮಾತನಾಡಿಸದಾದಾಗ (ಬಣ್ಣಮಾ. ೧೧). ೨. ಅತ್ಯಗತ್ಯವಾದುದು ; ಕೂಡಲೆ ಗಮನ ಕೊಡಬೇಕಾದುದು ; ಜರೂರು : ಈ ತುರುತಿನಲ್ಲಿ ಬೇಕು ಅಂದರೆ ಯಾರು ತಾನೇ ಹಣ ಒದಗಿಸುತ್ತಾರೆ (ಮರಳಿ. ೧೫೦). ತುರ್ತ$_1$: ೩. ಸದ್ಯ; ತತ್ಕಾಲ : ತುರ್ತಕ್ಕೆ ನಮ್ಮ ಕಡಿಗೆ ಇರುವ ಆಸಾಮಿಗಳೊಳಗೆ ಯಾರಿಗೆ ನಾವು ಸರಾಫರೆಂದು ಎಣಿಸುತ್ತೇವೆ (ಮುಂಬವ್ಯಾ. ೨೨ ಪ್ರಸ್ತಾವನೆ). ತುರ್ತು : ೨. ತುರ್ತಾದ ವರ್ತಮಾನ ಬಂದಿದೆ (ಯೋಧಪು. ೨೦) ; ವ್ಯವಹಾರದೊಳು ಯೋಜಿಸೆರಡನು ಕೂಡಿಡು ತುರ್ತಿಗೆ ನಾಲ್ಕನೆಯದನು (ಇಂಜಾಪ. ೨೦೧-೪೩). (ಗು). ೪. ಕೂಡಲೆ ಗಮನಕೊಡಬೇಕಾದ ; ಅತ್ಯಗತ್ಯವಾದ ; ವಿಳಂಬಕ್ಕೆ ಯೋಗ್ಯವಲ್ಲದ : ಯಾವ ತರಹದ ತುರ್ತು ಕೆಲಸ ವಿಲ್ಲದಿದ್ದರೆ ಕಾಲುನಡೆಯಿಂದಲೇ ... ನಡೆದು ಮನೆ ಕಾಣುತ್ತಿದ್ದರು (ಕಂಬಹು. ೨೭) ; ಕೂಡಲೇ ಹೋಗಿ ಅಧಿಕಾರ ವಹಿಸಿಕೊಳ್ಳಬೇಕೆಂದೂ ತುರ್ತು ಆಜ್ಞೆ ಮಾಡಿದ್ದಾರೆ (ರಂಗಕ. ೯).

[< ಸಂ. ತ್ವರಿತ. / ತುಳು. ತುರಿತ, ತುರ್ತ, ತುರ್ತು; ತೆಲು. ತುರಿತ, ತುಱುತು]

ತುರಿಪ, ತುರಿಹ (ನಾ). = ತುರಿತ$_2$ ೧. ಇರ್ವರುಮೊಟ್ಟೆಯನೇಱ ತುರಿಪದಿಂ ಕತಿಪಯದಿವಸಗಳಿಂ ವೇಣೂತಟಮನೆಯ್ದಿ (ಪಡ್ಡಾರಾ. ೧೩೦-೦೫); ಕೆಂದಳಿರ ಪಾಸುಗಳಿಂ ಕುಳಿರ್ವಾಲಿನೀರ್ಗಳಿಂ ತುರಿಪದೆ ಸೂಸುತುಂ ಕೆಳದಿಯರ್ ನದಿಪುತ್ತಿರೆ (ಪಂಪಭಾ. ೫-೮) ; ಅರೆಗಟ್ಟಿ ತುರಿಪದಿಂ ಪರಿತರೆ... ನೋಡಿದಳ್ ಪೆಱಳೊರ್ವಳ್ (ಶಾಂತಿಪು. ೬-೧೦) ; ತುರಿಪದೆ ನಡೆತಂದಳ್ಕಾಮಯೋಗಿನೀವಿಭ್ರಮದಿಂ (ಕಾದಂಪೂ. ೪೮೦); ಚೇಟಿಯರ್ ತುರಿಪದಿಂ ಪ್ರಿಯನಿಂ ಬರೆ ಕಂಡು (ಶೃಂಗಾರ. ೩-೬೪); ತುರಿಪದೆ ಕಾದಿ ಗೆಲ್ದು ಹಯಮಂ (ರಾಮಾಶ್ವ. ೧೧೦-೦೭). ತುರಿಹ : "ತುರಿಹಂ ... ಬೇಗಂ – ಈ ರ ಶೀಘ್ರಂ" (ಕಶಸಾ. ೧೨-೨೨೯) ; "ತುರಿಹ ಬೇಗಂ ... ಶೀಘ್ರಾರ್ಥಂ" (ಕವಿಕಂ. ೧೦೦) ; ಅತ್ವಕ್ಕುತ್ವಂ — ಅಂಗುಷ್ಠ – ಉಂಗುಟ ; ತ್ವರಿತ–ತುರಿಹ (ಶಮದ. ೨೬೯ ಪ್ರಯೋ) ; ಜಗದಂತರಿಯಾಮಿ ಮುಂಗೆಲಸಕ್ಕೆ ತುರಿಹದಿಂದವಳ ಪ್ರೇರಕನಾಗಿ (ಮೋಹತ. ೨೯-೪೦) ; ವಸ್ತುವಿನ ಘನತೆಯೇನದ ನಾನು ತುರಿಹದಿ ಮುಂದೆ ತಂದನುಬಂಧಿಸುವೆನೆಂದು ನುಡಿದ (ಭರಚ. ೩೩-೪೫).

[<ಸಂ. ತ್ವರಿತ ?]

ತುರಿಪಂ (ಅ). ಬೇಗನೆ ; ಶೀಘ್ರವಾಗಿ : ಹರೆಯದಿನಗ್ಗಳಂ ಹಣದ ಮೇಗಣ ಮೋಹಮಿವಳ್ಗೆ ಬಷ್ಟಿನಂ ತುರಿಪಮೆಯರ್ಥಮಂ ಕ್ರಮದಿನಾ ಮುದುಪಂಗಡ ಕೊಟ್ಟನೊತ್ತೆಯಂ (ಸೂಕ್ತಿಸು. ೮-೪೨೨). [<ತುರಿಪ]

ತುರಿಪಂಗೆಯ್ (ಕ್ರಿ). ಆತುರಪಡು ; ತವಕಿಸು : ನೀಮೇಕೆ ತುರಿಪಂಗೆಯ್ವುರೆಮ್ಮರಸಿಯಂ ಪ್ರಾರ್ಥಿಸಿ ಪೊಡೆವಟ್ಟು ಬೇಡಿಕೊಂಡು ವಿಧಿಪೂರ್ವಕಂ ಮದುವೆ ನಿಲ್ವುದು (ಪಂರಾಮಾ. ೮-೬೧ ವ) ; ಅನುಷ್ಠಾನಂಗಳ್ಗೆ ಪೇಟ್ದ ಪ್ರಮಾಣದ ಕಡೆಯೊಳು ತುರಿಪಂಗೆಯ್ಯದೆ ನಿಜನಿರಂಜನನಿತ್ಯಾನಂದಾತ್ಮಸ್ವರೂಪಮಂ ಧರ್ಮಶುಕ್ಲಧ್ಯಾನದಿಂ ಭಾವಿಸುವುದು (ಪಸಾರ. ೩೪೧).

[ತುರಿಪ+ಕೆಯ್$_1$]

ತುರಿಪಕಾಱ (ನಾ). ಆತುರಪಡುವವನು ; ತವಕಿಸುವವನು ; ರಭಸಗೊಳ್ಳುವವನು; ದುಡುಕುವವನು: ಗೆಲ್ಲಕಾಱಂ ಪರವಾದಿವ್ರಾತದೊಳ್ ಬಿತ್ತರಿಪ ತುರಿ[ಪಾಠಾಂ. ಱಿ]ಪಕಾಱಂ ಮಹಾಧರ್ಮದೊಳ್...ನೇಮಿ ಚಂದ್ರಂ (ಅರ್ಧನೇ. ೧-೩೭) ; ರಾಭಸಿಕಾನಾಂ = ತುರಿಪಕಾಱರ್ಗೆ (ನೀತಿವಾ. ೯-೦೦೭). [ತುರಿಪ + – ಕಾಱ]

ತುರಿಪವಯಣ (ನಾ). ಬೇಗನೆ ಮಾಡುವ ಪ್ರಯಾಣ ; ಆತುರದ ಪ್ರಯಾಣ. 'ತುರಿಪವಯಣವರ್' ಪರಾ. [ತುರಿಪ + ಪಯಣ$_1$]

ತುರಿಪವಯಣವರ್ (ಕ್ರಿ). ಬೇಗಬೇಗನೆ ಪ್ರಯಾಣ ಮಾಡಿಕೊಂಡು ಬರು : ಅರಿಕುಠಾರದಿಂದ ತಳರ್ದು, ತುರಿಪವಯಣವಂದು (ಮಂತ್ರಶ. ೧೦೦-೦) [ತುರಿಪವಯಣ + ಬರ್$_1$]

ತುರಿಬೀಳ್ಬಳ್ಳಿ (ನಾ). ಒಂದು ಬಗೆಯ ಬಳ್ಳಿ : (ಮೈಜಿಗಿ. ೫೫-೦೦೦೨). [? + ಬಳ್ಳಿ]

ತುರಿಮಣೆ 'ತುರುವುಮಣೆ' ನೋ.

ತುರಿಮುಳ್ಳುಮೀನು (ನಾ). ಒಂದು ಬಗೆಯ ಮೀನು : "ಸಹಸ್ರದಂಷ್ಟ್ರಃ, ಪಾಠೀನಃ – ೨ ಸಾವಿರ ಕೋರೆಗಳುಳ್ಳ ಮೀನಿನ ಹೆಸರುಗಳು, ಅಂದರೆ ತುರಿಮುಳ್ಳುಮೀನು" (ಸಿದ್ಧಾಂತಿ. ೮೦).

[ತುರಿ$_3$ (<ತುಱಿ)+ಮುಳ್ಳು (<ಮುಳ್)+ ಮೀನು$_2$ (<ಮೀನ್$_3$)]

ತುರಿಯ$_1$ (ನಾ). = ತುರಿತ$_2$ ೧ : ಮಾಯಾಸ್ವರೂಪವನು ನೆನೆದಾಕ್ಷಣಂ ಮುಂದೆ ನಿಲಲು ತುರಿಯದಿಂ ತೂರ್ಯತ್ರಯವ ನಟಿಸಿ (ಲಶಿಚಿಂ. ೨೯-೩೮) ; ತುರಿಯದೆ ಕೈದ ಕೊಳ್ಳೆನುತಲೀಶ್ವರ ಮುಂದುವರಿದೆಚ್ಚನಾಗ ಬಾಣದಲಿ (ಮೋಹತ. ೩೯-೨೭) ; ತುರಿಯದಿಂದೆಯ್ದಿಯವರಂ ಕೊಂದು ಮುಪ್ಪೊಳಲ ದಹಿಸಿ (ಪಾಸೋಪು. ೧೦-೩೪). 'ತುರಿತ$_2$' ಪರಾ.

[< ಪ್ರಾ. ತುರಿಅ./ಸಂ. ತ್ವರಿತ]

ತುರಿಯ$_2$ (ನಾ). = ತುರೀಯ ೪: ನಾನು ತುರಿಯ ತುರಿಯಾತೀತವಪ್ಪ ಸತ್ತುಚಿತ್ತಾನಂದ ನಿತ್ಯಪರಿಪೂರ್ಣವೆ ತನ್ನಿರವೆಂದು ತಿಳಿಯೆ (ವಚಸಂ. ೦೬೭-೦೦೫) ; ಏನೇನರಿಯನು ತುರಿಯಯರಡೆಂಬೊಂದರಿಯ ಮಾನಮೂರುತಿ ಆವವರಿಯ (ಪಿದಾವ. ೮೩-೦೩). [< ಸಂ. ತುರೀಯ]

ತುರಿಯಾತೀತ (ನಾ). ೧. ಮೋಕ್ಷಕ್ಕೆ ಕಾರಣವಾದ ಏಳು ಭೂಮಿಂಕೆಗಳಲ್ಲಿ ಕೊನೆಯಂದು, —ಏಳನೆಯಂದು : ತುದಿಯ ತುರಿಯಾತೀತವೇ ಏಳನೆಯ ಭೂಮಿಕೆಯು (ಅಮೃತ. ೬-೬). ೨. ಪರಮಾತ್ಮ : ತುರಿಯಾತೀತನ ಗುರು ತರಿವರಾರೆಂದ (ಗಗತಾ. ೦೩-೦). [<ಸಂ. ತುರೀಯಾತೀತ]

ತುರಿಯಾವಸ್ಥೆ (ನಾ). ಮೋಕ್ಷವನ್ನು ಪಡೆಯುವ ಸ್ಥಿತಿ ; ಜೀವನ್ಮುಕ್ತಿ : ನಾದಬಿಂದುಕಳೆ ಕಲಾನ್ವಿತ ನಾಲ್ಕಱ ಮಧ್ಯದಲ್ಲಿರ್ಪ ತುರಿಯಾವಸ್ಥೆ (ವಚಸಂ. ೫೬೨-೦೮ ಟೀಕು). [< ಸಂ. ತುರೀಯಾವಸ್ಥಾ]

ತುರಿಸು 'ತುಱಿಸು' ನೋ.

ತುರಿಹ 'ತುರಿಪ' ನೋ.

ತುರೀಯ (ಗಂ). ೧. ನಾಲ್ಕನೆಯ ; ಚತುರ್ಥ : ಗಾಯತ್ರಿಯ ತುರೀಯ (ನಾಲ್ಕನೇ) ಪಾದಪ್ರಶಂಸೆ ಉಪನಿಷತ್ತಿನ ವೈಶಿಷ್ಟ್ಯ (ಹುಳ್ಳಾರ. ೮೫ ಟೀಠಿಕೆ). (ನಾ). ೨. ನಾಲ್ಕನೆಯದು. ೩. ನಾಲ್ಕನೆಯ ಒಂದು ಭಾಗ. ೪. =ತುರೀಯಾವಸ್ಥೆ ೨ : ತುರೀಯದ ಮೋಹ ಬೆರಸಿದಾಗವೇ ಆ ತುರೀಯ ನಷ್ಟ (ಮೋಳಿಮಾ. ೭೨-೨೮೨) ; ಎನ್ನ ಕಂಗಳೊಳರೂಹಿಂಗೆ ಆನು ಬೇಟ ಗೊಂಡು ಬಳಲುವಂತೆ ಹಿಡಿದು ನೆರೆಯಲಿಲ್ಲಯ್ಯ ತುರೀಯದ [ಪಾಕಾಂ. ತುರ್ಯದ, ತೂರ್ಯದ] ತವಕವನೇನೆಂಬೆನಯ್ಯ (ಅವಚಂ. ೦೩೨-೬೦೦) ; ತುರೀಯಪರಮಾನಂದನು ... ಕೂಡಲಸಂಗಯ್ಯನು (ಬಸವ. ೯೫೪) ; ಜನಕಜಾರಮಣ ಧೀರೋದಾತ್ತವಕ್ಷವಾರ್ಧಿಯ ನೀಲನಾವೆಯೊಳ್ ತೇಲಿದನು ಶಾಂತಿಯ ತುರೀಯಕೆ (ಶ್ರೀರಾಮಾ. ೦೬೪-೩೪೭) ; ಉಪನಿಷತ್ತುಗಳು ತುರೀಯ ಎಂಬ ನಾಲ್ಕನೆಯ ಅವಸ್ಥೆಯನ್ನು ಜೀವನಿಗೆ ಹೇಳುವುವು (ಭಾತತ್ತ್ವ. ೬೪); ತುರೀಯಾವಸ್ಥೆಯೇ ಮುಕ್ತಾವಸ್ಥೆ. ಅಲ್ಲಿ ತುರೀಯನೆಂಬ ಪರಮಾತ್ಮಪ್ರಾಪ್ತಿಯಾಗುವುದು (ಹಿಂದಸಾ. ೨೮೮). ೫. [ಜ್ಯೋತಿ] ಲಗ್ನದಲ್ಲಿ ನಾಲ್ಕನೆಯ ಸ್ಥಾನ, – ಚತುರ್ಥ ಕೇಂದ್ರ : ಸಿತನಸ್ತದೊಳಿರೆ ರಜನೀಪತಿ ಪತ್ತಱೊಳೊಂದಿ ನಿಲೆ ಶುಭೇತರರೊಡಗೂಡೆ ತುರೀಯ [ಪಾಕಾಂ. ತೂರ್ಯದೊಳಾ] ಲಗ್ನೋದ್ಗತಮನುಜಂ ಸ್ವಕುಲನಾಶಕಂ ತಾನೆನಿಕುಂ (ಜಾತತಿ. ೨೦-೯). ೬. (?) : ನಿಷ್ಠೆಯ ಹರಿದು ಭಕ್ತಿ ಎಂಬ ತುರೀಯದಲ್ಲಿ ಸಿಕ್ಕಿ ಸಾಯಲಿಲ್ಲದ ವಿರಕ್ತಿಯ ಕಟ್ಟಿಕೊಂಡು ಮಾಡುವ ಸದಾನಂದನ ಇರವು (ಮೋಳಿಮಾ. ೩೭-೧೫೩). [ಸಂ.]

ತುರೀಯವರ್ಣ (ನಾ). ಚತುರ್ವರ್ಣಗಳಲ್ಲಿ ಕೊನೆಯದು ; ಚತುರ್ಥ ವರ್ಣ ; ಶೂದ್ರಜಾತಿ : (ಕಿ). [ತುರೀಯ + ವರ್ಣ]

ತುರೀಯವೃತ್ತಿ (ನಾ). [ಯೋಗ] ಪ್ರಾಣಾಯಾಮದ ನಾಲ್ಕು ಭೇದಗಳಲ್ಲಿ ಒಂದು : ಪ್ರಾಣಾಯಾಮವು ಬಾಹ್ಯವೃತ್ತಿ, ಆಭ್ಯಂತರವೃತ್ತಿ, ಸ್ತಂಭವೃತ್ತಿ ಮತ್ತು ತುರೀಯವೃತ್ತಿಯೆಂದು ನಾಲ್ಕು ವಿಧ ... ಬಾಹ್ಯವಾದ ದೇಶವನ್ನೂ ಆಭ್ಯಂತರವಾದ ಹೃದಯಪ್ರದೇಶವನ್ನೂ ಸೂಕ್ಷ್ಮವಾಗಿ ಪರ್ಯಾಲೋಚನೆ ಮಾಡುವವನಿಗೆ ತುರೀಯವೃತ್ತಿ ಸಂಭವಿಸುವುದು (ಭಾತತ್ತ್ವ. ೩೩೯). [ತುರೀಯ + ವೃತ್ತಿ$_2$]

ತುರೀಯಾನುಭವ (ನಾ). ಬ್ರಹ್ಮಸಾಕ್ಷಾತ್ಕಾರ ; ಆತ್ಮೈಕ್ಯಾನುಭವ : ಗುರುಕೃಪೆಯಿಂದ ಪಡೆದ ತುರೀಯಾನುಭವವು ಅವುಗಳಲ್ಲಿ ಮೂಡಿವೆ (ಕಸಾಚ. ೩೦೯). [ತುರೀಯ + ಅನುಭವ]

ತುರೀಯಾವಸ್ಥೆ (ನಾ). ೧. ನಾಲ್ಕನೆಯ ಅವಸ್ಥೆ : ಕಂದರ್ಪಾವಸ್ಥೆಯ ತುರೀಯಾವಸ್ಥೆಯಿಂ ಪರ್ಯಾಕುಲಜೀವಿತೆಯಾಗಿ ಕನ್ನೆ ಮೂರ್ಛಾಪ್ರಪನ್ನೆಯಪ್ಪುದುಂ (ಜಗವಿ. ೧೦-೫೩ವ). ೨. ಆತ್ಮನ ನಾಲ್ಕನೆಯ ಸ್ಥಿತಿ ; ಮೋಕ್ಷ : ಆದರೆ ಅವರಿಗೇನು ಗೊತ್ತು—ಅದು ತುರೀಯಾವಸ್ಥೆಯ ಪರಜಂಗಮ ಲೀಲೆಯ ನಾಂದಿಯೆಂದು ? (ಶರಚ. ೮೦೯) ; ತುರೀಯಾವಸ್ಥೆಯೆ ಮುಕ್ತಾವಸ್ಥೆ. ಅಲ್ಲಿ ತುರೀಯನೆಂಬ ಪರಮಾತ್ಮ ಪ್ರಾಪ್ತಿಯಾಗುವುದು (ಹಿಂದಸಾ. ೨೮೮); ಯೋಗಿಗೆ ತನ್ನ ತುರೀಯಾವಸ್ಥೆಯಲ್ಲಿ ಈ ಸ್ಥಿತಿ ಮತ್ತು ಈ ದರ್ಶನ ಲಭಿಸುತ್ತದೆ (ಈಚಕೆ. ೮). [ತುರೀಯ + ಅವಸ್ಥೆ]

ತುರೀಯೋಪಾಂತ್ಯ (ನಾ). ಮೋಕ್ಷದ ಸಾಮೀಪ್ಯ ; ಬ್ರಹ್ಮಾನಂದಕ್ಕೆ ಸನ್ನಿಹಿತವಾದ ಮಟ್ಟ : ತುರೀಯೋಪಾಂತ್ಯದೊಳು ವಿಹರಿಸುತಲಿರುವ ಯಾತ್ರಿಕರ ಕಾಣುತ್ತ (ಮಲೆದೇ. ೪೭-೬) ; ಕವಿ ಪಡೆಯುವ ಈ ಸಾಮರಸ್ಯಾನುಭವ ತುರೀಯೋಪಾಂತ್ಯ ಸ್ಥಿತಿ. ತುರೀಯದಲ್ಲಿ ಯೋಗಿಯ ಅನುಭವ ಅಲ್ಲಿ ವಿಷಯ ಆತ್ಮಗಳ ಸಂಪೂರ್ಣ ಸಾಮರಸ್ಯ (ಸೌಂದಸ. ೧೬).

[ತುರೀಯ + ಉಪಾಂತ್ಯ]

ತುರೀರ (ನಾ).(?): ಬಿಜ್ಜಯನು ಬಡಿದು ತುರೀರರು ಮೊಟ್ಟೆಯ ಹುಱಿಸಲ್ಕೆ (ಇಎ. ೦೯೪೭, ಹಾನಗಲ್. ೦೯೯-೩೦ ; 1322). [?]

ತುರು 'ತುಱು' ನೋ.

ತುರುಕ, ತುರಃಕ, ತುರುಂಕ$_2$ (ಗಂ) ೧. ಬೇರೆ ದೇಶದ ; ವಿದೇಶದ. 'ತುರುಕ ಬೇವು' ಪರಾ. (ನಾ). ೨. ಒಂದು ದೇಶ ; ತುರ್ಕಿಸ್ಥಾನ : ಅರಸುಮಕ್ಕಳು ಪರಮಮಗಧೆಯ ಗೌಡ ಗುರ್ಜರ ತುರುಕದೇಶದ ಪ್ರಭೃತಿ ಭೂಪರು ನೆರೆದು ಬಂದಲ್ಲಿ (ಜ್ಞಾನಚಂ.೦-೦೦); ಸಿಂಧುಜನಂ ತುರುಕವನಿಯು ಆಂಧ್ರ...ಮೊದಲಾದ ಚಪ್ಪನ್ನದೇಶಕೆ ದರ್ಪಣವೆಂದೆನಿಸಿಪ್ಪುದು ತ್ರೈಲಿಂಗ ದೇಶ (ಭೈರವೇ.೦-೫೭). ೩. ತುರುಂಕದೇಶದವನು; ತುರ್ಕಿಸ್ಥಾನದವನು: ತುರುಕ ಬರ್ಬರ ಪಾರಸೀಕರ ತುರಗವೈಸಾವಿರಸಹಿತ ಮೋಹರಿಸಿ ನಿಂದನು ಶಕುನಿ (ಕುಮ್ಯಾಗ. ೦-೪). ೪. ಮುಸಲ್ಮಾನ; ಮಹಮ್ಮದೀಯ: ತುರುಕ ದಂಡಿಗೆ ಕಾಲುವಟ್ಟೆಯಾದದು ಕರ್ಣಾಟ (ಕುರಾಸಾಂ. ೩೬-೬೭); ಒಡನಿಕ್ಕೇರಿಯ ಸೆಳೆದಾಗ ತುರುಕರ ಪಡೆ ನಡೆದುದು ಕನ್ನಡಕೆ (ಕಂನವಿ. ೦೦ ಸೂಚನೆ) ; ಭಾರತೀಯರು ಇಸ್ಲಾಂಮತಾವಲಂಬಿಗಳನ್ನು ಕುರಿತು ಮಾತನಾಡುವಾಗ ಅವರನ್ನು ತುರುಕರು ಎಂದು ಕರೆಯುವುದುಂಟು (ಭಾರದ. ೪೦೫) ; ತಿರಿತಿರಿಗಿ ಗೋಕರ್ಣಕ್ಕೆ ಹೋಗಿ ತುರುಕನಿಂದ ದೆಬ್ಬೆ ತಿಂದ (ಗಾದೆ). ೫. ಒಂದು ಬಗೆಯ ಪರಿಮಳದ್ರವ್ಯ ; ಲೋಬಾನ : "ಕಪಿಲಃ–ಕಪಿ, ತುರುಕ, ತುತ್ಥ" (ಓಷಧಿ. ೨೦). 'ತುರುಸಿ' ಪರಾ. ತುರಃಕ : ೨. ಪಾಂಡ್ಯ ಲಾಳ ನೇಪಾಳ ತುರಃಕ ಬಬ್ಬರಿಗ . . . ಸಿಂಧು

ವಿಷಯಾಧಿಪರಾಳ್ವಸಗೆಯೆ (ಕಶಾ. I, ೩೦-೧೭ ; 1222) ; **ತುರುಕು**$_3$: ೨. ಆಂಗ ವಂಗ ಕಳಿಂಗ ಕಾಶ್ಮೀರ ಗುಜ್ಜರ ತುರುಕು ನೇಪಾಳ (ಜಿನಮು. ೫೦-೭೦). [< ಪ್ರಾ. ತುರುಕ್ಕ./ಸಂ. ತುರುಷ್ಕ]

ತುರುಕಬೇವು (ನಾ). (ವಿದೇಶೀಯಂವಾದ) ಒಂದು ಬಗೆಯ ಬೇವಿನ ಮರ ; ಮಹಾನಿಂಬ : ಸಾಸುವೆ . . . ತುರುಕಬೇವಿನ ಬೀಜ ಈ ಔಷಧಿಗಳ ಪ್ರತ್ಯೇಕ ಎರಡು ವರಹ ತೂಕವ ಚೂರ್ಣಿಸಿ (ವೈದ್ಯಸಾ. I, ೬೯೭); ರಾಸ್ನೆ, ತುರುಕಬೇವು, ಬಂಗಲಕೋಷ್ಠ . . . ಪ್ರಾತಃಕಾಲದಲ್ಲಿ ಗಳ ತೂಕವಂ ಸೇವಿಸುವುದು (ಸಕಪ್ರ. ೨೦೯).

[ತುರುಕ + ಬೇವು. / ತಮಿ. ತುರುಕ್ಕವೇಮ್ಬು]

ತುರುಕರಾಡ್ಪಲ (ನಾ). ಮುಸಲ್ಮಾನ ದೊರೆಯ ಸೈನ್ಯ ; ತುರುಷ್ಕ ಸೇನೆ : ತುರುಕರಾಡ್ಪಲ ವಾರ್ಧಿಬಾಡಬ ದ್ರಾವಿಡಧರಣೀಶ ತಿಮಿರ ಮಾರ್ತಂಡ (ಕಂನವಿ. ೮-೭೬) [< ಸಂ. ತುರುಷ್ಕರಾಡ್ಪಲ]

ತುರುಕರು 'ತುಱುಕಱು' ನೋ.

ತುರುಕಸಿಂಗಾಡಿ (ನಾ). ತುರಂಕಯೋಧರು ಉಪಯೋಗಿಸುತ್ತಿದ್ದ ಬಿಲ್ಲು : ತುರುಕಸಿಂಗಾಡಿ ಪೇಡೆಯ ಲಾಳಕೋಲ ನಿಷ್ಪುರವಾಕ್ಯದಾಳ್ಗ ಳೊಗ್ಗಿನೊಳು ಚುರುಚುರನೆಯ್ದಿ ಕೈಮುಗಿದು ಗಡ್ಡದ ದೊಡ್ಡ ತುರುಕ ರರಸು ತೊಲಗಿದನು (ಭರಡ. ೨೨-೩೬). [ತುರುಕ + ಸಿಂಗಾಡಿ]

ತುರುಕಳ್ಳಿ (ನಾ). (ವಿದೇಶೀಯಂವಾದ) ಒಂದು ಬಗೆಯ ಕಳ್ಳಿಗಿಡ : ತೋಟದ ಬೇಲೀಲೆಲ್ಲಾ ತುರುಕಳ್ಳಿ ಬೆಳೆದಿದೆ (ರೂಢಿ). [<ತುರುಕ+ಕಳ್ಳಿ$_2$]

ತುರುಕಾಣಿಕೆ (ನಾ). ಒಂದು ಬಗೆಯ ಕಾಣಿಕೆ (?) : ಸಕಲ ಸುವರ್ಣಾದಾಯ ಭತ್ತಾದಾಯ ತುರುಕಾಣಿಕೆ . . . ಯಿವ ಮೊದಲಾದವೆಲ್ಲಾ . . . ಧಾರೆಯನೆರದು ಕೊಟ್ಟ ಅಗ್ರಹಾರ (ಎಕ. X, ಕೋಲಾರ. ೨೪೬-೩೬ ; 1637 ?). [ತುರು$_2$? + ಕಾಣಿಕೆ (< ಕಾಣ್ಕೆ)]

ತುರುಕಾಣ್ಯ (ನಾ). ತುರಂಕರ ದೇಶ ; ಮುಸಲ್ಮಾನರ ದೇಶ : ತುರುಕಾಣ್ಯ ಮೊದಲಾದ ದೇಶದೊಳ್ವಿಹರಿಸಿ ಸುರಿದರಾತ್ಮಾಮೃತರಸವ (ಭರಡ. ೮೦-೬೯); ರಾಮಸಮುದ್ರವ ಬಟ ಅಗ್ರಹಾರವಾಗಿ ಕೊಟ್ಟದು ತುರುಕಾಣ್ಯದ ದೊರೆಗಳು (ಎಕ. X, ಕೋಲಾರ. ೧೪೬-೧೩ ; 1558); ತುರುಕಾಣ್ಯದೊಳಗನಾವೃಷ್ಟಿದೋಷಂ ಬಂದು ವಸರಿಸೆ (ಕಲಪು. ೦-೦೯). P ಸಂಸ್ಕೃತದ ' ಆಜ್ಞಾ ' ಶಬ್ದದಿಂದ ಬಹುಶಃ ವ್ಯುತ್ಪನ್ನವಾದ ' ಆಣೆಯ ' ಎಂಬ ಶಬ್ದದೊಡಗೂಡಿ ಕನ್ನಡದಲ್ಲಿ ತಿಗುಳಾಣ್ಯ, ತುರುಕಾಣ್ಯ, ತೆಲುಗಾಣೆಯ, ಮುಂತಾದ ಪದಗಳು ರೂಪಗೊಂಡಿರ ಬಹುದೆ ? [ತುರುಕ + ಆಣ್ಯ$_0$(P ← ತೆಲು. ಆಣಿ = ದೇಶ)]

ತುರುಕಾಯು (ನಾ). ತುರಂಕರ ಆಕ್ರಮಣ (?) : ಶ್ರೀ ವೀರಬಲ್ಲಾಳ ದೇವರಸರು ರಾಜ್ಯಂಗೆಯ್ಯುತ್ತಿರ್ದ್ದಲ್ಲಿ ತುರುಕಾಯಾವಾಗಿದಲು (ಮೈಆರ. ೦೯೩೬, ೧೧-೨; 1310). [ತುರುಕ + ?]

ತುರುಕಾರ ' ತುಱುಂಗಾಱಿ ' ನೋ.

ತುರುಕಾಳು (ನಾ). ತುರುಕಸೈನಿಕ,—ಭಟ : ಪಿರಿದಗುರ್ವಿಸಿ ಪುರಿಯನು ಕಾದಿರೆ ಬಂದು ತುರುಕಾಳು ಲಗ್ಗೆಮಾಡಿದರು (ಕಂನವಿ. ೧೦-೫೯).

[ತುರುಕ + ಆಳು$_3$ (< ಆಳ್$_3$)]

ತುರುಕಿತಿ (ನಾ). ತುರುಕಜಾತಿಯ ಹೆಂಗಸು : "ಯವಾನೀ – ತುರುಕಿತಿ" (ಕಾಶಕ್ಕ. ೧೬೩). [ತುರುಕ + – ಇತಿ$_1$ (< – ಇಕ್ತಿ)]

ತುರುಕಿಸು (ಕ್ರಿ). ಒತ್ತಿ ಒಳಸೇರಿಸು ; ಗಿಡಿ : ಕರಿಯನು ಮರದ ಟಿಕ್ಕ ಚಕ್ಕ ವೊಂದನ್ನು ಬಿದಿರಿನ ಸೀಳಿನೆಡೆಗೆ ತುರುಕಿಸಿ (ಮುಂಗಾಮು. ೦೦೪) : ಹತ್ತು ರೂಪಾಯಿನ ಐದು ನೋಟನ್ನು ಒಳ ತುರುಕಿಸುತ್ತಾ ಮಾಸ್ತರು ಮೇರಿಯ ಮನೆಯತ್ತ ಕಾಲುಕಿತ್ತರು (ಕಾಪೇರಿ. ೧೬೩).

[ತುರುಕ್ಕು (<ತುಱುಕ್ಕು$_1$) + – ಇಸು$_3$]

ತುರುಕ್ಕು$_1$ 'ತುಱುಕ್ಕು$_1$' ನೋ.

ತುರುಕ್ಕು$_2$ 'ತುರಂಕ' ನೋ.

ತುರುಕುಡಿ (ನಾ). ಒಂದಂ ಬಗೆಯ ಗಿಡ : "ಕಲಾರಂ–ಚಿಂಗಣಿಗಲು, ಬಿಳಿಯ ನೈದಿಲು, ಈಚಲು, ತುರುಕುಡಿ ?" (ಒಷಧಿ. ೩೩). [?]

ತುರುಕುಮಲ್ಲಿಗೆ (ನಾ). (ವಿದೇಶೀಯಂವಾದ) ಒಂದಂ ಬಗೆಯಂ ಮಲ್ಲಿಗೆ ಗಿಡ ಮತ್ತಂ ಅದರ ಹೂವು : ಕೆಂಪುಕಾಸಿಕಣಿಗಲು, ತುರುಕುಮಲ್ಲಿಗೆ, ಗಣೇಶನ ಹೂ (ಮೈಜಿಗಿ. ೭೭-೧೫೯೦).

[ತುರುಕ್ಕು$_2$ (<ತುರುಕ) + ಮಲ್ಲಿಗೆ.]

ತುರುಕುಹರಳು (ನಾ). ಒಂದು ಬಗೆಯ ಹರಳುಗಿಡ ; ವಂರ ಔಡಲು; ಕಾಡು ಹರಳುಗಿಡ : ದೊಡ್ಡ ಹರಳು, ಬೆಟ್ಟಹರಳು, ತುರುಕುಹರಳು (ಮೈಜಿಗಿ. ೪೭-೯೪೩).

[ತುರುಕ್ಕು$_2$ (<ತುರುಕ) + ಹರಳು (< ಪರಲ್)]

ತುರುಕುಹೆಸರು (ನಾ). (ವಿದೇಶೀಯಂವಾದ) ಒಂದಂ ಬಗೆಯ ಹೆಸರು ಕಾಳು ; ಕಾಡಂಹೆಸರು : ತುರುಕುಹೆಸರು, ಮಡಕೆ (ಮೈಜಿಗಿ. ೬೧-೦೫೫೫).

[ತುರುಕ್ಕು$_2$ (< ತುರುಕ) + ಹೆಸರು$_2$ (<ಪೆಸಱ್)]

ತುರುಗ (ನಾ). ಕುದುರೆ ; ಅಶ್ವ : ತುರುಗ ಗೋವಾ ಮಹಿಷ ಶುನಕಂಗಳಂ ತಿಂದು ನರಮಾಂಸವಂ ಭಕ್ಷಿಸುತ್ತ (ವೀಶಿಪು. ೫-೬-೪೦) : ಮೆಟ್ಟು ಇಲ್ಲದ ವಾದ ಅಟ್ಟಲೋಡದ ತುರುಗ ಕುಟ್ಟಿ ಕೆಡಹದ ಕಲಿತನವು ಚಂದನವ ಸುಟ್ಟು ಬಡಿದಂತೆ (ಸರ್ವಜ್ಞ. ೭೫೫). [< ಸಂ. ತುರಗ]

ತುರುಗಲು 'ತಂಜುಂಗಲ್' ನೋ.

ತುರುಗಾಡು 'ತುಱುಗಾಡು' ನೋ.

ತುರುಗಾಲು (ನಾ). (ಕರಾ) ಕುಕ್ಕರಗಾಲು : ಅತ್ತೆಯು ಮಣೆಯ ಮೇಲೆ ತುರುಗಾಲಲ್ಲಿ ಕುಳಿತ ಅವನ ಮುಂದಕ್ಕೆ ವೀಳೆಯದ ತಬುಕನ್ನು ತಂದಿರಿಸಿದಳು (ಕುಡಿಕೂ. ೪೭). [? + ಕಾಲು$_1$ (< ಕಾಲ್$_1$)]

ತುರುಗಾಳಿಗ (ನಾ). ಗೋವುಗಳ ಸಂರಕ್ಷಣೆಗಾಗಿ ಮಾಡುವ ಕಾಳಗ : ಬಂಕಯ್ಯ ತುರುಗಾಳಿಗದಲ್ಲಿ ವೀರಸ್ವರ್ಗ ಪಡೆದುದರಿಂದ, ನಾಗವಯ್ಯ... ಮುತ್ತಣ್ಣನನ್ನು ಅರಮನೆಯ ತಳವಾರಿಕೆಯ ಊಳಿಗಕ್ಕೆ ಸೇರಿಸಿಕೊಂಡ (ಜನಜೀ. ೯೦). [ತುರು (< ತುಱು) + ಕಾಳಿಗ]

ತುರುಗು$_1$ 'ತುಱುಕು$_1$' ನೋ.

ತುರುಗು$_2$ 'ತುಱುಗು$_2$' ನೋ.

ತುರುಗುಂಗೂದಲು 'ತುಱುಗುಗೂಂದಲ್' ನೋ.

ತುರುಗೆವೆ 'ತುಱುಗೆಮೆ' ನೋ.

ತುರುಗೋಳು 'ತುಱುಗೋಳ್' ನೋ.

ತುರುಚ 'ತುಱುಚೆ' ನೋ.

ತುರುಚಿ 'ತುಱುಚೆ' ನೋ.

ತುರುಚು (ಕ್ರಿ). ಚುಚ್ಚು ; ತಿವಿ. 'ತುರುಚುಗಬ್ಬ', 'ತುರುಚುಮಾತು' ಪರಾ. [< ತುಱಿಸು]

ತುರುಚುಗಬ್ಬ (ನಾ). (ವಿಡಂಬನೆಯಿಂದ) ಮನಸ್ಸನ್ನು ಚುಚ್ಚುವಂಥ ಕಾವ್ಯ : ಇದೇ ವಿಡಂಬನೆ, 'ತುರುಚುಗಬ್ಬ' (ಗೊತ್ತುಗು. ೪೩). [ತುರುಚು + ಕಬ್ಬ$_1$]

ತುರುಚುಮಾತು (ನಾ). (ವಿಡಂಬನೆಯಿಂದ) ಮನಸ್ಸನ್ನು ಚುಚ್ಚುವ ಮಾತು : ಮಕ್ಕಳನ್ನು ಹುಟ್ಟುಹೆಸರನ್ನು ಬಿಟ್ಟು ಹಿಯ್ಯಾಳಿಕೆಯ ನೀಚ ಹೆಸರುಗಳಿಂದ ಕರೆಯುವುದು, ತುರುಚುಮಾತುಗಳನ್ನಾಡುವುದು (ಶಿಷ್ಟದ. ೬೭೨). [ತುರುಚು + ಮಾತು$_1$]

ತುರುಚೆ 'ತುಱುಚೆ' ನೋ.

ತುರುತು 'ತುರಿತ್$_2$' ನೋ.

ತುರುತುರನೆ (ಅ). ಬೇಗಬೇಗನೆ : ವ್ರತಭ್ರಷ್ಟರನಟ್ಟೊರಸುವೆ ಸುಟ್ಟು ತುರುತುರನೆ ತೂಡುವೆ (ಸರ್ವಜ್ಞ. ೦೫೬-೯೬೦). [ತುರುತುರು+ – ಅನ್ನೆ$_1$]

ತುರುತುರು (ಅ). ಬೇಗಬೇಗ; ಶೀಘ್ರವಾಗಿ : ತುಂಗಳ್ಕ ಮುಖ್ಯ ರಸ್ತೆಯನ್ನು ಸೇರಿ ತುರುತುರು ನಡೆಯಹತ್ತಿದಳು (ಮೂಕಜ್ಜಿ. ೦೩೭).

ತುರುತ್ತಿ (ನಾ). (ಕರಾ) ನಡುಗಡ್ಡೆ ; ಚಿಕ್ಕದ್ವೀಪ.

[ದೇ.॥ ತಮಿ. ಮಲ. ತುರುತ್ತಿ]

ತುರುಪಟ್ಟಿ 'ತುಜುಪಟ್ಟಿ' ನೋ.

ತುರುಪಿಸು (ಕ್ರಿ). (ಉಕ) ಹೊಲಿ; ಟಾಕಿ ಹಾಕು : ಅಂಗಿ ಹರಿದು ಹೋಗಿದೆ, ಸ್ವಲ್ಪ ತುರುಪಿಸಿಕೊಂಡು ಬಾ (ಕೂಡಿ).

[ತುರುಪು$_0$ (P ← ಮರಾ. ತುರಪ) + – ಇಸು$_3$]

ತುರುಪು$_1$, ತುರುಫ್ (ನಾ). ೧. ಗುಂಪು; ಸಮೂಹ. ೨. ದಂಡು; ಸೈನ್ಯ : ತುರುಪಿನ ಸರದಾರರು . . . ಪರಿಯಾಪಟ್ಟಣಕ್ಕೆ ಬಾದು ಇದ್ದರು (ರಾಷೇಂದ್ರ. ೦೦೮) ; ಇತ್ತರದಿ ಸಾಲ್ಗೊಂಡು ತುರುಪರಲಿ (ಕೃಷ್ಣವಿ. ೩-೩) ; ವೇಗದಿಂ ಘಾಳಿಯಂ ಜೈಸಿರುವ ಕುದುರೆಗಳ ವೇಗದಿಂ ದೇರಿರುವ ತುರುಪಿನ ಸವಾರರು (ಅರ್ಜಾವಿ. ೩೪—೪೮). **ತುರುಫ್** : ೨. 'ತುರುಫ್‌ಸವಾರ' ಪರಾ. [← ಇಂ. Troop]

ತುರುಪ್ಪು, ತುರುಫು, ತುರ್ಪು$_1$ (ನಾ). ಇಸ್ಪೀಟಿಂ ಆಟದಲ್ಲಿ ಇತರ ಮೂರು ಬಣ್ಣದ ಎಲೆಗಳಿಗಿಂತ ಸದ್ಯಕ್ಕೆ ಹೆಚ್ಚು ಪ್ರಾಧಾನ್ಯ ಪಡೆದಿರುವ ಎಲೆ ; ಹುಕುಮಂ : (ಕ). **ತುರುಫು** : ಮೊದಲೇ ತುರುಫು ಆಡಿ ಬಿಟ್ಟರೆ ಆಟ ಕೆಟ್ಟುಹೋಗುತ್ತದೆ (ಕಾಮಿಕಾಂ. ೧೦೩). **ತುರ್ಪು$_1$** : 'ತುರ್ಪುಹೂಡು' ಪರಾ. [← ಇಂ. Trump]

ತುರುಫ್ 'ತುರುಪು'$_1$ ನೋ.

ತುರುಫ್‌ಸವಾರ (ನಾ). ಕುದುರೆ ಸವಾರ; ಅಶ್ವಾರೋಹಿ : ಒಂದು ಕಾಗದವು ಅಪ್ಪಣೆಯಾಗಿ ತುರುಫ್‌ಸವಾರನ ಕೈಲಿಕೊಟ್ಟು . . . ಕಳುಹಿಸಿ (ಮಹಾವಂ. II, ೦೩೦). [ತುರುಫ್ (<ತುರುಪು$_1$) + ಸವಾರ]

ತುರುಫು 'ತುರುಪ್ಪು'$_2$ ನೋ.

ತುರುಬಿ 'ತುಜುವೆ' ನೋ.

ತುರುಬಿಕ್ಕು 'ತುಜುಬಿಕ್ಕು' ನೋ.

ತುರುಬು$_1$ 'ತುಜುಂಬು$_1$' ನೋ.

ತುರುಬ್ಬು 'ತುಜುಂಬ್ಬು' ನೋ.

ತುರುಬುಕಟ್ಟು (ಕ್ರಿ). ಮುಡಿಯಂನ್ನು ಹೆಣೆದಂ ಕಟ್ಟು : ಪಕ್ಕದ ಮನೆಯಾಕೆಗೆ ತುರುಬುಕಟ್ಟಿ ಬರುತ್ತೇನೆಂದು ಹೇಳಿ ಹೊರಡುತ್ತಿರುವುದನ್ನು ಕಂಡು ರಾಯರು . . . ತುರುಬುಕಟ್ಟೋದರಲ್ಲಿ ಇವಳು ಮೊದಲನೆಯವಳಂತೆ ಈ ಊರಿಗೆ ಎಂದು ಪತ್ನಿಯನ್ನು ಪ್ರಶಂಸಿಸಿ (ರಾಯಳ. ೧೦೯).

[ತುರುಬ್ಬು (< ತುಜುಂಬ್ಬು) + ಕಟ್ಟು$_1$]

ತುರುಬೆ 'ತುಜುವೆ' ನೋ.

ತುರುಮಂದೆ 'ತುಜುಮಂದೆ' ನೋ.

ತುರುಮರಿಗಡ್ಡೆ (ನಾ). ಹಳದಿ ಬಣ್ಣದ ಹೂವುಗಳನ್ನು ಬಿಡುವ ರುಚಿಕರವಾದ ಗಡ್ಡೆಯುಳ್ಳ ಒಂದಂ ಬಗೆಯ ಗಿಡ : (ಕ). [ತುರುಮರಿ$_0$+ಗಡ್ಡೆ]

ತುರುಮರಿಯಲಬು (ನಾ). ಒಂದು ಬಗೆಯ ಗಿಡ : (ಕ).

[ತುರುಮರಿ$_0$ + ಅಲಬು$_2$]

ತುರುವಿಂಡಿ 'ತುಜುವಿಂಡಿ' ನೋ.

ತುರುಮೆ 'ತುಜುವೆ' ನೋ.

ತುರುಮೇವು (ನಾ). ದನಕರುಂಗಳ ಆಹಾರ ; ಹುಲ್ಲು : ನಡೆವುದು ಪಳ್ಳ . . . ತುರುಮೇವು ವಿಾಸಲ ಸಿರಿಯ ತಪ್ಪಲಿಗೆ (ಶ್ರೀರಾಮಾ. ೭೦೩-೦೦೩).

[ತುರು (<ತುಜು) + ಮೇವು (< ಮೇಪು)]

ತುರುವಲು (ನಾ). =ತುರಂವ್ಯ ೧: ತೆಂಗಾಯಿ ತುರುವಲಂ [ಪಾಣಾಂ. ಕುಸುರುವೆ] ತೆಗೆದು ಮತ್ತಾ ವಿದಳಹುಗ್ಗಿಯೆಂದೊಲಿದು ಹೆಸರಂ ಕರೆವುದು (ಸೂಪಶಾ. ೩-೪) : ಸಕ್ಕರೆಯನು ಇತ್ತು, ತೆಂಗಾಯಿ ತುರು [ಪಾಣಾಂ. ೦] ವಲನಿಕ್ಕಿ ತುಪ್ಪದೊಳುಪೊತ್ತಿ, ತಾಳಿಸಿ (ಸೂಪಶಾ. ೪-೩೦).

[ತುರುವ್ಯ + – ಅಲು (< – ಅಲ್ಯ). / ತಮಿ. ತುರುವಲ್]

ತುರುವಳ ' ತುಜುವಾಳ ' ನೋ.

ತುರುವಳ್ಳಿ ' ತುಜುವಳ್ಳಿ ' ನೋ.

ತುರುವಿಂಡು ' ತುಜುವಿಂಡು ' ನೋ.

ತುರುವ್ಯ$_1$, ತುರಿ$_1$ (ಕ್ರಿ). ೧. ಟೊಳ್ಳುಮಾಡು ; ಕೊರೆದು ತೆಗೆ; ತೂತುಮಾಡು : (ಕ). ೨. (ತೆಂಗಿನಕಾಯಿ ಮೊದಲಾದುವನ್ನು) ಹೆರೆ,–ಕೆರೆ : ತೆಂಗಿನಕಾಯನ್ನು ಚಿನ್ನಾಗಿ ತುರುವಿ ಆಮೇಲೆ ಕರಟವನ್ನು ಬಿಸಾಡು (ಕೂಡಿ). ' ತುರುವುಮಣೆ ' ಪರಾ. **ತುರಿ$_1$** : ೨. ತುರಿದ ತೆಂಗಿನಕಾಯಿಹಾಲೆಮ್ಮೆವಾಲುಮಂ ಸರಿಗೂಡಿ (ಸೂಪಶಾ. ೪-೭); ಗೆಡ್ಡೆಗಳನ್ನು . . . ತುರಿಮಣೆಯಲ್ಲಿ ತುರಿಯಬೇಕು (ಅಡುಸಾ. ೦೦೩) ; 'ಇನ್ನು ನಮಗೊಬ್ಬ ಮಗನೂ ಆಯಿತಲ್ಲ' ಎಂದರು ಅತ್ತೆ ಹೆರೆಮಣೆಯಲ್ಲಿ ಕಾಯಿ ತುರಿಯುತ್ತ (ಹೊಸಕ್ಷ. ೭೭). ೩. ತುಂಡರಿಸು ; ಕೊಲ್ಲು : ಕರಿಕನಾಡ ಬಿದಿರ್ಕಲ್ಲಾಲ್ದ ಕುಕ್ಕರ ಪಾಳಿಕ್ಕಾಜಿ ನಾಡಿಯರ್ ತುರಿದು (ಎಕ.IX, ಬೆಂಗಳೂ. ೩೬-೩ ;ಸು.750).

[ದೇ.॥ ತಮಿ. ತುರುವು, ತುರ; ಮಲ ತುರ; ತುಳು. ತುರುವು, ತುರಿ; ತೆಲು. ತುರ್ಮು, ತುಜುಮು ; ಕುರುಖ್. ತೂರ್ನಾ ; ಮಲ್ತೊ. ತೂರೆ]

ತುರುವ್ಯ$_2$, ತುರ್ಯ$_2$, ತುರುವೆ$_1$ (ನಾ). ೧. ತೆಂಗಿನಕಾಯಿ ಮೊದಲಾದುವನ್ನು ಹೆರೆಯುವುದರಿಂದ ಉಂಟಾಗುವ ಸಣ್ಣ ಸಣ್ಣ ಚೂರಂ ; ಸೂಸಲು; ಹೆರಕಲು : ಪಲ್ಕಕ್ಕೆ ತುಂಬ ಕಾಯಿ ತುರುವಿಲ್ಲದಿದ್ದರೆ ರುಚಿ ಬರುವುದಿಲ್ಲ (ಕೂಡಿ). ೨. ರಂಧ್ರ; ತೂತು : ಕತ್ತೆಯಲಿ ಗುಣವಿಲ್ಲ ಕತ್ತಿಗೆ ದಯವಿಲ್ಲ ಬತ್ತಿದ ಕೆಜಿಗೆ ತುರುವಿಲ್ಲ (ಸರ್ವಜ್ಞ. ೦೪೭೩). **ತುರಿ$_2$** : ೧. ಬಾಳೆಯಕಾಯಿಗಳನ್ನು ತಂದೆರಡಾಗಿ ಸೀಳಿ...ಆ ಕಾಯತಿರುಳುಮಂ ತೆಗೆದು ಕೊಂಡು ತುರಿಯುಮಂ ಮಾಡಿ (ಸೂಪಶಾ. ೪-೭೩); ಕಗ್ಗುಂಬಳದ ತುರಿ ೧ ಹಲ, ಏಲಕ್ಕಿ ಅರೆಹಲ . . . ಇವನ್ನೆಲ್ಲ ಚೂರ್ಣಂ ಮಾಡಿ (ಸಳಪ್ಯ. ೩೩೦). **ತುರುವೆ$_1$** : ೧. ಕಡಲೆ ಹೆಸಱುದ್ದು ತೆಂಗಿನ ತುರುವೆ [ಪಾಣಾಂ. ರಿಯು] ಮೆತ್ತನೆಯ ಸೊಜ್ಜಿಗೆಯ ಕೂಳು (ಸೂಪಶಾ. ೪-೩೦).

[< ತುರುವ್ಯ$_1$./ತಮಿ. ತುರುವು; ಮಲ. ತುರುವು, ತುರ]

ತುರುವುಮಣೆ, ತುರಿಮಣೆ (ನಾ). ಕೊಬ್ಬರಿ ಮೊದಲಾದ ಪದಾರ್ಥಗಳನ್ನು ಹೆರೆಯುವುದಕ್ಕೆ ಉಪಯೋಗಿಸುವ ಸಣ್ಣ ಸಣ್ಣ ಹಲ್ಲುಗಳುಳ್ಳ ಸಾಧನ : ತುರುವುಮಣೆ ತಂದುಕೊಡು (ಕೂಡಿ). **ತುರಿಮಣೆ** : ಗೆಡ್ಡೆಗಳನ್ನು ತೊಳೆದಂ, ಸಿಪ್ಪೆ ತೆಗೆದು ತರಕಾರಿ ತುರಿಯುವ ತುರಿಮಣೆಯಲ್ಲಿ ತುರಿಯಬೇಕು (ಅಡುಸಾ. ೦೦೩): ಲಾಂಟಾನಕಡ್ಡಿ ತುರಿಮಣೆಯಂತೆ ಮೈಮೇಲೆ ಸವರಿ ಬಟ್ಟೆ ಹರಿದು (ನಡದಾ, II, ೦೨೩೪).

[ತುರುವ್ಯ$_1$ + ಮಣೆ]

ತುರುವೆ$_1$ ' ತುರುವ್ಯ$_2$ ' ನೋ.

ತುರುವೆ$_2$ ' ತುಜುವೆ ' ನೋ.

ತುರುಷ್ಕ (ನಾ). ೧. =ತುರುಕ ೨ : ವಂಗ ತುರುಷ್ಕ ಚೇರ ಮಾಗಧ (ಶಾಇತಿ. XI-II, ೦೫೦-೮: 1102); ಬರ್ಬರ ಪಾರಸೀಕ ಪಾರಿಯಾತ್ರ ಹಮ್ಮೀರ ಡೊಕ್ಕಾರ ತುರುಷ್ಕ ಮರುವ್ರಭೃತಿ ಭೂಪಾಲಕರಿಂ ಭಯಾನಕ ರಸಮುಂ . . . ನೆಗಟುತ್ತುವಿರೆಯರೆ (ಜಗವಿ. ೨-೯೪೪) ; ತುರುಷ್ಕ ಸರಸಿಜವನಕುಂಜರ ಪರಾಕು (ಯಾದಕಂ. ೩-೦೮). ೨. ತುರಂಕರ ದೇಶದಲ್ಲಿ ಸಿಕ್ಕುವ ಅಂದುಕವೆಂಬ ಮೇಣದಿಂದ ಮಾಡುವ ಒಂದಂ

ಬಗೆಯ ಸುಗಂಧವಸ್ತು; ಯವನಧೂಪ; ಪಿಂಡಕ: ಹರಿಚಂದನ ಕಾಳಾಗರು ಮಲಯಜ ತುರುಷ್ಕಾದಿಗಳ ಕಂಪು ಬಂದು ತೀಡಿದೊಡೆ (ವಡ್ಡಾರಾ. ೫೫.೩). [ಸಂ.]

ತುರುಷ್ಕಗೌಳ (ನಾ). [ಸಂಗೀತ] ಒಂದು ರಾಗದ ಹೆಸರು: ಕರ್ಣಾಟಗೌಳ, ದೇಶಗೌಳ, ತುರುಷ್ಕಗೌಳ . . . ಎಂಬೇಳುಂ ಉಪಾಂಗಗೌಳ ರಾಗಂಗಳು (ವಿವೇಕ. ೨೩೪). [< ಸಂ. ತುರುಷ್ಕಗೌಡ]

ತುರುಷ್ಕತೋಡಿ (ನಾ). [ಸಂಗೀತ] ಒಂದು ರಾಗದ ಹೆಸರು: ಛಾಯಾತೋಡಿ ತುರುಷ್ಕತೋಡಿಯೆಂಬೆರಡುಂ ಉಪಾಂಗತೋಡಿರಾಗಂಗಳು (ವಿವೇಕ. ೨೩೪). [ಸಂ. ತುರುಷ್ಕತೋಡೀ]

ತುರುಷ್ಕಬಲ (ನಾ). ತುರುಕರ ಸೈನ್ಯ: ಈ ಕರಾಳ ಕರವಾಳವನ್ನು ಸ್ವೀಕರಿಸಿ ಶ್ರೀರಂಗವನ್ನಾಕ್ರಮಿಸಿರುವ ತುರುಷ್ಕಬಲ ಮುರಿದು . . . ಜಯಪತಾಕೆಯನ್ನೇರಿಸು (ಅನ್ನಾವ. ೯೦). [ತುರುಷ್ಕ + ಬಲ್ಲ]

ತುರುಸಿ (ನಾ). ಮುಸಲ್ಮಾನ; ಮಹಮದೀಯ. 'ತುರುಸಿದಳ', 'ತುರುಕ' ಪರಾ. [< ಸಂ. ತುರುಷ್ಕ]

ತುರುಸಿದಳ (ನಾ). = ತುರುಷ್ಕಬಲ: ಕಲಂಣನಾಯಕ ಆ [ತ] (ತ)ನ (ತ)ಂಮಂದಿರು ಭಯರುನಾಯಕ ತಂಮಂಣನಾಯಕ ಯಿ ಮೂವರು ತುರುಸಿದಳದ ಕೂಡೆ ಕಾದಿ (ಕಇ.I,೬೨-೧೪; 1481).

[ತುರುಸಿ + ದಳ್ಳ (= ದಲ)]

ತುರುಸು 'ದುರುಸು' ನೋ.

ತುರುಹಟ್ಟಿ 'ತುಱುಪಟ್ಟಿ' ನೋ.

ತುರುಹರಿ 'ತುಱುಹರಿ' ನೋ.

ತುರ್ಕಿ, ತುರಕಿ (ನಾ). ೧. ಭಾರತದ ಪಶ್ಚಿಮದಲ್ಲಿರುವ ಏಷ್ಯಾಖಂಡಕ್ಕೆ ಸೇರಿದ ಒಂದು ರಾಷ್ಟ್ರ: ಏಷ್ಯಾದ ದೊಡ್ಡ ಚಕ್ರಾಧಿಪತ್ಯವಾಗಿದ್ದ ತುರ್ಕಿಯಲ್ಲಿ . . . ಪುಸ್ತಕಭಂಡಾರಗಳನ್ನು ನೆಲಸಮಮಾಡಿದರು (ಪ್ರವಾಇ. II, ೧). ತುರಕಿ: ೨. ತುರ್ಕೀದೇಶಕ್ಕೆ ಸಂಬಂಧಿಸಿದುದು. ೩. ತುರ್ಕೀದೇಶದ ಕುದುರೆ: (ಕ).

[←ಪಾರ. ಮರಾ. ತುರ್ಕ್; ಹಿಂ. ತುರಕೀ, ತುರ್ಕೀ. / ಇಂ. Turkey]

ತುರ್ತ್ಯ$_1$ 'ತುರಿತ್ಯ' ನೋ.

ತುರ್ತ್ಯ$_2$ (ಅ). ಕೂಡಲೆ; ತಕ್ಷಣದಲ್ಲಿ: ಇವರಿಗೂ ತುರ್ತ ಅದೇ ಒಳ್ಳೆಯದೆನಿಸಿತು (ಮೂರುದಾ. ೫); ಗಂಗೊಳ್ಳಿಯವರು ತಮ್ಮ ಓದನು ತುರ್ತನಿಲ್ಲಿಸಿ ಇವರ ಕಡೆ ಲಕ್ಷ್ಯ ಕೊಡಹತ್ತಿದರು (ಅಬೋಲೀ. ೧೫೭).

[< ತುರಿತ್ಯ]

ತುರ್ತು 'ತುರಿತ್ಯ' ನೋ.

ತುರ್ತುಪರಿಸ್ಥಿತಿ (ನಾ). ಯುದ್ಧಕಾಲದಲ್ಲಿ ಅಥವಾ ಅದೇ ರೀತಿಯ ಕ್ಷೋಭೆಯ ಕಾಲದಲ್ಲಿ ದೇಶದಲ್ಲಿ ಉಂಟಾಗುವ ವಿಷಮಸನ್ನಿವೇಶಗಳಲ್ಲಿ ಸರ್ಕಾರವು ಅಧಿಕಾರಯುತವಾಗಿ ಘೋಷಿಸುವ ವಿಶೇಷ ಪರಿಸ್ಥಿತಿ; ಜರೂರು ಪರಿಸ್ಥಿತಿ. P ತುರ್ತುಪರಿಸ್ಥಿತಿಯನ್ನು ಘೋಷಿಸಿದಾಗ ಸರ್ಕಾರದವರು ರಾಷ್ಟ್ರಸಂರಕ್ಷಣೆಗಾಗಿ ಕೆಲವು ವಿಶೇಷ ಕಾನೂನುಗಳನ್ನು ಮಾಡಬಹುದು: ಹೀಗೆಯೇ ಗಲಭೆಗಳಾಗುತ್ತಿದ್ದರೆ ಸರ್ಕಾರದವರು ತುರ್ತುಪರಿಸ್ಥಿತಿಯನ್ನು ಘೋಷಿಸುತ್ತಾರೆ (ರೂಢಿ).

[ತುರ್ತು (< ತುರಿತ್ಯ) + ಪರಿಸ್ಥಿತಿ]

ತುರ್ತುಸಭೆ (ನಾ). ಸಂಘ, ಸಂಸ್ಥೆ ಮೊದಲಾದ ಕಡೆಗಳಲ್ಲಿ ಸದಸ್ಯರು ವಿಶೇಷ ಪರಿಸ್ಥಿತಿಯೊದಗಿದಾಗ ಸೇರುವಿಕೆ; ಅವಸರದ ಸಭೆ, -ಅಧಿವೇಶನ: ಇದು ತುರ್ತುಸಭೆಯಲ್ಲಿ ಅಂಗೀಕೃತವಾಯಿತು (ರೂಢಿ).

[ತುರ್ತು (< ತುರಿತ್ಯ) + ಸಭೆ]

ತುರ್ಪು$_1$ 'ತುರುಪ್ಪು' ನೋ.

ತುರ್ಪು$_2$ (ನಾ). ತೋರಿಕೆ; ಪ್ರದರ್ಶನ (?): ಮನದ ತೊಡರ್ಪು ಲೋಚನದಡರ್ಪಲರಂಬಿನ ಕೂರ್ಪು ಸರ್ವಮೋಹನರಸದಿರ್ಪು ಬೇಟದ ಪೊಡರ್ಪಭಿಮಾನದ ನಟ್ಟ ತುರ್ಪು ಕಾಮನ ಕರವಾಳ ಕೂರ್ಪು ವಿರಹಾಹಿಯ ಕೊಳ್ವ ಪಸುರ್ಪು ಜೀಯ ಭಾವೆನಿಸಿದುದಂಗಹಾರಕರಣಾಭಿನಯಂಗಳ ನೇರ್ಪು ನೀಱಿಯಾ (ಪುಲ್ಲಿಪು. ೮-೫೬).

[P ಇದು 'ತೋರ್ಪು' ಎಂಬುದರ ಅಪಲಿಖಿತವಿರಬಹುದೆ ?]

ತುರ್ಪುಹೂಡು (ಕ್ರಿ). ೧. ಇಸ್ಪೀಟಾಟದಲ್ಲಿ ತುರುಪು ಎಲೆಯನ್ನು ಒಡ್ಡು. ೨. (ಆಲಂ) ಗೆಲ್ಲುವ ಉಪಾಯವನ್ನು ಮಾಡು: ಜಾತಿ ಜಾತಿಗಳ ತುರ್ಪುಹೂಡಿ ಇಲೆಕ್ಶನ್ ಮುಗಿಯಿತು (ದೇಜ್ಯೋತಿ. ೬೦).

[ತುರ್ಪು$_1$ (<ತುರುಪ್ಪು$_2$) + ಹೂಡು$_1$ (<ಪೂಡು)]

ತುರ್ಯ (ಗು). ೧. [ವೇದಾಂತ] ಚೈತನ್ಯದ ನಾಲ್ಕನೆಯ ಸ್ಥಿತಿಯಲ್ಲಿರುವ; ಪರಮಾತ್ಮಸ್ವರೂಪನಾದ: ಅಗ್ಗದ ತುರ್ಯಶಿವನನು ಪಾರ್ಥ ಚಿಂತಿಸಿದ (ಕುಮ್ಯಾಅ.೫-೬). ೨. [ಜ್ಯೋತಿ] ಜನ್ಮಲಗ್ನದಿಂದ ನಾಲ್ಕನೆಯದಾದ: ಗ್ರಹಂ . . . ತುರ್ಯಾಷ್ಟಮಸ್ಥಾನದೊಳ್ ಗ್ರಹದಿಂ ಕೂಡೆ ಪರಸ್ಪರಂ ಸ್ವಗುಣದಿಂದಾಳ್ಗುಂ ಚತುರ್ಥಾಂಶಮಂ (ಜಾತತಿ. ೯-೯).

[ಸಂ.]

ತುರ್ಯಗೆ (ನಾ). [ತತ್ತ್ವಶಾ] ಶಾಕ್ತಮತದಲ್ಲಿ ಮೋಕ್ಷಸಾಧನವೆಂದು ಹೇಳಿರುವ ಏಳು ಜ್ಞಾನಭೂಮಿಕೆಗಳಲ್ಲಿ ಕೊನೆಯದು: ಅನುಭವದಿಂದ ತಿಳಿಯತಕ್ಕ ಭೂಮಿಕೆಗಳು ಜ್ಞಾನಭೂಮಿಕೆಗಳು. ಅವುಗಳು "ವಿವಿದಿಷಾ" . . . "ತುರ್ಯಗಾ" ಎಂದೇಳು (ಭಾರದ. ೨೨೭). 'ಜ್ಞಾನಭೂಮಿಕೆ' ಪರಾ. [ಸಂ. ತುರ್ಯಗಾ]

ತುರ್ಯರ್ಕ್ಷ (ನಾ). [ಜ್ಯೋತಿ] ನಾಲ್ಕನೆಯ ಸ್ಥಾನ, -ಮನೆ: ಲಗ್ನಕ್ಕೆ ತೃತೀಯದೊಳ್ ಖಳನವಂ ತುರ್ಯರ್ಕ್ಷದೊಳ್ ಪಂಡಿತಂ (ಜಾತತಿ.೧೮-೦೦).

[ತುರ್ಯ + ಋಕ್ಷ]

ತುರ್ಯಾತೀತ (ನಾ). ಜೀವನ್ಮುಕ್ತ; ಅವಧೂತ: ಇದುವೆ ತುರ್ಯಾತೀತ ಆಶ್ರಮಯಿದುವೆ ಶುದ್ಧಪರಮಹಂಸೆಂಬದುವೆ ಆಶ್ರಮಯಿದುವೆತಾನವಧೂತಆಶ್ರಮವು (ಜ್ಞಾನಸಿಂ. ೪೨-೦೨೫). [ತುರ್ಯ + ಅತೀತ]

ತುರ್ಯಾರೂಢ (ನಾ). ಪರಬ್ರಹ್ಮಾವಸ್ಥೆಯನ್ನು ಪಡೆದಿರುವವನು; ಜೀವನ್ಮುಕ್ತ: ಪರಮತತ್ತ್ವರಹಸ್ಯವನು ವಿಸ್ತರಿಸಿ ತುರ್ಯಾರೂಢರಾಗಿಯೆ ಚರಿಸುತಿಹ ಗಗನಾರ್ಯರಿಗೆ ನಾ ನಿರುತವಂದಿಸುವೆ (ಗಗತಾ.೦-೦).

[ತುರ್ಯ + ಆರೂಢ]

ತುರ್ಯಾಶ್ರಮ (ನಾ). ನಾಲ್ಕನೆಯ ಆಶ್ರಮ; ಸಂನ್ಯಾಸ: ನೇಮದಿ ತುರ್ಯಾಶ್ರಮ ಬಲಿದೆ (ಪ್ರಸಕೀ. ೩-೦). [ತುರ್ಯ + ಆಶ್ರಮ]

ತುರ್ವ (ನಾ). ಒಂದು ಪ್ರದೇಶದ ಹೆಸರು (?): ಪ್ರಿಯಾತ್ಮಜೆ ಯೆಱಗ [ಜ್ಞ] × × [ವ]ಕ್ಷಸ್ಥಳನಿವಾಸಿ ಶ್ರೀರೇವ[ಕ್ಕೆ] × [ರ್ಮ್ಮ]ಟಿ ಎಡದೊಱೆ [ತುಱ್ವನಾಳ್ದು] (ಸೌಇಇ. IX-1, ೭-೦೪; 837). [?]

ತುಲ, ತುಳ (ನಾ). ೧. ತಕ್ಕಡಿ; ತ್ರಾಸು. ತುಳ: ೨. ಹೋಲಿಕೆ; ಸಾದೃಶ್ಯ: "ತುಳ (ತೋಲ) – ತುಲ (ಲಾ) = ಸಾಮ್ಯ" (ತದ್ಭಕೋ.೦೮).

[ಸಂ.]

ತುಲನ (ನಾ). ೧. ತಕ್ಕಡಿಯಲ್ಲಿ ತೂಗುವುದು; ತೂಕ ಮಾಡುವುದು: "ತೂಗು–ತುಲನೇ" (ಶಮಧಾ). ೨. ತೂಕ: "ತುಲಿಃ, ತುಲುಃ, ತುಲನಂ ...ತುಲಿತಂ, ಈ ೬ ತೂಕಂ" (ಕಾಶಕ್ಯ. ೧೦೩). ೩. ಮೇಲಕ್ಕೆ ಎತ್ತುವುದು,-ಏರಿಸುವುದು. ೪. ಹೋಲಿಸುವುದು; ತಾಳೆನೋಡುವುದು.

ತುಲನಮಾಡು = ಹೋಲಿಸು; ತಾಳೆನೋಡು; ತಾರತಮ್ಯವನ್ನು ಕಂಡುಹಿಡಿ: ನನ್ನ ಯೋಗ್ಯತೆಯೇನು ಅವನ ಯೋಗ್ಯತೆಯೇನು ತಾವೇ ತುಲನಮಾಡಿ. (ರೂಢಿ). [ಸಂ.]

ತುಲನಾತ್ಮಕ (ಗು). ಒಂದಕ್ಕೊಂದನ್ನು ಸರಿದೂಗಿಸಿ ನೋಡುವ, —ಹೋಲಿಸಿ ನೋಡುವ: ತುಲನಾತ್ಮಕ ದೃಷ್ಟಿಯಿಂದ ಸಹ ನೋಡಿದಾಗ ಈ ಪಾತ್ರವರ್ಗದ ಮೇಲೆ ಹೆಚ್ಚಿನ ಬೆಳಕು ಬೀಳಬಹುದು (ಸಮಜೀ. ೩೧ ಟೀಠಿಕೆ); ಹೋಲಿಕೆ ಎಲ್ಲೆಲ್ಲಿ ಕಾಣುವುದೆಂಬ ವಿಷಯವಾಗಿ ತುಲನಾತ್ಮಕವಾದ ವ್ಯಾಸಂಗವನ್ನು ನಡೆಸುತ್ತಿದ್ದೇವೆಯಷ್ಟೆ (ಶಮಪಾಂ. ೮೮); ಸಮಾನಾಂತರವಾದ ಮತ್ತು ಪ್ರತಿಕ್ರಿಯಾವಾದಗಳ ತುಲನಾತ್ಮಕ ವಿವೇಚನೆಯಿಂದ ಸಿದ್ಧವಾದ ವಿಷಯಗಳಿಷ್ಟು (ಜೀವಾತ್ಮ. ೦೦೮). [ಸಂ.]

ತುಲನೆ (ನಾ). ಹೋಲಿಕೆ: ಸ್ವಾಮಿದಾಸರು ಆಕೆಗೆ ರಕ್ಷಾಕವಚವಾಗಿ ನಿಲ್ಲುತ್ತಾರೆ. ಈ ತುಲನೆ ವಿಚಾರಣೀಯವಾಗಿದೆ (ಸಮಜೀ. ೨೪ ಟೀಠಿಕೆ).

ತುಲನೆ ಮಾಡು=ಹೋಲಿಸು; ತುಲನಮಾಡು: ಇವರನ್ನು ತುಲನೆ ಮಾಡುವಾಗ ಕೆಲವು ಕ್ಷಣ ಮಾನವಮಟ್ಟಕ್ಕೆ ಇವರನ್ನು ತಂದುಕೊಳ್ಳಬೇಕು (ವಾರಾಕ್ಯ. ೩೩); ಚೆಂದುಟಿಗಳನ್ನು ಕಾಮನ ಬಿಲ್ಲಿನೊಂದಿಗೆ ತುಲನೆ ಮಾಡಿದೆ (ಸೀತಾರ. ೮). [ಸಂ. ತುಲನಾ]

ತುಲಸಿ, ತುಳಸಿ (ನಾ). ಪವಿತ್ರವಾದುದೆಂದು ಪೂಜಿಸುವ, ಒಂದು ಬಗೆಯ ಗಿಡ ಮತ್ತು ಅದರ ದಳ: ತುಲಸಿಯ ಲುಂಗಕಷಾಯದ ಜಲದೊಳ್ . . . ಕಟವೆಯ ಸಮನಿಸು ತಾಂ ಮೊಸರೊಳೆ ಮೇಣ್ ಕಲಸಿದೊಡೆ ಪಲವು ದೆವಸಂ ನಿಲ್ಕುಂ (ಲೋಕೋಪ. ೮-೩); ಖರಮರೀಚಿಯ ಜಳಕೆ ಬಾಡಿದ ತರುಣತುಲಸಿಯ ದಂಡೆಯೊಪ್ಪುವ ಗರುವದೇವನ ಬರವ ಕಂಡನು ಬಾಗಿಲಲಿ ವಿದುರ (ಕುವ್ಯಾಉ. ೮-೭); ಕೊರಳ ತುಲಸಿಯ ದಂಡೆ ಬಾಡದು (ಜೈಮಿಭಾ. ೦೦-೨೨); ತುಲಸೀ ಎಲೆಯನ್ನೂ ಕಕ್ಕೆ ಪತ್ರೆಯನ್ನೂ ಹೊಸಕಿದರೇನೇ ಅವುಗಳ ಸ್ವಭಾವಗುಣವಾದ ವಾಸನೆಯನ್ನು ಹೊರಗೆಡಹುತ್ತವೆ (ಕೊನಪ್ಪೈ. ೪-೭). **ತುಳಸಿ**: "ತುಳಸಿಯದು ಸುರಸಿ ಬಹು ಮಂಜರಿಯೆನಿಕ್ಕು" (ಮಂಗರಾ. ೩೯-೨೭); ಬಳಸಿ ಪಚ್ಚೆಯ ಕೋಟೆಯಂತಿರೆ ತುಳಸಿ ಬೆಳೆದಿರೆ ಮನೆಯ ಚೌಕದಿ (ಕೌಶಿರಾ. ೦೦-೩೮); ಒಲ್ಲನೋ ಹರಿ ಕೊಳ್ಳನೋ ಎಲ್ಲ ಸಾಧನವಿದ್ದು ತುಳಸಿ ಇಲ್ಲದ ಪೂಜೆ (ಪುರಂದ. ೨-೭೯ ಅನುಪಲ್ಲವಿ); ತುಳಸಿ:—ಈ ಎಲೆಯ ರಸ, ಮೆಣಸು ೫, ಬೆಳ್ಳುಳ್ಳಿ ೫ ಸಹ ಅರೆದು ಕುಡಿಯೆ ಛಳಿಜ್ವರ ಮಾಣ್ಗುಂ (ವಿವೈವಿ. ೫); ಪಾರ್ಥನೀಕ್ಷಿಸಿದ ವಿಶ್ವಶರೀರಿಗೆ ಜೋಡೆಲೆ ತುಳಸಿಯನಿತೆ ತೊಲೆಯೆ (ಗಿಳಿವಿಂ. ೪೧-೭).

ತುಳಸಿಯ ಕಟ್ಟೆ = ತುಳಸಿಕಟ್ಟೆ: ಸಂಪ್ರದಾಯವಂತರು ಮನೆಯಿದಿರು ತುಳಸಿಯ ಕಟ್ಟೆಗಳನ್ನು ರಚಿಸುತ್ತಾರೆ (ಭಾಹಬ್ಯ. ೧೫೭). [ಸಂ. ತುಲಸೀ]

ತುಲಸಿಕಟ್ಟೆ, ತುಳಸಿಕಟ್ಟೆ (ನಾ). ತುಲಸಿಗಿಡದ ಸುತ್ತಲೂ ಕಟ್ಟಿರುವ ಕಟ್ಟೆ; ಬೃಂದಾವನ: ಕಾರ್ತಿಕಶುದ್ಧದ್ವಾದಶಿಯಂದು ತುಲಸೀ ಕಟ್ಟೆಯ ಮೇಲೆ ಕಬ್ಬಿನ ಹಂದರ ಹಾಕಿ . . . ಸಿಂಗರಿಸುವರು (ಭಾಹಬ್ಯ. ೦೫೭). **ತುಳಸಿಕಟ್ಟೆ**: ಮನೆಯ ಮುಂದೆ ಅಥವಾ ತುಳಸೀಕಟ್ಟೆಯ ನೆರೆಯಲ್ಲಿ ಚೆನ್ನಾಗಿ ನೆಲವನ್ನು ಸಾರಿಸಿ ರಂಗವಲ್ಲಿಯನ್ನು ಹಾಕುತ್ತಾರೆ (ಭಾಹಬ್ಯ. ೦೭೨). [ತುಲಸಿ + ಕಟ್ಟೆ$_1$]

ತುಲಸಿಪೂಜೆ, ತುಳಸಿಪೂಜೆ (ನಾ). ೧. ಸಾಮಾನ್ಯವಾಗಿ ಸಂಪ್ರದಾಯಸ್ಥೆಯರಾದ ಹೆಂಗಸರು ಪ್ರತಿನಿತ್ಯವೂ ತುಲಸಿಗಿಡಕ್ಕೆಮಾಡುವ ಪೂಜೆ. ೨. ಉತ್ಥಾನದ್ವಾದಶಿಯಂದು ತುಳಸಿಗಿಡಕ್ಕೆ ಮಾಡುವ ಶಾಸ್ತ್ರೋಕ್ತವಾದ ಪೂಜೆ: (ಕ). **ತುಳಸಿಪೂಜೆ**: ೧. ಪ್ರತಿದಿನ ಅವಳು ತುಳಸಿಪೂಜೆ ಮಾಡುತ್ತಾಳೆ (ರೂಢಿ). [ತುಲಸಿ + ಪೂಜೆ$_2$]

ತುಲಸಿಮಾಲೆ, ತುಳಸಿಮಾಲೆ (ನಾ). ತುಲಸಿದಳಗಳಿಂದ ಕಟ್ಟಿರುವ ಸರ,—ಹಾರ: ತುಲಸಿಮಾಲೆಯ ಧರಿಸಿದವಗೇಕೆ ಜವ್ವಾಜಿ (ಪುರಂದ. ೧-೦೦೦-೨). **ತುಳಸಿಮಾಲೆ**: ತುಳಸಿಮಾಲೆಯ ಹಾಕುವುದಕ್ಕೆ ಅರಸನಾಗಿ ನಾಚುತಿದ್ದೆ ಸರಸಿಜಾಕ್ಷ ಪುರಂದರವಿಠಲನು ತುಳಸಿಮಾಲೆ ಹಾಕಿಸಿದನು (ಪುರಂದ. ೧-೯೫-೩). [ತುಲಸಿ + ಮಾಲೆ]

ತುಲಸೀದ್ವಾದಶಿ (ನಾ). ಕಾರ್ತೀಕ ಮಾಸದ ಶುಕ್ಲಪಕ್ಷದ ಹನ್ನೆರಡನೆಯ ದಿನ ಮತ್ತು ಅಂದು ಆಚರಿಸುವ ಹಬ್ಬ; ಉತ್ಥಾನದ್ವಾದಶಿ. [ಸಂ. ತುಲಸೀದ್ವಾದಶೀ]

ತುಲಸೀಮಣಿ, ತುಳಸೀಮಣಿ (ನಾ). ತುಳಸಿಯ ಬೇರು ಮತ್ತು ಕಾಂಡಗಳಿಂದ ಮಾಡಿರುವ ಮಣಿ. P ತುಲಸೀಮಣಿಯ ಸರವನ್ನು ವಿಷ್ಣುಭಕ್ತರು ಕೊರಳಲ್ಲಿ ಧರಿಸುವುದುಂಟು: ತುಲಸೀಮಣಿ, ಸ್ಫಟಿಕಮಣಿಮಾಲೆಗಳು (ಸಕವೈ. ೩೯). **ತುಳಸೀಮಣಿ**. ಸಕಲವಾದ ಪಾಪಗಳನ್ನು ಹೋಗಲಾಡಿಸುವ ಆಯುಧವಾಗಿರುವುದೇ ತುಳಸೀಮಣಿಯ ಗುಣ (ಸಕವೈ. ೩೯); ಈ ತುಳಸೀಮಣಿ ಕಂಠಾಭರಣವಾಗುವುದಾದರೆ? (ಹೇಮಕೂ. ೨); ತುಳಸೀಮಣಿಗಳು ಪ್ರತ್ಯಕ್ಷವಾದವು (ಸಾಹಿಜೀ. ೬೪). [ಸಂ.]

ತುಲಸೀವಿವಾಹ, ತುಳಸೀವಿವಾಹ (ನಾ). ವಿಷ್ಣುಭಕ್ತರು ಆಚರಿಸುವ ಒಂದು ಉತ್ಸವ; ಶ್ರೀ ವಿಷ್ಣುವಿಗೂ ತುಲಸಿಗೂ ಪ್ರತಿಮಾರೂಪವಾಗಿ ಮಾಡುವ ಮದುವೆಯ ಹಬ್ಬ; ತುಲಸೀಕಲ್ಯಾಣ: ಕಾರ್ತಿಕಶುದ್ಧದ್ವಾದಶಿಯ ತಿಥಿಗೆ 'ತುಲಸೀವಿವಾಹ'ದ ವ್ರತಾಚರಣೆ ನಡೆಯುವುದು (ಭಾಹಬ್ಯ. ೦೫೫). **ತುಳಸೀವಿವಾಹ**: ಪುರೋಹಿತರು ವಿವಾಹಮಂತ್ರಗಳನ್ನು ಹೇಳುತ್ತ ತುಳಸೀವಿವಾಹವನ್ನು ನೆರವೇರಿಸುತ್ತಾರೆ (ಭಾಹಬ್ಯ. ೦೫೭). [ಸಂ.]

ತುಲಸೀವೃಂದಾವನ (ನಾ). = ತುಲಸಿಕಟ್ಟೆ. [ಸಂ.]

ತುಲಾಕೋಟಿ (ನಾ). ೧. ತಕ್ಕಡಿಯ ಕೋಲಿನ ತುದಿ: ಜಿನಂ ಕೇವಲ ವಿಪುಲತುಲಾಕೋಟಿಯಿಂ ತೂಗೆ ತನ್ನಂ (ಪಂರಾಮಾ. ೧-೪೨). ೨. ಕಾಲ್ಕಡಗ; ನೂಪುರ: "ತುಲಾಕೋಟಿ ನೂಪುರಮೆನಿಕ್ಕು" (ಮಂಗರಾ. ೧೦೦-೩೦); "ಪಾದಾಂಗದಂ, ತುಲಾಕೋಟಿಃ, ಮಂಜೀರಃ, ನೂಪುರಃ, ಹಂಸಕಃ, ಪಾದಕಟಕಃ ೬ ಅಂದಿಗೆ" (ಸಿದ್ಧಾಂತಿ. ೦೭೫). ೩. [ಗಣಿತ] ಒಂದು ಸಂಖ್ಯೆ; ಅರ್ಬುದ. [ಸಂ.]

ತುಲಾದಂಡ (ನಾ). ೧. ತಕ್ಕಡಿಯ ಕೋಲು; ದಂಡಿಗೆ. ೨. ತಕ್ಕಡಿ: ತೂಗಲ್ಧರೆಗೆ ತುಲಾದಂಡಮಲ್ತೆ ಮದ್ಭುಜಂ (ಆದಿಪು. ೦೪-೮೦); ನಮ್ಮ ನಮ್ಮ ಸಾಮರ್ಥ್ಯಗಳ ತೂಕಕ್ಕೆ ನಮ್ಮ ನಮ್ಮ ತೋಳುಗಳೇ ತುಲಾದಂಡಗಳಾಗಿ ಹೋಗಲಿ (ಶಕಾರ. ೨೦೬). [ಸಂ.]

ತುಲಾಪುರುಷ, ತುಳಾಪುರುಷ (ನಾ). ೧. ಷೋಡಶ ಮಹಾದಾನಗಳಲ್ಲಿ ಒಂದು; ತನ್ನ ದೇಹವು ತೂಗುವಷ್ಟು ಚಿನ್ನ ಮೊದಲಾದುವನ್ನು ದಾನಮಾಡುವುದು: ಆಗ ರಾಮಭೋಜರಾಯನು ಬ್ರಾಹ್ಮಣರಿಗೆ "ತುಲಾಪುರುಷ" ದಾನಗಳನ್ನೂ, ಹಾಗೆಯೇ "ತುಲಾಭಾರ"ಗಳನ್ನೂ ತೂಗಿಸಿಕೊಟ್ಟನು (ತುಳುನಾ. ೧೮); ಷೋಡಶ ಮಹಾದಾನಗಳನ್ನು ಮಾಡಬೇಕೆಂದು ನಿಶ್ಚಯಿಸಿ . . . ಎಲ್ಲವನ್ನೂ ಮಾಡಿದರು. ಅವು ಯಾವುವೆಂದರೆ (೧) ತುಲಾಪುರುಷದಾನ (೨) ಹಿರಣ್ಯಗರ್ಭದಾನ (ಜಾಮವಂ. ೯೬). ೨. ತುಲಾಪುರುಷದಾನವನ್ನು ಮಾಡಿದವನು: ಬೃಹದಾಕಾರದ ಚಿನ್ನದ ಗೋವನ್ನು . . . ದಾನವಾಗಿ ಕೊಡಲಾಯಿತು. ಇದಾದ ಮೇಲೆ ಪ್ರಭು ತುಲಾಪುರುಷರೂ ಆದರು (ಶಾಂತಲಾ. ೨೩೭). **ತುಳಾಪುರುಷ**: ೧. ತುಳಾಪುರುಷಕ್ಕೆಂದು ಹಿರಣ್ಯಗರ್ಭಮಿರಲೆಂದುತ್ತುಂಗದೇವಾಲಯೋತ್ಕರಮಂ ಮಾಡಿಸಲೆಂದು ಸಂದ ಪರರಾಷ್ಟ್ರಂಗಳ್ಗೆ (ಎಕ. VI, ತರೀಕೆ. ೪೫-೨೮; 1196). ೩. ತನ್ನ ತೂಕದ ಚಿನ್ನವನ್ನು ದಾನಮಾಡುವ ವ್ರತ: ಪುರುಷೋತ್ತಮನ ತಂಗೆಯುಂ ತಾನುಂ ತುಳಾಪುರುಷಮನಿರ್ದು ಲೋಕಕ್ಕೆಲ್ಲಂ ಬಿಯಮಂ ಮೆಱೆದು (ಪಂಪಭಾ. ೦೪-೨೦ ವ); ಶ್ರೀಮತ್ ಪ್ರತಾಪಚಕ್ರವರ್ತ್ತಿ ಜಗದೇಕಮಲ್ಲದೇವರು ತುಳಾಪುರುಷಮನೇಱೆ (ಸೌಇಇ. XV, ೩೦-೩೯; 1146). [ಸಂ.]

ತುಲಾಭಾರ (ನಾ). ೧. = ತುಲಾಪುರುಷ ೧: ಆಗ ರಾಮಭೋಜ ರಾಯನು ಬ್ರಾಹ್ಮಣರಿಗೆ "ತುಲಾಪುರುಷ" ದಾನಗಳನ್ನೂ, ಹಾಗೆಯೇ "ತುಲಾಭಾರ" ಗಳನ್ನೂ ತೂಗಿಸಿ ಕೊಟ್ಟನು (ತುಳುನಾ. ೦೮); ಕಪ್ಪೆಯ ತುಲಾಭಾರ ಕೊಟ್ಟ ಹಾಗೆ (ಗಾಡ). ೨. ಹಿಂದಕ್ಕೂ ಮುಂದಕ್ಕೂ ಚಲಿಸುವಿಕೆ; ತೂಗುವಿಕೆ: ತಕ್ಕಡಿಯನೊಮ್ಮೆ ತೆಂಕಣ್ಗೊಮ್ಮೆ ಬಡಗಣ್ಗೆ ತೂಗಿದುವೆನಲ್ ತುಲಾಭಾರಮಂ, ತೊನೆದುದಯ್ ಬೃಹದ್ ಪೃಥಿವಿ! (ಶ್ರೀರಾಮಾ. ೪೦೪-೪೩). [ಸಂ.]

ತುಲಾಮಾನವಿಶುದ್ಧಿ, ತುಳಾಮಾನವಿಶುದ್ಧಿ (ನಾ). ತೂಕ ಮತ್ತು ಅಳತೆಗಳನ್ನು ಸರಿಯಾಗಿಟ್ಟಿರುವಿಕೆ: ವರ್ಣಾಶ್ರಮವ್ಯವಸ್ಥೆಗಳಂ ಸ್ವಸ್ಥಂ ಮಾಡಿಯುಂ ತುಲಾ [ಪಾಠಾಂ. ಳಾ] ಮಾನವಿಶುದ್ಧಿಯಂ ವಿಚಾರಿಸಿಯುಂ (ಕಂದ್ರಪು. ೨-೬೦ ವ). **ತುಳಾಮಾನವಿಶುದ್ಧಿ**: ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ತುಲಾಮಾಸ (ನಾ). ಸೂರ್ಯನು ತುಲಾರಾಶಿಯಲ್ಲಿರುವ ತಿಂಗಳು; ಸೌರಮಾನದ ಏಳನೆಯ ತಿಂಗಳು; P ಅಕ್ಟೋಬರ್ ತಿಂಗಳ ಮಧ್ಯದಿಂದ ನವೆಂಬರ್ ತಿಂಗಳ ಮಧ್ಯದವರೆಗಿನ ಭಾಗ: ತುಲಾಮಾಸದಲ್ಲಿ ಕಾವೇರೀನದಿಯಲ್ಲಿ ಸ್ನಾನಮಾಡುವುದು ಪುಣ್ಯಪ್ರದವೆಂದು ಹೇಳುತ್ತಾರೆ (ಕೂಡಿ). [ಸಂ.]

ತುಲಾಯನ (ನಾ). ಸೂರ್ಯನಿಂ ತುಲಾರಾಶಿಯನ್ನು ಪ್ರವೇಶ ಮಾಡುವ ಕಾಲ; ತುಲಾಸಂಕ್ರಮಣ; P ಇದು ಅಕ್ಟೋಬರ್ ತಿಂಗಳ ಮಧ್ಯದಲ್ಲಿ ಸಂಭವಿಸುತ್ತದೆ. [ಸಂ.]

ತುಲಾಯೋಗ (ನಾ). ಬಿಂಬಾಗಮದ ಹದಿನೈದು ಭೇದಗಳಲ್ಲಿ ಒಂದು: ಚತುರ್ಮುಖತಂತ್ರ . . . ತುಲಾಯೋಗ ಕುಟ್ಟಿಮತಂತ್ರ ಸರ್ವತೋಭದ್ರ ಮಹಾವಿದ್ಯೆ ಮಹಾಸಾರವೆಂದು ಬಿಂಬಾಗಮದ ಹದಿನೈದು ಭೇದಂಗಳು (ವಿವೇಕ. ೭೦). [ಸಂ.]

ತುಲಾವೃತ್ತ (ನಾ). ಬಿಂಬಾಗಮದ ಹದಿನೈದಂ ಭೇದಗಳಲ್ಲಿ ಒಂದು: ತುಲಾವೃತ್ತ ತುಲಾಯೋಗ ಕುಟ್ಟಿಮತಂತ್ರ . . . ಮಹಾಸಾರವೆಂದಂ ಬಿಂಬಾಗಮದ ಹದಿನೈದು ಭೇದಂಗಳು (ವಿವೇಕ. ೭೦). [ಸಂ.]

ತುಲಾಷ್ಟಿ (ನಾ). ಮೂವತ್ತು ಮೂರಂ ತಂತೀವಾದ್ಯಗಳಲ್ಲಿ ಒಂದಂ: ವಿಪಂಚಿಕೆ . . . ತುಲಾಷ್ಟಿ ಕಾಲಕೀಯೆಂಬ ಮೂವತ್ತಮೂಱು ತಂತ್ರೀವಾದ್ಯಂಗಳಲ್ಲಿ (ವಿವೇಕ. ೨೩೬). [?]

ತುಲಾಸಂಕ್ರಮಣ (ನಾ). = ತುಲಾಯನ: ತುಲಾಸಂಕ್ರಮಣದಂದು ತಲಕಾವೇರಿಯಲ್ಲಿ ಪುಣ್ಯಸ್ನಾನ ಮಾಡಬೇಕು (ಕೂಡಿ). P ತುಲಾಸಂಕ್ರಮಣಕಾಲದಲ್ಲಿ ಕಾವೇರೀನದಿಯು ತಲಕಾವೇರಿ ಎಂಬ ಸ್ಥಳದಲ್ಲಿ ಉದ್ಭವವಾಗುವುದೆಂಬ ನಂಬಿಕೆಯಿಂದೆ. [ಸಂ.]

ತುಲಾಸೂತ್ರ (ನಾ). ತಕ್ಕಡಿಯನ್ನು ಹಿಡಿದುಕೊಳ್ಳಲು ದಂಡಿಗೆಗೆ ಮಧ್ಯದಲ್ಲಿ ಕಟ್ಟಿರುವ ಹುರಿ, – ದಾರ. [ಸಂ.]

ತುಲಾಸ್ನಾನ (ನಾ). ಸೂರ್ಯನಿಂ ತುಲಾರಾಶಿಯಲ್ಲಿರುವಾಗ ಪುಣ್ಯತೀರ್ಥಗಳಲ್ಲಿ ಮಾಡುವ ಸ್ನಾನ: ಆ ದಿನ ಕೃಷ್ಣವೇಣಿ, ರಂಗಸ್ವಾಮಿಯರು ತುಲಾಸ್ನಾನಕ್ಕೆಂದು ಕಾರಿನಲ್ಲಿ ಪಶ್ಚಿಮವಾಹಿನಿಗೆ ಬಂದಿದ್ದರು (ಊರುಳಿ. ೫೯). [ಸಂ.]

ತುಲಿತ (ಗಂ). ೧. ಹೋಲಿಸಿದ; ತಾಳೆ ನೋಡಿದ. (ನಾ). ೨. ತೂಕ: "ತುಲಿಃ . . . ತುಲಿತಂ, ಈ ೬ ತೂಕಂ" (ಕಾಕಕ್ಕ. ೦೦೩). [ಸಂ.]

△ **ತುಲು** 'ತಂಳಂ' ನೋ.

ತುಲೆ (ನಾ). ೧. ಪದಾರ್ಥಗಳನ್ನು ತೂಗುವ ಸಾಧನ; ತಕ್ಕಡಿ; ತ್ರಾಸು; ಚಿಂತಾಲು: "ತುಲಾ–ತ್ರಾಸು, ಚಿಂತಾಲು, ತಕ್ಕಡಿ, ತೂಗುಕೋಲು" (ಸಿದ್ಧಾಂತಿ. ೨೩೭): ಇದು ಮಹಾಜನರ ತುಲೆ, ದೊಡ್ಡವರ ತೂಗುಕಲ್ಲು (ಪಾಪಾಕ. ೪೦); ಬೆಲೆಯ ತುಲೆಯ ತಳಿಗೆಯಲ್ಲಿ ಎಡೆ–ಪ್ರಸಾದ ತೂಗುತಿಹುದು (ಮೂರ್ತಿಗಾ. ೨೫-೦೨). ೨. ತಕ್ಕಡಿಯ ಸಹಾಯದಿಂದ ಕಂಡುಹಿಡಿಯುವ ವಸ್ತುವಿನ ತೂಕ. ೩. ಚಿನ್ನ, ಬೆಳ್ಳಿ ಮೊದಲಾದ ಲೋಹಗಳ ತೂಕದಲ್ಲಿ ಒಂದು ಪ್ರಮಾಣ; ನೂರು ಪಲಗಳಷ್ಟು ತೂಕ. ೪. = ತುಲಾಪುರುಷ ೧. ೫. ತೂಕ ಮಾಡುವಿಕೆ; ತೂಗುವಿಕೆ. ೬. ಹೋಲಿಕೆ; ಸಾಮ್ಯ; ಸಾದೃಶ್ಯ. ೭. ತುಲಾದಂಡ; ದಂಡಿಗೆ. ೮. ಒಂದು ರೂಪಾಯಿಯಷ್ಟು ತೂಕ; ಒಂದು ತೊಲ. ೯. ಒಂದು ಬಗೆಯ ಪಾತ್ರೆ. ೧೦. ಮನೆಯ ಚಾವಣಿಗೆ ಹಾಕುವ ತೊಲೆ. ೧೧. ದಿವ್ಯಗಳಲ್ಲಿ ಒಂದು; P ಹಿಂದಿನ ಕಾಲದಲ್ಲಿ ಸಾಕ್ಷಿಗಳಿಲ್ಲದ, ಆದರೆ ಪ್ರಬಲವಾದ ಸಂಶಯಕ್ಕೆ ಒಳಗಾದ ಒಬ್ಬನ ಅಪರಾಧವನ್ನು ಪತ್ತೆಹಚ್ಚಲು ಮಾಡುತ್ತಿದ್ದ ಒಂದು ಪರೀಕ್ಷೆ; ಆರೋಪಿಯನ್ನು ತಕ್ಕಡಿಯಲ್ಲಿ ತೂಗಿ ಮಾಡುವ ಒಂದು ವಿಶೇಷ ರೀತಿಯ ನ್ಯಾಯ ನಿರ್ಣಯ. 'ದಿವ್ಯ' ಪರಾ. ೧೨. [ಜ್ಯೋತಿ] ಹನ್ನೆರಡಂ ರಾಶಿಗಳಲ್ಲಿ ಏಳನೆಯದಂ; ತುಲಾರಾಶಿ: "ವಣಿಕ್, ತುಲಾ, ತೌಲೀ, ಜೂಕಃ, ತುಲಾಧಿಪಃ ಈ ೫ ತುಲಾಕೆ ಹೆಸರು" (ಧಾನ್ಯ. ೬೬-೬): ಮತ್ತಮಾ ಖಗೋಳದಲ್ಲಿ ಮೇಷ . . . ತುಲೆ ವೃಶ್ಚಿಕ ಧನುಸ್ಸು ಮಕರ ಕುಂಭ ಮೀನವೆಂಬ ಪನ್ನೆರಡು ರಾಶಿಗಳು (ವಿವೇಕ. ೨೩೦). [ಸಂ. ತುಲಾ]

ತುಲ್ಯ (ಗು). ಸಮಾನವಾದ; ಸದೃಶವಾದ; ಹೋಲುವ. [ಸಂ.]

ತುಲ್ಯತೆ (ನಾ). ಸಮಾನತೆ; ಸಾದೃಶ್ಯ: "ಸಮತ್ವ, ತುಲ್ಯತೆ" (Equality. ಪಾಂಏ. ೬೭). [ಸಂ. ತುಲ್ಯತಾ]

ತುಲ್ಯಪಾನ (ನಾ). ಒಟ್ಟಿಗೆ ಸೇರಿ ಕುಡಿಯುವಿಕೆ: "ಸಪೀತಿಃ, ತುಲ್ಯ ಪಾನಂ – ಕೂಡೆ ಪಾನಮಾಡುವಿಕೆ" (ಸಿದ್ಧಾಂತಿ. ೨೪೯).

[ತುಲ್ಯ + ಪಾನ್ಯ]

ತುಲ್ಯಯೋಗಿತಾಲಂಕಾರ (ನಾ). [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು; ಕೇವಲ ವರ್ಣ್ಯ ಮತ್ತು ಕೇವಲ ಅವರ್ಣ್ಯಗಳಿಗೆ ಒಂದೂ ಸಮಾನಧರ್ಮ ವಿರುವ ಅಲಂಕಾರ: ಪ್ರಸ್ತುತದಿಂದಾಗಲಿ ಅಥವಾ ಅಪ್ರಸ್ತುತದಿಂದಾಗಲಿ ಗುಣರೂಪವಾದ ಧರ್ಮ್ಯೈಕ್ಯ ಮತ್ತೆ ಕ್ರಿಯಾರೂಪವಾದ ಧರ್ಮ್ಯೈಕ್ಯ ಪೇಳಲ್ ತುಲ್ಯಯೋಗಿತಾಲಂಕಾರವೆನಿಪುದು (ಕುವಲ. ೩೪): ಮಡದೀ ವರ್ಣ್ಯಂಗಳ್ಗಾದೊಡಮಿತರಂಗಳ್ಗೆಯಾದೊಡಂ ಧರ್ಮ್ಯೈಕ್ಯಂ ನಿಡಿದುಂ ಸ್ಫುರಿಸಲ್ಕೆಳ್ಕುಬೆಡಗಿನ ಕಣಿ ತುಲ್ಯಯೋಗಿತಾಲಂಕಾರಂ (ಸರಸ. ೩೭-೭೪). [ಸಂ.]

ತುಲ್ಲು (ನಾ). ಹೆಂಗಸಿನ ಗುಹ್ಯೇಂದ್ರಿಯ; ಯೋನಿ.

[< ಪ್ರಾ. ತುಲ್ಲ]

ತುವಗಾಮುಂಡ (ನಾ). ಒಬ್ಬಾತನ ಹೆಸರಂ: ತುವಗಾಮುಂಡ ಸತ್ಯ (ಎಳ. IX, ಹೊಸಕೋಟೆ. ೦೩-೭; ಸು. ೧೦೦). [ತುವ್ಯ + ಗಾವುಂಡ]

ತುವರ (ನಾ). ೧. ಆರು ಬಗೆಯ ರಸಗಳಲ್ಲಿ ಒಂದಂ; ಒಗರಂ; ಒಗಚಂ; ಕಷಾಯ: "ತುವರವೆನಲೊಗರಕ್ಕುಂ" (ಪುಗರಾ. ೬೫-೫); ತುವರಂ ತಿಕ್ತಂ ಮಧುರಂ ಲವಣಂ ಕಟು ಕಾರಮೆಂದು ರಸಮಾಜು ತೆಱಂ (ಪಸ್ತು. ೯೪-೦೫). ೨. ಯೌವನಕ್ಕೆ ಬಂದಿದ್ದರೂ ಗಡ್ಡ, ಮಾಸೆ ಬೆಳೆಯದವನು; ಶ್ಮಶ್ರುಹೀನ. [ಸಂ.]

ತುವರಮಣ್ಣು, ತೊವರಮಣ್ಣ (ನಾ). ಸಂವಾಸನೆಯ ಮಣ್ಣು: "ಕಾಸವ್ಯಕ್ತಿಕಾ—ತುವರಮಣ್ಣು" (ಓಷಧಿ. ೩೩); "ವ್ಯತ್ಯಾಳಕಂ-ತುವರ ಮಣ್ಣು" (ಓಷಧಿ. ೦೫೮). **ತೊವರಮಣ್ಣು**: "ತುವರೀ–ತೊಗರಿ, ತೊವರಮಣ್ಣು, ಕೆಂಬಟಿಕೆ" (ಓಷಧಿ. ೭೦).

[< ತುವರಿ + ಮಣ್ಣು (< ಮಣ್)]

ತುವರಿ (ನಾ). ೧. ಒಂದು ಬಗೆಯ ದ್ವಿದಳಧಾನ್ಯ ; ತೊಗರಿ : "ಆಢಕೀ, ತುವರೀ—ಈ ೨ ತೊಗರಿ" (ಹಲಾಯು. ೯೬-೪೩೦); ಒಡೆಯ ನೊರ್ವಂ ಜೂಜನಾಡಿ ರತ್ನಂಗಳಂ ಬಿಡೆ ಮೂಗಳವ ಸೋತನೆಂದು ಬಾಧಿಸುತಿರಲು ನಡುಬೀದಿಯೊಳು ರಾಸಿಯಾದ ತುವರಿಯ ರತ್ನಗಳ ಮಾಡಿಕೊಟ್ಟು ಬಸವಂ ಬಿಡಿಸಿಕೊಂಡಂ (ಗುರುಚಾ. ೮-೨೩). ೨. ಸುವಾಸನೆಯುಳ್ಳ ನೆಲ ; ಸುಗಂಧಯುಂಕ್ತವಾದ ಮಣ್ಣು. ೩. ಪಟಿಕ.

[ಸಂ. ತುವರೀ]

ತುವರಿಕೆ (ನಾ).=ತುವರಿ. [ಸಂ. ತುವರಿಕಾ]

ತುಶಿತ (ನಾ). ೧. ದೇವತೆಗಳಲ್ಲಿ ಒಂದು ಭೇದ. ೨. ಆ ದೇವತೆಗಳು ವಾಸಿಸುವ ಲೋಕ ; ಸ್ವರ್ಗಲೋಕದ ಒಂದು ಭಾಗ : ಅನಾಥ ಪಿಂಡಿಕನು . . . ತನ್ನ ಕಳೇಬರವನ್ನು ಕಳಚಿ ಹಾಕಿ, ತುಶಿತವೆಂಬ ಸ್ವರ್ಗದಲ್ಲಿ ದೇವತೆಯಾಗಿ ಹುಟ್ಟಿದನು (ಹತ್ತುಮ. ೦೭೩). [<ಸಂ. ತುಷಿತ]

ತುಷ (ನಾ). ೧. ಬತ್ತ ಮೊದಲಾದ ಧಾನ್ಯಗಳ ಮೇಲಿನ ಸಿಪ್ಪೆ ; ತವುಡು ; ಹೊಟ್ಟು ; ಉಮ್ಮಿ : ತುಷವ ಕಳದು ತಂಡುಲವನಡಬೇಕು (ಏಲೇಶ್ವ.೦೪೮) ; ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆಱೆದಡೆ ಅದೆಂದಿಂಗೆ ಬೆಳೆದು ಫಲವಪ್ಪುದಯ್ಯಾ (ಮಹಾದೇ. ಕ. ೨೪-೬೨) ; ಕುಮಾರಿಲಭಟ್ಟರು . . . ದೇಹಾಂತಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಬೇಕೆಂದು ನಿಶ್ಚಯಿಸಿ ತುಷದ ಚಿತಿಯನ್ನೇರಿದ್ದರು (ಭಜ್ಯೋತಿ. ೨೪). ೨. ಒಂದು ಬಗೆಯ ಮರ ; ತಾರೆ ; ಕಲಿದ್ರುಮ. ೩. (ಆಲಂ) ಹೊದಿಕೆ ; ಆಚ್ಛಾದನೆ ; ಆವರಣ : ಜಗತ್ತೆಂಬ ಜಂತ್ರದ ಹಾಹೆಗೆ ಅಜ್ಞಾನವೆಂಬ ತುಷವ ತೊಡಿಸಿ ಅಹಂ ಮಮತೆಯೆಂಬ ಸೊಕ್ಕನಿಕ್ಕಿ . . . ವಿನೋದಿಸಿದೆಯಯ್ಯಾ (ಬಸವ. ಕ. ೯೬೮). [ಸಂ.]

ತುಷಗಳೆ (ಕ್ರಿ). ಹೊಟ್ಟನ್ನು ತೆಗೆ ; ತವುಡನ್ನು ತೆಗೆದು ಹಾಕು : ತುಷಗಳೆದಕ್ಕಿಯ ತಳಿಸುವಂತಾತ್ಮನ ವಿಷಯಗಳೆದು ನೋಳ್ಪರೆಲ್ಲ (ಭರಚ. ೫೪-೨೦). [ತುಷ+ಕಳೆ$_1$]

ತುಷಪರ್ಣ (ನಾ). ಮೊಳಕೆಗೆ ಆವರಣವಾಗಿರುವ ಎಲೆ ; ಮೊಳಕೆಯನ್ನು ಮುಚ್ಚಿಕೊಂಡಿರುವ ಬೀಜದ ಎರಡು ದಳ : ಸಸಿ ಬಲಿದು ಹೊಸಸುಳಿ ತೋಱದಲ್ಲಿಯಲ್ಲದೆ ಆ ತುಷಪರ್ಣ ಬಿಡದು (ಮೋಳಿಮಾ. ೦೪೦-೪೪೦). [ತುಷ + ಪರ್ಣ]

ತುಷಪರ್ಣಿ (ನಾ). ಒಂದು ಬಗೆಯ ಮರ ; ಕಿರುಗೋಣಿ : "ತುಷಪರ್ಣಿ ಕಿಱುಗೋಣಿ" (ಮಂಗಣಾ. ೪೫-೪೭). [ಸಂ. ತುಷಪರ್ಣೀ]

ತುಷಮಷ (ಗು). ತೂಕವಿಲ್ಲದ ; ಕ್ಷುಲ್ಲಕವಾದ : ತುಷಮಷಬೋಧಗೇಳ್ದಪ್ಪಾಜಿಯೊಳು ಮನೋಲಷಿತದೀಕ್ಷೆಯನಾಂಪೊಡಾವು ವೃಷಭೇಂದ್ರ ಹಂಸೇಂದ್ರ ಮೊದಲಾದ ಸುತರ ಪೌರುಷವಡೆದೆವೆಯೆಂದರಳಲಿ (ಭರಚ. ೭೯-೫೨) [ತುಷ + ಮಷ]

ತುಷಮೇಘ (ನಾ). ಆವರಣವಾಗಿರುವ ಮೋಡ : ತುಷಮೇಘಮಂ ಮುರಿದು ನಿಂತುರಿವ ಮಾರ್ತಾಂಡನೇಳಿಗೆಯಂತೆ ಜೀವನ್ಮುಕ್ತನೈ (ಗಗತಾ. ೦೩-೪೨). [ತುಷ + ಮೇಘ]

ತುಷಾಗ್ನಿ (ನಾ). ೧. ಬತ್ತದ ಹೊಟ್ಟಿಗೆ ಹತ್ತಿಸಿರುವ ಬೆಂಕಿ. 'ಕುಕೂಲ' ಪರಾ. ೨. ಒಂದು ಬಗೆಯ ಕಠಿನವಾದ ಪ್ರಾಯಶ್ಚಿತ್ತ. P ಮಹತ್ತರವಾದ ಪಾಪವನ್ನು ಮಾಡಿದವರು, ಅದರ ಪರಿಹಾರಕ್ಕಾಗಿ ಹೊಟ್ಟಿನ ರಾಶಿಗೆ ಬೆಂಕಿ ಇಟ್ಟು ಅದರ ಮಧ್ಯೆ ಕುಳಿತುಕೊಂಡು ಮರಣವನ್ನು ಹೊಂದುತ್ತಿದ್ದರು ಎಂಬ ನಂಬಿಕೆಯಿದೆ. ೩. ಒಂದು ನರಕದ ಹೆಸರು: ತುಷಾಗ್ನಿ ಕ್ರಿಮಿಸಂಘ...ದುರ್ಗಂಧವಾಸಗಳೆಂಬೈದು ಮಂತ್ರಿ ನರಕಂಗಳಿಂದೊಡಗೂಡಿ (ವಿವೇಕ. ೦೮೦). [ತುಷ + ಅಗ್ನಿ]

ತುಷಾನಲ (ನಾ). = ತುಷಾಗ್ನಿ : (ಕ). [ತುಷ + ಅನಲ]

ತುಷಾರ (ಗು). ೧. ತಂಪಾದ ; ಶೀತಲವಾದ. 'ತುಷಾರಕರ' ಪರಾ. (ನಾ). ೨. ಹಿಮ ; ಮಂಜು. ೩. ಹಿಮದ ತುಂತುರು ; ಮಂಜಿನ ಕಣ ; ಇಬ್ಬನಿ : ಸುರಿವ ತುಷಾರದೊಳ್ಬೆರೆದರಲ್ವ ಸಿತಾಂಬುಜದಿವ್ಯಗಂಧದೊಳ್ ಪೊರೆದು...ಪರೆದೆಸೆಗಿತ್ತು...ನಿಶಾಸಮೀರಣಂ (ಕಾದಂಪೂ. ೨೮೩); ಆ ನೀರು ಸಾರವ ಕೊಟ್ಟು ದ್ರವ್ಯಕ್ಕೆ ಮತ್ತೆ ತುಷಾರವಾಗಿ ಸಾರವನೆಯ್ದಿದಂತೆ (ಮೋಳಿಮಾ. ೦೨೦-೪೭೦); ತುಷಾರಕಣಕೋಟಿಯಂಶಕೆ ಸಾಟಿಯಲ್ತು ಗಡ ನಿಮ್ಮಳಿವು (ಭಾವಚಿಂ. ೯-೩); ಮೇಣಸುರಾಮರಾಕಾರದಿಂ ಪ್ರವಹಿಸಿತೊ ಶೀಕರತುಷಾರದೋಲೆಂಬಂತೆ ಬಿಳಿಮಂಜು...ಮುಚ್ಚಿ ಮುಸುಕಿದುದು (ಶ್ರೀರಾಮಾ. ೦೯೯-೦೩೨). ೪. ಮಂಜುಗಡ್ಡೆ ; ಹಿಮದ ಗಡ್ಡೆ. ೫. ತುಂತುರುಹನಿ ; ಶೀಕರ : ಆ ಹಣ್ಣನೊಡದು ನೋಡಲಾಗಿ ರಸವಿಲ್ಲದೆ ತುಷಾರ ಹಾಱಿತ್ತು (ಮೋಳಿಮಾ. ೦೮೦-೬೮೦) ; ಧರಣಿ ನೆನೆದುದು ಗಂಧರಸಕತ್ತುರಿಯ ಪನ್ನೀರುಗಳ ಹೊನಲೊಡವೆರಸಿ ದೆಸೆ ಕಂಪಿಟ್ಟುದಂಬುಧಿ ನವತುಷಾರದಲಿ ತರಣಿ ಪರಿಮಳಿಸಿದನು ಪವನನ ಸುರಭಿತನವಚ್ಚರಿಯೆ (ಕುವ್ಯಾವಿ. ೦೦-೮೩). ೬. ಕರ್ಪೂರ. 'ತುಷಾರೋಪಳ' ಪರಾ. [ಸಂ.]

ತುಷಾರಕರ (ನಾ). ತಂಪಾದ ಕಿರಣವುಳ್ಳವನು ; ಚಂದ್ರ : ತುಷಾರಕರನಿಂದೇಕಾದಶದ್ರವ್ಯ ಧರ್ಮತನೂಜಾಸ್ತದೊಳಿಂದ್ರಮಂತ್ರಿ ಶುಭದಂ (ಜಾತತಿ. ೦೦-೦೦). [ಸಂ.]

ತುಷಾರಪುಂಜ (ನಾ). ಮಂಜಿನ ಗುಂಪು : ಹಿಮರಾಶಿ : ಪುದಿದ ತುಷಾರಪುಂಜದೊಳಗಿರ್ಪ ಹಿಮಾದ್ರಿವೊಲ್ ... ಒಪ್ಪಿದನಿಂದ್ರವಂದಿತಂ (ಪುಷ್ಪಪು. ೦೦-೨೯). [ತುಷಾರ + ಪುಂಜ$_4$]

ತುಷಾರರುಚಿ (ನಾ). ಹಿಮಕಿರಣ ; ಚಂದ್ರ : ಮಿತ್ರಕ್ಷೇತ್ರದೊಳುತ್ಪಲ ಮಿತ್ರಂ ನಿಲೆ ತತ್ತುಷಾರರುಚಿಯಂ ... ಶತಪತ್ರಸಖಾದಿಗ್ರಹಂಗಳೀಕ್ಷಿಸೆ ಶುಭದಂ (ಜಾತತಿ. ೨೦-೦೪). [ತುಷಾರ + ರುಚಿ]

ತುಷಾರವರ್ಷ (ನಾ). ತುಂತುರು ಮಳೆ : ತಣ್ಗಾಳಿಯ ಸೋಂಕಿಂ ವಿರಳಮಾಗಿ ಸೂಸುವ ತುಷಾರವರ್ಷದೊಳಂ (ಮಲ್ಲಿಪು. ೩-೦೦೦).

[ತುಷಾರ + ವರ್ಷ]

ತುಷಾರಸ್ನಾನ (ನಾ). ಯಂತ್ರಸಹಾಯದಿಂದ (ನೀರಿನ) ಸಣ್ಣ ಸಣ್ಣ ಹನಿಗಳು ಮೈವೋಲೆ ಬೀಳುವಂತೆ ಅಳವಡಿಸಿ ಮಾಡುವ ಸ್ನಾನ : ನಮಗೆಲ್ಲರಿಗೂ ಡಿ.ಡಿ.ಟಿ. ತುಷಾರಸ್ನಾನವಾಯಿತು (ಅಪೂಪ. ೩೦೯).

[ತುಷಾರ + ಸ್ನಾನ]

ತುಷಾರಾಂಶು (ನಾ). = ತುಷಾರರುಚಿ. 'ತುಷಾರಾಂಶುಜ' ಪರಾ.

[ತುಷಾರ + ಅಂಶು]

ತುಷಾರಾಂಶುಜ (ನಾ). ಚಂದ್ರನ ಮಗ ; ಬುಧ : ಪತಿ ... ತುಷಾರಾಂಶುಜನಥರ್ವವೇದಕ್ಕಕ್ಕುಂ (ಜಾತತಿ. ೨-೪). [ಸಂ.]

ತುಷಾರಾದ್ರಿ (ನಾ). ಹಿಮದಿಂದ ಕೂಡಿದ ಪರ್ವತ ; ಹಿಮಾಲಯ ; ಹಿಮವಂತ. 'ತುಷಾರಾದ್ರಿತನುಜೆ' ಪರಾ. [ತುಷಾರ + ಅದ್ರಿ]

ತುಷಾರಾದ್ರಿತನುಜೆ (ನಾ). ಹಿಮವಂತನ ಮಗಳು ; ಪಾರ್ವತಿ : (ಕ).

[ತುಷಾರಾದ್ರಿ + ತನುಜೆ]

ತುಷಾರೋಪಳ (ನಾ). ಕರ್ಪೂರದ ಹಳುಕು,-ಚೂರು : ತುರುಷ್ಕತುಷಾರೋಪಳಕಾಳಾಗುರುತಕ್ಕೋಳಲವಂಗಪ್ರಮುಖಸುರಭಿಪರಿಕರಯುತಮಂ (ಪುಷ್ಪಪು. ೦೦-೪೫). [ತುಷಾರ + ಉಪಳ (=ಉಪಲ)]

ತುಷಿತ (ನಾ). ೧. ದೇವತೆಗಳಲ್ಲಿ ಒಂದು ಗುಂಪು ; ಒಂದು ದೇವಗಣ: "ಆದಿತ್ಯಾಃ ...ತುಷಿತಾಃ, ಭಾಸ್ವರಾಃ, ಅನಿಲಾಃ...ಗಣದೇವತೆಗಳ ಹೆಸರುಗಳು" (ಸಿದ್ಧಾಂತಿ. ೦೪). ೨. [ಜೈನ] ಲೋಕಾಂತಿಕ ದೇವತೆಗಳ ಎಂಟು ವರ್ಗಗಳಲ್ಲಿ ಒಂದು : ಬ್ರಹ್ಮಕಲ್ಪಾಂತವಾಸಿಗಳುಮಪ್ಪ

ಸಾರಸ್ವತಾದಿತ್ಯವಹ್ನ್ಯರುಣಗರ್ದತೋಯ ತುಷಿತಾವ್ಯಾಬಾಧಾರಿಷ್ಟರೆಂ ಬೆಣ್ಬರುಂ ಲೋಕಾಂತಿಕದೇವರ್ ಬಂದು (ಆದಿಪು. ೯-೬೦ವ).

[ಸಂ.]

ತುಷೋದಕ (ನಾ). ಅಕ್ಕಿಯನ್ನು ತೊಳೆದ ನೀರು; ಕಲಗಚ್ಚು: "ಅಭಿಷವಂ, ಅವಂತಿ, ಸೋಮಂ, ತುಷೋದಕಂ, ಶುಕ್ಲಂ—ಈ ೫ ಅಕ್ಕಿಗರ್ಚು" (ಹಲಾಯು. ೫೩-೦೬೩).

[ತುಷ + ಉದಕ$_2$]

ತುಷ್ಟ (ಗು). ೧. ಸಂತೋಷಗೊಂಡ; ತೃಪ್ತಿಹೊಂದಿದ. (ನಾ). ೨. ಸಂತೋಷಗೊಂಡವನು; ತೃಪ್ತ: ತುಷ್ಟನಾದಂ ಪರಮಜಿನಮತಾಂ ಭೋಜಿನೀರಾಜಹಂಸಂ (ಸುಕುಮಾ. ೩-೪೮); ತುಷ್ಟನಾದನು ನೃಪತಿಕೃತಪರಿಶಿಷ್ಟಪಾಲನು (ಕುಪ್ಯಾವಿ. ೦-೦೦); ಮಧುರವಾದ ಮುಗುಳ್ನಗೆಯೊಂದಿಗೆ ಅವನನ್ನು ಬಹಳ ತುಷ್ಟನನ್ನಾಗಿ ಮಾಡಿದಳು (ಮೃಜಲ. ೮೬). ೩. = ತುಷ್ಟಿ ೧: ತಮ್ಮ ವೃತ್ತಾಂತವೆಲ್ಲಮಂ ಪೇಳ್ದು ನಮಗೆ ತುಷ್ಟಮಂ ಮಾಳ್ಪುದು (ಕಗವಿ. ೦೫೧-೯). [ಸಂ.]

ತುಷ್ಟಿ (ನಾ). ೧. ಸಂತೋಷ; ತೃಪ್ತಿ; ತಣಿವು: ಅಕ್ಕುಂ ಧೃತಿ ತುಷ್ಟಿ ಪುಷ್ಟಿ ವಿಭವಂ ... ಭದ್ರಂ ಶುಭಂ ಮಂಗಳಂ (ಪಂಪಭಾ. ೧೪-೬೫); ಪರಿಣಾಮ ಗರ್ಭತುಷ್ಟಿಯಂತೆಯುಂ ... ಮಹತ್ತ್ವಮಂ ಪಡೆದೆಯೆಂದಮರ ಸಮುದಯಂ ಸ್ತುತಿಗೆಯ್ದು ಪೋಗೆ (ಜಗವಿ. ೨-೯೬ ವ); ಈ ಸಂಗ್ರಾಮ ಮುಖದಲಿ ಬಿಲ್ಲ ಹಬ್ಬದ ತುಷ್ಟಿ ನಿನಗೇಕೆಂದನಾ ಕರ್ಣ (ಕುಪ್ಯಾದ್ರೋ. ೦೩-೬೩); ತುಷ್ಟಿಯಿಲ್ಲದ ನೃಪ ದರಿದ್ರನು (ನಿಭಾಗ. ೨-೦-೩೭); ವಿಪರ್ಯಯಗಳುಐದು, ತುಷ್ಟಿಗಳು ಒಂಬತ್ತು (ಹಿಂದಸಾ. ೫೭). P"ಸಾಂಖ್ಯರ ಪ್ರಕಾರ ಒಂಬತ್ತು ಬಗೆಯ ತುಷ್ಟಿಗಳಿವೆ: ಪ್ರಕೃತಾಖ್ಯ ತುಷ್ಟಿ (ಎಂಟು ಬಗೆಯ ಪ್ರಕೃತಿತತ್ವದಲ್ಲಿ ಮನಸ್ಸನ್ನು ಲಯಗೊಳಿಸಿ ಧ್ಯಾನ ಮಾಡುತ್ತ ತಾನು ವಿಮುಕ್ತನೆಂದು ಸಂತಸಪಡುವಿಕೆ), ಉಪಾದಾನಾಖ್ಯ ತುಷ್ಟಿ (ಸಂನ್ಯಾಸವೇಷಸ್ವೀಕಾರ ಮಾತ್ರದಿಂದಲೇ ಮುಕ್ತನೆಂದು ಭಾವನೆ), ಕಾಲಾಖ್ಯತುಷ್ಟಿ (ಮುಕ್ತಿ ಕೈಗೂಡುವ ಕಾಲ ಬಂದರೆ ತಾನಾಗಿಯೇ ಸಿದ್ಧಿಸುವುದು; ಧ್ಯಾನಾದಿಗಳಿಂದ ಫಲವೇನೆಂದು ತೂಷ್ಣೀಕತೆಯನ್ನು ವಹಿಸುವಿಕೆ), ಭಾಗಾಖ್ಯತುಷ್ಟಿ (ಪೂರ್ವಜನ್ಮ ಸುಕೃತವಿಶೇಷಗಳು ಫಲಿಸಿ ಅದೃಷ್ಟವಿಶೇಷದಿಂದ ಮುಕ್ತಿ ಲಭಿಸುವುದಾದರೆ ಶ್ರಮವೇಕೆಂಬ ಭಾವನೆ)—ಈ ನಾಲ್ಕೂ ಅಧ್ಯಾತ್ಮಿಕಗಳು. ಸುಕಾರತುಷ್ಟಿ (ದ್ರವ್ಯಾರ್ಜನೆಯಲ್ಲಿ ವಿರಕ್ತನಾಗುವಿಕೆ), ಸುಪಾರತುಷ್ಟಿ (ಸಂಪಾದಿಸಿದ ದ್ರವ್ಯ ಕಾಪಾಡದೆ ಅಸಡ್ಡೆ), ಸುನೇತ್ರ (ದ್ರವ್ಯನಾಶವಾದರೆ ವ್ಯಥೆಪಡದಿರುವಿಕೆ), ಮರೀಚಕ ತುಷ್ಟಿ (ಒಮ್ಮೆ ಅನುಭವಿಸಿದ ವಸ್ತುವಿನಲ್ಲಿ ಮರಳಿ ಇಚ್ಛೆಯಿಲ್ಲದಿರುವಿಕೆ), ಉತ್ತಮಾಂಭ ತುಷ್ಟಿ (ಯಾವ ವಸ್ತುವನ್ನಾದರೂ ಅನುಭವಿಸಬೇಕೆಂಬ ಇಚ್ಛೆಯೇ ಆತ್ಯಂತಿಕವಾಗಿ ಹುಟ್ಟದಿರುವಿಕೆ). (ವಿಷ್ಣುಪು-೧-೫-ಪುನಾಚೂ. ೨೬೭)" (ಶ್ರೀವತ್ಸ ನಿಘಂಟು. ೧೮೮). 'ನವತುಷ್ಟಿ' ಪರಾ. ೨. ಚಂದ್ರನ ಹದಿನಾರು ಕಲೆಗಳಲ್ಲಿ ಒಂದು: ಅಮೃತ ಮಾನದ ಪೂಷ ತುಷ್ಟಿ ಪುಷ್ಟಿ...ಕಾಮದಾಯಿನಿಯೆಂಬ ಷೋಡಶಕಲೆಗಳಿಂ ಭರಿತನಾಗಿ (ವಿವೇಕ. ೨೬೭). ೩. ಲಾಭ (?): ತುಷ್ಟಿಗೈದಿರ್ದ ಹೊನ್ನಂ ತುಷ್ಟಿಯನೈದಲ್ ಮಿಶ್ರವರ್ಣದಿ ನೂರ್ತಾನಷ್ಟಿಗೈದಿರ್ದ ಪೊನ್ನಂ ನೆಟ್ಟನೆ ತೆಗೆಯಲ್ಕೆ ಬಕ್ಕು ನಷ್ಟದ ಬಣ್ಣಂ (ವ್ಯವಹಾ. ೪೬-೨೨). 'ತುಷ್ಟೆ' ಪರಾ. [ಸಂ.]

ತುಷ್ಟಿಕರ (ನಾ). ಸಂತೋಷವನ್ನು ಉಂಟುಮಾಡುವುದು; ತೃಪ್ತಿಯನ್ನು ಕೊಡುವುದು: ಗ್ರಹಮಿರೆ ಪರಿವೇಷದೊಳಾ ಗ್ರಹಮಂ ಕ್ರೂರಗ್ರಹಂ ನಿರೀಕ್ಷಿಸುವೊಡರಿಷ್ಟಹರಂ ತುಷ್ಟಿಕರಮಭೀಷ್ಟಹೇತು ಜನ್ಮಾವಸರದೊಳ್ (ಜಾತತಿ. ೭-೧೯). [ಸಂ.]

ತುಷ್ಟಿಗೊಳಿಸು (ಕ್ರಿ). ಸಂತೋಷಪಡಿಸು; ತೃಪ್ತಿಪಡಿಸು: ಹುಟ್ಟಿದ ತಪ್ಪಿಗೆ ...ಎಷ್ಟು ಜನರನ್ನು ತುಷ್ಟಿಗೊಳಿಸಬೇಕು (ಕಲ್ಲೋಲ. ೮-೧೬).

[ತುಷ್ಟಿ + ಕೊಳ್$_1$ + – ಇಸು$_3$]

ತುಷ್ಟಿದಾನ (ನಾ). ಪುತ್ರೋತ್ಸವ, ಯುದ್ಧಜಯ ಮೊದಲಾದ ಸಂತೋಷದ ಸಂಗತಿಗಳನ್ನು ತಿಳಿಸಿದವರಿಗೆ ಕೊಡುವ ಬಹುಮಾನ; ಪಸಾಯದಾನ; ಪೂರ್ಣ ಪಾತ್ರ: ಆತಂಗೊಸೆದು ತುಷ್ಟಿದಾನಂಗೊಟ್ಟಂ (ಪದ್ಮಾರಾ. ೧೪೭-೯); ಋಷಿನಿವೇದಕಂಗೆ ತುಷ್ಟಿದಾನಂಗೊಟ್ಟು ಭೇರಿಯಂ ಪೊಯ್ಸಿ (ಶಾಂತಿಪು. ೯-೨೪ ವ); ಅಂತು ಋಷಿನಿವೇದಕಂಗಂಗಚಿತ್ತಮಂ ತುಷ್ಟಿದಾನಮನಿತ್ತು (ಸುಕುಮಾ. ೮-೪೭ ವ). [ತುಷ್ಟಿ + ದಾನ]

ತುಷ್ಟಿಬಡಿಸು 'ತುಷ್ಟಿವಡಿಸು' ನೋ.

ತುಷ್ಟಿಬಡು 'ತುಷ್ಟಿವಡು' ನೋ.

ತುಷ್ಟಿವಡಿಸು, ತುಷ್ಟಿಬಡಿಸು (ಕ್ರಿ). ಸಂತೋಷವನ್ನುಂಟುಮಾಡು; ತೃಪ್ತಿಪಡಿಸು: ನದೀಜಳಮಂ ನಿರ್ಮಳಮಂ ಮಾಡಿ ಮೃಗಪಕ್ಷಿಕುಳಮಂ ಮಿಗೆ ತುಷ್ಟಿವಡಿಸುತ್ತುಂ (ಗಿರಿಕ. ೭-೪೨ ವ); ಸನ್ನುತಿಗಳಿಂ ತುಷ್ಟಿವಡಿಸಿಯಾ ಭಕ್ತರ್ಗೆ ತನ್ನ ಭಾಷೆಯನುಸಿರ್ದಂ (ಪದ್ಮರಾ. ೪-೧೮); ಅಖಿಳವಸ್ತುವ ಕೊಟ್ಟು ಮಿಗೆ ತುಷ್ಟಿವಡಿಸಿ ಸರ್ವರನು ಬೀಳ್ಕೊಟ್ಟನು (ಸೌಂದಪು. ೬-೧೮); ಪತಿಯೊಳು ... ಕನಲದೆ ತುಷ್ಟಿವಡಿಪುದೊಲವಱಿತು (ಹದಿಬ. ೩-೧೮). ತುಷ್ಟಿಬಡಿಸು: ಉಡುಗೊಱೆಗಳಿಂ ತುಷ್ಟಿಬಡಿಸಿದ ಪೊಡವಿಪಾಲಕ ಋಷಿಗಳಷ್ಟಾಶೀತಿಸಾವಿರವ (ಕುಪ್ಯಾಲ. ೧೬-೬); ನಿಗ್ರಹವಡಿಸದೆ ಪ್ರಜೆ ಪರಿವಾರವ ವೆಗ್ಗಳದಿಂ ತುಷ್ಟಿಬಡಿಸು (ಮೋಹತ. ೦೩-೦೧).

[ತುಷ್ಟಿವಡು + – ಇಸು$_3$]

ತುಷ್ಟಿವಡು, ತುಷ್ಟಿಬಡು (ಕ್ರಿ). ತೃಪ್ತಿಹೊಂದು; ಸಂತೋಷಪಡು: ಮೊದಲ ಕವೀಂದ್ರರೊಲ್ದೊರೆದ ಸತ್ಕೃತಿಸಂಚಯಮಿಾ ಧರಿತ್ರಿಯೊಳ್ ಪುದಿದಿರೆ ನೋಡಿ ತುಷ್ಟಿ [ಪಾಠಾಂ. ತೃಪ್ತಿ]ವಡಲೊಲ್ಲದೆ ಕಬ್ಬಿಗರೇಕೆ ಕಬ್ಬಮಂ ಗದಿಪರೊ (ರಾಜಶೇ. ೧-೩೫). ತುಷ್ಟಿಬಡು: ಕಾಂತೆಯರಿಕ್ಕಲವನು ತುಷ್ಟಿಬಡದಿರೆ ಸಂತಸದಲಿ ಜೀವಂಧರನು ತನ್ನಯ ಹಸ್ತದಿಂದ ಗಲಿನೊಳಿರ್ದ ದಿವ್ಯಾನ್ನವನೀಯಲು (ಜೀವಂಸಾಂ. ೭-೨೫). [ತುಷ್ಟಿ+ಪಡು$_1$]

ತುಷ್ಟಿವಡೆ (ಕ್ರಿ). ತೃಪ್ತಿಯನ್ನುಂಟುಮಾಡು: ವಿಘ್ನಕಾರಿದ್ವಿಷದ್ಗಣದಿಂ ಭೂತಗಣಕ್ಕೆ ತುಷ್ಟಿ [ಪಾಠಾಂ. ತೃಪ್ತಿ]ವಡೆದಪ್ಪೆಂ (ಜಗವಿ. ೦೭-೧೧).

[ತುಷ್ಟಿ + ಪಡೆ$_1$]

ತುಷ್ಟಿಸು (ಕ್ರಿ). = ತುಷ್ಟಿವಡು: ಧರ್ಮಪುತ್ರನ ಘಾತಿಯನು ಘಟ್ಟಿಸಿದರೇ ತುಷ್ಟಿ [ಪಾಠಾಂ. ಟ್ಟಿ] ಸಿದನೇ ನೃಪತಿ (ಕುಪ್ಯಾತ. ೨-೩೫); ಕಷ್ಟದನುಭವವಾಹ ನಡತೆಯೊಳಿಷ್ಟವಾಗುವದಾವ ತೆರದೊಳು ತುಷ್ಟಿಸಲು ಮನದೊಳಗೆ ನಿಮ್ಮಕ್ಕರವನಾಕ್ಷಣದಿ (ಜಿನಸಾ. ೬). [ತುಷ್ಟಿ+–ಇಸು$_3$]

ತುಷ್ಟೆ (ನಾ). ಲಾಭ (?): ಹದುರಿಗೆಯಲ್ಲು ನಷ್ಟ ತುಷ್ಟೆಗೆ ಆವರ ಕಾಲದ ××× ಆರು ಹಿಡಿಯ ಸಲ್ಲವೆನ್ದು ಪಾಲಿಸಿ (ಎಕ. VI, ಕೊಪ್ಪ. ೪೯-೨೫; 1892).

[<ಸಂ. ತುಷ್ಟಿ ?]

ತುಸ$_1$ (ನಾ). ತವುಡು; ಹೊಟ್ಟು; ಉಮ್ಮಿ: "ತುಸ – ತುಷ = ಧಾನ್ಯದ ಸಿವುರು" (ತದ್ಭಕೋ. ೧೮); ತುಸ [ಪಾಠಾಂ. ಸು] ಮೊದಲು ಚತುರಾಸ್ಯ ಪರ್ಯಂತೆಸೆವುದೇ ಭುವನದಲಿ ಜೀವಪ್ರಸರ (ಕುಪ್ಯಾಸ. ೧೪-೧೨೮).

[<ಪ್ರಾ. ತುಸ./ಸಂ.ತುಷ]

ತುಸ$_2$ (ನಾ). = ತುಸ್ತ ೧. 'ಕೋಲ್ದುಸ' ಪರಾ. [< ತುಸ್ತ]

ತುಸ$_3$, ತುಸು$_1$ (ಗು). ೧. ಅಲ್ಪವಾದ; ಸ್ವಲ್ಪವಾದ: ಇವರ ನಾವು ಇನ್ನೂ ಆ ಸಂಗನ ಡೋಣಿಯಿಂದ ತುಸ ದೂರದಲ್ಲೇ ಹೋಗುತ್ತಿತ್ತು (ಇಂದುಮು. ೬೬). (ನಾ). ೨. ಅಲ್ಪ; ಕೊಂಚ: ದೇವ ನಿಮ್ಮಡಿಯಂಘ್ರಿಕಮಲವನಾವ ನೆನೆದವಂಗೆ ತುಸ [ಪಾಠಾಂ. ಸು]ವಲ್ಲಾ

ವಿರಿಂಚಾದ್ಯಮರಪದ (ಕುಮ್ಯಾಸ. ೧೦-೧೪). **ತುಸು$_1$**: ೨. ಹಣ ಬ್ಯಾಂಕಿನಲ್ಲಿಡುವ ಬದಲು ನಾನು ನನ್ನ ಮಕ್ಕಳ ದೇಹದಲ್ಲಿ ತುಸು ರಕ್ತವನ್ನು ತುಂಬುವುದಕ್ಕೆ ಯತ್ನಿಸುತ್ತೇನೆ (ಮಹಾತ್ಮಾ. ೨೦): ಅವನು ತುಸು ಆಲೋಚನೆ ಮಾಡಿದ (ಹಾಹುತ್ತ. ೯೭). [?]

ತುಸ್ಸ$_4$ 'ತುಸಂ' ನೋ.

ತುಸಂ, ತುಸ್ಸ$_4$, ತುಸು$_3$ (ಅ). ಸ್ವಲ್ಪವೇ ; ಕೊಂಚಮಟ್ಟಿಗೆ: ಕಾಲವಕ್ಕಿಗೆ ತುಸಮೆ ಹಾರಲಿಡೆ ದಾರಿ (ಗಿಳಿವಿಂ. ೧೦೭-೬). **ತುಸ್ಸ$_4$** : ಕನ್ನಡಿಯ ಮುಂಗಡೆ ತುಸ ನಿಲುವೆ (ಗಜೇಶ. ೪೯-೪); ತಂದೆ ತುಸ ಸಿಡುಕಾಡೆ ಮಿಡುಕಾಡಿ ... ತಾಯ ಬೆಂಬಳಿವಿಡಿಯುತ (ಭಾವಜೀ. ೩-೫೭). **ತುಸು$_2$** : ಅದು ಹೀಗೆ ಏಕೆ ಮತ್ತು ಹೇಗೆ ಮಾನ್ಯವಾಗಬಹುದೆಂಬುದನ್ನು ತುಸು ವಿಸ್ತರಿಸುವೆವು (ಗೀತಾಸಂ. ೧೪); ಹುಸಿನಗುತ ಬಂದೇವ ನಸುನಗುತ ಬಾಳೋಣ ತುಸು ನಗುತ ತೆರಳೋಣ (ಗರಿ. ೦೦೩-೧೦); ಅವಳ ಕೊರಳು ತುಸು ಕೊಂಕಾಯಿತು (ಬಾಣಅ. ೩೩).

ತುಸಮಾತ್ರ, ತುಸುಮಾತ್ರ = ಅತ್ಯಲ್ಪ ; ಲೇಶಮಾತ್ರ : ನಾ ಕೊಟ್ಟವರದೊಳು ತುಸಮಾತ್ರ ತಪ್ಪದು ಕೇಳಾಯತಾಕ್ಷಿ (ಮೋಹತ. ೪-೨೪) ; ಕೈದುಡುಕಿ ತುಸು [ಪಾಠಾಂ. ಸ] ಮಾತ್ರಮೆನೆ ಫಲುಗುಣನ ತುರಗಂಗಳಂ ತಂದು ನಿಮಿಷದೊಳ್ ನಿಲಿಸಿದರ್ (ಚೈಮಿಭಾ. ೨೭-೫): [< ತುಸ್ಸ$_3$]

ತುಸಪುಸ (ನಾ). (ಗೊಂದಲ, ಗಡಿಬಿಡಿ, ಬೇಸರಗಳನ್ನು ಸೂಚಿಸುವ) ಒಂದಂ ಅನಂಕರಣ ಶಬ್ದ : ಬೆಳಗ್ಗಿಂದ ಬೆಳಗಿನವರೆಗೂ ಕದನ ಕಾದಾಟ ನೋಡಿ ನೋಡಿ ನನಗೂನೂ ಒಳಗೊಳಗೇ ತುಸಪುಸ ಪ್ರಾರಂಭವಾಯಿತು (ಜೋಗುಳಿ. ೨೪).

ತುಸಮುಸ (ನಾ). (?) : ತುಸಮುಸವೆಂಬೀ ಶಬ್ದವನುಸುರುತ ಶಿವಭೂತಿ ಮುನಿಪನೇಕಾಗ್ರತೆಯಿಂ (ಭವ್ಯಾಮೃ. ೩೬). 'ತುಷಮುಷ' ಪರಾ. [?]

ತುಸವ (ನಾ). ಒಬ್ಬಾತನ ಹೆಸರು (?) : ಪೂರಟ ಗೋಸಾಸಿಗರಾ ಮಱು ಧರ್ಮಾ ತುಸವನಿನ್ ಪಡೆದು (ಇಅ. VIII, ೨೮೫-೪: 706). [?]

ತುಸು$_1$ 'ತುಸ್ಸ$_3$' ನೋ.

ತುಸು$_2$ 'ತುಸಂ' ನೋ.

ತುಸ್ತ (ನಾ). ೧. ಸುಟ್ಟ ಅಥವಾ ಹುರಿದ ಮಾಂಸ ; ಸುಂಟಗೆ. ೨. ಸುಟ್ಟ ಅಥವಾ ಹುರಿದ ಮಾಂಸದ ಕರಿಕಾದ ಮೇಲ್ಪದರ. ೩. ಹಣ್ಣಿನ ತೊಗಟೆ. 'ಬುಸ್ತ' ಪರಾ. [< ಸಂ. ಚುಸ್ತ]

ತುಹಿನ (ಗು). ೧. ತಂಪಾದ ; ಶೀತಲವಾದ. 'ತುಹಿನಕಿರಣ' ಪರಾ. (ನಾ). ೨. ಮಂಜು ; ಹಿಮ : ಸರಸಮೃಣಾಳಿಕೆಯಂ ಮೃದುತರ ತುಹಿನಂ ಕೊರಗಿಪಂತೆ ಶಾಂತಿರಸಕ್ಕಾಗರಮೆನಿಪ ತಪಮೆ ನಿನ್ನಂ ಕೊರಗಿಸುತಿರೆ (ಕಾದಂಉ. ೫೫೫). ೩. ಬೆಳುದಿಂಗಳು ; ಚಂದ್ರಿಕೆ : ತುಹಿನ ಸದೃಶಕಾಂತಿಯಿಂದ ಶೋಭಾಯಮಾನವಾದುದಾಗಿ (ಜ್ಯೋತಿರ್ವಿ. ೨೦೧). ೪. ಕರ್ಪೂರ : "ಪ್ರಾಲೇಯಮೆನಲು ಘನಸಾರಮೆನೆ ಪಟ್ಟಿ ಹಿಮವಾಳುಕಂ ಚೀನಿ ತುಹಿನಂ ಪನ್ನೆಯಕ್ಕು" (ಮಂಗರಾ. ೯೯-೨೨). [ಸಂ.]

ತುಹಿನಕಣ (ನಾ). ಮಂಜಿನ ಸಣ್ಣ ಹನಿ ; ಹಿಮಬಿಂದು : ಚಂದ್ರಿಕೆಯಂ ಸೇವಿಸಿದ ಚಕೋರಕ್ಕೆ ಬಾಟ್ತಿಯೇ ತುಹಿನಕಣಂ (ಪಂರಾಮಾ. ೧೦-೪೦).
[ತುಹಿನ + ಕಣ$_3$]

ತುಹಿನಕರ (ನಾ). = ತುಷಾರಕರ: ದಿಗ್ನಾಯಕಚೂಡಾಮಣಿ ಲಗ್ನೋದಯ ಶಿಖರನೊಪ್ಪಿದಂ ತುಹಿನಕರಂ (ಅಜಿಪು. ೬-೪೧) ; ಇವರೆನ್ನ ಪುಣ್ಯಕೀರ್ತಿ ಪ್ರಭಾವನಧಿವರ್ಧನತುಹಿನಕರರೂಪರು (ಸಿದ್ಧರಾ. ೧-೨). [ಸಂ.]

ತುಹಿನಕಿರಣ (ನಾ). = ತುಷಾರಕರ : ಬೆಳಗುವ ಪಳಿಕಿನ ಸಱಿಯೊಂದು ... ತುಹಿನಕಿರಣಮಂಡಲದೊಳಗಣ ಹರಿಣಂಬೊಲೊಪ್ಪಿ ತೋಱಿತ್ತಾಗಳ್ (ಕಾವ್ಯಸಾ. ೧೦೫೦ ಕೂದ್ರಳ). [ತುಹಿನ + ಕಿರಣ$_1$]

ತುಹಿನಕ್ಷೋಣೀಧ್ರ (ನಾ).=ತುಷಾರಾದ್ರಿ: ಎಲೆ ಇದಲ್ತೆ ತುಹಿನಕ್ಷೋಣೀಧ್ರ ದುತ್ತುಂಗಸಾನುಗಳ್ (ಶಮದ. ೫೬ ಪ್ರಯೋ).
[ತುಹಿನ + ಕ್ಷೋಣೀಧ್ರ]

ತುಹಿನಕ್ಷ್ಮಾಧರ (ನಾ). =ತುಷಾರಾದ್ರಿ : ತುಹಿನಕ್ಷ್ಮಾಧರ ಜಾತಾಲೋಲೇಕ್ಷಣ ... ಜಯ ಸೂಕ್ಷ್ಮಾಕಾರಾ (ಉದ್ಧವೇ. ೩-೩).
[ತುಹಿನ + ಕ್ಷ್ಮಾಧರ]

ತುಹಿನಗಿರಿ (ನಾ). = ತುಷಾರಾದ್ರಿ : ಬಳಸಿರ್ದಭ್ರಾಳಿಯಿಂದು ತುಹಿನಗಿರಿ ಶಿಲಾಪಟ್ಟವೆಂಬಂತೆ ಚೆಲ್ವಾದ ಲತಾಂತಂ (ಕಾದಂಪೂ. ೭೯); ಹೊಳೆಹೊಳೆವ ಕೋಕನದಪಂಕ್ತಿಗಳ ಬಣ್ಣಮುಜ್ವಲದಿಂದ್ರಚಾಪದಾಕಾರಮಂ ಸಂತತಂ ಪಳಿವಂತೆ ಕೊಳದೊಳಾರಾಜಿಸಿತು ತುಹಿನಗಿರಿರಾಜನಂದನೆಯ ಕಣ್ಗೆ (ಚೈಮಿಭಾ. ೧೫-೧೦). [ತುಹಿನ + ಗಿರಿ$_1$]

ತುಹಿನಗು (ನಾ). = ತುಷಾರಕರ : ಅತಿಬಳ ತುಹಿನಗು ನಿರ್ಝರತತಿಯೆನಿಸಿದ ಮದ್ಗಿರೀಂದ್ರಮಂ ಚಂಡಕರದ್ಯುತಿ ಪುಗದು (ಚಂದ್ರಪು. ೫-೭೨). 'ತೀಕ್ಷ್ಣಗು' ಹೋ. [ಸಂ.]

ತುಹಿನತೆ (ನಾ). ತಂಪು ; ಚಳಿ ; ಶೈತ್ಯ : ಅದಱ ಗೌರವದ ಶುದ್ಧತೆಯ ತುಹಿನತೆಯ ಸವಿಗಂಪಿನ ಉರವಣೆಯ ಸೊಗಸಿಂಗೆ ಕಣ್ಮನಂ ದಣಿದು (ಸಿದ್ಧರಾ. ೬-೫೬). [ಸಂ. ತುಹಿನತಾ]

ತುಹಿನದೀಧಿತಿ (ನಾ). = ತುಹಿನಪ್ರದ್ಯೋತ : ಶರತ್ತುಹಿನದೀಧಿತಿಬಿಂಬ ವಿಡಂಬ ಕೀರ್ತಿ (ಎಕ. V, ಅರಸೀ. ೧೦೨-೪ ; ಸು. 1100). [ತುಹಿನ + ದೀಧಿತಿ]

ತುಹಿನಪವನ (ನಾ). ತಂಪಾದ ಗಾಳಿ ; ತಂಗಾಳಿ : ನಿಜಸ್ವಾಂತೋತ್ಪಲಕ್ಕತ್ಯಧಿಕವಿಕಸನಶ್ರೀಯನಾದೇಯಕಾಯಂ ತನುಜಾತಂ ಸ್ವರ್ಣನಾಭಂ ತುಹಿನಪವನ ಸಂಸ್ಪರ್ಶದಂತೀಯೆ...ಅರಸುಗೆಯುತ್ತಿರ್ದನಾ ಪದ್ಮನಾಭಂ (ಚಂದ್ರಪು. ೨-೬೬). [ತುಹಿನ + ಪವನ]

ತುಹಿನಪ್ರದ್ಯೋತ (ನಾ). ತಂಪಾದ ಬೆಳಕನ್ನುಳ್ಳವನು ; ಚಂದ್ರ : ತುಹಿನಪ್ರದ್ಯೋತನುಂ ಶುಕ್ರನುಮೊಡನಿರೆ ಜಾಮಿತ್ರದೊಳ್ ಪುಣ್ಯಕಾಂತಾರಹಿತಂ ಮೇಣ್ ಪುತ್ರಹೀನಂ (ಜಾತತಿ. ೨೧-೮). [ತುಹಿನ + ಪ್ರದ್ಯೋತ]

ತುಹಿನಬಿಂದು (ನಾ). = ತುಹಿನಕಣ : ಹಿಮಸಿಕ್ತಪತ್ರದಿಂ ಬಿಳ್ದುವು ತುಹಿನಬಿಂದು ತೋರಮಳೆಹನಿಗಳೋಲ್ (ಶ್ರೀರಾಮಾ. ೨೦೦-೧೭೭).
[ತುಹಿನ + ಬಿಂದು]

ತುಹಿನಭೂಮಿಾಧ್ರ (ನಾ). = ತುಷಾರಾದ್ರಿ: ತುಹಿನಭೂಮಿಾಧ್ರಕ್ಕೆ ಸಾರ್ದಂ ಹರಪ್ರಿಯಂ (ಚಂದ್ರಪು. ೯-೬೭). [ತುಹಿನ + ಭೂಮಿಾಧ್ರ]

ತುಹಿನಮಹೀಧರ (ನಾ). = ತುಷಾರಾದ್ರಿ: ಕನಕಶಾಂತಿಕುಮಾರಂ...ಒಂದು ದೆವಸಂ ಕ್ರೀಡಾನಿಮಿತ್ತಂ ತುಹಿನಮಹೀಧರಕ್ಕೆ ಪೋಗಿ (ಶಾಂತಿಪು.೯-೧೭ ಪ).
[ತುಹಿನ + ಮಹೀಧರ]

ತುಹಿನರ್ತು (ನಾ). ಹೇಮಂತ ಋತು ; ಚಳಿಗಾಲ : ಹಬ್ಬಿ ತುಂತುರ್ ಮಂಜು, ಮರ್ದಾಯ್ತು ತುಹಿನರ್ತುಸಂಧ್ಯೆ ! (ಶ್ರೀರಾಮಾ. ೨೦೫-೨೯೬).
[ತುಹಿನ + ಋತು]

ತುಹಿನಶಿಖರಿ (ನಾ). = ತುಷಾರಾದ್ರಿ : ಮೇಘಾವಳಿ ಕಱಿಗುಂ ತುಹಿನಶಿಖರಿಯಿಂ [ಪಾಠಾಂ. ಕಿರಣದಿಂ] ಗಂಗೆವರಂ (ಅಟ್ಟಮ. ೮-೨).
[ತುಹಿನ + ಶಿಖರಿ]

ತುಹಿನಾಂಶು (ನಾ). = ತುಹಿನಕರ. 'ತುಹಿನಾಂಶುಬಿಂಬ' ಪರಾ.
[ತುಹಿನ + ಅಂಶು]

ತುಹಿನಾಂಶುಬಿಂಬ (ನಾ). = ತುಹಿನಾಂಶುಮಂಡಳ : ಪೆಱದೆಗೆವ ತಮಂ ತಟ್ತಿಮೆದುಱುಗಲೆನಲ್ಪೂರ್ವದಿಗ್ವಧೂವದನಂ ಕಣ್ತೆಱೆದಪೊಲದೇಂ ಬೆಳರ್ತುದೊ ಕೆಱೆದೆಡೆ ತುಹಿನಾಂಶುಬಿಂಬಮುದಯಿಪ ಪದದೊಳ್ (ಮಲ್ಲಿಪು. ೭-೨೭). [ತುಹಿನಾಂಶು + ಬಿಂಬ]

ತುಹಿನಾಂಶುಮಂಡಳ (ನಾ). ಚಂದ್ರಮಂಡಲ; ಚಂದ್ರಬಿಂಬ : ನಭೋವಧೂ ಸೂಡಿ ಬಿಸುಟ್ಟ ಮಾಲ್ಯಮಂಡಳದವೊಲಿರ್ದುದಸ್ತಗಿರಿಮಸ್ತಕದೊಳ್ ತುಹಿನಾಂಶುಮಂಡಳಂ (ಜಗವಿ. ೦೬-೦೩೫).

[ತುಹಿನಾಂಶು + ಮಂಡಳ (= ಮಂಡಲ)]

ತುಹಿನಾಂಸು (ನಾ). = ತುಹಿನಕರ : ಗುಣಾರ್ನ[ವ]ತುಹಿನಾಂಸು ಶೋಭನನುದಾರದ ತಾಯ್ಮನೆ (ಸಾಇತಿ. XX, ೭೭-೨೪ ; 1118).

[P ಇದು 'ತುಹಿನಾಂಶು' ಎಂಬುದರ ಅಪಲಿಖಿತ]

ತುಹಿನಾಗಜೆ (ನಾ). ಹಿಮವಂತನ ಮಗಳು ; ಪಾರ್ವತಿ : ತುಹಿನಾಗ ಜಾರ್ಧಾಂಗ ... ಎಮ್ಮಯ ಕೃತಿಯ ಭೂಗಗನದಿಗ್ಭರಿತಮಾಗಿ ವಸರಿಸು ವಿನಂ ಸಾಗಿಸುವುದಳ್ಕುಂದ (ಧಾವಚಂ. ೦-೦). [ಸಂ. ತುಹಿನಾಗಜಾ]

ತುಹಿನಾಚಲ, ತುಹಿನಾಚಳ (ನಾ) : = ತುಷಾರಾದ್ರಿ : ಕನಕನಿಭಪ್ರಭಾಂಘ್ರಿಯುಗನಂ ತುಹಿನಾಚಲವರ್ಣಮಧ್ಯದೇಹನಂ ... ಕಂಡು (ಪಂಚತಂ. ೦೬೦-೦); ನಿದಶರೀರಮಂ ಕೆಡಹಿ ತುಹಿನಾಚಲದೊಳು ಸಜ್ಜನರ ಗತಿವಡೆವೆಂ (ಕೃಮಿಭಾ. ೪೪-೭೬). **ತುಹಿನಾಚಳ** : ಇತ್ತ ಸೇನಾನಿಯುತ್ತರಭರತದ ಪಶ್ಚಿಮಖಂಡಮಂ ಬಾಯ್ಕೆಳಿಸಿ ಬಂದು ವಿಜಯಕಟಕಂ ಬಿಡಿದು ತುಹಿನಾಚಳ ಸಿಂಧೂಪಾಂತದೊಳ್ ಬಿಟ್ಟರೆ (ಶಾಂತಿಪು. ೦೦-೫೬ ವ) ; ಸುಂದರ ತುಹಿನಾಚಳ ಸಂಕ್ರಂದನಗಜ ... ಯಶೋಭಾಸುರನೆಂದು ಮನಂಗೊಂಡು (ಸುಳುಮಾ. ೦-೫೬). [ತುಹಿನ + ಅಚಲ]

ತುಹಿನಾಚಳ ' ತುಹಿನಾಚಲ ' ನೋ.

ತುಹಿನಾದ್ರಿ (ನಾ). = ತುಷಾರಾದ್ರಿ : ಭದ್ರಾಸನಮಂ ಭುಜವಿಜಯದ್ರವಿಣಂಗವನಿಪತಿಗೆ ಕೊಟ್ಟಿಱಗೆ ಯಶೋಭದ್ರೈಕತಿರಸ್ಕೃತ ತುಹಿನಾದ್ರಿ ಜಗದ್ಬಂಧುಸಿಂಧುದೇವಿಯನರಸಂ ಪೋಗವೇಟ್ಟು (ಶಾಂತಿಪು. ೦೦-೫೭).

[ತುಹಿನ + ಅದ್ರಿ]

ತುಹಿನಾದ್ರೀಂದ್ರ (ನಾ). ಶ್ರೇಷ್ಠವಾದ ಹಿಮಾದ್ರಿ: ಬಹುತಾಪಕ್ಕೆ ಬಿಗುರ್ತು ವಿಷ್ಣುಪಡೆವಂ ಮತ್ಸ್ಯಾವತಾರಕ್ಕಿನು ತುಹಿನಾದ್ರೀಂದ್ರಮನೊತ್ತುಗೊಂಡು ನಡೆವಂ (ಪಂಚಾಮೂ. ೭-೮೯). [ತುಹಿನ + ಅದ್ರಿ + ಇಂದ್ರ]

ತುಹಿನೋದ್ಗತಿ (ನಾ). ತಂಪಿನ ಏಳಿಗೆ ; ಹೆಚ್ಚು ತಂಪು; ಶೈತ್ಯಾತಿಶಯ : ಸುತರಿಲ್ಲದ ಸಿರಿ ತುಹಿನೋದ್ಗತಿಯಿಲ್ಲದ ವಾರಿ...ಮೆಜ್ಜಿದಪುದೇ (ಪಂಪ್ರಪು. ೭-೪೩). [ತುಹಿನ + ಉದ್ಗತಿ]

ತುಳ ' ತುಲ ' ನೋ.

ತುಳಕಲು ' ತುಟಿಕಲ್ ' ನೋ.

ತುಳವೇಂದ್ರ (ನಾ). ತುಳುವದೇಶದ ರಾಜ,—ಒಡೆಯಂ : ತದ್ವಂಶೇ ದೇವಕೀ ಜಾನಿರ್ದಿದೀಪೇ ತಿಂವುಧೂಪತಿಃ ಯಶಸ್ವೀತುಳವೇಂದ್ರೇಷು ಯದೋಃ ಕೃಷ್ಣ ಇವಾನ್ವಯೇ (ಎಳ್. VII, ತಿವಪು. ೧-೧೩ ; 1518).

[ತುಳವ$_0$ (< ತುಳು) + ಇಂದ್ರ]

ತುಳಸಿ ' ತುಲಸಿ ' ನೋ.

ತುಳಸಿಕಟ್ಟೆ ' ತುಲಸಿಕಟ್ಟೆ ' ನೋ.

ತುಳಸಿದಳ (ನಾ). ತುಳಸಿಯ ಕಂಡಿ,—ಎಲೆ : ಹಸಯು ಮಗುವನು ವೊನ್ನೆ ಬಂದವರು ನೋಡಿ...ಹಸಿ ತುಳಸಿದಳ ನೀರ ಒಣಬಾಯೊಳೂಡಿ (ಕಎಪು. ೪೪-೨). [ತುಳಸಿ (= ತುಲಸಿ) + ದಳ$_2$ (= ದಲ)]

ತುಳಸಿಪೂಜೆ ' ತುಲಸಿಪೂಜೆ ' ನೋ.

ತುಳಸಿಮಾಲೆ ' ತುಲಸಿಮಾಲೆ ' ನೋ.

ತುಳಸೀಪತ್ರ (ನಾ) : ತುಳಸಿಯ ದಳ,—ಎಲೆ: ತುಳಸೀಪತ್ರ ಸಂದೋಹದಿಂ ಮಾಧವಪಾದಾಂಭೋಜಮಂ ಪೂಜಿಸಿ (ಹೂಡಚಂ. ೧೫-೨೯); ತುಳಸೀಪತ್ರ-ಧಾರ್ಮಿಕ ದೃಷ್ಟಿಯಿಂದ ಬಹಳ ಮಹತ್ತ್ವವುಳ್ಳುದಾಗಿದೆ (ಭಾಹಬ್ಯಾ. ೦೫೭).

[ಸಂ. ತುಲಸೀಪತ್ರ]

ತುಳಸೀಮಣಿ ' ತುಲಸೀಮಣಿ ' ನೋ.

ತುಳಸೀಮಾಲೆ (ನಾ). = ತುಲಸಿಮಾಲೆ : ಸಾಲ ಕಿಂಡಿಡೆ ವೀಣೆ ತುಳಸೀ ಮಾಲೆಯೊಪ್ಪುವ ಮುನಿವರೇಣ್ಯನು ಶೂಲಿ ಕಳುಹಲು ಬಂದ ನಾರದ (ಕಾಶಿಖಂ. ೪೪-೮). [ಸಂ. ತುಲಸೀಮಾಲಾ]

ತುಳಸೀವಿವಾಹ ' ತುಲಸೀ ವಿವಾಹ ' ನೋ.

ತುಳಾಡಿ (ನಾ). ಜಟ್ಟಿಕಾಳಗದ ಒಂದು ವರಸೆ: ಕಡಕಿ ಕಕ್ಕವಡಂ ಮುಹಡಂ ತುಳಾಡಿ [ಪಾಕಾಂ. ಡಿ] ಸಂದಸುವಿಡಿವಟ್ಟಿಸಂ ಗುಣವಳುಂಬುಗೆ ... ಎನಿಪ್ಪ ಜೆಟ್ಟಿಗನ ನಚ್ಚಿನ ಬಿನ್ನಣವೊಪ್ಪೆ ಕಾದಿದರ್ (ಪಂದ್ರಪು. ೫-೭೮) ; ಚಡಿಕೆ ತುಳಾಡಿ ಪೊಟ್ಟಮುಡುಹಂ ಮುಹಡಂ ದಣುವಟ್ಟಿ ಪಟ್ಟಸಂ ಎಂದು ಮಲ್ಲಮಾತಂ ಮಾಡಿ (ಅನಂಪು. ೪-೨೭). [?]

ತುಳಾಧರ (ನಾ). ೧. ತಕ್ಕಡಿಯನ್ನು ಹಿಡಿದುಕೊಂಡಿರುವವನು : ಬಂಡಂಗಳ ಬೆಲೆಯಂ ಚಿಂತಿಸುವಂ ತುಳಾಧರಂ ತೌಳಿನಿಳಯದಾದಿತ್ಯಂಶಂ (ಜಾತಕ. ೦೯-೦೯). ೨. ವ್ಯಾಪಾರಿ ; ಬಣಜಿಗ. [ಸಂ. ತುಲಾಧರ]

ತುಳಾಪುರುಷ 'ತುಲಾಪುರುಷ' ನೋ.

ತುಳಾಮಾನವಿಶುದ್ಧಿ 'ತುಲಾಮಾನವಿಶುದ್ಧಿ' ನೋ.

ತುಳಿ$_1$ 'ತುಟಿ$_1$' ನೋ.

ತುಳಿ$_2$ 'ತುಟಿ$_2$' ನೋ.

ತುಳಿ$_3$ (ನಾ). ತುಪ್ಪಟ (?) : ಹಂಸೆಯ ತುಳಿಯ ಮೇಲ್ವಾಸಿನಲಿ ಪವಡಿಸು ವೀಕೆ ಇಂದೀಗ ... ಕಲುನೆಲದೊಳೂಜಗಿದಳು (ಕುದ್ಯಾಅ. ೯-೩೦).

[< ಸಂ. ತೂಲ ?]

ತುಳಿತ (ನಾ). ಕಾಲಿನಿಂದ ವೆಟ್ಟುವಿಕೆ : ಆ ಭಸ್ಮವು ಪರಮೇಶ್ವರನ ಪಾದಗಳ ತುಳಿತದಿಂದ ಎದ್ದು ... ಆ ಪರಶಿವನ ಶರೀರವಂ ವ್ಯಾಪಿಸಿ (ಸೌಗಂಧಿ. ೩೧೦-೦೮). [ತುಳಿ$_1$ (< ತುಟಿ$_1$) + – ತ$_2$]

ತುಳಿಯಾಳು (ನಾ). ಶೂರನಾದ ಯೋಧ : ಕಾದುತಲಿಹ ತು[ಪಾಕಾಂ. ೪[ಳಿಯಾಳು ದೊರೆಕುಮಾರಕರ ಚಲವನಜಿತು ದಳಪತಿ ನಂಜರಾಜೇಂದ್ರಸಲೆ ಮನ್ನೆಯರೊಳಿಂತೆಂದ (ಕಂನವಿ. ೦೮-೦೪೯).

[P ಇದು 'ತುಳಿಲಾಳು' ಎಂಬುದರ ಅಪಲಿಖಿತವಿರಬಹುದು.]

ತುಳಿಯಿಸು 'ತುಟಿಯಿಸು' ನೋ.

ತುಳಿಲ್$_1$ 'ತುಟಿಲ್$_1$' ನೋ.

ತುಳಿಲ್$_2$ 'ತುಟಿಲ್$_2$' ನೋ.

ತುಳಿಲಾಳ್ 'ತುಟಿಲಾಳ್$_2$' ನೋ.

ತುಳಿಲಾಳು$_1$ 'ತುಟಿಲಾಳ್$_1$' ನೋ.

ತುಳಿಲಾಳು$_2$ 'ತುಟಿಲಾಳ್$_2$' ನೋ.

ತುಳಿಲು$_1$ 'ತುಟಿಲ್$_1$' ನೋ.

ತುಳಿಲು$_2$ 'ತುಟಿಲ್$_2$' ನೋ.

ತುಳಿಲುಗೆಯ್ 'ತುಟಿಲ್ಗೆಯ್' ನೋ.

ತುಳಿಲುಗೆಯಿ 'ತುಟಿಲ್ಗೆಯ್' ನೋ.

ತುಳಿಲ್ಗಾಣ್ಕೆ (ನಾ). ಪ್ರಣಾಮಪೂರ್ವಕವಾಗಿ ಒಪ್ಪಿಸುವ ಕಾಣಿಕೆ ; ಭಕ್ತಿಯಿಂದ ಕೊಡುವ ಕಾಣಿಕೆ : ಮರದ ತುದಿಹರೆಯ ಮೇಲಿರ್ದು ಕವಿಯಾದನ್, ಕುಟೀರದಿಂ ಪೊಣ್ಮುತಿರ್ದೊಂದೊಂದು ರವಕೆ ರೋಮಾಂಚನವೆ ತನ್ನ ಭಕ್ತಿಯ ತುಳಿಲ್ಗಾಣ್ಕೆಯಪ್ಪಂತೆಪೋಲ್ (ಶ್ರೀರಾಮು. ೪೭೫-೦೦೩). [ತುಳಿಲ್$_1$ (< ತುಟಿಲ್$_1$) + ಕಾಣ್ಕೆ]

ತುಳಿಲ್ಗುಂದು (ಕ್ರಿ). ಶಕ್ತಿಗುಂದು; ಬಲಹೀನವಾಗು : ಕಣ್ಗೆಟ್ಟು ಕಾಲ್ಗಾಣದಾದನಾ ಕಾಳ್ಗೆಯ್ತಕಳ್ಕುತೆ ತುಳಿಲ್ಗುಂದಿ ನಾಲ್ಕೊಗು (ಧಾವಚಂ. ೩-೨೬).

[ತುಳಿಲ್$_2$ (< ತುಟಿಲ್$_2$) + ಕುಂದು$_1$]

ತುಳಿಲ್ಗೆಯ್ 'ತುಟಿಲ್ಗೆಯ್' ನೋ.

ತುಳಿಲ್ಗೈ 'ತುಟಿಲ್ಗೆಯ್' ನೋ.

ತುಳಿಲ್ಗೊಳ್ 'ತುಟಿಲ್ಗೊಳಂ' ನೋ.

ತುಳಿವೆಡೆ (ನಾ). ಒಂದು ಬಗೆಯ ವಸ್ತ್ರ (?) : ಮೆಟ್ಟುವೆಡೆಗಳೊಳೆಲ್ಲಂ ಪಾಸಿ ಕಾರೋಹಣದ ಕಕ್ಕರವಟಯಿಗೆಯ ಚಿತ್ರಾವಟಿಯ ಪಳಿವೆಡೆಯ ತುಳಿವ [ಪಾಠಾಂ. ಲೆ] ಡೆಯ ನೆಳಲಪಾಣಿಯ ಬಣ್ಣದ ಕಣದ ಬಣ್ಣ ವಣ್ಣಿಗೆಯ ಜವಳಿಗಳನೆ ಮೊಗಂ ನೋಡದೆ ಸೂಸಿದಾಗಳ್ (ಆದಿಪು. ೪-೩೪ ವ). [?]

ತುಳಿಸು 'ತುಟಿಯಿಸು' ನೋ.

ತುಳು, ತುಲು, ತುಳುವ$_1$, ತುಟುವ (ನಾ). ೧. ಕನ್ನಡನಾಡಿನ ಪಶ್ಚಿಮಕರಾವಳಿಯ ಒಂದಂ ಪ್ರದೇಶ : ಆಂಧ್ರ ದ್ರಾವಿಡ ಹೈವ ತುಳು ಮಲೆಯ ಕಲರ ಕಲಾಮೂಲ (ಎಕ. VII, ಶಿವಮೊ. ೭೯-೩೦ ; ಸು. 1154 ?). ೨. ತುಳು ದೇಶದ ಭಾಷೆ ; ದ್ರಾವಿಡಭಾಷೆಗಳಲ್ಲಿ ಒಂದಂ : ತುಳು ಭಾಷೆಯನ್ನು ಆಡುವ ಪ್ರದೇಶ ಮೊದಲು ಮದರಾಸು ಪ್ರಾಂತ್ಯಕ್ಕೆ ಸೇರಿತ್ತು (ದ್ರಾವಿವಿ. ೧೪೦). △ **ತುಲು** : ೩. ತುಳು ದೇಶದವನು : ತೆಲುಗರು ತೆರುವ ಗ ೩೨ ಪ ೫ ತುಲು ಮಳೆಯಾಲರು ತೆರುವ ಗ ೩೨ ಪ ೫ (ಎಕ. XV, ಬೇಲೂರು. ೨೯೮-೭೨ ; 1278). **ತುಳುವ$_1$** : ೧. ದ್ವಾರಾವತೀ ಪುರವರಾಧೀಸ್ವರಂ ತುಳುವಬಳಜಳಧಿ ಬಡಬಾನಳಂ (ಮೈಆರಿ. ೧೯೨೮, ೯-೨೧ ; 1133) ; ಉಲಿವ ಗೆಜ್ಜೆಯ ಚೆಲ್ಲಣದ ಹೊಂಬಳಿದ ಹರಿಗೆಯ ಹೊಳೆವ ಕಡಿತಲೆಗಳ ವಿಲಾಸದೊಳಂದು ಹೊಕ್ಕುದು ತುಳುವಪಡೆ ಕಡುಗಿ (ಕುವ್ಯಾಭೀ. ೪-೩೩) ; ಈ ಗ್ರೀಕ್‌ಪ್ರಹಸನದ ದೃಶ್ಯ ತುಳುವದೇಶದ ಸಮುದ್ರತೀರದ್ದೇ ಇರಬೇಕೆಂದೂ . . . ವಿದ್ವಾಂಸರೂ ಊಹಿಸಿದ್ದಾರೆ (ದ್ರಾವಿವಿ. ೭೮). ೩. "ತುಳುವಂ ತುಳುವನಕ್ಕು" (ಮಂಗರಾ. ೧೧೨-೭) ; ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು ಮೆಯ್ಯುಬ್ಬಿ ಕೇಳ ಬೇಕಣ್ಣ (ಭರಜ. ೧-೭). △ **ತುಟುವ** : ೩. ಬಟಿಕೀಶ್ವರನರಸಮುಖರ್ ತುಟಿಲಾಳ್ಗಳ್ ದೊರೆಗಳೆನಿಸಿ ತೊಲಗಿದರೈವರ್ ತುಟುವರ್ (ಚಿಕವಿ. ೨-೦೪).

[ದೇ.॥ ತಮಿ. ತುಳು. ತುಳು, ತುಳುವ ; ಮಲ. ತೆಲು. ತುಳು]

ತುಳುಂಕಾಡು, ತುಳಂಕಾಡು, ತುಳ್ಕಾಡು (ಕ್ರಿ). ೧. (ನೀರಂ ಮೊದಲಾದುವು) ಹೊರಹೊಮ್ಮು, – ಉಕ್ಕಿ ಹರಿ, – ಹೊರಸೂಸು : ವಜ್ರವೈಡೂರ್ಯಶಿಲಾಪಟ್ಟಕಂಗಳವಿರಳದೀಧಿತಿಯೆ ಕೊಳಂಗಟ್ಟಿ ತುಳುಂಕಾಡುವಂತೆ ತಿಳಿದೊಪ್ಪುವ ಸರೋವರದ ತಡಿಗಳೊಳ್ (ಜಗವಿ. ೧೬-೩೪ ವ); ನೆರೆದ ಪುರಜನದ ಸಂಭ್ರಮಂಗಳಿನಾ ಪುರದ ಕ್ಷೋಭಂ . . . ತೆಕ್ಕನೆ ತೀವಿ ತುಳುಂಕಾಡುತಿರ್ದುದು (ಅನಂಪು. ೯-೫೯ ವ). ೨. ಕದಡು ; ಕ್ಷೋಭೆಗೊಳ್ಳು ; ಅಲ್ಲೋಲಕಲ್ಲೋಲವಾಗು : ಮರುತ್ತರಂಗಿಣಿ ಮಟಲ್ತೋಱಲ್ ತುಳುಂಕಾಡೆ (ದಶಕು. ೩-೫). ೩. (ನೀರನ್ನು) ಚಿಮುಕಿಸು,– ಎರಚು : ಅನಂತರಂ ತುಮುಲಕೇಳಿಯಿಂದೋರೊರ್ವರಂ ತುಳುಂಕಾಡುವಾಗಳ್ (ಚಂದ್ರಪು. ೭-೦೪೨ ವ). ೪. ಮುಳುಗಿ ಏಳು ; ಓಲಾಡು : ಕೊಳಂಗಳೊಳ್ ತುಳುಂಕಾಡುವ ಬಾಳೆ . . . ನೋಡುವರಟ್ತಿಯನುಂಟು ಮಾಡುಗುಂ (ಶಬ್ದಾನು. ೯೬ ಪ್ರಯೋ). **ತುಳುಕಾಡು** : ೧. ನಿಜ ತುಂಬಿದ ಭಕ್ತಿ ತುಳುಕಾಡದವರ ಸಂಗವೇನು ಬಾತೆ (ಬಸವ. ೬೩೪) ; ದರಹಸಿತ ಸಿತಕಾಂತಿ ಮುಖಪಂಕೇರುಹದೊಳು ತುಳುಕಾಡೆ (ಬಸಪು. ೫೨-೩೯) ; ಕರುಣರಸ ತುಳುಕಾಡೆ ಕಪಿಕುಂಜರನ ಕಂಜದಳಾಯತಾಕ್ಷನು ಬರಸೆಳೆದು ಬಿಗಿಯಪ್ಪಿದನು (ತೊರರಾ. ೪-೭-೪) ; ತುಳುಕಾಡಿತಾ ನಾಡ ಸಿರಿ (ಚೈಮಿಭಾ. ೨೯-೦೨) ; ತುಳುಕ್ಯಾಡತಾವ ತೂಕಡಿಕೆ (ಗಂಗಾತ. ೭೦-೩) ; ಆವೇಶ ತುಳುಕಾಡುತ್ತದೆ (ಶಿಕ್ಷದ. ೧೧೩). ೨. ಅಬುಜಭವಾಂಡಘಟ ಬಿರಿಯೆ ವನಧಿಗಳು ತುಳುಕಾಡೆ . . . ಬೊಬ್ಬಿಱಿದುಬ್ಬಿದನು ರಘುಜ (ತೊರರಾ. ೩-೬-೭). ೪. ಯಶೋದೆ-ರಾಗರಸಾಬ್ಧಿಯೊಳ್ತುಳುಕಾಡೆ . . . ಮುರಾರಿ ಕೈಪಱ ಗಾಡಿದಂ (ಜಗವಿ. ೩-೫೭). **ತುಳ್ಕಾಡು** : ೨. ಮೌರ್ವೀಲತಾಸ್ಫಾಲನಂಗೆಯ್ಯೆ . . . ವ್ಯೋಮಗಂಗಾಸಲಿಲಂ ತುಳ್ಕಾಡೆ (ಜಗವಿ. ೮-೫೦) ; ಬಹುಚರಣದಾಟಕೆ ನೆಲ ನಡುಗುತಿರೆ ವಾರಿನಿಧಿ ಬೆಂಬಳಿಯಲುಱ ತುಳ್ಕಾಡಿ ತಾಂಡವವಾಡಿದನು ಸುರಪ (ಸಾಳ್ವಭಾ. ೩೩-೧೦೪). ೩. ನವನಾಳಿಕೇರ ರಸಪೂರಮಂ ತುಳ್ಕಾಡಿ . . . ಪೊಟ್ಟುಗಳೆವುದು ನೃಪನ ಪೆಂಡವಾಸಂ (ಪುಪ್ಪಪು. ೨-೪೪). [ತುಳುಂಕು$_1$ + ಆಡು$_1$]

ತುಳುಂಕು$_1$, ತುಳುಕು, ತುಳ್ಕು (ಕ್ರಿ). ೧. ತುಂಬಿ ಹೊರಸೂಸು – ಹೊರಹೊಮ್ಮು : ತಮ್ಮಣ್ಣನ ಬಿನ್ನನಾದ ಮೊಗಮುಮಂ ಕಂಡು ಕಣ್ಗಳಿಂ ನೆತ್ತರ್ ತುಳುಂಕೆ (ಪಂಪಭಾ. ೭-೫ ವ) ; ಸ್ಮರರಾಗಾಮೃತಮಂ ತುಳುಂಕಿ (ಅರ್ಧನೇ. ೨-೭೮) ; ದರಹಾಸಂ ಮುಖದಿಂ ತುಳುಂಕುತಿರೆ (ಕುಸುಮಾ. ೧೨-೭೯) ; ಗಾನರಸವಾರ್ಧಿಯನ್ನೈದೆ ತುಳುಂಕುವಾ ಲಸದ್ವೇಣು ವಿಂಚರಗಳನೆ ಪೊಣ್ಮಿಪ ಮೋಹನರೂಪದಂಗನಾಶ್ರೇಣಿ ವಿರಾಜಿಕುಂ (ಉದ್ಭಟ. ೧-೭೮) ; ಪೊಣ್ಮುವ ಸುಖಬಾಷ್ಪಂ ತುಳುಂಕೆ ಪೇಳ್ವುದು ಕೃತಿಯಂ (ರಾಜಶೇ. ೧-೫೨). ೨. ಕದಡು ; ಕ್ಷೋಭೆಗೊಳ್ಳು : ಜಳಧಿಯ ನೀರ್ ತುಳುಂಕಿದವು ಧಾತ್ರಿ ತಿಱ್ಱಂದಿಱಿದತ್ತು (ಮಹಾನೇ. ೧೦-೦೨೯). ೩. ಕ್ಷೋಭೆಗೊಳಿಸು ; ಕದಡುವಂತೆ ಮಾಡು : ಗಂಗೆಯ ನೀರಂ ತೋಳೊಳ್ ತುಳುಂಕಿ ಮಗುಟ್ಟು ಬಂದಂಗೆ ವಿಷದ ಲಡ್ಡುಗೆಯನಿಕ್ಕಿಯುಂ (ಪಂಪಭಾ. ೨-೩೨ ವ). ೪. ಚಿಮುಕಿಸು ; ಎರಚು ; ಸಿಂಪಡಿಸು : "ತುಳುಕು, ತುಳುಂಕು – ಸೇಚನೇ" (ಶಮಧಾ) ; ವಾರಸ್ತ್ರೀಜನಮಿದಿರೊಳ್ ತುಳುಂಕೆ ನೀರಂ ನೀರಧ್ರಸ್ತನತಟದೊಳ್ ಕೃತೋಪಹಾರಂ ಹಾರಶ್ರೀಗೆಣೆಯೆನಿಸಿತ್ತು ವಾಃಕಣೌಘಂ (ಕಾವ್ಯಾವ. ೫-೪೮) ; ನಾಡೆ ಮುಳುಂಗಿ ಮೂಡಿದರಱುಂಬಿ ತುಳುಂಕಿದರಂಬುವಂ (ಹಮ್ಮೀರ. ೪-೨೭). ೫. ಚೆಲ್ಲು; ಒಗೆ ; ಬಿಸುಡು ; ಹೊರಹಾಕು : ಮುಗಿಲ ನೀರಂ ನಚ್ಚಿ ಡೊಣಿಯ ನೀರಂ ತುಳುಂಕಿದ ಕೋಡಗದಂದಂ ನಿನಗಕ್ಕುಂ (ಪಂಚತಂ. ೬೮-೮). **ತುಳುಕು** : ೧. ಅನುರಾಗರಸಂ ಕಟಾಕ್ಷದಿಂ ತುಳ್ಕೆ ಕುಚಾಗ್ರದಿಂ ತುಳುಕೆ ಹಾರಮರೀಚಿ (ಜಗವಿ. ೧೪-೧೦೩); ವೀರಭಕ್ತನ ಪದನಿಹತಿಗೆ ಶಿರೋರುಗಂಗಾವಾರಿ ತುಳುಕಿಯಪಾರ ಪಾದೋದಕವೆನಿಸಿ (ಬಸಪು. ೧೮-೪೮); ಹೃದಯಶಿಖಿಯುಱ ತಳಿತು ಲೋಚನವಾರಿ ತುಳುಕಿತು ಪವನಜಾದಿಗಳ (ಕುವ್ಯಾದ್ರೋ. ೭-೮) ; ಸಲೆ ಮೋಹರಸವಧಿಕ ಭಕ್ತಿರಸಮೊಡವೆರದು ತುಳುಕಲ್ (ಚಿಬಪು. ೬-೪) ; ಅಶ್ರು ನಯನದೊಳ್ತುಳುಕೆ (ಚೈಮಿಭಾ ೧೮-೫೨) ; ಲಾಲಾಜಲಂ ತುಳುಕಲ್ ಬರ್ಪತೊದಲ್ ಮನಂಗೊಳಿಸಲ್ (ಶಾಕುಂತ. ೧೦೫-೧೮೦) ; ತುಂಬಿದ ಕೊಡ ತುಳುಕುವುದಿಲ್ಲ (ಗಾದೆ). ೨. ಧರೆಯೊರ್ಗುಡಿಸಲಿ ಶರನಿಧಿ ತುಳುಕಲಿ (ದೀಕ್ಷಾಬೋ. ೯೧-೧೫) ; ವಿಕಲ್ಪಬಿಂದುಗೆ . . . ತುಳುಂಕಿದಂ, ತುಳುಕಿದಂ (ಶಮದ. ೩೬ ಪ್ರಯೋ) ; ನೆಳಲು ಸುಳಿಯಲು ದುತಿಯೆಂದಪ್ಪಳಿಸೆ ವಾಸುಕಿ ನೊಂದನಬುಧಿ ತುಳುಕಿದವು (ಕುವ್ಯಾದ್ರೋ. ೩-೦೪) ; ಜಲಚರಗಳಟ್ಟುಳಿಗೆ ತುಳುಕಿ ಮೇಲಕೇಳ್ವ ಬಲುಸೀರ್ಪನಿಗಳ ಮೊತ್ತದಿಂದಂಬುಧಿಯಳವಟ್ಟು ಮೆಱಿದುದಳ್ತಿಯಲಿ (ಕಂನವಿ. ೪-೨೩). ೪. ಭರದಿಂದಂ ತುಳುಕಿದ ನೀರುರದೊಳ್ ಹಾರಾಂಶುರುಚಿಯನಿರ್ಕುಟಿಗೊಳೆ (ಆದಿಪು. ೧೪-೧೦೮) ; ಕರತಳವಾರಿ ತಳ್ತು . . . ತನೂದರಿಯರಲಂಪಿನಿಂ ತುಳುಕೆ ಕೃಷ್ಣನ ಮೇಲೆ (ಜಗವಿ. ೧೪-೯೮). ೫. ನಿನ್ನ ರಕುತವ ತುಳುಕುವೆನು ಹಿಂದಿಕ್ಕಿಕೊಂಬನ ತೋಱು ತೋಱಿನುತ...ಕೈಮಾಡಿದನು (ಕುವ್ಯಾಳ. ೧೨-೨೪) ; ಮಳೆಯ ಮುಗಿಲ ನೋಡಿ ಮನೆಯೊಳಗಿರ್ದುದಕವ ತುಳುಕುವ ಕಡು ಹೆಡ್ಡರಂತೆ (ನೇಮಿಸಂ. ೩೪-೩೨). ೬. (ಬಾಣ ಮೊದಲಾದ ಆಯುಧಗಳನ್ನು ಎದುರಾಳಿಯ ಮೇಲೆ) ಎಸೆ,—ಪ್ರಯೋಗಿಸು : ಶರಾಳಿಯ ತುಳುಕಿ ಹೊಕ್ಕನು ಸತ್ಯಜಿತು (ಕುವ್ಯಾದ್ರೋ. ೨-೪೩) ; ತುಳುಕಿ

ದನೂನ ಶರಜಾಲಮಂ ಕರಿತುರಗರಥ ಪದಾತಿಗಳ ಸಂದಣಿ ದಣಿಯಲು (ಕೃಮಿಭಾ. ೪-೪೩); ಬಿಲ್ಗೊಂಡು ದಿವ್ಯಾಸ್ತ್ರಮಂ ತುಳುಕಿದನು ಝೋಂಕರಿಸುತ (ತುರಂಗ. ೮೫-೨೮). ೭. ಸೇರಿಸು ; ಹೂಡು ; ಸಂಧಾನಮಾಡು : ಸೆಳೆದನಿಷುಧಿಯಲಂಬ ತಿರುವಿಗೆ ತುಳುಕಿ ಕೋಲನು ಕೋಡಕೈಯಿಂದಳವಿಗೊಯ್ಯನೆ ನಿಲುಕಿದನು ನಿಗುರಿದ ಶರೀರದಲಿ (ತೊರರಾ. ೩-೮-೬೯). ತುಳ್ಕು : ೧. "ಸೂಸಿದುದೆನೆ ತುಳ್ಕಿತೆಂಬುದು" (ರನ್ನಕಂ. ೭) ; ಚಾರು ವೀರಭಟಕೋಟಿಗೆ ರಾಗರಸಂ ಪೊದಟ್ಟು ತುಳ್ಕುತ್ತಿರೆ ಬಂದು ಮುತ್ತಿ ಮೊಗೆದಂ ವಿಭು ಗೋಕುಲಮಂ ವಿರಾಟನಾ (ಪಂಪಭಾ. ೮-೯೨) ; ತುಳ್ಕೆ ದರಸ್ಮಿತಂ ವದನದಿಂದನುರಾಗರಸಂ ಕಟಾಕ್ಷದಿಂ ತುಳ್ಕೆ (ಜಗವಿ. ೦೪-೦೦೩); ಕಂಗೊಳಿಸಿತ್ತಾ ತುಂಗಭದ್ರೆ ತುಳ್ಕುತೆ ಸೊಗಸಂ (ಉದ್ಯಟ. ೩-೮೨). ೨. ನೆಲನಂ ನುಂಗಲುಮಂಬುಧಿ ಜಲಮಂ ತವೆ ತುಳ್ಕಲುಂ . . . ಒಡರ್ಚಿದಂ ಚಕ್ರಧರಂ (ಕಾವ್ಯಾವ. ೦೦೮) ; ಕಡಲೇಳುಂ ಕದಡೆಳ್ದು ತುಳ್ಕೆ (ರಾಜಶೇ. ೬-೧೦). ೪. ಸವತಿಯ ಮೇಲೆ ಮುಂ ತುಳುಕಿ ತನ್ನಯ ಮೇಲಧಿಪಂ ಬಟಿಕ್ಕೆ ತುಳ್ಕುವ ವಿಮಲಾಂಬುಗಳ್ ತನಗೆ ಮನ್ಮಥನಂಬುಗಳಂತಿರೆ (ಜಗವಿ. ೦೪-೦೦೦) ; ಕೊಳ್ಕೊಳ್ಳೆಂದೊಡನೊಡನೆಯೆ ತುಳ್ಕುವ ಯುವತಿಯರ ಕರಪರಿಚ್ಯುತ ಸಲಿಲಂಗಳ್ಕೊಳೆ (ಶಮದ. ೨೩೦ ಪ್ರಯೋ). ೫. ಸರೋವರಾಂಬುವನಿತಂ ತವೆ ತುಳ್ಕಿ ರಸಾತಳಂಬರಂ ಬೆದಕಿಯುಮೆಂತು ಮಪ್ಪಳಿಸಿ ಕೊಂದಪೆಂ (ಪಂಪಭಾ. ೦೩-೮೦) ; ಬೇಸಱೊಳ್ ತುಳ್ಕಿದ ಳೊರ್ಮೆಯೆ ಕಣ್ಣನೀರ್ಗಳಂ (ಶೃಂಗಾರ. ೩-೫೮) ; ತುಳ್ಕುತಿರ್ಪುದಂ ನೆತ್ತರೆಲ್ಲರಂ ಕರೆಗೆ (ಕಾಲೂರ. ೦೬೦-೩೫೫). ೬. ಇಂತಿರದೆ ಮೂದಲಿಸಿ ಸಮ್ಮುಖವಾಗಿ ತುಳ್ಕಿದರ್ ಶರವರುಷಮಂ (ಜಿಲಪು. ೨೪-೦೭). ೮. ಹುಟ್ಟು ; ಮೂಡು ; ಉಂಟಾಗು : ಮದಕರಿಕುಳಮೋವದೆ ಬಳ್ಳಿವಾಯ್ದುಗಱಿ ತುಳ್ಕಿದ ಗಿರಿ ಪರಿವಂತೆ ಪರಿದು ಮರವಾಯ್ದಿರ್ಕುಂ (ಶಾಂತಿಪು. ೯-೦೪೦) ; ವಸುಮತಿಗೆ ಕೆನ್ನೀರ್ತುಳ್ಕೆ ತುಳ್ಕಿದಂ ಕೈಗೆಡದೆ ಸಾಯಕ ಸಮುದ್ರಮಂ ಶಾರ್ಙ್ಗಿ ಬಳಿಕ (ಜಿಲಪು. ೪೯-೪೦).

[ದೇ.॥ ತಮಿ. ತುಳಙ್ಕು, ತುಳಕ್ಕು, ತುಳುಮ್ಬು ; ಮಲ. ತುಳುಮ್ಬು; ತೆಲು. ತೊಲುಕು, ತೊನಕು ; ಪರ್ಜಿ. ತೊಲ್ಕ್]

ತುಳುಂಕು$_2$, ತುಳುಕು$_2$ (ನಾ). ಹೊರಸೂಸುವಿಕೆ ; ಹೊರಹೊಮ್ಮುವಿಕೆ. 'ತುಳುಂಕಂಗುಟ್ಟು' ಪರಾ. ತುಳುಕು$_2$. 'ದೊಂಬಿದುಳುಕು' ಪರಾ.

[<ತುಳುಂಕು$_1$. / ತಮಿ. ತುಳಕ್ಕು ; ಮಲ. ತುಳಣ್ಣು]

ತುಳುಂಕುಗುಟ್ಟು (ಕ್ರಿ). ಅತಿಶಯವಾಗಿ ತುಳುಕು ; ಹೆಚ್ಚಾಗಿ ಹೊರಸೂಸು : ಆಕೆಗಳಂಗೋಪಾಂಗದೊಳಿಂತು ನಾಟ್ಯರಸಮೆ ತೀವಿ ತುಳುಂಕುಗುಟ್ಟಿ ... ಅತ್ಯಾಶ್ಚರ್ಯಮಂ ಮಾಡಿದಾಗಳ್ (ಆದಿಪು. ೭-೦೨೫ ವ).

[ತುಳುಂಕು$_2$ + ಕುಟ್ಟು$_1$]

ತುಳುಂಕುದುಂಬು (ಕ್ರಿ). ಹೊರಚಲ್ಲುವಂತೆ ಭರ್ತಿಮಾಡು ; ತುಳುಂಕುವಷ್ಟು ತುಂಬು : ನಿನ್ನ ಬಟ್ಟಲನ್ನು ತುಳುಂಕುದುಂಬಿ ಜನ್ಮ ಸಾರ್ಥಕ ಮಾಡಿಕೊಳ್ಳುವೆನು (ಬೆಟ್ಟಅ. ೯೮-೧). [ತುಳುಂಕು$_1$ + ತುಂಬು$_1$]

ತುಳುಕಾಡು 'ತುಳುಂಕಾಡು' ನೋ.

ತುಳುಕಿಸು (ಕ್ರಿ). ಹೊರಸೂಸು; ಹೊರಚೆಲ್ಲು : ಮುಗುಳುನಗೆ ತುಳುಕಿಸುತ್ತ ಕುಳಿತಿದ್ದಳು ಬಾಲಿ (ಮಡ್ಮುಹೆ. ೯೫).

[ತುಳುಕು$_1$ (<ತುಳುಂಕು$_1$) + – ಇಸು$_2$]

ತುಳುಕು$_1$ 'ತುಳುಂಕು$_1$' ನೋ.

ತುಳುಕು$_2$ 'ತುಳುಂಕು$_2$' ನೋ.

ತುಳುಕುನೀರಾಡು (ಕ್ರಿ). ನೀರನ್ನು ಚಿಮುಕಿಸಿ ಆಟವಾಡು,–ಕ್ರೀಡಿಸು: ಧೊಮ್ಮಳಿಸಿ ತುಳುಕುನೀರಾಡಿದಂ (ಸುಳುಮಾ. ೯-೪೩).

[ತುಳುಕು$_1$ (<ತುಳುಂಕು$_1$) + ನೀರ್$_1$ + ಆಡು$_1$]

ತುಳುಕುವರಿಗೆ (ನಾ). ಒಂದು ಬಗೆಯ ಗುರಾಣಿ (?) : ತುಳುಕುವರಿಗೆಯ ಗುಳವ ವಜ್ರದ [ದಿ] ನಲಗ ಮುಱಿಯೊಡೆಯೆಚ್ಚು ಜೋದರ ತಲೆಗಳನು ತುಂಡಿಸಿದನಿಭವನು ಹೊಕ್ಕು ಬೀದಿಯಲಿ (ಕುಪ್ಯಾದ್ರೋ. ಓರಿಇ. ಪರಿ. ೨೮೯).

[ತುಳುಕು ? + ಪರಿಗೆ$_3$]

ತುಳುಕೆವಟ್ಟು 'ತುಡುಕೆವಟ್ಟು' ನೋ.

ತುಳುಗತ್ತಿ, ತುಳುವಕತ್ತಿ (ನಾ). ಈಳಿಗೆ ; ಮೆಟ್ಟುಗತ್ತಿ ; "ಈಲಿ, ಕರವಾಲಿಕೆ" (ನಾಚಿರಾ. ೫). ತುಳುವಕತ್ತಿ : "ಈಳೀ, ಕರವಾಳಿಕಾ, ೨ ತುಳುವಕತ್ತಿ ... ಈಳಿಗೆಕತ್ತಿ" (ಸಿದ್ಧಾಂತಿ. ೨೨೮). [ತುಳು ? + ಕತ್ತಿ]

ತುಳುನಾಡು (ನಾ). = ತುಳು ೧ : ತುಳುನಾಡ ಸತ್ತ ಮನೆಯಂತೆ ಪಟಯಿಸುವರ್ ...ಪಾವಿನಂತೆ ಪೊರಳ್ವರ್ (ಧರ್ಮಾಮೃ. ೩-೮೦) ; ಈ ತುರವರ ನಾಡೇ ನಮ್ಮ ತುಳುನಾಡೆಂದು ನಿರ್ಧರಿಸಲು ಅನೇಕ ಕಾರಣಗಳುಂಟು (ತುಳುನಾ. ೧೩). [ತುಳು+ನಾಡು]

ತುಳುವ$_1$ 'ತುಳು' ನೋ.

ತುಳುವ$_2$ (ನಾ). (ಕರಾ) ೧. ಮೃದುವಾದುದು; ಮೆದುವಾದುದು. 'ತುಳುವಗಾಯ್' ಪರಾ. ೨. ಒಂದು ಬಗೆಯ ಹಲಸಿನ ಹಣ್ಣು ; ಬಹಳ ಮೃದುವಾದ ಹಲಸು. [←ತುಳು. ತುಳುವೆ]

ತುಳುವಕತ್ತಿ 'ತುಳುಗತ್ತಿ' ನೋ.

ತುಳುವಗಾಯ್ (ನಾ). (ಹೀರೆಯ ಕಾಯಿಯಿಂದ ಮಾಡುವ) ಒಂದು ಬಗೆಯ ಖಾದ್ಯ : ಕೆಲವ ನವಜಿಹ್ವೆಯ ಸೊದೆಯ ಕೆಲವ ತುಳುವಗಾಯಂ ಕೆಲವ ಶೂಲ್ಯಕವನು ... ಮಾಡಿ ಹಲವು ಚಂದದೊಳು ಹೀರೆಯಕಾಯ ಪಾಕಮಂ ಹಿರಿದಾಗಿ ಹಸಮಾಳ್ಪುದು (ಸೂಪಶಾ. ೫-೭).

[ತುಳುವ$_2$ + ಕಾಯ್$_4$]

ತುಳುವಬದನೆಕಾಯ್ (ನಾ). ಬದನೆಕಾಯಿಯಿಂದ ಮಾಡುವ ಒಂದು ಬಗೆಯ ಖಾದ್ಯ : ಹದನಾದ ಬದನೆಯ ಕಾಯ ಹೊದಟ ವಗ್ಗರಣೆಯಂ ಮಾಡಿ ಪರಿಮಳವಿಕ್ಕಲದು ತುಳುವಬದನೆಕಾಯ್ವೆಸರಾದುದು (ಸೂಪಶಾ. ೪-೭). [ತುಳುವ$_2$ + ಬದನೆಕಾಯ್]

ತುಳ್ಕಾಡು 'ತುಳುಂಕಾಡು' ನೋ.

ತುಳ್ಕು 'ತುಳುಂಕು$_1$' ನೋ.

ತುಳ್ಕುವೊಳೆ (ನಾ). ತುಂಬಿ ತುಳುಕಾಡುತ್ತಿರುವ ಹೊಳೆ,–ನದಿ : ಮಸಗಿತು ತುಂಬಿ ತುಳ್ಕುವೊಳೆ ಕಾರ್ವಗಲವ್ವಳಿಪಂತೆ (ಚಿಕವಿ. ೨-೦೦೬).

[ತುಳ್ಕು (<ತುಳುಂಕು$_1$) + ಪೊಳೆ$_3$ (<ಪೊಟೆ$_1$)]

ತುಳ್ದಿಲ್ಕಾಲ್ 'ತುಟ್ದಿಲ್ಗಾಲ್' ನೋ.

ತುಳ್ಳಾಡು (ಕ್ರಿ). ೧. ಹೊರಳಾಡು ; ಉರುಳಾಡು. ೨. ಜಿಗಿದಾಡು ; ನೆಗೆದಾಡು ; ಕುಣಿದಾಡು : ತುಳ್ಳಾಡಿ ತುಳ್ಳಾಡಿ ಮುಳ್ಳಿನ ಮೇಲೆ ಬಿದ್ದ (ಗಾಬೆ). [ತುಳ್ಳು + ಆಡು$_1$]

ತುಳ್ಳು (ಕ್ರಿ). ೧. ಉರುಳು ; ಹೊರಳು. ೨. ಜಿಗಿ ; ನೆಗೆ ; ಹಾರು ; ಕುಣಿ. 'ತುಳ್ಳಾಡು' ಪರಾ.

[ದೇ.॥ ತಮಿ. ಮಲ. ತುಳು. ತೆಲು. ತುಳ್ಳು ; ಕೊಡ. ತುಳ್ಳ್]

ತುಱಿ, ತುರಿ$_3$ (ನಾ). ೧. ಕಡಿತ ; ಕೆರೆತ ; ನವೆ ; ತಿಂಡಿ (ಉಕ). 'ತುಱಿಸು' ಪರಾ. ೨. ಒಂದು ಬಗೆಯ ಚರ್ಮರೋಗ: "ಕಂಡೂಃ, ಖರ್ಜೂಃ, ಕಂಡೂಯಾ ಈ ೩ ತುಱಿ" (ನಾಚಿರಾ. ೧೨೦) ; ಕೆರಕಿಂ ತುಱಿಯಿಂ ತೀವಿದ ಕರಚರಣಂ ಬೋಟಮಂಡೆ ಕುಗ್ಗಿದ ದೇಹಂ (ಧರ್ಮಾಮೃ. ೭-೨೨೪) ; ತುಱಿಯ ಮೇಲೆ ಉಗುರನಿಕ್ಕಿದರೆ ಹಿತವಾಗಿಹುದು (ಸಿದ್ಧೇವ. ೪೧-೦೦೨) ; ಆ ರೂಪಂ ಪಲ್ಲಟಿಸಿ ಕೆರಕುಂ ತುಱಿಯುಂ... ಗುಂಡವೇಷಂ ತನಗಮರೆ (ಬಂಹರಿ.೯-೩೦ ವ). ೩. ಕಾಮಾಸಕ್ತಿ ; ವಿಷಯಾಭಿಲಾಷೆ ; ಕಾಮಲಂಪಟತೆ. 'ತುಱಿಪ' ಪರಾ. ತುರಿ$_3$:

೨. ಮೈಯೆಲ್ಲಾ ತುರಿ, ಕಜ್ಜಿ ತುಂಬಿತ್ತು (ನೀತಿಚಿಂ. I, ೨೮) ; ತುರಿಯಿದ್ದವಗೆ ನಾಚಿಕೆಯಿಲ್ಲ, ಮರೆಯಿದ್ದವಗೆ ಮಂದತ್ವವಿಲ್ಲ (ಗಾದೆ).

[ದೇ. ॥ ತಮಿ. ತುರುತ್ತೈ, ಚೊಱಿ; ಮಲ. ಚೊಱಿ ; ತೆಲು. ದುರದ]

ತುಱಿಕೆ, ತುರಿಕೆ (ನಾ). ೧. = ತುಱಿ ೨ : (ಕ). **ತುರಿಕೆ** : ೧. ತುರಿಕೆಯಾದವನೆಯೆ ತುರಿಸಿಕೊಳ್ಳುವನಲ್ತೆ ತುರಿಯಿಲ್ಲದವಗೇಕೆ ಚಿಂತೆ (ಇಂದಾಪ. ೧೮೭-೨೩). ೨. ಒಂದು ಬಗೆಯ ಗಿಡ : ತುರಿಕೆ, ಸುರುಸುರಿಕೆ (ಮೃಜಿಗಿ. ೩೯-೭೭೦). 'ತುಱುಚೆ' ಪರಾ. [ತುಱಿ + -ಕೆ]

ತುಱಿಗ (ನಾ). ತುರಿರೋಗದಿಂದ ಪೀಡಿತನಾದ ವ್ಯಕ್ತಿ : ತುಱಿಗರ ತೊನ್ನರ . . . ಮುಟ್ಟಲಕ್ಕುಮೊ ಸೂಳೆಯರಂ (ಶ್ರಾವಕಾ. ೧೨೨-೫).

[ತುಱಿ + – ಗ$_2$]

ತುಱಿಚ 'ತುಱುಚೆ' ನೋ.

ತುಱಿಚೆ 'ತುಱುಚೆ' ನೋ.

ತುಱಿಪ (ನಾ). ಕಾಮಾತುರತೆ ; ಬೆದೆ. 'ತುಱಿಪಗಾಱ' ಪರಾ.

[ತುಱಿ + – ಪ$_2$]

ತುಱಿಪಗಾರ್ತಿ (ನಾ). ಕಾಮಾತುರೆ ; ಕಾಮುಕಿ : ಮಾನವಮದನನಂ ಕಂಡು ಕೈಗಟಿಯೆ ಕಣ್ಸೋಲ್ತು ಕಾಮಕಾತರೆಯಾಗಿ ತುಱಿಪಗಾರ್ತಿ ಕೂರ್ತು ನಿತ್ತರಿಸಲಾಱದೆ...ಮೇಲ್ವಾಯ್ದು (ಲೀಲಾವ. ೦೪-೦೦೪ ವ).

[ತುಱಿಪಗಾಱ + – ತಿ$_1$ (< – ಇತ್ತಿ)]

ತುಱಿಪಗಾಱ (ನಾ). ಕಾಮಾಸಕ್ತನಾದವನು ; ವಿಷಯಲಂಪಟ. 'ತುಱಿಪಗಾರ್ತಿ' ಪರಾ. [ತುಱಿಪ + –ಕಾಱ]

ತುಱಿಸು, ತುರಿಸು (ಕ್ರಿ). ೧. ಮೈಯಲ್ಲಿ ಕಡಿತ ಹೋಗುವಂತೆ ಕೆರೆ : "ತುಱಿಸು–ಕಂಡೂತಿಕರ್ಷಣೇ" (ಶಮಧಾ) : ಪಲ್ಲಂ ಸುಲಿವೊಡಂ ಕಿವಿ ತೀಂಬೊಡೆ ತುಱಿಸುವೊಡಂ ಪುಲ್ಲಿಂದೆನಿತುಂ ಪ್ರಯೋಜನಮುಂಟು (ಪಂಚತಂ. ೩೪-೦೪) : ಹಾವಿನ ಹೆಡೆಗಳ ಕೊಂಡು ಕೆನ್ನೆಯ ತುಱಿಸುವಂತೆ (ಬಸವ. ೬೬೦); ಹೆಡತಲೆಯ ತುಱಿಸುವರೆ ಹಾವಿನ ಹೆಡೆಯೊಳಕಟಾ(ಕುವ್ಯಾಸ. ೧೪-೩೭); ಇನಿಸು ತಲೆಯ ತುಱಿಸುವೊಡೆ ಹೊತ್ತಂ ಕನಸಿನಲ್ಲಿ ಕಾಣೆ (ಸಮ್ಯಕೌ. ೫-೧೯). ೨. ತಿವಿ; ಚುಚ್ಚು: ಆವೋಪಳನರಸಂ ಮಕರಂದನಂ ತುಱಿಸಿ ತೋಱುತ್ತಂ ಪೋಪಾಗಳ್ (ಲೀಲಾವ. ೨-೩೭ ವ). **ತುರಿಸು** : ೧. ಕುಸುಮೆಯನ್ನು ಕಾಣದೆ ತಲೆ ತುರಿಸುತ್ತ ಬಾಗಿಲಲ್ಲಿ ನಿಂತಿದ್ದಾರೆ (ಪಹಾರ.೨೩).

ತುಱಿಸಿಕೊಳು, ತುರಿಸಿಕೊಳ್ಳು = ಕೆರೆದುಕೊಳ್ಳು: ಇಱಿಸಿಕೊಳುತಂ ತುಱಿಸಿಕೊಳುತ. ಕೊಱೆಯಿಸಿಕೊಳುತೆ...ತೆರಳುತುರುಳುತುಂ (ಸಾನಂಚ. ೪-೨೦೦); ತುಱಿಸಿಕೊಳುತಿದ್ದೆಸೆಯ ಬದಿಗಳ ಹೊಱಗನಾಲಿಸುತ...ಇರ್ದನಾ ಹನುಮ (ತೊರರಾ. ೫-೫-೨); ತುರಿಕೆಯಾದವನೆಯೆ ತುರಿಸಿಕೊಳ್ಳುವನಲ್ತೆ ತುರಿಯಿಲ್ಲದವಗೇಕೆ ಚಿಂತೆ (ಇಂದಾಪ. ೧೮೭-೨೩) : ಕೊಳ್ಳಿಯಿಂದ ತಲೆ ತುರಿಸಿಕೊಂಡ ಹಾಗೆ (ಗಾದೆ). [ತುಱಿ + – ಸು$_1$]

ತುಱಿಹಿಡಿ (ಕ್ರಿ). ತುರಿಯುಂಟಾಗು; ತುರಿಯೆಂಬ ಚರ್ಮರೋಗ ಅಂಟು : "ಪ್ರಸರ, ವಿಸರ್ಪಣ—ಚಿಬ್ಬು, ತುಱಿಹಿಡಿವುದು" (ನಾಚಿರಾ. ಕಿ).

[ತುಱಿ + ಹಿಡಿ$_1$ (< ಪಿಡಿ$_1$)]

ತುಱು, ತುರು, ತೊಱು (ನಾ). ೧. ಹಸು; ದನ; ಆವು; ಗೋವು : "ತುಱುಗಳೆನಲ್ಕಾಕಳೆಂದು ತಿಳಿಗೆ" (ಭಾರನಿ. ೪೬). 'ತುಱುಗಾಱ' ಪರಾ. ೨. ದನಗಳ ಗುಂಪು ; ದನಗಳ ಮಂದೆ ; ಗೋಸಂಪತ್ತು : "ಗೋಧನಂ ತುಱುವೆನಿಕ್ಕು" (ಮಂಗರಾ. ೫೬-೦೦); ಕೊತ್ತಮಙ್ಗಲಮನಿಱಿದು ತುಱುವಂ ಕೊಂಡು ಪೋಗುತ್ತಿರೆ (ಎಕ. IV, ಹೆಗ್ಗಡ. ೦೦೩-೭ ; ಸು. 910) ; ಗೋಗ್ರಹಣದೊಳ್ ತನಗಾಗಿ ಕಾದಿ ತುಱುವಂ ಮಗುಟ್ಟಿದುದುಮಂ ನೆನೆದು (ಪಂಪಭಾ. ೧೨-೦೭ ವ); ಮಾದಿರಾಜನತಿಕೋಪದಿನ[ನ್ತಿ]ರ[ದೆ] ಬೆನತೂರ ತುಱುವಂ [ತಱ್ದಿ]ಸಿದನನ್ದಣ್ಣಿಗೆಱಿಗೆ ತ[ಱಿ]ಸಲನಿನ್ದಂ (ಸೌಇಇ. XI-i, ೮೦-೦೦ ; 1049) ; ಗೋವರ್ಧನಗಿರಿಯೆತ್ತಿ ತುಱುವ ಕಾದಂತೆ (ಮೋಹತ. ೪೦-೫೦); ಗೋವಳಂ ತುಱುಗಳಂ ಮನೆಯಂ ಪುಗಿಸಿದಂ (ಶಬ್ದಾನು. ೨೦೫ ಪ್ರಯೋ). **ತುರು** : ೧. ಕೆಚ್ಚಲ ಕರುವನು ನೆಕ್ಕುವ ತುರುವೋ (ಅನಿಕೇ. ೩೦-೦೨) : ಹಟ್ಟಿಯಲ್ಲಿ ತುಂಬಿದ ತುರುಗಳ ಆರೈಕೆಯನ್ನೂ ಅವಳೇ ನೋಡಿಕೊಳ್ಳುತ್ತಿದ್ದಳು (ಹಾಹುತ್ವ. ೬೬). ೨. ಶತ್ರುಗಳು ಮುರಿದೋಡಿದರು ತುರು ಮರಳಿತು (ಕಸಾಚಿ. ೭೬). **ತೊಱು** : ೨. ಕೇಸರಿ ತೊಱುವಾಳ್ಳನಾ ಮಗನ್ ಆಲನ ತೊಱು ಇಕ್ಕಿಸಿ ಬಿಟ್ದಾನ್ (ಎಕ.X (8), ಮಾಲೂರು. ೦೫೬-೬; 8ನೆಯ ಶತ); ಶ್ರೀ [ಮಾ]ವಲಿಪಣರಸರ್ × × ಮಗ ಗ × × × ಮುಣ್ಡನು ತೊಱುವ ಕೊಳ್ವಾ ... ಅಯಿಕುಳ ಗ ಟಾನಿ ಕೊಟ್ಟದು (ಸೌಇಇ. IX-i, ೦೦-೫; 9ನೆಯ ಶತ); ತೊಱುಗೊಳೆ ತೊಱುವಂ ಪರಿಯಲೀಯದೆ (ಮೈಎರಿ. ೧೯೩೨, ೧೯೬-೭; 9ನೆಯ ಶತ).

ತುರುವಿನ ಮಾಳ=ದನಗಳು ಮೇಯುವ ಮೈದಾನ; ಹುಲ್ಲಂ ಗಾವಲು ; ಗೋಮಾಳ: ವಾಯವ್ಯದಲ್ಲಿ ಒಂದು ಮೈಲಿ ದೂರದಲ್ಲಿ ಗಿರಿಜಾಪುರದ ಕಡೆಗೆ "ತುರುವಿನ ಮಾಳ" ಇದೆ (ಹೊಯ್ಸಾವಾ. ೨೩೪). **ತುಱುಕಱು, ತುರುಕರು**=ದನಕರು : ತುಱುಕಱು ಕಱೆದರೆ ಉಣಬಹುದಣ್ಣ ತುಱುಕಱು ಕಱೆದರೆ ಅತಿ ಪುಣ್ಯವಯ್ಯ (ಪುರಂದ. ೧-೦೭೯ ಪಲ್ಲವಿ); ತುಱುಕಱುವು ಇರದೂರು ನರಕಭಾಜನಮಕ್ಕು ತುಱುಕಱುಂಟಾದರುಣಲುಂಟು ಜಗಕೆಲ್ಲ ತುಱುಕಱುವೆ ದೈವ (ಸರ್ವಜ್ಞ. ೦೩೬೫) ; ಒಯ್ವ ಹುಲಿಯಂ ಕಂಡು ತುರುಕರುಗಳೋಡುತಿವೆ (ಕಾಲೂರ. ೯೦-೦೭೪). **ತುಱುವನಿಕ್ಕಿಸು, ತೊಱುವನಿಕ್ಕಿಸು** = ಅಪಹಾರವಾದ ಗೋವುಗಳನ್ನು ಮರಳಿಸು : ಮಟ್ಟಿಯರ ಬೂವಯ್ಯನ ಮಗಂ ಬಿದಿಯಾಯ್ತು ತುಱುವನಿಕ್ಕಿಸಿ ಕಾದಿ ಸತ್ತು (ಎಕ. II, ೩೯೪-೯ ; ಸು. 834) ; ಕುಸುಪ್ಪುರಿ ತುಱುವನಿಕ್ಕಿಸಿ ಸತ್ತ (ಎಕ. XVI, ಚಿಕ್ಕನಾ. ೭೨-೫ ; ?) : ಅಣಿಲೆಯರ ಮಗ ನೆಲ್ಮಲ್ಲ ಅಣ್ಣರ್ಮ್ಮನಟಿಯ ತೊಱುವನಿಕ್ಕಿಸಿ ಸಗ್ಗಿಯಾದಂ (ಎಕ. IX, ಹೊಸಕೋ. ೧೦೦-೬ ; ಸು. 906). **ತುಱುವನಿಕ್ಕು**=ತುಱುವನಿಕ್ಕಿಸು : ಗೋತ್ರಪವಿತ್ರ ಬಮ್ಮಿಸೆಟ್ಟಿಯ ಸ × × × ಗೆಱೆಯ ತುಱುವನಿಕ್ಕಿ (ಎಕ. XVI, ಚಿಕ್ಕನಾ. ೭೫-೩೨ ; ?). **ತುಱುವಿಗೆ ಹೋಗು** = ತುಱುವನಿಕ್ಕಿಸು : ರಾಮಗಉಡನ ಮಗ ಬೊಂಮಂಣ್ಣನು ತುಱುವಿಗೆ ಹೋದಗ (ಎಕ. IX (8), ಚನ್ನಪ. ೨೯೪-೩ ; 16ನೆಯ ಶತ). **ತುಱುವಿನ ಮಂದೆ** = ದನಗಳ ಹಿಂಡು, — ಗುಂಪು : "ವ್ರಜಃ, ಗೋಕುಲಂ, ಗೋಷ್ಠಂ—ಈ ೩ ತುಱುವಿನ ಮಂದೆ" (ಹಲಾಯು. ೪೪-೦೦೭).

[ದೇ.॥ ತಮಿ. ತುಱು, ತೊಱು ಮಲ; ತುಱು ; ತೆಲು. ತೊರ್ರು]

△ **ತುಱುಂಕು** 'ತುಱುಕು$_1$' ನೋ.

ತುಱುಂಗಲ್, ತುರುಂಗಲು, ತುಱುಗಲ್, ತುಱುಗಲು (ನಾ). ಗುಂಪು; ಸಂದಣಿ ; ಸಮೂಹ : ಆತಂಗೆ ತುಱುಂಗಲುಂ ಬಂಬಲುಮಾಗೆ ಬೀಸುವ ಚಾಮರದ ಪೊಳೆಪುಗಳ್ ದೆಸೆದೆಸೆಗೆಸೆವಂತೆ ಪಸರಿಸಿ (ಆದಿಪು. ೦೦-೫ ವ); ವಿದ್ಯಾಧರವಧೂಜನದ ಸೋರ್ಮುಡಿಯಿಂ ಸೂಸಿದ ಪೊಂಗೇದಗೆಯ ಕುತ್ತುಂಗಱಿಯ ತುಱುಂಗಲುಮಂ...ನೋಡುತ್ತೆ (ಪಂಠಾಮಾ.೨-೧೩ವ); ಪರಾಗಮಂ ಪಸರಿಸುವ ಸರಸೀರುಹದೆಸಳ ತುಱುಂಗಲ ಸಿಂಹಾಸನದೊಳ್ ಸುರತರುವಂ ಮಲಂಗಿ (ಗಿರಿಕ. ೭-೦೦ ವ) ; ಎಳನೀರ್ಗಾಯ ತುಱುಂಗಲಿಂ ತೊನೆವ ತೆಂಗಿಂ ತೋರಪಣ್ಣೊಂಗಲಿಂ .... ಪೂತಿರ್ದ ನಾನಾಲತಾನಿಳಯಾ ನೀಕದಿನಾತನೊಳ್ ಪಡೆದುದತ್ಯಾನಂದಮಂ ನಂದನಂ (ಮಹಾನೇ. ೪-೨೩). **ತುರುಗಲು** : ಒಗೆಮುಗಿಲ ತುರುಗಲನು ಕಳೆದು ತನ್ನೆಳನಗೆಯ ಮೊಗವಾಡವನು ತೊಡಿಪನಾವ ಭಾನು ? (ಭಾರಂಗ. ೦೨-೫); ಎನ್ನ ಬಗೆ ... ಮಾಮರದೆಲೆಯ ತುರುಗಲೊಳು ತಂಗುವುದು ತವರ ಕಂಡಂತೆ (ಮಲೆದೇ. ೪೨-೬). **ತುಱುಗಲ್** : ಗುಡಿಯ ತೋರಣಂಗಳುಮಂ ತುಱುಗಲುಂ

ಬಂಬಲುಮಾಗೆ ಕಟ್ಟಿಸಿ (ಪಂಪಭಾ. ೪-೫ವ) ; ತಂಬೆಲರ ಪೊಯ್ಲಿನಿಂ ತಣ್ಪು ವಡೆಯಲೆಂದು ನೆಱೆಪಿದಂತಿರ್ದ ನೀರ್ಗಾಯ ತುಱುಗಲಿಂದೆಱಗಿದ ನಾಳಿ ಕೇರಭೂರುಹಂಗಳುಂ (ಚಂದ್ರಪು. ೧-೧೦೫ ವ) ; ಎಱಪ ಶರಧರದ ತುಱುಗಲ್ಕಱೆವ ಘನೋಪಳಕದಂಬಮುಡುಗಣಮೆನೆ (ರಾಜಶೇ. ೧-೧೨೦). 'ಎಮೆದುಱುಂಗಲ್' ಪರಾ. **ತುಱುಗಲು** : "ಬಂಬಲ್ ತುಱುಗಲು ಮೊತ್ತಂ ಗಡಣಮೊಟ್ಟಲೊಟ್ಟಱೆ ... ಸಂದಣಿ ಜಾಳಿಗೆಯುಮೆನೆ ಶ್ರೇಣಿ ಕಾಖ್ಯಂ" (ಕಬ್ಬಿಕ್ಕೆ. ೦೬) ; ಕರಗಿದಳು ಗಾಂಧಾರಿ ಕಂಬನಿದುಱುಗಲಲಿ (ಕುಮ್ಯಾಸ. ೧೩-೫೫) : ಅಱಸಿದೆವಮ್ಮ ಲತಾಮಂಟಪಗಳ ಮಱೆಯೊಳು ನಾಗವಲ್ಲಿಗಳ ತುಱುಗಲೊಳು (ಕುರಾಸಾಂ. ೩೨-೩೩).

[ತುಱುಂಗು (< ತುಱುಕು$_1$) + – ಅಲ್$_2$]

△ **ತುಱುಂಗು** 'ತುಱುಕು$_1$' ನೋ.

ತುಱುಂಗೊಳ್ 'ತುಱುಗೋಳ್' ನೋ.

ತುಱುಂದವೊಟಲ್ (ನಾ). ಒಂದು ಊರಿನ ಹೆಸರು : ಮಾಚಿಗಂ ಗುತ್ತಿಯ ಗಂಗನ ಬೆಸದೊಳ್ ತುಱುನ್ದವೊಟಲ ಕಾಳೆಗದೊಳ್ ನೊಳಂಬಾಧಿರಾಜ ರಾಜನೊಳ್ ಕಾದಿ ಸತ್ತಂ (ಎಕ. IV, ಹೆಗ್ಗಡ. ೧೦೦-೧೨; ಸು. 900).

[ತುಱುಂದ$_0$ + ಪೊಟಲ್$_2$]

ತುಱುಂಬು$_1$, ತುರುಬು$_1$, ತುಱುಬು$_1$ (ಕ್ರಿ). ೧. ಹೂವನ್ನು ಮುಡಿ,– ಸೂಡು : ರತಿಗೆ ಮುಡಿಯಲ್ಕೆ ಮದನಂಗೆ ತುಱುಂಬಲ್ಕಿರ್ದುದೆಂದು ... ಇರುವಂತಿಯಂತೆ ನೋಂತಲರೊಳವೇ (ಆದಿಪು. ೧೧-೧೧೦) ; ತುಱುಂಬಿದ ನವಮಾಲಿಕಾಕುಸುಮವಿಕ್ಕಿದ ಮುತ್ತಿನ ಲಂಬಣಂ ... ಅಮರಲ್ಕೆಸೆದಂ ನೃಪರೂಪಚಂದ್ರಮಂ (ಕಾದಂಪೂ. ೫೮೨); ಜಾದಿಯ ಪೂವಂ ಬಿಟ್ಟು ಬೇವಿನ ಪೂವಂ ತುಱುಂಬುವಂತೆ (ಧರ್ಮಾಮೃ. ೦೦-೦೬೨) ; ಸಜ್ಜಕಮಂ ತುಱುಂಬಿ ಮೊಲೆಗಳ್ಗೆ ಕರಂಟಮನಿಕ್ಕಿ ... ವೃದ್ಧವಾರಯೋಷಿಜ್ಜನಮೊಪ್ಪಿತಲ್ಲಿ (ಉದ್ಯಟ. ೦೦-೭೦). ೨. ಮುಡಿಸು : ಸಹಚರಿಯರ್ಬಂದು ಸೇವಂತಿಗೆಯ ಪನಿನೀರಂ ಮಜ್ಜನಕ್ಕೆಱೆದು ಪರಾಗದಂಗರಾಗಮನಮರ್ಚಿ ತಾವರೆಯ ನೂಲ ದುಕೂಲಮನುಡಿಸಿ ಕದಂಬಕುಸುಮಮಂ ಸಿರಿಮುಡಿಯೊಳ್ ತುಱುಂಬಿ (ಗಿರಿಕೆ. ೫-೭೬ ವ). ೩. ತುಂಬು; ಸಂದಣಿಸು; ಕೂಡು: ಹೊಂಬಾಱೆ ತುಱುಂಬಿದೀಳೆ ಬನದೊಳ್ ಪೆಣ್ದುಂಬಿ ನಿಂದಂಬುಜಂ ... ರಮ್ಯಂ ಪುರೋದ್ಯಾನದೊಳ್ (ಅನಂಪು. ೦-೯೩) ; ಕುಂಭಿಣಿ ಬೆಸಲಾದುದೆಂಬಂತೆ ಜನರು ತುಱುಂಬಿತು ಹೊನ್ನಗಸೆಯೊಳು (ಮೋಹತ. ೪೧-೩೮). **ತುರುಬು$_1$**: ೨. ಪ್ರಸೂನಮಂ ತಿರಿತಂದು...ರುಕ್ಮಿಣಿ ಸತ್ಯಭಾಮೆಯರಿಗಂ ಮುಡಿಸಿ ವುಳಿದ ಗೋಪಾಲವಧುಗಳಿಗೆ ಕರೆಕರೆದಿತ್ತು...ಮಸ್ತಕದಿ ತುರುಬಿ (ನವಮೋ. ೦೦-೭೧). **ತುಱುಬು$_1$** : ೧. ನವಪ್ರಸೂನಮಂ ಮಗಮಗಿ ಪಂದದಿಂ ತುಱುಬಿ ಬಂದಳ್ (ನಳಚಂ. ೭೪೪) ; ಅವಿರಳಾಮೋದ ಜಾತಿಯ ನಲ್ಲದುಳಿದ ಕುಸುಮವನು ತುಱುಬದ ... ಲತಾಂಗಿಯರು (ಸೌಂದಪು. ೭-೨೬). ೨. ಇರವಂತಿಯಂ ತಂದು ಸಿರಿಮುಡಿಯೊಳಗೆ ತುಱುಬಿ ಬೆರಸಿಯವಱೆಡೆಗೆಡೆಗೆ ಸೇವಂತಿಗಳ ತುಱುಬಿ (ಪುಷ್ಪರ.ಹ. ೫೨೬-೦೬); ಪೊಸ ಕುಸುಮಂಗಳಂ ತುಱುಬಿದರು ಸತಿಗಾ ಪುಣ್ಯವನಿತೆಯರು (ಬಸಪು. ೪-೩೪). ೪. ಮುಡಿಗಟ್ಟು ; ಕೂದಲನ್ನು ಗಂಟುಕಟ್ಟು ; ತುರುಬು ಕಟ್ಟು: ಹೆಳಲು ಕಟ್ಟು : ಮತ್ತವೊರ್ವಳಟ್ಟಸದ ಜಗದಿಟ್ಟೆ ಸೋರ್ಮುಡಿಯಂ ತುಱುಬಿ ಕಟಲಂ ಕಟಲ್ಚಿ ... ನೀರನಿಱಿದಳ್ (ರಾಮಾಶ್ವ. ೧೩೩-೧೬).

[ದೇ.॥ ತಮಿ. ತುಱುಮ್ಬು, ತುಱುಮು ; ಮಲ. ತುಱು ; ತೆಲು. ತುಱುಮು, ತುರುಮು]

ತುಱುಂಬು$_2$, ತುರುಬು$_2$, ತುಱುಬು$_2$ (ನಾ). ೧. ಕೂದಲಿನ ಮುಡಿ,– ಗಂಟು : ತೋರಮಲ್ಲಿಗೆಯ ತುಱುಂಬು ರಾಹು ತವೆ ನುಂಗಿದ ಚಂದ್ರನ ನೊಯ್ಯನೊಯ್ಯನಂದುಗುಟ್ಟವೊಲೊಪ್ಪಿರಲ್ (ಪಂಪಭಾ. ೭-೮೭) ; ನಱು ಗಂಪುವೊಱೆದ ಜಾದಿಯ ತುಱುಂಬು ಕಣ್ಗೊಳಿಸೆ ಶೂದ್ರಕಂ ಕರಮೆಸೆದಂ (ಕಾದಂಪೂ. ೩೨); ಭಯದಿಂದೋಡುತ್ತಿರೆ ಕಾಡೊಳೊಂದು ಮರದ ಕೊಂಕುಗೊಂಬಾತನ ತುಱುಂಬಂ ಪಿಡಿದು ತಡೆಯೆ (ಧರ್ಮಾಮೃ. ೨-೫೭) ; ಬಂಬಳ ಬಾಡಿದ ದೇಹ ಕಟ್ಟಳಿದ ತುಱುಂಬು ಕಂದಿದ ಮೊಗ (ಭರಚ. ೭೧-೭೯). ೨. ಗುಂಪು ; ಸಮೂಹ : ಪರ್ವಿ ಪಸರಿಸಿದ ಪೊಂಬಾಱೆಯ ಕಂಬಂಗಳ ತು [ಪಾಶಾಂ. ತ]ಱುಂಬಿನೊಳ್ ಬಳ್ವಳ ಬೆಳೆದ ಮೃದ್ವೀಕಾಲತೆಯ ಕಾಯ ಮಾನಂ (ಅನಂಪು. ೭-೧೧ವ). **ತುರುಬು$_2$** : ೧. ಹುರುಮಂಜಿಮುತ್ತುಗಳ ತುರುಬಿಂಗೆ ಕೊರಳಿಂಗೆ ಮೆರೆವ ಹಾರಂಗೈದು (ವೆಂಕಾರಾ. ೫-೬-೧೭) ; ತುರುಬಿನ ಸುತ್ತಲೂ ಮಲ್ಲಿಗೆಯ ದಂಡೆ ಕಟ್ಟಿಕೊಂಡಿದ್ದಳು (ಅಪನಾ. ೨೪೮); ಅತ್ತೆ ತುರುಬು ಮಾವಗೆ ದಾನ (ಗಾದೆ). **ತುಱುಬು$_2$** : ೧. "ತುಱುಬು ಹಿಣಿಲು ಪಾಶಂ" (ಮಂಗರಾ. ೯೪.೬); ತಳ್ಪತಳದೊಳ್ ಬಳಿಕಾತನ ತುಱುಬಂ ತಿರ್ದುತ್ತಂ ಮೊನಸಿದ ಪಳಿತಮನೆ ಕಂಡು (ಪುಷ್ಯಾಸ್ರ. ೧೧-೦೦) ; ವಾಮ ಹಸ್ತವ ತುಱುಬಿನೊಳಿಟ್ಟು (ಮೋಹತ. ೦೬-೩೭) ; ಮುಡಿದ ಪೂವಿನ ತುಱುಬು ಮೃಡಗಂಧಗಜದಿಱುಬು (ಜಿಬಪು. ೩೭-೨೨).

ತುತ್ತುಱುಂಬು, ತುತ್ತುಱುಬು (ದ್ವಿರುಕ್ತಿ): ತುತ್ತುಱುಂಬಾಗಿಯುಗಳಿಗೆ ಬಿಳ್ದು ಕೋಟೆಯಂ ಹತ್ತಲೆಂದಂಗವಿಸುವಾ ಹರಿಗೆಯಾಳ್ಗಳ್ (ಸಮ್ಯಕೌ. ೮-೩೭) : ಕಾಳೋರಗನ ಹುತ್ತನೊಳಹೊಕ್ಕ ಮಾಳ್ಕೆಯೊಳ್ಕಾಳಗತ್ತಲೆ ತುತ್ತುಱುಂಬಾಗಿ ತುಂಬಿದಾಭೀಳಮಪ್ಪಾರಣ್ಯಮಧ್ಯದೊಳ್ದಬ್ಬುದಲೆಗೊಂಡು ದಾರಿಯ ತಪ್ಪಿದ (ಸಮ್ಯಕೌ. ೦೦-೩೭) : ಅಳಿಯಂದಿರಿಂದಾಪ್ತರಿಂದ . . . ತುಳಿಲಾಳ್ಗಳ ತುತ್ತುಱುಬಿಂ ಸಭೆ ಕಣ್ಗೆ ತಳೆದುದು ಗಾಡಿ ಗಮಕವ (ರಾಮವಿ. ೦೦-೭೭); ಕುತ್ತುಱು ಮೆಳೆವಱೆಗಳೊಳು ತುತ್ತುಱುಬಾಗಿ ನಿಂದರು ಬೆಟ್ಟಬೆಟ್ಟಗಳೊತ್ತಿನೊಳಗೆ ಕಾಲವರು (ಕುರಾಸಾಂ. ೩೯-೮).

[< ತುಱುಂಬು$_1$./ತುಳು. ತುರುಟು]

ತುಱುಂಬುಗೊಳಿಸು (ಕ್ರಿ). ತುಂಬುವಂತೆ ಮಾಡು ; ಭರ್ತಿ ಮಾಡು : ಅರಿಬಳಪ್ರಹರಣನಿವಾರಂಗಳಪ್ಪಾಳ್ವಱೆಯ ತುಱುಗಲಂ ತುಱುಂಬುಗೊಳಿಸಿಯುಂ (ಪುಷ್ಪಪು.೭-೬೯ ವ). [ತುಱುಂಬು$_2$ + ಕೊಳ್$_1$ + – ಇಸು$_3$]

ತುಱುಕಾರ್ತಿ 'ತುಱುಗಾರ್ತಿ' ನೋ.

ತುಱುಕಾಱ 'ತುಱುಗಾಱ' ನೋ.

ತುಱುಕು$_1$, ತುರುಕು$_1$, ತುರುಗು$_1$, ತುಱುಂಕು, ತುಱುಂಗು, ತುಱುಗು ೧. (ಕ್ರಿ.) ಒತ್ತಿ ತುರಬು; ಗಿಡಿ; ಅಡಕು; ಬಲವಂತದಿಂದ ಒಳಕ್ಕೆ ಸೇರಿಸು: "ತುಱುಕು–ಗಾಢಪ್ರವೇಶೇ" (ಶಮಧಾ) ; ಪೊಱಗೊಂದು ಹೆಡಗೆ ಮಣ್ಣಂ ನೆಱೆ ಶೌಚಂಗೆಯ್ವರೊಳಗೆ ಪಲತೆಱದಡಗಂ ತುಱುಕುವರ್ (ಸಮಪ.೧೪-೧೫೦). **ತುರುಕು$_1$**: ೧. ಕೋಣೆಯಲ್ಲಿ ಬಾಗಿಲ ಸಂದಿನಿಂದ ನನಗೊಂದು ಕಾಗದ ತುರುಕಿತ್ತು (ಆಲಹೂ. ೧೫೨); ಕೆಲವರು ಓದಿದರೂ ಅವುಗಳನ್ನು ಎಲ್ಲಿಯೋ ಪೆಟ್ಟಿಗೆಯಲ್ಲಿ ತುರುಕಿಬಿಡುತ್ತಿದ್ದರು (ರಂಗಕ. ೪೭). **ತುರುಗು$_1$** : ೨. ದಟ್ಟೈಸು ; ಸಂದಣಿಸು ; ಇಟ್ಟಣಿಸು : ತಾರಕೆ ಮಿರುಗೆ ಆಗಸ ತುರುಗೆ ಹುಲ್ಲಲ್ಲೊರಗುವಳು (ಹಾಡುಪಾ. ೧೯-೦೬). ೩. ಹೆಚ್ಚಾಗು ; ಅಧಿಕವಾಗು ; ಅತಿಶಯವಾಗು ; ತುಂಬಿರು : ವೃಕೋದರನಿಗೆ ಸಹೋದರನ ಮರಣದಿಂದ ಒಡಲೊಳಗೆ ಅಳಲು ತುರುಗಿತು (ಬಿದುರಿ. ೧೦೦). ೪. ಸಂಗ್ರಹಿಸು ; ಒಟ್ಟುಮಾಡು : ತಂದನೊಬ್ಬಂ ಪೇಳ್ದ ಬೆಲೆಗೊಟ್ಟು ನವಿರುಡೆಯನೆಂದಿನಂತುರಲ ಬಡವಂ ತುರುಗಿ ತಂದಂ (ಕಾಲೂರ. ೭೮-೦೪೪). ೫. ಎದುರಿಸು ; ಕಾದು : ಇದಿರಿಸುವ ಗಂಡರನ್ನು ತಾನೊಬ್ಬನೇ ತುರುಗುವೆನೆಂದು ಮುಂಬರಿದು ಬರುವ ವೀರರನ್ನು ... ದಿಂಡು ಗೆಡವಿದನು (ಕವೀರ.೩೦). △ **ತುಱುಂಕು**: ೧. ಮೆಯ್ಯಂ ಕಿಱಿಕಿಱಿದಾಗಿ ಕತ್ತರಿಸಿ ಬಾಯೊಳ್ತುಱುಂಕಿಯುಂ (ಧರ್ಮಾಮೃ. ೩-೭೩). △ **ತುಱುಂಗು** : ೨. ಪರಿವ ಕರೆಕರೆವ ಸೂಱಾಯ್ತರ ಸೂಱುಗಳೊಳ್ತುಱುಂಗಿದಚ್ಚುಳಾ

ಯ್ತರ ಕಳಕಳರವದಿಂ ಭೋರ್ಗರೆದುಲಿವಂಬುಧಿಯನಂತದೇರಿ ಮಗುಳಿಸಿತೋ (ಸುಕುಮಾ. ೦೦-೨೩). ೩. ತನಿವಣ್ಣಳ ಸಂತತಿಯಿಂ ತುಱುಂಗಿ ನೆಱೆ ಕಣ್ಗತಿಶಯಮಾಗಿರ್ದುದಲ್ಲಿ ನಾರಂಗಕುಜಂ (ಶಾಂತೀಶ್ವ. ೦೦-೯೮). **ತುಱುಗು$_1$** : ೧. ಕಂಪುಳ್ಳ ಸೇವಂತಿಯಂ ತಂದು ತುಱುಗೆಂಬ ಜಾದಿಯಂ ಮೊಲ್ಲೆಯಂ ಬೆರಸಿ ನೀಡಮಗೆಂಬ...ಶರಣರಂ ನೋಡುತಂ (ಬಸರ. ೭-೪೦); ಮುಱಿದು ಮಾರನನು ಭೀಮನಹಿತರ ತುಱುಬಿದನು ಹೊಕ್ಕೆಱಗಿದನು ತುಱುಗಿದನು ಭಟರ ಭದ್ರವಿಮಾನದಲಿ (ಕುಮಾ.ಅ. ೨೨-೨೯); ಕಿಱಿದಿನೊಳಗೆ ನೋಡೆ ನಿಯಮಸಾರಂದೊಲು ತೆಱಬಿಗೆ ಪ್ರಾಭೃತದಂತೆ ತುಱುಗಿ ಭೂಪತಿ ಹೇಳಿದಧ್ಯಾತ್ಮಸಾರದ ತೆಱದೊಳಧ್ಯಯನ ಮಾಡಿದರು (ಧರಕ. ೧೯-೦೩೬). ೨. ತಾಪಸಕನ್ಯೆಯರ್ ನಡಪಿದೆಳಲತೆಗಳೊಳೆಱಗಿ ತುಱುಗಿ ವಾಮವೇದಧ್ವನಿಯೊಳ್ ಮೊರೆವ ದುಂಬಿಗಳುಮಂ (ಪಂಪಭಾ. ೦-೧೦೩ ಪ); ಆಗಸಂ ಹೂತಂತೆ ಪುಷ್ಪಕಂಗಳು ತುಱುಗೆ (ಇಹರ.ದೇ.೪೬-೧೭); ದಂತಿಘಟೆಗಳು ತುಱುಗಿದವು ... ಚೂಣಾಯ ನೃಪರ ಜೋಕೆಯಲಿ (ಕುಮಾ.ದ್ರೋ.೧-೪೬); ನಱುಗಂಪ ಸವಿಯಲೆಂದೆಲರ ಬೆಂಬಳಿವಿಡಿದು ತುಱುಗಿ ಬಂಬಲು ಮಾಲೆಗೊಂಡು...ಎಱಪಳಿಗಳೋಲ್ಪೆಪ ಪರಿವಾರವೆನೆ (ಭಿಕ್ಷಾಟ. ೧-೨೪); ಸಿಂಹಾಸನದ ಸುತ್ತಲುಂ ತುಱುಗಿದ ಸುರವ್ರಜದ ಮಧ್ಯದೊಳ್ ಮೆಱೆವವಂ ಕುಱಿಯೊ...ನೀಂ ಪೇಳೆಂದನು (ಕಬಪು. ೦೬-೫). ೩. ಮೊದಲೊಳ್ ಮಾದುಪಳದ ಕಾಯ್ ತುಱುಗಿರ್ಕುಂ (ಲೋಕೋಪ. ೬-೩೪); ಸುಲಲಿತಮಾಗಿ ನೀಳ್ದ ತುಱುಗಿರ್ದೆಮೆಗಳ್ ತಮಮಂ ಬೆಳರ್ಪ ಕಣ್ಮಲರ್ಗಣ್ಣಿಯಂದಮಂ ನೆಱೆಯೆ ಪೊಲ್ತಿರೆ (ಧರ್ಮಾಮೃ. ೬-೧೯೭); ಅಂತು ನಿಧಾನಕ್ಕೆಱಗುವ ದೀಪವರ್ತಿಯಂತೆಱಗಿ ತುಱುಗಿದರ್ಚನೆಗಳಿಂದರ್ಚಿಸಿ ಗುರುಭಕ್ತಿಪೂರ್ವಕಂ ಬಂದಿಸಿ (ಅರ್ಧನೇ. ೧-೯೦ಪ); ತುಱುಗಿದ ಕಾಯಿ ಪಣ್ಣಳ ಸಾಲವೃಕ್ಷವ ಮುಱಿದು (ವೋಹಶ. ೪-೩೭); ಫಲವೃಕ್ಷಂಗಳೆತ್ತಂ ತುಱುಗಿ ಬೆಳೆದಿರೆ (ರಾಮಾಶ್ವ. ೪೩-೦೩). ೬. ತುಂಬಿಕೊಳ್ಳು ; ಅಡಕಿಕೊಳ್ಳು : ಬಾಯೊಳು ತುಱುಗಿದೆಲೆ ಬಾಯೊಳಗೆ ಮಡಿದೆಲೆ ಕೈಯೊಳಂಗನೆಯ ಸ್ಥಿರದೊಳೆವೆಯಿಕ್ಕದೆ ನಿರೀಕ್ಷಿಸುತರಸನೊರ್ವನು ... ಇರ್ದನು ಲಲಿತಧಿತ್ತಿಯ ಚಿತ್ರದಂದದಲಿ (ಜೀವಂಧ. ೯-೫೩). ೭. ಮುಚ್ಚು ; ಕವಿ ; ಆಚ್ಛಾದಿಸು : "ತುಱುಗು-ಸಂಚ್ಛನ್ನೇ (ಕವಿದುಕೊಳ್ಳು)" (ಶಮಧಾ); ತುಱುಗಿದ ಮುಗಿಲಾ ಮುಗಿಲಿಂದೆಱಗುವ ಮಱೆ (ಅದಿಪು. ೬-೬೨); ಎಱಗುವ ನರೇಂದ್ರನಿಕರದ ಮಿಱುಗುವ ಮಣಿಮೌಳಿ ಮಂಜುಳ ಪ್ರಭೆ ತನ್ನೊಳೆ ತುಱುಗೆ (ಕಾದಂಪೂ. ೪೬೯); ತುಱುಗಿರ್ದ ನೀಲ ಮೇಘದ ತುಱುಗಲ್ ನೆಱೆ ಟಿಂಗಿ ಪೋಗೆ (ಜಗವಿ. ೪-೫೯); ಕಿಱಿಮೊನೆಯ ಮುಗುಳಂಬುಗಳ ಸೈಗಱೆದನಭಿಮನ್ಯುವಿನ ಮೆಯ್ಯಲಿ ತುಱುಗಿದವು ಮಱಿದುಂಬಿ ಕೆಂದಾವರೆಗೆ ಕವಿವಂತೆ (ಕುಮಾ.ದ್ರೋ. ೫-೫೪); ಧುರದೊಳು ತುಱುಗಿರ್ದ ಕೃತಕಾಂಧಕಾರವಿಸ್ತರವ ನಿರ್ಮೂಲನಗೆಯ್ದುದಕೆ ವರಮೂಡಿಗೆಯಿಂದೆ ತೆಗೆದೆಚ್ಚ ಕೃಷ್ಣ (ವೋಹಶ. ೪೦-೪೩). ೮. ಹರಡು; ವ್ಯಾಪಿಸು : ಪೊಸ ಮಸೆಯಂಬಸದಳವೊಡನೆಱಗಿ ತುಱುಗಿ ಪಾಯ್ದುವು ಕೆಲವುಂ (ಶಾಂತಿಪು. ೫-೬೦); ತುಱುಗಿದ ತನುತಾಪದಿಂದೆ ಪಕ್ಕೆಯ ತಳರ್ ತಱಗೆಲೆಯಾಗಿ ತೋಱಿಸಲು (ವೋಹಶ. ೨೮-೦೬); ಮಣಿಕೋಟಿರಾಂಶುವೆತ್ತಂ ತುಱುಗೆ...ಕನಕಲಸತ್ಕೀಚದೊಳ್ ಭೂಪನಿರ್ದಂ (ರಾಜಶೇ. ೫-೦೭). ೯. ಜೋಡಿಸು ; ಹೊಂದಿಸು ; ಕುಂದಣಗೊಳಿಸು : ತರತರದಿಂ ತುಱುಗಿದ ವಿವಿಧ ರತ್ನಮಯಮಪ್ಪ ಪೊನ್ನ ಕುಟಿವಟ್ಟುಗಳಿಂ ನಿರುಪಮ ಕನಕಸರೋಜಾಕರಮಲರ್ದಂತಿರ್ದುದನ್ನವಾಸವಿಲಾಸಂ (ಸು ಕು ಮಾ. ೧೦-೨೭). ೧೦. ತಾಗು ; ತಗುಲು; ಅಂಟು: ತುರಗದ ವ್ಯಾಧಿನಿದಾನವನಱಿಯದ ವೈದ್ಯನನೆ ಶಿಕ್ಷೆಗೆಯ್ದ ನೃಪಗಂ ತುಱುಗುವುದಶ್ವೇತಿ ಪಾತಕಮಱಿದವನಂ ತಡೆಯಲಶ್ವಮೇಧದ ಫಲಮುಂ (ಅಶ್ವಶಾ. ೦೦-೫).

ತುರುತುರುಗು (ದ್ವಿರುಕ್ತಿ) : ನೀನುಳಿವೆ ಎಂದಿನೊಲು ಎಲ್ಲೆಡೆಗೆ ತುರುತುರುಗಿ ಗಾಳಿಯೊಲು ಜಿನುಗಾಗಿ ಜೀವನಕೆ ಉಸಿರಾಗಿ (ಬಾಸಿಗ. ೨೬-೯). [ದೇ. ॥ ತಮಿ. ಮಲ. ತುಱು ; ತೆಲು. ತುರುಗು, ತುಱುಗು]

ತುಱುಕು$_2$ (ನಾ). (?) : ಇಱಿದುದಕದಂತೆ ಹಾಲಿನ ನಱುಸೋನೆಯಲುಂಡ ಬಣ್ಣದರಲ್ಗಳ ಸೊನೆಯಿಂ ತುಱುಕಿನ ಜೋಲುವ ತಿಳಿಗಳ ನೆಱಗಿದರಾ ಜನಮನಳುರೆ ಹೊಸ ರಸವಣಗರ್ (?) (ಸೂಕ್ತಿಸು. ೧೩-೦೯).

[?]

ತುಱುಗಲ್ 'ತುಱುಂಗಲ್' ನೋ.

ತುಱುಗಲು 'ತುಱುಂಗಲ್' ನೋ.

ತುಱುಗಲೂರ್ (ನಾ). ಒಂದು ಊರಿನ ಹೆಸರು : ಈಶ್ವರಶರ್ಮಣಾಖ್ಯಾಯ ತುಱುಗಲೂರ್ ವಸ್ತವ್ಯಾ (ಮೃಅರಿ. ೧೯೦೪, ೧೦.೮;728).

[? + ಊರ್]

ತುಱುಗಲ್ಗೊನೆ (ನಾ). ದಟ್ಟವಾಗಿ ಕಾಯಿ ಅಥವಾ ಹಣ್ಣುಗಳನ್ನು ಒಳಗೊಂಡಿರುವ ಗೊನೆ. 'ತುಱುಗಲ್ಗೊನೆವಣ್' ಪರಾ.

[ತುಱುಗಲ್ (< ತುಱುಂಗಲ್) + ಕೊನೆ$_3$ (< ಗೊಲ್ಲೆ)]

ತುಱುಗಲ್ಗೊನೆವಣ್ (ಕ್ರಿ). ದಟ್ಟವಾದ ಕಾಯಿ, ಹಣ್ಣುಗಳಿಂದ ತುಂಬಿದ ಗೊನೆಯನ್ನು ಬಿಡು;ಫಲಿಸು : ತೊರೆದುದೊ ಕಾಮಧೇನು ತುಱುಗಲ್ಗೊನೆವಣ್ತುದೊ ಕಲ್ಪವೃಕ್ಷಂ (ಗದಾಯು. ೦೦-೨೨ ಅಡಿಬಿ).

[ತುಱುಗಲ್ಗೊನೆ + ಪಣ್$_2$]

ತುಱುಗಲ್ಗೊಳ್ (ಕ್ರಿ). ಗುಂಪುಗೂಡು ; ಒಟ್ಟಾಗು : ಪೊಕ್ಕು ಕೇದಗೆಯ ಪೂಗೊಯ್ಯಲ್ಕೆ ಘರ್ಮಾಂಬುಗಳ್ ತುಱುಗಲ್ಗೊಂಡವು ತಂಗೆ ಬಲ್ಲಿತಿ ಬಿಸಿಲ್ ಪುದೋಂಟದೊಳ್ (ಸೂಕ್ತಿಸು. ೦೦-೬೦).

[ತುಱುಗಲ್ (< ತುಱುಂಗಲ್) + ಕೊಳ್$_1$]

ತುಱುಗಳವು (ನಾ). ಹಸುಗಳ ಅಪಹಾರ ; ಗೋಗ್ರಹಣ : ತುಱುಗಳವೊ[ಪಾಠಾ. ಗೊಳ್ಳೊ]ಳ್ ಪೆಣ್ಬುಯ್ಯಲೊಳ್...ತಱಿಸಂದು ಗಂಡು ತನವಮನೆ ನೆಱಪದವಂ ಗಂಡನಲ್ಲನೆಂತುಂ ಪಾಡಂ (ಗದಾಯು.೨-೨೪).

[ತುಱು + ಕಳವು]

ತುಱುಗಾ, ತುಱುಗಾಯ್ (ಕ್ರಿ). ದನಕರುಗಳನ್ನು ಕಾಯು,—ಮೇಯಿಸು : ತುಱುಗಾವ ಗೋವರಂ ಮತ್ತಱಿಕೆಯ ಕಬ್ಬಿಲರನೆಯ್ದೆ ಬೆಸಗೊಳುತಂ (ಧರ್ಮಾಮೃ.೯-೨೩), ತುಱುಗಾವ ಕಿಱುಕಾಳದ ಕೆಳೆಯರುಮಂ ನೋಡುತ್ತುಂ (ಕಬ್ಬಿಕಾ.೨೩೪); ಆರ ಬಸುಱಲಿ ಬಂದು ... ಆರ ಹೆಂಡಿರ ಕೊಂಡು ಕಱು ತುಱುಗಾದು ಕಳವಿನಲಿ ವೀರದೈತ್ಯನ ಸದೆಬಡಿದು ಕುರುವೀರವಂಶದ ರಾಯರೆಮ್ಮೊಳು ವೈರಬಂಧವ ಬಿತ್ತಿ ಕೊಂದವ ಕೃಷ್ಣ ನೀನೆಂದ (ಕುಮಾ.ಗ.೯-೩೮) ; ತುಱುಗಾವ ಪಳ್ಳಿಯಂ ಬಿಟ್ಟು ಬಳಿಕೆರವಿಲ್ಲದೆ ಹೊದ್ದಿ ಪಾಂಡವರನು (ಕೃಷ್ಣಮಿಶ್ರಾ. ೬-೪೭). **ತುಱುಗಾಯ್**: ಮಾಯುದೀ ಮಗ ಹೊಲದೊಳಗೆ ತುಱುಗಾವುತಿರೆಲೊಂದು ಬಾಯ ಬಿಡುತಿರಿಗಾದೆ ಕತ್ತೆಯ ಸಾಯ ಬಡಿದನು (ಶಾಳ್ವಕಾ.೨೨-೧೫).

ತುಱುಗಾವ = ದನಕಾಯುವವನು ; ದನಗಾಹಿ : ತುಱುಗಳು ತುಱುಗಾವರನು ನೆಱೆದಾಡುವರ್ಥಕರ ಎಱಗಿ ನೋಡುವ ತನ್ನನು ... ಕಾಣುತವೆ ಮೈಮಱಿದಳಂಗನೆ (ನಿಘಾಗ. ೦೦-೯-೫೦). [ತುಱು+ಕಾ$_1$]

ತುಱುಗಾಡು, ತುರುಗಾಡು (ನಾ). ದನಕರುಗಳು ಮೇಯುವ ಕಾಡು ; ಹುಲ್ಲುಗಾವಲು ; ಗೋಮಾಳ : ತುಱುಗಾಡು, ಕುಱುಗಂಟು, ಕುಡುಗೋಲ್ (ಶಬ್ದಾನು. ೮೭ ಪ್ರಯೋ). **ತುರುಗಾಡು** : "ಆಶತಂ [ಗವೀನಂ] – ತುರುಗಾಡು" (ಆಕಾನಿ. ೩-೭). [ತುಱು + ಕಾಡು$_2$]

ತುಱುಗಾಯ್ 'ತುಱುಗಾ' ನೋ.

ತುಱುಗಾಯಿ 'ತುಱುಗಾಹಿ' ನೋ.

ತುಱುಗಾರ್ತಿ, ತಂಱುಕಾರ್ತಿ (ನಾ). ಗೊಲ್ಲರವಳಂ ; ಗೊಲ್ಲಿತಿ ; ಗೋಪಿ : "ತುಱುಗಾರ್ತಿ [ಪಾಠಾಂ. ವಳ್ತಿ] ಯೆಂದು ಗೋಪಿ" (ಕಶಸಾ. ೭-೧೨೭) ; "ತುಱುಗಾರ್ತಿಯರೆನಲು ಗೋಪಿಯರ್" (ಕವಿಕಂ. ೮೫) : ಮನೆ ನಿನಗೆ ನಂದಗೋಪಾಲನ ಮನೆ ತುಱುಗಾರ್ತಿ ನಿನಗೆ ಮನೆವೆಂಡತಿ (ಪಂಪಭಾ. ೬-೫೨) ; ತನ್ನ ಪೆಂಡತಿಯಪ್ಪ ನಂದೆಯೆಂಬ ತುಱುಗಾರ್ತಿಯಂ ಕರೆದು... ಮಾಗನಂ ಕೊಟ್ಟು (ಧರ್ಮಾಮೃ. ೦೦-೦೫೦) ; ಕಱುವಂ ಬಿಡು...ಮುಱುವಂ ಸುರಿಯೆಂಬ ಸರಮೆ ತುಱುಗಾರ್ತಿಯರೊಳ್ (ಲೀಲಾವ. ೫-೦೨೦) ; ಕಱೆಯೆಂಬ ನುಡಿ ತುಱುಗಾರ್ತಿಯರೊಳು (ಕುರಾಸಾಂ. ೨-೬೮). **ತುಱುಕಾರ್ತಿ** : ತುಱುಕಾರ್ತಿಯರ್ ತಿಱಿದು ತಂದು ಪಾಱುತನಕ್ಕೆ ಪರಪೆ ಪರೆದು ಕೊರಗಿರ್ದ ಕಱಿಯ ನೆಯ್ದಿಲ್ಗಳಿಂ ... ಮನೋಹರಮಾದ ಮಾಧವೀಮಂಟಪದ ಮೊಗಸಾಲೆಯೊಳ್ ಕುಳ್ಳಿರ್ದು (ಲೀಲಾವ. ೫-೫೯ವ).

[ತುಱುಗಾಱ + – ತಿ$_1$ (< – ಇತ್ತಿ)]

ತುಱುಗಾಹಿ, ತುಱುಗಾಯಿ (ನಾ). ದನಕರುಗಳನ್ನು ಕಾಯುವವನು : ಗೊಲ್ಲ : ತುಱುಗಾಹಿ ಕಾಜಿನ ಮಣಿಯ ಬಲ್ಲನು ಗಡ (ಕುಮ್ಮಾಕ. ೯-೧೪) ; ತುಱುಗಳ ತಿರುಹಿಕೊಂಡೆಯ್ದುವ ಬೇಡರ ತುಱುಗಾಹಿಗಳು ಕಂಡು ನಡುಗಿ (ಜೀವಂಸಾಂ. ೮-೨೩) ; ಈತನೇ ತುಱುಗಾಹಿ ಮಾರಣ್ಣನೆಂಬಾತನು (ಜಿಬಪು. ೫೭-೬೦) ; ಸಲಹುವನೆ ಮನೆಯ ತುಱುಗಾಹಿ ಸ್ತ್ರೀಯರಿಗೆ ಒಲಿಯುವನೆ ಯೋಗಿ (ಸರ್ವಜ್ಞ. ೫೦೯). **ತುಱುಗಾಯಿ** : ಇಂದು ತುಱುಗಾಯಿ[ಪಾಠಾಂ. ಹಿ]ಯಂ ಬಂದಿಱಿಯದವನೆನಗೆ ಸಂದ ಪಗೆ (ಜೈಮಿಭಾ. ೭-೩೦). [ತುಱು + ಕಾಹಿ]

ತುಱುಗಾಱ, ತುರುಕಾರ, ತುಱುಕಾಱ (ನಾ). ದನಕರಂಗಳನ್ನು ಕಾಯುವವನು : ಗೊಲ್ಲ ; ಗೋಪಾಲ : ಒರ್ವರಿನೊರ್ವರೆ ಮಿಕ್ಕು ಪಾರ್ದು ಸಾರ್ದಿಸೆ ತುಱುಗಾಱರಂದಿನಿಸು ಬಲ್ವಲನಾದುದದೊಂದು ಕಾಳೆಗಂ (ಪಂಪಭಾ. ೮-೯೩); ಆ ಶಿಶುವನೆತ್ತಿಕೊಂಡು ಬಂದು ಗೋವಿಂದನೆಂಬ ತುಱುಗಾಱಂಗೆ ಕುಡುವುದುಂ (ಧರ್ಮಾಮೃ. ೦೦-೦೫೦) ; ಏಱಿದರು ಭಂಡಿಗಳನಾ ತುಱುಗಾಱರಾ ಸ್ತ್ರೀಬಾಲವೃದ್ಧರು (ನಿಭಾಗ. ೧೦-೦೦-೧೧). **ತುರುಕಾರ** : ಹಿಂದೆ ಕುಳಿತು ತೇರೆಸಗು ಎಂದು ಅಪ್ಪಣೆಮಾಡುವವನು ಅಂಬಿಗ, ಯುದ್ಧರಂಗದಲ್ಲಿ ಮುಂದೆ ಸಮಾನನಾಗಿ ಬಂದಿರುವವನು ತುರುಕಾರ (ಭಾಮಹಿ. ೨೪). **ತುಱುಕಾಱ** : "ಗೋಮಾನ್, ಗೋಮಿಾ, ಗೋಸ್ವಾಮಿಾ—ಈ ೩ ತುಱುಕಾಱರ್" (ಹಲಾಯು. ೪೪-೧೦೭) ; ಪಚ್ಚ ಪಸಿಯ ತುಱುಕಾಱಂಗಗ್ಗಳಿಕೆಯನೆ ಮಾಡಿ ನೀನುಂ ಪಱಿಯಂ ಕಟ್ಟಿದೆಯೊ ಭೂಪರಿನಿಬರ ಕೊರಲೊಳ್ (ಪಂಪಭಾ. ೭-೪೬). [ತುಱು + – ಕಾಱ]

ತುಱುಗಾಱಪಳ್ಳಿ (ನಾ). ಗೋವಳರ ಗ್ರಾಮ ; ಗೊಲ್ಲರ ಹಳ್ಳಿ : ಪಕ್ಕಣಗಳಲಿ ತುಱುಗಾಱ[ಪಾಠಾಂ. ವ] ಪಳ್ಳಿಯಲಿ . . . ಅಱಸಿದರಾ ನಿಶಾಚರನ (ತೊರಕಾ. ೪-೧೦-೧೫). [ತುಱುಗಾಱ + ಪಳ್ಳಿ$_1$]

ತುಱುಗು$_1$ 'ತುಱುಕು$_1$' ನೋ.

ತುಱುಗು$_2$, ತುರುಗು$_2$ (ನಾ). ಸಂದಣಿ ; ದಟ್ಟಣೆ : ಸಪ್ತಮುಖದಿಂದೆ ವಿಷೋನ್ನತಿಯಿಂದೆ ಭೋಗದೊಳ್ ತುಱುಗಿರವಿಂದೆ ಪೋಲ್ತುದು ಮಹಾನದಿ ರುಂದ್ರಫಣೀಂದ್ರರಾಜನಂ (ಕಾವ್ಯಸಾ. ೭೪೭ ತೂದ್ರಳ); ಮೆಱೆವ ದೇಹಪ್ರಭೆಗಳಲಿ ಮಿಱುಮಿಱುಪ ದಿವ್ಯಾಭರಣಕಿರಣದ ತುಱುಗಿನಲಿ ಒಪ್ಪಿದರಿಂದ್ರತೇಜದಲಿ (ಸಂಭಪ. ೩೩-೫೬). **ತುರುಗು$_2$** : "ತಿಂತಿಣಿ, ಕಿಕ್ಕಿರಿ, ತುರುಗು, ಬಂಬಲು, ಜಂಗುಳಿ, ಹಿಂಡು, ಗುಂಪು...ಮಂದಿ" (ಕಂನುಹು. ೮೫). [<ತುಱುಕು$_1$./ಮಲ. ತುಱುಕು]

ತುಱುಗುಗೂಂದಲ್, ತಂರಂಗುಂಗೂದಲು (ನಾ). ದಟ್ಟವಾಗಿರುವ ಕೂದಲು; ತುಂಬುಗೂದಲು : ತುಱುಗುಗೂಂದಲ್ ಕೊಕ್ಕರಿಸೆ ಕೊನೆವಾಲವಿನಿಸುಂ ನಿಮಿರ್ದು ಸಂಚಳಿಸೆ (ರಾಮಾಶ್ವ. ೧೩೨-೯). **ತುರುಗುಂಗೂದಲು** : ಇದೀ ಶ್ಮಶ್ರುಸಂಕಟವಾದರೋ, ವಿಪರೀತವಾಗಿ, ಕರಿಯ ಚಾಮರದ ಚವುರಿಯ ತುರುಗುಂಗೂದಲಂತೆ...ರೂಕ್ಷತೆಯ ಕಡುಗಪ್ಪಾಗಿ ಗೋಳಾಡುತ್ತಿರುವುದು (ಮಂತ್ರಶ. ೯೨-೦೮).

[ತುಱುಗು$_1$ (<ತುಱುಕು$_1$) + ಕೂಂದಲ್]

ತುಱುಗೆಮೆ, ತಂರುಗೆವೆ, ತಂಱುಗೆವೆ (ನಾ). ದಟ್ಟವಾದ ಕೂದಲುಳ್ಳ ರೆಪ್ಪೆ ; ಒತ್ತಾದ ಕೂದಲುಳ್ಳ ರೆಪ್ಪೆ: ತುಱುಗೆಮೆ ನೀಳ್ದ ಪುರ್ವು ನಿಡುಗಣ್ (ಪಂಪಭಾ. ೧-೦೦೮) ; ಘನಸ್ತನಂ ತುಱುಗೆಮೆ ಕೋಮಲಾಂಗಮಳ ವಟ್ಟ ಕುರುಳ್...ರಮಣೀಯಮಾಗೆ (ಧರ್ಮಾಮೃ. ೪-೦೪೨); ತುಱುಗೆಮೆಯ ತೆರ್ಕೆಯೊಳ್ ಬಂಬಲಿಪ ಕಣ್ಬನಿಗಳೊಸರೆ (ವರ್ಧಪು. ೪-೬೧ವ). **ತುರುಗೆವೆ** : ತುರುಗೆವೆ ನಿಡುಹುಬ್ಬು ಡಾಳಿಪ ಕದಪು...ಅಂಚೆಯ ನಡೆ ನುಡಿಯ ಜಾಣೆಯರು (ಸೌಂದಕಾ. ೩-೭೬). **ತುಱುಗೆವೆ** : ತುಱುಗೆವೆ ನಿಂದು ನೋಡೆ ಕಡೆಗಣ್ಣಿದಿರ್ಗೊಳ್ವಳಿಪಾಡೆ ಪೊಕ್ಕು ಸೈಪೆಱಗಿದಿರ್ಗೊಳ್ವ ಸೋಂಕು. . . ಲಲ್ಲೆಯಿದಿರ್ಗೊಂಡುದು ಕೂಟದ ಕಾಯ್ಪುವೋಪರಾ (ಅರ್ಧನೇ. ೨-೩೬); ತುಱುಗೆವೆಯ ನಿಟ್ಟೆಸಳುಗಂಗಳ . . . ನೀಱಿಯರೈದಿ ತೊಗ್ಗಿನಲಿ (ಕುಮ್ಮಾಆ. ೧೩-೩೦); ತುಱುಗೆವೆಯ ನಿಡುಗಂಗಳಿನ ಕಡೆಸೆಱಗನ ಮರಿಸುತ...ಬಂದಳು ರಾಮನಿದ್ದೆಡೆಗೆ (ತೊರಕಾ.೩-೪-೮); ಪಾಮರಿಯರ ಕುಡುವುರ್ವಿನ ಕೊನೆಮುಟ್ಟಿದ ತುಱುಗೆವೆಗಳ ನಡುವೆ ಕರಿಯಾಲಿಗಳೆಸೆದುವು (ಜಯಕಾ. ೧-೪೦). [ತುಱುಗು$_1$ (<ತುಱುಕು$_1$) + ಎಮೆ]

ತುಱುಗೆಮೆಗಣ್, ತುಱುಗೆವೆಗಣ್, ತುಱುಗೆವೆಗಣ್ಣು (ನಾ). ದಟ್ಟವಾದ ಕೂದಲುಳ್ಳ ರೆಪ್ಪೆಯಿಂದ ಕೂಡಿದ ಕಣ್ಣು : ಭವನಾಂತರಮಂ ನೆಱೆ ಧವಳಿಸುತಿರ್ದಪುದೀ ತುಱುಗೆಮೆಗಣ್ಬೆಳಗು ಪುಂಡರೀಕೇಕ್ಷಣನಾ (ಕಾದಂಪೂ. ೪೨೦); ಪುಂಡರೀಕದಳಧವಳವಿಲೋಚನೆಯರಾ . . . ತಮ್ಮ ನಿಡಿಯ ಬಿಳಿಯ ತುಱುಗೆಮೆಗಣ್ಗಳಿಂ ಕಣ್ಬೇಟಂಗೊಳಿಸಿಯುಂ (ಸುಕುಮಾ. ೦೦-೦೩೭ವ) ; ನಳಿನದೆಸಱೊಳ್ ಮುಸುಱಿ ಮುತ್ತಿದ ಮತ್ತಮಧುಕರಕುಳಮಂ ಕೆಲಕ್ಕೆ ತೊಲಗಿಸುವಂತೆ ತಳ್ತ ತುಱುಗೆಮೆಗಣ್ಗಳಂ ತೆಗೆದು (ಲೀಲಾವ. ೩-೬೫); ಕಾವನ ತೋಳಂ ಬಿಡದಪ್ಪಿದುವಂದಾಕೆಯ ಕೊಡಕೆವರಂ ನಿಮಿರ್ದು ಪೊಳೆವ ತುಱುಗೆಮೆಗಣ್ಗಳ್ (ಕಬ್ಬಿಕಾ. ೩೨೮). **ತುಱುಗೆವೆಗಣ್** : ನಿಡಿಯ ಬಳ್ಳಿಯ ತುಱುಗೆವೆಗಣ್ಗಳಂ ಕೆನ್ನೆಯನೆಯ್ದಿದ ಪುರ್ವುಗಳಂ . . . ಪಡೆದ ಕಾಮದೇವತ್ವಮನವಗಯಿಸುವಂತಿರ್ದ ರೂಪಿನ ಬಾಲಕನಂ . . . ಎತ್ತಿ ಕೊಂಡಿಂದ್ರನ ದೇವಿ ಬಂದಳ್ (ಶಾಂತಿಪು. ೧೦-೯); ತುಱುಗೆವೆಗಣ್ಣ ಕಾಂತಿ ಮರಗಟ್ಟಲೆಯಂ ಬೆದಱಟ್ಟೆ (ಜಗವಿ. ೧೬-೨೫); ತುಱುಗೆವೆಗ [ಪಾಠಾಂ. ನಿಡಿಯಲರ್ಗ]ಣ್ಬೊಣರು . . . ಕಡುಚೆಲ್ವಂ ನೆನೆಯಿಸುತೊಪ್ಪಿದುವು (ಜಯಕಾ. ೨-೪೩). **ತುಱುಗೆವೆಗಣ್ಣು** : ತುಱುಗೆವೆಗಣ್ಣ ಕಟಾಕ್ಷ ಕೆಂಬಲ್ಗಳ ಮಿಱುಗುವ ತೊಂಡೆವಣ್ದುಟಿಯ ಬೆಱಗಿಂದೆ ಮಾತನಾಡಿದಳು (ಮೋಹತ. ೧೬-೨೪) ; ತುಱುಗೆವೆಗಣ್ಣ ನೋಟಮೆಸೆದುದು (ಜಿಬಪು. ೪-೧೧)

[ತುಱುಗೆಮೆ+ಕಣ್]

ತುಱುಗೆವೆ 'ತುಱುಗೆವೆಂ' ನೋ.

ತುಱುಗೆವೆಗಣ್ 'ತುಱುಗೆಮೆಗಣ್' ನೋ.

ತುಱುಗೆವೆಗಣ್ಣು 'ತುಱುಗೆವೆಂಗಣ್' ನೋ.

ತುಱುಗೊಳ್$_1$, ತೊಱುಗೊಳ್$_1$ (ಕ್ರಿ). ದನಕರುಗಳನ್ನು ಅಪಹರಿಸು; ಹಸುಗಳನ್ನು ಹಿಡಿ; ಗೋಗ್ರಹಣಮಾಡು; ದನಗಳನ್ನು ಅಪಹರಿಸಲು ಯಂದ್ಧಮಾಡು : ನೆಲ್ಲಿಗೆಱೆಯ ತುಱುಗೊಣ್ಡಲ್ಲಿ ತುಱುವನಿಕ್ಕಿಸಿ ರೊಸಗರಲಯನ್ ಪೊಸಮೆಣ್ಣಿ ಸಗಮೇಱಿದನ್ (ಎಕ. IX (8), ಹೊಸಕೋ. ೯-೩; 875); ಚಿಃ ತುಱುಗೊಳೆ ಬಾಱೆಮೆಂದು ತುಱುಗೋಳೊಳೆ ಸಾವುದು ಸೈಪಿದೆಂದು ಪಾಯ್ದಱಿಕೆಯ ಗೋವರಣ್ಮ ಬರೆ (ಪಂಪಭಾ. ೮-೯೫); ಮರವುರ ಪರಿವರಿವರಿದಿಱಿಯಲಾಱದೆ ಕಳ್ದು

ತುಱುಗೊಣ್ಡು (ಎಕ, IV. ಹುಣಸೂ. ೦೧-೬; 1020?); ಸುಶರ್ಮನೃಪಂ ವೀತಾಂಕುಶಂ ತುಱುಗೊಳಲ್ ಪೊಱಮಟ್ಟಂ (ಕಾವ್ಯಾವ. ೦೨೨); ಪಟಿಯೆ ಧರೆ ತುಱುಗೊಳಲ್ ಬಂದಟಿವುದೆ ರಣದೊಳ್ ಕನಿಷ್ಠಮಿದೆ ಚಿಃ ಕಷ್ಟಂ (ನೇಮಿಪು. ೦೦-೦೫೭). **ತೊಱುಗೊಳ್₁** : ಸೋಮಣಮ್ಬೊಂಕ್ಕಮವಿ ಕುಣಮ್ಬನ್ದು ತೊಱುಗೊಳ್ವಲ್ಲಿ ಪಲರುಮನೋಡಿಸಿ (ಎಕ. X, ಕೋಲಾರ. ೨೩೨-೩; ಸು. 750). [ತುಱು + ಕೊಳ್₁]

ತುಱುಗೊಳ್₂ 'ತುಱುಗೋಳ್' ನೋ.

ತುಱುಗೋಳ್, ತುರುಗೋಳು, ತುಱುಂಗೊಳ್, ತುಱುಗೊಳ್₂, ತೊಱುಕೊಲ್, ತೊಱುಕೊಳ, ತೊಱುಕ್ಕೊಳ್, ತೊಱುಗೊಳ್₂, ತೊಱುಗೊಳ, ತೊಱುಗೊಳ್ಳ, ತೊಱುಗೋಳ್ (ನಾ). ಶತ್ರುಗಳು ದನಗಳನ್ನು ಹಿಡಿದುಕೊಂಡಾಗ ಅವುಗಳ ರಕ್ಷಣಾರ್ಥವಾಗಿ ಮಾಡುವ ಕದನ; ಗೋಗ್ರಹಣಕಾಲದಲ್ಲಿ ಅವುಗಳನ್ನು ರಕ್ಷಿಸಲು ಮಾಡುವ ಯುದ್ಧ : ತುಱುಗೋಳೊಳೆ ಸಾವುದು ಸೈಪಿದೆಂದು ಪಾಯ್ದಱಿಕೆಯ ಗೋವರಣ್ಮೆ ಬರೆ (ಪಂಪಭಾ. ೮-೯೫); ತುಱುಗೋಳೊಳ್ ಸತ್ತೊಡೆ ಪುಣ್ಯಮಕ್ಕು (ಜಾಪುಂಪು. ೨೭೫). 'ತುಱುವರಿಗಾಳಗ' ಪರಾ. **ತುರುಗೋಳು** : ಈ ವೀರಗಲ್ಲಿನಲ್ಲಿ . . . ಕನ್ನೆಯನು ಕಾತಿಕವಳ್ಳಿಯ ತುರುಗೋಳಿನಲ್ಲಿ ಕಾದಿ ಸತ್ತನೆಂದು ಹೇಳಿದೆ (ಶಾಪಮಂ. ೫೪೨ ಸೂಚನೆ). **ತುಱುಂಗೊಳ್** : ಸಿನ್ದಮ್ಮನಾಡ ಬವರದೊಳು ಕೆಲ್ಲಂಗೆಱೆಯ ತುಱುಂಗೊಳೊಳೆ ××× ಸತ್ತ (ಎಕ. V, ಅರಸೀ. ೯೯-೬ : ಸು. 990). **ತುಱುಗೊಳ್₂** : ಗಂಗಮಹಾನಾಇಗರಾ ಮಗನ್ಬಾದೆಯನ್ನಿರಟ್ಟಿ ತುಱುಗೊಳೊಳ್ ಕಾದಿ ತುಱುವನಿಕ್ಕಿಸಿ ಸುರಲೋಕದ ಭೋಗಿ ಆದನ್ (ಎಕ. IX, ಹೊಸಕೋ. ೮೪-೩ : 720) ; ಕುರ್ಗ್ಗಲ್ಲಗಾವುಣ್ಡ ತಮುತ್ತಿರ್ಬ್ಬೊರ್ ತುಱುಗೊಳೋಳ್ಕಾದಿ ಸತ್ತರ್ (ಎಕ. IV, ಹುಣಸೂ. ೯೨-೮ : ಸು. 920); ಕಾಡಿಗಾವುಣ್ಡ ತನ್ನೂರ ತುಱುಗೊಳೊಳ್ ತುಱುವ × ಕ್ಷಿಸಿ ಕಾದಿ ಸತ್ತ (ಎಕ. IV, ಗುಂಡ್ಲುಪೇ. ೧೪-೪ : 995 ?). **ತೊಱುಕೊಲ್** : ತೊಱುಕೊಲ್ವಳಿ ಪೆರಿಯವನ್ ಕೋಲ್ಗಳಾಂ[ತು] ಭಿಳ್ದನ್ (ಸೌಇಇ. IX-i, ೨-೮ : ೩ನೆಯ ಶತ). **ತೊಱುಕೊಳ** : ಸ್ವಸ್ತಿಶ್ರೀ ತೊನ್ದೆಗೊಲೆ ಉಕ ×× ತೊಱುಕೊಳ × ಸತ್ತೋನ್ (ಎಕ. X, ಚಿಂತಾಮ. ೦೦೫-೩; ?). **ತೊಱುಕ್ಕೊಳ್** : ತೊಱುಕ್ಕೊಳುಳ್ವಿಟಾನ್ (ಎಕ. X(8), ಮಾಲೂರು. ೧೦೯-೧; ೩ನೆಯ ಶತ). **ತೊಱುಗೊಳ್₂** : ಎಱೆಯಮ್ಮಂ[ನಿ]ವುದಿ ತೊಱುಗೊಳೊಳ್ಕಾದಿ ಸತ್ತೋನ್ (ಸೌಇಇ. XI-i, ೧೯-೩ : 383) ; ಮದಲೂರ ಕುಪ್ಪನ್ತೊಱುಗೊಳೊಳಿಱಿದು ಸತ್ತು ಸಗ್ಗಿಯಾದನ್ (ಎಕ. X, ಕೋಲಾರ. ೦೮೨-೨ ; 1000 ?). **ತೊಱುಗೊಳ** : × × × ಮೇರು ತೊಱುಗೊಳ ಕಟ್ಟಿತ್ತೊಡೆ ಮೆಚ್ಚಿ ಕಲ್ನಾಡೊಂದಂ ಕೊಟ್ಟಂ (ಸೌಇಇ. IX-ii, ೭೦೭-೦; ಸು. ೩ನೆಯ ಶತ). **ತೊಱುಗೊಳ್ಳ** : ಸಿಂಗಪ್ಪ ದುಗ್ಗಯ್ಯ ಸಾನ್ತನೊರ ತೊಱುಗೊಳ್ಳ ಧಾಳಿ ಕಳ್ಳರೊಳ್ತಳ್ತಿಱಿದು ಅಟ್ಟಿ ಸತ್ತಂ (ಎಕ. IX (8), ಕಾನಕಾ. ೪೮-೦೫ ; 900). **ತೊಱುಗೋಳ್** : ಶ್ರೀ ಹೆಮ್ಮಯನ ಮಗ ಸಾನ್ತಂ ತೊಱುಗೋಳೊ ಕಾದಿ ಸತ್ತು ಸಗ್ಗಿಯದಂ (ಎಕ. IX (8), ಹೊಸಕೋ. ೦೯೫-೪ ; ಸು. 1000). [ತುಱು + ಕೋಳ್]

ತುಱುಘಟೆ (ನಾ). ಒಂದು ಪ್ರದೇಶದ ಹೆಸರು (?) : ಆ ದೇವರ ಅಂಗರಂಗಭೋಗಕ್ಕಂ...ನೈವೇದ್ಯಕ್ಕಂ ತಂಮ ಪ್ರವಿಷ್ಟದ ತುಱುಘಟೆಯ ಮೂಡಣ ಬೆಂಚೆ ಯಿಶಾನ್ಯದಲ್ಲಿ ... ಧಾರಾಪೂರ್ಬ್ಬಕಮ್ಮಾಡಿಕೊಟ್ಟ ಮತ್ತರಾಱು (ಸೌಇಇ. IX-i, ೨೯೫-೧೮ ; 1172). [?]

ತುಱುಚ₁ 'ತುಱುಚೆ' ನೋ.

ತುಱುಚ₂ (ನಾ). ತುರಿಯೆಂಬ ಚರ್ಮರೋಗವುಳ್ಳವನಂ : ಸಾವಂ ಬಯಸುವ ತೊನ್ನರುಂ ತುಱುಚರುಂ ಮಹಾರೋಗಾವಿಳರುಂ ಬಂದಾ ಮರನ ಫಲಮಂ ಮೆಲೆ ನಿರೋಗಿಗಳಾಗಿ (ಧರ್ಮಪ. ೭-೪ ಪ).

[ತುಱುಚೆ + – ಅ₇]

ತುಱುಚಿ 'ತುಱುಚೆ' ನೋ.

ತುಱುಚೆ, ಚುಱಚಿ, ತುರಚಿ, ತುರಚೆ, ತುರಿಚೆ, ತುರುಚ, ತುರುಚಿ, ತುರುಚೆ, ತುಱಿಚ, ತುಱಿಚೆ, ತುಱುಚ₁, ತುಱುಚಿ, ತುಱುಜೆ (ನಾ). ೧. ಶರೀರಕ್ಕೆ ತಗುಲಿದರೆ ನವೆಯುಂಟುಮಾಡುವ ಒಂದು ಬಗೆಯ ಗಿಡ; ತುರಿಕೆಗಿಡ ; ಉರಿಸಣಿಕೆ (ಕರಾ) : "ದುಸ್ಪರ್ಶಮೆನೆ ತುಱುಚೆಯಕ್ಕುಂ" (ಮಂಗರಾ. ೪೪-೪೪) ; ಹೆಗ್ಗುಱುಟಿಗೆಯಂ ತುಱುಚೆಯನೊಗ್ಗಿರೆ ತಾಂ ಕೈಪೆಸೋರೆಯ ಬೇರ್ಗಳೊಳೆಲ್ಲಂತಗ್ಗಳ ಮೂರ್ಸೂಟ್ವರೆಗಂ ತೆಗ್ಗಿಲ್ಲದೆ ರಚಿಸಿ (ಐಮದ. ೧೬-೧೪೫); ವನಜವನದಲಿ ತುಱುಚೆ ಕಬ್ಬಿನ ಬನದಿ ಕಡಸಿಗೆ ಚೂತಮಯ ಕಾನನದಿ ಬೊಬ್ಬುಲಿ ಭೀಮಸೇನನ ಇರವು ತಮ್ಮೊಳಗೆ (ಕುವ್ಯಾಅ. ೮-೫) ; ತೊಳಚಿದೋಂಟದೊಳ್ ತುಱುಚೆ ಪುಟ್ಟುವಂತಿರೆ (ರಾಪೂಶ್ವ. ೨೭-೭). **ಚುಱಚಿ** : ೧. ಹಾಳೂರ ಚುಱಚಿ ನಸುಗುನ್ನಿ ತಿಗುಳರ ಗಾಳಿ ಬೇಡೆಂದ (ಸರ್ವಜ್ಞ. ೦೩೮೫). **ತುರಚಿ** : ೧. 'ತುರಚಿಬಳ್ಳಿ' ಪರಾ. **ತುರಚೆ** : ೧. ತುರಚೆಯ ಜಾತಿಯ ಗಿಡ (Archangel. ಇಂಕನಿ). **ತುರಿಚೆ** : ೧. ಧರಣಿಪತಿಯಹ ನಳನ ಸಭೆಯಲಿ ತುರಿಚೆ ಮಕ್ಕಣದಂತೆ ದುರ್ಮತಿ ದುರುಳ ಪುಷ್ಕರನೆಂಬ ದಾಯಿಗ ... ಇರುತಿಹಂ (ಅಂಬಿಕಾ. ೩-೫೯) ; ಅವನ ಸಹವಾಸ ಅಂದರೆ ತುರಿಚೆ ಮುಟ್ಟಿದ ಹಾಗೆ (ರೂಢಿ). **ತುರುಚ**: ೧. ತುರುಚನ ಬೇರು, ನೀಲಿಬೇರು ಇವು ಪ್ರತ್ಯೇಕ ಹತ್ತು ಹಲಗಳನ್ನಿಡಿದು (ಸಕಪ್ಯ. ೭೦). **ತುರುಚಿ** : ೧. ಬಂಜರು ನೆಲದಲ್ಲಿ ಯಥೇಚ್ಛವಾಗಿ ಬೆಳೆಯುವ ಕುಟುಕುಗೂದಲುಗಳಿಂದ ಕೂಡಿದ, ಕೆಲವು ಜಾತಿಯ ತುರುಚಿಯ, ಚುರುಚುರುಕನ, –ಗಿಡ (Nettle. ಇಂಕನಿ) ; ತೋಟಕ್ಕೆ ಕರೆದುಕೊಂಡು ಹೋಗುವುದು ಅಲ್ಲಿ ಬೇಕೆಂದು ನೆಪ ತೆಗೆದು ಜಗಳವಾಡಿ ತುರುಚಿ ಮುಟ್ಟಿಸುವುದು (ಕಳಹು. ೦೦). **ತುರುಚೆ** : ೧. ಮಳೆಗಾಲದಲ್ಲಿ ಆ ಪ್ರದೇಶ ಜಿಗಣೆ, ಬೆತ್ತದ ಬೀಳಲು, ತುರುಚೆಗಿಡಗಳಿಂದ ಪ್ರವೇಶಕ್ಕೆ ಅಸಾಧ್ಯವಾಗುತ್ತಿತ್ತು (ಕುಡಿಕೊ. ೧೦೪); ಆ ನೋಟದಿಂದಾಗಿ ತುರುಚೆಯನ್ನೊರಸಿದಂತಾಯಿತು (ನಾಡೋಜ. ೦೯೬) ; ರಾಣಿ...ಅಸೂಯೆ ಸಂಶಯವೆಂಬ ತುರುಚೆಯ ಗಿಡಕ್ಕೆ ನೀರೆರೆದು ಪೋಷಿಸಿರಬೇಕು (ಹಾಹುತ್ತ. ೦೯). **ತುಱಿಚ** : ೧. ತಳವಲು ತುಂಬೆ ನೆಲ್ಲಿ ತುಱಿಚ ಕೆಱಿನೆಲ್ಲಿ (ಐಮದ. ೫-೮೯). **ತುಱಿಚೆ** : ೧. "ಮರ್ಕಟಿಯೆನಿಕು ಕಪಿಕಚ್ಛು ದುರಾಲಭೆ ತುಱಿಚೆ" (ವಸ್ತುಕೋ. ೩೬-೨೦). ೨. ಒಂದು ಬಗೆಯ ಚರ್ಮ ರೋಗ ; ತುರಿ ರೋಗ : ಹಱುವಾಯ ತುಱಿ[ಪಾಕಾಂ. ಱು]ಚೆಗಳ ಬತ್ತಲೆಯ ಬಾಳ್ವೆಣಂಗಳು ಸುತ್ತ ಮುತ್ತಿರಲು (ವಾಗೀರ. ದೇ. ೨೫೪-೨೬). **ತುಱುಚ₁** : ೧. "ಮರ್ಕಟಃ –ಎಕ್ಕೆ, ತುಱುಚ, ಹಿಪ್ಪಲಿ, ಕೋಡಗ" (ಓಷಧಿ. ೦೦೫); ಮೆಣಸು ... ಆಷಾಢಿ, ಸಹದೇವಿ, ತುಱುಚ, ನೀಲಿ, ರುದ್ರಜೆಡೆ, ಇವ ಸಮಾನಂಗೊಂಡು ಸಹದೇವಿರಸದಲ್ಲಿ ಲೇಪವಂ ಮಾಡಿದುದು ಜ್ವರ ಹರ (ವಿಪ್ರವಿ. ೦೮೩) ; ಹಂಬಿನ ತುಱುಚನಾ ಬೇರು ಸಸಿಗುಪ್ಪೆ ... ಹತ್ತಿ ಹರಳ ರಸಮಂ ಪೂರೈಸಿ ಕಾಸಿ (ಸೂಪಶಾ. ೨-೦೯) ; ತುಱುಚನ ಬೇರು, ಪರ್ಪಾಟಕ, ಅಮರದವಳ್ಳಿ, ಶುಂಠಿ ಇವಿಷ್ಟನು ... ಕಷಾಯವ ಕಾಸಿ (ವೈದ್ಯಸಾ. I, ೩೬೩) ; ತುಱುಚನ ಗಿಡು ಸೋಂಕಿದಂತೆ ಬಿಱುಬುಗೊಂಬಳು ಬೆದಱುವಳು (ಹದಿಬ. ೭-೨೬). **ತುಱುಚಿ** : ೧. "ದುರಾಲಭಾ – ತುಱುಚಿ" (ಬಾಹಟೀ. ೨-೨-೮೫) ; ಹಸಿದಡುಣಬಹುದೇ ನಸುಗುನ್ನಿ ತುಱುಚಿ [ಪಾಕಾಂ. ಱಿಚೆ]ಯನು (ಅವಚಂ. ೭೦-೩೧೫); ಹಿತ್ತಲ ತುಱುಚೆಯ ತಂದು ಪನ್ನೀರನೆಱೆದರೆ ಒತ್ತಿದವರ ಹಱಿಕೊಂಡು ತಿಂಬೋದು ಬಿಡಬಲ್ಲುದೆ (ಪುರಂದ. ೫-೫೬-೩). **ತುಱುಜೆ** : ೧. "ಕುಚ್ಛಭಃ –ತು(ಱು)ರುಜೆ" (ಓಷಧಿ. ೨೧); ಕಬ್ಬುನದ

ಬಡಿಗೆಗಳ ನಸುಗುನ್ನಿದುಱುಜೆ [ಪಾಶಾಂ. ತುಱುಚೆ]ಯ ಪುಡಿಯ ತೀವಿದ ಶಿತ್ತಿಗಳ ... ಹರಹಿನಲೆಸೆದುದಾ ದುರ್ಗ (ತೊರರಾ. ೬-೭-೧೧).

[<ತುಱು./ತೆಲು. ತುರುಚೆ = ಮಂಗರವಳ್ಳಿ]

ತುಱುಜೆ 'ತುಱುಚೆ' ನೋ.

ತುಱುತುಱು (ನಾ). ಒಂದು ಅನುಕರಣ ಶಬ್ದ. 'ತುಱುತುಱುತಿನ್' ಪರಾ.

ತುಱುತುಱುತಿನ್, ದುಱುದುಱುದಿನ್ (ಕ್ರಿ). ಬಹಳ ನವೆಯುಂಟಾಗು,—ಕಡಿತವುಂಟಾಗು ; "ಚುರುಚುರಂ ಉರಿ" (ಪ್ರಭಣ್ಣ) : ಮಿಱುಗುವ ದಾಡೆಯಿಂದಣಿದು ಪೆರ್ದರಿಯಂ ಕರದಿಂದಮೆತ್ತುತುಂ ತುಱುತುಱುತಿಂಬ ಕಂದರವನೊತ್ತರಗೊಂಡು ಮಹಾಮಹೀಜದೊಳ್ ತಱತಱನಾಗಿ ಮಾಱಿರಸುತುಂ ... ಬರುತಿರ್ದುದು ಭೀಕರನೊಂದು ಸೂಕರಂ (ಕಾವ್ಯಸಾ. ೧೧೦೨). **ದುಱುದುಱುದಿನ್** : ಉದಯಿಸುಗುಂ ಶೂಲಂ ವಾತದಿನುರಿಪಂ ಪಿತ್ತದೇಟ್ಗೆಯಿಂ ದುಱುದುಱುದಿಂಬುದು ಕಫದಿನಾ ತ್ರಿದೋಷದ ಪುದುವಿಂದಾಮಿಶ್ರಮಾಗಿ ತೋರ್ಕುಂ ತಮ್ಮೊಳ್ (ಲೋಕೋಪ. ೯-೩). [ತುಱುತುಱು + ತಿನ್]

ತುಱುನೆಲೆ (ನಾ). ದನಕರುಗಳನ್ನು ಕಟ್ಟುವ ಅಥವಾ ಕೂಡುವ ಸ್ಥಳ ; ಕೊಟ್ಟಿಗೆ : ಮಾನವಮದನನುಂ ಮಕರಂದನುಮಾ ತುಱುಪಟ್ಟಿಯ ತುಱುನೆಲೆಯೊಳ್ ನಿಂದು ನೋಡುತ್ತುಮಿರೆ (ಲೀಲಾವ. ೫-೧೦೦).

[ತುಱು + ನೆಲೆ]

ತುಱುಪಟ್ಟಿ, ತುರುಪಟ್ಟಿ, ತುರುಹಟ್ಟಿ, ತುಱುವಟ್ಟಿ, ತುಱುಹಟ್ಟಿ (ನಾ). ೧. ದನಕರುಗಳ ಹಟ್ಟಿ ; ದನಕರುಗಳನ್ನು ಕಟ್ಟಿಹಾಕುವ ಸ್ಥಳ ; ಕೊಟ್ಟಿಗೆ ; ಗೋಸ್ಥಾನ : "ಗೋಷ್ಠಂ, ಗೋಸ್ಥಾನಕಂ, ಈ ೨ ತುಱುಪಟ್ಟಿಯ ಹೆಸರು" (ನಾಚಿರಾ. ೧೦೩) ; ಗೋಟ್ಟೀ—ತುಱುಪಟ್ಟಿ [ಪಾಶಾಂ. ಳ್ಳಿ] ಯೊಳ್ (ವಡ್ಡಾರಾ. ೦೬೦-೫) ; ತುಱುಗಿದ ತುರಗಗಳೆಂದೆಂಬ ಪಶುಗಳ ಮುಱಿದಿಕ್ಕಿ ರಣವೆಂದೆಂಬ ತುಱುಪಟ್ಟಿ[ಪಾಶಾಂ. ಟ್ಟಿ]ಯೊಳು ರಾಮನೆಂದೆಂಬ ಪೆರ್ಬುಲಿ ಬಿಱುವರಿದುದು (ಕುರಾಸಾಂ. ೨೦-೬೫). ೨. ಗೊಲ್ಲರು ವಾಸಿಸುವ ಹಳ್ಳಿ ; ಗೊಲ್ಲರ ದೊಡ್ಡಿ : ತುಱುಗಾರ್ತಿಯಂ ಕರೆದು ಪುತ್ರಲಾಭಮಾದುದೆಂದು ಮಗನಂ ಕೊಟ್ಟು ತುಱುಪಟ್ಟಿಯೊಳೊಸಗೆಯಂ ಮಾಡಿ (ಧರ್ಮಾಮೃ. ೧೦-೦೫೦) ; ಅಲ್ಲಿಗೆ ಸಮೀಪದೊಳೊಂದು ತುಱುಪಟ್ಟಿಗೆಲ್ಲಂ ಪ್ರಧಾನ ನಂದಗೋವನೆಂಬಂ (ಬಂಜರಿ. ೬-೫೮) ; ಗಂಗಾ ತೀರದ ತುಱುಪಟ್ಟಿ [ಟ್ಟಿ] ಯೊಳಗೆ ವೃಷಭಂಗಳಾಗಿ ಸಂಜನಿಸಿ (ನೇಮಿಸಂ. ೭-೨೨) ; ಸಂತತಾಶ್ರಮ ತಪೋವನಗಳು ತುಱುಪಟ್ಟಿ ಮುಂತಾದುವು ಘೋಷಾಕರವು (ಶಾಂತೀಶ. ೮-೭೨); ಸಲೆ ಪೆಂಪೊಗೆದ ಡಂಗುರ ಸಾಱಿಸಲು ತುಱುಪಟ್ಟಿಯಲಿ (ಸಾಳ್ವಭಾ. ೨೨-೨೫). ೩. (ಆಲಂ) ಹಳ್ಳಿಯ ಜನ : ಅನ್ನೆಗಮಾ ತುಱುಪಟ್ಟಿಯುಮಲ್ಲಿಂದೆರ್ದು ನಾಡೆ ಗೆಂಟುಪೋದತ್ತು (ವಡ್ಡಾರಾ. ೧೦೩-೨೩). **ತುರುಪಟ್ಟಿ** : ೧. ಅಮೃತಶಿಲೆಯ ಗೋಶಾಲೆ ತಂತುಕಾರಸಹಸ್ರಜಾಲವೈರೂಪ್ಯದಿಂ . . . ಖಿನ್ನಮಿದೆ ಪಾಳೂರ ತುರುಪಟ್ಟಿಯೋಲ್ (ಶ್ರೀರಾಮಾ. ೮೫೦-೧೦) . **ತುರುಹಟ್ಟಿ** . ೧. ಒಮ್ಮೆ ನಮ್ಮ ತುರುಹಟ್ಟಿಗೆ ಹುಲಿ ನುಗ್ಗಿತ್ತು (ರೂಢಿ). **ತುಱುವಟ್ಟಿ** : ೧. ಸುರಧೇನುಸಂಚಯಂ ಸರ್ವಭೂಷಣನ ತುಱುವಟ್ಟಿಯೆನೆ ಚೆನ್ನಾದುದರಸು ತನವಂದೀಶನ (ಚಿಬಪು. ೨೯-೪೨) ; ತುಱುವಟ್ಟಿಯಿಂದ ತೊಪ್ಪಿಂದ ತಣ್ಣೆಳಲಿಂದ ಕೆಱೆ ಕಟ್ಟೆಯಿಂದ (ನಂದಿಮಾ. ೧೫-೧೬). **ತುಱುಹಟ್ಟಿ** : ೧. ಗೋಷ್ಠಾಧ್ಯಕ್ಷ, ಗೋವಿಂದ—ತುಱುಹಟ್ಟಿಯ ಅದ್ದಿಕದವನು(ನಾಚಿರಾ.ಕಿ). ೨. ನಾಡೊಳಗೆ ತುಱುಹಟ್ಟಿಯಲಿ ಹೊಲನಾಡಿ ಹೆಚ್ಚಿದ ಗೋಕದಂಬವ ನೋಡುವುದು ನೆವ (ಕುಮಾಅ. ೧೭-೨೦). 'ಕಱುಹಟ್ಟಿ' ಪರಾ.

[ತುಱು + ಪಟ್ಟಿ$_1$]

ತುಱುಪರಿ 'ತುಱುವರಿ' ನೋ.

ತುಱುಪರಿಗ (ನಾ). = ತುಱುಗೋಳ್(?) : ಅಂತಾತನನುಜ ದೇಕರಸ ತುಱುಪರಿಗವೆಂಬ ಪುಯ್ಯಲ ನೆಱೆಯಾಲಿಸಿ ಕೇಳ್ದು (ಎಕ. XII, ಚಿಕ್ಕನಾ. ೦೯-೨೬ ; 1215 ?). [P ಇದು 'ತುಱುಪರಿಗುಂ' ಎಂಬುದರ ಅಪಲಿಖಿತ ವಿರಬಹುದು]

ತುಱುಪಳ್ಳಿ 'ತುಱುವಳ್ಳಿ' ನೋ.

ತುಱುಪಳ್ಳಿಕಾಱ (ನಾ). ಗೊಲ್ಲರ ಹಳ್ಳಿಯವನು ; ಗೊಲ್ಲ; ಗೋವಳಿಗ : ಧರಣಿವಾಲರ ಮಧ್ಯದಲಿ ಭಾಸ್ಕರನು ಗಡ ತುಱುಪಳ್ಳಿಕಾಱರ ಪುರದ ಭಾಸ್ಕರನೀತನಲ್ಲಾ (ಕುಮಾಸ. ೮-೧೭).

[ತುಱುಪಳ್ಳಿ (<ತುಱುವಳ್ಳಿ) + – ಕಾಱ]

ತುಱುಬಿಕ್ಕು, ತುರುಬಿಕ್ಕು (ಕ್ರಿ). ತುರುಬನ್ನು ಹಾಕು ; ಕೂದಲನ್ನು ಗಂಟುಕಟ್ಟು : ತುಂಬಿಗುರುಳ ತುಱುಬಿಕ್ಕಿ ದಾದಿಯರು ನಿತಂಬಿನಿಯೊಡನೆ ಪೇಳಿದರು (ಪೂರ್ಣಚಂ. ೯-೧೬). **ತುರುಬಿಕ್ಕು** : ಉಳ್ಳಲರ ಹೂವೀಡ ತುರುಬಿಕ್ಕಿ ಮುಡಿಸಿ (ಕಾಲೂರ. ೦೮೩-೪೦೪).

[ತುಱುಬ್ಬು$_2$ (<ತುಱುಂಬ್ಬು$_2$) + ಇಕ್ಕು]

ತುಱುಬ್ಬು$_1$ 'ತುಱುಂಬ್ಬು$_1$' ನೋ.

ತುಱುಬ್ಬು$_2$ 'ತುಱುಂಬ್ಬು$_2$' ನೋ.

ತುಱುಮಂದೆ, ತುರುಮಂದೆ (ನಾ). ೧. ದನಗಳ ಹಿಂಡು, – ಗುಂಪು : "ತುಱುಮಂದೆಯಕ್ಕತಿ ಗೋವೃಷಂ" (ಮಂಗರಾ. ೫೬-೧೦) ; "ತುಱುವಿಂಡು ತುಱುಮಂದೆಯಕ್ಕುಂ ಗೋಸಮುದಾಯವು" (ಶಬ್ದಮಂ. ೩೪) : ನಾನಾರೆಂಬುದ ತಾನಱಿತು ತಿಳಿದಲ್ಲಿ ತುಱುಮಂದೆಯೊಳಗಾಯಿತ್ತು (ತುಱುಗಾ. ೪-೬) ; ಈಗಳೊ ನೀನ್, ನಿನ್ನಯ್ಯನವೆ ತುಱುಮಂದೆಗಳ್ ವೇಣ್ ತುಱುಪಟ್ಟಿಗಳ ಬಱಿಯ ... ಪುಲ್ಗಾವಲೆಡೆಗೊರ್ವಳೇ ಚೆಚ್ಚರಂ ಬೋಗು (ಬಡಬ್ರ. ೩೪-೭೪೨). ೨. ಗೋವುಗಳಂ ಇರುವ ನೆಲೆ ; ಕೊಟ್ಟಿಗೆ ; ಗೋಸ್ಥಾನ ; ಗೋಕುಲ : (ಕ). **ತುರುಮಂದೆ** : ೧. "ತುರುವಿಂಡೆನಲು ತುರುಮಂದೆಯೆನಲು ಗೋಸಮುದಾಯಮಕ್ಕು" (ಕಶರ. ೪೭) ; ತುರುಮಂದೆಯಲ್ಲಿ ಇರುವ ಪದ್ಧತಿಯಾಗಿದ್ದುದರಿಂದ (ನಮ್ಮೂರ. ೬೬). [ತುಱು + ಮಂದೆ]

ತುಱುಮಿಂಡಿ, ತರಿಮಿಂಡಿ, ತಱಿಮಿಂಡಿ, ತಱುಮಿಂಡಿ, ತುರುಮಿಂಡಿ (ನಾ). ೧. ಹೊಸಪ್ರಾಯದವಳು ; ಮೈನೆರೆದ ಹೆಣ್ಣು ; ನವಯೌವತಿ : "ತುಱುಮಿಂಡಿಯೆನೆ ನೆಱೆದ ಪೆಣ್ಣಕ್ಕು" (ಶಬ್ದಮಂ. ೭೪) ; ಪಾಡಿದರ್ ತುಱುಮಿಂಡಿಯರವ್ಯತೋಪಮಾನಗಾನಮಸೊಲವಿಂ (ಉದ್ಭಟ. ೨-೦೦೮). ೨. ಮುಟ್ಟಾದವಳು : "ತುಱುಮಿಂಡಿಯಾರಯ್ಯೆ ಪುಷ್ಪವತಿಯಾದವಳ್" (ಕಬ್ಬಿಳ್ಕ. ೨೬). **ತರಿಮಿಂಡಿ** : ೧. ತರಿಮಿಂಡಿಯರ್ನಡೆದರೊಡಲಳಪಿನಿಂ ಮಲೆಯ ಬೆರೆವ ಪೊರೆಯಂ ಪೊತ್ತು (ಕಾಲೂರ ೦೩೪-೩೬೧). **ತಱಿಮಿಂಡಿ** : ೧. ತುಱುಗಿದಾಭರಣಗಳೋರೆಕೋರೆಯ ತಿದ್ದಿತ [ಪಾಶಾಂ. ಸ]ಱಿಮಿಂಡಿಯನುವಾದಳಾಗ (ಧರಚ. ೦೦-೬೬) ; ರಣಕೆ ಪೋಪವಸರದೊಳ್ ತಱಿಮಿಂಡಿಯಪ್ಪ ತನ್ನಯ ಮಡದಿಯನಿಕ್ಷುವತಿಯಂ ಕಂಡು (ರಾಮಾಶ್ವ. ೧೩೦-೨೬). ೨. "ತಱಿ[ಪಾಶಾಂ. ತುಱು]ಮಿಂಡಿಯೆಂದು ಪುಷ್ಪಿತೆಯಾದ ಕಾಂತೆ" (ಕಶಸಾ. ೬೨-೩೬೨) ; "ತಱಿ [ಪಾಶಾಂ. ತುಱು]ಮಿಂಡಿಯೆನಲು ಪುಷ್ಪಿತೆ" (ಕವಿಕಂ. ೦೬೪). **ತಱುಮಿಂಡಿ** : ೨. "ತಱುಮಿಂಡಿ—ರಜಸ್ವಲೆ, ಮುಟ್ಟಾದ ಹೆಂಗಸು, ಪುಷ್ಪಿತೆ" (ಪ್ರಭಣ್ಣ). **ತುರುಮಿಂಡಿ**:೧."ತುರುಮಿಂಡಿಯೆಂದೆನಲ್ ಪ್ರಥಮಾಖ್ಯತುವಾದ ಕಾಮಿನಿ" (ಕಶರ. ೪೭); "ತಱುಮಿಂಡಿ—ತುರುಮಿಂಡಿ=ಬೆಳೆದ ಹುಡಿಗೆ, ಹೆಣ್ಣಾದವಳು" (ಜಾನಕೋ. ೬೭). 'ಸಱಿಮಿಂಡಿ' ಪರಾ. [<ತುಱುಗು$_1$ + ಮಿಂಡಿ]

ತುಱುಯ್ಯಲು 'ತುಱುಹುಯಲು' ನೋ.

ತುಱುವಟ್ಟಿ 'ತುಱುಪಟ್ಟಿ' ನೋ.

ತುಱುವರಿ, ತುಱುಪರಿ, ತುಱುಹರ್ಬ (ನಾ). = ತುಱುಗೋಳ್ : ಮಾದೆಯ ಹರಿಹರಂಗಳು ಸಂಕರಸೆಟ್ಟಿಯ ಹಳ್ಳಿಯ ತುಱುವರಿಯಲು ಹರಿದು ಸ್ವರ್ಗಸ್ತನಾದನು (ಮ್ಯಸರಿ. ೧೯೩೮, ೪-೪; 1291). **ತುಱುಪರಿ** : ಬೆಳ್ಳರ್ತ್ತದ ಗಾವುಣ್ಡಂ ತುಱುಪರಿಯಲೆ ಸತ್ತಂ (ಎಳ. XII, ತಿಪಟೂ. ೧೦-೩;ಸು. ೭೩೦); ಗೆನಪಳ್ಳಿಯ ಎಱಸಂದಂ ಕಾಸನರ ಭೀಮಂ ಉರಟಿವಿನೊಳ್ ತುಱುಪರಿಯೆ ಮಾಣ್ಬೆ...ಸುರಲೋಕಕ್ಕೆ ಸಂದನ್ (ಎಳ. VIII(s), ಸೊರಬ. ೫೭೩-೩; 981). **ತುಱುಹರ್ಬ** : ಶ್ರೀಮತ್ಕದಂಬರ ಸಾನ್ತಯ ದೇವ ಗುಡುವೆಯನಿಱಿದು ತುಱುಹರಿಯೆ ಕಾದಿಸಿ ತುಱುವಿಂಗಡ್ಡಂ ಬನ್ದು (ಎಳ. VIII, ಸೊರಬ. ೬೦-೦೭; 1032); ತುಱುಹರಿಯಲು ಕಾದಿಸಿದವರು ...ಸುರಲೋಕಪ್ರಾಪ್ತವಾದರು (ಎಳ. XVI, ಚಿಕ್ಕನಾ. ೭೦-೩; 1123); ಮತ್ತಿಗಟ್ಟದ ಮುದ್ದಗ × × × ಗಜಕ್ಕಗವುಣ್ಡಂಗಂ ಪುಟ್ಟಿ × ಮಾರಗವುಡ ತುಱುಹರಿಯಲು...ಸುರಲೋಕಪ್ರಾಪ್ತನಾದಂ (ಎಳ. XII, ತಿಪಟೂ. ೭೯-೮; 1291). [ತುಱು + ಪರಿ$_3$]

ತುಱುವರಿಗಾಳಗ (ನಾ). ಹಸುಗಳನ್ನು ಅಪಹರಿಸಂವಾಗ ಮಾಡುವ ಯುದ್ಧ; ಗೋಗ್ರಹಣನಿಮಿತ್ತವಾದ ಕಾಳಗ,–ಯುದ್ಧ : ತುಱುವರಿ [ಪಾಣಾಂ. ಬರೆ, ಹರಿ] ಗಾಳಗದೊಳೊಡೆಮುರಿದು ಗೋವರು ಧೂಳಿಗೋಟಿಯ ಕೊಂಡರಮರರ ರಾಜಧಾನಿಗಳ (ಕುವ್ಯಾವಿ. ೫-೩). 'ತುಱುಗೋಳ್' ಪರಾ. [ತುಱುವರಿ + ಕಾಳಗ (<ಕಾಳೆಗ)]

ತುಱುವಳ 'ತಂಜುವಾಳ' ನೋ.

ತುಱುವಳ್ಳಿ, ತುರುವಳ್ಳಿ (ನಾ). ಗೊಲ್ಲರ ಹೆಂಗಸು; ಗೊಲ್ಲಿತಿ; ಗೋಪಿ: "ತುಱುವಳ್ಳಿಯರು ಗೊಲ್ಲತಿಯರೆನಲ್ ಗೋಪಿಯರು" (ಕಬ್ಮಮಂ. ೩೪). **ತುರುವಳ್ಳಿ** : "ತುರುವಳ್ಳಿಯೆನೆ ಗೋಪತರುಣಿ" (ಕಶರ. ೪೭).

[ತುಱುವಳ (<ತುಱುವಾಳ) + –ತಿ$_1$ (< – ಇತ್ತಿ)]

ತುಱುವಳ್ಳಿ, ತುಱುಪಳ್ಳಿ (ನಾ). = ತುಱುಪಟ್ಟಿ ೨ : "ಘೋಪ ತುಱುವಳ್ಳಿಯು ತಾಂ" (ಕವಿಕಂ. ೮೫). **ತುಱುಪಳ್ಳಿ**: ತುಱುಪಳ್ಳಿಯ ಗೋವುಳಿಗರೊಳ್ಕೋಟಿಗೆಯ್ದುಱಿದಾಡುವ ಬೀಡಿನೆರ್ಮೆಗಳಂ ಪಿಡಿದಂತರಸ ರ್ಗೊಪ್ಪಿಸುವುದುಂ (ಶುಕುಮಾ. ೬-೩೫ ವ); ತುಱುಪಳ್ಳಿಗಳ ನೋಡಿ ವನಾಳಿದಪ್ಪದೆ ಬೇಟೆಯಾಡಿ ಸಮಸ್ತದಳಸಹಿತ ... ನೃಪ ಬಿಡಿಸಿದನು ಪಾಳೆಯವ (ಕುವ್ಯಾಅ. ೬೫೩. ೧೯-೦). [ತುಱು + ಪಳ್ಳಿ$_1$]

ತುಱುವಟ್ಟಿ (ನಾ). (?) : ಕರಪುರನ್ ಬನ್ದು ಬಲ್ಲದಾ ತೊಱುಗೊಳೆ ಊರಾ ತೊಱುವಳ್ಳ ಉವಟನ್ ತುಱುವಟ್ಟಿ ಇದಿರೆ ನಡದಿಱಿದು ಬಿಟ್ಟೊನ್ (ಎಳ. X, ಮುಳಬಾ. ೯೨-೬; ಸು. 780). [?]

ತುಱುವಾಳ, ತುರುವಳ, ತುಱುವಳ, ತೊಱುವಳ್ಳ, ತೊಱುವಾಳ (ನಾ). ದನವನ್ನು ಕಾಯುವವನು; ಗೊಲ್ಲ; ಗೋವಳ : "ಗೋಪತಿ ಗೋವಿಯೆನಲು ತುಱುವಾಳನಕ್ಕುಂ" (ಭುಂಗರಾ. ೫೬-೦೦). **ತುರುವಳ**: "ತುರುವಳರೆನಲ್ಕೆ ಗೋಪರಂ" (ಕಶರ.೪೬). **ತುಱುವಳ**: "ತುಱುವಳನೆಂದು ಗೋಪಾಳಂ" (ಕಶಸಾ. ೬-೦೨೬); "ತುಱುವಳರೆನೆ ಗೋವಾಲರ್" (ಕವಿಕಂ. ೮೫); ನರಸಿಂಹಸೆಟ್ಟಿ ಕೊಟ್ಟ ಗ ೨ ತುಱುವಳ ಮಾಳಗತಿ ಕೊಟ್ಟ ಗ ೧ (ಎಳ. VI. ತರೀಕೆ. ೪೬-೧೦; 1239); ಪಳ್ಳಿಯ ತುಱುವಳನಂತಿರೆ ಹಸುವ ನೇನೆಂದು ಕಟ್ಟಿದಯ್ (ಕಾಮಾಶ್ರೆ. ೧೫೬-೨೧). **ತೊಱುವಳ್ಳ** : ಕರಪುರನ್ ಬನ್ದು ಬತದಾ ತೊಱುಗೊಳೆ ಊರಾ ತೊಱುವಳ್ಳ ಉವಟನ್ ತುಱುವಟ್ಟಿ ಇದಿರೆ ನಡದಿಱಿದು ಬಿಟ್ಟೊನ್ (ಎಳ. X, ಮುಳಬಾ. ೯೨-೬; ಸು. 780). **ತೊಱುವಾಳ್ಳ** : ಸೆಬ್ಬಣ್ಣಾಡ ಮಾಜನ ಮೂವತ್ತೀರ್ಚ್ಚರ ಅಳ್ಕೊಡುಗೆಯನ್ ಕೇಸರಿ ತೊಱುವಾಳ್ಳನಾ ಮಗನ್ ಆಲನ ತೊಱು ಇಕ್ಕಿಸಿ ಬಿಟ್ಟಾನ್ (ಎಳ. X (s), ಮಾಲೂರು. ೧೫೬-೬ : ೩ನೆಯ ಶತ). [ತುಱು + – ವಾಳ್$_1$]

ತುಱುವಿಂಡು, ತುರುವಿಂಡು (ನಾ). ದನಗಳ ಮಂದೆ; ದನಕರುಗಳ ಸಮೂಹ : ಮೇವ ತುಱುವಿಂಡಿನೊಳು ದಾರಿಯೊಳು ಸುತ್ತಿ ಸುಳಿದಱಿಸಿದಂ ಸಿದ್ಧರಾಮನಾ ಪರ್ವತಾಗ್ರಣಿ ಮಲ್ಲಿಕಾರ್ಜುನನನು (ಸಿದ್ಧರಾ. ೨-೩೬); ತುಱುವಿಂಡನೊತ್ಪಟ್ಟಿನೊಳ್ಬಿಟ್ಟು ... ಐತಂದರ್ (ಶ್ರೀರಾಮ. ೪-೧೪). **ತುರುವಿಂಡು** : "ತುರುವಿಂಡನಲು ತುರುಮಂದೆಯೆನಲು ಗೋಸಮುದಾಯವಮಕ್ಕುಂ" (ಕಶರ. ೪೭); ವರುಣನು ಒಂದು ಹೋರಿಯನ್ನು ಕಳುಹಿಸಿದನು ... ಅದರ ಸಾಧು ಸ್ವಭಾವವನ್ನು ನೋಡಿ ಚಕ್ರವರ್ತಿಯು ಅದನ್ನು ತನ್ನ ತುರುವಿಂಡಿನಲ್ಲಿ ಸೇರಿಸಿಕೊಂಡನು (ಮಚಸ. ೯೫).

[ತುಱು + ಮಿಂಡು$_2$]

ತುಱುವಿಡು (ಕ್ರಿ). (ಅಪಹಾರವಾದ) ದನಗಳನ್ನು ವಂರಳಿಸು,–ಕಾಪಾಡು (?) : ತುಱುಕೊಳೆ ಪಳ್ಳಿ ಅರಕ್ಕಮನ್ ತುಱುವಿಟ್ಟು ವಿಟ್ಟುಂ (ಎಳ. X, ಮುಳಬಾ. ೨೬೫-೨ ; ಸು. ೪೧೦). [ತುಱು + ಬಿಡು$_1$]

ತುಱುವೆ, ತುರುಬಿ, ತುರುಬೆ, ತುರುಬೆಂ, ತುರುವೆ$_2$ (ನಾ). ೧. ಒಂದಂ ಬಗೆಯ ಹೂವಿನ ಗಿಡ : ತುಱುವೆಯ ಬೇರನಿಕ್ಕಿ ... ಘೃತಮಂ ಬೆರಸಿಟ್ಟು (ಲೋಕೋಪ. ೮-೧೦); ಪೊಂಗಳನೆ ಗೋಪಿಯರ್ ಕೆದಱಿದವೋಲ್ ತುಱುವೆಯ ನೆಗ್ಗಿಲ ಪೂಗಳ್ ತುಱುಪಟ್ಟಿಯ ಪೊಱಗೆ ತುಱುಗಿ ಕರವೆಸೆದಿರ್ಪಂ (ಲೀಲಾವ. ೫-೧೦೫); ತುಱುವೆಯ ಕಾಯ್ಗಳುಮಂ ಮಂಗುಱುವಳ್ಳಿಯನಿಡಿದ ಚೂರ್ಣಮಂ ಶರ್ಕರೆಯಿಂ ನೆಜ್ಜಿ ತಿಂದು ಬಿಸಿಯ ನೀರಂ ಕಿಱಿದುಗೊಳಲ್ಕುಟಿಯದುಱಿಗುಮೇ ಕೆಯ್ಮಸಕಂ (ಖಮರ. ೦೪-೪೨); ತುಱುವೆಯ ಬೇರು ಮಾದಲದ ಕಡ್ಡಿಗಳನು ಇಟ್ಟು ತೊಳಸಿದೊಡೆ (ಸೂಪಶಾ. ೨-೩). ತುಱುವೆ :—ಈ ಬೇರಂ ನರಮೂತ್ರದಿಂದ ಅರೆದು ತೆಗೆದುಕೊಳ್ಳೆ ಬಾಣಂತಿಸನ್ನಿ ಹರ (ವಿವೈವಿ. ೪). ೨. ಒಂದು ಬಗೆಯ ಹಕ್ಕಿ : ಲಾವುಗೆ ಹರಡೆ ಗೌಜು ಟಟ್ಟಿಭ ಕುಕಿಲ ತುಱುವೆ ಕಳ[ಪಾಣಾಂ. ತುರುವೆಗಣ್ಣಂ] ಹಂಸೆ ಶುಕ ಪಾರಿವದ ದನಿಗಳಿಂದೊದವಿ ತಾವ್ ಕರೆವುತಿರಲು (ಸೋಮಚ. ಹರಿ. ೨೦೪); (ಹಕಕಾ. ೫-೪೨ ನೋ). **ತುರುಬಿ** : ೧. ಶ್ರೀಮುದ್ರೆಗಿಡ... ತುರುಬೀಗಿಡ, ಗಿಡುತಿಂಗಿ (ಮ್ಯಜಿಗಿ. ೦-೬). **ತುರುಬೆ** : ೧. ಬೇವಿನ ಸೊಪ್ಪಿನ ಕಿಟ್ಟುಮಾಡಿ ಅದರಲ್ಲಿ ತುರುಬೆ, ತುಂಬೆ, ಗಣಜಲಿ, ಹೆಬ್ಬೇವು ಮೊದಲಾದ ತಪ್ಪಲುಗಳನ್ನು ಚೆಲ್ಲಿ (ಕನ್ನಚಾ. ೧೬೬); ನಮ್ಮ ಹುಡುಗಿ ಮಾಘಗೌರೀಪೂಜೆಗೆ ತುರುಬೆ ಹೂವು ಕೊಯ್ದುಕೊಂಡು ಬರಲು ಹೋಗಿದ್ದಾಳೆ (ಡೂಢ). **ತುರುಮೆ** : ೧. "ತುತ್ತ–ತುತ್ತಿ, ತುರುಮೆ" (ಓಷಧಿ. ೭೦). **ತುರುವೆ** : ೧. "ಭೂರಿಬಲಾ–ತುರುವೆ" (ಓಷಧಿ. ೦೧೭); ಮೂಲಿಕಾ ಪ್ರಯೋಗ . . . ತುರುವೆಯ ಬಡಗ ಹರಿದ ಬೇರಂ ತಂದು ಕಿವಿಗೆ ಕಟ್ಟಲು ಛಳಿ ಬಿಡುವುದು (ಸಳವೈ, ೭೫).

ತುಱುಸೆಜ್^{3} (ನಾ). ಹಸುಗಳನ್ನು ಸೆರೆ ಹಿಡಿಯುವುದು ; ಗೋಗ್ರಹಣ : ಅರಿ ವಿರಾಟನ ಪುರಕೆ ಹಾಯಿದು ತುಱುಸೆಜ್ಜೆಯ ತೆಗೆಸುವೆವು (ಕುವ್ಯಾವಿ. ೪-೦೯); ಸಂಗಂಣ್ಣನು ಮೂಗೂರಿಂಗೆ ಹಳ್ಳಿಹಿರಿಯರ ಸಮಸ್ತ ಪ್ರಜೆಗಳುಡುಗಳ ತುಱುಸೆಜ್ಜೆಯನಿಱಿದು ಕೊಂಡು ಹೋದಲ್ಲಿ (ಎಳ. XIV, ತಿರುಮು. ೨೨೩-೪ : ?). [ತುಱು+ಸೆಜ್$_3$]

ತುಱುಸೆಜ್^{3}**ಗೊಳ್** (ಕ್ರಿ). ಹಸುಗಳನ್ನು ಸೆರೆಹಿಡಿ : ಅರಮನೆಯ ಸೀಮೆಯೊಳ್ ದಾಟಿಟ್ಟು ತುಱುಸೆಜ್ಜೆಗೊಂಡುದಱಿಂದಂದಿಗೆವರ್ಪ ಧನ ಧಾನ್ಯಂಗಳಡಂಗಿ (ಚಿಕವಂ. ೪೫-೦೧). [ತುಱುಸೆಜ್^{3} + ಕೊಳ್$_1$]

ತುಱುಸೆಜ್^{3}**ವಿಡಿ** (ಕ್ರಿ). ಹಸುಗಳನ್ನು ಸೆರೆಹಿಡಿಯುವ ಹಾಗೆ ಗುಂಪು ಗುಂಪಾಗಿ ಹಿಡಿ : ಒಱಲ್ದೆಱಗುವ ಪಜವೆವಜ್ಜೆಗಳಂ ತುಱುಸೆಜ್ಜೆವಿಡಿವ ನಱುಗಾಪಿನ ಸೊಂಪುಗಳ್ಗಿಂದಾದ ಪೊಂಬಾಜಿಗಳಿಂ ಬಳ್ಕುವಡಕೆಯ ಸಾಲೆಳಂ (ಕಬ್ಕಾಕಾ. ೭೦). [ತುಱುಸೆಜ್^{3} + ಪಿಡಿ$_1$]

ತುಱುಹಟ್ಟಿ 'ತುಱುಪಟ್ಟಿ' ನೋ.

ತುಱುಹತಿ (ನಾ). = ತುಱುಗೋಳ್(?) : ಕಲೋಜ ಹೆಗಡೆ ಕೇತೈಯ [0] ಗಳು...ತುಱುವ ಕೊಂಡು ಹೋಹಂದು ಅವರ ಕೂಡೆ ಕಾದಿ ತುಱುಹತಿಯ ಸತ್ತು ಸ್ವರ್ಗಬಡದರು (ಕಇ. IV, ೩೫-೬; ?). [P ಇದು 'ತುಱುಹರಿ' ಎಂಬುದರ ಅಪಲಿಖಿತವಿರಬಹುದು]

ತುಱುಹರಗೋಳು (ನಾ). = ತುಱುಗೋಳ್ : ಶ್ರೀಮಾದಿ ಅಬಲದಲ ಸ್ತಲದ ಚಿಕಾನ್ಯಾ ತುಱುಹರಗೋಳುಗಳಲ್ಕಾದಿ ಸತ್ತಂ (ಮೈಅರಿ. ೧೯೩೨, ೫೪-೯; ೪ನೆಯ ಶತ). [<ತುಱುಹರಿ + ಕೋಳ್ಳು (<ಕೋಳ್)]

ತುಱುಹರಿ$_1$, ತುರುಹರಿ (ಕ್ರಿ). ಗೋವುಗಳನ್ನು ಹಿಡಿದುಕೊಂಡು ಹೋಗು : ಖೂಟೆಯ ಕೆಱೆಯ ತುಱುಹರಿವಲ್ಲಿ ಕಾದಿ ತುಱುವಂ ಮಗುರ್ಚಿ ತಾಂ ಸುರಲೋಕಪ್ರಾಪ್ತನಾದ (ಎಕ. V, ಹಾಸನ. ೧೦೮-೯; 1147). **ತುರುಹರಿ**: ರಾಕ್ಷಸರ್ತುರುಹರಿದು ತಮ್ಮ ಹೆಗೆಯರ ಗುರುವಿನಾ ಮಗನಿಲ್ಲಿ ಗೈತರಲುಬಹುದೇ ದುರುಳನಿವನೆಂದಾತನಂ ಕೊಂದುಹಾಕಿರಲ್ (ತುರಂಗ. ೮-೧೨). [ತುಱು + ಹರಿ$_2$ (<ಪರಿ$_2$)]

ತುಱುಹರಿ$_2$ 'ತುಱುಂವರಿ' ನೋ.

ತುಱುಹುಯಲು, ತುಱುಯ್ಯಲು (ನಾ). ೧ = ತುರುಗಾಳೆಗ : ರಾಮಯನು ತುಱುಹುಯಲಲಿ ಸುರಲೋಕವ ಸಂದೊಡೆ (ಮೈಅರಿ. ೧೯೨೮, ೧೨-೩ : ?). **ತುಱುಯ್ಯಲು** : ೨. ಹಸುಗಳ ಕೂಗು : ಅವರ ಮಗನ ಮಗಂ ಜಕ್ಕ ಪೆಣ್ಡಿರುಡೆಯುಟ್ಟುವ ಪುಯ್ಯಲು ತುಱುಯ್ಯಲುವ ಕೇಳ್ದು ತಾಗಿ ಕಾದಿ ... ಸತ್ತಂ (ಎಕ. XII, ಶಿರಾ. ೪೩-೩ : ಸು. 1000).

[ತುಱು + ಹುಯಲು (<ಪೊಯ್ಲು)]

ತುಟಿ$_1$, ತುಳಿ$_1$ (ಕ್ರಿ). ೧. ಕಾಲಿನಿಂದ ಮೆಟ್ಟು,-ಅಮುಂಕು,-ಘಟ್ಟಿಸು : "ತುಟಿ-ಪಾದಸಂಘಟ್ಟನೇ" (ಶಮಧಾ) ; ತುಱು ಪರಿವಾಗಳೆಮ್ಮ ಪೆಣನಂ ತುಟಿದುಂ ಪರಿಗುಂ ದಲ್ (ಪಂಪಭಾ. ೮-೯೫) ; ಈ ಧೂರ್ತನನಾ ಗಜಂ ತುಟಿವುದಕ್ಕೇ ಪಚ್ಚದೇ ಮಂತಣಂ (ಧರ್ಮಾಮೃ. ೧೩-೭೪) ; ಗಂಧಗಜೋತ್ತಮಂ ತುಟಿದು ಕಿಟ್ತೋಡಾಡುಗಾನಂದಚಂದ್ರವಿರುದ್ಧಸ್ಥಿತಿಯಂ ವಿಶುದ್ಧಜಿನಧರ್ಮದ್ರೋಹಪಂಕೇಜಮಂ (ಅರ್ಧನೇ. ೦-೮). ೨. ನಾಶ ಮಾಡು ; ಸೋಲಿಸು ; ಹಾಳುಮಾಡು : ರಿಪುಸೇನೆಯಂ ತುಟಿದು ತೊಟ್ಟುಟಿಮಾಡುವೆಂ (ಪಂಪಭಾ. ೧೩-೪೪) ; ಬಡವಂ ಬಾಟ್ಗೆಂಗುಮೊ ...ಪೆಣ್ಬಡೆಯೆಂಗುಮೊ ತುಟಿದು ಪರಿಗುಮಂತಕರಾಜಂ (ಅಜಿಪು. ೧೦-೨೩) ; ಮನಮಂ ಕಟ್ಟಿ ಗುಣಂಗಳಿಂ ತುಟಿದು ಪಂಚಾಚಾರದಿಂ ಪಂಚ ಬಾಣನ ಬಾಹಾಬಲಮಂ (ಪಂರಾಮಾ. ೧-೩). ೩. ಹತ್ತಿಕ್ಕು ; ಅದುಮಿಡು ; ತಲೆ ಎತ್ತದಂತೆ ಮಾಡು : ತೊಲಗಿಸಿ ಕಾಮವಂ ತುಟಿದು ಕೋಪಮಂ...ಎಮ್ಮನಾಳ್ಗೆ ನಳಿನಾಕ್ಷಚರಿತ್ರದ ಚೈತ್ರಭೇರಿಗಳ್ (ಜಿಕವಿ. ೧-೯). ೪. ನೋಯಿಸು ; ಪೀಡಿಸು ; ಕಾಡಿಸು : "ತುಟಿದಂ...ಘಾಸಿ ಮಾಡಿದಂ" (ಶಮದ. ಪರಿ. ೧) ; "ಘಾಸಿಯೊಳ್ ಪದದೆ ಮರ್ದಿಸುವಲ್ಲಿಯುಂ ತುಟಿವೆಸರ್" (ಸಂಜೀವ. ೧೨) ; ಗಂಡರಳ್ಳೆರ್ದೆಗಳಂ ತುಟಿ ವೋಜೆಯನುಂಟುಮಾಡುವಂದದೆ...ಸೂಸಿದುದು ಸೇಸೆಯನಾ ಪುರಾಂಗನಾ ಜನಂ (ಪಂಪಭಾ. ೪-೩೫). ೫. ಕಿವುಚು ; ಜಜ್ಜು ; ಹಿಂಡು ; ಅರೆ : "ಕಿಮುಟ್ಟಿನಲ್ ತುಟಿವುದು" (ಸಂಜೀವ. ೬) ; ಗುರುಗುಂಜೆಯೆಲೆಯೊಳಲ್ಲದೊಡರಪಿಚ್ಚಗೆಯರಲೊಳೆಳ್ಳುಮಂ ಬೆಲ್ಲಮುಮಂ ಬೆರಸಿ ತುಟಿದಿಟ್ಟದಂ ತಿನೆ ವರಾಂಗಿ ಲತೆಯಂತೆ ಪುಷ್ಪವತಿಯಾಗಿರ್ಕುಂ (ಲೋಕೋಪ. ೯-೧೭೪) ; ತಿಲತೈಲ ಸೈಂಧವಂ ಪಿಪ್ಪಲಿ ಮರಿಚಂ ವಿಶ್ವಮೆಂಬಿವಂ ಸಮನಾಗಲ್ತುಟಿದು ಮೆಲುತ್ತಿರೆ ತೊಲಗುಗುಮಲಸಂದೆಯ ಸೊರ್ಕು (ಐಮದ. ೨-೧೬೮) ; ಒರ್ಪಲಮುಪ್ಪಂ ತ್ರಿಕಟುಕಮೊರ್ಪಲಮುಂ ಬೇವಿನೆಲೆಯುಮಂ...ತುಟಿದು ಸಮರ್ಪಿಸುವುದು (ಅಶ್ವಶಾ. ೭-೩೪). **ತುಳಿ**$_1$: ೧. ಭಾಳಲೋಚನಾಗ್ನಿಯಿಂ ಪಂಚಶರನುರಿದು ನಿಲೆ ಪರಿತಂದು ಪದತಳದಿಂ ತುಳಿದು ಸ್ಮರಭಸ್ಮಾವಯವನಾಗಿ (ಗಿರಿಕ. ೨ ಕಥಾಗರ್ಭ) ; ಕೊಂಡು ಬಂದಾ ದೈತ್ಯಗಣವನು ದಿಂಡುಗೆಡಹಿಯು ತುಳಿಯೆ (ಸಂಭಪ. ೭-೩೮) ; ದಿಕ್ಕರಿ ನಡುಗೆ ಚೌಕದ ಕಳನ ತುಳಿದುದು ಸುಪ್ರತೀಕಗಜ (ಕುವ್ಯಾದ್ರೋ. ೩-೦೦); ಮೈಂದನ ಸದೆದ ನೀಲನ ತುಳಿದ ... ಗದೆಯಲಪ್ಪಳಿಸಿದ ಗವಾಕ್ಷನ (ಕೌಶಿರಾ. ೨೫-೨೨); ಹಾವಿನ ಹೆಡೆಯಂ ತುಳಿವರೇನೆ ಅಂಜಿಕಿಲ್ಲವೆ (ಪುರಂದ. ೨-೭೩-೮); ತ್ರಿವಿಕ್ರಮನು ಬಲಿಯ ತಲೆಯ ಮೇಲೆ ಪಾದವನ್ನಿಟ್ಟು ಅವನನ್ನು ಪಾತಾಳಕ್ಕೆ ತುಳಿದು ಅಲ್ಲಿಯೇ ಆಳಿಕೊಂಡಿರುವಂತೆ ಅಪ್ಪಣೆ ಮಾಡಿದನು (ನೀತಿಚಿಂ. XV, ೨೯). ೨. ಕೌರವಸೇನೆಯಂ ತುಳಿದು ಗೆಲ್ದಾ ಗಣ್ಡರುಂ ... ವೀತಮತ್ಸರದಿಂ ಭಾವಿಸುವಾಗಳೀ ಸಮರ ಕೊಳ್ಗಣ್ಡಂಬರಂ ಗಣ್ಡರೇ (ಸೌಇಇ. XI – i, ೫೨-೦೨; 1008); ಕದನ ದೊಳಾಂತರಂ ತುಳಿದು ಕೊಲ್ವೆಡೆಯೊಳು ಲಯಕಾಲಕಾಲನೆಂಬುದು (ಎಇ. XVI, ೩೩-೧೭; 1102). ೩. ಆಗ ಇತರರ ಹಕ್ಕುಬಾಧ್ಯತೆಗಳನ್ನು ತುಳಿಯಲೂ ಹಿಂಜರಿಯರು (ಶಿಕ್ಷದ. ೦೧೧). ೪. ಸುಲಿದು ವಿಪ್ರನಿಕಾಯವಾದುದ ತುಳಿದು ದೇಶಾಂತರವ ಮಾಡಿಯೆ ... ಬಂದು ಕಂಡನು ಜಗದ ವಲ್ಲಭನ (ಸಂಭಪ. ೨೬-೬೧). ೫. ಕಗ್ಗಲಿಯ ತೊಪ್ಪಲನು ತುಳಿದು ರಸವ ಹಿಂಡಿಕೊಂಡು ಅದಂ ಮೈಗೆ ತೊಡೆವುದು (ಅಶ್ವಟೀ.೬೯-೦). ೬. ಹಾದಿಯಲ್ಲಿ ನಡೆ,-ಸಾಗು : ಎಷ್ಟು ತುಳಿದರೂ ದಾರಿ ಮುಗಿಯಲೊಲ್ಲದು (ರೂಢಿ).

ತುಳಿತುಳಿ (ದ್ವಿರುಕ್ತಿ) : ಮದವಲರ್ದ ತನುವಂ ಕುಸುರಿದಱಿದುಱಿ ಕಲ್ಲೊರಳೊಳಿಕ್ಕಿ ತುಳಿತುಳಿದು ತಾಂ ಹರಿವ ತೊಱೆಯಲಿ ಕಲಸ ಬಗೆವನು (ಬಸಪು. ೪೫-೨೮); ರಣವ ಶೋಧಿಸಲೆಂದು ಕಳನೊಳು ಹೆಣನ ತುಳಿತುಳಿದಱಸೆ ಕುರುಧಾರುಣಿಯ ಪತಿಯನು ಕಂಡು ನೆಱೆ ಮಱುಗಿದಳು ಗಾಂಧಾರಿ (ಕುವ್ಯಾಗ. ೦೨ ಸೂಚನೆ); ಸಲೆ ಸೇರಿಸಿದೇಣಿಗಳ ಮೇಲೆ ಸುಭಟರು ... ಅಲಗಿನ ಗಾಯವನೆಣಿಸದೆ ಹೆಣಗಳ ತುಳಿತುಳಿದೊಡನೇಱಿದರು (ಕಂನವಿ. ೧೪-೪೬). ತುಳಿದ ಹಾದಿ=೧. ಜನರು ನಡೆದಾಡಿರುವ ದಾರಿ ; ಸಿದ್ಧವಾದ ಮಾರ್ಗ. ೨. ಸಂಪ್ರದಾಯ ; ಪರಿಚಿತವಾದ ಕ್ರಮ; ಪದ್ಧತಿ : ಮಾಡಿರುವ ಪ್ರಯತ್ನವು ಮುಂದೆ ಸತ್ಯಾನ್ವೇಷಣ ಮಾಡುವವರಿಗೆ ತಳಹದಿ ಅಥವಾ ತುಳಿದ ಹಾದಿ ಆಗದೆ? (ಸಂಶೋಧ. IV, ಅರಿಳಿ). ತುಳಿದಾಡು=ತುಳಿ; ಮೆಟ್ಟು : ವಿಗಡಕರಿ ತುಳಿದಾಡಿತಿದಿರಿದಿರಾದ ಪಟುಭಟರ (ಕುವ್ಯಾದ್ರೋ. ೩-೦೬). ತುಳಿಮಣ್ಣು= (ಗೋಡೆ ಮೊದಲಾದುವನ್ನು ಕಟ್ಟಲು) ಚೆನ್ನಾಗಿ ತುಳಿದು ಹದ ಮಾಡಿದ ಮಣ್ಣು : ತುಳಿಮಣ್ಣು ಚೆನ್ನಾಗಿದ್ದಷ್ಟೂ ಗೋಡೆ ಬಿಗಿಯಾಗುತ್ತದೆ (ರೂಢಿ). ತುಟಿದಿಕ್ಕು = ಅದುಮು ; ಹತ್ತಿಕ್ಕು : ಸ್ಯೂಸ್ ದೇವನೆಂದುಂ, ಎನ್ನೆರ್ದೆಯ ಬಯಕೆಯನ್ ತುಟಿದಿಕ್ಕಲೆಂದು, ತನ್ನಯಾ ಬಲ್ಮೆಯನ್ ಒತ್ತದಿರ್ಕೆಂದುಂ (ಬದ್ಮಪ್ರ. ೨೮-೫೯೬).

[ದೇ.॥ ತಮಿ. ತೊಟ್ಟೈ ; ಮಲ. ತೊಟಿ]

ತುಟಿ$_2$, ತುಳಿ$_2$ (ನಾ). ಮೆಟ್ಟುವಿಕೆ ; ತುಳಿತ : ಆ ಖಳನ ತುಟಿಯು [ಪಾಠಾಂ. ವು] ಮಂ ಸೋಂಕುಮನಾರವಧರಿಪರ್ (ಆದಿಪು. ೪-೬೭). **ತುಳಿ**$_2$: ಸುಮಮಕರಂದದಿಂದೆ ಕಪಿ ಕೈದೊಳೆದಾ ದ್ರುಮಪತ್ರಪಾತ್ರೆಯಂ ಸಮೆದದಱಲ್ಲಿ ತುಂಬಿ ತುಳಿವೊಂದದ ಪೂಗಳನೈದೆ ತುಂಬಿಕೊಂಡು..ಬಂದು ಸಂಯಮಿಗಳ ಮುಂದೆ ನಿಂದೆಱಗಿ ಕಾಣ್ಕೆಯನಿತ್ತುದು (ರಾಜಶೇ.೧-೧೨೭). 'ಕಾಲ್ದುಳಿ$_2$' ಪರಾ. [< ತುಟಿ$_1$]

ತುಟಿಕಲ್, ತುಳಕಲು, ತುಟಿಕಲ (ನಾ). ೧. ತುಳಿತಕ್ಕೆ ಸಿಕ್ಕಿದುದು. ೨. ಬಾಡಿದುದು ; ಸೊಪ್ಪಾದುದು ; ರಸಹೀನವಾದುದು : "ತುಟಿಕಲ್ (ತಟಿಕಲ್, ತಟಿಕಲ್) = ಸೊಪ್ಪಾದುದು" (ಶಮದ. ಪರಿ.೧); ತುಟಿಕಲಡುಗೆಗಳೊಳೇಂ ಪಟಗಟವೆಯ ಕೂಟ್ ತಿವುಡುಗಳೆದ ತೊವರಿಯ

ತೊವೆ ಕಾಯ್ದೀಪಿದ ತುಪ್ಪಂ ಕೋಡುವ ಕಬಿಲ್ಲದೆ ದಿವ್ಯಭೋಜನಂ ಪೆಡತುಂಟೇ (ಕಾವ್ಯಾವ. ೩೪೦). **ತುಳಕಲು** : ೩. ತುಳಿತ; ಮೆಟ್ಟುವಿಕೆ : ಕುದುರೆ, ಎತ್ತು, ಮನುಷ್ಯರು ಇವರ ತುಳಕಲಿನಿಂದ ತವಗೆ ತಾವೇ ಬಿದ್ದ ಮಾರ್ಗಗಳಿಂದಲೇ ಯಾವತ್ತು ವ್ಯವಹಾರ ನಡಿಯುತ್ತಿತ್ತು (ಕಥಾಗೆ. ೩೯೪). **ತುಟಿಕಲ** : ೨." ತುಟಿಕಲಮನೆ ಸೊಪ್ಪಾದುದು" (ಕರ್ಣಾನಿ. ೬೩).

[ತುಟ್ಟು$_1$ + – ಕಲ್$_4$]

ತುಟಿಕಲ 'ತುಟಿಕಲ್' ನೋ.

ತುಟಿಯಿಸು, ತುಳಿಯಿಸು, ತುಳಿಸಂ, ತುಟಿಸು (ಕ್ರಿ). ೧. ಕಾಲಿನಿಂದ ತುಳಿಯಂವಂತೆ ಮಾಡಂ; ಮೆಟ್ಟಿಸು : ಲೀಲಾಕಮಲಾಕರಾನೀಕರಕ್ತ ಕಮಳಂಗಳನಾಸ್ಯಾನುಶೋಣತಶೋಣರಿವುನ್ಮಪಶರಂಗಳಿಂದೆ ತುಟಿಯಿಸಿಯುಂ (ಆದಿಪು. ೯-೪೦ವ). ೨. (ಅರೆದು) ಕೂಡಿಸು; ವಿಶ್ರಮಾಡು : ಕ್ರಿಯೆಯಿಂ ಬೀಜಂಗಳನಲ್ಲಿಯೇ ಮಣ್ಣೊಳ್ ಬಿತ್ತಿ ತಳಿಗೆ ತುಟಿಯಿಸಿ ಪಾಲ್ ಪಂದಿಯ ನೆಣಗಳುಮೆಂಬಿವನನುನಯದೆ ಮೊದಲ್ಗೆಱೆಯೆ ಸದ್ಮಕಲದೊಳ್ ನೆಱೆಗುಂ (ಕೋಕೋಶ. ೬-೨೪). **ತುಳಿಯಿಸು** : ೧. ಎತ್ತುಗಳಿಂದ ರಾಗಿಯನ್ನು ತುಳಿಯಿಸಿದರು (ಕೂಡಿ). ೩. ನಾಶಪಡಿಸು : ಸಿದ್ಧಪದಮಂ ಕೆಯ್ಕೊಳ್ತುದರ್ಕಡ್ಡಮೊಡ್ಡಣಮೊಡ್ಡಿರ್ದಭಸ್ಯೆನ್ಯಮಂ ತುಟಿಯಿಸಲ್ (ಶಾಂತಿಪು. ೦-೭). **ತುಳಿಸು** : ೧. ಎಲವೊ ಸಂಶಯಬೇಡ ಗಜದಲ್ಲಿ ತುಳಿಸು ತಂಗಿಯ ಮಕ್ಕಳನು (ನಿಘಾಗ. ೦೦-೩೦-೩೨); ರಾಗಿ ತುಳಿಸುವುದಕ್ಕೆ ನಿಮ್ಮ ಎತ್ತುಗಳನ್ನೂ ಸ್ವಲ್ಪ ಕೊಟ್ಟಿರಿ (ಕೂಡಿ). **ತುಟಿಸು** : ೧. ಸಿಂಧುರದಿಂ ನುರ್ಗಾಗೆ ಕಾಲ್ಕೆಯ್ ಮುಱಿಯೆ ತುಟಿಸಿ... ದಂಡಿಸುವ ನರಕಜರ್ಗೋವೋ ಮೆಯ್ಯೊಡ್ಡಲಾಟಿಂ (ಧರ್ಮಾಮೃ. ೧೩-೦೫೬).

[ತುಟ್ಟು$_1$ +– ಇಸು$_3$]

ತುಟಿಲ್$_1$, ತುಳಿಲ್$_1$, ತುಳಿಲು$_1$ (ನಾ). ೧. ಎರಗುವಿಕೆ; ಮಣಿಯುವುದು; ನಮಸ್ಕಾರ; ಪ್ರಣಾಮ : "ತುಟಿಲ್ ಪ್ರಣಾಮದೊಳ್" (ಕರ್ಣಾನಿ. ೩೬); "ತುಟಿಲೆಂದು ಮೊಟ್ಗಿಂದು ಕುಂಬೆಂದು ಯಜಗೆಂದು ಬಟ್ಟಿಕ ಮಣಿಯೆನೆ ನಮಸ್ಕಾರಕ್ಕೆ ಪೆಸರಕ್ಕುಂ" (ಕಬ್ಬಿಕ್ಕ. ೩೩) : ಬ್ರಹ್ಮಋಷಿಯರೆಲ್ಲರುಮಂ ತುಟಿಲ ಪರಕೆಯ ಸಮಾನ ಪ್ರತಿಪತ್ತಿಯಿಂ ಕಿಱಿವಿರಿಯರಟ್ಟಿದು ಪೊಡೆವಟ್ಟು (ಪಂಪಭಾ. ೬-೩೩೪) ; ಉಮಾಸಂಶ್ಲಿಗೊಳ್ವಿನಿಂ ತುಟಿಲನೊಡರ್ಚಲ್ (ವೀರವಿ. ೦-೭೦); ಬೀಗುತ್ತುಂ ಶರಣೆಂದು ಮಾಟ್ಟ ತುಟಿಲೇಂ ಬೇರೊರ್ವರಂ ಸೇರ್ವುದೇ (ಕು.ಸೂಪು. ೦-೧). ೨. ಆಳಂತನ; ದಾಸ್ಯ; ಸೇವೆ. 'ತುಟಿಲ್$_1$' ಪರಾ. **ತುಳಿಲ್$_1$** : ೧. "ನತಿಃ—ತುಳಿಲ್" (ಕಾಕಶ್ಯ. ೪೦); ತು [ಪ್ರಾಣಂ. ಶ್]ಳಿಲಾಂತು ಬಂದು ನಿರ್ಮಳನದ್ವಿತೀಯನಚಳಪರಂಜ್ಯೋತಿರಾಕಾರ ನಳಿನಜಾಂಡಗಳ ತನ್ನೊಳು ಪೆತ್ತಮೂರ್ತಿ ಕಂಗೊಳಿಪ ಸೋಮೇಶನಾಲಯಕೆ (ಕೃಕವೇ. ೪-೦೦) ; ನಾಗನಾಥಂಗೆ ಸಲುಗೆಯಿಂ ತುಳಿಲಿಸಿಗಿ (ಸಿದ್ಧೇಪು. ೬-೪೯) : ಬೆನ್ನ ಬಸಿಲೇ ಕಾಣ್ಕೆ ಗೆಯ್ಮೆಯೊಡೆಯನ ತುಳಿಲ್ (ಕಾಂಖಂಕ. ೨೯-೨೦). **ತುಳಿಲು$_1$** : ೧. ಮನೆಯ ಮೂಲೆಮೂಲೆಗೂ ತುಳಿಲೆಂದು, ಮಗಳನ್ನು ಕಾವಾಡಿರೆಂದು ಕೋರಿ ಪತಿಯೊಡನೆ ತವರಿಗೆ ಹೋಗುತ್ತಾಳೆ (ಕರಚ. ೫೧). ೨. 'ತುಳಿಲಾಳು$_1$' ಪರಾ.

[ದೇ.॥ ತಮಿ. ತೊಟು=ಪೂಜಿಸು; ಮಲ. ತೊಟು = ನಮಸ್ಕರಿಸು; ತುಳು. ತುರ್ಲಿ; ತೆಲು. ದೋಯಿಲಿ]

ತುಟಿಲ್$_2$, ತುಳಿಲ್$_2$, ತುಳಿಲು$_2$ (ನಾ). ಶಕ್ತಿ; ಸಾಹಸ; ಪರಾಕ್ರಮ: " ತುಟಿಲ್=ಪೊಡವಡಿಕೆ : ವೀರಂ " (ಶಮುದ. ಪರಿ. ೦); " ತುಟಿಲೆಂದು ಶೌರ್ಯದೊಳ್" (ಕರ್ಣಾನಿ.೩೬); "ತುಟಿಲೆನಲ್ ಪೊಡವಡಿಕೆಗಂ ವೀರಕಂ ಪೆಸರ್" (ಸಂಜೀವ. ೦೦). 'ತುಟಿಲಾಳ್$_2$' ಪರಾ. **ತುಳಿಲ್$_2$** : ತುಳಿಲಾಂತರಳಿದರುಳಿಯದೆ ಬಳಿಯಂ ನೆಜಿ ಕಾಣದಲ್ಲಿ ದಳದುಳದಿಂದಂ (ಹಮ್ಮೀರ. ೩-೩೩). **ತುಳಿಲು$_2$** : ಕರಚಮತ್ಕಾರಕ್ಕೆ ಚಮತ್ಕಾರಮಾರ್ಬಟಿಗೆ ಯಾರ್ಬಟಿ ತುಳಿಲ್ಗೆ ತುಳಿಲು ... ಸರಿಯಾಗೆ ನಂದೀಶ ಶುಂಭಾಸುರರ್ ಮಹಾಧುರದೊಳೆಬ್ಬಾಡಿದರ್ (ಪಂಪು. ೨೬-೨೫).

ತುಟಿಲ್ಗೆ ವಸಂತ=ಒಂದೆಂ ಬಿರುದಂ: ಮಾನಸೂರರಳಿ ಕಯ್ಪೆ ಮಗನನ್ಪ ಭುಕಯ್ಪೆ ತುಟಿಲ್ಗೆ ವಸನ್ತನ್ ಗಣ್ದಪದಿಚನ್ದನ್ ... ಕುದುರೆಗ್ದಿಟ್ಟಿದು ನಡದಿಜ್ಜೊಟ್ಟಕೆಯ್ದು ಬಿಟ್ಟರ್ (ಎಕ. X, ಶ್ರೀನಿವಾ. ೫-೫; ಸು. 780).

[ದೇ.॥ ತಮಿ. ತುಣಿವು; ಮಲ. ತುನಿ=ಸಾಹಸಮಾಡು]

ತುಟಿಲ$_1$ (ನಾ). ೧. ಸೇವೆಯಿಂದ ಜೀವಿಸುವವನು; ಭೃತ್ಯ; ದಾಸ : ಅಟ್ಟಿಪಿ ಕಿಜ್ಜಿದಕ್ಕೆ ಕೆಮ್ಮನೆ ಗಳಗಳಿಸುತ್ತೇಳಿದರ್ಕಳೊಳ್ ಬಿಡದೆ ತಗುಟ್ಟಿಬಿಟ್ಟಿ ಪಟಿಯಾಡುವ[ನೆಂತುಂ] ತುಟಿಯ[ಲ]ಕ್ಕುಂ ತುಟಿಲಸಂದನಕ್ಕುಮಧರೆಯೊಳ್ (ಬಂಹರಿ. ೦೦-೦೦೫). ೨. ಪಂಚಮವರ್ಗಕ್ಕೆ ಸೇರಿದವನಂ; ಅಂತ್ಯಜ : "ತುಟಿಲನೆನಲ್ಕೆ ಪಂಚಮನೊಳಗೆ" (ಕರ್ಣಾನಿ. ೬೩).

[ತುಟಿಲ್$_1$ + – ಅ$_7$]

ತುಟಿಲು$_2$ (ನಾ). ವೀರ; ಶೂರ; ಪರಾಕ್ರಮಶಾಲಿ : "ಕರಮೊಲ್ದನೊಳಂ ಸುವೀರನೊಳ್ ತುಟಿಲನೆನಲ್ಕೆ" (ಕರ್ಣಾನಿ. ೬೩). [ತುಟಿಲ್$_2$ + – ಅ$_7$]

ತುಟಿಲಸಂದ$_1$ 'ತುಟಿಲ್ಲಸಲ್$_1$' ಪರಾ.

ತುಟಿಲಸಂದ$_2$ 'ತುಟಿಲ್ಲಸಲ್$_2$' ಪರಾ.

ತುಟಿಲಾಳ್$_1$, ತುಳಿಲಾಳಂ$_1$ (ನಾ). ಆಳು; ಸೇವಕ; ದಾಸ : ಆದೊಡೆ ಪೆಣ್ಗಳ್ ಮೇಣ್ ತುಟಿಲಾಳ್ಗಳ್ ಅವನ ಜಸಮಂ ಪಾಡುವೆಡೆಯೊಳ್ ನಿರ್ಬಂಧಮಿಲ್ಲಂ (ಅಜ್ಜುತ. ೨೨-೨೨). **ತುಳಿಲಾಳು$_1$** : ದಳಪತಿ ಮನ್ನೆಯ ಮಾಂಡಲಿಕರು ನೆಜಿ ತುಳಿಲಾಳು ರಾಯರಾವುತರು...ಒಪ್ಪಿದರು (ಕಂಸವಿ. ೪-೨೮) ; ರಾಷ್ಟ್ರಕೂಟಸಿಂಹಾಸನಕ್ಕೆ ತುಳಿಲಾಳಾಗಿ ಬದ್ದೆಗನು ಚಾಳುಕ್ಯ ಭೀಮನನ್ನು ಗೆದ್ದನೆಂಬುದರಿಂದ (ಸಾಡೋಜ. ೩೩೬). [ತುಟಿಲ್$_1$+ಆಳ್$_3$]

ತುಟಿಲಾಳ್$_2$, ತುಳಿಲಾಳ್, ತುಳಿಲಾಳು$_2$ (ನಾ). ಪರಾಕ್ರಮ ಉಳ್ಳವನು ; ಶೂರ ; ವೀರ : "ತುಟಿಲಾಳ್ ಪರಾಕ್ರಮಮುಳ್ಳಂ" (ಕಶಾ. ೦೪-೩೬); "ತುಟಿಲಾಳೆ ಧೀರನೊಳ್" (ಕರ್ಣಾನಿ.೩೦); ವದ್ದೆಗನ ಕೋಣೆಯ ಗಂಗನ ಮೊತ್ತಮೆಲ್ಲಮಂ ಬೆದಱುವಿನಂ ತೆರಳ್ಚಿ ಪಲರುಂ ತುಟಿಲಾಳ್ಗಳನಿಕ್ಕಿ (ಎಕ. II, ೧೩೪-೦೨ ; ೨೪೦) ; ಪಸಾಯ್ತರ ಬಟಿಸಲ್ದ ತುಟಿಲಾಳ್ಗಳಡ್ಡಣದೊಳೆಡ್ಡಮಾಗೆ (ಕಬ್ಬಿಕಾ. ೪೪) ; ಕೊಳನಂ ನಿಸ್ಸಾರಮೆಂದು ಪುರುಳ್ಗುಂದಿ ದಾಣ್ಮನಂ ತೊಱೆದು ಪೋಪ ತುಟಿಲಾಳ್ಗಳಂತಿರೆ ನೀರ್ವಕ್ಕಿಗಳ್ ದೆಸೆದೆಸೆಗೆ ಪೋದುವು (ರಾಮಾಶ್ವ. ೩೦-೨೩). **ತುಳಿಲಾಳ್** : "ತುಳಿಲಾಳಿನೆ ಪರಾಕ್ರಮಿಗೆ ...ಅಭಧಾನವು" (ಕಶಿ. ೪೬); ತುಳಿಲಾಳ್ಗಳು ತನ್ನಾ ನೂರ್ವರು ಸುತರೆಳಸಿ ಬಳಸಿ ಬಂದನಾಗ (ಸೇಮಿಸಂ. ೩೩-೦೬೪) ; ತಳುವದೆ ಜೀವಿತಗೊಂಬ ತುಳಿಲಾಳ್ಗಳಲ್ಲದೆ ರಾಮನ ಮೆಯ್ಗಾವಲೊಳಗಿಲ್ಲ ಲೆಕ್ಕದಾಳುಗಳು (ಕುಡಾಸಾಂ. ೯-೦೮) ; ಬಿರುದಿನ ಬೆನ್ನ ಝಲ್ಲಿಯು ತುಳಿಲಾಳ್ಗಳ ನೆರವಿ ಮಧ್ಯದೆ ಬಹನಾರೆ (ಕಂಸವಿ. ೨೩-೪೭). **ತುಳಿಲಾಳು$_2$**: ತುಳಿಲಾಳಿಗೆ ಕೈವಶವಾದ ಸುದತಿಯರಳವಿಟರಿಗೆ ಮೋಹಿಸುವರೆ (ಸೇಮಿಸಂ. ೦೦-೦೪೪) ; ನಳಿನನಾಭನ ಸುತನಂತೆ ತುಳಿಲಾಳಿನಂತೆ ... ಸಲೆ ಭೂಜವೆಸೆಯೆ (ಕೃಕವೇ. ೧-೩೩) : ಹೈದರನು ಮತ್ತೆ ಒಂದು ಲಕ್ಷ ತುಳಿಲಾಳುಗಳನ್ನು ಕೂಡಿಕೊಂಡು ದುರ್ಗದ ಮೇಲೆ ಧಾಳಿಮಾಡಿದನು (ಕವೀಕ. ೦೨೩).

[ತುಟಿಲ್$_2$ + ಆಳ್$_3$]

ತುಟಿಲಾಳಾಯ್ತು (ನಾ). ವೀರರ ಧರ್ಮ ; ವೀರವೃತ್ತಿ (?) : ಅಂತು ಮೂದಲಿಸದೆ ಇಜ್ಜಿವ್ದುದು ತುಟಿಲಾಳಾಯ್ತುವಲ್ಲೆಂದು ಮುಟ್ಟಿ ಮೂದಲಿಸಿ (ಗದಾಯು. ೮-೨೫ ವ).

[P ಇದು 'ತುಳಿಲಾಳ + ಆಯತ' ಎಂದು ಭಿನ್ನಪದವಾಗಿರಬಹುದೆ ?]

ತುಟಿಲಾಳ್ತನ (ನಾ). ಶೌರ್ಯ ; ಪರಾಕ್ರಮಂ : ಪೆಣ್ಣುಡೆಯುಟ್ಟರೆ ಪುತ್ತ ನೇಱಿ ಕೊಲ್ಲದ ತುಟಿಲಾಳ್ತನಕ್ಕೆ ಸಮನಾವನೊ ಸಾಹಸಭೀಮಭೂಪ ನೊಳ್ (ಗದಾಯು. ೧-೨೨) ; ಚಾಳುಕ್ಯರಾಜ್ಯಕ್ಕೆ ಕಾರಣಮಾದಳ್ ತುಟಿ ಲಾಳ್ತನಕ್ಕೆ ನೆಱಿದಾಳ್ (ಎಇ. XV, ೩೪೦-೯ ; 1071): ತುಟಿಲಾಳ್ತನಕ್ಕವಂ ನೀರಿಟಿವಂತಳವಟಿದು ಸೂಸೆ ಕಣ್ಣೇರ್ತೇರಿಂದಿಟಿದಂ (ಪಂರಾಮಾ. ೪-೭೦).

[ತುಟಿಲಾಳ್$_2$ + – ತನ]

ತುಟಿಲ್ಗೆಯ್, ತುಳಿಲುಗೆಯ್, ತುಳಿಲುಗೆಯಿ, ತುಳಿಲ್ಗೆಯ್, ತುಳಿಲ್ಗೈ (ಕ್ರಿ). ವಂದಿಸು ; ನಮಸ್ಕರಿಸು : "ತುಟಿಲ್ಗೆಯ್ – ನಮಸ್ಕಾರೇ" (ಶಮಧಾ) ; "ಬಾಗೆಱಗು ಮೊಟ್ಟು ತುಟಿಲ್ಗೆಯ್ಯೆನ್ನಲ್ ಬಿಡದದುವೆ ವಂದನಾರ್ಥದಿ ತೊಡರ್ಗುಂ" (ಕವಿಕಂ. ೧೮೯) ; ತಾಯಂ ಕಂಡು ತುಟಿ ಲ್ಗೆಯ್ದು ಪಂಡಿತರಾಗಿ ಬಂದುದಂ ಪೇಟ್ದು (ವಡ್ಡಾರಾ. ೪-೨೨) ; ಜನಕನುಂ ವಿದೇಹಿಯುಂ ದಶರಥಂಗಮಪರಾಜಿತಾಮಹಾದೇವಿಗಂ ತುಟಿಲ್ಗೆಯ್ದುದುಂ (ಪಂರಾಮಾ. ೬-೪೮ವ); ನಂಜುಗೊರಲನ ಗಾಡಿಯಂ ನೋಡಿ ಬಗೆಯೊಳಚ್ಚರಿ ವಡುತಂ ಬಂದು ತುಟಿಲ್ಗೆಯ್ದು ಕೈಗಳಂ ಮುಗಿದು (ಕಬ್ಬಿಕಾ. ೧೬೮) ; ನಿಜರಾಜಮಂದಿರಮಂ ಪೊಕ್ಕು ತಾಯ್ಗೆ ತುಟಿಲ್ಗೆಯ್ದು ತನ್ನ ಬಟಿ ಯೊಳ್ಬಂದ ವಿದ್ಯಾಧರರ್ಗೆಲ್ಲಮುಡಲುಂ ತೊಡಲುಂ ಕೊಡಿಸಿ (ಪುಷ್ಪಾಸ್ತ್ರ. ೧-೮೮ವ); ಎನ್ನ ಬಿನ್ನಪಂ ಪಾಪೆಯಂ ತುಟಿಲ್ಗೆಯ್ದಂತಿರೆ ಪೊಚ್ಚಜದಾಯ್ತು (ರಾಮಾಶ್ವ. ೩೭-೨೮). **ತುಳಿಲುಗೆಯ್** : ಬಳಿಕ ತುಳಿಲುಗೆಯ್ದಿಂತೆಂದನು (ನೇಮಿಸಂ. ೭-೦೦) ; **ತುಳಿಲುಗೆಯಿ** : ವಸುದೇವ ... ಮುನಿಪಗೆ ತುಳಿಲು ಗೆಯಿದೆಯಿ[ಪಾಠಾಂ. ಗೈದೈ]ತಂದು ನಿಜಮಂದಿರದೊಳಿರೆ (ಸಾಳ್ವಭಾ. ೦೯-೫೩). **ತುಳಿಲ್ಗೆಯ್** : ಸಗ್ಗಿಗರೆಱಿಯಗೆ ತುಳಿಲ್ಗೆಯ್ವೆ (ತ್ರಿಭುತಿ. ೨೪-೦); ಬಾಗಿಲ್ಗಾಪಿನ ಪಡಿಯರತಿಯರು ಬಾಗಿ ತುಳಿಲ್ಗೆಯ್ವಾಗ ಒಡತಿಯ ಮುಖವನ್ನು ನೋಡುತ್ತಿದ್ದರು (ಸವತಿ. ೨೦೧). **ತುಳಿಲ್ಗೈ** : ಯತಿ ನಿಶ್ಚಳಾನಂದಮಯನಡಿದಾವರೆಗೆ ತುಳಿಲ್ಗೈದು ಕೃಪೆಯಿಂದೆ ಬಿಜಯಂಗೈ ವುದೆಂದು ಬಿನ್ನವಿಸೆ (ಸಿದ್ಧೇಪು. ೧೭-೩೧) ; ಕಾಲನಂ ಕಂಡು...ತುಳಿಲ್ಗೈದನು (ರುಕ್ಮಾಂಗ. ೮-೪). [ತುಟಿಲ್$_1$ + ಕೆಯ್$_1$]

ತುಟಿಲ್ಗೊಳು, ತುಳಿಲ್ಗೊಳ್ (ಕ್ರಿ). ೧. ನಮಸ್ಕರಿಸು ; ವಂದಿಸು : ಕಾಣ್ಕೆಯನಿಕ್ಕು ಚೋಳ ಮಲೆಯಾಳ ತುಟಿಲ್ಗೊಳು (ಉದ್ಧಟ. ೨-೨೧). **ತುಳಿಲ್ಗೊಳ್** : ೨. ನಮಸ್ಕಾರವನ್ನು ಕೈಗೊಳ್ಳು ; ವಂದನೆಯನ್ನು ಸ್ವೀಕರಿಸು : ಪಲಗಣ್ಣಮುಖದಮರ್ದನುಂಬರಿಂ ತುಳಿಲ್ಗೊಂಬ ಗೊಂದೆ ವಳವಿಗ ಗೊರವನೇ (ನವಮೋ. ೩೨-೦).

[ತುಟಿಲ್$_1$ + ಕೊಳು (<ಕೊಳ್$_1$)]

ತುಟಿಲ್ಪಾಡು (ನಾ). ಶೌರ್ಯವನ್ನು ಕುರಿತು ಹಾಡುವ ಹಾಡು ; ವೀರಗೀತೆ : ಶ್ರೀರಘುಪ್ರವರನಡಿಯ ತುಟಿಲ್ಪಾಡಿನ ಬೀಣೆಯ ಜವಳಿ ಮದ್ದಳೆಯ ... ಮೇಳದವರ್ (ರಾಮಾಶ್ವ. ೭೮-೧೮).

[ತುಟಿಲ್$_2$ + ಪಾಡು$_2$]

ತುಟಿಲ್ಸಂದ$_1$ 'ತುಟಿಲ್ಸಲ್$_1$' ಪರಾ.

ತುಟಿಲ್ಸಂದ$_2$ 'ತುಟಿಲ್ಸಲ್$_2$' ಪರಾ.

ತುಟಿಲ್ಸಲ್$_1$ (ಕ್ರಿ). ಸೇವೆಗೆ ಸೇರು ; ಊಳಿಗದಲ್ಲಿ ಪ್ರವರ್ತಿಸು ; ದಾಸನಾಗು.

ತುಟಿಲ್ಸಂದ$_1$, ತುಟಿಲಸಂದ$_1$ = ೧. ಸೇವಕ ; ದಾಸ. ೨. ಪಂಚಮವರ್ಗಕ್ಕೆ ಸೇರಿದವನು ; ಅಂತ್ಯಜ. "ತುಟಿಲ್ಸಂದಂ = ವೀರಂ ; ಪಂಚಮಂ" (ಶಮದ. ಪರಿ. ೦) ; "ತುಟಿಲಸಂದಂ ಪಂಚಮಂಗೆ ವೀರಂಗೆ ಪೆಸರ್" (ಸಂಜೀವ. ೧೦). [ತುಟಿಲ್$_1$ + ಸಲ್$_1$]

ತುಟಿಲ್ಸಲ್$_2$ (ಕ್ರಿ). ಪರಾಕ್ರಮದಿಂದ ಪ್ರಸಿದ್ಧನಾಗು ; ಬಲದಿಂದ ಹೆಸರುವಾಸಿಯಾಗು ; ಶೂರನೆನಿಸು.

ತುಟಿಲ್ಸಂದ$_2$, ತುಟಿಲಸಂದ$_2$=ಶೂರ; ಪರಾಕ್ರಮಿ; ಶೂರನಾದ ಯೋಧ : "ತುಟಿಲ್ಸಂದಂ = ವೀರಂ ; ಪಂಚಮಂ" (ಶಮದ. ಪರಿ. ೧) ; ನೀಮುಮಿಂತಿನಿತೆರ್ದೆಗೆಟ್ಟರಿಂ ತುಟಿಲಸಂದರನಾರುಮನೆಂತು ನಂಬುವರ್ (ಪಂಪಭಾ. ೧೦-೧೧೯); ಕೆಲರ್ ತುಟಿಲಸಂದರಟಿಯೆ ನೊಂದರ್ (ಪಂಚತಂ. ೨೦೬-೧೯) ; ಕೆಲಬರಂ ಕಡೆವಾಯೊಳವುಂಕಿ ಕೊಂದುದುಳ್ಕಟಿಯದೆ ನಿಂದರಂ ತುಟಿಲಸಂದರನಾ ವನಕೇಳಿವಾರಣಂ (ಚಂದ್ರಪು. ೧೦-೯೭) ; ಪರಧನಮಂ ಕರವೊಪ್ಪುವ ಪರವನಿತಾಜನಮನಳಿಪಿ ಕಳಲುಂ ಕೊಳಲುಂ ದೊರೆಗಾಗದೆಂಬ ಶೌಚದಭರಮುಂ ತಾಳ್ದಿದನೆ ತುಟಿಲಸಂದಂ ಜಗದೊಳ್ (ಬಂಹರಿ. ೧೦-೧೦೦). ತುಟಲ ಸಂದಿಕೆ = ಯುದ್ಧದಲ್ಲಿ ತೋರುವ ಪರಾಕ್ರಮ, – ಶೌರ್ಯ : ನೇಸಱಿನೊಳದಂದೆನ್ನಂ ಸಾಸಿಸುವಂ ಸುರಪಸೂನುವಲ್ಲದೊಡಟಿವಂ ಭಾಸುರ ವಸುವೊಕ್ಕಿಂತಿದೆ ಲೇಸೆಂದುಟಿದಿರೆಲೆ ತುಟಿಲಸಂದಿಕೆಯಟಿಗುಂ (ನೇಮಿಪು. ೧೨-೭೩) ; ಕೆಲರ್ ತುಟಿಲಸಂದಿಕೆಯ ಪಸುಗೆಗಳಂ ಮುನ್ನಱಿ ಯದೆ ನೆಗಟ್ದು (ಬಂಹರಿ. ೧೧-೮೦ವ). [ತುಟಿಲ್$_2$ + ಸಲ್$_1$]

ತುಟಿವು (ನಾ) ತುಳಿತ ; ಮೆಟ್ಟುವಿಕೆ : ಆ ಖಳನ ತುಟಿವು [ಪಾಠಾಂ. ಯು] ಮಂ ಸೋಂಕುಮನಾರವಧರಿಪರ್ (ಆದಿಪು. ೪-೬೭).

[ತುಟಿ$_1$ + – ವು]

ತುಟಿಸು 'ತುಟಿಯಿಸು' ನೋ.

ತುಟಿಹ (ನಾ). ಹಿಂಡುವುದು ; ರಸ ತೆಗೆಯುವುದು ; ಅರೆಯುವುದು : "ಸುತ್ಯಾ, ಅಭಿಷವಃ, ಸವನಂ–ಯಜ್ಞಾರ್ಥವಾಗಿ ಸೋಮವ ತುಟಿಹ" (ನಾಚಿರಾ. ಕಿ). [ತುಟಿ$_1$ + – ಹ್$_2$]

△ **ತುಟುವ** 'ತುಳಂ' ನೋ.

ತುಟ್ದಿಲ್ (ನಾ). ಒಂದಂ ಬಗೆಯ ಮರ ; ಚುಜ್ಜಲುಮರ (?) : ತಸ್ಯ ಸೀಮಾನ್ತರಂ ಕೊಳ್ತಿನಿ ತೊಱ್ಪೆ ಪೆರಿರ್ಪ್ಪೆಎ ವಾಣ್ಡಿರ್ಕು ತುಟ್ದಿಲುಂ ದೇವಸಾಲೆಯುಂ (ಎಕ. XVI, ಗುಬ್ಬಿ. ೭೫-೫೦ ; 733) : ದಕ್ಷಿಣಸ್ಯನ್ದಿಶಿ ಪಡುವ ನೋಡಿ ಪೋದ ಪೇಱೊಱ್ಪೆಯೆ ಅನ್ತೆ ತುಟ್ದಿಲ ಪೇಱೊಱ್ಪೆಯೆ (ಎಕ. XVI, ತಿಪಟೂ. ೧೪೦-೬೮ ; 900). [?]

ತುಟ್ದಿಲ್ಗಾಲ್, ತುಳ್ದಿಲ್ಕಾಲ್ (ನಾ). ಒಂದು ಸ್ಥಳದ ಹೆಸರು : ತಸ್ಯ ಸೀಮಾನ್ತರಂ ಪೂರ್ವ್ವಸ್ಯಾನ್ದಿಶಿ ತುಟ್ದಿಲ್ಗಾಲೆ ಅನ್ತೆ ಬನ್ದು ಕಳರಾ ಬಾಯ್ಕಾಲುಳ್ ಕೂಡಿ ... ಅನ್ತೆ ಬನ್ದು ತೊಱೆಯುಳ್ ಕೂಡಿತ್ತು ... ಅನ್ತೆ ಬನ್ದು ಬೆಟ್ಟದಾ ಮೂಡಾಯ್ ಪೊರೆವ ಬನ್ದು ತುಟ್ದಿಲ್ಗಾಲೊಳ್ಕೂ ಡಿತ್ತು (ಮೈಆರಿ. ೧೯೩೬, ೫೩-೨೪ ; 700 ?). **ತುಳ್ದಿಲ್ಕಾಲ್** : ಅರಸರಾನ ನುಮತಪ್ಪಡಿಸಿ ಪೊಯ್ದದು ತುಳ್ದಿಲ್ಕಾಲ್ಕಿಲ್ಲಿಪುಸೂರ್ ಪಡಿಯಕ್ಕ (ಮೈಆರಿ. ೧೯೨೫, ೧೦೬-೨೮ ; ?). [ತುಟ್ದಿಲ್ ? + ಕಾಲ್$_2$]

ತೂ (ನಾ). (ಅವಹೇಳನ, ಅಸಹ್ಯಗಳನ್ನು ಸೂಚಿಸುವ) ಒಂದು ಅನುಕರಣ ಶಬ್ದ : ತೂ ನಿನ್ನ ಯೋಗ್ಯತೆಗೆ ಇಷ್ಟು ಬೆಂಕಿ ಹಾಕು (ರೂಢಿ).

ತೂತೂ (ದ್ವಿರುಕ್ತಿ) : ಶಿವನ ತನುವಂ ನೋಡಿ ತೂತೂ ಎಂದು ತೂಪಿಱಿದ ಯುವತಿಯಂ ಕಂಡು (ಬಸಪು. ೧೩-೨೦). 'ಥೂ' ಪರಾ.

ತೂಂಕಂಗೊಳ್ (ಕ್ರಿ). ತೂಗಿಬೀಳು; ಮೂರ್ಛೆಹೋಗು : ವಿಷವಿಷಮ ಕನತ್ಕಿಂಜಲ್ಕಮನುತ್ಪಲವೊಂದಂ ಜನಪತಿ ಕಂಪುಗೊಂಡು ತೂಂಕಂ ಗೊಂಡಂ (ಶಾಂತಿಪು. ೬-೯೨). [< ತೂಂಕು$_2$ + ಕೊಳ್$_1$]

ತೂಂಕಡ 'ತೂಂಕಡು' ನೋ.

ತೂಂಕಡಂಗಾಣ್ (ಕ್ರಿ). ತೂಕಡಿಸು ; ಜೂಗರಿಸು : ಹಂಸೆಗಳೆರಡೆಮ ಯೊಂದಾಗಲೀಯಳ್ ನವಿಲ್ವಾಣತಿಯಂ ಕಣ್ಮುಚ್ಚಲೀಯಳ್ ಗಟಪುವ ಗಿಳಿಯಂ ತೂಂಕಡಂಗಾ [ಪಾಠಾಂ. ಕಾ]ಣ ಲೀಯಳ್ (ಅರ್ಧನೇ. ೩-೦೦೭).

[< ತೂಂಕಡು + ಕಾಣ್]

ತೂಂಕಡಿಕೆ, ತೂಕಡಿಕೆ, ತೂಗಡಿಕೆ (ನಾ). = ತೂಂಕಡು ೧ : ಜೃಂಭಮತಿ ಜಡಶ್ವಾಸಂ ದೃಮಿಳನಂ ತೂಂಕಡಿಕೆಯಿವನುಭಾವಂಗಳ್ (ರಸರ. ೪-೧೨೮). **ತೂಕಡಿಕೆ** : ಬರಬರ ಭಕ್ತಿಯರೆಯಾಯಿತ್ತು ಕಾಣಿರಣ್ಣಾ ಮೊದಲ ದಿನ ಹಣೆ ಮುಟ್ಟಿ ಮಱುದಿನ ಕೈಯ ಮುಟ್ಟಿ ಮೂಱೆಂಬ ದಿನಕ್ಕೆ ತೂ[ಪಾಠಾಂ. ಮಾಂ]ಕಡಿಕೆ ಕಾಣಿರಣ್ಣಾ (ಬಸವ. ೨೨೦) ; ಸೆಜ್ಜೆವನೆಯೊಳಗೆ ಮೃದುವೆನಿಪ ತಳ್ಪದ ಮೇಲೆ ಸಜ್ಜನಂ ನೆಲಸಿ ತೂಕಡಿಕೆ ಮನವಂ ಜೋಲೆ (ಬಸರ. ೯-೧೩೦) ; ಕಣ್ಣೆವೆಗಳಲಿ ನಸು ತೂಕಡಿಕೆ ತೋಱಿದೊಡೆ ಮೈಗೆದಱುವನು (ಕುವ್ಯಾಅ. ೯-೮); ತುಳುಕ್ಕಾಡತಾವ ತೂಕಡಿಕೆ (ಗಂಗಾತ. ೭೦-೩) ; ತನಗೆ ತೂಕಡಿಕೆ ಬಂದಾಗ ಅಲ್ಲಿ ಕೊಂಚ ಹೊತ್ತು ಕುಳಿತುಕೊಂಡ (ಪಕಾಕ್ಷಿ. ೧೨೦). **ತೂಗಡಿಕೆ** : "ಜೃಂಭಣಂ–ತೂಗಡಿಕೆ" (ಕಾಶಕ್ಯ. ೭೭) ; ಸುಂದರಿಯರೇ ನಿಮಗೆ ತೂಗಡಿಕೆಯೇ (ಮಲೆನಾ. ೭೦).

[ತೂಂಕಡು + – ಇಕೆ]

ತೂಂಕಡಿಕೆಗಣ್ (ನಾ). ತೂಕಡಿಸುವ ಕಣ್ಣು ; ನಿದ್ದೆಗಣ್ಣು : ಕಳ್ಳನೆಂದು ತೂಂಕಡಿಕೆಗಣ್ಣೆಂದಾಕೆಯ ಮುಂದಲೆಯನಡಸಿ ಪಿಡಿದು (ಧರ್ಮಾಮೃ. ೨-೪೭).

[ತೂಂಕಡಿಕೆ + ಕಣ್]

ತೂಂಕಡಿಸು, ತೂಕಡಿಸು (ಕ್ರಿ). ೧. ನಿದ್ರೆಯ ಭಾರದಿಂದ ತಲೆಯನ್ನು ತೂಗಾಡಿಸು ; ನಿದ್ರೆಯಿಂದ ಜೋಲು ; ಜೂಗರಿಸು : ತೂಂಕಡಿಸಿಯು ಮಲಸಿಯುಮಿಗಳು ಜಡತ್ವಮಾಯ್ತೆಂದು ಮನಮನಱಿಗಬಲೆಯರ(ಂ) (ಮದತಿ. ೧೦-೫೭) ; ಬಡವಪ್ಪೊಡೆ ... ತೂಂಕಡಿಪೊಡೆ ಪಶುಗಳ್ಗೆಲ್ಲಂ ಕೊಡುವುದು ಬೇವಿನ ಕಷಾಯಮಂ (ಲೋಕೋಪ. ೯-೨೦೭) ; ತೂಂಕಡಿಪ್ಪವರ ನೊಪ್ಪುವ ಪಾಸಿನ ಮೇಲೆ ನೂಂಕಿದಂತಾದುದು (ಪಾರ್ಶ್ವಪು. ೩-೧೦೩) ; ತನು ಬಡವಪ್ಪ ತೂಂಕಡಿಸುವಾಗುಳಿ ಪುಟ್ಟಿ ... ಪೊಂಗಿ ಬಸಿಱ್ ಬಿಗಿದನ್ಯಗರ್ಭಿಣೀಜನದ ವಿಕಾರಮಾ ಸತಿಯೊಳಾಗವೆ (ಪುಷ್ಪಪು. ೯-೧೦೭) ; ನಿದ್ದೆಯ ಬಿಣ್ಪಿಂ ತೂಂಕಡಿಪ ನಿನತೊಂದು ಗುಣಂ ಹೀನಂ (ರಾಮಾಶ್ವ. ೯೩-೧೦). ೨. ನಿದ್ರೆಮಾಡು : ಲೋಕಪಾಲನಿರುಳ್ ತೂಂಕಡಿಸುವಾಗಳ್ (ಜಾವುಂಪು. ೮೫-೬) ; ತೂಂಕಡಿಪ ವನ್ಯಮೃಗಂಗಳ ಮಗ್ಗುಲೊಳ್ ತೆಱಂದಿರಿದು ಹಿಮಾಂಶುರಶ್ಮಿಗಳಿನುಜ್ವಳಿಸಿದುಟಜಾಂಗಣಗಳೊಳ್ ಪರೆದೆಸಗಿತ್ತತಿಪ್ರಮದಕಾರಣನಂದು ನಿಶಾಸಮೀರಣಂ (ಕಾದಂಪೂ ೨೮೩) ; ಚೇರಮನಲ್ಲಿ ತೂಂಕಡಿಸೆ ಕನಸಿನೊಳಗೆಲ್ಲವಂ ಪುರಹರನೊಡಂಬಡಿಸೆ (ನಂಬಿರ. ೧೭-೧೧) ; ಆತನೊಂದು ಲತಾಭವನದೊಳ್ ಮಱೆದು ತೂಂಕಡಿಸೆ (ಪುಷ್ಯಾಸ್ರ. ೦-೯೦ವ). ೩. (ಆಲಂ) ಕಾರ್ಯಗತವಾಗದಿರು ; ಆಚರಣೆಗೆ ಬಾರದಿರು : ನಿಯಮ ನಿಬಂಧನೆಗಳ ಕಟ್ಟುಪಾಡು ನಿಶ್ಚಯವಾಗಿ ತೂಂಕಡಿಸುತ್ತಿರುವುವು (ಬೆಟ್ಟಅ. ೩೪-೧೭). **ತೂಕಡಿಸು** : ೧. ಕೋಕನದಷಂಡತಟದೊಳ್ ತೂಕಡಿಸುವ ಹಂಸನಂತಿರೆ (ದಶಕು. ೦೪-೧೩) ; ಕೃತವರ್ಮನೊಲೆದಾಗುಳಿಸಿ ತೂಕಡಿಸಿದನು ತೆಗೆದುದು ನಿದ್ರೆ ತನುಮನವ (ಕುವ್ಯಾಗ. ೯-೩); ಭಂಗಿಯ ತಿಂದಂತೆ ತೂಕಡಿಸುತ ಮತ್ತೆ ಕಂಗಳ ಮುಚ್ಚಿ ತೆಱೆವುತ ಬಿಂಗಿಯಂತಾಡುವ ಕಂಥೆಯ ಜೋಗಿಣಿಯಂಗದಾಟವೆ ನಮ್ಮ ನೃತ್ಯ (ಭರಕ. ೦೪-೫೨); ಕಿರಣಸಿಂಗ ತೂಕಡಿಸುತ್ತಿದ್ದ (ದೇವಸಾ. ೫೦); ತೂಕಡಿಸುತ್ತಿದ್ದವನಿಗೆ ಹಾಸಿಗೆ ಹಾಸಿ ಕೊಟ್ಟಂತೆ (ಗಾದೆ). ೪. (ಆಲಂ) (ಹೂವನ್ನು) ಬಾಡಿಸು ; ಮುಚ್ಚಿಕೊಳ್ಳುವಂತೆ ಮಾಡು: ನಗಿಸಿಯೆ ಕುಮುದಿನಿಯ ತೂಕಡಿಸಿ ಕಮಲಿನಿಯ ... ಸಂಧ್ಯಾಮಡದಿಯೊಪ್ಪಿದಳು (ಜೀವಂಚ. ೪-೦೬). [ತೂಂಕಡು + – ಇಸು$_3$]

ತೂಂಕಡು, ತೂಂಕಡ, ತೂಕಡು (ನಾ). ೧. ನಿದ್ರೆಯ ಜೊಂಪು ; ತೂಕಡಿಕೆ; ಮಂಪರು : ತುಂಗಭದ್ರನೆಂಬ ಪೋಡುಂಗಾಱಂ ಸೊರ್ಕಿ ತೂಂಕಡಿಂದಿರುಳ್ ಕಟ್ಟಿಂಗಳ್ ಕಡುಗತ್ತಲೆಯೊಳ್ ಬಂದು (ವಡ್ಡಾರಾ. ೧೪೭-೨೨). ೨. ನಿದ್ರೆ : ಆ ತೂಂಕಡಿನೊಳ್ ಪರವಶತೆ ಬೆರಸಿತರಸನೊಳಾಗಳ್ (ಲೀಲಾವ. ೩-೫೩); ಪದೆದಿರ್ದ ವನವಿಹಂಗಂಗಳಂ ಕೊಂಬುವೆರಸಿ ತೂಗಿ ತೂಂಕಡನೊಡರ್ಚಿಯುಂ (ಚಂದ್ರಪು. ೮-೪ವ) ; ಪತತ್ರಿಗಳೊಳಿರ್ಪಾ ತೂಂಕಡಂ ನೂಂಕುತುಂ ತಣ್ಣನೆ ತೀಡಿತ್ತೆನಸುಂ ಪ್ರಭಾತಸಮಯ ಪ್ರೋದ್ಭೂತಶೀತಾನಿಲಂ (ಕುಸುಮಾ. ೧-೫೨). **ತೂಂಕಡ** : ೨. ತೂಂಕಡದ ಮೆಯ್ಯಲಸಿನಿಂದೇಳಲೊಲ್ಲದೆ (ಮಂತ್ರಶ. ೦೨೯-೪). **ತೂಕಡು** : ೨. ಪುರ್ಬಿನ ಕುಡಿವೆರಸು ತೂಕಡನೊಳಕೊಂಡ ಜಾಡ್ಯಮುಂ ಸೊಕ್ಕು ಮುಕ್ಕುಳಿಸಿದಂತಿರ್ದಿರವುಂ ... ದೊರೆಕೊಳ್ಗುಮೆಂದು ಭಾವಿಸಿ (ಕಾದಂಪೂ. ೭೫೯).

[ದೇ. ॥ ತಮಿ. ತೂಙ್ಕಲ್ ; ಮಲ. ತೂಣ್ಣಲ್ ; ತುಳು. ತೂಗಡಿ]

ತೂಂಕಡುಗೆಡು (ಕ್ರಿ). ನಿದ್ರೆ ತಿಳಿ ; ಎಚ್ಚರವಾಗು : ಆಗಳಾತನುಂ ನೇಸರ್ಮೂಡುವಾಗಳ್ ತೂಂಕಡುಗೆಟ್ಟು ದೆಸೆಗಳಂ ನೋಟ್ಟಂ (ವಡ್ಡಾರಾ. ೫೪-೦೯). [ತೂಂಕಡು + ಕೆಡು$_1$]

ತೂಂಕಿಡು (ಕ್ರಿ). ಇಡಿ ; ತುಂಬು ; ತುರುಕು (?) : ಧರೆಗಂ ವ್ಯೋಮಕ್ಕ ಮೆಂಟುಂ ದೆಸೆಗಮಡಸಿ ತೂಂಕಿಟ್ಟವೋಲ್ ಭೂತಸೈನ್ಯಂ ಬರೆ (ಜಗವಿ. ೧೮-೦೯). [P ಇದು 'ತೂಂತಿಡು' ಎಂಬುದರ ಅಪಲಿಖಿತವಿರಬಹುದು]

ತೂಂಕು$_1$, ಜೂಗು, ತೂಕು$_1$, ತೂಗು$_1$ (ಕ್ರಿ). ತೂಂಪ, ತೂಂಬ, ತೂಪ (ಭವಿಕೃ). ೧. ತಕ್ಕಡಿ ಮೊದಲಾದ ಸಾಧನಗಳಿಂದ ಭಾರವನ್ನು ಕಂಡು ಹಿಡಿ, -ತೂಕಮಾಡು, -ತೋಲನಮಾಡು: ತೂಂಕಿ ನೋಡಿದರ್ ದಿಟ್ಟಿದೊಲೆಯೊಳೊರ್ವರನೊರ್ವರ್ (ಜಗವಿ. ೯-೭೦); ನಿತ್ಯಬಿಂದುಗೆ–ಬೆಡಂಗು, ಕಡಂಗು ... ಕೂಂಕಿದಂ, ತೂಂಕಿದಂ (ಶಮದ. ೩೬ ಪ್ರಯೋ). ೨. ತೂಗಾಡಿಸು ; ಅಲ್ಲಾಡಿಸು ; ಅಲುಗಾಡುವಂತೆ ಮಾಡು : ತಮ್ಮ ಗದೆಗಳನಾಗಳ್ ಕಿಱಿಕಿಱಿದೆ ತಿರುಪಿ ಮಾಣದೆ ಕಿಱಿಕಿಱಿದನೆ ತೂಂಕಿ ತೂಂಕಿ ನೂಂಕಿದರೆನಸುಂ (ಗದಾಯು. ೮-೭); ಅವಷ್ಟಂಭದಿಂ ತೂಗಿದ ಬಾಳ್ಬಾಳ್ವತ್ತು ಬಾಳ್ವುಗ್ಗಡದ ಬಿರುದರಂ ತೂಗಿ ತುತ್ತಿಟ್ಟುದೇಂ ತಾಳ್ದಿದನೋ ವಿಕ್ರಾನ್ತಮಂ ಯಾದವಕುಳತಿಳಕಂ ವೀರಬಲ್ಲಾಳದೇವಂ (ಎಕ. IV, ತರೀಕೆ. ೪೫-೪೦; 1196). ೩. ನೇತಾಡು; ಜೋಲು; ಇಳಿಬೀಳು : ಫಲದ ಬಿಣ್ಪಿಂ ತೂಂಬವೋಲ್ ಜೋಲ್ದಿಳಾಂತರಮಂ ತಳ್ತು ವಿರಾಜಿಸಿತ್ತಭಿನ ತೋದ್ಯನ್ಮಾತುಳುಂಗವ್ರಜಂ (ಕುಸುಮಾ. ೯-೩೦) ; ತೂಂ [ಪಾಠಾಂ. ತೂ] ಪೆಳೆಗಾಯ್ಗಳೆಂಬ ಕುಂಡಲಮಮರ್ದಾಡೆ ನಂದನಮೆ ನಂದನಮಾದುದು ಚೈತ್ರರಾಜನಾ (ವೃಷವಿ. ೪-೫೬). **ಜೂಗು** : ೪. ತೊನೆ ; ಒಲೆ ; ತೂಗಾಡು : ಬಳಲುತ್ತ ತೊಳಲುತ್ತಿರ್ಪ ಭವರೋಗದಲ್ಲಿ ಜೂಗುತ್ತಿರ್ಪ ಬಂಧನದ ಈ ದಂದುಗವಿನ್ನೆಂದಿಗೆ ಪೋಪುದು (ವಚಶಾ. II, ೦೫೩). **ತೂಕು$_1$**: ೪. ಬೀಳುವಂಬಿನ ಹೊಯ್ವ ಖಡ್ಗದ ತೂಳುವಾನೆಯ ತೂಕಿ ತಾಗುವ ಶೂಲಿಗೆಯ ... ಧಾಳಾಧೂಳಿ ಮಸಗಿತು (ಕುವ್ಯಾಕ. ೧೦-೯). ೫. ತೂಕವನ್ನು ತೋರು : ಏನದಕೆ ಸುರಪತಿಯ ದಂತಿ ಸಮಾನವೆಂಬರದಷ್ಟದಿಕ್ಕುಗಳಾನೆಗಳ ಪಡಿಕಟ್ಟು ತೂಗಲು ತೂಕುವವು [ಪಾಠಾಂ. ತೂಕಕವು] ಕಿಱಿದು (ತೊರರಾ. ೬-೩೨-೦೪). ೬. ಸಮಾನವಾಗೆಣಿಸು : ಮಂದರಾಚಲದಿಂದ ತೂಕಿಯೆ ವರಪಿನಾಕವ ಕೊಟ್ಟನಾ ಶಿವನು (ಸಂಭಪ. ೨೪-೧೬). **ತೂಗು$_1$** : ೧. ಧರೆಯಱಿಯಲೊಡಂ ತೂಗಲ್ ಧರೆಗೆ ತುಲಾದಂಡಮಲ್ತೆ ಮದ್ಭುಜದಂಡಂ (ಆದಿಪು. ೧೪-೮೧); ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ (ಬಸವ. ೪೪೦) ; ದೇವದ್ರುಮವಂ ಲಕ್ಷ್ಮಾದೇವಿಯುವಂ ಕಮಳ ಸಂಭವಂ ತೂಗಿದೊಡಾ ದೇವದ್ರುಮಕ್ಕೆ ಲಕ್ಷ್ಮಾದೇವಿ ದಶಾಫಲದ ಬಿಣ್ಪಿನಿಂ ಘನವಾದಳು (ಸೌಇಇ. IX-1, ೨೭೩-೫೭; 1179) ; ಓರಂತೆ ಮರಕಾಲರು ಹಡಗಿನ ವ್ಯವಹಾರದಿ ಗಳಿಸಿದ ಹಣವ ಭಾರಸಂಖ್ಯೆಯಲಿ ತೂಗುವರು (ಮೋಹತ. ೩-೨೯) ; ವರುಣಗಿರಿ ಪೂರ್ವಾದ್ರಿಗಳ ಹೆಚ್ಚು ಕುಂದುಮಂ ಸರಸಿಜಭವಂ ನೋಳ್ಪೆನೆಂದು ತೂಗಲ್ (ಚಬಪು. ೯-೦೭) ; ಶಶಿ ರವಿ ತ್ರಾಸಲೀ ಪುರವ ಸಗ್ಗವನೊಲ್ದು ಬಿಸರುಹಾಸನ ತೂಗುತಿರಲು

(ಕಂಸವಿ. ೫-೪). ೨. ಮೆಯ್ಯಂ ತೂಗುತ್ತುಂ ಉನ್ಮತ್ತ ಚೇಷ್ಟೆಯಿಂದೆರೆಯಂ ತಿಂದ ಮಿಾನಂತೆ ಪೊಳೆಯುತ್ತುಂ (ಧರ್ಮಾಮೃ. ೫-೦೩೬ಪ) ; ನಿಮ್ಮನ್ವಯವ ಸಂಹರಿಸಿದಿರಿ ಸಾಕೆಂದು ಸಂಜಯ ತೂಗಿದನು ಶಿರವ (ಕುಮ್ಯಾಕ. ೧-೦೫). ೪. "ತೊನೆ, ಒಲೆ, ತೂಗು, ಸೆಡೆಪು, ಅಲ್ಲಾಡು, ನಡುಕಂ–ಈ ೬ ಕಂಪನಂ" (ಕಶಸಾ. ೩೦-೬೫೦) ; ತೂಗಿ ಪಣ್ಗೊಲೆಯಿಂ ಬಳ್ಕುವ ಕೌಂಗು (ಆದಿಪು. ೧-೬೭) ; ತನು ಪುಳಕಾಳಿಭಾರದೊಳೆ ತಾಂ ತೂಗುತ್ತಿರಲ್ (ಕುಸುಮಾ. ೬-೮೮) ; ತಿಂದು ತೇಗಿ ತೂಗಿ ಕೆಲೆಕೆಲೆದು . . . ನಲಿದಾಡುವ ಭಲ್ಲೂಕ ನಿಕಾಯದಿಂ (ಗಿರಿಕ. ೧-೦೨೮ ಪ) ; ನಸುಗೆಂಪಿನಿಂ ಬೀಗಿ ಬಾಗಿ ತೂಗುವ ... ತೆನೆಗಳಂ ತಿಱಿತಿಱಿದು ತಂದು ತಂದು (ಸಿದ್ಧರಾ. ೨-೨೯) ; ಚಾರಿಗಳು ಬಲವೆರಡಱೊಳಗೊಯ್ಯಾರದಲಿ ತೂಗಿದವು (ಕುಮ್ಯಾದ್ರೋ. ೧-೫೦) ; ಎಡಗೆಯ್ಯ ಮುಷ್ಟಿಯಂ ತಾಣದೊಳಗೆ ಕೆಯ್ಯಡಗಿ ತೂಗುವ ಪಾದದ್ವಯದಿ ಪೊಡವಿ ತಲ್ಲಣಿಪಂತೆ ಖಳರಾಯ ಗರ್ಜಿಸಿ ಮೃಡತಪಧ್ವಂಸಿಯ ತಿವಿದ (ಮೋಹತ. ೦೨-೮೭) ; ನೆಳಲ ಚಪ್ಪರದಲ್ಲಿ ಹಣ್ಣುಗಳೂ ಅಡಕೆಯ ಗೊಂಚಲುಗಳೂ ತೂಗುತ್ತಿದ್ದುವು (ಕಾಲೂರ. ೧೩ ಕಥಾಸಾರ). ೭. ನೇತು ಹಾಕು ; ಇಳಿಬಿಡು : ಭಾಳಾಕ್ಷನ ರೂಹು ನಿನಗೇಕೆನುತ ನಾರಿಕೇಳಫಲವ ಕಟ್ಟಿ ತೂಗಿ . . . ಹೋಳ ಮಾಡಿದರು ಜೂದಿನಲಿ (ಮೋಹತ. ೨೦-೨೨). ೮. ತೊಟ್ಟಿಲು, ಉಯ್ಯಾಲೆ ಮೊದಲಾದಂವುಗಳನ್ನು ಆ ಕಡೆಯಿಂದ ಈ ಕಡೆಗೆ ಚಲಿಸುವಂತೆ ಮಾಡು ; ಜೀಕು : ಇದು ಲೀಲಾಂದೋಳ ಮಿಂದೋಳದ ದನಿ ನೆಱೆಗೊಳ್ವನ್ನೆಗಂ ಪಾಡಲೆಂದೇಱಿದಳಂ ತೂಗುತ್ತು ಮಿರ್ದೆನ್ನಯ ಪರಿಜು (ಆದಿಪು. ೪-೯) ; ಉನ್ಮದದಂತಿದಂತಯುಗದೊಳ್ತಂ ನರ್ತ್ತಿಯಿಂ ಕಟ್ಟಿದುಯ್ಯಲನಾನಂದದೊಳೇಱಿ ದಿಗ್‌ವನಿತೆಯರ್ತ್ತೂಗಲ್ಕೆ (ಎಕ. VIII, ಸಾಗರ. ೦೦೯-೪೦; 1042) ; ಪಾಡುತೆ ತೂಗಿದರಖಿಳಪ್ರಪಂಚ ವಾಡಿಪ ಶಿಶುವಂ (ಗಿರಿಕ. ೩-೬೭); ಮಣಿಲೇಖೆ ಸುತಮಾಲೆಯರಿಗೆ ಪುಟ್ಟಿದ ಕಂದನ ತೂಪಲ್ಲಿ (ಜೇರಮ. ೮-೨೦) ; ತೂಗಿರೆ ರಂಗನ ತೂಗಿರೆ ಕೃಷ್ಣನ ತೂಗಿರೆ ಅಚ್ಯುತಾನಂತನ (ಪುರಂದ. ೨-೦೩೬ ಪಲ್ಲವಿ). ೯. ಉಯ್ಯಲಾಡು ; ಜೀಕಿಕೊಳ್ಳು : ಬಾಗಿಲ ಮುಂದಣ ನವಿಲುಯ್ಯಲನೇಱಿ ತೂಗುತಿರ್ಪೆಳೆ ವೆಣ್ಣುಗಳ ಸೋಗೆಗಣ್ಮಱಿಮಿನು ಸುಳಿದಾಡುವ ಜನಸಾಗರದೊಳಗೊಪ್ಪು ತಿಹುವು (ಕಂಸವಿ. ೭-೯). ೧೦. ಜಗ್ಗು ; ಸೆಳೆ : ತೂಗಿ ಕಿವಿವರೆಗುಗಿದು ಯಂತ್ರವ ತಾಗಿಸಿದನಂಬಿನಲಿ (ಕುಮ್ಯಾಅ. ೧೫-೨೯) ; ಪಾರ್ಥ ಸಾಕಿನ್ನೇಳು ಬಾಣವ ತೂಗು ಮಾತಾಡಿಸು ಮಹಾಧನುವ (ಕುಮ್ಯಾಭೀ. ೩-೨೪). ೧೧. ಎಸೆ; ಬೀಸು; ಹೊಡೆ: ತರಳಾಪಾಂಗಂಗಳೊಳ್ ಮಚ್ಚರಿಪಲರ್ಗಣೆಯಂ ಕಟ್ಟಿ ತೂಪಂದದಿಂ ಚಾಮರಮಂ ವಕ್ಷೋಜಪೀಠಸ್ಥಿತ ಮದನನೃಪಂಗೆತ್ತು ವಂತೆ (ಲೀಲಾವ ೭-೦೪). ೧೨. ಹೋಲಿಸು ; ತಾಳೆನೋಡು : ಪಾವಿನ ನಂಜುಮನವರುಮನೋವಿನಿಸಂ ತೂಗಿ ನೋಡೆ (ಧರ್ಮಾಮೃ. ೨-೦೦೬) ; ನಿಮ್ಮಾರುಭಟೆಯನು ನಮ್ಮ ಬಾಹುವಿಕಾರ ಬಲವನು ತೂಗಿ ಯೆನುತೆಚ್ಚನು ಧನಂಜಯನ (ಕುಮ್ಯಾಕ. ೨೦-೨೭) ; ಭೂಗಗನಪಾತಾಳ ದರಮನೆಗಳಿದಱೊಡನೆ ತೂಗೆ ಸರಿಬಾರವು (ಚಿಬಪು. ೫-೫೨) ; ರಾಘವಾನು ಜಂಗೆ ಕೆಲಬಲನ ವನಂಗಳಂ ತೋಱಿ ಅಂದಿನ ದಂಡಕೆಗೊರೆಯಾಗದೆಂದು ತೂಗಿ ಬಣ್ಣಿಪಳ್ (ರಾಮಾಶ್ವ. ೩೩-೦೨). ೧೩. ಪರೀಕ್ಷಿಸು ; ವಿಮರ್ಶಿಸು ; ಯೋಗ್ಯತೆಯನ್ನು ನಿಷ್ಕರ್ಷಿಸು : ಕರದಿಂ ಸರಲಂ ಕಣ್ಣಿಂದ ರಾತಿಯಂ ತೂಗಿದೂಗಿ (ಶಾಂತಿಪು. ೪-೫) ; ದಂಡುವೇಟ್ಟರಸಿನಂತೆ ತೂಗಿ ಬಿಡುವ ನಾಯಕನಂತೆ ಕಲಹಂ ಮಾಟ್ಟ ಕೊಂಡೆಯನಂತೆ ಲೇಸಲ್ಲದ ಸುಖಕ್ಕೆ ಪಾಯಿಸಿ ನೋಯಿಸುವಿಂದ್ರಿಯಂಗಳುಮಂ (ಧರ್ಮಾಮೃ. ೯-೨೩) ; ದೂರಕೆ ದಿಟ್ಟಿಯ ಪಸರಿಸಿ ಕೊರಲೆತ್ತಿ ದಾರಿದಾರಿಯ ತೂಗಿ ನೋಳ್ಪ (ಭರಚ. ೩-೩೬) ; ತೂಗಬೇಕು ಮನದೊಳಗೆ ತೂಕವುಳ್ಳವರ ಮಾತು ಹಿಡಿದು (ನಲಮು. ೪೯-೯) ; ಗದ್ಯವನ್ನೋ ಪದ್ಯವನ್ನೋ ಓದಿ, ಆನಂದಿಸಿ ಅದರ ಬೆಲೆಯನ್ನು ತೂಗಿದ ಮೇಲೆ ಅದರಲ್ಲಿರುವ ಉದಾತ್ತ ಧ್ಯೇಯ ಗಳನ್ನೂ ಕೌಶಲ್ಯವನ್ನೂ ಅನುಭವಿಸುವ ಶಕ್ತಿಯುಂಟುಮಾಡುವುದು (ಶಿಕ್ಷದ. ೨೩೯). ೧೪. ಸಾಧ್ಯವಾಗು : ಕಾಳೆಗಂ ತೂಗದಿವರೊಡನೆಮ್ಮವರ್ಗೆನುತೆ ನೋಟಕರ್ ನುಡಿವುತಿರೆ (ಚಿಬಪು. ೪೨-೦೬). ೧೫. ನಿಲುಕು ; ಮುಟ್ಟು ; ಹಿಡಿತಕ್ಕೆ ಬರು : ನಮ್ಮ ಸಾಮಾನ್ಯ ವ್ಯವಹಾರದಲ್ಲಿಯೇ ಎಷ್ಟೋ ಮಾತು ತಲೆಗೆ ತೂಗದೆ ಹೋಗುವಾಗ, ಶಾಂತಿಯ ನೆಲೆಯು...ಅಳತೆಗೆ ಸಿಕ್ಕದಿರು ವುದು ಆಶ್ಚರ್ಯವಲ್ಲ (ಸಾಹಿವಿ. ೦೩೭). ೧೬. ಸಾಟಿಯಾಗು ; ಸಮಾನ ವಾಗು : ರಮಾದಿ ಸಮಸ್ತ ಪ್ರಪಂಚದ ಸುಖವು ಒಟ್ಟುಗೂಡಿದರೂ ಪರಮಾತ್ಮನ ಸುಖಾನಂದದ ಒಂದಂಶಕ್ಕೂ ತೂಗಲಾರದು (ಜಗದಾ. ೨೦೪). ೧೭. ತೇಲಿಸು : ಸಾಗರದ ತೆರೆಗಳಲಿ ಗಿರಿಗಳ ತೂಗಿ ಸೇನೆಯ ನಡೆಸಿ (ಕುಮ್ಯಾಅ. ೨೨-೫೨).

ತೂಗ ಕಟ್ಟು=ನೇತುಹಾಕು : (ಕ). ತೂಗಿಕೊಳ್=ನೆಗೆ; ಹಾರು ; ಬೀಳು : ತಾಗುವ ತಗರು ಬರಲೋಡಿ ಬಾವಿಯ ತೂಗು [ಗಿ] ಕೊಂಡಂತೆ (ಸರ್ವಜ್ಞ. ೦೦೦೦). ತೂಗಿ ತೊನೆ=ತೂಗಾಡು ; ಒಲೆ : ಅಂತಾಕೆಗಳ್ ತೂಗಿ ತೊನೆವ ತೊನೆಪಂಗಳುಮುಂ ... ನೋಡಿ (ಪಂಪಭಾ. ೪-೯೦ಪ). ತೂಗಿ ನೋಡು=೧. ತೂಕಮಾಡಿ ನೋಡು ; ಭಾರ ಕಂಡುಹಿಡಿ : ಹಿರಿಯ ಭಕ್ತರ ಕೆರಹನೊಂದೆಸೆಗಿರಿಸಿವೊಂದೆಸೆಯಲಿ ಮಹೀಸುರವರರ ನೇಱಿಸಿ ತೊಲೆಯನೆಲ್ಲರು ತೂಗಿ ನೋಡಲ್ಕೆ (ಬಸಪು. ೫೫-೫೭). ೨. ವಿಮರ್ಶಿಸು ; ಪರೀಕ್ಷಿಸು : ಗೋವಿಂದನ ಮತದಲಿ ತೂಗಿ ನೋಡುವೆನಿದಱ ತೂಕವನೆಂದನಾ ಭೂಪ (ಕುಮ್ಯಾಸ. ೨-೫). ತೂಗಿಬಿಡು=ಸೆಳೆದು ಬಿಡು; ಜಗ್ಗಿಬಿಡು : ಹೂಡಿ ಮಂಡಿಯ ಕಿವಿವರೆಗೆ ಕರಾಂಗುಲಿಗೂಡಿ ಬಾಣವ ತೂಗಿಬಿಡುತ ಕೂಡೆ ವೈರಿಗಳ ಕೆಡಹಿ ಪತಿರುಣವ ನೀಗಾಡಿದರು (ಕಂಸವಿ. ೧೯-೬೫). ತೂಗುಹಾಕು, ತೂಗಹಾಕು, ತೂಗಂಹಾಕು = ನೇತುಹಾಕು ; ಇಳಿಬಿಡು : ಮನೆಯ ಗೋಡೆಯ ಮೇಲೆ ದೇವರ ಪಟಗಳನ್ನು ತೂಗು ಹಾಕಿದ್ದಾರೆ (ರೂಢಿ); ತೂಗಾಸರೆಯಿಂದ, ಜೋಲಿಯಲ್ಲಿ,–ತೂಗಹಾಕು; ಜೋಲಹಾಕು (Sling. ಇಂಕನಿ) ; ತನಿಗಂಪು ಹೂವುಗಳ ಪೊರೆಯೊತ್ತಿ ತಂಗರಗಕನುವಾಗಿ ತುಂಬಿ ತೂಗಂಹಾಕಿ ಬಿಜ್ಜಣಿಗೆಯನಿಲನಿಂ ಬೀಸಿ ಮಾಡಿದುದು ಹಂಸೋದಕಂ (ಸೂಪಶಾ. ೨-೪೦).

[ದೇ.॥ ತಮಿ. ತೂಙ್ಕು, ತೂಕ್ಕು ; ಮಲ. ತೂಕ್ಕು, ತೂಣ್ಣು ; ಕೊಡ. ತುಂಗ್ ; ತುಳು. ತೂಂಕು, ತೂಂಗು, ತೂಕು, ತೂಗು ; ತೆಲು. ತೂಂಗು, ತೂಗು ; ಕುವಿ. ತೂಂಗಲಿ, ತೂಖಲಿ]

ತೂಂಕು$_2$, ತೂಕು$_2$, ತೂಗು$_2$ (ನಾ). ೧. ತೂಗಾಡುವಿಕೆ ; ಒಲೆದಾಟ ; ತೊನೆತ. 'ತೂಂಕಂಗೊಳ್' ಪರಾ. ತೂಕು$_2$: ೨. ತೂಕ ; ಭಾರ : ನಗದ ತೂಕೇರಬೇಕೆಂದು ... ಪೊಟ್ಟಿತನದಿಂದ ತುಂಬಿದ್ದಾದರೆ ಆವಾಗಲೆ ತಿಳಿದು ಬರುವುದು (ಮುಂಬಮ್ಯಾ. ೪೨). ತೂಗು$_2$: ೧. ಶಿರದ ತೂಗಿನ ತಳ್ಳವಾಱಿನಲಳಲಿದಳು ಕಾಂತೆ (ತೊರರಾ. ೨-೩-೪೦). (ಗು). ೩. ತೂಗಾಡುವ ; ಒಲೆದಾಡುವ. 'ತೂಗುಗುಂಡು' ಪರಾ.

[<ತೂಂಕು$_1$./ತುಳು. ತೂಂಕು, ತೂಕು ; ತೆಲು. ತೂಕು]

ತೂಂತಿಡು$_1$, ತೂತಿಡು (ಕ್ರಿ). ೧. ತುಂಬು; ತುರುಕು; ಇಡಿ; ಗಿಡಿ (?) : ಆತನ ಕೆಲದೊಳ್ ಬಾಳಬಟ್ಟಂ ತೂಂತಿಟ್ಟಂತೆ ಸಂದಣಿಸಿ ನಿಂದ ಗೋಪ ಕುಮಾರರಣಿಯ ನಡುವೆ...ನಿಂದಾತನೆನ್ನ ತಮ್ಮಂ (ಪಂಪಭಾ. ೦೦-೫೭ಪ). ೨. ಉಕ್ಕು ; ತುಂಬಿ ಬರು : ಎನಸುಂ ಭಿನ್ನಘಟಕ್ಕೆ ತೂಂತಿಡುವುವೇ ನದ್ಯಾದಿಗಳ್ (ಅರ್ಧನೇ. ೪-೫೭) ; ತುಂತುಱು ತೆರೆ ನೊರೆ ಘುಳುಘುಳುರವ ತೂಂತಿಟ್ಟು ಹೊಳೆವ ವಾರಿಧಿಯ ಕಾಂತೆಯರೆಲ್ಲರೀಕ್ಷಿಸುತಿರೆ (ಭರಚ. ೨೩-೯೭). ತೂತಿಡು : ೧. ಕಿವಿಯೊಳ್ ಬೆರಳಂ ತೂತಿಟ್ಟು (ಶ್ರಾವಕಾ. ೧೫೬-೧೫). [ತೂಂತು$_1$ + ಇಡು$_1$]

ತೂಂತಿಡು$_2$ (ಕ್ರಿ). ಕಂಡಿಮಾಡು ; ರಂಧ್ರಮಾಡು ; ವೆಜ್ಜಮಾಡು ; ಚುಚ್ಚು : ಗಾತ್ರಂ ವಿಯನ್ಮಂಡಲಕೆ ತಡೆಯೆ ತೂಂತಿಟ್ಟನೆಂಬಂತೆ ನಿಂದಂ (ಧರ್ಮಾಮೃ. ೯-೨೩೦) ; ಬಾಂಗೆ ತೂಂತಿಟ್ಟವೊಲಪ್ಪ ಮೆಯ್ (ಚಂದ್ರಪು. ೫-೭೦); ವಿದ್ಯಾಧರಬಲಂ ನೆಲಕಮಂಬರಕಂ ತೂಂತಿಟ್ಟಂತೊಡ್ಡಿ ನಿಲ್ವುದುಂ (ವರ್ಧಪು. ೮-೪೦ವ) ; ಅಲ್ಲಿ ತೂಂತಿಟ್ಟಂತೆ ನಿರಂತರಂ ಸುಟಿವ ನಾನಾದೇಶ ಪ್ರಸಿದ್ಧರಾಜಪುತ್ರ ವಣಿಗ್ವಲ್ಲಭವಾರನಾರೀಭಾರತಿಕನಿಕರದ ... ಪರಿಮಳ ಪ್ರವಾಹಸಮೂಹದಿಂ (ಅನಂಪು. ೦-೧೦೫ವ). [ತೂಂತು$_3$ + ಇಡು$_1$]

ತೂಂತಿಱಿ (ಕ್ರಿ). ೧. ತುಂತುರುಹನಿಯನ್ನು ಹೊರತಳ್ಳು,-ಹೊರಹಾಕಂ: ಹರಿ ಹರಿದದ್ರಿಕುಂಭದಿನೊಱಲ್ದೊಗೆದಿಂದುವೆನಿಪ್ಪಗಸ್ತ್ಯನಚ್ಚರಿ ಮಿಗೆ ನೀಳ್ದ ತನ್ನ ಕರದಿಂ ಮೊಗೆದಂಧತಮಸ್ಸಮುದ್ರಮಂ ತುರಿಪದಿನೀಂಟು ತಾಗಳೆಡೆ ಸಿಲ್ಕಿದ ಮುತ್ತುಗಳಂ ತೆರಳ್ಚಿ ಪುಷ್ಕರದೆಡೆಯಲ್ಲಿ ತೂಂತಿಱಿದ ವೋಲ್ತುಱುಗಿರ್ದುದು ತಾರಕೋತ್ಕರಂ (ವೃಷವಿ. ೮-೫೦). ೨. ಬಾಯಿಂದ ಗಾಳಿಬಿಡು ; ಊದು : ತಲ್ಲಿಂಗಾಗ್ರದೊಳ್ಪತ್ತಿ ಮೇಣ್ಪರಿತರ್ಪೊಂದು ಸೆಲಂದಿಯಂ ಜವದಿನಾಗಳ್ಕಂಡು ತತ್ಕಾಂತೆ ಬಾಯೆರಲಿಂ ತೂಂತಿಱಿದಳ್ (ವೃಷವಿ. ೯-೫೬) ; ಬಾಯುಗುಳ್ಸಿಡಿಯೆ ತೂಂತಿಱಿದಪ್ಪೆ (ವೃಷವಿ. ೯-೫೭).

[ತೂಂತು$_4$ + ಇಱಿ$_1$]

ತೂಂತು$_1$ (ಕ್ರಿ). ಇಡಿ; ತಂಂಬು; ಗಿಡಿ ; ತಂರಂಕು; ತೂರಿಸಂ: ಉಗ್ರಗಜೇಂದ್ರಂ ಬೆರಸೋವದಂತಕನ ಬಾಯೊಳ್ ತೂನ್ತಿ (ಎಇ. XIII, ೩೨೯-೪ ; 930) ; ಅವನಂ ಮಾರುತಿ ನಿಮಿಷಕ್ಕೆ ತೂಂತಿದಂ ಯಮಮುಖದೊಳ್ (ಪಂಠಾಮಾ. ೦೦-೭೦) ; ಕರಮಂ ತೂಂತಿ ತದಾಸ್ಯದೊಳ್ ಬಳೆಯಿಸಲ್ (ಜಗವಿ. ೫-೪೬) ; ತನ್ನ ಗೋತ್ರಾವಳಿಯುಕ್ತಮಾಗಿ ನೆಱೆ ತೂಂತುವೆನಂತಕನಾಸ್ಯರಂಧ್ರದೊಳ್ (ಶಾಂತೀಶ್ವ. ೬-೦೧೭); ಅವನ ಮೈಯನು ಕೊಱೆಕೊಱೆದು ತೂಂತುವರು ಬಾಯೊಳಗೆ (ವರ್ಧಚ. ೮-೮೯); ಬೀರ್ವಗ್ಗಮಂ ಹಾಯ್ಕಿ ಸೇದಿದರ್ ಮರುಳ್ಗೈಗಳಿಂ ತೂಂತರು (ಚಿಬಪು. ೪೨-೩೬); ದೇವಿಯರನೇವೊಟ್ಟುಂ ಸೇವಿಸಿಯುಮಿಂದೀಗಳ್ ಪುಲಿ ಕರಡಿ ಸಿಂಗಂಗಳ ಬಾಯೊಳ್ ತೂಂತಲೆಂದೆ ಕೊಂಡುಯ್ದಪೆಂ (ರಾಮಾಶ್ವ. ೨೯-೦೦). [ದೇ.॥ ಕುವಿ. ತೂಥಲಿ]

ತೂಂತು$_2$ 'ತೂನ್' ಪರಾ.

ತೂಂತು$_3$, ತೂತಂ$_1$ (ನಾ). ಕಂಡಿ; ರಂಧ್ರ; ಬಿಲ : ಮಣಿಕುಟ್ಟಿಮಮಪ್ಪ ಬಾವಿಯಂ ಪೊಕ್ಕು... ಛಿದ್ರಕದ್ವಾರದ ತೂಂತನುರ್ಚಿ ನೀರಂ ಕಳೆದಾಗಳ್ (ಪಡ್ಡಾರಾ. ೨೬-೨೦) ; ಪೆಡತಲೆಯ ತೂಂತಿಂದುಟ್ಟುವರಿಕ್ಕುಟಿಸಿ ನಾರಕರ್ ನಾಲಗೆಯಂ (ಸುಕುಮಾ. ೦೦-೪೪); ಕವಲಂಬಿಂ ಕಡಿವೋದ ಕೂರಲಗಿನಂಬಿಂ ಕೂಡೆ ತೂಂತಾದ ತಾಗುವ ನಾನಾಯುದ್ಧದಿಂದನೇಕವಿಧಂ (ಮಜಾನೇ. ೦೨-೪೫). **ತೂತು$_1$**: ಷಡಾಧಾರ ಬಳಿವಿಡಿದು ನೆತ್ತಿಯಿಂದುತ್ತರಕ್ಕೆ ಉಚ್ಚಳಿಸಿ ಹಾಯ್ದು ನಡುನೆತ್ತಿ ತೂತಾದರೂ ಲಿಂಗಸಾಹಿತ್ಯವಿಲ್ಲ (ಅದವ. ೦೦-೨೦); ಚಲಿಸಿ ಮೂತ್ರವೊಸರ್ವ ತೂತುಗಳಳಿಪಿದವದಿರು (ಬಸಪು. ೪೦-೬೯); ಎಲ್ಲರ ಮನೆಯ ದೋಸೆಯೂ ತೂತು (ಗಾದೆ); ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು (ಗಾದೆ).

ತಾತಾತೂತು, ತಾತತೂತು, ತಾತುತೂತು (ದ್ವಿರುಕ್ತಿ) : ಕಂದರ್ಪನೊಡಲು ನಿಶಾಚರನಾಥನ ಕೂರ್ಗಣೆಯಿಂದ ತಾತಾತೂತಾದುದು(ಮೋಹತ. ೩೫-೩೩) ; ತಾತಾತೂತಾಗೆ ವಜ್ರಾಂಗಿ (ಕುಮಾಸಾಂ. ೩೪೯) ; ಕೂರಂಬು ವನ್ನೆಸೆಯೆ ಸಚಿವನ ಮೈಯು ತಾತತೂತಾಗಲೊಡನೆ (ನವಮೋ. ೨೮-೩೯); ದಾನವನ ವಜ್ರಕವಚವನೊಡೆದು ಸರ್ವಾಂಗ ತಾತುತೂತಂ ಗೈಯಲು (ನವಮೋ. ೦೨-೭೮). **ತೂಂತನಿಡು** = ೧. (ಯಾವುದಾದರೂ ವಸ್ತುವನ್ನು) ಗಿಡಿ,-ತಂರುಕು: ಬಸದಿಯೊಳ್ ಧನ್ವಂತರಿ ವಿಶ್ವಾನು ಲೋಮನ ಮುನ್ನಿನ ಸೂರುಳಂ ನೆನೆದು ಕಿವಿಯೊಳ್ ತೂಂತನಿಟ್ಟು ಪಟ್ಟಿರ್ದಂ (ಧರ್ಮಾಮೃ. ೨-೧೭೨). ೨. ರಾಶಿಹಾಕು ; ತುಂಬು : ರೋದೋಂತಂ ಕೂಡೆ ರತ್ನೋಜ್ವಳಗಿರಿಕುಳದಿಂ ತೂಂತನಿಟ್ಟಂತೆ ನೀಲಾಂಭೋದಂಗಳ್ ಕೂಡೆ (ಆದಿಪು. ೧೪-೯೭). **ತೂತಾಗು** = ರಂಧ್ರಬೀಳು ; ಕಂಡಿಬೀಳು : "ಮೃಣತಿ = ತೂತಾದಪುದು" (ಕಾಶಕ್ಯ. ೨೨೦) : ಮಾತಿನಾ ಬೊಮ್ಮವು ತೂತಾದ ಮಡಿಕೆಯು ಪಾತಕನ ನೆರೆಯು ಇವು ಮೂಱು ಲೋಕದೊಳಗೇ ತಕ್ಕು ಬೇಡ (ಸರ್ವಜ್ಞ. ೪೩೦). **ತೂತುಬೀಳು** = ತೂತಾಗು ; ರಂಧ್ರವಾಗು : "ವಿದ್ಧ=ತೂತುಬಿದ್ದದ್ದು" (ಗಂಗಾಮ. ೨೯೦): ಮಾತ ತಾನಱಿಯದಧಮಂಗೆ ಮಾಣಿಕವು ತೂತುಬಿದ್ದಂತೆ (ಸರ್ವಜ್ಞ. ೧೩೫೩) ; ಓಲೆಗರಿ ತಂಂಡಾಗುವ – ತೂತುಬೀಳುವ ಸಂಭವವುಂಟು (ದ್ರಾವಿವಿ. ೫೯). **ತೂತುಮಾಡು** = ರಂಧ್ರವನ್ನು ಮಾಡು,-ಕೊರೆ : ಆಸ್ಫೋಟನೀ = ರತ್ನಗಳನ್ನು ತೂತುಮಾಡುವ ಶಸ್ತ್ರ (ಗಂಗಾಮ. ೩೦) ; ಬೆಲೂನಿಗೆ ತೂತು ಮಾಡಿದೆ. ಒಡೆದಂಹೋಯಿತು (ರೂಢಿ).

[<ತೂಂತಂ$_1$./ ತೆಲು. ತೂಟಂ ; ಮಲ್ಲೊ. ತೂತ್ರೊ]

ತೂಂತು$_4$ (ನಾ). ೧. ಹೊರಸೂಸುವಿಕೆ. ೨. ಊದುವಿಕೆ. 'ತೂಂತಿಱಿ' ಪರಾ. [?]

ತೂಂತುಗೊಱೆ, ತೂತಂಕೊರೆ, ತೂತಂಗೊಱೆ (ಕ್ರಿ). ತೂತನ್ನು ಕೊರೆ; ತೂತುಮಾಡು ; ರಂಧ್ರವನ್ನು ಮಾಡು : ಲೋಹದೊಂದು ಭಾರಗುಂಡನಿಳಿಯಬಿಟ್ಟು ಮರ್ಮವೆರಡಱೊಳುಮವೆರಡನೊತ್ತಿ ತೂಂತುಗೊಱೆದು ಕಯ್ಯೊಳಮರ್ಚಿ (ಸಾನಂಚ. ೬-೧೫೪ ರಗಳೆ). **ತೂತುಕೊರೆ** : ಮುಖದಲ್ಲಿ ಹೇಗೆ ತೂತುಕೊರೆಯಬೇಕೆಂಬುದನ್ನು ಹೆಣ್ಣಲ್ಲದೆ ಇನ್ನಾರು ಹೇಳಬೇಕು ? (ಗಾಳಿಪ. ೧೫೨). **ತೂತುಗೊಱೆ** : ದುಟ್ಟ ಕಡಂದುಱುಗಳಿಂದೆ ತನುವನೆಯ್ದೆ ತೂತುಗೊಱೆದು ಒಡಲನೆಯ್ದೆ ತೀವುವಂತೆ ಕ್ಷಾರರಸವನೆಱೆದುವೆಱೆದು (ಸಾನಂಚ.೬-೯೮ ರಗಳೆ).

[ತೂಂತು$_2$ + ಕೊಱೆ$_1$]

ತೂಂತುವೋಗು, ತೂತುವೋಗು (ಕ್ರಿ). ೧. ತೂತಾಗಂ ; ರಂಧ್ರಬೀಳು: ಧರಣಿಯಂ ಪೊಯ್ವೆನೋ ತೂಂತುವೋಗಲ್ (ಧರ್ಮಾಮೃ. ೯-೦೮೩) ; ಪೊಸಬಸದಿಯಂ ಮಾಡಿ ತೂಂತುವೋದ ಕಳಶಮನಿಡುವಂತೆ (ಧರ್ಮಾಮೃ. ೯-೦೮೭). **ತೂತುವೋಗು** : ೨. ಇಳಿ ; ಕಂಸಿ : ಪೃಥ್ವೀತಳಂ ಪಾತಾಳಕ್ಕೆ ತೂತುವೋಗೆ (ಅರ್ಧನೇ. ೮-೨೨ವ). [ತೂಂತು$_2$ + ವೋಗು$_1$]

ತೂಂಪ 'ತೂಂಕಂ$_1$' ಪರಾ.

ತೂಂಬ 'ತೂಂಕು$_1$' ಪರಾ.

ತೂಂಬು, ತುಂಬು$_3$, ತೂಪು, ತೂಬು (ನಾ). ೧. ಕಂಡಿ ; ರಂಧ್ರ. ೨. ಕೊಳವೆ; ಕೊಳಾಯಿ; ನಳಿಕೆ. ೩. ಕೆರೆ, ಕಟ್ಟೆ ಮೊದಲಾದ ಜಲಾಶಯಗಳಲ್ಲಿ ನೀರು ಬಿಡಲಂ ಮಾಡಿರುವ ಕಂಡಿ,-ದ್ವಾರ ; ನೀರುಗಂಡಿ : ಮೊಱಗಲೂರ ಮಟ್ತಿಯುಳ್ಳಯ್ದೂಬು ಇನ್ತು ತಾಗೆ ಮೂಱಡಿ ತೂಂಬುಂ ದೇವಭೋಗಂ (ಎಕ. X, ಕೋಲಾರ. ೦೦-೯; ಸು. 753); ಜಲಗರಂ ಬಿಡೆ ಪರಿಗುಮಗುರ್ವಾಗಿ ತೂಂಬನುರ್ಚಿದ ತೆಱದಿಂ (ಲೋಕೋಪ. ೯-೦೧೬); ಈ ಕೆಱೆಯ ನೀರಂ ತೂಂಬನುರ್ಚಿ ಕಳೆದು ಕಿಱಿದಾನುಮುಟಿದ ನೀರಂ ತುಳುಂಕಿ ಕಳೆದೊಡೆ ನಿನ್ನಱಸುವುದಂ ಕಾಣಲಕ್ಕುಂ (ಜೀವಸಂ. ೧೬೩-೦೫) ; ವಾಪೀಕೂಪದೀರ್ಘಿಕಾಘಟೀಯಂತ್ರಪ್ರವಾಹಂ ಪುಗುವ ಬಚ್ಚಲ್ಗಳ ಪೊಱಮಡುವ ತೂಂಬುಗಳ ಬೆಡಂಗು ... ಮೆಱೆದಿರ್ದುದು (ಅನಂಪು. ೭-೨೪ವ) ; ಇಳೆಯಾಣ್ಮನ ಕರುಣರಸಂ ತೀವಿದ ಲಲಿತತಟಾಕಮದಾಗಲ್ಕರ ಮನೆ ತೊಳಗುವ ಬಾಗಿಲ್ವಾಡಮದಱ ತೂಂಬೆಂಬವೊಲೊಪ್ಪಿದುದು (ಜಯಕಾ. ೧-೬೫). ೪. ಭೂಮಿಯ ಒಂದು ಅಳತೆ. 'ಅಯ್ದೂಂಬು' ಪರಾ. ೫. ಒಂದು ಊರಿನ ಹೆಸರು : ಕರಿವೊಡೆವಿಷಯೇ ತೂಂಬುವರವು ಪೂರ್ವ್ವತಟೇ ವಾರಿವೊಱೆ ತೂಂಬುನಾಮಗ್ರಾಮಯೋಃ

(ಮೈಅರಿ. ೦೯೦೯, ೨-೦೯ ; 749). ತುಂಬ್ಬು : ೩. ತುಂಬಿನ ನೀರನುರ್ಚಿದಾಗಳಡೆ ಪರಿದು (ಪಂಪಭಾ. ೫-೪೬ಪ) ; ಹಿರಿಯ ಕೆಱೆಯ ಕೆಳಗೆ ಎರಡು ತುಂಬಿನ ನಡುವೆ ಬಿಟ್ಟ ಗದ್ದೆ (ಎಕ. XII, ಚಿಕ್ಕನಾ. ೦೩-೩೭ : 1181) ; ಮಹಾಜನಂಗಳು ಬಸವಯ್ಯನ ಕೆಱೆಯ ನೀರ ತುಂಬನೆತ್ತಿ ಹರಿಸಿಕೊಳ್ಳದೆ ಅಱುವತ್ತೊಂದು ವ್ರಿತ್ತಿಗೆ ನಿಲ್ವರು (ಎಕ. VI, ತರೀಕೆ. ೫೫-೮ ; 1291 ?). ೬. ಚಕ್ರದ ಮಧ್ಯಭಾಗ ; ಗುಂಬ ; ಚಕ್ರನಾಭಿ ; ಪಿಂಡಿಕೆ: "ನಾಭೀ, ಪಿಂಡಿಕಾ – ಈ ೨ ತುಂಬು" (ಹಲಾಯು. ೭೩-೨೯೩). ತೂಪು : ೪. ಮಂದುವೂರ ತೊಱುಕೊಳ್ವಲ್ಲಿ ವಿಟ್ಟೋರ್ ಪೆರಾಣ್ಕೋವರ್ ಅವಂಗೆ ಪದಿ ತೂಪು ಕಟನಿ ನೆತ್ತಪಡಿ (ಎಕ. X, ಶ್ರೀನಿವಾ. ೨೦-೭ ; ಸು. 750). ತೂಬು : ೩. ನೈರುತ್ಯದೊಳ್ ಕಟ್ಟೆಯ ಕಡೆಯ ತೂಬು ಪಶ್ಚಿಮದೊಳ್ಬುಷ್ಕರಣಿ (ಎಕ. VIII, ಸಾಗರ. ೦೦೯-೬೦ ; 1042) ; ತೂಬಿಲ್ಲದ ಕೆಱೆಯಂ ಕಟ್ಟುವೆನೆಂಬ ಕಾಲಿಲ್ಲದೆ ಪರಿವೆನೆಂಬ ... ಪಚ್ಚಪಸಿಯೆಗ್ಗನಂ ಪೋಲ್ಕುಂ (ಧರ್ಮಾಮೃ. ೦-೬೭) ; ಆರ್ದಿಱಿದು ಕಾಲನ ಬನಕೆ ರಕುತದ ಕೆಱೆಯ ತೂಬೆತ್ತಿದರು ಸೇವಣರಾಯರಾವುತರು (ಕುವ್ಯಾಭೀ. ೪-೬೭); ತೂಬು ಉಳ್ಳ ಕೆರೆಯ ತುಳುಕಿದರೆ ಬತ್ತೀತೆ? (ಗಾದೆ). ೬. "ಪಿಂಡಿಕೆ, ನಾಭಿ–ಬಂಡಿಯ ತೂಬು" (ನಾಜಿರಾ.ಕಿ). ೭. ಕೊಡಲಿ, ಗುದ್ದಲಿ ಮೊದಲಾದ ಸಾಧನಗಳಲ್ಲಿ, ಕಾವನ್ನು ಒಳಗೆ ಸೇರಿಸಲು ಮಾಡಿರುವ ಕಣ್ಣು,–ತೂತು,–ರಂಧ್ರ: (ಕಿ). ೮. ಕಿವಿಯೋಲೆಯ ಕೊಳವೆ: (ಕಿ). ೯. (ಆಲಂ) ಹಾಳುಮಾಡುವವನು : ಅಪ್ಪನ ಖಜಾನೆಗೆ ಮಗ ತೂಬಾಗಿದ್ದಾನೆ (ರೂಢಿ).

ತೂಂಬನಿಕ್ಕು=ಕೆರೆ ಮೊದಲಾದುವುಗಳಿಗೆ ತೂಬನ್ನು ಮಾಡಿಸು,–ಕಂಡಿಯನ್ನು ಇಡು : ಸಿರಿಯಮಯ್ಯನೆರಡು ಕೆಱೆಯಂ ತೂಂಬನಿಕ್ಕಿ... ಮೂಱು ಕೆಱೆಯ ಬಿತ್ತುವಟ್ಟವಂ ಪಡೆದಂ (ಎಕ. IX, ಬೆಂಗಳೂ. ೭೯-೬ ; ಸು. 870).

[ದೇ.॥ ತಮಿ. ತೂಮ್ಬು ; ಮಲ. ತೂಮ್ಬು ; ತುಳು. ತೂಂಬು, ತೂಂಬೆ, ಸೂಂಬು ; ತೆಲು. ತೂಮು]

ತೂಂಬುರ್ಚು, ತುಂಬುಚ್ಚು (ಕ್ರಿ). ತೂಬಿನ ಬಾಗಿಲನ್ನು ಎತ್ತು, —ತೆಗೆ : ಮೀಂಬೊಲಸು ನಾರ್ಪ ಮೆಯ್ಗಮಳುಂಬಂ ತೂಂಬುರ್ಚಿದಂತೆ ಸುರಿವರುಣಜಳಕ್ಕಂ ಬಿಡದೆ ಕಾಗೆಯುಂ ಪರ್ದುಂ ಬಳಸುವವು (ಸುಕುಮಾ. ೪-೫೯) ; ಅರದಚಯಂ ... ಪತ್ತಿಚಯಮದೆತ್ತಂ ಗಗನೋದರಮಂ ತೀವಿದುದಳಕಾಪುರದಿಂ ತೂಂಬುರ್ಚಿದಂತೆ ಕವಿದವಿರಳಿತಂ (ವರ್ಧಪು. ೮-೪೦). ತುಂಬುಚ್ಚು : ಒಂಭತ್ತುದ್ವಾರದಿ ಮಲವು ತುಂಬುಚ್ಚಿದಂದದಲಿಳಿವ (ಜಿದಾಕೋ. ೪೦-೫). [ತೂಂಬು + ಉರ್ಚು]

ತೂಕ (ನಾ). ೧. ತೂಗುವುದು; ತೂಕಮಾಡುವುದು : (ಕಿ). ೨. ಯಾವುದಾದರೂ ವಸ್ತುವನ್ನು ತಕ್ಕಡಿಯಲ್ಲಿಟ್ಟು ತೂಗುವುದರಿಂದ ಗೊತ್ತಾಗುವ ಪದಾರ್ಥದ ಭಾರ,—ಗುರುತ್ವ: ಅಳತೆಗೆ ತೂಕಕ್ಕೆಣಿಕೆಗ ಮೊಳಗಾದುವು ಸಕಳವಸ್ತುಗಳ್ ಭುವನಜನಕ್ಕಳೆಯಲ್ ತೂಗಲ್ಕೆಣಿ ಸಲ್ಕಳುಂಬಮೆನಿಸಿದುದು ನಿನ್ನ ಗುಣಗಣಮರ್ಹಾ (ಆದಿಪು. ೦೦-೫೫) ; ಬಲ್ಲವರೊಡಗೂಡಿ ಬಣ್ಣದಿಂದೊರೆಯಿಂ ತೂಕದಿಂ ಮರ್ಚಿಯಿಂದಂ ಪೊನ್ನೆಂ ತೊಪ್ಪುಗುಂ ... ಅಂತೆ ಸ ಮ್ಯಕ್ತ್ವದೊಳ್ ಕೂಡಿ...ಶ್ರಾವಕನು ಮೊಪ್ಪುವುದು (ಧರ್ಮಾಮೃ. ೦೩-೫) ; ಸೌರಾಷ್ಟ್ರಸೋಮನಾಥಂಗತಿಭಕ್ತಿಯಿಂ ತನ್ನ ತೂಕದ ಧೂಪಮಂ ... ಓಹಿಲದೇವನರ್ಪಿಸುತಿರ್ದಂ (ಉದ್ಯಟಿ. ೦೦-೮೯ ಪ); ತಲೆವೊರೆಯ ತೂಕದಲಿ ಫಣಿಪತಿ ಬಳುಕತೊಡಗಿದ (ಕುವ್ಯಾಉ. ೦೧-೧೫) ; ಗುರುಕುಚದಲಘುನಿತಂಬದ ತೂಕದ ಸರಿಮಿಗಿಲಂ ಪಿಡಿದೆತ್ತಿ ನಿರೀಕ್ಷಿಪರಿಯಿಂ ಪ್ರಾಣೇಶ್ವರನಂಗೈಯಂ ತನುಮಧ್ಯದೊಳಿಡಲು (ಜಯಕಾ. ೦೦-೪೪); ತೂಕಕ್ಕೆ ದಯವಿಲ್ಲ ಪಾಕಕ್ಕೆ ಹಸಿಯಿಲ್ಲ (ಗಾದೆ). ೩. ಒಂದು ವರಹದಷ್ಟು ಭಾರ : ಸಿಕ್ಕಿಸಲ್ಬೇಳೆಯೆರಡುಮನೊಂದು ಪಾಗಮವು ನಾಲ್ಕಾಗೆ ಪಣಮೆನಿಕ್ಕವು ದಶಂ ತೂಕಕ್ಕೆ (ಮಂಗರಾ. ೦೦೪-೦೧) ; ಹೊಸಸುಣ್ಣದ ನೀರನ್ನೂ ಬೆಲ್ಲದ ಪಾಕವನ್ನೂ ಒಲೆ ಮೇಲಿಕ್ಕಿ, ಎರಡು ತೂಕ ಬಿಳೀ ಪಾಷಾಣವನ್ನು ಹಾಕಿ ಕುದಿಸಿ ... ಕೊಡಲು ಛಳಿಜ್ವರಂ ನಿಲ್ಗುಂ (ಸಕಪ್ಯ ೭೪). ೪. ಎರಡು ಕೈಯಲ್ಲಿ ತೂಗಿ ತರುವಷ್ಟು (ನೀರಿನ) ಅಳತೆ : ಎಷ್ಟು ತೂಕ ನೀರು ಹಾಕಿದ್ದೀರಿ ? (ರೂಢಿ). ೫. ಸಮತೋಲ ; ಸಮಚಿತ್ತ : ಕೆಳಗು ಮೇಲಾಗದೊಲು ತೂಕವಿರಲಿ !! (ಉಯ್ಯಾಲೆ. ೭೯-೦೬). ೬. ಸಮಾನವಾದುದು ; ಸದೃಶವಾದುದು : ಋಷಿಪ್ರತಿಪನ್ನ ಮಂತ್ರವಮೋಘವದಱಿಂದೆನ್ನ ತೂಕದ ಮಗನಹನು (ಕುವ್ಯಾಅ. ೩-೦೯); ಸರೋಜಜಗೆ ಸಂಭವಿಸಿದಗ್ಗದ ತನ್ನ ತೂಕದ ಬವರಿಗರ ತೋಱಿಸಿದನನಿಲಜನು (ತೊರರಾ. ೪-೭-೨೪). ೭. ಗೌರವ ; ಘನತೆ ; ಮಹತ್ವ : ಬರಿಸಿದನು ತೂಕದ ಮಹಾಮಂಡಳಿಕಮನ್ನೆಯರ (ಕುವ್ಯಾಉ. ೮-೨೯) ; ಏಕೆ ನುಡಿಯನೋ ಇನ್ನೊಮ್ಮೆಯೆಂಬಂತೊಂದು ತೂಕದೊಳೆಸೆದನಾ ರಾಯ (ಭರಜ. ೦-೩೮) ; ತೂಗಬೇಕು ಮನದೊಳಗೆ ತೂಕವುಳ್ಳವರ ಮಾತು ಹಿಡಿದು (ನೆಲಮು. ೪೯-೯) ; ತಾನು ಈ ಪ್ರೊಫೆಸರರ ಬಾಲವನ್ನು ಹಿಡಿದು ಹೋದರೆ, ತನ್ನ ತೂಕ ಸ್ವಲ್ಪ ಹೆಚ್ಚೀತು (ಒಂಟಿದ. ೮). ೮. ಒಂದು ಬಗೆಯ ತೆರಿಗೆ : ಕಿಱುಕುಳ ತೂಕ ನೋಟವಣ ಅಭ್ಯಾಗತವಳ . . . ಯೆಲ್ಲವನೂ ಕಾರುಣ್ಯಂಮಾಡಿ ಧಾರಾಪೂರ್ಬ್ಬಕಂ ಮಾಡಿಕೊಟ್ಟರು (ಎಕ. VI, ಕಡೂರು. ೪೯-೪೦ : 1291). ೯. ಒಲೆತ; ತೂಗುವಿಕೆ ; ತೂಗಾಟ; ತೊನೆದಾಟ : ಗೋಪೀನಟಿ ತೋಱಿದಳ್ ಮಿಸುಗುವೋಲೆಯ ತೂಕಮೆ ತೋಱೆ ನೃತ್ಯಮಂ (ಜಗವಿ. ೫-೦೪) ; ತೊಟ್ಟಿಲ ತೂಕದೊಳ್ ಪೊಣರೆ ಕಂಕಣಝಂಕೃತಿ (ಸೂಕ್ತಿಸು. ೭-೬೨). 'ತೂಕವಣೆ' ಪರಾ.

ತೂಕತೂಗು=ಘನತೆಯನ್ನು ಹೊಂದಂ ; ಗೌರವವನ್ನು ಗಳಿಸಂ : ಭಾರತದ, ಲೋಕದಾ ಮಕ್ಕಳಲಿ ಹಿರಿದಾಗಿ ತೂಕತೂಗುವಿರಾ ? (ಹೊಂಗಳು. ೨೦-೨). ತೂಕದ ಕೋಲ ತೊಲೆ = ತಕ್ಕಡಿಯ ಕೋಲು ; ತುಲಾದಂಡ : ವನಿತೆ ... ಚಿಂತಿಸುತ ತೂಕದ ಕೋಲ ತೊಲೆಯಾದಳು (ಹಜಕಾ. ೦೨-೪೭). ತೂಕದ ಗುಂಡು = ಗೋಡೆಯನ್ನು ಕಟ್ಟುವಾಗ ನೇರಸ್ಥಿತಿಯನ್ನು ಕಂಡುಹಿಡಿಯಲು ಬಳಸುವ ಸಾಧನ : ತೂಕದ ಗುಂಡನ್ನು ಹಿಡಿಯದೆ ಗಾರೆ ಬಳಿದರೆ ಗೋಡೆ ಸಮನಾಗುವುದಿಲ್ಲ (ರೂಢಿ). ತೂಕದ ಮಾತು = ಬೆಲೆಯುಳ್ಳ ಮಾತು ; ಗೌರವದ ಮಾತು ; ನ್ಯಾಯವಾದ ಮಾತು ; ನಿಷ್ಪಕ್ಷಪಾತವಾದ ನುಡಿ: ಅವರದು ಒಳ್ಳೆಯ ತೂಕದ ಮಾತು (ರೂಢಿ). ತೂಕದಾಳ್ = ಘನತೆಯನ್ನು ಹೊಂದಿರುವವನು : ಬಾಣಸ್ಥಾಪನಕೆ ಮೆಚ್ಚಿದೆನು ಮೇಲಣ ತೂಕದಾಳವನು ಈ ಪರಿಯಲೆಂದಱಿಯೆನಹುದೈ ಚಾಪವಿದ್ಯಾಪಾತ್ರವಿಂದ ವನೀಪತಿಯಲಾ ಪೂತು ಮಝ ಎಂದೆಚ್ಚನಾ ಕರ್ಣ (ಕುವ್ಯಾಕ. ೧೧-೪೪). ತೂಕಮಾಡು = ೧. ತಕ್ಕಡಿ ಮೊದಲಾದುವುಗಳ ಸಹಾಯದಿಂದ ಭಾರವನ್ನು ಕಂಡುಹಿಡಿ : ಈ ಹುರುಳೀಕಾಯನ್ನು ಬೇಗ ತೂಕಮಾಡು (ರೂಢಿ). ೨. ವಿಮರ್ಶಿಸು ; ಬೆಲೆಕಟ್ಟು : ನಮ್ಮಿಬ್ಬರ ಹೇಳಿಕೆಯನ್ನೂ ತೂಕಮಾಡು. ಯಾವುದು ಸರಿ ಎಂದು ನಿನಗೇ ಗೊತ್ತಾಗುತ್ತದೆ (ರೂಢಿ). ೩. ತೂಕಡಿಸು : ಅವನೆಲ್ಲೋ ತೂಕಮಾಡುತ್ತಾ ಕುಳಿತಿರಬೇಕು (ರೂಢಿ).

[ದೇ.॥ ತಮಿ. ಮಲ. ತುಳು. ತೆಲು. ತೂಕ]

ತೂಕಗಾಣ್ (ಕ್ರಿ). ಗಾಂಭೀರ್ಯವನ್ನು ಗವಂನಿಸು ; ಘನತೆಯನ್ನು ತಿಳಿ : ಆಕೆಯಿಚ್ಛಾದೇವಿಯನುಜೆ . . . ತೂಕಗಾಣದೆ ನುಡಿದಳು (ಭರಜ. ೫೦-೫೦). [ತೂಕ + ಕಾಣ್]

ತೂಕಗುಂದು (ಕ್ರಿ). ವಿಮರ್ಶೆ ಇಲ್ಲದಾಗು,–ತಪ್ಪು : ತೂಕಗುಂದದ ನೋಟವ ನೋಡುವೆನಯ್ಯ (ಆದವ. ೨೭-೭೭). [ತೂಕ + ಕುಂದು$_1$]

ತೂಕಡಿಕೆ 'ತೂಂಕಡಿಕೆ' ನೋ.

ತೂಕಡಿಸು 'ತೂಂಕಡಿಸು' ನೋ.

ತೂಕಡು 'ತೂಂಕಡು' ನೋ.

ತೂಕರಿಸು (ಕ್ರಿ). ೧. ದೃಷ್ಟಿದೋಷ ಪರಿಹಾರಕ್ಕಾಗಿ ಹಾಗು ರಕ್ಷೆಗಾಗಿ ನೆತ್ತಿಯಂ ಮೇಲೆ ಊದು; ತೂಪಿರಿ: ತೂಕರಿಸಿ ಪರಸಲೆಂದು ಶಚೀಕಾಂತೆಯೊಡರ್ಚಿ ನಾಣ್ಚ ತಲೆವಾಗಿ (ಚಂದ್ರಪು. ೦೨-೧೫೮). ೨. ತಿರಸ್ಕರಿಸು; ಅವಹೇಳನ ಮಾಡು: ನಿಮ್ಮನೆಮ್ಗೆಲುವೆಂದು ಮೂದಲಿಸಿ ತೂಕರಿಸಿ ದಿಮ್ಮಿದಿರಗೊಡುತಲೊಲೆದಶ್ಚಿತ್ತ (ಜಿನಪು. ೧೩-೬೪).

[<ತೂತ್ಕಾರ + – ಇಸು$_3$]

ತೂಕವಣೆ (ನಾ). [ನಾಟ್ಯ] ನೃತ್ಯದಲ್ಲಿ ಒಂದು ಗತಿ,–ಚಲನೆ: ಢಾಳದ ಮೇಲೆ ತೂಕವಣೆ ರೇಖೆಯನಾಳ್ದಿರೆ ಪಾದದೊಳ್ಪಯಂ ಮೇಳಿಸಿ ಝಂಕೆ ಬಿಂಗದೊಳೊಡಂಬಡೆ ... ಸಿಂಹಸೇನಭೂಪಾಳನ ಚಿತ್ತವಲ್ಲಭೆಗೆ ಸಂದುದು ರಂಭೆಯ ಲಾಸ್ಯವಿಭ್ರಮಂ (ಅನಂಪು. ೪-೯೦); ರೂಪು ರೇಖೆ ಧಾಪಣೆ ತೂಕವಣೆಯಂಕೆ ಝಂಕೆ...ಉಲ್ಲಾಸದಚ್ಚರಿವಡೆಯೆ ನರ್ತಿಸುತ್ತು ವಿಂರೆಯುಂ (ಶಾಂತೀಶ್ವ. ೦೬-೬೭ಪ). [ತೂಕ + – ಅಣ್ಣೆ$_4$]

ತೂಕು$_1$ 'ತೂಂಕು$_1$' ನೋ.

ತೂಕು$_2$ 'ತೂಂಕು$_2$' ನೋ.

ತೂಗಡಿಕೆ 'ತೂಂಕಡಿಕೆ' ನೋ.

ತೂಗಾಟ (ನಾ). ೧. ತೂಗಾಡುವಿಕೆ; ಒಲೆದಾಡುವಿಕೆ: ಸಾಲುಝಲ್ಲರಿಗಳ ಪತಾಕಾಜಾಲದಲಿ ಸಬಳದ ಹೊದಱ ಗೋವಳಿಗೋಲ ತೂಗಾಟದಲಿ ಸಮರಕೆ ದ್ರೋಣ ನಡೆತಂದ (ಕುಪ್ಯಾದ್ರೋ. ೯-೧೬). ೨. ಡೋಲಾಯಮಾನವಾದ ಮನಸ್ಸಿನ ಸ್ಥಿತಿ; ನಿರ್ಣಯಕ್ಕೆ ಬಾರದಿರುವ ಸ್ಥಿತಿ: ಬಾಬಣ್ಣ ತೂಗಾಟದಲ್ಲಿ ಬಿದ್ದ. ಹೆಂಡತಿಯ ಮುಂದೆ ಸಾಲದ ವಿಷಯ ಹೇಳಬೇಕೋ ಬೇಡವೋ ಎಂದು ಯೋಚಿಸತೊಡಗಿದ (ಅಶೋಕ. ೩೩).

[ತೂಗು$_1$ (<ತೂಂಕು$_1$) + ಆಟ]

ತೂಗಾಡಿಸು (ಕ್ರಿ). ೧. ನೇತುಹಾಕು; ತೂಗುಬಿಡು: ಕಪ್ಪು ಮತ್ತು ಭರಣಿಗಳನ್ನು ಕೊಂಡಿಗಳಲ್ಲಿ ತೂಗಾಡಿಸಿದರೆ ವ್ಯವಸ್ಥೆ ಚೆನ್ನಾಗಿ ಕಾಣುವುದು (ಅಡುಸಾ. ೪೫). ೨. ಬಾಗಿಸು; ಮಣಿಸು: ಯೋಗಕೆ ಮುಖವಿಕ್ಕಿದಾಗ ಮೂಲೋಕವ ತೂಗಾಡಿಸದೆ ಸುಮ್ಮನಿಹನೆ (ಭರಣ. ೭೭-೫೬).

[ತೂಗಾಡು + – ಇಸು$_3$]

ತೂಗಾಡು, ಜೂಗಾಡು (ಕ್ರಿ). ೧. ಒಲೆದಾಡು; ತೊನೆ: ಮೇಪಿಂಗೆ ತೂಗಾಡುವ ಯಾಮಾನೇಕವಂ ಮಿಳ್ಮಿಳಿಸಿ ಸೊವಡನಾರಯ್ದುದು (ಪರ್ಧಪು. ೮-೩೪); ತಾಯನಪ್ಪುತ್ತ ಮೊಲೆಗೆ ಲಲ್ಲೈಸಿ ನಿಱಿವಿಡಿದು ಮೊಗವಂ ನೋಡುವ ತೂಗಾಡುವ ಮಗನ ಮುದ್ದುತನವಂ ಬಸವರಾಜಂ ಕಂಡು (ಬಸರ. ೦೦-೧೨೦); ಸೆಳೆಗೊಂಬೆಲರಿಂ ತೊನೆದೆಟ್ಟು ತಟ್ಗಿ ತೂಗಾಡಿದೊಡಂತದಂ ಪಿಡಿದುಕೊಂಡಲರಂ ನೆಱೆ ಕೊಯ್ದು ಕಾಂತೆ . . . ಪರ್ಚಿದಳ್ (ಕುಸುಮಾ. ೫-೦೦೦); ತೀಡುವ ತೆಂಬೆಲರ್ಗೆ ಚಲಿಪಚ್ಛತಳಿರ್ಗಳ ಘಾತದಿಂದೆ ತೂಗಾಡುವ ಪಣ್ಗಳೈದೆ ಮಸೆದಂದೊಡೆಯುತ್ತೊಗುತಿರ್ಪಿನಂ ರಸಂ (ಉದ್ಯಟ. ೬-೦೨); ಬೆಳಗಿನ ತುಱುಗಲಲಿ ತೂಗಾಡುತಿದ್ದುದು ಕೈದು ತೊಡವಾಗಿ (ಕುಪ್ಯಾದ್ರೋ. ೩-೬೦); ಮುಂದೆ ಸಾಗುವಾಗ ಅವಳ ಎಡತೋಳು . . . ಚುರುಕಾಗಿ ತೂಗಾಡುತ್ತಿತ್ತು (ಪುನರು. ೨೭೫). ೨. ಅಲ್ಲಾಡಿಸು; ಅಲುಗುವಂತೆ ಮಾಡು: ನೆಳಲುಗಂಡವ್ವಳಿಸುವುದು ಸುಂಡಿಲನು ತೂಗಾಡುವುದು . . . ಹಿಡಿಹಿಂಗೆ ಲಾಗಿಸುತಿರ್ದುದಾ ದಂತಿ (ಕುಪ್ಯಾದ್ರೋ. ೩-೩೭); ಮೈಯೆಲ್ಲ ತೂಗಾಡದೊಂದಿನಿಸು ... ಸಲ್ಲಲ್ಲಿತದೊಳು ಹಾಡಿದರು (ಭರಣ. ೦-೬೦); ಪೂಡಿದಳ್ ಪೊಂದೊಟ್ಟಿಲಂ ಸಖಿಯರೊಡನೆ ತೂಗಾಡಿದಳ್ (ಜಿಬಪು. ೪೭-೬). ೩. ತೂಕಡಿಸು: ಈ ಕಾರಣದಿಂದ ಗೌರೀದೇವಿಯು ಮಲಗಿಕೊಳ್ಳುವುದಕ್ಕೆ ಹಾಸಿಗೆಯಾದರೂ ದೊರೆಯದೆ ಒಂದು ಗೋಡೆಯನ್ನೊರಗಿಕೊಂಡು ಹಾಗೆಯೆ ತೂಗಾಡಬೇಕಾಯಿತು (ಕವಿಕ. ೫೩). ೪. ಹೊಯ್ದಾಡುತ್ತ ನಡೆ: (ಕಿ). ೫. ಡೋಲಾಯಮಾನವಾಗು; ನಿರ್ಣಯಕ್ಕೆ ಬಾರದಿರು; ಅನಿಶ್ಚಿತ ಪರಿಸ್ಥಿತಿಯನ್ನು ಪಡೆ: ಈ ಜಂಜಾಟದಲ್ಲಿ ತೀರ್ಮಾನವು ತೂಗಾಡುತಿತ್ತು (ಚಿದೇಪ. ೪೬); ವಾದ ವಿವಾದಗಳ ತಕ್ಕಡಿಯಲ್ಲಿ ತೂಗಾಡುವ ಈ ವಿಷಯದ ವಿಮರ್ಶೆ ಮುಂದೆ ಬರುತ್ತದೆ (ದ್ರಾವಿವಿ. ೪೫). ೬. (ಆಲಂ) ಓಲಾಡು; ನಲಿದಾಡು: ಲಲ್ಲೆಯಿಂ ತೊನೆಯುತ್ತಿರ್ದ ನಿಜಾಂಗದಿಂದಮೊಲೆಯುತ್ತುಂ ತೊಟ್ಟಿಲಂ ತತ್ಕುಮಾರನಿಳಾಧೀಶನ ಚಿತ್ತಮುತ್ಸವದೊಳಂ ತೂಗಾಡೆ ತೂಗಾಡುವಂ (ಕುಸುಮಾ. ೬-೦೪೩). **ಜೂಗಾಡು:** ೧. "ಜೂಗಾಡು = ತೂಗಾಡು" (ಜಾನಕೋ. ೬೦). [ತೂಗು$_1$ (<ತೂಂಕು$_1$) + ಆಡು$_1$]

ತೂಗಿಸು (ಕ್ರಿ). ೧. ತೂಕ ಮಾಡಿಸು: ತೂಗಿಸಿ ತೊಲೆಯೊಳ್ ಬಾಯಂ ಮೂಗುಮನೊಡೆಯೊತ್ತಿ ಕೊಂದ ಕಳ್ಳನ ದೇಹಂ ತೂಗಿದೊಡೆ ಕುಂದದಾತ್ಮವಿಭಾಗಂ ಬೇಱಿಲ್ಲ ಜೀವನೆಂತುಂ ದೇಹಂ (ಯಶೋಚ. ೪-೨೦). ೨. (ಮೆಚ್ಚುಗೆಯಿಂದ ತಲೆಯನ್ನು) ತೂಗುವಂತೆ ಮಾಡು: ಶಿರವ ತೂಗಿಸುವುದೀ ವಚನದ ರಚನೆ (ಮೋಹತ. ೦-೨೫). ೩. ನೇತುಹಾಕು; ಇಳಿಬಿಡು: ಲಿಂಗವ ಎದೆಗೆ ಕಟ್ಟಿನ್ನಾಗ ಬಳಿದನು ಭಸಿತ ವದನಕೆಯಂಗಸಂಗದಲಿ ತೂಗಿಸಿದ ರುದ್ರಾಕ್ಷಿಸರಗಳನು (ಬಿಜ್ಜಪು. ೯೧-೨). ೪. ತೊಟ್ಟಿಲನ್ನು ತೂಗು: ಹೆಸರನಿಕ್ಕಿದರನಿರುದ್ಧನೆಂದೆನುತೆ ತೂಗಿಸಲೊಡರ್ಚಿದರು ಜೋಗುಳವ (ಮೋಹತ. ೦೭-೫೦). ೫. ನಿಭಾಯಿಸು; ನಿರ್ವಹಿಸು; ಸಂಭಾಳಿಸು: ಈ ಕೆಲಸವನ್ನು ನೀನು ತೂಗಿಸಬಲ್ಲೆಯಾ? (ರೂಢಿ).

ತೂಗಿಸಿಕೊಂಡು ಹೋಗು=ನಿಭಾಯಿಸು; ಸಾಗಿಸು; ಸಂಭಾಳಿಸು: ಪಾತ್ರರಚನೆಯ ದೃಷ್ಟಿಯಿಂದ ಎಡ್ವಿನ್‌ನ ವ್ಯಕ್ತಿತ್ವದಲ್ಲಿ ಕತೆಯ ಬೌದ್ಧಿಕತೆಯನ್ನು ತೂಗಿಸಿಕೊಂಡು ಹೋಗುವ ನಿರ್ಲಿಪ್ತತೆಯಿಲ್ಲ (ಹೊಸಕ್ಷಿ. ೨೯೦); ಅಷ್ಟು ತಾಪತ್ರಯದಲ್ಲೂ ಅವನು ಹೇಗೋ ಸಂಸಾರವನ್ನು ತೂಗಿಸಿಕೊಂಡು ಹೋಗುತ್ತಿದ್ದಾನೆ (ರೂಢಿ).

[ತೂಗು$_1$ (<ತೂಂಕು$_1$) + –ಇಸು$_3$]

ತೂಗು$_1$ 'ತೂಂಕು$_1$' ನೋ.

ತೂಗು$_2$ 'ತೂಂಕು$_2$' ನೋ.

ತೂಗುಂಗೊಂಬು (ನಾ). ನೇತಾಡುತ್ತಿರುವ ಕೊಂಬೆ: ತುಱುಗಿರ್ದ ಬಲ್ಮಿಡಿಯ ತೂಗುಂಗೊಂಬಿನೊಳ್ಪಾಯ್ದು ಮಂಡಳಿಸುತ್ತಿರ್ಪ ತುಕಾಳಿ (ಆದಿಪು. ೧೦-೯೬). [ತೂಗು$_1$ (<ತೂಂಕು$_1$) + ಕೊಂಬು$_1$]

ತೂಗುಂಜೊಡರ್, ತೂಗುಂಜೊಡರು (ನಾ). ನೇತುಹಾಕಿರುವ ದೀಪ; ತೂಗುದೀಪ: ಜಕಾರಕ್ಕೆ—ತೂಗುಂಜೊಡರ್, ಅಟ್ಟುಂಜಗಳಂ (ಶಮದ. ೧೭೦ಪ್ರಯೋ); ಮಾಲವವೆಸರ ವಿಷ್ಣುಭಕ್ತಂ ಆ ಕ್ಷೇತ್ರದ ದೇಗುಲದೊಳ್ ತೂಗುಂಜೊಡರನುರಿಯಿಸುವಂ (ಅದ್ಭುತ. ೦೬-೨೪). **ತೂಗುಂಜೊಡರು:** ಹಸಿರ ಬಸಿರೊಳೊಗೆದಲರಿನ ತೂಗುಂಜೊಡರಾಡಿಸುತಿವೆ ಇಲ್ಲಿ ಕೆಂಡಸಂಪಿಗೆ (ಹೂಜಾದಿ. ೯-೫).

[ತೂಗು$_1$ (< ತೂಂಕು$_1$) + ಸೊಡರ್]

ತೂಗುಂಜೊಡರು 'ತೂಗುಂಜೊಡರ್' ನೋ.

ತೂಗುಂದಲೆ (ನಾ). ೧. ನೇತಾಡುತ್ತಿರುವ ತಲೆ: ಪೊಸ ದೂವೆ ದೂ [ಪಾಠಾಂ. ದಂಬೆತೂ]ಪ ತೂಗುಂದಲೆ ಬಾಚ್ವಿಣಂ ಪೊಡರೆ ಬಳ್ಕುವ ಸಮ್ಮನ ಸೂಲಮಾಲದೊಳ್ ಸಂದಣಿಯಾಗಿ ನೇಲ್ವ ಪೆಣನೊಂದಿರೆ (ಕಾಪ್ಯಾಪ. ೫೬); ದಕಾರಕ್ಕೆ–ಕಡುಕುಂದಱಿ ... ಆಡುಂದೊಲೆ, ತೂಗುಂದಲೆ (ಶಮದ. ೧೭೦ಪ್ರಯೋ). ೨. (ಒಪ್ಪಿಗೆ, ಮೆಚ್ಚುಗೆ ಮುಂತಾದುವನ್ನು ಸೂಚಿಸುವು

ದಕ್ಕಾಗಿ) ತೂಗುವ ತಲೆ: (ತೂಗುಂದಲೆಯಿಂದ ಪ್ರೋತ್ಸಾಹಿಸಿ ಎರ್ದೆ ಗುಡುವನು) (ಚಟ್ಟಅ. ೦೦೩-೯). [ತೂಗು$_1$ (< ತೂಂಕು$_1$) + ತಲೆ$_1$]

ತೂಗುಂದೆನೆ (ನಾ). ಅತ್ತಿಂದಿತ್ತ ಆಡುತ್ತಿರುವ ತೆನೆ,-ಹೊಡೆ: ಅನಿಲಾಯತ್ತೋಚ್ಚಲಚ್ಛಾಳಿಯೊಳವಯವದಿಂ ಪಾಯ್ದು ಕಾಲ್ ಜಾಱ ತೂಗುಂದೆನೆಯಂ ತಟ್ಕೈಸಿ (ಲೀಲಾವ. ೫-೫೯); ತೂಗುಂದೆನೆಯ ಕಳಮಮಲ್ಲಲ್ಲಿ ಕಾಸಾರಮಲ್ಲಲ್ಲಿ . . . ಮೆಱವುದೆನೆ ಸುಖಾವಾಸಮಾ ದೇಶಮಲ್ತೇ (ಪೃಷವಿ. ೪-೪). [ತೂಗು$_1$ (<ತೂಂಕು$_1$) + ತೆನೆ$_1$]

ತೂಗುಂದೊಟ್ಟಿಲ್, ತೂಗುತೊಟ್ಟಿಲು (ನಾ). ಅತ್ತಿಂದಿತ್ತ ಆಡುತ್ತಿರುವ ತೊಟ್ಟಿಲು; ಜೀಕುತ್ತಿರುವ ತೊಟ್ಟಿಲು: ಎಸೆವ ತೂಗುಂದೊಟ್ಟಿಲೊಳ್ ಪಟ್ಟ ಪುತ್ರನ ವಕ್ತ್ರೇಂದುವನಂಜನಾಂಕಿತಮನಾನಿನ್ನೆಂದು ಪೇಟ್ ಕಾಣ್ಬೆನೋ (ಕಾದಂಪೂ.೩೫೫); ದಕಾರಕ್ಕೆ-ಕಡುಕುಂದಱ, ಉರ್ಕುಂದೊಱ, ತೂಗುಂದೊಟ್ಟಿಲ್, ಆಡುಂದೊಲೆ (ಶಮದ. ೦೬೦ ಪ್ರಯೋ); ತೂಗುಂದೊಟ್ಟಿಲೊಂದು ಪಾಂಗಿನಿಂ ಬಗೆ ಮನಮಱುಕದ ಗಂಡಗರ್ವದಿರ್ದೆಸೆಮೂಲೆಗಳೊಳಮುಯ್ಯಲಾಡೆ (ರಾಮಾಶ್ವ. ೯೩-೨೪) **ತೂಗುತೊಟ್ಟಿಲು**: ಮಂಡೋದರಿಯ ಸೊಸೆಯ ಶಿಶು ಕೂಗಿದನು ತೂಗುತೊಟ್ಟಿಲೊಳೆದ್ದು ಕುಳಿತು (ಶ್ರೀರಾಮಾ. ೪೫೦-೭); ತೂಗುತೊಟ್ಟಿಲಿನ 'ಕಿರೀಂ', 'ಕಿರೀಂ' ಸದ್ದು (ಪಾತ್ಸಲ್ಯ. ೨).

[ತೂಗು$_1$ (<ತೂಂಕು$_1$) + ತೊಟ್ಟಿಲ್$_1$]

ತೂಗುಂಮಂಚ, ತೂಗುಮಂಚ (ನಾ). ತೂಗಲು ಅನುಕೂಲವಾಗುವಂತೆ ಕಟ್ಟಿರುವ ಮಂಚ; ಉಯ್ಯಾಲೆ ಮಂಚ: ತೂಗುಂಮಂಚದೊಳ್ ಶಶಿಪ್ರಭಾಮಹಾದೇವಿಯುಂ ತಾನುಂ ಕುಳ್ಳಿರ್ದು (ಚಂದ್ರಪು. ೭-೯೫ಪ); ಸೀತೆಯೊರ್ಮೆ... ತೂಗುಂಮಂಚಮನೇಱ ಚೆಲ್ಲದಿಂ ಕುಳ್ಳಿರ್ದು (ರಾಮಾಶ್ವ. ೦೭-೩೦). **ತೂಗುಮಂಚ**: "ಆಂದೋಳ ಪರಿಯಂಕಮೆನೆ ತೂಗುಮಂಚ ಮಕ್ಕುಂ" (ಮಂಗರಾ. ೬೦-೦೭); ಮಂಚಕ್ಕೆ—ಕಾಂಚನಮಂಚ. ತೂಗುಮಂಚ, ರತ್ನಮಂಚ (ಶಮದ. ೨೯೮ ಪ್ರಯೋ); ಅರಸು ಪವಡಿಪ ತೂಗುಮಂಚದ ಸರಪಳಿಯ ಬಳಿವಿಡಿದು ಪಟುಭೀಕರವಿಷೋರಗವಾಗಳೊಂದು ರವಣಿಸಿ ಹರಿತಂದು (ಬಸಪು. ೪೬-೨೦); ತೂಗುಮಂಚದಿ ಹಂಸತೂಲದ ಹಾಸಿಗೆ (ಪುರಂದ. ೩-೦೩೦-೨); ಆಗಳಾ ದಮಯಂತಿ ಚಿತ್ರದ ಬಾಗಿಲುಪ್ಪರಿಗೆಯಲಿ ರತ್ನದ ತೂಗುಮಂಚದ ಹಾಸಿನಲಿ ಕುಳ್ಳಿರಲು (ನಳಚ. ೩-೨೮); ತೂಗುಮಂಚದ ಮೇಲೆ ಪೊಱಗುಮೂಡೆಗೆ ವಾಮಭಾಗವನಿಟ್ಟು ಕುಳಿತನು (ಭರಚ. ೪-೦೦೭); ನಂದಗೋಪನ ಮನೆಯ ತೂಗುಮಂಚದ ಮೇಲೆ ನಿದ್ದೆ ಮೇಲುದುವಾತ್ಮ ಹೊದೆಯಲಿರೆ (ಗೋಕುನಿ. ೯-೦೯).

[ತೂಗು$_1$ (< ತೂಂಕು$_1$) + ಮಂಚ]

ತೂಗುಕುದುರೆ (ನಾ). ಹಿಂದಕ್ಕೂ ಮುಂದಕ್ಕೂ ಆಡುವ, ಮಕ್ಕಳ ಆಟದ ಕುದುರೆ: ಮಗು ಸವಾರಿ ಮಾಡುವ ಮರದ ತೂಗುಕುದುರೆ (cook-horse. ಇಂಕನಿ). [ತೂಗು$_1$ (<ತೂಂಕು$_1$) +ಕುದುರೆ]

ತೂಗುಕೋಲು (ನಾ). (ವಿಶೇಷವಾಗಿ ಹಳ್ಳಿಗಳಲ್ಲಿ) ಬೆಣ್ಣೆ ಮೊದಲಾದುವನ್ನು ತೂಕಮಾಡಲು ಬಳಸುವ, ಒಂದೇ ಪರಡಿ ಅಥವಾ ತಟ್ಟೆಯಿರುವ ಮರದ ಕೋಲು: ಚಿಂತಾಲು, ತಕ್ಕಡಿ, ತೂಗುಕೋಲು ...ಖಂಡಿ ಮುಂತಾದವುಗಳಿಂದಲೂ ಮೂರು ಬಗೆಯಾಗಿದೆ (ಸಿದ್ಧಾಂತಿ. ೩೦೦); ತೂಗುಕೋಲು ತಂದಿದ್ದೀಯಲ್ಲ, ತಕ್ಕಡಿ ಬಟ್ಟು ಎಲ್ಲಿ? (ರೂಢಿ).

[ತೂಗು$_1$ (<ತೂಂಕು$_1$) +ಕೋಲು$_1$ (<ಕೋಲ್$_1$)]

ತೂಗುಗುಂಡು (ನಾ). (ಗಡಿಯಾರದ) ಲೋಲಕ; ತೂಗಾಡುವ ಗುಂಡು: ಕವಿಯ ಮನಸ್ಸು . . . ಹೀಗಿಂದ ಹಾಗೆ ಗಡಿಯಾರದ ತೂಗುಗುಂಡಿನಂತೆ ತೋರುತ್ತಿತ್ತು (ಅಲಹೂ. ೦೨೧).

[ತೂಗು$_1$ (<ತೂಂಕು$_1$) + ಗುಂಡು]

ತೂಗುಜೋಕಾಲಿ (ನಾ). ತೂಗಾಡುವ ಉಯ್ಯಾಲೆ: ಬಾಳುವೆಯ ಹೊಸದೊಂದು ಒಗಟವಾಗಿಹುದು. ನೆಲೆಯರಿಯದೇ, ತೂಗುಜೋಕಾಲಿಯಾಗಿ ತಲೆತಿರುಗಿಸುವದೊಮ್ಮೆ, ಕೆಳಗೆ ಮೇಲಾಗಿ (ಉಯ್ಯಾಲೆ. ೭೭-೭).

[ತೂಗು$_1$ (<ತೂಂಕು$_1$) + ಜೋಕಾಲಿ]

ತೂಗುತೊಟ್ಟಿಲು 'ತೂಗುಂದೊಟ್ಟಿಲ್' ನೋ.

ತೂಗುತೊಲೆ 'ತೂಗುದೊಲೆ' ನೋ.

ತೂಗುದೀಪ (ನಾ).=ತೂಗುಂಜೊಡರ್: ಭವ್ಯವಾದ ದೇವಮಂದಿರ. ಬೆಳ್ಳಿಯ ತೂಗುದೀಪಗಳು (ಶ್ರೀರಾಯ. ೨೩೦).

[ತೂಗು$_1$ (<ತೂಂಕು$_1$) +ದೀಪ$_2$]

ತೂಗುದೀವಿಗೆ (ನಾ).=ತೂಗುಂಜೊಡರ್: ಜೋಲುವ ತೂಗುದೀವಿಗೆಯ ಸಾಲುಗಳೊಳು [ಪಾಠಾಂ. ಜೋಲುವ ದೀಪಸಾಲುಗಳೊಳು ಕೇರಿ] ದೀಪಾಳಿಯ ಹಬ್ಬದಂತಿಹುದು (ಭರಚ. ೦೫-೨೩).

[ತೂಗು$_1$ (< ತೂಂಕು$_1$) + ದೀವಿಗೆ]

ತೂಗುದೊಲೆ, ತೂಗುತೊಲೆ (ನಾ.) ೧. ಒಂದು ಬಗೆಯ ಯುದ್ಧ ಸಾಧನ; ಲಗ್ಗೆಯಲ್ಲಿ ಶತ್ರುಗಳ ಮೇಲೆ ತೂಗಿ ಎಸೆಯುವ ಮರದ ದಿಮ್ಮಿ: ಸಾಲ ಮುಗಿಲಟ್ಟಣೆಯ ಡೆಂಕಣಿಯ ಪಂದಿದಲೆಯೋಳಿಗಳ ಮರುಳ ಕೈಗಳ ತೂಗ[ಗು]ದೊಲೆಯ . . . ವಿಶಾಲಶಾಲಮನಿರದೆ ದಿವಿಜಪತಿ ಕಂಡು (ಚಬಪು. ೪೨-೨೨). **ತೂಗುತೊಲೆ**: ೨. ಇಳಿಬಿಟ್ಟಿರುವ ತೊಲೆ; ನೇತುಹಾಕಿರುವ ಮರದ ದಿಮ್ಮಿ: ಎಂಥ ಭಾರಕು ಜೋಲಿ ಹೊಡೆಯದಿಹ ತೂಗು-ತೊಲೆ (ನಲಮು. ೫೦-೭).

[ತೂಗು$_1$ (< ತೂಂಕು$_1$) + ತೊಲೆ$_3$]

ತೂಗುನೀರು (ನಾ). ೧. ಎರಡು ಕೈಗಳಲ್ಲೂ ಕೊಡಗಳನ್ನು ಹಿಡಿದುಕೊಂಡು ಗಿಡ, ಮರ, ಬಳ್ಳಿ ಮೊದಲಾದುವುಗಳಿಗೆ ಒದಗಿಸುವ ನೀರು: ಅರಮನೆಯಲ್ಲಿ ಪ್ರತಿದಿನದಲ್ಲಿಯೂ ನಡೆಯುವಂತೆ ಕಟ್ಟುಮಾಡಿದ ಊಳಿಗಗಳ ವಿವರ...ಕರಗದ ಊಳಿಗ, ತೂಗುನೀರಿನ ಊಳಿಗ (ಬಾಮವಂ. ೪೫). ೨. ನೇತುಹಾಕಿದ ಪಾತ್ರೆಯಲ್ಲಿಟ್ಟ ನೀರು: ತೂಗುನೀರಿನಲ್ಲಿ ಲವಂಗ, ಏಲಕ್ಕಿ, ಸಬ್ಬಸಿಗೆಬೀಜ, ತಾಳೀಶಪತ್ರೆ ಸಹ ಅರೆದು...ಸೇವಿಸೆ ಪೈತ್ಯರೋಗಂ ಗುಣಮಕ್ಕುಂ (ಸಕವೈ. ೦೩೪).

[ತೂಗು$_1$ (<ತೂಂಕು$_1$) + ನೀರು$_1$ (< ನೀರ್$_1$)]

ತೂಗುಪಾತ್ರೆ (ನಾ). ೧. ನೇತುಹಾಕಿರುವ ಪಾತ್ರೆ: ಆಗಾಗ ದೈವಿಕ ಪರಿಮಳದ ತೂಗುಪಾತ್ರೆಗಳು ಗಾಳಿಯಲ್ಲಿ ಓಲಾಡಿದ ಶಬ್ದ ನನಗೆ ಕೇಳುತ್ತಿತ್ತು (ಯೋಧಪು. ೪೮). ೨. ನೇತುಹಾಕಲು ಅನುಕೂಲವಾಗುವಂತೆ ಹಿಡಿ ಇರುವ ಪಾತ್ರೆ. [ತೂಗು$_1$ (< ತೂಂಕು$_1$) + ಪಾತ್ರೆ]

ತೂಗುಬಿಡು (ಕ್ರಿ). ಜೋಲಾಡುವಂತೆ ಮಾಡು; ನೇತುಬಿಡು; ಇಳಿಬಿಡು: ಅವರ ಖಗೋಳಸಿದ್ಧಾಂತದ ಪ್ರಕಾರ ಭೂಮಿಯು ಗೋಳಾಕಾರವಾಗಿದ್ದು ಅಂತರಿಕ್ಷದಲ್ಲಿ ತೂಗುಬಿಟ್ಟ ಹಾಗಿದೆ (ಶಿಲ್ಪನಾ. ೯೫).

[ತೂಗು$_1$ (< ತೂಂಕು$_1$) + ಬಿಡು$_1$]

ತೂಗುಮಂಚ 'ತೂಗುಂಮಂಚ' ನೋ.

ತೂಗುಮಣಿ (ನಾ). ಜೋಲಾಡುವಂತೆ ಹರಳನ್ನಿಟ್ಟು ಮಾಡಿರುವ ಒಂದು ಬಗೆಯ ಆಭರಣ: ಕೈಗಡಿಯಾರದ ಜೊತೆಗೆ ಚಿನ್ನದ ಬಳೆಗಳು. ಕಿವಿಗೆ ತೂಗುಮಣಿಗಳನ್ನು ಇಳಿಬಿಟ್ಟು ಹಣೆಗೆ ತಿಲಕವನ್ನಿಟ್ಟಿದ್ದಳು (ದೂರಸ. ೮೬). [ತೂಗು$_1$ (< ತೂಂಕು$_1$) + ಮಣಿ$_3$]

ತೂಗುಮಣೆ 'ತೂಗುವಣೆ' ನೋ.

ತೂಗುಮರ 'ತೂಗುವರ' ನೋ.

ತೂಗುಯ್ಯಲೆ, ತೂಗುಯ್ಯಾಲೆ (ನಾ). ೧. ತೂಗಾಡುತ್ತಿರುವ ಉಯ್ಯಾಲೆ: ಲಕ್ಷ್ಮಣಂ ... ಎಂದುಮಗಲದಣ್ಣನ ಕಡೆಗೆ ದೂಳ್ಳಾಯ

ದೊಳ್ಪತ್ತಿ ಪೊರಳ್ವ ಸೀತೆಯ ಕಡೆಗೆ ತೂಗುಯ್ಯಲೆವೊಲಾದನು (ಕ್ರಮಿಧಾ. ೦೯-೫೯): ಕೊಂಬೆಯಂ ತೂಗುಯ್ಯಲೆಯಲಿ ಹಕ್ಕಿ ಸುರಗಾನದ ಹೊಳಹಿಂ ಸಿತು ಸೊಕ್ಕಿ (ಪಾಂಡಕ. ೫೬-೩). ೨. (ಆಲಂ) ಡೋಲಾಯಮಾನವಾದ ಸ್ಥಿತಿ; ಸಂದಿಗ್ಧಪರಿಸ್ಥಿತಿ: ಅವಳ ಪ್ರೇಮ ತೂಗುಯ್ಯಲೆಯಾಗಿತ್ತು (ಪುಪಕು. ೫೩೦). **ತೂಗುಯ್ಯಾಲೆ**: ೨. ಹಳೆಯದನ್ನು ಬಿಡಬೇಕೋ ಕಟ್ಟಿ ಕೊಳ್ಳಬೇಕೋ ಎಂಬ ತೂಗುಯ್ಯಾಲೆಯಲ್ಲಿದೆ ನನ್ನೂರು (ಪನ್ಮೂಕು. ೩೦೯).

[ತೂಗು$_1$ (<ತೂಂಕು$_1$) + ಉಯ್ಯಲೆ (<ಉಯ್ಯಲ್)]

ತೂಗುಯ್ಯಾಲೆ 'ತೂಗಂಯ್ಯಲೆ' ನೋ.

ತೂಗುವಣೆ, ತೂಗುವಂಣೆ (ನಾ). ಉಯ್ಯಾಲೆ; ಜೋಕಾಲಿ: ತಳಿರ ತೊಂಗಲ ತೂಗುವಣೆಯಲ್ಲಿ . . . ಸುಳಿದಾಡುವ ಮುಂದೆಮಾರುತ ಮತ್ಕಾಂತನ ಬಳಿಗೆನ್ನ ಸಾರ್ಚಿಂದಳಲುತ (ಪೋಚಿತ. ೯-೩೮). **ತೂಗುಮಣೆ**: ತೂಗುವಣೆ ಇರೋದೆ ಮಕ್ಕಳಾಟಕ್ಕೆ. ಆಡಬೇಡ ಅನ್ನಬೇಡ (ಕೂಡಿ). [ತೂಗು$_1$ (< ತೂಂಕು$_1$) + ವಣೆ]

ತೂಗುವರ, ತೂಗುವುರ (ನಾ). ೧. = ತೂಗುದೊಲೆ ೧: ತಳವರ ನೂಲ ಹರಿಗೆ ಕಬ್ಬುನದ ಬಲ್ಲಲಗೆ ಬದ್ದರ ಸಾರಮಾರಿ ತೊಲೆ ತೂಗುವರ ಬಲೆ ಹಗ್ಗ ವಂಕರದಿಬ್ಬಿ ಸಲೆ ಮೆಱೆದವು ದುರ್ಗದೊಳಗೆ (ಕುಡಾಸಾಂ. ೩೬-೫೬). **ತೂಗುಮರ**: ೨. ನೇಣುಮರ; ಗಲ್ಲುಗಂಬ: ನಾವು ಈಗಲೆ ಹೇಳಿದ್ದೇನೆ. ಇವನು ಒಂದು ದಿನ ತೂಗುಮರ ಏರುತ್ತಾನೆ (ಕೂಡಿ).

[ತೂಗು$_1$ (< ತೂಂಕು$_1$) + ಮರ$_1$]

ತೂಗುವೆರಳು (ನಾ). (ಮೆಚ್ಚುಗೆಯಿಂದ) ಅಲ್ಲಾಡಿಸಂತ್ತಿರುವ ಬೆರಳು: ಮರ್ಕು ಪೂತು ಭಾವನುತ ತೂಗುವೆರಳಿನ ವಂಕುಟದೊಲಹಿನೊಳಾ ಗರುವಧಟರುಲಿಯೆ (ಕುವಾ.ದ್ರೋ. ೦-೩೬).

[ತೂಗು$_1$ (< ತೂಂಕು$_1$) + ಬೆರಳು (<ಬೆರಲ್)]

ತೂಗುವೊಡಲು (ನಾ). ಜೋಲುತ್ತಿರುವ ಶರೀರ; ನಿಲ್ಲಲಾರದೆ ತತ್ತರಿಸುತ್ತಿರುವ ದೇಹ: ತೂಗುವೊ[ಡಾಣಾಂ. ಗಿದೊ]ಡಲರೆಮುಚ್ಚು ಗೆಂಗಳ...ಮೂರ್ಛೆಯಲಿ ರವಿಸೂನು ಮೈಮಱೆದ (ಕುವಾಳ. ೧೦-೩೦).

[ತೂಗು$_1$ (< ತೂಂಕು$_1$) + ಒಡಲು (< ಒಡಲ್)]

ತೂಗುಸೇತುವೆ (ನಾ). "ತಳದಲ್ಲಿ ಆಧಾರವಿಲ್ಲದೆ ಎರಡುಕೊನೆಗಳಲ್ಲೂ ಸ್ತಂಭ, ಮೊ.ಕೈ ಬಿಗಿದು ಕಟ್ಟಿ, ಹೊಳೆ, ಮೊ. ಗಳಿಗೆ ಅಡ್ಡವಾಗಿ ತಂತಿ ಹೊರಜಗಳಿಂದ ಜೋಲ ಹಾಕಿರುವ ಸೇತುವೆ" (Suspension-bridge. ಇಂಳಿನಿ); ೧೫೫೦ರಲ್ಲಿ ಮೊದಲ ಬಾರಿ ಪೆರೇಡಿಯೊ ಕಬ್ಬಿಣದ ತೂಗುಸೇತುವೆಯನ್ನು ಕಟ್ಟಿದನು (ಶಿಲ್ಪಾ. ೦೫೪).

[ತೂಗು$_1$ (<ತೂಂಕು$_1$) + ಸೇತುವೆ]

ತೂಗುಹಲಗೆ (ನಾ). (ಅಂಗಡಿ ಮೊದಲಾದುವುಗಳ ಮುಂದೆ ಅದರ ಹೆಸರನ್ನು ಬರೆದು) ತೂಗುಹಾಕಿರುವ ಹಲಗೆ; ನಾಮಫಲಕ: ಅಮೇಲೆ ಬರುವಿ ನೀ ದತ್ತತಾಯಾಗಿ ಕರ್ತವ್ಯಗಳ ತೂಗುಹಲಗೆಯನೆ ತೂಗಿ (ನವ್ಯಧ್ಯ. ೬-೦೩): ಬಾಂಬೇ ಸೈಕಲ್ ಸ್ಟೋರ್ಸ್ ಎಂಬ ತೂಗುಹಲಗೆ ಅದರ ಮುಂದೆ ನೇತಾಡುತ್ತಿತ್ತು (ನಿಸುತ. ೦).

[ತೂಗು$_1$ (< ತೂಂಕು$_1$) + ಹಲಗೆ (< ಪಲಗೆ)]

ತೂಗೋಲೆ (ನಾ). ತೂಗಾಡುತ್ತಿರುವ ಓಲೆ; ಲೋಲಕ: ಕತ್ತಿನಲ್ಲಿ ವಜ್ರದ ಹಾರ. ಕಿವಿಗಳಿಗೆ ವಜ್ರದ ತೂಗೋಲೆ (ಪ್ರಕಾತ. ೨).

[ತೂಗು$_1$ (<ತೂಂಕು$_1$) + ಓಲೆ]

ತೂಟಿಸು (ಕ್ರಿ). ನಾಶಮಾಡು; ಪರಾಭವಗೊಳಿಸು: ನಿನ್ನಿನ ರಣವನ್ಯೆಯ ತಾ ತೂಟಿಸಿದುದೇನಾಯ್ತೆನುತ್ತ ಹೆಂಗಳ ನೋಟದಿಂದುತ್ತರಂ ನುಡಿದನು (ತುರಂಗ. ೩೬-೩೬). 'ತುಟ್ಟಿಸು' ಪರಾ.

[< ತುಟ್ಟಿಸು]

ತೂಟೆದಾರ (ನಾ). (ಕರಾ) ಉತ್ಸವಾದಿಗಳಲ್ಲಿ ತೆಂಗಿನ ಗರಿಗಳ ಕೊಳ್ಳಿಗಳನ್ನು ಹಿಡಿದು ಮಾಡುವ ಒಂದು ಬಗೆಯ ಹಾಸಿಕಾಳಗ: ತೂಟೆದಾರ . . . ಬೋಂಟೆ (Hunting) ಇತ್ಯಾದಿಗಳು ತುಳುವರ ಧೈರ್ಯ, ಸ್ಥೈರ್ಯ, ವೀರತ್ವದ ಕುರುಹುಗಳೆಂಬುದಾಗಿ ಸೂಚಿಸಿದ್ದಾರೆ (ತುಳುನಾ. ೨೦). [← ತುಳು. ತೂಟಿದರ]

ತೂಡಿಲ್ (ನಾ). ಒಂದು ಸ್ಥಳದ ಹೆಸರು: ಅಸ್ಯ ಸೀಮಾನ್ತರಂ ಪೆರ್ವಟ್ಟಿಯೂರ ಸೀಮೆ ಮೂಡಯ್ತೂಡಿಲ ಪೆರ್ವಳ್ಳಮೇ . . . ಬಡಗಾಯ್ ಪೆರ್ವಳ್ಳದೆ ಸೀಮೆ (ಎಕ. IV, ಹಗ್ಗಡ. ೪-೫೫; ಸಂ. 750). [?]

ತೂಣ$_1$ 'ತೂಳ್$_1$' ನೋ.

ತೂಣ್, ತೂಣ (ನಾ). ಕಂಭ; ಸ್ತಂಭ: "ತೂಣ(ನ) – ಸ್ಥೂಣ = ಗೂಟ್, ಕಂಬ" (ಕರ್ನಾಕೋ. ೦೮); ಮುಡದಿಯು ನುಣ್ಮೊಡೆಗಳನ್ನು ಕಡೆಗೆ ಬಣ್ಣಿಸಲಾನಱಿಯೆ ವೋಪವೆಂಬ ಗುಡಿಗಟ್ಟಿ ತೂಣದಂತಿಹುದು (ಅಂಜಚ. ೫-೦೩೪); ಸುರರ ಸಂದಣಿ ಭರದಿಂದ ವರನಾಕವಿಳಿದು ಕೂಡ ದೊಲಜ ತೂಣವನಿರಿಸಿದಂತಿಹುದಲ್ಲಿ ಮೇರು (ವರ್ಧಚ. ೦-೪೮). **ತೂಸೆ**: (ಕ). 'ತೂನಗೆಣಸು' ಪರಾ. [< ಸಂ. ಸ್ಥೂಣಾ]

ತೂಣ್ (ನಾ). = ತೂಣೀರ: ಕಾಪುಬಾಣಂಗಳ ತೂಣವೆಂದನಿಸಿ ರಂಜಿಸಿ ತೊಂದು ಮನೋಜ್ಞಮಂಟಪಂ (ಉದ್ಭಟ. ೫-೦೬); ತೂಣದಿಂ ಸರಳ್ಗಳ ನರ್ಚ್ಚ ತೊಟ್ಟು ಶಿರುವಂ ತೆಗೆದೆಚ್ಚಂ (ಕ್ರಿಪುವಿ. ೫೪-೩೫೫). [ಸಂ.]

ತೂಣ್$_2$ (ನಾ). ಯವಂ: ತೂಣನ ತೋಳಂ ತುಂಡಿಸಿ ಪೂಪನ ಕೋಣೆಯ ಹಲ್ಲೆಲ್ಲ ಫಲ್ಲಿಸಿ . . . ಶಿರುಗಿದನರ್ಧ್ವರದೆಡೆಗೆ (ವೀರೇಚ. ೫-೪೩): ಓಹೋ ಹೋಯೆನ್ನಸುವಿಗ ತೂಣನ ತೋಹಿಗೆ ಸಿಲ್ಕದು (ಉದ್ಭದೇ. ೩-೪೩): ತೂಣನಂ ತುಳಿದ ಪೆಬ್ಬಾವಿನೆಂಜಲುಂಡಾ ... ಕಜಿಗೊರಲ ಶಿವ ರಕ್ಷಿಸೈ ನಿಶ್ಚಲದೊಳು (ನಂದಿಮಾ. ೫೦-೫೫). 'ತೂಣಕೋಡು', 'ತೂಣಕೋಣ' ಪರಾ. [?]

ತೂಣಕೋಡು (ನಾ). ಯವಮಂನ ವಾಹನದ ಕೋಡು: ಮನಂಜಪತಿ ಜವಹರಂಬುಗುವವನೆನುತುಂ ಬಿನ್ನೈಸುತಿರ್ಪ ಸಮಯದೊಳಗೆ ಪಡಿಹಾರಿಯೊರ್ವನೆಯ್ತಂದು ತಚ್ಛ್ರೋಣನೆಡೆವಿಡದಡರಿದಂ ತೂಣಕೋಡುಗಳನೆನು ತೊಡನೆ ಬಿನ್ನೈಸಿದಂ ತದ್ಭಕ್ತಸಂದೋಹಕಣಿಯರಂ ಮುದದೊಳು (ಆರಾಚ. ೪-೭೪). [ತೂಣ$_4$ + ಕೋಡು$_5$]

ತೂಣಕೋಣ (ನಾ). ಯವಮನ ವಾಹನವಾದ ಕೋಣ,– ಮಹಿಷ: ಸುರಪಕರಿದಂತಮಂ ತೂಣಕೋಣನ ಕೊಂಬನಿರದೆ ಕಿಳ್ತಿರದನುಜೆ ಪಿಡಿದು ತಾಳಂಗಟ್ಟುತ್ತ (ಆರಾಚ. ೦೭-೦). [ತೂಣ$_4$ + ಕೋಣ$_1$]

ತೂಣಗೊಳ್ಳು (ಕ್ರಿ). ಪರವಶವಾಗು; ಆವೇಶ ಹೊಂದು: ವನದೇವಿಯೋಲಗದೊಳುತ್ಸವದಿಂದಮಡಿಗಡಿಗೆ ತೂಣಗೊಂಡವನಂತೆಸವ. ಮುಂದ ಮಾರುತನ ನೋಡೆಂದನು (ಕ್ರಮಿಧಾ. ೩-೩೫): ನವಿಲ ನಾಟ್ಯವನ್ನು ನೋಡಿ ನೆನಸಿ ನೆನಸಿ ತೂಣಗೊಂಡೆ (ಪಯೂಣ. ೬೬-೭) : ತೂಣಗೊಂಡಿಹೆನಿಂತು ಮಹಾದ್ಭುತಪವಾಡಸಂದರ್ಶನಕ್ಕೆ (ಅನಿಕೇ. ೪೯-೯).

[ತೂಣ$_1$ (< ತೂಳ್$_1$) + ಕೊಳ್ಳು$_1$ (< ಕೊಳ್$_1$)]

ತೂಣಮನ (ನಾ). (ಕಂಬದಂತೆ) ಸ್ಥಿರವಾಗಿರುವ ಮನಸ್ಸು: ತೂಣ ಮನಗೈದಡವಿಯಂ ಸಾರ್ದೊಡಂ (ಕ್ರಿಣಾಪು. ೪-೫೭).

[ತೂಣ$_3$ + ಮನ$_1$]

ತೂಣೆ (ನಾ). = ತೂಣೀರ: "ಮೂಡಿಗೆ, ತೂಣಿ; ಬತ್ತಳಿಕೆ – ಈ ೩ ದೆನ್ನ ಹೊದೆ" (ಕಕಸಾ. ೫೨-೦೦೭); ನಮಿಸಿ ಮುನಿಗಳಿಗಾಗ ಧನುವನಂ ಬಾಣ ತೂಣಿಗಳಂ ಸಮರಜಯಕಾಂಕ್ಷೆಯಲಿ ಧರಿಸುತ (ಶಾತ್ರ.ರಾ. ೩೨-೭೦); ಪತಿ ಭಕ್ತಿಜಾಣೆಯುಂ ಸುಲಭಪ್ರವೀಣೆಯುಂ ಬಿಡ್ಪಾಣತೂಣಿಯುಂ . . . ಪಶುಪತಿಯ ರಾಣಿಯುಂ ವಿುಗೆ ಪೊಗಳುವೆ (ಗುಭಚ. ೦-೭). [ಸಂ.]

ತೂಣಿಕಾರ (ನಾ). ಬತ್ತಳಿಕೆಯನ್ನು ಹಿಡಿದಿರುವ ವೀರ (?) : ಕಾಣಿಸಿ ೪ ದೇವಕೂಟದ ತೂಣಿಕಾರ × × × ದ್ದಲ್ಲಿ (ಕಇ. I, ೪೭-೧೦; 1425).
[ತೂಣಿ + - ಕಾರ$_1$ (< - ಕಾಱ)]

ತೂಣೀರ (ನಾ). ಬಾಣವನ್ನು ತುಂಬುವ ಚರ್ಮದ ಚೀಲ; ಬತ್ತಳಿಕೆ : "ತೂಣೀರಂ . . . ಕಳಾಪಃ–ಈ ೮ ಮೂಡಿಗೆ" (ಹಲಾಯು. ೭೬-೩೧೧) ; ಸನ್ನಹತೂಣೀರಚಾಪಕಂಬಳಸಹಿತಂ ರನ್ನದ ಚಿತ್ರಿತ ಘಟಮಂ ತನ್ನಯ ಭುಜದೆ ತಳೆವಂ ಮೃಗಾಂತ್ಯತ್ರ್ಯಂಶಂ (ಜಾತತಿ. ೧೯-೩೦) ; ಕವಚಂದೊಟ್ಟು ಶರಾಸನಂ ಬಿಡಿದು. ತೂಣೀರಂಗಳಂ ತಾಳ್ದಿ (ಪಂರಾಮಾ. ೯-೪೬) : ತೂಣೀರದೊಳ್ ಶರಂ ಪೋಗುವಂತೆ ತಲೆಯೊಳಗೆ ಮಾಣದೆ ಪೋಗಲು ಮೂರ್ಛೆಯೊಳಾಳ್ದು ಬೀಳೆ (ಚತುಪು. ೩-೮-೯೪); ಸಾರ್ಥಕಂಗೆಯ್ ನನ್ನ ಕೊಟ್ಟಾ ಧನುರ್ಬಾಣಮಂ ದಿವ್ಯತೂಣೀರಮಂ (ಶ್ರೀಕಾಮಾ. ೧೯೩-೪೬೯) [ಸಂ.]

ತೂತ (ನಾ). ೧. ಹುರುಳಿಲ್ಲದವನು; ಪೊಳ್ಳಾದವನು: ಆಶೆಗೆ ಸಿಲುಕಿ ಸಾವ ತೂತರಿಗೆಲ್ಲಿಯದೋ ಲಿಂಗೆ (ಮೋಳಿಮಾ. ೪೮-೨೦೦) : ನಾಡಿ ಸೂತ್ರಗಳ ಭೇದವನಱಿದೆವೆಂದು ದೀಪನ ಪಚನ ವೈತ್ಯಕ್ಕೆ ಶ್ಲೇಷ್ಮವಿದೆಯೆಂದು ಆತ್ಮನ ಹಿತವನಱಿಯದ ತೂತ ವೈದ್ಯನಲ್ಲ (ಸರ್ವವ. ೨೨-೦೦೨). (ಗು). ೨. ಹುರುಳಿಲ್ಲದ; ಪೊಳ್ಳಾದ. 'ತೂತಜ್ಞಾನಿ' ಪರಾ.
[ತೂತು$_1$ (< ತೂಂತು$_3$) + - ಅ$_7$] 21

ತೂತಜ್ಞಾನಿ (ನಾ). ಪೊಳ್ಳುಜ್ಞಾನಿ ; ಅಜ್ಞಾನಿ : ಮಾತಿನ ಮಾಲೆಯ ಕಲಿತು ಸಂತೆಯ ಹೋತಿನಂತೆ ಹೋರುವ ತೂತಜ್ಞಾನಿಗಳಿಗಿನ್ನೇತಱ ವಿರಕ್ತಿಯೋ (ಮೋಳಿಮಾ. ೧೭೦-೬೩೫); ಮಾತಿನ ಮಾಲೆಯ ಬೋಧೆ ತೂತ ಜ್ಞಾನಿಗಳ ಸಂಸರ್ಗ (ಅವರೇ. ೪೭). [ತೂತ + ಜ್ಞಾನಿ]

ತೂತಪ್ಪಚ್ಚಿ (ನಾ). ೧. ಮಧ್ಯೆ ತೂತಂ ಮಾಡಿರುವ ರೊಟ್ಟಿ ಮೊದಲಾದ ತಿನಿಸು ; ತಪ್ಪಲೆರೊಟ್ಟಿ ಇತ್ಯಾದಿ. ೨. ಸ್ತ್ರೀಯ ಗುಹ್ಯಾಂಗ ; ಯೋನಿ : (ಕ). [ತೂತು$_1$ (< ತೂಂತು$_3$) + ಅಪ್ಪಚ್ಚಿ]

ತೂತಾಲಂಬ (ನಾ). ತಪ್ಪನ್ನೇ ಹಿಡಿದಂ ಹೋರಾಡಂವವನು ; ದೋಷಗ್ರಾಹಿ (?) : ಮಾತಿಗೆ ಮಾತ ಗಂಟನಿಕ್ಕಿ ನಿಹಿತವರ್ತನವಿಲ್ಲದೆ ಸರ್ವ ತೂತಾಲಂಬರ ಮಾತು ಸಾಕಂತಿರಲಿ (ಅವರೇ. ೮೦).
[ತೂತು$_1$ (< ತೂಂತು$_3$) + ಆಲಂಬ]

ತೂತಿಡು 'ತೂಂತಿಡು$_1$' ನೋ.

ತೂತು$_1$ 'ತೂಂತು$_3$' ನೋ.

ತೂತು$_2$ (ನಾ). ಒಂದಂ ಬಗೆಯ ಮೀನು : ತೂತು ತೆಂತಲು ಸಿಸಿಲು . . . ಆನೆಮೊಗನೆಂಬ ಪರಿಪರಿಯ ಮೀನ್ಗಳಂ ಗುದಿಗೆಯ್ದರು (ಹಚಶಾ. ೫-೪೫). [?]

ತೂತುಕೆಡವು (ಕ್ರಿ). ರಂಧ್ರವನ್ನುಂಟುಮಾಡು ; ತೂತಂಮಾಡು : "ಆವಿಧ ತೂತುಕೆಡವತಕ್ಕದು" (ಗಂಗಾಮಾ. ೨೮).
[ತೂತು$_1$ (<ತೂಂತು$_3$) + ಕೆಡವು (<ಕೆಡವು)]

ತೂತುಕೊರೆ 'ತೂಂತುಗೊಱೆ' ನೋ.

ತೂತುಗೆಯ್ (ಕ್ರಿ). = ತೂತಂಕೆಡವು : ಕಪೋತನೊಂದು ಶಾಂ ಠಕ್ಕಿಸಿ ಕಲ್ಲಿಯಂ ಕಡಿದು ಕನ್ನದೊಳೋಡಿದುದಂತೆ ಕಲ್ಲಿಯಂ ಚಿಕ್ಕನೆ ತೂತುಗೆಯ್ದು ಗಿಳಿಗಳ್ ಕರೆತಂದವು ತಮ್ಮ ಪೋತಮಂ (ಹಮ್ಮೀರ. ೪-೬೨).
[ತೂತು$_1$ (<ತೂಂತು$_3$) + ಕೆಯ್$_1$]

ತೂತುಗೊಱೆ 'ತೂಂತುಗೊಱೆ' ನೋ.

ತೂತುತೆಗೆ (ಕ್ರಿ). = ತೂಂತುಗೊಱೆ : ಗೋಡೆಯಲ್ಲಿ ಮೊದಲು ತೂತು ತೆಗೆದು ಆಮೇಲೆ ಮೊಳೆ ಹೊಡೆ (ರೂಢಿ).
[ತೂತು$_1$ (<ತೂಂತು$_3$) + ತೆಗೆ$_1$]

ತೂತುಬಾಯ್, ತೂತುಬಾಯಿ (ನಾ). ಯಾವ ವಿಷಯವನ್ನಾದರೂ ಗುಟ್ಟಾಗಿಡದೆ ಬಹಿರಂಗ ಪಡಿಸುವ ಬಾಯಿ ; ಒಡಕುಬಾಯಿ : ಮರ್ತ್ಯದ ಮನುಜರು ಸತ್ತರೆನುತ್ತ ಕತ್ತಲೆಯೊಳು ಮುಳುಗಿ ಈ ಮಾತು ಕಲಿತುಕೊಂಡು ತೂತುಬಾಯೊಳಗೆ ನುಡಿದು ... ಹುಚ್ಚುಗೊಂಡು ತಿರುಗುವ ಕತ್ತೆಮನುಜರ ಮೆಚ್ಚರು ನಮ್ಮ ಅಪ್ಪಣ್ಣಪ್ರಿಯಚನ್ನಬಸವಣ್ಣ (ಲಿಂಗವ. ೬೬-೫೯). **ತೂತುಬಾಯಿ** : ಅವಳದು ತೂತುಬಾಯಿ, ಯಾವುದೂ ಗುಟ್ಟಾಗಿ ಉಳಿಯುವುದಿಲ್ಲ (ರೂಢಿ).
[ತೂತು$_1$ (<ತೂಂತು$_3$) + ಬಾಯ್]

ತೂತುಬಾಯಿ 'ತೂತುಬಾಯ್' ನೋ.

ತೂತುವೋಗು 'ತೂಂತುವೋಗು' ನೋ.

ತೂತೇಳು (ಕ್ರಿ). ರಂಧ್ರವುಂಟಾಗು : ಮಾತುಗಾಱಿಕೆ ಬೇಡ ಹಿಡಿಯೆಂದು ಭಾಳದೆ ತೂತೇಳಲೆಚ್ಚು ಬೊಬ್ಬಿಱಿದ (ಮೋಹತ. ೧೨-೫೯).
[ತೂತು$_1$ (<ತೂಂತು$_3$) + ಏಳು$_1$ (<ಏಟ್$_1$)]

ತೂತ್ಕಾರ (ನಾ). ಒಂದು ಅನುಕರಣ ಶಬ್ದ : ಗೋವಳರೊತ್ತುವ ತಿತ್ತಿರಿಗಾಳೆಯ ತೂತ್ಕಾರಮುಮಂ (ಅರ್ಧನೇ. ೮-೭೫ವ).

ತೂದ (ನಾ). ಒಂದು ಬಗೆಯ ಮರ ; ಹೂವರಸಿ ; ಬ್ರಹ್ಮದಾರಂ : ತೂದಃ, ಪೂಗಃ, ಯೂಪಃ . . . ತೂಲಂ–೬ ಹುವ್ವರಿಸೆ ಗಿಡ . . . ಕಾಡಡಿಕೇಮರವೆಂದು ಕೆಲವರನ್ನುವರು (ಸಿದ್ಧಾಂತಿ. ೧೨೧). [ಸಂ.]

ತೂದು 'ತುಯ್$_2$' ಪರಾ.

ತೂನ್, ತೂನು (ಕ್ರಿ). ತೂಂತು$_2$ (ಭೂತನ್ಯೂ). ೧. ಜಗ್ಗು ; ಮುಂದಕ್ಕೆ ಎಳೆ : ಬಳ್ಳು ಎತ್ತಿನುವರದಿಂ ಪೊಱಮಟ್ಟು ಓಡುವುದಂ ಶ್ವಾನಂಗಳ್ ಕಂಡು ತೂನುತ್ತಿರಲ್ (ಪಂಚತಂ. ೨೦-೬) ; ಆ ಧನುವನು ತೂನಲ್ಕಾಱದೆಯಂಗಾಧೀಶ ತಿರುಗೆ ಲಜ್ಜೆಯೊಳು (ನೇಮಿಸಂ. ೨೩-೨೬೬) ; ಕೆಲರಲ್ಲಿ ತಲೆಗೂಡಲಂ ಕಟ್ಟಿ ಬಿಡದೆ ಅಲೆದು ತೂನುತ್ತೊಯ್ದರು (ವೀತ್ಯಪು. ೪-೦೮-೨೬); ಸಸಿ ಸಾಣೆಯನು ತೆಂಕಣೆಲರ್ವರ್ಗದೊಳು ತೂಂತು ಮಸೆಯೆ (ನಾಗಕು. ೩೦-೨೬). **ತೂನು** : ೨. ಕಿತ್ತುಕೊಳ್ಳು ; ಸೆಳೆದುಕೊಳ್ಳು ; ವಸೂಲುಮಾಡು : ಇಂದು ಗೌರಿಯ ಹಬ್ಬವಿಂದು ದೀಪಾವಲಿ ಇಂದು ಕೇತಾರನ ದಿನವೂ ಇಂದು ಯುಗಾದಿ ಮತ್ತಿಂದು ಸಂಕ್ರಾಂತಿಯೆಂದೆಂದು ಧನವ ತೂನುತಿಹರು (ಅಂಜಜ. ೫-೧೨೮).

ತೂನ 'ತೂಣ$_2$' ನೋ.

ತೂನಗೆಣಸು (ನಾ). ಒಂದು ಬಗೆಯ ಗೆಣಸು ; ಮರಗೆಣಸು : ತೂನ ಗೆಣಸು, ಮುಡಿಗೆಣಸು, ನೂರೆಲೆಗೆಣಸು, ತುಣಗೆಣಸು, ದಂಡಾಲು (ಮೃಜಿಗಿ. ೩೧-೫೯೨).
[ತೂನ (< ತೂಣ$_2$) + ಗೆಣಸು (< ಗೆಟಸು)]

ತೂನಿಹುಳ (ನಾ). ಒಂದು ಬಗೆಯ ಹುಳು : ತೂನಿಹುಳ, ಗೆದ್ದಲು (ನಮ್ಮನು. ೨೪೦). [ತೂನಿ$_3$ + ಹುಳ (< ಪುಟು)]

ತೂನು 'ತೂನ್' ನೋ.

ತೂಪ 'ತೂಂಕು$_1$' ಪರಾ.

ತೂಪರ, ತುಪರ, ತೂಪರೆ$_2$, ತೂಪುರ, ತೂಪ್ರ, ತೂಬರ$_1$, ತೂಬರೆ (ನಾ). = ತುಂಬುರು$_2$: ಮಾತ್ಗಂಟ ಮಗಳಲ್ಲ ತಾಟ್ಗಿತ್ತಿ ಸೊಸೆಯಲ್ಲ ತೂಪರದ ಚಕ್ಕೆ ಒಲೆಗಲ್ಲ (ಹಳ್ಳಿದಾ. ೮೬). **ತುಪರ** : ಮರಗಳು : — ಹೆಸವ ... ಹಸರಗಣ್ಣಿ, ತುಪರ (ನಮ್ಮನು. ೨೩೬). **ತೂಪರೆ$_2$** : (ಕ). **ತೂಪುರ** : ತೂಪುರದ ಕೊಳ್ಳಿಯೋಪಾದಿಯಲ್ಲಿ ಛಿಟಛಿಟಗುಟ್ಟುವಂಥ ಕಟ್ಟುಗ್ರದ ಕಡುಗೋಪವೇ ರೋಷವು (ವಚಶಾ. II, ೧೦೫). **ತೂಪ್ರ** : ಕಂಬಳಿಕರೀಮರ, ಬೀಡಿಎಲೆಮರ, ತೂಪ್ರ, ತೂಬರೆ (ಮೃಜಿಗಿ. ೩೧-೬೦೪). **ತೂಬರ$_1$** : ತೂಬರದ ಬೀಜ, ಕೊಡಸಿಗನ ಬೀಜ...ಇವಱ

ಕಷಾಯವ ಜೇನುತುಪ್ಪವೆರಸಿ ಸೇವಿಸಲು ರಕ್ತಪಿತ್ತಾತಿಸಾರ ಪರಿಹರ (ವೈದ್ಯಸಾ. I, ೨೦೦) : ಇಂಗು, ತೂಬರದ ಬೇರು, ಶುಂಠಿ ಈ ಮೂಱನು ಸಾಸುವೆಯ ಎಣ್ಣೆಯಲ್ಲಿ ಕಾಸಿ ಕಿವಿ ತುಂಬ ಬಿಡಲು ಕರ್ಣಶೂಲೆ, ಕರ್ಣ ದೋಷಗಳು ಶಮನವಹವು (ವೈದ್ಯಸಾ. II, ೯೬). **ತೂಬರೆ** : "ತಿಂದುಕಃ, ಸ್ಫೂರ್ಜಕಃ, ಕಾಲಸ್ಕಂಧಃ, ಶಿತಸಾರಕಃ – ೪ ತುಂಬರಗಿಡ, ತೂಬರೇಗಿಡ" (ಸಿದ್ಧಾಂತಿ. ೧೦೬). [< ಸಂ. ತುಂಬುರು]

ತೂಪರಿಡು (ಕ್ರಿ). = ತೂಪಿಱಿ ೨ (?): ಕಟ್ಟಿ ಮೀಸಲ ತೂಪರಿಟ್ಟು ನೆಟುಕನು ಮುರಿವಳು (ಜಿನಮು. ೪೨-೭). [< ತೂಪಿಡು]

ತೂಪರು, ಜುಬ್ಬರ$_1$, ಜೂಪರ, ತೂಪರೆ$_1$, ದೂಮರ (ನಾ). ತುಂತುರು ಹನಿಗಳಿಂದ ಕೂಡಿದ ಮಳೆ ; ಜಿನುಗುಮಳೆ : ಈ ತೂಪರು ಸಾಕಾಗಿ ಹೋಗಿದೆಯಪ್ಪ (ರೂಢಿ). **ಜುಬ್ಬರ$_1$** : ಇಷ್ಟೇ ಜುಬ್ಬರ ಬಂದು ನಿಂತೀ ತೆಂಬುವ ಹಾಗಿಲ್ಲ. ಇದಕ್ಕೂ ದೊಡ್ಡಮಳೆ ಬರುವ ಹಾಗೆ ಕಾಣುತ್ತದೆ (ಮುಂಬಯಿ. ೫-೫೦). **ಜೂಪರ** ; "ಜೂಪರ = ಜಿನಗುಡುವ ಮಳೆ, ಜುಬರುಮಳೆ" (ಜಾನಕೋ. ೬೦). **ತೂಪರೆ$_1$** : "ತೂಪರೆ = ಜಿಟಿಜಿಟಿ, ಸಣ್ಣ ; (ತೂಪರೆಮಳೆ ; ತೂಪರೆ ಕಾಳು)" (ಜಾನಕೋ. ೬೭). **ದೂಮರ** : "ದೂಮರ = ಜಿಟಿಜಿಟಿ ಮಳೆ" (ಜಾನಕೋ. ೭).

[ದೇ.ಪ ತಮಿ. ತೂವಲ್, ತುವಲೈ ; ಮಲ. ತೂವಲ್ ; ತೆಲು. ತುಪ್ಪರ, ತುಂಪರ, ತುವ್ವರ]

ತೂಪರೆ$_1$ 'ತೂಪರು' ನೋ.

ತೂಪರೆ$_2$ 'ತೂಪರ' ನೋ.

ತೂಪಿಡು (ಕ್ರಿ). = ತೂಪಿಱಿ ೨ : ಭಸಿತದ ತಿಲಕಮನಿಟ್ಟು...ಪ್ರಸಾದದ ತುಂತುಱಿಂ ತೂಪಿಟ್ಟು (ಬಸರ. ೦೦-೧೦೦) ; ರಾಕಾಚಂದ್ರಮನಂದಮಂ ಶರಧಿ ಕಂಠಿ ಮರ್ತ್ಯರಿಂ ದೃಷ್ಟಿದೋಷಾಕೌಟಲ್ಯತೆಯಕ್ಕುಮೆಂದಿರದೆ ... ತೂಪಿಟ್ಟಂತೆವೋಲ್ ತೋರ್ಕುಂ (ಕಮಮಾ. ೨-೨೮). [< ತುಪ್ಪು + ಇಡು$_1$]

ತೂಪಿರಿ 'ತೂಪಿಱಿ' ನೋ.

ತೂಪಿಱಿ, ತೂಪಿರಿ (ಕ್ರಿ). ೧. ಬಾಯಿಯಿಂದ ಉರುಬು,– ಊದು : ಶಿವನ ತನುವಂ ನೋಡಿ ತೂತೂ ಎಂದು ತೂಪಿಱಿದ ಯುವತಿಯಂ ಕಂಡು (ಬಸಪು. ೧೩-೨೦) ; ಲಿಂಗದೆಡದಂಗದೊಳ್ ಸಲದಿ ತತ್ತಿಯನಿಕ್ಕೆ... ಪಿಂಗದದ ತೂಪಿಱಿಯೆ (ಲಶಿಚಿಂ. ೩೫-೨೬) ; ಜೇಡವುಳು ತಾಂ ಪರಿಯೆ ಲಿಂಗದಗ್ರದೊಳು ತೂಪಿಱಿದ ಸತಿಯಂ ಪಾಪಿಯೆಂದಟ್ಟಿ (ರಾಘಜ. ೬-೨೪). ೨. (ಮಕ್ಕಳಿಗೆ) ದೃಷ್ಟಿದೋಷ ಪರಿಹಾರಕ್ಕಾಗಿ ಹಾಗು ರಕ್ಷೆಗಾಗಿ ನೆತ್ತಿಯಂ ಮೇಲೆ ಊದು : ನಿಱಿಯ ಸೆಱಂಗನೋಸರಿಸಿ ಕೆಂದಳದಿಂದಮೆ ಕರ್ಚಿಕೊಂಡು ತೂಪಿಱಿದೊಗೆದಟ್ಕಱಿಂದ...ಕಣ್ದೆಱಿಯದ ಕಂದನೆಂದೆನಗೆ ಕಣ್ದೆಱಿಯಿಪ್ಪನೊ ಮಂದಹಾಸಮಂ (ಅರ್ಧನೇ. ೦-೧೦೦); ಸೊಡರ್ವಕ್ಕಿನ ಬೊಟ್ಟನಿಟ್ಟು ತೂಪಿಱಿದು ಪಲರ್ಮೆಯುಂ ಪರಸಿ (ಚಂದ್ರಪು. ೩-೪೫) ; ಪರಾಗದ ತಿಲಕಮನಿಕ್ಕಿ ಸೌರಭದ ತುಂತುಱಿಂ ತೂಪಿಱಿದು (ಗಿರಿಕ. ೨-೭೦ವ) ; ತನ್ನ ಮಗಳಿಗೆ ಸಮವಹ ರೂಪಜೀವೆಯರಿಲ್ಲೆಂದು ಚಾಪಳೆ ... ಪೇಟಿ ತೂಪಿಱಿದುಪ್ಪ ಸೂಸುವಳು (ಅಂಜಜ. ೩-೧೪೫) ; ತರಳಂಗೆ ಕಣ್ಣೆಂಜಲೆಂದು ತೂಪಿಱಿದು (ಮೋಹತ. ೧೭-೬೩); ಕನ್ನೆಗೆ ಕಣ್ಣೀರಾದು ದಕ್ಕಟಯೆಂದು ಚೆನ್ನೆಯರೆತ್ತಿ ತೂಪಿಱಿದು . . . ಬೀಸಿದರಾಲವಟ್ಟದಿಂ (ನಾಗಕು. ೨೫-೬೩). ೩. ಎಸೆ ; ಚೆಲ್ಲು : ಸಭೆಯಲಿ ಸುಲಿದು ಬಿಸುಡುವ ಸೀರೆಗಳ ತೂಪಿಱಿದು ಸುಳಿವುಪ್ಪಾರತಿಯ ತನಿಹರಕೆ ತಳಿತುದು ತಾಯ ನೇಮದಲಿ (ಕುಪ್ಯಾಅ. ೭-೩೦). ೪. ಹೊರಹೊಮ್ಮು : ಧಾರಾವಿಭಿನ್ನ ಘ್ರಾಣಮುಖಿ ಬಳಿಕ ಹಾಯಿದಳು ಹೊಱವಡುವ ನೆತ್ತರ ಬಾಯ ತೂಪಿಱಿ ವಶ್ರುಜಲಪೂರಾಯದಭಿಮಾನಚ್ಯುತಿಯ ರೋದನನಿನಾದದಲಿ (ತೊರರಾ. ೩ ೫-೧) : ಉಱುಬಿನುಸುರಳ್ಳೆಗಳ ಮಿಗೆ ತೂಪಿಱಿವ ರಕುತದ ರಣದ ನಾಟಕದಱಕೆಕಾಱರು ಠಾವುಠಿಯಲೊದಗಿದರು ಸರಿಸದಲಿ (ತೊರರಾ. ೬-೧೪-೨೨). ೫. ಉಗಿ ; ಉಗುಳು ; ತುಪ್ಪು : ದಾಸಿಮಯ್ಯಂ ಮುದದಿ ತೂಪಿಱಿಯಲೆಂ[ಪಾಠಾಂ. ವೀಳ್ಯೆಯವನುಗುಳ್ವೆನೆಂ]ದು ಕೆಲನಂ ನೋಡೆ (ಶಂಕದಾ. ೧೪-೭೦). ೬. ಶಾಂತಪಡಿಸು ; ಸಮಾಧಾನಮಾಡು : ಅನುವುಳ್ಳ ಬುದ್ಧಿಯಂ ಕಂಡೆನೆಂದತಿ ಮೆಚ್ಚಿ ತನಗೆ ತಾ ತೂಪಿಱಿದುಕೊಂಡು (ಹಡಕಾ. ೩-೧೨); ಅಂಜದಿರೆನುತ ತೂಪಿಱಿದು ಹರಸಿದರೈದೆಯಾಗೆಂದವನಿ ನಂದನೆಯ (ತೊರರಾ. ೬-೧೨-೩೮). **ತೂಪಿರಿ** : ೨. ಚಂಡಭುಜಬಲನೆಂದು ಶಾರದೆ ಗಂಡನುಪಚರಿಸಿದಳು ತೂಪಿರಿದಧಿಕಹರುಷದಲಿ (ಅಂಬಿಕಾ. ೩೭-೪೦); ನಾಲ್ದೆಸೆಯ ಸುತನಿಗುಂ ಕ್ರಮದಿ ತೂಪಿರಿಯಲುದುರಿದ ಕಣಂಗಳ ತೆರದಿ ನಕ್ಷತ್ರಗಣಮೆಸೆದುವು (ವಂಕಾಠಾ. ೫-೬-೧೬); ತಾಯಿಯ ದೃಷ್ಟಿ ನಾಯಿಯ ದೃಷ್ಟಿ ಎಂದು ತೂಪಿರಿಯುತ್ತ (ಸಂಚಿತ್ರ. ೦೬). ೫. ಗೊಳ್ಳನೆ ನಕ್ಕು ಮೂದಲಿಸಿ, ಮೊಗದಿ ತೂಪಿರಿದು (ಗೊಲ್ಮೊಥಾ. ೯-೨೪೭). ೭. (ಆಲಂ) ಧ್ವನಿಮಾಡು; ಮೊಳಗು : ಹಮ್ಮಿನಿಂ ಕಹಳೆಗಳ್ ತೂಪಿರಿಯೆ ನಿಸ್ಸಾಳ ಬಿಮ್ಮಗಂ ಒದಗಿದುವು (ತುರಂಗ. ೬೨-೨೦). [< ತುಪ್ಪು ? + ಇಱಿ$_1$]

ತೂಪು 'ತೂಂಬು' ನೋ.

ತೂಪುರ 'ತೂಪರ' ನೋ.

ತೂಪುರಗೊಳ್ಳಿ (ನಾ). = ತುಂಬುರುಗೊಳ್ಳಿ : ತೂಪುರಗೊಳ್ಳಿಯಂದದಿ ಛಿಟಛಿಟಲೆಂದು ಕೋಪವ ಮನಕೆ ತಾ ತಂದು (ಜ್ಞಾನಪ. ೫-೮೫).

[ತೂಪುರ (< ತೂಪರ) + ಕೊಳ್ಳಿ$_1$]

ತೂಪ್ರ 'ತೂಪರ' ನೋ.

ತೂಫಾನು 'ತುಫಾನು' ನೋ.

ತೂಬರ$_1$ 'ತೂಪರ' ನೋ.

ತೂಬರ$_2$ (ನಾ). ೧. ಗಡ್ಡ, ಮೀಸೆ ಹುಟ್ಟದಿರುವ ಪುರುಷ. ೨. ನಪುಂಸಕ ; ಷಂಡ : ಭೀಮಸೇನನನ್ನು ನೋಡಿ–ಗಡ್ಡ ಮೀಸೆಗಳಿಲ್ಲದ ತೂಬರ, ತೂಬರ ಎಂದು ಬಾರಿಬಾರಿಗೆ ಹಂಗಿಸಿ (ಕೃಪಾಣು. ೨೫೨). ೩. ಕೊಂಬಿಲ್ಲದ ಪಶು : "ಕೊಂಬಿಲ್ಲದುವು ತೂಬರಾಖ್ಯಂ" (ಮಂಗರಾ. ೫೫-೯) ; "ಕೊಂಬಿಲ್ಲದ ಪಶುವುಮಂ; ಗಡ್ಡ ಮೀಸೆಯಿಲ್ಲದ ಗಂಡಗೂಸುಮಂ ತೂಬರಮೆಂಬುದು" (ಹಲಾಯು. ೪೬-೧೨೩). [ಸಂ.]

ತೂಬರಕ (ನಾ). ಷಂಡ ; ನಪುಂಸಕ : ನಿಜಾಂಗನೆಯನನ್ಯರಿಗೆ ಕೊಟ್ಟವನ ಹನು ತೂಬರಕ (ನಿಭಾಗ. ೫-೧೨-೧೦). [ಸಂ.]

ತೂಬರೆ 'ತೂಪರ' ನೋ.

ತೂಬಾಕ (ನಾ). (?) : ಸುಣ್ಣದ ಬೊಟ್ಟನಿಟ್ಟಂತೆ ಕಿಱಿಗಣ್ಣಲಿ ತೂಬಾಕ ನೊಣ ನೋಡಿದಂತೆ ನಿನ್ನೊಳಾ ಪರಿಲಕ್ಷನಿಂತೆ ತೇಜನಂತಾಗೆ ಬೆಳಗೋದು ಬಿರಿಸುಕ್ಕಿದಂತೆ (ಚಿದಾಕೋ. ೫೬-೫). [?]

ತೂಬು 'ತೂಂಬು' ನೋ.

ತೂಯ್ 'ತುಯ್$_2$' ನೋ.

ತೂರಣಿಗೆ (ನಾ). "ತೂರುವ ಸಾಧನ: ತೂರಣಿಗೆ" (Fanner. ಇಂಕನಿ).

[ತೂರು$_1$ (< ತೂಱು$_1$) + – ಅಣಿಗೆ]

ತೂರಲ್ 'ತೂಱಲ್' ನೋ.

ತೂರಲು (ನಾ). ತುಂತುರುಮಳೆ : ಬೆಳಗ್ಗೆಯಿಂದ ಹಿಡಿದಿರುವ ಈ ತೂರಲಿನಿಂದ ಎಲ್ಲಿಗೂ ಹೋಗಲಾಗಲಿಲ್ಲ (ರೂಢಿ).

[< ತೂಱು$_2$ + – ಅಲ್./ತಮಿ. ತೂಱಲ್, ತೂಱ್ಱಲ್; ಮಲ. ತೂಱ್ಱಲ್; ತೆಲು. ತೂರ]

ತೂರಲ್ಗೊಂಬು 'ತೂಱಲ್ಗೊಂಬು' ನೋ.

ತೂರಾಡು (ಕ್ರಿ). ೧. ತೂಗಾಡು; ಜೋಲಾಡು : ನೀನು ಕಮರಿಯ ತುದಿಯಲ್ಲಿ ತೂರಾಡುತ್ತಿರುವುದು ತಿಳಿಯುತ್ತಿಲ್ಲವಲ್ಲ ! (ವಚಭಾ. ೯೬೪)

೨. ಹೊಯ್ದಾಡು ; ಜೂಗಾಡು : ಆಗ ಒಂದು ವರ್ಷದ ಮಗು ತೂರಾಡುತ್ತ, ಹೆಜ್ಜೆ ಇಕ್ಕುತ್ತ ... ಗಟ್ಟಿಯಾಗಿ ನಕ್ಕಿತು (ಬಂಕಿಮ. ೦೦೫). ೩. ಚೆಲ್ಲಾಡು ; ಸೂಸು : ತನ್ನ ಹರೆಯದ ರೂಪಿನ ಚೆರಗ ತೂರಾಡಬಾರದೆಂದು ಬಸವಂತಿ ಜಪ್ಪಿಸುತ್ತಿದ್ದಳು (ದೀಪಹ. II, ೧೪೧).

[ತೂರು$_1$ (< ತೂಱು$_1$) + ಆಡು$_1$]

ತೂರಾಯ 'ತುರಾ' ನೋ.

ತೂರಾಯಿ 'ತುರಾ' ನೋ.

ತೂರಿಸು$_1$ 'ತೂಱಿಸು' ನೋ.

ತೂರಿಸು$_2$ (ಕ್ರಿ). ೧. ಒಳಹೊಗಿಸು ; ತುರುಕು ; ಒಳಗೆ ಹೋಗುವಂತೆ ಮಾಡು : ಜಾನುಮಧ್ಯದಲ್ಲಿ ಶಿರ ಗೋಣು ತೂರಿಸಿಕೊಂಡು (ವಿದಾಕ್ಯ. ೫೬-೩); ಅವನ ಪೆಡ್ಡಿನೊಳಕ್ಕೆ ತಲೆ ತೂರಿಸಿ ಕಣ್ಣುಬಿಟ್ಟರೆ ಅದರ ಅಚ್ಚು ಕಟ್ಟನ್ನು ನೋಡಿ ನಮಗೆ ಅಚ್ಚರಿಯಾಗುವುದು(ಜಿಂಗೂಲಿ. ೦). ೨. ಚುಚ್ಚು ; ಇರಿ : ವಾರಿಜಾಕ್ಷನು ಶುಕ್ರದೇವರ ಕಣ್ಣ ದರ್ಭೆಯಲಿ ತೂರಿಸಲು ಕಣ್ಣೊಡೆದು ಹೋಯಿತು (ಸಂಭಪ. ೧೦-೨೪). [ತೂರು$_2$ + – ಇಸು$_3$]

ತೂರು$_1$ 'ತೂಱು$_1$' ನೋ.

ತೂರು$_2$, ದೂರು$_2$ (ಕ್ರಿ). ೧. ಒಳಸೇರು ; ಒಳನುಗ್ಗು : ಹಾರಿ ಸ್ವರ್ಗವ ತೂರಿ ನರಕವ ಸೇರಿ ಧರಣಿಯ ಸುಕೃತದುಷ್ಕೃತ ಕಾರಿಯದೆ ಸುಖದುಃಖದೊಳಗೋಲಾಡುತಿಹರು (ಅಮೃತ. ೨-೫); ಕೃಷ್ಣಮೇಘಸದೃಶವೇಣಿ ತೂರಿ ಬೀರಿ ಬರುವಳು! (ಪಾಂಡಜ. ೧೧-೪); ಗಾಡಿಯೊಳಕ್ಕೆ ತೂರುವುದು ಬಹಳ ಕಷ್ಟವಾಯಿತು (ರಾಮಾನ. ೧೦೦); ಭೂಮಿಯು ಒಣಗಿ ಹೋಗಿದ್ದರೆ ನೇಗಿಲು ಭೂಮಿಯಲ್ಲಿ ತೂರುವುದೇ ಕಷ್ಟ (ವ್ಯವಮ. ೦೪); ಚಾಪೆ ಕೆಳಗೆ ಒಬ್ಬ ತೂರಿದರೆ ಇನ್ನೊಬ್ಬ ರಂಗೋಲೆಯ ಕೆಳಗೆ ತೂರಿದ (ಗಾದೆ). ೨. ಹೊರಕ್ಕೆ ಚಾಚು; ನೀಡು: ಹೆಬ್ಬುಲಿಯು...ಕೆಂಡಕಣ್ಣಿಂದೊಳರಿ ಹಲ್ಲು ಗುರ್ಗಳ ತೂರಿ ಹೊಂಡದಿಂ ತೋರ್ದು ಗವಿ ಬಾಯ ಮೇಲ್ವಾಯೆ (ಕಾಲೂರ. ೯೫-೧೮೮). ೩. ದಾಟು ; ಹಾದುಹೋಗು : ಈ ಸಂಪ್ರದಾಯದ ಕಣ್ಣ ಕಪಾಟನ್ನು ತೂರಿಯೂ ಪ್ರತಿಭಾವಂತ ಕವಿಗಳ ಕಣ್ಣು ಸೌಂದರ್ಯದ ನೂರು ಪರಿಗಳನ್ನು ಕಂಡದ್ದುಂಟು (ಸೌಂದಸ. ೧೬೯). **ದೂರು$_2$** : ಆ ದ್ವಾರ ದೂರಿ ಸುಲಭವಾಗಿ ನಾನು ಗುಡಿಯೊಳಕ್ಕೆ ದೇಕಿಕೊಂಡು ಬರಬಹುದಾಗಿತ್ತು (ಗಲಿಪ್ರ.೧೩).

ತೂರಿಕೊಳ್ಳು = ಸೇರಿಕೊಳ್ಳು ; ನುಸುಳು : ಈ ಕಡೆ ಖಾಲಿ ಇರುವ ಮನೆಗೆ ಒಬ್ಬಳು ತುಂಗಿ ಬಂದು ತೂರಿಕೊಂಡರೆ (ನಡೆದಾ. I, ೫೦೪). **ತೂರಿಬರು** = ದಾಟಿಬರು; ಹಾದುಬರು : ತಾಂ ತೂರಿ ಬರುತಿರುವ ಮನಮನದ ಮಾಧ್ಯಮದ ಚಿತ್ರ ಚಿತ್ರಾಕೃತಿಯ ತಳೆದೆಸೆವ ಬೆಳಕೋ (ಮಲೆದೇ. ೨೮-೧); ಪಕ್ಕದ ಕೋಣೆಯಿಂದ ಅಧಿಕಾರಿಗಳ ಮಾತಿನ ಸದ್ದು ತೂರಿಬರುತ್ತಿತ್ತು (ಪುನರು. ೫೩೮). [ದೇ.॥ ತಮಿ. ತೂರ್]

ತೂರುಗಂಡಿ (ನಾ). (ಗೋಡೆ, ಬೇಲಿ ಮುಂತಾದುವುಗಳಲ್ಲಿ) ನುಸಿದುಕೊಂಡು ಹೋಗಲು ಅವಕಾಶವಿರುವಂತೆ ಇರುವ ಕಂಡಿ,–ತೂತು,–ರಂಧ್ರ : "(ಸೋರುವ, ಒಳತೂರುವ) ಒಡಕು, ಬಿರುಕು, ತೂತು; ಸೋರುಗಂಡಿ ; ತೂರುಗಂಡಿ" (Leak. ಇಂಕನಿ). [ತೂರು$_2$ + ಕಂಡಿ$_1$]

ತೂರುಗಾಳಿ (ನಾ). ಒತ್ತಿ ಬೀಸುವ ಗಾಳಿ ; ಬಿರುಗಾಳಿ : ತೂರುಗಾಳಿಗೆ ಕಡಲು ಕುದಿಯಿತು (ಇಂಗೀತ. ೬೭-೧).

[ತೂರು$_1$ (< ತೂಱು$_1$) + ಗಾಳಿ$_1$]

ತೂರುನೊರೆ (ನಾ). ಚಿಮ್ಮುತ್ತಿರುವ ನೊರೆ; ಹಾರುತ್ತಿರುವ ನೊರೆ : ನೀರ್ ಬೀಳು ಬೆಳ್ಪು ! ಕಡೆದ ನೊರೆ, ಚಿಗಿವ ನೊರೆ, ತೂರುನೊರೆ, ಕುದಿವ ನೊರೆ, ಬೆಳ್ಪಿನೊಳ್ ಬೆಳ್ಪು ! (ಹೊಂಗಳು. ೦೬-೬).

[ತೂರು$_1$ (< ತೂಱು$_1$) + ನೊರೆ$_2$]

ತೂರೆಣ್ಣೆ (ನಾ). ಕೊಬ್ಬರಿಯೆಣ್ಣೆ ; ತೆಂಗಿನೆಣ್ಣೆ (?) : ಆರೆಣ್ಣೆ ತೂರೆಣ್ಣೆ ಆರ್ಮಾನದೊಳ್ಳೆಣ್ಣೆ ... ಒತ್ತೀರಿ ರಾಜ್ಯವಾಳೋರ ಮಗನೀಗೆ (ಚಳ್ಳಿಯ. ೬೩). [ತೂರು? + ಎಣ್ಣೆ. / ತಮಿ. ತೂರ್ = ಎಳೆಯ ತೆಂಗು]

ತೂರ್ಣ (ಗು). ೧. ವೇಗವಾದ ; ಚುರುಕಾದ. 'ತೂರ್ಣಗತಿ' ಪರಾ. (ನಾ). ೨. ಚುರುಕು ; ವೇಗ ; ತ್ವರೆ : "ತೂರ್ಣಂ, ತ್ವರಿತಂ" (ವಸ್ತುಕೋ. ೦೦೫-೪೨) ; "ತ್ವರಿತಂ ದ್ರುತಂ ... ತೂರ್ಣಮಹ್ನಂ ಶೀಘ್ರಮಕ್ಕು" (ಮಂಗರಾ. ೦೨೭-೭) ; ವೀರರಸಾರ್ಣವದಂತೆ ಚಾತುರ್ದಂತಬಳಂ ಬೆರಸು ತೂರ್ಣದಿನೊಡ್ಡಿ ನಿಂದೊಡೆ (ನೇಮಿಪು. ೫-೮೩ ಪ); ಸ್ವರ್ಣದೀಧರನಂ ಯಜಿಸೆ ದಲಾ ಯಕ್ಷಂಗೆ ತೂರ್ಣದೆ ವರದನಾಗಿ ಗಣಪತಿತ್ವವನಕ್ಷಿ ಕರ್ಣಾಭರಣನಿತ್ತನೆಂದು ಶೈವದ ಧರ್ಮಸಂಹಿತೆಯೆ ಮತ್ತಮುಲಿಗುಂ (ಪದ್ಮರಾ. ೦೧-೧೮೪). ೩. ಚುರುಕಾಗಿರುವವನು : "ತೂರ್ಣನೆಂದರೆ ಚೆಚ್ಚರಿಗನಕ್ಕು" (ಮಂಗರಾ. ೬೯-೦೨). [ಸಂ.]

ತೂರ್ಣಗತಿ (ನಾ). ಚುರುಕಾದ ನಡಗೆ ; ತೀವ್ರಗತಿ : ಕುರಂಗದ ಪೊಲ್ತೂರ್ಣಗತಿಪ್ರಯುಕ್ತಂ...ಆ ರಾಜವಾಜಿದ್ವಯಂ (ರಾಜಶೇ.೧೨-೧೦೨).

[ತೂರ್ಣ + ಗತಿ]

ತೂರ್ಪನಿ (ನಾ). ಸಿಡಿಯುತ್ತಿರುವ ಹನಿ ; ಹಾರುತ್ತಿರುವ ಜಲಬಿಂದು; ಸೀರ್ಪನಿ : ಎಲರಲೆಪದಿನೊಗೆದ ತೆರೆಗೊನೆಯ ತೂರ್ಪನಿಯ ತುಂತುಱುಗಳಿಂ ಮಸಗುವ ಮಂಜಿನೊಳಂ ಅಂಜದೆ ಪೊಕ್ಕು (ಕಾದಂಪೂ. ೧೧೬).

[ತೂಱ್ (< ತೂಱು$_1$) + ಪನಿ$_2$]

ತೂರ್ಪಿಡು (ಕ್ರಿ). (?) : ರಾಯಝುಳಪ್ಪವಲ್ಲಭನ ನಚ್ಚಿನ ಬಿಲ್ಕರಚಕ್ರಮುಗ್ರಖಡ್ಗಾಯುಧವಾರ್ದ್ದಾಂತ ತೂರ್ಪ್ಪಿಡುವ ಕಕ್ಕಟೆಯೆಂಬ ಪೊಲಿರ್ದಪರ್ (ಸೌಇಇ. IX-', ೨೨೦-೮೭; ?).

[P ಇದು 'ತೂಱಿಡು' ಎಂಬುದರ ಅಪಲಿಖಿತವಿರಬಹುದು]

ತೂರ್ಯ$_1$ (ನಾ). ೧. ನಾಲ್ಕನೆಯದು ; ಚತುರ್ಥ. ೨. [ಜ್ಯೋತಿ] ನಾಲ್ಕನೆಯ ಸ್ಥಾನ : ದನುಜೇಜ್ಯಂ ... ಚಂದ್ರನಿನಾದ್ಯಾಂತ್ಯಷ್ಟಮೈಕಾದಶನವ ಧನ ಪುತ್ರ ತ್ರಿ ತೂರ್ಯಂಗಳೊಳ್ ... ಲೇಸೆನಿಕ್ಕುಂ (ಜಾತತಿ. ೧೦-೧೨). ೩. [ವೇದಾಂತ] ತ್ರಿಮೂರ್ತಿಗಳಿಗೂ ಮೂಲವೆನಿಸಿರುವವನು; ಪರಮಾತ್ಮ: ತ್ರಿಮೂರ್ತಿಗಳ ಮಧ್ಯದಲ್ಲಿ ತೂರ್ಯನಾದ ... ಮಹೇಶ್ವರನೊಪ್ಪುತ್ತಿರಲಾಗಿ (ಭೃರಸೂ. ೧೭). ೪. ಮೋಕ್ಷಕ್ಕೆ ಯೋಗ್ಯವಾದ ಸ್ಥಿತಿ: ದಾಸರೆನಿಸಿ ಧರ್ಮ ಹಿಡಿದು ಆಸೆ ಕಡಿದು ತೂರ್ಯದಲ್ಲಿ ಕಾಸುಕವಡಿ ಕಾಲಿಲೊದ್ದು ಈಶನೊಲಿಸಿಕೊಂಬುವಂಥಾ–ದಾಸರೊ ಹರಿದಾಸರೊ (ಶರೀಫ. ೪೫-೧). [< ಸಂ. ತುರ್ಯ]

ತೂರ್ಯ$_2$ (ನಾ). ಒಂದು ಬಗೆಯ ವಾದ್ಯ : ತ್ರಿದಶಶರಾಸನಂ ತಳಿರ ತೋರಣಮಾಗಿರೆ ... ಘನಧ್ವನಿ ತೂರ್ಯಮಾಗೆ ರಾಗದಿನಿನರಶ್ಮಿಯೆಂಬ ಕಸಮಂ ಕಟಿದಂಬರಮೆಂಬ ಪಾಟನೇಱಿದುದಸಿತಾಂಬುವಾಹಕುಲಮೆಂಬ ಕುಟುಂಬಕದಂಬಕೋತ್ಕರಂ (ಆದಿಪು. ೬-೭೧) ; ಶುಭ್ರಾಕ್ಷತಂ ಪೊಂಬಳೆ ತೂರ್ಯಂ ತೋರಣಂ ... ಸ್ವಸ್ತಿಕಂ ಸುಲ್ವಮೆಂಬೀ ಮಂಗಳ ರಚನೆಯಿನಂದೇಂ ಮನಂಗೊಂಡುದೋ . . . ಧನ್ಯಕನ್ಯಾಕದಂಬಂ (ಸುಳುಮಾ. ೫-೬೧); ಡವರುಗತೂರ್ಯನಿರ್ಗೋಷಣಂ (ಸೌಇಇ. XX, ೧೪೪-೦೫; 1168); ಭೋರೆನೆ ತೂರ್ಯವಂಚೆಯನಜಂ ಗಜಮಂ ಬಳವೈರಿ ... ವೃಷಭನಂ ಹರನೇಱಿ ನಭಕ್ಕೆ ಸಲ್ವುದುಂ (ಜಗವಿ. ೦-೩೬) ; ಪಿಕದ ತೂರ್ಯ ಮೊಳಗುತಿಹುದು (ಪೂಂದಳಿ. ೯-೧೩). [ಸಂ.]

ತೂರ್ಯಕ್ಷ್ಮಾಜ (ನಾ). [ಜೈನ] ದಿವ್ಯವಾದ್ಯಗಳನ್ನು ಒದಗಿಸುವ ಒಂದು ಕಲ್ಪವೃಕ್ಷ : ಅತಿಮೃದುರವದಾಯಿಗಳಂ...ಓಲಗಿವುದೊ ದುಪತಿಗೆಂದುಮವಾರ್ಯವೀರ್ಯ ತೂರ್ಯಕ್ಷ್ಮಾಜಂ (ಆದಿಪು. ೫-೩೫). 'ತೂರ್ಯಾಂಗ' ಪರಾ. [ತೂರ್ಯ$_2$ + ಕ್ಷ್ಮಾಜ]

ತೂರ್ಯತ್ರಯ (ನಾ). ನೃತ್ಯ, ಗೀತ, ವಾದ್ಯ–ಈ ಮೂರರ ಮೇಳ : ಅಲ್ಲಿಯ ಮಾಹೇಶ್ವರರೆಲ್ಲರ್ಗೆ ಬೆಸಸೆ ಮಂಗಳಮೃದಂಗತೂರ್ಯತ್ರಯ ಪ್ರವೀಣ ನಾನಾವಿಳಾಸಿನೀನಿಕರದಿಂದಿದಿರ್ಗೊಳಲು (ಸಂಬಿಕ. ೯-೭೦); ನುಡಿಗಡಣ ತತ್ವವಿಚಾರ ಭಾಷೆಗಳುಲಿವು ತೂರ್ಯತ್ರಯದ ಘೋಷಣವು (ಬಸಪು. ೪-೫೪); ಏನನೆಂಬೆನು ಜೀಯ ಶಕ್ರಾಸ್ಥಾನವಲ್ಲಿ ದಿವ್ಯವಾದ್ಯ ಸುಗಾನನರ್ತನವಿಮಳತೂರ್ಯತ್ರಯದ ಮೇಳವದ ಆ ನಿತಂಬಿನಿಯರ ... ಭಾವಭಂಗಿಗಳ (ಕುಣ್ಮಾಳ. ೭-೯೨); ಗಾನವಾದ್ಯಂ ನೃತ್ಯಗೂಡಿ ತೂರ್ಯತ್ರಯದಿ ಮೇನಕಾಜಾನಾಥನಂಘ್ರಿಯಂ ಭಜಿಸುವವನೇನೆಂಬೆ (ಗುರುಚಾ. ೭-೭೫). [ತೂರ್ಯ್ + ತ್ರಯ]

ತೂರ್ಯತ್ರಿಕ (ನಾ). = ತೂರ್ಯತ್ರಯ : ಚಿತ್ರೋದ್ಭವನಿನೆಸೆಯೆ ತೂರ್ಯತ್ರಿಕಂ ಹಾಸವುಜ್ಜಾಂಜಳಿಯಿಂ ತತ್ಕಾಂತೆ ದೇಹದ್ಯುತಿ ಜಮನಿಕೆಯಿಂ ನಾಟ್ಯರಂಗಂಬೊಲಿರ್ಪಳ್ (ಅಜಿಪು. ೨-೪೧). [ತೂರ್ಯ್ + ತ್ರಿಕ]

ತೂರ್ಯತ್ರಿತಯ (ನಾ). = ತೂರ್ಯತ್ರಯ : ತೂರ್ಯತ್ರಿತಯದ ನಿಜ ಚಾತುರ್ಯಮನಂತಲ್ಲಿ ಮೆಱೆದು (ಚಂದ್ರಪು. ೦೩-೬೮).

[ತೂರ್ಯ್ + ತ್ರಿತಯ]

ತೂರ್ಯನಾದ (ನಾ). = ತೂರ್ಯನಿನದ : ಸೀಮಂತಿನೀಪ್ರಸರಂ ಮಂಗಳ ತೂರ್ಯನಾದಮೆಸೆಯುತ್ತಿರ್ಪನ್ನೆಗಂ ಚಕ್ರಿ ರಾಗಿಸಿ ಕೈ ನೀರೆಱೆ ದಂ (ಹಂಪಭಾ. ೫-೨೫); ಅಂಬರ ಬಿರಿವ ತೂರ್ಯನಾದ ಪೊಟ್ಟನೂರಿಗರ ಕರ್ಣಗಹ್ವರವನ್ನು ಗಡಚಿಕ್ಕಿತು (ಆಳಾಳ. ೪೦). [ತೂರ್ಯ್ + ನಾದ]

ತೂರ್ಯನಿನದ (ನಾ). ತೂರ್ಯವೆಂಬ ವಾದ್ಯದ ಧ್ವನಿ : ಪಸರಿಪ ಪೂಮಟ್ಟಿಯೊಡನೊಡನೆಸೆವುತ್ಸವತೂರ್ಯನಿನದಂ . . . ಎಸೆದುದು (ಪುಷ್ಪಪು. ೧೦-೯). [ತೂರ್ಯ್ + ನಿನದ]

ತೂರ್ಯರವ (ನಾ). = ತೂರ್ಯನಿನದ : ಉಣ್ಮಿದತ್ತು ಭೋರನೆ ದಿವಿಜೇಂದ್ರತೂರ್ಯರವಂ (ಜಗವಿ. ೩-೩); ಒಪ್ಪಿದುವಸಂಖ್ಯತೂರ್ಯರವಂಗಳ್ (ಪುಷ್ಪಪು. ೦೦-೦೦). [ತೂರ್ಯ್ + ರವ]

ತೂರ್ಯಸ್ಥಿತಿ (ನಾ). = ತುರೀಯಾವಸ್ಥೆ : ಧ್ಯಾನನಿಷ್ಠಸಮಯದಲ್ಲಿ ತೂರ್ಯಸ್ಥಿತಿಯಲ್ಲಿ ಇವರ ಸಮೀಪಕ್ಕೆ ಯಾರೂ ಹೋಗುತ್ತಿರಲಿಲ್ಲ (ಕರೀಕ್ಷ. ೬೧ ಳವಿಕಾವೃಪರಿಚಯ). [< ಸಂ. ತುರ್ಯಸ್ಥಿತಿ]

ತೂರ್ಯಸ್ವನ (ನಾ). = ತೂರ್ಯನಿನದ : ಅರಿಭೂಪಾಲರನಿಕ್ಕಿ ಗೆಲ್ದೊಸಗೆಯಿಂ ತೂರ್ಯಸ್ವನಂ ಪೊಣ್ಮೆ (ಗದಾಯು. ೩-೭೫); ಸುಪೀತವಸನಂ ಬಂದಾಸ್ಥದೊಳ್ ಪೊಕ್ಕುದು ಮೃಗಲಕ್ಷ್ಮನನೆ ಕಂಡಳುಣ್ಮೆ ವಭದೊಳ್ ದೇವೇಂದ್ರತೂರ್ಯಸ್ವನಂ (ಜಗವಿ. ೨-೭೭). [ತೂರ್ಯ್ + ಸ್ವನ]

ತೂರ್ಯಸ್ವರ (ನಾ). = ತೂರ್ಯನಿನದ : ತೂರ್ಯಸ್ವರದೊಳ್ ತಳ್ಪೊಯ್ದುದೇಂ ಶೋಭಿಸಿದುದೊ ಪರಿದುಂ ಯೌವರಾಜ್ಯಾಭಿಷೇಕಂ (ಚಂದ್ರಪು. ೨-೬೮). [ತೂರ್ಯ್ + ಸ್ವರ]

ತೂರ್ಯಾಂಗ (ನಾ). [ಜೈನ] ದಶವಿಧ ಕಲ್ಪವೃಕ್ಷಗಳಲ್ಲಿ ಒಂದಂ ; ವಾದ್ಯಗಳನ್ನು ಕೊಡುವ ಕಲ್ಪವೃಕ್ಷ; ತೂರ್ಯಕ್ಷ್ಮಾಜ: ವಿಚಿತ್ರಭೇದನಿನಾದಂ ಜನಯಿಸೆ ತೂರ್ಯಾಂಗಂ ಕನದನೋಕಹಂ ಪಲವು ತೆಱದ ಪಱಿಗಳನೀಗುಂ (ಶಾಂತಪು. ೬-೦೦೩); ತೂರ್ಯಾಂಗವೆಂಬುದು ಪಣವಮದ್ದಳಕಾಹಳ ಭೇರೀಶಂಖಮೃದಂಗಾದಿ ವಿವಿಧ ತೂರ್ಯವಿಶೇಷಂಗಳನೀವುದು (ಶಾವುಂಪು. ೯). 'ದೀಪಾಂಗ' ಪರಾ. [ಸಂ.]

ತೂರ್ಯಾರಾವ (ನಾ). = ತೂರ್ಯನಿನದ : ಪೊಣ್ಮಿದುದು ಗಭೀರಂ ತತ್ರಿಯಾಮತೂರ್ಯಾರಾವಂ (ಚಂದ್ರಪು. ೮-೯೩).

[ತೂರ್ಯ್ + ಆರಾವ]

ತೂರ್ಯಾವಸ್ಥೆ (ನಾ). ಮೋಕ್ಷವನ್ನು ಪಡೆಯಂಬ ಸ್ಥಿತಿ ; ತುರೀಯಾವಸ್ಥೆ : ತೂರ್ಯಾವಸ್ಥೆಯ ಚಿಂತನೆಯಿಂದಂ ಮುಳುಗಿದ ನಿಜೈಕ್ಯನು ಆ ನಿಜವಸ್ತು ಭಾವದೊಳಿರುತ್ತಿಹನೆಂಬುದರ್ಥ (ಪದಗೋ. ೯೨-೨); ಆತ್ಮನ ಅಹಂಕಾರವಿಭ್ರಾಂತಿಯ ತೂರ್ಯಾವಸ್ಥೆಯಲ್ಲಿ ಜೀವಶುಕನುದಯಿಸಿ ಸಂಸಾರ ಪ್ರಪಂಚನಲ್ಲಿ ನೆಲಸಿದನು (ಅವಶಂ. ೩೮೬-೦೩-ಛಾಪಾನುವಾದ).

[<ತೂರ್ಯ + ಅವಸ್ಥೆ]

ತೂರ್ಯೋದ್ಘಾರ(ನಾ). ತೂರ್ಯವೆಂಬ ವಾದ್ಯವನ್ನು ಬಾರಿಸುವಿಕೆ, –ನುಡಿಸುವಿಕೆ: ಅದಾರು ಹೊಱಕಡೆಯಲ್ಲಿ ತೂರ್ಯೋದ್ಘಾರವನು ಮಾಡುವರೆನುತ ಕೇಳಿದಳು ಕೆಳದಿಯರ(ಪ್ರಭುಲೀ. ೩-೦೦). [ತೂರ್ಯ್+ಉದ್ಘಾರ]

ತೂಲ, ತೂಳ್ (ನಾ). ೧. ಹತ್ತಿ; ಆರಳಿ; ಕಾರ್ಪಾಸ : ಕುರು ಭೂಭೃದ್ಬಲಕೂಲತೂಲಪವನಂ ಕೌರವ್ಯಗಂಧೇಭಕೇಸರಿ ... ಎಂದಭವರ್ಗೆಂ ರಣಯಶಶ್ರೀರಾಮನಂ ಭೀಮನಂ (ಗದಾಯು. ೦-೫೨); ಚತುರ್ಗತಿಗಳೊಳ್ ಸುಟ್ಟಿಗಾಳಿಯ ತೂಲದಂತೆ...ತೊಟಲ್ಪರುತುವಿರ್ದುದು ಸಾಲದೆ ಕರ್ಮಯೋಗದಿಂ (ಚಂದ್ರಪು. ೦೩-೯೦); ಮೂಲೋಕವನೊರ್ಮೆ ಕಿಱುವೆರಲಿಂದರ್ಕ ತೂಲವೆತ್ತುಪೊಲೆತ್ತುವನ (ಕಂಪ್ರಣಾಂ. ೨೪-೦೯೩); ವೀರಯ್ಯಂಗೆ ತೂಲಮಂ ತೂಗಿ ಹಾಯ್ಕುಲ್ಮೊಲ್ಲೆವೆನೆ ಬರಾತ್ಮಾರದಿಂ ಹಾಯ್ಕು ಪೋಗೆ (ಗುರುಚಾ.೦೪-೪); ತೂಲಮೃದುವೆನಲುಜ್ಜಿದಳ್ ಪತಿ ಲಲಾಟಮಂ (ಶ್ರೀಧಾಪು. ೬೫೧-೨೬೦). ೨. ಹಕ್ಕಿಯಂ ತುಪ್ಪಳು. 'ಹಂಸತೂಲ' ಪರಾ. ೩. ಆರಳಿ ಜಾತಿಗೆ ಸೇರಿದ ಒಂದಂ ಬಗೆಯಂ ವಂರ; ಹೂವರಸಿ: "ತೂದಃ, ಯೂಪಃ, ಪೂಗಃ, ಕ್ರಮುಕಃ . . . ತೂಲಂ–೬ ಹುವ್ವರಿಸಿಗಿಡ ... ಕಾಡಡಿಕೇಮರವೆಂದು ಕೆಲವರ್ಗೆನ್ನುವರು" (ನಿಘಂಂತಿ. ೦೩೦). ೪. ಒಂದಂ ಬಗೆಯಂ ಗಿಡ ವಂತ್ತು ಆದರ ಹಣ್ಣು ; ಉಪ್ಪುನೇರಿಳೆ. **ತೂಳ್** : ೧. ಅಮರರ್ಕಳೇಱಿದ ವಿಮಾನವೆಗಾಳಿಯ ತೂಳದಂತಿರೆ (ಅನಂಪು. ೫-೭೪) ; ಸಂಸಾರತೂಳದವಶಖಿಯೆನಿಪ ಕೇಶಮಂ ಪಿಡಿದು (ಧಾವಪಿಂ. ೯-೩೦). 'ಹಂಸತೂಳ' ಪರಾ. [ಸಂ.]

ತೂಲಕ, ತೂಳಕ (ನಾ). = ತೂಲ ೧: "ಆರಳಿ ಪಿಚು ತೂಲ[ಪಾಠಾಂ. ಳ]ಕಾಪ್ಯಂ" (ಪಾಂಗಣಾ. ೩೮-೨೩). **ತೂಳಕ** : ವೇಲಿನ 'ಮಂಗರಾ' ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ತೂಲತಲ್ಪ, ತೂಲತಳ್ಪ, ತೂಳತಲ್ಪ (ನಾ). ಆರಳಿಯಿಂದ ಅಥವಾ ಹಂಸ ಮೊದಲಾದ ಹಕ್ಕಿಗಳ ತುಪ್ಪಳದಿಂದ ಮಾಡಿದ ಹಾಸುಗೆ, –ಸುಪ್ಪತ್ತಿಗೆ : ಮಲಗಿಸಿದರಾ ... ವಸುಧೇಶನಂ ಹಂಸಹೃದಯದ ತೂಲತಲ್ಪದಲಿ (ಶ್ರೀರಾಮಾ. ೦೦೦-೨೮). **ತೂಲತಳ್ಪ** : ಸೆಜ್ಜೆವನೆಯೊಳುವಧಾನ ವಿರಾಜಮಾನಹಂಸತೂಲತಳ್ಪದೊಳ್ ವಿಶ್ರಮಿಸಿ (ಪಂರಾಮಾ. ೫-೩೦೮). **ತೂಳತಲ್ಪ** : ಕಂದರ್ಪರೂಪ ಹಂಸೆಯ ತೂಳತಲ್ಪದೊಳಂದು ಮಂಡಿಸಿದ ನರ್ತಿಯಲಿ (ಕಂಸವಿ. ೩೬-೨೩). [ತೂಲ + ತಲ್ಪ]

ತೂಲತಳ್ಪ 'ತೂಲತಲ್ಪ' ನೋ.

ತೂಲರಾಸಿ (ನಾ). ಆರಳಿಯ ರಾಶಿ : ಅಳಿಕನೇತ್ರನ ಕೂಡೆ ಸರಸಮೆ ತೂಲರಾಸಿಯು ಸಿಖಿಯ ಕೆಣಕಿದಂತೆ (ಸವಮೋ. ೫-೨೨). [ತೂಲ+ರಾಸಿ]

ತೂಲಿ$_1$ (ನಾ). ಹತ್ತಿ ; ಆರಳಿ. [ಸಂ. ತೂಲೀ]

ತೂಲಿ$_2$ (ನಾ). ತೂಲವುಳ್ಳುದಂ ; ತೂಲತಲ್ಪ : ತೂಲಿಯೊಳತನು ವ್ಯಾಕುಲದಲ್ಲಿ ಕುಳಿತಿರ್ದತುಳಕರ್ಣನ ಕರೆಯಲಿಲ್ಲಾ ರಾಯ ಮೌನದಲಿ (ಜಸಂಧಾ. ೩೫-೬). [ಸಂ.]

ತೂಲಿಕಾತಲ್ಪ (ನಾ). = ತೂಲತಲ್ಪ : ಆ ಕೊಟಡಿಯಲ್ಲಿ ಎರಡು ದಪ್ಪನೆಯ ದಿಂಬುಗಳೂ ತೂಲಿಕಾತಲ್ಪವೊಂದೂ ಎತ್ತರವಾದ ಮಂಚದ ಮೇಲೆ ಅಣಿಗೊಂಡಿದ್ದುವು (ಪುನರಾ. ೨೯೬). [ಸಂ.]

ತೂಲಿಕೆ, ತೂಳಿಕೆ (ನಾ). ೧. ಚಿತ್ರವನ್ನು ಬರೆಯಂಬ ಕುಂಚ ; ಚಿತ್ರಗಾರನ ಕುಂಚ : ಸಂಕಲ್ಪತೂಲಿಕಾಭಿತ್ತಿಯೊಳೀ ಭುವನತ್ರಯಮಂ ಚಿತ್ರಿಸುವ ವಿರಿಂಚನ ವಿದ್ಯೆಗಧಿಪ ನೀಂ ಗುರುವಲ್ತೇ (ಜಗವಿ. ೯-೪೯).

೨. ನೆಯ್ಗೆಯವನು ಬಟ್ಟೆ ನೇಯುವಾಗ ಉಪಯೋಗಿಸುವ ಒಂದು ಬಗೆಯ ಉಪಕರಣ ; ನೆಯ್ಗೆಯವನ ಕುಂಚ. 'ತುರಿ$_5$' ಪರಾ. ೩. ಚಿನ್ನ, ಬೆಳ್ಳಿ ಮೊದಲಾದುವನ್ನು ಕರಗಿಸುವ ಮೂಸೆ. ೪. "ಅಕ್ಕಸಾಲೆಯರ ಸಲಾಕೆ" (ಗಂಗಾಮ. ೧೫೬). ೫. ದೇವರ ದೀಪ ಮೊದಲಾದುವಕ್ಕೆ ಉಪಯೋಗಿಸುವ, ಅರಳೆಯಿಂದ ಮಾಡಿದ ಬತ್ತಿ. ೬. ಅರಳೆ ಅಥವಾ ತುಪ್ಪಳ ಮತ್ತು ಅವುಗಳಿಂದ ಮಾಡಿದ ಹಾಸುಗೆ. ೭. ಹಾಸುಗೆಗೆ ಹಾಕಿರುವ ಅರಳೆ ಅಥವಾ ತುಪ್ಪಳ. 'ತೂಲಿಕಾತಲ್ಪ' ಪರಾ. **ತೂಳಿಕೆ$_2$** : ೧. ಚಿತ್ರಿಪೊಡೆ ತೂಳಿಕೆಯಂ ತರಿಸುವಂ (ಶಮದ. ೨೫೦ ಪ್ರಯೋ). ೬. ಅದಱಿನವಿರಳವಾ ತೂಳಿಕಾ ಭ್ರಮಣಪರಿಗತತೂಳಿಕಾತಳಮಪ್ಪ ಮನಕ್ಕೆ...ಪರಿಣಮಿಸಿದ ಸುಸ್ಥತೆಯಂ ವ್ಯರ್ಥಂ ಮಾಡದೆ (ಚಂದ್ರಪು. ೪-೦೮). [ಸಂ. ತೂಲಿಕಾ]

ತೂವರ (ನಾ). = ತೂಬರ$_2$. [ಸಂ.]

ತೂಷ್ಣಿ (ನಾ). ೧. ಮಾತನಾಡದಿರುವಿಕೆ ; ಮೌನ : ರೋಷವಂ ತಾಳ್ದೊಡೆಯನಿರೆ ತೂಷ್ಣಿಯಿಂದ ವಿಶ್ವಾಸಿಯಂ ನುಡಿಸಲೇಕಿವನೆಂದು ಸಲಿಗೆಯಿಂ ಬೇಸರೇಕೆಂದು ದೇವರಿಗೆಂದು ಶಬರಪತಿ ಬೆಸಗೊಂಡನಾ ಭೀಮನ (ತುರಂಗ. ೭೪-೩೫). ೨. (ಕರಾ) ಸಂಕ್ಷೇಪ ; ಸಂಗ್ರಹ : ನೀನು ಹೇಳಬೇಕಾದ್ದನ್ನು ತೂಷ್ಣಿಯಲ್ಲಿ ಹೇಳಿಬಿಡು (ರೂಢಿ).

[< ಸಂ. ತೂಷ್ಣೀಂ]

ತೂಷ್ಣಿಭಾವ 'ತೂಷ್ಣೀಭಾವ' ನೋ.

ತೂಷ್ಣೀಂಭಾವ (ನಾ). = ತೂಷ್ಣಿ ೧: ಆ ಬುಭೂಕ್ಷೆ ಒಳಮಡಿಕೆಗಳಲಿ ತು[ತೂ]ಷ್ಣೀಂಭಾವವಾಗಿ ದೇವರಾಯಸವು ಆಗಿ ಇಹುದು (ಅರಳು. ೧೮೮-೭). [ಸಂ.]

ತೂಷ್ಣೀಂಭೂತ (ಗು). ಮೌನವಾಗಿರುವ ; ಮಾತನಾಡದಿರುವ : ಸುಷುಪ್ತ್ಯವಸ್ಥೆ, ತೂಷ್ಣೀಂಭೂತಾವಸ್ಥೆ, ಸಮಾಧ್ಯವಸ್ಥೆಗಳಲ್ಲಿ ರಾಗದ್ವೇಷಗಳಿಲ್ಲವಾಗಿ ಕರ್ಮವೂ ಇಲ್ಲ (ವೇಸಾರ. ೬). [ಸಂ.]

ತೂಷ್ಣೀಂಶೀಲ (ನಾ). = ತೂಷ್ಣೀಕ ೧. [ಸಂ.]

ತೂಷ್ಣೀಕ (ನಾ). ೧. ಮೌನಸ್ವಭಾವದವನು ; ಮಾತನಾಡದೆ ಸುಮ್ಮನಿರುವ ಸ್ವಭಾವದವನು. ೨. [ಜೈನ] ದೇವಗಣದಲ್ಲಿ ಒಂದು ಬಗೆ : ರಾಕ್ಷಸರುಂ ಯಕ್ಷರುಂ . . . ತೂಷ್ಣೀಕರುಂ ಪವನರುಂ ಎಂದು ಪಿಶಾಚರ್ ಚತುರ್ದಶವಿಧಂ (ತತ್ತ್ವಪ್ರ. ೦೯೩). [ಸಂ.]

ತೂಷ್ಣೀಕರಣ (ನಾ). ಮಾತನಾಡದಿರುವಿಕೆ ; ಮೌನ. 'ತೂಷ್ಣೀಕರಿಸು' ಪರಾ. [< ಸಂ. ತೂಷ್ಣೀಂಕರಣ]

ತೂಷ್ಣೀಕರಿಸು (ಕ್ರಿ). ೧. ಮಾತನಾಡದಂತೆ ಮಾಡು ; ಬಾಯಿ ಮುಚ್ಚಿಸು : ಗಹಗಹಿಕೆಯಲಿ ತೂಷ್ಣೀಕರಿಸಿ ಸೌಮಿತ್ರಿ ಮಾಱುಾಂತ (ತೊರರಾ. ೬-೩೪-೫೫). ೨. ಸುಮ್ಮನಿರು ; ಮೌನವಾಗಿರು : ಜಿಷ್ಣು ರಕ್ಷಕ ಜಿತೇಂದ್ರಿಯ ಜೀವನಾಧಾರ ತೂಷ್ಣೀಕರಿಸದಱಿಯೆನ್ನ (ಶತಸಾಂ. ೬೨-೬).

[ತೂಷ್ಣೀಕರಣ + - ಇಸು$_3$]

ತೂಷ್ಣೀಭಾವ, ತೂಷ್ಣಿಭಾವ (ನಾ).=ತೂಷ್ಣಿ ೧ : ಈ ತೆರದಲ್ಲಿ ದುರ್ಯೋಧನನಿಗೆ ಬುದ್ಧಿಹೇಳಿ ಭೀಷ್ಮನು ತೂಷ್ಣೀಭಾವವನ್ನು ಅವಲಂಬಿಸಿದನು (ಭೀಷ್ಮಜ. ೮೭). **ತೂಷ್ಣಿಭಾವ** : ತೂಷ್ಣಿಭಾವದಲ್ಲಿ ಸುಮ್ಮನೆಯಿರುವ ಧರ್ಮರಾಯನ ಮನೋಭೀಷ್ಟವನ್ನು ತಿಳಿದು (ಶೇಷಧ. ೩-೪).

[< ಸಂ. ತೂಷ್ಣೀಂಭಾವ]

ತೂಳ್, ತೂಳು$_1$ (ಕ್ರಿ). ತೂಳ್ತು, ತೂಳ್ದು$_2$ (ಭೂತನ್ಯೂ). ೧. ಬೆನ್ನಟ್ಟು ; ಅರೆಯಂಟ್ಟು : "ಎಟ್ಟಟ್ಟೆಂದುಂ, ತೂಳೆಂದುಂ ಅಱಿಯಟ್ಟುವುದೆಂದುಂ ಜೆನ್ನಟ್ಟುವುದು" (ಕಶಸಾ. ೨೮-೫೮೮); "ಎಟ್ಟಟ್ಟಱಿಯಟ್ಟು ತೂಳೆನುತ್ತುಂ ಸಲೆ ಬೆನ್ನಟ್ಟೆಸಲು" (ಕವಿಕಂ. ೨೩೧) : ಮಸಗಿ ಬಳಾಕಾವರ್ತರ ಬೆಸದಿಂದಂ ಬಂದ ಮೇಘಮುಖರಂ ತೂಳ್ದೋಡಿಸೆ(ಆದಿಪು. ೦೪-೫೮) ; ಬಳಯುತರಂ ಬಟಲ್ಚುವ ಲತಾಂತಶರಂಗಿದಿರಾಗಿ ತಾಗಿ ಸಂಚಳಿಸೆ ಪಳಂಚಿ ತೂಳ್ದವನನೋಡಿಸಿ (ಎಕ. II, ೦೦೭-೮೫ ; 1123) ; ಮತ್ತ ಮಾತಂಗವಿಟ್ಟಳಿಸಿದ ಜನಂಗಳಂ ತೂಳ್ದು ಸೀಳ್ದೈದಿ ವಿಸಟಂಬರಿದು ಬರುತಿರ್ದುದು (ಸೌಂದಪು. ೩-೦೪) ; ಕೆಡಪಿದುದೀಳ್ದು ಸೀಳ್ದುದುಱಿ ತೂಳ್ದುದು ಪೋಳ್ದುದು ನೀಳ್ದ ಹಸ್ತದಿಂ ಪಡಿಬಲಮಂ ಮಹಾರಣವಿದಾರಣದಾರುಣ ಮತ್ತವಾರಣಂ (ರಾಜಶೇ. ೬-೮೩). ೨. ಓಡಿಸು ; ಸೋಲಿಸು ; ಹಿಮ್ಮೆಟ್ಟಿಸು : ವೈರಿರಜನೀಸಂಘಾತಮಂ ತೂಳ್ವ ಭಾಸುರಸೂರ್ಯಾಂಶುವೆನಲ್ಕೆ ಸಾಸಿರದ ಮೂನೂರ್ವ್ವರು ಯೆಶೋಮೂರ್ತ್ತಿಗಳು (ಎಕ. VII, ಶಿಕಾರಿ. ೧೮-೨೦ ; 1158) ; ಜ್ಯಾತತರುತಿ ಮಿಗೆ ಬಳಧೂಳೀತತಿಯಂ ಗಱಿಯ ಗಾಳಿ ತೂಳ್ವಿನಮಿಷುಸಂಘಾತದಿನಿಸುತುಂ ಕೃಷ್ಣನರಾತಿಯ ಬಗೆಗಟ್ಟಿ ತಿಂಬ ಜವನಂತಿರ್ದಂ (ಜಗವಿ. ೯-೨೯) ; ಅಸುರಂ ... ಬಾಱಿಯ ಬನದೊಳ್ಮದಶುಂಡಾಳಂ ಪೊಕ್ಕಂತೆ ಪೊಕ್ಕು ಸಬಳಿಗರಣಿಯಂ ತೂಳೆ (ಉದ್ಕಟ. ೪-೭೪) ; ಸೀಳ್ವೆನಿಳೆಯಂ ಕೀಳ್ವೆನದ್ರಿಗಳನರ್ಕನಂ ತೂಳ್ವೆಂ (ಚಬಪು. ೩೦-೦೦) ; ಆ ಪೊಟ್ಟಿಂಗೆ ಮಾಱಾಂತರಿರಾಯಗುವರನಂ ತೂಳ್ದು . . . ಪ್ರತಾಪಾಗ್ರ್ಯಂ ಮಾರ್ಮಲೆದು ದಮನನಂ ತಡೆದೊಡ್ಡಿ ನಿಲ್ದಂ (ರಾಮಾಶ್ವ. ೯೦-೬೦). ೩. ಹಿಂದಕ್ಕೆ ಸರಿ ; ಹಿಮ್ಮೆಟ್ಟು : "ತೂಳ್—ಅವಸರ್ಪಣೇ (ಹಿಂತಿರುಗಿ ಓಡು)"(ಶಮಧಾ); ಅಲಘುನಿತಂಬದ ಪೊಯ್ಲೊಳ್ ನೆಲೆಮೊಲೆಯಳ್ಳೇಱಿನೊಳ್ ತರಂಗಂಗಳ್ ತೂಳ್ದಲಱುಗುಮವಱಳ್ಳೇಱಿನೊಳಲಱುಗುಮೆರ್ದೆ ತೆರೆಗಳಳಱಿ ತೂಳ್ವುದು ಪಿರಿದೇ (ಆದಿಪು. ೦೦-೦೪೬) ; ಕಡಲ ಪೊದಟ್ಟ ಪೆರ್ದೆರೆಗಳೆಯ್ದೆ ಕುಲಾದ್ರಿಗಳೊಳ್ ಪಳಂಚಿ ತೂಳ್ದೊಡನೆ ಮರಲ್ದವೋಲ್ ಕೆಡೆಯೆ ಪಾಯಿಸಿದುಗ್ರರಥಂಗಳ್ (ಪಂಪಭಾ. ೮-೯೦); ಅರ್ಕನಳುರ್ಕೆಗೆಟ್ಟು ನಭದಿಂ ತೂಳ್ದಂ (ಪಂಪಭಾ. ೦೦-೨೬) ; ದಿನಕರನೋದಯದೊಳ್ ತಮಮನಿತುಂ ತೂಳ್ದೋಡುವಂತೆ ಮಿಥ್ಯಾತ್ವತಮಂ ದಿನಕರನುದಿ(ದ)ಯಿಸೆ ನಿಜಕುಳವನದಿಂ ತೂಳ್ದೋಡಿ ಕಿಡುವುದೇಂ ವಿಸ್ಮಯಮೇ(ಎಇ. XVI, ೬೦-೩೫ ; 1081). ೪. ಅಡಗಿಸು ; ಪರಿಹರಿಸು ; ನಿವಾರಿಸು : ಕೇಳ್ದು ನೃಪನಾಗಳೊದವಿದ ಮಹಾಚಿಂತೆಯಂ ತೂಳ್ದು ತನ್ನಾಪ್ತರಂ ಕರೆದು ... ಎನೆ (ಪದ್ಮರಾ. ೪-೫) ; ಪರಶಿವಂ ನೀನೆ ಕಾರುಣ್ಯದಿಂದಂ ಗುರುರೂಪಂ ತಾಳ್ದು ತೂಳ್ದೈ ಭವಮಂ (ವೃಷವಿ. ೨೬-೦೦); ನೋವೆಲ್ಲಮಂ ತೂಳ್ವ ನಿನ್ನ ಸದ್ಧರ್ಮಮನೆ ಮೆಚ್ಚುವೆಂ (ಸೌನಂದ. ೦೨-೦೬). ೫. ಸೆಳೆ ; ತೂಗು : ನನೆಯಂಬಂ ತೊಟ್ಟು ಕಾಮಂ ಮುಳಿದು ನರಪನಂ ನೋಡಿ ... ಕಾಮಿನಿಯಂ ಶ್ಯಾಮಾಂಗಿಯಂ ಮತ್ತೆನಿಸದೆ ಮಱಿಗೊಂಡಿರ್ದು ತೂಳ್ದೆಚ್ಚನಾಗಳ್ (ಧರ್ಮಾಮೃ. ೦೦-೨೯); ಕೂರಲಗಿಂ ಗಿಱ್ಱನೆ ತೂಳ್ದು ಬೇಗಮಿಱಿದಪಂ (ಧರ್ಮಾಮೃ. ೦೩-೦೦೮). ೬. ಹರಡು ; ಹೊರಹೊಮ್ಮು : ತಂಗದಿರ್ವಟ್ಟನಿಂಗದಿರ್ದೊಂಗಲಂ ಪಿಂಗದೆ ಕಡಿದು ಕಂಡರಿಸಿ ಕರುವಿಟ್ಟು ಪೊಂಗಿ ತೂಳ್ವ ಬೆಳ್ವೆಳಗನುಗುಟ್ವೆಳೆಮುತ್ತಿನ ಮೂಡುವೆಟ್ಟುಗಳಿಂ (ಉದ್ಕಟ. ೯-೩೦ವ). **ತೂಳು$_1$** : ೧. ತೈಲ ಮರ ಕಲುಗುಂಡ ಸುರಿವುತ ತೂಳಿದರು ಕಪಿಭಟರು . . . ಕುಂಭಕರ್ಣನು ತೂಳಿದನು ಪಡೆಯ (ಕೌಶಿರಾ. ೨೫-೦೦). ೨. ತುಳಿಸಿದನು ತೂಳಿದನು ಹಿಡಿದನು . . . ರಕ್ಕಸ ಹಿಳುಕಹಿಳುಕನು ಹಳಚುತಿರ್ದನು (ಕೌಶಿರಾ. ೩೦-೦೪) ; ಕೈಮಾಡುವ ನಿಶಾಚರರ ತೂಳಿದನು (ತೊರರಾ. ೬-೩೩-೨೪) ; ಆಸ್ಥಾಯಿಕೆಯೊಳಱಿದವರೆಂದರಾತನ ಸತ್ವಸಾಹಸದಂದವನು ... ಖಚರೇಂದ್ರವಿಂಧ್ಯಾವೃಷಭವನು ತೂಳಿದ ಪರಾಕ್ರಮದ (ಸಾಳ್ವಭಾ. ೨೨-೨೬) ; ಬಲಖಳನಾಗ ಖಚರರ ತೂಳಿ ಪೊಕ್ಕನು (ಅಂಬಿಕಾ. ೧೪-೦) ; ಆಳು ಮತ್ಸರದಿಂದ ತೂಳಿದರು ಹೂಳಿದರು ಸೀಳಿದರು ರಿಪುಬಲವನು (ತುರಂಗ. ೪೬-೨೯). ೪. ಮಾನಸದಂಧಕಾರವ ನೆಱಿ ತೂಳುವ ಭಾನುಮುನಿಗೆ ನಮಿಸುವೆನು

(ಅಂಜಿಡ. ೦-೬೫) : ಈ ಲೋಕಾವಳಿಯೆಲ್ಲ ಮಾಡಿದ ಮಹತ್ಪುಣ್ಯಂಗಳೊರ್ಗೂಡಿಯುಂ ತೂಳಲ್ಕಾಱದ ಪಾತಕಕ್ಕೆ ನೆಲೆಯಪ್ಪೆನ್ನಂ ಸಮುತ್ತಾರಿಸಲ್ (ವಸ್ತವಂ. ೨-೦೨). ೫. ವೀರರು ತೂಳಿದರು ಕಣೆಯ (ಕುಪ್ಯಾಭೀ. ೪-೦೩) ; ಅಮರಗಿರಿ ತಜತಱಿಸೆ ತೂಳಿದರಸ್ತ್ರಶಸ್ತ್ರದ ಹೊಱಿಗೆಯಲಿ (ತೊರರಾ. ೩-೬-೮); ತೂಳುವ ಗುಂಡುಗಲ್ಗಳ ರಾಸಿ ಪಟ್ಟಣದಾಳುವೇರಿಯ ತುಂಬಿಹುವು (ಕಂನವಿ. ೬-೨೦). ೬. ಏಳುತೆತ್ತಿದನುಗ್ರ ವಿಕೃತ ಕರಾಳಶಕ್ತಿಯನುರಿ ಚಡಾಳಿಸಿ ತೂಳಿತಂಬರತಳವ (ತೊರರಾ. ೬-೨೭-೫೦); ತೂಳಿದೀ ಸಂಶಯವಿಪರ್ಯಾಸವನು ನೆಱೆ ಕೆಡಿಸಿ (ಅಮೃತ. ೦೦-೭೫) ; ತೂಳುತಿರೆ ಭೇರಿಗಳ ಧ್ವನಿಯು ದಿಗ್ಜಾಲಮಂ (ದುರಪು. ೧೫-೪). ೭. ಉಬ್ಬು ; ಉಕ್ಕು : ದುರ್ಮುಖ ಸುಮುಖರೆಂಬುವರು ತೂಳುವಬುಧಿಯ ಸಬುದದವೊಲುಬ್ಬೇಳುವಗ್ಗದ ಗಾಢಿಕೆಯ ಕಟ್ಟಾಳುತನವನು ಮೆಱೆದರಿದಿರಲಿ ರಾಘವೇಶ್ವರನ (ತೊರರಾ. ೬-೪-೯). ೮. ತಳ್ಳು; ದಬ್ಬು; ನೂಕು: ತುಡುಕಿ ತೂಳುವ ಸೂತ್ರಯಂತ್ರದ ಗಡಣದಲಿ ಗತಿಗೊಂಡು ಬೇಡಿತ ಕೊಡುವ ಮಣಿಪುತ್ರಿಕೆಗಳೆಸೆದವು (ತೊರರಾ. ೧-೦೩-೧೦) ; ದಳಪತಿಯಾಗ ಮೇಳೈಸಿ ಬಲವ ಕಗ್ಗೊಲೆಯ ಕಾಳಗಕಂದು ತೂಳಿದನೇನ ಬಣ್ಣಿಸುವೆ (ಕಂನವಿ. ೧೬-೭೯). ೯. ಒತ್ತರಿಸಿ ಬರು ; ನಂಗ್ಗು : ಆಳು ಹೊಕ್ಕುದು ದಂತಿಘಟೆಗಳು ತೂಳಿದವು (ಕುಪ್ಯಾಭೀ. ೯-೦೫); ತುಱುಗಿ ತೂಳುವ ಮತ್ತವಾರಣದುಱುಬೆಗಾಱದೆ ವೀರಹನುಮನ ಮಱೆಯ ಹೊಕ್ಕುದು ಭೂರಿವಾನರಸೇನೆ (ತೊರರಾ. ೬-೩೨-೯); ಮದಕರಿಗಳ ಸಾಲ ಪಟಗಳಿನಪ್ರಭೆಯ ತೂಳಗೊಡದೆ ಮುಸುಕಲು ರಾಹು ಪರ್ವದೊಲ್ ಮೇಳೈಸಿತು ತಮ ಜಗಕೆ (ಕಂನವಿ. ೦೯-೪೪) ; ತೂಳುತಿಹ ದಶವಾಯು ಬಂಧದಿ ಮೇಳವಿಸಿ ಪೊಱವಡಿಸುತಿಹ ನವನಾಳಮಂ...ತಾಳಿ (ಶಂಕದಾ. ೩-೮೦). ೧೦. ಅಲ್ಲಾಡು ; ಚಲಿಸು : ತುಱುಗಿ ತೂಳುವ ಸಿಂಧ ಸೆಳೆ ಮಡಲಿಱಿವ ಝಲ್ಲರಿ (ಕುಪ್ಯಾಕ. ೩-೦೩) ; ತೋಳ ಗಾಳಿಗೆ ತೂಳಿದವು ಸೌಧಾಳಿ (ತೊರರಾ. ೬-೧೦-೨೬). ೧೧. ಹೆಚ್ಚಿಸು ; ಬೆಳೆಸು ; ವೃದ್ಧಿಪಡಿಸು : ಕೋಪವನು ಕೊನರಿಸುವ ನೃಪರನುತಾಪವನು ತೂಳುವ ಕುಬುದ್ಧಿವ್ಯಾಪಕನ ನೀ ವೈರಿಯಲ್ಲದೆ ಭೀಮನಲ್ಲೆಂದ (ಕುಪ್ಯಾಗ. ೮-೪೦). ೧೨. ಹೆಚ್ಚು ; ವೃದ್ಧಿಹೊಂದು : ಕೇಳಿ ತಲೆದೂಗಿದನು ಮೂಗಿನ ಮೇಲುವೆರಳಿನ ಹೊತ್ತ ದುಗುಡದ ತೂಳಿದುಬ್ಬೆಯ ನಟ್ಟ ನೋಟದ... ಹುದಿದ ಭಾವದಲಾಲಿಸಿದನಸುರಾರಿ ದೂತವ್ರಜದ ಬಿನ್ನಪವ (ಕುಪ್ಯಾಅ. ೨-೨); ಎಳೆನೇಸಱಿನವೊಲು ರಂಜಿಸುವ ರತ್ನಪ ತುಱುಗಿ ತೂಳುವ ಹರುಷ ಪುಳಕದಿನಿತ್ತನನುಜಂಗೆ (ತೊರರಾ. ೫-೯-೩೦). ೧೩. ಆವರಿಸು : ತೂಳುವಂತಸ್ತಾಪ ತಗ್ಗಿದುದು (ನಿಭಾಗ. ೦೦-೫೪-೧೦).

[ದೇ.॥ ತಮಿ. ತುವಳ್=ನಡುಗು; ತೆಲು. ತೂಲು; ಕೊಲಾ. ಪರ್ಜಿ. ತೂಲ್; ನಾಯ್ಕಿ. ತೂಳ್]

ತೂಳ$_1$, ತೂಣ$_1$, ತೂಳು$_2$ (ನಾ). ೧. ಪರವಶತೆ ; ಆವೇಶ ; ಉನ್ಮಾದ : ತೂಳ ಬರೆ ಕುಣಿದುದು ಕಬಂಧದ ಜಾಲದೊಡನೆ ಪಿಶಾಚಗಣ (ಕುಪ್ಯಾಭೀ. ೫-೩೫) ; ಕಾಳಿಗದೊಳು ಬೊಮ್ಮ ಜಟ್ಟಿಗ ಬೀರ ಭೇತಾಳ ಶಾಕಿನಿ ಡಾಕಿನಿಯರ ತೂಳದೆ ಹೊಯ್ದಾಡಿ ಜೃಂಭಿಸಿ ಗಗನಾಂತರಾಳದಿ ಬೊಬ್ಬಿಕ್ಕುತಿಹರು (ಮೋಹತ. ೨೯-೧೦) ; ತಾಳಿ ಸುರರೆಂದು ದುವ್ವಾಳಿಸುತೆ ವಂದಿರವದೋಳಿ ಸುತ್ತಲ್ ಮುಸುಕೆ ತೂಳದಿಂ ಹರಿ ನಡೆದನು (ಚಿಬಪು. ೩೦-೫೫) ; ತೂಳದ ಭಕ್ತಿಯು ವ್ರತವು ಶೀಲಂಗಳ ಮೇಳೈಸುತ ಮನದೊಳಗೆ (ಅಮುಸಾಂ. ೪-೧೦೬). ೨. ದೆವ್ವ, ಭೂತ ಮೊದಲಾದುವು ಮೈಮೇಲೆ ಬರುವುದು; ಭೂತಾವೇಶ: ನಟ್ಟಲಗಂ ಪಿಡಿದು ಬಿಟ್ಟ ತಲೆವೆರಸು ತೂಳಂ ಬಂದಂತೆ ಬೊಬ್ಬಿಱಿದು ಪರಿವಬ್ಬರಗಲಿಗಳುಮಂ (ಲೀಲಾವ. ೫-೦೩೪) ; ಇದು ಮೋಹನದೇವತೆಯಾವೇಶದೊಳೊದವಿದ ತೂಳವೊ...ಎನಲೊಪ್ಪಿದುದಾ ಸುದತಿಗೆ ಸುಕುಮಾರನ ಕುವರನ ಮೊಗಮಂ ಕಾಣುತವೆ (ಜಯಕಾ. ೪-೧೯). ೩. ಅತ್ಯಾಸಕ್ತಿ; ಉತ್ಕಂಠೆ: ಇಷ್ಟಲಿಂಗ ತೂಳದಿಂದ ಎಷ್ಟು ದೋಷ ದುರಿತಗಳನು ಬಿಟ್ಟು ಓಡಿಸುವೆನು (ಶಿವಗೀ. ೦೫೬-೭೯೫); ಬಾಲೆ ಕಾಂತನ ಕಿವಿದೆಱಪಿಗೆ ಪುಳಕಕೆ ತೂಳವೆತ್ತಿದಳು (ಪರ್ಧಚ. ೫-೮೯) ; ತೂಳವೇತಕೆ ರಮಣಿ ನಿನಗದ ಕೇಳಿದಲ್ಲದೆಯಶನವಿಳಿಯದೆ (ಶಂಕದಾ. ೭-೫೯). ೪. ಉತ್ಸಾಹ : ಹಸ್ತದೊಳಗೆ ಪೂಜಿಸು ನಮ್ಮನುಯೆಂದು ವಿಸ್ತರಿಸಿದನು ತೂಳದಲಿ (ಮಾದೇಸಾಂ. ೨-೪೦). ತೂಣ$_1$: ೧. ಏಕಶಾನಮಾಂ ತೊರೆಯ ತೂಣಂ ಬಿರಿದೆನ್ನ ತುಟಿವರಿಯೆ ತಿರೆಯದಂ ಕೇಳೆ (ಗಿಳಿವಿಂ. ೯-೧೨೩). ತೂಳು$_2$: ೧. ರಣದೊಳುಭಯವೀರರ್...ಕೂರಲಗಿನಿಂ ತೂಳುವೆದ್ದಿಱಿದಾಡುತಿರ್ದರತಿ ಖಾತಿಯಿಂ (ಚಿಬಪು. ೨೬-೧೪).

ತೂಳದವರು = ಉನ್ಮಾದಸ್ವಭಾವದವರು ; ಆವೇಶವುಳ್ಳವರು : ತೂಳದವರ ಮಾತ ಕೇಳಿ ಖೂಳರೆಲ್ಲರು ಕೂಡಿಕೊಂಡು ಹಾಳುಮಾಡಿ ಕೈಯಲಿದ್ದ ಹೊನ್ನು ಹಣಗಳ (ಕನಕ. ೧೪೨-೩). [←ತುಳು. ತೂಳ]

ತೂಳ$_2$ (ನಾ). ದಪ್ಪ ; ತೋರ : "ತೂಳ-ಸ್ಥೂಲ=ದಪ್ಪ, ತೋರ" (ತದ್ಭಕೋ. ೦೮); ಸಕಾರದೊಡನೆ ಕೂಡಿದ ಥಕಾರಕ್ಕೆ ತಕಾರಂ . . . ಸ್ಥೂಲ-ತೂಳ (ಶಮದ. ೨೫೭ ಪ್ರಯೋ). [< ಸಂ. ಸ್ಥೂಲ]

ತೂಳ$_3$ 'ತೂಲ' ನೋ.

ತೂಳಕ 'ತೂಲಕ' ನೋ.

ತೂಳಗ, ತೂಳಿಗ (ನಾ.) ೧. ಆವೇಶ ; ಉನ್ಮಾದ : ಶ್ರೀಕಾಂತನ ತೂಳಗವಂ ಲೋಕದೊಳಾರಾದಡಱಿದು ನಿಲ್ಲಿಸಿದೊಡೆ . . . ಆ ಕಾರಣ ಪುರುಷನಡಿಗೆ ಮಣಿದವೆಂ (ಹಮ್ಮೀರ. ೭-೬). ೨. = ತೂಳ$_1$ ೨: ತೂಳಗ ಬಂದವನಂತೆ ಭೂತ ಸೋಂಕಿದವನಂತೆ . . . ಮನ್ಮಥನ ಪರವಶನಾಗಿರುವ ಬಗೆಯನು ಕಂಡು (ವಚಕಾ. ೨೭). ತೂಳಿಗ : ೩. ದಂಬಾಚಾರ ; ಸೋಗು ; ಬೂಟಾಟಿಕೆ : ಜಾಳುಮನುಜರು ಒಡಲ ಪೊಱೆವರು ತೂಳಿಗವ ಮಾಡಿ (ಕಾಲಸಂ. ೩೪-೦೯). ೪. ಆವೇಶ ಬಂದಂತೆ ನಡೆಯುವವನು ; ಮನಸ್ಸು ಬಂದಂತೆ ವರ್ತಿಸುವವನು : ನರಸಿಂಹ ನಾಮದ ಅರಸು ನರಬೇಂಟೆ ಹೋದ ಧರೆಯೊಳು ತೂಳಿಗರು ಹಿರಿದು ಹೆಚ್ಚುವರು (ಶರಲೀ. ೫೦೦-೧೩). [< ತೂಳ$_1$]

ತೂಳತಲ್ಪ 'ತೂಲತಲ್ಪ' ನೋ.

ತೂಳವೇಳಿಸು (ಕ್ರಿ). ಮೈಮರೆಯುವಂತೆ ಮಾಡು ; ಪರವಶತೆಯನ್ನುಂಟುಮಾಡು : ಸಕ್ಕರೆವೆರಸಿದ ಚಿಲಿಪಾಲಿನಂತೆ ವರಕವಿ ಗೌರನ ವಚನ ಕೇಳುವ ರಸಿಕರ ತೂಳವೇಳಿಸುತಿಹುದು (ಮೋಳಿಪು. ೨-೨).

[ತೂಳವೇಳು + – ಇಸ್ಸು$_3$]

ತೂಳವೇಳು (ಕ್ರಿ). ೧. ಆವೇಶಗೊಳ್ಳು ; ಮೈಮರೆ : ತೂಳವೆದ್ದಲ್ಲಲ್ಲಿ ಜನಗಳು ಕುಣಿವುದ ಹೇಳಲಳವೆ (ಭರಜ. ೪೦-೧೧೧) : ಲೀಲೆಯಿಂದುಸುರ್ದ ಪುರಾಣಿ ರಾಯಗೆ ತೂಳವೇಳುವಂತೆಂದು ಮೇಲ್ಗತೆಯ (ಮೋಳಿಪು. ೨-೦೦೭). ೨. ದೆವ್ವಹಿಡಿ; ಪಿಶಾಚಿ ಹಿಡಿ: ಒಬ್ಬ ತೂಳವೆದ್ದಂತಾಡುತಿರ್ದ (ಭರಜ. ೫೩-೪೩). [ತೂಳ$_1$ + ಏಳು$_1$ (< ಏಟ್$_1$)]

ತೂಳಿಕೆ$_1$ (ನಾ). ಎಸೆತ ; ಹೊಡೆತ ; ಬಡಿತ : ಕಾಳರಕ್ಕಸನುಗ್ರಪರಿಘದ ತೂಳಿಕೆಯ ತೋಟಿಗಳ ಧಾಳಾಧೂಳಿ ತುಂಬಿತು ಕಡೆಗೆ ಕಮಲಭವಾಂಡ ಮಂಡಲವ (ತೊರರಾ. ೬-೦೭-೩೫) ; ನಿಶಿತಕೋಪಜ್ವಾಲೆಯಲಿ ತಜ್ಜ್ವಲನ ಸುತ ನಿಂದನು ಸುದರ್ಶನದ ತೂಳಿಕೆಯ ಸರಿಸದಲಿ (ತೊರರಾ. ೬-೩೨-೩೩).

[ತೂಳ್ + – ಇಕೆ]

ತೂಳಿಕೆ$_2$ 'ತೂಲಿಕೆ' ನೋ.

ತೂಳಿಗ 'ತೂಳಗ' ನೋ.

ತೂಳಿಸು (ಕ್ರಿ). ೧. ಓಡಿಸು ; ಹಿಮ್ಮೆಟ್ಟಿಸು : ಬಾಣದ ಹೊಗೆಯಲಿ ರಿಪುಗಳ ತೂಳಿಸಿಕೊಂಡೇಣಾಂಕವಂಶಸಂಭವನು ... ಮಾಣದಿಱಿದ ರಿಪು

ಬಲವ (ಕಂನವಿ. ೩-೭೪) ; ತೂಳಿಸಿದ ದಶಲಕ್ಷವನು . . . ದೈತ್ಯನು (ಕೋಗಯ. ೨-೬೫). ೨. ಮುಂದಕ್ಕೆ ನುಗ್ಗಿಸು,— ಹಾಯಿಸು : ಜೋದರಾನೆಯ ತೂಳಿಸಲಿ ಸಮರಥರು ಸರಳಿಸಿ ಎಂದನಾ ಭೂಪ (ಕುಪ್ಯಾಗ. ೫-೪೨); ತೂಳಿಸಿದರಾನೆಯಂ ಜೋದರುರವಣಿಸಿ (ಚೈಮಿಭಾ. ೨೨-೭) ; ರಾಯರಾವುತರು ತೂಳಿಸಿ ಕುದುರೆಗಳನು ಭೋಯೆಂದು ಬೊಬ್ಬಿಱಿದೇಱಿ . . . ಸಾಯಲಿಱಿದರು (ಕಂನವಿ. ೦೭-೫೨). ೩. ಮುಂದಾಗು ; ತಾನಾಗಿ ಮುಂದೆ ಬರು : ತೂಳಿಸಿ ಮೋಹವ ಕಾಣಿಸುವುದು ಪ್ರೌಢಲೋಲಾಕ್ಷಿಯರ ಮತವಲ್ಲ (ಕಂನವಿ. ೯-೧೫೬). ೪. ಪ್ರಯೋಗಿಸು ; ಹೊಡೆ : ತೂಳಿಸುವ ಬೆಂಗೊಡತಿಗಳ ಸಿಟ್ಟೇಳಿಸುವ ನಿಶಿತಾಂಕುಶದ ವಿಕರಾಳ ಮದಕರಿ ಮೆಱೆವುತಿರ್ದುದು ರಣದ ಸೊಬಗಿನಲಿ (ತೂರರಾ. ೬-೨೯-೨೦) : ತೂಳಿಸು ಪೆಟಲಗುಂಡುಗಳನೆಂಬಸುರರ ಕೋಳಾಹಳವೊಪ್ಪಿತು (ಕಂನವಿ. ೦೪-೫). ೫. ಉದ್ದೀಪಿಸು; ಹೆಚ್ಚಿಸು; ಅಧಿಕಗೊಳಿಸು : ಮೇಲೆ ಮಾತಿನ್ನೇಕೆ ವಂಶವಿಶಾಲವೈಭವವೆನ್ನದೈಸಲೆ ತೂಳಿಸಗ್ನಿಯನೊಟ್ಟಲಿಂಧನವೆಂದಳಿಂದುಮುಖಿ (ತೂರರಾ. ೬-೫೩-೮೫).

[ತೂಳ್ + – ಇಸು$_3$]

ತೂಳು$_1$ 'ತೂಳ್' ನೋ.

ತೂಳು$_2$ 'ತೂಳ್$_1$' ನೋ.

ತೂಳುಕಾರ (ನಾ). (ಯುದ್ಧದಲ್ಲಿ) ಆಕ್ರಮಣ ಮಾಡುವವನು,– ಮುನ್ನುಗ್ಗುವವನು : ಹೇಳಲೇನದನಾ ಕ್ಷಣಾರ್ಧದಿ ಬೀಳುಕೊಟ್ಟನು ಕಾಲನಗ್ಗದ ಕಾಳದೇಹದ ತೂಳುಕಾರರ ಘೋರವಿಗ್ರಹರ (ಅಂಬಿಕಾ. ೪-೩೦). [ತೂಳು$_1$ (< ತೂಳ್) + – ಕಾರ$_1$ (< – ಕಾಱ)]

ತೂಳುವಱೆ (ನಾ). (ಯುದ್ಧಕಾಲದಲ್ಲಿ) ಆಕ್ರಮಣದ ಸೂಚನೆಯನ್ನು ನೀಡುವ ಒಂದು ಬಗೆಯ ವಾದ್ಯ ; ರಣವಾದ್ಯ : ತೂಳುವಱೆಗಳು ಗಜಱಿದವು ತಂಬಟದ ಲಗ್ಗೆಯಲಿ (ಕುಪ್ಯಾದ್ರೋ.೩-೭); ತಳುವದವರ ಮೇಲೆ ನಡೆದನು ಮಗ್ಗಹೊಯ್ಸಳ ತೂಳುವಱೆ ಮೊಳಗುತಿರೆ (ಕುರಾಸಾಂ. ೦೩-೩೬); ತೂಳುವಱೆಗಳ ರವಂ ತುಂಬಿತಾಶೆಗಳಂ (ಚಿಬಪು. ೩೮-೨೨).

[ತೂಳು$_1$ (< ತೂಳ್) + ಪಱೆ$_1$]

ತೂಳೆ (ನಾ). ಅರಳೆ : ನವಮಣಿಮಂಚದಿಂದೆ ಮಿಸುಪಂಚೆಯ ತುಪ್ಪುಟ ತೂಳೆಯಿಂದೆ ... ಎಸೆದಿರ್ದ ಸೆಜ್ಜೆಯೊಳ್ ಪವಡಿಸಿ (ಪುಷ್ಪಪು. ೯-೯೭).

[ಸಂ. ತೂಲ]

ತೂಳ್ತರು (ಕ್ರಿ). ಆವೇಶದಿಂದ ಬರು ; ಮುನ್ನುಗ್ಗು : (ಓಡಿಹೋಗಿ, ಬಾಗಿಲ ಹೊರಗೆ ಪರೀಕ್ಷಿಸಿ, ತೂಳ್ತಂದು, ತವಕಿಗತನದಿಂದ ಆ ಚೀಲಗಳನ್ನೆತ್ತಿ ತೂಗಿ ತೂಗಿ ನೋಡಿ ಬಾಯ್ಕಟ್ಟಿನ ದಾರಗಳನ್ನೆಳೆಯುತ್ತಿರುವರು) (ಬೆಟ್ಕಅ. ೫೪-೨೦). [ತೂಳ್ + ತರು$_1$ (<ತರ್)]

ತೂಳ್ತು 'ತೂಳ್' ಪರಾ.

ತೂಳ್ದು$_1$ (ಕ್ರಿ). ೧. ಅಟ್ಟು ; ಓಡಿಸು ; ಬೆನ್ನಟ್ಟು : ತಾಪಸರಂ ಬೆರ್ಚಿಸಿ ತೂಳ್ದಿ ಬೇ[ಳ್ವ]ರಣಿಯಂ ಕೊಂಡಾಶ್ರುಮಕ್ಕಿಂತು ಬೇವಸಮಂ ಮಾಡುವುದಾಯ್ತುದೊಂದು ವಿಭವಂ ಮತ್ತೇಭವಿಕ್ರೀಡಿತಂ (ಪಂಪಭಾ. ೮-೩೭) ; ಸದೋಷನಿವಂ ದಲಸ್ಮದಾರಾಧನವಿಘ್ನಕಾರಿರಿಪುವೆಂದಸಿಪೇಟಹಸ್ತೆ ತೂಳ್ದಿದಳ್ (ಶಾಂತಿಪು. ೯-೬) ; ಆರ್ಮೆಯ್ದೋರ್ಪರಾರ್ಮಲೆವರಾರ್ ಪೊಣರ್ವರಾರ್ ತೂಳ್ದುವರಾರವಂ ಜವನೆ ದಲ್ ತಾನೆಂದು (ಶಮದ. ೦೫೦ ಪ್ರಯೋ). ೨. ಓಡು ; ಹಿಂದಕ್ಕೆ ಸರಿ ; ಹಿಮ್ಮೆಟ್ಟು ; ಪಲಾಯನ ಮಾಡು : ಭೀತಿಯಿಂ ಮಱುಗಿ ತೆರಳ್ದು ತೂಳ್ದಿ ಸುಟಿಗೊಂಡುದು ಪಾಂಡವಸೈನ್ಯಸಾಗರಂ (ಪಂಪಭಾ. ೦೨-೩೦) ; ಹುತವಹ ಬಾಣದಿಂದಮಿಸೆ ತೂಳ್ದುದು ವಾನರಸೇನೆ (ಗದಾಯು. ೦-೨೪). ೩. ನಿವಾರಿಸು ; ಪರಿಹರಿಸು : ಪಸರಿಸಿದ ಕುತೀರ್ಥಧ್ವಾಂತಮಂ ತೂಳ್ದಿ . . . ಆರ್ಕಂಬೊಲು ದ್ಯೋತಿಸುಗೆ ಸಕಲಧಾತ್ರೀಚಕ್ರದೊಳ್ ಧರ್ಮಚಕ್ರಂ (ಅಜಿಪು. ೦-೦೬) ; ಮೇಣ್ವಾರುಣಾಗ್ನೇಯಮಂಡಲವೇಳಾಕ್ರಮಮೊಂದಿ ಸಂಭವಿಸಿದುತ್ಪಾತಂಗಳಂ ತೂಳ್ದುಗುಂ (ಲೋಕೋಪ. ೪-೮೭) ; ಖೇದಮಂ ಕ್ಷಣದೊಳೆ ತೂಳ್ದಿ ತಾಳ್ದುವುದು ಪಿಂಗದೆ ಪುತ್ರ ಸಮಸ್ತಧಾತ್ರಿಯಂ (ಚಂದ್ರಪು. ೪-೦೯) ; ಮುನಿನಾಥಾ ಭವದೀಯ ದಿವ್ಯವಚನಂ ತೂಳ್ದಿತ್ತು ಸರ್ವಾರ್ಥಸಂಜನಿತ ಭ್ರಾಂತಿಯಂ (ಮಹಾನೇ. ೨-೪೫). ೪. (ಪರಮತವನ್ನು) ಖಂಡಿಸು : ಅಭಿನವಗಣಧರರೆನೆ ದಿವ್ಯಭಾಷೆಯಂ ತಾಳ್ದಿ ಕುಮತಮಂ ತೂಳ್ದಿದರಂ ಶುಭಕೀರ್ತಿದೇವರಂ ... ಪೂಜ್ಯಪಾದರೆನ್ನದರೊಳರೇ (ಪಂರಾಮಾ. ೦-೨೦). ೫. ತೀರಿಸು ; ಮುಗಿಸು : ತೂಳ್ದಿ ಪಿತೃಗಳ ಋಣಮಂ...ಪಾರ್ವರಂ ಮನ್ನಿಸಿದಂ (ಚಿಕವಿ.೪-೮೨) ೬. ನಂದಿಸು ; ಆರಿಸು ; ತವಿಸು : ಶಂಭು ಜೂಟದೊಳಾಂತಂ...ತತ್ಸಿಂಧುಬಂಧದ ನೀರೆಲ್ಲಮನೊಂದು ಮುಕ್ಕುಳೊಳೆ ತಂದಾ ವಹ್ನಿಯಂ ತೂಳ್ದಿದಂ (ಜಗವಿ. ೧೮-೫). ೭. ತಡೆಯಿಲ್ಲದೆ ಸಂಚರಿಸು ; ಮುನ್ನುಗ್ಗು : ಕನಕಾಂಭೋಜರಜಂ ನಿಜಾಂಗರುಚಿಯಂ ಕನ್ನೆಯ್ದಿಲಿಂದಂ ಕಟಲ್ದಿನಿಸಂ ತೂಳ್ದಿ ತೆರಳ್ದೆಸಟ್ಟಿಯನಮಂ ಕಂಪಂ ಕೊಳಲ್ಬರ್ಪ ಭೃಂಗನಿಕಾಯಂ ನಿಜಕೇಶಪಾಶರುಚಿಯಂ ಕೈಕೊಳ್ವಿನಂ ಮೆಲ್ಲಮೆಲ್ಲನೆ ನೋಟಕ್ಕೆ ಸದೇಹಮಾಗಿ ಸುಟಿಯುತ್ತಿರ್ಕುಂ ವಿದೇಹಾನಿಲಂ (ಅದಿಪು. ೦-೬೨); ಷಟ್ತರ್ಕ್ಕವೀಧಿಗಳೊಳ್ ತೂಳ್ದಿತು ಗೋಪಣನ್ದಿದಿಗಿಭ ಪ್ರೋದ್ಭಾಸಿ ಗಂಧದ್ವಿಪಂ (ಎಕ. II, ೬೯-೪೬ ; 1100). ೮. ಹೆಚ್ಚುಮಾಡು ; ಅಧಿಕಗೊಳಿಸು : ತಾಳ್ದಿದ ವಿರಹದೊಳೀಕೆಗೆ ಬೆಳ್ದಿಂಗಳ್ ಬಿಳಿಯ ಕಿರ್ಚು ಸಸಿ ಬಿಸಿ ಕಾವಂ ತೂಳ್ದುವ ದಾವಂ (ಗಿರಿಕ. ೪-೦೦೭). [<ತೂಳ್]

ತೂಳ್ದು$_2$ 'ತೂಳ್' ಪರಾ.

ತೂಱ್ 'ತೂಱು' ನೋ.

ತೂಱಲ್, ತೂರಲ್, ತೂಱಲು (ನಾ). ೧. ದೂರ ಹರಡಿರುವುದು; ಚೆದರಿಕೊಂಡಿರುವುದು : "ತೂಱಲ್—ದೂರ ಪೋದುದು" (ಚತುನಿ. ಕಿ. I, ೭೭). ೨. ತುದಿ ; ಅಗ್ರ : ನಿನ್ನೊಡವರಲ್ ರೌದ್ರಾದಿದುರ್ಗಂ ಜಲಾಶ್ರಯಮಾ ಬೆಟ್ಟದ ತೂಱಲನ್ಯವಿಷಯಂ ಪಾತಾಳಮೆಂಬೀ ಮಹಾಭಯಸಂದೋಹಮಿವೆಂತುಮೆನ್ನ ಮನಮಂ ಪೇಟಂಜಿಸಲ್ಕಾರ್ಪುವೇ (ಶೃಂಗಾರ. ೧-೫೫); ತೂಱಲ ಸೆಳ್ಳಗೊಂಬುವರಂ ನನೆ ಪೇಱಿದ ಮಾವು (ಅನಂಪು. ೦-೭೮). **ತೂರಲ್** : ೧. ದೂರದ ಕವಿತೆಯ ಝಳಂಬದಾ ತೂರಲ ಕಿಳ್ಸೆರಗಂ ಮಿಳಿರ್ಚಿ ಬಂದೇರುವ ಮೆಲ್ಲೆಲರ ಶಕ್ತಿಯಂ ನೇರರಿಪಲ್ ಪ್ರತಿಭಾನಮೆಂದವರ್ (ಸಂಸಪ. ೪೯-೯೭). **ತೂಱಲು** : ೧. 'ತೂಱಲಂಗೊಂಬು' ಪರಾ.

ತೂಱಂತುದಿವಟ್ಟೆ = ಅತ್ಯಂತ ಎತ್ತರದಲ್ಲಿರುವ ಮಾರ್ಗ,–ಹಾದಿ : ನಟ್ಟಿರುಳೊಳ್ ತೂಱಂತುದಿವಟ್ಟೆಯೊಳೆಡೆಯಾಡುತಿರ್ಪನೆಂದತಿಭಯದಿಂದಿಟ್ಟಳೊ ರೋಹಿಣಿ ರಕ್ಷೆಯ ಬೊಟ್ಟಂ ಕಾಡಿಗೆಯೊಳಿಂದುವೆನಿಸಿತ್ತಂಕಂ (ಮಹಾನೇ. ೦೪-೫೪). ತೂಱತುದಿಗೊಂಬೆ = ತೂಱಲ್ಗೊಂಬು ೧ : ತೂಱತುದಿಗೊಂಬೆಯನು ಏಱಿಪ್ಪ ಶಿವಯೋಗಿ ಬೇಱೊಂದು ಬಯಸಿ ಹರಿದರೆ ಬೆಳಗಾಗಿ ಸೂಱೆ ಹೋದಂತೆ (ಸರ್ವಜ್ಞ. ೪೪೯). ತೂಱಲ ತುದಿ = ಅತ್ಯಂತ ಕೊನೆ ; ತುಟ್ಟತುದಿ : ಖಚರರನಡರ್ದೇಱಿಸುವೆನೊ ಮೇರು ಗಿರಿಯ ತೂಱಲ ತುದಿಯಂ (ಗದಾಯು. ೬-೦೭) ; ನೀನೇಱಿ ಜರಾಸಂಧ ಭಯದೆ ಗಿರಿದುರ್ಗಮನಾ ತೂಱಲ ತುದಿಯೊಳ್ಕೇದಗೆಯೇಱಿದ ಕೋಡಗದೊಲಿರ್ದ ತೆಱನಂ ಮಱೆದೈ (ಜಗವಿ. ೧೭-೪೫). [ತೂಱು$_1$+ –ಅಲ್$_2$]

ತೂಱಲು 'ತೂಱಲ್' ನೋ.

ತೂಱಲುಗೊಂಬು 'ತೂಱಲ್ಗೊಂಬು' ನೋ.

ತೂಱಲ್ಗೊಂಬು, ತೂರಲ್ಗೊಂಬು, ತೂಱಲುಗೊಂಬು (ನಾ). ೧. ಬಹುದೂರಕ್ಕೆ ಚಾಚಿಕೊಂಡಿರುವ ಕೊಂಬೆ,–ಶಾಖೆ : ತಾರಾಪಥ

ಮಂಡಲಮಂ ನೆಱೆ ಪಂದರಿಸಿ ಬೆಳೆದ ನವತರುಗಳ ತುಱುಗಿದ ತೂಱಲ್ಗೊಂಬಿನ ಕೆಲವು ಕವಲ್ಗೊಂಬೊಪ್ಪಿದುವು (ಜಯಕಾ. ೦೫-೨೫); ಖಗಂಗಳ್ ನಿಡುಮರಂಗಳ ತೂಱಲ್ಗೊಂಬನಡರ್ದು ಮೋನಮಿರ್ದುವು (ರಾಮಾಶ್ವ. ೩೦-೨೩). ೨. ತಂತ್ರತುದಿಯಂ ಕೊಂಬೆ: ಶಾಖಾಚರಂ ... ಮರದ ತುದಿಗೊಂಬಿಂಗೆ ಪಾಯ್ದು ತೂಱಲ್ಗೊಂಬನೇಱಿ (ಪಂಚತಂ. ೨೮೦-೯); ಬಾಲವಿಹಂಗಂಗಳನೆಱಂಕೆಯೊಳಿಱಂಕಿಕೊಂಡು ಪಾಱಲನುವಾಗಿ ತೂಱಲ್ಗೊರೆಬಿನೊಳಿರ್ಪ ವಿಹಂಗಸಂಕುಳದಿಂ (ಗಿರಿಕ. ೦-೦೨೮ವ); ಕೇದಗೆಯ ತೂಱಲ್ಗೊಂಬ[ಪಾಠಾಂ. ತೂಳಿಲ್ಲೊಂಬ]ನೇಱಿರ್ದ ಮರ್ಕಟನೆಂತಂತೆ . . . ದುಷ್ಕವಿಯದೇ ಹಾಸ್ಯಕ್ಕೆ ಪಕ್ಕಾದನೋ (ಧರ್ಮನಾ. ೦-೫೩). **ತೂರಲ್ಗೊಂಬು**: ೧. ಹಿರಿಯಾಲದ ಮರದ ತೂರಲ್ಗೊಂಬಿನ ಇರುಂಬಿನೊಳಗೆ ಚುಂಚನ ಶವವು ಗೋಣಿಂದ ನೇಲುತ್ತಿದೆ (ಬೆಟ್ಟಅ. ೧೬೨-೦೦). **ತೂಱಲುಗೊಂಬು**: ೧. ಎಲೆಗಳಿಱುಂಬಿನೊಳ್ ಮರದ ತೂಱಲುಗೊಂಬಿನ ನೀಡನೀಡದೊಳ್ ತೊಲಗದೆ ನಿಂದು (ಕುಸುಮಾ. ೬-೩೬); ವಿಹಂಗಸಂಕುಲಂ...ಮರಂಗಳ ತೂಱಲುಗೊಂಬುಗೊಂಬಿನೊಳ್ ಸುಂಟಗೆಗೋದ ಮಾಟ್ಕೆಯವೊಲಿರ್ದುವು[ಡುಂ]ಗಿ ನಿದಾಘಕಾಲದೊಳ್ (ಸೂ ಕ್ತಿ ಸು. ೦೦-೧೦೯). [ತೂಱಲ್ + ಕೊಂಬು$_1$]

ತೂಱಾನೆ (ನಾ). ಮಂದೋದ್ರೇಕದಿಂದ ಸಿಕ್ಕಿದವರನ್ನು ಸೊಂಡಿಲಿನಿಂದ ಹಿಡಿದಂ ಎಸೆಯುಂವ ಆನೆ (?): ಈ ಹದನನೆನಗಱಿಯಬಂದುದು ದ್ರೋಹಿಯನು ತೂ[ಪಾಠಾಂ. ಕೂ]ಱಾನೆಗಿಕ್ಕಲೆಬೇಹುದಾದೊಡೆ ರಾಯಚಿತ್ತೈಸೆನ್ನ ಭಾಷೆಯನು (ಸಾಳ್ವಭಾ. ೨೨-೫೦). [ತೂಱು$_1$ + ಆನೆ$_1$]

ತೂಱಿಸು, ತೂರಿಸು$_1$ (ಕ್ರಿ). ೧. ಕಾಳಂಕಡ್ಡಿಗಳನ್ನು ತೂರುವಂತೆ ಮಾಡಂ. ೨. ನಂಗ್ಗಿಸು; ತಳ್ಳು: ಕೇಱಿಸುತೆ ಕೆದಱಿಸುತೆ ವೀರರಂ ನೋಡುತಂ ತೂಱಿಸುತೆ ಕಾಳೆಗಕೆ ಮಸಗಿ ಹಲು ಮೊಱೆವುತಂ... ವೀರನೊರ್ವಂ ನಗರಿಯೊಳು ನಡೆದು ಬರುತಮಿರೆ (ಏಕಾರ. ದೇ. ೦೦೭-೬). ೩. ಹಾರಿಸಂ; ಚಿಮ್ಮಿಸು: ಛತ್ರಚಾಮರಪತಾಕಾಳಿಯಂ ಕೆಂಗಱಿಯ ಗಾಳಿಯಿಂದೆ ತೂಱಿಸಿತು...ಬಭ್ರುವಾಹನನ ಶರಸಂಕುಲಂ (ಚೈಮಿಭಾ. ೨೩-೩೯). **ತೂರಿಸು$_1$**: ೧. ಭತ್ತ ತೂರಿಸಬೇಕು. ಆಳುಗಳೇ ಸಿಕ್ಕಲಿಲ್ಲ (ರೂಢಿ). [ತೂಱು$_1$ + – ಇಸು$_3$]

ತೂಱು$_1$, ತೂರು$_1$, ತೂಱ್ (ಕ್ರಿ). ೧. ಭತ್ತ ಮೊದಲಾದ ಧಾನ್ಯಗಳ ಹೊಟ್ಟನ್ನು ಗಾಳಿಯಂ ಸಹಾಯದಿಂದ ಹಾರಿಸಂ, – ಹೊಟ್ಟು ಬೇರ್ಪಡುವಂತೆ ಮಾಡಂ: "ತೂಱು–ಉದ್ಧೂತೌ (ಧಾನ್ಯವನ್ನು ತೂರು)" (ಕಮಧಾ); ಕಳದೊಳ್ಳೂಱಿದ ಭತ್ತಮನಳೆಯದೆ ನಿಂದಂದುದ ನು ಜ ನಾ ಧಾನ್ಯಮನಾಗಳೆ ಕೊಳ್ವರೆಂಬರ್ (ಸಮಪ. ೦೨-೪೭); ತೂಱಿದರೆ ತನಿಹೊಟ್ಟು ಗಾಳಿಗೆ ಹಾಱುವುದು (ಕುವ್ಯಾದ್ರೋ. ೦೬-೪೪); ನೂಱುಕಂಡುಗ ಹೊಟ್ಟ ತೂಱಿದರೆ ಫಲವೇನು (ಸರ್ವಜ್ಞ. ೩೪೦). ೨. ಎರಚು; ಬಿಸುಡಂ; ಎಸೆ: ನೇಹಮಂ ಮೆಱೆದು ಹೊಳ್ಳಿಸಿಬಿಟ್ಟಪನೆಂಬಡಾಳೆಯಂ ಸುಡುವುದು ಸುಟ್ಟು ತೂಱುವುದು ತೂಱಿದ ಬೂದಿಯ ಹಿಟ್ಟುಗುಟ್ಟಿ ಬೊಟ್ಟಿಡುವುದು (ಅನಂಪು. ೮-೫೬); ನೂಱು ಹಣ ಸಿಗುವನಕ ಮೀಱಿ ವಿನಯದಲಿಪ್ಪ ನೂಱೊಳ್ಮೂಱ ಕೇಳಿದರೆ ಸಾಲಿಗನು ತೂಱುವನು ಮಣ್ಣ (ಸರ್ವಜ್ಞ. ೦೩೯೪). ೩. ದೂರೀಕರಿಸು; ತಿರಸ್ಕರಿಸಂ: ತಂದೆ ತಾಯ್ಗಳ ಮೀಱಿ ಬಂಧುಗಳನು ತೂಱಿ ... ಅಂಗನೆಯರ್ಗೆ ಸೋಲ್ವೆನ್ನ ಮಂದಮತಿಯ ರಂಗ ಬಿಡಿಸು (ಶತಸಾಂ. ೯-೪೯). ೪. ಚೆದರಿಸು; ಓಡಿಸಂ: ಮಾಱುಗೊಂಡರು ಮನುಜರುಗಿನುಜರುಗಳ ತೂಱಿಯಾಡಿಸಿ ಕಾಣೆನೆನಲು (ತ್ರಿಪುಸಾಂ. ೮-೯೨); ಖೂಳ ಫಡಫಡ ಜಾಱದಿರು ತೋಱೊಳ ತೂಱಿದ ಡೊಂಬು ಬೇಡ (ಕುವ್ಯಾಕ. ೦೪-೨೯); ಮೂದಲಿಸಿ ಮುತ್ತಿದ ರಿಪುಗುನ್ನಿಗಳನು ತೂಱಿದರು (ಕಂನವಿ. ೧೪-೮೪). ೫. ಚಿಮ್ಮು; ಹಾರಂ; ಸಿಡಿ: ನೀರಾನೆಯ ಕೈಯೇಱಿಂ ತೂಱುವ ಮಣಿಗಣಮಯೂಖದೊಳ್ ಕಣ್ಗೆಸೆಗುಂ ... ತಿಮಿಂಗಿಳಗಿಳಂಗಳಿಂದೆ ಸಮುದ್ರಂ (ಪುಷ್ಯಾಸ್ತ. ೧೨-೦೩); ಕಣ್ಣೆವೆ ಜಾಱೆ ಜಾಱಿದುವಶ್ವಚಯ ಪವಮಾನವೇಗದಲಿ ತೂಱಿ ಬಿದ್ದುದು ಮಕುಟ (ತೊರರಾ. ೩-೨-೨೦). ೬. ನಿವಾರಿಸಂ; ತಪ್ಪಿಸಂ; ಪರಿಹರಿಸಂ: ಎಡಬಲದಲೌಕುವ ಭಟಾಳಿಯ ತೊಡಕ ತೂಱುತ ಮೀಱಿ ಮಿಸುಕುವ ಕಡುಹುಕಾಱರ ಕಾಲನೂರಿಗೆ ಕಳುಹುತ (ತೊರರಾ. ೪-೬-೨೦); ಅತಿಶಯಾರ್ಥಂಗಳ ತೋಱಿ ಜಾಡ್ಯವ ತೂಱಿ ಮತಿಗೆ ಮಂಗಲವನಿತ್ತೆನ್ನ ಕೃತಿಗೆ ನಿರ್ವಿಘ್ನದಾಯಕಿಯಾಗು (ನಾಗಕು. ೦-೨೦). ೭. ಹೊಯ್ದಾಡಂ; ಒಲೆದಾಡು: ಕಿವಿಗಳೆಳ(ಟ)ಲ್ದು ತೂಱುವೊಡೆ ಮೆಯ್ ಬಿಗಿದಪ್ಪೊಡೆ ದಿಟ್ಟ ನೆತ್ತಿಗೇಱುವೊಡೆ...ಎಚ್ಚುಗೆ ಪಟ್ಟಸೂ[ತ್ರಭಸ್ಮ]ವಂ (ಲೋಕೋಪ. ೯-೨೦೯). ೮. ಚೆಲ್ಲು; ಸೂಸಂ: ಮದವೇಱಿ ಪೊಸಗಂಪನೀವ ಮಕರಂದರಸಮಂ ತೂಱಿ . . . ಶೀಡಿದುದು ಸುಪ್ರಭಾತಾನಿಲಂ (ಕಾದ್ಯಟ. ೦೦-೦೨೯); ಸೌರಭಕ್ಕೆ ಕವ್ವರೆಗೊಂಡು ಬೆಂಬಿಡದೆ ತೂಱುವ ತುಂಬಿಯ ತುಱುಗಲಂಬರದೊಳುಱಿದು ಬಂಬಲ್ಗೊಳ್ವಂತೆಯುಂ (ಅನಂಪು. ೮-೪೩). ೯. ದೂರಕ್ಕೆ ತಳ್ಳು,–ದಬ್ಬು,–ನೂಕು: ಹಾಱಲೂದಿ ಸುಶರ್ಮನವದಿರ ತೂಱಿ ತಿರುಗಿದ ಬಳಿಕ ಕೈ ಮೈ ತೋಱಿದನೆ ಕಲಿಕರ್ಣ (ಕುವ್ಯಾಕ. ೦೬-೦೩); ಶಿರದ ಗಂಗೆಯ ತೂಱಿ . . . ಹಣಿಗಣ್ಣುರಿಯನೆಬ್ಬಿಸಿ ತನುವನೊಡ್ಡಿದನಭವನಡುಕದಲಿ (ತೊರರಾ. ೩-೨-೩); ಸಾರಂಗಧರ ಬಂದು ಸುರತಕೆನ್ನಂ ಪಿಡಿದೊಡಂಬಡಿಸಲೊಲ್ಲದಿರಲು ತೂಱಿ ಮುಂದಲೆವಿಡಿದು...ಧಾರುಣಿಗೆ ಕೆಡಹಿ ಮಾನಭಂಗಮಂ ಮಾಡಿ ಕ್ರೂರನೀಗಂ ಪೋದಂ (ಗುರುಚಾ. ೦೩-೪೩); ಏನೈ ಮೈದುನ, ಜೀವಿತೇಶನೆನ್ನೊಂದು ಬಿನ್ನಪಮಂ ತೂಱದೆ ನಲ್ಮೆ ಮಿಗೆ ಪೊರೆದನೆ! (ರಾಮಾಶ್ವ. ೨೭-೨೩). ೧೦. ಓಡಿಹೋಗು; ಕಂಬಿಕೀಳು: (ಕಿ). ೧೧. ಬೀಳಿಸು; ಸಿಡಿಸು: ನಾರಾಚಂ ತೂಱುವ ಸರಲ್ (ಶಮದ. ೧೭೦ ಪ್ರಯೋ); ಅಸ್ತ್ರತತಿಗಳು ತೂಱಿದವು ತಲೆಗಳನು (ನಿಭಾಗ. ೭-೦೧-೭); ಜಾನಕಿಯ ಸುತನ ಬಾಣಾವಳಿಯ ಹಾವಳಿಯನೇನೆಂಬೆನಹಿತರಂ...ತೂಱಿದುವು ಕೊಂದುವು (ಚೈಮಿಭಾ. ೨೦-೪೭). **ತೂರು$_1$**: ೧. ನೂರುಮತದ ಹೊಟ್ಟ ತೂರಿ, ಎಲ್ಲ ತತ್ತ್ವದೆಲ್ಲೆ ಮೀರಿ ... ಆಗು ನೀ ಅನಿಕೇತನ! (ಅನಿಕೇ. ೬೦-೮); ಆ ದಿನ ಮಾತ್ರ ಜಳ್ಳನ್ನು ತೂರಿ ಕಾಳು ಆರಿಸಲ್ಪಡುತ್ತದೆ (ತತ್ತ್ವಪ್ರಾ. ೩೩೬); ತೂರುವಾಗ ಹಾರಿದ್ದೆಲ್ಲ ಮಾರಿ ಪಾಲು (ಗಾದೆ). ೨. ಎರಡು ತಂಡದವರೂ ಕಲ್ಲುಗಳನ್ನು ತೂರಿದರು (ರೂಢಿ). ೬. ಅಖಿಲಲಯ ಕಾರಕನು ಮೆರೆವಹಂಕಾರಗಳ ಮುರಿದು ತೂರುವನು (ವಿಸೀಗೀ. ೬೦-೦೦). ೮. ಟಾರ್ಚಿನ ಬೆಳಕನ್ನು ತೂರಿದೆ (ಮೂರುದಾ. ೦೨೩). ೯. ಮೂಡು ಕೆಂಪಿನಿಂದ ಕಂಗೊಳಿಸಿತು, ಅರುಣವನ್ನು ತೂರಿ ಕಿರಣವೂ ಹಾದುಬಂತು (ನಾಗಕಾ. ೩೭). ೧೨. (ಹಣದ ವಿಷಯದಲ್ಲಿ) ಪೋಲುಮಾಡಂ; ಹಿಡಿತವಿಲ್ಲದೆ ಖರ್ಚುಮಾಡಂ: ಓಟು ಗಿಟ್ಟಿಸುವುದಕ್ಕಾಗಿ ಹಣ ತೂರಿದ್ದಾರೆ (ರೂಢಿ). ೧೩. (ಕರಾ) ಭೇದಿಯಾಗು: ಅವನು ಕಾರುತ್ತಾನೆ, ತೂರುತ್ತಾನೆ (ರೂಢಿ). **ತೂಱ್**: 'ತೂರ್ಪನಿ' ಪರಾ.

ತೂಱಿಕೊಳ್, ತೂಱಿಕೊಳ್ಳು = ತೂಱು$_1$ ೧: ಅಂತು ಪೊಕ್ಕು ವಿರೋಧಿಸೈನ್ಯಮಂ ಮಾರಿ ಪೊಕ್ಕಂತೆ ಪಣಮಯಂ ಮಾಡಿ ತೂಱಿಕೊಂಡ ಜೋಳದಂತಿರೆ ಪಡಲ್ವಡಿಸಿದಾಗಳ್ (ಪಂಪಭಾ. ೦೦-೯೩ವ); ಗಾಳಿ ಬಂದ ಕೈಯಲ್ಲಿ ತೂಱಿಕೊಳ್ಳಿರೋ (ಪುರಂದ. ೨-೨೦ ಪಲ್ಲವಿ). **ತೂರಿಬಿಡು** = ಕೈಬಿಡು; ಬಿಟ್ಟುಬಿಡಂ; ಹೋಗಬಿಡಂ: ಆದರ್ಶವನ್ನು ತೂರಿಬಿಡಬೇಕೋ (ರಂಗರೋ. ೦೯೭); ಜಗತ್ಸಿಂಹನು ಬಂಗಾಲಿ ಹುಡುಗೆಯನ್ನು ಮದುವೆಯಾಗಿ ಎಲ್ಲವನ್ನೂ ತೂರಿಬಿಟ್ಟನು (ಕುರಿಹಿಂ. ೨೬).

[ದೇ.॥ ತಮಿ. ಮಲ. ತೂಱ್ಱು; ತುಳು. ತೂಪು; ತೆಲು. ತೂರು; ಗೊಂಡಿ. ತೂರಾನಾ]

ತೂಱು₂ (ಕ್ರಿ). ೧. ಸಣ್ಣ ಸಣ್ಣ ಹನಿಯಾಗಿ ಬೀಳಂ; ತುಂತುರು ತುಂತುರಾಗಿ ಬೀಳು,—ಉದುರಂ: ಖಿನ್ನಗೃಹಿಣೀನಿಶ್ವಾಸದಿಂ ಕೂಡೆ ತೂಱಿದುವು...ವಾರ್ಬಿಂದುಗಳ್ (ಚಂದ್ರಪು.೪-೪೦);ಕಟ್ಟಳ್ಕಱಿಂ ತೂಪಱಿದಪಳಿನೆ ತುಱುಂಗಿ ತೂಱಿ ಸಿಡಿವ ಸೀರ್ವನಿ ಕಡುಬಿಡಂಗುವಡೆಯೆ (ರಾಜಶೇ.೨-೮೪). ೨. ಹನಿ ಹನಿಯಾಗಿ ಬೀಳಿಸಂ,-ಉದುರಿಸಂ ; ಸಿಂಪಡಿಸಂ: ಸಾಗರಮಂ ಕೂಡೆ ತೆರಳ್ದಿದಂ ತೊಟಸಿದಂ ತುಳ್ಕಾಡಿದಂ ತೂಱಿದಂ ... ದೇವಕೀನಂದನಂ (ಜಗವಿ. ೭-೦೮) ; ಪುಷ್ಪರಸಮಂ ತೆಗೆದೀಂಟ ತುಳುಂಕಿ ತೂಱಿ ತೇಂಕಾಡಿ ... ಮಗಮಗಿಸಿತ್ತೊಂದು ಮಧುಕರಂ ಮಲ್ಲಿಗೆಯೊಳ್ (ಗಿಕಿಕ. ೨-೭೭); ತೂಱಿ ಕಂಗಳ್ ಕಿಡಿಗಳಂ ಸೂಸೆ ಮೈಬೆವರ್ ತಾಱಿ ಬೇಗದೊಳೀಶನೆಡೆಗೆ ಬಂದು (ಜಬಪು.೨೦-೨೫); ವಸಂತಮಾಂಟವದ ಮಧ್ಯದ ಮಕರಂದರಸದ ತುಂತುಱಿಂ ತೂಱುವ ಪಜ್ಜಳಿವ ಗೊಜ್ಜಗೆಯರಲಜಂತ್ರದ ಬೆಳ್ಮುಗಿಲ ಕೆಳಗೆ ... ತಳಿರಲರ್ವಾಸನೆಯೊಳರಸಿವೆರಸಿ ಕುಳ್ಳಿರ್ದು (ರಾಜಶೇ. ೧೦-೩೦೪). [ದೇ.॥ ತಮಿ. ಮಲ. ತೂಱು; ತೆಲು. ತೂರು]

ತೂಱುಗಲ್ಲು (ನಾ). ತೂರುತ್ತಿರುವ ಕಲ್ಲುಂ; ಎಸೆಯುತ್ತಿರುವ ಕಲ್ಲುಂ: ತೋಡುಗವಣೆಯ ತೂಱುಗಲ್ಲಿನ ಝೂಡಿ ಝಮ್ಮಿಡಿಸಿದವು ಗಗನವನು (ತೊರಠಾ. ೬-೦೦-೩). [ತೂಱು₁ + ಕಲ್ಲು (<ಕಲ್ಲ್)]

ತೂಱುಂಗಿಡಿ (ನಾ). ಸಿಡಿಯುತ್ತಿರುವ ಕಿಡಿ; ಹಾರುತ್ತಿರುವ ಕಿಡಿ,—ಅಗ್ನಿಕಣ: ತುಡುಕಿದನುಗ್ರಧಾರೆಯ ತೂಱುಂಗಿಡಿಗಳ ತುಱುಗಿದುರಿಯ ಮಹಾಸ್ತ್ರವನು ಕರ್ಣ (ಕುಚ್ಚಾದ್ರೋ. ೧೬-೫೦); ಮಂಡಳಿಸಿ ಮುರಿದೇಳ್ದ ವಹ್ನಿಯ . . . ತುಂಡುಗಿಡಿಗಳ ತೂಱುಗಿಡಿಗಳ ಗುಂಡುಗಿಡಿಗಳ ಘಾಡಣೆಯ ಕಿಡಿ ಚಂಡಿಯಾಯ್ತು (ತೊರಠಾ. ೫-೯-೮೨); ಮಿಕ್ಕು ಸೂಸುವ ತೂಱುಗಿಡಿಗಳ ಕಣಾಳಿಗಳ . . . ಪೆರ್ಗಿಚ್ಚುಗಳ ವೆಂಕೆ ಮೇಲಿಕ್ಕಿದುದು (ಶ್ರೀವಿಜಾ. ೦೩-೦೫). [ತೂಱು₁ + ಕಿಡಿ]

ತೃಟಿ (ನಾ). ಒಂದು ಕಾಲಮಾನ; ಅತ್ಯಲ್ಪಕಾಲ; ಬಹಳಸೂಕ್ಷ್ಮವಾದ ಕಾಲ: ಕಾಲಮದು ನಿರ್ಗುಣಮಚೇತನದೊಳಿಂದಿ ತೃಟಿ ಲವ ಮುಂಖ್ಯಕಾಲಂಗಳಿಂದೆ (ಆರಾಪ. ೪-೭); ಒಮ್ಮೆ ಕಣ್ಣೆವೆಯನಿಕ್ಕುವನಿತಱ ನಾಲ್ಕುಭಾಗದೊಳಗೊಂದು ಭಾಗವೇ ತೃಟಿಯನಿಸುವುದು (ವಿವೇಕ. ೬೦೯); ಒಂದು ನಿಮಿಷದ ನಾಲ್ಕನೆಯ ಭಾಗವು ತೃಟಿಯೆನಿಸಿಕೊಂಬಂದು (ದಶಬೀ. ೬೩-೦). [ಸಂ.]

ತೃಟಿನೀಲಕರ (ನಾ). [ಶೈವ] ಹದಿನೈದಂ ಬಿಂಬಾಗಮಂಭೇದಗಳಲ್ಲಿ ಒಂದು: ಚತುರ್ಮುಖತಂತ್ರ ಮಲಯತಂತ್ರ . . . ತೃಟಿ [ಪಾಕಾಂ. ತುಟಿ, ಕುಟಿ]ನೀಲಕರ ತುಲಾವೃತ್ತ ತುಲಾಯೋಗ ಕುಟ್ಟಿಮತಂತ್ರ ಸರ್ವಶೇಖರ ಮಹಾವಿದ್ಯೆ ಮಹಾಸಾರಮೆಂದು ಬಿಂಬಾಗಮದ ಹದಿನೈದು ಭೇದಂಗಳು (ವಿವೇಕ. ೭೦). [?]

ತೃಡ್ಬಾಧೆ (ನಾ). ನೀರಡಿಕೆಯ ತೊಂದರೆ; ಬಾಯಾರಿಕೆಯಿಂದುಂಟಾಗುವ ಕ್ಲೇಶ: ಜಲಜಾತಪ್ರಿಯನೆಂಟಱೊಳ್ ನಿಲೆ ಮನುಷ್ಯಂ ಕಿಚ್ಚಿನಿಂ . . . ಭಾರ್ಗವಂ ನಿಲೆ[ತೃಡ್ಬಾಧೆಯಿನರ್ಕಜಂ] ನಿಲೆ ಮಹಾಕ್ಷುದ್ವ್ಯಾಧಿಯಿಂ ಪೊಂದುಗುಂ (ಜಾತಕತಿ. ೨೩-೨). [ಸಂ. ತೃಡ್ಬಾಧಾ]

ತೃಣ (ನಾ). ೧. ಹುಲ್ಲುಂ: "ವಾರಿಯೊಳು ಬಾಣದೊಳು ತೃಣದೊಳು ಶರಾಖ್ಯಮಕ್ಕುಂ" (ಪುಂಗರಾ. ೦೪೯-೪೩); ಗುಣಮಿದು ದೋಷಮಿದೆಂಬೀ ಗಣದಮನೆತ್ತಱಿಗುಮಶ್ರುತ ಪ್ರಕೃತಿಜನಂ ತೃಣಸಸ್ಯಘಾಸವಿಷಯ ಪ್ರಣಯಂ ಸಮವೃತ್ತಿಯಪ್ಪವೊಲ್ಮೃಗಗಣದೊಳ್ (ಕವಿರಾ.೦-೮); ನೃಪಂಗೆ ಮನದೊಳ್ ತೃಣವಲ್ಲಘುವಾದುದಾವಗಂ ಸ್ತ್ರೈಣಸುಖಂ (ಕಾದಂಪು. ೦೯); ಗೋಸಮುದಾಯಕ್ಕೆ ಬಹುಪ್ರಕಾರತೃಣಮುಂ ಸುಚ್ಚಾಯೆಯುಂ ತಮ್ಮೊಳ ಪ್ರವಿತಂ ಕೇಳಸುಖಪ್ರದೇಶಮಸೆಗುಂ ವೃಂದಾವನಂ (ಜಗವಿ. ೩-೬೫); ಕಾಲೋಚಿತಕ್ಕೆದಿದಾ ತೃಣವೇ ಪರ್ವತವಲ್ಲವೇ(ಸೋಮೇಶ. ೦೬); ತೃಣಮುಂ ತನೆವೋದ ಬಟ್ಟಕ್ಕೊಣಗುವುದದಱಿಂದೆ ನರರ ಬಾಟ್ ಲಘುಕಾಲಂ (ಅನಂಪು. ೩-೭೧); ಪರರ ಪಸ್ತುವ ತೃಣಕೆ ಸರಿಯೆಂಬ ಭಾಷೆಯಿದು ರಾಘವಾಂಕಗೆ ಸಂದುದು (ಹಕಕಾ. ೧-೦೬) : ಕ್ಷಣವೊಂದು ಯುಗವಾಗಿ ತೃಣಕ್ಕಿಂತ ಕಡೆಯಾಗಿ ಎಣಿಸಲಾಱದ ಭವದಿ ನೊಂದೆ ನಾನು (ಪುರಂದ. ೧-೯೩-೨); ತೃಣಕೆ ಹಸುರೆಲ್ಲಿಯದು? ಬೇರಿನದೆ? ಮಣ್ಣಿನದೆ? (ಪುಂಕಾಳ. ೩೩). ೨. (ಆಲಂ) ಅಲ್ಪವಾದುದಂ; ಕನಿಷ್ಠವಾದುದಂ: ಚತುರಾಹವದ ಕೋವಿದ ದೇವದಲ್ಲಣನು ಅಣುವ ಮೊದಲಾದವರ ತೃಣವೆಂದೆಣಿಸಿ ಬಗೆಯದೆ ಬಂದ ... ಖಳಮಲ್ಲ (ಕಾಶಿಖ. ೩೬-೦೩).

ತೃಣಕೆ ಕೊಳ್ = ಕೀಳಾಗಿ ಕಾಣಂ: ತೃಣಕೆ ಕೊಂಬೆನೆ ಫಲುಗುಣನ ಕಣಗಿಣಿಯನು (ಕುವಾ್ಯ. ೫-೮). [ಸಂ.]

ತೃಣಕಣ (ನಾ). ಹುಲ್ಲಿನ ಚೂರಂ: ವೆಗ್ಗೊರ್ವಳೊಲಿದಳಂ ರಕ್ಷಿವ್ಯುದೇಂ ಕರಿಗೆ ತೃಣಕಣದ ಭಾರಕಣಿಯಲ್ಲೆ (ಶ್ರೀರಾಮಾ. ೮೮-೩೬೬).

[ತೃಣ + ಕಣ₃]

ತೃಣಕಬಳ (ನಾ). ಹುಲ್ಲಿನ ತುತ್ತು: ತೃಣಕಬಳಂ ಜಗುಳಿ ಬಾಯಿನರೆಯದು ಹರಿಣಿಗಣಂ (ಶಾಳುಂತ. ೫೪-೯೦). [ತೃಣ+ಕಬಳ್ (=ಕಬಲ)]

ತೃಣಕಲ್ಪ (ನಾ). (ಆಲಂ) ಹುಲ್ಲಿಗೆ ಸಮಾನವಾದುದಂ; ಅಲ್ಪವಾದುದಂ; ಕೀಳಾದುದಂದು: ರಾವಣನ ರೂಪು ಸೀತಾದೇವಿಗೆ ತೃಣಕಲ್ಪಮಾಯ್ತು (ಪಂರಾಮಾ. ೦೪-೦೦೮). [ಸಂ.]

ತೃಣಕುಂಕುಮ (ನಾ). ಒಂದು ಬಗೆಯ ಸಂಗಂಧ ಸಸ್ಯ: "ಲೋಹಿತಂ-ಹರಿಚಂದನ, ತೃಣಕುಂಕುಮ, ಚೆಂಬು" (ಓಷಧಿ. ೦೪೭). [ಸಂ.]

ತೃಣಕುಟಿ (ನಾ). ಹುಲ್ಲಿನ ಗುಡಿಸಲುಂ; ಜೋಪಡಿ: "ತೃಣಕುಟವುಲ್ಲುಡಿ" (ಪಸ್ತುಕೋ. ೪೬-೯): ಜರೆ ಬಿಜಿಗಾಳಿ . . . ಮದೀಯ ಕಾಯತೃಣಕುಟಿಯಂ ಜರ್ಝರಿತಂ ಮಾಡದ ಮುನ್ನಮೆ ಪರಮತಪೋಭರಮನಾಂಪ ಬಗೆಯಂ ಬಗೆದೆಂ (ಚಂದ್ರಪು. ೪-೦೬) ; ತೃಣಕುಟಿಯೊಳ್ ಮಣಿಭವನಂ ತೃಣಕಲ್ಪಿತ ಪುತ್ರಿಕಾಳಿಯೊಳ್ ಯುವತಿಗಣಂ .... ಎನುತ್ತ ವಿರ್ದನುದಾತ್ತಂ (ಪಾರ್ಶ್ವಪು. ೬-೬) : ಪೊಕ್ಕಳಾ ತ್ರಿಜಟೆ ತೃಣಕುಟಿಗೆ (ಶ್ರೀರಾಮಾ. ೪೪೯-೩೪೭). [ತೃಣ + ಕುಟಿ]

ತೃಣಕುಟೀರ (ನಾ). = ತೃಣಕುಟಿ : ಎಮ್ಮನೆಡೆಗೊಳ್ವ ಕಾವಲಿನ ಬಟ್ಟೆಯೆಡೆ ಗರ್ವುದಾಕೆಯ ಸೆರೆಯ ತೃಣಕುಟೀರಂ (ಶ್ರೀರಾಮಾ. ೪೭೬-೪೪).

[ತೃಣ + ಕುಟೀರ]

ತೃಣಗ್ರಾಹಿ (ನಾ). ನೀಲಿಬಣ್ಣದ ರತ್ನ ; ನೀಲರತ್ನ : ಹವೋವಳ ವೊಸರ್ವವೊಲಿಂದುಕರಾವಳಿಗೆ ತೃಣಗ್ರಾಹಿ ನೀಳಮಣಿಯೊಸರ್ದವುದೇ (ಚಂದ್ರಪು. ೧-೩೯). 'ತೃಣಮಣಿ' ಪರಾ. [ಸಂ. ತೃಣಗ್ರಾಹಿನ್]

ತೃಣಚೂರ್ಣ (ನಾ). ಹುಲ್ಲಿನ ಚೂರು: ಒಡಿದ ತೃಣಚೂರ್ಣಮುಂ ರಾವಣ ಪ್ರತಿಗತ್ತು ವೊಗಮೆತ್ತದೆಯೆ ಸಂಬೋಧಿಸಿದಳವನಿಜಾತೆ (ಶ್ರೀರಾಮಾ. ೩೩೩-೭೦). [ತೃಣ + ಚೂರ್ಣ]

ತೃಣಜ್ಯೋತಿ (ನಾ). ಒಂದು ಬಗೆಯ ಗಿಡಮೂಲಿಕೆ ; ಕಂಗೊಂಗೆ ; ಜ್ಯೋತಿಷ್ಮತೀಲತೆ : "ತೃಣಜ್ಯೋತಃ— ತೃಣಜ್ಯೋತಿ" (ಓಷಧಿ. ೬೨).

[ಸಂ. ತೃಣಜ್ಯೋತಿಸ್]

ತೃಣದರ್ಭೆ (ನಾ). ದರ್ಭೆಯಂಲ್ಲಿ ಒಂದು ಬಗೆ: "ಕುಶಂ . . . ಪವಿತ್ರಂ – ೪ ದರ್ಭೆಹುಲ್ಲಿನ ಹೆಸರುಗಳು. ವಿಶ್ವಾಮಿತ್ರದರ್ಭೆ, ಬ್ರಹ್ಮದರ್ಭೆ, ವಸಿಷ್ಠದರ್ಭೆ, ತೃಣದರ್ಭೆ" (ಸಿದ್ಧಾಂತಿ. ೦೩೨).

[ತೃಣ + ದರ್ಭೆ]

ತೃಣದ್ರುಮ (ನಾ). ತಾಳೆಜಾತಿಗೆ ಸೇರಿದ ಪಂರೆ: "ಹಿಂತಾಲಸಹಿತಾ-ಕೆರುತಾಳೇಗಿಡದೊಂದಿಗೆ ಸೇರಿದ ತಾಳ, ನಾರಿಕೇಳ, ಕ್ರಮುಕಗಳು, ಖರ್ಜೂರಃ – ಖರ್ಜೂರಹಣ್ಣಿನ ಗಿಡ, ಕೇತಕಿ – ಕೇದಗಿ ಹುವ್ವಿನ ತಾಳೆ

ಗಿಡವು. ತಾಳೀ. ಶ್ರೀತಾಳವಾಲೇಗಿಡವೂ. ಏರ್ಜೂರೀ—ಈಚಲುಮರ—೮ ತೃಣದ್ರುಮ" (ನಿಘಂ೦ಟು. ೧೫೨). [ತೃಣ + ದ್ರುಮ]

ತೃಣಧಾನ್ಯ (ನಾ). ಸಜ್ಜೆ, ನವಣೆ ಮೊದಲಾದ ಬಿತ್ತನೆಯಿಲ್ಲದೆ ತಾನಾಗಿ ಬೆಳೆಯುವ ಧಾನ್ಯ; ಕಾಡುನವಣೆ: "ತೃಣಧಾನ್ಯಂ, ನೀವಾರಃ – ಈ ೨ ಹೊಡೆಹುಲ್" (ಹಲಾಯು. ೯೬-೪೦); ತೃಣಧಾನ್ಯದ ಅರನೆಯ ಭಾಗವನ್ನು ನಮಗೆ ಕೊಡಬೇಕು (ಶಾಳುಂತ. ೨೬-೧೧). [ತೃಣ + ಧಾನ್ಯ]

ತೃಣಧ್ವಜ (ನಾ). ೧. ಬಿದಿರಂ; ವೇಣುಂ: "ವಂಶಃ, ತ್ವಕ್ಸಾರಃ, ಕರ್ಮಾರಃ, ತ್ವಚಿಸಾರಃ, ತೃಣಧ್ವಜಃ ...ತೇಜನಃ– ೧೦ ಬಿದುರು ಹೆಸರು" (ನಿಘಂ೦ಟು. ೦೩೦). ೨. ತಾಳೆಮರ. [ಸಂ.]

ತೃಣಪುರುಷ (ನಾ). ೧. ಹೊಲ, ಹೊಸ ಕಟ್ಟಿಡ ಮುಂತಾದ ಕಡೆಗಳಲ್ಲಿ ನಿಲ್ಲಿಸಂವ ಹುಲ್ಲುಂ ತುಂಬಿದ ಬೊಂಬೆ; ಬೆಚರ್ಗು; ಬೆದರುಗೊಂಬೆ: "ಬೆಚರ್ಗು–ಸಂತ್ರಾಸೇ(ಭಯಪಡು),ತೃಣಪುರುಷೇ ಚ (ದೃಷ್ಟಿಪರಿಹಾರಾರ್ಥವಾಗಿ ಮಾಡಿರುವ ಬೊಂಬೆ)" (ಕಮುಧಾ). ೨. ತೃಣಪ್ರಾಯನಾದ ಮನುಷ್ಯ; ಅಲ್ಪವ್ಯಕ್ತಿ: ತೃಣಪುರುಷನಾಗಿ ಕಲ್ಪಿಸಿ ರಣರಭಸಮನಪ್ಪಕೆಯ್ದುವಂ ಬಗೆಯದೆ ರಾವಣನುಮಂ...ರಘುರಾಮಂ (ಪಂರಾಮಾ. ೧೧-೬). [ತೃಣ + ಪುರುಷ]

ತೃಣಪೂರ (ನಾ). ಹುಲ್ಲಿನ ಕಂತೆ,— ಹೊರೆ: "ತೃಣಪೂರ ಪುಷ್ಪಧಾರಣಗಳೊಳು ಸೂಡು" (ಶಲ್ಯಮಂ. ೯೩). [ತೃಣ + ಪೂರ1]

ತೃಣಪ್ರತಿ (ನಾ). ಹುಲ್ಲುಕಡ್ಡಿಗೆ ಸಮಂವಾದಂದಂ; ಅಲ್ಪವಾದಂದಂ: ಮನುಜದನುಜಾಮರಮಹೋರಗಜನ ತೃಣಪ್ರತಿಯಾಯ್ತು (ತೂರರಾ. ೧-೮-೩೦). [ತೃಣ + ಪ್ರತಿ]

ತೃಣಪ್ರಾಯ (ಗು). ಹುಲ್ಲಿಗೆ ಸಮಾನವಾದ; ನಿಕೃಷ್ಟ; ನಿಷ್ಪ್ರಯೋಜಕ: "ತೃಣಪ್ರಾಯ–ಹುಲ್ಲುಕಡ್ಡಿಯ ಸಮಾನ" (ಗಂಗಾಮ. ೦೫೬); ರಾವಣನನ್ನು ರಾಮನು ತೃಣಪ್ರಾಯವಾಗಿ ಕಂಡನು (ಕೂಡಿ). [ಸಂ.]

ತೃಣಮಣಿ (ನಾ). =ತೃಣಗ್ರಾಹಿ: ಕಾರೂಬಾಮಣಿ; ಶಿಲಾರಾಳ; ತೃಣಮಣಿ; ತೈಲಸ್ಫಟಿಕ; ಅಂಬರ್ (Amber. ಇಂಳಿನಿ). [ಸಂ.]

ತೃಣಮನುಜ (ನಾ). ಅಲ್ಪಮನುಷ್ಯ; ಹುಲುಮಾನವ; ಕೆಲಸಕ್ಕೆ ಬಾರದವನಂ: ತೃಣಮನುಜರು ಕೈಮುಗಿದು ವಂದನೆ ಮಾಡೆ ಅನುಮಾನ ಇಲ್ಲದೆ ಪಾಟಿಸುವ ಕರ್ಣ (ತೀರ್ಥರಾ. ೧೬೧). [ತೃಣ + ಮನುಜ]

ತೃಣಮಾತ್ರ (ನಾ). ಅಲ್ಪವಾದಂದಂ; ಸ್ವಲ್ಪವಾದಂದಂ: ನಿಜವಾದ ಸಂನ್ಯಾಸಿಗಳು ಐಶ್ವರ್ಯವನ್ನು ತೃಣಮಾತ್ರದಂತೆ ಕಾಣುತ್ತಾರೆ (ಕೂಡಿ).

[ಸಂ. ತೃಣಮಾತ್ರಂ]

ತೃಣರಾಜ (ನಾ). ೧. ತಾಳೆಮರ; ತಾಳವೃಕ್ಷ: "ತೃಣರಾಜಃ, ತಲಃ ತಾಲಃ – ಈ ೩ ತಾಟಿ" (ಹಲಾಯು. ೩೨-೩೯). ೨. ತೆಂಗಿನ ಮರ. ೩. ಬಿದಿರು. ೪. ಕಬ್ಬು. [ಸಂ.]

ತೃಣರಾಶಿ (ನಾ). ಹುಲ್ಲಿನ ಹೊರೆ,—ವೆಂದೆ: "ತೃಣರಾಶಿ ಹೆಡ್ಡತ್ವಗಳಿಂಗೆಸಗು ವೆಂದೆ" (ಶಲ್ಯಮಂ. ೦೦೦). [ತೃಣ + ರಾಶಿ]

ತೃಣವಿಡಿ (ಕ್ರಿ). ಹುಲ್ಲನ್ನು ಹಿಡಿ: ಸುಬುದ್ಧಿಯರುಹಿದ ಬಸವ ಕೆಡಬ್ಯಾಡೆಂದು ತೃಣವಿಡಿದು (ಬಿಜ್ಞಪ್ತಿ. ೬೧-೩೨).

ತೃಣವಿಡಿದು ಹೇಳು=ನಿರ್ಧಾರವಾಗಿ ಹೇಳಂ; ಸ್ಪಷ್ಟವಾಗಿ ಹೇಳು; ಕಡ್ಡಿಮುರಿದಂ ಹೇಳಂ. [ತೃಣ + ಪಿಡಿ1]

ತೃಣಶಯ್ಯೆ (ನಾ). ಹುಲ್ಲಿನ ಹಾಸಿಗೆ: ರಘುಜರ್ ನದೀತಟದ ತೃಣಶಯ್ಯೆಯೊಳ್ ಮಲಗಿ (ಶ್ರೀರಾಮಾ. ೩೧-೯೨). [ತೃಣ + ಶಯ್ಯೆ]

ತೃಣಶಿಖರ (ನಾ). ಹುಲ್ಲಿನ ತುದಿ: ತೃಣಶಿಖರಾಧ್ಯುಷಿತಾಂಭಃಕಣಸಂಚಲಮಮರಚಾಪಚಪಲಂ ವಿದ್ಯುತ್ಕ್ಷಣಿಕಂ . . . ಯೌವನರೂಪವಿಭವ ಭೋಗಾಭೋಗಂ (ಆದಿಪು. ೪-೬೫). [ತೃಣ + ಶಿಖರ]

ತೃಣಶೂನ್ಯ (ನಾ). ಒಂದು ಬಗೆಯ ಮಲ್ಲಿಗೆ: "ತೃಣಶೂನ್ಯಾ, ಮಲ್ಲಿಕಾ, ಭೂಪದೀ, ಶೀತಭೀರುಃ—೪ ಮಲ್ಲಿಗೇಗಿಡದ ಹೆಸರುಗಳು" (ನಿಘಂ೦ಟು. ೦೦೨). [ಸಂ.]

ತೃಣಾಗ್ರ (ನಾ). ಹುಲ್ಲಿನ ತುದಿ: ತೃಣಾಗ್ರಗತವಾಃಕಣಿಕಾಗಣದಂತೆ ಸಂದ ಜೀವನಂ (ಪಂಚತಂ. ೫೯-೦೩). [ತೃಣ + ಅಗ್ರ1]

ತೃಣಾಸನ (ನಾ). ಹುಲ್ಲಿನ ಪೀಠ; ಹುಲ್ಲಿನ ಚಾಪೆ: ದಾರುಕಾಸನ ಧಾಗ್ಯಹಾನಿ ಎರಲು ತೃಣಾಸನವಶೋಕವು (ಗಗಣಾ. ೪-೩೨). [ತೃಣ + ಆಸನ]

ತೃಣೀಕರಿಸು (ಕ್ರಿ). ಹುಲ್ಲಿಗೆ ಸಮವೆಂದು ಭಾವಿಸು; ಅಲ್ಪವಾಗಿ ಎಣಿಸು; ಕ್ಷುಲ್ಲಕವಾಗಿ ಕಾಣು; ತುಚ್ಛೀಕರಿಸು: ಆ ಮಾಯಾಜನಿತ ವಸ್ತುಗಳಲ್ಲಿ ಬೇಕು ಬೇಡಂಬುದನಳದು ನಿಂದ ವಿಮಲವಿರಕ್ತಿಯಿಂದವು ತೃಣೀಕೃತ ಜಗತ್ತ್ರಯಂ ತೃಣೀಕರಿಸಲ್ಪಟ್ಟ ಮೂರು ಲೋಕವಳ್ಗೆಂಥಾ ಸದ್ಗುರುಂ ಶ್ರೀ ಗುರುವನು (ಶಿವಪ್ರ. ೪೦-೧೦); ನೂರಾರು ಸಾವಿರಾರು ಮಂದಿಯ ಸಂಕಟವನ್ನು ತೃಣೀಕರಿಸಿ ಒಬ್ಬಿಬ್ಬರ ಸಂಕಟದ ಪರಿಹಾರಕ್ಕಾಗಿ ಅವನು ಸಮಾಜದ ಯಾವ ಘಾತಕರ ವಿರುದ್ಧವಾಗಿ ನಿಡಿದಿದ್ದನೊ ಅಂಥವರನ್ನೆ ಈಗ ಆಶ್ರಯಿಸಬೇಕಾಯಿತು (ಪುವರು. ೩೩೩).

[ತೃಣೀಕರಣಂ + – ಇಸ್ಕು]

ತೃಣೀಕೃತ (ಗು). ಹುಲ್ಲಿಗೆ ಸಮಾನವಾಗಿ ಎಣಿಕೆಯಾದ: ಅಭಿನವ ಯೌವನಾವಷ್ಟಂಭಪ್ರಾಗಲ್ಭ್ಯದೃಷ್ಟಿಪಾತ ತೃಣೀಕೃತತ್ರಿಭುವನನುಮಷ್ಟ ನೊರ್ವಂ ರಾಜಕುಮಾರಂ (ಆದಿಪು. ೩-೯೦೪); ಲೋಕಸನ್ನುತಗುಣತೃಣೀಕೃತಲೋಕನವಿರಳಶೀಲ...ಸಂಸಾರಮಾಯಾರಿ (ಬಸಪು. ೩೯-೩). [ಸಂ.]

ತೃಣ್ಯೆ (ನಾ). =ತೃಣರಾಶಿ: "ತೃಣ್ಯೆ=ಹುಲ್ಲಿನ ಸಮುದಾಯು" (ಗಂಗಾಮ. ೦೫೬). [ಸಂ. ತೃಣ್ಯಾ]

ತೃತಿಯ (ಗು). ೧. ಮೂರನೆಯ. (ನಾ). ೨. ಮೂರನೆಯದು: ಪ್ರಥಮಾದಲಿ ಹುಲಿಯಂತೆ ದ್ವಿತಿಯದಲಿ ಇಲಿಯಂತೆ ತೃತಿಯದಲಿ ತಾನು ಕಪಿಯಂತೆ ಕವಿಗಳಲಿ ಮತಿವಂತರಜುಹ (ಸರ್ವಜ್ಞ. ೩೧೦೦).

[<ಸಂ. ತೃತೀಯ]

ತೃತೀಯ (ಗು). ೧. ಮೂರನೆಯ: ಸಮವಸರಣಮಂ ಪೊಕ್ಕು ಪ್ರಥಮ ದ್ವಿತೀಯ ತೃತೀಯ ಪೀಠಂಗಳುಮನನುಕ್ರಮದಿನರ್ಚಿಸಿ (ಶಾಂತಿಪು. ೯-೬೯೪). (ನಾ). ೨. ತಾಂಬೂಲಕ್ಕೆ ಬಳಸುವ ಪಸ್ತುಗಳಲ್ಲಿ ಮೂರನೆಯಂ ಘಟಕ; ಸುಣ್ಣ: (ಕ). [ಸಂ.]

ತೃತೀಯಕಲ್ಯಾಣ (ನಾ). [ಜೈನ] ಪಂಚಕಲ್ಯಾಣಗಳಲ್ಲಿ ಮೂರನೆಯಂದಂ; ಸಂಸಾರದಿಂದ ಮುಂಕ್ಕನಾದ ತೀರ್ಥಂಕರನಿಗೆ ಸಲ್ಲುವ ಪರಿನಿಷ್ಕ್ರಮಣಕಲ್ಯಾಣ: ಅನ್ನೆಗಂ ಸೌಧರ್ಮೇಂದ್ರಸಮೇತಂ ಚತುರ್ವಿಧಮಿಶ್ರ ನಿಕಾಯಂ ತೃತೀಯಕಲ್ಯಾಣಕರಣೋತ್ಸುಕತ್ವದಿಂ ಬಂದು ಭಗವತ್ಪಾದ ಪಯೋರುಹಕ್ಕೆಱಗೆ (ಶಾಂತಿಪು. ೯-೦೦೯೪). [ತೃತೀಯ + ಕಲ್ಯಾಣ]

ತೃತೀಯತೆ (ನಾ). [ವ್ಯಾಕ] ವರ್ಗದ ಮೂರನೆಯಂ ಅಕ್ಷರ: ಪೂರ್ವೋಕ್ತ ಸೂತ್ರದಿಂ ಪರದ ಕತವಕ್ಕೆ ತೃತೀಯಾತೆಯಕ್ಕುಂ; ಪೂರ್ವಪದಾಂತ್ಯಕ್ಕೆ ದೀರ್ಘಮುಮುತ್ತರವದದಾದಿಗೆ ಲೋಪಮುಮಕ್ಕುಂ (ಕಮುದ. ೪೯೩ ವೃತ್ತಿ). [ಸಂ. ತೃತೀಯತಾ]

ತೃತೀಯತ್ವ (ನಾ). =ತೃತೀಯಂತೆ: ತಕಾರದ ತೃತೀಯತ್ವಕ್ಕೆ-ಕಡ್ಡಿಅವು; ಮೇಲ್ದುಡುಗೆ (ಕಮುದ. ೬೩ ಪ್ರಯೋ). [ಸಂ.]

ತೃತೀಯದ್ವೀಪ (ನಾ). [ಜೈನ] ಜೈನಗ್ರಂಥಗಳಲ್ಲಿ ಹೇಳಿರುವ ಮುಂಖ್ಯವಾದ ಎಂಟುದ್ವೀಪಗಳಾದ ಜಂಬೂದ್ವೀಪ, ಧಾತಕೀದ್ವೀಪ, ಪುಷ್ಕರವರದ್ವೀಪ, ವಾರುಣೀವರ, ಕ್ಷೀರವರ, ಘೃತವರ, ಇಕ್ಷುವರ ಮಂತ್ತು ನಂದೀಶ್ವರ ಎಂಬುವುಗಳಲ್ಲಿ ಮೂರನೆಯದು; ಪುಷ್ಕರದ್ವೀಪ; P ಪುಷ್ಕರವರಸಮುದ್ರದಿಂದ ಸುತ್ತುವರಿದ

೧೬,೦೦,೦೦೦ ಯೋಜನ ವಿಸ್ತಾರವಾದ ಈ ಪುಷ್ಕರದ್ವೀಪದ ಮಧ್ಯದಲ್ಲಿ ಕಂಡಲಾಕಾರವಾದ ಮಾನುಷೋತ್ತರವೆಂಬ ಪರ್ವತ ವಿದೆ. ಇದರಿಂದಾಗಿ ಈ ದ್ವೀಪವು ಇಬ್ಭಾಗವಾಗಿದೆ. ಇದರ ಒಳ ಭಾಗದಲ್ಲಿ ಮನುಷ್ಯರಂ ವಾಸಮಾಡುತ್ತಾರೆ. ಹೊರಭಾಗವು ಮನುಷ್ಯವಾಸಕ್ಕೆ ಯೋಗ್ಯವಾಗಿಲ್ಲ: ತೃತೀಯದ್ವೀಪದಂತೆ ನಿವಿಷ್ಟೇಷ್ವಾ {ಷ್ವಾ} ಕಾರಮಾನುಷೋತ್ತ {ತ್ತ} ರಮುಂ . . . ಅಷ್ಟ ಸಂಗ್ರಾಮ ಭೂಮಿಯಂ ಪೊಱಮಟ್ಟು (ಕಂದ್ರಪು. ೦೨-೦೦೫೪). 'ಜಂಬೂದ್ವೀಪ' ಪರಾ. [ತೃತೀಯ + ದ್ವೀಪ]

ತೃತೀಯಪೀಠ (ನಾ). ೧. ಮೂರನೆಯ ಆಸನ. ೨. [ಜೈನ] ಜಿನನು ಸಮವಸರಣದಲ್ಲಿ ವಂಡಿಸುವ ಮೂರು ಪೀಠಗಳನ್ನೊಳಗೊಂಡ ಆಸನದಲ್ಲಿ ಮೂರನೆಯದು,–ವೇಲಿನದು: ಸಮವಸರಣಮಂ ಪೊಕ್ಕು ಪ್ರಥಮ ದ್ವಿತೀಯ ತೃತೀಯಪೀಠಂಗಳುಮನನುಕ್ರಮದಿನರ್ಚಿಸಿ (ಶಾಂತಿಪು. ೯-೬೯ ಪ). 'ದ್ವಿತೀಯಪೀಠ' ಪರಾ. [ತೃತೀಯ+ಪೀಠ]

ತೃತೀಯವೃತ್ತಿ (ನಾ). [ವ್ಯಾಕ] ವರ್ಗದ ಮೂರನೆಯ ಅಕ್ಷರ ಆದೇಶವಾಗಿ ಬರುವುದು: ಒಂದರಡರ್ಕೆ ಜಕಾರಕ್ಕಂದಾದೇಶ ರೇಫಗಂ ಡತ್ವಕ್ಕಂ ಬಂದಾದೇಶ ಱಟಕ್ಕಂ ಸಂಧಿಸಲು ತೃತೀಯವೃತ್ತಿ ಕತಪಕ್ಕೆಂದುಂ (ಶಬ್ದ. ೬೬). [ತೃತೀಯ + ವೃತ್ತಿ]

ತೃತೀಯಾಕೃತ (ನಾ). ಮೂರು ಸಾರಿ ಉತ್ತ ಭೂಮಿ: ಮೂರು ಉಕ್ಕೆ ಆದುದು: "ತ್ರಿಗುಣಾಕೃತಂ, ತೃತೀಯಾಕೃತಂ, ತ್ರಿಹೆಲ್ಕಂ, ತ್ರಿಸೀತ್ಕಂ –ಳ ಮೂರುಸಾಲು ಉತ್ತ ಭೂಮಿ" (ನಿದ್ಯಾಂತಿ. ೨೩೭). [ಸಂ.]

ತೃತೀಯಾಕ್ಷರ (ನಾ). [ವ್ಯಾಕ] ವರ್ಗದ ಮೂರನೆಯ ಅಕ್ಷರ; ಗ, ಜ, ಡ, ದ, ಬ ಎಂಬ ಅಕ್ಷರಗಳು: ಪದವಿಧಿಯಿಂ ನೆರೆದುತ್ತರ ಪದದಾದಿಯೊಳ್ನಿಂದ ನಿಂದ ವರ್ಗಪ್ರಥಮಕ್ಕದಱ ತೃತೀಯಾಕ್ಷರಮಪ್ಪುದದಕ್ಕುಂ ಬಹುಳಮುಟಿಯೆ ಚಟವರ್ಗಂಗಳ್ (ಶಾಪ್ರಾಪ. ೩೪); ಇರೆ ವರ್ಗಪ್ರಥಮಂಗಳ್ ಪರದೊಳ್ ಚಟವರ್ಗಮುಟಿಯೆ ತಮ್ಮ ತೃತೀಯಾಕ್ಷರಮಕ್ಕುಂ ಪದವಿಧಿಯೊಳ್ ಪರಿಹರಿಸಲ್ಬಾರದಲ್ಲಿ ಬಹುಳಸ್ಥಿತಿಯಂ (ಕಪುದ. ೬೫). [ತೃತೀಯ + ಅಕ್ಷರ]

ತೃತೀಯಾಪ್ರಕೃತಿ (ನಾ). ಷಂಡ; ನಪುಂಸಕ: "ತೃತೀಯಾಪ್ರಕೃತಿಃ, ಷಂಡಃ, ಕ್ಲೀಬಂ, ಷಂಡೋ, ನಪುಂಸಕಂ – ೫ ನಪುಂಸಕನ ಪೆಸರುಗಳು" (ನಿದ್ಯಾಂತಿ. ೦೫೫). [ಸಂ.]

ತೃತೀಯಾವಿಭಕ್ತಿ (ನಾ). [ವ್ಯಾಕ] ನಾಮವಿಭಕ್ತಿಗಳಲ್ಲಿ ಮೂರನೆಯದಂ; P ಇದಂ ಕರಣವನ್ನು ಕಾರಣವನ್ನು ತಿಳಿಸುವ ಶಬ್ದಗಳ ವೇಲೆಯೂ ಕರ್ಮಣಿಪ್ರಯೋಗದಲ್ಲಿ ಕರ್ತೃಪದದ ವೇಲೆಯೂ ಬರುವುದು: ತೃತೀಯೆಯಂ – ತೃತೀಯಾವಿಭಕ್ತಿಯ ರೂಪಂ (ಶಮದ. ೦೧೬ ಟೀಳ). [ಸಂ.]

ತೃತೀಯೆ (ನಾ). ೧. ಮೂರನೆಯವಳು: ಈತಂ ನಿಸರ್ಗಭಿನ್ನನಿ ಕೇತನಮಂ ಶ್ರೀಸರಸ್ವತೀದ್ವಯಮಂ ತಂದೋತೊಂದೆ ಮೆಯ್ಯೊಳಿರಿಸಿದನೇ ತಡವವರೊಳ್ ತೃತೀಯೆಯಾಗಿರು ನಿರುತಂ (ಶಾಂತಿಪು. ೫-೦೦೫). ೨. ಪಕ್ಷದ ಮೂರನೆಯ ದಿನ; ತದಿಗೆ. ೩. [ವ್ಯಾಕ] ತೃತೀಯಾವಿಭಕ್ತಿ: ಪತ್ತಿಸುವರ್ ಮೂದೆಱನಂ ಪತ್ತ ತೃತೀಯೆಯನೆಕಾರಮಂ ಪರಿಹರಿಪರ್ (ಶಬ್ದ. ೧೦೬). [ಸಂ. ತೃತೀಯಾ]

ತೃಪತಿ 'ತೃಪ್ತಿ' ನೋ.

ತೃಪತಿಪಡು (ಕ್ರಿ). = ತೃಪ್ತಿಗೊಳ್ಳು: ದೇವತಾದಿಗಳೆಲ್ಲ . . . ನಿಮ್ಮ ಪದನುತಿಯಿಂ ಕೃತಾರ್ಥರಾಗಿ ತೃಪತಿವಟ್ಟರ್ (ವೀಕೃಪು. ೧-೬-೦೩). [ತೃಪತಿ (< ತೃಪ್ತಿ) + ಪಡು$_1$]

ತೃಪ್ತ (ನಾ). ತೃಪ್ತನಾದವನು; ಸಂತುಷ್ಟ: ನಿಜಸುಖತೃಪ್ತನಿರ್ದನು ಜಡ ಬಧಿರ ಮೂಕಾಂಧರಂದದಲಿ (ನಿಡಾಗ. ೫-೬-೪). [<ಸಂ. ತೃಪ್ತ]

ತೃಪ್ತಿ, ತೃಪತಿ (ನಾ). ತೃಪ್ತಿ; ಸಂತುಷ್ಟಿ: ಅವರಿಮಿತ ಸಕ್ಕರೆಯ ಮೇಲೋಗರಂಗಳಂ ತೃಪ್ತಿಯನುಳಿದು ತಣಿಯದಾರೋಗಿಸುತ್ತಿರ್ದ ಕಪಿಲಸಿದ್ಧೇಂದ್ರಮಲ್ಲಯ್ಯಲಿಂಗಂ ಜಂಗಮದ ಮುಖದೊಳ್ (ಸಿದ್ಧಕಾ. ೪-೪೪). **ತೃಪತಿ**: ನಿಪುಣಮತಿ ಮಾಡುವುದು ಸುರಪತಿತೃಪತಿಯನು ಸುಶ್ರಾದ್ಧಮುಖದಲಿ (ನಿಡಾಗ. ೬-೦೪-೩೪). [<ಸಂ. ತೃಪ್ತಿ]

ತೃಪ್ತ (ಗು). ೧. ತೃಪ್ತಿಹೊಂದಿದ; ತಣಿದ; ಸಂತೃಪ್ತಿಗೊಂಡ. (ನಾ). ೨. ಸಂತೃಪ್ತಿಹೊಂದಿದವನು; ಸಂತುಷ್ಟನಾದವನು: ಪೋಡಶತೀರ್ಥಕರಪರಮೇಶ್ವರಂ ಪರಮಪದಪ್ರಾಪ್ತನುಮನಂತಸುಖಾವ್ಯತತೃಪ್ತನುಮಾಗಿರೆ (ಣಂತಿಪು. ೦೪-೫೦ ಪ); ತೃಪ್ತಂಗೆ ಕ್ಷುದ್ಭಯವೆ (ಗಗಣಾ. ೦೬-೪೪); ತೃಪ್ತನಿಗಾದರೂ ಮೃತ್ಯು ತಪ್ಪದು (ಗಾದ). [ಸಂ.]

ತೃಪ್ತಿ (ನಾ). ತಣಿವು; ಸಮಾಧಾನ; ತುಷ್ಟಿ: "ಪರ್ಯಾಪ್ತಂ, ಉಪಸಂಪನ್ನಂ, ತೃಪ್ತಿಃ, ಸೌಹಿತ್ಯಂ–ಈ ೪ ತ(ಣ)ಣುವು" (ಹಲಾಯು. ೫೪-೦೬೦); ನಿಮ್ಮ ಶರಣಂಗೆ ಆಪ್ಯಾಯನವಾದಡೆ ಎನಗೆ ತೃಪ್ತಿಯಾಯಿತ್ತು (ಬಸವ. ೮೫೬); ಘನತೃಷ್ಣಾತುರತೆ ಬೀಳುಕೊಂಡುದು ತೃಪ್ತಿ ನನಗಾಯ್ತು (ಕುವ್ಯಾಥೀ. ೦೦-೨೮); ಕೃಷ್ಣದೇವಂಗೆ ತಂದು ದ್ರೌಪತಿ ಇತ್ತ ಶಾಖಿವ ತಿಂದ ಮಾತ್ರದಲಖಿಳ ಮುನಿಜನರೊಂದೆ ತೃಪ್ತಿಯನನ್ಯರಾದರೆ ತೃಪ್ತಿಯೆಂತಹುದು (ಗಗಣಾ. ೦೩-೪೪); ತೃಪ್ತಿಯೆ ತಣಿದು ತೇಗಿದುದೆನಲ್ಕೆ ನಲಿದುದು ಜನಂ (ತ್ರಿರಾಮಾ. ೦೦-೪೮೩). [ಸಂ.]

ತೃಪ್ತಿಕರ (ಗು). ೧. ಸಮಾಧಾನ ಉಂಟುಮಾಡುವ; ತೃಪ್ತಿಗೊಳಿಸುವ. (ನಾ). ೨. ಸಮಾಧಾನ ಉಂಟುಮಾಡುವಂಥದು; ತೃಪ್ತಿಗೊಳಿಸುವಂಥದು: ಅವರ ಸದ್ಯದ ವರ್ತನೆ ತೃಪ್ತಿಕರವೆಂದೇ ಹೇಳಬಹುದು (ಪುಸರು. ೬೩೦). [ಸಂ.]

ತೃಪ್ತಿಗೊಳಿಸು (ಕ್ರಿ). ಸಂತುಷ್ಟಿಯನ್ನುಂಟುಮಾಡು; ಮೋದಗೊಳಿಸು; ತಣಿಸು: ಮೇಘಗಳು ಭೂಮಿಯನ್ನು ತೃಪ್ತಿಗೊಳಿಸುತ್ತವೆ (ಪುಚ್ಛಾರ. ೫೯೩). [ತೃಪ್ತಿ + ಕೊಳ್$_1$ + –ಇಸು$_3$]

ತೃಪ್ತಿಗೊಳ್ಳು (ಕ್ರಿ). ತಣಿ; ಸಮಾಧಾನ ಹೊಂದು: ಅವಳು ಆ ವೃತ್ತಿಯಿಂದ ತೃಪ್ತಿಗೊಂಡಿದ್ದಂತೆ ಮಾತ್ರವಲ್ಲ, ಹೆಮ್ಮೆಪಡುತ್ತಿದ್ದಂತೆ ಕಂಡಳು (ಪುಸರು. ೦೯೭). [ತೃಪ್ತಿ + ಕೊಳ್ಳು$_1$ (<ಕೊಳ್$_1$)]

ತೃಪ್ತಿಪಡಿಸು 'ತೃಪ್ತಿವಡಿಸು' ನೋ.

ತೃಪ್ತಿಪಡು 'ತೃಪ್ತಿವಡು' ನೋ.

ತೃಪ್ತಿಲಿಂಗ (ನಾ). [ವೀಶೈ] ಲಿಂಗತ್ರಯಂಗಳಲ್ಲಿ ಒಂದು; ಭಾವಲಿಂಗ: ಬಳಿಕ ಇಷ್ಟಲಿಂಗ ಪ್ರಾಣಲಿಂಗ ತೃಪ್ತಿಲಿಂಗವೆಂದು ಶಿವಲಿಂಗತ್ರಯ ಭೇದಂಗಳವುಗಳಲ್ಲಿ . . . ಸಕಲಾವಸ್ಥೆಗಳಲ್ಲಿಯೂ ಶಿವಲಿಂಗದೊಡನನನ್ಯ ಭಾವನೆಯೇ ತೃಪ್ತಿಲಿಂಗಮಕ್ಕುಂ (ವಿಚೇಕ. ೦೫೭). [ಸಂ.]

ತೃಪ್ತಿವಡಿಸು, ತೃಪ್ತಿಪಡಿಸಂ (ಕ್ರಿ). ತಣಿಸಂ; ಸಂತುಷ್ಟಿಗೊಳಿಸು: ಸಶಿಷ್ಯಯಾಸಮ್ಮೇಳನದೊಳತಿತೃಪ್ತಿವಡಿಸಿ ದಯಾಳುವಂ ಬಿಜಯಂಗೆಯಿಸಿ ತಂದೊಳಗೆ ಕುಳ್ಳಿರಿಸಿ (ಬಸಪು. ೫೨-೪); ನುಡಿಸಿದ ಕೆಲರ ನೋಡಿದ ವಿನಯದಿ ತೃಪ್ತಿವಡಿಸಿದ ಪೆಣ್ಮನೋವ್ಯಥೆಯ ಬಿಡಿಸಿದ ಬೆಮರ್ವನಿಗಳನೆಲ್ಲರಿಗೋತು ಕೊಡಿಸಿದ ಸಕಲಸನ್ನಹವ (ಮೋಹಶ. ೦೬-೦೩), ಮಱಿಯೆ ಮಾತೇಕೀ ಕುವರನ ಸವಿಕೂಟಕೆಱಗಿದ ಮನದ ದೀಪನವ ನೆಱಿಯಾತನ ಸುರತದೆ ತೃಪ್ತಿವಡಿಸು (ಕಂನವಿ. ೯-೦೨೬). **ತೃಪ್ತಿಪಡಿಸು**: ಜನರ ಬಯಕೆಯನ್ನು ತೃಪ್ತಿಪಡಿಸುವ ಅಥವಾ ನಿರಾಕರಿಸುವ ಅಧಿಕಾರ ಅವರದು (ಪುಸರು. ೦೯೮). [ತೃಪ್ತಿವಡು + – ಇಸು$_3$]

ತೃಪ್ತವಡು, ತೃಪ್ತಿಪಡು (ಕ್ರಿ). ತಣಿ; ತುಷ್ಟಿಹೊಂದಂ: "ಪೂರಯತಿ=ತೃಪ್ತವಟ್ಟವುದು" (ಕಾಶಕ್ಕ. ೨೮೦). 'ತೃಪ್ತಿವಡಿಸಂ' ಪರಾ. **ತೃಪ್ತಿಪಡು.** 'ತೃಪ್ತಿಪಡಿಸಂ' ಪರಾ. [ತೃಪ್ತಿ + ಪಡು$_1$]

ತೃಷಾಪರ (ಗು). ೧. ಬಾಯಾರಿದ; ದಾಹದಿಂದ ಪೀಡಿತವಾದ; ನೀರಡಸಿದ. (ನಾ). ೨. ಬಾಯಾರಿದವನಂ; ನೀರಡಸಿದವನು: ಬಂದೀಯಂದಕೂವದೊಳ್ ಬಟ್ಟು ತೃಷಾಪರನೆಂ ರಸಮಂ ನೀರೆ ಗೆತ್ತು ವೊಗೆಯಲ್ (ನೇಮಿಪು. ೪-೯೦ ಪ). [ಸಂ.]

ತೃಷಾರ್ತ (ಗು). ೧. ಬಾಯಾರಿಕೆಯಿಂದ ಪೀಡೆಹೊಂದಿದ. (ನಾ). ೨. ನೀರಡಸಿದುದು: ಚಂಚು ಬೇಯೆ ತಲೆ ಬಿದಿರ್ದಸುವರೆಯೊದುದೂ ತೃಷಾರ್ತನೊಂದು ಮಯೂರಂ (ಜಂದ್ರಪು. ೯-೭೨). ೩. ಬಲವಾದ ಅಪೇಕ್ಷೆಯಿಂದ ತಳಮಳಗೊಳ್ಳುವುದು: ನಸ್ಸ ಮನಸ್ಸೋ ತೃಷಾರ್ತ ವಾಗಿತ್ತು (ಇಪ್ಪಳ ೪೪೮). [ಸಂ.]

ತೃಷಾವಿಷಾದ (ನಾ). ಬಾಯಾರಿಕೆಯಿಂದಾಗುವ ಬೇಪ: ಆತಪ ತಾಪಮಂ ತಳರ ಸತ್ತಿಗೆಯಿಂದೆ ತೃಷಾವಿಷಾದಮಂ ಶೀತಲ ತೋಯ ದಿಂದೆ ... ಪಥಶ್ರಮಾಂಬುವಂ ಸೀತೆಗೆ ತೂಳ್ದಿದಂ ಕದಳಿಕಾದಳವೀಜನ ದಿಂದೆ ರಾಘವಂ (ಪಂರಾಪು. ೭-೨೫). [ಸಂ.]

ತೃಷಾವಿಷಾದನ (ನಾ).=ತೃಷಾವಿಷಾದ: ವಾಃಕಣಸಂತತಿ ಸೋರೆ ಸೋರ್ದ ಡಂಗಿದುದೆಳಗಾರೊಳಾ ಸಕಳಚಾತಕಪೋತತೃಷಾವಿಷಾದನಂ (ಜಂದ್ರಪು. ೪-೪೬). [ಸಂ.]

ತೃಷಿತ (ಗು). ೧. ಬಾಯಾರಿದ; ನೀರಡಸಿದ. ೨. ಆಸೆಯಿಂದ ಕೂಡಿರುವ; ಹಂಬಲಿಸುವ: ತೃಷಿತದೃಷ್ಟಿಯನಟ್ಟಿ, ನಿಸ್ಸೀಮಘಾಸ ಸೀಮಾರ್ಣವದ ವಿಸ್ತೀರ್ಣದೊಳ್ ಮನಂ ಲಯವಾಗೆ ನೋಡಿ (ಶ್ರೀರಾಮಾ. ೨೬೭-೧೦೩): ತನ್ನ ತೃಷಿತ ಬಾಲಭಾವನೆಗೆ ನೀರೆರದು ಚಿಗುರಿಸುತ್ತಲೂ ಬಂದಿದ್ದಳು (ಜಯಂತ. ೫೭). (ನಾ). ೩. ಬಾಯಾರಿಕೆ. ೪. ಆಸೆ; ಅಪೇಕ್ಷೆ; ಬಯಕೆ. ೫. ಬಾಯಾರಿದವನು; ನೀರಡಸಿದವನಂ: "ತೃಷಿತಃ, ತರ್ಷಿತಃ, ಪಿಪಾ(ಸಃ), ಪಿಪಾಸಿತಃ—ಈ ೪ ನೀರಡಿಸಿದಾತಂ" (ಹಲಾಯು. ೫೯-೩೦೭): ಅತಿ ತೃ [ಪಾಣಾಂ. ಕೃ] ಪಿತನುಂ ಬಾಭುಕ್ಷಾನ್ವಿತನು ಮೆನಲ್ ಬೀಜ್ಜ ಕುಂಭಮುಂ ಪಿಡಿದಂ ... ತುಳಾರ್ಕ್ಷಮಧ್ಯತ್ರ್ಯಂಶಂ (ಜಾತಕ. ೦೯-೩೦). [ಸಂ.]

ತೃಷಿತನೇತ್ರ (ನಾ). ಆಸೆ ತುಂಬಿದ ಕಣ್ಣು; ಬಯಕೆಯ ಕಣ್ಣು: ತನ್ನಂತಹ ನತದೃಷ್ಟನ ಮುಂದೆ ಲೋಲಾನಂತಹ ಲಾವಣ್ಯವತಿಯು ತೃಷಿತನೇತ್ರದಿಂದ ಕುಳಿತು ಯಾಚಿಸುವುದು ದೈವವಿಡಂಬನೆಯೆಂದು ಕೊಂಡನು (ಜಯಂತ. ೦೬೭). [ತೃಷಿತ + ನೇತ್ರ]

ತೃಷೆ (ನಾ). ೧. ನೀರಡಿಕೆ; ಬಾಯಾರಿಕೆ: ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು ತೃಷೆಯಾದರೆ ಕೆಟ್ಟ ಥಾವಿ ಹಳ್ಳಂಗಳುಂಟು (ಕುಷಾದೇ. ಬ. ೭೯-೧೯೪): ಬಿಸಿಲ ಬಿಸಿಗೆ ಹಸಿವಿಂಗೆ ತೃಷೆಯುಬ್ಬರದ ಡಗೆಗೆ ಸೈರಿಸಲಾಜದನುಗೆಟ್ಟು ನಡೆಗೆಡಲು ತೊಡಗಿದರು (ಜಡಕಾ. ೯-೨೭): ನಂಬಿಯಣ್ಣನಸನಗಲ್ದ ದಿನಂ ಮೊದಲಾಗಿ ... ಹಸಿವು ತೃಷೆಯುಂ ಒಡನೊಡನಗಲ್ದ ವಿರಹವಿಹ್ವಳಿಗೆ . . . ಕೊಳವರ್ಕೈಗಳ ಕಳರವಂ ಶವದೂಷಕರ ನುಡಿಗೇಳ್ದ ಸದ್ಭಕ್ಷನಂತೆ ಕೇವಿಯೇಱು (ನಂಬಿರಾ. ೧೬-೮): ತೃಷೆಯಿಲ್ಲದೊಡುದಕಮೊಳ್ಳಿತೆನೆ ಕಾಡಿದಪರೇ (ಪಾರ್ಶ್ವಪು. ೧೫-೬೭): ನಳಸಂವತ್ಸರದೊಳ್ ಮುಂ ಘಟ್ಟಿಲೆನೆ ಮನುಜರ್ಗಮಧಿಕ ತೃಷೆ ತಾಸಕ್ಕು (ಅಬ್ಬಪು. ೭-೨೩); ಎತ್ತ ಹೋದುದೊ ಹಸಿವು ತೃಷೆ ಹೊಗದುತ್ತಮದ ಮಹಿಮಾತಿಶಯ ಹಸಿದತ್ತು ಮೊಲೆವಾಲಿಂಗೆ ಮೊಗಸು ವಡಿದು ವಿಚಿತ್ರವಲ (ತೊರಹಾ. ೦-೮-೭೪). ೨. ಆಸೆ; ಅಪೇಕ್ಷೆ: ತೃಷೆ ಇಲ್ಲದವ ಋಷಿಗೆ ಸಮಾನ (ಗಾದ). [ಸಂ. ತೃಷಾ]

ತೃಷ್ಣಕ (ನಾ). ೧. ಬಾಯಾರಿದವನು; ದಾಹವುಳ್ಳವನು. ೨. ಅತಿ ಆಸೆಯುಳ್ಳವನಂ; ಆಸೆಬುರುಕ: "ಆಲುಬ್ಧನಭಿಲಾಷುಕಂ ಗೃಧ್ನು ತೃಷ್ಣಕಂ ಮೇಲೆ ಬಯಸುವಸಕ್ಕು" (ಮುಂಗಡಾ. ೬೯-೦೦). [<ಸಂ. ತೃಷ್ಣಜ್]

ತೃಷ್ಣಾಕರೆ (ನಾ). ೧. ಬಾಯಾರಿಕೆಯನ್ನುಂಟುಮಾಡುವವಳು. ೨. ತೀವ್ರವಾದ ಅಪೇಕ್ಷೆಯನ್ನುಂಟುಮಾಡುವವಳು. ೧, ೨: ಮತ್ತಂ ಪಥೋರಾಶಿಯೊಳ್ಪುಟ್ಟಿಯುಂ ತೃಷ್ಣಾಕರೆಯುಂ ... ಪುರುಷೋತ್ಕಮ ರತೆಯಾಗಿಯುಂ ದುರ್ಜನಪ್ರಿಯೆಯುಮೆನಿಸಿ ಪರಸ್ಪರವಿರೋಧಿಯಪ್ಪ ನಿಜಚರಿತ್ರಮುಂ ಇಂದ್ರಜಾಲಮುಂ ತೋರ್ವಂತೆ ಮೆಱೆಯುತ್ತಿರ್ಪಳ್ (ಕಾಡಂಪು. ೩೩೦). [ಸಂ. ತೃಷ್ಣಾಕರಾ]

ತೃಷ್ಣಾಕುಲತೆ (ನಾ). ನೀರಡಿಕೆಯಂ ಬಾಧೆ; ದಾಹದ ಪೀಡೆ: ನನ್ನನು ಸಾತಿಕೊಂಡ್ಯೆ ಪಾರ್ಥ ಘನ ತೃಷ್ಣಾಕುಲತೆ ಬೀಳ್ಕೊಂಡುದತಿಶಯ ತೃಪ್ತಿ ನನಗಾಯ್ತು (ಕುವ್ಯಾಭೀ. ೧೦-೩೮). [ಸಂ. ತೃಷ್ಣಾಕುಲತಾ]

ತೃಷ್ಣಾತುರ (ಗು). ೧. ನೀರಡಿಕೆಯಿಂದ ತಪಿಸುವ; ನೀರಡಿಕೆಯ ಬಾಧೆಗೊಳಗಾದ: ಮಾತಂಗಿಯುಂ . . . ತೃಷ್ಣಾತುರಗದ್ಗದಕಾಂತೆ ಯನಾ ತಾಪಸನಾಗಳವಳನಿದಿರೊಳ್ ಕಂಡಂ (ಶುಳುಮಾ. ೪-೩೬). (ನಾ). ೨. ಅತ್ಯಾಸೆಯುಳ್ಳವನಂ: ಮಜುಗುವ ತೃಷ್ಣಾತುರರಂ ಮಜುಗಿಸುವರ್ ನೆಟ್ಟಿಯೆ ಮಜುಗಿ ಕುದಿವೆಣ್ಣೆಗಳೊಳ್ (ಶುಳುವಾ. ೧೦-೪೭). [ಸಂ.]

ತೃಷ್ಣಾಪರ (ನಾ). ಆಸೆಯುಳ್ಳವನು: ಅತಿ ತೃಷ್ಣಾಪರನಾಗಿ ಮುನ್ನೆ ತೊಡರ್ದಿರ್ದಾ ಗಾಂಪೆ ಸಾಲ್ದುಂ (ಆದಿಪು. ೦-೮೦). [ಸಂ.]

ತೃಷ್ಣಾಭಂಗ (ನಾ). ಆಸೆಯನ್ನು ತ್ಯಜಿಸುವಿಕೆ; ಆಸೆಯನ್ನು ಬಿಡುವಿಕೆ: ಸಾಂಗವೇದಾಧ್ಯಯನ ಸಜ್ಜನಸಂಗಶಾಸ್ತ್ರಶ್ರವಣ ತೃಷ್ಣಾಭಂಗ ಯಜನಾಧ್ಯಾನ ಮೌನ ವ್ರತ ಸದಾಚಾರ ... ಇವು ಸದ್ಗರ್ಗತಿಯಿಂದ (ಕುವ್ಯಾಅ. ೧೩-೦೫). [ಸಂ.]

ತೃಷ್ಣಾಭಿಭೂತ (ನಾ). ನೀರಡಿಕೆಯಿಂದ ಪೀಡಿತನಾದವನು; ದಾಹದಿಂದ ತೊಂದರೆಗೊಂಡವನಂ: ಮಧ್ಯಂದಿನ ಸಮಯದೊಳ್ ಲಲಾಟಂತಪಮಾದೆ ತವನತಾಪದಿಂ ತೃಷ್ಣಾಭಿಭೂತರಾಗಿ ಸಕಲಜನಾ ಪ್ಯಾಯನಕಾರಿಯಪ್ಪ ವೈಶಂಪಾಯನ ಸರೋವರಕ್ಕೆ ನೀರ್ಗುಡಿಯೆ ಪೋಗಿ (ಗದಾಯು. ೬-೩೭ ಪ). [ಸಂ.]

ತೃಷ್ಣೆ (ನಾ). ೧. ನೀರಡಿಕೆ; ಬಾಯಾರಿಕೆ: "ಉದನ್ಯಾ, ತರ್ಷಃ, ತೃಟ್, ತೃಷ್ಣಾ, ಪಿಪಾಸಾ—ಈ ೫ ನೀರಬಿಕ್ಕೆ" (ಹಲಾಯು. ೬೦-೩೦೬). ೨. ಬಯಕೆ; ಅಪೇಕ್ಷೆ: "ತೃಷ್ಣಾ, ಅಭಿಲಾಷಾ, ಲಿಪ್ಸಾ, ಆಶಾ, ಧನಾಯಾ, ಗರ್ಧನಾ—ಈ ೬ ಕಾಂಕ್ಷೆ" (ಹಲಾಯು. ೬೦-೩೦೯): ಅತಿಕಷ್ಟಮವ್ವವಸ್ಥಿತಿಯಂ ಮಱೆಯಿಸಿ ಜಳಾಭಿಲಾಷೆಯನೀ ಜೀವಿತತೃಷ್ಣೆ ಮಾಡಿತು (ಕಾದಂಪು. ೧೯೪); ಘನಂ ಕರಗೆ ಕಂಡು ಕಂಡಶನಿವೇಗವಿದ್ಯಾಧರಂ ಘನೋಪಲದ ಮಾಟಕ್ಯಯಿಂ ಕರಗೆ ತೃಷ್ಣೆ ಸಾಮ್ರಾಜ್ಯದೊಳ್ ಮನಸ್ವಿ ನಿಲುವೇಟ್ದು ತನ್ನ ಸುತನಂ ಸಹಸ್ರಾರನಂ ಜಿನೇಂದ್ರಮುನಿರೂಪಮಂ ತಳೆದನಸ್ತ ಸಂತಾಪಮಂ (ಪಂರಾಮಾ. ೧೦-೦೩೭): ಇಹಪರಂಗಳ ತೃಷ್ಣೆ ಭವ ರೋಗಂಗಳ ಬಂಧಸ...ಇಂತಪ್ಪ ಸಕಲ ಪ್ರಪಂಚಿನೊಳು ಸಿಲುಕದ..ಮಹಾ ಶರಣರ ತೋಱಿ ಬದುಕಿಸಾ ಎನ್ನ (ಆದಪ. ೨೦-೯೯): ವಾರಿಧಿಯೊಳಡಗಿ ನಿದ್ರಿಪ ಬಾಡವವೊ ತೃಷ್ಣೆ ಆರದನು ಕೆರಳಿಪರೊ (ಪುಂಳುಳ. ೨೭೭). ೧. ೨: ಮದನರಸಪ್ಪವಂ ಕವಿಯೆ ತಣ್ಣನಸಾಗದೆ ತೃಷ್ಣೆಗಿಂಬುಕೆಯ್ಯದೆ ಪಗೆಗೊಂಡು ಪೋಪುದು (ಶಾಂತಿಪು. ೪-೪೭): ಮಧುರದ ಪೊಲುನುಡಿಯ ಸುಧೆಯಿಂದ ತೃಷ್ಣೆಯನಕಟ ಪರಿಹರಿಸು (ಕುವ್ಯಾವಿ. ೨-೨೩). [ಸಂ. ತೃಷ್ಣಾ]

ತೃಷ್ಣೆಗೊಳ್ (ಕ್ರಿ). ನೀರಡಿಸು; ಬಾಯಾರಂ: ಬರಯಿಗಳ ಬಸುಸುಯ್ದುಂ ಪೊರೆದುದೆನೆ ಬನಗಾಳಿ ಬೆಚ್ಚನೆ ಶೀಡಿದುದು ಲೋಗರ್ ತೃಷ್ಣೆಗೊಂಡರ್ (ರಾಮಾಕ್ಕ. ೩೨-೦೨). [ತೃಷ್ಣೆ + ಕೊಳ್$_1$]

ತೆ1 (ಅ). ಛೀ, ತೆಗೆ, ಬಿಡಂ ಎಂಬ ಅರ್ಥದ ಧಿಕ್ಕಾರಸೂಚಕವಾದ ಪದ : ಮುಳಿದು ಶಶುಪಾಲನಾ ಸಭೆಯೊಳಗೆ ... ಉಚ್ಚಳಿಸಿ ನುಡಿದಂ ತೆ ಕಳಿಕಳಿ ಹರಿಗೆತ್ತಿದನರ್ಘ್ಯದರ್ಘ್ಯಮಂ ಧರ್ಮಸುತಾ (ಪಂಪಭಾ. ೬-೪೨) ; ಏಜಿಸಿದೊಡ್ಡವಂ ಬಿಡದೆ ಗೆಲ್ದ ಕೆರಳ್ದ ತೆ ಲೆಕ್ಕ ದಾಯವಂ ತೋ ೀ ಜಿ ದ ರೆಂಬ ... ಬನ್ನಿಣಂಬಡೆದಾದಂತವರಿರ್ವರೊಳಕ್ಷಖೇಳನಂ (ನಳಚಂ. ೬೫೮). [< ತೆಗೆ1]

–ತೆ2 (ಪ್ರ). ಒಂದು ಭಾವವಾಚಕಕೃದಂತಪ್ರತ್ಯಯಂ : ತೆಕಾರಕ್ಕೆ–ಅಗಟ್ತಿ, ಪೊಗಟ್ತಿ, ನೆಗಟ್ತಿ, ಪುಗುತೆ (ಶಮದ.-೩೦೦ ಪ್ರಯೋ); ನೆಗಟ್ತಿ, ಪೊಗಟ್ತಿ (ಕೃಪಟಿ. ೧೬).

–ತೆ3 (ಪ್ರ). ಒಂದು ತದ್ಧಿತಭಾವನಾಮಪ್ರತ್ಯಯ. 'ಚಡಾಳತೆ', 'ಚಾಕಚಕ್ಯತೆ' ಪರಾ.

ತೆಂ (ನಾ). ತೆಂಕು ಎಂಬ ಶಬ್ದಕ್ಕೆ ಸಮಾಸದಲ್ಲಿ ಆದೇಶವಾಗಿ ಬರುವ ರೂಪ. 'ತೆಂಗಾಳಿ', 'ತೆಂಬೆಲರ್' ಪರಾ.

ತೆಂಪಡುವಲು = ದಕ್ಷಿಣ ಹಾಗು ಪಶ್ಚಿಮದಿಕ್ಕುಗಳ ನಡಂವಣ ಭಾಗ; ನೈಋತ್ಯ: ಶಾಸನಗಳು ಆತನ ರಾಜ್ಯದ ಬಡಗಲ್ಲಿ ದೊರೆಯದೆ ತೆಂಪಡುವಲ್ಲಿ ಮಾತ್ರ ಕೆಲವೇನೋ ದೊರೆಯುವುದರಿಂದ (ಪೂರುಳು. ೭೧). ತೆಂಬಡಗಣ=ದಕ್ಷಿಣೋತ್ತರವಾದ: ತೆಂಬಡಗಣ ತೆವರಿಂ ಮೂಡಲ್ಗೆ ವತ್ತೆರಡು ಗೇಣಗಳೆಯಲು (ಎಕ. VIII. ಸಾಗರ. ೧೦೯-೬೬; 1042). ತೆಂಬಡಗಲು=ದಕ್ಷಿಣೋತ್ತರ: ಅದರಲ್ಲಿ ತೆಂಬಡಗಲಾಗಿ ಕೂಪಕ ... ಪರ ಕೊಂಕಣ ಎಂದು ಏಳು ದೇಶಗಳಿವೆ (ತುಳುನಾ. ೭೦). ತೆಮ್ಮೂಡಲು = ದಕ್ಷಿಣ ಹಾಗಂ ಪೂರ್ವ ದಿಕ್ಕುಗಳ ನಡಂವಣ ದಿಕ್ಕು; ಆಗ್ನೇಯಂ ದಿಕ್ಕು : ಆಗ್ನೇಯ ಮಾರುತ : ತೆಮ್ಮೂಡಲ ಗಾಳಿ (South Easter. ಇಂಗ್ಲಿ). ತೆಮ್ಮೂಡು=ತೆಮ್ಮೂಡಲು: ಈ ಸಾರಸ್ವತರ ಒಂದು ಶಾಖೆಯು ಶ್ರೀಹೋತ್ರ (ತಿಹರ್ತ) ದೇಶಕ್ಕೆ ತೆಮ್ಮೂಡಾಗಿ ಪ್ರವಾಸ ಮಾಡಿತ್ತೆಂದೂ ... ತಿಳಿಸುತ್ತಾರೆ (ತುಳುನಾ. ೧೬೦).

[<ತೆಂಕು./ತಮಿ. ಮಲ. ತೆನ್ ; ತುಳು. ತೆಣ್]

ತೆಂಕ 'ತೆಂಕಂ' ನೋ.

ತೆಂಕಂಡ (ನಾ). ದಕ್ಷಿಣದಿಕ್ಕಿನ ಭಾಗ,–ತಂಣುಕು (?): ವಾಣಿಗತೋಟ್ಟಂ ತೆನ್ನಣ್ಮಮುಂ ವಡಕಣ್ಮಮುಂ ವಿನಿತೇಶ್ವರಕ್ಕಂ ಪೊಯ್ದಾರ್ (ಎಕ. IV, ಚಾಮರಾ. ೬೩-೭ ; ಸು. 750). [ತೆಂ + ಕಂಡ1]

ತೆಂಕಕಡೆ (ನಾ). ದಕ್ಷಿಣದಿಕ್ಕಿನ ಕಡೆ,–ಪಕ್ಕ: ಕೆಜಿಯ ತೆಂಕಕಡೆ ಪಡುವ ಪೋಗಿ ಕದವಿ ಪಡಿಕಟ್ತಿಗೆಜಿ ಕಡೆ ಕೊಳಂ (ಸ್ಮಾಅರಿ-೦೯೩೪, ೩೮-೦೪ ; 11ನಹು ಶತ). [ತೆಂಕ (<ತೆಂಕು) + ಕಡೆ3]

ತೆಂಕಣ್ 'ತೆಂಕಂ' ಪರಾ.

ತೆಂಕಣ 'ತೆಂಕಂ' ಪರಾ.

ತೆಂಕಣವಳ್ಳಿ (ನಾ). ಒಂದಂ ಊರಿನ ಹೆಸರು : ತೆಂಕಣವಳ್ಳಿಯ ಗುಡ್ಡಂ ಪುಬ್ಬಾಮಿ ಗಂಗೆಮಾಳಿಜ್ಗಾಮಿತ್ತಿಯಾಂಗೆ ಪುಟ್ಟಿದ ಶ್ರೀಮಾರಂ (ಎಕ. VII, ಶಿಕಾರಿ. ೨೮೩-೪; 830). [ತೆಂಕಣ + ಪಳ್ಳಿ1]

ತೆಂಕದೆಸೆ, ಟೆಂಕದೆಸೆ (ನಾ). ದಕ್ಷಿಣದಿಕ್ಕು: ತೆಂಕದೆಸೆ[ಪಾಠಾಂ. ತೆಂಕಣದಿಶೆ] ಯೋಳಕಾಲದೊಳ್ ಮುಗಿಲಿಲ್ಲದ ಮಿಂಚುಂ ಕಂಡಡಂ ನೀರೊಳಗಿಂದ್ರ ಧನುವಂ ಕಂಡೊಡಂ ನಾಲ್ಕು ತಿಂಗಳಾಯು (ಪಸಾರ. ೩೫೫); ಕೋಳಿಯೊಡವೆ ಮುಂತಾಗಿ ತಿರುಗಿದಂ ಫಲುಗುಣಂ ಮೇಲೆ ನಡೆದುದು ಕುದುರೆ ತೆಂಕ ದೆಸೆಗೊಡನೆ (ಕೃಮಿಭಾ. ೧೬-೪೭) ; ಅಸಮವಿಗ್ರಹವೀರರ ತೆಂಕದೆಸೆಯೊಳ ಗೆಸಗಿದನೆರಡುಸಾಸಿರವ (ಕಂಪವಿ. ೧೯-೫೭). ಟೆಂಕದೆಸೆ: ಆ ಕೆಜಿಯ ಟೆಂಕ[ದ]ಸೆಯ ಕೋಡಿಯ ಪಡುವಸೆ ದಿಕ್ಕಿನಲು ಕೊಟ್ಟ ಯೆರೆಯ ಬೀಜವರಿ (ಶಾಇಶಿ. IX–II, ೫೦೦-೯; 1516). [ತೆಂಕ (<ತೆಂಕು) + ದೆಸೆ2]

ತೆಂಕನಾಡು (ನಾ). ದಕ್ಷಿಣದೇಶ,–ನಾಡು; ದಕ್ಷಿಣದಿಕ್ಕಿನಲ್ಲಿರುವ ನಾಡು: ತೆಂಕನಾಡ ಕಿಷ್ಕಿಂಧಮೆಂಬ ಪರ್ವತಮನೆಯ್ದಿ (ವಡ್ಡಾರಾ. ೧೧೬-೨೮); ತೆಂಕನಾಡ ಮಜಿಯಲ್ಕಿನ್ನೇಂ ಮನಂ ಬರ್ಕುಮೇ (ಪಂಪಭಾ.೪-೩೦); ಉನ್ನತಿವೆತ್ತ ತೆಂಕನಾಡಿಂ ಬಂದೆಂ (ಧರ್ಮಾಮೃ. ೧-೯೭).

[ತೆಂಕ (< ತೆಂಕು) + ನಾಡು]

ತೆಂಕಬಟ್ಟ (ನಾ) ದಕ್ಷಿಣದಿಕ್ಕಿನ ಬಯಂಲು ಭೂಮಿಂ (?) : ಶ್ರೀಪುರುಷ ನಾಯಿಗಗೆ ಪಟ್ಟಂಗಟ್ಟಿ ಕೊಟ್ಟ ಕಟಿನ ಅಮಟ್ಟಿಯನ್ತೆಂಕಬಟ್ಟಂ ಮೂವತ್ತು ಗುಳ ಅಯ್ಗುಳ ಪಾಳುಂ (ಎಕ. IX, ಹೊಸಕೋ. ೮೬-೯ ; ಸು. 720). [ತೆಂಕ (< ತೆಂಕು) + ಬಟ್ಟ1]

ತೆಂಕಮುಖ (ನಾ). ೧. ದಕ್ಷಿಣದ ಕಡೆ ; ದಕ್ಷಿಣದಿಕ್ಕು : ಸತಿಯನುಳಿದ ತಿದಿಗಂಬರನಾಗಿ ಮುಕ್ಕಣೇಶನನಾಗಿ ನರಕಪಾಲದೊಳು ಸುರೆಯೆಱಿದು ಕುಡಿಯುತ ತೆಂಕಮುಖವಾಗಿ ಹೋಹೆಂ (ಹಡಕಾ. ೨-೨೨); ರಘುನಂದನನ ಕೀರ್ತಿಸ್ತಂಭಡಂಬರವೆನಿಪ ಸೇತುವ ಕಂಡು ನಡೆದನು ತೆಂಕಮುಖವಾಗಿ (ಕುವಾ.ಸೆ. ೫-೨೪). ದಕ್ಷಿಣಾಭಿಮುಖನಾದವನಂ ; ದಕ್ಷಿಣದಿಕ್ಕಿಗೆದುರಾದವನು : ತೆಂಕಮುಖನಾಗಿ ಮರುಜ್ಜವದಿಂ ಚಂಪಾಪುರಕ್ಕೆ ಬಂದು (ಧರ್ಮಾಮೃ. ೩-೩೯); ಪೊಸವಿಮಾನವನೇಱಿ ಬಂದಂ ತೆಂಕಮುಖನಾಗಿ (ಜ್ಞಾನಚಂ. ೨-೨೪). [ತೆಂಕ (< ತೆಂಕು) + ಮುಖ]

ತೆಂಕಮೊಗ (ನಾ). = ತೆಂಕಮುಖ ೧: ತೆಂಕಮೊಗದೆ ಬಂದು ವೃಷಭಾಚಳಮಂ ಕಂಡಂ (ಆದಿಪು. ೧೩-೬೯೨) ; ಪಾಂಡವರ್ ಸುರಂಗದಿಂ ಪೊಜಮಟ್ಟು . . . ತೆಂಕಮೊಗದೆ ಪಯಣಂಬೋಗಿ (ಪಂಪಭಾ. ೩-೮೪); ತೆಂಕಮೊಗದೆ ಬಂದು . . . ವೃಷಭಾಚಲಮಂ ಕಂಡು (ಅಜಿಪು. ೯-೩೪೨); ತೆಂಕಮೊಗದ ಗಾವುಣ್ಡರ ಪಡುವಣ ಬಿರಿಯ ತೋಣ್ಪದ ತೆಂಕಣ ಸೀಮೆಯಿಂ (ಶಾಇಶಿ. IX-I, ೭೮-೫೫; 1045).

[ತೆಂಕ (< ತೆಂಕು) + ಮೊಗ]

ತೆಂಕಲ್ 'ತೆಂಕು' ಪರಾ.

ತೆಂಕಲು 'ತೆಂಕು' ಪರಾ.

ತೆಂಕಲ್ಲೆ 'ತೆಂಗಲೆ' ನೋ.

ತೆಂಕವಂಕ 'ತೆಂಕವಕ್ಕ' ನೋ.

ತೆಂಕವಕ್ಕ, ತೆಂಕವಂಕ (ನಾ). ದಕ್ಷಿಣ ದಿಶೆ,–ದಿಕ್ಕು : ತೆಂಕವಕ್ಕ [ಪಾಠಾಂ. ವಂಕ] ದೊಳಸಂಖ್ಯಬಲಂ . . . ತುಱುಗೊಳಲ್ ಪೊಱಮಟ್ಟಂ (ಕಾವ್ಯಾವ. ೧೩೨). ತೆಂಕವಂಕ: ಆ ಪುರದ ತೆಂಕವಂಕದೊಳ್ . . . ಚಂಡಮಾರಿ ದೇವತೆಯರ್ವಳ್ (ಯಶೋಧ. ೧-೭) ; ತೆಂಕವಂಕಮಂ ಪರಿಪಾಲಿವಂ (ಆರಾಧ. ೧-೩೦). [ತೆಂಕ (< ತೆಂಕು) + ವಕ್ಕ]

ತೆಂಕವಟ್ಟಿ (ನಾ). ದಕ್ಷಿಣದಿಕ್ಕಿನ ಮಾರ್ಗ, – ದಾರಿ : ಕೆಳಯರಿರ, ಇನ್ನೆಮಗೆ ತೆಂಕವಟ್ಟಿ (ಅಶ್ವತ್ಥಾ. ೪೦-೬೯೦); ಇಲ್ಲಿ ತಾರೆಗಳ ನೆರೆಯ ನಿಡಿಯ ಗಿರಿಮುಡಿಯ ಮೇಲೆ ವೆಣಗಾಡಿ ತಳ್ದಿ, ತೆಂಕವಟ್ಟಿ ತಿರುಗ ವೇಟ್ಟುಂ (ಬದ್ಮಪ್ರ. ೩೮-೬೩೭). [ತೆಂಕ (<ತೆಂಕು) + ಬಟ್ಟಿ2]

ತೆಂಕವೊಲ (ನಾ). ದಕ್ಷಿಣಕ್ಕೆ ಇರುವ ಹೊಲ,—ಪ್ರದೇಶ : [ತೆ]ಂಕ ವೊಲದಲು ಪ್ರಭುಗಳ ಮಾನ್ಯದಿಂ ಮೂಡಲು ಹದಿಮೂಱು ಗೇಣ ಬೆಂಕೊಳ್ವನ ಕೋಲ ಮತ್ತರು ನೂಱು (ಎಇ. XXVII, ೧೫-೪೫ : 1114).

[ತೆಂಕ (<ತೆಂಕು) + ವೊಲ]

ತೆಂಕವೋಗು (ಕ್ರಿ). ದಕ್ಷಿಣದಿಕ್ಕಿನ ಕಡೆಗೆ ಚಲಿಸು, — ಹೋಗು ; ತೆಂಕಮುಂಖವಾಗಿ ಹೊರಡು : ತಲೆಕೆದಱಿ ತೆಂಕವೋಗಿರೆ ... ತಾನೆ ಕನಸಿನೊಳಶುಭಂ (ಕಲ್ಯಾಕಾ. ೨-೨೩). [ತೆಂಕ (<ತೆಂಕು) + ವೋಗು1]

ತೆಂಕಾಯ್, ತೆಂಕೈ (ಗು). ದಕ್ಷಿಣದಿಕ್ಕಿನ : ಸೀಯಮಂಗಲದ ವೊಲ ವೇರೆ ಇಸಾನದ ದೆಸೆ ನಡುಗಲ್ಲೆ ಅಮ್ಬಲ ತಿಣ್ಣೆಯಿನ್ತೆಂಕಾಯ್ ವೇರೊಟ್ಟಿಯೆ

(ಎಳ. X (8), ಚಿಕ್ಕಬ. ೧೦೬-೬೬; 850); ಮೂಡಾಯ್ತೊಜಿ ತೆಂಕಾಯ್ಬಾ ಟಾರನ ಮಾಡಮೆ ... ಸನ್ದು ಪೆರ್ಗೊಲ್ಲಿಯುಳ್ಳೂಡಿತ್ತು (ಎಳ. IV, ಎಡತೊ. ೬೦-೭೩; ಸು. 890). ತೆಂಕೈ : ಪ್ರಥಮಂ ದುಗ್ಗನ್ಕೆಜಿ ... ಕೆಜಿಯಿ ನ್ತೆಂಕೈ ನಟ್ಟ ಕಲ್ಲೆ (ಎಳ. X (8), ಚಿಕ್ಕಬ. ೬೬-೧೬ ; ಸು. 850).

[ತೆಂಕು + – ಆಯ್ಕ್./ತುಳು. ತೆಂಕಾಯಿ, ತೆನ್ಕಾಯಿ]

ತೆಂಕು, ಟೆಂಕ್₁, ತೆಂಕ (ನಾ). ದಕ್ಷಿಣದಿಕ್ಕು, — ದೆಸೆ : ತೆಂಕು, ಬಡಗು, ಪಡುದಿಕ್ಕುಗಳಲ್ಲಿಯೂ ಬೆಳಕು ಹರಡುವುದನ್ನು ಕಂಡಿದ್ದೇವೆ (ನಿಬಂಧ. I, ೪೯೪) ; ಗಿರಿಜ ಸತ್ತು ಪ್ರೇತವಾಗಿ ಸರೋವರದ ತೆಂಕಿನ ಹೊನ್ನೆಮರವನ್ನು ಆಶ್ರಯಿಸಿದ್ದಾಳೆ (ಪದ್ಮಸ. ೧೦). ಟೆಂಕ್₁ : ಕನಕಶೈಲಕೆ ಟೆಂ[ಪಾಕಾಂ. ತೆಂ]ಕಮೆನಿಸಿ ರಾರಾಜಿಪುದು...ಅಯೋಧ್ಯಾಭಿಧಾನ ಪಟ್ಟಣಂ (ವೆಂಕಾರಾ. ೦-೪-೦). 'ಟೆಂಕದೆಸೆ' ಪರಾ. ತೆಂಕ : ತೆಂಕ ಪೇರೂರ ಪಳ್ಳಂ (ಎಳ. X, ಮೊಳಕಾ. ೨೭-೬ ; 962) ; ತೆಂಕ ಪಾಲ್ವಳ್ಳಂ ... ಮೂಡಲೆರಡು ಪಳ್ಳದ ಕೂಡಲೆ ಮೇರೆಯಾಗೆ (ಸೌಇಇ. XI–1, ೫೨-೫೬; 1007); ಸುರರೆಲ್ಲಂ ಬಡಗಲು ನೆರೆದಿರೆಯಾ ದೆಸೆ ಕುಸಿದು ತೆಂಕ ನೆಗೆದೊಡೆ (ಸಮಪ. ೧೦-೦೧೪); ಅದಱಿಂದೆ ತೆಂಕ ಕಿಂಪುರುಷವರ್ದೆ. ತೆಂಕ ಹರಿವರ್ಷ (ಕಇ. IV, ೧-೦೩; 1204); ತೆಂಕ ಮುಂತಾಗಿ ನಡೆದನವನಿಪ ಸಮರಾಂಕಣಕಂದು ಲೀಲೆಯೊಳು (ಕುರಾಸಾಂ. ೦೦-೮೦).

ತೆಂಕಣ್ = ದಕ್ಷಿಣದಿಕ್ಕು : ಮಂದಾನಿಲಂ ತೆಂಕಣಂ ಬರೆ ಚೈತ್ರಂ ಕುಡುವರ್ಘ್ಯಲಾಜತತಿಯೋ (ಕಾದಂಪೂ. ೭೪೦) ; ಮೇರು ಪಡುವಣ್ಗೆ ಸೀತಾತೀರಂ ತೆಂಕಣ್ಗೆ . . . ತನಗೆ ಸೀಮೆಯೆನಿಕ್ಕುಂ (ಮಲ್ಲಿಪು. ೨-೧೨) ; ತೆಂಕಣ್ಗಾ ನಿರುಪಮ ದಿವ್ಯವಾಜಿ ನಡೆದತ್ತಾಗಳ್ (ಕುಸುಮಾ. ೧೦-೦೩೪) ; ಕಂಪಿನೊಳೊಂದಿ ತೆಂಕಣಂ ಗಾಳಿ ಮೆಲ್ಲನೆ ತೀಡುತಿದೆ (ಕಬ್ಬಿಕಾ. ೬೩). **ತೆಂಕಣ, ಟೆಂಕಣ, ತೆಂಕಳ** = ೧. ದಕ್ಷಿಣ ದಿಕ್ಕಿನ ; ದಕ್ಷಿಣಕ್ಕೆ ಇರುವ : ಪುಲಿಪದಿಯ ತೆಙ್ಕಣ ಪೇರೊಟ್ಟಿಯೆ ಪೇರ್ಬಿಳಿಕೆ ಎಟಗಲ ಕಱಣ್ಡಲೋ ಮುಕೂಡಲ್ (ಇಅ. XII, ೧೬-೧೭; 735) ; ಮೂಡಣದೆಸೆಯ ವ[ರಾಹ] ಕೆಱಿಯಂ ಮೂಡಣ ಪಳ್ಳ ಅದಱ ತೆಙ್ಕಣ ದೆಸೆ [ಮಣ್ಣಗೆಱಿ] (ಸೌಇಇ. XI–1, ೯-೨೮; 862); ತೆಂಕಣೆಲರಲೆಪದಿಂದಂಕುರಿಸಿದ ಚೂತದಂತೆ ರೋಮಾಂಚಕಂಚುಕಿತಶರೀರನಾಗಿ (ಅದಿಪು. ೪-೨೦ ಪ) ; ತೆಂಕಣ ಗಾಳಿ ಸೋಂಕಿದೊಡಂ . . . ನೆನೆವುದೆನ್ನ ಮನಂ ವನವಾಸಿದೇಶಮಂ (ಪಂಪಭಾ. ೪-೩೦); ತೆಂಕಣ ಭೂಪಾಲಕರಂ ಭೋಂಕನೆ ಪರಿದೆಯ್ದು ದರ್ಪಮಂ ಕಿಡಿಸಿ (ಧರ್ಮಾಮೃ. ೦-೧೦೨೨); ಅನಿಲಶರದಿಂದೂದಿದನು ಜಲನಿಧಿಯ ತೆಂಕಣ ತೀರಕಾ ಖಳನ (ತೊರರಾ. ೦-೦೦-೨೦); ಗಣನೆಯಿಲ್ಲದ ಕಪಿಗಳಂ ಕೂಡಿ ಕೊಂಡು ತೆಂಕಣ ಕಡಲ ತೀರದೊಳ್ಬಿಟ್ಟು ಬಂದೊಡೆ (ಕೃಮಿಭಾ. ೦೮-೭); ತೆಂಕಣ ಗಾಳಿಯು ಕೊಂಕಣ ಸೀಮೆಗೆ ಬಂತೈ ! (ಕಪಿಪು. ೨೯-೬); ಪೂಗೊಳನ ತೆಂಕಳ ಗಾಳಿ ಸಂಚರಿಸಿತುಱಿ ಬನದೊಳು (ಬಳೋಪು. ೩-೮೦). ೨. ದಕ್ಷಿಣ ದಿಕ್ಕು: ಕರೆನಾಡು ಎಂಬುದು ... ತೆಂಕಣದ ಸೀಮೆಯನ್ನು ನಿರ್ದೇಶಿಸುವ ಹೆಸರು (ದ್ರಾವಿವಿ. ೮೨); ಬರುತ ಕರ್ನಾಟಕವನು ಕಳಿದುತ್ತರದಿಶಾಮುಖ ದಿಂದ ಟೆಂಕಣದೆಸೆಯ ಕೊಂಕಣಕೆ ಪರಮಪಾವನಮೂರ್ತಿ ಬಂದನು (ನಿಭಾಗ. ೫-೪ -೩೯); ವಿಜಯಾದ್ರಿ ಟೆಂಕಣ ಶ್ರೇಣಿಯೊಳು ... ಪದ್ಮ ವರೂಥಖಚರವಿನೋದದೊಳು ತೆರಳಿದನು ದೇಶಭ್ರಮಣೆಗೆ (ಜಿನಭಾ. ೫೦-೦೮). ತೆಂಕಣಂ=ದಕ್ಷಿಣದೇಶಕ್ಕೆ ಸೇರಿದವನಂ: ಅಕಾರಕ್ಕೆ–ಮೂಡಣಂ, ತೆಂಕಣಂ, ಬಡಗಣಂ (ಶಮದ. ೧೦೧ ಪ್ರಯೋ); ತೆಂಕಲ್ ಪುಟ್ಟಿದಂ, ತೆಂಕಣಂ (ಶಬ್ದಾನು. ೨೯೨ ಪ್ರಯೋ). ತೆಂಕಣರ್=ಪಿತೃದೇವತೆಗಳು : ತೆಂಕಣರ್ ದೈವಂ ಬಿರ್ದೊಕ್ಕಲ್ ತಾನೆಂಬಿವೈದೆಡೆ ನಿಱಿಯೋವುದು ತಲೆ (ಕುಱಳ್. ೦-೫-೩). ತೆಂಕಣರಾಯ=ದಕ್ಷಿಣದೇಶದ ಅಧಿಪತಿ : ರಣದೊಳ್ ತೆಂಕಣ ರಾಯನಂಕದ ಚತುಃಸೈನ್ಯೋತ್ಕರಂ ದಂಡೆಯಡ್ಡಣವೀತಂ (ಎಳ. XI, ದಾವಣ. ೨೫-೫೬ ; 1224); ಹಣಿದಂಬೊಯ್ಯಲ್ ಜವಂ ರಾಯರನೆ ಬಯಸಿ ಬರ್ಪಂತೆ ಸೋಮೇಶ್ವರಂ ತೆಂಕಣರಾಯಂ ಬಂದಂ (ಸೂಕ್ತಿಸು. ೦-೨೧). ತೆಂಕಣಾದಿತ್ಯ = ಹೊಯ್ಸಳರಾಜನಾದ ವಿಷ್ಣುವರ್ಧನನ ಒಂದು ಬಿರುದು: ವಿಷ್ಣುವರ್ಧನ ತೆಂಕಣಾದಿತ್ಯ ತೆಂಕಣಚಕ್ರವರ್ತ್ತಿ (ಎಳ. VII, ಶಿಪಪೊ. ೬೯-೯ ; 1320). ತೆಂಕಣಾಸೀಮೆ = ದಕ್ಷಿಣದ ಸೀಮೆ : ಪಡುವಣ್ಣಾ ಸೀಮೆ ತಣ್ವಳ್ಳಿಗಾರ ಪಾಟಿ ತೆಙ್ಕಣ್ಣಾಸೀಮೆ ನೆಯ್ದಲ್ಗೆಱಿ (ಎಇ. XXI, ೧೭೮-೧೨೦ ; 8ನೆಯ ಶತ). ತೆಂಕಲ್, ತೆಂಕಲು=ದಕ್ಷಿಣದಿಕ್ಕು: "ಅವಾಚೀನಂ, ಅವಾಕ್—ಈ ೨ ತೆಂಕಲಾದುದಱ ಪೆಸರ್" (ಹಲಾಯು. ೧೬-೧೦೩) ; ತೆಂಕಲಾವುದೆನುತಂ ನೋಡುತ್ತಮಿಂ ಪೋಗವೇಟ್ಟುದಿದಂ ತಲ್ಲದೆ ಬೇಱುಪಾಯಮಣಮಿಲ್ಲ (ಕಾದಂಪೂ. ೬೨೮) ; ತದ್ದವಾಡಿಗೆ ತೆಂಕಲ್ ತೊಱಗಲೆಗೆ ಬಡಗಲಿರ್ದುದು ನೆಱಿಯೆ ಸುಖೋದ್ದೀಪಮೆನಿಸಿ ಬೆಳುಗಲಿ ದೇಶಂ (ಅಜಿಪು. ೧೨-೪೪) ; ಆ ಕನಕಾದ್ರಿಯ ತೆಂಕಲ್ ಭೂಕಾಂತಾ ಕುಂತಳೋಪಮಂ ಕುಂತಳವಂತಾ ಕಾಂತವಿಷಯರಕ್ಷಕರೀ ಕಲಿಯುಗ ದಲ್ಲಿ ಪುಟ್ಟಿದರ್ಚ್ಚಾಲುಕ್ಯರ್ (ಎಇ. XX, ೦೨-೫ ; 1167) : ಉದ್ಭಟ ಭೂಮಿಪನುತ್ತರದಿಂ ಕೂರ್ತು ತೆಂಕಲಭಿಮುಖನಾದಂ (ಉದ್ಭಟ. ೨-೩೩) ; ಅದಱೊಪ್ಪುವ ತೆಂಕಲ್ ಪೆರ್ಚಿದ ಹಿಮವಾನ್ ಹೇಮಕೂಟನಿಷಧಂ ಬಡಗಲ್ ಸದಮಳನೀಲಶ್ವೇತಂ ಪದೆಪಿಂ ಶೃಂಗಿಗಳೆನಲ್ಕೆ ವರ್ಷ ಗಿರೀಂದ್ರಂ (ದಶಕು. ೭-೧೧) ; ಮೇರುಗೆ ತೆಂಕಲು ಸದಮಲ ಭರತಾವನಿ (ಇಅ. IX, ೯೭-೬ ; 1169) ; ಅತ್ತಲಿಹುದಾ ವರುಷ ಕಿಂಪುರುಷೋತ್ತಮ ಮದಱಿಂದ ತೆಂಕಲು ವರ ಹಿಮಾಚಲವು (ಸಂಭಪ. ೦೦-೨೦) ; ಮರಳಿ ಬಂದವರು ತೆಂಕಲು ಪಡುವಲು ಮೇವ ತುಱುವಿಂಡನು ಕೊಂಡು ಪೋಗಿ . . . ಒಪ್ಪಿಸಲು (ಜೀವಂಸಾಂ. ೮-೨೨).

[ದೇ.॥ ತಮಿ. ತೆಱ್ಕು, ತೆಕ್ಕು; ಮಲ. ತೆಕ್ಕು, ತೆಕ್ಕನ್; ಕೊಡ. ತೆಕ್ಕಿ, ತೆಕ್ಕೈ]

ತೆಂಕುದಿಕ್ಕು (ನಾ). ದಕ್ಷಿಣದಿಕ್ಕು : ತೆಂಕುದಿಕ್ಕಿನಲ್ಲಿರುವ ಐದಂಕಣದ ಮನೆಯನ್ನು ಅವರಿಗೆ ಕೊಟ್ಟು ತಾವು ಮಲೆನಾಡಿಗೆ ಹೊರಟು ಹೋಗಿದ್ದರು (ದೇವಹೆಂ. ೩೦). [ತೆಂಕು + ದಿಕ್ಕು]

ತೆಂಕೈ 'ತೆಂಕಾಯ್' ನೋ.

ತೆಂಗಡೆ (ನಾ). = ತೆಂಕಕಡೆ : ತೆಂಗಡೆಯಿಂ ಸುಳಿವ ಸುರಭಿವಾಯುವ ತಾಟನದಿಂ ತಳುವದೊಲೆವ ಲತೆಯಂತೆ (ಜಯಶಾ. ೮-೫೯) ; ನಡೆತಂದಾ ಬಿಜ್ಜಾಧರ ಪೊಳಲ ತೆಂಗಡೆಯ ಶಬಾಲಯಕಾಗಿ ಕಡುನೀರರತಿ ಮುದದಿಂ ಪೋಗುತಿರೆ (ಶ್ರೀಪಾಲ. ೭-೧೫೨). [ತೆಂ + ಕಡೆ₃]

ತೆಂಗಲೆ, ತೆಂಕಲೈ (ನಾ). [ವಿಶಿಷ್ಟಾ] ವಿಶಿಷ್ಟಾದ್ವೈತಿಗಳಲ್ಲಿ ಹಣೆಯ ನಾಮದ ಕೆಳಗೆ ಪೀಠವನ್ನು ಹಚ್ಚುವ ಪಂಗಡ ; ರಾಮಾನುಜ ಭಕ್ತರ ಒಂದು ಪಂಥ : (ಕಿ). 'ಬಡಗಲೆ' ಪರಾ. ತೆಂಕಲೈ : ಶ್ರೀವೈಷ್ಣವಮತದ ಈ ತತ್ವ ಕ್ರಮೇಣ ಬಡಗಲೈ ತೆಂಕಲೈ (ಉತ್ತರ ದಕ್ಷಿಣ) ಭಾಗಗಳಾಗಿ ಒಡೆದವು (ಧಾರದ. ೨೯೭). [← ತಮಿ. ತೆನ್ಕಲೈ]

ತೆಂಗಾಯ್, ತೆಂಗಾಯಿ, ತೆಂಗುಗಾಯ್, ತೇಂಗಾಯ್ (ನಾ). ತೆಂಗಿನ ಕಾಯಿ ; ತೆಂಗು ; ನಾರಿಕೇಳ : ತೆಂಗಾಯ ಪಾಸಟಿಯ ಕರ್ಕಶಕುಚಂಗಳ್ (ಸೌಂದಪು. ೬-೫೩) ; ತೆಂಗಾಯನು ಹೆರೆದದರ ಮೇಲಿಕ್ಕಿ (ಸೂಪಶಾ. ೩-೪) ; ಒಟ್ಟಿದ ಕಬ್ಬು ತೆಂಗಾಯಿಂದ ಮೆಱಿವುತ್ತಿದ್ದುದು ಖಡ್ಗಪೂಜೆ (ಧರಜ. ೨೦-೦೨೯) ;ತಟ್ಟೆಯ ತೆಂಗಾಯನು ಒಡೆದಲ್ಲಿಡು ಕೊಡು ಹಣ್ಗಳನಿಲ್ಲಿ (ಕೋಗಿಲೆ. ೮೦-೩೬). 'ಚೆಂದೆಂಗಾಯ್', 'ತೆಂಗಾಯ್ಗೊನೆ' ಪರಾ. ತೆಂಗಾಯಿ : ಸಣ್ಣಿಸಿದ ತೆಂಗಾಯಿ ತನಿವಾಲುಗಳ ಬೆರಸಿ . . . ಗಾರಿಗೆಯಡುವುದು (ಸೂಪಶಾ. ೦-೨೪); ತೆಂಗಾಯಿ ಪಲಸು ... ಬಹುಫಲಾದಿಗಳ ತೋಂಟಿ ಗರು ಸಾರಂಗಪಾಣಿಗೆ ಸಾರ್ಚಿದರು (ಪೋಹತ. ೪-೬೨) ; ತೆಂಗಾಯಿ

ಯೊಳಗೆ ಪರಿಪೂರ್ಣಜಲ ಬಲಿದು ಹಿಂಗಿದಪ್ಪಂದ (ಸರ್ವಜ್ಞ. ೧೬೪). **ತೆಂಗುಗಾಯ್ :** ಮುಡಿಪು ಕಟ್ಟುವರವರೆ ತೆಂಗುಗಾಯ್ ಬಾಳೆಗಾಯ್ . . . ನೈವೇದ್ಯನಿವಹಂಗಳಂ (ಶ್ರೀರಾಮಾ. ೭೦೩-೧೨೮). **ತೇಂಗಾಯ್ :** ಹೊಂಗೊಡದೊಳು ನೀರ ಹೊತ್ತ ಧೂರ್ಜಟಿಯಂತೆ ತೇಂಗಾಯ್‌ಮರ ಗಳೊಪ್ಪಿದುವು (ಪೋಹತ. ೨೪-೧೨) ; ಅವಲುಂ ಪುರಿಗಡಲೆಯು ಮುದ್ದ ಣಂಗೆ ; ಕಬ್ಬು ಕಬ್ಬಿಗಂಗೆ ; ತೇಂಗಾಯೆನಗೈಸೆ (ರಾಮಾಶ್ವ. ೮೯-೩).

[ತೆಂಗು$_3$ + ಕಾಯ್$_4$; ತಮಿ. ತೇಙ್ಕಾಯ್ ; ಮಲ. ತೆನ್ನನ್ ಕಾಯಿ ; ತೆಲು. ತೆಂಕಾಯ, ಟೆಂಕಾಯ]

ತೆಂಗಾಯಿ 'ತೆಂಗಾಯ್' ನೋ.

ತೆಂಗಾಯ್ಗೊನೆ (ನಾ). ತೆಂಗಿನ ಕಾಯಿಂಗಳ ಗೊನೆ,-ಗೊಂಚಲು: ಕಕ್ಕಸದೆ ಬೆಳೆದ ತೆಂಗಾಯ್ಗೊನೆಗಳಂ ... ವನಪಾಲಕಂ ಪೊಱಸಿಕೊಂಡೈತಂದನು (ಜಿಬಪು. ೪೫-೨೯). [ತೆಂಗಾಯ್ + ಗೊನೆ$_3$ (<ಗೊಲೆ$_2$)]

ತೆಂಗಾಯ್ಮೊಲೆ, ತೇಂಗಾಯ್ಮೊಲೆ (ನಾ). ತೆಂಗಿನಕಾಯಿಯಂತಹ ಮೊಲೆ: ತೆಂಗಾಯ್ಮೊಲೆಯ ನುಣ್ಮೊಲೆಯ...ಮಹಾಪ್ರೌಢವನಿತೆಯರ್ ಕಣ್ಗೆಸೆದ ರಲ್ಲಿಗಲ್ಲಿ (ಜಿಬಪು. ೦೦-೨೦). **ತೇಂಗಾಯ್ಮೊಲೆ :** ನವೀನಲತಾಂಗದ ತೇಂಗಾಯ್ಮೊಲೆಯ...ತರಳಾಕ್ಷಿಯರೆಯ್ತಂದೀಕ್ಷಿಸಿದರ್ ನೃಪನ (ಜಯಕಾ. ೧೦-೪೯). [ತೆಂಗಾಯ್ + ಮೊಲೆ$_1$]

ತೆಂಗಾಳಿ, ತೆಣ್ಗಾಳಿ (ನಾ). ದಕ್ಷಿಣ ದಿಕ್ಕಿನಿಂದ ಬೀಸುವ ಗಾಳಿ : ಮದನೇಭ ಕ್ಕಾಮ್ರಮೊಂದಂಬುಜಮೆರಡು ಕೊಳಂ ಮೂಱು ತೆಂಗಾಳಿ ನಾಲ್ಕು . . . ಅಳಿ ಪದಿಮೂಱಲ್ತೆ ಮತ್ತೋಪಚಾರಂ (ಶಾಂತಿಪು. ೯-೮೯) ; ತೆಂ[ಪಾಠಾಂ. ತಂ]ಗಾಳಿ ಪೇಟ್ ಪಿರಿದೊಂದುತ್ಸವಮಾಯ್ತೆ (ಕಾದಂಪೂ. ೯೦೦) ; ತನುಲತೆಯನೈದೆ ತೆಂಗಾಳಿಗೊಡ್ಡುವ ಕೋಮಲಾಂಗಿಯರು (ಹಚಕಾ. ೪-೩೯) ; ಈ ತೆಂಗಾಳಿ ತನ್ನಿಚ್ಛೆಯಿಂ ನಡೆತಂದಪ್ಪುದು (ಕಬ್ಬಿಕಾ. ೫೫) ; ಆಗರದೊಳು ರಸದಾಳಿ ತೆಂಗಾಳಿಯಂ ತಾಗಲೊಂದಱೊಳೊಂದು ಹಳಚಿ ಮೇಗೋಲ್ಗಳೊಡೆದಿನಿರಸದ ಪರಿಯೊಳಿಕ್ಷುಸಾಗರ ತುಂಬಿದಂತಾಯ್ತು (ಪೋಹತ. ೨-೪೮). **ತೆಣ್ಗಾಳಿ :** ತೆಣ್ಗಾಳಿಯಲೆಪದಿಂದೊಲೆದು ಪುಣ್ಯ ಪಣ್ಯಾರ್ಥಿಭವ್ಯಸಾರ್ಥಮನಿತ್ತಲೆಟ್ಟರ್ಪುದೆಂದು ಕೈಸನ್ನೆಯಿಂ ಕರೆವಂತೆ ಕರಮೆ ಸೊಗಯಿಸುವ ತಳಿರ್ಗೊಂಬುಗಳುಂ (ಚಂದ್ರಪು. ೨-೦೧೫).

[ತೆಂ + ಗಾಳಿ$_1$]

ತೆಂಗು$_1$ 'ತೇಂಗು$_2$' ನೋ.

ತೆಂಗು$_2$ (ಕ್ರಿ). (?) : ಕರಂ ಬಿಂಕಂ ತೆಂಗುವ ಗೂಢಜತ್ರು ಸುದೃಢಾಯ ದ್ಬಾಹುಕಾಂಡಂ (ಜಿಕವಿ. ೩-೨೦). [?]

ತೆಂಗು$_3$, ಟೆಂಗು (ನಾ). ಒಂದು ಬಗೆಯ ಮರ ಮತ್ತು ಅದರ ಕಾಯಿ; ನಾರಿಕೇಳ : "ನಾಳಿಕೇರಃ, ಲಾಂಗಲಿಃ; ಈ ೨ ತೆಂಗು" (ನಾಚಿರಾ. ೧೧೩); "ನಾರಿಯಳಿ ನಾಳಿಕೇರಂ ತೆಂಗೆನಿಕ್ಕು" (ಮಂಗರಾ. ೩೪-೦೦) ; ಎಲೆಯಡಕೆ ಯುಮಂ ತೆಂಗಿನೆಳನೀರುಮಂ ಕೊಳಲಿಂಬಪ್ಪಂತಿರೆ ಮಾಡಿ ನಟ್ಟ ಕೌಂಗಿನ ತೆಂಗಿನ ಮರಂಗಳುಮಂ (ಪಂಪಭಾ. ೫-೪೭ ವ); ಶೀತಳಮಪ್ಪ ತೆಂಗಿನೆಳ ನೀರೊಳ್ . . . ಪುಂಡ್ರೇಕ್ಷು ಪಾನೀಯದೊಳ್ ಬೆಳೆದೋರಂತೊಱಗಿರ್ದು ತೋರ್ಪ ವಿಲಸತ್ಕರ್ಪೂರಶಾಳೀವನಾವಳಿಯಿಂದಂ ಕರಮೊಪ್ಪಿ ತೋರ್ಪುದು ಬನಂ (ಸುಕುಮಾ. ೧೦-೬೦) ; ತೆಂಗಿನ ಪೊಸನೇಣಿಂದಱು ದಿಂಗಳ್ವರಮಡಸಿ ಕಂಬಿಯಿಂ ಕಟ್ಟಿದೊಡಂ ತಾಂ ಗಡ ಬಿಟ್ಟೊಡೆ ಮತ್ತಂ ಪಿಂಗದು ಡೊಂಕೆಂಬ ನಾಯ ಬಾಲದ ತೆಱದಿಂ (ಧರ್ಮಾಮ್ಯ. ೨-೯೨) ; ನಾಯ್ಗೆ ತೆಂಗೇವುದೊ ಕಾಗೆಗೇವುದೊ ರಸಾಯನಯುಕ್ತದ ಸಾರಭೋಜನಂ (ಲೀಲಾವ. ೨-೧೦೦) ; ಗಂಜೆಯನಾಗಳ್ ತೆಂಗಿನ ತಿಳಿವಟ್ಟಲೊಳಾ ತಂಗೆಱೆದಳ್ (ದಶಕು. ೧೨-೧೨೫) ; ತೆಂಗಿಗೆ ನೀರನೆಱೆದರೆ ಅಂಗೈಯಲ್ಲಿ ಫಲವು ಕಾಣುವಂತೆ (ಆಖಂಡೇ. ೬೦-೧೧) ; ತೆಂಗನು ಲಾಗಿಸಿ, ಅಡಕೆಯ ಬಾಗಿಸಿ . . . ಬಂತೈ ! ಬಂತೈ ! (ಕಎಪು. ೨೮-೫) ; ಸಿಂಹಲದ್ವೀಪದಲ್ಲಿ . . . ತೆಂಗು ಮೊದಲಾದ ಫಲಗಳೂ ಬಹಳ ಆಗುತ್ತವೆ (ಮುಂಬಯಿ. ೪-೨೦೧); ತಲೆದೂಗೆ ತೆಂಗುಗಳ್ ಮೆರೆವ ಕಾಲೂರು (ಕಾಲೂರ. ೪೭-೬೬). **ಟೆಂಗು :** ಟೆಂಗು ಬಾಳೆಹಣ್ಣು ... ದ್ರಾಕ್ಷೆ ತಂದಿಹರು (ಸಿದ್ಧಪು. ೦೯-೮) ; ದೂರದ ದ್ವೀಪದ ಮೇಲಿನ ಟೆಂಗಿನಗಿಡಗಳು ... ಗೊಂಬೆಗಳಂತೆ ನಿಂತಿದ್ದವು (ಭೂಮಿತಾ. ೮೧).

ತೆಂಗಿನಕಾಯ್, ಟೆಂಗಿನಕಾಯಿ, ತೆಂಗಿನಕಾಯಿ = ತೆಂಗಾಯ್ : ತೆಂಗಿನ ಕಾಯದೊಂದು ಕಠಿನತ್ವಮನೊರ್ಮೆಯೆ ಕಂಡು ಪೊಲ್ಲದೆಂದೇಂ ಗಳ ಬೆಚ್ಚಿ ಭೀರುತನದಿಂ ಬಿಡದೊಯ್ಯನೆ ಮೂಸಿ ನೋಡಿ ನಾಯ್ಪಿಂಗಿದುದು (ಧರ್ಮಾಮ್ಯ. ೧೦-೪೩) ; ಅಕ್ಕಿಯಡಕೆ ಓಲೆ ತೆಂಗಿನಕಾಯ ಕಂಡೆ (ಮಹಾದೇ. ಬ. ೪೦-೮೭) ; ಈಚೆಗೆ ಟೆಂಗಿನಕಾಯಿ ಬಹಳ ತುಟ್ಟಿ ಆಗಿವೆ (ರೂಢಿ) ; ತೆಂಗಿನ ಕಾಯ ಹೋಳ ಮಾಡಿದರು ಜೂದಿನಲಿ (ಪೋಹತ. ೨೦-೨೨) ; ಆಡಿ ಬಾ ಎನ ಕಂದ ಅಂಗಾಲ ತೊಳದೇನ ತೆಂಗೀನ ಕಾಯಿ ತಿಳಿನೀರ ತಕ್ಕೊಂಡು ಭಂಗಾರ ಮಾರಿ ತೊಳದೇನ (ಗರತಿ. ೮೬) ; ಉಪ್ಪಿನವ ಕೆಟ್ಟೆ ನೆಂದರೆ ತೆಂಗಿನಕಾಯವ ಹೊರಳಿ ಹೊರಳಿ ಅತ್ತ (ಗಾದೆ). ತೆಂಗಿನ ತಿರುಳೋಲೆ = ತೆಂಗಿನ ಎಳೆಯ ಗರಿಯಿಂದ ಮಾಡಿದ ಓಲೆ : ಮಂಗಳ ಪ್ರಸಾಧನಮೆಸೆದತ್ತು ಕಪ್ಪುರವ ಕಂಠಿಕೆ ಬಣ್ಣದ ಸಣ್ಣ ಮಾಲೆ ತೆಂಗಿನ ತಿರುಳೋಲೆ ತಾವರೆಯ ನೂಲುಡೆನೂಲ್ (ಪಂರಾಮಾ. ೩-೧೦೬) ; ಪೂವಿನ ಕಂಕಣ ತೆಂಗಿನ ತಿರುಳೋಲೆ ತಾವರೆನೂಲುಡೆನೂಲು ... ಭೂಷಾವಳಿ ಯಾದುದವಳಿಗೆ (ಕುರಾಸಾಂ. ೮-೫೪). ತೆಂಗಿನ ಮರ = ಒಂದಂ ಬಗೆಯ ಮರ ; ತೆಂಗು : ಎಲೆಯಡಕೆಯುಮಂ ತೆಂಗಿನೆಳನೀರುಮಂ ಕೊಳಲಿಂ ಬಪ್ಪಂತಿರೆ ಮಾಡಿ ನಟ್ಟ ಕೌಂಗಿನ ತೆಂಗಿನ ಮರಂಗಳುಮಂ (ಪಂಪಭಾ. ೫-೪೭ ವ) ; ತೆಂಗಿನ ಮರ ಯಾಕೆ ಹತ್ತುತ್ತಿ ಎಂದರೆ ಬೆಕ್ಕಿಗೆ ಹುಲ್ಲು ಕುಯ್ಯೋದಕ್ಕೆ ಅಂದ (ಗಾದೆ) ; ತೆಂಗಿನ ಮರಕ್ಕೂ ಅಡಿಕೆ ಮರಕ್ಕೂ ಒಂದೇ ತಳಿಯೇ ? (ಗಾದೆ). ತೆಂಗಿನ ಹಣ್ಣು = ಬಲಿತ ತೆಂಗಿನಕಾಯಿ ; ತಳಲು : ಅಕ್ಕ ಕರಿಯವ್ವ ತಂಗೀಯು ಭದ್ರಕಾಳಿ ತೆಂಗಿನ ಹಣ್ಣಾ ಒಲೆ ಹೂಡಿ ಅಟ್ಟಲ್ಲೊ ... ಅಡಿಗೇಯಾ (ಹುಟ್ಟಿಹ. ೪೫). ತೆಂಗಿನೋಲೆ = ತೆಂಗಿನ ತಿರುಳೋಲೆ : ಮುಡಿದ ಪಾದರಿ ತೊಟ್ಟೆಳಮುತ್ತು ಸುತ್ತಿ ನೊಳ್ ಮಾಸದ ತೆಂಗಿನೋಲೆ ... ಸಂದ ಭೋಗಿಗೆ ವಿಲಾಸದ ದೇಸೆಯ ನುಂಟುಮಾಡುಗುಂ (ಸೂಕ್ತಿಸು. ೦೦-೦೩೯).

[ದೇ.॥ ತಮಿ. ತೆಙ್ಕು, ತೆಙ್ಕ ; ಮಲ. ತೆಣ್ಣು ; ತುಳು. ತೆಂಗ್ ; ಕೊಡ. ತೆಂಗೆ]

ತೆಂಗುಗಱಿ (ನಾ.) ತೆಂಗಿನ ಗರಿ, - ಸೋಗೆ ತೆಂಗುಗಱಿ ಕೊಡೆಯಿರ್ದ ಕಡಲುಲಿಯ ಮನೆಯೇ (ಅಶ್ವತ್ಥಾ. ೩೫-೬೭೦). [ತೆಂಗು$_3$ + ಗಱಿ]

ತೆಂಗುಗಾಯ್ 'ತೆಂಗಾಯ್' ನೋ.

ತೆಂಗುದಿ (ನಾ). ಕೆಂಪು ಬಣ್ಣದ ಪ್ರಾಣಿ : ಹರಿಣ-ಎರಳೆ, ಶಶ-ಮೊಲ, ಲೋಹಿತ-ತೆಂಗುದಿ (ಭಾಹಟೀ. ೨-೨-೬೨ ವ).

[P ಇದು 'ಕೆಂಗುಱಿ' ಇರಬಹುದೆ ?]

ತೆಂಗುಹ 'ತೇಂಗುಹ' ನೋ.

ತೆಂಟು, ತೆವಟು (ಕ್ರಿ). ಮೊರದಿಂದ ಕೇರು : "ತೆಂಟು-ಶೂರ್ಪಕರಣೇ (ಕೇರು)" (ಶಮಧಾ). ತೆವಟು : (ಕಿ).

[ದೇ.॥ ತಮಿ. ಮಲ. ತೆಳ್ಳು ; ಕುರುಖ್. ತೆಲ್ನಾ ; ಮಲ್ತೊ. ತೇಲೆ]

ತೆಂಟೆ (ನಾ). ಜೂಜುಕಟ್ಟೆ: ಕಂಡನವಂ ತೆಂ[ಪಾಠಾಂ. ತೇಂ, ದೀಂ] ಟೆಯೊಳೆ ನಿಂದು ಜೂಜಾಡುವನಂ (ಪಾರ್ಶ್ವಪು. ೪-೨೦). 'ತಿಂಟೆ' ಪರಾ.

[< ಪ್ರಾ. ಟೆಂಟಾ]

ತೆಂಡೆ 'ತೆಟ್ಟೆ' ನೋ.

ತೆಂಡೆಸುತ್ತು (ಕ್ರಿ). ಬೆಳೆಯುತ್ತಿರುವ ಕಬ್ಬಿನ ಜಲ್ಲೆಗಳು ಕೆಳಗೆ ಬೀಳದಂತೆ ಗರಿಗಳಿಂದ ಸುತ್ತಿಕಟ್ಟು : (ಕ).

[ತೆಂಡೆ (< ತೆಟ್ಟೆ) + ಸುತ್ತು$_1$]

ತೆಂದೆಸೆ (ನಾ). = ತೆಂಕದೆಸೆ : ಬಲಿತನವನು ಬಡವಾಗಲ್ ಸಲೆ ತನ್ನಯ ನೆಳಲು ತೆಂದೆಸೆಗೆ ಪೋಗುವದಂ ಭಳಿಲನೆ ಕಾಣಲ್ ಪ್ರಾಣಂ ಅಳಿವುದು ತಾ ಸತ್ಯವೈದುದಿನದೊಳಗೆ (ಪಂಚಶ. ೪೮-೩೨). [ತೆಂ + ದೆಸೆ$_2$]

ತೆಂಪು (ನಾ). ಶೌರ್ಯ ; ಸಾಹಸ : ತೆಂಪಿನಿಂದೈತರುವಕಂಪನನ ಭರಕೆ ಭೂಕಂಪಮಾಗಲ್ಪವನತನಯ ಕೋಪದಲಾ ನಿಲಿಂಪತತಿ ಸಂತಸಂಗೊಳುವಂತೆ ದೈತ್ಯನಂ ಸಂಹರಿಸಿದಂ ರಣದೊಳು (ವೆಂಕಾರಾ. ೬-೨೧ ಸೂಚನೆ). [ದೇ.ಶ ತಮಿ. ತೆಮ್ಬು ; ತೆಲು. ತೆಂಪು]

ತೆಂಪುಗಾರ (ನಾ). ದುಂದುಗಾರ (?) : ಅಂಥ ತೆಂಪುಗಾರನಾದ ನೀನು ನಮ್ಮ ಸಾಲವನ್ನು ಹೇಗೆ ತೀರಿಸುವಿ (ಕಥಾಮಂ. IV, ೪).

[ತೆಂಪು? + – ಗಾರ (< – ಕಾಱ)]

ತೆಂಬ (ನಾ). ತಿಟ್ಟು ; ದಿಣ್ಣೆ ; ತೆವರು : ಬೆಟ್ಟಕ್ಕಿಂತಲೂ ಚಿಕ್ಕದಾದರೆ ಗುಡ್ಡ, ದಿಣ್ಣೆ, ಬೋರೆ, ತೆಂಬ, ತೆವರು ಎಂಬ ಹೆಸರುಗಳು ಬರುತ್ತವೆ (ಭೂಗೋಳ. ೧೧) ; ಇಂಬು ಮಾಡ್ಯಾರ ಅಣಗೇರಿ ತೆಂಬೊಳ್ಳೇದೆಂದೂ ಇಳಿದಾರ (ಕಜಾಗೀ. ೪೯) ; ಆ ಎತ್ತುಗಳು . . . ತಿಪಟೂರು ಕುಣಿಗಲು ಗಳಿಗೆ ಕಾಯಿ ಕೊಬರಿ ಬೆಲ್ಲ ತುಂಬಿದರೆ ಎಂಥ ತೆಂಬದಲ್ಲಿಯಾದರೂ ಸಲೀಸಾಗಿ ಎಳೆಯುತ್ತಿದ್ದುವು (ನನ್ನೂರು. ೩೫). [?]

ತೆಂಬಾಲ (ನಾ). ಒಂದು ಪ್ರದೇಶದ ಹೆಸರು (?) : ಬಸದಿಯ ಪೊಱಗಣ ಪಿತ್ತಿಲ್ಲೋಣ್ಟಮುಂ ತೆಂಬಾಲದೊಳು . . . ಕೊಟ್ಟ ಮಣ್ಣು (ಎಕ. X, ಕೋಲಾರ. ೯೦-೯೦ ; 903). [?]

ತೆಂಬುಟಿ (ನಾ). (?) : ತೆಂಬುಟಿ [ಪಾಠಾಂ. ಪೆಂಪುಳಿ] ಯೋಪಗ್ಗದನೇಕ ಭಂಗಿಯ ನವೀನಸ್ವಾದುವೆತ್ತುರ್ಪುಗಾಯ್ಗಳನಾಳೋಕಿಸಿ ತಂದು ಬಡ್ಡಿಸಿದರ್ (ಶಾಂತೀಶ್ವ. ೧೫-೭೦). [?]

ತೆಂಬೆರಲ್ ' ತೆಂಬೆಲರ್ ' ನೋ.

ತೆಂಬೆಲತ್ತಪಳ್ಳ (ನಾ). ಒಂದು ಪ್ರದೇಶದ ಹೆಸರು (?) : ಕೆಱೆಯ ಕೆಱಗೆ ತೆಂಬೆಲತ್ತಪಳ್ಳ ಕಱನಿ ಮೂಗಣ್ಡುಗವೆಡೆ (ಎಕ. X ಕೋಲಾರ. ೯೦-೮೮ ; 903). [? + ಪಳ್ಳ]

ತೆಂಬೆಲರ್, ತೆಂಬೆರಲ್, ತೆಂಬೆಲರು (ನಾ). = ತೆಂಗಾಳಿ : ಊದುವ ತೆಂಬೆಲರಿಂ ಬೆಡಂಗುವೆತ್ತು (ಎಇ. XIII, ೩೩೦-೨೮ ; 929) ; ಬೀಸಿದುದು ತೆಂಬೆಲರಪ್ಪಿಕೊಳ್ವವೊಲ್ (ಆದಿಪು. ೨-೬೫) ; ತೆಂಬೆಲರಲೆಪದ ಪೂಲತೆಯೆಂಬಿನಮಂಕುರಿಸೆ ಪುಳಕಮೊರ್ಮೊದಲೊಳೆ ಬಿಲ್ಲುಂಬೆಱಗುಮಾಗಿ ಸತಿ ಚೋದ್ಯಂಬಟ್ಟಳ್ (ಶಾಂತಿಪು. ೧೦-೭) ; ಮೆಲ್ಲಗೆ ನಡೆದಪ್ಪುದು . . . ತೆಂಬೆಲರ್ (ವರ್ಧಪು. ೧-೬೬) ; ಪೂಗಳ ಪೊಸಗಂಪಿನೊಳ್ ಪೊರೆದು ತೀಡುವ ತೆಂಬೆಲರಂತೆ . . . ಸೋಲಿಸದೆ ಕಾವನ ಕಬ್ಬಮದಾರನಾದೊಡಂ (ಕಬ್ಬಿಕಾ. ೦೪); ತೆಂಬೆಲರ್ ತೀಡೆ ತುಂಬಿಗಳಾಡೆ (ಶ್ರೀರಾಮಾ. ೪೯೬-೨೮೭) **ತೆಂಬೆರಲ್** : ಬಂದಾಡುವ ತೊಂಡುವೆಣ್ಬುರುಳಿ ತೀಡುವ ತೆಂಬೆರಲ್ (ಪಂಪಭಾ. ೩-೩೭) ; ತೆಂಬೆರಲ್ ಪೊರೆಪೊರೆಯ ಸಡಿಲ್ಚೆ ನಡು ಪೊಂಗಿರೆ ಮಲ್ಲಿಗೆಗಳ್ ಬಸಂತದೊಳ್ ಬಿರಿದೊಡೆ (ಪಂಪಭಾ. ೫-೩೩) ; ಪಾರದೆ ವಸಂತಮಂ ಕೈವಾರದೆ ತೆಂಬೆರಲ[ಪಾಠಾಂ. ತೆಂಬೆಲರ]ನಾ ಮುನೀಶನ ಬರವಿಂ ಪಾರೈಸಿದಂದದಿಂ ಸಹಕಾರಂ ತಾಳ್ದಿತ್ತು ಪುಳಕಮೆನೆ ಕಳಿಕೆಗಳಂ (ಚಂದ್ರಪು. ೨-೯೦). **ತೆಂಬೆಲರು** : ತೆಂಬೆಲರೊಯ್ಯನೆ ತೀಡೆ ನಿದ್ರಾಂಗನೆ ಗಿಂಬುಗೆಯ್ದನು ತನ್ನೊಡಲ (ಕರ್ಣವೃ. ೪-೫). [ತೆಂ + ಎಲರ್]

ತೆಂಬೆಲರು 'ತೆಂಬೆಲರ್' ನೋ.

ತೆಕಿಮುಕ್ಕಿ 'ತಕ್ಕೆಮುಕ್ಕೆ' ನೋ.

ತೆಕಿಮುಕ್ಕಿಬೀಳು 'ತೆಕ್ಕಿಮುಕ್ಕಿಬೀಳು' ನೋ.

ತೆಕ್ಕನೆ (ಅ). ೧. ತಕ್ಷಣ; ಕೂಡಲೆ; ಒಡನೆ: ಆತನ ಭಾವ ಭಣಿತೆಯನಱಿವವೊಲು ನಾನೊಂದುಪಾಯವನು ತೀವಿ ತೆಕ್ಕನೆ ಸಿಕ್ಕಿಸುವೆನು (ಪ್ರಭುಲಿಂಗ ೨೦-೮) ; ಅಸುರರ ಸಂತತಿಯುಂ ಮುಂ ತೀವಿದ ಕೃತಕಧ್ವಾಂತಮುಮಾ ಜಯಭೂಪತಿ ದಿನಕರಶರಮಂ ಬಿಡಲೊಡನೆ ತಾಂ ತೆಕ್ಕನೆ ಪರೆದತ್ತು (ಜಯಕಾ. ೭-೩೩); ಏನು ತೆಕ್ಕನೆ ಚಿಂತಾಗ್ರಸ್ತರಾದಿರಿ? (ಚಂದ್ರಸ. ೧೨); ದಾಳಿಂಬೆಹಣ್ಣನು ತಿನ್ನುವ ಕವಿ ಅದನ್ನು ತಿನ್ನುತ್ತಾ ತೆಕ್ಕನೆಯೇ ಆ ಸವಿಯ ಮೂಲಕ್ಕೆ ಹೊರಟಿರುವುದು ಇದರ ವಿಶೇಷ (ಸೌಂದಸ. ೩೩). ೨. ಹೆಚ್ಚಾಗಿ; ಅತಿಶಯವಾಗಿ; ಅಧಿಕವಾಗಿ; ಬಹಳವಾಗಿ : ಆ ಶಿಶುವಿನಟ್ಕೆ ತೆಕ್ಕನೆ ತೀವಿತ್ತನಿತುಂ ದಿಕ್ತಟಮಂ (ಜಗವಿ. ೩-೧೨); ಜನನಿಯ ಶರೀರದೊಳ್ ತೆಕ್ಕ[ಪಾಠಾಂ. ಕ್ಕೆ]ನೆ ತೀವಿದ ರಾಗರಸದೊಳೋಲಾಡಿಯೆ ... ಬಳೆವಂತೆ (ಚಂದ್ರಪು. ೩-೯೯); ಆ ರವಮೆಣ್ದೆಸೆಯೆಲ್ಲಮಂ ತೆಕ್ಕನೊತ್ತರಿಸಿ ತೀವಿರೆ (ಧರ್ಮಪ. ೩-೩).

ತೆಕ್ಕತೆಕ್ಕನೆ (ದ್ವಿರುಕ್ತಿ) : ಕಾಳೋರಗನಿಶ್ವಾಸಾನಿಳನಿಂ ಜಗುನೆಯ ಮಡು ತೆಕ್ಕತೆಕ್ಕನುಕ್ಕುತಿರ್ಕುಂ (ಅರ್ಧನೇ. ೮-೪೧) ; ಕಮಂಡಲಜಲಂ ತೆಕ್ಕತೆಕ್ಕನೆ ಕುದಿಯೆ (ಹಡಕಾ. ೨-೩೩) : ಪದಪದಾರ್ಥಂಗಳು ಪಚನಕಾಲದೊಳೊಡನೊಡನೆ ತೆಕ್ಕ[ಪಾಠಾಂ. ಕ್ಕು]ತೆಕ್ಕನೆ ಕುದಿಯೆ (ಬಸಪು. ೩೬-೪೬); ಜಲಕ್ಕನಾದಾನಂದರಸಭರಿತನೇತ್ರದಿಂ ತೆಕ್ಕತೆಕ್ಕನೆ ನೆಗೆವುತಿರ್ಪ ಬೆಮರ್ವನಿಗಳಿಂದಿರದೆ ಸೆರೆ ಬಿಗಿವ ಕೊರಲಿಂ...ಮೆಯ್ಯಿಕ್ಕಿ (ಪದ್ಮರಾ. ೫-೨೫). ತೆಕ್ಕನೆ ತೀವು=ಜಡಿದು ತುಂಬು; ಅಂಚು ಮುಟ್ಟ ತುಂಬು: ಕರಿಯ ಕರಗಮಂ ತೆಕ್ಕನೆ ತೀವಿ (ವಡ್ಡಾರಾ. ೦೦೩-೨೭); ತೆಕ್ಕನೆ ತೀವಿದ ಕಣ್ಣ ನೀರೊಳ್ ದೆಸೆಗಾಣದೆ ನಿಂದಿರ್ದ ಸುಯೋಧನನಂ ಸಂಜಯನಿಂತೆಂದಂ (ಪಂಪಭಾ. ೧೩-೫೭ ವ); ಮನದೊಳ್ ತೆಕ್ಕನೆ ತೀವಿದೊಂದು ಪರಮಸ್ನೇಹಾಮೃತಂ ಕಣ್ಗಳಿಂದೆನಸುಂ ಪೊಣ್ಮಿದುದೆಂಬಿನಂ ಸುರಿವಿನಂ ಹರ್ಷಾಶ್ರು (ಜಗವಿ. ೬-೮೫); ಹೊಕ್ಕಳು ಗುಣ್ಪುಗೆಟ್ಟುದು ಪೊಡಲೊಳು ಶಿಶು ತೆಕ್ಕನೆ ತೀವಿ ಜೀವಿಸಲು (ಮೋಹತ. ೧೭-೭). [? + – ಅನೆ$_1$]

ತೆಕ್ಕನೆವೋಗು (ಕ್ರಿ). ೧. ವಿಸ್ಮಯಪಡು; ಅಚ್ಚರಿಗೊಳ್ಳು : ಆ ಭವದೊಳೆ ನೀಂ ವನಚರನೆ ಎನಲೊಡಂ ತೆಕ್ಕನೆವೋದು ಜನ್ಮನಾಟಕಕ್ಕವನೀಶಂ (ಅರ್ಧನೇ. ೪-೫). ೨. ಗಾಬರಿಯಾಗು : ಇತ್ತ ಲೀಲಾವತಿ ನಿಜವಲ್ಲಭಂ ಮಲ್ಲಿಕಾಮಂಡಪದೊಳಿಲ್ಲದುದಂ ಕಂಡು ತೆಕ್ಕನೆವೋಗಿ (ಲೀಲಾವ. ೦೪-೦೦೬ ವ). [<ತೆಕ್ಕು$_2$ + ಪೋಗು$_1$]

ತೆಕ್ಕಾಡು 'ತೇಂಕಾಡು' ನೋ.

ತೆಕ್ಕಾಮುಕ್ಕೆ 'ತಕ್ಕೆಮುಕ್ಕೆ' ನೋ.

ತೆಕ್ಕಾಮುಕ್ಕೆಬೀಳು 'ತೆಕ್ಕಿಮುಕ್ಕಿ ಬೀಳು' ನೋ.

ತೆಕ್ಕಿಮುಕ್ಕಿ 'ತಕ್ಕೆಮುಕ್ಕೆ' ನೋ.

ತೆಕ್ಕಿಮುಕ್ಕಿಬೀಳು, ತೆಕಿಮುಕ್ಕಿಬೀಳು, ತೆಕ್ಕಾಮುಕ್ಕೆಬೀಳು (ಕ್ರಿ). ೧. ಬಲವಾಗಿ ತಬ್ಬು; ಗಟ್ಟಿಯಾಗಿ ಅಪ್ಪಿಕೊಳ್ಳು : ನಿಮ್ಮ ತಾಯಿ ಪುನರ್ಜನ್ಮವನ್ನು ಹೊಂದಿದ್ದಾಳೆ ಬಹಳ ಹೊತ್ತು ತೆಕ್ಕಿಮುಕ್ಕಿಬೀಳಬನ್ನಿರಿ (ಉರಾಜ. ೦೩೦) : ಮುಳುಗುವವನು ಬೆಂಡಿಗೆ ತೆಕ್ಕಿಮುಕ್ಕಿಬಿದ್ದಂತೆ ಏನನ್ನಾದರೂ ಹಿಡಿಯ ಹೋಗುವನು (ಬಾಳಬ. ೨೬). ೨. (ಆಲಂ) ಕೂಡಿಕೊಂಡು ಬರು ; ಜೊತೆಯಲ್ಲಿ ಬರು : ಇತ್ತೀಚಿನ ಆರು ವರ್ಷಗಳಲ್ಲಿ ಮತ್ತೆ ಸುಖ ದುಃಖ ತೆಕ್ಕಿಮುಕ್ಕಿಬಿದ್ದು ಬಂದಿವೆ (ಕಂನಾಸಾ. ೦೦೮). **ತೆಕಿಮುಕ್ಕಿಬೀಳು** : ೧. ಮುಳುಗಾಂವ ಬೆಂಡಿಗೆ ತೆಕಿಮುಕ್ಕಿಬಿದ್ದಾಂಗ (ಗರಿ. ೦೦೦-೪). **ತೆಕ್ಕಾಮುಕ್ಕೆಬೀಳು** : ೧. ವೆಂಕಣ್ಣಮಾಸ್ತರರನ್ನು ಮತ್ತೆ ಕುಂತಿ ಗಾಂಧಾರಿಯರು ತೆಕ್ಕಾಮುಕ್ಕೆ ಬಿದ್ದಿದ್ದರು (ದೀಪಹ. I, ೪೯).

[ತೆಕ್ಕಿಮುಕ್ಕಿ (<ತಕ್ಕೆಮುಕ್ಕೆ) + ಬೀಳು$_1$ (< ಬೀಟ್$_1$)]

ತೆಕ್ಕಿಸು 'ತಟ್ಕಿಸಂ' ನೋ.

ತೆಕ್ಕು$_1$ 'ತೇಗು$_1$' ನೋ.

ತೆಕ್ಕು$_2$ (ಕ್ರಿ). ೧. ಅಂಜಂ; ಹೆದರು; ಭಯಂಪಡು: ಮುನಿದೊಡಂ ಮುಟ್ಟಿ ನೋಯಿಸಿದಡಂ ತೆಕ್ಕನೀತನನೆಂತು ಹುಸಿಯ ನುಡಿಸುವೆನೆಂದು ಚಿಂತಿಸುತ (ಪಡಕಾ. ೮-೪೩); ಕಾಡುವಂ ಶಿವನಂತದರ್ಕೆ ತೆಕ್ಕದೆ ಭಕ್ತ ರಾಡಿದುಕ್ತಿಯನೆ ಮನ್ನಿಸುತೆ (ಪದ್ಮರಾ. ೩-೯); ಮನೋಜನ ಸಡಗರಕ್ಕೆ ತೆಕ್ಕಿದಳು...ಬೆಚ್ಚಿದಳಂಗಜಾಸ್ತ್ರದಲಿ (ಕುಪ್ಯಾಅ. ೮-೨೦); ತೆರಳದೆ ತೆಕ್ಕದೆ ತೆಱಹುಗೊದದೆ ರಾಮನಿರೆ ಮೆಚ್ಚಿದರು ದೇವತೆಗಳು (ಕುರಾಸಾಂ. ೨೦-೨೪). ೨. ಹಿಮ್ಮೆಟ್ಟು; ಸೋಲಂ: ಎಂತಪ್ಪ ವಿದ್ವಾಂಸರುಂ ತನಗೆ ತೆಕ್ಕುವರ್ (ಸಾಮರ.ಹ. ೨೩೮-೧); ಹಿಡಿ ಗುದಿಗಾಲ್ಗಳಂ ಕಟ್ಟಿ ಗೋತಮಂ ತೆಗೆ ತೆಕ್ಕದೊಡೆ ಕುತ್ತಿ ಕೆಡಹು (ಸಿಂಗಿರಾ. ೩-೧೮); ಸಿಡಿಲ ಪೊಡರ್ಪು ತೆಕ್ಕುವಂತು ಗುಡುಗುಡಿಸಿ ಗುಡುಗಿ ಬೊಬ್ಬಿಱಿದಂ ಕಲಿಯಣುವಂ (ರಾಮಾಶ್ವ. ೧೩೦-೩೦). ೩. (?): ನಿಱಿ ತೆಕ್ಕಿದ[ದೆ]ರಳೆ ತೆರೆಗಳ್ ಪೊಱವಾಱಂ ಭೋಂಕನಪ್ಪೆ ಘನನುಣ್ಡೊಡೆಯಂ ನಿಱಿ ಸೋಂಕಿ ಸೋಂಕೆ ಕೊಳನಂ ತುಱುಗೆವೆಗಳ್ ತುಱುಗೆ ಪೊಕ್ಕುದಬಲಾನೀಕಂ (ಸೂಕ್ತಿಸು. ೧೨-೨೩).

ತೆಕ್ಕು$_3$ (ಕ್ರಿ). (ಪ್ರಾಣಿಗಳಂತೆ) ನವೆಗೆ ಮೈ ನೆಕ್ಕಿಕೊಳ್ಳು: "ತೆಕ್ಕು-ತಿರ್ಯಕ್ಕಂಡೂತಿ ಲೇಹನೇ (ನವೆಗೆ ನೆಕ್ಕು)" (ಶಮಧಾ).

[ಗಿ ಇದು 'ತಿಕ್ಕು' ಎಂಬುದರ ಅಪಲಿಖಿತವಿರಬಹುದು]

ತೆಕ್ಕೆ$_1$ 'ತಟ್ಕೆ' ನೋ.

ತೆಕ್ಕೆ$_2$ 'ತಕ್ಕೆ$_3$' ನೋ.

ತೆಕ್ಕೆಗಟ್ಟು, ತಕ್ಕೆಗಟ್ಟು$_1$ (ಕ್ರಿ). ೧. ಸಂರುಳಿಗಟ್ಟು; ಸಂರಂಳಿ ಸುತ್ತು; ಸಿಂಬೆ ಸುತ್ತು: ಕುಂಡಲೀ. ಜಿಹ್ಮಗಃ—ಈ ೨ ತೆಕ್ಕೆಗಟ್ಟಿದ ಹಾವು (ಹಲಾಯು. ೦೦೩-೧೯); ತಲೆಸುತ್ತ ತೆಗೆದೊಡನೀಡಾಡಲಾ ಕೇಶ ನೆಲದೊಳಿರ್ದುದು ತೆಕ್ಕೆಗಟ್ಟಿ (ಭರಜ. ೭೦-೯೨). ೨. ರಾಶಿಯಾಗು; ದಟ್ಟೈಸಂ; ಸಂದಣಿಸು: ಪರಿಖೆಯ ತೆರೆವೊಯ್ಲಿಂದಂ ತೆರಳ್ದು ತಡಿವಿಡಿದು ತೆಕ್ಕೆಗಟ್ಟಿದ ಪೊಂದಾವರೆಯ ರಜದಂತೆ (ಮಲ್ಲಿಪು. ೨-೬೪); ಹೊಡಕರಿಸಿ ಹೊದಱಿದ್ದು ಮುಂದಕ್ಕೆ ನಡೆನಡೆದು ಕೈ ಮಾಡಿ ಕಾಯದ ತೊಡಕನೊಲ್ಲದೆ ತೆಕ್ಕೆಗ[ಪಾತಂ. ಗೆ]ಟ್ಟಿತು ಭಟರು ನಾಕದಲಿ (ಕುಪ್ಯಾಭೀ. ೯-೧೮). ೩. ಒಂದರೊಡನೊಂದಂ ಬೆರೆ; ಕೂಡು; ತೊಡಕಂಹಾಕಿಕೊಂಡಿರು: ತೆಕ್ಕೆಗಟ್ಟಿರ್ದ ಘಣಿಪತಿಯ ಭಾವದಿಂದೆಸೆವ ಬಜ್ಜರವರಲ ಬಾಹುಪೂರಕ (ಸೌಂದಪು. ೭-೨೭). **ತಕ್ಕೆಗಟ್ಟು$_1$**: ೪. ಒಟ್ಟಿಗೆ ಸೇರಿಸಿ ಕಟ್ಟು; ಪಿಂಡಿ ಮಾಡು: ಆ ಹುಲ್ಲೆಲ್ಲವನ್ನೂ ತಕ್ಕೆಗಟ್ಟು (ರೂಢಿ).

[ತೆಕ್ಕೆ$_1$ (<ತಟ್ಕೆ) + ಕಟ್ಟು$_1$]

ತೆಕ್ಕೆಗೆಡಿಸು (ಕ್ರಿ). ಗುಂಪುಗೆಡಿಸು; ಚೆದರಿಸು: ಕಕ್ಕಸದೊಳಕ್ಕತುಳಕೈತಂದ ವೀರರಂ ಮುಕ್ಕುರಿಕಿ ತೆಕ್ಕೆಗೆಡಿಸಿದಂ (ಜೈಮಿಭಾ. ೧೪-೬).

[ತೆಕ್ಕೆ$_1$ (<ತಟ್ಕೆ) + ಕೆಡಿಸು$_1$].

ತೆಕ್ಕೆಗೆಡೆ (ಕ್ರಿ). ಗುಂಪಾಗಿ ಬೀಳು; ರಾಶಿಯಾಗಿ ಬೀಳು: ಮಿಕ್ಕು ನೂಕುವ ಕುದುರೆಕಾಱರು ತೆಕ್ಕೆಗೆಡೆದರು ಸಂದಣಿಸಿ ಕೈಯಿಕ್ಕಿದಾನೆಯ ನೇನನೆಂಬೆನು ಕಾಣೆನಳವಿಯಲಿ (ಕುಪ್ಯಾದ್ರೋ. ೫-೩).

[ತೆಕ್ಕೆ$_1$ (<ತಟ್ಕೆ) + ಕೆಡೆ$_1$]

ತೆಕ್ಕೆಗೆಯ್ 'ತಟ್ಕೆಗೆಯ್' ನೋ.

ತೆಕ್ಕೆಗೈ 'ತಟ್ಕೆಗೆಯ್' ನೋ.

ತೆಕ್ಕೆಗೈಸು (ಕ್ರಿ). ಅಪ್ಪುವಂತೆ ಮಾಡು; ತಬ್ಬಿಸು: ನಿನ್ನ ಉರಿವ ಗಾಜಿನ ಕಂಭಕೆ ತೆಕ್ಕೆಗೈಸಿ ಪರಿಭವದೊಳು ಬಳಲುವಾಗ ಹರಿಪುರುಷೋತ್ತಮನ ನಾಮ ನೆನೆಗೊಡದೆಲೆ ಮನ (ಪುರಂದ. ೧-೧೪೨-೬).

[ತೆಕ್ಕೆಗೈ (< ತಟ್ಕೆಗೆಯ್) + – ಸು$_1$]

ತೆಕ್ಕೆಗೊಳ್ ತಟ್ಕೆಗೊಳ್' ನೋ.

ತೆಕ್ಕೆಗೊಳ್ಳು 'ತಟ್ಕೆಗೊಳ್' ನೋ.

ತೆಕ್ಕೆಗೋಲ್ (ನಾ). ಗುಂಪಾಗಿ ಬರುವ ಬಾಣ: ಹೊಕ್ಕವಾನೆಗಳೆರಡು ಸೇನೆಯೊಳೊಕ್ಕಲಿಕ್ಕಿದವೆಸುವ ಜೋದರ ತೆಕ್ಕೆಗೋಲಿನ ಮಾಲೆ ಮುಕ್ಕುಳಿಸಿದವು ದಿಗುತಟವ (ಕುಪ್ಯಾಭೀ. ೪-೭೫). [ತೆಕ್ಕೆ$_1$ (<ತಟ್ಕೆ) + ಕೋಲ್$_1$]

ತೆಕ್ಕೆತುರುಬು 'ತೆಕ್ಕೆದುಱುಂಬು' ನೋ.

ತೆಕ್ಕೆದುಱುಂಬು, ತೆಕ್ಕೆತುರುಬು, ತೆಕ್ಕೆದುಱುಬು (ನಾ). ಸಂರಂಳಿ ಸುತ್ತಿ ಕಟ್ಟಿದ ಮುಡಿ: ತೆಕ್ಕೆದುಱುಂಬಿನ ತೊಂಡಿಲು ಮಣಿಬಲೆ ಚೊಕ್ಕ ಬೊಟ್ಟಿಕ್ಕಿದ ರವಕೆ ಇಕ್ಕಿ ಲೆಕ್ಕಿಸಿ ತಿದ್ದಿ ನಿಱಿವಿಡಿದುಡಿಸಿದ ಸುಕ್ಕಿನಂಬರದೊಳೆಸೆದರು (ಭರಜ. ೩೦-೪೧). **ತೆಕ್ಕೆತುರುಬು**: ಅಡ್ಡಮುಡಿ, ಸೋರುಮುಡಿ, ದೊಡ್ಡಮುಡಿ, ತೆಕ್ಕೆತುರುಬು ಮುಂತಾದ ಶೃಂಗಾರದ ತುರುಬುಗಳನ್ನು ತೋರದೆ ಬೇಸರುಮುಡಿಗಟ್ಟಿ ಬಂದರು (ಮಾಮಲ್ಲಿ. ೧೨೫). **ತೆಕ್ಕೆದುಱುಬು**: ಅಡ್ಡಮುಡಿಯ ಸೋರುಮುಡಿಯ ಸೊನ್ನಾರದ ದೊಡ್ಡಮುಡಿಯ ತೆಕ್ಕೆದುಱುಬ ಒಡ್ಡುದೋಱದೆ ಬಿಟ್ಟು ಬೇಸಱುಮುಡಿಗಟ್ಟಿ...ಐತಂದರು (ಭರಜ. ೧೬-೨೪).

[ತೆಕ್ಕೆ$_1$ (<ತಟ್ಕೆ) + ತುಱುಂಬು$_2$]

ತೆಕ್ಕೆದುಱುಬು 'ತೆಕ್ಕೆದುಱುಂಬು' ನೋ.

ತೆಕ್ಕೆಬಡಿ (ಕ್ರಿ). ಗುಂಪಾಗಿ ಬೀಳಿಸು; ರಾಶಿಯಾಗಿ ಕೆಡವು: ಅಡ್ಡಮಳೆ, ಸಡ್ಡು ಹೊಡೆಯುವ ಸಿಡಿಲು, ಸಿಕ್ಕುದನು ತೆಕ್ಕೆಬಡಿಯುವ ಗಾಳಿ (ನೆಲಮು. ೬೦-೧೦). [ತೆಕ್ಕೆ$_1$ (<ತಟ್ಕೆ) + ಬಡಿ$_1$]

ತೆಕ್ಕೆಬೀಳು 'ತಕ್ಕೆಬೀಳು' ನೋ.

ತೆಕ್ಕೆಯಾಡು (ಕ್ರಿ). ಗುಂಪುಗುಂಪಾಗಿ ಚೆಲ್ಲಾಪಿಲ್ಲಿಮಾಡು; ಗುಂಪುಗುಂಪಾಗಿ ನಾಶಗೊಳಿಸು,-ಚೆದರಿಸು: ಮಿಕ್ಕುಟಿದ ನಿಮ್ಮ ಸೊರ್ಕು ಜವ್ವನಿಗರಂ ತಿಕ್ಕಿ ತೆಕ್ಕೆಯಾಡುವೆನಿಂತಿದು ದಿಟ್ಟಮೆಂದಂ (ರಾಮಾಶ್ವ. ೧೪೨-೨೮). [ತೆಕ್ಕೆ$_1$ (<ತಟ್ಕೆ) + ಆಡು$_1$]

ತೆಕ್ಕೆಯಿಸು 'ತಟ್ಕೈಸು' ನೋ.

ತೆಕ್ಕೆಯ್ಸು 'ತಟ್ಕೈಸು' ನೋ.

ತೆಕ್ಕೆವರಿ (ಕ್ರಿ). ರಾಶಿಯಾಗು; ಗುಂಪಾಗು: ತೆಕ್ಕೆವರಿದೇಳ್ವ ಕರ್ಬೊಗೆಯ ಹೊರಳಿಗಳ ದಶದಿಕ್ಕುಗಳನವ್ವಳಿಪ ಕೇಸುರಿಯ ಚೂಣಿಗಳ . . . ಪೆರ್ಗಿಚ್ಚುಗಳ ವೆಂಕೆ ಮೇಲಿಕ್ಕಿದುದು ಹಂಸಧ್ವಜನ ಸೇನೆ ಬೆಂದು ಬೇಗುದಿಗೊಂಡುದು (ಜೈಮಿಭಾ. ೧೩-೧೨); ಘಣಿನಿಕರ ಘೋಳೆಂದು ತೆಕ್ಕೆವರಿದಿಂಗಳದ ಮೇಲ್ಬಿದ್ದು ಸುಡುತಿರಲ್ (ತುರಂಗ. ೬-೩೫).

[ತೆಕ್ಕೆ$_1$ (<ತಟ್ಕೆ) + ಪರಿ$_2$]

ತೆಕ್ಕೆವರಿಗೆ (ನಾ). ಒಂದಂ ಬಗೆಯ ಗುರಾಣಿ (?); ಗುರಾಣಿಗಳ ಸಾಲು (?): ನಡೆಗೋಟೆಯೆನೆ ಮಂಡಳಿಸಿ ಬಲಿದರು ತೆಕ್ಕೆವರಿಗೆಗಳ (ಕುಪ್ಯಾಭೀ. ೪-೨೫); ಬಲುವಾನಿಸದ ಬಂಡಿಗಳನೊಡ್ಡಿದರಾ ನಿರಂತರ ಶರವ ತಡೆದರು ತೆಕ್ಕೆವರಿಗೆಯಲಿ (ಕುಪ್ಯಾಕ. ೧೧-೫೦); ಲಗ್ಗೆವರಿಗೆ ತೆ[ಪಾಠಾಂ. ತ]ಕ್ಕೆವರಿಗೆಗಳಿಂ ಬಂದು ಮುಗ್ಗಿ ಕವಿದು (ಕುರಾಸಾಂ. ೧೦-೩೨); ಸಾಲು ಕೆಂಪಿನ ತೆಕ್ಕೆವರಿಗೆಯೊಳರಿಕುಲಕಾಲಾಂತಕಬಲಬಲನು ಶೂಲಧರನು ಖಗರಾಜಗೆ ಪಕ್ಷದವೋಲೆಸೆದಳು ಜೀವದೊಡತಿ (ಪರ್ಧಜ. ೬-೭೭).

[ತೆಕ್ಕೆ$_1$ (<ತಟ್ಕೆ) + ಪರಿಗೆ$_3$]

ತೆಕ್ಕೆವೆಳಗು (ನಾ). ಅಧಿಕವಾದ ಬೆಳಕಂ; ಹೆಚ್ಚಾದ ಕಾಂತಿ: ಹತ್ತು ಸಾವಿರ ಕೈಪ್ರಮಾಣದ ಸುತ್ತುವಳಯದ ಮಣಿಯ ಶಿಲೆಗಳ ತತ್ತವಣೆಗಳ ತೆಕ್ಕೆವೆಳಗಿನ . . . ವೈಡೂರ್ಯ ಶಿಲೆಗಳ ಮತ್ತವಾರಣ ವರವಿಧಾನದಲೆಸೆದುದಾಸ್ಥಾನ (ಕುಪ್ಯಾಸ. ೧-೦೪).

[ತೆಕ್ಕೆ$_1$ (<ತಟ್ಕೆ) + ಬೆಳಗು$_2$ (<ಬೆಳಕು$_2$)]

ತೆಕ್ಕೆವೆಱು (ಕ್ರಿ). ರಾಶಿಯಾಗು ; ದಟ್ಟೈಸು ; ಸಂದಣಿಗೊಳ್ಳು : ತದೀಯತನುವಂ ಪ್ರಾಳೇಯಸಂಸ್ತೋಮವಿಶ್ರಮಮಂದೆಕ್ಕಿದ ತೆಕ್ಕೆವೆತ್ತರಲೆ ಪೋಲ್ ಪತ್ತಿರ್ಪಿನಂ ನಿಂದನಶ್ರಮದಿಂದಂ ತಟಿನೀತಟಾಕತಟದೊಳ್ ಯೋಗೀಂದ್ರಂ (ನೇಮಿಪು. ೨-೬೪) ; ತನಯಂ ಬಂದಾ ವಾರ್ತೆಗೆ ತನುಪುಳಕದ ತೆಕ್ಕೆವೆತ್ತು ಶಿಶಿರದ ಸೋಂಕಿಂ ನನೆವೆತ್ತೊಪ್ಪುವ ಮಾಲತಿಯನೆ ವಿಜಯಾವತಿ ಸಮಂತು ಪೋಲ್ತೆಸೆದಿರ್ದಳ್ (ಕುಸುಮಾ. ೧೫-೯೮).

[ತೆಕ್ಕೆ$_1$ (<ತಟಕ್ಕೆ) + ಪೆಱು$_1$]

ತೆಕ್ಕೆಹಾಯ್, ತೆಕ್ಕೆಹಾಯಂ (ಕ್ರಿ). ೧. ಅಪ್ಪಿಕೊಳ್ಳು ; ತಬ್ಬು : ಕಮಲೆಯು ಅಳುತ್ತ ... ಅವನಿಗೆ ತೆಕ್ಕೆಹಾಯ್ದಳು (ರಕ್ತಧ್ವ. ೧೫೭). **ತೆಕ್ಕೆಹಾಯು** : ೨. = ತೆಕ್ಕೆಬಡಿ : ದಿಕ್ಕುದಿಕ್ಕಿಗೆ ಮೋಡ ಪಕ್ಕ ಬೀಸುವುದು. ಎದುರು ಬಂದುದನಮರಿ ತೆಕ್ಕೆಹಾಯುವುದು ! (ನಲಮು. ೧೫-೨೩).

[ತೆಕ್ಕೆ$_1$ (<ತಟಕ್ಕೆ) + ಹಾಯ್$_1$ (<ಪಾಯ್$_1$)]

ತೆಕ್ಕೆಹಾಯು 'ತೆಕ್ಕೆಹಾಯ್' ನೋ.

ತೆಗಪು, ತೆಗೆಪು$_1$ (ಕ್ರಿ). ೧. ಹೋಗುವಂತೆ ಮಾಡು; ಹೊರಡಿಸು; ತೆರಳಿಸು. ೨. ಕುದಿಸು ; ಬೇಯಿಸು : ಕುದಿವ ಕರ್ಬೊನ್ನ ಕಾಯ್ಗೊಂಡೆಣ್ಣೆಯೊಳ್ ಬಳಲೆ ತೆಗಪು[ಪಾಠಾಂ. ತೆಗೆ]ವರುಂ(ಆದಿಪು. ೫-೮೫ವ); ಕುದಿಯಿಸುಗೆ ಸುಣ್ಣದಿಂ ಕಯ್ಪೆದೊಂಡೆಯಂ ಕೋಕಿಲಾಕ್ಷಿವೆರಸು ಸಿತೇರಂಡದ ತೊಟ್ಟಿಯೆಲೆಗಳಿಂ ಪಡಲದ ಕಾಯಂ ತೆಗಪುಗವಱ ಕೈಪೆಗಳಟಿಗುಂ (ಲೋಕೋಪ. ೮-೩೦) ; ತಳಿರ್ಗಳ್ ಮೆಯ್ವೆಂಕೆಯಿಂದಂ ತೆಗಪಿದ ತಳಿರಂತಾದುವಾದಂ ಮೃಣಾಳೀವಳಯಂ ಕೆಯ್ವೆಂಕೆಯಿಂದಂ ಕರಿಯ ಬಳೆಗಳಂತಾದುವು (ಲೀಲಾವ. ೧೧-೪೪) ; ತುಲಸಿಯ ನುಗ್ಗಿಯ ತಗ್ಗಿಯ . . . ಪತ್ರಂಗಳನೊಡನೆ ತೆಗಪಿಕೊಂಡದಱೊಳೆ ಸೇಕಂಗೆಯ್ಯೆ (ಅಶ್ವಶಾ. ೦೦-೨೦). **ತೆಗೆಪು$_1$** : ೧. ಜಲನಿಧಿಯಂ ಪೀರ್ದಲ್ಲಿಯ ಜಲಚರಮಂ ಕೂಡೆ ತೆಗೆಪಿದೆಂ ತೆಗೆಪುವೆನಿಂ ಸ್ಥಲಚರಮನೆಂದು ವಡಬಾನಲನೇಟ್ವವೊಲೊಗೆದುದರ್ಕಮಂಡಳಂ (ಕಾದಂಉ. ೪೬೩). ೨. ತೆಗೆಪಿ ಕುಡಿಯಿಸುಗೆ ಶಿವೆ ಕಳವಿಗೆ ಬಾಳಂ ... ಎಂಬಿನಿತುಮಂ (ಲೋಕೋಪ. ೯-೦೮).

[ತೆಗೆ$_1$ + – ಪು$_1$]

ತೆಗಲಮುಗು (ನಾ). ಒಂದು ಬಗೆಯ ಸಸ್ಯ : (ಮೃಜಿಗಿ. ೪೨-೮೩೦). [?]

ತೆಗಲೆ (ನಾ). ೧. ಎದೆ ; ವಕ್ಷಸ್ಥಳ : ಪುಲಿ ಬಂದು ಪಾಯ್ದು ಬಸಿಱಂ ಪೋಟ್ದು ನೆತ್ತರಂ ಕುಡಿದು ತೆಗಲೆಯಂ ಪೋಟ್ದು ತಿಂಬಾಗಳ್ (ವಡ್ಕಾರಾ. ೪೮-೧೯); ಅಡಿ ತೊಡೆ ಪೊರ್ಕುಟುಂ ತೆಗಲೆ ಕೈ ಕಣಕಾಲ್ ಕೊರಲೆಂಬಿವುಂ . . . ಸೀಟ್ದುವು ಪಾರ್ಥನಂಬುಗಳ್ (ಪಂಪಭಾ. ೧೦-೧೩೬); "ಹೆಕ್ಕತ್ತು ; ಹೆಗಲು" (ಪಂಪಭಾ. ಕೋಶ); ದೇಸಿಯಾದ ತೆಗಲೆ ಪದಕ್ಕೆ ವಕ್ಷಸ್ಥಳದ ಮೇಲ್ಗಡೆ ಎಂಬ ಅರ್ಥ ಮಾತ್ರವಲ್ಲದೆ ಒಳಗಡೆ ಎಂಬರ್ಥವಿಲ್ಲ (ನಾಡೋಜ. ೨೪೬) ; ತೆಗಲೆ ಎಂಬುದು ಉರಸ್ಥಳಕ್ಕೆ ನಮ್ಮಿ ಕನ್ನಡನಾಡಿನಲ್ಲಿ ಮಾತ್ರ ರೂಢವಾದ ಹೆಸರು . . . 'ತಗಲೆ' ಎಂದರೆ ತೆಗಲೆಯ ಮೇಲೆ ಬಿಗಿದು ಕಟ್ಟುವ ಬಟ್ಟಲಿನಾಕಾರದ ಒಂದು ಪದಾರ್ಥ (ಪಾರ್ತಿಸು. ೪೭). ೨. ಹೆಗಲಂ ; ಭುಜ : "ತೆಗಲೆ[ಪಾಠಾಂ. ಳ್]ಯೆಂದು ಪೆಗಲ್" (ಶಮದ. ಸ. ೩೪೩ ಪ್ರಯೋ). ೩. (ಕರಾ) ಸೊಕ್ಕು ; ಮದ ; ಅಹಂಕಾರ : ಯಾವ ಇನ್ಸ್‌ಪೆಕ್ಟರರೇ ಬರಲಿ ವರದಿಪುಸ್ತಕದಲ್ಲಿ 'ಲಾಯ್ಕು' ಎಂದು ಬರೆದು ಹೋಗುತ್ತಾರೆ. ಆದರಿಂದ ಇವರಿಗೆಲ್ಲ ತಿಂದ ತೆಗಲೆ (ಸ್ವಪ್ನಹೊ. ೩೪).

[ದೇ.॥ ತಮಿ. ಚುವಲ್, ಚಕಿಲ್ ; ತುಳು. ತಿಗಲೆ]

ತೆಗವು, ತೆಗುವು (ನಾ). ೧. ಭಾರವಾದುದು; ಜಡವಾದುದು. ೨. ಕಠಿನವಾದುದು ; ಕಷ್ಟಕರವಾದುದು : ಅವನ್ನ ಹೊರಗೆ ಹಾಕೂದುಂದ್ರ ಓಟು ತೆಗವ ಹರೀತೇತಿ (ಗ್ರಾಮಾಯ. ೪೮). **ತೆಗುವು$_2$** : ೨. ಅವಳಿಗೆ ಅಡುಗೆ ಮಾಡುವುದು ತೆಗುವೆನಿಸಹತ್ತಿತು (ಜಮೀನ್ದಾ. ೭೩). [?]

ತೆಗಸು 'ತೆಗೆಯಿಸು' ನೋ.

ತೆಗಹು (ನಾ). ೧. ಹಿಂದಕ್ಕೆ ತೆಗೆಯುವಿಕೆ,–ಎಳೆಯುವಿಕೆ ; ಸೆಳೆಯುವಿಕೆ : ಆಳು ಮಿಗೆ ಕುರುಭೂಪಾಲಕನ ಹಿಂದಿಕ್ಕಿ ಕಿವಿಗಡಿಗೋಲ ತೆಗಹಿನೊಳೊದಗಿದರು ದುಶ್ಶಾಸನಾದಿಗಳು (ಕುವ್ಯಾದ್ರೋ. ೨-೭೪) ; ಭರಿತ ವಿಷದಹಿವರನ ತೆಗಹಿನ ತೆರಳಿಕೆಯಲುದಿಸಿದ ತಮೋನಿರ್ಭರಶರೀರದ ಸುಭಟರದೆ ನರನಾಥ ನೋಡೆಂದ (ತೊರರಾ. ೬-೨೦-೬೪). ೨. ಹಿಂದೆಗೆಯುವಿಕೆ ; ನಿರ್ಗಮನ. 'ಬಿಸಿಲುದೆಗಹು' ಪರಾ. ೩. ತೆರವು ; ಬಿಡುವು ; ಅವಕಾಶ : ಹಗಲಿರುಳಿಡೆವಿಡದೀ ಮಳೆ ಕಱಿದುದು ತೆಗಹಿಲ್ಲ ಮುಂದೆ ಹೆಚ್ಚುತಿದೆ (ಭರಚ. ೩೪-೭೨). ೪. ದೃಢತೆ ; ಕೆಚ್ಚು ; ಸತ್ವ : ಬಾಹುಸತ್ವದ ಹೊಗರು ಹೋಗದು ಮನದ ಖಾತಿಯ ತೆಗಹು ತಗ್ಗದು ಹೊಕ್ಕು ತಿವಿದಾಡಿದರು ಬೇಸಱದೆ (ಕುವ್ಯಾಸ. ೨-೦೦೦) ; ಕ್ಷತ್ರಧರ್ಮದ ತೆ[ಪಾಠಾಂ. ತ]ಗಹು ಸಾಯದು ನಿನಗೆನುತ ಗಹಗಹಿಸಿದನು ಶಕುನಿ (ಕುವ್ಯಾಸ. ೧೪-೨). [ತೆಗೆ$_1$ + – ಹು$_2$]

ತೆಗಳ್$_1$ 'ತೆಗಟ್$_1$' ನೋ.

ತೆಗಳ್$_2$ 'ತೆಗಟ್$_2$' ನೋ.

ತೆಗಳಿ$_1$ 'ತೇಮಳು' ನೋ.

ತೆಗಳಿ$_2$ (ನಾ). = ತೆಗಳಿಕೆ$_2$. 'ತೆಗಳಿಗೊಳ್', 'ಸೆಗಳಿ' ಪರಾ. [?]

ತೆಗಳಿಕೆ$_1$ (ನಾ). = ತೆಗಟ್ಕೆ ೧: ಪೊಗಳಿಕೆಗೆ ಹಿಗ್ಗಲೊಲ್ಲಡೆ, ತೆಗಳಿಕೆಗೆ ಕುಗ್ಗಲಾರಡೆ, ಲತೆ ಫಲಕೆ ಸಿಗ್ಗಲೇಕೆ ? (ಗಿಳಿವಿಂ. ೦೦೪-೪೪) ; ಹೊಗಳಿಕೆ ತೆಗಳಿಕೆಗಳ ಕಡೆಗೆ ಲಕ್ಷ್ಯಕೊಡಬಾರದು (ಗೀಪಾಸಂ. ೨೬).

[ತೆಗಳ್$_1$ (<ತೆಗಟ್$_1$) + – ಇಕೆ]

ತೆಗಳಿಕೆ$_2$ (ನಾ). ಹೆಕ್ಕಳೆ; ಪದರ : ಸುರಿತಂದಶ್ರುಪ್ರವಾಹಂ ಬಱತೊಣಗಿದ ಬಾಸುಟ್ಮೊಗಂ ಪೂಸೆಯುಂ ಕಾಯ್ದಿರದೆಟ್ಟಾ ಚಂದನಾಲೇಪದ ತೆಗಳಿಕೆಗಳ್ . . . ಬೆರಸಲರ್ವಸೆಯೊಳ್ ಕಾಂತೆಯಿಂತಿರ್ದಳ್ (ಕುಸುಮಾ. ೧೩-೭೯). 'ಸೆಗಳಿಕೆ' ಪರಾ. [ತೆಗಳಿ$_2$ + – ಕೆ]

ತೆಗಳಿಗೆ (ನಾ). ಪದರ ; ಹೆಕ್ಕಳೆ ; ನಿರಿಗೆ : ಮುಗಿಲ ತೆಗಳಿಗೆಯ ನೆಗೆದ ಪೊರೆಗಳೊಳದೃಶ್ಯನಾದಂ ನಭದೊಳ್ (ಶಾಂತಿಪು. ೯-೯೪) ; ಮುಗಿಲ ತೆಗಳಿಗೆಯ ಪೊರೆಯೊಳಗೊಗೆದ ಶರಶ್ಚಂದ್ರನಂದದಿಂದುದಯಿಸಿದಂ (ವರ್ಧಮಾ. ೬-೩೬) ; ಶರದದ ಮುಗಿಲ ತೆಗಳಿಗೆಯಿದನಿಪ ಮೇಲ್ಕಟ್ಟಿನ ಬೆಳ್ಳುಂಬಟ್ಟೆಯುಂ (ಚಂದ್ರಪು. ೦೨-೦೦ವ). 'ಸೆಗಳಿಗೆ' ಪರಾ.

[ತೆಗಳಿ$_2$ + – ಗೆ]

ತೆಗಳಿಗೆಬೀಟ್ 'ತೆಗಳಿಗೆವೀಟ್' ನೋ.

ತೆಗಳಿಗೆವೀಟ್, ತೆಗಳಿಗೆಬೀಟ್ (ಕ್ರಿ). ಹೆಕ್ಕಳೆ ಉಂಟಾಗು ; ಪದರವಾಗು : ತೆಗಳಿಗೆವಿರ್ದೊ[ಪಾಠಾಂ. ಟ್ಟೊ]ಡಲುಂ ನಾಲಗೆಗಿತ್ತರೆ ಬಱತ ಬಾಯುಂ ... ತಾಱುವ ತಾಳ್ಗಳುಮಗುರ್ವಿಸಲ್ ಕಾಡ ಕೋಣನೆಯ್ದಿದುದಱಿಲಂ (ಜಗವಿ. ೧೭-೬೬). **ತೆಗಳಿಗೆಬೀಟ್** : ಮೃಗಕುಲಂ ... ಬೆಂದೊವಲ್ ತೆಗಳಿಗೆಬೀಟ್ ಬಾಯ್ಗೆ ಕರಿಸಂ ಬರೆ ನಾಲಗೆಗಿಟ್ಟು ನಟ್ಟದಿಟ್ಟಿಗಳೊಡನಳ್ಳೆ ಪೊಯ್ಯೆ ನಡೆಗೆಟ್ಟುವು ತೃಷ್ಣೆಯಿಂ (ಪಂರಾಮಾ. ೭-೯೩).

[ತೆಗಳಿಗೆ + ಬೀಟ್$_1$]

ತೆಗಳಿಗೊಳ್ (ಕ್ರಿ). ಸುಕ್ಕಾಗು ; ಪದರವಾಗು : ಅಂಗಜತಾಪದಿಂ ಕೊಱಗಿದಬ್ಜಮುಖಂ ಪರೆದಿರ್ದ ನುಣ್ಗೊರಲ್ ತುಂಗಕುಚುಗಳೊಳ್ ತೆಗಳಿಗೊಂಡ ಲಸನ್ಮಳಯೋದ್ಭವಂ ... ರಂಜಿಸಿರ್ಪಂಗನೆ ಕಾಮದೇವ ನೆಡೆಯಾಡಿಪ ಪುತ್ರಿಕೆಯಂತಿರೆಯ್ದಿದೆಳ್ (ದಶಕು. ೬-೧೨೯).

[ತೆಗಳಿ$_2$ + ಕೊಳ್$_1$]

ತೆಗಳಿಸು 'ತೆಗಟಿಸು' ನೋ.

ತೆಗಳು$_1$ 'ತೆಗಟ್$_1$' ನೋ.

ತೆಗಳು$_2$ (ಕ್ರಿ). ತಳ್ಳು; ನೂಕು: ಬಂಗಾರ ಅಳದೀರ ಬಾಯ್ಮೇಲೆ ಹೊಯ್ದೀರ ಬಾಗ್ಲಿಂದಾಚೆಗೆ ತೆಗಳೀರ ಅಪ್ಪಾಜಿ ಹುಟ್ಟಿದಾ ಮನೆ ತಿರುವೀರಾ (ಹಳ್ಳಿಪಾ. ೫೩). [?]

ತೆಗಳು$_3$ 'ತೆಗಟ್$^{ಳ್}_2$' ನೋ.

ತೆಗಳುಗಾರ (ನಾ). ತೆಗಳುವವನು; ನಿಂದಿಸುವವನು; ಅವಹೇಳನ ಮಾಡುವವನು: ಕನ್ನಡಕದ ತೆಗಳುಗಾರ ನಡುವೆ ಮಾತು ಹಾಕಿದ (ಯೋಧಪು. ೫೭). [ತೆಗಳು$_1$ (<ತೆಗಟ್$^{ಳ್}_1$)+–ಗಾರ (< – ಕಾಱ)]

ತೆಗಳುನಗೆ (ನಾ). ತಿರಸ್ಕಾರದಿಂದ ಕೂಡಿದ ನಗೆ: ಸುಲೋಚನ ಧರಿಸಿದ್ದವನು ತನ್ನ ಮುಖದ ಮೇಲೆ ನೆಲಸಿದ್ದ ತೆಗಳುನಗೆಯನ್ನು ಎಲ್ಲರ ಮೇಲೆಯೂ ಚೆಲ್ಲಿ ಹೇಳಿದನು (ಯೋಧಪು. ೫೬).

[ತೆಗಳು$_3$ (<ತೆಗಟ್$^{ಳ್}_2$) + ನಗೆ]

ತೆಗಳ್ಪು (ನಾ). ತೆಗಳಿಕೆ; ನಿಂದೆ: ಇಲಿಗಂ ಮರಕುಟಗವಕ್ಕಿಗಮಲಸದೆ ಕರ್ದುಕುತ್ತೆ ಕಡಿಯುತಿರ್ಪುದೆ ಸಹಜಂ ಸಲೆ ಚಪಲಂಗಂ ಕುಕವಿಗಮಲಸದೆ ತೆಗಳ್ಪಿದುವೆ ಸಹಜಮವಱಂತೆ ಕರಂ (ಧರ್ಮಾಮೃ. ೧-೪೬).

[ತೆಗಳ್$_1$ (<ತೆಗಟ್$^{ಳ್}_1$) + – ಪು$_2$]

ತೆಗಟ್$^{ಳ್}_1$. ತೆಗಳ್$_1$, ತೆಗಳು$_1$ (ಕ್ರಿ). ೧. ಹೀಯಾಳಿಸು; ನಿಂದಿಸು; ಅವಹೇಳನ ಮಾಡು; ತಿರಸ್ಕರಿಸು: "ತೆಗಟ್=ನಿಂದಾಯಾಂ" (ಶಮಧಾ); ಕಂಜನಾಭನ ಸಮಂಜಸಿಕೆಯೊಳ್ತನ್ನಂ ತೆಗಟ್ದು ನುಡಿದು ದರ್ಕೇವೈಸಿ (ಗದಾಯು. ೭-೪೫ಪ); ಅಂತಾ ದುರಾತ್ಮಂ ... ಜಗಂ ತೆಗಟ್ಳ ಜೀವಿಸುತ್ತುಂ (ವರ್ಧಪು. ೩-೧೨ಪ). ೨. ವಿನೋದವಾಡು; ಹಾಸ್ಯ ಮಾಡು: ನೀಂ ಮಹಾದೇವಿಯ ಮಂಚಮನಂಜದೇಱಿ ಆಕೆಯೊಡನೆ ನಗುತ್ತಂ ತೆಗಟುತ್ತಮಿರೆಂದು ಕಲ್ಪಿಸಿದಂ (ವಡ್ಡಾರಾ. ೧೭೭-೧೯); ಇಚ್ಛೆಯಱಿದು ತೆಗಟ್ವ ತೆಗಟ್ಕೆಗಂ ಪದನಱಿದು ಪತ್ತುವ ಪತ್ತುಗೆಗಂ ... ಮನಂಬೆಚ್ಚು ಪತ್ತೆ ಪೊಯ್ದಂತಾಗಿರೆ (ಶಾಂತಿಪು. ೩-೫೯ಪ). **ತೆಗಳ್$_1$**: ೧. ಭಗವತಿಯೇಱು ಶೌಚಗುಣಮತ್ತಿಯ ಪಣ್ಣೆನಿಪೇಳಪುಣ್ಡರಂ ತೆಗಳ್ವುದುದಾರ ಚಾರುಚರಿತಪ್ರಭೆಯಿಂ ಪಡೆವಳ್ಳತೈಲನ (ಸೌಇಇ. XI-i, ೫೨-೩೪; 1007 ?); ಉರಗ ನರ ಕಿಂಪುರುಷ ಕಿನ್ನರತರುಣಿಯರ ವ್ರತಗೆಡಿಸಿ ಭೋಗಿಸಿ ನರಳಿಸುವ ರೈದಿದರೆ ಕೊಲುವರು ತೆಗಳ್ದು ವಲ್ಲಭರ (ಅಂಬಿಕಾ. ೩೪-೩೬). **ತೆಗಳು$_1$**: ೧. ಅಗಿದು ಮೈದೆಗೆದು ಸಿಗ್ಗಾಗಿ ತಮ್ಮಿಂ ತಾವೆ ತೆಗಳಿ ಬೈಬೈದು ಬಾಯಳಿದು ಶೋಕಿಸಿ ತಾವೆ (ಸಾನಂಚ. ೪-೨೫೬ರಗಳೆ); ರಗಳೆಯ ಕವಿಯೆಂದು ತೆಗಳೆ ವಾದಿಗಳೆಲ್ಲ ಹರಿಯಣ್ಣನ ಪದಯುಗಳಕೆಱಗುವೆನಳ್ತಿಯೊಳು (ಕುರಾಸಾಂ. ೧-೩೫); ಕಂಡವರ ತೆಗಳುವನೆ ... ಕಂಡಿಹರೆ ತೊಲಗು (ಸರ್ವಜ್ಞ. ೧೫೩೩); ಪೊಡವಿಯೊಳಗಡಗಿರುವ ತಳಹದಿಯ ತೆಗಳುವರೆ? (ಪಾಂಚಜ. ೫-೧೮).

[ದೇ.॥ ತುಳು. ತೆಗು; ತೆಲು. ತೆಗಡು, ತೆವಡು]

ತೆಗಟ್$^{ಳ್}_2$, ತೆಗಳ್$_2$, ತೆಗಳು$_3$ (ನಾ). ೧. ನಿಂದೆ; ತಿರಸ್ಕಾರ; ಅವಹೇಳನ: "ತೆಗಟ್ ... ಅಣಕಂ–ಈ ೬ ನಿಂದೆ" (ಕಶಸಾ. ೧೩-೨೫೬); "ತೆಗಟ್ಳನ್ನಲದು ತಾಂ...ನಿಂದಾಖ್ಯಂ" (ಕವಿಕಂ. ೧೨೨); ತಮ್ಮೊಡನಾಡಿಗಳಪ್ಪ ಮೇಳದ ಸಬ್ಬವದ ನಗೆಯ ತೆಗಟ್ಳನವರನೆಮ್ಮ ಬಟ್ಟಿಯಟ್ಟಿದಂದು ಬನ್ನಿಮೆಂದು ಪ್ರಿಯಂ ನುಡಿದಿರಿಸಿ (ಪಂಪಭಾ. ೨-೯೫ಪ). ೨. ಕುಂದು; ಕಳಂಕ; ದೋಷ: ಮಾಷಮುಖದಂತೆ ದೋಷಗವೇಷಣರಪ್ಪರೆಂ ದೊಡದು ತೆಗಟಲ್ತೆ (ಆದಿಪು. ೧-೨೦); ಅರೋಚಿಗಳದಂ ತೆಗಟ್ಳಿಂದಾ ಗದ್ಯ ಪದ್ಯ ಕಾವ್ಯದೊಳಿಕ್ಕರ್ (ಶಮದ. ೬೦). ೩. ವಿನೋದ; ಚೆಲ್ಲಾಟ: ರಮಿಯಿಪುದಮರಿಯರೊಳ್ ತೆಗಟಮರಿಯರೊಳ್ ತವದ ಮೇಳಮ ಮರಿಯರೊಳ್ (ಶಾಂತಿಪು. ೭-೭೬); ನಗೆ ತೆಗಟ್ ಪಾಟಂ ಬಿಯಂ ಜವ್ವನಂ . . . ಇಂತಿವಂ ಬೇಟಕ್ಕಾಗರಮೆಂಬೆಂ (ಕಾಪ್ಯಾವ. ೬೫೩). **ತೆಗಳ್$_2$**: ೧. ವಿಕ್ರಮಾದಿತ್ಯನೃಪಂ ಜ್ಯಾಯಂ ತನಗೆನೆ ಜಗದೊಳಗಾ ಯುವತಿಯ ಸತ್ಕುಲೀನತೆಗೆ ತೆಗಳುಂಟೇ (ಎಕ. XI, ದಾವಡ. ೪೦-೩೯; 1148). **ತೆಗಳು$_3$**: ೧. "ತೆಗಳು ನಿಂದೆಗೆ" (ಕಶರ. ೪೮); ದಕ್ಷನಾತ್ಮಜೆ ಗೌರಿ ಮಿಗೆ ತನ್ನ ಜನಕನೀಶ್ವರನನೇಳಿಸೆ ಬಹಳ ತೆಗಳನಾಲಿಸಿ ತನ್ನ ದೇಹಮಂ ಜ್ಞಾನಾಗ್ನಿಯೊಳ್ದಹಿಸಿ (ಪಾಸೋಪು. ೮-೨೨); ಇದು ಹೊಗಳೋ ತೆಗಳೋ? (ಶಾಂತಲಾ. ೫೪). [<ತೆಗಟ್$^{ಳ್}_1$]

ತೆಗಟಿಸು, ತೆಗಳಿಸು (ಕ್ರಿ). ೧. ತೆಗಳಂವಂತೆ ಮಾಡು; ನಿಂದಿಸಂವಂತೆ ಮಾಡು: "ತೆಗಟಿಸು–ನಿಂದಾಯಾಂ (ನಿಂದಿಸುವಂತೆ ಮಾಡು)" (ಶಮಧಾ). **ತೆಗಳಿಸು**: ೧. ಮಱದುಂ ಪುಸಿದು ನುಡಿವ ಹುಸಿ ಸಿರಿಯಂ ಪಱಿಪಡಿಪುದು ಸಂತಾನಂ ಕೆಡಿಸುವುದಱನಂ ತೆಗಳಿಸುವುದು ಪಳಿಯಂ ಪುಟ್ಟಿಸುವುದು (ಜಯಕಾ. ೧೦-೧೨). ೨. ಮೀರು; ಸೋಲಿಸು: ಸೊಳಪ ಹಸುಳೆಲತೆಯಂ ಸಲೆ ತೆಗಳಿಪ ನಳಿತೋಳ್ಗಳ ಸಿಂಗದ ಶಿಶುವಂ ತಾನಿಳಿಕೆಯ್ವೊಳ್ನಡುವಿನ ನೃಪತನುಜೆಯ ತರುಣಮಮೊಪ್ಪಿದುದು (ಜಯಕಾ. ೩-೨೨).

[ತೆಗಟ್$^{ಳ್}_1$ + – ಇಸು$_3$]

ತೆಗಟ್ಕೆ (ನಾ). ೧. ನಿಂದೆ; ಅವಹೇಳನ. ೨. ವಿನೋದ; ಹಾಸ್ಯ: ಇಚ್ಛೆಯಱಿದು ತೆಗಟ್ವ ತೆಗಟ್ಕೆಗಂ ಪದನಱಿದು ಪತ್ತುವ ಪತ್ತುಗೆಗಂ ... ಮನಂಬೆಚ್ಚು ಪತ್ತೆಪೊಯ್ದಂತಾಗಿರೆ (ಶಾಂತಿಪು. ೩-೫೯ಪ).

[ತೆಗಟ್$^{ಳ್}_1$ + – ಕೆ]

ತೆಗಟ್ತೆ (ನಾ). ವಿನೋದ; ಸರಸ; ಲಲ್ಲೆ (?): ಲಾಲಿಸುವ ಲಲ್ಲೆ ಮರಲ್ಚುವ ಮಾತು ಚಿತ್ತಮಂ ತೆಗೆವ ತೆಗಟ್ತೆ (ಚಂದ್ರಪು. ೪-೭೧).

[ತೆಗಟ್$^{ಳ್}_1$ + – ತೆ$_2$]

ತೆಗಿಸು 'ತೆಗೆಯಿಸು' ನೋ.

ತೆಗುವು 'ತೆಗವು' ನೋ.

ತೆಗೆ$_1$ (ಕ್ರಿ). ೧. ಈಚೆಗೆ ತರು; ಹೊರ ತರು; ಬೇರೆ ಮಾಡು: ಸಿಂಧುರಾಜನ ಬಸಿಱಂ ಪೋಟ್ದೆನ್ನ ಮಗನನಾಂ ತೆಗೆಯದಿರೆಂ (ಪಂಪಭಾ. ೧೦-೧೨೦); ಕೋಮಳಶುಕಶಾಬಕಪ್ರಕರಮಂ ತೆಗೆದಂ ದಯೆಗೆಟ್ಟು ಲುಬ್ಧಕಂ (ಕಾದಂಪೂ. ೧೭೮); ದೊಣೆಯಿಂದಂ ತೆಗೆವಾಗಳೊಂದು ತುಡುವಾಗಳ್ಪತ್ತು ಬಾಣಂ (ಗದಾಯು. ೩-೩); ಬೆಳ್ಮುಗಿಲ ತೆಳ್ವೊರೆಯಿ ನಿಂದ್ರಚಾಪರೇಖೆಯಂ ತೆಗೆವ ಶರಲ್ಲಕ್ಷ್ಮಿಯಂ ಪೋಲ್ತು ನಿಚೋತ್ತರೀಯ ಪಲ್ಲವದ ಪೊರೆಯಿಂ ತೆಗೆದು ... ಮಣಿದೊಡವನೊರ್ವಳಂಗನೆಗಿತ್ತಳ್ (ಪುಲ್ಲಿಪು. ೪-೬೧); ನವ್ಯದುಕೂಲಮಂ ತೆಗೆದುಟ್ಟು ದಿವ್ಯವಸ್ತ್ರಮಂ ಪೊದೆದು (ಬಸರ. ೨-೪೩); ಅಂಬಿಲದೊಳಗೆ ಹೊಸ ಬೆಣ್ಣೆಯಂ ತೆಗೆಯಲು (ಬಸಪು. ೪೨-೨); ಹೊಟ್ಟುಗರ ತೆಗೆ ಹೋಗಹೇಳೆಂದೆಚ್ಚನತಿರಥರ (ಕುವ್ಯಾದ್ರೋ. ೨-೭೧); ತೆಗೆ ಹಯ ತೇರುಗಳ ತಳ್ಳಂಕ ಬೇಡೆಂಬಾರುಭಟೆ ಬಲುಹಾಯ್ತು (ತೊರರಾ. ೫-೮-೭೩); ಇದ್ದವಳು ತೆಗೆದು ಉಟ್ಟರೆ ಇಲ್ಲದವಳು ಕೊಡವಿ ಉಟ್ಟಳು (ಗಾದೆ). ೨. ಎತ್ತಿಕೊಳ್ಳು; ತೆಗೆದುಕೊಳ್ಳು: ತಾರಗೆಯಂ ವಿದ್ಯಾಧರಿಯರ್ ಮುತ್ತೆಂದು ತೆಗೆದು ತುಡಲವ್ವಳಿಪರ್ (ಗಿರಿಕ. ೧-೫೪); ಕೆಲಬಲದ ಮಾಮರದೊಳಿಪ್ಪ ನಿರ್ಯಾಸಮಂ ತೆಗೆದು ಕಿಱುವೆರಳುಗುರ್ಗೊನೆಯಿಂದೆ ತಿದ್ದಿ ಬರೆದು (ಕೈಮಿಭಾ. ೩೦-೨೯); ಅನರ್ಘ್ಯಮಣಿಯಂ ಬಾಲದಿನಮಣಿಯಂ ತುಡುಂಕುವ ರಾಹುವೆನಿಸಿ ನಿಜಕರಮೆಸೆಯೆ ತುಡುಂಕಿ ತೆಗೆದು ತತ್ಪಾದಪೀಠದೊಳಿಳಿಪಿದಾಗಳ್ (ರಾಜಶೇ. ೫-೨೫ಪ). ೩. ಏಳುವಂತೆ ಮಾಡು; ಎಬ್ಬಿಸು; ಮೇಲಕ್ಕೆತ್ತು: ಅಲ್ಲಿರ್ಪುದೊಂದು ಕಪಿ ಬೇಗಮಿದಿರಂ ಬಂದು ಅಂಜದಿರೆಂದು ಕೈಯಂಪಿಡಿದು ತೆಗೆವುದುಂ (ಪಂಚತಂ. ೧೦೭-೨೨); ಸುರಿವ ರಕುತದ ಸರಿಯ ಸೆಱಗಿನೊಳೊರಸಿ ರಥದಚ್ಚುಗಳನೊದೆದನು ತಿರುಹಿ ಗಾಲಿಯ ತೆಗೆದು ಮುಂಗೈಗೊಂಡು ನಡೆನಡೆದು ಅರಿಬಲವನಿಡೆ (ಕುವ್ಯಾದ್ರೋ. ೭-೫೫). ೪. ಉದ್ಧಾರ ಮಾಡು; ಉದ್ಧರಿಸು: ಧಗಧಗಿಸಿದಱುವತ್ತುಸಾವಿರ ಸಗರರನು

ಸಂಸ್ಕಾರಮುಖದಲಿ ತೆಗೆಯಲೋಸುಗ ತಪದಲಿದ್ದನು ಕಮಲಗರ್ಭಂಗೆ (ತೊರಣಾ. ೦-೧೨-೧೩). ೫. ಆಕರ್ಷಿಸು ; ಎಳೆ ; ಜಗ್ಗು ; ಎಳೆದು ಕೊಳ್ಳು : "ತೆಗೆ-ಆಕರ್ಷಣೇ" (ಶಬ್ದಾಣ) : ಕೃಷ್ಣೆಯ ಕಚಪ್ರಾರಂಭಮಂ ಬಾಹುವಿಕ್ರಮಿ ದುಶ್ಶಾಸನ ಮುಂದೆ ತೆಗೆವಂದೆಲ್ಲಿರ್ದೆ (ಗದಾಯು. ೭-೩೨) ; ಪೊಸನನೆಯ ಬಿರಿಮುಗುಳ ಕುಸುಮ ಬಾಣಂಗಳಂ ... ಕವಿವರಂ ತೆಗೆದು ನೇರನಱಿದೆಸೆವುದುಂ (ಧರ್ಮಾಮೃ. ೧೦-೩೦) : ಧರಾಧೀಶ್ವರನಾಶೀರ್ವಾಕ್ಸಮೇತಂ ತೆಗೆದು ಬಿಗಿದು ತಕ್ಕೈಸಿದಂ (ಪರ್ಥಪು. ೧-೪೦) : ಶರಣ ಇನ್ನೇಳೇಳಿನುತ...ಕರಕಮಲದಿಂ ತೆಗೆದು ಬಿಗಿಯಪ್ಪಿ (ಬಸಪು. ೨೦-೬) ; ಅತಿಶಯಪ್ರೀತಿಯಿಂ ತೆಗೆದು ಬಿಗಿಯಪ್ಪಿ (ಕೃಮಿಭಾ. ೪-೭೦). ೬. (ಗಾಳಿಯನ್ನು) ಎಳೆದುಕೊಳ್ಳು : ಆತ್ಮಸಂ ಭೇದಿಸಿ ಪ್ರಾಣವಾಯು ನಾಡಿಗಳನಱಿತು ಹಿಡಿವ ಭೇದಮಂ ತಿಳಿದು ತೆಗೆವ ಬಿಗಿವ ಸಂಚಮಂ ಕಂಡು (ಆದಪ. ೨೯-೨೬). ೭. ಬಿಲ್ಲಿನ ಹೆದೆಯನ್ನು ಸೆಳೆ ; ಶರಸಂಧಾನ ಮಾಡು : ತೆಗೆದಚ್ಚನರ್ಜುನನಂಬು ತೀವೆ ತುದಿಯಿಂ ಬಾಲಂಬರಂ ಪಂದಿ ಸೌಳಗೆವೋಪಂತಿರೆ (ಪಂಪಭಾ. ೮-೦೬) ; ಮುಂದಿರ್ದ ಪಾವೇಭಕಂಠೀರವನುಮಂ ಬಗೆದು ತೆಗೆದಿಸುವುದುಂ (ಶಾಂತಿಪು. ೪-೦೦೨) : ಬಗೆಯದೆ ವಿರಹಿಗಳಂ ವಿಗೆ ತೆಗೆದೆಚ್ಚು ಬಟಲ್ದ ಮಧುಸಖನ ಸುಯ್ಮೆಲರ್ವೋಲ್ ... ತನ್ನೆಲರದಿನಿಸು ಶೀಡಿತ್ತಾಗಳ್ (ಕಾದಂಉ. ೦೬೫) ; ತೆಗೆದೆಚ್ಚನಾ ಪಾರ್ಥ (ಕುವಾ೯ದ್ರೋ. ೩-೪೯). ೮. ಕೀಳಿಂ; ಕಿತ್ತು ಹಾಕು : ನಡುವಂ ಕೊಱಿ ಕುತ್ತಿ ಕರುಳ್ಗಳಂ ತೆಗೆ ಮೊಗಮಂ ಸುಡು (ವಡ್ಡಾರಾ. ೦೨೬-೦೦) : ಮಾದೆಗನಂತೆ ಬಾರೆತ್ತುವರ್ ನಾಯಂತೆ ಕಚ್ಚಿ ತೆಗೆವರ್ (ಧರ್ಮಾಮೃ. ೩-೭೩) : ಆಸೆಯಾಮಿಷ...ಕ್ರೋಧ ಕ್ಷುದ್ರ ಮಿಥ್ಯೆ ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದು ಕಳಿಯಯ್ಯಾ (ಬಸವ. ೪೬) : ಪಂದಿಯ ಬಳಿಯೊಳ್ ನೊವ್ಪು ನೆಗೆದುರ್ಬಿ ಪಾಯುತೆ ಚಪ್ಪರಿಸುತ್ತುಗಿದು ಬಗಿದು ತೆಗೆದುವು ನಾಯ್ಗಳ್ (ಗಿರಿಕ. ೦-೦೦೩) ; ನಿನ್ನ ಕಣ್ಣಿಂಗೆನ್ನ ಕಣ್ಣೇ ಮುದ್ದೆನುತ ಚಿತ್ತಂ ನಲಿದು ತನ್ನೇತ್ರಮಂ ತನ್ನಂಬಿನಲಿ ತೆಗೆದು (ಬಸಪು. ೧೮-೭೦) : ಅಗೆಯೊಯ್ವ ಕಳಿಗೀಳ್ವ...ಸಸಿಯ ತೆಗೆವ ನಡುವ ನಗೆಮೊಗದ ಪಾವುರಿಯರ ಬಗೆ ಬಿಡಗಾಗಿಹುದಲ್ಲಿ (ಕುರಾಸಾಂ. ೨-೩೫). ೯. ಕಿತ್ತು ಕೊಳ್ಳು ; ದೋಚು ; ಕಸಿದಂಕೊಳ್ಳು : ಮ್ಲೇಚ್ಛವರ್ಗವ ತಱಿದು ಶೋಧಿಸಿ ತೆಗೆದನಲ್ಲಿಯ ಸಾರವಸ್ತುಗಳ (ಕುವಾ೯ಸ. ೪-೧೨) : ಕುಳಿಂದನಂ ದಂಡಿಸಿದನಾ ದುಷ್ಟಬುದ್ಧಿ...ಹಿಂಡಿ ಹಿಳಿದರ್ಥಮಂ ತೆಗೆದಂ ಸೆಱೆಮನೆಗಿಕ್ಕಿ ನಿಗಳಮಂ ಕಾಲ್ಗೆ ಮಾಡಿ (ಕೃಮಿಭಾ. ೨೦-೨೬) : ಮುದ್ದುಮಾತಿನಲಿ ಮೋಹವ ಬೀಱಿಯವನೊಳಗಿದ್ದ ಹಣವ ತೆಗೆ ಮಗಳೆ (ಕಂಸವಿ. ೬-೦೫೦). ೧೦. ಕದಿ ; ಕಳವು ಮಾಡು; ಅಪಹರಿಸು: " ಅಪಹಾರ, ಅಪಚಯ = ಬಹಳದ ಒಳ್ಪುಮಂ ತೆಗೆವುದು " (ನಾಟಿಕಾ. ೬) : ಅಜ್ಞಾನಿಗಳಿರಾ ಕಣ್ಣಿ ಕಾಣರೆ ಈ ನುಡಿಗಳೇಕಿಂತು ತೆಗೆದವೆ ನಿಮ್ಮ ಸಾಮ್ಯವನು (ಬಸಪು. ೫೮-೫೩); ಧೇನುವನು ತೆಗೆಯಲಿಕೆ ತನ್ನಯ ಸೇನೆಯಧಿಪನ ಕಳುಹಿ (ಸಂಧಪ.೨೬-೨೦) ; ಕರುಣದೊಳಾತ ಕೊಟ್ಟ ಸೌಭಾಗ್ಯವ ತೆಗೆಯಲೋರ್ವರಿಗಳವಲ್ಲ (ಮೋಹಶ. ೩೦-೦೬). ೧೧. ಕಳಚು ; ಬಿಚ್ಚು ; ತೆರೆ : ಬಲ್ಲಿದನ ಹಗೆಯ ತೆಗೆವನ್ನಬರ ಬಡವನ ಹರಣ ಹೋದ ತೆಱನಂತಾಯಿತ್ತು (ಮಹಾದೇ. ಬ. ೩೩-೭೦); ಉತ್ತರದ್ವಾರದ ಬಾಗಿಲ ಬಯಗವ ತೆಗೆದಲ್ಲಿ ನಾದಮೂರುತಿಯಪ್ಪ ಪ್ರಸಾದವ ಕಂಡೆ (ಆದವ. ೨೪-೬೯) ; ಕಾಲ ಕೆರಹುಗಳಂ ತೆಗೆಯದಿಂತಿರ್ದಡೆಲೊ ನಿನ್ನ ಬೀಳ ಹೊಡೆವೆನು (ಬಸಪು. ೪೬-೦೦) ; ಕೆತ್ತ ಕದ ತೆಗೆಯದು (ಕುವಾ೯ಅ. ೦೫-೭); ಅರುಣಾಬ್ಜನಿಳಯಕವಾಟ ಕೌಸ್ತುಭಮಣಿ ಕಿರಣದಿಂ ತೆಗೆದೊಳಪೊಕ್ಕು (ಮೋಹಶ. ೦-೬). ೧೨. ಪ್ರಕಟವಾಗು ; ಕಾಣಿಸಿಕೊಳ್ಳು ; ತೋರು ; ಹೊಳೆ : ರತ್ನಾಭರಣಂಗಳ ರುಚಿ ... ತೆಱಂ ಬೊಳೆಯಲ್ಕಿಂದ್ರಾಯುಧವೇಂ ಪೊಳೆದುದೋ ನೃಪಸುತನ ಮುಂದೆ ತೆಗೆದು ಬರುತ್ತುಂ (ಕಾದಂಪೂ. ೫೯೮) ; ತೆಗೆಯಬಹುದೆ ಕಡವರವು ದರಿದ್ರಂಗೆ (ಬಸವ. ೨೬೬) : ಧರ್ಮಮುಖವರಳ್ವಂತೆ ಮುಕ್ತಿಯ ಸೆಜ್ಜೆ ತೆ[ಪಾಠಾಂ. ದೆ]ಗವಂತೆ ವೃಷಭನಮುಖಂ ವಿಕಾಸವನೆಯ್ದೆ (ಬಸರ. ೪-೩೦) . ೧೩. ತೋರ್ಪಡಿಸು; ಕಾಣುವಂತೆ ಮಾಡು : ತೆಗೆದಯ್ ಮೋಕ್ಷದ ಬಟ್ಟೆಯಂ (ಶಬುದ. ೩೦೭ ಪ್ರಹೋ). ೧೪. ಹೊರಬರಂ ; ಹೊರಸೂಸು : ಮೆಯ್ಯ ನೀರ್ತೆಗೆವನ್ನಂ ಜವಜವಜವನಂಜೆಸಿದುವು ಜವನಾಳ್ಗಳ ತೆಱದಿನೆನ್ನ ಕೆನ್ನೆಯ ನರೆಗಳ್ (ಅಜಿಪು. ೨-೬೯). ೧೫. ಸಂಹರಿಸು ; ನಾಶಮಾಡು ; ಧ್ವಂಸಮಾಡು : ನಿನ್ನ ಧೈರ್ಯಾವಲೇಪಮಂ ಪ್ರಾಣಂಬೆರಸು ತೆಗೆಯದೆ ಮಾಣನೆಂದು ಮನೋಭವನಂ ನಿರ್ಭರ್ತ್ಸಿತೆಯಾದಂತೆಯುಂ (ಕಾದಂಉ. ೮೩) : ಈ ಪುಸಿವನಂ ಕುಸಿಯೊತ್ತಿ ಬಟ್ಟೆಯೊಳ್ ಪೆಟ್ಟಮೆಟ್ಟಿದುಂ ಬಳಸಿದ ದಸಿಯೊಳ್ಕೆಗೆಯುವೆಂದು . . . ಪೇಟಿ (ಸುಳುಪೂ. ೭-೫೮) ; ನೈಷಧಭೂಮಿಪನ ಕೈಹಿಡಿದು ಬಾಳುವ ನೇಮವನು ತೆಗೆದ [ಪಾಠಾಂ. ಬಿಸುಟ] ಡವಿಗಟ್ಟಿತೆ ಕಠಿನವಹ ವಿಧಿಯು (ಸೋಕ. ೭-೦೩). ೧೬. ನಾಶವಾಗು; ಹಾಳಾಗು : ಒಬ್ಬ ಜಂಗಮದಭಿಮಾನದಿಂದ ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು (ಬಸವ. ೬೫೬). ೧೭. ಆಕ್ರಮಿಸು ; ಆವರಿಸು ; ಮೇಲೆ ಬೀಳು : ಕಾಳಿಯೆಂಬ ಜಲದೇವತೆ ಪೂರ್ವಭವಬದ್ಧ ವೈರದೊಳು ಗ್ರಗ್ರಾಹಾಕಾರದಿಂ ತೆಗೆಯೆ (ಜಾಪುಂಪು. ೫೭) ; ಮಹಾರಣ್ಯದೊಳಗೆ ಬರ್ಪನನೊರ್ವ ಬೊಮ್ಮರಕ್ಕಸಂ ಕಂಡು ಪಿಡಿದು ತಿನಲೆಂದು ತೆಗೆವುದುಂ (ಪಂಡತಂ. ೦೫೨-೯) ; ತಾರೆಗಳು ನೆಣಗೊಬ್ಬಿನಲಿ ರಾಹುವ ತೆಗೆದು ಬದುಕಲು ಬಲ್ಲವೇ (ಕುವಾ೯ದ್ರೋ. ೫-೭೬). ೧೮. ತಡೆ ; ಅಡ್ಡಿಪಡಿಸು : ಪೋಗದಿರೀಶ್ವರನಾಣೆಯೆಂದು ಪುಲ್ಕರುಳಿನ ಸಾನುಮಂ ತೆಗೆದು ಕಾಡಿದುದಲ್ಲಿ ಫಣೀಂದ್ರಕೇತುವಂ (ಪಂಪಭಾ. ೦೩-೫೫); ಕಾಲಮೇಲೆ ಮುಟ್ಟಿದ ವಿನಯಾಭಿರಾಮನಂ ತೆಗೆದು ತಟ್ಕೈಸಿ (ಕಾದಂಉ. ೨೭೫) ; ಇಂದು ಪೋಗಲಾಗೆನ್ನನವಜ್ಞೆಗೆಯ್ದು ಬಸಲಾದುದು ನಿಮ್ಮಡಿ ನಾಳೆ ಪೋಪುದೆಂದುನ್ನತಶೀಲರಂ ತೆಗೆವುದುಂ (ಧರ್ಮಾಮೃ. ೦೨-೭೬) ; ದಂಡಾಗ್ರದೊಳ್ ರಂಜಿಪ ಬಿರುದ ಪಟವ್ಯಾತಮೋರಂದದಿಂ ವಾಯುಗಮ ವ್ಯಾಪಾರಮಂ ನೆಟ್ಟಗೆ ತೆಗೆಯೆ ... ಬರುತುಮಿರ್ದಂ ಪುರಕ್ಕುರ್ವರೇಶಂ (ಕುಸುಮಾ. ೪-೦೦೪). ೧೯. ನಿವಾರಿಸು ; ಹೋಗಲಾಡಿಸು ; ಕಳೆ : ಬಯ್ವ ಜನರು ಜರಿವ ಜನರು ಅವರಿಗೇನು, ಬಾಯಿ ಕೊಬ್ಬು ನೋವು ತೆಗೆವರೆ ? (ಕವಿಸೋ. ೭೦-೫೦) ; ಪಿಸುರು ತೆಗೆದರೂ ಪಿಶಾಚಿ ಬಿಡುವುದಿಲ್ಲ (ಗಾಡ). ೨೦. ತೊಡಗು ; ಉಪಕ್ರಮಿಸು; ಆರಂಭಿಸು : ಮೆಲ್ಲನೆ ಮಾತ ತೆಗೆದನು (ಕುವಾ೯. ೫-೫) ; ಸಿಂಹಳಕ್ಕಾಳ್ದನ ಬಂಟರುರ್ವಿ ವಿಗೆ ಕಾಳೆಗಮಂ ತೆಗೆದರ್ (ರಾಜಚೇ. ೫-೦೩೪). ೨೧. ಉಂಟುಮಾಡು ; ಆಗಿಸು : ಬಗಸೆಗಣ್ ಕುಡಿನೋಟವಮವು ಪೊಸಗಾಡಿಯಂ ತೆಗೆಯೆ ... ದಿಟ್ಟಗೇನೆಸೆದಳೋ (ಪದ್ಮಕಾ. ೩-೩೦) ; ಸುಮನ ಸುಗಂಧ ಕದಂಬದ ಕಂಪನು ತಿಮಿರಿ ತೆಗೆಯಲಾಗಿ (ಧರಪ. ೦-೩೬). ೨೨. ಮಾಡು ; ರಚಿಸು ; ನಿರ್ಮಿಸು : ಕಡದರೊ ಶಂಖದಿಂ ತೆಗೆದರೋ ನವ ಮೌಕ್ತಿಕದಿಂ ... ಪೇಟ್ಕನಲ್ಕರವೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ (ಕಾದಂಪೂ. ೬೬೭); ಗಗನಗಂಗಾನದಿಯ ಕಾಲುವೆ ತೆಗೆದರೆನೆ ಕೆಕ್ಕೆಯದ ಪಲ್ಲವ ಪಗಿಯೆ ಮೆಱಿದುದು ಬಿಗಿದ ಮೊಗರಂಬದ ವಿಳಾಸದಲಿ (ಕುವಾ೯ದ್ರೋ. ೩-೪) ; ತೆಗೆದ ತೊಱೆ ಕಾಲುವೆಗಳುದ್ಯಾನಗಳ . . . ಈಕ್ಷಿಸುತೆರಸ ನೈತಂದ (ತೊರಣಾ. ೦-೬-೦೦). ೨೩. ಬರೆ ; ರೇಖಿಸು ; ಚಿತ್ರಿಸು : ಎರಡು ಬರೆಯಂ ತೆಗೆದು[ಪಾಠಾಂ. ತೀವ್ದು]ದನರಸಂ ಕಂಡು ಕಡು ಮುಳಿದು (ವಡ್ಡಾರಾ. ೦೦೪-೩೪) ; ಗಾಡಿವೆತ್ತಡರ್ದು ಕತ್ತುರಿಯೊಳ್ ಮದ ವಟ್ಟೆಯಂ ವಿಳಾಸದೆ ತೆಗೆದಂತೆ ಕಣ್ಗೆಸೆದು ತೋಱಿದುದಾ ಕದನತ್ರಿಣೇತ್ರನಾ (ಪಂಪಭಾ. ೩-೭೬) ; ಹೊಗರುಮೊಗಕೆ ಕಣ್ಗಳ ದಿಟ್ಟತಾಕದೊಲ್ತೆಗೆದ

ಕತ್ತುರಿರೇಖೆಯಂತೆ (ಕಂನವಿ. ೯-೦೦೪); ಖಲೀಲ ಜಿಬ್ರಾನನು ಮಹಾ ಕವಿಯೂ, ತತ್ವಜ್ಞಾನಿಯೂ, ಹಾಗು ಚಿತ್ರಕಾರನೂ ಆಗಿದ್ದನು ... ಅವನು ತೆಗೆದ ಚಿತ್ರಗಳು ಪಾಶ್ಚಾತ್ಯದೇಶದೊಳಗಿನ ಬಹುಶಃ ಎಲ್ಲಾ ಪ್ರಮುಖಪಟ್ಟಣಗಳಲ್ಲಿಯೂ ಪ್ರದರ್ಶಿತವಾಗಿವೆ (ಪ್ರಬಂಧ. ೦೦೨). ೨೪. ಸರಿಸು; ತಳ್ಳು: ಅಡಿಯಿಂ ಮೇಗಣ್ಗೆತ್ತುವ ಕಡುಗಾಳಿಯ ಪೊಯ್ಲೊಳಿದಱ ನೀರೊಗೆದಪುದಾರ್ದಡಿಗೆ ಬರೆ ತೆಗೆವ ಗಾಳಿಯಿನಡಿಗಿಱಿದ ಪುದಿದಱ ನೀರಿದೊಂದಚ್ಚರಿಯೇ (ಆದಿಪು. ೦೩-೫೨); ಎಲೆಎಲೆ ಹಿಡಿ ಭೀಮನನು ತೆಗೆ ಕೆಲಕೆ ದುರ್ಯೋಧನನ (ಕುಮ್ಯಾಆ. ೭-೩೬); ಪಾಂಡವರ ಮಾತ ತೆಗೆಯಾಡದಿರಿ (ತುರಂಗ. ೪೬-೧೨). ೨೫. ಓರೆಯಾಗು; ಅರುಗಾಗು; ಪಕ್ಕಕ್ಕೆ ಸರಿ: ಒತ್ತೊತ್ತಿನಿಂ ನಿತ್ತರಿಸಲ್ತಾನಾಱದೇನೊಂದೆಡೆಗೆ ತೆಗೆದುದೋ ವಿಶ್ವದಿಕ್ಚಕ್ರಂ (ಕಾದಂಉ. ೪೩೨); ಇದು ಹರಿಯ ಸಮರಲಕ್ಷ್ಮಿಯ ಮದುವೆಯೊಳೆಡೆವಿಡಿದ ಕಾಂಡಪಟಮೆನಿಸಿದ ಕೌಮುದಿ ತೆಗೆವಿನಂ ಮಗುಟ್ಟುದೆನಿಸಿದತ್ತು ಮುನ್ನೀರೊಳಿಂದುಘಟಕಾಪಾತ್ರಂ (ವರ್ಧಪು. ೮-೩೫). ೨೬. ಒಯ್ಯಂ; ಸಾಗಿಸು: ಕೀರಂಗೆ ಕುಟುಕನಿಕ್ಕೆಂಬ ಚಕೋರಿಗಳಂ ಚಂದ್ರಕಾಂತದ ನೆಳಲ್ಗೆ ತೆಗೆಯೆಂಬ ... ಕೆಲಸದ ನೆವದಿಂ (ನಂಬಿರ. ೦೪-೩೬). ೨೭. ತೆರಳಿಸು; ಹಿಂತಿರುಗಿಸು: ಇಚ್ಛೆಯಣಮಿಲ್ಲದೊಡಂ ತೆಗೆದಳ್ ಕರು ಮನಂ ಕಿಡೆ ಪೊಸತಪ್ಪುದೊಂದು ಪಿಡಿಗಂಕುಶಮಿಟ್ಟು ಮರಳ್ಚುವಂದದಿಂ (ಕಾದಂಪೂ. ೭೭೨); ಪಡೆಯ ತೆಗೆ ತರುವಲಿಯ ಕೊಲ್ಲದೆ ಹಿಡಿ (ಕುಮ್ಯಾದ್ರೋ. ೬-೭); ಬಗೆವೆತ್ತ ಬಾಗಿಲ ಕದ ವಜ್ರಲಾಳವಿಂಡಿಗೆಗಳ ಬಂಧನಗೊಳಿಸಿ ಮಿಗೆ ವಿಶ್ವಾಸಿ ಕಠೋರ ರಾಕ್ಷಸಿಯರ ತೆಗೆಯದೆ ಕಾಪನಿಕ್ಕಿದಳು (ಮೋಹತ. ೩೩-೩೭). ೨೮. ಹಿಂತೆಗೆದುಕೊಳ್ಳು; ವಾಪಸ್ಸು ತೆಗೆದುಕೊಳ್ಳು: ಪದಪಿಂ ನಟ್ಟಿರೆ ದಿಟ್ಟಿಯಂ ತೆಗೆದೆನೆಂತೆಂತಾನುಮುದ್ವೇಗದಿಂ (ಕಾದಂಪೂ. ೭೭೪); ಹಗೆಯರಿಗೆ ವರವೀವರಿಬ್ಬರು ತೆಗೆಯಲಱಿಯರು ಕೊಟ್ಟ ವರಗಳ (ಹರಿಸಾ. ೨೮). ೨೯. ಹೋಗು; ತೆರಳು: ಇತ್ತಲೀ ಪ್ರಾಣೇಶನಿದ್ದ ನಿಮಿತ್ತದಲಿ ಪಶುಗಳು ಬೆಳೆದ ಹೊಲದತ್ತ ತೆಗೆಯಲು (ಬಸಪು. ೬೦-೨೩). ೩೦. ಹಿಮ್ಮೆಟ್ಟು; ಹಿಂದೆಗೆ: ಆಹವಧರೆಯೊಳ್ ಪತಿತಂ ಪ್ರಸ್ಕನ್ನಂ ಕಾದಿ ತಟ್ಟುಗಿದು (ರಣದೆ) ತೆಗೆದನಕ್ಕುಂ ನಷ್ಟಂ (ವಸ್ತುಕೋ. ೮೨-೫); ಕೈಕೊಳ್ಳದಗ್ಗದ ಬೀರರ್ ತೆಗೆದೋಡೆ (ಕಬ್ಬಿಕಾ. ೩೦೪); ತೆಗೆಯೆ ರಿಪುಬಲ ಕೊಲುತ ಬಂದುದು ದಿಗಿಭವು (ಕುಮ್ಯಾದ್ರೋ. ೩-೪೨); ಹಗಲು ಸವೆದುದು ಹೊಂಬಿಸಿಲು ನೆಱ್ ತೆಗೆದುದತಿ ವೇಗದಲಿ (ನಳಚ. ೫-೪೩). ೩೧. ಮಂಚ್ಚು; ರದ್ದುಪಡಿಸು: ಬಿಜವಾಡ ಅಂಗಡಿಯು ಈಗ ತೆಗೆದು ಇರುತ್ತೇವೆ (ಮುಂಬಮ್ಯಾ. ೨೩ ಪ್ರಸ್ತಾವನೆ). ೩೨. ಹಿಡಿದುಕೊಳ್ಳು; ಹಿಡಿ: ಚೇಱ್ ಚಿಕ್ಕದೆಂದಟ್ಕಱಿಂ ತೆಗೆಯಲ್ ಕಚ್ಚದೆ (ಸೋಮೇಶ. ೪೧). ೩೩. ಆಯ್ದಿಡು; ಆರಿಸಿಡು; ಮೀಸಲಿಡು: ಸರ್ವಸ್ವಮುಮಂ ಕುಡದಿರಲುರ್ವೀಪತಿ ಬಂದೊಡಾಗದೆಂದತಿಭಕ್ತರ್ ಖರ್ವಡನಿವಾಸಿಗಳ್ ಕೆಲರುರ್ವೀಶರ್ ತೆಗೆದರಾನೆಯಂ ಕುದುರೆಯುಮಂ (ಆದಿಪು. ೯-೧೨೮). ೩೪. ಬಳಸು; ಉಪಯೋಗಿಸು: ನಿತ್ಯವು ತೆಗೆಯುತಲಿರಬೇಕು ಹುಟ್ಟನು ತಾನೆಯೆ ತೊರೆಯೊಳಂಬಿಗನು (ಇಂಜಾಪ. ೨೦೦-೩೬). ೩೫. ಕ್ರಯ ಕೊಟ್ಟು ಪಡೆ; ಕೊಂಡುಕೊಳ್ಳು: ಇದನ್ನು ಎಷ್ಟು ದುಡ್ಡು ಕೊಟ್ಟು ತೆಗೆದಿರಿ? (ರೂಢಿ). ೩೬. ಉಚ್ಚರಿಸು; ಹೇಳು: ಮಾತು ಕೇಳದ ಮಕ್ಕಳ ಹೆಸರು ತೆಗೆಯಬಾರದು (ಪುರಂದ. ೨-೫೮-೧). ೩೭. ತೋರಿಬಿಡು: ತೆಗೆಯೆ ಬೀರರವ [ದೆ] ಮೇಲೆ ಪರಿವ ಮದಗಜಂಗಳಿಂ ಚಳತ್ತುರಂಗಮಂಗಳಿಂ (ಪಂಪಭಾ. ೧-೫೮ ರಗಳೆ). ೩೮. ನಿಲ್ಲಿಸು; ಸುಮ್ಮನಿರು: ಎಂತುಂ ತೆಗೆ ಮೇಘನಾದ ಸಹಿತಂ ತತ್ಪಾದಪದ್ಮೋಪಜೀವಿಗಳಾಗಿರ್ದರ ಮಕ್ಕಳೆಲ್ಲವಿದೆ ನಮ್ಮಂ ಕಾಣಲೆಂದೀಗಳಿಲ್ಲಿಗೆ ಮುಂತೀ ಬರುತಿರ್ಪರ್ (ಕಾದಂಉ. ೬೬೪); ಧರೆಯೊಳಗೆ ತಾರಕಂಗೆನಗರಿಮೇಘ ಮಹಾಬಲಂಗೆ ಸಮರಾಂಗಣದೊಳ್ ... ಸುರಪತಿಗಿರಪತಿಯಜಂಗಿಜಂ ತೆಗೆ ಸರಿಯೇ (ಗಿರಿಕ. ೬-೩೮); ಘಡ ಘಡುರವಣೆ ಬೇಡ ತೆಗೆ ಬಾಯ್ಬಡಿಕತನವಿದು (ಕುಮ್ಯಾದ್ರೋ. ೨-೩೯). ೩೯. ಸುಡು; ಮರಳಿಸು: ಕುದಿಸು: ನೇಱಿಲ ಬೀಜಂ ಕಡಸಿಗೆಯನ ಬೇರಂ ಸುಣ್ಣಂ ಜಲಮಿವಱಿಂ ತೆಗೆಯಲ್ ವಿಷಮಟಿಗುಂ (ಲೋಕೋಪ. ೮-೨೩). 'ತೆಗೆಪು$_1$' ಪರಾ. ೪೦. ತೇಯು; ಅರೆ: (ಕಿ). ೪೧. [ಗಣಿತ] ಭಾಗಿಸು: "ತೆಗೆಯೆನಲು ಭಾಗಿಸುಹಮಕ್ಕು" (ಮಂಗರಾ. ೦೦೪-೧೦೨).

ತಕ್ಕೊ, ತಗೊ, ತೆಕ್ಕೊ=ತೆಗೆದುಕೊಳ್ಳು; ಸ್ವೀಕರಿಸು: ತಕ್ಕೋ ಗಂಟ ನಿನ್ನಾಟವ ತಿಳಿಸುವೆ (ವಿದಾಕ್ಯ. ೩೫ ಪಲ್ಲವಿ); ನಿನ್ನ ಹಣವನ್ನು ನೀನೇ ತಗೋ (ರೂಢಿ); ತೆಕ್ಕೋ ನೀ ಮುನ್ನ ಕೊಟ್ಟ ಹೊನ್ನ (ಶರಲೀ. ೩೫೯-೪). **ತೆಗೆದಿಕ್ಕು** = ಧರಿಸು: ಕಾಸೆಯನುಟ್ಟು ಜನ್ನವಿರಮಂ ಪೆಗಲೊಳ್ ತೆಗೆದಿಕ್ಕಿ ವೇದದಭ್ಯಾಸಮನುಂಟುಮಾಡಿ ಪೊಲಸಂ ಪಸುತಿರ್ಪ ನಿಶಾಚರರ್ಕಳಂ ಗ್ರಾಸಮನುಣ್ಬುದೆಂದೊಡೆ (ಕಾವ್ಯಸಾ. ೫೩೫). **ತೆಗೆದಿಡು** = ಜೋಪಾನ ಮಾಡು; ಎತ್ತಿಡು: ಹೊಸಬಟ್ಟೆಯನ್ನು ಪೆಟ್ಟಿಗೆಯಲ್ಲಿ ತೆಗೆದಿಡು (ರೂಢಿ). **ತೆಗೆದಿರಿಸು** = ಬೇರೆಯಾಗಿರಿಸು; ಮೀಸಲಾಗಿರಿಸು: ಸಕಲ ದೇವಾನ್ನವ ಒಡೆಯರಿಂದಲೂ ಮಿಗಿಲಾಗಿಕ್ಕಲು ತೆಗೆದಿರಿಸಿದೆನು (ಬಸವ. ೪೩೯); ನೊಣವನೆ ಬೇಯಿಸಿ ಬಡಿಸುವುದಾದರು ರೆಕ್ಕೆಯನೊಂದನು ಅಡುಗೆಯ ಭಟ್ಟರು ತಮಗಾಗಿ ತೆಗೆದಿರಿಸುವರು (ಇಂಜಾಪ. ೨೨೦-೯೪). **ತೆಗೆದುಕೊಳ್, ತಕೊಳ್, ತಕ್ಕೊಳ್, ತಕ್ಕೊಳ್ಳು, ತೆಕೊಳ್, ತೆಕ್ಕೊಳ್, ತೆಕ್ಕೊಳ್ಳು, ತೆಗಕೊಳ್, ತೆಗೆಕೊಳ್** = ೧. ಸ್ವೀಕರಿಸು: ಸಮ್ಯಗ್ವ್ರತಂಗಳುಮಂ ತೆಗೆದುಕೊಳ್ವಂತೆ ವಿಚಿತ್ರವಸ್ತ್ರಂಗಳಂ ತೆಗೆದುಕೊಂಡು ... ಬನಮಂ ಪೊಕ್ಕು (ಸುಕುಮಾ. ೦೦-೮೩ ವ); ಆ ವಿಭೂತಿಯಂ ಸುಕೃತದಿಂ ತೆಗೆದುಕೊಂಡು . . . ಧರಿಸಿ ಲಿಂಗಾರ್ಚನೆಯ ಮಾಡುವ ಶರಣನಾತನೆ ವೇದವಿತ್ತು (ಅದವ. ೦೮-೪೩); ಆ ಜಂಗಮವೇ ಸಾಕ್ಷಿಯಾಗಿರ್ದು ವಿಭೂತಿ ವೀಳೆಯವ ತಕ್ಕೊಂಡು (ಚನ್ನವ. ೦೨-೯); ಲಿಂಗ ಕೆಲದೊಳಿರೆ ಕರದಲ್ಲಿ ತಕ್ಕೊಂಡು (ಗುರುಚಾ. ೫-೭೪); ಬೆಣ್ಣೆ ತಕ್ಕೊಂಡ ಬಳಿಕ ಉಳಿಯುವುದೇನು ಮಜ್ಜಿಗೆ (ಮುಂಬಯಿ. ೦-೨೫); ತೋಟ ಮಠ ಕೆರೆಯ ಅಪಹರಿಸಿ ತೆಕೊಂಡಂಥಾ ಪಾಪಿಗಳು ದೇವಲೋಕ ಮರ್ತ್ಯಲೋಕಕೆ ಹೊರಗು (ಎಕ. XVI, ಚಿಕ್ಕನಾ. ೦-೦೯; 1622); ತಾಂಮ್ರ ಶಾಸನ ಸಹವಾಗಿ ಕ್ರಯವನೂ ತೆಕ್ಕೊಂಡು (ಸೌಇಇ. IX-ii, ೫೦೭-೨೪; 1538); ಖಂಡಪರಶುವಿನ ಕೈಯಿಂದಲಾ ಹೊನ್ನ ತೆಕ್ಕೊಂಡು (ಜಿಬಪು. ೬೨-೬೨); ದುಡ್ಡುಗಳನ್ನೆಲ್ಲಾ ತೆಕ್ಕೊಂಡು ಪೇಟೆಗೆ ಹೋಗಿ (ಕಥಾಮಂ. IV, ೧೪); ವಿವಿಧವಾದಕರೊಳಗದೊರ್ವನ ಹೆಗಲ ಹಱ್ವೊಂದ ತವಕಿಸದೆ ತೆಗಕೊಂಡು ತನ್ನೊಪ್ಪುವ ಹೆಗಲಿನೊಳು ಕೋದು (ಸಾಳ್ವಭಾ. ೦೮-೫೫); ಪೂವಸೆಗೆಲದೊಳವ ಮುನ್ನಿರಿಸಿ ದಸಿ ಖೇಡಯವಿರಲು ತೆಗೆಕೊಂಡು ನೋಡುತಿರೆ (ಸಾಳ್ವಭಾ. ೦೭-೦೫). ೨. ಪಡೆ; ಹೊಂದು: ತಮ್ಮ ಆಪ್ತರು ಇಷ್ಟರು ಸ್ನೇಹಿತರು ಮುಂತಾದವರ ಭೆಟ್ಟಿಯನ್ನು ತಕೊಳ್ಳಬೇಕು (ಮುಂಬಯಿ. ೪-೩೪). ೩. ವಹಿಸು: ಇನ್ನು ಮುಂದೆ ಹೆಚ್ಚು ಶ್ರಮ ತಕ್ಕೊಂಡು ಕಲಿಯಬೇಕಾಗುವುದು (ಮುಂಬಯಿ. ೪-೦). ೪. ದೋಚು; ಕಸಿ; ಕೀಳು: ಬಿಕ್ಕು ಬಿಕ್ಕನೆ ತೋಱಿ ಇಕ್ಕುವಳು ಕಣ್ಣೀರ ಸಿಕ್ಕಿದಳು ಸೂಳೆಯೆನಬೇಡ ಅದು ರೊಕ್ಕ ತಕ್ಕೊಂಬುವುದಕೆ (ಸರ್ವಜ್ಞ. ೧೯೨೪). **ತೆಗೆದುನೋಡು**=ನೋಡಿಯೂ ನೋಡದ ಹಾಗೆ ಈಕ್ಷಿಸು,—ನೋಡು: ಪರೆದ ಕುರುಳಲುಗೆ ಘಟ್ಟಿಯನರೆಯುತ್ತುಂ ನಾಣ್ಚೆ ತೆಗೆದು ನೋಟ್ಪುದುಮೆನ್ನಂ (ಪಂಪಭಾ. ೮-೬೫). **ತೆಗೆದು ಹಾಕು** = ೧. ಹೊಡೆದು ಹಾಕು: ಇಲ್ಲಿ ಬಂದಿರುವ ಅನಾವಶ್ಯಕ ವಾಕ್ಯವನ್ನು ತೆಗೆದುಹಾಕ ಬಹುದೆ? (ರೂಢಿ). ೨. ವಜಾಮಾಡು: ಅವನನ್ನು ಕೆಲಸದಿಂದ ತೆಗೆದು

ಹಾಕಿದರು (ರೂಢಿ). ೩. ನಿರಾಕರಿಸು ; ಅಲ್ಲಗಳೆ : ಆ ಮಾತನ್ನು ತೆಗೆದುಹಾಕುವಂತಿಲ್ಲ (ರೂಢಿ). ತೆಗೆದು ಹೋಗು = ಕೃಶವಾಗು ; ದುರ್ಬಲವಾಗು : ದಿನೇ ದಿನೇ ಮೊದಲಿಗಿಂತ ಹೆಚ್ಚಾಗಿ ತೆಗೆದು ಹೋಗುತ್ತಾ ಬಂದರು (ಚಿಕ್ಕದೇ. ೨೭೯) ; ನೀವು ಬಹಳ ತೆಗೆದು ಹೋಗಿದ್ದೀರಿ (ಮುರುಳು. ೯೯). ತೆಗೆಬೀಯ = ಕೊಡುಗೈಯವನು ; ಮುಕ್ತ ಹಸ್ತ ; ಉದಾರಿ ; ಒಂದು ಬಿರುದು (?) : ಅನ್ತಾತನ ಕಾಳೆಯ ಬಿರುದೆನ್ತಂದಡೆ ಆಳಿಂ ಮುಂನಿಱುವಂ ಸಿತಗರ ಗಂಡಂ ತೆಗೆಬೀಯ ಚಲದಂಕರಾಮನ ಗಂಧವಾರಣಂ ಮಲೆವರ ಮಾರಿ (ಸೌಇಇ. XX, ೦೨೫-೮ ; 1185). P ಈ ಧಾತು ಅನೇಕ ಶಬ್ದಗಳ ಮುಂದೆ ಸೇರಿ ಸಂಯುಕ್ತ ಧಾತುವಾಗಿ ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ. ಉದಾ:—ಕಾಲ್ತೆಗೆ, ಚಿತ್ರತೆಗೆ, ಪ್ರಾಣತೆಗೆ, ಬಾವಿತೆಗೆ, ಮೈದೆಗೆ, ಹೊರತೆಗೆ ಇತ್ಯಾದಿ.

[ದೇ.॥ ತಮಿ. ತೆಕ್ಕು ; ತೆವ್ವು ; ತುಳು. ದೆವ್ವು ; ತೆಲು. ತಿಗಿಯು, ತಿಗುಚು ; ತಿಗುವು, ತಿವ್ವು ; ಕೊಲಾ. ತಿಕ್, ತಿವ್ ; ನಾಯ್ಕಿ. ತಿಕ್ಕ್, ತಿವ್ವ್]

ತೆಗೆ$_2$ (ನಾ). ೧. ತೆಗೆದುಕೊಳ್ಳುವಿಕೆ : (ಕಿ). ೨. ಆಕರ್ಷಣೆ ; ಸೆಳೆತ : "ಆಕರ್ಷಣ ಪಲಾಯನಗಳೊಳ್ ತೆಗೆ" (ಶಲ್ಯಮಂ. ೮೦). ೩. ಹಿಮ್ಮೆಟ್ಟುವಿಕೆ ; ಹಿಂದೆಗೆಯುವಿಕೆ ; ಪಲಾಯನ : ಅಮರ್ಚುವ ನಿಲ್ವೆಡೆಯಂ ಬಗೆಯಂ ತೆಗೆಯನಲ್ಲಾಟಮಂ ಕಾಟಮಂ ನೋವುದಂ ಸಾವುದನೆಲ್ಲಂದದಿಂ ಬಗೆದಾಗಳ್ (ಪಂಪಭಾ. ೫-೪೩). ೪. ಇಳಿತ ; ಇಳಿಯುವಿಕೆ : ತೆರೆ ನೊರೆ ಬುದ್ಬುದಂ ಸುಱಿಜಲಂ ತೆಗೆ ಪೆರ್ಚುಗೆ ಗುಣ್ಪು ಘೋಷಣಂ ವರುಣ ನಗಂ ವಧೂಟಿಜನನಂ . . . ನೀರ್ಮೊಗೆ ವಭ್ರಮುರ್ವರಾಪರಿವೃತಿ ನಾಗರಿಕ್ಕೆ ಬಗೆದಾದೊಡೆ ಸೈತು ಸಮುದ್ರ ವರ್ಣನಂ (ಸೂಕ್ತಿಸು. ೨-೦). [<ತೆಗೆ$_1$]

ತೆಗೆತ (ನಾ). ತೆಗೆದು ಕೊಡುವಿಕೆ ; ದಾನ : "ದಯ—ದಾನ, ಗತಿ ಹಿಂಸಾದಾನೇಷು ಈವಿಯೊಳಂ, ನಡೆಯೊಳಂ, ಝುಂಕಣಿಯೊಳಂ, ತೆಗೆತದೊಳಂ" (ಕಾಶಕ್ಕ. ೦೧೦). [ತೆಗೆ$_1$ + – ತ$_2$]

ತೆಗೆತರ್ (ಕ್ರಿ) ೧. ತೆಗೆದುಕೊಂಡು ಬರು. 'ತೆಗೆತರಿಸು' ಪರಾ. ೨. ಸೆಳೆದುಕೊಂಡು ಬರು : ಹೆಣ್ಣಾಳ್ಗಳೆನ್ನದೆ ತಱಿದಿಕ್ಕಿ ತೆಗೆತಂದು ಚಿಣ್ಣನನೆಮಗೊಪ್ಪಿಸೆಂದ (ಮೋಹತ. ೩೩-೩೦). [ತೆಗೆ$_1$ + ತರ್]

ತೆಗೆತರಿಸು (ಕ್ರಿ). ತೆಗೆದುಕೊಂಡು ಬರುವಂತೆ ಮಾಡು : ಪೆಟ್ಟಿಗೆಗಳಂ ತೆಗೆ [ಪಾಠಾಂ. ಗ] ತರಿಸಿ ಮುಂದಿಟ್ಟು (ಬಸಪು. ೦೦-೦೫). [ತೆಗೆತರ್+–ಇಸು$_3$]

ತೆಗೆನೆಱೆ (ಕ್ರಿ). (ಬಾಣ ಬಿಡಲು ಸಿದ್ಧವಾಗಿ) ಪೂರ್ತಿಬಾಣವನ್ನು ಎಳೆ : "ತೆಗೆನೆಱೆ – ಆಕರ್ಣಾಂತೇ (ಪೂರಾ ಎಳೆ)" (ಕಮಧಾ) ; ಗಱಿ ಸನ್ನೆಗೆಯ್ದು ತೆಗೆನೆಱೆದೆಱಗಿ ಪರಂಕಲಿಸಿ ಪರ್ವಿ ಕೂಕಿಱಿದಿಸೆ (ಪಂಪಭಾ. ೦೦-೭೩) : ಆಗಳಂಬರಚರಬಲದ ಧನುರ್ವಲಂ ತೆಗೆನೆಱೆದು ಪೊಕ್ಕು (ಶಾಂತಿಪು. ೪-೮೫) ; ಕಡೆಗಣ್ಣುಂ ಕಯ್ಯುಮಿಂದಾಗಿರೆ ತೆಗೆನೆಱೆದವ್ಯಗ್ರನೇ ಕಾಗ್ರಚಿತ್ತಂಬಡೆದಿರ್ದಂ (ಪಂರಾಮಾ. ೦೪-೧೭೬) ; ತೆಗೆನೆಱೆದಬ್ಜನಾಭನಿಸೆ (ಜಗವಿ. ೭-೮೩) ; ಸಂಚಳಿಸದ ಶಂಕರನ ಮನಂ ಚಳಿಯಿಪುದಂ ಸಾರ್ದು ಪಾರ್ದು ತೆಗೆನೆಱೆದಿರ್ದಂ (ಗಿರಿಕ. ೮-೪೪) ; ಓಸರಿಸದೆ ತೊಡರ್ಚಿ ಸಾರ್ಚಿ ತೆಗೆನೆಱೆದು ನಿಂದು (ರಾಜಶೇ. ೬-೯೭೫). [ತೆಗೆ$_1$ + ನೆಱೆ$_1$]

ತೆಗೆನೇಣು (ನಾ). ಎಳೆಯುವ ಹಗ್ಗ ; ಕಡೆಗೋಲಿನ ಹಗ್ಗ : ಮಂದರದ ಕಡೆಗೋಲ ಮೇಳವಿಸಿ ವಾಸುಗಿಯ ತೆಗೆನೇಣಿನಿಂದಸುರರೋಳಿಯಿಂ ನೀವು ಸಹಿತೆರಡು ಕಡೆಯಂ ಪಿಡಿದು ಮಥಿಸಲು (ಲಶಿಚಂ. ೦೨-೫) ; ನಳನಳಿಪ ತೋಳುಗಳ ನಿಜಕರತಳದ ತೆಗೆನೇಣುಗಳ ಮುಖದಲಿ ಹೊಳೆವ ಹೊನ್ನೋಲೆಗಳ . . . ಮೋಹನಗಾತ್ರೆಯೆಸೆದಳು ಮೊಸರ ಕಡೆವುತ್ತ (ನಿಭಾಗ. ೦೦-೯-೦೫) ; ಹರಿಗೆ ತಲ್ಪವಾಗಿರ್ದೆನು ಸಮುದ್ರಮಥನದಲ್ಲಿ ತೆಗೆನೇಣಾಗಿ ನೊಂದೆನು (ಭೈರಸೂ. ೨೦). [ತೆಗೆ$_1$ + ನೇಣು (<ನೇಣ್$_1$)]

ತೆಗೆಪು$_1$ 'ತೆಗಪು' ನೋ.

ತೆಗೆಪು$_2$ (ನಾ). ನೆನೆಸುವಿಕೆ : ಅಳೆಯೊಳ್ ತೆಗೆಪಾದರಳಿಯ ತಳಿರಂ ಮಾರುಡದ ಪತ್ತಿಯೆಳಗಾಯುಮನಾ ಜಳದೊಳ್ ಗೋಕ್ಷೀರಾನ್ವಿತಮಾ ಮಳಕಾಮ್ರಫಳಂಗಳಾವಗಂ ಮೃದುವಕ್ಕುಂ (ಲೋಕೋಪ. ೮-೨೦). [?]

ತೆಗೆಬಗೆ, ತೆಗೆಬಿಗಿ (ನಾ). ೧. ತೊಂದರೆ ; ಕಷ್ಟ : ಭೂಪತಿ ಜಿಗಡುಗೊಳುತೈತಂದು ಕೇಳಲು ತೆಗೆಬಗೆಯಲುಸುರುತ್ತ ತಂದೆಯ ನೆಲೆಯ ತಿಳುಹಿದನು (ಕಾಶಿರಾ. ೦-೩೦) ; ಮಸೆದು ಕರಗಳನೊರ್ವರೊರ್ವರು ಮಸಗಿದರು ಮುಷ್ಟಿಪ್ರಹಾರದಲುಸಿರ ತೆಗೆಬೆ[ಬ]ಗೆಯಿಂದ ಮಂಡಿಯ ನೊಡ್ಡಿ ಸಮವಾಗಿ (ಕೋಗಯ. ೨೪-೦೯). ೨. ಪ್ರಾಣ ಹೋಗುವ ಸ್ಥಿತಿ ; ಉತ್ಕಟಾವಸ್ಥೆ : ಬಾಯ ಮಿಡುಕಿನ ಬಳಲುಗಂಗಳಿನಾಯುವಿನ ತೆಗೆಬಗೆಯ ರಕ್ಕಸರಾಯನನು ಕೊಂಡೊಯ್ದು ಬೀಸಿದರಾಲ ವಟ್ಟದಲಿ (ತೊರರಾ. ೧-೦೫-೨೭). ೩. ಅತಿಶಯ ; ಆಧಿಕ್ಯ ; ಹೆಚ್ಚಳ : ವಿಕ್ರಮದ ತೆಗೆಬಗೆಯ್ದಂದಲರಿನೃಪರುಗಳ ಬಗೆಗೆಡಿಸುತ ನಡೆದಳು (ಕುರಾಸಾಂ. ೪೦-೮೪). 'ತಗೆಬಗೆ' ಪರಾ. **ತೆಗೆಬಿಗಿ** : ೧. ಸೊಗಸಿ ಬೆಳೆಯ ಕೊಯ್ದು ಪೊಱುವ ಜನಕೆ ತೆಗೆಬಿಗಿಯಿಲ್ಲವಾವ ಕಾಲದೊಳು (ರಾಮವಿ. ೨-೫೭). ೪. ಬಿಂಕ ; ಬಿಗುಮಾನ : ಸೊಗಯಿಪ ಸತ್ಕಾರದಿಂದ ತೆಗೆಬಿಗಿಯಿಲ್ಲದ ಸಮರತಿಯಿಂದವಳಗಣಿತಸುಖವಿತ್ತಳವಗೆ (ನೇಮಿಸಂ. ೦೦-೯೦) ; ಮೊಗವ ಕಾಣುತ ನಮ್ಮೊತ್ತಿಗೆ ಬಹನಲ್ಲದೆ ತೆಗೆಬಿಗಿಯವನಲ್ಲ ನಿಮ್ಮ ಮಗ (ಕುರಾಸಾಂ. ೩೬-೦೨೪). 'ತಗಿಬಗಿ' ಪರಾ.

ತೆಗೆಬಗೆಮಾಡು = ತೊಂದರೆಯನ್ನುಂಟುಮಾಡು ; ಇಕ್ಕಟ್ಟನ್ನುಂಟುಮಾಡು : ಶಿಶುವೆ ನೋಡಭಿಮನ್ಯು ಸುಭಟಪ್ರಸರದಿನಿಬರ ನೊಂದು ಘಾಯದೊಳುಸಿರ ತೆಗೆಬಗೆ ಮಾಡಿದನು (ಕುವ್ಯಾದ್ರೋ. ೫-೨೫). **ತೆಗೆಬಗೆಯಾಗು** = ೧. ಹೊಯ್ದಾಡು ; ಅನಿಶ್ಚಯವಾಗು : ಮುಗಿದ ಸರೋಜಮಾಲೆಗಮರಲ್ವಸಿತೋತ್ಪಲಮಾಲೆಗಂ ಮನಂ ತೆಗೆಬಗೆಯಾಗಿ ಸೈರಿಸದೆ ಷಟ್ಟದಸಂತತಿ ... ಎಡೆಯಾಡಿದುವಂಬುರುಹಾಕರಂಗಳೊಳ್ (ಅನಂಪು. ೭-೬೯). ೨. ಸಂಕಟವಾಗು ; ಕಷ್ಟವಾಗು : ಉಸುರು ತೆಗೆಬಗೆಯಾಯ್ತು ಜೀವರಿಗೆ (ಕಾಶಿರಾ. ೨೭-೫೪) ; ಇಳೆಯ ಭಾರಕರುಸುರು ತೆಗೆಬಗೆಯಾಗೆ ತೆರಳಿತು ಸೇನೆ ಪಶ್ಚಿಮಕೆ (ತೊರರಾ. ೪-೯-೦).

[ತೆಗೆ$_1$ + ಬಗೆ$_3$]

ತೆಗೆಬಿಗಿ 'ತೆಗೆಬಗೆ' ನೋ.

ತೆಗೆಮಿಳಿ (ನಾ). ಪ್ರಾಣ ತೆಗೆಯುವ ಹಗ್ಗ ; ನೇಣು (?) : ಚಕೋರಿಗಳ್ ನಲಿಯೆ ಪಾಣ್ಬರಿಯರ್ಕಳ ಚಿತ್ತದಲ್ಲಿ ಪೆಂಪೊಗೆಯೆ ವಿಯೋಗಿಗಳ್ ಮುನಿಯೆ ಕತ್ತಲೆಮತ್ತಲೆಯಾಗಿ ಸಂಜೆಯೊಳ್ ತೆಗೆಮಿಳಿಯಾಡೆ [ಪಾಠಾಂ. ತೆಗೆಯೆ ಮುಳಿಯಾಡೆ] ಸೂರ್ಯನಪರಾಬ್ಧಿಯೊಳೊಯ್ಯನೆ ಮೆಯ್ಯನಿಕ್ಕಿದಂ (ಪುಣ್ಯಾಸ್ರ. ೩-೬೮). [ತೆಗೆ$_1$ + ಮಿಳಿ$_2$]

ತೆಗೆಮೆಟ್ಟು (ನಾ). (ಕಾಳಗದಲ್ಲಿ ಮುನ್ನುಗ್ಗಲು) ಹಿಂದಕ್ಕೆ ತೆಗೆದು ಇಟ್ಟ ಹೆಜ್ಜೆ : ಬೆದಱುಗಾಗೆಯ ನೋಟ ಸಾಳುವನೊದೆವು ಮೀಂಗಳ ಝಳಕೆ ಕೇಸರಿಯಧಟು ಶಾಖಾಮೃಗದ ಲಂಘನ ತಗರ ತೆಗೆಮೆಟ್ಟು . . . ಸೊಕ್ಕಿದ ರದನಿಗಳ ಧೂಳಾಟ ಒಪ್ಪಿದವವರ ಯುದ್ಧದಲಿ (ಸಾಳ್ವಭಾ. ೨೨-೭೦).

[ತೆಗೆ$_1$ + ಮೆಟ್ಟು$_2$]

ತೆಗೆಯಾಳ್ (ನಾ). ಆಕ್ರಮಿಸುವ ಯೋಧ ; ಧಾಳಿಯಿಡುವ ವೀರ : ದಿವ್ಯವಾಗ್ವಿದಿತ ಸುಧರ್ಮಮಾ ಸಭೆಯೊಳಿಂದು ವಿರಕ್ತನೃಪಾಳಜಾಳ ಮಿರ್ದುದು ತೆಗೆಯಾಳನಾಯ್ದು ತೆಗೆದಂತೆ ಕೊಳಲ್ಕಪವರ್ಗದುರ್ಗಮಂ (ಅನಂಪು. ೯-೪೯). [ತೆಗೆ$_1$ + ಆಳ್$_3$]

ತೆಗೆಯಿಸು, ತೆಗಸು, ತೆಗಿಸು, ತೆಗೆಸು (ಕ್ರಿ). ೧. ಹೊರಕ್ಕೆ ತರು ; ಹೊರ ಬರುವಂತೆ ಮಾಡು : ಸುಬಂಧುವಂ ನೆಲವನೆಯಿಂ ತೆಗೆಯಿಸಿ ಸನ್ಮಾನ ದಾನಂಗಳಿಂದಾತನಂ ಸತ್ಕರಿಸಿ (ವಡ್ಡಾ.ರಾ. ೦೮೨-೨೩) ; ಎಲ್ಲಂ ನಟ್ಟಿಡಿದ ಬಾಳ ಕಕ್ಕಡೆಯುಡಿಗಳುಮನೆಯುಸ್ಮಾಂತಮುಂ ತೋಱಿ ತೆಗೆಯಿಸುತ್ತುಂ (ಪಂಪಭಾ. ೦೦-೨೮) : ನಾನಿಂದಧರ್ಮದೊಳಿದ್ದರೆ ತೆಗೆಯಿಸು ಅಲ್ಲಿಯು ನೆಲೆನಿಲ್ಲದಂತೆ (ಜಂಡಾಪು. ೦೦೬-೬೯). ೨. ಬರುವಂತೆ ಮಾಡುಂ ; ಆಕರ್ಷಿಸು : ಆ ಸ್ಥಿರಪ್ರಕೃತಿಯ ಸತ್ಯ ಪ್ರಕೃತಿಯೆ ತೆಗೆಯಿಸಿದವುದಾ ದಕ್ಷಿಣಹೃದಯೆಯ ದಕ್ಷಿಣತ್ವಮು ಗಮಿಯಿಸಿದವುದಾ . . . ಮ ಹೋ ದಾ ರೆ ಯು ದಾ ರ ತೆ ಯ ಮನಂಗೊಳಿಸದವ್ವುದು (ಕಾದಂಬ. ೪೦೪). ೩. ಇಳಿಸು ; ಕೆಳಕ್ಕೆ ತರಿಸು : ಅಡವಿಯೊಳ್ ನಿಡಿಯ ಮರದ ತುತ್ತತುದಿಯೊಳಿರ್ದಬಲ್ವ ಗುಂಡಿಗೆಯುಂ ಕಂಡು ತೆಗೆಯಿಸಿ ಕೊಂಡು ಪೋಗಿ (ವಡ್ಡಾ.ರಾ. ೪೦-೦೭). ೪. ಸಾಗಿಸು ; ಕಳುಹಿಸು : ಕನಕರತ್ನಾಭರಣಜಾಳಮನೊಪ್ಪುಗೊಂಡು ಭಂಡಾರಕ್ಕೆ ತೆಗೆಯಿಸುತ್ತುಂ (ಜಸಕ. ೬-೩೩). ೫. ಹೊರ ಹಾಕು ; ಬಹಿಷ್ಕರಿಸು : ನಾಳೆ ಒಬ್ಬನನ್ನು ಜಾತಿಯಿಂದ ತೆಗೆಯಿಸುವ ವಿಷಯ . . . ಅಲ್ಲಿ ಬರುತ್ತದೆ (ಕುಡಿಳಾ. ೦೩೭). ೬. ಕೊಂಡುಕೊಳ್ಳು ; ಕ್ರಯಕೊಟ್ಟು ಪಡೆ : ಗಜನೂರಿನಲ್ಲಿ ಏನಾದರೂ ತಿಂಡಿ ತೆಗೆಯಿಸಿಕೊಂಡು ತಿನ್ನೋಣವೆಂದಂದು ಕೊಂಡೆ (ಹಂಗಾಳ್ಯ. ೪೯). ೭. ಬಿಡು ; ತೊರೆ ; ತ್ಯಜಿಸು : ಕುಮ್ಮಟವನು ತೆಗೆಯಿಸಿದರೆ ಕಾರ್ಯವನುಗೆಡುವುದು . . . ಅದಱಿಂದದ ಬಿಡುವುದು ಮನುಜೇಶ್ವರ ನೀತಿಯಲ್ಲ (ಕುಡಾಸಾಂ. ೩೭-೪೮). ೮. ಕಳಚುವಂತೆ ಮಾಡು ; ಬಿಚ್ಚುವಂತೆ ಮಾಡು : ವೇಷವನ್ನು ತೆಗೆಯಿಸಿ, ಬಣ್ಣವನ್ನು ತೊಳಸಿ ಕಳಿಸಿದಾಗ ಬೆಳಗಾಗಿತ್ತು (ಕೂಫ). ೯. ಕೊಲ್ಲಿಸು ; ಸಂಹರಿಸುವಂತೆ ಮಾಡು : ಬಾಟರಂ ಕೊಂಡಾಡುವರ ಗಂಟಲೊಳ್ ನೇಣನಿಕ್ಕಿ ತೆಗೆಯಿಸುವಂ (ಧರ್ಮಾಮೃ. ೩-೩೭). **ತೆಗಸು** : ೪. ಹಿರಿಯ ಕಣಜದ ದವಸವೇನುವನಿರಿಸದೀಗಳ್ ತೆಗ[ಹಾಕಾಂ. ಗೆ]ಸು (ಜಸಪು. ೩೩-೦೮); ತೆಗ[ಹಾಕಾಂ. ಗೆ]ಸಿದನು ಬಳಿಕುತ್ತಮದ ತೊಡವುಗಳ ದಿವ್ಯದುಕೂಲರತ್ನಾಳಿಗಳಿನನುಪಮ ಗಜಹಯಾದಿ ಸಮಸ್ತವಸ್ತುಗಳ (ತೊರಠಾ. ೦-೬-೨). ೯. ಲೋಹಶೂಲದೊಳಿನಬರಂ ತೆಗ[ಹಾಕಾಂ. ಗೆ]ಸುವೆನು ತಲೆಕೆಳಕಾಗಿ ನಿಮ್ಮುವನು (ಜಸಪು. ೫೦-೩೦). ೧೦. ಹೂಳು, ಕಸ ಮೊದಲಾದಂವನ್ನು ಹೊರಗೆ ಹಾಕು,– ಎತ್ತಿಹಾಕುಂ: ಪ್ರತಿ ವರುಷಳು ಕೆಱಿಯ ತೆಗಸುವ ಹಾಗೆ ಕೊಟ್ಟ ಸ್ವಾಸ್ತಿ (ಎಳ್. VII(8), ಶಿಶಾಸಿ. ೨೩೪-೦೦; 1528). ೧೧. ಕೇಳಂವಂತೆ ಮಾಡು ; ಕೀಳಿಸುಂ : ಅವರಂ ಕರೆಸಿ ಕಣ್ಣಂ ತೆಗ[ಹಾಕಾಂ. ಗೆ]ಸಿದನು (ಜಸಪು. ೬೦-೪). ೧೨. ನಿವಾರಿಸುಂ ; ಹೋಗಲಾಡಿಸು : ಒಱಲುವವರರ ಬಾಯಿ ಕೈಗಳ ಮೊರೆಯೆ ತೆಗಸಿ ಮಹಾಗಣಂಗಳೊಳಿರುವ ನಂದೀಶ್ವರನು ಹೊಕ್ಕನು ಹೊಯ್ದು ದಾನವರ (ಕುವಾ.ಳ. ೬-೨೯). ೧೩. ಹಿಂದಕ್ಕೆ ತೆಗೆದಂಕೊಳ್ಳು ; ವಾಪಸ್ಸು ತೆಗೆದುಕೊಳ್ಳು : ಬಲುಕಾಳಿಗವನೊಯ್ಯಾರಿಸುತ ರಾಯರು ತೆಗಸಿದರು ಸೇನೆಯನು (ಕುವಾ.ಭೀ.೪-೦೦). ೧೪. ಹಿಂದಕ್ಕೆಬರುವಂತೆ ಮಾಡು; ಹಿಮ್ಮೆಟ್ಟಿಸುಂ: ತೆಗಸಿದನು ಸಾತ್ಯಕಿಯನೀತನ ಬಿಗಿದನಂಬನಲವನ ಬಾಣಾಳಿಗಳ ಕಡಿದನು ಛಾಸಿಮಾಡಿದನವನ ರ ಥ ಹ ಯ ವ (ಕುವಾ.ಳ. ೪-೩) : ಪ್ರವೀರನಂ ತೆಗ[ಹಾಕಾಂ. ಗೆ]ಸಿದರ್ನ್ನೆಲೆಗೆ (ಜೈಮಿಭಾ. ೦-೩೦). ೧೫. ತೆರೆಯುವಂತೆ ಮಾಡುಂ ; ತೆರೆಯಿಸುಂ : ಬಂದನಿತಱಿಂದಿಂದುಶೇಖರನಿಂದ ಕದಹುಗಳಂ ತೆಗ[ಹಾಕಾಂ. ಗೆ]ಸಿ (ಜಸಪು. ೪೪-೦೮). **ತೆಗಿಸು** : ೧೦. ಎಂಜಲ ತೆಗಿ [ಹಾಕಾಂ. ಗೆ]ಸಿ ಸಾರಿಸಿದನು (ಕುವಾ.ಸ. ೭-೦೬) . ೧೫. ಸೌರಾಷ್ಟ್ರೇಶ ಸೋಮೇಶ ನೀಂ ತೆಗಿಸೀ ಬಾಗಿಲ ಪ್ರೊಂಗದಂಗಳನೆನುತ್ತುಂ (ಅರ್ಜು. ೦೦-೭೦). **ತೆಗೆಸು** : ೧. ಫಲುಗುಣ ಹೊಕ್ಕನಾಯುಧಶಾಲೆಯನು ತೆಗೆಸಿದನು ಧನು ಮೊದಲಾದ ಕೈದುಗಳ (ಕುವಾ.ಭೀ.೪. ೯-೦) ; ತೆಗೆಸಿದನು ಬಳಿಕೆನಕುಲದ ಪೀಳಿಗೆಯ ನೃಪರಾರ್ಜಿಸಿದ . . . ಅಪಿಳ ವಸ್ತುಗಳ (ತೊರಠಾ. ೦-೭-೪). ೭. ಹೊಸಮಲೆಯನು ಬಲಿಯಿಸು ಕುಮ್ಮಟವನಸವಸದಿಂದ ತೆಗೆಸು (ಕುಡಾಸಾಂ. ೩೭-೪೭). ೮. ಬ್ರಾಹ್ಮಣ ನಿಯೋಗಿಗಳು ಪರಶ್ರೇಷ್ಠರಾಗಿ ಬಂದರಮನೆವಾಗಿಲ ಕದಬೀಯಗವ ತೆಗೆಸಿದರು (ಪೋಷಡ. ೦೯-೪). ೧೪. ಸೂಳವಿಸಿದವು ಸನ್ನೆಯಲಿ ನಿಸ್ಸಾಳ ಸೇನೆಯು ತೆಗೆಸಿದವು ಹೆಗ್ಗಾಳೆ ಮೊಳಗಿದವಾನೆವಱಿ ಗಜಱಿದವು ಡೌಡೆಗಳು (ಕುವಾ.ಭೀ. ೫-೨೪). ೧೫. ಬಾಗಿಲ ತೆಗೆಸಂಬನಿಷ್ಮರದ ವಾಕ್ಯಗಳ ಮುಂಬರಿತಂದೊರ್ವಳುಸಿರಲ್ಕೆ (ಪೋಷಡ. ೩೪-೩). ೧೬. ನಿಲ್ಲಿಸು ; ಸ್ಥಗಿತಗೊಳಿಸು ; ಅಡ್ಡಗಟ್ಟು : ಸಮಸಪ್ತಕರ ಬಲ ನಿಜಪಾಳಯಕೆ ತಿರುಗಿದುದು ಪೀರಿತು ತ್ರಿಗರ್ತರಣಯಾತ್ರೋವ ಕಾಳಿಗವ ತೆಗೆಸಿದರು ಕೌರವರು (ಕುವಾ.ಭೀ.೪. ೮-೦). ೧೭. ತೋಡಿಸು ; ಅಗೆಯುವಂತೆ ಮಾಡು : ಅವನು ಬಾವಿ ತೆಗೆಸಲು ಸಾಲ ಮಾಡಿದ್ದಾನೆ (ಕೂಫ). ೧೮. ಕಂದಿಸು ; ಬೇಯಿಸು : ಗರಗಸದಿಂದಂ ಎಗೆ ನಿಷ್ಕರುಣಿಗಳೊಡನಿಕ್ಕಿ ನೆತ್ತಿಯಿಂದಂ ಪಾದಂಬರೆಗಂ ಸೀಳ್ದಾಭಾಗಮನುರಿವೆಣ್ಣೆಯೊಳಿಕ್ಕಿ ತೆಗೆಸುವರ್ಮಱುಗುವಿನಂ (ಧರ್ಮಾಮೃ. ೩-೭೦). [ತೆಗೆ$_1$ + – ಇಸು$_3$]

ತೆಗೆಸು 'ತೆಗೆಯಿಸು' ನೋ.

ತೆಗೆಹ (ನಾ). ತೆಗೆಯುವಿಕೆ ; ಬೇರ್ಪಡಿಸುವಿಕೆ : ಉಪ್ಪು ಎಗಿಲಾದವಱ ಉಪ್ಪು ತೆಗೆ(ಹ)ಯೋಣ. ಕಹಿ ಎಗಿಲಾದವಱ ಕಹಿ ತೆಗೆ(ಹ)ಯೋಣ (ಧೀಮಸೂ. ೨). [ತೆಗೆ$_1$ + – ಹ$_2$]

ತೆಗ್ಗು$_1$ 'ತಟ್ಟು' ನೋ.

ತೆಗ್ಗು$_2$ 'ತಗ್ಗು$_3$' ನೋ.

ತೆಗ್ಗುಬೀಳು 'ತಗ್ಗುಬೀಳು' ನೋ.

ತೆಜಿಸು (ಕ್ರಿ). ಬಿಟ್ಟುಬಿಡು ; ತೊರೆ ; ತ್ಯಜಿಸು : ತೆಜಿಸದಂ ಮಗುಳತ್ತಲೆಸೆ ವಂಗದೇಶಮಂ ಪೊಕ್ಕೊಡನೆ ಬಾಚಿದಂ ಬಹುನಾಣ್ಯವಾ (ಪರಶು. ೦೦-೦೫); ನಿನ್ನ ಸುತನನೀಕ್ಷಣ ತೆ[ಹಾಕಾಂ. ತ್ಯ]ಜಿಸೆ ರಾವುಗಂ ಪಟ್ಟಗಟ್ಟಿ . . . ಸು ಖ ವಿ ರ್ಪ ನು (ವಂಕಾರಾ. ೨-೬-೦೩) : ಭೂರಿದಾರಿದ್ರ್ಯದಲಿಯಾ ಸಂಸಾರವನು ಮಾಡುವುದಕಿಂತಲೂ . . . ಈ ಶರೀರವನೆ ತೆಜಿಸುವುದು ಲೇಸು (ಸುದಾಮು. ೫-೮). [< ತ್ಯಜಿಸು]

ತೆಟ್ಟಂದೆಱಿ 'ತೆಱಿ$_1$' ಪರಾ.

ತೆಟ್ಟುಂತೆಱಿ 'ತೆಱಿ$_1$' ಪರಾ.

ತೆಟ್ಟುಂದೆಱಿ 'ತೆಱಿ$_1$' ಪರಾ.

ತೆಟ್ಟಿ, ತೆಂಡೆ, ತೆವಟಿ, ತೆವಡೆ (ನಾ). ೧. ಗುಂಪು ; ಸಮೂಹ ; ಸಂದಣಿ. **ತೆಂಡೆ** : ೨. (ಹುಲ್ಲು ಮುಂತಾದುವುಗಳ) ಕಟ್ಟು ; ಪಿಂಡಿ ; ಕಂತೆ : ಈ ನಾರಿಯನ್ನು ಮೆಯ್ಯೊಳಗೆ ಹುಲ್ಲು ತೆಂಡೆಯಿಂ ನೀನಿಂತು ಬಿಗಿಸಿದೊಡಿಸೆ ಮಾಳ್ಪ ವಾವವೇನಯ್ಯಾ (ಸಾನಂಗ. ೪೩). ೩. ಮರ ಗಿಡಗಳ ಬುಡ ; ಬೇರುಗಳು ಹೊರಡುವ ಭಾಗ : ತಂಗಿನ ತೆಂಡೆ ಮುರಿದು ತಳಕೆಳಕಾಗಿ ಗಂಗಾಧರನ ಪೂಜಕನ ಹಿಂಗದೆ ನೆನೆಯೆ ರಾಯಗೆ ಮಣಿದೊರತಾ ಅಂಗೈಗಳಲಾಂತ ಬಸವ (ಬಸಪ. ೩-೩೪). ೪. ವಂಶ ; ಬುಡಕಟ್ಟು : ಉಳಿದವರೆಲ್ಲ ಅಣ್ಣತಮ್ಮಂದಿರಾಗಿ ಒಂದೇ ತೆಂಡೆಗೆ ಸೇರಿದವರು (ಸನ್ನೂರು. ೨೦೯) : ಒಬ್ಬ ಪ್ರಸಿದ್ಧ ಪುರುಷನಿಂದ ಅವರ ಮಕ್ಕಳು ಮೊಮ್ಮಕ್ಕಳುಗಳನ್ನು ಇಂತಹವರ ತೆಂಡೆ, ವಟಾರ, ಪಟ್ಟಡೆ ಎಂಬುದಾಗಿ ಕರೆಯುವ ವಾಡಿಕೆ (ಹುಬ್ಬಹ. ೦೮). ೫. ತೊಡರಿಕೊಂಡಿರುವಿಕೆ ; ಸುತ್ತಿಕೊಂಡಿರುವಿಕೆ : (ಕ). **ತೆವಟಿ** : ೬. ಹೊಲ ಉಳುವಾಗ ಕುಂಟೆಯ ಕುಳಕ್ಕೆ ತೆಕ್ಕೆತೆಕ್ಕೆಯಾಗಿ ಸುತ್ತಿಕೊಳ್ಳುವ ಮಣ್ಣು . – ಕೆಸರು : ಎರಡು ಸಾರಿ ಕುಂಟೆಯನ್ನು ಎತ್ತಿ ಕುಡಕ್ಕೆ ಸುತ್ತಿಕೊಂಡಿದ್ದ

ತೆಮಟೆಯನ್ನು ಕುರುಚಿಗೆಯಿಂದ ತೆಗೆಯುವುದಕ್ಕೇ ಇವನ ರಟ್ಟೆ ಬಿಟ್ಟು ಹೋಗಿದ್ದುವು (ಬೆಳುಮ. ೨೬೯). **ತೆವಡೆ** : ೭. ಹೊಲ, ಗದ್ದೆಗಳಲ್ಲಿ ಪಾತಿ ಅಥವಾ ಮಡಿಗಳ ಮಧ್ಯೆ ಕಟ್ಟುವ ಸಣ್ಣ ಬದು : (ಕ).

ತೆಟ್ಟೆತೆಟ್ಟೆ (ದ್ವಿರುಕ್ತಿ) : ತೆಟ್ಟೆತೆಟ್ಟೆಯೊಳೋಡುವ ಕುರುಸೈನಿಕ ಕೆಟ್ಟುದ ನೋಡಿ ಗೊಳ್ಳೆಂದು ದಿಟ್ಟರವರು ನಗುತವೆ ತುಱುಗಳನು ಹಿಮ್ಮೆಟ್ಟಿಸಿದರು (ಸೇಮಿಸಂ. ೨೫-೦೫೩); ಬಟ್ಟಜವ್ವನೆಯರಾರತಿವಿಡಿದವನಿಗೆ ತೆಟ್ಟೆತೆಟ್ಟೆಯೊಳೆತ್ತಿದರು (ರಾಮವಿ. ೦೯-೮೦) : ಬೆರೆಯದೆ ತೆಟ್ಟೆತೆಟ್ಟೆಯೊಳು ಸಂಗ್ರಾಮಕೆಂದೆರಡು ಪಡೆಗಳೊಟ್ಟಿದವು (ಪಂಪ್ರಸಾಂ. ೨೦-೦೨೦) ; ಕಟ್ಟಿತೋ ಪಲವಣ್ಣ ಮೇಘ ಬಾನದೊಳೆನೆ ತೆಟ್ಟೆತೆಟ್ಟೆಯೊಳು ತೋಱುದುದು (ಜ್ಞಾನಕ. ೦೪-೭೦). **ತೆಂಡೆತೇಲು** = ೧. ಮರದ ಬೇರಿನ ಭಾಗ ಮೇಲೆ ಬರುಂ ; ಮರ ಒಣಗತೊಡಗು. ೨. ವಂಶವು ನಿರ್ನಾಮವಾಗು ; ವಂಶದಲ್ಲಿ ಯಾರೂ ಇಲ್ಲದಂತಾಗು : ಆ ದೊಡ್ಡ ಬರದಲ್ಲಿ ತೆಂಡೆತೇಲದೇ ಇದ್ದದ್ದೇ ಹೆಚ್ಚು (ರೂಢಿ). [ದೇ.॥ ತೆಲು. ತೆಟ್ಟ, ತೆಟ್ಟು]

ತೆಡಾಯ (ನಾ). ಒಂದು ಬಗೆಯ ಆಯುಧ (?) : ಕತ್ತಿ ತೆಡಾಯ ಖಡಲ್ಗ ತೆಯಲ್ಲಿ ಬಿಲ್ಲು ನಾರಾಚ ಗದೆ ಸೂಲ್ಗಿ ... ಮೊದಲಾದಾ ಬತ್ತೀಶಾಯುಧಾ ಶಕ್ತ ಸಮರ್ಥಕರಾದಾ (ಎಕ. XVI, ಗುಬ್ಬಿ. ೭೪-೨೦ ; 1776).

[P ಇದು 'ಖೆಡೆಯ' ಎಂಬುದರ ಅಪಲಿಖಿತವಿರಬಹುದೇ ?]

ತೆಣರು 'ತೆಣಱು' ನೋ.

ತೆಣಱು, ತೆಣರು, ತೆಳಱು (ಕ್ರಿ). ಭಾರದಿಂದ ಉಸಿರು ಕಟ್ಟು,–ತಿಣುಕು,–ನರಳು : ನೆಲನಂ ಪೊತ್ತ ಫಣಿ ತೆಣಱು [ಪಾಶಾಂ. ಪೊಱಲು] ತಿರೆ ನಡೆದತ್ತಾಗಳ್ ಸಗರ ಚಕ್ರವರ್ತಿಯ ಕಟಕಂ (ಅಜಿಪು. ೯-೦೬) ; ಕ್ಷಿತಿ ಚಕ್ರಂ ನಿಜಭಾರದಿಂ ತೆಣಱಿದತ್ತೆಂಬನ್ನೆಗಂ (ಪಂರಾಮಾ. ೦೩-೬೭). **ತೆಣರು** : ಕುದಿವೊಡಲ ಮದುಮಗಳ್ ತೆಣರುತಿಹಳೆಲ್ಲಿ ? (ಕಾಲೂರ. ೦೫೩-೩೩೬). **ತೆಳಱು** : ನಾಗರಾಜಂ ತೆಳಱಿ ಬೆಳಱಿ ದಿಗುದನ್ತಿಗಳು (ಪೊಂಳಶಾ. ೦೯೨೯, ನವಿಲುಗುಂದ. ೨೦೭-೦೦ ; 1184). 'ತಿಣಂಱು' ಪರಾ.

[ದೇ. ॥ ತಮಿ. ತಿಣಱು]

ತೆಣೆ 'ದಿಣ್ಣೆ' ನೋ.

ತೆಣ್ಗಾಳಿ 'ತೆಂಗಾಳಿ' ನೋ.

ತೆತಾವು (ನಾ). ಒಂದು ಪ್ರದೇಶದ ಹೆಸರು (?) : ಮೂಡಾಯ್ನೋಡಿ ನೀರಿಟ್ಟೆವೆ ತಾಱಿ ಎ ತೆತಾವಿನ್ಕೊಲ್ಲಿ ಎ ಪೋಗಿ ಕುಣ್ಡು ಸೋಮೆ ಎ ಕರ್ಗಲ್ಲಾಱಿದ ಆನೆಗಲ್ಲ ಕಮ್ಮಾರ್ ಕೊಟ್ಟಲೆಯ ಮುದುವುಣಸೆ ಮಾಳ್ದೆಯುಳ್ ಕೂಡಿತ್ತು ಸೀಮೆ (ಎಕ. XVI, ಗುಬ್ಬಿ. ೭೫-೫೨ ; 733). [?]

ತೆತ್ತು$_1$ 'ತೆಱು$_1$' ಪರಾ.

ತೆತ್ತು$_2$ (ನಾ). ಮಾಲುಗಣ್ಣುಳ್ಳವನು ; ಮೆಳ್ಳೆಗಣ್ಣಿರುವವನು : ಅವನನ್ನು ತೆತ್ತಹನುಮ ಎಂದೇ ನಮ್ಮ ಹುಡುಗರು ಹಾಸ್ಯಮಾಡುತ್ತಾರೆ (ಗರುದಾ. ೦೪೭). [ತೆತ್ತು$_1$ + – ಅ$_7$]

ತೆತ್ತಕಣ್ಣು 'ತೆತ್ತಗಣ್ಣು' ನೋ.

ತೆತ್ತಗಣ್ಣು, ತೆತ್ತಕಣ್ಣು (ನಾ). ಮಾಲುಗಣ್ಣು ; ಮೆಳ್ಳೆಗಣ್ಣು ; ಓರೆಗಣ್ಣು : ಇನ್ನುಮೇಲೆ ನಿನ್ನ ತೆತ್ತಗಣ್ಣಿನ ಹಂಗೇ ನನಗೆ ಬೇಡ (ಗರುದಾ. ೦೪೯). **ತೆತ್ತಕಣ್ಣು** : ನಮ್ಮೂರ ಕ್ಷೌರಿಕ ಹನುಮನಿಗೆ ಸ್ವಲ್ಪ ತೆತ್ತಕಣ್ಣು, ಎಡಗಡೆ ಅವನು ನೋಡಬೇಕಾದರೆ ಬಲಗಡೆ ನೋಡುವಂತೆ ತೋರುತ್ತದೆ (ಗರುದಾ. ೦೪೭). [<ತೆತ್ತು$_1$ + ಕಣ್ಣು (< ಕಣ್)]

ತೆತ್ತವಣೆ (ನಾ). ಜೋಡಣೆ (?) : ಇತ್ತಲೀ ಮಹದೇವಿ ಮಿಗೆ ಜಳೆವುತ್ತಲಿದ್ದಳು . . . ಉತ್ತಮದ ಮೈಲುಳಿಯ ಕಾಂತಿಯ ಮತ್ತಗಜಗಮನದ ವಿಳಾಸದ ತೆತ್ತವಣೆಯ ನವೀನರೀತಿಯ ಜಾತಿಭಾವದಲಿ (ಪ್ರಭುಲೀ. ೦೦-೨). [ತೆತ್ತಿಸು$_1$ + – ಅಣ್$_4$]

ತೆತ್ತಿಗ (ನಾ). ೧. ಬಂಧು ; ನಂಟ : ಮತ್ತಮಲ್ಲಿ ಬೇಟದ ತೆತ್ತಿಗನುಂ ಮೊತ್ತಮೊದಲಿಗನುಮಪ್ಪನೋರ್ವಂ . . . ಇಂತೆಂದಂ (ಶಾಂತಿಪು. ೬-೯೪ವ) ; ಸ್ವಬಂಧುನಿಕಾಯಕ್ಕುಪಕಾರಿ ತೆತ್ತಿಗನೆನಿಕ್ಕುಂ ತೌಟಗೇಹೋದ್ಭವಂ (ಆಾತಕಿ. ೧೭-೭) ; ಗುರುವೆ ತೆತ್ತಿಗನಾದ ಲಿಂಗವೆ ಮದವಳಿಗನಾದ (ಮಹಾದೇ. ಬ. ೧೦೩-೨೫೮) ; ಪನ್ನಗಾಭರಣನಾತನ ಭಕ್ತಿಯೋಗಮಂ ತಾಂ ನೋಡಿ ತಲೆದೂಗಿ ಮುಂಡಾಡಿಯೆನ್ನಣ್ಣ ಎನ್ನ ತೆತ್ತಿಗಯೆನ್ನ ಭದ್ರಗಜವೇ . . . ಎಂದೊರೆದು (ಪದ್ಮರಾ. ೭-೪೩) ; ತಾವರೆಯ ತೆತ್ತಿಗನ ಕುಮುದದ ಜೀವಿಗನ ಮಿಗೆ ಮೇಲುನೋಟದೊಳಾ ವಿಗಡರುಗಳಡು ತಿವಿದಾಡಿದರು (ಕುಮಾ್ರಸ. ೨-೦೦೯) ; ಬಾಗಿಲ ಬೀಗ ಮುದ್ರೆಯ ಮಾಡಿಸಿಕೊಂಡು ಪೋಗಿ ತೆತ್ತಿಗರ ಬೀಳ್ಕೊಂಡು (ಮೋಹಕ. ೧೯-೯೮) ; ಮೃತ್ಯು ಬೆನ್ನಿನೊಳಿಹುದು ತಾವಿನ್ನತ್ತು ಮಾಡುವುದೇನು ಪೂರ್ವದ ತೆತ್ತಿಗನು ನೀನೀಗ ರಕ್ಷಿಸು (ಹರಿಹಾ. ೯೨). ೨. ಸೇವಕ ; ಆಳು : ನಿಮ್ಮ ತೆತ್ತಿಗನು ಬೊಮ್ಮಯ್ಯನ ಕೀರ್ತಿ ಮಹತ್ತು ಘನವಂದೊಮ್ಮೆ ರಾಗಂಬೆತ್ತು ಕೈಲಾಸಕ್ಕೆ ಹೋಗಿ ಮರಳ್ದುದನುವಾಯ್ತು (ಬಸಪು. ೨೯-೨೯) ; ತಿಲಕವನು ತೆತ್ತಿಗರಲಂಕರಿಸಿದರು ಹೊಳಹಿನ ಹೊಗರ ಹೊಸ ಜವ್ವನದ ಜೋಡಿಯ ಜಾಡಿಯುಮ್ಮಡಿಸೆ (ಕುಮಾ್ರಭ. ೬-೩) ; ಹನುಮನೀನು ನರನ ತೆತ್ತಿಗನಾಗಿ ಸಾಯದಿರು (ಕಾಶಿಕಾ. ೦೯-೦೩) ; ದೆಂಬತ್ತಿ ಬಾರದೆ ಮಾಣರಭವನ ತೆತ್ತಿಗರು (ನಿಧಾಗ. ೪-೩-೨) ; ತನ್ನ ತೆತ್ತಿಗರಹ ನಂದೀಶ್ವರಾದಿ ಪ್ರಮಥರ ಕಳುಹು (ಪ್ರಭುಪು. ೪-೦೦). ೩. ಹೊಣೆಗಾರ ; ರಕ್ಷಕ : ಗುತ್ತಿಯ ಗಂಗಮಹೀಪ × × × ರಾಜ್ಯಕ್ಕೀತಂ ತೆತ್ತಿಗಂ (ಎಕ. IV. ನಾಗಮಂ. ೩೦-೦೪ ; 972) ; ಅಂಕ ಓಡಿದರೆ ತೆತ್ತಿಗಂಗೆ ಭಂಗವಯ್ಯಾ ಕಾದಿ ಗೆಲಿಸಯ್ಯಾ ಎನ್ನನು (ಬಸವ. ೨೯೯) ; ಸೂನಗೆಯನೆತ್ತಿ ಪರಿವ ತೆತ್ತಿಗ ವೀರರುಮಂ (ಲೀಲಾವ. ೩-೦೩೪) ; ಈ ಖಳ್ಗವನೊಲವಿಂ ಸಾಧಿಸುತಿರ್ದಾ ಖೇಚರತನುಜನ ಮಾತಾಪಿತೃವಾಕೆಯ ತೆತ್ತಿಗರಾಗಲ್ವೇಳ್ಕುಂ (ಕುಮುಾಂ. ೬-೩೮) ; ನಿಮ್ಮ ವಿಪತ್ತು ತನ್ನದು ನಿಜಪದಾಶ್ರಿತ ಭಕ್ತರಸುಗಳಿಗೆ ತೆತ್ತಿಗನಲಾ ತಾನು (ನಿಧಾಗ. ೬-೯-೩೩) ; ನೀಂ ಪಸುಳೆ ನಿನಗೆ ತೆತ್ತಿಗರದಾರಕಟ (ಶೃಮಿಧಾ. ೨೦-೦೪) ; ಚಿತ್ತೈಸಲೆ ಸ್ವಾಮಿ ಭೃತ್ಯನ ಬಿನ್ನಪ ತೆತ್ತಿಗರಾರು ನಿನ್ನಿಂದ (ಕೋಡಚಿ. ೧-೪೩). [ತೆತ್ತು$_1$ + – ಇಗ]

ತೆತ್ತಿಸು$_1$ (ಕ್ರಿ). ೧. ಹೊಂದಿಸು ; ಜೋಡಿಸು ; ಅಳವಡಿಸು; ಹೂಡು: ಹರನೊಳೆ ಪತ್ತಿ ತೆತ್ತಿಸಿದ ಚಿತ್ತಮನಿರ್ಜಗಿಯಾಗೆ ಮೋಹಮೊತ್ತರಿಸೆ . . . ಅತ್ತಣ ಪಂಬಲ ಬಂಬಲೊಳ್ ತೆಱಂದಿರಿದುದು ಚಿತ್ತಂ (ಪಂಪಭಾ. ೧೩-೬೩); ತೋರಣಸ್ತಂಭಂಗಳೊಳ್ ತೆತ್ತಿಸಿದ ಜಂತ್ರದ ಹಂಸ ಕೀರ ಮಯೂರ ಪಾರಾವತ ವಾರಣಂಗಳಿಂ (ಗಿರಿಕ. ೦೦-೭೪ ವ) ; ತೆತ್ತಿಸಿದ ಪುತ್ತಳಿಗಳಾಭರಣಕಿರಣದಿಂ ಸೇಸೆಯುಂ ಸೂಸುವಂತೆ ದೇಸೆವಡೆದೆಸೆವ ಸಿವಿಗೆಯುಂ (ಪುಷ್ಪಪು. ೦೩-೮೪ ವ) ; ಪಿರಿದುಂ ಬಿನ್ನಣದಿಂದೆ ನಿರ್ಮಿಸಿದ ನಾನಾ ಚಿತ್ರ ಸತ್ಪುತ್ರಿಕೋತ್ಕರಮಂ ತೆತ್ತಿಸಿ ಸುತ್ತಲುಂ (ಪಾಧಪು. ೪-೩೩) ; ಶರವನು ತೂಗಿ ಬಿಲ್ಲಿಗೆ ತೆತ್ತಿಸಿದನು (ಕುಮಾ್ರದ್ರೋ. ೦೯-೩೨) ; ಸುತ್ತಿನುಂಗುರ ಮದ್ದುಮಣಿಯಂತ್ರಗಳ ತಂದು ತೆತ್ತಿಸಿದರು ಕಾಲ್ದೆಸೆಯ (ಮೋಹತ. ೧೭-೧೩) ; ಜಲಕಾಂತ ಶಿಲೆಯಿಂದ ನಿರ್ಮಿಸಿದ ತೊಟ್ಟಿಲಿಕ್ಕೆಲದಲ್ಲಿ ತೆತ್ತಿಸಿದ ವಿವಿಧಮಣಿದೀಪ್ತಿಯಿಂ (ಜ್ಞಾನಸಂ. ೦-೪೭). ೨. ತೊಡಿಸು ; ಧರಿಸುವಂತೆ ಮಾಡು : ಎತ್ತಲುಂ ಕೇಳ್ದಱಿಯೆವೀ ರುದ್ರಾಕ್ಷಿ ಮೂಗಿನಲಿ ತೆತ್ತಿಸುವುದಾವುದು ವಿಶೇಷವೊ (ಬಸಪು. ೦೨-೨೦); ಹೆಱಿನೇಸಱಂ ಮುಂಗುರುಳ ಮೇಲೆ ತೆತ್ತಿಸಿ (ಸೌಂದಪು. ೭-೨೪) ; ಕಾಯವಿರಹಿತನೆಂದು ಧರೆಗಱುವುವಂತೆ ಮಾಗಾಯನಾ ಕರ್ಣಯುಗಳದೊಳಂದು ತೆತ್ತಿಸಿದರು (ಲಶಿಚಂ. ೩೦-೩೩). ೩. ಮುಂಡಿಯುವಂತೆ ಮಾಡು ; ಮುಂಡಿಸು : ಸೋರ್ಮುಡಿಯೊಳೆಡೆಗೆಡೆಗೆ ಭಾವಕಿಯರರೆವಿರಿದ ಮಲ್ಲಿಗೆ ಜಾಜಿಯರಲ ತೆತ್ತಿಸಿದರತಿಸೊಬಗಿ

ನಿಂದ (ಸೌಂದಪು. ೬-೨೩) ; ಪುಂಡ್ರೇಕ್ಷುದಂಡಗಳನಮರ್ಚಿ ಬಾಳವೇರ್ಗಳಂ ಜಿಗಿದೆಡೆದೆಡೆಯೊಳ್ ಸಂಪಗೆಯ ಬಿರಿಮುಗುಳ್ಗಳಂ ತೆತ್ತಿಸೆ (ರಾಜಶೇ. ೧೦-೩೦ ವ). ೪. ಒಳಹೊಗು ; ನಾಟಿಕೊಳ್ಳು ; ಚುಚ್ಚಿಕೊಳ್ಳು : ಬಾಳಂ ಕೊಂಡೆತ್ತಿ ಪೊಯ್ದುದುಮಾ ಬಾಳ್ ನಾಗವೇದಿಕೆಯಂ ತಾಂಗಿ ತೆತ್ತಿಸೆ [ಪಾಠಾಂ. ಕೀಲಿಸೆ] ಮೇಗಂ ನೋಡಿ (ಪಂಚತಂ. ೧೯೫-೧೦) ; ಶರಾವಳಿಯೆಱಗಿದವು ತುಱುಗಿದವು ತೆತ್ತಿಸಿದವು ರಥಾಂಗದಲಿ (ಕುಮ್ಯಾಕ. ೧೦-೪೬) ; ತೆತ್ತಿಸಿದುವುಭಯವೀರರ ಮೆಯ್ಯೊಳಂಬುಗಳ್ (ಚೈಮಿಭಾ. ೨೫-೪೦). ೫. ಚುಚ್ಚು ; ತಿವಿ ; ತುರುಕು : ರಿಪುವರ್ಗ್ಗದ ಬಾಯ ಬಾಗಿಲೊಳು ತೆತ್ತಿಸಿದಂ ಪಲರ್ಬ್ಬೆದಱೆ ಕೂರಲಗಂ (ಎಕ. VIII, ಸೊರಬ. ೩೪೫-೩೪ ; 1171) ; ಕಕ್ಷದೊಳ್ ಬರಿಯೊಳ್ ನೇತ್ರದೊಳೆಯ್ದೆ ತೆತ್ತಿಸಿದ ನತ್ಯಾಭೀಳಬಾಣಂಗಳಂ (ಜಗವಿ. ೧೮-೧೦೩) ; ತೆತ್ತಿಸಿದಂಬಿನ ಗಱಿ ಮಿಱುಗುತ್ತಿರೆ (ವರ್ಧಪು. ೯-೫೫) ; ಪರೆವ ಕಣ್ಗಳೊಳಾಲಿಪ ಕರ್ಣಗಳೊಳ್ತ ಗುಳ್ದುರಿಪುವಯಶ್ಶಲಾಕೆಯನೆ ತೆತ್ತಿಸುವರ್ ಪರವೆಣ್ಗೆ ಕೂರ್ಪರಂ (ಅನಂಪು. ೯-೩೭) ; ಒತ್ತಿನಂಗಡಿಯ ಕಜ್ಜಾಯಮಂ ಬಲ್ಲೆಹದಿ ತೆತ್ತಿಸುತ ಬಸವ ಕೋಯೆನಲ್ (ಲಶಿಜಿಂ. ೩೨-೨೩) ; ಗಜವ ಒತ್ತಿ ಕಿವಿಗಳನೊದೆದು ಶಿರದಲಿ ತೆತ್ತಿಸಿದರಂಕುಶವನು (ಕುಮ್ಯಾದ್ರೋ. ೩-೬) ; ನರನವನ ರೋಮ ರೋಮಂಗಳಂ ಭೇದಿಪವೊಲು ತೆತ್ತಿಸಿದನಂಬುಗಳನು (ಚೈಮಿಭಾ. ೨೫-೪೭). ೬. ಕೊರೆಯಿಸು ; ಕೆತ್ತಿಸು ; ಕಂಡರಿಸು : ದಿಙ್ಮುಖ ದಂತಿದಂತದೊಳ್ ತೆತ್ತಿಸಿದಂ ನಿಜಾಂಕ ಮಹಿಮಾಕ್ಷರಮಾಳಿಕೆಯಂ (ಶಾಪಮಂ. ೩೪೦) ; ಕುಂಬಳ ಬಿತ್ತಿನಂದದಿ ಕೊಱೆಕೊಱೆದು ತೆತ್ತಿಸಿದಂತೆ (ಭರಣ. ೬-೫೩). ೭. (ಹರಳಿನಂತೆ) ಕೂಡಿಸು ; ಕುಂದಣಿಸು ; ಮೆಟ್ಟು : ಮುತ್ತು ಮಾಣಿಕ ನವರತ್ನ ತೆತ್ತಿಸಿದಂತಿಹ ಉಪ್ಪರಿಗೆ ಮೇಗಳ ಶಿವಾಲಯವ ಕಂಡು (ಲಿಂಗವ. ೭೭-೮೦) ; ಸುತ್ತುವಳೆಯುವ ತೊಳಗಿ ಬೆಳಗುವ ಮುತ್ತು ವಜ್ರದ ನಡುವೆ ಮಾಣಿಕ ತೆತ್ತಿಸಿದ ಬೊಟ್ಟೊಂದು (ಪ್ರಭುಲೀ. ೪-೦೬) ; ತೆತ್ತಿಸಿದ ನವರತುನದಿಂದಲಿ ಮುತ್ತಿನುಂಡೆಯ ಜೂಳೆಯಂಗಳ ಪತ್ತಿ ಪಚ್ಚೆಯ ಹಲಗೆ ಪವಳದ ಕಡೆದ ಬೋದಿಗೆಯ . . . ರಥ ಕಳಶ ಮೇಲೆಸೆಯೆ (ಕುಮ್ಯಾದ್ರೋ. ಓರಿಇ. ಪರಿ. ೨೭೮) ; ಅಮಲವಜ್ರಂಗಳ ತೀವಿ ತೆತ್ತಿಸಿದ ಪೊನ್ನುಡೆ ನೂಲ್ಗಳಂ ತಳೆದು (ಸೌಂದಪು. ೧೦-೨೩) ; ಅಗಣಿತ ಕನಕದಂಡದ ಪಲ್ಲವಛತ್ರ ನೆಗಹಿರೆ ರತ್ನ ತೆತ್ತಿಸಿದ ಸೊಗಯಿಪ ಮಣಿ ಸೊಡರ್ವೆಳಗಿನೊಳ್ ಮೆಱೆದುವು (ಮೋಹತ. ೦೫-೩೦) ; ಬಳಸಿರೆ ಕಟ್ಟಿ ಬಿಟ್ಟ ಪೊಸಮಲ್ಲಿಗೆಮಾಲೆ . . . ಮೌಕ್ತಿಕ ಪ್ರಸರಮಂ ಹರಿನೀಲಮಣಿ ಪ್ರತಾನದೊಳ್ಕೆಳೆಗೊಳಿಸುತ್ತೆ ತೆತ್ತಿಸಿದವೋಲ್ಮೆಱೆದಿರ್ದುದು ಮಂಟಪಾಗ್ರದೊಳ್ (ರಾಜಶೇ. ೮-೩). ೮. ಹೊಂದು ; ಸೇರು ; ಅಂಟು : ಬಸಿಱೆತ್ತಿ ಕಟ್ಟೆ ಮೆಯ್ ಕೀಲಿಸಿದಂತಿರೆ . . . ಕಿವಿ ತೆತ್ತಿಸಿದಂತಿರೆ . . . ಹರಿಣ ರೋಗಂ ತಡೆಯದೆ ಮಡಿಗುಂ (ಅಶ್ವಶಾ. ೦೩-೪೧) ; ಹತ್ತೆ ಬಂದಿರೆ ಸೂಜಿಗಲ್ಲನು ಹತ್ತಿ ಮೋಹಿಪ ಸೂಜಿಯಂತಿರೆ ತೆತ್ತಿಸಿದುದಾ ಸಚ್ಚಿದಾನಂದ ಸ್ವರೂಪೆನಿಪ ನಿತ್ಯವಲ್ಲಮನಂಶವಾದ ನಿಮಿತ್ತವಾಕ್ಷಣ ಕಾಣುತವೆ ಮೈಯೆತ್ತಿತೊಯ್ಯನೆಯನಿಮಿಷಯ್ಯನ ಕೈಯ ಶಿವಲಿಂಗ (ಪ್ರಭುಲೀ. ೦೦-೨೭). ೯. ನಿರ್ಮಿಸು ; ರಚಿಸು : ಅಸುರನ ಗದೆ ಭೂತ ಪಿಶಾಚ ಸಮಿತಿಗೆಱೆಯಿಸುವ ನೆತ್ತರಱವಟ್ಟಿಗೆ ತೆತ್ತಿಸಿದೆಲ್ವಿನ ಸೊದೆವನೆ (ಜಗವಿ. ೯-೬೦) ; ವಸುಧಾಮಂಡಳಮೆಯ್ದೆ ತೆತ್ತಿಸುವ ಚೈತ್ಯಂಗಳ್ಗೆ ದಾನಕ್ಕೆ ಪಾತ್ರ ಸಮೂಹಂ ದಿಟಮೆಯ್ದದೆಯ್ದದು ದಿಶಾಚಕ್ರಂ (ಅನಂಪು. ೯-೨) ; ಉರಿಯ ಜಾಳಿಗೆ ತೆತ್ತಿಸಿತು ಹರಿದಶ್ವಶತವನು (ಕುಮ್ಯಾದ್ರೋ. ೧೯-೩೨). ೧೦. ಬಳಿ ; ಹಚ್ಚು ; ಲೇಪಿಸು : ಚಿತ್ತಜಂಗೆತ್ತಿದ ತಳಿರ್ಗಳ ಸತ್ತಿಗೆಯೊ ದಿವಿಜೇಭಕುಂಭದಿ ತೆತ್ತಿಸಿದ ಸಿಂದೂರವೋ . . . ಎನಲೆಸೆಯಿತ್ತು ರಾಗದಲಿಂದುಮಂಡಲ (ಜೀವಂಚ. ೦೭-೨೩). [ತೆತ್ತು$_1$ + – ಇಸು$_3$]

ತೆತ್ತಿಸು$_2$ (ಕ್ರಿ). ಕೊಡುವಂತೆ ಮಾಡು ; ಕೊಡಿಸು ; ತೆರಿಸು : ದಾಪಿತಃ – ಸಾಧಿತಃ – ೨ ತೆರಿಗೆ ತೆತ್ತಿಸಲ್ಪಟ್ಟವನು, ಕೊಡಿಸಲ್ಪಟ್ಟವನು, ಕೊಡುವ ಹಾಗೆ ಮಾಡಲ್ಪಟ್ಟವನು (ಸಿದ್ಧಾಂತಿ. ೨೮೮). [ತೆತ್ತು$_2$ + – ಇಸು$_3$]

ತೆತ್ತೀಸ, ತೆತ್ತೀಸು (ನಾ). ಒಂದು ಸಂಖ್ಯಾವಾಚಕ ; ಮೂವತ್ಮೂರು : ಹರಿಬ್ರಹ್ಮಾದಿಗಳು ಮೊದಲಾದ ತೆತ್ತೀಸಾದಿ ದೇವರ್ಕಳಂ ಉಘೆ ಉಘೆ ಎನುತಿರಲು (ಬಸವ. ೮೪೪) ; ಖಳಪಳದ ಕಟ್ಟುಲುಹು ಮೂರ್ಛಾಕುಳವನಿತ್ತವು ತರುಣ ಕೇಳ್ ತೆತ್ತೀಸ ದೇವರಿಗೆ (ತೊರರಾ. ೬-೫೦-೬) ; ತೆತ್ತೀಸವೆಂದೆನಿಪ ಸ್ಥಲವಿವು (ಸಿದ್ಧೇಪು. ೨೪-೩೩). ತೆತ್ತೀಸು.

ತೆತ್ತೀಸಕೋಟಿ, ತೆತ್ತೀಸುಕೋಟಿ = ಮೂವತ್ಮೂರು ಕೋಟಿ : ಮಱೆಯಲಾಗದು ತೆತ್ತೀಸಕೋಟಿ ದೇವರ್ಕಳ (ಬಸವ. ೫೫೦) ; ದಕ್ಷನೊಬ್ಬ ಯಾಗವನಿಕ್ಕಲು ತೆತ್ತೀಸಕೋಟಿ ದೇವರ್ಕಳೆಲ್ಲಾ ತೊತ್ತಳದುಳಿಸಿಕೊಂಡು ನುಚ್ಚುನುಱಿಯಾಗಿ ಹೋದರು (ಸರ್ವವ. ೯೦-೫೦೨) ; ನರ್ತಿಪ ನವಿಲ ನಾಟ್ಯಕೆ ಮೆಚ್ಚಿ ಪುರುಹೂತ ತೆತ್ತೀಸಕೋಟಿ ನಿರ್ಜರರು ಮುತ್ತಿನ ತ್ಯಾಗವ ಕೊಟ್ಟಂತೆಯಾಲಿಕಲ್ ಬಿತ್ತಿಕ್ಕಿ ಬಿರ್ದುದುರ್ವಿಯಲಿ (ಮೋಹತ. ೪-೩೮) ; ಉರಿನಾಲಿಗೆಯ ಗರವೊಟ್ಟಗೆಯ ತೊಳಲಿಕೆ ತೆರಳಿಚಿತು ತೆತ್ತೀಸುಕೋಟಿಗಳ (ಕುಮ್ಯಾಅ. ೨೦-೫೬). [<ಪ್ರಾ. ತೇತೀಸ, ತೇತ್ತೀಸ./ಹಿಂ. ತೈಂತಿಸ್, ತೈಂತೀಸ್, ತೇತೀಸ್ ; ಮರಾ. ತೇತೀಸ್. / ಸಂ. ತ್ರಯಸ್ತ್ರಿಂಶತ್]

ತೆತ್ತೀಸು 'ತೆತ್ತೀಸ' ನೋ.

ತೆತ್ತು$_1$ (ಕ್ರಿ). ೧. ಸಂಬಂಧಿಸಿರು ; ಹೊಂದಿಕೊಂಡಿರು : ಚಿತ್ತಜಂ ಕತ್ತಿಯಂ ಕಿತ್ತುಕೊಂಡೆತ್ತಿ ಹೊಯ್ಯುತ್ತೆ ಬರಲುತ್ತುಂಗವೃತ್ತಕುಚೆಯರ್ತಮಗೆ ತೆತ್ತಿರ್ದ ತೆತ್ತಿಗರನೊತ್ತಿಗರ ಸುತ್ತಿರ್ದರಾಗಳನುರಾಗದಿಂದೆ (ಚೈಮಿಭಾ. ೨೬-೬). 'ತೆತ್ತಿಗ' ಪರಾ. ೨. ಹೆಣೆದುಕೊಂಡಿರು ; ತೊಡಕಿಕೊಂಡಿರು : (ಕಿ). ೩. ತಿರಿಚು ; ಸುತ್ತು. 'ತೆತ್ತಗಣ್ಣು' ಪರಾ. ೪. ಒಳಸೇರು ; ಅಡಗು : ಕಿರಣ ತೆತ್ತಿದವಭ್ರದಲಿ ತಾರಕೆಯ ತೇರುಗಳು ಹರಿವ ಮಂಜಿನ ನದಿಯ ಹೂಳ್ದವು (ಕುಮ್ಯಾದ್ರೋ. ೪-೦೨). ೫. ಕೇವಣಿಸು; ಕುಂದಣಿಸು; ವೆಂಟ್ಟು ; ಕೂಡಿಸು : ಮುತ್ತಿನ ಸೇಸೆಯೊಳೆಸೆವ ರತ್ನಂಗಳ ತೆತ್ತಿರ್ದ ಹಸೆಯ ವಿಷ್ಟರದಿ ಹತ್ತಿದ ದಂಪತಿಗಳ ವಿಗ್ರಹಂಗಳು ತೆತ್ತಿಸಿದಂತೆ ಶೋಭಿಸಿತು (ಮೋಹತ. ೧೩-೭೨). [ದೇ॥. ತಮಿ. ತೆತ್ತು. ತೆಱ್ಱು]

ತೆತ್ತು$_2$ (ಕ್ರಿ). ತೆರು ; ಕೊಡು : ಶಚಿಪತಿಯು . . . ಕೃತ್ತಿವಾಸನ ತೋತ್ತರವ ಮಾಡುತ್ತ ಮಾನವ ತೆತ್ತಿ ಮಸ್ತಕವನ್ನು ಪಾದಕೆ ಸತತ ಮಣಿಯುವನು (ಪಾರ್ವಪ. ೨೦-೮೧) ; ಕೈತುಂಬ ವರದಕ್ಷಿಣೆ ತೆತ್ತಬೇಕು (ಸುಂದರಿ. ೦೦೩) ; ಹಲ ಜನುಮ ಕಳೆದರೂ ನೀ ತೆತ್ತಲಾರೆ ಬರಿ ಅಂಚೆ ವೆಚ್ಚ (ಉಯ್ಯಾಲೆ. ೪೦-೪) ; ಆತ ವಿಧಿಸಿದ ದಂಡವನ್ನೂ ತೆತ್ತಲು ಸಿದ್ಧರಿದ್ದರು (ಸಮಜೀ. ೫೧೭). 'ಕಿತ್ತು$_1$' ಪರಾ. [<ತೆಱು$_1$]

ತೆತ್ತು$_3$ 'ತೆಱು$_1$' ಪರಾ.

ತೆತ್ತು$_4$ (ನಾ). ಮೋಸ ; ವಂಚನೆ. 'ತೆತ್ತುತನ' ಪರಾ.

[ದೇ.॥ ತಮಿ. ತೆತ್ತು]

ತೆತ್ತುತನ (ನಾ). ಮೋಸಮಾಡುವಿಕೆ; ವಂಚನೆ ಮಾಡುವಿಕೆ: ತೆತ್ತುತನಕ್ಕೆ ತೆತ್ತುತನಮಂ ಪುಸಿನಲ್ಮೆಗೆ ಮೋದಿ ನಲ್ಮೆಯಂ ಜತ್ತುಕಱಿಂಗೆ ಜತ್ತುಕಱ ನಾಸೆಗಮಾಸೆಯನಾದಲಂಪಿನಿಂ ಪತ್ತಿದ ಮೆಯ್ಗೆ ಪತ್ತುಗೆಯನುಕ್ಕೆವ ಕುಕ್ಕೆವಗೆಯ್ತುಮಂ ಪೊಣರ್ಚುತ್ತುಮುಪಾಯದಿಂ ಕಳಿಯೆ ಕೂಡುವನಂ ವಿಭು ಕಂಡು ಮೆಚ್ಚಿದಂ (ಕಾಷ್ಠಸಾ. ೯೮೫ ಶೂದ್ರಳ).

[ತೆತ್ತು$_4$ + – ತನ]

ತೆನಂದಾಕ 'ತೆನ್ನಂದಾರ್ಕ' ನೋ.

ತೆನಂದಾಕಕೆಱೆ, ತೇನಂದಾಕಗೆಱೆ (ನಾ). ಒಂದು ಕೆರೆಯ ಹೆಸರು : ತೆನನ್ದಾಕಕೆಱೆ ಎ ಪೆಂಮ್ಮುಗಗೆಱೆ ಎ ವಡಗಾಯ್ ಸನ್ದು ಕಿಱುಮಾಮಿ

ಪಂಳ್ಳಮೆ (ಎಳ. IV, ಎಡತೊ. ೬೦-೭೪ ; ಸು. 890): ತೇನಂದಾಕಗೆಱ³ : ತೇನನ್ದಾಕಗೆಱ³ ದಕ್ಷಿಣಾನ್ತ ಭಾಗತತಃ (ಮೃಅರಿ. ೦೯೪೨,೭೫-೦೦೭ ; 816).
[ತೆನಂದಾಕ (<ತೆನ್ನಂದಾರ್ಕ) + ಕೆಱ³]

ತೆನುಂಗು 'ತೆಲುಂಗು' ನೋ.

ತೆನುಗು 'ತೆಲುಂಗು' ನೋ.

ತೆನೆ₁ (ನಾ). ೧. ಧಾನ್ಯದ ಹೊಡೆ ; ಕಾಳಿನ ಕದಿರು : "ಕಣಿಶಂ, ಧಾನ್ಯ ಶೀರ್ಷಕಂ – ಈ ೨ ತೆನೆ"•(ಹಲಾಯು. ೯೫-೪೨೫) : "ತೆನೆಯೊಳು ಕದಿರು" (ಶಬ್ದಮಂ. ೧೦೬) ; ಪ್ರಬಳ ಫಳಭಾರದಿಂ ಕೂಡಿ ಬಳ್ಕಿ ತೆನೆ ನೆಲನನಲೆಯೆ ಪವನಹತಿಯಿಂದೆ (ಸುಕುಮಾ. ೯-೫೨) ; ಪಿಂಗಳಮಾದ ನೆಲ್ಲ ತೆನೆಯಂ ನಸುಗರ್ಚಿದ ರಕ್ತಚಂಚು ಪಕ್ಷಂಗಳ ಶಾಡ್ವಲಚ್ಚವಿ ಮನಂಗೊಳೆ ಪಾಱುವ ಕೀರಮಾಲೆ (ಜಗವಿ. ೪-೬೬) ; ಪೊಸಕಮ್ಮಂಗಳವೆಯ ತೆನೆಯ ತುದಿಯ ತನಿಗಂಪಂ ಭುಂಜಿಸಲ್ (ಜಯಕಾ. ೦-೩೯); ದನಗಳ ಜೋಳದ ತೆನೆಯನ್ನು ಬಿಡಿಸಿದರೆ ಹೇಗೆ ? (ಮಹಾತ್ಮಾ. ೬). ೨. ಕೋಟೆಯ ಗೋಡೆಯ ಮೇಲ್ಭಾಗದ ರಚನೆ ; ಕೋಟೆಯ ಪ್ರಾಕಾರದ ತುದಿಯ ಗಾಲಿಯಾಕಾರದ ರಚನೆ: "ಕೋಟೆಯ ತೆನೆಯಲ್ಲಿಯುಂ ಕಪಿಶೀರ್ಷಮೆಂಬುದು" (ಹಲಾಯು. ೦೩೧-೨) ; ನಿರಾಳದಲ್ಲಿ ನೀರಕೋಟೆಯನಿಕ್ಕಿ ಬಯಲ ಆಗಳ ತೆಗೆದು ವಾಯುವ ತೆನೆ ಹೂಡಿ (ಅಜಿಮಾ. ೧೩೬-೫೦೯) ; ರಥಾಂಗಮೆ ಗೆತ್ತರುಣಂ ತೆನೆಯನೆತ್ತಿ ನಗಿಸುವನಿನನಂ (ಅನಂಪು. ೦-೦೦೦) ; ತುಱುಗಿತ ಮರರು ಖಳನ ದುರ್ಗದ ತುದಿಯ ತೆನೆಗಳಲಿ (ಕುವ್ಯಾಅ. ೦೨-೩೩) ; ಕೆಡಹಿದರು ಕೋಟೆಗಳ ತೆನೆಗಳನೊಡೆಬಡಿದರಟ್ಟಳೆಗಳನು (ತೊರೆರಾ. ೬-೦೭-೬) ; ಕೋಟೆಯ ನೂತನ ತೆನೆಗಳೊಪ್ಪಿದುವು (ಕಂಸವಿ. ೨-೬೦). 'ಕೋಟೆದೆನೆ' ಪರಾ. [ದೇ. ೩ ತಮಿ. ತಿನೈ ; ಮಲ. ತಿನ]

ತೆನೆ₂ 'ತನೆ' ನೋ.

ತೆನೆಂದಕ 'ತೆನ್ನಂದಾರ್ಕ ನೋ.

ತೆನೆಂಧಕ 'ತೆನ್ನಂದಾರ್ಕ' ನೋ.

ತೆನೆಗಟ್ಟು (ಕ್ರಿ). ತೆನೆ ಬಿಡು ; ಕಾಳಿನ ಹೊಡೆ ಕಟ್ಟು ; ಕಾಳಾಗು : ಅದೆ ಕಾಣ್ ಅದೊ, ಈ ನಾಡಿನ ನಡೆಜಾಡಿನ ಹಿರಿಜಾಣಿನ ತೆನೆಗಟ್ಟಿದ ಬೆಳಸು (ದ್ರಾಕ್ಷಿದಾ. ೨-೨೦). [ತೆನೆ₁ + ಕಟ್ಟು₁]

ತೆನೆಗರ್ಚು (ಕ್ರಿ). ಧಾನ್ಯದ ಗೊಂಚಲನ್ನು ಕಚ್ಚು,–ಕಡಿ : ತಮ್ಮ ಕೆಯ್ಪಱಿಗೆ ಬೆರ್ಚಿ ಶುಕಂ ತೆನೆಗರ್ಚಿ ಬೇಗದಿಂ ಪಾಱ³ . . . ಪಾಮರಿಯ ರೀಕ್ಷಿಪರಾರ್ದು ನಭೋವಿಭಾಗಮಂ (ಧರ್ಮನಾ. ೨-೨೮).
[ತೆನೆ₁ + ಕರ್ಚು₁]

ತೆನೆಗಾಯಿ (ನಾ). ವರ್ಷದ ಮೊದಲ ಫಲ : ಗೌರೀ ಹಬ್ಬಕ್ಕೆ ಸರಿಯಾಗಿ ತೆನೆಗಾಯಿ (ರೂಢಿ). [ತೆನೆ₂ (<ತನೆ) + ಕಾಯಿ₄ (< ಕಾಯ್₄)]

ತೆನೆಗೊನೆ (ನಾ). ಕೋಟೆಯ ಬುರುಜಿನ ತುದಿ : ತಾರಗೆಗಳ್ ತೆನೆಗೊನೆಗಳೊಳೋರಂದದೆ ಬೆಳಪ ಸೊಡರ್ಗಳಂತಿರೆ (ಹಂದ್ರಪು. ೦-೦೦೯) ; ಹೊಂಗೋಂಟೆದೆನೆಗೊನೆಗಳಿಂದೇಳ್ವ ದೂಳಲ್ಲಿಗಲ್ಲಿಗೆ ಸ್ಥೂಲದಂಡಾಕೃತಿಯ ನಾಂತವೋಲ್ . . . ಡೆಂಕಣಿಯ ಕೈಗಳಾಲಿಗಚ್ಚರಿಯಾಗಿ ತೋಱುತಿವೆ (ಶೃಮಿಭಾ. ೩-೨೦). [ತೆನೆ₁ + ಕೊನೆ₂]

ತೆನೆಗೊಳ್ (ಕ್ರಿ). ೧. = ತೆನೆಗಟ್ಟು. 'ತೆನೆಗೊಳಿಸು' ಪರಾ. ೨. ಕೋಟೆಯ ತುದಿಗೆ ತಾಗು : ಮುತ್ತಿನೋಳಿ ತೆನೆಗೊಂಡು ಪಱಿದ ಮುಗಿಲಿಂ ಸುರಿಗುಂ (ಮಲ್ಲಿಪು. ೨-೫೩). [ತೆನೆ₁ + ಕೊಳ್₁]

ತೆನೆಗೊಳಿಸು (ಕ್ರಿ). ಹೊಡೆ ಮೂಡುವಂತೆ ಮಾಡು ; ತೆನೆಯಾಗುವಂತೆ ಮಾಡು : ಬಿತ್ತಿ ಬೆಳೆಯಿಸಿ ಪರಾಂಬರಿಸುವುದು ಒಕ್ಕಲಿಗನಾದರೆ, ಕೈಯನ್ನು ತೆನೆಗೊಳಿಸಿ ಮಾಗಿಸುವುದು ಕಾಲದ ಕೈವಾಡ (ವೀರಬಂ. ೪೮).
[ತೆನೆಗೊಳ್ + – ಇಸು₃]

ತೆನೆತೀವು (ಕ್ರಿ). ಬಸಿರು ತುಂಬು : ಅಲ್ಲಿಯೆ ಪೋಂತಪ್ಪುದುಮದು ಮೆಲ್ಲನೆ ತೆನೆತೀವಿ ಸುಟಿಯೆ (ಯಶೋಚ. ೩-೫೫).
[ತೆನೆ₂ (< ತನೆ) + ತೀವು₁]

ತೆನೆತುಂಬು₁ (ಕ್ರಿ). = ತೆನೆಗಟ್ಟು : ಕನ್ನಡ ನುಡಿ ಪಯಿರ್ ಮುನ್ನಡೆ ತೆನೆ ತುಂಬಿ ಪೊನ್ನಡಕಿಲ್ಗಂ ಪೊನ್ನಕ್ಕೆ (ಹೊಂಗಳು. ೪೫ ಹಾರೈಳೆ).
[ತೆನೆ₁ + ತುಂಬು₁]

ತೆನೆತುಂಬು₂ 'ತನೆತುಂಬು' ನೋ.

ತೆನೆದರ್ಭೆ (ನಾ). ತೆನೆ ಬಿಡುವ ಒಂದು ಬಗೆಯ ದರ್ಭೆ : "ಚಾಮರ ಪುಷ್ಪಃ – ತೆನೆದರ್ಭೆ" (ಓಷಧಿ. ೫೬). [ತೆನೆ₁ + ದರ್ಭೆ]

ತೆನೆದುಱುಗಲ್ (ನಾ) ಕಾಳಿನ ಗೊಂಚಲಿನ ಗುಂಪು; ಕಣಿಶಗಳ ಸಮೂಹ: ಅನಿಳಾಹತಿಯಿಂ ಕಟಮೆಯ ತೆನೆದುಱುಗಲೊಳೊಱ³ತುಪರಿವ ಪಾಲಂ ಕಳ ಹಂಸ ನಿಕಾಯಮಿಾಂಟಿ ಪಾಳಿಯನನವರತಂ ಬಿಡದು ಪಾಳಿಯಂ ಪಾಳಿಪ ವೋಲ್ (ಶಾಂತೀಶ್ವ. ೦-೯೪). [ತೆನೆ₁ + ತುಱುಗಲ್ (< ತುಱುಂಗಲ್)]

ತೆನೆನಿಲ್ಲು 'ತನೆನಿಲ್' ನೋ.

ತೆನೆಬಲಿ 'ತನೆಬಲಿ' ನೋ.

ತೆನೆಬಿಡು (ಕ್ರಿ). ಕಾಳಿನ ಗೊಂಚಲನ್ನು ಬಿಡು ; ಹೊಡೆಯಾಗು : ಹೊಲದಲ್ಲಿ ಜೋಳ ತೆನೆಬಿಟ್ಟಿದೆ (ರೂಢಿ). [ತೆನೆ₁ + ಬಿಡು₁]

ತೆನೆಬಿದಿರು (ನಾ). ಪೊದರಾಗಿ ಬೆಳೆಯುವ ಒಂದು ಬಗೆಯ ಬಿದಿರು : (ಮೃಜಿಗಿ. ೫೯-೦೦೮೦) [ತೆನೆ₁ + ಬಿದಿರು₂ (< ಬಿದಿರ್₂)]

ತೆನೆಮಗುಟ್ (ಕ್ರಿ). ಗರ್ಭಸ್ರಾವವಾಗು; ಮೈಯಿಳಿ: "ತೆನೆಮಗುಟ್ಟುದು ವೇಹತ್ತು" (ವಸ್ತುಕೋ. ೯೦-೮). [ತೆನೆ₂ (< ತನೆ) + ಮಗುಟ್]

ತೆನೆಯಾವು 'ತನೆಯಾವು' ನೋ.

ತೆನೆವಳಿ (ನಾ). ಕೋಟೆಯ ತುದಿ ; ದುರ್ಗದ ಉನ್ನತಭಾಗ : ಕಲುವಳೆಯ ಕೋಲಾಹಲಕ್ಕಿವರಳುಕದಿಱಿದರು ಸುರಗಿಯಲಿ ತೆನೆವಳಿಯ ಹಿಡಿದರು ಹೊಯ್ದು ಕೇಶಾಕೇಶಿಯುದ್ಧದಲಿ (ಕುವ್ಯಾಸ. ೩-೫೦).
[ತೆನೆ₁ + ಬಳಿ₃]

ತೆನೆವಾಲ್, ತೆನೆಹಾಲು (ನಾ). ಹೊಡೆಯಲ್ಲಿ ಕಾಳು ಗಟ್ಟಿಯಾಗುವುದಕ್ಕೆ ಮುಂಚಿನ ಹಾಲು ; ಎಳೆಯ ತೆನೆಯೊಳಗಿನ ರಸ : ಫಳರಸದಿ ಬೆಳವ ನವಶಾಳೀವನಂಗಳಿಂ ತೆನೆ[ಪಾಠಾಂ. ತನಿ]ವಾಲನುಂಡು ಬಳೆವರಗಿಳಿ ಗಳುರ್ಕಿನಿಂ (ತಿರುರ. ದೇ. ೨-೦೦) ; ತೆನೆವಾಲನುಂಡು ಬಳೆದುವು ಗಿಳಿಗಳು (ನಂಬಿರ. ೯-೦೭). **ತೆನೆಹಾಲು** : ತೆನೆಹಾಲು ದಕ್ಕಲಿ ಕಕ್ಕಿಸಬೇಡದನು ನಿನ್ನ ನಂಜಿನ ಸೆರಗ ಬೀಸಾಡಿ (ಗರಿ. ೦೦೬-೦೬) ; ಜನಕೆ ನಿನ್ನೀ ಹಾಡು ಕೆನೆಹಾಲು ಇದ್ದಂತೆ ತೆನೆಹಾಲು ನಿನಗೆ ಒಕ್ಕಲಿಗ ಇಂಪಾಗಿ ಮನಸೋತು ಮಲಗೆ ಶಿವಲೋಕ (ಕನ್ನಜಾ. ೨೦೭). [ತೆನೆ₁ + ಪಾಲ್₁]

ತೆನೆವೆರಸು (ಕ್ರಿ). ತೆನೆಗಳಿಂದ ಕೂಡಿರು: ತೆನೆವೆರಸಿದಿಕ್ಷುಗಳ ಹೊರೆಗಳಗೊನೆ ವೆರಸಿ ಶೋಭಿಸುವ ಕದಳಿಯ (ನಿಭಾಗ. ೪-೮-೫೪). [ತೆನೆ₁ + ಬೆರಸು₁]

ತೆನೆವೊಱು (ಕ್ರಿ). ಕಾಳಿನ ಗೊಂಚಲನ್ನು ಹೊತ್ತುಕೊಳ್ಳು ; ಹೊಡೆಯಾಗು: ತಿಳಿದ ತಡಿವಿಡಿದ ಮಡಿಗಳ ಜಳದೊಳ್ ರಂಜಿಸುವ ಧಾನ್ಯ ಮಂಜರಿಯ ನೆಟಲ್ ಪೊಳೆಯೆ ತೆನೆವೊತ್ತು[ಪಾಠಾಂ. ವೋದು]ವಿವು ಬೇರ್ಗಳಿನೆನಿಪುದು ಬೆಳೆದ ಕಟಮೆ ಭೂಸಾರತೆಯಿಂ (ಹಂದ್ರಪು. ೦-೯೨) ; (ಕಾವ್ಯಸಾ. ೦೦೦ ನೋ). [ತೆನೆ₁ + ಪೊಱು]

ತೆನೆವೋಗು (ಕ್ರಿ). ೧.= ತೆನೆಬಿಡು: ತೃಣಮುಂ ತೆನೆವೋದ ಬಱಿಕ್ಕೊಣಗುವುದು (ಅನಂಪು. ೩-೭೦). ೨. (ಕೋಟೆಯ) ತೆನೆಯಾಕಾರವಾಗು. ೧, ೨: ವಸುಧೆಯ ಮಿಸುನಿ ಬೆಳೆದು ತೆನೆವೋದುದೆಂಬೆಸಕವನೀಕ್ಷಿಸುವರಿಗೆ ಪೊಸಯಿಸುತಾ ಪುರವರದ ಪೊಂಗೋಂಟೆ ಕಣ್ಗೆಸೆದುದು (ಕುರಾಸಾಂ. ೩-೬೩). [ತೆನೆ₁ + ಪೋಗು₁]

ತೆನೆಹಾಲು 'ತೆನೆವಾಲ್' ನೋ.

ತೆನೆಹುಲ್ಲು (ನಾ). ೧. ತೆನೆಬಿಡುವ ಹುಲ್ಲು: ಕೈತೋಟದಲ್ಲೆಲ್ಲಾ ತೆನೆಹುಲ್ಲು ಬೆಳೆದಿದೆ (ರೂಢಿ). ೨. ತೆನೆಸಹಿತವಾದ ಹುಲ್ಲು.

[ತೆನೆ$_1$ + ಹುಲ್ಲು (< ಪುಲ್)]

ತೆನ್ನಂದಾರ್ಕ, ತೆನಂದಾಕ, ತೆನೆಂದಕ, ತೆನೆಂಧಕ (ನಾ). ಒಂದು ವಂಶದ ಹೆಸರು ಮತ್ತು ಆ ವಂಶಕ್ಕೆ ಸೇರಿದವನು (?): ವಾಣಿಗ ತೋಟ್ಟಮ್ ತೆನ್ಕಣ್ಡಮುಂ ವಡಕಣ್ಡಮುಂ ವಿನೀತೇಶ್ವರಕ್ಕಮ್ ಪೊಯ್ದರ್ ಮಾನ್ದ ತೆಂನನ್ದಾರ್ಕರುಂ ಮಾರಾಟ್ಟ ತೆಂನನ್ದಾರ್ಕರುಂ ಅವರ ಕುಂಬು ಪೊಯ್ದಾರ್ (ಎಕ. IV, ಜಾಮರಾ. ೬೩-೮; ಸು. 750). **ತೆನಂದಾಕ**: ಪೆರ್ವ್ವಯಲ ಕೆಟರುಂ ತೆನನ್ದಾಕರುಂ ಕೊಳನೆಲ್ಲೂರ ಸಾಲತ್ತರುಂ ವಾರದರುಂ ಎನೆವ್ವರುಂ ನರಸಾಕ್ಷಿ (ಎಕ. IV, ಎಡತೊ. ೬೦-೭೨; ಸು. 890); ತೆನಂದಾಕಗಾದೆಯುಂ ಕಣ್ಣಮಂಗಲದೊಳ್ವಸದಿ ಮಾಡಿಸಿ ಆ ಬಸದಿಗೆ ಕೊಟ್ಟ ಮಣ್ಣು (ಎಕ. X, ಕೋಲಾರ. ೯೦-೮೫; 903). **ತೆನೆಂದಕ**: ನೊಕ್ಕಿ ಊರೊಳೆ ಆಗ್ಗಡಿ ಕಳೊಸ ಕೊಟ್ಟ ನೆಲ ತೆನೆನ್ದಕ ಕಾಡೆಱುಕು ಸಾಕ್ಷಿ (ಮೈಆರಿ. ೦೯೧೬, ೧೩-೮; 726). **ತೆನೆಂಧಕ**: ಕೊಟ್ಟ ನೆಲ ತೆನೆನ್ದಕ ಕಾಳೆಱುಕು ಸಾಕ್ಷಿ (ಎಕ. III, ಮೈಸೂರು. ೨೫-೨; 750). [?]

ತೆನ್ನಮರ (ನಾ). ೧. ತೆಂಗಿನ ಮರ. ೨. ತೆಂಗಿನ ಮರದ ಮೇಲೆ ಹಾಕುವ ಒಂದು ಬಗೆಯ ತೆರಿಗೆ: ತೆನ್ನಮರಂ (ಎಇ. XVIII, ೧೮೨-೪೮; 1434). [← ತಮಿ. ತೆನ್ನಮರ]

ತೆನ್ನೆಲೆಹುಳಿಗ (ನಾ). ಒಂದು ಬಗೆಯ ಮೂಲಿಕೆ; ಅಗಳುಶುಂಠಿ: "ಅರಣ್ಯವಾಸಿನಿ – ತೆನ್ನೆಲೆಹುಳಿಗ" (ಓಷಧಿ. ೯); "ವಲ್ಲೀಕಾ–ತೆನ್ನೆಲೆಹುಳಿಗ, ಹಿಡಿಹಿಡಿಕೆ, ಶ್ರೀವಲ್ಲಿ, ಅಗಳುಶುಂಠಿ" (ಓಷಧಿ. ೦೪೫). 'ತನ್ನೆಲೆಹುಳಿಗ' ಪರಾ. [?]

ತೆನ್ನೊಟ್ಟೆ (ನಾ). ದಕ್ಷಿಣಕ್ಕಿರುವ ಬೇಲಿ: ದಕ್ಷಿಣಸ್ಯಾನ್ದಿಸಿ(ಶಿ)ಕ (?) ಱು ಪೊಱಿಕ್ಕಾಲ್ ತೆನ್ನೆ(ನ್ನೊ)ಟ್ಟೆ . . . ಎಕಿಱುವ ದಿಕ್ಕಾಲ್ ತೆನ್ನೊಟ್ಟೆ ಎಕುಟ್ಟಕ್ಕಾಲ್ ತೆನ್ನೊಟ್ಟೆ (ಇಆ. XVIII, ೩೬೭-೨೩; 8ನೆಯ ಶತ).

[ತೆಂ + ಒಟ್ಟೆ (<ಒಟ್ಟೆ)]

ತೆಪರ (ನಾ). ಬುದ್ಧಿಯಿಲ್ಲದವನು; ದಡ್ಡ: ಸೈಕೋಲ್ ಕೊಟ್ಟು ಬುಡೋ ವಷ್ಟು ತೆಪರಾ ಅಂತ ತಿಳಕೊಂಡಿಯೇನೋ? (ಇಚಿಮೋ. ೨೨). [?]

ತೆಪ್ಪ, ತೆಪ್ಪೆ (ನಾ). ೧. ನದಿ ಅಥವಾ ಹೊಳೆಯನ್ನು ದಾಟಲು ಬಳಸುವ ಸಾಧನ; ಹರಿಗೋಲು; ನಾವೆ: "ತಳ್ಪಂ, ಉಡುಪಃ, ಪ್ಲವಃ – ಈ ೩ ತೆಪ್ಪಂ" (ಪಲಾಯು. ೧೦೦-೪೯); "ಉಡುಪ ಪ್ಲವ ಕೋಲ" (ನಾಚರಾ. ೬); ಪರಿಶರ್ಣ ಪರ್ಬಳ್ಳದೊಳ್ ಪಿರಿದಪ್ಪ ತೆಪ್ಪದ ಮೇಲೆ ತೇಂಕುತ್ತುಂ (ಪಂಚತಂ. ೨೯೬-೦೮); ತೊಱೆಯೊಳ್ ಪೋಪವಂಗೆ ತೆಪ್ಪವನಿಕ್ಕಿದಂತೆ (ಧರ್ಮಾಮೃ. ೧-೦೪೮); ಬಾಲಮರಾಳಂಗಳಂ ಪದ್ಮಪತ್ರದಿನೊಪ್ಪುವ ತೆಪ್ಪದೊಳಿಟ್ಟು ದಾಂಟಿಸುತಿರ್ಪ ರಾಜಹಂಸರಾಜಿಗಳಿಂ (ಗಿರಿಕ. ೨-೭೦ ವ); ತೆರೆಯ ಮೇಲಣ ತೆಪ್ಪದಂತಿರೆ ಧರಣಿಯೊಲೆದುದು ಗಾಲಿಗಳ ಹಾವರದ ಭಾರಿಗೆ (ಕುಮ್ಮಾವಿ. ಕಿರಿಇ. ೬-೫೯); ಉರುಳುತಿರ್ದವು ರಣದೊಳಗೆ ಹೆಣನೆರಡು ಸೇನೆಯಲರುಣಜಲವುಬ್ಬರಿಸುತಿರ್ದುದು ನೆಗಹಿ ನಾಲುಕು ಬಲದ ತೆಪ್ಪಗಳ (ತೊರರಾ. ೬-೦೩-೪೦); ನದಿಯ ದಂಡೆಯಲ್ಲಿ ಒಂದು ತೆಪ್ಪವು ಕಟ್ಟಿ ಹಾಕಲ್ಪಟ್ಟಿದ್ದಿತು (ಶ್ರೀರಾಯ. ೦). ೨. ಬಿದಿರು, ಹಲಗೆಗಳಿಂದ ನಿರ್ಮಿಸಿದ ಚಪ್ಪಟೆಯಾದ ತೇಲುಸಾಧನ. 'ತೆಪ್ಪೋತ್ಸವ' ಪರಾ. **ತೆಪ್ಪೆ**: ೧. ಉದಕದಲ್ಲಿ ತೇಲಾಡುವ ತೆಪ್ಪೆಯ ವಿಧದಿಂದ ಮಹಾತ್ಮರು ಶೋಕ ಸಮುದ್ರದಲ್ಲಿ ಮುಳುಗದೆ ದಡವನ್ನು ಸೇರುವರು (ಮಡಿಕ್ಯಾ. I, ೨೦೦) [ದೇ.॥ ತಮಿ. ತೆಪ್ಪ, ತೆಪ್ಪಲ್, ತೇಪ್ಪೈ; ತುಳು. ತೆಪ್ಪ, ಚೆಪ್ಪೊ, ತೆಪ್ಪೊ; ತೆಲು. ತೆಪ್ಪ, ತೇಪ./ಅರ. ತಾಇಫಾ; ಮರಾ. ತಾಪಾ, ತಾಫಾ]

ತೆಪ್ಪಗೆ (ಅ). ೧. ಸುಮ್ಮನೆ; ನಿಶ್ಚಲವಾಗಿ; ಮೌನವಾಗಿ: ಮೊಳೆವು ದೊಮ್ಮೊಮ್ಮೆ ಚಿತ್ತದೊಳು ವಿಕಲ್ಪ ಕೂಡಳಿವುದೆಂತೆನೆ ಘಾಳಿಯಿಂದ ಜಲದಲ್ಲಿ ತೆರೆಯೇಳುವಂತೆ ಮತ್ತಾ ಘಾಳಿ ನಿಲೆ ಜಲ ತೆಪ್ಪಗಿಹಂತೆ (ಭರಚ. ೧೮-೪೯); ಆಜ್ಞೆ ಕೊಡಲಾರದೆ ತೆಪ್ಪಗೆ ನಿಂತುಕೊಂಡರು (ನಾಪೋಲೀ. ೮೦); ತೆಪ್ಪಗೆ ಕುಳಿತುಕೋ (ರಂಗಕ. ೦೦೯). ೨. ಪೆಚ್ಚಾಗಿ; ಬೆಪ್ಪಾಗಿ: ನಾನೂ ತೆಪ್ಪಗೆ ಅವನ ಮುಖವನ್ನೇ ನೋಡುತ್ತಾ ನಿಂತಿದ್ದೆ (ಅಲಹೂ. ೪೯). ೩. ಆರಾಮವಾಗಿ; ಸುಖವಾಗಿ; ಹಾಯಾಗಿ: ತೆಪ್ಪಗೆ ಮದುವೆಯಾಗಿ ಸಂಸಾರಿಯಾಗು (ವಿದ್ಯಾರಿ. ೩೬).

ತೆಪ್ಪಗಾಗು = ಸುಮ್ಮನಾಗು; ಮಾತನಾಡದಿರು; ಮೌನವಾಗಿರು: ಖೈದಿಗಳೆಲ್ಲ ಸದ್ದು ನಿಲ್ಲಿಸಿ ತೆಪ್ಪಗಾದರು (ಪುನರು. ೫೩೮); ಈ ಮಾತುಗಳನ್ನು ಕೇಳಿ ಕುಡುಕನು ತೆಪ್ಪಗಾದನು (ಹಬ್ಬಿಬ. ೨೦೦); ಇಬ್ಬರೂ ತೆಪ್ಪಗಾದರು (ಮುರುಕು. ೬). **ತೆಪ್ಪಗಿರು**=೧. ಸುಮ್ಮನೆ ಇರು; ಮೌನದಿಂದರು: ಟಪ್ಪು ತನ್ನ ಹಗೆತನವನ್ನೂ ಹಿರಿಯಾಸೆಯನ್ನೂ ತೊರೆದು ತೆಪ್ಪಗಿರಲಿಲ್ಲ (ಭಾರದ. ೪೨೫); ಅವನು ಹೆದರಿ ತೆಪ್ಪಗಿದ್ದರೆ ಅವನ ಸಹೋದ್ಯೋಗಿಗಳು ಹೇಡಿಯೆಂದು ಭಂಗಿಸಿ, ಅವನನ್ನು ಸೈನ್ಯದಿಂದ ಹೊರಹಾಕುತ್ತಿದ್ದರೆಂದೂ ವಾದಿಸಿದನು (ಪುನರು. ೩೪೪). ೨. ಹಾಯಾಗಿರು; ನೆಮ್ಮದಿಯಿಂದಿರು: ನಾನೆ ಪೋಪೆನಮ್ಮಾಜಿ ತೆಪ್ಪಗಿರಿ ನೀವೆಂದ (ಭರಚ. ೩೭-೫೫); ಕೆಲವರು ರಾಜಕಾರಣವನ್ನು ಬಿಟ್ಟು ತೆಪ್ಪಗಿರಬೇಕೆಂದು ಯೋಚಿಸುತ್ತಿದ್ದರು (ಪಂಜಪಂ. ೦೮೦). 'ಸಪ್ಪಗೆ' ಪರಾ.

ತೆಪ್ಪತೇರು (ನಾ). ತೆಪ್ಪೋತ್ಸವದ ತೇರು; ತೆಪ್ಪದ ರಥ: ಅವನ ತೆಪ್ಪ ತೇರಿನ ಮೇಲೆ . . . ನವಿಲುಹಿಂಡು ಕುಳಿತುಕೊಂಡು ಕಳಸಕ್ಕೆ ಕಪ್ಪು ತುಂಬುತ್ತವೆ (ಹಳ್ಳಿಬಾ. ೧೭). [ತೆಪ್ಪ + ತೇರು$_2$ (<ತೇರ್$_2$)]

ತೆಪ್ಪತ್ತ 'ತೆಪ್ಪಱು' ಪರಾ.

ತೆಪ್ಪತ್ತು 'ತೆಪ್ಪಱು' ಪರಾ.

ತೆಪ್ಪನೆ (ಅ). ೧. ಸುಮ್ಮನೆ; ತೆಪ್ಪಗೆ: ಎಲೆ ಮರುಳೆ! ನೀಂ ಭಯಂಬಡಬೇಡ, ತೆಪ್ಪನೆ ನಡೆ (ಮಿತ್ರಗೋ. ೨೩); ಇಬ್ಬರೂ ತೆಪ್ಪನೆ ನಡೆದು ಬರುತ್ತಿದ್ದೆವು (ಮಗಮಾಂ. ೩೯). ೨. ಒಮ್ಮೆಲೆ; ಇದ್ದಕ್ಕಿದ್ದಂತೆ; ನಿಷ್ಕಾರಣವಾಗಿ: ಮುಪ್ಪಾಗ ಬೆಣ್ಣೆಯನ್ನು ತಪ್ಪದೆ ನಾ ಹಾಕಿ ಸಾಕಿದೆ ಒಪ್ಪದಿಂದ ಗಿಳಿಯು ಈಗ ತೆಪ್ಪನೆ ಹಾರಿ ಹೋಯಿತಯ್ಯೊ (ಪುರಂದ. ೧-೦೦೨-೪). ೩. ಹಾಯಾಗಿ; ಸುಖವಾಗಿ: ತೆಪ್ಪನೆ ಬೀಣೆವಾಡದೊಳಗಾಡುವ ವಾಣಿಯ ನೂಪುರಸ್ವರಂ (ಚಿಕವಿ. ೪-೦೦೪).

ತೆಪ್ಪತೆಪ್ಪನೆ (ದ್ವಿರುಕ್ತಿ): ಅವ್ಯಯ ಪದಾಂತ ಲೋಪಕ್ಕೆ . . . ತೊಪ್ಪ ತೊಪ್ಪನೆ, ತೆಪ್ಪತೆಪ್ಪನೆ ಪುರುಳ್ (ಕಮದ. ೦೯೩ ಪ್ರಯೋ). **ತೆಪ್ಪನಾಗು** = ತೆಪ್ಪಗಾಗು; ಸುಮ್ಮನಾಗು: ಸುಮ್ಮನಿರುವುದರಲ್ಲಿ ಪುರುಷಾರ್ಥವಿದೆಯೆಂದು ಭಾವಿಸಿ ಬಸಗೋಂಡ ತೆಪ್ಪನಾಗುತ್ತಿದ್ದ (ದೀಪಹ. II, ೧೪೩). **ತೆಪ್ಪನಿರು** = ತೆಪ್ಪಗಿರು; ಸುಮ್ಮನಿರು: ಹುಟ್ಟುಗುಣಗಳ ಮನಶ್ಶಕ್ತಿ . . . ಗುಪ್ತಮನಸ್ಸಿನಲ್ಲಿ ಅಡಗಿಬಿಡುತ್ತದೆ. ಅಡಗಿದರೆ ಅಡಗಿರಲಿ, ಎಂದು ತೆಪ್ಪನಿರುವಂತಿಲ್ಲ (ಶಿಕ್ಷದ. ೬೪೯).

ತೆಪ್ಪರಿಗೆ (ನಾ). (ಕರಾ) ತೆಂಗಿನ ಗರಿಯ ಬುಡದಲ್ಲಿರುವ ಎಳೆಎಳೆಯಾದ ಹೊದಿಕೆ; ತೆಂಗಿನ ಸೀರೆ; ಸೀಬಿ: ನಾವು ಗವಿಯೊಳಗೆ ಹೋಗುವಾಗ ತೆಂಗಿನ ಗಿಡದ 'ತೆಪ್ಪರಿಗೆ'ಯ ಸೂಟಿಗಳನ್ನು ಬೆಳಕಿಗೆಂದು ಒಯ್ದಿದ್ದೆವು (ಗಂಗಾವ. ೬೫). [←ತುಳು. ತೆಪ್ಪರಿಗೆ, ಚೆಪ್ಪರಿಗೆ]

ತೆಪ್ಪರಿಸು (ಕ್ರಿ). ಚೇತರಿಸು; ಎಚ್ಚತ್ತುಕೊಳ್ಳು: ಶ್ರೀರಾಜ ಒಡೆಯ ಮಹಾಸ್ವಾಮಿಯವರು ಆ ಮಹಾಸಭೆಯ ವಿಕಾರ ವಿಲಾಸಗಳ ಉಮ್ಮಹವದನ್ನು ತಲೆಗಿಡಿಸಿ ತೆಪ್ಪರಿಸಿ ನೇರ್ಪಡಿಸಿಕೊಂಡರು (ಮಂತ್ರತ. ೧೫೫-೨೨). [ತೆಪ್ಪರು (< ತೆಪ್ಪಱು) + – ಇಸು$_3$]

ತೆಪ್ಪರು 'ತೆಪ್ಪಱು' ನೋ.

ತೆಪ್ಪಸ (ನಾ). = ತೆಪ್ಪ ೧ : ನರರ ತುರಂಗಂಗಳ . . . ಶರಹತಿಯಿನಾದ ಪಲ್ಲಟಗಡಿಗಳ್ ಪರಿವರುಣಜಲದ ತೊಱೆಯೊಳ್ ತೆರಳ್ದು ತೆಪ್ಪಸದ ತೆಱದೆ ಪರಿದವು ಧುರದೊಳ್ (ಮಹಾನೇ. ೩-೪೮). [< ತೆಪ್ಪ]

ತೆಪ್ಪಹಾಂಸೆ (ನಾ). ನೀರಿರುವ ಪ್ರದೇಶದಲ್ಲಿ, ಬೇರು ಆಳಕ್ಕಿಳಿಯದೆ ನೀರಿನ ಮೇಲೆ ತೇಲಿ ಬೆಳೆಯುವ ಒಂದು ಬಗೆಯ ಸಸ್ಯ ; ಅಂತರಗಂಗೆ : ಅಂತರಗಂಗೆ ಅಥವಾ ತೆಪ್ಪಹಾಂಸೆ (ಮುಂಬಯಿ. ೬-೨೭೫).

[ತೆಪ್ಪ + ಹಾಂಸೆ (<ಪಾವಸೆ)]

ತೆಪ್ಪಱು, ತೆಪ್ಪರು, ತೆರ್ಪಱು (ಕ್ರಿ). ತೆಪ್ಪತ್ತ (ಭೂತಕೃ). ತೆಪ್ಪತ್ತು, ತೆರ್ಪತ್ತು (ಭೂತನ್ಯೂ). ಎಚ್ಚರಗೊಳ್ಳು ; ಚೇತರಿಸಿಕೊಳ್ಳು : "ತೆಪ್ಪಱು—ಚೇತನಕರಣೇ" (ಶಮಧಾ) ; ಆಗಳ್ ತೆ[ಪ್ಪ]ತ್ತುಮೆಲ್ಲಿದನೆತ್ತಣನೆಂದು ಕರ್ಣನ ಕಳೇವರಮಂ ನೋಡಿ ನೋಡಲಾಱದೆ ಕಣ್ಗಳಂ ಮುಚ್ಚಿ (ಪಂಪಭಾ. ೧೩-೫೮ ವ) ; ಕೂಸಂ ಕಾಣದೆ ಬೆರ್ಚಿ . . . ಪೊಡರ್ಪುಗೆಟ್ಟು ಮರವಟ್ಟಂತಂತೆ ತೆಪ್ಪರ್ತು . . . ಕಾಂತೆ ಪುಯ್ಯಲ್ಬಿದಳ್ (ಬಂಹರಿ. ೮-೫); ಮೂರ್ಛೆಗೆ ಸಂದ ರಾಯಂ . . . ಶೈತ್ಯೋಪಚಾರದತ್ತಣಂ ತೆಪ್ಪತ್ತನಾಗೆ (ರಾಮಾಶ್ವ. ೧೩-೨೨). **ತೆಪ್ಪರು** : ಕರೆಕರೆಯಾಂಪಳೊರ್ವೆ ನಿಜದೈವಮನೊರ್ವೆ ಕಡಂಗಿ ಬಯ್ದು ತೆಪ್ಪರುವಳದೊರ್ವೆ ಚಿಂತೆ ತಲೆದೋರೆ ಪಲುಂಬುವಳೊರ್ವೆ (ಕಂದ್ರಪ್ಪಾ. ೬-೨೭). △ **ತೆರ್ಪಱು**: "ತೆರ್ಪತ್ತಂ—ಮೂರ್ಛಿತಿಳಿದಂ" (ಶಮದ. ಪರಿ. ೨) ; ತೆರ್ಪತ್ತು ಬಿಟ್ಟು ನಮೆಯುಷ್ತಿರ್ಪರ್ ನಾರಕರ್ (ಶಾಂತಿಪು. ೬-೯೯) ; ಎಚ್ಚಂಬರ್ದೆಯಿಂದುರ್ಚಲ್ . . . ತೆರ್ಪತ್ತಾಗಳ್ (ವೀರವಿ. ೧೨-೩೭).

ತೆಪ್ಪತ್ತುಕೊಳ್ಳು=ಚೇತರಿಸಿಕೊಳ್ಳು; ಎಚ್ಚತ್ತುಗೊಳ್ಳು : ಸ್ವಲ್ಪಕಾಲದಲ್ಲಿಯೇ ಮೊಗಲನು ತೆಪ್ಪತ್ತುಕೊಂಡು . . . ರಂಗಸ್ಥಳದಿಂದ ಹೊರಕ್ಕೆ ಹೋದನು (ಭಾರವೀ. ೧೨೩); ಅಂದಿನಿಂದ ಅವರು ಸ್ವಲ್ಪ ತೆಪ್ಪತ್ತುಕೊಂಡು ಎದ್ದು ಊಟ ಮಾಡಲೂ ಅಲ್ಲಲ್ಲಿ ತಿರುಗಲೂ ಅನುವಾದರು (ನಗೆಗ. ೭೭).

[ದೇ.॥ ತೆಲು. ತೆಪ್ಪಱು, ತೆಪ್ಪರು, ತೆಪ್ಪಿರು, ತೆಪ್ಪಿಱುಲು, ತೆಪ್ಪಿಱು]

ತೆಪ್ಪೆ 'ತೆಪ್ಪ' ನೋ.

ತೆಪ್ಪೋತ್ಸವ (ನಾ). ತೆಪ್ಪದಲ್ಲಿ ದೇವರನ್ನು ಕೂರಿಸಿ ಮಾಡುವ ಉತ್ಸವ,—ಮೆರವಣಿಗೆ: ನಮ್ಮ ದೇವಾಲಯಗಳ ಲಕ್ಷದೀಪ ತೆಪ್ಪೋತ್ಸವ, ದೀಪಾರಾಧನೆಗಳಲ್ಲಿ ಅಸಂಖ್ಯಾತ ದೀಪಗಳನ್ನು ಹಣತೆಯಲ್ಲಿ ಉರಿಸುತ್ತೇವೆ (ಬಾಲಶ್ರ. III, ೦೩೬೯). P ಈ ರೂಪ ವ್ಯಾಕರಣ ಶುದ್ಧವಲ್ಲ.

ತೆಬ್ಬಱಿಸು (ಕ್ರಿ). ೧. ಹಾರು ; ನೆಗೆ ; ಚಿಮ್ಮು ; ಪುಟನೆಗೆ : ಎತ್ತಂ ತೆಬ್ಬಱಿಸಿಯಾಡುವಟ್ಟೆಗಳುಬ್ಬರದಿಂದೊಱೆದು ಪರಿವ ರುಧಿರಸ್ರೋತಂ (ನೇಮಿಪು ೦೧-೦೮೪). 'ಟೆಪ್ಪರಿಸು' ಪರಾ. ೨. ಉತ್ಸಾಹಗೊಳ್ಳು ; ಹುರುಪನ್ನು ಪಡೆ : ಇರ್ವರುಂ ಪರಸಿ ತಡವರಿಸಿಯುಂ ತೆಬ್ಬಱಿಸಿಯುಮಟ್ಕಱಿಗೊಳಪ್ಪಿಕೊಂಡು (ಪಂಪಭಾ. ೧೩-೮ ವ) ; ಆನಂದಿತಚಿತ್ತರಾಗಿ ತಡವರಿಸಿಯುಂ ತೆಬ್ಬಱಿಸಿಯುಂ ತೆಗೆದಪ್ಪಿಯುಂ (ಗದಾಯು. ೩-೮೪ವ) : "ಚೇತರಿಸಿಕೊಳ್ಳುವಂತೆ ಮಾಡು" (ಗದಾಸಂ. ಟಿಪ್ಪಣಿ) ;ಕರವಾಳ ಘಾತದಿಂ ಪರಿದುರುಳ್ದ ತಲೆಗಳನವುಂಕಿ ಪಿಡಿದರೆಬರ್ ತೆ[ಪಾಕಾಂ. ಟಿ]ಬ್ಬಱಿಸಿ ಮಗುಟ್ಟಿಟ್ಟೆಯೊಳ್ ಬಿತ್ತರದಿಂ ಬೀರಕ್ಕೆ ಕಳಶಮಿಡುವಂತಿಟ್ಟರ್ (ಕಂದ್ರಪು. ೦೦-೭೩). [<ತೆಬ್ಬು$_1$ + – ಇಸು$_3$]

ತೆಬ್ಬು$_1$ 'ತುಬ್ಬು$_1$' ನೋ.

ತೆಬ್ಬು$_2$ 'ತಿರುವ್ವು$_3$' ನೋ.

ತೆಮಟೆ 'ತೆಟ್ಟೆ' ನೋ.

ತೆಮರ್$_1$, ತೆಮರು$_1$, ತೆಮಱು, ತೆವರು$_1$ (ಕ್ರಿ). ೧. ಅಟ್ಟು; ಓಡಿಸು; ನಿವಾರಿಸು : ತಿಮಿರಭ್ರಮರವ್ರಜಮಾಕ್ರಮಿಸಿರೆ ಭಗಣಪ್ರಸೂನಕುಲಕಿಂದ್ರ ದಿಶಾರಮಣಿ ತೆಮರಲ್ಕೆ ಚಂಪಕಸುಮಕಂತುಕಮಿಟ್ಟಳಿನಿಕುಮಾ ವಿಧುಬಿಂಬಾ (ರಾಜಶೇ. ೧೧-೪೬) ; ಪರಿತಂದು ತಿಮಿರ ಮಧುಪೋತ್ಕರಮುಡುಸುಮಚಯಕೆ ಬಳಸಿ[ಸೆ] ತೆಮರಲ್ ಭರದಿಂ ಹರಿದಿಗ್ವಧುವಿಟ್ಟತಿಭಾಸುರ ಚಂಪಕದಿಂಡೆಯೆನೆ ನಿಶಾಕರನೆಸೆಗುಂ (ವಿಷ್ಣುಪು. ೫-೩-೧೧೦) ; ನೋಡಿದನ ಪಿಳಾಳಮಂ ತೆಮರ್ವ ಕಣ್ಗಳಿಂ (ಶಬಕಂ. ೫-೪೦) ; ಐದು ಕೋಶಗಳ ಹೊಕ್ಕೈದು ಯೋಗಗಳ ಮಿಕ್ಕೈದು ಲಕ್ಷಣವ ತೆಮರ್ದೈದು ವಿಷಯಗಳ ನೆಮರ್ದು (ಕೈಕವ. ೧-೨೦-೩). ೨. ಹೆದರು ; ಬೆದರು ; ಹಿಮ್ಮೆಟ್ಟು : ಸೆಡೆದನೆಂದುಂ, ನಡುಕಂಗೊಂಡನೆಂದುಂ . . . ತೆಮರ್ತನೆಂದುಂ – ಈ ೮ ಭಯಂಗೊಂಡವಂ (ಕ ಶ ಸಾ. ೧೨-೨೨೫) ; ಜನ್ಮಾರ್ಜಿತಾಘಂಗಳುಂ ತೆಮರ್ಗುಂ (ಕಮಸೂ. ೩-೩೯೭). ೩. ಹೀಯಾಳಿಸು ; ತಿರಸ್ಕರಿಸು : ಎಮೆದುಱುಗಲ್ಕವಲ್ತು ಕುಡಿಗೊಂಡವೊಲಾಗಿರೆ ಸೋಗೆ ಸೋಗೆಯುಂ ತೆಮರ್ವವೊಲೊಪ್ಪೆ ಸೋರ್ಮುಡಿ . . . ಕಂಗೆಸೆದುದಗ್ಗದ ಪೂರ್ವವಿಳಾಸನೀಜನಂ (ರಾಜಶೇ. ೧೨-೫೫) **ತೆಮರು$_1$** : ೧. ವಿಭ್ರಮ ಮಟ್ಟಿದಿರ್ಪುಗುಂದಿ ಬಸಿಱಂ ಪೊಸೆದೊತ್ತಿನೊಳೊಂದಿ ನಿಂದರಂ ತೆಮರಿ ತೆರಳ್ಕೆ ಕಾರ್ಯಮಣಮಿಲ್ಲದೆ ಬಿಣ್ಪಟ್ಟೆದೊರ್ವಳೊಪ್ಪಿದಳ್ (ರಸರ. ಪರಿ. ೦೦೯). △ **ತೆಮಱು** : ೧. ನಡೆದುಚ್ಚಂಗಿಗೆ ಬಂದ ರಾಯದಳವಂ ಕಯಿಕೊಳ್ಳದೊಂದಂಗದಿಂ ಬಿಡದೆಚ್ಚಾಡಿ ಸರಂಗಳಿಂ ತೆಮಱಿಯಂತಾ ಸೇನೆ ಪಿಂಗಲ್ಕೆ ತಾಂ ಪಡೆದಂ ವೀರದ ಪೆರ್ಮ್ಮೆಯಂ (ಎಕ. V, ಅರಸೀ.೦೦೮-೨೦ ; 1255). **ತೆವರು$_1$** : ೧. ತುಂಬಿ ತುಂಬಿಯನಟ್ಟುವಂತಳಕವಳಕವರಲಂಬಂಬ ತೆವ[ಪಾಕಾಂ. ವು]ರುವಂತೆ . . . ಚಿಟ್ಟುಮುರಿಯಾಡುತಿರ್ದರು ಸತಿಯರು (ಹಡಕಾ. ೪-೦೦) : ಮಕ್ಕಳನು ತಱಿದಿವರ ತೆವರಿಯೆ ರಾಜ್ಯಮಾಡುತಲಿ (ಕುವ್ವಾಆ. ಓರಿಇ. ೨೬-೦೦೫) ; ಭವಾಂತರದೋಷತಮವ ತೆವರುವ ನೇಸಱಿಂದೆನಿಪುದು (ಸೌಂದಪು. ೬-೪೫) ; ಗಿಳಿಗಳಂ ತೆವರುವ ಪಾಮರ ಸ್ತ್ರೀಯರ್ (ರೇವಾಂ. ೨೩-೯) ; ವಿಷಮನಮೃತಂ ಪುಣ್ಯಮಾ ಪಾಪವ ಸಲೆ ತೆವರುವಂತೆ ಪರವಾದಮಂ ಗೆಲ್ದು (ಚಿಪು. ೩-೨೮) : ಅಪ್ಪಳಿಸಿ ಹೊಯ್ದೆಳೆದು ಸದೆದಿಟ್ಟೊರಸಿ ಮೆಟ್ಟಿ ಸೊಪ್ಪಿಸಿ ಪೊರಳ್ದರೆದು ತೆವರಿ ಪರಿದರೆಯಟ್ಟಿ ಚಿಪ್ಪುಚೀರಾಗಿಸಿತು ಸಕಲ ಪರಿವಾರಮಂ (ಶ್ರೀಮಿಭಾ. ೦೩-೫೦). ೨. ಇವನ ಕಾಣುತ ಸಕಲಸುರಮುನಿನಿವಹವಾಚರಿಸಿತು ದೆಸೆದೆಸೆಗವಯವದ ಭೀತಿಯೊಳಗೋಡಿತು ಬ್ರಹ್ಮವಟುನಿವಹ ತೆವರುತಿರ್ದವು ಖಗ ಮೃಗಾವಳಿ (ಅಂಬಿಕಾ. ೬-೪೪). ೩. ಅರೆನಗೆಯ ಬಿಱುನಗೆಯ ನಗೆಗಳ ಹೊರಳಿಗಳ ಲಡಬಿದ್ದು ಕೈದಾವರೆಯ ಕಮಲಂಗಳಲಿ ತೆವರಿದರಿಟ್ಟು ಭೂಭುಜರ (ತೊರಗಾ ೧-೦೫-೮).

ತೆಮರ್$_2$, ತೆಮರು$_2$, ತೆವರ್, ತೆವರ, ತೆವರಿ, ತೆವರು$_2$ (ನಾ). ೧. ದಿಣ್ಣೆ ; ಬೋರೆ ; ದಿಬ್ಬ ; ತಿಟ್ಟು : ಅಡವಿ ಬಯಲಾಗೆ ನದ ವೊಟ್ಟುಡುಗೆ ತೆಮರ್ಸರಿಸಮಾಗೆ (ಕಾವ್ಯಾವ. ೨೯೪) ; ತೆಮರೆಲ್ಲಂ ಜೈನ ರಾಜಾಯತನಮೆ ಕುಟಿಯೆಲ್ಲಂ ನವಾಂಭೋಜಿನೀಷಂಡಮೆ ಪೌರೋದ್ಯಾನಮೆಲ್ಲಂ ಸುರಕುಜಮೆ (ಅನಂಪು. ೩-೭) ; ಮುಂಡಿಗೆಯ ತುದಿಗಳಂ ಕುಟಿ ತೆಮರಂ ಪಸರಿಸಿ ತೆಳ್ಗಲ್ಲೊಳ್ ಘಟಿಯಿಸುವುದು ಸುಸ್ಥಾನಶಯನನಪ್ಪಂತೆ ನೆಲಂ (ಅಶ್ವಶಾ. ೬-೫). **ತೆಮರು$_2$** : ೧. ಪಳ್ಳದ ಬಡಗಣ ತೆಮರು (ಮೈಅರಿ. ೦೯೨೯, ೩೮-೯; 8 ನೆಯ ಶತ). **ತೆವರ್**: ೧."ದ್ವೀಪಃ, ಅಂತರೀಪಂ ಈ ೨ ನೀರ ನಡುವಣ ಕುರುವದ ಪೆಸರು. ಉದಕದ ತೆವರೆಂದು ಎಂಬರು" (ನಾಚಿಂಗಾ. ೯೯) ; "ತೆವರಾರಯಲುದ್ದನೆಲಂ" (ಚತುನಿ. ೩೫) ; ಮುಂಗಿಲಿಂದೆ ಱಗುವ ಮಟ್ಟೆ ಕದಡಿ ಬರ್ಪ ತೊಱೆ ಬೆಟ್ಟು ತೆವರ್ ಮೊರಡುಪ ಜಲಧಿಗಳೆನೆ (ಆದಿಪು. ೬-೬೨) ; ತೆವರೆಲ್ಲಂ ದೇವತಾಮಂದಿರನಿವಹಮೆ (ಎಇ. XVI, ೩೮-೨೪ : 1152) ; ಕಲ್ಲಾಗಿ ಮಣ್ಣಾಗಿ ಕುಳಿಯಾಗಿ ತೆವರಾಗಿ (ಪಿಂಡೋರ.ಹ. ೫೦೦-೭) ; ಕುಟಿಯುಂ ತೆವರುಂ ಸಮನಾಯ್ತದೆತ್ತಲುಂ

(ಪುಷ್ಪಪು. ೫-೪೬) : ಭೂಮಿಯ ಕುಳಿ ತೆವರ್ಮೊದಲಾದುದಂ ನೋಡಿ (ಶ್ರಾವಕಾ. ೯೩-೨೨) ; ತೊರಳೆಗುಪ್ಪೆ ಮಜ್ಜೆಯ ತೆವರ್ ಸುಂಟಿಗೆಯ ಸಾಲ್ (ಚಿಬಪು. ೪೮-೫೬). **ತೆವರ** : ೧. ಆ ತೆವರದ ಶಿಲೆಯ ಕಂಬ (ಎಕ. XII, ತುಮಕೂ. ೩-೧೨ ; 1515) ; ತಿಟ್ಟೆಯೊಳು ತೆವರದೊಳು ಹುಟ್ಟಿಹನೆ ಪರಶಿವನು ಹುಟ್ಟು ಸಾವುಗಳು ಅವಗಿಲ್ಲ ಜಗವನ್ನು ಬಿಟ್ಟಿಹನು ನೋಡ (ಸರ್ವಜ್ಞ. ೩೩೩). **ತೆವರಿ** : ೧. ತೆನೆ ತಿಂದ ಎತ್ತು ತೆವರಿಯನ್ನು ಏರಿತು (ಗಾದೆ). ೨. ಹೊಲ ಗದೆ ಮೊದಲಾದುವುಗಳ ಬದು,–ಏರಿ,–ಅಂಚು : ಗದ್ದೆಯ ತೆವರಿಯಲ್ಲಿ ಬರುತ್ತಿದ್ದ ದೊಡ್ಡನನ್ನು ದೂರದಿಂದಲೇ ಬೆಳ್ಳಿ ನೋಡಿದಳು (ಕಾಲೂರ. ೪ ಕಥಾಸಾರ). **ತೆವರು$_2$** : ೧. ತೆಙ್ಕಣ ತೆವರು ಪಡುವ ಪಳ ಮೇರೆ (ಎಕ. V, ಅರಕ ೨೪-೧೩ ; ಸು. 900) ; ಉಗುಳ ನುಂಗಿ ಹಸಿವ ಕಳೆದು ತೆವರ ಮಲಗಿ ನಿದ್ರೆಗೆಯ್ದೆನಲ್ಲಾ (ಅವಚಂ. ೮೨-೩೬೮) ; ಕಡೆಯ ಹೊಲದ ತೆವರಿನಲ್ಲಿ ಮರ ತಾಗಿ ನೇಗಿಲು ಮುಱಿಯಿತ್ತು (ಮೋಳಿಮಾ. ೧೩೮-೩೧); ಗುರುಸೇವೆ ಕೈಕೊಂಡು ಹಿರಿದಾಗಿ ಮಾಡದರೆ ಹರಿದೇಱಿ ಮುಕ್ತಿ ಪಡೆಯುವಡೆ ಅದು ತಾನು ಹಿರಿದಾದ ತೆವರೆ (ಸರ್ವಜ್ಞ. ೫೬) ; ಸಂದಿಗೊಂದಿಯೊಳೆ ಹಿಡಿಸದೆ ತುಂಬಿದೆ ತಗ್ಗಿಲ್ಲ ತೆವರಿಲ್ಲ (ಸಖೀಗೀ. ೨೪-೪೧೯) ೨. ಗದ್ದೆಗೆ ತೆವರು ಗಟ್ಟಿಯಿರಬೇಕು(ಸಂಸ್ಕಾರ. ೨೬) ; ನಮ್ಮ ಎರೆಹೊಲದ ತೆವರಿನಲ್ಲಿ ಒಂದು ಒಳ್ಳೆ ಹಲಸಿನ ಮರವಿದೆ (ಚಂಗಾಳ್ವ. ೬೫). [?]

ತೆಮರು$_1$ 'ತೆಮರ್$_1$' ನೋ.

ತೆಮರು$_2$ 'ತೆಮರ್$_2$' ನೋ.

ತೆಮಲಿಸು (ಕ್ರಿ). ನೂಕು; ತಳ್ಳು; ಕದಲಿಸು : ವಾರಿಯಂದದಿ ನಿಂದಿಹನ ಮತ್ತಾರು ತೆಮಲಿಪರೆಂದು ಬಳಲಿಕೆ ಸಾರಿದರು ಮೊದಲಿಂದ ಸೆಣಸಿದ ಖಚರಸಂತತಿಯೂ (ಜಿನಭಾ. ೫೨-೩೬).

[ತೆಮಲು (<ತೆಮಟ್) + – ಇಸು$_3$]

ತೆಮಲು 'ತೆಮಟ್' ನೋ.

ತೆಮಳ್ 'ತೆಮಟ್' ನೋ.

ತೆಮಳು 'ತೆಮಟ್' ನೋ.

ತೆಮಳ್ಚು, ತೆವರ್ಚು (ಕ್ರಿ). = ತೆಮಲಿಸು : ಮೇಲುದಂ ತೆಮಳ್ಚಿ ಕುಚ ಮಂಡಳಂ ಕುಣಿಯೆ . . . ಘಟ್ಟವಳ್ತಿಯರದೇಂ ಮನಂಗೊಂಡರೋ (ಧರ್ಮನಾ. ೨-೮೪). **ತೆವರ್ಚು** : ಮೇಲುದಂ ತೆವರ್ಚುತ ಸುಯ್ದು ಬಿನ್ನಣದಿಂ ಬೇಟಮಂ ಬೀರಿ ಮುಂಬರಿವವಳ (ರುಕ್ಮಾಂಗ. ೬-೬೧).

[ತೆಮಳ್ (<ತೆಮಟ್) + – ಚು$_1$]

ತೆಮಳ್ದು 'ತೆಮಟ್ದು' ನೋ.

△ **ತೆಮಱು** 'ತೆಮರ್$_1$' ನೋ.

ತೆಮಟ್, ತೆಮಲು, ತೆಮಳ್, ತೆಮಳಂ, ತೆವಳ್, ತೆವಳು (ಕ್ರಿ). ೧. ಸೇರು ; ಕೂಡು ; ಬೆಂಬಲಿಸು : ಅಮಳರುಮಿಾ ಬೇಳ್ವೆಯ ಮಾತಂ ತೆಮಟಿ [ಪಾಠಾಂ. ತಮಗೆ] ನುಡಿದೊಡೆಮ್ಮ ಗಂಡವಾತುಮಳುಂಬಂ ಭೃತಮಕ್ಕುಮೆಂದು (ಪಂಪಭಾ. ೬-೨೬ ವ). ೨. ತಿರುಗು ; ಹೊರಳು : ತೆಮಟ್ವನ್ನೆಗಂ ನುಣ್ಪಂ ತಿಣ್ಪುಮನೊಳಕೊಂಡು (ಶಾಂತಿಪು. ೯-೧೪೩ ವ). ೩. ಹೊಟ್ಟೆ ಮೇಲೆ ಭಾರ ಹಾಕಿ ಮುಂದೆ ಸರಿ ; ದೇಕು : ಏಟು ದಿವಸದೊಳ್ ತೆಮಟ್ದು ಪೆಱವೇಟುದಿವಸಕ್ಕೆ ತಳರ್ನಡೆ ನಡೆದುಂ (ಆದಿಪು. ೫-೪೦ ವ) ; ತಡೆಯದೆ ಕುಳ್ಳಿರಲ್ ತುರಿಪದಿಂ ತೆಮಟಲ್ ತದನಂತರಂ ತಳರ್ನಡೆ ನಡೆಯಲ್ (ಶಾಂತಿಪು. ೬-೦೦೬). ೪. ಮಾಸು : ಮಂಕಾಗು; ಮಸುಳು: ಮುಟ್ಟಿ ಮಾಡೆ ಸುಕರತ್ವಂ ತೆಮಟ್ದಪ್ಪುದೆಂದು ಮನೋಜಾತ ನನಂಗನಾಗಿ ಮನದಿಂದಂ ಮಾಡಿದಂ ಪೆಣ್ಣ ವಿದ್ಧಮಂ (ಅನಂಪು. ೨-೧೩). ೫. ಸಮನಾಗಿರು; ಮಟ್ಟಸವಾಗಿರು: ತೆಮಟ್ದಿದೆ ಕುಟಿಯಿಲ್ಲದೆಯುಂ ಸುಮನೋಹರಮಪ್ಪ ಕಕ್ಷಮತಿಶುಭದಂಗಳ್ (ಲೋಕೋಪ. ೧೧-೦೦). **ತೆಮಲು** : ೬. ಅಲುಗು; ಕದಲು; ಜರುಗು: ಜೈನರು ಬಸದಿಗಂ ಪೋಗಿ ಹೇಮಗದಗಳ ಬೀಗಮಂ ತೆಗೆದು ನೂಂಕಲುದ್ದಾಮದಿಂ ತೆಮಲದಿರಲವರು ವಾದಯ್ಯನಿಂದಾದ ವಿಘ್ನವಿದೆನ್ನಲು (ಪ್ರಭುಪು. ೮-೫೦) **ತೆಮಳ್** : ೩. ಮರಳಿ ಕೆಲಬರ್ ಕಾಲ್ಗಳೊಡೆದು ಮುಂದಣ್ಗಡಿಯನಿರದಿಡಲ್ಕಾಱ ದಂಬಳ್ಗೈಗಳಿಂ ತೆಮಳ್ದು ಭರದೆ ಬರ್ಪರ್ ಕೆಲರ್ (ಆರಾಡ. ೪-೩೩). ೬. 'ತೆಮಳ್ಚು' ಪರಾ. ೭. ಹಿಮ್ಮೆಟ್ಟು ; ದೂರವಾಗು : ಮದಂಘ್ರಿಯಂ ಸಮರ್ಚಿಪುದದಱಿಂ ತೆಮಳ್ಗುಂ ದ್ವಿಜಘ್ನದೋಷಂ (ಹಸ್ತಿಮಾ. ೯-೨೪) **ತೆಮಳು** : ೮. ನಡೆಸು ; ಚಲಿಸುವಂತೆ ಮಾಡು : ಸುಮತಿಸಾಗರ ಮುಂದೆ ಭರದಿ ವಿಮಾನವ ತೆಮಳಿಕೊಂಡೆಯ್ದಿ ವಾರ್ತೆಯನು ನಮಿರಾಜಗಱುಹೆ (ಭರಡ. ೩೮-೮). **ತೆವಳ್** : ೩. ಕೋಲ್ಗಳಿಂ ತೊಡೆಗಳಂ ಕತ್ತರಿಸೆ ನಾದಿದುವು ದೂಳ್ಗಳರುಣಾಂಬುವಿಂದೆದೆಯೊಳ್ತೆವಳ್ದ ಹಿಯವೋಲ್ಗಂಡುಗಲಿ ಧನಂಜಯನ ಸಮ್ಮುಖಕೆ ಮೇಲ್ವಾಯ್ದನು (ಚೈಮಿಭಾ. ೧೪-೦೬) ; ಗಟಿಗೆಯನಿತು ತೆವಳಲಿರ್ಪ ಉಸಿರಿಗಳಾ ಸಾಹಸಮ್ (ಬದ್ಧಪ್ರ. ೨೯-೬೧೯). **ತೆವಳು** : ೩. ಕರಯುಗದೊಳೆರಡು ಕೈಮಣಿವಿಡಿದುಕೊಂಡು ಪುರವರದ ಬೀದಿಯೊಳೊರ್ವ ಕುಂಭಕಾರಂ ತೆವ[ಪಾಠಾಂ. ಮ]ಳಿ ಬರುತಿರಲ್ಕೆ (ಸಮ್ಯಕೌ. ೨-೪೨) ; ಮೆಲ್ಲನೆ ತೆವಳಿ ಆಡುವ ಕಿಱುವರೆಯದಂದಂಗಳದೊಳಾಡುತಲು ಹರಿಯಿರಲು (ಸಾಳ್ವಭಾ. ೨೧-೪೩) ; ಕಾಲೊಡೆದು ಕೆಲವು ದೂರ ತೆವಳುತ್ತ ಪೊರಳುತ್ತ ರಕ್ತಂ ಸುರಿವುತಾ ರಮಣಿ ಬರುತ್ತಿರಲ್ (ಪಾಸೋಪು. ೪-೧೪೮) ; ಇರದಮೃತ ಕಾಂತಿಯಂ ಕೈವೀಸಿ ಕರೆವಂತೆ ಕರವ ಮುಂದಿಟ್ಟಲ್ಲಿ ತೆವಳುವಳು ಬಳಲುವಳು (ಸಿದ್ಧಕಾ. ೫-೩೦); ಕೊನೆಯ ನಾಲ್ಕೈದು ಮೈಲಿಗಳನ್ನಂತೂ ತೆವಳಿಕೊಂಡು ಬಂದ ಹಾಗೇ ಬಂದಿದ್ದ (ಅನಾಥ. ೨೬೩) ; ಉತ್ತು ಬರುವ ಮಗ ತೆವಳಿ ಬಂದರೆ ಹೆತ್ತ ತಾಯಿಯ ಪುಣ್ಯ (ಗಾದೆ). ೯. ನಿಧಾನವಾಗು; ಮಂದಗತಿಯಾಗಂ : ದೈಹಿಕ ಶಿಕ್ಷಣಕ್ಕೆ ನೆರವಾಗುವ ಚಟುವಟಿಕೆ ತೆವಳುವುದು (ಶಿಕ್ಷದ. ೭೮).

[ದೇ.ಕ ತಮಿ. ತವಟ್, ತಿವಳ್; ಮಲ. ತವಿಟು; ತೆಲು. ತೆಮಲು]

ತೆಮಟ್ದು, ತೆಮಳ್ದು (ಕ್ರಿ). ೧. ಒಟ್ಟುಮಾಡು ; ಒಂದುಗೂಡಿಸು ; ಕೂಡಿಸು ; ಸಂಗ್ರಹಿಸು : ತುಮುಳಯುದ್ದದೊಳಿಂತೆ ನಿರಂತರಂ ತೆಮಟ್ದಿ ಕಾದಲೆ ನಮ್ಮಯ ಸತ್ಪರಾಕ್ರಮಮನೆಂತಱಿಗುಂ ಜಗಮಂತಱಿಂ ಕ್ರಮದಿನೊರ್ವರೊಳೊರ್ವರೆ ಕಾದುವಂ (ನೇಮಿಪು. ೦೨-೨); ವಿರಹಾನಲನಾಳಿಯರೊಂದಹರ್ನಿಶಂ ತಳಿಯೆ ತೆಮಟ್ದು [ಪಾಠಾಂ. ದುರ್] ಪೀರ್ದ ಪಟನೀರ್ಗಳನಟ್ಕಿಸಲಾಱದೆಯ್ದೆ ಕಂಟಳಿಸಿ ಮಗುಳ್ಚಿದಪ್ಪುದೆನಲುಮ್ಮೆನೆ ಕಾಮಿನಿಯೇಂ ಬೆಮರ್ತಳೋ (ಲೀಲಾವ. ೦೨-೩೮) ; ಮೂಲೋಕಮುಮಂ ತನ್ನೊಂದು ಜೋಗದ ಜಾಣ್ಮೆಯ ಮೈಮೆಯ ಬಲ್ಮೆಯಿನೊರ್ಮೊದಲೊಳೆ ತೆಮಟ್ದಿ ಬಿಚ್ಚಟಿಸಿ ನೋಡಲ್ (ರಾಮಾಶ್ವ. ೬೯-೦೬). ೨. ಬಳಿದುಕೊಳ್ಳು ; ಪೂಸು ; ಹಚ್ಚಿಕೊಳ್ಳು : ಕುಮುದದ ಕೇಸರರಜಮಂ ತೆಮಳ್ದಿ ತಟ್ಕೈಸಿ (ಲೀಲಾವ. ೫-೮೫). **ತೆಮಳ್ದು** : ೧. "ತೆಮಳ್ದು – ಚಯನೇ (ಕೂಡಿ ಹಾಕು) (ಶಪುಧಾ)". ೩. ಒಟ್ಟಾಗು ; ಒಂದುಗೂಡು : ತಾಳ್ದನಸುರಾರಿ ಭೀತಿಯನೆಳ್ದೋಡಿದನಿಂದ್ರನಖಿಳದೇವ ಪ್ರತತಿ ತೆಮಳ್ದುದು (ವೀರವಿ. ೦೦-೮).

ತೆಮಟ್ದಿಕೊಳ್ = ೧. ಒಟ್ಟುಮಾಡು ; ಒಂದುಗೂಡಿಸು : ಜಾತರೂಪಧರನಾಗಿ ತನ್ನ ಪಱಿದು ಬಿಸುಟ ಸಹಸ್ರಕುಂತಳಂಗಳಂ ತನ್ನ ತಳದೊಳ್ ತೆಮಟ್ದಿಕೊಂಡು ತುಂಬಿಯ ಬಂಬಲ್ಗಳಂ ಕೆಂದಾವರೆಯರಲ್ಗಳೊಳ್ ಪುದಿದುಯ್ವಂತುಯ್ದು (ಆದಿಪು. ೨-೩೯ ವ) ; ತಾನುಗುಟುತ್ತು ಮಿರ್ಪ ಪೊಸಗಂಘಮನಿತ್ತೆ ತೆಮಟ್ದಿಕೊಂಡು ಮಂದಾನಿಳನುಯ್ಯುತಿರ್ಪ

ತನಿಗಂಪುಮನಿತ್ತೆ . . . ಗಡಂ ಪ್ರಫುಲ್ಲಮಲ್ಲೀನವಪುಷ್ಪವೋಗರದ ಕಂಪು ಗಳಾಗರವಾಯ್ತು ಸುಗ್ಗಿಯೊಳ್ (ಕಂದ್ರಪು. ೬-೪೯). ೨. ಬಳಿದಂ ಕೊಳ್ಳುಃ; ಪೂಸಂ; ಲೇಪಿಸಿಕೊಳ್ಳುಃ ಕದಱುತ್ತುಂ ಮಣಲಂ ತೆಮಟ್ಟಿ ಕೊಳುತಂ ಭೂರೇಣುವಂ . . . ಪೊಕ್ಕುದು ಬೀಡಂ ಲಯಕಾಲಕಾಲ ವಿಚಲದ್ವೀವಾರುತಂ ಮಾರುತಂ (ಕಾವ್ಯಾವ. ೪೦೯). [<ತೆಮಟ್ಟು]

ತೆಮ್ಮ 'ತೊಂಬೆ$_1$' ನೋ.

ತೆಮ್ಮಲ್, ತೆಮ್ಮಲಂ (ನಾ). ಗುಂಪು; ಸಮೂಹ: "ಬಂಬಲ್, ತುಱುಗಲ್ . . . ತೆಮ್ಮಲ್, ಗುವ್ಮಿ, ಗೊಂದಣ (ಉಂದಲ್) ಈ ೪೦ ಸಮೂಹಂ" (ಕಶಾ. ೫೯-೨೨೨); "ತಂಡಂ ತೆರಳ್ಕೆ . . . ತೆಮ್ಮಲ್ . . . ಪಂಡಿತರಿಂ ಗಡಣ ವಂಗಡಂ ಕಿಕ್ಕಿಂದಂ" (ಕವಿಕಂ. ೦೦೬). ತೆಮ್ಮಲು: ತೆಮ್ಮಲಿನ ತಿಂಡಿಗಳ್ ಹಸುರಲೆಯ ತಟ್ಟೆ (ಕಾರೂಕ. ೬೩-೦೦೯). "ಸಂಗ್ರಹ" (ಕಾಲೂಕ. ಕೋಶ). [ತೆಮ್ಮ (<ತೊಂಬೆ$_1$) + – ಅಲ್$_2$]

ತೆಮ್ಮಲು 'ತೆಮ್ಮಲ್' ನೋ.

ತೆಮ್ಮೂಡಲು 'ತೆಂ' ಪರಾ.

ತೆಮ್ಮೂಡು 'ತೆಂ' ಪರಾ.

ತೆಮ್ಮೆ 'ತೊಂಬೆ$_1$' ನೋ.

ತೆಮ್ಮೊಲ (ನಾ). ದಕ್ಷಿಣ ದಿಕ್ಕಿನಲ್ಲಿರುವ ಹೊಲ: ಬಸದಿಗೆ ಪಡುವಣ ತೆಱ್ಗತೋಣ್ಪಮುಂ ತೆಮ್ಮೊಲದೊಳ್ನಾಲ್ಗೂಳಿವೆಡೆ ಪಳ್ಳ ಕಳನಿ (ಎಕ, X, ಕೋಲಾರ. ೯೦-೯೨ ; ೪೦೩). 'ತೆಂಬಾಲ' ಪರಾ. [ತೆಂ + ಪೊಲ]

ತೆಯ್ 'ತೇ$_1$' ನೋ.

ತೆಯಲಯ್ಯಜೂಬು (ನಾ). ಒಬ್ಬಾತನ ಹೆಸರುಃ ತೆಯಲಯ್ಯಜೂಬು ಕಾಲಂ ಕಟ್ಟಿ . . . ಎಱಿಯ[ರ]ಸಂಗೆ ಬಿಟ್ಟಗ್ರಹಾರ (ಎಕ. I, ೪೦-೦ ; 10ನೆಯು ಶತ). . [?]

ತೆಯಲ್ಲಿ (ನಾ). ಒಂದು ಬಗೆಯ ಆಯುಂಧ (?) : ಖಡಲ್ಲಿ ತೆಯಲ್ಲಿ ಬಿಲ್ಲು ನಾರಾಚ ಗದೆ . . . ಚಿಲುತಲಿ ಮೊದಲಾದ ಬ ಹ್ತೀ ಶಾ ಯುಧಾ ಶಕ್ತಿಸಮರ್ಥಕರಾದಾ (ಎಕ. XVI, ಗುಬ್ಬಿ. ೬೪-೨೦ ; 1776). [?]

ತೆರ್$_1$ 'ತೆಱಿ$_1$' ನೋ.

ತೆರ್$_2$ 'ತೆಱಿ$_3$' ನೋ.

ತೆರಂ 'ತೆಱಂ' ನೋ.

ತೆರಂಗುಣಿ (ಕ್ರಿ). ಚೆನ್ನಾಗಿ ಕುಣಿ; ಅತಿಶಯವಾಗಿ ನರ್ತಿಸಂ: ಎನಗಿದೆ ಎಂತೆ ಮೆಯ್ಯಡುಕವೋವೊ ನವಿರ್ಗುಡಿಗಟ್ಟುಹಂ ಬಿಳ್ಲನೆ ಬೆಮರಶ್ರು ಮಾಲೆ ಬಗೆದೇಂಕು ತೆರಂಗುಣಿವಾಸ ಪೊಂಕವೇಕಿನತೊ (ಸಂಸಪ. ೨೦-೩೩).

[ತೆರಂ (<ತೆಱಂ) + ಕುಣಿ$_1$]

ತೆರಂಟು, ತೆರಟುಂ$_1$ (ಕ್ರಿ). ವಧೂವರರಿಗೆ ಉಡುಗೊರೆಯನ್ನು ಕೊಡುಃ ಮುಂಯ್ಕಿಕೊಡುಃ "ತೆರಂಟುನಿವಸನೋದ್ವಹನೇ (ಮುಯ್ಕು ಸೀರೆ ಕೊಡು) (ಕಮಧಾ); ನಿತ್ಯ ಬಿಂದುಗೆ–ಬೆಡಂಗು ... ತೆರಂಟು, ಸೀಂಟು (ಕಮಧ. ೩೬ ಪ್ರಯೋ). ತೆರಟುಂ$_1$: "ತೆರಟು–ನಿವಸನೋದ್ವಹನೇ" (ಕಮಧಾ. ೫). 'ತೆಲ್ಲಂಟಿ' ಪರಾ. [<ತೆಱು$_1$]

ತೆರಂಬಿಡು (ಕ್ರಿ) ತೆರವಾಗಿ ಬಿಡುಃ ಖಾಲಿ ಮಾಡುಃ ಅವು ಮುನ್ನ ತಮಗಿರ್ದ ಗೌರವಕ್ಕೆಳ್ಕು ನೀರ್ ಕೊಟ್ಟು ದಿಕ್ಕುಗೆಟ್ಟೋಡುವುವು, ಬಾಳ್ ಭೂಮಿ ಸರ್ವಮಂ ವೈರಿಗೆ ತೆರಂಬಿಟ್ಟು (ಶ್ರೀರಾಮಾ. ೬೩೩-೦೪೪).

[ತೆರ್$_2$ (<ತೆಱಿ$_3$) + ಬಿಡು$_1$]

ತೆರಕೊಡು 'ತೆಱಿಕೊಡು' ನೋ.

ತೆರಗಾಲ (ನಾ). ಒಂದು ಪ್ರದೇಶದ ಹೆಸರು (?): ಪೆರ್ಮ್ಮಾಡಿಗಾವುಣ್ಣನ ಪೆಣ್ದತಿ ಚಾವುಣ್ಣಬ್ಬೆ ೧ ದೇಗುಲವ ಮಾಡಿಸಿ ತೆರಗಾಲಂ ದೇವಟ್ಟ ಬಿಟ್ಟಳ್ (ಮೈಆರಿ. ೦೯೩೦, ೦೪-೯ ; ಸು. 870). [?]

ತೆರಟು$_1$ 'ತೆರಂಟು' ನೋ.

ತೆರಟು$_2$ (ಕ್ರಿ). ೧. ದುಂಡಗೆ ಮಾಡುಃ ಸಂತ್ತು ; ಸಂರುಳಿ ಮಾಡು. ೨. ಸೇರಿಸು : ಕೂಡಿಸುಃ ಹೊಂದಿಸು : (ಕ).

[ದೇ.ತ ತಮಿ. ಮಲ. ತಿರಟ್ಟು]

ತೆರಟು$_3$ (ನಾ). ಹಿಂದಕ್ಕೆ ಬೀಳುವಿಕೆ; ಹಿಂದಿರಂಗುವಿಕೆ; ಕೆಳಗೆ ಬೀಳಂವಿಕೆ (?) : ಮಗ್ಗಿಗಳ ವಿಗೆ ಕೂಡಿ ಕಳೆದರೆ ಸಗ್ಗವಹುದೇ ಮುಂದೆ ಭಾಗಿಸಿಯುಗ್ಗಡದ ಘನವರ್ಗಮೂಲವನಱಿದೊಡೀ ಭವದ ಹಗ್ಗ ಹರಿದೇಱುವನೆ ಮುಕ್ತಿಯ ದುರ್ಗವನು ಕೇಳಯ್ಯ ತೆರಟಿನ ಬುಗ್ಗಿಯಲ್ಲದೆ ಬರೆದೊಡಂತ್ಕದೊಳ್ಳಿ ಸುಖವಂದ (ಪ್ರಹ್ಲಾಚ. ೬-೦೯); "ಕಪ್ಪ" (ಪ್ರಹ್ಲಾಚ. ಕೋಶ). [?]

ತೆರಟುವಾಲ್ (ನಾ). ಕುದಿಸಿ ಗಟ್ಟಿಗೊಳಿಸಿದ ಹಾಲಂ: ಬಟ್ಟವಾಲ್ ತೆರಟು[ಪಾಕಾಂ. ಡು]ವಾಲ್ ಚಿಲುವಾಲುವೆಸರನದಕಿಟ್ಟು ಹಸಮಾಡುವುದು (ಸೂಪಶಾ. ೨-೩). [←ತಮಿ. ತಿರಟ್ಟುಪ್ಪಾಲ್]

ತೆರಣಿ$_1$ 'ತೆರಳಿ' ನೋ.

ತೆರಣಿ$_2$ 'ತೆರಳಿ$_2$' ನೋ.

ತೆರಣಿ$_3$ (ನಾ). ಒಂದು ಬಗೆಯ ಸಸ್ಯ: ಹೆತ್ತರಾಣಿಕೆ, ನಲ್ಲ, ಹೆದ್ದರಣಿ, ಬಳಚಿ, ತೆರಣಿ, ಕಕೋರ್ಲ (ಮುಔಗಿ. ೬೩-೦೨೬೯). [?]

ತೆರಣಿಗಟ್ಟು (ಕ್ರಿ). ಒಟ್ಟುಗೂಡಿಸಿ ಕಟ್ಟುಃ ಉಂಡೆಗಟ್ಟುಃ ಕಂಚಿನ ಕರಡಗೆಯೊಳಗೆ ಕಂಬಿಯ ತೆರಣಿಗಟ್ಟಿ ನಿಂತಾಳು (ಅವಕಂ. ೨೯೭-೦೩೦೦).

[ತೆರಣಿ$_2$ (< ತೆರಳಿ$_2$) + ಕಟ್ಟು$_1$]

ತೆರಣಿ 'ತೆರಳಿ' ನೋ.

ತೆರತವಳಿ (ನಾ). ಒಂದು ಬಗೆಯ ಸೀರೆ : ಕುಂಬಳಗಂಟಿ ತೆರತ [ಪಾಕಾಂ. ಥ] ವಳಿ ತೆಳುಗಾವಿಯುಂ ಬಿಳಿದಿನ ಸೀರೆ ಬರಹ ನಿಂಬೆಯು ಕಾಯು ಪೊಪ್ಪಳಿ ಕರ್ಕವಾಡಗಳಿಂಬ ಸೀರೆಗಳೊಪ್ಪಿ ಮೆಱೆಯೆ (ಅವಮುಸಾಂ. ೪-೦೯).

[? + ಪಳಿ$_5$ (< ಪಟ್ಟಿ)]

ತೆರಪಿಚು (ಕ್ರಿ). ತೆರವುಮಾಡಂ (?) : [ಕೊ] ಡಕುಣಿಯ ಸ್ವಳದ ಸೇನ ಬೋವನೂ ಕರಸಿ ಆತನ ವಿಂಪ್ರಮಾಣಿನಲೂ ನೇಮಿಚಂದ್ರದೇವರೂ ಮಾಡಿಕೊಂಡ ಬಾಳೆ ತೆರಪಿಚಿ ಪಾಲಿಸಿದ ವಿವರ (ಕಇ. III, ೦೦-೦೪; 1542).

[ತೆರಪು (<ತೆಱಪು) + – ಚು$_1$]

ತೆರಪು 'ತೆಱಪು' ನೋ.

ತೆರಪುಕೊಡು 'ತೆಱಪುಗೊಡಂ' ನೋ.

ತೆರಪುಗಾಣಿಸು 'ತೆಱಪುಗಾಣಿಸಂ' ನೋ.

ತೆರಪುಗೆಯ್ (ಕ್ರಿ). ಹೋಗಲಾಡಿಸಂ; ಕಳೆ ; ನಿವಾರಿಸು : ಭಾಸ್ಕರ ಬಾಣಮಂ ತೆಗದು ಪೂಡಚ್ಚು ಖಳನ ಕೃತತಿಮಿರಮಂ ತೆರಪುಗೆಯ್ಯೆ ಹರಿದುದು ಕತ್ತಲೆಯು (ನಪಮೋ. ೩೨-೨೦).

[ತೆರಪು (< ತೆಱಪು) + ಕೆಯ್$_1$]

ತೆರಪುಗೊಡು 'ತೆಱಪುಗೊಡು' ನೋ.

ತೆರಪುಮೊಳೆ (ನಾ). ಅಕ್ಷರದ ಮೊಳೆಗಳನ್ನು ಜೋಡಿಸುವಾಗ ಜೊಡುವಿನಲ್ಲಿ ಸೇರಿಸುವ ತಗ್ಗು ಮೊಳೆ : ಸೂಚೀ ಚಿಹ್ನೆಗಳು . . . ತೆರಪು ಮೊಳೆಗಳು . . . ಮತ್ತು ಸಂಯುಕ್ತಾಕ್ಷರಗಳೂ ಇರುತ್ತವೆ (ಮುದ್ರಕ. ೦೯).

[ತೆರಪು (<ತೆಱಪು) + ಮೊಳೆ$_2$]

ತೆರವು$_1$ 'ತೆಱವು$_1$' ನೋ.

ತೆರವು$_2$ 'ತೆಱವು$_2$' ನೋ.

ತೆರವೆ 'ತೆಱವೆ' ನೋ.

ತೆರಸ 'ತೇರಸ' ನೋ.

ತೆರಸಿ 'ತೇರಸಿ' ನೋ.

ತೆರಸು (ನಾ). ತೆರೆಯುವಿಕೆ ; ವಿಕಾಸ : ಕಣ್ದೆರೆಯ, ನಿನ್ನ ಕಣ್ಣಿಂದುಮಿನಿ ದೆರಸಂ ಮರಸದೆನ್ನಲಿ ಎನ್ನು ! (ಗಿಳಿವಿಂ. ೫೦-೧೩).

[ತೆರೆ$_1$ (< ತೆಱೆ$_1$) + – ಸು$_2$]

ತೆರಹು$_1$ (ಕ್ರಿ). ಬಿಚ್ಚು ; ತೆರೆ : ಸರಸಿಗೆ ತೆರಹಿ ತೋರುವದು ಜಗವು ಹೃದಯವ (ಉಯ್ಯಾಲೆ. ೨೨-೬). [ತೆರೆ$_1$ (<ತೆಱೆ$_1$) + – ಹು$_1$]

ತೆರಹು$_2$ 'ತೆಱಪು' ನೋ.

ತೆರಹು$_3$ (ನಾ). ಕಾಣಿಕೆ ; ಕಪ್ಪ ; ತೆರಿಗೆ : ತೆರಹುಗಳ ತೆತ್ತು ವರಹದ ಭಂಡಾರ ಅಂತು (ಎಕ. IX(S), ಕಾನಕಾ. ೩೩-೬ ; 17ನೆಯ ಶತ).

[ತೆರ$_2$ (<ತೆಱೆ$_3$) + – ಹು$_2$]

ತೆರಹುಗುಡು 'ತೆಱಪುಗೊಡು' ನೋ.

ತೆರಳ್, ತೆರಳು (ಕ್ರಿ). ೧. ಹೋಗು ; ಚಲಿಸು ; ಸರಿ ; ನಡೆ : ದಿಗ್ಗಜಂ ದೆಸೆಯಿನತ್ತ ತೆರಳ್ದುವು (ಪಂಪಭಾ. ೧೧-೭೧) ; ಎಸೆವ ನಭಸ್ಸರೋವರ ದೊಳುಣ್ಮೆ ಕೆಲಕ್ಕೆ ತೆರಳ್ದ ನೀಲಿಕಾಪ್ರಸರವೊ . . . ಎಂದೆನಿಸಿತಂದು ಪುರಂದರಚಾಪವಿಭ್ರಮಂ (ಚಂದ್ರಪು. ೪-೫೦) ; ಮಹಾಸಂಗರದೊಳೊಬ್ಬರ ನೊಬ್ಬರೊಪ್ಪಿಸಿ ತೆರಳಲಾಗದು (ಕುವ್ಯಾದ್ರೋ. ೨-೭) ; ಹಸಿವು ನೀರಡಿಕೆ ಸಂತಾಪವ ನೆಱೆ ವಾರಿಸಿಕೊಂಡು ಬಲಗೂಡಿ ತೆರಳ್ದು (ಮೋಹತ. ೧೯-೬೦); ತೆರಳು, ತೆರಳುವೊಡಿನಿಯ ; ಪಥದಲಿ ನಿನಗೆ ಮಂಗಳವೊದಗಲಿ (ಭಾರವಿಂ. ೨೯೧). ೨. ಹರಿ ; ಪ್ರವಹಿಸು : ಕಡಲ್ ಕಡಲಂ ಮುಟ್ಟಿ ತೆರಳ್ದ ನೆತ್ತರ ಪೊನಲ್ ಕಣ್ಗೊಂಡುದುಗ್ರಾಜಿಯೊಳ್ (ಪಂಪಭಾ. ೧೦-೯೦) ; ಕುರವದಿಂ ಕೂಡೆ ನೆತ್ತರ್ತೆರಳ್ದುಣ್ಮುವಿನಂ ಮೆಯ್ಯೆಲ್ಲಮಂ ಜರ್ಜರಿಸಿ (ಸುಕುಮಾ. ೭-೩೫); ನೆಲನನಿತುಂ ತೆರಳ್ದಡಸಿ ಬಿಟ್ಟೊಣೆಯಂ ತವದೊಂದ ಮಾಟ್ಕೆಯಿಂ ನೆಲೆ ನೆಲೆವರ್ಚೆ ಮುಂಪರಿವ ಪೆರ್ದೊಱೆಗಳ್ (ಕಾವ್ಯಸಾ. ೪೬೩). ೩. ವ್ಯಾಪಿಸು; ಆವರಿಸು : ದಿನಕರಕರನಿಕರಂಗಳ್ ಘನವಿವರಪ್ರಸರಮಾಗಿಯುಂ ತಮ್ಮಂ ಕಂಡನಿತಱೊಳೆ ತೆರಳ್ದೆನ್ನಾ ಮನೋಗತಧ್ವಾಂತಬಂಧಮಳಱಿತ್ತೆಲ್ಲಂ (ಕವಿರಾ ೨-೬೭); ನಟ್ಟ ಕೋಲ ಬಟೆವಿಡಿದೆತ್ತಂ ಸುರಿದುವವಂದಿರ ಮುಳಿಸಿನ ತೆರಳ್ದ ದಳ್ಳುರಿಯನಿಟೆಸಿ ನವರುಧಿರಂಗಳ್ (ಪಂಪಭಾ. ೧೨-೧೪೮). ೪. ಎಬ್ಬಿಸು ; ಹೊಮ್ಮಿಸು : ತೆರಳ್ದು ಸುರಭೂರುಹಪ್ರಸವಧೂಳಿಯಂ ...ನಯದಿನಾಡಿಸಿತ್ತಾಗಳಪ್ಸರಃಪ್ರಕರದೊಳ್ಗುರುಳ್ಗಳನದೊಂದು ಮಂದಾನಿಳಂ (ಆದಿಪು. ೭-೬೬). ೫. ಮೇಲೇಳು; ಚಿಮ್ಮು ; ನೆಗೆ: ಕರಿಕರಶೀಕರಮದ ಜಳತುರಂಗಲಾಲಾಂಬುಸೇಕದಿಂದಟೆದುಟೆದಿರ್ದ ರಜಂ ನರೇಂದ್ರಚಾಮರ ಮರುದಭಿಹತಿಯಿಂ ತೆರಳ್ದು ತೂಳ್ದತ್ತಾಗಳ್ (ಆದಿಪು. ೧೦-೩೮). ೬. ಒಟ್ಟಿಗೂಡು ; ಒಂದಾಗು : ಅಡಿಯೊಳ್ ಪಾಸಿದ ಚರ್ಮರತ್ನಪಟಮುಂ ತಚ್ಛತ್ರರತ್ನಂ ಬೆಡಂಗಿಡಿದೋರಂತಿರೆ ಮುಟ್ಟಿ ಪೊಲ್ದ ತೆಱದಿಂದಿಂಬಾಗೆ ತನ್ಮಧ್ಯದೊಳ್ ಸೊಡರಿರ್ಪಂತಿರೆ ಚಕ್ರರತ್ನಮದಱೊಳ್ ನಿರ್ಬಾಧಮಿರ್ದತ್ತು ಪೆರ್ವಡೆ ವಾರಾಶಿಯೊಳಿರ್ದ ಭೈತ್ರದೊಳಗಂದೆತ್ತಂ ತೆರಳ್ದಿರ್ದವೊಲ್ (ಆದಿಪು. ೧೩-೬೦); ತಳರ್ದು ಕುಳಾಯದಿಂ ಬಿದಿರ್ದೆಱೆಂಕೆಯ ನೀರ್ವನಿಯಂ ತೆರಳ್ದ ತುಪ್ಪುಟನೊನೆದಂಟಿ ಚಂಚುಪುಟದಿಂ . . . ಪಕ್ಕಿಗಳ್ ಮರಂಗಳ ತುದಿಗೋಡ ಮೇಲೆ ದನಿಗೆಯ್ಯುತುಮಿರ್ದುವು (ಜಗವಿ. ೧೪-೧೦). ೭. ಅಲುಗು ; ಅಲ್ಲಾಡು : ಮಲಯಾನಿಲನೂದೆ ತೆರಳ್ದ ಚೂತಪಲ್ಲವದ ತೆರಳ್ಕೆ (ಪಂಪಭಾ. ೨-೧೪). ೮. ಹಿಮ್ಮೆಟ್ಟು ; ಹಿಂಜರಿ ; ಹೆದರು : ಬಿಸಿಲಂ ಬೆಳ್ದಿಂಗಳುಮಂ ಪಸರಿಸೆ ಕಟ್ಟಲೆ ತೆರಳ್ದು ತೂಳ್ದೊಡೆ (ಆದಿಪು. ೧೩-೫೦) ; ಸಂತಾಪಭೀತಿಯಿಂ ತನುಕಾಂತಿ ತೆರಳ್ದೋಡಿದಪುದೆನಲ್ (ಕಾದಂಉ. ೨೨೫) ; ನಿದಾಘದ ದೀಪ್ತಿವರ್ತಿಯೊಳ್ ಕಾಸೆ ತೆರಳ್ದ ಪಿಂಜರಿಯ ವೋಲ್ ಕಿಸುಸಂಜೆ ತೆರಳ್ದಿನಂ ಪಟಂಗಾಸಿನ ಪೊನ್ನಗಂಟೆಯವೊಲೊಪ್ಪಿ ದುದ್ಗತಭಾನುಮಂಡಲಂ (ಅಜಿಪು. ೬-೭೦) ; ಕರಿ ಕೆಡೆಯೆ ಕಾಲಿನಲಿ ಜೋದರು ತೆರಳದೆಚ್ಚಾಡಿದರು (ಕುವ್ಯಾಕ. ೧೫-೨೮). ೯. ಮುರಂಟು ; ಸಂಕ್ಕುಗಟ್ಟು : ಮುಸು ಮುತ್ತಂತೆ ತೆರಳ್ದ ತನ್ನ ಮೊಗಮಂ ಕಂಡಳ್ಕನೋ ಕೂಡೆ ಜೋಲ್ದು ಸಡಿಲ್ದಿರ್ದೊಡಲಳ್ಳೆಜೊಳ್ಳೆತನಮಂ ಮೇಣ್ಕಾಣನೋ (ಆದಿಪು. ೨-೪೫) ; ಭೀಮಸೇನನ ಗದಾಘಾತದೊಳೂರು ಭಂಗಮುಂ ಪದಘಾತದೊಳ್ ಮಕುಟಭಂಗಮುಮಾಗೆ ಸುರುಳ್ದು ತೆರಳ್ದು ಸುಯೋಧನನಿರೆ (ಗದಾಯು. ೯-೦೬ ವ). ತೆರಳು : ೧. ಹೈಮವತಿ ಕೈಲಾಸಗಿರಿಗೆ ತೆರಳಿದಳು (ಸಿದ್ಧರಾ. ೧-೬೦) ; ಸರ್ವಾಭಿಸಾರ, ಸರ್ವೌಘ, ಸರ್ವಸನ್ನಹನ–ಎಲ್ಲಾ ಸೇನೆಯು ತೆರಳುವುದು (ನಾಚಿರಾ. ೬); ತೆರಳಿ ಮುಂದಕೆ ಹೋಗಬಾರದು ಮರಳಿ ಹಿಂದಕೆ ಬರಲು ಬಾರದು (ಬಸಪು. ೪೦-೮) ; ಧನಂಜಯ ತೆರಳಿದನು ಪಾಳೆಯದ ಪಥವಿಡಿದು (ಕುವ್ಯಾಕ. ೧೪-೩೨) ; ಸರಸಿಜಗಂಧಿಯ ದಿವ್ಯಾಂಗ ಲಾವಣ್ಯಶರಧಿಯೊಳ್ನೆರವಿಗರಕ್ಷಿ ವರ ಮೀನುಗಳು ನೆಱೆ ಪೊರಳುತ ತೆರಳುತ ಮರಳಿ ಮುಳುಗುತೊಪ್ಪಿದುವು (ಕಂನವಿ. ೯-೯೫). ೨. ಕಣ್ಗಳಿಂ ಶೋಕಜಲಬಿಂದು ತೆರಳೆ . . . ಗದುಗದಿಸಿ ಬಿಕ್ಕುತೆ ಬಿದ್ದು (ಬಸರ. ೫-೧೯). ೮. ಅರಸನಂ ಕೆಡಿಸಿ ಹುಸಿ ತೋಱೆಂದಡೆನಗವಂ ತೆರಳುವವನೇ (ಹಡಕಾ. ೯-೧೭) ; ರವಿಯ ಕೈ ಕತ್ತಲೆಯ ಹೊರಳಿಯ ತಿವಿಗುಳಿಗೆ ತೆರಳುವುದೆ (ಕುವ್ಯಾಕ. ೧೦-೪೬). ೯. ಒಳಗೆ ಮಂಚದ ಮೇಲೆ ನಡುಗುವ ತಲೆಯ ತೆರಳಿದ ಮೈಯ . . . ಚಲಿತ ವಚನದ ವೃದ್ಧರನು ತೋಱಿದನು (ಕುವ್ಯಾಅ. ೧೫-೧೦). ೧೦. ಅಳಿಸಿ ಹೋಗು; ಇಲ್ಲವಾಗು: ಪೊರೆದ ದುಕೂಲಮೊಂದಿನಿಸು ಮಾಸಿದೆ ಭಾಳದೊಳಿಟ್ಟ ಚಂದನಂ ತೆರಳಿದೆ (ದಶಕು. ೧೧-೨೧). ೧೧. ತೆಗೆ; ಕಳೆ; ಬಿಡಿಸು: ಹಿರಿದು ಹೊರೆಗಳನೊಂದನೊಂದಂ ತೆರಳಿ ಸುಲಿಯಲು ಬಾಳೆಯದು ತಾನೊರೆಯಲಿಲ್ಲದೆ ಮುನ್ನಿನಾಕೃತಿಯಿಲ್ಲದಿಪ್ಪವೊಲು (ಬಸಪು. ೩೫-೩೮).

[ದೇ. ॥ ತಮಿ. ತಿರಳ್ ; ತೆಲು. ತೆರಲು. ತೆರ್ಲು]

ತೆರಳಿ, ತಿರುಳಿ$_2$, ತೆರಣಿ$_1$, ತೆರಣೆ, ತೆರಳೆ$_1$ (ನಾ). ೧. ಮಣ್ಣು, ಮಲ ಮೊದಲಾದುವುಗಳನ್ನು ಉಂಡೆಗಟ್ಟಿ ಸಾಗಿಸುವ ಒಂದು ಬಗೆಯ ಹುಳು : ಸ್ಪರ್ಶ ರಸ ಗಂಧ ರೂಪುಗಳೆಂಬೀ ನಾಲ್ಕುಮನಱಿವ . . . ಮಿಡುತ ತೆರಳಿ ಕೊಟ್ಟಾರಿಗಂ ಯೆಡೆವುಟುಯೆಂದಿತ್ಯೇವಮಾದಿಗಳೊಳಂ (ಪಸಾರ. ೪೯). ೨. ತನ್ನ ಶ್ಲೇಷ್ಮದಿಂದ ತನ್ನ ಸುತ್ತಲೂ ಎಳೆಯನ್ನು ನೆಯ್ದು ಸುತ್ತಿಕೊಳ್ಳುವ ಒಂದು ಬಗೆಯ ಹುಳು ; ರೇಷ್ಮೆಹುಳು : ನಿಷ್ಕಾರಣಂ ತೆರಳಿಯ ಪುಟುವಿನಂತೆ ನಿನ್ನಂ ನೀನೆ ದುಷ್ಪರಿಣಾಮದಿಂ ಸುತ್ತಿಕೊಂಡು (ಧರ್ಮಾಮ್ಯ. ೧೪-೮೪); ತೆರಳಿ[ಪಾಠಾಂ. ತೆರಣೆ, ತೋರಣೆ]ಯ ಪುಟುವಂ ತನಗೆ ಮನೆ ಮಾಟ್ಪೆನೆಂದು ತನ್ನೊಳ್ ಪುಟ್ಟಿದ ನೂಲಿಂ ತನ್ನನೆ ಸುತ್ತಿಕೊಂಡು ಪೊಱಮಡಲಱಿಯದೆ ಸಾವಂತೆ (ಜೀವಸಂ. ೧೪೦-೧೦ ವ) ; ಹಲವು ಮಾಯಾಮೋಹಪಾಶದ ಬಲೆಯೊಳಗೆ ನೆಱೆ ಸಿಲುಕಿ ತೆರಳಿಯ ಹುಳುವಿನಂತೊಳಗಿರ್ದು ತಾಪತ್ರಯದ ದುಃಖದಲಿ (ನಿಭಾಗ. ೭-೬-೧೩). ತಿರುಳಿ$_2$: ೨. ಹಲವು ಮಾಯಾಮೋಹಪಾಶದ ಬಲೆಯೊಳಗೆ ತನು ಸಿಲುಕಿ ತಿರುಳಿಯ ಹುಳುವಿನಂತಳವಳಿದು ತಾಪತ್ರಯದ ಬೇಗೆಯಲಿ (ನಿಭಾಗ. ೩-೧೪-೪). ತೆರಣಿ$_1$: ೨. ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆಱನಂತೆ (ಮಹಾದೇ. ಬ. ೧೫-೧೭). ತೆರಣೆ : ೨. ಮೇಲಿನ 'ತೆರಳಿ' ಉಲ್ಲೇಖದ 'ಜೀವಸಂ' ಪ್ರಯೋಗದ ಪಾಠಾಂತರವನ್ನು ನೋಡಿ. ತೆರಳೆ$_1$: ೨. ಕೌಶೇಯ–ತೆರಳೆಯ ಹುಟು ಮುಕುಲಾಕಾರದಿಂದ ಮಾಡಿದುದ ಬಿಡಿಸಿ ನೆಯ್ದ ಸೀರೆ (ನಾಚಿರಾ. ೬) ; ಪರಿಪರಿಯ ಸಂಸಾರವಿಷಯದಿ ಹಿರಿದು ಬಿಗಿವಡೆದಿರ್ಪ ಮನುಜಗೆ ದೊರಕುವುದೆ ಪರತತ್ವ ತೆರಳೆಯ ಹುಳುವಿನಂತಿಹಗೆ (ಅಮೃತ. ೧-೩೭). [<ತೆರಳ್]

ತೆರಳಿಕೆ 'ತೆರಳ್ಕೆ' ನೋ.

ತೆರಳಿಚು 'ತೆರಳ್ಚು' ನೋ.

ತೆರಳಿಸು (ಕ್ರಿ). ೧. ಹೋಗುವಂತೆ ಮಾಡು; ಹೊರಡಿಸು; ಕಳುಹಿಸು: ಬೆಸವೇಳ್ದು ತೆರಳಿಸಿದನನುಜನನು (ತೊರಣಾ. ೪-೫-೨೬); ಆತನನಲ್ಲಿಂದ ತೆರಳಿಸಿ ಬಿಟ್ಟಳು (ಕಂನವಿ. ೬-೧೬೪). ೨. ಹೊಗಿಸು; ಪ್ರವೇಶ ಮಾಡಿಸು: ಇಂತು ಸಿಂಗರವಾದ ಸ್ವಯಂವರಮಂಟಪಕಂ ತೆರಳಿಸಲು ಸುವ್ರತೆಯ ಮುಂತಣದಿಂದ ಸಿಂಗರಿಸಿದರಾ ದೇವಕಾಂತೆಯ ಶೃಂಗಾರದಂತೆ (ಶಾಂತೀಶ. ೩-೬೫). ೩. ಕೆದರು; ಬೆಲ್ಲಾಪಿಲ್ಲಿ ಮಾಡು: ತೆರಳಿಸಿತು ಬಿಜುಗಾಳಿ ತಾರೆಯ ನೆರವಿಯನು (ಸಾಳ್ವಭಾ. ೧೬-೩೪).

[ತೆರಳ್ + – ಇಸು$_3$]

ತೆರಳು 'ತೆರಳ್' ನೋ.

ತೆರಳಿ$_1$ 'ತೆರಳಿ' ನೋ.

ತೆರಳ್ಚ$_2$, **ತೆರಣಿ**$_2$ (ನಾ). ತುತ್ತು; ಮುದ್ದೆ; ಉಂಡೆ: ತೆರಳಿ ಕೈಯೊಳಗಿದೆ ಬಾಯೆಮ್ಮ ತಂದೆ ಕುಳ್ಳಿರುಯೆಂದು ಕರೆದರಚ್ಯುತನಾ (ಕೃಷ್ಣಗೋ. ೩-೮೫); ಭಕ್ತನು ಒಂದು ಹೊತ್ತು ಅಡಿಗೆ ಮಾಡಿಕೊಟ್ಟ ಊಟದ ತೆರಳೆಯನ್ನು ಮಧ್ಯಾಹ್ನ ದೇವರೆದುರಿಗೆ ಭಿಕ್ಷವಾಗಿ ಸ್ವೀಕರಿಸಿ ಉಂಡು (ಸಣ್ಣ. VI, ೩೬). **ತೆರಣಿ**$_2$: 'ತೆರಣಿಗಟ್ಟು' ಪರಾ.

[ದೇ.॥ ತಮಿ. ತಿರಳ್ಚಿ, ತಿರಣ್ಚಿ; ತೆಲು. ತೆರಲ]

ತೆರಳ್ಕೆ, ತೆರಳಿಕೆ (ನಾ). ೧. ಚಲನೆ; ಅಲುಗಾಟ; ಸ್ಪಂದನ: ಮುಲಯಾನಿಲನೂದೆ ತೆರಳ್ವ ಚೂತಪಲ್ಲವದ ತೆರಳ್ಕೆ ತದ್ವನವಿಳಾಸನಿಯುಟ್ಟ ದುಕೂಲದೊಂದು ಪಲ್ಲವದ ತೆರಳ್ಕೆಯಂತೆಸೆಯೆ (ಪಂಪಭಾ. ೨-೦೪); ಕಲಶಮನೆತ್ತಿ ನೀರೆಱೆವ ಕಾಂತೆಯ ತೋಳ ತೆರಳ್ಕೆ ಮೇಲುದಂ ತೊಲಗಿಸೆ (ಕಂದ್ರಪು. ೦-೯೮); ಚರಣನ್ಯಾಸದ ತುಱುಗಲ ತೆರಳ್ಕೆಯಭಿನಯದೊಳಭಿನವಂಬೆತ್ತು ಮನೋಹರಮಾಗೆ (ಮಹಾನೇ. ೯-೦೦); ಉರಿಯುಂ ಮೇಣ್ ಕಣ್ಗಳ ತೆರಳ್ಕೆಯಂ ಪೋಲ್ವ ರಶ್ಮಿ ತುರಗಂ ಕಿಱಿಬುತ್ತಿರೆ (ಅಶ್ವಶಾ ೪-೭೨). ೨. ಓಡುವಿಕೆ; ಓಟ: ಪೂಡಿದ ವಾರುವಂಗಳ ತೆರಳ್ಕೆಗೆ ನೇಸಱ ತೇರ ತೇಜಿಗಳಂ ಪಾಡಟಿಪಿರ್ಪಿನಂ . . . ಪರಿತಂದುವು ತೋರ್ಕೆಯ ತೇರ್ಗಳೋಳಿಯಿಂ (ಕಬ್ಬಿಕಾ. ೩೦೩). ೩. ವ್ಯಾಪಿಸುವಿಕೆ; ಹರಡುವಿಕೆ: ರಾಜ್ಯಸಂಪದದ ಪೊದಳ್ಕೆ ತೇಜದ ತೆರಳ್ಕೆ ವಿರೋಧಿಯ ಬಾಳ್ಕೆ ತನ್ನದೆಂಬುದನೆನೆ ಪೆರ್ಮೈಯಂ ತಳೆದಸೋ ನ್ರಿಪರೊಳು ನ್ರಿಪಶೈಲಶಾನ್ತರಂ (ಎಳ. VIII, ಸಾಗರ. ೦೫೯-೧೩ : 1159). ೪. ಹೆಚ್ಚಳ; ಆಧಿಕ್ಯ; ಅತಿಶಯ: ಸೋರ್ವ ಕಂಬನಿಯ ತೆರಳ್ಕೆ ಗದ್ಗದಿಕೆಗೊಳ್ವ ಸರಂ (ಆದಿಪು. ೯-೭೬); ಸಿರಿಯ ತೆರಳ್ಕೆ ಜವ್ವನದ ಪೆರ್ಚುಗೆ ರೂಪವಿಳಾಸದೇಳ್ಗೆ . . . ಮೂರ್ತಿವೆತ್ತುದು (ಪರ್ಧಪು. ೩-೩೪). ೫. ಸಮೂಹ; ಗುಂಪು; ನೆರವಿ: "ತಂಡಂ ತೆರಳ್ಕೆ . . . ಪಂಡಿತರಿಂ ಗಡಣವಂಗಡಂ ಕಿಕ್ಕಿಂದಂ" (ಕವಿಕಂ. ೧೦೭); ಈಳೆಯಿಟ್ಟೆಡೆಯುಂ ತಿಲಕದ ತೆರಳ್ಕೆಯುಂ ಅಸುಗೆಯ ಕುತ್ತುಱುಂ . . . ಎನಿಸಿದ ದೇವರಮಣೋದ್ಯಾನಮಂ . . . ಪೊಗುತಪ್ಪಾಗಳ್ (ಶಾಂತೀಶ್ವ. ೧೦-೭೮ ವ); ಸುವಿಲಾಸದಿಂದಪ್ಪವಸುಗಳ ತೆರಳ್ಕೆ ಘನಜವದಿಂದೆ ಸಪ್ತ ಋಷಿಗಳ ನೆರವಿ . . . ಓಲಗಕೆ ಬಂದುದು (ಜಿಲಪು. ೩-೧೭); ಸುಯ್ವಿಟ್ಟ ಪೊರೆಗಳಂ ಬಿಟ್ಟು ಪೈಗರೆದು . . . ಪೆಣ್ ತೆರಳ್ಕೆಯು ತೆರಳಿ (ಕಾಲಜ್ಞ. ೧೩೧-೩೭೪). ೬. ಮಡಿಕೆ; ನಿರಿಗೆ. 'ತೆರಳ್ಕೆವೆಱು' ಪರಾ. ೭. ಔದಿ; ಒಯ್ಯಾರ; ಬೆಡಗು: ಸ್ಮರಶರಮುಂ ತದೀಯಮೈದುಗೇಯಮುಮುರ್ಚಿದ ಪುಣ್ಣಿನೊಕ್ಕ ನೆತ್ತರನಱಸಲ್ಕೆವೇಡ . . . ಬರ್ಬರೆಯ ಕಿರಾತೆಯೊಟ್ಟಜೆಗೆ ಕಿನ್ನರರೊಟ್ಟಜೆಯುಂ ತೆರಳ್ಕೆಯುಂ (ಶಾಂತಿಪು. ೩-೨೨); ಮಾತಿನ ತೆರಳ್ಕೆಗಳಿಂ ರಸಗೇಯದಂತಿರೀ ಕೃತಿ ಪೊಸದೇಸಿಯಿಂದಸೆದು ಸೋಲಿಪುದಚ್ಚರಿಯೇ ರಸಜ್ಞರಂ (ಲೀಶಾವ. ೪-೬೩); ಧರೆಗೆಸೆದತ್ತು ತಾರಕನಾಜ್ಞೆ ತಾರಕಾಸುರನ ತೆರಳ್ಕೆ ತಾರಕನ ತೀವ್ರತೆ ತಾರಕನುರ್ಬು (ಗಿಕಿ. ೬-೦೦); ವಳಿಯ ತೆರಳ್ಕೆಯುಂ ವಹಣಿ ಯೊಟ್ಟಜೆಯುಂ ಪಸರಂಗಳಿಂಪನುಜ್ವಳಿಸುವ ಡಾಳಮುಂ . . . ಅಱಿವನ್ನರಾರ್ (ಆನಂಪು. ೪-೬೮). **ತೆರಳಿಕೆ** : ೫. ನೆರದರಬೆಯು ರಂಗವಟ್ಟದ ಪರಿಮಳದ ಮುಸ್ತಿಗೆಯ ತುಂಬಿಯ ತೆರಳಿಕೆಯ ಕತ್ತಲೆಯ ಕೆದಱಿವ ಕಣ್ಣ ಬೆಳಗುಗಳ (ಕುವಾ೩ಅ. ೪-೬) ; ತೇರುಗಳ ತೇಜಿಗಳ ಬಲುಮದವಾರಣಂಗಳ ತೆರಳಿಕೆಯ ರಣಚೋರಗಂಡಿಯ . . . ವೀರ ವಱಿಗಳ ರಭಸವರಿ ರಂಜಿಸಿದುದಾ ದುರ್ಗ (ತೊರಣಾ. ೬-೭-೦೫); ಶಿಖಿರಿದಶನದ್ಯುತಿಯ ಬೆಳ್ಮಗೆಯ ಸೂಸಲೆನೆ ನಖರುಚಿಯ ತೆರಳಿಕೆಯ ಹೊರಳಿಯೆನೆ . . . ತಿಳಿನೀರ ತುಂತುರ್ವನಿಗಳಿಸೆದಿರ್ದುವು (ಜೈಮಿಭಾ. ೩೦-೦೧). ೮. ತೆರಳಿಸುವಿಕೆ; ಸಾಗಿಸುವಿಕೆ: ಪುರವರವನಲ್ಲಿಂದ ಮೌಲ್ಯದ ತೆರಳಿಕೆಯ ಮಾಡಿದನು ಮೂಡಲು ಹರಿದು ಮುರಿದು ಸಮುದ್ರಸೇನನ ಸರ್ವಗವತೆಯಲಿ ತೆರಳಿಯಲ್ಲಿಂದಿಂದ್ರಸೇನನನೊರೆಸಿ ಭಂಡಾರವನು ಹೇರಿಸಿ ಮರಳಿ ವಂಗನನಪ್ಪಳಿಸಿದನು (ಕುವಾ೩ಸ. ೪-೯). ೯. ಆಕ್ರಮಣ; ಮುನ್ನುಗ್ಗುವಿಕೆ; ರಭಸ: ಸರಳ ತೆರಳಿಕೆಗೆ ಮರಳಿತು ಕರುಳ ಸುರುಳಿಯೊಳು ಹೊರಳುತ್ತ ಬೀಳುತ್ತಲು . . . ಹಾದಿ ಮರಳಿ ಕಾಸನಕೆಯ್ದಿತು (ಜಡಕಾ. ೬-೩೦); ಇಂದಿನೀ ಬಲವೀ ಸಮರಜಯದಂದವೀ ಸೌರಂಭವೀ ಸರಳಂದವೀ ತೆರಳಿಕೆಯದಾವಂಗೆಂದನವನೀಶ (ಕುವಾ೩ದಿಪ್ರೀ. ೫-೧೭).

[ತೆರಳ್ + – ಕೆ]

ತೆರಳ್ಕೆಯಿಡು (ಕ್ರಿ). ಅಧಿಕಗೊಳಿಸು; ಒತ್ತುಗೊಳಿಸು: ಇತ್ತಲಿಳ್ದು ಮಳೆಯ ರಾಜನುತ್ಸವಕ್ಕೆ ಹೆಚ್ಚುಗೊಟ್ಟು ಚಿತ್ರದೊಳ್ಪವಸ್ತುಸಂತಸಂಗಳಂ ತೆರಳ್ಕೆಯಿಟ್ಟು ರಂಗಮಂಟಪಕ್ಕೆ ಬಂದು (ಮಾಳಕ.ಹ. ೩೩೧-೦೦).

[ತೆರಳ್ಕೆ + ಇಡು$_1$]

ತೆರಳ್ಕೆವೆಱು (ಕ್ರಿ). ಪದರವಾಗು; ನಿರಿಗೆಯಾಗು: ಕರವೆರಸಿದ ಪೊಸದುಗುಲವ ತೆರಳ್ಕೆವೆತ್ತುಡೆ ಪಟತ್ಕಟೀಸೂತ್ರಪರಿಸ್ಫುರಿತದೊಳಂ . . . ಜನಮನೇಂ ಮನಂಗೊಳಿಸಿದುದೇನೋ (ಆದಿಪು. ೪-೩೬).

[ತೆರಳ್ಕೆ + ಪೆಱು$_1$]

ತೆರಳ್ಚು, ತೆರಳಿಚು (ಕ್ರಿ). ೧. ಚಲಿಸುವಂತೆ ಮಾಡು; ಚಲನಗೊಳಿಸು; ಸರಿಸು; ತಳ್ಳು: "ತೆರಳ್ಚು–ಚಲನೇ, ಜಯನೇ ಚ" (ಶಪುಧಾ); ಅಂತಿತನ ಕಟಕಕ್ಕೆ ನಿತ್ಯಕ್ಷಯವ್ಯಯಪ್ರತ್ಯವಾಯಂಗಳಂ ಪೂಡಿ ಬೇಸಱಿಸಿ ನೆಲದಿಂ ತೆರಳ್ಚುವಂ (ಆದಿಪು. ೧೩-೫೮ ವ); ಉಪವನದ ತರುಲತಾಗುಲ್ಮಜಾಲಮಂ ಸೋಂಕಿ ಬಂದು ತಿಳಿಗೊಳಂಗಳೊಳ್ ತೆರೆಯ ನೆರವಿಯಂ ತೆರಳ್ಚಿ . . . ಸಾಯಂತನಸಮಯ ಸವಿೂರಣಂ ಸೌಖ್ಯಸಾರ ಸರ್ವಸ್ವಮೆನಿಸಿದಾಗಳ್ (ಕಂದ್ರಪು. ೯-೪ ವ); ವಾಯುವು (ನಸ್ಸ) ಹಟ್ಟಿಯ ಬಾಗಿಲ ರಜಗಳಂ ತೆರಳ್ಚುವನು (ಕುಳಸ. ೦೪೪). ೨. ಅಲುಗಾಡಿಸು; ಕಲಕು; ಕ್ಷೋಭೆಗೊಳಿಸು; ಕದಲಿಸು: ಮಿಡಿಯಂ ತೆರಳ್ಚಿ ತೆಗೆದೋವದೆ ಕಾಯದೆ ಕೂರಕರ್ಮದಿಂ ಸೊನೆ ಸುರಿವನ್ನೆಗಂ ಪಱಿದು ನೋಯಿಸಿ ಕಾಡಿದೆವು (ಆದಿಪು. ೧೧-೧೩೨); ಆಸುಂ ಕುಲಗಿರಿಗಳ ಸಪ್ಪೊಡೆಂತುಂ ತರಳ್ಚಲಾಱಿನದಱಿಂದೆನಗಂ ಸಗಂಗಳ್ ಪರಿಯವೆನೆ (ಪಂಕತಂ ೨೫೯-೬); ಸಾಗರಮುಂ ಕೂಡೆ ತೆರಳ್ಚಿದಂ ತೊಱಸಿದಂ ತುಳ್ಕಾಡಿದಂ (ಜಗವಿ. ೬-೦೮); ತೆರಳ್ಚಿ ತರಂಗನೀವಿಯಂ...ಭುಜಂಗನಪೋಲ್ ಸುಳಿಗುಂ ಸವಿೂರಣಂ (ಕಬಶಂ. ೨-೬೦). ೩. ಅಲುಗಾಡು; ಕದಲು: ಇಡು ಪೊಲನಂ ತೆರಳ್ಚದಿಸು ಪುಲ್ಲಿಗಳಂ (ಗಿಕಿ. ೧-೮೩). ೪. ಕಳುಹಿಸು; ಸಾಗಿಸು: ಗೋವ್ರಜಂಗಳುಮನಿಂದ್ರಪ್ರಸ್ಥಕ್ಕೆ ತೆರಳ್ಚಿ (ಪಂಪಭಾ. ೬-೩೩ ವ). ೫. ಸುತ್ತಿಸು; ತಿರುಗಿಸು: ವಿರಹಿಗಳಂ ತೆರಳ್ಚಿ ತುಱುವಲ್ಲಿಗೆ ನೀಂ ನೆರಮಯ್ಯೊಳಕ್ಕೆ (ಆದಿಪು. ೧೧-೦೦೦ ಆಡಿಟಿ.); ಇರದೊಯ್ವುದು ತನ್ನಿಚ್ಛೆಗೆ ವರಯವ್ವನದಂದು ಪುರುಷನಂ ಪ್ರಕೃತಿರಜಂಬೊರೆದು ತಿರುಪತ್ತೆ ಸುಟ್ಟುಱಿ ತೆರಳ್ಚಿ ತಱಗೆಲೆಯನುಯ್ವ ತೆಱದಿಂದೆತ್ತಂ (ಕಾರಂಪು. ೫೩೫) ; ಕೆಂದಳದಿಂ ಸಣ್ಣಿಗೆಯುಂ ತೆರಳ್ಚಿ ತಿರುಪತ್ತುಂ (ಕುಸುಮಾ. ೩-೧೦೬). ೬. ಒಂದ

ಗೂಡಿಸು ; ಸೇರಿಸು ; ಕೂಡಿಸು : ಮೂಜುಲೋಕದ ಚೆಲ್ವೆಲ್ಲಮಂ ವಿಧಾತ್ರನೊಂದೆಡೆಗೆ ತೆರಳ್ಚಿದಂತೆ (ಪಂಪಭಾ. ೦-೫೮ ವ) : ಮಾಂಸ ವ್ರಾತಮಂ ಪೊತ್ತು ಕೇಸರಿಚಮರೀವಾಲಂಗಳಂ ತಾಳ್ದಿ ಬಂದರನೇಕರ್ (ಕಾದಂಪು. ೦೬೯) ; ತಂತಮ್ಮ ಭಂಟರರ್ಥಮಂ ತೆರಳ್ಚಿ ಕಟ್ಟಿಕೊಂಡು ಪೊಬಲ್ಗೆವಂದು (ಧರ್ಮಾಮೃ. ೩-೦೯೩). ೭. ಹರಡಂ ; ಪಸರಿಸು : ಪುಷ್ಪಕೇಸರಂ ತೆರಳೆ ತೆರಳ್ಚಿ ಬೀಸಿದುದು ತಂಬೆಲರ್ (ಆದಿಪು. ೨-೬೫) ; ಓಡೆಯರ್ ತೊಡೆದಂಗಾನುಲೇಪನದ ಸೌರಭ್ಯಮಂ ತೆರಳ್ಚಿ ವಿಟಜನ ಘ್ರಾಣಕೆ ಪಾರಣಾಯನೊಡರ್ಚಿಯುಂ (ಕುಸುಮಾ. ೪-೩೯ ವ); ಇಂಬುವೆತ್ತ ತಣ್ಬುಟಿಲೊಳಗೊಲ್ದು ಕೂಡುವಿನಿಯರ್ಗೆ ತೆರಳ್ಚಿದ ಕಂವು ತಣ್ಬು ಪೊಂಪುಟಿಯನಲರ್ಚಿ ಕೀಡುವುದು ತತ್ಪುರಬಾಹಿರ ಮಂದಮಾರುತಂ (ಅನಂಪು. ೩-೦೩) ; ಸರ್ಬಾದಳಮಂ ತಗುಳ್ದುವು ಬೇಸಗೆಯ ಬಿಜುವ ಲರ್ಬೀಸಿ ರಜಮಂ ತೆರಳ್ಚುವಂತಾಗ ವೀರರ್ಬಿಂಕದಿಂದಾಂತು ನಿಂದರ್ (ಕೃಮಿಭಾ. ೫೩-೨೭). ೮. ಅಧಿಕವಾಗಿಸು ; ಅತಿಶಯವಾಗಿಸು : ಗುರು ಗಳುಮಂ ಸುತರಂ ಸೋದರರಂ ಕೊಲಲಾಜಿನಿಂದ ಪಾರ್ಥನನಾಗಳ್ ಹರಿ ರಥಮಂ ಹರಿಯಿಸುತುಂ ತೆರಳ್ಚಿ ತತ್ವಮನೆ ಪೇಟ್ದು ಗಡ ಕಾದಿಸಿದಂ (ಸಮಪ. ೦೦-೧೬೨). ೯. ಉಂಟುಮಾಡು ; ಹೊಂದಿಸು : ಕಳೆಯಂ ಪತ್ತಿಸಿ ರಾಗಮಂ ನಿಲಿಸಿ ನುಣ್ಪಂ ನಣ್ಪುಗೆಯ್ದಿಂಪನಿರ್ಕುಳಿಗೊಂಡು . . . ತೆರಳ್ಚಿ ಜತಿಯಂ ಸೈತೋಜೆಯಂ ತಾಳ್ದಿ ಗೋವಳರಾಯಂ ಕೊಬಲೂದಿದಂ ನೆಗಟ್ಟಿನಂ ಮಾಧುರ್ಯ ತೂರ್ಯಸ್ವನಂ (ಜಗವಿ. ೫-೨) ; ಕವಿಕಂದರ್ಪನ ಬಾಳಚಂದ್ರನ ಲಸದ್ಬಾಣೋತ್ಕರಂ ಕೂರ್ತುವಂದವರ್ಗಂ ನೆಟ್ಟನೆ ಕೂರ್ತು ಕೂಡಿದವರ್ಗಂ ರಾಗಾದಿ ಕಲ್ಲೋಲಮಂ ಕವಿಯಂ ತಾಗಲೊಡಂ ತೆರಳ್ಚುವುದು (ಅನಂಪು. ೦-೫೩). ೧೦. ಹಿಮ್ಮೆಟ್ಟಿಸು ; ಓಡಿಸು ; ಅಟ್ಟು : ಪೂಜಾನುಪೂಂಖವಿಸುತ್ತಿರ್ಪಡೆಯೊಳ್ ತೆರಳ್ಚಿದುವಗು ರ್ವಿಂ ಪರ್ವಿ ಬಾದಿರ್ದ ಮೇಘಮುಖಾಹೀಂದ್ರರ ಪೊಂಕಮಂ ಜಯಕುಮಾರೋನ್ಮುಕ್ತ ಬಾಣಾಳಿಗಳ್ (ಆದಿಪು. ೧೩-೬೦) ; ಗಂಗನ ಮೊತ್ತಮೆಲ್ಲಮಂ ಬೆದಱುವಿನಂ ತೆರಳ್ಚಿ ವಲರುಂ ತುಟಿಲಾಳ್ಗಳನಿಕ್ಕೆ (ಎಳ. II, ೦೩೮-೦೨ ; ಸು. 940). ೧೧. ಹೋಗಲಾಡಿಸು ; ನಿವಾರಿಸು ; ಕಳೆ : ಭುಜಕಂಡುವಂ ತೆರಳ್ಚುವುದರ್ಕಿದುವೆ ವದನೆಂದು ಕದನೋದ್ಯುಕ್ತನಾಗಿ (ಜಗವಿ. ೬-೭೦ ವ). **ತೆರಳಿಚು** : ೪. ಅಲ್ಲಿಗಲ್ಲಿಗೆ ನಡೆದು ಸಾಧಿಸಿ ಕೆಲ್ಲೆ ಕುಹರದ ಕೋಣೆ ಬಾಗು ಗಳಿಲ್ಲವನು ಹೊಕ್ಕಱಸಿ ತೆರಳಿಚಿದನು ಮಹಾಧನವ (ಕುವಾ.ಸಿ. ೩-೪೭) ; ಸುಧಾಮನ ವರಶತಾನಂದನನ ತೆರಳಿಚಿ[ಪಾಣಂ. ಸಿ]ದನು ಮಹೀಪಾಲ (ತೊರಣಾ. ೦-೧೬-೧). ೭. ಆಲಿಗಳನರಳಿಚುತ ನಗೆಗಳ ಮಾಲೆಗಳ ತೆ[ಪಾಣಂ., ಕೆ]ರಳಿಚುತ ಕರೆ ಕಟ್ಟೂಳಿಗದ ಕಾತರರನೆಂದನು ಹರಿ ಸುಪರ್ಣಂಗೆ (ತೊರಣಾ. ೦-೪-೫೪). ೧೦. ಕರ್ಣನ ತೆರಳಿಚಿದನ್ಯೆನೂಱು ಹಜ್ಜೆಯಲಿಂದ್ರಸುತಸೂನು (ಕುವಾ.ದಿಗ್ವಿ. ೬-೫೧) ; ನೀನಿಂದು ಮುರವೈರಿಯಂ ತೆರಳಿಚಿದೆ . . . ಕರ್ಣಜನೆ ನಿಲ್ಲೆನುತೆ ತೆಗೆದಚ್ಚು ಬೊಬ್ಬಿಱಿದನ್ (ಕೃಮಿಭಾ. ೬-೫೮). ೧೧. ಶಂಕರನ ಪರಮಮೂರ್ತಿದು ಹೃದಯಕಮಲದೊಳಿರಿಸಿ ಸಂಧಾನದಲಿ ಜೀವನ ತೆರಳಿಚಿದನು (ತೊರಣಾ. ೨-೩-೦೯). ೧೨. ಅಧಿಕವಾಗು ; ಹೆಚ್ಚಾಗು : ಕರಿಯ ಬರಿಕೈಗೆಣೆಯೆನಿಪ ನಿಷ್ಕುರದ ಧಾರಾಸಾರ ತೆರಳಿಚಿ ಸುರಿದುದು (ಕುವಾ.ಆ. ೨೦-೩೩). [ತೆರಳ್ + – ಚು$_1$]

ತೆರಾಣೆ (ನಾ). ಕೊಡುವ ಹಣ ; ಸುಂಕ ; ತೆರಿಗೆ : ಸರಕಾರಕ್ಕೆ ತೆರ ಬೇಕಾದ್ದೆಷ್ಟು ? ಹೊರಗಿನ ತೆರಾಣೆ ಎಷ್ಟು ? . . . ನೇರವಾಗಿ ತೆರುವ ಅಥವಾ ಸಾಲ ಪಟ್ಟಂದಿಗಳ ರೂಪದಲ್ಲಿ ತೆರುವ ತೆರಾಣೆ ಎಷ್ಟು ? (ಹೊಪ್ರ. ೩೬೩). [ತೆರು$_1$ (< ತೆಱು$_1$) + ಆಣೆ$_5$]

ತೆರಿಗಲು (ನಾ). ಗಡಿಯ ಗುರುತಿಗಾಗಿ ನೆಟ್ಟ ಕಲ್ಲು : ಅಲಿಂದಂ ಪಡುವ ನಡುದು ನಟ್ಟ ಗುಡುಕಲು ಅಲಿಂದಂ ಪಡವ ನಡದು ನಟ್ಟ ತೆರಿಗಲು ಅಲಿಂದಂ ಪಡುವ ನಡದು ನಟ್ಟ ಹಲಗೆಗಲು (ಎಳ. XII, ತಿಪಟೂ. ೦೩೯-೬೮ : ?). P ಇದು 'ಕರಿಗಲ್ಲು' ಇರಬಹುದೇ ?

[ತೆರಿ? + ಕಲು$_1$ (<ಕಲ್$_3$)]

ತೆರಿಗೆ 'ತೆಱಿಗೆ' ನೋ.

ತೆರಿಗೆದಾರ (ನಾ). ತೆರಿಗೆಯನ್ನು ಕೊಡುವವನು: (Rate payer. ಕಪ್ರಸಿ. ೬೭). [ತೆರಿಗೆ (< ತೆಱಿಗೆ) + – ದಾರ$_4$]

ತೆರಿಮೆದ್ದು (ನಾ). ಒಂದು ಬಗೆಯ ಸಸ್ಯ : (ಕ). [?]

ತೆರಿವಿಳಾಸ (ನಾ). ಒಂದು ಬಿರುದು : ಮಹಾರಾಜಾಧಿರಾಜಪರಮೇಶ್ವರ ನೆಲ್ಲರ ಮರುಳಂ ತೆರಿವಿಳಾಸಂ ಮದಗಜಮಲ್ಲ . . . ಮಾಡಿದ ಮರ್ಯ್ಯಾದೆ (ಸಾಇಇ. IX-1, ೭೬-೫ ; 991). [ತೆರಿ? + ವಿಳಾಸ (= ವಿಲಾಸ)]

ತೆರಿಸು 'ತೆಱಿಸು' ನೋ.

ತೆರು$_1$ 'ತೆಱು$_1$' ನೋ.

ತೆರು$_2$ 'ತೆಱಿ^{3}' ನೋ.

ತೆರುಗಡೆ 'ತೆಱುಗಡೆ' ನೋ.

ತೆರುವಣ (ನಾ). ಸುಂಕ ; ತೆರಿಗೆ : ಶಾಸನಗಳಲ್ಲಿ ಬರುವ ತೆರುವಣಗಳು :– ತೆರು, ಮುಂಡಗಡಿ, ಅರುಗಡಿ (ತುಳುನಾ. ೨೭೦).

[ತೆರು$_2$ (< ತೆಱಿ^{3}) + ಪಣ$_3$]

ತೆರೆ$_1$ 'ತೆಱಿ$^3_1$' ನೋ.

ತೆರೆ$_2$ 'ತೆಱಿ$^3_2$' ನೋ.

ತೆರೆ$_3$ 'ತೆಱಿ$^3_3$' ನೋ.

ತೆರೆ$_4$ (ನಾ). ೧. ಅಲೆ ; ತರಂಗ : "ವೀಚೀ, ಭಂಗಃ, ತರಂಗಃ – ಈ ೩ ತೆರೆ" (ಹಲಾಯು. ೦೦೯-೩೦) ; ಪಾಲ್ಗಡಲ ತೆರೆಯ ನೊರೆಯ ದೊರೆಯ ದುಕೂಲಾಂಬರಮನುಟ್ಟು (ಆದಿಪು. ೪-೪೦ ವ) : ಗಂಗಾದೇವಿಯುಮಾ ಕೂಸು ಮುಟುಗಲೀಯದೆ ತನ್ನ ತೆರೆಗಳೆಂಬ ನಳತೋಳ್ಗಳಿನೊಯ್ಯ ನೊಯ್ಯನೆ ತಟ್ಕೈಸಿ ತರೆ (ಪಂಪಭಾ. ೦-೯೫ ವ) ; ಕುಳಿರ್ವಚ್ಚೋದದ ತೆರೆಯೆಲರೊಳೆ ಪುಳಕಂ ಪೊಣ್ಮಿದಂತೆ ತಣ್ಗದಿರ್ಗಳ್ ಕಣ್ಗೊಳಿಸರೆ ಶಶಿಕಾಂತ ಶಿಲಾತಳವೊಂದುಜ್ವಳಿಸಿತಾ ಲತಾಮಂಟಪದೊಳ್ (ಕಾದಂಪು. ೪೪೨) ; ಸಮುದ್ರದ ತಡಿಯಲೊಂದು ಮನೆಯ ಮಾಡಿ ನೊರೆ ತೆರೆಗಳಿಗಂಜಿ ದೊಡೆಂತಯ್ಯ (ಮುಷಾದೀ. ೪. ೫೧-೦೩೪) ; ತು ಂ ತು ಙಿ ಂ ತೆರೆಯಿಂ ವೆರ್ದೆರೆಯಿಂ . . . ಒಪ್ಪಿತ್ತು ನೀರಾಕರಂ (ಗಿಕಿ. ೦-೪೬) ; ವಾರ್ಧಿಯೊಗ್ಗಿನ ತೆರೆಯಂತೆ ಗಾಳಿಗಿದಿರೊಡ್ಡಿದ ಕೆಂಡೊದರಂತೆ (ದಶಕು. ೦೪-೩೬); ತೆರೆಯ ಮೇಲಣ ತಪ್ಪದಂತಿರೆ ಧರಣಿಯೊಲಿದುದು (ಕುವಾ.ವಿ. ೬೫೩. ೬-೫೯) ; ತೇಜಿಯ ಸಾಲೋ ಶರಧಿಯ ತೆರೆಗಳ ರಾಜಿಯೊ . . . ಎನೆ ತಿರುಮಲರಾಜನೈತಂದನುಬ್ಬನಲಿ (ಕಂನವಿ. ೩-೩೩); ತೀರಕ್ಕೆ ಬಂದ ಮೇಲೆ ತೆರೆಯ ಭಯವೇನು ? (ಗಾಡ). ೨. ಸುಕ್ಕು ; ಮಂಡಿಕೆ : ಜರೆಯಿಂದಂ ಪೂರ್ಬ ಜೋಲಲ್ತೆರೆ ತರತರದಿಂದುಣ್ಮೆ ಪೊಣ್ಮಲ್ಕೆ (ಕಾದಂಪೂ. ೦೬೫) ; ನೆರೆ ಕನ್ನೆಗೆ ತೆರೆ ಗಲ್ಲಕೆ ಶರೀರ ಗೂಡುಪೋಗದ ಮುನ್ನೆ . . . ಪೂಜಿಸು ನಮ್ಮ ಕೂಡಲಸಂಗಮದೇವನ (ಬಸವ. ೦೬೧); ಕಯ್ಯ ಕೊಡೆಯಿಂ ಮಯ್ಯ ತೆರೆಯಿಂ ಜೋಲ್ದ ಪೂರ್ವಿ . . . ಮೆಲ್ಲಮೆಲ್ಲನೆ ಚಪ್ಪರದ ಬಾಗಿಲ್ಗೆ ಬಂದೊಡೆ (ನಂಬಿರ. ೬-೨೩) ; ನರೆ ತೆರೆಗಳಿಡಿದಡರಿ ತನು ಜರ್ಜರಿತವಾಗಿ ಯನೇಕ ದಿವಸದಲಿ ಹಿರಿಯರೆಂದೆನಿಸಿದರೆ ಹಿರಿಯರೆ (ಪ್ರಭುಲೀ. ೧೭-೦೪). ೩. ಪರದೆ ; ಜವನಿಕೆ ; ಮುಸುಕು: "ಅಪಟೀ, ಕಾಂಡಪಟಃ, ಪ್ರತಿಸೀರಾ, ಯವನಿಕಾ, ತಿರಸ್ಕರಿಣೀ – ಈ (೫) ತೆರೆ" (ಹಲಾಯು. ೫೨-೦೫೪) ; ಕೆಮ್ಮುಗಿಲ ತೆರೆಯ ಪೊರೆಯೊಳ್ ನೆಗೆದು ಪೊಱಮಡುವ ವಿದ್ಯಾಧರಿಯಂತೆ . . . ಬೌಪಳಿಗೆಯ ಬಾಗಿಲೊಳ್ ನಿಂದು (ಪಂಪಭಾ. ೪-೪೯ ವ) : ಅಸುರೇಂದ್ರಂ . . . ಅಂಬರದ ನಿಱಿಮುಗಿಲ ತೆರೆಗಳ ಪೊರೆಯೊಳಗಣ ನಿಜ

ವಿಮಾನದೊಳಗಂ ಪೊಕ್ಕಂ (ಶಾಂತಿಪು. ೮-೫೨) ; ರವಿ ಬಂದನಸ್ತಾಚಲಕ್ಕು ದಯಕಾಲಕ್ಕೆ ಸುತ್ತಿದ ಕರಿಯ ತೆರೆಯೊ ಎನಿಸಿ (ಸಿದ್ಧರಾ. ೧-೫೪) ; ಗುರು ಕಾರುಣ್ಯಮುಹೂರ್ತಕ್ಕೆ ಜನನಮರಣಂಗಳೆಂಬ ತೆರೆಯರ್ ಪಿಡಿದ ಸಂಸಾರದ ತೆರೆ ಸರಿಯೆ (ಬಸರ. ೪-೧೦೨) ; ತೆರೆಯ ಹಿಡಿದುದು ಮಱವೆ ಸಮ್ಯಜ್ಞಾನ ದೀಧಿತಿಗೆ (ಕುಮ್ಯಾದ್ರೋ. ೦೮-೬೦) ; ತೆರೆಯ ಹಿಂದೆ ನಾನು ಅವಳ ಅಪೂರ್ವ ನೃತ್ಯವನ್ನು ನೋಡುತ್ತಿದ್ದೆ (ಬಾಣಅ. ೧೯); ಅತಿಪ್ರಚ್ಛನ್ನ ಪಟ ದೇಹ ಸುರ್ಕು ತೆರೆಯು (ಶಬ್ದಮಂ. ೧೦೬). 'ತೆರೆವಿಡಿ' ಪರಾ. ೪. (ಪ್ರಕಾಶಗ್ರಾಹಿಯಾದ) ಕಣ್ಣಿನ ಪೊರೆ ; ದೃಷ್ಟಿಪಟಲ : ತೆರೆಯ ಮೇಲೆ ಬಿಂಬವು ಬೀಳಲು, ಆ ಅನುಭವವನ್ನು ಅಲ್ಲಿರುವ ಸೂಕ್ಷ್ಮ ನರಗಳು ಮಿದುಳಿಗೆ ತಿಳಿಸುವುವು (ಬಾಲಪ್ರ. I, ೪೮೪). ೫. ಒಂದು ಬಗೆಯ ಕಣ್ಣಿನ ರೋಗ ; ಕಣ್ಣಿನ ಪೊರೆ : ಪೂವರಸೆ ತೆರೆಯೆಂಬ ಪಲ ವಕ್ಷಿರೋಗಮಂ ಕಳೆಗುಂ (ಅಶ್ವಶಾ. ೧೫-೧೫) ೬. ಬೇಟೆಗಾರರು ಉಪ ಯೋಗಿಸುವ ಒಂದು ಬಗೆಯ ಸಾಧನ ; ಮುಸುಕಿನ ಆಕಾರದಲ್ಲಿ ಮಾಡಿರುವ ಬಲೆ : "ಪಟಹಂ = ಬೇಂಟೆಯ ತೆರೆ" (ಶಮದ. ಪರಿ. ೧); ತೆರೆಯ ಸರಳಿಸುವೆರಳೆ ಬಲುನಾಯ ಬಾಯಿಂದ ಮುರುಚಿ ಕೊಂಡೋಡುವ ಮೊಲಂ (ಸೋಮದ. ೩-೭) ; ತೆರೆಯ ತೋಹಿನ ಮೇಹಿನ ನೀರ ಬೇಂಟೆಯುರ್ವರೆಗಳನೀಕ್ಷಿಸುತವರು (ಅನಂದ. ೧೭-೧೫). 'ತೆರೆವೇಂಟೆ' ಪರಾ. ೭. ಛಾಯಾಚಿತ್ರಪ್ರದರ್ಶನಕ್ಕಾಗಿ ಬಳಸುವ ಬಿಳಿಯ ಪರದೆ ; ಸಿನಿಮಾದಲ್ಲಿ ಚಿತ್ರವನ್ನು ಮೂಡಿಸುವ ಪಟ ; ರಜತಪರದೆ : ಹೆಚ್ಚು ಮಂದಿ ನಟನಟಿಯರನ್ನು ಏಕಕಾಲದಲ್ಲಿ ತೆರೆಯ ಮೇಲೆ ಅವರಿಗೆ ತರುವುದು ಸಾಧ್ಯವೇ ಇಲ್ಲ (ನಾಡಿಗೇ. ೬೧).

ತೆರೆಯ ಊಳಿಗ = ಪರದೆಯನ್ನು ಹಿಡಿಯುವ ಸೇವೆ : ಅರಮನೆಯಲ್ಲಿ ಪ್ರತಿದಿನದಲ್ಲಿಯೂ ನಡೆಯುವಂತೆ ಕಟ್ಟು ಮಾಡಿದ ಊಳಿಗಗಳ ವಿವರ . . . ಬೀಸಣಿಗೆಯ ಊಳಿಗ, ತೆರೆಯ ಊಳಿಗ . . . ಚಾವಡಿ ಕಾವಲು ಊಳಿಗ (ಚಾಮವಂ. ೪೫). ತೆರೆಯ ಸೀರೆ = ಅಂತಃಪಟ : ತೆರೆಯ ಸೀರೆ ಚನ್ನೆಯರೊಲಿದು ಕಟ್ಟಿದರು (ಅಂಜಜ. ೪-೪೦) ; ವೇದಿಕಾಗ್ರದೊಳ್ ತೆರೆಯ ಸೀರೆಯಂ ಪಿಡಿದು ವರನಂ ಕನ್ನಿಕೆಯಂ ಇಕ್ಕೆಲದೊಳಿರಿಸಿ (ಧರ್ಮಪ ೭-೫ ವ). 'ತೆರೆಸೀರೆ' ಪರಾ.

[ದೇ.॥ ತಮಿ. ತಿರೈ ; ಮಲ. ತಿರ ; ತುಳು. ಸೆರೆ ; ತೆಲು. ತೆರ]

ತೆರೆಗಟ್ಟು (ಕ್ರಿ). ನಿರಿಗೆಗಳಿಂದ ಕೂಡಿರು ; ಪದರ ಪದರವಾಗಿರು : ಮಿಱುಮಿಱನಾದ ಮೈ ಹೊಳಹಿಂದ ತೆರೆಗಟ್ಟಿ ನಿಱಿದೇಳ್ವ ಹೊಂಗಾಸೆಯಿಂದ . . . ಬಯಲ್ದೊಱೆ ಹೊಳೆವಂತೆ ಹೊಳೆವರು (ಧರಜ. ೧೩-೧೦೧).

[ತೆರೆ$_4$ + ಕಟ್ಟು$_1$]

ತೆರೆಗಣ್ಣು (ನಾ). ಬಿಟ್ಟಿರುವ ಕಣ್ಣು ;ಬಿಡುಗಣ್ಣು : ತೆರೆಗಣ್ಣಾಗಿ ನೋಡುತಿರೆ, ಗುರುತಿಸಿದೆನಯ್ ಪಿತನನು (ಶ್ರೀರಾಮಾ. ೦೦೪-೧೦೭) ; ಅವನ್ನೆಲ್ಲ ತೆರೆಗಣ್ಣಿನಿಂದ ನೋಡಲು ಕಲಿತಿದ್ದಾನೆ (ಸ್ವಪ್ನಹೊ. ೨೦೨).

[ತೆರೆ$_1$ (<ತೆಱೆ$_1$) + ಕಣ್ಣು (< ಕಣ್)]

ತೆರೆಗಯ್ 'ತೆಱೆಗಯ್' ನೋ.

ತೆರೆಗೂಡು$_1$ (ಕ್ರಿ). ಅಲೆಗಳಿಂದ ಕೂಡಿರು,–ತುಂಬಿರು : ದೇವಗಂಗಾನದಿ ಗಗನಗಾಮಿನಿಯಾದ ಭಾವವ ನೋಡಬೇಕೆನುತ ಭಾವಿಸಿ ತೆರೆಗೂಡಿ ಕಾವೇರಿ ನೆಱೆ ಗಗನಾವಲಂಬಿತೆಯಾಗಿಹಳು (ಕಂನವಿ. ೫-೪೪).

[ತೆರೆ$_4$ + ಕೂಡು$_1$]

ತೆರೆಗೂಡು$_2$ (ನಾ). ಒಳಗಿರುವುದು ಕಾಣುವಂತಿರುವ ಗೂಡು,–ಕೋಶ : ದಿಂಡುಗಳು ಆವರಿಸಿದ್ದರೆ ಆವರಣಗಳು (Closed Cells) ; ಗೂಡು ರೆಕ್ಕೆ ಅಂಚಿನವರೆಗೂ ಇದ್ದರೆ ತೆರೆಗೂಡುಗಳು (Open Cells) (ಕೀಟಬಿ. ೧೯). [ತೆರೆ$_1$ (<ತೆಱೆ$_1$) + ಗೂಡು]

ತೆರೆಗೆಯ್ಸು (ಕ್ರಿ). ಪರದೆಯನ್ನು ಹಾಕಿಸು ; ಮರೆಮಾಡಿಸು : ವೃಷಭೇಂದ್ರನಂ ಕರೆಯಲ್ಕೆಂದದೆಳಸಿ ತೆರೆಗೆಯ್ಸಿ ಬಸವಂ . . . ಅದಱ ಮಱೆಯೊಳಗಿರ್ದಂ (ವೃಷವಿ. ೪೧-೫). [ತೆರೆ$_4$ + ಕೆಯ್ಸು]

ತೆರೆಗೈ 'ತೆಱೆಗಯ್' ನೋ.

ತೆರೆಗೊನೆ (ನಾ). ಅಲೆಯಮೇಲ್ಭಾಗ,-ನೆತ್ತಿ,–ತುದಿ: ಎಲರಲೆಪದಿನೊಗೆದ ತೆರೆಗೊನೆ[ಪಾಠಾಂ. ಮೇಗೊನೆ]ಯ ತೂರ್ಪನಿಯ ತುಂತುಱುಗಳಿಂ ಮಸಗುವ ಮಂಜಿನೊಳಂ ಅಂಜದೆ ಪೊಕ್ಕು (ಕಾದಂಪೂ. ೧೧೭) ; ನೀರ್ವಾನಸಂ ಮೆಲ್ದು ಬಿಸುಡೆ ಪಸರಿಸುವ ತೆರೆಗೊನೆಯೊಳ್ ತೇಂಕಿ ಬರ್ಪ ಜಳಮೃಣಾಳನಾಳಮಂ ಜಳವ್ಯಾಳಮೆಂದು ಕೆಲದ ಬಿಲದಿಂ ಪಿಡಿಯಲೆಂದು ಧೀಂಕಿಡುವ ವಿಷಾಪಹಾರಶಾಲೂರಜಾಲಂಗಳ್ (ಚಂದ್ರಪು. ೫-೪೦ ವ) ; ತೆರೆಗೊನೆಯೊಳ್ ತೆರಳ್ದು ನಿಱಿಗಟ್ಟಿದ ಕತ್ತುರಿಯೊಳ್ಗೆಸಱ್ . . . ಮನಕ್ಕೆ ಬಂದಿರೆ (ವರ್ಧಪು. ೪-೭೩). [ತೆರೆ$_4$ + ಕೊನೆ$_2$]

ತೆರೆಗೊರಳು (ನಾ). ತೆರೆದ ಕೊರಳು ; ಮುಕ್ತಕುಠ: ಈ ಗೀತಪದ್ಧತಿ ಶಕ್ತಿಯುತವಾದದ್ದು, ಹಾಗೆಯೇ ಗಟ್ಟಿಯಾಗಿ . . . ತೆರೆಗೊರಳಿನಿಂದ ಹಾಡಬೇಕಾದುದು (ಯಕ್ಷಬ. ೭೭). [ತೆರೆ$_1$ (<ತೆಱೆ$_1$)+ಕೊರಳು (<ಕೊರಲ್)]

ತೆರೆಗೊಳ್ (ಕ್ರಿ). ೧. ತರಂಗಗಳಿಂದ ಕೂಡಿರು ; ಅಲೆಅಲೆಯಾಗು : ಪರಿಕಲಿಸಿ ಕಲಸಿ ಕಪ್ಪುರದ ರಜಂ ಕುಂಕುಮದ ರಜಂ ಮೃಗೋದ್ಭವರಜಮೇಂ ತೆರೆಗೊಂಡುವೊ ಸಿತಚಾಮರಮರುದಭಿಹತಿಯಿಂದಮಾ ಸಭಾ ಕುಟ್ಟಿಮದೊಳ್ (ಜಗವಿ. ೧೦-೬೫). ೨. ಮಡಿಕೆಯಾಗು; ನಿರಿಗೆಗಟ್ಟು; ಸುಕ್ಕುಗಟ್ಟು : ತೆರೆಗೊಂಡ ಮೊಗಂ ನಡುಗುತ್ತುಮಿರ್ಪ ಕೈ . . . ಸೆರೆಗೊಂಡ ಕಾಲ್ಗಳಿಂ ಮನಕೆ ವಿರಕ್ತಿಯಂ ಪಡೆವ ಮುಪ್ಪಿನ ಪಾರ್ವನ ದೊರ್ಬನೊಪ್ಪಿದಂ (ಪುಣ್ಯಾಸ ೩-೮೧) ; ನೆರೆದಲೆಗೆ ಮಸಿದೊಡೆದು ತೆರೆಗೊಂಡೊಡಲನು ಕತ್ತಲೆಯ ಮಱೆಗೆಯ್ದು (ಚಿಬಪು. ೧೦-೭೬).

[ತೆರೆ$_4$ + ಕೊಳ್$_1$]

ತೆರೆಚಿಮ್ಮಿಸು (ಕ್ರಿ). ಅಲೆಯನ್ನು ಹೊಮ್ಮಿಸು,–ಉಂಟುಮಾಡು : ಈಗ ಚಕಾರ ಎತ್ತದ ಈ 'ಮಹಾಪ್ರಾಣಿ' ಆಮೇಲೆ ಒಂಟಿಯಾಗಿ ತೆರೆಚಿಮ್ಮಿಸುವ ಅಳಲ ಮೊರೆ (ಬದ್ಧಪ್ರ. IV, ಪೀಠಿಕೆ). [ತೆರೆ$_4$ + ಚಿಮ್ಮಿಸು]

ತೆರೆದುಱುಗಲ್ (ನಾ). ಅಲೆಗಳ ಸಮೂಹ,_ಗುಂಪು : ಜಲಚರಂಗಳ ಪೊಳಪಿನೆಸಕದಿಂ ಮಸಗಿ ಮೊಱೆವ ತೆರೆದುಱುಗಲ್ (ಕಾದಂಪೂ. ೧೦೭) ; ಮಿಥ್ಯಾತ್ವವಿಷಜಳಧಿಯ ತೆರೆದುಱುಗಲೆನಿಸಿ ಪೊಱಪೊಣ್ಮಿದಸಂಖ್ಯಾತ ಲೋಕಮಾತ್ರ ದುಃಪರಿಣಾಮಂಗಳುಂ (ವರ್ಧಪು. ೦೦-೫೯ ವ) ; ಪೊಳೆಪು ವಡೆದ ಪಾಲ್ಗಡಲ ತೆರೆದುಱುಗಲೊಳ್ ಪವಡಿಸುವ ಸಿರಿಯಂ ಪೋಲ್ತಿರ್ಪಳ್ (ಕಬ್ಬಿಕಾ. ೩೦೫). [ತೆರೆ$_4$ + ತುಱುಗಲ್ (<ತುಱುಂಗಲ್)]

ತೆರೆದೆಗೆ (ಕ್ರಿ). ೧. ಪರದೆಯನ್ನು ಓಸರಿಸು,–ಸರಿಸು : ನಾಂದಿಯನೋದಿ ಸೂತ್ರಧಾರಕಂ ಭೋಂಕನೆ ತೆರೆದೆಗೆಯೆ (ರಾಜಶೇ. ೫-೧೯ ವ) ; ತೆರೆದೆಗೆಯ ಲಲರಿಚಂ ಬೇಡೆಂಬ ಬಗೆಗೆ ಪೊರೆಯಲ್ಲಿ ? (ಕಾಲೂರ. ೧೮೮-೪೨೮). ೨. ಅಂತಃಪಟವನ್ನು ಎತ್ತು : ಅಂತು ತೆರೆದೆಗೆಯಲೊರ್ಬರೊರ್ಬರ ಮೊಗಮಂ ನೋಟ್ಟಿ ಸಮಯದೊಳ್ ಹೇಮದತ್ತಂ ಕೈನೀರೆಱೆಯೆ (ದಶಕು. ೪-೧೨೪ ವ). [ತೆರೆ$_4$ + ತೆಗೆ$_1$]

ತೆರೆದೆಗೆಸು (ಕ್ರಿ). ೧. ಪರದೆಯನ್ನು ಓಸರಿಸು,–ಸರಿಸು: ೨.=ತೆರೆದೆಗೆ ೨ ಸುಮುಹೂರ್ತಮಂ ಕೇಳ್ದು ತೆರೆದೆಗೆಸಿ ಭೂದಿವಿಜರ ನಲ್ದರಕೆವೆತ್ತು . . . ಧಾರೆಯನೆಱೆದನು (ಚೈಮಿಧಾ. ೩೦-೧೬).

[ತೆರೆ$_4$ + ತೆಗೆಸು (< ತೆಗೆಯಿಸು)]

ತೆರೆದೊಂಗಲ್ (ನಾ). = ತೆರೆದುಱುಗಲ್ : ತೆರೆದೊಂಗಲ್ಪೊರೆದಿರ್ದ ತಣ್ಣೆಲರ್ಗಳಿಂ . . . ಮೆಲ್ನುಣ್ಚರಂಗೆಯ್ವ ಹಂಸ ರಥಾಂಗಂಗಳಿಂ (ಕಾದಂಉ. ೩೫೬). [ತೆರೆ$_4$ + ತೊಂಗಲ್]

ತೆರೆದೊಗಲು (ನಾ). ಸುಕ್ಕುಗಟ್ಟಿದ ಚರ್ಮ,–ತೊಗಲು: ಬಟ್ಟಹೊಟ್ಟೆಯ ತೆರೆದೊಗಲ ಜೀರ್ಣಾಂಗದ ಗಡವ ಗರುಡಿಯ ನಿನ್ನ ಜಗಜಟ್ಟಿತನವನ್ನು ಎಕ್ಕತುಳದಿಂದ ಸವಿಗೊಳ್ಳಬೇಕೆಂಬ ರಣರಣಿಕೆಯು ನನ್ನನ್ನೀ ವೀರತಾಣ್ಡವ ದಿಂದಾಡಿಸುತ್ತಿದೆ (ಮಂತ್ರಶ. ೬೩-೧೨).

[ತೆರೆ$_4$ + ತೊಗಲು (<ತೋಲ್$_1$)]

ತೆರೆದೋಱು (ಕ್ರಿ). ಅಲೆಗಳನ್ನು ಕಾಣಿಸು,–ತೋರು; ಚಂಚಲವಾಗು: ಕಲೆ ಇಲ್ಲದ ಮೌಕ್ತಿಕದಂತೆ ಜರವಿಲ್ಲದ ರತ್ನದಂತೆ ತೆರೆದೋಱದ ಅಂಬುಧಿ ಯಂತೆ ಒಡಲಳಿದವಂಗೆ ನೆಱೆ ಅಱಿದವಂಗೆ . . . ಬೇಱೊಂದೆಡೆ ಇಲ್ಲ (ಮೋಳಿಮಾ. ೧೧೧-೪೩೮). [ತೆರೆ$_4$ + ತೋಱು]

ತೆರೆಪೊಡೆ (ನಾ). ಮಡಿಲು; ಉಡಿ: "ತೆರೆಪೊಡೆಯೊಂದುಂ ಸೋಗಿಲೆಂದುಂ ಮಡಿಲ್" (ಕಶಸಾ. ೬೩-೩೯೬); "ತೆರೆಪೊಡೆಯೆನೆ ಮಡಿಲ್" (ಕಬೃಕೈ. ೭೫).

[ತೆರೆ$_4$ + ಪೊಡೆ$_3$]

ತೆರೆಬಟ್ಟೆ (ನಾ). ಜವನಿಕೆ; ಪರದೆ: "ಪ್ರತಿಸೀರಾ. ಯವನಿಕಾ, ತಿರಸ್ಕರಣೀ–೩ ತೆರೆಬಟ್ಟೆ, ಫರದೆ" (ಸಿದ್ಧಾಂತಿ. ೧೭೮).

[ತೆರೆ$_4$ + ಬಟ್ಟೆ$_2$]

ತೆರೆಬಾಯಿ 'ತೆಱೆವಾಯ್' ನೋ.

ತೆರೆಬೀಳು (ಕ್ರಿ). ೧. ಪರದೆ ಕೆಳಕ್ಕೆ ಬರು: ದೃಶ್ಯ ಮುಗಿಯುವ ಮೊದಲೇ ತೆರೆಬಿತ್ತು (ರೂಢಿ). ೨. (ಆಲಂ) ಮುಗಿ; ಪೂರೈಸು: ಅಲ್ಲಿಗೆ ಆ ಕೆಲಸಕ್ಕೆ ತೆರೆಬಿದ್ದ ಹಾಗೆಯೇ (ರೂಢಿ).

[ತೆರೆ$_4$ + ಬೀಳು$_1$ (<ಬೀಟ್$_1$)]

ತೆರೆಮಗುಳ್ಚು (ಕ್ರಿ). ಅಲೆಯನ್ನು ಹೊಮ್ಮಿಸು,–ಅಪ್ಪಳಿಸು: ಕಾಳಜಲ ಶರಧಿ, ಮೆಯ್ಯ ಮುರಿಯುವ ತೆರದಿ ತೆರೆಮಗುಳ್ಚುತೆ, ಭರದಿ ಮಲೆತುದು, ಮಹೇಂದ್ರ ಶಿಖರಂಗಳುಂ ನಾಣ್ಚೆದರಿ ಗೋಣ್ತಳ್ಗುವೋಲ್ (ಶ್ರೀರಾಮಾ. ೫೮೬-೬೫). [ತೆರೆ$_4$ + ಮಗುಳ್ಚು (<ಮಗುಟ್ಚು)]

ತೆರೆಮರೆ 'ತೆರೆಮಱೆ' ನೋ.

ತೆರೆಮಸಗು (ಕ್ರಿ). ೧. ಅಲೆಯು ಉಂಟಾಗು,–ಏಳು,–ಉಕ್ಕೇರು: ಎಸೆ ವುದು ವಳಿತ್ರಯಂಗಳಿನೆಸೆವಸಿಯಳ ತೆಳ್ವಸಿಱ್ . . . ತೆರೆಮಸಗಿದ ಲಾವಣ್ಯ ರಸದ ಪೊನಲೆಂಬಿನೆಗಂ (ಮಲ್ಲಿಪು. ೩-೬೬); ಕವಲಿಱಿದ ಕುಂತಳಂ ಗಂಗಾ ಧರನೊಳ್ ಪುರುಡಿಸಿ ತೆರೆಮಸಗಿದ ಕಾಳಿಂದೀನದಿಯಂ ಶಿ[ರೋ]ಗ್ರ ದೊಳ್ ಧರಿಸಿದುತಿರ್ಪುದು (ನಂಬಿರ. ೪-೨೪); ಸಾಂದ್ರಚಂದ್ರಿಕೆಯಿಂದಾ ನಂದಸುಧಾಬ್ಧಿ ತೆರೆಮಸಗಿದಂತೆ ಪಲ್ವೆಳಗು ಪಸರಿಸೆ (ರಾಜಶೇ. ೩-೮೦ ವ). ೨. (ಆಲಂ) ಹೆಚ್ಚಾಗು; ಅಧಿಕವಾಗು; ಅತಿಶಯವಾಗು: ಆತ್ಮಜ ಮುಖಸರೋಜಮಂ ಮೋಹರಸಂ ತೆರೆಮಸಗೆ ನೋಟ್ಟು ಜನನಿಯ ಕರಿಯಾಲಿಗಳೆಂಬ ತುಂಬಿಗಳ್ ಧನ್ಯಂಗಳ್ (ಮಲ್ಲಿಪು. ೩-೧೨೦); ತೆರೆಮಸಗೆ ಕಾಂತಿ ನಾಭೀಸರೋಜಮಲ್ಲಾಡೆ (ಗಿರಿಕ. ೩-೪೪); ದಳ್ಳುರಿದುಱುಗಲನು ತನಿಬಿಗಿದು ಭೀಮನ ರಥದ ಸುತ್ತಲು ಸೂಸಿ ತೆರೆಮಸಗೆ . . . ಉರವಣಿ ಸಿತಮಳಾಸ್ತ್ರ (ಕುವ್ಯಾದ್ರೋ. ೧೯-೪೭); ಸಿರಿವೆತ್ತ ಮೆಲ್ಲಡಿಯ ಚೆಲ್ವಿಕೆಗೆ ಮಂಗಳಂ ತೆರೆಮಸಗುವುಗುರ ಕಾಂತಿಗೆ ಮಂಗಳಂ (ಗೀತಗೋ. ೩೪-೪); ಮರುಳ್ಗೆ ಧೂಪಂದೋಱುತಾ ಮನಃಕ್ಷೋಭಂ ತೆರೆಮಸಗೆ ಊದಿದೆನ್ (ಅಶ್ವತ್ಥಾ. ೩-೪೮). [ತೆರೆ$_4$ + ಮಸಗು$_1$]

ತೆರೆಮಱೆ,ತೆರೆಮರೆ (ನಾ). ೧. ಪರದೆಯ ಹಿಂಭಾಗ: ತೆರಮಱೆಯೊಳಿರ್ದ ವಂ ನುಡಿಯೆ ಹಾಹೆಗಳುಲಿದೊಲಱಿಸುವುದು ಜಗದೊಳು (ನಂದಿಮಾ. ೧-೧೮). ೨. ಮುಚ್ಚುಮರೆ; ಗುಟ್ಟು; ರಹಸ್ಯ: ಪ್ರಾಣಕ್ಕೆ ಪ್ರಾಣ ಸಮದರುಶನವಾಗಿದ್ದವರಲ್ಲಿ ತೆರೆಮಱೆ ಎಂಬುದಿಲ್ಲ ನೋಡಯ್ಯ (ಶೂನ್ಯಸಂ. ೯೨-೩). **ತೆರೆಮರೆ**: ೧. ಅಮಲಾಂಗೆ ತೆರೆಮರೆಯಲ್ಲಿ ತಾಂ ಕುಳಿತು (ಸೌಗಂಧಿ. ೮೨-೪). 'ಕಱೆಮಱೆ' ಪರಾ.

ತೆರೆಮರೆಯ ಪದ್ಧತಿ = ಬುರಕಿಯನ್ನು ಧರಿಸುವ ಪದ್ಧತಿ; ಘೋಷಾ ಪದ್ಧತಿ: ಈ ಕಾಲದಲ್ಲಿ ತೆರೆಮರೆಯ ಪದ್ಧತಿ ಪ್ರಚಾರದಲ್ಲಿ ಬರುತ್ತಿತ್ತೆಂಬುದು . . . ತಿಳಿದು ಬರುತ್ತದೆ (ಕರ್ನಾಕ. ೧೩).

[ತೆರೆ$_4$ + ಮಱೆ$_2$]

ತೆರೆಮಾಲೆ (ನಾ). ಅಲೆಗಳ ಮಾಲೆ,–ಸಾಲು: ಕೂಡೆ ಮಸಗಿತು ರಿಪುಚತುರ್ಬಲ ಜೋಡು ಮಾಡಿತು ಕಡಹದಮರರು ಹೂಡಿದದ್ರಿಯ ನಂಬುಧಿಯ ತೆರೆಮಾಲೆ ಕವಿದಂತೆ (ಕುವ್ಯಾದ್ರೋ. ೧೦-೨೯); ಶರಧಿಯ ತೆರೆಮಾಲೆಗಳಂತೆ ಖಾನರ ತುರಗದ ಫೌಜೇಱಿದುದು (ಕುರಾಸಾಂ. ೨೦-೨೪). [ತೆರೆ$_4$ + ಮಾಲೆ]

ತೆರೆಮುಗಿಲ್, ತೆರೆಮುಗಿಲು (ನಾ). ಅಲೆಅಲೆಯಾದ ಮೋಡ: ತೆರೆ ಮುಗಿಲ ಮಱೆಗೆ ನಲ್ಲಂ ಬರೆ ತೆಗೆದೆಳಸುವುದುಮೊಗೆವ ಸುಯ್ಯೆಲರ್ಗಳಿನಾ ನೆರೆದ ಮುಗಿಲ್ ಕರಗೆ ವಿಯಚ್ಚರಿಗೇಂ ಕಲಿಸಿದುದೊ ಲಜ್ಜೆಯೊಳ್ ಕರಗುವುದಂ (ವರ್ಧಪು. ೫-೨೭); ತೆರೆಮುಗಿಲ ಬಱಿವಿಡಿದು ಭಾಸ್ಕರರಥ ಪರಿಪರಿವ ತೆಱದೆ (ಪಾರ್ಶ್ವಪು. ೧೦-೧೦೨); ತೆರೆಮುಗಿಲನಡರ್ವ ವಿದ್ಯಾಧರಿ (ಯಶೋಚ. ೪-೯). **ತೆರೆಮುಗಿಲು**: ದೊರೆಮುಗಿಲು ತೆರೆಮುಗಿಲು ನಿಡುಮೋಹರದ ಮುಗಿಲು (ತೂರರಾ. ೪-೬-೫). [ತೆರೆ$_4$ + ಮುಗಿಲ್]

ತೆರೆಮುಗಿಲು 'ತೆರೆಮುಗಿಲ್' ನೋ.

ತೆರೆಮುಟುಗು (ಕ್ರಿ). ಅಲೆಯಲ್ಲಿ ಮುಳುಗು ನೆತ್ತಿಯಮಿದುಳೊಡೆ ದುಣ್ಮುವ ನೆತ್ತರ ಧಾರೆಗಳೆ ತೀವೆ ತನ್ನಯ ಮುಖದೊಳ್ನೆತ್ತರನೆ ಕಾಱಿ ಕುರುಪತಿ ನೆತ್ತರ ಕಡಲೊಳಗೆ ತೇಂಕಿ ತೆರೆಮುಟುಗಿರ್ದಂ (ಗದಾಯು. ೯-೧೭). [ತೆರೆ$_4$ + ಮುಟುಗು$_1$ (< ಮುಟುಂಗು)]

ತೆರೆಯ (ನಾ). ಪರದೆಯನ್ನು ಹಿಡಿಯುವವನು: ಜನನ ಮರಣಂಗಳೆಂಬ ತೆರೆಯರ್ ಪಿಡಿದ ಸಂಸಾರದ ತೆರೆ ಸರಿಯೆ (ಬಸರ. ೪-೧೦೨).

[ತೆರೆ$_4$ + –ಅ$_7$]

ತೆರೆಯಾಡು (ಕ್ರಿ). ಅಲೆಗಳ ಚಲನೆಯನ್ನು ಹೊಂದು: ಇರವಿನಲ್ಲಿ ಆ ತೆರವು ತುಂಬಿ ತೆರೆಯಾಡುವಂತೆ ಕಡಲು ಅರಿವಿನೊಂದು ಹೊಸಬರವಿಗಾಗಿ ಹಾತೊರೆಯುತಿಹುದು ಒಡಲು (ನೆಲಮು. ೩೬-೩). [ತೆರೆ$_4$ + ಆಡು$_1$]

ತೆರೆಯಿಸು 'ತೆಱೆಯಿಸು' ನೋ.

ತೆರೆಯುಲಿಪು (ನಾ). ಅಲೆಗಳ ಧ್ವನಿ,–ಮೊರೆತ: ಪಲತೆಱದ ಪಱೆಯ ದನಿ ತೆರೆಯುಲಿಪೆನೆ ಪೊಕ್ಕತ್ತು ಕಟಕಮಂ ನೋಟ್ಟರ ಕಣ್ಣಲಸೆ ವಿಭೀಷಣ ವಾಹಿನಿ ಜಲನಿಧಿಯಂ ಬಂದು ಪುಗುವ ಕುಲವಾಹಿನಿವೋಲ್ (ಪಂರಾಮಾ. ೧೨-೮೦). [ತೆರೆ$_4$ + ಉಲಿಪು]

ತೆರೆಯೇಟ್ (ಕ್ರಿ). ಅಲೆಯೇಳು; ಉಬ್ಬರ ಹೊಂದು: ಸಾಗರಮಂ ಕೂಡೆ ತೆರಳ್ಚಿದಂ ತೊಟಸಿದಂ . . . ತೆರೆಯೇಟಲ್ ಕದಡಲ್ ಕೆಸರ್ಮಸಗ ಗಲಂತಾ ದೇವಕೀನಂದನಂ (ಜಗವಿ. ೭-೧೮). [ತೆರೆ$_4$ + ಏಟ್$_1$]

ತೆರೆಯೊಟ್ಟಿಲ್ (ನಾ).=ತೆರೆದುಱುಗಲ್: ತರುಣಿಯರಂಬುಕೇಳಿಗೆ ಲಸಜ್ಜ ಳವಂ ಪುಗುವಾಗಳೊರ್ಬರೊರ್ಬರ ನೆಱಲೊಂದನೇಕವಿಧದಿಂ ತೆರೆಯೊಟ್ಟಿ ಲೊಳೆಯ್ದೆ ತೋಱಲ್ (ದಶಕು. ೧೧-೮೬). [ತೆರೆ$_4$ + ಒಟ್ಟಿಲ್]

ತೆರೆವಂಕು (ನಾ). ಅಲೆಯ ಡೊಂಕು,–ವಕ್ರತೆ: ಆಗಸದ ಬಾಗು, ಚಂದ್ರಮನ ಗುಂಡಿನ ನುಣ್ಪು, ಸಾಗರದ ತೆರೆವಂಕು ... ಈ ಸೃಷ್ಟಿಯಿಂ ನಮ್ಮೊಳಾಗಿಹುದು ರೂಪರುಚಿ (ಮಂಕುಕ. ೨೧೭). [ತೆರೆ$_4$ + ವಂಕು$_2$]

ತೆರೆವಳಿಗೆ (ನಾ). ಗೌಸು; ಅವಕುಂಠನ: ಆ ಸಮರಸಂಭ್ರಮದೊಳ್ ಹೊರಜೆಯೊಳ್ ಕಾಲ್ಗೋದು ನಿಂದ ಮಂದರಾಚಲಧರನಗಲದೆಗೆದ ಮೊಗದ ಹರಿಗೆಯಿಂ ಮುಗಿಲ ತೆರೆವಳಿಗೆದೆ [ಪಾಠಾಂ. ತೆರವಳಿಗೆದೆ, ತೆರೆಯೊಳೊ]ಗೆದ ಬಱಸಿಡಿಲಂತೆಯುಂ (ಅನಂಪು. ೧೪-೬ ವ).

[ತೆರೆ$_4$ + ಪಳಿಗೆ$_2$]

ತೆರೆವಾಯ್ 'ತೆಱೆವಾಯ್' ನೋ.

ತೆರೆವಾಯಿ 'ತೆಱೆವಾಯ್' ನೋ.

ತೆರೆವಿಡಿ (ಕ್ರಿ). ೧. ಅಲೆಗಳನ್ನು ಅನುಸರಿಸು,_ಹಿಂಬಾಲಿಸು : ಕಲುಷರ ಹಿತಂಗಳಿನಿಸುವ ಕೊಳದೊಳಗೆ . . . ಕಣ್ಗೊಳಿಪುವು ತೆರೆವಿಡಿದು ಪೊಳೆವ ರವಿಬಿಂಬಂಗಳ್ (ಕಾದಂಪು. ೩೧೯) ; ನಡುನೀರೊಳೊಗೆದ ನಳಿನಮಂ ಮುಱಿಯಲೆಳಸಿ ಮಗುಳ್ದು ತೆರೆವಿಡಿದೀಸುವೆಳವೇಡಿತಿ (ರಾಜಶೇ. ೬-೩೪ ವ). ೨. ಅಂತಃಪಟವನ್ನು ಹಿಡಿ : ಜೋಯಿಸರ್ . . . ಅಚ್ಚದುಗುಲ ದಿಂದೆರೆವಿಡಿದರ್ (ಉದ್ಭಟ. ೪-೩೬) ; ಮೃದುಶುಭ್ರತೆಯಿಂ ಮೆಱಿದಿರ್ವ ಸೀರೆಯಂ ತೆರೆವಿಡಿದರ್ (ದಶಕು. ೪-೧೨೩) ; ನೆಟ್ಟನೆ ತೆರೆವಿಡಿದರು ಕ್ಷತ್ರ ವಿಧಿಯಿಂದೆ ಮೆಟ್ಟಕ್ಕಿಯ ಮೇಲೆ ನಿಲಿಸಿ (ಪೋಷತ. ೧೩-೬೪). ೩. ಮರೆ ಮಾಡು ; ಮುಚ್ಚು : ನಾರಿಯರು ಕಂಡರು ಸಲಜ್ಜಾಭಾರದಲಿ ತಡಿಗಡಿಗೆ ಹಾಯಿದು ಸೀರೆಗಳ ತೆರೆವಿಡಿದರಂಗೋಪಾಂಗಲತೆಗಳಿಗೆ (ಕುವಾ.ಆ.೧೦-೩೦).

[ತೆರೆ$_{4}$ + ಪಿಡಿ$_{1}$]

ತೆರೆವಿಡು (ಕ್ರಿ). ಪರದೆಯನ್ನು ಬಿಡು : ದೆಶಗೆ ತೆರೆವಿಡಲ್ವೊಮದರೆ ಯಕ್ಕುಂ (ಮುಂಗರಾ. ೬೧-೧೭). [ತೆರೆ$_{4}$ + ಬಿಡು$_{1}$]

ತೆರೆವೇಂಟೆ (ನಾ). ಮುಸುಕಿನ ಆಕಾರದ ಬಲೆಯನ್ನು ಹಾಕಿ ಬೇಟೆ ಯಾಡುವಿಕೆ : ಕಂತು ವಸಂತರ್ ತೆರೆವೇಂಟಿಗಿಟ್ಟ ದುಗುಲಂ ಪರ್ವಿತ್ತು ಚಂದ್ರಾತಪಂ (ಆನಂಪು. ೭-೮೬). 'ಪಟವೇಂಟೆ' ಪರಾ.

[ತೆರೆ$_{4}$ + ವೇಂಟೆ]

ತೆರೆವೊಯ್ಲು, ತೆರೆಹೊಯ್ಲು (ನಾ). ಅಲೆಗಳ ಹೊಡೆತ : ಪರಿಖೆಯ ತೆರೆವೊಯ್ಲಿಂದಂ ತೆರಳ್ದು ತಡಿವಿಡಿದು ತಕ್ಕೈಗಟ್ಟದ ಪೊಂದಾಪರೆಯ ರಜದಂತೆ (ಮಲ್ಲಿಪು. ೩-೭೪); ತೆರೆವೊಯ್ಲಿಂದಾದ ತುಂತುರ್ವನಿ ನಿಜತನುವಂ ತೀವಿ ನಿದ್ರಾಂಗನಾನಿರ್ಭರ ಸಂಭೋಗಾಂತ್ಯದೊಳ್ಪಾಣ್ಮಿದ ಬೆಮರ್ವನಿಯಂ ಪೋಲೆ (ಜಗವಿ. ೦-೫೩) ; ಮರದುಜುಗಲ್ಗಿರದೆಜಗಿ ಮುಱಿವ ಕರಿಕರಕಂಜಿ ನೀರ್ವೊಕ್ಕು ನಡುಗುವಂತೆ ತೆರೆವೊಯ್ಲಿಂ ಕಂಪಿಪಡಿ ಪಡಿನೆಲಲ್ ಪರಿರಂಜಿಸೆಯುಂ (ರಾಜಶೇ. ೬-೩೪ ವ) ; ಲಾಲಾಜಲದಿಂ ತೀವಿದ ಬಾಲೆಯ ಬೆಳರ್ಗಂಪನಾಂತ ಬಾಯ್ ಕಂಗೊಳಿಸುತ್ತಾಲೋಕಿಸೆ ತೆರೆವೊಯ್ಲೊಳಕಾಱಿದ ಬಾಯ್ದೊರೆದ ಸಜಲ ಶುಕ್ತಿಪುಟಂಬೊಲ್ (ದಮಸ್ಕ. ೦-೪೨). **ತೆರೆಹೊಯ್ಲು** : ಲವಣಾಬ್ಧಿ . . . ಬಡವರಿಗೆ ಬದುಕಿಲ್ಲವೆಂದಳ್ಳಿ ಹೊಯ್ವಂತೆ ತೆರೆಹೊಯ್ಲಿನಿಂ ಮೆರೆದುದು (ನಕಪೋ. ೫-೯).

[ತೆರೆ$_{4}$ + ಪೊಯ್ಲು]

ತೆರೆಸೀರೆ (ನಾ). ೧. ಪರದೆಯಾಗಿ ಉಪಯೋಗಿಸುವ ವಸ್ತ್ರ ; ಕಾಂಡಪಟ ; ಜವನಿಕೆ : "ಕಂಡವಡಂ ತೆರೆಸೀರೆ" (ಶಕಾನಿ. ೪) ; ಅರುಣ ಮಣಿಭೂಷಣಂಗಳ ಕಿರಣಂಗಳ್ ಪಸರಿಸಲ್ಕೆ ಮಣಿಭಿತ್ತಿಗಳಾಧರಿಸು ತ್ತಿರ್ದವು ಕೆಂಪಿನ ತೆರೆಸೀರೆಗಳೆಂಬ ಶಂಕೆಯಂ ಭರದಿಂದಂ (ದಾರಪು. ೫-೯೩); ಹೊಂಬಳಿಯ ತೆರೆಸೀರೆಗಳ . . . ಸುವರ್ಣಾವಳಿಯ ದಿಂಡುಗಳೊಟ್ಟಿದವು ಬಂಡಿಗಳ ಜವ ಜಡಿಯೆ (ಕುವಾ.ಗ. ೪-೦೪) ; ಸುತ್ತುವಳಸಿನ ತೆರೆಸೀರೆ ಕಣ್ಗೆ ರಂಜಿಸಿತು (ಪೋಷತ. ೩೬-೬೯) ; ಹೊಳೆವ ದೀಪಂ ಸೋಂಕಿ ತೆರೆಸೀರೆ ಬೇವುತಿರಲು (ಚಿಬಪು. ೬೨-೫೩); "ತೆರೆ" ಯಾಗಿ ಉಪಯೋಗಿಸುವ ಸೀರೆ (= ವಸ್ತ್ರ) ಇದು. ಬಯಲಾಟಗಳಲ್ಲಿ ವೇಷವು ಮೊದಲ ಬಾರಿ ರಂಗಸ್ಥಳಕ್ಕೆ ಬರುವಾಗ ಕೆಲವು ವೇಷಗಳಿಗೆ " ತೆರೆಸೀರೆ " ಹಿಡಿವ ಕ್ರಮವಿದೆ (ಸಪಕೋಧ. ೧೭೮). ೨. ಬೇಟೆಯಲ್ಲಿ ಪ್ರಾಣಿಗಳನ್ನು ಹಿಡಿಯಲು ಉಪಯೋಗಿಸುವ ಒಂದು ಬಗೆಯ ಬಟ್ಟೆ : ಹೆಬ್ಬಲೆ ತೆರೆಸೀರೆ ಕಾಲ್ಕಣ್ಣಿ ಬೆಳ್ಳಾರ ಹಬ್ಬುಗೆವಲೆಗಳ . . . ಹೊತ್ತು ನಡೆದರಂದಬ್ಬರ ಮಸಗೆ ಶಬರರು (ಕುರಾಸಾಂ. ೩೭-೪೩). [ತೆರೆ$_{4}$ + ಸೀರೆ$_{2}$]

ತೆರೆಸು 'ತೆಱೆಯಿಸು' ನೋ.

ತೆರೆಸುತ್ತು$_{1}$ (ಕ್ರಿ). ಪರದೆಯಿಂದ ಸುತ್ತುಗಟ್ಟು,_ಆವರಿಸು : ತನ್ನ ಕೇಸಡಿಯ ಕೆಂಪಿನೊಳುಜ್ಜ್ವಲಚಿತ್ರಭಿತ್ತಿನಿಸ್ಸುಳ ನಿಜಮೌಕ್ತಿಕಾಭರಣ ದೀಧಿತಿಯಿಂ ತೆರೆಸುತ್ತಿದಂತೆ ಕಣ್ಗೊಳಿಸೆ (ಮಲ್ಲಿಪು. ೩-೯೭) ; ತುರ ಗಾವಳಿಯುಂ ತೆರೆಸುತ್ತಿದಂತೆ ಕಾಯಾರವ ಬೀಸಿದಂತೆ (ಎಕ. XI, ಚಿಕ್ಕದು. ೧-೩೨ ; 1319). [ತೆರೆ$_{4}$ + ಸುತ್ತು$_{1}$]

ತೆರೆಸುತ್ತು$_{2}$ (ನಾ). ಅಲೆ ಅಲೆಯಾಗಿ ಸುತ್ತಿಕೊಂಡಿರುವುದು : ಎಳವಾಟೆಯ ತಿರುಳಿಲೆಯ ತೆರೆಸುತ್ತಿನೊಳಮೆಸೆವ ಪಸುರ್ವಂದರೊಳಗೆ (ಲೀಶಾವ. ೧೦-೫೦ ವ) ; ಅದಿರ್ಮುತ್ತೆಯ ಸುತ್ತುಗಳೆ ತೆರೆಸುತ್ತುಗಳಾಗೆ ಯುಂ (ಕಂವ್ರಪು. ೬-೪೬ ವ). [ತೆರೆ$_{4}$ + ಸುತ್ತು$_{2}$]

ತೆರೆಸೇಲೆ (ನಾ). = ತೆರೆಸೀರೆ ೧ : ತೆರೆಸೇಲೆ ಮಱಿಯಾಳಾ ತಱಿದ ಗವಾಕ್ಷ ದೊಳೊರೆದು ನೋಡುತ ಬಾಹ್ಮಜನವ ಅರಸಿಯರಿದ್ದರು . . . ಸಾಲಾಗಿ (ಧರಪ. ೧೨-೩೨). [ತೆರೆ$_{4}$ + ಸೇಲೆ]

ತೆರೆಹೊಯ್ಲು 'ತೆರೆವೊಯ್ಲು' ನೋ.

ತೆರ್ಕಯ್ಸು 'ತಟ್ಕೈಸು' ನೋ.

ತೆರ್ಕ 'ತಟ್ಕೈ' ನೋ.

ತೆರ್ಕಗಡಲ್ (ನಾ), ಇನ್ನೊಂದು ಸಮುದ್ರದೊಡನೆ ಸೇರಿದ ಸಮುದ್ರ ; ಒಟ್ಟುಗೂಡಿದ ಬೇರೆಬೇರೆ ಕಡಲುಗಳು : ಅದಱ ಕರ್ಣಚಮರದ ಝಲ್ಲಿಯಂತೆ ಜಲ್ಲೆನೊಳ್ಕಿ ಧಾರೆಗೆದಱಿ ಪೇರ್ಪೈಸಿ ಸೂಸುವುಭಯಕಟತಟದ ಸೊರ್ಕುಕದಡಿನ ತೆರ್ಕಗಡಲ್ಗಳೊಕ್ಕೈಸಿ ಜಗಮನಿಕ್ಕಲೆಂದು ಮಹಾವ್ರತಮ ನೆತ್ತಿಕೊಂಡ ಕಲ್ಪಾಂತಕಾಳಸ ಕೂರ್ಚಜಾಳಂ ಪರ್ಚಿಕ್ಕಿ ಬೇಱಿ ಬೆರ್ಚಿ ದಂತಿರ್ದಪುದು (ಆನಂಪು. ೧೩-೩೦ ವ). [ತೆರ್ಕ (<ತಟ್ಕೈ) + ಕಡಲ್$_{2}$]

ತೆರ್ಕಗೊಳ್ 'ತಟ್ಕಿಗೊಳ್' ನೋ.

ತೆರ್ಪಂಬತೆ 'ತೆಱಿಪುವಡೆ' ನೋ.

ತೆರ್ಪತ್ತು 'ತೆಪ್ಪಜು' ಪರಾ.

△ ತೆರ್ಪಜು 'ತೆಪ್ಪಜು' ನೋ.

ತೆರ್ಪು 'ತೆಱಿಪು' ನೋ.

ತೆರ್ಪುಜು (ಕ್ರಿ). ಅವಕಾಶವನ್ನು ಹೊಂದು : ಇನಿತಂ ಕೋಪಾವಳೀಪ ಭ್ರುಕುಟಿನಿಟಿಲದೊಳ್ ಪುಟ್ಟಿ ತೆರ್ಪ್ಪುತ್ತಿವಂ ತೊಪ್ಪನೆ ವಾರ್ಪ್ಪಾಯುಂ ದಿಶಾಧೀಶರನಿದರ ದಿಶಾಧೀಶರೊಳ್ ತಾಗಿಕುಂ (ಎಕ. VI, ಚಿಕ್ಕಪು. ೧೭೦-೩೦ ; 1103 ?). [ತೆರ್ಪು (<ತೆಱಿಪು) + ಉಜು]

ತೆರ್ಬು 'ತಿರುವು$_{3}$' ನೋ.

ತೆಲಂಬಯ (ನಾ). ಒಬ್ಬಾತನ ಹೆಸರು : ಇದಕ್ಕೆ ಸಾಕ್ಷಿ ಆಮಚ್ಚಾರ್ ತಲವ್ಯಯರ್ ಕರಾಸರ್ (ಎಕ. IV, ಗುಂಡ್ಲುಪೇ. ೮೬-೫ ; ಸು. 750).

[? + ಅಯ$_{1}$ (<ಅಯ್ಯ$_{1}$)]

ತೆಲವಿ 'ತೆಲಿವಿ' ನೋ.

ತೆಲಸಂಗ (ನಾ). ಒಂದು ಊರಿನ ಹೆಸರು ; ℙ ಈಗಿನ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿರುವ ಊರು: ಆಯ್ಕೂರ್ವ್ವರ್ವ್ವಿದ್ಯಾ ಕುಶಳಧರಾಮರರಿಂ ಲೋಕೋತ್ತರವೆಸೆವುದಸದಳಂ ತೆಲಸಂಗ (ಶಇ. II, ೧೪-೧೧ ; ?). [?]

ತೆಲಿಗ 'ತೆಲ್ಲಿಗ' ನೋ.

ತೆಲಿಗೆ, ತೆಲುಗೆ (ನಾ). ಒಂದು ಬಗೆಯ ಪುರ ; ತಿಲಕವೃಕ್ಷ: "ತಿಲಕಃ = ತೆಲಿಗೆಯ ಮರಂ " (ಕಾಶಕ್ಕ. ೪೭). **ತೆಲುಗೆ** : " ತಿಲಕಃ – ತೆಲುಗೆಯ ಮರನುಂ, ಹಣೆಯ ಬೊಟ್ಟುಂ " (ಕಾಶಕ್ಕ. ೩೩೬). [<ಸಂ. ತಿಲಕ]

ತೆಲಿವಿ, ತೆಲವಿ, ತೆಲುವೆ, ತೆಲ್ಮೆ (ನಾ). ಜಾಣತನ ; ಬುದ್ಧಿವಂತಿಕೆ ; ತಿಳಿವು : ತೆಲಿವಿಯ ತಪ್ಪಿಸಿ ಬಲವನ್ನು ಹೋಗಾಡಿ ಅಲೆಯಪಡಿಸಿದನಾಗ ಚಲದೊಳು ಶನಿಯು (ಯಾನಳ. ೮೭). **ತೆಲವಿ** : ತೆಲವಿಗೆ ತಾನು

ತೆಲವಿಯಾಗಿಯು ಯಾ ಭೇದಭಾವಗಳನ್ನೆಲ್ಲ ಗುರು ಅನುಗ್ರಹದಿಂದ ತಿಳಿದು (ಶತ್ಕಟಂ. ೨೮-೨). **ತೆಲುಮೆ** : ವಿಶೇಷವಾಗಿ ತೆಲುಮೆಯುಳ್ಳ ಮಹಾಪುರುಷರು ತಮ್ಮ ತರುವಾಯ ಹೆಸರು ನಿಲ್ಲುವ ಹಾಗೆ ಮಾಡಿಕೊಳ್ಳಬೇಕು (ಕಾಂಪೂಡ. ೫೩). **ತೆಲ್ಮೆ** : ಯುಕ್ತಿಗಳೊಳ್ ತೆಲ್ಮೆದುಂ (ಸೌಗಂಧಿ. ೨೨೦-೪). 'ತಿಳಿ' ಪರಾ.

[ದೇ.॥ ತಮಿ. ಮಲ. ತೆಳಿವು. ತುಳು. ತೆರಿವು ; ತೆಲು. ತೆಲಿವಿ]

ತೆಲುಂಗ, ತೆಲುಗ, ತೇಲುಂಗ, ತೈಲಂಗ (ನಾ). ೧. ತೆಲುಗು ಭಾಷೆಯನ್ನಾಡುವ ಜನರ ದೇಶ ; ಆಂಧ್ರ : ಕೊಂಗು ಕಳಿಂಗ ಸಿಂಗಳ ಸುಲಾಟ ವರಾಟ ತೆಲುಂಗ ಮಾಗಧೊತ್ಕಂಗ ನ್ಪಪಾಳರಾರುವಿದಿರಾಂ ಪವರಿಲ್ಲೆನಗೆ (ಎಳ. VI, ಕಡೂರು. ೧೪೬-೪ ; ಸು. 1180) ; ಪಾಂಚಾಳ ಚೋಳ ತೆಲುಂಗ ಭೂಭುಜರವನೆಸುಗೆಯ ತಾಳಲಾಜದೆ ತೊಲಗಿದರು (ನೇಮಿಸಂ. ೧೨-೮೩). ೨. ಆಂಧ್ರ ದೇಶಕ್ಕೆ ಸೇರಿದವನು : ಕಕ್ಕಿಜಿ ಗಿಜಿದು ಕುಳ್ಳಿರ್ದ ಲಾಳ ಗೌಳ . . . ತೆಲುಂಗ ಗುರ್ಜರ ಹಮ್ಮೀರ ನೇವಾಳರ್ಮೊದಲಾದ ರಾಜಪುತ್ರರ ಪಂಜ್ರಾಗಳೊಳಂ (ಗಿರಿಕ. ೨-೦೦೫ ವ). **ತೆಲುಗ** ; ೨. "ತೆಲುಗನಾಂಧ್ರನೆನಿಕ್ಕು" (ಮಂಗರಾ. ೦೦೨-೭) ; ನಡುಭವ ಗಾ[ವ್ಣ]ಣ್ಡಂಗೆ ತೆಲುಗರ ಮಾರಿಗಾವುಣ್ಣನೊಳ್ಪಟಜ್ಜಿಟ (ಎಳ. IV, ಹಗ್ಗಡ. ೧೦೪-೧೪ ; 1037) ; ತೆಲುಗರ ಮಾಗೆಯ ಕ್ರಮಿತರ ಮನೆ (ಎಇ. XIII, ೪೬-೭೯ ; 1112) ; ಇವನು ತೆಲುಗನಿವ ಮಗಧ ಇವನು ಕನ್ನಡಿಗ (ನೇಮಿಸಂ. ೨೭-೨೩೩) ; ಅಯ್ಯಯ್ಯ ಚೆನ್ನಾದುದೆನೆ ಕನ್ನಡಿಗರು ರಯ್ಯಾ ಮಂಚಿದಿಯನೆ ತೆಲುಗ ಅಯ್ಯಯ್ಯ ಎಂಚಪೊರ್ಲಾಂಡೆಂದು ತುಳುವರು ಮೆಯ್ಯುಬ್ಬಿ ಕೇಳಬೇಕಣ್ಣ (ಭರಕ. ೦-೭). **ತೇಲುಂಗ**: ೧. ದೊರೆಕೊಳ್ಗೀ ಬಲುಪಿಂತದಲ್ಲದಡೆಯಾ ತೇಲುಂಗ ರಾಜ್ಯಂಗಳಂ ಪುರ ಮೂಜಿಕ್ಕೆಣೆಯಾಗಿ ಮಾಡಿ ಕಳದಾ ತೇಜೋಗ್ರಮೆಂತಾದುದೋ (ಎಳ. XI, ದಾವಣ. ೫೯-೩೮; 1290). **ತೈಲಂಗ** : ೨. ತೆಲಗು ಬ್ರಾಹ್ಮಣರು (ತೈಲಂಗರು) (ಕಥಾಗ. ೮೩).

ತೆಲ್ಗರ ಮಾರಿ = ಒಂದು ಬಿರುದು : ಆಚರಸನ ಪುತ್ರಂ ಸರ್ವ್ವಾಧಿಕಾರಿ ತೆಲ್ಗರಮಾರಿ ಪತಿಕಾರ್ಯ್ಯದುರಂಧರಂ (ಎಇ. XIV, ೪೭೨-೩೪ ; 1103). **ತೆಲ್ಲಂಗರಾಯಸ್ಥಾಪನಾಚಾರ್ಯ** = ಒಂದು ಬಿರುದು : ತೆಲ್ಲಂಗ ರಾಯಸ್ಥಾಪನಾಚಾರ್ಯ . . . ಕರ್ನಾಟರಾಯ ದಿಸಾಪಟ್ಟಿ ದ್ವಾರಾಪತೀ ಪುರವರಾಧೀಶ್ವರ ವಿಷ್ಣುವಂಶೋದ್ಭವ (ಕೂಡ್ಲಾಶಾ. ೧೯-೩ ; 1261).

[ತೆಲುಂಗು + – ಅ,]

ತೆಲುಂಗಿತಿ, ತೆಲುಗಿತಿ (ನಾ). ತೆಲುಗು ಭಾಷೆಯನ್ನಾಡುವವಳು ; ತೆಲುಗಿನವಳು ; ಆಂಧ್ರಸ್ತ್ರೀ : ಕುಜುಂಬಿತಿ, ತೆಲುಂಗಿತಿ, ತೆಲ್ಲಿಗಿತಿ (ಶಮದ. ೨೦೬ ಪ್ರಯೋ). **ತೆಲುಗಿತಿ** : (ಕ).

[ತೆಲುಂಗ + – ಇತಿ, (< – ಇತ್ತಿ)]

ತೆಲುಂಗು, ತೆನುಂಗು, ತೆನುಗು, ತೆಲುಗು (ನಾ). ೧. ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಒಂದು ಭಾಷೆ; ಆಂಧ್ರಭಾಷೆ. 'ತೆಲುಂಗ' ಪರಾ. **ತೆನುಂಗು** : ೧. ತೆಲುರಾಗು, ತೆನುಗು, ತೆನುಂಗು ಎಂಬುದಾಗಿ ತೆಲುಗು ಭಾಷೆಗೆ ರೂಪಗಳನ್ನು ಕೊಡುವುದು (ನೀತಿಸಾ. ೬ ಟೀ೧೪). **ತೆನುಗು** : ೧. ಮೇಲಿನ 'ನೀಶಿಸಾ' ಪ್ರಯೋಗವನ್ನು ನೋಡಿ. **ತೆಲುಗು** ; ೨. ತೆಲುಗುದೇಶ ; ಆಂಧ್ರ : ಒಡೆಯಗೆ ಕೈಮುಗಿದೊಯ್ದನೆ ತೆಲುಗು ನಾಡೊಡೆಯ ಸಾಗಿದನೊಂದು ಬಳಿಗೆ (ಭರಕ. ೨೨-೨೦); ಭುಜ ಬಲಾನ್ವಿತರಾದ ತೆಲುಗು ಭೂಪಾಲರ ಶ್ರಿಜಗ ಮೆಚ್ಚಲು ಗೆದ್ದು ತಂದ ಗಜಘಟೆಗಳ ಶಾಲೆಗಳೊಪ್ಪಿದುವಾಗ (ಕಂಪವಿ. ೬-೩೦).

[ದೇ.॥ ತಮಿ. ತೆಲುಕು, ತೆಲುಙ್ಕು ; ಮಲ. ತೆಲುಙ್ಗು ; ತುಳು. ತೆಲುಂಗು, ತೆಲುಗು ; ತೆಲು. ತೆಲುಂಗು. ತೆನುಂಗು]

ತೆಲುಗ 'ತೆಲುಂಗ' ನೋ.

ತೆಲುಗಕಾಂಬೋದಿ (ನಾ). [ಸಂಗೀತ] ಒಂದು ರಾಗದ ಹೆಸರು: ಗುಮ್ಮ ಕಾಂಬೋದಿ ತೆಲುಗಕಾಂಬೋದಿ ಎಂಬಿವೇ ಕಾಂಬೋದಿದುವು ವಿಶ್ರುರಾಗಂಗಳು (ವಿಪೇಳ. ೨೩೫). [ತೆಲುಗ (<ತೆಲುಂಗ) + ಕಾಂಬೋದಿ]

ತೆಲುಗಾಣೆಯ (ನಾ). ಆಂಧ್ರ ಪ್ರದೇಶ : ತೆಲುಗಾಣೆ [ಪಾಣಾ. ತಿಗುಳಾಣ] ಯ ತೇರಬೀದಿ ತಿಗುಳನಾಡು ತಿರೆದೆಡೆಯಾಡುವ ದಾರಿ (ಕುರಾಸಾಂ. ೩-೪೭). 'ತುರುಕಾಣ್ಯ' ಪರಾ.

[ತೆಲುಗು + ಆಣ್ಯಂ (P ← ತೆಲು. ಆಣಿ = ದೇಶ)]

ತೆಲುಗಿತಿ 'ತೆಲುಂಗಿತಿ' ನೋ.

ತೆಲುಗು 'ತೆಲುಂಗು' ನೋ.

ತೆಲುಗೆ 'ತೆಲಿಗೆ' ನೋ.

ತೆಲುಮೆ 'ತೆಲಿವಿ' ನೋ.

ತೆಲ್ಮೆ 'ತೆಲಿವಿ' ನೋ.

ತೆಲ್ಲ$_1$ (ನಾ). ಶುಭ್ರವಾದುದು ; ಹೊಳಪುಳ್ಳುದಂ. 'ತೆಲ್ಲವಣ್ಣಂ' ಪರಾ.

[←ತೆಲು. ತೆಲ್ಲ]

ತೆಲ್ಲ$_2$ (ನಾ). ಎಳ್ಳೆಣ್ಣೆ : ತೈಲ. 'ತೆಲ್ಲಿಗ' ಪರಾ.

[←ಪ್ರಾ. ತೇಲ್ಲ. / ಸಂ. ತೈಲ]

ತೆಲ್ಲಂಟಿ, ತೆಲ್ಲಂಟಿ, ತೆಲ್ಲಟಿ, ತೆಲ್ಲಟೆ, ತೆಲ್ಲಟ್ಟಿ, ತೆಲ್ಲಟ್ಟು (ನಾ). ೧. ಉಡುಗೊರೆ ; ಬಹುಮಾನ : ಎನಗೆನ್ನೋವನ ಬಂದುದರ್ಕೆದುವೆ ದಲಾ ತೆಲ್ಲಂಟ (ಆದಿಪು. ೦೨-೪೪) ; ಈಶ್ವರಂ ಕೊಟ್ಟುದರ್ಕೆ ತೆಲ್ಲಂಟಿಯೆಂದು ಗೌರೀದೇವಿಯುಮಂಜಲಿಕಾಸ್ತ್ರಮೆಂಬಮೋಘಾಸ್ತ್ರಮಂ ವಿಕ್ರಮಾರ್ಜುನಂಗೆ ಕುಡೆ (ಪಂಪಭಾ. ೪-೨೬ ವ) ; ಲೆಕ್ಕವಿಲ್ಲದೆ ತೆಲ್ಲಂಟಿಯುನಾರ್ತ್ತು ಕೊಟ್ಟು ನೆಗಳ್ದಂ (ಎಇ. XIII, ೩೦೩-೩೪ ; 1125) ; ಅದಂ ಕಂಡರ್ಹದ್ದಾಸದೇವಂ ಕಾಪುದೇವಂಗೆ ಪಟ್ಟಂಗಟ್ಟಿ ಕೊಟ್ಟ ರಾಗರಾಜ್ಯಕ್ಕೆ ತೆಲ್ಲಂಟಿಯಾಗಿ (ಅರ್ಧನೇ. ೨-೩೮ ವ) ; ನಾನು ಹೋಗಿದ್ದೆ ಪಾಪಿ. ನನ್ನ ಸಿರಿಗೌರಿಗೆ ತೇರು ಹಬ್ಬದ ತೆಲ್ಲಂಟಿ ತರಲೆಂದು (ಶುಂಗಶ. ೫೩). ೨. ಮದುವೆಯ ಕಾಲಕ್ಕೆ ವಧೂವರರಿಗೆ ಕೊಡುವ ಬಳುವಳಿ ; ಮುಯ್ಯಿ : " ತೆಲ್ಲಂಟಿ – ನಿಬ್ಬಣಂ " (ಶಮದ. ಪರಿ. ೨) ; ಕರವೊಸೆದಾ ದ್ರುಪದಜೆಯೊಳ್ ನೆರೆದೊಸಗೆಗೆ ತಮ್ಮ ಬೀರಮಂ ಬಿಂಕಮುಮಂ ತೆಜವುಂ ತೆಲ್ಲಂಟಿಯುಂ ತಂದರಿಕೇಸರಿಗಾಗಳೀವ ವೋಲ್ ಬೆನ್ನಿತ್ತರ್ (ಪಂಪಭಾ. ೩-೭೨). **ತೆಲ್ಲಂಟೆ** : ೨. ಪ್ರಣತೇಂದ್ರಂ ವರನಂದು ಬಂದೆಸವ ಸೌಧರ್ಮಾದಿಗಳ್ ಬಂದ ನಿಬ್ಬಣಗರ್ ಕಲ್ಪದನಲ್ಪವಸ್ತುನಿವಹಂ ತೆಲ್ಲಂಟೆ (ಪುಷ್ಪಪು. ೦೨-೦೦೯). **ತೆಲ್ಲಟೆ** : ೧. ತೆಲ್ಲಟೆಯೆಂದು ಗಿರಿಜೆಯ ಮೆಚ್ಚಿ ಕೊಟ್ಟ ನಿಶಿತಾಸ್ತ್ರಮಂ . . . ಕೊಂಡು (ಪಂಪಭಾ. ೧೨-೩೦೧ ವ) ; ಮುಡಿಗೆ ಜೋಳೆಯ ತೆಲ್ಲಟೆಯೆಂಬ ನಾಟ್ಯಾಡಿಯಂತೆ (ಧರ್ಮಾಮೃ. ೬-೦೭೫) ; ಈ ಧರ್ಮಕ್ಕೆ ತೆಲ್ಲಟೆಯಾಗೆ . . . ಕರಂಬಂ ಮತ್ತರು ಹತ್ತುಮನಿತ್ತ (ಕಇಆ. ೮೨-೬೮-೮೮ ; 1117) ; ಚಲ್ಲಿದವು ರಥ ಗಾಲಿ ಮುಱಿದವು . . . ಎಲ್ಲಿಯವು ರಥವಾಜಿ ವಾಜಿಗೆ ತೆಲ್ಲಟಿಯಲೇ ರಥಿಕ ಸೂತರು (ಕುವಾ.ಗ. ೦-೩೦) ; ಮೆಲ್ಲೆಲ್ಲ ಕುಳಿರ ತೆರೆ ಬೆಲ್ಲಾಡುತ್ತಿರಲು ತೆಲ್ಲಟಿಯ ನಗೆನುಡಿಯ ದೊಡ್ಡನೆಂದಂ ಪೋಪೆ (ಕಾಲೂರ. ೭೦-೦೨೮). **ತೆಲ್ಲಟೆ** : ೨. " ತೆಲ್ಲಟಿ[ಪಾಣಾಂ. ಟ್ಟು]ಯೆನಲ್ಕೆ ಮುಯ್ " (ಶತುನಿ. ೭೦) . **ತೆಲ್ಲಟ್ಟಿ** : ೧. ರಸದಂಬುಲದಿನಿಗುಟಿಕಿಂದೆಸೆದರ್ತಮ್ಮೆರ್ದೆಯೊಳೊಪ್ಪುವನುರಾಗವನೇ ರಸನೆಯೊಳುಜಿ ತೆಲ್ಲಟ್ಟಿಯ ನೊಸೆದೊರ್ವರ್ಗೊರ್ವರೀವವೋಲ್ (ವೀರವಿ. ೬-೭೫). **ತೆಲ್ಲಟ್ಟು** : ೨. 'ತೆಲ್ಲಟೆ' ಪ್ರಯೋಗದ ಪಾಠಾಂತರವನ್ನು ನೋಡಿ.

[←ತೆಲು. ತೆಲ್ಲಂಟ, ತೆಲ್ಲಟ]

ತೆಲ್ಲಂಟಿಗೆ, ತೆಲ್ಲಟಿಗೆ (ನಾ). ೧. ಬಹುಮಾನ ; ಉಡುಗೊರೆ. ೨. ಬಳುವಳಿ; ಮುಯ್ಯಿ: 'ತೆಲ್ಲಂಟಿಗೆಗೊಡು' ಪರಾ. **ತೆಲ್ಲಟಿಗೆ** : ೧. "ತೆಲ್ಲಟಿಗೆ

ಯೆನಲ್ ಮರ್ಯಾದೆದುಕ್ಕು" (ಕಶಿರ. ೪೮); ಮತ್ತಮಿಾ ಧರ್ಮಕ್ಕೆ ತೆಲ್ಲಟಿಗೆಯಾಗೆ (ಎಇ. IX, ೨೬೪-೮೪; 1117). ೨. "ತೆಲ್ಲಟಿಗೆವೆಸರು ಮುಯ್ಕಂದಕ್ಕು" (ಶಬ್ದಮಂ. ೬೩). ℙ ಇಲ್ಲಿ 'ತೆಲ್ಲಟಿ' ಎಂಬ ಶಬ್ದದ ಚತುರ್ಥೀವಿಭಕ್ತಿಯ ರೂಪವಾದ 'ತೆಲ್ಲಟಿಗೆ' ಎಂಬುದನ್ನು ಸ್ವತಂತ್ರ ರೂಪವನ್ನಾಗಿ ಕೆಲವರು ಸ್ವೀಕರಿಸಿರಂವಂತಿದೆ. [<ತೆಲ್ಲಂಟಿ]

ತೆಲ್ಲಂಟಿಗೆಗೊಡು, ತೆಲ್ಲಟಿಗೆಗುಡು (ಕ್ರಿ). ೧. = ತೆಲ್ಲಂಟಿಗೊಡು: ಪುರವೆಂಬ ನಲ್ಲನೊಡನೆ ಸಿರಿ ಕೂಡಲು ಶರಧಿ ತನ್ನಯ ವಸ್ತುಗಳನೂ ತರಿಸಿ ತೆಲ್ಲಂಟಿಗೆಗೊಟ್ಟಪೊಲ್ (ವರ್ಧಪು. ೧-೧೦೯). **ತೆಲ್ಲಟಿಗೆಗುಡು**: ೨. ಉಡುಗೊರೆಯಾಗಿ ಕೊಡು: ತನ್ನಸುವಂ ತೆಲ್ಲಟಿಗೆಗುಡುವ ತೆಱದೊಳ್ಕೊಟ್ಟಂ (ಗದಾಯು. ೨-೧೩). [ತೆಲ್ಲಂಟಿಗೆ + ಕೊಡು$_1$]

ತೆಲ್ಲಂಟಿಗೊಡು (ಕ್ರಿ). ಬಳುವಳಿ ಕೊಡು: ವಸ್ತ್ರವಾಹನಸಂದೋಹವಂ ತೆಲ್ಲಂಟಿಗೊಟ್ಟು ವಧೂವರರಂ ತದೀಯಾಗಾರಕ್ಕೆ ಕಳಿಪಿ (ನೇಮಿಪು. ೧-೬೬ ವ). [ತೆಲ್ಲಂಟಿ + ಕೊಡು$_1$]

ತೆಲ್ಲಂಟಿದರ್, ತೆಲ್ಲಟಿದರ್ (ಕ್ರಿ). ಕಾಣಿಕೆಯನ್ನು ತರು; ಉಡುಗೊರೆಯನ್ನು ತರು: ತೆಲ್ಲಂಟಿದರ್ಪ ಸಾಮಂತಸಂದೋಹದಿಂ . . . ; ಕರಮಂ ಕಣ್ಗೆಸೆದುದು ನರೇಂದ್ರಭವನಾಂಗಣಂ (ಅಜಿಪು. ೪-೬ ಕಗಳ). **ತೆಲ್ಲಟಿದರ್**: ಚೆಲ್ವಾದರಾ ಕಾಮನುತ್ಸವದಿಂ ತೆಲ್ಲಟಿದಂದ ಮಾಧವವುರ ಶ್ರೀಲೀಲೆಯಂ ಬಾಲೆಯರ್ (ಶಾಂತಿಪು. ೮-೧೫). [ತೆಲ್ಲಂಟ + ತರ್]

ತೆಲ್ಲಂಟೆ 'ತೆಲ್ಲಂಟಿ' ನೋ.

ತೆಲ್ಲಕಾಕಮುಪ್ಪಿ (ನಾ). ಒಂದು ಬಗೆಯ ಸಸ್ಯ: ಬೀೞ್ಕಾಕವುಪ್ಪಿ, ಪೆಲ್ಲೆ, ತೆಲ್ಲಕಾಕಮುಪ್ಪಿ (ಮೃಔಗಿ. ೧೯-೩೩೪). [?]

ತೆಲ್ಲಟಿ 'ತೆಲ್ಲಂಟಿ' ನೋ.

ತೆಲ್ಲಟಿಗ (ಗಂ). ಹೊಳಪುಳ್ಳ; ಪ್ರಕಾಶಮಾನವಾದ: ಅಲ್ಲಿ ರಂಜಿಪ[ಪ] . . . ಪಲ್ಲವಿತವಮಾದ ಮರಕತ ನೀಲವಜ್ರದಿಂ ತೆಲ್ಲಟಿಗ ಮಣಿಗಳಿಂದ (ಲಿಂಗಪು. ೩-೨೭). [<ತೆಲ್ಲ$_1$]

ತೆಲ್ಲಟಿಗೆ 'ತೆಲ್ಲಂಟಿಗೆ' ನೋ.

ತೆಲ್ಲಟಿಗೆಗುಡು 'ತೆಲ್ಲಂಟಿಗೆಗೊಡಂ' ನೋ.

ತೆಲ್ಲಟಿಗೊಳ್ (ಕ್ರಿ). ೧. ಬಹುಮಾನವಾಗಿ ಪಡೆ. ೨. ಬಳುವಳಿಯನ್ನು ಸೆಳೆ; ಮುಯ್ಕಿಯನ್ನು ತೆಗೆದುಕೊಳ್ಳು: ಅವನಿಪ ಕಂತುವೆಚ್ಚ ಭವಬಾಣಮದೋವದೆ ಕೊಂಡು ಚಂಡವಿಕ್ರಮನ ಶಿರಕ್ಕೆ ತನ್ನ ಶರಮಂ ತವೆ ತೆಲ್ಲಟ [ಪಾಠಾಂ. ತಲೆ]ಗೊಳ್ಗುಮೆಂದು . . . ಓಡಿದಂ ನಿಜವುರಕ್ಕೆ (ಕುಸುಮಾ. ೧೧-೨೪). [ತೆಲ್ಲಟಿ (<ತೆಲ್ಲಂಟಿ) + ಕೊಳ್$_1$]

ತೆಲ್ಲಟಿದರ್ 'ತೆಲ್ಲಂಟಿದರ್' ನೋ.

ತೆಲ್ಲಟೆ 'ತೆಲ್ಲಂಟಿ' ನೋ.

ತೆಲ್ಲಟ್ಟಿ 'ತೆಲ್ಲಂಟಿ' ನೋ.

ತೆಲ್ಲಟ್ಟು 'ತೆಲ್ಲಂಟಿ' ನೋ.

ತೆಲ್ಲಪುನಿ (ನಾ). ಒಂದು ಬಗೆಯ ಸಸ್ಯ; ಬಿಳಿಯ ತಾಳೆ: ಬಿಳಿಪೊಳಿಕು . . . ಬೀಳತಾಳಿ, ತೆಲ್ಲಪುನಿ (ಮೃಔಗಿ. ೩೯-೭೭೩). [?]

ತೆಲ್ಲಯಿಸು, ತೆಲ್ಲಯ್ಸು, ತೆಲ್ಲೈಸಂ (ಕ್ರಿ). ೧. ದಪ್ಪವಾಗು; ಮಂದವಾಗು: (ಕ). ೨. ಗಟ್ಟಿಯಾಗಂ; ಬಲಗೊಳ್ಳು; ಶಕ್ತಿಯುಂತವಾಗು: (ಕ). ೩. ಹೆಚ್ಚಾಗು; ಅಧಿಕವಾಗು: (ಕ). ೪. ಒಟ್ಟಾಗು; ಗುಂಪಾಗು: ಕಲ್ಲದಾಡುವ ತೆಲ್ಲಯಿಸಿದ ಮಲ್ಲಗಿಳಿಯು ಸವಿನುಡಿಗೆ . . . ತಲ್ಲಣಂಗೊಂಡು (ರಾಮಾಶ್ವ. ೭೩-೪). ೫. ಜಿಡ್ಡಿನಿಂದ ಕೂಡಿರು; ಸ್ನಿಗ್ಧವಾಗು; ಅಂಟಂಟಾಗು: (ಕ). ೬. ಬೆಳಗಿಸು; ಪ್ರಜ್ವಲಗೊಳಿಸು: ತೆಲ್ಲಯಿಸಿ ಮಂಗಳಾರತಿಯ ವನಿತೆಯರೆಲ್ಲ ಭುಲ್ಲಯಿಸಿ ಹಾಡಿ ಹರಸುವ ಹೊತ್ತು (ಸಿದ್ಧರಾ. ೮-೮೮); ತೆಲ್ಲಯಿಸಿದಂ ಮೇಳಯಿಸಿದಂ (ಶಮುದ. ೫೪ ಪ್ರಯೋ); ಪೊಲ್ಲವೆಯಂ ನಿರ್ಮಾಣವುಂ ತೆಲ್ಲಯಿಸುತೆ ತಮಗೆ ತಮಗೆ ಪುದುವಲ್ಲದೊಡಂ ನಿಲ್ಲದೆ ಜಗದೊಳ್ಪಾಳ್ವರೆ ಸಲ್ಲಲಿತರ್ (ಪಂದ್ರಳ್ಳು. ೧೨-೨೭). **ತೆಲ್ಲಯ್ಸು**: ೭. ಅಲ್ಲಲ್ಲಿ ಕೈದೀವಿಗೆಗಳು ತೆಲ್ಲಯ್ಸೆ [ಪಾಠಾಂ. ತೆತ್ತೈಸೆ, ಬೆಳಗೆ]ಪಲ್ಲವಿಸೆ ಪಲ್ಲವಸಶ್ರಿಗೆ ಮೇಲ್ಮಸಗೆ (ನಂಬಿರ. ೧೦-೪೯). **ತೆಲ್ಲೈಸು**: ೧. "ತೆಲ್ಲೈಸಿತೆಂದು ಮುಂದೈಸಿದಕ್ಕೆ ನಾಮವದು" (ಶಬ್ದಮಂ. ೫೦); "ತೆಲ್ಲೈಸಿತೆನೆ ಬುಧರಿನದು ಮುಂದೈಸಿಯೆ ನಿಂದರ್ಥಮಪ್ಪುದು" (ಕವಿಕಂ. ೨೦೨). ೩. ತಂಪಿನಿಂ ತೆಲ್ಲೈಸಿ ಕೋಡುಗುಟ್ಟುವ ಗಾಳಿ (ಕಾಲೂರ. ೭೫-೧೩೮). ೬. ಭರದಿಂ ತೆಲ್ಲೈಸಿದ ಬಹು ಕರದೀಪಿಕೆಗಳ ಮರೀಚಿಮಾರ್ಗವಸಂತಾ ಪುರಲಕ್ಷ್ಮಿಯ ಸೀಮಂತದ ಸುರುಚಿರಕುಂಕುಮದ ರೇಪೆಯೆನಿಸಿತ್ತಾಗಳ್ (ಪುಹಾನೇ. ೦೪-೪೭). ೭. ಅಳವಡಿಸು (?): ಅಂತು ದೇವತೆ ಕೊಟ್ಟ ಗದಾದಂಡಮನುರ್ವಿದಮರಿಯಂ ನಿಮಿರ್ಚಿ ಪುಲ್ಲಿಯಂ ತೆಲ್ಲೈಸಿ ಗೊಂಡೆಯವಂ ದಂಡೆಗೊಳಿಸಿ ಚಾರಣಾಕೃತಿಯಂ ಪಿಡಿದಾಗಳ್ (ದಶಕು. ೨-೨೫ ವ). [ತೆಲ್ಲ? + –ಇಸು$_3$]

ತೆಲ್ಲಯ್ಸು 'ತೆಲ್ಲಯಿಸಂ' ನೋ.

ತೆಲ್ಲವಣ್ಣ (ನಾ). ಶುಭ್ರವಾದ ಬಣ್ಣ; ನುಣುಪಾಗಿ ಹೊಳೆಯುವ ಬಣ್ಣ: ಜೊಲ್ಲಣಿಗೆವಡೆದ ಚಿಂತಾರತ್ನಕಳಶದಿಂ ತೆಲ್ಲವಣ್ಣದ ಬಾಗಿಲಿಂ ಕನಕವಲಗೆಯಿಂ (ಲಿಂಗಪು. ೩-೩೧); ಪಲ್ಲವಿತವಾದ ಹಲಸವರೆ ಪರ್ಕರಿಯವರೆ ತೆಲ್ಲಣಿಪ ಸವಿಗೊಡುವ ಸಾಲವರೆ ಸರಳವರೆ . . . ತೆಲ್ಲವಣ್ಣದ ಸೊಂಪಿನವರೆ (ಲಿಂಗಪು. ೪-೪೫). [ತೆಲ್ಲ$_1$ + ಬಣ್ಣ$_3$]

ತೆಲ್ಲಿಗ, ತೆಲಿಗ, ತೇಲಿಗ$_2$ (ನಾ). ಎಣ್ಣೆಯನ್ನು ತೆಗೆದು ಮಾರಿ ಜೀವಿಸುವವನು; ಗಾಣಿಗ: "ತೆಲ್ಲಿಗ=ತೈಲಿಕ=ಎಣ್ಣೆವ್ಯಾಪಾರಿ" (ಕದೃಕೋ. ೦೮); ತೆಲ್ಲಿಗ ಸೇಣಿಗ ಮನೆವೀಡಿಲ್ಲಾದದು ತೆಱಿದುಂಂ (ಎಇ. XIV, ೧೯೦-೩೯; 725); ಅಲ್ಲಿಯ ತೆಲ್ಲಿಗರು ಬಿಟ್ಟ ಧರ್ಮವೆಂತೆಂದಡೆ . . . ಸೋಟಿಗೆಯೆಣ್ಣೆಯಂ ಬಿಟ್ಟರು (ಎಳ. VII (8), ಶಿಕಾರಿ. ೩೩೪-೩೭; ಸು. 1100); ಹಿಂಡಿಯಂ ನಂಬಿಯೆಣ್ಣೆಯನುಗುವ ತೆಲ್ಲಿಗನುಮಂ (ಧರ್ಮಾಮೃ. ೮-೩೦); ಪಡವಂದಿಗಂ, ಪತ್ತಳಿಗಂ, ತೆಲ್ಲಿಗಂ (ಶಾಪಾಳೂ. ೦೭೩ ಪ್ರಯೋ); ಹೇಱಿ ಬಂದೆಳ್ಳ ರಾಸಿಗಳ ತೆಲ್ಲಿಗರೊಯ್ದು ಗಾಣವಾಡೊಳ್ಳಿತೆನಿಸಿದ ತೈಲಕುಂಭ ಕೋಟಿಗಳ ತಂದರು (ಸಿದ್ಧರಾ. ೮-೩೧); ಖಿಲಪ್ರವರ್ತನಂ ತೆಲ್ಲಿಗರೊಳ್ . . . ಅಲ್ಲದೆ ತನ್ನೊಳಿಲ್ಲೆನಿಸಿರ್ಪುದು (ದಶಕು. ೦-೨೩ ವ); ತೆಲ್ಲಿಗಂಗೆಳ್ಳನುದಿನಂ ಬೆಳೆದಂದವಾಯ್ತು (ಬಸಪು. ೪೩-೭೦). **ತೆಲಿಗ**: ತೆಲಿಗರು ಸೇಡೆಯಂ ಬಿಟ್ಟರು ಸಖರ ಸೇಡೆಯುಂ ಬಿಟ್ಟರು (ಎಳ. V, ಜೀಲೂರು. ೦೭೭-೨೮; 1162). **ತೇಲಿಗ$_2$**: ಪಟ್ಟಣಸಾವಿ ಸೋವಿಶೆಟ್ಟಿಯರು ಮುಖ್ಯವಾದ ಸಮಸ್ತ ನಗರಂಗಳುಂ ತೇಲಿಗರುವಿರ್ದ್ದು ಬಿಟ್ಟ ದತ್ತಿ (ಎಳ. VIII, ಸೊರಬ.೦೪೦-೮೫; 1199); ದೂಸಿಗರುಂ ಮುಖ್ಯವಾಗುಳಿದ ಪರದರುಂ ತೇಲಿಗರುಂ (ಎಇ. XIII, ೨೦-೩೦; 1204); ತೇಲಿಗರ ಗಾಣವೊಳಗಾಗಿ ಆರಮನೆಯ ನ್ಯಾಯವನ್ಯಾಯ ಮಳೆ ಬ್ರಯ ಏನು ಬಂದಡಂ ಆ ಸ್ಥಳದಾಚಾರ್ಯ್ಯರು ತಾವೇ ತೆತ್ತು ನಿರ್ನ್ನಯಿಸುವರು (ಎಳ. II, ೩೩೩-೦೭; 1206 ?); ತೇಲಿಗ ಹಿರಿಯ ತಂಮನ ಮಗ ರಾಮಗೆ ಮೊಂದು ಗ ೧ (ಎಳ. III, ತಿರುಮ. ೨-೭; 1367).

[ತೆಲ್ಲ$_2$ + –ಇಗ./ಸಂ. ತೈಲಿಕ]

ತೆಲ್ಲಿಗಗೆಱಿ (ನಾ). ಒಂದು ಕೆರೆಯ ಹೆಸರಂ: ಹಿರಿಯ ಕೆಱಿಯ ಕೆಳಗೆ ಗದ್ದೆ ಮು ೧ ತೆಲ್ಲಿಗಗೆಱಿಯ ಕೆಳಗೆ ಗದ್ದೆ ಮತ್ತೆ ೧ ಕ ೪೫೦ (ಎಳ. XI, ದಾವಣ. ೨೦-೦೯; 1045). [ತೆಲ್ಲಿಗ + ಕೆಱಿ^{1}]

ತೆಲ್ಲಿಗಗೇರಿ (ನಾ). ಗಾಣಿಗರ ಬೀದಿ,–ಕೇರಿ: ಮಂತ್ರವಾದಿಯಂ ಕಂಡ ಗ್ರಹದಂತೆ ತೆಲ್ಲಿಗರ್ ತಲ್ಲಣಿಸೆ ತೆಲ್ಲಿಗಗೇರಿಯಂ ಪೊಕ್ಕ (ಧರ್ಮಾಮೃ. ೩-೨೧). [ತೆಲ್ಲಿಗ + ಕೇರಿ]

ತೆಲ್ಲಿಗವನೆ (ನಾ). ಗಾಣಿಗನ ಮನೆ : ಮೂಡಣ ತ[ಳ]ದ ಮೂಲು ಹ[ತ್ತಿ]ಯ ತೆಲ್ಲಿಗವನೆಯುಮನಾ ಶತದೊಳಗೆ . . . ಸರ್ವ್ವಬಾಧಾಪರಿಹಾರವಾಗಿ ಬಿಟ್ಟರು (ಕಇ. II, ೧೦-೩೦ ; 1090) ; ದೇವರ ನಂದಾದೀ[ವ]ಗೆಗೆ ಬಿಟ್ಟ ××× ತೆಲ್ಲಿಗವನೆ (ಶಾಇಶಾ. XI-II, ೦೫೯-೩೯ ; 1089).

[ತೆಲ್ಲಿಗ + ಮನೆ]

ತೆಲ್ಲಿಗಿತಿ (ನಾ). ಗಾಣಿಗರ ಹೆಂಗಸು ; ಗಾಣಿಗಿತ್ತಿ : ತೆಲುಗಿತಿ, ತೆಲ್ಲಿಗಿತಿ, ಚಿಪ್ಪಿಗಿತಿ (ಕಮಾದ. ೨೦೦ ಪ್ರಯೋ). [ತೆಲ್ಲಿಗ + – ಇತಿ$_1$ (< – ಇತ್ತಿ)]

ತೆಲ್ಲೈಸು 'ತೆಲ್ಲಯಿಸು' ನೋ.

ತೆವಟಿಗೆ 'ತಿಪ್ಪದಿಗೆ' ನೋ.

ತೆವಟಿಗೆಬುಲ್ಲು 'ತಿವಟಿಗೆ ಬುಲ್ಲು' ನೋ.

ತೆವಟು 'ತೆಂಟು' ನೋ.

ತೆವಡೆ 'ತೆಟ್ಟಿ' ನೋ.

ತೆವಡೆಗಟ್ಟು (ಕ್ರಿ). ಕಂತೆಕಟ್ಟು ; ಸಿವುಡುಗಟ್ಟು : ಹೊಲದಲ್ಲಿ ಆಳುಗಳು ಜೋಳದ ತೆನೆಗಳನ್ನು ತೆವಡೆಗಟ್ಟುತ್ತಿದ್ದಾರೆ (ಕೂಧಿ).

[ತೆವಡೆ (< ತೆಟ್ಟಿ) + ಕಟ್ಟು$_1$]

ತೆವರ್ 'ತೆವಂರ್$_2$' ನೋ.

ತೆವರ 'ತೆವುರ್$_2$' ನೋ.

ತೆವರಿ 'ತೆವುರ್$_2$' ನೋ.

ತೆವರಿಕೆ (ನಾ). ಹೀಯಾಳಿಕೆ : ಆಗವೋಡಲ್ಕವರು ಪಿಡಿತಂದು ನಮ್ಮ ತೆವರಿಕೆಗುಮ್ಮಟಲಿಲ್ಲರೆ ಈಗ ದಂಡಂ ಮಣಿಯೆನುತ್ತ ಬಗ್ಗಿಸಿ ಕೆಡಹೆ (ಕಪು. ೭-೩-೩೭). [ತೆವರು$_1$ (< ತೆವರ್$_1$) + – ಇಕೆ]

ತೆವರಿಸು (ಕ್ರಿ). ೧. ಅಟ್ಟು ; ಓಡಿಸಂ : ಇಲ್ಲಿಗಾತಂ ಬರಲು ಕದಹುದೆಱೆಯದೆ ಕಟಿಗಳನಾಡಿಸಿ ಕೆಳದಿಯರ ಕಯ್ಯಿಂದ ತೆವರಿಪುದೆನುತೆ ಬುದ್ದಿಗಲಿಸಿ (ಸೌಂದಪು. ೧೩-೩೧) ; ತವಕದಲಿ ತತ್ಕ್ಷಣದಿನಭ್ಯಕೆ ನ ವ ರು ಧಿ ರ ಮುಬ್ಬೆದ್ದು ಸುರಸೈನ್ಯವನು ತೆವ[ಪಾಣಂ. ಬೆದ]ರಿಸತೇನನೆಂಬೆನು ಸಮರ ಸಂಭ್ರಮವ (ತೊರಾ. ೬-೩೩-೪) ; ಬ ವ ರ ಕೈ ದು ವ ಸಿದ್ಧಸಾಧ್ಯರ ತೆವರಿಸುತೆ ರಣವಿಜಯ ರಭಸದ ರವಳಿಯಿಂ ಸಂಚರಿಪ ಸಾಲ್ವನ ಕಂಡ ವಿಹಗೇಂದ್ರ (ಅಂಬಿಕಾ. ೨೨-೦೪). ೨. ಧ್ವಂಸ ಮಾಡು; ನಾಶಗೊಳಿಸು: ತೆವರಿಸಿದನನಿಬರ. [ಪಾಣಂ. ಸವರಿದನು ಮತ್ತಾ] ಚತುರ್ಬಲನಿವಹವನು ನಿವಿಷಾರ್ಧದಲಿ (ಕುವಾ.ಗ. ೨-೩೨) . ೩. ಕಳೆ ; ನಿವಾರಿಸಂ ; ಪರಿಹರಿಸು : ಲಿಂಗವಿದು ತಾಪತ್ರಯಂಗಳಂ ತೆ ವ ರಿ ಪು ದು (ವಿದ್ಗೀಪು. ೨೨-೧೦೬) ; ತಂದೆ ಪಂಚಾಕ್ಷರಿಯ ಮಂತ್ರಲಸದುಪದೇಶಮಂ ದಯದೊಳಿತ್ತೆನ್ನ ಪಾ ಪ ಕು ಲ ಮ ಂ ತೆವರಿಸು (ರಾಷಕ. ೧೦-೧೯). ೪. ಜರೆ ; ಹೀಯಾಳಿಸು : ಇರುಳರಸನಂ ಜಱಿವ ವದನವನಜದಯಿಸಳ ತೆಱನಂ ತೆವರಿಸುತಿರದೆ ತೊಳಗುವ ನಯನವಳಹರಿಯಿರವ ನೆಱಿ ನಗುವ ನಡು . . . ನೆಲಪರಿಗಿಳಿದ ನಿಡುಜಡೆಯ ತರುಣಿಯರು (ನಂದಿಮಾ. ೯-೩೪).

[ತೆವರು$_1$ (<ತೆವರ್$_1$) + – ಇಸು$_3$]

ತೆವರು$_1$ 'ತೆವರ್$_1$' ನೋ.

ತೆವರು$_2$ 'ತೆವರ್$_2$' ನೋ.

ತೆವರೇರು 'ತೆವರೇಱು' ನೋ.

ತೆವರೇಱು, ತೆವರೇರು (ಕ್ರಿ). ದಿಣ್ಣೆಯನ್ನು ಹತ್ತು ; ಗುಡ್ಡವನ್ನು ಏರು: ಕಾಲುವೆಯಗಳು ಕುಳಿತವರೇಱಲರಿದನೆಲು ಗಾಲಿವೊಗದುವು ಕೀಲು ಮುಱಿದುವು ಗೋಳುಗುಟ್ಟಿತು ಪುರಜನಂಗಳು (ಕಾಶಿಕಾ. ೧೦-೪೪) ; **ತೆವರೇರು** : ತವರುಮನೆಯಾ ದೀಪ ತೆವರೇರಿ ನೋಡೇನು (ಹಕ್ಕಿಹು. ೯೩). [ತೆವರು$_2$ (< ತೆವರ್$_2$) + ಏಱು$_1$ (< ಏಱ್$_1$)]

ತೆವರ್ಚು 'ತೆವುಳ್ಚು' ನೋ.

ತೆವಲು, ತೆವುಲು (ನಾ). ೧. ಉತ್ಕಟವಾದ ಇಚ್ಛೆ ; ಗೀಳು; ಚಟ : ಈ ಮಾತುಗಳಿಂದ ಮಾಸ್ಲೋವಳಿಗೆ ಹೆಂಡದ ತವಲು ಹತ್ತಿತು (ಪುನರು. ೦೪೭) ; ಆ ಕೂಟಕ್ಕೆ ಹೊಗೇಸೊಪ್ಪ ಎಲೆ ಅಡಿಕೆ ನಶ್ಯ ಸುಣ್ಣ ಮುಂತಾದ ತೆವಲು ಸಾಮಾನುಗಳನ್ನೊದಗಿಸಿ (ಹುಬ್ಬಹ. ೫೦). ೨. ಬೇನೆ ; ವ್ಯಾಧಿ : ನಿನಗೇನು ಬಂತು ತೆವಲು (ಸಮ್ಮಸು. ೧೦೩) ; ಸುಳ್ಳು ಹೇಳಲಿಕ್ಕೆ ನನಗೆ ಏನು ತವಲು (ಮಠಮ. ೫೯೩) ; **ತೆವುಲು** : ೧. ಅವಳಿಗೆ ಅಡಕೆಲೆ ತೆವುಲು ಜಾಸ್ತಿ (ಕೂಧಿ). ೩. ತೀಟೆ ; ಬೆದೆ ; ನಸೆ: ತವುಲು ತೀರಿದ ಮೇಲೆ ಲೌಡಿಯ ಸಂಗವೇಕೆ ? (ಗಾದ).

[ದೇ.ತ ತುಳು. ತವಲ್ ; ತೆಲು. ತವುಲು, ತೆಗುಲು]

ತೆವಲುಗಾರ (ನಾ). ಗೀಳಂ ಹಿಡಿದವನು ; ಚಟವುಳ್ಳವನು :(ಕ).

[ತವಲು + – ಗಾರ (< – ಕಾಱಿ)]

ತೆವಳ್ 'ತೆವುಟ್ಸ್' ನೋ.

ತೆವಳಾಟ (ನಾ). ತೆವಳುವಿಕೆ ; ದೇಕುವಿಕೆ : ಎಳೆಯ ಮಕ್ಕಳ ತವಳಾಟವೂ ಹಾವಿನ ಹರಿದಾಟವೂ ಒಂದು ದೃಷ್ಟಿಯಲ್ಲಿ ಇದೇ ರೀತಿಯದು (ಪುನೋನಂ. ೧೬೭). [ತೆವಳು(< ತೆವುಟು') + ಆಟ]

ತೆವಳು 'ತೆವುಟ್ಸ್' ನೋ.

ತೆವಳಿ (ನಾ). ಅಲಕ್ಷ್ಯ ; ಉದಾಸೀನ. 'ತೆವಳಿಗಾಣ್' ಪರಾ. [?]

ತೆವಳಿಗಾಣ್ (ಕ್ರಿ). ಉದಾಸೀನಮಾಡು; ಕಡೆಗಣಿಸು: ಸತಿ ಪುಯ್ಯಲ್ವಿದ ಪಳ್ ರಘೂದ್ವಹ ಕುಲಸ್ತ್ರೀ ಸೀತೆ ಪೆಣ್ಬುಯ್ಯಲಂ ಶ್ರುತಿ ಕಯ್ಕೊಂಡುದು ಕೇಳ್ದದಂ ತವಳಿಗಂಡಂದೆನ್ನ ವಿಖ್ಯಾತಿ ದೂಷಿತವುಕ್ಕುಂ (ಪಂಂಮಾ. ೯-೦೪೪). [ತವಳಿ + ಕಾಣ್]

ತೆವ್ವಲು 'ತೆವಲು' ನೋ.

ತೆಳ್, ತೆಳಂ (ಗು). ತೆಳ್ಳಿತು, ತೆಳ್ಳಿತ್ತು ಎಂಬುದಕ್ಕೆ ಸಮಾಸದ ಪೂರ್ವಪದವಾಗಿದ್ದಾಗ ಬರುವ ಆದೇಶ ರೂಪ. 'ತೆಳ್ಗನ್ನಡ', 'ತೆಳ್ನಡಂ', 'ತೆಳ್ದರಿಜು' ಪರಾ. ತೆಳು. 'ತೆಳುಗದಪ್ಪ', 'ತೆಳುವಸಿಱಿ' ಪರಾ. 'ತಿಳಿ$_2$' ಹೋ.

ತೆಳ್ಳನೆಯ = ತೆಳ್ಳಗಿರುವ : ತಳ್ಳನೆಯ ಕೋಟು ಧರಿಸಿದುದರಿಂದ ನೆಕ್ಲುದೋವನ ಮೈಯಲ್ಲಿ ನಡುಕ ತಲೆದೋರಿತ್ತು (ಪುನರು. ೩೦೯); ದೃಷ್ಟಿ ಪಾಟವುಳ್ಳವರ ಬರಿಯ ಕಣ್ಣುಗಳಿಗೆ, ಮಬ್ಬಿನಲ್ಲಾಗಲಿ ತೆಳ್ಳನೆಯ ಮೋಡ ಮುಚ್ಚಿಕೊಂಡಿರುವಾಗಾಗಲಿ, ಶುಕ್ರನ ಕಲೆಗಳು ಅನೇಕ ವೇಳೆ ಕಾಣುವುದುಂಟು (ಜ್ಯೋತಿರ್ವಿ. ೧೦೬). [< ತೆಳ್ಳಿತು]

ತೆಳಗು (ನಾ). ಕೆಳಭಾಗ; ಅಡಿಭಾಗ: ಆ ಪುಸ್ತಕ ಪೆಟ್ಟಿಗೆಯ ತೆಳಗಿದೆ (ಕೂಧಿ).

ತೆಳಗಣ = ಕೆಳಗಿರುವ ; ತಳದ : ನಾಳು ಆಳುವ ರಾಜ್ಯಳಟ್ಟದ ಮೇಲಣ ಠಾಣಿಯ ಘಟ್ಟತ್ತೆಳಗಣ ಠಾಣಿಯಗಳಲ್ಲಿ (ಮೈಆರಿ. ೧೯೪, ೩೭-೦೭ ; 1642). [<ಕೆಳಗು]

ತೆಳಗೆ (ಅ). ಕೆಳಗೆ ; ಅಡಿಯಲ್ಲಿ : ಇದೂ ತಗ್ಗು, ಅದೂ ಗುಡ್ಡ. ಆಗೊ ಮಲೆಯ ಬೆಟ್ಟ ನೆಲ ತಳಗೆ ಬಿಟ್ಟ (ಗಂಗಾತ. ೧೦-೦೩). [<ಕೆಳಗೆ]

ತೆಳಜು 'ತೆಣಜು' ನೋ.

ತೆಳು 'ತೆಳ್' ನೋ.

△ತೆಳುಂಪು 'ತೆಳ್ಪು' ನೋ.

ತೆಳುಕಾಗದ (ನಾ). ದಪ್ಪವಲ್ಲದ ಕಾಗದ : ತೆಳುಕಾಗದದ ಮೇಲೆ ಊರಿ ಬರೆಯಬಾರದು (ಕೂಧಿ). [ತೆಳು (<ತೆಳ್) + ಕಾಗದ]

ತೆಳುಗದಪು 'ತೆಳ್ಗದಂಪು' ನೋ.

ತೆಳುಗನ್ನಡ 'ತೆಳ್ಗನ್ನಡ' ನೋ.

ತೆಳುಗಲ್ಲ 'ತೆಳ್ಗಲ್ಲ' ನೋ.

ತೆಳುಗಟ್ಟಿ 'ತೆಳ್ಗಟ್ಟಿ' ನೋ.

ತೆಳುಗಾವಿ (ನಾ). ತಿಳಿಯಾದ ಕಾವಿಬಣ್ಣದ ಸೀರೆ: ಸಾರಂಗವಟ್ಟಿ ಪಳಿ ಸಂಧ್ಯಾರಾಗಂ ತ್ರಿವಳಿ ಮಂಚಿಟಿಗೆ ಪಲ್ಲಕಿ ನಲ್ಲೂರ ತೆಳು[ಪಾಠಾಂ. ೪] ಗಾವಿಯೆಂಬಾ ಸೀರೆಗಳಂ ಸತಿಯರೊಲೆಯೊಳುರುಪಿದರಾಗಳ್ (ತ್ರಿಪುವಿ. ೧೦-೨೮); ಕುಂಬಳಗಂಟಿ ತೆರತವಳಿ ತೆಳುಗಾವಿಯುಂ ಬಿಳಿದಿನ ಸೀರೆ (ಆಮುಸಾಂ. ೪-೧೯). [ತೆಳು (< ತೆಳ್) + ಕಾವಿ]

ತೆಳುಗಾಳಿ (ನಾ). ಮೆಲ್ಲನೆ ಬೀಸುವ ಗಾಳಿ; ಮೆಲಂಗಾಳಿ; ಮಂದ ಮಾರುತ: ತೆಳುಗಾಳಿಯುಂ ಬಯಸಿ ಭದ್ರದೊಳು ಚರಿಸುವ ರತಾಂತ ಸತಿಯರ ಕಂಡನು (ಹಡಕಾ. ೪-೩೩); ಬಳಲಿಕೆಯಿಲ್ಲೆಮಗಣ್ಣಾಜಿ ನಿನ್ನಯ ನಿಳಯಕ್ಕಿನ್ನೆಯ್ದಿ ಬಹಾಗ ತೆಳುಗಾಳಿಯಲ್ಲದೆ ಬಿಱುಗಾಳಿಯಿಲ್ಲ (ಭರಡ. ೩೯-೧೮); ತೆಳುಗಾಳಿಗೊಯ್ಯನೆಯೆ ನಿರಿನಿರಿ ವಿಕಂಪಿಸುವ ಪಟಿಕನಿರ್ಮಲ ನದಿಯ ಪುಲಕಿತಮುಕುರದಲ್ಲಿ ಮಜ್ಜನಕ್ಕುಜ್ಜುಗಿಸಿ (ಶ್ರೀರಾಮಾ. ೧-೯).
[ತೆಳು (< ತೆಳ್) + ಗಾಳಿ$_1$]

ತೆಳುಗೊರಳು (ನಾ). ತೆಳ್ಳನೆಯ ಕೊರಳು: ನೀಳವಾದ ತೆಳುಗೊರಳಿನ . . . ಎಂಟು ವರ್ಷದ ಹುಡುಗನೊಬ್ಬ . . . ನಾವಿಕ ಟೋಪಿಯನ್ನು ಧರಿಸಿಕೊಂಡಿದ್ದನು (ಪುನರು. ೪೪೦).
[ತೆಳು (< ತೆಳ್) + ಕೊರಳು (< ಕೊರಲ್)]

ತೆಳುತೆರೆ 'ತೆಳ್ದೆರೆ' ನೋ.

ತೆಳುದಗಡು (ನಾ). ತೆಳುವಾದ ಲೋಹದ ಹಲಗೆ,-ಫಲಕ: ಝುಗ ಝುಗಿಪ ಬೆಳುದಿಂಗಳಿನ ತೆಳುದಗಡೆನಲು ತೊಳಗುವ ದುಕೂಲವ ಬಿಗಿದು (ಕುವ್ಯಾಗ. ೫-೪೦). [ತೆಳು (< ತೆಳ್) + ತಗಡು]

ತೆಳುದುಗುಲ (ನಾ). ಶುಭ್ರವಾದ ಬಟ್ಟೆ: ಮಳಯಜದ ಮಲ್ಲಿಗೆಯ ಮುತ್ತಿನ ತೆಳುದುಗುಲ ಸುಲಿಪಲ್ಲ ನಿಡುಗಂಗಳ ಬೆಳಗು ದೆಸೆ ಮುಸುಕು ತಿರೆ (ಸಾಳ್ಯಭಾ. ೩-೩೫). [ತೆಳು (< ತೆಳ್) + ದುಗುಲ]

ತೆಳುದೊಗಲು (ನಾ). ಸೂಕ್ಷ್ಮವಾದ ಚರ್ಮ; ನವುರಾದ ಚರ್ಮ: ತೆಳುದೊಗಲ ನಿಡುಸೋಗೆಯುಡುಗೆಯನೆಳಗರುಳ ಸಿಂಗಾರದುಱುಬಿನ... ಕಾಳಿಜದಟ್ಟುಗುಳಿಗಳ ಕೆಳಗೆಳೊಳು ಕೊಡಗೂಸು ಪೂತನಿನಿಕರವೊಪ್ಪಿದವು (ಕುವ್ಯಾಭೀ. ೫-೩೪). [ತೆಳು (< ತೆಳ್) + ತೊಗಲ್ (< ತೋಲ್$_1$)]

ತೆಳುನಿದ್ರೆ (ನಾ). ಸಣ್ಣ ನಿದ್ರೆ; ಮಂಪರು: ಸಿರಿಮಂಚಮಂ ಸುತ್ತಿ ಮುತ್ತಿ ಕುಳ್ಳಿರ್ದ ಸತಿಯರು ಕೂಡೆ ಮಾತಾಡುತಿರುತಿರಲು ತೆಳುನಿದ್ರೆ ಕವಿದುದೇಂ ಪಣ್ಣಿಸುವೆನು (ಸೋಮಚ. ೧-೮೪). [ತೆಳು (<ತೆಳ್)+ನಿದ್ರೆ]

ತೆಳುನೀರು (ನಾ). ತಿಳಿಯಾದ ನೀರು; ಶುಭ್ರವಾದ ನೀರು: (ಕಿ).
[ತೆಳು (<ತೆಳ್) + ನೀರು$_1$ (<ನೀರ್$_1$)]

ತೆಳುನೋಟ (ನಾ). ಸ್ವಚ್ಛವಾದ ನೋಟ; ನಿರ್ಮಲವಾದ ನೋಟ: ಸನ್ನೆಯ ನೋಟ ಸನ್ಮಾನದ ಸವಿನೋಟ . . . ಭಿನ್ನದೋಱದೆ ತೆಳು ನೋಟದ ಲಲಿತಾಂಗಿ [ಪಾಠಾಂ.ಬಿನ್ನಣದ ತೇಲ್ವ ನೋಟವ ನೋಡುತಲಾಗ] ಚೆನ್ನೆಯರಿರ್ದರೊಂದೆಸೆಯ (ಅಬ್ಬಲೂ. ೩-೦೦೭).
[ತೆಳು (< ತೆಳ್) + ನೋಟ]

ತೆಳುಪು 'ತೆಳ್ಪು' ನೋ.

ತೆಳುಬಣ್ಣ 'ತೆಳ್ವಣ್ಣ' ನೋ.

ತೆಳುಮಜ್ಜಿಗೆ (ನಾ). ತಿಳಿಯಾದ ಮಜ್ಜಿಗೆ; ನೀರುಮಜ್ಜಿಗೆ: ಪನಸಿ ಮ್ಮಾವು ಕಜ್ಜುರದ ಪಣ್ಗಳ ರಸಾಯನಮನೀಂಟಿ ತೆಳುಮಜ್ಜಿಗೆಯ ಕೊಂಡು ನೀರ್ಗುಡಿದು ಹೊಟ್ಟೆಯ ತಡಹುತೆಳ್ದು ಕಯ್ದೊಳೆದರು (ಸಮ್ಯಕೌ. ೭-೨೮). [ತೆಳು (<ತೆಳ್) + ಮಜ್ಜಿಗೆ]

ತೆಳುಮೆಯ್, ತೆಳುಮೈ (ನಾ). ಸ್ಥೂಲವಲ್ಲದ ದೇಹ; ಕೃಶ ಶರೀರ: ಕಚ್ಚುಕನ್ನಡಕದ ತೆಳುಮೆಯ್ಯ ಬಾಲೆಯೊಬ್ಬಳು ಆ ಭಾಷಣವನ್ನು . . . ತರ್ಜುಮೆ ಮಾಡುತ್ತಿದ್ದಳು (ಪುನರು. ೩೪೫). **ತೆಳುಮೈ**: ಅತ್ತಿಂದಿತ್ತ ತಿರುಗಾಡುತ್ತಿದ್ದ ತೆಳುಮೈಯ ಗುಜ್ಜಾರಿಯನ್ನು ಕಂಡು ಅವನು ಬಳಿ ಸಾರಿದನು (ಪುನರು. ೧೮೭). [ತೆಳು (< ತೆಳ್) + ಮೆಯ್]

ತೆಳುಮೈ 'ತೆಳುಮೆಯ್' ನೋ.

ತೆಳುಮೊಗ (ನಾ). ತೆಳುವಾದ ಮುಖ; ಕೃಶವಾದ ಮುಖ: ಅವರಲ್ಲೊಬ್ಬಳ ವಯಸ್ಸು ಸುಮಾರು ನಲವತ್ತು. ಅವಳ ತೆಳುಮೊಗ ಬಿಳಿಚಿಕೊಂಡಿತ್ತು (ಪುನರು. ೧೪೦). [ತೆಳು (< ತೆಳ್) + ಮೊಗ]

ತೆಳುವಸಿಱ್ 'ತೆಳ್ವಸಿಱ್' ನೋ.

ತೆಳುವಸಿಱು 'ತೆಳ್ವಸಿಱ್' ನೋ.

ತೆಳುವಸುಱು 'ತೆಳ್ವಸಿಱ್' ನೋ.

ತೆಳುವಳುಕು 'ತೆಳ್ವಳಿಕು' ನೋ.

ತೆಳುವಾಸೆ 'ತೆಳ್ವಾಸೆ' ನೋ.

ತೆಳುವು 'ತೆಳ್ವು' ನೋ.

ತೆಳುವುಡಿ (ನಾ). ಸಣ್ಣ ಪುಡಿ; ನವುರಾದ ಹುಡಿ: ತೆಳುವುಡಿಯ ಮಳಲಿಡಿಯಲಿತ್ತಡಿಯ ತಳಗಡಿಯ ಪೊಳೆ ನೆಱೆಯಲುಱೆ . . . ಸಲೆ ಕಣ್ಗೆಸೆದಳಂದು ದಿವಿಜಸಿಂಧು (ಚೈಮಿಭಾ. ೯-೨೪).
[ತೆಳು (<ತೆಳ್) + ಪುಡಿ$_2$]

ತೆಳುವೆಣ್ಣು (ನಾ). ತೆಳುವಾದ ಶರೀರವನ್ನುಳ್ಳ ಹೆಣ್ಣು; ಕೋಮಲೆ: "ತೆಳುವೆಣ್ಣು, ಲತಾಂಗಿ" (Sylph. ಇಂಕನಿ).
[ತೆಳು (<ತೆಳ್) + ಪೆಣ್ಣು (<ಪೆಣ್)]

ತೆಳುವೆಲರ್ 'ತೆಳ್ಳೆಲರು' ನೋ.

ತೆಳುವೆಳಗು 'ತೆಳ್ವೆಳಗು' ನೋ.

ತೆಳ್ಗದಂಪು, ತೆಳಂಗದಪು, ತೆಳ್ಗದಪು (ನಾ). ಸುಂದರವಾಗಿರುವ ಕೆನ್ನೆ; ನುಣುಪಾದ ಕೆನ್ನೆ; ಕೋಮಲವಾದ ಕಪೋಲ: ದೇವಿಯ ತಾಂಬೂಲ ಚ್ಛಾಯಾವಿಷ್ಕೃತಮಾದ ತೆಳ್ಗದಂಪುಗಳೆಸೆಗುಂ (ಪುಷ್ಪಪು. ೩-೪೮); ಕರ್ಮ ಧಾರಯಕ್ಕೆ – ತೆಳ್ಗದಂಪು, ಒಳ್ಗನ್ನಡಂ (ಶಮದ. ೧೬೪ ಪ್ರಯೋ); ಸೊಗಸುವ ತೊಳಪಗಣ್ಗಳ ತೆಳ್ಗದಂಪುಗಳ ಸಂಪಗೆಯ ಪಳಿವ ಮೂಗಿನ . . . ಪೆಣ್ಗಳಿರ್ದರು (ಜಿಬಪು. ೭-೧೨). **ತೆಳುಗದಪು**: ಅವನ ಕುಳ್ಳಿರಿಸಿ ತೆಳುಗದಪಮಳಾಧರವ ಚುಂಬಿಸಿ ಸುಖದಳೆದಳು (ಕಂನವಿ. ೧೦-೩೦). **ತೆಳ್ಗದಪು**: ಭುಜಂಗಳ ತಣ್ಪೆನೊತ್ತು ಬಿಂಕಂಬಡೆದಿರ್ದ ತೆಳ್ಗದಪಿನೊತ್ತು (ಸೂಕ್ತಿಸು. ೦೦-೨೬೧); ಪಸರಿಪೆಳನಗೆಯ ತೆಳ್ಗದಪಿನಿಂ . . . ಕಾಂತೆ ಕಣ್ಗೆಸೆದಿರ್ದಳು (ಚೈಮಿಭಾ. ೦೮-೨೯); ಮೆಲ್ಲಡಿ, ಒಳ್ಳಾಳ್, ತೆಳ್ಗದಪು (ಶಬ್ದಾನು. ೬೦ ಪ್ರಯೋ); ಪೆರೆನೊಸಲ ಚೆಂದುಟಿಯ ನುಣ್ದನಿಯ ತೆಳ್ಗದಪಿನ . . . ಮುಗ್ಧೆ (ವೆಂಕಾರಾ. ೫-೬-೫೮). [ತೆಳ್ + ಕದಂಪು]

ತೆಳ್ಗದಪು 'ತೆಳ್ಗದಂಪು' ನೋ.

ತೆಳ್ಗನ್ನಡ, ತೆಳಂಗನ್ನಡ (ನಾ). ತಿಳಿಯಾದ ಕನ್ನಡ; ಶುದ್ಧವಾದ ಕನ್ನಡ: (ಕಿ). **ತೆಳುಗನ್ನಡ**: ಒಳುಗನ್ನಡವಚ್ಚಗನ್ನಡಂ ಪೊಸತೆಂಬುದು ತೆಳುಗನ್ನಡ ಮಿಶ್ರದಿನಿದನಿಳೆಯೊಳ್ ಸತ್ಪುರುಷರೋದಿ ಕೇಳ್ವುದು ಸತತಂ (ಕವಿಚ. III, ೧೪೯. ರಾಜಾವಳೀ ಕಥೆ). [ತೆಳ್ + ಕನ್ನಡ$_1$]

ತೆಳ್ಗಪ್ಪುರ (ನಾ). ಶುಭ್ರವಾದ ಕರ್ಪುರ: ನೋಡಿದ ಕಣ್ಗಳಿಟ್ಟ ತೆಳ್ಗಪ್ಪುರದ ಸಲಗೆಯಂತಟ್ಕರಿಂ ಕೂಡೆ ಕೊಂಡಾಡಿದ ಬಾಯ್ಗೋರಂದದಿಂ ತೀವಿದ ತನಿಗೆನೆವಾಲಂತೆ ನೇರ್ಪಟ್ಟ ನಿನ್ನಗ್ಗದ ದೇಹಚಾಯೆಯಿಂ ತಣ್ಣನೆ ತಣಿಯದೆ ಲೋಕತ್ರಯಂ ಚಂದ್ರನಾಥ (ಧರ್ಮನಾ. ೫-೬೩).
[ತೆಳ್ + ಕಪ್ಪುರ]

ತೆಳ್ಗಲ್ (ನಾ). ಸಪುರವಾದ ಕಲ್ಲಂ,_ಚಪ್ಪಡಿ: ಕುಟಿ ತಮರಂ ಪಸರಿಸಿ ತೆಳ್ಗಲ್ಲೊಳ್ ಘಟಿಯಿಸುವುದು ಸುಸ್ಥಾನಶಯನನ[ಮ]ಪ್ಪಂತೆ ನೆಲಂ (ಅಶ್ವಶಾ. ೭-೫). [ತೆಳ್ + ಕಲ್$_3$]

ತೆಳ್ಗಲ್ಲ, ತೆಳಂಗಲ್ಲ (ನಾ). = ತೆಳ್ಗದಂಪು : ಗಲ್ಲಕ್ಕೆ – ಗಲ್ಲಗಿವಿ . . . ಗಲ್ಲ ಸ್ಥಳಂ, ತೆಳ್ಗಲ್ಲ (ಶಮುದ. ೨೪೮ ಪ್ರಯೋ); ತೆಳ್ಗಲ್ಲ ಪೂಸರನ ತೋಳ್ಗೆಲ್ಲ ವಟ್ಟಡಿಗಳೊಳ್ಗಾಡಿ ಜೋಗಿಗಳ ಬಾಳ್ಗೀಡಿ ನಳಿಸುಳಿಗುರುಳ್ಗರ್ಪಿನೊಳ್ಪಿ ನೊಂದೇಳ್ಗ ವಿಟರೆರ್ದವಾವುಗಳ್ಗಿಟ್ಟ ಪೇಳ್ಗ (ಉಡ್ಕರೇ. ೩-೩೦). **ತೆಳುಗಲ್ಲ :** ತನುರುಚಿ ನಗುವುದು ರನ್ನದ ತೊಡವ ವಿಗೆ ಪಚ್ಚೆಗೆಂಪ ಲತಗೆಯ ಹುರುಡಿಪ್ಪುದು ತೆಳುಗಲ್ಲವಾ ಸ್ವಯಂಪ್ರಭೆಗೆ (ವರ್ಧಚ. ೪-೩೦).

[ತೆಳ್ + ಗಲ್ಲ$_1$]

ತೆಳ್ಗಟಿ, ತೆಳಂಗಟಿ (ನಾ). ತಿಳಿಯಾದ ಗಂಜಿ,–ಅಂಬಲಿ : ಎರಡುಂ ಬಾಳಕ ಪದ್ಮಕಮೆರಡುಂ ಚಂದನಮೆನಿಪ್ಪುವಂ ತೆಳ್ಗಟಿಯಿಂದರೆದು ನಡುನೆತ್ತಿಯೊಳ್ ಪೂಸೆ ರುಜಾರ್ತನ ತೃಷೆಯ ದಾಹದೊದವಂ ಕಳೆಗುಂ (ಕೋಕೋಪ. ೯-೨೮). **ತೆಳುಗಟಿ :** "ಗಂಜ . . . ಕಾಂಜಿಕಮೆನೆ ತೆಳುಗಟಿ" (ವಸ್ತುಕೋ. ೯೨-೪). [ತೆಳ್ + ಕಟ್$_4$ (<ಕಳ್$_5$)]

ತೆಳ್ಗೂದಲು (ನಾ). ನವುರಾದ ಕೂದಲು ; ತೆಳ್ಳಗಿರುವ ಕೂದಲು : ನೀಟಾಗಿ ಬಾಚಿಕೊಂಡಿದ್ದ ತೆಳ್ಗೂದಲಿನ ಬಿಳಿಚುಮೋರೆಯ ತರುಣ ಕಲಾವಿದ (ಪುನರು. ೬೩೩). [ತೆಳ್ + ಕೂದಲು (< ಕೂದಲ್)]

ತೆಳ್ದುಟಿ (ನಾ). ತೆಳುವಾದ ತುಟಿ ; ತೆಳ್ಳಗಿರುವ ತುಟಿ : ಕೆದರ್ದ ತಲೆ ನವಿರರಮೆ ಮುಗಿದ ಕಣ್ಗಳ್ ಜೋಲ್ದ ವದನದಿಂ ಭುಜದೊಳೊಜಗಿದ ಕೊರಲ್ ತೆಳ್ದುಟಿಯು ತುದಿ (ಚಬಪು. ೧೦-೬೩). [ತೆಳ್ + ತುಟಿ$_2$]

ತೆಳ್ದೆರೆ, ತೆಳಂತೆರೆ (ನಾ). ೧. ಸಣ್ಣ ಅಲೆ,–ತರಂಗ : ಶರದೊಳ್ಮಳ್ಗುಂಗಿ ನೆಗಪಿದ ಕರಿಕುಂಭಂ ಫೇನ ಏಹಿತಮಿಂಬಾದುದು ತೆಳ್ದರೆ ಮೇಲುದಱಿಂ ಪೊಣ್ಮಿದ ಸರಸಿಯ ಮಲಯಜ ವಿಲಿಪ್ತ ಕುಚಕುಂಭದವೋಲ್ (ಶಬಶಂ. ೨-೫೬). **ತೆಳುತೆರೆ :** ೧. ತೆಳುತೆರೆಯಿಲ್ಲದಿಂಗಡಲೊಳು ಕೇಲುವ ಪೊಳಿವ ಚಂದಿರನೊಲು . . . ಬೆಳ್ಳಯ ಳಿಗೆವಟ್ಟಲು ರಂಜಿಸಿದುದು (ವರ್ಧಚ. ೫-೪೦). ೨. ತೆಳುವಾದ ಮುಸುಕು,–ಪರದೆ : ತೆಳುತೆರೆಯ ಮರೆಯಲ್ಲಿ ಅವಳ ಸುಂದರವಾದ ಮುಖ ಕಾಣಿಸುತ್ತಿತ್ತು (ಕೂಥಿ). [ತೆಳ್+ತೆರೆ$_4$]

ತೆಳ್ದೇಹ (ನಾ). = ತೆಳಂಮೆಯ್ : ಇಂತಪ್ಪ ಶೂರೆಯರೆನುತಿರ್ದು ತೆಳ್ದೇಹಮಂ ತಾಳ್ದಿರೇಕೆಂದಳವಳು (ವೀಶಾಕ. ೪-೬೪). [ತೆಳ್ + ದೇಹ]

ತೆಳ್ನಡು (ನಾ). ಕೃಶವಾಗಿರುವ ಸೊಂಟ; ಸಣ್ಣ ನಡು : ಬಂದರ್ ಗಡಣದೆ ತೆಳ್ನಡುವಿನ ಸೆಳೆಸಡುವಿನ ಬಡನಡುವಿನಸಿಯಸಡುವಿನ ಸತಿಯರ್ (ಜಗವಿ. ೪-೦೩೦); ತೆಳ್ನಡು ಬಳ್ಕೆ ಸಖೀಕದಂಬಕಂ ನಲಿದೊಡನೇಱಿ ನೀಱಿ ಬಿಡದೇಱಿದಳೊಯ್ಯನೆ ರಮ್ಯಹರ್ಮ್ಯಮಂ (ರಾಜಶೇ. ೭-೦೭). [ತೆಳ್ + ನಡು$_2$]

ತೆಳ್ಪಟಿ (ಕ್ರಿ). ಕೃಶತೆ ಅಳಿದಂಹೋಗು ; ದಪ್ಪವಾಗು : ಪೆತ್ತುಂ ತೆಳ್ಪಟಿಯದ ನಡು . . . ಮುನಿದುಂ ಚಿಲ್ವೊತ್ತರಿವ ನಗೆವೊಗಂ ಮೆಯ್ವೆತ್ತಿರೆ ಕರಮೊಪ್ಪದಪ್ಪರಲ್ಲಿಯ ಪೆಂಡಿರ್ (ಕಾವ್ಯಾವ. ೬೪೪). [ತೆಳ್ಪು + ಅಟ್ಟಿ$_1$]

ತೆಳ್ಪು, ತೆಳಂಪು, ತೆಳಂಪು (ನಾ). ೧. ಪರಿಶುದ್ಧತೆ ; ನಿರ್ಮಲತೆ ; ಶುಭ್ರತೆ : ನೀರ ತೆಳ್ಪು ದರ್ಪಾದ್ಯಿಗೆ ದೊರೆ ಸರಿ ಪೋಲ್ದೆಯೆಂಬೆನಱಿಯೆಂ ಪೊಗಟಲ್ (ಶಾಂತಿಪು. ೩-೫); ದಯೆಯಿಂದೊಳ್ಪಿನ ತೆಳ್ಪಿನ ಗುಣಗಣಾಳಂಕಾರದಿಂ ಮಾರ್ಗ್ಗನಿರ್ಣ್ಣಯದಿಂ ತತ್ವವಿಚಾರದಿಂ . . . ಅಧಿಕನೆಂದು (ಸೌಇಇ. XX, ೦೮-೦೯ ; 980) ; ಕಲಿಕಾಲದೇಳ್ಗೆಯಂ ದಿಸೆಗಿಡೆ ತೂಳ್ದಿ ತಾಳ್ದಿ ಕೃತಲಕ್ಷ್ಮಿಯನೊಳ್ಪಿನ ತೆಳ್ಪುಗಳ್ ಜಗಕ್ಕೆಸೆದಿರೆ (ಎಳ. VII, ಶಿಕಾರಿ. ೦೫೫-೦೫ ; 1019) : ಪೂತ ಪೂಗೊಳಗಿನ ತೆಳ್ಪು [ಪಾಕಾಂ. ತಣ್ಪು] ತೆಂಕಣೆಲರೊಳ್ಪು ಲತಾಳಿಯ ತಳ್ಪು (ಬಂಹರಿ. ೩-೫) ; ನಿಳ್ಪುಂ ಬೆಳ್ಪುಂ ತೆಳ್ಪುಂ ತಳ್ಪೊಯ್ದಿರೆ . . . ಒಳ್ಪಂ ಗೆಡೆಗೊಂಡು ಸೊಗಯಿಸುವ ಮಂಡಗೆಯಂ . . . ಇಟ್ಟರ್ (ಪಾರ್ಶ್ವಪು. ೮-೫೧) ; ಶೋಭಿಸಿ ತೆಳ್ಪಂ ತಾಳ್ಪ ಚಂದ್ರೋಪಲಮಮಳ ಶರತ್ಪೂರ್ಣ ಶುಭ್ರಾಂಶುವಂ (ಪುಷ್ಪಪು. ೩-೭೬). 'ಕಡುದೆಳ್ಪು' ಪರಾ. ೨. ತೆಳುವಾಗಿರುವುದು ; ಸಣ್ಣಗಿರುವುದು ; ಕೃಶವಾಗಿರುವುದು : ನುಣ್ಬಸಿಜಿನೊಳ್ ತೆಳ್ಪು ಬಾಳೆದೊಡೆಯೊಳ್ ನುಂಪು ನುಡಿಯೊಳ್ ಸೊಗಸಿನಿಂಪು ಸಂಜನಿಸಿ ಮೆಜಿಯೆ (ಚಬಪು. ೩೪-೬). △ **ತೆಳುಂಪು :** ೨. ಬಸಿಲಿ ತೆಳುಂಪು ಕುಂದದೆ . . . ನುತ ತ್ರಿವಳಿ ಕೆಟ್ಟರದೆ (ನೇಮಿಪು. ೪-೦೦೩). **ತೆಳುಪು :** ೨. "ತೆಳುವಾದುದು–ಪೇಲವ, ವಿರಲತನು" (ನಾಚರಾ. ೬); ಲೋಲಲೋಚನಂಗಳ ಪೊಳಿಪುಮಂ ತೆಳ್ದಸಿಲಿ ತೆಳುಪುಮಂ (ಮಹಾನೇ. ೧೪-೬೦ ವ).

[ತೆಳ್ + – ಪು$_2$./ತಮಿ. ತೆಳಿವು ; ತೆಲು. ತೆಲ್ಪು, ತೆಲುಪು]

ತೆಳ್ಪುಗೆಡು (ಕ್ರಿ). ಶುಭ್ರತೆಯನ್ನು ಕಳೆದುಕೊಳ್ಳು ; ಮಂಲಿನವಾಗು: ಮುದವದ್ದಂತಿ ವರೂಥವಾಜಿಘಟ ಸಂಘಾತಂಗಳ್ . . . ತೆಳ್ಪುರ್ವಿ ಪರ್ವಿದೊಡಾಮುನ್ನಿನ ತೆಳ್ಪುಗೆಟ್ಟು ಕೆಸಜಾಯಾಕಾಶಗಂಗಾಜಲಂ (ಪಂಪಭಾ. ೦೦-೩೯).

[ತೆಳ್ಪು + ಕೆಡು$_1$]

ತೆಳ್ಪುವೆಜು (ಕ್ರಿ). ಶೋಭೆಯನ್ನು ಪಡೆ,–ಹೊಂದು ; ಶೋಭಿಸು : ಶರೀರಮಬ್ಜಜನ್ಮನೆ ಸಮೆದಿಂದುಕಾಂತವನಕಾಂತೆವೊಲೀಂ ತನೆ ತೆಳ್ಪುವೆತ್ತುದೋ (ಶಾಂತಿಪು. ೯-೦೯೮). [ತೆಳ್ಪು + ಪೆಜು$_1$]

ತೆಳ್ಪೊಡೆ 'ತೆಳ್ವೊಡೆ' ನೋ.

ತೆಳ್ಪೊರೆ 'ತೆಳ್ವೊರೆ' ನೋ.

ತೆಳ್ಪೊಲ್ (ನಾ). ಕಿರಿದಾದ ಪೊಟರೆ,–ಡೊಗರು : ಪೆರ್ಮರನ ವಾಜುಗೊಂಬಿನೊಳ್ ಪೊಡೆಯು ತೆಳ್ಪೊಟಲೊಳೊತ್ತುಗಟ್ಟಿದ ಕಿಜುನೊಜಿನ ಸವಿಜೇನ ಸಜ್ಜಿನಿಂಬನಿಯನೆಜರಿದು (ರಾಮಾಶ್ವ. ೧೦೨-೩೯).

[ತೆಳ್ + ಪೊಬಲ್$_1$ (< ಪೋಬಲ್)]

ತೆಳ್ಮಡಿ (ನಾ). ಶಂಭ್ರವಾದ ವಸ್ತ್ರ ; ಸ್ವಚ್ಛವಾದ ಬಟ್ಟೆ : ಬೆಳ್ದರೆಯು ಮುಗಿಲ ಹತ್ತಿಯ ತೆಳ್ಮಡಿಯನುಟ್ಟು ಪೂರ್ಣಮಾರಜನಿಯುಂತೆಸದಳಾ ಕೌಸಲ್ಯೆ (ಶ್ರೀರಾಮಾ. ೧೪-೬೮೦). [ತೆಳ್ + ಮಡಿ$_5$]

ತೆಳ್ವಣ್ಣ, ತೆಳಂಬಣ್ಣ (ನಾ). ೧. ತಿಳಿಯಾಗಿ ಬಳಿಯುವ ಬಣ್ಣ : ತೊಡವ ಬೆರಸುವ ತೆರಳ್ಚುವಿಡುವರ್ಣದ ತೆಳ್ವಣ್ಣ[ಪಾಠಾ. ರ್ಣ]ಪರ್ಧೋದಕದ ಬಹುವಿಧದ ವರ್ಣಕ್ರಮಮುಮಂ (ವರ್ಧಪು. ೬-೩ ವ). **ತೆಳುಬಣ್ಣ :** ೨. ತಿಳಿಯಾದ ಬಣ್ಣ : ಗಂಡ ಮಾಟವಾಗಿ ಹೊಲಿದ ತೆಳುಬಣ್ಣದ ದೊಳು ಕೋಟನ್ನೂ ದೋರೆಟೋಪಿಯನ್ನು ಧರಿಸಿದ್ದನು (ಪುನರು. ೪೩೯).

[ತೆಳ್ + ಬಣ್ಣ$_2$]

ತೆಳ್ವದ (ನಾ). ವನ್ಯಪ್ರದ್ರವ ; ಕಾವಂರಸ : ತುಳ್ಕಿದವು ತೆಳ್ವದದಂತೆ ನವದ್ರವಾಂಬುಗಳ್ (ಲೀಶಾವ. ೩-೪) ; ಪೊಜವಾಜಿಗೊಳುಚ್ಚಳಿಪ ತೆಳ್ವದವಿರ್ವರೊಳೊಪ್ಪೆ (ಕಲ್ಕಿಕಾ. ೩೩೨) ; ತಳ್ವಿಲ್ಲದೆ ತೆಳ್ವದಂ ಸುರಿಯೆ (ಸೂಕ್ತಸು. ೦೪-೩೭) ; ಮಾನಿತ ವರಾಂಗದೊಳ್ ತೆಳ್ವದಂ ಸೂಸೆ (ಚಬಪು. ೩೦-೩೦).

[ತೆಳ್ + ಪದ$_1$]

ತೆಳ್ವರಿಜು (ನಾ). ನವುರಾದ ಉಡುಪು,–ಉಡುಗೆ : ತೊಟಲ್ವ ಕಣ್ಮಲರು ಮನಾಕುಳಂ ತಳೆದ ತೆಳ್ವರಿಜುಂ . . . ಅಪೂರ್ವಭಾವಮಂ ಲಲನೆಗೆ ತಂದುವಂದನುದಿನಂ ಬಳೆಯುತ್ತಿರೆ ಗರ್ಭದರ್ಭಕಂ (ಪುಷ್ಪಪು. ೪-೦೫).

[ತೆಳ್ + ಪರಿಜು]

ತೆಳ್ವಸಿರು 'ತೆಳ್ವಸಿಜ್' ನೋ.

ತೆಳ್ವಸಿಜ್, ತೆಳಂವಸಿಜ್; ತೆಳಂವಸಿಜಿಂ, ತೆಳಂವಸುಜಿಂ, ತೆಳ್ವಸಿರಂ, ತೆಳ್ವಸಿಜಿಂ, ತೆಳ್ವಸಂರಂ, ತೆಳ್ವಸುಜಿಂ (ನಾ). ಕೃಶವಾದ ಹೊಟ್ಟೆ,–ಉದರ : ತನುರೇಖೆಗೊಂಡ ಕೊರಲೊಡ್ಡಿದ ಪೆರ್ಮೊಲೆ ತೆಳ್ವಸಿಜ್ (ಪಂಪಭಾ. ೧-೦೦೮) ; ಸುದತಿಯ ತೆಳ್ವಸಿರ್ನೆಜ್ಜಿ ಪೊದಟ್ಟುದು ವಕ್ಕ್ರ

ಸರೋರುಹಂ ಬೆಳರ್ತುದು (ಸುಕುಮಾ. ೧೦-೧೪) : ಎಸೆವುದು ವಳಿತ್ರಯಂ ಗಳಿನೆಸೆವಸಿಯಳ ತೆಳ್ವಸಿಱ್ (ಮಲ್ಲಿಪು. ೩-೬೬) ; ಅವಳ ತೆಳ್ವಸಿಱ್ಸೆಗುಂ (ಜಗವಿ. ೧೦-೨೬) ; ತೆಳ್ವಸಿಱ್ಸೊಳೆಸೆವ ಸೊಂಪಿನಿಂ ತಾನುಂ ನೆಗೆತರೆ (ಕುಸುಮಾ. ೫-೮). **ತೆಳುವಸಿಱ್** : ಸಿದ್ಧರಾಮನರಿಷಡ್ವರ್ಗಮಂ ಗೆಲಲು ನಡೆವಡಜನಿಟ್ಟ ಗೂಡಾರಮಾ ಕಂಗೊಳಿಸಿತೆನೆ ತೆಳುವಸಿಱ್ ಪೆರ್ಚಿತು (ಸಿದ್ಧರಾ. ೧-೪೯). **ತೆಳುವಸಿಱು** : ಹೊಳೆವ ಕಂಗಳ ದೀರ್ಘ ಕೇಶದ ತೆಳುವಸಿಱ . . . ಶಂಕಿನಿಯರ ನೃಪಾಲನೀಕ್ಷಿಸಿದ (ಜೀವಂಚ. ೧೭-೪೨). **ತೆಳುವಸುಱು** : ತೆಳುವಸುಱ ಬಿಱುವೊಯ್ಲ . . . ಹಾಹಾರವದ ಕಾಯದಲಿ ಲಲನೆ ಬರೆ (ಕುಪ್ಯಾದ್ರೋ. ೭-೧೨) ; ಸೂಳುವೊಯ್ಲಿನ ತೆಳುವಸುಱ ಕರತಾಳದಲಿ ಹಾಹಾವಿರಾವದ ಮೇಳವದ ಗೀತದಲಿ ಬಂದಳು ದ್ರೌಪದೀದೇವಿ (ಕುಪ್ಯಾಗ. ೧೦-೧೪) ; ತ್ರಿದಶರ ಹೊಟ್ಟೆ ತೆಳುವ ಸುಱಾಯ್ತು ಬೀತುದು ದೈವಗುರುಭೀತಿ (ನಿಭಾಗ. ೪-೧೦-೧೭). **ತೆಳ್ವಸಿರು** : ಸುಳಿಗುರುಳು ತೆಳ್ವಸಿರು ಬಡನಡುವು ನಡುಗೆ (ಪಂಕಾರಾ. ೫-೬-೩೯). **ತೆಳ್ವಸಿಱು** : ಕಂಪಿಸುವ ನುಣ್ದೊಡೆಗಳ ಬಿದಿರುವ ಜಘನ ತೆಳ್ವಸಿಱ (ಮೋಹತ. ೧೯-೬೫). **ತೆಳ್ವಸುರು**: ಅಡಿ ಜಘನ ನಡು ತೆಳ್ವಸುರು . . . ಮುಡಿಗಡಣದಿ ಸಲೆ ಸೊಗಸುತಿರಲ್ಲು (ನವಮೋ. ೨೪-೧೯). **ತೆಳ್ವಸುಱು** : ನಗೆಮೊಗದಲರ್ಗಣ್ಣ ಬಡಬಾಸೆ ತೆಳ್ವಸುಱ ತೊಂಗಲ್ಗುರುಳ ವಿಮಲ ಪದ್ಮಾವತಿಯ ನಿಟ್ಟಿಸಿದನು (ರಾಘಚ. ೧೩-೨೪).

[ತೆಳ್ + ಬಸಿಱ್]

ತೆಳ್ವಸಿಱು 'ತೆಳ್ವಸಿಱ್' ನೋ.

ತೆಳ್ವಸುರು 'ತೆಳ್ವಸಿಱ್' ನೋ.

ತೆಳ್ವಸುಱು 'ತೆಳ್ವಸಿಱ್' ನೋ.

ತೆಳ್ವಳಿಕು, ತೆಳುವಳುಕು (ನಾ). ಶುಭ್ರವಾದ ಸ್ಫಟಿಕ ; ನಿರ್ಮಲವಾದ ಪಟಿಕ : ಪಗಲನುದಂಶುವಿಂದುಗುಟ್ಟ ದೀವಿಗೆ ತೆಳ್ವಳಿಕಿಂದಮಾದ ನುಣ್ಣಗಲಿಯೊಳ್ . . . ಸಜ್ಜೆಯೋವರಿಯಿದೋವರಿ ಮಾಡಿತು ಕಂತುಗೆಮ್ಮುಮಂ (ಚಂದ್ರಪು. ೮-೬೦). **ತೆಳುವಳುಕು** : ಕಡೆಗಣ್ಣೆಳಗೆಸೆದುವು ತತ್ಕಳಮೆಗೆಱಗಲೆನುತಾಗಸದೊಳ್ನಿಂದ ಗಿಳಿಯಂ ಸೆಳೆಯಲೆನುತ್ತವರೆತ್ತಿದ ತೆಳುವಳುಕಿನ ಸೆಳೆಯೋ ಪಸುರ್ವಟ್ಟೆಯ ತೊಳಗುವ ಗಾಳಿಪಟಕೆ ಕಟ್ಟಿದ ರಜ್ಜುವಿದೋ ಎಂಬಂತೆ (ಜಯಕಾ. ೧-೪೧) ; ತೆಳುವಳುಕಿನ ಬಟ್ಟಬಟ್ಟಲೊಳಗೆ ಕಣ್ಗೊಳಿಸುವ ಕತ್ತುರಿಗೆಸಱು ಎಳಸಿದುದಿಂದುಮಂಡಲದ ನಡುವೆ ನಳನಳಿಪ ಕಳಂಕವಿದೆನಲು (ಕುರಾಸಾಂ. ೮-೧೩). [ತೆಳ್ + ಪಳಿಕ್ಕು$_2$ (<ಪಟಿಕ$_1$)]

ತೆಳ್ವಳ್ಳೆ (ನಾ). ತೆಳ್ಳಗಿರುವ ಅಳ್ಳೆ ; ತೆಳುವಾದ ಪಕ್ಕೆ : ಆಱದ ಬೆಮರ್ ನಿಟ್ಟುಸುರ್ಗಳಿಂ ಪೊಯ್ವ ತೆಳ್ವಳ್ಳೆ[ಪಾಠಾಂ. ತೆಳ್ವಳಿಯ]ಬಳಲ್ದ ಕೈ ಮೈಯ ಪೊಸಗಂಪು ಕೆದಱಿದ ನಿಱಿಯ ಸುರತಾಂತೆಯರ್ ದೇವಕಾಂತೆಯರ್ ಬರುತಿರ್ದರು (ಚಬಪು. ೧೯-೨೫). [ತೆಳ್ವು + ಅಳ್ಳೆ$_1$]

ತೆಳ್ವಾಸೆ, ತೆಳುವಾಸೆ (ನಾ). ನವುರಾದ ಬಾಸೆ : ಸಣ್ಣನಡು ಬಳೆಯೆ ತಿವಳಿಗಳಡಗೆ ತೆಳ್ವಾ[ಪಾಠಾ. ಳುವಾ]ಸೆ ನುಣ್ಣನೆ ಪೊಗರ್ವಡೆಯೆ (ಚೈಮಿಭ್ನಾ. ೧೮-೩೪). **ತೆಳುವಾಸೆ** : ಮೇಲಿನ ಪ್ರಯೋಗದ ಪಾಠಾಂತರವನು. ನೋಡಿ. [ತೆಳ್ವ್ + ಬಾಸೆ$_1$]

ತೆಳ್ವು, ತೆಳುವು (ನಾ). ೧. = ತೆಳ್ಪು ೨ : ನಿಱಿಯ ಸಿಂಗರದುಡೆ ತೆಳ್ವುದಸಿಯ ಪೊಡೆಯ . . . ಸೌಂದರಿಯದರಸಿ (ಚೈಮಿಭಾ. ೧೦-೯). **ತೆಳುವು** : ೨=ತೆಳ್ಪು ೧ : "ಸ್ಫುಟಃ – ತೆಳುವುಂ, ವಿಕಾಸವುಂ" (ಕಾಶಕ್ಕ. ೨೦). ೩. ಅಸ್ಥಿರವಾದುದು ; ಬೇಗ ಮರೆತುಹೋಗುವಂಪದು : ಜನತೆಯ ನೆನಪು ತೆಳುವಾದುದು ; ತಾತ್ಕಾಲಿ ಪ್ರಮೇಯ ಪ್ರಸಂಗಗಳಲ್ಲಿ ಅದಕ್ಕೆ ಹೆಚ್ಚು ಆದರ (ಬದೇವ. ೧೫೬). [ತೆಳ್ + – ವು]

ತೆಳ್ವುಸುರು 'ತೆಳ್ಳುಸುರು' ನೋ.

ತೆಳ್ವೆಮರ್ (ನಾ). ಕಿರಂಬೆವರು ; ಸಣ್ಣನೆಯ ಬೆವರಂಹನಿ : ವಿಭೂಷಣಾಂಶುಲತೆ ತಂದಲ ಬಿಂದುವೊಲುಣ್ಮೆ ತೆಳ್ವೆಮರ್ಗಳಿಯಿಸೆ ಮೇಘಮಾಳೆವೊಲದೇನೆಸೆದತ್ತೊ ನಭಃಪ್ರಯಾಣದೊಳ್ . . . ಖಚರಾಂಗನಾಜನಂ (ಪರ್ಧಪು. ೫-೨೭). [ತೆಳ್ + ಬೆಮರ್$_2$]

ತೆಳ್ವೆಳಗ (ನಾ). ಶುಭ್ರವಾದ ಬೆಳಕನ್ನುಳ್ಳವನು ; ಚಂದ್ರ : ಮಿಗಲಚ್ಚಣಂ ತೆಳ್ವೆ[ಪಾಠಾಂ. ತಣ್ಬೆ]ಳಗನಮರ್ದುಕಳೆವೆಳಗ . . . ಶಶಿಯನಾಮಂ (ಕಬ್ಬಿಕ್ಕೆ. ೪೩). [ತೆಳ್ವೆಳಗು + – ಅ$_7$]

ತೆಳ್ವೆಳಗು, ತೆಳುವೆಳಗು (ನಾ). ಬೆಳ್ಳನೆಯ ಬೆಳಕು ; ಶುಭ್ರವಾದ ಬೆಳಕು : ತಿಳಿವೆಳಗಿನ ತೆಳ್ವೆಳಗಿನ ಬಳಿವೆಳಗಿನ ಬಳ್ಳಿವೆಳಗಿನೊಳ್ವೆಳಗಿನ ಬೆಳ್ವೆಳಗಿನ ಬೆಳಸಿನ ಸಿರಿಯೆನೆ ತೊಳ ತೊಳ ತೊಳಗಿದುದು ಮೂರ್ತಿ ಚಂದ್ರಪ್ರಭನಾ (ಶಬ್ದಾನು. ೧೪೦ ವ್ಯಾಖ್ಯಾ). **ತೆಳುವೆಳಗು** : ಪಳಿಕಿನ ಕಲಶದ ತೆಳುವೆಳಗಿನೆಳಕದಿನೆಳನೀರ ಪೊನಲೊಳ್ ಮುಟುಗಿಸುವಂತೆಯುಂ (ಅನಂಪು. ೫-೭೦ ವ). [ತೆಳ್ + ಬೆಳಗು$_2$]

ತೆಳ್ವೆಱ್ (ನಾ). ಗೆರೆಯಾಗಿರುವ ಚಂದ್ರ ; ಬಾಲಚಂದ್ರ : ಜಡೆಗಳ ಬಂಬಲೇ ತಲೆದಳಿರ್ ಫಣಿ ಸುತ್ತಿದ ಬಳ್ಳಿ ತಾಳ್ದ ಬಾನ್‌ಗಡಲದು ಪುಷ್ಪಮಾಲೆ ಗಱಿವೂ ಗಱಿ ತೆಳ್ವೆಱ್ (ಶಬಶಂ. ೩-೩). [ತೆಳ್ + ಪೆಱ್]

ತೆಳ್ವೊಗೆ (ನಾ). (ಹಿತವಾದ ಪರಿಮಳದ) ತೆಳುವಾದ ಹೊಗೆ,–ಧೂಪ: ಚೌಮೂಲೆಗಳಲ್ಲಿಯೂ ಸೋಂಬಿನಿಂದ ಪಲವಾಕೃತಿಗಳಿಂದ ತೆಳ್ವೊಗೆಯ ಸಂಪದವನ್ನೊಯ್ಯನೆ ಏರಿಸಿ ಕುಡುತ್ತಿರುವ ಅಗುರು (ಜಿಟ್ಕಅ. ೮೨-೧೮).

[ತೆಳ್ + ಪೊಗೆ$_2$]

ತೆಳ್ವೊಡೆ, ತೆಳ್ಪೊಡೆ (ನಾ). = ತೆಳ್ವಸಿಱ್ : ತೆಳ್ವೊಡೆ ಕಡುಚೆಲ್ವಡೆದುದು (ಅನಂಪು. ೬-೫). **ತೆಳ್ಪೊಡೆ** : ಕಡು ಬಿಣ್ಪುವೆತ್ತ ಪೊಱ[illegible]ಱುಗಿರ್ದವೆ ಸಣ್ಣ ಪುರ್ಬು ತೆಳ್ಪೊಡೆ ಸುಲಿಪಲ್ಗಳಂದದ ಕದಂಪಿರದೊಪ್ಪಿರೆ ಕಣ್ಗೆ ತೋಱಿದಳ್ (ರಾಜಶೇ. ೧೧-೮೫). [ತೆಳ್ + ಪೊಡೆ$_3$]

ತೆಳ್ವೊರೆ, ತೆಳ್ಪೊರೆ (ನಾ). ನವುರಾದ ಪೊರೆ,–ಪದರ: ಬೆಳ್ಮುಗಿಲ ತೆಳ್ವೊರೆಯಿನಿಂದ್ರಚಾಪಲೇಖೆಯಂ ತೆಗೆವ ಶರಲ್ಲಕ್ಷ್ಮಿಯಂ ಪೋಲ್ತು ನಿಜೋತ್ತರೀಯ ಪಲ್ಲವದ ಪೊರೆಯಿಂ ತೆಗೆದು . . . ಮಣಿದೊಡವನೊರ್ವಳಂಗ ನೆಗಿತ್ತಳ್ (ಮಲ್ಲಿಪು. ೪-೬೦ ವ) ; ಕೆಮ್ಮುಗಿಲ ತೆಳ್ವೊರೆಯ ಮಱಿಯೊಳ್ ವಿಱುಪ ಸಂಜೆವೆಱಿಯ ಮುಱುಕಮಂ ಮೆಱಿದುಂ (ಪರ್ಧಪು. ೧೦-೫ ವ). **ತೆಳ್ಪೊರೆ** : ಕರಗಿಸೆ ಬೆಳ್ಳಿಯಪ್ಪುಡಿದು ತೆಳ್ವೊರೆಯೆತ್ತ ದುಕೂಲವಪ್ಪ ಕಂಡರಿಸೆ ಮರಾಳವಪ್ಪ ... ಅಗುರ್ವನೊಳಕೊಂಡುದು ಚಂದ್ರಿಕೆ ಸಾಂದ್ರಭಾವದಿಂ (ಜಗವಿ. ೧೬-೧೦೯) ; ಪಿಡಿದ ಜವನಿಕೆಯ ಮಱಿಯೊಳ್ ಕುಡುಮಿಂಚಿನ ಬಳ್ಳಿ ಮುಗಿಲ ತೆಳ್ವೊರೆ[ಪಾಠಾಂ. ತೆಣ್ಬೊರೆ]ಯೊಳ್ ಕಣ್ಗೆಡರಂ ಪೊಲಡರೆ ತೋರ್ದುವು ತೊಡವಿನ ಬಿಡುವುಂ ಬಿಡೌಜನಂಗಚ್ಛಡಿಯುಂ (ಅನಂಪು. ೫-೯೪). [ತೆಳ್ + ಪೊರೆ$_6$]

ತೆಳ್ಸರಿ (ನಾ). ಸಣ್ಣನೆಯ ಮಳೆ ; ಹನಿಮಳೆ : ಮೆಲ್ಸರಿ ಸೂಳ್ಸರಿ ಮುಗಿಲೊಳ್ಗಲ್ಸರಿ ತೆಳ್ಸರಿ ಕರಂ ಪೊನಲ್ವರಿಯಿಪ ಬಂಬಲ್ಸರಿ (ರಾಜಶೇ. ೮-೧೦೬); ಮೆಲ್ಸರಿ ತೆಳ್ಸರಿ ಸಾಲ್ಸರಿ ಸೂಳ್ಸರಿ ಕಾಲ್ಸರಿ ಸುರಿದವು ಉಧೋ ಉಧೋ (ಕ್ರೌಂಚಧ್ವ. ೫೨-೨೦). [ತೆಳ್ + ಸರಿ$_6$]

ತೆಳ್ಳ (ನಾ). ೧. ಒಬ್ಬಾತನ ಹೆಸರು : ತೊರೆ ಕಾವಗದನುಂ ಬೀವಗದನುಂ ವಾರಬದಿಗದಾಲನುಂ ತೆಳ್ಳನುಂ ತಾಟಲಿಯನುಂ (ಎಕ. III, ನಂಜನ. ೧೩೯-೬; 915 ?). ೨. ಒಂದು ಕುಲದ ಹೆಸರು: ಶ್ರೀತಿಪ್ಪೂರುತೀರ್ತ್ಥದ ಹಳ್ಳಿ ಹಾದಿಲವಾಗಿಲ ಭೂಮಿಗಾರಂ ತೆಳ್ಳರ ಕುಲದ ಎಱಿಯಂಗ ಗಾಉಂಡನ ಮಗಂ (ಎಕ. III, ಮಳವ. ೪೮-೧೦ ; 1690). [?]

ತೆಳ್ಳಗೆ (ಅ). ೧. ಸ್ಪಷ್ಟವಾಗಿ ; ನಿಷ್ಕೃಷ್ಟವಾಗಿ ; ತಿಳಿಯುವಂತೆ : ಉಳ್ಳೋದುಗಳೊಳಗೆನಿತಱಿವುಳ್ಳರ್ಗಂ ತಿಳಿಪಲಱಿಯದೆನಿಪೆಡೆಗಳುಮಂ

ತೆಳ್ಳಗಿರೆ ತಿಳಿವುಗುಂ (ಪಂಪಭಾ. ೨-೩೫). ೨. ತಿಳಿಯಾಗಿ ; ನೀರಾಗಿ ; ಅಳ್ಳಕವಾಗಿ : ಒತ್ತರಿಸಿಬಂದನು ತೆಳ್ಳಗೆ [ಪಾಣಾಂ. ನ]ವಾಡಿ (ಸೂಪಶಾ. ೧-೨೫) ; ಜೀರಿಗೆ, ಮೆಂತ್ಯ, ನುಚ್ಚು ಈ ಮೂರನ್ನೂ ಮಜ್ಜಿಗೆಯೊಡನೆ ಅರೆದು ತೆಳ್ಳಗೆ ಕಲಸಿ . . . ಕೊಡಲು ಮತ್ತೊಂದು ಸಲ ವಾಂತಿಯಾಗುವುದು (ಸಳವ್ಯ. ಪರಿ. ೪೮೫). ೩. ತೆಳುವಾಗಿ; ಸಪುರವಾಗಿ: ಕೃಶವಾಗಿ: ಒಂಟಿಯ ಶರೀರವು ತೆಳ್ಳಗೆ ಇರುತ್ತದೆ (ಮುಂಬಯಿ. ೩-೬೪); ಗೆಡ್ಡೆಗಳನ್ನು ತೊಳೆದು ಸಿಪ್ಪೆ ತೆಗೆದು, ತೆಳ್ಳಗೆ ಕೊಯಿದು . . . ನೀರಿನಲ್ಲಿ ಬೇಯಿಸಬೇಕು (ಅಡುಸಾ. ೦೦೩).

ತೆಳ್ಳಗಾಗು = ೧. ನೀರಾಗಂ : ಅಂಬಲಿ ತೀರ ತೆಳ್ಳಗಾಗಿದೆ (ಕೃಷಿ). ೨. ತೆಳುವಾಗಂ ; ವಿರಳವಾಗಂ ; ಹಗುರವಾಗು : ಹವೆಯು . . . ಮೇಲಕ್ಕೆ ಹೋದ ಹಾಗೆ ತೆಳ್ಳಗಾಗಿರುತ್ತದೆ (ಮುಂಬಯಿ. ೪-೬೦). ೩. ಸಣ್ಣಗಾಗಂ ; ಸೊರಗಂ : ಪ್ರೇಮಿಯಾದವನು ಯೋಚಿಸಿ ಯೋಚಿಸಿ ಸಣ್ಣಗಾಗಬೇಕು, ತೆಳ್ಳಗಾಗಬೇಕು (ಆಲಹೂ. ೩೩). [ತೆಳ್ + – ಅಗ್ಗೆ]

ತೆಳ್ಳನೆ (ಅ). ೧. ಸ್ಪಷ್ಟವಾಗಿ ; ಚೆನ್ನಾಗಿ : ಮುನಿವಚನದೊಳಂ ನಂದನರೊಳವಾಗಳ್ ಯಶೋಮತಿ ಕ್ಷಿತಿಪಂ ತೆಳ್ಳನೆ ತಿಳಿದು (ಯಶೋಧಚ. ೪-೬೨); ಬಂದ ಕಾರ್ಯವ ನೀವು ತೆಳ್ಳನೆ ತಿಳಿವೊಲು ಪೇಳಿ (ವರ್ಧಚ. ೬-೦೪). ೨. ತೆಳುವಾಗಿ : ಕಳ್ಳಿಯುಮೆಕ್ಕೆಯುಮಂ ಸುಟ್ಟಳ್ಳಂ ಮಸಿಯಾಗಿ ಪುರಿದು ಚೂರ್ಣಸಮೇತಂ ತೆಳ್ಳನೆ ಪೂಸುಗೆ (ಅಶ್ವಶಾ. ೦೩-೨೦).

ತೆಳ್ಳತೆಳ್ಳನೆ, ತೆಳ್ಳೆಳ್ಳನೆ (ದ್ವಿರುಕ್ತಿ) : ಅದಂ ಬಾರಿಸಲು ತೆಳ್ಳತೆಳ್ಳನೆ ಮಡಕೆಯಡಿಯೊಳಗೆ ಬಿಳ್ದು ಹಳಿಯುಂತೆ ಹಾಲಹುದು (ಸೂಪಶಾ. ೨-೩) ; ತೆಳ್ದೆಳ್ಳನಾ[ಪಾಣಾಂ. ತೆಳ್ದೆಳ್ಳಮಾ]ದ ಪಾಲ್ಗಡಲಲ್ಲಿರೆಯೊಳ್ ಮಸುಳ ಮಸುಳನೆಸೆದುವು ಮಣಿಗಳ್ (ಅನಂಪು. ೫-೭೩) ; ತೆಳ್ದೆಳ್ಳನಾದ ಪಾಲ್ಗಡಲೊಳು ತಳತಳಿಸುವ ಮಣಿನಿಚಯ (ಅನಂಚ. ೭-೦೨೬). [ತೆಳ್ + –ಅನೆ$_1$]

ತೆಳ್ಳಿತು, ತೆಳ್ಳಿತ್ತು (ಗು). ೧. ತೆಳ್ಳಗಿರುವ ; ಕೃಶವಾದ ; ತೆಳುವಾದ : ಬೆಟ್ಟತು ತೆಳ್ಳಿತು . . . ನಿಡಿದಿನಿದಂಬಂತುಳ್ಳುವ ತುದು ಕಡೆಯೆನೆ ಕೈಕೊಳ್ಳಿಂ ಗುಣವಾಚಿ ಮೇಣ್ ತುಕಾರಂ ದ್ವಿತ್ವಂ (ಶಮುವ. ೭೭ ಪ್ರಯೋ). 'ತೆಳ್ಳೂದಲು' ಪರಾ. ೨. ಸುಂದರವಾದ ; ಕೋಮಲವಾದ. 'ತೆಳ್ಳಗದಂಪು' ಪರಾ. ೩. ಶುಭ್ರವಾದ ; ಬೆಳ್ಳಗಿರಂವ. 'ತೆಳುದುಗುಲ', 'ತೆಳ್ಳಡಿ' ಪರಾ. **ತೆಳ್ಳಿತ್ತು** : ೧. "ಕೃಷ್ಣಂ, ಕೃಷ್ಣಿ : ... ಕರ್ಶಿತವ್ಯಂ–ಈ ೭ ತೆಳ್ಳಿತ್ತು" (ಕಾಶಕ್ಕ. ೦೯೪) ; ತೆಳ್ಳಿತ್ತು ಕೆಂಪಸಿದೆನಿಪ್ಪ ನಾಲಗೆ ಲೇಸು ಕಕ್ಕು ಕವಲಾಗೆ ಪೊಲ್ಲಂ (ಮುಂಗರಾ. ೮೨-೦೬).

ತೆಳ್ಳಿದ = ತೆಳ್ಳಗಿರುವವನಂ ; ಸಣ್ಣಗಿರುವವನು : "ಕೃಶಾನುಃ – ಬೆಂಕಿಯುಂ, ತೆಳ್ಳಿದನುಂ" (ಕಾಶಕ್ಕ.$_1$ ೦೯೪) ; ದಕಾರಾದೇಶಕ್ಕೆ – ಒಳ್ಳಿದಂ, ತೆಳ್ಳಿದಂ, ಮೆಲ್ಲಿದಂ (ಶಮುದ. ೦೫೨ ಪ್ರಯೋ). ತೆಳ್ಳಿದುವು (ಬಹುವ): ನಡೆ ನೋಟಕ್ಕೊಡಮಂತುಮಿಂತು ಮೂಜಿಸಿಯವು ಮೂಜು ದೊಡ್ಡಿದುವು ಮೂಜಿಡೆ ತೆಳ್ಳಿದುವಂಬುಜಾಕ್ಷಿಯಾ (ಪಂಪಭಾ. ೪-೭೨) ; ಒಳ್ಳಿದುವು ಪೆಲ್ಲಿದುವು, ತೆಳ್ಳಿದುವು (ಶಬ್ದಾನು. ೨೭೭ ಪ್ರಯೋ).

[ದೇಸಿ ತಮಿ. ಮಲ. ತೆಳಿ, ತೆಳಿವು; ತುಳು. ತೆಳಿ, ತೆಲಿ, ಸೆಲಿ]

ತೆಳ್ಳಿತ್ತು 'ತೆಳ್ಳಿತು' ನೋ.

ತೆಳ್ಳುಸುರು, ತೆಳ್ವುಸಂರಂ (ನಾ). ನಿಧಾನವಾದ ಉಸಿರಂ ; ಮಂದ ನಿಶ್ವಾಸ : ಸಂಭೋಗಿಸುವಾಗ ಬೊಟ್ಟು ಕಲಕಿ ತುಜುಬಳಿದು ತೆಳ್ಳುಸುರುಬ್ಬ ಪುಟ್ಟದಿಹುದೆ ಮೈಗೆ ಬೆವರು (ಧರಚ. ೦೫-೭೪). **ತೆಳ್ವುಸುರು**: ಎಂದೆಂದು ದನಿಗೆ ತೆಳ್ವುಸುರಿಗೆ ಸರಿಯಲ್ಲವೆಂದು ಜಱಿವರೆಮ್ಮನೆಂದು ಅಂದು ವೇಳೆಯು ಕಂಡು ಕೊಂದರಾ ಕಳಕಂಠ ಮಂದ ಮಾರುತರು ನೀಜಿಯರ (ಧರಚ. ೪೯-೮೩). [ತೆಳ್ + ಉಸುರು$_2$ (<ಉಸಿರ್$_3$)]

ತೆಳ್ಳೆ (ನಾ). ೧. (ಕೆಸರು) ನೀರಾಗಿರುವಂತೆ ಮಾಡಿರುವುದು : ಎರಡು ಸಾಲಾಗಿದ್ದ ಗದ್ದೆಗಳನ್ನು 'ತೆಳ್ಳೆ' ಮಾಡಿ ಸಸಿಹಾಕಿ, ಹೆಂಗಸರು ಬರುವ ನಿರೀಕ್ಷಣೆಯಲ್ಲಿ . . . ಕಾದರು (ಗಂಗಾಳ. ೦೩೨). ೨. ಆಳವಿಲ್ಲದ ನೀರಿನ ಜಾಗ,–ಸ್ಥಳ : ದಡದೆಡೆಯ ತೆಳ್ಳೆಯೊಳಿದು ಕೆಲಕೆಲರ್ ಮಿಂದರೆದೆಯಾಳದಾ ನೀರೊಳಗೆ (ಶ್ರೀರಾಮಾ. ೫೪೪-೦೩೦). ೩. (ಆಲಂ) ಹಗುರ; ಲಘುಂ : ಅವರದೆಲ್ಲ ಅದೇ ಜಾಳಿಯಲ್ಲವೆ ? ನಾನಂತು ಪೊಳ್ಳಾಗಬಾರದು; ತೆಳ್ಳೆಯಾಗಬಾರದು ; ಹಾಗಾಗುವುದಾದರೆ ನನ್ನ ಗತಿ ಮುಗಿದಂತೆಯೆ (ಪುನರು. ೦೬೪). [<ತೆಳ್ಳಿತು]

ತೆಳ್ಳೆಗಂಪು (ನಾ). ತೆಳಂವಾದ ಕಂಪು ; ಹಿತವಾದ ಸುವಾಸನೆ : ತನೆ ಪಾಲೇಱಿದ ಶಾಲಿಗಂಪುಗಡಲೊಳ್ ಮುಬ್ಗುಡಿ ಮುಬ್ಗುಡಿ ಕೌಂಗಿನ ಪೊಂಬಾಟಿಯ ನಟ್ಟಗಂಪುಗಡಲೊಳ್ ಚುಳ್ಳಾಡಿ ಚುಳ್ಳಾಡಿ ಮಾವಿನ ರಲ್ಗೊಂಚಲ ತೆಳ್ಳೆಗಂಪುಗಡಲೊಳ್ ತೇಂಕಾಡಿ ತೇಂಕಾಡಿ ಪದ್ಮಿನಿಯೊಳ್ ತುಂಬಿ ವ:ಲಂಗಿ ಸೇದೆಗಟ್ಟಿಗುಂ ಕಾಸಾರತೀರಂಗಳೊಳ್ (ಅನಂಪು. ೩-೧೦).

[ತೆಳ್ಳೆ + ಕಂಪು]

ತೆಳ್ಳೆನೀರು (ನಾ). ಆಳವಿಲ್ಲದ ನೀರು; ದಡದಲ್ಲಿರಂವ ನೀರಂ : ಧರ್ಮು ಹೊಳೆಯ ಅಂಚಿನ ತೆಳ್ಳೆನೀರಿಗಿಳಿದನು (ಮಾಶಿಮ. ೫೦೩).

[ತೆಳ್ಳೆ + ನೀರು$_1$ (<ನೀರ್$_1$)]

ತೆಳ್ಳೆಲರು, ತೆಳುವೆಲರ್ (ನಾ). ತೆಳುವಾಗಿ ಬೀಸುವ ಗಾಳಿ; ಸುಳಿಗಾಳಿ; ಮಂದ ಮಾರುತ : ಸಕ್ಕರೆ ಕೀವಿದ ತನಿವಾಲೂದುವ ತಂಕಣ ತೆಳ್ಳೆಲರು (ಆಯಕಾ. ೧-೩೪). **ತೆಳುವೆಲರ್** : ನವ್ಯಪರಿಮಳದಿಂದೆ ಸೊಗಸು ತೀಡುವ ತೆಳುವೆಲರ್ಗೆ ಮೈಯೊಡ್ಡಿ ಮಾರ್ಗಶ್ರಮವನು ಕಳೆದರು (ಕೃಮಿಭಾ. ೮-೩). [ತೆಳ್ + ಎಲರು (<ಎಲರ್)]

ತೆಱ್ಱಿ$_1$, ತಱಿ, ತೆರ$_1$ (ನಾ). ೧. ರೀತಿ ; ಕ್ರಮ; ಬಗೆ: ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱಿಪೋಲ್ಮಂಜು.ಪೋಲ್ತೋಱೆ ಬೇಗಂ ಪರಿಗುಂ ಶ್ರೀರೂಪ ಲೀಲಾಧನವಿಭವಮಹಾರಾಶಿಗಳ್ಗಿಲ್ಲವಾರ್ಗ್ಗಂ (ಎಕ. II, ೮೮-೦ ; ಸು. 700) ; ಮುನಿ ವೀತರಾಗನೆಂದುಂ ಬನಮುಂ ಸಾರ್ತಕ್ಯಮಾವ ತೆಱಿದಿಂ ಪೋಪಂ (ಕವಿರಾ. ೧-೭೮) ; ಪದಿನೆಂಟುಂ ತೆಱಿದ ಭಕ್ಷ್ಯರೂಪಂಗಳುಮುಂ ನಾನಾಪ್ರಕಾರದ ಪಾನಂಗಳುಮುಂ ಭಟ್ಟಾರರ್ಗೆ . . . ಬಡ್ಡಿಸಿದೊಡೆ (ಪಡಾರಾ. ೭೪-೦೭) ; ಪುಂಡ್ರೇಕ್ಷುದುಡಂಗಳಂ ಕಡಿಕಡಿದು ಯಂತ್ರ ಪೀಡನೆಯುಂ ರಸಂಗೊಳ್ವ ತೆಱಿನುಮಜ್ಜಿಯೆ ಪೇಟ್ದು (ಆದಿಪು. ೭-೭೭ ವ); ಮುನಿವಧದೋಷಮಾವ ತೆಱಿದಿಂ ಕಳಿಗುಂ (ಕಾದಂಪೂ. ೮೭೬) ; ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆಱಿನಂತೆ (ಮಹಾದೇ. ಬ. ೦೫-೦೭) ; ತೆಱಿನಂ ಕಾಣದ ತಾಣದಲ್ಲಿ ಕವಟ್ಟಂಗಳ್ ಮಾಟ್ಟರಿರ್ಪಲ್ಲಿ . . . ಇರ್ದೊಡೆ ಹಾನಿಯೆಯ್ದೆ (ಸೋಮೇಶ. ೩೫) ; ಸುಮುಹೂರ್ತದೇ ಗಂಡುರೂಪಾದ ತೆಱಿನಾಗೆ ಅಮಮ ಕಾರಣಿಕ ಶಿಶು ಜನಿಯಿಸಿದನನುವಾಗೆ (ಬಸರ. ೦-೦೩೦) ; ತೆಱಿನಜ್ಜಿದೀವ ಕಾರ್ಯವಱಿದಂಜುವ . . . ಊರ್ಜಿತ ಬುದ್ಧಿಯಲ್ಲದಿಂಬಜ್ಜಿಯದ ಗಾವಿಲಂಗೆ ದೊರೆಕೊಳ್ವರೆ ಸೂಳೆಯರೆಂಬ ಡಾಳೆಯರ್ (ಸೂಕ್ಪ್ರಸು. ೮-೪೦೩) ; ಭರತ ಸಂತತಿ ಫಲಿತ ಕದಳಿಯ ತೆಱಿದೊಳಾಯತಲಾ (ಕುವ್ಯಾಅ. ೩-೨೧); ದೂಱು ಬರುವ ತೆಱ ನಂಬಿಕೆ ಕೊಟ್ಟರೆ ದುರ್ಜನ ಬರುವುದು ತಪ್ಪೀತೆ (ಪುರಂದ. ೧-೦೫೭-೦). ೨. ಅಂದ; ಮನೋಹರತೆ: ತಂನನೆ ಜಗಂ ಸಂಪ್ರೀತಿಯಿಂ ಬಣ್ಣಿಸಿತ್ತೆನೆ ತಾನುಂ ತೆಱಿದಿಂ ಜಸಕ್ಕೆ ನೆಲೆಯಾದಂ ನಾಚಿದಣ್ಣಾಧಿಪಂ (ಎಕ. XXVIII, ೫-೨೬ ; 1082). ೩. ಸಂಗತಿ ; ವಿಷಯಂ : ಪೆಜರಂ ದೂಱುವರೊಳ್ ತೆಱನಱಿಯದೆ ನುಡಿವವರೊಳ್ . . . ಬಜ್ಜುಲೆಯೆಂದೆಳಸಿ ಕೇಳಲಾಗದು ಪುರುಷಂ (ಧರ್ಮಾಮೃ. ೬-೨೦೩) ; ಅಱಿವಿನೊಳಗಣ ಅಱಿವ ತೆಱದೊಳಗಣ ತೆಱವ ಕುಱುಹಿಟ್ಟು ಕುಱುಹ ಕುಱುಹೆಂ

ಅವಗವಿಸಿ ಭಿನ್ನವಿಲ್ಲದೆ ನಿರ್ವಾಹ ನಿರ್ಲೇಪವಾದುದು (ಮದೇವ. ೨೭೪-೧೬); ಆ ನೃಪ ಸುವ್ರತಾಖ್ಯಮುನಿ ಬರಲೆಱಗಿ ತನಗುದಯಿಸಿದ ಪುತ್ರರು ನಿರಾಯುಷರೇಕೆ ತನಗೀ ತೆಱನ ಹೇಳೆನೆ ಕರ್ಮವಶ ತಾನೆಂದನಾ ಮುನಿಪ (ಜೀವಂಜ. ೫-೩೫). ೪. ಮಾರ್ಗ; ಹಾದಿ; ಉಪಾಯ: ಚಿಂತಿಸಿದಳೊಂದು ತೆಱನಂ ಶಿವಂ ಮೆಚ್ಚುತಿರೆ . . . ಪನ್ನಗಾಭರಣನ ಪಸಿವನಾಱಿಸುವುದೆಂದು (ಇಳೆರ. ದೇ. ೫೩-೨೦). ೫. ಸ್ಪಷ್ಟವಾದಂದಂ; ವ್ಯಕ್ತವಾದಂದು. 'ತೆಱದರುಶನ' ಪರಾ. **ತೆಱ**: ೧. ನಿಜಪರಿಭವವ ನೆಲ್ಲವನು ಹರಿಪದಸರಸಿಜಕೆ ತೆಱವಾಗಿ ಬಿನ್ನಹ ಮಾಡಿದನು (ನಿಭಾಗ. ೧೦-೬೯-೨). **ತೆರ$_1$**: ೧. ಶ್ರುತಿಯೊಳಗಾಡುವ ಹಾಡಿನ ತೆರದಿ ಸ್ವತಂತ್ರ ನೀನೀ ಪಾರತಂತ್ರ್ಯದಿ (ಗಜೇಶ. ೪-೮೩); ಶುದ್ಧನೀಲಿ ಬಣ್ಣಕ್ಕೂ ಶುದ್ಧಬಿಳಿಯ ಬಣ್ಣಕ್ಕೂ ಮಧ್ಯೆ ಒಂದು ತೆರನಾದ ಬಣ್ಣವಿರುತ್ತದೆ (ಜೀವಾತ್ಮ. ೧೫೩); ಭಕ್ತಿಯಲ್ಲಿ ನಾನಾ ತೆರ (ಜಗದಾ. ೧೮).

ತೆಱತೆಱ, ತಱಂತಱ, ತಱತಱ (ದ್ವಿರುಕ್ತಿ): ದಿವಕ್ಕೆ ಪೋಪ ಬಟ್ಟೆಗೆ ಸೋಪಾನಂಗಟ್ಟಿದಂತೆ ತೆಱತೆಱದಿಂ ನೆಗೆದೊಗೆದ ಪೊಗೆಯಂ ಕಂಡು (ಪಂಚತಂ. ೧೧೬-೬); ತೆಱತೆಱದ ಕಲ್ಲೋಲಮಾಲೆಗಳ ಲೀಲೆಗಳ ಬೆರೆಬೆರೆವ ರಾಜಹಂಸಾಳಿಗಳ ಕೇಳಿಗಳ . . . ಮುನಿಜನಂ ಸೇವಿಸುವ ಭಾವಿಸುವ ಗಂಗೆಗವನಿಜೆ ಬಂದಳು (ಚೈಮಿಭಾ. ೧೯-೫); ತಱಂತಱದಿಂ ಶಿರೋಜಮಂ ನೆಗಪುವ ಭಂಗಿ (ಜಗವಿ. ೧೦-೯೯); ತಱತಱ ಮೆಟ್ಟಿ ರಾಗದೊಡಗೂಡಿ ಬೆಡಂಗು ಪರಿಶ್ರಮಂಗಳೊಳ್ ನೆಱೆದಿರೆ . . . ನರ್ತಿಸಿದಾಕೆಯರೊಪ್ಪಿ ತೋಱಿದರ್ (?) (ಸೂಕ್ತಿಸು. ೧೩-೧೮). **ತೆಱತ್ತು** = ಹೀಗೆ; ಈ ರೀತಿಯಲ್ಲಿ: ನೀತಿನಿರಂತರಾನುಗತವೃತ್ತಿವಿಕಲ್ಪಿತಮಂ ತದೀಯ ನಿರ್ಣೀತಿಯನೀ ತೆಱತ್ತು ತಱಿಸಲ್ಗೆ ಬುಧೋತ್ತಮರುಕ್ತಿಪೂರ್ವಕಂ (ಕವಿರಾ. ೨-೧೦೦). [ದೇ.॥ ತಮಿ. ತಿಱ; ಮಲ. ತಿಱ, ತಿಱವು; ತೆಲು. ತೆಱಂಗು, ತೆಱವು]

ತೆಱ$_2$ 'ತೆಱ$^3_3$' ನೋ.

ತೆಱಂ, ತೆರಂ (ಅ). ಚೆನ್ನಾಗಿ; ಅಧಿಕವಾಗಿ. 'ತೆಱಂಬೊಳೆ' ಪರಾ. **ತೆರಂ**. 'ತೆರಂಗುಣಿ' ಪರಾ. [<ತೆಱ$_1$]

ತೆಱಂದಿರಿ (ಕ್ರಿ). ೧. ಬಹುವಾಗಿ ಅಲೆದಾಡು,_ಸುತ್ತು: ಅದೇಂ ತೆಱಂದಿರಿದು ಪಾಯ್ದುವೋ ಕೇತಕಿಯೊಳ್ ಮದಾಳಿಗಳ್ (ಆದಿಪು. ೧೦-೧೨೦); ಅತ್ತಣ ಪಂಬಲ ಬಂಬಲೊಳ್ ತೆಱಂದಿರಿದುದು ಚಿತ್ತಮಾದೊರೆಯ ಯೋಗಿಗಮಿಂತುಟೆ ಮೋಹಮಾಗದೇ (ಪಂಪಭಾ. ೧೩-೬೩); ಅಲರ್ವಂಡನುಂಡು ತನಿಸೊರ್ಕಿಂ ಸೊರ್ಕಿ ತೆಱಂದಿರಿದು ಪಾಱುವ ಪೆಣ್ಡಂಬಿಗಳ ಬಳಗಮನೊಳಕೊಂಡ ಲತಾಮಂಟಪಂಗಳೊಳಂ (ಕಾದಂಉ. ೫೨೬). ೨. ಒಮ್ಮೆಲೇ ಹೊರಳು; ರಭಸದಿಂದ ತಿರುಗು: ಮೆಯ್ವಸಮೊಂದೆ ಪೂವಿನೊಳೆ ಪೋಗಿ ತೆಱಂದಿರಿದಳ್ಳೆಗೊಂಬಿನೊಳ್ ಪಾಯ್ವುದುಂ (ಕಾಂತಿಪು. ೦-೬೩); ತೆಱಂದಿರಿದಾಂತ ಮೆಯ್ವೆಸಂ ಸುತ್ತುವ ಬಲ್ಪು . . . ತಮ್ಮೊಳೆಯ್ದೆ ಮೆಯ್ವೆತ್ತಿರೆ ಬಿಚ್ಚತಂ ಪೊಣರ್ದುವಂದೆರಡುಂ ಬಲದಂಕದಾನೆಗಳ್ (ಚಂದ್ರಪು. ೧೦-೮೪); ಬಿದಿರ್ಚಿ ದಳಂಗಳಂ ತೆಱಂದಿರಿದುದು ಜಕ್ಕವಕ್ಕಿ (ಅನಂಪು. ೭-೭೧); ಭರದಿ ತೆಱಂದಿರಿವಾ ತಿಹುರಿಯ ಮೇಲೆ ಇರದಿಟ್ಟು ಕುಂಬಱಗೋಲಾ ಪರಿಯೆನೆ ಗಜವೆಡೆಯಾದಶ್ವನ ಮೇಲೆ ಪಿರಿದೊಪ್ಪಿದನು ವಾಹಕನು (ಶ್ರೀಪಾಲ. ೪-೧೨). ೩. ಮನೋಹರವಾಗಿ ತಿರುಗು; ಸುಂದರವಾಗಿ ಸುತ್ತು: ಒಲವಿನೊಳಾದ ಕಾಯ್ದು ಮಿಗೆ ಕಾದಲನಂ ಬಿಸುಟಂತೆ ಪೋಪ ಕಾದಲಳಟುತುಂ ತೆಱಂದಿರಿದು ನೋಡಿದ ನೋಟದೊಳ್ (ಪಂಪಭಾ. ೪-೦೦೮). [ತೆಱ$_1$ + ತಿರಿ$_1$]

ತೆಱಂದಿರಿಪು (ಕ್ರಿ). ಬಗೆ ಬಗೆಯಾಗಿ ತಿರುವು, -ಹೊರಳಿಸು: ಬಿಡದೊಯ್ಯನೆ ನೀವಿಯಂ ತೆಱಂದಿರಿಪುತುಮಲ್ಲಿ ತೀಡುವುದು ಕಾಮುಕನಂದದೆ ಸಾರವಾರುತಂ (ಕುಸುಮಾ. ೨-೧೧೧). [ತೆಱ$_1$ + ತಿರಿಪು$_1$]

△ **ತೆಱಂಪು** 'ತೆಱಪು' ನೋ.

ತೆಱಂಬಾಯ್ (ಕ್ರಿ). ಚೆನ್ನಾಗಿ ಓಡಾಡು: ಮೊರೆವುನ್ಮತ್ತಮಧುಬ್ರಜಂ ಸುಱಿವ ಕಾದಂ[ಬಂ] ತೆಱಂಬೊ[ಬಾ]ಯ್ದು ಭೋರ್ಗರೆದೆತ್ತಂ ಪುಗಲೆಂಬ ಕೋಕಿಲೆ (ಸುಕುಮಾ. ೧-೭೩). [ತೆಱಂ + ಪಾಯ್$_1$]

△ **ತೆಱಂಬು** 'ತೆಱಪು' ನೋ.

ತೆಱಂಬೊಯ್ (ಕ್ರಿ). ಚೆನ್ನಾಗಿ ಹೊಡೆ: ಕಾಲ್ಗಾಳ್ಗಳಿಂ ಪಿಡಿದೀಡಾಡಿಯುಮರ್ದಿಯುಂ ತಿರಿಪಿಯುಂ ತೇದುಂ ತೆಱಂಬೊಯ್ದುಮಾ ದಡಿಗಂ ದಾನವನಂದದಿಂ ಕೆಡಪಿದಂ ಸಂಗ್ರಾಮರಂಗಾಗ್ರದೊಳ್ (ಪುಹಾನೇ. ೧೨-೨೦೪). [ತೆಱಂ + ಪೊಯ್$_1$]

ತೆಱಂಬೊಳೆ (ಕ್ರಿ). ಚೆನ್ನಾಗಿ ಪ್ರಕಾಶಿಸು; ಅಧಿಕವಾಗಿ ಹೊಳೆ: "ತೆಱಂಬೊಳೆದುದೆಂದು ತೋರ್ಕೆವಡೆದ ಕಾಂತಿ" (ಕಶಸಾ. ೫೬-೨೧೬); ಪೊಱಪೊಣ್ಮುವ ಕಣ್ಣ ಬಿಳ್ಪುಮೋಪರ ಮನದೊಳ್ ತೆಱಂಬೊಳೆವ ಬಾಳೆಗಳಂತಿರೆ (ಆದಿಪು. ೧೧-೪೬); ತೆಱಂಬೊಳೆವ ಮಿಾಂಗಳನುಳ್ಳುವ ಕೈದುಗಳ್ ನಿರಾಕರಿಸಿರೆ ಮೇರೆದಪ್ಪಿ ಕವಿದತ್ತು ನರಾಧಿಪ ಸೈನ್ಯಸಾಗರಂ (ಪಂಪಭಾ. ೩-೬೮); ಪುಷ್ಪಶರಪುನ್ನಾಗಘಟೆಯ ಕಟದಿನು ತ್ಕಟಮಾದ ಮದವೃಷ್ಟಿಯಿಂ ತೆಱಂಬೊಳೆವ ಮಱಿದುಂಬಿಯ ಬಂಬಲಿಂ . . . ಅತಿ ರಮಣೀಯಮಾಗಿ (ಮಲ್ಲಿಪು. ೨-೩೩); ಒಪ್ಪಂಬೂಸಿದ ವೋಲ್ ತೆಱಂಬೊಳೆವ ಕೊಂಕುಂ (ಕಬೈಕಾ. ೫); ಕೆಂಬಟ್ಟೆಯ ಮೃದುತಲ್ಪದೊಳೊಱಗಿ ತೆಱಂಬೊಳೆದೊಪ್ಪುವ ರತಿಯೆನೆ (ಜಯಕಾ. ೩-೮). [ತೆಱಂ + ಪೊಳೆ$_1$]

ತೆಱಂಬೊಳೆಯಿಸು (ಕ್ರಿ). ಚೆನ್ನಾಗಿ ಪ್ರಕಾಶಿಸುವಂತೆ ಮಾಡು; ಹೆಚ್ಚು ಶೋಭೆಯುಂಟಾಗುವಂತೆ ಮಾಡು: ವನಮಧ್ಯಮದೇಂ ದೇವನ ವನಮಾಲೆಯಂ ತೆಱಂಬೊಳೆಯಿಸಿತೋ (ಜಗವಿ. ೧೦-೫೬).

[ತೆಱಂಬೊಳೆ + – ಇಸು$_3$]

ತೆಱಕಾಱ (ನಾ). ತೆರಿಗೆಯನ್ನು ವಸೂಲು ಮಾಡುವವನು: ನೀನಿತ್ತವಧಿ ಕಿಱಿದೀವರಿಲ್ಲ ಧನವಂ ಗಳಿಸಿ ತಂದೀವೆನೆನಲು ದಿನವಿಲ್ಲೊಬ್ಬ ತೆಱಕಾಱನಂ ಕೊಟ್ಟೊಡಾತಂಗೆ ನಿರ್ಣಯಿಸಿ ಕೊಡುವೆನೆನಲು (ಹಡಕಾ. ೮-೫೬); ಸುರಿದನರ್ಥವನು ಕೌಶಿಕಮುನಿಯ ತೆಱಕಾಱ ತಲೆದೂಗಲು (ಹಡಕಾ. ೧೦-೨೬). [ತೆಱ$_2$ (<ತೆಱ$^3_3$) + – ಕಾಱ]

ತೆಱಕೈ (ನಾ). (ಹಣವನ್ನು) ಸೆಳೆದಂಕೊಳ್ಳುವ ಕೈ; (ಸಿರಿಯನ್ನು) ದೋಚುವ ಕೈ: ಠೌಳಿಕಾಱತನ ತೆಱಕೈ ಬಱುಬೋಸರಣೆ ಹೇವ ಹಳಿವು ಬೆಳ್ಳುಕ್ಕೆ ಬೆಳ್ಮನಿಸು ಕೈತವಮಂ ಕನಸಿನೊಳ್ ನೆನೆಯದೆ ಮದನಾಗಮವೆಂಬ ಮಹಾನಾಟಕಮನಭಿನೈಸುತೆ (ವಿರೂಪಾ. ೬೮).

[ತೆಱ$_2$ (<ತೆಱ$^3_3$) + ಕೈ$_3$ (<ಕೆಯ್$_2$)]

ತೆಱಕೊಡು, ತೆರಕೊಡು (ಕ್ರಿ). ೧. ತೆರಿಗೆಯನ್ನು ತೆರು,-ಕೊಡು: ಬಾಳ ಬಡವರು ತೆಱಕೊಟ್ಟು ಬಾಹರು (ಕಇ. I, ೫೦-೨೮; 1432?). **ತೆರಕೊಡು**: ೨. ತಪ್ಪುಕಾಣಿಕೆಯನ್ನು ಕೊಡು; ದಂಡ ತೆರು: ಬಿಡುಗಡೆಯಾಗಬೇಕಾದರೆ ತೆರಕೊಡಬೇಕು (ಉಡುಗೊ. ೬). ೩. ಕನ್ಯಾಶುಲ್ಕವನ್ನು ಕೊಡು,_ತೆರು: ಬಿಟ್ಟಿಯೇ ಸಿಕ್ಕುವುದಾದರೆ ಹೆಣ್ಣೊಂದು ನನಗೊಂದು ನಮ್ಮಪ್ಪಗೊಂದು ತೆರಕೊಟ್ಟು ತರುವ ಹಾಗಿದ್ದರೆ ಮುದುಕನು ನಮ್ಮಪ್ಪ, ಹುಡುಗನು ನಾನು (ಇಂಡಾಪ. ೧೦೦-೮೭).

[ತೆಱ$_2$ (<ತೆಱ$^3_3$) + ಕೊಡು$_1$]

ತೆಱಗೊಳ್ (ಕ್ರಿ). ಸುಂಕವನ್ನು ಕೊಳ್ಳು; ತೆರಿಗೆಯನ್ನು ವಸೂಲು ಮಾಡು: ಘೋಷಾಕರಸಂಗ್ರಾಹಕರ ಗೋವ್ರಜಂಗಳುಮಂ ಅವನಾಳ್ವ ತೆಱ[ಪಾಕಾಂ. ಱ^3]ಗೊಳ್ವ ಬಿಟ್ಟಿಬೆಸಕೆಯಿಸಿಕೊಳ್ವ ಭೋಗಿಪ ನಿಯೋಗಂಗಳುಮಂ ಮಾಡಿದಂ (ಆದಿಪು. ೮-೬೩ ವ). [ತೆಱ$_2$ (<ತೆಱ$^3_3$) + ಕೊಳ್$_1$]

ತೆಱತ್ತು 'ತೆಱ$_1$' ಪರಾ.

ತೆಱದರುಶನ (ನಾ). ಸ್ಪಷ್ಟವಾದ ನೋಟ,_ಕಾಣ್ಕೆ : ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂಬ ಷಟ್ಸ್ಥಲವನಱಿಯಬೇಕೆಂಬಿರಿ ಅಱಿವುದಕ್ಕೆ ಕುಱುಹು ತೆಱದರುಶನವ ಕಾಣಿರಣ್ಣಾ (ಮೋಳಿಮಾ. ೦೫೧-೫೭೩). [ತೆಱ$_1$ + ದರುಶನ]

ತೆಱದರ್ಶನ (ನಾ). = ತೆಱದರಂಶನ : ಕುಱು ಹಿಂಗೂ ಅಱುವಿಂಗೂ ತೆಱದರ್ಶನವಿಲ್ಲವಾಗಿ ಸೊಪ್ಪನೊಳಕೊಂಡ ಬಿತ್ತಿನಂತೆ (ಮೋಳಿಮಾ. ೮೪-೩೩೧). [ತೆಱ$_1$ + ದರ್ಶನ]

ತೆಱಪಱಿ (ಕ್ರಿ). ೧. ಅವಕಾಶವನ್ನು ತಿಳಿ : ಬರವಂ ಪಡಿಯಱರ್ಗಱಿಪಿ ತೆಱಪಱಿದೋಲಗದೆಡೆಯಂ ಪುಗಲು (ಕಬ್ಬಿಕಾ. ೧೬೦). ೨. ಎಡೆಯನ್ನು ತಿಳಿ ; ಸ್ಥಳವನ್ನು ಅರಿ : ಕೆಲಬಲದೊಳಲ್ಲಲ್ಲಿ ತೆಱಪಱಿದು ಕುಳ್ಳಿರಲು ನಲಿನಲಿದು ತುಂಬುರಂ ಬಲವಂಕದೊಳಗಿರಲು (ನಂಬಿರ. ೫-೯೯). ೩. ಗುರುತನ್ನು ತಿಳಿ: ತೆಱಪಱಿದಾ ಋತುಪರ್ಣಂಗಱಿಪದೆ ವಾರಾಂಗನಾ ನಿವೇದಿತನಾಗಲ್ ಪೊಱಮಟ್ಟು ಬಂದನೆಲ್ಲರ್ಬೆಱಗಾಗಲ್ ಸತಿಯ ಮನೆಗೆ ಬಾಹುಕಂ (ನಳಕಂ. ೭೨೨). [ತೆಱಪು + ಅಱಿ]

ತೆಱಪೀ (ಕ್ರಿ). ಅವಕಾಶವನ್ನು ಕೊಡು : ನೆಗಟ್ಟ ಚತುರ್ದಶರತ್ನದೆ ಸೊಗಯಿಪೆನಾನನ್ಯವಾಹಿನಿಗೆ ತನ್ನವೊಲಾನಗಿದು ತೆಱಪೀಯೆನೆನುತಂ ನಗುವುದು ವಿಜಯಾರ್ಧಕಟಕಕ್ಕೆ ವಿಭುಕಟಕಂ (ಪಾರ್ಶ್ವಪು. ೧೦-೦೯) : ಬಾಯನೊಡೆ ಬಡಿ ಮೀಸೆಗೀಳ್ ಕುರುಳ್ಗೊಯ್ ಪುಗಲ್ ತಾಯೊಡಲ್ ತೆಱಪೀವುದೇ ನಿಮಗೆ ಪೊಯ್ದಾಡಿ ಸಾಯಲೂಣೆಯವಹುದೆ ಸುಡು ನಿಮ್ಮ ಬಾಳ್ಕೆಗಳನೆನುತೆ ಜಱಿದಮರಕುಲಮಂ (ಜಿಬಪು. ೪೯-೪೯).

[ತೆಱಪು + ಈ$_2$]

ತೆಱಪು, ತೆರಪು, ತೆರಹು$_2$, ತೆರ್ಪು, ತೆಱಂಪು, ತೆಱಂಬು, ತೆಱಹಂ, ತೆಱಿಪು (ನಾ). ೧. ತೆರೆದ ಸ್ಥಿತಿ ; ಮರೆಯಿಲ್ಲದಿರುವುದು ; ಬಯಲು : ಮಱಸಿರ್ದಂಬರಮೆಯ್ದೆ ನಾಂದ ತನುವಂ ಪತ್ತಿರ್ದು ಕಣ್ಗೆಲ್ಲಿಯುಂ ತೆಱಪಂ ಮಾಡಿ (ಆದಿಪು. ೦೧-೧೫೩) ; ಬಾಲೆಯರುರದೊಳ್ ಕಿಱುಮೊಲೆ ಮೇಲುದು ನಸುದೊಲಗೆ ತೋರ್ಪ ತೆಱದಿಂ ಸರಸೀಮಾಲೆಯೊಳೆಸೆದುವು ನವಪತ್ರಾಲಿಯ ತೆಱಪಿಂದೆ ತೋರ್ಪ ಕಮಲದ ಮುಗುಳ್ಗಳ್ (ಜಗವಿ. ೪-೬೩) ; ಮೇಲುದಿನ ತೆಱಪಿನೊಳು ಮೊಲೆಗಳಲುಗಲು (ಹಡಕಾ. ೪-೧೩). ೨. ಎಡೆ ; ಸ್ಥಳ ; ಜಾಗ : ದಿಗ್ಭಿತ್ತಿಗಳನೊಡೆದು ತೆಱಪಂ ಮಾಡಲ್ ಪರಿವಂತೆ ದುಂದುಭಿಧ್ವನಿ ಪರಿವಿನೆಗಂ ದಿಗ್ಜಯಕೆ ಹರಿ ಪೊಱಮಟ್ಟಂ (ವರ್ಧಪು. ೮-೬೬); ಮಾಣಿಕವರಿಗೆಯ ತೆಱಪುಗಳೊಳ್ ಪೊಳೆವ ಬಾಳ ಬೆಳ್ವೆಳಗಂದೇಂ ಮೆಱಿದುವೊ (ಕಬ್ಬಿಕಾ. ೨೫೯) ; ತುಱುಗಿದ ತೂಱಲ್ಗೊಂಬಿನ ತೆಱಪುಗಳೊಳ್ ಕೂಡಿ ನುಸುಳಲಾಱದೆ ಸಿಲ್ಕಿಂ ಪಱಿದಿರ್ದ ಬೆಳ್ಮುಗಿಲ್ಗಳ ಮುಱಿಗಳಿವೆನಿಸಿದುವು ಶಾಳ್ಮಳೀಫಳತೂಳಂ (ಪುಷ್ಪಪು. ೫-೮೫) ; ಆನುದ್ದಂಡತ್ವದಿಂದಾಕ್ರಮಿಸಿದೊಡಮದಂ ಸೈರಿಸಿರ್ದುಂ ನಭಶ್ರೀ ತಾನೀಗಳ್ ಕೊಟ್ಟಳಾದಂ ತೆಱಪುಮನೆವಗಿಂತೆಂದು (ಬಾಧಪು. ೧-೦೦೪) ; ತಿಂತಿಣಿಯ ರಘುವರಚರಿತೆಯಲಿ ಕಾಲಿಡಲು ತೆಱಪಿಲ್ಲ (ಕುಮ್ಯಾಅ. ೦-೦೭). ೩. ಅವಕಾಶ ; ಸಮಯ ; ಸಂದರ್ಭ ; ಬಿಡುವು : ತೆಱಪನೆ ಪಾರ್ದಿರ್ಪಂ ಮಾಯ್ದಱಗುಲಿ ಜವನದಱಿನಿನಿಸು ಪೊಟ್ಟುಂ ತನ್ನಂ ಮಱಿದಿರಲಕ್ಕುಮೆ ತಳರದೆ ತಱಿಸಲದಿನ್ನೆಱಿದುಮಱಿದುಮಿರ್ಪುದೇ ಚದುರಂ (ಆದಿಪು. ೪-೭೬) ; ನೆಱನೀತಂಗೂರುಯುಗ್ಮಂ ನೆಱನನಱಿಯದಾ ನಿನ್ನೆಗಂ ಮಾಣ್ದೆನಿಂ ಪೋ ತೆಱಪಂ ಪಾರ್ದಿರ್ಪೆಂ (ಪಂಪಭಾ. ೧೩-೯೬) ; ತೆಱಪಂ ನಿಟ್ಟಿಸಿ ಕುರುಪತಿ ಬಱಸಿಡಿಲೆಱಗುವವೊಲೆಱಗಿ ಪೊಯ್ಯಲ್ (ಗದಾಯು. ೮-೨೬) ; ತೆಱಪಂ ಪಾರ್ದು ಸುಗ್ರೀವನಂ ಮಾಯಾಸುಗ್ರೀವಂ ಗದಾದಂಡದಿನಡಸಿ ಸಿಡಿಲ್ ಪೊಯ್ವವೋಲ್ ಕಾಯ್ದು ಪೊಯ್ದಂ (ಪಂರಾಮಾ. ೦೦-೨೬); ಬಲಂ ಪಱಿವಡೆ ಜೊಮ್ಮನೆ ಜೋಲ್ದುಂ ತೆಱಪಂ ಪಾರ್ದಿರದೆ ತಡೆಯದೊರ್ಮೆಯೆ ಮುನಿಪಂ (ಧರ್ಮಾಮೃ. ೪-೧೬೨). ೪. ವಿಸ್ತಾರ ; ಹರಹು : ಭರದಿಂ ಭೂದೇವಿ ಭೂಷಾಳಿಗೆ ಬಯಸಿ ಕೊಳಲ್ ನೀಡಿದಳ್ ಕೈಗಳಂ ನೀಟ್ದುರು ತಾರಾಮಾಲೆಗೆಂಬಂತಿರೆ ತುಱುಗಿದ ಶಾಖಾಳಿಯಿಂ ಚುಂಬಿಸುತ್ತಂಬರವಂ ತಾನಿರ್ದುದಾ ಶಾಖೆಗಳ ತೆಱಪುಗಳ್ (ಕುಸುಮಾ. ೦-೦೧೦) ; ತೆಱಪಿನೆದೆಯ ಹೊನ್ನ ಜನ್ನಿವಾರದ ರೇಖೆ ಮೆಱಿಯೆ ರಾಜೇಂದ್ರ ಮೆಱಿದನು (ಭರಕ ೧-೩೩). ೫. ಸ್ಪಷ್ಟತೆ : ನೀಂ ಪಲವುಂ ರಾಯಧಾರಿಗಳೊಳಂ ಮೆಲ್ಪುಂ ಬಲ್ಪುಂ ತೆಱಪುಂ ಮಱಪುಂ ಅನುವುಂ ಮೊನೆಯುಮಾಗಿ ನುಡಿದು ನಿನ್ನ ಬಿನ್ನಣಮಂ ಬಿತ್ತರಿಪಂತಾನು ಮಿವಳ್ದಿರಂತರಮಂ ತಿಳಿದು ನುಡಿಪೆಂ (ಚಿಕವಿ. ೬-೦೩೩ ವ). ೬. ಗುರಂತು; ಚಿಹ್ನೆ : ತೃಣ ತ್ರಿಣಯನ ಹೆಡಗೈಯ ಕಟ್ಟಿತ್ತು ಭವಕಾಲನ ಸಂಕೋಲೆಯ ನಿಕ್ಕಿತ್ತು ಕುಱುಹು ಅಱಿವವರ ಕೈಯಲ್ಲಿ ನೆಱಿ ನಂಬಿ ಎಂದು ತೆಱಪ ಹೇಳಿತ್ತು (ಮೋಳಿಮಾ. ೨೩೨-೬೮೦). ೭. ರೀತಿ; ಬಗೆ: ಸೆಱಗ ಹಿಡಿದೆಳದಪ್ಪಿ ಮುದ್ದಿಸಿ ತುಱುಬ ಪಲ್ಲಟಗೈದ ಮದನನ ತೆಱಪನೆಲ್ಲವ ಪೇಳು ತಿಳಿಪಿದನತಿ ವಿನಯದಿಂದ (ಸಾಳ್ವಭಾ. ೩೦-೫). **ತೆರಪು** : ೩. ದಾರಿಗಾಣದ ಮನಸ್ಸಿಗೆ ಈ ಸಂದರ್ಭವೇ ಒಂದು ತೆರಪನ್ನೊದಗಿಸಿತು (ನಾಡೋಜ. ೩೬೯); ತೆರಪ ನರಿಯದೆ ಪರಿವ ಕಾಲಪ್ರವಾಹದಲಿ ಪುರುಷರಚಿತಗಳೆನಿತೊ ತೇಲಿಹೋಗಿ ಹವು (ಮಂಕುಕ. ೪೦೦); ಹಗಲುರಾತ್ರಿ ತೆರಪಿಲ್ಲದೆ ಮಳೆ ಹತ್ತಿದ್ದರಿಂದ ಇದ್ದ ಉರುವಲು ಒದ್ದೆಯಾಗುವುದು ಸಹಜವೇ (ಬೆಟ್ಟಹೊ. ೪೩) : ತೆರಪಿಲ್ಲವೆಂತ ತೆರಿಗೆ ಇಟ್ಟುಕೊಂಡು, ಚರಿಗೆ ತಪಲೆ ಮಾರಿಸಿಕೊಂಡ (ಗಾಡೆ). ೮. ಬರಿದಾದ ಸ್ಥಳ,-ಎಡೆ ; ಖಾಲಿಜಾಗ : ಈಗ ಇರುವ ಸಂಸ್ಕೃತ ಸಾಹಿತ್ಯದಲ್ಲಿ ಭಾರಿ ತೆರಪು ಅಥವಾ ಖಾಲಿಜಾಗಗಳಿವೆ (ತತ್ವಪ್ರಾ. ೪೮೨). **ತೆರಹು$_2$** : ೪. ಇಳೆಯ, ಗಾಳಿಯ ತೆರಹನೆಲ್ಲವ ಕೆಲೆವ ನಿನ್ನುಲಿ ತುಂಬಿತು (ಇಂಗೀತ. ೦೨-೬). ೮. ಈ ಗುಡಿಯ ಶೂನ್ಯತೆಗೆ ಪೂರ್ಣತೆಯ ತಾ ನೀರ ತೆರಹಿಗೊಲವಿನ ಅಚ್ಚಕುರುಹಾಗಿ ಬಾ ! (ಮಾನಸ. ೪೬-೦೦). **ತೆರ್ಪು** : ೨. "ಅಡಂಕು=ತೆರ್ಪಿಲ್ಲದೆ ಇಡು : ಬಿಡತೆ ಇಲ್ಲದೆ ಇಡು" (ಗಂಗಾಮ. ೫). 'ತೆರ್ಪಂಬಡೆ' ಪರಾ. △ **ತೆಱಂಪು** : ೨. ತುಂಪಿನೊಳಗೆ ನಡೆಸುವನು ಸೇನೆಯನು ತೆಱಂಪನಱಿದು ಬಿಡಿಸುವನು (ಭರಕ. ೨೭-೯). △ **ತೆಱಂಬು**: ೧. ನೆಱಿದಾಯುಷ್ಯಮೆ ಮಿಟ್ಟುವನಱಸುವ ತೆಱದಿಂದಮವರ ಪೋಬಱಿಯನೆ ಬಂದಱಸಿ ನಭಸ್ಥಳದೊದವಿದ ತ[ತೆ]ಱಂಬು ಕಳನಾಗಿ ಕಾದಲೆಂದಿರ್ದವರಂ (ಶಾಂತಿಪು. ೩-೭೪); ತದ್ದಿವ್ಯರಥಮನಾ ಫಣಾಧರನೆ ಸಾರಥಿಯಾಗೇಱಿ ಗಗನಕ್ಕೆ ನೆಗೆದಂಬರದ ತೆಱಂಬೆ ಕಳನಾಗಳುಂಬಮಾಗೊಡ್ಡಿನಿಂದ ವಿದ್ಯಾಧರವರೂಥಿನಿಯಂ ನೋಡಿ (ಚಂದ್ರಪು. ೬-೨೭ ವ) ; "ಸ್ಥಾನ, ಪ್ರದೇಶ" (ಪ್ರಭಣ್ಣ). ೨. ತನುವಿನೊಳಾದ ಜಲ್ಲಮಲ ಮಾಭರಣಂ ಪುಲಿಯಿರ್ಪುದೊಂದು ಕಾನನದ ಗುಹಾಂತರಂ ಮನೆ ಪರಲ್ಗಳ ನುಳ್ಳ ತ[ತೆ]ಱಂಬು ಪಾಸು (ಜೀವಸಂ. ೫೦-೨೨) ; "ನೊರಜುಕಲ್ಲಿನ ನೆಲ" (ಜೀವಸಂ. ಕೋಶ) ; ಪೌರೋದ್ಯಾನಮೆಲ್ಲಂ ಸುರಕುಜಮೆ ತ[ತೆ]ಱಂಬೆಲ್ಲಮುತ್ಕೀರ್ಣಕೇದಾರಮೆ (ಅನಂಪು. ೩-೭). ೩. ಇಡಿದಿರೆ ರೋಮಕೂಪದೊಳಗುರ್ಚಿದ [ಸಾಲ] ಸರಲ್ಗ[ಳುಂ ತೆಱಂಬಿಡಿದಿರೆ ಬೆಟ್ಟುವೋ] ರ್ಗುಡಿಸಿದಂತೆ ನೆಱಲ್ದಿರೆ . . . ಬಿಟ್ಟದೇನೆಸೆದನೋ ಶರಶಯ್ಯೆಯೊಳಂದು ಸಿಂಧುಜಂ (ಪಂಪಭಾ. ೧೩-೬೨). "ತೆಱಂಬಿಡಿದರೆ-ನಾನಾತೆರನಾಗಿ" (ಪಂಪದೀ. ೫೩೪). **ತೆಱಹು** : ೨. ಹರಿಯಂತರ ವಿಶಾಲ ಮಹಾಸಭಾ ವಿಸ್ತರಣವದಱಲಿ ತೆಱಹ ಕಾಣೆನು (ಕುಮ್ಯಾಸ. ೧೩-೩೨). ೩. ಬೆರಣಿಯನಾಯಲಲ್ಲದೆ ಅಟ್ಟುಣ್ಣ ತೆಱಹಿಲ್ಲವೆನಗೆ (ಬಸವ. ೨೭೦) : ಅತ್ತಲಾ ಕೋಳಾಹಳದಲಿರಲಿತ್ತಲಾದುದು ಜೂಜು ನಿಮ್ಮ ವಿಪತ್ತು ಕಂಡುದು ತೆಱಹ ತಪ್ಪಿಸಿ ನಮ್ಮ ಸುಳಿವುಗಳ (ಕುಮ್ಯಾಅ. ೨೨-೨೭) : ತೆಱಹಿಲ್ಲ ತೆಱಹಿಲ್ಲವಯ್ಯಾ ನುಡಿಗಡಣಕ್ಕೆ (ಅಖಂಡೇ. ೩೩೮-೫೦). ೪. ಉರುವ

ಭಂಡಾರದ ಮಹಾರ್ಘದ ನೆಱವಣಿಗೆ ಗಾಢಿಸಿತು ಬೀದಿಯ ತೆಱಹು ಕೆತ್ತವು ಹೊತ್ತ ಸರಕಿನ ಬಹಳ ಬಂಡಿಗಳ (ಕುಮ್ಯಾಗ. ೪-೧೬). ೬. ಕಾಣ ಬಾರದ ಘನವ ಹೇಳಬಾರದಾಗಿ ಹೇಳುವುದಕ್ಕೆ ನುಡಿಯಿಲ್ಲ ನೋಡುವುದಕ್ಕೆ ರೂಪಿನ ತೆಱಹಿಲ್ಲ (ಲಿಂಗವ. ೬೦-೪೭). ೯. ಭೇದ ; ವ್ಯತ್ಯಾಸ ; ಅಂತರ : ತೆಱಹಿಲ್ಲದ ನಡೆ ತೆಱಹಿಲ್ಲದ ನುಡಿ ತೆಱಹಿಲ್ಲದ ಸಂಭಾಷಣೆಯ ಸುಖವು (ಬಸವ. ೯೧೮); ಎನಗೆ ತನಗೆ ತೆಱಹಿಲ್ಲದಂತೆ ಮಾಡಿ ತೋಱಿದನು (ಮಹಾದೇ. ಬ.೨೨-೪೧) ; ಪರಶಿವನೇ ಲಿಂಗವಾ ಪರಮಾತ್ಮನೇಯಂಗವೆರಡ ಱೊಳ್ ತೆಱಹಿಲ್ಲದಿರ್ಪುದೇ ಸಂಯೋಗ (ಜಿಲಪು. ೬೦-೬೭). ೧೦. ಶಕ್ಯತೆ ; ಸಾಧ್ಯತೆ (?): ಮಹಾದೇವಿಯಕ್ಕನ ನಿಲವ ಕೊಂಡಾಡುವುದಕ್ಕೆ ತೆಱಹಿಲ್ಲ ಕಾಣಾ (ಅವಚಂ. ೨೪೩-೧೧೦೮). **ತೆಱ³ಪು:** ೧. ಹರಿಕರಯಂತ್ರಾಂಬು ಧಾರಾವಳೀಸ್ಪರ್ಶನಸೌಖ್ಯಾಪೇಕ್ಷೆಯಿಂ ಭೋಂಕೆನೆ ಮೊಲೆದೆಱ³ಪಂ ಪೆತ್ತ ಪೋಲ್ ಶೋಭಿವೆತ್ತಳ್ (ಜಗವಿ. ೧೪-೧೦೫).

ತೆಱಪಾಗು, ತೆರಪಾಗು= ೧. ತೆರೆ ; ಬಿಚ್ಚು ; ಬಯಲಾಗಂ : ಅಱಿವು ಮಱವೆ ಎರಡ ನೂಂಕಿ ನಿಂದರೆ ಮುಂದೆ ಕಣ್ಣು ತೆಱಪಾಗಿ ತೋಱುವ ಬಯಲೇ ಲಿಂಗದ ಬೆಳಗು (ವಚಸಂ. ೫೨೨-೧೧೬); ಇನಿಯನನೆಯ್ದೆ ಸಮ್ಮುಖ ದೊಳೀಕ್ಷಿಸಲಣ್ಮದೆ ಮುಗ್ಧೆ ಪಾರ್ಶ್ವಯಾಯಿನಿ ತೆಱಪಾಗೆ ನೋಟ್ಟ ನಯನೇಂದ್ರಿಯದೊಳ್ ಸಕಲೇಂದ್ರಿಯಂಗಳಂ . . . ಸಲಿಪ್ಪನಿತುವರಂ ಕಡಂಗಿ ಕರೆಗಣ್ಮದಳುಣ್ಮದ ಘರ್ಮವಾರಿಯಿಂ (ಅನಂಪು. ೬-೬೦). ೨. ವಿಸ್ತಾರವಾಗು ; ವಿಶಾಲವಾಗಂ : ಪಂಚಾಗ್ನಿದೀಕ್ಷಿತರೂ ಕೋಡಿಯನೂ ತೆಱಪಾಗಿ ತೆಗಿಸಿ (ಎಳ. IX, ಮಾಗಡಿ. ೫೭-೫ : 1389 ?) : ಶ್ಲೇಷ್ಮಪ್ರಕೃತಿ ಯುಳ್ಳ ಪುರುಷನು...ತೆಱಪಾದ ಹಣೆಯುಳ್ಳವನಾಗಿ ಹೊದಱಾಗಿ ಕಪ್ಪಾದ ಕೇಶಪಾಶವುಳ್ಳವನಾಗಿಹನು (ವೈದ್ಯಸಾ. I, ೧೭). ೩. ಖಾಲಿಯಾಗು ; ಬರಿದಾಗು : ಕೆಲವು ಸದಸ್ಯರ ಸ್ಥಾನಗಳು ತೆರಪಾಗಿ ಹೊಸ ಚುನಾವಣೆ ಗಳಾದುವು (ದಿಲ್ಲಿಪ. ೧೨೨). **ತೆಱಪು ಮಾಡಿಸು** = ಖಾಲಿ ಮಾಡಿಸಂ ; ಬರಿದಂ ಮಾಡಿಸಂ ; ದೂರ ಕಳಂಹಿಸು : ಎಲ್ಲರ ತೆಱಪು ಮಾಡಿಸಿ ಎಂದಳೇನೆಂದುಸುರಬಹುದೀ ಬೆಂದ ಬಯಕೆಯ ನಿನ್ನೆದೆಯನಲಗಿಂದಿಱಿಯೆ ಹರಿದು ಬಂದ ನೆತ್ತರನೀಂಟಬೇಕೆಂಬೊಂದು ಬಯಕೆಯಂ ಪುಟ್ಟಿತೆನಗೆ ... ಎಂದಳು ಭೂವರನ ರಾಣಿ (ಸಾಳ್ವಭಾ. ೧೯-೪೫). **ತೆಱಪುಮಾಡು, ತೆಱಹು ಮಾಡು** = ೧. ತೆರೆ ; ಬಿಚ್ಚು : ದಕ್ಷಿಣದಿಶಾಂತದೊಳಗೆಲರು ತಣ್ಣನೆ ತೀಡೆ ಕೋಕಿಲಂಗಳ್ ಕೊರಲ್ದೆಱಪು ಮಾಡೆ (ಭಾವಚಂ. ೪-೧೬) ; ಉದಯ ಕಾಲದಲಷ್ಟದಳಮಂಟಪವ ತೆಱಹುಮಾಡೆಯಮ್ಮ (ಶಿವಗೀ. ೧೫೫-೭೯೨ ವ). ೨. ಎಡೆಮಾಡು ; ಜಾಗಮಾಡಂ : ಮುಱಿದು ಕೋಟೆಯನೊಂದು ಕಡೆಯಲಿ ತೆಱಹುಮಾಡಿ ಮಹಾರಥರು ಜನವಱಿಯದವೊಲೊಳಹೊಕ್ಕು (ಕುಮ್ಯಾಗ. ೯-೧೪). **ತೆರಪಿನ ಶಿಕ್ಷಣ**= ಅವಕಾಶ ಸಿಕ್ಕಾಗ ವಿದ್ಯೆ ಕಲಿಯುವ ವಿಶೇಷ ಶಿಕ್ಷಣವ್ಯವಸ್ಥೆ : ಇತ್ತೀಚೆಗೆ ವಿಶ್ವವಿದ್ಯಾಲಯಗಳು ತೆರಪಿನ ಶಿಕ್ಷಣಕ್ಕೆ ಅವಕಾಶವನ್ನು ನೀಡುತ್ತಿವೆ (ರೂಢಿ).

[ತೆಱ³₁ + – ಪು₂./ತಮಿ. ತಿಱಪ್ಪು ; ಮಲ. ತುಱಪ್ಪು ; ತುಳು. ತೆರಪು ; ತೆಲು. ತೆಱಪ, ತೆಱಪಿ]

ತೆಱಪುಗಣ್, ತೆಱಪುಗಣ್ಣು (ನಾ). ವಿಶಾಲವಾದ ಕಣ್ಣು ; ಅಗಲವಾದ ಕಣ್ಣು : ತೆಱಪುಗಂಗಳ ತೆಳುವಸಿಱ ತರುಣಿ ನಿನ್ನೆಱಕವನಿರದುಸುರುವೆನು (ನೇಮಿಸಂ. ೨೦-೬೧). **ತೆಱಪುಗಣ್ಣು** : ಎವೆಪೊಯ್ಯದೆ ತೆಱ³ದ ತೆಱಪುಗಣ್ಣು ಬಳಲುವಂದದಿ ನೆಱ³ ನೋಡಿ (ನೇಮಿಸಂ. ೩೨-೧೨೧).

[ತೆಱಪು + ಕಣ್]

ತೆಱಪುಗಣ್ಣು 'ತೆಱಪುಗಣ್' ನೋ.

ತೆಱಪುಗಾಣ್, ತೆಱಹುಗಾಣ್ (ಕ್ರಿ). ೧. ಅವಕಾಶವನ್ನು ಕಾಣು ; ಅನಂಕೂಲವನ್ನು ಕಾಣು : ತಮ್ಮ ಮೆಯ್ವೊರೆದ ರವಿಕಿರಣಕವಚ ಮೊರ್ಮೊದಲೆ ತೊಲಗೆ ತೆಱಪುಗಂಡು ತೂಳ್ದಿ ಸುತ್ತಿ ಮಱ³ಯಟ್ಟುವಂಗ ಭವನಾಱಡಿಗೆ ಬೆಗಡುಗೊಂಡು ತಲ್ಲಣಿಸಿದಂತೆ ನಲ್ಲಳಂ ಬಿಸುಟು ದೆಸೆಗೆಟ್ಟು ಚಕ್ರವಾಕಂ ಕೋಕನದಸವನದಿನೆಟ್ಟು ಪೋಗೆಯುಂ (ವರ್ಧಪು. ೬-೨೩ ವ) ; ಆ ಕುಟಿಲನಾಕೆಯೊಳ್ ತೆಱಪುಗಾಣದೆ ಮುಳಿದು (ಅನಂಪು. ೧೦-೯೪ ವ). ೨. ಬಿಡಂವನ್ನು ಕಾಣು ; ಕೊನೆಗಾಣು : ಸಂಸಾರಾನುಯಾತ್ರೆಗೆ ತೆಱಪುಗಾಣನುಪದ್ರವದ ಬಹುವಿಧ ಪರಾಭವಕೆ (ನಿಭಾಗ. ೪-೧೮-೨೫). **ತೆಱಹುಗಾಣ್** : ೩. ಮಾರ್ಗವನ್ನು ತಿಳಿ,–ಅರಿ: ತೆಱಹುಗಾಣದಱುಹು ಗುಂದಿ ಮಱಹುಗೊಂಡೆನೆನ್ನ ಗುರುವೆ (ಹಂಪರ. ಹ. ೫೧೧-೧೨).

[ತೆಱಪು + ಕಾಣ್]

ತೆಱಪುಗಾಣಿಸು, ತೆರಪುಗಾಣಿಸಂ (ಕ್ರಿ). ಬಿಡುವು ಕಾಣಿಸು ; ಎಡೆ ಬಿಡು: ಭೂ ದಿವಗಳ ಕೆಚ್ಚಿವಂದದ ಕೆಂದೂಳ ಹಾದಿಯ ತೆಱಪುಗಾಣಿಸದೆ ವೇದೋ ಜಿಯು ಬಲುಗುದುರೆ ಸಹಿತ ನೆಱ³ ಕಾದುಪೊಡೈತಂದನಾಗ (ಕಂನವಿ. ೧೮-೮೦). **ತೆರಪುಗಾಣಿಸು:** ಆರು ಜೀವವನಿಂತು ಸೆಳೆವರು ದಿವ್ಯಶಾಂತಿಯ ಧಾಮಕೆ ? ತೀರದಾಸೆಗೆ ತೆರಪುಗಾಣಿಸಿ ವಿಶ್ವತತ್ವವಿರಾಮಕೆ ? (ಕವಿಕಾ. ೮೮-೧೪). [ತೆಱಪುಗಾಣ್ + – ಇಸ್ಸು₃]

ತೆಱಪುಗುಡು 'ತೆಱಪುಗೊಡಂ' ನೋ.

ತೆಱಪುಗೊಡು, ತೆರಪುಕೊಡಂ, ತೆರಪುಗೊಡಂ, ತೆರಹಂಗಂಡಂ, ತೆಱಪು ಗಂಡಂ, ತೆಱಹಂಕೊಡಂ, ತೆಱಹುಗಂಡಂ, ತೆಱಹಂಗೊಡಂ (ಕ್ರಿ). ೧. ಸ್ಥಳ ಕೊಡಂ ; ಎಡೆ ಕೊಡಂ : ಪುದಿದಿರ್ಪ ಸಕಲಸಾಮ್ರಾಜ್ಯದ ಪಟ್ಟಸ್ಥಿತಿಗೆ ಪದೆಪಿನಿಂ ಮುನ್ನಮೆ ತಾನದು ತೆಱಪುಗೊಟ್ಟುದೆನಲೆಸೆದುದು ಬಾಲನ ಭಾಳಮಾ ವಿಶಾಲತೆಯಿಂದಂ (ಕುಸುಮಾ. ೬-೧೨೧). ೨. ಅವಕಾಶ ಕೊಡಂ ; ಸಮಯ ಕೊಡು : ಬೆಱಗಿದೇನೈ ಮೊದಲು ಬಂದಬ್ಬರದ ರಕ್ಕಸನಂತೆ ನೋಟಕೆ ತೆಱಪುಗೊಡುತಿದೆ ಚಿತ್ತವಿವನ ವನಲ್ಲವಲೆ ನೋಡು (ತೊರರಾ. ೬-೨೮-೧೦). **ತೆರಪುಕೊಡು** : ೧. ದೂರದೂರ ಇಡು; ತೆರಪುಕೊಡು; ಅಂತರ ಬಿಟ್ಟು ಇಡು (Space. ಪತ್ರಿನಿ. ೭೬). **ತೆರಪುಗೊಡು** : ೨. ಇಂಧನವನಟ್ಟಗ್ನಿಯಾರಿಪನಂದ ಸಂಸಾರ ದೊಳುಯಿನಿತೊಂದುಯಚ್ಚುತಲೈದೆ ಪರಿಗ್ರಹ ತೆರಪುಗೊಡದಂತೆ (ಜಿನಸಾ. ೬೯). **ತೆರಹುಗುಡು** : ೨. ಅಂತರಿಕ್ಷದ ತೆರದೊಳಾ ಶರಣರಿಚ್ಛೆಗಂ ತೆರಹುಗುಡುವಂ ಶಿವನೊಲು ಸಂತತಂ (ಐಕೋಪು. ೭-೪೭). **ತೆಱಪು ಗುಡು** : ೧. ಪೊಣರ್ವಕ್ಕೆ ವಿಳಾಸಮನೆನಿಸಂ ತಳೆದ ಘನಕುಚಂ . . . ಹಾರಮಣಿಗೆ ನುಸುಳಲ್ಕೆ ತೆಱಪುಗುಡದನವರತಂ (ಜಗವಿ. ೧೦-೩೦) : ವಿಕಾಸಲಕ್ಷ್ಮಿಯ ಬರವಿಂಗೆ ತೆಱಪುಗುಡುತಲಿರ್ದು ಕುವಲಯಂಗಳ ಕಿಱ³ಸ ಟ್ಗಳೊಳ್ ಪೊಕ್ಕು . . . ಸಾಯಂತನಸಮಯಸಮೀರಣಂ ತೀಡುತ್ತು ಮಿರ್ಪಾಗಳ್ (ಕುಸುಮಾ. ೪-೨೯ ವ); ಬೆಂಗದಿರ್ಗಂ ತಣ್ಗದಿರ್ಗಂ ತೆಱಪುಗುಡದ ಮರದುಱುಗಲ ಕಟ್ಟಲೆಯಂ ಕಾರಿರುಳ್ಗೆತ್ತು ಸುಱಿಯಲನುಗೆಯ್ವ ಗೂಗೆ ಗಳುಮಂ (ಕಬ್ಬಿಕಾ. ೨೩೪). ೨. ಇರುಳುಂ ಪಗಲುಂ ಜೀರೆನುತುಂ ತೆಱಪು ಗುಡದೆ ಕಱ³ದುವು ಮಳೆಗಳ್ (ಗಿರಿಕ. ೯-೪೯) ; ಓದಿ ಕೇಳಿಸುತ್ತಾ ಭ್ರಮರಿಕೆ ಪರಿಮಳೆಗೆ ತೆಱಪುಗುಡಲೊಡಂ (ಅನಂಪು. ೬-೮೦ ವ). **ತೆಱಹುಕೊಡು** : ೨. ತೆಱಹುಕೊಡದಿರಿ ಸೋತ ಕರ್ಣನ ಹರಿಬವೆಮ್ಮದು ನೂಕುನೂಕೆಂದು ರವಣಿಸಿದರು ಮತ್ತೆ ಕೌರವನನುಜರವಗಡಿಸಿ (ಕುಮ್ಯಾದ್ರೋ. ೧೩-೨೭). **ತೆಱಹುಗುಡು** : ೧. ತನುವಿನೊಳಗೆ ತೆಱಹುಗು[ಪಾತಾಂ. ಗೊ]ಡದೆ ತೀವಿ ನಿಲ್ಲು ಹಂಪೆಯರಸ (ಹಂಪರ. ಹ. ೫೧೨-೨೩). ೨. ಎನ್ನಲ್ಲಿ ನಾನಱಿದೆನೆಂಬ ಅಱಿವಿಂಗೆ ತೆಱಹುಗುಡದೆ (ಶಿವಗೀ. ೧೩೦-೬೪೮) : ಅಱಸಿ ಹೊಗಲಾ ಮ್ನಾಯ ನಿಕರಕೆ ತೆಱಹುಗುಡದ ಪರಸ್ವರೂಪನು (ಕುಮ್ಯಾಭೀ. ೭-೧೬) ; ಕರಣದುಪಹತಿಗೆ ತೆಱಹುಗುಡದನುಭವಿಸು (ಅನುಸಾ. ೮-೩-೪) ; ತೆಱಹು ಗುಡದೊರ್ವರೊರ್ವರ ಮೇಲೆ ಮುಳಿದು ಜಱ³ದೆಚ್ಚಾಡಿದರ್ಧುರದೊಳು

(ಜೈಮಿಭಾ. ೧೨-೨೦). **ತೆಱಹುಗೊಡು** : ೧. ಗೌಳ ತೆಱಹುಗೊಡು ಲಾಳ ಮೈಯಿಕ್ಕು ಗುರ್ಜರ ಬಿನ್ನವಿಸು (ಬಸರ. ೬-೨೭); ತರಣಿಗುಂಟೇ ಸಮಯ ವನಿಲಗೆ ತೆಱಹುಗೊಡುವವರಾರು (ಕುಮ್ಯಾಆ. ೧೨-೩); ಒಱಲಿ ಫಲವೇನರಸ ಬಟ್ಟೆಯ ತೆಱಹುಗೊಡಿರೈ ಹೋಗಲೀ ನೃಪರು (ತೊರರಾ. ೪-೩-೨೪); ಕಿಱುಬಿದಿರುಗಳ ಕಂಟಕಿಗಳು . . . ಧರಣಿಯೊಳ್ಪಸರಿಸಿಕೊಂಡು ಪಚ್ಚೆಗಳಿಗೆ ತೆಱಹುಗೊಡದೆ ಮುಸುಕಿಹುವು (ಕಂನವಿ. ೦೮-೪೫). ೨. ಮಱೆದಹೆನೆಂದು ಭಾವಿಸಹೋದರೆ ತೆಱಹುಗೊ [ಪಾಠಾಂ. ಗು]ಡದು (ಅವಚಂ. ೯೮-೪೪೨); ಬಾಯಿಬಡಿಕರು ನಾವು ನೀ ಗರುವಾಯಿಕಾಱನು ಬಯ್ವ ಬಿರುದಿನ ಬಾಯ ನೋಡಾಯೆನುತ ತೋಟಿಗೆ ತೆಱಹುಗೊಡದೆಸಲು (ಕುಮ್ಯಾಕ. ೪-೪).

[ತೆಱಪು + ಕೊಡು$_1$]

ತೆಱಪುಗೊಳ್, ತೆಱಹಂಗೊಳ್ (ಕ್ರಿ). ೧. ಎಡೆಯನ್ನು ಪಡೆ; ವ್ಯಾಪಿಸು; ಸ್ಥಳವನ್ನಾಕ್ರಮಿಸು: ಅಚ್ಚಸೊಗದ ಮೊಳೆ ಬೆಳೆಯುತ್ತುಂ ತೆಱಪುಗೊಳುತ್ತಿರೆ ಮೇನೆಯ ಹೊಱಗೊಗೆದುದು ಗರ್ಭಸೂಚನಾ ಸೌಂದರ್ಯಂ (ಗಿರಿಕ. ೩-೩೬). ೨. ತೆರೆ; ಬಿಚ್ಚು; ತೆರವಾಗು: ಕೋಗಿಲೆಯ ಕೊರಲೂ ತೆಱಪುಗೊಂಡಿತು (ತಿಮ್ಮಅ. ೫-೨). **ತೆಱಹುಗೊಳ್** : ೧. ಎನ್ನ ಮನವ ತನ್ನತ್ತ ಸೆಳೆದು ಮಱಹ ಮಾಣಿಸಿ ಕುಱುಹಳಿದ ತೆಱಹುಗೊಂಡ ಸೌರಾಷ್ಟ್ರ ಸೋಮೇಶ್ವರಲಿಂಗವ ಬಲ್ಲರೆ ಬಲ್ಲೆ (ಅದವ. ೨೨-೬೦). [ತೆಱಪು + ಕೊಳ್$_1$]

ತೆಱಪುವಡೆ, ತೆರ್ಪಂಬಡೆ (ಕ್ರಿ). ೧. ಸ್ಥಳವನ್ನು ಪಡೆ,–ಹೊಂದು: ಮುಂದೆ ತೆಱಪುವಡೆಯದೆ ಸುತ್ತುಂ ಪರಿವಡೆದುದು ಪುರಜನಂ (ವರ್ಧಪು. ೫-೫೦). ೨. ಅವಕಾಶವನ್ನು ಪಡೆ,–ಹೊಂದು: ತೆಱಪುವಡೆದಂಗಜಂ ಕೆಯ್ಸೆಱೆಗೊಳೆ ನೋಟಕರ ಮನಮನಾಗಳ್ (ಪಂಪಭಾ. ೫-೬೭); ತೆಱಪು ವಡೆದಡಸಿ ರುಜೆ ಮೆಯ್ಮಱುಗುವಿನಮವುಂಕಿ ಸೋಂಕಿ ನಿಃಕರುಣತೆಯಿಂ (ಸುಕುಮಾ. ೨-೦೦); ಅಂತು ಪಾಯದಟಮೆಲ್ಲಮೆಚ್ಚು ಮುಱಿದುಂ ಕುಱಿ ದಱಿಯಾಗೆ ತೆಱಪುವಡೆದಿದಿರೊಡ್ಡಿನ ತೇರೊಡ್ಡುಗಳ್ ಶೂರಸಾರಥಿ ಪ್ರೇರಣದಿನೋರೊಂದಂ ಪತ್ತೆಸಾರ್ಚಿದಾಗಳ್ (ಚಂದ್ರಪು. ೧೦-೭೪ ವ). **ತೆರ್ಪಂಬಡೆ** : ೩. ತೆರವಾಗು; ಖಾಲಿಯಾಗು; ಬರಿದಾಗು: ಕೆಸಱು ರ್ಬುರ್ಬೇಟೆ ನೀರ್ಬೊಬ್ಬುಳಿಸೆ...ತೆ[ಪಾಠಾಂ. ನೆ]ರ್ಪಂಬಡೆದಱುಗೆಱೆಗಳ್ ಬೀಡೆವೋಗಿರ್ದ ತಣ್ಣೀರೊಸರ್ದಾಣಂ ಬಾವಿಯಾದತ್ತು (ಜಗವಿ. ೦೭-೬೨). P ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪ. [ತೆಱಪು + ಪಡೆ$_1$]

ತೆಱಪುವಾರ್ (ಕ್ರಿ). ಅವಕಾಶವನ್ನು ನೋಡು,–ನಿರೀಕ್ಷಿಸು; ಸಮಯ ಕಾಯು: ಬಂದಿಕಾಱನಂತೆ ತೆಱಪುವಾರ್ದು ಪಿಡಿವ ಶಾಕಿನಿಯರಿಂ (ಕಾವ್ಯಸಾ. ೫೨೯ ಶೂದ್ರಕ); ತೆಱಪುವಾರ್ದು ನನೆವಿಲ್ಲ ಬಲ್ಲಹನಂ ಕಂಡು (ಕಬ್ಬಿಕಾ. ೦೮೮). [ತೆಱಪು + ಪಾರ್$_1$]

ತೆಱಪುವೆಱು (ಕ್ರಿ). = ತೆಱಪುವಡೆ ೨ : ತೆಱಪುವೆತ್ತು ಪಾಪೇಭಕಂಠೀರವ ನೆಚ್ಚೊಂದಪೂರ್ವಸಾಯಕಂ ಚಿತ್ರಾನೀಕನಂ ನೆರೆಗೊಳ್ವುದುಂ (ಶಾಂತಿಪು. ೪-೨೩ ವ); ಅಂತೆಚ್ಚಿಷುನಿಕರಮನೋರಂತಿರೆ ತಱಿತಱಿದು ಕಾದೆ ಪಾಂಚಾಳನ ವಿಕ್ರಾಂತತೆಗೆ ವಿಳಯಕಾಲಕೃತಾಂತನ ತೆಱದಿಂದೆ ತೆಱಪುವೆತ್ತಾ ಕ್ಷಣದೊಳ್ (ನೇಮಿಪು. ೧೨-೧೩೦). [ತೆಱಪು + ವೆಱು$_1$]

ತೆಱಯಪ್ಪೈ(?) (ನಾ). (?) : ಶ್ರೀಪ್ರಭುಮಾಣಿ ಪರಮಸುಭಗನ್ ಪಗೆವರ ಗನ್ಧಾಸ್ತಿ ಪಾರ್ವ್ವರ ಇಚ್ಛೆನತ × × × ಪೂರ್ವ್ವಾಚಾರದಾ ಈ ತೆಱಯಪ್ಪೈ ಈಯೆಮೆನ್ದೊಡೆ ಪೊನ್ನೆರನುಂ ಚೋಲಮಹಾರಾಜನುಂ ಮೂವದಿಮ್ಬರ್ಪ್ಪಾರ್ವ್ವರಾನ್ಕೊನ್ದಾ (ಎಕ. XVI, ಮದ್ಯಗಿ. ೦೦೮-೩ : ೩ನೆಯ ಶತ). [?]

ತೆಱವಲಿತನ (ನಾ). ಬಾಲಿಶಭಾವ; ದಡ್ಡತನ; ಅವಿವೇಕ: ಬಱು ವಲಿಯರ ಮಾತಂ ಕೇಳ್ದಱಿಯದೆ ದೆಸೆಗೆಟ್ಟು ಜೀವಮುಂ ಗತಿಯುಂ ಕೇಳಱನುಂ ತಾವೊಳಮೆಂಬೀ ತೆಱವಲಿತನವೇಕೆ ನಿನಗೆ ಭುವನಾಧಿಪತೀ (ಧರ್ಮಾಮ್ಯ. ೯-೪೦).

[P ಇದು 'ತರುವಲಿತನ' ಎಂಬುದರ ಅಪಲಿಖಿತವಿರಬಹುದು]

ತೆಱವಾಳಿಕೆ (ನಾ). ಒಂದು ಬಗೆಯ ತೆರಿಗೆ: ಆ ಸೀಮೆಯ ದೇವರ ಸ್ಥಾನಿಕದಲು ಸ್ಥಾನಿಕರ ಮನೆ ಮೊದಲಾದ ಮದವಳಿಕೆ ಸಲು × × ರಾಯ ಕಾಣಿಕೆ ಸುಂಕ ತೆಱವಾಳಿಕೆ ಸಹ ಸರ್ವ ಮಾ × × (ಎಕ. x, ಕೋಲಾರ. ೯೪-೦೭ ; 1406). [<ತೆಱ$_2$?]

ತೆಱವಿ (ನಾ). = ತೆಱಪು ೧. 'ಕಣ್ದೆಱವಿ' ಪರಾ.

[ತೆಱ$^3_1$ + – ವಿ]

ತೆಱವಿಡು (ಕ್ರಿ). ಪಣವಾಗಿ ಇರಿಸು; ಶುಲ್ಕವನ್ನಾಗಿ ಇಡು: ಆಯುಧಕೆ ತೆಱವಿಟ್ಟೆನೈ ನಿನ್ನಾಯುಷವ ಹಿಂದಿಕ್ಕಿಕೊಂಬನ ತಾಯೆನುತ ಬೊಬ್ಬಿಱಿದು (ಕುಮ್ಯಾದ್ರೋ. ೧೬-೫೨). [ತೆಱ$_2$ (<ತೆಱ$^3_3$) + ಇಡು$_1$]

ತೆಱವು$_1$, ತೆರವು$_1$ (ನಾ). ೧. ಎಡೆ; ಸ್ಥಳ; ಜಾಗ: ತೆಱವಿಂ ನೀಳ್ಕಿ ಗವಾಕ್ಷಮಂ ತೆಱೆವ ನೀರಂ ಮುಕ್ಕುಳೊಳ್ ತೀವಿಕೊಂಡೆಱೆವ . . . ಓಪರಟ್ಕಱಲಂಪಂಗನೆಯರ್ಗೆ ರಾಗಮನದೇಂ ಮಾಡಿತ್ತೊ ರತ್ಯಂತದೊಳ್ (ವರ್ಧಪು. ೬-೫೨); ಉತ್ತಂಸವಲಯದೊಳಡ್ಡಂಗೆಡೆವ ಸಾರ್ದ್ರ ಕಬರೀ ಭಾರಮುಂ ತೆಱವಿನೊಳ್ ಪೊಱಮುಯ್ವಿಂಗಣೆದು ನೂಂಕುತ್ತುಂ (ಅನಂಪು. ೭-೫೦ ವ). **ತೆರವು$_1$** : ೧. ಉರುವಲು ತುಂಬಲು ಎದುರಿನಲ್ಲಿ ತೆರವು ಇದೆ (ಅಡುಸೌ. ೨೨). ೨. ಅವಕಾಶ; ಬಿಡುವು: ಪ್ರೇರಣೆಯಾದಾಗೆಲ್ಲ ಕಾವ್ಯವು ಮನದಲ್ಲಿ ರಚಿತವಾಗಿ ತೆರವು ದೊರೆತಾಗ ಅದನ್ನು ಕಾಗದದ ಮೇಲೆ ಬರೆಯುವವರೆಗೂ ಅದು ಸಮಗ್ರವಾಗಿ ಸ್ಮರಣೆಯಲ್ಲಿ ಉಳಿಯು ತ್ತಿತ್ತು (ಮಹಾಯೋ. ೧೮೩). ೩. ಖಾಲಿಯಾದಂದು; ಬರಿದಾದಂದು: ಬರಿದೋ ಬರಿದು ತೆರವೋ ತೆರವೂ ಬಡವರ ಬಗ್ಗರ ತುತ್ತಿನ ಚೀಲಾ (ಗರಿ. ೬೦-೦೮); ಭೋಜನಶಾಲೆಯನ್ನು ಪ್ರವೇಶಿಸಿ ಎಡಬಲಕ್ಕೆ ನೋಡದೆ ತೆರವಿದ್ದ ಒಂದು ಎಲೆ ಹಿಡಿದು ಕುಳಿತು (ಜಿಲುನಿ. ೧೧); ಎರಡನೆಯ ನಂಬರ ಶಾಲೆಯಲ್ಲಿ ಒಂದು ಸ್ಥಳವು ತೆರವಿರುವದು (ಸ್ಕೂಲಮಿ. ೫); ಇರವಿನಲ್ಲಿ ಆ ತೆರವು ತುಂಬಿ ತೆರೆಯಾಡುವಂತೆ ಕಡಲು ಅರಿವಿನೊಂದು ಹೊಸ ಬರವಿಗಾಗಿ ಹಾತೊರೆಯುತಿಹುದು ಒಡಲು (ನೆಲಮು. ೩೬-೩).

ತೆಱವುಮಾಡು, ತೆರವುಮಾಡು = ೧. ಬರಿದು ಮಾಡು; ಖಾಲಿ ಮಾಡು: ಮೆಱೆವ ಮಣಿಭವನವನು ರವಿಜಗೆ ತೆಱವುಮಾಡಿದ (ಕೌಶಿರಾ. ೪೪-೫೦); ಹಿತ್ತಲಲ್ಲಿಯ ಒಂದು ಕೋಣೆಯನ್ನು ತೆರವುಮಾಡಿ ನೀಲಾಂ ಬರಿಯು ಇರುವಂತೆ ವ್ಯವಸ್ಥೆಮಾಡಲಾಗಿದ್ದಿತು (ಜಯಂತ. ೪೨೬). ೨. ಅವಕಾಶ ಮಾಡಿಕೊಡು: ಆ ಗಡಿಯಾರ . . . ತಡವಾಗಿ ಶಾಲೆಗೆ ಬಂದರೂ ಬೇಗನೇ ಮನೆಗೆ ತೆರಳಲು ತೆರವುಮಾಡಿಕೊಡಲು ಪೂರ್ಣ ಸಹಕರಿಸುತ್ತಿದ್ದಿತು (ರೂಪಸಂ. ೬೦). **ತೆರವಾಗು** = ೧. ಬಿಡುವಾಗು; ಪುರುಸೊತ್ತು ಹೊಂದು: ಈಗ ಸಾಹೇಬರು ತೆರವಾಗಿದ್ದಾರೆ. ನೀವು ಸುದ್ದಿ ಮುಟ್ಟಿಸಿರಿ (ಜಮೀನ್ಯಾ. ೧೫೨). ೨. ಖಾಲಿಯಾಗು: ಆ ಮನೆ ತೆರವಾಗಿದೆ (ರೂಢಿ).

[ತೆಱ$^3_1$ + – ವು./ತಮಿ. ತೆಱವು ; ಮಲ. ತುಱವು]

ತೆಱವು$_2$, ತೆರವು$_2$ (ನಾ). ೧. ಕಾಣಿಕೆ; ಕಪ್ಪ: ತಮ್ಮ ಬೀರಮುಂ ಬಿಂಕಮುಮುಂ ತೆಱವುಂ ತೆಲ್ಲಂಟಿಯುಮೆಂದರಿಕೇಸರಿಗಾಗಳೀವವೋಲ್ ಬೆನ್ನಿತ್ತರ್ (ಪಂಪಭಾ. ೩-೭೨). ೨. ತಪ್ಪುಕಾಣಿಕೆ. **ತೆರವು$_2$** : ೩. ಕನ್ಯಾ ಶುಲ್ಕ; ತೆರ: ತೆರವಿನ ಹಣ ಪಡೆದು ಸಾಲ ತೀರಿಸಿ ಗದ್ದೆ ಜಮೀನು ಉಳಿಸಿಕೊಳ್ಳಬಾರದೇಕೆ? (ಮನೆಬಿ. ೧೬೧); ಹೆಣ್ಣಿನ ತಂದೆಗೆ ಒಂಬತ್ತುನೂರು ರೂಪಾಯಿ ತೆರವು ಎಣಿಸಿ. ಒಂಬತ್ತುವರುಷದ ಎಳೆಹುಡುಗಿಯನ್ನು ಅವನು ಮದುವೆಯಾಗಿದ್ದ (ಎರಸೆ. ೪). ೪. ಸಾಲ; ಕಡ: ಉಪದೇಶ,

ವ್ಯವಹಾರಜ್ಞಾನಗಳು ಕಾವ್ಯದಲ್ಲಿ ಸೇರಬೇಕಾದರೆ ಕಾಂತೆಯರ ನಾಲಿಗೆಯನ್ನು ತೆರವು ತರಬೇಕು (ಸಾಹಿವಿ. ೯೪). 'ತೆಱಿ$_3$' ಪರಾ.

[ತೆಱು$_1$ + – ವು]

ತೆಱವೆ, ತೆರವೆ (ನಾ). ೧. ತೆರೆಯುವಿಕೆ : ತೆಱವೆ, ಪಳವೆ, ಎಳವೆ (ಕಡಂದ. ೨೦೦ ಪ್ರಹೋ). 'ಕಂದೆಱವೆ' ಪರಾ. ೨. ಕಾಣಿಸಿಕೊಳ್ಳುವಿಕೆ ; ಉಂಟಾಗುವಿಕೆ : ತೆಱವೆಯಾದುದು ಭೀತಿ ಬಲು ಬೊಬ್ಬಿಱಿತಕಸುರನ ಧೈರ್ಯ ಕಾಲನ ಮಱಿಯ ಹೊಕ್ಕುದು (ತೊರಣ. ೩-೬-೩೦). **ತೆರವೆ** : ೨. ಹೊಳಿದವು ರಥಗಳಾನೆಯು ಮೇಲೆ ದೊಂಪಾಡಿ ತಲೆಮುಟ್ಟ ನಿಂದವಾಳುಗಳೂ ಹಲವೇನು ತೆರವೇನು ತೆರವೆ ಮುರವೆಯಿಲ್ಲ (ಸೌಂದಕಾ. ೦೧-೦೯). [ತೆಱಿ$_1$ + – ವೆ]

ತೆಱವೊನ್ 'ತೆಱಿಪೊನ್' ನೋ.

ತೆಱಸಲಿಕೆ (ನಾ). ಕಂದಾಯವನ್ನು ಸಲ್ಲಿಸುವಿಕೆ ; ಸುಂಕವನ್ನು ತೆರುವಿಕೆ: ಮಲ್ಲೆಗ್ರಾವುದವರು ಅರಮನೆಗೆ ತೆಱುವ ಕುಳದ ಹೊಂನಿನ ವೊಳಗೆ ತೆಱಸಲಿಕೆಯ ಹಂನೆರಡು ಹೊಂನನೂ (ಕಇ. I, ೫೮-೧೬ : 1446).

[ತೆಱು$_2$ (<ತೆಱಿ$_3$) + ಸಲಿಕೆ$_1$]

ತೆಱಸು 'ತೆಱಿಯಿಸು' ನೋ.

ತೆಱಹಾರ (ನಾ). (?): ವೊಱಹಾರ ನೀಡಿದರೆ ತೆಱಹಾರ ಕೈಕೊಳ್ಳುತ್ತೈದಾನೆ ಅಹುದಹುದು ದೇವರ ಹಸುವು ನಮಗೆ ಹೊಸತು ದೆಸೆದಿಕ್ಕೆಲ್ಲ ವಿಶ್ವತೋಮುಖದ ಕೂಡಲಸಂಗಮದೇವಂಗೆ ದೆಸೆದೆಸೆಯಲ್ಲಿ ನೀಡಿ (ಬಸಹೆ. ೧೦೮-೩೫) : "ತೆರವಿಲ್ಲದೆ" (ಬಸವ. ೪. ಕೋಡ). [?]

ತೆಱಹು 'ತೆಱವು' ನೋ.

ತೆಱಹುಕೊಡು 'ತೆಱವುಗೊಡು' ನೋ.

ತೆಱಹುಗಾಣ್ 'ತೆಱವುಗಾಣ್' ನೋ.

ತೆಱಹುಗುಡು 'ತೆಱವುಗೊಡಂ' ನೋ.

ತೆಱಹುಗೊಡು 'ತೆಱವುಗೊಡಂ' ನೋ.

ತೆಱಹುಗೊಳ್ 'ತೆಱವುಗೊಳ್' ನೋ.

ತೆಱಹುದೋಱು (ಕ್ರಿ). ಅವಕಾಶವನ್ನು ಕೊಡಂ ; ಎಡೆಮಾಡಿಕೊಡು : ಅಱಸದಿರಿ ಬೇಱತ್ತಲಿತ್ತಲು ತೆಱಹು [ಪಾಣಾಂ. ಪು]ದೋಱುವೆ ನೋಡಿ ಸಮರವ ಮೆಱಿವುದುಳ್ಳಡೆ ಮೈಗುಡುವುದಗ್ಗಳಿಕೆ ನಿಮಗೆನುತ (ತೊರಣ. ೩-೪-೨). [ತೆಱಹು (<ತೆಱವು) + ತೋಱು]

ತೆಱಹುಮಱಹು (ನಾ). ೧. ಮೈಮರೆವು ; ತಲ್ಲೀನತೆ : ಇಂತು ಬಸವರಾಜದೇವರು ಲಿಂಗಾರ್ಚನೆಯಂ ಮಾಡುತ್ತಾ ತೆಱಹುಮಱಹಾಗಿರ್ದ ವೃತ್ತಾಂತವುಂ ಪ್ರಭುದೇವರು ಎಚ್ಚಱಿಸಿ (ಕೂನ್ಯಸಂ. ೧೦೩-೪೦). ೨. ಉದಾಸೀನತೆ ; ಉಪೇಕ್ಷೆ ; ಅಸಡ್ಡೆ : ಒಡೆಯರು ಮನೆಗೆ ಬಂದುದ ಕಂಡು ತೆಱಹುಮಱಹಾಗಿಪ್ಪನೆ ಭೃತ್ಯನು (ಕನ್ನವ. ೪. ೧೨೦-೫೭೭).

[ತೆಱಹು (<ತೆಱವು) + ಮಱಹು./ತೆಲು. ತೆಱವುಮಱಪು]

ತೆಱಿಗೆ, ತೆರಿಗೆ, ತೆಱಂಗೆ, ತೆಱಿಗೆ (ನಾ). ೧. ಸುಂಕ ; ಕರ : ನಿಮಗೆ ತೆಱಿಗೆ ಕಾಣಿಕೆ ಬೇಡಿಗೆ ಬಿರಾಡೆಯೇನುಂಟಾದದನೂ ನಾಳು ನಿಮಗೆ ಬಿಟೆಲು (ಮೈಆರಿ. ೦೪೪೬, ೨-೮ : ಸು. 1554) ; ಹಾಗದ ತೆಱಿಗೆ ಬೇಕೆಂದು ನಾ ನಿನ್ನೂರ ಬಾಗಿಲ್ಗೆ ಭಟರನಟ್ಟಿದೆನೆ (ಛರಚ. ೩೦-೭೨). ೨. ಕಾಣಿಕೆ : ಕಿರೀಟಿಯ ತಲೆಯ ತೆಱಿಗೆಗೆ ತಾವೆ ಹೊಣೆಯೆಂದುದು ಭಟಸ್ತೋಮ (ಕುವಾಳ. ೨೨-೨೩). **ತೆರಿಗೆ** : ೧. ಯಾ ತೆರಿಗೆ ಹಣವಿ ×× (ಎಳ. VII, ಶಿವಪೂ. ೨೦-೦೨ : ?) ; ಜನರಕ್ಷಣೆಯಗರೆಯದೆ ತೆರಿಗೆ ದಂಡಗಳಾಸೆಗೈವರೆ (ಏಜ್ಞಪು. ೭೨-೭೨); ಪ್ರಜೆಗಳಿಂದ ಹೆಚ್ಚು ತೆರಿಗೆ ವಸೂಲು ಮಾಡಬೇಕೆಂಬುದು ನನ್ನ ಸಲಹೆ (ಪ್ರಕಾಶ. ೯೦) : ವೃತ್ತಿಗಳೆಲ್ಲದರ ಮೇಲೂ ತೆರಿಗೆಗಳು ಕ್ಲುಪ್ತವಾಗಿದ್ದುವು (ಭಾಕರ. ೩೫೮). **ತೆಱಿಗೆ**: ೨. ಕೃತುವಿನಲಿ ತೆಱಿಗೆಯ ತೆಱವರೆಮಗೆ ಮನ್ನಿಸುವರೆಂತಾದರೂ (ನಿಶಾಗ. ೦೧-೮-೩೪). **ತೆಱಿ$_3$ಗೆ** ಹದಿನಱಯುದ್ದ ಹಣವಿನ ತೆಱಿಗೆಯ ಭೂಮಿ (ಎಳ. VIII, ತೀರ್ಥಹ. ೦೪೮-೩೦ : 1417) ; ಸಮಸ್ತ ತೆಱಿಗೆ ಹೊಱಗೆ ಎಲ್ಲವನು ಕುಳವ ಕಡಿದು ಬಿಟ್ಟು ಸರ್ವಮಾನ್ಯದ ಅಗ್ರಾರವಾಗಿ ಚಿಕ್ಕರಾಯಪುರವೆಂಬ ಹೆಸರನು ಯಿಟ್ಟು (ಎಳ. IV, ಗುಂಡ್ಲುಪೇ. ೬೬-೪೭ : 1505).

[ದೇ.ತು ತುಳು. ತೆರಿಗೆ]

ತೆಱಿಗೆದೆಱು (ಕ್ರಿ). ೧. ಸುಂಕವನ್ನು ಕೊಡಂ. ೨. (ಆಲಂ) ಒಡ್ಡು ; ನೀಡು: ಮಲಯಪವನಗೆ ತೆಱಿಗೆದೆತ್ತರು ಮಯ್ಯ ಮನುಜರು (ತಿಮ್ಮಭಾ. ೫-೨). [ತೆಱಿಗೆ + ತೆಱು$_1$]

ತೆಱಿದಾರ (ನಾ). ಒಬ್ಬಾತನ ಹೆಸರು (?) : ಕಡುಕಲ್ಲ ಪುಲ್ಲಮಜ್ಜಿಲ ತೆಱಿದಾರ ಪುನ್ನಾಡನಾಳ (ಎಳ. IX, ದೇವನ. ೪೬-೩; ಸು. 900 ?). [?]

ತೆಱಿಸು, ತೆರಿಸು (ಕ್ರಿ). ೧. ಕೊಡುವಂತೆ ಮಾಡಂ : ಅವರ್ ಪೊಳ್ಕನೆ ನಕ್ಕು ಕ್ರಮದಿಂ ತಿಳುಪಿ ಕನ್ನಡಿಯ ಬೆಲೆಯಂ ತೆಱಿಸಿದರ್ (ಧರ್ಮಾಭ. ೬-೦೩). ೨. ತಪ್ಪುಕಾಣಿಕೆ ಕೊಡಿಸು; ದಂಡ ಕೊಡುವಂತೆ ಮಾಡು: ಭೂಧವ ತೆಗೆ ನಿನ್ನ ಮುಸುಕನಿವಳೊಳಪರಾಧವ ತೆಱಿಸಿಕೊಡುವೆವು (ಛರಚ. ೦೪-೦೫). **ತೆರಿಸು** : ೧. ಹತ್ತುರೂಪಾಯಿ ತೆರಿಸಿದರು (ಕೂಫಿ).

[ತೆಱು$_1$ + – ಇಸು$_3$]

ತೆಱು$_1$, ತೆರಂ$_1$ (ಕ್ರಿ). ತೆತ್ತ$_1$ (ಭೂತಕೃ), ತೆತ್ತು$_3$ (ಭೂತನ್ಯೂ). ಕೊಡು ; ನೀಡಂ : ಅವರಾ ಪಡೆಯುಂ ಪೆರ್ವಟ್ಟಿಯೂರುನ್ನು ತೆಱಿ ಪೆನ್ನೆನ್ದ ಎರಡು ತೆಱುವುದು (ಎಳ. IV, ಹಗ್ಗಡ. ೪-೩೨; ಸು. 750) ; ಪರಮಂತಳವ್ಯಸನಮನಾರಯ್ವಮಪ್ಪೊಡಿತ್ತುಂ ತೆತ್ತುಂ ಬಾಟ್ವ ಪಂಡಲ ಮಲ್ಲದೆ ಕೀಱ್ಯುಯುಂ ಮಾಱಿಯುಂ ನೆಗಟ್ವ ಮಂಡಲಮಿಲ್ಲ (ಪಂಪಭಾ. ೬-೬೭ ಪ) ; ಮಧುಕರಂ ಮಧುಕರಮಂ ತೆಱಲಾರದೆ ಮಲ್ಲಿಗೆಯೊಳೆ ಸೆಱಿಗೆಯ್ದುಂತಿರ್ದುದೊಂದು ಪರಿಮಳಫಲಮಂ (ಅಜಿಪು. ೬-೦೮); ಇರುಳು ರಾಯನ ಮನೆಗೆ ಕಪ್ಪವ ತೆಱುವುದೋ ಹಗಲು (ಕುವಾ.ಡ್ರೋ. ೫-೩೪) ; ತೆಱುವರೀತಗೆ ಕಪ್ಪವನು ಸಾಗರಪರೀತಸಮಸ್ತಪೃಥ್ವೀಶ್ವರರು (ತೊರಣ. ೦-೩-೨೨). **ತೆರು$_1$**: ಹಣವನ್ನು ತೆತ್ತು ನೀ ಹೊತ್ತನು ಕೊಳಲ್ಗಾರೆ ಹೊತ್ತಿಗೆ ಬೆಲೆ ಹೆಚ್ಚು ಗೊತ್ತೆ (ಇಂದಾಪ. ೦೫೪-೫೬) ; ಕನ್ನುಡಿಯೆ ವೇಲಣ ನಲ್ಮೆಯಿಂದ ಕೆಲವರಾದರೂ ತಪ್ಪನ್ನು ಊದಿ ಓದಿದರೆ ಬರಹಕ್ಕೆ ಕೀಳ್ಪಟ್ಟದ ಬೆಲೆಯನ್ನಾದರೂ ತೆತ್ತಂತಾಗುವುದು (ಕಾಂಖರ. ೫ ಮುನ್ನುಡಿ); ಎಲ್ಲವನ್ನು ತೆರಲು ಅವರು ಹಿಂಜರಿಯುವುದಿಲ್ಲ (ಮುನಿಮಾ. ೨೮). 'ತೆಱಿಯಂ' ಪರಾ.

[ದೇ.ತು ಕೊಡ. ತೆರ್=ದಂಡ ಕೊಡು; ಕುಗು. ತೆಪ್ಪ=ಹಿಂದಿರುಗಿಸು]

ತೆಱು$_2$ 'ತೆಱಿ$_3$' ನೋ.

ತೆಱುಗಡೆ, ತೆರಂಗಡೆ (ನಾ). = ತೆಱಿಗೆ ೧: ಆ ಖಂಡಿಕದ ವೃತ್ತಿಗೆ ತೆಱುಗಡೆ ಹೊಱುಗಡೆ ನಿಮಿತ್ತವಾಗಿ ಆ ಮಹಾಜನಂಗಳು ಕೊಟ್ಟ ನಾಗಂಡುಗ ಗದ್ದೆ (ಎಳ. XII, ಚಿಕ್ಕನಾ. ೨-೩೦; 1261). **ತೆರುಗಡೆ** : ಶ್ರೀವಿಶ್ವನಾಥ ದೀಕ್ಷಿತೈಯ್ಯನವರಿಗೆ ದಂಣಾಯಕ ಸಿಂಗಮಗುವಂಣ್ಣಂಗಳು ಕೆರೆಯ ಕಟ್ಟಿಸಿದದ ಕೊಡಗೆಯಾಗಿ ಯಾವ ತೆರುಗಡೆಯಂಯಿಲ್ಲದೆ ಸರ್ವಮಾನ್ಯವಾಗಿ ಬೀಜವರಿಯಲಿ ಕೊಟ್ಟರು (ಮೈಆರಿ. ೦೪೩೦, ೮-೬; ?).

[ತೆಱು$_1$+ಕಡೆ ?]

ತೆಱುಗೆ 'ತೆಱಿಗೆ' ನೋ.

ತೆಱುಮಾನ್ಯ (ನಾ). ತೆರಿಗೆಯಿಲ್ಲದುದು ; ತೆರಿಗೆಯ ವಿನಾಯಿತಿ : ಬೇಣ ಬಿಳರು ಭಟು ಚಟಿ ಸೀವೆ ಸಾಮ್ಯ ಮುಂತಾದ ಉತ್ಪತ್ತಿಯೆಲ್ಲವನು ತೆಱುಮಾನ್ಯವಾಗಿ . . . ಪಾಲಿಸಿಕೊಂಡು (ಕಇ. III-1, ೯-೩೫ : 1589).

[ತೆಱು$_3$ (<ತೆಱಿ$_3$) + ಮಾನ್ಯ]

ತೆಱುಮಾರು (ನಾ). (?) : ಪ್ರಥಮಸ್ತಳಸಂಜಾತವಾದ ಹಳಿಕಾಱ ಹರವಾಗಿ ಗೌಡುಂಕೆಯಾಗಿ ಅರಮನೆ ತೆಱುಮಾರುಗಳನೂ ಉಂಡಿಗೆಯ ಕಿರುಕೊಳಸಲ್ಲ (ಸೌಇಇ. IX-11, ೪೩೩-೫೭; 1408). [?]

ತೆಱುವಟ್ಟಲ್ (ನಾ). ಒಂದು ಬಗೆಯ ಪಾತ್ರೆ (?) : ತಳಿಗೆ ಕನ್ನಡಿ ಸಿಪ್ಪು ಕಂಚಿನ ಸಟ್ಟುಗಂ ತೆಱುವಟ್ಟಲಗ್ಗಳದ ಕೈಮಳೆ ತಾಳಮೊಪ್ಪುವ ಗಿಣ್ಣಲೆಂಬಿವನಾವಗಂ ಕಳೆದುಕೊಂಡೊಡನಿರ್ದ ಧೂರ್ತಜನಕ್ಕೆ ಜೀವಿತಮೆಂದು ತನ್ನೊಳೆ ವಿಚಾರಿಸಿ ನಿಚ್ಚಲುಂ ಕುಡುವಂ ನೃಪಾತ್ಮಜನರ್ತಿಯಿಂ (ಧರ್ಮಾಮೃ. ೨-೨೬). [ℙ ಇದು 'ಕಿಱುವಟ್ಟಲ್' ಇರಬಹುದೇ ?]

ತೆಱುವಾಳು (ನಾ). (?) : ತೋಳು ಸಾವಿರವಮರಪತಿ ತೆಱು [ಪಾಕಾಂ. ಱ]ವಾಳಿನೊಕ್ಕಲು ಕಂತುಕದ ವೈಹಾಳಿ ಪಾತಾಳದಲಿ ಸಪ್ತದ್ವೀಪ ಮನೆತನಗೆ (ಕುಪ್ಯಾಸ. ೯-೬೦). "ಜೀತಗಾರ ; ದಂಡ ಕೊಡುವವನಂ" (ಪ್ರಭಣ್ಣ). [ℙ 'ಇದು ತೆಱು + ಬಾಳು' ಇರಬಹುದೇ ?]

ತೆಱುವೆ (ನಾ). = ತೆಱೆಗೆ ೧ : ಗುತ್ತಿಗೆ ಭೂಮಿ ೩೩೦೦ಕ್ಕೆ ಸಿದ್ದಾಯಗ ೨೦ ವನು ತೆಱುವೆ ಬಿಟ್ಟು ಕೊಟ್ಟ (ಪ್ಯುಅರಿ. ೧೯೩೮, ೩೭-೧೬ : 1501).

[ತೆಱು$_2$ (< ತೆಱೆ$_3$) + – ವೆ]

ತೆಱೆ$_1$, ತೆರೆ$_1$ (ಕ್ರಿ). ೧. (ಮುಸುಕು, ಬಾಗಿಲು ಮುಂತಾದುವನ್ನು) ತೆಗೆ.–ಬಿಚ್ಚು : "ತೆಱೆ – ಅನಾವರಣೋದ್ಘಾಟನಯೋಃ . ಕರೇ ಚ (ಕಪ್ಪ, ಕಾಣಿಕೆ)" (ಶಮಧಾ) : ತೆಱೆಯದೆ ಮುನ್ನ ಕೆತ್ತ ಪಡಿಗಳ್ ನಡಸೌರಭಮುಣ್ಮೆ ಮೊಕ್ಕಳಂ ತೆಱೆದುವು (ಆದಿಪು. ೨-೬೩) : ಕರಮಂ ಪೇಱಿ ರವಂಗಳೊಳ್ ತೆಱೆದು ಕರ್ಣದ್ವಂದ್ವಮಂ ತಾಮ್ರಭೀಕರಮಂ ಬಿಚ್ಚನೆ ಬಿಟ್ಟು ಕಣ್ಣನೆರಡುಂ . . . ವನದಂತಿ ಪೋರ್ವುದು (ಶಾಂತಿಪು. ೨-೧೦೦) ; ಮಗಳೆ ತೆಱೆ ನೀಂ ಕಣ್ಣಂ (ಕಾದಂಉ. ೬೮೧) ; ಅರೆಮುಗಿದ ಱೆಪ್ಪೆಗಳ ಬೆಳ್ಪಿನ ತಿರುಗದಿಹ ಕಣ್ಣಾಲಿಗಳ ನಸುಮುರಿದ ಕೊರಳ್ಗಳ ಬಿಗಿದ ನರಗಳ ತೆಱೆದ ನೊರೆವಾಯ (ಬಸಪು. ೪೬-೫೬) : ಲಲಾಟನೇತ್ರವ ತೆಱೆದರೆ ನೀನು ಬೆಂದುಹೋದಪೆ (ಮೋಹತ. ೭-೨೬). ೨. ಸೀಳು ; ಬಿರಿ : ತೆಱೆದಿರ್ದ ಪುಣ್ಗಳೆಸೆವಕ್ಕರದಂತಿರೆ (ಪಂಪಭಾ. ೧೧-೪೬) ; ಸುತಶೋಕದಿಂದಾವಗೆಯಂತೊಳಗುರಿಯೆ ಭೋಂಕನೆರ್ದೆ ತೆಱೆಯಲ್ (ಪಂಪಭಾ. ೧೨-೨೮) : ಕೇಳ್ದರೆರ್ದೆ ತೆಱೆವಿನಮೊಳಱೆ ಪೆಂಟೆಯ ಪೊಟ್ಟೆಯಂ ಕರ್ಚಿ ಸೆಳೆಯೆ (ಅರ್ಧನೇ. ೭-೯೧ ವ). ೩. ಸ್ಪಷ್ಟಪಡಿಸಂ ; ಸ್ಪಷ್ಟಗೊಳಿಸು : ಕುಱಿತಂತು ಪೆಱರ ಬಗೆಯಂ ತೆಱೆದಿರೆ ಪೆಱರ್ಗಱಿಪಲಾರ್ಪವಂ ಮಾತಱಿವಂ (ಕವಿರಾ. ೧-೧೫); ಗಂಭೀರೋದಾರ ಸಾರ ಭಿನ್ನನಯ ಸಂತತಿ ಸಮನ್ವಿತಮನಱಿಯೆ ತೆಱೆಯೆ ನೆಱೆಯೆ ನುಡಿದು (ಶಾಂತಿಪು. ೩-೮೯ ವ). ತೆರೆ$_1$: ೧. ತಟ್ಟದೊಡನೆಯೆ ತೆರೆವ ಕದವದಲ್ಲ (ಅನಿಕೇ. ೨-೧೦) ; ದಿನಸಿಯ ಜವಳಿಯ ಅಂಗಡಿ ತೆರೆಯಿತು (ಇಂಬಾಪ. ೭-೨೪). ೪. ಆರಂಭಮಾಡು ; ಪ್ರಾರಂಭಿಸು : ೧೭೮೧ರಲ್ಲಿ ಒಂದು ಶಾಲೆಯನ್ನು ತೆರೆದರು (ಭಾರದ. ೪೨೬).

ತೆಟ್ಟಂದೆಱೆ, ತೆಟ್ಟುಂತೆಱೆ, ತೆಟ್ಟುಂದೆಱೆ = ಪೂರ್ಣವಾಗಿ ತೆರೆ ; ತಡೆಯಿಲ್ಲದಂತೆ ತೆರೆ : ತನ್ನ ಹೃದಯಕವಾಟಮಂ ತೆಟ್ಟಂದೆಱೆದತ್ತಳಗ ಮಾದುತ್ತುಂಡವೇಟಮಂ ಬಯಲೊಳಿಕ್ಕಿ ಬಾಯಟಿದ ನಿಜಪತಿಯ ನುಡಿಗೆ ಸುದರ್ಶನನೆಂದಂ (ಆನಂಪು. ೧೧-೩೨ ವ) : ನೆಟ್ಟನೆ ತನ್ನಯ ಮನಮಂ ತೆಟ್ಟುಂತಱೆದುಸಿರ್ವ ನೃಪಮನೋಜನ ಮಾತಂ ತೊಟ್ಟನೆ ತಾಂ ಕೇಳ್ದು (ಕುಸುಮಾ. ೧೦-೧೨೪) ; ಕೀಟ್ಗೊಂಬಿನೊಳಡ್ಡಂ ಮೆಟ್ಟಿ ತೆಟ್ಟುಂದೆಱೆಯೆ ಗಳಪಿದತ್ತಾಮ್ರದೊಳ್ ತಾಮ್ರತುಂಡಂ (ಜಂದ್ರಪು. ೭-೮೭). ತೆರೆದ ಹೃದಯ = ಬಿಚ್ಚುಮನಸ್ಸು ; ನಿಷ್ಕಪಟತೆ : ಮುಚ್ಚುಮರೆಯಿಲ್ಲದಿರುವುದು; ತೆರೆದ ಹೃದಯ ; ನಿಷ್ಕಾಪಟ್ಯ ; ಸಂಶಯರಾಹಿತ್ಯ ; ದಯಾಪರತೆ ; ಸೌಹಾರ್ದ (Open-Heart. ಇಂಕನಿ). ತೆಱೆದ ಹಸ್ತ, ತೆರೆದ ಹಸ್ತ = ಕೊಡುಗೈ ; ಮುಕ್ತಹಸ್ತ ; ಔದಾರ್ಯ : ತೆಱೆದ ಹಸ್ತವು ಲೇಸು ... ಸರ್ವಕು ಶಿವನಿಂಗೆ ಶರಣವೇ ಲೇಸು (ಸರ್ವಜ್ಞ. ೨೪೦); ದಾನ ಮಾಡುವುದರಲ್ಲಿ ಅವರದು ತೆರದ ಹಸ್ತ (ಶೂಧಿ). ತೆಱೆಯೆ ನುಡಿ = ಸ್ಪಷ್ಟವಾಗಿ ಹೇಳು ; ನೇರವಾಗಿ ನುಡಿ : ತೆಱೆಯೆ ನುಡಿದುದರ್ಕೆ ಕಡುಮುಳಿದು (ಪಂಠಾಮಾ. ೯-೯೩ ವ). ತೆಱೆಯೆ ಬಣ್ಣಿಸು = ಚೆನ್ನಾಗಿ ತಿಳಿಯುವಂತೆ ವರ್ಣಿಸು : ಸಂಗತಜಿನಧರ್ಮಮತಿಗೆ ನಾಂಗಳ್ ನಿನಗಱಿಯೆ ತೆಱೆಯೆ ಬಣ್ಣಿಸೆಮಾದಿತ್ಯಂಗೆ ಸೊಡರೆತ್ತುವೀ ಗಾಂಪಿಗಾಗರವಾಗಿ ತೊಱೆಗೆ ನೀರಡುಕುವವೋಲ್ (ಆಜಿಪು. ೬-೭೯). ತೆಱೆಯೆ ಮೆಱೆ = ಅಧಿಕವಾಗಿ ಮೆರೆ : ರಾಜಾಯತನಕ್ಕೆ ನೊಸಲ ಕಣ್ಣೆನಿಸಿ ತೇಜಮಂ ತೆಱೆಯೆ ಮೆಱೆವಾ ಪೂರ್ವದ್ವಾರಂ (ವರ್ಧಪು. ೧-೦೩).

[ದೇ.॥ ತಮಿ. ತಿಱ ; ಮಲ. ತುಱ ; ತೆಲು. ತೆಱಚು, ತೆರಚು]

ತೆಱೆ$_2$, ತೆರೆ$_2$ (ನಾ). ತೆರೆಯುವಿಕೆ ; ತೆರೆದಿರುವ ಸ್ಥಿತಿ. 'ಬಾಯ್ದೆಱೆ$_2$' ಪರಾ. ತೆರೆ$_2$: 'ಕಣ್ದೆರೆ', 'ಬಾಯ್ದೆರೆ$_2$' ಪರಾ. [<ತೆಱೆ$_1$]

ತೆಱೆ$_3$, ತೆರ$_2$, ತೆರು$_2$, ತೆರೆ$_3$, ತೆಱ$_2$, ತೆಱು$_2$ (ನಾ). ೧. ಕಾಣಿಕೆ: ದೇವರನನ್ದಾದೀವಿಗೆಗೆ ಬಿಟ್ಟ ಗಾಣ ಮೂಱು ದೇವರಂಗಭೋಗಕ್ಕೆ ಅವರ ತೆಱೆಯೊಳಗಾಗಿ ಬಿಟ್ಟ ಸೂಳೆಯರೆ ೧೨ (ಎಕ. XI, ದಾವಣ. ೦೧-೨೬) ; 1066). ೨. ಕರ; ಸುಂಕ; ತೆರಿಗೆ: "ತೆಱೆ–ಅನಾವರಣೋದ್ಘಾಟನಯೋಃ. ಕರೇ ಚ (ಕಪ್ಪ, ಕಾಣಿಕೆ) " (ಶಮಧಾ) ; ದೇಶಾಧಿಪತಿಗಳಪ್ಪೊರ್ಗೆ ಕುಡುವ ತೆಱೆ (ಎಇ. XIV, ೧೯೦-೦೩ ; 725); ಪೆಱಗಣ ಮುಂತಣ ರಿತುಗಳ ತೆಱೆಯಂ ನಿಶ್ಚಯಿಸಿ ಮಧುಕರಂ ಮಧುಕರಮಂ ತೆಱಲಾಱದೆ ಮಲ್ಲಿಗೆಯೊಳ್ ಸೆಱೆಗೆಯ್ದಂತಿರ್ದುದೊಂದು ಪರಿಮಳಫಲಮಂ (ಆಜಿಪು. ೬-೦೮); ಭೂಪರ್ ತೆಱೆಯೊಳ್ ಮಗಂ ಮುಷ್ಟಿನೊಳ್ ಪೆಂಡತಿ ಕುತ್ತದೊಳ್ ಫಲಮಂ ತೋರ್ಪಂತೆ (ಧರ್ಮಾಮೃ. ೧೨-೩೮) ; ಪೂಜೆಗೆ ಬಿಟ್ಟ ಧರ್ಮ್ಮಮಂ ಮಂನಿಸಿ ಕಾವುದಲ್ಲದಿನಿಸಂ ತೆಱೆ ಕಾಣಿಕೆ ಸೇಸೆಯಾಸೆಗಳ ಮಂನೆಯವಾಯದಾಯಮಿವು ಸಲ್ಲವು (ಎಇ. XXVII, ೦೫-೦೭ ; 1114) ; ಬಿಟ್ಟಬೀಡಾರಂ ಹೊಱೆಗೆ ತೆಱೆ ಕೊಟ್ಟಣಂ ಕಾಣಿಕೆಯು (ಬಸಪು. ೨೭-೫೨). ತೆರ$_2$: ೨. ತೆರದ ರೂಪದಲ್ಲಿ ಸಂಬಳ, ಕಂದಾಯ, ಬಡ್ಡಿ ಮುಂತಾದ ಸಲುವಳಿಗಳ ರೂಪದಲ್ಲಿ ಹಣವು ಬಳಕೆಯಲ್ಲಿ ಬರುವುದು (ಮಾವಾದ. ೦೦೭); ಬನ್ನಿ, ನೋಳ್ಪಂ ! ನಿಮ್ಮುಲ್ಲಸಮೆ ತೆರಂ ! ಕಾಣ್ಬವಿಾ ಕುಂಭಕರ್ಣನ ಕರಡಿಯಾಟಮಂ ! (ಶ್ರೀರಾಮಾ. ೬೮೯-೩೦೪). ೩. (ಮದುವೆಯ ಕಾಲಕ್ಕೆ) ವಧುವಿಗೆ ಕೊಡಬೇಕಾದ ಶುಲ್ಕ ; ಕನ್ಯಾಶುಲ್ಕ : ನಾನೂ ಆ ಕುದುರೆಗಳನ್ನು ತೆರವಾಗಿ ಕೊಟ್ಟು ಈಕೆಯಲ್ಲಿ ಒಬ್ಬ ಪುತ್ರನನ್ನು ಪಡೆಯುವೆನು (ಕೃವಾಉ. ೧೮೭) : ನೀರೀಗೆ ಹೋಗೋಳೆ ನೀಲದುಂಗುರದವಳೆ . . . ವೈಯ್ಯಾರ ಬಿಟ್ಟು ತೆರ ಹೇಳೆ (ಹಳ್ಳಿಯ. ೫೪); ಮದುವೆಯ ಖರ್ಚಿಗಾಗಲೀ, ಮದುಮಗಳ ತೆರಕ್ಕಾಗಲೀ ಸಿದ್ದಣ್ಣ ಸಾಲ ಮಾಡಬೇಕಾದ ಪ್ರಮೇಯವಿರಲಿಲ್ಲ (ಪಂಜಪಂ. ೫೪) ; ಮದುವೆ ಮಾಡಿಕೊಳ್ಳಬೇಕಾದರೆ . . . ತೆರ ಕಟ್ಟಬೇಕು (ಹಳ್ಳಿಯ. ೨೦) ; ಮದುವೆಯ ಕಾಲಕ್ಕೆ ಕೊಡಬೇಕಾಗಿದ್ದ, 'ತೆರ'ದ ಹಣದಲ್ಲಿ ಅರ್ಧಭಾಗವನ್ನು ಆತನಿನ್ನೂ ತಂದು ಕೊಟ್ಟಿರಲಿಲ್ಲ (ಬೀದಿಬಿ. ೨೪). ೪. ದಂಡ ; ತಪ್ಪುಕಾಣಿಕೆ. 'ತೆರಕೊಡಂ' ಪರಾ. ತೆರು$_2$: ೨. ಮೂವರಿಂದ ಸಲುವ ಕಾಶವರ್ಗದ ತೆರು ಯಾ ಆರುಮಂದಿಗೂ ಹರುಗೋಲತ್ತೆರು ಸಹಾ ಬಿಟಿಧೇವೆ (ಎಕ. VII, ಶಿವಪೊ. ೩-೨೮ ; 1071) : ತೆರುವಿಂ ಮಂದಿ ನೋಯಿಸಂ (ಸೌನಂದ. ೨-೨೬) : ಶಾಸನಗಳಲ್ಲಿ ಬರುವ ತೆರುವಣಗಳು : – ತೆರು, ಮುಂಡಗಡಿ, ಅರುಗಡಿ (ತುಳುನಾ. ೨೭೦). ತೆರೆ$_3$: ೨. ಕಯ್ಗೊಳ್ಳಂ ರಾಷ್ಟ್ರದಿಂದೆಂದುಂ ತೆರೆಯಿಂ ಪೆರತೇನನುಂ (ಸೌನಂದ. ೨-೩೩). ತೆಱ$_2$: ೨. ನಾಲ್ಕಱ ಮೇಲೆ × × ಬಹ ತೆಱನೂ ದನಿಯರು ತಮ್ಮ ಬದ್ಧ ಭೋಜನ ನಡವಂತಾಗಿಯಿಕ್ಕಿ

ಕೊಂಡು (ಸೌಇಇ. IX-11, ೪೦೯-೨೬ ; 1365). **ತೆಱು$_2$** : ೨. ಅರಸಂಗೆ ತಪ್ಪು ಕಾ ಗ [೨]೦೦೦ ಹೊಂನ ತೆಱು ಅಡತು ಅರಸು (ಸೌಇಎ. ೦೯೨೯, ಮಂಗಳೂರು. ೪೬೦-೨೦ ; 1297) ; ತೆಱವ ತೆಱು ಕಟಿಗ ೪೮೨ ಹೊಂನ ಬಳಿಯ ಭತ ನಾಗಂಡುಗದಲು ಮೂಡೆ ೪ (ಸೌಇಇ. IX-11, ೪೨೪-೪೦; 1401) ; ಮಲ್ಲಪ್ಪನಾಯಕನ ಮಕ್ಕಿ ೮ ಗದೆಗೆ ತೆಱು ದೇವರಿಗೆ ವರುಷ ೧ಕ್ಕೆ ದೆಳ್ಳಿ ಗ ೧ (ಕಇ. I, ೩೦-೨೬ ; 1432).

[ದೇ.॥ ತಮಿ. ತಿಱ್ಕೈ ; ಮಲ. ತಿಱ]

ತೆಱೆಕುಱುಪು (ನಾ). ತೆರೆಯಲು ಮಾಡಿದ ಗುರುತು ; ತೆಗೆಯುವ ಸ್ಥಳದ ಕುರುಹು : ಅಂಬುಜೋದ್ಭವನತಿಪ್ರೀತಿಯಿಂ ಪೊಂಗಳಸವೆರಡಱಲ್ಲಿ ಪಿರಿದು ಸುಧೆಯಂ ನಿಜದೆ ತುಂಬಿ ಜತುಮುದ್ರೆಯಂ ತೆಱೆಕುಱುಪುಗೆಯ್ದು ನೋಯೆನಲೆಸಕದಿಂ ಪಯೋಧರದ ಚೂಚುಕವೆಯ್ದೆ ಕಪ್ಪನಾಂತಿರ್ದುವು (ಪಾಸೋಪು. ೨-೩೩). [ತೆಱೆ$_1$ + ಕುಱುಪು (< ಕುಱುಪು)]

ತೆಱೆಗಯ್, ತೆರೆಗಯ್, ತೆರೆಗೈ (ನಾ). ಬಿಚ್ಚಿದ ಕೈ ; ಚಾಚಿದ ಕೈ : ಎನ್ನ ಕಡುಪಗೆಯಿದಿರ್ ಸೆಱಗೊಡ್ಡಿ ಮೊಱೆಯಿಟ್ಟು ತೆಱೆಗಯ್ಯನೆತ್ತುವೆನ್ (ಬದ್ಧಪ್ರ. ೫೩-೦೦೬೦). **ತೆರೆಗಯ್** : ಕಡುಪಗೆಯ ಎದುರಿನಲ್ಲಿ ಬಿಡುಗಡೆ ಗಾಗಿ . . . ತೆರೆಗಯ್ಯನ್ನು ಎತ್ತುವ ಕ್ಷುದ್ರತರ ದೈನ್ಯ ತನ್ನಲ್ಲಿ ಇಲ್ಲ ಎನ್ನುತ್ತಾನೆ (ಬದ್ಧಪ್ರ. XXII, ಪೀಠಿಕೆ). **ತೆರೆಗೈ** : ಅವ್ವಾ ನೋಡಿರೆ ! ಭೂವೈಕುಂಠನಿವಾಸಿ ವೆಂಕಟರಮಣನ. ತೆರೆಗೈ ತಿರುಕನ (ಉಯ್ಯಾಲೆ. ೯೬-೦೬) ; ಸತ್ಯವನ್ನು ಮೊದಲು ಯಾರು ತೆರೆಗೈಗಳಿಂದ ತಬ್ಬಿಕೊಂಡಿಲ್ಲ (ಬಾಬಲ. ೮೩). [ತೆಱೆ$_1$ + ಕಯ್$_2$ (< ಕೆಯ್$_2$)]

ತೆಱೆಗೆ 'ತೆಱಿಗೆ' ನೋ.

ತೆಱೆಗೊಳ್ (ಕ್ರಿ). ಸುಂಕವನ್ನು ತೆಗೆದುಕೊಳ್ಳು,-ಪಡೆ ; ಕಂದಾಯ ಏತ್ತು : ಸ್ವಾತಿತ್ರಯದೊಳ್ ಗಮನೋದ್ಯೋತಾಸ್ತಮಯಿಪ್ಪ ಶುಕ್ರನಿಂ ಪಶುಗೆ ಭಯಂ ಮಾತೇಂ ತೆಱೆಗೊಳ್ಳರ್ ಸಂಪ್ರೀತಿಯ ನೃಪಸಮಿತಿ ಮುಳಿದು ತಮ್ಮೊಳಗಿಱುವರ್ (ಅಟ್ಟಿಮ. ೬-೦೩೭).

[ತೆಱೆ$_3$ + ಕೊಳ್$_1$]

ತೆಱೆದೆಱು (ಕ್ರಿ). ತೆರಿಗೆಯನ್ನು ಕೊಡು,-ಸಲ್ಲಿಸು : ಕ್ರಿಯಾಸಮಾಸಕ್ಕೆ . . . ತೆಱೆ[ಪಾಠಾಂ. ಱ]ದೆತ್ತಂ, ಮಱೆವೊಕ್ಕಂ (ಶಮದ. ೦೬೭ ಪ್ರಯೋ).

[ತೆಱೆ$_3$ + ತೆಱು$_1$]

ತೆಱೆಪಡು (ಕ್ರಿ). ಸುಂಕವನ್ನು ಕೊಡಬೇಕಾಗಿ ಬರು (?) : ದೇವರ್ಗೆ ದೇವಪೂವಿನ ಮುದನೆವಯ್ಯ ತೆಱೆಪಟ್ಟ ಪಾಳಿಯ ಪೊನ್ನರ ಕೊಟ್ಟು ಮಣ್ಣರ ಕೊಣ್ಡು ಬಿಡಿಸಿದಡೆ ಶ್ರೋತಿಯೂರ ಮಾರಯ್ಯಸೆಟ್ಟಿಯ ಮಗಂ ದೊರೆಯ್ಯಸೆಟ್ಟಿ (ಮ್ಯಾಆರಿ. ೦೯೪೬, ೨೮-೨೧ ; 1032).

[ತೆಱೆ$_3$ + ಪಡು$_1$]

ತೆಱೆಪು 'ತೆಱಪು' ನೋ.

ತೆಱೆಪೊನ್, ತೆಱವೊನ್ (ನಾ). ತೆರಿಗೆಯಾಗಿ ಕೊಡುವ ಧನ,-ಹಣ : ಅನ್ತೊ ಸಲೆ ಬಾಣರಾಜರ ವಿಷಯದ ಅಗ್ರಹಾರಂಗಳನ್ತೆಱೆಪೊನ್ವೇಡಿ ಕೊಣ್ಡು (ಸೌಇಇ. IX-1, ೪೬-೬; ಸು. ೩ನೆಯ ಶತ). **ತೆಱವೊನ್** : ತೆಱವಿನ ಪೊನ್, ತೆಱವೊನ್ (ಶಪ್ಪಾಸು. ೩೩೨ ಪ್ರಯೋ). [ತೆಱೆ$_3$ + ಪೊನ್]

ತೆಱೆಯಿಸು, ತೆರೆಯಿಸು, ತೆರೆಸು, ತೆಱಸು (ಕ್ರಿ). ತೆಗೆಯುವಂತೆ ಮಾಡು; ಬಿಚ್ಚಿಸು: ಕದವಂ ತೆಱೆಯಿಸಿರೆ ಎಲೇ ಅಪ್ಪರೇ (ಪಾಗೀರ. ದೇ. ೨೭೬-೦). **ತೆರೆಯಿಸು** : ತೆಗೆದ ಬಾಗಿಲ್ಗಳಿಂ ದಾರಿ ತೆರೆಯಿಸಿತು (ಕಾಲೂರ. ೪೪-೫೮); ಆಸ್ಯದಲ್ಲುಂಟಾದ ಮಹಾಪರಿವರ್ತನೆ ಭಂಡವಾಳಿಶಾಹಿ ಜನಾಂಗಗಳ ಕಣ್ಣು ತೆರೆಯಿಸುತ್ತದೆ (ಕಾಲಯಾ. ೩೬). **ತೆರೆಸು** : ಅನೇಕ ದಿನಗಳಿಂದ ಬೀಗ ಹಾಕಿದ ಬಾಗಿಲನ್ನು ತೆರೆಸಿದರು (ರೂಢಿ). **ತೆಱಸು** : 'ಬಾಯ್ದೆಱಸು' ಪರಾ. [ತೆಱೆ$_1$ + – ಇಸು$_3$]

ತೆಱೆವಾಯ್, ತೆರೆಬಾಯಿ, ತೆರೆವಾಯ್, ತೆರೆವಾಯಿ (ನಾ). ೧. ತೆರೆದ ಬಾಯಿ ; ಅಗಲಿಸಿದ ಬಾಯಿ ; ಬಿಟ್ಟ ಬಾಯಿ : ಮಿಗವಲ್ಲ ಮಾನಸ ರೂಪಲ್ಲ ಕೇಸರಿಮೊಗ ತೆಱೆವಾಯ ಪಲ್ಗಿಱಿದು ನಖದಿಂದಲಹಿತನ ಗೆಂಡಿಕೊಂಡಱುಹಿದ ಪ್ರಕಟಿತ ಬಲುಹ ತೋಱೆನಗೆ (ಮೋಹತ. ೪೦-೨೨). **ತೆರೆಬಾಯಿ** : ೧. ನನ್ನ ಭಾಷಣಕ್ಕಾಗಿ ನಿಮ್ಮ ತೆರೆಬಾಯಿ ನೀರೊಡೆ ದಿರಬಹುದು (ಹುಚ್ಚುಹು. ೦೦೩). ೨. ಪಕ್ಕನೆ ಬಾಯಿ ಬಿಡುವ ಸ್ವಭಾವ ; ಒಡಕುಬಾಯಿ : ನೋಡು ನೀನು ತೆರೆಬಾಯಿ ಮನುಷ್ಯ; ಪಿಸಕ್ಕನೆ ನಕ್ಕುಬಿಡುವಿ (ಕುರಿಹಿಂ. ೧೬). **ತೆರೆವಾಯ್** : ೧. ಮರಿಯ ತೆರೆವಾಯ್ಗಿಡುತೆ ತನ್ನ ಕೊಕ್ಕಂ ಕುಟುಕು ಕೊಡುತಿರ್ದ ತಾಯ್ವಕ್ಕಿಯಂ ಕಂಡು (ಶ್ರೀರಾಮಾ. ೮-೧೯೫). **ತೆರೆವಾಯಿ** : ೧. ಈ ಗುಚ್ಚಗಳು ಅನೇಕ ವೇಳೆ ಕಿರೀಟಗಳಂತೆಯೂ . . . ತೆರೆವಾಯಿಗಳಂತೆಯೂ . . . ಮೆರೆ ಯುತ್ತಿರುವುವು (ಜ್ಯೋತಿರ್ವಿ. ೬೪). [ತೆಱೆ$_1$ + ಬಾಯ್]

ತೇ$_1$, ತೆಯ್, ತೇಯ್, ತೇಯು (ಕ್ರಿ). ತೆಯ್ದು, ತೇದು, ತೇಯಿದು, ತೇಯ್ದು (ಭೂತನ್ಯೂ). ೧. ಅರೆ ; ಉಜ್ಜು ; ನುಣ್ಣಗೆ ಮಾಡು : ಇಱಿಯದೆ ಕೆಮ್ಮನುಂತೆ ಭುವನಂಗಳಸುಂಗೊಳೆ ತಕ್ಕುದೆಂದೊಡೇ ಮಱುಕಮನೆಂಬುದೇವಿರಿದಿದೆನ್ನ ಭುಜಾಸಿಗೆ ತೇದು ಪೂಸಲುಂ ನೆಱೆಯದು (ಕಾವ್ಯಸಾ. ೪೧೦ ಶೂದ್ರಕ) : ಆದ ಮುಳಿಸಿಂದಮೆಲ್ವಂ ತೇದುಂ ಕುಡಿಯಲ್ಕೆ ತಕ್ಕ ಪಗೆವನ ರುಧಿರಾಚ್ಛೋದಮನೆ ಕುಡಿದು ಮಾಣ್ದ ವೃಕೋದರನೇನಾವ ತೆಱದೊಳಂ ದೂಷಿಗನೇ (ಪಂಪಭಾ. ೧೨-೦೫೯) ; ಚಂದನವ ಕಡಿದು ಕೊಱೆದು ತೇದೊಡೆ ನೊಂದೆನೆಂದು ಕಂಪ ಬಿಟ್ಟಿತ್ತೆ (ಮಹಾದೇ. ಬ. ೨೮-೫೮) ; ಒರೆಯೆ ಸುವರ್ಣಂ ತೇಯೆ ಮಳಯಜಂ . . . ಪರಿಮರ್ದಿಸೆ ಹಿಮಕುಂಕುಮಮೃಗಮದಮೊರಸೆ ಕರಂ ಸಾದಿನ ಪುಣುಗಿನ ಘನಪರಿ ಮಳಮೆನೆ ಮತ್ಕೃತಿ ಮಾಡುವುದು ಚಮತ್ಕೃತಿಯಂ ಸಂಘರ್ಷಿಸಲು (ಕುಮುರಾ. ಪೀಠಿಕಾಸಂಧಿ ೪೨); ಮುಸುಡನಮರಾದ್ರಿಯಲಿ ತೇವೆನು ದೇವ ಸಂತತಿಯ (ಕುಪ್ಯಾವಿ. ೩-೬೮); ಕರದ ಕಂಕಣ ಝಣರೆನಲು ಗಂಧವ ತೇವ ತರುಣಿಯರೊಪ್ಪಿದರು (ಕಂನವಿ. ೬-೮೯) ; ಗಂಧವನು ತೇವಲ್ಲಿ ಒಂದು ನೊಣವನು ಕಾಣೆ (ಸರ್ವಜ್ಞ. ೮೧೮). ೨. ಸವೆ; ಕ್ಷಯಿಸು : ನೆಲನೆಲ್ಲ ಜವು ಗಾಯ್ತು ಮೊದಲು ಮತ್ತುಱೆ ತೇದು ತೊಳೆದುಹೋದುವು ಬಡಬೆಟ್ಟ (ಭರಜ. ೩೪-೬೦). ೩. ಸವೆಯಿಸು ; ಸವೆಯುವಂತೆ ಮಾಡು ; ಕೃಶ ವಾಗಿಸು : ಋಷ್ಯಾಶ್ರಮದೊಳೆ ತನುವಂ ಮುಪ್ಪಿನೊಳ್ತೇದು ಮೋಕ್ಷಾ ಸ್ಪದಮಂ ಕೈಕೊಳ್ವೆಂ (ಕಾದಂಉ. ೬೮೭); ಮಾಱುಡೆ ಗಾಣದಂತಿರಟ್ಟುಂಬರಿ ಗೊಂಡು ತೇದವುದು ಬೇಟಮಿದೆನ್ನಯ ಪಾಪಮಲ್ಲದೇ (ಲೀಲಾವ. ೨-೦೧೬) ; ಮುತ್ಸದ್ದಿಯು ತಂದೆ ತಾತಂದಿರ ಕಾಲದಿಂದಲೂ ಅರಮನೆಯ ಸೇವೆಯಲ್ಲಿ ಶರೀರವನ್ನು ತೇದಿದ್ದ ರಾಜಭಕ್ತನಾಗಿದ್ದನು (ಶ್ರೀರಾಯ. ೦೨೮). ೪. ಹಿಮ್ಮೆಟ್ಟು ; ಮರಳಿಹೋಗು : "ತೇ-ಅಪಸರಣೇ (ಹೊರಟುಹೋಗು)"(ಶಮಧಾ). **ತೆಯ್** : ೧. ಮಲಯರುಹಕ್ಕುದ್ಧತಿಯಿಂ ಸಾಪಮನಿತ್ತೊಡೆ ಚತುರಾಸ್ಯಂ ತೆಯ್ದು ಬೊಟ್ಟನಿಡುವರ್ಪಲರುಂ (ಧರ್ಮಾಮ್ಯ. ೩-೧೭೦). ೩. ತನುವಂ ತೆಯ್ದಪ್ಪಳಕ್ಕಂ ಬ್ರತದೊಳ್ (ಕಾದಂಉ. ೭೯). **ತೇಯ್** : ೧. ಶ್ರೀಗಂಧವಂ ತೇ[ಪಾಠಾಂ. ತ]ಯ್ದಂಗದಲಿ ಪೂಸಿ (ಬಸಪು. ೪೩-೩೦). ೩. ಕೊಳೆಯ ತೊಳೆಯಬೇಹುದಿಲ್ಲಿ ಒಡಲ ತೇಯಬೇಹುದಿಲ್ಲಿ (ವಿಸೀಗೀ. ೮೨-೨) ; ಅಖಂಡ ಆಯುಷ್ಯವನ್ನು ಅವಳ ಸೇವೆಯಲ್ಲಿ ತೇಯ್ದ ರಘು (ದೀಪಹ. II, ೪೧೬). **ತೇಯು** : ೧. ಕಾಲು ಗಳಿಂದ ತೇಯುವುದೂ (ಕೃಪಾಕ. ೦೦೯). ೩. ದಿನದ ಇಪ್ಪತ್ನಾಲ್ಕು ತಾಸು ಪಿರಿಪಿರಿ ತಿರುಗಿ ದೇಶದುದ್ಧಾರಕ್ಕೆ ದೇಹವನು ತೇಯಬಲ್ಲ (ನಲಮು. ೨೮-೨೬).

[ದೇ.॥ ತಮಿ. ತೇಯ್ ; ಮಲ. ತೆಲು. ತೇಯು ; ಕೊಡ. ತೆಯ್]

ತೇ$_2$ 'ಟೀ' ನೋ.

ತೇಂಕಾಡಿಸು, ತೇಕಾಡಿಸು (ಕ್ರಿ). ತೇಲುವಂತೆ ಮಾಡು ; ತೇಲಾಡಿಸು ; ತೇಲಿಸು : ಅಂಗಪ್ರಭೆಯೊಳಖಿಲಕಾಂತಾರಮಂ ಕೂಡೆ ತೇಂಕಾಡಿಸುತಂ . . . ಬಂದನೊರ್ವಂ ಕುಮಾರಂ (ಕಾದಂಉ. ೫೪೭); ಕೂಡೆ ಮೂಜಗವಂ ಮುಸುಕಿ ತೇಂಕಾಡಿಸುವ ಗಂಗೆಯನುಮೇಶನು ಸೂಡಿದನಲಾ ಮಲ್ಲಿಕಾ ದಳದಂತೆ ಮೌಳಿಯಲಿ (ಬಸಪು. ೫೪-೫೫) ; ನೀಱಿಯರ ಮಂಕು ಮಾಡುವ ಮತಿದೋಱುವ ಸುಖದಲ್ಲಿ ತೇಂಕಾಡಿಸುವನೇನನೆಂಬೆ (ಭರಚ. ೬-೮೫). **ತೇಕಾಡಿಸು** : ಪಗೆದಡೆಯ ನೆತ್ತರ ಪೊನಲಿನಲಿ ತೇಕಾಡಿಸಲು (ಸಾಳ್ವಭಾ. ೨೬-೩೯). [ತೇಂಕಾಡು + – ಇಸು$_3$]

ತೇಂಕಾಡು, ತೆಕ್ಕಾಡು, ತೇಕಾಡು, ತೇಗಾಡು (ಕ್ರಿ). ೧. ತೇಲು ; ತೇಲಾಡು : ಇಳೆ ಜಲದ ಮೇಲೆ ತೇಂಕಾಡುತ್ತಿದೆಂಬಂತೆ ಬಂದ ಮಳೆಯೊಳು ಕವಿದ ಕತ್ತಲೆ ಕರಂ ಹೆಚ್ಚೆ (ಇಳೆರ. ದೇ. ೫೧-೨೬); ಜನನಾಥಂ ಜನಿತಾನುರಾಗರಸದೊಳ್ ತೇಂಕಾಡುತಿರ್ದಾಗಳ್ (ಕುಸುಮಾ. ೮-೩೩) ; ವಲ್ಮೀಕನಗರಿ ಬಲ್ದೆರೆ ತೆಪ್ಪವಾಗೆ ತೇಂಕಾಡಿ ತೊಳತೊಳಗಿ ಬೆಳಗುತ್ತ ಬರಬರಲು (ಸೌಂದಪು. ೫-೮೬) ; ನಿದ್ದೆ ಎಚ್ಚರಗಳಲಿ ಒಂದೆ ಬಾಳಿನ ಬಿಂಬ ತೇಂಕಾಡುವದು (ಉಯ್ಯಾಲೆ. ೩-೧೨). ೨. ತುಂಬಿ ತುಳುಕು : ಅಮೃತಾ ಸಾರದಿನಾ ಪ್ರದೇಶಮನಿತುಂ ತೇಂಕಾಡಲ್ (ಕಾದಂಉ. ೬೦೨). ೩. ಮುಳುಗಿ ಏಳು : ಅಖಿಳ ಕಾಮುಕನಿಕಾಯಮವಿರಳಸುಖಾವಗಾಹದೊಳ್ ನಾಡೆ ತೇಂಕಾಡಿ ತಣಿವಿನಂ (ಪರ್ಧಪು. ೬-೫೨ ವ) ; ಕೊಳೆಯೊಳ್ ತೇಂಕಾಡಿ ವಿಣ್ಮೂತ್ರದೊಳ್ ಪುದಿದೇತಕ್ಕೆ ಬಟಿಕ್ಕೆ ಬೇಟ್ವರದಱಿಂ ಮರ್ತ್ಯಂ ಜುಗುಪ್ಸಾಕರಂ (ಅನಂಪು. ೩-೬೫); ಸುರತಾಂಭೋನಿಧಿಯೊಳ ಗೊಗುಮಿಗೆ ತೇಂಕಾಡಿದನರಸಂ ಮದನಾಗ್ನಿ ತವಿಪ ತೆಱದಿ (ಜಯಕಾ. ೮-೫೪). **ತೆಕ್ಕಾಡು** : ೩. ನೀರಿದೆ ಕೊಳ್ಳಿಯೊಂದು ಕಮಂಡಲವ ಮರುಗೆ ತೊಱೆವುದುದದು ಬಾಲವೃದ್ಧರು ಮೊಱೆಯಿಡುತ ತೆಕ್ಕಾ[ಪಾಠಾಂ. ತೇಕಾ]ಡುತಿರ್ದರು (ಸಾಳ್ವಭಾ. ೩೦-೩೬). **ತೇಕಾಡು** : ೧. ವಹಣಿಯ ತೆರೆಯೊಳ್ ತೇ[ಪಾಠಾಂ. ತೇಂ]ಕಾಡುತ್ತಿರೆ (ಭೃಂಗೀರ. ಹ. ೪೬೬-೧೫) ; ಸಟೆಯ ಸಾಗರದೊಳಗೆ ತೇಕಾಡುತಿರ್ದರು ಕೆಲವರು (ಗಣಭಾ. ೧೬೮-೨) ; ತಾಕಾಡುವಾಗ ಇತ್ತ ತೇಕಾಡುತಾವ ಚಿತ್ತ (ಗಂಗಾಪ. ೧೯-೪). ೩. ಭಯ ಜಲಧಿಯಲಿ ತೇಕಾಡಿದರು ಕೌರವಜನಪರು (ಕುಪ್ಯಾಭೀ. ೧೦-೧೩). **ತೇಗಾಡು**: ೧. ಗಣಿಕಾಜನಗಳು ಭೋಗಸಾಗರಮಧ್ಯದೊಳಗೆ ತೇಗಾಡುತ ವಿಟಜನಗಳ ಚಿತ್ತಮನಾಕರ್ಷಣಮಾಡುತಿಹರು (ಅಂಜಚ. ೩-೩೦೯).

[ತೇಂಕು$_1$ + ಆಡು$_1$]

ತೇಂಕಿಸು$_1$ (ಕ್ರಿ). ತೇಲಾಡಿಸು; ತೂಗಾಡಿಸು: ನುಣ್ಪುವಡೆದ ನಳಿತೋಳ್ಗಳೆಂಬ ಸೆಳೆಗೊಂಬುಗಳ್ ಕಾವನೆಂಬ ಗಾಡುಗೋಗಿಲೆಯಂ ತೇಂಕಿಸೆಯುಂ (ಕಬ್ಬಿಕಾ. ೧೨೩) ; ಲಾವಣ್ಯರಸದ ಪೊನಲ್ ಜನಲೋಚನ ಪಾಠೀನಮಂ ತೇಂಕಿಸೆಯುಂ (ಪುಷ್ಪಪು. ೫-೩೪ ವ). [ತೇಂಕು$_1$ + – ಇಸು$_3$]

ತೇಂಕಿಸು$_2$ (ಕ್ರಿ). ಬಳಲಿಸು ; ದಣಿಸು ; ಆಯಾಸಗೊಳಿಸು : ವಜ್ರಖಾನನಾದಂ ತೇಂಕಿಸಿ ರಾವುತಖಾನನನಂಕದೆ ಗೆಲ್ದೆಸೆವ ಮುನಿಲಖಾನನ ಮುಱಿದಂ (ಕಳನ್ನ. ೨-೧೨). [ತೇಂಕು$_2$ (< ತೇಗು$_1$) + – ಇಸು$_3$]

ತೇಂಕು$_1$, ತೇಂಗು$_1$, ತೇಕು$_1$(ಕ್ರಿ). ೧. ತೇಲು : "ತೇಂಕಿಂದು ತೇಲ್ವುದು" (ಕಶಸಾ. ೩೦-೬೩೫) ; ಜಿನಸವನಾಂಬುವಿನೊಳ್ ಭೋಂಕೆನೆ ಚಂದ್ರಂ ತೇಂಕಿ (ಆದಿಪು. ೭-೯೯) ; ಆಚ್ಚುದಿಲ್ಲೆಳೆ ತೇಂಕಿರ್ದುದು ಭಾರದಿಂ ಬಡಗೆನಲ್ ಪೆಂಪಾರ್ಗಗಸ್ತ್ಯಂಬರಂ (ಪಂಪಭಾ. ೪-೨೦) ; ಪೂಗೊಳಂಗಳೊಳ್ತೇಂಕಿ ಪಾಱುವ ಪಕ್ಕಿಗಳ್ (ಕಾದಂಉ. ೫೨೬) ; ನೆತ್ತರನೆ ಕಾಱಿ ಕುರುಪತಿ ನೆತ್ತರ ಕಡಲೊಳಗೆ ತೇಂಕಿ ತೆರೆಮುಟುಗಿರ್ದಂ (ಗದಾಯು. ೯-೧೭) ; ತೆರೆಯಂತೆ ನೂಂಕದೆ ಬೆಂಡಿನಂತೆ ತೇಂಕದೆ . . . ಶುಭಧ್ಯಾನಾರೂಢನಾಗಿರ್ಪುದುಂ (ಧರ್ಮಾಮ್ಯ. ೬-೧೦೫) ; ತೀವಿದ ತಿಂಗಳ ಬೆಳಗಿನೊಳಗ ತೇಂಕುವ ರಾಕಾಶಶಾಂಕನಂತೆ ಶಾಂತನುಂ ನಿರ್ವಿಕಾರನುಂ ನಿರೀಹಿತನುಂ ನಿರ್ಮಲನುಮಾಗಿ (ಅನಂಪು. ೬-೨೨ ವ) ; ಬೆಳ್ದಿಂಗಳ ಬೆಳ್ಳದೊಳಗೆ ಬಿನದದಿ ತೇಂಕುವ ಕುಸುಮಾಯುಧನೊ . . . ಎನಲಂಗನೆಯರ ಕಣ್ಬೆಳಗಿನ ಕಾಳ್ಪೂರದೊಳಾ ವಿಭು ನಡೆದಂ (ಜಯಕಾ. ೧೦-೬೨ ವ). ೨. ತೇಲಿದಂತಾಗು ; ತಲೆ ಸುತ್ತು ; ಬವಳಿ ಬರು : ಅರಸಂ ನಿಟಲದ ಗಾಯಕ್ಕೆ ತೇಂಕಿ ಮೈಮಱೆದಂ (ವಶಕು. ೨-೩೦). ೩. ಪರವಶತೆಗೆ ಒಳಗಾಗು ; ಮೈಮರೆ ; ಪರವಶಗೊಳ್ಳು : ಸೂಡಿದ ಪಾರಿಜಾತ ದಲರ್ಗಂಪಿಂ ತೇಂಕಿ ವೈಮಾನಿಕಂ (ಅನಂಪು. ೪-೭೦). ೪. ತುಂಬಿ ತುಳುಕು: ತೆಂಕಣದೆಸೆಯೊಳ್ ಮೆಱೆಗುಂ ಸಂಕರ್ಷಣರಾಜಧಾನಿ ನಿರರುತಿದೆಸೆಯೊಳ್ ತೇಂಕುವುದವನರಸಿಯ ತನಿಬಿಂಕದ ಸರಸತಿಯ ರಾಣಿವಾಸಂ ಲೇಸಂ (ಚಕವಿ. ೫-೧೨೯). **ತೇಂಗು$_1$** : ೧. ಮೃಗೋದ್ಭವಕಲ್ಕಂ ಘನಸಾರ ರೇಣುಪಟಲಂ ಶ್ರೀಖಂಡಜಂ ಬಾಳೆಯೆಂಬಿವಱಿಂ ತೇಂಗೆ ತರಂಗಮಾಲೆ ರತಿಕಂದರ್ಪಂಗೆ ತೀವಿಟ್ಟ ಬಣ್ಣವುರಂ ತಾನೆನೆ ಕಣ್ಗೆ ಮಾಡಿದುದು ಕಾಸಾರಂ (ಅನಂಪು. ೭-೫೨). **ತೇಕು$_1$** : ೧. ಸಂತೋಷಾರ್ಣವದೊಳು ಮೂಡಿ ಮುಳುಗಿ ತೇಕುತಿರ್ದಾ (ಗೊಮ್ಮಚ. ೬-೫೧). [ದೇ.॥ ತಮಿ. ತೇಙ್ಕು]

ತೇಂಕು$_2$ 'ತೇಗು$_1$' ನೋ.

ತೇಂಕು$_3$ 'ತೇಗು$_3$' ನೋ.

ತೇಂಕುದಾಣ (ನಾ). ನಾಡಿ ಮಿಡಿಯುವ ಸ್ಥಳ, ಉಸಿರಾಡುವ ಜಾಗ ಮುಂತಾದುವು : ತೇಂಕುದಾಣಂಗಳನಂಟಂಟಲ್ಲಿಯುಂ ಕಾಣದೆ ಹರಣ ಮನತ್ಯುಷ್ಣದಿಂ ಸುಯ್ಯೆ (ಲೀಲಾವ. ೯-೨೧) ; ಜೀವವಿಕ್ಕೆಂಬಾಸೆಯಿಂ ತೇಂಕುದಾಣಂಗಳಂ ಬಗೆದಳು (ಹಚಕಾ. ೧೨-೨೫) ; ಎಳದು ಬಾಯ್ ನಸುನಗುತ್ತಿದೆ ತೇಂಕುದಾಣಂಗಳಲುಗುವಂಗಂಗಳತಿ ಬಿಸಿವೆತ್ತಿವೆ (ಸಿದ್ಧಲಾ. ೨-೫). [ತೇಂಕು$_2$ (<ತೇಗು$_1$) + ತಾಣ]

ತೇಂಕುಮ್ಮುಗಿಲ್ (ನಾ). ತೇಲುವ ಮೋಡ,–ಮುಗಿಲು : ತೇಂಕುಮ್ಮುಗಿಲ್ಗೆ ಕಾಲ್ಮೊಳೆತಂತೆ ಕನಸಿನೊಳ್ ಚರಯಿಪಂಬೊಲ್ ಪೋಗುತಿರ್ದೆನ್ (ಸಂಸಪ. ೩೨-೧೮೭). [ತೇಂಕು$_1$ + ಮುಗಿಲ್]

ತೇಂಗಾಯ್ 'ತೆಂಗಾಯ್' ನೋ.

ತೇಂಗಾಯ್ಮೊಲೆ 'ತೆಂಗಾಯ್ಮೊಲೆ' ನೋ.

ತೇಂಗು$_1$ 'ತೇಂಕು$_1$' ನೋ.

ತೇಂಗು$_2$, ತೆಂಗು$_1$, ತೇಗು$_2$ (ಕ್ರಿ). ೧. ನೆಲಸು : ಜವದಿಂದಾಗಸದೊಳ್ ಪಾಱುವ ಪಕ್ಕಿಯುಮಂತುಗಾಣಲಣಮಾಱದೆ ತೇಂಗುವುದು ಪತಾಕಾಗ್ರದೊಳ್ (ಚಂದ್ರಪು. ೧೦-೨೫). **ತೆಂಗು$_1$** : ೨. (ಹಕ್ಕಿಯಂತೆ) ಎರಗು : (ಕಿ). 'ತೆಂಗುಹ' ಪರಾ. **ತೇಗು$_2$** : ೧. ಸಕಳಾವನಿ ರಾಗಿಸಿ ಬೀಗೆ ಕೀರ್ತಿ ದಿಕ್ತತಿಗಳ ಮೇಗೆ ತೇಗೆ ತಳೆದಂ ಭುವನಪ್ರಭು ರಾಜ್ಯಲಕ್ಷ್ಮಿಯಂ (ಪುಷ್ಪಪು. ೧೩-೨). [?]

ತೇಂಗು$_3$ (ನಾ). ಹೋಲಿಕೆ ; ಎಣೆ ; ಸಾದೃಶ್ಯ : "ಸದೃಶಾರ್ಥತೆಗೆ ತೇಂ[ಪಾಠಾಂ. ತೆಂ]ಗು" (ಕಬ್ಬಿಕ್ಕೆ. ೨೦). 'ಪಾಂಗು' ಪರಾ. [?]

ತೇಂಗುಹ, ತೆಂಗುಹ (ನಾ). ೧. ಹಕ್ಕಿಯು ಎರಗುವಿಕೆ: "ತೇಂಗುಹಮೆಂದು ಪಕ್ಕಿಯೆಱಗುಹಂ" (ಕಶಸಾ. ೫೦-೧೦೪). ೨. ಹಕ್ಕಿಯಂತೆ ಎರಗುವಿಕೆ ; ರಾಯಗದ್ದುಗೆಯ ಸೆಜ್ಜೆಗೆ ಮುಟ್ಟಲು ತೇಂಗುಹದ ಹವಣು ಒಂದೆರಡು ಅಂಗುಲಗಳಷ್ಟು ಸಾಲದೆ . . . ಬಿದ್ದು (ಬೆಟ್ಟಅ. ೧೦೯-೧೬). **ತೆಂಗುಹ**: ೧. "ತೆಂಗುಹಂ–ಹಕ್ಕಿಯೆಱಗುಹಂ" (ಶಮದ. ಪರಿ. ೨); "ತೆಂ[ಪಾಠಾಂ. ತೇಂ]ಗುಹವೆಂಬ ನುಡಿ ಹಕ್ಕಿಯೆಱಗುವುದಕಕ್ಕು" (ಕಬ್ಬಿಕ್ಕೆ. ೮೫) ; "ತೆಂಗುಹ ಮೆನಲ್ ಪಕ್ಕಿಯೆಱಗುವುದಕಪ್ಪುದು" (ಶಬ್ದಮಂ. ೩೧).

[ತೇಂಗು$_2$ + – ಹ$_2$]

ತೇಂಗೊಳಲು (ನಾ). ಅಕ್ಕಿಹಿಟ್ಟು ಮತ್ತು ಉದ್ದಿನ ಹಿಟ್ಟು ಮುಂತಾದುವುಗಳನ್ನು ಕೂಡಿಸಿ, ಎಣ್ಣೆಯಲ್ಲಿ ಕರಿದು ಮಾಡುವ ಒಂದು ಬಗೆಯ ತಿಂಡಿ : ಕೈಗಾವಲು ತಿಂಡಿ ಇರಲೆಂದು ಮಾಡಿಕೊಟ್ಟಿದ್ದ ತೇಂಗೊಳಲು, ಚಕ್ಕುಲಿ ಮತ್ತು ಬೇಸಿನ್‌ಲಾಡುಗಳು ಅದರಲ್ಲಿದ್ದುವು (ರಂಗಕ. ೬೧) ; ಎದುರಿಗೆ ತಟ್ಟೆಯಲ್ಲಿ ಗರಿಗರಿಯ ಚಕ್ಕುಲಿ, ಖಾರವಾದ ತೇಂಗೊಳಲು . . . ಹೊಳೆಯುತ್ತಿದ್ದುವು (ವೈದ್ಯವಿ. ೧೦೯) ; ತೇಂಗೊಳಲನ್ನು ಮುಷ್ಟಿಯಲ್ಲಿ ಮುರಿಮುರಿದು ಮುಕ್ಕಿದ ಹಾಗೆ (ರಾಮರಾ. ೬೮) ; ರಾಮಾನುಜರು ಕಂಡ ವೈಕುಂಠ ಕನಸು ಆಹಾ ನಮಗಾಗುತಿದೆ ತೇಂಗೊಳಲ ನನಸು (ಗಡೇಶ. ೭೦-೨೬).

[ದೇ.॥ ತಮಿ. ತೇಙ್ಕುಟಲ್ ; ತೆಲು. ತೇನೆತೊಲ, ತೇನೆತೊನ]

ತೇಕರೆ (ನಾ). ಕಮರುತೇಗು ; ಅಜೀರ್ಣದ ತೇಗು : ಲೋಕರಕ್ಷಕ ಮಂತ್ರಕಾರಣ ನಾಳಜಾಧಿಪ ಮುಖ್ಯಸುರರಿಗೆ ತೇಕರೆಯ ಮಾಡಿದರು ನುಂಗುವ ಮೃತ್ಯು ಕೇಳೆನಲು (ಸಂಭಪ. ೮-೮೪). 'ಕಟ್ಟಱೆ' ಪರಾ.

[ತೇಕು$_3$ (<ತೇಗು$_3$) + ಅರೆ$_5$]

ತೇಕಲ್ (ನಾ). ಒಂದು ಊರಿನ ಹೆಸರು ; P ಮಾಲೂರು ತಾಲ್ಲೂಕಿನ ಈಗಿನ ಟೇಕಲ್ : ಅವಱ ಮೇಗೆ ಬಾಣರಾಅಸರ್ ತೇಕಲ್ಲ ಟೆ × × × ದೆಯೊನ್ ಅಗ್ಗಳಾ ಅರಸರಾ ಬೆಸಸಿದೊಡೆ (ಎಕ. X (3), ಬಾಗೇಪ. ೯೬-೬ ; ಸು. 820) ; ನಾಯಕತನಕ್ಕೆ ಪಾಲಿಸಿದ ತೇಕಲಸೀಮೆವೊಳಗಣ ಉಳ್ಳೆಯರ ಹಳ್ಳಿ (ಎಕ. X, ಮಾಲೂರು. ೩೫-೪ ; 1525). [?]

ತೇಕಾಡಿಸು 'ತೇಂಕಾಡಿಸು' ನೋ.

ತೇಕಾಡು 'ತೇಂಕಾಡು' ನೋ.

ತೇಕು$_1$ 'ತೇಂಕು$_1$' ನೋ.

ತೇಕು$_2$ 'ತೇಗು$_1$' ನೋ.

ತೇಕು$_3$ 'ತೇಗು$_3$' ನೋ.

ತೇಕೆ (ನಾ). ಅಳತೆಯಲ್ಲಿ ಧಾನ್ಯವನ್ನು ತಲೆಸವರಿ ಅಳೆಯುವಿಕೆ.

[<ತೇಂಕು$_1$]

ತೇಗ$_1$, 'ತೇಗು$_4$' ನೋ.

ತೇಗ$_2$, ತೇಹ (ನಾ). ಒಂದು ಬಗೆಯ ಬಾಗಿರುವ ಕತ್ತಿ : ಕತ್ತಿ, ಕಠಾರಿ, ಕೈಚೂರಿ, ಪತಾತ, ಪಿಸ್ತೂಲ, ಕರುಳಿ, ತೇಗ (ಪಾಶ್ಚಾವಿ. ೫೧೩). **ತೇಹ** : ಸುರಾಯು, ಬಾಕು, ಕಠಾರಿ, ತೆ[ತೇ]ಹ ಮೊದಲಾದ ಆಯುಧಗಳನ್ನು ತಂದು . . . ಆತನ ಸಮಯವನ್ನು ನೋಡುತ್ತಿದ್ದರು (ಕೃವಾಸ. ೧೦೮).

[←ಪಾರ. ಅರ. ಹಿಂ. ತೇಗ್ ; ಮರಾ. ತೇಗಾ, ತೇಘಾ]

ತೇಗಟ್ಟೂರ್ (ನಾ). ಒಂದು ಊರಿನ ಹೆಸರು : ತೇಗಟ್ಟೂರ್ವಿಷಯೇ ಬಾರದೂರ್ನ್ನಾಮಗ್ರಾಮ (ಮೈಅರಿ. ೧೯೪೪, ೧೫-೩೩ ; 725).

[? + ಊರ್]

ತೇಗಳಿ 'ತೇವಳಿ' ನೋ.

ತೇಗಾಡು 'ತೇಂಕಾಡು' ನೋ.

ತೇಗು$_1$, ಡೇಗು$_1$, ತೆಕ್ಕು$_1$, ತೇಂಕು$_2$, ತೇಕು$_2$ (ಕ್ರಿ). ೧. (ತೃಪ್ತಿಯಿಂದ) ಢರಕೆಹೊಡೆ ; ಉದಾನವಾಯು ಬಿಡು : " ತೇಗು– ಉದಾನವಾಯೌ, ವೃಕ್ಷ ಭೇದೇ ಚ " (ಶಮಧಾ); ಕೆನ್ನೆತ್ತರೊಳೊರ್ವರೊರ್ವರಂ ತಳ್ಳಿಱಿದುಂ ಬೊಬ್ಬಿಱಿದುಂ ತ್ರಿಪುಂಡ್ರಮಿಟ್ಟುಂ ಕೂಕಿಱಿದುಂ ತೇಗಿಯುಂ . . . ಆಡುವಾಗಳ್ (ಪಂಪಭಾ. ೧೨-೧೫೮ ವ) ; ಗಱ್ಱಿಂದೋವದೆ ತೇಗಿಯುಂ ಮಿಡಿಗಳಂ ಕುಂಟಾಗೆ ಕೊಯ್ದುಂ ಖಳರ್ (ಧರ್ಮಾಮೃ. ೬-೧೮೯) ; ಭಕ್ತಿಯಿಂದವೆ ತಣಿದು ತೇಗಿ ತೂಗಾಡುತಂ (ಕಣ್ಣರ. ದೇ. ೧೩೦-೨೨) ; ತೇಗಿದನು ಡಱ್ಱನೆ . . . ಖಳನಧಿಕತೃಪ್ತಿಯಲಿ (ತೊರರಾ. ೬-೨೬-೫೯) ; ಉಂಡವ ತೇಗುವಂತಾತ್ಮನ ಭಾವಿಸಿ ಕಂಡು ಕಂಡವ ಪೇಳಬೇಕು (ಭರಣ. ೨-೯೬) ; ಕುರುಡ ಕುಂಟ ಹೆಳವರಲ್ಲಿ ಮರುಕಗೊಂಡು ಬೋನವಿಕ್ಕು ಹರನು ಮೆಚ್ಚಿ ತೇಗಿ ತಾನು ಹರಸಿ ಪೊರೆವನು (ಕವಿಸೋ. ೪೪-೩). ೨. ಏಗು ; ಕಷ್ಟಪಡು ; ಆಯಾಸಪಡು : ಬೆವರುತಂ ಬಿಕ್ಕುತಂ ತೇಗುತಂ ತೂಗುತಂ ಕ್ರಮವಳಿದು ಸುಳಿದು ಸುಖಿಯಾಗುತಂ (ಬಸರ. ೩-೧೦೬). ೩. (ಆಲಂ) ತಿಂದು ಮುಗಿಸು : ಕದನದಲಿ ದುಶ್ಶಾಸನನ ತೇಗಿದನಲಾ ಬಕವೈರಿ (ಕುವ್ಯಾಗ. ೩-೨೯). **ಡೇಗು$_1$** : ೧. ಬಿಠಿವಂತಾಯಿತುದರವೆಂದಂಜಿ ಬಿಟ್ಟನೋ ಎಂಬವೊಲ್ ಡೇಗಿ ಭೋಜನವ ಮುಗಿಸಿ (ಮಲ್ಲಿಡ. ೫-೧೫) ; ಜನನಿ ತುಷ್ಟನಾದೆನು ಸಾಕು . . . ಎಂದಾತನುರೆ ಡೇಗಲು (ಮಲ್ಲಿಡ. ೮-೪೪). **ತೆಕ್ಕು$_1$** : ೨. ತೆಕ್ಕುವಳ್ಳೆಯ ಬಿಟ್ಟ ಮಂಡೆಯ ಉಕ್ಕಿ ನೊರೆಗಟ್ಟಿಳಿವ ರಕ್ತದ ಲಕ್ಕೆ ಬಾಯೆತ್ತಣದು (ಕೌಶಿರಾ. ೫-೨೦) ; ತೆಕ್ಕುತಿಹ ಕಿಬ್ಬದಿಯ ಬಸುಱಿಂಗೊಲೆವ . . . ಚಿಂತಾಹೃದಯ ನೋಡುತ ಮಱೆಯ ಹೊಕ್ಕನು ದೈತ್ಯ ದಲಪತಿಯ (ಕೌಶಿರಾ. ೩೯-೨೮). **ತೇಂಕು$_2$** : ೧. ಆರೋಗಣೆಯನಾ ಹೊಟ್ಟೆಯೊಡೆವ ಮರ್ಯಾದೆಯೊಳಗುಂಡು ತೇಂಕು [ಪಾಕಾಂ. ಗು]ತ್ತಿರ್ದರು (ಸಮ್ಯಕೌ. ೭-೨೬). ೨. ತಪೋವನಮಂ ಶಶಿಮೌಳಿ ಪೊಕ್ಕು ಮೆಲ್ಲನೆ ಬರುತುಂ ಪಥಶ್ರಮವನಾಂತು ಬಳಲ್ದವೊಲಾಗಿ ತೇಂಕುತುಂ (ಗಿರಿಕ. ೯-೮೯) ; ಹಣೆಯಿಂದ ಬೆಮರುಗೆ ನೆತ್ತಿ ಹೊತ್ತಿ ತೇಂಕುತ್ತ ಹರಿತಪ್ಪಾಗಳ್ (ಹಡಕಾ. ೧೨-೭) ; ಕೆಮ್ಮುಗುಂ ತೇಂಕುಗುಂ (ಬಾಲಚಿ. ೧೨೭-೪). **ತೇಕು$_2$** : ೨. ಮೊಗ ಬೆಮರೆ ತೇಕುತಂ ಪರಿತಂದು (ಬಸರ. ೯-೯೬) ; ತೇಕಿ ತಲೆಕೆಳಕಾದನೀ ಯವಿವೇಕಸಾಗರನೆಲೆ ನೃಪತಿ ಜಗದೇಕವೀರನು ಕರ್ಣ ತಾನಿರೆ ಸಂಧಿಯೇಕೆಂದ (ಕುವ್ಯಾಉ. ೫-೧೩) ; ಮುನಿಮನಂಗಳು ತೇಕಿ ತಲೆಕೆಳಗಾದುವೈ ಕಾಣಿಸದೆ ನಿಜಪದವ (ನಿಭಾಗ. ೩-೭-೨೨) ; ಕೌರವಂ ನೋಡಿ ಹಸುಮಕ್ಕಳಂ ಬರಿದೆ ನೀ ಕೊಂದೆಯಾಯೆಂದು ಪ್ರಾಣೋತ್ಕಟಂಗಳಿಂ ತೇಕುತಿರೆ (ತುರಂಗ. ೭೬-೫೭) ; ಅದಾಗ ಏದುತ್ತ ತೇಕುತ್ತ ಅಲ್ಲಿ ಬಂದು ತಲುಪಿದ ಸುರೇಶ (ಆಬೋಲೀ. ೯೬) ; ಬಾಗಿಲು ಕಾಯುವವನು ತೇಕುತ್ತಾ ಬಂದ (ಜಮಿನ್ಯಾ. ೯).

ತೇಗಿ ತೊನೆ = ತೃಪ್ತಿಪಡು : ಗಣಪತಿಯು ಶಿವನ ಮುಂದೆ ಜಗತ್ತಿನಲ್ಲಿ ಎಲ್ಲಿ ನೋಡಿದರೂ ಸುಖವೇ ಉಂಟೆಂದೂ ಆ ಸುಖವನ್ನುಂಡು ತೇಗಿ ತೊನೆದು ಉಬ್ಬಿ ಬಂದನೆಂದೂ ಮುಂಚಿತವಾಗಿ ಹೇಳಿರಲು (ಕನ್ನಡಾ. ೧೫೬). [ದೇ.॥ ತಮಿ. ಮಲ. ತೇಕ್ಕು ; ತುಳು. ತೇಗು, ತೇಂಕ್, ಸೇಂಕ್; ತೆಲು. ತೇನು, ತೇಪು, ತ್ರೇಪು]

ತೇಗು$_2$ 'ತೇಂಗು$_3$' ನೋ.

ತೇಗು$_3$, ಡೇಗು$_2$, ತೇಂಕು$_3$, ತೇಕು$_3$ (ನಾ). ೧. ತೇಗುವಿಕೆ ; ಢರಕೆ : ಆಗುಳಿಕೆ ತೇಗು ಸೀನಿದನಾಗಿಸುಗುಂ (ಕಲ್ಯಾಕಾ. ೨-೧೭); ಮಹೇಶ್ವರಾಲಯದಂತೆ ಗೊರವು . . . ತಣಿಯುಂಡನಂತೆ ತೇಗು (ಬಂಹರಿ. ೨-೩೮ ವ) ; ಎರಡಳ್ಳೆ ಪಿಟ್ಗೆ ತೇಗುಬ್ಬರಿಸಲ್ ಕುಳಿರ್ವಮಳಜಲಮನೀಂಟಿದೆಂ (ದಶಕು. ೪-೩೪) ; ವರಸಮಾಧಾನದಲಿ ಕೈದೊಳೆದುರವಣಿಪ ತೇಗಿನ ತರಂಗದ ಪರಬಲಾಂತಕನೆದ್ದು ನಿಂದನು (ಕುವ್ಯಾಅ. ೧೦-೩೪). **ಡೇಗು$_2$** : ೧. 'ಅಬ್' ಎಂದು ಡೇಗುಹಾಕುತ್ತಾ ಮಧ್ಯಮದ ವಯಸ್ಸು ಸಮೀಪಿಸಿದ ಆ ಪಟೇಲರು . . . ಕುಳಿತಿದ್ದರು (ಬರಹಾ. ೬೩). **ತೇಂಕು$_3$** : ೨. ಏದುಸಿರು ; ಮೇಲುಸಿರು : ಪಿಪ್ಪಲಿಯುಂ ತ್ರಿಫಳೆಯುಮನರೆದು . . . ತಿನೆ ನೆಗಡಿ ತೇಂಕರೆತಲೆಬೇನೆ ಜ್ವರಂಗಳೆಂಬಿವಿನಿತುಂ ಕಿಡುಗುಂ (ಲೋಕೋಪ. ೯-೯೨). **ತೇಕು$_3$** : ೨. ಬಾಯಂ ಬಿಡುತುಂ ತೇಕುಣ್ಮೆ ಜಿಹ್ವಾಲತೆಯೆಟಲೆ ಜವಂಗುಂದುತುಂ ಬಂದು (ಶಾಂತೀಶ್ವ. ೧೨-೩೬) ; ಓಡಿ ಓಡಿ ಬಂದುದರಿಂದ ಅವನಿಗೆ ತೇಕು ಹೆಚ್ಚಾಗಿತ್ತು (ಬನಸಿ. ೭೬).

[<ತೇಗು$_1$./ತಮಿ. ತೇಕ್ಕು ; ತುಳು. ತೇಗ್, ತೇಂಕೆ]

ತೇಗು$_4$, ಟೇಗು$_1$, ತೇಗ$_1$ (ನಾ). ಒಂದು ಬಗೆಯ ಮರ ; ಸಾಗುವಾನಿ: "ತೇಗಿನ ಮರನದೆ ಸಾಕಂ" (ವಸ್ತು ಕೋ. ೩೫-೦೬) ; "ತೇಗು ೮ಉದಾನ ವಾಯೌ, ವೃಕ್ಷ ಭೇದೇ ಚ" (ಶಮಧಾ) ; "ತೇಗುಮುರಿವೇಪವಕ್ಕು" (ಹುಂಗರಾ. ೩೭-೦೮) ; ಸಿರಿಸಂ ಸೀರೆ ಬೆಳ್ಳವಂಗಮೆಲವಂ ಬಳ್ಳಾಲೆರಂ ಬಿಕ್ಕೆ ತೇಗು (ಕಾವ್ಯಶಾ. ೦೦೪೦ ಕೂರ್ಮಳ) ; ಮೊಗಮುಂ ತೊಳೆವಂತೆ ಬಾಗಿ ಮೂತಱಿಯದಳಂತೆ ಮೂಗಿ ವಿಗಿಲುಂಡವರಂತಿರೆ ತೇಗು ... ಕರೆವಂತೆ ಪಾಲೆ ಶಂಕರಸವಿನಂತೆ ಹೊನ್ನೆಯಳೆಯಂತಿರದಂತಿರಣ್ಯಮೊವ್ವುಗುಂ (ಹುಲ್ಲಿಕಾ. ೩-೦೩೭) ; ತೇಗಾಲದ ನೇಱಿಲ . . . ಹೊನ್ನೆಯ ತರುಗಳ್... ಮೆಱೆಗುಂ (ಹಮ್ಮಿಶ. ೪-೩೯) ; ತೇಗರುಟಾಳ ಚಿಲ್ಲ ನೆಲ್ಲಿಯುಂ ಹೊಂಗೆ ನೇಱಿಲುಂ . . . ಸೂರಮಾರ್ಗವ ತಡೆದಿಹುವು (ಕಂಸವಿ. ೧೮-೩೭) ; ಎಕ್ಕೆಯುಂಬಟೆ ತೇಗು ಮತ್ತಿಯು . . . ಕಿಕ್ಕಿಱಿದು ಬೆಳೆದಿರ್ದುವು (ಪ್ರಹ್ಲಾದ. ೪-೧೧) ; ಭಸಿತಧಾರೆ ಪೊಣ್ಮುವ ರಂಧ್ರಮುಂ ಭೋಂಕನೊಂದು ತೇಗಿನೆಳೆದಳಿರಿಂ ಕಟ್ಟಿ ಬಂಧಿಸುತ (ಕೃಷ್ಣವಿ. ೫೯-೦೩೫ ಪ) ; ತೇಗಿಗಿಂತ ಗಟ್ಟಿಯಿಲ್ಲ ಜೋಗಿಗಿಂತ ಕುಂಬು ಇಲ್ಲ (ಗಾದ). **ಟೇಗು$_1$** : ಚಿನ್ನಾಗಿ ಬಲಿತ ಟೇಗಿನ ಮರ ; ಒಂದಕ್ಕೊಂದು ತಟ್ಟಿದರೆ ಖಣಿಖಣಿಗುಟ್ಟುವಂತಿರುತ್ತದೆ (ಜಾಕದ. ೪ ಪರಿಷತ್ತು). **ತೇಗ$_1$** : ನಿಗುರ್ದ ಹೆತ್ತೇಗದಿಂ ತೇಗದಿಂ ಕಾನನಂ ಕಗ್ಗೆಸೆದುದು (ಡಾಫಡ. ೦೭-೫೪) : ಬಿದಿರುಮೆಳೆ ಮತ್ತು ತೇಗದ ಮರಗಳ ಭೀಕರ ಕಾಡಿನ ಮಧ್ಯೆ ಹತ್ತು ಮನೆ (ಹೊಸಕ್ಷಿ. ೦೨೩) : ತೇಗದ ಮರ, ಸಾಗವಾನಿ (ಹ್ಯುಪಿಗಿ. ೭೩-೦೫೦೫).

[ದೇ.॥ತಮಿ. ಮಲ. ತೇಕ್ಕು ; ತೆಲು. ತೇಕು ; ಟೀಕು ; ಕೊಲಾ. ಟೆಕ್ ; ಪರ್ಜಿ. ಟೇಕ್ ; ಗೊಂಡಿ ; ತೇಕಾ./ಇಂ. Teak]

ತೇಗುರು (ನಾ). ಒಂದು ಊರಿನ ಹೆಸರು : ಯಿದಕ್ಕೆ ಸಾಕ್ಷಿ ಮುಗುಳಿ ಚಣ್ಣಯೂರ ಪಲ್ಮಾಡಿ ಅಮ್ಮಳಿ ಕರಿಯ ಮುಗುಳಿ ಮುಟಿವಳ್ಳಿ ನಲ್ಲೂರು ಮಾಗುಣ್ಡ ತೇಗುರು ಆರಮಣ್ಣಂ ಬಿಟ್ಟ ಮಂಗಳಂ (ಎಕ. VI, ಬಳ್ಳಕು. ೪೨-೨೨ ; 959).

[ಇದು 'ತೇಗೂರು' ಎಂಬುದರ ಅಪಲಿಖಿತವಿರಬಹುದು]

ತೇಜ$_1$ (ನಾ). ೧. ಹೊಳಪು ; ದೀಪ್ತಿ ; ಪ್ರಕಾಶ ; ಕಾಂತಿ : ತೇಜಕ್ಕೆ ನೆಮ್ಮಿಳ್ ಸೆಣಸುವನೀ ಜನಪತಿಯೆಂದು ಕಾಯ್ದ ತೆಱದೆಳ್ದರ್ದಂ ನೀರೇಜ ಸಖಂ (ಲೀಲಾವ. ೬-೪೫) ; ರತಿಪತಿಗೆ ಮೂಲೋಕವಾವರಿಸುವ ರೂಪಂ ಸರಿತ್ಪತಿಗೆ ಗಂಭೀರತೆಯನುಂ ಸ್ವಾಹಾಪತಿಗೆ ತೇಜಮಂ ಕೊಟ್ಟ ಗುರು ಮೂರ್ತಿ (ಹಡಕಾ. ೦-೧) : ಪೃಥ್ವೀಪಾಲರಿದ್ದರು ತರಣಿಕಿರಣವನೇಳಿಸುವ ಮಣಿಭೂಷಣಂಗಳ ಬಹಳ ತೇಜದಲಿ (ತೂಕಕಾ. ೦-೦೪-೬). ೨. ಕದಿರು; ರಶ್ಮಿ ; ಕಿರಣ : ತೇಜಂ ಪ್ರದುವಿಲ್ಲೆನಿಸಿ ವಿರಾಜಿಸೆ ಪರರಾಜಮಂಡಲಂ ತನ್ನಿಂ ನಿಸ್ತೇಜಂಬೆತ್ತಿರೆ ಬೆಳಗಿದನೀ ಜಗಮಂ ಭಾನುವೆಂಬಿನಂ ಭಾನುರಥಂ (ಪಂಡಾಮಾ. ೩-೬೬). ೩. (ಪಂಚಭೂತಗಳಲ್ಲಿ ಒಂದಾದ) ಬೆಂಕಿ ; ಅಗ್ನಿ : ಈ ಅವಸ್ಥೆಗಳಲ್ಲಿರುವ ಬ್ರಹ್ಮನೇ ಪೃಥಿವ್ಯಪ್ತೇಜೋವಾಯ್ವಾಕಾಶವೆನ್ನಲ್ಬಡುವನು (ಹಿಂದಸಾ. ೨೩೩). ೪. ಸೂರ್ಯ ; ರವಿ. ೫. ಹರಿತವಾಗಿರುವಿಕೆ; ತೀಕ್ಷ್ಣತೆ. ೬. ಶಕ್ತಿ; ಸಾಮರ್ಥ್ಯ; ಪರಾಕ್ರಮ; ಪೌರುಷ : "ಪೌರುಷಂ ತೇಜಂ ಪ್ರತಾಪಂ ಪರಾಕ್ರಮಂ ವೀರಕ್ಕೆ ಪೆಸರು" (ಹುಂಗರಾ. ೧೩೦-೧೬) ; ಆರಾನುಂ ತೇಜದವರ್ ವಲ್ಲಿಯೆಂದು ಸುಟ್ಟಿಸಿ ತೋಱಲ್ ಸಲ್ಲದು (ಎಇ. XII, ೨೮೪-೨೩೬ : 1077) ; ಶತ್ರುಸಂತತಿ ತಲೆವಾಗೆ ಶಿಷ್ಟಜನದಾಶಿಡಿ ನಾಟ್ಯಡೆವೋಗೆ ತೇಜಮುದ್ಧತರನೆ ಕೊಂದು ಕೂಗೆ (ಪುಷ್ಪಪು. ೦೩-೨) : ತೇಜ ಇದ್ದವನೇ ಪೂಜ್ಯ (ಗಾದ). ೭. ಹೆಚ್ಚಳ ; ಗೌರವ ; ಮಂಹತ್ವ ; ಘನತೆ : ವಿಶ್ವಾವಿಂತ್ರಮುನಿಸುತೆಯರಂ . . . ಹರಿಶ್ಚಂದ್ರರಾಯಂ ತಂದನೆಂಬೊಂದು ತೇಜಮಂ ಕೊಡಬೇಹುದೆನಗೆ (ಹಡಕಾ. ೦-೩೦) : ಸುಮ್ಮನಾಕೆಗೆ ತೇಜವಿತ್ತು ತಂದಾಳ್ದರೆ ಹೆಮ್ಮಕ್ಕಳೇನ ಮಾಡುವೆವು (ಭರಡ. ೩೭-೦೦೬) ; ಒಡೆಯನ ತೇಜವ ಕೆಡಿಸಿಯಾಡದವನ ತಡೆಯದೆ ಕಾರ್ಯ ಮಾಳ್ಪವನ . . . ನೀಂ ಪೊರೆವೆ (ಶತಸಾಂ. ೪೪-೪೦); ಅನವರತವಗಲದಲೆ ಜನಪತಿಯನೋಲಬಿಸು ಧನಮಕ್ಕು ತೇಜ ಪಿರಿದಕ್ಕು (ಸರ್ವಜ್ಞ. ೭೩೩). ೮. ತನು ; ದೇಹ ; ಶರೀರ. ೯. ವಂಶ ; ಗೃಹ. ೧೦. ಹೊನ್ನು ; ಸಿರಿ ; ಚಿನ್ನ : "ಕಿರಣಂದ್ಯುತಿ ರುಗ್ವೀಧಿತಿ . . . ದೀಪ್ತಿ . . . ಅಂಶು ಭಾ ಭಾನು ರಶ್ಮಿ ಘೃಣವಸು ಗಭಸ್ತಿ ಪಾದಂ ತೇಜಂ" (ವಸ್ತು ಕೋ. ೧೨-೭೫) ; "ತನು ಭವನಾ ನಲಾರ್ಕ ಕಿರಣಂಗಳು ತೇಜಸ ಮಾಹ್ವಯಂ" (ನಾನಾರ. ೫೨). ೧೧. (ಬಹುವ್ರೀಹಿ ಸಮಾಸದಲ್ಲಿ) ಕಾಂತಿಯನ್ನುಳ್ಳವನು ; ತೇಜಸ್ಸಿನಿಂದ ಕೂಡಿದವನು : ಅತುಳತರ ತೇಜಂ ಮಲಪರೊಳ್ಗಂಡಪ್ರಚಂಡನಸಹಾಯಶೂರನೇಕಾಂಗವೀರಂ . . . ಸುಕಸಂಕಥಾವಿನೋದದಿಂ ಪೃಥ್ವೀರಾಜ್ಯಂಗೆಯುತ್ತಮಿರೆ (ಎಕ. VI, ತೀರ್ಥ. ೪೫-೫೦ ; 1196). ೧೨. [ಛಂದ] ಒಂದಂ ಅಕ್ಷರ ಗಣ ; ರಗಣ(–ಲ–): ತೇಜಮರ್ಕನೀಶನಿಂದೋಜೆವೆತ್ತು ಬಂದೊಡಂ ಭೋಜನೆತ್ತೆ ಕೇಳ ನೀನೀ ಜಗದ್ವಿಭೂತಿಯಂ (ಛಂಡೋಂಬು. ೩-೮೫).

ತೇಜಮಾರ್ತಂಡ = ತೇಜಸ್ಸಿನಲ್ಲಿ ಸೂರ್ಯನಂತಿರುವವನು ; ಒಂದಂ ಬಿರುದುಂ : ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾ ಸಾಮನ್ತಂ ತೇಜಮಾರ್ತಣ್ಡಂ (ಸೌಇಇ. XX,೦೯-೩೯ ; 1016).

[ಸಂ. ತೇಜಸ್]

ತೇಜ$_2$, ತೇಜಿ$_2$ (ನಾ). (ವ್ಯಾಪಾರದಲ್ಲಿ) ಬೆಲೆಯೇರಿಕೆ, ಉತ್ಕರ್ಷ : ವ್ಯಾಪಾರಕ್ಕೆ ಬಹಳ ತೇಜ ಬಂದದರಿಂದ ಅವನಿಗೆ ಬಹಳ ಲಾಭವಾಗುತ್ತಿತ್ತು (ಮುಂಬಯಿ. ೫-೩೬೦). **ತೇಜಿ$_2$** : ಹೊರದೇಶದ ವ್ಯಾಪಾರ ಬಹಳ ತೇಜಿಯಲ್ಲಿದೆ (ಹೇಮಕೂ. ೦೫) ; ಎಲ್ಲಾ ಮಾಲುಗಳಿಗೂ ಒಳ್ಳೆಯ ತೇಜಿಯ ಸಮಯ ಬರುತ್ತದೆ (ಜಾರುದಾ. ೦೪೫) ; ಆ ಕಾಲಕ್ಕೆ ವರಗಳ ವ್ಯಾಪಾರವೇ ತೇಜಿಯಲ್ಲಿತ್ತು (ತೊಳಮು. ೦೯೦). 'ಮಂದಿ$_2$' ಪರಾ.

ತೇಜಮಾಡು = ಬೆಲೆಯನ್ನು ಹೆಚ್ಚುಮಾಡು.–ಏರಿಸಂ : ಆ ರೇಶಿಮಿ ವ್ಯಾಪಾರವನು ಬೆಲೆಯು ಹೆಚ್ಚು ಬೆಳಸುತ್ತಾನೆ. ಅಂದರೆ ತೇಜಿ ಮಾಡುತ್ತಾನೆ (ಮುಂಬವ್ಯಾ. ೬೬). [←ಪಾರ. ಹಿಂ. ಮರಾ. ತೇಜೀ]

ತೇಜಂಗಿಡಿಸು (ಕ್ರಿ). ೧. ಕಾಂತಿಹೀನಗೊಳಿಸಂ. ೨. ಪರಾಕ್ರಮವನ್ನು ಕುಗ್ಗಿಸು ; ಶಕ್ತಿಗುಂದಿಸು. ೧, ೨: ಜಾಂಬವನಂ ಪಂಬಗಲಾದಿತ್ಯನಂತೆ ತೇಜಂಗಿಡಿಸಿ ಹನುಮನನನುಮಾನಂ ಮಾಡದೆ ನೆಲಕಿಕ್ಕಿ (ಧರ್ಮಕು. ೬--೯೫). [ತೇಜಂಗಿಡು (<ತೇಜಂಗೆಡು) + – ಇಸು$_3$]

ತೇಜಂಗಿಡು 'ತೇಜಂಗೆಡು' ನೋ.

ತೇಜಂಗುಂದು (ಕ್ರಿ). = ತೇಜಂಗೆಡಂ : ತಾರಗೆಗಳ್ತೇಜಂಗುಂದೆ ಕೊರಗೆ ಚಾರುಚಕೋರಂಗಳ್ (ಉದ್ಭಟ. ೧೦-೬). [ತೇಜ$_1$ + ಕುಂದು$_1$]

ತೇಜಂಗೆಡು, ತೇಜಂಗಿಡು (ಕ್ರಿ). ೧. ಕಾಂತಿಗುಂದು ; ಕಾಂತಿಹೀನವಾಗು : ಪಗಲ ಚಂದ್ರನಂತೆ ತೇಜಂಗೆಟ್ಟು (ಧರ್ಮಪ್ಯ. ೧-೦೬೮) ; ತರಣಿ ತೇಜಂಗೆಡದಿರಗ್ನಿ ಬಿಸುಪಾಜದಿರು (ಹಡಕಾ. ೩-೩೦). **ತೇಜಂಗಿಡು** : ೨. ಪರಾಕ್ರಮಂ ಕುಂದು,-ಕುಂಗ್ಗು. 'ತೇಜಂಗಿಡಿಸಿಂ' ಪರಾ.

[ತೇಜ$_1$ + ಕೆಡು$_1$]

ತೇಜಂಬೊಂದಿಸು (ಕ್ರಿ). ಕಾಂತಿಯನ್ನು ಹೊಂದುವಂತೆ ಮಾಡು,–ಹೊಂದಿಸಂ : ಆರ್ಗಂದೆಡಕೊಳಲ್ಲದೆ ತೇಜಂಬೊಂದಿವರ್ಗಲ್ಲದದೆಂತುಂ (ಎಕ. VII, ಶಿವಮೊ. ೯೭-೪೦ ; 1113). [ತೇಜ$_1$ + ಪೊಂದಿಸು]

ತೇಜಃಕಣ (ನಾ). ಬೆಂಕಿಯ ಕಣ,–ಅಂಶ : ಧಾರಾವಿಸರಭೂತಪರಿಸ್ಪಂ ಲಿಂಗಪ್ರಸರತೇಜಃಕಣಪರಿಷ್ಕೃತನವ್ಯಶತಭಾನು (ಕು ವಾ ಸ. ೦೦-೭೭).

[ಸಂ.]

ತೇಜಃಕ್ಷಯ (ನಾ). ಕಾಂತಿಯಂ ಅಳಿವು ; ತೇಜೋಹೀನತೆ : ಕಾಲವಶದಿಂ ತೇಜಃಕ್ಷಯಂ ಭಾನುಗೆಂದಗಿದಾರ್ತಂಬಡುವಂತೆ (ಪುಷ್ಪಪು. ೬-೪೦). [ಸಂ.]

ತೇಜಃಪಿಂಡ (ನಾ). ಆಗ್ನಿಯಂ ರಾಶಿ : ರ ಘೂ ದ್ವ ಹ ಂ-ಗೆ ಪರಿತಾಪಂ ಲಕ್ಷ್ಮಣಂಗಾಗಳುಬ್ಬರಮಾದತ್ತು ಲತಾಂಗಿ ಸೀತೆ ಪುಗೆ ತೇಜಃಪಿಂಡಮಂ ಕುಂಡಮಂ (ಪಂರಾಮಾ. ೧೬-೨೭). [ಸಂ.]

ತೇಜಃಪುಂಜ (ಗು).೧. ಪ್ರಕಾಶದಿಂದ ಕೂಡಿದ ; ಕಾಂತಿಯುತವಾದ : ಮರೆಯಾದುದಾ ದೇವ ತೇಜಃಪುಂಜ ಮುಖಮೂರ್ತಿಯಗ್ನಿ ಮೆಯ್ ಜ್ವಾಲಾನಿಮಗ್ನಮೆನಲ್ (ಶ್ರೀರಾಮಾ. ೧೪-೩೬೫); ತೇಜಃಪುಂಜ ಮುಖದ ಅಧಿಕಾರಿಯೊಬ್ಬನನ್ನು ನೋಡಿದನು(ಪುನರು. ೩೧೦).(ನಾ).೨. ಕಾಂತಿಯ ಸಮೂಹ : ಮಿಱುಪ ತೇಜಃಪುಂಜವುಕ್ಕಿತು ಹೊದಱ ಹೊಳಹಿನಲಿ (ಕುಮಾಸ. ೧೦-೭೮) ; ಧೂಮಕೇತು. . . ಪ್ರಕಾಶಮಾನವಾಗಿ ಇರುತ್ತದೆ. ಬಾಲ ಬಹಳ ಉದ್ದವಾಗಿ ತೇಜಃಪುಂಜವಾಗಿ ಇರುತ್ತದೆ (ಅಕಾಶ. ೩೬). ೩. ಸೂರ್ಯ : ಅಂತು ಬಾಹುಬಲಿ ತೇಜಃಪುಂಜಮೆ [ಪಾಶಾಂ. ತೇಜಸ್ಫುರಿತಮೆ] ಕಣ್ಣೊಳುಳ್ಳುವಂತೆ ಸೈರಿಸದೆಮೆಯಿಕ್ಕಿ ದೃಷ್ಟಿಯುದ್ಧದೊಳ್ ಸೋಲೆ (ಆದಿಪು. ೧೪-೦೦೫ ವ). [ಸಂ.]

ತೇಜಃಪ್ರಸರ (ನಾ). ಕಾಂತಿಯ ವಿಸ್ತಾರ,-ಹರಹಂ: ಎಸೆವ ಕಿಸುಗಲ್ಲ ತೇಜಃಪ್ರಸರಂ ದಾವಾಗ್ನಿಶಂಕೆಯಂ ಮನದೊಳ್ ಪುಟ್ಟಿಸಿ (ಶಾಂತಿಪು. ೨೯-೯೬) ; ಕರಣಗಣದ ತೇಜಃಪ್ರಸರದೊಡನೆ ಬಿಸಿಲ ಬಿಸುಪಸದಳಮಾಗೆಯುಂ (ಚಂದ್ರಪು. ೭-೬೦ ವ). [ಸಂ.]

ತೇಜನಕ (ನಾ). ಒಂದು ಬಗೆಯ ಹುಲ್ಲು ; ಕಾಗೆಬಿದಿರು : "ಗುಂದ್ರಃ, ತೇಜನಕಃ, ಶರಃ – ಈ ೩ ಕಾಕಬ್ಬು" (ನಾಚಿಕಾ. ೧೦೨) ; "ಗುಂದ್ರಃ, ತೇಜನಕಃ, ಶರಃ – ೩ ಕಾಗೆ ಬಿದಿರು" (ಸಿದ್ಧಾಂತಿ. ೧೩೦). [ಸಂ.]

ತೇಜನಿ (ನಾ). ೧. ಕುರುಟಗೆಯ ಗಿಡ. ೨. ಜ್ಯೋತಿಷ್ಮತೀಲತೆ. ೩. ತೃಣ ; ಹುಲ್ಲು. [ಸಂ. ತೇಜನೀ]

ತೇಜಪುಂಜ (ನಾ). ಕಾಂತಿಯ ಸಮೂಹ : ನೀ ತೇಜಪುಂಜ, ನಾನೊಂದು ಚುಕ್ಕೆ (ಹೃದಸ. ೨೨-೦೩). [< ತೇಜಃಪುಂಜ]

ತೇಜಫಲ (ನಾ). ಒಂದು ಬಗೆಯ ಹಣ್ಣಿನ ಮರ : "ಶಾಲ್ಮಲೀಫಲಃ– ತೇಜಫಲ" (ಓಷಧಿ. ೧೬೩) ; ತೇಜಫಲ, ಜಿಮ್ಮಿ, ತುಂಬುರು (ಮೃಜಿಗಿ. ೬-೦೬೨೦). [<ಸಂ. ತೇಜಃಫಲ]

ತೇಜಮಾನ್ಯ (ನಾ). ಅಷ್ಟಭೋಗಗಳಿಂದ ಕೂಡಿರುವಂತೆ ಕೊಟ್ಟ ಮಾನ್ಯದ ಭೂಮಿ (?) : ನೀವೆಲ್ಲರೂ ತೆತ್ತು ನಿಂ × × × ತೇಜಮಾಂನ್ಯ ಸಂಕ (ಸೌಇಎ. ೧೯೩೨, ಉಡುಪಿ. ೩೦೩-೦೦ ; 1397). [ತೇಜ$_1$ + ಮಾನ್ಯ]

ತೇಜವಂತ (ನಾ). ಕಾಂತಿಯುಳ್ಳವನು ; ತೇಜಸ್ವಿ : ರವಿಯ ತೆರದಿ ತೇಜವಂತನಾದ ಕವಿಯೆ (ಪಯಣ. ೬-೧೯). [ತೇಜ $_1$ + – ವಂತ]

ತೇಜಶ್ಚಕ್ರ (ನಾ). ಕಾಂತಿಯಿಂದ ಕೂಡಿದ ಚಕ್ರ ; ತೇಜೋಮಂಡಲ : ಉಗ್ರಪ್ರತಾಪೋರ್ಜಿತ ತೇಜಶ್ಚಕ್ರಮಿರ್ದತ್ತೊಳಪೊಗದೆ ಪುರೋಪಾಂತದೊಳ್ ಚಕ್ರರತ್ನಂ (ಆದಿಪು. ೧೪-೩); ತೇಜಶ್ಚಕ್ರಧರಂ ರಿಪುರಾಜ್ಯಾಪಹಾರಿ ತನ್ನವೊಲುರ್ವೀಧರ ವಿಭ್ರಾಜಿತಕರನುದಯಿಪಂ ತನೂಜಂ (ಪಾರ್ಶ್ವಪು. ೭-೬೨). [ಸಂ.]

ತೇಜಸಾಮ್ಯ (ನಾ). = ತೇಜಸ್ವಾಮ್ಯ : ಹಳ್ಳದಿಂ ಮೂಡಣ ತ್ರಿಭೋಗ ಸುಂಕ ತೇಜಸಾಮ್ಯ ದೇವರ್ಗೆ ಸರ್ವಬಾಧಾಪರಿಹಾರಮಾಗಿ ಕೊಟ್ಟರು (ಸೌಇಇ. XX, ೨೩-೨೭ ; 1029) ; ಕೊಳ್ಳಂಪೂರ ಸಗರದಕೆಯಿಮನ ತೇಜಸಾಮ್ಯವೆಲ್ಲಿಮಂ ಮಲ್ಲಿಮಯ್ಯಂಗಮರ್ಕ್ಗಳಂಗವೊಬ್ಬಸಿತಾವ್ವ ವಿತ್ತಿಗಂ ಜೊತೆಗಂದೊಱಂಗಾಗಿ ಪೊದರವರನಾ ಕೈಕೊಣ್ಡಾಡ ಸಮಾಚೆರಿಸಿದೊಡೆ (ಕಇಆ. ೦೨೪-೩೩-೭ ; 1085) ; ಆ ಹೆಬ್ಬಾಳು ಹನ್ನೆರಡಱ ಬಳಿಯ ಬಾಡಂ ಬಡಗನೂ ಯಷ್ಟಭೋಗ ತೇಜಸಾಮ್ಯವಂ ಯಾ ಬಾಳ ಸೋವರಸಂಗಳು ಕ್ರಯಮಂ ಕೊಂಡು ತಮ್ಮ ದೇವರ್ಗ್ಗೆ ಬಿಟ್ಟರು(ಕೊಲ್ಹಾಶಾ. ೧೪-೪೫; 1176). [<ತೇಜಸ್ವಾಮ್ಯ]

ತೇಜಸ್ಕಾಯ (ನಾ). [ಜೈನ] ಐದು ವಿಧವಾದ ಸ್ಥಾವರವಸ್ತುಗಳಲ್ಲೊಂದು ; ಅಗ್ನಿ : ಪೃಥ್ವೀಕಾಯ, ಅಪ್‌ಕಾಯ, ತೇಜಸ್ಕಾಯ, ವಾಯುಕಾಯ, ವನಸ್ಪತಿಕಾಯ ಎಂದು ಸ್ಥಾವರಗಳಲ್ಲಿ ಐದು ಪ್ರಕಾರಗಳು (ಜೈನಧ. ೩೦). [ಸಂ.]

ತೇಜಸ್ತತ್ವ (ನಾ). [ಜ್ಯೋತಿ] ದಿನದ ಕಾಲಮಾನದ ಒಂದು ಭಾಗ : ದಿನದ ಕಾಲಮಾನವನ್ನು ಪಂಚತತ್ವಗಳನ್ನಾಗಿ ವಿಂಗಡಿಸುವಾಗ ತೇಜಸ್ಸಿನ ಭಾಗಕ್ಕೆ ಬರುವ ಕಾಲ : ದೂರಪ್ರಯಾಣಕ್ಕೆ ಚಂದ್ರಸ್ವರ ಸಮೀಪಪ್ರಯಾಣಕ್ಕೆ ಸೂರ್ಯಸ್ವರ ಚಿರಕಾಲಪ್ರಯಾಣಕ್ಕೆ ಅಪ್ತತ್ವ ಕ್ಷಿಪ್ರಪ್ರಯಾಣಕ್ಕೆ ತೇಜಸ್ತತ್ವವಿರಬೇಕೆಂಬುದು ಮೊದಲಾದುವುಗಳಂ ತಿಳಿದು (ವಿವೇಕ. ೧೪೩). [ಸಂ.]

ತೇಜಸ್ಪತಿ (ನಾ). ತೇಜಸ್ಸಿನ ಒಡೆಯ; ಸೂರ್ಯ: ರಾಜಪ್ರತಾಪನುಪಮಿತ ತೇಜಸ್ಪತಿ ಖಚರರಾಜಂ (ಶಾಂತಿಪು. ೩-೩೩). [ಸಂ.]

ತೇಜಸ್ವಾಮ್ಯ (ನಾ). ಅಷ್ಟಭೋಗಗಳೊಂದಿಗೆ ಕೂಡಿದ ಭೂಮಿಯ ಒಡೆತನ,-ಸಂಪೂರ್ಣ ಒಡೆತನ : ಅಷ್ಟಭೋಗ ತೇಜಸ್ವಾಮ್ಯವನೂ ಸೂಖದಿಂ ಬೋಗಿಸಿ ಬಹಿರಿ (ಮೈಅರಿ. ೧೯೪೦, ೨೮-೨೫ ; 1509) ; ಈ ಭೂಮಿಯೊಳೆಲ್ಲಿಯಾದೊಡಂ ಸುಂಕಂ ದಂಡಂ ತೇಜಸ್ವಾಮ್ಯಂ ಮೊದಲಾಗೆ ಮತ್ತಂ ತೇಜಮೆನಿಸಿದವೆಲ್ಲಂ ದೇವರ ಸೊಮ್ಮಾಗೆ ಸರ್ವ್ವಬಾಧಾಪರಿಹಾರಂ ಮಾಡಿದೊರ್ (ಎಇ. XII, ೨೮೪--೨೫೫ ; 1877). 'ಅಷ್ಟಭೋಗ' ಪರಾ. [<ಸಂ. ತೇಜಸ್ವಾಮ್ಯ]

ತೇಜಸ್ವಿ (ನಾ). ೧. ಕಾಂತಿಯುಳ್ಳವನು : ಅಂಜದರಾರ್ ಮುಟ್ಟುವಲ್ಲಿ ತೇಜಸ್ವಿಗಳಂ (ಪುಷ್ಪಪು. ೦೦-೦೮) ; ವಾಲ್ಮೀಕಿ ತಾಂ ನಡೆತಂದನ್ . . . ತೇಜಸ್ವಿ, ತರುಣಂ, ತಪೋವಲ್ಕಲವಸ್ತ್ರಶೋಭಿ (ಶ್ರೀರಾಮಾ. ೦-೫). ೨. ಪ್ರಭಾವಶಾಲಿ ; ಸಮರ್ಥ : ರಾಜವತಿಯಕ್ಕುಮಲ್ಲದೆ ರಾಜನ್ವತಿಯಾಗದಲ್ತೆ ಧರೆ ಮತ್ತೊರ್ವಂ ತೇಜಸ್ವಿ ಪೊಡರ್ವೊಡದಱಂ ರಾಜನ್ವತಿ ಮಾಡು ಧರಣಿಯಂ (ಆದಿಪು. ೧೪-೨೦) ; ಎನ್ನ ಪಕ್ಕದೆ ತೇಜಸ್ವಿಯನಂತಾಡಿದನಾ ಕಳಶಯೋನಿ (ಗದಾಯು. ೨-೦೯). ೩. ಒಂದು ಬಗೆಯ ಸಸ್ಯ ; ತುರುವೆಗಿಡ; ಕಾಸುಳಿ: "ತುಱುವೆ ತೇಜಸ್ವಿ ಕಾಸುಳಿಯಕ್ಕು" (ಮಂಗರಾ ೩೯-೨೭). [ಸಂ. ತೇಜಸ್ವಿನ್]

ತೇಜಸ್ಸು (ನಾ). ೧. ಹೊಳಪು ; ಪ್ರಕಾಶ ; ಕಾಂತಿ : ವಿಕಲ್ಪಾರ್ಥದಿಂ ಸಕಾರಾಂತದಲ್ಲಿ–ಯಶ, ಯಶಸ್ಸು; ತೇಜ, ತೇಜಸ್ಸು (ಶಮದ. ೮೬ ಪ್ರಯೋ); ತೇಜಸ್ಸಮಗ್ರ ನೀನು (ವೀಶೈಪು. ೩-೧೯-೨೬) ; ಮೂರ್ತಿ ಸಣ್ಣದಾದರೂ ನಿಂತ ಆ ನಿಲುವಿನಲ್ಲಿ ಒಂದು ತೇಜಸ್ಸಿತ್ತು (ಹೊಸಕ್ಷಿ. ೩೩). ೨. ಬೆಂಕಿ ; ಅಗ್ನಿ : ಮತ್ತಂ ತೇಜೋಂಶಮರ್ಧಮುಂ ಮಿಕ್ಕ ನಾಲ್ಕುಂ ಭೂತಂಗಳಷ್ಟ ಮಾಂಶಂಗಳ್ ನಾಲ್ಕುಂ ಕೂಡಿ ತೇಜಸ್ಸೆನಿಕ್ಕುಂ (ಚಿಕಬಿ. ೨೬); ಪೃಥ್ವಿ ಜಲ ತೇಜಸ್ಸು ವಾಯು ಮನಸ್ಸು ಎಂಬ ಐದು ದ್ರವ್ಯಗಳು ಪುದ್ಗಲದಲ್ಲಿ ಸೇರಿದವು (ಹಿಂದಸಾ. ೮೦) ; ಪ್ರಪಂಚವು ಪೃಥಿವೀ, ಉದಕ, ತೇಜಸ್ಸು ಮತ್ತು ವಾಯುಗಳೆಂಬ ನಾಲ್ಕು ತತ್ವಗಳನ್ನು ಉಳ್ಳುದು (ಭಾತತ್ತ್ವ. ೦೮೫). ೩. ಪರಾಕ್ರಮ ; ಶೌರ್ಯ: ಕೌರವರಲ್ಲಿ ತೇಜಸ್ಸನ್ನು ತೋರಿಸುವುದಕ್ಕೆ ಕಾಲವೆಂದು ನಾನು ತಿಳಿದಿದ್ದೇನೆ (ವಚಭಾ. ೧೦೯). ೪. ಗೌರವ ; ಮರ್ಯಾದೆ. 'ತೇಜೋಭಂಗ', 'ತೇಜೋವಧೆ' ಪರಾ.

ತೇಜಸ್ಸಿನ ಸ್ವರ = ಪಂಚಭೂತಗಳಲ್ಲಿ ಒಂದಾಡ ತೇಜಸ್ಸಿಗೆ ಸಂಬಂಧಿಸಿದ ನಾಳದಿಂದ ಹೊರಡುವ ಸ್ವರ ; ಪಂಚಸ್ವರಸಂಜ್ಞೆಗಳಲ್ಲಿ

ಒಂದು: ಒಂದೊಂದು ನಾಳದಲ್ಲಿ ಪೃಥ್ವೀಸ್ವರ ಅಪ್ಪುಸ್ವರ ತೇಜಸ್ಸಿನ ಸ್ವರ ವಾಯುವಿನ ಸ್ವರ ಆಕಾಶಸ್ವರ ಇಂತೀ ಪಂಚಸ್ವರಸಂಜ್ಞೆಯಂ ತಾಳಿ (ವಿವೇಕ. ೧೮೭). [ಸಂ. ತೇಜಸ್]

ತೇಜಿ$_1$ (ನಾ). ಕುದುರೆ; ಅಶ್ವ: ಕಾಯವೆಂಬ ಪಟ್ಟಣದೊಳಗೆ . . . ವಶೀಕರಣವೆಂಬ ಸೇನಬೋವ ಸಂಚಲವೆಂಬ ತೇಜಿ ಅಷ್ಟಮದವೆಂಬ ಆನೆ (ಚನ್ನಪ. ಕ. ೪೪೪-೯೪೨); ತೇಜಿಯ ತಿರುಹಿದನು ಶಲ್ಯ (ಕುವ್ಯಾಕ. ೧೩-೪೮); ಬಿಳಿಯ ತೇಜಿಯ ಹೇಮರಥವನು ಸುಳಿಸಿದನು (ಕೌಶಿರಾ. ೨೭-೨); ಊರ್ಗೆ ಮರಳುವ ತೇಜಿಗಳ ಸಾಲ್ಗಳಾ ಮಧ್ಯಮಾರ್ಗದೊಳ್ತವೆ ತೀವಿ ಸಂದಣಿಸುತಿವೆ (ಚೈಮಿಭಾ. ೩-೪೦); ಪಲಾಯನ ತೇಜಿಯನ್ನೇರಲ್ಕೆ ತವಕಿಸಿತು ಜೀವಮಾ ಜಾನಕಿಜೀವಿತೇಶ್ವರಗೆ! (ಶ್ರೀರಾಮಾ. ೨೬೫-೫೨); ಕಪಿಲವರ್ಣದ ಮೂರು ತೇಜಿಗಳನ್ನು ಸಂಪಾದಿಸಿದ್ದಾನೆ (ಪುನರು. ೨೬೩).

[←ಮರಾ. ತೇಜೀ, ತೇಜಿಕಾ; ಪಾರ. ಹಿಂ. ತಾಜೀ]

ತೇಜಿ$_2$ 'ತೇಜ$_2$' ನೋ.

ತೇಜಿತ (ಗು). ೧. ಹರಿತ ಮಾಡಿದ; ಮಸೆದ; ಮೆರುಗು ಕೊಟ್ಟ. (ನಾ). ೨. ಮಸೆದುದು; ಹರಿತವಾದುದು: "ನಿಶಾತಂ, ನಿಶಿತಂ, ಧೌತಂ, ತೇಜಿತಂ – ಈ ಳ ಮಸೆದುದು" (ಹಲಾಯು. ೬೮-೩೨೦).

[ಸಂ.]

ತೇಜಿಮಂದಿ 'ತೇಜೀಮಂದಿ' ನೋ.

ತೇಜಿವಾರು (ನಾ). ಕುದುರೆಗೆ ಕಟ್ಟುವ ಚರ್ಮದ ಬಾರು,-ಪಟ್ಟಿ: ಪೊನ್ನ ಪಲ್ಲಣಂ ಪಕ್ಕರೆ ತೇಜಿವಾರು ಕಟಿದಿರ್ಕಡಿಯಾದುವು (ಕಬ್ಬಿಕಾ. ೨೮೦). [ತೇಜಿ$_1$ + ಬಾರು$_1$ (<ಬಾರ್$_4$)]

ತೇಜಿವಿಂಡು (ನಾ). ಕುದುರೆಗಳ ಸಮೂಹ; ಅಶ್ವಸೈನ್ಯ: ಇತ್ತರದಲಿ ತಳಿರ್ವಡೆದಿರ್ದ ಮಾಮರ ಮತ್ತೇಭ ಗಿಳಿ ತೇಜಿವಿಂಡು ವೃತ್ತ ವಿಹಂಗಂ ಚಕೋರ ಕಾಲಾಳಳ ಮೊತ್ತದಿ ನಡೆದನಳ್ತಿಯಲಿ (ಮೋಹತ. ೬-೦೯).

[ತೇಜಿ$_1$ + ಪಿಂಡು$_2$]

ತೇಜಿಷ್ಠ (ನಾ). ೧. ಕಾಂತಿಯಂತನಾದವನು; ತೇಜಸ್ವಿ: ಬಹಳ ಮನ್ನಣೆಯ ತೇಜಿಷ್ಠಗಣವಿರ್ದುದೇವೊಗಳ್ವೆನು (ಸಿದ್ಧರಾ. ೧-೦೮). ೨. ಅಧಿಕನಾದವನು; ಶ್ರೇಷ್ಠ: ಶೌರ್ಯನಿಕುರುಂಬದೋಳ್ ತೇಜಿಷ್ಠನರ್ಜುನಂ (ತುರಂಗ. ೮೦-೬). ೩. ಕೋಪಿಷ್ಠ; ದಂಡುಕುವವನು: ಮಳಯಕೇತುವೆಂಬ ರಾಜತನೂಜನತಿತೇಜಿಷ್ಠನಾಗಿ ತನ್ನ ಮಂತ್ರಿ ಮುದ್ರಾರಾಕ್ಷಸಂಗೆ ತಥ್ಯಾಭಿಯೋಗಮಾದೊಡು ಮಿಥ್ಯಾಭಿಯೋಗಮೆಂದು ನಿಶ್ಚೈಸಿ (ಪಂಚತಂ. ೨೪೮-೦೭). [ಸಂ.]

ತೇಜೀಮಂದಿ, ತೇಜಿಮಂದಿ (ನಾ). ೧. ಮಾರುಕಟ್ಟೆಯಲ್ಲಿ ಸರಕಿನ ಬೆಲೆ ಹೆಚ್ಚು ಅಥವಾ ಕಡವೆಯಾಗುವುದು; ಬೆಲೆಗಳ ಏರಿಳಿತ: ವಿಶ್ವಾಸನಿಗೆ ತೇಜೀಮಂದಿಯ ಅರ್ಥವಾಗಲಿಲ್ಲ (ದೀಪಹ. I, ೮೭). ೨. ವಾಣಿ ಜ್ಯೋದ್ಯಮಗಳಲ್ಲಿ ಶೇರುಗಳನ್ನು ಕೊಂಡು ಮಾರುವುದು. ೩. ತುರುಫನ್ನು ಕೊಂಡು ಆಡುವ ಒಂದು ಬಗೆಯ ಜೂಜು: ಅವನು ತೇಜೀಮಂದಿಯಲ್ಲಿ ಆಡುತ್ತಿದ್ದನೆಂದು ಹಲವರು ಊಹಿಸಿದ್ದರು. ಆದರೆ ಆ ಆಟಗಾರರಲ್ಲಿ ಇವನು ಅಪರಿಚಿತನಾಗಿದ್ದನು (ರಕ್ತಧ್ವ. ೮೪). ತೇಜಿಮಂದಿ: ೧. ಇಂಗ್ರೆಜಿ ಪತ್ರವ್ಯವಹಾರವನ್ನಿಟ್ಟು ತೇಜಿಮಂದಿಯ ತಾರುಗಳನ್ನು ಮಾಡುವುದು (ಮುಂಬವ್ಯಾ. ೨೬೯). [← ಮರಾ. ತೇಜೀಮಂದೀ]

ತೇಜೋಜೀವಿ (ನಾ). ೧. ಕಾಂತಿಯುಳ್ಳವನು. ೨. ಆಧ್ಯಾತ್ಮಿಕ ಕಾಂತಿಯುಳ್ಳವನು: ಋಷಿಯೂ ಭಕ್ತನಂತೆ ತೇಜೋಜೀವಿ (ಸಾಹಿವಿ. ೩೪); ಇಂದ್ರಿಯಜೀವಿಯದು ಪ್ರಾಣಾನುಭವ; ಭಾವಜೀವಿಯದು ಕಾವ್ಯಾನುಭವ; ತೇಜೋಜೀವಿಯದು ಶಿವಾನುಭವ (ಸಾಸಮಾ. ೩೯).

[ಸಂ. ತೇಜೋಜೀವಿನ್]

ತೇಜೋತಿಶಯ (ನಾ). ಅಧಿಕವಾದ ತೇಜಸ್ಸು, – ಕಾಂತಿ: ಜಾತಪ್ರಿಯ ನಾತಂ ತನುಜಾತನೆ ತಾನಾಗೆ ತನ್ನ ಕಣ್ಗಂ ಮನಕಂ ಜಾತಕುತೂಹಲನಾ ತೇಜೋತಿಶಯಮನರಸನಚಲದಂತಿರೆ ನೋಟ್ಕುಂ (ಅಜಿಪು. ೩-೫೩). [ಸಂ.]

ತೇಜೋದ್ವಯ (ನಾ). (ಬ್ರಾಹ್ಮತೇಜ ಮತ್ತು ಕ್ಷಾತ್ರತೇಜಗಳೆಂಬ) ಎರಡು ಬಗೆಯ ಶಕ್ತಿ,– ಸಾಮರ್ಥ್ಯ: ನೀವಿರಲು ಕೃಪನಿರಲು ದಳವಾಯ್ ನಾವಹೆವೆ ನೀವಿಂದು ತೇಜೋದ್ವಯದಲಧಿಕರಲೆ ನಾವು ತಱುವಾಯವರು (ಕುವ್ಯಾಕ. ೦-೨೦). [ಸಂ.]

ತೇಜೋನಿಧಿ (ನಾ). ೧. ಕಾಂತಿಯ ನಿಧಿ,–ಆಗರ. ೨. ಸಾಮರ್ಥ್ಯದ ನಿಧಿ. ೧, ೨: ತೇಜೋನಿಧಿ ಕರಹತ ಪರರಾಜಕ ನವದೋಷದಿಗ್ಜಯಂ . . . ಉಪಮಿತ ತೇಜಸ್ಪತಿ ಖಚರರಾಜಂ (ಶಾಂತಿಪು. ೩-೩೩); ವೀರ ವೈರಾಗ್ಯದ ತೇಜೋನಿಧಿ ಅಕ್ಕ (ಕರ್ನಾಕ. ೭೩). [ಸಂ.]

ತೇಜೋನಿಳಯ (ನಾ). ಕಾಂತಿಗೆ ನೆಲೆಯಾದವನು; ತೇಜಸ್ವಿ: ಅಮರೇಜ್ಯಂ ಕುಜಗೇಹದೊಳ್ ನಿಲೆ . . . ಕ್ಷಮಿ ತೇಜೋನಿಳಯಂ . . . ಗುಣಾಢ್ಯನೆನಿಕುಂ (ಜಾತತಿ. ೦೭-೨೬). [ಸಂ. ತೇಜೋನಿಲಯ]

ತೇಜೋಪಾರ್ಜನೆ (ನಾ). ಒಡೆತನದ ಭೂಮಿಯಿಂದಾದ ಗಳಿಕೆ: ಈ ಗ್ರಾಮದ ಸ್ತಳ ಸುಂಕಕೆ ಸಲುವ ಏನುಂಟಾದ ತೇಜೋಪಾರ್ಜನೆಯನು ನಾನು ಶ್ರೀವಿಟಲದೇವರಿಗೆ ಸರ್ವಮಾ(ಂ)ನ್ಯವಾಗಿ ಸಮರ್ಪಿಸ್ತೆನೂ (ಸೌಇಇ. IX-II, ೬೦೬-೨; 1545). [ಸಂ. ತೇಜೋಪಾರ್ಜನ]

ತೇಜೋಭಂಗ (ನಾ). ಗೌರವದ ಹಾನಿ; ಅಭಿಮಾನಕ್ಕೆ ಬೀಳುವ ಪೆಟ್ಟು; ಅವಮಾನ: ಹೊಗೆ ಬಿಡುತ್ತಿರುವ ಜ್ವಾಲಾಮುಖಿಯಂತೆ ವಿಷ್ಣು ತೇಜೋಭಂಗವನ್ನು ಸಹಿಸುತ್ತ ಕುಳಿತ (ಸಮಜೀ. ೭೦೭). [ಸಂ.]

ತೇಜೋಭಿಮಾನ (ನಾ). ಆತ್ಮಗೌರವದಲ್ಲಿ ವಿಶ್ವಾಸ: ಆನತರ ತೇಜೋಭಿಮಾನವ ನೀನೊಲಿದು ಸಲಹೆಂದು ಮುದದಲಿ ಭಾನುಮತಿ ಮೈಯಿಕ್ಕಿದಳು ಮುರಹರನ ಚರಣದಲಿ (ಕುವ್ಯಾಉ. ೨-೦೭). [ಸಂ.]

ತೇಜೋಭಿರಾಮ (ನಾ). ಪರಾಕ್ರಮದಿಂದ ಶೋಭಿಸುವವನು: ಒಲ್ದೀಕ್ಷಿಸಿದು ನಿಜಾಗ್ರಭವನಂ ದೈತ್ಯಾರಿ ತೇಜೋಭಿರಾಮನನುಗ್ರಾರಿವಿರಾಮನಂ (ಜಗವಿ. ೪-೫೮). [ಸಂ.]

ತೇಜೋಮಂಡಳ (ನಾ). ಬೆಳಕಿನ ಮಂಡಲ; ಕಾಂತಿಯ ವಲಯ: ಬಳೆವಾ ನೃಪತೇಜೋಮಂಡಳಕ್ಕೆ ಕಣ್ಣುಳ್ಕೆ ವಿನಯವಿನಮಿತನವನೀತಳದೊಳೆ ಮೆಯ್ಯಿಕ್ಕೆ (ಶಾಂತಿಪು. ೩-೩೦). [ಸಂ. ತೇಜೋಮಂಡಲ]

ತೇಜೋರಾಶಿ (ನಾ). ತೇಜಸ್ಸಿನ ರಾಶಿ; ಬೆಳಕಿನ ಪುಂಜ: ಮತ್ತಮಾ ಪರಮಕ್ಷತ್ರ ತೇಜೋರಾಶಿಗೆ (ಶಾಂತಿಪು. ೯-೧೫೨ ವ); ವಿಪರೀತವಾದ ನಕ್ಷತ್ರ ರಾಶಿ ಒಂದೆಡೆ ನೆಲೆಸಿ ಸುಳಿ ಸುತ್ತುವಂತೆ ಸುತ್ತುತ್ತಿದ್ದರೆ ನಾವು "ತೇಜೋರಾಶಿ" ಎನ್ನುತ್ತೇವೆ (ಆಕಾಶ. ೬೩); ವ್ಯಾಧಖಡ್ಗದ ಮಧ್ಯತಾರೆಯನ್ನು ದೂರದರ್ಶನಿಯಿಂದ ನೋಡಿದರೆ ಅದು ಒಂದು ವಿಶಾಲಾಕಾರದ ತೇಜೋರಾಶಿಯಾಗಿ ಹರಡುವುದು ಕಾಣುತ್ತದೆ (ನಕ್ಷತ್ರ. ೫). [ಸಂ.]

ತೇಜೋಲಿಂಗ (ನಾ). ಈಶ್ವರನ ಐದು ಲಿಂಗಸ್ವರೂಪಗಳಲ್ಲಿ ಒಂದು; ಅಗ್ನಿಸ್ವರೂಪವಾದ ಲಿಂಗ: ಕಾಂಚೀಪುರದಲ್ಲಿ ಪಾರ್ಥಿವಲಿಂಗ, ಜಂಬೂ ಕ್ಷೇತ್ರದಲ್ಲಿ ಅಪುಲಿಂಗ, ತಿರುವಣ್ಣಾಮಲೆಯಲ್ಲಿ ತೇಜೋಲಿಂಗ, ಕಾಳಹಸ್ತಿಯಲ್ಲಿ ವಾಯುಲಿಂಗ, ಚಿದಂಬರದಲ್ಲಿ ಆಕಾಶಲಿಂಗ – ಹೀಗೆ ವಿಶ್ವದಲ್ಲಿ ಕಾಣುವ ಪಂಚಭೂತಗಳ ರೂಪದಲ್ಲಿಯೂ ಪರಮಾತ್ಮನು ಸಾದಾಖ್ಯಗಳೆನಿಸಿ ವಿರಾಜಿಸುತ್ತಿರುವುದನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ (ಶಕ್ತಿವಿ. ೨೬): ತೇಜೋಲಿಂಗವೆಂದರೆ ಪ್ರಕಾಶವೇ ಲಿಂಗವಾಗಿಯೂ . . . ಆಕಾಶಲಿಂಗವೆಂದರೆ ಬಯಲೇ ಲಿಂಗವಾಗಿಯೂ ಹಿಂದೆ ತಿಳಿಸಿದ ಕ್ಷೇತ್ರಗಳಲ್ಲಿ ಈಗಲೂ ಕಾಣುತ್ತಿವೆ (ಶಕ್ತಿವಿ. ೩೦). 'ಜ್ಯೋತಿರ್ಲಿಂಗ' ಪರಾ. [ಸಂ.]

ತೇಜೋವಧೆ (ನಾ). ಅವಮಾನ ; ಮಾನಹಾನಿ : ಆದೊಡಾ ಕರ್ಣಂಗೆ ಸಾರಥಿಯಾದಿರಾದೊಡೆ ಸಮರಮುಖದಲಿ ವಾದ ತೇಜೋವಧೆಯ ಮಾಡುವುದವನನವಗಡಿಸಿ (ಕುಮ್ಯಾಉ. ೨-೦೭) ; ದ್ರುಪದನಿಗೆ ತೇಜೋವಧೆಯಾಯಿತು (ವಚಭಾ. ೪೯) ; ವೀರಾಜಯ್ಯನಿಗೆ ತೇಜೋವಧೆಯಾಯಿತು (ಒಡಕ. ೦೫). [ಸಂ. ತೇಜೋವಧ]

ತೇಜೋವೃತ್ತಿ (ನಾ). ಹೊಳಪುಂಟಾಗುವಿಕೆ ; ಕಾಂತಿಗೂಡುವಿಕೆ : ಖರಶಾಣಕಷಣದಿಂ ಮಣಿಗುರುತೇಜೋವೃತ್ತಿ ನೆಗಳ್ವಪೋಲಕ್ಕುಂ ನಿಷ್ಠುರ ವಾಕ್ಪಾಷಾಣ ಪರಿಸ್ಫುರಿತಂ ಕೃತಿರತ್ನದೊಳ್ ಸಮುಜ್ವಲಭಾವಂ (ಚಂದ್ರಪು. ೧-೪೪). [ಸಂ.]

ತೇಟ್ 'ಥೇಟ್' ನೋ.

ತೇಟಗೀತೆ (ನಾ). [ಛಂದ] ಒಂದು ಬಗೆಯ ದೇಶೀಯ ಛಂದೋರಚನೆ ; ಅಂಶಗಣದಿಂದಾಗುವ ಪದ್ಯ : ತೇಟಗೀತೆ ಒಂದು ಬ್ರಹ್ಮ, ಎರಡು ವಿಷ್ಣು, ಎರಡು ಬ್ರಹ್ಮ–ನಾಲ್ಕು ಸಲ (ಕೈಪಿಡಿ. ೧೫೨).

[← ತೆಲು. ತೇಟಗೀತಿ]

ತೇಟಗ (ನಾ). (ಸಾಣೆ ಹಿಡಿದು) ಹೊಳಪುಗೊಳಿಸುವವನು ; ಒಪ್ಪ ಹಾಕುವವನು : ಸಾಣೆಯ ಮೇಲೆ ರತ್ನಗಳಿಟ್ಟು ಮಸೆದೊಪ್ಪಗಾಣಿಸಿ ಕುಡುವ ತೇಟಗರು (ಮೋಹತ. ೩-೨೬). [ತೇಟು (<ಥೇಟ್) + – ಇಗ]

ತೇಟು, 'ಥೇಟ್' ನೋ.

ತೇಡಿಸು (ಕ್ರಿ). (ತಿವಿದು) ಹೀಯಾಳಿಸು ; ರೇಗಿಸು ; ಚುಡಾಯಿಸು : ಸ್ರುಕ್‌ಸ್ರುವವ ಮುಟ್ಟಿದರು ಧೌತಾಂಶುಕದೊಳಗೆ ತಂಬುಲವ ಕಟ್ಟಿದ ರಕಟು ಪಾಧ್ಯರ ಮೋಱೆಯನು ತೇಡಿಸುತ ಬೆರಳಿನಲಿ (ಕುಮ್ಯಾಅ. ೦೮-೮). 'ಏಡಿಸು' ಪರಾ. [< ಛೇಡಿಸು]

ತೇದಿ (ನಾ). (ಸೌರಮಾನದ) ದಿನಾಂಕ ; ತಾರೀಖು : ಪ್ರಜೋತ್ಪತ್ತಿ ಸಂವತ್ಸರದ ತುಲಾಮಾಸ ೨೬ನೇ ತೇದಿ ಷಷ್ಠಿಯೂ ಸೋಮವಾರ (ಮೈಆರಿ. ೧೯೩೫, ೨೮-೦೨ ; 1751) ; ಕಾಂಗ್ರೆಸ್ ಅಧಿವೇಶನವು ಜನವರಿ ಇಪ್ಪತ್ತಾರನೇ ತೇದಿಯನ್ನು ಸ್ವಾತಂತ್ರ್ಯದಿನವಾಗಿ ಆಚರಿಸಬೇಕೆಂದು ದೇಶಕ್ಕೆ ಕರೆ ನೀಡಿತ್ತು (ಆತ್ಮಾರ್ಪ. ೦೩೭) ; ಅಥರ್ವವೇದ ಪರಿಷ್ಕರಣದಲ್ಲಿ ಮುಹೂರ್ತಗಳು ಚಂದ್ರನ ತೇದಿಗಳು, ಕರಣಗಳು ಮತ್ತು ಯೋಗಗಳು ಇದ್ದು ವಾರದ ದಿವಸಗಳು ತಿಳಿಸಲ್ಪಟ್ಟಿವೆ (ತತ್ವಪ್ರಾ. ೪೮೩).

[ದೇ.॥ ತಮಿ. ತೇತಿ; ತುಳು. ತೆಲು. ತೇದಿ]

ತೇದಿರೇಖೆ (ನಾ). ದಿನದ ಗೊತ್ತುಪಾಡಿಗೆ ಸಂಬಂಧಿಸಿದ ಒಂದು ಸಂಕೇತ,–ಗುರುತು ; P ಶಾಂತಸಾಗರದಲ್ಲಿರುವುದೆಂದು ಭಾವಿಸಲಾಗಿರುವ ಗ್ರಿನಿಚ್ ಪಟ್ಟಣದಿಂದ ೧೮೦ನೆಯ ಡಿಗ್ರಿಯ ಮಧ್ಯಾಹ್ನ ರೇಖೆ ; ಈ ಗುರಿರೇಖೆಯಲ್ಲೂ ಇತರ ಎಲ್ಲಾ ಪ್ರದೇಶಗಳಲ್ಲೂ ಪಂಚಾಂಗದ ದಿನದ ಆರಂಭಾಂತ್ಯಗಳು ಮಧ್ಯರಾತ್ರಿಯಿಂದ ಮಧ್ಯರಾತ್ರಿಯವರೆಗೆಂದು ಎಣಿಸಲಾಗಿದೆ. ದಿನದ ಆರಂಭಾಂತ್ಯಗಳ ಸಮಯ ವ್ಯತ್ಯಾಸ ಹೊಂದುವುದರಿಂದ ಈ ರೇಖೆಯ ಪೂರ್ವಕ್ಕೂ ಮತ್ತು ಪಶ್ಚಿಮಕ್ಕೂ ಒಂದು ದಿನದ ಅಂತರವುಂಟಾಗುತ್ತದೆ. ಈ ಸಂಕೇತಕ್ಕೆ ಎಲ್ಲಾ ರಾಷ್ಟ್ರಗಳೂ ಸಮ್ಮತಿಸಿವೆ: "ತೇದಿಗಳಿಗೆ ಸಂಬಂಧಪಟ್ಟ ರೇಖೆ : ತೇದಿರೇಖೆ" (Date-Line. ಇಂಕನಿ). [ತೇದಿ + ರೇಖೆ]

ತೇದಿಸು (ಕ್ರಿ). ಕಾಲಕ್ರಮವನ್ನು ನಿರ್ಧರಿಸು ; ತಾರೀಖನ್ನು ನಿರ್ಣಯಿಸು : ಕಳಚುರ್ಯ ಬಿಜ್ಜಳನೇ ಬಸವೇಶ್ವರನ ಬಿಜ್ಜಳನೆಂದು ನಿಷ್ಕೃಷ್ಟವಾಗುವುದರಿಂದ, ಇನ್ನು ಬಸವೇಶ್ವರನ ಜೀವಮಾನದಲ್ಲಿಯ ವಿಶೇಷ ಘಟನೆಗಳನ್ನು ಹೀಗೆ ತೇದಿಸಬಹುದು (ಮೂರುಉ. ೮೭).

[ತೇದಿ + – ಸು$_1$]

ತೇನಂದಾಕಗೆಱೆ 'ತೆನಂದಾಕಕೆಱೆ' ನೋ.

ತೇನತೇನ 'ತೇನತೇನಂ' ನೋ.

ತೇನತೇನಂ, ತೇನತೇನ (ಅ). ಹೆಚ್ಚು ಹೆಚ್ಚಾಗಿ : ಮೇಲಿಂದ ಮೇಲೆ : "ತೇನತೇನಂ = ಮೇಲೆಮೇಲೆ" (ಶಮದ. ಪರಿ. ೨) ; ತರವೇಟಲೊಡಂ ಸುರರೊರ್ವರೊರ್ವರಂ ಕಱೆಯೆ ತೇನತೇನಂ ತಳರ್ದುಂ ಭರದಿಂ ನೀರಂ ಮೊಗೆದುಂ ಪರಿತಂದರ್ ಕನಕಕಳಶವಿಶದೋದಕಮುಂ (ಶಾಂತಿಪು. ೧೦-೩೯) ; ಇದು ಚಿತ್ರಂ ತೇನತೇನಂ ನೆಗೆದುದು (ಜಗವಿ. ೮-೮೦) ; ಅಂತು ಕೈಕೊಳ್ಳದೆ ಬೆಂಬತ್ತಿ ತೇನತೇನಂ ಮಸಗಿ ಸಂದಣಿಸಿ ಬರ್ಪ ಸೊರ್ಕಾನೆಗಳ್ (ಕಬ್ಬಿಕಾ. ೨೮೮) ; ತೇನತೇನ : "ತೇನತೇನಮೆಂದು ಮೇಲೆಮೇಲೆಂ ಬರ್ಥಂ" (ಕಶಸಾ. ೭೧-೬೦೯) ; "ಮೇಲೆಮೇಲೆಂಬರ್ಥಮುಂ ತೇನತೇನ ಮೆನಲ್" (ಕಬ್ಬಿಕ್ಕಿ. ೮೯) ; ನವೀನ ನಾಟಕಶಾಲೆಯಲ್ಲಿ ತೇನತೇನದೊಳು ಲೀಲೆಯ ತೋಱೆ (ಭರಚ. ೩೮-೫೨). [?]

ತೇನು 'ಜೇನ್$_1$' ನೋ.

ತೇನೆ (ನಾ). ಒಂದು ಬಗೆಯ ಪಕ್ಷಿ : ಪಾರಿಜಾತದ ರೆಂಬೆಯೊಂದರ ಮೇಲೆ ಕುಳಿತ ತೇನೆ ಹಾಡೊಂದ ಹಾಡುತ್ತಿತ್ತು (ಹೇಮಕೂ. ೫೧) ; ಆಗಾಗ ತೇನೆ, ಕಾಜಾಣ, ಗಿಳಿ . . . ಮಲೆವಕ್ಕಿಗಳ ಉಲ್ಲೇಖ ಬರುತ್ತಿದೆ (ಸಾಸಮಾ. ೯೮). [ದೇ.॥ ತೆಲು. ತೇನೆಪಿಟ್ಟ]

ತೇನೆಹಕ್ಕಿ (ನಾ). = ತೇನೆ : ತೇನೆಹಕ್ಕಿಗಳ ಹಾಡನ್ನೂ ಕಪ್ಪೆಗಳ ವಟವಟ ಧ್ವನಿಯನ್ನೂ ಕೇಳಿದಾಗ . . . ಮಗಳ ಸಂಗೀತದ ನೆನಪಾಯಿತು (ಪುನರು. ೨೬೭); ತೇನೆಹಕ್ಕಿಯೊಂದು ವಾಣಿ ಕೇಳುತ್ತಿತ್ತು (ಅನಿಕೇ. ೪೩-೫).

[ತೇನೆ + ಹಕ್ಕಿ$_1$ (<ಪಕ್ಕಿ$_1$)]

ತೇಪಾಡು (ಕ್ರಿ). ತುಂಬಿ ಸೂಸು ; ತುಳುಕು : ದೊಡ್ಡದೊಂದು ಕೆರೆ ... ತುಂಬಿ ತೇಪಾಡುತ್ತಿರುತ್ತದೆ (ನನ್ನೂರು. ೩). [ತೇಪು + ಆಡು$_1$]

ತೇಪು, ಚೇಪು$_1$ (ಕ್ರಿ). ೧. ಎರಚು; ಚೆಲ್ಲು: ಆ ಬಟ್ಟಲು ಹಿಡಿದುಕೊಂಡು ತೋಡಿನಲ್ಲಿ ನಿಂತು ತೇಪಿದಿರಿ (ಬಾಳಿಗಿ. ೦೦೯). ೨. ಉಜ್ಜು ; ತಿಕ್ಕು : ಮುಂದೆ ಅದರ ಮೈಯ ಬಾಗುವಿಕೆಯು ಅತಿ ಶುದ್ಧವಾಗುವಂತೆ ತೇಪುತ್ತಾರೆ (ಬಾಲಪ್ರ. III, ೦೪೨೮). ಚೇಪು$_1$: ೧. ವರ್ಷವೆಲ್ಲ ದಂಬೆ ನೀರಿದ್ದರೂ ನೀರಿನ ಹನಿಯನ್ನು ಅದಕ್ಕೆ ಚೇಪಿದವರಿಲ್ಲ. ಮರಗಳೆಲ್ಲ ಬಾಡಿದ್ದುವು (ಔದಾಉ. ೩೬೦). [←ತುಳು. ತೇಪು, ಚೇಪು]

ತೇಪೆ$_1$ (ನಾ). ೧. ಹರಿದುದನ್ನು ಕೂಡಿಸುವುದಕ್ಕಾಗಿ ಸೇರಿಸಿ ಹೊಲಿದ ತುಂಡು : ಉಟ್ಟ ಧೋತರ ಹಲವಾರು ತೇಪೆಗಳಿಂದ ಕೂಡಿದ್ದಿತು (ಜನಜೀ. ೦೨೭). ೨. ಹರಿದುದನ್ನು ಸರಿಪಡಿಸಿದ ಸ್ಥಿತಿ. ೩. ಬಟ್ಟೆ ಮುಂತಾದುವುಗಳ ಹರಿದ ಭಾಗಕ್ಕೆ ಬೇರೊಂದು ತುಂಡನ್ನು ಹೊಂದಿಸುವುದು. ೪. ಅಲ್ಲಲ್ಲಿ ಬಿಟ್ಟುಹೋದುದು : ಕಲಿತ ಗಿಳಿಯ ಪಾಠ ತಲೆಕೆಳಗಾಗಿ, ಸೊಟ್ಟಾಗಿ, ಚೂರಾಗಿ, ತೇಪೆಯಾಗಿ ಏನೇನೋ ಆಗಿ ಹೋಗಿ ತನ್ನ ಆಕಾರವನ್ನೇ ಕಳೆದುಕೊಂಡಿತ್ತು (ರಂಗನಾ. ೦೫).

ತೇಪೆಹಚ್ಚು = ೧. ಹರಿದಿರುವುದರ ಮೇಲೆ ಚೂರುಬಟ್ಟೆ ಕೂಡಿಸಿ ಹೊಲಿಗೆ ಹಾಕು : ಒಬ್ಬ ಹೆಂಗಸು, ತನ್ನ ಮತ್ತು ತನ್ನ ಮಕ್ಕಳ ಬಟ್ಟೆಗಳಿಗೆ ತೇಪೆಹಚ್ಚುವುದು ನೋಡುವುದಾಗುತ್ತಿರಲಿಲ್ಲ (ಮಹಾತ್ಮಾ. ೨೦). ೨. ತಾತ್ಕಾಲಿಕ ದುರಸ್ತಿಮಾಡು : ಅದರ ಹರಕಮುರಕ ಛಿದ್ರಕ್ಕೆ ತೇಪೆಹಚ್ಚುವ ಕಾಲವಿನ್ನೂ ಸಂಪೂರ್ಣ ಕೈವಿಾರಿ ಹೋಗಿಲ್ಲ (ಇಪ್ಕಳ. ೪೭೯). ತೇಪೆಹಾಕು = ೧. ತೇಪೆಹಚ್ಚು ೧ : ಅವಳು ಬಹಳ ಒರಟಾದ ತೇಪೆ ಹಾಕಿದ್ದ ಒಂದು ಹಳೆಯ ಲಂಗವನ್ನು ಧರಿಸಿದ್ದಳು (ಮಲೆನಾ. ೯೪) ; ಹರುಕಿಗೆ ತೇಪೆಹಾಕುವುದೇ ಹೊರತು ಅದು ಬೇರೆ ಸರಿಯಾಗುವುದಿಲ್ಲ (ಬಂಕಿಮ. ೦೬೭). ೨. = ತೇಪೆಹಚ್ಚು ೨ : ಈ ಮುರುಕಲು ಮನೆಗೆ ವೃಥಾ ತೇಪೆಹಾಕಿದರೆ ಏನು ಪ್ರಯೋಜನ (ಯೋಧಪು. ೨೮).

[ದೇ.॥ ಮಲ. ತೈಪ್ಪು = ಹೊಲಿಗೆಕೆಲಸ]

ತೇಪೆ$_2$ (ನಾ). ೧. ವೇಶ್ಯೆ ; ಗಣಿಕೆ : ಪತ್ತದರಾರೊ ಧೂರ್ತ ವಿಟಹೃತ್ಸಂತಾಪೆಯಂ ತೇಪೆಯಂ (ಲೀಲಾವ. ೨-೯೬) ; ಆತ್ಮಸಾರಸರ್ವಸ್ವಮುಮಂ ನೆಱೆಗೊಂಡು ತೇಪೆ ಬರೆ ಮುತ್ತುರುದಂಡಂ ಕೊಂಡೊಡಲ್ಲದೆಂತುಂ ನಡೆಸಳ್ (ಪುಷ್ಪಪು. ೧೩-೩೭) ; ಕಥೆವೇಳ್ವ ತೇಪೆಯೊಡನಾಡಿದ ಪೆಂಡಿತಿಗುಂಟೆ ಸಜ್ಜನಂ (ಮನ್ಮವಿ. ೦೫-೭); ತೇಪೆಯೊಡನಿರ್ದ ಗರುವನ ಪಾಪದ ಫಲವೆಂತೋ (ನೀತಿಸಾ. ೧೦೩೦). ೨. ಚೆಲ್ಲಾಟವಾಡುವವಳು; ಆಟಗಾತಿ; ವಿನೋದಗಾತಿ: ಗಣಿಕಾಸಂದೋಹದೊಳ್ತೇಪೆಯೆ ಪುರುಷಗುಣಶ್ರೀ ಗಳಗ್ರಾಹಿಯಲ್ತೇ (ಲೀಲಾವ. ೨-೯೭). 'ತಾಪು', ತಾಪೆ$_1$' ಪರಾ. [?]

ತೇಪೆಕೆಲಸ (ನಾ). ೧. "(ಬೇರೆ ಬೇರೆ ಬಗೆಯ ವಂತ್ತು ಬೇರೆ ಬೇರೆ ಬಣ್ಣದ ತುಂಡುಗಳನ್ನು ಸೇರಿಸಿ ಮಾಡಿದ) ತೇಪೆಕೆಲಸ" (Patch Work. ಇಂಕನಿ). ೨. ಅರ್ಧಂಬರ್ಧ ಮಾಡುವ ಕೆಲಸ ; ಪೂರ್ಣವಾಗಿ ಮಾಡದ ಕೆಲಸ : ಅವನದೆಲ್ಲಾ ತೇಪೆಕೆಲಸವೇ (ರೂಢಿ).

[ತೇಪೆ$_1$ + ಕೆಲಸ]

ತೇಮ (ನಾ). ನೆನೆದಿರುವಿಕೆ ; ಹಸಿ ; ಒದ್ದೆ ; ತೇವ : ಕಪಿತ್ಥಕುಜದಿಂದ ತೆಂಕದಿಸೆಯೊಳ್ ಕರು ಸಾರ್ಕೆವೆತ್ತ ಪುತ್ತು ದೊರೆಕೊಂಡೊಡೆ . . . ಪಂಚಪುರುಷ ಪ್ರಮಾಣದೊಳೆ ತೇಟು [ವಂ] ಮಕ್ಕುಂ (ಲೋಕೋಪ. ೫-೩೦) ; "ಉದಕ" (ಲೋಕೋಪ. ಟೀಕೆ). [ಸಂ.]

ತೇಮಗೊಳು (ಕ್ರಿ). ಒದ್ದೆಯಾಗು ; ಹಸಿಯಾಗು ; ತೇವಗೊಳ್ಳು : ಗಗನದಮೃತದ ಮೊಲೆಯ ಸೀಪುವೆಲೆಗಳ ನಡುವೆ ಮುದದಿ ಹನಿಯಾರಿಸುತ ತೇಮಗೊಳುವಂತೆ (ಮಲೆದೇ. ೩೪-೮).

[ತೇಮ + ಕೊಳು (<ಕೊಳ್$_1$)]

ತೇಮನ (ನಾ). ೧. ಒದ್ದೆಮಾಡುವಿಕೆ. ೨. ಒದ್ದೆ ; ಹಸಿ ; ತೇವ. ೩. ಒಂದು ಬಗೆಯ ವ್ಯಂಜನ,-ಪದಾರ್ಥ : "ತೇಮನಂ, ನಿಷ್ಠಾನಂ-೨ ತೇವನವೆಂಬ ಮಜ್ಜಿಗೆಪಳಿದ್ಯ, ಹಸೀಮಜ್ಜಿಗೆ, ಪಳಿದ್ಯ, ಮೊಸರುಚಟ್ನಿ" (ಸಿದ್ಧಾಂತಿ. ೨೪೬) ; "ತೇಮನ=ಪಳದೆ" (ಗಂಗಾಮ. ೧೫೭). [ಸಂ.]

ತೇಮಳು, ತಿಗಳಿ, ತೆಗಳಿ$_1$, ತೇಗಳಿ, ತೇವುಳ್, ತೇವುಳಿ, ತೇವುಳು (ನಾ). ಕೂದಲು ಉದುರುವ ಒಂದು ಬಗೆಯ ರೋಗ : "ಕೇಶಘ್ನ ಮೆನಲು ತೇಮ[ಪಾಠಾಂ. ಉ]ಳು" (ಮಂಗರಾ. ೦೦೪-೩). **ತಿಗಳಿ** : ಏನು ತಲೆ ಬಣ್ಣಿಸಲಿ ತಿಗಳಿ ಮೇಯುವ ಹೊಲವ ? (ನಾದಲೀ. ೫೩-೩) ; ತಿಗಳಿ ತಿಂದು ಮರುಳುಗಾಡಾದ ಅವಶೇಷಗಳನ್ನೂ ಕುಹಕಿಗಳ ಕಣ್ಣಿಗೆ ಬೀಳದಂತೆ ತನ್ನ ಎದೆಯಲ್ಲಿ ಅಡಗಿಸಿಟ್ಟು ಟೊಪ್ಪಿಗೆ ಒಡೆಯನ ಮಾನ ಕಾಯುತ್ತದೆ (ಗಾಳಿಪ. ೦೩೪). **ತೆಗಳಿ$_1$** : ಇಂದ್ರಲುಪ್ತಕ = ತಲೆಯ ಮೇಲಿನ ಕೂದಲು ಇಲ್ಲದ ಹಾಗಾಗುವ ಬೇನೆ : ತೆಗಳಿ ನೆಕ್ಕೋಣ (ಗಂಗಾಮ. ೩೨). **ತೇಗಳಿ** : ಇಂದ್ರಲುಪ್ತ ಅಥವಾ ತೇಗಳಿ ಅಂದರೆ ತಲೆಯ ಇಲ್ಲವೆ ಮೋರೆಯ ಮೇಲಿನ ಕೂದಲು ಉದುರುವುದು (ಗೃಹವೈ. ೬೬). **ತೇವುಳ್** : ಗುಳ್ಳದ ಪಣ್ಣಂ ಗುರುಗುಂಜೆಯೆಂಬಿವಂ . . . ಪೂಸಿದಂದು ತೇವುಳ್ [ಪಾಠಾಂ. ತೆಗುಳು] ಕಿಡುಗುಂ (ಲೋಕೋಪ. ೯-೫೫). **ತೇವುಳಿ** : "ಕೇಶಘ್ನಂ, ಇಂದ್ರಲುಪ್ತಂ - ಈ ೨ ತೇವುಳು [= ತೇವುಳಿ]" (ಹಲಾಯು. ೯೯-೪೫೦). **ತೇವುಳು**: ಮೇಲಿನ 'ಹಲಾಯು' ಪ್ರಯೋಗವನ್ನು ನೋಡಿ.

[ದೇ.॥ ತಮಿ. ತೇಮಲ್ = ಮಚ್ಚೆ, ಹುಳುಕಡ್ಡಿ, ಒಂದು ಬಗೆಯ ಚರ್ಮರೋಗ]

ತೇಮಾನ (ನಾ). ೧. (ಲೋಹಗಳು) ತಿಕ್ಕುವಿಕೆಗೆ ಒಳಪಟ್ಟು ಸವೆಯುವಿಕೆ ; ತಿಕ್ಕುವುದರಿಂದಾಗುವ ನಷ್ಟ ; ತೇಯುವುದರಿಂದ ಆಗುವ ನಷ್ಟ : ಘರ್ಷಣಕ್ಷಯ ; ತೇಮಾನ (Attrition. ಇಂಕನಿ) ; ಚಿನ್ನದ ಒಡವೆಗೆ ತೇಮಾನ ತೆಗೆದು ನಯ ಮಾಡಿದಂತೆ (ಕನ್ನಸು. II, ೦೩೬). ೨. ನಷ್ಟ ; ಹಾನಿ : ಮಾಡಬೇಕಾಗಿದ್ದ ಎಷ್ಟೋ ಕೆಲಸ ಮಾಡದೆ ಹೋಯಿತು ಇಲ್ಲವೆ ತೇಮಾನವಾಯಿತು (ಕಂನಾಸಾ. ೧೩). ೩. ಯಂತ್ರ ಮೊದಲಾದುವುಗಳ ಸವೆತದಿಂದಾದ ನಷ್ಟ ಎಂದು ವರ್ಷಾಂತ್ಯದಲ್ಲಿ ತೆಗೆದಿಡುವ ಹಣ : ಈ ವರ್ಷದ ಉಳಿಕೆಯ ಕಾಲುಭಾಗದ ಹಣವನ್ನು ತೇಮಾನವೆಂದು ತೆಗೆದಿರಿಸಲಾಯಿತು (ರೂಢಿ).

[ದೇ.॥ ತಮಿ. ತೇಯ್ಮಾನ; ಮಲ. ತೇಮಾನ; ತುಳು. ತೇಮಾನ, ತೇಮಾನೊ, ತೇಮನ ; ತೆಲು. ತೇಮಾನ = ಹಣದ ಮೇಲಿನ ಬಡ್ಡಿ]

ತೇಮೋಷ್ಣ (ಗು). ತೇವವೂ ಉಷ್ಣವೂ ಕೂಡಿರುವ : ಸಮಭಾಜಕವೃತ್ತದ ತೇಮೋಷ್ಣ ವಾಯುಗುಣ (ಭೂವಿವ. ೧೪೨). [ತೇಮ + ಉಷ್ಣ]

ತೇಯ್ 'ತೇ$_1$' ನೋ.

ತೇಯಿಸು (ಕ್ರಿ). ಸವೆಯುವಂತೆ ಮಾಡು : ಈಯಿಸಿದು, ತೇಯಿಸಿದು (ಶಮದ. ೨೩೦ ಪ್ರಯೋ). [ತೇ$_1$ + – ಇಸು$_3$]

ತೇಯು 'ತೇ$_1$' ನೋ.

ತೇಯೆಲೆ (ನಾ). ಚಹದ ಎಲೆ ; ಟೀಸೊಪ್ಪು : ತೇಯೆಲೆ, ಟೀಸೊಪ್ಪು (Tea-leaf. ಇಂಕನಿ) ; ಹತ್ತಿ, ತೇಯೆಲೆ, ಕರ್ಪೂರ, ದಾಲ್ಚಿನ್ನಿ . . . ಈ ಪದಾರ್ಥಗಳಲ್ಲಿ ಚೀಣಾದೇಶದೊಡನೆ ವ್ಯಾಪಾರ ನಡೆಸುತ್ತಿದ್ದರು (ಭಾಗೃತಿ. ೮). [ತೇ$_2$ (<ಟೀ) + ಎಲೆ$_1$]

ತೇರ್$_1$ 'ತೇರು$_1$' ನೋ.

ತೇರ್$_2$, ತೇರು$_2$(ನಾ). ೧. ಒಂದು ಬಗೆಯ ವಾಹನ,-ಬಂಡಿ ; ರಥ ; ಸ್ಯಂದನ : ಸಾರಥಿ ಕಣ್ಣಱಿದೊಯ್ಯನೆ ತೇರಂ ಕೊಸೆಗೊಂಡು ಚಕ್ರಿಯಂ ಬಿನ್ನವಿಕುಂ (ಆದಿಪು. ೧೧-೫೭) ; ಪೆಱರ್ಗೇಕೆ ತೇರನೆಸವಂ ಧರ್ಮಾನುಜಂಗೇಕೆ ಕಿಂಕರನಾದಂ . . . ಆದಿದೇವನೆನಿಸಲ್ ಕೃಷ್ಣಂಗದೆಂತೊಪ್ಪುಗುಂ (ಗದಾಯು. ೩-೪೩) ; ತೇರ್ಗಳುಮನೋಜೆಯಿಂ ಪಣ್ಣಿದರ್ (ಜಿಬಪು. ೨೩-೨೫). **ತೇರು$_2$** : ೧. ನಿಮಿಷಕೆ ಹೂಡಿದುವು ತೇರುಗಳು (ಕುಮ್ಯಾದ್ರೋ. ೨-೦೪) : ದಾರಿದೆಗೆದುವು ಮುಂದೆ ಹೂಡಿದ ತೇರುಗಳು (ತೊರಲಾ. ೨-೩-೫೦) : ಧರೆಯ ತೇರನು ಮಾಡಿ ಅಜನ ಸಾರಥಿ ಮಾಡಿ ಹರಿಯ ಶರಮಾಡಿ ತ್ರಿಪುರವನು ಅಳಿದಂಗೆ ಸರಿ ಯಾರು (ಸರ್ವಜ್ಞ. ೨೨೦). ೨. ದೇವರ ವಿಗ್ರಹವನ್ನಿಟ್ಟು ಮೆರೆಯಿಸುವ ಅಲಂಕಾರದ ಬಂಡಿ : ಬಾರೊ ಸಾಧನಕೇರಿಗೆ . . . ಮಳೆಯು ಎಳೆಯುವ ತೇರಿಗೆ (ಗಂಗಾತ. ೧೨-೩). ೩. ರಥದಲ್ಲಿ ದೇವರ ವಿಗ್ರಹವನ್ನಿಟ್ಟು ಮಾಡುವ ಉತ್ಸವ ; ರಥೋತ್ಸವ ; ಜಾತ್ರೆ : ರೈತರಿಗೆ ತೇರಿಗಿಂತ ದೊಡ್ಡ ಹಬ್ಬ ಯಾವುದೂ ಇಲ್ಲ (ಹಳ್ಳಿಪಾ. ೧೯) : ತೇರು ನುಂಗುವವನಿಗೆ ಪರಿಸೆ ಹಪ್ಪಳ ಸಂಡಿಗೆ (ಗಾದೆ).

ತೇರ ಕಾಣಿಕೆ = ರಥೋತ್ಸವ ನಡೆಸಲು ಕೊಡುವ ಕಾಣಿಕೆ : ಯಿಾ ತೇರ ಕಾಣಿಕೆಯ ಹೊನ್ನ×ತೆರಕಣಾಂಬೆಯ ಚಾವಡಿಗೆ . . . ಕೊಟ್ಟು (ಎಕ. XIV, ಗುಂಡ್ಲುಪೇ. ೮-೦೪ ; 1520). **ತೇರ ಬೀದಿ** = ತೇರು ಹರಿದು ಬರುವ ಮಾರ್ಗ ; ರಥಬೀದಿ : ಇಳೆಯ ಮೇಲಣ ಸರ್ವಜನರು ನಳಿನಾಕ್ಷ ರಂಗಧಾಮನ ತೇರ ಬೀದಿಯೊಳಳವಟ್ಟು ಮೆಱೆದರರ್ತಿಯಲಿ (ಕಂನವಿ. ೨೪-೦). **ತೇರಾಗು** = ರಥೋತ್ಸವವಾಗು ; ಜಾತ್ರೆಯಾಗು ; ಮೆರವಣಿಗೆಯಾಗು : ಸೋಮೆಯದೇವರಿಗೂ ರಾಮಚಂದ್ರದೇವರಿಗೂ ಪರದೇಗಿನ ತೇರಾಗಿ . . . ರತೋತ್ಸವ ನಡೆಯಬೇಕೆಂದು ಮಾಡಿಸಿದನು (ಎಕ. X(S), ಮಾಲೂರು. ೧೪೭-೧೪ ; 1498) ; ತೇರಾದ ಮೇಲೆ ಜಾತ್ರೆ ನೆರೆಯಿತು (ಗಾದೆ).

[ದೇ.॥ ತಮಿ. ಮಲ. ತುಳು. ತೇರ್ ; ತೆಲು. ತೇರು]

ತೇರ 'ಥೇರ' ನೋ.

ತೇರಂಜಿಸು (ಕ್ರಿ). ಸಾಣೆ ಹಿಡಿದಂ ಹೊಳೆಯುವಂತೆ ಮಾಡಂ,–ಹೊಳಪು ಕೊಡಂ : ಮಣಿಯಂ ತೇರಂಜಿಪಂತೊಪ್ಪಮನೆಸಗುಗೆ ಕೆಯ್ಯೊಂದು . . . ಅನುಪಮ ಮತ್ಕಾವ್ಯಮಂ ಸತ್ಕವೀಂದ್ರರ್ (ಪುಷ್ಪಪು. ೧-೩೫).

[P ಇದು 'ನೀರಂಜಿಸು' ಎಂಬುದರ ಅಪಲಿಖಿತವಿರಬಹುದೇ ?]

ತೇರಂಟಿ 'ತೇರಂಟೆ' ನೋ.

ತೇರಂಟೆ, ಚೇರಟೆ, ತೇರಂಟಿ (ನಾ). ಸಾವಿರಕಾಲಿನ ಹುಳಂ ; ಕಪ್ಪರ ಬೆಟ್ಟೆ ; ಒನಕೆಮಂಡಿ ; ಬೆಟ್ಟಬೆನಕ (ಉಕ) : ಬಿಸದಪರಂತೆ ಮುಯ್ಪಂ ನೋಡದೆ ತೇರಂಟಿಯಂತೆ ಕುಮತಕ್ಕೆ ಸೂರುಳದೆ . . . ಧರ್ಮದೊಳ್ ನಿಶ್ಶಂಕನುಮಪ್ಪುದು (ಧರ್ಮಾಮೃ. ೪-೪೩). **ಚೇರಟೆ :** ಚಳಿಯ ಹಿಡಿತ ಕ್ಕೊಳಗಾಗಿ ಬೆರಳು ಪುಟ್ಟಿದ ಚೇರಟೆ(ಶತಪದಿ)ಯಂತೆ ಎಂಟುಗೇಣಿನ ಮೈ ಎರಡುಗೇಣಾಗಿ ಜನಸಂದಣಿಗೆ ಸಂದಣಿ ಸುತ್ತಿ ಸುರುಟಿಹೋಗಿತ್ತು (ವೀರಜಿಂ. ೪೮). **ತೇರಂಟೆ :** ಸ್ಪರ್ಶರಸಗಂಧಂಗಳಿಂಬೀ ಮೂಜಿನಜಿವ ಇಜುವೆ . . . ಇಂದ್ರಗೋಪ ತೇರಂಟೆ (ಪಸಾರ. ೪೯).

[←ತುಳು. ತೇರಂಟೆ, ಚೇರಟೆ, ಚೋರಟೆ, ಶೇರಂಟೆ, ಶೇರಟೆ]

ತೇರಜೆ (ನಾ). ಒಂದಂ ಬಗೆಯ ಪ್ರಾಣಿ : ಶ್ರೀಮದಮುಳ್ಳಂ ಪೊಸಳೆಯಾಗಿಯುಂ ರೂಪಮದಮುಳ್ಳಂ ಕಟ್ತಿಯಾಗಿಯುಂ ಅಜ್ಞಾಮದಮಂಳ್ಳಂ ತೇರಜೆಯಾಗಿಯುಂ ಪುಸಿಯುಳ್ಳಂ ಕರಡಿಯಾಗಿಯುಂ ... ನರಕದೊಳ್ ಪುಟ್ಟಿ (ಧರ್ಮಾಮೃ. ೬-೧೫೮).

[?./ಮರಾ. ತರಸ್=ಕತ್ತೆ,ಕರುಬ./ಪ್ರಾ. ತರಚ್ಛ=ವ್ಯಾಘ್ರ./ಸಂ. ತರಕ್ಷು]

ತೇರಣ$_1$, **ತೇರಣೆ, ತ್ಯಾರಣ** (ನಾ). ೧. ಒಂದಂ ಬಗೆಯ ಸಸ್ಯ ; ಕುರವಕ ; ಗೋರಂಟಿ : "ತೇರಣಂ ವ್ರಣಿಯಕ್ಕು" (ಮಂಗರಾ. ೩೫-೧೫) ; ತೇರಣದ ಬೀಜವಂ ಮೊಸರ ನೀರಿಂದ ತೇದು (ವಿವೈವಿ. ೩೩) ; ತೇರಣದ ಹೂವನ್ನು (ಕುರವಕ) ಧರಿಸುವುದರಿಂದ–ವ್ಯಾಪ್ತವಾದ ಪರಿಪುಳ ಉಂಟಾಗಿ (ಸಳವ್ಯ. ೪೪). 'ಗಿಡಂದೇರಣ' ಪರಾ. **ತೇರಣೆ :** ೨. ಒಂದಂ ಬಗೆಯ ಮರ : ಂಬಟಿ, ಅತ್ತಿ, ಅರಳಿ, ತೆಂಗು. ತೇರಣೆ (ತಿವಿದ. ೭-೧೭). **ತ್ಯಾರಣ :** ೧. ಕೆಂಪಿನ ತ್ಯಾರಣದ ಹೂವಿನಂತೆ ಶುದ್ಧರಕ್ತದಂತೆಯೂ ಹೊಳಪುಳ್ಳ ರತ್ನವು (ಸಾಗಂಧಿ. ೩೩೭-೩೧). ೨. ಹೆದ್ದರಣ ತ್ಯಾರಣ ಗೊರವಿ . . . ಮೊದಲಾದ ಗಗನವಂ ತುಡುಕುವ ವೃಕ್ಷಂಗಳ್ (ಸಾಗಂಧಿ. ೫೪-೫).

[?]

ತೇರಣ$_2$ (ನಾ). ಗೆದ್ದಲುಹುಳಂ (?) : ವೇನಂತೆ ತಲೆಯಂ ಪತ್ತಿ ಪಲ್ಮಡಿವರ್ ತೇರಣದಂತೆ ತಳವಂ ಪತ್ತಿ ಕತ್ತರಿಸುವರ್ ಕಂಕಣದಂತೆ ಮುಂಗೈಯಂ ಪತ್ತಿ ಕೊಜಿವರ್ (ಧರ್ಮಾಮೃ. ೩-೭೩).

[?]

ತೇರಣೆ 'ತೇರಣ$_1$' ನೋ.

ತೇರಯ್ (ಕ್ರಿ). ೧. ಆಕ್ರಮಣ ಮಾಡು ; ಮೇಲೆ ಬೀಳಂ: ಕಡುಪಿಂದಾ ಕಾಕನಂ ಕುಪ್ಪಳಿಸಿದೆಡೆಯಿದಾ ಪೂತನಿ ರಕ್ತಮಂ ಪೀರ್ದೆಡೆಯಾ ತೇರಯ್ದ ತೇರಂ ಪರಪಿದೆಡೆಯಿದಂ (ಅರ್ಧನೇ. ೪-೨೩). ೨. ತವಕಪಡಂ; ತವಕಿಸಂ: ಆಡಿಸುವ ತೋಳ್ ತೇರಯ್ದಬಾಯ್ ತಪ್ಪಿ ಬರ್ಪರೆವಾತುಣ್ಮುವ ಕಿತ್ತುಸಿರ್ (ಪರ್ಧಪು. ೪-೭೦). [?]

ತೇರಯಿಸು, ತೇರಯಂಸ್ಸು, ತೇರೈಸು (ಕ್ರಿ). ೧. ಆಕ್ರಮಿಸಂ ; ಮೇಲೇರಿ ಹೋಗಂ : ಅಂತು ರಕ್ಕಸವಡೆ ತನ್ನ ಪಡೆಯೆಲ್ಲಮಂ ತೆರಳ್ಚಿ ತೇರಯಿಸಿ ನುಂಗಿದೊಡೆ (ಪಂಪಭಾ. ೦೩-೮ ಪ). ೨. ಅಧಿಕವಾಗಿರು ; ಹೆಚ್ಚಾಗು ; ಮಿಗಾರಂ: ಬೆಳ್ಳುಗಿಲ್ದುಜುಗಲಂ ತರತರದಿಂ ತೇರಯಿಸುವ ತೆರೆಗಳಂ (ದಶಳು. ೪-೩೫ ಪ). ೩. ಆತುರಪಡು ; ತವಕಿಸಂ ; ಲವಲವಿಸಂ : ಒಡನುಂಡಿಯಲ್ಕೆ ತೇರಯಿಸೆ ನಾಲಗೆ (ಜಗವಿ. ೦೭-೦೩೦) ; ತೇರಯಿಸ [ಪಾಠಾಂ. ತೇರೈಸ]ದಿರ್ದಸವನಶಿಸತ್ವದಿಂದೆ (ಜೈಮಿಭಾ. ೪-೩೮). **ತೇರಯಿಸ್ಸು :** ೧. ತುಂಬಿಗಳುಮೊಡನೊಡನೆ ತೇರಯಿಸ್ಸುತಿರೆ ಪಾಡಿ (ಪುಷ್ಪಪು. ೨-೪೪) ; ದುರ್ಧರ ಗ್ರೀಷ್ಮರಾಜನ ನೆಗಳ್ದ ಚತುರಂಗಮೆನಲು ರವಿಯ ಕಡುಗಾಯ್ಗಳ್ತೇರಯ್ಸ[ಪಾಠಾಂ. ರೈಸ]ಲೊತ್ತರಿಸಿ ಕವಿದವು (ಜೈಮಿಭಾ. ೧೩-೪) ; ಥಟ್ಟುವರಿಯಿವ ತೇರಯ್ಪ್ [ಪಾಠಾಂ. ತೇರೈಪ] ಬೋಳೈಪ ಬೋಹರ ದೊಳ್ಪಿಱಿಗೆಯ್ದ ಬೌಪಟದೇಜಿವಾಟದೊಳ್ (ರಾಜಶೇ.೭-೦೧ ಪ). **ತೇರೈಸು:** ೧. ವೃಕೋದರಂ ಚತುರ್ದಶಭುವನಂಗಳಿಲ್ಲಮಂ ತೆರಳ್ಚಿ ತೇರೈಸಿ ನುಂಗಂವಂತು ಮಸಕದಿಂ ಭಗದತ್ತನಂ ಮಾಕೋಂಡು (ಪಂಪಭಾ. ೦೧-೮ ಪ) ; ಸುರವಸುಜುಬೆಗೆ ಸೀವರಿಸೆ ಮೋಹರಿಸಿ ಮುರಿದೆಱಿಗುವ ವಂಹೀಧರದುರ ವಣೆಯ ತೆಱನಂತೆ ತೇರೈ[ಪಾಠಾಂ. ರಯಿ]ಸಿದವು ಗಗನದಲಿ (ತೊಕರಾ. ೪-೪-೦೭). ೨. ಬುದ್ಧಿಯೊಳಗಂ ಸಾರೈಸಿ ಅಹಂಕಾರಮಂ ತೇರೈಸಿ ಚಿತ್ತದೊಳು ಪೂರೈಸಿ (ಬಸರ. ೪-೭೦) ; ನೀರಾಟಕ್ಕೆಳಸಿದೈರಾವತವಾರಣ ಶರೀರ ಗೌರವರ್ಣಂ ತೇರೈಸಿದಂತೆಯುಂ . . . ನೈರ್ಮಲ್ಯದಿಂ ನೂರ್ಮಡಿಸಿರ್ದ ಅಮರಸದಿಯಂ ಕಂಡು (ದಶಳು. ೪-೪ ಪ) ; ಅಂಧಕಾರವನು ತೆವರಿ ತೇರೈಸುತಿಹ ತೇಜದೇಳ್ಗೆ (ಸೌಂದಪು. ೦-೩೬) ; ನೀಡಿಡುವಾ ಮೊಗ ನಿಡುಸುಯ್ವ ನಾಸಿಕ ತೇರೈಸುವಾ ತಳ್ಕಂಕ (ಶ್ರೀಪಾಲಾ. ೪-೪೩). ೩. ದುಶ್ಶಾಸನೋರಸ್ಥಳೋಷ್ಣಸೃತಾಸೃಗ್ಜಲಪಾನಮಂ ಬಯಸಿ ಬಾಯ್ ತೇರೈಸೆ ಸೈತಿರ್ಪನೇ (ಪಂಪಭಾ. ೭-೫೮); ಹೆಬ್ಬಿ ಹಾರೈಸಿ ತೇರೈಸಿ . . . ಪರಿಪರಿದಾಡಿ (ಬಸರ. ೪-೩೭) ; ಚುಂಬನಕೆ ಬಾಯ್ತೇರೈಸಿಯಾಲಿಂಗನಕ್ಕೆ ನಿಜೋದ್ಯದ್ಭುಜ ಶಾಖೆಗಳ್ ನಿಮಿರೆ ಮೇಲ್ವಾಯ್ದಂ ಪಟಾಲೇಖದಂಗನೆಗಾಗಳ್ (ಕುಸುಮಾ.೪-೭೦) ತನುರೋಮೋದ್ಗಮ ಘರ್ಮದೊಳ್ಪುದಿಯೆ ಬಾಯ್ ತೇರೈಸೆ (ಶಾಂತೀಶ್ವ. ೫-೪೩). ೪. ಗುಂಪಾಗು; ಒಟ್ಟಾಗು: ಮೇಲೆ ಮೇ ೨೬ಬ್ಬೆಳ್ವ ರಿಪುಶರಜಾಲಧಾರಾಧೂಮವಹ್ನಿಜ್ವಾಲೆಗುಜಿ ತೇರೈಸಿ ಕೋರ್ಯೆಸಿತು ಕುರುಸ್ತೋಮ (ಕುವಾ.೪. ೦೯-೦) ; ತೇರೈಸಿ ಮಾಗಧ ಹಿಮವಂತರೊಳಗಾದ ಭೂರಿವ್ಯಂತರರಿಗೆ ಕೂಡೆ ಬಾರು ರತ್ನಾಂಬರಗಳನಿತ್ತ ನೊಲ್ದು (ಭರತ. ೭೩-೨೦೬);ತೇರೈಸಿ ಬರ್ಪ ತುಂಬಿಗಳ ಮೈಗಪ್ಪು ಮುಂಗಾರ ಮುಗಿಲ್ (ಜಿಪು. ೪೫-೨೨). ೫. ನಿಧಾನವಾಗು; ಮಂದವಾಗು: ಒಳಗೆ ಗರ್ಭಂ ಬೆಳೆಯೆ ಪೊಜಗೆ ತನು ಸಳನಳಿಸಿ ತಿಳಿದು ಮೆಲ್ಲಡೆ ಜಘನಭಾರದಿಂ ತೇರೈಸಿತ್ರಿವಳಿ ಮೈಗರೆಯೆ (ಕಲ್ಲರ. ೨೩೯-೪).

[ತೇರಯ್ + – ಇಸು$_3$]

ತೇರಯ್ಕೆ (ನಾ). ೧. ತವಕ ; ತಂಡಿತ ; ಲವಲವಿಕೆ : ಅಚ್ಚವಣ್ಬೇಱಿದ ದಾಳಿಂಬಂ ತೆದುದ್ಯಾನದೊಳೊದವಿಸುಗುಂ ಬಾಯ್ಗೆ ತೇರಯ್ಕೆಯುರ್ವಂ (ಕಂದ್ರಪು. ೦೧-೩೪). ೨. ಕಾಳಗದ ಒಂದು ಪಟ್ಟು ; ಯಂದ್ದದ ಒಂದಂ ರೀತಿ : ತೆಜವು ಪಸರವಾರ್ಯಕೆ ತೇರಯ್ಕೆ ಕೂರ್ಪಂ ಕಿತವಾಕಾರಂ ತಡಂ ಕಿತ್ತಡವೆನಿಪ ಭೃಗು ಪ್ರೌಢಿಯಿಂ ಕೊಲ್ವನುಗ್ರಾಹಿತನಂ (ಎಳ. VIII, ಸೊರಬ. ೦೪೦-೩೪ ; 1198).

[ತೇರಯ್ + – ಕೆ]

ತೇರಯ್ಸು 'ತೇರಯಿಸು' ನೋ.

ತೇರವಾದ (ನಾ). [ಬೌದ್ಧ] ಮಹಾತ್ಮರ ಉಪದೇಶ ; ಸ್ಥವಿರವಾದ : ತೇರವಾದವೆಂದರೆ ಮಹಾತ್ಮರ ಉಪದೇಶವೆಂದರ್ಥ (ಧಾತತ್ತ್ವ. ೧೯೦).

[ತೇರ (< ಥೇರ) + ವಾದ್ಯ./ಪಾಲಿ. ಥೇರವಾದ]

ತೇರಸ, ತೆರಸ (ನಾ). ೧. ಒಂದಂ ಸಂಖ್ಯಾವಾಚಕ ; ಹದಿಮೂರಂ : "ತೇರಸ – ತ್ರಯೋದಶ" (ತದ್ಭವಕೋ. ೦೮); ಕರೆಯಬಹೆನಾ ನಿನ್ನನಾಯ ವಸರಕೆ ತೇರಸವೀರಮೋಡಶವರ ಗಣಾರ್ಚನೆಗೆ (ಬಸಪು. ೦೪-೦೫) ; ದಶಗಣ ತೇರಸ ಪೋಡಶ ದ್ವಾದಶ ಮಿಸುವೇಕಾದಶ ರುದ್ರರುಗಳು . . . ಬಂದರು (ಬಸಪು. ೧-೨೬). ೨. = ತೇರಸಿ : ಮಾಘಶುದ್ಧ ತೇರಸದೊಳ್ ಗುರುಯೋಗದೊಳ್ ಪುಟ್ಟಿ (ಜಾಪುಂಪು. ೪೪-೦೪) : ಎಸೆವಾಶ್ವಯುಜದ ತೇರಸದಿಂ ತೊಟ್ಟಯ್ದುದಿವಸ (ಮು)ಂ ಮಟ್ಟಿ ಕಜಿಯಲ್ (ಜಟ್ಟಿಪು. ೪-೦೭೪). **ತೆರಸ :** ೨. ಫಾಲ್ಗುಣ ಶುದ್ಧ ತೆರಸ[ಮುಂ] ಆದಿತ್ಯವಾರ ಮುಮಾದನ್ದು (ಸೌಇಇ. XX-i, ೩೦-೨ ; 10ನೆಯ ಶತ).

ತೇರಸರ್ = ಪ್ರಸಿದ್ಧರಾದ ಹದಿಮೂರು ಜನ ಶಿವಶರಣರು ; P (ಪಾಲ್ಕುರಿಕೆ ಸೋಮನಾಥನು ಹೇಳಿರುವಂತೆ) ಕಲ್ಯಾಣಪಟ್ಟಣದಲ್ಲಿ ಪ್ರಸಿದ್ಧರಾಗಿದ್ದ ಬಸವರಾಜ, ಸಂಗಯ್ಯ, ಬೊಮ್ಮಿಸೆಟ್ಟಿ, ಸಾತ್ವಿಕ ಸಂಗಯ್ಯ, ಮೋಳಿಗೆ ನಿಜಸಂಗವ್ವೆ, ದೇವರಸ, ಕನ್ನಮರಸಿ, ಪಡಿಹಾರಿ ಬಸವಯ್ಯ, ಹೂವಿನ ಬಾಚಿದೇವಯ್ಯ, ದೇವಯ್ಯ, ಓಹಿಲದೇವಯ್ಯ, ಬೊಪ್ಪಿದೇವ ಮತ್ತು ಕಾಮಲದೇವಿ ಎಂಬ ಹದಿಮೂರು ಮಂದಿ ಶರಣರು: ನರರು ಕೇಳಲು ಕೂಡೆ ಸಾಱಿಸಿ ಭರದೊಳವರೊಳು ತೇರಸರುಮೆನೆ ಬಿರಿ[ರು]ದೆಸವ ಪದಿಮೂವರುಂ (ಬಸಪು. ೫೧-೭೦); ಹರುಷದಿಂ ಪ್ರಮಥರಂ ರುದ್ರರು ತೇರಸರನುರುದಶ ಗಣಂಗಳಂ . . . ಭಕ್ತಿಯಿಂದೊರೆದು (ಲಶಿಚಂ. ೩೪-೩೫); ಕಾಣುತೊಲವಿಂ ಸಂತವಿಸಿ ತೇರಸರ್ಗೂಡಿ . . . ಲಿಂಗಮಂ ಪೂಜೆಗೈದು (ಸಿದ್ಧೇಪು. ೭-೭೦).

[< ಪ್ರಾ. ತೇರಸ./ಸಂ. ತ್ರಯೋದಶ]

ತೇರಸಿ, ತಿರಸೆ, ತೆರಸಿ, ತೇರಸೆ (ನಾ). ಚಾಂದ್ರಮಾನಮಾಸದ ಪಕ್ಷಗಳ ಹದಿಮೂರನೆಯ ದಿನ,-ತ್ರಯೋದಶಿ: "ತೇರಸಿಯೆ ತ್ರಯೋದಶಿ" (ಚತುನಿ. ೬೪); ವೈಶಾಖಶುದ್ಧ ತೇರಸಿಯ ಬೆಳಗಪ್ಪ ಜಾವದೊಳು (ಜಾವುಂಪು. ೪೪-೯); ಕದನಂ ಮಾರ್ಗಶಿರದ ಶುದ್ಧದಿನಂ ತೇರಸಿ . . . ಅಮಾವಸೆಯ ದಿವಸದೊಳಂ ನಿರ್ಮೂಲಮಾಯ್ತು ಕೌರವವಂಶಂ (ಗದಾಯು. ೯-೩೭). **ತಿರಸೆ:** "ತ್ರಯೋದಶಿ-ತಿರಸೆ" (ಹೊಸುಗ. ೧೦೯). **ತೆರಸಿ:** "ತೆರಸಿ ತ್ರಯೋದಶಿ" (ಕವಿಕಂ. ೨೬೦). **ತೇರಸೆ:** ಸಿತಪಂಚಮಿ ಸಪ್ತಮಿ ದಶಮಿ ತೇರಸೆ ಬಿದಿಗೆ ತದಿಗೆಯೇಕಾದಶಿಯೆಂಬತಿಶಯದಿನಂಗಳೊಳ್ . . . ಯಾತ್ರೆಗೆ ಶುಭದಂ (ಲೋಕೋಪ. ೨-೪೫); ತ್ರಯೋದಶಿ, ತೇರಸೆ (ಶಬ್ದಾನು. ೧೬೦ ಪ್ರಯೋ).

[<ಪ್ರಾ. ತೇರಸೀ./ಸಂ. ತ್ರಯೋದಶೀ]

ತೇರಸೆ 'ತೇರಸಿ' ನೋ.

ತೇರಹಪಂಥ (ನಾ). [ಜೈನ] ಒಂದು ಪಂಥದ ಹೆಸರು : ಹದಿಮೂರು ತರದ ಚಾರಿತ್ರವುಳ್ಳವರಾದುದರಿಂದ ತೇರಹಪಂಥದವರೆಂದೂ ಹದಿಮೂರು ಜನರು ಕೂಡಿ ಈ ಪಂಥದ ಸ್ಥಾಪನೆ ಮಾಡಿದುದರಿಂದ ಇದಕ್ಕೆ ಈ ಹೆಸರು ಬಂದಿತೆಂದೂ ಕೆಲವರು ಹೇಳುತ್ತಾರೆ (ಜೈನಪ. ೭೬).

[ತೇರಹ$_0$ (P ←ಪ್ರಾ. ತೇರಹ) + ಪಂಥ$_2$ (<ಪಂತ$_3$)]

ತೇರಾಳ್ (ನಾ). ಬಂಡಿಯನ್ನು ನಡೆಸುವವನು ; ರಥಿಕ ; ಸಾರಥಿ : ತೇರಾಳ್ಗಳ ಚಪ್ಪರಣೆಯೊಳ್ . . . ಕಿಱಿಗಿಱಿವ ಪೊಂದೇರೋರಣಮಿಂ ಬಿಡಿದಿರೆ (ರಾಮಾಶ್ವ. ೫೦-೫); ಕುದುರೆಯಾಳಕ್ಕೆ, ತೇರಾಳಕ್ಕೆ, ಕಾಲಾಳಕ್ಕೆ, ಮೇಣಾನೆಯಾಳಕ್ಕೆ, ನಿಮ್ಮೊಳೋರೊರ್ವನುಂ ಕಾಳೆಗುಗುಡುವನು (ಶ್ರೀರಾಮಾ. ೭೫೧-೭೧). [ತೇರ್$_2$ + ಆಳ್$_3$]

ತೇರಿಸು (ಕ್ರಿ). ಮುಟ್ಟಿಸು ; ತಲುಪಿಸು : ಕನ್ನಡ ಸಂಸ್ಕೃತ ವಾದವನ್ನು ಆಂಡಯ್ಯನು ಒಂದು ಘಟ್ಟಕ್ಕೆ ತೇರಿಸಿದನೆಂದು ಹೇಳಬಹುದು (ಕನ್ನನು. I, ೧೫೨). [ತೇರು$_1$ + – ಇಸು$_3$]

ತೇರೀಜು (ನಾ). ೧. ಒಟ್ಟು ಮೊತ್ತ: ಕಲಿತು ದಿನದಿನದಿಯತಿ ಚಮತ್ಕಾರದಿಂ ಗುಣಿತಗಳ ಭಾಗಿಸಿ ಲೆಖ್ಖ ತೇರೀಜುಬೇರೀಜುಮಂ (ನವಮೋ. ೧೫-೬೨). ೨. ಕೂಡುವಿಕೆ ; ಸಂಕಲನ.

[← ಮರಾ. ತೇರೀಜ್ ; ಹಿಂ. ತೇರಿಜ್]

ತೇರು$_1$, ತೇರ್$_1$ (ಕ್ರಿ). ೧. ಬಲವಾಗು ; ಅಭಿವೃದ್ಧಿಹೊಂದು ; ಅಧಿಕವಾಗು : ಕುವರಂ ನವಯೌವನದೊದವಿಂಗೆ ನೆಱೆವೆಱೆಯಂತಿರೆ ತುಂಬಿ ತೇರಿದೊಂದು ಮೆಯ್ಸಿರಿಯಿಂ ಸೊಗಯಿಸಿದನಪ್ಪುದುಂ (ರಾಮಾಶ್ವ. ೦೦೮-೮); ವಯಸ್ಸೇರಿದಂತೆ ಜೀವದಾಸೆಯೂ ಲೋಭವೂ ತೇರಿ ಬೆಳೆಯುತ್ತಿರುವುವು (ಮಂತ್ರಶ. ೬೨-೧೬); ಅವುಗಳ ವರ್ಣನೆಯನ್ನು ನನಗಿಂತ ಬರವಣಿಗೆಯಲ್ಲಿ ತೇರಿದವರಿಗೆ ಬಿಟ್ಟುಕೊಟ್ಟಿದ್ದೇನೆ (ಭಾರವೀ. ೧೫೨). ೨. ಉತ್ತೀರ್ಣವಾಗು : ಶಿಕ್ಷಕನಾಗಬೇಕೆಂಬ ಹುರುಪಿನಿಂದ ಬಿ. ಟಿ. ಪರೀಕ್ಷೆಯಲ್ಲಿ ತೇರಿ . . . ಸಂಸಾರವೂ ಕಾವ್ಯಸಂಸಾರವೂ ಹೊಸ ಹುಮ್ಮಸ್ಸಿನಿಂದ ಮೊದಲಾದುವು (ಕಂಪಾಸಾ. ೪೬). ೩. ತಿಳಿಯಾಗು ; ಸ್ವಚ್ಛವಾಗು : ನೀರು ತೇರಿತು (ರೂಢಿ). ೪. ನಿರ್ಣಯವಾಗು ; ತೀರು ; ಫಲಿತಾಂಶಕ್ಕೆ ಬರು : ಲೆಕ್ಕ ಇಷ್ಟಕ್ಕೆ ತೇರಿತು (ರೂಢಿ). ೫. ಸೇರು ; ತಲುಪು. 'ತೇರಿಸು' ಪರಾ. ತೇರ್$_1$: ೨. 'ತೇರ್ಗಡೆ' ಪರಾ.

[ದೇ.॥ ತಮಿ. ತೇಱು, ತೇಱ್ಱು ; ಮಲ. ತೇಱು; ತೆಲು. ತೇರು, ತೇಱು]

ತೇರು$_2$ 'ತೇರ್$_2$' ನೋ.

ತೇರು$_3$ (ನಾ). ಒಂದು ಬಗೆಯ ಔಷಧಿ ಸಸ್ಯ,-ಮೂಲಿಕೆ: "ಕರ್ಕಶಚ್ಛದಃ-ಸುರಸುರಲಿಕೆ, ತೇರು, ಮಿಟ್ಟಲಿ, ಸೌತೆ" (ಓಷಧಿ. ೨೬). [?]

ತೇರುಕಟ್ಟು (ಕ್ರಿ). ೧. ರಥೋತ್ಸವಕ್ಕಾಗಿ ರಥವನ್ನು ಸಿದ್ಧಮಾಡು,-ಅಲಂಕರಿಸು : ರಥಸಪ್ತಮಿಗಾಗಿ ದೇವಾಲಯದಲ್ಲಿ ತೇರುಕಟ್ಟುತ್ತಿದ್ದಾರೆ (ರೂಢಿ). ೨. ಶವವನ್ನು ಸಾಗಿಸುವುದಕ್ಕಾಗಿ ವಿಮಾನವನ್ನು ರಚಿಸು ; ಚಟ್ಟ ಕಟ್ಟು : ಆ ತಮ್ಮನ ಹೆಣಾ ಕೆಡವಿ, ತೇರುಕಟ್ಟಿ ಎಳ್ಯೋ ಮಟ ನನಗಂತೂ ಸಮಾಧಾನ ಇಲ್ಲ (ಹೊಸಂಸಾ. ೨).

[ತೇರು$_2$ (<ತೇರ್$_2$) + ಕಟ್ಟು$_1$]

ತೇರುತೆಕ್ಕೆ (ನಾ). ಕೈವಾಡ ; ಕುತಂತ್ರ : ತಂತಮ್ಮಿನಿಯರಂ ನೆನೆದು ಪುರಜನಂ ಮಂತಣಂಗೊಂಡು ಮಱುಗುತ್ತಿರಲ್ಕಾಣುತಾ ಕಂತು ಮಾಡುವ ತೇರುತೆಕ್ಕೆಯಿಂದಾ . . . ಕೆಟ್ಟೆವಿನ್ನೇವೆವೆನುತಿರ್ದರು (ಸಮ್ಯಕೌ. ೩-೧೯); ಇದು ನಿಮ್ಮ ಮಗಳು ಕಮಲೆಯ ತೇರುತೆಕ್ಕೆಯಿಂತಿದ ನೀವು ಬಲ್ಲಿರೋ (ಸಮ್ಯಕೌ. ೦೦-೨೩). [?]

ತೇರುಬೀದಿ (ನಾ). ದೇವರ ವಿಗ್ರಹವನ್ನಿಟ್ಟ ರಥವನ್ನು (ಮಾಮೂಲಾಗಿ) ಎಳೆಯುವ ದೊಡ್ಡರಸ್ತೆ ; ರಥಬೀದಿ : ನಮ್ಮೂರಿನಲ್ಲಿ ತೇರುಬೀದಿಯೊಂದು ಬಿಟ್ಟರೆ ಉಳಿದವುಗಳೆಲ್ಲಾ ಚಿಕ್ಕ ರಸ್ತೆಗಳೇ (ರೂಢಿ).

[ತೇರು$_2$ (< ತೇರ್$_2$) + ಬೀದಿ]

ತೇರುಹಬ್ಬ (ನಾ). ರಥೋತ್ಸವ ; ಜಾತ್ರೆ : ಕೆಸರೂರಿನಲ್ಲಿ ತೇರುಹಬ್ಬದ ಸಂದರ್ಭದಲ್ಲಿ ಇನ್ನೊಂದು ವಿಶೇಷಸಮಾರಂಭ ನಡೆಯಲು ಏರ್ಪಾಡಾಗಿದ್ದಿತು (ಬೆಳುಮ. ೧೭೬). [ತೇರು$_2$ (< ತೇರ್$_2$) + ಹಬ್ಬ (<ಪರ್ಬ)]

ತೇರೆಸೆಗು (ಕ್ರಿ). ರಥವನ್ನು ನಡೆಸು; ಸಾರಥಿಯಾಗು: ಮಿಳಿರ್ವ ಪೊಸದಳಿರೆ ಪಟಿಯಿಗೆ ಗಿಳಿಗಳೆ ಪೂಡಿರ್ದ ಕುದುರೆ ತೆಂಗಾಳಿಯೆ ಕಣ್ಗೊಳೆ ತೇರೆಸಗುವನೆನೆ ಬಂದೆಳೆಮಾವಿನ ತೇರನೇಱಿ ನಡೆದಂ ಕಾವಂ (ಕಬ್ಬಿಕಾ. ೨೦೯).

[ತೇರ್$_2$ + ಎಸಗು$_1$]

ತೇರೆಳೆ (ಕ್ರಿ). ದೇವರ ವಿಗ್ರಹವನ್ನು ಕೂರಿಸಿದ ರಥವನ್ನು ಎಳೆ: ಜಾತ್ರೆಯಲ್ಲಿ ತೇರೆಳೆಯುವಾಗ ಉಂಟಾದ ನೂಕುನುಗ್ಗಲಿನಿಂದ ಜನ ಕಂಗೆಟ್ಟರು (ರೂಢಿ). [ತೇರು$_2$ (< ತೇರ್$_2$) + ಎಳೆ$_1$]

ತೇರೈಸು 'ತೇರಯಿಸು' ನೋ.

ತೇರೊಡ್ಡು (ನಾ). ರಥಗಳ ಗುಂಪು ; ರಥಗಳ ಸೈನ್ಯ : ತೇರೊಡ್ಡು ಗಾಳಿಗೊಡ್ಡಿದ ನೀರದದೊಡ್ಡಿನವೊಲಾಗೆ (ಪಂರಾಮಾ. ೧೩-೭೩); ತೆಱಪು ವಡೆದಿದಿರೊಡ್ಡಿನ ತೇರೊಡ್ಡುಗಳ ಶೂರಸಾರಥಿ ಪ್ರೇರಣದಿನೋರೊಂದು ಪತ್ತೆಸಾರ್ಚಿದಾಗಳ್ (ಚಂದ್ರಪು. ೧೦-೭೪ ವ).

[ತೇರ್$_2$ + ಒಡ್ಡು$_2$]

ತೇರೋಟ (ನಾ). ೧. ರಥದ ಒಟ. ೨. (ಆಲಂ) ರಥವನ್ನು ವೇಗವಾಗಿ ಓಡಿಸುವ ಕೌಶಲ್ಯ : ಬಿಲ್ಲ ಜಾಣನ್ ಈಮಿಾಯಸ್ . . . ತೇರೋಟದ ಸೊಸ್ಥಾನೀಸ್ (ಪಾರಸಿ. ೩-೬೦). [ತೇರ್$_2$ + ಓಟ]

ತೇರ್ಗಡೆ (ನಾ). ಜಯ ; ಗೆಲುವು ; ಉತ್ತೀರ್ಣತೆ ; ಸಫಲತೆ : ತೇರ್ಗಡೆಯಾಯಿತು ನನಗೆಂಬ ಗೆಲುವಿನ ಸುದ್ದಿಯು ಬರುವಷ್ಟರೊಳಗೆ

ಸ್ವರ್ಗಸ್ಥರಾದರು ತಂದೆ (ಇಂಜಾಪ. ೨೦-೯೫) ; ವರ್ಷದಲ್ಲಿ ಕೆಲವು ವಾರ ದುಡಿದಿದ್ದರೆ ಒಂದೆರಡು ವಿದ್ಯಾರ್ಥಿಗಳಾದರೂ ತೇರ್ಗಡೆ ಹೊಂದುತ್ತಿದ್ದರು (ಸ್ಕೂಲಮಿ. ೬೦).

[ತೇರ್$_1$ (< ತೇರು$_1$) + ಕಡೆ$_3$./ತುಳು. ತೇರ್ಗಡೆ ; ತೆಲು. ತೇರುಗಡ]

ತೇರ್ಗುದುರೆ (ನಾ). ರಥಕ್ಕೆ ಹೂಡಿದ ಕುದುರೆ ; ರಥಾಶ್ವ : ಒಯ್ಯನೆ ನಡೆವ ತೇರ್ಗುದುರೆಯಂ ಕಂಡು (ಕೃಮಿಭಾ. ೩-೪೦). [ತೇರ್$_2$+ ಕುದುರೆ]

ತೇರ್ದೆಗೆ (ಕ್ರಿ). ರಥವನ್ನು ಎಳೆ : ಆ ಸುಧನ್ವನಿಪ್ಪತ್ತುನಾಲ್ಕಂಬಿನಿಂ ತೇರ್ದೆಗೆವ ಕುದುರೆಗಳ ಕಾಲ್ಗಳಂ ಗಾಲಿಗಳ ಕೀಲ್ಗಳಂ ಮೂಡಿಗೆಯನು ಮೀರ್ದಿಸುವ ಚಾಪಮಂ . . . ಕ್ಷಣಾರ್ಧದೊಳ್ ಕಡಿಯೆ (ಕೃಮಿಭಾ. ೦೨-೩೫). [ತೇರ್$_2$ + ತೆಗೆ$_1$]

ತೇರ್ನೊಗ (ನಾ). ರಥದ ನೊಗ : ವಿಗಡ ತೇಜಿಗಳುಮನ್ ತೇರ್ನೊಗಕೆ ತಂದೆನ್ (ಬದ್ಧಪ್ರ. ೨೫-೫೩೨). [ತೇರ್$_2$ + ನೊಗ]

ತೇರ್ಮನೆ (ನಾ). ೧. ರಥವನ್ನಿಡುವ ಮನೆ. ೨. ರಥದ ಹಾಗೆ ಅಂತಸ್ತು ಗಳಿಂದ ಕೂಡಿರುವ ಭವನ,-ಸೌಧ : ವಿಭೀಷಣಂ . . . ತೇರೈಸಿದನು ನೇರಮಲ್ಲಿಂ ತನ್ನ ತೇರ್ಮನೆಗೆ (ಶ್ರೀರಾಮಾ. ೫೭೪-೬೦೮).

[ತೇರ್$_2$ + ಮನೆ]

ತೇರ್ಮರ (ನಾ). ರಥವನ್ನು ಮಾಡಲಂ ಬಳಸುವ ಮರ : ತೇರ್ಗೆ ಮರಂ ತೇರ್ಮರಂ . . . ಮರಂ ತೇರ್ಗೆ, ಬಣ್ಣಂ ಮನೆಗೆ (ಶಬ್ದಾಸು. ೨೯೨ ಪ್ರಯೋ). [ತೇರ್$_2$ + ಮರ$_1$]

ತೇರ್ವಾಯ್ (ಕ್ರಿ). ರಭಸದಿಂದ ಮುನ್ನುಗ್ಗು,-ಹಾಯು : ತನ್ನುಪ ಚಮೂಪತಿಗಳಂ ಕಡಿದು ತನ್ನುರುವ ಕಡಿತಲೆಗೆ ಬಲಿಗೊಟ್ಟುದಂ ಕಂಡು ನಮ್ಮ ಕಲಿ, ನಿಮ್ಮಾನೆ, ತೇರ್ವಾಯ್ದನೈ ಪ್ರಹಸ್ತಂ (ಶ್ರೀರಾಮಾ. ೬೫೫-೩೬೪). [ತೇರ್$_1$ (<ತೇರು$_1$) + ಪಾಯ್$_1$]

ತೇಲ್, ತೇಲು$_1$ (ಕ್ರಿ). ನೀರಿನಲ್ಲಿ ಮುಳುಗದೆ ಬೆಂಡಿನಂತೆ ಮೇಲೆ ಇರು; ನೀರಿನ ಮೇಲೆ ಚಲಿಸು : "ಬೆಂಡೇಟ್ಟುದೆಂದೊಡೆ ತೇಲ್ವುದಕ್ಕು" (ಕಬ್ಬಿಕೈ. ೬೬); ಪೊಸತೆರೆಗಳೊಳ್ಸಿಲ್ಕಿ ತೇಲ್ವ ಹಂಸಂಗಳಿಂ (ಉದ್ಯಟ. ೩-೮೬) : ಶಾರ್ಙ್ಗಭೃತ್ಸುಧಾಸರಸಿಯೊಳಟ್ಟು ತೇಲ್ದು ತಣಿದಾಂ ಕಳೆವೆಂ ಭವದಾವ ತಾಪಮಂ (ಜಿಕವಿ. ೦-೪). ೨. (ಗಾಳಿಯಲ್ಲಿ) ಹಾರು ; ಹಗುರವಾಗಿ ಚಲಿಸು : ಗಾಳಿಗೆ ತೇಲ್ವ ಮುಗಿಲುಗಳಂದದಿಂದೋಡಿದವು (ಸಾಳ್ಕಭಾ. ೦೬-೦೨); ನಱುಸುಯ್ವ ಗಾಳಿಗೆ ತೇಲ್ವ ದುಕೂಲದ ಸೆಱಗು (ಭರಜ. ೦-೩೩); ಕೈವಱಿಗುಟ್ಟುವಂಡಲೆಗೆ ತೇಲ್ದು ಮೇಲುದು ಜಾಱಿ (ಕೃಮಿಭಾ. ೩-೭). ೩. ಪಕ್ಕಕ್ಕೆ ಸರಿ ; ನುಣುಚಿಕೊಳ್ಳು ; ಜಾರು ; ತಪ್ಪಿಸಿಕೊಳ್ಳು : ತೇಲ್ವುದು ರಣಾಗ್ರದಿಂದಲ್ಲದೊಡುಳುಹೆನೆನುತೆ ಕೋಲ್ವಳೆಗಱಿದನವಂ (ಕೃಮಿಭಾ. ೦೨-೩೬). ೪. ಸ್ಥಿರತೆಯಿಲ್ಲದಿರು ; ತಾರಾಡು ; ಹೊಯ್ದಾಡು : ಮದಿರಾಪಾನಮಂ ಮಾಡಿಯುರ್ಕಿ ಸೊರ್ಕಿ . . . ಜೋಲುತುಂ ತೇಲುತುಂ ಮಲೆಯುತುಂ ಮನಂಗೊಳಿಪ ತದ್ವನಿತಾಜನ ಮಧ್ಯದಲ್ಲಿ . . . ಇರ್ದಂ (ಉದ್ಯಟ. ೫-೯೦ ಪ) : ಪುಸಿಲಜ್ಜೆಯಿಂದೆ ತೇಲ್ದವಳ ತೆಱದಿಂದೆ ನಸುನಗೆಯ ಪಸರಿಸುತೆ (ಕೃಮಿಭಾ. ೫-೬೦). ೫. ಮೂರ್ಛೆಯುಂಟಾಗು ; ಮೈಮರೆ : ಅಳವಳಿದು ಪವನಜಂ ತೇಲ್ವನಿ ತಱಿಕೊಳ್ಕಂಡು . . . ಅಚ್ಯುತಂ ತಾನೆ ಕೋಪದಿಂದಾಹವಕೆ ನಡೆತಂದನು (ಕೃಮಿಭಾ. ೭-೪೯). ತೇಲು$_1$: ೧. ಗುರುಕರುಣವಾರ್ಧಿಯೊಳಗೋಲಾಡುತಂ ಸಂಭ್ರಮಾನಂದದೊಳಗಕ್ಕಾಡಿ ತೇಲು[ಪಾಠಾಂ. ಗು]ತಂ (ದೀಕ್ಷಾಬೋ. ೩೪-೦೮); ನೀತಿಯೆಂಬುದು ನೀರ ಮೇಲೆ ತೇಲುವ ತೆಪ್ಪ ಮಾತ ಬಲ್ಲವರೆತ್ತ ತೆಗೆದಂತೆ ಬಹುದು (ಸಮ್ಯಕ್ಕಾ. ೮-೦೮) ; ವನಚರಶ್ರೇಣಿ ಬೆಂಡೆದ್ದು ತೇಲಿದುವು (ಪೋಹತ. ೦೯-೪೫) ; ಕಪ್ಪುರ ನೀರಿಗಿಂತ ಹಗುರವಾಗಿರುವುದರಿಂದ ನೀರ ಮೇಲೆ ತೇಲುತ್ತದೆ (ಮುಂಬಯಿ. ೪-೭೦) : ಬಾಳಿನ ಹೊಳೆಯೊಳು ಕಸದಂತೆ ತೇಲಿದರಾಗದು ಗುರಿ ಬೇಕು ಕಂದ (ಇಂಜಾಪ. ೦೦೭-೭೦). ೨. ಬಿಳಿಯ ಮೋಡ ಬೆಳಕಿನಲ್ಲಿ ತೇಲುವಂತೆ ಬಂದಳೋ (ಗಂಗಾತ. ೯೬-೦೦). ೬. ಲಾಭವಾಗಿ ಬರು ; ಒದಗು : ತೊಡಗಿಸಿದ ಹಣದ ಮೇಲೆ ಸ್ವಲ್ಪವಾದರೂ ಬಡ್ಡಿ ತೇಲಬೇಡವೆ ? (ರೂಢಿ). ೭. (ಎಳೆಯ ಸಸ್ಯಗಳಂತೆ) ಬೇರು ಬಿಡದೆ ಮೇಲೆ ಬರು: ತೆಂಡೆ ತೇಲಿದೆ (ರೂಢಿ). ೮. ಭೂಮಿಯ ಮೇಲೆ ಕಾಣಿಸು : ಹುಲು ಬೇರ್ಕರಿಕೆ ಕಣ್ಣಿಗ ತೇಲುವಂದದಿಂದಲಿ ಹೊಡೆ ಹಣವಿನ ಹೊಲನ (ಅಮುಸಾಂ. ೩-೦೨೨).

ತೇಲಕಟ್ಟು = ಜೋಲುಬಿಡು ; ತೂಗುಹಾಕು : ತೇಲಕಟ್ಟಿದ ಕಂಠ ಮಾಲೆಗಳ ಗಳಿತಮುಕ್ತಾಳಿಗಳಗಲಕೆ ಪರಿದೆಸೆಯೆ ಮುತ್ತಿನ ರಂಗವಾಲಿಗಳನಿಕ್ಕಿದರು ದರುಶನೋತ್ಸವಕೆಂಬ ತೆಱನಾದುದು (ಕೃಮಿಭಾ. ೦೭-೨೮). ತೇಲಬಿಡು, ತೇಲಿಬಿಡು = (ನೀರಿನಲ್ಲಿ) ಮುಳುಗದ ಹಾಗೆ ಮುಂದುವರಿಯಲು ಬಿಡು : ಆ ಹುಡುಗನ ಕೈಗೆ ಸಿಗುವ ಹಾಗೆ ಹೊಳೆಯಲ್ಲಿ ತೇಲಬಿಟ್ಟನು (ಮುಂಬಯಿ. ೪-೩೮) ; ನನ್ನವೀ ನುಡಿಗಳಿರ ! ಕಾಲದಲೆಗಳಲಿ ನಿಮ್ಮನುರಿಹಣತೆಯಂತಿದೊ ತೇಲಬಿಡುವೆ (ಗಿಳಿವಿಂ. XIII) ; ಸಾನುರಾಗದಿಂದ ಇಂದು ದೀಪ ತೇಲಿಬಿಟ್ಟೆವೇ – ದೀಪ ತೇಲಿಬಿಟ್ಟೆವು (ನಾದಲೀ. ೬೨-೨೦) ; ವಿಶ್ವದಂಚಿನವರೆಗು ತೇಲಿಬಿಡು ನೌಕೆಗಳ (ನೆಲಮು. ೦೮-೫). ತೇಲಿಬರು = ನಿಧಾನವಾಗಿ ಬರು : ಗಾಳಿಗಡಲಿನಲ್ಲಿ ತೇಲಿಬರು ತಲಿಹವು ನಾದಾ (ಗಂಗಾತ. ೦೦೩-೦). ತೇಲಿಹಾಕು = ಮೇಲಿರುವಂತೆ ನೆಡು ; ಆಳವಾಗಿ ನೆಡದಿರು : ತೆಂಗು ತೇಲಿಹಾಕು, ಬಾಳೆ ಬಗೆದು ಹಾಕು (ಗಾದೆ). ತೇಲಿಹೋಗು = ೧. ನೀರಿನಲ್ಲಿ ಮುಳುಗದಂತೆ ಮುಂದುವರಿ. ೨. ಕೊಚ್ಚಿಹೋಗು : ಪ್ರವಾಹದಲ್ಲಿ ಈಜಿ ಈಜಿ ಶಕ್ತಿಗುಂದಿ ತೇಲಿಹೋಗುತ್ತಿದ್ದೆ (ರಾಮಾನಿ. ೦೦೦) ; ಜಗವೆಲ್ಲ ತೊಯ್ದು ಹೋಗಿದೆ, ತಿಳಿಮಣ್ಣು ತೇಲಿಹೋಗಿದೆ (ನೆಲಮು. ೦೬-೨೨).

[ದೇ.ಸ ತುಳು. ತೇಲ್, ತೇಲು ; ತೆಲು. ತೇಲು ; ಪರ್ಜಿ. ಗಡಬ. ತೇಲ್; ಕುವಿ. ತೇಲಲಿ]

ತೇಲಾಡಿಸು (ಕ್ರಿ). ನೀರಿನ ಮೇಲೆ ಚಲಿಸುವಂತೆ ಮಾಡು,-ಓಲಾಡಿಸು : ಚಿಕ್ಕಹುಡುಗರಿದ್ದಾಗ ಕಾಗದದ ದೋಣಿಯನ್ನು ಮಾಡಿ ನೀರಿನಲ್ಲಿ ತೇಲಾಡಿಸುವುದೂ ಒಂದು ಆಟ (ರೂಢಿ).

[ತೇಲಾಡು + – ಇಸು$_3$]

ತೇಲಾಡು (ಕ್ರಿ). ೧. ನೀರಿನ ಮೇಲೆ ಚಲಿಸು ; ನೀರಿನಲ್ಲಿ ಮುಳುಗದ ಹಾಗೆ ಇರು : ಕುಲಪರ್ವತಗಳು ಸಮುದ್ರದಲ್ಲಿ ತೇಲಾಡಿದರೂ . . . ಅರ್ಜುನನು ಕರ್ಣನನ್ನು ಜಯಿಸಲು ಸಮರ್ಥನಾದಾನೆ (ಕೃಪಾಕ. ೦೭೮). ೨. (ಆಲಂ) ಉತ್ಸಾಹದಿಂದ ಕೂಡಿರು ; ಸಂತೋಷಿಸು : ತೇಲಾಡುವಾಗ ಮನಸು ಮೇಲಾಡತಾವ ಕನಸು (ಗಂಗಾತ. ೦೮-೦).

[ತೇಲು$_1$ (<ತೇಲ್) + ಆಡು$_1$]

ತೇಲಿ (ನಾ). ಗಾಣಿಗ : ಉಜ್ಜನಪುರದಾ ತೇಲಿ ತಾಮಲಿಂದಾಪುರಕೆ ತನ್ನ ಮಗಳನು ಕೊಟ್ಟು ಲಗ್ನ ಮಾಡಿರಲು (ಶನಿಮಾ. ೦೭). 'ತೆಲ್ಲಿಗ' ಪರಾ.

[<ಸಂ. ತೈಲಿನ್]

ತೇಲಿಕೆ (ನಾ). ೧. ನೀರಿನಲ್ಲಿ ಮುಳುಗದಂತೆ ಇರುವುದು: "ತೇಲುವುದು, ತೇಲಿಕೆ, ಪ್ಲವನ" (Floatation. ಇಂಕನಿ). ೨. ಹಗುರವಾದುದು : ಸಮುದ್ರವು ಉಪ್ಪಾಗಿಯಿರುವುದರಿಂದ ಅನೇಕ ಗುಣಗಳು ಉಂಟು . . . ಅದರ ನೀರು ಸೀನೀರಿಗಿಂತಲೂ ತೇಲಿಕೆಯಾಗಿ ಇರುತ್ತದೆ (ಅನಂಶ. ೫೪).

[ತೇಲು$_1$ (<ತೇಲ್) + – ಇಕೆ./ತಮಿ. ತೇಲಿಕ್ಕೈ; ತೆಲು. ತೇಲಿಕೆ]

ತೇಲಿಗ$_1$ (ನಾ). ತೇಲುವವನು : ನೀಲಾಕಾಶದ ತೇಲಿಗನಾಗಿ ಓಲಾಡಿ ಪುಣ್ಯರನಾಡಿಗೆ ಹೋದೆ (ಹಂಸದ. ೧೭೨-೦೮). [ತೇಲು$_1$(<ತೇಲ್) + – ಇಗ]

ತೇಲಿಗ್ಗ 'ತೆಲ್ಲಿಗ' ನೋ.

ತೇಲಿಸು (ಕ್ರಿ). ೧. ನೀರಿನಲ್ಲಿ ಮುಳುಗದಂತೆ ಮಾಡಂ; ತೇಲಾಡಿಸಂ: ರಾಯರ ಉತ್ಸಾಹವು ನನ್ನನ್ನೂ ಸಂತೋಷದ ಕೆರೆಯಲ್ಲಿ ಮುಳುಗಿಸಿ ತೇಲಿಸಿತು (ರಾಹುಳ. ೯೦) ; ಕಾವಿನಲಿ ದೆಂದೋಡಿ ಆತ್ಮಜಯವಾದಾಗ ನೆಲ ಮುಗಿಲ ತೇಲಿಸುವ ಬೆಳಕಿನುಬ್ಬು (ನವಿಲ್ಲ. ೬೩-೬). ೨. ಅವಯಿಖ್ಯಿ ವೆಂದಂ ಪರಿಗಣಿಸಂ; ಗೌಣವಾಗಿಸಂ: ನಾನು ಆ ಮಾತನ್ನು ತೇಲಿಸಲು ಯತ್ನಿಸಿದೆ (ಆಂಕೂ. ೬೩) : ಮಾತುಗಳನ್ನು ಲಘುವಾಗಿ ತೇಲಿಸಬೇಡಿ (ಬದುಜ. ೦೦೩). ೩. ಶಿಥಿಲವಾಗಿ ಉಚ್ಚರಿಸಂ; ಹಗುರವಾಗಿ ಉಚ್ಚರಿಸಂ: ಉಚ್ಚಾರಣೆಯಲ್ಲಿ ಒಮ್ಮೆ ಒತ್ತಿ ಹೇಳುತ್ತೇವೆ. ಇನ್ನೊಮ್ಮೆ ತೇಲಿಸಿ ಹೇಳುತ್ತೇವೆ (ರಾ.ವಿವಿ. ೩೨೪). ೪. ಚಾಚು; ನೀಡು: ಬಿನ್ನನು ಕೋದು, ಕೈಕಾಲ್ಗಳನು ತೇಲಿಸಿ, ಹೊಳಿದಳು ಮಳೆಯ ಬಿಲ್ಲಿನ ಹಾಗೆ ಸ್ಥಾಣುವಿನೆಳೆಯ ಚಂದ್ರನ ಚಂದದಿ (ಕಎಪು. ೩೮-೦೩). ೫. (ಆಲಂ) ಪಾರುಮಾಡು; ರಕ್ಷಿಸಂ: ತೇಲಿಸೋ ಇಲ್ಲ ಮುಳುಗಿಸೋ ನಿನ್ನ ಪಾಲಿಗೆ ಬಿದ್ದೆನೊ ವರವಾಕ್ಯಪಾಲೋ (ಪುಕಂದ. ೨-೦೩೪ ಪದ್ಯವಿ). ೬. (ಆಲಂ) ನಿವಾರಿಸಂ; ಪರಿಹರಿಸಂ: ವಿಜರುವದ್ರಂಗಳಂ ತೇಲಿಸುವವರ್ ತಾವೆ ಲೋಕಕಂಟಕರಾದರಿದ ಪರಿಹರಿಸದಿರ್ಪುದು ಬಾಲೇಂದುಮೌಳಿಗೇಂ ಸೈರಣೆಯೇ (ಕಲಪು. ೦೬-೩೬). [ತೇಲು$_1$ (<ತೇಲ್) + – ಇಸು$_3$]

ತೇಲೀಜು (ನಾ). ನೀರಿನ ಮೇಲೆ ಹೊಟ್ಟೆ ಮೇಲಾಗಿ ಮಲಗಿರುವಂತೆ ಈಜುವುದಂ: ಅವರು ತೇಲೀಜನಲ್ಲಿ ಗಟ್ಟಿಗರು.(ಕೂಧ).

[ತೇಲು$_1$ (<ತೇಲ್) + ಈಜು$_3$ (< ಈಸು$_4$)]

ತೇಲು$_1$ 'ತೇಲ್' ನೋ.

ತೇಲು$_2$ (ನಾ). ೧. ನೀರಿನ ಮೇಲೆ ಚಲಿಸಂವಿಕೆ: (ಕ). ೨. (ಉಕ) ಕೋಡಿ; ಹೆಚ್ಚಿನ ನೀರಂ: ನಿನ್ನಿನ ಮಳೆಯಿಂದಲೇ ಹಿರಿಕೆರೆಯು ತೇಲು ಬಿದ್ದು, ಇನ್ನೂ ತೇಲು ಹರಿಯುತ್ತಿದೆ (ಕೂಧ). [< ತೇಲ್]

ತೇಲುಂಗ 'ತೆಲುಂಗ' ನೋ.

ತೇಲುಗಣ್ಣ (ನಾ). ಬಸವಳಿದ ಕಣ್ಣುಗಳನ್ನು ಉಳ್ಳವನು: ನಿನ್ನ ಕೆಣಕಿ ಶ್ವಾಸಪಟಿತ್ತ ತೇಲುಗಣ್ಣರಾಗಿ ಚಿತ್ತವ್ಯಾಕುಲವಿರೆ ಹಗಲಿರುಳೂ ನಿದ್ದೆಯಿಲ್ಲ (ಜಂತಸ. ೨೨-೨೦). [ತೇಲುಗಣ್ಣು + – ಅ$_7$]

ತೇಲುಗಣ್ಣು (ನಾ). ೧. ಸ್ಥಿರತೆ ತಪ್ಪಿದ ಕಣ್ಣು; ಬಸವಳಿದ ಕಣ್ಣು: ತೇಲುಗಣ್ಣು ಹಾಕುತ್ತ ನಡೆದ ಅವನಿಗೆ ನವಚೈತನ್ಯ ಬಂದಂತಾಯಿತು (ಕಂರುಟಿ. ೫೯) ; ಆ ಭಯಂಕರದೃಶ್ಯದಿಂದ ತನಗೆ ತೇಲುಗಣ್ಣಾದು ದಾಗಿಯೂ ಹೇಳಿ . . . ತನ್ನ ಕಥೆ ಮುಗಿಸಿದಳು (ಪುಪರು. ೨೦೯). ೨. ಚಂಚಲವಾದ ಕಣ್ಣು: ಆ ಪಾಂಡಿತ್ಯವನ್ನು ಗೌರವಿಸುತ್ತ ಮೂರ್ತಿಯ ತೇಲುಗಣ್ಣುಗಳನ್ನೆ ನೋಡುತ್ತಿರುವ ಚಪಲ ಯಾಕೆ? (ಪಾತ್ಯಲ್ಯ. ೨೨೪).

ತೇಲುಗಣ್ಣು ಮೇಲುಗಣ್ಣು=೧. ಆಯಾಸಗೊಂಡ ಸ್ಥಿತಿ; ಬಳಲಿರುವಿಕೆ: ಏಕಾದಶೀಭಕ್ಷಮುಂಡಿ ಅನಶನಸ್ಥಿತಿಯಲ್ಲಿ ಕುಳಿತು, ಮಲಗಿ ತೇಲುಗಣ್ಣುಮೇಲುಗಣ್ಣು ಹಾಕತೊಡಗಿತ್ತು (ದೀಪಹ. II, ೬). ೨. ಸಾಯುವ ಸ್ಥಿತಿ: ಸ್ವಲ್ಪ ಹೊತ್ತಿಗೆ ಮುಂಚೆ ಅವರ ಸ್ಥಿತಿ ತೇಲುಗಣ್ಣು ಮೇಲುಗಣ್ಣು ಆಗಿತ್ತು (ಕೂಧ).

[ತೇಲು$_1$ (< ತೇಲ್) + ಕಣ್ಣು (<ಕಣ್)]

ತೇಲುನೋಟ 'ತೇಲ್ನೋಟ' ನೋ.

ತೇಲುನೋಟಕ (ನಾ). ಮೇಲುಮೇಲಿನದನ್ನು ಮಾತ್ರ ನೋಡುವವನು; ಆಳವಾಗಿ ಅಭ್ಯಾಸ ಮಾಡದವನಂ: ಕವಿ ಶೃಂಗಾರವನ್ನು ಹೆಚ್ಚು ಬಳಸಿರುವುದಾಗಿ ತೇಲುನೋಟಕರಿಗೂ ಅನಿಸದಿರದು (ಸಂಜುಂಡ. ೦೦೦). [ತೇಲು$_1$ (<ತೇಲ್) + ನೋಟಕ]

ತೇಲುಪಟ್ಟ (ನಾ). ಸಮುದ್ರಪ್ರಯಾಣದಲ್ಲಿ ಹಡಗಿನಲ್ಲಿಟ್ಟಿರುವ ಪ್ರಾಣರಕ್ಷಣೆಯ ಸಾಧನಗಳಲ್ಲಿ ಒಂದು; ತೇಲುವುದಕ್ಕೆ ಸಹಾಯವಾಗುವಂಥ ಸಾಧನ: ಪ್ರತಿಯೊಬ್ಬರಿಗೂ ಒಂದೊಂದು ತೇಲುಪಟ್ಟಿಯನ್ನು ಒದಗಿಸಿರುವರು (ಕಪಪು. ೫-೦೨೬).

[ತೇಲು$_1$ (< ತೇಲ್) + ಪಟ್ಟಿ$_2$ (< ಪಟ್ಟಿ$_2$)]

ತೇಲುಮನೆ (ನಾ). ನೀರಿನ ಮೇಲೆ ಚಲಿಸುವ ಮನೆ; ದೋಣಿ; ತೆಪ್ಪ: ಸುತ್ತಲೆಲ್ಲ ತನ್ನವರ 'ತೇಲುಮನೆ'ಗಳು, ಕೆಳಗೆ ಅನ್ನವನ್ನು ನೀಡುವ ತಾಯಿಕಡಲು (ಪುಂಗಾಮು. ೭೪).

[ತೇಲು$_1$ (< ತೇಲ್) + ಮನೆ]

ತೇಲುಮಾತು (ನಾ). ಅವಯಿಖ್ಯವಾದ ಮಾತಂ; ಗೌಣವಾದ ಮಾತಂ; ಹಾರಿಕೆಯಂ ಮಾತಂ: ಛೆ, ಛೆ, ಇದೆಲ್ಲ ಬರೀ ತೇಲು ಮಾತು! (ಹೂಸಕ್ಷ. ೫೬).[ತೇಲು$_1$ (< ತೇಲ್) + ಮಾತು$_1$]

ತೇಲ್ನೋಟ, ತೇಲುನೋಟ (ನಾ). ಅಸ್ಥಿರವಾದ ನೋಟ: ಏಂದು ತೇಲ್ನೋಟದಿಂದಾಸ್ಯವ ನಿರೀಕ್ಷಿಸಲು ಕಂದರ್ಪ ಕಂಡು (ಸಪಕೋ. ೫-೨೦). ತೇಲುನೋಟ: ಅವಳತ್ತ ತೇಲುನೋಟದಿಂದ ನೋಡಿದನು (ಕೂಧ). [ತೇಲ್ + ನೋಟ]

ತೇಲ್ಮುಗಿ (ಕ್ರಿ). ನಿಧಾನವಾಗಿ ಮಲಗುಚ್ಚು: ಕರಣದಿಂ ಬೆರಸಿ ಬೋಸರಿಸಿ ದೈನ್ಯದಿ ನಾಮೋಚ್ಚರಣೆಗೈವುತ ನೇಮಗಳಿಗೆ ಕರವಿಡೆ ತೇಲ್ಮುಗಿವರೆ ಗುಣ್ಪುಮ್ಮಿಱಿದು ತಂಪೊರೆದೊಗುವರಲಂಬುಜಲವು (ಕೃಕಸೂ. ೨೪೭).

[ತೇಲ್ + ಮುಗಿ]

ತೇಲ್ಮೆ (ನಾ). ನೀರಿನ ಮೇಲೆ ಚಲಿಸಂವಿಕೆ: "ತೇಲುವುದು : ತೇಲ್ಮೆ" (Floatage. ಇಂಳಿ). [ತೇಲ್ + – ಮೆ$_1$]

ತೇವ (ನಾ). ಹಸಿ; ಒದ್ದೆ; ಆರ್ದ್ರತೆ: "ತೇವಂ = ಆರ್ದ್ರಂ" (ಕಾಕಕ್ಕ. ೦೦೩) : ದ್ರಾಕ್ಷೆ, ಖರ್ಜೂರ . . . ತೇವ ತಾಗಿದರೆ ಹಾಳಾಗಬಹುದು (ಅಹುಸಾ. ೫೪) ; ಕೆಸರುಗದ್ದೆಯ ವಿನಾ ಭೂಮಿಗಳನ್ನು ಉಳುವಾಗ ಭೂಮಿಯಲ್ಲಿ ತೇವ ಹೆಚ್ಚಾಗಿರಬಾರದು (ವ್ಯಪಪು. ೦೪) : ದೀದಿಯ ಕಣ್ಣುಗಳು ತೇವವಾಗಿರುವುದು ನನ್ನ ಕಣ್ಣಿಗೆ ಬಿದ್ದಿತು (ಪಾಣಿಳಿ. ೫).

[<ಸಂ. ತೇಮ]

ತೇವಗೊಳ್ಳು (ಕ್ರಿ). ಒದ್ದೆಯಾಗಂ; ಹಸಿಯಾಗಂ: ಬಡಬ್ರಾಹ್ಮಣನ ಒಣಗಿದ ನಾಲಗೆ ಆಗಲೇ ತೇವಗೊಂಡಿತ್ತು (ಪದ್ಮಕ. ೦೩೬) : ಭಟ್ಟನಿಯ ಕಣ್ಣುಗಳು ತೇವಗೊಂಡವು (ಪಾಣಿಳಿ. ೦೪೨) ; ಕಣ್ಣುಗಳತ್ತರೆ ಬಹು ಬೇಗ ಮೂಗುವೆ ತಾನಾಗಿ ತೇವಗೊಳ್ಳುವುದು (ಇಂಡಾಪ. ೨೩೬-೭೦).

[ತೇವ + ಕೊಳ್ಳು$_1$ (<ಕೊಳ್$_1$)]

ತೇವಟಗೆ 'ತಿವಿದಿಗೆ' ನೋ.

ತೇವನ (ನಾ). ಒಂದಂ ಬಗೆಯ ಮೇಲೋಗರ: "ತೇವನ – ತೇಮನ = ಒಂದು ಬಗೆ ಮಜ್ಜಿಗೆ, ತೇವ" (ತದ್ಭಕೋ. ೧೮); "ತೇಮನಂ, ನಿಷ್ಠಾನಂ– ೨ ತೇವನವೆಂಬ ಮಜ್ಜಿಗೆವಳಿದ್ಯ, ಹಸೀಮಜ್ಜಿಗೆ . . . ಚಟ್ನಿ" (ಸಿದ್ಧಾಂತಿ. ೨೪೬). [<ಸಂ. ತೇಮನ]

ತೇವಾರ (ನಾ). ತಮಿಳುನಾಡಿನ ಪ್ರಾಚೀನ ಶಿವಶರಣರಂ ಶಿವನನ್ನು ಕುರಿತಂ ರಚಿಸಿದ ಭಕ್ತಿಗೀತೆಗಳ ಸಂಗ್ರಹ: ಕನ್ನಡಗೀತಾಸಾಹಿತ್ಯದ ಮೇಲೆ ತಮಿಳುನಾಡಿನ ಶಿವಶರಣರ ತೇವಾರಗಳ ಪ್ರಭಾವ ಅಪರಿಮಿತವಾಗಿ ಆಗಿರುವುದು (ಅವಕಂ. ೦೪ ಟಿಃಳಿ) ; ವೀರಶೈವರು ಶಿವಶರಣರ ವಚನಗಳನ್ನೂ ತಮಿಳು ಶೈವಸಿದ್ಧಾಂತದವರು ತೇವಾರಗಳನ್ನೂ ಪ್ರಮಾಣಗಳಾಗಿ ಅಂಗೀಕರಿಸಿದ್ದಾರೆ (ಕಾರದ. ೨೦೦). [←ತಮಿ. ತೇವಾರ]

ತೇವಿಸು (ಕ್ರಿ). ತೇವಮಾಡಂ; ಒದ್ದೆಯಾಗುವಂತೆ ಮಾಡಂ: ಜಲತಿ = ತೇವಿಸಿದವಂ (ಕಾಶಕ್ಕ. ೦೪೬). [ತೇವ + – ಇಸು$_3$]

ತೇವುಳ್ 'ತೇವಂಳಂ' ನೋ.
ತೇವುಳಿ 'ತೇವಂಳಂ' ನೋ.
ತೇವುಳು 'ತೇವಂಳಂ' ನೋ.
ತೇಹ 'ತೇಗ್ಹ' ನೋ.
ತೇಳ್ 'ತೇಟ್ಸ್' ನೋ.
ತೇಳು 'ತೇಟ್ಸ್' ನೋ.
ತೇಳ್ದೇರ 'ತೇಟ್ದೀರ' ನೋ.

ತೇಱಿತು (ನಾ). ಪುಷ್ಟಿಯಾದುದುಂ; ಬಲವಾದಂದುಂ; ಗಟ್ಟಿಯಾದುದುಂ: ಘನಮಪ್ಪುದು ಗಂಭೀರಸ್ವನಮಪ್ಪುದು ತೇಱಿತಪ್ಪುದುತ್ಸಾಹೋನ್ಮೀಲನ ಮಪ್ಪುದು ಹೇಷಿತಮದು ಧನಕನಕಸಮೃದ್ಧಿಮಾಡಲಾರ್ಕುಂ ಜಯಮುಂ (ಅಶ್ವಶಾ. ೬-೨೫).

ತೇಱಿದಂ = ಪುಷ್ಟನಾದವನಂ ; ಬಲಿಷ್ಠ : "ತೇಱಿದನೆನೆ ಪುಷ್ಟಿಯಾದಂ" (ಕರ್ಣಾನಿ. ೭೦).

[ದೇ.॥ ತಮಿ. ಮಲ. ತೇಜ್ಜು = ಉತ್ಕರ್ಷ, ಬೆಳವಣಿಗೆ]

ತೇಟು$_1$ (ಕ್ರಿ). ನಾಶವಾಗು ; ಅಳಿ (?): ಬೀಟುವಿನಂ ಕಣ್ಣುಳ್ಕೆ ನಿರಾಳಂ ಬನಮಾಗೆ ಮನದ ಮೋಹಸ್ತಂಭಂ ಬೀಟಿ ವಿಷಯಾನುರಾಗಂ ತೇಟಿ ನಭಸ್ಥಲದೊಳಾದುದುಳ್ಕಾಪಾತಂ (ಅಚಪು. ೬-೪೬).

[P ಇದು 'ತೀಟು' ಎಂಬುದರ ಅಪಲಿಖಿತವಿರಬಹುದು]

ತೇಟ್ಸ, ಬೇಳಂ$_1$, ಬೇಟ್, ಬೊೋಳಂ, ತೇಳ್, ತೇಳು, ತೇಟು (ನಾ). ಬಾಲದಲ್ಲಿ ಕೊಂಡಿಯನ್ನು ಉಳ್ಳ ಒಂದಂ ಬಗೆಯ ವಿಷಜಂತು ; ವೃಶ್ಚಿಕ : "ದ್ರುತಃ, ಅಳಿಃ, ವೃಶ್ಚಿಕಃ —ಈ ೩ ತೇಟ್ (ಬೇಳು)" (ಹಲಾಯು. ೦೦೬-೨೬) ; "ತೇಟಿಂದೆನೆ ವೃಶ್ಚಿಕದೊಳ್" (ಕರ್ಣಾನಿ. ೮೦): ಪುಟ್ಟಿದ ತಾಣಕ್ಕಟಿವಂ ಪುಟ್ಟಿಸಲೊಡರಿಸುವ ಕಿಚ್ಚು ತೇಟ್ ಕ್ರಿಮಿ ಕುತ್ಸಂ ಪುಟ್ಟುವವೋಲ್ ದುಷ್ಕೃತದಿಂ ಪುಟ್ಟಿದನೀ ಪಾಪಕರ್ಮನೆನ್ನಯ ಬಸುಱಿಂ (ಕಾದಂಕು. ೪೭೫) ; ಪರ್ದಿನಂತೆ ಕೀಬ್ಬಿರ್ ತೇಟಿನಂತೆ ನೋಯಿಸುವರ್ (ಧರ್ಮಾಮೃ. ೬-೭೩) ; ಶಿರದ ತೇಟಿನಂತೆಯುಂ ಪೊಡೆವ ಸಿಡಿಲಂತೆಯುಂ . . . ಪೋದಳ್ (ಲೀಲಾವ. ೦೪-೦೦೬ ಪ); ಕೇಡುಗಾಲಕ್ಕೆ ತಾಮೊಗೆವರ್ತೇಟಿಂಗೆವಂತಿವರ್ನನಗೆ (ಅನಂಪು. ೦೩-೪೯) ; ಮಾಡಿದ ನೇಕೆಯೊ ಮೇಲಂ ನೋಡದೆ ಬಿದಿ ವಿಷಮಫಣಿಗಣಲ್ಗಳ ವಲ್ಲಂ ರೂಢಿಸಿದ ತೇಟ್ಗಿ ಮುಳ್ಕಂ ನಾಡಜಿಕೆಯ ದುರ್ಜನಂಗೆ ನಿಡುನಾಲಗೆಯಂ (ಧರ್ಮಶಾ. ೦-೬೨) ; ಪುದಿದಿರ್ಪುದು ತೇಟ್ಗಿ ವಿಷಂ ತುದಿವಾಲದೊಳ್ (ಚಕವಿ. ೦-೩೩). **ಬೇಳು**$_1$: ಊಱಿದ ಬೇಳಿನ ಏಱಿದ ಬೇನೆಯಲ್ಲಿ ಮೂಱುಲೋಕವೆಲ್ಲಾ ನರಳಿತ್ತು (ಅವಪಂ. ೮೪-೩೭೫) ; ಬೇಳಿಂಗೆ ಬಸುಱುಯಿತ್ತೆ ಕಡೆ ದಾಳಿಗೆ ಫಲವಾಯಿತ್ತೆ ಕಡೆ (ಬಸವ-೬೬೪); ಬೇಳ ಬೆನ್ನಿನೊಳೊಡೆದು ಮೂಡುವ ಬಾಲ ವೃಶ್ಚಿಕದಂತೆ (ಕುಪ್ಪಳೀ. ೦೦-೯) ; ಬೇಳಿನ ಮಂತ್ರ ಬಾರದವನು ಹಾವಿನ ಗುದ್ದಿಗೆ ಕೈ ಹಾಕಿದನಂತೆ (ಗಾದ) ; ಹಾವಿಗೆ ಹಲ್ಲು, ಬೇಳಿಗೆ ಬಾಲ (ಗಾದ). **ಬೇಟ್** : "ದ್ರುತಮಾಲಿ ವೃಶ್ಚಿಕಂ ಕ್ರೂರಬೇಟಿನಿಕಾಂ" (ಮುಂಗರಾ. ೦೦೯-೩); ಬೇಟ್ ಚಿಕ್ಕದೆಂದಟ್ಟಜಿಂ ತೆಗೆಯಲ್ ಕಚ್ಚದೆ (ಕೋಮೀಶ. ೪೦). **ಬೊೋಳು** : ಬೊೋಳಿಗೆ ಪಾರುವತ್ಯ ಕೊಟ್ಟ ಹಾಗೆ (ಗಾದ). **ತೇಳ್** : ಅಹಿ ಕೊಣ್ಡಡೆ ತೇಳ್ ಕಿನ್ದಡೆ (ಎಇ. XII, ೨೮೨-೦೯೩ ; 1077). **ತೇಳು** : ವೇಣು ಕದಳಿ ತೇಳು ಕರ್ಕಟಗಳು ಕೇಡು ಮಾಣದೆ ತಮಗಾಗುವಲ್ಲಿ ಹುಣಿಸೆ ಫಲವಾಗುವಂತೆ ನೀ ಮಕ್ಕಳ ಜಾಣ ಪಡದೆ ಕೆಡುವುದಕೆ (ಅನಂಜ. ೩೦-೦೩೬) ; ನಾನೊಂದು ತೇಳಾಗಿ, ಅವೆಯಾಗಿ, ಅಂತಹ ಇನ್ನೇನಾದರೂ ಆಗಿ ಹು[illegible]ಬಾರದಾಗಿದ್ದಿತೇನು (ಸುಗುಣಂ. ೦೦೪-೭). **ತೇಟು**: ಸ್ಪರ್ಶ ರಸ ಗಂಧಂಗಳೆಂಬೀ ಮೂಱಿನಱಿವ . . . ವೇನು ನೀರು ತೇಟು ಇಂದ್ರಗೋಪ ತೇರಂಟಿ (ಪಸಾರ. ೪೯).

ತೇಟ ಬಾಲ = ೧. ಬೇಳಿನ ಬಾಲ : "ಅಳಂ, ವೃಶ್ಚಿಕಲಾಂಗೂಳಂ — ಈ ೨ ತೇಟ (ಬೇಳ) ಬಾಲಂ" (ಹಶಾಯು. ೦೦೬-೨೬). ೨. ಒಂದಂ ಬಗೆಯ ಸಸ್ಯ ; "ಕತ್ತರಿ" (ಚಕುವಿ. ಕ. I, ೭೬).

[ದೇ.॥ ತಮಿ. ಮಲ. ತೇಳ್ ; ತುಳು. ತೇಳ್, ತೇಲ್, ಬೇಳ್ ; ಕೊಡ. ತೇಳೀ ; ತೆಲು. ತೇಲು ; ಮಲ್ತೊ. ತೇಲೆ]

ತೇಟು 'ತೇಟ್ಸ' ನೋ.

ತೇಟ್ಕುಟಗ (ನಾ). ಬೇಳಿನ ವಿಷವನ್ನು ನಿವಾರಿಸುವ ಒಂದು ಬಗೆಯ ಮೂಲಿಕೆ: ಜಲದಿಂದಂ ತೇಟ್ಕುಟ (ಡಿ) [ಟಿ]ಗನ ನೆಲಗುಂಬಳಮೆಂಬಿವಂ ಸಮಂಗೊಂಡರೆದಿಂ ಪಲವಜಿಳೀಂ ಕುಡಿಸಲ್ಕುಂ ಖಿಲ ವೃಶ್ಚಿಕ ವಿಷಮುದಾಕ್ಷಣಂ ಪಜಿವಡುಗುಂ (ಖಪದ. ೦೧-೨೬).

[ತೇಟ್ಸ + – ಕುಟಗ]

ತೇಟ್ದೀರ, ತೇಳ್ದೀರ(ನಾ).ಬೇಳನ್ನು ವಾಹನವಾಗಿ ಉಳ್ಳವನಂ; ಭೈರವ: "ತೇಟ್ದೀರಂ ಬಿಗುರ್ವರಿಜಂ — ಈ ೨ ಭೈರವಂಗೆ ಪೆಸರ್" (ಕಶಾ. ೦-೮) ; "ಬಿಗುರ್ವರಿಜಂ ತೇಟ್ದೀರಂ ಬಗೆಯಲ್ತಾಂ ಭೈರವಂಗೆ" (ಕವಿಕಂ. ೨೩) ; ಪೊದರ್ದಲೆಯ ಕರ್ಮೋಗದ ತೇಟ್ದೀರನೊಂದು ಪೊಡರ್ಪಿನ . . . ಜವನ ದೂಱುಗಾಱರ ಜಂಗುಳಿ (ಕಾಮಾಶ್ವ. ೭೯-೦೯). **ತೇಳ್ದೇರ** : "ಭೈರವಂಗೆ ತೇಳ್ದೇರನೆಂಬ.ವ ಪೆಸರ್" (ಕಕರ. ೪೪).

[ತೇಟ್ಸ + ತೇರ್$_2$ + – ಅ$_7$]

ತೈ (ನಾ). ಕುಣಿತದ ತಾಳವನ್ನು ಸೂಚಿಸುವ ಒಂದಂ ಅನುಕರಣ ಶಬ್ದ : (ಕ).

ತೈಜಸ (ಗು). ೧. ಹೊಳಪುಳ್ಳ ; ಪ್ರಕಾಶಮಾನವಾದ. (ನಾ). ೨. ಕಾಂತಿ ; ಹೊಳಪು ; ಪ್ರಕಾಶ : ತೀಡುವೆಲರಿನ ಗುಂವು ತೀವ್ರಾಭ್ರಗಳ ಗುಂವು ಮೂಡಿ ಬಹ ಚವಲಾತಿಶಯದಿಂವು ತೈಜಸದಿ ಕೂಡಿರುವ ವೈಭವದ ಲಂಪು . . . ಚಿರಮೆನುತ ಲಾಲಿಸುವ ಮೂಢರಿಂಗೇನೆಂಬೆನು (ವಂಕಾಡಾ. ೨-೯-೨೩) : ಮಿಂಚೆ ರೋವಮಾಂಚನಿಸಿತೆಂಬವೋಲ್ ಮೊಗಕೆ ತುಳ್ಕಿದುದು ತೈಜಸಂ (ಶ್ರೀರಾಮಾ. ೩೯೯-೯೯೩). ೩. ತೇಜಸ್ಸಿಗೆ ಸಂಬಂಧಿಸಿದ ಇಂದ್ರಿಯ ; ನಯನೇಂದ್ರಿಯ ; ಕಣ್ಣು : ರೂಪವಳ್ಕ ನಯನವು ತೈಜಸ (ಭಾತತ್ತ್ವ. ೩೭೩); P ಶಾಸ್ತ್ರಗಳಲ್ಲಿ ಘ್ರಾಣಕ್ಕೆ ಭೂವಿಂ, ರಸನಕ್ಕೆ ಜಲ, ನಯನಕ್ಕೆ ತೇಜಸ್ಸು, ಸ್ಪರ್ಶಕ್ಕೆ ವಾಯು, ಶ್ರವಣಕ್ಕೆ ಆಕಾಶ —ಹೀಗೆ ಪಂಚೇಂದ್ರಿಯಂಗಳಿಗೂ ಪಂಚಭೂತಗಳಿಗೂ ಸಂಬಂಧವನ್ನು ಹೇಳಿದೆ. ೪. ಲೋಹ : "ಎಲ್ಲ ಲೋಹಂ ತೈಜಸಂ" (ಮುಂಗಡಾ. ೩೦-೩). ೫. [ತತ್ತ್ವಶಾ] ಮೂರಂ ವಿಧವಾದ ಅಹಂಕಾರತತ್ತ್ವ ಗಳಲ್ಲಿ ಒಂದು ; ರಜೋಗುಣಪ್ರಧಾನವಾದ ಅಹಂಕಾರ : ಮುತ್ತ ಜದಹಂಕಾರವದಱಿಂ ಸತ್ತ್ವದಿಂ ವೈಕಾರಿಕವು ತಿಳಿ ಮತ್ತೆ ತೈಜಸ ರಜದಿ ಕಾಮುಸದಿಂದ ಭೂತಾದಿ (ಅಮೃತ. ೪-೦೦) ; ವೈಕಾರಿಕ, ತೈಜಸ, ತಾಮಸ ವೆಂದು ಮೂರು ವಿಧ ಅಹಂಕಾರತತ್ತ್ವಗಳಿರುವುವು (ಹಸಾರ. ೦೪-೦ ತಾತ್ಪರ್ಯ) ; ಸಾತ್ವಿಕಾಹಂಕಾರಕ್ಕೆ ವೈಕಾರಿಕವೆಂದೂ ರಾಜಸಾಹಂಕಾರಕ್ಕೆ ತೈಜಸವೆಂದೂ ತಾಮಸಾಹಂಕಾರಕ್ಕೆ ಭೂತಾದಿಯೆಂದೂ ನಾಮಾಂತರಗಳು ಶಾಸ್ತ್ರದಲ್ಲಿ ಹೇಳಿವೆ (ತತ್ತ್ವಕು. ೬). ೬. (ಸಂಖ್ಯಾದರ್ಶನದ ಮೇರೆಗೆ) ಸತ್ತ್ವಗುಣಪ್ರಧಾನವಾದ ಅಹಂಕಾರ : ತೈಜಸಂ ವೈಕಾರಿಕಾಯತ್ತ ಭೂತಾದಿಯಂದಹಂಕಾರದಿಂತೀಯವನಿಯಲ್ಲಿ ಮೂದಲಿನಾದುದಾ ತೈಜಸವೆ ಸಾತ್ವಿಕದ ಗುಣವು (ವೀತ್ಪಿಪು. ೬-೫-೦೦) ; ತೈಜಸದಲ್ಲಿ ಸತ್ತ್ವಗುಣವು ಪ್ರಧಾನವಾಗಿಯೂ ವೈಕೃತದಲ್ಲಿ ರಾಜಸಗುಣವೊ ಪ್ರಧಾನವಾಗಿ ಇರುವುವು (ಭಾತತ್ತ್ವ. ೬೬೪). ೭. ಸ್ವಪ್ನಾವಸ್ಥೆಯನ್ನು ಅನುಭವಿಸುವ ಜೀವ ; ಆತ್ಮನ ಒಂದು ಅವಸ್ಥೆ : ಸೂಕ್ಷ್ಮಶರೀರದಲ್ಲಿರುವ ಜೀವನಿಗೆ ತೈಜಸನೆಂದೂ ಅಂತರಾತ್ಮನೆಂದೂ . . . ಹೇಳುವರು (ಶಿವಾಸೂ. ೪೯) ; ಈ ವಿಧದವಸ್ಥೆ

ಯಲಿ ಹೊಳೆಯುವ ಜೀವನೆನಿಸುತ ವಿಶ್ವ ತೈಜಸನೋವಿ ಪ್ರಾಜ್ಞನೆಂಬ ಪೆಸರನು ತಳೆದು ತೋಜುವನು (ಆಮ್ಮ. ೯-೦೩) : ಸೂತ್ರವೈಶ್ವಾನರರಧಿ ಗತವಿಶ್ವಾತ್ಮನುಂ ತೈಜಸಂ ಪ್ರಾಜ್ಞಕನಾದಂ ನೀನೆ (ಶಬಶಂ. ೫-೩೫); ಈ ರೀತಿಯಾದ ಪ್ರಾಜ್ಞ, ತೈಜಸ ವಿಶ್ವರೆಂಬ ಹೆಂತಗಳನ್ನು ಹತ್ತಿ ಶಿವನೇ ಆಗುವನು (ಧಾಶರ. ೫೦೭) : P ಶಾಸ್ತ್ರಗಳಲ್ಲಿ ಸ್ಥೂಲ ಶರೀರದಲ್ಲಿರುವ ಜೀವನಿಗೆ ವಿಶ್ವನೆಂದೂ ಸೂಕ್ಷ್ಮ ಶರೀರದಲ್ಲಿರುವ ಜೀವನಿಗೆ ತೈಜಸನೆಂದೂ ಕಾರಣಶರೀರದಲ್ಲಿರುವ ಜೀವನಿಗೆ ಪ್ರಾಜ್ಞನೆಂದೂ ಹೇಳಿದೆ ೮. [ಜೈನ] ಔದಾರಿಕ, ವೈಕ್ರೀಯಕ, ಆಹಾರಕ, ತೈಜಸ ಮತ್ತು ಕಾರ್ಮಣಗಳೆಂಬ ಐದಂ ಬಗೆಯಂ ಶರೀರಗಳಲ್ಲಿ ಒಂದಂ ; ಸ್ಥೂಲ ಶರೀರದಲ್ಲಿ ದೀಪ್ತಿಯನ್ನುಂಟುಮಾಡುವಂಥ ಸೂಕ್ಷ್ಮ ಶರೀರ : ಅನುಕ್ರಮದಿನಯ್ದು ಭೇದದಿನೌದಾರಿಕ ವೈಕ್ರೀಯಕ(ಮಾ)ಹಾರಕ ತೈಜಸ ಕಾರ್ಮಣಂಗಳಿವು ತನುವೆನಿಕುಂ (ಸುಳುಮಾ. ೯-೦೦) : ಔದಾರಿಕ, ವೈಕ್ರೀಯಕ, ಆಹಾರಕ, ತೈಜಸ, ಕಾರ್ಮಣ ಎಂಬ ಐದು ತರದ ಶರೀರಗಳುಂಟು . . . ತೇಜಸ್ಸು ಹುಟ್ಟುವ ಯೋಗ್ಯತೆಯುಳ್ಳ ಶರೀರವು ತೈಜಸವು (ಕೃಸಧ. ೬೨). [ಸಂ.]

ತೈಜಸಾವರ್ತನಿ (ನಾ). ಲೋಹವನ್ನು ಕರಗಿಸುವ ಮೂಸೆ: "ತೈಜಸಾವರ್ತನೀ, ಮೂಷಾ – ೨ ಚಿನ್ನ ಮೊದಲಾದ್ದು ಕರಗಿಸುವ ಮೂಸೆಯ ಪೆಸರು" (ಸಿದ್ಧಾಂತ. ೪೭೦). [ಸಂ. ತೈಜಸಾವರ್ತನೀ]

ತೈತಿಕ್ಕು (ಕ್ರಿ). (?) : ಸಂಕಲಿನಾಚಿಯರ ನೋಟದೊಡನೆ ತನ್ನ ನೋಟಂ ಫಲಿಸಲೆ ಸಂದಿಸೆ . . . ನಡೆಗೆಟ್ಟು ಕಂಪಿಸಿ ನೆಸುಬೆಮತರ್ತು ಹೊಸ ನೋಟಂ ಹೋರಟೆಗುಟ್ಟ ತೈತಿಕ್ಕಿ[ಪಾಣಾ. ಕೈತೆಕ್ಕೆ]ತಳರದೆ ತಂತಮ್ಮೊಳ ಪೊಕ್ಕ ರೂವು ಮಗುಳಲಾಱದೆ ನಟ್ಟು ನೋಡುತ್ತಿರಲ್ (ಸಂಬಿರ. ೦೩-೫೪).

[Pಇದು 'ಸೈತಿಕ್ಕು' ಎಂಬುದರ ಅಪಲಿಖಿತವಿರಬಹುದು]

ತೈತಿಕ್ಷೆ (ನಾ). ಸಹನೆ; ತಾಳ್ಮೆ: ಮಿತಿಯನರಿತಾಶೆ, ಸಮುಚಿತವ ಮರೆಯದಯತ್ನ ತೈತಿಕ್ಷೆ ಕಷ್ಟಾಂಶದಪರಿಹಾರ್ಯತೆಗೆ (ಮುಂಕುಳ. ೮೫೦).

[ಸಂ. ತೈತಿಕ್ಷ]

ತೈತಿಲ (ನಾ). ೧. ಖಡ್ಗಮೃಗ ; ಘೇಂಡಾಮೃಗ. ೨. ಒಬ್ಬ ದೇವತೆ. ೩. ಒಂದು ದೇಶದ ಹೆಸರಂ : ಬಿಸಕಾಂಭೋಜಕ ಬಾಹ್ಲೀಕ ಸೈಂಧವಾರಟ್ಟ ತೈತಿಲಂ ವಾನೇಯಂ ಪೆಸರ ಕ್ಷೇತ್ರದ ಹಯಕಾ ಪೆಸರೆ ಪೆಸರ್ ಜಾತಿಗಳ್ ಗುಣಾಧಾರಂಗಳ್ (ಅಶ್ವಶಾ. ೬-೭೬). ೪. [ಜ್ಯೋತಿ] ಹನ್ನೊಂದು ಕರಣಗಳಲ್ಲಿ ನಾಲ್ಕನೆಯದಂ. [ಸಂ.]

ತೈತ್ತಿರ (ನಾ). ೧. ಖಡ್ಗಮೃಗ ; ಘೇಂಡಾಮೃಗ. ೨. ಗೌಜಲಂಹಕ್ಕಿ ; ತಿತ್ತಿರಿ. ೩. ಗೌಜಲಂಹಕ್ಕಿಗಳ ಸಮೂಹ, ಗುಂಪು. [ಸಂ.]

ತೈತ್ತಿರೀಯ (ಗಂ). ೧. ತಿತ್ತಿರಿಶಾಖೆಗೆ ಸೇರಿದ : ತೈತ್ತಿರೀಯ ಆರಣ್ಯಕವಂತೂ ಪ್ರತಿಮಾಶಿಲ್ಪಿಗಳಾದ ತ್ವಷ್ಟಾ, ವಿಶ್ವಕರ್ಮ ಮತ್ತು ಕಶ್ಯಪರ ಹೆಸರುಗಳನ್ನು ಸ್ಪಷ್ಟವಾಗಿ ಹೇಳುವುದು (ಧಾಶರ. ೫೧೦). (ನಾ). ೨. ಈಶ, ಕೇನ, ಕಠ, ಪ್ರಶ್ನೆ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯಂ, ಛಾಂದೋಗ್ಯ, ಬೃಹದಾರಣ್ಯಕಗಳೆಂಬ ದಶೋಪನಿಷತ್ತುಗಳಲ್ಲಿ ಒಂದಂ; ತಿತ್ತಿರಿ ಶಾಖೆಗೆ ಸೇರಿದ ಉಪನಿಷತ್ತು. [ಸಂ.]

ತೈನಾತಿ (ಗು). ೧. ನಿಯುಕ್ತ ಮಾಡಿದ ; ನೇಮಿಸಿರುವ : ಮಣಿಗಾರನ ತಾಬೆಯಲ್ಲಿ ತೈನಾತಿ ಜವಾನರು ಕುಳವಾಡಿಗಳು . . . ಮುಂತಾದ ಚಾಕರರು ಉಂಟು (ಕಥಾಮು. IV, ೩೦) ; ತಾಲ್ಲೂಕಿನ ತೈನಾತಿ ಜವಾನನೊಬ್ಬ ಅವನನ್ನು ಎದೆರುಗೊಂಡನು (ಸಂಸ್ಕೃ. VI, ೫೯) ; ಟಳಕರ ತೈನಾತಿ ನೌಕರರಲ್ಲಿ ಭಿಸ್ತಿ ಎಂ ಪಕಾಲಿಯವನಿದ್ದ (ಸ್ವತಿಚ. ೩೦೩). (ನಾ). ೨. ಪರಿಚರ್ಯೆ ; ಸೇವೆ ; ಚಾಕರಿ ; ಊಳಿಗ : ಕತ್ತಿ ಗೋಪಾಲಯ್ಯ ಅವನಿನವರ ತೈನಾತಿಯಲ್ಲಿಯಿದ್ದರು (ಹೈದ. ೩೦) ; ಮುಂದೆ ಇವಳನ್ನು ಬಾದಶಹ ಬೇಗಮಳು ತನ್ನ ಖಾಸ ತೈನಾತಿಗೆಂದು ಕರೆಸಿಕೊಂಡಳು (ಹಂಸಾ. ೦೩೨) ; ತೈನಾತಿಗೊಂದು ಮನೆಯ ಆಳೂ ಹೋಗಲಿತ್ತು (ದೀಚಹ. I, ೬೦) ; ನನ್ನ ತೈನಾತಿಯಲ್ಲಿ ಷೇಕ್ ಮೊಹದಿನ್ ಎಂಬ ಕಾನ್ಸ್ಟೇಬಲ್ ಇದ್ದ (ಕಲನಿ. ೦೦೯). ೩. ಊಳಿಗಕ್ಕೆ ಇರಂವವನು; ಚಾಕರ ; ಕೈಯಾಳಂ : ಕಿಗ್ಗಟ್ಟನಾಡ ಮೋದೀಖಾನೆಯಲ್ಲಿ ಜೋಪಾನದಿಂದ ಮಡಗಿಸಿ ಅದಕ್ಕೆ ಒಬ್ಬ ತೈನಾತಿ ಮಾಡಿ (ರಾಚೀಂದ್ರ. ೭೭) : ಜತೆಗೆ ತೈನಾತಿಯೊಬ್ಬ (ಕುಡಿಕೂ. ೩೪) : ಅವರಿಬ್ಬರ ಬೆನ್ನ ಹಿಂದೆ ತೈನಾತಿಗಳು ಹೊರಡುವಂತೆ ಹಿಂದಿನಿಂದ ಹಿಂಬಾಲಿಸುವ ಜನರು ಇದ್ದೇ ಇದ್ದಾರೆ (ಚಾರುದಾ. ೪೪).

[←ಹಿಂ. ಮರಾ. ತೈನಾತ್. ತೈನಾತೀ ; ಅರ. ತಅನಾತ್]

ತೈಮಾಸ, ತಯಿಂಮಾಸ (ನಾ). ಸೌರಮಾನ ವರ್ಷದ ಒಂಭತ್ತನೆಯಂ ತಿಂಗಳಂ : ಸಂಕ್ರಾಂತಿ ಬಂದು ತೈ(ಮಾಘ–ಫಾಲ್ಗುಣ)ಮಾಸ ಹುಟ್ಟಿ ಬಿಟ್ಟಿತು (ಕೂನಿಕೃ. ೩೭). ತಯಿಮಾಸ : ಸಾಧಾ[ರಣ]ಸಂವತ್ಸರದ ತಯಿಮಾಸ ೫ ದಿಯಲೂ . . . ಆ ಸ್ನಾನಿಕರಿಗೆ ಕೊಟ್ಟ ಸಂಸ್ಕೆ (ಶಾಇಇ. IX-II, ೪೦೩-೪ ; 1870). [←ತಮಿ. ತೈಮಾಚ]

ತೈರು (ನಾ). ಮೊಸರಂ. 'ತೈರಂವಡೆ' ಪರಾ.

[ದೇ.॥ ತಮಿ. ಮಲ. ತಯಿರ್; ತೆಲು. ತೈರು]

ತೈರುವಡೆ (ನಾ). ಮೊಸರಲ್ಲಿ ನೆನಸಿದ ವಡೆ ; ಮೊಸರಂವಡೆ : ಹೈಡ್ರೊಜನ್ ಬಾಂಬಿನಿಂದ ಹಿಡಿದು ರಾಜಭವನದ ಪೂರಿ, ತೈರುವಡೆಗಳ ವಿಸ್ತಾರಕ್ಕೂ ನಮ್ಮ ಹರಟೆ ಹಬ್ಬಿತ್ತು (ಇಚಿನೋ. ೪೬). [ತೈರು + ವಡೆ]

ತೈರೂರ್ (ನಾ). ಒಂದಂ ಊರಿನ ಹೆಸರು : ತೈರೂರ ಕೌಂಡ್ಲ್ಯಗೋತ್ರದ ಗಾಮುಂಡ್ಲಸಾಮಿಗಳ ಮಗನ್ (ಎಳ. XIV, ಪುಂಡ್ಲ. ೦೩-೬ ; 895).

[? + ಊರ್]

ತೈಲ$_1$ (ನಾ). ೧. ಎಳ್ಳಿನಿಂದ ತೆಗೆದ ಎಣ್ಣೆ ; ಎಳ್ಳೆಣ್ಣೆ: "ತಿಲಮೆನಲ್ಕೆಳ್ಳು ತೈಲಮದೆಣ್ಣೆ ತೈಲಕಂ ಹಿಂಡಿ" (ಮುಂಗಡಾ. ೧೦೦-೫). ೨. ಎಣ್ಣೆ : ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ (ಧರ್ಮಾಮೃ. ೦-೪೨) ; ತಿಲದ ಮಜ್ಜಿಯು ತೈಲದಂತೆ . . . ಚಿನ್ನಮಲ್ಲಿಕಾರ್ಜುನನ ನಿಲವನಾರೂ ಅಱಿಯಬಾರದು (ಮಹಾದೇ. ಬ. ೯-೫) ; ಮುಳಲೊಳ್ ತೈಲಂಗಳಂ ಹಿಂಡಲಕ್ಕುಂ . . . ಕಡುಮೂರ್ಖಂ ಹಿತ ಕೇಳ್ವನೇ (ಸೋಮೇಶ. ೪೯) ; ಕಮಲಾಕ್ಷಿಯರು ಪೂರಿತ ಪರಿಮಳದ ತೈಲವನು ಮೊಗದು . . . ನೇವರಿಸಿದರು ಸಳ್ಳುಗುರ್ಗಳಲಿ ಶಶಿಮುಖಿಯ ಸಿರಿಮುಡಿಯ (ತೂಕರಾ. ೦-೦೪-೦೩) ; ರಘುರಾಮಚಂದ್ರನಿನಿಯಳ ಜೀವದೀವಿಗೆಗೆ ತೈಲಮುಂ ಕಾಂತಿಯುಂ ತಾನಾಗಿ ರಸವಾಹದೊಳ್ ತೇಲುತಿರ್ದನು (ಶ್ರೀರಾಮಾ. ೫೫-೩೭) ; ಇಂದು 'ಎಣ್ಣೆ' ಎಲ್ಲಾ ತರದ ತೈಲಕ್ಕೂ ಅನ್ವಯಿಸುತ್ತದೆ (ಸಂಕೋಧ.೮೮). ೩. ಕೆಲವು ಔಷಧಗಳನ್ನು ಸೇರಿಸಿ ತಯಾರಿಸಿದ ಎಣ್ಣೆ.

[ಸಂ.]

ತೈಲ$_2$, **ತೈಳ** (ನಾ). = ತೈಲಪ : ಮೊಲೆಮೊತ್ತ ತೈಲಜನನಯ ಕೆಲದೊಳ್ ರಂಜಿಪರೆ ವಿಸವೊತ್ತಣ್ಣಂಗಳ್ (ಅಚಪು. ೦-೬೫) : ಶ್ರೀತೈಲಭೂಪಾಳ (ಸಾಇಇ. XI-II, ೦೩೬-೨೯ ; 1091). ತೈಳ : ತೈಳಭೂಪ(ಃ)ಸ್ತತೋಜಾತೋ ವಿಕ್ರಮಾದಿತ್ಯಭೂಪತಿಃ (ಸಾಇಇ. XI-II, ೦೩೬-೨೨ ; 1091).

ತೈಲಪ ಸಿಂಘ = ಒಂದಂ ಬಿರುದಂ : ವೈರಿನಿಕಂಟಂ ತೈಲಪ ಸಿಂಘಂ ಸಾಹಸೋತ್ತುಂಗಂ (ಸಾಇಇ. XX, ೪೦-೦೦ ; 1068). [?]

ತೈಲಂಗ 'ತೆಲಂಗ' ನೋ.

ತೈಲಕ (ನಾ). ಎಣ್ಣೆಯನ್ನು ತೆಗೆದ ನಂತರ ಉಳಿಯುವ ಸಾರವಿಲ್ಲದ ವಸ್ತು; ಹಿಂಡಿ : "ತಿಲಮೆನಲ್ಕೆಳ್ಳು ತೈಲಮದೆಣ್ಣೆ ತೈಲ[ಪಾಣಾ. ಲಿ]ಕಂ ಹಿಂಡಿ" (ಮುಂಗಡಾ. ೧೦೦-೫). [ಸಂ.]

ತೈಲಕಾರ (ನಾ). ಎಣ್ಣೆಯನ್ನು ತೆಗೆಯುವವನು ; ಗಾಣಿಗ : ಸುವರ್ಣಕಾರ . . . ತೈಲಕಾರಾದಿ ಅನಾಥಪ್ರೇಷ್ಯ ದಾಸೀದಾಸಪ್ರಭೃತಿ ತಪಶ್ಚರಣಕ್ಕೆ ಅಯೋಗ್ಯಂಗಳಪ್ಪ ಹೀನಜಾತಿಗಳ್ (ಪಾಶ. ೫೦). [ಸಂ.]

ತೈಲಚಿತ್ರ (ನಾ). ತೈಲವರ್ಣದ ಚಿತ್ರ; ತೈಲವರ್ಣವನ್ನು ಉಪಯೋಗಿಸಿ ಬರೆದ ಚಿತ್ರ : ಛಾಯಾಚಿತ್ರಗಳು, ತೈಲಚಿತ್ರಗಳು, ನೀರು ಬಣ್ಣದಿಂದ ಬರೆದ ಚಿತ್ರಗಳು, ಇವೆಲ್ಲವೂ ಹಾಫ್‌ಟೋನ್ ಪಡಿಯಚ್ಚಿಗೆ ಯೋಗ್ಯವಾದ ಮೂಲಪ್ರತಿಗಳು (ಮುದ್ರಣ. ೬೦) ; ಅರಸರ ತೈಲಚಿತ್ರಕ್ಕೆ ನಂದಾದೀವಿಗೆ ತಗುಲಿ, ಅದು ಉರಿದುಹೋಗುತ್ತದೆ (ಸಂಸಾಳ. ೯೯).

[ತೈಲ$_1$ + ಚಿತ್ರ]

ತೈಲಧಾರೆ (ನಾ). ಎಣ್ಣೆಯಂ ಸಂರಿತ,–ಸುರಿಯಂತಿಕೆ : ಕಾಲವಕ್ಷಯು ದೀಪವದರ ಪಾತ್ರೆಯಪಾರ ಬಾಳ್ ಅದರಿನಾದೊಂದು ಕಿರುಹಣತೆ ಮಿಣುಕು ಗಾಳಿಯಾರಿಪುದೊಂದನಿನ್ನೊಂದ ಹೊತ್ತಿಪುದು ತೈಲಧಾರೆಯಖಂಡ (ಪುಂಗುಳಿ. ೦೦೪). [ತೈಲ$_1$ + ಧಾರೆ]

ತೈಲನಿಕ್ಷೇಪ (ನಾ). ಭೂಮಿಯೊಳಗಿರಂವ ಎಣ್ಣೆಯಂ ದಾಸ್ತಾನಂ,–ನಿಕ್ಷೇಪ : (Oil Reserve. ಪತ್ರಿನಿ. ೫೯). [ತೈಲ$_1$ + ನಿಕ್ಷೇಪ]

ತೈಲಪ (ನಾ). ಚಾಳುಕ್ಯವಂಶದ ಒಬ್ಬ ಪ್ರಸಿದ್ಧ ದೊರೆಯಂ ಹೆಸರಂ : ಚಕ್ರವರ್ತಿಯೊಳ್ತೈಲಪನೊಳ್ ಪಡೆದಂ ಮಹಿಮೋನ್ನತಿಯಂ . . . ರನ್ನಂ (ಗದಾಯು. ೦–೩೭) ; ಶ್ರೀವಲ್ಲಾಳುಕ್ಯಚಕ್ರೇಶ್ವರನತುಳಬಳಂ ತೈಲಪಂ (ಇಆ. IV, ೨೦೯–೬ ; 1076) ; ಕಾಲಾಗ್ನಿರುದ್ರನೆನಿಸಿದುದು ತೋಳ ಬಾಳ್ ತೈಲಪನಾ (ಶಮದ. ೦೦೭ ಪ್ರಹೋ). [?]

ತೈಲಪಕ್ವ (ನಾ). ಎಣ್ಣೆಯ ಸ್ವರೂಪಕ್ಕೆ ಬರುವಂತೆ ಪಾಕವಾಗುವುದಂ : ಅರಗಿನ ಪುಡಿ ೧ ಪಡಿಯನ್ನು . . . ತೈಲಪಕ್ವವಾಗಿ ಅಟ್ಟು, ಶೋಧಿಸಿಕೊಂಡು, ಈತೈಲದಿಂ ಶರೀರಕ್ಕೆ ಲೇಪ ಅಭ್ಯಂಗನಾದಿಗಳಂ ನಡೆಸಲು . . . ತೋಳ್ಬಿ ಮುಂತಾದ ರೋಗಗಳು ಗುಣವಪ್ಪುಂ (ಸಕಪ್ರ. ೦೩೮).

[ತೈಲ$_1$ + ಪಕ್ವ]

ತೈಲಪರ್ಣ (ನಾ). ೧. ಗಂಧ ; ಚಂದನ : "ತೈಲಪರ್ಣ – ರಕ್ತ ಚಂದನ" (ಗಂಗಾಮು. ೦೩೭). ೨. ಸಾಂಬ್ರಾಣಿ ; ಹಾಲುಮಂಡ್ಡಿ ; ಲೋಬಾನ. ೩. ದೇವದಾರುವೃಕ್ಷದಿಂದ ತೆಗೆದ ಎಣ್ಣೆ : (ಕ).

[ಸಂ. ತೈಲಪರ್ಣೀ]

ತೈಲಪರ್ಣಿಕ (ನಾ). ಒಂದಂ ಬಗೆಯಂ ಗಂಧದ ವಂರ : "ತೈಲವರ್ಣಕಂ, ೧ ಬಹಳ ತಣ್ಣಗಿರುವ ಚಂದನವು" (ನಿಘಂ೮ತಿ. ೨೦೮).

[ಸಂ. ತೈಲವರ್ಣಿಕಾ]

ತೈಲಪಾಕ (ನಾ). ೧. ಎಣ್ಣೆಯಲ್ಲಿ ಹಂರಿದ ಅಥವಾ ಕರಿದ ಪದಾರ್ಥ. ೨. ಎಣ್ಣೆಯನ್ನು ಉಪಯೋಗಿಸಿ ಒಂದಂ ಹದದಲ್ಲಿ ಕಾಯಿಸಿ ತಯಾರಿಸಿದ ಔಷಧಿಯ ವಸ್ತು : ತೈಲಪಾಕವನ್ನು ಮಾಡಲು ಎಣ್ಣೆಯನ್ನು ಹೇಳದಿರುವಲ್ಲಿ ಅಚ್ಚಳ್ಳೆಣ್ಣೆಯೆಂದು ತಿಳಿಯಬೇಕು (ಸಕಪ್ರ. XII). ೩. (?) : ಅನವರತ ಪ್ರಮುಚ್ಯಮಾನಪ್ರಚುರನಿಜನಾರಾಚ ರಾಜಿಯಿಂದಮವಿರಳ ಮದಜಳ ತೈಲಪಾಕ ದುರಾಲೋಕಂಗಳಪ್ಪ ತದ್ಬಲ ಕರಟಘಟಂಗಳನಲ್ಪತುಚ್ಛಚ್ಛಿದ್ರಂಗಳ್ಮಾಡಲ್ಪಡೆಯದೆಯುಂ (ಆ ದಿ ಪು. ೦೪–೦೦೩ ಪ).

[ತೈಲ$_1$ + ಪಾಕ$_1$]

ತೈಲಪಾಯಿಕೆ (ನಾ). ೧. ಜಿರಳೆ ; ತೊಂಡಂಗಿ. ೨. ಒಂದಂ ಬಗೆಯ ಕೀಟ ; ಜೀರುಂಡೆ. ೩. ತೊಗಲಬಾವಲಿ : "ತೈಲಪಾಯಿಕೆ–ತೊಗಲ ಬಾವುಲಿ" (ಗಂಗಾಮು. ೦೩೭). [ಸಂ. ತೈಲಪಾಯಿಕಾ]

ತೈಲಯ (ನಾ). ಒಬ್ಬಾತನ ಹೆಸರಂ : ಚಾಗಿಗಳ ಬಲ್ಲಹಂ ಮಾರಹೂರ ತೈಲಯ (ಎಕ. VIII, ಸಾಗರ. ೬–೦೪ ; 1025).

[ತೈಲ$_2$ + ಅಯ$_1$ (<ಅಯ್$_{11}$)]

ತೈಲಯಂತ್ರ (ನಾ). ೧. ಎಣ್ಣೆಯನ್ನು ತೆಗೆಯಂವ ಯಂತ್ರ ; ಗಾಣ. ೨. ಎಣ್ಣೆಯ ಹಬೆಯ ಸ್ಫೋಟನದಿಂದ ನಡೆಯುವ ಯಂತ್ರ,–ಎಂಜಿನಂ : ತೈಲಯಂತ್ರ (Oil-Engine)–ಇದರಲ್ಲಿ ಡೀಸಲ್ ಎಣ್ಣೆಯಂಥ ಭಾರವಾದ ಎಣ್ಣೆಗಳನ್ನು ಇಂಧನವಾಗಿ ಬಳಸುತ್ತಾರೆ (ತಿಲ್ಕಾಣ. ೨೦೩).

[ತೈಲ$_1$ + ಯಂತ್ರ]

ತೈಲರಂಧ್ರ (ನಾ). "ಯಂತ್ರಗಳಲ್ಲಿ ತಿಕ್ಕಾಟ, ಮಸೆದಾಟ, ಕಡವೆಂ ಮಾಡಲು ಘರ್ಷಣಾಪಹರಣಕ್ಕಾಗಿ ಎಣ್ಣೆ ಒಳಪೊಸರುವಂತೆ ಮಾಡಿರುವ ರಂಧ್ರ" (Oil-Hole. ಇಂಕನಿ). [ತೈಲ$_1$ + ರಂಧ್ರ]

ತೈಲವರ್ಣ (ನಾ). "ವರ್ಣದ್ರವ್ಯಕ್ಕೆ ಎಣ್ಣೆಹಾಕಿ ಅರೆದು ಮಾಡಿದ ಬಣ್ಣ" (Oil-Colour. ಇಂಕನಿ) : ಅನಂತರ ಈ ಕೆಲಸಗಳಿಗೆ ತೈಲವರ್ಣ (Oil-Colours) ವನ್ನು ಉಪಯೋಗಿಸತೊಡಗಿದರು (ಡಾಂಪ್ರ. I, ೪೯೩).

[ತೈಲ$_1$ + ವರ್ಣ]

ತೈಲವರ್ತಿ (ನಾ). ೧. ಎಣ್ಣೆಯಲ್ಲಿ ಅದ್ದಿದ ಬತ್ತಿ. ೨. ಎಣ್ಣೆಯಂ ಬತ್ತಿಯಿಂದ ಕೂಡಿದ ದೀಪ : ತೈಲವರ್ತಿ, ಘೃತವರ್ತಿ, ಕರ್ಪೂರವೆಂಬ ತ್ರಿವಿಧದೀಪಂಗಳಂ (ವಿಚೀಕ. ೦೦೩). [ತೈಲ$_1$ + ವರ್ತಿ]

ತೈಲವಾಯು (ನಾ). ಇಂಗಾಲ ಮಿಶ್ರವಾದ ವಾಯು : ಕಾರ್ಬೊನ್ನು, ಜಲವಾಯುಗಳ ಮಿಶ್ರಣದಿಂದ ಹುಟ್ಟುವ ಅಪಕಾರಕ ವಾಯುಗಳು–ಇವು ಕರ್ದಮೋತ್ಥ ವಾಯುವೆಂತಲೂ ತೈಲವಾಯುವೆಂತಲೂ ಎರಡು ಸರುತ್ತವೆ (ಪುಂಬಹು. ೬–೪೦). [ತೈಲ$_1$ + ವಾಯು]

ತೈಲಶೋಧನಾಗಾರ (ನಾ). ಎಣ್ಣೆಯಂನ್ನು ಶುದ್ಧೀಕರಣಗೊಳಿಸುವ ಕಾರ್ಖಾನೆ : (Oil-Refinery. ಪತ್ರಿನಿ. ೫೯).

[ತೈಲ$_1$ + ಶೋಧನ + ಆಗಾರ]

ತೈಲಸಿಕ್ತ (ನಾ). ಎಣ್ಣೆಯಂನ್ನು ಲೇಪಿಸಿಕೊಂಡಿರುವವನು : ತೈಲಸಿಕ್ತಂ ವಿರೋಧಿಪನೊರ್ವಂ ದ್ವಿಜ ಮುಕ್ತಕೇಶಿ . . . ಧೂಮುಮಂ ನಿಪುಣರ್ ಕಂಡರೆ ಪೋಗರೈ (ಸೋಮೇಶ. ೬೮).

[ತೈಲ$_1$ + ಸಿಕ್ತ]

ತೈಲಸ್ಫಟಿಕ (ನಾ). ಒಂದಂ ಬಗೆಯಂ ಹವಳ ; ಶಿಲಾರಾಳ ; ಕರೋಬಾ ಮಣಿ : ಕಾರೂಬಾಮಣಿ, ಶಿಲಾರಾಳ, ತೃಣಮಣಿ, ತೈಲಸ್ಫಟಿಕ, ಅಂಬರ್ (Amber. ಇಂಕನಿ). [ತೈಲ$_1$ + ಸ್ಫಟಿಕ]

ತೈಲಾಭ್ಯಂಗನ (ನಾ). ತಲೆ ಮಂತ್ತು ಮೈಗೆ ಎಣ್ಣೆಯಂನ್ನು ಹಚ್ಚಿಕೊಂಡಂ ಮಾಡಂವ ಸ್ನಾನ ; ಎಣ್ಣೆ ಸ್ನಾನ : ಅಂಗನೆಗೆ ಸೌರಭ್ಯ ತೈಲಾಭ್ಯಂಗನ ವನಾಚರಿಸಿ . . . ತಂದುಡಿಸಿದರು ನವದುಕೂಲವನು (ಬಸಪು. ೪–೩೪).

[ತೈಲ$_1$ + ಅಭ್ಯಂಗನ]

ತೈಲಾಭ್ಯಂಜನ (ನಾ). =ತೈಲಾಭ್ಯಂಗನ : ಅಂದು ಎಲ್ಲರೂ ತೈಲಾಭ್ಯಂಜನ ಮಾಡಿ . . . ಕಣ್ತುಂಬ ನಿದ್ರೆಮಾಡಬೇಕೆಂದು ರಾಜನ ಆಜ್ಞೆ (ನಟಸಾ. ೬೪೦). [ತೈಲ$_1$ + ಅಭ್ಯಂಜನ]

ತೈಲಾರಿ (ನಾ). ಎಣ್ಣೆಯ ಶತ್ರು ; ಎಣ್ಣೆಯನ್ನು ಹೋಗಲಾಡಿಸುವುದು ; ಸೀಗೆ : "ತೈಲಾರಿಯೆನಲಾ ಸೀಗೆಯಕ್ಕುಂ" (ಪುಂಗಣಾ. ೪೩–೪೪).

[ತೈಲ$_1$ + ಅರಿ$_6$]

ತೈಲಾರ್ಚಿ (ನಾ). ಎಣ್ಣೆಯ ದೀಪ : ಒಂದಾದ ಮೇಲೊಂದು ನಿರ್ವಾಣವೊಂದಲಾ ತೈಲಾರ್ಚಿತತಿ ಮುಂಜುಮುಂಜಾಗಿ ತೋರ್ದಡಂ, ಕೈಗಣ್ಮೆ ದೋಲಾಯ್ತು ಶೈಶಿರಜ್ಯೋತ್ಸ್ನೆ (ಶ್ರೀಕಾಮು. ೪೪೦–೧೦೪).

[ತೈಲ$_1$ + ಅರ್ಚಿ]

ತೈಲಿ 'ಥೈಲಿ' ನೋ.

ತೈಲಿಕ (ನಾ). ಎಣ್ಣೆ ತೆಗೆಯಂವವನಂ ; ಗಾಣಿಗ. [ಸಂ.]

ತೈಲಿಗ (ನಾ). = ತೈಲಿಕ : ಎಮಗೆ ತೈಲಿಗಂಗೆಳ್ಕು ಬೆಳೆದಂದವಾಯ್ತು (ಆರಾಚ. ೮–೪೯). [ತೈಲ$_1$ + – ಇಗ]

ತೈಲೀನ$_1$, ತೈಳೀನ (ನಾ). ಎಳ್ಳು ಬೆಳೆಯುವ ಹೊಲ; ಎಳ್ಳಿನ ಹೊಲ: "ತಿಲ್ಮಂ, ತೈಲೀನಂ–ಈ ೨ ಎಳ್ಳ ಕೆಯ್" (ಹಲಾಯು. ೨೬-೮); "ಎಳ್ಳ ಬೆಳೆವ ಕೆಯ್ ತೈಲೀನಮೆನಿಸಿಕ್ಕುಂ" (ಪಂಗರಾ. ೨೯-೪); ಲೀಲೆಯಿನದಱ ನೆಲಂ ಪರಿಪಾಲಿಸಿದುವು ಕಣ್ಗೆ ನಾಡೆ ಮೌದ್ಗಂ . . . ತೈಲೀನಂ ಕೌದ್ರವೀಣಮೌಮ್ಯಂ ಯವ್ಯಂ (ಕಂದ್ರಪು. ೧-೯೦). **ತೈಳೀನ**: ಏನೆಸೆವುವೊ ಕೌದ್ರವೀಣದೌಮಿನದ ತೈಳೀನದ ಮಾಷೀಣದ ಮೌದ್ಗೀನದ ಬಹುಸಾರ ಸಸ್ಯಸಕಳಫಳಂಗಳ್ (ಪುಷ್ಪಪು. ೨-೦೨). [ಸಂ.]

ತೈಲೋಕವೊಟಲ್ (ನಾ). ಒಂದು ಸ್ಥಳದ ಹೆಸರು: ತೈಲೋಕವೊಟಲಂ ದೊಮ್ಮಬ್ಬೆ ಆಳುತ್ತಿರೆ ಅಲ್ಲಿ ಕೊಟ್ಟದು ಆಱುಗಣ್ಣುಗ ಮಣ್ಣು (ಎಕ. XII, ಶಿರಾ. ೨೪-೪೩; ಸು. 900). [ತೈಲೋಕ$_0$ + ಪೊಟಲ್$_2$]

ತೈಳ 'ತೈಲ$_2$' ನೋ.

ತೈಳೀನ 'ತೈಲೀನ' ನೋ.

ತೊಂಗಲ್, ತೊಂಗಲು (ನಾ). ೧. (ತೂಗಾಡುವ) ಗೊಂಚಲು; ಗುಚ್ಛ; ಕುಚ್ಚು; ಗೊಂಡೆ: "ತೊಂಗಲ್ ತೊಂಬೆ ಗೊಂಚಲ್ ತೊಡಂಬೆ ನುಣ್ಪೊದೆದ ಜೊಂಪಂ ತೊಂಗೆ ಗುಚ್ಛಮೆಂದಿರದೊಪ್ಪಿ ಪದೆದ ನಾಮಂ" (ಕಬ್ಬಿಳ್ಳಿ. ೦೯); ಪೊಂದಳಿರ ತೊಂಗಲ್ಗಳ ಸುತ್ತುಗೊಂಡ ಸುರಿಗೆಯ ಮುತ್ತಿನ ಬುಂಭುಕಂಗಳ ನಡುವೆ ಕಡೆಯಿಕ್ಕಿದ ಬಿಡುಮುತ್ತಿನ ಪೊಡರ್ದುಣ್ಮುವ ಬೆಳಗು (ಆದಿಪು. ೮-೦೫ ಪ); ಘನನಿತಂಬಬಿಂಬಮಂ ಬಳಸಿದ ನೂಲ ತೊಂಗಲ ಮಧುರಧ್ವನಿ . . . ಪೊಣ್ಮೆಯುಂ (ಪಂಪಿಪು. ೪-೯೭); ತಳಿರ ತೊಂಗಲ ಗದ್ದುಗೆಯೊಳೋಲಗಂಗೊಟ್ಟು . . . ಮುನಿನಾಥ ಕಣ್ಗೆಸೆದಿರ್ದನು (ಹರಿಶಾ. ೫-೬೬); ತಳಿರ ತೊಂಗಲ್ ಕೆಂಜೆಡೆಯ ಬಿಂಕಮಂ ಬೀಱೆ . . . ನೇಱಿಲ್ವರಂ ಚೆಲ್ವಾದುದು (ಪದ್ಮರಾ. ೮-೩೦). ೨. ಹೂವಿನ ಗೊಂಚಲು: "ತೊಡಂಬೆ . . . ತೊಂಗಲ್, ಜೊಂಪಂ, ಗೊಂಚಲ್, ಗುಚ್ಛಂ–ಈ ೭ ಪುಷ್ಪಮಂಜರಿ" (ಕಶಾ. ೦೦-೦೯೬). ೩. ಗುಂಪು; ರಾಶಿ; ಸಮೂಹ: ಸಂಗಡಿಸಿದ ಕಿಱುಜಡೆಗಳ ತೊಂಗಲ್ಗಳಿನೊಪ್ಪೆ ಜಾನು ಚಂಕ್ರಮಣಂ . . . ಸಿಂಗದ ಮಱಿಯಂತಿರೆಸೆದು ತೋರ್ಪ ಕುಮಾರಂ (ಕಾದಂಪೂ. ೩೫೭); ಧರಿತ್ರಿಯೊಳ್ ಕೆದಱುತುಮಿರ್ಪ ತಣ್ಗದಿರ ತೊಂಗಲ ಡಂಗೆ . . . ಮಾಸಿದ ಮುಕುರಂಬೊಲಂತೆ ವಿಗತಪ್ರಭನಾಯ್ತಮೃತಾಂಶು ಮಂಡಲಂ (ಕುಸುಮಾ. ೪-೬೭); ನೆಣವಸೆಯ ತೊರೆಯ ತೊಂಗಲಿ ನೊಂದೆಸೆವ ಚಕ್ರವ ನೋಡಿದನು ದೈತ್ಯಾರಿ (ಕುಮಾಧೀ. ೬-೩೨). ೪. ತಲೆಯಲ್ಲಿ ಧರಿಸುವ ಒಂದು ಬಗೆಯ ಆಭರಣ: ಒಪ್ಪುವ ವೀರಪಟ್ಟ ಮುದಯಂಗೆಯ್ವಂದುವಂ ತೋರ್ಪ ತೊಂಗಲೆ ಜಂಬೂವಿಟವಪ್ರಹಾರ ರುಚಿಯಂ ವಕ್ತ್ರಾರುಣಂ ಸಂಜೆಯಂ ಗೆಲೆ ಪೋಲ್ತತ್ತು (ಕಾವ್ಯಸಾ. ೩೨೫ ಕೂದ್ರಳ); ಹರನರಸಂ ಸುರರ್ನೆರದ ಗುಣ್ಡು ಜಟಾವಳಿ ತೊಂಗಲಿನ್ದ್ರ ದುರ್ಧರ ಗಿರಿಸೇತು ಧರ್ಮ್ಮಗಳೆಯಂಕದ ಮದ್ದಳೆ (ಎಕ. XII, ಶಿರಾ. ೨೮-೬೭; 943); ಆದಿತ್ಯನ ಬಲಮೆ ಮಾಬಲಮಾಗೆ ಚನ್ದ್ರನೆ ಚನ್ದ್ರಬಲ ಮಾಗೆ ನಕ್ಷತ್ರ ತಾರಾಗಣಗಳೆ ತೊಂಗಲಾಗೆ (ಎಕ. X, ಕೋಲಾರ. ೦೭೦-೧೫; ಸು. 1180 ?). ೫. ತೂಗಾಟ; ನೇತಾಡುವಿಕೆ. 'ತೊಂಗಲಿಸು' ಪರಾ. ೬. ಒಂದು ಬಗೆಯ ಆಯುಧ (?): ರಾಹುವೇ ತೊಂಗಲಾಗಿ ಕೇತುವೇ ಸುರಿಗೆಯಾಗಿ ಕುಳಿಕನೇ ಮೊನೆಯಾಗಿ (ಎಕ. VII, ಶಿಕಾರಿ. ೧೦೮-೪೩; 1054). ೭. ಜುಟ್ಟು (?): ಪುಗದೆಡೆಮಾಡು ಚಪ್ಪರಿಸು ರೂಪಿಡು ಕೂಪಿಡು ಕೂರ್ಪುದೋಱು ಪಾಱಿಗಿಯದೆ ಕೂರ್ಮೆ ಮಿಕ್ಕು ತೆಗೆ ತೊಂಗಲನಿಂಬೆನೆ ನೂಂಕು ಯುದ್ಧಮಂ (ಕಾವ್ಯಾವ. ೪೦೬). **ತೊಂಗಲು**: ೧. "ತೊಂಗಲೆನೆ ತೊಡಂಬೆಯೆನಲ್ಕೆ ಗುಚ್ಛಂ" (ಕಶರ. ೪೮); ತೊಡಕುಗರುಳಿನ ತೊಂಗಲಿನ ಹೊಱವಡುವ ನೆತ್ತರ ಬಾದಣದ . . . ಹೊರಳುವ ಹೆಣನ ರಾಶಿಯಲಿಡಿದುದಿಳೆ ಕಲಿಕುಂಭಕರ್ಣನ ಕರದ ಕದನದಲಿ (ತೊರರಾ. ೬-೨೮-೩೦); ಹೊಂಗೇದಗೆಯದಿರ್ಗಂಚಿ ಕಮ್ಮಲರ್ಗಳ ತೊಂಗಲು ಮೆಱೆದುವಪ್ರದಲಿ (ಮೋಹಶ. ೦೬-೧೯). ೬. ತುಱಿಲಸಂದಂಗನುವರಂ ಮುಟ್ಟದೊಡಂ ಶ್ರಾವಕಂಗೆ ಬೋಧಿ ಪುಟ್ಟದೊಡಂ ಆತಂ ತೊಂಗಲ[ಪಾಠಾಂ. ತೊವಲ]ನೇಱಿಸಿ ಕೊಂಡು ನಡೆವುದು ಈತಂ ಮಹಾವ್ರತಂಗಳನೇಱಿಸಿಕೊಂಡು ತಪೋವನಕ್ಕೆ ನಡೆವುದು (ಜೀವಸಂ. ೨೧೨-೩).

ತೊಂಗಲಾಡು = ತೂಗಾಡು; ಅಲುಗಾಡು: ಉರಿಗಣ್ಣ ಜಾಲ ದಳ್ಳಿಸೆ ನಿಚ್ಚವಚ್ಚದ ಪಂದಲೆ ತೊಂಗಲಾಡೆ . . . ಮಾರುತಿಗೆ ಮೊಗಂ ಮುಮ್ಮೊಗನಾಗೆ ಜಡಿದಂ (ರಾಮಾಶ್ವ. ೦೩೨-೮).

[ದೇ. ಕನ್ನಡ ತಮಿ. ತೊಜ್ಜಲ್; ಮಲ. ತೊಜ್ಜಲ್; ತುಳು. ತೊಂಗೆಲ್, ದೊಂಕೆಲ್; ತೆಲು. ತೊಂಗಲಿ]

ತೊಂಗಲಿಸು (ಕ್ರಿ). ತೂಗಾಡು; ನೇತಾಡು: ಚೆಲ್ವ ದಶಾಂಗಮುಖ್ಯದ ನಱುವೊಗೆಗಳಂ ತೊಂಗಲಿಪ ಸರಘಂಟೆಯಿಂ ಮೆಱೆವುದನರಸ ಕಂಡ (ಸಾಳ್ವಭಾ. ೪-೪೦). [ತೊಂಗಲ್ + – ಇಸು$_3$]

ತೊಂಗಲು 'ತೊಂಗಲ್' ನೋ.

ತೊಂಗಲುಗುರುಳ್ 'ತೊಂಗಲ್ಗುರುಳ್' ನೋ.

ತೊಂಗಲ್ಗಂಟೆ (ನಾ). ಗಂಟೆಗಳ ಗುಚ್ಛ; ಗಂಟೆಸರ: ತೋಳ ಕಚ್ಚಳಿಯ ತೊಂಗಲ್ಗಂಟೆಯ ಜೋಡುಶಂಖದ ಜಗಜಂಪಿನ ಸತ್ತಿಗೆಯ ಪಲಬಿರುದು ಗಳ್ನೆಗಳ್ತೆವಡೆಯೆ (ರಾಜಶೇ. ೬-೦೦ ಪ). [ತೊಂಗಲ್ + ಗಂಟೆ$_2$]

ತೊಂಗಲ್ಗುರುಳ್, ತೊಂಗಲುಗುರುಳ್ (ನಾ). ದಟ್ಟವಾದ ಕೂದಲು; ಒತ್ತೊತ್ತಾಗಿರುವ ಮುಂಗೂದಲು: ನೊಸಲಂ ತೊಂಗಲ್ಗುರುಳ್ ಮೇಲುದನೊಗೆವ ಕುಚಂ ಬೆನ್ನನಾ ನೀಳಕೇಶಪ್ರಸರಂ . . . ಓರಂತಲೆಯೆ ಭರತನಂ ನೋಡಲೈತಂದಳೊರ್ವಳ್ (ಆದಿಪು. ೧೧-೦೬); ರವಿ ಹಿಮಕಿರಣಂ ಕುಂಡಲಂ ನೀಲಮೇಘಪ್ರಕರಂ ತೊಂಗಲ್ಗುರುಳ್ಗಳ್ (ಧರ್ಮಾಮೃ. ೯-೨೩೦); ನಗೆಮೊಗಂ ತೊಂಗಲ್ಗುರುಳ್ ಕೆಂದಳಂ . . . ಚೆಲ್ವಾಗಿರೆ ನಿಂದ ಬೇಡಿತಿಯರಂ ಕಂಡಂ ಮಹೀವಲ್ಲಭಂ (ಕಾವ್ಯಾವ. ೨೦೬); ತೆಳ್ವಸುಱ ತೊಂಗಲ್ಗುರುಳ ವಿಮಲ ಪದ್ಮಾವತಿಯ ನಿಟ್ಟಿಸಿದನು (ರಾಘವ. ೦೩-೨೯). **ತೊಂಗಲುಗುರುಳ್**: ತೊಳವಗಂಗಳ ನಗೆಮೊಗದ ತೊಂಗಲುಗುರುಳ ಸುಲಿಪಲ್ಲ . . . ಕಡು ಚೆಲುಶಬರಿಯರು ಕಾಳರಾತ್ರಿಯ ಸಿರಿಗಳೆನಿಸಿದರು (ಸಾಳ್ವಭಾ. ೦೬-೬). [ತೊಂಗಲ್ + ಕುರುಳ್$_1$]

ತೊಂಗಲ್ಗೊಳ್ (ಕ್ರಿ). ೧. ಗೊಂಚಲಾಗು; ಜೊಂಪೆಯಾಗು: ತೊಂಗಲ್ಗೊಂಡುರು ಕರ್ಣಿಕಾರದಲರಂ ನಲ್ವಾಱೆವಣ್ಣಂ ಮಹೀಶಾಂಗಿತ್ತಳ್ (ಉದ್ಧಟ. ೯-೦೨); ತೊಂಗಲ್ಗೊಂಡಿರ್ದ ಕೆಂಪಾದಸುಗೆಯ ತಳಿರಂ . . . ಕೊಟ್ಟನೊರ್ವಂ (ಕಬ್ಬಿಳಾ. ೦೮). ೨. ರಾಶಿಯಾಗು; ಒಟ್ಟಾಗು: ಸದ್ಭಕ್ತೋಕ್ತಿ ತೊಂಗಲ್ಗೊಂಡಿರ್ಪಿನವೊಲ್ದು ನಿಟ್ಟಿಸಿ ಸಮಂತಾ ನಂದಮಂ ತಾಳ್ದು (ಉದ್ಧಟ. ೧೧-೭೯). [ತೊಂಗಲ್ + ಕೊಳ್$_1$]

ತೊಂಗಲ್ದೊಂಗು (ಕ್ರಿ). ಗೊಂಚಲಾಗಿ ತೂಗಾಡು: ಬಳ್ಳಿಯೊಳ್ ಪಣ್ತು ತೊಂಗಲ್ದೊಂಗುವ ತೊಡೆಯ ಕಱೆವಣ್ (ರಾಮಾಶ್ವ. ೬೦-೧೧).

[ತೊಂಗಲ್ + ತೊಂಗು$_1$]

ತೊಂಗಲ್ವರಜಿ (ನಾ). (ಅಲಂಕಾರದ) ಗೊಂಡೆಗಳಿಂದ ಕೂಡಿದ ಹಗ್ಗ: ಕನಕಘಂಟೆಗಳ್ಮಿಳಿರ್ವ ಕೊರಲ ಮಿಸುನಿಯ ತೊಂಗಲ್ವರಜಿಯ ಚಿನ್ನಮಣಿ ಪುದಿದ ಪಕ್ಕಗಂಟೆಯ . . . ಗಂಧಸಿಂಧುರಸಂದೋಹದಿಂ (ರಾಜಶೇ. ೬-೦೦ ಪ). [P ಇದು 'ತೊಂಗಲ್ವೊರಜೆ' ಎಂಬುದರ ಅಪಲಿಖಿತ]

ತೊಂಗಳೆ (ನಾ). (?): ತೊರಳೆ ತೊಂಗಳೆ ಮಜ್ಜೆ ಮಾಂಸಗಳನು ಸವಿದುರು ಭೂತದೆಂಜಲು ಕೈಗೆ ಎಱೆವ ಘಟದ ವಾರಿಗಳೆನೆ ರಕ್ತವ ಕಱೆದುವು ಭಟರ ಖಡ್ಗಗಳು (ಕಂನವಿ. ೦೫-೫೩). [?]

ತೊಂಗಿಸು (ಕ್ರಿ). ಒದಗಿಸು ; ಒಡ್ಡು : ಅಂಗಜ ಹೆಂಗಳ ಸಿಂಗರ ವನದೊಳು ತೊಂಗಿಸಿ ಮುನಿಮೃಗಾವಳಿಯ ಜಂಗುಳಿಗೊಡ್ಡಿದ ಬೆಳ್ಳಾರ ವಲೆಯೆನೆ ಕಂಗೊಳಿಸಿತು ಸೂಳೆಗೇರಿ (ಕಂನವಿ. ೬-೯೦).

[ತೊಂಗು$_1$ + – ಇಸು$_3$]

ತೊಂಗು$_1$ (ಕ್ರಿ). ೧. ತೂಗಾಡು ; ಜೋಲಾಡು ; ತೊನೆದಾಡು : ತೊಂಗುವ ಫಲಾವಳಿಯ ಭಾರಂಗಳಾವಗಂ ಪಿಂಗವು (ಚೈಮಿಭಾ. ೦೯-೬) ; ಕಮ್ಮಲರ್ಜೊಂಪವೆ ಜಲ್ಲರಿಯಾಗೆ ಪಣ್ತು ತೊಂಗುವ ಪಣ್ ಫಲಾವಳಿಯಾಗೆ (ರಾಮಾಶ್ವ. ೫೬-೨೬). ೨. ಬಾಗು ; ಬಗ್ಗು : ತೊಲಗು ಚಿಂತೆಯೆ ವಿಕಟಗುಹೆಯೊಂದು ನಿನಗಿರಲಿ . . . ತೊಂಗಿದರೆಗಲ್ಲುಗಳ ಮರೆಗೆ ಬೇಗನೆ ಹಾರು (ಭಾವಗೀ. ೨೨೬). ೩. ಹೊರಟುಹೋಗು; ಸರಿ : ಅವಳ ಪೊತ್ತ ಮನದ ತಲೆಗೆ ನೋವು ತೊಂಗದಾ ನೋಟಕಜನದ (ಕುರಾಸಾಂ. ೨೦-೬೨) ; ತೊಂಗಿದ ಹಲ್ಲು ಬಹವೆ (ಭರಜ. ೩೯-೯೦). ೪. ಒದಗು ; ಉಂಟಾಗು ; ದೊರಕು : ಅಲಘುರುಜೆಗಳ್ತೊಂಗೆ ನಾರುಬೇರ್ಮಣಿ ಮಂತ್ರಗಳನೊಲ್ಲದಿಹುದು ಮೂವತ್ತೆಂಟನೆಯ ಶೀಲ (ಪಾಸೋಪು. ೨-೬೬); ಲಿಂಗದ ಹಾರ ಜಂಗಮದರ್ಥದಾಗರ ತೊಂಗುವ ಭವಕೆ ನೀ ದೂರ (ಅಮುಸಾಂ. ೫-೯೩); ವೈಭವಂ ಪಿಂಗಿ ತೊಂಗಿದ ದರಿದ್ರದುಃಖದೊಳಾರ್ಯ ಚೂಡಾಮಣಿಯ ಬಳಿಗೆ ಬಂದು (ಕೂಟ್ಯೂಬಿ. ೦೩-೩೪). ೫. ಬಯಸು ; ಆಸೆಪಡು : ಹೊಂಗುವ ಮನ ಶಿವಪೂಜೆಗೆ ತೊಂಗುವ ಮನ (ಶಂಕಕಂ. ೨೬). [ದೇ.॥ ತಮಿ. ಮಲ. ತೊಙ್ಕು ; ತೆಲು. ತೊಂಗು]

ತೊಂಗು$_2$ (ನಾ). ೧. ಜೋಲು ಬಿದ್ದಿರುವುದು ; ನೇತಾಡುವಿಕೆ : (ಕಿ). ೨. ಆಧಾರವಿಲ್ಲದಿರುವಿಕೆ : ಹಂಗು ಹರಿದ ಮೇಲೆ ತೊಂಗೇನು ತೊಡರೇನು? (ಗಾಜೆ).

ತೊಂಗುತೊಸಗು = ತಪ್ಪನ್ನು ಹುಡುಕುವಾಗ ಆಡುವ ಮಾತು : ಎಂಥ ಪದಾರ್ಥವನ್ನು ತಂದುಕೊಟ್ಟರೂ ತೊಂಗುತೊಸಗು ಎಂದು ಹೇಳುತ್ತೀರಿ (ಪಂಯಾತ್ರೆ. ೫೫). [<ತೊಂಗು$_1$]

ತೊಂಗೆ, ಜೊಂಗೆ (ನಾ). ೧. ಗೊಂಚಲು ; ಗುಚ್ಛ : "ತೊಂಗಲ್ ತೊಂಬೆ . . . ತೊಂಗೆ ಗುಚ್ಛಮೆಂದಿರದೊಪ್ಪಿ ಪದೆದ ನಾಮಂ" (ಕಬ್ಬಿಳ್ಳೆ. ೦೯) : "ತೊಡಬೆ . . . ಗುಚ್ಛಂ ಸೊಗಯಿಪ ತೊಂಗೆಯೆ ತೊಂಗಲ್ ಬಗೆಯಲ್ ಬುಧರಿಂದೆ ಗುಚ್ಛಕಕ್ಕುಂ ನಾಮಂ" (ಕವಿಕಂ. ೭೮). ೨. ಹೂವಿನ ಗೊಂಚಲು : "ತೊಡಂಬೆ, ತೊಡಬೆ, ತೊಂಗೆ . . . ಗುಚ್ಛಂ–ಈ ೭ ಪುಷ್ಪಮಂಜರಿ" (ಕಶಸಾ. ೫೫-೦೯೬). **ಜೊಂಗೆ** : ೧. ತ್ರಿಕೂಟವೆಂದೆಂಬ ತ್ರಿವಿಧಮೂಲೆಯ ಜೊಂಗೆ (ಚಿದಾವ. ೫೮-೬).

[ದೇ.॥ ತುಳು. ತೊಂಗೆ, ಜೊಂಕೆ, ದೊಂಕೆ]

ತೊಂಚವಂಚ, ತಂಚಾವಂಚ, ತೊಂಚಾವಂಚ (ನಾ). ಹಿಂದು ಮುಂದು ನೋಡುವಿಕೆ ; ಅನುಮಾನ ; ಮೀನಾಮೇಷ : ಎಣಿಸುವುದು : ಏನು ಹೇಳಬೇಕೋ ತಿಳಿಯದೆ ತೊಂಚವಂಚಪಡುತ್ತ ಇದ್ದ ಆನಂದ (ಮರಳಿ. ೩೬). **ತಂಚಾವಂಚ** : ಈ ತಂಚಾವಂಚದಲ್ಲಿಯೇ ಕಾಲ ಕಳೆದು ಹೋಗಿತ್ತು (ರೂಪಸ. ೧೬). **ತೊಂಚಾವಂಚ** : ವಿಷಯವನ್ನೇ ಆಯ್ಕೆ ಮಾಡಿ ಎಂದರೆ ಕೊಂಚ ತೊಂಚಾವಂಚ (ಮನೋನಂ. ೦೪೪). [?]

ತೊಂಚಾವಂಚ 'ತೊಂಚವಂಚ' ನೋ.

ತೊಂಟತನ (ನಾ). ತೊಂಡುತನ (?) : ಏಳನೆ ಗುಣ ಜಱಿದು ಎಂಟಱ ಗುಣದ ತೊಂಟತನವ ಬಂಧಿಸಿ ತೋಱುವದಕ್ಕೆ ಮುನ್ನವೇಮನ ಜಾಱಿನಿಂದ ಮತ್ತೆ ಮೀಱಲಿಲ್ಲವಾಗಿ (ಮೋಳಿಮಾ. ೦೯೩-೭೨೬).

[ತೊಂಟ$_0$ + – ತನ]

ತೊಂಡ$_1$, ತಂಡು$_3$ (ನಾ). ೧. ಸೇವಕ ; ಗುಲಾಮ : ತೊತ್ತು ತೊಂಡರ ಕಾಲ ತೊಳೆದು ಸೇವೆಯ ಮಾಡಿ ಬದುಕುವನ ಪಡಿದೊತ್ತಿನ ಮಕ್ಕಳೆಂದು ಎಂಬರಲ್ಲದೆ ರಾಜಕುಮಾರನೆಂದೆನ್ನರು (ಜನ್ನವ. ಕ. ೦೮೫-೪೦೫) ; ಮಡದಿ ತೊಂಡನೆನುತ್ತ ನೀರೆಱಿಯದಿರೆ ಕೈಯ ಕಡಿದು ಹಾಯ್ಕಿಯೆ ಮೆಱಿದ ಕಲಿಕಂಬರು (ಲಶಿಶಂ. ೩೫-೪೩) ; ತೊತ್ತುಗೈವುದು ಲೋಕವೀತಗೆ ಮೃತ್ಯುಗಿತ್ಯುಗಳಿವನ ತೊಂಡರು (ಕೌಶಿರಾ. ೨೫-೭) ; ಚಾಮುಂಡಿಯನೊಲಿಸಿ ಕೊಂಡವನ ತೊಂಡನ ಮಾಡಿಕೊಡುವೆನು ನಿನಗೆ (ಕುರಾಸಾಂ. ೨೪-೩೬). ೨. ಭಕ್ತ; ಆರಾಧಕ: ಮಾಡುವವರೆಲ್ಲರೂ ಮಹಾಲಕ್ಷ್ಮಿಯ ತೊಂಡಂದಿರು (ಸರ್ವವ. ೬೩-೩೩೯) ; ಪುರಂದರವಿಠಲನು ತೊಂಡರಿಗೆ ತೊಂಡನಾಗಿ ಸಂಚರಿಸುತಿಹನು (ಪುರಂದ. ೦-೧೪೭-೩) ; ತಿರುಕುರುಂಬೆಯ ತೊಂಡರಂದು ಕಂಥೆಯನೊಗೆದು . . . ಕೈಲಾಸಮಂ ಪೊಕ್ಕರು (ಚಿಬಪು. ೫೫-೩೭). ೩.ಮುದುಕ ; ವಯಸ್ಸಾದವನು ; ವೃದ್ಧ. 'ತೊಂಡಜ್ಜ' ಪರಾ. **ತಂಡು$_3$** : ೧. ನೀನಾಡಿಸಿದಂತೆ ನಾನಾಡುತ್ತಿದ್ದೆ ಸಂಜ್ಞೆಯನಱಿದ ತಂಡಿನಂತೆ ವೇದಿಸಿದುದ ನಾ ಸಾಗಿಸಿದೆ (ಸಗಮೊ. ೮೫).

ತೊಂಡಮಂಡಳಿಕ = ಮಲೆತ ಸಾಮಂತ ; ಸೊಕ್ಕಿದ ಮಾಂಡಳಿಕ: ಅಹಿತಮಂಡಳಿಕ ಕಾಳಾನಳ ತೊಂಡಮಂಡಳಿಕ ಮಂಡಳಪ್ರಚಂಡ ದೌರ್ವ್ವಾನಳ (ಎಕ. II, ೦೪೩-೨೩ : 1131); ತೊಣ್ಡಮಣ್ಡಳಿಕ ಕುಳಾಚಳ ವಜ್ರದಣ್ಡ ಬಿರುದ ಭೇರುಂಡ್ಡ ಕಂದುಕಾಚಾರ್ಯ್ಯಂ (ಮೈಆರಿ. ೦೯೩೦, ೬೯-೫ : 1191). **ತೊಂಡರ ತೊಂಡ** = ಸೇವಕರ ಸೇವಕ ; ತೊತ್ತಿನ ತೊತ್ತು; ದಾಸಾನುದಾಸ : ನಮ್ಮ ನೀಲವರ್ಣ ತೊಂಡರ ತೊಂಡ (ವಾದಿಕೀ. ೦೨೬-೦೪). [ದೇ.॥ ತಮಿ. ತೊಣ್ಟ ; ಮಲ. ತೊಣ್ಡ]

ತೊಂಡ$_2$, ತುಂಡ$_1$ (ನಾ). ೧. ಮಲೆತವನು ; ತುಂಟ ; ಸ್ವೇಚ್ಛಾವೃತ್ತಿಯವನು ; ಉದ್ಧಟ : ತೊಂಡ ಬೇಡನು ಇಂತು ಮಾಡುವನೆ (ಕಣ್ಣರ. ದೇ. ೦೪೫-೪); ತೊಡರ್ದರನೊತ್ತಿ ತೊಂಡರನವುಂಕಿ ಕಡಂಗುವರಂ ಕಳಲ್ಚಿ (ಎಕ. VII, ಸಾಗರ. ೦೫-೩೨ ; 1218) ; ದಯಾವಿಹೀನನಧರ್ಮಂ ತೊಂಡನತಿಕಲುಷಿತಪಾಪದ ಪಿಂಡನೆನಿಪ್ಪವನೆ ಕೃಷ್ಣಲೇಶ್ಯೆಯ ಜೀವಂ (ಶ್ರಾವಕಾ. ೭೦-೯); ತೊಂಡ ಕೇಳೈ ನಿನಗೆ ಸತಿಯರು ಹೆಂಡಿರಾಗಿಯು ಮಕ್ಕಳಾಗಿಯು ಹಿಂಡು ಗೋಧನವಿದ್ದು ನೀವೇ ಮತ್ತೆ ಬೇಱಿಲ್ಲ (ಕೌಶಿರಾ. ೩೩-೨೬) ; ಪಡಿಮಾತೇನಾ ಪಾತಕ ತೊಂಡನ ಕೆಡಹಿ ಕೊರಲ ಕೊಯಿಸುವೆನು (ಕುರಾಸಾಂ. ೩೪-೦೫೬); ಬಡಿ ಬಡಿ ತೊಂಡರ ಬಾಯನೆಂದನು ಚಕ್ರಿ (ಭರಜ. ೩೬-೮೮). ೨. ಕಳವು ಮಾಡುವವನು; ಕಳ್ಳ; ಚೋರ : (ಕಿ). **ತುಂಡ$_1$**: ೧. ದ್ರವ್ಯಾಪಹಾರರಿಗೆ ತುಂಡರಿಗೆ . . . ಇದು ತಾ ಯೋಗ್ಯವಲ್ಲೆಂದ (ಜ್ಞಾನಸಿಂ. ೩೧-೪೬) ; ಜಗಳಗಂಟರೂ ತುಂಡರೂ ಅಪ್ರಮಾಣಿಕರೂ ಇರುತ್ತಾರೆ (ಕಭಾಗೆ. ೨೨೮). ೩. ನಿಷ್ಕರುಣಿ; ಕಠೋರಮನಸ್ಸಿನವನು: ತುಂಡನಾದ ಯಮನು ಬಂದು ಮಂಡೆ ಮೇಲೆ ಹೊಯ್ಯುವಾಗ ಹೆಂಡಿರು ಮಕ್ಕಳು . . . ಬಿಡಿಸೋದಿಲ್ಲ (ಪುರಂದ. ೩-೮೦-೫). 'ತುಂಟ' ಪರಾ.

ತೊಂಡರ ಗಂಡ = ದುಷ್ಟರನ್ನು ನಾಶಮಾಡುವವನು ; ಒಂದು ಬಿರುದು : ತೊಣ್ಡರ ಗಂಡನುದ್ಧತರ ಗಂಡನೋಱಂಟರ ಗಂಡನುಕ್ಕಿದುದ್ದಂಡರ ಗಂಡನೀ ಬೇಡರ ಗಂಡ (ಸೌಇಇ. IX-i, ೨೫೭-೨೧ ; 1150).

[ತೊಂಡು$_1$ + – ಅ$_7$./ಮಲ. ತೊಣ್ಣ]

ತೊಂಡ$_3$ (ನಾ). ೧. ಬಾಯಿ; ಮುಖ: ನೀಳ್ದ ನಿಡುಗಣ್ ಬೆಳಗೆ ತೊಂಡಂ ಬೆಳಗೆ ತೊಂಡರದ [ಪಾಠಾಂ. ಚೆಂಬುದರ]ಮಾಟ್ಕಿ[ಯಿನೊಡಂಬಡುತಲಾಡಿದಳು ಬೆಂಬಟಿಯ ಸಂಭ್ರಮದಲೊರ್ವಳ್] (ಸೂಕ್ತಿಸು. ೧೩-೦೦). ೨. ಕೊಕ್ಕು; ಚಂಚು: ಲಂಡಲೆವುತ ವಿಹಗರಾಜ ತೊಂಡದಿಂದಲೀ ತುಂಡಿಸಲ್ಕೆ (ದೇವೀಪ್ರ. ೬೬). ೩. (ಆನೆಯ) ಸೊಂಡಿಲು : ಬಂಧು ಜನರೆಲ್ಲರನ್ನೂ ಖಡ್ಗಪ್ರಹಾರದಿಂದ . . . ಗಜತೊಂಡಕ್ಕೆ ಸಿಕ್ಕಿದ ಬಾಳೆಯ ಗಿಡದಂತೆ ಛಿನ್ನಭಿನ್ನವಾಗಿ ಖಂಡಿಸಿದರು (ಪುರಾವಿ. ೬೫).

[<ಸಂ. ತುಂಡ]

ತೊಂಡ$_4$ (ನಾ). ಒಬ್ಬಾತನ ಹೆಸರು: ಆತನಿಂ ಬಳಿಕಂ ಗಾವುಣ್ಡಿಗೆ ನಿನ್ದನಾಹವಶೌಣ್ಡಂ ತೊಣ್ಡಂ (ಸೌಇಇ. XI-1, ೪೫-೦೩; 980). [?]

ತೊಂಡಂಗಿ, ಜೊಂಡಿಂಗ, ಜೊಂಡಿಗ, ತುಂಡಂಗಿ$_2$, ತೊಣ್ಣಂಗಿ (ನಾ). ಒಂದು ಬಗೆಯ ಹುಳು; ಜಿರಲೆ: "ಮುಖಲೋಮಿ ತೊಂ [ಪಾಠಾಂ. ತುಂ]ಡಂಗಿಯಕ್ಕುಂ" (ಮಂಗರಾ. ೪೯-೧೩). **ಜೊಂಡಿಂಗ**: ಸಣ್ಣ ಸಣ್ಣ ಇಲಿಗಳೂ ಜೊಂಡಿಂಗಗಳೂ ಪರಸ್ಪರ ಆಹಿಂಸಾಭಾವದಿಂದ ಸ್ವಚ್ಛಂದವಾಗಿ ಅತ್ತಿತ್ತ ಓಡಾಡುತ್ತಿವೆ (ಕುರಿಹಿಂ. ೧೪೮). **ಜೊಂಡಿಗ**: ರಾಜ್ಯದ ಹೆಗ್ಗಣಗಳ ತಾನೊಕ್ಕಿ ಜೊಂಡಿಗದಾ ಹುಲುಗಡಣವ ಮುಕ್ಕಿ . . . ಬೆಕ್ಕು ಹಾರುತಿದೆ ನೋಡಿದಿರಾ (ಗರಿ. ೮೨-೧೭); ಬಡಪಾಯಿ ಜೊಂಡಿಗದ ಜೀವ ತಕ್ಕೊಳ್ಳುವದು ನನ್ನ ಬೆಕ್ಕು (ಸ್ಮೃತಿಚಿ. ೩೮೯). **ತುಂಡಂಗಿ$_2$**: ಮೇಲಿನ 'ಮಂಗರಾ' ಪ್ರಯೋಗದ ಪಾಠಾಂತರವನ್ನು ನೋಡಿ. **ತೊಣ್ಣಂಗಿ**: ತೇವವಿರುವ ಜಾಗದಲ್ಲಿ ತೊಣ್ಣಂಗಿಗಳು ಬಹಳವಾಗಿ ಇರುತ್ತವೆ (ರೂಢಿ).

ತೊಂಡಜ್ಜ (ನಾ). (ಕರಾ) ಅಜ್ಜನ ತಂದೆ; ಮುತ್ತಾತ.

[ತೊಂಡ$_1$ + ಅಜ್ಜ$_2$]

ತೊಂಡತನ, ತುಂಡತನ (ನಾ). ಔದ್ಧತ್ಯ; ಉದ್ಧಟತನ: ವೀರವಳಿದುದು ತೊಂಡತನಗಳು ಹೋಗಿ ಕೈಕಾಲೊಡೆದು ನಾಚುತ್ತ . . . ತೆರಳಿದ (ಕೌಶಿರಾ. ೦೯-೩೩). **ತುಂಡತನ**: ತಂಡತಂಡಾಗಿ ತಿರುಗುವ ನಾರಿಯರ ತುಂಡತನವನು ನೋಡು (ಕಾಲಸಂ. ೩೩); ಚಂಡವಿಕ್ರಮಭೀಮನಡಿಗೆಱಗಿ ಕೀಚಕನ ತುಂಡತನವಂ ಪೇಳ್ದಳು ಭಾವೆ (ಪಾಂಡಚ. ೩೭-೨).

[ತೊಂಡ$_2$ + – ತನ]

ತೊಂಡನೂರ್ (ನಾ). ಒಂದು ಊರಿನ ಹೆಸರು: ತೊಣ್ಡನೂರ್ ಬೋಯಸ್ಯ ಕೌಶಿಕಗೋತ್ರ ರೇವಶರ್ಮ್ಮಣ (ಇಆ. VII, ೪೨-೩೭; 668).

[? + ಊರ್]

ತೊಂಡಬಡಿಗೆ (ನಾ). ಒಂದು ಬಗೆಯ ಆಯುಧ: ಬೇಱೆವೇಱೆತ್ತಿ ತೆತ್ತಿಸಿದ ತೋಮರದ ತೋರದೊಂಗಲ ತೊಂಡಬಡಿಗೆಯ ಗಂಡರ ದಾವಣಿಯ ... ಸುಭಟಪೇಟಕಂ . . . ಅಜಾಂಡವೊಡೆಯೆ ಗಜಱ ಗರ್ಜಿಸುತ್ತುಂ (ಮಹಾನೇ. ೦೨-೧೯ ಪ). [ತೊಂಡ$_0$ + ಬಡಿಗೆ]

ತೊಂಡಬ್ಬೆ (ನಾ). ಒಬ್ಬಾಕೆಯ ಹೆಸರು: ನಾಗತ್ತರನ ಮಗಳ್ತೊಂಡ ಬ್ಬೆಯು (ಎಕ. IX, ಬೆಂಗಳೂ. ೮೮-೨; ಸು. 00). [ತೊಂಡ$_4$ + ಅಬ್ಬೆ$_1$]

ತೊಂಡಮಂಡಲ (ನಾ). ಚೋಳಮಂಡಲ; ಪ್ರಾಚೀನ ತಮಿಳುರಾಜ್ಯದ ಒಂದು ಭಾಗ; ಇ ಕಾಂಚಿಯನ್ನು ರಾಜಧಾನಿಯಾಗಿ ಹೊಂದಿದ್ದ ಆರ್ಕಾಟು, ಚೆಂಗಲ್ಪಟ್ಟು ಮತ್ತು ನೆಲ್ಲೂರುಗಳನ್ನೊಳಗೊಂಡ ಭಾಗ: ತೊಂಡಮಂಡಲದಲ್ಲಿ ಶೋಭಿಪ ಶಕ್ತ್ಯರಣ್ಯಮೆನಿಪ್ಪ ನಿಖ್ಖಂಡಿ ತೋತ್ಸವವೊಂದು ಪಟ್ಟಣಮಿರ್ಪುದು (ಉದ್ಕಟಿ. ೦೨-೮೯).

[←ತಮಿ. ತೊಣ್ಟೈಮಣ್ಟಲ]

ತೊಂಡಲ್, ತೊಂಡಲ, ತೊಂಡಲು$_1$, ತೊಂಡಿಲ್, ತೊಂಡಿಲು$_1$ (ನಾ). ೧. ತಲೆಯಲ್ಲಿ ಧರಿಸುವ ಒಂದು ಬಗೆಯ ಮುತ್ತಿನ ಆಭರಣ,– ಶಿರೋಭೂಷಣ: ದಂಡೆಯಂ ತೊಂಡ[ಪಾಠಾಂ. ಡಿ]ಲಂ ನೂಂಕುತಂ ಛಂದದಿಂ ಚೆಂಡಿಕೆವಿಡಿದು ಮಗಳನುದ್ಧರಿಸುವಂದದಿಂ (ಮಾನರ. ದೇ. ೦೬೯-೩); ಪಾಂಡ್ಯಸತಿಯರ ತೊಂಡಲ್ದೀವಿದ ಘನರತ್ನಂಗಳ್ ಪಾವುಗೆಗಳ ಬಳಸು ದೊಂಗಲೆಡೆಯೊಳ್ ತೋರ್ಕುಂ (ಚಿಕವಿ. ೩-೩೬); ತೊಂಡಲವು ಶಿವಗಣಕೆ ಗುಂಡಯ್ಯ ನೀನಾದಿ (ಕನ್ನಡಾ. ೩೦೨). ೨. ಸಾಲು; ಶ್ರೇಣಿ: ಅಲ್ಲಲ್ಲಿಗೆ ಪರಿಯುತಿರ್ಪಿಱುಂಪೆಯ ತೊಂಡಲ್ (ಧರ್ಮಾಮ್ಯ. ೩-೭೪). ೩. ಹೂವಿನ ಹಾರ, – ದಿಂಡು, – ದಂಡೆ: ರೂಢಿಸಿತ್ತು ಕೆಂಪಿಡಿದ ಬೆಡಂಗಿನಿಂದಮೆ . . . ವಿಳಾಸದಿಂ ಮುಡಿದ ಮಹೇಂದ್ರದಿಗ್ವಧುವ ಬಣ್ಣದ ತೊಂಡಲ ನಿಂದುಮಂಡಲಂ (ಲೀಲಾವ. ೨-೬); ತೊಂಡ[ಪಾಠಾಂ. ಡಿ]ಲ ಮುಡಿದು ಕೊಂಡು ತಮ್ಮ ತಮ್ಮ ಗಂಡರ ಹಿಂದುಗೊಂಡು ನಾಡುಮಿಂಡರ ನೋಡುತ್ತಲಿ ಇಂದು ನಮ್ಮ ಹುಲಿ ಹೋಯಿತ್ತು (ಬಸಚ. ೬೦-೦೬೭); ವಿಯಚ್ಚರಿಯರ ವೇಣಿಯಿಂ ಜಗುಟ್ಟ ತೊಂಡಲ ದಂಡೆಯೊ (ದಶಕು. ೯-೪೦); ಪೊಸತೊರಳೆಗಳ ದಂಡೆದೊಂಡಲ್ಗಳಂ ಮುಡಿದುಮೆಲ್ಗಳ ತೊಡಂಗಳನೆ ತೊಟ್ಟು . . . ಮರುಳ ಮದವರ್ಕಳೆಸೆಯಲ್ (ಜಿಲಪು. ೩೨-೨೦); ಪರಿಪರಿಯ ಚಂಡು ತೊಂಡಲ ಮಾಲೆಗಳ ಕೊಂಡು ತೆರಳ್ದು ಸೊಗಸಿಂ ಸೂಳೆಗೇರಿಗೈತರಲು (ನವಮೋ. ೦೭-೬೩). **ತೊಂಡಲ**: ೧. ದಂಡ್ಯಾಗ ಒರಗಿರುವ ಮಂಡಲದ ಗಿಣಿರಾಮ ತೊಂಡಲವು ತೂಗಿದಳವೆಲ್ಲಿ (ಲೋಕಗೀ. ೪೦). ೩. ಖಂಡೆಯಕೆ ಪೊಂದಿರ್ದ ತೊಂಡಲವ ಕೂಡೆ ತೆಗೆದುಕೊಂಡು ಮುದದಿಂದ ಬರೆ (ಪ್ರೌಢರಾ. ೦೩-೨೭). **ತೊಂಡಲು$_1$**: ೧. ದುಂಡುಮುತ್ತಿನ ರತ್ನ ಕೇವಣಿಸಿದ ಹೊನ್ನ ತೊಂಡಲ ಸೂಡಿದು ಮುದದಿ (ಮೋಹತ. ೦೩-೬೫); ಕರುಳ ತೊಂಡಲು ಖಂಡದ ಬಣ್ಣಬಾಸಿಗ ನರದ ಹಂಜರ ಚಪ್ಪರದಲಿ ನೆರೆದು (ಕಂಸವಿ. ೧೫-೭೩); ೩. ಅಂಗಜ ವಿಭಂಗನವರಡಿದಾವರೆಗಳುತ್ತಮಾಂಗಕಮರಿದ ದಂಡೆ ತೊಂಡಲುಗಳನ್ನೇಕೆ (ಮದೇಪು. ೨೩-೫); ಕಾಂತೆಯರುಯತಿಕುಶಲದಿಂ ಮಾಲೆ ಕಂಕಣಂ ಚೆಂಡು ತೊಂಡಲುಗಳಿರದೇ ಸಾತಿಶಯದಿಂ ಕಟ್ಟಿ (ನವಮೋ. ೦೦-೭೦); ತೊಂಡಲ ಮೇಗಣ್ಗೆ ಸೆರಗನ್ನೆಳೆದುಕೊಳ್ಳುತ್ತ ಕೊರಲ್ವಾಗಿ ಹೊರಡುವಳು (ಬಿರುಗಂ. ೨೮-೦೨). **ತೊಂಡಿಲ್**: ೧. ದಂಡೆ ತೊಂಡಿಲ ಮುಡಿಸಿ ಶುಂಡಾಲ ಗಾಮಿನಿಯ ಮಂಡೆಯೊಳು (ಜ್ಞಾನಚಂ. ೭-೨೪); ವರಮೌಕ್ತಿಕದ ತೊಂಡಿಲನು ಸಿರಿಮುಡಿಯೊಳಗಳವಡಿಸಿ (ಜ್ಞಾನಚ. ೩೬-೯೨); ಇಳೆಯೊಳ್ಪೆಂಡಿರ ತೊಂಡಿ ಲೊಳ್ಮಣಿಯನೀ ಚಂದ್ರಾಸ್ಯೆಯಂ ಸೃಷ್ಟಿಗೈದು(ಮಿತ್ರಗೋ. ೫೦). ೩. ನಿರಾಳ ಬೋಳಿಂಗೆ ತೊಂಡಿಲ ಮುಡಿಸುವಂತೆ (ಅವಚಂ. ೦೩೩-೬೦೭). ೪. ಮದುವೆ ಯಲ್ಲಿ ಹೆಣ್ಣಿನ ತಲೆಗೆ ತೊಡಿಸುವ ಬಾಸಿಗ: ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ (ಮಹಾದೇ. ಬ. ೩೭-೭೮) **ತೊಂಡಿಲು$_1$**: ೧. "ತೊಂಡಿಲು ಶಿರೋಗ್ರಂಥಿಯೆನಿಸಿಕ್ಕು" (ಮಂಗರಾ. ೯೯-೨೦); ಮುಡಿಗೆ ಮಂಗಳಮಪ್ಪ ಮಣಿದೊಂಡಿಲಿಟ್ಟು (ಜೀರಮ. ೫-೪೧); ತೊಂಡಿಲುಂಗುರ ತಾಳಿ ಬಂದಿ ಭೂಷಣದ ಕರಂಡಗೆಗೊಟ್ಟು ಕಳುಹಿದ (ಭರಚ. ೩೭-೦೨೬); ಮಣಿವ್ರಜಮಂಡಿತವೊಂದಿ ತೊಂಡಿಲಾ ಸೋರ್ಮುಡಿಯಲ್ಲಿ . . . ಇಟ್ಟು ಸಿಂಗರಿಸಿ (ರಾಜಶೇ. ೮-೩೮); ಮೆರೆವ ತೊಂಡಿಲ ಧರಿಸಿ (ಯನಳ. ೫೪). ೩. ಮಲ್ಲಿಗೆಯಲರ್ಗಳಿಂ ಸಮೆದ ತೊಂಡಿಲಿನಿಂದ ಮೊಲ್ಲೆಯ ದಂಡೆಗಳಿಂದ (ಚಂಪ್ರಸಾಂ. ೦೨-೦೦೩). ೪. ತೊಂಡಿಲು ಬಾಸಿಗವನು ಸೂಡಿದರು ಚಂದ್ರ ಮಂಡಲ ರತಿಮನ್ಮಥರ್ಗೆ (ಮೋಹತ. ೧೫-೨೩).

ತೊಂಡಲ 'ತೊಂಡಲ್' ನೋ.

ತೊಂಡಲಿಪಿ (ನಾ). ಉದ್ಧತರ ಬರವಣಿಗೆ; ಉದ್ಧತರಾಜರ ಶಾಸನ: ತೊಡೆ ತೊಂಡಲಿಪಿಯನೆಂದನು ಧೂಳಿಲಿಪಿಗಳ ತೊಡೆವಂತೆ ತೊಡೆದನಾ ಭೃತ್ಯ (ಭರಚ. ೩೬-೯೮). [ತೊಂಡ$_2$ + ಲಿಪಿ]

ತೊಂಡಲು$_1$ 'ತೊಂಡಲ್' ನೋ.

ತೊಂಡಲು$_2$ (ನಾ). ಒಂದು ಬಗೆಯ ಹಕ್ಕಿ: ಗರುಡ ಕೊಣಕನು ಮೇಣು ಟೀವನು ಗರಗೆ ತೊಂಡಲು ಗಱಗ . . . ಪೆರುವರ್ದವಱೊಳೊಪ್ಪಿದವು (ಸಾಳ್ವಭಾ. ೫-೨೩). [?]

ತೊಂಡಲ್ವಚ್ಚ (ನಾ). ತಲೆಯಲ್ಲಿ ಧರಿಸುವ ಒಂದು ಬಗೆಯ ಆಭರಣ; ಬೈತಲೆಮಣಿ: ಬೆಳ್ಳಿಗರಡಿಗೆಯೊಳ್ ತಳತಳಿಪ ಪಟನುಡಿವೆಂಡಿರ ಪಚ್ಚೆಯ ತೊಂಡಲ್ವಚ್ಚದಂತೆಯುಂ (ಚಿಕವಂ. ೮೬-೭೦). [ತೊಂಡಲ್ + ಪಚ್ಚ$_2$]

ತೊಂಡಲ್ವೂವು (ನಾ). ಗೊಂಚಲಾಗಿರುವ ಹೂವು: ತೊಂಡಲ್ವೂವಿನ ಗಾಲಿ ನನೆಯ ನಿಡುದಂಡೆ ಮನೋಹರಮಾದಚ್ಚು (ಜಯಕಾ. ೫-೬).

[ತೊಂಡಲ್ + ಪೂವು (<ಪೂ$_2$)]

ತೊಂಡವಾಡಿ (ನಾ). ಒಂದಂ ಸ್ಥಳದ ಹೆಸರಂ : ತೊಣ್ಡವಾಡಿಯ ಪಳ್ಳಿಯ ಮಳೆಟುತ್ತಯ್ಯನ ಮಗ ಅಯ್ಯಪಯ್ಯ (ಎಕ. IV, ಗುಂಡ್ಲುಪೇ. ೦-೯೩ ; 975). [ತೊಂಡ + ಪಾಡಿ$_2$]

ತೊಂಡಾಣೆ (ನಾ). ಭಕ್ತನ ಆಣೆ : ಕೇಳಿನ್ನು ನಿನ್ನಾಣೆ ತೊಂಡಾಣೆ ಹೋಗೆಂದು ಕರುಣೆ ಕಳುಪಲ್ಕೆ (ಸಿದ್ಧರಾ. ೬-೫೦).

[ತೊಂಡ$_1$ + ಆಣೆ$_3$]

ತೊಂಡಾಲ (ನಾ). ಒಂದಂ ಸ್ಥಳದ ಹೆಸರಂ : ಅಲ್ಲಿಂದ ತಂಕ ಪಡುವಲು ಉತ್ತನೂರ ತೊಂಡಾಲದ ಮುಕ್ಕೂಟಲ ಮಣ್ಣೊಱಡಿ (ಮೈಅರಿ. ೧೯೨೫, ೧೦೫-೪೩ ; 934). [?]

ತೊಂಡಿ$_1$ (ನಾ). ದಾಸಿ ; ಸೇವಕಿ : ಬಸುರಿಳಿಯೆ . . . ಮಾಂಸದ ಚೀಲದಿಂ ಬೀಳೆಯೊಡನೆ ಗಾಂಧಾರಿಯುಂ ಮುಳಿಸಿಯದನೂ ಕಂಡಿದಕ್ಕಾಗಿ ತಾನೆರಡುವರುಷಂ ಧರಿಸಿಕೊಂಡೆನೆ ಗರ್ಭಮಂ ಬಿಸುಡು ಬಿಸುಡೆಂದಾಗ ತೊಂಡಿಯರಿಗುಸುರುತಿರಲು (ಲಕ್ಷ್ಮಭಾ. ೨೫-೩೭).

[ತೊಂಡ$_1$ + – ಇ$_2$]

ತೊಂಡಿ$_2$ 'ತೊಂಡೆ$_3$' ನೋ.

ತೊಂಡಿಕೆ (ನಾ). ತುಂಟತನ ; ತುಂಟಾಟ : ಕರುಮಾಡದ ಪೊಱಗನೆ ಪೋಪಳಂ ವಸುದೇವಂ ಕಂಡವಳ ಕೈಯಿಂದವಾ ಕರಂಡಕಮಂ ಕೊಂಡೊಡ ವಳಿಂತೆಂಬಳ್ ತೊಂಡಿಕೆಯನೊಪ್ಪೆ ನಿನ್ನೊಳ್ ಕಂಡುದಱಿನುಪಾಯದಿಂ ವನಾಂತರದೊಳ್ ಭೂಮಂಡಳಪತಿ ಸೆಱೆಯಿಟ್ಟುಂ ಕೊಂಡಾಟದೊಳಿರ್ದೆನೆಂದು ಬಗೆಯದೆ ಕಂಡಾ (ಬಂಹರಿ. ೨-೬). 'ತೊಂಡಿಕೆಗೆಯ್' ಪರಾ.

[ತೊಂಡು$_1$ + – ಇಕೆ]

ತೊಂಡಿಕೆಗೆಯ್ (ಕ್ರಿ). ತುಂಟಾಟವಾಡಂ : ನಿಚ್ಚನಿಚ್ಚಂ ತೊಂಡಿಕೆಗೆಯ್ದು ಪುಯ್ಯಲ ಮಾಡುತ್ತಿರೆ (ಬಂಹರಿ. ೫-೩೦ ವ). [ತೊಂಡಿಕೆ + ಕೆಯ್$_1$]

ತೊಂಡಿಗ$_1$ (ನಾ). ಒಂದಂ ಬಗೆಯಂ ಪಕ್ಷಿ : ಶಕುನಿ ಕಂಕಂ ತೊಂಡಿಗಂ . . . ರತ್ನಖಗಮಿರ್ಕುಂ ತದ್ವನಾಗೌಘದೊಳ್ (ರಾಜಶೇ. ೫-೫೯) ; "ರಣಹದ್ದು" (ರಾಜಶೇ. ಕೋಶ) ; ಟಿಟ್ಟಿಭಂ ತೊಂಡಿಗನುರುಳಿಗನಿರ್ಬಾಯನುಂ ಚಾತಕಂ . . . ಶಿಖಿ ಶುಕಂ ತದ್ವನಾಂತಸ್ಥಮಿರ್ಕುಂ (ಶಬಶಂ. ೩-೩೩). [?]

ತೊಂಡಿಗ$_2$ (ನಾ). ಒಬ್ಬಾತನ ಹೆಸರು : ಪಿರಿಯ ಮಗಂ ಕಾಳಿಧುರಂಧರ ನಾತಂ ತೊಣ್ಡಿಗ[ಂ]ಗೆ ಮೆಚ್ಚಿಸಿದೋಂ (ಸೌಇಇ. XI-1, ೪೫-೦೪ ; 980).

[?]

ತೊಂಡಿಲ್ 'ತೊಂಡಲ್' ನೋ.

ತೊಂಡಿಲು$_1$ 'ತೊಂಡಲ್' ನೋ.

ತೊಂಡಿಲು$_2$ (ನಾ). =ತೊಂಡೆ$_1$: ಯಾಕವ್ವಾ ತೆರೆದು ತೊಂಡಿಲ ಬಾಯಿ ಸಾಕವ್ವಾ ಮನವು ಮಾವಿನಕಾಯಿ (ಸುಗೀಗೀ. ೯೦-೧೭) ; ಸಂಜೆ ಬಂಜೆತನವ ಹರಿಸಿ ಮೆರೆಯೆ ತುಟಿಯ ತೊಂಡಿಲ (ಸೂರ್ಯಪಾ. ೧೦೮-೪).

[<ತೊಂಡೆ$_1$]

ತೊಂಡು$_1$, ತುಂಡು$_2$ (ನಾ). ೧. ಉದ್ಧಟತನ ; ದುಷ್ಟತನ ; ಸ್ವೇಚ್ಛಾವೃತ್ತಿ ; ಪುಂಡಾಟ : ತೊಂಡಿನೊಳುರ್ಕಿ ಕೆಟ್ಟ ದಶಕಂಠನನಕ್ಕಟ ಕೊಂಡ ಪೆರ್ಮರುಳ್ ಕೊಂಡುದೆ ತನ್ನುಮಂ (ಪಂಪಭಾ. ೬-೩೩) ; ತೊಂಡಿನೊಳೆಮ್ಮ ಪೇರಡವಿಯಂ ಪುಗುತಂದಪರೆಂದು ಲುಬ್ಧಕರ್ ತಂಡದೆ ಸುತ್ತಿಮುತ್ತೆ (ಪಂರಾಮಾ. ೭-೧೦೫) ; ಕೊಂಡು ಕಮಂಡಳಜಳದೊಳ್ ದಂಡಿತರಿಪು ತೀವೆ ಕಂಡು ಗುಂಡುಲಿಯೆ ಕರಂ ತೊಂಡಿಂದಾ ಪುರವರದೊಳ್ ಗುಂಡಿಗೆಯಂ ನೆಗಪಿ ಸುರಿಯೆ ಪರಿದುದು ನದಿವೋಲ್ (ನೇಮಿಪು. ೭-೦೮೨) ; ತೊಂಡಿನ ತೊಟ್ಟಿರ್ ಪಾಪದ ಪಿಂಡಮೆನಿಪ್ಪಂಗನಾಜನಂ ಬೆರಸಲ್ (ಖಮದ. ೧೪-೬೨) ; ತೊಂಡಿನ ತವರುಮನೆ ಬಾಹಿರರಿಗಾಶ್ರಯಭವನ ಖಳರಧಿದೇವ ಭೀಷ್ಮನ ಕೊಲುವರಿಲ್ಲೆಂದ (ಕುಮ್ಯಾಸ. ೦೦-೦೨). ೨. ಸೊಕ್ಕಿನ ನಂಡಿ ; ಉದ್ಧಟತನದ ಮಾತಂ : ಕಂಡುಳಿದಡುಳಿದರಲ್ಲದೆ ತೊಂಡಂ ನುಡಿದೆಡಱಿ ತೊಡರ್ವರುರವಣೆಯಂ ಕಂಡಿದಿರಲೆಟ್ಟು ಮುಳಿಸಿಂ ಖಂಡಿಪನೆನೆ ಹಬ್ಬಣಂಗಿದಿರ್ಚುವನಾವಂ (ಮುಂಬರಾ. ೨೪೩-೨೯ ; 1219). ೩. ಉದ್ಧಟ ವ್ಯಕ್ತಿ ; ಸ್ವೇಚ್ಛಾಚಾರಿ : ತೊಂಡೆನಿಸಿ ಬದುಕಿದವ ಪೆಣನಂತೆ ನಿಷ್ಫಲವು (ನಿಭಾಗ. ೧೧-೨೮-೧೭). ೪. ವಾಕ್ಪಟುತ್ವ : ಜನ್ನನ ದೇಸೆ ಪಂಪನ ಗುಣಂ ಗುಣನಂದಿಯ ತೊಂಡು ಪೊನ್ನನೊಳ್ ಸನ್ನಿದಮಾದ ಜಾಣ್ಣುಡಿ . . . ನೆಲಸಿರ್ಪುವೀ ಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್ (ಸೂಕ್ತಿಸು. ೦-೨೬). ೫. ಪರಾಕ್ರಮ ; ಶೌರ್ಯ : ಪೇಟೀವುದೊ ಶುಚಿಯಿಲ್ಲದವನ ಗಂಡುಂ ತೊಂಡುಂ (ಪಂಪಭಾ. ೮-೮೨) ; ಗಂಡಿನ ತೊಂಡಿನಂಕದಧಟಲ್ ಪೊಂಕಾಳ್ತನಂ (ಹೈಅಸಿ. ೦೩-೭-೭೩ ; 1090) ; ತೊಂಡಿನೊಳೆ ಮಲೆಮಹೀಪರ ಮಂಡಳಮಂ ಸೂರೆಗೊಂಡು (ಎಕ. V, ಅರಸೀ. ೧೦೨-೬೫ ; 1100 ?) ; ಭೇರುಂಡಪರಾಕ್ರಮಂಗೆ ಸಹದೇವ ಚಮೂಪತಿಗೆಂತು ಗಂಡಿನೊಳು ತೊಂಡನಿದಿರ್ಚ್ಚಿ ಬಾಳ್ವದಟನಾರ್ಗ್ಗಳ ಮೈಳುಗಿಯಂಕ[ಕಾ]ರನೊಳು (ಸೌಇಇ. XV, ೧೫೫-೨೫ ; 1206) ; ಬಲಂಗೊಂಡಂ ತೊಂಡಂ ಬಿಡದೆ ಗಜಕರ್ಣಾವನಿಭುಜಂ (ಪುಷ್ಪಪು. ೭-೮೦) ; ತೋಱಿಸಿದೆ ನೀ ತೊಂಡಿನೋಲೆಯಕಾಱತನವನು (ಕುಮ್ಯಾಕ. ೦೬-೦೩). ೬. ಮದ ; ಸೊಕ್ಕು : ಬಲವಂ ನಚ್ಚಿ ವಿರೋಧವಂ ಪಡೆವುದೇ ತೊಂಡಿಂದೆ ಸಾಮನ್ತರಂ ಕಲಹಂ ಬೇಡೆನೆ (ಎಕ. VI, ಕಡೂರು. ೩೫-೫೨ ; 1136) ; ಕೂರ್ತನಂ ತೊಂಡಿನಿಂ ಕುಂಟಣಿ ಮಾಟ್ಟಳ್ಕೇಣದಿಂ ನಾಣೊಡೆಯನನೆಡೆಯೊಳ್ನಿರ್ಧನಂ ಮಾಟ್ಟಳ್ (ಲೀಲಾವ. ೨-೯೭) ; ಬಾದೊರ್ವ ಭವಿಯೆನಿಪ ವಿಪ್ರಂಗೆ ತೊತ್ತಾಗಿ . . . ಅರಮನೆಯ ಕೆಲಸಮಂ ಮಾಡುತುಂ ತೊಂಡು ಮಿಕ್ಕುದು (ನಿಂಬರ. ೧೨೫-೦೬) ; ಜನಪನಾಱಡಿಯನಾನೆಯದೊಂದು ತೊಂಡ ಗುರುವಿನ ದುರಾಚಾರಮಂ ಮಾಣಿಸಲ್ಬಲ್ಲರೇ (ಸಮ್ಯಕೌ. ೨-೭೫). 'ತೊಂಡುಗೆಡೆ$_1$' ಪರಾ. ತುಂಡು$_2$: ೩. ಬಂಡು ಹೆಂಡತಿಯಾಗಿ ತುಂಡೊಬ್ಬ ಸೊಸೆಯಾಗಿ ಕಂಡಲ್ಲಿ ಹರಿವ ಮಗನಾದರಾ ಮನೆಗೆ ದಂಡ ತಪ್ಪುವದೆ (ಸರ್ವಜ್ಞ. ೦೭೫೫).

ತೊಂಡನಿಕ್ಕು = ದುಷ್ಟತನದಿಂದ ವರ್ತಿಸು : ತೊಂಡನಿಕ್ಕಿ ಠವಾಳತನದಲ್ಲಿ ಭಂಡುಗೆಲೆವುತ ಮಲುಹಣಿಯ ತಾಯ್ ಮಿಂಡನಂ ಹೊಱವಡಿಸಿ ತಾ ತನ್ನಾತ್ಮಜೆಯನೊಬ್ಬ ಮಂಡಳೇಶನ ಪೊರೆಗೆ ಕಳುಹಲು (ಬಸಪು. ೪೨-೧೯). ತೊಂಡಿನ ದನ = ತೊಂಡುದನ : ಮನಕ್ಕೆ ಲಿಂಗ ಬಾಹಾಗ ತೊಂಡಿನ ದನವೇ (ಮೋಳಿಮಾ. ೧೦೯-೪೬೭).

ತೊಂಡು$_2$ (ನಾ). ಅಂಕೆ ; ಹತೋಟಿ : ಮದವೆದ್ದಾನೆಗೆಲ್ಲಿಯ ತೊಂಡು (ಆನಂರಾ. ೬-೨೩-೨೭). [ದೇ.ಇ ತಮಿ. ತೊಣ್ಬು]

ತೊಂಡು$_3$ (ನಾ). ಗುಂಪು ; ಸಮೂಹ : ಇಡೀ ಜಗತ್ತೆಲ್ಲ ಮೋಹವಿಭ್ರಾಂತರಾದ ಜನರ ತೊಂಡಿನಂತೆಯೂ . . . ಅವಳಿಗೆ ಕಂಡಿತು (ಪುನರು. ೧೯೮).

[< ತಂಡ]

ತೊಂಡು$_4$ (ನಾ). (ಕರಾ) ಮುಸುರೆಯನ್ನು ಹಾಕುವ ಬಾನಿ.– ಕೂನಿ.

[?]

ತೊಂಡುಗಿಳಿ (ನಾ). ಧ್ವನಿಮಾಡುವ ಗಿಳಿ ; ಗಳಪುವ ಗಿಳಿ : ಗಂಡುಗೋಗಿಲೆಯ ತಂಡಮುಂ ತೊಂಡುಗಿಳಿಯ ಪಿಂಡುಂ ಮುಂ ಪಯಣಮಾಗೆ (ಶಾಂತಿಪು. ೭-೦೨೯ ವ) ; ಪರಿವಿಡಿಗೆಯ್ಯೆ ತೊಂಡುಗಿಳಿ ತಂದೆಯ ತಾಯ ಸಮಿಾಪದೊಳ್ (ರಸರ. ೪-೦೭೭). [ತೊಂಡು$_1$ + ಗಿಳಿ]

ತೊಂಡುಗೂಳಿ (ನಾ). ಸ್ವೇಚ್ಛೆಯಾದ ಬಸವ ; ದೇವರಿಗೆ ಬಿಟ್ಟ ಗೂಳಿ ; ಪುಂಡುಗೂಳಿ : ತೊಂಡುಗೂಳಿ ಬೆಳೆದ ಹಾಗೆ ಬೆಳೆದಿದ್ದೆ (ಸಂಧ್ಯಾರಾ. ೧೨).

[ತೊಂಡು$_1$ + ಗೂಳಿ$_1$]

ತೊಂಡುಗೆಡೆ$_1$ (ಕ್ರಿ). ೧. (ಗಿಳಿಯು) ಧ್ವನಿಮಾಡು,-ಗಳಹು: "ತೊಂಡುಗೆಡೆವುದೆಂದು ಶುಕವಿಲಾಸಂ" (ಶಶಾ. ೫೫-೨೦೪); "ತೊಂಡುಗೆಡುದೆನೆ ಗಿಳಿಯವಾತು" (ಕಬ್ಬಿಗೈ. ೨೩); ತೊಂಡುಗೆಡೆದು ವಸಂತರಾಜನ ಪಡಿಯಱರಂತೆ ವಿರಹಿಗಳಂ ಚಪ್ಪರಿಪ ರಾಜಕೀರಂಗಳ್ (ಗಿಂಶಿ. ೩-೦೦೩ ಪ); ಕಂಗೊಳಿಸಿದುದಂದು ತೊಂಡುಗೆಡೆಯುತ್ತುಮತೀವ ವಿಲಾಸದಿಂ ಶುಕಾವಳಿ (ಉದ್ಧಟ. ೦೦-೯); ತೊಂಡುಗೆಡೆಯುತ್ತುಪದೇಶಿಕನಂತೆ ಕಾಮತಂತ್ರದ ತಿರುಳಂ ಕನತ್ಕನಕಪಂಜರಪಿಂಜರಿತಾಂಶುಕಂ ಶುಕಂ (ಸೂಕ್ತಿಸು. ೦೪-೩); ಗಿಳಿಗಳೆಮ್ಮನೆ ಕಂಡು ಮೂಗ ಕಿಚ್ಚನೆ ಮಾಡಿ ತೊಂಡುಗೆಡೆದವವೆಂದಳೊರ್ವ ವನಿತೆ (ಧಾವಶಂ. ೬-೨೭); ಬಗ್ಗಿಪ ಕಳಕಂಠಂ ತೊಂಡುಗೆಡೆವ ಗಿಳಿ ಪೂತಸೆದಿರ್ವಲರ್ಚೋಂಪಂ (ರಾಜಶೇ. ೨-೩೮). ೨. (ಸ್ವಚ್ಛಂದವಾಗಿ) ಕೂಗು,-ಕಂಕಿಲಂ: ತೊಂಡುಗೆಡೆಯುತ್ತೆ ಪಿಕಾಳಿ ಶುಕಾಳಿಯೊಪ್ಪುಗುಂ (ಗಿಂಶಿ. ೨-೩೬); ಪುಗಲ್ ಪುಗಲೆಂದು ಬಂದಳಿಸಿ ತೊಂಡುಗೆಡೆವ ಗಂಡುಗೋಗಿಲೆಗಳುಂ (ಪುಷ್ಪಪು. ೨-೩೯ ಪ); ಶುಕಪಿಕಂ ತೊಂಡುಗೆಡೆದುಱ್ ಕೂಗಲ್ (ಧಾವಶಂ. ೪-೦೭). ೩. (ಆಲಂ) ಕೂಗಾಡು; ಜರುಚು: ಬಾಣದ ಮೊನೆಯೊಳು ಲೇಖೆಯಿಂ ಕಟ್ಟಿ ತೊಟ್ಟನೆಸೆವುದದಂ ಮಾಗಧಂ ಕಂಡು ತೊಂಡುಗೆ[ಪಾಠಾಂ. ಕೆ]ಡೆವುದುಂ ಮಂತ್ರಿಗಳು ಮಾಣಿಸಲ್ (ಪುಣ್ಯಾಸ್ರ. ೦೦-೨೮ ಪ); ಭಂಡ ನೀ ಬಾಯ್ಬಡಿಕತನದಲಿ ತೊಂಡುಗೆಡೆವರೆ (ಕೌಶಿರಾ. ೨೦-೩೦); ಅಲ್ಲಿಗೆ ಪೋಗಿ ತೊಂಡುಗೆಡೆದು ನಿಂದಿಸಿ ನಮ್ಮ ಕಾಡಿದ ದಿಂಡೆಯದೇನ ಮಾಡುವೆನೆಂದ (ಕ್ರಿಭುತಿ. ೯-೪೨).

[ತೊಂಡು$_1$ + ಕೆಡೆ$_2$]

ತೊಂಡುಗೆಡೆ$_2$ (ಕ್ರಿ). ರಾಶಿಯಾಗಿ ಬೀಳು; ಗುಂಪಾಗಿ ಕೆಡೆ: ಕರಚಂಡಘಾತದೊಳ್ ತೊಂಡುಗೆಡೆದ ತುರಗದಳಂಗಳುಂ (ಅಸಂಪು. ೦೪-೭ ಪ) ಕಡಿದು ಖಗಚಯ ತೊಂಡುಗೆಡೆದ ಕಾಯಿಪಣ್ಗಳೊಳು (ನಪಪೋ. ೨೪-೫೬). [ತೊಂಡು$_3$ + ಕೆಡೆ$_1$]

ತೊಂಡುಗೆಡೆತ (ನಾ). ಮಧುರವಾದ ಧ್ವನಿ,-ಕೂಗು: ಇಂದಿನ ಕನ್ನಡ ಕಾವ್ಯಪ್ರಪಂಚವು ಈ ಗಿಳಿವಿಂಡಿನ ತೊಂಡುಗೆಡೆತಕ್ಕೆ ಕಿವಿಗೊಟ್ಟೀತೆ? (ಗಿಳಿವಿಂ. XI, ಮುನ್ನುಡಿ). [ತೊಂಡುಗೆಡೆ$_1$ + – ತ$_2$]

ತೊಂಡುಗೆಡೆಪ (ನಾ). ಮಧುರವಾಗಿ ಮಾತನಾಡುವುದು: ತಂಬೆಲರ ತನಿಸೋಂಕು ನಾಂ ಪುಗಲ್ಪುಗಲಂತೆ ತೊಣ್ದುಗೆಡೆಪಂ ಪುಷ್ಪವಿಕಸನವ ಮುದ್ದಿಪಲರ್ವಕ್ಕಿಯಾವೋದಮುಂ (ಸಂಸಪ. ೩೦-೦೬೨).

[ತೊಂಡುಗೆಡೆ$_1$ + – ಪ$_2$]

ತೊಂಡುಗೆಯ್ (ಕ್ರಿ). (ಗಿಳಿಯು) ಧ್ವನಿಮಾಡು,-ಗಳಹು: ಇನವಣ್ಣುಂಡು ಗಿಳಿವಿಂಡು ತೊಂಡುಗೆಯಲೆಳಸಿತು (ಚಿಬಪು. ೪೫-೦೦). [ತೊಂಡು$_1$ + ಕೆಯ್$_1$]

ತೊಂಡುಗೇಡು (ನಾ). ಸೊಕ್ಕು ಇಳಿಯುವಿಕೆ; ಅಹಂಕಾರದ ಕೇಡು: ಗಂಡುಗುಂದಿನ ಬೀತ ಬಿರುದಿನ ತೊಂಡುಗೇಡಿನ ಜಯದ ಜಾಱನ ಖಂಡಶೌರ್ಯದ ಧೀರರಿದ್ದುದು ನೃಪನ ಬಳಸಿನಲಿ (ಕುಮಾಕ. ೦೩-೪೭). [ತೊಂಡು$_1$ + ಕೇಡು]

ತೊಂಡುಗೊಳ್ (ಕ್ರಿ). ಸ್ವೇಚ್ಛೆಯಾಗಿ ಓಡಾಡು: ಭಂಡಿಯಂ ನಲವಿಂದ ನೂಂಕಿ ತದುಲ್ಲಸತ್ಪುರವೀಧಿಯೊಳ್ ತೊಂಡುಗೊಂಡಿರಲೊಂದು ತರ್ಣಕಂ . . . ಬಿರ್ದಟಿಯಲ್ (ಉದ್ಧಟ. ೧೨-೭೭). [ತೊಂಡು$_1$ + ಕೊಳ್$_1$]

ತೊಂಡುತನ, ತಂಡುತನ (ನಾ). ೧. ಸ್ವೇಚ್ಛಾವೃತ್ತಿ: (ಕ). ತುಂಡುತನ: ೨. ತುಂಟತನ: (ಕ). [ತೊಂಡು$_1$ + – ತನ]

ತೊಂಡುತೆರೆ (ನಾ). ಪ್ರಕ್ಷುಬ್ಧವಾದ ಅಲೆ: ತೊಂಡುತೆರೆಗಳ ಮುಸುಕಿನಲ್ಲಿ ಕಂಡು ಮಗಳ ಕರಗಿಹೋದ (ಇಂಗೀತ. ೬೭-೨೧).

[ತೊಂಡು$_1$ + ತೆರೆ$_4$]

ತೊಂಡುತೊಳಸು$_1$ (ಕ್ರಿ). ಮನಬಂದಂತೆ ಸುತ್ತು,-ತಿರುಗು: ತೊಂಡುತೊಳಸುವ ದೋಣಿಯನ್ನ ನಂಬಿ ಬಂದೆನೆ? (ಗಿಳಿವಿಂ. ೫೫-೨೪).

[ತೊಂಡು$_1$ + ತೊಳಸು$_2$ (<ತೊಟಸು$_1$)]

ತೊಂಡುತೊಳಸು$_2$ (ನಾ). ಸ್ವೇಚ್ಛಾವೃತ್ತಿ; ಉದ್ಧಟತನ: ತೊಂಡುತೊಳಸೆಕ್ಕಸಿಕ್ಕ ವಂಚನೆ ಕುಹಕ ಜೂದು ಕುತ್ಸಿತ ಲಂಡು ಭಂಡು ದುರ್ಜನಮೆಂಬಿವೆಲ್ಲ ದುಷ್ಟಸ್ವಭಾವಂ (ಸಮ್ಯಕ್ಕಾ. ೬-೩೩); ಈ ನರದೇಹ ಕ್ರಿಮಿಗಳ ಮೊತ್ತದಾಗರ . . . ಇದು ಮುರಾರಿಯ ಶಕ್ತಿಯನಿಸುವ ಮಾಯೆ ಮಾಡುವ ತೊಂಡುತೊಳಸೆಂದ (ನಿಭಾಗ. ೦೦-೩೨-೨೦); ಉದ್ದಾಲಕಂ ಸಂತಸಗೊಂಡು . . . ಸಂಪ್ರೀತಿಯಿಂ ವಿಪರೀತದ ತೊಂಡುತೊಳಸಂ ಮಱೆದು (ಚೈಮಿಭಾ. ೦೦-೩೦); ಕಂಡಿರಾ ಗುರುಗಳರ ತನಯನ ತೊಂಡುತೊಳಸಿನ ಮಾತ (ಪ್ರಜ್ಞಾಪ. ೬-೩೭).

[ತೊಂಡು$_2$ + ತೊಳಸು$_4$ (< ತೊಟಸು$_2$)].

ತೊಂಡುತೊಳಸುಗ (ನಾ). ಮನಬಂದಂತೆ ವರ್ತಿಸುವವನು; ತೊಂಡುತೊಳಸುಗರನವನಿಯೊಳಂಡಲೆದಗಲಕ್ಕೆ ಪರಿದು (ಧರ್ಮನಾ. ೫-೯೦).

[ತೊಂಡುತೊಳಸು$_1$ + – ಗ$_2$]

ತೊಂಡುದನ (ನಾ). ಅಗಡುದನ; ಸ್ವೇಚ್ಛೆಯಾಗಿ ಅಲೆಯುವ ದನ; ತುಡುಗುದನ: ಕಂಡವರ ಹೊಲಕಿಳಿವ ತೊಂಡುದನಮಲ್ತು (ಕಾಲೂರ. ೦೦-೦೫೨); ನಾಲ್ಕುದಿಕ್ಕುಗಳಿಂದಲೂ ತೊಂಡುದನಗಳು ನುಗ್ಗಿ, ಮೇದು ತುಳಿದು ಹಾಳುಮಾಡಿದ ತೋಟವಾಯಿತು (ಕನ್ನಸು. II, ೫); ಜಗತ್ತಿಗೆ ಶಾಂತಿ ಸಂತೋಷಗಳನ್ನು ಕೊಡುವ ಹೂವೇ ಧನ್ಯ, ಮಾನ್ಯ. ಮುಳ್ಳು ಉಪಯೋಗಕ್ಕೆ ಬಂದರೆ ತೊಂಡುದನಗಳಿಗೆ ಅಡ್ಡಿಯಾಗುವಂತೆ ಬೇಲಿಹಾಕುವುದಕ್ಕೆ (ಬಂಕಿಮ. ೦೭೦). [ತೊಂಡು$_1$ + ದನ]

ತೊಂಡುನಗೆ (ನಾ). ತುಂಟನಗೆ; ಚೇಷ್ಟೆಯ ನಗೆ: ತೊಂಡುನಗೆಯ ತೊಂಡಬಾಯ ಕಂಡು ಕಂಡು ಮುತ್ತನಿಟ್ಟು (ನಾದಲೀ. ೭೭-೦೯). [ತೊಂಡು$_1$ + ನಗೆ]

ತೊಂಡುನಡೆ (ನಾ). ಸ್ವೇಚ್ಛಾವೃತ್ತಿ; ಉದ್ಧಟತನ: ವಿರಸವನು ಬಿತ್ತುತ್ತೆ ತೊಂಡುನಡೆ ನಡೆದು ಕೊಲೆಗೆ ಕೊಲೆ ಸಂತತಿಯನಿಡುವವರ ಬೇಡದಿರಿ (ಅಮತಂ. ೨೩-೯). [ತೊಂಡು$_1$ + ನಡೆ$_2$]

ತೊಂಡುನುಡಿ (ನಾ). ಚೇಷ್ಟೆಯ ಮಾತು; ತುಂಟತನದ ನುಡಿ: ನಗೆವೆರಸಿರ್ದ ತೊಂಡುನುಡಿಯಿಂ ತಗುಳ್ವಳ್ ಸಲೆ ಧೀರೆ (ರಸಿ. ೩-೯೦ ಸೂತ್ರ). [ತೊಂಡು$_1$ + ನುಡಿ$_2$]

ತೊಂಡುಪಾಳೆಯಗಾರ (ನಾ). ಉದ್ಧಟನಾದ ಪಾಳೆಯಗಾರ; ಸೊಕ್ಕಿದ ಪಾಳೆಯಗಾರ: ಚಿನ್ನರಾಜನು ಇದಿರುಬಿದ್ದು, ಉದ್ದುರುಟುತನದಿಂದ ತೊಣ್ದುಪಾಳೆಯಗಾರರೊಡನೆ ಸೇರಿಕೊಂಡು . . . ಸ್ವತಂತ್ರನಾಗಲು ಸಾಹಸಪಡುತ್ತಿರುವನು (ಚಿಟ್ಟಳ. ೪೪-೦೭).

[ತೊಂಡು$_1$ + ಪಾಳೆಯಗಾರ]

ತೊಂಡುಬಂಡು (ನಾ). (ಗಿಳಿಯು) ಧ್ವನಿಮಾಡುವ ಗದ್ದಲ,-ಗಳಹುವ ಕೋಲಾಹಲ: ತುಂಬಿಗಳ ಪಲ್ಮೊರೆವದಿಂ ಗಿಳಿಯು ತೊಂಡುಬಂಡಿಂ ಬೆಟ್ಟಿತಾದ ನುಡಿಯಿಂ . . . ಮೆಱೆದುದಾ ವನಂ (ಪದ್ಮರಾ. ೯-೨೫).

[ತೊಂಡು$_1$ + ಬಂಡು$_3$]

ತೊಂಡುಬೀಳು (ಕ್ರಿ). ಸ್ವೇಚ್ಛಾವೃತ್ತಿಗೆ ಬೀಳು; ತುಂಟಾಗು: ಸಾಧು ಕುದುರೆಯಾಗಿ ಮನೆಗೆ ಬಂದರಂತೂ ಸರಿಹೋಯಿತು; ಇಲ್ಲದೆ, ತೊಂಡುಬಿದ್ದರೆ? (ಬಂಕಿಮ. ೭೯). [ತೊಂಡು$_1$+ಬೀಳು$_1$ (<ಬೀಳ್$_1$]

ತೊಂಡುಮರುಳ್ (ನಾ). ದುಷ್ಟಪಿಶಾಚಿ: ಸುಭಟರಟ್ಟಿಗಳನೆಟ್ಟಿಕುಟ್ಟುವ ತೊಂಡುಮರುಳ್ಗಳುಂ (ಪಂಪಭಾ. ೦೦-೧೧೬ ಪ).

[ತೊಂಡು$_1$ + ಮರುಳ್$_3$]

ತೊಂಡುಮೇ, ತೊಂಡುಮೇಯು (ಕ್ರಿ). ಸ್ವೇಚ್ಛೆಯಾಗಿ ತಿನ್ನು,-ಮೇಯು; ತುಡುಗುಮೇಯು: ತೊಂಡುಮೇವ ಪಸುವಿಂಡಿನ ತಪ್ಪೋ ಕಂಡು ಕಾಯದ ತುಱುಗಾವನ ತಪ್ಪೋ (ಗೀತಗೋ. ೬೦). **ತೊಂಡುಮೇಯು**: ಅಲ್ಲಿ ಯಾವ ಕಾಲದಲ್ಲಾದರೂ ಬರುವ ಮೂರು ವರ್ಷದ ಕೋಣಗಳು ತೊಂಡುಮೇಯುತ್ತಿರುತ್ತವೆ (ಸಣ್ಣಕ. VI, ೩); ಹಳ್ಳ ಅಡಗಿ ಹರಿದಲ್ಲಿ, ತುಡುಗುದನ ತೊಂಡುಮೇಯುವಲ್ಲಿ ದಿಕ್ಕು ತಪ್ಪತಾರ ತಪ್ಪಿ ಹೊಕ್ಕರ ಕಕ್ಕಾವಿಕ್ಕಿಯಾಗಿ (ಗಂಗಾತ. ೮೭-೨).

[ತೊಂಡು$_1$ + ಮೇ]

ತೊಂಡುಮೇಯು 'ತೊಂಡುಮೇ' ನೋ.

ತೊಂಡುವಾಡೆ (ನಾ). ಪುಂಡುದನಗಳನ್ನು ಹಿಡಿದು ಹಾಕುವ ಸ್ಥಳ; ದೊಡ್ಡಿ; ಪೌಂಡಿಮನೆ; ಕೊಂಡವಾಡೆ: ಯಾವ ರಾಸುಗಳಾಗಲಿ . . . ಮೇಯುತ್ತಿರುವ ಕಾಲದಲ್ಲಿ ಹಿಡಿದು ಅಥವ ಹಿಡಿಸಿ ಸಾವಕಾಶ ಮಾಡದೆ ಸಮೀಪವಾದ ತೊಂಡುವಾಡೆ ದೊಡ್ಡಿಗೆ ದಾಖಲ್ಮಾಡಬೇಕು (ಗ್ರಾಮಾಕ. ೦೦೭). 'ಕೊಂಡವಾಡೆ' ಪರಾ. [ತೊಂಡು$_1$ + ವಾಡೆ$_3$]

ತೊಂಡುವೆಣ್ (ನಾ). ಸ್ವೈರಿಣಿಯಾದ ಹೆಣ್ಣು; ಜಾರೆ: ತೊಂಡುವೆಣ್ಗಳ ನೇಹದೊಡಕಿಗೆ ಸಿಲುಕದೆ . . . . ನಲ್ವೆಂಡಿರೊಡನೆ ಬೆರಸುವುದು (ಹದಿಬ. ೮-೪೬). [ತೊಂಡು$_1$ + ವೆಣ್]

ತೊಂಡುವೆಣ್ಬುರುಳಿ (ನಾ). ಗಳಹುವ ಹೆಣ್ಣುಗಿಳಿ; ಹರಟುವ ಹೆಣ್ಣುಗಿಳಿ: ನಡಪಾಡುವ ರಾಜಹಂಸೆ ಬಂದಾಡುವ ತೊಂಡುವೆಣ್ಬುರುಳಿ (ಪಂಪಭಾ. ೩-೩೭). [ತೊಂಡು$_1$ + ವೆಣ್ಬುರುಳಿ]

ತೊಂಡುವೆಸರ್ (ನಾ). ಹೆಮ್ಮೆಗಾಗಿ ಪಡೆದ ಬಿರುದು: ನೀಚಂಗೆ . . . ಗಾವಿಲನೊರ್ವಂ ಕುಡೆ ಕೊಂಡ ತೊಂ[ಪಾಕಾಂ. ಕೊಂ]ಡುವೆಸರಿಂದೇಂ ಸಲ್ವುದೇ ನಿಲ್ವುದೇ (ಧರ್ಮನಾ. ೦-೪೯). [ತೊಂಡು$_1$ + ವೆಸರ್]

ತೊಂಡುಸಲಗ (ನಾ). ಮದಿಸಿದ ಸಲಗ; ಮದ್ದಾನೆ: ತೊಂಡುಸಲಗ ನನ್ನು ಹಳ್ಳಕ್ಕೆ ಕೆಡವಿದ ಬೇಟೆಗಾರನ ಹೆಮ್ಮೆಯಿತ್ತು ಆ ಧ್ವನಿಯಲ್ಲಿ (ರಾಗಿಡಿ. ೬). [ತೊಂಡು$_1$ + ಸಲಗ]

ತೊಂಡುಹೋಗು (ಕ್ರಿ). ಸ್ವೇಸ್ಪೆಯಾಗಿ ತಿರುಗು: ಎಮ್ಮೆ ಕೋಣ ಕುಲವ ನಾ ಕಾಯಲಿಲ್ಲ ಅವು ಎನ್ನ ತುಱುವಿಗೆ ಹೊಱಗು ತೊಂಡುಹೋಗದಂತೆ ಕಾದೊಪ್ಪಿಸುವೆ (ತುಱುಗಾ. ೦): ಹಸುವಿಂಗೆ ಒಂದು ಕಚ್ಚು . . . ಕಱುವಿಂಗೆ ಮೂಱು ಕಚ್ಚು ಇಂತಿವ ನೋಡಿ ಮೇಯಿಸಿಕೊಂಡು ತೊಂಡುಹೋಗದಂತೆ ನಾ ಕಾದೊಪ್ಪಿಸಬೇಕು (ತುಱುಗಾ. ೨).

[ತೊಂಡು$_1$ + ಹೋಗು$_1$ (< ಪೋಗು$_1$)]

ತೊಂಡುಱಿಸು (ಕ್ರಿ). (?): ಹರಿಣನಾ ಹಿಂಡ ಸವಱುತಲೆಸುತ ಖಂಡಿಸುತ ಶಬರಕುಳ ತೊಂಡುಱಿಸಿ ಬೇಂಟೆಯಿಂ ಪೆಚ್ಚುತಿರಲು (ಲಿಂಗಪು. ೬-೨೫): ಸುರುಚಿರಾಭರಣದಿಂ ಖಂಡಶಶಿನೊಸಲ್ಗಳಿಂದಾ ತೊಂಡುಱಿಸಿ ವಿಟರ ಮೇಲ್ವಾಯ್ದು ಪಿಡಿದಪ್ಪುತಂ (ಲಿಂಗಪು. ೨೫-೪೬). [?]

ತೊಂಡೂರ್ (ನಾ). ಒಂದು ಊರಿನ ಹೆಸರು: ಮದರಿಕಲ್ಲೂ ತೊಣ್ಡೂರು ಮಲ್ಲಪ್ಪರ್ನೆರಡು ಅಮ್ಮವಳ್ಳಿ ಪನ್ನೆರಡು (ಎಕ. XI, ಹಳ್ಳಕ. ೩೪-೦೬; ಸು. 315). [? + ಊರ್]

ತೊಂಡೆ$_1$ (ನಾ). ಒಂದು ಬಗೆಯ ಬಳ್ಳಿ ಮತ್ತು ಅದರ ಹಣ್ಣು: "ಓಷ್ಠೀ, ಬಿಂಬೀ, ತುಂಡಿಕಾ-ಈ ೩ ತೊಂಡೆ" (ಹಲಾಯು. ೩೪-೫೦); "ತುಂಡಿಕೇರೀ, ರಕ್ತಫಲಾ, ಬಿಂಬಿಕಾ, ಪೀಲುಪರ್ಣೀ ಈ ೪ ತೊಂಡೆ" (ನಾಚಿರಾ. ೧೧೦): ಗಾಣರ್ಗೆ ಬುಧರ್ಗೆ ಕವಿಶ್ರೇಣಿಗೆ ಪಗೆಯಾದೆವೆಂದು ತೊಂಡೆಯ ಪಣ್ಗಳ್ ನಾಣುಂ ಬೆಳರ್ತು ತೋರ್ಪವೊಲೇಣಾಕ್ಷಿಯರಧರಮಂದು ಬೆಳ್ಪ ಮರ್ದೆಸೆಗುಂ (ಉದ್ಯಟಿ. ೯-೦೨೬): ಮದಕರಿ ಮತ್ತೆ ಮೆಟ್ಟಿದ ಹಿರಿಯ ತೊಂಡೆಯ ಹಣ್ಣಿನಂದದಿ ಕರುಳನೋಕರಿಸಿದನು (ಕೌಶಿರಾ. ೨೨-೨೨): ಚಿಲುಪಾಲುವೆಸರನದಕಿಟ್ಟು . . . ಹಸಿಯ ತೊಂಡೆಯ ಬೇರ ಕಟ್ಟಿ ತೊಳಸಿದೊಡೆ ಬಿಳುಪಹುದು (ಸೂಪಶಾ. ೨-೩): ತರುಣಿಯೋರ್ವಳ ತುಟಿಯ ತೊಂಡೆಯ ಪಣ್ಣೆಂದರಗಿಣಿಯೆಱಗಲು (ಕಂಸವಿ. ೫-೦೦೬).

[ದೇ.॥ ತಮಿ. ತೊಣ್ಟೈ; ಮಲ. ತೊಣ್ಡ; ತೆಲು. ದೊಂಡ]

ತೊಂಡೆ$_2$, ಡೊಣ್ಣೆ$_2$, ದೊಣ್ಣೆ$_2$ (ನಾ). ಓತಿಕೇತ; ಗೋಸುಂಬೆ; ಊಸರವಳ್ಳಿ: "ಸರಟಃ, ಕೃಕಲಾಸಃ-೨ ತೊಂಡೆ ಹೆಸರು" (ಸಿದ್ಧಾಂತಿ. ೦೩೭). 'ತೊಂಡೆಕೇತ' ಪರಾ. **ಡೊಣ್ಣೆ$_2$**: 'ಡೊಣ್ಣೆಕೇತ' ಪರಾ. **ದೊಣ್ಣೆ$_2$**: 'ದೊಣ್ಣೆಕಾಟ' ಪರಾ. [← ತೆಲು. ತೊಂಡ]

ತೊಂಡೆ$_3$, ತೊಂಡಿ$_2$, ದೊಂಡೆ$_2$ (ನಾ). ೧. [ಸಂಗೀತ] ಒಂದು ರಾಗದ ಹೆಸರು: ಆ ವಧು ಲಾಗು ಬಾಗು ಮೋಹ ಚಾಳೆಯಂ ನೆಱೆ ಮಾಡಿ ತೊಂಡೆ ವೇಳಾವಾಳಿ ದೇಶಿ ಗುಜ್ಜರಿ ವರಾಳಿಗಳಿಂದಮೆ ನಾಡೆ ಪಾಡುತಂ (ಧರ್ಮಪ. ೩-೯೦). **ತೊಂಡಿ$_2$**: ೨. ಮಧುರವಾದ ಸ್ವರ; ಇಂಪಾದ ಧ್ವನಿ: ಶರೀರದ ಲಾಗು ಲಾಗಿನೊಳ್ ನೆಲಸಿದ ರೂಪು ರೂಪಿನೊಳ ಗುರ್ವಿಸುವುನ್ನತ ದೇಸಿ ದೇಸಿಯೊಳ್ ನೆಲಸಿದ ಗಾಡಿ ಗಾಡಿಯೊಳನಾರತ ಮೊಪ್ಪುವ ತೊಂಡಿ ತೊಂಡಿನೊಳ್ಗೆಲೆ ಬಳಸಿರ್ಪ ಭಾವವಳವಟ್ಟರೆ ನರ್ತಕಿ ನಾಡೆ ರಂಜಿಪಳ್ (ಧರ್ಮಪ. ೨-೨೪). **ದೊಂಡೆ$_2$**: ೩. ಗಂಟಲು; ಕಂಠ: "ಅಯ್ಯೊ" ಎಂದು ಕಂಪಿತ ಚೀರ್ದನಿ ಮುನಿಯನ ದೊಂಡೆಯಿಂದ ಹೊರಟಿತು (ಕಾಬಝಾ. ೬೭).

[ದೇ.॥ ತಮಿ. ತೊಣ್ಟೈ; ಮಲ. ತೊಣ್ಡ; ತುಳು. ದೊಂಡೆ; ಕೊಡ. ತೊಂಡೆ]

ತೊಂಡೆ$_4$ 'ದೊಂಡೆ$_1$' ನೋ.

ತೊಂಡೆ$_5$ (ನಾ). ಕಬ್ಬಿನ ಜಲ್ಲೆಯ ನಿಸ್ಸಾರವಾದ ಮೇಲುಭಾಗ; ಕಬ್ಬಿನ ಸೋಗೆ: ತೊಂಡೆ ಹೊಯ್ದು ಒಂದೇ ಅಳತೆಗೆ ಕಬ್ಬುಗಳನ್ನು ಕತ್ತರಿಸಿ ರಾಶಿ ಹಾಕಬೇಕು (ನನ್ನೂರು. ೨೮೫). [?]

ತೊಂಡೆಕಾಯಿ (ನಾ). ತರಕಾರಿಯಾಗಿ ಬಳಸುವ ಒಂದು ಬಗೆಯ ಕಾಯಿ: ತೊಂಡೆಕಾಯಿ, ನೆಲ್ಲಿಕಾಯಿ . . . ಬೆಣ್ಣೆ, ದ್ರಾಕ್ಷಿಹಣ್ಣು, ಇವಿಷ್ಟು ಪಾಂಡುರೋಗ, ಕಾಮಿಲೆ, ಹಲೀಮಕಂಗಳಲ್ಲಿ ಪಥ್ಯವರ್ಗಂಗಳು (ವೈದ್ಯಸಾ. I, ೩೪೯): ಕಾಗೆದೊಂಡೆ, ಸಿಹಿತೊಂಡೆ, ತೊಂಡೆಕಾಯಿ (ಮೃಜಿಗಿ. ೨೩-೪೨೩). [ತೊಂಡೆ$_1$ + ಕಾಯಿ$_4$ (< ಕಾಯ್$_4$)]

ತೊಂಡೆಕೇತ, ಡೊಣ್ಣೆಕಾಟ, ಡೊಣ್ಣೆಕೇತ, ದೊಣ್ಣೆಕಾಟ (ನಾ). ಹಲ್ಲಿಯ ಜಾತಿಗೆ ಸೇರಿದ ಒಂದು ಬಗೆಯ ಪ್ರಾಣಿ; ಹೆಂಟೆಗೊದ್ದ: ಗಿಡದ ಮೇಲಿದ್ದ ತೊಂಡೆಕೇತವನ್ನು ನೋಡಿ ಮಗು ಹೆದರಿಕೊಂಡಿತು (ರೂಢಿ). **ಡೊಣ್ಣೆಕಾಟ**: ಅವುಗಳಿಗೆ ಸರ್ವಜಾತಿಗಳೆಂದರೂ ಸರಟ (ಡೊಣ್ಣೇಕಾಟ) ಜಾತಿಗಳೆಂದರೂ ಸಲ್ಲುವುದು (ಮುಂಬಯಿ. ೬-೨೫೯). **ಡೊಣ್ಣೆಕೇತ**: ಡೊಣ್ಣೆಕೇತವನ್ನು ಕಂಡರೆ ಮಕ್ಕಳು ಅದರ ಮೇಲೆ ಕಲ್ಲೆಸೆಯುತ್ತಾರೆ (ರೂಢಿ). **ದೊಣ್ಣೆಕಾಟ**: ವೆಂಕಟನ ಮೊಗ ತಮ್ಮನ ಕಲ್ಲಿನೇಟಿಗೆ ಬಿದ್ದ ಆ 'ದೊಣ್ಣೆಕಾಟ'ದ ಮೃತಶರೀರವನ್ನು ನೋಡುತ್ತಿರುವಂತೆ ವಿವರ್ಣವಾಯಿತು (ಬನಸಿ. ೦೧೪). [ತೊಂಡೆ$_2$ + ಕೇತ$_2$]

ತೊಂಡೆಗರುಳು 'ದೊಂಡೆಗರುಳ್' ನೋ.

ತೊಂಡೆದಾಳಿದ (ನಾ). ತೊಂಡೆಕಾಯಿಯಿಂದ ಮಾಡಿದ ಪಲ್ಯ: ತೊಂಡೆದಾಳಿದ ಪಟಲದಾಳಿದವ ಸವಿವುತಂ (ಲಿಂಗಪು. ೧೬-೦೬).

[ತೊಂಡೆ$_1$ + ತಾಳಿದ]

ತೊಂಡೆಬಾಯ್ 'ತೊಂಡೆವಾಯ್' ನೋ.

ತೊಂಡೆವಣ್, ತೊಂಡೆವಣ್ಣು, ತೊಂಡೆಹಣ್ಣು (ನಾ). ತೊಂಡೆಯ ಬಳ್ಳಿಯಲ್ಲಿ ಬಿಡುವ ಹಣ್ಣು; ಬಿಂಬಫಲ: ಅವಳ ಚೆಂದುಟಿಯಂ ಪೊಸ ತೊಂಡೆವಣ್ಣಿದೊಂದಚ್ಚರಿಯಲ್ಲಿ ಪುಟ್ಟಿತೆನುತಲ್ತಿಯಿನೊಲ್ದು ಕರ್ದುಂಕಲ್

(ಉದ್ಯಟ. ೬-೭೪) ; ತಳರಡಿಗೆ ತೊಂಡೆವಣ್ಣುಟಿಗೆ ತಾವರೆ ಮೊಗಕೆ . . . ಕೋಗಿಲೆ ಗಿಳಿಗಳಿಂಚರಕೆ ಸೋಲ್ದವಯವಂಗಳೊಳ್ನೆಲಸಿದುವು (ಕೃಮಿಧಾ. ೩೦-೪). **ತೊಂಡೆವಣ್ಣು** : ಮುದದಿಂದ ಗಿಳಿ ತೊಂಡೆವಣ್ಣಿನ ರಸವನು ಕರ್ದುಕಿ ಪೀರ್ವಂತೆ (ಕಂಪವಿ. ೯-೧೫೦) ; ನಾರಿಯರಧರಂಗಳಂ ಕಂಡು ತೊಂಡೆವಣ್ಣುಗಳೆಂದು ತಿಳಿದು ಎಳಗಿಣಿಗಳೆಲ್ಲ ಒಟ್ಟುಗೂಡಿ ಬರುತ (ಸಾಗಂಧಿ. ೪೭-೬) . **ತೊಂಡೆಹಣ್ಣು** : ಬಿಂಬ, ಬಿಂಬಿಕೆ – ತೊಂಡೆಹಣ್ಣು (ನಾಚರಾ. ೬. ೬೯) ; ತೊಂಡೆಹಣ್ಣು ಮಣಿಯೆ ನಾಚಿ ನಗೆಯ ಬೆಲುವ ತುಟಿಯ ಚಾಚಿ (ಅನಿರು. ೦೮-೦) . [ತೊಂಡೆ$_1$ + ಪಣ್$_3$]

ತೊಂಡೆವಣ್ಣು 'ತೊಂಡೆವಣ್' ನೋ.

ತೊಂಡೆವಣ್ಣುಟಿ (ನಾ). ಬಿಂಬಫಲದಂತಿರುವ ತುಟಿ ; ಬಿಂಬಾಧರ : ಬಂದುಗೆದುಟಿ ತೊಂಡೆವಣ್ಣುಟಿಯವರು ಮಂದಗಮನೆಯೊಳ್ಕೈದಿದರು (ಚೀವಂಸಾಂ. ೦೦-೪೭) ; ತುಱುಗೆವೆಗಣ್ಣ ಕಟಾಕ್ಷ ಕೆಂಬಲ್ಗಳ ವಿಱುಗುವ ತೊಂಡೆವಣ್ಣುಟಿಯ ಬೆಱಗಿಂದೆ ಮಾತನಾಡಿದಳು (ಕೋಚಕ. ೦೬-೩೪) ; ಕಣ್ಣೆಱೆದಾಕ್ಷಣ ಬರೆಸಳದಾ ತೊಂಡೆವಣ್ಣುಟಿಯಬಲೆಯನಪ್ಪಿ . . . ತೋಱಿದನು ಸ್ವರ್ಗಸುಖವ (ಧರಕ. ೦೫-೬೨) .

[ತೊಂಡೆವಣ್ + ತುಟಿ]

ತೊಂಡೆವಾಯ್, ತೊಂಡೆಬಾಯ್, ತೊಂಡೆವಾಯಿ (ನಾ). ತೊಂಡೆಯಂ ಹಣ್ಣಿನಂತೆ ಕೆಂಪಾಗಿರುವ ಬಾಯಿ,–ತುಟಿ : ಬಂದರ್ ಪವಳವಾಯ ತಳರ್ವಾಯ ತೊಂಡೆವಾಯೊಳ್ಪೈಂಡಿರ್ (ಜಗವಿ. ೪-೦೫೨) ; ನಿಡುಸುಯ್ದುಂ ತನ್ನನೊತ್ತಂಬರಿಸೆ ನಿಲುಪುತುಂ ನೀಳ್ದ ನಲ್ಮೇಶದಿಂದಂ ತೊಡೆಯುತ್ತುಂ ತೊಂಡೆವಾಯಂ ಶ್ರಮಜಲಕಣಮುಂ ಮೇಲುದಿಂ ವಾರಿಸುತ್ತುಂ . . . ಬಂದು ನಿಂದಳ್ (ಸೂಕ್ತಿಸು. ೪-೦೭೭) ; ಎನಗುಳಿದ ಗಂಡುಗಳೆಲ್ಲ ಸಹೋದರರೆಂದೀ ತೊಂಡೆವಾಯಬಲೆ ನುಡಿದಳು (ಶ್ರೀಪಾಲ. ೫-೮೬) ; ರಾಯ ಪರಾಕೆಂದು ಕೈವಾರಿಪ ತೊಂಡೆವಾಯ ವಾಕಳಿಯರೊಪ್ಪಿದರು (ಪೋಚಕ. ೪-೬) . **ತೊಂಡೆಬಾಯ್** : ತೊಂಡುನಗೆಯ ತೊಂಡೆಬಾಯ ಕಂಡು ಕಂಡು ಮುತ್ತನಿಟ್ಟು (ನಾದಲೀ. ೭೭-೦೯) . **ತೊಂಡೆವಾಯಿ** : ತುಱುಗೆವೆಯಲರ್ಗಣ್ಣು ತುಂಬಿಗುರುಳ ತೊಂಡೆವಾಯಿ . . . ಇಂಬಾದವಾ ಬಾಲಕಿಗೆ (ಶ್ರೀಪಾಲ. ೫-೨೪) . [ತೊಂಡೆ$_1$ + ಬಾಯ್]

ತೊಂಡೆವಾಯಿ 'ತೊಂಡೆವಾಯ್' ನೋ.

ತೊಂಡೆವಾಯ್ದೆರೆ 'ತೊಂಡೆವಾಯ್ದೊಱೆ' ನೋ.

ತೊಂಡೆವಾಯ್ದೊಱೆ, ತೊಂಡೆವಾಯ್ದೆರೆ (ನಾ). = ತೊಂಡೆವಣ್ಣುಟಿ : ತುಱುಗೆವೆಗಣ್ಣ ಕಾಂತಿ ಮುರಗಟ್ರಲಿಯಂ ಬೆದಱಟ್ಟಿ ತೊಂಡೆವಾಯ್ದೊಱೆ ಕಿಸುಸಂಡಿವೀಜಿ (ಜಗವಿ. ೦೬-೨೫) ; ಸಕ್ಕರೆಸವಿಯ ತೊಂಡೆವಾಯ್ದೊಱೆಯ ಸೊಗಸನುಗುರ್ವಕ್ಕಜದ ಮುದ್ದುವಾತಿನ . . . ಪೆಣ್ಮಕ್ಕಳೆಯೆ೦ದರೊಸೆದು (ಪದ್ಮಚ. ೭-೬೬) ; ತೊಂಡೆವಾಯ್ದೊಱೆಯ ಕಂಬು ಕಂಠದ . . . ನಿತಂಬಿನಿಗೆಣೆಯಾದರುಂಟೆ (ಚೀವಂಸಾಂ. ೦೦-೨೩) ; ಬೆಳ್ವರ್ಣಮುಂ ತಳೆದ ತೊಂಡೆವಾಯ್ದೊಱೆಯ ಕೆಂಬೊಳಪಡರ್ದ ನಿಡುಗಣ್ಣ . . . ಎಳವೆಣ್ಣು (ಉದ್ಭಟೆ. ೪-೭೪) . **ತೊಂಡೆವಾಯ್ದೆರೆ** : ತೊಳಗುವ ತೊಂಡೆವಾಯ್ದೆರೆಯ ಮುದ್ದು (ಪೂರಪಂ. ೨-೭೦) .

[ತೊಂಡೆ$_1$ + ಬಾಯ್ದೊಱೆ$_2$]

ತೊಂಡೆಹಣ್ಣು 'ತೊಂಡೆವಣ್' ನೋ.

ತೊಂಡೇಳ್ (ಕ್ರಿ). = ತೊಂಡುಬೀಳು : ತೊಂಡೆದ ದಿಂಡಿಗತನದ ಪುಂಡ ಹೆಣ್ಣು (ಮುಂತ್ರಕ. ೫೪-೦೭) . [ತೊಂಡು$_1$ + ಏಳು$_1$ (< ಏಟ್$_1$)]

ತೊಂತಗವಿತೆ (ನಾ). ವ್ಯರ್ಥಪದಪೂರಿತವಾದ ಕವಿತೆ ; ಹುರುಂಯಿಲ್ಲದ ಕಾವ್ಯ : ಮುಂತೆ ಸರಿಯಿಲ್ಲೆಂದು ಪೊಗಳ್ದವರು ಪೊಜಮಟ್ಟ ಪಂತವನ ಕವಿತೆಯೇನೆಂದು ನಿಂದಿಸಿ ತಮ್ಮ ತೊಂತ[ಪಾಠಾಂ. ಕೊಂತ, ತೂಂತ] ಗವಿತೆಯ ತೊಂಬನುರ್ಬಿ (ಪಚಕಾ. ೦-೨೯) ; (ಸೋಮುಚ. ೦-೦೭ ಸೊಟ) ; ತೊಂತಗವಿತೆಯ ಗು ನ್ಕೈ೯೦ . . . ಸುಪ್ರಬಂಧದೊಳ್ಪಿಂಗೆಣೆಯೇ (ಪಮ್ಮಾರ. ೦-೨೩) .

[ಈ ಪದ 'ತೂಂತಗವಿತೆ (<ತೂಂತು$_3$ + ಕವಿತೆ)' ಎಂದೇ ಇರಬಹುದು]

ತೊಂತು$_1$ (ಕ್ರಿ). ೧. ಮೇಲೇರು ; ಆಕ್ರಮಿಸು ; ವಯಿತ್ತು : ಮನ್ಮಥ ಕುಮಾರಕ ತನ್ನ ತೊಂತಿದ ಖಳರನುತ್ಸರಿಸಿ ಹಂತಿಯೊಳ್ ಕಡಹಲ್ಕೆ (ಪೋಚಕ. ೩೪-೩೭) ; ಮಂತ್ರೀಶ್ವರನ ಮೆಯ್ಗಾವಲ ರಥರಾಜಿ ದಂತಿಗಳಾ ಹವದೊಳಗೆ ತಿಂತಿಣಿ ಭರವಸದಿಂದಾಗ ಪರಿತಂದು ತೊಂತಿತು ನೀಲಾಂಬರನ (ಪೋಚಕ. ೪೦-೭೩) . ೨. ಸಂತರ್ಪಿಸಿಕೊ ; ಬಳಸು : ನೀನೀತನ ವರೂಥಮಂ ತೊಂತಿ ವಾಲಾಗ್ರದಿಂ ಗಗನದೊಳ್ಪರಿಪಿಡು (ಕೃಮಿಧಾ. ೫೭-೪೩) ; ಕಾಲು ತೊಂತಿದ ಹಾವು ಕಚ್ಚದ ಬಿಡದು(ಗಾಡಿ) . ೩. ಪ್ರೇರಣೆ ಮಾಡಿಂ ; ಎತ್ತಿಕಟ್ಟು ; ಪ್ರಚೋದಿಸಿಂ : (ಕ್ರ).

ತೊಂತಿಕೊಳ್ = ೧. ಸಂತ್ಪುಗಟ್ಟಿಂ : ಬಸವಣ್ಣನ ತೊಂತಿಕೊಂಡು ಬಸವಣ್ಣನ ಧರಿಸಿಕೊಂಡು ....ನಾಮ ಬಸವ ಬಸವಾ ಎನುತಿರ್ದನಯ್ಯಾ (ಅಖಂಡೇ. ೩೦೪-೮೩) . ೨. ಹಬ್ಬಿಂ ; ವ್ಯಾಪಿಸಿಂ ; ತುಂಬಿಕೊಂಡಿರಿಂ : ಮೂವತ್ತಾರುತತ್ತ್ವದೊಳಸಂತ ಜನ ದೇವ ದಾನವರಾದಿಯಾಗಿಹರು ತೊಂತಿಕೊಂಡಿಹರು (ಲಕ್ಷ್ಮಣ. ೩-೦೯-೩೨): ಈ ಮದನಕಾಂತೆ ಮನದೊಳ ಹೊರಗೆ ತೊಂತಿಕೊಂಡಿರ್ದತುಳಚಿಂತಾಗ್ನಿ ಶಾಂತರಸದೋಳ್ಮುಳುಗಲು (ನವಮೋ. ೯-೪೭) . ೩. ಸಿಕ್ಕಿಕೊಳ್ಳಿಂ : ತೊಂತಿಕೊಂಡಿರೆ ಶೋಕಸಾಗರದಿ ತೊಳಲುತಿರೆ ಪ್ರಾಣಂಗಳುಳಿಯವೆನಗೆ (ಕಂಕಾರಾ. ೩-೨೨-೩೭) .

[← ತಮಿ. ತೊತ್ತು]

ತೊಂತು$_2$ (ನಾ). ದಟ್ಟಣೆ ; ನಿಬಿಡತೆ : ಅಂತರಾತ್ಮಕನೈದುವ ನಿಶ್ಚಿಂತನೆ ಸಂಸಾರಸಾಗರ ತೊಂತಿನಿಂ ಕೆಡದಿಹರು ನೃಪ ನಿಶ್ಚಿಂತರಲ್ಲಿಂದ (ಅಂಬಿಕಾ. ೩೭-೨೩) ; ಮರಗಳ ತೊಂತು ಬಹಳ ಜಾಸ್ತಿಯಾದ್ದರಿಂದಲೂ . . . ಕತ್ತಲೆಯಾದ ಮೇಲೆ ಜನರು ಆ ದಾರಿಯನ್ನು ಉಪಯೋಗಿಸುತ್ತಿರಲಿಲ್ಲ (ಕಂಗಾಳ್ಕ. ೪೩೩) . [< ತೊಂತು$_1$ ·/ತಮಿ. ತೊತ್ತು]

ತೊಂತುಳಿ (ನಾ). ಅಜಿಗಿಜಿಯಾದ ಸ್ಥಿತಿ ; ಅಸ್ತವ್ಯಸ್ತವಾದ ಸ್ಥಿತಿ : ನಲಿ ಪೊಲವುಚ್ಚು ತಮ್ಮ ಮನದೊಳ್ ಸಲೆ ಕಬ್ಬಸು ಪರ್ವಿದುರ್ವಿಯೊಳ್ ಚಲದಿಱಿದಾಂತು ಬಿದ್ದ ಭಟರಂತ್ರದ ತೊಂತುಳಿಯೊಳ್ ಸಿಲುಂಕಿ (ನೇಮಿಪು. ೦೦-೦೫೩) .

[ಈ ಪದ 'ತೂಟ್ಟುಟ್' ಶಬ್ದದ ಅಪಲಿಖಿತವಿರಬಹುದು]

ತೊಂದರೆ (ನಾ). ೧. ಕಷ್ಟ ; ಪೇಚಾಟ : ಇಲ್ಲದ ಸಲ್ಲದ ಹೆಚ್ಚಿನ ತೊಂದರೆಗಳೂ,ಕಾರ್ಯಭಾರವೂ . . . ಸಹನಿಗೆ ಬಂದೊದಗಿತು (ಸಸ್ಕೃಳ. ೦೩೦) : ಮನೆಮನೆಗಳಲ್ಲಿಯ ಜನಗಳಲ್ಲಿ ಒಮ್ಮನಸಿಲ್ಲದಾಗಿ, ತೊಂದರೆಗಳು ತಾಂಡವವಾಡುತ್ತವೆ (ಗಾಳಗು. ೩೦) . ೨. ತೊಡಕಿಂ ; ತಡೆ ; ಅಡ್ಡಿ ; ಅನನಂ ಕೂಲ : ಮುಂದಡಿಯಿಡಬೇಕೆನ್ನುವವರಿಗೆ ಇನ್ನೂ ಕೆಲವು ತೊಂದರೆಗಳಿವೆ (ಹುಳಪ್ರ. ೦೬೫) : ಆವನ ಈ ಒದನಾಟದಿಂದ ನನಗಾದ ಒಂದು ತೊಂದರೆಯೆಂದರೆ ಸಂಜೆ ಯಮುನಾ, ಲಲಿತೆಯರನ್ನು ನೋಡಲು ಸಮಯ ಸಿಗದುದು ! (ಆಂಹೊ. ೭೭) . ೩. ಕಿರಂಕುಳ ; ಕಾಟ ; ಹಿಂಸೆ : ರಾಮಪ್ಪನವರು ಒಂದು ಪಿಳ್ಳೆಗೂ ಯಾವ ತೊಂದರೆಯನ್ನೂ ಕೊಡಲಿಲ್ಲ (ಕಂಬಹು. ೦೫೦) .

[ದೇ.ಪ ತಮಿ. ತೊನ್ರವು, ತೊನ್ರೈ ; ಮಲ. ತೊನ್ದರ ; ತುಳು. ತೊಂದರೆ ; ತೆಲು. ತೊಂದರ]

ತೊಂದರೆಗೊಳಿಸು (ಕ್ರಿ). ಅಡ್ಡಿಪಡಿಸು ; ತೊಡಕಿಗೆ ಈಡುಮಾಡಿಂ : ಇತರರನ್ನು ಕಾರಣವಿಲ್ಲದೆ ತೊಂದರೆಗೊಳಿಸುವುದೇ ಕೆಲವರ ಸ್ವಭಾವ (ಡೂಢಿ) . [ತೊಂದರೆ + ಕೊಳ್$_1$ + – ಇಸು$_3$]

ತೊಂದರೆಪಡು (ಕ್ರಿ). ಕಷ್ಟಪಡಂ : ಕುಡಿಮಿಶೆ . . . ಇಲ್ಲದಿದ್ದಾಗ ಅನೇಕ ಕೀಟಗಳು ನಿಸ್ಸಹಾಯ, ತೊಂದರೆಪಡುತ್ತವೆ (ಕೀಟಬೆ. ೦೪) ; ನನ ಗೋಸ್ಕರ ನೀನು ತೊಂದರೆಪಟ್ಕೋಬೇಡ (ರೂಢಿ). [ತೊಂದರೆ + ಪಡು₁]

ತೊಂದಿರ (ನಾ). (?) : ನಾಲುವಿರುದ್ರಮ ಮುಖ್ಯಧಿದಾವ ತೊದಲುಂ ತೊನ್ದಿರರುವೈ ನೂರ್ವ್ವರುಮಿರ್ದ್ದು ವಿಟ್ಟ ಧರ್ಮ್ಮಮೆನ್ತೆಂದಡೆ (ಇಅ. XI, ೨೭೪-೨೭ ; 1158). [?]

ತೊಂಪೆ 'ತೊಂಬೆ₁' ನೋ.

ತೊಂಬತು 'ತೊಂಬತ್ತು' ನೋ.

ತೊಂಬತ್ತು, ತೊಂಬತಂ, ತೊಂಭತಂ, ತೊಂಭತ್ತು (ನಾ). ಒಂದಂ ಸಂಖ್ಯಾವಾಚಕ ; ಒಂಬತ್ತನ್ನು ಹತ್ತರಿಂದ ಗುಣಿಸಿದರೆ ಬರುವ ಗುಣಲಬ್ಧ ; ಹತ್ತು ಕಡವೆಂನೂರು: ಆರಕೆಸಿಗಳಾಣತ್ತಿ ಆಗಪಳ್ಳಿಟ್ಟುಟ್ಟು ಪ್ರಸಾದಂಗೆಯ್ದಾರಿದರ್ಕ್ಕೆ ತೊಂಬತ್ತಱುಸಾಸಿರದಾ ಪ್ರಕೃತಿಗಳೆಲ್ಲೊರುಂ (ಎಳ. III, ತಿರುಮ. ೦-೯ ; 726) ; ತೊಂಬತ್ತೊಂಬಯ್‌ಸಾಸಿರದ ಇನ್ನೂಱಿಣ್ಬತ್ತು ನಾಲ್ಕು ವ್ಯಾಧಿಗಳುಂ (ವಡ್ಡಾರಾ. ೯೯-೪) ; ಮುಂದೆ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಶಿವಾಲಯಂಗಳಂ ಮಾಡುತಿಪ್ಪರಂ ಕಂಡು (ಶೂನ್ಯಸಂ. ೩೫-೩). **ತೊಂಬತು:** ಲಕ್ಷದ ಮೇಲೆ ತೊಂಬತಾರ್ಸಾಸಿರ ಮಹಾಜಂಗಮಕ್ಕೆ ಮೃಷ್ಟಾನ್ನಮಂ ದಾಸೋಹಮಂ ಮಾಡುತ (ಚಿಬಪು. ೩-೩೨). **ತೊಂಭತು:** ಬರಿಸಮಾಱಾಗೆ ಮತ್ತಂ ಶಕಾಬ್ದಂ ವಿಸ್ತಾರಂ ತೊಂಭತೇಱೊಂಭತುಮೆನೆ (ಎಇ. VI, ೨೦೫-೭ : 1057) ; ತೊಂಭತೊಂಬತ್ತು [ಪಾಠಾಂ. ತೊಂಬತ್ತೊಂಬತ್ತು] ಸಹಸ್ರಯೋಜನ ಗಳಿಂದಂಬರವನು ಮುಟ್ಟುತ್ತ. . . ಮೇರುವಿಂಬಾಗೆ ಲಕ್ಷಯೋಜನದಿ (ಜೀವಂಸಾಂ. ೧-೨೪). **ತೊಂಭತ್ತು :** ಪ್ರಿಥುವೀರಾಜ್ಯಕೆಯೆ ಕಂಭರಸರ್ ತೊಂಭತ್ತಱುಸಾಯಿ × × × (ಎಳ. IV, ಹೆಗ್ಗಡ. ೯೩-೨; ಸು. 780); ತೊಮ್ಬತ್ತಱುಸಾಸಿರ್ವ್ವರುಮಯ್ಸಾಮನ್ತರು ... ಇದಕ್ಕೆ ಸಾಕ್ಷಿ (ಎಳ. I, ೨-೯; 887); ತನ್ನೊಡನಾಡಿಗಳಪ್ಪ ತೊಂಭ[ಪಾಠಾಂ. ಬ]ತ್ತಾಱು ಸಾಸಿರ ಗೋಪಕುಮಾರರೊಡನೆ ಕೂಡಿ (ಪಂಪಭಾ. ೯-೦೨ ಪ); ಎಳೆಯೊಳಟ್ಟುದು ಸಾಸಿರಯೋಜನಂ ಗಗನಕ್ಕೆ ತೊಂಭತ್ತೊಂಭಯ್ಸಾಸಿರಂ ಬಳೆದುದು . . . ಮೇರುಮಹೀಧರೇಂದ್ರಂ (ಶಾಂತಿಪು. ೦೦-೬೬); ಅಂತು ತೊಂಭತ್ತ[ಪಾಠಾಂ. ತ್ತಾ]ಱುಸಾಸಿರಮಂತಃಪುರಂಗಳಂ . . . ನೆಱೆದ ಸಾಮ್ರಾಜ್ಯಲಕ್ಷ್ಮಿಗಧಿಪತಿಯಾಗಿ (ಅಜಿಪು. ೧೦-೦ ಪ).

ತೊಂಬದಿಂಬರ್ = ತೊಂಬತ್ತು ಮಂದಿ ; ತೊಂಬತ್ತು ಜನ : ಸಿಂಹಸೇನಂ ಮೊದಲಾಗೆ ತೊಂಬದಿಂಬರ್ ಗಣಧರರುಂ (ಅಜಿಪು. ೮-೨೫ ಪ). **ತೊಂಬಯ್ಸಾಸಿರ** = ತೊಂಬತ್ತುಸಾವಿರ : ತೊಂ[ಪಾಠಾಂ. ಒಂ. ಎಂ] ಬಯ್ಸಾಸಿರ್ವರ್ ನಿಮ್ಮಂಬಿನ ಬಂಬಲೊಳೆ ಮಕುಟಬದ್ಧರ್ ಮಡಿದರ್ (ಪಂಪಭಾ. ೦೦-೨೯); ಕೇಶಿರಾಜನ ಮೇರೆಗೆ 'ಒಂಬತ್ತು + ಪತ್ತು' ಎನ್ನುವುದಂ ಈ ಶಬ್ದದ ವ್ಯುತ್ಪತ್ತಿ.

[ದೇ.॥ ತಮಿ. ಮಲ. ತೊಣ್ಣೂಱು ; ಕೊಡ. ತೊಂಬದೀ ; ತೆಲು. ತೊಂಬದಿ, ತೊಂಭೈ]

ತೊಂಬರೆ (ನಾ). ಒಂದೆಡೆ ನಿಲ್ಲದವನು; ಅಲೆದಾಡುವವನು; ಅಲೆಮಾರಿ: ಅಂಬಲಿಯಲ್ಲದೆ ಉಂಬರೆ ಕೂಳಿಲ್ಲ ಕಂಬಳಿಗಳ ಹೊದ್ದಿಹೆವು ... ತೊಂಬರೆ ಬದುಕು ಕೇಳ್ ನಮಗೆ (ಳವಿಚ. II, ೩೮೯ ಪ್ರಸಾದಸಾಂಗತ್ಯ).

[ದೇ.॥ ತಮಿ. ತೊಮ್ಬರೈ]

ತೊಂಬಲ₁ 'ತಂಬುಲ' ನೋ.

ತೊಂಬಲ₂ (ನಾ). (ಉಕ) ತೇವ : ಮಳೆಗಾಲದಲ್ಲಿ ಹವೆಯು ತೊಂಬಲ ವಾಗಿರುತ್ತಿದ್ದರೂ ನೆಲದ ಮೇಲಿನ ನೀರು ಸ್ವಲ್ಪ ಸ್ವಲ್ಪ ಬಾಷ್ಪವಾಗಿ ಹೋಗುತ್ತಿರುತ್ತದೆ (ಮುಂಬಯಿ. ೫-೧೩೮). [<ತಂಬಲ]

ತೊಂಬಲು 'ತಂಬುಲ' ನೋ.

ತೊಂಬಾರ₁, ತೊಂಭಾರ (ನಾ). ೧. (ಧಾನ್ಯದ) ರಾಶಿ.-ಗುಂಪು,-ಸಮೂಹ : (ಕ). ೨. ಗುಂಪಿನ ಜನರಿಗಾಗಿ ಮಾಡಿದ ಅಡುಗೆ ; ಸಾಮೂಹಿಕ ಭೋಜನ : ತಂಡದ ಊಟ : ಆವುದೊಂದು ಸಿರಿಗರ ಹೊಡೆದಲ್ಲಿ ಪಾಕಭೇದವಾಗಿ ತೊಂಬಾ[ಪಾಠಾಂ. ಬ]ರಕ್ಕೆ ಬೇಱೆ ಮಾಡಿದುದು ರಾಜಾನ್ನವು (ಬಸಹೆ. ೧೦೮-೩೫೫) ; ತನ್ನ ಜೊತೆಯಲ್ಲಿಯೇ ಕೂತ ಉಳಿದವರಿಗೆ ತೊಂಬಾರದ ಅಡಿಗೆಯನ್ನು ಮಾಡಿಸಿ . . . ಹಾಕಿಸುತ್ತಿದ್ದನು (ನೀತಿಜಿಂ. X, ೦೫) ; ಗುಂಪಿನ ಅಡಿಗೆ, ಅಷ್ಟೇನೂ ಅಚ್ಚುಕಟ್ಟಿಲ್ಲದ್ದು . . . ತೊಂಬವಾರ, ತೊಂಬಾರ (ನಮ್ಮನು. ೧೦೮). **ತೊಂಭಾರ :** ೩. ಆಧಿಕ್ಯ ; ಅತಿಶಯ : ಬಸವೇಶ್ವರದೇವರು . . . ಸರ್ವಾಲಂಕಾರಶೃಂಗಾರದ ತೊಂಭಾರದಿಂದಲಂಕಾರಂಗೊಂಡು (ಯಜೋರ. ೩೦).

[ದೇ.॥ ತಮಿ. ತೊಮ್ಬರ, ತೊಪ್ಪಾರ ; ತುಳು. ತೊಂಬರ ; ತೆಲು. ತೊಮ್ಮರ]

ತೊಂಬಾರ₂ (ನಾ). ಭವನ ; ಸೌಧ : ಅಪ್ಪಾಜಯ್ಯನು ತನ್ನ ಸಂಗಡ ಚನ್ನುವೀರನನ್ನು ಕರದುಕೊಂಡು, ಹಿತ್ತಲ ಬಾಗಿಲಿಗಾಗಿ, ತೊಂಬಾರದ ಹಿಂದಟ್ಟಿಗಾಗಿ . . . ಕೆರೆಬಾಗಿಲಿಗಾಗಿ ನುಗ್ಗಿ (ರಾಜೇಂದ್ರ. ೨೬೬).

[← ತಮಿ. ತೊಮ್ಬಾರ, ತೊಮ್ಬರ, ತೊಪ್ಪಾರ]

ತೊಂಬುವ್ವೋಯ (ನಾ). ಒಬ್ಬಾತನ ಹೆಸರು : ತೊಮ್ಬುವ್ವೋಯನ ಮಕ್ಕಳ್ ನಾಗಯ್ಯನು ಕೊಣ್ಡಯ್ಯನು (ಎಳ. X, ಕೋಲಾರ. ೯-೪ ; ಸು. 925). [?]

ತೊಂಬೆ₁, ತೆಮ್ಮ, ತೆಮ್ಮೆ, ತೊಂಪೆ, ತೊಮ್ಮೆ₂, ತೋಮೆ (ನಾ). ೧. ಗೊಂಚಲು ; ಗುಚ್ಛ : "ಮಂಜರಿಯೊಳ್ತೊಂಬೆ ತೊಡಂಬೆ ಜೊಂಪ ಗೊಂಚಲ್ ತಿಳಿಗುಂ" (ಕರ್ಣಾನಿ. ೦೨) ; "ಜೊಂಪಮೆನಲ್ ತೊಂಬೆ" (ಚತುನಿ. ೯) ; ತಳ್ತ ಬಣ್ಣವಣ್ಣದ ಗುಡಿ ತೊಂ[ಪಾಠಾಂ. ಕೊಂ]ಬೆ ಗೊಂಚ [ಲೆಲೆ]ಯಿಕ್ಕಿದ ಕಾವಣಮೆಲ್ಲಿಯುಂ ಪೊದಱ್ದೊದವಿರೆ (ಪಂಪಭಾ. ೩-೩೮); ತಳಿರ ತೊಂಬೆಯನಲ್ಲಾಡಿ ಹೂಗೊಂಚಲೊಳ್ ಸುಱಿದು (ಅಂಜಚ. ೨-೫೦) ; ನನೆಗಳಿಂ . . . ತೊಂಬೆಗಳ ಕಾಯ್ಗಳಿಂ (ಜ್ಞಾನಚಂ. ೧-೬೩) ; ಹೀರಖಚಿತದ ಬೊಂಬೆ ಚಾರು ಪೂವಿನ ತೊಂಬೆ ತೋರಮುಡಿಯ ವಧೂಟಿ (ಪಂಕಾರಾ. ೫-೬-೫೭). ೨. ಗುಂಪು ; ಸಮೂಹ ; ಸಂದಣಿ ; "ಬಂಬಲ್" (ಚತುನಿ. ಕಿ. I, ೨೫) ; "ದೊಂದಣಿ ತೆರಳ್ಕೆ ಸಾಲೊಬ್ಬುಳಿ . . . ಗಡಣಂ ಜಾಳಿಗೆಯು ತೊಂಬೆಯೆನೆ ಶ್ರೇಣಿಕಾಖ್ಯಂ" (ಶಬ್ದಮಂ. ೫೫). ೩. ಸಾಲು; ಶ್ರೇಣಿ; ಪಂಕ್ತಿ: "ತೊಂಬೆಯೆನಲಕ್ಕದು ಶ್ರೇಣಿಗೆ" (ಕಶರ. ೪೯). **ತೆಮ್ಮ:** ೪. ಹೆಚ್ಚಳ ; ಆಧಿಕ್ಯ ; ಮೇಲ್ಮೆ. "ತೆಮ್ಮಂ ಶ್ರೇಣಿಯೊಳ್ ಪೆರ್ಚುಗೆಯೊಳಪ್ಪುದು" (ಕಶರ. ೪೮). **ತೆಮ್ಮೆ ;** ೨. ತೆಮ್ಮೆ ತೆಮ್ಮೆಯೊಳೆಯ್ದಿ ಸರ್ವರು ಮಾಡಿದ ಸಮ್ಮತಾರ್ಥವನೊಪ್ಪು ಗೊಂಡು (ಧರಕ. ೬೦-೭೪). **ತೊಂಪೆ:** ೧. ಎದೆಯ ಮೇಲೆ ಬಹುಮಾನಗಳ ತೊಂಪೆಯನ್ನು ನೇತುಹಾಕಿಕೊಂಡಿದ್ದ ಮಿಸೆ ಪೋಲೀಸಿನವನ ಕಡೆಗೆ ತಿರುಗಿ . . . ಆಜ್ಞಾಪಿಸಿದನು (ಪುನರು. ೧೮೮). **ತೊಮ್ಮೆ₂ :** ೪. 'ತೊಮ್ಮೆವಡೆ' ಪರಾ. **ತೋಮೆ :** ೨. ಪಂದಿಯ ಗೊಂದಳದಂತೆಯುಂ ಅಮ್ಮಾವಿನ ತೋಮೆಯಂತೆಯುಂ . . . ಎತ್ತಲುಂ ಮಿಡುಂಕಲ್ಪಡೆಯದ ಸಿಡಿಮಿಡಿಗೊಂಡು (ಪುಷ್ಪಪು. ೩-೧೨೭ ಪ).

[ದೇ.॥ ತಮಿ. ತುಮ್ಪೈ ; ತೆಲು. ತೊಂಬ, ತೊಪ್ಪ]

ತೊಂಬೆ₂, ಟೊಮ್ಮೆ, ತುಪ್ಪೆ (ನಾ). ೧. ಧಾನ್ಯಗಳನ್ನು ಶೇಖರಿಸಿಡುವ ಬಿದಿರಿನಿಂದ ಹೆಣೆದ ದೊಡ್ಡ ಬುಟ್ಟಿ,-ಗೂಡೆ; ಗಳಗೆ : "ಗೊಂಚಲು ಗಳಿಗೆ ತೊಂಬೆಯೆನಿಕ್ಕು" (ಶಬ್ದಮಂ. ೧೦೨) ; ಸೀರೆಯನ್ನು ಹೊರ

ತೆಗೆದು ಹತ್ತಿರದಲ್ಲಿದ್ದ ಅರೆ ತುಂಬಿದ ಭತ್ತದ ತೊಂಬೆಯೊಳಕ್ಕೆ ಹಾಕಿದ (ನಿಶಿಉ. ೨೬೪) ; ತೀರಿಲ್ಲ ತಿಟುವಟವಿಲ್ಲ ಜಂಭ ಮಾತ್ರ ತೊಂಬೇ ಅಷ್ಟು (ಗಾಡ). ೨. ಹೊಟ್ಟೆ ; ಉದರ : ತೋಕಿನ ನಳಿಗೆಯಿಂದ ಹಾರಿದ ಬೆಡಿ ಕಿರುಬನ ಪಕ್ಕೆಗೆ ತಗಲಿ ಅದರ ತೊಂಬೆಯನ್ನು ಸೀಳಿತು (ಹುಲಿಹಾ. ೦೦೦). 'ತೊಪ್ಪೆ$_1$' ಪರಾ. ಟೊಮ್ಮೆ : ೧. ಮಿಟ್ಟಮಿಟ್ಟನೆ ಮಿಡುಕೆ ಟೊಮ್ಮೆಯ ಹೊಟ್ಟು ತವುಡಂ ಕರ್ಚಿ (ಮದೇಪು. ೫-೩೪). ತುಪ್ಪೆ : ೩. ಧಾನ್ಯದ ರಾಶಿ, -ಸಂಗ್ರಹ ; ಕಾಳಿನ ಗುಡ್ಡೆ : ನೂರು ಮುಡಿ ಭತ್ತ ಆ ಬಾಕಿ ಮಾರಿನಿಂದ ಪ್ರತಿವರುಷ ಭಟ್ಟರ ಮನೆಯ 'ತುಪ್ಪೆ'ಯಲ್ಲಿ ಬಿದ್ದೇ ತೀರುತ್ತದೆಂದರೆ ಆಚ್ಚರಿಪಡಬೇಕಾಗಿಲ್ಲ (ದಂಬನಾ. ೧೨).

[ದೇ.॥ ತಮಿ. ತೊಮ್ಮೈ, ತೊಮ್ಮೈ ; ತುಳು. ತುಪ್ಪೆ]

ತೊಂಬೆಗಡುಕು (ನಾ). ಗೊಂಚಲಿನಂತಿರುವ, ಕಿವಿಯಲ್ಲಿ ಧರಿಸುವ ಒಂದು ಬಗೆಯ ಆಭರಣ: ಹಸ್ತಕಡಗದ ನೀಲಮುತ್ತಿನ ತೊಂಬೆಗಡುಕಿನ ಕೊರಳ ದಾರಗಳ...ಧರಿಸಿ (ಬಸಪು. ೬೦-೨೭) ; ಒಡನೆ ಕಿವಿಯೊಳೊಪ್ಪುವ ತೊಂಬೆಗಡುಕಿನ ಕಡುಚೆಲ್ವ . . . ಕೊಡಗಿತಿಯರು ರಾಜಿಸಿದರು (ಕಂಸವಿ. ೨೦-೮೬). [ತೊಂಬೆ$_1$ + ಕಡುಕು$_3$]

ತೊಂಭತು 'ತೊಂಬತ್ತು' ನೋ.

ತೊಂಭತ್ತು 'ತೊಂಬತ್ತು' ನೋ.

ತೊಂಭಾರ 'ತೊಂಬಾರ$_1$' ನೋ.

ತೊಕಡಕನ ಮರ (ನಾ). ಒಂದು ಬಗೆಯ ಮರ : ಪೇನಾರಿಮರ, ಪೀನಾರಿ, ಪಾತಾಳಮರ, ಭೇತಾಳ, ತೊಕಡಕನ ಮರ, ಭಾಕಾಳ (ಮೈಜಿಗಿ. ೭೨-೧೪೭೨). [? + ಮರ$_1$]

ತೊಕ್ಕಡ (ನಾ). (?) : ಚೊಕ್ಕಪಲ್ಗಳು ದಟ್ಟ ಸಣ್ಣವು ವುಕ್ಕಿ ನವರಸ ಲಗ್ಗೆಯೆಂಬುದು ತೊಕ್ಕಡವು ತಾನಾದ ದಂತವು ಕ್ಷತಕೆ ಅದು ಹಿತವು (ಕಕ್ಕೋಕ. ೧೦-೦೭). [?]

ತೊಕ್ಕಲು (ನಾ). ಒಂದು ಬಗೆಯ ವ್ಯಂಜನಪದಾರ್ಥ : ಅವನಿಗೆ ಮಜ್ಜಿಗಂಬರ . . . ಮಸೊಪ್ಪು, ತೊಕ್ಕಲು, ಒಂದೆಸರು – ಇವು ಸುತರಾಂ ಬೇಕಿಲ್ಲ (ಸನ್ನೂರು. ೫೭). [< ತೊಕ್ಕು$_1$]

ತೊಕ್ಕಸ (ನಾ). ಮಲ್ಲಯುದ್ಧದ ಒಂದು ವರಸೆ (?) : ಸಂದ ತೊ[ಪಾಕಾಂ. ಕೊ]ಕ್ಕಸ ಗುಂಡು ಗೋಣಿಯ ವಿಂದೆಪಟ್ಟಸು ಚೇಣಪಟ್ಟಸು ವೆಂದೆನಿಪ ವಿಂದಾಣದಲಿ ಕಾದಿದರು ಜಟ್ಟಿಗಳು (ಸಾಳ್ವಭಾ. ೨೨-೭೨).

[?]

ತೊಕ್ಕು$_1$ (ನಾ). ಹುಣಿಸೆಕಾಯಿ, ನೆಲ್ಲಿಕಾಯಿ, ಮಾವಿನಕಾಯಿ ಮೊದಲಾದುವುಗಳು ಬಲಿತ ಮೇಲೆ ಹದಗೊಳಿಸಿ ಮಾಡುವ (ಚಟ್ಣಿಯಂಥ) ಒಂದು ಬಗೆಯ ವ್ಯಂಜನಪದಾರ್ಥ : ಹುಣಿಸೆಕಾಯಿ ತೊಕ್ಕು ರುಚಿಯಾಗಿರುತ್ತದೆ (ರೂಢಿ). [ದೇ.॥ ತಮಿ. ತೆಲು. ತೊಕ್ಕು]

ತೊಕ್ಕು$_2$ (ನಾ). ೧. ತೊಗಲು ; ಚರ್ಮ : "ತೊಕ್ಕು (ತೊಗೆ)–ತ್ವಕ್ (–ಚ್)" (ತದ್ಭಕೋ. ೧೮); ನಯನ ಕರ್ಣ ನಾಸಾ ರಸನೆ ತೊಕ್ಕು ಮನವೆಂಬ ಕರಗಳೊಳು ಬಿಡದರ್ಪಿಪಂ (ಸಿದ್ಧೇಪು. ೨೩-೫೦); ತ್ವಕ್ಕಿಂಗೆ ತೊಕ್ಕು ನೇತ್ರಕೆ ನೇತ್ರವು . . . ಆಗಿಹುದು ಲಿಂಗಮುಖವು (ಚಿಬಪು. ೬೦-೪೫) : ಪ್ರತಿ ನಿತ್ಯವೂ ಮೈ ತಿಕ್ಕಿಸಿ ಅಥವಾ ಹಿಸಿಕಿಸಿಕೊಂಡಲ್ಲಿ . . . ತೊಕ್ಕು ಬಲಿತು, ಸಂದುಗಳಲ್ಲಿ ತ್ರಾಣವು ಹುಟ್ಟಿ (ಸಕಪ್ಯ. ೩೦). ೨. ತೊಗಟೆ ; ಸಿಪ್ಪೆ : ನೀರುಳ್ಳಿ ಹಸಿಯಲ್ಲಮಂ ತೊಕ್ಕ ತೆಗೆದಗುಳ ತೋರದೊಳು ಕತ್ತರಿಸಿ (ಸೂಪಶಾ. ೩-೨೫) ; ಪರಿಶುದ್ಧಮಾಗಿರ್ಪ ಪಾಲ್ಮರಗಳ ತೊಕ್ಕನಿರದೆತ್ತಿ ಕಾಸಿದ ಜಲವ (ಡಂಪ್ರಸಾಂ. ೧೪-೪೨) ; ಅಂಬಟೆಯ ತೊಕ್ಕು . . . ಹುಣಿಸೇಮೂಲದ ತೊಕ್ಕು . . . ಇವಱ ಕಷಾಯ ಶ್ಲೇಷ್ಮಾತಿಸಾರ ಮೊದಲಾದ ಹೊಟ್ಟೆಯ ಬೇನೆಯ ಪರಿಹರಿಸುವುದು (ಪೈದ್ಯಸಾ. I, ೨೦೨). ೩. ಚಕ್ಕೆ : ಗಂಧ ಲವಂಗದ ತೊಕ್ಕು (ಅಕಾನಿ. ೮-೬). ೪. ಚರ್ಮದ ಹೊದಿಕೆ : ಇಕ್ಕಿದ ಪಕ್ಕರಕ್ಕೆ ನಿಡುರುಳ್ಳಿ . . . ದಿಟ್ಟಿಸರ ಪೊಂಬಲೆಗಳ್ ಮೊಗರಂಬಮೊಂದು ಪೊಂಬಕ್ಕಿಯ ತೊಕ್ಕು ಮೆಯ್ಗರೆಯೆ ಬಾಸಿಗದಿಂ ಮೆಱೆದತ್ತು ಸಪ್ತಿಗಳ್ (ಚಿಕವಿ. ೨-೯೬). ೫. ಸೋಂಕು ; ಸಂಸರ್ಗ : ಮೂತ್ರ ಮಲ ಮಾಂಸ ರಕ್ತಂಗಳೊಳಗಿಕ್ಕುಮೇ ಶಿವಮೂರ್ತಿಯೆನ್ನು ದರದೊಳಗವಱ ತೊಕ್ಕಿಲ್ಲಮೆನೆ (ಚಿಬಪು. ೪-೨೭). 'ತ್ವಕ್ಕು' ಪರಾ.

[ಸಂ. ತ್ವಚ್]

ತೊಗಟು, ತೊಗಟೆ, ತೊಗಡು, ತೊಪ್ಪಟೆ, ತೊಪ್ಪಡೆ, ತೊಬಟೆ, ತೊವಟೆ, ತೊವಡು, ತೋಟೆ$_1$ (ನಾ). ಹಣ್ಣು, ಕಾಯಿ, ದ್ವಿದಳ ಧಾನ್ಯ ಇತ್ಯಾದಿಗಳ ಗಟ್ಟಿಯಾದ ಮೇಲುಹೊದಿಕೆ, -ಸಿಪ್ಪೆ : ತೊಗಟೆ ನೊಳಗಣ ಬೀಜ ಬೀಜದೊಳಗಣ ಅಂಕುರ (ಸರ್ವಪ. ೦೦೯-೫೮೪) ; ತಱೆದರೆಯು ಪರ್ನಗಳ ಕಾಷ್ಟಕೆ ಮುಱಿದರಾ ಶಾಖೆಗಳ ರೋಗಕೆ ಕೊಱೆದರೆಯು ಬೇರುಗಳ ನಾರಿಗೆ ಸುಗಿದರೆಯು ತೊಗಟ ತರು ತನುವ ತೆಱುವಂತೆ (ನಿಭಾಗ. ೧೦-೦೩-೨೪) ; ಹಣ್ಣಿನ ಒಳಗೆ ನಾಲ್ಕು ರಸವು ಐದು ದೊಡ್ಡಹರೆ ಕಾಣಪ್ಪ ಆಱು ಬಗೆಯ ಸ್ವರೂಪ ಕೇಳು ಏಳು ಬಗೆಯ ತೊಗಟುಂಟಣ್ಣ (ಪುರಂದ. ೧-೧೮೦-೫). **ತೊಗಟೆ**: ಕಮಲಮುಖಿ ನಾರಿನಾ ತೊಗಟೆಯನು ಕೊಳ್ವೆ (ತರಲೀ. ೨೦೮-೧೪) ; ಮಾದಾಳದ ತೊಗಟೆ (ಟಿ)ಯು ಕಹಿ, ಒಗರು (ಅಷ್ಟಾಂಗ. ೧೪೮) ; ತೊಗಲುಬಾವಲಿ ಮರದ ಜೋಲು ತೊಗಟೆ (ಸವ್ಯಧ್ಯ. ೮೭-೩). **ತೊಗಡು** : ತೊಗಡುಗಳೆದೆಳ್ಳುಗಳ ಕೇದಗೆಯಿಂ ವಾಸಿಸಿ (ಲೋಕೋಪ. ೭-೨೩). **ತೊಪ್ಪಟೆ** : ಆವರಿಕೆಬೇರಿನ ತೊಪ್ಪಟೆಯನು ೧ ಮೊರದಷ್ಟು ಹರವಿಯಲ್ಲಿ ಹಾಕಿ ನೀರ ಹೊಯ್ದು . . . ಇರಿಸಿಕೊಂಡಿರಲು ಆ ನೀರು ಮೆಂದವಾಗುವುದು (ಸಕಪ್ಯ. ೩೮೩). **ತೊಪ್ಪಡೆ** : ಉಲಗನ ಬೇರಿನ ತೊಪ್ಪಡೆ, ಬೇವಿನ ಬೇರಿನ ತೊಪ್ಪಡೆ ... ಮೊಳಗದ ಬೇರಿನ ತಿಗಡು ಇವಂ ಸಮಾನಂಗೊಂಡು ಚೂರ್ಣವಂ ಮಾಡಿ (ವಿಪ್ರವಿ. ೯೯). **ತೊಬಟೆ** : ಸುಟ್ಟ ಬಾಳೆಯ ಕಾಯ ಸೀದ ತೊಬಟೆಯ ತೆಗೆದು ಒಳಗಣ ತಿರುಳ ತೆಗೆದು (ಭೀಮಸೂ. ೪೨). **ತೊವಟೆ** : ಚೆಕ್ಕು = ತೊವಟೆ (ಕಾಶಕ್ಯ. ೯೦). **ತೊವಡು** : ಗಿಡುಕಳ್ಳಿಯ ತೊವಡು ಕಟ್ಟೆ ನಿರ್ವಿಷಮಕ್ಕುಂ (ಖಮದ. ೧೬-೭೯). **ತೋಟೆ$_1$** : ಬಾಳೆಯ ಹಣ್ಣಿನ ತೋಟೆಯ ಸುಲಿದು ನೋಡಿದರೆಯೂ ಮೃದುವಾಗಿ ತೋಱುವುದಲ್ಲದೆ ಕಠಿಣವಾಗಿ ತೋಱದೆಂಬ ಹಾಗೆ (ವಡಶಾ. I, ೧೯೩) ; ಕೆಲವು ಗಿಡಗಳ ತೋಟೆಗಳಿಂದ ಸಹ ಕಾಗದ ಮಾಡುವುದುಂಟು (ಮುಂಬಯಿ. ೧-೨೪). 'ತಿಗುಡು$_1$' ಪರಾ.

ತೊಗಟೆ 'ತೊಗಟು' ನೋ.

ತೊಗಡು 'ತೊಗಟು' ನೋ.

ತೊಗರ್ 'ತೊವರ್$_2$' ನೋ.

ತೊಗರ$_1$ (ನಾ). ಕೆಂಬಣ್ಣದ ಒಂದು ಬಗೆಯ ಬೇಟೆಯ ನಾಯಿ : ಏಣಕುಲಕ್ಕೆ ಚಂಚುವಾಲಂ ದಣಿದಿರ್ದ ಕೊಂಡಗುಱಿಗೀ ತೊಗರಂ ರುರು ಸಂಕುಳಕ್ಕೆ ಜೂಗಂ ದಿಟಮಲ್ತು ಮಾರಿ (ದಶಕು. ೨-೦೦೯) ; ತರವೇಟ್ ಸಾಳುವವೇಗನಂ ತೊಗರನಂ ಹೆಗ್ಗಾಳನಂ ಜೂಗನಂ (ನಳಡಂ. ೬೬).

[ತೊಗರು$_1$ + – ಅ$_7$]

ತೊಗರ$_2$ (ನಾ). ಒಂದು ವಂಶದ ಹೆಸರು (?) : ಮಣಿಗಾಱ ನಾಗಿಸೆಟ್ಟಿಯುಂ ತೊಗರ ಮಾಚಿಸೆಟ್ಟಿಯುಂ ಮಿಂದಗುದ್ದಲಿ ನಾಮಿಸೆಟ್ಟಿಯುಂ ... ಕೊಟ್ಟ ಕೆಯಿ ಕಂಮ್ಮವಯ್ವತ್ತು (ಎಕ. VII, ಶಿಕಾರಿ. ೧೦೬-೩೭ :1098).

[?]

ತೊಗರತ್ತಿ (ನಾ). ಒಂದು ಬಗೆಯ ಸಸ್ಯ: ತೊಗರತ್ತಿ, ಸಿಡಿಸಾಲೆ (ಮೈಜಿಗಿ. ೫-೭೪). [?]

ತೊಗರಿ$_1$ 'ತೊವರಿ' ನೋ.

ತೊಗರಿ$_2$ 'ತೊವರ್$_2$' ನೋ.

ತೊಗರು$_1$, ಚೊಗರಂ$_2$ (ನಾ). ೧. ಕೆಂಪುಬಣ್ಣ; ಅರುಣವರ್ಣ: ತೊಗರುವಿಗಿಲಪ್ಪ ಬಣ್ಣಮುಂ ಸಮನಿಪ ಗಂಧವಸ್ತುಗಳನಾದರದಿಂ ಪಿಡಿದು(ಚಟ್ಟಲ. ೬-೪೦). **ಚೊಗರು$_2$**: ೨. ಹಸಿಅಡಕೆಯನ್ನು ಬೇಯಿಸಂವಾಗ ಅದಕ್ಕೆ ಬಣ್ಣ ಬರಲು ಬೆರಸಂವ ಒಂದು ಬಗೆಯ ಕೆಂಪುದ್ರವ; P ಇದನ್ನು ನೇರಿಲೆಚಕ್ಕೆ, ರತ್ನಹೊನ್ನೆಗಿಡದ ಚಕ್ಕೆ ಮುಂತಾದುವುಗಳಿಂದ ತಯಾರಿಸುತ್ತಾರೆ: ನಾನೇ ತ್ವಾಟವಾಗೆ ಕದರಡಿಕೆ ಹೆರಕಿ, ಸುಲಿದು, ಚೊಗರು ಹಂಕಿ ಬೇಯಿಸಿ ಮಾಡಿದ್ದು (ಪುಶಕಾ. ೪೭೮). 'ತೊಗರು ಕಷಾಯ' ಪರಾ. [ದೇ.ಕ ತೆಲು. ತೊಗರು, ತೊವರು]

ತೊಗರು$_2$ 'ತೊವರ್$_2$' ನೋ.

ತೊಗರುಕಷಾಯ (ನಾ). ಹಸಿ ಅಡಕೆಯನ್ನು ಬೇಯಿಸಂವಾಗ ಅದಕ್ಕೆ ಬಣ್ಣ ಬರಲು ಬೆರಸಂವ ಒಂದಂ ಬಗೆಯ ಕೆಂಪುದ್ರವ,-ಕಷಾಯ: ಮೊದಲೇ ಸಿದ್ಧವಾಡಿ ಇಟ್ಟುಕೊಂಡಿದ್ದ ಅಡಿಕೆ ತೊಗರುಕಷಾಯವನ್ನು ಸೀಸೆಯಲ್ಲಿ ತುಂಬಿಕೊಂಡು ನಡೆದುಕೊಂಡೇ ಹೋದರು (ಕೊನಪ್ಪ. ೧೧೬). [ತೊಗರು$_1$ + ಕಷಾಯ]

ತೊಗರೆಳೆ (ನಾ). ಕೆಂಪುಬಣ್ಣದ ಎಳೆ: ಕಾಂತಿಯುಟ್ಟುದು ಬಳಿದು ತೊಗರೆಳೆಯುದು (ವೀಕೃಪು. ೪-೩೧-೫). [ತೊಗರು$_1$+ಎಳೆ$_2$ (<ಎಟ್$_2$)]

ತೊಗಲ್ 'ತೋಲ್$_1$' ನೋ.

ತೊಗಲು 'ತೋಲ್$_1$' ನೋ.

ತೊಗಲುಗೊಂಬೆ (ನಾ). ಚರ್ಮದಿಂದ ಮಾಡಿದ ಬೊಂಬೆ; ಚಕ್ಕಳಗೊಂಬೆ: ಈ ಅವಧಿಯಲ್ಲಿ ಯಕ್ಷಗಾನ ಆಟಕ್ಕೆ ಸಂಬಂಧಿಸಿದ ಬೊಂಬೆ, ತೊಗಲುಗೊಂಬೆಗಳ ಚಿತ್ರವೂ ಬೇಕೆನಿಸಿತು (ಯಕ್ಷಲ. IV, ಮುನ್ನುಡಿ); ನೆರೆಕೆರೆಯು ಕೇರಳ, ಆಂಧ್ರದೇಶಗಳಲ್ಲೂ ಇದೇ ಬಗೆಯಲ್ಲಿ ತೊಗಲು ಗೊಂಬೆ ಆಡಿಸುವವರಿದ್ದಾರೆ (ಯಕ್ಷಲ. ೧೫೦).

ತೊಗಲುಗೊಂಬೆ ಆಟ = ಚರ್ಮದಿಂದ ಮಾಡಿದ ಬೊಂಬೆಗಳ ಸಹಾಯದಿಂದ ತೋರಿಸುವ ಆಟ,-ವಂನರಂಜನೆ: ಜಾನಪದಕಲಾ ಮೇಳದಲ್ಲಿ ತೊಗಲುಗೊಂಬೆ ಆಟ ಬಹಳ ಆಕರ್ಷಕವಾಗಿತ್ತು (ಕೂಡಿ).

[ತೊಗಲು (<ತೋಲ್$_1$) + ಗೊಂಬೆ$_1$]

ತೊಗಲುಡೆ 'ತೋಲುಡೆ' ನೋ.

ತೊಗಲುಪಟ್ಟ (ನಾ). ಚರ್ಮದ ಪಟ್ಟಿ: ನಾಯಿಯ ಕೊರಳಿಗೆ ತೊಗಲು ಪಟ್ಟ ಕಟ್ಟಿದ್ದಾರೆ (ಕೂಡಿ). [ತೊಗಲು (<ತೋಲ್$_1$) + ಪಟ್ಟ$_2$]

ತೊಗಲುಪೆಟ್ಟಿಗೆ (ನಾ). ಚರ್ಮದಿಂದ ತಯಾರಿಸಿದ ಪೆಟ್ಟಿಗೆ: ಕನ್ನಡಿಯಿದ್ದ ಮೇಜಿನ ಮೇಲೆ ತೆರೆದಿದ್ದ ತೊಗಲುಪೆಟ್ಟಿಗೆಯಿತ್ತು (ಪುಶಕಾ. ೨೬೬). [ತೊಗಲು (<ತೋಲ್$_1$) + ಪೆಟ್ಟಿಗೆ]

ತೊಗಲುಬಾವಲಿ 'ತೋಲ್ವಾವಲ್' ನೋ.

ತೊಗಲುಬೊಂಬೆ (ನಾ). = ತೊಗಲುಗೊಂಬೆ: ತೊಗಲುಬೊಂಬೆಗಳಂತೆ ನಾಲುಕುಬಗೆಯ ನಿರ್ಮಾಣದಲಿ . . . ಬಗೆಬಗೆಯ ನಾಮಾಂಕಿತದ ಜೀವಿಗಳೆಲ್ಲವು ನಿನ್ನ ನಾಮದಿ ಜಗಕೆ ತೋಱುತ್ತಿಹುದು (ಹರಿಕಾ. ೮೪).

[ತೊಗಲು (<ತೋಲ್$_1$) + ಬೊಂಬೆ]

ತೊಗಲುಹಕ್ಕಿ (ನಾ). ಒಂದು ಬಗೆಯ ಪಕ್ಷಿ; ತೊಗಲಂಬಾವಲಿ: ಲಿಂಗಯೋನಿಗಳ ತಾಡ, ತೊಗಲುಹಕ್ಕಿಗಳ ಹಿಂಡದಿನ್ನು, ಸುತ್ತುಗಟ್ಟಿರಲು (ಜಂತನ. ೪೪-೪೨). [ತೊಗಲು (<ತೋಲ್$_1$) + ಹಕ್ಕಿ$_1$ (<ಪಕ್ಕಿ$_1$)]

ತೊಗಲ್ವೇಜು (ನಾ). ಚರ್ಮದ ಚೀಲ: ತಿತ್ತಿ ಸಿದ್ಧಿಗೆ ತೊಗ [ಪಾಣಾಂ. ವ]ಲ್ವೇಜುಸೊಳಗೆ ಬಂದತ್ತು ಗಂಗಾಸಾಗರವು (ಕುಡಾಸಾಂ. ೧೪-೧೦). [ತೊಗಲ್ (< ತೋಲ್$_1$) + ಪೇಜು$_3$]

ತೊಗೆ$_1$ 'ತೊವ್ವೆ' ನೋ.

ತೊಗೆ$_2$(ನಾ). (?): ಸ್ವಯಂಬುವದೇವರ್ಗ್ಗೆ ದತ್ತಿದೆಗಾಗಂಡ ಹಡುವಕ್ಕೆ ಬಿತೊಗೆ (ಮೈಅರಿ. ೦೯೪೬, ೦೦-೦೩; ಸು. 15 ನೆಯ ಶತ). [?]

ತೊಟ್ (ನಾ). ಒಂದು ಅನುಕರಣಶಬ್ದ: ಖಲನಾಕಾಶಕ್ಕೆ ತೊಟ್ಟೆಂದೊಗೆದಂ (ಜಗವಿ. ೦೩-೨).

ತೊಟ್ಟನಲ್ = ಇದ್ದಕ್ಕಿದ್ದಂತೆ; ತಟ್ಟನೆ: ಈ ಮಹಾತ್ಮನಂ ತೊಟ್ಟನಲಿಂತು ದೇವ ಯುವರಾಜನನೀ ತೆಱದಿಂ ಪೆಸರ್ಪುದೇ (ಕಾದಂಉಾ. ೪೭೯); ವಸುಧಾರಮಣೇರಮಣಂಗೆ ತೊಟ್ಟನಲ್ ಪುಟ್ಟಿಸಿದತ್ತು ಮೆಯ್ ವಿರ್ಗಳಂ ರಳುವೀರವಚಸ್ಸುಧಾರಸಂ (ಪಂರಾಮಾ. ೬-೭೦).

ತೊಟ (ನಾ). ಒಂದು ಅನುಕರಣ ಶಬ್ದ. 'ತೊಟಗುಟ್ಟು' ಪರಾ.

ತೊಟಕಿಕ್ಕು (ಕ್ರಿ): ಹನಿಹನಿಯಾಗಿ ಬೀಳಂ; ಒಸರಂ; ತೊಟ್ಟಿಕ್ಕುಂ: ಕಾವ್ಯಸುಧೆಯು ತೊಟಕಿಕ್ಕುತಿಹುದು ರಸಪಾನಕಾಗಿ ರಸಿಕ (ಪಂದ್ರಮಾ. ೦೬-೦೩). [ತೊಟಕಂ$_1$ (< ತಟಕು$_1$) + ಇಕ್ಕು]

ತೊಟಕು$_1$ 'ತಟಕಂ$_1$' ನೋ.

ತೊಟಕು$_2$ 'ತಟಕಂ$_2$' ನೋ.

ತೊಟಕುಹನಿ 'ತಟಕುವನಿ' ನೋ.

ತೊಟಗುಟ್ಟು (ಕ್ರಿ). ಹನಿಹನಿಯಾಗಿಬೀಳಂ; ತೊಟ್ಟಿಕ್ಕುಂ: ಎದ್ದವರು ಗೆದ್ದವರು ಬಾಂದುಂಬ ಕಾಣುವರು ಚುಕ್ಕೆ ತೊಟಗುಟ್ಟುತಿಹ ಬೆಳಕು, ಜೇನು (ಸೂರ್ಯಪಾ. ೩೬-೪). [ತೊಟ + ಕುಟ್ಟು$_1$]

ತೊಟ್ಟ 'ತೊಡಂ$_1$' ಪರಾ.

ತೊಟ್ಟಗೆ (ಅ). ೧. ಕೂಡಲೆ; ಬೇಗನೆ; ತಟ್ಟನೆ; ಶೀಘ್ರವಾಗಿ: ಕುರುಕುಳಪ್ರಪ್ಯಾತನಂ ಕಾದಿ ತೊಟ್ಟಗೆ ಗೋವ್ಯಂದಮನಾಂ ಮುಗುಟ್ಟಿದವೆಂ (ಪಂಪಭಾ. ೪-೦೦೩); ಮುಟ್ಟಿ ಮತ್ಕುರಿಚಯಕ್ಕಾದಂ ಮಹಾಶ್ವೇತೆ ತೊಟ್ಟಗೆ ತನ್ನಂ ತನುವಿಂದೆ ಪತ್ತುವಿಡಲೆಲ್ತೇ ಪಿಂದೆ (ಕಾದಂಉಾ. ೩೭೮); ತೊಟ್ಟಗೆ ಕೊಳೆ ಮೇಲೆವಾಯ್ದ ಮಹಿಷಾಸುರನಂ ತವೆ ಕೊಂದಳ್ (ಧಂದೋಂಬು. ೦-೪); ತನ್ನೆಯ ಸೂಚಿಯಾನೆ ತೊಟ್ಟಗೆ ಸಮರಾಗ್ರದೊಳ್ಪರಿಯೆ (ಗದಾಯು. ೦-೦೬); ತೊಟ್ಟಗೆ ತದ್ಗ್ರ[ಹಣಾಂ. ದ್ವಾ] ಹವುಮಂ ಗಜೇಂದ್ರಮುಮನೋರ್ವರ್ತ್ತಿಂಬನಂ ತುತ್ತಿ . . . ಪಾಱಿ ಸುರರಾಜಾವಾಸಮಂ ಮುಟ್ಟಿದಂ (ಕಾವ್ಯಾವ. ೫೯). ೨. ಒಮ್ಮಿಂದೊಮ್ಮೆ; ಇದ್ದಕ್ಕಿದ್ದಂತೆ; ಹಠಾತ್ತಾಗಿ: ಸಿಂಧುದೇಶಾಧೀಶ್ವರಂ . . . ಮೃಗಯಾಕ್ರೀಡೆಗೆ ಪಾಂಡುರಾಜತನಯರ್ ಪೋಪನ್ನೆಗಂ ಬಂದು ತೊಟ್ಟಗೆ ಪಾಂಚಾಳಿಯನೆತ್ತಿ ತನ್ನ ರಥದೊಳ್ ತಂದಿಟ್ಟುಕೊಂಡುಯ್ದಂ (ಪಂಪಭಾ. ೬-೩೦); ಒರ್ವ ವನಚರಂ ಮಹಾವನದೊಳ್ ವನದಂತಿಯಂ ಕಂಡ ನಿಮಿತ್ತಂ ಕೊಂದು ನಿಂದಿರ್ಪನೊಂದು ಮಹಾಹಿ ತೊಟ್ಟಗೆ ಬರೆ (ಪಂಪತಂ. ೩೦೦-೦೯); ಜನವದದೊಳ್ ತೊಟ್ಟಗೆ ಕಿರ್ಚು ನಂದೆ ಮೇಣ್ ಪುಳ್ಳಿಯಿಲ್ಲದುರಿಯುತ್ತಿರೆ. . . ದೇಶಂ ಕಿಡುಗುಂ (ಕೋಕೋಪ. ೪-೪೪); ನಾಯುನ್ನಿಗ ದೆಡೆಯಿಲ್ಲಮಂ ಪುಗಿಸಿ ಬಯ್ಕದ ಭಾಜನಮಾಗೆ ಮಾಡಿ ತೊಟ್ಟಗೆ ವಿಭುಸಾಯೆ (ಶುಕುಮಾ. ೨-೬೩). [ತೊಟ್ + – ಅಗೆ$_3$]

ತೊಟ್ಟನೆ (ಅ). ೧. ಕೂಡಲೇ; ಬೇಗನೆ: ತೊಟ್ಟನೆ ಸರ್ವಾಂಗಮುಲಧಾರಿಗಳೊಂದು ಶಿಲಾತಳದ ಮೇಗಿರ್ದು . . . ಸ್ವಾಧ್ಯಾಯದೊಳ್ ತಗುಳ್ದಿರ್ದೂರಂ . . . ಕಂಡು (ವಡ್ಡಾರಾ. ೯೬-೨); ಭವಪ್ರತ್ಯಯಜನ್ಮನ ತೊಟ್ಟನೆ ಪುಟ್ಟೆ (ಆದಿಪು. ೨-೩೬); ಶಿವಭೂತಿಗೆ ತೊಟ್ಟನೆ ಬಗೆದನಹಿತಮುಂ ತದ್ವನಚರಂ (ಪಂಚತಂ. ೧೦೨-೦೦); ಭವಸ್ಮರಣೆ ತೊಟ್ಟನೆ ಪುಟ್ಟೆ (ಪುರ್ಗಪು. ೪-೨೩); ನೆಗೞ್ದ ನೇತ್ರಜ್ವಾಲೆಯಿಂ ತೊಟ್ಟನೋವದೆ ಸುಟ್ಟಂ ಮದನಾರಿ (ಪಂಪಾಶ. ೪೦). ೨. ಇದ್ದಕ್ಕಿದ್ದಂತೆ; ಹಠಾತ್ತಾಗಿ: ಆ ನರಕಾಂತಕನೀಕೆಗಂಡು ತೊಟ್ಟನೆ ನಿಜಲಕ್ಷ್ಮಿಯಂ ಮಱೆದಂ (ಪಂಪಭಾ. ೪-೮೩);

ರಸೆಯಿಂ ಕಾಲಾಗ್ನಿರುದ್ರಂ ಪೊಱಮಡುವವೊಲಂತಾ ಸರೋವರಮಧ್ಯದಿಂ ಸಾಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಂಟ್ಟು (ಗದಾಯು. ೭-೩೦); ಮರಣಭ್ರಾಂತಿಯಂ ಚಿಂತಿಸಿ ಬರುತ್ತುಂ ತೊಟ್ಟನೆ ಮುಂದಿರ್ದ ಪುರಾಣ ಕೂಪಮಂ ಕಂಡು (ಪಂಚತಂ. ೮೮-೨೦); ಒಂದು ದಿವಸಂ ವಿಶ್ವಂಧರ ಮಹಾರಾಜಂ . . . ಪೊನ್ನುಯ್ಯಲನಾಡುವ ಸುಬಂಧುಶ್ರೀಯಂ ತೊಟ್ಟನೆ ಕಾಣ್ಬುದುಂ (ಧರ್ಮಾಮ್ಯ. ೦೦-೨೮); ತೊಟ್ಟನೆ ಸಾವುದೊಳ್ಳಿತು ತೊಡಂಕದೆ ಕಾಮನ ಡಾಮರಂಗಳೊಳ್ (ಚಂದ್ರಪು. ೮-೬೬); ತೊಟ್ಟ ನಿಂತು ಕಣ್ ನೋಡದೆ ಹುಣ್ಣ ನೋಡದೆ ಹೋಗೆಂಬರೆ (ಬಸರ. ೪-೨೮); ಒಟ್ಟೆ ಲುಲಾಯ ಗರ್ದಭ ರಥಂಗಳನೇಱಿದವಂ . . . ನಟ್ಟ ವಿಲೋಚನಂ ಗಳೊಳೆ ಮೇಗನೆ ನೋಡುತುಮಿರ್ಪ ಮಾನಿಸಂ ತೊಟ್ಟನೆ ಬಂದು ಪೇಟಲ ಶುಭಂ (ಖಮದ. ೩-೫೬). ೩. ಸುಮ್ಮನೆ; ವ್ಯರ್ಥವಾಗಿ: ನಿನಗೆ ಪತಿ ಪಾಶುಪತಿ ಇರೆ ತೊಟ್ಟನೆ ಪಶುಗಳಂ ಕೊಲುವ ಮೆಲುವ ಕುಮನದ ಪಶುಕರ್ಮಿಗಳ ದುಃಕರ್ಮಂಗಳೊಳಗಿರಲು(ಬಸಪು. ೬೦-೪೦); ರಾಜಬೀದಿ ಯೊಳಗಟ್ಟಹಾಸದೆ ಬಟ್ಟಬಯಲ ತೊಟ್ಟನೆ ನಿಟ್ಟಿಪಂ (ಕೊಟ್ಟೂಬ. ೭-೩೬).

ತೊಟ್ಟನೆ ತೊಳಲು = ಸುಮ್ಮನೆ ಅಲೆದಾಡು,–ಸುತ್ತಾಡು,–ತಿರುಗಾಡು: ಸದ್ಭಕ್ತರಿಗೆ ಉಳ್ಳುದೆಲ್ಲವ ಕೊಟ್ಟು ಐದರೇ ಎಂದು ಮಱು ಗುವ ಏಕೋಗ್ರಾಹಿ ಶರಣನ ತೊಟ್ಟನೆ ತೊಳಲಿ ಅಱಸಿ ಕಾಣೆನು (ಸಮಾವ. ೬-೨೦); ಅಱುವತ್ತುದಿವ್ಯಸಹಸ್ರಾಬ್ದಂಬರಮಿಾ ತೆಱದಿಂ ತೊಟ್ಟನೆ ತೊಳಲ್ದು (ಸಾನಂಚ. ಕಥಾಗರ್ಭಸಂಧಿ ೨೩ ಪ); ಬೆಟ್ಟಿಂಗೆ ಬೆಟ್ಟಿತ್ತನೆಸಗೆ ಪೃಥುಲಶ್ರೋಣಿ ತೊಟ್ಟನೆ ತೊಳಲ್ವಂತೆ ಮಾಡೆ (ಪದ್ಮರಾ. ೩-೨೮); ಕಾನನದೊಳಗೆ ತೊಟ್ಟನೆ ತೊಳಲಿ ಹದಿಮೂಱಬುದ ಬಂದಾಪತ್ತನನು ಭವಿಸಿ (ಕುಪ್ಯಾಭೀ. ೩-೩೮). [ತೊಟ್ + – ಅನ್ಸೆ1]

ತೊಟ್ಟಲ್ (ನಾ). ಒಂದು ಸ್ಥಳದ ಹೆಸರು: ಸ್ವಸ್ತಿಶ್ರೀವಲ್ಲವ ಪೃಥವೀ ರಾಜ್ಯಂಕೆಯೆ . . . ಗುಣ್ಡಿಗೆವಾಟಕ್ಕ ತೊಟ್ಟಲಾಳುತ್ತುಮ್ ಕಾಡವಟ್ಟಿ ದೋಳದುಳ್ಳಿ ಪೆಬ್ಬೀಳನಲ್ಲಕ್ಕಳ್ ಎಱಿದುವಿಟ್ಟಾರ್ (ಎಕ. XVI, ತುಮಕೂ. ೯೬-೦; 780 ?). 'ತೊಟ್ಟಿಲ್1' ಪರಾ. [?]

ತೊಟ್ಟಲ 'ತೊಟ್ಟಿಲ್1' ನೋ.

ತೊಟ್ಟಲಿ 'ತೊಟ್ಟಿಲ್2' ನೋ.

ತೊಟ್ಟಲು 'ತೊಟ್ಟಿಲ್1' ನೋ.

ತೊಟ್ಟಲ್ಲ 'ತೊಟ್ಟಿಲ್2' ನೋ.

ತೊಟ್ಟಿ1, ದೊಡ್ಡಿ1 (ನಾ). ೧. ಮನೆಯ ಹಜಾರದ ಮಧ್ಯದಲ್ಲಿರುವ ಚಾವಣಿಯಿಲ್ಲದ ಚಚ್ಚೌಕವಾದ ಸ್ಥಳ: "ಗೃಹಭೇದ ಲತೆಯೊಳು ತೊಟ್ಟಿ" (ಶಬ್ದಮಂ. ೯೦); ತೊಟ್ಟಿಯ ಸುತ್ತುವೆತ್ತ [ಪಾಠಾಂ. ಕಟ್ಟಿಯೆ ಸುಟ್ಟುವೆತ್ತ, ತಟ್ಟಿಯ ಸುತ್ತುವೆತ್ತ] ಪಸುರ್ವಂದಲ ಮುತ್ತಿನ ಮಂಟಪಂ ಗಳೊಳ್ ಕಟ್ಟಿದ ಪಚ್ಚೆದೋರಣದ ಬಾಜಿಪ ತೂರ್ಯದ ಸಂಭ್ರಮಂ ಗಳಿಂ . . . ನೇರ್ಪಟ್ಟುದು ನೋಟಕರ್ಗೊಸಗೆಯುಬ್ಬಣಮಪ್ಪಿ ನಮಾ ವಿವಾಹದೊಳ್ (ಸೂಕ್ತಿಸು. ೬-೨೨); ತೊಟ್ಟಿಗಳುಪ್ಪರಿಕೆ ಹೊಂಗಳಸ ಗಳು ಮೆಱೆವ ಮೇಲುಕಟ್ಟಿನ ಚಿತ್ರಗಳ . . . ತಾಯ್ವನೆಯಿದೆಂಬಂತೆಸೆದು ದೊಗ್ಗಿನಲಿ (ಪ್ರಜ್ಞಾಚ. ೪-೪೨); ರಂಗುವಡದ ನವರಂಗದ ತೊಟ್ಟಿಯ ಸಾಲು (ಸೌಂದಕಾ. ೪-೩೨); ಊರಿನ ಗಂಡಸರೆಲ್ಲಾ ಆಗಲೇ ಆ ತೊಟ್ಟಿ ಯಲ್ಲಿ ಸೇರಿದ್ದರು (ಕಳಹು. ೯); ಹಟ್ಟಿ ಗುಡಿಸೀರಿ ತೊಟ್ಟೀಯ ಗುಡಿಸೀರಿ ಪುಟ್ಟ ಮಲ್ಲಿಗೆಯ ಹರಡೀರಿ (ಸನ್ನೂರು. ೪೮). ೨. ಅಂತಃಪುರ; ರಾಣೀ ವಾಸ: ತದ್ಧರಣೀಸತಿಯ ಕಾಂತಿರಸಭರಿತನಾಭಿಯೋ ಎನೆ ತೊಟ್ಟಿ ಕಣ್ಗೆಸೆದುದು (ಪದ್ಮರಾ. ೬ ೭೨); ದಿಟ್ಟಿಗೆ ನೂತನವಾದಪರಂಜಿಯ ಕಟ್ಟೆ ರಕದ ಭಿತ್ತಿಯಿಂದ ಸೃಷ್ಟೀಶನ ರಾಣಿಯರ ನವರತ್ನದ ತೊಟ್ಟಿಗಳಿಹುವರ್ತಿ ಯಲಿ (ಕಂನವಿ. ೭-೪೨); ಚಾಮರಾಜನಗರದಲ್ಲಿ ಮದನವಿಲಾಸತ್ತೊಟ್ಟೀ ಪುಟ್ಟುಸ್ವಾಮಿಯವರ ಹೆಸರಿನಿಂದ ಪ್ರತಿಷ್ಠಿತರಾದ . . . ದೇವಸ್ಥಾನಕ್ಕೆ . . . ವಪ್ಪಿಶಿದ ನಿಲುವಿನ ಸೇವಾರ್ಥ (ಎಕ. XIV, ಚಾಮರಾ. ೨೦೯-೦; 1868); ಆ ರಾಜಕುಮಾರರಿಬ್ಬರನ್ನೂ ತಮ್ಮ ಅರಮನೆಯಲ್ಲಿ ಪೂರ್ವದಲ್ಲಿ ಇಳಿದಿದ್ದ ತೊಟ್ಟಿಯಲ್ಲಿಯೇ ಇರುವಂತೆ ನಿಯಮಿಸಿದಳು (ಚಾಮವಂ. ೦೫); ಶಾಂತಲಾದೇವಿ ತೊಟ್ಟಿಯಿಂದ ಹೊರಟಳು (ಸವತಿ. ೩೦); ದೊರೆ ಇವಳ ತೊಟ್ಟಿಗೆ ಕೊಡುತಾ ಇದ್ದ ಖಾಸಾ ಸೋಬಸ್ಕರವನ್ನು ದಿನಕ್ರಮೇಣ ಕಡಿಮೆ ಮಾಡುತ್ತಾ ಕಡೆಗೆ ಕಗ್ಗಲ ರಾಗಿ ಮುಗ್ಗಲ ಹುರುಳಿಗೆ ಇಳಿಸಿದನು (ಪೇಟಮಾ. ೦೬). ೩. ದರ್ಬಾರು ನಡೆಯುವ ಸ್ಥಳ; ಓಲಗಶಾಲೆ; ಆಸ್ಥಾನಮಂಟಪ: ಶ್ರೀರಂಗಪಟ್ಟಣದ ಅರಮನೆಯಲ್ಲಿ ಸಂಜೆಯ ಸನ್ನಿಧಾನದ ತೊಟ್ಟಿ (ಸಂಸಕ. ೦೨೦). ೪. ಹಸು, ಕುದುರೆ ಮುಂತಾದು ವನ್ನು ಕೂಡುವ ಸ್ಥಳ; ಕೊಟ್ಟಿಗೆ: ಕುರಿಗಳೆಲ್ಲಾ ರೊಪ್ಪದಲ್ಲಿ, ದನಗಳೆಲ್ಲಾ ತೊಟ್ಟಿಯಲ್ಲಿ, ಜನಗಳೆಲ್ಲಾ ಹಟ್ಟಿಯಲ್ಲಿ ಬಳಲಿ ಕೆಡೆದರು ತೆಪ್ಪಗೆ (ಇಂಗೀತ. ೫೨-೦). **ದೊಡ್ಡಿ1**: ೪. ಗುಡ್ಡ ಬೆರಳೊಳೆತ್ತಿ ದೊಡ್ಡಿ ಗೋವ್ಗಳ ಕಾಯ್ದು ಒಡ್ಡಿ ಜಗನ್ನಾಥ ಗಿಡ್ಡಾಗಿದ್ದನೆ (ಪುರಂದ. ೨-೩೨-೩); ನರಪಶುಗಳಿಹ ದೊಡ್ಡಿ ನರಕದ ದಿಡ್ಡಿ ಸಕಲರಿಂಗಿಕ್ಕಿದಡ್ಡಿ (ಪತಿಲ. ೨-೬೦); ಅಲ್ಲಲ್ಲಿ ದೊಡ್ಡಿಗಳಲ್ಲಿರುವ ಸಂತೋಷಕರಗಳಾದ ಗೋವುಗಳ ಹಿಂಡುಗಳನ್ನೂ ನೋಡುತ್ತ (ಕೃಪಾಲು.೦೪೨); ಗಿರಿಗಳೆಡೆಯೊಳು ಅಡವಿ ಮಧ್ಯದಿ ತುರುವ ದೊಡ್ಡಿಯ ಮಾಡಿಕೊಂಡು ಇರುವ ಕಾಳಿಂಗ ನೆಂಬ ಗೊಲ್ಲನ ಪರಿಯ ನಾನೆಂತು ಪೇಳ್ವೆನು (ಗೋಹಾಡು. ೨೦); ಆ ಎರಡು ತರಗತಿಯೂ ದೊಡ್ಡಿಯಂತಾಗಿದೆ (ಕಾಪೇರಿ. ೯೬). ೫. ಜನರು ವಾಸಿಸುವ ಸ್ಥಳ; ಹಟ್ಟಿ: ಅವನು ತನ್ನ ದೊಡ್ಡಿಯನ್ನು ತಲುಪಿ ಕಾರ್ಯ ನಿರತನಾದ ನಂತರ ಮನಸ್ಸಿನ ಮುರುಸು ಬೇಸರಗಳೆಲ್ಲ ಮಾಯವಾದುವು (ಪುನರು. ೨೬೪). ೬. ಕೆಲವುಹಳ್ಳಿಗಳ ಹೆಸರಿನ ಕೊನೆಯಲ್ಲಿ ಸೇರುವ ಶಬ್ದ. ೭. ಪೌಂಡಿಮನೆ; ಕೊಂಡವಾಡ(ಉಕ). ೮. ಕಾಡಾನೆ ಗಳನ್ನು ಪಳಗಿಸುವ ಸ್ಥಳ; ಖೆಡ್ಡಾ: (ಕಿ).

[ದೇ.॥ ತಮಿ. ತೊಟ್ಟಿ; ಮಲ. ದೊಟ್ಟಿ; ತೆಲು. ದೊಡ್ಡಿ]

ತೊಟ್ಟಿ2 (ನಾ). ೧. ನೀರು ತುಂಬುವುದಕ್ಕಾಗಿ ಕಲ್ಲು, ಮಣ್ಣು, ಸಿಮೆಂಟು ಮತ್ತು ಮರ ಮೊದಲಾದುವುಗಳಿಂದ ಮಾಡಿದ ಬಾನೆ; ಹೌದು; ಟ್ಯಾಂಕು: ತೊಟ್ಟಿಯ ನೀರು ಕಾಲುವೆಯಲ್ಲಿ ಹರಿಯುತ್ತಿತ್ತು (ಕಪಪು. ೩-೦೫). ೨. ವಾಯುಂಹಡಗಿನ ತಳಕ್ಕೆ ಕಟ್ಟಿರುವ ಒಂದು ಬಗೆಯ ತೂಗುದೊಟ್ಟಿಲು,–ದೋಣಿ: ಇದರ ಕೆಳಮಗ್ಗುಲಲ್ಲಿ ಒಂದು ತೊಟ್ಟಿಯನ್ನು (Gondala) ನಿರ್ಮಿಸುವರು. ಈ ತೊಟ್ಟಿಯಲ್ಲಿ ಜನರು ಕುಳಿತುಕೊಳ್ಳುವ ಅನುಕೂಲತೆಯಿದೆ (ಬಾಲಪ್ರ. II, ೦೦೨೬). ೩. ಕಸ, ಕುಪ್ಪೆಗಳನ್ನು ಹಾಕುವ ಗುಂಡಿ: ಕಸವನ್ನು ತೊಟ್ಟಿಗೆ ಹಾಕು (ರೂಢಿ). ೪. (ಆಲಂ)ವ್ಯಭಿಚಾರಿಣಿ; ವೇಶ್ಯೆ; ಜಾರೆ.

[ದೇ.॥ ತಮಿ. ಮಲ. ತುಳು. ತೆಲು. ತೊಟ್ಟಿ]

ತೊಟ್ಟಿ3 'ತೋಟ್ಟಿ2' ನೋ.

ತೊಟ್ಟಿ4 (ನಾ). ಒಂದು ಬಗೆಯ ಬಳ್ಳಿ: "ತೊಟ್ಟಿ[ಪಾಠಾಂ. ಟ್ಟ] ತುಷ್ಟೆ ಯಕ್ಕುಂ" (ಮಂಗರಾ. ೪೨-೩೭); "ಗೃಹಭೇದ ಲತೆಯೊಳು ತೊಟ್ಟಿ" (ಶಬ್ದಮಂ. ೯೦); ಕುದಿಯಿಸುಗೆ ಸುಣ್ಣದಿಂ ಕೈಪೆದೊಂಡೆಯಂ ಕೋಕಿಲಾಕ್ಷಿ ವೆರಸು ಸಿತೇರಂಡದ ತೊಟ್ಟಿಯೆಲೆಗಳಿಂ ಪಡಲದ ಕಾಯಂ ತೆಗಪುಗವಱ ಕೈಪೆಗಳಱಿಗುಂ (ಲೋಕೋಪ. ೮-೩೦); ತೊಟ್ಟಿಯೆಲೆಯ ಕಷಾಯಮಟ್ಕಮೆ ಯಂ ಕಳೆವುದು (ಧರ್ಮಾಮ್ಯ. ೯-೧೦೮); ಬಸವೇಶ್ವರದೇವರ ಬಲದ ಕರ್ಣದಲ್ಲಿ ತೊಟ್ಟಿಗಿಡ ಹುಟ್ಟುವುದೇ ಕುಱುಹು (ಕಾಲಸಂ. ೮೪-೪); ನೆಲದಾಳ್ ದಾಗುಡಿ ಹೇರೀಚಲು ವಾಳಂ ತರಣಿ ತೊಟ್ಟಿ... ಸತಕ್ರಪಾನಂ ವಿಷಹಂ (ಖಮದ. ೫-೯೬); ಸೀಗೆ ಗದುಗು ಕೀಚಕ ತೊ[ಪಾಠಾಂ. ದೊ]ಟ್ಟಿ

. . . ಗಡಣದಿಂದಾ ಕಾಡು ಕಡುಗುರ್ವುವಡೆದು ರಾಜಿಪುದು (ರಾಮವಿ. ೧೫-೬೦); ತೊಂಡೆ ತೊಟ್ಟಿಯು ಸೊಂಡೆಗಿಡ ಭೂಮಂಡಲಾದೊಳು ಬೆಳೆವ ತೊಳಸಿಯು . . . ತಂಡತಂಡದಿ ಮೆರೆದುವು (ಗೋಹಾಡು. ೭).

[ದೇ.॥ ತಮಿ. ತೊಟ್ಟಿ]

ತೊಟ್ಟಿಕ್ಕು (ಕ್ರಿ). ಹನಿಹನಿಯಾಗಿ ಬೀಳು : ಕದಡಿ ತೊಟ್ಟಿಕ್ಕುವ ವಿಭೂತಿಗಳ ಬೆಮರಿನಿಂ (ಜಿಬಪು. ೩೫-೦೫); ತೊಟ್ಟಿಕ್ಕೆ ಕಂಬನಿಯ ಜೇನೆದೆಯ ಹೂವಿಂದ (ಕಾಲೂರ. ೦೬೫-೩೬೭); ಸುಮತಿಯ ಕಂಗಳಲ್ಲಿ ಕಂಬನಿ ತುಂಬಿಕೊಂಡು, ಮುತ್ತುದುರಿದಂತೆ ಅವಳ ಗಲ್ಲಗಳ ಮೇಲೆ ತೊಟ್ಟಿಕ್ಕುತ್ತಿದೆ (ತೇಮೋಡ. ೬೫); ಏಲೆ, ಕೊಂಬೆ ಮತ್ತು ಹುಲ್ಲುಗಳಿಂದ ನೀರು ತೊಟ್ಟಿಕ್ಕುತ್ತಿತ್ತು (ಪುನರು. ೨೬೮). [ತೊಟ್ಟು₂ + ಇಕ್ಕು]

ತೊಟ್ಟಿಗ (ನಾ). (?) : ಅಘಹರನು ಕಾವನ ತಗೆದೆಚ್ಚ ಬಾಣದ ಮಗನ ಹಿಡಿದು ತೊಟ್ಟಿಗರು ಪಗೆಗೆ ಮಾರಲ್ಕಂಜಿ ಪಿಗಿದು ಪರ್ವರ ಕಂಡು ಸುಗಿದು ಸೊರಗಿದೆವೆಂಬ ಪಸರಾ (ಕೋಡಪ. ೧-೭೦). [?]

ತೊಟ್ಟಿಗಾಲ್ (ನಾ). ಒಂದು ಕಾಲುವೆಯ ಹೆಸರು : ಅನ್ತೆ ಬನ್ದು ತೊಟ್ಟಿಗಾಲ ತಜ್ಜಣಪೇರೊಟ್ಟಿಯಿಂ ಅನ್ತೆ ಬನ್ದು ಬಾಣಗಗೆಱೆಯ ಏರಿಯ ಮೇಗಣಿಂ (ಎಕ. III, ನಂಜನ. ೧೩೯-೨೦; 916 ?).

[ತೊಟ್ಟಿ ? + ಕಾಲ್₂]

ತೊಟ್ಟಿಡು (ಕ್ರಿ). = ತೊಟ್ಟಿಕ್ಕು : ಸಡಿಲಿದ ಮುಡಿ ಬೆಮರ್ವನಿಗಳು ತೀವಿ ತೊಟ್ಟಿಡುವಾಸ್ಯದ . . . ಹೆಂಗಳಡಸಿದಂಗಡಿಗಳೊಪ್ಪಿದವು (ಮೋಹತ. ೩-೧೪); ತನಿಸುಧೆಯೊಸರ್ದು ತೊಟ್ಟಿಡುವ ಬಿಂದುಗಳ ಸಾಲಿದೆನಲು . . . ಮುತ್ತುಗಳ ಮಣಿಗಳೆಡೆವಿಡದೆ ಸೂಸುತಿರೆ (ಚೈಮಿಭಾ. ೦೦-೦೭); ತೊಟ್ಟಿಡುವ ಬೆವರುಗಳ ಮಸ್ತಕದಿ ರೋಷದಿಂದೊಗುವಾ (ದೇವೀಮ. ೩-೪೯); ನಿರ್ಮಳಾಂತಃಕರಣದಾನಂದಾಶ್ರುಗಳು ಕಂಗಳಲಿ ತೊಟ್ಟಿಡಲು (ಆನಂರಾ. ೦-೨-೩೦); ಮುಖದಲ್ಲಿ ಬೆವರು ತೊಟ್ಟಿಡುತ್ತಿದ್ದಿತು (ನಿರಾತೆ. ೨೦). [ತೊಟ್ಟು₂ + ಇಡು₁]

ತೊಟ್ಟಿಮನೆ (ನಾ). ಹಜಾರದ ಮಧ್ಯದಲ್ಲಿ ಚಾವಣಿಯಿಲ್ಲದ ಚಚ್ಚೌಕವಾದ ಸ್ಥಳವನ್ನುಳ್ಳ ಮನೆ: ಇದ್ದಿರಬಹುದು ನಮ್ಮೂರಲ್ಲೂ ಕೋಟೆ, ಪೇಟೆ, ಅರಮನೆ . . . ಹನ್ನೆರಡು ಕಂಬದ ತೊಟ್ಟಿಮನೆ (ಜಿಂಗೂಲಿ. ೮); ನಾನು ಈಗಲೇ ಹೋಗಿ ತೊಟ್ಟೀಮನೆ ಕೃಷ್ಣಪ್ಪನೋರನ್ನು ಕಾಣುತ್ತೇನೆ (ಮಾಂಗಲ್ಯ. ೯). [ತೊಟ್ಟಿ₁ + ಮನೆ]

ತೊಟ್ಟಿಲ್₁, ತೊಟ್ಟಲ, ತೊಟ್ಟಲು, ತೊಟ್ಟಿಲು₁ (ನಾ). ೧. ಮಗುವನ್ನು ಮಲಗಿಸಿ ತೂಗಲು ಮರ, ಬೆತ್ತ ಅಥವಾ ಲೋಹದಿಂದ ಮಾಡಿದ ಒಂದು ಬಗೆಯ ಸಾಧನ; ತೂಗುಹಾಸಿಗೆ : "ಶೈಶವಿ ಬಾಲಶಯ್ಯೆಯನೆ ತೊಟ್ಟಿಲಕ್ಕುಂ" (ಮಂಗರಾ. ೬೦-೦೬); ನಿನ್ನ ತಂದೆವಿರ್ ಸಿದ್ಧಾರ್ಥರೆಂಬೊರ್ ನೀನ್ ತೊಟ್ಟಿಲೊಳಿರ್ದಂತೆ ನಿನಗೆ ಸೆಟ್ಟಿವಟ್ಟಂಗಟ್ಟಿ . . . ತಪಂಬಟ್ಟು (ಪಡ್ಮಾರಾ. ೪೬-೨೭); ಮದದಂತಿದಂತದೊಳ್ ಕಟ್ಟಿದ ತೊಟ್ಟಿಲಂ ನಯದಿಂದಮೇಱಿ[ಸೆ] ಬಾಳಕಾಲದೊಳೆ ತೊಟ್ಟಿಲಿಗಂ ಗಜಪ್ರಿಯನಪ್ಪುದಂ ಸಲೆ ತೋಱಿದಂ (ಪಂಪಭಾ. ೧-೪೩); ದೇಹಿವರ್ಗದ ಕೃತಪಾಪಪುಣ್ಯಫಲಮಂ ಸಲೆ ತೂಗುವ ಕರ್ಮಸಾಕ್ಷಿಯಂ ಪದುಳದೆ ತೊಟ್ಟಿಲೊಳ್ ಪಡಿಸಿ ತೂಗಿದರ್ (ಜಗವಿ. ೩-೨೮); ಕೂಸಂ ಚಿವುಂಟುವೈ ತೊಟ್ಟಿಲಂ ತೂಗುವೈ (ನಂಬಿರ. ೧೫-೧೪೧); ಎಳನೇಸಱ ತೊಟ್ಟಿಲುದಗ್ರದಾನವರೆಱೆವಟ್ಟು ಲಕ್ಷ್ಮಿಯ ತಪರ್ಮನೆ . . . ಮಹಾರ್ಣವಂ (ಸೂಕ್ತಿಸು. ೨-೩೮). ೨. ಒಂದು ಊರಿನ ಹೆಸರು : ಏಚಯ್ಯನುಂ ತೊಟ್ಟಿಲ ಪುಟ್ಟಿಗಾವುಣ್ಡನುಂ ಎಱೆಯಣ್ಣ ಪೆರ್ಮ್ಮಾಡಿ ಕೆಱೆಯ ಕಟ್ಟಿ ಕಲ್ಲ ತುಂಬನಿಕಿಸಿದ (ಮೈಆರಿ. ೧೯೩೨, ೧೧-೪; 886 ?). 'ತೊಟ್ಟಲ್' ಪರಾ. ತೊಟ್ಟಲ : ೧. ತನುವೆಂಬ ತೊಟ್ಟಲಕೆ ಮನವ ಸರಪಳಿ ಮಾಡಿ (ಅಖಂಡೇ. ೩೪೯-೧೩).

ತೊಟ್ಟಲು : ೧. ಭಕ್ತನ ಹಸ್ತವೆ ತೊಟ್ಟ[ಪಾಠಾಂ. ಟ್ಟಿ]ಲು ತನಗಂ ಭಕ್ತ್ಯಮೃತಂ ಮೊಲೆವಾಲದು ತನಗಂ (ದೀಕ್ಷಿಬೋ. ೬೪-೫); ಅಲ್ಲಿನ ಮಕ್ಕಳು ತಮ್ಮ ತೊಟ್ಟಲುಗಳಲ್ಲಿ ಸುಖವಾಗಿ ಮಲಗಿ ನಿದ್ರಿಸಲಿ (ಹುಬ್ಬಹ. ೦೯೦). **ತೊಟ್ಟಿಲು₁** : ೧. ತೊಟ್ಟಿಲ ಶಿಶುವಿಂಗೆ ಜೋಗುಳವಲ್ಲದೆ ಹೊಟ್ಟೆಯ ಶಿಶುವಿಂಗೆ ಜೋಗುಳವುಂಟೇ (ವಚಸಂ. ೪೦೬-೫೯); ಶರಣರ ಚರಣದ ತೊಟ್ಟಿಲೊಳು ಪಟ್ಟಿರಿಸಿ ಪುರಾತನರ ಗೀತದಿಂ ಜೋಗುಳಂಬಾಡಿ (ಬಸರ. ೦೦-೧೧೧); ಭೀಷ್ಮನ ತೋಳ ತೊಟ್ಟಿಲಿನೊಳಗೆ ಬೆಳೆದೆವು (ಕುವ್ಯಾಭೀ. ೭-೨೮); ಅಂಗದನ ತೊಟ್ಟಿಲಲಿ ವೀರೋತ್ತುಂಗ ದಶಕಂಧರನ ಕಟ್ಟಿದ ತುಂಗವಿಕ್ರಮವೆತ್ತ ಸರಿದುದು (ತೊರರಾ. ೪-೫-೯); ಬೆಟ್ಟಬೆಟ್ಟಕೆ ಕಟ್ಟಿ ಜೋಗುಳದ ತೊಟ್ಟಿಲನು ತೂಗಿದತ್ತು! (ಅನಿಕೇ. ೫೩-೫); ತೊಟ್ಟಿಲ ಹೊತ್ತುಕೊಂಡು ತೌರುಬಣ್ಣ ಉಟ್ಟುಕೊಂಡು . . . ತೌರೂರ ತಿಟ್ಟತ್ತಿ ತಿರುಗಿ ನೋಡ್ಯಾಳು (ಜಗೀತೆ. ೩೦). ೩. ಬಂಡಿಯಲ್ಲಿ ಜನ ಕೂರಲು ಅಥವಾ ಸಾಮಾನು ತುಂಬಲು ಇರುವ ಜಾಗ,-ಸ್ಥಳ.

ತೊಟ್ಟಲುಗಾಯಿ = ಒಡೆದಾಗ ಉದ್ದುದ್ದವಾಗಿ ವಿಭಾಗವಾಗುವ ತೆಂಗಿನಕಾಯಿ : ತೊಟ್ಟಲುಗಾಯಿ ಒಡೆದರೆ ಮನೆಯಲ್ಲಿ ಮಗುವಾಗುವ ಸೂಚನೆಯೆಂದು ನಂಬಿಕೆಯಿದೆ (ರೂಢಿ). **ತೊಟ್ಟಲ ಕಾರ್ಯ** = ಮಗುವನ್ನು ಮೊದಲ ಬಾರಿ ತೊಟ್ಟಿಲಿಗೆ ಹಾಕುವ ಶಾಸ್ತ್ರ,-ಸಮಾರಂಭ : ಪರಮಹರುಷದಿಂದ ಪುರಜನರೆಲ್ಲರು ನೆರೆದು ತೊಟ್ಟೀಲ ಕಾರ್ಯಕ್ಕೆ (ಸಿದ್ಧಪು. ೩-೨೫). **ತೊಟ್ಟಲ ಕೂಸು** = ಚಿಕ್ಕಮಗು ; ಎಳಗೂಸು : ಎರಡು ಸಪ್ತಕ ಜಗವ ಮಾಡಿದ ಸರಸಿರುಹಸಂಭವನೆ ನಾಭಿಯ ನಿರುತ ತೊಟ್ಟಿಲ ಕೂಸು (ಸಂಭಪ. ೭-೨). **ತೊಟ್ಟಲ ಚಪ್ಪರ** = ಅಂಬಾರಿ: ಆನೆಯ ಮೇಲೆ ತೊಟ್ಟಿಲ ಚಪ್ಪರದಲಿ . . . ಬರುವ ಖಾನರುಗಳು (ಕಂಪವಿ. ೦೦-೩೦). **ತೊಟ್ಟಲ ಜೀಕ, ತೊಟ್ಟಲು ಜೀಕ** = ತೊಟ್ಟಿಲನ್ನೊಳಗೊಂಡ ತಿರುಗುಯಂತ್ರ ; ರಾಟಣದುಯ್ಯಾಲೆ : ತೊಟ್ಟಲಜೀಕವ ತೂಗಿ ಕೈಬಿಟ್ಟರೆ ಗಾಳಿಯ ರಾಟಾಳದೊಳು ಪ್ರಾಣವು (ಸಖೀಗೀ. ೩೦-೦೦); 'ರಾಟಣದುಯ್ಯಾಲೆ' ಎಂದರೆ ನಮ್ಮಲ್ಲಿ ಈಗಲೂ ಪ್ರಚಾರದಲ್ಲಿದ್ದ ತೊಟ್ಟಿಲು ಜೀಕ (ಕರ್ಣಾಜ. ೮೩). **ತೊಟ್ಟಲನಿಕ್ಕು** = ಮಗುವನ್ನು ಮೊದಲ ಬಾರಿ ತೊಟ್ಟಿಲಿಗೆ ಹಾಕುವ ಶಾಸ್ತ್ರ ಮಾಡು ; ತೊಟ್ಟಿಲಿಡು : ಕುಮಾರನಿಗೆ ತೊಟ್ಟಲನಿಕ್ಕುವ ಉತ್ಸವವಂ ಬೆಳೆಯಿಸಬೇಕು (ಸೌಗಂಧಿ. ೪೨-೮). **ತೊಟ್ಟಲ ಮಗ** = ತೊಟ್ಟಿಲ ಕೂಸು : ತೊಟ್ಟಿಲ ಮಗಂಗೆ ಪಟ್ಟಂಗಟ್ಟಿ . . . ಜಿನದೀಕ್ಷೆಗೊಂಡಂ (ಪಂಠಾಮಾ. ೨-೩೭). **ತೊಟ್ಟಲ ಹಬ್ಬ** = ತೊಟ್ಟಿಲ ಕಾರ್ಯ : ಕುಸುಮಾಸ್ತ್ರನಂಗನೆಯು ಪಡೆದ ಶಿಶುವಂ ನೋಡಿ . . . ಸಸಿನೆ ತೊಟ್ಟಿಲ ಹಬ್ಬ ರಚಿಸುತ್ತ ನಾಮಕರಣಂಗೈಯೆ (ನವಮೋ. ೦೫ ಸೂಚನೆ). **ತೊಟ್ಟಿಲಿಗೆ ಹಾಕು** = ತೊಟ್ಟಿಲಿಕ್ಕು : ಎಂತಿದ್ದರೂ ಆಕ್ಕಯ್ಯನ ಬಾಲೆ ತೊಟ್ಟಿಲಿಗೆ ಹಾಕೋ ಮನೆಗೆ ನಾನು ಬಂದೇ ಬರ್ತೀನಲ್ಲಾ? (ಪುಲಮ. ೨೨೬). **ತೊಟ್ಟಲು ಗಾಡಿ** = ಕಮಾನಿಲ್ಲದ ಎತ್ತಿನ ಗಾಡಿ. **ತೊಟ್ಟಲು ಮುಂದಾಗಿ ಬರು** = ಬಾಣಂತನವನ್ನು ಪೂರೈಸಿಕೊಂಡು ಗಂಡನ ಮನೆಗೆ ಮಗುವಿನೊಡನೆ ಬರು.

[ದೇ.॥ ತಮಿ. ಮಲ. ತುಳು. ತೊಟ್ಟಿಲ್; ತೆಲು. ತೊಟ್ಟಿಲ, ತೊಟ್ಲ, ತೊಟ್ಲೆಯ, ತೊಟ್ಲೆ]

ತೊಟ್ಟಿಲ್₂, ತೊಟ್ಟಲಿ, ತೊಟ್ಟಲ್ಲ, ತೊಟ್ಟಿಲ, ತೊಟ್ಟಿಲು₂, ತೊಟ್ಟಲೆ (ನಾ). (ಮುಳ್ಳುಗಳುಳ್ಳ) ಒಂದು ಬಗೆಯ ಸಸ್ಯ : ತಗರಂ ಕೊಳ್ಳುಳಿ ಸುಗ್ಗಿ ಕಗ್ಗೊಱಲೆ ತೊಟ್ಟಿಲ್ ಸೂರಣಂ . . . ಪುತ್ತಿನ ಮಣ್ಣುಮಂ ಕದಡಿ ಕಾಸಿಟ್ಟೆಯ್ದೆ ಪೊಯ್ಯುವ ಬಾವುಗಳುಂ ತೀರ್ಚುಗುಂ (ಲೋಕೋಪ. ೯-೨೪೦). **ತೊಟ್ಟಲಿ**: ಕಾಯಿಗಳು: ಅಗಸೆ, ಹಲಸು, ತೊಂಡೆ, ತೊಟ್ಟಲಿ (ನಮ್ಮನು. ೨೩೭). **ತೊಟ್ಟಲ್ಲ** : ರೆಪ್ಪೆ, ತೊಟ್ಟಲ್ಲ (ಮೈಜಿಗಿ. ೧೭-೩೦೫).

ತೊಟ್ಟಿಲ: ತೊಟ್ಟಿಲ (ವಾಭಾಂಟಿ).–ಮುಳ್ಳುಗಳುಳ್ಳ ಬಹು ಸಾಧಾರಣವಾದ ಬಳ್ಳಿಯು (ಕಥಾಗ. ೪೦). **ತೊಟ್ಟಿಲು$_2$:** ಕೆಂಪುನೊಳ, ತೊಟ್ಟಿಲು, ಪ್ರಿಯಂಗು (ಮೃಚಿಗಿ. ೪-೫೭). **ತೊಟ್ಟಿಲೆ:** ಹೊಟ್ಟೆನೊಳ, ತೊಟ್ಟಿಲೆ (ಮೃಚಿಗಿ. ೬-೯೯). [ದೇ.॥ ತೆಲು. ತೊಟ್ಲ]

ತೊಟ್ಟಿಲ 'ತೊಟ್ಟಿಲ್$_2$' ನೋ.

ತೊಟ್ಟಿಲಿಕ್ಕು (ಕ್ರಿ). ಮಗುವನ್ನು ಮೊದಲ ಬಾರಿ ತೊಟ್ಟಿಲಿಗೆ ಹಾಕುವ ಶಾಸ್ತ್ರವನ್ನು ಮಾಡು: ತೊಟ್ಟಿಲಿಕ್ಕುವೆವೆಂದು ಹನ್ನೆರಡಿರುಳಿಂಗೆ ನೆಟ್ಟನೆ ಕೈಕೊಂಡರೊಲಿದು (ಮೋಹತ. ೦೭-೪೦).

[ತೊಟ್ಟಿಲು$_1$ (<ತೊಟ್ಟಿಲ್$_1$) + ಇಕ್ಕು]

ತೊಟ್ಟಿಲಿಗ (ನಾ). ತೊಟ್ಟಿಲ ಮಗು; ಎಳಗೊಸು: ಬಾಳಕಾಲದೊಳೆ ತೊಟ್ಟಿಲಿಗಂ ಗಜಪ್ರಿಯನಪ್ಪುದಂ ಸಲೆ ತೋಱುದಂ (ಪಂಪಭಾ. ೧-೪೩).

[ತೊಟ್ಟಿಲ್$_1$ + – ಇಗ]

ತೊಟ್ಟಿಲಿಡು (ಕ್ರಿ). = ತೊಟ್ಟಿಲಿಕ್ಕು: ತೊಟ್ಟಿಲಿಡುವ ದಿವಸ ಎಲ್ಲಿದ್ದರೂ ಬಂದೇವು (ಸವತಿ. ೨೬). [ತೊಟ್ಟಿಲು$_1$ (< ತೊಟ್ಟಿಲ್$_1$) + ಇಡು$_1$]

ತೊಟ್ಟಿಲು$_1$ 'ತೊಟ್ಟಿಲ್$_1$' ನೋ.

ತೊಟ್ಟಿಲು$_2$ 'ತೊಟ್ಟಿಲ್$_2$' ನೋ.

ತೊಟ್ಟಿಲುಹಬ್ಬ (ನಾ). ಮಗುವನ್ನು ಮೊದಲ ಸಲ ತೊಟ್ಟಿಲಿಗೆ ಹಾಕುವ ಉತ್ಸವ,–ಸಮಾರಂಭ; ತೊಟ್ಟಿಲ ಕಾರ್ಯ: ಗೌಡರ ಮೊಮ್ಮಗನ ತೊಟ್ಟಿಲುಹಬ್ಬ ನಿನ್ನೆ (ಪ್ರಣಸ. ೦೦).

[ತೊಟ್ಟಿಲು$_1$ (< ತೊಟ್ಟಿಲ್$_1$) + ಹಬ್ಬ (< ಪರ್ಬ)]

ತೊಟ್ಟಿಲೆ 'ತೊಟ್ಟಿಲ್$_2$' ನೋ.

ತೊಟ್ಟಿಲ್ದುಂಬಿಸು (ಕ್ರಿ). = ತೊಟ್ಟಿಲಿಕ್ಕು: ಧಾರಿಣಿ ಪೊಗಳ್ವಂತೆ ಪೊಲುತ್ಸಾಹದಿ ತೊಟ್ಟಿಲ್ದುಂಬಿಸಿದಂ (ಜಯಕಾ. ೨-೬೦).

[ತೊಟ್ಟಿಲ್$_1$ + ತುಂಬಿಸು]

ತೊಟ್ಟಿಸು (ಕ್ರಿ). ಹನಿಸು; ಚಿಮುಕಿಸು: ಒಕ್ಕಲಿಗರ ಮನೆಯ ಸುಣ್ಣದ ಮೇಲೆ, ಮಜ್ಜಿಗೆಯನ್ನು ತೊಟ್ಟಿಸಿದರೆ . . . ಅದರ ದೋಷನಿವಾರಣೆ ಯಾಯಿತೆಂದು ಹೇಳಿ ಉಪಯೋಗಿಸುತ್ತಿದ್ದರಲ್ಲಾ ? (ಬೈಸರ್ವ. ೧೨೨).

[ತೊಟ್ಟು$_2$ + – ಇಸು$_3$]

ತೊಟ್ಟು$_1$ 'ತೊಡು$_1$' ಪರಾ.

ತೊಟ್ಟು$_2$ (ಕ್ರಿ). ತೊಟ್ಟಿಡು; ಹನಿಹನಿಯಾಗಿ ಬೀಳು: ಮೋಟಾರ್ ವಾಹನಗಳಿಂದ ತೊಟ್ಟಿದ ಎಣ್ಣೆಯು ತೆಳುವಾಗಿ ಹರಡಿ ಎಣ್ಣೆಯ ಪೊರೆಯು ಉಂಟಾಗಿರುತ್ತದೆ (ಭೌತವಿ. ೨೦೭); ಅವಳ ಕಣ್ಣಿನಿಂದ ಒಂದೆರಡು ಬೊಟ್ಟು ನೀರು ತೊಟ್ಟಿತು (ದೇವೀಪೌ. ೧೬೬).

[ದೇ.॥ ತಮಿ. ಚೊಟ್ಟು; ತೆಲು. ತೊಟ್ಟು]

ತೊಟ್ಟು$_3$ (ನಾ). ೧. ಹನಿ; ಬಿಂದು: "ವೃಷಂತಿ, ಬಿಂದುಃ, ಪೃಷತಃ, ವಿಪೃಷಃ, ೪ ಜಲಬಿಂದುಗಳ ಹೆಸರುಗಳು ಅಂದರೆ ನೀರಿನ ತುಂತುರುಗಳು; ಉದಕ ತೊಟ್ಟುಗಳು" (ಸಿದ್ಧಾಂತಿ. ೬೯); ತೊಟ್ಟು ಕೂಡ ಬಿಡದಂತೆ ಸವರಿ ಹಿಗ್ಗನ್ನು ಹುಡುಕಿ ಕುಡಿವೆ (ಅರಳು. ೨೦೪-೦೩). 'ತೊಟ್ಟಿಡು' ಪರಾ. ೨. ಕೊಂಚ; ಸ್ವಲ್ಪ: ನೀವು ಇನ್ನೂ ಚಿಕ್ಕವರು . . . ಇಲ್ಲವಾದರೆ ಒಂದುತೊಟ್ಟು ಬೈದು ಮುಂದೆ ಸಾಗುತ್ತಿದ್ದೆ (ಬಾಬಲ. ೬೯).

[< ತೊಟ್ಟು$_2$./ತಮಿ. ಚೊಟ್ಟು]

ತೊಟ್ಟು$_4$ (ನಾ). ೧. ಹಣ್ಣು, ಹೂವು, ಎಲೆ ಮೊದಲಾದುವುಗಳ ತುಂಬು,–ಕಾವು; ದೇಟು: "ವೃಂತಂ, ಪ್ರಸವಬಂಧನಂ ಈ ೨ ಪುಷ್ಪ ಪತ್ರಂಗಳ ತೊಟ್ಟು" (ನಾಚಿರಾ. ೦೦೬); "ತೊಟ್ಟು ತುಂಬೆನೆ ವೃಂತನಾಮ ವೆಂದೇ ತಿಳಿವುದು" (ಕಬ್ಬಮಂ. ೨೩); ತೊಟ್ಟ ಬಿಟ್ಟ ಹಣ್ಣು ಮತ್ತೆ ಹತ್ತುವುದೇ (ಸರ್ವಪ. ೨೬-೧೨೦); ತೊಟ್ಟು ಪಿಂಡಿಗೆಯಾಗೆ ಫಲಮೆ ಲಿಂಗಮದಾಗೆ (ಬಸರ. ೯-೫೭); ಫಲದಲ್ಲಿ ತೊಟ್ಟುವೊಣಗದ ವೇಳೆಯಲ್ಲಿ ದಿರಿಟ್ಟು ಹಣ್ಣನು [ಪಾಶಾಂ. ಫಲವನು ತೊಟ್ಟ ಸರಿಸಕೆ ಕಾಲದಲ್ಲಿ ತಂದಿರಿಸಿ] ನಿಮ್ಮನುಕೂಲಧರ್ಮಂಗಳನು ಬೇಗದಿ ಹೇಳಿ (ಕುಮ್ಮಾಆ. ೩-೨೪); ಕೀಟಕವು ಕದುಕಿ ಕಡಿಯದ ತೊಟ್ಟುಗಳು ಪತ್ತಿದ ಸುಪುಷ್ಪವ . . . ಶಿವಲಿಂಗಕರ್ಪಿಸಿದಂ (ಶಂಕದಾ. ೫-೫೦); ತೊಟ್ಟ ಕಳಚಿದ ತೆರದಿ ಜೀವವ ಬಿಟ್ಟನೈ (ದೇವೀಪು. ೪-೨೦). ೨. ಮೊಲೆಯ ತುಂದಿ; ಚೂಚುಕ: "ತೊಟ್ಟು ಚೂಚಕಮೆನಿಕ್ಕುಂ" (ಮಂಗರಾ. ೯೫-೬); ಬಟ್ಟಿದುವಪ್ಪ ಮೊಲೆಗಳ ತೊಟ್ಟು ಕರಂಗುವುದುಮೊಡನೆ ಸರ್ವಸ್ವಮುಮಂ ಕೊಟ್ಟು ಕರಂಗಿದರಹಿತರ್ ಕೆಟ್ಟುವು ವಳಿಯೊಡನೆ ವೈರಿವಂಶಾವಳಿಗಳ್ (ಪಂಶಾಮಾ. ೩-೯೬); ಬಟ್ಟಮೊಲೆಗಳ ತೊಟ್ಟೊಳು ಕಪ್ಪು ರಂಜಿಸಿತು (ಅಂಜಪ. ೯-೭); ತೊಟ್ಟು ಹಿಡಿದು ಎನ್ನ ತೊಟ್ಟ ಕುಪ್ಪಸಗಂಟು ಬಿಟ್ಟು ಬೇಗ ಮುದ್ದಿಟ್ಟು . . . ನೆಟ್ಟನೆ ನಡೆದ ಶ್ರೀಕೃಷ್ಣನೆಂಬವನು (ಪುರಂದ. ೧-೭೫-೧).

ತೊಟ್ಟಿಡೆ = ದೇಟಿನ ಭಾಗ: ನೆಟ್ಟನೆ ಬಳೆದು ನೆಗಟ್ಟು ತೊಟ್ಟಿಡೆ ಯೋರೆವಟ್ಟಲರ್ದಾವರೆಯಂತೆ ಬಟ್ಟಮೊಗವನೋರೆಗೊಳಿಸಿಯವನ ಮೊಗವಿಟ್ಟ ದಿಟ್ಟಿಯೊಳು ನಟ್ಟಿಪುದು (ಚಿಕವಿ. ೬-೧೫೭ ಸಾಂಗತ್ಯ).

[ದೇ.॥ ಮಲ. ತೊತ್ತು; ತುಳು. ತೊಟ್ಟು]

ತೊಟ್ಟು$_5$ (ನಾ). (ಕರಾ) ತೆಕ್ಕೆ; ಕಂತೆ: ಈ ಹುಲ್ಲು ಎರಡು ತೊಟ್ಟು ಆಗುತ್ತದೆ (ರೂಢಿ).

[ದೇ.॥ ತುಳು. ತೊಟ್ಟು = ತೆಕ್ಕೆಯಲ್ಲಿ ಹಿಡಿ, ತಬ್ಬು]

ತೊಟ್ಟು$_6$ (ಅ). ಮೊದಲಾಗಿ; ಹಿಡಿದು; ಆರಂಭವಾಗಿ: ಪುಟ್ಟದಂದಿಂ ತೊಟ್ಟಿಂತಪ್ಪುಣಿಸಂ ಕನಸಿನೊಳಪ್ಪೊಡಂ ಕಂಡಱಿಯದೆಮಗಂ ಚೋದ್ಯಂ ಬಟ್ಟು . . . ಆಕಂಠಪ್ರಮಾಣಂ ಬರೆಗಂ ತಣಿಯುಂಡು (ವಡ್ಡಾರಾ. ೭೮-೨೦); ಕೊರಲೊಳ್ ಕಟ್ಟಿದ ದೇವಿಯಂತಿರುರದೊಳ್ ಶ್ರೀ ತೊಟ್ಟಿಲೊಳ್ ತೊಟ್ಟನಂತರಮೆನ್ನೊಳ್ ನೆಲಸಿತ್ತು (ಪಂಪಭಾ. ೦೦-೯); ಬಾಲಕಾಲದಿಂ ತೊಟ್ಟು . . . ಖಲಜನಸಂಗತನುಮಾಗಿಯುಂ ನಡೆಯುತ್ತುಮಿರೆ (ಪಂಪತಂ. ೨೭-೨೦); ಆ ಬಾಲಕರ್ ಬಾಲ್ಯದಿಂ ತೊಟ್ಟು ಗೋಳಾಂಗೂಳರಂತೆ ಸಹಜಚಾಪಲ್ಯರುಂ . . . ಎನಿಸಿ (ಸುಳುಮಾ. ೨-೫ ಬ); ಅಂಗುಷ್ಠ ತೊಟ್ಟು ಪಾಣಾಗ್ರ ಪರಿಯಂತರದಲ್ಲಿ ಸ್ಥಾನವ ಮುಟ್ಟಿ ನೋಡಿ (ಸರ್ವಪ. ೨೨-೦೦೦); ಕೆಱೆಯಂ ಕಟ್ಟಿಸು ಭಾವಿಯಂ ಸವಸು . . . ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾಂ ಯೆಱದಳ್ಪಾಲೆಱವಂದು ತೊಟ್ಟು ಕಿವಿಯೊಳ್ (ಸೌಇಇ. IV, ೨೬೭-೪೫; ಸು. 1411); ನೀವು ಆ ಊರಿಗೆ ಹೋದಾಗಿನ ತೊಟ್ಟು ಎಷ್ಟು ಸುಧಾರಿಸೀರಿ (ಸುಳಪು. ೪೨).

[<ತೊಡು$_1$./ತಮಿ. ತೊಟ್ಟು]

ತೊಟ್ಟುಕಳಚು (ಕ್ರಿ). = ತೊಟ್ಟುಬಿಡು: ಮರದಲ್ಲಿದ್ದ ಹಣ್ಣು ತೊಟ್ಟು ಕಳಚಿ ಉದುರಿದೆ (ರೂಢಿ). [ತೊಟ್ಟು$_4$ + ಕಳಚು (<ಕಟಲ್ಚು$_1$)]

ತೊಟ್ಟುಕಟಲ್ (ಕ್ರಿ). = ತೊಟ್ಟುಬಿಡು: ನಿಂದು ಕೀಲಿಸಿದೊಡುರ್ವರೆಯೊರ್ಗುಡಿಸಿತ್ತು ಸಾಗರಂ ವೇಳೆಯಿನುರ್ಕಿ ಸೂಸಿದುದು ತೊಟ್ಟುಕಟಲ್ದವು ತಾರಕಾಳಿಗಳ್ (ಅನಂಪು. ೧೦-೫೮). [ತೊಟ್ಟು$_4$ + ಕಟಲ್$_1$]

ತೊಟ್ಟುಬಿಡು (ಕ್ರಿ). ತೊಟ್ಟಿನಿಂದ ಕಳಚಿಕೊಳ್ಳು,–ಬೇರೆಯಾಗು: ತೊಟ್ಟು ಬಿಡದನ್ನಕ್ಕರ ಮತ್ತಾ ಬುಡದಾಸೆ ಬೇಕು (ಕೂನ್ಯಸಂ. ೨೨೪-೮); ತೊಟ್ಟು ಬಿಟ್ಟ ಹಣ್ಣಿನಂತೆ ದ್ರವ ತಟ್ಟಾಱಿದ ಫಲದಂತೆ (ಮೋಳಿಮಾ. ೧೨-೪೨). [ತೊಟ್ಟು$_4$ + ಬಿಡು$_1$]

ತೊಟ್ಟುವಾಯ್ 'ತೊಡು$_1$' ಪರಾ.

ತೊಟ್ಟುಳಿಕೆ 'ತೊಟ್ಟುಟಿಕೆ' ನೋ.

ತೊಟ್ಟುಟಿಕೆ, ತೊಟ್ಟುಳಿಕೆ (ನಾ). ರುಂಡ ಮುಂಡಗಳು ಒಟ್ಟು ಸೇರಿರುವ ಭಾಗ; ಕಂಠ; ಕೊರಳು: ತುಡುಂಕಲವ್ವಳಿಸುವ ಚಂಚು

ಘಾತಿಯಿಱಿದಾರ್ದೊಡೆ ವಾರಿ ಮಿಡುಂಕುತಿರ್ಪ ತೊಟ್ಟುಱಿಕೆ (ದಶಕು. ೧೧-೫೦). **ತೊಟ್ಟುಳಿಕೆ:** ಇಟ್ಟಣಿಸುವೀ ರಣಮದಾಂಧನ ತೊಟ್ಟುಳಿಕೆಯನು ಕೀಳ್ವ ರಾಯಘರಟ್ಟಸಿಲ್ಲಾ (ಕುಮ್ಯಾಕ. ೨೦-೨) ; ರಾಮನನೊಟ್ಟ ವಿಸಿ ಮುಂಬರಿದು ಮುನಿಪನ ತೊಟ್ಟು [ಪಾಠಾಂ. ತುಟ್ಟ, ತೊಟ್ಟ]ಳಿಕೆಯಲಿ ಚಾಚಿದಳು ಚಾಪಳಚಪೇಟಕವ (ತೊರರಾ. ೦-೧೦-೦೨) ; ಆರುಭಟೆ ಗಂಬುಗಳಳಿದವು ಮೇರೆಯನು ಸುರನಿಕರದಸುಗಳು ಸೇರಿದವು ತೊಟ್ಟುಳಿಕೆ ಗಿಟ್ಟಣಿಸಿತ್ತು ಸಂಗ್ರಾಮ (ನಿಭಾಗ. ೭-೭-೪೪). [<ತೊಟ್ಟು$_4$ + ?]

ತೊಟ್ಟೂರಮ್ಮಳಿ (ನಾ). ಒಂದು ಊರಿನ ಹೆಸರು : ಶ್ರೀ ಶಿವಮಾರ ಭಟಾರರ್ ಜಗವೆಲ್ಲವನ್ ಆಳುತ್ತಿರೆ ತೊಟ್ಟೂರಮ್ಮಳಿಯುಳ್ ಇಱಿದು ಪಿಡಿವಲ್ಲಿ (ಮೈಆರಿ. ೧೯೨೪, ೪೬-೧ : ?). [?]

ತೊಟ್ಟೆ (ನಾ). ೧. (ಕರಾ) ತೆಂಗಿನ ಗರಿಗಳಿಂದ ಮಾಡಿದ ಕುಕ್ಕೆ.– ಬುಟ್ಟೆ : ತೊಟ್ಟೆ ಕಟ್ಟಕೊಂಡು ಮೊಟ್ಟೆ ಹೊತ್ತ (ಗಾದೆ). ೨. ಪೊಟ್ಟಣ : ಸಾವುಕಾರ ಕಾಗದದ ತೊಟ್ಟೆ ಮಾಡಿ ಒಂದೊಂದಾಗಿ ಎಣಿಸಿ ಲೆಕ್ಕ ಗುಣಿಸಿದ (ಬಾಳಿಗಿ. ೫೦). 'ಚೊಟ್ಟೆ$_3$' ಪರಾ. [←ತುಳು. ತೊಟ್ಟೆ]

ತೊಟ್ಟಾನದಿ (ನಾ). ಒಂದು ನದಿಯ ಹೆಸರು : ತೊಟ್ಟಾನದೀ ಪಶ್ಚಿಮತೋ ಪೇರೂರಾತ್ಪೂರ್ವ್ವಸ್ಥಿತಮ್ (ಮೈಆರಿ. ೧೯೩೦, ೮೮-೧೨ ; ಸು. 475). [ತೊಟ್ಟಾ$_0$ + ನದಿ]

ತೊಡ (ನಾ). ೧. ಆಭರಣ; ಒಡವೆ : "ಪಸದನಂ, ಪಚ್ಚಂ, ತೊಡಂ – ಈ ೩ ಆಭರಣಂ" (ಕಶಸಾ. ೬೩-೪೦೯) ; "ಪಚ್ಚಂ ತೊಡಂ ಪಸದನಮೆನಲ್ ತೊಡಿಗೆಯೆಂದಿಳೆಗೆ ನಾಮಮಕ್ಕುಂ" (ಕಬ್ಬಿಕ್ಕೆ. ೨೫) ; ವಿನುತ ಮುತ್ತಿನ ತೊಡಗಳಂ ತೊಟ್ಟು (ಚಿಬಪು. ೧೦-೩೫) ; ಮೋಕ್ಷವೇ ಮಣಿಯಾದ ವರ ರುದ್ರಾಕ್ಷಿದೊಡಗಳ ತೊಡಿಸಿ (ಶಂಕದಾ. ೪-೮). ೨. ಉಡುಪು ; ವಸ್ತ್ರ : (ಕಿ). [ತೊಡು$_1$ + – ಅ$_6$]

ತೊಡಂಕಿಕ್ಕು (ಕ್ರಿ). ಕಷ್ಟಕ್ಕೆ ಗುರಿಮಾಡು ; ತೊಂದರೆಗೀಡುಮಾಡು : ನೀಮಾರ್ಗೆಲೆ ನಿಮ್ಮನಾವಱಿಯೆಮುಂದೆಮ್ಮಂ ತೊಡಂಕಿಕ್ಕುವಂದಿನ . . . ಸೊರ್ಕಕ್ಕಟ ಮುಕ್ಕುವೋಗಿ (ಸುಕುಮಾ. ೪-೨೬). [ತೊಡಂಕು$_3$ + ಇಕ್ಕು]

ತೊಡಂಕು$_1$, ತಂಡಂಂಕು$_1$, ತುಡಂಕು$_1$, ತೊಡಕು$_1$, ತೊಡಗು$_1$ (ಕ್ರಿ). ೧. ಸಿಲುಂಕಿಕೊಳ್ಳು ; ಸಿಕ್ಕಿಕೊಳ್ಳು : ಅದಟರ ಚೆನ್ನಪೊಂಗರ ಸಬಂಗಳ ತೊಟ್ಟುಟಿಯೊಳ್ ತೊಡಂಕಿ ನಿಲ್ಲದೆ ಪೊ[ಱಮಟ್ಟ] ತಮ್ಮ ಮನದೊಳ್ ಮಿಗೆ ಬೆಚ್ಚಿಸಿದಂತೆ ತೋಱುವ . . . ಕರ್ಬಸುಗಳ್ ಪರಿಗೊಂಡುವಾಜಿಯೊಳ್ (ಪಂಪಭಾ. ೮-೧೦೪) ; ತೊಟ್ಟನೆ ಸಾವುದೊಳ್ಳಿತು ತೊಡಂಕದೆ ಕಾಮನ ಡಾಮರಂಗಳೊಳ್ (ಚಂದ್ರಪು. ೮-೬೬) ; ನೇಣ್ಬಲೆಯ ತೊಡರೊಳ್ ತೊಡಂಕಿ ನಡುಗುವ ಕುರಂಗಿಯೊಳ್ದೊರೆಯಪ್ಪಳ್ (ವರ್ಧಪು. ೪-೫೮ ವ) ; ದಿಟ್ಟಿ ತೊಡಂಕೆ ರೂಪಿನ ಬೆಡಂಗಿನೊಳ್ (ಲಂಡರಿ. ೮-೫೩) ; ಆರುಮಸತ್ಯದೊಳ್ . . . ಪರಸ್ತ್ರೀರತಿಯೊಳ್ ತೊಡಂಕದಿರಲೆಂಬುದು ನಿನ್ನ ಮತಂ (ಪುಷ್ಪಪು. ೭-೦೨) ; ಮೃದುಮೃಣಾಳನಾಳ ತಂತುಜಾಲಕದೋಳೊಯ್ಯನೊಯ್ಯನೆರಯ್ಯಮೆನೆ ನಡೆವೆಡೆಯೊಳಡಿ ತೊಡಂಕಿ ತಡೆಗೆಡೆವ ತರುಣ ಮರಾಳಂಗಳಂ ಕಂಡು (ರಾಜಶೇ. ೬-೨೪ ವ). ೨. ಸಿಕ್ಕಾಗು ; ಗೋಜಾಗು ; ಗಂಟುಗಂಟಾಗು ; ಹೆಣೆದಂಕೊಳ್ಳು ; ತಿರುಚಿಕೊಳ್ಳು : ತೊಡಂಕಿ ಪೀಱಿದ ಕುರುಳ್ಗಳೆ ಚಿತ್ತದೊಳಾದ ಬೇಸಱಂ ನುಡಿವವೊಲಾಗೆ (ಪಂಪಭಾ. ೧೩-೯೯) ; ಪೊರೆದು ಸರೋಜರೇಣುಗಳಿನೊಂದಱಿಳೊಂದು ತೊಡಂಕೆ ವಾಃಕಣೋತ್ಕರದೊಡಗೂಡಿ ಕಣ್ಗೆ ಕವಿತರ್ಪ ಜಟಾಳಿ (ಕಾದಂಉ. ೬೦೬); ಬಿಡದೆ ತೊಡಂಕಿ ತೋರ್ಪ ಜಡೆ (ಉಮಾಶ. ೧೪). ೩. ಅನುಮಾನದಿಂದ ಹಿಂದುಮುಂದು ನೋಡು ; ತಡವರಿಸು : ಇವನಱಿವರೆ ಕನ್ನಡಗಬ್ಬದೊಳ್ ತೊಡಂಕದೆ ಸಲ್ವರ್ (ಶಮದ. ೪೮). ೪. ಹೋರಾಡು ; ಸೆಣಸು : ಜಯದ್ರಥನನಿಕ್ಕುಱಿದಾರೊಳಮಿಂ ತೊಡಂಕವೇಡೆನುತುಂ (ಪಂಪಭಾ. ೧೦-೦೪೫) ; ಎಮ್ಮದೀ ಮಣಿಯೆನುತ್ತಿರದೆಯ್ದಿ ತೊಡಂಕಿ . . . ಕಾಳೆಗಮಂ ತೆಗೆದರ್ (ರಾಜಶೇ. ೫-೦೨೪). ೫. ಅಡ್ಡಿಮಾಡು ; ಅಡಚಣೆಯೊಡ್ಡು ; ನಿರೋಧಿಸು : "ತೊಡಕು (ತೊಡಂಕು) – ವಿಪರ್ಯಾಸೇ (ಅಡ್ಡಿಮಾಡು)" (ಶಮಧಾ). ೬. ತೊಡರು ; ತೊಡರಿಕೊಳ್ಳು : ಕರುಳ ಪಿಣಿಲು ಕಾಲಂ ತೊಡಂಕೆಯು ಮಂದೆಗರುಳ್ಗಳಿಂದೆ ದಾಡೆ × × ಯುಂ . . . ಕೊಂಗೆಯ ಸಾಹಣಿ ಸುರಲೋಕ ಪ್ರಾಪ್ತನಾದ (ಎಕ. VIII, ಸೊರಲ. ೦೩೯-೦೪ ; 1173). ೭. ಕೂಡು ; ಸೇರು : ತೊಡೆ ತೊಡಂಕಿದ ನುಣ್ದೊಡೆಯಿಂ ಮನಂ ನಿರಂತರ ಸುರತ ಪ್ರಪಂಚಸುಖದಿಂ ಪೆಱಪಿಂಗದೆ (ಚಂದ್ರಪು. ೪-೭೦). **ತುಡುಂಕು$_1$** : ೮. ಮುಟ್ಟು ; ತಾಗು ; ಸೋಕು : ಇಂತು ಭೂಮಿ ಆಕಾಶಮಂಡಲಮಂ ತುಡುಂಕುತುಂ (ಶೂನ್ಯಸಂ. ೩೯-೨೦) ; ಇರ್ದುದೊಂದು ಕುಧರಂ ಗಗನ ಸ್ಥಳಮಂ ತುಡುಂಕುತುಂ (ದಶಕು. ೧೧-೬೨) ; ನಿರುಪಮಮಪ್ಪ ರತ್ನ ಶಿಖರಂಗಳಿನಾಗಸಮಂ ತುಡುಂಕುತಿರ್ದ . . . ಪೊನ್ನಕೋಂಟೆಯಂ ತರಣಿಹಯಂಗಳೀಕ್ಷಿಸಿ (ಬಾಧಪು. ೧-೧೧೯). ೯. ಬೇಗನೆ ಹಿಡಿ ; ಚುರುಕಾಗಿ ಹಿಡಿ ; ಥಟ್ಟನೆ ಹಿಡಿ : "ತುಡುಕು, ತುಡುಂಕು – ಸತ್ವರ ಗ್ರಹಣೇ (ಥಟ್ಟನೆ ಹಿಡಿ)" (ಶಮಧಾ) ; ತಾಳವಟ್ಟಮಂ ಸೆಳೆದು ತುಡುಂಕಿ (ಚಂದ್ರಪು. ೫-೬೫) ; ಪರಿವ ಪಾವುಗಳಂ ತುಡುಂಕಿ (ಕುಸುಮಾ. ೦೪-೨೯ ವ) ; ನಖರದ್ಯುತಿಯಂ ಮಲ್ಲೀಕುಟ್ಮಲಮೆಂದಾ ನಲ್ಲಳ್ಬಯಲಂ ತುಡುಂಕಿ ಕೌತುಕಮಾಂತಳ್ (ಉದ್ಭಟ. ೯-೬೨) ; ಆ ನೃಪಂ . . . ದಿವ್ಯಗದಾಯುಧಮಂ ತುಡುಂಕಿದಂ (ದಶಕು. ೨-೨೫) ; ಅಳಿಕುಳಮಂ ಹರಿನೀಲಮೆಂದು ತಿಱಿಯಲ್ ಸುರತರುಣಿ ತುಡುಂಕಿ ಸಖಿಯನೇಂ ನಗಿಸಿದಳೋ (ರಾಜಶೇ. ೩-೩೮) ; ಕಂಡರಿಸಿದ ಶುಕಕೋಲೈಸಿ ತುಡುಂಕೆ ನೋಡಿ ಯಾರುಂ ನಗುವರ್ (ಮೈಸೂಮೆ. ೫-೨೦). ೧೦. (ಕಾಮಾತುರದಿಂದ) ಆಕ್ರಮಣ ಮಾಡು : ಮದುವೆಯಾದ ಮೂಱುದಿವಸಮೊದವಿ ಮುಟ್ಟಲಾಗದ ವಳನದಱ ಮೇಲೆ ಬಲ್ಮೆಯಿಂ ತುಡುಂಕಲಾಗದು (ಜನವ. ೧೦-೫೦) ; ನೇಹಂದಳೆದು ಮೇಲ್ವರಿದು ಬರೆ ತುಡುಂಕುವ ಬರ್ದಿನಿನಿಯನ ವಿಲಾಸದಂತೆ (ಭಾವಜಿಂ. ೭-೧೭). ೧೧. ಹರಡು ; ವಿಸ್ತರಿಸು : ಸೋಗೆಯಂ ನೆಗಪಿ ತುಡುಂಕಿ ಮೆಟ್ಟುವ ನವಿಲ್ . . . ನಗುವ ಶುಕಾಳಿ (ಸೂಕ್ತಿಸು. ೦೦-೬೪). **ತುಡುಕು$_1$** : ೪. ಘನಸಂಗರದೊಳಗೆ ನನ್ನೊಡನೆ ತುಡುಕಿದಡಱಿಯಬಹುದು (ಕುಮ್ಯಾದ್ರೋ. ೪-೪೩) ; ತುಡುಕಲಮ್ಮುವರಿಲ್ಲ ಬಲದಲಿ ಮಿಡುಕಲಮ್ಮುವರಿಲ್ಲ (ಕುಮ್ಯಾದ್ರೋ. ೬-೪೮) ; ಎರಡೂ ಮಹಾಸೈನ್ಯಗಳು ಒಂದನ್ನೊಂದು ತುಡುಕಿ, ಕಡಂಗಿ ಕಾದಿದವು (ಕರತ್ನ. ೫೮). ೮. ಪೊನ್ನಕೋಂಟೆ ಮುಗಿಲಂ ತುಡುಕುತ್ತಿರೆ (ಪಂಠಾಮಾ. ೩-೩೫) ; ವಿಷದ ಕೊಡನ ತುಡುಕಲೆ ಬಾರದು (ಚನ್ನವ. ಕ. ೩೩-೭೨) ; ತೆರೆಗೈಯಿಂ ತುಡುಕುತ್ತು ಮೊಳ್ದೊಡೆಯನಾದಂ . . . ಕಾಮುಕನವೊಲ್ ನೀರೇಱುತಿರ್ದತ್ತು . . . ಪದ್ಮಾಕರಂ (ಚಂದ್ರಪು. ೭-೧೨೬) ; ತುಡುಕಿದ ಜಲಂ ಸಿದ್ಧಾಂಬು ನುಡಿದ ನುಡಿಗಳು ಮೂಲಮಂತ್ರವು (ಸಿದ್ಧರಾ. ೨-೨೦) ; ಪ್ರಸಾದವ ಬೆಕ್ಕು ತುಡುಕುತಿಪ್ಪಾ ದಾಯಮಂ ಪೇಳ್ದಂದು (ವೀಶೈಪು. ೮-೦-೫೨) ; ಕಡಗ ಕಂಕಣ ಬಳೆಗೈ ಝಣರೆನೆ ನಾರಿ ಬಿಡದಾಗ ಕಲೆಯ ತಾಣಗಳ ತುಡುಕಿ ತಾಡನಗೈದು (ಕೂನವಿ. ೧೦-೪೫). ೯. ಕರಿಪೋತಂ . . . ಕೇಸರಿಣಿಯ ಕೆಚ್ಚಲಂ ತುಡುಕುತುಂ ಪರಿದತ್ತು (ಪಂಪಭಾ. ೭-೮೦) ; ಘಟಸರ್ಪನ ತುಡುಕಿ (ಬಸವ. ೬೨೫) ; ಮಿಱುಗುವ ಬೆಳತಿಗೆಗಣ್ಬೊಣರೊಱತೆಯ ಜಲದೊಳಗೆ ಪೊಳೆಯೆ . . . ಎಳಮಿಾನ್ಗಳ್ಗೆತ್ತೇಂ ಕಿಱುವೇಡಿತಿ ತುಡುಕಿ ಶಬರನಂ ನಗಿಸಿದಳೊ (ಲೀಲಾವ. ೬-೪೩) ; ಒಡನೆ ಧಾಳಿಯನಿಕ್ಕಿ ಶುಕ್ರನ ತುಡುಕಿ ತೇಜವ ಕೊಂಡು (ತೊರರಾ. ೦-೮-೩೪) ; ಸೆಱಗುವಿಡಿಯೆ ಸಾರ್ಸಾರೆಂಬ ಕರವನು ಭರದೆ ತುಡುಕಲೊಡೆಮುರಿವ . . . ತರಳೆವೆಣ್ಣು

ಗಳೊಪ್ಪಿದರು (ಕಂನವಿ. ೬-೧೭೫) ; ಮುತ್ತುಗಳ್ . . . ಪಾರೆ ಪನಿಗೆತ್ತು ನವಿಲ್ ತುಡುಕೆ (ರಾಜಶೇ. ೫-೪೦) ; ಕೊಡನ ಮಱಿಯ ಪೆಡೆಯಂ ತುಡುಕುವೆಗ್ಗನಂತೆ (ರಾಮಾಶ್ವ. ೬೪-೨೬) ; ಯುವಕನೆ ತುಡುಕು ಕಠಾರಿಯನು ! (ಪಾಂಚಜ. ೧೪-೧೪). ೧೦. ಮಹದೇವಿಯನು ಕಂಡರಸನೇಕಾಂತದಲಿ ತುಡುಕಿದೊಡೆ (ಪ್ರಭುಲೀ. ೧೦-೨೧) ; ಕಾಮಾತುರದಿ . . . ಬಂದವ ಭರದಿ ತುಡುಕಲು ಪುಷ್ಪವತಿ ತಾನೆಂದಳೆದೆ ಬೆದರಿ (ಅಂಬಿಕಾ. ೮-೬೦) ; ದ್ರೌಪದಿಯನ್ನು ಕೀಚಕನು ಬಲಾತ್ಕಾರದಿಂದ ತುಡುಕಿದನು (ನೀಗಟ್ಟು. ೧೩೬). ೧೨. ಎರಗು ; ಮುತ್ತು : ಪುಷ್ಪದೊಳು ಗಂಧವಿರಲಾಱಡಿ ತುಡುಕುವುದೆಂದು ನೆಲದೆ ನಿಡುಬೇರಿನೊಳ್ ಪರಿಮಳವೆತ್ತು ರಂಜಿಪ ಮುಡಿವಾಳ (ಮೋಹತ. ೩-೧೬); ಕಮ್ಮಲರ್ಗಂಧಗಂಧಿಯರು ತಮ್ಮ ನಾಳುವ ಕೃಷ್ಣರಾಯನ ತುಡುಕಿದ ಪೆರ್ಮೆಯನೇನ ಬಣ್ಣಿಪೆನು (ಮೋಹತ. ೧೪-೬೮). ೧೩. ಮುನ್ನುಗ್ಗು ; ಆಕ್ರಮಿಸು : ತುಡುಕಿದವು ತೇಜಿಗಳು ವಾಘೆಯ ಗಡಣದಲಿ (ಕುಮ್ಯಾದ್ರೋ. ೬-೩೯). ತುಡುಕುವಾನೆಯನೀಸಿನಲಿ ಖುರವಿಡುವ ಕುದುರೆಯನೊತ್ತಿಹಾಯ್ಸುವ (ಕುಮ್ಯಾಕ. ೧೫-೨೩). ೧೪. ಆವರಿಸು ; ತುಂಬು ; ವ್ಯಾಪಿಸು : ತುಡುಕಿದವು ತಂಬಟದ ದನಿ ಜಗದಡಕಿಲನು (ಕುಮ್ಯಾದ್ರೋ. ೧-೪೭) ; ಪಿಡಿವ ಕಾಳೆಗಳ ಬಾಱಿಪ ಡಕ್ಕೆಗಳ ದನಿ ತುಡುಕಿತಜಾಂಡಮಂಡಲವ (ವರ್ಧಕ. ೬-೮೪). ೧೫. ತೆಗೆದುಕೊಳ್ಳು ; ಹಿಡಿ ; ಎತ್ತಿಕೊಳ್ಳು : ಪರವಧುವ ನೆರೆಯದೆ ಪರಧನವ ತುಡುಕದೆ (ದೇದಾವ. ೩೩ ೬೦) ; ನಾರಿಯಂ ತುಡುಕಿ ಕರ್ಣದ ಕಡೆಗೆ ಸೆಳೆಯೆ (ಹಚಕಾ. ೬-೩೬); ತುಡುಕುವಂಕುಶದಿಂದ ಮುನ್ನಿಳೆಯೊಡೆಯೆ ಗಜ ಗಾಢಿಸಿದವು (ಕುಮ್ಯಾಭೀ. ೨-೨); ತುಡುಕಿದರೆ ಕೈ ಬೇವುದು (ಕುಮ್ಯಾದ್ರೋ. ೪-೬೦) ; ತುಡುಕಿ ತೊಳುವ ಸೂತ್ರಯಂತ್ರದ ಗಡಣದಲಿ ಗತಿಗೊಂಡು ಬೇಡಿತ ಕೊಡುವ ಮಣಿಪುತ್ರಿಕೆಗಳೆಸೆದವು ವಿವಿಧ ರಚನೆಯಲಿ (ತೊರರಾ. ೧-೦೩-೦೦) ; ರಾಹು ತುಡುಕಿದ ಚಂದ್ರಮಂಡಲವೋ (ಜೈಮಿಭಾ. ೪-೧೩). ೧೬. ಧರಿಸು ; ಹೊಂದು ; ತಳೆ : ಬಿಸಿಲಂ ಕಳೆದು ಬೆಳುದಿಂಗಳಂ ತುಡುಕುವ ಗಗನಲಕ್ಷ್ಮಿಯಂತೆ ಕೆಂಪಿನ ಪಸದನಮಂ ಕಳೆದು . . . ಬೆಳ್ಪಸದನಂಗೈದು (ಅರ್ಧನೇ. ೨-೧೩ ಪ) **ತೊಡಕು$_1$** : ೧. ಕಡುಭವದ ಬಾಧೆಗೆ ತೊಡಕಿ ಮೊಱಿಯಿಡುವ ಭವಿಗಳ ನಾಲಿಸುವವೊಲು (ಬಸಪು. ೩-೩೮); ಮಿಡುಕುವುದು ಬಾಯ್ ಚಿತ್ತವವಳಲಿ ತೊಡಕಿಹುದು (ಕುಮ್ಯಾಅ. ೧೯-೩೭) ; ಮಡದಿ ಮದನನ ಬಲೆಯ ಬಾಯಲಿ ತೊಡಕಿ ಬಿರ್ದುದನಱಿದರಾಗಳೆ (ಪ್ರಭುಲೀ. ೫-೨೩) ;ಒಡನೆನ್ನ ನಿಟ್ಟಿಸಿದರಾ ಮೋಹವಲೆಯೊಳು ತೊಡಕದರಿಲ್ಲ ನಿನ್ನಾಣೆ (ಕಂನವಿ. ೧೦-೩೪) ; ಕಾಮುಕರ . . . ಕಡೆಗಂಗಳ ಸರಳಿಯೊಳು ತೊಡಕಿ ಹಮ್ಮಯಿಸುವರು (ಕೊಲ್ಲಾಚ. ೨೯). ೨. ತೊಡಕಿದ ಗಳದ ಹಾರದ ಕೆಂಪು ಗದಡಿದಧರದ . . . ಕೋಮಲೆಯರು (ಜೈಮಿಭಾ. ೧೦-೫೦). ೩. ಬೆದಱುಗಂಗಳ ಬಿಟ್ಟ ಮಂಡೆಯ ಹುದಿದ ಹಾಹಾರವದ ತೊಡಕಿದ ಪದಯುಗದ . . . ವರಸುದತಿ ಬಂದಳು ರಾಜಸಭೆಗೆ (ಕುಮ್ಯಾಸ. ೧೪-೭೧). ೪. ಮುನ್ನ ತೊಡಕಿ ತನಗಾದ ಭಂಗಂಗಳಂ ಹೇಳನೇ ನಿನಗೆ ಕಮಲಜಕಂದನು (ಹಚಕಾ. ೮-೧೫) ; ತೊಡಕಲಱಿಯದವಂ ತೊಡಕಿದವನಂ ತೊಡಕುವವನು (ಬಸಪು. ೫೦-೪೮) ; ಅಧಿಕರೊಳಿರದೆ ತೊಡಕುವುದಾಗದೆಂಬುದನಱಿಯೆಯಾ ನೀನು (ಕುಮ್ಯಾಉ. ಓರಿಇ. ೯-೫೩) ; ಕಡಗಿದಡೆ ಕೋದಂಡರುದ್ರನ ತೊಡಕಿ ಬದುಕುವವರಾರು (ಕುಮ್ಯಾದ್ರೋ. ೧-೫೬) ; ತೊಡಕಿದವರ ಗಂಡನೆಂದೆಂಬೆಡದ ಕಾಲ ತೊಡರೆಸೆದುದು ರಾಮನಿಗೆ (ಕುರಾಸಾಂ. ೧೯-೩೦) ; ವಿಚಾರಿಸೆ ನೀನೆನ್ನೊಳೋರಂತೆ ತೊಡಕಿದೆ ಮಹಾರಣಾಂಕಣದೊಳು (ಜಿಬಪು. ೫೦-೩೪); ಫಣಿಲೋಕಮಂ ಸುಡುವೆನು ಕಂಜಜ ಕಪರ್ದಿಗಳ್ತೊಡಕಿದೊಡೊರಲ್ಚುವೆಂ (ಜೈಮಿಭಾ. ೨೪-೩). ೫. "ತೊಡಕು (ತೊಡಂಕು)–ವಿಪರ್ಯಾಸೇ (ಅಡ್ಡಿಮಾಡು)" (ಶಮಧಾ). ೬. ಬುದ್ಧಿಗೆ ಸಂಶಯಾಳಾಪ ತೊಡಕಿಕೊಂಡುದು (ತೊರರಾ. ೩-೯-೪). ೮. ನುಡಿಸಿಯಱಿಯೆವು ಕಂಡು ಕೇಳ್ದುಂ ತೊಡಕಲಱಿಯೆವು ನಿನ್ನನೆಂದುಂ ಗಡಬಡಿಸಿ ನೀನೆನ್ನುವಂ ಝಂಕಿಸಲೆಹಗೆ ಬಹುದು (ಬಸಪು. ೪೦-೩೮). ೧೭. ಅಡಗಿರು ; ಮರೆಯಾಗಿರು : ತಳ್ತ ಕಲ್ಪಭೂಮಿರುಹನಿಕುಂಜಮಂಜರಿಗಳೊಳ್ ತೊಡಕಿರ್ಪೆನೋ (ವರ್ಧಪು. ೧೦-೫೭). **ತೊಡಗು$_1$** : ೪. ಇತ್ತಲೆನ್ನಯ ಹಸಿವು ಹೆಚ್ಚಿದೆ ತುತ್ತು ಹೊಗದೊಳಗಿವನ ತೊಡಗಲದೆತ್ತಲಕಟಾ ವಿಧಿಯೆನುತ ಮುರಿದೆದ್ದನಮರಾರಿ (ಕುಮ್ಯಾಅ. ೧೦ ೩೨).

ತೊಡಂಕುಸೊನ್ನೆನೂಲ್ = ಹೆಣೆಗೆಗೊಂಡ ಬುಗಾರದ ಉಡಿದಾರ: ಬಜ್ಜರಮಂಕಿ ತೊಡಂಕುಸೊನ್ನೆನೂಲ್ ತಳತಳೆನಿಪ್ಪ ಸಣ್ಣ ಪೊಸಪೊನ್ನುಡೆ (ಚಿಕವಿ. ೩-೯೦).

[ದೇ.॥ ತಮಿ. ತೊಟಕ್ಕು, ತುಟಕ್ಕು ; ತೆಲು. ತೊಡಗು, ತೊಡುಗು]

ತೊಡಂಕು$_2$, ತೊಡಂಗು, ತೊಡಕು$_2$, ತೊಡಗು$_2$ (ಕ್ರಿ). ೧. ಪ್ರಾರಂಭಿಸು ; ಮೊದಲುಮಾಡು ; (ಕೆಲಸದಲ್ಲಿ)ಪ್ರವರ್ತಿಸು : ಸರ್ವಜ್ಞ ಭೂಪನೋಲಗದೊಳ್ನಿಂದಿರೆ ದಂಡಾಧೀಶಂ ಕುಳ್ಳಿರೆ ಮಂತ್ರಿ ತೊಡಂಕೆ ಕವಿ ಜನಾರ್ದನದೇವಂ (ಅನಂಪು. ೧-೫೬). **ತೊಡಂಗು**: ೧. ಮತ್ತಮೆಂಟು ದಿವಸಂ ಮಹಾಮಹಿಮೆಯಂ ಮಾಡಲ್ ತೊಡಂಗಿದೊಡೆ (ವಡ್ಡಾರಾ. ೧೦೭-೧೫) ; ಚಿರಕಾಲಂ ತೊಡಂಗಿ ಪರಿಗೃಹೀತಬ್ರಹ್ಮಚರ್ಯವ್ರತ ಪರಿಣತನಾದೆಂ (ಗದಾಯು. ೫-೪೪ ಪ). **ತೊಡಕು$_2$** : ೧. ಅವನಿಜೆಯ ಕಾಬೆಣಿಕೆ ಕಡೆಗೆ ನಿಲಲಱಿಯದು ನಿರರ್ಥಕೆ ತೊಡಕಬಹುದೆ (ತೊರರಾ. ೪-೧೨-೩೧); ವೀರಚಿಕದೇವಂ . . . ಸೀಸಂ ಕರಂ ಕೊಂಕಸಂ ಮಗುಟ್ಟಿಂತೀ ಗತಿಭೇದದಿಂ ತೊಡಕಿ ತೋರ್ಕುಂ ಸಾಧಕಪ್ರೌಢಿಯಂ (ಚಿಕವಿ. ೪-೦೪೬) ; ಮೇಲಱಿಯದಧಿಕರೊಳು ಕಾಳಗವ ತೊಡಕಿ[ಪಾಕಾಂ. ಗಿ]ದರೆ ಬಾಳುವೆಯು ಕೆಟ್ಟು ಬಡವಕ್ಕು (ಸರ್ವಜ್ಞ. ೭೪೦). ೨. ಪ್ರಾಪ್ತವಾಗು ; ಒದಗು ; ಉಂಟಾಗು : ಒಡಲ ಜಡಿದವು ರೋಮರೋಮದೊಳಡಸಿದಂಬುಗಳಂಗವೇದನೆ ತೊಡಕಿತು (ಕುಮ್ಯಾಭೀ. ೧೦-೨೪). **ತೊಡಗು$_2$** : ೧. "ತೊಡಗು – ಪ್ರಾರಂಭೇ" (ಶಮಧಾ) : ಸುರಿವುದು ತಡೆಯದಯೋಧ್ಯಾಪುರದೊಳ್ ನೀನಿಂದೆ ತೊಡಗಿ ವಸುಧಾರೆಯನಾದರದಿನೆನೆ (ಆದಿಪು. ೭-೩) ; ಕರಂ ಸಂಪ್ರೀತಿಯಿಂ ನೂತನಂ ತಾನಿಂತೆಂದು ನಿವೇದಿಸಲ್ತೊಡಗಿದಂ (ವರ್ಧಪು. ೩-೫೬) ; ಸುರಪತಿಯ ಕೆಟ್ಟ ಸಂಪದಮಂ ತರಲ್ಕೆಂದು ಉರವಣಿಸಿ ತೊಡಗಿದರು ಕಡಲ ಕಡೆಯಲ್ಕೆಂದು (ನಂಬಿರ. ೦-೪); ಹೊಸ ತವಸಿ ತೊಡಗಿದನು ಬಲುತಪವ (ಕುಮ್ಯಾಅ. ೪-೪೩) ; ಯಜ್ಞಮಂ ತೊಡಗೆ ದಕ್ಷಂ (ಭಾವಜಿಂ. ೩-೦೩). ೨. ಇದು ದಲ್ ವಿಸ್ಮಯಮಾಗಿ ತೋಱಿದವುದೇನಿಂತೀಗಳ್ನಿಂದಮಾದುದೋ ಮೇಣಲ್ಲದೊಡಾಳ್ದನಿಂ ತೊಡಗಿತೋ (ಸುಕುಮಾ. ೨-೩೦) ; ತೊಡಗಿತ್ತು ಕಿರಾತಭೀಕರಧ್ವನಿ ವನದೊಳ್ (ಗಿರಿಕ. ೧-೮೧) ; ನಾರಿ ತೊಡಗಿದ ಕೋಟಿದುಃಖದಿಂ ನುಡಿದ ನುಡಿ ಕೂರಂಬಿನಂದದಿಂ ಹೃದಯಮಂ ತಟ್ಟುಗಿಯಲು (ಭಾವಜಿಂ. ೮-೩೩) ; ಮಕ್ಕಳಿರ ನಿಮಗೆ ರಘುವರನ ಸೇನೆಯೊಳಾಯ್ತು ಗಡ ಕಲಹಮೇಕೆ ತೊಡಗಿತು (ಜೈಮಿಭಾ. ೨೧-೪೪) ; ಅರಸುಗಳಿಗಾದರೋ ಇಷ್ಟಾರ್ಥಸಿದ್ಧಿಯ ಸಂಗಡಲೇ ದುಃಖ ತೊಡಗಿರುವುದು (ಶಾಕುಂತ. ೬೨-೨೪).

ತೊಡಗಿ = ಮೊದಲುಮಾಡಿ ; ಆರಂಭಿಸಿ ; ಮೊದಲ್ಗೊಂಡು : ಅಲ್ಲಿಂ ತೊಡಗಿ ದಕ್ಷಿಣಾಪಥದೊಳದು ತೀರ್ಥಮಾಯ್ತು (ವಡ್ಡಾರಾ. ೧೧೭-೫) ; ಉಡೆವಣಿ [ಪ]ಱಿಯದ ಮುನ್ನಮೆ ತೊಡಗಿ ಚಲಂ ನೆಗಱೆ (ಪಂಪಭಾ. ೦-೪೬) ; ಮಗನಂ ಕಿಱಿಯಂದಿಂ ತೊಡಗಿ ಶಿಕ್ಷಿಸದಿರ್ದುದಱಿನಿಂತಾಯ್ತು (ಧರ್ಮಾಮೃ. ೨-೮೩) ; ಹಲವು ಕಾಲಂ ತೊಡಗಿಯಾಲದ ನೆಲೆಯೊಳಿದ್ದೆನ್ನಿರವಳಿದು ನಿಃಫಲವೆನಿಸಿತಲ್ಲಾ (ಬಸಪು. ೫೭-೧೫) ;

ಹಿಮಗಿರಿ ತೊಡಗಿ ಸಾಗರ ವೇಲೆ ಪರಿಯಂತಖಿಳನಗರಗ್ರಾಮಪುರವರದ . . . ಸಮಸ್ತಭೂಜನಜಾಲ ಹಸ್ತಿನಪುರಿಗೆ ಬಂದುದು (ಕುಮ್ಯಾಗ. ೧೩-೧) ; ಕೃತಿಯ ಪಲ್ಲವಿ ತೊಡಗಿ ಪೂರ್ಣಮಪ್ಪನ್ನವಿಾ ಕೃತಿಯೊಳುತ್ಪ್ರೇಕ್ಷೆಯಿಲ್ಲದುದೊಂದು ಪದವಿಲ್ಲ (ಭಾವಚಿಂ. ೧-೧೭).

[ದೇ.॥ ತಮಿ. ತೊಟಙ್ಕು, ತುಟಙ್ಕು ; ಮಲ. ತುಡಣ್ಣು ; ತುಳು. ತೊಡಗು ; ತೆಲು. ತೊಡಂಗು]

ತೊಡಂಕು$_3$, ತುಡುಕು$_2$, ತೊಡಕು$_3$, ತೊಡಗು$_3$, (ನಾ). ೧. ಸಿಕ್ಕು ; ಗೋಜು ; ಗೊಂದಲ : ಮದಿರಾಮದದೊಳಮಳವಿಗಟಿಯೆ ಸೊರ್ಕಿ . . . ಕೂಕಿಡುವ ಕುಕಿಲ್ವ ಬಿಕ್ಕುಳಿಪ ತೇಗುವ ತನ್ನ ತೊಡಂಕದೆಯ್ದೆ ನೂರ್ಮಡಿ ಮನದೊಳ್ ಪಳಂಚಲೆಯೆ ಡಕ್ಕೆಯೊಳಟ್ಕಜವಾಗೆ ಯಾಡಿದಳ್ (ಪಂಪಭಾ. ೪-೯೦) ; ಕರುಳ ತೊಡಂಕಂ ಬಿಡಿಸಿ ನಡೆ ನೋಟ್ಪೆ ನೊಳಗೆಲುವಡಗಿರ್ಪುದು ಜೀವನಿರ್ಪೊಡೆಲ್ಲಿಗೆವೋದಂ (ಯಶೋಧ. ೪-೧೯) ; ಜಡಿವ ಹಾರವಲಯಗಳ ತೊಡಂಕ ತಪ್ಪಿಸದೆ . . . ತಲ್ಲಣಿಸಿ ಸೊಪ್ಪಡಸಿ ಕೆಡೆಯಲು (ನವಮೋ. ೬-೬). ೨. ತೊಡಕಿಕೊಳ್ಳುವಿಕೆ ; ಸಿಕ್ಕಿಹಾಕಿಕೊಳ್ಳುವಿಕೆ; ಕೂಟ: ನಳಿತೋಳಿದಿರ್ಗೊಳ್ವ ತೊಡಂಕಿನಪ್ಪು ಬಾಯ್ದೆಱೆಯಿದಿರ್ಗೊಳ್ವ ಚುಂಬನಂ (ಅರ್ಧನೇ. ೨-೩೬) ; ಸೋಂಕು ಯುವತಿ ಸುರೊಳಲ್ಲದೆ ಬಿಡದ ತೊಡಂಕುಂ ಬೇಟದ ತೋಟಿಯೊಳಲ್ಲದೆ ಕೋಟಲೆಗಳು [ತಾಂ] ಬೇಱಿಲ್ಲ (ಕುಮುರಾ. ಪೀಠಿಕಾಸಂಧಿ. ೫೯) ; ಸೋಂಕಿ ಚೆಂದುಟಿ ಗಚ್ಚಿದಿನಿಯಗೆ ಮುಗ್ಧೆ ತೊಡಂಕು ಸಾಕೆಂದು ಕೈಯೊದರ್ವ ಕಂಕಣದುಲು ಹೊಯೆಂಬಂತೆ (ಭರಣ. ೧೧-೧೬). ೩. ಅಡ್ಡಿ ; ಅಡಚಣೆ : ಉಡಿಗೆ ತೊಡಿಗೆಯ ತೊಡಂಕಿಲ್ಲ[ಪಾಠಾಂ. ತೊಡಕಿಲ್ಲ, ಹಂಗಿಲ್ಲ]ದೆ ರನ್ನಗನ್ನಡಿಯೆ ಜಿನೇಂದ್ರನಾದಂತೆ (ಭರಣ. ೬೭-೩೭) ; ಕಾರ್ಯಸಿದ್ಧಿಗೆ ತೊಡಂಕು ತೋರ್ಪುದೆ (ರಾಜಶೇ. ೧೪-೪೪). ೪. ಕಷ್ಟ ; ತೊಂದರೆ ; ಕ್ಲೇಶ : ಪಟ ನುಡಿಯ ತೊಡಂಕನಡಿಗಡಿಗೆಡವದಂತಿರೆಡೆವಿಡದೆ ಬಿಚ್ಚಟಿಸಿ ಶಿಷ್ಯರ್ಗೆ ನಿರವಿಪ ಕುಲಪತಿಯಂ (ರಾಮಾಶ್ವ. ೧೩೬-೨೯). **ತುಡುಕು$_2$:** ೫. ಬೇಗನೆ ಹಿಡಿಯುವುದಂ ; ಸತ್ವರಗ್ರಹಣ. 'ಕೈದುಡುಕು$_2$' ಪರಾ. **ತೊಡಕು$_3$:** ೧. ನಿನ್ನಂ ನುಡಿಯ ತೊಡಕಿನ ಬೆಡಂಗಿನಿಂ ಸೋಲಿಸಿ . . . ತಗುಳ್ವುದಿದು ದೈವಿಕಂ (ಹಡಕಾ. ೦೦-೦೩). ೩. ವಿಶ್ವಾಮಿತ್ರಮುನಿಯೆನಗೆ ಮತ್ತೆ ಮಾಡಿದ ತೊಡಕಿದಾಗದಿರದು (ಹಡಕಾ. ೦೨-೪೦); ನಿನ್ನವೃತ್ತಾಂತವ ಖಿಳರಾಯಗಱುಹಿ ಮುಂದಾವ ತೊಡಕಿಲ್ಲದಂತೆ ಮಾಡುವೆ (ಮೋಹತ. ೧೦-೩೨); ಬಾಳ್ಕೆಯಲಿ ನೂರೆಂಟು ತೊಡಕು ತಿಣುಕುಗಳುಂಟು (ಮಂಕುಕ. ೬೪೩); ನಮ್ಮ ಹಾದಿಯಲ್ಲಿ ತೊಡಕುಗಳು ವಿಪರೀತ (ಮುರುಕು. ೧೮). ೪. ಬಿಡಿಸಿದಿರೆನ್ನಿಂ ರಾಜ್ಯದ ತೊಡಕಂ [ಪಾಠಾಂ. ರಂ] ಕೈಕೊಂಡು ನೀಮೆ (ವರ್ಧಪು. ೯-೧೧) ; ಕೌರವ ಜೀವಿಸಲಿ ಮೇಣಳಿಯಲಿಮಗಿನ್ನಾ ತೊಡಕಿಲ್ಲ (ಕುಮ್ಯಾಕ. ೧-೦೨) ; ಕಕುಸ್ಥಜನೊಪ್ಪದಿರ್ದಡೆ ತೊಡಕು ನಿನಗಹುದು (ತೊರರಾ. ೪-೯-೩೪). ೧, ೪ : ನದಿಯೊಳ್ಚಕ್ರಗತಿ ಕೇಶತತಿಯೊಳ್ ತೊಡಕಬ್ಜದೊಳಾಱಡಿ ವರಕುಚಯುಗ್ಮದೊಳಲ್ಲದೆ ಕಠಿಣವೃತ್ತಿಯಿಲ್ಲಾ ನಾಡೊಳ್ (ಧರ್ಮಪ. ೦-೩೮). ೬. ಸಂಬಂಧ ; ಸಹವಾಸ : ಕಾಯದ ತೊಡಕನೊಲ್ಲದೆ ತೆಕ್ಕೆಗಟ್ಟಿತು ಭಟರು ನಾಕದಲಿ (ಕುಮ್ಯಾಭೀ. ೯-೦೮) ; ಮೇಳದೊಳು ತೊಡಕ ಬಿಡದವನ ಜಪವದುವೆ ಹಾಳುಮನೆಯಂತೆ (ಸರ್ವಜ್ಞ. ೧೭೩) ; ಕೋಪಭಾವದಿಂ ತೊಡವುಗಳ ತೊಡಕುಗಳನುಳಿದು ರಾಜೀವಾಕ್ಷಿ ತಿರೆಯೊಳೊರಗಿರ್ಪಳು (ವೆಂಕಾರಾ. ೨-೬-೫) ; ತನುಕಾಂತಿ ಮೋಹವಿಕೃತಿಗಳುಮಾ ತೊಡಕಿನವು ಕೊನೆಯಿರದ ಬಲೆಯೊ ಅದು (ಮಂಕುಕ. ೧೬೮) ; ಒಲವು ಹಾಕಿದ ತೊಡಕನೆಂತು ಬಿಡಿಸಲು ಬಹುದು (ಸ್ವದರ್ಶಿ. ೬). ೭. ಗೊಡವೆ ; ಉಸಾಬರಿ : ತರಣಿಯೋಲಗಕೆ ಸೊಡರಂ ಪಿಡಿವ ತೊಡಕೇಕೆ (ಸಿದ್ಧರಾ. ೦-೪) ; ಒಡೆಯ ಚಿತ್ತೈಸಭಿಮತಂಗಳತೊಡಕವೇತಕೆ ನಿಧಿಯಿದಿರೊಳಿರೆ ಕಡೆಗೆ ಜಲಗಂ ತೊಳೆಯ ಹೋದಹೆವೆಂಬ ಮರುಳುಂಟೆ (ಬಸಪು. ೫೭-೬೨) ; ನಮಗಿದೇಕರವಿಂದವದನೆಯ ತೊಡಕು (ಕುಮ್ಯಾಅ. ೧೫-೩) ; ಗೊಡವೆ ತಪ್ಪಿತು ಹೋಗಲಿನ್ನೆನಗದಱ ತೊಡಕೇಕೆ (ಕೌಶಿರಾ. ೧೯-೬). ೮. ಜಟಿಲವಾದುದು ; ಇಕ್ಕಟ್ಟು : ಸಾಂಖ್ಯದರ್ಶನದಲ್ಲಿರುವ ಬಹುದೊಡ್ಡ ತೊಡಕೆಂದರೆ : ಪ್ರಕೃತಿ ಪುರುಷರ ಸಂಬಂಧದ ಸಾಧ್ಯತೆ (ತತ್ವಪ್ರಾ. ೨೬೬). ೯. ಸಂಶಯ ; ಅನುಮಾನ : ಎಂತುಟು ಮೇಘನಾದ ತೊಡಕಿಲ್ಲದೆ ಪೇಟ್ ಮಗನಿರ್ದದೊಂದು ವೃತ್ತಾಂತಮಂ (ಕಾದಂಉ. ೬೬೮). ೧೦. ಸಂದಿಗ್ಧಪ್ರಶ್ನೆ ; ಸಮಸ್ಯೆ ; ಒಗಟು : ರಾಯರಾಜಗುರು ಜಗದ ಬಿನ್ನಾಣಿಯ ತೊಡಕ ಬಿಡಿಸಬಾರದು (ಬಸವ. ೭೨೪) ; ಕೊಡುವಡಿದು ವರವಲ್ಲದಿದ್ದರೆ ನುಡಿಗೆ ಮೊಳೆ ಹೊಮ್ಮುವರೆ ನಿಮ್ಮಯ ತೊಡಕನೊಲ್ಲುವವನಲ್ಲ (ಕುಮ್ಯಾದ್ರೋ. ೦-೪೧) ; ಅಜಗಣ್ಣನು . . . ಕಡೆಯಲೀ ಪರಿ ಕಾಣಬಾರದ ತೊಡಕನೊಡ್ಡಿದನು (ಪ್ರಭುಲೀ. ೦೨-೮). ೧೧. ಜಗಳ ; ಕದನ : ಎನ್ನ ನೀ ಮೊದಲು ನೂಂಕಿದ ಕಾರಣದಿಂದೆ ನಿನ್ನ ನಾ ನೂಂಕಿದೆನ್ನೆಸೆ ಇನ್ನಾವ ತೊಡಕು ಬೇಡ (ಮೋಹತ. ೧೪-೮೦) ; ಅವನೊಳು ತೊಡಕು ಸಲ್ಲದು ನಿಮಗೆಂದ (ಕಂನವಿ. ೧೩-೭). **ತೊಡಗು$_3$:** ೩. 'ಇಡುಗುತೊಡಗು' ಪರಾ.

ತೊಡಕುಬೀಳು = ಗೋಜಾಗು ; ಸಿಕ್ಕಾಗು : ಭೂಮಿಯನ್ನು ಅಳೆಯುವುದಕ್ಕೆ ಮೊದಲಿಟ್ಟ ಮೇಲೆ ಸರಪಣಿಯು ತೊಡಕುಬಿದ್ದಿರುವುದನ್ನು ನೋಡಬೇಕು (ಭೂಮಿಅ. ೪). [< ತೊಡಂಕು$_1$]

ತೊಡಂಕುವಲೆ, ತೊಡಕುವಲೆ (ನಾ). (ಕಾಲಿಗೆ) ತೊಡರುವ ಒಂದು ಬಗೆಯ ಬಲೆ : ಮಿಳಿರ್ವ ಬಂಬಲ್ಗುರುಳ್ಗಳೆಂಬ ತೊಡಂಕುವಲೆ ಬಸಂತನ ಕೆಳೆಯನೆಂಬೆರಲೆಯಂ ಸಿಲ್ಕಿಸೆಯುಂ (ಕಬ್ಬಿಕಾ. ೦೨೩) ; ಪೆರ್ವಲೆ ತೊಡಂಕುವಲೆ ಕೊಲ್ವಲೆ... ಬಿಡುವಲೆಗಳೆನಿಪ್ಪುವೆಸೆದುವಾ ಬೇಂಟಿಗರೊಳ್ (ಶಬಶಂ. ೩-೨೪). **ತೊಡಕುವಲೆ :** ಬಳ್ಳಿವಲೆ ತೊಡಕುವಲೆ ... ಮಡಿಕೆವಲೆ ಮಂದಸಿನವಲೆಯ ಹೊಱೆಗಳ ಬೇಡವಡೆ ನೆರೆದುದು (ಹಡಕಾ. ೫-೮) ; ದಂಡಿವಲೆಗಳ ತೊಡಕುವಲೆಗಳ . . . ಕಿರಾತರು ಕೆದಱಿತಗಲದಲಿ (ಕುಮ್ಯಾಅ. ೦೩-೨೩) ; ಪುತ್ರಮೋಹದ ತೊಡಕುವಲೆಯಲಿ ತಂದೆ ನೀ ಕಾಲಿಡದಿರು (ನಿಭಾಗ. ೩-೧-೬) ; ತಡಿಕೆವಲೆ ತಟ್ಟಿವಲೆ ಸಾಲುವಲೆ ಕೋಲುವಲೆ ತೊಡಕುವಲೆ . . . ಮರವಲೆಗಳಿರ್ದುವಾ ಶಬರರಲ್ಲಿ (ಸಿದ್ಧೇಪು. ೮-೬) ; ಉರುಲುವಲೆ ತೊಡಕುವಲೆ ಸಿಕ್ಕುವಲೆ ಸಿಡಿಲುವಲೆ . . . ಮೊದಲಾದ ಪರಿಪರಿಯ ವಲೆ ಸಮೂಹವ ನೋಡುತೆ (ನವಮೋ. ೧೬-೨೦). [ತೊಡಂಕು$_3$ + ಬಲೆ$_1$]

ತೊಡಂಗ (ನಾ). ಒಂದು ಬಗೆಯ ಆಯುಧ : ಆ ಬೀರೆಗೌಡನ ಕೈಲಿದ್ದ ಚಿನ್ನದ ಬಳೆ ಎರಡು, ತೊಡಂಗದ ಸರಪಣಿ, ಬೆಳ್ಳಿಕಟ್ಟಿದ ಚೂರಿ, ವರೆಚೂರಿ, ಇದನ್ನು ಅವನ ಮೈಯಿಂದಾ ತೆಗೆದು . . . ಮುಚ್ಚಿ ಮಡಗಿ ಬಂದರು (ರಾಜೇಂದ್ರ. ೨೭೬). [?]

ತೊಡಂಗಟ್ಟು (ಕ್ರಿ). ಅಲಂಕಾರಮಾಡು: ಅಬ್ಜಮಂ ಮಾಣ್ದು ದುತ್ತುರದ ಕುಸುಮದ ತೊಡಂ[ಪಾಠಾಂ. ತೊಡವು]ಗಟ್ಟವಂತೆ ಉತ್ತಮವಿದೆಂದು ಕೃಷ್ಣಾರ್ಜುನರ ಬಿಟ್ಟು ತಂದಿತ್ತೆ ತುರಂಗಂಗಳಂ (ಜೈಮಿಭಾ. ೨೫-೬೧). [ತೊಡ + ಕಟ್ಟು$_1$]

ತೊಡಂಗು 'ತೊಡಂಕು$_2$' ನೋ.

ತೊಡಂದುಡಿಸು (ಕ್ರಿ). ಒಡವೆಯನ್ನು ಹಾಕು ; ಆಭರಣವನ್ನು ತೊಡಿಸು : ಅಡಿಯಾಡುವ ಮುಡಿಯಿಕ್ಕುವ ತಿಲಕವಿಡುವ ತೊಡಂದುಡಿಸುವ ನಿಱಿವಿಡಿದು ನೀಡುವ ನೆಲನನಗ್ಧಡಿಸುವ ಮುಕುರಮಂ ತೋಱುವ ಮಕರಿಕಾಪತ್ರಮಂ ಚಿತ್ರಿಸುವ . . . ನಿಖಿಳಪರಿಚಾರಿಣೀ ಜನಂ (ಕುಸುಮಾ. ೬-೬ ಪ). [ತೊಡ + ತುಡಿಸು (<ತೊಡಿಸು)]

ತೊಡಂದೊಡು (ಕ್ರಿ). ಆಭರಣವನ್ನು ತೊಡು,–ಧರಿಸಂ: ಒಡನಂ ಟ್ಟೊಡನೆ ತೊಡಂದೊಟ್ಟೊಡನಿರದಾಡಿಯೊಡನೆ ಹೊಸ ಹರೆಯಂಬಡೆದ ಕೆಳೆಯರಿಂ . . . ಸುಕುಮಾರಂ ಸಡಗರದಿಂ ಸಲೆ ಸಂಪದದೊಳ್ ದಿನಮಂ ನೂಂಕುತ್ತಿಹನು (ಜಯಕಾ. ೨-೬೬). [ತೊಡ + ತೊಡು$_1$]

ತೊಡಂಬೆ$_1$, ತೊಡಬೆ$_1$ (ನಾ). ೧. (ಹಣ್ಣು, ಹೂವು, ಕಾಯಿ ಮೊದಲಾದಂವುಗಳ) ತೊಟ್ಟು; ತುಂಬು: "ಪ್ರತಾನಮುಳಪಂ ತೊಡಂಬೆಯಂತದು ವ್ಯಂತಂ" (ವಸ್ತುಕೋ. ೩೧-೮); "ವ್ಯಂತಂ ಪ್ರಸವಬಂಧನಂ ಈ ೨ ಹೂವಿನ ತೊಡಂಬೆ" (ಹಶಾಯು. ೩೧-೩೦); ಲತಾಳಿಯ ತಳ್ಪು ಬರ್ಚದಂತೆಲೆಯ ತೊಡಂಬೆಗಳ್ ಪಱಿಯದಂತು . . . ಎಲರೊಲವುಣ್ಮೆ ತೀಡಿದುದು (ಕಂದ್ರಪು. ೨-೧೦೦); ಅಗ್ಗದ ಗಾಳಿಯಿಂದೊಡನೊಡನೆ ಬೀತು ತೊಡಂಬೆಗಳು ಕಡು ಸಡಲಿ ತಮತಮಗವನಿಯಲಿ ಬಿದ್ದರಳುಗಳನುಳಿದು (ಬಸಪು. ೨೨-೮); ಬಿಟ್ಟು ತೊಡಂಬೆಯನೆಂದು ಮುಟ್ಟವು ಪಣ್ (ಪರಮಾ. ೨೮-೮೩). ೨. ಮೂಲ; ಬುಡ: ನೋಟದ ಸೋಲಂ . . . ಸುಯ್ಯ ಕಂಪಾಟಿಸಲಲ್ಲೆ ಮೆಯ್ಯಟಲೆ ಸಂದಪುವೆ ಮಲರ್ದಯ್ದು ವಿಂದ್ರಿಯಂ ಬೇಟದ ಗೊಂಚಲಂತೆ ಮನವೆಂಬ ತೊಡಂಬೆಯೊಳೊವ್ಮೊದಲ್ ಸುಖಾಸ್ಫೋಟಮನೀಯವೆನ್ನವು ಮನಃಪ್ರವಿಚಾರದ ಕಾಮ ಕೇಳಿಗಳ್ (ಆನಂಪು. ೪-೪೬). **ತೊಡಬೆ$_1$**: ೨. ಉಲುಕಿದರೆ ನಾಲಗೆಯ ತೊಡಬೆಯ ಕಳಚುವೆನು (ಕುಮ್ಮಾಕೃ. ೦೧-೨೫).

[ದೇ.ಕೆ ತೆಲು. ತೊಡಿಮೆ, ತೊಡಿಮ]

ತೊಡಂಬೆ$_2$, ತೊಡಬೆ$_2$ (ನಾ). ೧. ಗೊಂಚಲು; ಗುಚ್ಛ: "ತೊಡಂಬೆ ನುಣ್ಪೊದೆದ ಜೊಂಪಂ ತೊಂಗೆ ಗುಚ್ಛಮೆಂದಿರದೊಪ್ಪಿ ಪದೆದ ನಾಮಂ" (ಕಬ್ಬಿಕೃ. ೦೯); ಮುಂಗುಳ ತೊಡಂಬೆ ಗಂಟ್ಟಿೂಡೆಯೆ ಮೊಲ್ಲೆಗೆ ಬೆಳ್ಸುಟಿ ಪುಟ್ಟೆ . . . ತೀಡಿದುದು ತಣ್ಣನೆ ಪಣ್ಣನೆ ಪಶ್ಚಿಮಾನಿಲಂ (ಪಂಡಾಮಾ. ೭-೧೩೯); ತಳರ ತೊಡಂಬೆಯಂ ತಳೆದ ಮಾಮರಂ (ದಶಕು. ೦-೨೬); ಮಲ್ಲಿಗೆಯಲರ ತೊಡಂಬೆಯ ಮಧ್ಯದೊಳಲ್ಲಸದಿಂದೆ ಕುಳಿತ ಮಧುಕರನಂ . . . ಗೆಲ್ಲಂಗೊಂಡಿಸೆದುದು ಚಿಹ್ನಂ ಸಂಪೂರ್ಣ ಸುಧಾಕರನ (ಜಯಕಾ. ೦೪-೦೩); ಒಳಪೊಱಗಾಗಿರ್ದ ಗದುಗಿನ ಕಾಯಂತೆ ಕೆಳಮೊಗವಾದ ಯೋನಿಗಳು ಬಿಲದಗ್ಗದ ಕಟು ಗಳೊಳಗಿರ್ಪವವು ಪಾ ಪ ಫ ಲ ದ ತೊಡಂಬೆಗಳಂತೆ (ವರ್ಧಪ. ೮-೭೬). ೨. ಹೂವಿನ ಗೊಂಚಲು: "ತೊಡಂಬೆ, ತೊಡಬೆ . . . ಗುಚ್ಛ – ಈ ೭ ಪುಷ್ಪಮಂಜರಿ" (ಕಶಾ. ೫೫-೦೯೭); ಬಿಟ್ಟುಳಿಯ ಕಕ್ಕುಂಬ ತೊಡಂಬೆಯ ಮೂಡಿಗೆಯ ಕದಳಿಕೆಯ ಕಂಡಪಟಂಗಳುಮಂ (ಪಂಪಭಾ. ೫-೪೭ ವ); ತೊ[ಡಂಬೆ]ಯಂತಪ್ಪಳಿಸುವ ವೆಣ್ಡುಂಬಿಗಳಂತೆ ಲಲಾಟರಂಗದೊಳುಂಗುರಿಸಿ ಕುಣಿವ ನೀಳಾಳಕಂಗಳ . . . ಸೌಂದರಿಯದಿಂ ದೇಸೆವಡೆದ ಹದಿನಾಱಱ ಹರೆಯದ ಹರಂ (ಬಸಪು. ೦೨-೦೦); ಬಂಡುಣವಿಂಡುಗಳುಂಡಾಡಲೇಗಳುಮೊಡೆದ ತೊಡಂಬೆಗಳಿಂದೆ ನದಿಯ ದಡಂಗಳಲಸುಗೆಯ ಮರಗಳು ಬೋಳಾದುವಹ ಕಾಲವಶದೆ (ಗಾಥಾಸ. ೦೦೩-೨೨). ೩. ಗುಂಪು; ರಾಶಿ; ಸಮೂಹ: ಅಂಬರದೊಳು ಬಹುವರ್ಣದ ಮುಗಿಲ ತೊಡಂಬೆಗಳೆಡೆಯಾಡುವಂತೆ (ಧರಚ. ೦೮-೩೯). **ತೊಡಬೆ$_2$**: ೧."ತೊಡಬೆ, ತೊಡಂಬೆ . . . ಗುಚ್ಛಕಕ್ಕುಂ ನಾಮಂ" (ಶಬಿಂ. ೭೮); ಕಳಿತ ಹೂವಿನ ತೊಡಬೆಗಳೊ ರಿಪುಬಲವೊ ಬಿಜುಗಾಳಿಯೊ ವೃಕೋದರನಳವ ಬಲ್ಲವನಾವನ್ಯೆ (ಕುಮ್ಮಾಕೃ. ೨-೦೦). ೨. "ತೊಡಂಬೆ, ತೊಡಬೆ, ತೊಂಗೆ, ತೊಂಗಲ್, ಜೊಂಪಂ, ಗೊಂಚಲ್ ಗುಚ್ಛಂ–ಈ ೭ ಪುಷ್ಪಮಂಜರಿ " (ಕಶಾ. ೫೫-೦೯೭). ೩. ಸೀಗುರಿಸುವುರಿ ವಿಷದ ಲೋಳೆಯ ಲಾಗಿಸುವ ನಾಲಗೆಯ ಸುಯ್ಲಿನ ಬೇಗುದಿಯ ತೊಡಬೆಗಳ ಹಾವ್ ತುಡುಕಿದವು ಫಟ್ಟನಲಿ (ಕುಮ್ಮಾಕೃ. ೨೩-೩೯).

[ದೇ.ಕೆ ತುಳು. ತೊಡುಂಬೆ, ತೊಲುಂಬೆ]

ತೊಡಂಬೆಪಱಿ (ಕ್ರಿ). ತೊಟ್ಟು ಕತ್ತರಿಸಿಹೋಗು: ಬಡಿ ಕೊಳೆ ಕಾಯುಂ ಪಣ್ಣುಂ ತೊಡಂಬೆಪಱಿದುದಿರ್ವ ಮಾಬ್ಕಿಯಿಂ ಕಱುವಿರಿಯರ್ ಮಡಿವರ್ (ಪಂಡಾಮಾ. ೧-೮೩). [ತೊಡಂಬೆ$_1$ + ಪಱಿ$_1$]

ತೊಡಂಬೆವಿಡು (ಕ್ರಿ). ತೊಟ್ಟನ್ನು ಕಳಚಿಕೊಳ್ಳು,–ಬಿಡಂ: ತನಿತು ತೊಡಂಬೆವಿಟ್ಟುದಿರ್ದ ಪಣ್ಗಳನಟ್ಟಿಯೆ ಮೆಲ್ದು ಸೋರ್ವ ತೆಂಗಿನ ತಿಳಿನೀರನೀಂಟಿ . . . ಪೌರನಂದನದೊಳಗಿಂತಯತ್ನಸುಖಮಂ ಪಥಿಕರ್ ಪಡೆವರ್ (ಕಂದ್ರಪು. ೩-೦೫). [ತೊಡಂಬೆ$_1$ + ಬಿಡು$_1$]

ತೊಡಕಂಬು (ನಾ). ಒಂದಂ ಬಗೆಯಂ ಬಾಣ,–ಸರಳಂ: ಸಿಲುಕಂಬು ತುದಿಮೊನೆಯು ಬೋಳಿ ತೊಡಕಂಬು . . . ದಡಿಮುಂಖ್ಯವಾದ ಕೈದುಗಳ ಪಿಡಿದು (ಸೌಂದಪು. ೦೪-೩೭). [ತೊಡಕು$_3$ (<ತೊಡಂಕು$_3$)+ಅಂಬು$_2$]

ತೊಡಕಾಲು 'ತೊಡಕುಗಾಲು' ನೋ.

ತೊಡಕಿಸು 'ತೊಡಗಿಸು$_1$' ನೋ.

ತೊಡಕು$_1$ 'ತೊಡಂಕು$_1$' ನೋ.

ತೊಡಕು$_2$ 'ತೊಡಂಕು$_2$' ನೋ.

ತೊಡಕು$_3$ 'ತೊಡಂಕು$_3$' ನೋ.

ತೊಡಕುಗಾಲು, ತೊಡಕಾಲು (ನಾ). ೧.=ತೊಡರುಗಾಲು. ೨. (ಆಲಂ) ಆಡಚಣೆ; ಅಡ್ಡಿ: ಪೂಜ್ಯ ಪೂಜಕ ಸಂಬಂಧದಲ್ಲಿ ವ್ಯತ್ಯಾಸವಾಗಿ . . . ಈ ಅಹಿಂಸಾಮತಗಳು ವೈದಿಕಪದ್ಧತಿಗೆ ತೊಡಕುಗಾಲಾಗಿ ನಿಂತಿತು (ಧಾರದ. ೨೮೪). **ತೊಡಕಾಲು**: ೨. ಆ ವೇದವ್ಯಾಸಾಚಾರಿ ಹಾಕಿದ್ದ ತೊಡಕಾಲು (ಹರಿಚ. ೩೬).

[ತೊಡಕು$_3$ (<ತೊಡಂಕು$_3$) + ಕಾಲು$_1$ (<ಕಾಲ್$_1$)]

ತೊಡಕುನೇಣು (ನಾ). (ಕಡೆಗೋಲಿಗೆ) ಸಂತ್ತುವ ಹಗ್ಗ; ಕಡೆಯುವ ಹಗ್ಗ: ಕಡಲನು ಕಡೆವುದಾ ಮಂದರಮಹಾದ್ರಿಯನಿಟ್ಟು ವಾಸುಗಿಯ ತೊಡಕುನೇಣಲಿ ಕಡದೊಡಮೃತವ ಪಡೆವಿರಹಿತರು ಬಱಿದೆ ದುಃಖಂಬಡುವರು (ನಿಘಾಗ. ೮-೬-೦೫).

[ತೊಡಕು$_3$ (<ತೊಡಂಕು$_3$) + ನೇಣು (<ನೇಣ್$_1$)]

ತೊಡಕುಬೇರು (ನಾ). ಹೆಣೆದಂಕೊಂಡ ಬೇರು; ಜಡೆಗಟ್ಟಿದ ಬೇರು: ಕಾಂಡದ ಕೆಳಭಾಗದಿಂದ ಹೊಸಹೊಸ ಬೇರುಗಳು ಬೆಳೆಯುತ್ತವೆ. ಈ ಬೇರುಗಳು ಭೂಮಿಯ ಮೇಲ್ಪದರುಗಳಲ್ಲಿಯೇ ಪಸರಿಸುತ್ತವೆ. ಇವುಗಳ ಗಾತ್ರ ಒಂದೇ. ಇಂತಹ ಬೇರುಗಳಿಗೆ ತೊಡಕುಬೇರಿನ ಸವಂಹವೆಂದು ಹೆಸರು (ಸಸ್ಯಶಾ. ೦೩).

[ತೊಡಕು$_3$ (<ತೊಡಂಕು$_3$) + ಬೇರು (<ಬೇರ್)]

ತೊಡಕುಮೆಳೆ (ನಾ). ದಟ್ಟವಾಗಿ ಹೆಣೆದುಕೊಂಡಿರುವ ಪೊದೆ,–ಪೊದರು: ಕುಹರದ ತೊಡಕುಮೆಳೆಗಳಲದ್ರಿಕೂಟದಲೆಡಬಲದ ತಪ್ಪಲಲಿ . . . ಅಡಗಿ ತೋಱುತ (ತೊರಠಾ. ೩-೮-೪೭).

[ತೊಡಕು$_3$ (<ತೊಡಂಕು$_3$) + ಮೆಳೆ]

ತೊಡಕುವಲೆ 'ತೊಡಂಕುವಲೆ' ನೋ.

ತೊಡಕುವಳೆ (ನಾ). ಸರಪಳಿಯ ಆಕಾರದ ಬಳೆ: ಕೊಡಲಿ ಮಾರಗತ್ತಿ ಬಲ್ಲೆಯಂ ಚಕ್ರ ಗಿರುಗಟಿ ತೊಡಕುವಳೆ ವಂಕಿ ಕಲ್ಲಮಣಿ ಪದ್ಮಮಣಿ ಪುತ್ರಜೀವಿಯು ಹುಲ್ಲುಮಣಿ ಪಟಿಕವಣಭೂಷಣಂ (ಗುರುಚಾ. ೩-೫೦).

[ತೊಡಕು$_3$ (<ತೊಡಂಕು$_3$) + ಬಳೆ$_3$]

ತೊಡಕುವೀಥಿ (ನಾ). ಅಡ್ಡಲಾಗಿ ಹಾಯಂಂವ ಬೀದಿ; ಅಡ್ಡಬೀದಿ: ಸಿಡಿದು ನೋಡಿದ ನಿಳಯನಿಳಯಂಗಳಲಿ ನಿಮಿಷದಲಿ ತೊಡಕುವೀಥಿಯ ಕೇರಿಕೇರಿಗಳೆಡೆಯೆಡೆಯ ಮನೆಮನೆಯ . . . ಕೋಟೆಯ ಸುತ್ತು ವಳಯದಲಿ (ತೊರಠಾ. ೫-೨-೦೫).

[ತೊಡಕು$_3$ (<ತೊಡಂಕು$_3$) + ವೀಥಿ]

ತೊಡಕೆ (ನಾ). ಗಾಡಿಯ ತೊಟ್ಟಿಲಂ; ಬಂಡಿಯ ಒಳಗಿನ ಖಾಲಿಜಾಗ: ಎಲವೋ ಕುನ್ನಿ ಕೂಳಿದೆ ತಿನ್ನು ಬಾಯೆನುತ ತೊಡಕೆಯಲಿ ಕಲು ಮುಳ್ಳು ತುಂಬಿಯೆ ಬಿಡದೆ ಬುತ್ತಿಯನೊಂದು ಕೈಯಲಿ ಹಿಡಿದು ಬಂದನು ದೈತ್ಯನಲ್ಲಿಗೆ ಭೀಮ ಬೇಗದಲಿ (ಕುಪ್ಯಾಅ. ೬೦೩. ೨೩-೬೬). [?]

ತೊಡಗಿಸು$_1$, ತೊಡಕಿಸಂ (ಕ್ರಿ). ೧. ತಗುಲಿಸು; ಸಿಕ್ಕಿಸು: ತಮ್ಮ ಜೀರ್ಣ ವಿಚಾರದ ಶೃಂಖಲೆಯನ್ನು ಅವರ ಕಾಲುಗಳಲ್ಲಿ ತೊಡಗಿಸುವ ಪಾಪವನ್ನು ಮಾಡಕೂಡದು (ಪ್ರಬಂಧ. ೧೧೬). ೨. ಹೂಡು; ಬಳಸಂ; ವಿನಿಯೋಗಿಸಂ: ನನ್ನ ಹತ್ತಿರ ಹೇರಳವಾಗಿ ಹಣವಿದೆ. ಅದನ್ನು ಯಾವ ಕಾರ್ಯದಲ್ಲಿಯೂ ತೊಡಗಿಸಿಲ್ಲ (ಪರಿಶೇ. ೩೦); ಒಮ್ಮೆ ಕರಗತವಾದ ಧನವನ್ನು ಸಂರಕ್ಷಿಸಿ, ವೃದ್ಧಿಗೊಳಿಸಿ, ಉದ್ದಿಮೆಯಲ್ಲಿ ತೊಡಗಿಸತಕ್ಕದ್ದು (ಮಿತವ್ಯ. ೧೦): ಇಷ್ಟೊಂದು ಹಣವನ್ನು ಇಂಥ ರತ್ನದಲ್ಲಿ ತೊಡಗಿಸುವುದು ರಾಯರಿಗೇನೂ ಕಷ್ಟದ ಕೆಲಸವಲ್ಲ (ರತ್ನಗೋ. ೨೮). **ತೊಡಕಿಸು**: ೧. ಆ ಕಂಬಗಳಿಗೆ ನಾಲ್ಕು ಬಂಗಾರದ ಸರ್ಪಳಿಗಳನ್ನು ತೊಡಕಿಸಿ ... ಜೋಲೆ ಬಿಟ್ಟಿದ್ದರು (ಮುಂಬಯಿ. ೩-೨೯೯); ರೈತನು ಆ ಹಲಿಗೆಯನ್ನು ಆ ದನದ ಕಣ್ಣಿಯಲ್ಲಿ ತೊಡಕಿಸದರಾಯಿತು, ಆ ದನ ಇದ್ದಲ್ಲಿಂದ ಓಡಿ ಬರುತ್ತಿತ್ತು (ಹಟ್ಟಿಬ. ೨೪). ೩. ಪ್ರತಿಭಟಿಸುವಂತೆ ಮಾಡಂ: ಮುಱಿವೆನೇ ಮುನಿದಿವರು ನೂರ್ವರು ತೊಱಿವರೆನ್ನನು ತೊಡಕಿಸುವೆನೇ ತಱಿದು ಬಿಸುಡುವರವರು ಕೌರವಶತಕವನು (ಕುಪ್ಯಾಸ. ೧೨-೬೯).

[ತೊಡಗು$_1$ (< ತೊಡಂಕು$_1$) + – ಇಸು$_3$]

ತೊಡಗಿಸು$_2$ (ಕ್ರಿ). ೧. ಆರಂಭಿಸಂ; ಮೊದಲುಮಾಡಂ: ಒಳ್ಳಿತಪ್ಪ ದಿವಸವಾರನಕ್ಷತ್ರಮುಹೂರ್ತದೊಳ್ ಸಿದ್ಧಾಂತಮಂ ತೊಡಗಿಸೆ (ವಡ್ಡಾರಾ. ೬-೧೩); ಸಕಲವಿದ್ಯಾಬೀಜಪುಂಜಂಗಳಂ ಮೊದಲ್ ತೊಡಗಿಸಿ ನಿರ್ಬಂಧದಿಂದವೋದಿಸುತ್ತುಂ (ಸುಕುಮಾ. ೨-೫೭ ವ); ಕುಮಾರರ್ಗೆ ಮುನಿಪತಿ ಚೌಲಕರ್ಮಂಗಳಂ ಮಾಡಿಸಿ ತೊಡಗಿಸಿದನಕ್ಷರಾಭ್ಯಾಸಮಂ (ಚೈಮಿಭಾ. ೦೯-೫೦). ೨. ಉಂಟುಮಾಡಂ; ಆಗಿಸಂ: ಕೆಡುಕು ತೊಡಗಿಸಲಿಳೆಯನುಡುಗಿಸಲಡಗಿ ನಡುಗಿಸಿ ನಗುವೆನು (ಕಎಪು. ೨೯-೮).

[ತೊಡಗು$_2$ (< ತೊಡಂಕು$_2$) + – ಇಸು$_3$]

ತೊಡಗು$_1$ 'ತೊಡಂಕು$_1$' ನೋ.

ತೊಡಗು$_2$ 'ತೊಡಂಕು$_2$' ನೋ.

ತೊಡಗು$_3$ 'ತೊಡಂಕು$_3$' ನೋ.

ತೊಡಗುಹ (ನಾ). ಆರಂಭ; ಕೈಕೊಳ್ಳುವಿಕೆ; "ಪ್ರಕ್ರಮಂ, ಆರಂಭ" (ನಾಚಿರಾ. ೯). [ತೊಡಗು$_2$ (<ತೊಡಂಕು$_2$) + – ಹ$_2$]

ತೊಡಚು 'ತೊಡರ್ಚು' ನೋ.

ತೊಡಪ (ನಾ). ಪೊರಕೆ; ಕಸಬರಿಗೆ: "ತೇವವಾದ ಹಡಗಿನ ಅಟ್ಟವನ್ನು ಅಥವಾ ಬೀದಿಯನ್ನು ಗುಡಿಸಲು ಉಪಯೋಗಿಸುವ, ರಬ್ಬರಿನ ಅಲಗನ್ನು ಉದ್ದವಾದ ಹಿಡಿಗೆ ಅಳವಡಿಸಿ ಮಾಡಿದ ಸಲಕರಣೆ: ರಬ್ಬರು-ಪೊರಕೆ, ತೊಡಪ" (Squeegee. ಇಂಕನಿ). 'ತೊಡೆಪ' ಪರಾ.

[ದೇ.ಕ ತಮಿ. ತುಟಪ್ಪ, ತುಟೈಪ್ಪ; ಮಲ. ತುಡೆಪ್ಪ]

ತೊಡಪು$_1$, ತೊಡಹು$_1$ (ಕ್ರಿ). ೧. ನಿವಾರಿಸು; ಕಳೆ: ಮೊಗದೊಳ್ ಮೊಗಮಿಟ್ಟೊಡನೌಂಕಿ ಶಂಕೆಯಂ ತೊಡಪಿ (ಚಿಕವಿ. ೬-೨೦೨). **ತೊಡಹು$_1$**: ೨. ಹಚ್ಚಿಕೊಳ್ಳು; ಅಂಟಿಕೊಳ್ಳು: ಇವ ಸಂಸಾರಧರ್ಮವ ತೊಡಹಿದವನಲ್ಲ (ಪೋಳಿಮಾ. ೧೮೮-೭೦೮). [ತೊಡೆ$_1$ + – ಪು$_1$]

ತೊಡಪು$_2$, ತಡಪು$_3$. ತಡುಪು, ತೊಡಹು$_2$, ತೊಡುಪು (ನಾ). ೧. ಆಭರಣ; ತೊಡಿಗೆ: ತೊಡಪಿನ ಸವಗ ಬಟ್ಟಿಲ ಠೌಳಿ ಮೈಜೋಡು ಪಿಡಿದ ಖಂಡೆಯ ... ರಂಜಿಸೆ ಬಂದರೊಡನೊಡ್ಡಿಯ ರಾವುತರು (ಕುರಾಸಾಂ. ೧೧-೨೩); ಭರದಾ ಉಡಿಗೆ ತೊಡಪುವುಲಿವಾ ಬಾವಲಿ ಧೀರಾ ಪುರುಷಹರಾಕ್ರಮನ ಕಂಡೆ (ತೀರ್ಥಮ. ೨೨೦-೩); ಯುಧಿಷ್ಠಿರನು ಮೊದಲಾದ ಕೌರವಕುಮಾರಕರು ... ಕೈಗಳಿಗೆ ತೊಡಪುಗಳನ್ನು ತೊಟ್ಟು (ಕೃಪಾಅ. ೨೫೦). ೨. ಒಂದು ಬಗೆಯ ಆಯುಧ: ದುಷ್ಟವಾದ ಮೃಗಗಳನ್ನು ಕೆಣಕಿ ಬೇಟೆಯಾಡುತ ... ತೊಡಪು, ಕಬ್ಬಿಣದೊಣ್ಣೆ, ಪಟ್ಟಾಕತ್ತಿ, ಒನಿಕೆ, ಭರಜಿ ಮೊದಲಾದ ನಾನಾವಿಧ ಆಯುಧಗಳಿಂದ ... ಕೊಲ್ಲುತ (ಕೃಪಾಅ. ೦೫೦). **ತಡಪು$_3$**: ೩. ದಟ್ಟಿ; ಲುಂಗಿ: ತ[ಪಾಠಾಂ. ಉ] ಡ [ಪಾಠಾಂ. ಡು]ಪನೊಂದಂ ನೆಯಿದುಕೊಟ್ಟಾದಡೆ ಮೃಡನ ಕೈಯಿಂದಲಿನ್ನುಂ ಪಡೆಯದೇಂ ದವಸವನು (ಬಸಪು. ೨೩-೩೭); ನಡೆದನಲ್ಲಿಂ ವಿಪ್ರ ಹೆಗಲಿನ ಹಡಪ ಸುತ್ತಿದ ತಡಪು ನೊಸಲಲಿ ಬಡಿದ ಮಟ್ಟಿಯ (ಯಾದವ. ೦೦-೨೦). **ತಡುಪು**: ೨. ತಡುಪು ಡೊಂಕಣಿ ಭಿಂಡಿವಾಳುಗ್ಗಡದ ಭೋಜವು ಚಕ್ರ ನಾನಾಘಡಬಡೆಯ ಕೈದುಗಳ ತಳಪಳವೆಸದುದಗಲದಲಿ (ಅಂಬಿಕಾ. ೦೯-೪೮). ೩. ತಲೆಗೆ ಬಟ್ಟೆ ಕಟ್ಟಿಕೊಂಡಿದ್ದ ಬಟ್ಟೆಯ ತರಹದ್ದೇ ಒಂದು ತಡುಪು ಸುತ್ತಿದ್ದ (ಜೆಂಗಾಳ್ವ. ೩೫೩). **ತೊಡಹು$_2$**: ೧. ಆತನ ಕರುಳವಾಲೆಯ ಎಡದ ಕೈಯಲಿ ಪಿಡಿದು ಕಂಠಕೆ ತೊಡಹು ಮಾಡ್ದ ನೃಸಿಂಹ (ಗಗತಾ. ೦೯-೨೮). **ತೊಡುಪು**: ೨. ಜಯಬಾಡಿ ಶ್ರುಂಗಾರ ತೊಡುಪೂ ಸಂಣ ಚಂದ್ರಾಯುಧಾ ಚಿಲುತಲಿ ಮೊದಲಾದಾ ಬತ್ತೀಶಾಯುಧಾ ಶಕ್ತಸಮರ್ತಕರಾದಾ (ಎಕ. XVI, ಗುಬ್ಬಿ: ೭೪-೨೦; ಸು. 1672). ೪. (?): ಬಿಲ್ಲ ಹೆದೆ ಹಱಿದು ಬಿಲ್ಲಿನ ಹೆದೆಯಕೊಪ್ಪು ಅಲ್ಲಲ್ಲಿಗೆ ತೊಡುಪು ಮೆಲ್ಲಗೆ ಇರಿಸಿದಡೆ ಅದಱಲ್ಲಿಯೆ ಸಿಕ್ಕಿತ್ತು (ಪೋಳಿಮಾ. ೦೮೬-೬೯೯).

[< ತೊಡು$_1$ + – ಪು$_2$./ತೆಲು. ತೊಡುಪು]

ತೊಡಪು$_3$ 'ತೊಡರ್ಪು' ನೋ.

ತೊಡಬೆ$_1$ 'ತೊಡಂಬೆ$_1$' ನೋ.

ತೊಡಬೆ$_2$ 'ತೊಡಂಬೆ$_2$' ನೋ.

ತೊಡಬೆಗಳಚು (ಕ್ರಿ). ೧. ತೊಟ್ಟನ್ನು ಕತ್ತರಿಸಂ,-ಬೇರೆಮಾಡಂ: ನುಡಿಗೆ ಮುಂಚುವ ಬಾಣ ಮಾರುತನಡಸಿ ಬೀಸುವ ಲಾಗ ತಲೆಗಳ ತೊಡಬೆಗಳಚುವ ಬೇಗವನು ಬಣ್ಣಿಸುವರೆನ್ನಳವೆ (ಕುಪ್ಯಾದ್ರೋ. ೦೮-೦೯). ೨. (ಆಲಂ) ಸಾಯು; ದೇಹತ್ಯಾಗ ಮಾಡಂ: ಛಾಯವಡೆದನು ಭೀಷ್ಮ ಬಳಿಕಿನೊಳಾಯುಧದ ಗುರು ತೊಡಬೆಗಳಚಿದನೀಯವಸ್ಥೆಗೆ ನಮ್ಮ ತಂದನು ಭಾನುನಂದನನು (ಕುಪ್ಯಾಕ. ೧-೦೩).

[ತೊಡಬೆ$_1$ (< ತೊಡಂಬೆ$_1$) ಕಳಚು (<ಕಟಲ್ಜು$_1$)]

ತೊಡಮೆ 'ತಡಮೆ' ನೋ.

ತೊಡರ್$_1$, ತುಡರು, ತುಡುರು, ತೊಡರು$_1$ (ಕ್ರಿ). ೧. ಸಿಱುಕು; ಸಿಕ್ಕಿಕೊಳ್ಳು; ತೊಡಕಿಕೊಳ್ಳು: ವಿಕಟಾಕ್ಷರಂಗಳೊಳ್ ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ... ವೇಟ್ಟುದು ನೀತಿ ನಿರಂತರ ಕ್ರಮಂ (ಕವಿರಾ. ೦-೧೪೯); ತೊಡರ್ದೀ ಪುತ್ರಕಲತ್ರಮೋಹದೊಳಿದೇ ಕಟ್ಟಿರ್ದಪೈ (ಆದಿಪು. ೦-೭೯); ಉಡೆನೂಲ್ ಸಡಿಲ್ದು ಮೇಗಾಲ್ದುಡಿಗೆಯ ಕುಸುರಿಯೊಳೆ ತೊಡರೆ (ಕಾದಂಕಾ. ೦೩೪); ನರಿ ತೊಡರ್ವಂತಿರಲೇಂ ಕೇಸರಿ ತೊಡರ್ಗುಮೆ ಬಲೆಯೊಳ್ (ಸಮಪ. ೧೨-೪೨); ತೊಡರ್ವೀ ಗಾಣದ ಗೂಳಿಯಂತೆ ತಿರಿಯುತ್ತಿಂತಿರ್ಪರೇ (ಅರ್ಧನೇ. ೩-೫); ತೊಡರ್ವ ನಿನ್ನಾವನರಿಷಡ್ವರ್ಗತತಿಗೆ (ಸಿದ್ಧರಾ. ೨-೪೦). ೨. ಸಿಕ್ಕಿಬೀಳುವಂತೆ ಮಾಡು; ಸಿಕ್ಕಿಸು; ತೊಡಕಿಸು: ನಾಗರಖಂಡಗಳನಾ ನಾಗರ ಖಂಡದೊಳೆ ತೊಡರೆ ನರನಿಸುವುದುಂ (ಪಂಪಭಾ. ೫-೮೯); ಪಿಡಿದು ದಧಿಯೆಂಬಾಸೆದೋಱಿಸಿ ಕೊಡುತ ಪುಷ್ಕರಣಕೆ ತಳುವನು ತೊಡರ್ದು ನಿಗ್ಗವದೆಡೆಯಲಂಘ್ರಿಗಳೆಡೆಯಲೆಲರಂತೆ ಒಡಲೆಡೆಯ ಲೊಲೆದಾಡೆ (ಸಾಕ್ಷಭಾ. ೦೬-೧೪). ೩. ಹೊಂದಿಕೊಳ್ಳು; ಕೂಡಿ

ಕೊಳ್ಳು ; ಸೇರು : ತಂಕಣಗಾಳಿಯೊಳಾದ ಸೊಂಕಿನೊಳ್ ನಡುಗುವ ಶೋಕವಲ್ಲರಿಯ ಪಲ್ಲವದೊಳ್ ನವಚೂತಪಲ್ಲವಂ ತೊಡರ್ದವೊಲಾಗೆ (ಪಂಪಭಾ. ೩-೭೫) ; ನುಡಿಯಂ ಕೇಳ್ದಾಯತ್ತದೊಳೊಡಂಬಡದು ನುಡಿವ ಪೊಳ್ನುಡಿಯೆ ಯೆರ್ದೆಯೊಳ್ ಮಾರ್ನುಡಿವ ನುಡಿಗಳೊಳಮೆಂತುಂ ತೊಡರ್ದುತ್ತರಿಸಿದ ನುಡಿಯೆ ಕರಂ ಬಲವಂತಂ (ಲೋಕೋಪ. ೦೨-೫೭) ; ಸಿರಿಸದ ಮಾಲೆಯೊಳ್ ತೊಡರ್ದ ನೆಯ್ದಿಲ ಮಾಲೆಯೊ (ಮಲ್ಲಿಪು. ೮-೦೦೭); ಮನದಿಂ ಜಾಣ್ನಡೆಗೊಳೆ ತೊಡರ್ದರಿನಿಯಕೂಟದೊಳಿನಿಯರ್ (ಚಂದ್ರಪು. ೮-೬೯) ; ಘನಪಾಂಸುಪಟಲದೊಳ್ ತೊಡರ್ದನಿಲಂ ಸುಟಿವಂತೆ (ಉದ್ಕಟ. ೧೦-೮೭); ಸರ್ವಾರ್ಥದ ಸಿದ್ಧಿಯೊಳ್ ತೊಡರ್ದು ಬೋಧಂ ಭವ್ಯಸಂಸೇವ್ಯಮಾಯ್ತು (ಪುಷ್ಪಪು. ೧-೨೪) ; ಕೋಪಾಟೋಪದಿ ನಿಂತೆಂದನೆನಗೆ ತೊಡರ್ದ ಕನ್ಯಾರತ್ನಮನೊಯ್ದು ಮನುಜಂ ಧರಿತ್ರಿಯೊಳೆಲ್ಲಿರ್ದಪನೆಂದು (ಕಾಮಕ. ೧-೪೪ ಪ). ೪. ಅಂಟಿಕೊಳ್ಳು ; ಹತ್ತಿಕೊಳ್ಳು : ತೊಡರ್ದುವು ಸಮುದ್ರದಿಂ ಪೊಱಮಡುವವಸರದಲ್ಲಿ ಮೌಕ್ತಿಕ ಪ್ರಕರ ಮೆನಲ್ ಕಡುಪಿಂದೆ ರೋಮರೋಮದೆ ಬಿಡದೆಸೆದುವು ಹರಿಗೆ ಬೆಮರ ಬಿಂದುಗಳಾಗಳ್ (ಕಾದಂಪೂ. ೪೫೫) ; ತದುಕಿನ ಮರದ ಮುಱಿಗಣ್ಣೊಳೊಗೆದ ಪಗಿನೊಳಗ್ಗಿವೆಗಡಿಂ ಕಾಲ್ದೊಡರ್ದು ಮಿಡುಕಿ ಕಳವಳಿಪ ಕಳವಿಂಕಸಂಕುಳಂಗಳುಂ (ಚಂದ್ರಪು. ೫-೬೫ ಪ). ೫. ಸುತ್ತಿಕೊಳ್ಳು ; ಬಳಸು : ನಿಗಳಂಬೋಲ್ ತೊಡರ್ದುದು (ಭಾಷಾಭೂ. ೧೭೫ ಉದಾ); ಕುಡಿದೊಡೆ ಪೊಟ್ಟೆಯಿಂದೆ ಬಟಿನೀರ್ ಪೊಱಪಾಯ್ವುವೆ ಸುತ್ತಿ ಕಾಲನೇಂ ತೊಡರ್ವುವೆ ದಾಂಟುವಲ್ಲಿ ನಿಱಿ (ಚಂದ್ರಪು. ೮-೬೦) : ಬೆಳ್ಪೆಡೆವಿಡಿದರ್ಪ ರೂಪ್ಯಮಯಶೃಂಖಲೆ ರಾಜಕುಮಾರನಂಘ್ರಿಯೊಳ್ ತೊಡರ್ದಿರೆ (ದಶಕು. ೭-೩೬) ; ತೊಡರ್ದಡರ್ದಲವರ್ಳ್ಳಿಗಳ ಮಂಟಪಂಗಳಿಂ . . . ತದ್ರಾಜಕೇಳೀವನಂ ಕಣ್ಗೆಸೆದುದು (ಚೈಮಿಭಾ. ೨೯-೪೫). ೬. ಬಂಧಿಸು ; ಕಟ್ಟು : "ತೊಡರ್-ಬಂಧನೇ" (ಶಮಧಾ) : ತನಯವಿಮೋಹಮೆಂಬ ನಿಗಳಂ ತೊಡರ್ದಿರ್ದಪುದು (ಸುಕುಮಾ. ೧೦-೩೨) ; ತದೀಯ ಶುಕದಿರವನು . . . ನೋಡಿ ತೊಡರ್ದ ಬಲೆಯಂ ಕಟಲ್ಚಿ ಕಡೆಗೆದೆಗೆದು ಮೆಲ್ಲನೆತ್ತಿತಂದು (ಉದ್ಕಟ. ೪-೦೨೬ ಪ) ; ತಮ್ಮನಿಯರ ತೊಡರ್ದ ತೆಕ್ಕೆಯನೊದ್ದು ನೂಂಕುತ (ಜಿಬಪು. ೧೯-೮). ೭. ಹೋರಾಡಲು ಬಿಡು ; ಕಾದಾಡಲು ತೊಡಗಿಸು ; ಎದುರಿಸುವಂತೆ ಮಾಡು : ತೊಡರ್ದು ಬಿಡಿಂ ಸುಯೋಧನನೆನ್ನುಮಂ (ಪಂಪಭಾ. ೦೩-೯೧) : ಇವರಂ ಕೌರವರ್ಗೆ ತೊಡರ್ದು ಬಿಡು (ಪಂಚತಂ. ೨೦೮-೧೬). ೮. ಎದುರಿಸು; ಪ್ರತಿಭಟಿಸು: "ತಳ್ಪೊಯ್, ತಡಂಬರೆ, ಪೋರ್ಕುಳಿ, ತೊಡರ್ದುದು . . . ತಡಂಬೊಯ್-ಈ ೨೫ ಪ್ರತಿಹತಕ್ಕೆ ಪೆಸರ್" (ಕಶಸಾ. ೫೯-೨೯೬) ; ತೊಡರದೆ ನೀಮುಮಾನೆಗಟ್ಟಿ ಪಾಂಡುವುವೊಂದಿಯೆ ಬಟ್ಟಿರೊಂದೊಡಂಬಡು ನಿಮಗಿಲ್ಲ (ಪಂಪಭಾ. ೦೩-೦೮) ; ತಮ್ಮ ತಕ್ಕಿನ ಮೂಱುಂ ತಕ್ಕುಗಳುಮನಡರಿಯುಂ ತೊಡರಿಯುಂ ನುಡಿದಂತೆ ತಂತಮ್ಮಾನೆಯೊಳ್ತನಮುಮಂ ಬಿನ್ನಣಮುಮಂ ಮೆಱೆದು (ಶಾಂತಿಪು. ೩-೨೭ ಪ) ; ಅರಸುಗೆಯ್ವಾತಂ ಶರಣೆನೆ ಕಾವುದು ಬೇಡಿದೊಡಿರದಿವುದು ತೊಡರೆ ಸೆಡೆಯದಿಱಿವುದು (ಪಂಚತಂ. ೨೫೪-೨) ; ಮೃಗಲಕ್ಷ್ಮನದೇನೆಂದೀ ನಗೆಮೊಗದೊಳ್ತೊಡರ್ವನೆಂದು ಹಾರಾಂಶುಗಳಿಂ ನಗುವಂತೆ (ಮಲ್ಲಿಪು. ೩-೬೭) ; ತೊಡರ್ದರಿಯಂ ಕೇಸರಿಯೊಳ್ ತೊಡರ್ದಿಭಮೆಂತಂತೆ ಮಾಡುವಂ ಭುಜಬಳದಿಂ (ಅರ್ಧನೇ. ೪-೦೦೧) ; ತೊಡರ್ದರಾಯರನೊರಸಿದಪೆನೆಂದು ನುಡಿನುಡಿದು (ಹಡಕಾ. ೧-೪೫) ; ಈರೇಳು ಲೋಕದಲಿ ತೊಡರ್ವರಾರ್ ನಿಮ್ಮಡಿಗಳೊಳು (ಬಸಪು. ೨೨-೪೧); ಹರಿಯ ಬಳಗಂ ತೊಡರೆ ಗರುಡನಿರದೋಡುವನೆ (ಜಿಬಪು. ೫೩-೪೭). ೯. ಅಡ್ಡಿ ಹೊಂದು; ನಿಲ್ಲು; ತಡೆ ಹೊಂದು: ರಜತಗಿರಿಗುಹಾದ್ವಯದೆಡೆಯೊಳ್ ಪೋಪಂದುಮಣಮೆ ತೊಡರದುದೀ ಪುರಗೋಪುರದೊಳೇಕೆ ತೊಡರ್ದುದೋ ಚಕ್ರಂ (ಆದಿಪು. ೦೪-೮). ೧೦. ಮುಟ್ಟು ; ಹಿಡಿ : ಗಾಳಿ ಸೋಂಕಿದತ್ತು ಪಿಶಾಚಂ ತೊಡರ್ದುದು ಭೂತಂ ಬನ್ನಂಬಡಿಸಿದುದೆನೆ ಸಿರಿಯೊಳರಸುಗಳ್ಮೆಯ್ಯಱಿಯರ್ (ಕಾದಂಪೂ. ೫೬೩). ೧೧. ಆವರಿಸು ; ವ್ಯಾಪಿಸು : ನೀಂ ತಡೆಯೆ ತೊಡರೆ ಮನದೊಳ್ ಚಿಂತೆ ಸಮಂತಿಂತು ಬಂದೆವೆನೆ (ನೇಮಿಪು. ೪-೦೦೨); ಕಾಲ್ ತಡತಡವರೆ ತೊಡರ್ದಳಿಪಿಂದೆಳಸಿ ನೋಟ್ಟ ಮೃಗಲೋಚನೆಯಂ (ಕಾಪ್ಯಾವ. ೬೨) : ಚಿಂತಾತುರಂ ತೊಡರ್ದಿರ್ಪಾ ವಿಜಯಾವತೀಸತಿಯ ದೀನಮ್ಲಾನವಕ್ತ್ರಾಬ್ಜಮಂ ಪೊಡವೀಶಂ ಪುಗುತುಂ ನಿರೀಕ್ಷಿಸಿ (ಕುಸುಮಾ. ೩-೩೬). ೧೨. ತೊಡಗು ; ನಿರತವಾಗು : ಮನಮನದೆ ಬಹುಪರಿಗ್ರಹವಿನೋದದೊಳ್ ತೊಡರ್ದ ಜಡರ್ಗೆ ಸಯ್ತಿರ್ದಪುದೆ (ಅಜಿಪು. ೨-೮೯) ; ಈ ಕಜ್ಜದೊಳ್ ನೀಂ ತೊಡರ್ದು ಮರುಳೆ ಬೆಂಡಾಗದಿರ್ಪೋಗು (ಗದಾಯು. ೯-೦೫) ; ಬಿಡದಾಡುವನಿತು ಪೊತ್ತುಂ ತೊಡರ್ದು ವಿಭಾವದೊಳೆ ಬಸನಿ ತನ್ನುಮನಱಿಯಂ (ಸಮಪ. ೬-೫೨) ; ನೀನಾದಿಕೂರ್ಮನಾದಂದಾನಱಿದೊಡೆ ಪಿಡಿದು ತಂದದಂ ಮತ್ಕ್ರೀಡೋದ್ಯಾನಸರೋವರಸಲಿಲಸ್ಥಾನದೊಳಿರಿಸುವವಿನೋದದೊಳ್ ತೊಡರ್ದಿರೆನೇ (ಜಗವಿ. ೦೭-೩೫). ೧೩. ಉಂಟಾಗು ; ಪ್ರಾಪ್ತವಾಗು : ನೀನೆನ್ನಂ ಕಾಡವೇಡಾಂ ತೊಡರ್ದವಸರದೊಳ್ ಪ್ರತ್ಯಯಂಗೆಯ್ದೆನೊರ್ವಂಗೇನುಂ ತಳ್ವಿಲ್ಲದಾನೀಗಳೆ ಚಟುಲತೆಯಿಂ ನಿನ್ನನೆಯ್ತರ್ಪೆಂ (ಸುಕುಮಾ. ೭-೨೧) ; ಮರಣದ ದಂದುಗಂ ತೊಡರದನ್ನೆ ಗಮರ್ಚಿಪುದರ್ಥಿಯಿಂ ಜಿನೇಶ್ವರನಂ (ಸಮಪ. ೧-೧೦೫) ; ಅಸ್ತ್ರಮಂ ತಿರಿಪಿದನುಗ್ರವೈರಿಗೆ ಭಯಂ ತೊಡರ್ವನ್ನೆವರಂ (ಜಗವಿ. ೦೨-೩೨) ; ಇನಿತಾನುಮಱಿಪಿದಳ್ ತೊಟ್ಟನೆ ಕುಸುಮಾವಳಿಗೆ ತೊಡರ್ದ ಮೂರ್ಛೆಯ ತೆಱನಂ (ಕುಸುಮಾ. ೦೨-೦೦೬) ; ಶಿವನಿಂ ಕಲಾಯೋಗಭೋಗ ತೊಡರ್ದ ಕರ್ಮಕ್ಷಯಂ ಮಲದ ಪರಿಪಾಕಮಂ ಪಡೆದು (ಪಾಸೋಪು. ೦೦-೦೪೦). ೧೪. ತತ್ತರಿಸು ; ತಡವರಿಸು : ನಡುಗಲ್ಕೆರ್ದೆ ಬೆಮರಲ್ ತನು ತೊಡರಲ್ ನಾಲಗೆ ತಗುಳ್ದುದಾ ಮಾರ್ಗಣದಿಂ (ಪಂಪಭಾ. ೦೨-೭೨) ; ತೊಡರೆ ಕೊದಳ್ ಪೊದಟ್ಟು ತುದಿನಾಲಗೆಯೊಳ್ . . . ತಡತಡಮೆಟ್ಟಿ ಪಾಡಿ ಪೊಸ ಕಳ್ಗಳನೀಂಟಿದುದಂಗನಾಜನಂ (ಸೂಕ್ತಿಸು. ೧೩-೭). ೧೫. ತಾಕು ; ಗೀರು ; ಗೀಚು : ಉಗುರ್ ತೊಡರ್ದಾಯೆಡೆ ರೇಖೆ ಪತ್ತಿ ಚೆಲ್ವಂ ತಳೆದಿರ್ಪುದು (ಚಂದ್ರಪು. ೮-೭೧). ೧೬. ತಂಗು ; ನಿಲ್ಲು : ಗಗನಗತಿಶ್ರಮಮಂ ನೆಟ್ಟಗೆ ಕಳೆವರ್ ಖಚರರದಱ[ರನ್ನದ]ನೆಗಳೋಳಿಗಳೊಳ್ ತೊಡರ್ದಿರ್ದು (ಕುಸುಮಾ. ೨-೭೭). ೧೭. ವಾದಿಸು; ವಿವಾದ ಮಾಡು: ವೇದಾಂತ ಸಿದ್ಧಾಂತ ಪ್ರಮಾಣ ಶಾಸ್ತ್ರಂಗಳನೋದಿ ತರ್ಕಿಸುವ ಪಂಡಿತರ್ಕಳೊಡನೆ ತೊಡರ್ದು ನುಡಿದು ಸದುತ್ತರಂಗುಡುತಿರ್ಪ ಶುಕಶಾರಿಕಾನಿಕಾಯಂಗಳುಮಂ (ಪಂಚತಂ. ೧೦೮-೭). ತುಡರು : ೧೮. ಆಕ್ಷೇಪಿಸು ; ತರಾಟೆಗೆ ತೆಗೆದುಕೊಳ್ಳು; ಜರಿ : ಅಣ್ಣ ಗಂಗಾಧರನನ್ನು ತುಡರಿ ಇದರ ಇತ್ಯರ್ಥಮಾಡಿಕೊಳ್ಳಬೇಕೆಂದು ಹಂಬಲಿಸಿದಳು(ಬೆವರಿ.೦೪೨); ನಾನು ಯಾವ ದೃಷ್ಟಿಯಿಂದ ಕಡಿಮೆಯೆಂದು ಈ ಅನಾಚಾರಕ್ಕೆಳಿದಿರಿ ಎಂದು ತುಡರುತ್ತೇನೆ (ಮುತ್ತೈಡಿ. ೨೭). ತುಡುರು : ೧೮. ಈಗೀಗ ಅವನು ಅವರನ್ನು ಒಮ್ಮೊಮ್ಮೆ ತುಡುರುತ್ತಿದ್ದನು (ಕವಲು. ೩೭); 'ದೇವರ ಗುಡಿಗಷ್ಟೇನು ಕಾಯಿಪಲ್ಲಾ ಕೊಡು ಹಾಂಗಿಲ್ಲೇನು' ಅಂತ ತುಡುರಿದೆ (ಮಿಂಚಿಹು. ೯೧): ಅವರನ್ನೆಲ್ಲ ತುಡುರಿ, ಅಸ್ತವ್ಯಸ್ತವಾಗಿ ಬಿದ್ದ ಸಾಮಾನುಗಳೆಲ್ಲವನ್ನು ಜೋಕೆಯಿಂದ ಒಳಗೆ ಇಡಿಸಿದನು (ಗ್ರಾಮಾಯ. ೩೦೬). ತೊಡರು$_1$: ೧. ಕರ್ಮವೆಂಬ ಅಂಕದೊಡನೆ ತೊಡರಿದೆ (ಬಸವ. ೬೯೯) ; ಆ ತೆಲುಗ ಬೊಮ್ಮಯನ ಶರನಿರ್ಘಾತಪಾತಕೆ ತೊಡರ್ದು ಮಡಿಯಲು (ಬಸಪು. ೩೪-೨೫) ; ತೇಜಿಯ ದಾಂಟಿಸಿದನಾಹ ತೊಡರರಭವನ ಶರಣರಾಚತುರ್ವಿಧ ಪದಕ್ಕೆಂಬಂದದಿಂ ತಪ್ಪುತೆ (ಭಾವಚಿಂ. ೮-೧೮) ; ನರದೊಳ್

ತೊಡರಿ ರಕ್ತದೊಳ್ ನನೆದು ಪೇರೆಲುಗಳುಮನೊದೆದು . . . ದೈತ್ಯ ಸೇನಾಭಟರ್ ತಲೆದಡವುತೋಡಿದರ್ (ಚಿಬಪು.೪೪-೪೪). ೨.ಕೈದುಗಳೊಳಿಱಿ ದೊಡೀಯೆತ್ತು ಗಡಣೆಗೊಳ್ಳದು ಬಹಳ ಪಾಶಂಗಳ ಬೀಸಿ ತೊಡರಿ ಕೆಡಪಲ್ ವೇಳ್ಕುಂ (ಚಿಬಪು. ೪೪-೧೩) ; ಭುಜಯು ಗ್ಮಮಂ ತೊಡರಿಕೊಂಡುಪ್ಪರಿಸಿ ನರಕೃಷ್ಣರಿರ್ವರಂ ಮಿಡುಕಲೀಯದೆ ಬಿಗಿದು (ಜೈಮಿಭಾ. ೨೫-೫೪). ೩. ಮಖಾರಿಯ ಸ್ಥಿರಪರದೈವದೊಳ್ ತೊಡರದಿಂತು ಬರ್ದುಂಕಿದೆನ್ನೆ(ಪಂಪಾಶ. ೨೩). ೫. ಬಿಡದೆಯಱಸುವ ಬಳ್ಳಿ ಕಾಲನು ತೊಡರಿತು (ಪ್ರಭುಲೀ. ೧೦-೨೪) ; ಪಲ್ಲವಿಸಿದ ನಿರ್ಜರವೃಕ್ಷವ ಕಲ್ಪವಲ್ಲಿಯ ತೊಡರಿಕೊಂಬಂತೆ (ಮೋಹತ. ೦೪-೮೩) ; ಬಿಡದಱಸಿ ತೊಳಲುತಿಹ ಬಳ್ಳಿ ತಾನೇ ಕಾಲ್ಗೆ ತೊಡರಲೇನೊಳ್ಳಿತಲ್ಲವೆ (ಚಿಬಪು. ೪೩-೧೪). ೬. ಕೊಡಹುವಂ ನರಮೃಗ ಶರೀರಿ ಚರಣಂಗಳಿಂ ತೊಡರುವಂ ಶರಭಾವತಾರಿ (ಚಿಬಪು. ೩೩-೨೧). ೮. ಐಯವೊಳೆಯ ಪುರಪರಮೇಶ್ವರರ್ ಕಲಹ ಸಂಪುಂನರಾಚಾರಗಲಿಗಳ್ ತೊಡರೆ ಬಲುಗಂಡರ್(ಕಇ. IV, ೫೫-೯; 1000?) ;ಕಣನೊಳಗೆ ತೊಡರಿದವರಿಗೆ ಬೆಂಗೊಡುವನಲ್ಲೆಂದುದುಗ್ಗಡವ ಕೇಳ್ಳೆ (ತ್ರಿಪುಸಾಂ. ೧೭೩) ; ರಾವುತರು ರಾವುತರನ್ನೂ ಕಾಲ್ಮಂದಿಯು ಕಾಲ್ಮಂದಿಯನ್ನೂ ತೊಡರಿಕೊಂಡು ...ಯುದ್ಧವನ್ನು ಮಾಡಿದರು (ಕೃಪಾವಿ. ೫೭). ೯. ತೊಡರಿಯುಡ್ಡಂಪಾರ್ವ ಜೀವಿಗಳೆಡೆಗುಪದ್ರವದಹುದೊ ತಾ ಪೋಪೆಡೆಯೊಳೆನುತಂ ಕೈಗಳಂ ತವೆ ಬೀಸದಿಹನಂತೆ (ಬಸಪು. ೩೮-೯) . ೧೧. ಹರಿಪದದಿಂದೊಗೆದ ರಜಂ [ಹರಿ] ಪದಮಂ ತೊಡರೆ ನಡೆದುದಾ ನೃಪಸೈನ್ಯಂ (ಕುಸುಮಾ. ೦೫-೮೫) ; ಗುಹೆಯೊಳ್ ಪ್ರತಿಧ್ವನಿಗುಡುತ್ತುಂ ನಿಮ್ನಗಾಸ್ಥಾನದೊಳ್ ತೊಡರುತ್ತುಂ . . . ತೀಡಿದುದೊಂದು ಘೋರಪವನಂ (ದಶಕು. ೫-೭೧); ಮಿಡಿವ ಮರುತನ ತಂಪು ತೊಡರುವಳಿಗಳ ಪೆಂಪು (ಪಂಕಾರಾ. ೨-೧೮-೧೧). ೧೨. ನಿಂದೆಯೊಳ್ ತೊಡರದೆ ಸರ್ವರುಂ ತನಗೆ ಕೆಯ್ಮುಗಿದಿರ್ಪತಿಭಾಗ್ಯದೊಳ್ಪುಮಂ ಪಡೆದವಳಾವಳೀಕೆಯವೊಲ್ (ದಶಕು. ೦೨-೮೫); ರಾಜ್ಯಕಾರ್ಯಗಳಲ್ಲಿ ತೊಡರುವುದರಿಂದ ಧರ್ಮವನ್ನು ಮಾತ್ರವೇ ಅಲ್ಲ ಅಧರ್ಮವನ್ನು ಕೂಡ ಮಾಡಬೇಕಾಗುವುದು (ಭೀಷ್ಮಕ. ೨೨೭). ೧೩. ಮನಕೆ ಲವಾಲಸಂ ತೊಡರದಂತೆ ವಿಚಿತ್ರವಿನೋದಕೋಟಿಯಂ ವಿನಯದಿನೊರ್ಮೆಯಿಂ ನೆಗಱುತುಂ (ಕುಸುಮಾ. ೬-೫) ; ಅನುಲೇಪನಂಗುಡುವ ವೀಳೆಯಮಂ ತೆಗೆದೀವ ದಂದುಗಂ ತೊಡರೆ ಮನಂಗೊಳಲ್ ನೆರೆದರಿಂದ್ರಲತಾಂಗಿಯರನ್ನವಾಸದೊಳ್ (ಪುಷ್ಪಪು. ೯-೮೭); ಏನಗೆ ಮತ್ತೀ ರೂಪು ತೊಡರಿದುದು ದೈವಯೋಗಾನುಗತಿಯಿಂದಕಟ (ಪಂಕಾರಾ. ೦-೧೮-೧೩). ೧೯. ಹಾಕಿ ಕೊಳ್ಳು; ಧರಿಸು ; ತೊಡು : ಬಿಡದುಟ್ಟ ಪಟ್ಟೆಯ ದಟ್ಟಿ ಕುಂಕುಮ ಗಾಸೆ ತೊಡರಿದ ದಿವ್ಯಭೂಷಣದ . . . ಸುಭಟರ ಗಡಣವೈತಂದುದರ್ತಿಯಲಿ (ಕಂನವಿ. ೨೩-೮೬).

ತೊಡಂತೊಡರ್ = ಒಟ್ಟುಗೂಡು; ಸೇರು : ನಡುಕಮುಮಟ್ಟಱುಂ ಬೆರಸಗಲ್ಕೆಯೊಳಿಂದಿನಿತೆಂಬವೊಲ್ತೊಡಂ[ಪಾಕಾಂ. ಲ್ತರಂ]ತೊಡರೆ (ಆದಿಪು. ೧೨-೨೭). **ತೊಡರ್ದರ ಗಾಣ, ತೊಡರ್ದರ ಗಾಳ** = ಪ್ರತಿಭಟಿಸುವವರಿಗೆ ಗಂಟಲ ಗಾಳದಂತಿರುವವನು; ಒಂದು ಬಿರುದು : ತೊಡರ್ದ್ದರ ಗಾಣ ಮಱಿಹೊಕ್ಕರೆ ಕಾವ ಕೂಟದ ನಾಯಕರ ಗಂಡ ಕಾಡನೂರ ಮಡಯ ನಾಯಕನ ಮಗ (ಎಕ. XII, ಗುಬ್ಬಿ. ೧೮-೩ ; 1366) ; ಕೊಡಗರ ಕೇತಂ ಪಡವಳರೆರೆಯಮ್ಮಂ ಮಿಕ್ಕದಾನಿ ಗಡಿಯರ ಸಿಂಗಂ ತೊಡರ್ದ್ದರ ಗಾಳಂ ಕೆಂಚಂ (ಸೌಇಇ. XI-II, ೦೩೩-೩೮ ; 1087). **ತೊಡರ್ದರ ಜವ** = ಪ್ರತಿಭಟಿಸುವವರ ಪಾಲಿಗೆ ಯಮನಂತಿರುವವನು ; ಎದುರಿಸಿದವರನ್ನು ನಾಶಮಾಡುವವನು ; ಒಂದು ಬಿರುದು : ಗಡಿಯಂಕಮಲ್ಲನೆನಿಪ್ಪ ತ್ರೊಡರ್ದರ ಜವನೆನಿಪರಾಶ್ರಿತರ್ಬ್ಬೇಡಿದಡಂ ಕುಡುವರ್ತ್ಥಿಗಂಡರೆನೆ ಪೆಸರ್ವ್ವಡೆದರ್ (ಕಇ. I, ೨೪-೧೨ ; 1143). **ತೊಡರ್ದರ ಡೊಂಕಿ, ತೊಡರ್ವರ ಡೊಂಕಿ** = ಪ್ರತಿಭಟಿಸುವವರಿಗೆ ಡೊಂಕಿಯಂತಿರುವವನು; ಒಂದು ಬಿರುದು : ಮಾನ್ಯಖೇಡಪುರವರಾಧೀಶ್ವರಂ ಚತುರ್ಮುಖ ದಾಯಿಗಗೊಂದಳಂ ಬಡಿವಂ ತೊಡರ್ದರ ಡೊಂಕಿಯದಳರಾದಿತ್ಯಂ (ಎಕ. XII, ತುಮಕೂ. ೯-೦೦ ; 1151) ; ಮಾದಿರಾಜವಿಭು ತೊಡರ್ವರ ಡೊಂಕಿಯೆನಿಪ್ಪ ಬಿರುದನಿರದೆತ್ತಿಸಿದಂ (ಮುಂಬರಾ. X, ೨೬೪-೨೭ ; 1229).

[ದೇ.॥ ತಮಿ. ತೊಟರ್, ತುಟರ್; ಮಲ. ತುಡರು; ತೆಲು. ತೊಡರು]

ತೊಡರ್$_2$, ತೊಡರು$_2$ (ನಾ). ೧. ಹೊಂದಿಕೆ ; ಸಂಬಂಧ ; ಸೇರುವುದು : (ಕಿ). ೨. ಕಟ್ಟು ; ಬಂಧನ : ಮೊದಲೊಳ್ಪಱಿದೈ ಸಂಸಾರದ ತೊಡರಂ ನಿಂದೆ ಮುಕ್ತಿಪದದೊಳ್ (ಕಾದಂಉ. ೭೦೯) ; ತೊಡರ್ದಿರ್ದ ಮೋಹಪಾಶದ ತೊಡರಂ ಪಱಿಪಡಿಸಿ ಬಿಡಿಸಿ (ಸುಕುಮಾ. ೮-೫೨); ತೀರ್ಥಕರರ್ ನಿರ್ವ್ಯಾಕುಳಮೊಲ್ಲರ್ ಮೋಹೋದ್ರೇಕವಿಹೀನರ್ಕಳಿಲ್ಲಿ ರಾಜ್ಯದ ತೊಡರಂ (ನೇಮಿಪು. ೧೩-೪೭); ಮುಂಗಡೆಯೊಳ್ ಪೊರಳ್ವ ಪೆಂಡಿರ ಕುರುಳೋಳಿಯೆಂಬ ತೊಡರೊಳ್ ತಡವಾಗದೆ . . . ಸಂತತಂ ವನಾಂತರಮನೆ ಗೊತ್ತುಮಾಡಿ ಭರದಿಂ ತಳರ್ದತ್ತಧಿರಾಜಕುಂಜರಂ (ಅನಂಪು. ೩-೧೦೪) ; ತೊಡರದಿರು ಮೋಹಪಾಶದ ತೊಡರಂ (ಜೀವಸಂ. ೨೭-೫೦). ೩. ಬೇಡಿ ; ಸಂಕೋಲೆ : ತೊಡರಂ ಪೊಸೆದು ಪಱಿವ ಮದಕರಿಯಂತೆ (ಶಾಂತಿಪು. ೮-೫೦ ವ); ತೊಡರ್ಪಱಿವ ವನ್ಯವಾರಣದ ಮಾಟ್ಕೆಯಿಂ (ಪಂರಾಮಾ. ೨-೨೦); ಪಡೆಯೆ ನವೀನಯೌವನಮನಾ ಸತಿ ತಾಳ್ವಳೆ ಚಿತ್ತಜಾತನುಂ ತೊಡರನತರ್ಕ್ಯನೀ ಜಗತಿಗಿಕ್ಕಿದನಾಕೆಯ ರೂಪಿನೇಟ್ಗೆ ಗಂಡೆಡರಿದನುರ್ಕಿನಿಂ ಹರಿಹರಾಂಬುಜವಿಷ್ಟರರ್ಗೆಂಬಿನಂ ಕರಂ ಗೆಡೆಗೊಳೆ ರೂಪು ತನ್ನ ಸುತೆಗೆ (ನೇಮಿಪು. ೯-೭೦) ; ತೊಡರ ಬಿಗಿ ಮದನಂಗೆ ಮದವನು ತೊಡೆ ವಸಂತನ ಮಾರುತಗೆ ಮಱುವಿಡಿಯನಿಕ್ಕು (ತೊರರಾ. ೩-೪-೧೮) ; ಆವ ಕೆಯ್ಯುಂ ಬಿಡಿಸಲ್ಕೆ ಬಾರದ ಬಿಱುಬೆಸೆದ ತೊಡರಿಂದೆ . . . ಬಿಗಿದವೆನ್ ನಿನ್ನನ್ (ಬದ್ಧಪ್ರ. ೨-೨). ೪. ತೊಡಕು; ಗೊಂದಲ; ಗೋಜು : ಮನದೊಳ್ತೊಡರಿಲ್ಲದಾಗಳುಂ ಪರಮಜಿನೇಂದ್ರಪಾದದೊಳೆ ಕಾಂಕ್ಷಿತನಪ್ಪುದು(ಧರ್ಮಾಮೃ. ೩-೨೮೦);ದಂದುಗದ ತೊಡರಱಿವ ಮನವನುತಂದು ವೈರಾಗ್ಯದೊಳು ಶ್ರೀಜಿನಮಂದಿರದೊಳು (ಆದಿಪ. ೪೧-೧). ೫. ಕಟ್ಟುವ ಸಾಧನ; ಹಗ್ಗ, ಸರಪಳಿ ಮುಂತಾದುವು: ವಸಂತಗೃಹ ಮಂಪೊಕ್ಕು ನಡುವಣೆಳಗೌಂಗಿನ ಬಾಳ್ಗಂಬದೊಳ್ ತೊಡರ್ಚಿದ ಲತೆಯ ತೊಡರ ತೂಗುಂಮಂಚದೊಳ್ . . . ಕುಳ್ಳಿರ್ದು (ಚಂದ್ರಪು. ೭-೯೫ ವ); ತಳಸಂಕಲೆಯ ತೊಡರಂಕಣಿಯ ಕೊಂಡೆಯ . . . ಬಲುವೊರಜೆಗಳ ಬಾರಸಂಕಲೆಗಳನು ಬಿಗಿದರು ಜೋಡಿಸಿದರುಬ್ಬರದ ಮದಗಜವ (ಕುಮ್ಯಾದ್ರೋ. ೩-೨). ೬. ಸ್ಪರ್ಧೆ; ಹುರುಡು; ಸವಾಲು ಹಾಕುವುದು: ಅತಿಕಾಮಿ ಚನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ ಎರಡಱಿಯದೆ ಕೂಡಿದೆನು (ಮಹಾದೇ. ಇ. ೭೦-೧೭೪). ೭. ಒಡವೆ ; ಆಭರಣ ; ಭೂಷಣ : ಸುರಯಿಯ ಚೊಲ್ಲೆಯಮುಂ . . . ಪೊಂಬಾದರಿಯ ಕಿಱುಮುಗುಳ ತೊಡರುಂ ಪರಿವಡೆದಿರೆ ಬಂದನಟ್ಟಿಯಿಂದೆ ಬಸಂತಂ (ಕಬ್ಬಿಕಾ. ೩೨೫). ೮. ಬಿರುದಿನ ಸಂಕೇತವಾಗಿ ಧರಿಸುವ ಕಾಲ ಬಳೆ ; ಬಿರುದಿನ ಪೆಂಡೆಯ : "ತೊಡರ್–ಬಂಧನೇ, ಬಿರುದ ಶೃಂಖಲಾಯಾಂಚ (ಬಿರುದಿನ ಸರಪಣಿ)" (ಶಮಧಾ); "ತೊಡರೆಂದೊಡಕ್ಕು ಬಿರಿದಿನ ಹಾಹೆ" (ಕಬ್ಬಿಕ್ಕೆ. ೬೬) ; ಬಿರುದಿನ ಅಂಕಮಾಲೆ ತೊಡರಿಕ್ಕಿದ ಕಾಲಲು ಗಂಡಪೆಂಡರಂ (ಸೌಇಇ. IX-I, ೨೭೬-೩೨ ; 1183) ; ಹೊಳೆಹೊಳೆವುತಿಪ್ಪ ಪೊಂಬಟ್ಟೆಯಂ ಬಿಗಿದುಟ್ಟು ಘುಳುಘುಳಿಪ ಹೊಸ ತೊಡರನೆಡಗಾಲೊಳೊಲಿದಿಟ್ಟು (ಇಹರ. ದೇ. ೪೦-೧೦); ಬಾವುಲಿಯ ಕಾಲ ತೊಡರ ಮಹಾವೀರರ್ ಚೂಣಿ ಬವರಮಂ ಕೆಣಕಲ್ (ದಶಕು. ೨-೧೬) ; ನಿಮ್ಮ ನೂರ್ವರ ಬಣಗುಗಳಿಗೆಡಗಾಲ ತೊಡರಿದೆ ಬನ್ನಿ ನೀವೆನುತ

(ಕುಮ್ಯಾಆ. ೬-೪); ಕಡುಸಡಗರಂ ಮಿಕ್ಕು . . . ಬಿರುದಿನ ತೊಡರ್ ಝಣ ಝಣಿಸಲೇಳ್ದು (ರಾಜಶೇ. ೬-೦೦ ವ). 'ಕಾಲ್ದೊಡರ್' ಪರಾ. ೯. ಅಡ್ಡಿ ; ಅಡಚಣೆ ; ತೊಂದರೆ : "ಪ್ರತಿಬಂಧದೊಳು ತೊಡರೆನಿಕ್ಕು" (ಕಶರ. ೧೨೪) ; ಜಯಕೇಶಿದೇವಮ[ಹಿ]ಪಂ ತಳದಂ ಮಾ[ನ]ನಿಧಿ ಸಕಳ ಧಾತ್ರಿಯನೇನುಂ ತೊಡರಿಲ್ಲ ತಂನ ದಕ್ಷಿಣಭುಜದೊಳು (ಕಇ. V, ೩೨-೦೦; 1215) ; ಈ ಮಖವನ್ನೈದೆ ನಡೆಸುವುದನ್ವಯಕ್ಕೆ ತೊಡರಪ್ಪುದು ವಿಚಾರದೊಳ್ಕೈಕೊಂಬುದು (ಚೈಮಿಭಾ. ೨-೬೨) ; ತೊಡರ್ಗಳನೆಲ್ಲ ಮುಂದೆ ಸರಿಗಯ್ವುದದು (ಕಾಲೂರ. ೧೬೮-೩೭೬). ೧೦. ವ್ಯಾಜ್ಯ ; ವಿವಾದ : ಸೀಮಾವಿವಾದದಿಂ ತದ್ಭೂವಿಂಜರೋರೊರ್ವರಂ ಪಳಂಚಲೆವೆಡೆಯೊಳ್ ಸೀಮೆಗಳ ತೊಡರನುಡುಗಿಸಿ ಸೀಮಂಕರನೆಂಬುದೊಂದು ಪೆಸರಂ ಪಡೆದಂ (ಆದಿಪು. ೬-೫೭). ೧೧. ಯುದ್ಧ ; ಜಗಳ ; ಕದನ : "ತೊಡರೆಂದೊಡೆ ತೋಟಿಯಕ್ಕುಂ" (ಭಾರನಿ. ೨೨). ೧೨. ವ್ಯವಹಾರ ; ಕೆಲಸ ; ಉದ್ಯೋಗ : ಅರ್ಥಿಸಂತತಿಗೀಯಲ್ ಬಿಡುವೊನ್ನುಮನಾಳ್ಗಟ್ಟುವ ತೊಡರೊಳ್ ತೊಡರ್ದಿರ್ದರರಸುಮಕ್ಕಳ್ಕೆಲಬರ್ (ಪಂಪಭಾ. ೦೦-೩೮). ತೊಡರು$_2$: ೩. ಷಟ್ಸಮಾಧಿಯನೊಂದಿರಲಿ ವಾಚಿಸಲಿ . . . ಕರ್ಮದ ತೊಡರ ಬಿಡಿಸುವುದು (ಗಗಾ. ೧೭-೫೩) ; ಎಳೆಹರೆಯದಲ್ಲೇ ಸಂಸಾರದ ತೊಡರನ್ನು ಹರಿದು . . . ಹೊರಟ ಈ ತೇಜಸ್ವಿನಿಯ ಏಕನಿಷ್ಠೆ ಹಿರಿಯ ಅನುಭಾವಿಗಳನ್ನೇ ಬೆರಗುಗೊಳಿಸಿತು (ಕಾವ್ಯಸ. ೧೦೨). ೪. ಭೀಮಫಲು ಗುಣರಿಟ್ಟ ತೊಡರಿನೊಳಾರು ಸಿಲುಕರು ದಿವಿಜದನುಜರಲಿ (ಕುಮ್ಯಾದ್ರೋ. ೧೮-೨೮); ೫. ಪ್ರದಕ್ಷಿಣಂಗೈದು ತೊಡರು ಕಾಡಣೆಯಂ ತೆಗೆಸಿ ಇಮ್ಮಡಿ ಘಂಟೇಂದ್ರ ನರೇಂದ್ರಂ ಹನುಮಗತಿಯಿಂದೇರಿದನು (ಬೀಳವಂ. ೦-೪೫ವ). 'ಕಾಡಣೆ' ಪರಾ. ೭. ಅನುಪಮಪ್ರಣವಮಂದುಗೆ ದಯೆಯೆ ತೊಡರು . . . ಚಿತ್ತಿನ ನೊಸಲುಗನ್ನಡಿಯೊಳೆಸೆದನು (ಸಿದ್ಧರಾ. ೩-೪೬); ಸಿರಿಯ ಸಡಗರದ ತೊಡರ ಝಣಝಣರವದ ಮೆಲ್ಲಡಿಯಿಡುವ ಗಮನದ ಭರದಿ ಕಿಱುಬೆಮರಿಡುತ ಬಂದಳು (ನಳಚ. ೩-೫೬); ಚಾಮೀಕರದ ತೊಡರಿನೊಳ್ವೆಳಗು ಪೊಂಬಿಸಿಲೆಸಕಮಾಗೆ (ನಂದಿಮಾ. ೯-೪). ೮. ಕಲಿಯ ಕಾಲ ತೊಡರು ಛಲದಾಳಿಗಲ್ಲದೆ ಇಕ್ಕಬಾರದು (ಬಸವ. ೬೬೫) ; ಬಾವುಲಿಯ ತೊಡರುಗಳ ವೀರಗಣಾವತಾರದ ವೀರಭಕ್ತರು (ಬಸಪು. ೫-೪೦) ; ತೊಡರ ತೆಗೆದರು ಕೈಯಡಾಯ್ದವ ಜಡಿಯಲಮ್ಮರು...ಕೈದೀವಿಗೆಯ ಮಱೆಯಲಿ ಮಿಡುಕದಿರ್ದುದು ರಾಯನೋಲಗದೊಳಗೆ ಪರಿವಾರ (ಕುಮ್ಯಾಕ. ೦-೦೮); ತೊಡರ ಝಣಝಣರವದ ಸುರರುಘ್ಘಡಣದ ಬಿರುದಿನ ಬಾವುಲಿಯ . . . ರಾಯರಕ್ಕಸನೈದಿದನು ಧನುವ (ತೊರರಾ. ೦-೫೫-೦೦) ; ಸೀಸಕದ ಪುಸ್ತಂಗ ತೊಡರೆಗಾವಳಿಯಿಂದ ಭೂಪೋತ್ತಮ ನಡೆದನುಬ್ಬಿನಲಿ (ಕಂನವಿ. ೧೫-೦೨). ೯. ಪಾಶ್ಚಾತ್ಯ ದರ್ಶನಕಾರರೂ ಎಷ್ಟೋ ತೊಡರುಗಳಿಗೆ ಗುರಿಯಾಗಿರುತ್ತಾರೆ (ಜೀವಾತ್ಮ. ೪೫). ೧೪. ಹೊಡೆತ ; ಪೆಟ್ಟು (?) : ಬಾಳ ಹೊಯ್ಲೋ ಸಿಡಿಲ ತೊಡರಿನ ಸೂಳುಗಳೋ ಸಿಡಿದಲೆಯ ಗಿರಿಗಳ ಬೀಳುಗಳೊ (ಕುಮ್ಯಾಸ. ೨-೦೦೪).

ತೊಡರ ಬಾವುಲಿ = ಬಿರುದಿನ ಪೆಂಡೆಯ: ತೊಡರ ಬಾವುಲಿಯೊಳಗೆ ಜವಿ ಹಲವು ದಂಡೆಯಿಂ ಗುರುಗಂಜಿಯಿಂ ಸಮೆದ ದಂಡೆ ಮಂಡೆಯೊಳೊಪ್ಪೆ (ಬಸರ. ೯-೯೮).

[<ತೊಡರ್$_1$./ತಮಿ. ತೊಟರ್, ತುಟರ್ ; ಮಲ. ತುಡರ್ ; ತುಳು. ತೊಡರ್, ತೊಡರು]

ತೊಡರಿಕ್ಕು (ಕ್ರಿ). ೧. ತೊಡಕಿಸು ; ತೊಂದರೆಯನ್ನುಂಟುಮಾಡಂ : ಎನಿತಾನುಮುಪದ್ರವಂಗಳೊಳ್ ತೊಡರಿಕ್ಕಿಯುಂ ಗೆಲಲಾಱದೆ (ಪಂಪಭಾ. ೨-೩೨ವ) ; ಅನ್ಯಮಂತ್ರಿನಿಕರಕ್ಕದಟಿಂ ತೊಡರಿಕ್ಕಿದಂ (ಎಕ. VIII, ಸೊರಬ. ೧೪೦-೫೪ ; 1193). ೨. ಹುರುಡಿಸು ; ಸವಾಲು ಹಾಕು ; ಸ್ಪರ್ಧಿಸು : ಸಾಯಿಸುವ ಸಾವಂಜಿತೆನಗೆ ಚಿರಾಯು ತೊಡರಿಕ್ಕಿದೆನು ಮಾರ್ಕಂಡೇಯಮುನಿಗೆಂದರಸ ದೊಪ್ಪನೆ ಕೆಡೆದನವನಿಯಲಿ (ಕುಮ್ಯಾಶ. ೦-೩). ೩. ಸಂಕೋಲೆ ಹಾಕು ; ಬಂಧಿಸು. [ತೊಡರ್$_2$ + ಇಕ್ಕು]

ತೊಡರಿಚು 'ತೊಡರ್ಚು' ನೋ.

ತೊಡರಿಸು (ಕ್ರಿ). ೧. ಸಿಕ್ಕಿಸು ; ತೊಡಕಿಸು : ಬಲದ ಕಡೆಯ ಮಿಣಿವಲೆಯನೊಡ್ಡಿ ತೊಡರಿಸಿ ಹಿಂದಣ ಬೇಟೆಯ ನಾಯ್ಗಳ ಕೆಡಹುವ ಮುಂದಣ ಬೇಡನು (ಶಿವಗೀ. ೬೫೩) ; ಕೂಟದ ತೋಟಿಯೊಳ್ ತೊಡರಿಸಿಯುಂ ಅಗಲ್ದ ಮನಮಂ ಮಣಿಯಿಸಿಯುಂ . . . ಸುಪ್ರಭಾತ ಸಮೀರಣಂ ತೀಡುತ್ತಿರೆ (ಲೀಲಾವ. ೩-೨೦) ; ಕಡೆಗಣ್ಣ ಪಾಶಮಂ ತೊಡರಿಸುತ (ಪಂಕಾರಾ. ೫-೬-೫೨). ೨. ಕೂಡಿಕೊಳ್ಳು ; ಸೇರು : ತೊಡರಿಸುತ ಕೊಡಹಿ ಕಳುಹುವ ಸೂಳೆಯನು ತೊಡಚುವವನೆಗ್ಗ (ಸರ್ವಜ್ಞ. ೦೯೩೭). ೩. ಸೇರಿಸು ; ಕೂಡಿಸಂ : ತೊಡರ್ಪಂ ತೊಡರಿಸುವ ನರಕಗತಿಯೊಳ್ ತೊಡರ್ವುದೆ (ಆಚಿಪು. ೨-೭೦) ; ನಿನಗೆ ಅಪಯಶಸ್ಸಿನ ಮೇಲೆ ಆಸೆಯಿದ್ದರೆ ನಮ್ಮ ಹೆಸರನ್ನೇಕೆ ಇದರಲ್ಲಿ ತೊಡರಿಸಿದೆ(ಮಧ್ಯಮ. ೨೦೦). ೪. ನಿಯವಿಂಸಂ; ನಿಯೋಜಿಸಂ : ಅತಿ ಭಟರಂ ತೊಡರಿಸಲವರತಿವೇಗದೆ ನಡೆತಂದಾ ಕಡಬದುಗ್ರವನಮಂ ಪೊಕ್ಕರ್ (ಹಾಲಾಸ್ಯ. ೧-೪-೬೩). ೫. ಪ್ರವರ್ತಿಸು ; ಉದ್ಯೋಗಿಸು : ಬಿಡದೆ ಸೋಂಕುವ ಕೈಗಳಾದಡೆ ತೊಡರಿಸು [ಪಾಠಾಂ. ಚು]ವ ಸತ್ಕ್ರಿಯೆಗಳೊಡನೊಡನುಡುಗೆ ಗದ್ಗದಕಂಠಸಂಗತಿಯಿಂದೆ ದನಿಗೊಡುವ (ಬಸಪು. ೩೫-೫). ೬. ಬಂಧಿಸು ; ಕಟ್ಟು.

[ತೊಡರ್$_1$ + – ಇಸು$_3$]

ತೊಡರು$_1$ 'ತೊಡರ್$_1$' ನೋ.

ತೊಡರು$_2$ 'ತೊಡರ್$_2$' ನೋ.

ತೊಡರು$_3$, ತೊದುರು (ನಾ). ಒಂದು ಬಗೆಯ ತೆರಿಗೆ : ಆನೆಯ ಸೇಸೆ ಗ ೨ ಪ ೬ ತೊಡರು ಹಾ ೧ ಖಾಣ ನಿಬಂಧ ಪ ೯ (ಎಕ. VI, ಕೆಡೂರು. ೬೮-೩೫ ; ?). ತೊದುರು: ಕಲುಕು ಹಾ ೨ ತೊದುರು ಗ ೪ ಆನೆಯ ಸೆ ಗ ೬ ಅ ೧ ಪ ೨ (ಎಕ. V, ಹಾಸನ. ೮೪-೬೪ ; ಸು. 1230). [?]

ತೊಡರುಗಟ್ಟು (ಕ್ರಿ). ಹುರಂಡಿಸು ; ಸ್ಪರ್ಧಿಸು : ತೊಡರುಗಟ್ಟುವ ಬೈವ ಭಟ್ಟರ ಬಿಡುವ ಕಾದುವ ವೀರಭಟರಿಂದಿಡಿದುದಮರಾವತಿಯ ಸೊಂಪಿನ ಸೂಳೆಗೇರಿಗಳು (ಕುಮ್ಯಾಭೀ. ೫-೨೦).[ತೊಡರು$_2$(<ತೊಡರ್$_2$) + ಕಟ್ಟು$_1$]

ತೊಡರುಗಾಲು (ನಾ). ೧. ಅಡ್ಡಲಾಗಿ ಒಡ್ಡುವ ಕಾಲು ; ಅಡ್ಡಗಾಲು: ಅವರು ನೂರೊಂದು ಜನವಿದ್ದರೂ ಅವನೊಬ್ಬನೇ ಎಲ್ಲರನ್ನೂ ಮರ್ದನ ಮಾಡಿಬಿಡುವನು. ತೊಡರುಗಾಲು ಕೊಟ್ಟು ಬೀಳಿಸುವನು (ವಜಭಾ. ೧೬). ೨. ನಡೆಯುವಾಗ ಹರಡುಗಳು ಪರಸ್ಪರ ತಗುಲುವ ಕಾಲು. ೩. (ಆಲಂ) ಅಡ್ಡಿ ; ಅಡಚಣೆ. 'ತೊಡಕುಗಾಲು' ಪರಾ.

[ತೊಡರು$_1$ (< ತೊಡರ್$_1$) + ಕಾಲು$_1$ (< ಕಾಲ್$_1$)]

ತೊಡರುಗೊಳ್ಳು (ಕ್ರಿ). ಬಿಗಿಯಾಗು ; ಬಿಗಿದುಕೊಳ್ಳು : ಅವಯವದ ಸಂದುಗಳೆಲ್ಲವೂ ತೊಡರುಗೊಂಡು . . . ಮಧ್ಯಮವಾದ ಜ್ವರವೇಗವುಂಟಾಗಿರುವುದೇ ವಾತಶ್ಲೇಷ್ಮಜ್ವರವೆನಿಸಿಕೊಳ್ಳುವುದು (ಸಕವೈ. ೯೫).

[ತೊಡರು$_2$ (< ತೊಡರ್$_2$) + ಕೊಳ್ಳು$_1$ (< ಕೊಳ್$_1$)]

ತೊಡರುಮುಳ್ಳು (ನಾ). ತೊಡಕಿ ಹಿಡಿದಂ ಕೊಳ್ಳುವ ಕೊಕ್ಕೆಯಂತಿರುವ ಮುಳ್ಳು : ತೊಡರುಮುಳ್ಳಿಗೆ ತಗುಲಿ ಬಟ್ಟೆಯೆಲ್ಲಾ ಹರಿದುಹೋಯಿತು (ರೂಢಿ).

[ತೊಡರು$_1$ (< ತೊಡರ್$_1$) + ಮುಳ್ಳು (< ಮುಳ್)]

ತೊಡರುಲಿ (ನಾ). ಆಭರಣದ ಧ್ವನಿ ; ಒಡವೆಯ ಸದ್ದು : ಮಾತೆಯ ಬಳಿಗೆ ಪರಿದೈದಿ ತೊಡರುಲಿಯೊಳು ಮಾಡುತ್ತೆ ಮುದ್ದ (ನವಮೋ. ೧೫-೫೮). [ತೊಡರು$_2$ (<ತೊಡರ್$_2$) + ಉಲಿ$_2$]

ತೊಡರ್ಚು, ತೊಡಚು, ತೊಡರಿಚು (ಕ್ರಿ). ೧. ಕಟ್ಟು; ಬಂಧಿಸು: "ತೊಡರ್ಚು – ಬಂಧನೇ" (ಶಮಧಾ); ತನ್ನ ನಿರ್ಭರಪ್ರಣಯಿನಿಗಳ ದೊಳೆ ತೊಡರ್ಚಿ ತಾಗಿದಳ್ (ಆದಿಪು. ೧೨-೩೬ ಪ); ದಾಮೋದರನಾಂ ಮತ್ತಿಯನೀ ಮುಱಿದಪೆನೆಂದದೊಂದು ಕುಜಮಂ ಕಾಂಚೀದಾಮದೆ ತೊಡರ್ಚಿ . . . ಮೆಱೆದಳ್ (ಜಗವಿ. ೫-೨೦); ತೊಡರ್ಚಿದ ತೊಡಕ ಬಿಡಿಸ ಪೋಗಿ ಕಪ್ಪಿನೊಳ್ಕಿಡದೊಲಾಯ್ತು (ಸೊಬಸೋ. ೨೦-೬೯); ಪಿಂಗಾಲ್ಗೆ ತೊಡರ್ಚಿದಗ್ಗರಣೆಯಂ ಛಟಛಟನೆ ಕೀಳ್ತು (ರಾಜಶೇ. ೬-೧೦ ಪ). ೨. ಸಿಕ್ಕಿಸು; ತೊಡಕಿಸು: ದೇವರೆನ್ನಂ ಧರಾಭರದೊಳ್ ತಂದು ತೊಡರ್ಚಿ ಪೂಣ್ದು ತಲೆಗೋದಿರ್ದುಂ (ಆದಿಪು. ೪-೮೧); ನಿಱಿಯ ಸೆಱಂಗನೆತ್ತಿ ನಿಜನೀವಿಯೊಳುಯ್ದು ತೊಡರ್ಚಿ (ಕುಸುಮಾ. ೬-೭೮). ೩. ಸೇರಿಸು; ಹೊಂದಿಸು; ಕೂಡಿಸು; ಜೋಡಿಸು: ತಡವಡಿಸಿ ಯತಿ ಯನಿಂತಿರೆ ತೊಡರ್ಚಿ ಕೆಡೆಪೇಟ್ಟೊಡಕ್ಕುಮದು ಯತಿಭಂಗಂ (ಕವಿರಾ. ೧-೭೩); ತಡೆಯದೆ ಭವ್ಯರನಱದೊಳ್ ತೊಡರ್ಚಿ ಕಯ್ಗೊಳಿಪ ಸರ್ವ ಯಶರಂ ನೀಂ ಕಂಡು (ಶಾಂತಿಪು. ೪-೬೭); ಮಾಂಗಾಯ ಫಲಾವಳಿ ಗಳೊಳಂ ತೊಡರ್ಚಿದ ಪುನ್ನಾಗದ ಸೂಸಕಂಗಳೊಳಂ . . . ಪೊಂಬಾ ಟೆಯ ಚಾಮರಂಗಳೊಳಮೆಸೆವ ಮಂಟಪಂಗಳ್ (ಕಾದಂಉ. ೭೮೩); ದೇವಾಂಗವಿತಾನಮಂ ತೊಡರ್ಚುವ ನವಮುಕ್ತಾವಳಿಯಂ ಕಟ್ಟುವ ದಿಗ್ದೇವಿಯರೇಂ ರಾಗರಸದೊಳೋಲಾಡಿದರೋ (ಮಲ್ಲಿಪು. ೧೪-೨೩೦); ತದೀಯ ಪಾಣಿಪಲ್ಲವಮನನುರೂಪ ಕನ್ಯಾಕರಕಿಸಲಯದೊಳ್ ತೊಡರ್ಚಲ್ ಬಗೆದು (ಅರ್ಧನೇ. ೨-೩೪ ಪ). ೪. ಧರಿಸುವಂತೆ ಮಾಡು; ತೊಡಿಸು: ಬೇಡವೇಡೆನೆಯುಂ ಕಿವಿಯೊಳ್ತೊಡರ್ಚಿ ಪೋದಳೀ ಕುಸುಮ ಮಂಜರಿಯಂ (ಕಾದಂಪೂ. ೭೭೮); ಒಲವಿಂ ಮಣಿನೂಪುರಮಂ ತೊಡರ್ಚಿದಳ್ (ಉದ್ಧಟಿ. ೮-೩೯); ಮೆಚ್ಚಿ ವಸುದೇವನ ಕೊರಳ್ಗೆ ತೊಡರ್ಚಿದಳು ನವರತ್ನಮಾಲೆಯ (ಸಾಳ್ವಭಾ. ೧೮-೩೬); ಘುಲ್ಲಶರನ ಪಲ್ಲವಶರಕ್ಕೆ ಕೆಂಗಱಿಗಟ್ಟಿದಂತೆ ಕೆಂಬೆಳಗಂ ಕಱೆವ ಕೆಂಬೆರಲುಂಗುರಮನಂ ಗುಲಿಯೊಳ್ತೊಡರ್ಚಿಯುಂ (ರಾಜಶೇ. ೧೩-೫೯ ಪ). ೫. ಮುಡಿಯುಂವಂತೆ ಮಾಡು; ಮುಡಿಸು: ಲಳನೆಯ ಕೇಶದಲ್ಲಿಯಲರುಂ ತಳಿರುಂ ಪೊಳೆವಂದ ದಿಂದೆ . . . ದೇಸೆಯ ಪೂಮಡಿಯಂ ತೊಡರ್ಚಿದರ್ (ಚಂದ್ರಪು. ೬-೬೪). ೬. ಪೋಣಿಸು; ಸರಕಟ್ಟು: ಧಾತ್ರೀಶನ ಸಾಂದ್ರಮನಸ್ಸೂತ್ರ ದೊಳಾ ಸತಿಯ ಗುಣಗಣೋದ್ಗಮತತಿಯಂ ಚಿತ್ರವಿಧದಿಂ ತೊಡರ್ಚಿದ ಧಾತ್ರಂ ಮುಂ ಮಾಲೆಗಾಱರೊಡನಾಡಿದನೋ (ಚಂದ್ರಪು. ೩-೨೮); ನಳಿನಗುಣದೊಳ್ ತೊಡರ್ಚುತುಂ ಮೆಲ್ಲಮೆಲ್ಲನಿರವಂತಿಯ ಪೂದೊಡಗೆ ಗಳಂ ವಿರಚಿಸಿದಳ್ (ಗಿರಿಕ. ೫-೭೨); ಮಲ್ಲಿಗೆ ಮುಗುಳ ಸೂಸಕಂಗಳಂ ತೊಡರ್ಚಿ ನಿಮಿರ್ಚಿದ ಚೂತಪಲ್ಲವದ ಚುಂಚುಲೋವೆಯಿಂ (ರಾಜಶೇ. ೧೦-೩೧ ಪ). ೭. ತೊಡಗಿಸು; ನಿಯೋಜಿಸು: ಕರ್ಣನಂ ದ್ವಂದ್ವ ಕಲಹದಿಂ ದೇವಾಂಗನಾ ರತಿಕಲಹದೊಳ್ ತೊಡರ್ಚಿ (ಜಗವಿ. ೧೫-೫ ಪ). ೮. ಉಂಟುಮಾಡು; ಆಗಿಸು: ಅಳೀಕ ಲಜ್ಜೆಯಿನೇಂ ನಿನಗೆ ಗಮನಾಯಾಸ ಮನೆ ತೊಡರ್ಚಿದಪ್ಪೆಂ (ಕಾದಂಉ. ೩೯೯); ಮತಿ ಸಮ್ಮೋಹಮನಿದಿರವರ್ಗೆ ತೊಡರ್ಚಲ್ವೇಟ್ಟೊಡಲ್ಲಿಗಲ್ಲದು ದೋಷಂ (ಕಾಪ್ಯಾವ. ೪೫೬); ವಿರಹಾತುಳಾಗ್ನಿ ತಾಪವನಿದನೆಂತು ನಂದಿಸುವೆನೇನನೊಡರ್ಚುವೆನಾವುದಂ ತೊಡರ್ಚುವೆಂ (ಕುಸುಮಾ. ೧೦-೨೩). ೯. ಆರಂಭಿಸು; ತೊಡಗು; ಪ್ರಾರಂಭಮಾಡು: ಮೆಯ್ಗಲಿತನದಿಂ ತೊಡರ್ಚಿದವು ಕಾಳೆಗಮಂ ಕಡುಕೆಯ್ದು ಕೋಟಿಗಳ್ (ದಶಕು. ೧೧-೫೦); ಕಳಲೆನಾಡೊಳೊಡರ್ಚಿ ತೊಡರ್ಚಿ ತೋಟಿಯಂ . . . ಬಂದ ಮಲೆನಾಡಿನ ಸಿಂಗಳರಾಯ (ಜಿಕವಿ. ೨-೬೮). ೧೦. (ಬಿಲ್ಲಿಗೆ ಬಾಣವನ್ನು) ಹೂಡು,–ಸಂಧಾನ ಮಾಡು,–ತೊಡು: ಮೆಲ್ಲನೆ ಬಿಲ್ಲೊಳಂಬಂ ತೊಡರ್ಚಿ (ನೇಮಿಪು. ೧-೭೫ಪ); ಬಿಲ್ಗೀಸುವ ಬಾಣಮಂ ತಿರುಪಿ ತಿರ್ದುವ ಮಾರ್ತಿರುಮಂ ತೊಡರ್ಚಿ ನೋಟ್ಟಾ ಸಹಜ ಕ್ರಿಯಾವನ ವನೇಚರರಿಂ ಬಗೆಗೊಂಡುದಾ ವನಂ (ಜಗವಿ. ೧೬-೦೬); ಹೊಸಮಸೆಯ ಬಾಣಂಗಳಂ ತೊಡರ್ಚಿ ಹೆಱೆದಲೆಯನಾತ್ಮ ಜನನೆಚ್ಚು ಮರಳೆಚ್ಚು ಬೊಬ್ಬಿಱಿದು ಕೈಯೊಡನೆಸೆಯೆ (ಜೆಬಪು. ೪೦-೦೨). **ತೊಡಚು**: ೧. ಸಿದ್ಧಪತಿಯೊಂದು ದಿನ . . . ಪದ್ಮಾಸನಂಗೆಯ್ದು ಶಶಿರವಿಗಳಂ ಬಲಿದು ಕರಣಂಗಳ ತೊಡಚಿ ಕುಂಡಲಿಗೊತ್ತಿ (ಸಿದ್ಧರಾ. ೪-೨೭); ಝಾಡಿಸುವ ತೆಗೆವ ತೊಡಚುವ ಪಿಡಿವ . . . ವಿರೋಧಿ ಯಿಂಗಿತವಱಿವ ಭಿನ್ನಣಂ ಹರನರರೊಳೆಸೆದಿರ್ದುದು (ಜೆಬಪು. ೫೩-೫೦). ೨. ಬಲಿದಂತಃಕುಂಡಲಿಯೊಳ್ ಪ್ರಾಣವ ತೊಡಚಿ . . . ನೆಗೆದಳ್ ಗಗನಾಂಗಣಕೆ (ವೀರೇಚ. ೦-೬೮); ವರಮಂದಿರದ ಮೇಲ್ವಲಗೆಯ ಕೊಂಡಿಗೆ ಸರಪಳಿಯನು ತೊಡಚಿದರು (ಮೋಹತ. ೧೭-೪೯). ೩. ಕಡಿಗಳ ಹದಿನೆಂಟನೊಡಗೂಡಿ ಸಂಧಿಸಿ ತೊಡಚಿ ಕಟ್ಟಿದೆ ನರರ ಬಂಧನದಲ್ಲಿ (ದೇದಾಪ. ೩೭-೭೨); ನೇಹದ ನಲ್ಲರ ತೋಳೊಳ್ ತೊಡಚಿದ ಬಾಹು ಲತಿಕೆದೆಗೆದೊಯ್ಯನೆ ಕುಲಟಾವ್ಯೂಹಂ ನಡೆತಂದುದು (ಜಯಕಾ. ೧೪-೨). ೬. ಮಾಲೆ ತೊಡಚುವ ಕಜ್ಜಮಂ ಮಱೆದು ನಿಬ್ಬೆಱಗುವಡೆದು ಲೆಪ್ಪದ ಪೆಣ್ಣಿನಂತಿರ್ದಳು (ಸೌಂದಪು. ೧೨-೪೦). ೯. ಖಗರಾಜನೊಳು ಹಿಂದೆ ಕಾದಿ ನುಗ್ಗೆದ್ದವರ್ ಜಗಳವ ತೊಡಚಲುಬಹುದೆ (ಮೋಹತ. ೩೯-೨೦). ೧೦. ಕಡೆಗಂಗಳೆನಿಪ ಬಾಣವನು ಭೂಚಾಪದಿಂ ತೊಡಚಿ ಎಸುವುದು (ಅಂಜಚ. ೩-೧೫೫); ಒಂದನಲ್ಲದೆ ನಿನ್ನ ತಲೆಗೆರಡಂಬ ತೊಡಚಿದರೆ ಇಂದು ನಿನ್ನಯ ಬಾಯ ತಂಬುಲ ತಿಂದವನು ನೋಡು (ಕುಪ್ಯಾದ್ರೋ. ೧೭-೩೮); ಎಚ್ಚ ಬಾಣವ ತಱಿದು ತೊಡಚಿದನುಚ್ಚಿ ತೋಮರದಂಬನು (ತೊರರಾ. ೩-೬-೫೫); ಸದ್ಭಾವವೆಂಬ ಬಿಲ್ಲಿಂಗೆ ಸುಮನವೆಂಬ ನಾರಿಯ ಹೂಡಿ ಸುಜ್ಞಾನವೆಂಬ ಅಂಬ ತೊಡಚಿ (ಮೋಳಿಮಾ. ೨೪೫-೭೯೬ ಟೀಕೆ). ೧೧. ಸೇರು; ಕೂಡು; ಹೊಂದು: ನಿಮ್ಮ ಗರ್ಭದೊಳು ತೊಡಚಿ ಏಳೇ ತಿಂಗಳಿಗೆ . . . ಉದಯಿಸುವನು (ಸಾಳ್ವಭಾ. ೨೦-೯೩); ತೊಡರಿಸುತ ಕೊಡಹಿ ಕಳುಹುವ ಸೂಳೆಯನು ತೊಡಚುವವನೆಗ್ಗ (ಸರ್ವಜ್ಞ. ೦೯೩೭). ೧೨. ಎದುರಿಸು; ವಿರೋಧಿಸು: ಕರ್ಣನ ನಾವು ತೊಡಚುವರಲ್ಲ ತೆರಳಿಚು ಪಾಳಯಕೆ ರಥವ (ಕುಪ್ಯಾಕ. ೦೪-೩೭) ತೊಡಚಬೇಡ ಕುರುವಂಶದ ಹೊದಱನು ಕಡಿವ ಕಠೋರವಿಕ್ರಮನ ಒಡನಳಿಗಲಿಗಳೆನುತ ಕೌಂತೇಯರ ಕಡೆಯ ಕಾಳೆಗಳೊದಱಿದುವು (ನೇಮಿಸಂ. ೨೯-೪೪). ೧೩. ಪ್ರಾಪ್ತವಾಗು; ಉಂಟಾಗು: ಆಗಲೀ ವೈಷ್ಣವಕೆ ನಮ್ಮಯ ತಾಗುಥಟ್ಟಿನ ರಕ್ಷೆ ತೊಡಚಿದುದಾಗಳಿದ್ದುದು ಪಾಶುಪತ ಶರವದಱ ಬಳಿವಿಡಿದು (ಕುಪ್ಯಾಅ. ೧೪-೧೦). **ತೊಡರಿಚು**: ೧೨. ಒಡನೆ ಬೊಬ್ಬಿಡುವನು ಮಹಾಹವ ತೊಡರಿಚುವರಿಲ್ಲಾ ಎನಂತ (ಕುಪ್ಯಾವಿ. ಓರಿಇ. ೪-೧೦).

ತೊಡರ್ಚಿಕೊಳ್, ತೊಡಚಿಕೊಳ್ = ೧. ಕಟ್ಟಿಕೊಳ್ಳು; ಬಂಧಿಸಿ ಕೊಳ್ಳು: ಆ ಕುನ್ನಿಗಳಂ ತಮ್ಮ ಶ್ರೋತ್ರನಾಳದೊಳ್ ತೊಡರ್ಚಿ ಕೊಂಬುದುಂ (ಪಂಚತಂ. ೨೦-೫). ೨. ಸಿಲುಕಿಸಿಕೊಳ್ಳು; ಸಿಕ್ಕಿಸಿಕೊಳ್ಳು: ಮಾಯಾ ಮೋಹನಂಗಳಲಿ ತೊಡಚಿಕೊಂಬ ಸಮಸ್ತವಸ್ತುವನಡಕಿಕೊಂಬ ವಿದಗ್ಧಮುಗ್ಧೆಯರು . . . ಎಸೆದರು (ತೊರರಾ. ೦-೫-೩೦). ೩. ಧರಿಸಿ ಕೊಳ್ಳು; ತೊಟ್ಟುಕೊಳ್ಳು: ಮ ನಿಯ ವೇಷವ ತೊಡಚಿಕೊಂಡಿಹ ಕಾಲನೇಮಿಪ್ಪಂತೆ ರಂಜಿಸಿದ (ತೊರರಾ. ೬-೩೬-೬೮).

[ತೊಡರ್$_1$ + – ಚು$_1$]

ತೊಡರ್ಚುವಲೆ (ನಾ). ಒಂದು ಬಗೆಯ ಬಲೆ: ತೊಡರ್ಚುವಲೆ ತೋಳು ವಲೆ ಮರೆವಲೆ ಸಗಾಢವಲೆಗಳ ಹೊರೆಗಳೋಳಿಯಂ ಪೊತ್ತು ನಡೆತಂದುದು . . . ಭೂತಗಣಂಗಳು (ಸೌಂದಪು. ೧೮-೩೯). [ತೊಡರ್ಚು + ಬಲೆ$_1$]

ತೊಡರ್ಪು, ತೊಡಪ್ಪು$_3$ (ನಾ). ೧. ಕಟ್ಟು ; ಬಂಧನ : ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಟ್ತೆ (ಪಂಪಭಾ. ೧-೮೨) ; ದಯಿತಾಸಂಬಂಧ ಬಂಧಂ ಭವಪರಿಣತಿ ತನ್ಮೂಲವಿಾ ಬೇವಸಂ ನಿಶ್ಚಯಮೆಂದಾತಂ ತೊಡರ್ಪಂ ಬಿಡಿಸಿ ಕಿಡಿಸಿ ದುರ್ಮೋಹಮಂ (ಶಾಂತಿಪು. ೯-೧೪) ; ಪರಿಜನಕ್ಕೆ ಡಱಾದೊಡೆ ಪೊರೆವುದುಂ ಪಡೆದುದಂ ಪಟ್ಟುಕುಡುವುದುಂ ತೊಡರ್ಪಾಗೆ ಬಿಡಿಸುವುದುಂ . . . ಉತ್ತಮಗುಣಂಗಳೊಳವು (ಪಂಚತಂ. ೨೯೪-೨) ; ಸುಕುಮಾರನ ಮೋಹಬಂಧದ ಬಳ್ಳಿವಳ್ಳಿಯ ತೊಡರ್ಪಂ ಪಱಿಪಡೆ ಬಿಡಿಸುವಂತೆ (ಸುಕುಮಾ. ೧೧-೩೮ ವ) ; ಮನದೊಳ್ಮುನ್ನಮೆ ರಾಜ್ಯವಲ್ಲಿಯ ತೊಡರ್ಪಂ ನಾಡೆಯುಂ ಬಿಟ್ಟು (ಶಾಂತೀಶ್ವ. ೧೩-೭೯). ೨. ಗೋಜು ; ತೊಡಕು ; ಗೊಂದಲ; ಸಿಕ್ಕು : ಮೋಹಬನ್ಧನದ ತೊಡರ್ಪಿನೊಳ್ತೊದಟ್ಟು ಮೋಹಿಸಿ (ಎಕ. VII, ಶಿಕಾರಿ. ೨೧೩-೨೪ ; 913) ; ಗಾಂಗೇಯಂ ದಾಶರಾಜನಲ್ಲಿಗೆ ವಂದಾತನ ಮನದ ತೊಡರ್ಪಂ ಪಿಂಗೆ ನುಡಿದು (ಪಂಪಭಾ. ೧-೭೨ ವ); ಪಾಪ ಬಂಧನದ ತೊಡರ್ಪಿದೆಂತು ಪಱಿಗುಂ ದಯೆಯಿಂ ಬೆಸಸಿಂ (ವರ್ಧಪು. ೧೨-೪). ೩. ಸಂಬಂಧ ; ಹೊಂದಿಕೆ : ಒಡಹುಟ್ಟಿಯುಮೊಡವಳೆದುಂ ಕಡೆಯೊಳ್ ನೀನೆನ್ನನಿಂತು ಕಂಡುಂ ಬಂದಿರ್ದೊಡೆಯುಡಿದೀ ನಮ್ಮಿರ್ವರ ತೊಡರ್ಪಿಂದಂ ನೀಂ ಪುನರ್ನವಂ ಮಾಡಿನ್ನುಂ (ಶಾಂತಿಪು. ೭-೧೦೪) ; ಇಂತು ಚಿಂತಿಸುವಂಗೆ ಬಾಹ್ಯವಸ್ತುಗಳೊಳ್ ತೊಡರ್ಪಿಲ್ಲ (ತತ್ತ್ವಪ. ೩೨೬). ೪. ಅಡ್ಡಿ ; ವಿರೋಧ : ಅರಸುಮಕ್ಕಳೆಲ್ಲರ್ ಬರೆ ನೀಂ ನಡುವೆಸೆದು ಬಾರದಾವುದು ತೊಡರ್ಪಿನಿಂ ಪೆಱಗೆ ನಿಂದೆಯೊರ್ವನೆ ಕಂದಾ (ಕಾದಂಉ. ೬೬೬) ; ತೂಳ್ದೆನ್ನ ತೊಡರ್ಪುದೋಱದಿನಿಸಂ ಮುನಿಸಂ ಮುನಿಸಾನದಂತೆ ಬಿಟ್ಟೆನ್ನಿರೆ ಕೀರ್ತಿಲಕ್ಷ್ಮಿ ಬಿಡುಗುಂ ಕಿಡುಗುಂ ಕಡುಪೆಂಪಿನೆಟ್ಟರಂ (ಪುಷ್ಪಪು. ೭-೬೮). ೫. ಆಭರಣ ; ತೊಡವು : ತೋಳ ತೊಡರ್ಪು ಕಣ್ಗೆಸೆಯೆ . . . ಬಾಜಿಸಿದಳ್ ಸುವಿಲಾಸೆ ವೀಣೆಯಂ (ಸೂಕ್ತಿಸು. ೫-೧೯); ಅಲಸುವ ಮೆಯ್ಯುಂ . . . ಚಿಗು [ಬಿಗು] ರೇಱುತಿರ್ಪ ಮೇಖಳೆಯ ತೊಡರ್ಪು ಕಣ್ಗೊಳಿಪ ಯಾನದ ಮೆಲ್ಪುಮಪೂರ್ವಭಾವಮಂ ಲಲನೆಗೆ ತಂದುವಂದನುದಿನಂ ಬಳೆಯುತ್ತಿರೆ ಗರ್ಭದರ್ಭಕಂ (ಪುಷ್ಪಪು. ೪-೧೫). ೬. (ಆಲಂ) ಅಪ್ಪುಗೆ; ಆಲಿಂಗನ : ಅಡಿಮುಡಿ ಸಂಚು ವಂಚನೆ ವಿಡಾಯಮಡರ್ಪು ತೊಡರ್ಪು ತೋಟ . . . ನುಸುಳ್ ಗಣಿಕಾಂಗನೆ ಯರ್ಗೆ ಶಾಶ್ವತಂ (ಪೃಷವಿ. ೨೮-೬೩). **ತೊಡಪ್ಪು$_3$** : ೩. ಆ ಮರದ ಶಾಖೆಯ ತೊಡಪಿಂದ ಆ ಮರದ ಫಲವ ಕೈಗೆ ತಾಹಂತೆ (ತುಱುಗಾ. ೩೭).

[ತೊಡರ್$_1$ + – ಪ್ಪು$_2$./ತಮಿ. ತೊಟರ್ಪು]

ತೊಡವ 'ತೋಡ$_2$' ನೋ.

ತೊಡವಣಿಕ (ನಾ). (ಕರಾ) ಚೊಚ್ಚಲು ಕರುವನ್ನು ಈದ ಎಮ್ಮೆ ,–ಹಸು : ತೊಡವಣಿಕ=ಮೊದಲ ಬಾರಿ ಕರು ಹಾಕಿರುವ ಹಸು ಅಥವಾ ಎಮ್ಮೆ (ಸಂಶೋಧ. ೧೭೮). [<ತೊಡಂಕು$_1$ + ಮಣಿಕ (<ಮಣಕ)]

ತೊಡವು (ನಾ). ೧. ಆಭರಣ ; ತೊಡಿಗೆ : "ಪ್ರತಿಕರ್ಮಂ ನೇಪಥ್ಯಂ ... ವಿಭೂಷಾಪ್ರತಾನವಾಭರಣಮೆಂಬವವು ತೊಡವಕ್ಕುಂ" (ವಸ್ತುಕೋ. ೭೫-೧) ; "ಪಚ್ಚಂ ತೊಡವುಂ ಪಸದನಮೆನಲಾಭರಣಂ" (ಕವಿಕಂ. ೧೭೮); ಈ ತೊಡವೇವುದೊ ರೂಪೆ ಸಾಲದೇ (ಪಂಪಭಾ. ೩-೪೬) ; ತೊಡವಿಂಗೆ ತೊಡವು ನಿರತಂ ತೊಡವೇಂ ಪೆಱತುಂಟೆ ಜಿನನ ತೊಡವೆನೆ ಮತ್ತಾ ತೊಡವೆಡ್ಡಮಪ್ಪ ರೂಪಿನ ಬೆಡಂಗು ಭೂಷಣವಿಶೇಷಮಂ ಬಾರಿಸದೇ (ಶಾಂತಿಪು. ೧೦-೫೭); ಕುಂತಳ ಭೂತಳಕ್ಕೆ ತೊಡವಾದುದು ತಾಂ ವನವಾಸಿ ದೇಶಂ (ಎಕ. VIII, ಸೊರಬ. ೨೬೨-೪ ; 1077) ; ಪೊಸಸುಗ್ಗಿಯ ತೊಡವು ಪೆಱತೆ ಮಲ್ಲಿಗೆಯೆ ಪೊಲಂ (ಮಲ್ಲಿಪು. ೫-೧೫) ; [ಉ]ಡೆವಣಿಯ ತೊಡವು ಘಲಘಲಿಸುವಂದುಗೆ (ಬಸರ. ೧-೧೫೫) ; ಚಂದ್ರಾನನೆ ತೊಡವಿನ ಪೆಟ್ಟಿಯ ನಾನಂದದಿನೀಯಲು (ದಶಕು. ೮-೯೮); ತೊಡವುಗಳ ತೊಡಕಿಲ್ಲದವಯವಂ (ಜೈಮಿಭಾ. ೧೮-೨೫). ೨. ಅಲಂಕಾರಪ್ರಾಯನಾದವನು ; ಶ್ರೇಷ್ಠನಾದವನು: ಎಲೆ ಭೂಪಾಲ ವಂಶದ ತೊಡವೆ ಮೆಚ್ಚಿದೆ ನಾನು (ನಿಭಾಗ. ೪-೯-೪೧). ೩. ಉಡುಪು : (ಕಿ).

ತೊಡವುಮಾಡು = ಆಭರಣವನ್ನಾಗಿ ಮಾಡು ; ಒಡವೆಯಾಗಿಸು: ಜವ್ವನಿಗಿನಿಯನಿತ್ತ ನಖರದಕ್ಷತಂಗಳನೆ ತೊಡವುಮಾಡಿ ಮೆಱೆವುದನವ ಳೊಡನಾಡಿ ನೋಡಿ (ಚಂದ್ರಪು. ೮-೫೫ ವ).

[ತೊಡು$_1$ + – ವು./ತೆಲು. ತೊಡವು]

ತೊಡವುಲಿ (ನಾ). ಆಭರಣಗಳಿಂದ ಉಂಟಾಗುವ ಧ್ವನಿ ; ಒಡವೆಗಳ ಶಬ್ದ : ಕಡೆಗಣ್ಗಳ ಹೊಳಹಿನ ಬಳ್ಳಿಮಿಂಚಿನ ತೊಡವುಲಿಗಳ ಘನರವದ ಮುಡಿಯ ಮುಂಗಾರ ಮೇಘದೆ ಸೋಗೆನವಿಲಾಟದಡವ ತೋಱಿದ ರಂಗನೆಯರು (ಕಂಪವಿ. ೮-೬೫). [ತೊಡ + ಉಲಿ$_2$]

ತೊಡವೆ (ನಾ). ಹೊಂದಿಕೊಂಡಿರುವವಳಂ ; ಸಹಚರಿ : ನಂಬಿದ ತೊಡವೆಯ ತಿಂಬರ್ಗೆ ನಡುವಪ್ಪಂ ಬಡಿಯೊಳಗಟ್ಟೊವವಗೆ ಇಂಬಿನ ನಂಟನ ಸತಿಗಳುಪಿರ್ದಗೆ ಕುಂಭಿನಿನರಕವಾದಪುದು (ತರ್ಕಕೌ. ೧೬-೫೬).

[← ತಮಿ. ತೊಟುವೈ]

ತೊಡವೆಳಗು (ನಾ). ಆಭರಣದ ಕಾಂತಿ,–ಬೆಳಗು : ತೊಳಪ ಮಾಣಿಕದ ಮುತ್ತಿನ ನೀಲದ ತೊಡವೆಳಗೆನಲೊಪ್ಪಿದವಾಗ (ಶ್ರೀಪಾಲ. ೪-೧೨೫) ; ಕತ್ತಿವೆಳಗು ತೊಡವೆಳಗುಗಳ್ ಮಾಡೆ ಬೆಳಗಂ (ಜಿಬಪು. ೫೦-೨೩) ; ತೊಡವೆಳಗಿಂದ್ರಚಾಪಲತೆ ಸೋರ್ಮುಡಿ ಕಾರ್ಮುಗಿಲು (ರಾಜಶೇ. ೧೩-೯೩).

[ತೊಡ + ಬೆಳಗು$_2$]

ತೊಡಹ$_1$ 'ತೊಡೆಪ' ನೋ.

ತೊಡಹ$_2$ (ನಾ). ೧. ತೊಡುವಿಕೆ ; ಧರಿಸುವಿಕೆ. ೨. ಉಡುಪು ; ಉಡುಗೆ : ಧೂರ್ತವೇಷದ ತೊಡಹವನು ತೊಟ್ಟಲ್ಲಮಪ್ರಭು ಬಂದು ನಿಂದಿರ್ದ (ಪ್ರಭುಲೀ. ೫-೭). ೩. ವೇಷ : ತೊಡು ಮಹಾಸ್ತ್ರವನಿವಗೆ ಕಪಟದ ತೊಡಹದವನಿವ ವಿಪ್ರನಲ್ಲಿವ (ತೊರರಾ. ೧-೧೧-೨೦).

[ತೊಡು$_1$ + – $_2$]

ತೊಡಹಗಾಱಿಕೆ (ನಾ). ನಯಗಾರಿಕೆ : ತೊಡಹಗಾಱಿಕೆಯೊಳಾ ಮಂತ್ರಿ ಯಾಡಿದ ಮಾತಿಗೊಡನಹುದಹುದೆಂದ ನಗುತ (ಧರಶ. ೨೦-೧೨೩).

[ತೊಡಹ$_1$ (<ತೊಡೆಪ) + – ಕಾಱ + – ಇಕೆ]

ತೊಡಹತರ್ (ಕ್ರಿ). ಸಮಾಧಾನಗೊಳ್ಳು ; ಅಂಕೆಯಲ್ಲಿಟ್ಟುಕೊಳ್ಳು : ತನ್ನೊಳು ತಾನೆ ತೊಡಹತಂದುಕೊಂಡನು ಮನವ (ತೊರರಾ. ೬-೨೬-೧೩).

[ತೊಡಹ$_1$ (<ತೊಡೆಪ) + ತರ್]

ತೊಡಹು$_1$ 'ತೊಡಪ್ಪು$_1$' ನೋ.

ತೊಡಹು$_2$ 'ತೊಡಪ್ಪು$_2$' ನೋ.

ತೊಡಹು$_3$ (ನಾ). ಲೇಪನ : ಮೃಡಪಿತಾಮಹಪೂಜೆಗಾ ಸತಿ ಹಿಡಿಹಿನಲಿ ಮನವರಳಿ ಮುದ್ರೆಯ ತೊಡಹು ಹೊಱಗೊಳಗಿಂದುಮುಖಿಯರ ನ್ಯಾಸ ಮುದ್ರೆಯಲಿ (ಕುಬ್ಯಾಅ. ಓರಿಇ. ೩೬-೮೪). [<ತೊಡಪ್ಪು$_1$]

ತೊಡಾಯ (ನಾ). (?) : ಚಿಕದೇವರಾಜ ಒಡೆಯರು ತಮ್ಮ ಸಾಮಾಜಿಕ ರೊಡನೆ ಆಲೋಚನೆಮಾಡಿ ೧೮ ಕಛೇರಿ ಎಂಬುದಾಗಿ ನಿಬಂಧನೆ ಮಾಡಿದರು ಯಾವವೆಂದರೆ ೧. ನಿರೂಪದ ಚಾವಡಿ , . . ೯. ತೊಡಾಯದ ಚಾವಡಿ (ಜಾಮವಂ. ೧೪೦) ; ತೊಡಾಯದ ಚಾವಡಿ–ಇದರಲ್ಲಿ ಪೊಮ್ಮಿನ ಐವಜನಲ್ಲಿ ಶ್ರೀರಂಗಪಟ್ಟಣದಲ್ಲಿ ಮಾತ್ರ ಅರ್ಧ ಐವಜು ತೆಗೆದುಕೊಳ್ಳುವಂತೆ ಕಟ್ಟು ಮಾಡಿದರು (ಮಹಾವಂ. I, ೧೪೮). [?]

ತೊಡಿ (ನಾ). ಕೈತೋಟ ; ಮನೆಯ ಮುಂದಿನ ಅಥವಾ ಹಿಂದಿನ ತೋಟ : ತಾಯಿ ಮತ್ತು ಮಗ ಅನ್ಯರ ಗದ್ದೆ ಮತ್ತು ತೊಡಿಗಳಲ್ಲಿ

ಗೇಯಬೇಕಾಯಿತು (ಹುಲಿಹಾ. ೪) ; ಅಂದಿನಿಂದ ಕೊಳುಂಬನು ಪಾಪನ ತೊಡಿಯಲ್ಲಿ ಕೆಲಸ ಮಾಡಲು ಬರಲಿಲ್ಲ (ಧೂಮಮ. ೪೦).

[ದೇ.॥ ತಮಿ. ತೊಟು ; ಮಲ. ತೊಟ್ಟಿ ; ಕೊಡ. ತೊಡಿಯ]

ತೊಡಿಕೆ 'ತುಡಿಕೆ' ನೋ.

ತೊಡಿಗೆ 'ತೊಡುಗೆ' ನೋ.

ತೊಡಿಲಿ. (?). (?) : ನಾವದಕ್ಕರಲ್ಲಿ ಅಳ ಅಳ ತೊಡಿಲಿ ಮು[ಲ]ಅಲ್ಲಳದ ಬೆಟಲಿ (ಸೌಇಎ. ೧೯೩೦, ಉಡುಪಿ. ೫೭೫-೨೭ ; ?). [?]

ತೊಡಿಸು, ತುಡಿಸು (ಕ್ರಿ). ೧. (ಆಭರಣ, ವಸ್ತ್ರ ಮೊದಲಾದುವನ್ನು) ಧರಿಸುವಂತೆ ಮಾಡು,–ಇಕ್ಕು : ತೊಡಿಸಿದನಾವನೀ ಕುಸುಮಂಜರಿಯಂ ನಿನಗೆ (ಕಾದಂಪೂ. ೭೯೨); ತರಿಸಿ ಬೊಂಬೆಯನೊಂದಂ . . . ಪೊನ್ನೋಲೆಯಂ ತೊಡಿಸಿ ಚೆಲ್ವನಪ್ಪ ಪೂಮಾಲೆಯಂ ಮುಡಿಯಿಸುತ್ತುಮರ್ತಿಯಿಂ (ಧರ್ಮಾಮೃ. ೩-೯) ; ಸೌಂದರಿಗೆ . . . ತೊಡವಂ ತತ್ತರುಣೀಮಣಿಯರೊಲ್ದು ತೊಡಿಸಿದರೊಲವಿಂ (ಉದ್ಯಟ. ೮-೬೫); ಶೋಭನಾರ್ಥಕ್ಕಾದಡಂ ಕೆಲವಾಭರಣಮಂ ತೊಡಿಸವೇಳ್ಕು ಮದೇಭಗಮನೆಗೆನುತ್ತ (ಬಸಪು. ೪-೩೩) ; ಸುರೇಶ್ವರನಿತ್ತ ಭೂಷಣವ . . . ನಕುಲಾದಿಗಳ ಮೈಯಲಿ ತೊಡಿಸಿದನು ಕೈಯಾರೆ ಕಲಿಪಾರ್ಥ (ಕುವ್ಯಾಅ. ೧೦-೨೪) ; ಚೈತ್ರದ ಚೆಂಗದಿರನು ಚೆಂಬಿಸಿಲ ಚೆಂದುಡುಗೆಯನು ವಿಂಧ್ಯೆಯ ಗಿರಿಶಿಖರಗಳಿಗೆ ತೊಡಿಸುತ್ತಿದ್ದಾನೆ (ಮಚಿಸ. ೧). ೨. ಅಳವಡಿಸು; ಜೋಡಿಸು : ಬಿಲ್ಲನು ಕೊಂಡು ತಿರುವನು ತೊಡಿಸಿ ತಳೆದನು ಒಲಿದು ಮಂಡಿಯಲಿ (ಸಂಭಪ. ೧೯-೩೧) ; ಪಾವಕಮಹಾಬಾಣಮಂ ತಿರುವಿನೊಳ್ತೊ [ಪಾಠಾಂ. ಳ್ತು]ಡಿಸಿ ಕಿವಿವರೆಗೆ ತೆಗೆದೆಚ್ಚೊಡೆ (ಜೈಮಿಭಾ. ೪-೩೬) ; ತುಡುಕಿ ಚಾಪವನೆಗಪಿ ಬಾಗಿಸಿ ತೊಡಿಸಿ ನಾರಿಯ ಠಂಕರಿಸಿ ಮುರಿದಿಡಲು (ಅನಂರಾ. ೧-೨೩-೩೨). ೩. ಹದಿ ; ಹೊಂದಿಸು ; ಕೂಡಿಸು : ಗಿಳಿ ಸೋಂಕದ ಮಾವಿನ ಪಣ್ಣಿನಂತೆ ಪೊನ್ ತೊಡಿಸದ ರತ್ನದಂತೆ (ಮಲ್ಲಕಾ. ೬-೬೦) ; ಒಡಲು . . . ತೊಗಲನು ತೊಡಿಸಿದೆಲುವಿನ ಜಂತ್ರ (ನಿಭಾಗ. ೭-೯-೪೪). ೪. ತೊಡಕಿಸು ; ತಗಲುಹಾಕು : ಕಡುಗಿ ಕೊರಳಲದಾರೊ ಪಾಶವ ತೊಡಿಸಿ ಕೆಳಯಿಂಕೆಳದ ದಾಡೆಯದಡಿಗರಾರೋ ಮರಳೆಬಿಡಿಸಿದ ಪುಣ್ಯತರರ್ (ನಿಭಾಗ. ೬-೨-೨೭) ; ಕೊರಳಿಗೆ ಕೋಳವನು ಬಲವಾಗಿ ತೊಡಿಸುವವೋಲು (ಅಮೃತ. ೦-೩೫). **ತುಡಿಸು** : ೧. ತುಡಿಸಿದನೆನಗಱಿಕೆಯಪ್ಪ ಮಣಿಭೂಷಣಮಂ (ಕವಿರಾ. ೩-೨೩೪) ; ಸುರಾಸುರೇಂದ್ರವಂದಿತಪಾದಂಗೆ ಮೃದುಪದಂಗಳೊಳ್ ಕಳರವರಣಿತ ನೂಪುರಂಗಳಂ ತುಡಿಸಿ (ಆದಿಪು. ೭-೧೦೫ ಪ) ; ಆ ಲಾವಣ್ಯವತಿಯ ಪದನಖಮಯೂಖಂಗಳಂ ಜಲಧಾರೆಗೆತ್ತುತ್ಕಂಠಂಗಳಾದ ಸೋಗೆಗಳ ಕೇಗುಗಳ್ಗಗಿದವಱ ಕೊರಲಂ ಬಿಗಿವಂತೆ ಕಯ್ಯಿಂದಮುರ್ಚುವ ಮಣಿಕಂಕಣಂಗಳಂ ತುಡಿಸುತ್ತಂ (ಕಾದಂಉ. ೨೦೨); ಕಡಗ ಕಂಕಣ ಹಾರ ನೂಪುರಮಾದಿ ಭೂಷಣರಾಜಿಯಂ ತುಡಿಸಿ (ಧರ್ಮಾಮೃ. ೮-೧೩೪); ತುಡಿಸಿದ ಬೇಗದೊಳಾ ಪೂದೊಡವನಿತುಂ ಕೊರಗಿ ಕಾಡೆಯುಂ ಶಿಖಿಮುಖಮಂ ತೊಡರ್ದಂತಾಯ್ತು (ಕುಸುಮಾ. ೧೦-೨೭) ; ಜನ್ಮಾಭಿಷೇಕಂ ಮಾಡಿ ತದನಂತರಮನೇಕ ಬಾಲದುಡಿಗೆಗಳಂ ತುಡಿಸಿ (ಪುಣ್ಯಾಸ್ರ. ೦೦-೧೭ ಪ) ; ರನ್ನದಾಭರಣಮಂ ತುಡಿಸಿ (ಸೌಂದಪು. ೩-೪೯). ೨. ಕೂರ್ಗಣೆಗಳಾಱಂ ಮತ್ತೆ ವಕ್ಷದೊಳ್ತುಡಿಸಿದಂ (ಜೈಮಿಭಾ. ೨೦-೩೦).

[ತೊಡು$_1$ + – ಇಸು$_3$]

ತೊಡು$_1$, ತುಡು$_1$ (ಕ್ರಿ). ತೊಟ್ಟ (ಭೂತಕೃ). ತೊಟ್ಟು$_1$ (ಭೂತನ್ಯೂ). ೧. (ಆಭರಣ, ವಸ್ತ್ರ ಮೊದಲಾದುವನ್ನು) ಧರಿಸು,–ಹಾಕಿಕೊಳ್ಳು : ಶೀತಕ್ಕಾಱದಳ್ಕಿ ತೊಟ್ಟಿರ್ದ ಧರಾತಳಮೆಂಬ ಪೆಣ್ಣ ಪೊಸ ಕಂಚುಳಿಕೆಯ ಸೀರ್ಮುತ್ತಿನಂದಮಾದುವು ಪನಿಗಳ್ (ಕಾವ್ಯಸಾ. ೬೯೪ ಶೂದ್ರಕ) ; ಪಿಂಡುಗಂಕಣಮಂ ತೊಟ್ಟ ಕೈಯಿಂದಂ ಪೊನ್ನ ಸಟ್ಟುಗಮಂ ತೀವಿ (ವಡ್ಡಾರಾ. ೮೯-೭) ; ತೊಟ್ಟೆಕ್ಕವಡಂ . . . ತೊಟ್ಟಂಗಿಗೆ ತನ್ನೊಳಮರೆ ಬೇಂಟೆಯನೊರ್ವಂ ಬಂದು (ಪಂಪಭಾ. ೫-೩೬) ; ಜವ್ವನಿಗ ತವಸಿ ತೊಟ್ಟಿರ್ಪ ಕರ್ಣಾವತಂಸಂ ಪೊಸತೀ ಲೋಕಕ್ಕೆ (ಕಾದಂಪೂ. ೭೬೦) ; ತೊಟ್ಟು ತೀವಿ ಬಳೆಯಂ ನಿಡುದೋಳ್ಗಳೊಳ್ (ಕಾವ್ಯಾವ. ೩೭೨) ; ನೀರ ಬೊಂಬೆಯ ಚೋಹವ ತೊಟ್ಟು ಅಗ್ನಿಯ ಬಣ್ಣದ ಹೊದಿಕೆಯ ಹೊದ್ದು (ಅವಡಂ. ೨೦೭-೯೩೧) ; ಪೊಸ ಮುತ್ತಂ ತೊಟ್ಟವೋಲ್ ಪೊಣ್ಮುವ ಬೆಮರ್ವನಿಯಿಂ (ಲೀಲಾವ. ೧೦-೪೭) ; ತೊಡುವಲ್ಲಿ ಪೊದೆವಲ್ಲಿ ಸಂಗ ಶರಣೆಂದೆನುತೆ (ಬಸರ. ೩-೧೩೬) ; ಇಟ್ಟರೆ ತೊಟ್ಟರೆ ಪುಟ್ಟಕ್ಕ ಚಂದ (ಗಾದೆ). ೨. ಪಡೆ ; ಹೊಂದು ; ತಳೆ : ಕಾಮದ ಕಳವಳದಲ್ಲಿ ಹುಟ್ಟಿ ಸಂಸಾರವ ತೊಟ್ಟು ಲಿಂಗಮುಖ ಭವನಱಿಯದವರೆಲ್ಲರು ಅಂತಿರಲಂತಿರಲಿ (ಸಮಾವ. ೫-೧೬); ತಿಳುಹಿ ಹೋದರು ಮುನಿಗಳೀತನ ತಿಳಿವು ತೊಟ್ಟುದು ಮಱವೆಯನು (ಕುವ್ಯಾದ್ರೋ. ೧೮-೬೪) ; ಕೊಂದೆನು ನಿನ್ನ ತಮ್ಮನ ದಹಿಸಿ ಲಂಕೆಯ ಬಳಿಕ ಮೌನವ ತೊಟ್ಟೆ ತಾನೆಂದ (ಕೌಶಿರಾ. ೨೮-೬೦) ; ತೆಗೆದ ಚಿತ್ರದ ನಟ್ಟ ನೋಟದ ಮೊಗದ ಭಾವದ ಭಕ್ತಿಯಂಗವ ತೊಟ್ಟನಲ್ಲಮನು (ಪ್ರಭುಲೀ. ೧೧-೩೪) ; ಮೆಟ್ಟಿಪ್ಪುದಾಸೆಯನು ಕಟ್ಟಿಪ್ಪುದಿಂದ್ರಿಯವ ತೊಟ್ಟಿಪ್ಪುದುಳ್ಳ ಸಮತೆಯನು (ಸರ್ವಜ್ಞ. ೩೦೬) ; ದೀಕ್ಷೆ ತೊಟ್ಟೆ ; ತಪದ ಕಠಿಣಕೆದೆಯ ಕೊಟ್ಟೆ (ಅನಿಕೇ. ೧೬-೧೯). ೩. ಮೊದಲಾಗು ; ಆರಂಭವಾಗು : ಪೂರ್ವಭವದೊಳ್ತೊಟ್ಟೊಂದು ವೃತ್ತಾಂತಮಂ ನೆಱೆಯಱಿದು (ಅದಿಪು. ೨-೬೬) ; ಎಮ್ಮೊಳಾದ ಕಲಹಕ್ಕೆಂತಾದೊಡಂ ಕೇಳ ನೂರ್ವರೆ ದಲ್ ಕೌರವರಾಮುಮಯ್ವರೆ ವಲಂ ಮತ್ತೊರ್ವರೊಳ್ ತೊಟ್ಟ ಸಂಗರರಂಗಕ್ಕೆ ಜಸಕ್ಕೆ ಕೂಡುವೆಡೆಯೊಳ್ ನೂಱಯ್ವರಾವಲ್ಲವೇ (ಪಂಪಭಾ. ೭-೩೬). ೪. ಮೊದಲು ಮಾಡು ; ಆರಂಭಿಸು : ಕ್ರಮಗಣನೆಗೆ ತಾನುಂ ಮಧ್ಯಮಪಾಂಡವನಾದನಹಿತನೊಳ್ತೊಟ್ಟ ಮಹಾಸಮರಕ್ಕೆ ನರಾಗ್ರಜನಗ್ರಿಮಪಾಂಡವನಲ್ತೆ ಪಗೆಗೆ ಮೊದಲಪ್ಪುದಱಿಂ (ಗದಾಯು. ೭-೬೩) ; ಬಿಲ್ಲ ಪಡೆ ತಾಗಿದುದು ಬೇಗದಿ ಚೆಲ್ಲಿದೊಡೆ ತನ್ನಡ್ಡಣಾಯ್ತರು ಕಾಳಗವ ತೊಡಲು (ಸಾಳ್ವಭಾ. ೧೯-೧೩). ೫. ಬಿಲ್ಲಿಗೆ ಬಾಣವನ್ನು ಹೂಡು ; ಶರಸಂಧಾನ ಮಾಡು : "ಕಣೆಯ ಸಂಧಾನದೊಳ್ ಪಚ್ಚದೊಳ್ ತೊಡು [ಪಾಠಾಂ. ತುಡು]ವದು" (ಕಬ್ಬಮಂ.೯೩) ; ಮುಂ ತೊಟ್ಟಂಬನದನುಗಿದು ಕುಂದಿಸಿದಂ ಭಯದಿಂ ಕರ್ಣನೆಂದು ಲೋಕಂ ನಗದೇ (ಪಂಪಭಾ. ೧೨-೧೯೯); "ತೊಟ್ಟಗುರಿಯಿಟ್ಟು ಹೂಡಿದ" (ಪಂಪದೀ. ೫೦೦) ; ತೊ [ಪಾಠಾಂ. ತು]ಡುವಾಗಳೊಂದು ಬಿಲ್ಲಿಂ ಬಿಡುವಾಗಳ್ ಲಕ್ಕ ವೈರಿಸೇನೆಯ ಮೆಯ್ಯೊಳ್ ನಡುವಾಗಳ್ ಕೋಟಿಯಪ್ಪುದು ಗಡ ಪಾರ್ಥನ ಬಾಣಂ (ಸಮಪ. ೧೦-೧೬೬) ; ತೊಟ್ಟನಿದಂ ನಿಟ್ಟಿಸಿದಂ ಬಿಟ್ಟನಿದೆಂಬೊಂದು ಬಿಲ್ಲ ಬಲ್ಮೆಯನಾರ್ಗಂ ದಿಟ್ಟಿಸುವುದರಿದು (ಕಬ್ಬಿಕಾ. ೧೭೧); ತೊಡು ಕೋಲಂ ಹರಿಣಂಗೆ ಹಾಸು ಬಲೆಯಂ ಕೋಕಂಗೆ (ಮಲ್ಲಕಾ. ೩-೨೭೩) ; ಆದೊಡೈವರ ಮಕ್ಕಳನು ತಲೆಗಾಯ್ದು ತೋಱೈ ಕಂದ . . . ಹೋದ ಬಾಣವ ಮರಳಿ ತೊಡದಿರು (ಕುವ್ಯಾಉ. ೦೦-೩೫) ; ತೊಡು ಮಹಾಸ್ತ್ರವನಿವಗೆ (ತೊರರಾ. ೧-೧೧-೨೦). ೬. ಉಂಟಾಗು ; ಹುಟ್ಟು : ನಿನ್ನೊಳ್ ತೊಟ್ಟೊಂದು ಭಕ್ತಿಯನಾದರಂಬೆರಸು ಪೆಱತೊಂ ದೇಮುಟ್ಟಾಮೊಲ್ಲೆಂ (ಶಾಂತಿಪು. ೧೦-೨೦) ; ಬಗೆಯೊಳ್ಬೇಟದ ಬೀಜಮಂ ತಳಿದು ನೀರ್ವೊಯ್ವಂದದಿಂ . . . ನೀರ್ವೊಯ್ವುದುಂ ಪಾಂಥರಾಕೆಗಳೊಳ್ತೊಟ್ಟೊಲವಿಂಗಲ್ತೆ ಬಱಿನೀರೆಂಬಂದದಿಂದೀಂಟಿ ದಿಟ್ಟಿಗಳಿಂದೀಂಟುವರಾ ಪ್ರಪಾಪ್ರಣಯಿನೀಲಾವಣ್ಯನೀರಂಗಳಂ (ಮಲ್ಲಿಪು. ೨-೨೯) ; ಹೊದಱಿನಲಿ ಮಿಗೆ ತೊಟ್ಟ ಕಬ್ಬೊಗೆ ಝುಗೆಯ ಹೊರಳಿಯ ಕಿಡಿಯ ಗಡಣದಲೆ ಹುಟ್ಟಿದುರಿ ಹೆಮ್ಮರನ ಸುತ್ತಲು ಕಟ್ಟಿತು (ಕುವ್ಯಾಅ. ೨೦-೫೫). ೭. ಪಡೆ ; ಹೊಂದು : ಈತನೊಳ್ ತೊಟ್ಟ ಕಿಂಕರ

ಭಾವಂ ನಮಗಕ್ಕೆಗೊಟ್ಟು ಮಡಗೂಟ್ಟುಂಬಂದಮಂ ಪೊ ೇ ಲ ದೆ ೇ (ಆದಿಪು. ೧೪-೩೫) ; ೮. ಸೇರು ; ಕೂಡು : ನಿಟ್ಟೆಯ್ದೆಯಾಗು ಪತಿಯೊಳ್ ತೊಟ್ಟನುವಶೆಯಾಗು ಶೀಲವತಿಯಾಗು ಚಿರಂ ನಿಟ್ಟಾಯುವಾಗು ನೀ ನೆಂದಿಟ್ಟರ್ ಸೇಸೆಯಂ (ಕಾವ್ಯಾಕ. ೩೩೩). **ತುಡು₁** : ೧. "ತುಡು – ಶರಸಂಧಾನೇ, ಭೂಷಣಾವರಣೇಚ (ಒ ಡ ವೆ ಯ ನ್ನು ಇಟ್ಟುಕೊ)" (ಶಪಥಾ) ; ಅನರ್ಘ್ಯಮಪ್ಪ ಮಾಣಿಕ್ಯದುಂಗುರಮಂ ಕಳೆದು ತನಗೆ ತುಡಲ್ಕೆಂದು ಕೊಟ್ಟೊಡೆ (ವಡ್ಡಾ.ರಾ. ೫-೨) ; ಇವು ರತ್ನಕುಂಡಲಂ ಜಿತರವಿಮಂಡಳಮಿವು ತುಡಲ್ಕೆ ಯೋಗ್ಯಮೆ ನಿನಗೆ (ಆದಿಪು. ೦೨-೦೦೪) ; ತುಡನೆ ಕವಚಮಂ ರಾಧೇಯಂ (ಪಂಪಭಾ. ೧೨-೦೦೯) ; ನಿಮ್ಮ ತುಡುವಾಭರಣಂಗಳಂ ಪಲವಮೂಲ್ಯ ವಸ್ತುಗಳಂ ತಂದು (ಪಂಚತಂ. ೧೦೨-೧೪) ; ಉಟ್ಟ ನವಾಂಬರಕ್ಕಮರೆ ಪೂದೊಡವಂ ತುಡುವೊಂದು ಕೌತುಕಂ ಪುಟ್ಟಿ (ಜಗವಿ. ೬-೧೨) ; ತಾರೆಗೆಯಂ ವಿದ್ಯಾಧರಿಯರ್ ಮುತ್ತೆಂದು ತೆಗೆದು ತುಡಲವ್ವಳಿಪರ್ (ಗಿರಿಕ. ೦-೫೪). ೪. "ತುಡು–ಶರಸಂಧಾನೇ, ಭೂಷಣಾವರಣೇಚ (ಒಡವೆಯನ್ನು ಇಟ್ಟುಕೊ)" (ಶಪಥಾ) ; ಮತ್ಸ್ಯಮೈಂದ್ರ ವಾರುಣ ವಾಯವ್ಯಾಗ್ನೇಯ ಪಾರ್ವತಾದಿ ಬಾಣಂಗಳಂ ತುಡೆ (ಪಂಪಭಾ. ೨-೭೬ ವ) ; ಸೀಳ್ನಾಯ್ಗಳಂ ಬಿಡು ಕೋಲಂ ತುಡು (ಕಾದಂಪೂ. ೧೫೯) ; ದೊಣೆಯಿಂದಂ ತೆಗೆವಾಗಳೊಂದು ತುಡುವಾಗಳ್ವತ್ತು ಬಾಣಂ (ಗದಾಯು. ೩-೩) ; ನೆನೆದು ನಿಜಜನನಿಗಿತ್ತುದನನುವರದೊಳ್ ದಿವ್ಯಬಾಣಮಂ ತುಡದುದನಾ ದಿನಪಸುತಂ ತುಡನೆ ಅವಂ (ನೇಮಿಪು. ೦೨-೦೭೨) ; ಕರುಣಿಸೆಲೆ ಶಬರ ತುಡದಿರು ಸರಲಂ ನೀಂ (ಕುಸುಮಾ. ೦೪-೪೨) ; ಬತ್ತಳಿಕೆಯಿಂದುಗಿವ ಸಮಯದೊಳಗೊಂದು ತುಡೆ ಪತ್ತು (ಚಾಪು. ೪೩-೦೭) ; ಪಿಡಿವಾಗಳೊಂದು; ಓಡಿಯಿಂ ಕುಡುವಾಗಳಿರಡು . . . ಪಂಚಾಯುಧನ ಪೊಸಮಸೆಯ ವಿಶಿಖಂಗಳ್ (ರಾಮಾಶ್ವ. ೫೮-೪೭).

ತೊಟ್ಟುವಾಯ್ = ಗುರಿಯಿಟ್ಟು ಮೇಲೆ ಬೀಳು : ಸ್ಫುರಿತ ಕೃಪಾಣಪಾಣಿಗಿದಿರಂ ನಡೆದಳ್ಕುಱಿ³ ತೊಟ್ಟುವಾಯ್ದು . . . ನೆಲಕಿಕ್ಕಿ ಪತ್ತಿ (ಪಂಪಭಾ. ೧೦-೦೦೪).

[ದೇ.ǁ ತಮಿ. ತೊಟು ; ಮಲ. ತೊಡು ; ತೆಲು. ತೊಡು, ತೊಡುಗು]

ತೊಡು₂, ತಂಡು₂ (ನಾ) : ಬಾಯಿಂಚಪಲ : ಮಗುವಿಗೆ ಮಳೆಗಾಲಕ್ಕೆ ತೊಡುವಿಗೇನಾದರೂ ಮಾಡು (ಪುರಂ. ೩೪೯) ; ಸಂಜೆ ಮಕ್ಕಳಿಗೆ ತೊಡುವಾಗಿಯೇ ಆಗುತ್ತದೆ (ಸ್ವಪ್ನಹೊ. ೧೦೩) ; ದೋಸೆ ತಿನ್ನುವ ಆಸೆಯಿಂದ ಇದ್ದ ಸೊಸೆಗೆ ದ್ರೋಹಮಾಡಿದ ಪಾಪ ನನ್ನದು . . . ಎಮ್ಮ ತೊಡುವಾಗಿತ್ತೋ ಅವಳಿಗೆ (ಪದ್ಮಸ. ೬೧). **ತುಡು₂** : ತುಡುವಾಗತ್ತೆ ಎಂದರೆ 'ತುಡುವಾಗತ್ತೆ ತುಡುವಾಗತ್ತೆ ತುಳಸಿನಾರಾಯಣ' ಎಂದು . . . ಕೋಡುಬಳೆ ರವವುಂಡೆಯನ್ನು . . . ಕೊಟ್ಟು ಕಳಿಸುತ್ತಿದ್ದಳು (ಪ್ರಶ್ನೆ. ೯೩) ; ಬೇಕು ಬೇಕಾದಾಗ, ತುಡು ಬಂದ ಕೂಡಲೆ, ಸಿಹಿ ತರಿಸಿ (ಕಂದ್ರಸೆ. ೪). [ದೇ.ǁ ತಮಿ. ತೊಟು = ತಿನ್ನು ; ತುಳು. ತೊಡು]

ತೊಡುಗೆ, ತುಡಿಗೆ, ತುಡುಗೆ, ತೊಡಿಗೆ (ನಾ). ೧. ಒಡವೆ ; ಆಭರಣ ; ಅಲಂಕಾರ : "ನೇಪಥ್ಯಮಾ ಭೂಷಣಮಲಂಕಾರಮಾಭರಣಮೆಂದೆನಲು ತೊಡು [ಪಾಠಾಂ. ಡಿ]ಗೆಗಭಿಧಾನಮಕ್ಕುಂ" (ಮಂಗರಾ. ೯೮-೧೦) ; "ಮಂಡನಂ, ಮಂಡನೀಯಂ, ಈ ೨ ತೊಡುಗೆ" (ಕಾಶಕ್ಕ. ೩೬೯). ೨. ಉಡುಪು : (ಪ್ರ). 'ಉಡುಗೆ' ಪರಾ. **ತುಡಿಗೆ** : ೧. ಪೊಸಮುತ್ತಿನ ತುಡಿಗೆ ಪೊದಟ್ಟಿಸೆಯೆ (ಪಂಪಭಾ. ೩-೬೮) ; ಬಳೆ ತುಡಿಗೆಯಾಗಿಯುಂ ಸರಿಗೆಯಲ್ಲದಂತೆ . . . ದೂರಭವ್ಯರಂ ಅಭವ್ಯರುಂ ಶ್ರಾವಕರಾಗಿಯುಂ . . . ಮೋಕ್ಷಗಾಮಿಗಳಲ್ಲರ್ (ಧರ್ಮಾಮೃ. ೧೧-೦೭೬) ; ವಾಸಂತಮತುಕಾಲ ಸಮಯ ಕುಸುಮವನಾ ವಿಳಾಸಿನೀಜನ ತು [ಪಾಠಾಂ. ತೊ]ಡಿಗೆಯಂ ಮಾಡಿ ತ ೦ದೊ ಲ್ದು ಭೂಸುದತಿವಲ್ಲಭಂಗೀಯಲು (ಹಜಕಾ. ೩-೪೮) ; ತುಡಿ [ಪಾಠಾಂ. ಡ, ಡು] ಗೆಯಂ ತೊಟ್ಟಂ ; ಪೂವಂ ಮುಡಿದಂ (ಕಮುದ. ೧೨೭ ಪ್ರಹೋ). 'ಕಿವಿದುಡಿಗೆ' ಪರಾ. **ತುಡುಗೆ** : ೧. "ಭೂಷಣಃ, ಅಳಂಕಾರಃ, ನೇವಥ್ಯಂ, ಆಭರಣಂ–ಈ ೪ ತುಡುಗೆ" (ಹಲಾಯು. ೪೯-೩೮೫) ; ಅನರ್ಘ್ಯಮಪ್ಪ ತುಡುಗೆಗಳುಮಂ ಬಟ್ಟಿವಟ್ಟಿ ಗೊಟ್ಟು (ವಡ್ಡಾ.ರಾ. ೦೫೦-೨) ; ತುಡಲ್ಕೆ ತುಡುಗೆಯನುಡಲ್ಕೆ ದಿವ್ಯಾಂಬರಮಂ . . . ಕುಡುವಮರಿ ಕಲ್ಪಲತೆಯನೆ ಪೋಲ್ತುಳ್ (ಆದಿಪು. ೭-೦೧) ; ರತ್ನದ ತುಡು [ಪಾಠಾಂ. ತೊಡಿ] ಗೆಯನಿತ್ತುಂ ಯತ್ನದೆ ರಕ್ಷಿಸುವನೆಂಬ ನುತ್ತಮಜೈನಂ (ಸಮಪ. ೫-೦೫೦) ; ಪೊದಲ ಯುಗಳದೊಳೆ ಸುದತಿಯರುದಯಿಪರ್ . . . ಮಹಿಗೆ ತುಡುಗೆಯೆನಿಸುವ ತೆಱದಿಂ (ಪಾರ್ಶ್ವಪು. ೫-೮೧) ; ತುಡು [ಪಾಠಾಂ. ಡಿ] ಗೆಯ ತೊಟ್ಟು ಪಟ್ಟಾವಳಿಯ ಮುಂಜೆಱಗುಟ್ಟು ಕುಳಿತಿರೆ (ಕಾಶಿಪ್ರ. ೪೪-೦೫). ೨. ತೊಡರ್ದಮರ್ದ ಬಾಳವಣ್ಣದ ತುಡುಗೆ ಪಳಂಚಲೆವ ಪಂಚಜಡೆ . . . ಚೆಲ್ವಿಡಿದಿರ್ದುದು (ಪಂಪಭಾ. ೨-೪) **ತೊಡಿಗೆ** : ೧. "ತೊಡಿಗೆ–ಅಲಂಕಾರ, ಆಭರಣ, ಪರಿಷ್ಕಾರ, ವಿಭೂಷಣ, ಮಂಡನೆ" (ನಾಚರಾ. ೪) ; ಮುತ್ತಿನ ತೊಡಿಗೆಗಳಂ ತೊಟ್ಟು ದರ್ಭಶಯನದೊಳಿರ್ದ್ (ಪಂಪಭಾ. ೦-೨೦೮ ವ) ; ತನ್ನ ತೊಟ್ಟ ತೊಡಿಗೆಗಳೆಲ್ಲವನ ನೆಗಂಗಚಿತ್ತವನಿತ್ತೆಂತಾನುಂ ಬೀಟ್ಕೊಳಿಸಿ ಕಟಿಪಿ (ಕಾದಂಕಾ. ೩೫೪) ; ಅಂತು ತೊಡಿಗೆಗಳಂ ಪುಲಿಯಿಂ ಪಡೆದು (ಪಂಚತಂ. ೧೧೦-೧೧) ; ನಿಮ್ಮ ಶರಣರ ಪಾದಕ್ಕೆ ತೊಡಿಗೆಯು ಮಾಡಿ ಸಲಹು (ಬಸವ. ೨೫೧) ; ಹಳದಿಯ ಉಡುಗೆ ಸವೆಯದೂದುವ ಕೊಳಲು ಮೈಯ ತವರದ ತೊಡಿಗೆ ಎಸೆವುತಿರೆ (ಬಸರ. ೯-೦೦೩) ; ಕೆಂಡದ ತೊಡಿಗೆಗೆ ಮನವಿಟ್ಟರಗಿನ ಪೃತ್ಥಳಿಯೆಂತಂತೆ (ವೀರೇಚ. ೦-೨೦) ; ತೊಡಿಗೆಗಳೆಲ್ಲವಂ ತೊಡುವಳ್ (ಸೂಕ್ತಿಸು. ೦೩-೨೯) ; ತೊಡಿಗೆಗಳು ಥಳಥಳಿಸೆ ಕಡೆಗಂಗಳ ಬೆಳಗು ಹೊಳೆಯೆ (ಬಸಪು. ೫-೩೮).

[ತೊಡು₁ + – ಗೆ]

ತೊಡುಗೊರೆ (ನಾ). ಉಡುಗೊರೆ; ಬಳುವಳಿ: (ಪ್ರ). ☞ ಸಾಮಾನ್ಯವಾಗಿ ಈ ಪದ 'ಉಡುಗೊರೆ' ಎಂಬ ಪದದೊಡನೆ ಬರುತ್ತದೆ.

[ತೊಡು₁ + ಕೊರೆ₇ (< ಕೊಟಿ³]

ತೊಡುಪು 'ತೊಡಪು₂' ನೋ.

ತೊಡುವಡ್ಡಿ (ನಾ). ೧. ಹಣವನ್ನು ತೊಡಗಿಸುವುದರಿಂದ ಬರುವ ಬಡ್ಡಿ. ೨. ಚಕ್ರಬಡ್ಡಿ : ಧನುಮಾಸದ ತಿಂಗಳವೊಂದರ ನಿತ್ಯೋತ್ಸವದ ರಂಗವೂಜೆ ಬೀಜವೊಂನ ತೊಡುವಡ್ಡಿಂದ ನಡವಂತಾಗಿ (ಎಕ. XV, ಕೇಲೂಹು. ೪೮೮-೪ ; 1297).

[<ತೊಡಗು₁ + ಬಡ್ಡಿ₂. / ತಮಿ. ತೊಟವರ್ಟ್ಟಿ]

ತೊಡುವಿಲ್ (ನಾ). ಒಂದಂ ಬಗೆಯ ಬಿಲ್ಲು: ತೊಡುವಿ[ಪಾಠಾಂ. ತೊಡುಬಿ, ತೋಡುವಿ]ಲ್ಲಂಬು ತರಕಸ ಬಲ್ಲಿಯ ಜೋಡಬೇಡೆಯ ಸವಗ ಸೀಸಕದ ಗಾಡಿ ಕೈಮಿಗೆ ಪೊ ಱ ವಂ ಟ ರು ರಾವುತರಂ (ಕುಣಾಸಾ. ೦೧-೦೬).

[ತೊಡು₁ + ಬಿಲ್₂]

ತೊಡೆ₁ (ಕ್ರ). ೧. ಲೇಪಿಸಂ ; ಬಳಿ ; ಪೂಸು ; ಸವರು ; ಹಚ್ಚು : ಮನ್ಮಥೋತ್ಸವಾಭಿಮುಖ ಮುಖಚಂದ್ರನಂ ಚಂದ್ರಕವಳದಿಂ ತೊಡೆದು (ಆದಿಪು. ೪-೪೦ ವ) ; ಕುಡಿ ಮುಜಿರಿದಿರ್ದೊಡಂ . . . ಆಯೆಡೆಯೊಳ್ ಬಿಸಿಯಪ್ಪ ತುಪ್ಪಮಂ ತೊಡೆದು (ಶೋಕೋಪ. ೬-೦೩) ; ಒಪ್ಪವ ನುಡಿವರಯ್ಯಾ ತುಪ್ಪವ ತೊಡೆದಂತೆ (ಬಸವ. ೭೭೫) ; ತೊಡೆದ ಭಸಿತಂ ಧೂಮವಿಡೆ ಮೈಯ ರೋಮ ಕೌಱಿಡೆ . . . ಕೌಶಿಕಂ ಮುನಿದನು ವಸಿಷ್ಠಮುನಿಗೆ (ಹಜಕಾ. ೩-೩೩) ; ಮಂತ್ರಿಸಿದ ಸುರುಚಿರಭಸಿತವಂ ತಳಿದು ತಾಂ ತೊಡೆಯಲ್ಕೆ (ಬಸಪು. ೪೯-೩೯) ; ಆದ ಮೈಗಂಡಿಯೊಳು ರಕುತವ ಶೋಧಿಸುತ ಹಳದುಪ್ಪವನು ತೊಡೆದಾದರಿಸಿದುದು ವೈದ್ಯಸಂತತಿ ವೀರ ಭಟರುಗಳ (ಕುಬ್ಜಾಭೀ. ೩-೪೦); ಕಡುಮೊರ್ಖನಾದರೇನು ದುಷ್ಕರ್ಮದಿಂ

ತೊಡೆದಾತನಾದರೇನು (ಪುರಂದ. ೦-೧೪೩-೧). ೨. ತೀಡಂ; ಸೋಕು: ಪರಿತಂದಾಗಳ್ ಚಂಚುವಿಂ ತೊಡೆದು ಮೆಯ್ಯಂ (ಕುಸುಮಾ. ೦-೫೩); ಪುಗಿಲುಪುಗಿಲೆಂದುಡೆಯ ತೊಡೆಯುತಿರೆ ತಂಗಾಳಿ (ಕಾಲೂರ. ೬೦-೯೯). ೩. ಒರಸು: ತದೀಯಪಾದಪಲ್ಲವಂಗಳನಾನಂದಾಶ್ರುಮಿಶ್ರಿತಜಳಂಗಳೊಳ್ ತೊಳೆದುಂ ನಿಜೋತ್ತರೀಯ ಪಲ್ಲವಂಗಳೊಳ್ ತೊಡೆದುಂ (ಆದಿಪು. ೫-೪೬ ಪ); ಜಳದಿಂದೆ ಕರ್ಚಿ ವಲ್ಕಾಂಚಲದಿಂ ನಿಜವದನದಿಂಬಮಂ ಸತಿ ತೊಡೆದಳ್ (ಕಾದಂಪೂ. ೭೦೨); ಅರಿಚರಣಪಾಂಸು ಪತ್ತಿರೆ ಶರೀರಮಂ ತೊಡೆದು ಕಳೆದೆ ವಸ್ತ್ರಾಂಚಲದಿಂ (ಗದಾಯು. ೯-೨೭); ನನೆಯುಂಬಂ ತಾವರೆವೂವಿನ ಕೈಪೊಡೆಯಿಂ ಮನೋಭವಂ ತೊಡೆವವೊಲಾ ವನಿತೆಯ ಸಬಾಷ್ಪಲೋಚನಮನವನಿಪತಿ ಶೋಣಪಾಣಿತಳದಿಂ ತೊಡೆದಂ (ಮಲ್ಲಿಪು. ೪-೧೬); ಕಣ್ಬನಿಯಂ ತನ್ನ ಕರಾಗ್ರದಿಂದೆ ತೊಡೆದಂ ವಿಶ್ವಂಭರೋರ್ವೀಶ್ವರಂ (ಕುಸುಮಾ. ೩-೪೯); ಬಾಷ್ಪೋದಕಬಿಂದುಸಂದೋಹಮಂ ತೊಡೆದು ನಿನ್ನ ದುಃಖಕ್ಕೆ ಕಾರಣವೇನೆನುತ್ತ ಮತ್ತಿಂತೆಂದಂ (ಪುಷ್ಪಾಸ್ತ್ರ. ೧-೬೨ ಪ); ದುರ್ವ್ರಣವ ತೊಡೆದು ಕಟ್ಟುವ ಹಸ್ತಿವೈದ್ಯರ ಗಡಣ (ಕುಪ್ಯಾಭೀ. ೫-೪೦). 'ಕಂಬನಿದೊಡೆ' ಪರಾ. ೪. ಅಳಿಸು; ಉಜ್ಜಿತೆಗೆ: ಮನಸಿಜನ ತಲೆಯ ಬರೆಹವ ತೊಡೆದೆನು (ಪುಷಾದೇ. ಬ. ೭೧-೦೭೫); ತೊಡೆವೆಂ ಶಕ್ರನ ನಾಮಮಂ ತುಡುಕಿ ನೀರೊಳ್ ಮೆಟ್ಟುವೆಂ ವಹ್ನಿಯಂ (ಜಗವಿ. ೩-೨೦); ತೆಕ್ಕನೆ ತೀವಿರೆ ತಾಪಕ್ಕಿಕ್ಕಿದ ಸಿರಿಗಂಪು ಪಣೆಯೊಳೆಸೆದುದು ಕೋಪಂ ಮಿಕ್ಕತನು ಬೆಸಸಿದೊಡೆ ನೊಸಲಕ್ಕರಮಂ ತೊಡೆಯಲೆಂದು ಬಂದಿಂದುವವೋಲ್ (ಚಂದ್ರಪು. ೮-೮೬); ಎಡಱಿದನೋ ಅವನ ನೊಸಲಕ್ಕರವಂ ತೊಡೆದುದಕ್ಕುಂ(ಶಮದ.೫೭ ಪ್ರಯೋ); ಸರಸಿಜಾಸನನಂದು ನೊಸಲಲಿ ಬರೆದ ಲಿಪಿ ಹೆಡತಲೆಗೆ ಹೋಹುದೆ . . . ಮರಳಿ ತೊಡೆಯಲು ಕಾಯಲುಂ ಪಂಕರುಹಗರ್ಭಂಗಾಗದು (ಬಸಪು. ೪೬-೧೩); ತೊಡೆದನಾಗಳೆ ನೊಸಲ ಕಣ್ಣಿನ ಕಿಡಿಯನೆಲ್ಲರನುಳುಹಿದನು (ಪ್ರಭುಲೀ. ೧೩-೩೨); ಲೀಲೆಯಿಂದೀ ಭೀಮ ದೈತ್ಯರ ಭಾಳಲಿಪಿಯನು ತೊಡೆದ (ಕುಪ್ಯಾಅ. ಓರಿಇ. ೧೫-೧೪); ಶರದ ಘನರಾಜೇಂದ್ರಪದವಿಯ ಬರಹ ತೊಡದುದು (ತೊರರಾ. ೩-೨-೨); ಬರೆಬರೆದಂತದಂ ತೊಡೆದು ತೊಟ್ಟನೆ ನಿಟ್ಟಿಸಿ . . . ತೋರ್ಪ ದುಷ್ಕವಿ ಮಹಾಕವಿಮಧ್ಯದೊಳೊಪ್ಪಲಾರ್ಪನೇ (ರಾಜಶೇ. ೧-೨೩); ತೊಡೆಯಲಪ್ಪುದೆ ನೊಸಲ ಬರೆಹಗಳ ಕುಂದಂ (ಕಾಲೂರ. ೧೧೧-೨೨೮). ೫. ಗುಡಿಸು; ಉಡುಗು: "ತೊಡೆ-ಸಂಮಾರ್ಜನೇ, ಅಂಗೇಚ" (ಶಮಧಾ); ಉತ್ಪಲಿಕೆಯಂ ಕದಳೀಗೃಹಮರಕತವೇದಿಯಂ ಕಮಲದಳಂಗಳಿಂ ತೊಡೆಯಲುಂ . . . ಪೆಸರ್ವೆಸರೊಳೆ ಕರೆದು ಪೇಟ್ವ (ಕಾದಂಪೂ. ೧೦೦೬); ಊರ ಚೌವಟ್ಟದೊಳಂ ತೊಡೆದು ಬರೆದಲ್ಲಿ ರಂಗಮನಡುಗೆಗಳಂ ಸುರಿದು ಸೂಸಿ ಕೆಡುವರ್ಮೂಢರ್ (ಸಮಪ. ೯-೧೩೦); ಕಡುಸೊಗಯಿಪ ಮಣಿಮನೆಯಂಗಣಮಂ ತೊಡೆವ . . . ಮಡದಿಯರ ಮೊತ್ತಂ ಕಣ್ಗೊಪ್ಪಿದುದು (ಜಯಕಾ. ೧೨-೧೩). ೬. ಶುದ್ಧಿಮಾಡು; ಶುಭ್ರಮಾಡು: ವರಮುಕುರಮಂ ತೊಡೆವ[ಪಾಕಾಂ. ಬೆಳಪ]ರಾರ್ (ಹಚಕಾ. ೧-೨೨). ೭. ನಿರ್ಮೂಲಮಾಡು; ನಾಶಮಾಡು: ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೇ (ಮಹಾದೇ. ಬ. ೨೩-೪೩); ಜಿನಬುದ್ಧಸಮಯವಿದೆಂದುಲಿವ ಪೆಸರಿಲ್ಲದಂತಾತನು ತೊಡೆದು ಕಳೆದು (ಬಸಪು. ೫೦-೫೦); ಜಯವಿಜಯರಾ ದೈತ್ಯಜನ್ಮವನು ಈತ ತೊಡೆದನು (ಕುಪ್ಯಾಉ. ಓರಿಇ. ೧೦-೨೪); ಮೇಘಪ್ರಸರಕೊಳಗಹನೊಮ್ಮೆ ರವಿ ತೋಱುವನು ಮತ್ತೊಮ್ಮೆ ಅಸಮಸಮರದೊಳೀತನಾ ಪರಿಮಸುಳುವನು ತೋಱುವನು ತೊಡೆವನು ದೆಸೆಗೆಡಿಸುವನು ಬಳಿಕ ಮುಳಿಸಿನೊಳಾ ಮಹಾರಥರ (ಕುಪ್ಯಾಕ. ೧೧-೩೭) ೮. ನಾಶವಾಗು; ಇಲ್ಲವಾಗು: ತಪ್ಪಿತ ತೊಡೆಯಿತ್ತು ಭವಬುಧನ ಹಿಂಗಿತ್ತು (ಪದಗೋ. ೨); ಪಾಂಡವರೂ, ಕುಂತಿಯೂ ಬದುಕಿಕೊಂಡು, ದ್ರೌಪದಿಯನ್ನು ಪಡೆದಿದ್ದಾರೆ . . . ದುಃಖ ತೊಡೆದಿದೆ! (ವಚಭಾ. ೬೬); ಎಂದಾದರೊಮ್ಮೆ ತುಸು ಕದನ ಸುಳಿದರೆ . . . ಹೇಗೋ ತೊಡೆದು ಬಿಡುತ್ತಿತ್ತು (ಬೆಟ್ಟಹೊ. ೪). ೯. ಪರಿಹರಿಸು; ನಿವಾರಿಸು: ಸಯ್ತಡವಡಿಕೆಗಳಂ ತೊಡೆದತ್ತೆಡೆವಱಿಯದೆ ಪೊಳೆವ ಮಿಂಚು (ಕವಿರಾ. ೩-೧೨೫); ಕೋಪಮಂಗಜರಸಪೂರದೊಳ್ ತೊಡೆದವೋಲ್ ತಳರ್ದತ್ತು (ಶಾಂತಿಪು. ೮-೧೧೦); ಎನ್ನ ಕಾಯದ ಕರ್ಮವ ತೊಡೆದು . . . ಕಾರುಣ್ಯವ ಮಾಡು (ಅವಚಂ. ೧೬೭-೭೫೩).

ತೊಡೆದುಕೊಳ್, ತೊಡೆದುಕೊಳ್ಳು = ೧. ಲೇಪಿಸಿಕೊಳ್ಳು; ಬಳಿದಂಕೊಳ್ಳು: ಎದುರಿಗೇ ಇದ್ದ ತಮ್ಮ ದೃಷ್ಟಿಯ ಸುಪ್ರಭೆಯನ್ನು ತೊಡೆದುಕೊಂಡಿದ್ದೆ (ಸುವಸಂ. ೧೭). ೨. ಒರೆಸಿಕೊಳ್ಳು: ತುಡುಗಣಿ ತೊಟ್ತಿನಂತೆ ಬಾಯಂ ತೊಡೆದುಕೊಂಡು (ಪಂಚತಂ. ೨೮೪-೨೩). **ತೊಡೆದುಹಾಕು** = ೧. ಅಳಿಸಿಹಾಕು; ಅಳಿಸು: ನಿನ್ನ ಹಣೆಯ ಬರಹವನ್ನು ತೊಡೆದುಹಾಕುತ್ತೇನೆ (ರಾಜಸೂ. ೨೧). ೨. ನಾಶಮಾಡು; ನಿರ್ಮೂಲಮಾಡು: ರಾಯರ ದುಷ್ಟಸಹವಾಸಗುಣ ಅವರ ವಿವೇಕವನ್ನು ತೊಡೆದುಹಾಕಿತ್ತು (ಮರಳಿ. ೧೬೩); ಗ್ರಹಗಳು ರೂಪುಗೊಳ್ಳುವ ಕ್ರಿಯೆ ಅತ್ಯಂತ ಅಪೂರ್ವ ಸಂಭವವಾದುದು ಎಂಬುದು-ಮತಾಭಿಪ್ರಾಯವನ್ನು ತೊಡೆದುಹಾಕಲು ಇಚ್ಛಿಸದಿದ್ದ ಜನಸಾಮಾನ್ಯರ ದೃಷ್ಟಿಯಲ್ಲಿ ಒಂದು ಪ್ರಧಾನಗುಣವಾಗಿ ಪರಿಣಮಿಸಿತು (ಭೂಹುಟ್ಟು. ೨೯). **ತೊಡೆದು ಹೋಗು** = ಇಲ್ಲವಾಗು: ಅವರಿಗೆ ಉಂಟಾದ ಅಂತಹ ವಿಷಮವಿಪತ್ತಿನಲ್ಲಿ ಸಮಯಸ್ಫೂರ್ತಿಯು ತೊಡೆದುಹೋಯಿತು (ರಾವಿಜ. ೨೩).

[ದೇ. ॥ ತಮಿ. ತೊಟ್ಟೈ, ತುಟ್ಟೈ; ಮಲ. ತುಡೆ; ತುಳು. ತೊಡೆ, ತುಡೆ; ತೆಲು. ತೊಡೆಯು, ತುಡ್ಚು]

ತೊಡೆ$_2$ (ನಾ). ಸೊಂಟದಿಂದ ಮಂಡಿಯವರೆಗಿನ ಭಾಗ; ಊರು: "ಪ್ರಸೃತಾಖ್ಯೆ ಜಂಘೆ ತೊಡೆಯೂರು" (ವಸ್ತುಕೋ. ೬೭-೩); ವೀರಶ್ರೀ ಮಹಾದೇವಿಯರಸನ ತಲೆಯಂ ತನ್ನ ತೊಡೆಯ ಮೇಲಿಟ್ಟು (ವಡ್ಡಾರಾ. ೧೧೭-೧೦); ವದನಂ ತೋಳ್ ತೊಡೆ ಪಾದಮೆಂಬಿವನಿವಂ ಶುಶ್ರೂಷೆಗೆಯ್ಯಲ್ಕೆ (ಆದಿಪು. ೮-೭೩); ಕುರುರಾಜನ ತೊಡೆಯನುಡಿವೆನೆಂದಂ ಭೀಮಂ (ಗದಾಯು. ೨-೨೮); ತೊಡೆಯ ಮೇಲಿರ್ದೊಡಂ ಸ್ತ್ರೀಯನಾರೈದುಕೊಂಡಿರಬೇಕು (ಪಂಚತಂ. ೧೩೩-೧೭); ಸುರಪತಿಯ ಬೇಳಂಬವನು ವಿಸ್ತರಿಸಲೇತಕೆ ವಜ್ರಕೀಟೋತ್ಕರವ ಕಳುಹಿದರೆನ್ನ ತೊಡೆಗಳನುಗಿದವವು ಬಳಿಕ (ಕುಪ್ಯಾಕ. ೯-೩೧).

[ದೇ.॥ ತಮಿ. ತೊಟ್ಟೈ, ತುಟ್ಟೈ; ಮಲ. ತುಡ; ತುಳು. ತೊಡೆ, ತುಡೆ; ಕೊಡ. ತೊಡೆ; ತೆಲು. ತೊಡ]

ತೊಡೆಗಟ್ಟಿ (ನಾ). ಒಂದು ಬಗೆಯ ಸಸ್ಯ: ಬೀಟೆ, ತೊಡೆಗಟ್ಟಿ, ಕರೇವ್ಯಾಡಿ (ಮೃಜಿಗಿ. ೨೮-೫೪೮). [?]

ತೊಡೆಚಲ್ಲಣ (ನಾ). ಒಂದು ಬಗೆಯ ಚಲ್ಲಣ; ಮೊಳಕಾಲಿನವರೆಗೆ ಬರುವ ಉಡುಪು; ಅರ್ಧೋರುಕ: ತೊಡೆಚಲ್ಲಣ ತೊಟ್ಟ ಜೋಡು ಬಿಡದೆ ಮೆಱೆಯೆ ಬಿಲ್ಲವರು ನಡೆತಂದರು (ಕುರಾಸಾಂ. ೧೧-೩೫); ಹಜ್ಜೆ ಹಜ್ಜೆಗೆ ತೊಡೆಚಲ್ಲಣವಡಸಿರ್ದ ಗೆಜ್ಜೆಯು ಗಲಿರೆಂಬ ರವದಿ. . . ಬಂದನು (ಪೋಹಕ. ೧೨-೪೯). [ತೊಡೆ$_2$ + ಚಲ್ಲಣ]

ತೊಡೆಚಾಟುಗೊಳ್ (ಕ್ರಿ). ತೊಡೆಗೆ ಮರೆಮಾಡಿಕೊಳ್ಳು,-ರಕ್ಷಣೆಯಾಗಿಟ್ಟುಕೊಳ್ಳು: ಬೆಳ್ಳಿಪೊಂಗುಬ್ಬಿವರಿಗೆಯಂ ತೊಡೆಚಾಟುಗೊಳು ತೊಡನೆ ಖಡ್ಗಂಗಳ ಝಳಪಿಸುತೆ . . . ಪೊಯ್ದಾಡುತಿರ್ದರಾ ಹರಿಗೆಯವರು (ಜಿಬಪು. ೪೮-೫೦); ಕಾಳೆಯಿಂದೆ ಬೆದಱದಿರಿ ನೇಜಯಂಗಳನೂದು ಹರಿಗೆಯಂ ಕದಲಿಸು ವರೂಥಮಂ ತೊಡೆಚಾಟುಗೊಳ್ಳೆನುತೆ ಕದನ ವಿಕ್ರಮರೆಲ್ಲರುಂ ಬೆದಱಿ ಕಂಡ ಕಡೆಗೋಡಿದರು (ಜಿಬಪು. ೫೦-೧೬).

[ತೊಡೆ$_2$ + ಚಾಟು$_2$ + ಕೊಳ್$_1$]

ತೊಡೆತ (ನಾ). ೧. ಲೇಪನ ; ಬಳಿಯುವಿಕೆ : "ಲೇಪನಂ ತೊಡೆತಂ" (ಕಾಷಾ. ೨-೧-೪೭) ; (ಬಣ್ಣ, ಸುಣ್ಣ ಬಳಿಯುವುದರಲ್ಲಿ) ಮೊದಲನೆಯ ತೊಡೆತ (First Coat. ಇಂಳಿ.). ೨. ನಾಶ: ಗಡ್ಡೆ ಇರ್ಪುದು, ಕಿರಿದು, ಸಲಮಿಸಿನ ಮುಂದುಗಡೆ, ನಾವೆಗಳ ತೊಡೆತ (ಪಾರಿ. ೧೭-೩೯).

[ತೊಡೆ$_1$ + – ತ$_2$]

ತೊಡೆತಟ್ಟು 'ತೊಡೆದಟ್ಟು' ನೋ.

ತೊಡೆದಟ್ಟು, ತೊಡೆತಟ್ಟು (ಕ್ರಿ). ೧. ಚಿಂಕ್ಕುತಟ್ಟು : ಜಂಡವಿಕ್ರಮ ನೊಜಗಿದನು ನಾರಿಯರ್ ನಿಖಿಲೋಪಚಾರವ ಮಾಡಿ ಕೈವಾರಿಸಿ ತೊಡೆದಟ್ಟಲೊಡನೆ ವಾರಿಯ ವಾದ್ಯ ಘೋಷಣಸಲ್ಕೆ ದಿವ್ಯವಿಭೇರಿಯ ಹೊಡೆದರೂರೊಳಗೆ (ಕೋಚಕ. ೧೪-೧೦೦). **ತೊಡೆತಟ್ಟು** : ೨. ಯುದ್ಧಕ್ಕೆ ಸಿದ್ಧವಾಗು ; ಸಡ್ಡುಹೊಡೆ : ಜಟ್ಟಿಗಳು ತೊಡೆತಟ್ಟಿ ಮಲ್ಲಯುದ್ಧಕ್ಕೆ ಸಿದ್ಧವಾದರು (ಜೂಫಿ). [ತೊಡೆ$_2$ + ತಟ್ಟು$_1$]

ತೊಡೆಪ, ತೊಡಹ$_1$, ತೊಡೆಹ (ನಾ). ೧. ಬಳಿಯವಿಕೆ ; ಲೇಪನ : ತೊಡೆಪಂ, ನಡೆಪಂ, ಮೊಗೆವಂ (ಶಕ್ಕಾನು. ೫೭೧ ಪ್ರಯೋ). **ತೊಡಹ$_1$** : ೧. ಜಡೆದಲೆಯ ತೊಡಹದ ವಿಭೂತಿಯ ಮಡಿವೆರಳ ಜಪಸರದ . . . ಮುನಿಯ ವೇಷವ ತೊಡಚಿಕೊಂಡಿಹ ಕಾಲನೇಮಿವ್ರಂತೆ ರಂಜಿಸಿದ (ತೊರಡಾ. ೬-೩೬-೬೪) ; ಹೇಮದ ತೊಡಹದುರುಸಿಸ್ಸಾಳತತಿಯಲಿ ನುಡಿ ವಡಚ್ಚರಿಯೆನಲು ಮಿಗೆ ಸಂಭ್ರಮಿಸಿತಾ ನಗರ (ತೊರಡಾ. ೬-೩೩-೧೬). ೨. ಗಿಲೀಟು ; ಲೇಪ : ತೊಡಹದ ಕೆಲಸದ ಬಣ್ಣದಂತೆ ಕಡಿಹಕ್ಕೆ ಒರೆಗೆ ಬಾರದು ನೋಡಾ (ಬಸವ. ೨೮೪) ; ಚಿಗಿವ ಚಲನೆಯ ಚಂಗುವಾಙಿನ ಮೃಗ . . . ತರುಕದಂಬದಲಿ ಅಡಗಿ ತೋಱುತ ನಿಲುತ ನಿಗುರುತ ತೊಡಹದಳಿಮನದಧಮಪುರುಷನ ನುಡಿಯವೊಲು ವಂಚಿಸುತ ಹಾಯ್ದುದು ವಿಪಿನದಲಿ ನೃಪನ (ತೊರಡಾ. ೩-೪-೪೭). ೩. ಕಪಟ ; ಠಕ್ಕು ; ನಟನೆ : ಕಡಿಗಳ ಹದಿನೆಂಟನೊಡಗೂಡಿ ಸಂದಿಸಿ ತೊಡಚಿ ಕಟ್ಟಿದೆ ನರರ ಬಂಧನದಲ್ಲಿ ಈ ತೊಡಹದ ನಾಯ ನಿಚ್ಚ ನೀನಿಕ್ಕಿ ಕೆಡಿಸಿದೆಯಯ್ಯ (ದೀಪಾವ. ೩೭-೭೫) ; ತೊಡಹದಧಟನೆ ತಳೆದು ಯುದ್ಧಕೆ ತಡಹನಿಸಿ ಸಮಸತ್ತ್ವದಲಿ ಫಣಿಶಯನನು ಕಾದಿದನು (ಸಾಳ್ವಭಾ. ೨೨-೭೮). **ತೊಡೆಹ** : ೨. ಕನಕದ ತೊಡೆಹದೊಳಾ ಸರಪಣಿಯಂತೆ ಜನಪನಿನ್ನೊಬ್ಬ ಮಾಡುವನೆ (ಧರಿಚ. ೪೯-೧೪೦) ; ಹೊಸ ಹೊನ್ನ ತೊಡೆಹದಂತಸಿವ ಮೈಬಣ್ಣ (ಧರಿಚ. ೭೭-೧೯). ೪. ತೋರಿಕೆ: ವೀರರೆಂದೆನಿಸುವರು ತೊಡೆಹದ ಶೌರಿಯದ ಸಿರಿವಂತರರಸುಕುಮಾರಕರು ನಿನ್ನವರು (ಕುವಾಕ್ರೋ. ೧೩-೪೭) : ಹೊಳೆಹೊಳೆದು ತಂಬುಲದ ರಸದಲಿ ಮುಳುಗಿ ಮೂಡುವ ಧಗೆಯ ತೊಡೆಹದ ಮೆಲುನಗೆಯ . . . ಭೂಪಾಲನಿರವನು ಕಂಡು (ಕುವಾಕ್ರೋ. ೧೪-೯). [ತೊಡೆ$_1$ + – ಪ$_2$]

ತೊಡೆಮಡ (ನಾ). ೧. ಆನೆ ಅಥವಾ ಕುದುರೆಯನ್ನು ಏರುವ ಒಂದು ಬಗೆಯಂ ವಿದ್ಯೆ.–ವರಸೆ : ಸರಸನ್ನೆ ತೊಡ[ಹಾಕಾಂ. ಡ]ಮಡಂ ಕಸೆಕಬ್ಬಿ ಕಡಿಯಾಣ ಸರಸಮಂ ಸೈರಿಸದ ಚಳಬಳಿಕೆಗಳ ಚಾರು ತುರಗಕುಲ (ಸೋಮಪ. ೩-೨೮) ; ಬಳಿಕೆಯೊಳು ತೊಡೆಮಡ ಕಸಿ [ಕಸೆ] ಕಂಬಿಯ ಸರಸನ್ನೆಗಳಾಟದ ತೊಡಕಂ ಹೊದ್ದದೆ (ವೀರೇಶ. ೨-೨೯) ; ತೊಡೆಮಡದನಿ ಚಮ್ಮಟಿಗೆಗಳಿನೊಯ್ಯನೊಯ್ಯನೆ ಮೈವಳಿಗೆ ತಂದೊಡಂಬಡಿಸಿ (ಕಾಚಕೇ. ೬-೧೧ ಪ). ೨. ಸವಾರಿ : ಎನ್ನ ತೊಡೆಮಡದ ಮದಕರಿಯ ಭಕ್ಕರ ಸಿರಿಯ ದುರಿತಗಜ ಹರಿಯ ಸಾಮರ್ಥ್ಯಗಿರಿಯ (ಸಿದ್ಧಲಿ. ೮-೪೨) ; ೩. ಸವಾರಿಯ ಒಂದು ಕ್ರಮ : ಥಾವನೆ ಬಯ್ಸಿಕೆ ತೊಡೆಮಡಕಯ್ದನಿಯೆಂಬ ಚಡಾಯತಿಕೆಗಾಯತಿಕೆಪಡೆದಾರೂಢ ವಿದ್ಯಾವಿಳಾಸ (ಸಾಇಇ IX-I, ೭೪೩-೨೦ ; 1226). ೪. (ಆಲಂ) ಸಲಿಗೆ; ಆತ್ಮೀಯತೆ : ಪೊಱಮಡಿಸಿದಂ ಪುರಹರನ ತೊಡೆಮಡದ ಸುಕುಮಾರನು (ಸೋಮಪ. ೫-೨೨). [ತೊಡೆ$_2$ + ಮಡ$_1$]

ತೊಡೆಯಿಸು (ಕ್ರಿ). ೧. ಬಳಿಯುವಂತೆ ಮಾಡು ; ಲೇಪಿಸು : "ತೊಡೆಯಿಸು – ಲೇಪ್ಯಕರಣೇ" (ಶಮಧಾ). ೨. ಅಳಿಸು ; ಉಜ್ಜಿ ತೆಗೆ ; ಇಲ್ಲದಂತೆ ಮಾಡು : ಪುರಾತನ ಚಕ್ರವರ್ತಿಗಳ ದಿಗ್ವಿಜಯ ಕೀರ್ತಿಗಳಂ . . . ದಂಡರತ್ನದಿಂ ತೊಡೆಯಿಸಿ ಕಳೆದು (ಅಜಪು. ೯-೩೪ ಪ) ; ಆಂ ಬಂದು ಪೋದ ಪಜ್ಜೆಯನಂಬುಜಮುಖಿ ಪೆಱನದೊರ್ಬನಱಿಯದ ತೆಱದಿಂ . . . ತೊಡೆಯಿಸುವುದೆನುತುಮಾಂ ಪೊಱಮಟ್ಟಿಂ (ದಶಕು. ೧೦-೯೦) ; ತನ್ನರೇಂದ್ರನ ನೊಸಲ ಬರಹವ ಮುನ್ನೊರೆಸಿ ಬಿಜ್ಜಳನ ಸಾಮ್ರಾಜ್ಯೋನ್ನತಿಯನೀಶನ ಕವಳಿಗೆಯೊಳಂತು ತೊಡೆ[ಪಾಕಾಂ. ಡ]ಯಿಸುತ (ಬಸಪು. ೬೦-೭). [ತೊಡೆ$_1$ + – ಇಸು$_3$]

ತೊಡೆಯೇಱಿಸು (ಕ್ರಿ). ತೊಡೆಯ ಮೇಲೆ ಕೂರಿಸಿಕೊಳ್ಳು : ಬಯಸಿ ಪಡೆದು ತೊಡೆಯೇಱಿಸಿ ಮುದ್ದನೊಱಲ್ದು ನೋಡಿ ನಡೆಪಿದ ಜನನೀ ಜನಕರ್ಗದಿನಿತಲಲ್ ಜನಿಯಿಕುಮೋ (ಕಾದಂಳಾ. ೪೬೫) ; ಅರಸನೆಂಬ ಪಾತಕನೆನ್ನಂ ತೊಡೆಯೇಱಿಸಿ ಕೇಳಿಕೆಯಾದೊಡೆ ನೋಡುತಿರ್ದಂ (ಯುಶೋಚ. ೨-೫೦). [ತೊಡೆ$_2$ + ಏಱಿಸು]

ತೊಡೆವಾಳ 'ತೊಡೆವಾಳೆ' ನೋ.

ತೊಡೆವಾಳೆ, ತೊಡವಾಳ (ನಾ). ತೊಡೆಯಂ ಸಂದಿಯಲ್ಲಿ ಬಾಳೆಯ ಕಾಯಂತೆ ಏಳುವ ಬಾವು ; ಉಡುಚು ; ಒಂದು ಬಗೆಯ ಗುಹ್ಯ ರೋಗ : "ಜುಂಗಃ = ತೊಡೆವಾಳೆ" (ಕಾಕಕ್ಕ. ೧೦) ; ರಕ್ತಧಾತು, ಮಾಂಸ ಧಾತು ... ಇವಱಿಂದ ತೊಡೆಗಳ ಸಂದಿನಲ್ಲಿ ಆ ಗ್ರಂಥಿ ಉಂಟಾಗುವುದು. ಅದನ್ನೇ ತೊಡೆವಾಳೆ ಎಂದೆಂಬರು (ಕೈದಿಕಾ. II, ೧೬೪). **ತೊಡೆವಾಳ** : ಈ ಬೇರಂ ನಿಂಬೇಹುಳಿಯಲ್ಲಿ ತೇದು ತೊಡೆಯಲು ೩ ದಿನಕ್ಕೆ ತೊಡೆವಾಳ ಗುಣ (ವಿವೈವಿ. ೪) ; ದೇಹದ ಗ್ರಂಥಿಗಳಿರುವ ಪ್ರದೇಶದಲ್ಲಿ (ಮು. ಕಂಕುಳಲ್ಲಿಯೂ ತೊಡೆಯ ಸಂದಿಯಲ್ಲಿಯೂ) ಏಳುವ ಗೆಡ್ಡೆ; ತೊಡವಾಳ; ಉಡುಚು (Bubo. ಇಂಳಿ.).

[ತೊಡೆ$_2$ + ಬಾಳೆ$_1$ (< ಬಾಟಿ^{3})./ತಮಿ. ತೊಟ್ಟಿವಾಟಿ^{3}, ತುಟ್ಟಿವಾಟ್ಟೈ; ಮಲ. ತುಡವಾಟ್ಟೈ; ತುಳು. ತೊಡೆವಾಳ್, ತೊಡೆವಾಳೊ]

ತೊಡೆವೇನೆ (ನಾ). ತೊಡೆಯ ನೋವು,–ವೇದನೆ : ಕುರುರಾಜಂ ತೊಡೆವೇನೆಗೆ ನರಳನೆ (ಗದಾಯು. ೯-೧೯). [ತೊಡೆ$_2$ + ವೇನೆ]

ತೊಡೆವೊಯ್ (ಕ್ರಿ). ತೊಡೆಯನ್ನು ಮೃದುವಾಗಿ ಬಡಿ,–ಮೆಲ್ಲನೆ ತಟ್ಟು : ಹೊತ್ತು ಹೋಯಿತ್ತೀಗಳೇ ಶಿವಾರ್ಚನೆಗೆಂದು ತೊಡೆವೊಯ್ದು ಮೆಲ್ಲನೆಬ್ಬಿಸೆ (ಬಸಪು. ೯-೧೪೯). [ತೊಡೆ$_2$ + ಪೊಯ್$_1$]

ತೊಡೆಸಂಕಲೆ (ನಾ). ೧. ತೊಡೆಗೆ ಹಾಕುವ ಸಂಕೋಲೆ,–ಸರಪಣಿ : ತೊಡೆಸಂಕಲೆಯಿಕ್ಕಿದವೊಲ್ಕುಡಿಯಳ್ಳಿಗಳಿಂದೆ ಸುರಿದುವಿರ್ಕೆಲಕೆ ಕರುಳ್ (ಶಮದ. ೧೦೭ ಪ್ರಯೋ). ೨. ಬಿರುದಿನ ಬಳೆ : ಮೊಕ್ಕಳಮನೆ ಬಸಱೀ ಱಿಂದೊಕ್ಕ ಕರುಳ್ ತೊಡೆಯೊಳಾವಗಂ ತೊಡರ್ದನಸುಂ ವಿಕ್ಕುವು ಬಿರುದರ ಬಿರುದಿಂಗಿಕ್ಕಿದ ನುಣ್ಪೆಸದ ವಿಸುಪ ತೊಡೆಸಂಕಲೆಯುಂ (ಹಂದ್ರಪು. ೧೦-೭೪). ೩. (?) : ಬಿರುದಿನುಬ್ಬಟೆಯ ತಳಪಟದೊಳೌಕಿದರು ತೊಡೆಸಂಕಲೆಯ ತೊಲಗದ ಕಂಧದಪ್ರತಿಬಲರು ಹಾಣಾಹಾಣಿಯಲಿ ಹೊಯಿದಾಡಿದರು ಕಡುಗಿ (ಕುವಾಕ್ರೋ. ೪-೩೬). [ತೊಡೆ$_2$ + ಸಂಕಲೆ]

ತೊಡೆಸಕ್ಕಿ, ತೊಡೆಸಕ್ಕೆ (ನಾ). ೧. ಪ್ರತ್ಯಕ್ಷ ಸಾಕ್ಷಿ : ವಿಕ್ರಮಾಕ್ರಾಂತದಿಂ ದಿಗಧೀಶತ್ರ್ಯರ್ದಿಸಕ್ಕಿಯಾಗೆ ಧರೆಯಂ ನಿಃಕಂಟಕಂ ಮಾಡಿದಂ (ಸಾಇಇ. IX-I, ೧೪೩-೧೩ ; 1083) ; ನನೆಯಂಬುಗಳಂ ತೊಡೆಸಕ್ಕಿ ಮಾಡಿ ಕಾಂತೆಯ ತೊಡೆ ತೊಡೆದವು ಕನಕಕದಳಿಕಾವಿಲಸನಮಂ (ಮಲ್ಲಿಪು. ೩-೬೦) ; ಈವ ಗುಣಕ್ಕೆ ತಂದ ತೊಡೆಸಕ್ಕಿ ನಿಜಾಶ್ರಿತ ಪಂಡಿತರ್ಕ್ಕಳೊಳ್ ತೀವಿದುದಗ್ರ ಲಕ್ಷ್ಮಿ ನಿಜದೋರ್ಬ್ಬಳದೇಳ್ಗೆಗೆ ಸಕ್ಕಿ (ಎಕ. VII, ಶಿಕಾರಿ. ೧೦೩-೧೫ ; 1149). ೨. ತೊಡೆ ತಟ್ಟಿ ಮಾಡುವ ಪ್ರತಿಜ್ಞೆ (?) : ವಜ್ರವೇದಿಕೆಯಂ

ತಾಂ ತೊಡೆಸಕ್ಕಿ[ಪಾಠಾಂ. ಸಾಕ್ಷಿ]ವೊಯ್ವವೋಲ್ ಪೊಯ್ದೊಡನೊಡನುಚ್ಚಳಿ ಪವಿದಲಿ ತುಂಗತರಂಗಂ (ಆದಿಪು. ೧೨-೧೩೪). **ತೊಡೆಸಕ್ಕೆ**: ೧. ತೊಡೆಗಳ ನುಡಿಯಲ್ಗುರುಗಳ್ ತೊಡೆಸಕ್ಕೆಗಳಾಗೆ (ಗದಾಯು. ೧-೬೪);"ಪ್ರತಿಬಂಧಕ" (ಪ್ರಭಂ.) ; ಪರ್ಬು ಬಿರ್ದ ಪೆರ್ದೊಡೆ ತೊಡೆಸೆ[ಸ]ಕ್ಕೆಯಾಗಿದು ಕೆತ್ತುವ ಪುಣ್ಗಳ ಬಾಯ್ಗಳೀಜನುಳ್ಪಿಡಿಸುವ ಬಾಯ್ಗಳಾಗಿರೆ ಕಡುತ್ಕಿಜುವೆಂ ನೃಪ ಸೈನ್ಯವಂ (ಶೃಂಗಾರ. ೧-೮೩) ; ನಖಿಂ ಮುಡುಪನವುಂಕೆ ಕಂಡು ಸತಿ ಕಂಟಿಸಿ ಕಾಡುವಳೆಂದು ತನ್ನೊಡನೆಯ ಬೇಂಟಿಕಾಱವಡೆಯಂ ತೊಡೆಸಕ್ಕೆಯನುಂಟುಮಾಡಿದಂ (ಸೂಕ್ತಿಸು. ೩-೧೪೦); ತೊಡೆಯ ಸ[ಪಾಠಾಂ. ಸ]ಕ್ಕೆ= ತೊಡೆಸ[ಪಾಠಾಂ. ಸ]ಕ್ಕೆ (ಕಮಾದ. ೧೬೨ ಪ್ರಯೋ).

[ತೊಡೆ$_3$ + ಸಕ್ಕೆ]

ತೊಡೆಸಕ್ಕೆ 'ತೊಡೆಸಕ್ಕಿ' ನೋ.

ತೊಡೆಸನ್ನೆ (ನಾ). (ಕಂದುಱೆಸವಾರಿ ಮಾಡುವಾಗ) ತೊಡೆಯ ಅವುಕು ವಿಕೆಯಿಂದ ಮಾಡುವ ಸನ್ನೆ.–ಸೂಚನೆ : ಆನೆಗೆ ಅಡಿಸನ್ನೆ ಕುದುರೆಗೆ ತೊಡೆಸನ್ನೆ ಪೆಣ್ಣಿಗೆ ಕಣ್ಣಿನ ಸನ್ನೆ (ಇಂದ್ರಾಪ. ೯೦-೩೬).

[ತೊಡೆ$_2$ + ಸನ್ನೆ$_2$]

ತೊಡೆಸೋಂಕು (ನಾ). ೧. ತೊಡೆಯು ಸ್ಪರ್ಶವಾಗುವಷ್ಟು ಹತ್ತಿರ.–ಸನಿಹ: ವಾಸವನ ತೊಡೆಸೋಂಕಿನಲಿ ಕುಳ್ಳಿಹರೀ ಮಹೇಶ್ವರರು (ಕುವ್ಯಾಸ. ೮-೧೪). ೨. (ಆಲಂ) ಸಲಿಗೆ ; ಆತ್ಮೀಯತೆ : ಎನಗೆ ನಿಮ್ಮಡಿಗಳಲಿ ಸಮಸೇವನೆಯೆ ದೇವ ಮುರಾರಿಯಂಜುವೆನೆನಲು ತೊಡೆಸೋಂಕಿನಲಿ ಸಾರಿದು ಶೌರಿಯಿಂತೆಂದ (ಕುವ್ಯಾಉ. ೧೦-೨). [ತೊಡೆ$_2$ + ಸೋಂಕು$_2$]

ತೊಡೆಹ 'ತೊಡೆಪ' ನೋ.

ತೊಣಚಿ 'ತೊನಸೆ' ನೋ.

ತೊಣಚೆ 'ತೊನಸೆ' ನೋ.

ತೊಣಸಿ 'ತೊನಸೆ' ನೋ.

ತೊಣಸೆ$_1$ 'ತೊನಸೆ' ನೋ.

ತೊಣಸೆ$_2$ (ನಾ). ಒಂದಂ ಬಗೆಯ ಸಸ್ಯ.–ಸೊಪ್ಪು : (ಕ).

[?]

ತೊಣೆ$_1$, ತೊನೆ$_2$ (ನಾ). ೧. ಸರಿ ; ಸಮಾನ ; ಎಣೆ ; ಸಾಟಿ : "ಸರಿ ದೊರೆ . . . ಎಣೆ ತೊಣೆ . . . ಸಂಗಡಂ–ಈ ೧೮ ಸಮಾನಕೆ ವೆಸರ್" (ಕಕಸಾ. ೧೫-೫೧೧) ; ಕರ್ಣನೆನಗಂ ತೊಣೆಗಂ ನೃಪರಾರುಮಿಲ್ಲ (ಪಂಪಭಾ. ೧೨-೧೦೦) ; ಶಶಭೃತ್ಕಾಂತಿಗೆ ಮಿಂಚುಂಬಾಬು ಸಮನೆಂತಕ್ಕುಮೊ ದೊರೆಗವೊರೆಗಮೆಣೆಗಂ ತೊಣೆಗಂ (ಶಾಂತಿಪು. ೧೫-೬೭) ; ವಿದ್ಯಾವಿಭವವಂಶಸಂಪತ್ತಿಯೊಳಿಂದೀ ವರನೀಕೆಗೆ ತೊಣೆಯೆನೆ (ಪರ್ಧಪು. ೯-೪೩) ; ತೊಣೆಯಾಂಡಿಗಿಳೆಯೊಳಾರ್ತೊಣೆ (ಧೃಪದ. ೧-೩೫೮) ; ಸಹದೇವಂಗೆ ಸತ್ಯವಂತಂ ತೊಣೆ (ರಾಪಾಶ್ವ. ೧೪೪-೩). ೨. ಜೊತೆ ; ಒಡನಾಟ; ಸಹವಾಸ: ಅವಳ ತೊಣೆ ಪುವಿಗೂ ಹರ್ಷವನ್ನೊದಗಿಸುತ್ತಿದೆ (ಹುಲಿಹಾ. ೩೬). ೩. ಸಂಗಡಿಗ ; ಒಡನಾಡಿ : ರಕ್ಷಿಸು ನಮಃಶಿವಾಯ ನೀನೆ ತೊಣೆ ನೀನೆ ಹೊಣೆ ಎಂದು ಕಱಿಗೊರಲಂಗೆ ಮೊಱೆಯಿಡೆ (ಜಾಗೀರ. ದೇ. ೬೩೬-೯). 'ಎಣೆತೊಣೆ' ಪರಾ. **ತೊನೆ$_2$** : ೧. ನಿರುಪಮ ಧರ್ಮ್ಯಕಾರ್ಯ್ಯದೆಡೆಯೊಳು(ಳ್)ಸಲೆ ಶೋಭನಸೆಟ್ಟಿಯೊಳು(ಳ್) ದಿಟಂ ಸರಿ ದೊರೆ ಪಾಟ ಪಾಸಟ ಸಮಂ ತೊನೆಯೆಂದಡೆ ದೋಸವಾಗದೇ (ಕಇ IV, ೧೦-೪೯; 1121).

ತೊಣೆ ನಡೆಯರ್=ಜೊತೆಗೂಡಿ ನಡೆಯುವವರಂ; ಒಡನಾಡಿಗಳು: ಬರ್ಪೆವಾಮ್ ತೊಣೆನಡೆಯರ್ ; ಇರ್ವರುಮ್ ನೋಡುತ್ತುಮೊರ್ವನಾಕಣ್ಗಿನ್ (ಅಂತಿಗೊ. ೪೪-೯೦).

[ದೇ.ಪ ತಮಿ. ತುಣ್ಯ ; ಮಲ. ತುಣ ; ಕೊಡ. ತೊಣೆ]

ತೊಣೆ$_1$, ಡೊಣೆ$_2$, ದೊಣೆ$_2$ (ನಾ). ಬಾಣದ ಕೋಶ ; ಬತ್ತಳಿಕೆ ; ತೂಣೀರ : "ಮೂಡಿಗೆ ತೊಣೆ ಬತ್ತಳಿಕೆಯು" (ಕವಿಕಂ. ೪೧) ; ನಿನ್ನ ಶರಕೊಂದೆ ವಾಹನಕಮೆರಡು ಆರ್ಮೊಗಕೆ ಮೂರ್ಬಿಲ್ಗೆ ನಾಲ್ಕು ತೊ[ಪಾಠಾಂ. ಡೊ]ಣೆಗ್ಕೆದನಿತೆ ಕೂರ್ಮೊನೆಯು ಸರಳ್ಗಳಿಂದೆಸೆಯಲ್ಕೆ (ಕಬಪು. ೪೩-೧೯). **ಡೊಣೆ$_3$** : "ತೂಣೀರಮುಪಾಸಂಗಂ ಬಾಣಧಿ ಬಾಣಾಶ್ರಯಂ ನಿಷಂಗಂ ಡೊಣೆಗಳ್" (ವಸು.ಕೋ. ೬೫-೧೯); ಅಂತುಮಾ ರೂಪನೆ ಚಿಂತಿಸಿ ಚಿಂತಿಸಿ ಕಾಂತೆಯರ್ ಪತಿಗೆ ರತಿ ಸೋಲ್ತ ಕೆಂದಳಿ ರಂತಲರ್ಗಣೆಗೆ ಡೊಣೆಯಾದರ್ (ಶಾಂತಿಪು. ೧೦-೯೨) ; ಮಸೆವೆತ್ತ ಕೂರ್ಗಣೆಗಳಂ ಡೊಣೆಗಳಿಂದುಗಿದುಗಿದು ತೆಗೆದೆಸೆಯಲು (ಕಬಪು. ೪೯-೧೯); ಡೊಣೆಯಿಂ ಕಣೆಯಂ ತೆಗೆದಾರ್ದು ಬಿಲ್ಗದಂ ಪೂಡಿ (ಕಬಕಂ. ೩-೫೨). **ದೊಣೆ$_2$** : ತನುತ್ರಯಮಿಾ ಭಯಂಕರಧನು ಖಿಲ್ಗಮತ್ಪರಮಿಂತೆರಡುಂ ದೊಣೆ ತೀವಿದಂಬುಪೊಂದಿರವು ತಪಕ್ಕಿದೆಂತುಟೊ (ಪಂಪಭಾ. ೮-೧೭) ; ದೊಣೆಯಿಂದಂ ತೆಗೆವಾಗಳೊಂದು ತುಡುವಾಗಳ್ವತ್ತು ಬಾಣಂ (ಗದಾಯು. ೩-೩) ; ಕಾವುಸ ದೊಣೆಗೆ ತೊಣೆಯೆನಿಪ್ಪ ಕಿಬ್ಬುದೊಡೆ (ಕಾರಿರ.ದೇ. ೨೮೯-೭); ಇಂತೀ ನುಡಿಗೆ ಪುಷ್ಕಲಾ ಕರಂ ಕನಲ್ದು ದೊಣೆಯಿಂ ನಂಜನನುಗುಟ್ಟ ಕವಲಂಬುಗಳನುರ್ಚಿ ಮೊಗೆದಿಸುತಂಮಿರೆಯಿರೆ (ಕಾಮುಕ್ಕ. ೯೩-೩) ; ಗುರಿ ಸಿಕ್ಕಿತನುವಾಗ ದೊಣೆ ಬರಿದಾಗಿತ್ತು (ಹಂದ್ರವೀ. ೪೦-೬೦).

[<ಪ್ರಾ. ತೋಣ./ಸಂ. ತೂಣ]

ತೊಣೆಗಾಣು (ಕ್ರಿ). ಸಮಾನತೆಯಂನ್ನು ಕಾಣು : ಭೂಚಕ್ರದೊಳಗೀತಂಗೆ ತೊಣೆಗಾಣೆವೆಂದು ಸಜ್ಜನಸಮಿತಿ ಪೊಗಳುತಿರಲು (ಗುರುಚಾ. ೧೨-೩೨).

[ತೊಣೆ$_1$ + ಕಾಣು (<ಕಾಣ್)]

ತೊಣೆವಕ್ಕಿ (ನಾ). ಜೊತೆಯಾಗಿರುವ ಪಕ್ಷಿ ; ಅಮಳ್ವಕ್ಕಿ ; ಚಕ್ರವಾಕ: "ಕೋಕಮೆನಲ್ ತೊಣೆವಕ್ಕೆ [ಪಾಠಾಂ. ಪೊಣರ್ವಕ್ಕಿ]" (ಚತುಸಾ. ೧೧೮) ; ಪಾರಿವವಂಚೆ ಕೊಂಚೆ ಗಿಳಿ ಸೋಗೆ ಕುಕಿಲ್ ತೊಣೆವಕ್ಕಿ . . . ದನಿಗೆಯ್ದುವುವು (ಸೂಕ್ತಿಸು. ೧೪-೫೦) ; ಪಾಡುತಿಹಾಜಡಿ ನೆಜಿ ಹೆಜಿಸಾರುವ ತೊಣೆವಕ್ಕೆ (ಉದ್ಭರೇ. ೪-೧೦). 'ಎಣೆವಕ್ಕಿ' ಪರಾ.

[ತೊಣೆ$_1$ + ಪಕ್ಕಿ$_1$]

ತೊಣೆವರ್ (ಕ್ರಿ). ಜೊತೆಯಲ್ಲಿ ಬರು : ಸೋಮಂ ಸೌಮ್ಯದೆ ಸಾನ್ತನುಂ ತೊಣೆವರಲ್ . . . ಜ್ಞಾನಕ್ಕೆ ಮೇಣ್ಪೊಂದ್ದನುಂ ತಾಮಾರರ್ಗಡಮೆಂದು ತೋರ್ವ ನಲವಿಂ ಗೆಲ್ವಾಂವನಾ ಗುಮ್ಮಟಂ (ಕುಸೂಪು. ೩-೭೪).

[ತೊಣೆ$_1$ + ಬರ್]

ತೊಣೆವೆಱು (ಕ್ರಿ). ಜೊತೆಯಾಗು ; ಸರಿಸಾಟಿಯಾಗು ; ಸರಿಸಮಾನತೆಯನ್ನು ಹೊಂದು : ಪೊಣರ್ದೊಡಮನುವರಮಿವನೊಳ್ [ತೊಣೆ] [ಪಾಠಾಂ. ದೊರೆ]ವೆತ್ತವುದೆನಗೆ ನರನೊಳ್ (ಪಂಪಭಾ. ೧೨-೧೬೪).

[ತೊಣೆ$_1$ + ಪೆಱು$_1$]

ತೊಣೆಹೋಗು (ಕ್ರಿ). ಜೊತೆಯಲ್ಲಿ ಹೋಗು : ಚೆಲುವೆಯನು ಹೊಂಗನೂರಿಂಗೆ ಚಿಕ್ಕಕೇತಯ್ಯ ದಣ್ಣಾಯ್ಕರು ತೊಣೆಹೋಹುತವಿದ್ದಲ್ಲಿ (ಎಕ. IX, ಚನ್ನ.ಪ. ೧೫-೬ : 1338).

[ತೊಣೆ$_1$ + ಹೋಗು$_1$ (<ಪೋಗು$_1$)]

ತೊಣ್ಣಂಗಿ 'ತೊಂಡಂಗಿ' ನೋ.

ತೊಣ್ಣಂದ (ನಾ). ಒಬ್ಬಾತನ ಹೆಸರು : ಬಿನವತಿಅಬ್ಬೆ ಊರಾಳೆ ಮುಡುಗಾರ ತೊಣ್ಣಿನ್ದರ ಮಗನುಂ ಪೊರಿಗೊಣ್ಣಿನ್ದಮ್ಮಗನುಂ ಶ್ರೀಯಮ್ಮನೆ[ಮ್ಪೊ] ×× ಯ್ವಸರ್ ಅರಿಧೀರನೆ[ಮ್ಪೋ]ದ ××× (ಸೌಇಇ. XX, ೧೦-೨ ; ?). 'ಕೊಣ್ಣಿಂದ' ಪರಾ. [?]

ತೊಣ್ಕೆ (ನಾ). ಪ್ರಾಚೀನ ; ಮೂಲ (?) : ಭೂತಿಗೆ ಕುಜುವೆಂಬ ಕಿಂಕರರ ತೊಣ್ಕೆಯಿದೆಂಬ ವಿಲಾಸವೆಂಬ ದೇಸಗೆ ದಶಲಕ್ಷಲೆಕ್ಕದಸಿಪೇಟಕ

ಕೋಟಿಯ ಮಿಂಚುಬಳ್ಳಿದೀವಿಗೆಯನಲರ್ಚಿ ದೇವಸಭೆಯೊಳ್ ಮೆಱೆವರ್ ದಿವಿಜಾಂಗರಕ್ಷಕರ್ (ಅನಂಪು. ೪-೫೨). [←ತಮಿ. ತೊನ್ಮೈ ?]

ತೊತ್ತಳ 'ತೊಟ್ಟುಟಿ' ನೋ.

ತೊತ್ತಳಂತುಳಿ 'ತೊಟ್ಟುಟಿದುಟಿ' ನೋ.

ತೊತ್ತಳಂದುಳಿ 'ತೊಟ್ಟುಟಿದುಟಿ' ನೋ.

ತೊತ್ತಳಂದುಳಿಯಿಸು (ಕ್ರಿ). ಅಜಿಗಿಜಿಯಾಗುವಂತೆ ತುಳಿಸು ; ನುಗ್ಗುನುರಿಯಾಗುವಂತೆ ತುಳಿಯಿಸು : ಆನೆಗಳಿಂ ತೊತ್ತಳಂದುಳಿಯಿಸಲು ಬಗೆದು (ವಾಗೀರ. ದೇ. ೨೬೬-೧).

[ತೊತ್ತಳಂದುಳಿ (<ತೊಟ್ಟುಟಿದುಟಿ) + – ಇಸು$_3$]

ತೊತ್ತಳತುಳಿ 'ತೊಟ್ಟುಟಿದುಟಿ' ನೋ.

ತೊತ್ತಳದುಳಿ 'ತೊಟ್ಟುಟಿದುಟಿ' ನೋ.

ತೊತ್ತಳದುಳಿತ, ತೊತ್ತಳಿದುಳಿತ (ನಾ). ನುಗ್ಗುನುರಿ ಮಾಡುವಿಕೆ ; ಉಗ್ರವಾದ ಆಕ್ರಮಣ : ಅವರ ತೊತ್ತಳದುಳಿತದಿಂದ ತಮ್ಮ ಕಾವಲ ಹುರಿಗಡಲೆಯ ರಾಶಿಯನ್ನೂ ಚೀಲಗಳನ್ನೂ ರಕ್ಷಿಸಿಕೊಳ್ಳುತ್ತಿರುವರು (ಬಿರುಗು. ೧೩-೧೨) ; ಉಲ್ಲೋಲ ಕಲ್ಲೋಲ ಜೀವನಾಂಭೋನಿಧಿಯ ರುದ್ರತಾಂಡವದ ತೊತ್ತಳ ದುಳಿತಕಾಳಾಗಿ (ನಡಬಂ. ೫೨-೭) ; ಪರಕೀಯರ ತೊತ್ತಳದುಳಿತವನ್ನು ಆಮಂತ್ರಿಸಿದ ಭಾರತೀಯರಿದ್ದಾರೆ (ಕರ್ಣಾಟ. XV ಮುನ್ನುಡಿ). **ತೊತ್ತಳಿದುಳಿತ:** ಈ ಭೈರವಿಯ ತೊತ್ತಳಿದುಳಿತಕ್ಕೆ ಪರಕೀಯ ಸೊತ್ತಿನ ನೊಗ ಜಿಬ್ಬೆಜಿಬ್ಬೆಯಾಯಿತು (ಸುವರ್ಣ. ೨೨೬).

[ತೊತ್ತಳ (<ತೊಟ್ಟುಟಿ) + ತುಳಿತ]

ತೊತ್ತಳಿ 'ತೊಟ್ಟುಟಿ' ನೋ.

ತೊತ್ತಳಿಗೊಳ್ (ಕ್ರಿ). ನಜ್ಜುಗುಜ್ಜಾಗು ; ಅಜಿಗಿಜಿಯಾಗು : ಹಿಂಬರಿಕೆಯಡಿಯಲ್ಲಿ ಸಿಕ್ಕು ತೊತ್ತಳಿಗೊಂಡು ಸಾವವರ ನರಳಿಕೆಯ ಕಿವುಡುಗೇಳಿ, ಇಲ್ಲಿಯೂ ಅಲ್ಲಿಯೂ ಕೊನೆಗಾಣದಾಸೆಗಳ ಅಂತರ ಪಿಶಾಚಿಯೇ ! (ಉಯ್ಯಾಲೆ. ೪೫-೩). [ತೊತ್ತಳಿ (<ತೊಟ್ಟುಟಿ) + ಕೊಳ್$_1$]

ತೊತ್ತಳಿದುಳಿತ 'ತೊತ್ತಳದುಳಿತ' ನೋ.

ತೊತ್ತಟಿ 'ತೊಟ್ಟುಟಿ' ನೋ.

ತೊತ್ತಟಂದುಟಿ 'ತೊಟ್ಟುಟಿದುಟಿ' ನೋ.

ತೊತ್ತಟದುಟಿ 'ತೊಟ್ಟುಟಿದುಟಿ' ನೋ.

ತೊತ್ತಿ (ನಾ). ಊಳಿಗದವಳು ; ದಾಸಿ: ಮತ್ತೊಂದು ಕಾರ್ಯಮೇನುಂ ಬಿತ್ತರಿಪೊಡಮಿಲ್ಲ ನಿನ್ನ ವಲ್ಲಭೆಗೆ ಕರಂ ತೊತ್ತಿಯರಾಗಿಯೆ ಬೆಸನಂ ನೆತ್ತಿಯೊಳಾಂತೆಯ್ದೆ ಮಾಟ್ಟುದಲ್ಲದೆ ನಮಗಂ (ಜಾಧಪು. ೬-೪೦) ; ರಾಮ ನಿನ್ನೀ ಹತ್ತುತಲೆಗಳ ಕಡಿಯೆ ಬಳಿಕವರೆನ್ನ ತೊತ್ತಿಯರು (ಕೌಶಿರಾ. ೧೦-೭೦) ; ಇವರು ತೊತ್ತಿಯರಂದದಿಂದೀ ದಿವಿಜಲೋಕದ ನಾರಿಯರು ನಾವಿವರ ನೋಡುವರಲ್ಲವೆನೆ (ನಿಭಾಗ. ೧೧-೮-೩೩).

[ತೊತ್ತು (<ತೊಟ್ಟು) + – ಇ$_2$]

ತೊತ್ತಿಗ (ನಾ). ಊಳಿಗದವನು ; ಸೇವಕ : ಬಿನುಗು ಕೋಡಗಿಗಳಿರ ನೀವೀತನಿಗೆ ತೊತ್ತಿಗರಾಗಿ ಸಾಯದಿರೆಂದು ಬೊಬ್ಬಿಱಿದ (ಕೌಶಿರಾ. ೧೯-೪೧) ; ಸಾಲವಿರುವವನು ತೊತ್ತಿಗನು ಲೋಕದೊಳ್ ಸಾಲವೇ ಶೂಲ (ನೀತಿಚಂ. XI, ೧೯). 'ಗಂಡುತೊತ್ತಿಗ' ಪರಾ.

[ತೊತ್ತು (< ತೊಟ್ಟು) + – ಇಗ]

ತೊತ್ತು 'ತೊಟ್ಟು' ನೋ.

ತೊತ್ತುಗೆಯ್ಸು, ತೊತ್ತುಗೈಸು (ಕ್ರಿ). ಊಳಿಗವನ್ನು ಮಾಡಿಸು: ಸುರರ ನೆಱೆ ಗೋಳುಂಡೆಗೊಳಿಸಿದ ತೊತ್ತುಗೆಯ್ಸಿದ ನೆರೆದ ಮರ್ಕಟರ (ಕೌಶಿರಾ. ೩೧-೫೨). **ತೊತ್ತುಗೈಸು :** ಎನ್ನಯ ಹೆಂಡಿರೆಲ್ಲರನು ತೊತ್ತುಗೈಸುವೆ (ಕೌಶಿರಾ. ೧೦-೭೦). [ತೊತ್ತು (< ತೊಟ್ಟು) + ಕೆಯ್ಸು]

ತೊತ್ತುಗೆಲಸ 'ತೊಟ್ಟುಗೆಲಸ' ನೋ.

ತೊತ್ತುಗೆಲಸಂಗೆಯ್ (ಕ್ರಿ). ಆಳಿನ ಕೆಲಸವನ್ನು ಮಾಡು ; ಊಳಿಗವನ್ನು ಮಾಡು ; ಸೇವೆಯನ್ನು ಸಲ್ಲಿಸು : ತೊತ್ತುಗೆಲಸಂಗೆಯ್ಯವೇಳ್ದು[ಪಾಠಾಂ. ಲಿತ್ತು]ದ್ಧರಿಸು (ಬಸಪು. ೨೩-೨೯).

[ತೊತ್ತುಗೆಲಸ (<ತೊಟ್ಟುಗೆಲಸ) + ಕೆಯ್$_1$]

ತೊತ್ತುಗೈ 'ತೊಳ್ತುಗೆಯ್' ನೋ.

ತೊತ್ತುಗೈಸು 'ತೊತ್ತುಗೆಯ್ಸು' ನೋ.

ತೊತ್ತುಗೊಡು 'ತೊಟ್ಟುಗೊಡು' ನೋ.

ತೊತ್ತುಗೊಳ್ 'ತೊಟ್ಟುಗೊಳ್' ನೋ.

ತೊತ್ತುತನ 'ತೊಟ್ಟುತನ' ನೋ.

ತೊತ್ತುಬಡಕ 'ತೊತ್ತುಬಡಿಕ' ನೋ.

ತೊತ್ತುಬಡಿಕ, ತೊತ್ತುಬಡಕ (ನಾ). ಜಾರ; ವಿಷಯಲಂಪಟ: ತೊತ್ತುಬಡಿಕಂಗೇಕೆ ತತ್ತ್ವವಿಚಾರ (ಅಮೃತ. ೧-೪೩). **ತೊತ್ತುಬಡಕ :** ತೊತ್ತುಬಡಕನಿಗೆ ಪರತತ್ತ್ವದ ವಿಚಾರವೇಕೆ (ಪುರಂದ. ೧-೩೧-೧); ತೊತ್ತುಬಡಕರಿಗೆ ತತ್ತ್ವ ಉಸುರದಿರು (ವಿಸಾಸು. ೭೮-೩) ; ತೊತ್ತುಬಡಕಗೆ ಬಹು ತತ್ತ್ವವಿಚಾರವ್ಯಾತಕೆ (ಪ್ರಸಕೀ. ೫೧-೧). [ತೊತ್ತು (<ತೊಟ್ಟು) + – ಬಡಿಕ]

ತೊತ್ತುಬುದ್ಧಿ (ನಾ). ವೇಶ್ಯಾಬುದ್ಧಿ : ಉಪರತಿಗೆ ಪರಪುರುಷನ ಬಯಸುವ ತೊತ್ತುಬುದ್ಧಿಯನೆಲ್ಲ ಬಿಡು ಕಂಡ್ಯ ಮನವೆ (ವಿದಾಕ್ಯ. ೫೧-೩).

[ತೊತ್ತು (< ತೊಟ್ಟು) + ಬುದ್ಧಿ]

ತೊತ್ತುಮಗ 'ತೊತ್ತುವಗ' ನೋ.

ತೊತ್ತುವಗ, ತೊತ್ತುಮಗ (ನಾ). ತೊತ್ತಿನ ಮಗ ; ದಾಸೀಪುತ್ರ : "ದಾಸಂ ತೊತ್ತುವಗನಕ್ಕು" (ಮಂಗರಾ. ೭೧-೧೭). **ತೊತ್ತುಮಗ :** (ಕಿ).

[ತೊತ್ತು (< ತೊಟ್ಟು) + ಮಗ]

ತೊತ್ತುವೆಗ್ಗಡೆ (ನಾ). ರಾಣೀವಾಸದ ಮೇಲ್ವಿಚಾರಕ ; ಅಂತಃಪುರದ ಅಧಿಕಾರಿ : "ತೊತ್ತುವೆಗ್ಗಡೆಗಳಂತರ್ವಂಶಿಕರಕ್ಕು" (ಮಂಗರಾ. ೭೯-೭). 'ಅಂತರ್ವಂಶಿಕ' ಪರಾ.

[ತೊತ್ತು (< ತೊಟ್ಟು) + ಪೆಗ್ಗಡೆ (< ಪೆರ್ಗಡೆ$_1$)]

ತೊತ್ತುವೆಸ 'ತೊಟ್ಟುವೆಸ' ನೋ.

ತೊತ್ತುವೇಟ (ನಾ).ವೇಶ್ಯೆಯ ಪ್ರಣಯ: ಕಡಿದರೋ ಸುರತರುವನೆಲವದ ಮಿಡಿಯ ಬಯಕೆಗೆ ತೊತ್ತುವೇಟಕೆ ಹಡೆದ ತಾಯನು ತೊಱಸಿದರೋ (ತೊರರಾ. ೪-೫-೧೧).

[ತೊತ್ತು (< ತೊಟ್ಟು) + ಬೇಟ (< ಬೇಂಟ)]

ತೊತ್ತುವೊಗು (ಕ್ರಿ). ಕಿಂಕರನಾಗು ; ದಾಸನಾಗು : ಲಿಂಗಜಂಗಮಕ್ಕೆ ತೊತ್ತುವೊಕ್ಕು ಲಿಂಗಜಂಗಮಪ್ರಸಾದಿಯಾದ (ಚನ್ನವ. ಕ. ೩೮೮-೮೨೧) ; ತೊತ್ತುವೊಕ್ಕೆಂ ಮಹೇಶ್ವರ ನೀಂ ರಕ್ಷಿಪುದೆನ್ನನು (ಶಂಕಶ. X, ಪೀಠಿಕೆ).

[ತೊತ್ತು (< ತೊಟ್ಟು) + ಪೊಗು (< ಪುಗು)]

ತೊತ್ತುವೋಗು (ಕ್ರಿ). ದಾಸಿಯಾಗು ; ಸೇವಕಿಯಾಗು: ಜೀಯ ತೊತ್ತುವೋದಳು ನಮಗೆ ಜಯವನಿತೆ (ಶ್ರೀರಾಮಾ. ೬೫೫-೩೪೮).

[ತೊತ್ತು (< ತೊಟ್ಟು) + ಹೋಗು$_1$ (<ಪೋಗು$_1$)]

ತೊತ್ತುಳಿ (ಕ್ರಿ). ಅಜಿಗಿಜಿಯಾಗುವಂತೆ ತುಳಿ ; ಧ್ವಂಸಮಾಡು : ತೊತ್ತುಳಿದರೂನೂ ಥಥ್ಥಳಿಸಿ ಹೊಳೆವೆ ಸಂಜೀವಭ್ರಮರನಂತೆ (ಅರಳು. ೨೧೫-೮) ; ಈ ದಿಬ್ಬವು . . . ಪುಣೆಯನ್ನೆಲ್ಲ ಒಂದು ದಿನ ತೊತ್ತುಳಿದು ಹಾಳುಮಾಡುವಂತೆ ಇದು ನನ್ನನ್ನು ಅಂಜಿಸಿದೆ (ಸಮಜೀ. ೧೦೯).

[< ತೊಟ್ಟುಟಿದುಟಿ]

ತೊತ್ತುಟಿ 'ತೊಟ್ಟುಟಿ' ನೋ.

ತೊದ 'ತೋಡ$_2$' ನೋ.

ತೊದನಾಡು (ನಾ). ತೊದವರ ನಾಡು: ಹದಿನಾಡ ಹಲಸೀನ ತೊದನಾಡ ಬಾಳೇಯ . . . ನನಗೆಂದು ತಂದೆ ಅಣ್ಣಯ್ಯ (ಜಗೀತೆ. ೫೮).

[ತೊದ (< ತೋಡ$_2$) + ನಾಡು]

ತೊದಭಾಷೆ (ನಾ). ನೀಲಗಿರಿಯ ತೋಡಜನಾಂಗದವರಂ ಆಡುವ ಭಾಷೆ: ೧೯೬೧ರ ಜನಗಣತಿಯಲ್ಲಿ ೭೬೫ ಜನ ತೊದಭಾಷೆಯನ್ನು ಆಡುವವರಿದ್ದಾರೆಂದು ಹೇಳಿದೆ (ದ್ರಾವಿವಿ. ೧೫೫).

[ತೊದ (< ತೋಡ$_2$) + ಭಾಷೆ]

ತೊದಲ್$_1$ 'ತೊದಳ್$_1$' ನೋ.

ತೊದಲ್$_2$ 'ತೊದಳ್$_2$' ನೋ,

ತೊದಲ 'ತೊದಳ' ನೋ.

ತೊದಲಾಟ (ನಾ). ಮಕ್ಕಳ ಅಸ್ಪಷ್ಟವಾದ ಮಾತು: ತಪ್ಪಡಿ ತಪ್ಪೀಸಿ ತೊದಲಾಟ ಬಿಟ್ಟೂ (ಮೂರ್ತಿಕಾ. ೪೧-೫).

[ತೊದಲು$_2$ (< ತೊದಳ್$_2$) + ಆಟ]

ತೊದಲಿಸು 'ತೊದಳಿಸು' ನೋ.

ತೊದಲು$_1$ 'ತೊದಳ್$_1$' ನೋ.

ತೊದಲು$_2$ 'ತೊದಳ್$_2$' ನೋ.

ತೊದಲುನಾಲಗೆ (ನಾ). ತಡವರಿಸುವ ಜಿಹ್ವೆ; ತೊದಲುವ ನಾಲಗೆ: ಮೊದಲು ಭಜಿಸಿದೆನು ಈಶನನು ಸ್ತುತಿಗೈದು ತೊದಲುನಾಲಗೆಯಲ್ಲಿ ತಾಯ್ನುಡಿಯ ಹಿಡಿದು (ಕಎಪು. ೧೦-೬).

[ತೊದಲು$_2$ (< ತೊದಳ್$_2$) + ನಾಲಗೆ]

ತೊದಲುನುಡಿ 'ತೊದಳ್ನುಡಿ$_2$' ನೋ.

ತೊದಲುಮಾಡು 'ತೊದಳ್ಮಾಡು' ನೋ.

ತೊದಲುಮಾತು 'ತೊದಳ್ವಾತು' ನೋ.

ತೊದಲುಲಿ$_1$ (ಕ್ರಿ). ತೊದಲುಮಾತನಾಡಂ: ಮಗು ತೊದಲುಲಿವೊಲು ತಾಯನು ಕರೆಯೆ, ಉಲಿವೆನು ಮಗುಳ್ದುಲಿವೆನು ಶ್ರೀಹರಿಯೆ ನಿನ್ನ ನಾಮವನು (ಗಿಳಿವಿಂ. ೨೬-೭). [ತೊದಲ್$_2$ (<ತೊದಳ್$_2$) + ಉಲಿ$_1$]

ತೊದಲುಲಿ$_2$ 'ತೊದಳುಲಿ' ನೋ.

ತೊದಲ್ನುಡಿ$_1$ 'ತೊದಳ್ನುಡಿ$_1$' ನೋ.

ತೊದಲ್ನುಡಿ$_2$ 'ತೊದಳ್ನುಡಿ$_2$' ನೋ.

ತೊದಲ್ವಾತು 'ತೊದಳ್ವಾತು' ನೋ.

ತೊದಲ್ಸೊಲ್ಲಿಸು (ಕ್ರಿ). =ತೊದಲುಲಿ$_1$: ತಲ್ಲಣಿಸುತೈದಿಯವ್ವಬೈಬೇಯೆಂಬ ತೊದಲ್ಸೊಲ್ಲಿಸುತೆ . . . ಬಂದು ತೊಡೆಯಡರೆ (ನವಮೋ. ೧೫-೫೪).

[ತೊದಲ್$_2$ (< ತೊದಳ್$_2$) + ಸೊಲ್ಲಿಸು]

ತೊದಳ್$_1$, ತೊದಲ್$_1$, ತೊದಲು$_1$, ತೊದಟ್ (ಕ್ರಿ). ೧. ಮಾತಿನಲ್ಲಿ ತಡವರಿಸು: ನಿಮ್ಮನರ್ಚಿಪಾ ಬಾಯ್ಗೆ ನಮೋನಮೋ ತೊದಳದುನ್ನತ [ಪಾಠಾಂ. ದುಣ್ಮುತ]ಭಕ್ತಿಯೊಳೆಯ್ದೆ ಪಾಡುವಾ (ಪಂಪಾಶ. ೧೯). ೨. ಎದುರಿಸು; ಪ್ರತಿಭಟಿಸು: ವಯಚಯನ್ ತುರಗಗೊಳ್ಸಾಗಿ ದುಗ. ದರಸನುಂ ತೊದಳ್ದು ವೇಳೆಯವನಾಳು × ಪಟುಯುತ್ತಂ ಬಪ್ಪುದ ನನ್ನಗನ್ಕಾದೆ (ಸೌಇಇ. IX-1, ೨೨-೫; 923); ಸಂಗರಾಗ್ರದೊಳು ತೊದಳ್ದ ಪರಾರುದಾತ್ತಕಲಿತೇಜಚಮೂಪನೊಟುಗ್ರಕೋಪನೊಳು (ಎಕ. XI, ದಾವಣ. ೪೪-೪೬; ಸು. 1180). P ಇದು ಬಹುಶಃ 'ತೊಡರ್' ಎಂಬುದರ ಅಪಲಿಖಿತವಿರಬಹುದು. **ತೊದಲ್$_1$**: ೩. ಮಕ್ಕಳು ಮುದ್ದಾಗಿ ಮಾತನಾಡು: ಸುರಿವ ಸುರಯಿಯರಲ ಮುಗುಳ್ಗೆ ಮೊಗಸಿದಳಿಕುಳಂಗಳಿಂ ತೊದ[ಲ್ವ][ಪಾಠಾಂ. ಳ್ವ] ಶಿಶುಶುಕಂಗಳಿಂ(ಪಂಪಭಾ. ೧-೫೮). **ತೊದಲು$_1$**: ೧. ಅವಳ ಮಾತ ಕಲಿಯಲೆಂದು ತೊದಲುತಿಹುದು ಬಾಯಿಯು (ಅರಳು. ೪೯೪-೨೨); ನನಗೆ ಭಯವಾಗಿತ್ತು ಎಂದು ತೊದಲಿದ ಕೋಷವ್ಯ (ಶಾಲಿಮ. ೧೭೦). ೩. ತೊದಲುತ ಮುದ್ದುಮುದ್ದಾಗಿ ರಸವೊಗಲು ಮಾತಾಡಿ (ಅನಂರಾ. ೧-೧೮-೧೦). △ **ತೊದಟ್**: ೨. ನುಡಿದಡೆ ಕರ್ಣ್ಣ ನಾಹವದೊಳಿನ್ದ್ರಸುತಂ ಪಗೆಗೊಣ್ಡ ದರ್ಪ್ಪ[ದಿಂ] ತೊದಟ್ಟನಾಟಂಗೆ ವಾಯುತನಯಂ (ಸೌಇಇ. XX, ೩೧-೧೪; 1044). ೪. ಸುಳ್ಳು ಹೇಳು: ಮೋಹಬನ್ಧನದ ತೊಡರ್ಪ್ಪಿನೊಳ್ತೊದಟ್ಟು ಮೋಹಿಸಿ (ಎಕ. VII, ಶಿಕಾರಿ. ೨೧೯-೨೪; 918); ಪರನಾರೀಪುತ್ರಕ ನಣ್ಬರ ತೊಟ್ಟು . . . ತೊದಟ್ಟರ ಬೀವ (ಎಕ. II, ೩೧೭; ಸು. 950); ಖಣ್ಡಳಿ ವಾಸುದೇವ ಮೂಳ ಭದ್ರೋದ್ಭವನ್ನುಡಿದು ಪುಸಿಯತ್ತೊದಟ್ಟು ಕುಸಿಯಂ (ಎಕ. IV, ಹೆಗ್ಗಡ. ೧೭-೧೨; 1033). 'ಕೊದಲು$_1$' ಪರಾ.

[ದೇ. ॥ ಪರ್ಜಿ. ತೊತ್ರ್; ಕುವಿ. ತೊಥಲಿ./ ಹಿಂ. ತುತಲಾನಾ; ಪಂಜಾ. ತೊತ್ಲಾವುಣಾ; ಒರಿ. ತೊತಳಾ, ತೊತಲಾ; ಗುಜ. ತೊತ್ಳೂ, ತೊತ್ಲೂ, ತೊತ್ರೂ]

ತೊದಳ್$_2$, ತೊದಲ್$_2$, ತೊದಲು$_2$, ತೊದಳು (ನಾ). ೧. ತಡವರಿಸುತ್ತ ಮಾತನಾಡುವಿಕೆ: ಉಣ್ಮಿದ ಬೆಮರೋಳಿವಟ್ಟ ನಿಡುಸುಯ್ ತೊದಳಿಂಗೆಡೆಗೊಂಡ ಮಾತು (ಪಂಪಭಾ. ೪-೬೦); ರಸನಾಗ್ರದೊಳ್ ತೊದಳ್ವೆರಸಿದ ಮಾತಿನಿಂದೆಸೆದರಂಗನೆಯರ್ ಮಧುಪಾನಕೇಳಿಯೊಳ್ (ಕುಸುಮಾ. ೧೧-೧೬೦); ತೊದಳಂ ಮಾಟ್ಟ ಕೊ [ದಳ್] ವಿಕಾರವಶಮಂ ಕೈಕೊಂಡ ಮೆಯ್ (ಬಂಹರಿ. ೩-೫೭). ತೊದಳಿನಿತಿಲ್ಲದೊಳ್ಪೆಸವ ವಾಣಿಯ ಹಾಣ್ನುಡಿ ಕೇಳಲಾಯ್ತು (ದಶಕು. ೧೨-೫). ೨. ಮಕ್ಕಳ ತೊದಲು ಮಾತು, – ಅಸ್ಪಷ್ಟವಾದ ಮಾತು: "ತೊದಳ್ ಶಿಶುವಚಂ" (ಕರ್ಣಾನಿ. ೪೯); ಕಿವಿಗಿಂಪಂ ತೊ[ಪಾಠಾಂ. ಕೊ]ದಳೊಳ್ ಪೊದಟ್ಟ ನುಡಿಗಳ್ ಕಣ್ಗಟ್ಕಱಂ ರಾಗದಾಡುವ ಕೂಸಾಟದ ಚೆಲ್ವುಗಳ್ ಕುಡೆ . . . ಬಾಲ ನಿಂತೊದವಿದಂ(ಅದಿಪು. ೭-೧೨೮); ಕಿಱುನಗೆ ಲೋಳೆವಾಯ್ ತೊದಳೊಂದಿದ ನಾಲಗೆ . . . ನೆಱ್ ತನಗೊಪ್ಪುವರ್ಭಕನನೊರ್ವನನಾಂ ಪಡೆವಂದ ಮಾವುದೋ (ಸುಕುಮಾ. ೯-೯೯); ತೊದಳಿಸದ ತೊದಳ್ ಕೊಂಕಿಲ್ಲದ ದಟ್ಟಡಿ . . . ಭಾಲಭಾವಮಚ್ಚರಿ ಜಿನನಾ (ಅನಂಪು. ೬-೮); ತೊದಳಿಂ [ಪಾಠಾಂ. ಲಿಂ]ದೆ ನುಡಿಯೆ ಶಿಶುವದಱಲ್ಲಿ ತಪ್ಪನಾ ಚದುರನಾರ್ಯೆಯ ದಂತೆ (ಅನುಸಾ. ೧-೨೦೩). ೩. ಸುಳ್ಳು; ಹುಸಿ: "ತೊದಳ್=ಪುಸಿ" (ಶಮದ. ಪರಿ. ೨); "ತೊದಳೆಂದುಂ ಸುಳ್ಳೆಂದುಂ ಅನೃತಂ" (ಕಶಸಾ. ೨೬-೫೫೧); ಪರ್ವುವುದು ಕೀರ್ತಿ ಪುರಾಕೃತಪುಣ್ಯದಿಂದೆ ಸಂಗಳಿಸುವುವೆಂದೊಡೀ ಮಖದೊಳೇಂ ತೊದಳುಂಟೆ (ಪಂಪಭಾ. ೬-೧೯); ಮನ್ನಿಸಿ ಪಿರಿದೀವಂ ತೊದಳಂನ್ನುಡಿಯನ್ತೊಡರ್ದು ಮಾಣನ್ (ಎಕ. II, ೧೩೩-೫೮; 982); ಇಱಿವಬೆಡಂಗನ ಕೊರಲೊಳ್ಕೊಂಕುಂಟೆ ನುಡಿಯೊಳೇಂ ತೊದಳುಂಟೆ (ಗದಾಯು. ೨-೬); ತನ್ಮುನಿ ಪೇಟ್ಟಣುವ್ರತಮನಾನೀಗಳ್ ಬಿಸುಟ್ಟೌಗಳೇಂ ತೊದಳಿಲ್ಲಂ ನುಡಿವಂದವಿಂತೆ (ಸುಕುಮಾ. ೬-೫೦); ತೊದಳಲ್ಲು ನಾರದಂ ಪೇಟ್ಟುದು (ಜಗವಿ. ೨-೪೬). ೪. ಅನುಮಾನ; ಸಂಶಯಂ; ಶಂಕೆ: ಮೊದಲೊಳ್ ಸಮಾಸಪದಮುಮನೊದವಿಸಿ ಪೇಟ್ಟದಱ ತುದಿಯೊಳಸಮಾಸಪದಾಸ್ಪದಮಾಗಿ ನಿಱಿಸೆ ಕಬ್ಬಿನ ತುದಿಯಂತಿರೆ ವಿರಸಮಕ್ಕುಮದು ತೊದಳುಂಟೇ (ಕವಿರಾ. ೨-೮೬); ಧರಣಿತಳಂ ಕೀರ್ತಿಸೆ ಕೇಳ್ದು ರಾಗಿಸುತ್ತಿರ್ಪೆವಿನ್ನುಮೇಂ ತೊದಳುಂಟೇ (ಅದಿಪು. ೧೪-೪೯); ಇಂತಾದ ಗಣದ ಮಾತ್ರಾಸಂತತಿ ನಾಲ್ಕಕ್ಕು ಮಂತವರ್ಕೋರೊಂದರ್ಕಂತಯ್ದುಗಣಂಗಳ್ ಬರ್ಕುಂ ತೊದಳೇಂ ಸ್ಕಂಧ ಜಾತಿಯೊಳ್ (ಛಂದೋಂಬು. ೪-೨೨೯); ಎನ್ನ ಚಿತ್ತದೊಳೊಂದುಂ ತೊದಳಿಲ್ಲ[ಪಾಠಾ. ತಡವಿಲ್ಲ]ವೆನ್ನ ಸುಗುಣಕ್ಕುತ್ಕ್ರಾಂತಿಯಂ ಮಾಡುವೆಂ (ಗದಾಯು. ೯-೨೯); ಪರಮಜಿನಚರಣಯುಗಮಂ ಸ್ಮರಿಯಿಸಿ ತೊದಳಿಲ್ಲ ದೆರಡುಗೇಳದೆ ಮನದೊಳ್ ಜಱಿಯದೆ (ಧರ್ಮಾಮೃ. ೧೩-೭೨); ಚಂದ್ರ

ಸೂರ್ಯರೆ ಮನುಷ್ಯಕುಮಾರಕರಾಗಿ ಬಂದರೇನುಂ ತೊದಳಲ್ತು (ಜಗವಿ. ೭-೧೩). ೫. ವಂಚನೆ ; ಮೋಸ ; ಕಪಟ : ಏನಭಿಮತಮವರ್ಗ ವರ್ಗದನೇನುಂ ತೊದಳಿಲ್ಲದಿತ್ತು ಮನ್ನಿಸಿದಂ ಸನ್ಮಾನಪುರಸ್ಸರಂ (ಆದಿಪು. ೧೫-೧೨) ; ಮನದೊಳ್ ತೊದಳಿಲ್ಲದ ನಲ್ಮೆ (ಪಂಪಭಾ. ೪-೧೦೨) ; ನೀನುಂ ಪಾಂಡುತನೂಜರುಮೇನುಂ ತೊದಳಿಲ್ಲದೊಂದಿ ನಡೆವುದು ಮಗನೆ (ನೇಮಿಪು. ೧೦-೩) ; ದೂಷ್ಯರುಗಳ ವಸ್ತ್ರಗ್ರಹಣ ನಿಂದಿತರ್ಗನ್ನದಾನಂ ಬಳಿಕ್ಕೆ ಬಗೆಯೆ ತೊದಳಿಂ ಮಾಳ್ಪ ಬೆವಹಾರ ದೀಕ್ಷೆಯದು (ಪಾಸೋಪು. ೬-೭೩). **ತೊದಲ್$_2$:** ೨. ವಶ್ಯಮಂತ್ರಾಕ್ಷರದಂತೆಪೊಲೆಲ್ಲರುಮಂ ಸೋಲಿಸಿದವು ತೊದಲಂ ನುಡಿವ[ಪಾಠಾಂ. ತೊದಳೊಳ್ಪುದಿದ] ರಾಮ ಚಂದ್ರನ ನುಡಿಗಳ್ (ಪಂಠಾಮಾ. ೩-೧೨೭); ಕಂದನಾಡುವ ಬಾಲಲೀಲೆಯಂ ನೋಡಿ ತೊದಲೊಂದಿದಿನಿವಾತನುಱ್ ಕೇಳ್ದು (ಜೈಮಿಭಾ. ೧೮-೨೦) ; ಲಾಲಾಜಲಂ ತುಳುಕಲ್ ಬರ್ಪ ತೊದಲ್ ಮನಂಗೊಳಿಸಲ್ (ಶಾಕುಂತ. ೧೦೫-೧೮೦). ೩. "ತೊದಲ್[ಪಾಠಾಂ. ತೊದಳ್, ತೊವಲ್] ನೂಳೆಂದು ನೆಱ್ ಪುಸಿಯೆನಲ್ಕನೃತಮಕ್ಕು" (ಕಬ್ಬಿಕ್ಕೆ. ೫೯) ; ದೊರೆಯೆ ಸಹವಾಸ ಮದರಿಂ ದೊರೆವುದು ಗುಣವೆ ರಡುಮೆಂದು ನುಡಿವುದು ತೊದಲೇಂ (ನರಕ. ೮೭-೨೩೦) ; ಕಳ್ಳರಿರ್ಕೈಗಳಂ ಬಿಗಿಸಿ ತೊದಲಂ ನುಡಿಸಿ ಸುಳ್ಳು ನಾಲಗೆಯ ನಡುಗಿಸುತರವನೆರೆಗುಂ (ಕಾಲೂರ. ೭೭-೧೪೧). **ತೊದಲು$_2$:** ೧. ವಿಷಮರಣಭೀತಿಯಲಿ ಕಂದಿದ ಮುಸುಡ ತೊದಲಿನ ನುಡಿಯ ಮರಣದ ದೆಸೆಯ ಕೈಸನ್ನೆಗಳ ಕಾತರರೈದಿದರು ಪುರವ (ಕುಪ್ಯಾವಿ. ೪-೩೮). ೨. ಮೊದಲೆವೆಗಳನು ಮುಕುಳಿಸೆನ್ನ ಸಿರಿಯೇ ತೊದಲನ್ನು ನಿಲ್ಲಿಸೆನ್ನಯ ಹೊನ್ನ ಮರಿಯೇ (ಕಎಪು. ೨೪-೨) ; ಮೊಳೆವಲ್ಲು, ಉಗುವ ಜೊಲ್ಲು, ದಟ್ಟಿತಡಿ, ತೊದಲ ನುಡಿ (ಚಂದ್ರಸ. ೧೭-೧೯). ೩. ಬದಲು ಮಾತಾಡಿದರೂ ತೊದಲು ಹೋಗಲಿಲ್ಲ (ಗಾದೆ). **ತೊದಳು :** ೧. ಪೊಳೆವ ನಿಡಿಯಲರ್ಗಣ್ಗಳ್ಗೆ ಮಳಮಳಿಪ ನೋಟಮುಮನುಂತೆ ತೊದಳಿಸುವ ನುಡಿವ ನುಡಿಗಳ್ಗೆ ತೊದಳುಮನೆಕ್ಕೆಯಿಂ ತಳೆಯೆ (ಪಂಪಭಾ. ೭-೮೧ ಪ); ತೊದಳಿನಿಂದೊರ್ಮೆ ಗದುಗದುಕೆಯಿಂದೊಮ್ಮೊಮ್ಮೆ . . . ಬೊಬ್ಬಿಡುತೆ (ತಿರುರ. ದೇ. ೫-೩). ೩. "ತೊದಳು,ಸುಳ್ಳು... ಸಟೆ, ತಗಲು" (ಕಂನುಹು. ೮೬). ೬. ಗದ್ಗದ : ನೋಡಿ ಪರಮಾನಂದ ಮೂಡಿ ಸಂತಸದೊಳೊಲಾಡಿ ಪುಳಕ ಸ್ವೇದ ತೊದಳು ಕಂಪನ ಮಱವೆಗೂಡಿ (ಹಚಕಾ. ೫-೮೦). 'ಕೊದಲು$_2$' ಪರಾ.

ತೊದಲುತೊದಲು (ದ್ವಿರುಕ್ತಿ) : ಮಕ್ಕಳಕ್ಕರೆಯಿಂದೆ ತೊದಲು ತೊದಲಕ್ಕರಂ ನುಡಿದು ಕೈಮುಗಿದು ಕಂಬನಿಗರೆವನಂ ನೋಡಿ (ಶ್ರೀರಾಮಾ. ೩೦-೬೭) ; ನಾವು ಮಾತನಾಡಲು ಪ್ರಾರಂಭಿಸಿದಂದಿನಿಂದ ಈ ನಾನು, ನನ್ನ ಎಂಬ ಪದಗಳನ್ನು ತೊದಲುತೊದಲಾಗಿ ಉಚ್ಚರಿಸುತ್ತೇವೆ (ಜೀವಾತ್ಮ. ೯). **ತೊದಳಾಗು, ತೊದಲಾಗು** = ೧. ಸುಳ್ಳಾಗು ; ಹುಸಿಯಾಗು : ಪಾವಕನುರ್ಕುಗೆಟ್ಟಿದೆಂತುವೊ ತೊದಳಾಯ್ತು ದಾನಂ (ಪಂಪಭಾ. ೫-೯೭) ; ತೊದಳಾಯ್ತೆನ್ನಯ ಪೂಣ್ದ ಪೂಣ್ಕೆ (ಗದಾಯು. ೬-೧೭) ; ನುಡಿ ತೊದಳಾದೊಡೊಂದು . . . ಅಧಿಪಂಗೆ ತಪ್ಪಿ ಬರ್ದ್ದಡೆ ಗಡಿವೇಳುವೇಳು ನರಕಂಗಳಿವೆಂದಪನಲ್ತೆ ಗಂಗಣಂ (ಎಕ. V. ಬೇಲೂರು. ೧೨೪-೪೨; 1133); ತೊದಳಾಗದಾನೆಂದ ನುಡಿ, ದಿಟಂ ! (ನಡದಾ. I, ೪೫೦); ನಿನ್ನ ಶಾಪವು ತೊದಲಾಗದು (ನಡದಾ. I, ೫೫೧). ೨. ಏರುಪೇರಾಗು : ತೋಹಿನಲಿ ತೊದಳಾಗಿ ಗೋರಿಯ ಗಾಹಿನಲಿ ಗುಱ್ ಗಡಬಡಿಸೆ ಬಲು ಸಾಹಸಕಂಜುವೆವೆ (ಕುಪ್ಯಾಅ. ೧೩-೧೭).

[<ತೊದಳ್$_1$./ತುಳು. ತೊದಳೆ./ಹಿಂ. ತುತಲೀ, ತುತಲಾ ; ನೇಪಾ. ತೊತೆ ; ಬಂಗಾಲಿ. ತೊತ್ಲಾ]

ತೊದಳ, ತೊದಲ (ನಾ). ತೊದಲು ಮಾತನಾಡುವವನು ; ಉಗ್ಗ ; ಗುಕ್ಕ (ಉಕ): ವೃಷಭದೊಳ್ ಚಂದ್ರನೊಂದಿ ನಿಲೆ ಮೂಗನೆನಿಕ್ಕುವನಂತಾ ಶಶಿಯಂ ನೋಡುವೊಡೆ ಶುಭಪ್ರಕರಮಾತನೆನಿಕುಂ ತೊದಳಂ (ಜಾತತಿ. ೪-೩೯). **ತೊದಲ :** ರಾಶಿಯ ಕೊನೆಯಲ್ಲಿ ಪಾಪಗ್ರಹಗಳಿದ್ದು . . . ಆ ಚಂದ್ರನನ್ನು ಶುಭಗ್ರಹಗಳು ನೋಡಿದರೆ ಆತ ತೊದಲನಾಗುತ್ತಾನೆ (ಜಾತತಿ. ೪-೩೯ ಟೀಕೆ).

[ತೊದಳ್$_1$ + – ಅ$_7$./ತುಳು. ತೊದಲೆ./ಹಿಂ. ತೋತಲಾ; ಮರಾ. ತೋಂತ್ಳ್ಯಾ, ತೋತ್ರ್ಯಾ, ತೋಂತ್ರ್ಯಾ]

ತೊದಳಿಲಿ (ನಾ). ೧. ಸುಳ್ಳಿಲ್ಲದುದು;ನಿಜವಾದುದು. (ಗು). ೨. ಸುಳ್ಳಿನಿಂದ ಕೂಡಿರದ ; ನಿಜವಾದ: ತಾಂ ಪದನರಿದು ಲೋಕಕ್ಕೆ ಪುಟವಹ ಬಾಯ್ಗಿನಿದಪ್ಪವು ತೊದಳಿಲಿ ನಾಣ್ಣುಡಿಗಳಂ ಕಲ್ಪಿಪ್ಪನನಿತ್ತೆ ದಲ್ (ಸಂಸಪ. ೩೮-೩). [ತೊದಳ್$_2$+ – ಇಲಿ$_3$]

ತೊದಳಿಸು, ತೊದಲಿಸು (ಕ್ರಿ). ೧. ಮಾತಿನಲ್ಲಿ ತಡವರಿಸು : ಉಂತೆ ಪೊಳೆವ ನಿಡಿಯಲರ್ಗಣ್ಗಳ್ಗೆ ಮಳಮಳಿಪ ನೋಟಮುಮನುಂತೆ ತೊದಳಿಸುವ ನುಡಿವ ನುಡಿಗಳ್ಗೆ ತೊದಳುಮನೆಕ್ಕೆಯಿಂ ತಳೆಯೆ (ಪಂಪಭಾ. ೭-೮೧ ಪ) ; ಸುಯ್ಯ ಬಹಳದ ಭಟರು ತೊದಳಿಸುತೊಯ್ಯನೆಂದರು (ಕುಪ್ಯಾಅ. ೧೯-೬). ೨. ಮಕ್ಕಳಂತೆ ತೊದಲು ಮಾತನಾಡು: ತೊದಳಿಸದ ತೊದಳ್ ಕೊಂಕಿಲ್ಲದ ದಟ್ಟಡಿ . . . ಮುಳಿಸಿಲ್ಲದ ಕಾಟಂ ಬಾಲಭಾವಮಚ್ಚರಿ ಜಿನನಾ (ಅನಂಪು. ೬-೮) ; ನಸುನಗೆಯ ತೋಱಿದನು ಮಿಗೆ ತೊದಳಿಸಿದನಿಂತುಟನೇಕ ಬಾಲ್ಯವಿನೋದವನು ತೋಱ್ (ಸಾಳ್ಯಭಾ. ೩೦-೪೬) ; ತೊದಳಿಸಿ ನುಡಿವ ದಟ್ಟಡಿಯಿಡುವ . . . ಕುಣಿವ ಲೀಲೆಯಂ ನೆಟ್ಟನೆ ಕುಮಾರಕರ್ತೋಱಿದರ್ಜಾನಕಿಗೆ (ಜೈಮಿಭಾ. ೧೯-೫೦). **ತೊದಲಿಸು :** ೧. ನಾನು . . . ತೊದಲಿಸಹತ್ತಿದೆ (ಚಂದುಟಿ. ೧೦೮) ; ಈ ಮಾತುಗಳನ್ನಾಡುವಾಗ ಅವರ ನಾಲಿಗೆಯು ಸ್ವಲ್ಪ ತೊದಲಿಸಿತು (ಚಂಗಾಳ್ಯ. ೧೬೬). ೨. ಮನದಲ್ಲಿ ಕೇಳ್ವನು ನಸು ತೊದಲಿಸುವ ಸೊಲ್ಲುಗಳ ನೋರಂತೆ ಪಂಚಾಕ್ಷರಿಯನೋದಿಸುವ (ಬಸಪು. ೪೭-೩೨).

[ತೊದಳ್$_1$ + – ಇಸು$_3$]

ತೊದಳು 'ತೊದಳ್$_2$' ನೋ.

ತೊದಳುನುಡಿ 'ತೊದಳ್ನುಡಿ$_2$' ನೋ.

ತೊದಳುಲಿ, ತೊದಲುಲಿ$_2$ (ನಾ). ಮಕ್ಕಳ ತೊದಲುಮಾತು : ಹಕ್ಕಿಯಿಂಚರದಲ್ಲಿ ಮಗುವ ತೊದಳುಲಿಯಲ್ಲಿ . . . ನಲಿವ ಮೂರುತಿಯೆ (ವಿಸೀಗೀ. ೪೫-೨). **ತೊದಲುಲಿ :** ತೊದಲುಲಿಯ ಚುರುಕಿಂದ ಚಪ್ಪರಿಸಿ ಚೇರಿ, ಕುದುರೆ ಆಟವ ಗೈದ ನೆನವು (ಕಎಪು. ೨೫-೨); ಪುಟ್ಟ ಕಂದಮ್ಮನ ...ತೊದಲುಲಿ ಕೇಳಿತು ಮೆಟ್ಟಿತು ಕೊಳಲಿನ ಸವಿಯ (ಇಂಜಾಪ. ೪೧-೯೫).

[ತೊದಳ್$_1$ + ಉಲಿ$_2$]

ತೊದಳ್ನುಡಿ$_1$, ತೊದಲ್ನುಡಿ$_1$ (ಕ್ರಿ). ೧. ಅಸ್ಪಷ್ಟವಾಗಿ ಮಾತನಾಡು ; ಮಾತಿನಲ್ಲಿ ತಡವರಿಸು : ಲೋಹಲಃ, ಅಸ್ಫುಟವಾಕ್ = ತೊದಳ್ನುಡಿವವನು (ನಾಜಿಂಗ. ೫). ೨. ಮಕ್ಕಳಂತೆ ತೊದಲುಮಾತನಾಡು : ಚೆಂಬಾಯಿಂದಿನಿರಸದಂತೆ ನಸುಜೊಲ್ಲು ಸುರಿಯೆ ತೊದಳ್ನುಡಿವ ಸೊಗಸಂ (ಚಿಕವಿ. ೪-೮೯). ೩. ಸುಳ್ಳು ಹೇಳಂ ; ಸುಳ್ಳಾಡು : ತೊದಳ್ನುಡಿಯದೆ ಪೋಗು (ಪಂಪಭಾ. ೮-೨೯) ; ನೆರೆದರ್ತ್ಥಿಗರ್ತ್ಥಮಂ ಕುಡುವ ಚಲಂ ತೊದಳ್ನುಡಿಯದಿರ್ಪ್ಪ ಚಲಂ (ಎಕ. II, ೧೩೩-೨೨; 982) ; ಆ ಧರ್ಮಪುತ್ರಂ ದಯಾಪರನೆಂದೆಲ್ಲರ ಪೇಟ್ದ ಮಾತು ಪುಸಿಯಾಯ್ತಾ ಕಾರ್ಮುಕಾಚಾರ್ಯನಂ ಗುರುವಂ ಬ್ರಾಹ್ಮಣನಂ ತೊದಳ್ನುಡಿದು ಕೊಂದಾಗಳ್ (ಗದಾಯು. ೩-೨೩). **ತೊದಲ್ನುಡಿ$_1$:** (ಕ). [ತೊದಳ್$_2$ + ನುಡಿ$_1$]

ತೊದಳ್ನುಡಿ$_2$, ತೊದಲುನುಡಿ, ತೊದಲ್ನುಡಿ$_2$, ತೊದಳುನುಡಿ (ನಾ). ೧. ಮಕ್ಕಳ ತೊದಲುಮಾತು : ಮುಖಸರಸಿಜದೊಳ್ ದರಹಸಿತಂ ನೆಗೞ್ವಿನಂ ತೊದಳ್ನುಡಿ ನುಡಿದು (ಆದಿಪು. ೮-೩); ಜಿನೋಕ್ತಿ ಮೊದಲಲ್ತು

ಮದಂಗದೊಳೆಂಬವೊಲ್ ತೊದಳ್ನುಡಿ ನುಡಿ ? (ಪು. ೧೦-೮೩) : ನುಡಿಗಲ್ವಂತೆ ತೊದಳ್ನುಡಿ ನುಡಿಯಿಸಿದಂ ತನಗೆ ಪೋಲ್ಕ ವಾಕ್ಯನ್ನಿಕಯಂ (ಅರ್ಧನೀ. ೨-೩೧) ; ಇಡಿದ ಲಾಲಾಜಲಂ ಶಿವಪ್ರಸಾದಂ ತೊದಳ್ನುಡಿಯೆಲ್ಲ ಶಿವಕೀರ್ತನೆಯು (ಸೌಂದಪು. ೩-೧೦) ; ಜೊಲ್ಲು ಸುರಿವ ಮುದ್ದು ಮೊಗದಲ್ಲಿ ನಗೆಯಾಂತು ಸೊಲ್ಲಿಸುವನು ತೊದಳ್ನುಡಿಯ (ಪೋಹತ. ೧೭-೬೯). ೨. ಸುಳ್ಳುಮಾತು : ಮನುಕುಲದೊಳ್ ತೊದಳ್ನುಡಿ ಪೊದಟ್ಟುಮೆ (ಪಂರಾಮಾ. ೬-೯೫). ೩. ಮೆಲುದನಿಯಲ್ಲಿ ಆಡುವ ಗಂಭೀರವಾದ ಮಾತು : ನೆಗಟ್ಟ ಮರಾಂಗನಾಜನದ ರೂಪುಗಳೆಲ್ಲಮದೀಕೆಯೊಂದು ದೇಸೆಗೆ...ನೆಗಟ್ಟೊಂದು ಮೆಲ್ಪಿಸ ತೊದಳ್ನುಡಿಗಪ್ಪೊಡವೆಯೆಂದ್ವಾರವೇಂ (ಆದಿಪು. ೨-೬೫) ; ಆಕೆಯ ಮುದ್ದು ವೆರಸಿದ ತೊದಳ್ನುಡಿಗಂ ಪೂಮಾಲೆ ವೆರಸಿದ ಬಬಲ್ಮುಡಿಗಮಲಂಪುವೆರಸಿದ ನೋಟಕ್ಕಂ . . . ನಾಣ್ವೆರಸಿದ ಭಾವಕ್ಕಮೊಲ್ದುವೊಱಲ್ದುವಿರೆಯಿರೆ (ಪಂಪಭಾ. ೪-೧೭ ವ) ; ತೊದಳ್ನುಡಿಗಳೊಪ್ಪಿ ಪುಷ್ಪಚಯಮಂ ಸುಗಂಧಂಗಳಂ . . . ವಿದಗ್ಧೆ ಮಡಗಿಟ್ಟು ತಂದು ತನಗೀವೋಡೆ (ಮದತಿ. ೧೮-೫೦). ೪. ಇಂಪಾದ ಧ್ವನಿ,–ಕುಕಿಲು : ಒಲವಿಂದೋಲಗಿಸುವೆನೀ ನೆಲದಱಿಯನನೆಂದು ಬರ್ಪವೋಲ್ ಬಗ್ಗಿಪ ಕೋಗಿಲೆಯ ತೊದಳ್ನುಡಿ ಬಿರಯಿಯನಲೆಯುತ್ತಿರೆ ಬಡದೆ ಬಂದು ದಂದು ಬಸಂತಂ (ಕಬ್ಬಿಗ. ೫೩). **ತೊದಲುನುಡಿ** : ೧. ತೊದಲುನುಡಿಗಲಿತು ಮುದ್ದಾಗಿ ಬಾಳ್ವವನಯ್ಯೋ ಪದೆದು ದಟ್ಟಡಿಯಿಟ್ಟು ನಡೆದು ಬಾಳ್ವವನಯ್ಯೋ (ಶಾನಂಚ. ೪-೯೧ ರಗಳೆ) ; ಪರಮತತ್ವಾಮೃತವೆ ಮೊಲೆವಾಲ್ . . . ಮೃದುಸೂಕ್ತಿಗಳೆ ತೊದಲುನುಡಿ (ಬಸಪು. ೨-೧೧) ; ತೊದಲುನುಡಿಗಳಂಬಿಗಾಲು ದಟ್ಟಡಿ ಮುದವೊದವಿದ ಧೂಳಾಟದಿಂದ...ಕುಮಾರರೊಪ್ಪಿದರು (ಕಂಪವಿ ೪-೫೧). ೨. ಶಿಷ್ಟಂಗೆ [ಪಾಠಾಂ. ಸೆಟ್ಟಿಗೆ] ತೊದಲುನುಡಿಯೇಕೆ (ಸರ್ವಜ್ಞ. ೧೪೬೪). **ತೊದಲ್ನುಡಿ**$_2$: ೧. ನುಡಿಗಲಿಸಿದಂ ತೊದಲ್ನುಡಿ ಪಡವಿನೆಗಂ ಪಿತೃಯುಗಕ್ಕೆ ಕರ್ಣಾಮೃತಮಂ (ಪಂರಾಪಪು. ೧-೭೯) : ತೊದಲ್ನು [ಪಾಠಾಂ. ಳ್ನು]ಡಿಗೇಳ್ವಲಂಪಿನಿಂ . . . ಸಲೆ ನುಡಿಸುತ್ತುಮಿರ್ಪ ನೆವದಿಂ ನುಡಿಗಲ್ವನಿಳೇಶನಂದನಂ (ಕುಸುಮಾ. ೬-೧೩೧) ; ಪರಮಶಿವಭಕ್ತತತಿ ತಮ್ಮ ಕಂದನ ತೊದಲ್ನುಡಿಗಳಿಂದು ಮೆಯ್ಯುರ್ವಿ ಪುಳಕಂದಾಳ್ದು ಲಾಲಿಸುತಿರೆ (ಪಡ್ಕಥಾ. ೧-೩೩) ; ಪಾಡು ಎಂಬರಕೆ ಕೋಗಿಲೆ ತೊದಲ್ನುಡಿಯ ಮಾತಾಡುವುದಕೆ ರಾಜಕೀರ . . . ಜೋಡಿಸಿ ಕೊಟ್ಟರು ತ್ಸವದಿ (ಪೋಹತ. ೧೪-೭೭). ೨. ಪಿತರಂ ಪುತ್ರನಂ ತೊದಲ್ನುಡಿಯಂ ನುಡಿಸಿದಂ[ಪಾಠಾಂ. ತೊದಲ್ನುಡಿಯನೆನಿಸಿದಂ] (ಕಥಾಸು. ೨೦೫ ಪ್ರಯೋ). ೩. ಆ ಹುಡುಗನು ತೊದಲ್ನುಡಿಯಲ್ಲಿ . . . ತಮ್ಮ ಬಳಿ ವಿದ್ಯಾದಾನವನ್ನಪೇಕ್ಷಿಸಿ ಬಂದಿರುವೆನು ಎಂದು ಹೇಳಿ (ಪುಚಸ. ೬೦). **ತೊದಳುನುಡಿ** : ೧. ಬಾಲರ ತೊದಳುನುಡಿಯ ತಂದೆತಾಯಿಗಳಾಲಿಸಿ ಕೇಳ್ದು ತಪ್ಪಿರಲು ಆಳೋಕಿಸರಂತೆ ಕೃತಿದೋಷಮಿರೆ ತಿದ್ದಿ ಬಾಲನಹೆನು ನಾ ನಿಮಗೆ (ಅಂಚಿಪ. ೧-೧೦೪). ೨. ನಡೆತಂದರ್ ಚಿಲ್ವಿಂದೊಳ್ನುಡಿಯ ತಡನುನುಡಿಯ ತೊದಳು[ಪಾಠಾಂ. ಳ್]ನುಡಿಯೊಳ್ಪೆಂಡಿರ್ (ಆಗವಿ. ೪-೧೩೭) ; ಗದುಗದಗಂಠದಿಂ ತೊದಳುನುಡಿಗಳಿಂದ ಹೃದಯ ಸಖನೊಳಿಂತೆಂದು . . . ಕೇಳಿದೆನು (ಅಂಚಿಪ. ೫-೧೦೧) ; ರಂಜಿಸುವ ಯಮರಾಜನೋಲಗ ಕಂಜನಾಭಮುಕುಂದಗಾಯ್ತು ... ಎಂಬೀ ತೊದಳು ನುಡಿಗೇಳ್ದು (ನಿಘಾಗ. ೬-೩-೪). [ತೊದಳ್$_2$ + ನುಡಿ$_2$]

ತೊದಳ್ಮಾಡು, ತೊದಲುಮಾಡು (ಕ್ರಿ). ೧. ತಡವರಿಸುವಂತೆ ಮಾಡು: ಬಾದಿನೊಳಪೋದಿನೊಳಂ ವಿಬುಧರ್ಕ್ಕಳಂ ತೊದಳ್ಮಾಡುವ ರಾಜಕೀರತತಿ (ಸೌಇಇ. IX-I, ೨೬೭-೨೩ : 1160). **ತೊದಲುಮಾಡು** : ೨. ಹುಸಿಯಾಗುವಂತೆ ಮಾಡು : ಒಮ್ಮೆ ಆಡಿದ ಮಾತನ್ನು ತೊದಲುಮಾಡುವುದಕ್ಕೆ ಬಲಿಯು ಒಪ್ಪಲಿಲ್ಲ (ನೀಗಟ್ಟು. ೦೬೮). [ತೊದಳ್$_3$ + ಮಾಡು$_1$]

ತೊದಳ್ವಾತು, ತೊದಲುಮಾತಂ, ತೊದಲ್ವಾತು (ನಾ). ೧. ಮಕ್ಕಳ ತೊದಲುನುಡಿ : ತೊದಳ್ವಾತ ಮಾತನಾಡುವ ಮುದ್ದುಗೆಯ್ವ ಭೂತಳದೊಳಗಂಬೆಗಾಲಿಟ್ಟು ನಡೆವಂತೆ ಚೇತನವಾದುದಂಗಜಗೆ (ಮೋಹತ. ೧೧-೫೯) ; ಶಿಷ್ಯೋಕ್ತಿಗಳಂ ತಾಂ ಪೇಳ್ದು ಪೇಳ್ವಂತಿರೆ ಕಲಿಸಿ ತೊದಳ್ವಾತು ಬಿಲ್ವಾಗೆ ವಾಮಾಕ್ಷಿಗೆ ಪುರ್ಬಿಂ ಜರ್ಬಿನಿಂ ನೋದೆನುತಱಿಪಿ ನೃಪಂ (ರಾಜಕೀ. ೪-೭೦). ೨. ವ್ಯರ್ಥವಾದ ಮಾತು: ತೊದಳ್ವಾತಿನೊಳೇನೋ ಪಾಂಡವರ ಕೈಯೊಳೆ ನಿನ್ನ ನಿಸೇಕವಾಗದೇ (ಪಂಪಭಾ. ೯-೪೯). **ತೊದಲುಮಾತು** : ೩. ಅಸ್ಪಷ್ಟವಾದ ಮಾತು: ಕೆಲಂಬರು ತೊದಲುಮಾತುಗಳನಾಡುತ ಕಣ್ಣುಗಳಂ ಮುಚ್ಚಿ ಕೈಸನ್ನೆಗಳಂ ಮಾಡುವರು (ಸೌಗಂಧಿ. ೧೪೩-೧೧) ; ಲೋಹಲಃ , ಅಸ್ಪುಟವಾಕ್-ವ್ಯಕ್ತವಾಗದ ತೊದಲು ಮಾತನಾಡುವವನ ಹೆಸರುಗಳು (ಸಿದ್ಧಾಂತಿ. ೨೪೭). **ತೊದಲ್ವಾತು** : ೧. ಪಸುಳೆತನದೊಳ್ ಪ್ರಣವಮುಂ ಶರಣಗಣಕೆ ಬೋಧಿಸುವನೀ ಕುವರನೆಂಬೊಲ್ ತೊದಲ್ವಾತು ರಂಜಿಸಿದುವು (ಚಿಲಪು. ೫-೪೧). ೪. ಮುದುಮಾತು : ಮಾತೆಯ ಪಕ್ಷವುಟವ ಸೇರುವ ತೊದಲ್ವಾತ ನುಡಿದು ಬಿನದಿಸುವ . . . ಗಿಳಿವಱಿಗಳ ರೀತಿಯು ಕಂಡಳಾ ಸೀತೆ (ಳಂನವಿ. ೪-೪೭). [ತೊದಳ್$_2$ + ಮಾತು$_1$]

ತೊದಳ್ಳಿ (ನಾ). ಒಂದು ಸ್ಥಳದ ಹೆಸರು: ಬನವಸೆಯ ಚಟ್ಟ ನಾಗರಕಣ್ಣಕ್ಕೆ ಮುನಿದು ಪರಿಯನಟ್ಟಿದಡೆ ತೊದಳ್ಳಿಯನಿಱಿದು (ಎಳ. VIII, ಸೊರಬ. ೨೩೪-೪ ; 999). [?]

△ **ತೊದಟ್** 'ತೊದಳ್$_1$' ನೋ.

ತೊದಟ್ಟು (ಕ್ರಿ). ಎದುರಿಸು; ಪ್ರತಿಭಟಿಸು : ಕುಲದೀಪತಿಲಕ ಗೋಪಾಲ ರಾಜ . . . ಅಟ್ಟಿ ಪೊಯ್ದು ನುಗುಟ್ಟುಬ್ಬಿ ತೊದಟ್ಟು ಮಲ್ಲಮಾಟ್ಯೊನ್ದಾಸುರಮಟ್ಟಿನಂ ಪೆಣೆದು ಕಟ್ಟಿದು (ಎಳ. VI, ಚಳ್ಳಮು. ೭೬-೩೧ ; ಸು. 1060 ?). [ತೊದಟ್ (<ತೊದಳ್$_1$) + – ಚು$_1$]

ತೊದುರು 'ತೊಡರು$_3$' ನೋ.

ತೊನಗು 'ತೊಲಗು' ನೋ.

ತೊನಚಿ 'ತೊನಸೆ' ನೋ.

ತೊನಚೆ 'ತೊನಸೆ' ನೋ.

ತೊನಪೆ (ನಾ). ಒಂದು ಬಗೆಯ ಮರ ; ಹೊಂಗೆ : "ಗುಚ್ಛಕರಂಜಃ–ತೊನಪೆ, ಹೊಂಗೆಮರ" (ಓಷಧಿ. ೫೦). [?]

ತೊನಸಿ 'ತೊನಸೆ' ನೋ.

ತೊನಸೆ, ತೊಣಚಿ, ತೊಣಚೆ, ತೊಣಸಿ, ತೊಣಸೆ$_1$, **ತೊನಚಿ, ತೊನಚೆ, ತೊನಸಿ** (ನಾ). (ನಾಯಿ, ಕುದುರೆ ಮುಂತಾದುವುಗಳ ಮೈಯಲ್ಲಿ ಸೇರಿಕೊಳ್ಳುವ) ಒಂದಂ ಬಗೆಯ ನೊಣ : ಪಶುವಿನೊಳಲ್ಲಿರಲೇಂ ತಾನೆಂತೊ ತೊನಸೆಯೋ ನೊಣವುಗಳೋ (ಸಮಚ. ೯-೭೧) : ಅಗಸೆಯ ಮರಕ್ಕೆ ತೊನಸೆ ಮಟಿದುಂಬಿಯೆಂಬಂತೆ (ಧರ್ಮಾಮೃ. ೭-೨೫೯); ತುಂಬಿ ಪತಂಗ ನೊಣ . . . ತೊನಸೆ ಮೊದಲಾದುವಕ್ಕೆ ಸ್ಪರ್ಶನ ರಸನ ಘ್ರಾಣಮಕ್ಕುಂ (ಶಾಸ್ತ್ರಚೀ. ೧೧೭-೬); ನೀನು ತೊನಸೆಯ ಕೊಲೆಯ ಮಾಡಿದೆ ಮುಳ್ಳುಮೊನೆಯಲಿ (ಸಂಧಿಚ. ೧೪-೦೬). **ತೊಣಚಿ**: ತೊಣಚಿ: ಗೋವುಕ್ಷಿಕ (Breeze. ಇಂಗ್ಲಿ). **ತೊಣಚೆ** : (↓). **ತೊಣಸಿ**: ಹಾಲುಗೆಚ್ಚಲು ಬಳಿಯ ತೊಣಸಿ ಹಕ್ಕಿಕೊಂಡು ಕಾಲವನು ಕಳಿವ ಬಗೆ ಬಲ್ಲಿರಲ್ಲ ವೇಳವೇಳಿಗೆ ಹೆಸುಪ ಕರೆದುಂಬ ನರನಂತೆ ಕೀಳು ತೊಣಸಿಯು ಉಂಡು ಹರುಷ ವದ ಬಲ್ಲುದೆ (ವಿದಾಳ್ಯ. ೧೪-೩). **ತೊಣಸೆ**$_1$: ಬೆನ್ನಟ್ಟುವ ಘೋರರೂಪಿ ಆರ್ಗಸ್, ಕಡಿದು ರೂಪುಗೆಡಿಸಲೆಂದು ಎಡೆವಿಡದೆ ಹಾಯ್ದು ಬರುವ ತೊಣಸೆ . . . ಅವಳ ಪಾಲಿಗೆ ಬೆನ್ನಟ್ಟಿದ ಬೇತಾಳಗಳು (ಬಡ್ಕಪ್ರ. LI, ನಾಟಳದ ಸಮಸ್ಯೆ). **ತೊನಚಿ** : ತೊನಚಿಯಂ ಕೊಂದ ಪಾಪಸಮೇತ

ಮಾಂಡವ್ಯನಾ ಶೂಲದೊಳು ಬೀಳ್ದ (ವೀಕ್ಷಪು. ೪-೫-೩೧). **ತೊನಚೆ** : ವಾನರಕೊದಗಿದ ತೊನಚೆಯ ಕಾಟ (ಅವಧೂ. ೧೧) ; ಜ್ಞಾನೋತ್ಪರ ಮಾರ್ಗಕೆ ಜಂಜಾಟ ವಾನರಕೊರಲಿದ[ದಗಿದ]ತೊನಚೆ ಕಾಟ (ಅಡತ್ರ. ೧-೦೦೭). **ತೊನಸಿ** : ಲಿಂಗದ ಚಿತ್ರದಲ್ಲಿ ಕರ್ಣದೊಳಗೆ ತೊನಸಿ ಹೊಕ್ಕು ಗೋಳಿಟ್ಟು ಬಾಧಿಸಿದಂತಾಯಿತ್ತಯ್ಯಾ (ವಚಸಂ. ೧೩೪-೬೪) ; ವರತಪವ ಕೆಡಿಸಬೇಕೆಂದು ತೊನಸಿಗಳಾಗಿಯೆಱಗೆಱಗಿ ಕರ್ಣಕ್ಕೆ (ಪ್ರಾಥರಾ. ೪-೭೪) ; ತೊನಸಿ ಮುದಿ ಎತ್ತ ಹಱಿತಿಂದು ಹುಳಗಳನು ಜನಿಸಿ ಬಿಟ್ಟಂತೆ (ಸರ್ವಜ್ಞ. ೧೮೫೭) ; ತೊನಸಿಯು ತನ್ನ ತತ್ತಿಗಳನ್ನು ದನಗಳ ತೊಗಲಿನೊಳಗೆ ಹಾಕುತ್ತದೆ (ಮುಂಬಯಿ. ೫-೧೪೫).

ತೊನಹು (ನಾ). ತೂಗಾಟ; ಒಲೆದಾಡುವಿಕೆ: ಕಿಂಚುಗೂದಲ ನಿಟ್ಟೊಡಲು ನಿಡುದೋಳ ತೊನಹಿನ ಮುಟ್ಟದೆವೆಗಳ ನಟ್ಟನೋಟದ ... ವೃಥುಲಿಂಗ (ಪ್ರಭುಲೀ. ೨೨-೩೩). [ತೊನೆ$_1$ + – ಹು$_2$]

ತೊನೆ$_1$ (ಕ್ರಿ). ೧. ಅಲುಗಾಡು ; ಅಲ್ಲಾಡು : "ತೊನೆದುದು ತೂಗಿದು ದೊಲೆದುದುಮೆನುತಲಲ್ಲಾಡಿದುದು ನಡುಗಿತೆಂದನಲದು ಕಂಪನಮಕ್ಕು" (ಕವಿಕಂ. ೨೫೪) ; ಮನಸಿಜನೃಪಲೀಲಾಲಾಂಧನಂ ಸ್ವಸ್ತ್ರಿಕಂ ಸ್ತ್ರೀಜನದೊಳಿಸಿದು ನಿಂದತ್ಪುತ್ರೀಯಾಂತರೀಯಂ ತೊನೆಯೆ (ಆದಿಪು. ೧೧-೧೩೨) ; ಅರಿವ ನಡುವುಡಿವ ನೇರ್ಗೊಲ್ಲರಿದುರ್ಚುವ ನಟ್ಟು ತೊನೆವ ಕಣ್ಗೆಗಳ್ಗೆ ಮೊಗಂದಿರಿಯದೆ (ಪಂಪಭಾ. ೧೦-೭೪) ; ತೊನೆಯೆ ಕುರುಳ್ ಕದಕ್ಕದಿಸೆ ತುಂಗಕುಚಂ (ಪಾರ್ಶ್ವಪು. ೧೨-೩೦) ; ತೊನೆವ ಬಾಲಂ ಕುಸಿದ ತಲೆ . . . ದೈನ್ಯವಿಡಿದ ಕಿಱುದನಿವೆರಸು ಬಂದೊಂದು ಕೃಷ್ಣಶುನಕ ಬಿರ್ದುದು (ನಿಡ್ಡಣ. ೭-೪೩) ; ತೊನೆವುತಿಹ ಚಿತ್ರದ ಪತಾಕೆಗಳ ಡೋಕೆಗಳ ಕೋಟಾವಳಿಯುಮೆಸೆದುದು (ಪಾಪು. ೪೨-೩೧) ; ಮುತ್ತಿನ ಲಂಬಣಂ ತೊನೆವ ತೊಂಡಲ ಬಜ್ಜರಬೊಟ್ಟು (ಚಳವಿ. ೩-೪೯). ೨. ತೂಗಾಡು ; ಒಲೆದಾಡಂ : "ತೊನೆ ಆಂದೋಲನೇ (ತೂಗಾಡು)" (ಕಮಧಾ); ಪಂಚಬಾಣ ಕೃಪಾಣ ಪಟ್ಟದೊಡನೆ ಕೊನೆಯ ಬಿಲ್ಬೆಂ ತೊನೆದು ತೂಗದ ಪೂಗವನಮಿಲ್ಲ (ಪಂರಾಮಾ. ೧-೦೦೭ ಪ) ; ತೂಗಿ ತೊನೆದು ಮೆಯ್ಯಜಿವ ಹಂದಿಯನು ಕೌಶಿಕ ಕಂಡನು (ಹಡಕಾ. ೬-೬೦) ; ಹರಿಸದಿಂ ತೂಗುತುಂ ಬಾಗುತುಂ ತೊನೆಯುತುಂ ಭರವಸದಿ ನಲಿವುತುಂ ... ಅದೇಂ ನೆಗಳ್ದರೋ (ಪದ್ಮಚ. ೬-೬೨) ; ತೋಳ ಮೈಯಲಿ ತೊನೆದು ನೋಟದ ಢಾಳದಲಿ ಧವಳಿಸಿಯೆ . . . ಒಪ್ಪಿರ್ದಳಾ ಮಾಯೆ (ಪ್ರಭುಲೀ. ೪-೫೬) ; ತೂಗುತೆ ತೊನೆಯುತೆ ಬಳ್ಕುತೆ ಬಾಗುತೆ . . . ಸೊಂಪಾಗಿರ್ದುವು ಕಣ್ಗೆ ಗಂಧಶಾಲಿವನಂಗಳ್ (ರಾಜಶೇ. ೩-೧೦) ; ಗಿಡವೂ ಒಪ್ಪಿಕೊಂಡು ತಲೆಯಾಡಿಸುವಂತೆ ಗಾಳಿಗೆ ಅತ್ತಿತ್ತ ತೊನೆಯಿತು (ಈಳಥ. ೬೪); ಆತನ ಮನಸ್ಸು ಒಮ್ಮೆ ತೊನೆಯಿತು (ನಡಡಾ. II, ೧೪೫). ೪. ಅಲುಗಾಡಿಸು ; ಅಲ್ಲಾಡಿಸು : ಪಲ್ಲಂ ಕುಱುಕುತ್ತುಂ ಮೆಯ್ಯಂ ತೊನೆಯುತ್ತುಂ ಭೋಗಂಗಳಂ ಚಿಂತಿಸುತ್ತುಂ (ಧರ್ಮಾಮೃ. ೫-೧೩೬) ; ಮೈಯಂ ತೊನೆದುದ್ದಂ ನೀಡಿ ಗೋಣಂ ನವದಿನ ಮುಖದೊಳ್ ಕುಕ್ಕುಟಂ ಕೂಗಿತಾಗಳ್ (ಕುಸುದೂ. ೪-೭೭); ಫನಕೋವಾ ಟೋವದಿಂದಂ ಕುಲಕುಧರಮಹಾಶೃಂಗಮಂ ಕೋಡ ಕೊಪ್ಪಿಂ ತೊನೆದೀಡಾಡುತ್ತೆ ಬಪ್ಪ ದ್ವಿರದಪತಿಯಂ . . . ನೋಡುತ್ತೆ (ಸೂಕ್ತಿಸು. ೬-೩೪) ; ನೆನನ ತಿಂದು ತನೆದು ತಲೆಗಳ ತೊನೆವ ಬೇತಾಳತತಿ (ಚಲಪು. ೪೦-೨೭); ನಗೆಮೊಗದೊಳಂಗಮಂ ತೊನೆಯುತ್ತೆ ಸಂತಸಂಬಡುತಿರ್ದರು (ಕೇಷರಾ. ೨೪-೬೫). ೫. ನಡಂಗು ; ಕಂಪಿಸು : "ತೊನೆ, ಒಲೆ, ತೂಗು, ಸೆಡವು, ಅಲ್ಲಾಡು, ನಡುಕಂ – ಈ ೬ ಕಂಪನಂ" (ಕಶಾ. ೩೧-೬೩೦) ; ಗ್ರಹಪೀಡಿತನಂತೆ ತೊನೆಯುತ್ತುಂ . . . ಕಾಯ್ ಸತ್ತ ಶಿಶುವಿನಂತೆ ಬಾಯ್ವಿಡುತ್ತುಂ (ಧರ್ಮಾಮೃ. ೧-೧೪೪); ಮುನಿಯುತ್ತುಂ ಮುದ್ದಿಸುತ್ತುಂ ತೊನೆದು ತವಕಿಸುತ್ತುರ್ವುತುಂ (ಶ ಕ್ಷಾ ೬. ೬೫) ; ಸೆಳೆಗೊಂಬೆಲರಿಂ ತೊನೆದೆಟ್ಟು ತಟ್ಟಿ ತೂಗಾಡಿದೊಡಂತದಂ ಪಿಡಿದುಕೊಂಡಲರಂ ನೆಱಿಕೊಯ್ದು (ಕುಸುಮಾ. ೫-೧೧೧) ; ಮೇಲೆ ಅಟ್ಟದ ನೆಲ ಅವನ ಓಡಾಟದ ರಭಸಕ್ಕೆ ತೊನೆಯುತ್ತಿದ್ದಿತು (ಕಾಗಳ. ೧೩೭). ೬. ಬೀಸು ; ತೀಡು : ಸಂಪಗೆಯ ಪಂಡದೊಳಾಮ್ರಮಹೀಜಮಾಲೆಯೊಳ್ ಫಲದ ತುಱುಂಗ ಲೊಳ್ ತೊನೆವುದೊರ್ಮೆಯುಮಲ್ಲಿಯ ಮಂದಮಾರುತಂ (ಮಹಾಸೇ. ೧೫-೪೪) ; ಗಾಳಿ ತೊನೆಯಿತು, ಗಂಧ ಹರಡಿತು (ಕಠುಶ್ರಾ. ೨೬-೬). ೭. ಬಳುಕಂ ; ಒನಪುಮಾಡು: ರೂಹಿಲ್ಲದೊಡಂ ಕೆಲಬರ ಸಹಾಯದಿಂ ಬಱಿದೆ ತೊನೆದು ಕೆಮ್ಮನೆ ವಿಟಸಂದೋಹಮನೊಲಿಸುವರ್ (ಧರ್ಮಾಮೃ. ೩-೧೩೦); ಪುಷ್ಪ "ನಾಚಿಸುತ್ತೀರಿ" ಎಂದು ತೊನೆದಳು (ಸುಖವಿ. ೬೯). ೮. ಒಲಿ; ಮನಸೋಲು; ಮೆಚ್ಚು : ಕಾಲೂರ ಸೂಳೆಯಂತೆ ಬಱಿದೆ ದುರ್ಮತಕ್ಕೆ ತೊನೆಯದೆ . . . ಧರ್ಮದೊಳ್ ಕೂಡಿ ಜನಪಾದಸೇವೆಯೊಳಿರ್ದು ಸ್ವರ್ಗಾಪವರ್ಗ[ಸುಖ]ಕ್ಕೆ ಭಾಜನನಾಗು (ಧರ್ಮಾಮೃ. ೧೪-೪೪) ; ಕರಂ ನನ್ನಿಗನೆನ್ನನೇ ತೊನೆವನೆನ್ನನೆ ಬೇಡುವನೆನ್ನೊಳಾಡುವಂ (ಚಳವಿ. ೬-೧೭೦) ; ತಾಯಿಯ ಹೃದಯ ತೊನೆಯುತ್ತದೆ–ತನಯಳ ಮಾತುಗಳನ್ನು ಕೇಳಿ (ಶರಚ. ೩೦). ೯. ವಿಸ್ತಾರ; ಮಿಡಿ : ಕಿಂದಳಮಿಂದು ವೀಣೆಯೆಡೆಯಾಡುವುದಲ್ತಿದು ಹೃತ್ಸರೋಜದಾನಂದದ ನಾಡಿಯಂ ತೊನೆದು ಸೋಲಿಸಿ ಗಳ್ಕನೆ ಸೊರ್ಕನೇಱಿಕುಂ (ಚಳವಿ. ೪-೧೩೦). ೧೦. ತೂಗು ; ತೂಗಾಡಿಸು: ತೊನೆದು ಕತ್ತಿಯ ತಿರುಹುತಿರಲಿಕೆ ಸುತನ ನುಂಗೆನಲು (ಸಂಭವ. ೪-೪೪); ಸಿಂಹಮಧ್ಯದ ಕನ್ಯೆಯರು ತೋಳ್ಗಳಂ ತೊನೆಯಲು (ಭಾವಚಿಂ. ೯-೩೮) ; ತೊನೆದಿಡುವ ಹಸ್ತಬಲದಿಂದಂಬು ನಡೆದು ವೆರರನು ಕೊಂಬುದಲ್ತೆ (ವಂಕಾರಾ. ೫-೪-೪೩) ; ಜಡಿದು ಕೈದುವ ತೊನೆವುತಂದರು ತಮ್ಮೊಳಿಗೊಗೆ (ಅಂಬಿಕಾ. ೫-೩೧) ; ನೆತ್ತರ್ ತವಕಿವ ಕೂರ್ಮೊನೆ ಸಬಳಗಳನ್ ತೊನೆದನವನ್ (ಅಂತಿಗೊ. ೬-೧೦೧). ೧೧. ತಲೆಯನ್ನು ಅಡಿಸು : ತೊನೆವರ್ಮಾತಿಗೆ ಸೋಲ್ದು ತನ್ನ ತಲೆಯೊಳ್ ತಾನಿಟ್ಟು . . . ಲಜ್ಜೆಯಿಲ್ಲದನಬರ್ ಶಾಂ ಮಾನ್ಯನೆಂದೆನ್ನದಾ ಮನುಜಂ ಸದ್ಗತಿ ಕಾಣನೈ (ಸೋಮೇಶ. ೫೦); ನುಡಿದ ನುಡಿಯಂ ಪರಿವಿಡಿಯಿಂ ನನ್ನಿ ಮಾಡಿದೆಯೆಂದು ತೊನೆಯುತ್ತೆ ಕಿಱಿದೆಡೆಯಂ ಪೋಗೆವೋಗೆ (ಕಬ್ಬಿಕಾ. ೧೧೦). ೧೨. ಕೊಡಹು ; ನಿವಾರಿಸು : ಅನಿತರೊಳಗನಿತಾತ್ಮ ತಿವಿಗುಳ ನೆನೆದು ಮರವೆಯ ತೊನೆದು ನಿಂದನು (ಕೃಷ್ಣಾಳ. ೫೧-೧೪). ೧೩. (ಆಲಂ) ಜಂಬಪಡು ; ಗರ್ವಿಸು ; ಬೀಗು : ಕುಲಮುಂ ದಳಮುಂ ಜಳ ಬೊಬ್ಬುಳಿಕೆಯವೋಲ್ ಕೆಡುವುವೆಕೆ ತೊನೆವರ್ ಮೂಖರ್ (ಧರ್ಮಾಮೃ. ೭-೧೬೧) ; ತಲೆಗೇಱಿ ಸೊಕ್ಕು ತೊನೆವರ್ (ಸೋಮೇಶ. ೪೪) ; ಪಾರ್ಥನಂ ರಕ್ಷಿಸುವೆ ನೀಂ ಕೃಪೆಯೊಳಾವು ಬಱಿದೆ ತೊನೆದೊಡೇನಹುದಿನ್ನು (ಕೃಮಿಧಾ. ೧೩-೩೪) ; ಅಂತರಿಸದಾವಗಂ ತುಳ್ಕುತಿಹ ರೌದ್ರರಸದಿಂ ತೊನೆವ ಚಂಡಾಖ್ಯಭೈರವ ಮಹಾತೇಜದಿಂ ತರಣಿಯಂ ಜಱಿಯುತ (ಸಂದಿಮಾ. ೩-೭). 'ಒನೆ' ಪರಾ.

ತೊನ್ನೆ 'ತೊಣ್ಣೆ' ನೋ.

ತೊನೆಪ, ತೊನೆಹ (ನಾ). ೧. ತೂಗಾಟ: ಸೊನೆಯಿಂ ದಾನಜಲೌಘಮುಂ ಕೊನೆಪದಿಂ ಕೊಂಬಾಟಮುಂ ಕೋಕಿಲಸ್ವನದಿಂ ಬ್ಯಂಹಿತನಾದಮುಂ ... ಒಪ್ಪಲ್ (ಜಗವಿ. ೧೪-೭೪). ೨. ಒನಪು; ಒಲಪು : ಅತಾಕೆಗಳ್ ತೊಗಿ ತೊನೆವ ತೊನೆಪಗಳುಮಂ . . . ನೋಡಿ (ಪಂಪಭಾ. ೪-೯೦ ಪ) ; ತೊನೆಪಂ ಲೇಸು ಸಖಿಗೆಯರಿದೆಂಬಂತೆ . . . ಸಂಸಾರಸುಖಂ ಲೇಸು ಮೇಗಣ ನರಕದುಃಖಿಂಗಳರಿಯವು (ಧರ್ಮಾಮೃ. ೪-೪೦). **ತೊನೆಹ** : ಪಿ. (ಆಲಂ) ಓಲಾಟ; ಮೆರೆತ: ಮನೆಮನೆವಾರ್ತೆಯು ಮಂದದಿ ಮಕ್ಕಳುಗಳ ತೊನೆಹದ ತೊಡರೆನೊಳ್ಕೊಡರಿ ಮನಗೆಟ್ಟು ಮತಿಯಳ್ಗಿ ಮಜಿಗದವೊಲ್ ನಿನ್ನ ನೆನೆದೆನುಳುಹು (ಶತಶಾಂ. ೧೬-೯೨). [ತೊನೆ$_1$ + – ಪ$_3$]

ತೊನೆಯಿಸು (ಕ್ರಿ). ೧. ತೂಗು ; ಜೀಕು : ಲಲಿತಾಂಗಂ ಬಳ್ಕಲು ಉಯ್ಯಲಂ ತೊನೆಯಿಸಿದಳ್ (ಮರಾಚ. ೪-೪೬). ೨. ಪಲುಕನ್ನು ಮೂಡಿಸು: ನಾದಾನುಸಾರವಾಗಿ ಗಮಕದ ಗುಂಪು ಗುಂಗುಮಿಸುವಂತೆ ಹಾಡನ್ನೆತ್ತುವ, ಎತ್ತಿ ತೊನೆಯಿಸುವ ತೊನೆಯಿಸಿ ಕೊನೆಗಾಣಿಸುವ ಹಿಡಿತ (ಪಾರ್ತಿಸು. ೪೨). [ತೊನೆ$_1$ + – ಇಸು$_3$]

ತೊನೆಹ 'ತೊನೆಪ' ನೋ.

ತೊನ್ನ (ನಾ). ತೊನ್ನುರೋಗವುಳ್ಳವನು : ತಾಂ ತೊನ್ನನಾಗಿ ಮುರುಂಟಿದ ಕೈಯುಂ ಕಾಲುಂ ಬೆರಸು . . . ಲೋಗರ ಮನೆಗಳೊಳ್ ಭೈಕ್ಷಮಂ ಬೇಡಿ (ವಡ್ಡಾರಾ. ೧೨೨-೨೨) ; ಪಂಚಮ ನವ ಸ್ಥಾನಂಗಳೊಳ್ ಕರ್ಕಟಾಳಿ ಮೃಗೋಕ್ಷೋದಯಮುಗ್ರರೊಂದಿದೊಡವರ್ ಮೇಣ್ ನೋಡೆ ತೊನ್ನಂ ನರಂ (ಜಾತತಿ. ೨೦-೧೫) ; ತೊನ್ನಂಗೆ ತುಳಿಲುಗೆಯ್ದಂ ಗೆನ್ನಂತಾಗೆಂದಂ (ಸಮಪ. ೯-೬೮) ; ಈ ತೊನ್ನಂಗೀ ಕಷ್ಟಂಗೀ ತೊಡವಿ ದೇಕೆ (ಧರ್ಮಾಮೃ. ೪-೬೮) ; ಒಡಲಂ ಪತ್ತಿದ ತೊನ್ನರ ತುಟಿಯಂತೆ (ಲೀಲಾವ. ೨-೧೧೭) ; ತೊನ್ನನ ಕೂಟದಿನಾದುದು ತೊನ್ನು (ಯಶೋಚ. ೩-೭೪) ; ಸಾವಂ ಬಯಸುವ ತೊನ್ನರುಂ ತುಱುಚರುಂ . . . ಬಂದಾ ಮರನ ಫಲಮಂ ಮೆಲೆ ನಿರೋಗಿಗಳಾಗಿ (ಧರ್ಮಪ. ೭-೪ ವ).

[ತೊನ್ನು + – ಅ$_7$]

ತೊನ್ನಿ (ನಾ). ತೊನ್ನುರೋಗವುಳ್ಳವಳು. [ತೊನ್ನ + – ಇ$_2$]

ತೊನ್ನು (ನಾ). ಚರ್ಮವು ಬಿಳಿದಾಗುವ ಒಂದು ಬಗೆಯ ರೋಗ ; ಶ್ವಿತ್ರ : "ಕುಷ್ಠಮೆನೆ ತೊನ್ನು" (ಮಂಗರಾ. ೧೧೩-೨) ; ಆ ಮಯೂರನ ತೊನ್ನಾದೊಡಲುಂ ಸುವರ್ಣಮಾದುದು (ಸಮಪ. ೯-೨೨) ; ತೊನ್ನಿನಂತೆ ರಸಿಗೆಯನುಳ್ಳುದು ಸೊಂಬನಂತೆ ಅಲಸಮಪ್ಪುದು (ಧರ್ಮಾಮೃ. ೪-೧೭೫) ; ಪಿರಿಯ ಬಿಳಿದಪ್ಪ ತೊನ್ನುಳ್ಳವನೆ ಪೂರ್ವದೊಳು ಬೆಳ್ಳಿಯ ಕದ್ದವಂ (ವೀಶೈಪು. ೪-೨೨-೨೫) ; ತೊನ್ನುರೋಗಕ್ಕೆ:– ನೆಲದಾಳವ ಗೋಮೂತ್ರದಿಂ ಅರೆದು ಪೂಸಲು ತೊನ್ನು ಮಾಣ್ಗುಂ (ವಿಪೈವಿ. ೧೩೦) ; ಕುಷ್ಠಾಶ್ರಯಾ–ತೊನ್ನಿಗಾಲಯವಾಗಿರ್ಪುದು (ಬಾಹಟೀ. ೨-೩-೮ ವ). [ದೇ.॥ ತೆಲು. ತೆನ್ನು]

ತೊನ್ನುಗೊಳ್ (ಕ್ರಿ). = ತೊನ್ನುವಿಡಿ : ಮನೆಮನೆಯಂ ತೊಟಲ್ದು ತನ್ನ ತೊನ್ನುಗೊಂಡಿರ್ಪುದನಱಿಪುತ್ತುಂ (ವಡ್ಡಾರಾ. ೧೨೨-೨೪) ; ಮೆಯ್ಯೆಲ್ಲಂ ತೊನ್ನುಗೊಂಡು ದುಃಖಂಬಟ್ಟೋವೊಯ್ಯೆಂದೊಳಱುತ್ತಿರ್ಪರ್ ಚರ್ಯಾದಿ ಜಿನೇಂದ್ರಧರ್ಮಮಂ ಪಟಿದವರ್ಗಳ್ (ಧರ್ಮಾಮೃ. ೬-೧೭೭).

[ತೊನ್ನು + ಕೊಳ್$_1$]

ತೊನ್ನುಬಡಕ (ನಾ). ತೊನ್ನು ಹತ್ತಿದವನು : ತೊನ್ನುಬಡಕ ಮಾವ ಅನ್ಯಕಾರಿ ಅತ್ತೆ . . . ಎನ್ನ ಗೋಳು ತಾನೆ ನಾಶವೆಂದಿಗಹುದೊ (ಪುಕಂದ. ೨-೮೪-೩). [ತೊನ್ನು + – ಬಡಕ$_1$ (< – ಬಡಿಕ)]

ತೊನ್ನುವಿಡಿ, ತೊನ್ನುಹಿಡಿ (ಕ್ರಿ). ತೊನ್ನುರೋಗ ಹತ್ತು : ತೊನ್ನು ವಿಡಿದಾವರಿಸಿ ರೂಪಳಿದಿಂತಿರುತ್ತಿರಲು (ಬಸಪು. ೫೭-೫೬). **ತೊನ್ನುಹಿಡಿ** : ತೊನ್ನುಹಿಡಿದವರ ಹೆಣಗಳನ್ನು ಸುಟ್ಟುಬಿಡುತ್ತಿದ್ದರು (ಹುಟ್ಟಿಹ. ೬೯).

[ತೊನ್ನು + ಪಿಡಿ$_1$]

ತೊನ್ನುಹಿಡಿ 'ತೊನ್ನುವಿಡಿ' ನೋ.

ತೊನ್ನೆ (ನಾ). ತೊನ್ನು ಹತ್ತಿದವಳು: ಆರಸಿಯರ ಸೂಳೆಯರ ಕಣ್ಗಳೊಳ್ ಘುಟಿಕಾಂಜನಂಗಳನೆಚ್ಚಿದೊಡನಿಬರುಂ ತೊನ್ನೆಯರಾಗಿರ್ಪನ್ನೆಗಂ(ವಡ್ಡಾರಾ. ೧೨೪-೧೬). [ತೊನ್ನ + – ಎ$_2$]

ತೊಪ್, ತೊಪ್ಪು (ನಾ). ಒಂದು ಅನುಕರಣ ಶಬ್ದ. 'ತೊಪ್ಪನೆ' ಪರಾ. **ತೊಪು** : ಬೆನ್ನಟ್ಟಿ ತಗುಳ್ದಿಡುವುದುಂ ಖಳಿಲ್‌ಖಳಿಲ್ ತೊಪ್ಪು ತೊಪ್ಪು ಛಳಿಲ್ ಛಳಿಲೆಂದು ಕೊಳ್ವ ಬಡಿಗಂ ಚಳಿತು (ಧರ್ಮಾಮೃ. ೬-೮೮).

ತೊಪತೊಪ (ನಾ). ಒಂದು ಅನುಕರಣ ಶಬ್ದ. 'ತೊಪತೊಪನೆ' ಪರಾ.

ತೊಪತೊಪನೆ (ಅ). ತೊಪತೊಪ ಎಂದು ಸದ್ದಾಗುವಂತೆ ; ನೀರು ತೊಟ್ಟಿಕ್ಕುವಂತೆ: ಅವನು ಮಳೆಯಲ್ಲಿ ತೊಪತೊಪನೆ ತೊಯ್ದು ಬಂದನು (ರೂಢಿ). 'ತಪತಪನೆ' ಪರಾ. [ತೊಪತೊಪ + – ಅನೆ$_1$]

ತೊಪ್ಪಟೆ 'ತೊಗಟು' ನೋ.

ತೊಪ್ಪಡೆ 'ತೊಗಟು' ನೋ.

ತೊಪ್ಪನೆ (ಅ). ತೊಪ್ ಎಂದು ಸದ್ದಾಗುವಂತೆ ; ತಲೆ ಪಱಿದು ಜೋಲ್ದು ತೊಪ್ಪ[ಪಾಠಾಂ. ಪ್ಪೆ]ನೆ ನೆಲದೊಳ್ ತನು ಬೀಟಿ (ಧರ್ಮಾಮೃ. ೧೩-೧೬೨) ; ಬಿಡೆ ಕೆಮ್ಮಿ ಕೇಕರಿಸಿ ತೊಪ್ಪನುಗುಳುತ (ಸೌಂದಪು. ೮-೫೭) ; ಕುವರಿ . . . ತೊಪ್ಪನೆ ಬಿದ್ದಳುರ್ವಿಯಲಿ (ಮೋಹತ. ೩೫-೫೧) ; ಚೀಲವನ್ನು ತೊಪ್ಪನೆ ಒಂದು ಮೂಲೆಗೆಸೆದ (ಕೊನೆಥೇ. ೧೯೭).

ತೊಪ್ಪತೊಪ್ಪನೆ (ದ್ವಿರುಕ್ತಿ) : ಅವ್ಯಯಪದಾಂತಲೋಪಕ್ಕೆ–ಕಮ್ಮ ಕಮ್ಮನೆ . . . ತೊಪ್ಪತೊಪ್ಪನೆ, ತೆಪ್ಪತೆಪ್ಪನೆ (ಶಮದ. ೧೯೩ ಪ್ರಯೋ) ; ತಪ್ಪತಪ್ಪದೆ ಶರಶರಂಗಳಂ ತೆಗೆದೆಚ್ಚು ತೊಪ್ಪತೊಪ್ಪನೆ ಮೃಗಮೃಗಂಗಳಂ ಕೆಡಹಿದರ್ಕಾನನದೊಳು (ಜೈಮಿಭಾ. ೨೮-೪೧). **ತೊಪ್ಪನೆ ತೊಯ್, ತೊಪ್ಪನೆ ತೋ** = ೧. ಸಂಪೂರ್ಣವಾಗಿ ಒದ್ದೆಯಾಗು ; ಪೂರ್ತಿಯಾಗಿ ನೆನೆದು ಹೋಗು : ತೊಪ್ಪನೆ ತೊಯ್ದು ಕಾಮರಸದಿಂ ಲಲಿತಾಂಗಿಯೊಪ್ಪಿದಳ್ (ಲೀಲಾವ. ೧೩-೧೭); ನಿಪ್ಪೊಸತಪ್ಪ ರತ್ನಚಯಮಂ ಪಿಡಿದಾಯ್ದು ಸುಧಾರಸಂಗಳಿಂ ತೊಪ್ಪನೆ ತೊಯ್ದವೊಲ್ ಪೊಳೆವ ಪಲ್ಗಳಂ (ಜಾಧಪು. ೨-೫೦) ; ಹರಶರಣಕರುಣಾಮೃತದ ಮಳೆ ಸುರಿಯೆ ತೊಪ್ಪನೆ ತೋದು ತೋದೀಶ್ವರಗಣಾಂಘ್ರಜಲದ ಕಡಲೊಳೋಲಾಡಿವೋಲಾಡಿ (ಬಸಪು. ೬-೨೫) ; ನೀರ ಧಾರೆಗಳಿಂದ ತೊಪ್ಪನೆ ತೋದು ದೊಡಲು (ಬಸಪು. ೧೮-೬೫) ; ೨. ಸಂಪೂರ್ಣವಾಗಿ ನೆನೆಯಿಸು,– ತೋಯಿಸು : ಇಪ್ಪತ್ತು ಕೂರ್ಗಣೆ ಕೆನ್ನೀರ ಮಳೆಯಿಂದೆ ತೊಪ್ಪನೆ ತೊಯ್ದನು ಖಳನ (ಮೋಹತ. ೩೪-೧೬). [ತೊಪ್ + – ಅನೆ$_1$]

ತೊಪ್ಪಲ 'ತೊಪ್ಪಲು' ನೋ.

ತೊಪ್ಪಲು, ತಪ್ಪಲ, ತಪ್ಪಲು$_2$, ತೊಪ್ಪಲ, ತೊಪ್ಪಾಲೆ (ನಾ). ೧. ಮರಗಿಡಗಳ ಎಲೆ, ಚಿಗುರು ಮೊದಲಾದುವು ; ಸೊಪ್ಪು : ಹಸಿಯ ತೊಪ್ಪಲನೆ ತಂದು ಆ ದೇವರ ಮಸ್ತಕದ ಮೇಲೊಟ್ಟುವ ಆ ತೊಪ್ಪಲನೆ ತಂದು ಬಿಸಿಮಾಡಿ ಪಶುಪತಿ ಎಂಬ ಜಂಗಮಕ್ಕೆ ನೀಡಿದೊಡೆ (ವಚಸಂ. ೧೯೦-೩೦ ಅಂಬಿವ) ; ಬಿಸಿಲಲ್ಲಿ ಕಟ್ಟಿ ಕಗ್ಗಲಿಯ ತೊಪ್ಪಲನು ತುಳಿದು ರಸವ ಹಿಂಡಿಕೊಂಡು (ಅಶ್ವಟೀ. ೬೯-೧) ; ಅನ್ನವ ಬಿಟ್ಟು ತೊಪ್ಪಲ ತಿನ್ನುವನ ಕಂಡು ಕೊರಡುಯೆಂಬೆ (ಚಿದಾವ. ೨೩-೯) ; ಉಡುಗಿ ಮೈನಯದ ನೆಯ್ಗೆ ತೊಪ್ಪಲು ; ಹರೆಯ ಚಿಗುರಡಗಿ ನೆತ್ತರದ ನೆರೆಗೆಂಪು ಹಳಸುತಿದೆ ಭರದಲ್ಲೆ (ಉಯ್ಯಾಲೆ. ೧೨-೩). ೨. ಒಂದು ಬಗೆಯ ಸಸ್ಯ : ಈಶ್ವರೀಬೇರು, ತೊಪ್ಪಲು, ಗೋಪಾಲಪುಟ್ಟಿತೊಪ್ಪಲು (ಮೃಜಿಗಿ. ೯-೧೫೩) ; ಮರಗಳು : ಹೆಸವ, ಹೆಬ್ಬಲಸು . . . ಜಾಲಿ, ಕರೀಜಾಲಿ, ಗೊಬ್ಬಳಿ, ತೊಪ್ಪಲು, ಬಿಲವತ್ರೆ (ನಮ್ಮನು. ೨೩೬). **ತಪ್ಪಲ**: ೧. ದಪ್ಪಗನಣುಗನ ಬಲದ ಮಸ್ತಕದ ಮೇಲಪ್ಪಳಿಸಿದ ಬಿಸಿಲ್ಗಿಡಿಗೆ ಕುಪ್ಪಟೆಯಾದುದುರುವೀರುಹ ಕಳಿತಿರ್ದ ತಪ್ಪಲ ತಱಗೆಲೆಯಾಯ್ತು (ಮೋಹತ. ೧೯-೪೪). 'ಮುಷ್ಟಿತಪ್ಪಲ' ಪರಾ. **ತಪ್ಪಲು$_2$**: ೧. ಮೇವಿನ ಸೊಪ್ಪಿಯ ಕಿಚ್ಚು ಮಾಡಿ ಅದರಲ್ಲಿ ತುರುಬಿ, ತುಂಬಿ, ಗಣಜಲಿ, ಹೆಬ್ಬೇವು ಮೊದಲಾದ ತಪ್ಪಲುಗಳನ್ನು ಚೆಲ್ಲಿ (ಕನ್ನಜಾ. ೧೬೬). **ತೊಪ್ಪಲ$_1$** : ೧. ತೊಪ್ಪಲದ ಆಚ್ಛಾದನೆಯಿಂದ ಚಪ್ಪರವು ... ಶೋಭಿಸಿತು (ಹಬ್ಬಿಬ. ೪೬); ತಾಯಿಗೆ ಹೇಳಿ ಆಡನ್ನು ಬಿಚ್ಚಿಕೊಂಡು ತೊಪ್ಪಲ ತರಲು ಊರ ಹೊರಗೆ

ನಡೆದನು (ಜಯಂತ. ೩೨). **ತೊಪ್ಪಾಲೆ** : ೨. ಬಿಳೀಜಾಲಿ, ತೊಪ್ಪಾಲೆ, ಸಾರಾಯಿಬೇಲ, ತುಂಬೆಮರ (ಮೃಜಿಗಿ. ೧-೧೬). 'ಸೊಪ್ಪು$_3$' ಪರಾ.

ತೊಪ್ಪಲು ಪಲ್ಲೆ = ಸೊಪ್ಪಿನ ಪಲ್ಯ : ಸಾಧ್ಯವಿದ್ದಷ್ಟು ಮಟ್ಟಿಗೆ ತೊಪ್ಪಲು ಪಲ್ಲೆಯನ್ನೂ ಚಪ್ಪರಬದನೇಕಾಯಿಯನ್ನೂ ತಿನ್ನಲು ಶಿವರಾಮನಿಗೆ ಸೂಚನೆ ಕೊಟ್ಟರು (ಚೆಲುನಿ. ೨೮).

[ದೇ.॥ ತಮಿ. ಚುಪ್ಪಲ್ = ಒಣಗಿದ ಕುಡಿ ; ತುಳು. ತಪ್ಪು ; ಕೊಡ. ತೊಪ್ಪಿ, ಚಪ್ಪಲ]

ತೊಪ್ಪಾಲೆ 'ತೊಪ್ಪಲು' ನೋ.

ತೊಪ್ಪಿಗೆ 'ಟೋಪಿ' ನೋ.

ತೊಪ್ಪು 'ತೊಪ್' ನೋ.

ತೊಪ್ಪೆ$_1$ (ನಾ). ಬೊಜ್ಜು. 'ತೊಪ್ಪೆಮೈ' ಪರಾ.

[ದೇ.॥ ತಮಿ. ತೊಪ್ಪೆ$_1$]

ತೊಪ್ಪೆ$_2$ (ನಾ). ಹಸಿಯಾದ ಸಗಣಿಯ ಮುದ್ದೆ : ಅಪ್ಪು ಉಳ್ಳನ್ನಕ್ಕ ತೊಪ್ಪೆ ಕಿಚ್ಚಿಗೊಳಗಪ್ಪುದೆ ಅಪ್ಪುವಾಱು ಕಿಚ್ಚು ಮುಟ್ಟಿದ ಮತ್ತೆ ತೊಪ್ಪೆಯೆಂಬ ನಾಮ ಎತ್ತ ಹೋಯಿತ್ತು (ಮಾದೂಳ. ೯೬೭-೫೮) ; ತೊಪ್ಪೆ ಮೇಲೆ ಹೆಜ್ಜೆ ಇಟ್ಟು ಮುಖಕ್ಕೆ ಸಿಡಿಸಿಕೊಂಡು, ಇದನ್ನ ಗ್ರಹಚಾರಾಂದರೆ ನಾವು ಮನುಷ್ಯರೇ ! (ಉಮಾಶಿ. ೧೨೪) ; ತೊಪ್ಪೆ ಬರುವುದೇ ಹೆಪ್ಪಿಗೆ ? (ಗಾದೆ).

ತೊಪ್ಪೆ ತಟ್ಟು = ಸಗಣಿಮುದ್ದೆಯನ್ನು ತಟ್ಟು ; ಬೆರಣಿ ತಟ್ಟು : ತೊಪ್ಪೆ ತಟ್ಟಬೇಡವ, ರಾಗಿ ಮಾಡಬೇಡವ . . . ಹೊಟ್ಟೆಗಿಲ್ಲದೆ ಇದೆಲ್ಲಾ ಮಾಡಾಕಾದೀತಾ (ಮುಸುಗ. ೧೫೦). **ತೊಪ್ಪೆ ಹಾಕು** = (ಹಸು, ಎಮ್ಮೆ ಮೊದಲಾದುವು) ಸಗಣಿ ಹಾಕು : ರಸ್ತೆಯ ಮಧ್ಯದಲ್ಲಿ ಹಸು ತೊಪ್ಪೆ ಹಾಕಿದೆ (ಕೂಡಿ).

ತೊಪ್ಪೆ$_3$ (ನಾ). ತೊಗಟೆ ; ಚಕ್ಕೆ : ಆ ಮರನನೇಱಿ . . . ಕೊಂಬ ಕಡಿವುತ್ತಿರಲಾಗಿ ಒಂದು ಹೊಯಿಲಿಗೆ ಅದಱಂಗದ ತೊಪ್ಪೆ ಹಱಿದು (ಸರ್ವವ. ೧೦೫-೫೬೬); ಇಸುಬಿನ ಹುಣ್ಣಿಗೆ :-ಹುಳಿಸೊಡಲಿಯ ತೊಪ್ಪೆಯಂ ನಿಂಬೆಯ ಹುಳಿಯಲ್ಲಿ ಅರೆದು ಪೂಸೆ ಮಾಣ್ಗುಂ (ವಿವೈವಿ. ೭೫) ; ಇಂಗಳದ ತೊಪ್ಪೆಯನು ಹಿಟ್ಟುಮಾಡಿ (ಅಶ್ವಬೇ. ೯೮-೩).

ತೊಪ್ಪೆಮೈ (ನಾ). ಬೊಜ್ಜು ಬೆಳೆದ ಶರೀರ ; ನಿಸ್ಸಾರವಾದ ದಪ್ಪ ದೇಹ : ಈ ಪ್ರಕಾರದಲ್ಲಿ ಉದಯಕಾಲದಲ್ಲಿ ಸಂಚಾರಮಾಡುವುದು ಹೀಗೆ ಮಾಡಿದಲ್ಲಿ ಶರೀರವು ಲಘುವಾಗಿರುವುದು . . . ತಾಮಸವಾದ ತೊಪ್ಪೆಮೈ ಹೋಗುವುದು (ಸಕವೈ. ೨೯).

[ತೊಪ್ಪೆ$_1$ + ಮೈ (< ಮೆಯ್)]

ತೊಬಟೆ 'ತೊಗಟು' ನೋ.

ತೊಬ್ಬು, ತುಬ್ಬು$_2$ (ಕ್ರಿ). (ಊಳಿಗದ) ಕೆಲಸಮಾಡು; ದುಡಿ: ಸೀಲವಂತರೆಲ್ಲರೂ ಮಹಾಲಕ್ಷ್ಮಿಯ ಮನೆಮನೆಯ ಎತ್ತಾಗಿ ಉತ್ತುತೊತ್ತಾಗಿ ತೊಬ್ಬಿ ಕತ್ತೆಯಾಗಿ ಹೊತ್ತು ಸಾವರೆಲ್ಲರೂ ಸದ್ಭಕ್ತರೆ (ಐಲೇಶ್ವ. ೪೦). **ತುಬ್ಬು$_2$** : ಹೊತ್ತು ಮೂಡಿ ಮುಳುಗುವನ್ನೆವರ ತೊತ್ತುಗೆಲಸವನೆ ತುಬ್ಬಿ ಬೆಂದೊಡಲ ಬೇಗೆಯವನೇತಱದಿ ತಂಬಿಸುವೆಂ (ಸಮ್ಯಕ್ಕಾ. ೫-೨೨).

[?]

ತೊಮ್ಮೆ$_1$ (ನಾ). ಒಂಬತ್ತು ಸಲ ; ಒಂಬತ್ತು ಬಾರಿ : ತೊಂಬತ್ತು, ಒಂಬತ್ತುಪತ್ತು, ತೊಮ್ಮೆ, ತೊಂಬರ್ (ಶಬ್ದಾನು. ೩೬೧ ಪ್ರಯೋ); ತೊಮ್ಮೆ, ನವವಾರಾನ್ (ಶಬ್ದಾನು. ೩೬೧ ಪ್ರಾಪ್ಯಾ). [< ಒಂಬತ್ತು + – ಮೆ$_2$]

ತೊಮ್ಮೆ$_2$ 'ತೊಂಬೆ$_1$' ನೋ.

ತೊಮ್ಮೆ$_3$ (ನಾ). (?) : ಬಾಗಿಲ ಗದೆ ತೊಂಮೆ ಉಪಾದ್ಯಯನ ಗದ್ದೆ (ಸೌಇಎ. ೧೯೩೦, ಉಡುಪಿ. ೫೭೫-೨೨ : ?). [?]

ತೊಮ್ಮೆವಡೆ (ಕ್ರಿ). ಅಧಿಕಗೊಳ್ಳು ; ಆಧಿಕ್ಯಹೊಂದು : ತಿರಿಪು ತೊಮ್ಮೆವಡೆಯೆ ಗತಿ ಸಂಗತಿವಡೆಯೆ (ಶಾಂತೀಶ್ವ. ೧೬-೬೭ ವ).

[ತೊಮ್ಮೆ$_2$ (< ತೊಂಬೆ$_1$) + ಪಡೆ$_1$]

ತೊಯ್ 'ತೋ' ನೋ.

ತೊಯಿ 'ತೊವ್ವೆ' ನೋ.

ತೊಯಿಸು 'ತೋಯಿಸು' ನೋ.

ತೊಯೆ 'ತೊವ್ವೆ' ನೋ.

ತೊಯ್ತು (ನಾ). ಹಸಿಯಾಗಿರುವಿಕೆ ; ತೇವ ; ಆರ್ದ್ರತೆ : ತೊಯ್ತುಂ, ತೊಯ್ತುಂಗಳ್ ; ಕಾಯ್ತುಂ, ಕಾಯ್ತುಂಗಳ್ (ಶಬ್ದಾನು. ೫೫೩ ಪ್ರಯೋ).

[ತೊಯ್ (< ತೋ) + – ತ$_2$]

ತೊಯ್ಯಿಸು 'ತೋಯಿಸು' ನೋ.

ತೊಯ್ಯು 'ತೋ' ನೋ.

ತೊಯ್ಸು 'ತೋಯಿಸು' ನೋ.

ತೊರಂಗಲು (ನಾ). ಒಂದು ಬಗೆಯ ಮರ ; ಹೊಂಗೆ ; ಹುಲಿಗಲು : ತೊರಂಗಲ ಎಣ್ಣೆ ಹಾಕಿದ್ದ ಹಣತೆಯ ಬತ್ತಿಯನ್ನು ಹೊತ್ತಿಸಿ ದೀಪ ಮಾಡಿದನು (ಮಲೆಮ. ೨೦೯). [?]

ತೊರಕೆ (ನಾ). (ಕರಾ) ಒಂದು ಬಗೆಯ ಮೀನು. [← ತುಳು. ತೊರಕೆ]

ತೊರಕೆಬಲೆ (ನಾ). (ಕರಾ) ಒಂದು ಬಗೆಯ ಬಲೆ ; ತೊರಕೆಮೀನು ಹಿಡಿಯುವ ದೊಡ್ಡಕಣ್ಣಿನ ಬಲೆ. [ತೊರಕೆ + ಬಲೆ$_1$]

ತೊರಟೆ (ನಾ). ಗಡ್ಡೆ ; ಮುದ್ದೆ ; ಗರಣೆ : ಕೇಕರಿಸಿ ಉಗುಳಿದರೆ ತೊರಟೆಯಾಗಿ ರಕ್ತ ಬಾಯಿಂದ ಬೀಳುವುದು (ವೈದ್ಯಸಾ. I, ೮೩). 'ಕೊರಟೆ' ಪರಾ. [?]

ತೊರತಿ 'ತೋರತ್ತಿ' ನೋ.

ತೊರತೆ (ನಾ). ಜಿನುಗುವಿಕೆ; ಒಸರುವಿಕೆ; ಒರತೆ: ಮಳಮೂತ್ರಾಂಗಮನೇತನು ಕೊಳೆ ನೆತ್ತರ ಬಱಿಯ ತೊರತೆ[ಪಾಶಾಂ. ಬರೆಯ ತೊಱತೆ]ಯೋನಿಯೆ ತಾನೆಂದೆಳಸದೆ ಲಲನಾಸಂಗಮನುಟಿದಿರ್ಪಂ ಬ್ರಹ್ಮಚಾರಿ ವಿಜಿತವಿರಾಜಂ (ಶಾಂತೀಶ್ವ. ೧೩-೭೩). [ತೊರೆ$_2$ + – ತೆ$_2$]

ತೊರತ್ತಿ 'ತೋರತ್ತಿ' ನೋ.

ತೊರನಿ (ನಾ). ಒಂದು ಬಗೆಯ ಸಸ್ಯ : (ಮೃಜಿಗಿ. ೭೮-೧೬೦೭).

[?]

ತೊರಮರ (ನಾ). ಒಂದು ಸ್ಥಳದ ಹೆಸರು : ತೊರಮರವಿಷಯೇ ಚಿತ್ರಸೇದುಗ್ರಾಮಮಧಿವಸತಿ (ಇಅ. XIX, ೧೫೦-೧೯ ; 692).

[?]

ತೊರಲೆ (ನಾ). ಒಂದು ಬಗೆಯ ಮರ: ಸರಲೆಯಿಂ ಹಾಲೆಯಿಂ ಹೀಲೆಯಿಂ ನೀಲಿಯಿಂ ತೊರಲೆಯಿಂ ಹೊಂಗೆಯಿಂ . . . ಕಾಡೆಸೆದುದು (ನಂದಿಮಾ. ೧೩-೧೨). [?]

ತೊರವಿ 'ತೊಱವಿ' ನೋ.

ತೊರಸು 'ತೊಱಿಯಿಸು' ನೋ.

ತೊರಳಿ 'ತೊರಳೆ' ನೋ.

ತೊರಳೆ, ತೊರಳಿ, ತೊಳಲೆ, ತೊಳ್ಳೆ (ನಾ). ಗುಲ್ಮ ; ಪ್ಲೀಹ : ಸರಳುರ್ಚೆ ನರಳುತ್ತ ತೊರಳೆಯಡಸಲು ಮೂಗನರಳಿಸೆಚ್ಚಂಬ ಹೊತ್ತುರುಳ್ವ ಕಂಬನಿಯಿಂದ ತರಳಚಿತ್ತದ ಹಂದಿ ಮರಳಿ ಕಾನನಕೆಯ್ದಿತು (ಹಚಕಾ. ೬-೩೦) ; ಕೊಳ್ಳಿಗಿಡಿ ತಾಗಲಳ್ಳೆವೊಯ್ದು ಬೀಟ್ವ ಬೆಳ್ಳೆರಳೆಗಳಿಂ ಉರಿಯಟ್ಟಿ ಪರಿಪರಿದು ತೊರಳೆವಾಯ್ದುರುಳ್ವ ಮರೆವಿಂಡುಗಳಿಂದ . . . ಸರ್ವಾಂಗಪಂ ಕರ್ಬೊಗೆ ಸುತ್ತೆ ಕೊರ್ಬಿದೊಡಲಂ ಬಿಡುವ ಪೆರ್ಬಾವುಗಳಿಂದ ಗುರ್ಬುವೆತ್ತುವು (ನಳಚಂ. ೫೮೮ ವ) ; ತೊರಳೆಯ ತೊಂಗಲಿನೊಳಂದೆಸೆವ

ಚಕ್ರವ ನೋಡಿದನು ದೈತ್ಯಾರಿ ಕೋಪದಲಿ (ಕುಪ್ಯಾಭೀ. ೬-೩೨) ; ಪೊಸ ತೊರಳೆಗಳ ದಂಡೆದೊಂಡಲ್ಗಳಂ ಮುಡಿದುಮಲ್ಗಳ ತೊಡಂಗಳನೆ ತೊಟ್ಟು (ಜಿಬಪು. ೩೨-೨೦) ; ತೊರಳೆ ತೊಂಗಳೆ ಮಜ್ಜೆ ಮಾಂಸಗಳನು ಸವಿದು (ಕಂನವಿ. ೧೫-೫೩) ; ಕಡಿದು ಬಡಿದು ಕುರಿದರಿಯೊಟ್ಟುವೆನು . . . ಬಂದವರೊಡಲ ತೊರಳೆ ಮಾಂಸಂಗಳಂ (ಶ್ರೀರಾಮಾ. ೬೭೫-೩೮೭). 'ನಿಡುದೊರಳೆ' ಪರಾ. **ತೊರಳಿ:** ಹೊಂಡೆಯದ ತೊರಳಿಗಳ ಕೊರಳಿನ ತುಂಡುಗಳ ಕಾಲಾಂತಕನ ಹೆಬ್ಬೆಳಸು ಹುಲುಸಾಯ್ತು (ಕುಪ್ಯಾಭೀ. ೯-೧೩). **ತೊಳಲೆ:** ಕಣೆವೋದ ಕಣೆಕಾಲ್ಗಳುಂ ಕೊಟದು ಬೀಟ್ಟ ತೊ[ಪಾಠಾಂ. ಕೊ]ಳಲೆಗಳುಂ ಬಟ್ಟಲು ಕಟಲ್ದ ಮೊಣಕಾಲ್ಗಳುಂ . . ಮಹಾಭಯಂ ಕಾರಮಾಗೆ (ಮಹಾನೇ. ೧೨-೫೪ ಪ). **ತೊಳ್ಳೆ :** ನನಗೇಕೋ ತೊಳ್ಳೆ ನಡುಗುತಿದೆ (ಚಂದ್ರಸ. ೨೪-೨೦) ; ನಾನೂ ಗಟ್ಟಿಯಾಗಿ ಕೂರಾಕೆ ಪರ್ಯತ್ನ ಮಾಡಿದೆ, ಆಗಲಿಲ್ಲ, ತೊಳ್ಳೆ ನಡುಗಾಕೆ ಸುರುವಾಯ್ತು (ಮಲೆಮ. ೩೦೩). [ದೇ.॥ ತುಳು. ತೊಳ್ಳೆ = ಬೊಜ್ಜುಹೊಟ್ಟೆ]

ತೊರಿಗ (ನಾ). ಒಂದು ಬಗೆಯ ಕೀಟ: ದುಂಬಿ, ಹಸುರುದುಂಬಿ, ತುಡುವೆ, ತೊರಿಗ (ನಮ್ಮನು. ೨೪೧). [?]

ತೊರೆ$_1$ 'ತೊಱೆ$_1$' ನೋ.

ತೊರೆ$_2$ (ಕ್ರಿ). ೧. ಮೊಲೆಯಲ್ಲಿ ಹಾಲು ತುಂಬಿಕೊಳ್ಳು,–ಕೂಡಿಕೊಳ್ಳು: ಕಳಮಾಕ್ಷತಚೂರ್ಣಂ . . . ಎರ್ಮೆಯ ಪಾಲಿಂ ಕಲಸಿ ಕುಡಿಯಿಸುಗೆ ತೊರೆಗುಂ ಮೊಲೆಗಳ್ ಬಾಣ(ಳ)ಂತಿಗೆಚ್ಚು ಪಾಲ್ ಪಾಯ್ವಿನೆಗಂ (ಲೋಕೋಪ. ೯-೧೮೨). ೨. ಮೊಲೆಯಿಂದ ಹಾಲು ಸ್ರವಿಸು,–ಸುರಿಸು: "ತೊರೆ–ಸ್ತನ್ಯೇ (ಎದೆಹಾಲು ಸ್ರವಿಸು)"(ಶಮಧಾ); ತೊರೆದುದು ಕಾಮಧೇನು ತುಱುಗಲ್ಗೊನೆವಣ್ತುದು ಕಲ್ಪವೃಕ್ಷಂ (ಪಂಪಭಾ. ೧೪-೨೦); ತೊರೆದ ಕುಚಕಲಶದಿಂದಂಬಿಱಿವಿಟ್ಟೊಗೆತಂದ ಪಾಲ ಧಾರೆಯಿಂ (ಅಜಿಪು. ೫-೫೭); ಬಱಡಿಯ ಕೈಯಲ್ಲಿ ಮಕ್ಕಳಿದ್ದಡೆ ತೊರೆವುದೆ ಮೊಲೆ (ಮೋಳಿಮಾ. ೨೫-೧೦೧) ; ಕುಮಾರನನಜಿತಸೇನಮಹಾದೇವಿ ನಲ್ವರಕೆಯಿಂ ಪರಸಿ ಮೋಹರಸಪರವಶತೆಯಿಂ ತೊರೆದ ಮೊಲೆಗೆಲಕ್ಕೆ ತೆಗೆದು (ಚಂದ್ರಪು. ೬-೯೦ ಪ); ತೊರೆದೆಚ್ಚು ಪಾಯ್ವ ಮೊಲೆವಾಲಿಂ ಮಗನಂ ಮಜ್ಜನಂಬುಗಿಸಿ (ಅರ್ಧನೇ. ೮-೨೧ ಪ) ; ಹೆತ್ತ ತಾಯ ಮೊಲೆ ತೊರೆಯೆ (ನಂಬಿರ. ೮-೩೬); ಧರಣಿಯೊಳು ಬಸವಂಗೆ ಸಲೆ ಮೊಲೆ ತೊ[ಪಾಠಾಂ. ಸೊ]ರೆದು ಕಱೆವಂತಾಯ್ತು (ಬಸಪು. ೫೭-೮೩) ; ದೊರೆಯಬಹುದೆ . . . ಎರೆದು, ಹೊಚ್ಚಿ ಎದೆಹಾಲು ತೊರೆವ ಪಾದೋದಕ ಪ್ರಸಾದ ? (ನೆಲಮು. ೩೬-೨). ೩. ಒಸರು ; ಜಿನುಗು; ತೊಟ್ಟಿಕ್ಕು: ಕಾಡ ಪಂದಿಗಳ ಬಲ್ನೆಣದಿಂ ಪೊಲಸಂಟಿ ನಾರ್ವ ಜೇವಡೆಗಳ ಪುಣ್ಗಳಿಂ ತೊರೆವ ನೆತ್ತರ ಕೆಯ್ ನಡುಗಲ್ಕೆ ನೀಡಿ ಕೀಳಿಡೆಯಿಡೆ ಗಂಟಲಂ ಮುಱಿದನೊರ್ಮೆಯ ನಿರ್ಘೃಣನೆನ್ನ ತಂದೆಯಂ (ಕಾದಂಪೂ. ೧೮೪) ; ಹಿಂಗದೆ ನೋಳ್ಪವರ ಕಂಗಳ್ ತೊರೆಯೆ (ನಂಬಿರ. ೮-೩೬) ; ತೊರೆದುದು ಚಂದ್ರಕಾಂತಮಣಿ . . . ನೆಟ್ಟನೊಗೆಯಲ್ ಬಗೆದಂದೊಡೆ ಚಂದ್ರಮಂಡಲಂ (ಅನಂಪು. ೭-೭೭); ತೊರೆದುದು ಚಂದ್ರಕಾಂತಂ ಎಣೆವಕ್ಕಿಗಳಪ್ಪು ಸಡಿಲ್ದುವು (ಸೂಕ್ತಿಸು. ೮-೨೧೧) ; ತೊರೆದು ತೊಟ್ಟಿಡುವ ಪ್ರವಾಳಾಧರವ ಚುಂಬಿಸಿದ (ಮೋಹತ. ೧೮-೯೦). ೪. ಜಿನುಗಿಸು ; ಒಸರುವಂತೆ ಮಾಡು : ತೊರೆಯುತ ಮೊರೆಯುತ ಸುರಿಯುತ ರಕ್ತವ . . . ಅರಿಪೆಣಗಳು ಲೆಕ್ಕವಿಲ್ಲದೆ ನೋಟಕಚ್ಚರಿಯ ಪುಟ್ಟಿಸುತೊಪ್ಪಿದುವು (ಕಂನವಿ. ೧೫-೬೦). ೫. ಹರಿ; ಪ್ರವಹಿಸು: ಬೆಟ್ಟ ಸುರಿವುದು ಕೊಳ್ಳಕ್ಕೆ, ಕೊಳ್ಳ ತೊರೆವುದು ನದಿಗೆ (ಹೃದಸ. ೫೮-೧೨). ೬. ವ್ಯಾಪಿಸು ; ಹರಡು : ಸರಸಿಜಾಕ್ಷಿಗೆ ತತ್ಸುರತಾಂತ್ಯದ ಕೆಂಪು ತೊರೆದ ಕಣ್ಗಡೆಗಳೊಪ್ಪಿದವು (ಶ್ರೀಪಾಲ. ೯-೩೮). ೭. ಪುಷ್ಟವಾಗು ; ದಪ್ಪವಾಗು : ಕಿಱುಗಾಯ್ಗಳಿಂ ತೊರೆದ ದೋರೆಗಳಿಂ ತನಿವಣ್ಣ ಪಂಕ್ತಿಯಿಂದಂ . . . ಚಪ್ಪರಿಪ ರಾಜಶುಕಾಳಿಯಿನಾಮ್ರಮೊಪ್ಪುಗುಂ (ಗೀಕ. ೨-೩೩). ೮. ಉಂಟಾಗು: ಪಾರಿವವಕ್ಕಿಯನರವಿಂದವಿಲೋಚನೆ ಕರವಿಾಕ್ಷಿಸಿ ತೊರೆದ ಮಱವೆಯಿಂದವೆ ಮಣಿಗದ್ದುಗೆಯೊಳ್ ಮೆಯ್ಯಿಕ್ಕಿದಳು (ಆಯಕಾ. ೧೨-೨೫). 'ಸೊರೆ$_1$' ಪರಾ.

[ದೇ.॥ ತಮಿ. ಚುರ ; ಮಲ ಚುರ, ಚೊರಿಯು, ತೆಲು. ತೊರಗು, ತೊರುಗು]

ತೊರೆ$_3$ 'ತೊಱೆ$_2$' ನೋ.

ತೊರೆಇಂಗುಳ 'ತೊಱೆಯಿಂಗುಳ' ನೋ.

ತೊರೆಕರೆ 'ತೊಱೆಗರೆ$_1$' ನೋ.

ತೊರೆಗರೆ (ಕ್ರಿ). (ಮೊಲೆ ತುಂಬಿ) ಹಾಲನ್ನು ಸುರಿಸು : ಕರುವಿನ ಕರೆ ಕೇಳಿ ತೊರೆಗರೆಯದ ಹಸು ಇರಬಹುದೇನಲ್ಲಿ (ಸೂರ್ಯಪಾ. ೮೨-೧).

[ತೊರೆ$_2$ + ಕರೆ$_2$ (<ಕಱೆ$_1$)]

ತೊರೆಗರೆಯಿಸು (ಕ್ರಿ). ಹಾಲನ್ನು ಸುರಿಸುವಂತೆ ಮಾಡು : ಬಂಜೆಗೆ ತೊರೆಗರೆಯಿಸಿತ್ತು ಈ ಮುಖರಸ (ಉಯ್ಯಾಲೆ. ೧೦೭-೯).

[ತೊರೆಗರೆ + – ಇಸು$_3$]

ತೊರೆದವನ 'ತೊಱೆದವನ' ನೋ.

ತೊರೆಬಿಡಿಸು (ಕ್ರಿ). = ತೊರೆಗರೆಯಿಸು : ರಾಧಾಕಾಕೂ ಅವರೇ ಕೆಚ್ಚಲಿಗೆ ಕೈಹಾಕಿ ತೊರೆಬಿಡಿಸಬೇಕೆಂದಿಲ್ಲ (ದೀಪಹ. II, ೩೫೧).

[ತೊರೆಬಿಡು + – ಇಸು$_3$]

ತೊರೆಬಿಡು (ಕ್ರಿ). ೧. = ತೊರೆಗರೆ : ಕಾಮಧೇನು ತೊರೆಬಿಟ್ಟಂತೆ ಅಂದು ಧರ್ಮಾಮೃತವನ್ನು ಹರಿಸಿದರು (ದಾನಚಿಂ. ೧೦೮). ೨. ಜಿನುಗು ; ಒಸರು: ಮೃಗಶಿರದ ಮಂಚಕೆ ಚಂದಿರ ಬರುವಾಗ ಚಂದ್ರಿಕೆಯ ವಾತ್ಸಲ್ಯ ತೊರೆಬಿಟ್ಟಿತ್ತು (ಸಖೀಗೀ. ೨೨-೩೭೨) ; ಆತ್ಮಾನುಬಂಧ ಆನಂದದಿಂದ ತೊರೆಬಿಟ್ಟು ತುಟಿಗೆ ಚಿಮ್ಮೆ (ಮುಕ್ತಕಂ. ೧೬-೫). 'ಸೊರುಬಿಡು' ಪರಾ. [ತೊರೆ$_2$ + ಬಿಡು$_1$]

ತೊರೆಮಾವು 'ತೊಱೆಮಾವು' ನೋ.

ತೊರೆಮೆಂತೆ (ನಾ). ಹೊಳೆಯ ತಡಿಯಲ್ಲಿ ಬೆಳೆಯುವ ಒಂದು ಬಗೆಯ ಸಸ್ಯ : (ಕಿ). [ತೊರೆ$_3$ (<ತೊಱೆ$_2$) + ಮೆಂತೆ (<ಮೆಂತೆಯ)]

ತೊರೆಯ 'ತೊಱೆಯ' ನೋ.

ತೊರೆಯಿಟುಪು (ಕ್ರಿ). ಹಾಲು ಸುರಿಸು ; ತೊರೆಗರೆ ; ಸೊರುಬಿಡು : ಆ ತುಱು . . . ಮೊಲೆಯುಣವಂದ ಕಱುವಿನ ಮೆಯ್ಗಂಪಂ ಸವಿದು ತೊರೆಯಿಟುಪಲೊಡಂ (ಚಿಕವಂ. ೬೮-೧೪):

[ತೊರೆ$_2$ + ಇಟುಪು$_0$ (<ಇಟಿಪು)]

ತೊರೆಯೊಳ್ಕು (ಕ್ರಿ). ನದಿಯಂತೆ ಹರಿ,–ಪ್ರವಹಿಸು : ಅಶ್ರು...ಆತ್ಮೇಕ್ಷು ಸೋರ್ವ ಅನವರತ ರಸಧಾರೆಯೋಲ್, ತೊರೆಯೊಳ್ಕಿದುದು ಹನುಮನಕ್ಷಿಯ ಕೃತಜ್ಞತಾಶತಪತ್ರದಿಂ (ಶ್ರೀರಾಮಾ. ೪೭೮-೧೦೨).

[ತೊರೆ$_3$ (<ತೊಱೆ$_2$) + ಒಳ್ಕು$_0$ (<ಒಟ್ಕು$_1$)]

ತೊರೆವಳ್ಳಿ 'ತೊಱೆವಳಿ' ನೋ.

ತೊರೆಹ 'ತೊಱೆಹ' ನೋ.

ತೊರೆಹಾಲು (ನಾ). (ಮೊಲೆಯಿಂದ) ಹೊರಸೂಸುವ ಹಾಲು : ಕಂಬನಿ, ತೊರೆಹಾಲು, ಬೆವರು, ರಕ್ತ, ವೀರ್ಯ ಮೊದಲಾದ ರಸಭೇದಗಳು ಬೇರೊಂದು ರಸನೆಯ ಪ್ರವಾಹಗಳಾಗಿವೆ (ಸಾಹಿವಿ. ೧೦).

[ತೊರೆ$_2$ + ಹಾಲು$_1$ (<ಪಾಲ್$_1$)]

ತೊರ್ತು 'ತೊಟ್ತು' ನೋ.

ತೊರ್ತುವೆಸ 'ತೊಟ್ತುವೆಸ' ನೋ.

ತೊರ್ತುವೆಸಗೆಯ್ 'ತೊಟ್ತುವೆಸಗೆಯ್' ನೋ.

ತೊಲ 'ತೊಲೆ$_3$' ನೋ.

△ **ತೊಲಂಗಿಸು** 'ತೊಲಗಿಸಂ' ನೋ.

△ **ತೊಲಂಗು** 'ತೊಲಗಂ$_1$' ನೋ.

ತೊಲಗಿಕೆ (ನಾ). ೧. ಅಗಲಂವಿಕೆ ; ದೂರವಾಗುವುದು ; ವಿಯೋಗ ; ವಿರಹ : ಆರಯೆ ರತಿಯಿಂದಂ ಶೃಂಗಾರಂ ಸ್ತ್ರೀಪುಂಸಯೋಗದಿಂ ತೊಲಗಿಕೆಯಿಂ ಸಾರಂ ಸಂಭೋಗಂ ಶೃಂಗಾರಂ ಸವಿಯೆನಿಪ ವಿಪ್ರಲಂಭ ಸಮಾಖ್ಯಂ (ರಸರ. ೧-೧೪ ಸೂತ್ರ). ೨. ನಾಶ ; ಅಳಿಯುವಿಕೆ : "ಧ್ವಂಸಿಃ, ಧ್ವಂಸಃ, ಧ್ವಂಸಾ, ಧ್ವಂಸನಂ, ಧ್ವಂಸನೀಯಂ, ಧ್ವಸ್ತಿಃ ಈ ೬ ತೊಲಗಿಕೆ" (ಕಾಶಕ್ಕ. ೧೩೨). [ತೊಲಗು$_1$ + – ಇಕೆ]

ತೊಲಗಿಸು, ತೊಲಂಗಿಸು (ಕ್ರಿ). ೧. ದೂರ ಸರಿಸು; ಅಗಲಿಸು ; ದೂರ ಮಾಡು : ಪಲಕಾಲಂ ತಪದಿಂದಂ ಚಲದಿಂ ಸಂದಿರ್ದ ನಿನ್ನ ನಚ್ಚಿನ ಮುನಿಯಂ ತೊಲಗಿಸಿದೆನೊಂದು ವಚನದಿಂ (ಧರ್ಮಾಮೃ. ೩-೩೩೬); ನಿದ್ದೆಯಂ ತೊಲಗಿಸಿದಂಚೆವೆಣ್ಣೆಸೆವ ಗಾಂದವದಿಂ ದನಿದೊಂಗಲೊಳ್ ತಡಂಗಲಿಸಿ (ಚಂದ್ರಪು. ೮-೯೭) ; ಒಯ್ಯನೆ ನುಡಿಗಲಿಯಲೆಂದು ಬಂದ ಪುರುಳಿಗಳನಾಳಿಯರಿಂದೆ ತೊಲಗಿಸುತ್ತೆ (ಚಿಬಪು. ೭-೧೪). ೨. ಇಲ್ಲದಂತೆ ಮಾಡು ; ನಿವಾರಿಸು ; ಕಳೆ ; ಪರಿಹರಿಸು : ಜಡಧಿ ಸಂಗತಿಯಿಂ ಜಡಬುದ್ಧಿ ಬುದ್ಧಿಯಂ ತೊಲಗಿಸಿತಕ್ಕುಂ (ಪಂಪಭಾ. ೯-೪೪); ಮನಕ್ಕೆ ಸಂಕೆಯನ್ತೊಲಗಿಸಿದಂ (ಸೌಇಇ. XI-1, ೪೧-೩೬; 969); ಕರದೀಪಿಕಾನಿಕಾಯಂ ತರದಿಂದಂ ಮುಂದೆ ತೊಲಗಿಸುತ್ತಿರೆ ಕಕ್ಷ್ಯಾಂತರೆ ತಿಮಿರಮಂ (ಕಾದಂಪೂ. ೩೯೩) ; ದಿನಕರನ ಹಯಂ ಗಗನಾಧ್ವಖೇದಮಂ ಪಟಯಿಗೆಗಳ ತಣ್ಣೆಲರ ತೀಟದಿಂ ತೊಲಗಿಸುಗುಂ (ಪಂರಾಮಾ. ೧-೧೧೬) ; ಇಳೆಯೊಳೆಸೆವ ಭವ್ಯಜನಗಳ ಚಿತ್ತದ ಮಳವನಿರದೆ ತೊಲಗಿಸುವಾ . . . ಶ್ರುತಕೀರಿತಿಗಳಿಗೊಲಿದಾನೆಱಗುವೆನು (ಅಂಜಚ. ೧-೫೩); ಗಾರುಡಮಂತ್ರ ಸಂಸ್ಕಾರವಿವಶದಿಂದಾ ... ವಿಷ ತೊಲಗಿಸುವುದಾತಂಗೆ (ಬಸಪು. ೪೬-೩೦); ಭಕ್ತರ್ಗೆ ಮನ್ಮನದ ಚಲನಮಂ ತೊಲಗಿಸಿ ಶಿವಾಂಘ್ರಿಯೊಳ್ ಬೆಚ್ಚಂತೆ ನಿಲಿಸುಗೆಂದಾಂ ವಂದಿಪೆಂ (ಪದ್ಮರಾ. ೧-೧೦); ಪಗೆಯಾದ ಪಗಲಂ ತೊಲಗಿ ಪಂಧಕಾರಮೆನಲು (ಜೈಮಿಭಾ. ೨೮-೪೦) ; ಒಳವಿರ್ದ ವಿಟರ ಸೋಕಿದ ಕಾಮಗ್ರಹವನು ತೊಲಗಿಸುತಿಹರಂಗನೆಯರು (ಕಂನವಿ. ೨-೧೦೦). ; ನಿಮ್ಮೊಳು ಭೇದವ ಗೈಯುವ ಬುದ್ಧಿಯ ತೊಲಗಿಸಿರಿ (ನನಲ್ಲ. ೧೧೮). ೩. ಎಸೆ ; ತ್ಯಜಿಸು ; ಕಳಚು ; ತೆಗೆದಂಹಾಕು : ತ್ರಿಸಾಕ್ಷಿಕನಾಗಿ ವಸ್ತ್ರಾಭರಣಮಾಲ್ಯಾದಿಗಳಂ ಮೆಯ್ಯಿಂ ತೊಲಗಿಸಿ ಪೂರ್ವಾಭಿಮುಖನುಂ ನಿಬಿಡಬದ್ಧಪಲ್ಯಂಕಾಸನನುಮಾಗಿ (ಆದಿಪು. ೯-೭೬ ವ); ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ವಸ್ತ್ರಾಭರಣಾದಿಗಳಂ ತೊಲಗಿಸಿ ... ದೀಕ್ಷೆಯಂ ಕೈಕೊಂಡಂ (ಜಾವುಂಪು. ೩೭); ನೆಲಸಿರ್ಪ ವಾಸ್ತುಪುರುಷನ ತಲೆ ಹೃದಯಂ ನಾಭಿಪಾದಮೆಂಬಿವಱೆಡೆಯಂ ತೊಲಗಿಸಿ ಮುಂದಣ ಮೆಯ್ಯೊಳ್ ನಿಲಿಸುಗೆ ಕಂಭಮನಂ (ಲೋಕೋಪ. ೩-೨೫) ; ತೊಲಗಿಸಿ ಭೂಷಣಪ್ರತತಿಯಂ . . . ಬಟಲ್ದು ತೊಟಲ್ದು ಜಾನಿಪಳ್ (ಜಗವಿ. ೧೧-೨೩) ;ತನುಗುಣಂಗಳ ನುಳಿದುಳಿದು ಧಿಕ್ಕನೆ ತೊಲಗಿಸುತ ಸಾನುರಾಗಂ ಕೊನರ್ದು ಕೊನರ್ದಾ ಶಿವಶರಣರಂ ಕಂಡು (ಬಸಪು. ೩೫-೩). ೪. ತಳ್ಳು; ನೂಕು; ಸರಿಸು: ಮುಂದಣ ಮಾನಸರಂ ಪಡಿಯಱರ್ ತೊಲಗಿಸುತ್ತಂ ಬರೆ (ವಡ್ಡಾರಾ. ೮೦-೧೪) ; ತೊಲಗೆನೆ ಬಟ್ಟೆಯಿಂ ತೊಲಗಲಾಱೆನಶಕ್ತನೆನಾರ್ಪೊಡೆನ್ನನಿಂ ತೊಲಗಿಸಿ ಪೋಗು ನೀನೆನೆ (ಪಂಪಭಾ. ೮-೩೨); ಕಲಶಮನೆತ್ತಿ ನೀರೆಱೆವ ಕಾಂತೆಯ ತೋಳ ತೆರಳ್ಕೆ ಮೇಲುದಂ ತೊಲಗಿಸೆ (ಚಂದ್ರಪು. ೧-೯೮) ; ತೊಲಗಿಸಿ ಮೇಲುದಂ ಬೆಮರ ಬಿಂದುಗಳಂ ತವೆ ಪೀರ್ದು ... ಮನ್ಮಥ ಜಯಾದಿ ಮನಃಪ್ರಿಯನಂತೆ ಸಾರ್ದದೇಂ ತಳೆದುದೊ ಕಾಂತೆಗುಣ್ಮಿದ ರತಿಕ್ರಮಮಂ ನವಮಂದಮಾರುತಂ (ಮಲ್ಲಕಾ. ೪-೧೯೮) ; ನಿಳಯಮಂ ಪೊಱಮಟ್ಟು ಬರಲತಿಬಳವೃಷಭ ಕೆಲೆವುತ್ತ ಮಂದಿಯ ತೊಲಗಿಸುತ ಮುಂದೆಸೆಗೆ ದಾರಿಯ ತೋಱೆ ನಡೆವುತಿರೆ (ಬಸಪು. ೬೧-೨೩). ೫. ವಂರಳಿಸು ; ಹಿಂದಕ್ಕೆ ಸರಿಸು ; ಹಿಂದಿರುಗಿಸು ; ಹಿಮ್ಮೆಟ್ಟಿಸು : ರಾಯನನು ತೊಲಗಿಸಿದರಾ ಕರ್ಣಾಯತಾಸ್ತ್ರರು (ಕುಪ್ಯಾದ್ರೋ. ೫-೨೪) ; ಕಂಗಳ ಬಳೆ ಮರಳಿ ಬಸವಳಿಯೆ ಸಾರಥಿ ತೊಲಗಿಸಿದನಾ ರಥವನು (ಕುಪ್ಯಾದ್ರೋ. ೫-೩೩) ; ಸಂದಣಿಸಿ ದಳ ನೂಕಿಕೊಂಡೈತಂದುದಿದು ರವಿಸುತನ ತೊಲಗಿಸಿ ಮುಂದೆ ಮೋಹರದೆಗೆದು ಮೂದಲಿಸಿತು ಮರುತ್ಸುತನ (ಕುಪ್ಯಾಕ. ೧೩-೨೫). ೬. ಚೆದರಿಸು ; ಚಲ್ಲಾಪಿಲ್ಲಿ ಮಾಡು : ಹವ್ಯವಾಹನಸಖಂ ತೊಲಗಿಸುವ ಬಹಳ ಮೇಘವ್ಯೂಹಸಂಘಾತದೊಡ್ಡವಣೆ ಮುಱಿವುದೆ ಕೃತತ್ಯಜನವಾತದಿಂದ (ಜೈಮಿಭಾ. ೧೩-೯). ೭. ಕತ್ತರಿಸು ; ತುಂಡುಮಾಡು : ಕಾಂಭೋಜಭೂಪನ ಮಕುಟಮಸ್ತಕವ ಕೊರಳ ತೊಲಗಿಸಿ ಮುಂದೆ ನೂಕುವ ವರಶ್ರುತಾಯುವಿನೊಡನೆ ಘನಸಂಗರಕೆ ತೆಗೆದನು (ಕುಪ್ಯಾದ್ರೋ. ೧೦-೦೬). △ **ತೊಲಂಗಿಸು**: ೨. ನಿರಂತರ ಪಾರಮಾರ್ಥಸಚ್ಚಿಂತನೆಯಂ ತೊಲಂಗಿಸಿ (ಅಮಶ. ೫೫).

ತೊಲತೊಲಗಿಸು (ದ್ವಿರುಕ್ತಿ) : ವಿಲೋಚನೋತ್ಕೀರ್ಣಮುದಶ್ರು ಮಾಲೆಯಂ ಪಕ್ಷ್ಮಾಪಾಳಿನೀಜಾಲದಿಂ ತೊಲತೊಲಗಿಸಿ (ಕುಸುಮಾ. ೧೫-೧೧೩ ವ). [ತೊಲಗು$_1$ + – ಇಸು$_3$]

ತೊಲಗು$_1$, ತೊನಗು, ತೊಲಂಗು (ಕ್ರಿ). ೧. ಸ್ಥಳವನ್ನು ಬಿಡು ; ಹೊರಟು ಹೋಗು : ನಿಲ್ಲದೆ ತೊಲಗಿದಿರಿಂದಂ (ಕವಿರಾ. ೩-೨೦೦) ; ತೊಲಗೆನೆ ಬಟ್ಟೆಯಿಂ ತೊಲಗಲಾಱೆನಶಕ್ತನೆನಾರ್ಪೊಡೆನ್ನನಿಂ ತೊಲಗಿಸಿ ಪೋಗು ನೀನೆನೆ (ಪಂಪಭಾ. ೮-೩೨) ; ಅಂತಃಪುರದ್ವಾರದೇಶದೊಳಿರ್ದ ರಾಜಲೋಕಮೆಲ್ಲಮುಂ ಸಂಭ್ರಮಂಬೆರಸು ತೊಲಗಲ್ (ಕಾದಂಪೂ. ೪೨೫); ಅಳಿಯನಂ ಕಂಡತ್ತೆಯಂತೆ ತೊಲಗುತ್ತುಂ (ಧರ್ಮಾಮೃ. ೪-೭೭); ಸಾರೆಂಬರಸಾಳ್ಗಳ ತೊಲಗೆಂಬ ಪಡಿಯಱರ ಮುಂಗುಡಿಯ ಕುರುಳ ಕೊಂತದ ವೀರವೃಂದದ ಕೋಳಾಹಳಂ ಬೆರಸಿ ಬಂದು (ಬಸರ. ೬-೮) ; ಜಡರುಗಳಿರಾ ತೊಲಗಿ ಭೋ ಎನುತ (ಬಸಪು. ೨೧-೧೦); ಮಂದಿ ತೊಲಗಲಿ ತೆಱಹುಗೊಡು (ಕುಪ್ಯಾಅ. ೭-೮೬). ೨. ಅಗಲು ; ತೊರೆ ; ಬಿಟ್ಟು ಹೋಗು: "ತೊಲಗು – ವಿವಿಕ್ತೇ" (ಶಮಧಾ) ; ಎಲವೊ ದೇವೇಶನನೇಂ ಸೆಱೆವಿಡಿದೆ ತೊಲಗು ದೇವನ ಮಱೆಯಂ ಬಟಿಕಱಿಯಲಕ್ಕುಂ (ಪಂಪಭಾ. ೧೦-೧೨೧) ; ನಿಲೆ ನಿಜವಕ್ಷಸ್ಥಲವಜ್ರಲೇಪವಿಪುಲೋಪಲಪ್ರದೇಶದೊಳೆಂದುಂತೊಲಗದೆ ಸಾಮ್ರಾಜ್ಯಶ್ರೀಲಲನೆ ತಾಂ ನರೇಂದ್ರನಂ ಸುರೇಂದ್ರನಂ ಗೆಲೆವಂದಂ (ಮಲ್ಲಿಪು. ೩-೨೨) ; ಅಳಿಯನ ಕಂಡರೆ ನಾಚೆಂಬೆ ಮಗಳೆ ಅಳಿಯನ ಕಂಡರೆ ತೊಲಗೆಂಬೆ ಮಗಳೇ ನಾಚುವರೆ ಮೊಱೆಯಿಲ್ಲ ತೊಲಗುವರೆ ನೆಲನಿಲ್ಲ (ಬಸವ. ೯೧೨) ; ನಿನ್ನ ಕಣ್ಣೆಂಬಲಗಿನಲಿ ತನ್ನೆದೆಯ ನೋಯಿಸಿ ತೊಲಗಬಹುದೇ (ಕುಪ್ಯಾವಿ. ೨-೨೦) ; ಸೋಲಿಸಿ ತೊಲಗಿ ಪೋದವನ ನಿಟ್ಟಿಸುವ ಸಲೀಲೆಯಿಂದೆದ್ದಳಾ ಕುವರಿ (ಮೋಹತ. ೨೮-೬) ; ಖಂಡಿತದಿ ಲಕ್ಷ್ಮಿ ತೊಲಗುವಳು ಶಿವನೊಲುಮೆ ಕಂಡುಕೊಳದಿರಲು (ಸರ್ವಜ್ಞ. ೨೪೮). ೩. ಅಗಲಿಸು ; ಬೇರೆಯಾಗಿಸು : (ಕ). ೪. ಜಾರು ; ಓರೆಯಾಗು: ಮನಸಿಜನೃಪಲೀಲಾಲಾಂಛನಂ ಸ್ವಸ್ತಿಕಂ ಸ್ತ್ರೀಜನದೊಳೆಸೆದು ನಿಂದತ್ತುತ್ತರೀಯಾಂತರೀಯಂ ತೊನೆಯೆ ತೊಲಗಿ ನಿಂದಿರ್ದಲ್ಲಿ ತಂದಿತ್ತು ದುಚ್ಚಸ್ತನದೊಳಮರ್ದ ಹಸ್ತಸ್ವಸ್ತಿಕಂಗಳ್ ಬೆಡಂಗಂ (ಆದಿಪು. ೧೧-೧೫೨); ನಿಡುಸುಯ್ಯೆಲರಿಂ ಮೇಲುದು ತೊಲಗೆ (ಕಾದಂಕಾ. ೩೬) ; ಪೊದೆದ ಪೊಸದುಗುಲಂ ಕೆಲಕ್ಕೆ ತೊಲಗೆ (ವರ್ಧಪು. ೧೩-೬೨ ವ) ; ಮೊಲೆಗಳ ಮುಸುಕು ತೊಲಗಿದುದೆಂದೊ ಸರಸದ ನುಡಿಗಳಿನಿದೊಂದಿನಿತು ತಪ್ಪಿದುದೊ (ಬಸಪು. ೪೩-೧೪). ೫. ಪಕ್ಕಕ್ಕೆ ಸರಿ ; ದಾರಿಯಿಂದ ಕದಲು ; ಅರುಗಾಗು : ನಿಮ್ಮ ಪಟ್ಟಣದಲ್ಲಿ ಹೊಲ್ಲ ಹನಸಗನೊಬ್ಬನು ಬಲ್ಲ

ಭಕ್ತನೆನುತ್ತ ಗರ್ವಿಸಿ ತೊಲಗನಾರಿಗೆಯುಂ (ಬಸಪು. ೨೦-೧೪) ; ನೀ ಕೃಪೆ ಮಾಡಿ ತನ್ನನಂ ಕಳುಹಬೇಹುದು ನಿಮ್ಮೊಳಿದಿರೇ ರಣಕೆ ತಾನೆನುತ ಸೆಳೆದ ಬಾಣವನಿಳುಹಿದರೆ ಗುರು ತೊಲಗಿ ಕೊಟ್ಟನು ಪದವನಹಿತಾವಳಿಗೆ ಸಾತ್ಯಕಿ ಮೊಳಗಿದನು ಕಳಶಜನ ನೇಮದಲಿ (ಕುಪ್ಯಾದ್ರೋ. ೧೧-೯). ೬. ಹಿಂದೆಗೆ ; ಹಿಂಜರಿ ; ಹಿಮ್ಮೆಟ್ಟು : ಗೆಲಲುಂ ಸಾಯಲುಮಾಱದೆ ತೊಲಗಿದೊಡೆ ನೆಗಟ್ತೆ ತೋಱುಗುಮೆ ಸಿರಿಮೆಯ್ಯಂ (ಗದಾಯು. ೨-೨೧) ; ಕೆಚ್ಚಿನೊಳ್ತೊಲಗದೊರ್ಮೆಯೆ ಪಾಯಲಪ್ಪುದು (ಧರ್ಮಾಮ್ಯ. ೦-೧೬೯) ; ಪುಲಿ ಬಂದು ಗರ್ಜಿಸುತ್ತಿರೆ ಕೆಲದೊಳ್ ಪಾವಡರ್ದು ಕೂಡೆ ಸುತ್ತಲ್ ಮೆಯ್ಯಂ ತೊಲಗದೆ ಕೆಯ್ಯಿಕ್ಕಿರ್ದಂ (ನೇಮಿಪು. ೧-೧೫) ; ಕಾಮಿನಿ ಬೆದಱಿದಳು ... ತೊಲಗಿ ಹಿಂದಡಿಯಿಡಲು ಕೀಚಕನಳುಕದೈತಂದಬುಜವದನೆಯ ಬಳಿಗೆ ಬಂದನು (ಕುಪ್ಯಾವಿ. ೨-೧೭); ತೊಲಗದೆ ನಿಂದ ವೀರನಂ ತಲೆಗಡಿದುರುಳ್ಚುವ ಮೂದಲಿಪ ವೀರನಂ ತೌದಲೆಗಾಣಿಪ ... ಕಟ್ಟಾಳ್ತನಂಬೆತ್ತಂತೆ ಮೆಱೆದು ನೆರೆದ ಪದಾತಿವ್ಯೂಹದಿಂ (ರಾಜಶೇ. ೬-೧೧ಪ). ೭. ಹಿಂತಿರುಗು ; ಮರಳು : ಯೋಗವೈದ್ಯರು ಬಂದು ಮಂತ್ರಿಸಿ ನಾಗವಿಷದಿಂ ಮಡಿದ ರಾಯನನಾಗದಯ್ಯೋತಮ್ಮ ಕೈಯಲೆನುತ್ತ ತೊಲಗಿದರು(ಬಸಪು. ೪೬-೨೩); ತೊಲಗಿರೈ ಕಾಲಾಳು ಮೇಲಾಳಳವಿಗೊಡಲಿ ಮಹಾರಥರು ಮುಂಕೊಳಲಿ (ಕುಪ್ಯಾದ್ರೋ. ೫-೯) ; ಸಪ್ಪುಳಾಗದ ತೆಱದೊಳೆದ್ದು ಮೆಲ್ಲನೆ ಮಂತ್ರಿಸುತೆ ತೊಲಗಿ ಬರುತಿರ್ದಳ್ (ಚೈಮಿಭಾ. ೩೦-೨೯). ೮. ದೂಡು ; ಅಟ್ಟು : ನಿಜಮೋಹರವನಂದೈನೂಱು ಬಿಲ್ಲಂತರಕೆ ತೊಲಗಿ ಮಂತ್ರವ ಜಪಿಸಿದನು ಪಾರ್ಥ (ಕುಪ್ಯಾದ್ರೋ. ೯-೨೪). ೯. ಕಣ್ಣಿಗೆ ಕಾಣಿಸದಿರು ; ಅದೃಶ್ಯವಾಗು: ದಿವಸಕರ ಚಂದ್ರತಾರಾನಿವಹಂ ತೊಲಗಿರ್ಪ ಗಗನವಿಸ್ತಾರದವೊಲ್ (ಕಾದಂಪೂ. ೬೮) . ೧೦. ಮುಳುಗು ; ಅಸ್ತವಾಗು : ನಾಳೆ ಪಡುವಣ ತರಣಿ ತೊಲಗದ ಮುನ್ನ ಕೊಲುವೆನು ವೈರಿ ಸೈಂಧವನ (ಕುಪ್ಯಾದ್ರೋ. ೮-೩೫). ೧೧. ನಿವಾರಣೆಯಾಗು ; ಪರಿಹಾರವಾಗು : ತೊಲಗಿದವು ಜನಮನದ ಬಲುಗತ್ತಲೆ (ಕುಪ್ಯಾಉ. ೮-೫). ೧೨. ತೀರಿಹೋಗು ; ಮುಗಿದು ಹೋಗು : ತೊಲಗದು ಪುಬ್ಬಕೋಟಿಪರಿಸಂಖ್ಯೆವರಂ ಪರಮಾಯು (ಆದಿಪು. ೦-೫೨) ; ಮಬ್ಬು ಕ್ರಮೇಣ ಬೆಳೆಯುತ್ತಿದೆ; ಸಂಜೆ ತೊಲಗಿ ಇರುಳಾಗುತ್ತಿದೆ (ಚ್ಯೋತಿರ್ವಿ. ೨). ೧೩. ನಾಶವಾಗು ; ಅಳಿ : ತೊಲಗದ ಜವ್ವನಂ ತವದ ಮೆಚ್ಚು ಮರಲ್ಚುವ ನೋಟಮಟ್ತಿಯಿಂ ಸಲಿಸುವ ಭೋಗಂ (ಆದಿಪು. ೫-೪೨) ; ತಳಮಳಗಾಗದ ತನು ಪೆಪ್ಪಳಿಸದ ನೆಲೆ ತೊಲಗದಱಿವು . . . ತಮಗಮರೆ ಮಡಿಪಿದರ್ ಮಣಿಚೂಳರ್ (ಶಾಂತಿಪು. ೬-೮೧) ; ಅಕ್ಕಱಿಂದಡಿಗಡಿಗೆ ನಿನ್ನಂ ತಕ್ಕವಿಸಲೆಂದಾಶಿಸುವ ಕರ್ಮಕ್ಕೆ ತೊಲಗುವುಪಾಯವಾವುದೊ ಹೇಳಕಟ ತಾಯೆ (ಬಸಪು. ೪೫-೯); ಕೆಟ್ಟುದಪಮೃತ್ಯು . . . ನೆಲೆಗುಂದಿದಳ್ ಮಾರಿ ತೊಲಗಿತಘಚಯ (ಚಿಬಪು. ೪-೩೫). ೧೪. ಸೋತುಹೋಗು; ಸೋಲು: (ಕಿ).೧೫. ಕಳಚು; ಬಿಚ್ಚು: ಪರೆಯದ ಜವ್ವನಂ ತೊಲಗದಾಭರಣಂ ಸಲೆ ಮಾಸದಂಬರಂ . . . ಬಾಡಿರದ ಪೂಮುಡಿಯೊಪ್ಪುವ ದೇವಲೋಕಸುಂದರಿಯರನಿಂದ್ರಜಾಲಿಕ ನತೀವಮನೋಹರಮಾಗೆ ತೋಱಿದಂ (ದಶಕು. ೬-೧೩೮). ತೊನಗು : ೨. ಘನಭಕುತಿಯ ನೇಣನೆ ಮಾಡಿ ನಿನ್ನಾ ಚರಣಕೆನ್ನ ಕೊರಳಿಗೆ ಸನುರುಚಿಯಿಂದ ಗಂಟನೆ ಹಾಕಿಕೊಂಡು ತೊನಗದೆ ಬಿಡೆನೊ ನಿನ್ನನು ಎಂದೆಂದಿಗೆ (ಮೋಕ್ಷದೀ. ೨೦-೪). △ ತೊಲಂಗು : ೧. ಮಂತ್ರಿಪುತ್ರನ ಕಣ್ಣಱಿದು ವಿಳಾಸಿನೀಜನಂ ಕಾಮಸಂಚಾರಚ್ಛಲದಿಂ ತೊಲಂಗೆಯುಂ (ಲೀಲಾವ. ೪-೩೪ ಪ); ಕುಲವಿಹೀನರು ಕನಿಷ್ಠರು ಕುಲಜರುತ್ತಮಪುರುಷರೀ ನಾಲ್ವರು ತೊಲಂಗದೆ ಪೋಪ ಬಟ್ಟೆಗಳು (ಬಸಪು. ೪೦-೬೦). ೪. ಕೀಲು ತೊಲಂಗಿ ಡೊಂಕುಗಳೆಡೆಗೆಡೆಗೆ ನೆಲೆಗೊಂಡ ಕೈಕಾಲ . . . ಹೇಸಿಕೆಯು ನಾತವಧಿಕ ಭಯಂಕರವು (ಬಸಪು. ೪೬-೫೮); ಮೇಲುದಱ ಸೆಱಗಂ ತೊಲಂಗೆ ನೂಕುವ . . . ಭಾವೆಯರ್ ಬರುತಿರ್ದರು (ಚಿಬಪು. ೩೭-೪೩). ೫. ಸಮಸ್ತ ಭಕ್ಷ್ಯಾವಳಿಗಳಂ ನೃಪನೆಯ್ದೆ ಗಡಣಿಸಿ ಅಲಗನುರ್ಚಿ ಕರದೊಳಮರ್ಚಿ ತೊಲಂಗಿ ನಿಂದಿರಲು (ಬಸಪು. ೩೩-೦೪). ೧೩. ನಯನಂಗಳಂ ಬಲುಹಿಂದ ತೆಱೆದುಱೆ ನೋಡಲಾ ಜಿನನ ಅಂಗವದು ಧಟಧಟ ಎನುತ್ತ ತೊಲಂಗಿ . . . ಕೆಡೆದಿರಲು(ಬಸಪು. ೫೦-೮೦) ; ಮಹಾಪುರುಷವರ್ಯನ ಕೃಪಾಪಾಂಗವು ಸಂಗಳಿಸೆ ಭವಭಾರಿಗಳ ದುರಾಚಾರಂ ತೊಲಂಗಿ ಸದ್ಗುಣಮೊದಗುವುದು (ಕೊಟ್ಟೂಬ. ೩-೧೬) ; ವನಿತಾದಿ ವಿಷಯಮೋಹಂ ತೊಲಂಗುವದಿನ್ನು (ಮಲ್ಲಜ. ೧-೧೭).

ತೊಲ ತೊಲಗು (ದ್ವಿರುಕ್ತಿ) : ಪುಲಿ ಪುಲಿ ಪರಿ ಪರಿ ... ಮನಮನಂಜ ದಂಜದೆ ತೊಲ ತೊಲಗೀ ಮೆಳೆಗೆ ಪುಲಿಯೆಂಬುದು ಮಾರ್ಗಂ (ಕವಿರಾ. ೨-೨೬) ; ಇರದೀ ಠಾವಿನಲಿ ತೊಲತೊಲಗೆನುತ ಸಿದಿಗೆಯನಿಳುಹವೇಳ್ದು (ಬಸಪು. ೩೨-೪೩) ; ತೊಲತೊಲಗು ಮನ್ಮಥನ ಹೊಗರಿಟ್ಟಲಗು ಬರುತಿದೆ (ಕುಪ್ಯಾಆ. ೧೫-೩೩).

[ದೇ.॥ ತುಳು. ತೊಲಗು, ತೆಲವು, ತೆಲಾವು ; ತೆಲು. ತೊಲಗು, ತೊಲಂಗು, ತೊಲುಗು]

ತೊಲಗು$_2$ (ನಾ). ೧. ಮಲ್ಲಯುದ್ಧದ ಒಂದು ವರಸೆ ; ಹಿಡಿತದಿಂದ ತಪ್ಪಿಸಿಕೊಳ್ಳುವುದು : ಎಡ ಬಲದಲ್ಲಿ ಕೈಕಾಲು ಸಿರಸುಗಳ ಯತ್ನದಿಂದ ತೊಲಗುವದು ಆವದು ಅದು ತೊಲಗುಯೆಂಬುದು (ಐಡ್ಯಟೀ. ೪-೩೮). ೨. (ಬಾಣವನ್ನು) ನಿರೋಧಿಸುವ ಒಂದು ಬಗೆಯ ಸಾಧನ (?) : ಅಲಗಿನ ಮಱೆ ಉಳ್ಳವಂಗೆ ಶಸ್ತ್ರದ ಭಯವೇತಕ್ಕೆ ಬಾಣದ ತೊಲಗುಳ್ಳವಂಗೆ ಅಂಬಿನ ಘಾಯವೇತಕ್ಕೆ (ಮದೇವ. ೨೮೦-೪೦). [<ತೊಲಗು$_1$]

ತೊಲಗೆ (ನಾ). ಒಂದು ಬಗೆಯ ಸಸ್ಯ : (ಮೈಜಿಗಿ. ೨೪-೪೪೩). [?]

ತೊಲಿ 'ಟೊಳ್ಳು' ನೋ.

ತೊಲೆ$_1$ (ಕ್ರಿ). ತೊಲಗು ; ದೂರ ಸರಿ : ಜಾತಿಗೆಟ್ಟಾ ಹುಡುಗಿಯು ತೊಲೆದು ಹೊರಟುಹೋದಳೊ ? (ದೇವೀಜಾ. ೦೭).

[ದೇ.॥ ತಮಿ. ತೊಲೈ, ತುಲೈ ; ಮಲ. ತುಲಯು]

ತೊಲೆ$_2$ (ಕ್ರಿ). ೧. ತೂಗಾಡು ; ಜೋಲಾಡು ; ಒಲೆದಾಡು : ಅಲಘು ಕುಚದ್ವಯಂ ಕಚಭರು ತೊಲೆಯುತ್ತಿರೆ ಹಸ್ತಕಂಕಣಂ ಘಲಕೆನೆ . . . ಮೊಸರ್ಕಡೆದರ್ಲತಾಂಗಿಯರ್ (ಮಲ್ಲಕಾ. ೪-೫೫). ೨. ಅಲುಗಾಡಿಸು ; ಅಲ್ಲಾಡಿಸು : ಸಿಂಹಮಧ್ಯದ ಕನ್ನೆಯರು ತೋಳ್ಗಳಂ ತೊಲೆ[ಪಾಕಾಂ. ನೆ]ಯಲು (ಭಾವಚಿಂ. ೯-೫೮). [<ತೊನೆ$_1$]

ತೊಲೆ$_3$, ತೊಲ (ನಾ). ೧. ಮಾಳಿಗೆಗೆ ಅಥವಾ ಚಾವಣಿಗೆ ಆಧಾರವಾಗಿ ಗೋಡೆಗಳ ಮೇಲೆ ಅಡ್ಡಲಾಗಿ ಹಾಕುವ (ಮರದ) ದೂಲ: ಪವಳದ ಕಂಭಂ ಪಳಿಕಿನೆಸೆವ ತೊಲೆ ವಜ್ರದ ಮತ್ತವಾರಣಂ ಮುತ್ತಿನ ಮಂಡವಿಗೆ (ಸುಕುಮಾ. ೧೦-೪೫) ; ಆ ಮನೆಯ ನೋಡಲೆಂದು ಹೋದರೆ . . . ಅದಕ್ಕೆ ಕಂಭ ಒಂದು ತೊಲೆಯಾಱು (ಅವಚಂ. ೨೨೨-೧೦೦೮) ; ಮಱಿಹುಲ್ಲೆ ಸಿಂಹದ ಮಸಕಕಿದಿರೇ ಲತೆಯ ಎಳಗುಡಿ ಮಾಳಿಗೆಗೆ ತೊಲೆಯೆ (ಕುಪ್ಯಾಭೀ. ೩-೮೪) ; ಆ ಲಲಿತಪಚ್ಚೆಗಳ ತೊಲೆ ರನ್ನ ಬೋದುಗೆಗಳಾ ಪ್ರವಾಳಂಗಳಿಂದೆ ಮೇಲೆಸೆವ ಜಂತೆಗಳ್ (ಚಿಬಪು. ೫-೪೮); ಎಲುಬುಗಳ ತೊಲೆಗಳಲಿ ಮಾಂಸದಾ ಮಣ್ಣಿನಲಿ . . . ಬಿಡುಗಡೆಯ ಸಿರಿಗುಡಿಯ ಮಸಣದಲಿ ಕಟ್ಟು ! (ಪಾಂಚಜ. ೮-೭). 'ಅಡ್ಡತೊಲೆ' ಪರಾ. ೨. ಮರದ ದಿಮ್ಮಿ : ನೀರ್ಗೆ ಬಾಗುವೇತದ ತೊಲೆ ಕೊಳ್ವ ಕೊಳ್ಳದೆರಡುಂ ಕಡೆಯಿಂದಱಿಪುತ್ತುಮಿರ್ಪುದು (ಜೀವಸಂ. ೧೫೭-೧೪) ; ನೂರಾರು ತೊಲೆಗಳನು ತಂದಿಲ್ಲಿ ರಾಶಿಗೈಯೆಂದನಗೆ ಕಟ್ಟಾಣೆಯ ಬೆಸಸಿ ಪೋದನ್ (ಬಿಗಾಳಿ. ೫೫). ೩. ಯುದ್ಧದಲ್ಲಿ ಬಳಸುವ ಮರದ ದಿಮ್ಮಿ ಯಂಥ ಒಂದು ಬಗೆಯ ಸಾಧನ: ಹಾಯಿಕುವ ಗುಂಡು ಮೇಲುಱೆ

ಕೆಡಹುವ ತೊ[ಪಾಠಾಂ. ತ]ಲೆ . . . ಎಸೆದವು ದುರ್ಗದೊಳು (ಕುಂಪಾಸಾಂ. ೩೭-೫೩); ತೊಲೆಯುರುಳಿ ಕರಚರಣಮುಡಿದು ಕೆಡೆದರ್ (ಶಲಪು. ೪೨-೩೭); ತೊಲೆಗಳೊಳಗೆ ದಸಿಗಳ ಪೆಟ್ಟ ಲಂಘಿಪ ಬಲುಮೆಕಾಱರ ಮೇಲೆ ನೊಕೆ (ಕಂಶವಿ. ೧೪-೭೧). ೪. ಉಯ್ಯಾಲೆ: ಇತ್ತ ಹೊಂದೋರಣದ ತೊಲೆಯಲಿ ಅತ್ತಲಿತ್ತಲಾ ಹನುಮ ತಿರುಗಲಾ ಮುತ್ತಿತಮರಾರಿಗಳು ಶಿಖಿಯನು ಶಲಭ ಕವಿವಂತೆ (ಕಾತಿಕಾ. ೧೧-೩೭). ೫. ಒಂದು ರೂಪಾಯಿ ನಾಣ್ಯದ ತೂಕ : " ಬೀಸಿಗೆ . . . ಐ ದಾ ಗೊ ಂ ದು ತೊಲೆ " (ಮಂಗರಾ. ೧೦೪-೧೧) ; ತೊಲೆ ಪದಿನಯ್ದಱ ಬಿನ್ಪೆಂದಿಲಾಧಿವಂ ಪತ್ತು ತೊಲೆಯ ಬಿನ್ಪೆಂ ಧನ್ಯಂ ತೊಲೆಯಯ್ದಱ ಬಿನ್ಪೆಂ ಸುಖಿ ಖಲನಿರ್ತೊಲೆವರೆಯ ಬಿನ್ಪು ಸವನಿಸಿದಾತಂ (ಕೋಕೋಪ. ೧೧-೪೩) ; ವರ್ಷ ನಿಬಂಧಿಯಾಗಿ ಹೂವಿನ ಪಡಿಗೆ ಜಾತಿಹವಳಕ್ಕೆ ತೊಲೆಗೆ ತಾ ೧ ಕರಿದಕ್ಕೆ ವೀಸ ೧ (ಎಕ. II, ೩೪೧-೨; ಸು. 1175); ಗುಗ್ಗುಳವೊಂದು ತೊಲೆಯನವರ್ಜಿ ಕಂಬಿಯೊಳಂದ ಮಾಗಿರೆ ಪೊತ್ತುಕೊಂಡುರವಣಿಸಿ ಬರುತಿರಲು (ಬಸಪು. ೪೩-೪೩). ೬. ತಕ್ಕಡಿ : ರಿಪುಭೂಪದಂತಿದಂತದ ತೊಲೆಯೊಳ್ ಪರಾಕ್ರಮದಿನೆನ್ನನೆ ಭೂಪತಿ ತೂಗಿ ತೋಱಿನೇ (ಪಂಪಭಾ. ೧೦-೪೦); ಅವರ ದುರ್ಣಯಚೇಷ್ಟೆಗಳಿಂ ನೃಪನೈಶ್ವರ್ಯಂ ತೊಲೆಯಲ್ಲಿ ತೂಗಿಸಿಕೊಂಬುದು (ಪಂಪಕಾಂ. ೧೬೯-೧೦) ; ಕೈಲಾಸಮಂ ತೂಗಿದೀ ತೊಲೆಯೊಳ್ ದಕ್ಷಿಣಬಾಹುದಂಡ ದೊಳಿರ್ದಲ್ ಗಂಡನಾರೆಂದು ಮೆಯ್ಗುಲಿ ಪಾಯ್ದಂ (ಪಂಭಾಮಾ. ೧೪-೧೪೮) ; ಇಂತು ಭಕ್ತಿಯನೆ ತೂಗುವ ತೊಲೆಯನಳವಡಿಸಿ (ಪೋಕ. ದೇ. ೯೬-೭) ; ಹಿರಿಯ ಭಕ್ತರ ಕೆರಹನೊಂದೆಸಗಿರಿಸಿವೊಂದೆಸೆಯಲಿ ಮಹೀಸುರವರರನೇಱಿಸಿ ತೊಲೆಯನೆಲ್ಲರು ತೂಗಿ ನೋಡಲ್ಕೆ (ಬಸಪು. ೫೫-೫೭); ಹರದನು ಲೆಕ್ಕ ತಪ್ಪಿಸಿ ಹೊಡೆವನಳತೆಯ ತೂಕ ತೊಲೆಗಳಲಿ (ಕಾತಿಕಾ. ೧೦-೩೪) ; ದೈವಂ ಕೆಡಿಸಿದುದು ಸರಿಯಾಗಿ ತೂಗದೆಯೆ ತೊಲೆಯನ್ (ಪಾಕರಿ. ೧೪-೩೫). ೭. ಸಮಾನತೆ; ಸಾದೃಶ್ಯ; ಸಾಮ್ಯ: ತನ್ನ ತೂ ಕ ದ ತೊಲೆಯ ಮಹಿಷಾಕ್ಷಿಪ್ರಮುಖಗುಗ್ಗುಳವನೀವೆನು (ಬಸಪು. ೪೩-೩೧) ; ಈ ಸುರ ನರೋರಗರೊಳಿಗೆ ದಾ ನ ವ ರೊ ಳ ಗೆ ಮಹಿಮನ ತೊಲೆಗೆ ಬಹ ತೂಕದ ಮಹಾತ್ಮರದಾರು ಭುವನದಲಿ (ನಿಘಾಗ. ೩-೫-೩೪) ; ಪುಡಿ ತನಿಗೆಂಡದ ಬೂದಿಯ ಪಡಿ ನೆಲಮಟ್ಟೊಲೆಯ ತೊಲೆಯಲರ್ ಬರಯಿಯ ಬಾಯೆಡೆಯೆಲರ್ಗಣೆಯುರಿಗಿದು ಸರಿ ಕಡು ವಿಸಿಲಿನಿಸಿರೆ ನಿದಾಘವೇಂ ಪಸರಿಸಿತೋ (ರಾಜಕೇ. ೫-೩೪) ;ಪಾರ್ಥನೀಕ್ಷಿಸಿದ ವಿಶ್ವಶರೀರಗೆ ಜೋಡಿಲೆ ತುಳಸಿಯನಿತೆ ತೊಲೆಯೆ ? (ಗಿಳಿವಿ. ೪೧-೭). ೮. [ಜ್ಯೋತಿ] ತುಲಾರಾಶಿ: ಭಾವಿಸೆ ಮೇಷದಿಂ ತೊಲೆಯನೆಯ್ದುವಿನಂ ತೊಲೆಯಿಂದೆ ವಿಮಾನಮಂ ತಾವೊಸೆದೆಯ್ದುವನ್ನವುವರುಣ್ಯ ವಿನಾಟ್ ಗಳೆಂದು ಪೇಳ್ದಂ (ಜಟ್ಕಮ. ೭-೩೪). ೯, ೮ : ಒವದೆ ವಿಮಾನ ಮೇಷ ವೃಷಭಾದಿಗಳಂ ಕ್ರಮದಿಂ ದಿನಾಧಿಪಂ ಸೇವಿಸಿ ಮತ್ತೆ ಕನ್ನೆಯೊಡಗೂಡಲೊಡಂ ಕಿಡೆ ತನ್ನ ತೇಜಮಿನ್ನಾವುದು ಕಜ್ಜವೆಂದು ತೊಲೆಯಂ ಜನರಂಜನೆ ಗೇಱಿ ರಾಗಮಂ ಭೂವಲಯಕ್ಕೆ ಬೀಱಿದಂ (ಪಂಭಾಮಾ. ೭-೧೩೬); "ಕೃಶಮುಂ ವೇಶ್ಮಾಂಗವಸ್ತ್ರಂ ಸವುಂಜಸ ತೂಕಂ ತೊ[ಪಾಠಾಂ. ತು]ಲೆಯಕ್ಕುಂ" (ಪಾನಾಕ. ೧೫೯). **ತೊಲ** : ೫. ೧೦ ಮಾಷ = ೧ಕರ್ಷ (ಒಂದು ತೊಲ ಅಥವಾ ೧೧.೬ ಗ್ರಾಂಗಳು) (ಸಳಕ್ರಿ. XIII ಪ್ರಸ್ತಾವನೆ) ; ೫ ಅಂಗುಲ ಬಾಹುವಿರುವ ಕಡೆ ಎಂಟು ತೊಲ ತೂಕವನ್ನು ಹಾಕಿರಲಿ (ಧಾತವಿ. ೪೦).

[<ಸಂ. ತುಲಾ]

ತೊಲೆಗೋಲ್, ತೊಲೆಗೋಲು(ನಾ). ೧. ತಕ್ಕಡಿಯ ಕೋಲು; ತೂಗು ಕೋಲು ; ದಂಡಿಗೆ ; ತಕ್ಕಡಿ : ಗೃಹಸ್ಥಾಶ್ರಮಮೇ ಒಂದು ತಟ್ಟುಂ ವಿಕ್ಕಾದ ಮೂಱುಮಾಶ್ರಮಂಗಳುವೊಂದು ತಟ್ಟುಂ ಆಗಿ ನಾಲ್ಕೊಗಂ ತೊಲೆಗೋಲಿಂ ತೂಗಿ ನೋಡಿದನೆಂದು ಬಲ್ಲರ್ವೇಳ್ವರು (ಧಾರಣಾಂ. ೧೨-೫೮). **ತೊಲೆಗೋಲು** : ಕೂರಲಗು ತೊಲೆಗೋಲಿನಲಿ ನಿಮ್ಮಾರು ಭಟೆಯನು ನಮ್ಮ ಬಾಹುವಿಕಾರಬಲವನು ತೂಗಿಯೆನುತೆಚ್ಚನು (ಕುಪ್ಪಾಳ. ೨೦-೨೭). [ತೊಲೆ$_3$ + ಕೋಲ್$_1$]

ತೊಲೆಗೋಲು 'ತೊಲೆಗೋಲ್' ನೋ.

ತೊಲೊಡಿ (ನಾ).ಒಂದು ದಿಣ್ಣೆಯ ಹೆಸರು: ಅನ್ತೆ ಬನ್ದು ತೊಲ್ಕೊಡಿ ಎ ಕಲ್ಕುಪ್ಪೆಎ ಅನ್ತೆ ಬನ್ದು ಕೊನ್ದೆವಡಿಎ ... ತುಟ್ಟಿಲ್ಲಾಲೊಳ್ಕೂಡಿತ್ತು (ಮೈಆರಿ. ೧೯೩೭, ೫೩-೨೪ ; ಸು. 560).

[ತೊಲ್ ? + ಒಡಿ (<ಒರಡಿ)]

ತೊವಗೂರು (ನಾ). ಒಂದು ಸ್ಥಳದ ಹೆಸರು : ಬೆಂಪೂರು ತೊವಗೂರು ಪೂವಿನ ವಲ್ಲಿಮಜ್ಗಲ ಕೂತನಿಡುನಲ್ಲೂರು (ಎಕ. IX, ಚೆಂಗಳೂ. ೬೩-೬ ; ಸು. 890) ; (ಎಇ. I, ೩೫೦-೬ ; 900 ನೋ.)

[? + ಊರು$_3$ (<ಊರ್)]

ತೊವಟೆ 'ತೊಗಟು' ನೋ.

ತೊವಡು 'ತೊಗಟು' ನೋ.

ತೊವರ್$_1$ (ಕ್ರಿ). ಒಗರಾಗು ; ಒಗಚಾಗು : ಎಸಟ್ಮಸಗಿ ಮುಗುಳ್ನಗೆ ನಕ್ಕು ತೋಱಿ ಮದಾಳಿಗಳ್ ನುಸುಳಿ ತೊರ್ತಿರೆ ಕಂಪಲರ್ಚುವನಂಬುಜ ಪ್ರಸರಮನಾಳಿ ಬೆಳಪ್ಪನೀಗೆ ವರಂಗಳಂ (ಕಾಪ್ಯಾವ.೯೧೭). 'ತೊವರ್ಚು' ಪರಾ. [ದೇ.ಶ ತಮಿ. ತುವರ್]

ತೊವರ್$_2$, ಬೊಗರು$_1$, ತೊಗರ್, ತೊಗರಿ$_3$, ತೊಗರು$_2$, ತೊವರು$_1$ (ನಾ). ರುಚಿಯಲ್ಲಿ ಒಂದಂ ಬಗೆ ; ಷಡ್ರಸಗಳಲ್ಲಿ ಒಂದು ; ಒಗರು ; ಒಗಚು : ಆವುದೊಂದು ಭೂಮಿಯನಗುಬಲ್ ಆ ವುಟ್ಟಿದ ಮಣ್ ಕವ್ಪಾಗಿರಲ್ ಅಲ್ಲಿ ವುಟ್ಟಿದ ಉದಕಂ ತೊವರ[ಪಾಠಾಂ. ಬಗರ, ತೊಗರ] ವ್ಪುದು (ಕೋಕೋಪ. ೫-೮ ಟೀಕು); ಉದಧಿಗಳೇಟುಮೆಯ್ದೆ ತೊವರಾದುವು ವಾನಜಲೌಘದಿಂ (ಸೂಕ್ತಿಸು. ೧-೪); ಪುಳಿ ಮಧುರಮುಪ್ಪು ತಿಕ್ತಂಗಳೆಂದು ತೊವರೆಂದು ಕಟುಕಮೆಂದಪ್ಪವು . . . ಕುಡುಗೆ ಹರಿಗೆ ಪಾನಾದಿಗಳಂ (ಅಕ್ಕಶಾ. ೭-೫೦). **ಬೊಗರು$_1$** : ಆರೋಗಣೆಯ ವಿವರಗಳಲ್ಲಿ :–ಇನಿದು, ಸಿಹಿ, ಕಹಿ, ಕೈವೆ, ಪುಳಿ, ಉಪ್ಪು, ಬೊಗರು (ಧಾಷಾಣಾ. ೩೫೭) ; ವರ್ಜ್ಯ – ಮಲಬದ್ಧತೆಯಾಗುವ ಬೊಗರುಳ್ಳ ವಸ್ತುಗಳು (ಪುನಿಪು. ೯೪). **ತೊಗರ್**: ಅಣಲೆಗೆ ತೊಗರೆಂತು ಸಹಜಂ ಸುಂಟಿಗೆ ಕಾರವೆಂತು ಸಹಜಂ ತಾನಂತೆ ... ದೂಷಣಮುಂ ಔದಾಸೀನ್ಯಮುಂ ನರಕದುಃಖದೆಡೆಗೆ ಸಲ್ವ ಪುರುಷಂಗೆ ಸಹಜಮಾಗಿರ್ಕುಂ (ಧರ್ಮಾಮೃ. ೪-೪೦); ಪುಳಿ ಮಧುರಮುಪ್ಪು ತಿಕ್ತಂಗಳು ತೊಗರೆಂದುಂ (ಅಕ್ಕವ್ಯ. ೯-೯೩). **ತೊಗರಿ$_3$** : "ಕಷಾಯ, ತುವರ = ತೊಗರಿ" (ಪಾಚಿಕಾ. ೪). **ತೊಗರು$_2$**: ವಾತದಿಂದ ಹುಟ್ಟಿದ ಅರೋಚಕದಲ್ಲಿ ಬಾಯಿ ತೊಗರಾಗಿ ಇಹುದು (ಕ್ಕಕ್ಕಸಾ. I, ೧೭೭) ; ನೇರಿಲ ಚಿಗರು ವಾವಿನ ಚಿಗರು ಅದರ ತೊಗರು (ಪಾಕಾಚ. ೩೭-೬). **ತೊವರು$_1$** : ಸಿಹಿಯುಂ ಕಾರಮುಮಾಮ್ಲಮುಂ ತೊವರುಮುಪ್ಪುಂ ಕೈವೆಯುಂ ಬೇಱಿವೇಱಿ ಹಿತಂದೋರ್ಕುಂ (ರಹ್ಯಾಶ. ೫೦).

ತೊವರ್ತೊವರ್ (ದ್ವಿರುಕ್ತಿ) : ಊದಿದುದು ತನ್ನೆಲರ್ ಕಳನಾದಂ ನಾದರದೊಳೊಂದಿ ನೆಗಟ್ಟುದು ಪದ್ಮಾಮೋದಮಿನಿಸುಂ ತೊವರ್ತೊವರಾದುದು ಕೂಗಿದುವು ತಾಮ್ರಚೂಡಕುಳಂಗಳ್ (ಕಾಪ್ಯಾವ. ೪೯೨). 'ಒಗರ್' ಪರಾ.

[ದೇ.ಶ ತಮಿ. ತುವರ್ ; ತುಳು. ಬೊಗರ್ ; ತೆಲು. ತೊಗರ, ತೊವರ ; ಕೂಗ. ತೊರ್ಪ./ಸಂ. ತುವರ]

ತೊವರಮಣ್ಣು 'ತುವರಮಣ್ಣು' ನೋ.

ತೊವರಿ, ತೊಗರಿ$_1$, ತೊವರು$_2$ (ನಾ). ೧. ಒಂದು ಬಗೆಯ ಸಸ್ಯ ಮತ್ತು ಅದರ ದ್ವಿದಳಧಾನ್ಯ : "ಆಢಕಿಯೆನಲ್ ತೊವ (ಗ) ರಿ

(ಮಂಗರಾ. ೧೦೦-೫) ; "ತೊವರಿಯೆಂದು ತೊಗರಿ" (ಕಶಸಾ. ೨೮-೫೮೩) ; ತೊವರಿ ಗೋದುವೆ ಜೋಳಂ . . . ಎಂಬಿವಱೊಳೊಂದಱೊಳಾದ ತೈಲಮಂ. . . . ತಂದು ಪೂಸುವುದು (ಲೋಕೋಪ. ೯-೧೦೬) ; ಪಟಗಟವೆಯ ಕೂಱ್ ತಿವುಡುಗಳೆದ ತೊವರಿಯ ತೊದೆ (ಕಾವ್ಯಾವ. ೨೪೧) ; (ಸೂಕ್ತಿಸು. ೧೧-೮೩ ನೋ) ; ಒಡಗೂಡಿ ಬಿಲ್ವಮೂಲಂ ಕಡಲೆ ತೊವರಿ ಶುಂಠಿ ಎಂಬಿವಂ ಗಂಜಿಗೆ ಮೇಣ್ ಕುಡಿವಾಗಳ್ (ಕಲ್ಯಾಕಾ. ೩-೨೭). ೨. ಸುಗಂಧಯುಕ್ತವಾದ ಭೂಮಿ : (ಕಿ). **ತೊಗರಿ$_1$:** ೧. "ಆಢಕೀ. ತುವರೀ . . . ಈ ೨ ತೊಗರಿ" (ಹಲಾಯು. ೯೬-೪೩೦); ದೇವರ್ಗ್ಗೆ . . . . ಕಡಲೆ ತೊಗರಿಯಾದಿಯಾಗಿ ಸಲುವುದು (ಎಕ. VIII, ಸೊರಬ. ೩೨೮-೬೨ ; 1159) ; ಮೂವತ್ತೆತ್ತಿನೊಳು ತೊಗರಿ ಜೋಳದಕ್ಕಿ ಕಡಲೆಗಳನೊಡತೀವಿ ಕೊಡುವುದೆನುತ್ತಂದು ಶಿವ ಪ್ರೇರಣೆಯಿಂ ನುಡಿಯೆ (ಬಸರ. ೧೨-೪೮) ; ಸೂಪಕರ್ಮಕೆ ತೊಗರಿ ಹೆಸಱಾ ಚಣಾಖ್ಯವಿನ್ನೋಪುರ್ದಿನುತ್ತಮಂ ಹೊಟ್ಟ ಕಳದಿರ್ದವಿನ್ನಾ ಪರಿಯ ಮಧ್ಯಮಂ (ವೀಕ್ಷಿಪು. ೭-೧೦-೭೪) ; ಮಿಸುನಿಯ ವಣ್ಣದ ತೊಗರಿಯ ಬೇಳೆ (ಕಂನವಿ. ೮-೮೬) ; ತೊಗರಿ ಬಿತ್ತಿ ಅವರೆ ಕೊಯ್ದರು (ಗಾಡೆ). **ತೊವರು$_2$:** ೧. ಬೀಜದ ಒಳಗಿನ ತಿರುಳಂ ಅರೆದು ಶ್ರೀಗಂಧದಲ್ಲಿ ಹುದುಗಿಸಿ ಅವರೇ ತೊವರಷ್ಟು ನುಂಗಲು ಛಳಿ, ತಾಪಜ್ವರ ಸಹ ಮಾಣ್ಗುಂ (ವಿಷ್ಣವಿ. ೧).

[ದೇ.॥ ತಮಿ. ತುವರೈ ; ಮಲ. ತುವರ ; ತುಳು. ತೊಗರಿ, ತೊಗರೆ, ತೊಗೊರಿ ; ತೆಲು. ತೊವರಿ, ತೊಗರಿ ; ಕೊಲಾ. ತೊಗರ್ ; ನಾಯ್ಕಿ. ತೊಗರಿ./ಸಂ. ತುವರೀ]

ತೊವರು$_1$ 'ತೊವರ್$_2$' ನೋ.

ತೊವರು$_2$ 'ತೊವರಿ' ನೋ.

ತೊವರೇಱು (ಕ್ರಿ). ಒಗರಾಗು : ಮಾಂಗೊನರಂ ನಸುಗರ್ಚಿ ಸೊರ್ಕಿನಿಂ ತನು ದಳವೇಱ್ ಕಂಠವಿವರಂ ತೊವರೇಱ್ ಪಟುತ್ವವೇಱ್ ಕಾಮನ ನನೆಯಂಬುಗಳ್ ವಿರಹಿವೃಂದದ ಮೆಲ್ಲೆರ್ದೆಯಂ ಪುಗಲ್ . . . ಪುಗಲ್ ಪುಗಲೆಂದುದು ಕೋಕಿಲವ್ರಜಂ (ಜಗವಿ. ೧೪-೩೮).

[ತೊವರ್$_2$ + ಏಱು$_1$ (<ಏಱ್$_1$)]

ತೊವರ್ಗಂಪು (ನಾ). ಒಗರಾದ ಸುವಾಸನೆ,-ಸುಗಂಧ : ಅಲರ್ವೀ ವನಜವನಂಗಳ ತೊವರ್ಗಂಪನಾಂಪ ಬಗೆ ಬಳೆಯೆ ಮೊರೆವುವಳಿಗಳ ಬಳಗಂ (ಆದಿಪು. ೧೨-೫೦); ತೊವರ್ಗಂಪಂ ತನಿಗಂಪನೇಕೆ ಕನರ್ಗಂಪಂ ಪೊತ್ತುವೇ ಕೋರಕದ್ರವಮುಂ ತನ್ನಲರ್ಗೊಂಚಲುಂ ಮಿಡಿಗಳುಂ ತಮ್ಮತ್ತಲೇಂ ಕೂಗಿ ನೋಡುವುವೇ ಕೋಗಿಲೆಯೆಂದು ಸೊಕ್ಕಿದಳಿಯೆಂದೋವೆಂದು ಪೋಬಂದು ಮೇವುವೊ ಮಾವಲ್ಲದವೆಂಬವೋಲ್ ಬಳೆದುದೆತ್ತಂ ಕೀರಕೋಳಾಹಳಂ (ಲೀಲಾವ. ೧೩-೩೯). [ತೊವರ್$_2$ + ಕಂಪು]

ತೊವರ್ಚು (ಕ್ರಿ). ಒಗರಾಗು ; ಒಗಚಾಗು : ಅಸುಗೆಯ ನಾಗಕೇಸರದ ಬಲ್ಮುಗುಳಂ ಬಿರಿಯೊತ್ತಿ ತುಂಬಿ ಚುಂಬಿಸೆ ರಜದಿಂ ತೊವರ್ಚಿದ ಕೊರಳ್ ಸವಿಯಂ ತರೆ ಪಾಡಿ (ಶಾಂತಿಪು. ೭-೫೩). [ತೊವರ್$_1$ + – ಚು$_1$]

ತೊವಲ್$_1$ (ಕ್ರಿ). ೧. ಚಿಗುರು ; ಪಲ್ಲವಿಸು : ಪರಿವ ತೊಱೆಗಳುಮಂ ತೊವಲ್ತು ಸೊಗಯಿಸುವಡವಿಗಳುಮಂ . . . ಕಂಡು ತಮ್ಮ ಕಣ್ಗಂ ಮನಕಂ ಸೊಗಯಿಸೆ (ಪಂಪಭಾ. ೭-೨೫ ವ) ; ಎಲೆವಳ್ಳಿ ತೊವಲ್ತೆಲೆವಳ್ಳಿ ನಗಂ ಕೃತಕನಗಂ ಪಲಸು ಬಕ್ಕೆವಲಸಾ ಬನದೊಳ್ (ಜಗವಿ. ೬-೧೪). ೨. ತುಂಬು ; ಆವರಿಸು : ವಿಳಾಸಿನೀಘನಸ್ತನಶತಪತ್ರಪತ್ರಶತದಿಂದೆ ತೊವಲ್ತು . . . ಅಗರುಧೂಮಲತಾವಳಿಯಿಂ ಮಡಲ್ತು ಮೆಲ್ಲನೆ ಸುಟಿದತ್ತು ಸದ್ಮಸರಸೀಶರಶೀಕರಮಂದಮಾರುತಂ (ಮಲ್ಲಿಪು. ೭-೪೮).

[ದೇ.॥ ತಮಿ. ತುವಲ್]

ತೊವಲ್$_2$, ತೋಲ್$_2$ (ನಾ). ಎಳೆದಳಿರು; ಚಿಗುರು: "ಎಳೆದಳಿರ್ವೆಸರದು ತೊವಲೆ[ಪಾಠಾಂ.ರೆ]ನೆ (ಚತುನಿ.೧೦೪) ; ಸೋಮಶರ್ಮಭಟ್ಟಂ ಪಿರಿದೊಂದು ತೊವಲಂ ಪಿಡಿದಬ್ರಹ್ಮಣ್ಯಂ ಭೋ ಅಬ್ರಹ್ಮಣ್ಯಂ ಭೋಎಂದಟುತ್ತ . . . ಅರಮನೆಗೆ ಪೊಗಿ (ವಡ್ಡಾರಾ. ೨೩-೨); ಇದಂ ನೀನವಧಾರಿಸೆಂದು ತೊವಲಂ ಮುಂದಿಕ್ಕಿದಂ ಭೂಪನಾ (ಸುಕುಮಾ. ೭-೪೨) ; ಉಱ್ ಕಾವ ಸೂರ್ಯರಶ್ಮಿಗೆ ಮೊಱ್ಯಿಡಲೆಂದೆತ್ತಿ ಪಿಡಿದ ತೊವಲೆಂಬಿನೆಗಂ ತುಱುಗಿರ್ದಾವರೆಗೊಂಬಂ ಮುಱಿದು ನೆಟಲ್ಮಾಡಿಕೊಂಡು ನಡೆವರ್ ಪಥಿಕರ್ (ಜಗವಿ. ೧೭-೬೯) ; ತೆಗೆದು ನನೆಗೊಯ್ದು ಬಿಡೆ ಮೇಲೊಗೆವೆಳದಳಿರ್ಗೊಂಬು ಪೋಲ್ತುದಾ ಪೂವಿನ ಸೂಱೆಗೆ ತೊವಲಂ ಪಿಡಿದು ಮದಾಳಿಗಳುಲಿಯಿಂ ಪುಯ್ಯಲಿಡುವಶೋಕೆಯ ಕೈಯಂ (ಚಂದ್ರಪು. ೭-೧೦೦) ; ತಮ್ಮ ಕರಾಗ್ರದೊಳ್ತೊವಲನಾಂತು ನೆಟಲ್ಗೆ ತೊಟಲ್ದವಾನೆಗಳ್ (ಬಾಧಪು. ೪-೮೨) ; ಕಲಶದ ತೊವರಂ [ಲಂ] ರತ್ನಾವಲಿಯೊಳ್ ಸಮ್ಮಿಶ್ರ ಪುಷ್ಪಮಂ ಮಸ್ತಕದೊಳ್ ತಳಿದಲ್ಲಿ ಬಣ್ಣವುರದೊಳ್ ಬಱಿದು ಬಱಿಕಿಕ್ಕಿ ಮೇಖಲಾಲಂಕೃತಿಯಂ . . . ಕಟ್ಟುಗೆ ಪಟ್ಟವ(ಂ) ಲಲಾಟಪಟ್ಟಾಂತರದೊಳ್ (ಅಶ್ವಶಾ. ೮-೧೫). **ತೋಲ್$_2$.** 'ತೋಲ್ವಿಡಿ' ಪರಾ.

ತೊವಲನಿಕ್ಕು = ತೊವಲಿಕ್ಕು ೨ : ಬೇಂಟೆಯಾತಂಗೆ ಮೃಗವ್ಯಾಯಾಮಕಾರ್ತಿಕೇಯಂ ಮೆಚ್ಚಿ ಮೆಚ್ಚುಗೊಟ್ಟು ತೊವಲನಿಕ್ಕೆಂದು ಮುಂದೆ ಪೇಟ್ದಟ್ಟ . . . ಬೇಂಟೆಗೆ ಪೊಱಮಟ್ಟು (ಪಂಪಭಾ. ೫-೪೭ ವ).

[<ತೊವಲ್$_1$]

ತೊವಲ್$_3$ 'ತೋಲ್$_1$' ನೋ.

ತೊವಲಿಕ್ಕು (ಕ್ರಿ). ೧. ಪಲ್ಲವಿಸು ; ಚಿಗುರು : ತೊವಲಿಕ್ಕಿದ ಪೆರ್ವಟು ಬೇಗೆಗಿರ್ಚಿನೊಳ್ ಬೇವವೊಲಿರ್ದುವಿರ್ವಲದ ಬಿಲ್ಲಣಿಗಳ್ ರಣರಂಗ ಭೂಮಿಯೊಳ್ (ಪಂಠಾಮಾ. ೧೩-೪೮). ೨. ಹಳ್ಳ ಕಾಣದಂತೆ ಮೇಲೆ ಸೊಪ್ಪು ಮುಚ್ಚು : ಆಡಲಾಡಿಸಲ್ ಪಾಱಿಯಂ ನಿಱಿಸಲುಂ ಪರಿಗೊಳಲ್ ತೊವಲಿಕ್ಕಲೊಳಗಂ ಬರಲ್ . . . ಜಾಣಂ ನೀರ್ದಾಣಮೆಂದೆಡೆಯಱಿದುಂ ಮಾಡಲ್ ಮಾಡಿಸಲ್ ಪಡೆ ಮೆಚ್ಚೆ ನೀಂ ಬಲ್ಲೆ (ಪಂಪಭಾ. ೫-೪೧) ; " ಬಲೆ ಬೀಸು " (ನಾಡೋಜ. ೩೦೪).

[ತೊವಲ್$_2$ + ಇಕ್ಕು]

ತೊವಲು 'ತೋಲ್$_1$' ನೋ.

ತೊವಲುಡಿಗೆ 'ತೊವಲುಡುಗೆ' ನೋ.

ತೊವಲುಡುಗೆ, ತೊವಲಂಡಿಗೆ (ನಾ). ಚರ್ಮದ ಉಡುಗೆ ; ತೊಗಲಿನಿಂದ ಮಾಡಿದ ವಸ್ತ್ರ : ಬರಿ ತೊವಲುಡುಗೆಯವರ ನಾಡೊಂದಿದ್ದಿತು (ಬಿದುರಿ. ೭೬). **ತೊವಲುಡಿಗೆ :** ನಲಿದು ಬಿಗಿದುಟ್ಟ ತೊವ [ಪಾಠಾಂ. ಗ] ಲುಡಿಗೆಯಲಗುಗಳೆಸೆಯೆ (ಕಡ್ಡರ. ದೇ. ೧೨೭-೧೨).

[ತೊವಲ್$_3$ (< ತೋಲ್$_1$) + ಉಡುಗೆ]

ತೊವಲುಡೆ 'ತೋಲಂಡೆ' ನೋ.

ತೊವಲುಡೆಯ (ನಾ). ಚರ್ಮವನ್ನು ಬಟ್ಟೆಯಾಗಿ ಧರಿಸಿದವನಂ ; ಚರ್ಮಾಂಬರಧಾರಿ ; ಶಿವ : "ಈಶ್ವರಂದೊವಲುಡಿ [ಡೆ] ಯನೆಂದೆನಲ್" (ಕಶರ. ೫೨) ; ನಡುವಿನೊಳುಟ್ಟ ವಲ್ಕಲಂ ತೊವಲುಡೆಯನ ಕೃತ್ತಿವಾಸಂಬೋಲ್ ಮನೋಜ್ಞಮಾಗಿರೆ (ರಾಮಾಶ್ವ. ೪೦-೨೯).

[ತೊವಲುಡೆ (<ತೋಲುಡೆ) + – ಅ$_7$]

ತೊವಲ್ಗೊಳ್ (ಕ್ರಿ). = ತೊವಲ್ವಿಡಿ : ಪೊಂಗಿ ಕಡಂಗಿ ಬೀರದೊಳೆ ಬೀಗುವ ನಿನ್ನಣುಗಾಳೆ ನೋಡೆ ನಿನ್ನಂಗನೆಯರ್ ತೊವಲ್ಗೊಳೆ ಭಯಂಗೊಳೆ ಕೋಡಗಗಟ್ಟುಗಟ್ಟಿ ಚಿತ್ರಾಂಗದನುಯ್ಯೆ (ಪಂಪಭಾ. ೯-೫೪) ; "ತೊವಲ್ಗೊಳೆ = ಕೈಯಲ್ಲಿ ಚಿಗುರನ್ನು ಹಿಡಿದಿರಲು" (ಪಂಪದೀ. ೩೨೩).

[ತೊವಲ್$_2$ + ಕೊಳ್$_1$]

ತೊವಲ್ವಲೆ (ನಾ). ಚರ್ಮದಿಂದ ಮಾಡಿದ ಒಂದಂ ಬಗೆಯಂ ಬಲೆ: ಪುಲಿವಲೆ ಕೊಂಬು ಕಣ್ಣಿ ಮಿಡಿಗಣ್ಣು ತೊವಲ್ವಲೆ . . . ಎಂಬಿನಿತಂ ಪೊಱೆಗಟ್ಟಿ (ದಶಕು. ೨-೦೧೫). [ತೊವಲ್$_3$ (< ತೋಲ್$_1$) + ಬಲೆ$_1$]

ತೊವಲ್ವಿಡಿ, ತೋಲ್ವಿಡಿ (ಕ್ರಿ). (ಶರಣಾಗತಿಯಾಗಿರುವುದನ್ನು ಸೂಚಿಸಲಂ) ಚಿಗುರುನ್ನು ಕೈಯಲ್ಲಿ ಹಿಡಿ; (ಸೋಲನ್ನೊಪ್ಪಿರುವುದರ ಸಂಕೇತವಾಗಿ) ತಳಿರನ್ನು ಕೈಯಲ್ಲಿ ಹಿಡಿ; ಮರೆಹೊಗು: ಕಾಯದೆ ಕಾಮನಾರ್ದಿಸೆ ತೊವಲ್ವಿಡಿವಂತೆಡಗಯ್ಯೊಳೊಪ್ಪೆ ತೋರ್ಪಾಯೆಲೆ (ಪಂಪಭಾ. ೪-೩೬); ಸರಿದ್ವಲ್ಲಭಂ ಹರಿನೀಳಚ್ಛವಿಯಂ ತೊವಲ್ವಿಡಿದು ವೀಚೀಹಸ್ತದೊಳ್ ಘೂರ್ಣಿತಾತುರನಿರ್ಘೋಷಮುಣ್ಮೆ ಪುಯ್ಯಲಿಡುವಂತಿರ್ದತ್ತು (ಮಲ್ಲಿಪು. ೧೨-೦೩೨). **ತೋಲ್ವಿಡಿ**: ತೋಲ್ವಿಡಿದು ಸಾಱಿ ಪೇಟ್ಟಿಪೆಂ . . . ನೀಂ ಬಲ್ವಿಡಿವಿಡಿ ಜಿನಪದಾಬ್ಜಯುಗಮಂ ಬಗೆಯೊಳ್ (ಉಸಾರ. ೫೬). [ತೊವಲ್$_2$ + ಪಿಡಿ$_1$]

ತೊವಲ್ವೆರಸು (ಅ). ಚಿಗುರು ಸಹಿತವಾಗಿ; ಎಲೆಗಳಿಂದ ಕೂಡಿ: ಪಣ್ವೆರಸು ನಟ್ಟ ಮೈಂದವಾಟೆಗಳುಮಂ ತೊವಲ್ವೆರಸು ನಟ್ಟಾಲಂಗಳುಮಂ (ಪಂಪಭಾ. ೫-೪೭ ವ). [ತೊವಲ್$_2$ + ಬೆರಸು$_3$]

ತೊವಲ್ವೊದೆಯ (ನಾ). ೧. ಚರ್ಮವನ್ನು ಹೊದೆದವನು. ೨. ಸಿಪ್ಪೆಯಿಂದ ಆವರಿಸಿರುವುದು. ೧, ೨: ತಿಸುಳಿಯಂತೆ ಮುಕ್ಕಣ್ಣನುಂ ತೊವಲ್ವೊದೆಯನುಂ ಮುಗಿಲಂತೆ ನೀರೊಡಲನುಮೆನಿಪ ತೇಂಗಾಯಿಂ . . . ಪುರಂ ಕಣ್ಗೆಂಬಾದುದು (ರಾಮಾಶ್ವ. ೧೦೩-೧೬).

[ತೊವಲ್$_3$ (< ತೋಲ್$_1$) + ಪೊದೆ$_2$ + – ಅ$_7$]

ತೊವೆ 'ತೊವ್ವೆ' ನೋ.

ತೊವ್ವೆ, ತೊಗೆ$_1$, ತೊಯಿ, ತೊಯೆ, ತೊವೆ, ತೋಯ$_1$, ತೋಯಿ, ತೋಯೆ, ತೋವೆ (ನಾ). ತೊಗರಿ, ಅವರೆ ಮುಂತಾದ ಬೇಳೆಗಳನ್ನು ಬೇಯಿಸಿ ತಯಾರು ಮಾಡುವ ಒಂದಂ ಬಗೆಯಂ ಮೇಲೋಗರ: ಹುಲಿಗಿಲ ಬೇಳೆಗಳಂ ನೇಱಿಲ ಬೀಜಂ ... ತೊವ್ವೆಯಡೆ ಸವಿವಡೆಗುಂ (ಲೋಕೋಪ. ೮-೨೩); ಕೂಟುಂ ತೊವ್ವೆಯುಂ ಮೊದಲಾದುವ ನಟ್ಟಪರೆಂಬುದು ವ್ಯವಹಾರದೊಳಪ್ಪ ಸತ್ಯಮೆಂಬುದು (ಪಸಾರ. ೫೯೧); ವರ ಸಣ್ಣಕ್ಕಿಯೋಗರ ತೊವ್ವೆ ಪಳಿದ್ಯವ ತಱತಱದಲಿ ಬಡಿಸಿದರು (ಮೋಹತ. ೩-೫೦). **ತೊಗೆ$_1$**: ತೊಗೆ ತೊಗೆಯ ರಸ ಪುಣುಗುರಾಜಾನ್ನಮಿಶ್ರಿತದ ... ನೈವೇದ್ಯಮಂ ಧಗಧಗಿಪ ಕಲಧೌತಕನಕಹರಿವಾಣದೊಳು ತಂದಿಡಲು (ಪ್ರಭುಪು. ೯-೫೭); ಜೋಳದ ಬೋನಕ್ಕೆ ಬೇಳೆಯ ತೊಗೆಯಾಗಿ ಕಾಳೆಮ್ಮೆ ಕಱಿದ ಹಯನಾಗಿ (ಸರ್ವಜ್ಞ. ೧೬೧೭); ಕಡುಬ್ಬುಯ್ದು ಕಡಲೆ ತೊಗೆ ಮಾಡಿ ತುಪ್ಪ ಹಾಕಿ ಕೊಡದೋಳಿಗಿಕ್ಕೆ ಹದಿನಾರ (ನಾಪದ. ೭೭). **ತೊಯಿ**: ಅನ್ನ, ಉದ್ದಿನ ತೊಯಿ, ಕಡುಬು, ಹಾಲು, ತುಪ್ಪ, ಮೊಸರು ಸಹ ಬಲಿಯಂ ತುಂಬಿ (ಪಾಲಚಿ. ೧೨೬-೩); ತೊವರಿಯ ಹಳಚಗಿರುವ ತೊಯಿ ರಸ ಹುಣಿಸೆಪಳದ್ಯವ ಎಳೆವೆಣ್ಣುಗಳಿಕ್ಕಿದರು (ಜ್ಞಾನಚಿ. ೩೯-೦೩೬). **ತೊಯೆ**: ಮಠದಲು ನಡೆವ ಛತ್ರ ಅಯಿದು ಪರಿ ಶಾಕ ತೊಯೆ ತುಪ್ಪ ವಿಳೆಯ ಸಹಿತ ಅಟ್ಟುವ ಬ್ರಾಹ್ಮಣ ೧ (ಸೌಇಇ. IX-II, ೪೫೦-೯; 1447); ಸಣ್ಣಕ್ಕಿಯೋಗರಂ ಹೆಸಱ ತೊಯೆ ಹೊಚ್ಚಹೊಸ ಬೆಣ್ಣೆ ಕಾಸಿದ ತುಪ್ಪ (ಸಮ್ಯಕೌ. ೭-೨೪); **ತೊವೆ**: ಉಪಾಧ್ಯಾಯಂಗೆ ಕಟಮೆಯ ಕೂಟುಂ ತುಪ್ಪಮಂ ತೊವೆಯು [ಪಾಠಾಂ. ತೋಯ] ಮನುಣಲ್ಕೊಟ್ಟು ಕುಮಾರನನೋದಿಸುಗೆಂದೋಲೆಯನಟ್ಟಿದೊಡೆ (ಪಡ್ಡಾರಾ. ೭೫-೧೫); ಸಂದ ತಿರಿಕಂಗೆ ತೊವೆ ತುಪ್ಪಂ ದೊರೆಕೊಳಲುಣ್ಮೆ ನಲಿವ ತೆಱದಿಂ (ಧರ್ಮಾಮೃ. ೯-೩೦); ತಿವುಡುಗಳೆದ ತೊವರಿಯ ತೊವೆ ಕಾಯ್ದಿಟಿಪಿದ ತುಪ್ಪಂ ಕೋಡುವ ಕಟಲಲ್ಲದೆ ದಿವ್ಯಭೋಜನಂ ಪೆಱತುಂಟೇ (ಕಾವ್ಯಾವ. ೨೪೧); ಸುವರ್ಣದ ಸಟ್ಟುಗದಿಂ ತೊವೆಯೊಳ್ ಕಲಸಿದ ಕಟವೆಯ ಕೂಟುಂ ತುಪ್ಪಮುಂ ನೀಡಿರೆ (ಪುಣ್ಯಾಸ್ರ. ೯-೧೭ ವ); ಪ್ರಸಾದ ತೊವೆ ಮೂರು ಮೇಲೋಗರ (ಎಕ. VIII, ತೀರ್ಥಹ. ೧೫೮-೧೮; ಸು. 1400). **ತೋಯ**: ಉಂಡಹೆನೆಂಬಲ್ಲಿ ಅನ್ನವನಿಕ್ಕದೆ ಸತ್ತ ಮತ್ತೆ ಅಕ್ಕಿಯ ಹೇಱ ಮಸ್ತಕದಲ್ಲಿರಿಸಿ ಘಟ್ಟಿತುಪ್ಪ ತೋಯವ [ಪಾಠಾಂ. ತುಯ್ಯಲ]ನುಣ್ಣೆಂದು ಬಿಕ್ಕಿಬಿಕ್ಕಳುವನಂತೆ (ಉರಿವ. ೩೩-೩೫); ಹೆಸಱು ತೋಯ ಪಳದ್ಯ (ಬೊಂಕಶಾ. ೦೯೪೦, ಕುಮಟ. ೦೧೩-೨೬; 1475). **ತೋಯಿ**: ಉದ್ದಿನ ತೋಯಿ, ಅಲಸಂದೆಯ ಗುಗ್ಗುರಿ . . . ಇವಂ ಮಂತ್ರಸಮನ್ವಿತವಾಗಿ . . . ಬಲಿಯಂ ಕೊಡಲು (ಪಾಲಚಿ. ೧೩೦-೩); ತುಪ್ಪ ಕುಡುತೆ ೨ಕ್ಕೆ ತಾರ ೫ ತೋಯಿ ತಾ ೨ ಶಾಕ ೫ (ಸೌಇಎ. ಮಂಗಳೂರು, ೪೬೫-೩೩; 1312). **ತೋಯೆ**: ಸಣ್ಣಗಳಮೆಯೋಗರ ತೊಗರಿಯ ತೋಯೆ ಬೆಣ್ಣೆಗಾಸಿದ ತುಪ್ಪವೆಱೆದು ಅಣ್ಣಂದಿರುಣಬನ್ನಿಯೆನಬೇಕಲ್ಲದೆ ಹೆಣ್ಣಿಗೆಂದಮ್ಮ ಕರೆವರೆ (ನೇಮಿಸಂ. ೨೩-೨೬೯); ತೋಯೆ ಪಾಯಸ ತುಪ್ಪ ಕಲಸು ಮೇಲೋಗರ ತಾಳಿಲ ಮುಂತಾದ ಪಂಚಭಕ್ಷಕ್ಕೆ (ಎಇ. VIII, ೧೩೨-೨೯; 1586) **ತೋವೆ**: ಸಣ್ಣ ಛತ್ತದೋಗರಮಂ ಕಟ್ಟಿಸರ ತೋವೆಯುಂ ದೆಸೆದೆಸೆಗೆ ಪಸರಿಸುತ್ತ ಪರಿಮಳದಿಂ ಮಗಮಗಿಪ ಸದ್ಯ ಗಟ್ಟಿಮೊಸರು (ಧರ್ಮಪ. ೨-೫೬ ವ); ಹೆಸಱು ತೋವೆ ತುಪ್ಪ ನಾಲ್ಕು ಪರಿಯ ಶಾಕ ವೀಳೆಯ ಸಹ ಪ್ರತಿದಿನ ಒಂದಕ್ಕಂ ಕಾಟಿಹಣ ಒಂದಱ ಲೆಕ್ಕದಲು (ಸೌಇಇ. IX-II, ೪೧೭-೩೩; 1377); ತೋವೆಯಿಲ್ಲದ ಊಟ ಲೋವೆಯಿಲ್ಲದ ಮನೆಯು ನೋವನಱಿಯದಳ ಮನೆವಾರ್ತೆ ಸಿಹಿಯಱಸಿ ಬೇವು ತಿಂದಂತೆ (ಸರ್ವಜ್ಞ. ೦೭೦೯); ಮದುವೇ ಮನೇಲಿ ತೋವೆಗತ್ತರು ಗೌರೀಹಬ್ಬದಲ್ಲಿ ಕಾಯಿಗತ್ತರು (ಗಾದೆ).

[ದೇ.॥ ತಮಿ. ತುವೈ; ತುಳು. ತೋವೆ]

ತೊಸಕ್ (ನಾ). ಒಂದಂ ಅನುಕರಣ ಶಬ್ದ: ಕೆಸರಿನಲ್ಲಿ ತೊಸಕ್ಕೆಂದು ಕಾಲು ಹೂತು ಹೋಯಿತು (ರೂಢಿ).

ತೊಸಕ್ ತೊಸಕ್ (ದ್ವಿರುಕ್ತಿ): ದಾರಿಯ ಕೆಸರಿನಲ್ಲಿ ಗಾಡಿ ತೊಸಕ್ ತೊಸಕ್ ಎಂದು ಶಬ್ದಮಾಡುತ್ತಾ ಹೋಯಿತು (ರೂಢಿ).

ತೊಳಂಕು, ತೊಳಕು, ಸೊಳಕ (ನಾ). ೧. ದೇಹದ ಮಧ್ಯಭಾಗ: ಭ್ರೂವಕ್ಷಂ ತೋಳ್ ತೊಳಂಕು ತೊಡೆಯೆಂಬೆಡೆಯೊಳ್ ಶೀವಿದುವು ಭೀಮನಿಸೆ ವಿಶಿಖಾವಲಿ ಮಾಱಾಂತರಾತಿಸೇನೆಯ ಮೆಯ್ಯೊಳ್ (ಕಾವ್ಯಾವ. ೧೬೯); ವಿಕಲ್ಪಬಿಂದುಗೆ – ಕದಂಪು, ಕದಪು . . . ತೊಳಂಕು, ತೊಳಕು (ಶಮದ. ೩೬ ಪ್ರಯೋ); "ಕೀಲಂ; ಸಂದಂ" (ಪ್ರಭಣ್ಮ). **ತೊಳಕು**: ೧. ಅಡಿ ತೊಡೆ ಪೊರ್ಕುಟುಂ ತೆಗಲೆ ಕೈಕಣಕಾಲ್ ಕೊರಲೆಂಬಿವುಂ ಬೆರಲ್ ನಡುವುರ ಬೆನ್ ಬಸಿಱ್ ತೊಳಕು ಕರ್ಚರೆ ಮುಯ್ದು ಮುಸುಂಬು ಮೂಗು ಪೆರ್ದೊಡೆ ಕಟಿ ಮುಂಮಡಂ ಪರಡು ಸಂದಿ ನೊಸಲ್ ಪಣೆ ಕಣ್ ಕದಂಪಿ ವೆಂಬೆಡೆಯನೆ ನಟ್ಟುವುರ್ಚಿದುವು ನೇರ್ದುವು ಸೀಳ್ದುವು ಪಾರ್ಥನಂಬುಗಳ್ (ಪಂಪಭಾ. ೧೧-೧೩೬). ೨. **ಸೊಳಕ**: ಸೊಂಟ; ನಡು: "ಸೊಳಕ = ಟೊಂಕ; ನಡು" (ಜಾನಕೋ. ೫೦). 'ಸೊಳಲಂ' ಪರಾ.

ತೊಳಂಚಿ$_1$ 'ತೊಳಸಿ' ನೋ.

ತೊಳಂಚಿ$_2$ 'ತೊಳಂಚೆ$_2$' ನೋ.

ತೊಳಂಚೆ$_1$ 'ತೊಳಸಿ' ನೋ.

ತೊಳಂಚೆ$_2$, ತೊಳಂಚಿ$_2$ (ನಾ). ಒಂದಂ ಸ್ಥಳದ ಹೆಸರಂ; P ಈಗಿನ ಮಂಡ್ಯ ಜಿಲ್ಲೆಯ ತೊಣಚಿ ಎಂಬ ಊರು: ತೊಳಂಚೆಯದ ಸೀಮೆಯೊಳ್ ತಾಗಿ ಅರಸಿಯು (ಎಕ. XII, ನಂಜನ. ೨೬೯-೯೨; 904). **ತೊಳಂಚಿ$_2$**: ಹದಿನೆಣ್ಟು ವಿಷಯದ ದೇಸಿಯು ಕರೆದು ತೊಳಞ್ಚಿಯ ಅಙ್ಕಕಾಱದೇವರು ನಗರೀಸ್ವರದೇವರ್ಗ್ಗೆ ಕೊಟ್ಟ ಧರ್ಮಂ (ಮೃಅರಿ. ೦೯೧೫, ೨೦-೧೧; 1047). [?]

ತೊಳಕಲು (ನಾ). (ಉಕ) ಮುಸಂರೆನೀರು ; ಕಲಗಚ್ಚು : ಈ ಹಸು ಕೊಡುವುದು ಒಂದು ಸಿದ್ದೆ ಹಾಲು, ಒಂದು ಉಸುರಿಗೆ ಮೂರು ಬಾನಿ ತೊಳಕಲನ್ನು ಕುಡಿಯುತ್ತವೆ (ಕೂಡಿ).

[ತೊಳೆ$_1$ + – ಕಲು$_2$ (< – ಕಲ್$_4$]

ತೊಳಕು 'ತೊಳಂಕಂ' ನೋ.

ತೊಳಗು$_1$ (ಕ್ರಿ). ಹೊಳೆ ; ತಳತಳಿಸು ; ಪ್ರಕಾಶಿಸು ; "ತೊಳಗು–ಕಾಂತೌ (ಪ್ರಕಾಶಿಸು" (ಕ ಪು ಧಾ) ; ಅತಿಧವಳಜಳಧರವಪಥಮಂ೦ ತೊಳವಿಳೆ ವಜಿಯಂ ಕಳೆದುವು ಮುಸಿಸಂ (ಕವಿರಾ. ೩-೦೬೭) ; ಶ್ರೀಗೆ ಕುಳಸದನ ಮೆನೆ ತೊ[ಪಾಠಾಂ. ಬಿ]ಳಪ ಮಣಿಭವನದೊಳ್ (ಆದಿಪು. ೭-೩೭ ಕಗಳ) : ತೊಳಗುವ ಪಾರಿಜಾತದಲರ್ಗೊಂಚಲಿನೊಪ್ಪುವ ಕರ್ಣಪೂರಮಂ ಕಳೆದೊಡಂ (ಕಾಂಡಪು. ೮೩೩) ; ಭಾಸುರಮಾಯ್ತು ಜನೇಂದ್ರಾವಾಸಂ ತೊಳಗುವ ಸುವರ್ಣಕಳಶೋನ್ನತಿಯಂ (ಸೌಇಇ. XI-1, ೩೨-೮೫ ; 1007) ; ಮೃಗನೇತ್ರೆಯ ತೊಳಗುವ ಕಾಲುಗುರ್ಗಳ ನೂಪುರದ ಪೊಳೆವ ವಜ್ರಂಗಳ ಕಾಂತಿಗಳದರೆ (ಕಬ್ಬಿಪು. ೩-೯೫) ; ನಿಡುಗಣ್ ತೊಳಪ್ಪ ಕದಪ್ಪುದ್ದ ನೊಸಲ್ . . . ಎಂಬಿವಱೊಪ್ಪಿದುದಿರ್ದ ವನೇಚರೀಜನಂ (ಪುಪ್ಪಪು. ೩-೯೦).

ತೊಳತೊಳಗು (ದ್ವಿರುಕ್ತಿ) : ರಕ್ತಾಶೋಕವಲ್ಲವದಂತೆ ತೊಳತೊಳಗುವ . . . ಕರತಳವಲ್ಲವಂಗಳ್ (ಪಂಪಭಾ. ೨-೩೯ ಪ) ; ಅಂದೇ ಮಣಮಂದ ಪುತ್ರೂರ್ಗೆ ಕಳುಪುತ್ತವಿರೆ . . . ತೊಳತೊಳಪ ದಿವ್ಯಾಭರಣಮಣಿ ಪ್ರಕರಮಂ (ಸಂಬಿರ. ೫-೨೨) ; ಶಕ್ರನ ನೂಱುಮಡಿ ತೇಜದಲಿ. ತೊಳ ತೊಳಗಿದನು ಕಲಿಪಾರ್ಥ (ಕುವಾ೩ಅ. ೬-೮೪). **ತೊಳಗಿ ಬೆಳಗು** = ಅತಿಶಯವಾಗಿ ಪ್ರಕಾಶಿಸು : ತಳತಳಿಸಿ ತೊಳಗಿ ಬೆಳಗುವ ವಳಿಕಿನ ಸಜಿಯೊಂದು . . . ಒಪ್ಪಿ ತೋಱಿತ್ತಾಗಳ್ (ಕವ್ಯಾಸಾ. ೦೦೩೦ ಕೂದ್ರಳ) ; ಮದನನ ಸೋದನದೀವಿಗೆಯೆನೆ ತೊಳಗಿ ಬೆಳಗಿದಂ ತುಹಿನಕರಂ (ಪಂಪಭಾ. ೪-೩೩) ; ಇನಬಿಂಬಂ ಕಣ್ಗಳುಂಬಂ ತೊಳಗಿ ಬೆಳಗೆ (ಕಾದಂಪು. ೩೫೪) ; ಪುಳಂ ವೆನೆಬ್ಬಿಸುತೆಯ್‌ತಪ್ಪನೆ ಜಯ ತೊಳಗಿ ಬೆಳಗುತೆನ್ನೊಳಗಿಪ್ಪನೆ ಜಯ (ಜಯಶ. ೬-೧೪) ; ಹಬ್ಬುಗೆಯ ಹದಿನಾಲ್ಕು ಲೋಕಂ ವೊಬ್ಬುಗಳನೀಡಾಡಿ ನಭದೊಳಗೊಬ್ಬನೇ ರವಿ ತೊಳಗೆ ಬೆಳಗುವ ವೋಲು (ಕುವಾ೩ಅ. ೮-೪). **ತೊಳತೊಳತೊಳಗು** = ಉಜ್ವಲವಾಗಿ ಬೆಳಗು ; ಬಹಳ ಪ್ರಕಾಶಮಾನವಾಗಿ ಕಾಂತಿಯನ್ನು ಬೀರು : ದಿವ ಶಲ್ಪತಳದ ಪೊರೆಯೊಳಗೆ ತೊಳತೊಳತೊಳಗಿ ಪೊಜಿವಂಡುವೆಳನೇಸಱಿ ಬಳಗದ ಬೆಳಗನೊಳಕೊಂಡು (ಆದಿಪು. ೨-೬೦ ವ) ; ತೇಜಂ ಪಜ್ವಳಿಸ ತಟತಟಿಸಿ ತೊಳತೊಳತೊಳಗಿದನಸ್ತಮಯಸಮಯದೊಳ್ ದಿನಪಸುತಂ (ಪಂಪಭಾ. ೦೨-೩೦೦) ; ತೊಳತೊಳತೊಳಗುವ ಬೆಳ್ದಿಂಗಳ ಪಕ್ಕದ ಪೊಳೆವ ರಶ್ಮಿಜಾಲವಿದೆನೆ . . . ಅದೇನೊಪ್ಪಿದುವೊ ಧವಳಚಮರರುಹಂಗಳ್ (ಕಾದಂಬಾ. ೯೬) ; ಹಂಸನ ಬೆಲ್ವಂ ತಳೆದೇನೆಸೆದುವೊ ತೊಳತೊಳ ತೊಳಗುವ ಶಶಿಕಾಂತಮಣಿಕಮಂಡಲಂ ಕೆಲದೊಳ್ (ಪಂರ್ವಪು. ೯-೩೭) ; ಮೂಲಪ್ರಕೃತಿಗಳನ್ನುತ್ತರಿಸಿ ತೂಳತೊಳತೊಳಗೆ ಬೆಳಗುವ ಪರಮಶಿವನಲಿ ಸೆಣಸಿದೆವಲಾ (ಕುವಾ೩ಅ. ೬-೬೫).

[ದೇ.॥ ತಮಿ. ಮಲ. ತುಳಙ್ಕು, ತುಳಕ್ಕು ; ತೆಲು. ತುಲಕಿಂಚು]

ತೊಳಗು$_2$ (ನಾ). ಬೆಳಕು ; ಕಾಂತಿ ; ಪ್ರಕಾಶ : "ಕಳಿಗದಿರು . . . ತೊಳಗು ಬೆಳಗುಂ ಚವಿಯುಂ ತಿಳವೆಸರ್ ಕಾಂತಿಗೆ" (ಶಬ್ದಮಂ. ೦೬) ; "ತೊಳಗೆನೆ ವಿನುಗೆನೆ . . . ಕಾಂತಿಯೆನಿಕ್ಕುಂ" (ಕವಿಕಂ. ೦೦೦) ; "ತೊಳಗು ಕಾಂತಿ" (ಕಕರ. ೪೮). [<ತೊಳಗು$_1$]

ತೊಳಚಿ 'ತೊಳಸಿ' ನೋ.

ತೊಳಚೆ 'ತೊಳಸಿ' ನೋ.

ತೊಳಪ್ಪ$_1$ (ನಾ). = ತೊಳಗು$_2$: "ತೊಳಗು . . . ತೊ[ಪಾಠಾಂ. ತ]ಳಪಂ. ಮಸೆ–ಈ ೧೪ ಕಾಂತಿ" (ಕಕಸಾ ೦೦-೨೦೨) ; "ಮಸೆಯೆಂದು ತೊಳಪ [ಪಾಠಾಂ. ತಳಪ, ತೊಳಪ]" (ಕರ್ನಿಕೃ, ೫೩). [ತೊಳಗು$_1$ + – ಪ್ಪ$_2$]

ತೊಳಪ್ಪ$_2$, ತೊಳಹ್ಪ$_3$ (ನಾ). ಒಂದು ಮನೆತನದ ಹೆಸರು ಮತ್ತು ಆ ವಂಶತನಕ್ಕೆ ಸೇರಿದವನಂ : ವಿನಯನಿಧಿ ರಾಜಗೌಡಿಗೆ ಮನುಚರಿತನೆನಿಪ್ಪ ತಿಪ್ಪಗೌಡಂಗಂ ಕೇತನು ಸಾತನೆಂಬ ಮಕ್ಕಳು ಜನಿಯಿಸಿದರು ತೊಳಪ ಕುಳಕೆ ತಿಳಕರೆನಲ್ಕಂ (ಕಇ I, ೫೪-೩೦ ; 1148). **ತೊಳಹ್ಪ$_3$** : ಶಿವನಂದಯೋಗಿ ನಿವೇದ್ಯಶಾಲೆಯಂ ಮಾಡಿ[ಸೂ]ರಲಲಂ ತೊಳಹನೆ ಕಯ್ಕಲೂ . . . ಬದಿರೆ ಗದ್ದೆಯು ಮೇಲಿಕ್ಕಿದ ಪಾಣ್ಡ್ಯಗದ್ಯಾಣಂ (ಸೌಇಇ. VII. ೩೮೦-೦೩ ; 1140) ; ಶ್ರೀಶಂಖಿರನಾರಾಯಣದೇವರಿಂಗೆ ಮಾದಾಡಿ ತೊಳಹರು ಮಾಡಿ[ದ] ಧರ್ಮಪ್ರತಿಷ್ಠೆ (ಸೌಇಇ. IX-11, ೪೫೫-೦೦ ; ಸು. 1401) ; ತುಳುವದ ತೊಳಹರ ಮೂಲವು ಬೆಳಗಾವಿನ ತೊಳಹರ ಕುಟುಂಬವೆಂಬುದಾಗಿ ಅನುಮಾನಿಸಲಾಗಿದೆ (ತುಳುನಾ. ೨೬೨).

ತೊಳಹರ ಬಳಿ = ತೊಳಪರ ವಂಶ : ತೊಳಹರ ಬಳಿಯ ಅನತಕ ಸೆಟ್ಟಿತಿಯ ಮಗ ಆದಿಸೆಟ್ಟಿ (ಮೈಆರಿ. ೧೯೪೬, ೬-೨ ; 14ನೆಯ ಶತ) ; ತೊಳಹರ ಬಳಿಯ ಮಾಣಿಕ್ಯಸೆಟ್ಟಿಯ ಗಡಿಯಿಂದಂ ಬಡಗಲು (ಸೌಇಇ. IX-1., ೪೬೪-೦೭ ; 1472) ; ತೊಳಹರ ಬಳಿಯ ಹಿರಿಯ ದೇವ[ಕ] ನಾಯಕಿತಿಯ ಮೊಮ್ಮಗ (ಕಇ. I, ೬೭-೯ ; 1494). [?]

ತೊಳಪ್ಪ (ನಾ). (?) : ಆ ಗ್ರಾಮದ ಸೀಮೆಯಂತೆ[ಂ]ದೊಡೆ ಆಲಿಗೊಂದದಿಂ . . . ತೊಳಪ ಬಳಪ ಬಿಳಿಯಳರಿಯಿಂ . . . ಒಳಗುಳ್ಳ ಭೂಮಿ (ಇಆ. XVIII, ೩೦೨-೦೮ ; 11ನೆಯ ಶತ). [?]

ತೊಳಪು (ನಾ). ಕಾಂತಿ; ಪ್ರಕಾಶ: "ತೊಳಪುಂ[ಪಾಠಾಂ. ತೊಳಪಂ, ತಳಪುಂ] ಮಿಱುಗು . . . ಡಾಳಂ ತಾವೆನಲ್ಕಾಂತಿಗೆ ಪೆಸರ್" (ಕರ್ನಿಕೃ. ೨೪) ; ತೊಳಪಿಂದೆ ರತ್ನವೊಪ್ಪೆ (ಸೌಇಇ. IX-i, ೪೯೮-೦೭ ; 1196) ; ಎಳವೆಣ್ಗಳ ಕಣ್ಬೆಳಗುಜ್ವಳಭಟರ ಕೃಪಾಣಲತೆಯ ತೊಳಪುಂ . . . ಪರ್ವಿತಾ ಸಭಾಮಂದಿರಮಂ (ಅಧ್ಯಟ. ೩-೦೭) ; ಬಲು ಬೊಬ್ಬೆ ಸಿಡಿಲು ಖಿಡ್ಗಗಳ ತೊಳಪೂ ಮಿಂಚು ಸಲೆ ತುರಗದ ದನಿ ಗುಡುಗು (ಕಂನವಿ. ೦೮-೦೦೦).

[ತೊಳಗು$_1$ + – ಪು$_2$]

ತೊಳಮಿ(ನಾ). (?):ಪಿತೃಕಳತ್ರ ಮಿತ್ರಜನಮಂ ಕಾಯ್ವಾನ್ಯ ತಾಬ್ದಪ್ಪೊಡೀ ನಂಡಿಯಲ್ವೇಱ್ಕುಮೇ ಪೆಂಪನೊಪ್ಪ ಗುಣತೆ ತೊಳಮಿ ಕಿಬ್ದ ಗೋಪಯ್ಯನಂ (ಎಳ. III, ಮೈಸೂರು, ೬-೦೦ ; ಸು. 760). [?]

ತೊಳಲ್$_1$ 'ತೊಟಲ್$_1$' ನೋ.

ತೊಳಲ್$_2$ 'ತೊಟಲ್$_2$' ನೋ.

ತೊಳಲಾಟ (ನಾ). ೧. ಸಂತ್ಯಾಟ ; ಅಲೆದಾಟ ; ೨. ಕಷ್ಟ ; ಬವಣೆ ; ಗೋಳು : ಈ ತೊಳಲಾಟದೊಳಗೆ . . . ಬಾಳುವೆಗಾಗಿ ಚಿಂತಿಸುತ್ತಾ ಕಾಪಕೊಳಗಾಗಿ (ಬಿದುರಿ. ೦೪೬) ; ಈ ಗೋಳಾಟವು ಅವಳ ಅಂತರಂಗದ ತೊಳಲಾಟವಾಗಿತ್ತು (ಕಾರಥ. ೦೫೩) : ಇನ್ನು ಈ ತೊಳಲಾಟ ಯಾಕೆ ? (ದೂಪಿಬ್ಯ. ೦೦೯) ; ಹೆಂಗಸರ ಈ ತೊಳಲಾಟ ಇದ್ದೇಇದೆ (ಸಮುಚೀ. ೯೩).

[ತೊಳಲ್$_1$ (<ತೊಟಲ್$_1$) + ಆಟ]

ತೊಳಲಾಡು (ಕ್ರಿ). ೧. ಸುತ್ಯಾಡು ; ಅಲೆದಾಡು : ದಿನವೆಲ್ಲಾ ಕಾಡಿನಲ್ಲಿ ತೊಳಲಾಡಿ ಅವರೆಲ್ಲಾ ಬಹಳ ಆಯಾಸಗೊಂಡರು (ಕೂಡಿ). ೨. ಕಷ್ಟ ಪಡು; ತೊಂದರೆಪಡು; ಗೋಳಾಡು: ನಮ್ಮ ಕೈಯಾರ ಬಂಧನವನ್ನು ತೊಡಗಿಸಿ ಅದರಲ್ಲಿ ಸಿಕ್ಕಿ ತೊಳಲಾಡುವುದು ನನಗೆ ಸರ್ವಥಾ ಇಷ್ಟವಿಲ್ಲ (ಅನಾಮಿ. ೮೯) : ಹಿಂದೂಸ್ಥಾನವೇ ದಾಸ್ಯದಲ್ಲಿ ತೊಳಲಾಡುವವರೆಗೆ ಚಟಗಳಿಗೆ ದಾಸನಾಗದ ಹಿಂದೀಯನು ಯಾರು (ಮುಂಗಾಪು. ೩೮).

[ತೊಳಲ್$_1$ (<ತೊಟಲ್$_1$) + ಆಡು$_1$]

ತೊಳಲಿಕಲ್ಲು 'ತೊಟಲಿಕಲ್' ನೋ.

ತೊಳಲಿಕೆ 'ತೊಟಲ್ಕೆ' ನೋ.

ತೊಳಲಿಚು 'ತೊಟಲ್ಚು' ನೋ.

ತೊಳಲಿಸು (ಕ್ರಿ). ಸುತ್ತುವಂತೆ ಮಾಡು ; ತಿರುಗುವಂತೆ ಮಾಡು : ಬಂದುದೊಂದು ಸುಳಿಗಾಳಿ ಧರೆ ನಡಗುವಂತೆ . . . ತೊಳಲಿಸಿತಜಾಂಡ ಶತಕೋಟಿಗಳನು (ಜೈಮಿಭಾ. ೩೨-೩೯) ; ಅರ್ಜುನನನ್ನು ಸುಮ್ಮಸುಮ್ಮನೆ ಸೂಳೆಗೇರಿಯಲ್ಲಿ ತೊಳಲಿಸಿರುವುದೂ ಇದಕ್ಕೆ ನಿದರ್ಶನ (ಕಾವ್ಯಸ. ೮೧).

[ತೊಳಲ್$_1$ (<ತೊಟಲ್$_1$) + – ಇಸು$_2$]

ತೊಳಲು$_1$ 'ತೊಟಲ್$_1$' ನೋ.

ತೊಳಲು$_2$ (ನಾ). ಚಿಗುರು ; ತಳಿರು : ಆ ಗಾಳಿ ತಾನೆ ಬೀಸಣಿಗೆಯಾಗಿ ತನ್ನನ್ನೆ ಬೀಸಿಕೊಳಲು ತಲೆಯಲ್ಲೆ ಹೂವು ಅರಳಿರಲು ಮುಡಿಸಿಕೊಳಲೇಕೆ ತಳಿರ ತೊಳಲು ? (ಅರಳು. ೧೦೦-೧೯). 'ತೊವಲ್$_2$' ಪರಾ.

[<ತಳಲ್$_2$]

ತೊಳಲೆ 'ತೊರಳೆ' ನೋ.

ತೊಳಲ್ಕೆ 'ತೊಟಲ್ಕೆ' ನೋ.

ತೊಳಲ್ವಲೆ (ನಾ). ಒಂದು ಬಗೆಯ ಬಲೆ : ಕೋಲುವಲೆ ಹೆಬ್ಬಲೆ ತೊಳಲ್ವಲೆ ಸಗಾಢವಲೆಗಳ ಹೊಟ್ಟೆಗಳೋಳಿಯಂ ಪೊತ್ತು (ಸೌಂದಪು. ೧೮-೩೯). [ತೊಳಲ್ ? + ಬಲೆ$_1$]

ತೊಳವಿಗೆ (ನಾ). ಸಮೂಹ ; ಗುಂಪು (?) : ವಾರಿಯೊಳರ್ದಿಕೊಳ್ವರಣ್ಯ ವಾರಣಂಗಳೊಡನೆ ಭರದಿಂ ಪೋರ್ಗಂ ಮೊಗಂಬುಗುವ ನೀರ ಪೇರಾನೆಗಳ ತೊಳವಿಗೆಗಳೊಳಂ (ಚಂದ್ರಪು. ೫-೪೦ ವ). [?]

ತೊಳಸಂಬಟ್ಟೆ (ನಾ). ಅಸ್ತವ್ಯಸ್ತತೆ ; ಅವ್ಯವಸ್ಥೆ ; ಗೊಂದಲ : ಪಲ್ಯದ ಸ್ವರ್ಗ ಅನುಭವಿಸುತ್ತಾ ಇರುವಾಗ ಆಫೀಸಿನ ನರಕದ ತೊಳಸಂಬಟ್ಟೆ ಜ್ಞಾಪಿಸುತ್ತೀಯಲ್ಲೇ ! (ನಡೆದಾ. I. ೫೨೬) ; (ನೀತಿ. ಮೊ.ಗಳ ವಿಷಯದಲ್ಲಿ) ತೊಳಸಂಬಟ್ಟೆಯ, ಸೊಟ್ಟಪಟ್ಟ, ಸುತ್ತುಬಳಸಿನ; ವಕ್ರ, ಕುಟಿಲ (Tortuous. ಇಂಕನಿ). 'ಕಂಡಾಬಟ್ಟೆ' ಹೋ. [< ತೊಟಸು$_1$]

ತೊಳಸಾಟ (ನಾ). ಜಗಳ ; ಕಲಹ : ಆಚಾರ್ಯರಿಗೆ ಕವುಟಿಲ್ಯಬುದ್ಧಿಯಂ ಕಲಿಸಿ ಒಂದಕೊಂದ ನೆನೆದು ತೊಳಸಾಟವಂ ಮಾಡಿ (ಎಕ. II, ೩೩೩-೨೨ ; 1206 ?) ; ತೊಳಸಾಟವಿದು ಗೋಚರಿಸಲಱಿಯದು ಗೋಮಿನೀಧವ ನೊಡನೆ ನಿನಗೆಂದ (ತೊರಥಾ. ೬-೨-೨೪) ; ಮರುಳೆ ಸುಮ್ಮಗಿರು ನಮ್ಮ ಕಣ್ಣಾರೆ ತೊಳಸಾಟವಂ ಮಾಡದಿರಿ (ತುರಂಗ. ೬೪-೪೫).

[ತೊಳಸು$_4$ (< ತೊಟಸು$_2$) + ಆಟ]

ತೊಳಸಿ, ತೊಳಂಚಿ$_1$, ತೊಳಂಚೆ$_1$, ತೊಳಚಿ, ತೊಳಚೆ (ನಾ). = ತುಲಸಿ : "ತುಳಸೀ – ತೊಳಸಿ" (ಓಷಧಿ. ೭೧) ; ರುದ್ರಾಕ್ಷಿಯ ಧರಿಸಲೊಲ್ಲದೆ ಪದ್ಮಾಕ್ಷಿ ತೊಳಸಿಯ ಮಣಿಯಂ ಕಟ್ಟಿಕೊಂಬಿರಿ (ಸರ್ವವ. ೧೭೯-೮೨೯) ; ನಾಗದೇವನು ಮಾಡಿಸಿದ ತೊಳಸಿಯ ವ್ರಿಂದಾವನಕೆ ಸರ್ವ್ವರೂ ಅನುಕೂಲರು (ಎಕ. III, ಮಳವ. ೧೫-೩ ; 1389 ?) ; ಇದ ವಿಚಾರಿಸೆ ಬಱಿಯ ತೊಳಸಿಯ ವುದಕದಂತಿರೆಯಲ್ಲಿ ನೋಳ್ಪುದು ಪದುಮನಾಭನ ಮಹಿಮೆ ಧರ್ಮವಿಚಾರ ಮಾತ್ರವನು (ಕುಪ್ಯಾಅ. ೧-೧೪) ; ಅಮ್ರುತಪಡಿಗೆ ಅಕ್ಕಿ . . . ತೊಳಸಿ ಹೂವಿನ ಮಾಲೆ (ಎಕ. VI, ಮೂಡಗೆ. ೫೯-೭ ; 1520) ; ಕೊರಲ ದಂಡೆಯ ತೊಳಸಿಯ ಪೊಸ ಚಿಗುರು (ಗೀತಗೋ. ೧೩-೨೦). **ತೊಳಂಚಿ$_1$** : ಬನ್ನಿಯೆಕ್ಕೆಯುತ್ತರಣೆಯ ಬೆಲ್ಲವತ್ತದ ತೊಳಂಚಿ [ಪಾಠಾಂ. ಚೆ] ಯ ಪತ್ರೆಯನೊಂದಿನಿತ್ತು ಚೆಚ್ಚರಮಮರತ್ವಮಂ ಪಡೆಯಿಮೆಂಬರ್ (ಸಮಪ. ೮-೧೨) ; ಒಪ್ಪುವ ಯಜ್ಞಸೂತ್ರಕಂ ಕಿವಿಯ ತೊಳಂಚಿಯುಟ್ಟುಡೆಯ . . . ವಿಲಾಸಮೊಪ್ಪೆ (ಮಹಾನೇ. ೧೦-೮೭). **ತೊಳಂಚೆ$_1$** : "ತೊಳಂಚೆ ತೊಳಚೆ" (ಚತುನಿ. ೬೧); ಸೂರಣಕ್ಕೆಲೆ ಕುಮಾರಿ(ಗೆ)ಯ ಕಳ್ಳಿಯ ಬೂದಿ . . . ಲವಣಕ್ಕೆ ತೊಳಂಚೆ ವಿಷಾಪಹಾರಕಂ (ಲೋಕೋಪ. ೮-೨೭). **ತೊಳಚಿ** : "ತೊಳಚಿಯೆನೆ ತುಳಸಿ" (ಶಬ್ದಮಂ. ೨೮) ; ಪೊಸೆವ ಮರನಂ ಬಿಲಂ ತೊಳಚಿ [ಪಾಠಾಂ. ಲಿ] ಸಮಸ್ತಂ ದೆಯ್ವಮಿಂತಿವೆಂಬರ್ಮೂಢರ್ (ಸಮಪ. ೯-೮೨) ; ಬಹುಳದಿಂ ಸತ್ವಕ್ಕೆ ಚತ್ವಂ – ಅಪ್ಸರಸ್ – ಅಚ್ಚರಸಿ . . . ತುಳಸಿ – ತೊಳಚಿ (ಶಮದ. ೨೬೩ ಪ್ರಯೋ) ; ಅಣಿಯರದ ತೊಳಚಿ ಗೊರಟನ ಮಣಿದೊಡವಿನ . . . ಮಟ್ಟಿಗರೆಸೆದರ್ (ಹಮ್ಮೀರ. ೭-೧೯) ; ತೊಳಚಿಯ ಪಸುರ್ವೆಳಗು ದುಗುಲದ ಪೊಂಬೆಳಗು . . . ಎನ್ನ ತಿಳಿವು ಬೆಳ್ವೆಳಗಿನೊಳೆಡವಿಡದಿರ್ಕೆ (ಕರ್ಣಪ್ಯ. ೧-೩೪); ಎಂತೊ ತೊಳಚಿದೋಂಟದೊಳ್ ತುಱುಚೆ ಪುಟ್ಟುವಂತಿರೆ ನಿನ್ನೀ ಬಱಿಯೊಳ್ ಜಾಳೆನೆ ಪಂಚಮನಾಂ ಪುಟ್ಟಿದೆಂ (ರಾಮಾಶ್ವ. ೨೭-೭). **ತೊಳಚೆ** : ಇತ್ವಕ್ಕೆತ್ವಂ – ಅತಸಿ – ಅಗಸೆ . . . ತುಲಸಿ – ತೊಳಚೆ (ಶಮದ. ೨೭೯ ಪ್ರಯೋ) ; ದೇವಿಯರು ಬ್ರಹ್ಮನ ಕೈಯಲ್ಲಿ ಒಂದು ಬೀಜವ ಕೊಡಲು, ಅದ ತಂದು ಬೂದಿಯ ಮೇಲೆ ಬಿತ್ತಲು, ತೊಳಚೆ ಪುಟ್ಟಿತ್ತಾಗ (ಭೈರಸೂ. ೧೧೭).

[< ಸಂ. ತುಲಸೀ]

ತೊಳಸು$_1$ 'ತಳಿಸು$_1$' ನೋ.

ತೊಳಸು$_2$ 'ತೊಟಸು$_1$' ನೋ.

ತೊಳಸು$_3$ 'ತಳಿಸು$_3$' ನೋ.

ತೊಳಸು$_4$ 'ತೊಟಸು$_2$' ನೋ.

ತೊಳಸುಗ (ನಾ). ಎದುರಿಸುವವನು ; ಪ್ರತಿಭಟಿಸುವವನು : ಸೆಳೆದು ಕೊಂಡನು ಖಡುಗವನು ಭುಜವಳಯದಿಂದವುಚಿದನು ತೋಟಿಯ ತೊಳಸುಗರ ಹೊಯ್ ಹೊಯ್ಯೆನುತ ಗರ್ಜಿಸಿದನಾ ಭೀಷ್ಮ (ಕುಪ್ಯಾಸ. ೦೦-೨೬).

[ತೊಳಸು$_4$ (<ತೊಟಸು$_2$) + – ಗ$_2$]

ತೊಳಸುಗೊಳ್ಳು (ಕ್ರಿ). ಸಿಕ್ಕಿ ಬೀಳು ; ತೊಡಕಿಕೊಳ್ಳು : ತರ್ಕತಂತ್ರದ ತಱದ ಯುಕುತಿಗೆ ತೊಳಸುಗೊಳ್ಳದ ಠಾವಲಾಯೆಂದ (ಕುಪ್ಯಾಳಾ. ೧-೨೨).

[ತೊಳಸು$_4$ (<ತೊಟಸು$_2$)+ಕೊಳ್ಳು$_1$ (<ಕೊಳ್$_1$)]

ತೊಳಹ$_1$ (ನಾ). ತೊಳೆಯುವಿಕೆ; ಶುದ್ಧಿಮಾಡುವುದು: ಹಸ್ತಶುದ್ಧಿಂ–ಕೈ ತೊಳಹವಂ (ಪ್ರಕಟೀ. ೬-೧೫) ; ಪರಶುರಾಮನ . . . ಪರಶುವಿನ ನೆಣವಸೆಯ ತೊಳಹದ ಪರನದಿಯ. ವಿಸ್ತರಣವನು ಕೇಳಿದನು ಯಮಸೂನು (ಕುಪ್ಯಾಅ. ೯-೧೫) ; ಎಲವೋ ಮಡಿವಳ ನಿನ್ನ ತೊಳಹವು ಚೆಲುವನಾದವು . . . ತೊಳೆದು ಕೊಡು ನಾವುಟ್ಟುದನು ನೀ (ಸಾಳ್ವಭಾ ೨೨-೫೯). [ತೊಳೆ$_1$ + – ಹ$_2$]

ತೊಳಹ$_2$ 'ತೊಳಪ$_2$' ನೋ.

ತೊಳಿಸು 'ತಳಿಸು$_1$' ನೋ.

ತೊಳೆ$_1$ (ಕ್ರಿ). ೧. ಸ್ವಚ್ಛಮಾಡು ; ಶುದ್ಧಮಾಡು: "ತೊಳೆ–ಪ್ರಕ್ಷಾಲನೇ, ಫಲ ತೂಲಾಯಾಂ ಚ" (ಶಮಧಾ) ; ನಿಮ್ಮ ಕಾಲಂ ತೊಳೆವೆ[ಪಾಠಾಂ. ಕರ್ಚುವೆ,ಕರ್ಚುವ]ಮೆಂದು ಮಹಾದೇವಿ ತಾನೆ ಕಾಲಂ ಕರ್ಚಿ (ವಡ್ಡಾರಾ. ೭೮-೧೧) ; ಪಳುಕಿನ ಪಾಪೆಯನಮರ್ದಿಂ ತೊಳೆದಂತೆ (ಆದಿಪು. ೬-೩೯) ; ತೊಳೆವೊಡದಂ ಜಿನಪತಿಮತಸಳಿಳಂ ತೊಳೆಗುಂ ವಿಶೋಧಿ ತೊಳೆಗುಂ ನಿಯಮಂ ತೊಳೆಗುಂ (ಶಾಂತಿಪು. ೪-೭೯) ; ಮುರಹರನಾಗಸಕೆತ್ತಿದ ಚರಣ ಮನಜನಲ್ಲಿ ತೊಳೆದನಾ ನೀರೆ ಗಡಂ ಸುರಸಿಂಧುವಾಗಿ ಬರುತಿರೆ (ಸಮಪ. ೮-೫೫) ; ಕುದುರನೇಸು ತೊಳೆದರೆಯೂ ಕೆಸಱು ಮಾಣ್ಬುದೆ (ಬಸವ. ೨೬೦) ; ಗುರುಗಳಿಗೆ ಕಾಲ ತೊಳದು ಧಾರಾಪೂರ್ವ್ವಕವಾಗಿ ಕೊಟ್ಟರು (ಎಕ. VII, ಶಿವಮೊ. ೬೧-೧೭ ; 1287) ; ತನ್ನಡಿಗಳಿಗೆ ತಪ್ಪಗ್ಭವಣಿಯಂ ತಾನೆ ಕಳಕೊಂಡು ಅಡಿಗಳಂ ತೊಳಕೊಳುತ ಬಸವಂ ಸಡಗರಿಸಿ (ಬಸಪು. ೩೦-೯) ; ತೊಳೆದರೆ ಮಸಿಗೆ ಧವಳತೆಯುಂಟೆ (ಕೌಶಿರಾ. ೩೬-೪೭).

೨. ಅಳಿಸು ; ತೆಗೆದುಹಾಕು : ಅಜ ಬರೆದ ಬರೆಹವನು ತೊಳೆಯಬಲ್ಲನೆ ಬಾಣ (ಪುರಂದ. ೨-೪೪-೩). ೩. ನಿವಾರಿಸು ; ಪರಿಹರಿಸು : ಹಿಂದಿನವ ಮಾನಗಳ ತೊಳೆಯಿರೇಳಿ (ವಿಸೀಗೀ. ೪೩-೬) ; ಈ ಪುರೋಚನವೃತ್ತಾಂತ ದಿಂದ ಬಂದಿರುವ ಕಳಂಕವನ್ನು ತೊಳೆದುಕೊಂಡಂತಾಗುತ್ತದೆ (ವಚಧಾ. ೬೫). ೪. ಇಲ್ಲವಾಗು : ತನಗಿಂದು ತೊತ್ತಿನ ಕೆಲಸ ಕೊಂಡಿಹುದ ನಿಲಿಸುವೊಡೆ ಕದ್ರುವಿಗೆ ಕೊಟ್ಟರೆಯೊಲಿದು ಸುಧೆಯನು ದಾಸಿತನವದು ತೊಳೆದುಹೋಹುದು (ಸಂಭಪ. ೫-೫೪). ೫. ಹಾಳುಮಾಡು ; ನಾಶ ಮಾಡು: 'ನೀ ಬಂದು ಈ ಮನೆ ತೊಳೆದೆ' ಎಂದು ಅವಳು ದಿನಾ ಸೊಸೆ ಯನ್ನು ಛೇಡಿಸ ಹತ್ತಿದಳು (ಹೊಸಕ್ಷಿ. ೨೧). 'ತೊಡೆ$_1$' ಪರಾ.

ತೊಳೆದ ಕೆಂಡ = ಆರಿಸಿದ ಕೆಂಡ ; ಇದ್ದಲು : ಅವನ ಕ್ರೂರವಾದ ಕಣ್ಣು, ತೊಳೆದ ಕೆಂಡದಂಥ ಮೈಬಣ್ಣ ನೋಡುವವರಿಗೆ ಹೆದರಿಕೆಯನ್ನು ಹುಟ್ಟಿಸುವಂತಿತ್ತು (ರೂಢಿ). **ತೊಳೆದ ಮುತ್ತು** = ಶುಭ್ರಗೊಳಿಸಿದ ಮೌಕ್ತಿಕ ; ಶುದ್ಧವಾದ ಮುತ್ತು : ಆ ಮಗು ತೊಳೆದ ಮುತ್ತಿನಂತೆ ಬಹಳ ಮುದ್ದಾಗಿದೆ (ರೂಢಿ). [ದೇ ॥ ತೆಲು. ತೊಲಂಚು]

ತೊಳೆ$_2$, ಸೊಳೆ$_2$, ಸೋಳೆ (ನಾ). ಕಿತ್ತಲೆ, ಹಲಸು ಮುಂತಾದ ಹಣ್ಣು ಗಳ ಹಾಗು ಹತ್ತಿ ಮೊದಲಾದುವುಗಳ ಒಳಗಿನ ಒಂದೊಂದು ಭಾಗ,-ಖಂಡ : "ತೊಳೆ – ಪ್ರಕ್ಷಾಲನೇ, ಫಲತೂಲಾಯಾಂ ಚ" (ಶಮಧಾ) ; ಪಲಸಿನ ತೊಳೆ(ಟಿ^{3})ಗಳನರನೇಱಿಲ ಕೊನೆ ಕರ್ಪೂರಮೆಣ್ಣೆ ಯೆಂಬಿನಿತಿವಱಿಂ ಕಲಸಿ ಕಡುವಿಸಿಲೊಳವನಿರಿಸಲೊಡಂ ದ್ರವಿಯಿಸುಗು ಮಚ್ಚರಸಮಪ್ಪಿನೆಗಂ (ಲೋಕೋಪ. ೮-೩೫) ; ಕಡಲೆಯಂದದೊಳು ಹಲಸಿನ ತೊಳೆಯನುತ್ತರಿಸಿ ಹುಡಿಮೆಣಸು ಶುಂಠಿ ಯಾಲಕ್ಕಿಯಂ ಮೊಸರ ಕೆನೆಯೊಡನಿಕ್ಕಿ (ಸೂಪಶಾ. ೫-೫೪) ; ನಾನೊಂದು ತರಲ ಮರುಕಾಂತಾರ ದಲ್ಲಿ ತೊಟ್ಟು ಕಳಚಿದ ಹತ್ತಿಯ ತೊಳೆಯಂತೆ ಇಳಿಯುತ್ತಿದ್ದೆ (ಬಾಣಅ. ೧೯೩) ; ತೊಗಲು ತೊಳೆ ಆದೀತೆ ? (ಗಾದೆ). **ಸೊಳೆ$_2$** : ಆಲೂಗಡ್ಡೆ . . . ಹಲಸಿನಕಾಯಿಯ ಸೊಳೆ ಇತ್ಯಾದಿಗಳನ್ನೂ ತುಂಡುಮಾಡಿ ಈ ರೀತಿ ಕರಿಯಬಹುದು (ಅಡುಸೌ. ೯೦) ; ಬಳಿಕ ಮೂವರೂ ಸೊಳೆಗಳನು ತಿಂದರು (ಈಕಥೆ. ೧೦೩). **ಸೋಳೆ**: ರುಚಿ ನೋಡೋಣವೆಂದು ಒಂದೆರಡು ಸೋಳೆ ಬಾಯಿಗೆ ಹಾಕಿಕೊಂಡೆ (ಬಾಳಿಗಿ. ೧೧೯) ; ರಚ್ಚೆ ! ಹುಲ್ಲು ! ಯಾರಿಗದು ಸೋಳೆ ಇಲ್ಲದಿದ್ದರೆ ? (ಮೊಮಗು. ೬೪).

[ದೇ.॥ ತಮಿ. ಚುಳೈ; ಮಲ. ಚುಳ; ತೆಲು. ತೊಲ, ತೊನ; ಕುವಿ. ತೋಲ]

ತೊಳೆ$_3$ 'ಸೊಳ್ಳೆ$_1$' ನೋ.

ತೊಳೆ$_4$ (ನಾ). ದೋಣಿ ನಡೆಸುವ ಹುಟ್ಟು : ಆಗ ಸಾಲು ಸಾಲಾಗಿ ಜನರನ್ನು ಹಡಗಿನ ಬಾಣಿಗಳಲ್ಲಿ ಕುಳ್ಳಿರಿಸಿ ತೊಳೆ (oar)ಗಳಿಂದ ನೀರನ್ನು ತಳ್ಳಬೇಕಾಯಿತು (ಪಾಲಪ್ರ. II, ೬೪೩) ; ಆಗ ದೋಣಿಯ ತೊಳೆಗಳನ್ನು ಒಚ್ಚಬೇಕಾಗಿಲ್ಲ (ಒಂಟಿದ. ೧೩೬); ನೀನು ಒಂದು ತೊಳೆ ಹಿಡಿ, ನಾನೊಂದು ಹಿಡಿಯುತ್ತೇನೆ (ಔದಾಉ. ೧೬೧).

ತೊಳೆಹಾಕು = ಹುಟ್ಟುಹಾಕು : ರಾತ್ರೆ ಒಂದು ಹರದಾರಿ ತೊಳೆ ಹಾಕುವುದು ; ಅನಂತರ ಸ್ವಲ್ಪ ಹೊತ್ತು ತಣ್ಣಗೆ ಕುಳಿತಿರುವುದು (ಒಂಟಿದ. ೧೩೬). [<ತೊಟಸು$_1$/ತಮಿ. ತುಟವೈ ; ಮಲ. ತುಟ]

ತೊಳೆತ (ನಾ). ಶುದ್ಧಮಾಡುವಿಕೆ ; ತೊಳೆಯುವುದು : "ಕ್ಷಾಲನಂ = ತೊಳೆತಂ" (ಕಾಶಕ್ಕ. ೨೬೧). [ತೊಳೆ$_1$ + – ತ$_2$]

ತೊಳೆಯಿಸು (ಕ್ರಿ). ಶುದ್ಧ ಮಾಡಿಸು ; ಸ್ವಚ್ಛ ಮಾಡಿಸು : ಭಕ್ತರ ಕೂಡ ಬಂದವನೀಗ ಕಾಲಂ ನೀಡಿ ತೊಳೆಯಿಸಿಕೊಂಡಹನು (ಬಸಪು. ೨೬-೪೦) ; ನಿಮಗೆ ಮುಖ ತೊಳೆಯಿಸಿ ಮಾತ್ರೆ ಕೊಡುವುದಕ್ಕೆ ಕಾಯ್ದು ಕೊಂಡಿದೇವೆ (ಜಂಗಾಳ್ಕ. ೧೫೪). [ತೊಳೆ$_1$ + – ಇಸು$_3$]

ತೊಳ್ತಳ 'ತೊಟ್ತುಟಿ' ನೋ.

ತೊಳ್ತಳಂದುಳಿ 'ತೊಟ್ತುಟಿದುಟಿ' ನೋ.

ತೊಳ್ತಾಳ್ 'ತೊಟ್ತಾಳ್' ನೋ.

ತೊಳ್ತು 'ತೊಟ್ತು' ನೋ.

ತೊಳ್ತುಗೆಯ್, ತೊತ್ತುಗೈ (ಕ್ರಿ). ೧. ತೊತ್ತಾಗಿ ಮಾಡಿಕೊಳ್ಳು ; ಸೇವೆಮಾಡಿಸಿಕೊಳ್ಳು : ನಿಜಮೋಕ್ಷಲಕ್ಷ್ಮಿಯಂ ತ್ವರಿತದಿಂ ತೊಳ್ತು ಗೆಯ್ದಾಳ್ವ ಬಲ್ಗಾಡಿಯಿಂ (ಪದ್ಮರಾ. ೫-೩೪). **ತೊತ್ತುಗೈ** : ೨. ಸೇವೆ ಮಾಡು : ತೊತ್ತುಗೈವುದು ಲೋಕವೀತಗೆ (ಕೌಶಿರಾ. ೨೫-೭).

[ತೊಳ್ತು (<ತೊಟ್ತು) + ಕೆಯ್$_1$]

ತೊಳ್ತುಗೆಯ್ಮೆ (ನಾ). ತೊತ್ತಿನ ಕೆಲಸ ; ಸೇವೆ ; ಊಳಿಗ : ತೊಳ್ತು ಗೆಯ್ಮೆಯ ಪೆರ್ಮೆಗೊಳ್ಳನೆಸಗುವೆನೆಂದು ಕಜ್ಜಮಂ ಕೈಕೊಂಡೊಡೇಂ ಸ್ವಾರ್ಥದೋಷಮಂ ಕಾಣ್ಬರಾರ್ (ಶ್ರೀರಾಮಾ. ೧೧೫-೯೭).

[ತೊಳ್ತು (<ತೊಟ್ತು) + ಗೆಯ್ಮೆ (<ಕೈಮೆ$_1$]

ತೊಳ್ತುಗೆಲಸ 'ತೊಟ್ತುಗೆಲಸ' ನೋ.

ತೊಳ್ತುಗೊಡು 'ತೊಟ್ತುಗೊಡು' ನೋ.

ತೊಳ್ತುಗೊಳ್ 'ತೊಟ್ತುಗೊಳ್' ನೋ.

ತೊಳ್ತುಬಾಳ್ (ಕ್ರಿ). ತೊತ್ತಾಗಿ ಜೀವಿಸು ; ಗುಲಾಮನಾಗಿರು : ನಾ ತೊಳ್ತುಬಾಳೆನು ನಿನಗೆ (ಮೂರುನಾ. ೧೧೨-೪೭೦).

[ತೊಳ್ತು (<ತೊಟ್ತು) + ಬಾಳ್$_1$ (<ಬಾಟ್$_1$)]

ತೊಳ್ಪುಟ್ಟಿ 'ತೊಟ್ಪುಟ್ಟಿ' ನೋ.

ತೊಳ್ಮಗ (ನಾ). ತೊತ್ತುಮಗ ; ಆಳುಮಗ : ಅವ [ನಾ] ತೊಳ್‌ಮಗ ಗೊಣ್ಡೊಮ್ (ಸೌಇಎ. ೧೯೩೨, ಪುಂಗನೂರು. ೧೯೭-೭ ; ೨ನೆಯ ಶತ). 'ತೊಟ್ಪುಟ್ಟಿ' ಪರಾ. [<ತೊಟ್ತು + ಮಗ]

ತೊಳ್ಳು (ಕ್ರಿ). ಸ್ವಚ್ಛವಾಗು : ಮೂವರು ಮೂರು ಒನಕೆಗಳನ್ನೆತ್ತಿ ಅನುಕ್ರಮವಾಗಿ ನೆಲಕುಳಿಗೆ (ಒರಳಿಗೆ) ಗುರಿತಪ್ಪದೆ ಕುಟ್ಟುವಾಗ ಹೊರಕ್ಕೆ ಹಾರುವ ಧಾನ್ಯವನ್ನು ತಂತಮ್ಮ ಒಂದೊಂದು ಪಾದದಿಂದ ಕೂಡುವರು. ಹೀಗೆ ಕೂಡದಿದ್ದರೆ ಅಕ್ಕಿ ಸರಿಯಾಗಿ ತೊಳ್ಳದು (ಸಂಶೋಧ. ೧೪೯). 'ತಳಿಸು$_1$' ಪರಾ. [ದೇ. ॥ ತುಳು. ತೊಳ್ಳು]

ತೊಳ್ಳುಗುಂಡು (ನಾ). ಕೆಳಗೆ ತಳ್ಳುವ ಗುಂಡು (?) : ಬಹು ಜನರು ಹತರಾಗುವಂತೆ ಮಾಡಿರುವ ತೊಳ್ಳುಗುಂಡುಗಳನ್ನೂ ತುಪಾಕಿಗುಂಡು ಗಳನ್ನೂ ಇರಿಸುವುದಕ್ಕೆ . . . ಉಗ್ರಾಣಗಳನ್ನು ಮಾಡಿಸಿದರು (ಜಾಮವಂ. ೮೯). [< ತಳ್ಳು + ಗುಂಡು]

ತೊಳ್ಳೆ 'ತೊರಳೆ' ನೋ.

ತೊಳ್ಳೆಮೀನು (ನಾ). ಒಂದು ಬಗೆಯ ಮೀನು: ಆ ಪೊಟ್ಟಣದಲ್ಲಿ ಕೆಲವು ಬೆಳ್ಳೇಡಿ, ಸೋಸಲು, ತೊಳ್ಳೆಮೀನುಗಳಿದ್ದು, ಒಂದು ತೊಳ್ಳೆಮೀನಿಗೆ ಇನ್ನೂ ಜೀವವಿದ್ದುದರಿಂದ ಚಿಮ್ಮಿ ಹಾರಿ ಒಲೆಯ ಬೂದಿಗೇ ಬಿದ್ದಿತು (ಮಲೆಮ. ೫೮೮). [ತೊಳ್ಳೆ ? + ಮೀನು$_2$ (<ಮೀನ್$_3$)]

ತೊಱಗಲೆ, ತೊಱಗೆಲೆ (ನಾ). ಒಂದು ಊರಿನ ಹೆಸರು ; P ಈಗಿನ ಬೆಳಗಾವಿಜಿಲ್ಲೆಯ ತೊರಗಲ್ಲು : ತದ್ದವಾಡಿಗೆ ತೆಂಕಲ್ ತೊಱಗಲೆಗೆ ಬಡಗಲಿರ್ದುದು ನೆಱೆಯ ಸುಖೋದ್ದೀಪನಮೆನಿಸಿ ಬೆಳುಗಲಿದೇಶಂ (ಅಜಿಪು. ೧೨-೪೪) ; ಕಿಸುಕಾಡೆಟ್ಟತ್ತುಮಂ ಬಾಗಡಗೆ ಯೆಟ್ಟತ್ತುಮಂ ತೊಱಗಲೆ ××× ಮಂ ಮಾಸೆಯವಾಡಿ ನೂಱ ನಾಲ್ವತ್ತುಮಂ . . . ರಾಜ್ಯಂಗೆಯ್ಯುತ್ತಂ (ಸೌಇಇ. XI-i, ೮೬-೮ ; 1050). **ತೊಱಗೆಲೆ** : ತೊಱಗೆಲೆ ಱಟ್ಟಹಳ್ಳಿ ನೆಗಟ್ದೂಜಿರಗೋಳ ಮೆನಿಪ್ಪಗುರ್ವುವೆತ್ತಱಿಕೆಯ ಬೇಡವಟ್ಟುಗಳ . . . ಕಿಡಿಸಲಂಕದ ಮುನ್ನಿನ ಚಕ್ರವರ್ತಿಗಳ್ ಪೆಱರಳವಲ್ತು (ಕಾವ್ಯಾವ. ೨೧೨). [?]

ತೊಱಗೆಲೆ 'ತೊಱಗಲೆ' ನೋ.

ತೊಱಡು (ನಾ). ಮರದಿಂದ ಹಣ್ಣನ್ನು ಕೀಳಲು ಉಪಯೋಗಿಸುವ ಕೊಕ್ಕೆ; ದೋಟಿ : (ಕಿ).

[ದೇ.॥ ತಮಿ. ತುಱಟು, ತುಱಟ್ಟಿ; ಮಲ. ತುಱಡು]

ತೊಱಪ, ತೊಱಹ (ನಾ). ಒಂದು ವಂಶದ ಹೆಸರು ವಂತ್ತು ಆ ವಂಶಕ್ಕೆ ಸೇರಿದವನು : ತೊಱಪರ ಬೂತಯ್ಯಂ ಪೂಲಿಯ ತುಱವಂ ಕೊಂಡಡೆ (ಎಇ. XVIII, ೨೦೦-೩; 1107). **ತೊಱಹ** : ತಂಬುಲಿಗ ಸಾಸಿರ್ವ್ವರರ್ತ್ಥಂ ತೊಱಹರು ಕೊಣ್ಡಡಾಯರ್ತ್ಥಂ ಸಿಂಗಗಾವುಂಣ್ಡನಿಕ್ಕಿಸಿ ತಂದ[ಡೆ] (ಸೌಇಇ. XI-1, ೧೪೮-೨೩; 1099); ಆ ಗ್ರಾಮದ ತುಱವಂ ತೊಱಹರ ಕಾಳಯ ಆ ಪುಯ್ಯಲಿಂಗೆಱಗಿ ಮೇಲಾಳಂ ನಿಱಿದು . . . ತುಱುವಂ ಮಗುರ್ಚ್ಚಿ (ಎಕ. VII, ಶಿವಮೊ. ೩೭-೭; 1140); ಕಾವಗೌಡಂ ನೆಗರ್ದ ತೊಱಹರ ಕುಳಕ್ಕೆ ತಿಳಕಂ (ಕಇ. I, ೨೪-೧೫; 1148); ತೊಱಹನಂ ಬೆಂಕೊಂಡು ತೂಳ್ದೆಯ್ದಿ ಮುಟ್ಟಿ (ಎಇ. XIX, ೨೩೦-೩೩; 1179). 'ತೊಳಪ$_{2}$' ಪರಾ.

ತೊರಹರ ಮಾರಿ = ಒಂದು ಬಿರುದು : ತೊರಹರ ಮಾರಿ ವೈರಿ ಸಂಹಾರಿ ದಂಡಿಂ ಮುಂನಿಱಿವಂ ಶೌರ್ಯ್ಯಮಂ ಮೆಱೆವಂ (ಎಕ. VIII, ಸಾಗರ. ೧೦೯-೫; 1042). [?]

ತೊಱಬು (ನಾ). ಅಣಕ ; ಹಾಸ್ಯ : "ತೊಱಬೆಂದಣಕಂ" (ಕರ್ಣಾನಿ. ೬೮).

[P ಇದು 'ಕೊಱಚು' ಎಂಬುದರ ಅಪಲಿಖಿತವಿರಬಹುದು]

ತೊಱರಗಣಿಗಿಲು (ನಾ). ಒಂದು ಬಗೆಯ ಸಸ್ಯ : "ಕಾಂತಃ – ತೊಱರ ಗಣಿಗಿಲು, ನಂದಿವೃಕ್ಷ . . . ಸೂಜಿಕಲ್ಲು". (ಓಷಧಿ. ೨೮). 'ತೊಱ^{3} ಗಣಿಗಿಲು' ಪರಾ. [? + ಗಣಿಗಿಲು (<ಕಣಗಿಲೆ$_{1}$)]

ತೊಱವಿ, ತೊರವಿ (ನಾ). ೧. ತ್ಯಜಿಸಂವಿಕೆ; ವರ್ಜಿಸುವುದು; ತ್ಯಾಗ: ಕ್ರೋಧದ ತೊಱವಿಯುಂ ಲೋಭದ ತೊಱವಿಯುಂ . . . ಎಂಬಿವಯ್ದುಂ ಪುಸಿಯರ ವ್ರತದ ಭಾವನೆಗಳು (ಶಾಸ್ತ್ರಸೀ. ೭೪-೭); ವಕಾರಕ್ಕೆ-ತೊಱವಿ, ಅಳವಿ, ಬಳವಿ (ಶಮದ. ಸ. ೨೨೧ ಪ್ರಯೋ). ೨. ಬಿಡುಗಡೆ; ವಿಮೋಚನೆ: ನೀವಲ್ಲಿಗೆ ಬಿಜಯಂಗೆಯ್ದು ತತ್ಪಣಿಗೆ ತೊಱವಿಯಂ ಕುಡುವುದೆಂಬುದುಂ (ಧರ್ಮಾಮ್ಯ. ೧೪-೯೩). **ತೊರವಿ**: ೧. ಅತಿಕಾಂಕ್ಷೆಗಳ ತೊರವಿಯಲಿಲ್ಲವು ಪಾಪಗಳೆಂದು ಕೊಟ್ಟನು (ಕದಂಪು. ೯); ತೊರವಿಯೆ ರಸ ಪರಿತ್ಯಾಗವೆಂಬುದು ತಾನರಿವುದು ಭವ್ಯರಿಂತಿದನು (ಪೂಜ್ಯಪ. ೧೨-೬೯). ೩. ತ್ಯಜಿಸಲು ಯೋಗ್ಯವಾದುದು : ಅಂತಹ ಧರ್ಮಗೊಡ್ಡಿನ ಹುಚ್ಚಾಟವು ಈ ಸನ್ದರ್ಭದವಸರಕ್ಕೆ ತೊರವಿಯದಹುದು (ಮಂತ್ರಶ. ೧೫೨-೨೪). [ತೊಱ$^{3}_{1}$ + – ವಿ/ತಮಿ. ತುಱವಿ]

ತೊಱಸು 'ತೊಱ^{3}ಯಿಸು' ನೋ.

ತೊಱಹ 'ತೊಱಪ' ನೋ.

ತೊಱಿಸು 'ತೊಱ^{3}ಯಿಸು' ನೋ.

ತೊಱು 'ತುಱು' ನೋ.

ತೊಱುಕೊಲ್ 'ತುಱುಗೋಳ್' ನೋ.

ತೊಱುಕೊಳ 'ತುಱುಗೋಳ್' ನೋ.

ತೊಱುಕ್ಕೊಳ್ 'ತುಱುಗೋಳ್' ನೋ.

ತೊಱುಗರೆ (ನಾ). ಒಂದು ಪ್ರದೇಶದ ಹೆಸರು : ಅಕ್ಕಾದೇವಿಯರ್ ಕ್ಕಿಸುಕಾಡೆಟ್ಟತ್ತುಮಂ ತೊಱುಗರೆಯಱುವತ್ತುಮಂ . . . ಆಳುತ್ತಮಿರೆ (ಎಇ. XV, ೭೮-೭; 1050). 'ತೊಱಗಲೆ' ಪರಾ. [?]

ತೊಱುಗೊಳ್$_{1}$ 'ತುಱುಗೊಳ್$_{1}$' ನೋ.

ತೊಱುಗೊಳ್$_{2}$ 'ತುಱುಗೋಳ್' ನೋ.

ತೊಱುಗೊಳ 'ತುಱುಗೋಳ್' ನೋ.

ತೊಱುಗೊಳ್ಳ 'ತುಱುಗೋಳ್' ನೋ.

ತೊಱುಗೋಳ್ 'ತುಱುಗೋಳ್' ನೋ.

ತೊಱುಮಣ್ಣು (ನಾ). (?) : ಬೊಂಬಸಮುದ್ರದ ಹಿಂದೆ ಗದ್ದೆ ಸ ೨ ಕೊ ×××ಗಗರಿಯ ಕೆಟ್ಟದೊಳಗೆ ಗದ್ದೆ ಸ ೨ ಕೊ ೧೦ × ಮುಂದಣ ಕೆಱೆಯ ಹಿಂದೆ ಗದ್ದೆ ಕೊ ೧೦ . . . ಇವೆಲ್ಲ ತೊಱುಮಂಣು ಚೆತುಸೀಮೆಗೆ ನಟ್ಟ ಕಲ್ಲೆ ಮೇರೆ ಸಾಲು (ಎಕ. XVI, ಚಿಕ್ಕನಾ. ೫೮-೨೮; 1260).

[ತೊಱು ? + ಮಣ್ಣು (<ಮಣ್)]

ತೊಱುವಳ್ಳ 'ತುರುವಾಳ' ನೋ.

ತೊಱುವಾಳ್ಳ 'ತುಱುವಾಳ' ನೋ.

ತೊಱ$^{3}_{1}$, ತೊರೆ$_{1}$ (ಕ್ರಿ). ೧. ಬಿಟ್ಟು ಬಿಡು ; ಪರಿತ್ಯಾಗ ಮಾಡು ; ವರ್ಜಿಸು ; ತ್ಯಜಿಸು : "ತೊಱ^{3} –ವಿಸರ್ಜನೇ, ನದ್ಯಾಂ ಚ" (ಶಮಧಾ) ; ಪರರ ದೋಷಂಗಳುಮಂ . . . ತೊಱ^{3}ವುದು ತೊಱ^{3}ವಂತಸಾಧುಜನ ಸಂಗತಿಯಂ (ಕವಿರಾ. ೧-೬೭) ; ಉತ್ತಮಕುಲದೊಳಪ್ಪಭಿಮಾನಮಂ ತೊಱ^{3}ದು ಬಾಟಿಸ್ಕಾರಣಮಾಗಿ ಕುಲಜರಲ್ಲದವರ್ಗಾಳಾಗಿ ಬಾಟ್ವರ್ (ವಡ್ಡಾರಾ. ೮೬-೩೦) ; ಎಲ್ಲಮಂ ತೊಱ^{3}ದು . . . ದಿಗಂಬರವಿಳಾಸಮಂ ಬಯಕೆ ತೀರ್ವಿನಂ ತಾಳ್ದಿದೆಂ (ಅದಿಪು. ೩-೫೭); ಮಹಾಶ್ರೀಯಂ ಕೊಳದ ಪುಲ್ಲ ಕಡ್ಡಿಯಂ ತೊಱ^{3}ವಂತೆ ತೊಱ^{3}ದು (ಧರ್ಮಾಮ್ಯ. ೯-೩೨); ಪರನಾರಿಯರ ಸಂಗವ ತೊಱ^{3}ಯಿಂ ಭೋ (ಬಸವ. ೬೪೨); ಪರಾಂಗನೆಗೆ ಕೂರ್ತು ಒಸೆದು ತಾಯಂ ತೊಱ^{3}ವ ಬೆಸನಿ ಜೋ (ಸಿದ್ಧರಾ. ೦-೫೯) ; ಭೀತಿಯಂ ತೊಱ^{3}ದು ಕಾಂತೆಯ ಕೂಡೆ ರಮಿಸಿದಂ (ಜೈಮಿಭಾ. ೧೦-೨೦). ೨. ಪ್ರಾಪಂಚಿಕಸುಖವನ್ನು ತ್ಯಾಗ ಮಾಡು ; ವಿರಕ್ತಿಹೊಂದು : ಸಸಿಮತಿಶ್ರೀಗನ್ತಿಯರ್ . . . ಕಟ್ವಪ್ಪಿನುಳ್ ತೊಱದಾರಾಧನೆ ನೋನ್ತು ತೀರ್ತ್ಥಗಿರಿ ಮೇಲ್ಸ್ವರ್ಗ್ಗಾಲಯಕ್ಕೇಱಿದಾರ್ (ಎಕ. II, ೭೬-೪ ; ಸು. 700) ; ಪರ್ವತದೊಳಿರ್ದ ಶಾರ್ದೂಲಂ ಜಾತಿಸ್ಮರನಾಗಿ ತೊಱ^{3}ದಿರ್ದುದೆಂಬುದನಾ ಮುನಿಪನವಧಿಯಿನಱಿದು (ಜಾವುಂಪು. ೨೫) ; ನರರರೆಬರ್ ವೈರಾಗ್ಯಂ ದೊರಕೊಂಡಡೆ ತೊಱ^{3}ವೆವೆಂಬರ್ (ಅಜಿಪು. ೨-೮೫). **ತೊರೆ$_{1}$** : ೧. ಮರೆಯರೊ ನೀ ಮಾಡಿದ ಅನಿಮಿತ್ತೋಪಕಾರ ತೊರೆಯರೊ ನಿನ್ನಂಘ್ರಿಸೇವೆ ಪ್ರತಿವಾಸರ (ಜಗದಾ. ೩೯-೧) ; ತರಿದು ಬಿಡು, ತೊರೆದು ಬಿಡು, ತೊಡೆದು ಬಿಡು ನೆನಹಿಂದ ಕರೆಕರೆಯ ಬೇರುಗಳ ಮನದ ಗಂಟುಗಳ (ಮಂಕುಕ. ೬೪೮) ; ನಂಬಿರುವ ಸುಚರಿತರ ತೊರೆಯೆಯೆಂಬಾ ಕೀರ್ತಿ ಎಂದಿನಂತೆಯೆ ನೆರೆದು ಪೂಜ್ಯವಾಗುವುದು (ವಿಸೀಗೀ. ೨೩-೧೧).

[ದೇ.॥ ತಮಿ. ತುಱ ; ತುಳು. ತೊರೆವು ; ತೆಲು. ತೊಱಂಗು]

ತೊಱ$^{3}_{2}$, ತೊರೆ$_{3}$ (ನಾ). ೧. ನದಿ ; ಹೊಳೆ : "ಸಿಂಧುಃ, ಸ್ರವಂತೀ . . . ಸರಿತ್, ರೋಧೋವಕ್ತ್ರಾ – ಈ ೨೧ ತೊಱ^{3}" (ಹಲಾಯು. ೧೧೦-೪೩) ; ವಾರಿ ಮರಳ್ಪುಣಾಸ ಪೆರಿ ×× ತೊಱ^{3}ಯು ಆಲರ್ ಮೇರೆ (ಎಕ. II, ೩೫-೬ ; ಸು. 800) ; ತೊಱ^{3}ಯ ಪಳ್ಳದ ನೀರ್ಗಳಂ ಕುಡಿದು (ವಡ್ಡಾರಾ. ೯೦-೨೨); ಶಿರದೊಳ್ [ತೊ]ಱ^{3} ತೊಱ^{3}ಯ ಕೆಲದೊಳೆಸೆದಿರೆ ಪೆಱ^{3}(ಪಂಪಭಾ. ೮-೨೪);ಹಾಲ ತೊಱ^{3}ಗೆ ಬೆಲ್ಲದ ಕೆಸಱು ಸಕ್ಕರೆಯ ಮಳಲು (ಬಸವ. ೨೯೦) ; ತೊಱ^{3}ಯ ಹೊನಲಲಿ ಹೋಹ ಕರಡಿಯನಱಿಯದದು ಕಂಬಳಿಯೆನುತ್ತಾಸಱದೆಯಂಬಿಗನೆಯ್ದಿ ಹಿಡಿಯಲು (ಬಸಪು. ೨೦-೨೨) ; ಮರೀಚಿಯ ತೊಱ^{3}ಗೆ ಹಱಗೋಲಿಡುವರುಂಟೇ (ಕುಪ್ಯಾಡ್ರೋ. ೪-೩೮). ೨. ಪ್ರವಾಹ ; ನೆರೆ ; ಹರಿವು : ಎಱ^{3}ವ ತೊಱ^{3}ಯನಿದಿರಿಸುವುದೆಲ್ಲಿಯ ಗಾಂಪು (ಅದಿಪು. ೧೨-೧೦೮) ; ರಸದ ತೊಱ^{3} ಪರಿದುದು (ಸುಕುಮಾ. ೧೦-೨೩) ; ಹೆಣ ಸಾಲಿಟ್ಟ ತೊಱ^{3} [ಪಾಕಾ. ಟ್ಟುದುಱ^{3}] ಯೆನಲರುಣಜಲ ನಗರೋಪಕಂಠದಲಿ (ಕುಪ್ಯಾಅ. ೧೨-೨೫) ; ಉದಕಪ್ರವಾಹಮಂ ತೊಱ^{3}ಯೆಂಬರು . . . ಉರು ಶಿಲೆಯನಱ^{3}ಯೆಂಬರಲ್ಲದಿವ ನುಡಿಯರವನಾಳ್ವಿ

ಳೆಯೊಳು (ಚೈಮಿಭಾ. ೨-೯) ; ತೊಱೆಗೂಡಿದ ನದಿ ನದಿಯ ಕಾಲುವೆಗಳು . . . ರಂಜಿಸುತಿಹ ಪುರವಿಹುವಾ ದೇಶದೊಳಗೆ (ಕಂನವಿ. ೨-೧೧). **ತೊರೆ$_3$** : ೧. "ಹೊಳೆಗೆ ತೊರೆಯೆಂದಕ್ಕು" (ಕಶರ. ೪೯) ; ಏಱಿ ತೊರೆ ಕಳವೃತ್ತಿ ಕಟಿವೊನ್ಪಞ್ಚಮಹಾಪಾತಕನಕ್ಕುಮ್ (ಎಕ. XVI, ತುಮಕೂ. ೧೦೨-೩ ; 730) ; ನಿತ್ಯವು ತೆಗೆಯುತಲಿರಬೇಕು ಹುಟ್ಟನು ತಾನೆಯೆ ತೊರೆಯೊಳಂಬಿಗನು (ಇಂಚಾಪ. ೨೧೦-೩೯) ; ಕುದಿವುದು ಮೋಡವು ತೊಟ್ಟಿಡದಿದೆ ಮಳೆ ಬತ್ತಿತು ಹಳ್ಳವು ಅತ್ತಿತು ತೊರೆ ಹೊಳೆ (ಉಯ್ಯಾಲೆ. ೬೪-೪) ; ಬಾಳ ಗುಬ್ಬಿಗೆ ಗುಟುಕಿವಾಗಲಿ ಬಾಳ ತೊರೆಯಲಿ ಹರಿಯಲಿ (ಕಲ್ಲೋಲ. ೧-೦೨) .

ತೊಱೆತೊಱೆ, ತೊರೆತೊರೆ (ದ್ವಿರುಕ್ತಿ) : ನಡುಗಿತಿಳೆ . . . ಹೆಮ್ಮರ ನುಡಿದು ಬಿದ್ದವು ಸಲಿಲವುಕ್ಕಿತು ಕೂಡೆ ತೊಱೆತೊಱೆ [ಪಾಠಾಂ. ಕೆಱೆ ತೊಱೆ]ಯ(ಕುಪ್ಯಾಸ.೧೫-೪೩); ತೊರೆತೊರೆಯಾಗಿ ಹೊಳೆಬಸಿಯಂತಿಹುದು (ಇಂಗೀತ. ೬೧-೧೧). **ತೊರೆ ಬಸಿ** = ಪ್ರವಾಹದಂತೆ ಉಕ್ಕಿ ಹರಿ :ಕೆನ್ನೀರು ತೊರೆಬಸಿವೆರಡು ತೋಳ್ಗಳಂ ಮುನ್‌ಚಾಚಿ (ಶ್ರೀರಾಮಾ. ೬೯೬-೪೯೯). **ತೊಱೆಗಳಾಣ್ಮ** = ನದಿಗಳ ಒಡೆಯ,-ಅಧಿಪತಿ ; ಸಮುದ್ರ : "ತೊಱೆಗಳಾಣ್ಮಂ ಮುನ್ನೀರ್, ನೀರೊಟ್ಟಲ್ (ಕಡಲ್) - ಈ ೪ ಸಮುದ್ರಂ" (ಕಶಸಾ. ೮-೧೪೧) ; "ಮುನ್ನೀರ್ ನೀರೊಟ್ಟಲುಮೆಂದೆನ್ನುತ್ತುಂ ತೊಱಗಳಾಣ್ಮ ಕಡಲೆನೆಯುಂ ತಾಂ . . . ಸಾಗರಮೆನಿಕುಂ" (ಕವಿಕಂ. ೮೯). **ತೊಱೆದಾಳ್ದ** = ಗಂಗೆಯನ್ನು ಧರಿಸಿದವನು ; ಶಿವ; ತೊಱೆದಾಳ್ದನ ಕಾರ್ಮುಕವ ಸಿಂಜಿನಿಯಿಂದೆ ನೆಱೆ ಬಾಗಿಸಿದರೆಂಬಂತೆ (ಮೋಹತ. ೨-೩೬). [ದೇ.ಕ ತಮಿ. ತುಱೈ; ಮಲ. ತುಱ; ತುಳು. ತುದೆ]

ತೊಱೆಕಡವ (ನಾ). ನದಿಯ ತೀರದಲ್ಲಿ ಬೆಳೆಯುವ ಕಡವ ವೃಕ್ಷ "ನದೀಕದಂಬಃ – ತೊಱೆಕಡವ" (ಓಷಧಿ. ೮೪).

[ತೊಱೆ$_2$ + ಕಡವ$_1$ (<ಕಡಂಬ)]

ತೊಱೆಕಾರಾಟ್ಟಿ 'ತೊಱೆಕ್ಕಾರಾಟ್ಟಿ' ನೋ.

ತೊಱೆಕ್ಕಾರಾಟ್ಟಿ, ತೊಱೆಕಾರಾಟ್ಟಿ (ನಾ). ಒಂದು ಸ್ಥಳದ ಹೆಸರು : ತೊಱೆಕ್ಕಾರಾಟ್ಟಿಉ ಪೆಕ್ಕ ವಿಯಮುವೊಲ್ಪೊಗೆಯು ಕೂಡಲೂರು (ಎಕ. IV, ಗುಂಡ್ಲುಪೇ. ೮೮-೪ ; ಸು. 750). **ತೊಱೆಕಾರಾಟ್ಟಿ** : ಶ್ರೀಮತು ತೊಱೆಕಾರಾಟ್ಟಿಯ ಆಚಯ್ಯನ ಮಗಂ ಕೇಸವಭಟ್ಟಂ ದೇಗುಲವಂ ಮಾಡಿಸಿ . . . ಕೊಟ್ಟ ಭೂಮಿ (ಎಕ. IV, ಗುಂಡ್ಲುಪೇ. ೯೩-೨೦; 1049).

[P ಇದು 'ತೊಱೆಕಾರರ ಹಟ್ಟಿ ಇರಬಹುದೆ' ?]

ತೊಱೆಗಟ್ಟು (ಕ್ರಿ). ಪ್ರವಾಹವಾಗು ; ಪ್ರವಹಿಸು : ಕಾಳಮೇಘವೆಂಬ ಭೂಮಿಯಲ್ಲಿ ಕಾಳರಾತ್ರಿಯೆಂಬ ಏರಿಗಟ್ಟಿ ಮಂಜಿನ ನೀರು ತೊಱೆಗಟ್ಟಿ ಹಾಯ್ದು ತುಂಬಿತ್ತು (ವಚಸಂ. ೫೪೭-೧). [ತೊಱೆ$_2$ + ಕಟ್ಟು$_1$]

ತೊಱೆಗಣಗಿಲೆ, ತೊಱೆಗಣಗಿಲು, ತೊಱೆಗಣಗಿಲೆ (ನಾ). (ತೇವದ ನೆಲದಲ್ಲಿ ಬೆಳೆಯುವ) ಒಂದು ಬಗೆಯ ಕಣಗಿಲೆ. "ನಿಚುಲ, ಅಂಬುಜ, ಹಿಜ್ಜಲ = ತೊಱೆಗಣಗಿಲೆ" (ನಾಚಿರಾ. ೬) ; "ತೊಱೆಗಣ [ಪಾಠಾಂ. ಣಿ]ಗಿಲಾ ಲೋಮಕಂ ಪಿಚುಳಮದು" (ಮಂಗರಾ. ೩೪-೧೧). **ತೊಱೆಗಣಗಿಲು** : "ರಕ್ತಕಾರ್ಮುಕಃ– ತೊಱೆಗಣಗಿಲು" (ಓಷಧಿ. ೧೩೫); ತೊಱೆಗಣಗಿಲ ಕತ್ತರಿಯೆಸೆವ ಮೂಲಮಂ ಕತಕಕುಜಾವಳಿಯ ಪರಿಪಕ್ವ ಫಲರಸ ಜಳದಿಂದರೆದು (ಖಮದ. ೭-೨೦). **ತೊಱೆಗಣಗಿಲೆ** : "ನಿಚುಲಃ, ಹಿಜ್ಜಲಃ, ಅಂಬುಜಃ ಈ ೩ ತೊಱೆಗಣಗಿಲೆ ಹೆಸರು" (ನಾಚಿರಾ. ೧೦೮).

[ತೊಱೆ$_2$ + ಕಣಗಿಲೆ$_1$]

ತೊಱೆಗಣಜಿಲು, ತೊಱೆಗಣಜಿಲು, ತೊಱೆಗಣಜಿಲೆ (ನಾ). (ತೇವದ ನೆಲದಲ್ಲಿ ಬೆಳೆಯುವ) ಒಂದು ಬಗೆಯ ಸಸ್ಯ : "ದೀರ್ಘಪತ್ರಃ– ಕಮ್ಮತ್ತಿ, ತೊಱೆಗಣಜಿಲು, ನೀರಿಪ್ಪೆ, ಹಬ್ಬೆಯ ಭೇದ" (ಓಷಧಿ. ೭೭). **ತೊಱೆಗಣಜಿಲು**: ನೆಱೆ ಕು(ದಿ)ಸಿ ಕಟ್ಟುಗಿಂ ತೊಱೆಗಣಜಿ[ಪಾಠಾಂ. ಗಿ]ಲ ದಳಮನಾದೊಡಂ ಬಾತ ವಿಷಕ್ಕುಱಿಸಲ್ಕುಪನಾಹದೆ ತೊಱೆಯಿಟಿಗುಂ (ಖಮದ. ೧೬-೭೨). **ತೊಱೆಗಣಜಿಲೆ**: ನಱುವಲ್ ಮಗ್ಗಾರೆಯ ಕಾಯ್ ತೊಱೆಗಣ(ಜಿ)ಗಿಲೆ ದೇವದಾಳಿ . . . ಇವನರೆಯಲ್ ಜಲದಿಂದೆ ಫಣಿಯ ವಿಷನಿರ್ಹರಣಂ (ಖಮದ. ೫-೧೦೪).

[ತೊಱೆ$_2$ + ಗಣಜಿಲು (< ಗಣಜಿಲೆ$_1$)

ತೊಱೆಗಣಗಿಲು 'ತೊಱೆಗಣಗಿಲೆ' ನೋ.

ತೊಱೆಗಣಗಿಲೆ 'ತೊಱೆಗಣಗಿಲೆ' ನೋ.

ತೊಱೆಗಣಜಿಲು 'ತೊಱೆಗಣಜಿಲು' ನೋ.

ತೊಱೆಗಣಜಿಲೆ 'ತೊಱೆಗಣಜಿಲು' ನೋ.

ತೊಱೆಗರೆ$_1$, ತೊರೆಕರೆ (ನಾ). ಹೊಳೆಯ ತಡಿ ; ನದೀತೀರ : ಕಡಲ ಕಡೆಯಲ್ಲಿ ಸಾರ್ಚಿರ್ವುದೋ ಅತರ್ ಮೋಡನದ ತೊಱೆಗರೆಯ ತೆಮಿಸಿರದೆ ಎಂದಾನುಮೊರ್ಮೆ ಮನೆ ಮಾಟ್ಟರನ್ (ಬದ್ಧಪ್ರ. ೩೮-೮೩೨). **ತೊರೆಕರೆ** : ಗೋವತ್ಸಲೀಲೆ ತೊರೆಕರೆಯ ಮೇಲೆ ವನವಾಟಿ ಸೆಜ್ಜೆಸಾಲೆ (ಸೂರ್ಯಪಾ. ೩೫-೧). [ತೊಱೆ$_2$ + ಕರೆ$_4$]

ತೊಱೆಗರೆ$_2$ (ನಾ). ಒಂದು ಸ್ಥಳದ ಹೆಸರು : ಲೋಕಾಪುರಂ ಪನ್ನೆರಡು ತೊಱೆಗರೆಯಱುವತ್ತು ಇನ್ನು ಮೂವತ್ತೊರ್ಚ್ಚಾಸಿರದ ನೂಱೆರಡು ಬಾಡಮಂ ಲೋಕಟೆಯರಾಳೆ (ಎಕ. VII, (S), ಶಿಕಾರಿ. ೩೬೮-೭ ; 902). 'ತೊಱಗಲೆ ಪರಾ'. [?]

ತೊಱೆದಡಿ (ನಾ). = **ತೊಱೆಗರೆ$_1$** : ಬಿಲ್ಲಪಳ್ಳಿಗಳೆಲ್ಲಂ ತೊಱೆದುವು ತೊಱೆದಡಿಗಳನಾರ್ ತೊಱೆಯದರನುಕೂಲವೃತ್ತಿಗೆಟ್ಟೆಸಗುವರು (ಜಗವಿ. ೪-೧೦) ; ಅಂದು ನಮ್ಮನು ರಜತವಾಳುಕಿಯೆಂದೆನಿಪ ತೊಱೆದಡಿಯೊಳೀತನು ಬಂದು ಬಂಧುವೆಯಾಗಿ ರಕ್ಷಿಸಿದನು (ಸಾಳ್ಯಭಾ. ೧೭-೯೦).

[ತೊಱೆ$_2$ + ತಡಿ$_2$]

ತೊಱೆದಲೆಯ (ನಾ). ತಲೆಯಲ್ಲಿ ನದಿಯನ್ನು ಧರಿಸಿದವನು ; ಗಂಗಾಧರ ; ಶಿವ : ತೊಱೆದಲೆಯನ ಮುಂದಲೆಗೆ ಸೀಸಕವನಳವಡಿಸಿ, ಫಣಿ ಕುಂಡಲನೆ ಕರ್ಣಕ್ಕೆ ಮಕರಕುಂಡಲಮನಿಟ್ಟು (ರಾಮಾಶ್ವ. ೧೩೦-೯೦).

[ತೊಱೆ$_2$ + ತಲೆ$_1$ + – ಅ$_7$]

ತೊಱೆದವನ, ತೊರೆದವನ (ನಾ). ನೀರಿರುವ ಜಾಗದಲ್ಲಿ ಬೆಳೆಯುವ ಒಂದು ಬಗೆಯ ದವನ : "ತಪೋಧನಃ – ಬೋಟತಱ, ತೊಱೆದವನ" (ಓಷಧಿ. ೬೬) ; ಗಿಣಿಮೂಗನ ಬೇರ್ ತೊಱೆದವನ ತೊಟ್ಟಿ ಮುಸ್ತೆಯ ನುಱೆ ಚೂರ್ಣಿಪುದು (ಖಮದ. ೫-೯೪). **ತೊರೆದವನ** : "ವನಾದೀ – ದವನ, ತೊರೆದವನ" (ಓಷಧಿ. ೧೪೯). [ತೊಱೆ$_2$ + ದವನ]

ತೊಱೆನಾಡು (ನಾ). ಒಂದು ಪ್ರದೇಶದ ಹೆಸರು : ಮಿದಿಯರಸರ್ ತೊಱೆನಾಡಯ್‌ನೂಱುಂ . . . ಆಳೆ (ಎಕ. IV, ಚೆಗ್ಗಡ. ೯೩-೩ ; ಸು. 740) ; ಎಱೆಗಙ್ಗ ನಾಮಧೇಯಃ ತೊಱೆನಾಡು ಅಯಿನೂಱು[ಂ] . . . ಆಳೆ (ಇಅ. XIV, ೨೩೨-೪೯ ; ಸು. ೨ನೆಯ ಶತ).

[ತೊಱೆ ? + ನಾಡು]

ತೊಱೆನಾಯ್ (ನಾ). ನೀರುನಾಯಿ: ತೊಱೆನಾಯ್ ಸತ್ತೆಡೆಯ ಮಣ್ ಶುಕಾಸ್ಯಂ ಮದ್ಯಂ ಮುಱಿದೊಂಡೆಯುಬಿವಂ ಪೆಸರಱಿಯದ ಬಾಹುಗಳೊಳೊರಸೆ ಪೊಱಸಿ(ಸು)ಗೆ ಪೋಕುಂ (ಲೋಕೋಪ. ೯-೨೦೨).

[ತೊಱೆ$_2$ + ನಾಯ್]

ತೊಱೆಮತ್ತಿ (ನಾ). ೧. ನದಿಯ ತೀರದಲ್ಲಿ ಬೆಳೆಯುವ ಒಂದು ಬಗೆಯ ಮತ್ತಿಗಿಡ : "ನದೀಸರ್ಜಃ, ವೀರತರುಃ ಈ ೨ ತೊಱೆಮತ್ತಿ" (ನಾಚಿರಾ. ೧೦೭) ; "ತೊಱೆಮತ್ತಿ ನೀತಿ ಕಕುಭಾಖ್ಯಾನಂ" (ನಾನಾರ. ೧೨೯) ; "ನದೀಸರ್ಜಃ – ಮತ್ತಿ, ತೊಱೆಮತ್ತಿ" (ಓಷಧಿ. ೮೩).

೨. ಒಂದು ಬಗೆಯ ಸಸ್ಯ : "ಮುರುಕಿಲಾ ತೊಱೆಮತ್ತಿ ಸಿಂಧುಕಿಯೆನಿಕ್ಕು" (ಮಂಗರಾ. ೩೫-೧೪). [ತೊಱೆ$_2$ + ಮತ್ತಿ$_2$]

ತೊಱೆಮಲ್ಲಿಗೆ (ನಾ). ನದಿಯ ತೀರದಲ್ಲಿ ಬೆಳೆಯುವ ಒಂದು ಬಗೆಯ ಮಲ್ಲಿಗೆ: ತೊಱೆಮಲ್ಲಿಗೆಯಂ ಪ್ರವಿಲೇಪನಮಂ ಮಾಡುತ್ತವಿರಲ್ಕಚ್ಚರಿಯಿದೆಂಬಿನಂ ಕ್ರಿಮಿ ಕಿಡುಗುಂ (ಲೋಕೋಪ. ೯-೧೧೫); ತೊಱೆಮಲ್ಲಿಗೆ ಪುನ್ನಾಗಂ... ತೊಟ್ಟಿ ಮುಸ್ತೆಯನುಱೆ ಚೂರ್ಣಿಪುದು (ಖಮದ. ೫-೯೪).
[ತೊಱೆ$_2$ + ಮಲ್ಲಿಗೆ]

ತೊಱೆಮಾವು, ತೊರೆಮಾವು (ನಾ). ನದಿಯ ತೀರದಲ್ಲಿ ಬೆಳೆಯುವ ಒಂದು ಬಗೆಯ ಮಾವಿನ ಮರ: ತೊಱೆಯ ಮಾವು = ತೊಱೆಮಾವು (ಶಮದ. ೧೬೨ ಪ್ರಯೋ); ಹಲಸು ಕೊಡಸಿಗ ಮಾವು ಕೊ[ಪಾಠಾಂ. ತೋ]ಱೆಮಾವುಲಿಯ ಕಣಗಿಲು .... ಹಾದರಿಯಮರ ಮೊದಲಾದುವುರ್ವಿಹವು (ಸಾಳ್ವಭಾ. ೫-೩). **ತೊರೆಮಾವು** : "ಆಮ್ರಪತಾಕಾ – ತೊರೆಮಾವು" (ಓಷಧಿ. ೧೨). [ತೊಱೆ$_2$ + ಮಾವು]

ತೊಱೆಯ, ತೊರೆಯ (ನಾ). ೧. ಮೀನಂ ಹಿಡಿಯುವವನಂ; ಮೀನಂ ಗಾರ; ಬೆಸ್ತ : ಅರ್ಥವುಂಟೆಂದಹಂಕರಿಸಿ ಮಾಡುವನ ಭಕ್ತಿ ತೊತ್ತಿನ ಕೂಟ ತೊಱೆಯನ ಮೇಳದಂತೆ [ಪಾಠಾಂ. ತೊತ್ತಿನ ಕೂಟದ ತೂರ್ಯ ಮೇಳದಂತೆ](ದೇದಾವ೩೦-೫೩). ಕಾಡತುಱುಕಾಱನೋ ಮೀನ್‌ಬಿಡಿವ ತೊಱೆಯನೊ(ಅಶ್ವತ್ಥಾ. ೩೬-೩೮೮). **ತೊರೆಯ**:೧. "ಬಿಸ್ತ:=ತೊರೆಯಂ"(ಕಾಶಕ್ಯ. ೨೬೦); ಇಲ್ಲಿಯ ಬೆಸಮಕ್ಕಳಾರೆನ್ದೊಡೆ ಕಾಱಗೊಡೆಯನುಂ . . . ತೊರೆಯರಾಳ ಪಡಿಯನುಂ (ಎಕ. III, ನಂಜನ. ೧೩೯-೯; 915 ?); ಸ್ವಸ್ತಿ ಶ್ರೀಮತ್ ಪಱಮೆಯರ ಕುಲದ ತೊರೆಯರ ಮಾರಣ್ಣಗಂ ಅನ್ನವ್ವೆಯಕ್ಕಂಗಂ ಪುಟ್ಟಿದ ವರ ತಾತಣ್ಣ (ಎಕ. IV, ಗುಂಡ್ಲುಪೇ. ೮೪-೨; 1000 ?); ೨. ದೋಣಿ ನಡೆಸುವವನು; ಅಂಬಿಗ : ಪಡುವದಿಬ್ಬದ ಗೌಡನೊಬ್ಬನು ಬಿಡದೆ ತೊರೆಯನ ಕೂಗಿಕೊಂಡನು (ಇಂಗೀತ. ೬೬-೨); ತೊರೆಯರೆರೆಯಾ ಏಕೆ ನಿನ್ನಹೊತ್ತಿಗಲ್ಲದೆ ಬಾರೆ ಮುನ್ನ? (ಗಿಳಿವಿಂ. ೫೫-೩೩). [ತೊಱೆ$_2$ + – ಅ$_7$./ತಮಿ. ತುಱೈಯ]

ತೊಱೆಯಣುಗ (ನಾ). ನದಿಯ ಮಗ; ಗಾಂಗೇಯ; ಭೀಷ್ಮ : ತೊಱೆಯಣುಗನು ಪರಿತಂದು ಅಱಗುಲಿ ಕೌರವನಾಡುವ ಜೂದಿನ ತೆಱನನು ಧೃತರಾಷ್ಟ್ರಗುಸುರೆ (ನೇಮಿಸಂ. ೨೪-೩೬).
[ತೊಱೆ$_2$ + ಅಣುಗ (<ಅಣುಂಗ)]

ತೊಱೆಯಿಂಗುಳ, ತೊರೆಇಂಗುಳ (ನಾ). ನದಿಯ ತೀರದಲ್ಲಿ ಬೆಳೆಯುವ ಒಂದು ಬಗೆಯ ಇಂಗುಳದ ಗಿಡ : "ತೊಱೆಯಿಂಗುಳಂ ದುರಾಲಂಬ ಮೆನಿಸಿಕ್ಕು" (ಮಂಗರಾ. ೩೬-೧೬). **ತೊರೆಇಂಗುಳ** : ನೆಲಗುಳ್ಳ ತೊರೆಇಂಗ[ಗು]ಳ . . . . ಕಷಾಯ ಕಾಯಿಸಿ, ಹಿಪ್ಪಲಿ ಪ್ರತಿಪಾಕವಿಕ್ಕಿ ಸೇವಿಸೆ ಶ್ಲೇಷ್ಮಜ್ವರ ನಾಶವಾಗುವುದು (ಸಕವೈ. ೮೯). [ತೊಱೆ$_2$ + ಇಂಗುಳ]

ತೊಱೆಯಿಸು, ತೊರಸು, ತೊಱಸು, ತೊಱಿಸು (ಕ್ರಿ). ೧. ತ್ಯಜಿಸುವಂತೆ ಮಾಡು : ತವರೂರ ಮಱೆಯಿಸಿ ನಿದ್ರೆಯ ತೊಱೆಯಿಸಿ ಸವಿಗಳ ನಱೆಯಿಸಿ . . . ಸುಖದೊಳೋಲಾಡಿಸುವವಗಡ ಯಾತಱಿಂದಾಯ್ತು (ಭರತ. ೬-೩೯). ೨. ವೈರಾಗ್ಯವನ್ನು ಹೊಂದುವಂತೆ ಮಾಡು; ವೈರಾಗ್ಯದೀಕ್ಷೆಯನ್ನು ಕೊಡು : ಪರಮಾಯುಷ್ಯಾಂತಂಬರಂ ನಿರಾಕುಳ ಮಾಗಿರ್ಪಾ ಯಿರವಿನ ಜೈನಾಭಿಪ್ರಾಯಂ ಪ್ರಾಯೋಪಗಮನದಿಂ ತೊಱೆಯಿಸಿದಂ (ಆದಿಪು. ೨-೫೩). **ತೊರಸು** : ೧. ಶರೀರದಭಿಲಾಷೆಯಂ ಕೆಡಿಸುವರೆ ನೆರೆ ಸ್ವಬಂಧುವನೆಲ್ಲ ಮರಸುವಡೆ ತೊರಸುವಡೆ ತಿರುತಿರುಗಿ (ತಿರುಶ. ೧-೬೮). **ತೊಱಸು** : ೧. ತೊತ್ತುವೇಟಕೆ ಹಡದ ತಾಯನು ತೊಱಸಿದರೋ[ಪಾಠಾಂ. ತೋಱಿದರು] (ತೊರರಾ. ೪-೫-೧೧). **ತೊಱಿಸು**: ೧. ಅವನ ಮಾತಾಪಿತರ ತೊಱಿಸಿ[ಪಾಠಾಂ. ತೊಲಗಿಸಿ] ಪ್ರೀತಿಪಡಿಸಿ ಹಣವ ಸೆಳೆದು ರೀತಿಗೆಡಿಸಿ (ಪುರಂದ. ೨-೧೬-೨). ೩. ಕಂಗ್ಗಿಸು; ಕಡಿಮೆಮಾಡು : ಕರ್ಪುರಕ್ಕುಳ್ಳ ಗುಣಂಗಳಂ ತೊಱಿಸಿ ಮಲ್ಲಿಗೆಯೊಳ್ ಸಮನಾಗಿ ತೋರ್ಪ ನೀರುಳ್ಳಿಯ ಗಡ್ಡೆಯಂ . . . ಮೆಲ್ಲದ ಮಾನವನೇನ ಬಲ್ಲವಂ (ಸೂಕ್ತಿಸು. ೧೦-೯೩). [ತೊಱೆ$_1$ + – ಇಸು$_3$]

ತೊಱೆಯೆಱೆಯ (ನಾ). ನದಿಯ ಒಡೆಯ,– ಪ್ರಭು; ಸಮುದ್ರ : "ಪಾರಾವಾರ ಶಬ್ದಂ ತೊಱೆಯೆಱೆಯನೆನಲ್" (ಕರ್ಣಾನಿ. ೪೦); ಎಱಗಿದ ನಿಱಿಮುಗಿಲೊಳ್ನೆಱೆ ಮಿಱುಗುವ ಮಿಂಚುಗಳನುಡಿದು ಪಿಡಿದನೊ ಕಡುಪಿಂ ತೊಱೆಯೆಱೆಯಂ ತೆರೆಗೈಗಳಿನುಱದೆನೆ ಕೆಮ್ಮಿನ್ಗಳೇಂ ಮನಂಗೊಳಿಸಿದವೋ (ರಾಜಶೇ. ೧-೯೯). [ತೊಱೆ$_2$ + ಎಱೆಯ]

ತೊಱೆವನಿ (ನಾ). ಪ್ರವಾಹವಾಗಿ ಹರಿಯುವ ಹನಿ: ಒಱೆವನಿಗಳಿದಿರ್ವನಿ ಮಸ್ತಕವನಿ ತೊಱೆವನಿಗಳನಾಂತು ಬಿಡದೆ ನೆಱೆ ವಿಶ್ವರೂಪಾದಂತೆ ಸಂತತಧಾರೆ ಸುರಿದುದೀಗಳೆಯಿಳೆಯೊಳಗೆ (ಮೋಹತ. ೪-೩೯).
[ತೊಱೆ$_2$ + ಪನಿ$_2$]

ತೊಱೆವರಿ (ಕ್ರಿ). ತೊರೆಯಾಗಿ ಹರಿ; ನದಿಯಾಗಿ ಪ್ರವಹಿಸು: ಕೆಱೆಯು ಬಱುಗೆಱೆಯಾಗಲೀಕ್ಷಿಸಿ . . . ನೀರಿದೆ ಕೊಳ್ಳಿಯೆಂದು ಕಮಂಡಲವ ಮರುಗೆ ತೊಱೆವರಿದುದು (ಸಾಳ್ವಭಾ. ೩೦-೩೬). [ತೊಱೆ$_2$ + ಪರಿ$_2$]

ತೊಱೆವಳಿ, ತೊರೆವಳ್ಳಿ (ನಾ). ಒಂದು ಊರಿನ ಹೆಸರು: ತೊಱೆವಳಿಯ × × × ಗಟ್ಟಿ (ಎಕ. VI, ಚಿಕ್ಕಮ. ೬೧-೨೦; 1058 ?). **ತೊರೆವಳ್ಳಿ** : ಪಡುವಣ ತೊರೆವಳ್ಳಿಯ ಬಾಸಂಬಾಳ್ಳಿಯೂರ ಮುಂದಣ ಕೆಱೆಯೊಳ್ (ಎಕ. IV, ಮೈಸೂರು. ೩೬-೧೫; ಸು. 990?); (ಮೈಆರಿ. ೧೯೧೬, ೨-೧೫ ನೋ).
[?]

ತೊಱೆವಾಯ್ (ಕ್ರಿ). ನದಿಯನ್ನು ದಾಟು: ನಗುತ ತೊಱೆವಾಯ್ದಂಬಿಗರ ಗಂಡನೆಂಬ ಕೀಳ್ಬಗೆ ನಿಮಗೆ ನೈಜ (ಸಿಂಗಿರಾ. ೪೪-೧೦).
[ತೊಱೆ$_2$ + ಪಾಯ್$_1$]

ತೊಱೆವು (ನಾ). ಇಲ್ಲವಾಗುವಿಕೆ; ಬಿಟ್ಟುಹೋಗುವಿಕೆ : ವೀರನೆನಿಪಗ್ಗದ ಮಾತದು ದೂರಮಾಯ್ತು ನಿಷ್ಠುರನಿವನೆಂಬ ಮಾತು ತೊಱೆವಾದುದು ಪೆಂಪಿನ ಮಾತು ಕೆಟ್ಟುದು (ಧರ್ಮಾಮೃ. ೧೩-೧೧೦).
[ತೊಱೆ$_1$ + – ವು./ತಮಿ. ತುಱವು]

ತೊಱೆವೇಂಟೆ (ನಾ). ನೀರಿನಲ್ಲಿ ಆಡುವ ಬೇಟೆ; ಮೀನು ಹಿಡಿಯುವಿಕೆ: ಇಂತು ಪನ್ನತಿಕೆಯಿಂ ಪಲವೇಂಟೆಯಾಡಿ ಕಾಡೊಡೆಯಂ ತೋಡಿಲ್ಲದ ತೊಱೆವೇಂಟೆಯಾಡಲು . . . ಪೆರ್ದೊಱೆಗೆಯ್ದಿ ಸಾರ್ದು (ರಾಜಶೇ. ೫-೧೧೪ ಪ). [ತೊಱೆ$_2$ + ಬೇಂಟೆ]

ತೊಱೆಹ, ತೊರೆಹ (ನಾ). ತ್ಯಜಿಸುವುದು; ಬಿಡುವಿಕೆ; ತ್ಯಾಗ: ಸಂಕಾಕುಳಂ ಪುಲ್ಲೆಯೊಳ್ ತೊಱೆ[ಪಾಠಾಂ. ಱ]ಹಂ ಕ್ಷೀಣಮದಂಗಳೊಳ್ ಬಡತನಂ ಸ್ತ್ರೀಮಧ್ಯದೊಳ್ . . . ಅಲ್ಲದಿಲ್ಲ ಪೆಱತೇನಾರಯ್ದಡಾದೇಶದೊಳ್ (ಪುಷ್ಕಾಸ್ತ್ರ. ೧-೧೧೬). **ತೊರೆಹ** : ತೊರೆಹ; (ಅಧಿಕಾರ, ಹಕ್ಕು, ಬಾಧ್ಯತೆ, ಮೊ.ಗಳ) ವಿಧಿಗನುಸಾರವಾದ ಪರಿತ್ಯಾಗ (Abdication. ಇಂಕನಿ). [ತೊಱೆ$_1$ + – ಹ$_2$]

ತೊಱೊಗಂಗ (ನಾ). (?) : ಸರಿಸೆ ತೊಱೊಗಂಗಗೆ ಕಟ್ಟಿದ × ಡಿಯೆ . . . [ಯ]ದು (ಸೌಇಇ. XX, ೨೯-೨೨; 1044). [?]

ತೊಱ್ತುಳಿದುಳಿ 'ತೊಟ್ತುಱಿದಂಟಿ' ನೋ.

ತೊಟಕಲ್ (ನಾ). ತಿರುಗುವಿಕೆ; ಸುತ್ತುವಿಕೆ: "ತೊಟಕಲ್ ತೊಟಲ್ವುದು" (ಶಮದ. ಪರಿ. ೧). [<ತೊಟಲ್$_1$ + – ಕಲ್$_4$]

ತೊಟಲ್$_1$, ತೊಳಲ್$_1$, ತೊಳಲು$_1$, ತೊಟಲು (ಕ್ರಿ). ೧. ತಿರುಗಾಡು; ಸಂಚರಿಸು; ಅಲೆದಾಡು : ಚರಿಗೆವೊಕ್ಕಡವಿಯಂ ತೊಟಲ್ವಲ್ಲಿಯೊಂದು ಮರದ ಪೊಟಲೊಳಿರ್ದು (ವಡ್ಡಾರಾ. ೮೯-೬); ಅಂತು ಭರತೇಶ್ವರಂ

ಸಕಳಾಂತಃಪುರಸಹಿತಮಲ್ಲಿ ವಿಶ್ರಮಿಸಿ ವನಾಭ್ಯಂತರವುಂ ತೊಟಲೆ (ಆದಿಪು. ೧೧-೮೩); ಒಂದು ದಿವಸಂ ಯುವರಾಜನಿಂದ್ರಾಯುಧಮನೇಱೆ ಬೇಂಟೆಯ ವಿನೋದದಿಂ ತೊಟಲುತ್ತುಮಿರೆಯಿರೆ (ಕಾದಂಪೂ. ೬೧೬); ಈ ಕಾಂತಾರದೊಳ್ ವ್ಯಾಧರಾಗಡೆಯತ್ಯಾಗ್ರಹದಿಂ ತೊಟಲ್ವರ್ (ಪಂಚತಂ. ೯೭-೧೪); ಶಾಸ್ತ್ರದವೇಕ್ಷೆಯಿಂದೆ ತೊಟಲುತಿರ್ದಂ ಧರಾಮಧ್ಯದೊಳ್ (ನೇಮಿಪು. ೩-೧೭೨); ನೀಂ ತೊಟಲದ ವಟ್ಟಣಂ ಪುಗದ ನಂದನಂ . . . ಅವುದು (ಆಗವಿ. ೧೭-೦೨೩); ಗಗನದೊಳೊರ್ಮೆಯುಂ ತೊಟಲುತಿರ್ಪ ವಿಯಚ್ಚರಸಂಕುಲಕ್ಕೆ . . . ಫಲಸಾರಮನಿತ್ತು (ಋಷಭ. ೯-೩೭). ೨. (ಸಂಸಾರಚಕ್ರದಲ್ಲಿ) ತಿರಂಗಂ; ಸಂಶ್ಲಿ, ಬರಂ; ಭ್ರಮಣೆ ಹೊಂದಂ: "ತೊಟಲ್-ಭ್ರಮಣೇ" (ಶಮುಧಾ); ಬಗೆದೀಡಾಡೆ ದುರಂತ ದುಃಖತತಿಗಳ್ . . . ಇನ್ನೆಗವೋರಂತೆ ತೊಟಲ್ದೆನಿಂ ತಿರಿಯಲಾಱಿಂ ಭವಾಂಭೋಧಿಯೊಳ್ (ಆದಿಪು. ೯-೬೦); ಅರ್ಧಚಕ್ರವರ್ತಿಯಾಗಿ ಭೋಗಂಗಳನುಂಡು ಮತ್ತಂ ಸಂಸಾರಚಕ್ರದೊಳ್ ತೊಟಲ್ದು ಕಡೆಯ ತೀರ್ಥಕರನಕ್ಕುಂ (ಶಾಪುಂಪು. ೫೧); ಗಾಣದೆತ್ತಿನಂತೆ ನಿಯಮಂಗೆಟ್ಟು ತೊಟಲುತ್ತಿರದೆ ಅಲದ ಬಟಲಂತೆ ನೆಲಕ್ಕೆಱಗದೆ (ಧರ್ಮಾಮೃ. ೫-೯೯). ೩. ಸುಳಿದಾಡಂ; ಸಂಚರಿಸು; ಹೊಳೆ: ಸುಭದ್ರೆಯ ರೂಪು ಕಣ್ಣ ಪಾವೆಯಂತೆ ಕಣ್ಮೊಳೆ ತೊಟಲೆ (ಪಂಪಭಾ. ೪-೬೯ ವ); ಕಣ್ಮೊಳ್ ತೊಟಲ್ದಂದದಿಂದಾ ನಿದ್ರಾಂಗನೆ ಸೂಬ್ಗಿವಂದಳಿರುಳೊಳ್ ತತ್ಪೇಚರಾಧೀಶನಾ (ಶಾಂತಿಪು. ೫-೮೦); ಪ್ರಿಯೆಯ ಭಂಗಿ ತೊಟಲ್ದವುದೆನ್ನ ಚಿತ್ತದೊಳ್ (ಶೃಂಗಾರ. ೩-೩೪); ಎನ್ನ ಚಿತ್ತಮಂ ನೋಯಿಸೆ ಕಣ್ಗಳೊಳ್ ತೊಟಲುತಿರ್ದವನಂಗಜಂ (ಬಂಹರಿ. ೮-೩೫); ೬ಲಸುವ ಮೆಯ್ಯುಮಾಗುಳಿಸುವಾನನಮುಂ ನಯದಿಂ ತೊಟಲ್ದ ಕಣ್ಮಲರುಂ (ಪುಸ್ತಪು. ೪-೧೫). ಮೆಣ್ಣ ಕಣ್ಮೊಳ್ ತೊಟಲೆ ಧೈರ್ಯಂಗೆಟ್ಟು ಬಾಯ್ವಿಟ್ಟು ಕನ್ಯಾರತ್ನಂ ತನಗೆಂತು ಸಾಧ್ಯಮಪ್ಪುದೆಂದು ವಿಚಾರಿಸಿ (ಪುಣ್ಯಾಸ್ರ. ೩-೪೨ ವ); ೪. ಗಸ್ತು ತಿರುಗಂ; ಪಹರೆ ಮಾಡಂ: "ಗರವಟಿಗವಂದಂಗೆ ಮತಿಗೆಟ್ಟವಂಗಂ ತೊಟಲ್ದುದೆಂದೆಂಬ ನಾಮಂ" (ಸಂಜೀವ. ೧೪); ರವಿಕಿರಣನಿಕರದ ತೆಱದಿಂ ತೊಟಲುತ್ತುಮಿರ್ವ ದಂಡಕನೆಂಬಾ ತಳಾಟಂ ಕಂಡು(ಧರ್ಮಾಮೃ.೩-೧೩೬). ೫. ಹೋಗು; ಗಮಿಸು; ನಡೆ: ಇಡುವಂತೆ ಪಯ್ಯಲಂ ತಮ್ಮ ಕರಾಗ್ರದೊಳ್ ತೊವಲನಾಂತು ನೆಲರ್ಗೆ ತೊಟಲ್ದವಾನೆಗಳ್ (ಶಾಪುಂ. ೪-೩೨). ೬. ಸುತ್ತಾಡಿ ಪ್ರಚಾರ ಮಾಡು: ಆತಂಗೆಯಾತನ ಬೇಡುವುದೆಲ್ಲಮಂ ಕುಡುವೆನೆಂದು ತೊಟಲ್ದ ಗೋಪಣೆಯಂ . . . ಅರಸಂ ಕೇಳ್ದು (ವರ್ಧಮಾ. ೫೦-೨೨). ೭. ಹುಡುಕು; ಶೋಧಿಸು: ಕುರುಡರ್ಕುರುಡರ ಬಬ್ಬಿಯಂ ವರಿವರಿದುಂ ತೊಟಲ್ದತೆಱದೆ (ಸಮುಪ.೧೦-೧೪೪); ಎಣ್ಪತ್ತೆಗಳೊಳ್ ನೃಪನಂ ಕಾಣ್ಬನ್ನಂ ತೊಟಲಿಮೆಂದು ... ಒಂದೊಂದು ದೆಸೆಗೆ ಪೊಱಮಟ್ಟಾಗಳ್ (ದಶಕು. ೪-೧೯). ೮. ಕಷ್ಟಪಡು; ಹಿಂಸೆಪಡಂ; ಸಂಕಟಗೊಳ್ಳು: ಮನದೊಳ್ ತೊಟಲುತ್ತುಂ ತಾಂ ಮನವೊಲ್ಲದೆ ತನಗೆ ಸೇವಮೆಂದೆನುತೊರೆದಳ್ (ಕಾದಂಉ. ೫೦); ಮೂಱುಂ ಭುವನದೊಳಂ ತೊಟಲುತಿರ್ಪ ಜೀವಾವಳಿಯಂ ಭುವನಾಗ್ರಕ್ಕೆಯ್ದಿಸುವರ್ತವತವಗೆ ಪರಿಯರಾ ಮಹಾತ್ಮರೆ ಜೈನರ್ (ಸಮುಪ. ೪-೯೫); ಬೊಚ್ಚೆಲ್ ಪೆಱುವಳಂತೆ ತೊಟಲುತ್ತುಂ (ಧರ್ಮಾಮೃ. ೧-೧೬೦); ಮೃಗಾವಳಿ ತೃಷೆಯಿಂ ತೊಟಲ್ದು ಪರಿತಾಪಮನೈದೆ ವನಾಂತರಾಳಮಂ ಬಳಸಿ ದವಾನಳಂ ಬಳಸಿತುಮಮರಿಚಿಪುರೀಚಿಸಂಚಯಂ (ಉದ್ಭಟ. ೪-೪೪); ಎರೆವರ್ ತಮ್ಮಯ ಬಡತನದಿರವಿಂಗೆ ತೊಟಲ್ವರ್ (ದಶಕು. ೬-೧೧೫); ಈ ಪರಿಯ ತೊಟಲುತ್ತುಮವಸರದೊಳಾನ್ ತಳ್ದಿ ಬಿಡುವಾಗಿ ಪರಿದೆನ್ (ಅಂತಿಗೊ. ೧೧-೨೧೫). **ತೊಳಲ್[1]**: ೧. ಆಱಿಸಿ ತೊಳಲಿದರಿಲ್ಲ . . . ತಪಸ್ಸು ಮಾಡಿದರಿಲ್ಲ ಅದು ತನ್ನ ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು (ಮಹಾದೇ. ಬ. ೪೪-೧೦೭); ಕೂಡ ಹಡೆಯದೆ ತೊಳಲ್ವ ನವಿಲ ತಂಡಂಗಳಂ . . . ನೋಡುತುಂ ಕೊಂಡಾಡುತಿರ್ದನಾ ವನದೊಳಗೆ (ನಂಬಿರ. ೫-೧೦೫). ಸತತಮುಂ ಕಾಲು ನಿಲ್ಲದೆ ತೊಳಲ್ವ ಸೂರ್ಯನು ದೈವವೆಂತಹನು (ಬಸಪು. ೫೪-೧೨); ಬನದೊಳು ಬೇರು ಬಿಕ್ಕೆಯನಱಿಸಿ ತೊಳಲ್ದುದು ಸಾಲದೇ (ಕುಪ್ಪಾವಿ. ೯-೪೦); ಅಱಿಸಿ ಕಾಲ್ಗೆಱಗುವೆನೆನುತೆದ್ದು ತನು ತರಹರಿಸುತೆ ತೊಳಲ್ದಳಾಲಯವ (ವೀರಾಹತ. ೩೭-೪೯). ೨. ತ್ರೇತೆಯಲಿ ರಘುರಾಮನಾಮದಿ ಸೀತೆಯಂ ಹೋಗಾಡಿ ದಶಶಿರದಾತನಿಂ ಬ್ರಹ್ಮತಿಗೆ ಸಿಕ್ಕಿ ತೊಳಲ್ದಱಸುತಿರನೇ (ಬಸಪು. ೫೪-೩೯); ಶಿವಪದವನಱಿಯದೆ ತೊಳಲ್ವರಿಂತು ಭವಾರ್ಣವದೊಳ್ (ಪದ್ಮಠಾ. ೧೧-೧೭೭). ೩. ನೆಲಸು ನುಂಗಿದ ಮಾತ್ರದಿಂದ ಬಾನೆಡೆಯೊಳಂ ತೊಳಲಲಾದುದು ಪದಂ (ಪಂಚಾಠಾ. ೫-೧-೩೭). **ತೊಳಲು[1]**: ೧. ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ ಹೊಳಲ ಸುಂಕಿಗನಂತೆ ತೊಳಲುತ್ತಿದ್ದನವ್ವ (ಮಹಾದೇ. ಬ. ೪೩-೧೦೦); ಆಗಮಂಗಳ ಹಿಂದೆ ತೊಳಲದಿರು ತೊಳಲದಿರು (ಆದಪ. ೫೧-೫೫); ತೊಳಲಿದೆನು ಮಧ್ಯಾಹ್ನ ವೊದಲಾಗಿ ಕಡಹೆಗಲ ತನಕ (ಹಡಕಾ. ೧೧-೧೪); ವನಿತೆ ನಿವ್ಮೊಡನೆಂತು ತೊಳಲುವಳನವರತ (ಕುವ್ಯಾಸ. ೧೬-೬೨); ನಿಮ್ಮಾಜ್ಞೆಯೊಳು ಲೋಕಂಗಳ ತೊಳಲಿದೆಂ (ಕಬಪು. ೩-೭); ಬಹುದೇಶಂಗಳ ತೊಳಲಿ . . . ಮಣಿಪುರಕೆ ನಡೆತಂದನು (ಚಿಮಿಭಾ. ೧೬ ಸೂಚನೆ). ೨. ತಮ್ಮ ಮಾನಸಿಕ ಪಾಪದ ಫಲವಾಗಿ ಅವರಿಬ್ಬರೂ ತಿರ್ಯಗ್ಯೋನಿಯಲ್ಲಿ ಆರಾರು ಸಲ ತೊಳಲಬೇಕಾಗುವುದು (ಕಾವ್ಯಸ. ೬೩); ಆ ವಿಮಾನ ನುಂಗಿದುದು ಬಳಿಕೊಂದು ವಿಮಾನದಂ ಮತ್ತೊಂದು ವಿಮಾನ್ನುಂಗಿತಾ ವಿಮಾನ ನುಂಗಿತೊಂದು ತೊಳಲುತೊಂದೊಂದನೊಂದಿಂತು ನುಂಗಲ್ (ಚಿಮಿಭಾ. ೬-೮); ಯುವಮುಖಸರಸಿಜದೊಳ್ ನೃಪನ ಕಣ್ಗಳೇಂ ತೊಳಲಿ [ಪಾಣಾಂ. ೧೫]ದವೋ (ಕಾಜಶೇ. ೪-೧೧೫). ೩. ಅವನನಱಿಸದ ನಿರೆತ ಮಾರುತತನಯ ಕಾಣದೆ ಹಳ್ಳವನು ತೊಳಲಿ (ಸಂಭವ. ೨೩-೭೭); ಮದುಮಗಂ ಕಾಣದಿರಲು . . . ಕೆರೆ ಕುಂಟಿಗಳನೆಲ್ಲ ತೊಳಲಿ ಪೊನ್ನಂಗೆ ದೊರಕಿದುದಳಲ ಪಾಲು(ಕಾಲೂಠ. ೧೭-೪೦೫). ೪. ಹಿರಿದಾಗಿ ಮನದಲಿ ತೊಳಲಿದಿರಿ (ನಳಪ. ೩-೪೭); ಕಾಲುಗಂಜಿಗಳಲಿ ತೊಳಲಿ ಕೂಲಿ ಮಾಡಿ ಉಂಬ ಹೆಣ್ಣು . . . ಬಂದಳು (ಕವಿಸೋ. ೪೧-೯); ಹಲವು ಯೋಜನೆಗಳ ಸುಳಿಯಲ್ಲಿ ಸಿಕ್ಕಿ ಅವಳು ತೊಳಲುತ್ತಿದ್ದಳು (ಶ್ಯಾಗಮ. ೧೬೪); ಹೇಗಾದರೂ ಆಸೆ ಫಲಿಸೀತೋ ಏನೋ ಎಂಬ ಕನಸಿನಲ್ಲೇ ತೊಳಲುವರು (ಶಿಪ್ಪಡ. ೬೬೭). **ತೊಟಲು**: ೨. ತ್ರಿವಿಷ್ಟನರೇಂದ್ರರ ಭವಮಾಲೆಯೊಳ್ ತೊ ಟ ಲಿ ಯು ಂ ತಾನಂತ್ಯತೀರ್ಥೇಶನಪ್ಪನುಮಂದಾ ಭರತಂಗೆ ಪೇೞ್ದನೊಲವಿಂ (ಶಾಂತೀಶ್ವ. ೨-೬೫).

[ದೇ. ತ ತಮಿ. ಚುಟಲ್; ಮಲ. ಚುಟಲು; ತುಳು. ತುಲಿವು, ತುಲಿಯು, ಸುಲಿವು; ತೆಲು. ಸುಡಿಯು]

ತೊಟಲ್[2], ತೊಳಲ್[2] (ನಾ). ೧. ಸುತ್ತಾಟ; ತಿರಂಗುವಿಕೆ: (ಕ). ೨. ದಿಗ್ಭ್ರಮೆಗೊಳ್ಳುವಿಕೆ; ತಬ್ಬಿಬ್ಬಾಗುವುದು: (ಕ). **ತೊಳಲ್[3]**: ೨. 'ಕಣ್ಮೊಳಲ್[3]' ಪರಾ. ೩. ಬವಣೆ; ದುಃಖ; ಚಿಂತೆ: ಕಣ್ಣನೆನ್ನ ಕಣ್ಣಲಿ ನೆಟ್ಟು . . . ತೋಡಿದಳು ತೊಳಲ (ಹೊಂಗಳು. ೧೭-೧೭). [< ತೊಟಲ್[1]]

ತೊಟಲಿ (ನಾ). ೧. ಸುತ್ತಲೂ ತಿರುಗುವಿಕೆ. 'ಕಣ್ಣಂದೊಟಲಿ' ಪರಾ. ೨. = ತೊಟಲಿಕಲ್ ೧. : ಕಾಯ್ದ ಶೃಂಖಲೆಗಳಿಂದಾವಳಿಸಿಯುಂ ತೊಟಲಿಯೊಳ್ಪೀಸಿಯುಂ ಎಣ್ಣೆಯೊಳ್ಕಾಸಿಯುಂ . . . ಇಂತನೇಕ ಪ್ರಕಾರಂಗಳಂ ಪೀಡಿಸಿ (ಪಸಾರ. ೧೪೪). [ತೊಟಲ್[1] + – ಇ]

ತೊಟಲಿಕಲ್, ತೊಳಲಿಕಲ್ಲು, ತೊಟಲಿಕಲ್ಲು (ನಾ). ೧. ವಂರ ಅಥವಾ ಕಲ್ಲಿನಿಂದ ಮಾಡಿದ ಬತ್ತ ಒಡೆಯುವ ಕಲ್ಲು; ಬತ್ತ ಬೀಸುವ ಕಲ್ಲು;

ಒಡೆಗಲ್ಲು : "ತೊಟಲಿಕಲ್ಲೆನಲ್ ಸಂಘಟಿಗೆ ನಾಮಮಕ್ಕುಂ" (ಸಂಜೀವ. ೫) ; ಪಟಯಿಗೆ, ತೊಟಲಿಕಲ್ [ಪಾಠಾಂ. ತೊಟರಿಕಲ್] (ಶಬ್ದಾನು. ೧೪೦ ವ್ಯಾಖ್ಯಾ). ೨. "ತಿರುವುವ ಗುಂಡು" (ಪ್ರಭಿಧಾ). **ತೊಳಲಿಕಲ್ಲು** : "ತೊಳಲಿಕಲ್ಲು = ಭತ್ತ ಒಡೆಯುವ ಕಟ್ಟಿಗೆ ಕಲ್ಲು" (ಜಾನಕೋ. ೬೮). **ತೊಟಲಿಕಲ್ಲು** : ೧. ಕೊಡಲಿ ಕತ್ತಿ . . . ತೊಟಲಿಕಲ್ಲ ಅಸುವೆಕಲ್ಲು ಕಲ್ಲೊರಳು ಕಲ್ಲೊನಕೆಯೆಂದಿವು ಮೊದಲಾಗೊಡೆಯುವಂ ಮೊದಲನೆಯ ಅನರ್ಥದಂಡಮಕ್ಕುಂ (ಪಸಾರ. ೩೧೩). [ತೊಟಲಿ$_1$ + ಕಲ್$_3$]

ತೊಟಲಿಕಲ್ಲು 'ತೊಟಲಿಕಲ್' ನೋ.

ತೊಟಲು 'ತೊಟಲ್$_1$' ನೋ.

ತೊಟಲ್ಕೆ, ತೊಳಲಿಕೆ, ತೊಳಲ್ಕೆ (ನಾ). ೧. ಅಲೆದಾಡುವಿಕೆ ; ಸುತ್ತಾಟ : ಚತುರ್ಗತಿಭ್ರಮಣರೂಪದಿನನೇಕಕ್ಲೇಶಂಬಡುವ ಜೀವರಾಶಿಯ ತೊಳ[ಟ]ಲ್ಕೆಯಂ ಸಂಸಾರಮೆಂಬುದು (ಪಸಾರ. ೫೩೬). **ತೊಳಲಿಕೆ** : ೧. ತಿಳಿಗೊಳನ ತಂಪಗಿವ ತೆಕ್ಕೆಯ ತೊಳಲಿಕೆಯ ತಾವರೆಯ ತನಿಪರಿಮಳದ ವಿಸರದ ಹಸರದಲಿ ತೀಡಿದುದು ತಂಗಾಳಿ (ತೊರರಾ. ೨-೭-೩). ೨. ಗಸ್ತು ತಿರುಗುವಿಕೆ ; ಪಹರೆ : ಗರವೊಟ್ಟಿಗೆಯ ತೊಳಲಿಕೆ ತೆರಳಿಚಿತು ತೆತ್ತೀಸು ಕೋಟಿಗಳ (ಕುಟ್ಯಾಅ. ೨೦-೫೬) ; ಪಾಳಯವು ಗಜಬಜಿಸೆ ತೊಳಲಿಕೆಯಾಳು ನೆರೆದುದು (ಕುಟ್ಯಾದ್ರೋ. ೮-೪೪). ೩. ತೊಳಲಾಟ; ಬವಣೆ: ಮಱುಗಿದನಂದಿನಿರುಳಲಿ ಕರುಳುಗಳ ತೊಳಲಿಕೆಯ ತಾಪದಲಿ (ತೊರರಾ. ೬-೨೯-೩). **ತೊಳಲ್ಕೆ**: ಹುರಿ ಮಣಲೆ ಭರವಸಮುಂ ತೊಳಲ್ಕೆಯುಂ ಬಳಲ್ಕೆಯುಂ ಕಾಳೆಗದೂಳಿಗಮುಂ ಕನಿಸಿನೊಳಮಿಲ್ಲೆನಿಸಿ (ಎಕ. XI, ಮೊಳಕಾ. ೨೦-೪೨; 1278 ?). [ತೊಟಲ್$_1$ + – ಕೆ]

ತೊಟಲ್ಚು, ತೊಳಲಿಚು (ಕ್ರಿ). ೧. ತಿರುಗುವಂತೆ ಮಾಡು ; ಸುತ್ತಾಡಿಸು ; ಅಂಗನೆ . . . ಎಟ್ಟರುತ್ತಿರೆ ಜನಂ ಕಂಡೆಯ್ದೆ ವಿಭ್ರಾಂತಿಗೊಂಡಿರಲಂತಂತೆ ತೊಟಲ್ಚಿ ವಿದ್ಯೆಗಳನಂಗಾಗಾರದತ್ತೊಯ್ಯೆ (ನೇಮಿಪು. ೮-೫೮) ; ವೇದೋದಯಮಘಕೃತಮಂದೇದೊರೆಯನುಮಂ ತೊಟಲ್ಚುಗುಂ ಸಂಸೃತಿಯೊಳ್(ವರ್ಧಪು. ೧೩-೨೦); ಅಮಿತಶ್ರಮದಲ್ಲಿಯಳ್ಕಾಡೆ ತೊಟಲ್ಚಿ ತೂಳ್ದು ಕಡುಪಿಂ ಕೆದಱಟ್ಟಿ ಮಹಾಂಧಕಾರಮಂ ಕೂಡೆ ಗುಹಾಳಿಯಂ ಪುಗಿಸುತಿರ್ದುದು ಚಂದ್ರಿಕೆ (ಕುಸುಮಾ. ೧೦-೧೩). ೨. ಪ್ರಕಟಿಸು ; ಸಾರು : ಪೊಟಲೊಳಗೆಲ್ಲಂ ಗೋಸನೆಯಂ ತೊಟಲ್ಚಿ [ಪಾಠಾಂ. ತಗುಳ್ಚಿ]ದೊಡೆ (ಪಡ್ಡಾರಾ. ೭೮-೪). **ತೊಳಲಿಚು** : ೧. ಅಳಿಯನನು ಕಾಣದೆ ವಿದರ್ಭನು ತೊಳಲಿಚಿದನನುಚರರ ನಾನಾ ಹಳುವದಲಿ ಹಳ್ಳಿಯಲಿ (ತೊರರಾ. ೩-೨-೧೬). [ತೊಟಲ್$_1$ + – ಚು$_1$]

ತೊಟಲ್ತರ್ (ಕ್ರಿ). ಸುತ್ತಾಡಿ ಬರು ; ಅಡ್ಡಾಡು : ಮೃಗಯಾವ್ಯಾಜದಿನೊರ್ವೆ ಶಂತನು ತೊಟಲ್ತರ್ಪಂ ಪಳಂಚಲ್ಕೆ ತನ್ಮೃಗಶಾಬಾಕ್ಷಿಯ ಕಂಪು ತಟ್ಟಿ ಮಧುಪಂಬೋಲ್ ಸೋಲ್ತು (ಪಂಪಭಾ. ೧-೭೦) ; ಕುಂದದ ಮುಗುಳ್ಗಳುಮಸುಗೆಯ ಕೆಂದಳಿರ್ಗಳುಮಬ್ಜದಲರ್ಗಳುಂ ಬೆರಸು ತೊಟಲ್ತಂದಪುವು ತಮಾಳಲತೆಗಳೆಂದಮರರ್ ನೋಡೆ ಚರಿಯಿಪರ್ ವನಚರಿಯರ್ (ವರ್ಧಪು. ೦೦-೧೯). [ತೊಟಲ್$_1$ + ತರ್]

ತೊಟಸು$_1$, ತೊಳಸು$_2$ (ಕ್ರಿ). ೧. (ನೀರನ್ನು) ಕದಡು ; ಅಲ್ಲಾಡಿಸು ; ಕಲಕು : ಆಟೋಪದಿಂ ಪೊಕ್ಕು ಸಾಗರಮಂ ಕೂಡೆ ತೆರಳ್ಚಿದಂ ತೊಟಸಿದಂ ತುಳ್ಕಾಡಿದಂ (ಜಗವಿ. ೭-೧೮). ೨. (ಸೌಟಿನಿಂದ ಸಾರು ಮೊದಲಾದುವುಗಳನ್ನು) ತಿರುಗಿಸು ; ತಿರುವು ; ಗೊಟಾಯಿಸು : ಬ್ರಹ್ಮಾಂಡವೆಂಬ ಕೊಪ್ಪರಿಕೆಯ ಮಧ್ಯದಲ್ಲಿ . . . ಮಾಸಋತುಗಳೆಂಬ ಸಟ್ಟುಗದಿಂ ತೊಟಸುತ್ತುಂ ಭೂತಂಗಳಂ ಜವನಡುತಿರ್ದನಿಂತೆಂಬುದೆ ವಾರ್ತೆ (ಪಂಚತಂ. ೬೫-೫) ; ಮಸಣದ ಕಿಚ್ಚಿನಿಂ ನರಕಪಾಲದ ಭಾಂಡಮನಿಟ್ಟು ಮಜ್ಜೆಯ ರಸವೆಸರಾಗೆ ಕೀಲಿಗನ ಹೆಂಡತಿ ತಾಂ ತೊಟಸುತ್ತ ಮೂಳೆಯೊಳ್ (ಧರ್ಮಾಮೃ. ೧೧-೧೮೨) ; ಅಂತಕ್ಕಿಯಂ ಪೊಯ್ದು ತೊಟಸಿ ಕುದಿ ಬರಲೊಯ್ಯನೆ ಮೇಲುರ್ಬಿದ ನೊರೆಯಂ ತೆಗೆದು ಬಿಸುಟು (ದಶಕು. ೧೩-೧೩೧ ವ). ೩. ಹೊಟ್ಟೆ ಕಲಕು; ಓಕರಿಕೆ ಬರುವಂತಾಗು : (ಕ). ೪. ಕ್ಷೋಭೆಗೊಳ್ಳು ; ಕ್ಷೋಭೆಯುಂಟಾಗು : ಅಂಗನೆಯಂ ಪಿಡಿದೊಯ್ದರೆಂದು . . . ಪುಯ್ಯಲ ಗಾವಳಿ ಕೆಯ್ಯನಿಟ್ಟುದೀ ತೊಟಸಿದ ಪಾಂಗೆ ಕಿಟ್ಟಲೆ ಕಿಟಂದಲೆಯಾದುದು ಕೂಡೆ ಪಟ್ಟಣಂ (ಅನಂಪು. ೧೦-೭೩). ೫. ಹುಟ್ಟುಹಾಕು; ದೋಣಿ ನಡೆಸು: ನೆತ್ತರ ತೊಱೆಯಂ ಮರುಳ್ತೊಟಸಿ ಪಾಯಿಸುತಿರ್ದುವು (ಪಂರಾಮಾ. ೧೩-೬೬). **ತೊಳಸು$_2$** : ೨. ಎಲ್ಲರ ಹೆಂಡಿರೂ ತೊಳಸಿಕ್ಕುವರು ಎನ್ನ ಗಂಡಂಗೆ ತೊಳಸುವುದಿಲ್ಲ (ಸರ್ವವ. ೬೪-೩೪೨) ; ಅಲಗನೊಡಲೊಳು ತೊಳಸಿದಂತಿರೆ ಬಳಲಿದನು ಭೂಪಾಲ (ಕುಟ್ಯಾದ್ರೋ. ಓರಿಇ. ಪರಿ. ೨೮೨) ; ಕುದಿ ಬಂದಾಗ ಒಮ್ಮಾನ ಹಾಲ ಹುಯಿದದನು ಸಟ್ಟುಗದಿ ತೊಳಸಿ (ಸೂಪಶಾ. ೧-೪೦) ; ೩. ವಾಂತಿ ಬರೋ ಹಾಗೆ ಆಗುಲ್ಲ, ಹೊಟ್ಟೆ ತೊಳಸುಲ್ಲ (ಮನೋನಂ. ೫೮); ಅವನಿಗೆ ಹೊಟ್ಟೆ ತೊಳಸಿ ಬಂತು (ದಾದಾನ. ೭೨). ೬. ಸುತ್ತಾಡು; ಅಲೆ : ತೊಳಸದಿರು ಬ್ರಾಹ್ಮ್ಯವನು ಭಕ್ತಿಸ್ಥಳವು ಬೇಱೆಯೆ ಮಾರ್ಗವಹುದಿದು ತಿಳಿದು ನೋಡಾ ದರ್ಶನಂಗಳೆನಲ್ಕೆ (ಬಸಪು. ೩-೭೧); ಆ ನೃಪತಿಳಕನ ವಾಗ್ವೈಭವಕ್ಕೆ ಮೂಱುಂ ಜಗಮಂ ತೊಳಸಿದೊಡೊರ್ವನೆ ಸಮನಾಗುಳಿದುದಱಿಂ ಶೇಷನೆನಿಪನಿನ್ನುಂ ಶೇಷಂ (ಧರ್ಮನಾ. ೩-೨೮). ೭. ಬಳಸು ಮಾತಾಡು; ಸುತ್ತು ಮಾತಾಡು : ತೊಳಸಲೇನೂರ್ವಸಿಗೆ ಜನಿಸಿದ ಅಲಘುಮುನಿ ಮಾತಂಗನೆಂಬಗ್ಗಳೆಯನುದ್ಭವಿಸಿದನಲಾ ಮಾತಂಗಿಯುದರದಲಿ (ಬಸಪು. ೫೭-೭೨). ೮. ಕಾದಾಡು; ಎದುರಿಸು: ಅಱಿದೆನಱಿದೆನೆಂದು ಮಱವೆಯ ತೋಟಿಯ ತೊಳಸುತ್ತ (ಮೋಳಿಮಾ. ೧೭೫-೬೬೦). ೯. ಕೀಳು ; ಕಳಚು (?) : ಕಾಳುಗೆಡೆದರೆಯಗ್ನಿಯಾದರು ಕೀಳುವರು ನಾಲಿಗೆಯ ಕೃತಕವ ಮೇಳಯಿಸಿದರೆ ಸುರಪನಾದರು ಕಣ್ಣ ತೊಳಸುವರು (ಶಂಕದಾ. ೯-೬೪) ; "ಕುಟ್ಟು" (ಶಂಕದಾ. ಕೋಶ).

[ದೇ.॥ ತಮಿ. ತುಟ, ತುಟ್ಟೈ, ತುಟೂವು, ಚುಲವು ; ಮಲ. ತುಟಯು ; ತುಳು. ತುಳಾವು, ಸುಲಾವು]

ತೊಟಸು$_3$, ತೊಳಸು$_4$ (ನಾ). ೧. ಸುತ್ತಲೂ ತಿರುಗುವಿಕೆ ; ಪರಿಭ್ರಮಣ : (ಕ). ೨. (ಮನಸ್ಸಿನ) ಅಲೆದಾಟ ; ಚಂಚಲತೆ : (ಕ). **ತೊಳಸು$_4$** : ೩. (ಕಣ್ಣು) ಹೊರಳುವುದು : ಮುಚ್ಚಿರ್ಪ ಕಣ್ಗಳಂ ತೆರೆದು ತೊಳಸಿನ ಬೆಳ್ಪು ಚುಚ್ಚೆ (ಕಾಲೂರ. ೧೭೩-೩೮೮). ೪. ಘರ್ಷಣೆ; ತಿಕ್ಕಾಟ : ಅಱಿಯದುದನಱಿದಲ್ಲಿ ಮಱೆದು ಮಱದುದನಱಿದಲ್ಲಿ ಕಂಡು ಉಭಯದ ತೋಟಿಯ ತೊಳಸು ನಿಂದಲ್ಲಿ ನಿಃಕಳಂಕ ಮಲ್ಲಿಕಾರ್ಜುನಲಿಂಗದ ಅಂಗ ಕರತಳಾಮಳಕವಾಯಿತ್ತು (ಮೋಳಿಮಾ. ೯೩-೩೬೯) ; ಬಳಿಕೆಮಗೆ ಬಲವದ್ವಿರೋಧದ ತೊಳಸು ಬಿದ್ದುದು ತೋಟಿಗಾಱದೆ ಜಲಧಿಮಧ್ಯದಲೂರ ಕಟ್ಟಿದೆವು (ಕುಟ್ಯಾಸ. ೨-೧೮). ೫. ತೊಡಕು ; ಸಿಲುಕಿಕೊಳ್ಳುವಿಕೆ ; 'ತೊಳಸುಗೊಳ್ಳು' ಪರಾ.

ತೊಳಸಾಗು = ಗೊಂದಲಗೊಳ್ಳು ; ಕೆಡು : ಯಮನಂದನನ ನುಡಿ ಸಂಧಾನದಲಿ ಸಂಜನಿಸಿತಾದೊಡೆ ಕಾಣೆನವನಿಯ ಹೊರೆಗೆ ಹರಿವುಗಳ ಮನದೊಳನುಸಂಧಾನವಂತಕತನುಜನಲಿ ತೊಳಸಾಯ್ತು ತೋಟಿಯ ನೆನಹು (ಕುಟ್ಯಾಉ. ೬-೭). **ತೊಳಸುಮೆಳಸು** = ಗೋಜು ; ಸಿಕ್ಕು : ತಿಳಿಯ ಬಾರದು ಖಳರ ಕುಟಿಲದ ತೊಳಸುಮೆಳಸು (ಅಂಬಿಕಾ. ೨೦-೧೭).

[<ತೊಟಸು$_1$]

ತೊಟ್ಕುತ್ತು (ನಾ). (?) : ಒಕ್ಕಲುಳಿದುಣ್ಡು ಕಾದುವೊಂಗಿದು ಕಣ್ಗೆಟ್ಟು ತೊಟ್ಕುತ್ತುವೆ [ಕ್ಕೆ] (ಮೃಆರಿ. ೧೯೩೦, ೩೬-೧೦ ; ಸು. 800).

[ಇದು 'ತೋಳ್ಕುತ್ತು' ಎಂಬುದರ ಅಪಲಿಖಿತವಿರ ಹುದೆ ?]

ತೊಟ್ಟಾಳ್, ತೊಳ್ತಾಳ್ (ಕ್ರಿ). ತೊತ್ತು ಮಾಡಿ ಆಳು : ಪ್ರಭುತ್ವ ನಡೆಸಂ : ಸಿರಿಯಂ ನೀನುಯ್ದು ತೊಟ್ಟಾಳ್ದು [ಪಾಠಾಂ. ಳು] ರಾಗದಿನೆ ನ್ನೊಳ್ ಸುಕಮಿರ್ಪದು (ಪಂಪಭಾ. ೪-೬೬). **ತೊಳ್ತಾಳ್** : ನೀನೆ ಆಳ್ಮಾಡಿಕೊಳಲಲ್ಲೆನಲ್ ಬಪ್ಪುದೇ ನೀನೆ ತೊಳ್ತಾಳ್ವ [ಪಾಠಾಂ. ತ್ತಾಳ್ವ, ತ್ತಾಳ್ದ]ಡಿನ್ನಲ್ಲೆನಲ್ ಬಪ್ಪುದೇ (ನಂಬಿ. ೭-೧೩೦).

[ತೊಟ್ಟು + ಆಳ್₁]

ತೊಟ್ಟು, ತೊತ್ತು, ತೊರ್ತು, ತೊಳ್ತು (ನಾ). ೧. ದಾಸಿ ; ಸೇವಕಿ : "ಪೋಟಾ, ಚೇಟಾ, ಚೇಟೀ, ದಾಸೀ, ಕುಟಹಾರಿಕಾ – ಈ ೫ ತೊಟ್ಟು" (ಹಲಾಯು. ೮೦-೩೩೫); ತೊಟ್ಟನುಟಿದಂತುಟಿದ ಮಹಾಪುರುಷರಱಿಯದುಟಿದರೆ ಸಿರಿಯಂ (ಕವಿತಾ. ೩-೧೭೫) ; ಧರೆಯಂ ಪಟ್ಟಕೆಯ್ದು ತೊಟ್ಟನುಟಿವಂತುಟಿದಂ ಸಾಮ್ರಾಜ್ಯಲಕ್ಷ್ಮಿಯಂ ಚಕ್ರಧರಂ (ಆದಿಪು. ೪-೭೭) ; ನಿನ್ನ ತೊಟ್ಟಿರೊಳಿನಿತೇಕೆ ಭಕ್ತಜನವತ್ಸಲ ನಿರ್ದಯನಾದೆ (ಕಾದಂಪೂ. ೯೨೪) ; ಪೊಲೆಯರಾಡಿನ ಪೆಸರ್ ಮಾಣಕದೇವಿಯೆಂಬಂತೆ ತೊಟ್ಟಿನ ಪೆಸರ್ ಸಿರಿಯ ದೇವಿಯೆಂಬಂತೆ (ಧರ್ಮಾಮೃ. ೯-೧೭೬). ೨. ದಾಸ ; ಸೇವಕ : ತೊಟ್ಟಿಂದು ದಾಸನುಂ ದಾಸಿಯುಮಕ್ಕುಂ (ಶಮುದ. ನ. ೩೩ ಪ್ರಯೋ). ೩. ಹಾದರಗಿತ್ತಿ ; ಜಾರೆ : ಮತ್ತಮೊಂದೆಡೆಯೊಳೊರ್ವರ ತೊಟ್ಟು ಲಲಿತಾಂಗಂ ಬಂದನಿನ್ನಾವಾತನ ತೋಟಿ ಪಿಂಗುವಿನಂ ನೆರೆವನೆಯೊಳಿರ್ದು ಬರ್ಪಮೇಟುಮೆಂದು ತನ್ನಾರ್ದ್ದಿಚ್ಛೆಯರಪ್ಪ ಬಧಿರೆಯರ್ಗಂ ಮೆಲ್ಲನೆ ಪೇಟ್ವುದುಂ (ಧರ್ಮಾಮೃ. ೨-೪೯). **ತೊತ್ತು** : ೧. "ಕುಟಹಾರಿ ಚೈಟಂ ಚೇಟಿ ದಾಸಿಯೆನೆ ತೊತ್ತಕ್ಕು" (ಮಂಗರಾ. ೯೦-೪); ಎಲೆ ತೊತ್ತೆ ನಿನಗಿನಿತು ಸಾಮರ್ಥ್ಯವನಾರ್ಮಾಡಿದರ್ (ಪಂಡಿತಂ. ೧೫೫-೩) ; ಪ್ರಭುದೇವರ ತೊತ್ತಿನ ತೊತ್ತಿನ ಮಱುದೊತ್ತಿನ ಮಗಳು (ಪುಹಾದೇ. ಬ. ೭೪-೦೯೮) ; ಹೆತ್ತ ತಾಯಂ ಮಾಱಿ ತೊತ್ತ ಕೊಂಬರೆ (ಹಡಕಾ. ೯-೭೬). ೩. ತೊತ್ತೇರಿಗುಂಟು ತಾಟಕಿಗುಂಟು ಹೆತ್ತ ತಾಯಿಗಿಲ್ಲವೀ ಕಾಲ (ಪುರಂದ. ೦-೦೩೦-೩). 'ತೊತ್ತುಬಡಿಕ', 'ತೊತ್ತುಬುದ್ಧಿ' ಪರಾ. **ತೊರ್ತು** : ೧. ಆ ದೇವರ ತೊರ್ತು (ಎಇ. XIII, ೩೩೦-೩೦ ; 1126). **ತೊಳ್ತು** : ೧. ಮೃಡ ತಾಂ ಭಕ್ಷವ ಬೇಡನೇ ಮಖಜೆ ತಾಂ ತೊಳ್ತುಗಳೆ . . . ನರರ್ ಪೂರ್ವದೊಳ್ ಪಡೆದಮ್ಬಣ್ಣದೆ ಪೋಪರೇ (ಸೋಮೇಶ. ೩.೨) ; ತೊಳ್ತಿಗೆ ಚಮ್ಮವಟ್ಟಗೆವಿಡಿದಂತೊಡ್ಡಿದೊಡ್ಡಣದ ಕಡುಗಲಿಗಳನು ಕೈದತ್ತದಂದದಿ ಹುಯ್ಕುದೊಡೆ ಪಂಥವೆಲ್ಲಿಯದೆವಗೆ (ನೇಮಿಸಂ. ೪೯-೬) ; ವರಮಿಳ್ದು ನಿಮಗೆ ತೊಳ್ತುವೆ ಬಿಡ ಮರುಳ್ತನಂ (ಮುಹಾವಿ. ೬-೩೬). ೨. 'ಗಂಡುದೊಳ್ತು' ಪರಾ.

ತೊತ್ತಿನ ಕೂಸು = ದಾಸಿಯ ಪುತ್ರ; ಸೂಳೆಯಂ ಪಂಗ : ಪುಷ್ಪಾಸವವನ್ನು ಕಳುವ ತೊತ್ತಿನ ಕೂಸಾದ ಈ ದುರುದುಂಬಿ ತುಂಬಿಯು ಪೂಜ್ಯಳಾದ ಈಕೆಯ ಮುಖಕ್ಕೆ ಎರಗುವುದು (ಶಾಕುಂತ. ೯೦-೧೭) **ತೊತ್ತಿನ ತೊತ್ತು** = ಸೇವಕನ ಸೇವಕ : ನಿಮ್ಮ ತೊತ್ತಿನ ತೊತ್ತು ನಾನು (ಚನ್ನವ. ಕ. ೩೭-೬೦). **ತೊತ್ತಿನ ಮಗಳು** = ದಾಸಿಯಂ ಪುತ್ರಿ ; ಕೀಳಂ ಸೇವಕಿ : ಮನೆಯ ತೊತ್ತಿನ ಮಗಳ ಮುಕ್ಕಳಿಗಿನಿತುವುಂ ಸರಿಯಾಗದೆನ್ನವನಿಯೊಳುತ್ತಮ ಭಕ್ತೆ ನಾನೆಂದಾತ್ಮದೊಳು ನೆನೆದು (ಬಸಪು. ೪೪-೩೭) ; ತೊಲಗು ತೊತ್ತಿನ ಮಗಳೆ ಮುಟ್ಟದಿರಿಳೆಯ (ತೊರಠಾ. ೧-೦೦-೦೩). **ತೊತ್ತು, ತೊಡಿಕೆ** = ಸೇವಕಿಯಂತೆ ಹೊಂದಿಕೊಂಡಿರುವವಳಂ : ಹೆತ್ತಯ್ಯನ ಮನೆಯಾ ತೆತ್ತಿಗಳು ನಾನಲ್ಲೆ ತುತ್ತಿನಾಸೆಗೆ ಬಂದಾ ತೊತ್ತು ತೊಡಿಕೆಯಲ್ಲಾ (ಶ್ರೀಕೃಪಾ. ೩೫). **ತೊಟ್ಟಿನ ಮಗ, ತೊತ್ತಿನ ಮಗ** = ದಾಸಿಯ ಮಗ : "ಗೋಪ್ಯ ೧ , ದಾಸೀಸುತ ೧–ಈ ೨ ತೊಟ್ಟಿನ ಮಗಂ" (ಹಲಾಯು. ೮೩-೩೪೭) ; ತೊಟ್ಟಿನ ಮಗನಧ್ಯಯನಮೆಬಾಟ್ಪೆ ಮದಾತ್ಮಜರ ಬುದ್ಧಿಯುಂ ವೃದ್ಧಿಯುಮೇಂ ಬಾಟ್ಪೆ ನಿನಗೆಂದಟ್ಟಲ್ದಳ್ (ಶಾಂತಿಪು. ೬-೬೪); ಗ್ರಾಸಕಿಲ್ಲದೆ ತೊತ್ತಿನ ಮಗನ ಮನೆಲುಂಡ (ಪುರಂದ. ೨-೦೦-೦). **ತೊಟ್ಟರ್, ತೊತ್ತಿರು** (ಬಹುವ) : ಎನ್ನ ಪರಿವಾರಮೆನ್ನ ತೊಟ್ಟರೆನ್ನ ಮಾಣಕಭಂಡಾರಂ . . . ಎಂದಿವ ಜೊಳ್ ಮೋಹಿಸಿದ ಬುದ್ಧಿಯನೊಡೆಯನಾಗಿಯಾರ್ತಧ್ಯಾನದಿಂ ಸತ್ತು (ವಡ್ಡಾಠಾ. ೦೪೦-೩೦) ; ಸಗ್ಗಂಗಳೊಳಿರ್ಪ ದೇವಡಿತಿ ತೊಟ್ಟಿರೊಳಟ್ಟಿಯನಾಗಲೀವೆನೇ (ಪಂಪಭಾ. ೧೦-೪೫) ; ಕಾದಿದ್ದರಯ್ಯ ಪಡುವರ್ಗವೆಂಬ ತೊತ್ತಿರು ಮುಟ್ಟದಂತೆ (ಅವಪಂ. ೩೭೭-೧೩೭೦) ; ನಾವಿನ್ನು ನಿಮ್ಮ ಶ್ರೀಪದಾಂಬುಜನಿತ್ಯಸೇವೆಯೊಳೋವ ತೊತ್ತಿರ ತೊತ್ತಿರಾಗಿರಲು (ಬಸಪು. ೩೩-೪೬) ; ರಂಭೆಯೂರ್ವಶಿ . . . ಮೊದಲಾದ ಸುರಸತಿಯರೆನ್ನರಮನೆಯ ತೊತ್ತಿರುಗಳಾದರು (ಕುವ್ಯಾಲ. ೧೩-೬೫).

ತೊಟ್ಟುಮಾಡು = ಸೇವಕನನ್ನಾಗಿಸು : ಎನ್ನಾನೆಯಿಂದೆ ಪಗೆಗಳ ಬೆನ್ನೆಲ್ವಂ ಮೆಟ್ಟ ಮುಱಿಸಿ ಸಪ್ತಾಂಗದ ಸೊಂಪನ್ನಿನಗೆ ತಂದು ಕುಡದೊಡೆ ನಿನ್ನಹಿತನ ಮನೆಗೆ ತೊಟ್ಟುಮಾಡುವುದೆನ್ನಂ (ದಶಕು. ೬-೫೦).

[ದೇ.ತ ತಮಿ. ತೊಟುತ್ತ್ಯ, ತೊತ್ತು; ಮಲ. ತೊಟ್ಟಿಲ್ = ಕೆಲಸ ; ತುಳು. ತೊಳಿಲ್ = ಕೆಲಸ, ಉದ್ಯೋಗ ; ತೆಲು. ತೊತ್ತು]

ತೊಟ್ಟುಗೆಲಸ, ತೊತ್ತುಗೆಲಸ, ತೊಳ್ತುಗೆಲಸ (ನಾ). ಸೇವೆ ; ಊಳಿಗ : ಓರ್ವ ಸೊರ್ಕಿದ ತೊಟ್ಟು ತೊಟ್ಟುಗೆಲಸಕ್ಕರವಿನೆಯಂ ಪುಗುವ ಪೊಱಮಡುವ ಸೂಟಿಂಳ್ (ಪಂಡಿತಂ. ೧೭೯-೪). **ತೊತ್ತುಗೆಲಸ** : ತೊತ್ತಿಂಗೆ ತೊತ್ತುಗೆಲಸವಲ್ಲದೆ ಅರಸರ ಸುದ್ದಿ ಎನಗೇಕಯ್ಯಾ (ಬಸವ. ೪೦೦) ; ಎಂಬತ್ತು ವರುಷಂಗಳು ಶಿವೈಕ್ಯರ ತೊತ್ತುಗೆಲಸಂ ಮಾಡಲು (ಬಸಪು. ೩೭-೬೨) ; ಅರಸುಮಗಳನಾ ತೊತ್ತುಗೆಲಸಕ್ಕೆ ಪರುಠವಿಸಿದಿರೆ (ಕುವ್ಯಾಲ. ೧೯-೩೩) ; ಹೊತ್ತು ಮೂಡಿ ಮುಳುಗುವನ್ನೆವರ ತೊತ್ತುಗೆಲಸವನೆ ತುಬ್ಬಿ (ಸಮ್ಮೇಳಾ. ೩-೪೨). **ತೊಳ್ತುಗೆಲಸ** : ಲೋಕವನಗಿವ ಕಾಲನೆಂಬ ದರ್ವಿಕರನ ದಾಡೆಯಂ ಕೆಳ್ದವಧಿವಿಧಿಗಳರ್ವರ್ಗೆ ತೊಳ್ತು [ಪಾಠಾಂ. ತ್ತು] ಗೆಲಸವನಿತ್ತು (ಪದ್ಮಠಾ. ೩-೦೭ .)

[ತೊಟ್ಟು + ಕೆಲಸ]

ತೊಟ್ಟುಗೊಡು, ತೊತ್ತುಗೊಡು, ತೊಳ್ತುಗೊಡು (ಕ್ರಿ). ಪರಿಚಾರಕನನ್ನಾಗಿಸು; ಸೇವೆಗೆ ತೊಡಗಿಸು,–ಇಡು: ರಾಗೋದಯಮೆನ್ನನೋವದೆಟ್ಟಿದೊಯ್ದೀಂ ತೊಟ್ಟುಗೊಟ್ಟಿತ್ತೊ (ಕಾದಂಉ. ೯೧). **ತೊತ್ತುಗೊಡು** : ತನುವನೀಶ್ವರಂಗೆ ಹಿಂಗದೊಪ್ಪಿಸುತ್ತೆ ತೊತ್ತುಗೊಟ್ಟು (ನಮರ. ದೇ. ೦೯೭-೦೩). **ತೊಳ್ತುಗೊಡು** : ಪುರಹರ ನಿಮಗೆನ್ನಂ ಸದಾ ತೊಳ್ತುಗೊಟ್ಟೆಂ (ರಣ್ಣಕ. ೬೮). [ತೊಟ್ಟು + ಕೊಡು₁]

ತೊಟ್ಟುಗೊಳ್, ತೊತ್ತುಗೊಳ್, ತೊಳ್ತುಗೊಳ್ (ಕ್ರಿ). ಊಳಿಗಕ್ಕೆ ಇಟ್ಟುಕೊಳ್ಳು ; ಸೇವಕನನ್ನಾಗಿ ಮಾಡಿಕೊಳ್ಳು : ದೆಸೆವೆಂಡಿರ್ಗೆ ಪಸದನಂಗೈದು ಬರ್ದಿಲವೆಣ್ಗಳಂ ತೊಟ್ಟುಗೊಂಡರ್ (ಣಮಾಶ್ವ. ೦೪-೩೭). **ತೊತ್ತುಗೊಳ್** : ನಿನ್ನ ಕರುಣದ ಬಲವುಂಟೆನಗೆಂದು ಸಾಯಿದೇವನ್ನಂ ಬಲು ಸಲೆ ತೊತ್ತುಗೊಣ್ಣ ದಯಕೇಂ ಸಲೆವುಂಟೆ (ಸೌಇಇ. IX-೧, ೫೯೭-೬೦; 1177) ; ದೇವ ಸಂಸಾರಂ ನೆಱೆ ಪುಗದ ಮುನ್ನ ನೀನೆಂದು ಬಂದೆನ್ನಂ ತೊತ್ತು[ಪಾಠಾಂ.ಳ್ತು]ಗೊಂಬೆಯೆಂಬುವ್ಮಳಿಕೆಯಿಂದಳುವಂದದಿಂ (ನಂಬಿ. ೭-೧೦). **ತೊಳ್ತುಗೊಳ್** : ಕೃಪೆಯೊಳೆನ್ನಂ ತೊಳ್ತುಗೊಂಡಾಳ್ದನಂ . . . ಕಂಡಂ ವಿರೂಪಾಕ್ಷನಂ (ಪಂಪಾಶ. ೩೬). [ತೊಟ್ಟು + ಕೊಳ್₁]

ತೊಟ್ಟುತನ, ತೊತ್ತುತನ (ನಾ). ಸೇವೆ ; ಊಳಿಗ ; ಪರಿಚರ್ಯೆ : ನಿಜಜೀವಿತಮುಮಂ ತನ್ನುಮನಿರದಿತ್ತು ತೊಟ್ಟುತನಮುಂ ತಾಂ ಕೊಂಡುಂ (ಕಾದಂಉ. ೦೦೪). **ತೊತ್ತುತನ**: ಬೆಚ್ಚದೆ ಬೆದಱದೆ ತೊತ್ತುತನವ ಮಾಡಲು ತನ್ನನೀವ ಕೂಡಲಸಂಗಮದೇವ (ಬಸವ. ೦೪೮) ; ಕಂದ ನೀವಿರಲೆನಗೆ ಸವತಿಯ ತೊತ್ತುತನವಾಯ್ತು (ಸಂಧಿಶ. ೫-೪೬). [ತೊಟ್ಟು + – ತನ]

ತೊಟ್ಟುತೊಡರ್ (ನಾ). ಗುಲಾಮಗಿರಿಯ ಬಂಧನ; ದಾಸ್ಯಶೃಂಖಲೆ : ತೊಟ್ಟುತೊಡರಿನಿಱುಕಿಯೆನ್ನನಿಱಿಯುತಿರ್ಪವನ್ (ಬದ್ಧಪ್ರ. ೧೧-೨೦೬).

[ತೊಟ್ಟು + ತೊಡರ್2]

ತೊಟ್ಟುವೆಸ, ತೊತ್ತುವೆಸ, ತೊರ್ತುವೆಸ (ನಾ). ಊಳಿಗ ಸೇವೆ : ನೀಮೆನಗೆಡೆಮಡಗದೆ ಬೆಸಪ ತೊಟ್ಟುವೆಸನಂ ಬೆಸಸಿಂ (ಪಂಪಭಾ. ೯-೮೧); ಲವಣಾರ್ಣವದ ನಿಖಿಳ ವಸ್ತುಗಳಂ ಕಸ್ತೂರಿ(ಸಿ) ವಿಸ್ತಾರಿಸಿ ವೆಸರ್ವೆಸರೊಳೆ ಪೇಟ್ದವಟಯ್ಸೆ ವರತನು ತೊಟ್ಟುವೆಸನಂ ಪೂಣ್ದಾಳಾದಂ (ಶಾಂತಿಪು. ೧೧-೧೦ಪ) ; ಇನ್ನನ ಸುಸತ್ವಗುಣಸಂಪನ್ನನ ಸತಿಗೆನಗೆ ತಗದು ತೊಟ್ಟುವೆಸಂ (ನೇಮಿಪು. ೧೩-೩೮) ; ನನ್ನ ಈ ಕಡುಕಷ್ಟಂಗಳನ್ ನಿನ್ನ ಈ ತೊಟ್ಟುವೆಸಕಾಗಿ ಮಾಱಾಡೆ ನಾನ್ (ಬದ್ಧಪ್ರ. ೫೧-೧೧೧೩). **ತೊತ್ತುವೆಸ:** ಆಂ ತೊತ್ತುವೆಸದೊಳಿಪ್ಪೆಂ (ಬಂಹರಿ. ೯-೨). **ತೊರ್ತುವೆಸ.** 'ತೊರ್ತ್ತುವೆಸಗೆಯ್' ಪರಾ. [ತೊಟ್ಟು + ಬೆಸ1]

ತೊಟ್ಟುವೆಸಗೆಯ್, ತೊರ್ತುವೆಸಗೆಯ್ (ಕ್ರಿ). ತೊತ್ತಿನ ಕೆಲಸವನ್ನು ಮಾಡು ; ಊಳಿಗಮಾಡು : ತೊಟ್ಟೆ ತೊಟ್ಟುವೆಸಗೆ[ಪಾಠಾಂ. ಕೆ]ಯ್ ಪೋ ಪೋಗು ನೀನೆಂದು ಬಯ್ದು (ಪಂಪಭಾ. ೭-೫). **ತೊರ್ತುವೆಸಗೆಯ್:** ತೊರ್ತ್ತುವೆಸಗೆಯ್ಯದ ಮಂಡಲನಾಥರಿಲ್ಲ (ಎಇ. XIII, ೪೪-೩೦; 1112).

[ತೊಟ್ಟುವೆಸ + ಕೆಯ್1]

ತೊಟ್ಟುಟಿ, ತೊತ್ತಳ, ತೊತ್ತಳಿ, ತೊತ್ತಟ, ತೊತ್ತುಟಿ, ತೊಳ್ತಳ (ನಾ). ೧. ನುಗ್ಗುನುರಿ ; ಅಜಿಗಿಜಿ ; ಅಸ್ತವ್ಯಸ್ತವಾದ ಸ್ಥಿತಿ : "ತೊಟ್ಟುಟಿ (ತೊಟ್ಟಟಿ) = ಸೊಪ್ಪಾದುದು" (ಶಮದ. ಪರಿ. ೧) ; "ಸೊಪ್ಪಾದುದು ತೊಟ್ಟುಟಿ" (ಕರ್ಣಾನಿ. ೭೮). ೨. ತಂಳಿತ; ತುಳಿಯಂ ವಿಕೆ : ಅದಟರ ಚೆನ್ನಪೊಂಗರ ಸಬಂಗಳ ತೊಟ್ಟು[ಪಾಠಾಂ. ತ್ತು]ಟಿಯೊಳ್ ತೊಡಂಕಿ ನಿಲ್ಲದೆ (ಪಂಪಭಾ. ೮-೧೦೪); ಪರ್ವಿದಾ ಪಡೆಯ ತೊಟ್ಟುಟಿಯಿಂ ಗಿಡು ಬಳ್ಳಿ ಭೂರುಹಾವಳಿ ಪೊದಱುಳ್ಳ ಬಲ್ಲಡವಿ ಪೆರ್ವಯಲಾಯ್ತು (ಪುಷ್ಪಪು. ೫-೪೬). ೩. (ಆಲಂ) ಸ್ವಾಧೀನಪಡಿಸಿಕೊಳ್ಳುವಿಕೆ ; ಆಕರ್ಷಿಸುವಿಕೆ : ತೊಟ್ಟುಟಿಯುಮುಗಿಯುಂ ಬಗಿಯುಂ ಮಾಡಿ ಮನಮನುಱ್ ಸೆಱೆವಿಡಿದ ಸೀಯನಪ್ಪ ಗೇಯರಸಾಬ್ಧಿಪೂರದೊಳ್ ಮೂಡಿ ಮುಱುಗಾಡುತ್ತುಂ (ಶಾಂತಿಪು. ೨-೨೨ ಪ). **ತೊತ್ತಳ :** ೧. 'ತೊತ್ತಳತಂಳಿ' ಪರಾ. ೪. ರಭಸ; ವೇಗ : ಬಿರುಗಾಳಿಯ ತೊತ್ತಳದೊಳು ಬಂಡೆ ಬಂಡೆ ಬಡಿ ಬಡಿಯಲು (ನಡಬಂ. ೬೮-೭). **ತೊತ್ತಳಿ :** ೧. 'ತೊತ್ತಳಿಗೊಳ್' ಪರಾ. **ತೊತ್ತಟ:** ೧. 'ತೊತ್ತಟದುಟಿ' ಪರಾ. **ತೊತ್ತುಟಿ :** ೨. ನೋಡಿರೆ ಕರ್ಣನಿತ್ತ ಕನಕೋತ್ತರರಾಶಿಯನಂದು ವಂದಿಗಳ್ ನಾಡೆಯುಮೆಯ್ದೆಪೊತ್ತಡಕಲಾಱದೆ ಮಿಕ್ಕೊಡೆ ರಾಶಿಗೆಯ್ದಿರಲ್ ಕೂಡೆ ಮದೇಭರಾಜಘಟಕೋಟಿಯ ತೊತ್ತುಟಿಪೊಲ್ಲದಲ್ಲಿ ಬಿಟ್ಟೋಡೆ ನೆಲಂ ಸುವರ್ಣಮಯಮಾದುದು ತಚ್ಛಿಬಿರಾಂತರಾಳದೊಳ್ (ನೇಮಿಪು. ೧೧-೧೧೫). ೫. ಬಿಗಿತ : ಸವಿ ತಲೆಗಾದುದೀಯಧರದಿಂ ಪುಳಕಾಂಕುರ ಮಾಯ್ತುಮಾಯ್ತು ಮೆಯ್ಗವಳ ಕುಚಕ್ಕೆ ಕರ್ಕಶತೆ ಜೀವನಮಾಯ್ತುಟಿ ದಂತಿರೆನ್ನ ಬಾಯ್ವಿವರದೊಳೆನ್ನ ತೋಳ್ದೊಣರ ತೊತ್ತುಟಿಯೊಳ್ ಕಡಿಕೆಯ್ದುವಿಂತು ಬಟ್ಟುವೆ ಪೊಣರ್ವೆನ್ನುರೋಹತಿಯೊಳೆಂಬವೊಲೀಕ್ಷಿಸು ತಿರ್ದ ನಲ್ಲನಾ (ಲೀಲಾವ. ೧೩-೩೧). **ತೊಳ್ತಳ :** ೧. 'ತೊಳ್ತಳಂದುಳಿ' ಪರಾ.

ತೊಟ್ಟುಟಿಮಾಡು = ನುಗ್ಗುನುರಿ ಮಾಡು ; ಅಸ್ತವ್ಯಸ್ತಗೊಳ್ಳುವಂತೆ ಮಾಡು : ರಿಪುಸೇನೆಯಂ ತುಟಿದು ತೊಟ್ಟುಟಿಮಾಡುವೆಂ (ಪಂಪಭಾ. ೧೩-೪೪) ; ಜಿನರಾಜಂ ವನವಾರಿಕೇಳಿ ವಿಭವಂ . . . ಶ್ರೀಯಂ ಮದೀಯ ಪ್ರಿಯಾಬ್ಜಿನಿಯಂ ತೊಟ್ಟುಟಿ ಮಾಡಿ ಕೀಟ್ಟಡಿಸಿದಂ (ಅನಂಪು. ೭-೫೬). [<ತುಟಿ1]

ತೊಟ್ಟುಟಿದುಟಿ, ತತ್ತಟದುಟಿ, ತೊತ್ತಳಂತುಳಿ, ತೊತ್ತಳಂದಂಳಿ, ತೊತ್ತಳತುಳಿ, ತೊತ್ತಳದುಳಿ, ತೊತ್ತಟಂದಂಟಿ, ತೊತ್ತಟದುಟಿ, ತೊಳ್ತಳಂದಂಳಿ, ತೊಱ್ತುಳಿದುಳಿ, ತೋರ್ತಳದುಳಿ (ಕ್ರಿ). ಪುಡಿಯಾಗುವಂತೆ ತುಳಿ ; ನುಗ್ಗುನುರಿಯಾಗುವಂತೆ ತುಳಿ ; ಸೊಪ್ಪಾಗುವಂತೆ ಮಾಡು; ಮುದ್ದೆಯಾಗುವಂತೆ ಮಾಡು: ಸುಪ್ರತೀಕ[ಂ]ಕೆಯ್ಯ ಕಾಲ ಕೋಡೇಱಿನೊಳ್ ಬಲಮನೆಲ್ಲಂ ಜವನೆ ಜಿವುಟಿದುಟಿವಂತೆ ತೊಟ್ಟುಟಿದುಟಿದು (ಪಂಪಭಾ. ೧೧-೭೨ ಪ) ; ರಾಗರಸದಾಗರಮಪ್ಪ ವಲ್ಲಭನ ಮನಮನಾಗಳಾಗಳೆ ತೊಟ್ಟುಟಿದುಟಿದು ಬಂದಳೆನಿಸಿ (ವರ್ಧಪು. ೭-೯ ಪ). **ತತ್ತಟದುಟಿ :** ನಾಡಂ ದಾಟಿಟ್ಟು, ಒಳ್ಳಿದರಂ ಪೊರೆದು, ಕೂಟರಂ ತತ್ತಟದುಟಿದುಂ, ಬರ್ಕುಮಾತನಡಿಯಾಣತಿಯೊಳೆ ಸೇನೆ (ರಾಮಾಶ್ವ. ೧೩೦-೭). **ತೊತ್ತಳಂತುಳಿ:** ಒತ್ತಿದ ಜಗಳಕ್ಕೆ ಸುತ್ತ ಮುತ್ತಿಗೆಯಾಗಿ ತೊತ್ತಳಂತುಳಿದು ಕೊಲುವಾಗ ಉಳುವೆಯ ಕರ್ತ ಬಂದಾನು (ಸರ್ವಜ್ಞ. ೧೦೫೩). **ತೊತ್ತಳಂದುಳಿ :** ಮುಂದಲೆವಿಡಿದು ಕೆಡಹಿ ಪಾದಂಗಳಿಂ ತೊತ್ತಳಂದುಳಿದು ತಾಂಡವರೂಪಮಂ ಧರಿಸಿ ಕುಣಿವುತಿರೆ (ಚಿಬಪು. ೨೦-೩೨) ; ಧರೆಯೊಳಗುಳ್ಳ ಬಲ್ದೊರೆಗಳೆಲ್ಲ . . . ಪರಿತರೆ ತೊತ್ತಳಂದುಳಿದನಪ್ರತಿಮಂ (ಅಪ್ರತಿ. ೨೭-೨೧). **ತೊತ್ತಳತುಳಿ:** ಬುಧಜನಾಧಾರಂ ತೊತ್ತಳತುಳಿವಂ (ಬೊಂಕಶಾ. ೧೯೩೪, ಬಂಕಾಪುರ. ೩-೧೨ ; 934) ; ಅಧೈರ್ಯ, ಭಯ, ಹೆದರಿಕೆ ತೊತ್ತಳತುಳಿದವು (ಕಕಂಡ. ೧೩೮). **ತೊತ್ತಳದುಳಿ :** ಮಲೆವತ್ಯುದ್ವ್ರಿತ್ತರಂ ತೊತ್ತಳದುಳಿದು ನಿಜ ಪ್ರಾಜ್ಯ ಸಾಮ್ರಾಜ್ಯಮಂ ತೋಳ್ವಲದಿಂ ನಿಷ್ಕಂಟಕಂ ಮಾಡಿದನಧಿಕಬಳಂ (ಎಕ. II, ೧೩೨-೨೨ ; 1123) ; ಗೂಳಿಯಾಗಿ ಹೋಗಿ ಎಲ್ಲರ ತೊತ್ತಳದುಳಿದು ಒಕ್ಕಲಿಕ್ಕಿ (ಶೂನ್ಯಸಂ. ೧೫೦-೨೧); ತೊತ್ತಳದುಳಿದನರಿನಳಿನವನಮಂ ಬಸವ ಕುಂಜರನು (ಬಸಪು. ೫೯-೫೪) ; ಕದಳಿಯನು ಮದಕರಿಯು ತೊತ್ತಳದುಳಿದವೊಲು (ಕುವ್ಯಾಭೀ. ೪-೬೩) ; ವರ ಜಿತೇಂದ್ರಿಯರ ತೊತ್ತಳದುಳಿದ ಧೀರೋದಾತ್ತ ಜಯಯೆಂದು ಚಿತ್ತಜನನು ಹೊಗಳಿದರು (ಮೋಹತ. ೧೬-೮). **ತೊತ್ತಟಂದುಟಿ :** ಕೋಪಾಟೋಪದಿಂ ತೊತ್ತಟಂದುಟಿಯಲ್ಕೆಟ್ಟರೆ ರಾಸಭಾಕೃತಿಯಿನಾಗಳ್ ರೌದ್ರಮಂ ಬೀಱುತಂ (ಮಹಾನೇ ೬-೧೯) ; ಪಾರ್ವನಂ ತೊತ್ತಟಂದುಟಿದರ್ (ಚಿಕವಿ. ೬-೧೧೯) ; ತುಱುಗೆಱೆಯವನಂ ತೊತ್ತಟಂದುಟಿದು ಬೆಂಗಳೂರವನಂ ಭಂಗಂಬಡಿಸಿ (ಚಿಕವಂ. ೫೭-೧೨). **ತೊತ್ತಟದುಟಿ :** ಹೀನಬಲನನಧಿಕಬಲಂ ತೊತ್ತಟದುಟಿದನೆಂಬ ಲೋಕದ ಪಟಿ ಪೊರ್ದದೆ ಮಾಣೆ ಧರ್ಮಯುದ್ಧದೊಳೆಸಗಿಂ (ಅದಿಪು. ೧೪-೧೦೨) ; ಕೊತ್ತಾಗಾಲಮಂ ತೊತ್ತಟದುಟಿದು (ಚಿಕವಿ. ೨-೨೯); ದುಱುದುಂಬಿಗುದುರೆ . . . ಪೊಕ್ಕು ಪೊಱದೋಂಟಮಂ ತೊತ್ತಟದುಟಿದು ಪಾಟ್ಗಡಿಕುಂ (ರಾಮಾಶ್ವ. ೧೫೨-೧೩). **ತೊಳ್ತಳಂದುಳಿ:** ಅಖಿಳ ಜೀವರಂ ತೊಳ್ತಳಂದುಳಿದುಬ್ಬುತ ವಾರಾಹನಿಂತು ಕೋಲಾಹಲಂ ಮಾಡಿ (ವೀಶ್ವಪು. ೩-೧೧-೧೭). **ತೊಱ್ತುಳಿದುಳಿ:** ಕಲಿ ತೊಱ್ತುಳಿದುಳಿದಿಕ್ಕೆ ಪರೆಯ ಭಾನೂದಯದೊಳ್ಕರ್ತ್ತಲೆಯನ್ತಿರೆ ರಿಪುಗಳ್ಕರ್ತ್ತಲೆವೆಸರಾದು ದಾತನೊಕ್ಕಲ್ವೆಸರುಂ (ಸೌಇಇ. XI-I, ೪೫-೫; 980). **ತೋರ್ತಳದುಳಿ:** ಕಾಲ್ದುಳಿಯೊಳಳಿಱಾಗೆ ತ್ತೋರ್ತ್ತಳದುಳಿವಂ ರಣರಂಗಭೈರವಂ ಗೋವಿನ್ದ (ಸೌಇಇ. XX, ೮೭-೨೮; ?). [ತೊಟ್ಟುಟಿ + ತುಟಿ1]

ತೊಟ್ಟುಟ್ಟಿ, ತೊಳ್ಪುಟ್ಟಿ (ನಾ). ದಾಸಿಯ ಪುತ್ರ ; ತೊತ್ತಿನ ಮಗ : ಎಟ್ಟೋಗು ದೂತನಪ್ಪನ ಬೆಟ್ಟನ ನುಡಿಗೇಳ್ದುಮುಳಿಯಲಾಗದು ನೀನುಂ ಮೆಟ್ಟಟ್ಟು ವಿದುರನೆಂಬೀ ತೊಟ್ಟುಟ್ಟಿಯ ಮನೆಯ ಕೂಟಿ ನುಡಿಯಿಸೆ ನುಡಿದೈ (ಪಂಪಭಾ. ೯-೫೮). **ತೊಳ್ಪುಟ್ಟಿ :** ಮೂರು ತಲೆ ತೊಳ್ಪುಟ್ಟಿ ತಾಯ ಮಗನೆಂದು (ಮೂರುನಾ. ೧೩೩-೧೧೧೬).

[<ತೊಟ್ಟು + ಪುಟ್ಟು1 + – ಇ3]

ತೊಟ್ಟುಟ್ಟು (ನಾ). = ತೊಟ್ಟುಟ್ಟೆ : ನಾಲ್ಕುಂ ಗ್ರಹಂ ನೀಚ ಶತ್ರು ನಿವಾಸಂಗಳೊಳಕ್ಕೆ ನವಾಂಶಕದೊಳೊಂದಿರ್ದಂದು ತೊಟ್ಟು[ಪಾಠಾಂ. ಪ್ಪು]ಟ್ಟು (ಕಾಶಿ. ೫೧-೨೧). [<ತೊಟ್ಟು + ಪುಟ್ಟು₂]

ತೋ, ತೊಯ್, ತೊಯ್ಯು, ತೋಯು (ಕ್ರಿ). **ತೋದ₁** (ಭೂತಕೃ) **ತೊಯ್ದು, ತೋದು, ತೋಯ್ದು** (ಭೂತನಾ). ೧. ತೇವವಾಗು; ನೆನೆ ; ಹಸಿಯಾಗು : ಏನೆಂಬೆಂ ಬಾಲ್ಯದೊಳ್ ಮೇಲಱಿಯದೆ ಮಲದಿಂ ಮೂತ್ರದಿಂ ಶ್ಲೇಷ್ಮದಿಂ ತೋದಾ [ಪಾಠಾಂ. ತೊಯ್ದಾ] ನಾರೆಂದೇನುಮಂ ಭಾವಿಸದೆ(ರಕ್ಷಾಕ. ೪); ತೋದುದು ತೇರು ರಕ್ತದಲಿ (ಶಾಕ್ಯಾರ್ಜು. ೫-೫೫) ; ತೋದುದಂಬರತಳಂ ವಿವಿಧ ಲೋಳೆಗಳಿಂದೆ ತೀದುದಮರರ ಹರುಷವು (ಚಂಪು. ೪೩-೨೩) ; ಮಳೆಗಱಿದುದಿದೇತರ್ಕವಳ್ ತೋದೊಡೇ ಕುದ್ಯವಿಸಿತ್ತೋ ಪ್ರೀತಿ (ದಿವ್ಯಕ. ೭-೪೯) ; ಪಾದಪಗಳಡಿಗೆರೆಯ ಸಲಿಲವ್ರ ತೋದು ಕೊಂಬೆಗಳುಬ್ಬ ಪುಷ್ಪ ಸ್ವಾದುಫಲವೀವಂದದಲಿ (ಹಸಾರ. ೩-೧೩). ೨. ನೆನೆಯಿಸು ; ಒದ್ದೆಮಾಡು : " ತೋ–ಆರ್ದ್ರಕರಣೇ (ನೆನೆಯಿಸು) " (ಕಮಧಾ) ; ಅರಗಿನರಮನೆಗುರಿಯಬಟ್ಟಂತರಟಿ ದಾನವ ವನಚರಂಗಳ ಸರಳ ಮಳೆಯಲಿ ತೋದನದ್ದಿದನಮಮ ಮುಳುಗಿಸಿದ (ಕಾಶಿಕಾ. ೩೨-೩೩). **ತೊಯ್** : ೧. "ತೊಯ್ (ತುಯ್)=ಸಾರ್ದ್ರತ್ವೇ" (ಕಮಧಾ) ; ಹಾಯ್ದ ಕರುಳಿನ ವಿದುಳ ಜೋರಿನೆ ತೊಯ್ದ ರಕ್ತಾಂಬರದಿ ತಾನಿರಲೈದಿ (ಶಾಕ್ಯಾಕ. ೮-೪೧). ೨. ಹಳಮುಖನುಂ ಬೆಂಟಿಯನೆಣ್ಣೆಯೊಳ್ ತೊಯ್ದು [ಪಾಠಾಂ. ತೋದು]ನಪಾಗ್ರದಿಂ ತೊಟ್ಟು ನೆತ್ತಿವರೆಗಂ ಬಳಸಿಯುಂ . . . ಕಿಚ್ಚಂ ತಗುಳ್ದಿ (ವಡ್ಡಾ.ರಾ. ೧೩೪-೬); ಕನಲ್ದ ಕೆಂಡದ ವೇಲೆ ವಟಿಯ ಬೇವಿನೆಣ್ಣೆಯೊಳ್ ತೊಯ್ದಿಕ್ಕಿದ ಬೆಳ್ಳುಳ್ಳಿಯ ಕಂಪಿನಂತೆ (ಪಂಪಭಾ. ೩-೭೦ ಪ) ; ನೀಲಿಯ ರಸದೊಳ್ ಕರಡಿಯ ತೋಲಂ ತೊಯ್ದಟ್ಟಿ ಮಸಿಯೊಳದಱೊಳ್ ಪುದಿದತ್ತೀ ಲೋಕಮಕ್ಕುಮೆನಿಸಿತ್ತಾ . . . ತಮಸಂ (ಕಾವ್ಯಾವ. ೭೩೩) ; ಪೊಸ ಮುತ್ತನಾಯ್ದಮರ್ದಿನೊಳ್ತೊಯ್ಯಂತೆ ನೇರ್ಪಟ್ಟ ನಿರ್ಮಲದಂತಚ್ಛವಿ ಬೇಡಿದರ್ಗೆ ವರವೀವಂತಿರ್ಪುವು (ಅನಂಪು. ೫-೧೪). **ತೊಯ್ಯು** : ೧. "ನೆನೆ = ತೊಯ್ಯು" (ಗಂಗಾಮ. ೧೯೦). **ತೋಯು** : ೧. ಬಸಜಾಕ್ಷಿಯರು ತೋಯ್ದು ಪೊಱಮಟ್ಟು ಬಂದಾಗ . . . ದೇಹಲಾವಣ್ಯಪರಿಪೂರ್ಣರಸ ಸುರಿವಂತಾದುದು (ಪೂರ್ವಹರಿ. ೧೪-೫೭) ; ನೀನು ನೋಯೆ ಕಣ್ಣು ತೋಯೆ ರುದ್ರಭೂಮಿ ಈ ಜಗ (ಪಾಪನಸ. ೧೪-೧೫) ; ನೆಲವೆಲ್ಲ ಕಣ್ಣೀರಿನಿಂದ ತೋಯ್ದು ಹೋಗಿದೆ (ಸುಭಾಂ. ೧೦೪).

[ದೇ. ತ ತಮಿ. ತೋಯ್ ; ಮಲ. ತೋಯು ; ತೆಲು. ತೋಗು]

ತೋಂಟ, ತೋಟ₁ (ನಾ). ಹೂವು, ಹಣ್ಣು, ಕಾಯಿಪಲ್ಯೆಗಳು ಅಥವಾ ತೆಂಗು, ಅಡಿಕೆ ಮುಂತಾದ ಮೊದಲಾದುವುಗಳು ಬೆಳೆಯುವ ಭೂಮಿ ; ಬಾಗಾಯತ ಭೂಮಿ : ಶ್ರೀವರದಾ ದಣ್ಣುಗಾಮುಣ್ಣರಾ ತೋಣ್ಪದಾ ಪಡುವಾಯೊನ್ದು ತೋಣ್ಪ (ಎಕ. IV, ನಾಗಮಂ. ೮೫-೬೭ ; 770) ; ಕಬನಿ ಮತ್ತಂ ಮಣ್ಣೆಯೆಲರ ಕೆಱಿಯ ಕೆಬಗಣ ತೋಣ್ಪಮುಂ (ಎಕ. IX, ನಂಜಮಂ. ೬೦-೧೨೫ ; 797); ಕಳ್ಳಿಯಂ ನಂಬಿ ಕೌಂಗಿನ ತೋಂಟಮುಂ ಕಡಿವ ತೋಂಟಿಗನುಮಂ (ಧರ್ಮಾಮೃ. ೮-೩೧) ; ಕುಱಿವಿಂದು ಕಬ್ಬಿನ ಉಲಿವ ತೋಂಟ [ಪಾಠಾಂ. ಹೊಲ]ವ ಹೊಕ್ಕು ತೆಱನನಱಿಯದೆ . . . ಮೇದುವು (ಜಸವ. ೫೫೮) ; ಎಲರ್ವೊಯ್ಲುಂದೆಸೆವಿಕ್ಷುಕಾಂಡರಸದಿಂ ತೋಂಟ [ಪಾಠಾಂ. ನಾಂದಿ]ಕ್ಕೆ ತವ್ಮೊಳ್ ಪಳಂಚಲೆವೊಳ್ಗುಂಚಲ ಕಾಯೊಳುರ್ಕುವೆಳನೀರಿಂದುಂ ಬನಂಗಳ್ಗೆಗುಂದಲೆ ನೀರೂಟಮಿದೇಕೆ (ವರ್ಧಪು. ೦-೪೩) ; ಕಂಡವರ್ ಕಾವಿಸೆ ಮಾಲೆಗಾಱರೊಸೆದೋವಿದ ಪೂವಿನ ತೋಂಟವೊಪ್ಪುಗುಂ (ಗಿಕಿ. ೩-೬೦). **ತೋಟ₁** : ಗಳೆಯ ಮಂತ್ರರ್ ೩ ಬೆದ್ದಲೆ ಮತ್ರರ್ ೫ ಅಡಕೆಯ ತೋಟದಲು ವರ್ಷಕ್ಕೆ ಮರದಲೊಂದಡಕೆ ಎಲೆಯ ಸುಂಕ (ಎಕ. VII, ಶಿಕಾರಿ. ೫೨-೧೫ ; 1032) ; ನಾಡಿಲ್ಲದರಸುಂ ಫಲಮಿಲ್ಲದ ತೋಟಮುಂ ... ಒಪ್ಪಲಾರ್ಕುಮೆ (ಧರ್ಮಾಮೃ. ೦-೬೫) ; ತನುವ ತೋಟವ ಮಾಡಿ ಮನವ ಗುದ್ದಲಿ ಮಾಡಿ ಅಗೆದು ಕಳೆದೆನಯ್ಯ ಭ್ರಾಂತಿನ ಬೇರೊಡದು(ಅವಚ.೧೪೦-೬೧೩);ಮುಳಿದು ಕಬ್ಬಿನ ತೋಟದಲಿ ನರಿ ಹುಲಿಯವೋಲ್ ಗರ್ಜಿಸಿತು (ಶಾಮ್ಭಾಳ. ೦೩-೪೪); ಬನ್ನಿ ಓ ಬಾನಲಿವರೆ. ನಮ್ಮ ತೋಟಕೆ (ಆನಿಳೀ. ೫೦-೧) ; ತೋಟ ಮೂರು ವೊಳ ಕಾಯಿ ಆರು ವೊಳ (ಗಾಡ).

[ದೇ. ತ ತಮಿ. ಮಲ. ತೋಟ್ಟ ; ತುಳು. ತೋಟ, ತೋಟೊ ; ಕೊಡ. ತೆಲು. ತೋಟ ; ಗದಬ. ತೋಂಟ]

ತೋಂಟಕಂಡ (ನಾ). ತೋಟದ ಭಾಗ.–ತುಣುಕು : ವೊಳವಡೆ ಪದಿಕ್ಕೊಳಂ ಆರಾತೋಣ್ಪದಿಂ ಮೂಡಣ ತೋಣ್ಪಕಣ್ಮಮುಂ ಮಾರಿ ಬೆಱಿತಿಯಿಂ ಒಡಗಣ ಮಣ್ಣು (ಎಕ. IV, ಎಳಂಮೂ. ೨೫-೭; ಸು. 925 ?).

[ತೋಂಟ + ಕಂಡ₁]

ತೋಂಟಖಂಡ (ನಾ). = ತೋಂಟಕಂಡ : ಶ್ರೀ ದೇಕಬ್ಬೆ ಮಹಾದೇವರ್ಗೆ ಬಿಟ್ಟ ಪೊಂಬೊಲಂ ತೋಂಟಖಂಡಮುಮಂ (ಎಕ. IV, ಹೆಗ್ಗ. ೧೪-೪೭ ; 1057). [ತೋಂಟ + ಖಂಡ]

ತೋಂಟವಾಳ, ತೋಟವಳ, ತೋಟವಾಳ (ನಾ). ತೋಟದಲ್ಲಿ ಕೆಲಸ ಮಾಡುವವನು ; ತೋಟಗಾರ. 'ತೋಂಟವಾಳತಿ' ಪರಾ. **ತೋಟವಳ** : ಬನ್ನಪಂಗೆಯ್ದ ತೋಟವ [ಪಾಠಾಂ. ವಾ]ಳಂಗೆ ಪಸಾಯನ ಮನಿತ್ತು (ರಾಜಶೇ. ೦೦–೫ ಪ). **ತೋಟವಾಳ** : ಮೇಲಿನ 'ರಾಜಶೇ' ಪ್ರಯೋಗದ ಪಾಠಾಂತರವನ್ನು ನೋಡಿ. [ತೋಂಟ + – ವಾಳ₁]

ತೋಂಟವಾಳತಿ (ನಾ). ತೋಟದಲ್ಲಿ ಕೆಲಸ ಮಾಡುವವಳು ; ತೋಟಗಾರ್ತಿ : ಇತ್ತಳರಸಗೊರ್ವ ತೋಂಟವಾಳತಿ ಹೊಂಗೇದಗೆ ಹೂವ (ಸೊಲಸೋ. ೩-೪೩). [ತೋಂಟವಾಳ + – ತಿ₁ (<– ಇತ್ತಿ)]

ತೋಂಟವಾಳಿಗ, ತೋಟವಾಳಿಗ (ನಾ). = ತೋಂಟವಾಳ : ಪುರವ ಪೊಗದ ಮುನ್ನ ತೋಂಟವಾಳಿಗನದನೊರೆಯಲು ಯುವರಾಜ ಮುಳಿದು (ಪರ್ವಪ. ೩-೬೩).**ತೋಟವಾಳಿಗ** : ತೋಟವಾಳಿಗ ಪೇಳಲಂದಾ ಬಸವಂದ ವನೇ ನೋಳ್ಪೆನೆಂದು . . . ಪೊಱಮಟ್ಟ (ಶ್ರೀಪಾಂ. ೩-೧೭).

[ತೋಂಟವಾಳ + – ಇಗ]

ತೋಂಟವೆಸ (ನಾ). ತೋಟದ ಕೆಲಸ.–ಕಾರ್ಯ. 'ತೋಂಟವೆಸಂ ಗೆಯ್' ಪರಾ. [ತೋಂಟ + ಬೆಸ₁]

ತೋಂಟವೆಸಂಗೆಯ್ (ಕ್ರಿ). ತೋಟದ ಗಿಡ, ಮರಗಳಿಗೆ ಆರೈಕೆ ಮಾಡು ; ತೋಟವನ್ನು ಕೃಷಿಮಾಡು : ಮಂದಾನಿಲಂ ತೋಂಟವೆಸಂಗೆಯ್ದಟ್ಟಿಯಿಂ ಪೆರ್ಚಿಸಿದ ವಿಚಕಿಳಂ ರಯ್ಯಮಲ್ಲಲ್ಲಿಗೆಲ್ಲಂ (ಚಂದ್ರಪು. ೦-೪೭). [ತೋಂಟವೆಸ + ಕೆಯ್₁]

ತೋಂಟಿ₁ 'ತೋಟಿ₁' ನೋ.

ತೋಂಟಿ₂ 'ತೋಟಿ₂' ನೋ.

ತೋಂಟಿಗ, ತೋಟಿಗ (ನಾ). ತೋಟದ ಕೆಲಸ ಮಾಡುವವನು : ಅಂತಃಪುರಕಾಂತಾಸಂತತಿಲತಾಪ್ರತಾನಮುಂ ಜಲಧರ ಧಾರಾಂತಾಭಷೇಕದಿಂ ತಳೆದಂ ತೋಂಟಿಗನಂತೆ ಸಂತತಂ ಯುವರಾಜಂ (ಶಾಂತಿಪು. ೮-೪೬) ; ಮದನಂ ಗಡ ಯೌವನವನಕ್ಕೆ ತೋಂಟಿಗನಾದಂ (ಅಜಿಪು. ೨-೩೧) ; ಕಳ್ಳಿಯಂ ನಂಬಿ ಕೌಂಗಿನ ತೋಂಟಮುಂ ಕಡಿವ ತೋಂಟಿಗನುಮಂ (ಧರ್ಮಾಮೃ. ೮-೩೧) ; ಸೊಂಟಿನಿಂ ಬೆಳ್ಪುವೆತ್ತಿರ್ದಿಂಗೋಲಂ ಪಣ್ಪ ದಾಳಿಂಬಗಳನೊಲವಿನಿಂ ತೋಂಟಿಗಂ ಕೊಟ್ಪನೋರ್ವಂ (ಕಬ್ಬಿಕಾ. ೮೮) ; ಲೋಗರ ಕಣ್ಣಿಂಜಲ್ ತಾಗದಂತು ಬೆರ್ಚನಿಟ್ಟು ಪಕ್ಕಿಗಳಂ ಬೆದರ್ಚಲೊಡರ್ಚಿದ ತೋಂಟಿಗನೊಂದಾಯತಿಯಂ ಕಂಡನಕ್ಕುಂ (ರಾಮಾಶ್ವ. ೮೫-೨೮).

ತೋಟಿಗ : ಸಮಸ್ತ ತೋಟಿಗರುಂ ಕೊನೆಕಾಜರು ವುಳಿಯ ಮೂನೂ ರ್ಬ್ಬರುಮಿರ್ದ್ದು . . . ಬಿಟ್ಟ ಧರ್ಮವಪ್ಪುದು (ಸೌಇಇ. IX-1, ೧೪೦-೩೩; 1136) ; ಬಾಳೆವಣ್ಣೊನೆಯ ಕಾಣಿಕೆಯಿತ್ತು ಭೂವರಗೊರ್ವ ತೋಟಿಗ ನೆಂದ (ಸೊಬಸೋ. ೩-೧೦) ; ಬಳಿಕಲಾ ತೋಟಿಗನ ಬುದ್ಧಿಗೆ ತಿಳಿವ ತೀಡುವೆನೆನುತ ಮಿಗೆ ಕಂಗಳಿಗೆ ಕಟ್ಟಿದಿರಾಗುತಲಿ ಶರಣಾರ್ಥಿಯೆಂದೆನಲು (ಪ್ರಭುಲೀ. ೦೧-೭) ; ತೋಟ ತೋಟಿಗಗಾಸೆ ಕೋಟೆ ಮನ್ನೆಯಗಾಸೆ (ಸರ್ವಜ್ಞ. ೧೯೦೩) ; ಅಗೆದು ಗೊಬ್ಬರವಿಕ್ಕಿ ನೀರೆರೆದು ತೋಟಿಗನು ಜಗಿವ ಮುಳ್ಳಿರಿತಗಳ ಸೈರಿಸೆ ಗುಲಾಬಿ ನಗುವುದೊಂದರೆನಿಮಿಷ (ಮಂಕುಕ. ೪೭೮). [ತೋಂಟ + – ಇಗ]

ತೋಂಟಿಗವೆಸ (ನಾ). ತೋಟಗಾರನ ಕೆಲಸ,–ಕಾರ್ಯ. 'ತೋಂಟಿಗ ವೆಸಂಗೆಯ್' ಪರಾ. [ತೋಂಟಿಗ + ಬೆಸ$_1$]

ತೋಂಟಿಗವೆಸಂಗೆಯ್ (ಕ್ರಿ). ತೋಟಗಾರನ ಕೆಲಸ ಮಾಡು : ನನೆಯಂಬಂ ನನೆಮಾಡಿ ಚಾಪಲತೆಯಂ ನೀಳೇಕ್ಷುಗಳ್ಗೆತ್ತು ಕೇತನಮಂ ಖ್ಯಾತಿಯೊಳಿಕ್ಕಿ ತೋಂಟಿಗವೆಸಂಗೆಯ್ದಂಗಜಂ ತಿರ್ದೆ (ಅನಂಪು. ೧೦-೨೨).

[ತೋಂಟಿಗವೆಸ + ಕೆಯ್$_1$]

ತೋಂಟಿಗಸಮಯ (ನಾ). ತೋಟ ಮಾಡುವವನನ್ನು ನೇವಿಂಸುವುದು,–ಕರಾರು ಮಾಡಿಕೊಳ್ಳುವುದು : ಮೂಱು ಮತ್ತರ ತೋಂಟ ಮೊಂದದಂ ಜೈನರ್ಪ್ರತಿಪಾಳಿಸುವರಾ ತೋಂಟಕ್ಕೆ ತೋಂಟಿಗಸಮಯ ಮಿಲ್ಲದನಾರೋರ್ವ್ವರ್ಮ್ಮಾರ್ಪ್ಪರವರ್ಬ್ಬಸದಿಗೆ ಸಮಭಾಗಮಿಕ್ಕಿಯುಣ್ಬರ್ (ಸೌಇಇ. XI-1, ೫೨-೭೩ ; 1007).

[ತೋಂಟಿಗ + ಸಮಯ]

ತೋಂಟಿಗೊಳ್ (ಕ್ರಿ). ಯುದ್ಧಕ್ಕೆ ತೊಡಗು : ರಾಜನೃಪನೊಳ್ ತೋಂಟಿ ಗೊಳಲೆಂದು ಎಡದೊಱೆಯೆಂಬ ಗಡಿಗೋಂಟೆಯೊಳ್ ಕಟ್ಟಿರ್ದ ಮೇಘ ಪುಷ್ಪಮೆಂಬ ಕೇಜಯಂ ಕಳವಿನಿಂದೆ ಕೊಂಡೊಯ್ವುದುಂ (ಚಿಕವಂ. ೫೦).

[ತೋಂಟ$_1$ (<ತೋಟ$_1$) + ಕೊಳ್$_1$]

ತೋಂಡಿಗೆಱೆ (ನಾ). ಒಂದು ಸ್ಥಳದ ಹೆಸರು : ಪಶ್ಚಿಮಾನ್ತ ಭಾಗ ತತಃ ತೋಣ್ಡಿಗೆಱೆ ದಕ್ಷಿಣಾನ್ತ ಭಾಗಃ (ಮೈಅರಿ. ೧೯೪೨, ೭೫-೧೧೫ ; 819). [ತೋಂಡಿ ? + ಕೆಱೆ]

ತೋಂಡಿ ಪರೀಕ್ಷೆ (ನಾ). ಮೌಖಿಕ ಪರೀಕ್ಷೆ : ಮೌಖಿಕ ಪರೀಕ್ಷೆಗೆ ತೋಂಡಿ ಪರೀಕ್ಷೆ ಎಂದೂ ಹೆಸರಿದೆ (ರೂಢಿ).

[ತೋಂಡಿ$_0$ (ℙ ←ಮರಾ. ತೋಂಡೀ) + ಪರೀಕ್ಷೆ]

ತೋಕ (ನಾ). ಮಗ ಅಥವಾ ಮಗಳು; ಸಂತಾನ : "ಸೂನುಃ, ಸಂತತಿಃ . . . ತೋಕಂ, ತನಯಃ, ಸ್ತನಂಧಯಃ, ಅಪತ್ಯಂ – ಈ ೧೨ ಮಗವು" (ಹಲಾಯು. ೮೨-೩೪೩) ; ಬಿಜ್ಜಲೋರ್ವ್ವೀಶನ ತೋಕಂ ಸೋವಿದೇವಂ (ಸೌಇಇ. XV, ೧೪೨-೯ ; ?) ; ಘನಸಂಸಾರಸುಖಕ್ಕೆ ಸಾರಮಿದು . . . ಸುತಶಿರೋಜಾಘ್ರಾಣನಂ ಸೂನುಲೋಚನರೋಚಿಷ್ಪರಿಚರ್ಚೆ ತೋಕ ತನುಲಿಪ್ತಕ್ಷೋದ ಸಂದರ್ಶನಂ (ಕುಸುಮಾ. ೩-೫೮) ; 'ಜೀವತ್ತೋಕೆ' ಪರಾ. [ಸಂ.]

ತೋಕಿಸು (ಕ್ರಿ). ೧. ಹೊಡೆ ; ಪ್ರಯೋಗಿಸು ; ಬಿಡು : ಸಂಗರಕೆ ಬಿಲ್ಗೊಂಡು ಸರಳುಗಳ್ತೋಕಿಸುತಮತಿರಥರು ಪೊಕ್ಕು ಸೇನಾಜಲಧಿ ಯನ್ನೊರಸಿ (ತುರಂಗ. ೪೯-೪೧). ೨. ಬಾರಿಸು ; ಮೊಳಗು ; ಶಬ್ದ ವಾಗು : ಏಕಶಂಖಧ್ವನಿ ಛಡಾಳಿಸಲ್ಪರುರವಣೆಯಿಾ ಕ್ರತುವು ಮುಗಿದ ಪರಿಯಂತರಮ್ಮೇಳುದಿನ ತೋಕಿಸಿತು ಪಗಲಿರುಳು (ತುರಂಗ. ೨೨-೪೬).

[ತೋಕು$_1$ + – ಇಸು$_3$]

ತೋಕು$_1$ (ಕ್ರಿ). ೧. ಹೊಡೆ ; ಪ್ರಹಾರ ಮಾಡು ; ಪ್ರಯೋಗಿಸು : ತೋಕುವಂಬಿನ ಜೋದರೊಗ್ಗಿನೊಳೌಕಿದುವು ಸಾವಿರಮದೇಭಾನೀಕ ಬೊಬ್ಬೆಯ ಲಳಿಯ ತಾಕಿತು ಲಕ್ಕ ಪಾಯದಳ (ಕುಪ್ಯಾಗ. ೧-೨೮) ; ಒಡನೆ ನೂಕಿತು ತೋಕುವಂಬಿನ ತಡೆವ ಶೂಲದ ಹೊಯ್ವ ಖಡ್ಗದ ಬಿಡುವ ಚಕ್ರದ ಬೀಸುಗವಣೆಯ ಬಹಳ ಭಟನಿಕರ (ತೊರರಾ. ೫-೬-೧೧); ತೋಕುತಂಬನು ರಥದಿ ಕಲಿಬಲನಾಕರಸಿ ಮುಂದುಬ್ಬಿ ಬೊಬ್ಬಿಡೆ (ಅಂಬಿಕಾ. ೧೪-೪೨) ; ಷಡ್ರಥರು ಸೊಕ್ಕಿ ಕೋಪಾಗ್ನಿಯಿಂ ತೋಕಿದರು ತನಿಸರಳ (ತುರಂಗ. ೫೨-೨೬). ೨. ಸುರಿಸು ; ವರ್ಷಿಸು : ತೋಕಿದವು ನಾರಾಚ ದೆಸೆದೆಸೆಯೋಕರಿಸಿದವೊ ಸರಳನೆನೆ (ಕುಪ್ಯಾಅ. ೧೯-೧೩) ; ಮಾನವಸೂರ್ಯ ಭಾಪೆನುತ ತೋಕಿ ಪುಷ್ಪಾಂಜಲಿಯಲಮರಾನೀಕ ಕೈವಾರಿಸಲು (ನಿಭಾಗ. ೪-೧೦-೩೯) ; ಮರದ ಬುಡಕ್ಕೆ ನೀರು ತೋಕು ತ್ತಿದ್ದ ರಾಮನಾಥನನ್ನು ಕರೆದು . . . ಗುಡುಗಿದನು (ಮೂರುದಾ. ೩೩). ೩. ಹೊರಹಾಕು ; ಚೆಲ್ಲು ; ತುಳುಕು : ನೆಱೆ ತೋಕಿದನು ಗಂಧರ್ವ ಜಲಧಿಯನೊಂದು ನಿಮಿಷದಲಿ (ಕುಪ್ಯಾಅ. ೧೯-೧೭) ; ಹೊದಱ ಹರೆಗಡಿ ದೌಕಿದನು ತೋಕಿದನು ಸುಭಟರ ಜೀವವನು (ಕುಪ್ಯಾದ್ರೋ. ೦೭-೨೫) ; ಕುಹಕದಲಿ ಮಲೆತರೆ ತೋಕುವೆನು ತನಿಗರುಳ ರುಧಿರವ ಶಾಕಿನಿಯರಿಗೆ (ನಿಭಾಗ. ೩-೭-೪೧). ೪. ಅಲ್ಲಾಡು ; ಬೀಸು : ತೋಕಿದವು ಸೀಗುರಿ ಗಳೆಡಬಲದಾಕೆಯಲಿ (ಕುಪ್ಯಾಸ. ೧೫-೭೭). ೫. ಓಡು ; ಚೆದುರು : ಬಲಜಲಧಿ ತೋಕಿದುದು ದೆಸೆದೆಸೆಗೆ ರಿಪುಬಲದ ಸುಭಟರಂ ನಾಕಮಂ ಕಾಣಿಸಿತು (ತುರಂಗ. ೪೯-೩೮).

[ದೇ.॥ ತಮಿ. ತುಕೈ, ತುವೈ ; ತುಳು. ತೊಯಿಪು ; ಕುಯಿ. ತೋಗ ; ಕುರುಖ್. ತೋಕ್‌ನಾ]

ತೋಕು$_2$ (ನಾ). ಕೋವಿ ; ಬಂದೂಕು : ಮಾದಪ್ಪ ಹಗಲ ಮೇಲೆ ತೋಕನ್ನು ಏರಿಸಿ ಸೊಂಟಕ್ಕೆ ವಡಿಕತ್ತಿಯನ್ನು ಸೆಕ್ಕಿಸಿ . . . ನರಿಬೇಟೆಗೆ ಹೊರಟ (ಹುಲಿಹಾ. ೧೭). 'ತುಪಾಕಿ' ಪರಾ.

[ದೇ.॥ ತಮಿ. ಮಲ. ತೋಕ್ಕು]

ತೋಕು$_3$ (ನಾ). ಉತ್ಸಾಹ (?) : ಜಂಝಾನಿಲ ಸುಳಿದೇಳ್ವ ರಭಸಮೋ ಯೆನೆ ಕಾದಿದರ್ಕಲಿಗಳಿಗೆ ಪೊಸತೆನಲು ಹಾಣಾಹಣಿಯಿಂದಲುಚ್ಚಳಿಸಿದರ್ . . . ಗಜಗಳಿಂ ತುಳಿಸಿದರ್ ತೋಕಿನಿಂದ (ಲಕ್ಷ್ಮಭಾ. ೬-೩-೩೨).

[←ಮರಾ. ತೋಕ್, ತೋಖ್ ; ಹಿಂ. ತೋಖ್ ; ಅರ. ತೌಕ್./ಸಂ. ತೋಷ]

ತೋಕುಳಿ (ನಾ). ೧. ನೆನೆಸುವಿಕೆ ; ಅದ್ದುವಿಕೆ : (ಕಿ). ೨. ತೊಗಲು ಹದ ಮಾಡುವುದಕ್ಕಾಗಿ ನೆನೆಯಿಡುವ ಗುಳಿ : ಹರಳಯ್ಯಗಳ ತೋಕುಳಿಯ ನೀರ ತಂದು . . . ತಂಬುಗೆಗಳೊಳು ಮೊಗೆದು ಹರುಷದಿ ಮಧುವರಸಗೆಱೆಯಲು (ಪ್ರಭುಪು. ೯-೧೦೩) ; ಪೊಲೆಯರ ತೋಕುಳಿಯ ಕೊಳದೊಳಂಬುಜಮಂ ನೀನಲಸದೆ ಪುಟ್ಟಿಸಿದಂತೆ (ವೃಷವಿ. ೩೪-೧೦೮).

[ತೋ + ಕುಳಿ$_2$ (<ಕುಟ್ಟು$_2$)]

ತೋಕೆ 'ಸೋಗೆ' ನೋ.

ತೋಕೆಗೋಧಿ (ನಾ). ಉದ್ದವಾಗಿರುವ ಒಂದು ಬಗೆಯ ಗೋಧಿ : ಓಟ್ಸು, ತೋಕೆಗೋಧಿ (ಮೃಜಿಗಿ. ೧೦-೧೮೧) ; ತೋಕೆಗೋಧಿ, ಜವೆ ಗೋಧಿ, ರೈ ಎಂಬ ಚಿಕ್ಕ ಗೋಧಿ . . . ಇವು ಸಮಶೀತೋಷ್ಣ ವಲಯದ ಇತರ ಮುಖ್ಯ ಬೆಳೆಗಳು (ಭೂವಿವ. ೧೮೭).

[ತೋಕೆ (<ಸೋಗೆ) + ಗೋಧಿ$_1$ (<ಗೋದುವೆ)]

ತೋಚಿಕೆ (ನಾ). ತೋರುವಿಕೆ ; ಗೋಚರವಾಗುವಿಕೆ; ಹೊಳೆಯುವಿಕೆ; ಭಾಸವಾಗುವಿಕೆ : ಆ ಕತೆ . . . ರಂಜನೀಯವಾಗಬಹುದೆಂದು ಮನಸ್ಸಿಗೆ ತೋಚಿತು, ಆ ತೋಚಿಕೆಯ ಫಲವೇ 'ಕಡುಗಲಿ ಕುಮಾರ ರಾಮ' ಗ್ರಂಥದ ಪ್ರಕಟಣೆ (ನಂಜುಂಡ. III, ಪ್ರಸ್ತಾವನೆ).

[ತೋಚು + – ಇಕೆ]

ತೋಚು(ಕ್ರಿ). ೧. ಗೋಚರವಾಗು ; ಕಾಣು ; ತೋರು : ನವೋನವದ ಜಾಗೃತಿಯಲಿದ್ದ ಜೀವಾಗ್ನಿ ತೋಚುತಿಹುದು (ಜ್ಞಾಕಾ. ೬-೦೩). ೨. (ಮನಸ್ಸಿಗೆ) ಹೊಳೆ ; ಭಾಸವಾಗು : ಕೀಚಕನಾಡಿದ ನೀಚನುಡಿ ಕೇಳಿ . . . ಮುಂದೆ ತೋಚದೆ ಖಳನ ವಿಚಾರಿಸಿಕೊಳ್ಳೂ ಶ್ರೀ ಚಕ್ರಪಾಣೀ . . . ಎಂದು ನುಡಿದಳು (ಪಾದಿಕೀ. ೬೫-೯) ; ಎನಗೇನು ತೋಚುವ ಪರಿಯ ಕಾಣೆನು (ಜಿನಭಾ. ೬೩-೩೭).

ತೋಚಿಕೊಳ್ಳು = ಭಾವಿಸು ; ಯೋಚನೆ ಮಾಡು : ವಶಃ– ಕಾಂತಿಃ ೨ ಮನಸ್ಸಿನಲ್ಲಿ ನೆನವುಂಟಾಗುವಿಕೆ ; ತನ್ನೊಳಗೆ ತೋಚಿಕೊಳ್ಳುವಿಕೆ, ಬುದ್ಧಿಯಲ್ಲಿ ಸ್ಫುರಿಸುವಿಕೆ (ಸಿದ್ಧಾಂತಿ. ೩೦೭); ವೀರರಾಜ ಅದೇನು ತೋಚಿಕೊಂಡನೊ ಯಾವ ಪ್ರತಿಯನ್ನೂ ಹೇಳದೆ . . . ಸಾಗಿದನು (ಚಳರಾ. ೧೩). [<ತೋಱು + – ಚು೧./ತುಳು. ತೋಜು, ಸೋಜು; ತೆಲು. ತೋಚು]

ತೋಟ೧ 'ತೋಂಟ' ನೋ.

ತೋಟ೨ 'ತೋಟ್ಟಾ೧' ನೋ.

ತೋಟಕ (ನಾ). [ಛಂದ] ಪ್ರತಿ ಪಾದದಲ್ಲಿ ಹನ್ನೆರಡು ಅಕ್ಷರಗಳುಳ್ಳ ವೃತ್ತ ; : ಜವಮಾನ ಚತುಷ್ಕಯುತಂ ಯತಿಯುಂ ದಿವಸಾಧಿಪರೊಳ್ ನಿಲೆ ವಸ್ತು ಕವಿಪ್ರವರಸ್ತುತಮಪ್ಪುದು ತೋಟಕಮೆಂದವಧಾರಿಸು (ಛಂದೋಂಬು. ೨-೫೬). [ಸಂ.]

ತೋಟಗಟ್ಟು (ನಾ). ತೋಟದ ಪ್ರದೇಶ ಅಥವಾ ಸ್ಥಳ: ಬಿಟ್ಟ ಮೇಲು ಮಕ್ಕಿಯ ಗಡಿಯ ತೋಟಗಟ್ಟು ಕಮ್ಮ ೪೦೦ (ಸೌಇಇ. IX-1, ೯೫-೫೦; 1041); ಮನ್ನೆಯಗೆಜಿಯ ಕೋಡಿಯಿಂ ತೆಂಕ ತೋಟಗಟ್ಟು ಮತ್ತರೊಂದು ಆ ಕೆಜಿಯ ಕೆಳಗೆ ಗದ್ದೆ ಮತ್ತರೆರಡು (ಸೌಇಇ. IX-1; ೩೨೯-೩೩; 1200); ಮಂನೆಯಗೆಜಿಯ ಕೆಳಗೆ ಹಿರಿಯೂರೆಡೆಯರ ತೋಟಗಟ್ಟು ಮತ್ತರೆರಡು (ಸೌಇಇ. IX-1, ೩೩೩-೪೬ ; 1216).

[ತೋಟ೧ (<ತೋಂಟ) + ಕಟ್ಟು೨]

ತೋಟಗಾರ (ನಾ). ೧. ತೋಟಮಾಡುವವನು ; ತೋಟಿಗ : ಆಶೆಗೆ ತಕ್ಕ ಹಾಗೆ ಮುತುವರ್ಜಿಯಿಂದ ಕೆಲಸ ಮಾಡುವ ತೋಟಗಾರರಿರಬೇಕು (ತರಬಿ. ೧). ೨. ತೋಟದ ಮಾಲೀಕ,–ಒಡೆಯ.

[ತೋಟ೧ (<ತೋಂಟ) + – ಕಾರ೧ (<– ಕಾಱ]

ತೋಟಗಾರಿಕೆ (ನಾ). ತೋಟವನ್ನು ಬೆಳೆಸುವುದು ; ತೋಟ ಮಾಡುವುದು ; ತೋಟದ ಬೇಸಾಯ : ಮೈಸೂರುಸಂಸ್ಥಾನದಲ್ಲಿ ತೋಟಗಾರಿಕೆಯನ್ನು ಕುಲಕಸಬನ್ನಾಗಿ ಪಡೆದಿರುವ ಅಲ್ಪಸಂಖ್ಯಾತ ಪಂಗಡವೊಂದಿದೆ (ತರಬಿ. ೨). [ತೋಟಗಾರ + – ಇಕೆ]

ತೋಟಗಾವಲ್ (ನಾ). ತೋಟವನ್ನು ಕಾಯುವುದು ; ತೋಟಕ್ಕೆ ಕಾವಲಾಗಿರುವಿಕೆ : ಪುಲ್ಲಳ ಪಸುರ್ಗಳಸಿ ಪೊಕ್ಕಡಾ ತೋಟಗಾವಲ್ಗೆ ತನ್ನೊಡನಾಡಿಗಳ ಕೂಡೆ ಲೀಲೆ ಮಿಗೆ ಬಿಲ್ಗೊಂಡು ನಡತಂದವಂ ಕಂಡ ನರ್ತಿತ ಸುವಾಜಿಯಂ (ಜ್ಞಮಿಭಾ. ೨೦-೩).

[ತೋಟ೧ (<ತೋಂಟ) + ಕಾವಲ್೨]

ತೋಟತುಡಿಕೆ (ನಾ). ತೋಟ ಮತ್ತು ಅದಕ್ಕೆ ಸಂಬಂಧಿಸಿದ ಭಾಗ : ಯಿಂತೀ ಚತುಸ್ಸೀಮೆಯೊಳಗುಳ್ಳ ಗಡಿಗ್ರಾಮ . . . ಹಟ್ಟಿಹಕ್ಕಲು ತೋಟತುಡಿಕೆ (ಮೈಆರಿ. ೧೯೩೪. ೩೩-೧೪ ; 1406) ; ಆ ದಂಣ್ಣಾಯಕ ಪುರಕ್ಕೆ ಸಲುವ ಚತುಸೀಮೆಯೊಳಗುಳ್ಳ ತೋಟತುಡಿಕೆ ಗದ್ದೆ ಬೆದ್ದಲು (ಎಕ. VII, ಶಿವಮೊ. ೭೧-೨೭ ; 1431).

[ತೋಟ೧ (<ತೋಂಟ) + ತುಡಿಕೆ]

ತೋಟಪಟ್ಟಿ (ನಾ). ತೋಟದ ಭೂವಿಸ್ತೃ,–ಪ್ರದೇಶ : ತೋಟಪಟ್ಟಿಗಳ ಮೇಲೆ ಪ್ರಾತಃಕಾಲೀನ ಪ್ರಕಾಶ ಬೀರುವ ಹೇ ಪರಮಾತ್ಮಾ . . . ನಿನ್ನ ಕೃಪೆಯನ್ನು ಸುರಿಸು (ಅಶ್ರಮು. ೨೩) ; ಬೆಲ್ಲದ ನಾಡವರು. ತೋಟಪಟ್ಟಿ ಇದ್ದವರು (ಅಕೋಕ. ೭) ; ಆನುವಂಶಿಕ ಹಕ್ಕುದಾರಿಯ ಕಾಲರಾ ತನ್ನ ತೋಟಪಟ್ಟಿಯ ಕೃಷಿಮಾಡಲು ಬಂದಿತು (ಸ್ಮೃತಿಚಿ. ೫೦೭). 'ತೋಟ್ಟಿ ಪಟ್ಟಿ' ಪರಾ. [ತೋಟ೧ (<ತೋಂಟ) + ಪಟ್ಟಿ೩]

ತೋಟಮಲ್ಲಿಗೆ (ನಾ). ತೋಟದಲ್ಲಿ ಬೆಳೆಯುವ ಮಲ್ಲಿಗೆ : ನಾಟರಾಗವು ಲೇಸು ತೋಟಮಲ್ಲಿಗೆ ಲೇಸು ಕೂಟವದು ಲೇಸು ಹಿರಿಯರೊಳು (ಸರ್ವಜ್ಞ. ೩೩೩). [ತೋಟ೧ (<ತೋಂಟ) + ಮಲ್ಲಿಗೆ]

ತೋಟಮಾದಳ (ನಾ). ತೋಟದಲ್ಲಿ ಬೆಳೆಯುವ ಮಾದಳ : ತೋಟ ಮಾದಳದ ಹಣ್ಣಿನ ರಸದಲ್ಲಿಯಾದರೂ ಹಸಿಶುಂಠಿರಸದಲ್ಲಿಯಾದರೂ ಕೊಡಿಸಲು . . . ಸಕಲ ರೋಗಂಗಳೂ ಪರಿಹರ (ವೈದ್ಯಸಾ. I, ೩೯೮).

[ತೋಟ೧ (<ತೋಂಟ) + ಮಾದಳ]

ತೋಟವಳ 'ತೋಂಟವಾಳ' ನೋ.

ತೋಟವಾಳ 'ತೋಂಟವಾಳ' ನೋ.

ತೋಟವಾಳಿಗ 'ತೋಂಟವಾಳಿಗ' ನೋ.

ತೋಟ್ಟಾ೧, ತೋಟ೨, ತೋಟ್ಟಿ೩ (ನಾ). ಬಂದೂಕಿನಲ್ಲಿಟ್ಟು ಹಾರಿಸುವ ಕೊಳವೆಯಾಕಾರದ ಗುಂಡು ; ಕಾಡತೂಸು : ಮೊದಲನೆ ಈಡು ಕಡಿತನ ತೋಟಾದ್ದಾದ್ದರಿಂದ ಒಂದೆರಡು ಕಡಕುಗಳು ಗಿಡಗಳಿಗೆ ತಗುಲಿದ್ದುದು ಕಂಡು ಬಂದಿತು (ಕಾನೂರು. ೧೪೩). **ತೋಟ್ಟ೨** : ಸುಲ್ತಾನಿ ತೋಟ ತುಂಬಿದಂಥಾ ತೋಸ್ತಾನಿ ಒಂದು . . . ಈ ಮೇರೆ ಎರಡು ಜನಕ್ಕೂ ಜಂಗಿ ಸಾಮಾನು ಕೊಟ್ಟು (ರಾಷೀಂದ್ರ. ೧೦೫). **ತೋಟ್ಟಿ೩**: ಆದರೆ ಪಿಸ್ತೂಲುಗಳನ್ನು ಇಟ್ಟುಕೊಳ್ಳುವುದು ಹೇಗೆ? ಅದಕ್ಕೆ ಹತ್ತಾರು ರೂಪಾಯಿಗಳನ್ನು ಖರ್ಚುಮಾಡಿ ಮೇಲೆ ಮೇಲೆ ತೋಟಿಗಳನ್ನು ಕೊಳ್ಳುತ್ತಲೇ ಇರಬೇಕು (ಪಂಯಾತ್ರ. ೪೬).

[←ಮರಾ. ತೋಟಾ ; ಹಿಂ. ಟೋಟಾ]

ತೋಟ್ಟಾ೨ 'ತೋಡಾ' ನೋ.

ತೋಟಾವಳಿ (ನಾ). ತೋಟಗಳ ಸಾಲು : ಹತ್ರಿರದಲ್ಲಿಯೇ ಕೆರೆ, ಅದರ ಕೆಳಗೆ ಅಂದವಾದ ತೋಟಾವಳಿಗಳು (ಜಿಂಗಾಳ್ಳ. ೩೦೯).

[ತೋಟ೧ (<ತೋಂಟ) + ಆವಳಿ೧ (= ಆವಲಿ)]

ತೋಟ್ಟಿ೧, ತೋಂಟ್ಟಿ೧ (ನಾ). ೧. ಕಲಹ ; ಜಗಳ ; ಕದನ : "ತೋಟಿಯೆಂದು ಜಗಳಂ" (ಕರ್ಣಾನಿ. ೦೪) ; ಎರಡು ರಥಮೊಳವು ನೋಟಕ್ಕೆ ರಡಱೊಳವನೊಂದು ರಥಮೆ ತೋ[ಪಾಕಂ. ಕೋ]ಟಗೆ ಪಲವಾಗಿರೆ ವರಿದು (ಪಂಪಭಾ. ೫-೯೫) ; ಸುರಕೋಟಿ ವಿನೋದದ ತೋಟಿಯೊಳ್ ಚರಾಚರಗುರುವಿಂಗೆ ಪೊಟ್ಟುಗಳೆಯುತ್ತಿರೆ (ಶಾಂತಿಪು. ೦೦-೯೦); ತೊಡಗಿದರು ತೋಟಿಯನು ತಮತಮಗೆ (ಪ್ರಭುಲೀ. ೦೩-೭) ; ತೋಳನ ತೋಟಿ ಸದರವೆ ಕಱಿಯ ಜಂಗುಳಿಗೆ (ತೊರಹಾ. ೬-೩೬-೫೫) ; ಭರತೇಶನೊಳು ತೋಟಿ ಬೇಡೆಂದು ಮೊದಲೆ ಪೇಳ್ದರೆ ಕೇಳದುಕ್ಕಿ ಕಾದಿದರು (ಭರಚ. ೩೪-೯೯) ; ತೊಡರ್ದಿ ತೋಟಿಯಂ ಪಡಿದಟವಾಂತು ಬಂದ ಮಲೆನಾಡಿನ ಸಿಂಗಳರಾಯನಂ ಮೊಗಂಗಿಡಿಸಿ (ಚಳವಿ. ೨-೬೮). ೨. ಹೊಯ್ದಾಟ; ತೊಳಲಾಟ ; ಭಾವನೆಗಳ ತಾಕಲಾಟ : ಕಣ್ಬೇಟದ ತೋಟಿಯೊಳ್ಕೊಡರ್ದು ದುಸ್ಸಹ ವಿರಹತಾವಕ್ಕಳ್ಕಿ ವನದುರ್ಗವಂ ಪುಗುವಂತೆ ಲತಾಗೃಹವನಂಗಳಂ ಪೊಕ್ಕು (ಪುಲ್ಲಪು.೩-೩೨); ಅಱಿದೆನಱಿದೆನೆಂದು ಮಱವೆಯ ತೋಟಿಯ ತೊಳಸುತ್ತ (ಮೋಹಮಾ. ೦೭೫-೬೭೦). ೩. ಹಾವಳಿ ; ತೊಂದರೆ : ಮತ್ತವೊಂದೆಡೆಯೊಳೂರ್ವರ ತೊಟ್ಟು ಲಲಿತಾಂಗಂ ಬಂದನಿನ್ನಾವಾತನ ತೋಟಿ ಪಿಂಗುವಿನಂ ನೆರೆವನೆಯೊಳಿರ್ದು ಬರ್ಪಮೇಟ್ಪೆಮೆಂದು . . . ಪೇಟ್ಪುದುಂ (ಧರ್ಮಾಮೃ. ೨-೪೯) ; ಬಿರುದ ಬಿಸುಟರೆ ತೋಟಿಯೇನೆಂದ (ತೊರಹಾ. ೧-೯-೩೨). ೪. ತಂಟೆ; ಗೊಡವೆ; ಗೋಜು : ಚಿಲ್ಲಂ ಬೇಂಟದ ತೋ ಟಿ ಯೊ ಳ್ ತೊಡರೆ ಕಂಡು

(ಕಾವ್ಯಸಾ. ೫೫೦ ಶೂದ್ರಕ) ; ಅದಱಿಂ ನಿನಗಿದಱ ತೋಟಿ ಬೇಡ (ಪಂಚತಂ. ೨೪೨-೨೩) ; ಬೇಟದ ಪದನೆಂದು ಕೂಟದ ಮದವೆಂದು ನೋಟ ದೊಳ್ಗಂಡರಱಿವೊಡೆ ಹಡಹಿನ ತೋಟಿಯೇಕೆಲಗೆ ಬೆಲೆವೆಣ್ಣೆ (ಲೀಲಾವ. ೨-೩೪) ; ಕಾಮದೇವನ ತೋಟಿ ಬೇಡೆಂದು ಬಿರುದೆತ್ತಿ ಕರೆವ ಕಂದರ್ಪನ ಕಹಳೆಗಳೆಂಬಂತೆ ತಂಡ ತಂಡದಿಂ ಕೂಗುವ ಗಂಡುಗೋಗಿಲೆಗಳಂ (ಗಿರಿಕ. ೩-೧೦೩ ಪ) ; ಅಸುರಕುವರನ ತೋಟಿ ಬೇಡ (ಕೌಶಿರಾ. ೩೫-೧೮) ; ಈ ಕೊಡಲಿಕಾಱನ ತೋಟಿ ಬೇಡೆಂದ (ಕುಪ್ಯಾಸ. ೯-೪೮). ೫. ಸಾಮರ್ಥ್ಯ; ಪರಾಕ್ರಮ : ನಾನಾವ ಮಂತ್ರದ ತಂತ್ರ ತೊಡಕಿನ ತೋಟಿಯುಳ್ಳವಳು (ಕುಪ್ಯಾಅ. ೧೫-೨೩) ; ತೋಟಿಯಿಂದೊಳಪೊಕ್ಕು ಪುರಗಳೊಳಗೆ ಬಲು ಬೇಟೆಯ ನಾಯ ಪಿಡಿವರು (ಕುರಾಸಾಂ. ೦೦-೩). ತೋಂಟ್ಟ$_1$: ೧. 'ತೋಂಟಿಗೊಳ್' ಪರಾ. ೬. ಮಾತ್ಸರ್ಯ ; ಹೊಟ್ಟೆಕಿಚ್ಚು : ಕವಿಶಿವನೆಸೆದಂ ತೋಂಟಿಯನುಳಿದ ಕವೀಶರ್ಗುಂಟೆನಿಸುತೆ ದಿವ್ಯ ಬೋಧೆಯಂ ದಕ್ಷಿಣೆಯಿಂ (ಹಾಲಾಸ್ಯ. ೪-೩-೬೧).

ತೋಟ್ಟ$_2$, ತೊಟ್ಟ$_3$, ತೋಂಟ್ಟ$_2$ (ನಾ). ೧. ಗ್ರಾಮಸೇವಕರಲ್ಲಿ ಒಬ್ಬ ; ಕಸಗುಡಿಸುವವನು; ಜಾಡಮಾಲಿ: ತೋಟಿ-ತಳವಾರ, ವೆಟ್ಟಿ, ಬಾರೀಕಿ ಅಥವಾ ಕೋಲುಕಾರನೆಂದು ಹೆಸರುಂಟು (ಗ್ರಾಮಾಕ. ೧) ; ತೋಟಿ (Scavengers)ಗಳೇ ಅವಶ್ಯವಿಲ್ಲದ, ಬಾವಿ-ಪಾಯಿಖಾನೆ (Bore-hole Latrines)ಗಳನ್ನು ಯಾರೂ ಮಾಡಬಹುದು (ಬಾಲಪ್ರ. I, ೨೯೬) ; ಇವನ ಹೆಣವೂ ತೋಟಿಗಳ ಪಾಲಾಗಬೇಕೋ ಏನೋ (ದೀಪದ. ೫೧). ೨. (ಆಲಂ) ಕೀಳಾದವನು ; ಅಲ್ಪ ; ಕ್ಷಂದ್ರ : ಭಂಡರ್ಗೆ . . . ತೋಟಿ ತೊನ್ನರಿಗೆ ಕೊಂಡೆಯರ್ಗೆಲೆ ರಂಗ ನಿನ್ನಯ ಪದಪದ್ಮಗಂಡಲ್ಲಿ ಮೋಕ್ಷ ಸಿದ್ಧಾಂತ (ನೀತಿಸಾಂ. ೪೭-೩೩). ತೊಟ್ಟ$_3$: ೨. ಇವನೆಂತಹ ತೊಟ್ಟಿ (ರೂಢಿ). ತೋಂಟ್ಟ$_2$: ೩. ಸೇವಕ; ಪರಿಚಾರಕ: ಚಾವುಣ್ಡಯ್ಯಜ್ಗಿ ನಾಲ್ಕು ಮತ್ತರ್ತೋಣ್ಟಿಗಳ್ಗೆ ನಾಲ್ಕು ಮತ್ತರ್ನಿವೇದ್ಯಕ್ಕೆ ನೆಲ್ಲ ಮಡಿ ಎರಡು (ಸೌಇಇ. IX-i, ೬೦-೧೫ ; 931). P 'ತೋಂಟಿ' ಎಂಬುದೇ ಮೂಲ ರೂಪವಾಗಿರಬಹುದೇ ?

[ದೇ. ॥ ತಮಿ. ಮಲ. ತೋಟ್ಟಿ ; ತುಳು. ತೆಲು. ತೋಟಿ]

ತೋಟ್ಟ$_3$ (ನಾ). ೧. ಪಕ್ಷಿಯ ಚುಂಚು,-ಕೊಕ್ಕು. ೨. ಬಾಯಿ: ಇತ್ತಲು ಭೀಮ ಬಲುದುತ್ತುಗಳ ತೋಟಿಯಲಿ ಮರನ ಮುಱಿದೆಱಗಿದರೆ ಪುನರಪಿ ಮುಱಿದು ನೋಡಿದು ಬಹೆನು ನಿಲ್ಲೆನುತರೆಗೆಲಸ ಪೂರೈಸಲೆಂದನು (ಕುಪ್ಯಾಅ. ೧೦-೩೩). ೩. ಪಾತ್ರೆ ಮುಂತಾದುವುಗಳ ಮೂತಿ : ನೀರು . . . ಪಾತ್ರೆಗೆ ಹಚ್ಚಿದ ತೋಟಿಯೊಳಗಿಂದ ಹೊರಗೆ ಬೀಳುತ್ತದೆ (ಮುಂಬಯಿ. ೫-೮೨). [<ಸಂ. ತ್ರೋಟೀ./ಮರಾ. ತೋಟೀ]

ತೋಟಿಕಾಱ 'ತೋಟಿಗಾಱ' ನೋ.

ತೋಟಿಗ 'ತೋಂಟಿಗ' ನೋ.

ತೋಟಿಗಾಱ, ತೋಟಿಕಾಱ (ನಾ). ಯುದ್ಧಾಸಕ್ತ ; ಯುದ್ಧ ಮಾಡುವವನು : ಬಲು ತೋಟಿಗಾಱರು ತೊಡಗಿದರು ರಣವ (ನಿಧಾಗ. ೪-೯-೧೨). ತೋಟಿಕಾಱ : ನೋಟದಮರರ ನಯನಗಳಿಗಲ್ಲಾಟವೆನೆ ಪರಿಚಿತ್ರ ಗತಿಗಳ ತೋಟಿಕಾಱರು ಹೊಕ್ಕು ತಾಗಿದರುಭಯಸೇನೆಯಲಿ (ಕುಪ್ಯಾಭೀ. ೪-೨೫) ; ಜಯದ ತವಕದ ತನಿಮನದ ಕಡುತೋಟಿಕಾಱರು ಕಾದಿದರು ಕಡುಗಿ (ಕುಪ್ಯಾಗ. ೬-೨೯) ; ಶ್ರೀಮಂನಾಡಪ್ರಭು ಗಡಿಯಂಕ ಭೀಮಕಟಕ ತೋಟಿಕಾಱ (ಎಕ. XI, ಹೊಳಲ್ಕೆ. ೧೦೨-೩ ; 1691 ?).

[ತೋಟ್ಟ$_1$ + – ಗಾಱ (< – ಕಾಱ)]

ತೋಟಿಗಿತಿ (ನಾ). ತೋಟದ ಕೆಲಸದವಳು : ಸುಂಕಿಗಿತಿ, ತೋಟಿಗಿತಿ (ಶಬ್ದಾನು. ೦೯೧ ಪ್ರಯೋ).

[ತೋಟಿಗ$_1$ (<ತೋಂಟಿಗ) + – ಇತ್ತಿ$_1$(< – ಇತ್ತಿ)]

ತೋಟಿಗೈ (ಕ್ರಿ). ಯುದ್ಧಮಾಡು ; ಕದನಮಾಡು : ಪೊಯ್ವ ತೊಡಂಕುವ ತೋಟಿಗೈವ ಕೂಂಕುವ ನೆಱ ನೂಂಕುವೇಳ್ಗೆಯ ಬಲಂ ಬಗೆಗೊಂಡುದು (ರಾಜಶೇ. ೦೩-೮೪). [ತೋಟ್ಟ$_1$ + ಗೈ (<ಕೆಯ್$_1$)]

ತೋಟಿಗೊಳು (ಕ್ರಿ). ಜಗಳವಾಡು ; ಕಲಹ ಮಾಡು : ತೋಟಿಗೊಳುವ ದುಷ್ಟ ದಂಪತಿಗಳು ಬೂತಾಟಗಳಿಂದನುಗೆಟ್ಟು ಊಟ ನಿದ್ದೆಗಳೊಂದ ಱೊಳು ಸುಖಮಿಲ್ಲದೆ ಕೋಟಲೆಗೊಂಡು ಕುಗ್ಗುವರು (ಹದಿಬ. ೬-೭).

[ತೋಟ್ಟ$_1$ + ಕೊಳು (<ಕೊಳ್$_1$)]

ತೋಟಿಯ (ನಾ). ಶೂರ; ಪರಾಕ್ರಮಿ (:) ತೋಟಿಯರ್ ತಱಿದಿಕ್ಕಿದಿ ರಾಂಪದೈತ್ಯವಧೂಟಿಯ ಕರೆದು ತನ್ನೊಡನೆ ಸೂಟಿಯೊಳ್ ಸಾವಂತೆ ಕೆಯ್ಯ ಖಡ್ಗವನಿಕ್ಕಿ ದಾಟಿಸಿಕೊಂಡಳೆಲ್ಲರನು (ಮೋಹತ. ೩೩-೩೮).

[ತೋಟ್ಟ$_1$ + – ಅ$_7$]

ತೋಟೆ 'ತೊಗಟು' ನೋ.

ತೋಟ್ಟ$_2$ 'ತೋಟ್ಟಾ$_1$' ನೋ.

ತೋಟ್ಟ$_3$ (ನಾ). ಒಂದು ಬಗೆಯ ಔಷಧಿ ಮೂಲಿಕೆ : ತೋಟೆಯ ಬಡಗ ಹರಿದ ಬೇರಂ ನೀರಲ್ಲಿ ಅರೆದು ಯೋನಿಯಿಂದಿಳಿಯ ಪೂಸಲು ಪ್ರಸವ ಮಾಗುವುದು (ವಿವೃವಿ. ೧೦೭). [?]

ತೋಟ್ಟಪಟ್ಟು (ನಾ). ತೋಟದ ಭೂಮಿ,-ಪ್ರದೇಶ: ಪುತ್ತೂರತ್ತಾಣಿಗೆ ಅಯ್ದೂಂಬು ಕಟನಿಯುಂ ಅಯ್ದೂಂಬು ತೋಟ್ಟಪಟ್ಟುಂ ಕೊಟ್ಟರ್ (ಎಕ. X, ಕೋಲಾರ ೨೨೪-೫; ಸು. 750); ಅಯ್ದೂಂಬು ಮೆದಕಟನಿಯು ಎಟ್ಟೂಮ್ಬು ಬಾಳೆ ತೋಟ್ಟಪಟ್ಟು ಬ್ರಹ್ಮದೇಯಂ ಕೊಟ್ಟೋದು (ಎಕ. X, ಕೋಲಾರ. ೨೩೦-೫ ; ಸು. 800 ?). 'ತೋಟಪಟ್ಟಿ' ಪರಾ.

[ತೋಟ್ಟ$_1$ (<ತೋಂಟ) + ಪಟ್ಟು$_3$ (<ಪಟ್ಟ$_3$)]

ತೋಡ$_1$ (ನಾ). ಬೆಳೆಯನ್ನು ನಾಶಪಡಿಸುವ ಬಿಳಿಯ ಇಲಿ : ಸುಂಡನ್ಗೆ ಶೂಲದ ಕತ್ತಿ ತೋಡಣ್ಗೆ ಬಿಲ್ ಬಾಣ, ಮುಂದೋಗೋ ಹೆಣ್ಣಾನ್ಗೆ ನಾಗಸ್ವರದ ಕೊಳಲು (ಹುಟ್ಟಿಹ. ೧೪೫) ; ತೋಡ, ಹೆಗ್ಗಣ, ಗೋಲಂದಿ (ನಮ್ಮನು. ೨೩೯) ; ದೇವಸ್ಥಾನದ ಪ್ರಾಕಾರದ ಗೋಡೆಯ ಕೆಳಗೆ ಒಂದು ತೋಡ (ಬಿಳಿ ಇಲಿ) ಮನೆ ಮಾಡಿಕೊಂಡು ಸಂಸಾರ ಮಾಡಿಕೊಂಡಿದೆ (ಗರುವಾ. ೧೮೧). [<ತೋಡು$_1$]

ತೋಡ$_2$, ತೊಡವ, ತೊದ (ನಾ). ಒಂದು ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದವನು; ನೀಲಗಿರಿಯ ಆದಿವಾಸಿ: ನೀಲಗಿರಿಯ ತೋಡರು ಹೊರಗಿನ ಜನರೊಡನೆ ಈಗೀಗ ಬೆರೆಯತೊಡಗಿರುವರು (ಬಾಲಪ್ರ. I, ೪೯೯); ತೋಡರು ಹಾಲು, ಮೊಸರು, ಮಜ್ಜಿಗೆ ಮಾಡುವರು (ದ್ರಾವಿವಿ. ೧೫೭). ತೊಡವ : ತುಳುವರು ತೊಡವರು ಬಡಗರು (ಅರಳು. ೩೦೪-೭). ತೊದ : (ಕಿ). [ದೇ.॥ ತಮಿ. ತೋಟ, ತುಟವ]

ತೋಡ$_3$ 'ತೋಡಾ' ನೋ.

ತೋಡರ (ನಾ). (?) : ನಂದಿಧ್ವಜನ ಚರಣಪಂಕೇಜಗಳು ಶೋಭಿಸಿದವಾಗ ದೃಕ್ಕರಣ ತೋಡರಗಳಿಂದ (ಮಲ್ಲಾರಿ. ೫-೧೨). 'ತೋಡಾ' ಪರಾ. P ಇದು 'ತೊಡರು' ಎಂಬುದರ ಅಪಲಿಖಿತವಿರಬಹುದು.

ತೋಡಾ, ತೋಟ್ಟಾ$_2$, ತೋಡ$_3$, ತೋಡ್ಟ$_1$ (ನಾ). ೧. ಮುಂಗೈಗೆ ತೊಡುವ ಒಂದು ಬಗೆಯ ಆಭರಣ ; ಹಸ್ತಾಭರಣಗಳಲ್ಲಿ ಒಂದು; ಕಂಕಣ ; ಕಡಗ : ತನಗೆ ಮಹಾರಾಜರು ಬಹುಮಾನವಾಗಿ ಕೊಟ್ಟ ತೋಡಾ, ಮಕರಕಂಠಿ ಮುಂತಾದ ಒಡವೆಗಳಿಂದ ಆತನನ್ನು ಅಲಂಕರಿಸಿ (ಗಾನಕ. ೬೮) ; ಮಹಾರಾಜರು ಅವರ ಎರಡು ಕೈಗಳಿಗೂ ರತ್ನಖಚಿತ ಚಿನ್ನದ ತೋಡಾ (ಬಳೆಗಳನ್ನು) ಹಾಕಿ ಬಹುಮಾನಿಸಿದರು (ಸಂಗೀತ. ೨೭). P ರಾಜ, ಮಹಾರಾಜರು ಕಲಾವಿದರು ಅಥವಾ ವಿದ್ವಾಂಸರಿಗೆ ಬಿರುದಿನೊಡನೆ ಬಹುಮಾನರೂಪವಾಗಿ ಕೊಡುವ ಅಲಂಕಾರ

ಸಾಧನ. ತೋಟ್ಟಾ$_2$: ೨. ಹಣದ ಚೀಲ ; ಥೈಲಿ. ೩. ನಳಿಗೆ ಯಾಕಾರದಲ್ಲಿ ನಾಣ್ಯಗಳನ್ನು ಸುತ್ತಿದ್ದು ; ಒಂದೇ ಸಮನಾಗಿ ಜೋಡಿಸಿದ ನಾಣ್ಯಗಳ ಕಟ್ಟು: ಕಚೇರಿಯಾದ ಮೇಲೆ ಒಂದು ಬೆಳ್ಳಿಯ ತಟ್ಟೆಯಲ್ಲಿ ತಾಂಬೂಲಸಮೇತವಾಗಿ ಎರಡು ಹಣದ ತೋಟಾಗಳನ್ನಿಟ್ಟು ಕೃಷ್ಣಪ್ಪನವರಿಗೆ ಕೊಟ್ಟರು (ನಾಕಲಾ. ೫೮). ತೋಡ$_3$: ೧. ಸಜ್ಜುಕ ಸರ ತೋಡ ಮುಕುರ ಬಾಚಣಿಗೆಯ ಕಜ್ಜದರೊಱಗಿರ್ದರು ಸುತ್ತ (ಸೊಬಸೋ. ೨೩-೨೭). ೪. (ಬಿರುದಿನ ಸಂಕೇತವಾಗಿ) ಕಾಲಿಗೆ ಹಾಕಿಕೊಳ್ಳುವ ಕಡಗ ; ಪೆಂಡೆಯಂ : ಪ್ರಭುಗಳು, ಮುತ್ತಿನ ಜೊಂಪೆಗಳಿಂದ ಕೂಡಿದ, ನವರತ್ನಖಚಿತವಾದ ಗಂಡಪೆಂಡೇರವೆಂಬ ಚಿನ್ನದ ತೋಡವನ್ನು ಕುವರನ ಬಲಗಾಲಿಗೆ ಬಹುಮಾನಿಸಿದರು (ಶಾಂತಲಾ. ೨೦೬). ತೋಡೆ$_1$: ೧. ಜಡೆಯ ಮಾದರಿ, ತೋಡೆಯ ಮಾದರಿ ಇತ್ಯಾದಿ ಕೆಲವು ಮಾದರಿಯ ಮಾಲೆಗಳನ್ನು ಹೆಣ್ಣುಮಕ್ಕಳು ಕಟ್ಟುತ್ತಾರೆ (ಶ್ಯಾಮಶಾ. ೨೦). ೫. ಒಂದು ಬಗೆಯ ಆಭರಣ ; ಕಾಲ್ಗಡಗ : ಶ್ರೀಕೃಷ್ಣವಿಲಾಸದ ಲಿಂಗಾಜಂಮ್ಮಣ್ಣೀಯವರು ವಪ್ಪಿಶಿದ ಬೆಳ್ಳಿ ಬಸವನ ಆಭರಣದ ಲೆಖ್ಖಾ . . . ೧. ಕಾಲಿಗೆ ತೋಡೆ. ೨. ಮುಂಗಾಲಿಗೆ ಹೂವು (ಎಕ. XIV, ನಂಜನ. ೨೮೯-೨ನೇ ಕಾಲಂ ; 1840).

[←ಹಿಂ. ಮರಾ. ತೋಡಾ]

ತೋಡಿ (ನಾ). [ಸಂಗೀತ] ಒಂದು ರಾಗದ ಹೆಸರು : ಮಲಹರಿ ಮೇಘರಂಜಿ ಫಳಮಂಜರಿ ತೋಡಿ ವಸಂತಮೆಂಬ ಮಂಜುಳತರ ರಾಗ ರಂಜನದೆ . . . ಪಾಡಿ ಮುದಂ ಮಿಗೆ ಮೆಚ್ಚಿಸುತ್ತುಂ (ಬಾಧಪು. ೬-೧೪) ; ಮಲಹರಿ ದೇಸಿ ತೋಡಿಯೆನೆ ಪಾಡಿ ಮೊಸರ್ ಕಡೆದರ್ ಲತಾಂಗಿಯರ್ (ಮಲ್ಲಕಾ. ೪-೫೫) ತೋಡಿ ಮಕರಂದಿ ವಸಂತರಾಗಂ ಇತ್ಯಾದಿಯಾದ ರಾಗಂಗಳಂ ಪಾಡುತ್ತಿರೆ (ಹಮ್ಮೀರ. ೨-೯೦) ; ಆಹಿರಿಯಲ್ಲಿ ತೋಡಿ ಯೊಳು . . . ರಾಗಿಸಿ ಸಭೆಗೆ ಸಮ್ಮೋಹನರಸವ ಸೂಸಿದರು (ಭರಣ. ೧೨-೪೩) ; ತೋಡಿ-ರನೇ ಮೇಳಕರ್ತ ಹನುಮತೋಡಿಯ ರಾಗಾಂಗ ರಾಗ . . . ಈ ರಾಗ ಶುದ್ಧಕರ್ನಾಟಕವೆಂದೂ ಔತ್ತರೇಯವೆಂದೂ ಮತಭೇದವುಂಟು. ಸಾಯಂಕಾಲದಲ್ಲಿ ಹಾಡಬೇಕಾದ ರಾಗ. ಕರುಣಾರಸ ಪ್ರಧಾನರಾಗ (ಸಂಗೀಕಂ. ೧೪೫). [ಸಂ. ತೋಡೀ./ಮರಾ. ತೋಡೀ]

ತೋಡಿಟ್ಟಿ (ನಾ). ಎರಡು ತುದಿಗಳುಳ್ಳ ಒಂದು ವಿಧವಾದಈಟಿ: ಬಿಲು ಸರಳು ತೋಡಿಟ್ಟಿ ಮುದ್ಗರ ಪಿಂಡಿವಾಳಚಯ (ಕುಮ್ಯಾಭೀ. ೩-೨೦) ; ಬಡಿಗೋಲ್ಸೊಕ್ಕಿನ ಮರ್ದು ಕೂಳಿ ಪದವಿಲ್ ತೋ[ಪಾಠಾ. ಕೋ]ಡಿಟ್ಟಿ ಕೈಗಲ್ಲುರುಳ್ ಮಿಡಿಬಿಲ್ಪೆರ್ಬಲೆ ... ಖಡ್ಗಂ ಗಾಳಮಿಂಬಾಗೆ ಕೊಂಡೊಡನಾ ಲುಬ್ಧಕಸಂಚಯಂ ನಡೆದುದಾಗಳ್ (ಯಾದಚಂ. ೪-೫೧).

[ತೋಡು$_3$ + ಇಟ್ಟಿ$_2$]

ತೋಡಿಸು$_1$ (ಕ್ರಿ). ಅಗೆಯಿಸು ; ಹಳ್ಳ ತೆಗೆಸು ; ಗುಣಿ ಮಾಡು : ಕೊಂಡವ ತೋಡಿಸಬೇಡ ಶುಷ್ಕವೆ ಸುಟ್ಟು ಕೆಂಡವ ಮಾಡಿಸಬೇಡ ಖಂಡೇಂದುಶೇಖರ ಕಣ್ಗಿಚ್ಚಿನಿಂದೆನ್ನ ಗಂಡನನುರುಪಿದಂತುರುಹು (ಮೋಹತ. ೮-೩೭); ಒಂದು ಬಾವಿಯನ್ನು ತೋಡಿಸಯ್ಯಾ (ಪ್ರೈಮಹ. ೪೬).

[ತೋಡು$_1$ + – ಇಸು$_3$]

ತೋಡಿಸು$_2$ (ಕ್ರಿ). ಸರಿಗಟ್ಟು ; ಸಮವೆಂದು ಎಣಿಸು : ಪಾಳಾದ ದುಷ್ಕರ ಲಂಕಾಪುರಮಂ ನಭೋಗಪುರಮಂ ಕ್ರೌಂಚಾದ್ರಿಯಂ ದ್ವಾರಕೀ ಪುರಮಂ . . . ಸುಸ್ಥಿರ ಹಮ್ಮೀರಪುರಕ್ಕೆ ತೋಡಿಸಲೊಡಂ ಮೂಢೋಕ್ತಿ ಮೂಲೋಕದೊಳ್ (ಹಮ್ಮೀರ. ೧-೬೪). [ತೋಡು$_3$ + – ಇಸು$_3$]

ತೋಡು$_1$ (ಕ್ರಿ). ೧. ಅಗೆ ; ಬಗಿ ; ಹಳ್ಳವನ್ನು ಮಾಡು ; ಕೊರೆ : ತೋಡುವೆನೆಂಬುದಲ್ಲದಿಡಲಾಗದು ನಿಕ್ಕುವ ತೋಟ್ಟೆನೆಂಬುದಂ (ಕವಿಠಾ. ೨-೧೦೧); ಕಾಯೋತ್ಸರ್ಗದಿಂ ನಿಂದೊನಂ ಗೃಧು,ವಾಯಸಾದಿಗಳ್ ಪುಣ್ಣಂ ತೋಡಿ ತಿನೆ ಮೇರುಪರ್ವತಂಬೊಲಚಳಿತಧೈರ್ಯನಾಗೊಂದು ತಿಂಗಳ್ವ ರೆಗಂ ಸೈರಿಸಿ (ವಡ್ಡಾರಾ. ೬೫-೧) ; ಪಥಿಕರಜಲ್ಗೊಂಡು ತೋಡಿದಱುಂಬ ನೀರ ಬಗರಗೆಗಳುಮನೊಳಕೆಯ್ದು ಬತ್ತಿದ ಪಳ್ಳಂಗಳೊಳಮತಿರೌದ್ರ ಮಾದ ಪೇರಡವಿಯೊಳಗೆ ಬರ್ಪಾಗಳ್ (ಕಾದಂಉ. ೨೬೬) ; ಇಲಿಗಳ್ ಮನೆಯೊಳ್ ಪುಟ್ಟಿಯುಮಲಸದೆ ತವೆ ತೋಡಿ ಮನೆಗಳಂ ಕಿಡಿಸುವ ವೊಲ್ (ಪಂಚತಂ. ೧೦೬-೧೮) ; ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು ಬೇಱೆ ಬಾವಿಯ ತೋಡಿ ಉಪ್ಪ ನೀರನುಂಬವನ ವಿಧಿ ಯಂತೆ ಆಯಿತೆನ್ನ ಮತಿ (ಬಸವ. ೨೯೦) ; ಗೋಡೆಗನ್ನಮಂ ತೋಡಿ ಮನೆ ಯೊಳಪೊಕ್ಕು ಪರಿಕಿಸಿ ನೋಡುವಲ್ಲಿ (ಬಸಪು. ೩೧-೬) ; ಬೇಡುವುದು ಗದೆ ನಿಮ್ಮ ವಕ್ಷವ ತೋಡಿ ನೆತ್ತರುಗೊಳದಲೋಕುಳಿಯಾಡುವುದನು (ಕುಮ್ಯಾಅ. ೧೦-೪೯) ; ಮಾಡಿದ ಪುಣ್ಯಕ್ಕೆ ಫಲವೇ ಸಾಕ್ಷಿ ತೋಡಿದ ಬಾವಿಗೆ ಜಲವೇ ಸಾಕ್ಷಿ (ಗಾದೆ). ೨. ಚುಚ್ಚು ; ತಿವಿ : ಐದುಬಾಣದೊಳುರವ ತೋಡಿದನು(ಕುಮ್ಯಾದ್ರೋ. ೫-೩೨); ದೈತ್ಯನ ಮೆಯ್ಯ ತೋಡಿದನೈದಂಬಿನಲಿ (ಮೋಹತ. ೩೪-೧೪); ತೋಡಿದಂ ಮೂವತ್ತು ಬಾಣದಿಂ ತಾಪಮಂಕುರಿಸು ವಂತವನೊಡಲೊಳು (ಚೈಮಿಭಾ. ೧೨-೪೬) ; ೩. ಹೊರ ತೆಗೆ; ಹಿರಿ ; ಹಿರಿದುಕೊಳ್ಳು : ಧುರದೊಳು ಬಂದೊಡ್ಡಿ ವೈರಿಪ್ರಕರಮಿರಲ ವಷ್ಟಂಭದಿಂ ಬಿಟ್ಟಿದೇವಂ ಕರವಾಳಂ ತೋಡಿ ಕೊಂಡಿಂ ಬಳಿಕ (ಎಕ. IV, ನಾಗಮಂ. ೨೮-೧೩ ; ಸು. 1125) ; ಕರವಾಳಂ ತೋಡಿಕೊಂಡು (ಕವಿಚ. I, ೧೦೪). ೪. (ಅಡಿಗೆ, ನೀರು ಮುಂತಾದುವನ್ನು ಒಂದು ಪಾತ್ರೆ ಯಿಂದ ಮತ್ತೊಂದಕ್ಕೆ) ಮೊಗೆದು ಹಾಕು : ಎಡಗೈಯೊಳೆ ತೋಡಿ ಬೆಣ್ಣೆಯಂ ತಿನುತಿರೆ (ಜಗವಿ. ೩-೫೧) ; ತೋಡಿ ಬಡಿಸುವೆ ಕಿವಿ ಗರೋಚಕ ವಾಯ್ತು ತೆಗೆಯೆಂದ (ಕುಮ್ಯಾಸ. ೧೦-೨೦) ; ನೀರು ತೋಡಿ ಇಟ್ಟಿದ್ದೇನೆ ಜಳಕ ಮಾಡಿರಿ (ಮುತ್ತೈದ. ೨೩೦). ೫. ಹೊರಕ್ಕೆ ಹೋಗು ; ಆಚೆ ಹೋಗು : "ತೋಡು – ನಿಷ್ಕ್ರಮಣೇ (ಹೊರಟು ಹೋಗು). ಯುಗ್ಮೇ ಚ (ಜತೆ)" (ಶಮಧಾ) ;" ನಿಷ್ಕ್ರಮಣಯುಗಸಾಮ್ಯಂಗಳೊಳ್ ತೋಡಲಾ" (ಶಬ್ದಮಂ. ೯೨). ೬. (ಮನಸ್ಸನ್ನು ತೆರೆದು) ವ್ಯಕ್ತ ಪಡಿಸು ; ತಿಳಿಸು ; ಹೇಳಿಕೊಳ್ಳು : ದುಃಖಮಂ ತೋಡುವೆನಾರ ಕೂಡೆ (ಕಾವ್ಯಸಾ. ೫೭೬); ಈ ಭವದ ಯೋಗಗಳ, ಭೋಗಗಳ, ರೋಗಗಳ ತೋಡ ಬಾ, ಹಾಡ ಬಾ (ನವ್ಯಧ್ವ. ೩-೬). ೭. ಎಳೆಯನ್ನು ಬಿಚ್ಚಿ ಹಾಕು ,–ತೆಗೆದುಹಾಕು : ನಾರಸಿಂಹನ ರೂಪಿಂ . . . ಪಟ್ಟಗಾಱನೆ ಪಾಸಂ ತವೆ ತೋಡುವಂತೆ ಕರುಳಂ ನೀಂ ತೋಡಿದೈ ದೈತ್ಯನಾ (ಕಾಪ್ಯಾಪ. ೩೫೫) ; ಅವ್ವ ರೇಶಿಮೆ ತೋಡುವ ಕೆಲಸ ನಿಲ್ಲಿಸಿ ಅಡುಗೆಗೆ ತೊಡಗುತ್ತಿದ್ದಳು (ಪಾತರ. ೩೮).

ತೋಡಿಕೊಳ್ಳು = ಮನಸ್ಸಿನ ಅಳಲನ್ನು ಹೇಳಿಕೊಳ್ಳು : ಕಂಡ ವರೆದುರೊಳು ನಿನ್ನೆದೆಯೊಳಗನು ತೋಡಿಕೊಂಡಳಲಾಗ ನೋಡ (ಸಂಜಾಪ. ೨೩೦-೩೬).

[ದೇ.ಕ ತಮಿ. ತೋಣ್ಟು; ಮಲ. ತೋಣ್ಡು; ತುಳು. ತೆಲು. ತೋಡು; ಕೊಡ. ಪರ್ಜಿ. ತೋಡ್]

ತೋಡು$_2$ (ನಾ). ೧. ಅಗೆದಿರುವ ಸ್ಥಳ ; ಗುಂಡಿ ; ಹಳ್ಳ , ಕಾಲುವೆ ಮೊದಲಾದುವು : ಉಂಡ ಹಾಳೆಗಳನ್ನು ಮಡಿಸಿ . . . ತೋಡಿಗೆ ಎಸೆದು ಕೈ ತೊಳೆದು ಬಂದಳು (ನಂಬಿನಾ. ೨೧೯) ; ಅಂಗಳದ ಕೆಳಗಿನಿಂದ ಒಂದು ನೀರಿನ ತೋಡು ಸದಾ ಹರಿಯುತ್ತದೆ (ಕಂಬಹು. ೭೮) ; ೨ ಇಳಿಜಾರಾದ ಮಾರ್ಗ,–ಜಾಡು : ಈ ತೋಡು ಕಣಾಂತರ ದಲ್ಲಿರುವ ಬಾಯಿ ಮೂಲಕ ಗಂಟಲನ್ನು ಪ್ರವೇಶಿಸುತ್ತದೆ (ಪ್ರಾಚಶಾ. ೫೬). ೩. ಝರಿ ; ಅಬ್ಬಿ ; ಪ್ರವಾಹ : ಬೆಟ್ಟದ ಗುಣ ತೋಡಿನಿಂದಳಿ ಯಿತ್ತು ಸಾಗರದ ಗುಣ ಕೋಡಿಯಿಂದಳಿಯಿತ್ತು (ಮೋಳಿಮಾ. ೧೦೩-೪೦೦) ; ಗಣಸಲೆ ನೀರ ತೋಡಿನಿಂದ ಪಡುವಲು (ಬೊಂಕಶಾ. ೧೯೩೦, ಮಂಗಳೂರು.

ಈಶಾನ್ಯ ಹೊಳೆ (೫೩೬-೨೯ ; 1375) ;ತೋಡಿಗೆ ತೆಂಕ ಒತ್ತು ಬದರು ತಾಳ ತೋಡಿ ತೆವರಿನ ಮಲಪಡುವ ಮುಖವಾಗಿ ನೆಟ್ಟ ಕಲ್ಲು(ಎಳ. III, ತಿರುಮ. ೬೩-೩೬೯ ; 1748); ಅಲ್ಲಲ್ಲಿ ತಡೆತಡೆವ ಕಾಡುಗಳ ತೋಡುಗಳ ಕಲ್ಲ ಬೆಲ್ಲಿದ ಪಸಲೆಗಳ ನೊಸಲ ತುಳಿದಂ (ಕಾಲೂಕ. ೧೦೮-೨೨೨); ಆ ದಾನವರಾದ ನವ್ಮವರು, ಎಂಬವರ ಸ್ವಭಾವ ವರ್ತನೆಗಳು ಆ 'ಕಾಡ ಸೊಪ್ಪು ತೋಡ ನೀರಿನ' ಬಡಮುನಿಗಳ ಮೇಲೆ ಹೇಗೆ ಹೇಗೆ ಕಾಂಡವವನ್ನಾಡಿದ್ದುವು? (ಪಾರ್ಶ್ವಸು. ೫೮) ; 'ಕಾಡ ಸೊಪ್ಪ'ನ್ನು 'ತೋಡ ನೀರಿ'ನಲ್ಲರದು ಕುಡಿಸಿ ಗುಣ ಗೊಳಿಸುವ ಎಷ್ಟೋ ಮಂದಿ ಹಳ್ಳಿಗರೀಗಲೂ ಇದ್ದಾರೆ (ನಾಡೋಜ ೨೬೦). [<ತೋಡು$_1$./ಮಲ. ತುಳು. ತೋಡು; ಕೂಡ. ತೊಡಿ]

ತೋಡು$_3$ (ನಾ). ೧. ಜೊತೆ ; ಯುಗಳ : "ತೋಡು – ನಿಮ್ಮ ಮನೇ (ಹೊರಟು ಹೋಗು), ಯುಗ್ಮೇ ಚ (ಜತೆ)" (ಶಬ್ದಭಾ) ; "ತೋಡು ಜೋಡಿಯು" (ಶಬ್ದಮಂ. ೫೬) ; ಬಿಸುಸುಯ್ದತ್ತಗಲ್ದಿರ್ದ ನೀರ್ವಕ್ಕಿಗಳಾಗಳ್ ಕೂಡಿ ತೋಡಾದುವು (ಆದಿಪು. ೦೨-೯) ; ನೀರ್ವಕ್ಕಿಗಳ್ ಕೂಡಿ ತೋಡಾಗೆ ದಿಗಂತಂಗಳ್ ನಿತಾಂತಂ ತೊಳಗಿ ಬೆಳಗೆ . . . ಉದಯಂಗೆಯ್ದುತ್ತು ಶೋಭಾರುಣಕಿರಣಗಣಾಳಂಬಮಾದಿತ್ಯಬಿಂಬಂ (ಸುಕುಮಾ. ೦೨-೧೬) ; ತವಕದಿನಪ್ಪಿ ತಲ್ಲಣದೆ ಚುಂಬಿಸಿ ನಿಲ್ಲದೆ ಕೂಡಿ ತೋಡಗಲ್ಲುವ ದಿವಸಾವಸಾನಸಮಯಕ್ಕೆ . . . ಅಗಲಲಾಱದಗಲ್ದುವು ಜಕ್ಕವಕ್ಕಿಗಳ್ ಕನಲ್ದು (ಅನಂಪು. ೭-೭೦) ; ಓಲೆಯ ತೋಡುಳಿಯಲ್ ಪೊಕ್ಕಳಬಲೆ ಜನಕಾಲಯಮಂ (ನೇಡಂ. ೫೭೮); ಬಿನ್ನಣದಿಂದ ಸಮೆದ ದಂಡೆ ತೊಂಡಿಲು ಹೊನ್ನೋಲೆಯ ತೋಡುಗಳನು (ದಂಪ್ರಸಾಂ. ೦೨-೨೪೪). ೨. ಸಮಾನ ; ಸಾಟಿ: "ಸರಿ, ದೊರೆ, ಪಡಿ...ತೋಡು, ಒರಗೆ, ಜೋಳಿ, ಹೊಯ್ಕೆಯ್ ಹೋಟಿ, ಸಂಗಡಂ – ಈ ೧೮ ಸಮಾನಕ್ಕೆ ವೆಸರ್" (ಕಕಸಾ. ೧೫-೨೯೦) ; ವಾರ್ವ್ವತಿಗೆ ತೋಡು . . . ವಾಸವಾಂಗನೆಗೆ ಪಾಸಟಿ ಚಾಗಲ ದೇವಿ ಧಾತ್ರಿಯೊಳ್ (ಎಳ. VIII, ನಗರ. ೪೭-೦೦೩ ; 1062) ; ಕರಿವರಮಸ್ತಕದೊಳ್ ತೋಡಿಲ್ಲದೆ ಬಗೆಬಗೆದುತ್ಸುಕದೊಳ್ . . . ಪಿರಿದುತ್ಸುವದಿಂದೇಳ್ದಂದಾಗಳ್ (ರಾಜಚೇ. ೯-೪೧ ರಗಳೆ) ; ಇನ್ನೆಬರಂ ತಮಗೆ ಜಗಂ ತೋಡಾಗದೆಂದು ಸೊರ್ಕಿನುರ್ಕಿಂ ಬಜಿಗೊಂದೆ ಪಂದೆ ರಾಯರಂ ಕಾಡಿ ಬೇಡಿ ಕೂಡಿದ ಜಾಳಿಗೆವೊನ್ನಂ ಕೋಳುಗೊಂಬೆಂ (ರಾಮಾಶ್ವ. ೧೫೭-೨೮) ; ನಾನಾ ಜಾತಿಯ ರಾಯರೊಕ್ಕ ಬನಮಂ ಮೈಸೂರ ಕಾಡೊಳ್ಗಿನೊಳ್ ಮಾನಾತೀತಮನೋವಿಕಾಸವಡೆಯಲ್ಕೀ ಕಾಡ ತೋಡಾವುದೋ (ಪ್ರಸೂಮು. ೦-೩೫) ; ಅವನ್ಗಿವಳ್ಗಿ ಬೆಳೆದ ಪತ್ತುಗೆಗೆ ತೋಡಿಲ್ಲಮ್ (ಅಂತಿಗೊ. ೩೭-೩೪೭). ೩. ಸಂದಣಿ; ಗುಂಪು: ಹೂಡಿದಂಬನ ಹೊದೆಯ ಬಂಡಿಯ ತೋಡ ಕಡಿದನು ಧತ್ರ ಚಮರದ ರಥಾಡಿಗಳ ತಜಿದೊಟ್ಟಿದನು ಕಲಿವಾರ್ಥ (ಕುವ್ಯಾಳ. ೨೬-೯). [ದೇಶ್ಯ. ತಮಿ. ತೆಲು. ತೋಡು]

ತೋಡು$_4$ (ನಾ). ಬಾಣವನ್ನು ತೊಡುವಿಕೆ ; ಶರಸಂಧಾನ : ತೋಡು ಬೀಡಂ ಕಾಣ್ಬುದು ನಾಡೆಯುಮಂರಿದೆನಿಸಿ ಕೃಷ್ಣನಾರ್ದಿಸೆ (ಪಂಭಾಮಾ. ೯-೬೩);ತೋಡುಡುಗದೆಸುತಮಿರೆ ಮಾರ್ಪಡೆಯ[ರುಮವ]ರವಯವಂಗಳಿನೆನಿತಪಿಳಂ ಕೂಡೆ ನಡೆ ಮೆಯ್ಗಳಂಬಿನ ಮೂಡಿಗೆಯನೆ ಪೋಲ್ತು ಕೆಡೆದರುಗ್ರಾಹವದೊಳ್ (ಬಂಹರಿ. ೧೧-೦೦೦); ತೋಡು[ಮಂ]ಬಿಡುವಂದ ಲೀಕ್ಷಿಸಿ ನೋಡಿಯಱಿಯಲು ಬಾರದಂಬಿನ ಕೂಡೆ ಬಿಲ್ದಿಭ ತುರಗ ರಥ ಕಾಲಾಳ್ಗಳಿಂದಱಿಯೆ (ಕುಮುಂರಾ. ೨-೫೩).

ತೋಡುಂ ಬೀಡುಂ, ತೋಡು ಬೀಡು=(ಬಾಣವನ್ನು) ತೊಡಂವುದಂ ಮತ್ತಂ ಬಿಡುವುದಂ: ಎರಡುಂ ಕೆಯ್ಯೊಳ್ ತೋಡುಂ ಬೀಡುಂ ಕಾಣಲಾಗದಂತಿಸೆ (ದಂಪಥಾ. ೫-೧೬ ವ); ತೋಡುಂ ಬೀಡುಮಿಲ್ಲೆಚ್ಚುತೆ ಪೆಣಮಯಮಾದಪ್ಪುದೋ...ಎಂಬಂತಿರೆಚ್ಚಂ (ಅನಂಪು. ೦೪-೦೭);ಕೃತವರ್ಮನೆಸುಗೆಯ ತೋಡುಬೀಡಿನ ಭರವ ಬಲ್ಲವನಾರು (ಕುವ್ಯಾಗ. ೨-೬). [<ತೊಡು$_1$]

ತೋಡು$_5$ (ನಾ). ೧. ಉಪಾಯ ; ಹಂಚಿಕೆ ; ತಂತ್ರ ; ಯುಂಕ್ತಿ : ಶ್ರಮವನ್ನೂ ತೊಡಕುಗಳನ್ನೂ ತಕ್ಕ ತೋಡುಗಳಿಂದ ನಿವಾರಣಮಾಡಿ ಕೆಲಸವನ್ನು ಕೊನೆಗಾಣಿಸಿ ತೋರಿಸುವ ವಿವೇಕವೇ ಜ್ಞಾನಾಂಜನವೆನ್ನಿಸಿ ಕೊಳ್ಳುವುದು (ಕಾಂಪ್ರಾತ. ೬೯) ; ಇದು ಬಿಕ್ಕಟ್ಟಿನ ಪ್ರಶ್ನವು. ಇದಕ್ಕೆ ಏನಾದರೊಂದು ತೋಡು (ಉಪಾಯ) ತೆಗೆಯಲುಬೇಕು (ದೀಕಲ. ೧೪೧). ೨. ಕಟ್ಟು ; ಪ್ರತಿಬಂಧಕ ಉಪಾಯ ಅದರ ತೋಡು ತಿಳಿದವರು ಮೂರುದಿನಗಳೊಳಗಾಗಿ ಬದುಕಿಸಿಕೊಳ್ಳಬಹುದು (ಆದೀಪ. ೧೫೭) ; ನಾವು ಒಬ್ಬ ಮಾಂತ್ರಿಕನ ಕೈಯಲ್ಲಿ 'ತೋಡು' ಮಾಡಿಸಿದರೊ ? (ಕಡ್ಡಾಮು. ೭೪).

[ತಮಿ. ತೋತು ; ಕೋತ. ತೋದ್./ಮರಾ. ತೋಡ್]

ತೋಡುಂಗಿಱು (ಕ್ರಿ). ಜೊತೆಯಾಗಿ ಎಣಿಸಂ; ಸಮಾನವೆಂದು ಭಾವಿಸಂ: ಆರಂ ತೋಡುಂಗಿಱದೆ ತನ್ನೊಂದು ಗರಗರಿಕೆಯ ಸೊಮ್ಮಿನಭ್ಯುದಯದ ಪದುಳವಮರಸಾಳ್ವ ಬಸಂತರಾಯನುರ್ಕುಂ ಸೊರ್ಕುಂ ಸೋದ್ರುಬಯಲಪ್ಪಿನೆಗಂ ದಾಬೆಗೆಯ್ದು (ರಾಮಾಶ್ವ. ೫೦-೦೮).

[ತೋಡು$_3$ + ಗಿಱು]

ತೋಡುಕ್ಕೈ 'ತೊಡಂಗೈ' ನೋ.

ತೋಡುಗವಣೆ (ನಾ) ಜೋಡಿ ಕವಣೆ : ತೋಡುಗವಣೆಯ ತೂಱುಗಲ್ಲಿನ ಝಾಡಿ ಝಮ್ಮಿಡಿಸಿದವು ಗಗನವ (ತೂರಣಾ. ೬-೦೦-೬).

[ತೋಡು$_3$ + ಕವಣೆ$_1$]

ತೋಡುಗಾಲುವೆ (ನಾ). (ಅಗೆದು ಮಾಡಿದ) ಸಣ್ಣ ಕಾಲುವೆ : ದೊಡ್ಡ ನಾಲೆಯಿಂದ ಕಬ್ಬಿನ ಗದ್ದೆಗೆ ತೋಡುಗಾಲುವೆ ಅಗೆಯಬೇಕು (ಕೂಡಿ).

[ತೋಡು$_3$ + ಕಾಲುವೆ (<ಕಾಲ್ವಾಯ್)]

ತೋಡುಗೆಲಸ (ನಾ). (ಭೂಮಿಯನ್ನು) ಅಗೆಯುವ ಕಾರ್ಯ : ಅಗೆತ : ನಾಲೆಯನ್ನು ಅಗೆಯಲು ೫೬ ಮಿಲಿಯ ಸಲೆ ಅಡಿ ತೋಡು ಗೆಲಸವನ್ನು ೧೦೦೦ ಸಲೆ ಅಡಿಗೆ ೨೫ ರೂಪಾಯಿನ ದರದಲ್ಲಿ ಮಾಡಲಾಯಿತು (ಶಿಲ್ಪನಾ. ೨೪೬). [ತೋಡು$_3$ + ಕೆಲಸ]

ತೋಡುಗೈ, ತೋಡುಕ್ಕೈ (ನಾ). ೧. ಬಗಿಯಂತ್ತಿರುವ ಕೈ : ತೋಡುಗೈಗಳ ಮಿದುಳ ಬಾಯ್ಗಳ ಬಾಡುಗರುಳಿನ ಚೀತ್ಕೃತಿಯ ತಲೆಯೋಡುಗಳ ತನಿರಕುತಪಾನದ ಶಾಕಿನೀಜನವ . . . ಕಂಡೋಸರಿಸುವನದೊಂದು ದೆಸೆಗಾಗಿ (ಕುವ್ಯಾಗ. ೩-೧೧). **ತೋಡುಕ್ಕೈ** : ೨. ಮೊಗೆಯಲು ಉಪಯೋಗಿಸುವ, ಚಿಕ್ಕ ಹಿಡಿಯುಂಳ್ಳ ಕೈಯಂ ಆಕಾರದ ಒಂದು ಬಗೆಯ ಸಲಕರಣೆ: (ಧಾನ್ಯ, ಸಕ್ಕರೆ, ಇದ್ದಿಲು, ಮೊ.ನ್ನು ತೋಡಿ ಮತ್ತೊಂದಕ್ಕೆ ಹಾಕಿಕೊಳ್ಳಲು ಅನುಕೂಲಿಸುವ, ಮೋಟುಹಿಡಿಯ, ಆಳವಾದ ಪಾತ್ರವುಳ್ಳ) ತೋಡುಕ್ಕೈ, ಗೋರಿಗೆ. ಉದ್ದ ಹಿಡಿಯ, ಸೌಟಿನಾಕಾರದ, ಅದ್ದುಪಾತ್ರೆ (Scoop. ಇಂಳನಿ.). 'ಮಗುಚುಕ್ಕೈ' ಪರಾ.

[ತೋಡು$_1$ + ಕೈ$_2$ (<ಕೆಯ್$_2$)]

ತೋಡುದಾರಿ (ನಾ). ದಿಣ್ಣೆಯಂನ್ನು ಅಗೆದು ಮಾಡಿದ ಹಾದಿ,–ಮಾರ್ಗ: ತೋಡುದಾರಿಯ ಪಕ್ಕದಲ್ಲಿ . . . ನೆಲಗಟ್ಟಿನ ಕಡೆಗೆ ನೆಕ್ಕುದೋವನ ದೃಷ್ಟಿ ಹರಿಯಿತು (ಪುಸರು. ೪೬೬).

[ತೋಡು$_1$ + ದಾರಿ]

ತೋಡುದೋಣಿ (ನಾ). ೧. ವಂರದ ದಿಮ್ಮಿಯನ್ನು ಕೊರೆದಂ ಮಾಡಿದ ದೋಣಿ: ತೋಡುದೋಣಿಯಿಂದ ಹಿಡಿದು ಸಮುದ್ರಯಾನದಲ್ಲಿ ಹಡಗಿನ ನಿರ್ಮಾಣದ ಹಾಗೆ ಆಕಾಶಯಾನದ ಬೆಳವಣಿಗೆಯೂ ವೈಜ್ಞಾನಿಕ ಸಾಧನೆಯಾಗಿರಲಿಲ್ಲ (ಶಿಲ್ಪನಾ. ೦೪೪). ೨. ದನಕರುಗಳು ಕುಡಿಯಲು ನೀರನ್ನು ತುಂಬಿಡುವ ಕಲ್ಲಿನ ಅಥವಾ ಮರದ ದೋಣಿ,–ತೊಟ್ಟಿ.

[ತೋಡು$_1$ + ದೋಣಿ$_3$]

ತೋಡುವಡಿ (ನಾ). ಸಮಾನವಾದ ಅಳತೆ.—ಪ್ರಮಾಣ : ತಿಂಗಳಿಗೆ ಸಲ್ವ ಮೂಱುವೀಸ ದೋಪಾದಿಯ ಬಡ್ಡಿಯಲು ತೋಡುವಡಿಯಾಗಿ ವರ್ಷಂ ಪ್ರತಿ ಬಂದ ಬಡ್ಡಿ ಇಂದ ಆ ಇಂದ್ರಧರ್ಮ್ಮ ನಡವಂತಾಗಿ (ಎಳ. V, ದೇವರು. ೨೪೬-೬ ; 1203). [ತೋಡು೩ + ವಡಿ೧]

ತೋಡುವೊಯ್ಲು (ನಾ). (ದೇಹದಲ್ಲಿ ರಕ್ತವನ್ನು ಚಿಮ್ಮಿಸುವ) ಹೊಡೆತ ; ಗಾಯಂ ಕೊರೆಯಂಎ ಹೊಡೆತ: ಜಾಡಿಸುವ ಮಣಮಯದ ಗದೆಯಲಿ ತೋಡುವೊಯ್ಲಿನ ತುಡುಕುಗಾಯದ ನೀಡುಮೊನೆಗಳ ವಿಗಡನ ಕೈದನದಬರಕ್ಕಸರ (ಕುಪ್ಪಾಳ. ೧೦-೩೨). [ತೋಡು೧ + ವೊಯ್ಲು]

ತೋಡುಹಾವುಗೆ (ನಾ). "ಒಂದೇ ವಂರದ ತುಂಡನ್ನು ಕೆತ್ತಿ ಮಾಡಿದ ಪಾದರಕ್ಷೆ ; ವುರದ ಅರೆಜೋಡಂ ; ಪಾವುಕೊರಡಂ ; ತೋಡು ಹಾವುಗೆ ; ವಂರದ ಅಟ್ಟಿಯಂ ಪಾದರಕ್ಷೆ" (Sabot. ಇಂಳಿ).

[ತೋಡು೧ + ಪಾವುಗೆ]

ತೋಡೆ೧, 'ತೋಡಾ' ನೋ.

ತೋಡೆ೨, ಥೋಡೆ, (ನಾ). ಸ್ವಲ್ಪ ; ಕಿಂಚಿತ್ತು ; ಅಲ್ಪ : ನಂಗೆ ಒಂದು ಹಂಚಿಕೆ ಹೊೞೀತಯ್ತು. ಮನೋಗ ಹೇಳು : ಧನೇರ ಕಡೇನೇ ಹೋಗಿ ಕೈಕಾಲು ಬೀೞ್ಕಿ. ಅಲ್ಲೆ ನಾನೂ ತೋಡೆ ಹೇೞ್ತಿನು (ಪ್ರೀಪೂಶ್ರ. ೧೩). ಥೋಡೆ : ಏನೋ ಥೋಡೇ ತುಸಾ ಯಾರರೆ ಧಾಂದಲೆ ಹಾಕತಾರ, ಆದನ್ನೆಲ್ಲ ಥಮ್ಮಣೆ ಮಾಡತೀವಿ (ಧನಂಜ. ೩೧).

[←ಹಿಂ. ಮರಾ. ಥೋಡಾ]

ತೋತಾಪುರಿ (ನಾ). ಒಂದು ಬಗೆಯ ಮಾವಿನ ವಂರ ಮತ್ತು ಅದರ ಕಾಯಿ ; ಗಿಣಿಮೂತಿಮಾವು : ನವ್ಮ ತೋಟದಲ್ಲಿ ತೋತಾಪುರಿ ವುರ ಇದೆ (ಕೂಥಿ). [←ಹಿಂ. ಮರಾ. ತೋತಾ = ಗಿಣಿ]

ತೋತಾಯ (ನಾ). ೧. ಕೃತ್ರಿವು ದಾಖಲೆ ಮೊದಲಾದುವನ್ನು ಹುಟ್ಟಿಸುವಿಕೆ. ೨. ಮೋಸಗಾರ ; ಡಾಂಭಿಕ. ೩. ಪೋಟಾ ವಾರಸುದಾರ : (ಟ). [←ಮರಾ. ತೋತಯಾ. / ಹಿಂ. ತೋತ]

ತೋತ್ತರ (ನಾ). ಸ್ತೋತ್ರ ; ಸ್ತುತಿಸಂವಿಕೆ : ಶಚಿಪತಿಯು ಎತ್ತು ಹತ್ತುವ ಕೃತ್ರಿವಾಸನ ತೋತ್ತರವ ಮಾಡುತ್ತ ಮಾನವ ತೆತ್ತಿ ಮಸ್ತಕವನ್ನು ಪಾದಕೆ ಸತತ ಮಣಿಸುವನು (ಪಾರ್ವಹ. ೨-೮೦).

[<ಸಂ. ಸ್ತೋತ್ರ. /ತಮಿ. ತೋತ್ತಿರ ; ತುಳು. ತೋತ್ರ]

ತೋತ್ರ (ನಾ). ಆನೆ, ಕಂದುರೆ, ಎತ್ತು ಮೊದಲಾದ ಪ್ರಾಣಿಗಳನ್ನು ನಡೆಸಲು ತಿವಿಯಂಎ ಸಾಧನ ; ತಿವಿಗೋಲಂ : "ಪ್ರತೋದ, ಪ್ರಾಜನಂ, ತೋತ್ರಂ—ಸಿ ಮುಳುಹುಗೋಲ್" (ಹಲಾಯು. ೪೪-೪೩೨) ; "ತೋತ್ರಂ, ವೈಣಾಕಂ—ಆನೆಯನ್ನು ತಿವಿದು ಶಿಕ್ಷಿಸುವ ಬಿದುರಿನ ಕೋಲಿನ ಹೆಸರು" (ಸಿದ್ಧಾಂತಿ. ೩೧೩) ; ಧೈರ್ಯದೈರಾವತಂ ಹೋರಾಡುತಿರ್ಪುದಂ ಕಾಣಾತಿ ಗುರು ವಸಿಷ್ಠನಾಡಿದನ್ ಮಾವುತಂ ತೋತ್ರದಿ ತಿವಿಯುವಂತೆ (ಶ್ರೀರಾಮಾ. ೧೭೦-೪೭೬). [ಸಂ.]

ತೋದ೧ 'ತೋ' ಪರಾ.

ತೋದ೨ (ನಾ). ೧. ದನ, ಕರು, ಕುದುರೆ ಮುಂತಾದುವುಗಳನ್ನು ಹೊಡೆದಂ ಕೊಂಡು ಹೋಗುವಿಕೆ,—ನಡೆಸಿಕೊಂಡು ಹೋಗುವಿಕೆ. ೨. ನೋವು ; ಯಾತನೆ : ಅಂಬುಧಿಸಂಗಸಂಜನಿತಶಂಬರನಿರ್ಭರಗರ್ಭ ಬಂದು ಕಾದಂಬಿನಿ ತತ್ಪ್ರಸೂತಿಸಮಯಂ ಬರೆ...ನರಲ್ವ ರಾವದಂತೇಂ ಬಗೆಗೊಂಡುದೋ ಗುಡುಗು ಸೂತಿಮರುತ್ಕೃತತೋದದೇಳ್ಗೆಯಿಂ (ರಾಜಶೇ. ೯-೦೦೩). [ಸಂ.]

ತೋದನ (ನಾ). ೧. ಹೊಡೆತ ; ಬಡಿತ : (ಟ). ೨. = ತೋತ್ರ : "ಪ್ರಾಜನಂ, ತೋದನಂ, ತೋತ್ರಂ—ಸಿ ತಿವಿಗೋಲಂ" (ಸಿದ್ಧಾಂತಿ. ೩೩೮). ೩. ತೀವ್ರವಾದ ನೋವು,—ಯಾತನೆ,—ವೇದನೆ. [ಸಂ.]

ತೋದೆ (ನಾ). ತೋರಿಕೆಯಂ ನೆಪ ; ಕುಂಟುನೆಪ : ಅವುಲ್ದಾರರು ಹೇಳಿದುದಕ್ಕೆಲ್ಲ ಅವನು ಒಂದು ತೋದೆ (ಕುಂಟುನೆವ) ಹಾಕುತ್ತಿದ್ದನು (ಗರುಡಾ. ೧೦೭). [←ತಮಿ. ತೋತು]

ತೋದ್ಯ (ನಾ). (ಹೊಡೆಯಬಹುಂದಾದ ಅಥವಾ ಬಾರಿಸಬಹುಂದಾದ) ಒಂದಂ ವಾದ್ಯವಿಶೇಷ : ಸುದತಿ ಧನತೋದ್ಯದಳಗೀತದ ವಾದ್ಯದ ಹೃದ್ಯದುಚಿತ ಪತ್ರದ ರಸಚಿತ್ರದ ಮಾಳಾಕರ್ಮದ ನರ್ಮದ ಸಖಿಯರ ಬಿನದದಿಂದವಲಸಿಕೆಗಳಿವಳ್ (ಪುಷ್ಪಪು. ೪-೧೭). 'ಆತೋದ್ಯ' ಪರಾ.

[ಸಂ.]

ತೋಪಡ೧, ತೋಪರ, ತೋಬಡ (ನಾ). ೧. ಮರ ಅಥವಾ ಲೋಹವನ್ನು ಸವಂಗೊಳಿಸಲು ಬಳಸುವ ಸಾಧನ ; ಉಜ್ಜುಗೊರಡಂ ; ಹತ್ತರಿ : ತೋಪಡ ಹೊಡೆಯುಬೇಕಾದ ಲೋಹವನ್ನು ಒಂದು ಮೇಜಿನ ಮೇಲಿಟ್ಟು ಮೇಜೇ ಹಿಂದಕ್ಕೂ ಮುಂದಕ್ಕೂ ವಿದ್ಯುತ್ತಿನ ಬಲದಿಂದ ಓಡಾಡುವ ಹಾಗೆ ಮಾಡುತ್ತಾರೆ (ಶಿಲ್ಪಿನಾ. ೧೯೩). ೨. (ಆಲಂ) ಅನುತ್ತೀರ್ಣತೆ; ಸೋಲು : ಡ್ರಾಯಿಂಗ್ ಪರೀಕ್ಷೇಲಿ ನನಗೆ ತೋಪಡ ಆದರೆ ನಿವುಗೆ ತುಂಬಾ ಸಂತೋಷವೇನೋ (ಸ್ವಾಮಿಸ್ಮೇ. ೩೦). **ತೋಪರ** : ೧. ಅವರು ತೋಪರ ಹಾಕಿ ಮರಗಳನ್ನು ನಯಮಾಡಿದರು (ಗಲಿಪ್ರ. ೯೯). **ತೋಬಡ**: ೧. ಬೈರಿಗೆಯ ಅಲಗು; ತೋಬಡದ ಉಳಿಯಲಗು; ಪಟಕಾರು, ವೊ.ಗಳ ಕೊನೆಗತ್ತರಿ. ಕಡಿವಾಣ (Bit. ಇಂಳಿ).

[←ತೆಲು. ತೋಪಡ, ತ್ರೋಪು]

ತೋಪಡ೨ 'ತೋಬರಿ' ನೋ.

ತೋಪರ 'ತೋಪಡ೧' ನೋ.

ತೋಪಿ 'ಟೋಪಿ' ನೋ.

ತೋಪು೧, ತೋಹು೧ (ನಾ). ಮರಗಳ ಗುಂಪು,—ಸಮೂಹ : ಇಂತು ಮನಂಗೊಳಿವ ಮಾವಿನ ತೋಪಂ ಕಂಡು ಪೊಂಗಿ ಪೊಱಮೆಯೇಱಿ ಮೆಲ್ಲ ನೆಟ್ಟಂದಾ ವನಮನಾಶ್ರಯಿಸಿಕೊಂಡಾನನಂತಕಾಲವಿಮರಲ್ (ಉದ್ಭಟ. ೬-೧೩ ಪ) ; ಗಂಧರ್ವಸುಭಟರಿಗೆ ಕುರುಪತಿಯ ಸುಭಟರಿಗೆ ತೊಡಕಿತು ಕೋಟಿ ತೋಪಿನಲಿ (ಕುಪ್ಪಾಳ. ೧೮-೫೯) ; ತಾಪವನು ಹಿಂಗಿಸುವಶೋಕೆಯ ತೋಪಿನಲಿ ಸರಮೆ ಶ್ರಿಜಟೆಯರ ಕಾಪಿನಿಂದಿರಿಸಿದನು ತೊರವೆಯ ರಾಯನಂಗನೆಯ (ತೊರರಾ. ೩-೧೦-೪೪) ; ನರಸರಾಜನೂ ಶ್ರೀ ಪರಮೇಶ್ವರ ಪ್ರೀತಿಯಾಗಿ . . . ಬಾವಿಯನೂ ಅಗುಸಿ ಮಾವಿನ ತೋಪನು ಯಿಕ್ಕಿಸ್ಸನು (ಸೌಇಇ. IX-II, ೪೭೭-೭೩ ; 1509) ; ಆ ಪತಿವ್ರತೆಯಪ್ಪ ಖಗಿಯೂ ತೋಪಿನಲಿ ಪತಿಯೊಡನೆ ಸಂಗಿಸಿ . . . ಗರ್ಭ ಧರಿಸಿ (ನಿಶಾಗ. ೧೫-೧೩-೫೪) ; ಇಂದ್ರನ ತೋಳ್ಗಳಂದೊಪ್ಪಿದವುಯೆಳ ನೀರ್ವೊತ್ತ ತೆಂಗಿನ ತೋವುಗಳ ತೆಱದಿ (ಸಾಳ್ವಭಾ. ೩೩-೬೦) ; ಮಾವಿನ ವುರಗಳಂ ಹಾಕಿ ತೋವು ಮಾಡಿ ಯಾವ ವುರುಷನು ಸಲಹುವನೊ ಆ ವುರುಷನು . . . ಸದ್ಗತಿಯನ್ನೈದಿ ಸಂತೋಷಪಡುವನು (ಸೌಗಂಧಿ. ೪೨೪-೦೫) ; ಖಗಗಳುಲಿವ ವಿವಿಧ ಸ್ವನದ ಮೇಳ ತೋವ ತುಂಬಿದ (ಪೂಂದಳೆ. ೯-೦೬). **ತೋಹು೧** : ಮನೆ ನೆರೆಯೊಳಿವ ತೋಹುಗಳು ವಿವಿಧವೃಕ್ಷಗಳು ಸ್ಥಿರ ಜೀವನಕೆ ಹಸುರುಗುಡಿಯನೆತ್ತಿ (ಧಾರಂಗ. ೬೩).

[ದೇ. ॥ ತಮಿ. ಮಲ. ತೋಪ್ಪ ; ತುಳು. ತೆಲು. ತೋಪು]

ತೋಪು೨ 'ತೋರ್ಪು' ನೋ.

ತೋಪು೩, ಟೋಪು೧, ತೋಪು (ನಾ). ೧. ಗುಂಡು ಇಟ್ಟು ಹೊಡೆಯುವ ಸಾಧನ ; ಫಿರಂಗಿ : ಕರವೆಸೆವ ಕಾವಿ ಮಂಜಟಿಗೆ ತೋಪು ಗಳಿಂದೆ ಭರದಿ ಬಾಸಣಿಸೆಸೆವ ಬಲ್ಲಾಳದಟ್ಟಿಯೊಳಗುರುವೋದದಿಂ ಬರ್ಪವರ್ ಕೆಲರ್ (ಆರಾಜ. ೪-೩೩) ; ತೋಪು ತುಬಾಕಿಗಳು ಇಲ್ಲದಾಗ ಕಾಳಗದಲ್ಲಿ ಆನೆಗಳನ್ನು ಉಪಯೋಗಿಸುತ್ತಿದ್ದರು (ಮುಂಬಯಿ. ೪-೩೩) ;

ತೋಪು ತುಬಾಕಿ, ಕುರುಳಿ ಪಿಸ್ತುಲಬಾಕ ಸಹಿತ ನಡುವಿನಾಗ (ಕನ್ನಡಾ. ೮೮). **ಟೋಪು$_1$:** ೧. ಸಮ್ಮೋಹದಿಂದೊಪ್ಪಿಸುತೆ ಗುರುಪಾದಕಂ ಜನಪನಾಗಳ್ ಟೋಪುಗಳನುಡಾವಿಸಿದ ಬಳಿಕನುನಯಂ ಚರಗಣದ ತಿಂಥಿಣಿಗೆ (ಮಹಾವಿ. ೨೨-೮೨). **ತೋಪು:** ೧. ಕೆಲವು ಜಹಜಿನಲ್ಲಿ ಎಪ್ಪತ್ತೆರಡು ತೋಪು ಇತ್ತು (ರಾಜೀಂದ್ರ. ೧೧೫) ; ನಾಡ ಸಂರಕ್ಷಣೆಗೆ ತೋಪು ಇರದಿರಲು ನಾಡಿಗೊಂದಿರಬೇಕು ಬಯ್ಯುವಾ ಮುದುಕಿ (ನಿರಾಭ. ೧೭೯-೨). ೨. ಗೌರವಕ್ಕೋಸ್ಕರವಾಗಿ ಫಿರಂಗಿಯನ್ನು ಹೊಡೆಯುವುದು,-ಹಾರಿಸುವುದು; ಫಿರಂಗಿ ಮರ್ಯಾದೆ : ಖಾವಂದರಿಗೆ ಕ್ರಮವಾಗಿ-ತೋಪು ಮುಂತಾದ ಮರ್ಯಾದೆಗಳು ನಡೆದುವು (ಮಹಾವಂ. II, ೪೩).

[←ಹಿಂ. ತೋಪ್ ; ತುರ್ಕೀ, ಮರಾ. ತೋಫ್]

ತೋಪುಖಾನಿ 'ತೋಫಖಾನೆ' ನೋ.

ತೋಪೊಳೆ (ಕ್ರಿ). ಚೆನ್ನಾಗಿ ಹೊಳೆ,-ಮಿರುಗು (?) : ತಾರಾಪತಿಯು [ಯು] ಸುತೆಯು ತನ್ನಣುಗಂಗೆ ಶ್ರೀಫಲಪಯೋಧರಂಗಳನು ಪಾನಂಗೈಸಿ ತೈಲಮಂ ಪೂಸಿಯೆರೆದು ತೋಪೊಳೆವ ಪೊಂದೊಟ್ಟಲೊಳಗಿಟ್ಟು . . . ಸಲಹುತಿರ್ದಳು (ನವಮೋ. ೧೫-೪೭). [<ತೋಱು + ಪೊಳೆ$_1$]

ತೋಫಖಾನೆ, ತೋಪುಖಾನಿ (ನಾ). ಮದ್ದುಗುಂಡುಗಳ ಸಂಗ್ರಹಾಲಯ,-ಗೋದಾಮು : ಜಪಾನಿಗಳಿಂದ ತೋಫಖಾನೆಯ ಗುಂಡುಗಳು ಹಾರಹತ್ತಿದ್ದುವು (ಪ್ರಡಸ. ೭೪). **ತೋಪುಖಾನಿ :** ತೋಪುಖಾನಿ ಸನ್ನಾಹತಂತ್ರ ಪ್ರಯೋಗಮುಖದಿಂ ಫೌಜಂ ಮೆದೆಗೆಡೆಹಿ (ಕೆಳನ್ನ ೮-೧೦).

[←ಮರಾ. ತೋಫ್ ಖಾನಾ ; ಹಿಂ. ತೋಪ್‌ಖಾನಾ ; ಪಾರ. ತೋಪ್‌ಖಾನಹ್]

ತೋಪು 'ತೋಪು$_3$' ನೋ.

ತೋಬಡ 'ತೋಪಡ$_1$' ನೋ.

ತೋಬರ 'ತೋಬರಿ' ನೋ.

ತೋಬರಿ, ತೋಪಡ$_2$, ತೋಬರ (ನಾ). ಕುದುರೆಯ ಬಾಯಿಗೆ ಕಟ್ಟುವ ಕಡಲೆಯ ಅಥವಾ ಹುರುಳಿಯ ಚೀಲ ; ಮುಖ ಚೀಲ : ಡೋರರು . . . ತೊಗಲಿನ ಬುದ್ದಲಿ, ಕುದುರೆಯ ತೋಬರಿ, ಲಗಾಮು, ಜೀನು ಮುಂತಾದ ತೊಗಲಿನ ಸಾಮಾನುಗಳನ್ನು ಮಾಡುವರು (ಕಥಾಗೆ. ೨೧೯) ; ತೋಬರಿಯಲ್ಲಿ ಕಡಲೆಯನ್ನು ಹಾಕಿ ಆ ತೋಬರಿಯನ್ನು ಕುದುರೆಗೆ ತೋರಿಸಿ . . . ಅದನ್ನು ಹಿಡಕೊಂಡದ್ದು ಅವನಿಗೆ ನೆನಪಾಯಿತು (ಮುಂಬಯಿ. ೪-೮೦). **ತೋಪಡ$_2$:** ಕೂಸಪ್ಪ... ಹುರುಳಿ ಇಸುಗೊಂಡ. ತೋಪಡದ ಚೀಲಕ್ಕೆ ತುಂಬಿ ಇಟ್ಟುಗೊಂಡ (ದಿನಾರಿ. ೩೭). **ತೋಬರ :**(ಕ).

[←ಪಾರ. ತೋಬರಾ, ತುಬರಾ; ಹಿಂ. ತೋಬಡಾ; ಮರಾ. ತೋಬ್ರಾ, ತೋಬರಾ]

ತೋಮ (ನಾ). ಗುಂಪು ; ಸಮೂಹ ; ನೆರವಿ: "ಸ್ತೋಮ – ತೋಮ" (ಶಮದ. ೨೭೨ ಪ್ರಯೋ) ; "ಬಂಬಲ್, ತುಱುಗಲ್ . . . ತೋಮಂ, ತೆಮ್ಮಲ್, ಗುಮ್ಮಿ, ಗೊಂದಣಿ (ಉಂದಲ್) – ಈ ೪೦ ಸಮೂಹಂ" (ಕಶಸಾ. ೫೬-೨೨೨). [<ಸಂ. ಸ್ತೋಮ]

ತೋಮರ (ನಾ). ೧. ತುದಿಯಲ್ಲಿ ಮೊನಚಾಗಿರುವ ಈಟಿಯಂತಹ ಒಂದು ಬಗೆಯ ಆಯುಧ : "ತೋಮರ ಪಿಂಡಿವಾಳ ಪಟ್ಟಿಶ . . . ಕೈದುಗಳ ಭೇದಮಕ್ಕುಂ" (ಮಂಗರಾ. ೮೮-೩೮); ಶಕ್ತಿ ತೋಮರ ಮುಸಲ . . . ವಿವಿಧಾಯುಧಂಗಳೊಳಮತಿಪ್ರವೀಣನುಂ (ಪಂಪಭಾ. ೨-೩೪ ವ); ನಾಳಿಯ ಕೋಲ್ ಜವನಾಳಿವೆಂಬಿನಂ ಕವಿದುವು ತೋಮರಂ ಜವನ ಡಾಮರವಾದುವು (ಪಂರಾಮಾ. ೧೩-೬೧) ; ಶಶಿಕಾಂತದ ಶಿಲಾತಳದೊಳ್ ಪೊರಳುತಿರ್ಪ ಪರವೆಗೆ ಅಶೋಕೆ ಸಶೋಕೆ ಮಾಮರಂ ತೋಮರಂ ಬೆಳ್ದಿಂಗಳು ಬಿಳಿಯಿಂಗಳಂ (ನಂಬಿರ. ೧೬-೨೩) ; ಆ ಮಹಾಸಂಗ್ರಾಮ ಮುಖದಲಿ ತೋಮರದ ಕಾಣಿಕೆಗಳಲಿ ಸುಪ್ರೇಮವನು ಬೆಸಸುವುದು ದುರಿಯೋಧನನ ಮತವೆಂದ (ಕುಪ್ಯಾಉ. ೧೧-೪) ; ಆ ಮರುತ್ತನ ಯಜ್ಞಕೈತಂದಾ ಮರುದ್ಗಣ ಮುನಿಗಣಂಗಳ ತೋಮರದ ತೋಟಿಯಲಿ ಕೆದಱಿತು ಕದನಕೇಳಿಯಲಿ (ತೊರರಾ. ೧-೮-೩೮); ಕುಂತ ತೋಮರ ಖಡ್ಗ ಸುರಗಿ ಭಲ್ಲೆಹಗಳ ಕಾಂತಿ ಮುಸುಕೆ ಚೌದೆಸೆಯ (ಕಂನವಿ. ೦೫-೨೧) ; ಹೆರರ ಕೊಲ್ಲಲು ಕತ್ತಿ ಪರಶು ತೋಮರ ಬೇಕು (ಪಾಂಚಜ. ೪೦-೫). ೨. ತುದಿಯಲ್ಲಿ ಅರ್ಧಚಂದ್ರಾಕೃತಿಯಲ್ಲಿರುವ ಒಂದು ಬಗೆಯ ಬಾಣ: ಕಿರಣತೋಮರದಕ್ಷಿಣೋರುಸ್ಫುರಣತಿಮಿರ ಮೃಗೀಕದಂಬಕ ತರಣಿ ನೂಕಿದನುದಯಶೈಲಕೆ ರತುನಮಯ ರಥವ (ಕುಪ್ಯಾಕ. ೮-೧೫) ; ಮೂದಲಿಸಿ ಖಳನಿಟ್ಟನಿಷ್ಪತ್ತೈದು ತೋಮರಗಳಲಿ ಜೀವವಕಾಯ್ದುಕೊಳ್ಳೆನುತ (ನಿಭಾಗ. ೧೦-೬೯-೩೮). ೩. ಲೋಹದ ಗದೆ. P ಈ ಆಯುಧದ ಆಕಾರವಿಷಯದಲ್ಲಿ ಭಿನ್ನಾಭಿಪ್ರಾಯವಿದೆ ೪. [ಛಂದ] ಒಂದು ವಿಧವಾದ ರಗಳೆ: ವೃತ್ತಜಾತಿ ಸಮುಚ್ಚಯದಲ್ಲಿ ಅಸಿ, ಅಶಿನಿ, ತೋಮರ . . . ಕ್ಷುರಪ್ರ ಇತ್ಯಾದಿ ಆಯುಧಗಳ ಹೆಸರುಗಳು ಪಂಚಮಾತ್ರಾಗಣ ನಿರ್ದೇಶಕ್ಕಾಗಿ ಪ್ರಯೋಗವಾಗಿವೆ . . . ಆದ್ದರಿಂದ 'ತೋಮರ' ಎಂದರೆ ಪಂಚ ಮಾತ್ರಾಗಣವೆಂದು ಸ್ಪಷ್ಟ (ಛಂದೋವಿ. ಪರಿ. ೨). 'ತೋಮರರಗಳೆ' ಪರಾ. [ಸಂ.]

ತೋಮರರಗಳೆ (ನಾ). [ಛಂದ] ರಗಳೆಯ ಭೇದಗಳಲ್ಲಿ ಒಂದು; ಲಲಿತ ಬರಗಳೆ ಪ್ರತಿಪಾದದಲ್ಲಿಯೂ ಐದು ಮಾತ್ರೆಯ ನಾಲ್ಕು ಗಣಗಳು ಇರುವ ರಗಳೆ:ತೋಮರರಗಳೆ-ಶ್ರೀ ಮದರುಹಚ್ಚರಣ ಸರಸಿರುಹಭೃಂಗನಂ ಭೂಮಿ ಕೀರ್ತ್ತಿಸೆ ನೆಗಳ್ದ ಗುಣಗಣೋತ್ತುಂಗನಂ (ಸೌಇಇ. IX-ii, ೧೧೭-೧೬ ; 1055) ; ತೋಮರರಗಳೆಯೆಂದರೆ ಪಂಚಕಲದ ಗಣಗಳಿಂದ ರಚಿತವಾದ ರಗಳೆಯೆಂದು ಅರ್ಥ . . . ಇಂದ್ರಕೀರ್ತಿಯನ್ನು ವರ್ಣಿಸುವ ಪದ್ಯಗಳು ಲಲಿತರಗಳೆಯಲ್ಲಿದ್ದು ಅಲ್ಲಿ ಅವುಗಳನ್ನು 'ತೋಮರರಗಳೆ' ಎಂದು ಹೆಸರಿಸಲಾಗಿದೆ (ಛಂದೋವಿ. ಪರಿ. ೨). [ತೋಮರ + ರಗಳೆ]

ತೋಮಾಲೆ (ನಾ). ದೊಡ್ಡಹಾರ : ಆಜ್ಞಾಧಾರಕರಾಗಿಯಿರುವ ಮಠದ ಬ್ರಾಂಹ್ಮರುಗೆ ಮೊದಲು ತೀರ್ಥ ತೋಮಾಲೆ ಮೊದಲಾದ ಸಕಲ ಮರಿಯಾದೆಗಳನ್ನು ನಡಸುವದು (ಮೈಆರಿ. ೧೯೩೮, ೦೯-೧೧ ; 1811) ; ಪಂಡಿತ ಪೆರುಮಲೆಯವರು ಅನಂತರ ಮಗಳ ಕೈಗೆ ನವಮಲ್ಲಿಕಾ ತೋಮಾಲೆಯನ್ನು ಕೊಟ್ಟರು (ಶಾಂತಲಾ. ೧೦೯). [<ತೋರ + ಮಾಲೆ]

ತೋಮೆ 'ತೊಂಬೆ$_1$' ನೋ.

ತೋಯ$_1$ 'ತೊವ್ವೆ' ನೋ.

ತೋಯ$_2$ (ನಾ). ೧. ನೀರು ; ಉದಕ ; ಜಲ : "ಸಲಿಲಂ ಜೀವನಮಂಬು ತೋಯಮುದಕಂ" (ವಸ್ತುಕೋ. ೨೨-೧); ಎನ್ನ ಮಾತಿಂಗೆಲೆ ಕೌಂತೇಯ ಮಱುಮಾತನಿತ್ತು ಮದೀಯ ಸರೋವರದ ತೋಯಮಂ ಕುಡಿ (ಪಂಪಭಾ. ೮-೩೦) ; ಚತುಃಕೋಣಕಳಶಭರಿತತೋಯದಿನಭಿಷೇಕಂಗೆಯ್ದು (ಆಜಿಪು. ೪-೭೦ ವ) ; ಕಾಶಿಯ ನದೀತೋಯಂಗಳಂ ಮಂಗಳೋತ್ಸವದಿಂ ಭೂವರ ವೃಂದಮಂ ನಿಲಿಸಿ ಸಾಲ್ಗೊಂಬಂತುಟೋರೋರ್ವಱಿದವನಂದೈದಿಸಿದಂ ಸುವರ್ಣಘಟದಿಂ (ರಾಜಶೇ. ೩-೩೧) ; ಶೀತಲಸುಗಂಧಮಯ . . . ವಿಮಲತೋಯಮಿದು (ಶ್ರೀರಾಮಾ. ೧೭೭-೪೨೨). ೨. [ಛಂದ] ಒಂದು ಅಕ್ಷರಗಣ ; ಯಗಣ (ಲ - -) : ಗುರು ಮೂಱಾಗಿರೆ ಧಾತ್ರಿ ಮುಂತೆರಡು ಬಿಣ್ಪಿಂ ತೋಯಂ (ಛಂದೋಂಬು. ೧-೩೮). [ಸಂ.]

ತೋಯಕುಂಭ (ನಾ). ನೀರಿನ ಕೊಡ,-ಕಳಶ : ದೇವಮಹೀರುಹವ್ರಜದೊಳಂ ದೇವಾಪಗಾತೋಯಕುಂಭದೊಳಂ ದೇವವರಂ ಸ್ತವಂಗೆಯೆ (ಜಗವಿ. ೩-೧೭). [ತೋಯ$_2$ + ಕುಂಭ]

ತೋಯಜ (ಗಂ). ೧. ನೀರಿನಲ್ಲಿ ಹುಟ್ಟಿದ. (ನಾ). ೨. ಕಮಲ; ತಾವರೆ: ಸುಭಟರ ಚರಣತೋಯಜದ ಘಾತದಿಂ ಕೆಂಧೂಳಿ ಮಸಗೆ (ಛಾವಕಂ. ೫-೧೪); ತೋಯಜವೆಂಬ ಪುಷ್ಪದ ಪೆಸರವರೊಳು . . . ಇರಿಸು ಕಂಡ್ಯ ಎನ್ನನು (ಕಇಳ. ೦೩೦-೨). [ಸಂ.]

ತೋಯಜಗರ್ಭ (ನಾ). ೧. ಕಮಲದ ಒಳಭಾಗ: ಎಲೆ ಮಧುವ್ರತ ನೀನದ ಸೋಂಕೆ ನಿನ್ನ ಕೇಳ್ ತೋಯಜಗರ್ಭಮೆಂದೆನಿಪ ಬಂಧನಮಂದಿರ ಕಿಂದು ಸೇರಿಪೆಂ (ಣಳುಂತ.೯೧-೦೫೧). ೨. ಕಮಲದಲ್ಲಿ ಜನ್ಮತಾಳಿದವನು; ಬ್ರಹ್ಮ: ತೋಯಜಗರ್ಭನಾದಿಮುನಿಮುಖ್ಯಮತಪ್ರಕಟೀಕೃತಾಖಿಳಾ ಮ್ನಾಯಂ . . . ಒಲ್ದು ದೀರ್ಘಾಯುಮನೀಗೆ (ಪಂಚತಂ. ೦-೯).

[ತೋಯಜ + ಗರ್ಭ]

ತೋಯಜನಾಭ (ನಾ). ಹೊಕ್ಕುಳಲ್ಲಿ ತಾವರೆಯನ್ನುಳ್ಳವನು; ವಿಷ್ಣು: ತೋಯಜನಾಭನನಂತಸಹಾಯಂ ನಲಿದಿಂತು ವತ್ಸಕುಲಮಂ ಕಾದಂ (ಜಗವಿ. ೩-೭೮). [ಸಂ. (ತೋಯಜ + ನಾಭ + -)]

ತೋಯಜಪ್ರಭವ (ನಾ). = ತೋಯಜಗರ್ಭ ೨: ಅಂಬುಜಾಂಬಕ ತೋಯಜಪ್ರಭವರು ಸುಧಾಶನನಾಯಕಾದಿ ದಿಶಾಧಿಪರು . . . ಬಂದರೀಶ ನನೋಲ್ಕೆಸಲೆಂದು (ಬಸಪು. ೦-೪೦). [ತೋಯಜ + ಪ್ರಭವ]

ತೋಯಜಭವ (ನಾ). = ತೋಯಜಗರ್ಭ ೨. [ಸಂ.]

ತೋಯಜಮಿತ್ರ (ನಾ). ತಾವರೆಯ ಸ್ನೇಹಿತ; ಸೂರ್ಯ: ಮತ್ತಮಾ ಗ್ರೀಷ್ಮಕಾಲದೊಳ್ ತೋಯಜಮಿತ್ರನೇಟ್ಗೆವಡೆದೊಪ್ಪಿರೆ (ಋಧ್ಯಟ. ೯-೮೭). [ತೋಯಜ + ಮಿತ್ರ]

ತೋಯಜಷಂಡ (ನಾ). ೧. ತಾವರೆಗಳ ಸಮೂಹ. ೨. ತಾವರೆಗಳ ಗುಂಪನ್ನುಳ್ಳದು;ಸರೋವರ: ತೋಯಜಷಂಡಮನಿದನಾನಾಯತಿಯಿಂ ಕಾವೆನೆನ್ನ ಮಾತಿಂಗೆಲೆ ಕೌಂತೇಯ ಮಱುಮಾತನಿತ್ತು ಮದೀಯ ಸರೋವರದ ತೋಯಮಂ ಕುಡಿ (ಪಂಪಭಾ. ೪-೪೯). [ತೋಯಜ + ಷಂಡ]

ತೋಯಜಾಕರ (ನಾ). ಕಮಲಗಳಿರುವ ಸರೋವರ; ಕಮಲಾಕರ: ತೋಯಜಾಕರದಂತೆ ಪದ್ಮಾಲಯಂ ಶಿವನ ಕಾಯದಂದದೆ ಸರ್ವಮಂಗಳಾಲಂಕೃತಂ ಕಾಯಜನ ಪತನಂತನಂತಮಣಿರಂಜಿತದೊಳರಮನೆ ವಿರಾಜಿಸಿದುದು (ಜಬಪು. ೫-೫೩). [ತೋಯಜ + ಆಕರ]

ತೋಯಜಾಕ್ಷ (ನಾ). ಕಮಲದಂತೆ ಕಣ್ಣುಳ್ಳವನು: ವಿಷ್ಣು; ಅಂತವುರ ಮಾವಳ್ಗೆ ವನಮಾಲಿಕಾಲಂಕೃತಂ ತೋಯಜಾಕ್ಷವಕ್ಷಸ್ಥಲಂ . . . ಅ ಲಕ್ಷ್ಮೀದೇವಿ ಸಂತತಮುಮೆನ್ನೊಳ್ಪುಧಾದೃಷ್ಟಿಯಂತಿಹ ಕಟಾಕ್ಷವೃಷ್ಟಿಯ ಸುರಿಸಲಿ (ಪಚಪಶಾ. ೧-೪). [ಸಂ. (ತೋಯಜ + ಅಕ್ಷಿ + -)]

ತೋಯಜಾನನೆ (ನಾ). ಕಮಲದಂತೆ ವಂಯಮುಖವುಳ್ಳವಳು; ಕಮಲಮುಖಿ: ಜೀಯ ನಿಮಗಂ ನಿನ್ನೆ ನಮಿಸಿದ ತೋಯಜಾನನೆ ಇಂದು ಮರಣಂಗೆಯ್ದಳ್ (ಬಸಪು. ೩೨-೪೨). [ಸಂ. ತೋಯಜಾನನಾ (ತೋಯಜ+ಆನನ + -)]

ತೋಯಜಾರಿ (ನಾ). ಕಮಲಕ್ಕೆ ಶತ್ರುವಾದವನು; ಚಂದ್ರ.

[ತೋಯಜ + ಅರಿ]

ತೋಯದ (ನಾ). ನೀರನ್ನು ನೀಡುವುದು; ಮೋಡ; ಮುಗಿಲು: ನಡೆದನಾ ದೈತ್ಯೇಶ್ವರಂ, ದಿವಂಗತ ಸುತನ ಸತಿಯ ಶೋಕಾಗ್ನಿಯಂ ತವಿವ ವೆರ್ಮಳಿಗಳಂ ಕರೆಯುವ ಮನೋನಿಶ್ಚಯದ ತೋ ಯ ದಂ ಗ ಳಂ ಪೊತ್ತುಯ್ವ ಕಾರ್ಗಾಳಿಯೋಲ್ (ಶ್ರೀಪಾಪು. ೬೪-೧೩೧). [ಸಂ.]

ತೋಯಧಿ (ನಾ). ಕಡಲು; ಸಮುದ್ರ: "ರತ್ನಾಕರಃ . . . ತೋಯಧಿಃ . . . ಸಮುದ್ರಃ – ಈ ೧೨ ಸಮುದ್ರಂ" (ಹಲಾಯು. ೧೦೭-೩೦); ಆಯುಂ ಶ್ರೀಯುಂ . . . ನೃಪತಿ ನಿನಗೆ ನಿಜಸಂತತಿಯುಂ ನ್ಯಾಯದೆ ವೆರ್ಚುವುದಕ್ಕೇ ತೋಯಧಿ ಧರ[ಣೀಧ]ರಾಧರ ಸ್ಥಿತಿವರೆಗಂ (ಕವಿಕಾ. ೩-೫೦೭); ಶ್ರೀಯನರಾತಿಬಳಾಸ್ಯಕ್ಕೋಯಧಿಯೊಳ್ ಪಡೆವ ವೀರನು ಉದರಿಗಳನಾತ್ಮೀಯಪದಸ್ಮರಿತನಖಚ್ಛಾಯೆಗಳೊಳ್ ನಿಜಿಸಿ ನಿಂದ ಗಂಡಂ ಹರಿಗಂ (ಪಂಪಭಾ. ೩-೧); ಶ್ರೀಯಂ ನಿಜವಾದದ್ವಯ ತೋಯಧಿಯೊಳ್ ತಾಳ್ದಿ (ಜಬ್ಭಮ. ೦-೧). [ಸಂ.]

ತೋಯನಿಧಾನ (ನಾ). = ತೋಯಧಿ: ತೋಯನಿಧಾನಫೇನವಿಶದೋತ್ತಮವಸ್ತ್ರಮನುಟ್ಟು ಪುಷ್ಪಮಾಲಾಯುತೆಯಾಗಿ . . . ಪೊಜಮುಟ್ಟಲ್ (ಪಂಚತಂ. ೭೪-೫). [ತೋಯ + ನಿಧಾನ]

ತೋಯನಿಧಿ (ನಾ). = ತೋಯಧಿ: ಶ್ರೀಯ ಚಾಮರದ (ಸುಟಿಗಳಂ)–ತಿಳಿಗೊಳಂಗಳಂ ತೋಯನಿಧಿಯ (ಪೆರ್ಗಱಿಯ)–ಪರಿಯ ಸುಟಿಗಳಂ . . . ಪೋಲ್ವೆಯಪ್ಪ ಮುಗಿಲಿಂದೆ ಮಟ್ . . . ಕಱಿಗುಂ (ಜಬ್ಭಮ. ೪-೦೨). [ತೋಯ + ನಿಧಿ]

ತೋಯಪಾನ (ನಾ). ನೀರನ್ನು ಕುಡಿಯುವಿಕೆ; ಜಲಪಾನ: ಬಾಯಿ ಗೇಳಿಸುತಿರ್ದ ನಾವ್ ತತ್ತೋಯಪಾನಕೆ ತಿರುಗಿ ಕಂಡೆವು ರಾಯನಂಘ್ರಿಗಳಾಣೆಯೆಂದರು ಶಬರರನಿಲಜಗೆ (ಕುವ್ಯಾಗ. ೪-೫೨). [ತೋಯ + ಪಾನ]

ತೋಯಪಿಪ್ಪಲಿ (ನಾ). ನೀರಂ ಹಿಪ್ಪಲಿ [ತೋಯ + ಪಿಪ್ಪಲಿ]

ತೋಯಭೃತ್ತು (ನಾ). ನೀರನ್ನು ಧರಿಸಿರುವುದು; ಮೋಡ: ಅಪೂರ್ವ ತೋಯಭೃದ್ದಿಸರದೆ ವಾಃಕಣಂಗಳುಗುತಂದವುವೆಂದೆ ಪೊಡವ್ದುಗೆಯ್ದು ಪೂರಿಸುವಳಿಪಿಂದೆ ಪುಷ್ಕರಮನೆತ್ತಿದುದೆಂದು ನಭಕ್ಕದೊಂದಿಧಂ (ಕಂದ್ರಪು. ೯-೭೫). [ಸಂ. ತೋಯಭೃತ್]

ತೋಯರಾಶಿ (ನಾ). ಜಲರಾಶಿ; ಸಮುದ್ರ: ಮಂತ್ರಿವರ್ಗದುಜ್ವಲ ನವರತ್ನಭೂಷಣಕಿರೀಟಹಟದ್ಪುಚಿಯಿಂದದೇಂ ವಳಂಜಲೆದುದೊ ರಾಜ ರಾಜಸಭೆ ಕುಂಭಜನೀಂಟಿದ ತೋಯರಾಶಿಯಂ (ಪಂಂಪಾ. ೬-೭೪). [ತೋಯ + ರಾಶಿ]

ತೋಯರುಹ (ನಾ). = ತೋಯಜ ೨. 'ತೋಯರುಹನಾಭ' ಪರಾ. [ಸಂ.]

ತೋಯರುಹನಾಭ (ನಾ). = ತೋಯಜನಾಭ: ತೋಯರುಹನಾಭನೈಂದ್ರಾಗ್ನೇಯಾಂತಕಕೌಣಪಾಸ್ತ್ರತತಿಯಿಂದಿಸೆ (ಜಗವಿ. ೦೨-೪೧). [ಸಂ. (ತೋಯರುಹ + ನಾಭ + -)]

ತೋಯಾಕರ (ನಾ). ನೀರಿಗೆ ಆವಾಸಸ್ಥಾನವಾದುದು; ಜಲಾಶಯಂ: ಸರೋವರ: ಪರಮಶ್ರೀಸಂತತಾವಾಸದೊಳಖಿಲಸುಖಸ್ಪದ್ಧಿಸಂಪನ್ನ ತೋಯಾಕರದೊಳ್ . . . ಸೌಂದರಕೇಲೀಹಂಸನಾದಂ (ಆದಿಪು. ೧೬-೭೫). [ತೋಯ + ಆಕರ]

ತೋಯಾಧೀಶ (ನಾ). ನೀರಿಗೆ ಒಡೆಯನಾದವನಂ; ಜಲಾಧಿಪತಿ; ವರುಣ: ಪವಮಾನಂ ದಹನಂ ವಾಸವ ತೋಯಾಧೀಶರೆಂದಿವರ್ ಸಲೆ ರಾತ್ರಿಂದಿವಗಳೊಳೊಂದೊಂ(ದರೆ ?)ದುಂ ಜಾವವನಾಳ್ವರ್ (ಕೋಳೂಪು. ೪-೭೮). [ತೋಯ + ಅಧೀಶ]

ತೋಯಾಶಯ (ನಾ). ನೀರಿಗೆ ಆಶ್ರಯವಾದುದಂ; ಜಲಾಶಯಂ; ಕೆರೆ: "ಹ್ರದಃ, ತೋಯಾಶಯಃ – ಈ ೨ ಮಡು" (ಹಲಾಯು. ೦೧೦-೪೮); ಮಾರ್ಗಾನೇಕ ತೋಯಾಶಯಮನುರುರಜಂ ಪೀರೆ ದಾನವ್ಪಲಂ ಪೂರಿಸೆ ತೋಱಿತ್ತೆತ್ತಮಾದಂ ಹರಣಭರಣಚಾತುರ್ಯಮಂ ಚಾತುರಂಗಂ (ಕಂದ್ರಪು. ೦೦-೩೦). [ತೋಯ + ಆಶಯ]

ತೋಯಿ 'ತೊವ್ವೆ' ನೋ.

ತೋಯಿಲ (ನಾ). ಹೊಲಸಂನೀರು: ನಾಯಡಗು ನಕಕನಿಳಯಂ ಮಾಯೆಯ ಕಣಿ ಬಿಡದ ಬಿಗುಟು ಪಾಪದ ಪುಂಜಂ ತೋಯಿಲಕುಟಿ ಪೊಲಗೆಱಿಯೆಂದಾಯತಿಯಿಂ ಬಗೆವರಱಿವರಾ ಸೂಳೆಯರಂ (ಪಣಾರ. ೪೯೯). 'ತೋಕುಳಿ' ಪರಾ. [?]

ತೋಯಿಸು, ತೊಯಿಸು, ತೊಯ್ಯಿಸು, ತೊಯ್ಸು (ಕ್ರಿ). ನೆನಸು; ಒದ್ದೆಮಾಡು; ತೇವವಾಗಿಸು: ರಸವಿಶೇಷದೊಳತಿವಿಮಲಸಿತವಸನ ತೋಯಿಸಿ ಅಗ್ನಿಯೊಳಗಿಡೆ ಪಸರಿಸುವುದು ಪ್ರಕಾಶ ನಸುಗುಂದದಲೆ ಸರ್ವತ್ರ (ಜಗದಾ. ೨೨೪); ಒಂದೇ ಉಸುರಿನಲ್ಲಿ ಮಕ್ಕಳಂತೆ ಅಳುತ್ತಾ ಕಣ್ಣೀರಿನಿಂದ ನನ್ನ ಕಾಲು ತೋಯಿಸಿದ (ಪಕಂಗ. ೧೮); ಅವನನ್ನು (ಆತ್ಮನನ್ನು) ಶಸ್ತ್ರಗಳು ಕತ್ತರಿಸಲಾಗುವುದಿಲ್ಲ . . . ಜಲವು ತೋಯಿಸಲಾಗುವುದಿಲ್ಲ (ಅನಾಸ. ೭); ಸಾರಕವೆಂದು ಈ ತೌಡು ಉಪಯೋಗಿಸುವ ದಾದಲ್ಲಿ, ತೋಯಿಸಿ ಹಾಕಬೇಕು (ಗೋಗ್ರಾಸ. ೬೮). **ತೊಯಿಸು**: ಓಕುಳಿಯ ನೀರನುಜ್ಜಿ ಸೂಸುವ ಕೋವಿದಜನಮಂ ನೂತ್ನಕಲಾಕೋವಿದೆಯರ್ತೊಯಿಸಿದರಮರ್ದ ಪರಿಮಳಜಲದಿಂ (ಉದ್ಭವ. ೯-೭೩); ಬೊಲ್ಲಾ ಆಹಾರವನ್ನು ತೊಯಿಸುತ್ತದೆ (ಮುಂಬಯಿ. ೪-೮೫). **ತೊಯ್ಯಿಸು**: ಮೇಘಜಲ ತೊಯ್ಯಿಸಿರೆ ತಳರುಗಳ (ಧ್ವನ್ಯಾಲೋ. ೬೭). **ತೊಯ್ಸು**: ಹರಿದು ಬಂದು ನನ್ನ ಮೈ ತೊಯ್ಸಲೆಂದೇ ನೀನಲ್ಲಿರುವೆ! (ಳಕ್ಕೋಲ. ೧೪-೮). [ತೋ + – ಇಸು$_3$]

ತೋಯು 'ತೋ' ನೋ.

ತೋಯೆ 'ತೊವ್ವೆ' ನೋ.

ತೋಯೇಜ (ನಾ). = ತೋಯಜ ೨. 'ತೋಯೇಜಾಸನ' ಪರಾ. [ಸಂ.]

ತೋಯೇಜಾಸನ (ನಾ). ಕಮಲವನ್ನು ಪೀಠವಾಗಿ ಉಳ್ಳವನು; ಬ್ರಹ್ಮ: ತೋಯೇಜಾಸನನಿಂದ್ರ ರುದ್ರ ಧನಧರ್ ಮುಂತಪ್ಪ ದೇವೇಶರುಂ ಶ್ರೀಯಂ ಬೀರುವ ನಿನ್ನ ಪಾದರಜಮಂ ಶೀರ್ಷಾಗ್ರದೊಳ್ಪೊತ್ತು (ಮ್ಯಸೂಮ. ೨-೫೮). [ತೋಯೇಜ + ಆಸನ]

ತೋಯೋದ್ದೇಶ (ನಾ). = ತೋಯಾಶಯಂ: ಅಪ್ಪದಿಜ್ಞಾಗರಾಜಿಗೆ ಮೆಯ್ಗರ್ಚಿ ಕೊಳಲ್ಕಜಂ ಸಮೆದ ತೋಯೋದ್ದೇಶವೋ ಸಂದಯಂಬಗೆಗಾದತ್ತೆನಿಸಿರ್ದುದೇಂ ಪಿರಿದೊ ವೈಶಂಪಾಯನಾಬ್ಜಾಕರಂ (ಗದಾಯು. ೬-೧೧). [ತೋಯ$_೪$ + ಉದ್ದೇಶ]

ತೋಯೋದ್ಭವ (ನಾ). ನೀರಿನಲ್ಲಿ ಹುಟ್ಟಿದುದು; ಮುತ್ತು, ರತ್ನ ಮೊದಲಾದುವು: ಬುಧಂ . . . ಶಶಿಗೇಹದೊಳ್ ನೆಲಸೆ ಬಂಧುದ್ವೀಪಿ ತೋಯೋದ್ಭವದ್ರವಿಣಂ (ಜಾತಕ. ೧೭-೩೪). [ತೋಯ$_೪$ + ಉದ್ಭವ]

ತೋಯೌಕಸ (ನಾ). ನೀರಿನಲ್ಲಿ ಬದುಕುವ ಪ್ರಾಣಿ; ಜಲಚರ: ಭೇಕ ಶುಕ್ತಿಕೆ . . . ಕಮಠ ಕಂಬು ಪ್ರಮುಖ ತೋಯೌಕಸಾಹ್ವಯದಿಂದೆ ರಾಜಿಸುತಿರ್ಪುದಂಬುನಿಧಿ (ಕಂಕಾ. ೦-೩೦). [ಸಂ. ತೋಯೌಕಸ್]

ತೋರ, ಥೋರ (ನಾ). ೧. ಗಾತ್ರವಾದಂದಂ; ದಪ್ಪವಾದುದು; ಸ್ಥೂಲವಾದುದು: ಕಾಯ್ದ ಕರ್ಬೊನ್ನ ನಿಡಿಯವುಂ ತೋರಮುಮಪ್ಪ ಕೇಲ್ಗಳಿಂದಂ ಮೆಯ್ಯೆಲ್ಲಮುಂ ನಿರಂತರಮುರ್ಚಿ ಪೋಗಿ ನೆಲನಂ ತಾಪಿನಂ ಕೀಲಿಜ್ಜಿಯೆವಟ್ಟ ಮೆಯ್ಯುನೊಡೆಯನಾಗಿಯುಂ (ವಡ್ಡಾ. ೫೦-೭); ಮಾನದ ತೋರಿಹ ಅವಿಂಗೆ ಕೊಳಗದ ತೋರಿಹ ಕೆಚ್ಚಲು (ಅವಕಂ. ೧೨-೪೪); ತೆಂಗಿನ ಕಾಯು ತೋರದ ಮೊಲೆಮೊತ್ತ ಲತಾಂಗಿಯ . . . ಚೆಂದುಟಿಯಿನಿದೆನೆಮೋಹತರಂಗಿಣಿವೇಳ್ದೆ (ಮೋಹತ. ೧-೩೭; ತೋರವಾಗಿರುತಿಹುದು ಪರ್ವತ ಧಾರುಣಿಯನದು ಹರಹಿಕೊಂಡೇ ದೂರದೀದಲಿ ನೋಡಿದಡೆ ಅಣುವಾಗಿ ಕಾಣಿಪುದು (ಜ್ಞಾನಸಿಂ. ೬-೨೦). ೨. ಗಾತ್ರ; ಆಕಾರ: ತೋರದಲಿ ಕುಲಗಿರಿಯ ಸತ್ವದ ಸಾರದಲಿ ವಜ್ರವನು ದನಿಯಲಿ ಕಾರ ಬಜಸಿಡಿಲಂದವಿದನುಗಿದೊಂದು ಮಾಡಿದನು (ಕುಪ್ಪಾಭೀ. ೩-೧೫); ಕಣಕವನು ನಿಂಬೆಯ ಹಣ್ಣು ತೋರದುಂಡೆಯ ಮಾಡಿ (ಸೂಪಶಾ. ೧-೨೫); ಪಿರಿದಪ್ಪ ಕುಂಬಳಕಾಯ ತೋರದ ಮುತ್ತಿನಿರವಾಂತು ಮೆಱಿವ ಕಾವ್ಯಗಳು ಇರಲು ನಾ ಪೇಳ್ವ ನೆಲ್ಲಿಯಕಾಯ ತೋರದವರಮುಕ್ತಿನಂತೀ ಕೃತಿಯ (ನಾಗಳು. ಬೀತಕಾಸಂಧಿ. ೫೯); ಪ್ರ. ಹೆಚ್ಚಳ; ಆಧಿಕ್ಯ: ಮುರಿದಿರೆತ್ತೆ ಮೆಯ್ದಿರಿದು ತೋರಮನಾಳ್ದು ಪೊದಟ್ಟು ನೀಳ್ದ ಪಂಕರುಹ ಪರಾಗಮುಂ ಜವದೆ ಮಂದರಮಾಗೆ ಸರೋವರಾಬ್ಧಿಯಂ ಸ್ಮರಸುರವಲ್ಲಭಂ ಪೊಸೆದು ಪುಟ್ಟಿಸುವಿಂದುಗಳಂದದಿಂ (ಲೀಲಾವ.೧೩-೧೨೩); (ಗಂ). ೪. ದಪ್ಪವಾದ; ಸ್ಥೂಲವಾದ; ಗಾತ್ರವಾದ: ಹೆಣ್ಣರ ಸಮರದೊಳ್ಮರಾರಿ ಮಾರನಾಗಿ . . . ರಾಣಿ ವಾಸಭಣ್ಣಾರಮಂ ಪೆಱದು ತೋರ ಪಳಯಿಗೆ ಭಾಗಿತ್ತಿ ತೊಱಿಬಡಗರೆನಾಡುವಿಷಯು ಅಪ್ಪೊಗಾಲ್ನಾಮಗ್ರಾಮ ಸರ್ವಬಾದುಪರಿಹಾರಮುಬ್ಬುಗೊಟ್ಟಂ (ಎಕ. III, ನಂಜನ ೧೨೨-೧೬; ೨೬೬?); ಓವನಂ ಮಿಡುಕಲೀಯದೆ ಕಾಲ್ವಿಡಿದು ತೋರ ಕಣ್ಬನಿಗಳನಿಕ್ಕಿದಳ್ ತರಳಲೋಚನೆ ಸಂಕಲೆಯಿಕ್ಕಿದಂತೆವೋಲ್ (ಪಂಪಭಾ. ೪-೯೭); ಅನುಭವಿಸಿದ ಕೋಟಲೆಗಳನಿನಿಸೆಂದೆಣಿಸಲ್ಕೆ ಮೌಕ್ತಿಕಾಕ್ಷಾವಳಿಯಂ ವನಜದಳನಯನೆ ಸಮೆದಪಳಿನೆ ಸುರಿದುವು ತಱದೆ ತೋರ ಕಣ್ಬನಿದುಜ್ಜುಗಲ್ (ಕಾದಂಬಾ. ೩೭೨). ೫. ದೊಡ್ಡದಾದ; ಬೃಹತ್ತಾದ. 'ತೋರಗದ', 'ತೋರಗಲಂ' ಪರಾ. ೬. ಅತಿಶಯವಾದ; ಹೆಚ್ಚಾದ: ನೀರಧಿಯ ಪೀರುವಳ್ಳೆತಪ್ಪ ಮಾರುತಿಯ ನಿಟ್ಟಸುತ ನಕ್ರ ಕೂರ್ಮಂಗಳೆಲ್ಲ ತೋರಭಯದಿಂದೊಂದನೊಂದೊರಸಿ ವಿತಳಮಂ ಸಾರುತಿರಲು (ಪಂಕಾರಾ. ೫-೧-೨೭). 'ತೋರತೋಟಿ' ಪರಾ. **ಥೋರ**: ೧.ನೊಲೆಯೆಯ ಗಾತ್ರದ ಮರದಲ್ಲಿ ಬೆಟ್ಟದ ಥೋರದ ಕಾಯಿ ಫಲವಾಯಿತು (ಪೋಳಮಾ. ೧೯೨-೭೨೨). ೨. ಥೋರ ಕುಲಗಿರಿನಿಚಯಕಂ ಕುಲಿಶ ಕವಿವವೋಲ್ (ತುಕಂಗ. ೭೪-೭೪).

[<ಪ್ರಾ. ಥೋರ./ಮಾಠಾ. ಥೋರ./ತುಳು. ತೋರ, ತೋರೋ: ತೆಲು. ತೋರ./ಸಂ. ಸ್ಥೂಲ]

ತೋರಂಜಿ 'ತುರಂಜೆ' ನೋ.

ತೋರಂಬಟೆ (ನಾ). ಒಂದಂ ಬಗೆಯ ದಪ್ಪವಾದ ಅವಂಟೆಕಾಯಿ: ಹರುಷದಿಂದಿಟ್ಟು ತೋರಂಬಟೆಕಾಯನು ಜಱಿವ ಮೌಕ್ತಿಕದ ಬಾವುಲಿಯ (ಜ್ಞಾನಚ. ೪-೭). [ತೋರ + ಅಂಬಟೆ]

ತೋರಕಬರಿ (ನಾ). ದಪ್ಪವಾಗಿರುವ ತುರುಬು; ತೋರವುಂಡಿ: ತೋರಕಬರಿಯ ಕುಡಿತೆಗಂಗಳ ... ಭೂರಿಭೂಷಣದವರಿಯರು ಮೆಱಿದಿರ್ದರೊಂದೆಸೆಯ (ತೊರಕಾ. ೫-೨-೭೦). [ತೋರ + ಕಬರಿ]

ತೋರಕಿಡಿ 'ತೋರಗಿಡಿ' ನೋ.

ತೋರಕಿವಿ 'ತೋರಗಿವಿ' ನೋ.

ತೋರಕುಚ, ಥೋರಕುಚ (ನಾ). ದೊಡ್ಡ ಗಾತ್ರದ ಮೊಲೆ: ಬಿಗಿದಡರಿದ ತೋರಕುಚ ಸಣ್ಣ ನಡುವಿನ ಸೊಗಸಲಿ ಮೆಱಿವ ತೆಳ್ಬಸಱ ... ಶಂಖಿನಿಯರು ವಿಗೆ ರಾಜಿಸಿದರು (ಕಂನವಿ. ೫೧-೭೯). **ಥೋರಕುಚ**: ಥೋರಕುಚದ ಮೇಲೆ ಚಾರುಗಂಧವ ಪೂಸಿ (ಪಾದಿಕೀ. ೪೬-೧೨).

[ತೋರ + ಕುಚ]

ತೋರಗಂಬ 'ತೋರಗಂಭ' ನೋ.

ತೋರಗಂಭ, ತೋರಗಂಬ (ನಾ). (ಮಾಳಿಗೆ ಅಥವಾ ಚಪ್ಪರಕ್ಕೆ ಆಧಾರವಾಗಿ ನಿಲ್ಲಿಸುವ) ದಪ್ಪವಾದ ಕಂಬ: ಲೋಹದ ತೋರಗಂಭಂಗಳೊಳಗೆ ಮುರಿಗೇಶದಿನೆಸೆವ ಶಬರರ ತಲೆಗಳೋಳಿಯಂತೆ ರಕ್ತಚಾಮರಂ ಗಳನ್ಕೊಳಕೆಯ್ದು ಕರ್ಬೊನ್ನ ಕನ್ನಡಿಯ ತೋರಣಂಗಳೊಳಂ (ಕಾದಂಉ. ೨೬೯). **ತೋರಗಂಬ**: ಸರಸೀವರಿಸರದೊಳ್ ನಟ್ಟು ಮುಗಿಲಂ ಮೆಟ್ಟುವಂತೆ ಮುಂದಿರ್ದ ಕಲ್ಲ ತೋರಗಂಬಮಂ . . . ಕೆಟ್ಟು (ವರ್ಧಪು. ೨-೪೮ ವ); ಬೆಳೆದೆಳವಳ್ಳಿಯೊಳ್ ಪುದಿದು ತೋಱುವ ಮಾವಿನ ತೋರಗಂಬದಿಂ . . . ಸೊಗಯಿಪೋಲಗಸಾಲೆಯೊಳಿರ್ದರ್ (ಕಲ್ಕಿಕಾ. ೧೩೬).

[ತೋರ + ಕಂಭ]

ತೋರಗಣು (ನಾ). ದೊಡ್ಡ ಕಣ್ಣು : ಕಾರೊಡಲು ದಾಡೆ ಮಣಿಮಕುಟ ಫಣಿಕುಂಡಲು ತೋರಗಣು ಕೆಮ್ಮೀಸೆ . . . ಎಸೆವ ಬಾವುಲಿ ತೊಡರಿನ ವೀರಭದ್ರಂ (ಸಿದ್ಧರಾ. ೪-೬). [ತೋರ + ಕಣು (<ಕಣ್)]

ತೋರಗದ (ನಾ). ದೊಡ್ಡ ಬಾಗಿಲು: ತ್ರಿಭುವನದಗ್ರದಲ್ಲಿ ಮೂವತ್ತಾಱು ಲೋಕ ಅದರ ಮಧ್ಯದಲ್ಲಿ ಇಪ್ಪತ್ತೈದು ಮಹಾಮೇರುವೆ ಹದಿನಾಱು ವರ್ತನದ ಕೊಂಡಿ ಗುರು ಲಘುವೆಂಬ ತೋರಗದ (ಮೋಳಿಮಾ. ೨೩೩-೭೮೪).

[ತೋರ + ಕದ (<ಕದವು$_1$)]

ತೋರಗರುಳು (ನಾ). ದೊಡ್ಡ ಕರುಳು,-ಅಂತ್ರ : ಸಾರು ನೀ ಸಾರೆಲವೊ ಭೀಮನ ತೋರಗರುಳಿನ ದಂಡೆಯನು ಕೈಯಾರೆ ಮಾರಿಗೆ ಮುಡಿಸುವೆನು (ಕುವ್ಯಾಕ. ೩-೧೮). [ತೋರ + ಕರುಳು (<ಕರುಳ್)]

ತೋರಗಲು (ನಾ). ದೊಡ್ಡ ಶಿಲೆ,- ಬಂಡೆ : ಆಱ ಸಱ ತೋರಗಲು ಕವಣಿಗಲು ಕಣಿ ಭಂಡಿಯ ಗಾಲಿ ಕೆಲ್ಲೆ ಹೆಗ್ಗೊಱದುಱಿಯೆ[ಣ್ಣೆ] ಕಾಯ್ದ ಮಣಲಗ್ಗದ ಢೇಂಕಣೆ (ಸಾಇಇ. XX, ೧೨೬-೩ ; 1186).

[ತೋರ + ಕಲು$_1$ (<ಕಲ್$_3$)]

ತೋರಗಾಯ್ (ನಾ). ದಪ್ಪವಾದ ಕಾಯಿ; ದೊಡ್ಡ ಕಾಯಿ : ಭಾರದಿಂ ತೂಗಿ ನೆಲನಂ ತಾಗುವ ತೋರಗಾಯ್ಗಳಿಂ ಜನನಿಯಪ್ಪವನಿಯಂ ಮುದ್ದಿಂ ಮುಂಡಾಡುವಂತಿರಿರ್ದ ಮಾತುಲುಂಗಸಂಘಾತಂಗಳುಂ (ಚಂದ್ರಪು. ೧-೧೦೩ ವ); ತೋರಗಾಯ್ಗಳ ಬಹುಭಾರಮಂ ತಳೆದು ಸಾರ್ವ ವಿಹಂಗಚಯಕ್ಕೆ ಬೇಸಱಂ ಬಳೆಯಿಪುದೆಂದು ತಾಳತರುವಂ ನಗುವಂತೆ ಪೊಲಾದ ಬೀಡೆವಣ್ಗಳಿನೆಸೆದಿರ್ಪ ದಾಡಿಮತರುವ್ರಜಮಾ ಬನದೊಳ್ ವಿರಾಜಿಕುಂ (ಕುಸುಮಾ. ೧-೯೦) ; ಸಾರವಿಲ್ಲದ ಚಂದ್ರಕಳೆಯನು ಸೇವಿಪ ಭೂರಿ ನಿರ್ಜರರು ಗಾಂಪರಿಗೆ ತೋರಗಾಯ್ಗಳ ರಸದೋಱಲೆನಿಸಿ ನಾಳಿಕೇರ ಮಂಬರವ ಚುಂಬಿಪವು (ವರ್ಧಪ. ೧-೭೦). [ತೋರ + ಕಾಯ್$_4$]

ತೋರಗಿಡಿ, ತೋರಕಿಡಿ (ನಾ). ದಪ್ಪವಾದ ಕಿಡಿ; ದೊಡ್ಡ ಕೆಂಡದ ಚೂರು: ಎಚ್ಚೊಡಂಬಂಬನಟ್ಟಿ ಪಳಂಚುತೆ ಸಿಡಿಲ್ದ ತೋರಗಿಡಿಯಿಂದೊಂದೊಂದಱೊಳ್ ಬೇವುದುಂ ತ್ರಿಪುರಂಬೊತ್ತಿಸಿದಂತೆ ಪೊತ್ತಿ ಪೊಗೆದತ್ತೆತ್ತಂ ವಿಯನ್ಮಂಡಳಂ (ಪಂಪಭಾ. ೧೦-೧೭) ; ಘಟೆಯೊಳ್ ಘಟೆ ಜೋಡಿಸಿ ದಂತ ಜಾಲದೊಳ್ ಭೋಂಕನೆ ಪೊಣ್ಮೆ ತೋರಗಿ[ಪಾಠಾಂ. ಕಿ]ಡಿ ಸೂಸೆ ಕಱುತ್ತುಱ ತಾಗಿತಾಜಿಯೊಳ್ (ಗಿರಿಕ. ೬-೭೨) ; ತೋರಗಿಡಿಯೆನೆ ತೊಳಗಿದುವ ರುಣಾಂಶುರುಚಿರತಾರಾನಿಕರಂ (ಪಾರ್ಶ್ವಪು. ೧೦-೨೩). **ತೋರಕಿಡಿ :** ಪೊಣ್ಮೆದ ಮುನಿಸಿಂ ಭುಗಿಲನುರಿದೆಟ್ಟನಾ ದಿಟ್ಟಿಗಳೊರ್ಮೆಯೆ ತೋರ ಕಿಡಿಗಳಂ ಕೆದಱುವಿನಂ (ಕಬ್ಬಿಕಾ. ೧೫೧) ; ಹೊಸ ಮಸೆಯ ಧಾರೆಯ ತೋರಕಿಡಿಯಲಿ ಮುಸುಕಿತರಸನ ತೇರು (ಕುವ್ಯಾದ್ರೋ. ೫-೨೦).

[ತೋರ + ಕಿಡಿ]

ತೋರಗಿರಿ (ನಾ). ದೊಡ್ಡ ಬೆಟ್ಟ ; ಮಹಾಪರ್ವತ : ತೋರಗಿರಿಗಳ ವೆರಸಿದಿಳೆ ತಾ ನೀರೊಳದ್ದುವದೆಂದು ಸಲೆ ಮದವಾರಣಂಗಳು ಧರಿಸಿ ಕೊಂಡಿಹವೆಂಟುದಿಕ್ಕಿನಲಿ (ಕುವ್ಯಾಅ. ೭-೨೭). [ತೋರ + ಗಿರಿ$_1$]

ತೋರಗಿವಿ, ತೋರಕಿವಿ (ನಾ). ದೊಡ್ಡ ಕಿವಿ ; ಅಗಲವಾದ ಕಿವಿ : ತೋರಗಿವಿ ಕೆಂಗಣ್ಣು ಬಿಡುವಾಯಿ ನಿಡುದಾಡೆ ನಿಡಿಯ ಕಾಳರಕ್ಕಸಿ (ಸಿದ್ಧರಾ. ೬-೧). **ತೋರಕಿವಿ:** ವಾರಿಧಿಯ ನೀರೊಳಗೆ . . . ವಾರಿಕರಿಗಳು ಧುಮುಕೆಯವುಗಳ ತೋರಕಿವಿಗಳಿಗಂಟಿ ಫೇನವು ಚಾರುಚಮರಗಳಂತೆ ಯಿರ್ಭಾಗಾಗಿ ತೋರುವದು (ರಘುವಂ. ೧೪೦-೧೧).

[ತೋರ + ಕಿವಿ$_3$]

ತೋರಗುಂಡು (ನಾ). = ತೋರಗಲು : ಒತ್ತಿ ಕಾಲಿಡಲೊಡನೆ ಗಿರಿ ತಲೆಗುತ್ತುತಿರ್ದುದು . . . ನೆತ್ತಿಯಗ್ರದ ತೋರಗುಂಡುರುಳುತ್ತಲಿರ್ದವು (ತೊರರಾ. ೪-೧೨-೨೪). [ತೋರ + ಗುಂಡು]

ತೋರಗುರುಳ್ (ನಾ). ಅಧಿಕವಾದ ಕೂದಲು,- ಮುಂಗೂದಲು : ಪೆಱನೊಸಲಂ ಮೆಟ್ಟಿ ನಿಮಿರ್ದ ತೋರಗುರುಳ ತೊಂಗಲೆಳವೆಱಯನಂಧ ಕಾರಮಾವರಿಸಿದಂತೆ ತೋಱಯುಂ (ಪಂಠಾಮಾ. ೩-೧೩೩ ವ); ಪಾಮರೀ. ವಿತತಿ ಮಾರ್ಪೊಳೆವೀಕ್ಷಣದಿಂ ನಿಜಾಸ್ಯ[ಮಂ] ತೋರಗುರುಳ್ಗಳಿಂ ಪಡೆವು ದೊಪ್ಪಮನಲ್ಲಿಗೆ ಮುನ್ನಿನಂದದಿಂ (ವರ್ಧಪು. ೧-೪೦).

[ತೋರ + ಕುರುಳ್$_1$]

ತೋರಗೆಂಡ (ನಾ). ದಪ್ಪವಾದ ಕೆಂಡ : ಒದಱಿ ಕುಕಿಲ್ದು ಬೆಟ್ಟುಗಳ ಕೆಯ್ದುಗಳುರ್ವಿದ ನೀರ ತೋರಗೆಂಡದ ಸರಿಯಂ ಸಮಂತು ಸುರಿದು . . . ಬಾಧಿಸಿದತ್ತು ತದ್ಬಳಂ (ವರ್ಧಪು. ೧೫-೩೯). [ತೋರ + ಕೆಂಡ]

ತೋರಗೊಂಡೆಯ (ನಾ). ದೊಡ್ಡದಾದ ಕೊಂಡೆ,-ಕುಚ್ಚು : ಇಕ್ಕಿದ ಪಕ್ಕರಕ್ಕೆ ನಿಡುರಘಲ್ಲಿ ತೊಡಂಕುವ ತೋರಗೊಂಡೆಯಂ ಸೆಕ್ಕಿದ ಖಂಡೆಯಂ ಬಿಗಿದ ಬಿಲ್ (ಚಕವಿ. ೨-೯೬). [ತೋರ + ಗೊಂಡೆಯ]

ತೋರಗೊಂಬು (ನಾ). ದೊಡ್ಡದಾದ ರೆಂಬೆ ; ದೊಡ್ಡ ಕೋಡು : ನನೆಯಂ ಪೇಱಿದ ತೋರಗೊಂಬು ನನೆಯಂ ಪೂಗೊಂಚಲಂ ಪೊತ್ತು ನೆಟ್ಟನೆ ಬಿಣ್ಪೇಱಿದ ಬಳ್ಳಿಗೊಂಬು (ಕಬ್ಬಿಕಾ. ೬೨).

[ತೋರ + ಕೊಂಬು$_1$]

ತೋರಗೊನೆ (ನಾ). ದಪ್ಪವಾಗಿರುವ ಗೊಂಚಲು; ಗಾತ್ರವಾದ ಗೊನೆ: ತೋರಗೊನೆವೇಱಿದ ಕಂಚಳವಾಱ ತೋರವಣ್ಪೇಱಿದ ಬಕ್ಕೆ (ಅನಂಪು. ೧-೭೮). [ತೋರ + ಗೊನೆ$_3$ (<ಗೊಲೆ$_2$]

ತೋರಡವು (ನಾ). ತೋರಿಕೆಗಾಗಿ ಹಾಕುವ ಒತ್ತೆ; ನಂಬಿಕೆಗಾಗಿ ಇಡುವ ಒತ್ತೆ : "ತೋರಡವು-ಒತ್ತೆಹಾಕುವುದು" (ಜಾನಕೋ. ೬೮).

[ತೋರು (<ತೋಱು) + ಅಡವು$_2$ (<ಅಡರ್ಪು$_2$)]

ತೋರಣ (ನಾ). ೧. ಹೆಬ್ಬಾಗಿಲು ; ಹೊರಬಾಗಿಲು : ತೋರಣಃ. ಬಹಿರ್ದ್ವಾರಂ - ಪುಷ್ಪಮಾಲಿಕೆ ತಳಿರು ತೋರಣ ಮಾವಿನ ಸೊಪ್ಪು ಮುಂತಾದವುಗಳನ್ನು ಕಟ್ಟುವದಕ್ಕೋಸ್ಕರ ಬಾಗಿಲ ಹೊರಗಡೆ ಕಾಣುವಂಥ ಕಂಭಗಳಿಂದ ಕಟ್ಟಲ್ಪಟ್ಟ ದ್ವಾರಬಂಧನದ ಚೌಕಟ್ಟು. ಮನೆಯ ಹೊರ ಬಾಗಿಲು, ತೋರಣಬಾಗಿಲು (ಸಿದ್ಧಾಂತಿ. ೯೨). 'ತೋರಣದ್ವಾರ' ಪರಾ. ೨. ಹಬ್ಬ, ಹರಿದಿನ ಇತ್ಯಾದಿ ವಿಶೇಷ ಸಂದರ್ಭಗಳಲ್ಲಿ ಅಲಂಕಾರ ಕ್ಕಾಗಿ ಬಾಗಿಲು, ಬೀದಿ ಮುಂತಾದೆಡೆಗಳಲ್ಲಿ ಕಟ್ಟುವ ತಳಿರು, ಹೂ, ಬಟ್ಟೆ ಮುಂತಾದುವುಗಳ ಮಾಲೆ,-ದಂಡೆ; ವಂದನಮಾಲೆ: "ದ್ವಾರದ ಮುಂದೆ ಸಂಧಿಸಿರೆ ಕಟ್ಟಿದ ವಂದನಮಾಲೆ ತೋರಣಂ" (ವಸ್ತುಕೋ. ೪೮-೧೬) ; "ವಂದನಮಾಲಾ, ತೋರಣಂ- ಈ ೨ ತೋರಣಂ" (ಹಲಾಯು. ೫೦-೧೪೬) ; ಪೊಟಲೊಳಗೊಪ್ಪೆ ಕನ್ನಡಿಯ ಕಂಚಿನ ತೋರಣದೋಳಿಗಳ್ (ಪಂಪಭಾ. ೩-೭೪) ; ಊರುಯುಗಸ್ತಂಭೋದ್ಗತ ತೋರಣಮೆಂಬಂತೆ ಮಿಸುಗುವುಡಿ ನೂಲ್ (ಕಾದಂಪೂ. ೩೩೪) ; ಪೊನ್ನ ತೋರಣದಿಂ ದುಕೂಲದ ಸೂಸಕಂ ಗಳನೊಪ್ಪುವೆತ್ತುನ್ನತಧ್ವಜದೋಳಿಯಿಂ . . . ಪಿರಿದುನ್ನತಿಕ್ಕೆಯಿನಿರ್ದುದೀ ಜಿನಮಂದಿರಂ (ಧರ್ಮಾಮೃ. ೬-೪೮) ; ಹಬ್ಬಕ್ಕೆ ತಂದ ಹರಕೆಯ ಕುಱಿ ತೋರಣಕ್ಕೆ ತಂದ ತಳಿರ ಮೇಯಿತ್ತು (ಲಸವ. ೧೨೯); ಕಾರಿರುಳ ಪಟ್ಟಣಕೆ ಚಂದ್ರನ ತೋರಣವ ಬಿಗಿದಂತೆ (ಕುವ್ಯಾಉ. ೧೧-೨೮) ; ಬೆಂದ ಮನೆ ಬಾಗಲಿಗೆ ಮುಂದೆ ತೋರಣವೇಕೆ (ಸರ್ವಜ್ಞ. ೯೧೯). [ಸಂ.]

ತೋರಣಂಗಟ್ಟಿಸು, ತೋರಣಗಟ್ಟಿಸಂ (ಕ್ರಿ). (ಚಿಗುರು ಮುಂತಾದುವುಗಳ) ಮಾಲೆಯನ್ನು ಬಿಗಿಸಂ : ಮಣಿಭದ್ರಮಪ್ಪ ಹೇಮ ಮುಕ್ತಾಹಾರಂಗಳಿಂ ತೋರಣಂಗಟ್ಟಿಸಿಯರಸರ ಬರವಂ ಪಾರುತ್ತಿರೆ (ವಡ್ಡಾರಾ. ೨೬-೩) ; ಇನಿಯನನೀ ಪಾಸೊಳ್ ತಂದೆಳದಳಿರಿಂದೆ ತೋರಣಂ ಗಟ್ಟಿಸುವೆಂ (ಚಂದ್ರಪು. ೮-೯೧). **ತೋರಣಗಟ್ಟಿಸು :** ನೀರಜಭವನ ಮಾನಸಪುತ್ರ ನೀನಲ್ಲದಾರಾದೊಡೀ ಮಾತುಗಳ ಭಾರಾಂಕನಾಗಿಯೆನ್ನೊ

ಡನೆ ಪೇಳ್ದೊಡೆ ಸೀಳಿ ತೋರಣಗಟ್ಟಿಪೆನೆಂದ (ಮೋಹತ. ೧೨-೩೧).

[ತೋರಣಂಗಟ್ಟು + – ಇಸು$_3$]

ತೋರಣಂಗಟ್ಟು, ತೋರಣಗಟ್ಟು (ಕ್ರಿ). (ಚಿಗುರಂ ಮುಂತಾದುವುಗಳ) ಮಾಲೆಯನ್ನು ಕಟ್ಟು,–ಬಿಗಿ: ಆಗಳಾ ಬಸಂತರಾಜನ . . . ಬರವಿಂಗೆ ತೋರಣಂಗಟ್ಟಿದಂತೆ ಬಂದ ಮಾಮರಂಗಳನಡರ್ದ . . . ಮಾಧವೀಲತೆಗಳುಂ (ಪಂಪಭಾ. ೨-೧೨ ವ); ಪುರದ್ವಾರಮನವನಡಗಿಂ ಬುತ್ತಿಯಿಟ್ಟು . . . ಕರುಳಿನಿಂ ತೋರಣಂಗಟ್ಟಿ ಕೋಲಾಹಲನಾದಂ ಪೆರ್ಚೆ ಪೊಕ್ಕಂ ದನುಜನ ಪೊಟಲಂ ಸಾಗ್ರಜನ್ಮಂ ಮುಕುಂದಂ (ಜಗವಿ. ೬-೧೦). **ತೋರಣಗಟ್ಟು**: ರಾವುತ ತಲೆಯಂ ಸಂ × × × ತೋರಣಗಟ್ಟುತ್ತಂ ಚೆಲ್ವಿಂ ಸುರಲೋಕಮೆಯ್ದಿದಂ (ಸೌಇಇ. XX, ೧೬೯--೧೦ ; 1183).

[ತೋರಣ + ಕಟ್ಟು$_1$]

ತೋರಣಗಂಬ 'ತೋರಣಗಂಭ' ನೋ.

ತೋರಣಗಂಭ, ತೋರಣಗಂಬ (ನಾ). (ತಳಿರಂ ಮುಂತಾದವುಗಳ) ಮಾಲೆಯನ್ನು ಕಟ್ಟುವ ಕಂಭ; ತೋರಣವನ್ನು ಕಟ್ಟುವ ಕಂಭ: ತೋರಣಗಂಭದಲ್ಲಿ ಒಬ್ಬ ಭೈರವೆ ಜೋಗಿ ಶೂಲದಲ್ಲಿರುವನು (ಬತ್ತೀಪು. ೧೨೩). **ತೋರಣಗಂಬ**: ಸೊಬಗಿಂಗೆತ್ತಿದ ತೋರಣಗಂಬಂಬೊಲಿರ್ದು ವಾಕೆಯ ತೊಡೆಗಳ್ (ಕಬ್ಬಿಕಾ. ೭೫). [ತೋರಣ + ಕಂಭ]

ತೋರಣಗಟ್ಟಿಸು 'ತೋರಣಂಗಟ್ಟಿಸು' ನೋ.

ತೋರಣಗಟ್ಟು 'ತೋರಣಂಗಟ್ಟು' ನೋ.

ತೋರಣಗಲ್ಲು (ನಾ). ತೋರಣವನ್ನು ಕಟ್ಟುವ ಕಲ್ಲಿನ ಕಂಬ: ಬಸ್ತಿಂದ ಪಡುವಲು ಪೂರ್ವದಲು ನಡವ ಉಭಯಮಾರ್ಗದ ಹಾದಿಗೆ ಯಿಕ್ಕಿದ ತೋರಣಗಲ್ಲಿನೊಳಗಣ ಪ್ರಮಾಣಿನಲಿ . . . ಮೂಡಕಡೆಯಲು ಮೂಡಣ ತೋರಣಗಲ್ಲಿಂ ಪಡುವಲು (ಸೌಇಇ. IX-II, ೪೫೭-೨೬ ; 1455).

[ತೋರಣ + ಕಲ್ಲು (<ಕಲ್$_3$)]

ತೋರಣಗ್ರಥನ (ನಾ). ತೋರಣವನ್ನು ಕಟ್ಟುವುದು; ತೋರಣದ ರಚನೆ, ಬಂಧ: ತೋರಣಗ್ರಥನ ಮುಕ್ತಾಮಾಳಿಕಾಳಂಬನವ್ಯಸನ ವ್ಯಗ್ರಕರಂ ಕರಂ ಸೊಗಯಿಸಿತ್ತಂತಲ್ಲಿ ಕಾಂತಾಜನಂ (ಚಂದ್ರಪು. ೬-೫೫).

[ತೋರಣ + ಗ್ರಥನ]

ತೋರಣದರ್ಪಣ (ನಾ). ತೋರಣದಲ್ಲಿರುವ ಕನ್ನಡಿ: ತೋರಣ ದರ್ಪಣದೊಳ್ ಚಮರೀರುಹಮಂ ನೃಪತಿಗಿಕ್ಕುವಬಲೆಯರ ನೆಟಲ್ ರಾ ರಾ ಜಿ ಸಿ ದು ವು ರಿಪುರಾಜೀರಾಜ್ಯಶ್ರೀಸಮೂಹಮಿದಿರ್ವಂದಿರವಂ (ಚಂದ್ರಪು. ೧೦-೧೬). [ತೋರಣ + ದರ್ಪಣ]

ತೋರಣದ್ವಾರ (ನಾ). ಹೆಬ್ಬಾಗಿಲು; ಮಹಾದ್ವಾರ: ಅಂತು ಸೊಗಯಿಸುವ ವನವೇದಿಕೆಯ ನಾನಾಮಣಿಮಯೂಖಮಾಲಾ ವಿರಾಜಿ ತೋತ್ತುಂಗ ತೋರಣದ್ವಾರದಿಂದಂ ನುಗುಳ್ದು ವನವೀಧಿವಿಡಿದು ಬಂದು (ಆದಿಪು. ೦೩-೧೧ ವ). [ತೋರಣ + ದ್ವಾರ]

ತೋರಣವಿಡು (ಕ್ರಿ). = ತೋರಣಂಗಟ್ಟು: ಆ ಸದ್ದಿಲ್ಲದ ಕತ್ತಲೆಯ ಮುಸುಕಿನಲ್ಲಿ, ಕಣ್ಣೀರ ಹಾರ ಕೋದು ತೋರಣವಿಟ್ಟ ಒಂದು ಗುಪ್ತ ಶೋಕಮಂದಿರವನ್ನು ನಿರ್ಮಿಸಿ ನಿಲ್ಲಿಸಿಕೊಂಡಳು (ಇಪ್ಪಕ. ೨೮೪).

[ತೋರಣ + ಇಡು$_1$]

ತೋರತಕ್ಕು (ನಾ). ಹೆಚ್ಚಿನ ಯೋಗ್ಯತೆ; ಹಿರಿಯ ಯೋಗ್ಯತೆ: ಇಕ್ಕಿದ ಸೀಸಕಂ ಪಱಿದು . . . ಬೆನ್ನೊಳಮರ್ಚಿದ ಪೊನ್ನ ಪಲ್ಲಣಂ ಪಕ್ಕರೆ ತೇಜಿವಾರು ಕಟಿದಿರ್ಕಡಿಯಾದುವು ಬಾಳ ಬಾಯೊಳಿಂತಕ್ಕುಮೆ ತೋರ ತಕ್ಕಿದೆನೆ ಗೋಟಯಿಲರ್ ಕೆಲರಲ್ಲಿ ಕಾದಿದರ್ (ಕಬ್ಬಿಕಾ. ೨೮೦).

[ತೋರ + ತಕ್ಕು$_2$]

ತೋರತೋಟಿ 'ತೋರದೋಟಿ' ನೋ.

ತೋರತ್ತಿ, ತೊರತಿ, ತೊರತ್ತಿ (ನಾ). ದೊಡ್ಡ ಜಾತಿಯ ಉದುಂಬರ; ದೊಡ್ಡ ಅತ್ತಿಯ ಮರ: ತೋರತ್ತಿ (ಕಾಸ್ತೆಲ). ಸುಂದರವಾದ ಉನ್ನತವೃಕ್ಷ. ಕಟ್ಟಿಗೆ ಇಮಾರತಿಗೆ ಬರುತ್ತದೆ. ಬೀಜದಿಂದ ದೀಪದ ಯೆಣ್ಣೆ ಹೊರಡುತ್ತದೆ (ಕಥಾಗೆ. ೪೧). **ತೊರತಿ**: ಸಣ್ಣ ಸೊಳ್ತಿ, ತೊರತಿ, ಮರ ತುತ್ತಿ (ಮೃಜಿಗಿ. ೪೫-೮೮೦). **ತೊರತ್ತಿ**: ತೊರತ್ತಿ, ಸುರಟಿ . . . ಎಣ್ಣೆ ಮರ, ಹಾಲವೆ (ಮೃಜಿಗಿ. ೪೫-೮೮೨). [ತೋರ + ಅತ್ತಿ$_1$]

ತೋರದಿಟ್ಟಿ (ನಾ). ದೊಡ್ಡ ಕಣ್ಣು; ಅಗಲವಾದ ಕಣ್ಣು; ಬೊಗಸೆ ಗಣ್ಣು: ತೋರದಿಟ್ಟಿಯ ತುದಿಯೊಳು ತೊರೆದುದಕವ ಕೂರುಗುರಿಂ ಮಿಡಿಮಿಡಿದು ವಾರಿಜಮುಖಿ ನುಡಿಯಲು (ಶ್ರೀಪಾಲ. ೨-೩೮).

[ತೋರ + ದಿಟ್ಟಿ]

ತೋರದುಟಿ (ನಾ). ದಪ್ಪವಾದ ತುಟಿ: ತೋರಕುಚದ ತೋರದುಟಿ ತೋರದುಱುಬಿನ ತೋರಿದ ಮೆಲ್ನವಿರುಗಳ ಮಾರಕೇಳಿಗೆ ಮನದಣಿಯದ ಚಿತ್ತಿನಿನಾರಿಯರೆಸೆದರರ್ತಿಯಲಿ (ಕಂನವಿ. ೨೧-೮೧).

[ತೋರ + ತುಟಿ$_2$]

ತೋರದುತ್ತು (ನಾ). ದೊಡ್ಡ ತುತ್ತು: ಸಿತರಾಜಾನ್ನ ಸದ್ಘೃತ ತೊವ್ವೆ ಗೂಡಿ ನಿರ್ಮಿತವಾದ ತೋರದುತ್ತುಗಳ ಜತನದಪ್ಪದೆ ಕೈಕೊಂಡರು (ಮೋಹತ. ೩-೫೫). [ತೋರ + ತುತ್ತು$_2$]

ತೋರದುರುಬು 'ತೋರದುಱುಂಬು' ನೋ.

ತೋರದುಱುಂಬು, ತೋರದುರುಬು, ತೋರದುಱುಬು (ನಾ). ದೊಡ್ಡದಾದ ಕಬರಿ; ದೊಡ್ಡ ತುರುಬು: ತೋರದುಱುಂಬಿನೊಳ್ ತೆಱಂಬೊಳೆವಲರ್ಗೊಂಚಲೊಪ್ಪೆ (ಲೀಲಾವ. ೮-೨೮). **ತೋರದುರುಬು**: ಇಟ್ಟ ಕಸ್ತುರಿಬಟ್ಟು . . . ತೋರದುರುಬನು ಉಟ್ಟ ದೇವಾಂಗದ ನಿರಿಯ ಮೇಗಳವಟ್ಟ ಹೊನ್ನುಡಿದಾರದಿಂದ (ಸೌಂದಕಾ. ೩-೮೨). **ತೋರದುಱುಬು**: ಕಾರಗತ್ತಲೆಯೊಳು ಥಳಥಳಿಸುತಲಿಹ ತಾರಗೆಗಳೊಯೆಂಬಂತೆ ತೋರ ದುಱುಬಿನೊಳು ಕಮ್ಮಲರ್ಗಳ ತಂದಾ ರಮಣಿಗೆ ಮುಡಿಸಿದರು (ಜೀವಂಸಾಂ. ೧೦-೯). ತೋರದುಱುಬು ದುಂಬಿಗುರುಳರನೇಱಿಲ ದೋರೆವಣ್ಡುಟಿ ವೆಱೆನೊಸಲ . . . ವಾರಾಂಗನೆಯರೊಪ್ಪಿದರು (ಶ್ರೀಪಾಲ. ೯-೧೦);

[ತೋರ + ತುಱುಂಬು$_2$]

ತೋರದುಱುಬು 'ತೋರದುಱುಂಬು' ನೋ.

ತೋರದೆರೆ (ನಾ). ದೊಡ್ಡ ಅಲೆ,–ತರಂಗ: ಹೆಂಸತಳ್ಪತಳದೊಳ್ ಪಾಲ್ಗಡಲ ತೋರದೆರೆಯ ಮೇಲೆ ಲೀಲೆಯಿನವತರಿಸುವ ಸಿರಿಯನನುಕರಿಸಿರ್ದು ನಿಜಮನೋವಲ್ಲಭನೊಡನೆ ಸುಖಸುಪ್ತಿಯಂ ತಳೆದು (ನೇಮಿಪು. ೬-೬೫ ವ); ತೋರದೆರೆ ಮುಱಿಯೆ ಮೂಡುವ ವಾರಣಮಂ ಪೋಲ್ತುದು (ಅರ್ಧನೇ. ೫-೧೧೩). [ತೋರ + ತೆರೆ$_4$]

ತೋರದೊಡೆ (ನಾ). ದಪ್ಪವಾದ ತೊಡೆ: ಆತನಯೆ ತೋರದೊಡೆಗಳಿವಾತನ ನಿಡುದೋಳೆ ನಡೆಯುಮಾತನ ನಡೆ (ಕಾಪ್ಯಾವ. ೪೩); ನಿದಸತಿಯ ತೋರದೊಡೆಗಳ ಮೇಲೆ ಲಲಿತಮಣಿಮಕುಟಮಂಡಿತಮಸ್ತಕವನಿಳುಹಿ ಮಗ್ಗುಲಿಕ್ಕಿದನಾಗಳು (ಹಚಕಾ. ೬-೫೦); ಕೆಂಡಗಣ್ಣ ಹೆಮ್ಮಾರಿಮೊಗಗಳ ಬಿಗಿದ ಹುಬ್ಬುಗಳ ಬಲ್ಗೋರೆದಾಡೆಗಳ ಸಲೆ ಕೊಬ್ಬಿದ ತೋರದೊಡೆಗಳ . . . ದಡಿಗರಕ್ಕಸರ್ ಕೋಟಾನುಕೋಟಿಗಳದೇನೆಂಬೆನು (ಇಬಪು. ೪೭-೦೪). [ತೋರ + ತೊಡೆ$_2$]

ತೋರದೊಣ್ಣೆ (ನಾ). ದೊಡ್ಡ ಗುದಿಗೆ,–ದೊಣ್ಣೆ: ಕೂರಲಗುವಿಡಿದವನ ಕೂಡತಿವೀರರಾಗಿದ್ದವರು ಕಾದಲು ತೋರದೊಣ್ಣೆಯ ಹೊಯಿಲನಂ ಗೈಸುವರದಾರುಂಟು (ಕಾಶಿರಾ. ೨೦-೩೩). [ತೋರ + ದೊಣ್ಣೆ$_1$]

ತೋರದೋಟಿ, ತೋರತೋಟಿ (ನಾ). ಭಾರಿಯಾದ ಕಾಳಗ; ರಭಸದ ಯುದ್ಧ. 'ತೋರದೋಟಿಗ' ಪರಾ. **ತೋರತೋಟಿ**:

ಮೂಡುವವು ತಲೆ ಹಲ್ಲಿದ ಗಜ್ಜಿ ಹೊಜಬೀಡ ಬಡುವವು ಸುಭಟರಿಬ್ಬರ ರುಮುಡಣೆಯ ಖಂಡೆಯದ ತುಂಡದ ತೋರತೋಟಿಯಲಿ [ಪಾಣಾಂ. ತಾಣಕೋಟಿಗಳ] (ತೊರರಾ. ೬-೦೦-೫೦).

[ತೋರ + ತೋಟಿ$_1$]

ತೋರದೋಟಿಗ (ನಾ.) ಭಾರಿಯಾದ ಕಾಳಗ ಮಾಡುವವನಂ; ಮಹಾವೀರ: ಕಡು ಸಡಗರದ ಬಡಿವಾರದ ತೋರದೋಟಿಗ (ಕಾವಾಕಾ. ೧೪೪-೫೦). [ತೋರದೋಟಿ + -ಗ$_2$]

ತೋರಪಿಲ್ಲಿ (ನಾ). ದೊಡ್ಡ ಪಿಲ್ಲಿ: ವೀರಮುದ್ರಿಕೆ ಕಾಲುಂಗುರ ಮೆಂಟಿಕೆ ತೋರಪಿಲ್ಲಿ ಕಿಱಿಪಿಲ್ಲಿ ಭೂರಿರುಚಿಗಳಿಂದ ಮೆಱಿದವು (ಅಸಂಪ. ೭-೧೦೮).

[ತೋರ + ಪಿಲ್ಲಿ$_1$]

ತೋರಬಾಷ್ಪ (ನಾ). ಅತಿಶಯವಾದ ಕಣ್ಣೀರು; ಅಧಿಕವಾದ ಕಣ್ಣೀರು: ಪುದಿದ ಮನೋಗತಾರ್ಥಮನದಂ ನೆಱಿ ಜಿಹ್ವೆಗೆ ತಂದು ಪೇಟಲೀಯದೆ ಮೊಗಕಡ್ಡವಿರ್ವ ಕಡುನಾಣ್ಚಿಕೆಯಂ ತೊಳೆವಂತೆ ತೋರಬಾಷ್ಪದ ಪನಿದಂದಲಂ ಸುರಿಯುತುಂ (ಕುಸುಮಾ. ೦೨-೦೪೪).

[ತೋರ + ಬಾಷ್ಪ]

ತೋರಬೆರಳು 'ತೋರುಬೆರಳು' ನೋ.

ತೋರಮರ (ನಾ). ದೊಡ್ಡ ಮರ; ಹೆಮ್ಮರ: ಒತ್ತಿ ಕಾಲಿದಲೊಡನೆ ಗಿರಿ ತಲೆಗುತ್ತುತಿರ್ದುದು ತೋರಮರಗಳು ಕಿತ್ತು ಹಾರುತಲಿರ್ದವಂಬರ ಮಣಯನನೆಡರೆದು (ತೊರರಾ. ೪-೦೨-೫೪). [ತೋರ + ಮರ$_1$]

ತೋರಮಲ್ಲಿ, ತೋರ್ಮಲ್ಲಿ (ನಾ). ಒಂದು ಬಗೆಯ ಹರಳು,—ರತ್ನ; ಗಂಧರ್ವಮಣಿ: "ಪ್ರಶಸ್ತಶಿಲೆಯಾಗಿ ಉಪಯೋಗಿಸುವ, ಬಲವಾದ ವಿದ್ಯುದ್ಗುಣಗಳನ್ನುಳ್ಳ, ಬೇರೆ ಬೇರೆ ಬಣ್ಣಗಳ ಖನಿಜ ವಸ್ತು: ತೋರಮಲ್ಲಿ" (Tourmalin (e). ಇಂಳವಿ). **ತೋರ್ಮಲ್ಲಿ**: ತೋರ್ಮಲ್ಲಿಗಳು ಒಳಗಡೆಯಲ್ಲಿ ಯುರೋಪದಿಂದ ಮುಂಬಯಿಗೆ ಮಾರಾಟಕ್ಕೆ ಬರುತ್ತವೆ. ಈ ಹರಳುಗಳು ಕಡಿಮೆ ಜಾತಿಯ ರತ್ನಗಳೆಂದು ಎಣಿಸಲ್ಪಡುತ್ತವೆ (ಮುಂಖಾಮು. ೬-೪೭).

[ದೇ.॥ ತಮಿ. ತೋರಮಲ್ಲಿ, ತೋರಾಮಲ್ಲಿ; ತೆಲು. ತೋರಮಲ್ಲಿ, ತೋರಮಲ್ಲೆ./ಮರಾ. ತೋರಮಲೀ, ತೋರಮಲ್ಲೀ./ಇಂ. Tourmaline. ಸಿಂಹಳೀ. ತೋರಮೊಲ್ಲಿ]

ತೋರಮಲ್ಲಿಗೆ (ನಾ). ದೊಡ್ಡ ಮಲ್ಲಿಗೆ: ಬಿಳಿಯ ತಾವರೆಯೆಳಗಾವಿನಸಿಯ ನೂಲೊಳ್ ಕೋದ ತೋರಮಲ್ಲಿಗೆಯ ಬಿರಿಮುಗುಳ ಸರಿಗೆಯುಮಂ (ಪಂಪಭಾ. ೫-೬ ವ); ಒದವಿದ ತೋರಮಲ್ಲಿಗೆಯ ಹಾರದ ಸೂಸಕದಿಂದೆ ಸಿಂಧುವಾರದ ಚಮರೀಜದಿಂದೆ ... ಬೆಲ್ಲುವೆತ್ತುದು ಕದಳೀದ್ರುಮಗ್ರಥಿತ ಸುಂದರ ವಂದನಮಾಲಿಕಾವೃತಂ (ಕಾದಂಉ. ೩೦೩) ; ಕೊಸಗಿನೆಸಟ ಕೇಸರಮಂ ತೊಡರ್ಚಿದ ತೋರಮಲ್ಲಿಗೆಯ ಮುಗುಳ್ಗಳಾರಂಗಳುಮಂ (ಜಗವಿ. ೬-೦೬ ವ). 'ತೋರಮೊಲ್ಲೆ' ಪರಾ [ತೋರ + ಮಲ್ಲಿಗೆ]

ತೋರಮಾಣಿಕ (ನಾ). ದೊಡ್ಡ ಮಾಣಿಕ್ಯ,—ರತ್ನ: ತೋರಮಾಣಿಕವೆಂದು ಪಿಡಿದರೆ ಭೂರಿಕೆಂಡವಿದಾಯ್ತು (ನಳಕ. ೬-೦೫). [ತೋರ + ಮಾಣಿಕ]

ತೋರಮುಡಿ (ನಾ). = ತೋರದೊಜ್ಜಂಬು: ತೋರಮುಡಿವಿಡಿದು ಕುಡಿಯಂ ನಾರಂ ಸದವಂತೆ ತದೆದು (ಯುಕೋಚ. ೨-೫೦) ; ತೋರಮುಡಿ ಬಿಟ್ಟಿಪ್ಪುದಾರುಣಿಯೊಳಗ್ರ ಕಚಂ (ಸೂಕ್ತಸು. ೦೩-೯) ; ತೋರಮುಡಿಯ ಕೆಂಡೆಡೆಯ ರತ್ನದ ಕರ್ಣಪೂರದ ಫಣಿಕುಂಡಲಗಳ ಚಾರುಕುಂಕುಮಗಂಧ ಘನತಲೇಪನದರ್ಧನಾರೀಶ ಜಯ (ಕ್ರಿಭಾ. ೨೬-೦); ಕಡುತೋರಮುಡಿ ಮುಗಿಲನಧರಮತಿಸಂಚಯಂ [ಪಾಣಾಂ. ಮಧುವೃಷ್ಟಿಯಂ] ತನುಮಧ್ಯ ಮದು ಪುಸಿಯನು ಬಿಡದೆ ವಿಕ್ಕುಂ ಮಹಾಚಂಚಲಮೆ ರೂಪಾದ ಮಡದಿಯರ . . . ನಂಬುವಂ ಮೂಢಂ (ಕಬಪು. ೦೦-೫೭); ದೇವೇಂದ್ರ ಸಿಂಹಾಸನದಿಂದೆದ್ದು ತೋರಮುಡಿಯ ತಿಲೋತ್ತಮೆಯ ಕೈಯನ್ನು ಹಿಡಿದುಕೊಂಡು ಉದ್ಯಾನದಲ್ಲಿದ್ದ ನಮೇರುವೃಕ್ಷದಡಿಯನ್ನು ಸೇರಿದ (ಧಮಮಾ. ೬೧). [ತೋರ + ಮುಡಿ$_3$]

ತೋರಮುಡುಹು (ನಾ). ದೊಡ್ಡ ಹೆಗಲು; ಗಾತ್ರವಾದ ಹೆಗಲು: ಪರಿಮಳದ ಕತ್ತುರಿಯ ತಿಲಕದ ಹೊರೆದ ಗಂಧದ ತೋರಮುಡುಹಿನ ಕರದ ಖಂಡೆಯರದಟರೈದಿದರಾನೆ ಕಾದುರೆಯಲಿ (ಕುವಾವಿ. ೪-೪೫) ; ತೋರಮುಡುಹು ನಿಡುಗಯ್ಯತಿದೀರ್ಘಶರೀರ ವೇರುರ ವೆರ್ಚಿ ಬೆಳೆದ ಚಾರುಬಾಹುಯುಗವೆಸೆಯೆ ಬಾದುರನಂದು ಸಾರಿದನಾ ಶಾರ್ದ್ಗವನು (ಕುರಾಸಾಂ. ೦೪-೭೭). 'ತೋರಮುಯ್ಯಲ್ಲಿ' ಪರಾ.

[ತೋರ + ಮುಡುಹು$_5$ (<ಮುಡುಪು$_4$)]

ತೋರಮುತ್ತು (ನಾ). ದಪ್ಪವಾದ ಮುಂತರ್ತ್ರ; ಗಾತ್ರವಾಗಿರುವ ಮೌಕ್ತಿಕ: ತೋರಮುತ್ತಿನ ಹಾರಂಗಳುರಸ್ಥಲಂಗಳೊಳಿಲ್ಲಿಳಿದಾಡೆಯುಂ (ಕಾದಂಪೂ. ೬೭) ; ನೊಸಲೆಡೆಯಲ್ಲಿ ನೀಳ್ದ ಕುರುಳೋಳಿಗಳುಯ್ಯಲನಾಡಿ ಡಾಳಮಂ ಪಸರಿಪ ತೋರಮುತ್ತಿನ ಸರಂ ವೊಲೆಯೊಳ್ ತಲೆಯೊತ್ತಿ . . . ಪೊಸರನ್ನದಾರತಿಯನೆತ್ತಿದರಗ್ಗದ ಗಾಡಿಕಾರ್ತಿಯರ್ (ಕಬ್ಕಾ. ೩೪೭) ; ಕೊರಳೊಳಿಕ್ಕಿರ್ದಾ ತೋರಮುತ್ತುಗಳೆಲ್ಲ ತಿಳಿಗೊಳದೊಳು ತೋರ್ವ ತಾರಾಳಿಯಂತೆ ತೋಱಿದುವು (ಧರಚ. ೦-೪೩) ; ಈಕೆಯ ಕೊರಳಿನ ಕಾಂತಿಯ ಹೊಳೆಯೊಳು ಮುಳುಗಿವೆ ತೋರಮುತ್ತುಗಳು (ಇಂಡಾಪ. ೮೫-೦೩). [ತೋರ + ಮುತ್ತು$_6$]

ತೋರಮುಯ್ಯು (ನಾ). = ತೋರಮುಡುಹಂ: ತೋರಮುಯ್ಯುಗಳೊಳಿಸೆವ ಕುಂಕುಮಂಗಳ ಬಂಬಲ ಸೋಂಕಿನೊಳ್ ರಜಂ ನೆಗೆದು ದೆಸೆಗಳ್ಪೊಂಬಣ್ಣಮಾಗಿಸೆಯೆಯುಂ (ಕಾದಂಪೂ. ೬೭).

[ತೋರ + ಮುಯ್ಯು$_1$]

ತೋರಮೂಗುತಿ (ನಾ). ದೊಡ್ಡ ಗಾತ್ರದ ಮೂಗಂತಿ; ದೊಡ್ಡ ಮೂಗು ಬೊಟ್ಟು: ತೋರಮೂಗುತಿ[ಪಾಣಾಂ. ಮುತ್ತಿನ]ಬೊಟ್ಟು ತುಱುಪಿನ ಬಲೆವಣೆ ಸೇರಿ ಕಣ್ಗೆಸೆದುವವರಿಗೆ (ಕುರಾಸಾಂ. ೩೬-೦೫೭).

[ತೋರ + ಮೂಗುತಿ]

ತೋರಮೊಗ (ನಾ). ಅಗಲವಾದ ಮುಖ; ವಿಸ್ತಾರವಾದ ವದನ: ತೋರವೊಗಂ ಸಮುನ್ನತಗಳಂ ಸವಗೆಂಪಡರ್ದಕ್ಷಿ . . . ಕರ್ಕಶದೇಹ ಮತೀವಭೀಷಣಾಕಾರಮನಪ್ಪುಕೈಯೆ (ದಶಕು. ೯-೦೫).

[ತೋರ + ಮೊಗ]

ತೋರಮೊಲೆ (ನಾ). = ತೋರಕುಚ: ತೋರಮೊಲೆಗಳ ಮೊಗಂಗಳ್ ರಾರಾಜಿಸಿ ಕರ್ಪುವೆತ್ತು ಮೋಹನಧೂಮೋದ್ಗಾರಿಗಳಂ ಕಾಂಚನಭೃಂಗಾರಿಗಳಂ ಪೋಲ್ತುವು (ಪಂರಾಮಾ. ೩-೯೫); ವೊರೆಯುದ ತುಂಬಿಳುಂ ಕುರುಳ ಸಂದಣಿ ಸೋಲಿಸೆ ಜಕ್ಕವಕ್ಕಿಯಂ ಪರಿವಡೆದಿರ್ದ ತೋರಮೊಲೆ ಬಗ್ಗಿಸೆ (ಕಬ್ಕಾ. ೧೦೨); ಮುಡಿ ತೋರಮೊಲೆಯ ಭಾರಗಳಿಂದಲಂಗುರವಿಡಿನಡು ಬಳುಕುವಂತಿಹರು (ಪಾಚಹತ. ೨-೪೨) ; ನೀರೆಱಿವಬಲಾಜನದಾ ತೋರ ಮೊಲೆಗಳಿಗೆಱಿಗಿದ ಪಾಂಥರ ದಿಟ್ಟಿ ತೋಱಿದುವಸಾವಿಷತೆಯನು (ಕಂಪವಿ. ೨-೫೪). [ತೋರ + ಮೊಲೆ$_1$]

ತೋರಮೊಲ್ಲೆ (ನಾ). ದೊಡ್ಡ ಜಾತಿಯ ಮೊಲ್ಲೆ: ಭೃಂಗ ಕೈದುಡುಕದ ಸೌರಭ್ಯವಾಂತ ಪುಷ್ಪಂಗಳ ತೋರಮೊಲ್ಲೆಗಳ . . . ತಂದಿತ್ತು (ಪಾಚಹತ. ೪-೫೦). [ತೋರ + ಮೊಲ್ಲೆ]

ತೋರವಜ್ಜೆ (ನಾ). ದೊಡ್ಡ ಹೆಜ್ಜೆ; ಅಗಲವಾದ ಪಾದ: ಮನಮೆಳಸಿ ಮೆಲ್ಲ ಸಲ್ಲಕೀಪಲ್ಲವಂಗಳಲ್ಲಲ್ಲಿಗುದಿದುದಿದು ಬೀಟುತ್ತಿರೆ ಪೋದ ಮದ ವಾರಣಂಗಳ ತೋರವಜ್ಜೆಗಳುಮಂ (ಕುಸುಮಾ. ೦೪-೩೯ ವ).

[ತೋರ + ಪಜ್ಜೆ]

ತೋರವಣ್ (ನಾ). ದೊಡ್ಡದಾಗಿರುವ ಹಣ್ಣು : ಆವ್ರುದ ತೋರ ವಣ್ಣೊಳಿಂದಲಿ ರಸದಂತುಗಾಣದ ದಲೊಂದು ಶುಕಂ ಮಧುಸಮ್ಮ ದೊತ್ಸುಕಂ (ಚಂದ್ರಪು. ೭-೪೭); ಕಾಯ್ಪೇಱಿದ ತೆಂಗು ತೋರಗೊನೆ ವೇಱಿದ ಕಂಚಳವಾಟ್ ತೋರವಣ್ಪೇಱಿದ ಬಕ್ಕೆ (ಅನಂಪು. ೧-೭೪).

[ತೋರ + ಪಣ್[೨]]

ತೋರವಣ್ಗೊನೆ (ನಾ). ದೊಡ್ಡ ಹಣ್ಣುಳ್ಳ ಕೊಂಬೆ : ಎಳವಲಸು ನಿಜಸ್ಕಂಧಾವಳಂಬಿಯಿನಿಸಿರ್ದ ತೋರವಣ್ಗೊನೆಯಿಂ ಕಣ್ಗೊಳಿಸಿತ್ತು (ಚಂದ್ರಪು. ೭-೮೫). [ತೋರವಣ್ + ಗೊನೆ (<ಕೊನೆ)]

ತೋರವನಿ, ತೋರಹನಿ (ನಾ). ದಪ್ಪವಾಗಿರುವ ಹನಿ.–ಬಿಂದು : ಸುರಿದಪುದು ಮುಗಿಲ ಮುತ್ತಿನ ಸರಿ ಗಗನದಿನಿನಿಸು ಪೊಳೆವುವೆಳವಿಸಿಲೊಳ್ ಬೆಳ್ಪರಿ ತೋರವನಿಯ ಪುದುವಿನೊಳರಲ್ದ ತಿಳಿಗೊನೆ ನಭದೊಳಿಟ್ ದಂತಿರ್ದಂ (ಆದಿಪು. ೧೧-೮); ಅಲ್ಲಲ್ಲಿಗೆ ಮುತ್ತಿನ ಪುಡಿಯ ಸುಣ್ಮಳೆಲ್ಲಳಾಲ ವಾಲಂಗಳಂ ಕೂಡಿರ್ದಡೆವಿಡದೆ ಸುರಿವ ತೋರವನಿಗಳಂ (ಕಾದಂಬಿ. ೩೦೬); ಕಾರ ತೋರವನಿ ಚಾದಗೆಗೆ ಭಾರಮೆ ಶಿವನ ಕರುಣಮೆನಗಿದಿರ್ವರೆ ವಿಚಾರಮೆ (ಗಿರಿಕ. ೧೦-೩೬ ಪ). **ತೋರಹನಿ:** ಕಣ್ಣೀರ ಕೋಡಿ ಹರಿಯಿತು. ತಟ್ಟಿಯಲ್ಲಿ ಅನ್ನದಲ್ಲಿ ಬಿದ್ದವು ಆ ಕಣ್ಣೀರ ತೋರಹನಿಗಳು (ಸುವಸಂ. ೧೯).

[ತೋರ + ಪನಿ[೨]]

ತೋರವೆಟ್ಟು (ನಾ). = ತೋರಗಿರಿ : ಎಸೆವಲರ್ಗೊಂಚಲಂ ತಳೆದ ಮಲ್ಲಿಗೆ ಪೂವಿನ ಸಂತ ಕೊಂಬಿನಿಂ ಪಿಸುಗುವ ಮಾಮರಂ ವೆಸರ ಮಾಳಿಗೆ ಮಾಡಿದ ತೋರವೆಟ್ಟುಗಳ್ (ಕಬ್ಕಾ. ೦೦೧). [ತೋರ + ಬೆಟ್ಟು[೨]]

ತೋರವೆಣ (ನಾ). ದೊಡ್ಡ ಹೆಣ; ಗಾತ್ರವಾದ ಶವ: ತೋರವೆಣಂಗಳಂ ತಳೆದು ಭೂತಗಣಂ ಕುಣಿದಾಡುವಂತಿರಲ್ . . . ಸುತ್ತಲುಂ ವಾರಿಧಿ ಪೀರೆದಪ್ಪಿ ಕವಿವಂತು ಬಿಗುರ್ವಿಸಿದಂ ದಶಾನನಂ (ಪಂರಾಮಾ. ೯-೧೮೯).

[ತೋರ + ಪೆಣ]

ತೋರಶಿಖೆ (ನಾ). ದಪ್ಪಗಾತ್ರದ ಜುಟ್ಟು (?) : ದುಗುಲದಿಂದ ಬೀಗಿ ತೋರಶಿಖೆಯನು ಧರಿಸಿ (ಚಳಸ. ೦೭). [ತೋರ + ಶಿಖೆ]

ತೋರಹತ್ತ (ನಾ). ೧. ದೊಡ್ಡ ಸೊಂಡಿಲು: ಆ ವಾರಣದ ತೋರಹತ್ತ ಮಾನುಪೂರ್ವಿ ಸ್ಥೂಳಮುಮಾಭೀಳಮುಮುತಿಪ್ರಲಂಬಮುಮಾಗೆ (ಅನಂಪು. ೧೩-೨೦ ಪ); ನೆಲ್ಲಿಯ ಕಾಯ್ಗಳಂ ಬಡಿಗೆ ಕೊಂಡಪ್ಪೊಲೆತ್ತಿದ ತೋರಹತ್ತದಿಂ ಜಲ್ಲನೆ ತುಂಬಿಗಳ್ ಕೆದಱಿ ಬಂದುವು ಬಿಂಕದಿನಂಕದಾನೆಗಳ್ (ಕಬ್ಕಾ. ೨೦೩) ; ಹೇಱಿದ ಹೇರಂಬುಗಳನಿಕ್ಕಡಿ ಮಾಡಿ ತೋಱಿದ ತೋರಹತ್ತದಲಿ (ಕೂಡಿಹ. ೩೮-೪೭). ೨. (ಶಕ್ತಿಯುತವಾದ) ಕೈಗಳುಳ್ಳವನು ; ಶೂರ : "ತೋರಹತ್ತನೆನೆ ತಾಂ ರಣ ಧೀರಂ" (ಭಾರನಿ. ೩೪) ; ಭುಜಬಳದಳವಿಂ ಭೀಮನಿಂ ತೋರಹತ್ತಂ ಬಳನಿಂದಂ ತೋರಹತ್ತಂ (ಎಳ. V, ಅರಿಷೇ. ೯-೫ ; 1286) ; ಬೆಳದಪೊ ಕೈಕಾಲು ನೀಲಾಚಲಕೆ ಹೇಳೆನೆ ಮುಗಿಲ ಪುಡುಕುವ ತಲೆಯ ಜೋಕೆಯ ತೋರ ಹತ್ತನ ಕಂಡು ಕುದುಸೇನೆ (ಕುವಾ.ಕ್ರೋ. ೧೫-೫೧); ಬೈದು ಬೆರಸುವ ತೋರಹತ್ತರ ಕೈದುಗಳ ಹೊಳಹೊಳೆವ ಧಾರೆಯ ಮೈದಡಿಗೆ . . . ಜಾರುಶದ ಮುಖ್ಯರು ಸಂದರಿದಿರಾಗಿ (ನಿಘಾಗ. ೪-೧೭-೩೬). ೩. ಶೌರ್ಯ ; ಸಾಹಸ: ನೀರೊಳು ಪೊಕ್ಕ ರಕ್ಕಸನ ಘೋರಾಕೃತಿವೆತ್ತು ವಿಷಾನಾಗಿ ಮಡುಹಿದ ತೋರಹತ್ತಪ ತೋಱಿಸ್ನೊಡನೆ (ಮೋಹತ. ೪೨-೧೯). ೪. ಮಲ್ಲಯುದ್ಧದಲ್ಲಿ ಒಂದು ಪರಸೆ : ಮಿಕ್ಕುದು ವಜ್ರ ಪಾತಮುಮನೆಂಬಿನಮುಬ್ಬಸಮಾದ ತೋರಹತ್ತಕ್ಕೆ ತಗುಳ್ದು ಪತ್ತಿಸುವ ಮಾನಸಗೋಳಮೆಸಪ್ಪ ಡೊಕ್ಕರಕ್ಕಿಕ್ಕದ ವಜ್ರಲೇಪಮೆನೆ ಪತ್ತುವ ಲಗ್ಗೆಗೆ ಪಾರಿಯೊಳ್ ವೊಗಂಬೊಕ್ಕವೊಲಾಗೆ ಬೆರ್ಚಿದನವಂ (ಚಂದ್ರಪು. ೫-೮೦) ; ಎರಾವತಂ ಮಲ್ಲನೇಷದೊಳಿರಾದೊಡಂ ತೋರಹತ್ತದೊಳಂ ತಿವಿದು ತಿವಿವುವ . . . ಮಲ್ಲರ ನೆರವಿಗಳೊಳು (ಗಿರಿಕ. ೨-೧೦೫ ಪ) ; ಇರ್ವರ ಚಮತ್ಕಾರಕೆರ್ವರೇ ಸಾಟಿಯೆನಲು ವರಶಿರೋಪಲಯದಿಂ ಸಿಲ್ಕಿಪರ್ ತೋರಹತ್ತದೆ ತವಕದಿಂ ಪಿಡಿವರು (ಚಬಪು. ೨೫-೩೪) ; ತಳಹತ್ತಂ ದಣಾವಟ್ಟ ಪೊಪ್ಪರಮುರೋಬಂಧಂ ... ಭುಜಗಬಂಧಂ ತೋರಹತ್ತಂ ಶಿರೋವಳಯಂ ಬಾಹುತಳಂ ಚಮತ್ಕರಿಸೆ ನಾನಾ ಕೌಶಲಂದೋಱಿದರ್ (ಶಬಶಂ. ೪-೭೫). 'ತಳಹತ್ತ' ಪರಾ.

[ತೋರ + ಹತ್ತ[೨]./ತೆಲು. ತೋರಹತ್ತ]

ತೋರಹನಿ 'ತೋರವನಿ' ನೋ.

ತೋರಹಾರ (ನಾ). ದೊಡ್ಡದಾದ ಮಾಲೆ ; ದೊಡ್ಡ ಗಾತ್ರದ ಸರ : ಪಸರಿಸಿದ ತೋರಹಾರದ ಪೊಸವೆಳ್ದಿಂಗಳುಮನಮರ್ದ ಪೆರ್ದುಡುಗೆ ಗಳೊಳ್ ಪಿಸುಗುವ ಪೊಸ ಮಾಣಿಕದೆಳವಿಸಿಲುಮನೊಡಗೂಡಲಾದುದಾ ಸ್ಥಾಯಿಕೆಯೊಳ್ (ಆದಿಪು. ೯-೫) ; ಪ್ರಮದದೊಳೆನ್ನ ಕಂಧರದೊಳಂ ದಿರುಳಕ್ಕಿದ ತೋರಹಾರಮುಂ ಹಿಮಗೃಹ ಪ್ರವೃತ್ತಕಮಂ . . . ಆ ರಮಣಿಯದೊಂದು ಭಾವಗತಮಂ ಸೆಜಿಸೂಟಿಸೆ (ಕಾದಂಬಿ. ೩೪೭); ಸುತ್ತಪೆ ನೆಲೆಗೊಂಡಂ ಪರಿವೃತ್ತೋನ್ನತ ಚಂದ್ರನಗಜೆಯಾಸ್ಯದೊಳೆಂದು ನೃತ್ತತೆಯೊಳ್ ತಾರಗೆಗಳ್ ಸುತ್ತಿದುವೆನೆ ತೋರಹಾರಮಂ ರಂಜಿಸಿದರ್ (ಗಿರಿಕ. ೧೦-೪೭). [ತೋರ + ಹಾರ[೨]]

ತೋರಱಿಕೆ (ನಾ). ಹೆಚ್ಚಿನ ಪ್ರಸಿದ್ಧಿ ; ಅತಿಶಯವಾದ ಕೀರ್ತಿ : ಅಗ್ಗದ ಬೀರರ್ ತೆಗೆದೋಡೆ ತೋರಱಿಕೆಯಾಳ್ಗಳ್ ಬಳ್ಕಿ ಬೆಂಬೇಟ್ (ಕಬ್ಕಾ. ೩೦೪). [ತೋರ + ಆಱಿಕೆ]

ತೋರಾಟೆ (ನಾ). ಒಂದು ಬಗೆಯ ಮರ : ತೋರಾಟೆ (ಕೌಂಟಿಲ) . . . ಇದರ ಎಣ್ಣೆ ಔಷಧಕ್ಕೂ ದೀಪಕ್ಕೂ ಬರುತ್ತದೆ (ಕಳಾಗ. ೪೧). 'ತೋರತ್ತಿ' ಪರಾ. [?]

ತೋರಾಯ (ನಾ). ಬಹಳ ಸಾಮರ್ಥ್ಯ ; ಅತಿ ಪರಾಕ್ರಮ : ನಾರಾಯಣಾ ಮಹಾರೋಷದಿಂದೆಸುತಿರ್ಪ ತೋರಾಯದೆಸುಗೆಯಿಂ ತರಹರಿಸದಾಕ್ಷಣಂ ಪೂರಾಯ ಗಾಯದಿಂ ಬಲಮಳಿಯೆ ಕಂಡು ಸಂಹಾರಾವತಾರನಾಗಿ (ಚಬಪು. ೩೨-೪). [ತೋರ + ಆಯ[೩]]

ತೋರಿ (ನಾ). (ಕರಾ). ಒಂದು ಬಗೆಯ ಮೀನಂ. [?]

ತೋರಿಕೆ 'ತೋಱಿಕೆ' ನೋ.

ತೋರಿತು, ತೋರಿತ್ತು, ತೋರಿದಂ (ನಾ). ೧. ದೊಡ್ಡದಾಗಿರುವುದು; ತೋರವಾದುದು: (ಕ). **ತೋರಿತ್ತು** : ೧. ತುಕಾರಾಂತಕ್ಕೆ ವಿಕಲ್ಪದಿಂ ದ್ವಿತ್ವಮುಂಟು . . . ತೋರಿತ್ತು; ನೇರಿತ್ತು . . . ಬಲ್ಲಿತ್ತು ಎಂಬಂತೆ ನೋಡಿಕೊಳ್ವುದು (ಶಮದ. ೭೭ ಪ್ರಯೋ). ೨. ಆಗಲವಾದಂದಂ ; ವಿಶಾಲವಾಗಿರುವುದು : ಪೊಂಗೋಂಟೆಯಂ ತೋರಿತ್ತಾದಗಳೆಯ್ದೆ ಸುತ್ತಿ ಮೆಱಿಗುಂ (ಪಾಧಪು. ೪-೩೬). **ತೋರಿದು** : ೧.ಪಾದರಿ ಪೂತುವು ತೋರಿದುವಾದುವು ಮಲ್ಲಿಗೆಗಳೆಯ್ದೆ ಪಣ್ತುವು ಮಾವು (ಆದಿಪು. ೧೧-೮೭); ತೋರಿದುವಾದ ಮಲ್ಲಿಗೆಯ ಮೊಗ್ಗೆಗಳೊಳ್ ಮೊಗವೂಱಿ ಬಿರ್ದು ಭೋರ್ಭೋರೆನೆ ಪಾಯ್ದು ಬಂಡಿನೊಳ್ ಬಂಡೊಗೆದು . . . ಕಾಱಿ ಕಡಲಿಟ್ಟುವು ಮತ್ತಮಧುವ್ರತಾಳಿಗಳ್ (ಲೀಲಾವ. ೯-೧೧೬) ; ನಾರಿಯ . . . ತೋರಿದುವಾದ ನಿತಂಬಂ ತೊಡೆಯಡಿಗಳು ಕಡುಸೊಗಸಿದುವು (ಆಯಕಾ. ೨-೭).

ತೋರಿದಂ = ತೋರವಾದವನಂ : ಒಳ್ಳಿದಂ, ತೆಳ್ಳಿದಂ, ಮೆಲ್ಲಿದಂ, ಬೆಟ್ಟಿದಂ, ತೋರಿದಂ (ಶಮದ. ೧೫೨ ಪ್ರಯೋ). [<ತೋರ]

ತೋರಿತ್ತು 'ತೋರಿತು' ನೋ.

ತೋರಿದು 'ತೋರಿತು' ನೋ.

ತೋರಿಸು 'ತೋಱಿಸು' ನೋ.

ತೋರು 'ತೋಱು' ನೋ.

ತೋರುಗಣ್ಣು (ನಾ). ಸನ್ನೆ ಮಾಡುವ ಕಣ್ಣು ; ಸೂಚಿಸುವ ಕಣ್ಣು : ಕುಳಿಂದಕನು ಚಂದ್ರಹಾಸನ ಕಡೆಗೆ ತೋರುಗಣ್ಣಾಗುತ್ತಾನೆ (ಚಂದ್ರಸ. ೬೬).
[ತೋರು (<ತೋಱು) + ಕಣ್ಣು (<ಕಣ್)]

ತೋರುಗದ್ದಿಗೆ (ನಾ). [ವೀಶೈ] ಶರಣರ ಹೆಸರಿನಲ್ಲಿ ನಿರ್ಮಿಸಿದ ನಾಮಮಾತ್ರ ಗದ್ದುಗೆ ; ತೋರಿಕೆಗಾಗಿ ಕಟ್ಟಿಸಿದ ಗದ್ದುಗೆ : ತೋರು ಗದ್ದಿಗೆ = ಶರಣರ ಹೆಸರಿನಲ್ಲಿ ನಿರ್ಮಿಸಿದ ನಾಮಮಾತ್ರ ಗದ್ದಿಗೆಗಳು (ನಿಜವಾದ ಗದ್ದಿಗೆಗಳಿಗೆ ವಿಭಿನ್ನವಾದುವು) (ವೀಶೈಪಾ. ೨೯೭).
[ತೋರು (<ತೋಱು) + ಗದ್ದಿಗೆ (<ಗರ್ದುಗೆ$_2$)]

ತೋರುಗಪ್ಪುಕ (ನಾ). (?) : "ತೋರುಗಪ್ಪುಕಮೆನಲ್ ಮೃಗಹಿಂಸೆಗೆ" (ಕಶರ. ೧೦). 'ಕಪ್ಪು$_3$' ಪರಾ. [?]

ತೋರುಗಾಣಿಕೆ (ನಾ). ತೋರಿಕೆ ; ನಟನೆ : ಎಲ್ಲ ಎಷ್ಟು ಸುಳ್ಳು-ಕೆಲವು ಸಾರಿ ತೋರುಗಾಣಿಕೆ ಬೇರೆ (ಪ್ರಶ್ನೆ. ೩೨).
[ತೋರು (<ತೋಱು) + ಕಾಣಿಕೆ (<ಕಾಣ್ಕೆ)]

ತೋರುಬೆರಳು, ತೋರಬೆರಳು (ನಾ). ಹೆಬ್ಬೆರಳಿನ ಪಕ್ಕದ ಬೆರಳು ; ನಿರ್ದೇಶಿಸಲು ಬಳಸುವ ಬೆರಳು ; ತರ್ಜನಿ : ಎಡಗೈ ತೋರು ಬೆರಳನ್ನು ತುಟಿಯ ಮೇಲಿರಿಸಿ . . . ಬಾಲಿ ಅಣಕವಾಡಿದಳು (ಮಣ್ಡುಹ. ೮೯) ; ಆದರೆ ಅದು ನಿಂತಿರುವುದು ಆ ಪರಮಪ್ರಕಾಶದೆಡೆ ತೋರು ಬೆರಳಾಗಿ ಮಾತ್ರ (ಸೌಂದಸ. ೯೪). **ತೋರಬೆರಳು** : ತನ್ನ ಕೊರಳಿಗೆ ಅಡ್ಡವಾಗಿ ತೋರಬೆರಳನ್ನೆಳೆದುಕೊಳ್ಳುತ್ತ (ವೀರಯೋ. ೫೪) ; ರಾಜನ ಬಲಗೈಯಿನ ತೋರಬೆರಳು (ಝಾರಾಣಿ. ೯೪).
[ತೋರು (<ತೋಱು) + ಬೆರಳು (<ಬೆರಲ್)]

ತೋರುಮನೆ (ನಾ). ಪ್ರದರ್ಶನಾಲಯ : ವಸ್ತುಸಂಗ್ರಹಾಲಯ : ಗೋಡೆ ಗೋಡೆಗಳಲ್ಲಿ ಕಣ್ಣಲೆವ ಕಡೆಗಳಲಿ, ಸುತ್ತಣೆಲ್ಲೆಡೆಗಳಲಿ ಮೆರೆದುವಾ ಕುಂಭಕರ್ಣನ ಬಿನದವೇಂಟೆಯ ಕವರ್ತೆಗಳ್, ತೋರು ಮನೆಯಲ್ಲಿ ! (ಶ್ರೀರಾಮಾ. ೪೫೫-೨೬೯). [ತೋರು (<ತೋಱು) + ಮನೆ]

ತೋರುಮರ (ನಾ). ದಾರಿ ತೋರಿಸುವ ಮರ; ಕೈಮರ: ಒಳದಾರಿಗಳ ಕತ್ತರಿ, ಚೌಕಗಳಲ್ಲಿ ತೋರುಮರಗಳಲ್ಲದಿದ್ದರೆ ಪ್ರಯಾಣ ಕಷ್ಟವಾಗುತ್ತದೆ (ರೂಢಿ) [ತೋರು (<ತೋಱು) + ಮರ$_1$]

ತೋರುವಳಿ (ನಾ). ಹೊರಕ್ಕೆ ಕಾಣಿಸುವ ರೀತಿ ; ತೋರಿಕೆ : ತಿಕ್ಕುವುದಕ್ಕೆ ಸುರಿಯಲು, ಚಿಮುಕಿಸಲು, ಚೊಕ್ಕಗೊಳಿಸಲೋ, ಕಾಂತಿ ಹೆಚ್ಚಿಸಲೋ, ಗಮನ ಸೆಳೆವಂತೆ ಮಾಡಲೋ ತೋರುವಳಿಯನ್ನು ಬದಲಾಯಿಸಲೋ . . . ಬಳಸುವ ಆದರೆ ಸಾಬೂನಲ್ಲದ ವಸ್ತುಗಳಿಗೆ ಅಂಗರಾಗಪದಾರ್ಥಗಳೆಂದು ಹೆಸರು (ಕವಿಕೋ. I, ೩೨).
[ತೋರು (<ತೋಱು) + – ವಳಿ$_1$]

ತೋರುವೊತ್ತೆ 'ತೋರೊತ್ತೆ' ನೋ.

ತೋರೈಸು (ಕ್ರಿ). ದೊಡ್ಡದಾಗು ; ವಿಸ್ತಾರವಾಗು : ಬಡತನದಿ ನವೆದವರು ಸುರುಚಿರ ಸುಭೋಜನವನುಣಲು ಹೆರೆ ಹೆಚ್ಚುವೊಲು ಬಡನೆಡುವು ತೋರೈಸಲು (ನವಮೋ. ೧೫೮-೮). [ತೋರ + – ಇಸು$_3$]

ತೋರೊತ್ತೆ, ತೋರುವೊತ್ತೆ (ನಾ). = ತೋರಡವು : ಅವನು ಮನೆಯನ್ನು ತೋರೊತ್ತೆ ಇಟ್ಟಿದ್ದಾನೆ (ರೂಢಿ). **ತೋರುವೊತ್ತೆ** : ಅವರು ಹೊಲವನ್ನು ತೋರುವೊತ್ತೆ ಹಾಕಿ ಸಾವಿರರೂಪಾಯಿ ತಂದಿದ್ದಾರೆ (ರೂಢಿ). [ತೋರು (<ತೋಱು) + ಒತ್ತೆ$_1$]

ತೋರ್ಕೆ (ನಾ). ೧. ಕಾಣಿಸುವಿಕೆ ; ತೋರುವಿಕೆ : "ಉಱ್ ತೋರ್ಪು ತೋರ್ಕೆಯೆಂದುಂ" (ಕವಿಕಂ. ೨೦೫); ಯಕ್ಷರೂಪಿನಿಂ ತೋರ್ಕೆಗೊಳಗಾಗಿ (ರೇವಡ. ೮-೨೧) ; ಕೀಟಗಳ ಮೊಟ್ಟೆಗಳು ಅವನ್ನಿಟ್ಟ ಕೀಟಗಳಷ್ಟು ಗಾತ್ರ, ಆಕಾರ, ತೋರ್ಕೆಗಳಲ್ಲಿ ವ್ಯತ್ಯಾಸವಾಗಿಲ್ಲ (ಕೀಟಬೆ. ೯೬). ೨. ಪ್ರದರ್ಶನ ; ದೃಷ್ಟಾಂತ ಪಡಿಸುವಿಕೆ : ಇದು ನಿನ್ನರ್ಚಿಸುವಿಕ್ಷುಚಾಪವಿದು ನಿನ್ನೀ ಲೋಕಮಂ ಕೈಗೆ ಮಾಡಿದ ಪುಷ್ಪಾಸ್ತ್ರಮಿದಲ್ತೆ ನಿನ್ನ ವಿಜಯಪ್ರಾರಂಭದೊಳ್ ತೋರ್ಕೆಗೆತ್ತಿದ ಚೈತ್ರಧ್ವಜಂ (ಆದಿಪು. ೧೧-೧೭) ; ಚಾಗದ ತೋರ್ಕೆಗಂ ನೆಗಟ್ವ ಬೀರದಳುರ್ಕೆಗದೊಳ್ಪನಿಪ್ಪಿದುದ್ಯೋಗದಮರ್ಕೆಗಂ ಸಿರಿಯ ಸಾರ್ಕೆಗಂ . . . ಸ್ತಿಮಿತಸಾಗರನಾಗರಮಾಗದಿರ್ಕುಮೇ (ಶಾಂತಿಪು. ೧-೬೮). ೩. ಆಕಾರ ; ರೂಪು ; ಗಾತ್ರ : ಕುದುರೆಯ ಬಣ್ಣದಿಂ ರಥದ ತೋರ್ಕೆಯಿನೆತ್ತಿದ ಚಿತ್ರಕೇತುವೃಂದದ ಕುಱುಪಿಂದ . . . ಒರ್ವರೊರ್ವರನೆ ಮಚ್ಚರದಿಂ ಗಱಿಸನ್ನೆಗೆಯ್ದು (ಪಂಪಭಾ. ೧೦-೮೭) ; ಬೆಡಂಗಿನ ತೋರ್ಕೆಗೆ ನೋಡ ನಾಡ ಸೌಂದರಿಯರೊಳಾವಗಂ ಸೆಣಸುವಳ್ ಸಲೆ ಗಾಡಿಗಮುನ್ನತಿಕ್ಕೆಗಂ (ಧರ್ಮಾಮೃ. ೮-೧೬೬); ಘನಪುಣ್ಯನಿರ್ದ ತಾಣಂ ಘನಮಾಗಲ್ವೇಳ್ಕುಮೆಂಬ ಬಗೆಯಿಂದೆಂಬಂತಿನಿಯಳ ತನೂದರಂ ತಾಂ ಘನಮಾಗಿಯೆ ಬಳೆದು ತೋರ್ಕೆಯಂ ತಳೆದಿರ್ಕುಂ (ಬಾಧಪು. ೪-೩೭). ೪. ಹೋಲಿಕೆ ; ಸಾದೃಶ್ಯ : ವರಶಬ್ದಾಲಂಕಾರದ ವಿರಚನೆಗಳ್ನೋಚ್ಚೊಡೊಂದೆ ತೋರ್ಕೆಗಳಿಂತುಂ ಪೊರೆದಿರಲು (ಕವಿರಾ. ೨-೪೮) ; ೫. ಆಡಂಬರ; ಡಂಬ; ನಟನೆ : ಕೆಳಗಣದೊಂದು ತಾಣದೊಳಗಿರ್ದಮಳ್ದಾವರೆಯಂತೆ ತೋರ್ಕೆಯುರ್ಬಳಿಯದೆ ತಳ್ತ ಪೆರ್ಮಾಲೆಗಳೊಳ್ (ಕಾವ್ಯಸಾ. ೬೦೧) ; ತಳೆಗುಂ ತೋರ್ಕೆಯ ಬಿತ್ತರಂಬಡೆದು ಬತ್ತಿತೆಂಬವೋಲಿರ್ದ ಪೆರ್ಬೊಳೆ (ಶಾಕುಂತ. ೧೦೧-೧೭೧) ; ದಶಾನನಂ ನಿನ್ನನೆಮ್ಮಂ ವಂಚಿಸಲ್ಕೆಂದೆ ತೋರ್ಕೆಯಂತಃಕಲಹಮಂ ರಚಿಸಿ . . . ನಿರಸನಂ ಗೆಯ್ದರ್ಪನೇಂ ಲಂಕೆಯಿಂ ? (ಶ್ರೀರಾಮಾ. ೬೧೨-೫೪). ೬. ಅರ್ಪಣೆ; ದಾನ. 'ತೋರ್ಕೆಗೊಡು' ಪರಾ. [ತೋಱ್ (<ತೋಱು) + – ಕೆ]

ತೋರ್ಕೆಗಿಡು (ಕ್ರಿ). ಕಾಣದಾಗು ; ಅಸ್ತವಾಗು : ರೂಪುಗೆಟ್ಟುದು ದೆಸೆ ತೋರ್ಕೆಗೆಟ್ಟುದಿನಮಂಡಲಂ (ಜಗವಿ. ೭-೮೦).
[ತೋರ್ಕೆ + ಕಿಡು (< ಕೆಡು$_1$)]

ತೋರ್ಕೆಗುಡು 'ತೋರ್ಕೆಗೊಡು' ನೋ.

ತೋರ್ಕೆಗೊಡು, ತೋರ್ಕೆಗುಡು (ಕ್ರಿ). ತೋರಿಸಿ ಕೊಡು ; ಒಪ್ಪಿಸಿ ಕೊಡು ; ಅರ್ಪಿಸು ; ದಾನವಾಗಿ ಕೊಡು: ಅರ್ಕಕೀರ್ತಿಗೆ ರಾಜ್ಯವಿರಲೆಂದು ಮಂತ್ರಿಗೆ ತೋರ್ಕೆಗೊಟ್ಟೆಯ್ದೆಲೊ ತಪಕೆ (ಭರಿಕ ೫೨-೧೧೪). **ತೋರ್ಕೆಗುಡು** : ನಿನಗೆನ್ನಂ ಬಿಡದುಣ್ಮೆದೀ ಬೆಮರ್ ಕೈ ನೀರಾಗಿರಲ್ತೋರ್ಕೆಗೊಟ್ಟನನಂಗಂ (ಕಾದಂಉ. ೫೯).
[ತೋರ್ಕೆ + ಕೊಡು$_1$]

ತೋರ್ಕೆಗೊಳ್ (ಕ್ರಿ). ಕಾಣು ; ರೂಪತಾಳು : ವಿಶ್ವರೂಪದೊಳಜಾಂಡದ ಮಂಡಲಿ ತೋರ್ಕೆಗೊಂಡುದು (ಚಿಕವಿ. ೩-೫೩).
[ತೋರ್ಕೆ + ಕೊಳ್$_1$]

ತೋರ್ಕೆವಡೆ (ಕ್ರಿ). ೧. ಕಾಣು ; ಪ್ರಕಟವಾಗು ; ಸ್ಪಷ್ಟವಾಗು : "ಮಿಗೆ ತೆಱಂಬೊಳೆದುದೆಂದೆನೆ ತೋರ್ಕೆವಡೆದ ಕಾಂತಿಗೆ ನಾಮಂ" (ಕಬ್ಬಿಕೈ. ೫೪) ; ಸೊರ್ಕೊಗೆದಬ್ಧಿಯ ಮಧ್ಯದೊಳುರ್ಕಿದ ಸಿಂಹಳನ ಮದಕಿದೌಷಧಮೆನಿಕುಂ ತೋರ್ಕೆವಡೆದೆಸೆವ ಬಾಳು ಪೊಣರ್ಕೆಗೆ ಪೊಡೆಯಿಪುದು ಭೇರಿಯಂ ಭರದಿಂದಂ (ರಾಜಶೇ. ೫-೧೨೮). ೨. ಪ್ರಸಿದ್ಧಿಯನ್ನು ಪಡೆ,-ಹೊಂದು : ಬೆಳ್ಳಕ್ಕರಿಗರ ಕಲ್ಪಿ ತೋರ್ಕೆವಡೆಯದು (ನೀತಿಮಂ. I, ೨೧).
[ತೋರ್ಕೆ + ಪಡೆ$_1$]

ತೋರ್ಕೆವರ್ (ಕ್ರಿ). ಸ್ಪಷ್ಟವಾಗು; ಕಾಣುವಂತಾಗು : ಪದೆದಬ್ಕಱಳುರ್ಕೆ ತೋರ್ಕೆ[ಪಾಠಾಂ. ತೋಳ್ಗೆ]ವಂದೊದವಿರೆ ನಾಣನೊಕ್ಕೆರ್ದೆ ವಿಚಿತ್ರವಿಕಾರ ರಸಾಂತರಂಗದೊಳ್ ಪುದಿದಿರೆ ಮಾಣದಾಡಿಸಿದನಾತನನಂಗಜನೆಂಬ ನಟ್ಟುವಂ (ಆದಿಪು. ೪-೧೫). [ತೋರ್ಕೆ + ಬರ್$_1$]

ತೋರ್ಕೆವೆಱು (ಕ್ರಿ). = ತೋರ್ಕೆಗೊಳ್: ಶರ್ಕರೆಯನು ಪಿಡಿವಾಗಳಂಗೈಯ ಸಂಪರ್ಕದಿ ಸಿಂಧೂರದಂತೆ ತೋರ್ಕೆವೆತ್ತುದು (ಭರಣ. ೧೦-೩೬).

[ತೋರ್ಕೆ + ಪೆಱು$_1$]

ತೋರ್ಕೊಳಿಸು (ಕ್ರಿ). ತೋರಿಸು; ಕಾಣಿಸು; ಪ್ರಕಾಶಪಡಿಸು: ಭೋಗಿಗಂ ಜೋಗಿಗಂ ಕರುಣಿಪನುಭವಮಿಂತಿವೆಂದೆನಗೆ ನಿಖಿಲಮುಮನೊಡನೆ ತೋರ್ಕೊಳಿಸುತ್ತೆ (ಸಂಸಪ. ೨೯-೯).

[<ತೋಱು + ಕೊಳ್$_1$ + – ಇಸು$_3$]

ತೋರ್ತಳದುಳಿ 'ತೊಟ್ಟುಟಿದುಟಿ' ನೋ.

ತೋರ್ಪಡಿಸು (ಕ್ರಿ). ೧. ತೋರಿಸು; ವ್ಯಕ್ತಗೊಳಿಸು; ಪ್ರಕಟಿಸು: ಯೋಗದೊಳಾತ್ಮತತ್ವವೆ ಕಡೆ ದಶವಿಧಭೋಗಕಂಗನೆ ಕಡೆಯೆಂದು ಯೋಗ ಶಾಸ್ತ್ರವ ಭೋಗಶಾಸ್ತ್ರವನೆರಡನು ತೂಗಿ ತೋರ್ಪಡಿಸಿ ಪಾಡಿದಳು (ಭರಣ. ೧೧-೨೬). ೨. ತೋರು; ಪ್ರಕಟವಾಗು: ಸುಸ್ಮೇರಭವದ್ವದನದಾ ಮಿಂಚಂತಿದೆ ನಿರ್ವ್ಯಾಜದಿ ಮನಕದೇಂ ಸಂಶಯಂ ತೋರ್ಪಡಿಸಿತೆನೆ (ಪರಶು. ೧೯-೨೦).

ತೋರ್ಪಡಿಸಿಕೊಳ್ಳು = ೧. ವ್ಯಕ್ತವಾಗು; ಪ್ರಕಟವಾಗು: ತಾನು ಎಂಬುದು ಎರಡು ಸ್ವರೂಪಗಳಲ್ಲಿ ತೋರ್ಪಡಿಸಿಕೊಳ್ಳಬಹುದು (ಇಸ್ಲಾಂಸಂ. ೨೪೨). ೨. ತೋರಿಸು; ವ್ಯಕ್ತಪಡಿಸು: ಅವರು ತಮ್ಮ ಅಂತ್ಯಕಾಲ ಸಮೀಪಿಸಿದೆಯೆಂದು ನಿರ್ಧರಿಸಿದ್ದ ಹಾಗೆ ಕಂಡರೂ ನನಗೆ ಬುದ್ಧಿವಾದವನ್ನು ಹೇಳುವಾಗ ಅದನ್ನು ತೋರ್ಪಡಿಸಿಕೊಳ್ಳಲಿಲ್ಲ (ಚಂಗಾಳ್ಯ. ೧೫೫). [ತೋರ್ಪಡು + – ಇಸು$_3$]

ತೋರ್ಪಡು (ಕ್ರಿ). ೧. ಸ್ಪಷ್ಟವಾಗಿ ಕಾಣು; ತೋರು; ಗೋಚರಿಸು: ಮರಾಳಾವಳಿ ನಗದ ಬಿಲದ್ವಾರದಿಂದೇಳ್ದುದಾಶಾವಳಯಂ ತೋರ್ಪಟ್ಟು ದಬ್ಬಂ ಪಳಚನಲರ್ದುದಬ್ಜಾರಿಬಿಂಬಂ ಕಳಂಕಂ ಕಳಿದತ್ತೆಂಬಂತೆ ನೀಡುಂ ತೊಳಗಿತು ತಿಳಿದತ್ತಾಪಗಾವಾರಿಪೂರಂ (ರಾಜಶೇ. ೬-೨); ಸೊಂಟದಲ್ಲಿ ಧೋತ್ರ ಅಥವಾ ಇತರ ಬಟ್ಟೆಯಿದ್ದಂತೆ ತೋರ್ಪಡಲಿಲ್ಲ (ಕಪಾಕುಂ. ೧೪). ೨. ಮೇಲಾಗು; ಪ್ರಸಿದ್ಧವಾಗು; ಶ್ರೇಷ್ಠವಾಗು: ಶರಣಾ ಹೊಕ್ಕುದು ಬಂದು ಮಕುಟದ ಗರುವರವನೀಪಾಲಕರು ಮೋಹರಕೆ ತೋರ್ಪಟ್ಟವರು ಭಾರಿಯ ಬಿರುದಿನತಿಬಲರು (ಕುಪ್ಯಾದ್ರೋ. ೧೬-೨೦).

[ತೋಱು^{ಅ} (<ತೋಱು) + ಪಡು$_1$]

ತೋರ್ಪು, ತೋಪು$_2$, ತೋವು, ತೋಹು$_2$, ತೋಹೆ (ನಾ). ೧. ಕಾಣಿಸುವಿಕೆ; ತೋರುವಿಕೆ; ಪ್ರದರ್ಶನ: "ತೋರ್ಪೆನೆ ಕಾಣ್ಕೆ" (ರನ್ನಕಂ. ೧೨); "ತೋರ್ಪು ತೋರ್ಕೆಯೊಳಂ ಮಿಗೆ ತೋರ್ಕುಂ" (ಕರ್ಣಾನಿ. ೭); ದೀನನೇತ್ರಂ ತುಷಲಘುತರಮಾತ್ರಂ ಕರಂ ಪೊರ್ದಿ ತೋರ್ಪಿಂ ಜನಮಂ ಬೇಳ್ಪಾಸೆಯಿಂ ಸಾವಿನ ಪರಿಯೆನಿಪೀ ದೈನ್ಯಮಂ ಬಿಟ್ಟು ನಿಮ್ಮಂ ನೆನೆಯುತ್ತಿರ್ಪಂತೆ ಪಂಪಾಪುರದರಸ ವಿರೂಪಾಕ್ಷಂ ರಕ್ಷಿಪ್ಪುದೆನ್ನಂ (ರಕ್ಷಾಶ. ೨೧); ತೋರ್ಪೆಂದು ತೋರ್ಕೆ (ತೋರ್ಪೆ) (ಶಮದ. ೧೧೫). ೨. ಆಕಾರ; ಸ್ವರೂಪ. 'ತೋರ್ಪುಗೆಡು' ಪರಾ. **ತೋಪು$_2$**: ೧. ವ್ಯಾಪಿಸಿಯೆ ನೀವ್ ಮಲ್ಲವಿದ್ಯೆಯ ತೋಪ ಮೆಱೆವುದು ಭೀಮನಿದ್ದರೆ ಆ ಪುರ ದೊಲೊತ್ತೊತ್ತಿ ಹೊಗಳಿಸಿ ನಿಮ್ಮ ಬಿರುದುಗಳ (ಕುಪ್ಯಾವಿ. ಓರಿಇ. ೪-೧೪). ೩. (ಬೇಟೆಯಲ್ಲಿ ಒಡ್ಡುವ) ಆಕರ್ಷಣೆ; ಆಮಿಷ; ಆಕರ್ಷಕ ವಸ್ತು ಧರಣೀಪತಿ ಚಂಡಶಾಸನಂಬೆರಸು ವನಾಂತದೊಳ್ ತೆರೆಯ ತೋಪಿನ ಸೋಹಿನ ನೀರ ಬೇಂಟೆಯುರ್ವರೆಗಳನೀಕ್ಷಿಸುತ್ತೆ ಬರೆ (ಅನಂಪು. ೧೧-೪೦); ಸೋಪಿನ ತೋಪಿನ ಪಳಹದ ಕೋಪಿನ ಪಾಳಿವದ ಗೋರಿವೇಂಟೆಗೆ ಮತ್ತಂ ಚಾಪ ಪ್ರವೀಣರುದ್ಗತಕೋಪರ್ ನಡೆತಂದರಲ್ಲಿ ಮುಂದೆ ಪುಳಿಂದರ್ (ಸೂಕ್ತಿಸು. ೩-೧೦೪). **ತೋವು**: 'ತೋವಿಕ್ಕು' ಪರಾ. **ತೋಹು$_2$**: ೩. ತೋಹಿನಶಬರನಂತೆ ಲಾಗಿನ ವ್ಯಾಘ್ರದಂತೆ ಆಡುವ ವಿಧಾನದಂತೆ ಇಂತೀ ವೇಷ ಸಹಜ (ಮೋಳಿಮಾ. ೩೪-೧೪೧); ಜಾಳವಣಿಗಳ ಬಲೆಯ ಠಕ್ಕಿನ ಠೌಳಿಗಳ ತೋಹುಗಳ ನಗೆಗಳ ಮೇಲುಮುದ್ದಿನ ಬೇಟೆಕಾತಿಯರೈದಿದರು ವನವ (ತೊರರಾ. ೧-೫-೩೯). ೪. ಬೇಟೆಯ ಸ್ಥಳ; (ದೀವದ ನೆರವಿನಿಂದ) ಬೇಟೆಯಾಡಲು ವನ್ಯಮೃಗಗಳನ್ನು ಆಕರ್ಷಿಸುವ ತಾಣ: ನಿಂದು ಬೇಡರ ತೋಹು ಸೋಹುಗಳ ಸಂದಿಯೊಳು (ಕಣ್ಣರ. ಬೇ. ೧೨೭-೨೦); ಬೆಳ್ಳಾರ ಬಿಗಿ ತೋಹಿನೊಳು ನಿಲ್ಲು ತಿಱಿಯಂಬ ಬಿಡು (ಹಡಕಾ. ೫-೨೪); ಪುಳಿಂದರು ಬಳಸಿ ಬೇಂಟೆಯನೆಯ್ದಿ ಬನದೊಳು ತೋಹಿನಲ್ಲಿರ್ದು (ಬಸಪು. ೧೯-೨); ಸಿಂಹಳದ್ವೀಪದಿಂದೆಮ್ಮ ತೋಹಿಂ ಗೊಂದು ಸಿಂಹಮಾಟೋಪದಿಂ ಬರಲ್ (ಭಾವಚಿಂ. ೫-೧೨); ಹೋಯೆನ್ನಸು ಮಿಗ ತೂಣನ ತೋಹಿಗೆ ಸಿಲ್ಕದೆನುತ್ತುಂ ನಿಷ್ಠೆಯ ನೇಹದ ಸಾಹಸಿಗಂ ಶಂಕರನಳ್ಕಱ ಪೂಜೆಗೆ ಸಲ್ವಂ (ಉದ್ಭದೇ. ೩-೪೩); ಉದಕಮಂ ಕೊಳಬಂದ ಮೃಗಗಳ ಬೆದರದಂತೆಸೆಯಲ್ಕೆ ತೋಹಿನ ಹೊದರಿನೊಳು ಕಾದಿರ್ದ್ ಚಾಪಾಸ್ತ್ರಗಳ ಕೈಕೊಂಡು (ಅನಂರಾ. ೨-೩-೭). ೫. ಕಪಟ; ಮೋಸ: ಯುಧಿಷ್ಠಿರಾನಾಳ್ವ ದೇಶದೊಳ್ಳಳವು ಕೋಲೆ ಪಾದರಂ ಪುಸಿ ನುಸುಳು ವೈರಮಟ್ಟುಳಿ ತೋಹು ಬೆದಱು ಬೆಜ್ಜರ . . . ಅಲಸಿಕೆ ಕರ್ಕಶಂಗಳಿವು ಮೊಳೆದೋಱವು (ಜೈಮಿಭಾ. ೨-೫). ೬. ಗುರಿಯಿಡುವಿಕೆ; ಸಂಧಾನ ಮಾಡುವುದು: ಬಳಿಕ ನೂಱು ನಿರಂತರಸ್ತ್ರಾವಳಿವಿಘಾತಿಗೆ ನೂಱು ಲೆಕ್ಕವ ಕಳೆದವಿನ್ನೂಱಾನೆ ಪಾರ್ಥನ ಕೋಲ ತೋಹಿನಲಿ (ಕುಪ್ಯಾಗೆ. ೧-೧೦); ಚೂರಿಸುವ ಮೊಗಸೂನಿಗೆಯ ಕೊಲ್ಲಾರಿಗಳ ಶರಬಂಡಿಗಳ ಹೊಂದೇರು ಕವಿದುವು ಕೋಲ ಕೋಲಾಹಲದ ತೋಹಿನಲಿ (ಕುಪ್ಯಾಶ. ೨-೪೪); ಬಿಲ್ಲ ತಿರುವಿನ ಕೋಲ ತೋಹಿನ ರಾಮನಿದ್ದನು ನೋಡುತಾಹವವ (ತೊರರಾ. ೪-೩-೧೫); ಪತ್ತು ರಥಂಗಳಾ ಪೆಸರ ಭೂಪನು ಭಾವಿಗೆ ತೋಹನಿಕ್ಕಿ ನೋಡುತ್ತಿರೆ (ಪಂಚಶ. ೭೧-೪೦). ೭. ನೇತೃತ್ವ: ಮುಂದಾಳುತನ; ಮಾರ್ಗದರ್ಶನ: ಮನುಮುನಿಯತಿವ್ರತಿಗಳೆಲ್ಲರು ನಿಮ್ಮ ತೋಹಿನೊಳಗಿದ್ದರು (ಚನ್ನವ. ಕ. ೩೯೩-೮೩೪); ಘನ ರೌದ್ರಮಯ ದುಗ್ಗಡದ ರಕ್ಕಸಸೇನೆ ನಿಂದುದು ಖಳನ ತೋಹಿನಲಿ (ತೊರರಾ. ೬-೧೯-೧೬). **ತೋಹೆ**: ೩. ಕರೆಸಿದಡವರು ನಿಲ್ಲರು ತೋಹೆ[ಪಾಠಾಂ. ಗೋರಿ] ಯಲಿ ಬಳಿಸಂದ ಮೃಗದಂತೆ (ಕುಪ್ಯಾಸ. ೧೨-೬೮).

ತೋಪಿನ ಬೇಟೆ = ತೋಹುವೇಂಟೆ: ಪಾಂಡುರಾಜನಧಿಕತೇಜನುಂ . . . ಒಂದು ದಿವಸಂ ತೋಪಿನ ಬೇಂಟೆಯನಾಡಲಟ್ಟಿಯೆ ಪೊಱಗಿ (ಪಂಪಭಾ. ೧-೧೧೦ ವ). [ತೋಱು^{ಅ} (<ತೋಱು) + – ಪು$_2$]

ತೋರ್ಪುಗೆಡು (ಕ್ರಿ). ಗಾತ್ರ ಕಳೆದುಕೊಳ್ಳು; ಕುಗ್ಗು: ತನ್ನ ಪಕ್ಷಂ ಸತ್ತೊಡಂ ಮಾತು ಸಾಯದೆ ತೋರ್ಪುಗೆಟ್ಟೊಡಂ ಕೂರ್ಪುಗಿಡದೆ ತೇಜಂ ತೊಲಗೆಯುಮಾಯು ತೊಲಗದೆ (ಶಾಂತಿಪು. ೪-೩೨ ವ).

[ತೋರ್ಪು + ಕೆಡು$_1$]

ತೋರ್ಮಲ್ಲಿ 'ತೋರಮಲ್ಲಿ' ನೋ.

ತೋಲ್$_1$, ತೊಗಲ್, ತೊಗಲು, ತೊವಲ್$_3$, ತೊವಲು, ತೋಲು$_1$, ತೋವಲ್ (ನಾ). ೧. ಚರ್ಮ; ಚಕ್ಕಳ; ತ್ವಕ್ಕು: "ತ್ವಚಮಜಿನಾಸೃಗ್ಧರೆ ಕೃತ್ತಿ ಚರ್ಮಮೆನೆ ತೋಲ್ ತ್ವಗಾಹ್ವಯಂ" (ವಸ್ತುಕೋ. ೭೨-೨೮); ಸಿಡಿಲಂತೊರ್ಮೆಯೆ ಪೊಯ್ಯೆ ಪೊಯ್ದ ಭರದಿಂದೊಂದಾನೆ ತೋಲ್ ನೆತ್ತರೆಲ್ವಡಗೊಂದೊಂದಱೊಳೊಂದುಮೊಂದದೆ ಗದಾನಿರ್ಘಾತದಿಂ ಮಾಯಮಾದೊಡೆ (ಪಂಪಭಾ. ೧೦-೧೦೫); ಕರಡಿಯ ತೋಲಂ ಕಜ್ಜಲ ಪರಾಗದಿಂ ಪೊರೆದು ಪಿರಿದು ಜೇನೆಯ್ಯೊಳ್ ತಂದಿರಿಸಿದವೊಲ್ (ಶಾಂತಿಪು. ೮-೧೨೭); ಗಜಂ ಹತಪಾದುದಿಂದು . . . ಅದಱ ತೋಲೊಳ ಮೆಲ್ವಿನೊಳಪ್ಪುದಿಲ್ಲ ತತ್ಸಾರಧನಂ (ಜಗವಿ. ೬-೬೧); ತೋಲಂ ಕರ್ಚುತೆ ನಲಿವ ಸೊಣಗಂ (ನೀತಿಮಂ. I, ೩೦೫). **ತೊಗಲ್**: ೧. "ಚರ್ಮ ತ್ವಚಂ

ಕೃತ್ತಿ ಅಜಿನವದಸೃಗ್ಧರೆಯೆನಲು ತೊಗಲಕ್ಕು" (ಮಂಗರಾ. ೧೦೬-೩) ; ತಪೋದಾನಶೀಲವ್ರತೋಪವಾಸಾದಿಗಳಿನೆಲ್ಲುಂ ತೊಗಲುಮಾಗಿರ್ಪರ್ (ಶಾಂತಿಪು. ೯-೧೨೮ ವ) ; ಕೆರ್ಪಿನಂತೆ ತೊಗಲನುಳ್ಳುದು ಬೀಣೆಯಂತೆ ನರದೊಳ್ ಕೂಡಿದುದು (ಧರ್ಮಾಮೃ. ೪-೧೭೫). **ತೊಗಲು** : ೧. ಸುಗಿದ ತೊಗಲೇಅದೆಗೆದಳ್ಳೆ ದಿಗ್ವಸನವೆತ್ತಿದ ಕತ್ತಿಯೊಡ್ಡಿದ ಕಪಾಲವೆರಸು . . . ಕಾಳರಕ್ಕಸಿ ಬರುತ (ಸಿದ್ಧರಾ. ೬-೧) ; ಅಂಗುಳಂಗಳ ಸಂದಿಗಳ ಕಳೆಯಿಂಗಿ ನೆತ್ತರು ಸತ್ತ ತೊಗಲ ನರಂಗಳತಿದುರ್ಗಂಧವಾಗಳು ನಾರ್ವ ಬಾತೊಡಲ (ಬಸಪು. ೪೬-೫೮) ; ತೊಗಲು ಸಡಿಲಿದ ಗಲ್ಲ ಬತ್ತಿದ ಹೆಗಲು ನಱುಕಿದ ನೆರೆತ ಮೀಸೆಯ . . . ಮುಪ್ಪಿನ ಮುಗುದನೀತನು (ಕುಮ್ಯಾಭೀ. ೧-೩೫) ; ಉಡಲುಬಹುದೇ ತೊಗಲು ನನ್ನೀಯಡಗು ಬೋನಕ್ಕಹುದೆ (ಕೌಶಿರಾ. ೮-೩೩) ; ತೊಗಲಿನ ದೇಹಕೆ ಗೋಪಿಗಂಧ ತೇದುಕೊಂಡು (ಪುರಂದ. ೨-೬೪-೨) ; ತೊಗಲು ಸಡಲಿ ಮುಪ್ಪು, ಹಗಲು ಸಡಲಿ ಇರುಳು (ಗಾದೆ) ; ನಾಯಿ ಬಲ್ಲದು, ತೊಗಲು ಬಲ್ಲದು (ಗಾದೆ). **ತೊವಲ್$_3$** : ೧. "ಅಸೃಗ್ಧರಃ, ಅಜಿನಂ, ಚರ್ಮ,ಕೃತ್ತಿಃ, ತ್ವಕ್ — ಈ ೫ ತೊವಲ್" (ಹಲಾಯು. ೧೦೪-೮) ; ಪುಲಿಯ ತೊವಲ್ಗ [ಪಾಠಾಂ. ತೋಲ್ಗ] ಳುಮಂ ಚಮರಿಗಳುಮಂ ಕೊಂಡು ಬಂದು (ವಡ್ಡಾರಾ. ೧೬೩-೧೫) ; ಪಸಿಯ ತೊವಲ ತಿದಿಯೊಳ್ ಪುದಿದು ಪುಟಪಾಕಂ ಸುಡುವರುಂ (ಆದಿಪು. ೫-೮೫ ವ); ಕರಡಿಯ ತೊವಲಂ ಕಾಡಿಗೆಯೊಳರ್ದಿ ವಿಧಾತ್ರಂ ಲೋಕಮಂ ಬಾಸಣಿಸಿದ ನೆಂಬಂತಪ್ಪ ಕತ್ತಲೆಯೊಳ್ (ಧರ್ಮಾಮೃ. ೧೩-೨೦) ; ಜೋಲ್ವ ಪುರ್ವಿಂ ನೇಲ್ವ ತೋಳ ತೊವಲಿಂ ಇಟ್ಟ ವಿಭೂತಿಯಿಂ (ನಂಬಿರ. ೬-೩೪); ಎಲುವ ನಾಯಿಗೆ ಹೊಲೆಯಗಂ ಮಾಂಸವನು ಮಚ್ಚಿಗಗೆ ಬಳಿಕ ತೊವಲೆಂಬಂತೆ ಮುಳಿಸಿಂ ಕೆಲಕೆ ಬಿಸುಡುವಂ (ಬಸಪು. ೨೦-೪೪). 'ತೊವಲ್ವೊದೆಯ, ಪರಾ. ೨. ಮರ, ಗಿಡ ಮೊದಲಾದುವುಗಳ ತಿಗುಡು: ತೊಗಟೆ : ತವಸಿಯ ತೊವಲೊಳಗೆ ಪುನರ್ನವಿಯುಮಂ . . . ಲೊಕ್ಕಿಯುಮಂ ಸವನಾಗಿ ಕೂಡಿಕೊಳ್ವುದು (ಅಶ್ವಶಾ. ೭-೩೩). ೩. ಕಿತ್ತಲೆ ಮುಂತಾದ ಹಣ್ಣಿನ ಕವಚ,—ಸಿಪ್ಪೆ. **ತೊವಲು** : ೧. ಬಲ್ಲಿದ ನರಹರಿಯ ತೊವಲು ಕರಿಗಜಾಸುರನ ತೊವಲು ಕರಿಪುಲಿದೊವಲ ನುಟ್ಟು ಹೊದ್ದ . . . ಕಟ್ಟುಗ್ರ(ನ?)ಲಾ (ಸರ್ವವ. ೧೬೬-೭೮೬) ; ಪುದಿದ ತೊವಲ ಕಂಡ ಮಿದುಳೆಲು ನರಗಳಿಂದೊದವಿದೊಡಲ ನೆನೆ ದೊಱಲುವುದು (ಗೀತಗೋ. ೫೬-೧) ; ತೊವಲು ಕೊಂಬುಗಳನ್ನು ಧರಿಸಿ ಯಜ್ಞದೀಕ್ಷೆಯನ್ನು ಹಿಡಿಯುವ ದುರ್ಮತಿಗಳೂ ಉಂಟೆ, ನಿನ್ನನ್ನು ಕಂಡ ಬಳಿಕ (ಬಿದುರಿ. ೧೩೪). 'ಗಂಗೆದೊವಲ್' ಪರಾ. **ತೋಲು$_1$** : ೧. ಸುರಿವ ರಕ್ತದಿ ತೋಲು ತೋದುದು ಸಾರಥಿ ತಿರುಗಿಸಿದನು ಬೇಗಾ ರಥವ (ಅಭಿಕಾ. ೧೨) ; ಗೋಳುಮೋರೆಯ ಜೋಲುತೋಲಿನ ಜೂಲು ಅರಿವೆಯ ತಿರುಕ (ಕಗದ್ಯ. ೭೪). **ತೋವಲ್** : ೧. ಭಾಗದ ತೋವಲಕ್ಕೆ ಕಡುಕರ್ಪೆಸವೆಟ್ಟಿನ ಗಂಗೆದೋವಲಕ್ಕಾಗಳೆ ಕೊಂಡು ಪುಣ್ಯದಿನದೊಳ್ . . . ಸುತ್ತಿ ಕಟ್ಟೆ (ಲೋಕೋಪ. ೬-೪೧).

ತೊಗಲ ಚಲ್ಲಣ = ಚರ್ಮದ ಚಲ್ಲಣ,—ಉಡುಪು : ತೊಗಟೆ ಕುಪ್ಪಸ ತೊಟ್ಟು ತೊಗಲ ಚಲ್ಲಣ ಉಟ್ಟು (ಹೆಬ್ಬೆರ. ೨೮-೮೯). **ತೊಗಲ ಚಿಗರಿ** = ತೊಗಲ ಬಾವಲಿ : ತೊಗಲ ಚಿಗರಿಯನ್ನಂತೆತ್ತಿದನೆ ? ಅವನೆ ಬಿಲ್ಲಾಯ್ತ ರಲಿ ಗಡ ಪಿನಾಕಿ (ಹೆಬ್ಬೆರ. ೩-೨೫). **ತೊಗಲ ಚೀಲ** = ಶರೀರ ; ದೇಹ : ತೊಗಲ ಚೀಲದಲ್ಲಿ ಪರಶಿವನಿದ್ದಾನೆಂದು ಪೊಡವಿಯ ಮೃಡಭಕ್ತರೆಲ್ಲ ನುಡಿವುತಿಪ್ಪರು (ಮೋಳಿಮಾ. ೩೩-೧೩೯). **ತೊಗಲ ತಿತ್ತಿ** = (ದ್ರವ ಪದಾರ್ಥಗಳನ್ನು ತುಂಬುವ) ಚರ್ಮದ ಚೀಲ : ಮದ್ದಿನ ಸುರೆಯ ತೊಗಲ ತಿತ್ತಿಯಲ್ಲಿ ತುಂಬಿ ಒಪ್ಪದಲ್ಲಿ ನಿಲಿಸಲಿಕೆ ಅದು . . . ಅಪ್ಪಳಿಸಿ ಬೀಳೂದ ಕಂಡೆ (ಸರ್ವವ. ೧೪೩-೭೦೩). **ತೊಗಲ ಬೊಂಬೆ, ತೊವಲ ಬೊಂಬೆ** = ಚರ್ಮದ ಗೊಂಬೆ : ಚಿತ್ರವಿಚಿತ್ರ ವಿನೋದದಾಟವನು ಜಂಗಮ ಮುಂತಾಗಿ ನೋಡದೆ ತಾ ನೋಡಿದನಾದಡೆ ತೊಗಲ ಬೊಂಬೆಯ ನೋಡಿದ ಸಮಾನ (ಚನ್ನವ. ಕ. ೧೩೪-೨೮೧) ; ವಿಶ್ವಪತಿಯಾಡಿಸಿದೊಡಾ ಡಿದರಲ್ಲದಕಟ ಪರಿಕಿಪೊಡೀ ತೊವಲ ಬೊಂಬೆಗಳ್ ತಾಮೆಯಾಡಲ್ ಸ್ವತಂತ್ರಮೇ (ಪದ್ಮರಾ. ೬-೨೨). **ತೊವಲ್ನಾರು** = (ಜಿಂಕೆಯ) ಚರ್ಮ ಮತ್ತು ವಲ್ಕಲ ; "ತೊಗಲು ನಾರು" (ಪಂಪದೀ. ೨೫೪) ; ಆ ದುಶ್ಶಾಸನನಿಂದೆನಗಾದ ಪರಾಭವಮನೇನುಮಂ ಬಗೆಯದೊಡಿಂತಾದರಮೆ ತೊವಲ್ನಾರುಮನಾದರದೇ[ಂ] ನಿನ್ನ ಮನಕೆ ಚಿಂತೆಯುಮಿಲ್ಲಾ (ಪಂಪಭಾ. ೭-೪೯). **ತೋಲ ಬಾವಲಿ, ತೊಗಲ ಬಾವಲಿ, ತೊಗಲ ಬಾವುಲಿ** = ಒಂದು ಬಗೆಯ ಪಕ್ಷಿ ; ತೊಗಲು ಹಕ್ಕಿ ; ತೊಗಲು ಬಾವಲಿ : ಆ ದೇವಸ್ಥಾನದ ತುಂಬ ತೋಲ ಬಾವಲಿಗಳು ಸೇರಿಕೊಂಡಿವೆ (ರೂಢಿ) ; ಅಲ್ಲಿ ತೊಗಲ ಬಾವಲೀ ಚೀರತಾವ ಭರತಿ ಹಗಲಿನೊಳಗ (ಗಂಗಾತ. ೮೭-೧೩) ; ಇಂಥ ತೊಗಲ ಬಾವಲಿಗಳಿಗೆ ಸತ್ತ ಮೇಲೆ ಯಾವ ಪ್ರತ್ಯೇಕ ಸ್ಥಳದ ವ್ಯವಸ್ಥೆಯಾಗಬೇಕು (ರಕ್ತಧ್ವ. ೧೦೦) ; ನವಿಲು ಮಂಗ ತೊಗಲ ಬಾವುಲಿ ಮುಂತಾದ ಪ್ರಾಣಿಗಳು ಮನೆ ಮಾಡಿಕೊಂಡು ಇರುತ್ತವೆ (ಮುಂಬಯಿ. ೨-೩೦).

[ದೇ.॥ ತಮಿ. ತೋಲ್, ತೊಲಿ ; ಮಲ. ತೋಲ್, ತೊಲಿ, ತುಕಲ್ ; ತುಳು. ತುಗಲ್, ತೊಲಿಕೆ ; ಕೊಡ. ತೊಲಿ ; ತೆಲು. ತೋಲು ; ಕೊಲಾ, ನಾಯ್ಕಿ. ಪರ್ಜಿ. ಗಡಬ. ಗೊಂಡಿ. ತೋಲ್ ; ಕುವಿ. ತೋಲು./ಸಂ. ತ್ವಕ್]

ತೋಲ್$_2$ 'ತೊವಲ್$_2$' ನೋ.

ತೋಲ್$_3$, ತೋಲು$_2$ (ನಾ). ದಾರಿ ; ಮಾರ್ಗ: "ದಾರಿ ಕಡವಸಗಳೊಳ್ ತೋಲ್ [ಪಾಠಾಂ. ತೊಗಲ್]" (ಶಬ್ದಮಂ. ೧೦೭). **ತೋಲು$_2$** : ಒರ್ಮೆ ದೇಂಟೆಗೆ ವನಚರರ್ಪೋದ ತೋಲಿನೊಳಗೊರ್ಮೊರ್ಮೆ ನಡೆದು ನಿಜಪುರದ ಪಾಂಥದ ಹೊಲಬನೊರ್ಮೆಯುಂ ಕಾಣದೆ (ಸಮ್ಯಕೌ. ೧೦-೪೧).

[ದೇ.॥ ತೆಲು. ತ್ರೋವ]

ತೋಲ (ನಾ). ೧. ತೂಕ; ಭಾರ: ಚಂದನದ ಕೊರಡುಗಳು ಕೆಂಪಾಗಿಯೂ ತೋಲವಾಗಿಯೂ ಸುಗಂಧವಾಗಿಯೂ ಇದ್ದ ಹಾಗೆ ಹೆಚ್ಚು ಬೆಲೆಗಾಣು ತ್ತವೆ (ಮುಂಬಯಿ. ೩-೭೮). ೨. (ಚಿನ್ನ, ಬೆಳ್ಳಿ ಮುಂತಾದ ಲೋಹ ಗಳ) ತೂಕದ ಪ್ರಮಾಣ ; ಒಂದು ರೂಪಾಯಿ ತೂಕ ; ತೊಲ : (ಕಿ). ೩. ಸಮಸ್ಥಿತಿ ; ಸಮತೋಲನ : ಮೈಯ ತೋಲ ತಪ್ಪಿತು (ಕುಡಿಕೂ. ೩೮) ; ಈ ತ್ರಾಸುಗಳಲ್ಲಿ ಕಡಿಮೆ ತೂಕದ ಕಲ್ಲು ಗಳಿಂದಲೂ ಭಾರವಾದ ಪಾತ್ರೆಗಳನ್ನು ಎತ್ತಿ ತೋಲದಲ್ಲಿರಿಸಲು ಬರುವುದು (ಜಾಲಪ್ರ. I, ೩೩೭). ೪. ಸಮಾನವಾದ ಆಕಾರ ; ಪ್ರಮಾಣ ಬದ್ಧತೆ : ನಿತ್ಯ ಬಳಸುವ ಕಲ್ಲು ಗಾರೆಗಳಿಂದ ಅದನ್ನು ನಿರ್ಮಿಸಿದ್ದರೂ ಅದರ ವಾಸ್ತುರಚನೆಯಲ್ಲಿ ಕಾಣುವ ವೈಖರಿ, ತೋಲ, ಇಕ್ಕಡೆಯ ಮೇಳ-ಬಲು ಚೆನ್ನಾಗಿವೆ (ಆಬೂಬ. ೧೦೪). [ಸಂ.]

ತೋಲಂಗಿ (ನಾ). ತೊಗಲಿನ ಅಂಗಿ : ಪುಲಿ ಚಿರತೆ ಮಿಗದ ತೋಲಂಗಿ ಸಿಂಗರಗೈದ ನವಿರಿಡಿದ ಮೆಯ್ಯ, ಬಣ್ಣದ ನಾರ್ಗಳಿಂ ಸಮೆದ ವಸ್ತ್ರದಿಂ ಶೋಭಿಸುವ ಮಲ್ಲಗಚ್ಚೆಯ ... ಸಿಡಿಲಾಳ್ಗಳ್ (ಶ್ರೀರಾಮಾ. ೨೯೧-೧೭೫).

[ತೋಲ್$_1$ + ಅಂಗಿ$_2$]

ತೋಲನ (ನಾ). ೧. ತೂಕ ಮಾಡುವುದು ; ತೂಗುವುದು ೨. ಆಯ ; ಸಮ ತೂಕ : ಆಸ್ಪತ್ರೆ ಮತ್ತು ಬಂಗ್ಲೆಗಳು ಅವಳ ಸ್ಮೃತಿಯಲ್ಲಿ ಬಂದು ಅವಳ ಚಿತ್ತತೋಲನವನ್ನು ತಪ್ಪಿಸುತ್ತಿದ್ದುವು (ವಂಶವೃ. ೩೭೮). ೩. ಹೋಲಿಕೆ ; ತಾಳೆ; ಸಾದೃಶ್ಯ: ಸಂವಿಧಾನದ ವಿವಿಧ ಭಾಗಗಳ ತೋಲನ ವನ್ನು ಕುರಿತು ನಾಟಕದ ತಂತ್ರದ ಬಗೆಗೆ ಪ್ರಸ್ತಾಪಿಸುವಾಗ ಹೆಚ್ಚು ಹೇಳುತ್ತೇವೆ (ಸಾಹಿಪ್ರ. ೧೩೫); ಈಚೆಲು ಹುಳುವನ್ನು ಸುಟ್ಟು ಬೂದಿ

ಮಾಡುವ ಸಣ್ಣ ಮಣ್ಣುಹಣತೆಯ ದೀಪವನ್ನು, ಪಟ್ಟಣವನ್ನೇ ದಹಿಸಿ ನಾಶಮಾಡುವ ಉರಿಗೆ ತೋಲನಮಾಡಿದರೆ ಹೇಗೋ ಹಾಗೆ (ಕ್ರೋಡಿರ್ಗಿ-೯೩). ೪. [ನಾಟ್ಯ] ಇಪ್ಪತ್ತು ಬಗೆಯ ಹಸ್ತವಿನ್ಯಾಸಗಳಲ್ಲಿ ಒಂದಂ: ಧೂನನ, ಶ್ಲೇಷ, ವಿಶ್ಲೇಷ . . . ವಿಕೃಷ್ಟಿ, ತಾಡನ, ತೋಲನ [ಪಾಠಾಂ. ತೋದನ, ದೋಡನ] ಛೇದ, ಭೇದ, ಸ್ಫೋಟನ, ಮೋಟನ, ವಿಸರ್ಜನ, ಆಹ್ವಾನ, ತರ್ಜನ ಈ ಇಪ್ಪತ್ತು ಕರಕರ್ಮ ಭೇದಂಗಳ್ (ಲಾಸ್ಯರಂ. ೪-೧೩ ವ). [ಸಂ.]

ತೋಲನಯಂತ್ರ (ನಾ). ತೂಕವನ್ನು ತೋರಿಸುವ ಯಂತ್ರ: "ತೋಲನಯಂತ್ರ, ಸಮತೋಲಕ" (Balance. ಪತ್ರಿನಿ. ೮).

[ತೋಲನ + ಯಂತ್ರ]

ತೋಲಾಟ (ನಾ). ಖಡ್ಗಯುದ್ಧ ಒಂದು ಪಟ್ಟು,-ವರಸೆ: ಮೊದಲು ನಿಲ್ಲುವ ಕಡೆಯಲ್ಲಿಯೇ ನಿಂತು ಯರಡು ಪಾದಗಳ ಮುಂದುಗಡೆಯಲ್ಲಿ ಹಿಂದುಗಡೆಯಲ್ಲಿ ದಾಟುವುದು ಅವದುಂಟು ಅದು ತೋಲಾಟಯಂದು ಸಮ್ಮತವು (ಖಡ್ಗಟೀ. ೫-೧೫). [?]

ತೋಲು$_1$ 'ತೋಲ್$_1$' ನೋ.

ತೋಲು$_2$ 'ತೋಲ್$_3$' ನೋ.

ತೋಲು$_3$ (ನಾ). ಸಮಸ್ಥಿತಿ; ಸಮತೋಲನ: ಜೋಲಿ ಹೋದಾಗ ಆದಿರಿ ಕೋಲು ಹಿಡಿದಿರಿ ನಮ್ಮ ತೋಲು (ಹಾಡುಪಾ. ೪೧-೧೦).

[< ಸಂ. ತೋಲ]

ತೋಲುಡೆ, ತೊಗಲುಡೆ, ತೊವಲುಡೆ (ನಾ). ಚರ್ಮದ ಉಡುಗೆ: ಬಿಡದೆ ತೊಡಂಕಿ ತೋರ್ಪ ಜಡೆ ತೋಲುಡೆ ಪೂಸಿದ ಬೂದಿ (ಉಮಾಶ. ೨೯). **ತೊಗಲುಡೆ**: ತೊಗಲುಡೆಯ ತೆಗೆದಿಟ್ಟು . . . ಪೋದರಾಳುಗಳು (ಕಾಲೂರ. ೯೦-೧೭೫). **ತೊವಲುಡೆ**: ಪಿಡಿದ ಬಿಲ್ಲುಗಳಿಂದುಟ್ಟ ತೊವಲುಡೆ [ಪಾಠಾಂ. ತೊವಲುಡಿಗೆ]ಗಳಿಂ . . . ಬೇಡವಡೆ ಕೂಡೆ (ನಂಬಿರ. ೧೮-೩೦); ಮಿತ್ರನು ಧನಪತಿಯಾದರು ಶಂಕರ ತೊವಲುಡೆಯಾಂತನು ತಾನು (ಇಂಜಾಪ. ೧೬೩-೪). [ತೋಲ್$_1$ + ಉಡೆ$_2$]

ತೋಲುತಪ್ಪು (ಕ್ರಿ). ತೂಕ ತಪ್ಪು; ಸಮತೋಲನವನ್ನು ಕಳೆದು ಕೊಳ್ಳು: ತೋಲುತಪ್ಪಿತೊ-ಚೀರು, ಎದೆಯೊಡೆವ ಅಳು, ಕುದಿತ, ಮಿಡಿತ (ನವ್ಯಧ್ವ. ೩-೩). [ತೋಲು$_3$ + ತಪ್ಪು$_1$]

ತೋಲೆ, ತೋಳೆ (ನಾ). ೧. ಬಾವಲಿ; ಕಣ್ಕಪಟ: ತೊಗಲ ಬಾವಲಿ, ತೋಲೇಹಕ್ಕಿ; ಕಣ್ಕಪಟ (ನಮ್ಮನು. ೨೩೯). ೨. ಕಣ್ಣಿನ ಪೊರೆ: (ಕಿ). **ತೋಳೆ**: ೧. ಸ್ಪರ್ಶರಸ ಗಂಧ ರೂಪುಗಳೆಂಬೀ ನಾಲ್ಕುಮನಱಿವ . . . ತೊನಸಿ ತೋಳೆ ತೋಲೆ ಕೊಲಿಗ ಮಿಸಿರಿಕೆ ಪಚ್ಚೆ ಮಿಡುತೆ (ಪಸಾರ. ೪೯); ತೋಳೆಯ ಹಿಂಡು ಕವಿದರೆ ಕರಿಗೆ ಕಳವಳವೇ (ಕೌಶಿರಾ. ೩೩-೨೦); ಎದ್ದ ತೋಳೆಯ ಹಿಂಡನಗಲಕೆ ಹದ್ದು ಬಡಿದಂದದಲಿ (ನಿಭಾಗ. ೪-೯-೧೭).

[< ತೋಲ್$_1$]

ತೋಲ್ಗಟ್ಟು (ಕ್ರಿ). (ಮುಂಗೈಗೆ) ಚರ್ಮವನ್ನು ಕಟ್ಟು: ಹಾರಾದ್ಯಾ ಭರಣಂಗಳನೊಲ್ಲದೆ ತೋಲ್ಗಟ್ಟಿ (ಧರ್ಮಾಮೃ. ೭-೬೩).

[ತೋಲ್$_1$ + ಕಟ್ಟು$_1$]

ತೋಲ್ದಪ್ಪು (ಕ್ರಿ). ದಾರಿ ತಪ್ಪು; ಮಾರ್ಗ ಬಿಡಂ: ತೋಲ್ದಪ್ಪಿ ಕೇಡುಗಳ ಬಳಿವಿಡಿಯಲೆಳಸುತಿಹ ಮಾಲಿಸುವ ಕವಲ್ಗಳಳಿಮಾತುಗಳನುಗಿದಂ (ಕಾಲೂರ. ೧೨೭-೨೬೯). [ತೋಲ್$_3$ + ತಪ್ಪು$_1$]

ತೋಲ್ಪಂಜರ (ನಾ). ತೊಗಲಿನ ಗೂಡು; ಚರ್ಮದ ಪಂಜರ: ಚಂಡಾಲರ ಕಯ್ಯೊಳ್ಬೀಟ್ಟ ತೋಲ್ಪಂಜರದ ಪಡಕೆಯೊಳ್ನಿಲ್ವ ದುರ್ವಾರದುಃಖೋತ್ಕರ ಮೆ[ಲ್ಲಂ ನೋಡ] ಲೆನ್ನಿಂದ್ರಿಯನಿವಹದ ದೋಷಂ ದಲ್ (ಕಾದಂಉ. ೭೫೪). [ತೋಲ್$_1$ + ಪಂಜರ$_1$]

ತೋಲ್ವಾವಲ್, ತೊಗಲುಬಾವಲಿ (ನಾ). (ದೊಡ್ಡ ರೆಕ್ಕೆಗಳುಳ್ಳ) ಮರ, ಗಿಡಗಳಿಗೆ ನೇತು ಬೀಳುವ ಒಂದಂ ಬಗೆಯ ಪಕ್ಷಿ: ಕಾವುದು ದೇವ ಯಾಚಕನನಂಜದಿರೇಕೆ ನೇಲ್ವ ತೋಲ್ವಾ[ಪಾಠಾಂ. ಳ್ವಾ]ವಲೊ ಮತ್ತವಾರಣದ ಸೊಂಡಲೊ (ಲೀಲಾವ. ೨-೧೦೮). **ತೊಗಲುಬಾವಲಿ**: ತೊಗಲುಬಾವಲಿ ಮರದ ಜೋಲು ತೊಗಟೆ (ನವ್ಯಧ್ವ. ೮೭).

[ತೋಲ್$_1$ + ಬಾವಲ್ (<ವಾವಲ್)]

ತೋಲ್ವಿಡಿ 'ತೊವಲ್ವಿಡಿ' ನೋ.

ತೋಲ್ವುಲ್ಲೆ (ನಾ). (ಗುರಿಯಿಡಲು) ತೊಗಲಿನಿಂದ ಮಾಡಿದ ಹುಲ್ಲೆ; ಚರ್ಮದ ಜಿಂಕೆ: ನೆರೆದಿಸುತಿರೆ ತೋಲ್ವುಲ್ಲೆಯನಿರದದು ಬಿಟ್ಟೊಡೆ ಪುರಾಣಕೂಪದೊಳ್ (ಪಂಪಭಾ. ೨-೫೧). [ತೋಲ್$_1$ + ಪುಲ್ಲೆ$_1$]

ತೋವಲ್ 'ತೋಲ್$_1$' ನೋ.

ತೋವಿಕ್ಕು (ಕ್ರಿ). = ತೋಹಿಡು: ತೋವಿಕ್ಕಿ ಬಹ ಚಿತ್ರಕಾಯನುರು ಗವಲಿಗುಂ ಜೀವ ತಾಂ ತಲ್ಲಣಿಸಿ ಗೋವ್ರಜಂ ಬೆಚ್ಚುವೊಲು . . . ಗಜಬಜಂಗೊಳುತಿರ್ದುದು (ಪರಶು. ೩೫-೧೪).

[ತೋವು (<ತೋರ್ಪು) + ಇಕ್ಕು]

ತೋವು 'ತೋರ್ಪು' ನೋ.

ತೋವೆ, 'ತೊವ್ವೆ' ನೋ.

ತೋಶಿಕಾನೆ 'ತೋಷೀಖಾನೆ' ನೋ.

ತೋಷ (ನಾ). ಆನಂದ; ಹರ್ಷ; ಸಂತೋಷ: "ಗಹಗಹಿಕೆಯೆನಲ್ ಪೋಷಂ[ಪಾಠಾಂ. ಸಂತಸ]" (ಭಾರನಿ. ೨೧); ತಂದರು ನೊಸಲಿಗೆ ಕೈಗಳ ಬಿನ್ನಹವೆಂದರನೂನತೋಷದಲಿ (ತ್ರಿಪುಸಾಂ. ೧೬೭); ಶೀಲಕೆ ಸಮನಾದ ತೊಡವಿಲ್ಲ ತೋಷಕೆ ಸಮನಾದ ಧನವು ಬೇರಿಲ್ಲ (ಇಂಜಾಪ. ೧೩೮-೭೭); ರೋಷ ಹೆಚ್ಚಿ ತೋಷವಳಿದು ಮೋಸಹೋಯ್ತು ಜಗವಿದು! (ಕರುಶ್ರಾ. ೮೧-೧೮); ಚಿಕ್ಕಶಿಶುವಾಗಿದ್ದ ಕಾಲವಿತ್ತೊಂದು . . . ಮಿಕ್ಕ ನೆನಹುಗಳು ಕೊಡವಾ ತೋಷವೆಂದುಂ (ಕಎಪು. ೯-೯). [ಸಂ.]

ತೋಷಖಾನೆ 'ತೋಷೀಖಾನೆ' ನೋ.

ತೋಷಣ (ನಾ). ೧. ಆನಂದವನ್ನುಂಟುಮಾಡುವಿಕೆ; ತೃಪ್ತಿಪಡಿಸುವಿಕೆ. ೨. ಆಮೋದ; ಆಹ್ಲಾದ; ತೃಪ್ತಿ; ಸಂತಸ: ತ್ಯಾಗಗುಣಕ್ಕೆ ತಾಯ್ವನ ಸಮಸ್ತನ್ರಿ[ನೃ]ಪಾಳನಿಯೋಗವರ್ತನಾಶ್ರೀಗೆ ನಿವಾಸಮಿಷ್ಟರ ವಿಶಿಷ್ಟರ ತೋಷಣ ಪೋಷಣಂಗಳೊಳ್ಳಾಗರಮೆಂದು ಬಣ್ಣಿಸುವುದೀ ಧರೆ ಪಣ್ಡಿತಪಾರಿಜಾತನಂ ನಾಗನಾ ಜನಾರ್ಧನನಾ (ಎಇ. XXI, ೧೩-೩೩; 1260); ಈ ಬಿನದಿಗೆ ಕುಹಕವೆ ತೋಷಣವೋ (ಗಜೇಶ. ೪-೯೪). [ಸಂ.]

ತೋಷಿಖಾನೆ 'ತೋಷೀಖಾನೆ' ನೋ.

ತೋಷಿತ (ಗು). ಸಂತೋಷಗೊಳಿಸಿದ; ತೃಪ್ತಿಪಡಿಸಿದ: ನಿಜಾಂತ ರಾಳಾಶ್ರಿತಲೋಕಾನಂದನಮಂ ತೋಷಿತಮಾನಂದನಮಂ ನಿರೀಕ್ಷಿಸಲ್ಲಡೆ ನೃಪತೀ (ರಾಜಶೇ. ೧೦-೫). [ಸಂ.]

ತೋಷಿಸು (ಕ್ರಿ). ಸಂತೋಷಪಡಿಸು; ತೃಪ್ತಿಪಡಿಸು; ಆಮೋದಗೊಳಿಸು: ಅಖಿಳವೀರರ್ಕಳಂ ಗೆಲ್ದನಿವನಾಂ ತೋಷಿಸುವೆನೆಂದನು (ಚೈಮಿಭಾ. ೨೭-೫೦); ನಿಜತನುವನರೆದು ತೋಷಿಸುವುದೊಲವು (ವಿಸೀಗೀ. ೨-೧೫). [ತೋಷಣ + – ಇಸು$_3$]

ತೋಷೀಖಾನೆ, ತೋಶಿಕಾನೆ, ತೋಷಖಾನೆ, ತೋಷಿಖಾನೆ, ತೋಷೇಖಾನೆ (ನಾ). ಅರಮನೆಯಲ್ಲಿ ಆಭರಣ, ಪೋಷಾಕು, ಹಣ ಮೊದಲಾದುವುಗಳನ್ನಿಡುವ ಮನೆ; ಖಜಾನೆ; ಭಂಡಾರ: ತೋಷೀಖಾನೆ ತಯಾರ್ರಿ (ಎಕ. XIV, ಮೈಸೂರು. ೧೩೧; 1827); ಟಿಪ್ಪೂಸುಲ್ತಾನರ ಕಾಲದಲ್ಲಿ ತೋಷೀಖಾನೆಯ ಅಧಿಕಾರದಲ್ಲಿದ್ದ ಪೂರ್ಣಯ್ಯನವರನ್ನು ದಿವಾನ್‌ಪದವಿಗೆ ನಿಯಮಿಸಿದರು (ಮಹಾವಂ. II, ೩); ಪೂರ್ಣಯ್ಯನವರಂ

ಬಹು ಬುದ್ಧಿವಂತರಾಗಿ ಇದ್ದದ್ದರಿಂದ ತೋಪೀಖಾನೆಯ ಭಕ್ಷಿ ಆಸದಲ್ಲಿ ಖಾನನು ನವಾಬರಿಗೆ ಹೇಳಿ . . . ನೇಮಕ ಮಾಡಿಸಿದನು (ರಾಮವಂ. ೨೧೯). **ತೋಶಿಕಾನೆ :** ಆ ದಂಡಿನ ಸಾಮಾನು, ಸರಂಜಾಮು, ತೋಶೀಕಾನೆ, ಛರಂಗಿ ಮುಂತಾಗಿ ಕೊಡಗಿನ ಸಂಸ್ಥಾನದವರು ತೆಗೆದುಕೊಂಡರು (ರಾಜೇಂದ್ರ. ೧೨). **ತೋಷಖಾನೆ :** ಶ್ರೀ ನರಸಿಂಹ ತೋಷಖಾನೆ ಗೆ ಲ್ಲ ಸೇರ್ವೆ ಜವರಾಯಿಗೌಡನ ಸೇವೆ (ಎಕ. XV, ಹೊಳೆನ. ೪೦ ; ?). **ತೋಷಿಖಾನೆ :** ನಾನು ಈಗಲೇ ತೋಷಿಖಾನೆಗೆ ಹೋಗಬೇಕಾದ ಕೆಲಸವಿದೆ (ಕೃಷ್ಣಭೂ. ೧೬); ಈ ವಿಜಾನೆಯ ಐಶ್ವರ್ಯವನ್ನು ನೋಡುವುದು ಸಾಧ್ಯವಿಲ್ಲ ಎಂದು ಆ ತೋಷಿಖಾನೆಯ ಸುತ್ತಲೂ ಸೇನೆಯವರನ್ನು ನಿಲ್ಲಿಸಿ ಹೊರಟು ಹೋದರಂತೆ (ಮುಸುಗ. ೩೭). **ತೋಪೇಖಾನೆ :** ಕಛೇರಿಗಳು—೧. ದಿವಾನ್ ಕಛೇರಿ . . . ೭. ತೋಪೇಖಾ (ಮಹಾವಂ. II, ೩೯).

[←ಪಾರ. ತೋಶ್‌ಖಾನ; ಹಿಂ. ತೋಶಾಖಾನಾ; ಮರಾ. ತೋಶ್‌ಖಾನಾ, ತೋಶೇಖಾನಾ]

ತೋಪೇಖಾನೆ 'ತೋಪೀಖಾನೆ' ನೋ.

ತೋಸ (ನಾ). = ತೋಷ. 'ತೋಸಂಗೊಳ್' ಪರಾ.

[<ಸಂ. ತೋಷ]

ತೋಸಂಗೊಳ್ (ಕ್ರಿ). ಸಂತೋಷಹೊಂದು ; ಆನಂದಿಸು : ನೇಸರ್ಸಾಸಿರ ಕೈಗಳಿಂದೊಲವಿನಿಂ ತಟ್ಕಿ ೃಸಲಿಂದೇಗಳುಂ ತೋಸಂಗೊಂಡು ಕೆಲಕ್ಕ ದೊರ್ವೆ ಸೆಳಿವಂತೆ (ಮೃಸೂಮ. ೦-೫). [ತೋಸ + ಕೊಳ್$_1$]

ತೋಸ್ತಾನಿ 'ತೋಸ್ತಾನು' ನೋ.

ತೋಸ್ತಾನು, ತೋಸ್ತಾನಿ (ನಾ). ಸೈನಿಕನು ತೋಟಾಗಳನ್ನಿಡಲು ಬಳಸುವ ಚರ್ಮದ ಚೀಲ; ಸಿಪಾಯಿಯ ಮದ್ದುಗುಂಡಿನ ತೊಗಲುಚೀಲ : (೬). **ತೋಸ್ತಾನಿ :** ಸುಲ್ತಾನಿ ತೋಟ ತುಂಬಿದಂಥಾ ತೋಸ್ತಾನಿ ಒಂದು . . . ಕೊಟ್ಟು (ರಾಜೇಂದ್ರ. ೫೬).

[←ಮರಾ. ತೋಸ್ತಾನ್, ತೋಸ್‌ದಾನ್ ಪಾರ. ಹಿಂ. ತೋಶ್‌ದಾನ್ ;]

ತೋಹಡಿಕೆ (ನಾ). ಓಕರಿಕೆ ; ವಾಂತಿ ; ವಮನ : "ತೋಹಡಿಕೆಯನಲೊಗಡಿಕೆ" (ಭಾರನಿ. ೫೩) : 'ಓಗಡಿಕೆ' ಪರಾ. [? + – ಇಕೆ]

ತೋಹಮತ್ತು, ತೋಹಮಾತಂ (ನಾ). ವಿಂಥ್ಯಾರೋಪ; ಸಂಳ್ಳು ಆರೋಪ ; ಅಪವಾದ : ಸುಮ್ಮಗೆ ಅವರ ಮೇಲೆ ತೋಹಮತ್ತು ಹಾಕುವ ದುರಾತ್ಮರನ್ನು ದಬ್ಬಿಸಿಬಿಡೋದು ಉತ್ತಮ (ವಾಗ್ಭೂವಿ. ೧೯೬). **ತೋಹಮಾತು :** ನೀವು ಅವನ ಮೇಲೆ ನಿಷ್ಕಾರಣವಾಗಿ ತೋಹಮಾತು ಹಾಕುವದು ನಿಮ್ಮ ದುಷ್ಪಸ್ವಭಾವದ ದೃಷ್ಟಾಂತವಂತಲೇ ತಿಳಿಯಬೇಕು (ವಾಗ್ಭೂವಿ. ೨೧೭).

[←ಅರ. ಹಿಂ. ತೋಹಮತ್, ತುಹಮತ್ ; ಮರಾ. ತೋಹಮತ್]

ತೋಹಮಾತು 'ತೋಹಮತ್ತು' ನೋ.

ತೋಹಿಡು (ಕ್ರಿ). ಬೇಟೆಗಾಗಿ ಅಡಗಿಕೊಂಡು ಹೊಂಚು ಹಾಕು : ಸರಸಿಯ ತಡಿಯ ಮರನನೇರ್ಯೂ ಮರದೊಳು ತೋಹಿಡಲಾ ಸರಿತ ದೊಳಿರ್ದುದು ಲಿಂಗಾಕಾರವನಾದ್ಯಂದ (ಸಿಂಗಿರಾ. ೨೮-೩೪).

[ತೋಹು$_2$ (<ತೋರ್ಪು) + ಇಡು$_1$]

ತೋಹು$_1$ 'ತೋಪು$_1$' ನೋ.

ತೋಹು$_2$ 'ತೋರ್ಪು' ನೋ.

ತೋಹುಕಾಜಿ (ನಾ). ಮರಸು ಬೇಟೆಯಾಡಲಂ ಸಂಚಿನ ಸ್ಥಳದಲ್ಲಿರುವವನು : ಬಲು ನಾಯು ಬಾಯಿಂದ ಮುರುಚಿಕೊಂಡೋಡುವ ಮೊಲಂ ತೋಹುಕಾಜಿರಂ ಹರಿದೆಱಗಿ ಕೊಲುವ ಕೋಣಂ (ಹೋಮುಡ. ೩-೭).

[ತೋಹು$_2$ (< ತೋರ್ಪು) + – ಕಾಜಿ]

ತೋಹುಗ (ನಾ). = ತೋಹುಕಾಜಿ : ತಡೆಯದೊಡ್ಡಾ ವಂದಿ ವಿಗಗಳ ನಿಡುವಲೆಯ ನೋಡ್ಯೆದೆ ತೋಹುಗರೆಡೆಗವಂ ಸೋವುಗರು ಜಡಿತರೆ ವಿಂಧ್ಯಕನು ಕಡುಗಿ (ಶಾಳ್ವಭಾ. ೫-೨೫).

[ತೋಹು$_2$ (<ತೋರ್ಪು) + – ಗ$_2$]

ತೋಹುಗಾಣಿಸು (ಕ್ರಿ). ಮರಸುಬೇಟೆಯಲ್ಲಿ ಕಾಯಿಸು, – ಸಂಚಿನ ಸ್ಥಳದಲ್ಲಿರಿಸು : ವಿರಹಿವಿಗವನೆಸುವರೆ ಕಾವ ಶಬರ ತನ್ನುರ ತೋಹು ಗಾಹ[ಣ]ಿಸುವಂತೆ ಸರಸಿಜಲೋಚನೆಯರು ಲೀಲೆಯಿಂದ ಗೋಪುರ ದೊಳಗನುದಿನವಿಹರು (ತರ್ಕಾ. ೧-೫೮).

[ತೋಹು$_2$ (<ತೋರ್ಪು) + ಕಾಣಿಸು]

ತೋಹುಗೊಳ್ (ಕ್ರಿ). ಬೇಟೆಗಾಗಿ ಮರೆಯಾದ ಸ್ಥಳದಲ್ಲಿರು, ಸಂಚಿನ ತಾಣದಲ್ಲಿರು : ಬಲೆಯೊಡ್ಡಿ ತೋಹುಗೊಂಡಿರೆಗೆದಱಿ ಬಿಳ್ಚಿರ ಸುತ್ತಿ ಸರಿವ ಬಿಗಿವ ಸಂಕಟ ಬೇಡ (ಹಡಕಾ. ೫-೩೦).

[ತೋಹು$_2$ (<ತೋರ್ಪು) + ಕೊಳ್$_1$]

ತೋಹುವಿಡಿ (ಕ್ರಿ). ಬೇಟೆಗಾಗಿ ಹೊಂಚುಹಾಕು : ಕಾನನಸ್ಥಳದೊಳಗೊಲ್ದು ತೋಹುವಿಡಿದೊಡ್ಡಿದರೆಯ್ದೆ ಪುಳಿಂದನಾಯಕರ್ (ದಶಳು. ೩-೧೧೫); ಪರಿದೆನಿಪ ಗಜದ ಬೇಂಟೆಯನಾಡಲೆಂದು ಕಾನನದ ಮಧ್ಯದೊಳಗೊಂದು ಕರಮೆಸವ ಕೆಱಿಯೊತ್ತಿನೊಳ ತೋಹುವಿಡಿದಿರಲ್ಕೆ (ಸಿಕ್ಕೇಪು. ೭-೯). [ತೋಹು$_2$ (<ತೋರ್ಪು) + ಪಿಡಿ$_1$]

ತೋಹುವೇಂಟೆ (ನಾ). ಒಂದಂ ಬಗೆಯ ಬೇಟೆ ; ಮರಸುಬೇಟೆ : ನೆಗಳ್ತೆಯ ತೋಹುವೇಂಟೆ ಸಂಗಳಿಸಿದ ನೀರವೇಂಟೆ ಘನ ಸೋಹಿನ ವೇಂಟೆಯೆನಿಪ್ಪ ನಾಮಮಂ ತಳೆದಿಸೆವೆಂಟು ಬೇಂಟೆಗಳನಾಡಿದಂ (ಕೃಪುವಿ. ೩೭-೯೩) ; ಅರಸು ಮರುತಾದೇವಿಗೊಗೆದು ಜನನಾಮದಿಂದಿರುತೊಮ್ಮೆ ತೋಹುವೇಂಟೆಗೆ ಹೋಗಿ ನದಿಯೆಡೆಗೆ ಬರಲು (ವೀಶ್ವಪು. ೪-೭-೩೭).

[ತೋಹು$_2$ (<ತೋರ್ಪು) + ಬೇಂಟೆ]

ತೋಹೆ 'ತೋರ್ಪು' ನೋ.

ತೋಳ್, ತೋಳು (ನಾ). ೧. ಬಾಹು ; ರಟ್ಟೆ : ಈ ನರೇಂದ್ರಂ ಸಾಕ್ಷಾದಿಂದ್ರಂ ತಾನೆನೆ ಸಲೆ ನೆಗಟ್ಟಿಂದ್ರೇಂದ್ರನ ತೋಳಿ ತೊಟ್ಟಲಾಗಿರೆ ಬೆಳೆದಂ (ಪಂಪಭಾ. ೧-೪೪) ; ತೊಳಗುವ ಮೂಳವೀಮುಖಸರೋರುಹಕಾಂತಿಗೆ ಸೋಲ್ತ ಚಂದ್ರಮಂಡಳದ ಕಳಂಕಮಂ ಕಳೆದವಳ್ ನೆಗರೀಲಲಿತಾಂಗಿ ನಿಳ್ಕಿ ತೋಳ್ಗಳಿನೆನೆ ಕೂಡೆ ಕಣ್ಗೊಳಿಸಿ ತೋರ್ಪುವು . . . ಕೇತನಾಳಿಗಳ್ (ಕಾದಂಪೂ. ೩೦೩) ; ಎನಗಿರ್ವರುಮೆರಡುಂ ತೋಳೆನಗಿರ್ವರುಮೆರಡು ಕಣ್ಗಳೆನ್ನರೆ ಯುವರಾಜನುಮಂಗರಾಜನುಂ (ಗದಾಯು. ೩-೬೭) ; ದೋಷ ಮುಳ್ಕೊಡೆ ತನ್ನ ತೋಳನಾದೊಡಂ ಕಡಿದುಬಿಡುವುದು (ಪಂಡಕಂ. ೧೦೦-೫) ; ಬಲ್ಲಾಳನ ತೋಳ ಬಾಳ ನೆಳಲಾದುದು ಧಾತ್ರಿಗೆ ವಜ್ರ ಪಂಜರಂ (ಎಕ. VII, ಶಿವಪೂ. ೯೮-೦೩ ; 1203) ; ಸಖನ ಮಂಚದಲಿ ಕುಳ್ಳಿರಿಸಿ ತಕ್ಕಿಸಿಕೊಂಡು ಮುಖ ಕೊರಳುರ ತೋಳ್ತೊಡೆಯ ನಖದಗ್ರದಿಂದಱಿದಿಱಿದು (ಕಂನವಿ. ೯-೦೫೩). ೨. ಮರದ ದೊಡ್ಡ ಕೊಂಬೆ, – ಮುಖ್ಯ ಶಾಖೆ : ತೋಳ ನೀಳದ ಕೆಂದಳಿರಿಂದಂ ಸಂದಣಿಸಿರ್ದ ಮದಾಳಿಯಿಂದೋಳಿದಿಂ ಮಳಯಾನಿಳಲೀಲಾಂದೋಳದಿನೊಪ್ಪೆ (ಆದಿಪು. ೩-೩೦); ಬಂಣಟಿ ಮೂಡೆ ೨ ಮುಂಡಿನ ಮಾಡುವ ಬಳು ಮೂಡೆ ೧ ಚಿಕ್ಕ ಬಿಟ್ಟುವ ಕೊಡಂಗೆ ಮೂಡೆ ೧ ಅದಱ ಮೇಗಣ ತೋಳ ಆರವೆ ಕಂಬಿ ಸಹಿತವಾಗಿ (ಎಇ. XVII, ೦೬೨-೫೧ ; 1256). **ತೋಳು :** ೧. "ಭುಜ ದೊಳಗಕ್ಕು ತೋಳಿಂದು" (ಳಕಕ. ೪೯) ; ಎರ್ದೆ ಪಡವಡ ಪಾರ್ದವುದೇಕೆ ಕೆಳದಿ ತೋಳುಗಳಂ ಪಿಡಿ ಮೃದುಹಸ್ತತಳದಿ (ಕಾದಂಪೂ. ೪೮೨ ರಗಳೆ) ; ಶಿವನ ತೋಳ ತೊಡವಾನತರ ವಿಸಾಲ ಮನೋರ್ಥವು ಸಿರಿ ಸರಸ್ವತಿವರಸಿಗಿರಿಜೆ ಬಿಜಯಂಗೈದಳು (ಸಿದ್ಧರಾ. ೧-೫೬) ; ಸಿಂಹದ ತೋಳ ತೆಕ್ಕೆಯ

ಕರಿಯ ಸೆಳೆವಂದದಲಿ . . . ಧರಣಿಪಾಲನ ತೆಗೆದು ಭೀಮನ ಬರಿಯ ನೆಚ್ಚನು ಜೋಡ ಜೋಕೆಯ ಜರುಹಿದನು (ಕುಮ್ಯಾಕ. ೧೪-೨) ; ತೋಳು ಇಲ್ಲದವನಿಗೆ ಭುಜಕೀರ್ತಿ ತಾನೇಕೆ (ಪುರಂದ. ೨-೬೪-೧೩) ; ರನ್ನದ ಬಳೆ ತೋಳ ತಾತಿ ಮೋಹನದತ್ಯುನ್ನತ ಭುಜಕೀರ್ತಿಯಿಂದ . . . ರೂಪ ಸಂಪನ್ನೆ ಮೆಱೆದಳೊಲವಿನಲಿ (ಕಂನವಿ. ೯-೭೪) ; ಕಾಲಿಲ್ಲದಲೆ ಹರಿಗು ತೋಳಿಲ್ಲದಲೆ ಹೊರುಗು ನಾಲಿಗಿಲ್ಲದಲೆ ಉಲಿವುದು (ಸರ್ವಜ್ಞ. ೨೦೨೯). ೩. ಭುಜಬಲ ; ಸಾಮರ್ಥ್ಯ : ತೋಳಿಂದೆ ತಿಳಿವಿಂದೆ ನುಡಿಯಿಂದೆ ಜಗದಿರವ ಮೇಲೆನಿಪವನೆ ರಸಿಕ (ಪುಂಕುಕ. ೨೬೫). ೪. ಆನೆಯ ಸೊಂಡಿಲು : ಮೋಱೆಯ ತೋಳಿನಲಿ ಮೋದಿದವು ಮಹಿಯನು ಸೊಕ್ಕಿ ದಾನೆಗಳು (ಕುಮ್ಯಾಪ್ರೋ. ೧೨-೬) ; ಅಟ್ಟಿ ಹೊಯ್ದನು ಹೊಗುವ ತೇರಿನ ಥಟ್ಟ ತೂಳುವ ತೋಳಿನಾನೆಯ ಮೆಟ್ಟಿದನು (ತೊರರಾ. ೩-೬-೪೨). 'ತೋಳವಟ್ಟ' ಪರಾ. ೫. ಅಂಗಿಯ ಅಥವಾ ಕೋಟಿನ ಕೈ : ಮುರಿದ ಕೈಯಾದರೆ ಮುಚ್ಚಿಕೊ ಕೈಯನು ಅಂಗಿಯ ತೋಳಿನ ಒಳಗೆ (ಇಂಜಾಪ. ೨೩೯-೮೦). ೬. ಗಾಡಿಯ ತೊಟ್ಟಿಲಿನ ಎರಡೂ ಬದಿಗಿರುವ ಮರದ ದಿಂಡು : ಯಾವ ಗಾಡಿಗೆ ತೋಳು ಇಲ್ಲ. ಯಾವುದರ ಬುಟೆವು ಮುರಿದುಹೋಗಿದೆ (ಬೆಳಭಾ. ೧೭೭).

ತೋಳ ತೀಟೆ = ತೋಳಿನ ನವೆ ; ಯುದ್ಧ ಮಾಡುವ ತವಕ : ತೋಳ ತೀಟೆಯನವನ ನೆತ್ತಿಯ ಮೇಲೆ ಕಳೆವೆನು (ಕುಮ್ಯಾಭೀ. ೧-೬೦). **ತೋಳ ತೀನ್**=ತೋಳ ತೀಟೆ : ಸಿಡಿಲೊಳೆ ತಳ್ತು ಪೋರ್ವ ಸಿಡಿಲಂತಿರೆ ಬಾಳೊಳೆ ಬಾಳ್ ಪಳಂಚಿ ಮಾರ್ಕಿಡಿವಿಡೆ ನೋಡಲಂಜಿ ದೆಸೆದೇವತೆಗಳ್ ಪೆಱಪಿಂಗೆ ತೋಳ ತೀನ್ ಕಿಡೆ ನಲಿದು (ಪಂಪಭಾ. ೧೦-೪೨). **ತೋಳ ತೋಟಿ**=ತೋಳಿನ (ಬಲದ) ಸ್ಪರ್ಧೆ,-ಹುರುಡು : ಕಾಳಗದಲಮರೇಂದ್ರ ಸೋತರೆ ಸೋಲವದು ನಿನಗೆಂಬೆ ನಿನ್ನಯ ತೋಳ ತೋಟಿಯ ತೋಱು (ತೊರರಾ. ೪-೫-೫). **ತೋಳನ್ನಾಡು** = (ಮಕ್ಕಳು) ಆಟಕ್ಕಾಗಿ ಕೈಯ್ಯನ್ನು ಅಲುಗಾಡಿಸು : ತೋಳು ತೋಳು ತೋಳು ರಂಗ ತೋಳನ್ನಾಡ್ಯೆ (ಪುರಂದ. ೩-೧೮೯ ಪಲ್ಲವಿ). **ತೋಳ ಪಾವಡೆ** = ಅಧಿಕಾರ ಅಥವಾ ಬಿರುದಿನ ಸಂಕೇತವಾಗಿ ತೋಳಿಗೆ ಕಟ್ಟಿಕೊಳ್ಳುವ ಬಟ್ಟೆ : ಬಿರುದಿನ ತೋಳಪಾವಡೆಯ ದುರಗಲಿಗಳು ದುರ್ಗದಾಳ್ವೇರಿಯ ಮೇಲೆ ಪರಿಶೋಭಿಸಿದರುಬ್ಬಿನಲಿ (ಕಂನವಿ. ೧೧-೧೪೪). **ತೋಳ ಬಂದಿ** = ೧. ತೋಳಿಗೆ ಹಾಕಿಕೊಳ್ಳುವ ಒಂದು ಬಗೆಯ ಆಭರಣ ; ಕೇಯೂರ : "ಕೇಯೂರಂ, ಅಂಗದಂ–ಈ ೨ ತೋಳ ಬಂದಿ" (ನಾಚಿರಾ. ೧೨೩) ; ಇಕ್ಕಿದ ರನ್ನದೋಲೆ ಪೊಸ ಮುತ್ತಿನ ಮೂಗುತಿ ತೋಳ ಬಂದಿ . . . ಚೆಲ್ವನೊಳಕೊಂಡಿರೆ (ಕಲ್ಯಿಕಾ. ೩೪೦). ೨. ತೋಳುಗಳ ಬಂಧನ: ಆಲಿಂಗನ. ೧, ೨ : ಆತ ಕೊಟ್ಟ ವಸ್ತು ಒಡವೆ ನನಗೆ ಅವಗೆ ಗೊತ್ತು ತೋಳುಗಳಿಗೆ ತೋಳಬಂದಿ ಕೆನ್ನೆ ತುಂಬ ಮುತ್ತು (ನಾದಲೀ. ೫೯-೧೫). **ತೋಳಬಾಪುರಿ, ತೋಳ ಭಾಪುರಿ** = ತೋಳಬಂದಿ : ತೋಳ ಬಾಪುರಿಯಿಟ್ಟು ಕಮಲ ಬಂಧವ ಕಟ್ಟಿ (ಜಿನರಾ. ೯-೫೨) ; ಚಾರುಭುಜಕೀರ್ತಿಯಂ ತೋಳ ಭಾಪುರಿಯು ಕರಕಂಕಣಂಗಳನು ಧರಿಸಿ (ನವಮೋ. ೧೬-೧೦). **ತೋಳ ಮಣಿ** = ತೋಳುಬಂದಿ ; ಕೇಯೂರ ; ನಳಿತೋಳೊಳ್ ತೊಡರ್ದೊಂದು ತೋಳ ಮಣಿವೋಲ್ (ಆದಿಪು. ೧೨-೪೦). **ತೋಳ ಮೊದಲ್** = ಕಂಕುಳು ; ಕಕ್ಷ : ಅಮರ್ದಂ ಮುಂದಿಡೆ ಮಂದಹಾಸಮಲರ್ಗಣ್ ಬೆಳ್ದಿಂಗಳಂ ಬೀಱೆ ತೋಳ ಮೊದಲ್ಗೆಯ್ದೆ ಪೊದಟ್ಟ ಪೆರ್ಮೊಲೆಗೊಡಂಗಳ್ ಸೂಸೆ ಲಾವಣ್ಯತೋಯಮಂ (ಪಂಕಾಮಾ. ೧-೧೦೩) ; ಲಾವಣ್ಯರಸಮಂ ಬೀಱೆ ಮುದ್ದುಮೊಗ ಮುಗುಳೆ ಹೊಗರಂ ತೋಳ ಮೊದಲಪ್ಪುಗೆಯ್ಯೆ (ಪಹ್ಮರಾ. ೩-೩೦).

[ದೇ. ॥ ತಮಿ. ಮಲ. ತೋಳ್ ; ತುಳು. ತೋಳ್, ತೋಳು]

ತೋಳ್₁ (ನಾ). ಒಂದು ಬಗೆಯ ಕಾಡುಮೃಗ ; ಈಹಾಮೃಗ ; ವೃಕ : "ಅಠಣ್ಯಶ್ವಾ, ಕೋಕಃ, ಈಹಾಮೃಗಃ, ವೃಕಃ–ಈ ೪ ತೋಳಂ" (ಹಲಾಯು. ೩೮-೭೫); "ಕೋಕಮೀಹಾಮೃಗಂ ವೃಕಮೆನಲು ತೋಳನಕ್ಕು" (ಮಂಗರಾ. ೪೮-೮); ನಿಲ್ ತೋಳಂ ಬರ್ಪುದು (ಕವಿರಾ. ೧-೬೩); ಮೊಲನುಂ ಪಂದಿಯುಂ ತೋಳನುಂ . . . ಮುಂಗುರಿಯುಂ ಮೊದಲಾಗೊಡೆಯ ಸ್ಥಲಚರಂಗಳುಂ (ವಡ್ಡಾರಾ. ೯೭-೪) ; ಆತಂಗೆ ಧೂರ್ತವಿನೋದಮೆ ವಿನೋದಮಪ್ಪುದಱಿಂ ದುರ್ಜನಪರಿವೃತನಾಗಿ ಬಂದಂಗಡಿಯಂ ಪುಗೆ ತೋಳನಂ ಕಂಡ ಕುಱಿವಿಂಡಿನಂತೆ ಪರದರ್ ಪರದುವೋಗೆ (ಧರ್ಮಾಮೃ. ೨-೩೨) ; ಮರ್ತ್ಯರ ಸಹಸವೆಮ್ಮೊಡನೆ ತೋಳನಳವಿಗೆ ಮಲೆತ ಕುಱಿಗಳ ಜಾಲದಂತಿಹುದೆಂದು ಮಂದಕರಾಳಮತಿಗಳು ನಗಲು (ಕುಮ್ಯಾಸ. ೫-೩೯); ಪುಲ್ಲೆಯಂ ನೆಲದೊಳುಂ ಪಾಸಿ ತೋಳನ ತುಳಿದು (ಮಹಾವಿ. ೭-೨೬) ; ಹುಲಿ, ಕಿರುಬ, ತೋಳ ಮೊದಲಾದ ಕಾಡುಮೃಗಗಳು ಆ ಕಡೆ ಬಹಳ (ಕಳಹು. ೪) ; ತೋಳ ಗುಂಡಿಗೆ ಬಿದ್ದರೆ ಆಳಿಗೊಂದು ಕಲ್ಲು (ಗಾದೆ).

[ದೇ.॥ ತಮಿ. ತೋಣ್ಟಾನ್; ತುಳು. ತೋಳ್, ತೋಳೆ; ತೆಲು. ತೋಡೆಲು, ತೋಡೇಲು ; ಬ್ರಾಹುಈ. ತೋಲ = ನರಿ]

ತೋಳ್₂ (ನಾ). ಗೆಳೆಯ ; ಮದುವೆಯಲ್ಲಿ ಗಂಡಿನ ಜೊತೆಯಲ್ಲಿ ಬರುವ ಸ್ನೇಹಿತ : ಅಳಿಯನಿಗಿಂತ ಅವನ ತೋಳನ ಅವಾಂತರ ಬಹಳ (ರೂಢಿ). [ದೇ.॥ ತಮಿ. ಮಲ. ತೋಟ]

ತೋಳವಟ್ಟ (ನಾ). ಆನೆಯು ಸೊಂಡಿಲಿನಿಂದ ಹೊಡೆಯುವ ಒಂದು ಕ್ರಮ : ಮಸಗಿದ ಮಿಟ್ಟುವೆ ಮದಗಜದೆಸಕಮನೊಳಕೊಂಡುದೆನಿಸಿ . . . ಬಂದು ಪನ್ನೆರಡುಂ ಹಸ್ತಪ್ರಹಾರದೊಳಂ ಪದಿನೆಂಟು ಕೋಡೇಱಿನೊಳಂ ಏಟುಂ ತೆಱದ ತೋಳವಟ್ಟದ ಪೊಯ್ಲೊಳಂ . . . ಪಡೆಯಂ ಪ್ರಳಯಮನೈದಿಸುತ್ತುಂ ಬರ್ಪುದಂ ಕಂಡು (ಮಹಾನೇ. ೧೨-೧೪೨ ವ).

[<ತೋಳ್ + ?]

ತೋಳಾಟ (ನಾ). ಮಕ್ಕಳು ತಮ್ಮ ತೋಳನ್ನು ಆಡಿಸುವ ಒಂದು ಕ್ರಮ : ಳಕಾರಕ್ಕೆ . . . ತೋಳಾಟಂ ; ಬಾಳೊಪ್ಪಂ (ಶಮದ. ೬೯ ಪ್ರಯೋ); ಮೇಲೆ ಪರವಾದಿಗಳ ಬಾಯ್ಗಳಂ ಪೊಯ್ವಂತೆ ತೋಳಾಟವಾಡಿ (ಜಿಬಪು. ೫-೩೯). [ತೋಳ್ + ಆಟ]

ತೋಳಾಡಿಸು (ಕ್ರಿ). ತೋಳನ್ನು ಅಲುಗಾಡಿಸು : ಪರವೆನಾಚಿ ಸಂಕಿಲಿ ನಾಚಿಯರನಪ್ಪುವ ತೋಳ್ಗಳಿವೆಂಬಂತೆ ತೋಳಾಡಿಸುತ್ತುಂ (ನಂಬಿರ. ೨-೫).

[ತೋಳ್ + ಆಡಿಸು]

ತೋಳಾರ್ಪು (ನಾ). ತೋಳಿನ ಶಕ್ತಿ ; ಭುಜದ ಬಲ : ಅವರಿಗೆ ತಿಮ್ಮಣ್ಣನಾಯಕನ ತೋಳಾರ್ಪಿನ ನೆನಪಾಯಿತು (ಕವೀರ. ೧೨೧).

[ತೋಳು (<ತೋಳ್) +ಆರ್ಪು₁]

ತೋಳು 'ತೋಳ್' ನೋ.

ತೋಳುಕಯ್ಗೊಡು 'ತೋಳ್ಗೈಗೊಡು' ನೋ.

ತೋಳುಕೆಲಸ (ನಾ). ತೋಳಿನ ಶಕ್ತಿಯಿಂದ ಮಾಡುವ ಕೆಲಸ : ಬುದ್ಧಿಯ ಕೆಲಸ ಶ್ರೇಷ್ಠ ; ತೋಳುಕೆಲಸ ಮಧ್ಯಮ ; ಕಾಲ್ಕೆಲಸ ಹೆಗಲ ಕೆಲಸಗಳು ಅಧಮ (ವಚಭಾ. ೩೩೭).

[ತೋಳು (<ತೋಳ್) + ಕೆಲಸ]

ತೋಳುಕೈಗೊಡು 'ತೋಳ್ಗೈಗೊಡು' ನೋ.

ತೋಳುಗುತ್ತು (ನಾ). ಬಾಹುವಿಗೆ ಹೊಂದಿಕೊಂಡಿರುವಿಕೆ : ಭಾರಿಯ ತೋಳುಗುತ್ತಿನ ಜಯಲಕುಮಿ ಜಂಗಳವ ಜಾಱಿದಡೆ ಭಾಳಲಿಪಿಗಳ ಲಿಕ್ಕವನು ಪ್ರತಿಕೂಲವಿಧಿ ಪಲ್ಲಟಿಸಿ ಬರೆದಡೆ ಹೇಳಿ ಫಲವೇನೆನುತ ತುಂಬಿದನರಸ ಕಂಬನಿಯ (ಕುಮ್ಯಾಗ. ೩-೨೮).

[ತೋಳು (<ತೋಳ್) + ಗುತ್ತು₂ (<ಗುತ್ತ₁)]

ತೋಳುತೊಡಿಗೆ (ನಾ). ತೋಳಿಗೆ ಧರಿಸುವ ಆಭರಣ; ವಂಕಿ: "ಕೇಯೂರಂ, ಅಂಗದಂ ೨ ಬಾಹುಪುರಿ ಹೆಸರು. ನಾಗಮುರಿಗೆ ತೋಳು ತೊಡಿಗೆ ಬಾಜುಬಂದೂ ವಂಕಿ" (ಸಿದ್ಧಾಂತಿ. ೧೭೪).
[ತೋಳು (<ತೋಳ್) + ತೊಡಿಗೆ (<ತೊಡುಗೆ)]

ತೋಳುಬಂದಿ (ನಾ). = ತೋಳುತೊಡಿಗೆ: ತೋಳುಬಂಧನದಲ್ಲಿ ವಜ್ರದ ತೋಳುಬಂದಿಯು ಅಲಂಕೃತವಾಗಿದ್ದಿತು (ಶ್ರೀರಾಯ. ೨೩೨); ಶ್ಯಾಮರಾಯನಿಗೇ ಒತ್ತಿ ಒಗೆದ, ಬೆಳ್ಳಿಯ ತೋಳುಬಂದಿಯನ್ನು ಬಿಡಿಸಿಕೊಂಡು ತಂದ (ದೀಪಹ. II, ೧೪೩). [ತೋಳು (<ತೋಳ್) + ಬಂದಿ$_1$]

ತೋಳುಮರ (ನಾ). ೧. ಗಾಡಿಯ ಮೂಕಿಗೂ ತೊಟ್ಟಿಲಿಗೂ ಸಂಬಂಧವನ್ನು ಕಲ್ಪಿಸುವ ಮರದ ಸಾಧನ: ಅನುಕರ್ಷಃ, ದಾರ್ವಧಸ್ಥಂ - ಆ ನೊಗದ ಕೆಳಗಿರುವ ಕೋಳೀಹಲಿಗೆಗೂ ತೋಳುಮರಕ್ಕೂ . . . ಹೆಸರು (ಸಿದ್ಧಾಂತಿ. ೨೫೪). ೨. ದಾರಿಯನ್ನು ತೋರಿಸುವ ಕೈಯಾಕಾರದ ಮರದ ಸಾಧನ; ಕೈಮರ: ಆ ತೋಳುಮರದಿಂದ ಊರು ಮೂರು ಮೈಲಿಯಿದೆ (ರೂಢಿ). [ತೋಳು (<ತೋಳ್) + ಮರ$_1$]

ತೋಳುವಲ 'ತೋಳ್ವಲ' ನೋ.

ತೋಳುವಲೆ 'ತೋಳ್ವಲೆ' ನೋ.

ತೋಳುವಳೆ 'ತೋಳ್ವಳೆ' ನೋ.

ತೋಳುವೆರಗು 'ತೋಳ್ವೆಱಗು' ನೋ.

ತೋಳೆ 'ತೋಲೆ' ನೋ.

ತೋಳೆಡೆಗೊಡು (ಕ್ರಿ). (ತೋಳನ್ನು ದಿಂಬಾಗಿ ಮಾಡಿಕೊಂಡು) ನಿದ್ದೆ ಮಾಡು,- ಮಲಗು: ರಜನೀನಾರಿ ತೋಳೆಡೆಗೊಟ್ಟಳಂಬುಜಬಂಧು ಹೊಱವಂಟ (ಕುವ್ಯಾದ್ರೋ. ೧೮-೪೫). [ತೋಳ್ + ಎಡೆಗೊಡು]

ತೋಳೆವಿಂಡು (ನಾ). ಬಾವಲಿಗಳ ಸಮೂಹ,-ಗುಂಪು: ಬಿಲ್ವಡೆ ಪೊಕ್ಕಿಸೆ ಬಾಣಸಂಕುಲಂ ಕವಿದುವು ತೋಳೆ[ಪಾಠಾಂ. ಳ]ವಿಂಡು ಕವಿವಂತೆಲೆಯಿಕ್ಕಿದ ಕಾನನಂಗಳಂ (ಪಂಠಾಮಾ. ೧೩-೪೩). [ತೋಳೆ (<ತೋಲೆ) + ಪಿಂಡು$_2$]

ತೋಳೇರಿಸು (ಕ್ರಿ). ಅಂಗಿಯಂ ತೋಳನ್ನು ಮೇಲೆತ್ತು; ಜಗಳಕ್ಕೆ ಸಿದ್ಧವಾಗು: ನೀನು ಇನ್ನೊಂದು ಮಾತಾಡಿದರೆ ಆ ಮಾತಿನ ಕೊನೆಯುಸುರಿನ ಸಂಗಡ ಪ್ರಾಣವನ್ನು ಕಳೆದುಕೊಳ್ಳುವೆಯೆಂದು ತಿಳಿ ಎಂದು ತೋಳೇರಿಸಿದನು (ಜಯಂತ. ೨೯೫). [ತೋಳು (<ತೋಳ್) + ಏರಿಸು (<ಏಱಿಸು)]

ತೋಳ್ಕಟ್ಟು 'ತೋಳ್ಗಟ್ಟು' ನೋ.

ತೋಳ್ಕೈಗೊಡು 'ತೋಳ್ಗೈಗೊಡು' ನೋ.

ತೋಳ್ಗಟ್ಟು, ತೋಳ್ಕಟ್ಟು (ನಾ). ತೋಳುಬಂದಿ: ಎಡೆಯೆಡೆಗೆ ಸಜ್ಜುಕವೆನಿಸಿದ ಗೊಜ್ಜಗೆಯರಲ ಮಿಶ್ರದಿನುಪಾಶ್ರಯಂಬಡೆದ ಹೇಮತಾಮರಸದ ಮೊಗ್ಗೆಯ ತೋಳ್ಗಟ್ಟುಗಳು ಮಂ (ಜಗವಿ. ೬-೧೬ ಪ). **ತೋಳ್ಕಟ್ಟು**: "ಕೇಯೂರಂ, ಅಂಗದಂ — ಈ ೨ ತೋಳ್ಕಟ್ಟು" (ಹಲಾಯು. ೯೧-೪೦೩).
[ತೋಳ್ + ಕಟ್ಟು$_2$]

ತೋಳ್ಗುಟ್ಟು(ಕ್ರಿ). ತೋಳು ತಟ್ಟು; ಸಡ್ಡು ಹೊಡೆ: ತೋಳ್ಗುಟ್ಟುತಾರ್ದು ಸುಮ್ಮಾನದಿಂ ಪಟುಭಟಕೋಳ್ಗೊಂಡು ಕುದಿಯುತಿರ್ದರು (ಜೈಮಿಭಾ. ೧೨-೫). [ತೋಳ್ + ಕುಟ್ಟು$_1$]

ತೋಳ್ಗೈಗೊಡು, ತೋಳುಕಯ್ಗೊಡು, ತೋಳುಕೈಗೊಡು, ತೋಳ್ಕೈಗೊಡು (ಕ್ರಿ). ಗಂಡನ ಚಿತೆಯೇರಿ ಸಹಗಮನ ಮಾಡು; ಮಹಾಸತಿಯಾಗು: ಅಷ್ಟಮಹಿಷಿಯರ್ ಕೃಷ್ಣನೊಡನೆ ... ತೋಳ್ಗೈಗೊಟ್ಟರು (ಪದ್ಮಠಾ. ೧೦-೧೫೨). **ತೋಳುಕಯ್ಗೊಡು**: ಆ ಬೊಮೆನಾಯ್ಕನ ಹೆಂಡತಿ × × ಬವೆನಾಯಕಿತ್ತಿ ತೋಳುಕಯ್‌ಗೊಟ್ಟು ಸಗ್ಗ ಪ್ರಾಪ್ತರಾದರು (ಎಕ. VII, ಶಿವಮೊ. ೬೦-೧೪; 1287). **ತೋಳುಕೈಗೊಡು**: ಗಂಗಗೌಡನ ಸೊಸೆ ಮಗಸಿ ತಿಪುರಊಡದಲಿ ? ತೋಳುಕೈಗೊಟ್ಟಳು (ಮೈಆರಿ. ೧೯೩೬, ೬೦-೪; 16 ನೆಯ ಶತ). **ತೋಳ್ಕೈಗೊಡು**: ತಲೆಗಿರಿದು ಕೃಷ್ಣಂಗೆ ತಲೆಗೊಳ್ಳಿಯಿಱಿ ದೊಡವನಳಲಿ ಕಿಚ್ಚಂ ಪಾಯ್ದರಚ್ಯುತನೊಳು ಕಲಿ ರುಕ್ಮಿಣಿಪ್ರತತಿ ಬಲನೊಳಾ ರೋಹಿಣಿಯುಮೊಲಿದು ತೋಳ್ಕೈಗೊಟ್ಟುದುಮಂ (ಸಾನಂಚ. ೨-೧೧೮). [ತೋಳ್ + ಕೈ$_2$ (<ಕೆಯ್$_2$) + ಕೊಡು$_1$]

ತೋಳ್ತಿಂಡಿ (ನಾ). ತೋಳಿನ ತೀಟೆ,-ನವೆ: ತಮ್ಮ ತೋಳ್ತಿಂಡಿಯನ್ನು ತೀರಿಸುವುದಕ್ಕೆ ಎಷ್ಟು ಹೆಚ್ಚು ಸಂದರ್ಭಗಳು ಒದಗುವುವೊ ಅಷ್ಟು ಅವರಿಗೆ ಆನಂದ (ಕರತ್ನ. ೩೪). [ತೋಳು (<ತೋಳ್) + ತಿಂಡಿ]

ತೋಳ್ದಲೆ (ನಾ). ಹೆಗಲು: "ತೋಳ್ದಲೆಯೆಂದುಂ ಮುಯ್ಪೆಂದುಂ ಭುಜಾಗ್ರಂ" (ಕಶಸಾ. ೩೦-೬೨). [ತೋಳ್ + ತಲೆ$_1$]

ತೋಳ್ದೀಂಟೆ (ನಾ). = ತೋಳ್ತಿಂಡಿ: ಸುಧನ್ವಂ . . . ಇಂದೆನ್ನ ತೋಳ್ದೀಂಟೆಯಂ ಕಳೆವೆನೆನುತೆ ಕೃಷ್ಣಾರ್ಜುನರ ಸರಿಸಕೈತರುತಿರ್ದನು (ಜೈಮಿಭಾ. ೧೪-೧). [ತೋಳ್ + ತೀಂಟೆ$_1$]

ತೋಳ್ದೀನ್ (ನಾ). = ತೋಳ್ತಿಂಡಿ: ತೋಳ್ದೀನಂ ಕಳೆದು ತಂದವೆಂ ಪಂದಲೆಯಂ (ಚಂದ್ರಪು. ೧೦-೯೦). [ತೋಳ್ + ತೀನ್]

ತೋಳ್ದುಱುಗಲ್ (ನಾ). ತೋಳುಗಳ ಸಮೂಹ,-ಗುಂಪು: ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಱುಗಲ್ಗಳೊಳ್ ಪಳಂಚದೆ . . . ಏಂ ಪದುಳಮಾದುದೊ ದಿವ್ಯವಧೂಕದಂಬಕಂ (ಆದಿಪು. ೬-೧೨೫); ಎನಗೆ ನಭಂ ದಿಕ್ತಟಮಿನ್ನೆನಿತಂತರಮೆಂದು ನಿಳ್ಕಿ ನೋಡುವ ಗಿರಿರಾಜನ ತೋಳ್ದುಱುಗಲೆನಲ್ ನೀಳ್ದನೇಕಶಾಖೆಗಳಿನೆಸೆದುದೊಂದು ಕದಂಬಂ (ಜಗವಿ. ೮-೨೪). [ತೋಳ್ + ತುಱುಗಲ್ (<ತುಱುಂಗಲ್)]

ತೋಳ್ನಾಯಿ (ನಾ). ಒಂದಂ ಬಗೆಯ ದೊಡ್ಡಗಾತ್ರದ ನಾಯಿ; ತೋಳದಂಥ ನಾಯಿ: ಉದಕಮಂಡಲದಿಂದ ಹೊಸದಾಗಿ ತಂದಿದ್ದ ಅಲ್ಶೇಶನ್ ತೋಳ್ನಾಯಿ ಅವರನ್ನು ಅಡ್ಡಾಡಿಸಲು ಕರೆದೊಯ್ದಿದೆ (ಬಾಕೂಟ. ೨೪). 'ಸೀಳ್ನಾಯಿ' ಪರಾ. [<ತೋಳ$_1$ + ನಾಯಿ (<ನಾಯ್)]

ತೋಳ್ನೆರ (ನಾ). ತೋಳಿನ ನೆರವು,-ಆಸರೆ,-ಆಶ್ರಯ: ದಶರಥಂ ಪುಟ್ಟಿ, ಪಟಿ ಪೊರ್ದದ ಬಟಿಯಱಂ ಕಳೆಗುಂದದ ತೋಳ್ನೆರಂ ತನ್ನೊಳಾಗೆ . . . ತಿರೆಯಂ ಪೊರೆಯುತೆ (ರಾಮಾಶ್ವ. ೬-೧೧). [ತೋಳ್ + ನೆರ$_2$]

ತೋಳ್ಬೊಯ್ 'ತೋಳ್ವೊಯ್' ನೋ.

ತೋಳ್ಬಲ 'ತೋಳ್ವಲ' ನೋ.

ತೋಳ್ಬಲ್ಬು 'ತೋಳ್ವಲ್ಬು' ನೋ.

ತೋಳ್ಬಲ್ಮೆ 'ತೋಳ್ವಲ್ಮೆ' ನೋ.

ತೋಳ್ಮಾಲೆ (ನಾ). ತೋಳಿಗೆ ಕಟ್ಟುವ ಹಾರ; (ಹೂವಿನ) ತೋಳುಬಂದಿ: ತೊಳಪ ಚೆಂಗಣಿಗಿಲೆಯ ತೋಳ್ಮಾಲೆಗಳನಿಕ್ಕಿ ಬೆಳಪ ಸಪುರಪ್ರಕರ ದುತ್ತರಿಗೆಯುಮನಿಕ್ಕಿ ಮಂಗಳವಿಳಾಸಮಂ ಮಾಡಿ (ನಂಬಿರ. ೫-೬೩).
[ತೋಳ್ + ಮಾಲೆ]

ತೋಳ್ಮುರಿ (ನಾ). ತೋಳುಬಂದಿ: ಗೆಜ್ಜೆ ಪದಸರ ಕಂಠಿ ಪದಕ ತೋಳ್ಮುರಿ ಹಸ್ತವಲಯ (ಜನಮು. ೪-೨). [ತೋಳ್ + ಮುರಿ$_3$]

ತೋಳ್ಮೊದಲ್, ತೋಳ್ಮೊದಲು (ನಾ). ೧. ಬಾಹುಮೂಲ; ಕಂಕುಳು: ಅಲರ್ವಿಲ್ಲನ ಬಾಳ್ಮೊದಲಾದ ತೋಳ್ಮೊದಲ್ ತುಳ್ಕುವ ನುಣ್ಪನೀಕ್ಷಿಪಳಿಪಂ ಬಗೆಯೊಳ್ ಮಿಗೆ ಕಾದು ಕಾದಲಂ (ಚಂದ್ರಪು. ೭-೧೦೧). **ತೋಳ್ಮೊದಲು**: ೨. ಭುಜ: ತೋಳ್ಮೊದಲನಂಗಯ್ಗಳಿಂ ಚಪ್ಪರಿಸಿ ತೋರ ತೊಡೆಗಳ ನಪ್ಪಳಿಸಿ...ನಿಮಿರಿನಿಂತನು (ಶ್ರೀರಾಮಾ. ೪೫೭-೩೩೮). [ತೋಳ್+ಮೊದಲ್]

ತೋಳ್ಮೊದಲು 'ತೋಳ್ಮೊದಲ್' ನೋ.

ತೋಳ್ವಂಕಿ (ನಾ). ತೋಳುಬಂದಿ: ಜೂಳೆಯ...ತಾಳೆಹೂ ಬೆಂಬಚ್ಚೆದಂಡೆ ತೋಳೊಂಕೆ [ತೋಳ್ವಂಕಿ] ಕರ್ಣಕೆ ಸರಪಣಿ ಮೊದಲಾಗಿ ಬಾಲೆಗಾಭರಣ ವೊಪ್ಪಿದುವು (ಭರಚ. ೪೦-೬೫). [ತೋಳ್ + ವಂಕಿ]

ತೋಳ್ವಚ್ಚ (ನಾ). ತೋಳಿನ ಆಭರಣ; ಕೇಯೂರ; ಅಂಗದ: ಮುತ್ತಿನೆಕ್ಕಸರಂಗಳುಂ ... ಪಚ್ಚೆಯ ತೋಳ್ವಚ್ಚಂಗಳುಂ ಕೆಂಬರಲ ಕಡಗಂಗಳುಂ (ಚಿಕವಂ. ೬೦-೧೦). [ತೋಳ್ + ಪಚ್ಚ$_2$]

ತೋಳ್ವಲ, ತೋಳುವಲ, ತೋಳ್ಬಲ, ತೋಟ್ವಲ (ನಾ). ಬಾಹುಬಲ; ಭುಜದ ಶಕ್ತಿ; ತೋಳಿನ ಕಸುವು: ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನ ಗುಂಟೆ (ಪಂಪಭಾ. ೧೦-೨೩); ತನ್ನೊಂದೆ ತೋಳ್ವಲದಿಂ ಭೂತಳಮಂ ನಿಮಿರ್ಚಿ (ಎಕ. VIII, ಸೊರಬ. ೧೮೪-೨೦; 1033 ?); ಬಿಸುಗಣ್ಗೊರವಂ ಕಾವನ ತೋಳ್ವಲಮನಱಿವೆನೆಂದೇಟ್ಟಂದಂ (ಕಬ್ಬಿಕಾ. ೨೯೦); ಬಲಕ್ಕೆ-ಆಳ್ವಲ (ಆಳ್ಬಲ), ತೋಳ್ವಲ (ತೋಳ್ಬಲ) (ಶಮದ. ೨೯೮ ಪ್ರಯೋ); ಶರಧಿಯನು ತೋಳ್ವಲದೊಳೀಸುವೊಡುರವಣಿಪ ಮರುಳಂತೆ (ಸಾಳ್ಕಥಾ. ೧-೩೬). **ತೋಳುವಲ:** ತಂನುವ ತೋಳುವಲವೆನೆ ಸಾಧಯಿಸಿತ್ತನೆ (ಬೊಂಕಶಾ. ೧೯೨೯, ನವಲುಗುಂದ. ೨೦೭-೨೨; 1184); ತೋಳುವಲಕಿದಿರಿಲ್ಲ ಬಿನುಗು ನೃಪಾಲನೆಲವೋ ಕರ್ಣ ಫಡಫಡ ಮೇಳವಾದರೆ ಮೊಗೆವೆ ನರುಣಾಂಬುವನು ನಿನ್ನೊಡಲ (ಕುಪ್ಪಾದ್ರೋ. ೧೩-೨೫). **ತೋಳ್ಬಲ:** ಸಂದ ತೋಳ್ಬಲದದಟಂ ಪರಾಭವಮನೇಕೆಯೊ ಸೈರಿಸುವಂ ಬಲಸ್ಥನೊಳ್ ಬಲಮನೆ ಪೂಣ್ವುದುಂ ಪರಿಭವಕ್ಕೆ ಮೊದಲ್ (ಆದಿಪು ೧೨-೦೦೩). △ **ತೋಟ್ವಲ:** ಅಸಹಾಯಶೂರನಾಂತರನಿಱಿದಟ್ಟೆಯಾಡಿಸಿದ ತೋಟ್ವಲದಿಂ (ಎಕ. VI, ತರೀಕೆ. ೪೫-೪೭; 1196). [ತೋಳ್ + ಬಲ$_2$]

ತೋಳ್ವಲಯ (ನಾ). ತೋಳಿಗೆ ಧರಿಸುವ ಬಳೆ; ತೋಳ್ಬಳೆ: ಮುಯ್ಪಿನೊಳಮರ್ಚುವ ಮೃಣಾಳದ ತೋಳ್ವಲಯಂಗಳೊಳಂ ಬಾಟಿಯ ತಿರುಳೆಲೆಯ ಬಿಜ್ಜಣಿಗೆಗಳೊಳಮೆಸಟ ಪಸೆಗಳೊಳಂ ಎಂತುಮಾ ಸಂತಾಪಮಂ ಸಂತಯಿಸಲಾಱದೆ (ಕಾದಂಉ. ೭೭೫).

[ತೋಳ್ + ವಲಯ]

ತೋಳ್ವಲೆ, ತೋಳುವಲೆ (ನಾ). ೧. ಬಾಹುಬಂಧನ; ತೋಳಿನ ಸೆರೆ; ತೋಳಿನ ಹಿಡಿತ: ನಿನ್ನನುಜರಂ ಕಂಡೆಂತುಮೇನೆನ್ನ ತೋಳ್ವಲೆಯೊಳ್ ಸಿಲ್ಕಿದೆಯೆಂದು ಮೂದಲಿಪುದುಂ (ಪಂಪಭಾ. ೧೩-೧೪೬); ದಶಾಸ್ಯದೇವೋತ್ತಮ ಕಾಮಿನೀಜನದ ತೋಳ್ವಲೆಯೊಳ್ ತೊಡರಲ್ಕೆ ತಕ್ಕುದೇ (ಪಂರಾಮಾ. ೧೪-೨೦೦). **ತೋಳುವಲೆ:** ೧. ಭೀಮಸೇನನ ತೋಳುವಲೆಯಲಿ ಸಿಕ್ಕಿದನು ಭೂಪಾಲ (ಕುಪ್ಪಾಕ. ೧೩-೪೮). ೨. ಒಂದು ಬಗೆಯ ಬಲೆ: ತೊಡರ್ಚುವಲೆ ತೋಳುವಲೆ ಮರೆವಲೆ ಸಗಾಢವಲೆಗಳ ಹೊಱಿಗಳೋಳಿಯಂ ಪೊತ್ತು ನಡೆತಂದುದು ಪುಳಿಂದರೂಪದಲಿ ಭೂತಗಣಂಗಳು (ಸೌಂದಪು. ೧೮-೩೯). [ತೋಳ್ + ಬಲೆ$_1$]

ತೋಳ್ವಲ್ಬು, ತೋಳ್ಬಲ್ಬು (ನಾ).=ತೋಳ್ವಲ: ಮೊದಲೊಳು ಹೊಯ್ಸಳ ರಾಜ್ಯಲಕ್ಷ್ಮಿಯೊದವಂ ತೋಳ್ವಲ್ಬಿನಿಂ ತಾಳ್ದಿ(ದಂ) (ಎಕ. VI, ತರೀಕೆ. ೬೦-೫; 1154 ?). **ತೋಳ್ಬಲ್ಬು:** ಮಾಱುಾಂತಿಭಮಟ್ಗಿ ಪಾಟ್ಮನೆಯ ಪೋಲ್ ಬೀಟ್ವನ್ನೆಗಂ ಪೊಯ್ದು ಕೊಲ್ಲದೆ ಬಿಲ್ಬಲ್ಮೆಗೆ ಗೇಣ ಬಿನ್ನಣಕೆ ತೋಳ್ಬಲ್ಬಿಂಗೆ ಮುಯ್ಯಾಂಪುದೇ (ಪರ್ಧಪು. ೭-೪೮); ದುರ್ಗವನ್ನು ಹೈದರ್‌ಅಲ್ಲಿಯು ಮುತ್ತಿದಾಗ ಈ ಸಂಹಿಣಿಯು ತನ್ನ ತೋಳ್ಬಲ್ಬಿನಿಂದ ಕೆಲವು ಕಾಲ ಹೈದರ್‌ಅಲ್ಲಿಯ ಸೇನಾಶರಧಿಯನ್ನು ತಡೆದು ಹಿಡಿದಳು (ಕವೀರ. ೧೪೧). [ತೋಳ್ + ಬಲ್ಬು]

ತೋಳ್ವಲ್ಮೆ, ತೋಳ್ಬಲ್ಮೆ (ನಾ). ಬಾಹುಬಲ; ಭುಜಪರಾಕ್ರಮ: ಆಳ್ವಲ್ಮೆ; ತೋಳ್ವಲ್ಮೆ (ಶಮದ. ೬೭ ಪ್ರಯೋ). **ತೋಳ್ಬಲ್ಮೆ:** ನಿನ್ನ ಕೈಹಿಡಿತವೂ ತೋಳ್ಬಲ್ಮೆಯೂ ಕಡಿಮೆಯಾಗಿ ಹೋಯಿತೇ? ಗಾಂಡೀವ ತನ್ನ ಸತ್ವವನ್ನು ಕಳೆದುಕೊಂಡಿತೋ? (ವ್ಯಾಸಕಿ. ೪೦೨).

[ತೋಳ್ + ಬಲ್ಮೆ]

ತೋಳ್ವಳೆ, ತೋಳುವಳೆ (ನಾ). ತೋಳಂಬಂದಿ: ವನಕುಸುಮಂಗಳಂ ... ಮುಗುಳ್ಸರಿಗೆ ತೋಳ್ವಳೆ ಕಂಕಣವಾರವೆಂದು ಬೇಟ್ಪನಿತನೆ ಮಾಡಿತೊಟ್ಟು ಕರಮೊಪ್ಪಿದಳ್ (ಪಂಪಭಾ. ೨-೧೬); ಮಣಿಮೇಖಳೆ ಮಕರ ಕುಂಡಳಂ ತೋಳ್ವಳೆಯೆಂಬಿವನವರ್ಗೆ ಭೂಷಣಾಂಗಂ ಕುಡುಗುಂ (ಶಾಂತಿಪು. ೬-೧೧೦); ಶೀತಳಿಕೆಯ ಚಾಮರಂ ಪೊಸ ಮೃಣಾಳದ ತೋಳ್ವಳೆ ಮುತ್ತಿನಾರಂ ... ಕಣ್ಗೊಳೆ (ಕಾದಂಉ. ೪೫೯). **ತೋಳುವಳೆ:** ಕುಡುದಾಡೆ ತೋಳುವಳೆ ಪಾವುಕಯ್ಯ (ಬೊಂಕಶಾ. ೧೯೩೩, ಹಾವೇರಿ. ೧೪೫-೦; ?). [ತೋಳ್ + ಬಳೆ$_2$]

ತೋಳ್ವಾಸ (ನಾ). ೧. ಬಾಹುಬಂಧನ; ತೋಳಿನ ಪಾಶ; ಅಪ್ಪುಗೆ: ಮೆಯ್ಯಟಲಾಱುವನ್ನಮವನಂ ತೋಳ್ವಾಸದೊಳ್ ಕಟ್ಟಿ ತೂಗದೊಡಂ ಪೇಟ್ ಮೊಲೆಪೊತ್ತೆನೇ ಅವನ ವೇಷಂಬೊತ್ತೆನಬ್ಬಾನನೇ (ಲೀಲಾವ. ೧೧-೭೮); ಆತ್ಮೇಶನಂ ಕಾಣುತನ್ಮಳ ಸಂಗಕ್ಕೊಳಗಾಗಿ ಬಂದನೆನುತುಂ ಕಾಯ್ಬೇಱಿ ತೋಳ್ವಾಸದಿಂದೆಳೆದಾ ಕೋಮಳೆಯೋರ್ವಳೊತ್ತಿ ಬಿಗಿದಳ್ ಶೀತಾತುರಂ ಪೋಪಿನಂ (ರಾಜಶೇ. ೯-೩೨). ೨. ಒಂದು ಬಗೆಯ ತೋಳಿನ ಆಭರಣ; ಬಾಹುಪೂರ: ತರುಣರೀರ್ವರ್ಗಮೊಪ್ಪುವ ಶೀರ್ಷಕಂಗಳಂ ಮೆಱೆವ ಭುಜಕೀರ್ತಿ ತೋಳ್ವಾಸ ನಡುಗಟ್ಟುಗಳನೊರೆಯ ಕರವಾಲಗಳ ಶರಶರಾಶ್ರಯಚಾಪಯುಗ್ಮಮಂ ಕರದೊಳಾಂತು (ಭರಜ. ೩-೦೩).

[ತೋಳ್ + ಪಾಸ$_1$]

ತೋಳ್ವಿಡಿ (ಕ್ರಿ). ತೋಳನ್ನು ಚಾಚು; ಕೈಚಾಚು: ಉಗ್ರಕಣ್ಣಿಂದೆ ಕಾಮನ ಸುಟ್ಟು ಮನಸಿಜವಿಗ್ರಹವನು ಮಾಡಿಕೊಟ್ಟ ನಿಗ್ರಹದಿಂದೆ ತೋಳ್ವಿಡಿದಡೆ ಶಾಪಾನುಗ್ರಹದಿಂದೆ ಭಂಗಿಸುವೆ (ಮೋಹತ. ೧೦-೨೮).

[ತೋಳ್ + ಪಿಡಿ$_1$]

ತೋಳ್ವಿಸುಗೆ (ನಾ). ತೋಳಿನ ಬೆಸುಗೆ,-ಬಂಧನ: ವೀರಾಂಗನೆ ಕಡ್ಡೆ ತೋಳ್ವಿಸುಗೆಯೊಳ್ನೇರ್ಪಟ್ಟು ನಿಲ್ವನ್ನಳೇ (ಪಂರಾಮಾ. ೦೨-೬೦).

[ತೋಳ್ + ಬಿಸುಗೆ <ಬೆಸುಗೆ]

ತೋಳ್ವೀಸಲು (ನಾ). ತೋಳನ್ನು ಬೀಸುವಿಕೆ: ಬೆರಲ್ಮಿಡಿತ ತಲೆದೂಕ ತೊಡೆವೊಯ್ಲು ಮುಡುಹಿನಾಟ ತೋಳ್ವೀಸಲು ಭ್ರೂಲೀಲೆ ನಯನಚೇಷ್ಟೆ ಇತ್ಯಾದಿಗಳ ... ಸುಮ್ಮಾನ ಸಂತೋಷೋತ್ಸಾಹಗಳಲ್ಲಿರುವರು (ಬೆಟ್ಟಅ. ೭೦-೧೯). [ತೋಳ್ + ಬೀಸಲು]

ತೋಳ್ವೆಱಗು, ತೋಳುವೆರಗು (ನಾ). ತೋಳಿನ ಹಿಂಭಾಗ: ಪ್ರಣಯ ಕಲಹಕೇಳಿಯಿಂ ವಿಜಯಶ್ರೀಯಂ ಜನಿಸುವಂತೆ ತೋಳ್ವೆರ[ಱ]ಗ ನಪ್ಪುಕೆಯ್ದು (ಪಂರಾಮಾ. ೩-೯ ವ); ಶ್ರೀಗೆರ್ದೆವತ್ತುಗೆ ವರವಾಕ್ಪ್ರೀಗೆ ನಿಜಂ ಸುಮುಖವೃತ್ತಿ ತೋಳ್ವೆರ[ಱ]ಗು ಜಯಶ್ರೀಗೊಲವನೀಯೆ ನೆಗಟ್ದಂ ಭೂಗಧಿಪತಿ (ಚಂದ್ರಪು. ೨-೧); ಶ್ರೀಯಂ ಕೂರಿಸಿ ವಿಜಯಶ್ರೀಯಂ ತೋಳ್ವೆರೆ[ಱ]ಗಿನೊಳ್ ಮನಂಗೊಳಿಸಿ ... ನೆಗಟ್ದಂ ವಿನೇಯಜನಮುಖತಿಲಕಂ (ಅನಂಪು. ೮-೧); ಜಯಶ್ರೀ ಮನಂಗೊಳ್ವಿನಂ ತೋಳ್ವೆರ[ಱ]ಗಂ ಪಾರ್ದಿರ್ಪ ದರ್ಪೋನ್ನತಿ (ಧರ್ಮನಾ. ೨-೧೪೩). **ತೋಳುವೆರಗು:** ವೀರಲಕ್ಷ್ಮಿ ತೋಳುವೆರಗಿನೊಳೊಪ್ಪೆ (ಎಕ. VI, ಚಿಕ್ಕಮ. ೦೬೦-೪೩; 1137). [ತೋಳ್ + ಪೆಱಗು]

ತೋಳ್ವೊಯ್, ತೋಳ್ಪೊಯ್ (ಕ್ರಿ). ಭುಜವನ್ನು ತಟ್ಟು,-ಆಸ್ಫಾಳಿಸು: ಉಭಯಸುಭಟರ್ಗಳಾರ್ಭಟಿಸಿ ತೋಳ್ವೊಯ್ದು ಪಟುಭಟವಾಜಿವರ್ಗಮಂ ರಾವ್ತರಡ್ಡಾಡಿದರ್ (ಜಿಬಪು. ೨೪-೩); ರಾಮಾವತಾರದೊಳ್ದೇಹ ಮುಳ್ಳನಿತು ದಿನಮಾರ್ಜಿಸಿದ ಪುಣ್ಯಮಂ ರೂಹುಗಾಣಿಸಿಕೊಟ್ಟು ಶಕ್ತಿಯಂ ನೆಲೆಗೊಳಿಸಿ ಮುರಹರಂ ತೋಳ್ವೊಯ್ದನು (ಚೈಮಿಭಾ. ೧೩-೪೨). **ತೋಳ್ಪೊಯ್:** ಹೂಂಕರಿಸಿ ತೋಳ್ಪೊಯ್ದುತೆ ... ಬಂದುದು ಪದಾತಿಬಲಂ (ಜಿಬಪು. ೪೭-೩೭). [ತೋಳ್ + ಪೊಯ್$_1$]

ತೋಳ್ವೊಯ್ಲು (ನಾ). ಭುಜ ತಟ್ಟಿಕೊಳ್ಳುವಿಕೆ ; ಬಾಹುಸ್ಫಾಲನ : ತೋಳ್ವೊಯ್ಲು ತುಟಿವೆರಳ ಬೊಬ್ಬೆಗಳ ರಿಪುಗಳಂ ಸೀಳ್ವ ಸಡಗರದ . . . ಸಂಭ್ರಮವನಿರದೆ ಪಡೆಯೆರಡೀಕ್ಷಿಸುತ್ತಿರ್ದುವು (ಪಜಪು. ೩೬-೧೬).

[ತೋಳ್ + ಪೊಯ್ಲು]

ತೋಳ್ಸಾರ್ದು (ಕ್ರಿ). = ತೋಳ್ವಿಡಿ : ನೀನು ಆವ ಧೈರ್ಯದಿಂದ ಮನವೇರಿಸಿ ತೋಳ್ಸಾರ್ದಿದೆ ? (ಪಟ್ಟಿಅ. ೦೯-೦೦).

[ತೋಳ್ + ಸಾರ್ದು]

ತೋಳ್ಸುತ್ತು (ನಾ). ಬಾಹು ಬಂಧನ ; ಅಪ್ಪುಗೆ : ಜಿನನಂ ಸೋಲಿಪ ಪೆಂಡಿರಾರ್ ಪರಮನಂ ತೋಳ್ಸುತ್ತಿನೊಳ್ ಕಾವ ಕಾಮಿನಿಯಾರ್ (ಅನಂಪು. ೬-೩೪). [ತೋಳ್ + ಸುತ್ತು$_3$]

ತೋಳ್ಸೆರೆ (ನಾ). = ತೋಳ್ಸುತ್ತು : ಅವನ ತೋಳ್ಸೆರೆಯಲ್ಲಿ ನಾನು ಮಲಗಿದಾಗ . . . ಒಂದು ಬಗೆಯ ಅಮಲು ಬಂದಿತ್ತು (ಮೂಕಜ್ಜಿ. ೩೦೧). [ತೋಳ್ + ಸೆರೆ (<ಸೆಱೆ$_3$)]

ತೋಱು 'ತೋಱು' ನೋ.

ತೋಱಿಕೆ, ತೋರಿಕೆ (ನಾ). ೧. ಕಾಣಿಸುವಿಕೆ ; ತೋರುವಿಕೆ ; ಹೊರನೋಟ : ತೋಱುವೀ ತೋಱಿಕೆಯ ತುಷವನು ತೂಱಿದರೆ ಮೇಣ್ ವಿಶ್ವಮುಖದಲಿ ತೋಱಿ ತೋಱದೆ ಮೆಱೆವನೀ ಹರಿಯೆಂದನಾ ಭೀಷ್ಮ (ಕುಮ್ಮಾಸ. ೯-೧೨) ; ತೋಱುವೀ ತೋಱಿಕೆಯೊಳಗೆ ಸಲೆ ವಿ ಱಿ ತೋಱುವ ನಿಜವನಱಿಯದ ಗಾಱುಗಳು ನೀವ್ ಪಶುಗಳೆಂದರೆ ಪೇದ ವೇಕೆಂದ (ಕುಮ್ಮಾಕ. ೭-೨೩) ; ಭೇದಾಭೇದದಿಂದ ತೋಱುವ ತೋಱಿಕೆಗಳೇನೂ ಇಲ್ಲದಂದು ಅಖಂಡೇಶ್ವರಾ ನಿಮ್ಮ ನೀವಱಿಯದೆ ಅನಂತಕಾಲ ವಿರ್ದಿರಂದು (ಅಖಂಡೇ. ೧-೧). ೨. ಸಾದೃಶ್ಯ ; ಹೋಲಿಕೆ : ತೋಱಿದವು ಗರ್ಭಗಳು ಶುಕ್ತಿಯ ತೋಱಿಕೆಯ ಮೌಕ್ತಿಕದವೊಲು (ತೊರಕಾ. ೧-೮-೨). ೩. ದೃಶ್ಯ ; ನೋಟ : ಕಂಪಿನ ತನಿರಸದ ತಾವರೆಯ ತೆಕ್ಕೆಯ ತೋಳ ತೋಱಿಕೆಯ ಜನುಗುದುಂಬಿಯ ಜಾಳಿಗೆಯ ತನಿವಿನುಗುವೋಱಿಯ ಕಣ್ಣ ಕೆಂಪಿನ ಘನಭಯಂಕರರೂಪ ಭೀಮನ ಕಂಡನವನೀಶ (ಕುಮ್ಮಾಅ. ೧೧-೪). ೪. ಆಂದ ; ಚೆಂದ : ಮೂಱುಂ ರೇಖೆಗಳಿಂದಂ ತೋಱಿಕೆಯಂ ಪಡೆದು ಸೊಗಸನೀವುತ್ತಿರ್ದಾ ನೀಱಿಯ ಕೊರಳತಿಶಯಿತಂ ಮಾಱುಂಗೊಂಡುದು ನೃಪಾಳತಿಳಕನ ಮನಮಂ (ಜಾಧಪು. ೨-೪೩).

ತೋರಿಕೆ : ೧. ಇಂದ್ರಿಯಗಳು ತೋರಿಕೆಯ ಪ್ರಪಂಚವನ್ನು ಅರಿಯಲು ಮಾತ್ರ ಸಹಾಯ ಮಾಡುತ್ತವೆ (ತತ್ಪ್ರಾ. ೦೦). ೨. ಆಡಂಬರ ; ದಂಬ ; ನಟನೆ : ತೋರಿಕೆಯ ಪ್ರವೃತ್ತಿ ಅವರದು (ಕುರಿ. ೮೩).

[ತೋಱು + ಇಕೆ]

ತೋಱಿಕೆವೆಱು (ಕ್ರಿ). ಕಾಂತಿ ಹೊಂದು ; ಥಳಥಳಿಸು ; ಹೊಳೆ : ತೋಱಿಕೆವೆತ್ತ ಭೂರಿತರ ಬಾಡವಸಂಸ್ಥಿತಿಯಿಂದವೊಪ್ಪಿ ಕೂರ್ವೇಱಿದ ಶೀರದಂಬುಗಳನೆಯ್ದೊಳಕೊಂಡು . . . ಅಗುರ್ವನದಿತ್ತುದಾಕ್ಷಣಂ (ಜಾಧಪು. ೦೩-೪೦). [ತೋಱಿಕೆ + ಪೆಱು$_1$]

ತೋಱಿಸು, ತೋರಿಸು (ಕ್ರಿ). ೧. ಕಾಣಿಸು ; ದೃಷ್ಟಿಗೆ ಬೀಳುವಂತೆ ಮಾಡು : ತನುವನದೊರ್ಮೆಯುಂ ಮಗುಟ್ಟು ತೋ ಱಿ ಸ ಲಾ ಱ ನೆ (ಕಾದಂಱು. ೫೬೬) ; ಮಹಾನುಭಾವರ ತೋಱಿಸು ಕೂಡಲಸಂಗಮದೇವಾ (ಬಸವ. ೦೮೨) ; ಧುರದೊಳಹಿತಖಿಳೋತ್ತಮರ ದುರ್ಧರದ ಶಿರಖಂಡನವ ನೆಮ್ಮಯ ಸರಳ ಮೊನೆಯಲಿ ತೋಱಿಸುವೆವಿದ ನಂಬಿ ನೀವೆಂದ (ತೊರಕಾ. ೦-೮-೬೬) ; ಬೆಂಬಣ್ಣ ಮಾಂದಳಿರಸುಗೆ ಪುನ್ನಾಗ ದಾಳಿಂಬ ಶ್ರಮಣವೃಷ್ಟಗಳು ಮುಂಬಾಗದೆ ತೋಱಿಸುವ ವಸಂತನನಿದಿರ್ಗೊಂಬಂತೆ ಬನದಿ ರಂಜಿಸಿತು (ಪೋಹತ. ೪-೪೯). ೨. ಪ್ರಕಟಿಸು ; ವ್ಯಕ್ತಪಡಿಸು ; ಪ್ರದರ್ಶಿಸು : ಶ್ರುತಸಾಗರದ್ವಿಜವರಂ . . . ಅನೇಕವಿಧಶಾಸ್ತ್ರಪ್ರೌಢಿಯಂ ನಾಡೆ ತೋಱಿಸುತಿರ್ದಂ (ಕುಸುವಾ. ೬-೫೧) ; ಲುಳಿಯ ಬಿಲುವಿದ್ಯಾ ಚಮತ್ಕೃತಿಯಳವು ಗರುಡಿಯೊಳಲ್ಲದೀ ರಿಪುಬಲಗೆ ತೋ ಱಿ ಸ ಬಹುದೆ (ಕುವ್ಯಾಭೀ. ೩-೫) ; ಜಯಸಿರಿಗೆ ನೀನೇ ಪತಿಯೆನಿಸಿ ತೋಱಿಸುವೆನೆಂದೆನು ಶಲ್ಯ ಕುರುಪತಿಗೆ (ಕುವ್ಯಾಕ. ೦-೩೭). ೩. ಕಾಣಿಸಿಕೊಳ್ಳು ; ವ್ಯಕ್ತವಾಗು : ನೊಸಲೊಳ್ ತೃತೀಯಲೋಚನಮೆಮಗುಂಟು ತೋಲಮಱಿಯಿಂದದು ತೋಱಿಪುದಿಲ್ಲ (ಕಾದಂಪೂ. ೫೬೮) ; ಸಮನಿಸಿ ತೋಱಿಸುಗುಮಿಮಿಂದ ಮಿಂದೆಯೆಂಬಿವು ತೃತೀಯೆಯೊಳ್ (ಕಮುದ. ೧೦೭). ೪. ಜವಾಬ್ದಾರಿ ಹೊರಿಸು ; ಗುರಿಮಾಡು : ಎಮ್ಮ ತೋಱಿಸಬೇಡ ಸುಖದಲ್ಲಿ ನಿಮ್ಮ ಚಿತ್ತಕೆ ಬಹುದ ಮಾಡುವುದು (ಕುವ್ಯಾಕ. ೧-೩೬). **ತೋರಿಸು**: ೧. ತಮ್ಮ ಬಾತುರ್ಯವನು ದೊಡ್ಡವರಿಗೆ ತೋರಿಸಬೇಕೆಂದು ಹುಡುಗರು ಸದಾ ಅಭಿಲಾಷಿಸುವರು (ರಾವಿಜ. ೩೨).

ತೋಱಿಸಿಕೊಡು, ತೋರಿಸಿಕೊಡು = ದೃಷ್ಟಿಗೆ ಬೀಳುವಂತೆ ಮಾಡಿಂ; ತಿಳಿಸು ; ಅರಿಯುವಂತೆ ಮಾಡು : ಈ ವಿರೋಧಿಯ ಕೆಡಹು ಸೂರ್ಯನ ನಾವು ತೋಱಿಸಿಕೊಡುವೆವು (ಕುವ್ಯಾದ್ರೋ. ೧೪-೩೮) ; ಸಾವಿರ ಸಾವಿರ ಶಿಷ್ಯರಿಗರಿವನು ತೋರಿಸಿಕೊಟ್ಟರು ತಂದೆ (ಇಂಡಾಪ. ೯-೩೪) ; ರಾಮಕೃಷ್ಣಪರಮಹಂಸ – ವಿವೇಕಾನಂದರು, ತಮ್ಮ ಬಾಳಿನೆಲ್ಲಿ, ಕೃತಿಗಳಲ್ಲಿ ಭಗವದ್ಗೀತೆಯ ರಹಸ್ಯವನ್ನು ತೋರಿಸಿಕೊಟ್ಟಿದ್ದಾರೆ (ಧರ್ಮಾಸಾ. ೦೨೭). [ತೋಱು + – ಇಸು$_5$]

ತೋಱು, ತೋರು, ತೋಱ್ (ಕ್ರಿ). ೧. ಕಾಣು ; ದೃಷ್ಟಿಗೆ ಬೀಳು ; ಗೋಚರವಾಗು : "ತೋಱು–ದರ್ಶನೇ" (ಶಮುಧಾ) ; ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ಮಂಜುವೊಲ್ಪೊೀಱಿ ಬೇಗಂ ಪಿರಿಗುಂ ಶ್ರೀರೂಪ ಲೀಲಾಧನವಿಭವಮಹಾರಾಶಿಗಳ್ನಿಲ್ಲವಾರ್ಗ್ಗಂ (ಎಳ. II,೮೮-೦; ಸು.700); ಮದನಾಟವಿಯಂತೆವೊಲೊಪ್ಪಿ ತೋಱಿದಳ್ (ಕಾವ್ಯಸಾ. ೬೦೨ ಕೂಡ್ರಳ) ; ಸಮುದಾಯಾರ್ಥಮನಾರಯೆ ಸಮನಿಸುವರ್ಥಪ್ರತೀತಿ ತೋಱಿದೊಡೆಲ್ಲಂ ಕ್ರಮಮಕ್ಕುಂ (ಕವಿರಾ. ೦-೭೭) ; ದುರ್ಗಾರ್ಣವಭೇನಪಾಂಡುರತೆಯಂ ಕಯ್ಕೊಂಡು ಬೆಳ್ದಿಂಗಳಂತಿರೆ ತೋಱಿತ್ತೆಸವೆತ್ತರೀಯವಸನಂ (ಕಾದಂಪೂ. ೮) ; ಸುರಭಿಜಂ ಜ್ಯೋತಿರಂಗಂ ಬೆಳಗೆ ತಮದ ಮಾತಿಲ್ಲ ಚಂದ್ರಾರ್ಕರುಂ ಮೈಗರೆದಿರ್ವರ್ ತೋಱವಾಜುಂ ಋತು (ಪಂಡಾಮಾ. ೦-೭೦). ೨. ದೃಷ್ಟಿಗೆ ಬೀಳಿಸು ; ಕಾಣಪಡಿಸು ; ತೋರಿಸು ; ವ್ಯಕ್ತಪಡಿಸು : ತಮ್ಮ ದೇವತ್ವಮಂ ತೋಱಲ್ವೇಡಿ ಆಕಾಶಮೆಲ್ಲಂ ಚಿತ್ರಪಟಂಗೆದಱಿದಂತೆ ವಿಮಾನಂಗಳಂ ಸಂಧನ್ನಮಾಗಿ ವ್ಯಾ ಪಿ ಸೆ (ಪಡ್ಮಾಣ. ೧೪೦-೩೫) ; ಮೂಱಡಿ ಮಾಡಿದಂದು ನೆಲನೆಲ್ಲಮನಾ ಬಲಿಗಾದ ರೂಪಮಂ ತೋಱಿದಂ (ಪಂಪಭಾ. ೯-೬೦); ಕವರಲ್ಬಂದಂಗೆ ಬಯಕೆಯಂ ತೋಱಿದರೆಂಬಂತೆ (ಧರ್ಮಾಮೃ. ೨-೦೪೯) ; ಎನ್ನ ಮನದ ದುರಾಶೆಯ ಮಾನಿಸಿ ನಿಮ್ಮತ್ತ ತೋಱುವಾ (ಮಹಾದೇ. ಬ. ೦೫-೦೭) ; ಹಿತವಂ ತೋಱುವನಾತ್ಮಬಂಧು (ಸೋಮೇಶ. ೮) ; ಗುಣಹೀನನಲ್ಲಿ ಗುಣವನು ತೋಱುವದು ಗರುವರಿಗೆ ತೊಡಿಗೆಯಿದು (ಕುವ್ಯಾಅ. ೩೦-೦೩) ; ದಾರಿಯ ತೋಱಿಸೋ ಮುಕುಂದಾ (ಪುರಂದ. ೩-೦೨೩ ಪಲ್ಲವಿ) ; ಊರಿಂಗೆ ದಾರಿಯನು ಆರು ತೋಱಿದಡೇನು (ಸರ್ವಜ್ಞ. ೩೮). ೩. ಉಂಟಾಗು ; ಆಗು : ನಿಜಕರದೊಳಾಯುಧವಿಲ್ಲ ಘನ ಸಂಗರಕೆ ಬೇಸಱು ತೋಱಿತೇ (ಕುವ್ಯಾದ್ರೋ. ೩-೬೩). ೪. ತಿಳಿಸಿಕೊಡು ; ಅರಿವನ್ನುಂಟುಮಾಡು : ಲಿಂಗ ಜಂಗಮ ಪ್ರಸಾದದ ನಿಲವ ತೋಱ್ ಬದುಕಿಸಯ್ಯಾ (ಬಸವ. ೦೩೩). ೫. ಅಶುಭವನ್ನು ಸೂಚಿಸು ; ಅಪಶಕುನವಾಗು : ಅ ರ ಸಿ ಂ ಗೆ ತೋಱುತೋ ದೇಶಕಳಿವಪ್ಪುದೋ ಹರನೆ ಬಲ್ಲಂ (ಕಡ್ಡಿ. ದೀ. ೦೪೫-೦೩). ೬. ಹೊರಗೆಡಹು ; ಪ್ರಕಟಪಡಿಸು : ಚಂದ್ರಕಾಂತದ ಶಿಲೆಯಲ್ಲಿ ಜಲವಿಲ್ಲದನ್ನಕ್ಕ ಶೈತ್ಯವ ತೋಱುವ ಪರಿಯೆಂತೋ (ಬಸವ. ೮೦೮).

ತೋರು : ೧. ಇಲ್ಲಿ ಹುಡುಕಿದರೆ ಅಲ್ಲಿ ತೋರುವನು ಎಲ್ಲೆಡೆ ಸ್ವಚ್ಛಂದ (ನಿಲಮು. ೩೯-೦೨) ; ಭೂಮಿಯ ಪೃಷ್ಠಭಾಗವು ಸಮನಾಗಿದ್ದಂತೆ ತೋರುತ್ತದೆ (ಮುಂಬಯಿ. ೪-೬೫). ೨. ತಾರಮ್ಮಯ್ಯ ತಂದು ತೋರಮ್ಮಯ್ಯ (ಕೆಎಪು. ೮-೧). ೬. ರತಿಯನ್ನು ಅವನು ಸುಡಲಿಲ್ಲ. ಅವಳಿಗೆ ಕಾರುಣ್ಯವನ್ನು ತೋರಿದನು (ಸಾಹಿಸ. ೧೪೩). **ತೋಱು್ :** ೧. ಈಗಳೆನ್ನ ಕಂಡ ಕನಸುಗಳೀ ಯುಗದ ಕಡೆಯೊಳ್ ಪ್ರಜೆಗಳ್ಗೆ ವಿವಿಧೋಪದ್ರವಸೂಚಕಂಗಳಾಗಿ ತೋರ್ಕುಂ (ಆದಿಪು. ೧೫-೨೧ ವ) ; ನವಕೂಟಾಗ್ರಂಗಳೊಳ್ ತೋರ್ಪ ಕಾಂಚನವರ್ಣಾಂಚಿತಪಂಚರತ್ನಮಯ ಶೋಭಾಭಾಸಿಗೆ . . . ಜೈನಗೃಹಾಳಿಗಂದೆಱಗಿದಂ ಸೌಜನ್ಯಕಂದಾಂಕುರಂ (ಶಾಂತಿಪು. ೨-೧೧೯) ; ಮದ್ದುಕುಣಿಕೆಯಂ ತಿಂದಂಗೆ ಕಲ್ಲುಂ ಮಣ್ಣುಂ ಮರನುಂ ಪೊಂಬಣ್ಣಮಾಗಿ ತೋರ್ಪಂತೆ (ಧರ್ಮಾಮೃ. ೧-೧೧೮) ; ಕೈವಾರಮಂ ಬೀಸಿದಂತೆ ಬಟ್ಟಿತ್ತಾಗಿ ತೋರ್ಪುದು ಸೊನ್ನೆ (ಕಮದ. ೧೭ ವೃತ್ತಿ). ೨. ನರಪತಿಯ ಗುಣಾಗುಣದಂತರಮಱಿವುದನಾಳ ಸಿರಿಯ ಲೀಲೆಯ ತೋರ್ಕುಂ (ಶಾಂತಿಪು. ೧-೬೯) ; ಗುಣಮನೆ ತೋರ್ಪಂ ದೋಷದ ಗುಣಂಗಳನೆ ನೆಗೞ್ದು ತೋರ್ಪ ದುರ್ಜನನುಮದೇಂ ಗುಣಗಣನೆಗೆ ತೋರ್ಪಂ ಕೃತಿ ಗುಣದೋಷಪರೀಕ್ಷೆಗಾಱರಾರ್ಬಾರಿಪರೋ (ಗದಾಯು. ೧-೪೮) ; ಆಗ್ರಹಿಸಿ ತರ್ಕಶಾಸ್ತ್ರಸಮಗ್ರತೆಯಂ ತೋರ್ಪುದಲ್ಲಿ ನೀಂ (ಸುಕುಮಾ. ೨-೧೯) ; ಜಡರಂ ಕರಮಱಿದು ತಿಳಿಪಲೆಂತೆನೆ ಖರಕರನಂ ಗೂಗೆಗೆಯ್ದೆ ತೋರ್ಪಂತಕ್ಕುಂ (ಧರ್ಮಾಮೃ. ೧-೪೩) ; ಇನ್ನೀ ಭಕ್ತನ ದೃಢಭಕ್ತ್ಯುನ್ನತಿಯಂ ಧರೆಗೆ ತೋರ್ಪೆನೆಂದಾ ಸೋಮೇಶಂ ನಿಲ್ಲದೆ . . . ನಡೆತಂದಂ (ಉದ್ಭಟ. ೧೧-೧೦೪).

ತೋರಗೊಡು = ವ್ಯಕ್ತಪಡಿಸು ; ಕಾಣಿಸು : ಅವನು ತನಗಾದ ದುಃಖವನ್ನು ತೋರಗೊಡಲಿಲ್ಲ (ರೂಢಿ). **ತೋಱಪಡು** = ಕಂಗೊಳಿಸು : ಬೇಱೊಂದು ಕೋಣೆಯುಂಟುಪ್ಪರಿಗೆಯೊಳಲ್ಲಿ ತೋಱಪಟ್ಟೊಂದು ಪಂತಿಯೊಳು ನೀಱನು ನೀಱಿಯರಾರೋಗಿಸಿದರು (ಭರಜ. ೧೧-೧೧೮). **ತೋಱಿಕೊಡು, ತೋಱಿಕುಡು** = ಕಾಣುವಂತೆ ಮಾಡು ; ತೋರಿಸಿಕೊಡು : ಮನ್ಮಥ ಮಹೀಭುಜನೋವದೆ ತೋಱಿಕೊಟ್ಟುದೊಂದಾನೆಯ ತನ್ನನಾನೆಗೊಲೆಗೊ[ಂ]ದಪುದೆಂದು ಲತಾಂಗಿ ಬೆರ್ಚಿದಳ್ (ಪಂಪಭಾ. ೪-೩೮) ; ಚೆನ್ನಮಲ್ಲಿಕಾರ್ಜುನನ ತಂದೆನಗೆ ತೋಱಿಕೊಟ್ಟ ಗುರುವೆ ನಮೋ ನಮೋ (ಮಹಾದೇ. ಬ. ೨೩-೪೨); ಪಾರ್ಥನ ತೋಱಿಕೊಡುವೆನು (ಕುಮ್ಮಾಕ. ೯-೨) ; ತೊಡೆಯಂ ಪೊಯ್ದಾರ್ವ ನೆವದೆ ನೆಱನೀತಂಗೀಯೆಡೆಯೆಂದು ತೋಱಿಕುಡೆ (ಗದಾಯು. ೮-೩೫). **ತೋಱಿ ನುಡಿ** = (ಕುಂದನ್ನು ನಿರ್ದೇಶಿಸಿ) ಸ್ಪಷ್ಟವಾಗಿ ಮಾತನಾಡು,- ಖಂಡಿತವಾಗಿ ನುಡಿ : ನಿನ್ನ ಪೆಂಡಿರುಮಂ ಬರ್ದುಂಕಲಿತ್ತಪ್ಪೊರಿಲ್ಲೆಂದು ತೋಱಿ ನುಡಿದೊಡೆ (ಪಡ್ಮಾರಾ. ೧೭೮-೩) ; ತೋಱಿ ನುಡಿದರೆ ಭೀಷ್ಮದ್ರೋಣರು ಜಾಱಿಸಿದ ರಣವೆಮಗೆ ಸದರವೆ ದೂಱುವವರಾವಲ್ಲ (ಕುಮ್ಮಾಕ. ೧-೨೪); P ಇದು ಬೇರೆ ಬೇರೆ ಶಬ್ದಗಳೊಡನೆ ಸೇರಿ ಅನೇಕ ಅರ್ಥಗಳ್ನು ಕೊಡುತ್ತದೆ. ಉದಾ: ಕೈದೋಱು, ಬೆನ್ನುತೋರು, ಮೈದೋಱು ಇತ್ಯಾದಿ.

[ದೇ.॥ ತಮಿ. ತೋಱ್ಱು ; ಮಲ. ತೋನ್ನು]

ತೋಱುಂಗೈ (ನಾ). ಮಾರ್ಗದರ್ಶನ ಮಾಡುವ ಕೈ; ನಿರ್ದೇಶಿಸುವ ಕೈ: ಪಟುವಂ ಪೊಲನಂ ತಿರುಗಿಸಿ ಬಟಲಿಸದಿರು ತೋಱು ದೇವ ತೋಱುಂಗೈಯಂ (ವಸ್ತುವಂ. ೧೫-೧೧೨). [ತೋಱು + ಕೈ$_2$ (< ಕೆಯ್$_2$)]

ತೋಱುಂಬೊಣೆ (ನಾ). (ವ್ಯವಹಾರ ಪತ್ರ ಮುಂತಾದುವುಗಳಲ್ಲಿ ಬರೆದು) ಕಾಣಿಸುವ ಹೊಣೆ : ಬಕಾರಕ್ಕೆ – ಬತ್ತುಂಬಯಲ್ . . . ತೋಱುಂ ಬೊಣೆ[ಪಾಕಾಂ. ಳೆ] ಹೇಱುಂಬಳೆ (ಕಮದ. ೧೭೦ ಪ್ರಯೋ).

[ತೋಱು + ಪೊಣೆ$_2$]

ತೋಱುವಲೆ (ನಾ). ಒಂದು ಬಗೆಯ ಬಲೆ : ತೋಱುವಲೆ ತೊಟ್ಟವಲೆ ಗೂಟವಲೆ ಕಣ್ಣಿವಲೆ . . . ಮಂದಸಿನವಲೆಯ ಹೊಱೆಗಳ ಬೇಡವಡೆ ನೆರೆದುದೇನೆಂಬೆನು (ಹಜಕಾ. ೫-೮). [ತೋಱು + ಬಲೆ$_1$]

ತೋಱುಹ (ನಾ). ಕಾಣಿಸುವಿಕೆ ; ತೋರುವಿಕೆ: ಕುರುಡಂಗೆ ಕನ್ನಡಿಯಂ ತೋಱುಹವುಂ ಮೂರ್ಖನಂ ಬುದ್ಧಿವಂತನೋಲೈಸುಹವುಂ ಇವಱೋ ಪಾದಿ (ಪಂಚತಂ. ೧೩೬-೧೦). [ತೋಱು + – ಹ$_2$]

ತೋಱಿತ್ತು (ನಾ). ಬೇಟೆಯಲ್ಲಿ ಕ್ರೂರವಾದ ವನ್ಯಮೃಗಗಳನ್ನು ಆಕರ್ಷಿಸಲು, ಅವುಗಳಿಗೆ ಕಾಣುವಂತೆ ಕಟ್ಟುವ ಎತ್ತು ; ದೀಹದ ಎತ್ತು: ಕಾಂತಾರದೊಳು ಮೃಗವ ನೆಲೆಗೊಳಿಸಿ ಮೇಗಾಳಿಯಿಂ ದೂರದಿಂ ತೋಱಿತ್ತನೊಡ್ಡಿ ಕಿಗ್ಗಾಳಿಯಿಂ ಬಂಡಿಯಿಂದಿಳುಹಿ ಹುಲಿಯ ಹಾರಯಿಸಿ (ಹಜಕಾ. ೫-೩೦). [ತೋಱು + ಎತ್ತು$_2$ (< ಎಱ್ತು$_1$)]

ತೋಟಯ್ಯ (ನಾ). ಒಬ್ಬಾತನ ಹೆಸರು: ತೋಟಯ್ಯನ ಮಗ ಮಙ್ಗಯ್ಯಂ ದುರ್ವ್ವಿನೀತನ ತಮ್ಮ ಬೂತುಗಂ (ಎಕ. XII, ಮದ್ದಗಿ. ೩೯-೯; ಸು. 950).

[ತೋಱು್ ? + ಅಯ್ಯ$_1$]

ತೋಟೂರ್ (ನಾ). ಒಂದು ಊರಿನ ಹೆಸರು : ಮಾರಶರ್ಮ್ಮಣಃ ಪುತ್ರಾಯ ತೋಟೂರ್ವ್ವಾಸ್ತವ್ಯಾಯ (ಎಕ. X, ಗೋರೀಬಿ. ೪೭-೪೫; 762).

[ತೋಱು್ ? + ಊರ್]

△ **ತೋಟ್ಟಲ** 'ತೋಳ್ವಲ' ನೋ.

ತೌಂಕಲ್ 'ತವುಂಕಲ್' ನೋ.

ತೌಂಟಿಗೆ 'ತಿವದಿಗೆ' ನೋ.

ತೌಂಬುರವೀಣೆ (ನಾ). ಒಂದು ಬಗೆಯ ವೀಣೆ : ಗೌರೀವೀಣೆಯ ಗೌರವದಿಂದಂ ತೌಂಬುರವೀಣೆಯ ತುಂಬುರರಿಂ ಕಿನ್ನರವೀಣೆಯ ಕಿಂಪುರುಷರಿಂದಂ . . . ಒಪ್ಪಿದತ್ತಾ ಮಹಾಲಿಂಗದಾಸ್ಥಾನಂ (ಹಮ್ಮೀರ. ೮-೪೧ ವ). 'ತುಂಬುರವೀಣೆ' ಪರಾ. [ತೌಂಬುರ$_0$ + ವೀಣೆ]

ತೌಕಲ್ 'ತವುಂಕಲ್' ನೋ.

ತೌಗೆ 'ತವುಗೆ' ನೋ.

ತೌಟಿಗೆ 'ತಿವದಿಗೆ' ನೋ.

ತೌಡಂಗಿ 'ಚವುಡಂಗಿ' ನೋ.

ತೌಡಿ 'ತವುಡಿ$_1$' ನೋ.

ತೌಡು 'ತವುಡು' ನೋ.

ತೌಡುಕುಟ್ಟು 'ತವಡುಕುಟ್ಟು' ನೋ.

ತೌತರ್ 'ತವುತರ್' ನೋ.

ತೌದಲೆ 'ತವುದಲೆ' ನೋ.

ತೌದಲೆಗಾಣಿಸು 'ತವುದಲೆಗಾಣಿಸು' ನೋ.

ತೌದೆ (ನಾ). ಒಂದು ಬಗೆಯ ತೆರಿಗೆ: ಬಸದಿಯ ವಸದಲಿ ಪಲವ ಮನೆಗಳ ಮಾಡಿಸಿ ರಿಷಿಹಳ್ಳಿಯೆಂದು ಪೆಸರನಿಟ್ಟು ಮನೆದೆಱೆ ಮದುವೆದೆಱೆ ಊರುಟ್ಟಿಗೆ ತೌದೆ ಸುರಂದು ಕವರ್ತ್ತೆಸೇಸೆ . . . ಪೊಳಗಾಗಿ . . . ಆಚಂದ್ರಾರ್ಕ್ಕತಾರಂಬರಂ ಸಲ್ಗೆ (ಮೃಆರಿ. ೧೯೩೨, ೧೬-೨೯ ; 1069).

P [ಇದು 'ತವುಡಿ' ಯಅವಲಿಖಿತವಿರಬಹುದು]

ತೌಬಂದ (ನಾ). ಉಡುವ ಸೀರೆ,-ವಸ್ತ್ರ : ಚಂದ್ರಕಿರಣವು ಪೋಲ್ವ ಚಲ್ವ ಜರತಾರಂಚಿನ ತೌಬಂದನುಟ್ಟು ಚೆಲ್ವಿಕೆಯಾ ನೋಡುತ್ತಿದ್ದಳು (ಶ್ರೀಕೃಷ್ಣಾ. ೧೭). [← ಪಾರ. ತಹಬಂದ್, ತಹಮತ್ = ಲುಂಗಿ]

ತೌಮೊನೆ (ನಾ). ನಾಶಕಾರಿಯಾದ ಮೊನೆ : ಎತ್ತಿದ ನಿನ್ನ ಕಯ್ಯ ನಿಶಿತಾಸಿಯ ತೌಮೊನೆ ಬೆನ್ನ ಬಾರನೆತ್ತುತ್ತಿರೆ (ಎಕ. II, ೨೪೦-೨೨ ; ಸು. 1175). [< ತವು$_2$ + ಮೊನೆ$_1$]

ತೌರು 'ತಮರ್' ನೋ.

ತೌರುಮನೆ 'ತವರ್ಮನೆ' ನೋ.

ತೌರೂರು 'ತವರೂರ್' ನೋ.

ತೌರ್ಮನೆ 'ತವರ್ಮನೆ' ನೋ.

ತೌರ್ಯತ್ರಿಕ (ನಾ). ವಾದ್ಯ, ನೃತ್ಯ, ಗೀತ ಈ ಮೂರರ ಮೇಳ: ತೌರ್ಯತ್ರಿಕಂ[ಪಾಣಂ. ತ್ರಯಂ]ಪೊಣ್ಮಲೇಳ್ದು ನಡೆತಂದು . . . ಭಕ್ತ ತತಿವೆರಸಂತವುರಕೆಯ್ದಿ ಶಿವಸುಖದೊಳೊಪ್ಪುತಿರ್ದಂ (ಪರ್ಮಾ. ೧೧-೩೦೦); ತೆಕ್ಕನೆಯೆ ಮಾಧುರ್ಯಗಿರಿಶೃಂಗಮೆನಿಪೊಂದು ಸುಂದರಂ ಕೇಳ್ದತ್ತು ತೌರ್ಯತ್ರಿಕಂ (ಶ್ರೀರಾಮಾ. ೪೮೯-೩೮). [ಸಂ.]

ತೌಲನಿಕ (ಗು). ೧. ಪರಸ್ಪರ ಹೋಲಿಸಿ ನೋಡುವ; ತುಲನೆ ಮಾಡುವ; ತುಲನಾತ್ಮಕ. 'ತೌಲನಿಕವಿಧಾನ' ಪರಾ. (ನಾ). ೨. ತುಲನೆ ಮಾಡಿದುದು; ತುಲನಾತ್ಮಕವಾದುದು: ಈ ಪರಿಷ್ಕರಣಗಳನ್ನು ಮೊದಲು ತೌಲನಿಕವಾಗಿ ಪರಿಶೋಧಿಸಿದ ಕೀರ್ತಿ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳಿಗೆ ಸಲ್ಲಬೇಕು (ಕೂನ್ಕಳು. ೩೫); ಇವೆರಡನ್ನು ತೌಲನಿಕವಾಗಿ ನೋಡುವವರು ಕನ್ನಡದ ಅಕ್ಷರಪಂಕ್ತಿ ಶಾಸ್ತ್ರೀಯವಲ್ಲ ವೆನ್ನುವುದುಂಟು (ಸಂಕೋಧ. ೩೫). [ಸಂ.]

ತೌಲನಿಕವಿಧಾನ (ನಾ). ತುಲನಾತ್ಮಕವಾದ ಅಭ್ಯಾಸ; ಹೋಲಿಕೆಯ ವಿಧಾನ: ವ್ಯಷ್ಟಿ ಲೇಖಕರ ಅಭ್ಯಾಸದಲ್ಲಿ ಮಹತ್ವಪೂರ್ಣವೆನಿಸಿಕೊಂಡ ತೌಲನಿಕವಿಧಾನ, ಸಾಹಿತ್ಯದೊಡನೆ ನಾವು ಚಾರಿತ್ರಿಕವಾಗಿ ವ್ಯವಹರಿಸುವಾಗ ತುಂಬ ಉಪಯುಕ್ತವಾಗುತ್ತದೆ (ಸಾಹಿತ್ಯ. ೪೦).

[ತೌಲನಿಕ + ವಿಧಾನ]

ತೌಲಿ, ತೌಳಿ (ನಾ). [ಜ್ಯೋತಿ] ಮೇಷ ಮೊದಲಾಗಿ ಏಳನೆಯ ರಾಶಿ; ತುಲಾರಾಶಿ. 'ತೌಲಿಗೇಹ' ಪರಾ. **ತೌಳಿ**: ಲಲನಾ ವೃಶ್ಚಿಕ ತೌಳಿ ಕುಂಭ ಹರಿಗಳ್ ಶೀರ್ಷೋದಯಂಗಳ್ (ಜಾತಕ. ೦-೩೯); ಕನ್ನೆ ವಿಥುನಂ ವಿಮಾನಂ ಮೃಗಂ ಕರ್ಕ ತೌಳಿ ಗವೇಂದ್ರಂ ವರಲಗ್ನಮಾಗಿ ನಿಲೆ ಮಾಬ್ಯಾನಂದದಿಂ ಪೌಳಮಂ (ಕೋಳೂಪ. ೨-೩೨).

[ಸಂ. ತೌಲಿನ್]

ತೌಲಿಗೇಹ (ನಾ). = ತೌಲಿ. 'ತೌಲಿಗೇಹೋದ್ಭವ' ಪರಾ.

[ತೌಲಿ + ಗೇಹ]

ತೌಲಿಗೇಹೋದ್ಭವ (ನಾ). ತುಲಾರಾಶಿಯಲ್ಲಿ ಹುಟ್ಟಿದವನು: ಸ್ವಬಂಧು ನಿಕಾಯಕ್ಕುಪಕಾರಿ ತೆತ್ತಿಗನೆನಿಕ್ಕುಂ ತೌಲಿಗೇಹೋದ್ಭವಂ (ಜಾತಕ. ೧೭-೭).

[ತೌಲಿಗೇಹ + ಉದ್ಭವ]

ತೌವುಡಿ 'ತವುಡಿ$_1$' ನೋ.

ತೌಸಿತಾಣ (ನಾ). (?): ನಲಿಸೆಟ್ಟಿಗೆ ಮಾಣತಂಗಿಗೆ ಅವರ ಮಗ ಮಂಚಿ ಗೌಂಡ ನಿಲಿಸಿದ ತೌಸಿತಾಣಯ ಕಲ್ಲು (ಎಕ. III, ಶ್ರೀರಂಗ. ೩೭-೪ ; ?).

[?]

ತೌಳವ (ಗು). ತುಳುದೇಶಕ್ಕೆ ಸಂಬಂಧಿಸಿದ,–ಸೇರಿದ: ಕಾರ್ಮುಗಿಲ ಮುಂಬನಿಗಳೊಳು ವಹಿಲದಲಿ ಕೇರಳ ಜನಪದದ ತೌಳವದ ಕೊಂಕಣ ವಿಷಮವೀಧಿಯಲಿ . . . ಬಂದನು ಕಿರೀಟ (ಕುವ್ಯಾಚ. ೧೯-೩೧); ಸರೋಂಬುಧಿತೀರವೆ ಶರಣಾಗಿ ಬಾಳ್ವ ಚಾರುರಥಾಂಗ ತೌಳವ ತನುರಕ್ಷಕ ಸೇರುವೆ ಸೊಗಸದೆ ನೋಡು (ಪರ್ಭಡ. ೧೧-೧೨೭) ; ಜಯಜಯ ತೌಳವ ತಾಯೇ ಮಣಿವೆ ತಂದೆತಾಯಂದಿರ ತಾಯೇ (ಗಿಳಿವಿಂ. ೪೬-೧).

[<ತುಳುವ$_1$]

ತೌಳಿ 'ತೌಲಿ' ನೋ.

ತ್ಯಕ್ತ (ಗು). ೧. ತೊರೆದ ; ತ್ಯಜಿಸಿದ ; ಬಿಟ್ಟ : ಕ್ರೂರಾತ್ಮಂ ತ್ಯಕ್ತವ್ರತ ನಾರ[ಕ್ತ]ಪಟಪ್ರಿಯನಜತೃತಿಯ ತ್ಯಂಶಂ (ಜಾತಕ. ೧೯-೩); ತ್ಯಕ್ತಾಪಿಲ ದೋಷಂ ಸುವ್ಯಕ್ತಾಂಗಂ . . . ತೊಳಗುತಿರ್ದಂ (ಅನಂಪು. ೧೨-೮೦). (ನಾ)- ೨. ತೊರೆದುದು; ತ್ಯಜಿಸಿದುದು; ಬಿಟ್ಟುದು : "ಅವಕೀರ್ಣಂ. ಅವಧ್ವಸ್ತಂ, ತ್ಯಕ್ತಂ, ಉತ್ಸೃಷ್ಟಂ, ಉಜ್ಝಿತಂ – ಈ ೫ ಬಿಡಲ್ಪಟ್ಟುದು" (ಹಂಶಾಯು. ೧೧೪-೨೯) ; "ತ್ಯಕ್ತಮವಕೀರ್ಣಮವಧ್ವಸ್ತಮೆನಲು ಬಿಡುಹಂ" (ಮಂಗಣಾ. ೧೩೯-೧೧). [ಸಂ.]

ತ್ಯಜ (ನಾ). ೧. ತೊರೆಯುವಿಕೆ ; ಬಿಡುವಿಕೆ : "ಚರಿತಂ ತ್ಯಜಮುಂ ನೋಡೆ ವಿಸರ್ಜಾಹ್ವಯ" (ನಾಗಾರ. ೬೩). ೨. [ಗಣಿತ] ಕಳೆಯುವಿಕೆ ; ವ್ಯವಕಲನ : ರಜತಂ, ರಜಿತಂ, ಉಜಿತಂ, ತ್ಯಜಂ . . . ಇಂತಿನಿತುಂ ಕಳೆವುದಕ್ಕೆ ವೆಸರು (ವ್ಯವಹಾ. ೧೧-೩೧). [ಸಂ.]

ತ್ಯಜಯಿಸು 'ತ್ಯಜಿಸು' ನೋ.

ತ್ಯಜಿಸು, ತ್ಯಜಯಿಸು (ಕ್ರ). ೧. ಬಿಡು ; ತೊರೆ ; ವರ್ಜಿಸು : ಪ್ರಾಣಪಂ ತ್ಯಜಿಸಿದ ಶರಣನಂ ಕಾಣುತಂ (ಬಸಪು. ೩೭-೧೮) ; ಮಹಾಮಖಿಪವ್ಯಕಪ್ಯ ದ್ವಿಪರ ವರ್ತನೆಯ ತ್ಯಜಿಸಲೀಸ [ಪಾಠಾಂ. ಭಜಿಸಲೀಯ] ನಿದೀಗ ಗರುಡಧ್ವಜನ ಬಿರುದು (ತೊರಣಾ. ೧-೮-೧೪); ಗರ್ಭಾಣುಪಟ್ಟ ಪಕ್ಕಗಳಲ್ಲಿ ಬೆಳೆದು ಭ್ರೂಣದ ಪೊರೆಯನ್ನು ಕ್ರಮೇಣ ತ್ಯಜಿಸುತ್ತದೆ (ಕೀಟವಿ. ೧೦೪). ೨. [ಗಣಿತ] ಕಳೆ : ವ್ಯವಕಲನವಮಾಡು : ತ್ಯಜಿಸು, ಕಳೆ ಇಂತಿನಿತುಂ ಕಳೆವುದಕ್ಕೆ ವೆಸರು (ವ್ಯವಹಾ. ೧೧-೩೧). **ತ್ಯಜಯಿಸು** : ೧. ರಾಜಭಾಗಂ ತ್ಯಜಯಿಸುವದು ತುಷ್ಣೀರುತಂ ಮೌನಮಕ್ಕುಂ (ನಾನಾರ. ೧೫೬).

[ತ್ಯಜನ + – ಇಸು$_3$]

ತ್ಯನನಹಳ್ಳಿ (ನಾ). ಒಂದು ಹಳ್ಳಿಯಂ ಹೆಸರು ; ₱ ಈಗಿನ ಬೌರಿಂಗ್ ಪೇಟೆ ತಾಲ್ಲೂಕಿನ ತ್ಯಾರನಹಳ್ಳಿ : ನಮ್ಮ ನಾಯಕತನದ ತ್ಯನನಹಳ್ಳಿಯ ಅತ್ತಿಕುಣ್ಬೆ ಪೂರ್ವ್ವ (ಮ್ಯಆರಿ. ೧೯೫೩ ; ೧೪-೬ ; ?).

[? + ಹಳ್ಳಿ (<ಪಳ್ಳಿ$_1$)]

ತ್ಯಾಗ (ನಾ). ೧. ಬಿಡುವುದು ; ತೊರೆಯುವುದು ; ವರ್ಜನ : ಸತ್ಯ ಶೌಚಸಂಯಮ ತಪಸ್ಯಾಗಾಕಿಂಚನ್ಯ ಬ್ರಹ್ಮಚರ್ಯಾಪರ್ಯಾಪ್ತದಶ ಧರ್ಮಂಗಳುಮಂ ಕೈಕೊಂಡು (ಆದಿಪು. ೬-೩೦ ವ) ; ಭೋಗಿಗೆ ಲೋಭಿಗೆ ಯೋಗಂ ತ್ಯಾಗಂ ಹಿತಮಾಗದು (ಹಮ್ಮಾರ. ೨-೫). ೨. ದಾನ ; ಕೊಡುಗೆ. 'ತ್ಯಾಗಜೀವನ', 'ತ್ಯಾಗಬುದ್ಧಿ' ಪರಾ. ೩. ಬಿಟ್ಟು ಕೊಡುವುದು ; ಔದಾರ್ಯ : ತ್ಯಾಗ ಬಲಿದಾನಗಳಿಂದ ಕೂಡಿದ ಧರ್ಮವೇ ನಿಜವಾದ ಧರ್ಮ (ಧರ್ಮಾಸಾ. ೭) ; ಗವ್ವುದೀ ಹಾದಿಗೆ ತವ್ವುದೀ ತ್ಯಾಗ (ನಾಡ). ೪. [ಜೈನ] ಹದಿನಾರಂ ಭಾವನೆಗಳಲ್ಲಿ ಒಂದು : ತ್ಯಾಗತಪಸೀ ಸಮಾಧಿ ವೈಯಾವೃತ್ಯ . . . ಎಂಬ ಷೋಡಶ ಭಾವನೆಗಳೊಳು (ಪಾವುಂಪು. ೨೬೧).

ತ್ಯಾಗದಗರಝುಂಪ, ತ್ಯಾಗಜಗರಝುಂಪಿ = ತ್ಯಾಗಗುಣದಿಂದ ಪ್ರಸಿದ್ಧನಾದವನು ; ಒಂದು ಬಿರುದು : ತ್ಯಾಗಜಗರಝುಂಪನರ್ಧಾಂಗಿ . . . ಮೈಳಲ ಮಹಾದೇವಿಯರ್ (ಎಇ. XIII, ೨೭೦-೪ ; 1125); ಮಹಾಶಕ್ತಿ ಪ್ರಭಾವಂ ತ್ಯಾಗಜಗರಝುಂಪಿ ರಝುಂಪಳಾಚಾರ್ಯ್ಯ (ಎಇ. XVII, ೦೧೪-೯; 1124). **ತ್ಯಾಗಮಾಡು**=ಬಿಡಂ; ತೊರೆ; ತ್ಯಜಿಸಂ: ಭಾಸನ ವಾಸವದತ್ತೆ. ಪದ್ಮಾವತಿ, ಬಾಣನ ಮಹಾಶ್ವೇತೆ ಇವರೆಲ್ಲ ಪತಿಗಾಗಿ ಸರ್ವಸ್ವವನ್ನೂ ತ್ಯಾಗಮಾಡುವ ದುರ್ಧರ ದೀಕ್ಷೆಯಲ್ಲಿ ... ನಿಸ್ಸೀಮರು (ಧರ್ಮಾಸಾ. ೭೮). **ತ್ಯಾಗವಿನೋದ** = ದಾನದಿಂದ ಸಂತೋಷವನ್ನು ಪಡೆಯುವವನು ; ಒಂದು ಬಿರುದು : ಮಹಾಲಕ್ಷ್ಮೀದೇವೀಲಬ್ಧವರಪ್ರಸಾದಂ ತ್ಯಾಗ ವಿನೋದಂ (ಸೌಇಇ. XX, ೭೧-೧೩ ; 1109) ; ತ್ಯಾಗವಿನೋದಂ ಬಿರುದ ಮನ್ನೆಯ ಮದನಿವಾರಣಂ . . . ಅರಸುಗೆಯ್ವುತ್ತುಮಿರೆ (ಕಇ. IV, ೧೧-೧೯ : 12ನೆಯ ಶತ). [ಸಂ.]

ತ್ಯಾಗಜೀವನ (ನಾ). ಇತರರಿಗಾಗಿ ತನ್ನದನ್ನು ಬಿಟ್ಟುಕೊಡುತ್ತಾ ಬಾಳುವಿಕೆ ; ತ್ಯಾಗಪೂರ್ಣವಾದ ಬದುಕು ; ಪರೋಪಕಾರದ

ಬಾಳು : ತ್ಯಾಗಜೀವನದಿಂದ ಆತ್ಮಸಂತೋಷವಾಗುತ್ತದೆಂದು ತಿಳಿದ ಅವನು . . . ಆಸ್ತಿಯ ಮೇಲಣ ಸ್ವಾಮ್ಯವನ್ನು ತ್ಯಜಿಸಿ ರೈತರಿಗೆ ಅದನ್ನೆಲ್ಲ ಹಂಚುವುದೆಂದು ನಿರ್ಧರಿಸಿಕೊಂಡಿದ್ದನು (ಪುನರು. ೫೪).

[ತ್ಯಾಗ + ಜೀವನ]

ತ್ಯಾಗಪತ್ರ (ನಾ). ಯಾವುದಾದರೂ ಅಧಿಕಾರ, ಹೊಣೆಗಾರಿಕೆಗಳನ್ನು ತ್ಯಜಿಸಿರುವುದಾಗಿ ತಿಳಿಸಿ ಬರೆಯುವ ಪತ್ರ ; ರಾಜೀನಾಮೆ ಪತ್ರ : ಇವರ ಪ್ರತಿಭಟನೆಗಾಗಿಯೇ] ೧೯೩೯ರಲ್ಲಿ ಕಾಂಗ್ರೆಸ್ ಪ್ರಾಂತಮಂತ್ರಿ ಮಂಡಲಗಳು ತ್ಯಾಗಪತ್ರ ಕೊಟ್ಟದ್ದು (ಎಚ್ಕಸಾ. ೧೯).

[ತ್ಯಾಗ + ಪತ್ರ]

ತ್ಯಾಗಬುದ್ಧಿ (ನಾ). = ತ್ಯಾಗಮನ : ಭರತಂ ಮಹಾತ್ಮನೆಸೆದನು ದಿವ್ಯ ತೇಜಸ್ವಿ, ತ್ಯಾಗಬುದ್ಧಿಯಲಿ (ಶ್ರೀರಾಮಾ. ೩೭-೬೪೪).

[ತ್ಯಾಗ + ಬುದ್ಧಿ]

ತ್ಯಾಗಮನ (ನಾ). ಎಲ್ಲವನ್ನು ತೊರೆಯುವ ಮನಸ್ಸು : ನಿರ್ಮಲಿನದಮ್ಯ ತತ್ವಮಾಗದು ತ್ಯಾಗಮನಮಿರದೆ (ಗಗಕಾ. ೧೬-೨೩).

[ತ್ಯಾಗ + ಮನ$_1$]

ತ್ಯಾಗಮಯಿ (ನಾ). ತ್ಯಾಗಗುಣದಿಂದ ಕೂಡಿದವಳು ; ಉದಾರ ಸ್ವಭಾವದವಳು : ಅವನ ಕಣ್ಣ ಮುಂದೆ ತ್ಯಾಗಮಯಿಯಾದ ರಂಗಸಾನಿ ದೇವತೆಯಂತೆ ಸುಳಿದಂತಾಯಿತು (ರಂಗರೋ. ೩೬) ; ಇದರ ಪ್ರಧಾನ ಪಾತ್ರಗಳಾದ ರಾಜರ್ಷಿ ಜನಕ . . ತ್ಯಾಗಮಯಿ ಮೈತ್ರೇಯಿ ಮತ್ತು ಬ್ರಹ್ಮವಾದಿನಿ ಗಾರ್ಗಿ ಭಾರತೀಯರಿಗೆ ಚಿರಪರಿಚಿತರಾಗಿದ್ದಾರೆ (ಭಾರದ. ೩೮). [ಸಂ. ತ್ಯಾಗಮಯೀ]

ತ್ಯಾಗಮಾನ್ನ (ನಾ). [ಛಂದ] ಒಂದು ಬಗೆಯ ಪದ್ಯಜಾತಿ: ತ್ಯಾಗಮಾನ ಅಟತಾಳ (ಸಾರಂಗ. ೧೪) ; ಯಾಲಪದವು ಮತ್ತು ತ್ಯಾಗಮಾನಗಳು ಅಂಶಗಣಾನ್ವಯವಾದ ಉತ್ಸಾಹಲಯದಲ್ಲಿವೆ ಎಂಬುದನ್ನು ಗಮನಿಸಬೇಕು (ಛಂದೋವಿ. ೨೫೧ ಆಡಿಟಿ). [?]

ತ್ಯಾಗವೀರ (ನಾ). ತ್ಯಾಗದಲ್ಲಿ ಬಹಳ ಉತ್ಸಾಹವುಳ್ಳವನು ; ದಾನದಲ್ಲಿ ಆಸಕ್ತನಾದವನು : ಸಾಮಾನ್ಯಜನತೆಯ ಕ್ಷೇಮಸಾಧನೆಗಾಗಿ ತಮ್ಮ ಬಾಳನ್ನೇ ಮುಡಿಪಾಗಿಟ್ಟ ತ್ಯಾಗವೀರರೆಂದೂ ಅವಳಿಗೆ ಮನವರಿಕೆಯಾಯಿತು (ಪುನರು. ೪೯೧). [ತ್ಯಾಗ + ವೀರ]

ತ್ಯಾಗಶೀಲ (ನಾ). ೧. ತ್ಯಾಗಸ್ವಭಾವ : ಧರ್ಮವೀರರ ತ್ಯಾಗಶೀಲವೂ, ಸಂನ್ಯಾಸಿಗಳ ಆನಂದವೂ ಪ್ರತಶೀಲರ ಸಂಯಮಶಕ್ತಿಯೂ ಆದ ಯೇಸು ಭಗವಾನ್, ನಮ್ಮನ್ನುದ್ಧರಿಸು (ಪುನರು. ೧೭೮). ೨. ಉದಾರಬುದ್ಧಿಯುಳ್ಳವನು: ಇಂದಿನ ಸರಿವಂತರಲ್ಲಿಯೂ ಅನೇಕ ಜನ ತ್ಯಾಗಶೀಲರಿದ್ದಾರೆ (ಕೂಡಿ). [ತ್ಯಾಗ + ಶೀಲ]

ತ್ಯಾಗಾಂಗ (ನಾ). [ವೀಶೈ] ಜೀವನ ಮೂರು ಅಂಗಗಳಲ್ಲಿ ಒಂದು ; ತನುಗುಣವನ್ನು ಅಳಿದ ಸ್ಥಿತಿ : ತನ್ನಲ್ಲಿ ತ್ಯಾಗಾಂಗ ಭೋಗಾಂಗ ಯೋಗಾಂಗ ಸರ್ವಸಮಾಧಾನ ಸುಚಿತ್ರವಿರ್ದು ಮತ್ತೆ ಇತ್ಯಾದಿಗಳಲ್ಲಿ ನೋಡಿಹೆನೆಂಬ ಭ್ರಾಂತು ಭ್ರಾಮರವೇತಕ್ಕೆ (ಕೂಲಿಮಾ. ೧೯೦-೭೦೫) ; ಮಹಾತ್ಯಾಗಾಂಗವೇ ಸ್ಥೂಲತನುವೆನಿಸಿ ವಿವಿಧ ಭೇದದೊಳಪ್ಪುದಂಗ ತ್ರಯಂ (ಲಶಿಚಂ. ೫೦-೩) ; ಸಂಸಾರಭ್ರಾಂತಿಯು ಸಹಜವಾಗಿಯೇ ತ್ಯಾಗವಾಗಿರುವುದರಿಂದ ತಿನೆಯದು ತ್ಯಾಗಾಂಗವೆಂದು ಹೇಳಲ್ಪಡುವುದು (ಶಿವಾಸೂ. ೪೪-೭) ; ನ್ಯೂನಸಭಾವವನ್ನು ಹೊಂದಿದ ಅಂಗಸ್ಥಲವು (ಶುದ್ಧ ಜೀವನು) ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರು ವಿಧವಾಯಿತು (ಭಾರದ. ೨೫೩). [ತ್ಯಾಗ + ಅಂಗ$_3$]

ತ್ಯಾಗಾಂಗಿ (ನಾ). [ವೀಶೈ] ಸಂಸಾರಭ್ರಾಂತಿಯನ್ನು ಕಳೆದು ಕೊಂಡವನು; ತನುಗುಣವನ್ನು ಬಿಟ್ಟುಕೊಡುವ ಸ್ಥಿತಿಗೆ ಏರಿದವನು: ತ್ಯಾಗಾಂಗಿಯಾಗಿ ಶಿವದೀಕ್ಷೆ, ಶಿವಪೂಜೆ, ಶಿವಧ್ಯಾನದ ಮೂಲಕ ಸಂಸಾರ ಭ್ರಾಂತಿಯನ್ನು ತ್ಯಾಗ ಮಾಡುವನು (ಭಾರದ. ೨೦೭).

[ಸಂ. ತ್ಯಾಗಾಂಗಿನ್]

ತ್ಯಾಗಿ (ನಾ). ೧. (ಎಲ್ಲವನ್ನೂ) ಬಿಡುವವನು ; ವರ್ಜಿಸುವವನು ; ವಿರಾಗಿ: ತ್ಯಾಗಿಗೆ ಯೋಗಿಗೆ ಲೋಭಂ ಭೋಗಂ ಹಿತಮಾಗದು (ಹಮ್ಮೀರ. ೨-೩) ; ತ್ಯಾಗೀ ಗುಣ ಭೋಗದಲ್ಲಿ ಕಾಣುವುದು (ಗಾಡ). ೨. ಕೊಡುವವನು ; ದಾನಮಾಡುವವನು ; ಉದಾರಿ ; ದಾನಶೀಲ : "ತ್ಯಾಗಿಯು ತಾಂ ಬಾಗಿ" (ಕವಿಕಂ. ೩೭೦) ; ಕವಿ ವಾಗ್ಮಿ ದೀರ್ಘಮುಖ ಕಂಠಂ ಧಾರ್ಮಿಕಂ ತ್ಯಾಗಿ . . . ಧನುರ್ಗೇಹಜಂ (ಜಾತಕ. ೧೭-೯) ; ಭೂವರರೊಳ್ ತ್ಯಾಗಿಗಳಲ್ಲವೇ (ಕೋಮೀಕ. ೩೮). [ಸಂ. ತ್ಯಾಗಿನ್]

ತ್ಯಾಜಕ (ನಾ). ಕೊಡುವವನು ; ದಾನಿ : ಭೋಜನದಿ ಪರಮಭೋಜನ ಪರಬ್ರಹ್ಮರಸ ಯಾಚಿಸಲ್ಕೇನಿರ್ಪುದದನುಂಡ ಬಳಿಕ? ತ್ಯಾಜಕ ತ್ಯಾಗ ಸಂತ್ಯಾಜ್ಯಭೇದಗಳಿರದೆ ರಾಜ ನೀಂ ಜಗಕೆಲ್ಲ (ಪುಂಳುಕ. ೬೫೨). [ಸಂ.]

ತ್ಯಾಜ್ಯ (ಗು). ೧. ಬಿಡಲು ಯೋಗ್ಯವಾದ ; ವರ್ಜಿಸಲು ತಕ್ಕುದಾದ. ೨. ತ್ಯಜಿಸುವ. ೩. ಕೊಡಲು ಯೋಗ್ಯವಾದ ; ದಾನಮಾಡಲು ಅರ್ಹವಾದ. (ನಾ). ೪. ಬಿಡಲು ಯೋಗ್ಯವಾದುದು ; ಬಿಡಬೇಕಾದುದು ; ವರ್ಜ್ಯ : ಯೂಕಾಭೀತಿಯಿಂದಂಬರಂ ಪರಿಹರ್ತವ್ಯಮೆಂ ಮೇಣಜೀರ್ಣಭಯದಿಂ ಪ್ರಾಜ್ಞಾಜ್ಯಮೇಂ ತ್ಯಾಜ್ಯಮೇ (ಕಂದ್ರಪು. ೦-೬೫); ಗುಣವೂ ಗೌಣವಾದದ್ದಲ್ಲ, ಅದರಂತೆಯೇ ಕರ್ಮವೂ ತ್ಯಾಜ್ಯವಾದದ್ದಲ್ಲ (ಭಾರದ. ೧೦೬); ಶಿಕ್ಷಾಶಾಸ್ತ್ರದ ಬೆಂಬಲವು ಅದಕ್ಕಿಲ್ಲದೇ ಹೋದರೂ ಅದು ಸರ್ವಥಾ ತ್ಯಾಜ್ಯವೆಂದು ಹೇಳಲಾಗುವುದಿಲ್ಲ (ದ್ರಾವಿವಿ. ೮೬). [ಸಂ.]

ತ್ಯಾಜ್ಯವಸ್ತು (ನಾ). ವರ್ಜಿಸಲು ಯೋಗ್ಯವಾದ ಪದಾರ್ಥ ; ಬೇಡವಾದ ವಸ್ತು : ಮನೆಯ ಎಲ್ಲಾ ತ್ಯಾಜ್ಯವಸ್ತುಗಳನ್ನೂ ನಿರ್ಮೂಲ ಮಾಡಿ ಸದಾ ಶುಚಿಯಾಗಿ ಇಟ್ಟುಕೊಳ್ಳಬೇಕು (ಗೃಹವಿ. ೧೮೯).

[ತ್ಯಾಜ್ಯ + ವಸ್ತು]

ತ್ಯಾಪಿ (ನಾ). ೧. ಗಾರೆ ಕೆಲಸದ ಒಂದು ಸಾಧನ ; ಕರಣಿಗೆ : ನಮ್ಮ ನರ್ಸಿನ ಸಹಾಯದಿಂದ ಒಂದು ಅಳತೆ ಕಟ್ಟಿಗೆ, ಉಪ್ಪಾರರ ಗುಂಡು, ತ್ಯಾಪಿಗಳನ್ನು ಸಂಪಾದಿಸಿದೆವು (ಪುೀದಿಮ. ೨೨೩). ೨. ಲೇಪ; ಗಿಲಾಯಿ: ಮಣ್ಣಿನ ತ್ಯಾಪಿಯನ್ನು ಕೆದರಿಸಿ ಅದು ತಿಳಿಯಬಾರದೆಂದು ಸುಣ್ಣ ಬಳಿಸಿದರಂತೆ (ಹೂಅರ. ೧೩೪). [←ಹಿಂ. ಮರಾ. ಥಾಪೀ]

ತ್ಯಾಬೆ (ನಾ). ಗೋಧಿ ಬೆಳೆಗೆ ಬರುವ ಒಂದು ಬಗೆಯ ರೋಗ: ತ್ಯಾಬೆ ಕುಂಕುಮ ಇಟ್ಟಂಗಿ ಮೊದಲಾದ ರೋಗಗಳು ಹಾಯದೆ ಧಾನ್ಯಗಳು ದಪ್ಪಾಗಿ ... ಮೂರು ತಿಂಗಳದೊಳಗೆ ಬರುವವು (ಕ ಟಿಪ್ರ. ೫೩). [?]

ತ್ಯಾಮನ (ನಾ). ಸುಂಕ ; ತೆರಿಗೆ (?) : ತೆರಿಗೆ ತ್ಯಾಮನದಿಂದ ಲೋಕವ ಮುರಿವರಿನ್ನು (ಕಾಲಸಂ. ೨೨-೩). [?]

ತ್ಯಾರಣ 'ತೇರಣ$_1$' ನೋ.

ತ್ರಪಾಹೀನ (ನಾ). [ಕಾಮಶಾ] ಲಜ್ಜಾಹೀನವಾದುದು : ಲತಾವೇಷ್ಟನ ವೃಕ್ಷಾಧಿರೋಹಣವೆಂಬ ಯರಡಾಲಿಂಗನಮುಂ ಸ್ತ್ರೀಯರಿಗೆ ತ್ರಪಾ[ವಾಹೀ]ನಮೆಂಬ ಯರಡನೆಯ ಅವಸ್ಥೆ (ಕಾಮಶಾ. ೮೮).

[ಸಂ. (ತ್ರಪಾ + ಹೀನ)]

ತ್ರಪು (ನಾ). ೧. ಒಂದು ಬಗೆಯ ಲೋಹ ; ಸೀಸ : "ತ್ರಪು ವಂಗಂ ಸೀಸಂ" (ವಸ್ತುಕೋ. ೨೯-೯); ಅತಿವಿಚಿತ್ರತ್ರಪುಮಯಪತ್ರ ವಿಚಿತೋಚ್ಚಂಡ ತಾಳ ಚಾಪದಂಡಂ (ಆದಿಪು. ೧೩-೪೫ ವ); ಧರಿತ್ರಿಪುತ್ರನಿಂ ಹೇಮಮೈಂದವ ನಿಂದಂ ತ್ರಪು ಕಾಂಸ್ಯವರ್ಗಂ (ಜಾತಕ. ೪-೧೫). ೨. ತವರ ; ತಗರ : "ಮಧುರಂ ತ್ರಪುವೆನಲು ವಂಗಮೆನೆ ತವರಮೆನಿಕ್ಕುಂ" (ಮಂಗರಾ. ೩೦-೩).

[ಸಂ.]

ತ್ರಪುಸ (ನಾ). (ಸೌತೆ ಜಾತಿಗೆ ಸೇರಿದ) ಒಂದು ಬಗೆಯ ಬಳ್ಳಿ ಮತ್ತು ಅದರ ಕಾಯಿ : ತ್ರಪುಸ (ಸವತೀಜಾತಿ) . . . ಕೆಂಪುಕುಂಬಳ ಇವು ಕಫ ವಾತಕರ (ಆಷ್ಟಾಂಗ. ೦೩೭-೮೬). [ಸಂ.]

ತ್ರಪುಸೆ (ನಾ). ಸೌತೆಯ ಬಳ್ಳಿ : ಅಂಕುಡೊಂಕಿನ ಅಳ್ಳುಜಳ್ಳಿಯ ತರುವಿಸ ಸುತ್ತ ಸುತ್ತುವುದಿದೂ ತ್ರಪುಸೆ (ಗಾಥಾಸ. ೬-೩೪). [ಸಂ. ತ್ರಪುಸ]

ತ್ರಪೆ (ನಾ). ಲಜ್ಜೆ ; ನಾಚಿಕೆ : "ಹ್ರೀ ತ್ರಪಾಹ್ವಯಂ ವ್ರೀಡೆ ಲಜ್ಜೆಯೆನೆ ಮಂದಾಕ್ಷಂ" (ಪಸ್ತು.ಕೋ. ೦೧೪-೦೯) ; "ಹ್ರೀ, ಲಜ್ಜಾ, ಅವತ್ರಪಾ, ವ್ರೀಡಾ, ತ್ರಪಾ, ಮಂದಾಕ್ಷಂ – ಈ ೬ ಲಜ್ಜೆ" (ಹಲಾಯು. ೯೩-೪೦೩). [ಸಂ. ತ್ರಪಾ]

ತ್ರಪ್ಸ್ಯ (ನಾ). ಮಜ್ಜಿಗೆ ; ತಕ್ರ. [ಸಂ.]

ತ್ರಯ (ನಾ). ಮೂರು ; ಮೂರರ ಗುಂಪು. 'ತಾಪತ್ರಯ' ಪರಾ. [ಸಂ.]

ತ್ರಯಸ್ಥ (ಗು). ೧. ತಟಸ್ಥವಾದ ; ಪಕ್ಷಾತೀತವಾದ : ಚರಿತ್ರ ಲೇಖಕರಿಗೆ ಇರಬೇಕಾದ ತ್ರಯಸ್ಥ ಭೂಮಿಕೆಯನ್ನವರು ಸಾಧಿಸಿದ್ದಾರೆ (ಸ್ಮೃತಿಚಿ. ೬). (ನಾ). ೨. ಮಧ್ಯಸ್ಥ ; ನ್ಯಾಯತೀರ್ಮಾನ ಮಾಡುವವನು : ತ್ರಯಸ್ಥರು ಈ ತಂಟೆಯನ್ನು ಬಗೆಹರಿಸಲು ಮಾಡಿದ ಪ್ರಯತ್ನ ಫಲಿಸಲಿಲ್ಲ (ಪುನೀಚಿ. ೦೩೬). [ಸಂ.]

ತ್ರಯಿ (ನಾ). ೧. ಮೂರರ ಗುಂಪು ; ಮೂರರ ಸಮುದಾಯ. ೨. = ತ್ರಯಿಾ : "ಸಾಮರ್ಗ್ಯಜುಸ್ಸ್ವಯಂ ತ್ರಯಿಯೆನಿಕುಂ" (ಪಸ್ತು.ಕೋ. ೩-೧೭) ; ಸರ್ವಬೀಜ ಭೂತಾಧ್ವರ ಗರ್ಭಸ್ಥರಿತೆಯಾದ ತ್ರಯಿಯುಂ ನೀನೇ (ವಿಷ್ಣುಪು. ೫-೧-೧೦೦). ೩. ಗಂಡ ಮತ್ತು ಮಕ್ಕಳುಗಳನ್ನುಳ್ಳ ಗೃಹಿಣಿ. [ಸಂ. ತ್ರಯಿಾ]

ತ್ರಯಿರಾಶಿಕ (ನಾ). = ತ್ರೈರಾಶಿ: ಇನ್ನು ಮುಂದೆ ರಾಜಾದಿತ್ಯದ ಗಣಿತದಲ್ಲಿ ತ್ರಯಿರಾಶಿಕ, ಬಿಸ್ತತ್ರಯಿರಾಶಿಕ (ವ್ಯವಹಾ. ೦೧ ಅನುಬಂಧ). [<ಸಂ. ತ್ರೈರಾಶಿಕ]

ತ್ರಯಿಾ (ನಾ). ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳೆಂಬ ಮೂರು ವೇದಗಳು: "ಮೂಱು ವೇದಂಗಳುಮಂ ತ್ರಯಿಾಯೆಂಬುದು" (ಹಲಾಯು. ೩-೮); ತತ್ಪ್ರನಯಂ ತ್ರಯಿಾತ್ರಿಪಥಗಾ ಹಿಮವದ್ಗಿರಿ ಸಚ್ಚರಿತ್ರ ಸಂವತ್ತಿಯ ಬಿತ್ತು. . . . ದೇಚಿರಾಜವಿಪ್ರೋತ್ಪ್ರಮನಾ ಮಹಾಪುರುಷನಂ ಪುರುಷೋತ್ಪ್ರಮನೆನ್ನಿರ್ದಿರ್ದಾರ್ (ಶಾಪಮಂ. ೫೦೯ ; 1112) ; ವೇದವು ಋಗ್ವೇದ ಯಜುರ್ವೇದ ಸಾಮವೇದ ಎಂದು ಮೂರು ವಿಧ. ಮೂರಕ್ಕೂ ಸೇರಿ ತ್ರಯಿಾ ಎಂದು ಹೆಸರು (ಹಿಂದಿಸಾ. ೧೫೭). [ಸಂ.]

ತ್ರಯಿಾಚೋರ (ನಾ). ೧. ಮೂರು ವೇದಗಳನ್ನು ಕದ್ದವನಂ; ಹಯಗ್ರೀವನೆಂಬ ರಾಕ್ಷಸ : ಹಯವದನನಾಗಿ ನೀ ತ್ರಯಿಾಚೋರನನ್ನು ಕೊಂದು ಸ್ಮೃಯರಿಗೆ ನ್ಯಾಯದಿಂದ ದಯಾ ಬೀರಿದೆಯಲ್ಲ (ಪಾಂಡೇ. ೩೭-೫). ೨. ಸೋವಕನೆಂಬ ರಾಕ್ಷಸ. ℗ ಈ ಬಗ್ಗೆ ಪುರಾಣಗಳ ಕಥೆಗಳಲ್ಲಿ ಭೇದವಿದೆ. [ತ್ರಯಿಾ + ಚೋರ]

ತ್ರಯಿಾತನು (ನಾ). ಮೂರು ವೇದಗಳನ್ನು ಶರೀರವಾಗಿ ಉಳ್ಳವನಂ ; ಸೂರ್ಯ್ಯ ; ಆದಿತ್ಯ : "ಆದಿತ್ಯಃ, ಸವಿತಾ . . . ತ್ರಯಿಾತನುಃ – ಈ ೪೭ ಆದಿತ್ಯನ ಪೆಸರ್" (ಹಲಾಯು. ೭-೩೭) ; "ತ್ರಯಿಾತನು . . . ಸೂರ್ಯ್ಯನಕ್ಕುಂ" (ಪುಂಗಣ. ೦೦-೨). [ತ್ರಯಿಾ + ತನು]

ತ್ರಯಿಾಮಯ (ನಾ). = ಮೂರು ವೇದಗಳ ಸ್ವರೂಪನಾಗಿರುವವನು ; ಸೂರ್ಯ್ಯ : ತ್ರ ಯಿಾ ಮ ಯ ನು ಂ ನಿತ್ಯೋದಯನುಮಪ್ಪ ಗಭಸ್ತಿ ಮಾಲಿಗರ್ಭ್ಯಮನೆತ್ತಿ (ಪಂಡಿತಂ. ೩೬೭-೫). [ಸಂ.]

ತ್ರಯೋದಶ (ಗು). ೧. ಹದಿಮೂರನೆಯ. (ನಾ). ೨. ಹದಿಮೂರು : ಬ ಟಿ ಯ ಂ ಸಂಜ್ವಲನಕಷಾಯಚತುಷ್ಕನೋಕಷಾಯನವಕನಾಮ ತ್ರಯೋದಶಪ್ರಕೃತಿಗಳನರೆದು (ಶಾಂತಿಪು. ೦೧-೦೧೦ ವ) ; ಪರಿಗೃಹೀತ ದಶವಿಧ ಶ್ರವಣ ಧರ್ಮನುಂ . . . ತ್ರಯೋದಶವಿಧ ಕ್ರಿಯಾನಿರತನುಂ (ಜಾಪುಂಪು. ೫-೨೫). [ಸಂ.]

ತ್ರಯೋದಶಿ (ನಾ). ಚಾಂದ್ರಮಾನ ತಿಂಗಳ ಎರಡೂ ಪಕ್ಷಗಳ ಹದಿಮೂರನೆಯ ದಿನ : "ತೇರಸಿಯೆ ತ್ರಯೋದಶಿ" (ಪಚಾಸಿ. ೬೪) ; ಅಮಾವಾಸ್ಯೆ ತ್ರಯೋದಶಿ . . . ನವಮಿಯೆಂಬವೇ ಸರಣಿಯುಂ ಷಡ್ವಾದಿ ಸ್ಮರೋತ್ಪತ್ತಿ ತಿಥಿಗಳು (ವಿವೇಕ. ೩೬೧). [ಸಂ. ತ್ರಯೋದಶೀ]

ತ್ರಯೋಭಾಗ (ನಾ). ಮೂರನೆಯ ಒಂದು ಭಾಗ: ಬೆನಕಂಗೆ ತಾವರಕಾರಿಗೆ ಎನಗೆ ನೀವಿಂದು ಧನಮುಳ್ಳುದಂ ತ್ರಯೋಭಾಗವಾಗಿರಲಿಂದು ಹಂಚಿ ಕೊಟ್ಟಲ್ಲದಾರೋಗಿಸಲ್ಯಾನೀಯೆ (ಸಂಬಿರ. ೦೭-೯೩). ℗ಸಂಸ್ಕೃತ ವ್ಯಾಕರಣದ ಪ್ರಕಾರ ಇದು ಅಬದ್ಧರೂಪ. [<ಸಂ. ತ್ರಿಭಾಗ]

ತ್ರಸ (ಗು). ೧. ಚಲಿಸುವ ; ಸರಿಯುವ ; ಚರಿಸಂವ. (ನಾ). ೨. (ಎರಡು ಅಥವಾ ಎರಡಕ್ಕಿಂತ ಹೆಚ್ಚು ಇಂದ್ರಿಯಗಳನ್ನುಳ್ಳ) ಚಲಿಸುವ ಜೀವ ; ಜಂಗಮಪ್ರಾಣಿ : "ತ್ರಸಮಕ್ಕುಂ ಜೀವನಿಕಾಯಂ ಜಂಗಮಮಾವಿರ್ಭೂತ ಪ್ರಧಾನ ಚೈತನ್ಯಗುಣಂ" (ಪಸ್ತು.ಕೋ. ೦೮-೨) ; ತ್ರಸವೆನೆ ಚರಿಸುವ ಜೀವಂ (ತ್ರಿಷ.ಕೋ. ೯). ೩. [ಜೈನ] ತ್ರಸನಾಮ ಕರ್ಮದ ಉದಯದಿಂದ ಉಂಟಾಗುವ ಎರಡು ಇಂದ್ರಿಯಗಳಿಂದ ಹಿಡಿದಂ, ಐದಂ ಇಂದ್ರಿಯಂಗಳನ್ನು ಪಡೆದಿರುವ ಜೀವ: ತ್ರಸ ಸ್ಥಾವರ ಯೋನಿಗಳೊಳು ಬಲಕಾಲಂ ತೊಬಲ್ದು (ಜಾಪುಂಪು. ೩೪೬-೦೪) ; ಕೇವಲ ಗಮ್ಯಂ ತ್ರಸಮುಂ ಸ್ಥಾವರಮುಂ . . . ಇರ್ದುವು ಜೀವದ್ರವ್ಯಂಗಳಿಂ ಜಗತ್ತ್ರಯ ಮಧ್ಯಂ (ಅಜಿಪು. ೦೦-೩೬) ; ತ್ರಸಮೆನಿಕುಂ ದ್ವೀಂದ್ರಿಯದಿಂ ಪೆಸರ್ಗೊಳೆ ಪಂಚೇಂದ್ರಿಯಂಬರಂ ಕ್ರಮದಿಂದಂ (ಕಂದ್ರಪು. ೦೬-೦೨). ೪. ಹುಳು ; ಕ್ರಿಮಿ ; ಕೀಟ : "ತ್ರಸ ಲಾಕ್ಷಂ ಕ್ರಿಮಿಯೆಂದಿಕ್ಕುಂ" (ನಾನಾರ. ೦೨೨) ; ಹಸಿದ ದಿಂಡುಕಂಗೆ ಭಕ್ತಂಗೆ ಎಸಕದ ಧ್ಯಾನ ಉಂಟೇ ಅದು ತನ್ನ ಹಸಿವಡಗುವನ್ನೆಕ್ಕ ತ್ರಸಗಳು ಬಂದು ಸೇರುವನ್ನೆಕ್ಕ ಹುಸಿಧ್ಯಾನದಿಂದ ಜೀವದ ಅಸುಗಳ ಕೊಂಬವು (ಪೋಳಮಾ. ೫೭-೨೩೮) ; ತ್ರಸಮಂ ಕರಿಪತಿ ಪರಿರಕ್ಷಿಸುವುದದೇನರಿದೆ (ಪಾರ್ಶ್ವಪು. ೫-೫೯) ; ಧರಣಿಯೊಳು ದ್ವೀಪಾದ್ರಿಗಂಗಾಶರಧಿಪಕ್ಷಿವ್ಯಗತ್ರಸಂಗಳ ವಿರಚಿಸಿದರೊಲವಿಂದ (ಶಂಕದಾ. ೪-೨೯). ೫. ಕಾಡು ; ಅರಣ್ಯ. [ಸಂ.]

ತ್ರಸಕಾಯ (ನಾ). ೧. [ಜೈನ] ಚಲಿಸುವ ಶರೀರ : ನಾರಕರ್ಗೆ ವಿಘ್ಯಾ ದೃಷ್ಟಾ ಕ್ಯದಿಯಾಗಿ ನಾಲ್ಕು ಗುಣಸ್ಥಾನಮುಂ ... ಪಂಚೇಂದ್ರಿಯತ್ವಮುಂ ತ್ರಸಕಾಯಮುಂ . . . ನೀನವಶ್ಯಂ ಮಾಡೆ ಪಡುಗುಂ (ಪಸಾರ. ೧೬೪). ೨. ಚಲಿಸುವ ಶರೀರವುಳ್ಳ ಪ್ರಾಣಿ : ಅಲ್ಲಿಯುಂ ತ್ರಸನಾಮ ಕರ್ಮೋದಯವಶಂಗಳ್ ತ್ರಸಕಾಯಂಗಳ್ (ಆದಿಪು. ೦೦-೬೦ ವ). [ತ್ರಸ+ಕಾಯ]

ತ್ರಸಕಾಯಿಕ (ಗು). ೧. ತ್ರಸಜೀವಿಗಳ ದೇಹಕ್ಕೆ ಸಂಬಂಧಿಸಿದ. (ನಾ). ೨. = ತ್ರಸಜೀವ : ಕಾಯಾನುವಾದದಿಂ ತ್ರಸಕಾಯಿಕಂಗಳ್ಗೆ ಮೂಱು ಮೊಳವು (ತಸೂವೃ. ೦೧) ; ತ್ರಸಕಾಯಿಕಂಗಳ ಗಣನಂ ಪಂಚೇಂದ್ರಿಯ ಸಂಖ್ಯಾಸಮಾನಂ (ತತ್ತ್ವಸಾ. ೩೩). [ತ್ರಸ + ಕಾಯಿಕ]

ತ್ರಸಘಾತ (ನಾ). [ಜೈನ] ತ್ರಸಜೀವಿಗಳನ್ನು ಕೊಲ್ಲುಂವುದು,–ನಾಶ ಮಾಡುವುದಂ : ಅಲ್ಲಿ ತ್ರಸಘಾತಮೆಂಬುದು ತ್ರಸಂಗಳಂ ಕೊಂದೊಡಲ್ಲದ ಮಧುಮಾಂಸಮಿಲ್ಲವ್ವುದಱಿಂದವಂ ಸದಾಕಾಲಂ ವರ್ಜಿಸುವುದು (ಪಸಾರ. ೩೧೬). [ತ್ರಸ + ಘಾತ]

ತ್ರಸಜೀವ (ನಾ). [ಜೈನ] ಸಂಚರಿಸುವ ಜೀವ ; ಜಂಗಮಪ್ರಾಣಿ : ಸ್ಪರ್ಶನರಸನಘ್ರಾಣಚಕ್ಷುಶ್ರೋತ್ರೇಂದ್ರಿಯ ಸಮನ್ವಿತಂಗಳಪ್ಪ ಮನುಷ್ಯಾದಿ ಪಂಚೇಂದ್ರಿಯಂಗಳುಮೆಂದಿಂತು ತ್ರಸಜೀವಂಗಳ್ ಚತುರ್ವಿಧ ಮಕ್ಕುಂ (ಆದಿಪು. ೦೦-೬೩ ವ). [ತ್ರಸ + ಜೀವ]

ತ್ರಸಜೀವಿ (ನಾ). [ಜೈನ] ಚಲನೆಯುಳ್ಳ ಪ್ರಾಣಿ; ಜಂಗಮ; ಎರಡು ಅಥವಾ ಅದಕ್ಕಿಂತ ಹೆಚ್ಚು ಇಂದ್ರಿಯಗಳನ್ನುಳ್ಳ ಜೀವಿಗಳನ್ನು, ಅವುಗಳಿಗೆ ಚಲನಶಕ್ತಿಯೂ ಇರುವುದರಿಂದ ತ್ರಸಜೀವಿಗಳೆಂದು ಕರೆದಿದೆ (ತತ್ತ್ವಪ್ರ. ೧೪೭). [ತ್ರಸ + ಜೀವಿ$_1$]

ತ್ರಸನ (ನಾ). ೧. ಭಯ; ಹೆದರಿಕೆ. ೨. ಕಳವಳ; ಆತಂಕ. ೩. [ಕಾವ್ಯಮೀ] ಸಂಚಾರೀಭಾವಗಳಲ್ಲಿ ಒಂದು: ಧೃತಿವಿದ್ರಾವೇಗಶಂಕಾ ತ್ರಸನಚಪಲತಾಲಸ್ಯ . . . ಇವಿಂತೆಯ್ದು ಸಂಚಾರಿಭಾವಂ (ಕಾವ್ಯಾವ. ೭೯೩). [ಸಂ.]

ತ್ರಸನಾಮ (ನಾ). [ಜೈನ] ಹದಿಮೂರು ಪ್ರಕೃತಿಗಳಲ್ಲಿ ಒಂದು; ತ್ರಸ ಕಾಯದಲ್ಲಿ ಜನ್ಮವುಂಟಾಗುವಂತೆ ಮಾಡುವ ಕರ್ಮ: ವಂಚೇಂದ್ರಿಯ ಜಾತಿ ತ್ರಸನಾಮ ಶುಭಾಶುಭೋದಯ ಪರ್ಯಾಪ್ತ . . . ತೀರ್ಥಕರ ನಾಮಂಗಳೆಂಬ ಪದಿಮೂಱುಂ ಪ್ರಕೃತಿಗಳುಮಂ ನಿರ್ಮೂಲಂ ಕಿಡಿಸಿ (ಆದಿಪು. ೧೬-೪೯ ವ); ವಂಚೇಂದ್ರಿಯ ಜಾತ್ಯಾನುಪೂರ್ವಿತ್ರಸನಾಮ ಬಾದರ ಪರ್ಯಾಪ್ತ ಶುಭಗಾದೇಯ ಯಶಸ್ಕೀರ್ತಿ ತೀರ್ಥಂಕರ ನಾಮೋಚ್ಚೈರ್ಗೋತ್ರಂಗಳೆಂಬ ಪದಿನಾಱುಂ ಪ್ರಕೃತಿಗಳುಮೊರ್ಮೆಯೆ ನಿರ್ಮೂಲಮಾಗೆ (ಪಂಡಿತಾ. ೧೬-೮೦ ವ). 'ನಾಮಕರ್ಮ' ಪರಾ. [ತ್ರಸ + ನಾಮ]

ತ್ರಸನಾಳ (ನಾ). [ಜೈನ] ತ್ರಸಜೀವಿಗಳು ಇರುವ ಪ್ರದೇಶ: ಅಧೋಲೋಕಂ ಮಧ್ಯಮಲೋಕಮೂರ್ಧ್ವಲೋಕಂ ಕ್ರಮದಿಂ ತ್ರಸನಾಳಮೇಕ ರಜ್ಜುಪ್ರಮಿತಂ (ಆದಿಪು. ೬-೫೬); ಸಮಚತುರಸ್ರಂ ತ್ರಸನಾಳಮೇಕರಜ್ಜು ಪ್ರಮಾಣನಿಯತಂ ಮೂಲಾಗ್ರಮನೆಯ್ದಿ . . . ಮಧ್ಯದೊಳಿರ್ಕುಂ (ಮಲ್ಲಿಪು. ೦-೫೮); ಚತುರಸ್ರಂ ತ್ರಸನಾಳವೊಂದೆ ನಿಜರಜ್ಜುಪ್ರಾಪ್ತಿಯಿಂದಾ ತ್ರಿಲೋಕತಳಾಗ್ರಂಬರಮೆತ್ತಿನಿಂದ ಮಣಿಗಂಬಂಬೊಲ್ ಬೆಡಂಗಾದುದು (ಧರ್ಮನಾ. ೨-೫); ಒಂದು ರಜ್ಜುವಿನ ವಿಸ್ತಾರದಿ ತ್ರಸನಾಳ ಸಂದಿಹುದು ಊರ್ಧ್ವಾಧೋಸ್ಥಿತಿಗೆ (ಅನಂತ. ೦-೫೪). [ತ್ರಸ + ನಾಳ (= ನಾಲ)]

ತ್ರಸನಾಳಿ (ನಾ). = ತ್ರಸನಾಳ : ಇಂಥ ಲೋಕದ ಮಧ್ಯದಲ್ಲಿ ಬುಡದಿಂದ ತುದಿಯವರೆಗೆ, ಮರದಲ್ಲಿ ತಿರುಳು ಇರುವಂತೆ ಒಂದು ರಜ್ಜುವಿನಷ್ಟು ಅಗಲವಾಗಿಯೂ ಜೌಕವಾಗಿಯೂ ತ್ರಸನಾಳಿ ಇರುತ್ತದೆ (ಜೈನಪ. ೪೪೭). [ತ್ರಸ + ನಾಳಿ (= ನಾಲಿ)]

ತ್ರಸರ (ನಾ). ೧. ದಾರವನ್ನು ಸುತ್ತುವ ಅಟ್ಟೆ; ನೇಯಿಗೆಯಂ ಲಾಳಿ: "ತ್ರಸರಃ, ಸೂತ್ರವೇಷ್ಟಸಂ – ೨ ನೇಯಿಗೆಯವರು ನೂಲು ಸುತ್ತುವ ಅರಟೆ" (ಸಿದ್ಧಾಂತಿ. ೩೬೮). ೨. "ಜೇಡರು ಒಂದು ವಿಧವಾಗಿ ಸುತ್ತಿದ ನೂಲು" (ಗಂಗಾಮ. ೧೫೯). [ಸಂ.]

ತ್ರಸರೇಣು (ನಾ). (ಕಿಟಕಿ ಅಥವಾ ಹೆಂಚಿನ ಸಂದಿಯಲ್ಲಿ ಬೀಳುವ) ಸೂರ್ಯನ ಕಿರಣದ ಮಧ್ಯದಲ್ಲಿ ಕಾಣುವ ಧೂಳಿನ ಕಣ; Fಒಂದು ಅಳತೆಯ ಪ್ರಮಾಣ; ಮೂರು ಅಥವಾ ಆರು ಅಥವಾ ಎಂಟು ಪರಮಾಣುಗಳಿಂದ ಕೂಡಿದ ಧೂಳಿನ ಕಣ: ಎಂಟು ಪರಮಾಣುಗಳು ಕೂಡಲೊಂದು ತ್ರಸರೇಣುವೆನಿಸುವದು (ವಿವೇಕ. ೩೦೦); ಎರಡು ಪರಮಾಣುಗಳಿಂದರೆ ಒಂದು ಅಣು, ಮೂರು ಅಣುಗಳಿಂದರೆ ಒಂದು ತ್ರಸರೇಣು (ಧಾಮೃತ. ೮೯); ಎಂಟು ತ್ರುಟರೇಣುಗಳಿಂದ ಒಂದು ತ್ರಸರೇಣು (ಜೈನಪ. ೩೦೭). [ತ್ರಸ + ರೇಣು]

ತ್ರಸಿತ (ನಾ). [ಜೈನ] ಒಂದು ನರಕದ ಹೆಸರು: ವಕ್ರಾಂತ ತ್ರಸಿತ ಅವಕ್ರಾಂತ . . . ತತ್ಸಂಬಂಧಿ ಶ್ರೇಢೀಬಂಧ ಪ್ರಕೀರ್ಣಕ ವಿಕಲ್ಪದಿಂ ತ್ರಿಂಶಲ್ಲಕ್ಷ ಬಿಲಂಗಳಪ್ಪುವು (ತತ್ತ್ವಪ್ರ. ೦೨೦). [<ಸಂ. ತ್ರಾಸಿತ]

ತ್ರಸೆ (ನಾ). ಕಾಡು; ಅರಣ್ಯ: ತಿಂಮಯ್ಯನೆಟ ಮಾಡಿ ಧರ್ಮ ಭೇರಿ ಜೇಗಟೆ ಕೇಸ ಕಂಚು ಮುಟಗೆ ಮಾಡಿದು ಮುಗುವಿನ ವೊಳಗೆ ತ್ರಸೆಯಲಿ ಅಂತಭಟ ಸಿದವ್ವಭಟನವರ ಮೂಲದ ಬಾಳ ಮೇಲೆ . . . ಕೊಟ ಕಾಟಹೊಂನು ೧೧೦ (ಶಾಇಶ. IX-11, ೪೭೦-೪೮; 1482). [ಸಂ. ತ್ರಸ]

ತ್ರಸ್ತ (ಗು). ೧. ಹೆದರಿದ; ಅಂಜಿದ. ೨. ಕಳವಳಗೊಂಡ; ಗಾಬರಿಗೊಂಡ. (ನಾ). ೩. ಅಂಜುಬುರುಕ; ಭೀರು: "ಭೀರುಕರಂ ಕಾತರಂ ಭಯಸ್ಥಂ ತ್ರಸ್ತಂ" (ವಸ್ತುಕೋ. ೧೦೮-೧೨); "ಭೀರು ಭೀತಂ ಹಂದೆ ದಿತನಾ ಕಾತರಂ ತ್ರಸ್ತನಾ ಚಕಿತನೆನೆ ಹೇಡಿಗಭಿಧಾನಮಕ್ಕುಂ" (ಮುಂಗರಾ. ೬೯-೧೨); ಭವದೀಯಬಲವಿಜೃಂಭಿತರವದಿಂ ತ್ರಸ್ತನೆನಧೀಶ ಬಂದೊಂ ಕಾಣಲ್ ಭವದಂಭ್ರಸರೋದಮಂ (ಆದಿಪು. ೦೩-೨೮); ಅತಿತ್ರಸ್ತನಾಗಿ ಮುಂದುಗಾಣದೆ ವಿಹ್ವಲನಾಗಿ ತೊಬಲುತ್ತುಂ ಕಟಕದ ನಡುವನೆಯ್ದಿ ಬರ್ಪನ್ನೆಗಂ (ಕಾದಂಬ. ೪೩೬); ಅನವಶ್ಯಕ ಜಗಳದ ಮಾತುಗಳಿದ್ದುದರಿಂದ ತ್ರಸ್ತನಾಗಿ ನಾನೇ ಸುಮ್ಮನಾದೆ (ಕಾಗಳ. ೧೦೦). ೪. [ನಾಟ್ಯ] ಮುಖ್ಯವಾದ ಪಂಚಾವತ್ಕಾರರು ದೃಷ್ಟಿಚಲನೆಗಳಲ್ಲಿ ಒಂದು: ಬಿದರ್ವಲರ್ವ ತಾರೆ ತಿರುವಮನೊದವಿದ ಪುಟಮಾಗಿ ತೋಱಿ ತ್ರಸ್ತ ಮೆನಿಕ್ಕುಂ (ಕಾಸ್ಕರಂ. ೩-೩೭); ಉಳಿದ ೨೦ ನೋಟಗಳು ವ್ಯಭಿಚಾರಿ ಭಾವಯುಕ್ತವಾದುವುಗಳು: ೧. ಶೂನ್ಯ ... ೧೯. ತ್ರಸ್ತ, ೨೦. ಮದಿರ (ಆಭಾನ. ೪೩). ೫. [ಜೈನ] ಒಂದು ನರಕದ ಹೆಸರು: ತ್ರಸ್ತ ವಕ್ರಾಂತ ತ್ರಸಿತ . . . ತತ್ಸಂಬಂಧಿ ಶ್ರೇಢೀಬಂಧ ಪ್ರಕೀರ್ಣಕ ವಿಕಲ್ಪದಿಂ ತ್ರಿಂಶಲ್ಲಕ್ಷ ಬಿಲಂಗಳಪ್ಪುವು (ತತ್ತ್ವಪ್ರ. ೦೨೦). [ಸಂ.]

ತ್ರಸ್ತರಿ (ನಾ). ಪರಿಹಾಸ; ಮೂದಲಿಕೆ. 'ತ್ರಸ್ತರಿಯಾಡು' ಪರಾ. [ದೇ.ಕೆ ತೆಲು. ತ್ರಸ್ತರಿ]

ತ್ರಸ್ತರಿಯಾಡು (ಕ್ರಿ). ಪರಿಹಾಸ ಮಾಡು; ಮೂದಲಿಸು: ಸುರಭೂರುಹ ಮುಮನಗ್ಗದ ಸುರಭಿಯುಮಂ ಚಾಗಗುಣದೊಳಿಮ್ಮತಿಸಂ ತ್ರಸ್ತರಿಯಾಡುವಂ (ಧರ್ಮಾಮೃ. ೪-೩೦೭). [ತ್ರಸ್ತರಿ + ಆಡು$_1$]

ತ್ರಸ್ತಾಭಿಭೂತ (ನಾ). ಭಯಗೊಂಡವನಂ; ಹೆದರಿದವನಂ: ಕಳ್ಳರೆಂದು ಪಯ್ಕೆಲಿಟ್ಟಾಗಳನಿಬರುಂ ತ್ರಸ್ತಾಭಿಭೂತ[ಪಾಠಾಂ. ತ್ರಸ್ತಾಭೀತ]ರಾಗಿ ಪಟ್ಟನೆ ಪಾಱಿಯೋಡಿ (ವರ್ಧಮಾಚ. ೦೮-೨೩). [ತ್ರಸ್ತ + ಅಭಿಭೂತ]

ತ್ರಸ್ತಾಲಸ (ನಾ). [ನಾಟ್ಯ] ಕುಳಿತುಕೊಳ್ಳುವ ಒಂಭತ್ತು ಸ್ಥಾನಕಗಳಲ್ಲೊಂದು; P ಗ್ಲಾನಿ, ಮದ, ವ್ಯಾಧಿ ಮೊದಲಾದುವನ್ನು ಅಭಿನಯಿಸುವ ಭಂಗಿ: ಸ್ವಸ್ಥ ಮಂಡಾಲಸ ಕ್ರಾಂತ ವಿಷ್ಕಂಭಿತ ಉತ್ಕಟ ತ್ರಸ್ತಾಲಸ ಜಾನುಗತ ಮುಕ್ತಜಾನು ವಿಮುಕ್ತ ಈ ಒಂಬತ್ತು ಕುಳ್ಳಿರ್ದ ಸ್ಥಾನಕಂಗಳ್ (ಕಾಸ್ಕರಂ. ೭-೦೨ ವ); ತ್ರಸ್ತಾಲಸ: ಕೈಗಳನ್ನು ಜೋತು ಬಿಟ್ಟು ಆಲಸ್ಯದಿಂದ ಕೂಡಿ, ಕಣ್ಣುಗಳನ್ನು ಕಡೆದ ನೊರೆಯಂತೆ ಸುತ್ತಿಸುವುದು. ಹಾನಿ, ಗ್ಲಾನಿ, ಮದ, ವ್ಯಾಧಿ, ಮೂರ್ಛೆ, ಭಯ ಇವುಗಳನ್ನು ತೋರಿಸುವಾಗ ಇದನ್ನು ವಿನಿಯೋಗಿಸಬೇಕು (ಕಾಸ್ಕರಂ. ೭೭೨ ಗದ್ಯಾನುವಾದ). [ತ್ರಸ್ತ + ಆಲಸ]

ತ್ರಸ್ತಾಲಸಕ (ನಾ). = ತ್ರಸ್ತಾಲಸ : ಎರಡುಂ ಕೈಗಳ್ ಪಸರದಿನಿರೆ ತನು ಜಡನಾಗಿ ಕಣ್ಗಳಿರಡುಂ ಮಥಿಸಿದ ನೊರೆಯಾಗಿ ತಿರುಗಲದು ತಾಂ ತರುಣೀ ತ್ರಸ್ತಾಲಸಕದ ತಾಣವೆನಿಕ್ಕುಂ (ಕಾಸ್ಕರಂ. ೭-೩೭). [ಸಂ.]

ತ್ರಸ್ತೆ (ನಾ). ಕಳವಳಗೊಂಡವಳು. [ಸಂ. ತ್ರಸ್ತಾ]

ತ್ರಸ್ನು (ನಾ). ಹೆದರುವ ಸ್ವಭಾವದವನು; ಅಂಜಂಬುರುಕ; ಭೀರು: "ತ್ರಸ್ನುಃ, ಭೀರುಃ, ಭೀರುಕಃ, ಭೀಲುಕಃ–೪ ಹೆದರುವವನ ಪೆಸರು, ಭಯಪಡುವ ಪರಿಕಿ" (ಸಿದ್ಧಾಂತಿ. ೩೨೯). [ಸಂ.]

ತ್ರಾಟಕ (ನಾ). (ಕಣ್ಣುಗಳಲ್ಲಿ ನೀರು ಬರುವವರೆಗೂ) ಒಂದೂ ವಸ್ತುವನ್ನು ದಿಟ್ಟಿಸಿ ನೋಡುವಿಕೆ: ಅತಿ ಸೂಕ್ಷ್ಮವಾದ ವಸ್ತುಗಳನು ಸ್ಥಿರ ದೃಷ್ಟಿಯಿಂ ಕಂಬನಿ ಬರುವ ಪರಿಯಂತರ ನೋಡೂದು ತ್ರಾಟಕವೆನಿಸೂದು (ಶಿವಪ್ರ. ೬-೭). [?]

ತ್ರಾಟಿಕಿ 'ತಾಟಿಕಿ' ನೋ.

ತ್ರಾಟಿಕೆ 'ತಾಟಿಕಿ' ನೋ.

ತ್ರಾಟಿಸು (ಕ್ರಿ). ೧. ಹೊಡೆ; ಬಡಿ; ತಾಟಿಸಂ: ಪೂರ್ವವಜ್ಞಿತು ತ್ರಾಟಿಸುವಾಗ ಶ್ರೀವಿಶ್ವಕರ್ಮನ ಪೂಜೆಯು ಹೋಯಿತಲ್ಲೋ (ಪ್ರಸಕೀ. ೭೭-೦). ೨. ಚಪ್ಪರಿಸು; ತಟ್ಟು: ಕುದುರೆಯ ನೆರೆಯ ತ್ರಾಟಿಸಲಾನಂದದಿ ಸೆಟ್ಟಿಯ ಪುರಕೆ (ತರ್ಕಭಾ. ೧೭-೯೦). [<ತಾಟಿಸು]

ತ್ರಾಡ (ನಾ). ಶಬ್ದ ; ಸಪ್ಪಳ ; ರವ : "ರವಂ ತ್ರಾಡಮಕ್ಕುಂ" (ಮಂಗರಾ. ೯೭-೧೬). [<ಸಂ. ತಾಡ]

ತ್ರಾಡಿಸು (ಕ್ರಿ). ಹೊಡೆ; ಬಡಿ: ತ್ರಾಡಿಸುವ ಭೇರಿಗಳ ರಭಸದೊಳೀಡಿರಿವ ಹರುಷದಲಿ ತೇಜೋವತಿಯನೊಳಪೊಕ್ಕ (ಅಂಬಿಕಾ. ೪-೦೫) ; ಘೋಟಕಗಳನ್ನೇರಿ ನಿಜಕರಕಲಿತ ಕಶೆಗಳಿಂ ತ್ರಾಡಿಸ [ಪಾಣಾಂ. ತಾಡಿಸ]ಲ್ (ಪಂಚಾರಾ. ೧-೭-೪). [<ತಾಡಿಸು]

ತ್ರಾಣ (ನಾ). ೧. ಕಾವು ; ರಕ್ಷಣೆ ; ಪಾಲನೆ : ಪರಿಜನಪ್ರಾಣ ತ್ರಾಣಾ ಕುಲಮತಿಯಪ್ಪೆನ್ನ ಬಿನ್ನಪಮಂ ದೇವರವಧಾರಿಸಿ ಪ್ರಸಾದಂಗೆಯ್ವುದು (ಕಾದಂಬಾ. ೩೭೯). ೨. ಶಕ್ತಿ ; ಬಲ; ಕಸುವು; ಸಾಮರ್ಥ್ಯ: ದಪ್ಪವಾದ ಶರೀರವುಳ್ಳವನಾದರೂ ಒಬ್ಬನು ತ್ರಾಣವಿಲ್ಲದೇ ಇಹನು (ವೈದ್ಯಸಾ. I, ೩೦); ಉರುತರ ತ್ರಾಣದೊಳ್ ಜಯದೊಳ್ ಚಮತ್ಕೃತಿಯೊಳ್ ... ಪಂಥದೊಳ್ ಕಾಣೆನವರಿರ್ವರ್ಗೆ ಸಮರಾದ ಕಲಿಗಳಂ ಕ್ಷೋಣಿಯೊಳ್ (ಚ ಮಿ ಭಾ. ೨೨-೧೨) ; ಕಾಣಲೊಲ್ಲದೆ ತನ್ನ ತ್ರಾಣವನು ನೆಲೆ ನಂಬಿ ಜಾಣತನವನ್ನು ತೋಱಿದರೆ ಗುರುಮುಖವ ಕಾಣದೆ ಹೋಹ (ಸರ್ವಜ್ಞ. ೩೬) ; ತ್ರಾಣಗಳನು ತೋರಿಸಿ ಪಾರಿಸುವ ಭೂರಿ ದಾರುಣವೀರ ಧೀರ ಶೌರ್ಯೋದಾರ್ಯ . . . ಕಾವಾಂಧಕಾರಗೃಹದಿ ಸೇರಿಸಿದ ಮಾರನೆಷ್ಟೊಂದು ವೀರನರರೆ (ಸೌಗಂಧಿ. ೬೪-೦) ; ಅತ್ರಿಋಷಿಗಳಿಗೆ ಒಂದು ದಿನ ದೇಹದಲ್ಲಿ ಅಲಸಿಕೆಯಾಯಿತು. ನಡೆಯುವುದಕ್ಕೆ ತ್ರಾಣವಿಲ್ಲದೇ ಹೋಯಿತು (ವೀತಚಿಂ. IX, ೧೬) ; ತ್ರಾಣವಿದ್ದವನ ಸಂಗಡ ಹೋಗಿ ತಾಟಿಸಿಕೊಂಡ (ಗಾಥ). ೩. ರಕ್ಷಾಕವಚ. 'ತನುತ್ರಾಣ', 'ಶಿರಸ್ತ್ರಾಣ' ಪರಾ. ೪. ರಕ್ಷಕ ; ಪಾಲಕ. ೫. ಸರಕಿನ ಭಾರ ಹೊರುವ (ಹಡಗಿನ) ಶಕ್ತಿ : "ತ್ರಾಣವೆನೆ ಸರಿ" (ಮಂಗರಾ. ೧೩೧-೫). [ಸಂ.]

ತ್ರಾಣಂಗೆಡು (ಕ್ರಿ). ಬಲವನ್ನು ಕಳೆದುಕೊಳ್ಳು ; ಶಕ್ತಿಗುಂದು : ಸುಖ ಬಂದಡೆ ಸಪ್ರಾಣಿಸುವೆ ದುಃಖ ಬಂದಡೆ ತ್ರಾಣಂಗೆಡುವೆಂ (ಶಂಖಕಂ. ೨೫). [ತ್ರಾಣ + ಕೆಡು$_1$]

ತ್ರಾಣಗುಂದಿಸು (ಕ್ರಿ). ಶಕ್ತಿಗುಂದುವಂತೆ ಮಾಡು ; ಶಕ್ತಿಗುಂದಿಸು : ಜವಗೆಡಿಸು=ತ್ರಾಣಗುಂದಿಸು (ಗಂಗಾಮ. ೦೩೮). [ತ್ರಾಣ + ಕುಂದಿಸು]

ತ್ರಾಣಗುಂದು (ಕ್ರಿ). = ತ್ರಾಣಂಗೆಡು : (ಕ). [ತ್ರಾಣ + ಕುಂದು$_1$]

ತ್ರಾಣಗೊಳ್ಳು (ಕ್ರಿ). ಬಲಿಷ್ಠವಾಗು ; ಶಕ್ತಿಯನ್ನು ಹೊಂದು : (ಕ). [ತ್ರಾಣ + ಕೊಳ್ಳು$_{11}$ (<ಕೊಳ್$_1$)]

ತ್ರಾಣಪುಷ್ಪಿ (ನಾ). ಬಲವನ್ನು ಕೊಡುವ ಸತ್ತ್ವ: ಹಸುವಿನ ಹಾಲಿನಲ್ಲಿರುವ ತ್ರಾಣಪುಷ್ಪಿ ಎಮ್ಮೆಯ ಹಾಲಿನಲ್ಲಿ ಇಲ್ಲ (ಹೇಮಾತೀ. ೬೭). [ತ್ರಾಣ + ಪುಷ್ಪಿ]

ತ್ರಾಣಿ (ನಾ). ೧. ಶಕ್ತಿಯನ್ನು ಉಳ್ಳವನು ; ಬಲಶಾಲಿ : "ಬಲಿಷ್ಠಃ, ಬಲೂಲಃ=ತ್ರಾಣಿ" (ಕಾಶಕ್ಕ. ೪೭) ; ಕೇಣವನು ಕಳೆಯುವುದು ತ್ರಾಣಿಯೆಂದನಿಸುವದು ಕ್ಷೋಣಿಮಾರ್ಬಲವ ಗೆಲ್ಲುವುದು ಪುಣ್ಯದತ್ರಾಣ ಕಾಣಯ್ಯ (ಸರ್ವಜ್ಞ. ೭೦೪); ಕೂಸಿಗಿಂತ ತ್ರಾಣಿಯಲ್ಲ ಪಾಪ ! ರಾಯರು (ಮೂಂಡಿ. ೩೧-೧೧) ; ತೊಟ್ಟಿಲಲ್ಲಿ ಆಡುವ ಕೂಸು . . . ನಡೆದಾಡುವಷ್ಟು ತ್ರಾಣಿಯ ಆದಾಗ (ಹೊಸಕ್ಕಿ. ೬೭). ೨. ರಕ್ಷಣೆಯನ್ನು ನೀಡುವಂತಹುದು : ತ್ರಾಣಿಗಳತ್ಯಧಿಕ ವರಶ್ರೇಣಿಗಳ್ (ಗಿರಿಕ. ೧೦-೫೬). [ಸಂ. ತ್ರಾಣಿನ್]

ತ್ರಾತ$_1$ (ನಾ). ರಕ್ಷಿಸುವವನು ; ರಕ್ಷಕ : ಹುಟ್ಟುಗುರುಡಿಯನು ಹುಟ್ಟಿಸಿದಾತನಿಗೆ ವಿಶ್ವದ ತ್ರಾತನಿಗೆ ನನ್ನ ನಮಸ್ಕಾರ (ಚಿಂತನ. ೭೫-೩೭). [ಸಂ. ತ್ರಾತೃ]

ತ್ರಾತ್ಯ (ನಾ). ಕಾಪಾಡಲ್ಪಟ್ಟುದು; ರಕ್ಷಿಸಲ್ಪಟ್ಟುದು: "ತ್ರಾಣಂ ತ್ರಾತಂ (ಸಮಂತು) ರಕ್ಷಿತಮವಿತಂ" (ವಸು.ಕೋ. ೧೦೫-೪೩); ೨. ರಕ್ಷಣೆ; ಪಾಲನೆ: "ತ್ರಾತಂ, ತ್ರಾಣಂ, ರಕ್ಷಿತಂ, ಅವಿತಂ, ಗೋಪಾಯಿತಂ, ಗುಪ್ತಂ–ಈ ಪೊರೆಯಲ್ಪಟ್ಟದ್ದು" (ಸಿದ್ಧಾಂತಿ. ೩೩೨). "ತ್ರಾತಂ, ತ್ರಾಣಂ . . . ತ್ರಾಯಂ, ಈ ೫ ಪಾಲನೆ" (ಕಾಶಕ್ಕ. ೦೩೯). [ಸಂ.]

ತ್ರಾಪುಷ (ಗು). ೧. ತವರದಿಂದ ಮಾಡಿದ.. (ನಾ). ೨. ತವರದಿಂದ ಮಾಡಿದ ಪಾತ್ರೆ. [ಸಂ.]

ತ್ರಾಯಂತಿ (ನಾ). ಒಂದು ಬಗೆಯ ಔಷಧಿ ಸಸ್ಯ ; ನೀರಾಮೆ ಬಳ್ಳಿ ಮತ್ತು ಅದರ ಬೇರು : ತ್ರಾಯಂತಿ = ತ್ರಾಯಂತಿಯ ಚೂರ್ಣಕಷಾಯಂ . . . ಎಂಬಿವುಗಳಿಂದಂ ... ಕೊರಳಿಂದ ಮೇಲಪ್ಪ ವಿಕೃತಿ, ಪಿತ್ತಂಗಳುಂ, ಮಾಣುವುವು (ವಿವೈವಿ. ೧೬೨). [ಸಂ. ತ್ರಾಯಂತೀ]

ತ್ರಾಯಮಾಣಿ (ನಾ). ಒಂದು ಬಗೆಯ ಗಂಧದ್ರವ್ಯ : "ವಾರ್ಷಿಕಂ–ತ್ರಾಯಮಾಣಿ ಎಂಬ ಗಂಧದ್ರವ್ಯ, ದರಸಿ, ಬಿದಿರುಪ್ಪು" (ಓಷಧಿ. ೦೫೦). [ಸಂ. ತ್ರಾಯಮಾಣಾ]

ತ್ರಾವಳಿ (ನಾ). [ಸಂಗೀತ] ಒಂದು ರಾಗದ ಹೆಸರು : ಕೌಶಿಕಿ ವೇಳಾವಳಿ . . . ತ್ರಾವಳಿ . . . ಶಯಸೋದರಿಯೆಂಬ ಮೂವತ್ತುನಾಲ್ಕು ರಾಗಂಗಳೇ ಭಾಷಾಂಗದಿಂದ ಪುಟ್ಟಿದವು (ವಿವೇಕ. ೨೬೩). [?]

ತ್ರಾಸ (ನಾ). ೧. ಭಯ ; ಹೆದರಿಕೆ : "ಶಂಕೆ ಭಯಂ . . . ತ್ರಾಸಂ ದರಂ ಎಭೀತಿ ಸಮಾನಾರ್ಥಂ" (ವಸು.ಕೋ. ೧೧೦-೫); "ಆತಂಕಃ, ಭಯಂ . . . ತ್ರಾಸಃ, ಸಾಧ್ವಸಂ – ಈ ೬ ಭಯಂ" (ಹಲಾಯು. ೧೩೦-೪೦) ; ಉದಯಿಸೆ ನೃಪಖಿಳ್ಗಂ ಮಹಾತೀಕ್ಷ್ಣಧಾರಾಪರಿಪಾತತ್ರಾಸದಿಂದೋಡಿದರತಿ ಜವದಿಂ ರಾಜಹಂಸರ್ (ದಾಢಪು. ೨-೦೩). ೨. ಉಪದ್ರವ; ತೊಂದರೆ: ರಾಗಾದಿಗಳ್ ಜನ್ಮಮೃತ್ಯು ತ್ರಾಸಂಗಳನೀವುವು (ಪಂಚಾಮೃ. ೧-೪) ; ನನ್ನಿಂದ ನಿನಗೆ ತ್ರಾಸ ಮಾತ್ರ ಆಯಿತು (ಪ್ರೇಮಶ. ೧೪); ನನ್ನ ಮನಸ್ಸಿಗೆ ಎಷ್ಟು ತ್ರಾಸವಾಯಿತೆಂಬದನ್ನು ಅದೇ ಕಾಲಕ್ಕೆ ಪತ್ರದ್ವಾರದಿಂದ ತಿಳಿಸಿದ್ದೇನೆ (ದಾಸಹು. ೧೦೦). ೩. ರತ್ನದಲ್ಲಿಯ ಹುಳುಕು,–ದೋಷ: "ರತ್ನಂಗಳ ದೋಷದಲ್ಲಿಯುಂ ತ್ರಾಸಮೆಂಬುದು" (ಹಲಾಯು. ೧೩೪-೨೨) ; "ಅಖಿಳ ರತ್ನದ ಕಾಂತಿ ಕೆಟ್ಟರಲು ತ್ರಾಸಮೆನಿಸಿಕ್ಕುಂ" (ಮಂಗರಾ. ೧೪೦-೧೦) ; ವರ್ಣಾಲ್ಪತೆ ರೇಖೆ ತ್ರಾಸಂ ಕಾಕಪದಂ ಬಿಂದುವೆಂಬಿವೈದು ದೋಷಂಗಳನುಳಿದ ಬಜ್ರರಮಂ ತೊಡವುಗಳೊಳ್ ಕೇವಣಿಸಿ (ಹಾಲಾಸ್ಕ. ೨-೧-೫೫ ವ). ೪. ಹೆದರಿಸುವುದು ; ಭಯಪಡಿಸುವುದು. ೫. ಚಲಿಸುವುದು ; ಚಲನೆ. ೬. [ಕಾವ್ಯಮಿಶ್ರ] ಸಂಚಾರೀಭಾವಗಳಲ್ಲಿ ಒಂದು ; ತ್ರಸನ ; ಹೆದರುವುದು ; ಬೆದರುವಿಕೆ : ತ್ರಾಸ ಎಂದರೆ ಬೆದರುವುದು (ಧಾರಮಿ. ೩೪೭). [ಸಂ.]

ತ್ರಾಸಂಗೊಳ್, ತ್ರಾಸಗೊಳ್ಳು (ಕ್ರಿ). ೧. ಹೆದರಿಕೊಳ್ಳು; ಭಯಪಡು: ವಸುಧಾತಳಪತಿಗಿತ್ತಂ ತ್ರಾಸಂಗೊಳುತುಂ ಸರ್ವಸ್ವಮುಂ ಪೃಥಾಸಾಮರನುಂ (ಆದಿಪು. ೦೩-೪). **ತ್ರಾಸಗೊಳ್ಳು**: ೨. ತೊಂದರೆಗೆ ಒಳಗಾಗು: ಜನರು ತ್ರಾಸಗೊಂಡಿದ್ದಾರೆ (ಕ್ಷೂರಾಡಿ. ೪೫೫). [ತ್ರಾಸ + ಕೊಳ್$_1$]

ತ್ರಾಸಕೊಡು (ಕ್ರಿ). ತೊಂದರೆ ಕೊಡು; ಉಪದ್ರವ ಕೊಡು; ಪೀಡಿಸು: ಮಕ್ಕಳೇ ಜಗಳಮಾಡಬಾರದು; ಈ ಅಮ್ಮನಿಗೂ ಅಣ್ಣನಿಗೂ ತ್ರಾಸಕೊಡಬಾರದು (ಜಿದಾಉ. ೩೦೦) ; ಅವರು ಯಾವ ವಿಧದಲ್ಲೂ ತಮ್ಮ ಮಗನಿಗೆ ತ್ರಾಸಕೊಡುತ್ತಿರಲಿಲ್ಲ (ಅವತಂ. ೩). [ತ್ರಾಸ + ಕೊಡು$_1$]

ತ್ರಾಸಗೊಳ್ಳು 'ತ್ರಾಸಂಗೊಳ್' ನೋ.

ತ್ರಾಸದಾಯಕ (ಗು). ಕಷ್ಟಕರ; ಉಪದ್ರವಕಾರಿ; ತೊಂದರೆಯನ್ನುಂಟುಮಾಡುವ: ಹೊಸ ಶಿಕ್ಷಣಾಧಿಕಾರಿಯು ಆಡಳಿತವು ಆನಂದ – ಗೋವಿಂದರಾಯರಿಗೆ ತ್ರಾಸದಾಯಕವಾಯಿತು (ಸ್ಮೃಲಮಿ. ೨೨೮); ನೀರು ಹೊರುವ ಕೆಲಸ ತ್ರಾಸದಾಯಕವಿದ್ದ ಪ್ರಾಂತಕ್ಕೆ ಬೀಪಾಯಿ ಸವಾರಿ ಬಿಡುತ್ತಿದ್ದನು (ಕಂಲಹು. ೨೩); ಉಪದ್ರವಕಾರಕ, ತ್ರಾಸದಾಯಕ ಭೂತ, ರೋಗ ಮುಂತಾದುದರಿಂದ ತೊಂದರೆಯಾಗದಿರಲೆಂದು ಕೊಡುವ ಬಲಿ (ಕರ್ಗಾಟ. ೬೫). [ತ್ರಾಸ + ದಾಯಕ]

ತ್ರಾಸಪಟ (ನಾ). (?): ಪರಮೇಶ್ವರರಲ್ಲಿ ಭಕ್ತಿವುಳ್ಳವನಾದ್ದರಿಂದ ಪೂರ್ಣ ಚಂದ್ರನಿಗೆ ಸಮಾನವಾದ ಕಾಂತಿವುಳ್ಳಂಥಾದಾಗಿ ತ್ರಾಸಪಟಗಳು ಇಲ್ಲದೆ ಇರುವಂಥಾವರಾಗಿ ಉತ್ತಮವಾದ ಸ್ಫಟಿಕಲಿಂಗವನ್ನು ಸಂಪಾದಿಸಿ (ಶಿವದ. ೧೧೫-೧೭). [?]

ತ್ರಾಸಿಸು (ಕ್ರಿ). (ಹೆದರಿಸಿ) ನಾಶಪಡಿಸು,–ಇಲ್ಲದಂತೆ ಮಾಡು: ಅಘಮಂ ತ್ರಾಸಿಸಲೆಂದಮಳ ದೀಕ್ಷೆಯಂ ಕೆಯ್ಕೊಂಡಳ್ (ಜಾಂತಿಪು. ೪-೮೪). [ತ್ರಾಸ + – ಇಸು$_3$]

ತ್ರಾಸು$_1$ (ನಾ). ತೊಂದರೆ; ಆಯಾಸ; ಕಷ್ಟ: ನನ್ನಿಂದ ನಿಮಗೆ ಸುಮ್ಮನೆ ತ್ರಾಸು (ಹೊಸಕ್ಷ. ೩೫); ಮದುವೆ ಆದರೆ ಮಾಡಿಕೊಂಡವಳಿಗೂ ತ್ರಾಸು ನನಗೂ ತ್ರಾಸು (ರಕ್ತಧ್ಯ. ೬೯); ಬಾಳ ತ್ರಾಸಾಗೈತಿ ಜೀವಕ್ಕ (ಮಣ್ಣುಹೆ. ೪); ನೀ ಒಪ್ಪೋದ ತ್ರಾಸು ಅಂತ ತಿಳಿದಿದ್ದೆ (ಅಪನಾ. ೨೯). [<ಸಂ. ತ್ರಾಸ]

ತ್ರಾಸು$_2$, ತರಾಜು, ತರಾಸು (ನಾ). ಮಸ್ತುಗಳನ್ನು ತೂಕಮಾಡುವ ಸಾಧನ; ತಕ್ಕಡಿ: "ಪಾತ್ರದಂ ತ್ರಾಸು ಸಮದಂಡಿ ತೂಗುವ ಕೋಲು" (ಮಂಗರಾ. ೧೦೫-೦೪); ತೂಗೆ ಸಂದಾ ವೇರು ಕ್ಷೋಣೀಂದ್ರಪುಂ ತ್ರಾಸಿನೊಳ್ (ಎಳ. VII, ಶಿವಮೂ. ೬೪-೪೬ ; 1112); ತ್ರಾಸಿನ ಕೊಡನೊಂದು ಬಿರ್ದೊಡೊಂದುಬಿದಪುದೇ (ಧರ್ಮಾಮೃ. ೫-೧೦೭); ಹೊನ್ನ ತೂಗಿದ ತ್ರಾಸು ಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ (ಅವಪಂ. ೧೦೮-೪೯೦); ಮಿಗೆ ಮನದೊಳಗೆ ನಸುನಗುತೆ ತಂದಿಕ್ಕಿದಂ ತ್ರಾಸಿನೊಳಗೆ ಕೌಪಂ (ಆನೀರ. ದೀ. ೯೬-೧೨) ; ಸೊಗಸು ಮಿಗಲಾ ತ್ರಾಸು ಕಟ್ಟಳೆಯೊಗುಮಿಗೆಯು ಮಾಷಗಳ ಪದ್ಧತಿಯಗಲದಲಿ ಹರಹಿದನು (ಸಂಭವ. ೩೨-೩೩) ; ತ್ರಾಸಿಂದೆ ತೂಗಿದ ಮಣಿಯೆನೆ ಮಜ್ಜೀವಿತೇಶ ವಿಸ್ತರಿಸು ಮೇಲ್ಗತೆಯ (ಮೋಹಶ. ೨೩-೧) ; ಕೂಗಿ ಹೇಳಿದರೆ ತೂಗುವ ತ್ರಾಸು ಕೇಳುತ್ತದೋ ? (ಗಾಡ). **ತರಾಜು**: ವಿಲಾಯತಿ ಕಬ್ಬಿಣ ಮತ್ತು ಹಿತ್ತಾಳೆಯ ತರಾಜು ಮತ್ತು ಫಿಡಿಯಾಳಗಳು (ಮುಂಬಶಾ. ೧೯೨). **ತರಾಸು**: ನೀವು ನಿಮ್ಮ ಕೈಯೊಳಗೆ ಒಂದು ತರಾಸು ತಕ್ಕೊಂಡು ಎತ್ತಿ ಹಿಡಿಯಿರಿ (ಮುಂಬಹು. ೩-೫೪).

ತ್ರಾಸಿನ ಕಟ್ಟಳೆ = ತೂಕ; ಪ್ರಮಾಣ: ಅರಿದರಿದು ಸಮಗಾಣಿಸ ಬಾರದು ತ್ರಾಸಿನ ಕಟ್ಟಳೆಯಂತಿನಿತು ವೆಗ್ಗಳವಾದರೆ ಈಶ್ವರನೊಡೆಯಿಕ್ಕದೆ ಮಾಣುವನೆ (ಬಸವ. ೮೦೪).

[←ಪಾರ. ಹಿಂ. ತರಾಜೂ; ಮರಾ. ತರಾಸ್, ತರಾಜೂ]

ತ್ರಾಸ್ಯ (ನಾ). ಒಂದು ಬಗೆಯ ಚರ್ಮವಾದ್ಯ: ಲಿಂಗವ ಸೋಂಕಿದ ಮನಕ್ಕೆ ಲಿಂಗಾಭಿಮಾನವಾವುದೆಂದಡೆ ಶೇವನ ಅವಸಾನದಂತಿರಬೇಕು ತ್ರಾಸಿನ ವಾಸದ ಭಾಷಾಂಗದಂತಿರಬೇಕು (ಮೋಳಮಾ. ೧೨೮-೭೦೫); ಭದ್ರಮೆಂಬ ಕರಾಡಿ ಶಾಸಕವೆಂಬ ನಗಾರಿ ಭೀಷಣವೆಂಬ ತ್ರಾಸಾ[ಸು] . . . ಘಂಟಕೆಯೆಂಬ ಘಂಟೆ ಇತ್ತೆಱದ ದಶವಾದ್ಯಂಗಳಂ ಬಾಜಿಸಲುಳ್ಳ ವಿಚಕ್ಷಣರಿಂ ವಿನುತರಾಗಿ (ವಿವೇಳ. ೨೩೭); ವಾದ್ಯದ ಚೀರಲುದ್ಧನಿ, ತ್ರಾಸುಮಾರಿನ ಬಡಿತಗಳಿಗೆ ನಾಗನ ಪಾತ್ರಿಗಳು ಮಾತನಾಡುವ ಸೂಚನೆ ಕಾಣಿಸಿದಾಗ, ವಾದ್ಯದವರಿಗೆ ಕೈಸನ್ನೆ ಮಾಡಿದರು (ಸ್ವಪ್ನಹೂ. ೬೩). 'ತಾಸೆ' ಪರಾ. [?]

ತ್ರಾಸುಗಟ್ಟಳೆ (ನಾ). (ತಕ್ಕಡಿಯಿಂದ ತೂಗುವ) ತೂಕ; ಪ್ರಮಾಣ: ತ್ರಾಸುಗಟ್ಟಳೆವೊರೆಗಲ್ಲು ಮಚ್ಚರಗಡ್ಡಿ . . . ಲೇಸಾಗಿ ಮಯಣದಿಂದೊಗೆಯನೆತ್ತುವ ಬಹುಕೌಶಲವಿದರಿರುತಿಹರು (ಅಂಜಚ. ೩-೮೧).

[ತ್ರಾಸು$_2$ + ಕಟ್ಟಳೆ$_1$]

ತ್ರಾಹಿ (ಅ). 'ಕಾಪಾಡು' ಎನ್ನುವ ಅರ್ಥದ ಶಬ್ದ: ತ್ರಾಹಿ ಸುರವರವಂದ್ಯ ಚರಣ ತ್ರಾಹಿ ಸುಜನಜನಾಘಹರಣ (ವಿಘಾಗ. ೩-೧೦-೧೩). P ಸಂಸ್ಕೃತದಲ್ಲಿ ಇದು ಒಂದು ಪೂರ್ಣ ಕ್ರಿಯಾಪದ. [ಸಂ.]

ತ್ರಿ (ನಾ). ಒಂದು ಸಂಖ್ಯೆ; ಮೂರು: ದ್ವಿತ್ರಿಪದರಚಿತವೃತ್ತಿ ವಿಚಿತ್ರೌಪಮ್ಯಾದ್ಯಲಂಕ್ರಿಯಾಸಮುಪೇತಂ . . . ಪಾಂಚಾಲರೀತಿಯೆನೆ ಪೆಸರ್ವಡೆಗುಂ (ಕಾವ್ಯಾವ. ೭೮೪); ಏಕ ದ್ವಿ ತ್ರಿ ಚತುಃಪಂಚಾಕಲಿತಾರ್ಥಂಗಳಾಗಿ ಅಟನೆಳವು (ಕಮುದ. ೨೩). [ಸಂ.]

ತ್ರಿಕ (ನಾ). ೧. ಮೂರು. ೨. ಮೂರರ ಸಮುದಾಯ,–ಗುಂಪು. ೧, ೨: ಕೆಲವು ದ್ವಿಕ (ಜೋಡಿ) ಗಳಾಗಿಯೂ ತ್ರಿಕ (ಮೂರು ಮೂರು) ಗಳಾಗಿಯೂ ಅಥವಾ ಅನೇಕಗಳಾಗಿಯೂ ಇವೆ (ಜೈತೀವಿ. ೨೦). ೩. ಮೂರರಪ್ಪು; ಮುಮ್ಮಡಿ. ೪. ತಿಗ; ಪಿರ್ರೆ: ಬಾಲದ ಮೊದಲೊಳ್ ತ್ರಿಕದೊಳುದರದೊಳಂ ಶಿವನಿಯೊಳಂ ಕುದಿರಿಗೆ ಸುಟ್ಟಯಾದೊಡೆ ಕೊಲ್ಲದೆ ಮಾಣ್ಗುವೆ ರಣದೊಳಧಿಪನಂ ಮಾರ್ಗಣದೊಳ್ (ಆಶ್ವಜ. ೪-೩೦). ೫. ಮೂರನೆಯ ಬಾರಿ ಸಂಭವಿಸುವುದು,–ಪ್ರಾಪ್ತವಾಗುವುದು,– ಘಟಿಸುವುದು,– ಬರುವುದು. ೬. ಮೂರು ರಸ್ತೆಗಳು ಸೇರುವ ಎಡೆ,–ಸ್ಥಳ. [ಸಂ.]

ತ್ರಿಕಂಟಕ (ನಾ). ೧. ಪ್ರತಿಯೊಂದು ಬೀಜಕ್ಕೂ ಮೂರು ಮೂರು ಮುಳ್ಳುಗಳುಳ್ಳ ಒಂದು ಬಗೆಯ ಸಸ್ಯ; ನೆಗ್ಗಿಲು: "ಗೋಕ್ಷುರಕ, ಸ್ಥಳಶೃಂಗಾಟಕ, ಶ್ವದಂಷ್ಟ್ರಾ, ತ್ರಿಕಂಟಕಃ – ಈ ೪ ನೆಗ್ಗಿಲು" (ಹಲಾಯು. ೩೩-೪೪) ; "ತ್ರಿಕಂಟಕಂ ಗೋಕ್ಷುರಂಕಂ ದಂಷ್ಟ್ರಿಯೆನೆ ನೆಗ್ಗಿಲಕ್ಕುಂ" (ಮುಂಗರಾ. ೩೭-೩೨). ೨. ಒಂದು ಬಗೆಯ ಕಳ್ಳಿಗಿಡ; ಕೋಡುಂಕಳ್ಳಿ: "ತ್ರಿಕಂಟಕೆ" (ಪಂಡಿತ. ೨೫೦). ೩. ಒಂದು ಬಗೆಯ ಮಿನಾರು. [ಸಂ.]

ತ್ರಿಕಟಂ 'ತಿಗಟಂ' ನೋ.

ತ್ರಿಕಟು (ನಾ). ಕಾರವಾದ ಮೂರು ಔಷಧೀದ್ರವ್ಯಗಳು; ಶುಂಠಿ, ಹಿಪ್ಪಲಿ ಮತ್ತು ಮೆಣಸು: "ತ್ರಿಕಟು, ತ್ರ್ಯೂಷಣಂ, ವ್ಯೋಷಂ–ಈ ೩ ತ್ರಿಕಟುಕಂ" (ಹಲಾಯು. ೧೦೧-೪೬೩). [ಸಂ.]

ತ್ರಿಕಟುಕ (ನಾ). = ತ್ರಿಕಟು : "ತ್ರಿಕಟು, ತ್ರ್ಯೂಷಣಾ, ವ್ಯೋಷಂ – ಈ ೩ ತ್ರಿಕಟುಕಂ" (ಹಲಾಯು. ೧೦೧-೪೬೩) ; ಎವೆಯಿಕ್ಕದಿರ್ದೊಡಂ ಪೇಣ್ಬೆ ಮುರಿಂ ತೈಲಾಂಬುಲವಣದಿಂ ತ್ರಿಕಟುಕದಿಂ ಹಿಮದಿಂ ತಂಬುಲದಿಂ ಮೇಣ್ಸಮನಿಸುಗುಂ ಕಣ್ಣ ನೀರ್ಗಳ್ (ಪುರಶ. ೧೧-೧೯) ; ತ್ರಿಕಟುಕದ ಕಜ್ಜಾಯವಿದು ಬಾಲಕರ ಸೊಗಸೇ (ಕುವ್ಯಾಳ. ೧೨-೧೪); ಕಟುಕರೋಹಿಣಿ, ತ್ರಿಕಟುಕ . . . ಇವಿಷ್ಟನು ಸಮಾಂಶವಾಗಿ ಜೇನುತುಪ್ಪದಿಂದ ಅರೆದು (ವೈದ್ಯಸಾ. II, ೧೧೬); ತ್ರಿಕಟುಕ ನಿಂಬೆರಸದಲ್ಲಿ ಮರ್ದಿಸಿ ಹಣೆಗೆ ಲೇಪವಂ ಮಾಡೆ (ಪಾಕಾಚ. ೧೬-೩). [ಸಂ.]

ತ್ರಿಕಟುಚೂರ್ಣ (ನಾ). ಶುಂಠಿ, ಹಿಪ್ಪಲಿ ಮತ್ತು ಮೆಣಸಂಗಳ ಪುಡಿ: ಸಮಭಾಗ ತ್ರಿಕಟುಚೂರ್ಣವನ್ನು ಚೆನ್ನಾಗಿ ಕಲಸಿ . . . ತೆಗೆದುಕೊಳ್ಳಲು ಶ್ಲೇಷ್ಮಪ್ರಕೃತಿಯವರಿಗೆ ಪ್ರವೃತ್ತಿ ಚೆನ್ನಾಗಿ ಆಗುವುದು(ಸಕವೈ. ಪರಿ ೪೬).

[ತ್ರಿಕಟು + ಚೂರ್ಣ$_3$]

ತ್ರಿಕರಣ (ನಾ). ೧. ಕಾಯ, ವಾಕ್ಕು, ಮನಸ್ಸು ಎಂಬ ಅಂಗಗಳು; ಕರಣತ್ರಯ: ಮೂಱಿನಿಪ ತ್ರಿವುಟಿಯ ತ್ರಿವರ್ಗವ ತ್ರಿಕರಣಂಗಳನು . . . ಮಾಱಿ ತೋಱುವ ತುರ್ಯವೇ ವರಮಾತ್ಮಪದವು (ಅಮೃತ

೭-೨೨) ; ಶಿವನು ಶಿಷ್ಯನ ತ್ರಿಕರಣಗಳನ್ನು ಪರೀಕ್ಷಿಸದೆ ಅನುಗ್ರಹಿಸನು (ಶಕ್ತಿವಿ. ೭೪). ೨. [ಜೈನ] ಜೀವಕ್ಕೆ ಒದಗುವ ಮೂರು ಬಗೆಯ ಪರಿಣಾಮ ; ಆಧಃಕರಣ, ಅಪೂರ್ವಕರಣ, ಅನಿವೃತ್ತಿಕರಣ ಎಂಬುವು : ತ್ರಿಕರಣ ದಿವ್ಯಾಂಜನದಿಂ ಸಕಳಪ್ರತ್ಯಕ್ಷ ಹೇತು ಸಮನಿಸೆ (ಮಲ್ಲಿಪು. ೧೪-೭೮) ; [ತ್ರಿ + ಕರಣ]

ತ್ರಿಕರಣಕಷ್ಟ (ನಾ). ಕಾಯ, ವಾಕ್ಕು ಮತ್ತು ಮನಸ್ಸುಗಳಿಗೆ ಉಂಟಾಗುವ ಶ್ರಮ : ಅದು ನಮ್ಮ ಪೂರ್ವಜರಿಂದ ಬಂದ ಸೊತ್ತಾಗಿದ್ದರೂ, ಇಂದಿನವರಾದ ನಾವು ತ್ರಿಕರಣಕಷ್ಟದಿಂದ ಗಳಿಸಿಕೊಳ್ಳಬೇಕಾಗಿದೆ (ಸಾಹಿವಿ. ೧೪೧). [ತ್ರಿಕರಣ + ಕಷ್ಟ]

ತ್ರಿಕರಣಪರಿಣತ [ಜೈನ](ನಾ). ಕರಣತ್ರಯಗಳ ಬಗೆಗೆ ಪರಿಪೂರ್ಣವಾದ ತಿಳಿವನ್ನು ಹೊಂದಿರುವವನು: ತ್ರಿಕರಣಪರಿಣತನೇಟುಂ ಪ್ರಕೃತಿಗಳುಮನಿಂತು ಕಿಡಿಸಿ . . . ಶುದ್ಧದರ್ಶನನಾದಂ (ಚಂದ್ರಪು. ೧೪-೬೬).
[ತ್ರಿಕರಣ + ಪರಿಣತ]

ತ್ರಿಕರಣಪೂರ್ವಕ (ನಾ). ಕಾಯ, ವಾಕ್ಕು, ಮನಸ್ಸು - ಇವುಗಳ ಮೂಲಕವಾದುದು : ಅವರ ಆದರ್ಶವನ್ನು ಎಲ್ಲರೂ ತ್ರಿಕರಣಪೂರ್ವಕವಾಗಿ ಪರಿಪಾಲಿಸಬೇಕಂತೆ (ರಕ್ತರೂ. ೫೩) ; ಇಂದಿನ ನಮ್ಮ ಸಂಸ್ಥೆಗಳು ತ್ರಿಕರಣಪೂರ್ವಕವಾಗಿ ಹಾಗೆ ನಡೆಯುತ್ತಿವೆಯೆ ? (ಶಿಕ್ಷದ. ೨೧) ; ಸ್ವಾಮಿಯ ಸೇವೆಯನ್ನು ತ್ರಿಕರಣಪೂರ್ವಕವಾಗಿ ಮಾಡುವೆನೆಂದು ಪಣತೊಟ್ಟ (ಶಾಂತಲಾ. ೧೪೧); ಮಾನವ ತ್ರಿಕರಣ ಪೂರ್ವಕವಾಗಿ ನಡೆಯಬೇಕು (ರೂಢಿ). [ಸಂ.]

ತ್ರಿಕರಣಶುದ್ಧ (ನಾ). ೧. = ತ್ರಿಕರಣಶುದ್ಧಿ: ತ್ರಿಕರಣಶುದ್ಧವಿಲ್ಲದ ಅಬದ್ಧ ಪಾಪಿ ಚಾಂಡಾಲ ದ್ರೋಹಿಗೆ ಅಖಂಡೇಶ್ವರನು ಎಂತೊಲಿವನೊ ಎನಗೆ (ಅಖಂಡೇ. ೯೭-೧೬). ೨. ತ್ರಿಕರಣಶುದ್ಧಿಯನ್ನು ಹೊಂದಿರುವವನು: ತನುಮನಧನವರ್ಪಿಸಿ ತ್ರಿಕರಣಶುದ್ಧನಾಗಿರಬೇಕು (ಪಂಚೇಕ. ೯).
[ತ್ರಿಕರಣ + ಶುದ್ಧ]

ತ್ರಿಕರಣಶುದ್ಧಿ (ನಾ). ಮಾತು, ಮನಸ್ಸು ಮತ್ತು ದೇಹವೆಂಬ ಮೂರು ಕರಣಗಳಲ್ಲಿಯೂ ಶುದ್ಧವಾಗಿರುವಿಕೆ : ತ್ರಿಕರಣಶುದ್ಧಿಯೊಳಾ ರಾಜಕುಮಾರಂ ಮಾರಮಥನನಂ ಸ್ತುತಿಯಿಸಿ (ಆದಿಪು. ೪-೨) ; ತಪಂಗೆಯ್ಯಲ್ ಕಾಲಮಿಲ್ಲೆಂದು ತ್ರಿಕರಣಶುದ್ಧಿಯಿಂ ಸಂನ್ಯಸನಮಂ ದಯಂಗೆಯ್ಯಮೆಂಬುದುಂ (ಸುಳುಮಾ. ೧೨-೯ ವ) ; ಶ್ರೀರಾಮಚಂದ್ರಮನಂ ತ್ರಿಕರಣಶುದ್ಧಿಯಿಂ ಸೇವಿಸಿಯುಂ ಪಡೆದ ಸೈಪಿನೇಟ್ಗಿಗಿನಿತೊಂದು ಫಲಮಾಯ್ತೇ ! (ರಾಮಾಶ್ವ. ೨೯-೧೪). [ತ್ರಿಕರಣ + ಶುದ್ಧಿ]

ತ್ರಿಕರ್ಮಿ (ನಾ). ಯಜನ, ಅಧ್ಯಯನ ಮತ್ತು ದಾನಸ್ವೀಕಾರಗಳೆಂಬ ಮೂರು ವಿಧವಾದ ಕರ್ಮಗಳನ್ನು ಆಚರಿಸುವವನು: ತ್ರಿಕರ್ಮಿಗಳಾದ ಬ್ರಾಹ್ಮಣರು ತಮಗೆ ಕೊಟ್ಟ ಭೂಮಿ ಮುಂತಾದುವುಗಳನ್ನು ಅನುಭವಿಸಿಕೊಂಡು ರಾಜ್ಯಾರ್ಥವನ್ನು ಅರಸುಗಳಿಗೆ ಕೊಡಬೇಕೆಂಬುದಾಗಿಯೂ . . . ಹೇಳಿದ ಗ್ರಂಥಕ್ಕೆ ಗ್ರಾಮಪದ್ಧತಿಯೆಂದು ಹೆಸರು (ತುಳುನಾ. ೯೯); ಇವುಗಳಲ್ಲಿ ೧೦೫ ಕುಲಗಳು ತ್ರಿಕರ್ಮಿಗಳು ; ತಂತುಮಾತ್ರ ಬ್ರಾಹ್ಮಣರು (ತುಳುನಾ. ೧೫೦). [ಸಂ. ತ್ರಿಕರ್ಮಿನ್]

ತ್ರಿಕಾಲ, ತ್ರಿಕಾಳ (ನಾ). ೧. ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲಗಳೆಂಬ ಮೂರು ಕಾಲಗಳು: ಗಿರಿಜೇಶನಂಘ್ರಿಕಮಲವನು ತ್ರಿಕಾಲದೊಳು ಪರಮಕಾಷ್ಟೆಯಲಿ ಪೂಜಿಸಲು (ನವಮೋ. ೧೮-೩೫). ೨. ಭೂತ, ವರ್ತಮಾನ ಮತ್ತು ಭವಿಷ್ಯತ್ ಎಂಬ ಮೂರು ಕಾಲಗಳು : ಜನರ್ಗಂ ತ್ರಿಕಾಲಯೋಗಂ ಜನರ್ಗಂ ಸ್ವಾಧ್ಯಾಯಮಯ್ದು (ಅಚಿಪು. ೧೨-೩೦) ; ಪ್ರೇಮದಿಂದರ್ಚಿಸಿ -ಪಡೆದನಭಿರಾಮವೆನಲಿಂತು ತ್ರಿಕಾಲಂ ಭೂಮಿಜನವಚ್ಚರಿವಡುತ ಕೀರ್ತಿಸಲು (ಬಸಪು. ೫೩-೫೬). ೩. [ಸಂಗೀತ] ಮೂರು ಬಗೆಯ ಕಾಲಗಳು,-ಲಯಗಳು : ಪ ಸಂಗೀತಕೃತಿಗಳನ್ನು ಹಾಡುವಾಗ ಎತ್ತಿಕೊಳ್ಳುವ ಬೇರೆ ಬೇರೆಯ ಕಾಲಗಳು. ಇವುಗಳಲ್ಲಿ ಮೂರು ಬಗೆಯುಂಟು, ಮೊದಲನೆಯ ಕಾಲ, ಎರಡನೆಯ ಕಾಲ ಮತ್ತು ಮೂರನೆಯ ಕಾಲ : ಅವರು ಕೊಂಚವೂ ಪ್ರಯಾಸವಿಲ್ಲದೆ ಕೃತಿಗಳನ್ನು, ಪಲ್ಲವಿಗಳನ್ನು, ಆಲಾಪನೆಗಳನ್ನೂ ತ್ರಿಕಾಲಗಳಲ್ಲಿಯೂ ಸುಲಲಿತವಾಗಿ ಹಾಡುತ್ತಿದ್ದರು (ಸಂಗೀತ. ೫೪). ತ್ರಿಕಾಳ : ೧. ಈಶ್ವರ ಮುಡಿಯಾರ್ಗ್ಗೆ ಕೊಟ್ಟ . . . ಪಞ್ಚಮಹಾಶಬ್ದಮಂ ತ್ರಿಕಾಳಂ ಬಾಜಿಸುವುದಕ್ಕೆ ತ್ರಿಕಾಳಂ ದೇವತಾರ್ಚ್ಚನಂಗೆಯ್ವುದಕ್ಕಂ (ಮೃಅರಿ. ೧೯೪೬, ೨೮-೧೬ ; 1032). [ತ್ರಿ + ಕಾಲ]

ತ್ರಿಕಾಲಗ (ಗು). ಮೂರು ಕಾಲಗಳಲ್ಲೂ ವ್ಯಾಪಿಸುವ. 'ತ್ರಿಕಾಲಗಯೋಗ' ಪರಾ. [ಸಂ.]

ತ್ರಿಕಾಲಗಯೋಗ (ನಾ). ತ್ರಿಕಾಲಜ್ಞ (?) : ತ್ರಿಕಾಲಗಯೋಗರ್ ಪರಮೇಶ್ವರರ್ ಪರಸುಗಿಂ ವಾತ್ಸಲ್ಯದಿಂ ಸರ್ವಸಾಧುಗಣಂ ಸಾಧುಗಳಪ್ಪೆಮಾ ಪರಕೆಯಿಂದಾಮುಂ ವ್ರತವ್ರಾತದೊಳ್ (ಶಾಂತಿಪು. ೧-೫).
[ತ್ರಿಕಾಲಗ + ಯೋಗ]

ತ್ರಿಕಾಲಗೋಚರ (ನಾ). ಯೋಗಶಕ್ತಿಯಿಂದ ಭೂತ, ಭವಿಷ್ಯತ್, ವರ್ತಮಾನ ಕಾಲಗಳಲ್ಲಿ ನಡೆಯುವುದನ್ನು ತಿಳಿಯುವಿಕೆ : ಮುಕುರದೊಳಾ ಪ್ರತಿಬಿಂಬಂ ನಿಕಾಮಮೆಸೆವಂತೆ ತದ್ವಚೋವಿಸ್ತರದೊಳ್ ಸಕಲಜಗಂ ಸೊಗಯಿಸುಗುಂ ತ್ರಿಕಾಲಗೋಚರಮನಂತಪರ್ಯಾಯಯುತಂ (ಚಂದ್ರಪು. ೨-೮೫). [ತ್ರಿಕಾಲ + ಗೋಚರ]

ತ್ರಿಕಾಲಜ್ಞ (ನಾ). (ಯೋಗಬಲದಿಂದ) ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಂಬ ಮೂರೂ ಕಾಲಗಳ ಜ್ಞಾನವುಳ್ಳವನು: ಪಂಡಿತರು ತ್ರಿಕಾಲಜ್ಞರು, ಅವರಿಗೆ ತಿಳಿದೇ ಇರಬೇಕು (ಶಾಂತಲಾ. ೮೫). [ಸಂ.]

ತ್ರಿಕಾಲಜ್ಞಾನ (ನಾ). ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಂಬ ಕಾಲತ್ರಯದ ಅರಿವು : ತ್ರಿಕಾಲಜ್ಞಾನ ಆಯುರ್ವೇದ . . . ಎಂದು ಪ್ರೋದ್ಗೀತಾಗಮದ ಷೋಡಶಭೇದಂಗಳು (ವಿವೇಕ. ೭೦); ತ್ರಿಕಾಲಜ್ಞಾನ, ಖಗೋಳಜ್ಞಾನ ಮೊದಲಾದುವುಗಳು ಅವಾಂತರಸಿದ್ಧಿಗಳು (ಭಾರದ, ೧೬೫).
[ತ್ರಿಕಾಲ + ಜ್ಞಾನ]

ತ್ರಿಕಾಲಜ್ಞಾನಿ (ನಾ).=ತ್ರಿಕಾಲಜ್ಞ : ಆಗ ತ್ರಿಕಾಲಜ್ಞಾನಿಯಾದ ಋಷಿಯು ಸ್ವಲ್ಪಹೊತ್ತು ಧ್ಯಾನಮಗ್ನನಾದನು (ಮಚಿಸ.೬೫). [ಸಂ. ತ್ರಿಕಾಲಜ್ಞಾನಿನ್]

ತ್ರಿಕಾಲತಾನ (ನಾ). [ಸಂಗೀತ] ಒಂದು, ಎರಡು ಮತ್ತು ಮೂರನೆಯ ಕಾಲಗಳಲ್ಲಿಯೂ ನುಡಿಸುವ ತಾನ : ಅವರು ತ್ರಿಕಾಲತಾನಗಳನ್ನು ನುಡಿಸುತ್ತಿರುವಾಗಲಂತೂ ಮೇಲಿನಿಂದ ಮುತ್ತುಗಳ ಮಳೆಗರೆಯುತ್ತಿದೆಯೇನೋ ಎಂದೆನಿಸುತ್ತಿತ್ತು (ಸಂಗೀತ. ೬೬). [ತ್ರಿಕಾಲ + ತಾನ್ನ]

ತ್ರಿಕಾಲದರ್ಶಿ (ನಾ). ೧. = ತ್ರಿಕಾಲಜ್ಞ : ನೀಂ ತಪೋವೃದ್ಧರುಂ ತ್ರಿಕಾಲದರ್ಶಿಗಳುಂ ಸಕಳಭೂತಂಗಳಂ ಸವನಾಗಿ ಕಾಣ್ಬ ಕರುಣಾರಸಾರ್ದ್ರ ಹೃದಯರಪ್ಪುದಱಿಂ ನಿಮ್ಮಂ ನಂಬಿ ಬಂದಪೆವು (ಪಂಚತಂ. ೮೪-೧೫). ೨. ಋಷಿ ; ಮುನಿ : "ಋಷಿಃ, ತ್ರಿಕಾಲದರ್ಶೀ, ಮುನಿಃ, ವಾಚಂಯಮಃ - ಈ ೪ ಋಷಿಗಳ್" (ಹಲಾಯು. ೬೮-೨೫೮). [ಸಂ. ತ್ರಿಕಾಲದರ್ಶಿನ್]

ತ್ರಿಕಾಲವರ್ತಿ (ಗು). ೧.ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಂಬ ಮೂರು ಕಾಲಗಳಲ್ಲಿಯೂ ಇರುವ,-ವರ್ತಿಸುವ (ನಾ). ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಂಬ ಮೂರು ಕಾಲಗಳಲ್ಲಿಯೂ ವರ್ತಿಸುವ ವ್ಯಕ್ತಿ: ಐದನೆಯ ನೆಲೆಯಲ್ಲಿ ವಿರಾಜಮಾನರಾಗಿರುವ ಅತೀತ, ಅನಾಗತ, ವರ್ತಮಾನವೆಂಬ ತ್ರಿಕಾಲವರ್ತಿಗಳಾದ ತೀರ್ಥಂಕರ ಪರಮದೇವರುಗಳಿಗೆ . . . ವಂದಿಸುತ್ತೇನೆ (ಬಿಜ್ಜಪು. ೧ ಪ್ರದೀಪಿಕೆ).
[ಸಂ. ತ್ರಿಕಾಲವರ್ತಿನ್]

ತ್ರಿಕಾಲಸಂಗತಿ (ನಾ). [ಸಂಗೀತ] ಒಂದೇ ಪಂಕ್ತಿಯನ್ನು ಸ್ವರವ್ಯತ್ಯಾಸಗಳೊಂದಿಗೆ ಮೂರು ಕಾಲಗಳಲ್ಲೂ ಹಾಡುವುದು: ಈ ಕೃತಿಗಳ ತ್ರಿಕಾಲಸಂಗತಿಗಳ ಪ್ರತಿಯೊಂದು ಸ್ವರವೂ ಸುಸ್ಪಷ್ಟವಾಗಿ ಕೇಳುತ್ತಿದ್ದುದು ಅಚ್ಚರಿ (ಸಂಗೀತ. ೬೬). [ತ್ರಿಕಾಲ + ಸಂಗತಿ]

ತ್ರಿಕಾಲಾಬಾಧಿತ (ಗು). ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಂಬ ಮೂರು ಕಾಲಗಳಲ್ಲೂ ವಿರೋಧವಿಲ್ಲದ,-ಪ್ರತಿಭಟನೆಯಿಲ್ಲದ: ವಿದ್ಯೆಯ ಜೊತೆಗೆ ವಿನಯವೂ ಸೇರಬೇಕು . . . ಎಂಬ ಭಾವವು ತ್ರಿಕಾಲಾಬಾಧಿತವಾದ ಸತ್ಯ (ಕ್ರಿಯಾಶ. ೮೨).

[ತ್ರಿಕಾಲ + ಅಬಾಧಿತ]

ತ್ರಿಕಾಲಾವರ್ತಿ (ಗು). ೧. = ತ್ರಿಕಾಲವರ್ತಿ. ೧. (ನಾ). ೨. ಸನ್ನಿಪಾತರೋಗದ ಒಂದು ಬಗೆ: ತ್ರಿಕಾಲಾವರ್ತಿಯೆಂಬುದು ಮೂಱುಕಾಲದಲ್ಲಿಯೂ ಪ್ರಕೋಪಿಸುಗುಂ (ವಿಕೃವಿ. ೧೯೦). [ಸಂ. ತ್ರಿಕಾಲಾವರ್ತಿನ್]

ತ್ರಿಕಾಲೋಚಿತ (ಗು). ಮೂರು ಕಾಲಗಳಿಗೂ ಯೋಗ್ಯವಾದ. 'ತ್ರಿಕಾಲೋಚಿತಜ್ಞಾನಿ' ಪರಾ. [ತ್ರಿಕಾಲ + ಉಚಿತ]

ತ್ರಿಕಾಲೋಚಿತಜ್ಞಾನಿ (ನಾ). ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆಂಬ ಮೂರು ಕಾಲಗಳ ಬಗೆಗೂ ಸರಿಯಾದ ತಿಳಿವಳಿಕೆಯುಳ್ಳವನು: ತ್ರಿಕಾಲೋಚಿತಜ್ಞಾನಿ ಮುನಿಯಱಿದನರಸನ ಮೇಲೆ ಕೌಶಿಕನ ಕಾಟವಡಿಯಿಟ್ಟನುವನು (ಹಡಕಾ. ೫-೭೧).

[ತ್ರಿಕಾಲೋಚಿತ + ಜ್ಞಾನಿ]

ತ್ರಿಕಾಳ 'ತ್ರಿಕಾಲ' ನೋ.

ತ್ರಿಕಾಳಭೋಗ (ನಾ). ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲಗಳೆಂಬ ಮೂರು ಕಾಲಗಳಲ್ಲೂ ಮಾಡುವ ಪೂಜೆ: ಕಣ್ವಪಳ್ಳಿಯ ಭೋಗೇಶ್ವರ[ದ] [ಪಾ]ಮಸಕ್ಕಿಪಣ್ಡಿತಗ್ಗೆ ತ್ರಿಕಾಳಭೋಗಮುಮಂ ಪೂಜೆಗೆ × × ನಡೆ[ಯಿ]ಸಿ (ಸೌಇಇ. XX, ೩೭-೦೬ ; 1041).

[ತ್ರಿಕಾಳ (=ತ್ರಿಕಾಲ) + ಭೋಗ]

ತ್ರಿಕುಂದಪುರ (ನಾ). ಒಂದು ಊರಿನ ಹೆಸರು: ತ್ರಿಕುನ್ದಪುರ ಪರಮೇಶ್ವರ (ಎಇ. XI, ೬-೫ : 10ನೆಯ ಶತ). [ತ್ರಿಕುಂದ ? + ಪುರ]

ತ್ರಿಕೂಟ(ನಾ). ೧. ಮೂರು ಶಿಖರಗಳನ್ನುಳ್ಳದು 'ತ್ರಿಕೂಟ ಪ್ರಾಸಾದ' ಪರಾ. ೨. ಒಂದು ಪರ್ವತದ ಹೆಸರು; ಲಂಕಾಪಟ್ಟಣವಿದ್ದ ಪರ್ವತ: ತ್ರಿಕೂಟಕರುವಿಂದ ಪತಂಗ ರುಚಕ ನಿಷಧವೆಂಬೈದು ಗಿರಿಗಳೀ ಟಂಕಣ ಗಂಧಮಾದನಶ್ಯಲದ ಪಡುವಲ ವಿಪುಲಾದ್ರಿಯ ಮಧ್ಯಭಾಗದೊಳಗಿಹವು (ವಿವೇಕ. ೨೦೪). ೩. ಮೂರು (ಶ್ರೇಷ್ಠ) ವ್ಯಕ್ತಿಗಳ ಸಂಗಮಂ: ನಾಭ-ವೃಷಭ-ಭರತ. ಈ ತ್ರಿಕೂಟವು, ವೈಷ್ಣವಶಿರೋಮಣಿಯಾದ ಧ್ರುವನ ತಂದೆ ಉತ್ತಾನಪಾದರಾಯನ ಭ್ರಾತೃವಂಶದಲ್ಲಿ ಮೆರೆಯುವುದು (ಭಾರದ. ೧೬೮). ೪. [ಯೋಗ] ಭ್ರೂಮಧ್ಯಸ್ಥಾನ ; ತ್ರಿಪುಟೀಸ್ಥಾನ: ನೀನು ನಾನೆಂಬುಭಯಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯು ಮೆಟ್ಟೆ (ಅವಪಂ. ೩೭೬-೧೩೭೭) ; ತ್ರಿಕೂಟದ ನೆಲೆಗೆ ನೀಡುಸುಮುಪ್ಪಿ ಸರ್ಪನನೆಬ್ಬಿಸುತ್ತ (ಬಸಪು. ೬-೮) ; ಆ ನಾಡೀತ್ರಯಂಗಳ ಸಂಬಂಧದಿಂ ತ್ರಿವೇಣಿಯೆಂಬ ಯೋಗಸ್ಥಲಕೆ ತ್ರಿಕೂಟವೆಂದು ಮಧ್ಯ ಹೃದಯವೆಂದು . . . ಪರ್ಯಾಯನಾಮಂಗಳನುಳ್ಳ ಶಿವಧ್ಯಾನಕ್ಕೆ ರಹಸ್ಯವಾದ ಭ್ರೂಮಧ್ಯಸ್ಥಾನದಲ್ಲಿ (ಅಖಂಡೇ. ೩೦೮-೩೦).

[ತ್ರಿ + ಕೂಟ$_3$]

ತ್ರಿಕೂಟಪ್ರಾಸಾದ (ನಾ). ಮೂರು ಶಿಖರಗಳಿಂದ ಕೂಡಿದ ದೇವಸ್ಥಾನ, ಮಂಟಪ ಮುಂತಾದುವು ಚಾಮುಂಡರಾಜ ಮಾಡಿಸಿದ ತ್ರಿಕೂಟ [ಪ್ರಾಸಾದ]ಕ್ಕೆ (ಎಇ. XIX, ೨೫-೬೨; 1250).

[ತ್ರಿಕೂಟ + ಪ್ರಾಸಾದ]

ತ್ರಿಕೂಟಸ್ಥಾನ (ನಾ). [ಯೋಗ] ಮೂರರ ಸಂಗಮಸ್ಥಾನ ; ಎರಡು ಹುಬ್ಬುಗಳ ನಡುವಿನ ಜಾಗ; ಭ್ರೂಮಧ್ಯಸ್ಥಾನ: ತ್ರಿಕೂಟಸ್ಥಾನದ ಸಮರಸದ ಸುಖದಲ್ಲಿ ಬೆಳೆದ ಕಂದ ಮೂಲಾದಿಗಳ ಹೊಸರಸದ ಆಮೃತವನು ಓಸರಿಸಿ (ಅವಪಂ. ೫೭-೩೪೪); ಪ್ರಾಣವಾಯುದ[ಯುವ]ನು ಪಶ್ಚಿಮಮಾರ್ಗದೊಳ್ಕಡಸಿ ತ್ರಿಕೂಟಸ್ಥಾನದೊಳು ನಿಲ್ಲಿಸುತ್ತೆ (ನವಮೋ. ೬-೩೭). [ತ್ರಿಕೂಟ + ಸ್ಥಾನ]

ತ್ರಿಕೂಟಾಚಲ (ನಾ). = ತ್ರಿಕೂಟ ೨: ತ್ರಿಕೂಟಾಚಲದ ಮೂರು ಶಿವಿರಗಳು ಕಲಾದ್ಯಪ್ಪಿಯಿಂದ ಹೆಚ್ಚು ಆಕರ್ಷಕವಾಗಿದೆ (ಹೊಯ್ಸಪಾ. ೧೭).

[ತ್ರಿಕೂಟ + ಅಚಲ]

ತ್ರಿಕೆ (ನಾ). (ಬಾವಿಯ ರಾಟೆಯನ್ನು ಹೊಂದಿಸಲು) ಕಬ್ಬಿಣ ಮುಂತಾದುವುಗಳಿಂದ ಮಾಡಿದ ತ್ರಿಕೋಣಾಕಾರದ ಚೌಕಟ್ಟು.

[ಸಂ. ತ್ರಿಕಾ]

ತ್ರಿಕೋಟಿ (ನಾ). ಮೂರು ಕೋಟಿ: ತ್ರಿಕೋಟಿರತ್ನದ ಮಟಿಯಂ ಸುರಿಯಲೆ ತೊಡಗಿದನನುದಿನಂ (ಚಂದ್ರಪು. ೧೧-೧೦೪) ; ಕಂದಮೂಲ ಫಲಾದಿಗಳಿನಿಶಶಿಕಿರಣ ಪವನೋದಕಾಹಾರಂಗಳಿಂ ವರುಷ ತ್ರಿಕೋಟಿಗಳ ಸಲಿಸಿ (ಬಸಪು. ೦-೬೪). [ತ್ರಿ + ಕೋಟಿ$_1$]

ತ್ರಿಕೋಣ (ಗು). ೧. ಮೂಲೆಯ ; ತ್ರಿಭುಜಾಕಾರದ. (ನಾ). ೨. [ರೇಖಾಗ] ಮುಮ್ಮೂಲೆಯ ಆಕೃತಿ ; ತ್ರಿಭುಜ : ಹಿಂದುಸ್ಥಾನದ ಆಕಾರವು ಹಿಮಾಲಯವೆಂಬ ಪಾದದ ಮೇಲೆ ಆದ ತ್ರಿಕೋಣದಂತೆ ಆದೆ (ಮುಂಬಯಿ. ೪-೧೦೧) ; ಶಂಕುವಿನ ಸಹಾಯದಿಂದ ಕಂಡುಹಿಡಿಯುವ ತ್ರಿಕೋಣ ಚತುಷ್ಕೋಣಗಳಿಗೆ "ವಸಲೆ" ಯೆಂದು ಹೇಳುವುದೂ ಉಂಟು (ಭೂಮಿಶ. ೩). ೩. [ಜ್ಯೋತಿ] ಲಗ್ನದಿಂದ ಐದನೆಯ ಮತ್ತು ಒಂಬತ್ತನೆಯ ಸ್ಥಾನಗಳು : ನವಮಂ ಪಂಚಮಭಂ ತ್ರಿಕೋಣಮೆನೆ ಸಲ್ಗುಂ (ಜಾತಕ. ೧-೩೫). [ತ್ರಿ + ಕೋಣ$_2$]

ತ್ರಿಕೋಣಪಾತ (ನಾ). ಒಂದು ನರಕದ ಹೆಸರು : ಐದುಮಂತ್ರಿನರಕಂಗಳು ಸಹಿತಮಾಗಿ ತ್ರಿಕೋಣಪಾತವೆಂಬರಸುನರಕವಿಹುದು (ವಿವೇಕ. ೧೬೧).

[ತ್ರಿಕೋಣ + ಪಾತ$_1$]

ತ್ರಿಕೋಣಮಿತಿ (ನಾ). [ರೇಖಾಗ] ತ್ರಿಭುಜದ ಆಕೃತಿಯ ಅಳತೆ, ಕೋಣಗಳ ಮತ್ತು ಬಾಹುಗಳ ಪರಸ್ಪರ ಸಂಬಂಧವನ್ನು ತಿಳಿಸುವ ಗಣಿತ ಭಾಗ; ℙ ತ್ರಿಕೋಣದಲ್ಲಿ ಕೊಟ್ಟಿರುವ ವಿವಕ್ಷಿತ ಅಳತೆಗಳಿಂದ ಇನ್ನುಳಿದ ಅವಯವಗಳ ಅಳತೆಯನ್ನು ನಿರ್ಣಯಿಸುವುದು ಇದರ ಕಾರ್ಯ. ಇದರ ಉಪಯೋಗವು ಮುಖ್ಯವಾಗಿ ಜ್ಯೋತಿಷ್ಯ ಶಾಸ್ತ್ರ, ಭೂಮಿಯ ಅಳತೆ ಮತ್ತು ನೌಕಾಶಾಸ್ತ್ರಗಳಲ್ಲಿ ಆಗುತ್ತದೆ : ಕೆಲವು ಕಡೆ ಬೀಜಗಣಿತ, ತ್ರಿಕೋಣಮಿತಿ (Algebra, Trigonometry) ಈ ಭಾಗಗಳನ್ನು ಉಪಯೋಗಿಸಲಾಗಿದೆ (ಭಾತವಿ. ೧೫); ಕಟ್ಟುಕ (Algebra), ತ್ರಿಕೋಣಮಿತಿ (Trigonometry) ಮುಂತಾದ ಗಣಿತದ ಭಾಗಗಳೂ . . . ವೃದ್ಧಿಯನ್ನು ಪಡೆದವು (ಭಾಇಪ್ರ. ೩೭೬).

[ತ್ರಿಕೋಣ + ಮಿತಿ./ಇಂ. Trigonometry]

ತ್ರಿಕೋಣಸ್ಥ (ಗು). ತ್ರಿಕೋಣವಾಗಿರುವ : ತ್ರಿಕೋಣಾಕೃತಿಯ : ಸೋಮ ಸೂರ್ಯಾಗ್ನಿ ತ್ರಿಕೋಣಸ್ಥ ನೇತ್ರವಾದಾ ಮಹಿಮನೆನೆದಿರ್ಪನಾ ಮಹೇಶಂ (ವೀಕೃಪು. ೨-೦-೩೭). [ಸಂ.]

ತ್ರಿಕೋಣೀಕರಣ (ನಾ). ಅಳೆಯಬೇಕಾದ ಕ್ಷೇತ್ರವನ್ನು ತ್ರಿಕೋಣಗಳನ್ನಾಗಿ ವಿಂಗಡಿಸಿ ಅಳತೆಯನ್ನು ಕಂಡು ಹಿಡಿಯುವ ಕ್ರಮ : ತ್ರಿಕೋಣೀಕರಣ ಕ್ರಮದ ಅಳತೆಯನ್ನು ಬಹುಪಾಗರೂಕತೆಯಿಂದ ಅತ್ಯಂತ ಸೂಕ್ಷ್ಮವಾದ ಯಂತ್ರಸಾಧನಗಳ ಸಹಾಯದಿಂದ ನಿರ್ವಹಿಸಬೇಕು (ಭೂವಿವ. ೩೩). [ಸಂ.]

ತ್ರಿಕ್ರಮ (ನಾ). ಮೂರು ಹೆಜ್ಜೆಗಳನ್ನಿಟ್ಟವನು; ವಾಮನಾವತಾರದ ವಿಷ್ಣು; ತ್ರಿವಿಕ್ರಮ: ಸುಚರಿತಕೂರ್ಮೋದಯಂ ಸಾರಸೂಕರಿಯ ವಿಳಾಸಂ ವಿಕ್ರಮ ಶ್ರೀನರಹರಿಪರಮಂ ತ್ರಿಕ್ರಮಂ (ಎಕ. VIII, ಸೊರಬ. ೧೪೦-೫; 1199). [ತ್ರಿ + ಕ್ರಮ]

ತ್ರಿಖಂಡ (ನಾ). [ಜೈನ] ಮೂರು ಖಂಡಗಳು; P ಭರತಖಂಡದ ಮೂರು ಭಾಗಗಳು; ಗಂಗಾ ಮತ್ತು ಸಿಂಧೂನದಿಗಳಿಂದ ಪ್ರತ್ಯೇಕಿಸಲ್ಪಟ್ಟ ಮೂರು ಭೂಭಾಗಗಳು: ತಾನುಂ ತ್ರಿಖಂಡ ಮಂಡಲಾಧಿಪತ್ಯಮಂ ತಾಳ್ದಿ ಪೌದನಪುರಮಂ ಪೊಕ್ಕು (ಶಾಂತಿಪು. ೫-೬೪ ವ). 'ಷಟ್ಖಂಡ' ಪರಾ. [ತ್ರಿ + ಖಂಡ]

ತ್ರಿಖಂಡಾಧಿಪ (ನಾ). [ಜೈನ] ಮೂರು ಖಂಡಗಳಿಗೆ ಒಡೆಯ; ಅರ್ಧ ಚಕ್ರವರ್ತಿ; P ಷಟ್ಖಂಡಾಧಿ ಪತಿಯು ಚಕ್ರವರ್ತಿಯಾಗುತ್ತಾನೆ: ಮಯೂರಗ್ರೀವಂಗಂ ನೀಳಾಂಜನೆಗಂ ಪುಟ್ಟಿದ ನಿಖಿಳಪೇಚರಲಲಾಮಾಯ ಮಾಣಂ ತ್ರಿಖಂಡಾಧಿಪಂ (ಶಾಂತಿಪು. ೫-೨೬ ವ). [ತ್ರಿಖಂಡ + ಅಧಿಪ]

ತ್ರಿಗಾತ್ರ (ನಾ). ಉದ್ದ, ಅಗಲ ಮತ್ತು ಎತ್ತರ ಎಂಬ ಮೂರು ಗಾತ್ರಗಳು: ಕಲಾಕೃತಿಯ ಆಸ್ವಾದಕ್ಕೆ ಲೋಕಜೀವನದಿಂದ ಏನನ್ನೂ ತೆರಬೇಕಾಗಿಲ್ಲ . . . ಕಲಾಕೃತಿಯ 'ತ್ರಿಗಾತ್ರ'ದ ಅರಿವು ಮತ್ತು ವರ್ಣ ರೇಖಾದಿಗಳ ಪರಿಜ್ಞಾನ, ಇಷ್ಟಿದ್ದರೆ ಸಾಕು (ಸೌಂದಸ. ೭೬).

[ತ್ರಿ + ಗಾತ್ರ]

ತ್ರಿಗಾರವ (ನಾ). [ಜೈನ] ಋದ್ಧಿಗಾರವ, ರಸಗಾರವ, ಸಾತಾಗಾರವ ಎಂಬ ಮೂರು ಬಗೆಯ ಅಹಂಕಾರಗಳು; P ಐಶ್ವರ್ಯದಿಂದ ಉಂಟಾಗುವ ಅಹಂಕಾರಕ್ಕೆ ಋದ್ಧಿಗಾರವವೆಂದೂ ಷಡ್ರಸೋಪೇತವಾದ ಆಹಾರದ ಮೂಲಕ ಉಂಟಾಗುವ ಅಹಂಕಾರಕ್ಕೆ ರಸಗಾರವವೆಂದೂ ಸಂಪೂರ್ಣವಾದ ಆರೋಗ್ಯದಿಂದುಂಟಾಗುವ ಅಹಂಕಾರಕ್ಕೆ ಸಾತಾಗಾರವವೆಂದೂ ಹೇಳುತ್ತಾರೆ: ತ್ರಿದಂಡ ತ್ರಿಶಲ್ಯ ತ್ರಿಗಾರವಂಗಳಂ ಕ್ರಮಕ್ರಮದಿಂ ಕಟಲ್ಚಿ ಕಳೆಯುತ್ತುಂ (ಸುಕುಮಾ. ೩-೪೬ ವ); ತ್ರಿದಂಡ ತ್ರಿಶಲ್ಯ ತ್ರಿಗಾರವ ತ್ರಿಮೂಢರಹಿತನುಂ (ರತ್ನಕ. ೧-೬ ವ).

[ತ್ರಿ + ಗಾರವ$_1$]

ತ್ರಿಗುಟ 'ತಿಗಟ' ನೋ.

ತ್ರಿಗುಣ (ನಾ). ೧. ಸತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ಮೂರು ಗುಣಗಳು; ಗುಣತ್ರಯ: ಷಟ್ಸರೋಜವೆ ಸದನ ಹೃದಯವೆ ಮಂಟಪಂಗಳು ತ್ರಿಗುಣಗಳೆ ಕಲಶ (ಹಸಾರ. ೫-೧೯). ೨. ಸತ್ವ, ರಜಸ್ಸು, ತಮಸ್ಸು ಈ ಮೂರು ಗುಣಗಳ ಸ್ವರೂಪವಾದ ಪ್ರಕೃತಿ: ಅಭಿಮಾನ ಸಂಕಲ್ಪ ಆಲೋಚನೆ ಶಬ್ದಾದಿ ಸ್ವಭಾವಗಳು ಹೊಸಹೊಸದು ಬರುವುವು. ಈ ಪ್ರಕೃತಿಗೆ ಪ್ರಧಾನವೆಂದು ಹೆಸರು. ಇದರಲ್ಲಿ ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿರುವುದರಿಂದ ಇದನ್ನು ತ್ರಿಗುಣವೆಂದು ಹೇಳುತ್ತಾರೆ (ಹಿಂದಸಾ. ೫೫). ೩. ಮೂರರಷ್ಟು; ಮುಮ್ಮಡಿ: ತ್ರಿಗುಣಂ ಪಿರಿದಕ್ಕುಂ ಪತ್ತಿಗೆ ಸೇನೆಯದಕ್ಕುಂ (ಪಂರಾಮಾ. ೧೩-೬); ತನ್ನ ದೋರ್ಗ್ಗರ್ವ್ವಮಂ ತ್ರಿಗುಣಂ ಮಾಡೆ ಸಮಸ್ತಮಂ ತಳೆದನುರ್ವ್ವೀಚಕ್ರಮಂ ವಿಕ್ರಮಂ (ಎಕ. XI, ದಾವಣ. ೩೫-೧೮; ಸು. 1160); ಇದರಿಂದ ಕಂಪಾಸಿನ ರುಂದಿಯು ಮೊದಲಿಗಿಂತಲು ತ್ರಿಗುಣ ವಿರಳವಾಯಿತು (ಭೂಮಿಅ. ೪೭). ೪. ಮೂರು ಎಳೆಗಳು ಅಥವಾ ದಾರಗಳಿಂದ ಕೂಡಿದುದು. [ತ್ರಿ + ಗುಣ]

ತ್ರಿಗುಣಕೂಟ (ನಾ). ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳ ಕೂಟ: ನಕ್ಷತ್ರಂಗಳೇ ಪುಷ್ಪ ಶಿವತತ್ವಕಾಂತಿಯೇ ಆಭರಣ ತ್ರಿಗುಣಕೂಟವೇ ತಾಂಬೂಲ ಜ್ಞಾನಶಕ್ತಿಯೇ ಸಂಗ (ಅವಚಂ. ೨೮೫-೧೦೭೨).

[ತ್ರಿಗುಣ + ಕೂಟ$_1$]

ತ್ರಿಗುಣತತ್ವ (ನಾ). ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣಗಳಿಗೆ ಸಂಬಂಧಿಸಿದ ತತ್ವ: ಸೌಂದರ್ಯಾನುಭವದ ಈ ಅರೆಕೊರೆಗಳ ವಿಚಾರವನ್ನು 'ತ್ರಿಗುಣತತ್ವ' ಬಹು ಸೊಗಸಾಗಿ ವಿವರಿಸುತ್ತದೆ (ಸೌಂದಸ. ೧೧೧). [ತ್ರಿಗುಣ + ತತ್ವ$_1$]

ತ್ರಿಗುಣಾತ್ಮಕ (ಗು). ೧. ಸತ್ವ, ರಜಸ್ಸು ಮತ್ತು ತಮಸ್ಸು ಎಂಬ ಮೂರು ಗುಣಗಳಿಂದ ಕೂಡಿದ: ತ್ರಿಗುಣಾತ್ಮಕ ಸೃಷ್ಟಿಯನ್ನು ನಿರ್ಮಿಸಿದ ಅಘನಾಶಕನು ನಮ್ಮ ಚಿಂತೆಯನ್ನು ದೂರ ಮಾಡಲಿ (ತುಳಸೀ. ೫೩). (ನಾ). ೨. ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿಂದ ಕೂಡಿದ ವ್ಯಕ್ತಿ: ತ್ರಿಗುಣಾತ್ಮಕರಾಡಿಪ ಬೊಂಬೆಗಳಾಗಿರ ಲೆಸೆವ ಶಂಭು ನಿನ್ನರೆಮೆಯ್ಯೊಳ್ಬಗೆಗೊಂಡಗಲದೆ ಬೆಚ್ಚಿರಲಗಸುತೆಯಾಂ ನಿನ್ನ ಘನವನಿನ್ನೇನೆಂಬೆಂ (ಉದ್ಕಟ. ೩-೧೦೪). [ಸಂ.]

ತ್ರಿಗುಣಿಸು (ಕ್ರಿ). ೧. ಮೂರರಷ್ಟು ಆಗು; ಮೂರು ಪಟ್ಟು ಹೆಚ್ಚಾಗು: ತ್ರಿಗುಣಿಸಿ ಬಲವರ್ಪ ನಿಳಿಂಪಗಣಂ (ಅಜಿಪು. ೪-೩೧); ತ್ರಿಗುಣಿಸೆ ನಯನ ವಿಭೂಷಣಾಂಶುಗಳಲಗಿನ ರುಚಿಯನಲಗನೆರಡುಂ ಕೈಯೊಳ್ ತ್ರಿಗುಣಿಸಿ ಚಿತ್ರಂಬಡೆದಳ್ ಬಿಗಿಯೆ ಕುಚಂ ಬಿಗಿಯಿಪಂತು ಕಂತುಗೆ ದೊಣೆಯಂ (ಜಗವಿ. ೫-೧೭); ಕಮನೀಯಾಂಗತ್ರಿಭಂಗಿ ತ್ರಿಗುಣಿಸೆ ನಿಜಲಾವಣ್ಯಮಂ (ಶಾಂತೀಶ್ವ. ೨-೭೭). ೨. ಮೂರರಷ್ಟು ಹೆಚ್ಚಿಸು; ಮೂರುಪಟ್ಟು ಮಾಡು: ತ್ರಿಗುಣಿಸೆ ಗುಲ್ಮಮನದು ನೆಟ್ಟಗೆ ವಾಹಿನಿಯಕ್ಕುಂ (ಪಂರಾಮಾ. ೧೩-೭); ಆತನೊಳ್ ಸಂಗಳಿಸಿದ ಪುಣ್ಯಪ್ರಭಾವಮಂ ತ್ರಿಗುಣಿಪವೋಲ್ (ಚಂದ್ರಪು. ೯-೫೩). ೩. ಮೂರು ಎಳೆಗಳಿಂದ ಕೂಡಿರು: ತ್ರಿಗುಣಿಸಿದ ಮಲ್ಲಿಕಾಮಾಲೆಗಳಂ ಕಡು ತೋರಮಾದ ಮುಡಿಯಲ್ಲಿ ಮನಂಬುಗುವಂತಿರೆ ಮುಡಿಸಿಟ್ಟಳ್ (ಬಾಧಪು. ೧೦-೬೬). [ತ್ರಿಗುಣ + – ಇಸು$_3$]

ತ್ರಿಗುಪ್ತಿ (ನಾ). [ಜೈನ] ಮನಸ್ಸು, ವಾಕ್ಕು, ಕಾಯಗಳನ್ನು ವಶದಲ್ಲಿಟ್ಟುಕೊಂಡು, ವಿಷಯಸುಖಾಭಿಲಾಷೆಯನ್ನು ನಿರೋಧಿಸಿ, ಅವು ಧರ್ಮಧ್ಯಾನದಲ್ಲಿ ನಿರತವಾಗುವಂತೆ ಮಾಡುವುದು: ಆ ಮುನಿನಾಥಂ ತ್ರಿಗುಪ್ತಿಯೊಳ್ ನೆರೆದಂ (ಆದಿಪು. ೬-೨೪ ವ); ತ್ರಿಗುಪ್ತಿಯಿಂದಾಸ್ರವಮಂ ಬರಲೀಯದಿರ್ಪುದಾಸ್ರವನಿರೋಧಮದು ಭಾವಿಪಂದು ಸಂವರೆಯಕ್ಕುಂ (ಸುಕುಮಾ. ೧೨-೩೫); ಜೈನಮತದಲ್ಲಿ ತ್ರಿಗುಪ್ತಿಗಳು, ಪಂಚಸಮಿತಿಗಳು . . . ಪಂಚಚಾರಿತ್ರಗಳು, ದ್ವಾದಶತಪಗಳು ಇವುಗಳಿಂದ ಸಂವರವು ಸಾಧಿಸಲ್ಪಡುವುದು (ಜೈನಧ. ೩). 'ಗುಪ್ತಿ' ಪರಾ.

[ತ್ರಿ + ಗುಪ್ತಿ]

ತ್ರಿಗುಪ್ತಿಗುಪ್ತ (ನಾ). ಮೂರುವಿಧವಾದ ನಿಗ್ರಹಗಳನ್ನು ಸಾಧಿಸಿದವನು: ತ್ರಿಗುಪ್ತಿಗುಪ್ತನುಂ ತ್ರಿದಂಡ ತ್ರಿಶಲ್ಯರಹಿತನುಂ . . . ಚತುರಸೀತಿಲಕ್ಷಣಗುಣರತ್ನಭೂಷಣನುಮಕ್ಕುಂ (ಜಾ ಪು ಂ ಪು. ೬); ದ್ವಿವಿಧಸಂಯಮಧಾರಿಯುಂ ತ್ರಿಗುಪ್ತಿಗುಪ್ತನುಂ . . . ಪಂಚದಶ ಪ್ರಮಾದಪರಿವರ್ಜಿತನುಮಾಗಿ (ಅಜಿಪು. ೩-೧ ವ). [ತ್ರಿಗುಪ್ತಿ + ಗುಪ್ತ]

ತ್ರಿಜಗ (ನಾ). ಸ್ವರ್ಗ, ಮರ್ತ್ಯ ಮತ್ತು ಪಾತಾಳಗಳೆಂಬ ಮೂರು ಲೋಕಗಳು: ತ್ರಿಜಗದೊಳಾದಿಪುರಾಣಮುಮಜಿತಪುರಾಣಮುಮನೆಸೆಯೆ ಪೇಟ್ದುದಱಿಂದಂ ದ್ವಿಜವಂಶಧ್ವಜ ವೈಶ್ಯಧ್ವಜರೆನ್ನದರೊಳರೆ ಪಂಪನಂ ರತ್ನನುಮಂ (ಅಜಿಪು. ೧೨-೪೧); ತ್ರಿಜಗದೊಳುಳ್ಳಱಿಕೆಯ ಭೂಭುಜರಂ ಭುಜಬಲದಿನೆನ್ನ ಕಾಲ್ಗೆಱಗಿಸಿದೆಂ (ಪಂರಾಮಾ. ೧೪-೧೪೯). [ತ್ರಿ + ಜಗ]

ತ್ರಿಜಗಚ್ಚೂಡಾಮಣಿ (ನಾ). ಮೂರು ಲೋಕಗಳಿಗೂ ಶಿರೋಭೂಷಣನಾದವನು; ಶ್ರೇಷ್ಠ: ತ್ರಿಜಗಚ್ಚೂಡಾಮಣಿಯಂ ಕರಣತ್ರಯಶುದ್ಧಿಯಿಂದೆಱಗಿ ಪೊಡೆವಟ್ಟು (ಶಾಂತಿಪು. ೯-೬೯ ವ). [ಸಂ.]

ತ್ರಿಜಗತ್ಪೂಜ್ಯ (ನಾ). ಮೂರು ಲೋಕಗಳಿಂದಲೂ ಪೂಜೆಗೆ ಅರ್ಹನಾದವನು: ತ್ರಿಜಗತ್ಪೂಜ್ಯಂಗಿಟ್ಟಿದು ಪೀಠದಿಂ ಪೊಡೆವಟ್ಟಂ (ಶಾಂತಿಪು.

೯-೩೪) ; ಪರಿತ್ಯಕ್ತಸಕಲವಸುಂಧರಾತಳಾಧಿರಾಜ್ಯನುಂ ತ್ರಿಜಗತ್ಪೂಜ್ಯ ನೆನಿಸಿದ ಶ್ರೀವಾಸುಪೂಜ್ಯಭಟ್ಟಾರಕರ ಪರಿನಿರ್ವಾಣಕ್ಷೇತ್ರಮಂ ಕಂಡು (ಸುಕುಮಾ. ೪-೪೬ ವ). [ಸಂ.]

ತ್ರಿಜಗತ್ಸ್ವಾಮಿ (ನಾ). = ತ್ರಿಜಗದೀಶ್ವರ: ಸಾಸಿರನಾಮ ತ್ರಿಜಗತ್ಸ್ವಾಮಿ ಸಲೆ ಸುಖಭೂಮಿಯನಗಾಶ್ರಯವ ಗೈವುದು (ಲಿಜ್ಜಪು ೧-೧).

[ಸಂ. ತ್ರಿಜಗತ್ಸ್ವಾಮಿನ್]

ತ್ರಿಜಗದೀಶ್ವರ (ನಾ). ಮೂರು ಲೋಕಗಳಿಗೂ ಒಡೆಯನಾದವನು: ಈ ಪರಮೇಶ್ವರಂ ತ್ರಿಜಗದೀಶ್ವರನೀ ಹತಕಲ್ಮಷಂಗೆ ಮಾತಾಪಿತೃಭಾವ ಮೆಂದು ನಿಮಗಾದುದು (ಶಾಂತಿಪು. ೧೦-೭೫). [ಸಂ.]

ತ್ರಿಜಗದ್ಗುರು (ನಾ). ಮೂರು ಲೋಕಗಳಿಗೂ ಗುರುವಾದವನು: ಸಿದ್ಧಭಕ್ತಿಪೂರ್ವಕಂ ತ್ರಿಜಗದ್ಗುರುವೇ ಗುರುವೆಂದು ತತ್ಪದಸರಸಿಜಧ್ಯಾನ ಪರಾಯಣನಾಗಿ (ಆದಿಪು. ೧೬-೭೨ ವ); ವೃದ್ಧಸೇವೆ ಯಾನಂ ತ್ರಿಜಗದ್ಗುರು ಪ್ರಣತಿಯೆಂಬಿವನಾಗಳುಮೊಂದೆ ಕೀಲೆ ದಲ್ ಜಂತ್ರದ ಪಾಪೆಯಂ ತೊಡರ್ಚುವನಿಂದ್ರನುಮಾ ಪ್ರತೀಂದ್ರನುಂ (ಶಾಂತಿಪು. ೭-೧೧೦). [ಸಂ.]

ತ್ರಿಜಗದ್ವಂದಿತ (ನಾ). ಮೂರು ಲೋಕಗಳಿಂದಲೂ ನಮಸ್ಕರಿಸಿಕೊಳ್ಳು ವವನು: ತ್ರಿಜಗದ್ವಂದಿತನೆನಿಸಿರ್ದಜನಾ ಜಮದಗ್ನಿಗಖಿಳಭುವನಪ್ರಭು ಪಂಕಜನಾಭಂ ದಶರಥಭೂಭುಜಂಗೆ ಸುತನಾದನೆಂಬುದಂ ಕೇಳ್ ಮೊದಲೊಳ್ (ಕಾದಂಉ. ೬೫೦). [ಸಂ.]

ತ್ರಿಜಗನ್ನಾಥ (ನಾ). = ತ್ರಿಜಗದೀಶ್ವರ: ತ್ರಿಜಗನ್ನಾಥನ ಮಜ್ಜನಕ್ಕೆ ಮಣಿಪೀಠಾಕಾರದಂತಾಗಿ ವಿಶ್ವಜಗತ್ಪೂಜಿತಮಾಗಿ ಪೆಂಪುವಡೆದಾಹೇಮಾಚ ಳೇಂದ್ರಕ್ಕೆ (ಆದಿಪು. ೭-೪೮); ತ್ರಿಜಗನ್ನಾಥಂಗೆ ತಾಯ್ತಂದೆಗಳೆನಿಸಿದ ಸೈಪಿಂಗೆ (ಮಲ್ಲಿಪು. ೧೩-೩೨). [ಸಂ.]

ತ್ರಿಜಗನ್ಮಾತೆ (ನಾ). ಲಕ್ಷ್ಮಿ, ಸರಸ್ವತಿ, ಪಾರ್ವತಿ ಮುಂತಾದ ದೇವತೆ ಗಳಲ್ಲಿ ಒಬ್ಬಳು. [ಸಂ. ತ್ರಿಜಗನ್ಮಾತೃ]

ತ್ರಿಜಗೋದರ (ನಾ). ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳನ್ನೂ ತನ್ನ ಹೊಟ್ಟೆಯಲ್ಲಿ ಉಳ್ಳವನು; ವಿಷ್ಣು: ಬಾಣಾಸುರಂ ಪ್ರತಿಷ್ಠಾವಿಧಿಯಿಂದಾದರದೆ ರಚಿಸಿದಂ ತ್ರಿಜಗೋದರನಂ ಪಡೆದನಂತಕೋಟೀಶ್ವರನಂ (ಎಕ. VIII, ಸೊರಬ. ೨೭೬-೮ ; 1070).

[<ಸಂ. ತ್ರಿಜಗದುದರ]

ತ್ರಿಜಾತಕ (ನಾ). ಜಾಯಿಪತ್ರೆ, ದಾಲ್ಚಿನ್ನಿ, ಏಲಕ್ಕಿ ಇವುಗಳ ಕೂಟ,-ಮಿಶ್ರಣ: ತಿಗಡೆ ೧ ಪಲ, ತ್ರಿಜಾತಕ ೩ ಪಲ, ಕಳಿಂಗರಾಸ್ಮೆ ೧ ಪಲ . . . ಹೊತ್ತಿಗೆ ಕರ್ಷಪ್ರಮಾಣ ಸೇವಿಸಲು . . . ಅರೋಚಕ, ಹೃದಯಶೂಲೆ ಇವೆಲ್ಲಾ ಮಾಣುವುವು (ಸಕವೈ. ಪರಿ. ೪೪೧). [ಸಂ.]

ತ್ರಿಜಾಯಿ (ನಾ). ಮೂರನೆಯ ಒಂದು ಭಾಗ,-ಅಂಶ,-ಪಾಲು: ನಿಂತ ಐವಜಿಗೆ ತ್ರಿಜಾಯಿ ಒಂದು ಪಾಲಿಗೆ ಸರಿಯಾಗಿ ಐವಜು ಜಮೆ ಮಾಡಿ . . . ರಶೀದಿ ತರಿಸಿಕೊಳ್ಳುವದು (ಮಹಾವಂ. II, ೬೭).

[←ಮರಾ. ತಿಜಾಈ]

ತ್ರಿಜ್ಞಾನ (ನಾ). [ಜೈನ] ಶ್ರುತಿಜ್ಞಾನ, ಮತಿಜ್ಞಾನ ಮತ್ತು ಅವಧಿ ಜ್ಞಾನಗಳೆಂಬ ಮೂರು ಬಗೆಯ ಜ್ಞಾನಗಳು. 'ತ್ರಿಜ್ಞಾನಧರ' ಪರಾ. [ತ್ರಿ + ಜ್ಞಾನ]

ತ್ರಿಜ್ಞಾನಧರ (ನಾ). [ಜೈನ] ಶ್ರುತಿಜ್ಞಾನ, ಮತಿಜ್ಞಾನ ಮತ್ತು ಅವಧಿ ಜ್ಞಾನಗಳೆಂಬ ಮೂರು ಬಗೆಯ ಜ್ಞಾನಗಳನ್ನುಳ್ಳವನು: ಶ್ರೀನಿಳಯ ಮಿದುವೆ ನಾಭಿಸ್ಥಾನಮೆನಲ್ ನೆಱೆದಯೋಧ್ಯೆಗವತರಿಸಲ್ ತ್ರಿಜ್ಞಾನಧರಂ ಬಗೆದಂ ಭವ್ಯಾನಂದಕರಂ ಸರಸ್ವತೀಮಣಿಹಾರಂ (ಆದಿಪು. ೭-೧). [ಸಂ.]

ತ್ರಿಜ್ಯ (ನಾ). [ರೇಖಾಗ] ಕೇಂದ್ರಬಿಂದುವಿನಿಂದ ವೃತ್ತರೇಖೆಯ ಅಥವಾ ವರ್ತುಳದ ಪರಿಘದವರೆಗೆ ಎಳೆದ ಸರಳರೇಖೆ; ವ್ಯಾಸಾರ್ಧ: ಗ್ರಹಪಥದ ತ್ರಿಜ್ಯಗಳ ವರ್ಗಧಾತು ಬಹುಮಟ್ಟಿಗೆ, ಒಂದು ಗಣಿತಶ್ರೇಣಿ ಯಲ್ಲಿ ಹೆಚ್ಚುವುದು (ಭೂಹುಟ್ಟು. ೪೪); ವೃತ್ತದ ಅರ್ಧಜ್ಯಾವನ್ನು (Half-chord) ತ್ರಿಜ್ಯದಿಂದ (Radius) ಭಾಗಿಸಿ ಹಿಂದುಗಳು ಸ್ಪೈನುಗಳ ಕೋಷ್ಟಕವನ್ನು ನೇರವಾಗಿ ಬರೆದರು (ಶಿಲ್ಪನಾ. ೯೮). [ಸಂ. ತ್ರಿಜ್ಯಾ]

ತ್ರಿಜ್ಯಾಮಿತಿ (ನಾ). = ತ್ರಿಕೋಣಮಿತಿ: ಬೀಜಗಣಿತ ಬಹುವಾಗಿ ಮುಂದುವರಿದು, ಅದಕ್ಕೆ ನೆರವಾಗತಕ್ಕ ತ್ರಿಜ್ಯಾಮಿತಿಯನ್ನು ಹಿಂದುಳಿ ಸಿದ್ದರೆ, ಹಲವು ರೀತಿಯ ತೊಡಕುಗಳು ತರಗತಿಯಲ್ಲಿ ಹುಟ್ಟಿಕೊಳ್ಳುವುವು (ಶಿಕ್ಷದ. ೨೫೦). [ಸಂ./ಇಂ. Trigonometry]

ತ್ರಿಣಯ (ನಾ). = ತ್ರಿಣಯನ: ತೃಣ ತ್ರಿಣಯನ ಹೆಡಗೈಯ ಕಟ್ಟಿತ್ತು (ಮೋಳಿಮಾ. ೨೩೨-೭೮೧); ತ್ರಿಣಯನ ತಪಮಂ ಕಿಡಿಸಲ್ ಕ್ಷಣವೇಧಿ ಗಳೆನಿಸುವೆನ್ನ ತರಳಕಟಾಕ್ಷೇಕ್ಷಣಯುಗಮಿರ್ದಂತೀ ನನೆಗಣೆಗಳ್ ಪರ್ಯಂತವೇಕೆ ಮಕರಪತಾಕಾ (ಗಿರಿಕ. ೭-೬೫); ಪರಶಿವ ತ್ರಿಣಯನ ಕೃಪೆಯಿಂ ಧರೆಯೊಳು ಪಿರಿದು ಸಂತಾನವ ಪಡೆದು (ಕಂನವಿ. ೨೬-೪೨); ದಿನಪನಿಂ ಬೆಳಗಿಲ್ಲ ಬೆನಕನಿಂದಧಿಕ ಗಣವಿಲ್ಲ ಪರದೈವ ತ್ರಿಣಯನಿಂದಿಲ್ಲ (ಸರ್ವಜ್ಞ. ೩೩೬); ತ್ರಿಣಯ ಕೊಟ್ಟನು ವರವ ದ್ರುಪದಸುತೆಗಂ ಮುನ್ನ (ತುರಂಗ. ೯೩-೧೫). [<ತ್ರಿಣಯನ]

ತ್ರಿಣಯನ (ನಾ). ಮೂರು ಕಣ್ಣುಗಳುಳ್ಳವನು; ಮುಕ್ಕಣ್ಣ; ಶಿವ: "ಈಶಾನಃ . . . ತ್ರಿಪುರಾಂತಕಃ, ತ್ರಿಣಯನಃ, ರುದ್ರಃ . . . ನೀಲ ಲೋಹಿತಃ – ಈ ೪೫ ಮಹಾದೇವರ ಪೆಸರ್" (ಹಲಾಯು. ೩-೧೦); ಮಣಿಗಳ ಸೂತ್ರದಂತೆ ತ್ರಿಣ[ಪಾಠಾಂ. ನ]ಯನ ನೀನಿಪ್ಪೆಯಯ್ಯ (ದೇದಾವ. ೨-೩); ತ್ರಿಣಯನನಂ ಹರನಂ ನಿರ್ಗುಣನಂ ಸಡಿಫಡ ರತೀಶನಿಸುವನೆ (ಗಿರಿಕ. ೮-೪೦). [<ಸಂ. ತ್ರಿನಯನ]

ತ್ರಿಣಿಕೆ (ನಾ). ಮೂರು ಗೆರೆ: ತ್ರಿಣಿಕೆಯಿಂದೊಪ್ಪುವ ಕಡೆದ ಶಂಖದಂತಿಪ್ಪ ಕರುಣಿ ವೆಂಕಟೇಶನ ಕಂಧರವ ಕಂಡೆ ನಾ (ವಾದಿಕೀ. ೧೦೩-೧೦). [<ತ್ರಿ ?]

ತ್ರಿಣೇತ್ರ (ನಾ). ೧. ಮೂರು ಕಣ್ಣುಗಳು: ದಶಭುಜಂ ಪಂಚವಕ್ತ್ರಂ ತ್ರಿಣೇತ್ರದಿನೊಪ್ಪೆ (ನಂಬಿರ. ೭-೧೩೫). ೨. = ತ್ರಿಣಯನ: "ಭವನೀಶಂ, ಶಂಭು . . . ಶಿವನೀಶಾನಂ ತ್ರಿಣೇತ್ರಂ . . . ವಾಮದೇವಂ ವೃಷಾಂಕಂ" (ವಸ್ತುಕೋ. ೩-೧೩); ತ್ರಿದಶಾಸುರರಂ ಸುಡುವಗ್ಗದ ವಿಷಮಂ ನುಂಗಿದಾ ತ್ರಿಣೇತ್ರನುಮಾನೆಂಬುದನಱಿಯರ್ ಮಾನವರ್ (ಜಗವಿ. ೩-೮೧); ನರಸರಾಜೇಂದ್ರಚಂದ್ರಮನ ಚರಿತೆಯ ಲಾಲಿಸಿದವರಿ ಗಿಷ್ಟಾರ್ಥವ ಕರುಣಿಸುತಿಹನಾ ತ್ರಿಣೇತ್ರ (ಕಂನವಿ. ೨೬-೪೯).

[<ಸಂ. ತ್ರಿನೇತ್ರ]

ತ್ರಿಣೇಶ್ವರ (ನಾ). ಈಶ್ವರ; ಶಿವ: ಪಾವನರೂಪ ವಿಷಕಂಠ ಸುರಗಣನಮಿತ ತ್ರಿಣೇಶ್ವರನೆಸೆದಿಹನಾ ಪುರದೊಳಗೆ (ಕಂನವಿ. ೨-೧೦೮).

[<ಸಂ. ತ್ರಿನಯನೇಶ್ವರ]

ತ್ರಿತತ್ವ (ನಾ). [ವೀಶೈ] ಲಯ, ಭೋಗ ಮತ್ತು ಅಧಿಕಾರಗಳೆಂಬ ಮೂರು ವಿಧವಾದ ತತ್ತ್ವಗಳು; ಶೂನ್ಯತತ್ತ್ವ; ಶಿವತತ್ತ್ವ: ಲಯ ಭೋಗವುನ್ನತದೊಳೆಸೆವಧಿಕಾರವೆಂಬಾ ತ್ರಿತತ್ವಭೇದವೆ ಬಿಂದು ವೆಂದಱಿವುದು (ವೀಶೈಪು. ೧-೯-೧೩). [ತ್ರಿ + ತತ್ವ1]

ತ್ರಿತತ್ವಾತ್ಮಕ (ಗು). ೧. ಸತ್ವ, ರಜಸ್ಸು ಮತ್ತು ತಮೋಗುಣಗಳೆಂಬ ಗುಣತ್ರಯಗಳನ್ನು ಹೊಂದಿರುವ. (ನಾ). ೨. ಗುಣತ್ರಯಗಳ ಸ್ವರೂಪನಾದವನು; ಶಂಕರ; ಶಿವ: ತ್ರಿಭುವನಾಧೀಶಂ ತ್ರಿತತ್ವಾತ್ಮಕಂ ನಿರಘಂ . . . ಗೌರೀಶನೊಪ್ಪಿರ್ದನು (ಶಬಶಂ. ೫-೫೮). [ಸಂ.]

ತ್ರಿತನು (ನಾ). ಮೂರು ದೇಹ: ಪಾಂಡುರಂಗಂ ತ್ರಿತನುವಂ ಕೈಕೊಂಡು ಬಂದವೊಲಿತ್ತ ಮೂವರ ದಂಡಿ ಲೇಸಾಯ್ತೆನುತ ಭಕ್ತರು ಕೀರ್ತಿಸುತ್ತಿರಲು (ಬಸಪು. ೬೦-೩೩). [ತ್ರಿ + ತನು]

ತ್ರಿತಯ (ನಾ). ೧. ಮೂರರ ಗುಂಪು: ಅಲ್ಲಿಂದತ್ತಲ್ ಯೋಜನ ತ್ರಿತಯಾಂತರದೊಳ್ ಶುಕ್ರವಿಮಾನಮುಂ . . . ಅಲ್ಲಿಂ ಮೇಗನಿತೆ ಯೋಜನಾಂತರದೊಳ್ ಶನಿಯ ವಿಮಾನಮಿರ್ಕುಂ (ಸುಕುಮಾ. ೧೧-೫೯ ವ). ೨. ಮೂರು: ತ್ರಿತಯಂ ಪರಮಗುಣತ್ರಯಮನಲಂ ಸುರನದಿ ಮಾರ್ಗತ್ರಯಮದು ಮೂಱಱ ನಾಮಂ (ವ್ಯವಹಾ. ೯-೩). ೩. ಮೂರು ಜನರು; ಮೂವರು: ಪಿತನಿರಲು ದಾತಾರನಿರೆ ನಿಜಪತಿಯಿರಲು ಸುತ ದಾಸ ಸತಿಯೊ ತ್ರಿತಯರುಂ ಸ್ವಾತಂತ್ರ್ಯದವರಲ್ಲ (ಕುವ್ಯಾಉ. ೩-೩೭). ೪. ಮೂರು ಭಾಗಗಳನ್ನು ಉಳ್ಳುದು; ಮೂರು ಅಂಶಗಳಿಂದ ಕೂಡಿದುದು. [ಸಂ.]

ತ್ರಿತಯಜಾತ (ನಾ). ಚತುರ್ವರ್ಣಗಳಲ್ಲಿ ಮೂರನೆಯ ವರ್ಣದಲ್ಲಿ ಹುಟ್ಟಿದವನು; ವೈಶ್ಯ: "ವಿಶನೂರುಭವಂ ತ್ರಿತಯಜಾತನಾರ್ಯಂ ಮಹೀಸ್ಪೃಶನೆನಲು ವೈಶ್ಯನಕ್ಕುಂ" (ಪಾಂಗರಾ. ೧೦೩-೦).

[P ಇದು 'ತೃತೀಯಜಾತ' ಎಂಬುದರ ಅವಲಿಖಿತ]

ತ್ರಿತಾಪ (ನಾ). ಆಧಿದೈವಿಕ, ಆಧ್ಯಾತ್ಮಿಕ, ಆಧಿಭೌತಿಕವೆಂಬ ಮೂರು ವಿಧವಾದ ತಾಪಗಳು; ತಾಪತ್ರಯ: ಜಿತ ತ್ರಿತಾಪ ಬಸವೇಶ್ವರ ನೀಗೆಮಗೀಶಭಕ್ತಿಯಂ (ರಾಜಶೇ. ೧-೧೧). 'ತಾಪತ್ರಯ' ಪರಾ.

[ತ್ರಿ + ತಾಪ]

ತ್ರಿತ್ರಿಕೋಣ (ನಾ). [ಜ್ಯೋತಿ] (ಲಗ್ನದಿಂದ) ಒಂಬತ್ತನೆಯ ರಾಶಿ: ತ್ರಿತ್ರಿಕೋಣಾಖ್ಯಮಾ ನವಮಂ (ಜಾತಕ. ೧-೩೫); ಒಂಭತ್ತನೆಯ ರಾಶಿಗೆ ತ್ರಿತ್ರಿಕೋಣ . . . ಎಂದು ಸಂಜ್ಞೆ (ಜಾತಕ. ೧-೩೫ ಟೀಕು).

[ತ್ರಿ + ತ್ರಿಕೋಣ]

ತ್ರಿದಂಡ (ನಾ). ೧. ಒಟ್ಟಾಗಿ ಸೇರಿಸಿ ಕಟ್ಟಿದ ಮೂರು ದಂಡಗಳು; ಯತಿಗಳು ಹಿಡಿಯುವ ದಂಡ: ರಾವಣನು ತ್ರಿದಂಡ ಕಮಂಡಲು ಗಳನ್ನು ಧರಿಸಿದ ಯತಿಯಾದನು (ವಡಭಾ. ೪೦೬). ೨. [ಜೈನ] ಕಾಯದಂಡ, ವಂನೋದಂಡ, ವಾಗ್ದಂಡಗಳೆಂಬ ಮೂರು ವಿಧವಾದ ದಂಡಗಳು: ವಿವಿಧಾರ್ಥಸಳಿಪಾತಮತಿಯುಂ . . . ತ್ರಿದಂಡ ಶಿಶಲ್ಯ ರಹಿತನುಂ (ಜಾಪುಂಪು. ೬); ಮತ್ತಂ ತ್ರಿದಂಡ ತ್ರಿಶಲ್ಯ ತ್ರಿಗಾರವಂಗಳಂ ಕ್ರಮಕ್ರಮದಿಂ ಕಟಲ್ಟಿ ಕಳೆಯುತ್ತುಂ (ಸುಕುಮಾ. ೩-೪೬ ವ); ಭಾರತೀಯ ವಿವಿಧ ಧರ್ಮ-ಸಂಸ್ಕೃತಿಗಳ ಮೇಲೆಯೂ ನಿರ್ಗ್ರಂಥಸಂಪ್ರದಾಯದ ತ್ರಿದಂಡ ತ್ರಿ ಗು ಪ್ತಿ ಗಳ ಪ್ರಭಾವವು ಬಿದ್ದುದನ್ನು ಕಾಣಬಹುದು (ಜೈನಸ. ೫೪೦). [ತ್ರಿ + ದಂಡ]

ತ್ರಿದಂಡಿ (ನಾ). ಸಂನ್ಯಾಸಿಗಳಲ್ಲಿ ಒಂದು ವರ್ಗ; ತ್ರಿದಂಡವನ್ನು ಧರಿಸಿರುವವನು; ವಂನಸ್ಸು, ವಚನ ಮತ್ತು ಕಾಯಗಳ ಮೇಲೆ ನಿಗ್ರಹಶಕ್ತಿಯನ್ನು ಹೊಂದಿರುವ ಯತಿ,-ಸಂನ್ಯಾಸಿ ಆಗಳವರ್ಗಳಾ ರೂಪನೊಳದಂ ನೆಗಟುಲಂಜ . . . ಏಕದಂಡಿ ತ್ರಿದಂಡಿಗಳಪ್ಪ ವರಿ ವ್ರಾಜಕರುಮಾಗಿ ತಮಗೆ ತಾವೇ ವನವ್ರವೇಶಮಂ ಮಾಡಿ (ಆದಿಪು. ೯-೯೩ ವ). [ತ್ರಿ + ದಂಡಿ$_3$]

ತ್ರಿದಶ$_1$ (ನಾ). ೧. ಮೂರಂ ಹತ್ತು; ಮೂವತ್ತು: ತ್ರಿದಶ ದಿನಂ ತೀವಲೊಡಂ ತ್ರಿದಶತ್ವಮನೆಯ್ದಿ (ಧರ್ಮಪು. ೦೨-೦೯); ವ್ಯಾಳಕಂಕಣಗೆ ತ್ರಿ[ಪಾಠಾಂ. ತ್ರೈ]ದಶ ಸೇರು ಧೂಪವನು ಅರ್ಪಿಸುವ ನೇಮವಿಡಿದು (ಪ್ರಾಕಥಾ. ೧೨-೬). ೨. ಹನ್ನೆರಡು ಆದಿತ್ಯರು, ಎಂಟು ವಸುಗಳು, ಹನ್ನೊಂದು ರುದ್ರರು, ಇಬ್ಬರು ಅಶ್ವಿನಿಗಳು-ಹೀಗೆ ಮೂವತ್ತು ಮೂರು ದೇವತೆಗಳು. ೩. [ಛಂದ] ಮೂರು ಲಘುಗಳಿಂದ ಕೂಡಿದ ಒಂದು ಅಕ್ಷರಗಣದ ಹೆಸರು: ನಗಣ: ತ್ರಿದಶ ಪವನೇಶರ್ ಪುದಿದು ನಿಲೆ ಪಾದಾಂತ್ಯದೊಳಱ್ ಎದಗ್ಗೇ ಸದಮಳವಿಶಾಲಂ (ಛಂದೋಂಬು. ೨-೯೨). [ಸಂ.]

ತ್ರಿದಶ$_2$ (ನಾ). ಸದಾ ಯೌವನದಿಂದ ಕೂಡಿರುವವನು; ಬಾಲ್ಯ, ಕೌಮಾರ್ಯ, ಯೌವನವೆಂಬ ಮೂರು ಅವಸ್ಥೆಗಳನ್ನು ಮಾತ್ರ ಉಳ್ಳವನು; ದೇವತೆ: "ಸುರರಮೃತಾಶರ್ ಕ್ರತುಭುಜರ್ ನಿಲಿಂಪರ್ ತ್ರಿದಶರ್" (ಪಸು.ಕೋ. ೬-೩೧); ತ್ರಿದಶ ನರಾಸುರೋರಗಗಣಪ್ರಭು . . . ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ (ಪಂಪಭಾ. ೦-೮೫); ತ್ರಿದಶರುಂಜದೆ ಹುತವನುಣ್ಣಲಿ ಕದನ ಕಾವಿಹೆವು (ಕಾಶಿಕಾ. ೦-೯೧). [ಸಂ. (ತ್ರಿ + ದಶಾ + -)]

ತ್ರಿದಶಕನ್ನಿಕೆ (ನಾ). ದೇವತಾಸ್ತ್ರೀ: ತ್ರಿದಶಕನ್ನಿಕೆಯರುವೆರಸಿ ಗಗನ ದೊಳುದಂಚಿತ ಮುಕ್ತಿಕನ್ನಿಕೆಯಿದಿರುಗೊಳುತಿದೆ (ಬಸಪು. ೨೪-೪೩).

[ತ್ರಿದಶ$_2$ + ಕನ್ನಿಕೆ$_1$]

ತ್ರಿದಶಗಣ (ನಾ). ದೇವತೆಗಳ ಗುಂಪು,-ಸಮೂಹ: ತ್ರಿದಶಗಣೇಶ ಮೌಳಿಮಣಿಪೀಠನಿಷೇವಿಗಳೊಳ್ ಮುನೀಂದ್ರನಾ ಪದಯುಗಳಂಗಳೊಳ್ ಮುದದೆ ಬಾಗುವೆನೆಂಬುದು ದಕ್ಷಿಣಾಯನಂ (ಕವಿಕಾ. ೩-೧೦೬). 'ತ್ರಿದಶ ಗಣಾಧಿನಾಯಕ' ಪರಾ. [ತ್ರಿದಶ$_2$ + ಗಣ]

ತ್ರಿದಶಗಣಾಧಿನಾಯಕ (ನಾ). ದೇವತೆಗಳ ಒಡೆಯ, - ಅಧಿಪತಿ; ಇಂದ್ರ: ತ್ರಿದಶಗಣಾಧಿನಾಯಕನ ಪರ್ವಿದ ತೋಳ್ದುಱುಗಲ್ಗಳೊಳ್ . . . ಜತ್ರವಟ್ಟದ ಮಣಿಯಂತದೇಂ ಪದುಳವಾದುದೊ ದಿವ್ಯವಧೂ ಕದಂಬಕಂ (ಆದಿಪು. ೭-೦೩೪). [ತ್ರಿದಶಗಣ + ಅಧಿನಾಯಕ]

ತ್ರಿದಶಗಣಾಧಿಪ (ನಾ). = ತ್ರಿದಶಗಣಾಧಿನಾಯಕ: ತ್ರಿದಶಗಣಾಧಿಪರ್ ಸುರಿಯುತಿರ್ಪತಿನಿರ್ಮಳದುಗ್ಧವಾರಿಪೂರದೊಳ್ . . . ಒಪ್ಪಿದನಿಂದ್ರ ವಂದಿತಂ (ಪುಷ್ಪಪು. ೦೧-೩೯). [ತ್ರಿದಶಗಣ + ಅಧಿಪ]

ತ್ರಿದಶತ್ವ (ನಾ). ದೇವತ್ವ: ತ್ರಿದಶದಿನಂ ತೀವಲೊಡಂ ತ್ರಿದಶತ್ವಮನೆಯ್ದಿ ನೀನೆ ಬಂದು ಸಮಸ್ತ ತ್ರಿದಶೇಂದ್ರವಂದಿತ ಶ್ರೀಪದನಂ ಪ್ರತ್ಯಕ್ಷವಾಗೆ ನಲಿದೀಕ್ಷಿಸುವೈ (ಧರ್ಮಪು. ೦೨-೦೯). [ಸಂ.]

ತ್ರಿದಶದೀರ್ಘಿಕೆ (ನಾ). ದೇವನದಿ; ಗಂಗಾನದಿ; ಗಂಗೆ.

[ತ್ರಿದಶ$_2$ + ದೀರ್ಘಿಕೆ]

ತ್ರಿದಶದ್ವೇಷ (ನಾ). ದೇವತೆಗಳನ್ನು ಕುರಿತ ದ್ವೇಷ: ಮದದಿ ತ್ರಿದಶ ದ್ವೇಷದಿಂದಳಿದಧೋಗತಿಗೆ ಪದುವಾದರ್ (ನವವೋ. ೧೮-೭).

[ತ್ರಿದಶ$_2$ + ದ್ವೇಷ]

ತ್ರಿದಶಧರಣೀರುಹ (ನಾ). ದೇವಲೋಕದ ಮರ; ಕಲ್ಪವೃಕ್ಷ: ತ್ರಿದಶ ಧರಣೀರುಹದೊಳಿಳುಗಂಪುಮಿರ್ಪವೊಲಖಿಳಭಕ್ತರೊಳು ಪೂರಮಾಗಿಹ ನಿಮ್ಮ ಕೃತಿಯಂ ಪಾರವೆಯ್ದಿಸಿ ಪೊರೆವುದೆಮ್ಮನು (ಬಸಪು. ೧-೭).

[ತ್ರಿದಶ$_2$ + ಧರಣೀರುಹ]

ತ್ರಿದಶಧುನಿ (ನಾ). = ತ್ರಿದಶದೀರ್ಘಿಕೆ: "ತ್ರಿದಶಧುನಿ ವಿಷ್ಣುಪದಿ ಗಂಗೆ ಜಾಹ್ನವಿ ದೇವನದಿಯೆನಿಕುಂ" (ಪಾಂಗರಾ. ೧೩೨-೦೦). [ತ್ರಿದಶ + ಧುನಿ]

ತ್ರಿದಶನಗೇಂದ್ರ (ನಾ). ದೇವತೆಗಳ ಬೆಟ್ಟ; ಮೇರು: ತ್ರಿದಶನಗೇಂದ್ರಂ ಧನುವಾದುದು ಪಶುಪತಿಗೆ (ಜಗವಿ. ೧೬-೨೭). [ತ್ರಿದಶ$_2$ + ನಗೇಂದ್ರ]

ತ್ರಿದಶನದೀಸಲಿಲ (ನಾ). ಗಂಗಾನದಿಯ ನೀರು: ತ್ರಿದಶನದೀಸಲಿಲದ ಪೂರದಿನಂಗನೆ ನಯದೊಳಭಿಷವೋತ್ಸವಮನೊಡರ್ಚಿದಳ್ (ಶಾಂತಿಪು. ೯-೦೭೯). [ಸಂ.]

ತ್ರಿದಶನದೀಸುತ (ನಾ). ಗಂಗೆಯ ಮಗ; ಭೀಷ್ಮ: ತ್ರಿದಶನದೀಸುತನಿಂ ತೀರದ ಕಜ್ಜಂ ಮುನ್ನ ಕಳಶಸಂಭವನಿಂ ತೀರದ ಕಜ್ಜಂ . . . ದ್ರೋಣ ಪುತ್ರನಿಂ ತೀರ್ದಪುದೇ (ಗದಾಯು. ೩-೬೦). [ಸಂ.]

ತ್ರಿದಶನಿಕರ (ನಾ). ದೇವತೆಗಳ ಸಮೂಹ,-ಗುಂಪು: ಅದಿರಿತಿಳಿ . . . ತ್ರಿದಶನಿಕರದ ಸಾಧುರವವಂಜಿಸಿತು ಮೂಜಗವ (ಕುವ್ಯಾಗ. ೬-೪). [ತ್ರಿದಶ$_2$ + ನಿಕರ$_1$]

ತ್ರಿದಶನಿವಾಸ (ನಾ). ದೇವತೆಗಳ ವಾಸಸ್ಥಾನ ; ದೇವಲೋಕ : ತ್ರಿದಶನಿವಾಸಮಿಂತಿದು ನಿಜಾರ್ಜಿತವುಣ್ಮಿದಿನಾದುದು (ಪಾರ್ಶ್ವಪು. ೫-೧೫). [ತ್ರಿದಶ + ನಿವಾಸ]

ತ್ರಿದಶಪತಿ (ನಾ). = ತ್ರಿದಶಗಣಾಧಿನಾಯಕ : ತ್ರಿದಶಪತಿ ಪಾರಿಜಾತ ಪ್ರದನಾಗದೊಡಾಧಿಪತ್ಯಸವನಮದಿನ್ನಾಗದು ತನ್ನಗಾರಿಗಾಗಿಪ್ಪುದು ಧಾರಾಖಡ್ಗಸವನಮಂ ಮತ್ತಡ್ಗಂ (ಜಗವಿ. ೧೩-೩೧) ; ತ್ರಿದಶಪತಿ ವಿನುತವ:ರ್ಹತ್ಸದನಂ ಮಾಹೇಂದ್ರಕಲ್ಪದೊಳ್ (ಪಾರ್ಶ್ವಪು. ೧೩-೨೫). [ತ್ರಿದಶ + ಪತಿ]

ತ್ರಿದಶಪದ (ನಾ). ದೇವಲೋಕದ ಪದವಿ ; ಸುರಲೋಕ ಪ್ರಾಪ್ತಿ : ತ್ರಿದಶಪದ ಸುಖಮನೆಯ್ದಲ್ ತುದಿಗಾಲೊಳ್ ನಿಂದನೀತಂ (ಜಗವಿ. ೧೬-೭೦). [ತ್ರಿದಶ + ಪದ]

ತ್ರಿದಶಭುವನ (ನಾ). = ತ್ರಿದಶಲೋಕ : ತ್ರಿದಶಭುವನವಂ ಪ್ರೀತಿಯಿಂ ಬಂದು ಕಾಣ್ಬಂಗೊದವಿದ್ದೈಶ್ವರ್ಯಮಂ ಭೀತರಿಗಸುಗತಿಯಂ ಮಾಟ್ಪನೇ (ಎಕ. VII, ಶಿಕಾರಿ. ೯೬-೩೮ ; 1178). [ತ್ರಿದಶ + ಭುವನ]

ತ್ರಿದಶರಿಪು (ನಾ). ದೇವತೆಗಳ ಶತ್ರು ; ರಾಕ್ಷಸ ; ದೈತ್ಯ : ತ್ರಿದಶರಿಪುಗಳ ಗಂಡನಿದು ಕಾದಿದವು ನಾವಿಂದೆನುತ ಸುಭಟರು ಕದಡಿ ಸರಿದುದು (ಕುವಾ.ಕ್ರೂ. ೩-೧೨). [ತ್ರಿದಶ + ರಿಪು]

ತ್ರಿದಶಲೋಕ (ನಾ). ದೇವತೆಗಳ ಲೋಕ ; ದೇವಲೋಕ ; ಸ್ವರ್ಗ : ತ್ರಿದಶಲೋಕಕ್ಕೇಱುತಿರ್ದ ತ್ರಿಶಂಕುನರಾಧೀಶನ ಲಕ್ಷ್ಮಿ, ಶಕ್ರನ ಮಹಾ ಹುಂಕಾರದಿಂ ಬರ್ದಳೆಂಬಿನೆಗಂ (ಕಾದಂಪು. ೩೪). [ತ್ರಿದಶ + ಲೋಕ]

ತ್ರಿದಶವಿರೋಧಿ (ನಾ). = ತ್ರಿದಶರಿಪು : ತ್ರಿದಶವಿರೋಧಿಗೂರ್ಧ್ವಗತಿ ದೋಱುವಪೋಲ್ ಮಣಿರಮ್ಯಹರ್ಮ್ಯಕೂಟದೊಳೆಸೆದತ್ತು ಚೀನವಸನ ಧ್ವಜಸಂತತಿ (ಜಗವಿ. ೬-೩೮). [ತ್ರಿದಶ + ವಿರೋಧಿ]

ತ್ರಿದಶಶರಾಸನ (ನಾ). ದೇವತೆಗಳ ಬಿಲ್ಲು; ಕಾಮನ ಬಿಲ್ಲು ; ಇಂದ್ರ ಧನು : ತ್ರಿದಶಶರಾಸನಂ ತಳಿರ ತೋರಣಮಾಗಿರೆ ಕುಕ್ಕಿನೋಳಿ ಚಿಲ್ವಿದಿರ್ಗೊಳೆ ಬರ್ಪ ಸೊನ್ನಲಿಗೆಯಾಗೆ ಘನಧ್ವನಿ ತೂರ್ಯಮಾಗೆ ರಾಗ ದಿನಿನರಶ್ಮಿಯೆಂಬ ರಸಮಂ ಕಟ್ಟಿದು (ಆದಿಪು. ೬-೭೧); ತ್ರಿದಶಶರಾಸನರುಚಿ ಮೊದಲದು . . . ಉಬ್ಬಿದವೆರಡು ರವಿಕಾಂತಂಗಳ್ (ಪಾರ್ಶ್ವಪು. ೧೬-೧೪). [ತ್ರಿದಶ + ಶರಾಸನ]

ತ್ರಿದಶಸಂಕುಳ (ನಾ). = ತ್ರಿದಶನಿಕರ: ಹಂಪೆಯರಸಂ ನಿಟಲಂದೆಱಿಯರ್ ಬಳಿಕ್ಕದೆತ್ತಣ ಹರಿ ... ಎತ್ತಣ ತ್ರಿದಶಸಂಕುಳವೆತ್ತಣ ಭಾಸ್ಕರೇಂದುಗಳ್ (ಪಂಪಾಶ. ೩೮). [ತ್ರಿದಶ + ಸಂಕುಳ (= ಸಂಕುಲ)]

ತ್ರಿದಶಸ್ತುತ (ನಾ). ದೇವತೆಗಳಿಂದ ಸ್ತುತಿಸಿಕೊಂಡವನು : ತ್ರಿದಶಸ್ತುತ ನೋಡ ಪೊದಱ್ದೊದವಿದ ತಾಳೀತಮಾಳನೀಳದ ಕರ್ಪಿಂ ವುದಿದು ಪರಭಾಗಮಂ ಪಡೆದಿದಱಿರಡುಂ ಕೆಲದೊಳೆಸೆವ ವನರಾಜಿಗಳಂ (ಆದಿಪು. ೧೧-೬೦). [ತ್ರಿದಶ + ಸ್ತುತ]

ತ್ರಿದಶಸ್ತುತ್ಯ (ನಾ). ದೇವತೆಗಳಿಂದ ಸ್ತುತಿಸಿಕೊಳ್ಳುವಂತಹುದು : ತ್ರಿದಶಸ್ತುತ್ಯವಿದಾದಿದೇವಚರಿತಂ (ಆದಿಪು. ೧೬-೭೮). [ತ್ರಿದಶ + ಸ್ತುತ್ಯ]

ತ್ರಿದಶಾಂಗನೆ (ನಾ). ದೇವತಾಸ್ತ್ರೀ : ತ್ರಿದಶಾಂಗನೆಯರ್ . . . ವಾಡಿದ ರೋಲಗಸಾಲೆಯೊಳ್ ಜಿನೇಂದ್ರಾಂಬಿಕೆಯಾ (ಶಾಂತಿಪು. ೯-೩೮೫) ; ತ್ರಿದಶಾಂಗನೆ ಜಿನಜನನಿಗೆ ಪದಿಂ ತಾರಾವತಂಸಮಂ ಭೂಷಿಸೆ (ಶಾಂತೀಶ್ವ. ೧೩-೨೧೮). [ತ್ರಿದಶ + ಅಂಗನೆ]

ತ್ರಿದಶಾಚಲ (ನಾ).=ತ್ರಿದಶನಗೇಂದ್ರ : ತ್ರಿದಶಾಚಲಶಿಖರದೊಳಜಿತದೇವ ಜನ್ಮಾಭಿಷೇಕಮಂಗಳಸಮಯಾಂಬುದಸಮಯಂ ಸಮನಿಸೆ (ಅಜಿಪು. ೫-೭). [ತ್ರಿದಶ + ಅಚಲ]

ತ್ರಿದಶಾಚಾರ್ಯ (ನಾ). ದೇವತೆಗಳ ಗುರು ; ಬೃಹಸ್ಪತಿ: "ವಾಚಸ್ಪತಿಃ, . . . ತ್ರಿದಶಾಚಾರ್ಯಃ, ಚಿತ್ರಶಿಖಂಡಿಪ್ರಸೂತಿಃ, (ಕಥ್ಯತೇ) – ಈ ೮ ಬೃಹಸ್ಪತಿಯ ಪೆಸರ್" (ಹಲಾಯು. ೯-೪೭). [ತ್ರಿದಶ + ಆಚಾರ್ಯ]

ತ್ರಿದಶಾಧಿನಾಥ (ನಾ). = ತ್ರಿದಶಗಣಾಧಿನಾಯಕ : ಪದವಿನ್ಯಾಸದ ತುಱುಗಲ್ ಪೊದಟ್ಟಿ ಲಯಂಬೆರಸು ರಂಗಮಂ ಬಳಸಿದನಾ ತ್ರಿದಶಾಧಿನಾಥನಳವಪೊಲುದನ್ವದಾವೇಷ್ಟಿತಾಪೀಳಾವನಿತಳಮಂ (ಆದಿಪು. ೬-೧೦೯). [ತ್ರಿದಶ + ಅಧಿನಾಥ]

ತ್ರಿದಶಾಧೀಶ (ನಾ). ೧. = ತ್ರಿದಶಗಣಾಧಿನಾಯಕ: ತ್ರಿದಶಾಧೀಶನಿನಾದ ಜನ್ಮಸವನಾಂಭಃಪೂರದೊಳ್ ನೀರನೂಡಿದುದೋಲಾಡಿದುದು . . . ದೇವೇಂದ್ರನೈರಾವತం (ಮಲ್ಲಿಪು. ೧೨-೧೫೪). ೨. ಜಿನ ; ತೀರ್ಥಂಕರ : ತ್ರಿದಶಾಧೀಶನ ಮುಂದೆ . . . ಸಪ್ತವಿಧಸೇನಾಚಕ್ರಮೇನೊಪ್ಪಿತೋ (ಪುಷ್ಪಪು. ೧೪-೪೬). [ತ್ರಿದಶ + ಅಧೀಶ]

ತ್ರಿದಶಾಧೀಶ್ವರ (ನಾ). = ತ್ರಿದಶಗಣಾಧಿನಾಯಕ : ತ್ರಿದಶಾಧೀಶ್ವರ ಭೂತ್ಯತ್ಯುದಾರವಿವಿಧಾರ್ಥವಿಭವನೀ ಭೂವೇಂದ್ರಂ (ಕವಿರಾ. ೨-೭೦) ; ತ್ರಿದಶಾಧೀಶ್ವರ ಸಂಪದಂ ಸಫಲವಿಸಾ ಪೌಲೋಮಿಯಿಂ (ಜಗವಿ. ೧೩-೫೫). [ತ್ರಿದಶ + ಅಧೀಶ್ವರ]

ತ್ರಿದಶಾಧೀಶ್ವರಮಂತ್ರಿ (ನಾ). ದೇವತೆಗಳ ಒಡೆಯನಿಗೆ ಮಂತ್ರಿಯಾದವನಂ ; ಗುರು : ತ್ರಿದಶಾಧೀಶ್ವರಮಂತ್ರಿ ಶೀತಕರರೆಂಬೀಯರ್ವರುಂ ಕರ್ಕಗೇಹದೊಳ್ದರ್ದಂದು . . . ಪುಟ್ಟಿದ ಮರ್ತ್ಯಂಗೆ ಚಿರಾಯು ಸಂಭವಿಸುಗುಂ (ಜಾತಕ. ೮-೧೫). [ತ್ರಿದಶಾಧೀಶ್ವರ + ಮಂತ್ರಿ]

ತ್ರಿದಶಾನಕ (ನಾ). ದೇವತೆಗಳ ದುಂದುಭಿ,–ಭೇರಿ : ತ್ರಿದಶಾನಕ ಕೋಟಿಗಳುಂ ಪುದಿದ ಚತುಷ್ಪಟ್ಟಿ ಚಮರಜಂ ಮುಕ್ಕೊಡೆ . . . ಮೃಗಾಧಿಪಪೀಠಂ ಎಸೆಯೆ (ನೇಮಿಪು. ೦೪-೦೪೩). [ತ್ರಿದಶ + ಆನಕ]

ತ್ರಿದಶಾನೀಕ (ನಾ). ೧. = ತ್ರಿದಶನಿಕರ. ೨. ದೇವತೆಗಳ ಸಮೂಹದಿಂದ ಕೂಡಿದವನು : ಚತುಸ್ಸಹಸ್ರಸಾಮಾನಿಕಸಮೇತನುಂ ತತ್ಪ್ರಮಾಣಾಂಗರಕ್ಷ ತ್ರಿದಶಾನೀಕನುಂ . . . ಅಂತರ್ಮಧ್ಯತ್ರಿಃಪ್ರಕಾರ ಪರಿಷತ್ಪ್ರಕಾಶಕರನಾಗಿ ಪರಮೈಶ್ವರ್ಯಸ[ಂವ]ನ್ನನಾದಂ (ಸುಕುಮಾ. ೯-೩೧ ವ). [ತ್ರಿದಶ + ಅನೀಕ]

ತ್ರಿದಶಾರಿ (ನಾ). = ತ್ರಿದಶರಿಪು : ತ್ರಿದಶಾರಿಧೂಮಕೇತುವನುದರದೊಳೀ ದೇವಿ ತಳಿದುದರ್ಕಿದೆ ದೃಷ್ಟಾಂತದ ಧೂಮಲೇಖೆಯಿನೆ ಕರ್ಪೊದವಿದ ರೋಮಾಳಿ ರಂಜಿಕುಂ ದೇವಕಿಯಾ (ಜಗವಿ. ೫-೯೦). [ತ್ರಿದಶ + ಅರಿ]

ತ್ರಿದಶಾಲಯ (ನಾ). ದೇವತೆಗಳ ವಾಸಸ್ಥಾನ ; ಸ್ವರ್ಗಲೋಕ ; "ತ್ರಿದಿವಂ . . . ತ್ರಿದಶಾಲಯಂ ನಾಕಮೂರ್ಧ್ವಲೋಕಂ ಸ್ವರ್ಗಮದು" (ಪುಂಗಣಾ. ೩-೮). [ತ್ರಿದಶ + ಆಲಯ]

ತ್ರಿದಶಾವಾಸ (ನಾ). = ತ್ರಿದಶಾಲಯಂ : "ಸ್ವರ್, ಸ್ವರ್ಗಃ, ಸುರಸದ್ಮ, ತ್ರಿದಶಾವಾಸಃ . . . ಊರ್ಧ್ವಲೋಕಃ [ಚ] ಈ ೧೧ ದೇವಲೋಕದ ಪೆಸರ್" (ಹಲಾಯು. ೩-೩) ; ಇದು ದಲ್ಭ್ಯೋತ್ತರಥಾಹ್ವಯಂ ಬನಮಿದ ಟ್ಟೋದಂ ಸರಂ ನೋಟ್ಟಿರ್ಪೊಡೀ ತ್ರಿದಶಾವಾಸಮಿದಿಂತುಟಲ್ತೆ ರಮಣೀಯಂ (ಕಾದಂಕು. ೪೪೩). [ತ್ರಿದಶ + ಆವಾಸ]

ತ್ರಿದಶಾಸನ (ನಾ). ದೇವತೆಗಳ ಆಸನ,–ಪೀಠ : ತ್ರಿದಶಾಸನಂಗಳಲ್ಲಾಡಿದುವು ಜಗದ್ಭರ್ತುಗೆ ಬೇಗಮುಚ್ಚಾಸನದಿಂದಿದಿರೇಳ್ವೆಮೆಂದು ಪೇೞ್ವವೊಲ್ (ಆದಿಪು. ೭-೪೦). [ತ್ರಿದಶ + ಆಸನ]

ತ್ರಿದಶಾಹಾರ (ನಾ). ದೇವತೆಗಳ ಆಹಾರ ; ಅಮೃತ : "ಅಮೃತಂ, ತ್ರಿದಶಾಹಾರಃ, ಸುಧಾ, ಪೀಯೂಷಂ – ಈ ೪ ಅಮರ್ದಿನ ಪೆಸರ್" (ಹಲಾಯು. ೨೨-೦೩೩). [ತ್ರಿದಶ + ಆಹಾರ]

ತ್ರಿದಶಾಹಿತ (ನಾ). ದೇವತೆಗಳಿಗೆ ಶತ್ರುವಾದವನು; ದೈತ್ಯ. 'ತ್ರಿದಶಾಹಿತಮಂತ್ರಿ' ಪರಾ. [ತ್ರಿದಶ್ಯ + ಅಹಿತ]

ತ್ರಿದಶಾಹಿತಮಂತ್ರಿ (ನಾ). ದೈತ್ಯರ ಮಂತ್ರಿ; ಶುಕ್ರ: ತ್ರಿದಶಾಹಿತ ಮಂತ್ರಿಯೊಳಿಂದಿದ ಶನಿಯಿಂ ಸ್ತೋಧನಾನ್ವಿತಂ (ಜಾತಕ. ೦೫-೭).

[ತ್ರಿದಶಾಹಿತ + ಮಂತ್ರಿ]

ತ್ರಿದಶೇಂದ್ರ (ನಾ). = ತ್ರಿದಶಗಣಾಧಿನಾಯಕ: ತ್ರಿದಶೇಂದ್ರಂಗೆ ಯುಧಿಷ್ಠಿರಾಧ್ವರದ ಮಾಸಾಮರ್ಥ್ಯಮಂ ಸೂಟುಸೂಟದೆ ಪೇಟಲ್ ವರಿವಂತೆ ಪೊಗ್ಳೆ ಪಲವುಂ ಧೂಮಂಗಳ್ (ಪಂಪಭಾ. ೬-೩೮); ತ್ರಿದಶೇಂದ್ರವಂದ್ಯ ಬಿಸಸಿನೆ ಪೊದಟ್ಟುದರ್ಹನ್ಮುಪೇಂದು ದಿವ್ಯನಿನಾದಂ (ಶಾಂತಿಪು. ೬-೩೮); ತ್ರಿದಶೇಂದ್ರಾರಾತಿ ದೈತ್ಯಂ ಧರೆಯೆನೆ ರಸೆಗಂದುಯ್ಕೆ (ಪಂಡಾಮಾ. ೧೧-೪೪). [ತ್ರಿದಶ್ಯ + ಇಂದ್ರ]

ತ್ರಿದಶೇಭ (ನಾ). ಸ್ವರ್ಗದ ಆನೆ; ಐರಾವತ: ತ್ರಿದಶೇಭಕ್ಕೆಸೆದಾದುವಂದು ವದನಂ ಮೂವತ್ತೆರಟ್ ಕೂಡೆ ತದ್ವದನವ್ಯಾತದೊಳಾದುವು ದ್ವಿರದನಂ ಪ್ರತ್ಯೇಕವೆಂಟೆಂಟು (ಪೀಮಿಪು. ೮-೦೫೩). [ತ್ರಿದಶ್ಯ + ಇಭ]

ತ್ರಿದಶೇಶ (ನಾ). ದೇವತೆಗಳ ಒಡೆಯ: ವೃಷಪಾಲಿ ತ್ರಿದಶೇಶನುಗ್ರಧನ್ವಿಗೆ . . . ಸರ್ವಜ್ಞಂಗೆ ವಾಮದೇವಂಗೆಱಗುವಂ (ಗುರುಚಾ. ೦-೨೩).

[ತ್ರಿದಶ್ಯ + ಈಶ]

ತ್ರಿದಿವ (ನಾ). ೧. ಸ್ವರ್ಗ; ದೇವಲೋಕ: "ತ್ರಿದಿವಂ . . . ದಿವಮೆಂದಿಂತಿದು ತಾನಮರ್ತ್ಯಭವನಂ" (ವಸ್ತು.ಕೋ. ೬-೩೦); ತ್ರಿದಿವ ದೊಳಚ್ಚರಸಿಯರಿರ್ವುದು ವಿದಿತಂ (ಕಾದಂಪೂ. ೭೦೬); ತ್ರಿದಿವಪ್ರಾಪ್ತ ಮನೋಹರಂ . . . ತಾನೆನುತ್ತುಂ ಸಮಂತದನಿಂತೇಳಿಪುದಿಂದ್ರನಂದನಮನಾ ಸಾರ್ವರ್ತುಕಾಖ್ಯಂ ವನಂ (ಕುಸುಮಾ. ೧-೦೦೩); ತ್ರಿದಿವವನು ತುಡುಕಿತು ಹವಿರ್ಗಂಧದ ಗಢಾವಣೆ ಧೂತಧೂಮನ ತುದಿ ತಪೋಲೋಕದಲಿ ತಳಿತುದು (ಕುಣ್ಯಾಸ. ೬-೩೪). ೨. ಆಕಾಶ; ಗಗನ: ತ್ರಿದಿವಕ್ಕೇಱಿ ದೊಡಂಬೆಯಿಂಬೆರಸು ಜೋದರ್ ಪಾಱಿ (ವರ್ಧಪು. ೭-೪೮). [ಸಂ.]

ತ್ರಿದಿವಾಂಗನೆ (ನಾ). = ತ್ರಿದಶಕನ್ನಿಕೆ: ವಿಸ್ಮರತ್ನನ್ಯಕಾರ್ಯತಿಯಂ ತಳೆದಿರ್ದಳ್ ತಾಂ ತ್ರಿದಿವಾಂಗನೆಯೋಲವಳ್ (ಪಂಚಕಂ. ೨೩೬-೦೮).

[ತ್ರಿದಿವ + ಅಂಗನೆ]

ತ್ರಿದಿವೇಶ (ನಾ). ೧. ದೇವಲೋಕದ ಒಡೆಯಂ; ಇಂದ್ರ. ೨. ದೇವತೆ. [ತ್ರಿದಿವ + ಈಶ]

ತ್ರಿದೋಷ (ನಾ). ೧. ಕಾಯಿಕ, ವಾಚಿಕ ಮತ್ತು ಮಾನಸಿಕವಾದ ಪಾಪಗಳು: ಅವಸ್ಥಾತ್ರಯಂಗಳ ಅವಗುಣವಳ್ದು ತ್ರಿದೋಷಂಗಳ ಪಲ್ಲಟಗೊಳಿಸಿ (ಅಪಾಂಡೇ. ೦೯೪-೦೪). ೨. [ವೈದ್ಯ] ವಾತ, ಪಿತ್ತ ಮಂತ್ತು ಕಫಗಳೆಂಬ ಮೂರೂ ವಿಷಮಗೊಂಡು, ಶರೀರಕ್ಕೆ ತೊಂದರೆಯನ್ನುಂಟುಮಾಡುವ ದೋಷಗಳು: ತ್ರಿದೋಷಸಮುದಿತರೋಗಂ ಸವನಿಸುಗುಂ ಮನುಜಂಗಮೃತಮಯೂಷಾಪತ್ಕದಶೆಯೊಳವರೋಹಿಣಿಯೊಳ್ (ಜಾತಕ. ೯-೨೪); ವಾಯು, ಅವಸ್ಕಾರ, ತ್ರಿದೋಷ ಹದಿಮೂಱು ಪ್ರಕಾರದ ಸನ್ನಿಪಾತ ಹರ (ವಿಕ್ರಪಿ. ೩೭); ತ್ರಿದೋಷಯುಕ್ತವಾದ ರೋಗಗಳೂ ಕಂಠರೋಗಗಳೂ ಸಹ ಗುಣವಾಗುವುವು (ಶಳವ್ಯ. ೩೯); ತ್ರಿದೋಷ ಲಕ್ಷಣ ಕಂಡಿತು (ಹೃಮಾಖ್ಯ. ೦೦೯).

[ತ್ರಿ + ದೋಷ]

ತ್ರಿದೋಷಹರ (ಗು). ತ್ರಿದೋಷಗಳಿಂದಂಟಾಗುವ ರೋಗಗಳನ್ನು ನಾಶಮಾಡುವ. [ಸಂ.]

ತ್ರಿನಯನ (ನಾ). ಮೂರು ಕಣ್ಣುಗಳನ್ನು ಉಳ್ಳವನು; ಮುಕ್ಕಣ್ಣ; ಶಿವ: ಮಣಿಗಳ ಸೂತ್ರದಂತೆ ತ್ರಿನ[ಪಾಠಾಂ. ಣ]ಯನ ನೀನಿಪ್ಪೆಯಯ್ಯ (ದೇದಾವ. ೨-೩). [ತ್ರಿ + ನಯನ]

ತ್ರಿಪಂಚಲೋಚನ (ನಾ). (ಐದು ಮುಖಗಳಲ್ಲಿ ಮೂರೂ ಮೂರರಂತೆ ಒಟ್ಟು) ಹದಿನೈದು ಕಣ್ಣುಗಳನ್ನು ಉಳ್ಳವನು; ಶಿವ: ಪಂಚಲಪನ ಮಳದ್ವಿಪಂಚಿಬಾಹುಗಳು ತ್ರಿಪಂಚಲೋಚನನಸಮ ಪಂಚಶರ ಧಸಿತಾಂಗ . . . ಉಡುಪವೌಳಿ ಮೃಡನೇ (ನವಪೋ. ೧-೭). [ಸಂ.]

ತ್ರಿಪಟಿಕ (ನಾ). ಮುಪ್ಪಟ್ಟೆಯಾಕಾರದಲ್ಲಿರುವುದು; ಮೂರು ಮೂಲೆಗಳುಳ್ಳದು: ಸೂರ್ಯನ ಕಿರಣ ಒಂದನ್ನು ಗಾಜಿನ ತ್ರಿಪಟಿಕ (Prism) ದ ಮೂಲಕ ಹಾಯಿಸಿದಾಗ ಅದು ನಾನಾ ವರ್ಣಗಳಾಗಿ ಪ್ರತ್ಯೇಕಿಸಲ್ಪಡುತ್ತದೆ (ಆಕಾಶ. ೭). [ತ್ರಿ + ಪಟಿಕ]

ತ್ರಿಪತಾಕ (ನಾ). [ನಾಟ್ಯ] ಮೂರು ಬೆರಳುಗಳನ್ನು ಬಿಚ್ಚಿರುವ ಒಂದು ಬಗೆಯ ಹಸ್ತಮುದ್ರೆ: ಮತ್ತಾ ತ್ರಿಪತಾಕಂಗಳ್ ಬತ್ತರದಿಂ ತುದಿಗಳಿಂದೆ ಕಟಿಗಳನೊಂದಲ್ . . . ವಕ್ಷವುಚಿತಮಕ್ಕುಂ (ಲಾಸ್ಯರಂ. ೨-೭೧); ನಾಟ್ಯಶಾಸ್ತ್ರದಲ್ಲಿ ಹೇಳಿರುವ ಅಸಂಯುತ ಹಸ್ತಗಳು ಯಾವುವೆಂದರೆ ೧. ಪತಾಕ ೨. ತ್ರಿಪತಾಕ (ಅಭಾಸ್ಯ. ೪೭); ಪತಾಕ, ಅರ್ಧಚಂದ್ರ, ತ್ರಿಪತಾಕ . . . ಶಿಖರಹಸ್ತ ಮೊದಲಾದ ನೂರಾರು ಹಸ್ತಮುದ್ರೆಗಳಿವೆ (ಶಾಲಶ್ರ. II, ೯೦೯). [ಸಂ.]

ತ್ರಿಪತಾಕೆ (ನಾ). ೧. ಮೂರು ಧ್ವಜಗಳು. ೨. ಮೂರು ಗೆರೆಗಳಂತೆ ಮೂರು ಮಡಿಕೆಗಳ ಗುರುತನ್ನು ಹೊಂದಿರುವ ಸ್ಥಿತಿ: ತ್ರಿಪತಾಕೆ ನಿನ್ನ ನೊಸಲೊಳ್ ತೋರ್ಪನ್ನೆಗಂ ಕೊರ್ವುದೋರ್ಪವನಾವಂ (ಮಲ್ಲಪು. ೦೪-೩೬); ತ್ರಿಪತಾಕೆ ನಿಟಿಲತಟದೊಳ್ ಕಪಿಧ್ವಜಂ ಗಗನತಲದೊಳರ್ವಿಸೆ (ಪಂಡಾಮಾ. ೦೩-೦೦೭). [ಸಂ. ತ್ರಿಪತಾಕ]

ತ್ರಿಪತ್ರ (ನಾ). ೧. (ಮೂರು ಎಲೆಗಳಿಂದ ಕೂಡಿರುವ) ಬಿಲ್ವಪತ್ರೆ ಮತ್ತು ಅದರ ಮರ; ಬೆಲ್ಲವತ್ತ: ಭವಾನಿಯ ಪಾದದಲ್ಲಿ ತ್ರಿಪತ್ರವನ್ನೊಪ್ಪಿಸಲು ಹೋದೆನು (ಕಪಾಳಿಂ. ೭೧). ೨. ಮುತ್ತುಗ; ಪಲಾಶವೃಕ್ಷ. [ಸಂ.]

ತ್ರಿಪತ್ರಕ (ನಾ). =ತ್ರಿಪತ್ರ ೨: "ಬ್ರಹ್ಮವೃಕ್ಷಃ, ಪಲಾಶಃ, ಕಿಂಶುಕಃ, ತ್ರಿಪತ್ರಕಃ – ಈ ೪ ಮುತ್ತುಗದ ವೆಸರ್" (ಹಲಾಯು. ೩೩-೪೪); "ಹೇಚಕಮಾ ತ್ರಿಪತ್ರಕಂ ಕಿಂಶುಕಾಖ್ಯಂ" (ಮುಂಗರಾ. ೩೭-೫೦). [ಸಂ.]

ತ್ರಿಪತ್ರಿಣಿ (ನಾ). ಒಂದು ಬಗೆಯ ಸಸ್ಯ: "ವಾರುಳಿ ಬಲಿರ್ಬುಧ್ನಾಕ್ಷಿ ಹಾವುಮೆಕ್ಕೆ ಹಿಡಿಹಿಡಿಕೆ ತ್ರಿಪತ್ರಿಣಿಯೆಂದಿನಿಕ್ಕುಂ" (ಮುಂಗರಾ. ೪೪-೪೪).

[ಸಂ. ತ್ರಿಪತ್ರಿಣೀ]

ತ್ರಿಪಥ (ನಾ). ೧. ಮೂರು ಮಾರ್ಗಗಳುಂ,–ದಾರಿಗಳು. ೨. ಸ್ವರ್ಗ, ಮರ್ತ್ಯ ಮತ್ತು ಪಾತಾಳ. ೩. ಮೂರು ರಸ್ತೆಗಳು ಸೇರುವ ಸ್ಥಳ,–ಜಾಗ. [ತ್ರಿ + ಪಥ]

ತ್ರಿಪಥಗಾಮಿನಿ (ನಾ). ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರು ಲೋಕಗಳಲ್ಲಿಯೂ ಹರಿಯುವವಳು; ಗಂಗಾನದಿ: ತ್ರಿಪಥಗಾಮಿನಿಯೆನಿಪ ಜಾಹ್ನವಿ ನೃಪನ ಚರಣದಲುದಿಸಿದಳು (ಕಾಶಿಂಡಿ. ೩೭-೭); ಈ ಮೂರು ಮತಗಳು ತ್ರಿಪಥಗಾಮಿನಿಯ ಹಾಗೆ ಮೂರು ಹಾದಿಯನ್ನು ಹೊಂದಿದ್ದರೂ ಮೂಲಕ್ಕೂ ಮೂಲೋದ್ದೇಶವು . . . ಕಡೆಯ ಸೂತ್ರವಾದ ಮುಕ್ತಿಯೇ (ಧಾರವ. ೩೭೦). [ಸಂ. ತ್ರಿಪಥಗಾಮಿನೀ]

ತ್ರಿಪಥಗೆ (ನಾ). = ತ್ರಿಪಥಗಾಮಿನಿ: ತ್ರಿಪಥಗೆಯ ಮೂಱು ಪೊನಲಿಂದೆ ಪೊಳೆವ ಹಿಮಗಿರಿಶಿಲಾತಳಕ್ಕಣೆಯೆನಿಸುತ್ತುಪರಚಿತರುಚಿರಭಸ್ಮತ್ರಿಪುಂಡ್ರಾಂಕಿತಲಲಾಟವಾ ಮುನಿವರನಾ (ಕಾರಂಪೂ. ೩೩೪); ಪ್ರಣಯದೆ ತ್ರಿಪಥಗೆ ನಡೆತರೆ ತ್ರಿಣೇತ್ರನೊಲವಿಂದೆ ತಾಳ್ದಿದಂ ಮಸ್ತಕದೊಳ್ (ಶಮದ. ೫೯ ಪ್ರಯೋ); ಲೋಕಪಾವನೆಯೆನಿಸುತೋರಂದದೆ ಪಾತಾಲದತ್ಕಣ್ಗೆ ಪೋದ ತ್ರಿಪಥಗೆ ಕಾಣಿಸಿಕೊಂಡಳ್ (ರಾಮಾಶ್ವ. ೩೦-೦೪).

[ಸಂ. ತ್ರಿಪಥಗಾ]

ತ್ರಿಪದ (ನಾ). ೧. ಮೂರು ಪಾದಗಳು. ೨. ಮೂರು ಪಾದಗಳನ್ನು ಉಳ್ಳುದು ; ಕಾಲುಮಣೆ : ತಿವದಿಗೆ. ೩. ಮೂರು ಭಾಗಗಳನ್ನು ಹೊಂದಿರುವುದು. ೪. ಮೂರು ಹೆಜ್ಜೆಗಳನ್ನಿಟ್ಟವನು ; ವಿಷ್ಣು. 'ತ್ರಿವಿಕ್ರಮ' ಪರಾ. [ತ್ರಿ + ಪದ್]

ತ್ರಿಪದಾರ್ಥ (ನಾ). [ವೀಶೈ] ಪಶು, ಪತಿ ಮತ್ತು ಪಾಶಗಳೆಂಬ ಮೂರು ವಿಧವಾದ ತತ್ತ್ವಗಳು : ಪತಿ-ಪಶು-ಪಾಶಗಳೆಂಬ ತತ್ತ್ವತ್ರಯಗಳೇ (ತ್ರಿಪದಾರ್ಥಗಳೇ) ಶೈವಾಗಮದ ಮೂಲತತ್ತ್ವಗಳು ... ಶೈವಾಗಮಗಳು ತ್ರಿಪದಾರ್ಥಪ್ರತಿಪಾದಕಗಳಾಗಿರುವಂತೆ . . . ಆರು ಬಗೆಯಾಗಿವೆ (ಶಾಕರ. ೬೩). [ತ್ರಿ + ಪದಾರ್ಥ]

ತ್ರಿಪದಾಸನ (ನಾ). [ತತ್ತ್ವಶಾ] ಯೋಗಾಸನಗಳಲ್ಲಿ ಒಂದು : ಯೋಗ ಯೋಗ್ಯಾಸನಗಳಲ್ಲಿ ತ್ರಿಪದಾಸನ . . . ಅರ್ಧಾಸನಾದಿಯುಂಭತ್ತಾಲ್ಯಾಸನ ಭೇದಗಳು (ವಿವೇಕ. ೧೫೦). [ತ್ರಿಪದ + ಆಸನ]

ತ್ರಿಪದಿ (ನಾ). ೧. ಮೂರು ಪಾದಗಳನ್ನು ಉಳ್ಳುದು. ೨. ಮೂರಂ ಕಾಲಿನ ಮಣೆ ; ತಿವದಿಗೆ ; ಮುಕ್ಕಾಲುಮಣೆ : "ತ್ರಿಪದಿಯೆನೆ ತಿವದಿಯಕ್ಕುಂ" (ಮುಂಗರಾ. ೬೨-೩೦). ೩. ಒಂದು ಬಗೆಯ ಸಸ್ಯ ; ಹಂಸಪಾದಿ ಗಿಡ : "ತ್ರಿಪದಿ ಧೃತಮಂಡಳಿ ಮರಾಳಪದಿಯೆನೆ ಹಂಸಪಾದಿ" (ಮುಂಗೆಂಗಾ. ೪೨-೩೯). ೪. ಆನೆಯನ್ನು ಕಟ್ಟುವ ಹಗ್ಗ : ನಂದನಭುಜಂಗವೇಷ್ಟಿತಚಂದನಮಾರ್ಗದೊಳಿಭಂಗಳೊಳ್ಕಾನೆಗಳಂತೊಂದು ತ್ರಿಪದಿಚ್ಛೇದದೊಳಂ ದಲ್ ತ[ಳ]ರದ ಪಯೋಧಿವೇಳಾವನದೊಳ್ (ಶಾಂತಿಪು. ೧೧-೩). ೫. [ಛಂದ] ಮೂರಂ ಪಾದಗಳಲ್ಲಿ ಒಟ್ಟು ಹನ್ನೊಂದು ಅಂಶಗಳಿದ್ದು, ಆರನೆಯ ಮತ್ತು ಹತ್ತನೆಯ ಗಣಗಳಲ್ಲಿ ಬ್ರಹ್ಮಗಣಗಳೂ, ಉಳಿದವುಗಳಲ್ಲಿ ವಿಷ್ಣುಗಣಗಳೂ ಇರುವ ಒಂದಂ ಕನ್ನಡ ಛಂದಸ್ಸು : ಬಿಸರುಹೋದ್ಭವಗಣಂ ರಸದಶ ಸ್ಥಾನದೊಳ್ ಬಿಸರುಹನೇತ್ರಗಣಮೆ ಬರ್ಕುಬಿದುವು ಬಿಸರುಹನೇತ್ರೇ ತ್ರಿಪದಿಗೆ (ಛಂದೋಂಬು. ೫-೩೪೭) ; ಕನ್ನಡ ಛಂದಕ್ಕೆ ಮೂಲ ತ್ರಿಪದಿ (ಛಂದೋವಿ. ೬೩). [ಸಂ. ತ್ರಿಪದೀ.]

ತ್ರಿಪದಿಕೆ (ನಾ). ೧. = ತ್ರಿಪದಿ ೨ : (ಕ). ೨. = ತ್ರಿಪದಿ ೫ : ತ್ರಿಪದಿಗೆ ತಿವದಿ, ತಿವುಡೆ, ತ್ರಿವುಡೆ, ತ್ರಿಪದಿಕಾ ಎಂಬ ಹೆಸರುಗಳೂ ಬಳಸಲ್ಪಟ್ಟಿವೆ (ಛಂದೋವಿ. ೮೮). [ಸಂ. ತ್ರಿಪದಿಕಾ]

ತ್ರಿಪದೆ (ನಾ). = ತ್ರಿಪದಿ ೫ : "ತ್ರಿಪದಾ = ತಿವದೆ" (ಶಮರ. ೩೫೮ ಪ್ರಹೋ). [ಸಂ. ತ್ರಿಪದಾ]

ತ್ರಿಪದೋನ್ನತಿ (ನಾ). [ಛಂದ] ಒಂದು ವಿಷಮವೃತ್ತದ ಹೆಸರು ; ಮೂರು ಸಾಲುಗಳಲ್ಲಿ ಮೂರಂ ಭಗಣಗಳೂ, ಒಂದು ಗಂರುವೂ. ಒಂದು ಸಾಲಿನಲ್ಲಿ ನಾಲ್ಕು ಭಗಣಗಳೂ ಬರುವ ವೃತ್ತ : ಚಂದ್ರ ಗಣತ್ರಿತಯಂ ಕಡೆಯೊಳ್ ಚಂದ್ರಧರಂ ಬರೆ ಮೂಜಿಡೆಯೊಳ್ ಚಂದ್ರ ಚತುಷ್ಕಯಮಾಗಿರೆ ಭಾವಿಸು ಚಂದ್ರಮುಖೀ ತ್ರಿಪದೋನ್ನತಿಯಂ (ಛಂದೋಂಬು. ೩-೩೧೪). [ಸಂ.]

ತ್ರಿಪರ್ಣ (ನಾ). ಬಿಲ್ವಪತ್ರೆಯಂ ವಂರ : ಬೆಂಬಣ್ಣ ಮಾಂದಳಿರಸುಗೆ ಪುನ್ನಾಗ ದಾಳಿಂಬ ತ್ರಿಪರ್ಣ ಪುಷ್ಪಗಳು . . . ಬನದಿ ರಾಜಿಸಿತು (ಕೋಚಿತ. ೪-೪೯). [ಸಂ.]

ತ್ರಿಪರ್ಣಿ (ನಾ). ೧. ಮೂರು ಎಲೆಗಳನ್ನುಳ್ಳುದು. ೨. ಕಾಡಂಹತ್ತಿಗಿಡ. ೩. ನರಿಹೊನ್ನೆಗಿಡ : "ನಿಕಾ-ತ್ರಿಪರ್ಣಿ" (ಓಷಧಿ. ೪೬) ; "ಬೃಹತ್ಪತ್ರಾ ತ್ರಿಪರ್ಣಿ" (ಓಷಧಿ. ೧೦೯). [ಸಂ. ತ್ರಿಪರ್ಣೀ]

ತ್ರಿಪಲ್ಯೋಪಮ (ನಾ). [ಜೈನ] ಮೂರು ಪಲ್ಯಗಳ ಅವಧಿ ; P ವ್ಯವಹಾರಕಲ್ಪ, ಉದ್ಧಾರಕಲ್ಪ, ಅದ್ಧಾಪಲ್ಯವೆಂಬ ಮೂರಂ ಪಲ್ಯಗಳಷ್ಟು ಕಾಲ : ಬದರೀಫಲ ಮಾತ್ರಾಹಾರಿಗಳುಮಾರೋಗ್ಯ ಶರೀರಂಗಳುಂ ಸೌಂದರಾಕಾರಂಗಳುಂ ತ್ರಿಪಲ್ಯೋಪಮಜೀವಿಗಳುಮಾಗಿ (ಆದಿಪು. ೫-೪೧ ವ); ಬದರೀಫಲಮಾತ್ರಾಹಾರರುಂ ಏಗತವಾಹಾರರುಂ . . . ತ್ರಿಪಲ್ಯೋಪಮಾಯುರ್ಜೀವರುಮಾಗಿ (ಜಾವುಂಪು. ೩೬-೩). 'ಪಲ್ಯ' ಪರಾ [ಸಂ.]

ತ್ರಿಪಾದ (ಗು). ೧. ಮೂರು ಪಾದಗಳುಳ್ಳ: ಜ್ಯೋತಿಪುರುಷನೊಬ್ಬ ಪುರುಷನು ತ್ರಿಪಾದೂರ್ಧ್ವಪುರುಷನೊಬ್ಬ ಪುರುಷನು (ಬಸವ. ೯೫೫). ೨. (ನಾ). ಮೂರು ಪಾದಗಳು : ಏಳಯ್ಕ ಬೆಳಗಾಯಿತು . . . ಛೇದಿಸಿ ಭೂಮಿ ತ್ರಿಪಾದದಿಂದಳೆಬೇಕು (ಪುರಂದ. ೫-೧೪೯-೩). ೩. ಮೂರು ಕಾಲುಗಳಿಂದ ಕೂಡಿದ ಪೀಠ ; ತ್ರಿಪದಿ : ಗ್ರೀಸದೇಶದ ಅರಿಸ್ಟಾಟಲ ನೆಂಬ ತತ್ತ್ವಜ್ಞಾನಿಯು ತಮಗೆ ತಾವೇ ನಡಿಯುವಂಥ ತ್ರಿಪಾದಗಳನ್ನು (ತೀವಟಿಗೆಗಳನ್ನು) ತನ್ನದೊಂದು ಗ್ರಂಥದಲ್ಲಿ ವರ್ಣಿಸಿದ್ದಾನೆ (ಮುಂಬಯಿ. ೬-೨೪). ೪. ಮೂರು ಪಾದಗಳಿಂದ ಕೂಡಿದುದು. ೫. ಮೂರು ಭಾಗಗಳನ್ನುಳ್ಳುದು. ೬. ತ್ರಿವಿಕ್ರಮ; ವಿಷ್ಣು. ೭. ತ್ರಿಪಾದಿ ೨.

[ತ್ರಿ + ಪಾದ]

ತ್ರಿಪಾದಿ (ನಾ). ೧. ಮೂರಂ ಕಾಲುಗಳಿಂದ ನಡೆದಂತೆ ನಡೆಯುವಿಕೆ : ಅವುಗಳ ನಡಿಗೆ ತ್ರಿಪಾದಿ-ಒಂದು ಕಡೆಯ ಪಾರ್ಶ್ವದ ಕಾಲು ಮತ್ತು ಇನ್ನೊಂದು ಕಡೆಯ ಮುಂಗಾಲು ಮತ್ತು ಹಿಂಗಾಲುಗಳನ್ನು ಏಕಕಾಲದಲ್ಲಿ ಮುಂದಿಟ್ಟು, ಉಳಿದ ಮೂರು ಕಾಲುಗಳ ಮೇಲೆ - ಶರೀರವನ್ನು ಸರಿದೂಗಿಸಿ ನಡೆಯುತ್ತವೆ (ಕೀಟಜಿ. ೧೬). ೨. [ಜ್ಯೋತಿ] ಒಂದು ರಾಶಿಗೆ ಮೂರು ಪಾದಗಳು, ಮತ್ತೊಂದು ರಾಶಿಗೆ ಉಳಿದ ಪಾದಗಳು ಸೇರುವ (ಅಮಂಗಳವೆಂದು ಪರಿಗಣಿಸಲಾದ) ಕೃತ್ತಿಕೆ, ಪುನರ್ವಸು, ಉತ್ತರೆ, ವಿಶಾಖೆ, ಉತ್ತರಾಷಾಢ ವಂತ್ತು ಪೂರ್ವಾಭಾದ್ರೆ ಎಂಬ ಆರಂ ನಕ್ಷತ್ರಗಳು. ೩. (ಆಲಂ) ನಿಂತ ಕಡೆ ನಿಲ್ಲದೆ ಸದಾ ಓಡಾಡುತ್ತಿರುವವನು; ಅಲೆಮಾರಿ : ಇಂದಿನ ಹುಡುಗರಿಗೆ ತ್ರಿಪಾದಿಯಂತೆ ಅಲೆಯುತ್ತಿರುವುದೇ ಕೆಲಸ (ಕೂಥಿ). [ಸಂ. ತ್ರಿಪಾದಿನ್]

ತ್ರಿಪಾವಡೆ (ನಾ). ಮೂರಂ ಪದರವಾಗಿ ಮಡಿಸಿದ ಬಟ್ಟೆ : ಪರ್ಣಫಲಂಗಳಲ್ಲಿ ಪುನರಪಿ ಪ್ರಕ್ಷಾಳನವ ಮಾಡಬೇಕು ಕೂಪೋದಕದಲ್ಲಿ ತ್ರಿಪಾವಡೆಯಲ್ಲಿ ಸೋದಿಸಬೇಕು (ಸರ್ವಜ್ಞ. ೧೮೯-೭೯).

[ತ್ರಿ + ಪಾವಡೆ (< ಪಾವಡ$_1$)]

ತ್ರಿಪಿಟಕ (ನಾ). [ಬೌದ್ಧ] ಸೂತ್ರಪಿಟಕ, ವಿನಯಪಿಟಕ ವಂತ್ತು ಅಭಿಧರ್ಮಪಿಟಕಗಳೆಂಬ ಬೌದ್ಧರ ಮೂರು ಪವಿತ್ರಗ್ರಂಥಗಳು : ಅನವ್ಯಾಹ್ವ . . . ಇವನು . . . ತ್ರಿಪಿಟಕಗ್ರಂಥಗಳನ್ನೂ . . . ತಂದು ಬರ್ಮಾ ಇತಿಹಾಸದಲ್ಲಿ ಸುವರ್ಣಯುಗವನ್ನು ಆರಂಭಿಸಿದ (ಶಾಕರ. ೩೪೧); ತ್ರಿಪಿಟಕ . . . ಸೂತ್ರಪಿಟಕ ವಿನಯಪಿಟಕ ಅಭಿಧರ್ಮಪಿಟಕ ಎಂಬ ಮೂರು ಪಿಟಕಗಳು (ಹಿಂದಶಾ. ೩೩); ತ್ರಿಪಿಟಕ ಬೌದ್ಧರ ಮತಗ್ರಂಥ (ಪ್ರವಾಇ. I, ೧೬೩ ಅಡಿಟಿ). [ತ್ರಿ + ಪಿಟಕ$_1$]

ತ್ರಿಪೀಡಿ (ನಾ). ಮೂರು ತಲೆಮಾರಂಗಳು, 'ತ್ರಿಪೀಡಿದಾನ' ಪರಾ.

[ತ್ರಿ + ಪೀಡಿ$_3$ (P ←ಮರಾ. ಪಿಢೀ)]

ತ್ರಿಪೀಡಿದಾನ (ನಾ). ಮೂರು ತಲೆಮಾರುಗಳು ಅನುಭವಿಸುವ ದಾನ : 'ತ್ರಿಪೀಡಿದಾನ' ಎಂಬ ಮರಾಠಿ ಪದವನ್ನು ಕೊಟ್ಟು . . . ಮೇಲಿನ ತೀರ್ಮಾನಕ್ಕೆ ಬಂದಿದ್ದಾರೆ. ವಾಸ್ತವವಾಗಿ 'ಮೂರು ತಲೆಮಾರುಗಳು ಅನುಭವಿಸುವ ದಾನ' ಎಂಬ ಅರ್ಥವೇ ಸರಿಯಾದುದು (ಕಶಾಲ. ೩೯ ಅಡಿಟಿ). [ತ್ರಿಪೀಡಿ + ದಾನ]

ತ್ರಿಪುಂಡ್ರ (ನಾ). ಹಣೆಯಂ ಮೇಲೆ ಅಡ್ಡವಾಗಿ ಧರಿಸುವ ಭಸ್ಮದ ಮೂರು ಗೆರೆಗಳು: ತದ್ಭೂತಿಯಿನಿಟ್ಟರ್ ತ್ರಿಪುಂಡ್ರಮಂ ದಿವಿಜೇಂದ್ರರ್ (ಆದಿಪು. ೧೬-೫೩) ; ಜಿನದೇಹಮಂ ಭಸಿತಮಯಮಷ್ಟನಂ

ಸಂಸ್ಕಾರಿಸಿರ್ದು ತ್ರಿಪುಂಡ್ರಮಂ ನೊಸಲೊಳಿಡೆ (ಶಾಂತಿಪು. ೧೨-೩೫); ಅಡ್ಡ ತ್ರಿಪುಂಡ್ರದ ಮಣಿಮುಕುಟದ ವೇಷದ ಶರಣರಕಂಡರೆ ನಂಬುವುದೆನ್ನ ಮನವು (ಬಸವ. ೮೮) ; ತ್ರಿಪುಂಡ್ರದ ನೊಸಲರುಣ ಪಟವೇಕಜಡೆ . . . ಎಸೆವ ನಸುನಗೆದ ಶನರುಚಿ ದೆಸೆದೆಸೆಗೆ ಪಸರಿಸೆ (ಬಸಪು. ೧-೫೩) ; ಇಬ್ಬರೂ ಲಲಾಟದಲ್ಲಿ ತ್ರಿಪುಂಡ್ರವನ್ನು ಧರಿಸಿದ್ದರು (ಝೂರಾಣಿ. ೧೫). 'ಊರ್ಧ್ವಪುಂಡ್ರ' ಪರಾ. [ತ್ರಿ + ಪುಂಡ್ರ]

ತ್ರಿಪುಂಡ್ರಕ (ನಾ). = ತ್ರಿಪುಂಡ್ರ : ತೊಳಪ್ಪ ಕಪ್ಪುರದ ಭಸ್ಮ ರಜ[ಸ್ತ್ರಿಪುಂಡ್ರ]ಕವೊಪ್ಪೆ ಪಿಂಗ ಜಟಾಳಿ ತಾವರೆಯ ಸೂತ್ರದೊಳಾದ ಜನ್ನವಿರಂ . . . ಕರವೊಡಂಬಡೆ ನೋಟಕರ್ಕಳನಾ ತಪಸ್ವಿ ಮರುಳ್ಚಿದಂ (ಪಂಪಭಾ. ೬-೮); ಪೆಱೆನೊಸಲೋಳ್ಳಸಿತ ತ್ರಿಪುಂಡ್ರಕಂ (ಕಾದಂಪು. ೨೦೪). [ತ್ರಿ + ಪುಂಡ್ರಕ]

ತ್ರಿಪುಚ್ಛ (ನಾ). [ಸಂಗೀತ] ಒಂದೇ ಸ್ವರವನ್ನು ಮೂರು ಬಾರಿ ನುಡಿಯುವಿಕೆ : ತ್ರಿಪುಚ್ಛ – ಒಂದೇ ಸ್ವರ ಮೂರುಬಾರಿ ನುಡಿಯುವುದು (ಸಂಗೀಚಂ. ೨೮). [ಸಂ.]

ತ್ರಿಪುಟ (ಗು). ೧. ಮುಮ್ಮೂಲೆಯ ; ತ್ರಿಕೋಣಾಕಾರದ. (ನಾ). ೨. ಬಾಣ. ೩. ತೀರ ; ದಡ. ೪. ಒಂದು ಹಸ್ತಪ್ರಮಾಣ ; ಒಂದು ಮೊಳ. ೫. ನೆಲಗಡಲೆಕಾಯಿ. ೬. = ತ್ರಿಪುಟಿ ೧ : ಲಯ ಭೋಗಾಧಿಕಾರಂಗಳೆಂಬ ತ್ರಿಪುಟಂಗಳು ಆತನಿಂ ಮಿಾಱಲ್ಪಟ್ಟವು (ದಶಟೀ. ೧೦೦-೯). ೭. [ಸಂಗೀತ] ಏಳು ಬಗೆಯ ತಾಳಗಳಲ್ಲಿ ಒಂದು; ಒಂದು ಲಘು, ಎರಡು ದ್ರುತಗಳಿಂದ ಕೂಡಿದ ತಾಳ : ಧ್ರುವ . . . ತ್ರಿಪುಟ ಅಟ್ಟ ಏಕವೆಂಬ ಸಪ್ತತಾಳಭೇದಂಗಳಂ (ವಿವೇಕ. ೨೩೮). [ಸಂ.]

ತ್ರಿಪುಟಿ (ನಾ). ೧. ಒಂದಕ್ಕೊಂದು ಸಂಬಂಧವುಳ್ಳ ಮೂರು ಪದಾರ್ಥಗಳು ; ಮೂರರ ಕೂಟ. ೨. [ವೀಶೈ] ಜ್ಞಾತೃ (ತಿಳಿದುಕೊಳ್ಳುವವನು), ಜ್ಞಾನ (ತಿಳಿವಳಿಕೆ), ಜ್ಞೇಯ (ತಿಳಿಯಬೇಕಾದುದು) ಎಂಬ ಮೂರರ ಕೂಟ : ದ್ರಷ್ಟೃದೃಶ್ಯ ದರ್ಶನಂಗಳೆಂಬ ತ್ರಿಪುಟೀ ಸ್ವರೂಪಮಾಗಿಯುಂ (ಮನೋವಿ. ೪-೧೨ ಟೀಕು) ; ಜ್ಞಾತೃ ಜ್ಞಾನ ಜ್ಞೇಯಗಳೆಂಬ ಮೂಱೀ ತ್ರಿಪುಟಿಯಾಗಿರ್ಪುದು (ವಿವೇಕ. ೩೩) ; ಪರಮಾನಂದಜಲವೆಂಬ ಎಸರನಿಟ್ಟು ತ್ರಿಪುಟಿಯೆಂಬ ಒಲೆಯ ಹೂಡಿ (ಅಖಂಡೇ. ೩೧೯-೬). ೩. [ವೇದಾಂತ] ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿಂದ ಕೂಡಿಕೊಂಡಿರುವುದು ; ಮಾಯೆ : ಅಱಿವುದು ತ್ರಿಪುಟಿಯ ನಿಜವನು (ಪರಬೋ. ೩-೧೭-೧೪) ; ಮಾಯೆ ತ್ರಿಪುಟಿಯ ರೂಪು (ಅಮೃತ. ೪-೫). ೪. [ಯೋಗ] ಮೂರು ನಾಡಿಗಳು ಕೂಡುವ ಸ್ಥಾನ ; ಭ್ರೂಮಧ್ಯಸ್ಥಾನ : ಉರಿವಗ್ನಿಯ ಮೇಲೆ ತಂಗಾಳಿ ಬೀಸಿದಂತೆ ತ್ರಿಪುಟಿಯ ಮೇಲೆ ಚಿದ್ಬೆಳಗು ಒಲೆದಾಡುತ್ತಿದೆ (ಘನವ. ೬೩); ತಾ ರುದ್ರನಾಗಲ್ ತ್ರಿನೇತ್ರಂಗಳಿಲ್ಲೆನಲ್ ತರಳನ ತ್ರಿಪುಟಿಯಲ್ಲಿ ಬಕೋಪು. ೬-೭೫). [ಸಂ. ತ್ರಿಪುಟೀ]

ತ್ರಿಪುಟಿಜ್ಞಾನ (ನಾ). ಜಗತ್ತು, ಜೀವ, ಶಿವ – ಈ ಮೂರು ವಸ್ತುಗಳ ಅರಿವು : ಆ ಸುಖಜಲವ ತ್ರಿಪುಟಿಜ್ಞಾನದಿಂದ ಧರಿಸುವ ವೇದಾಂತಿ ಕರ್ಮಯೋಗದಲ್ಲಿ ವರ್ತಿಸುತ್ತಿರ್ಪ ಕಾರಣ . . . ಜ್ಞಾನ ಗುರೂಪದೇಶ ವಿಲ್ಲದೆ ಹೋಯಿತ್ತೆಂಬುದೀಗ ಮಿಾವಾತ ಬಂದ ಉದಕವನೆಱೆವವರ ನಾರನು ಕಾಣೆನೆಂಬ ಶಬ್ದಕ್ಕರ್ಥ (ವಚಸಂ. ೫೬೮-೨೪ ಟೀಕು). [ತ್ರಿಪುಟಿ + ಜ್ಞಾನ]

ತ್ರಿಪುಟಿರಹಿತ (ನಾ). ಸತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ತ್ರಿಪುಟಿಯಿಂದ ದೂರನಾದವನು ; ತ್ರಿಗುಣಗಳನ್ನು ಮಿಾರಿದವನು : ತದ್ಧ್ಯಾನಕರ್ತುವೋ ತ್ರಿಪುಟಿರಹಿತನೋ ತಾನು ಮೇಣೆನಲಾಯ್ತು ಚಿತ್ತದ ಶುದ್ಧಿಯರ್ಜುನನ (ಕುಮ್ಯಾಅ. ೫-೭). [ತ್ರಿಪುಟಿ + ರಹಿತ]

ತ್ರಿಪುಟಿರೂಪು (ನಾ). (?) : ತ್ರಿಪುಟಿರೂಪಾಗಿ ತಾನೆಂಬಬ್ದಿಯೊಳ್ಪುಟ್ಟಿದ ಪರಿಮಿತರತ್ನಾಗಮಾಳಿ ಮಾಯಾಪ್ರಭಾಧಿಪನೆ ರಂಭಾಚಿತ್ರ ಗಗನ ರೂಪಾದನೆಂದನ್ಮಾತ ಚಿದ್ವಿಂಶಿಕೆಯೊಳು (ವೀಶೈಪು. ೫-೮ ಸೂಚನೆ). [?]

ತ್ರಿಪುಟೀಜ್ಞಾನ (ನಾ). = ತ್ರಿಪುಟಿಜ್ಞಾನ: ಈ ಸಂವೇದನದಲ್ಲಿ ಗ್ರಾಹ್ಯವೆಂಬ ಘಟಾದಿ ವಸ್ತುವೂ ಗ್ರಾಹಕನೆಂಬ ಜೀವಾತ್ಮವಸ್ತುವೂ ಗ್ರಹಣವೆಂಬ ಸಂವೇದನವು – ಈ ಮೂರು ತೋರುವುವು. ಈ ಸಂವೇದನವನ್ನು ತ್ರಿಪುಟೀಜ್ಞಾನವೆಂದು ಹೇಳುವರು (ಹಿಂದಸಾ. ೧೭೭). [ಸಂ.]

ತ್ರಿಪುಟೀಸ್ಥಾನ (ನಾ). ಎರಡು ಹುಬ್ಬುಗಳ ನಡುವಿನ ಪ್ರದೇಶ ; ಭ್ರೂಮಧ್ಯಸ್ಥಾನ. [ಸಂ.]

ತ್ರಿಪುಟೆ (ನಾ). ಒಂದು ಬಗೆಯ ಔಷಧಿ ಸಸ್ಯ; ತಿಗಡೆ: ಸರ್ವಾನುಭೂತಿಃ, ಸರಳಾ, ತ್ರಿಪುಟಾ, ತ್ರಿವೃತಾ . . . ರೋಚನೀ–ಈ ೭ ಕೆಚ್ಚನೇ ತಿಗಡೆಯ ಹೆಸರುಗಳು. ಬಿಳೀತಿಗಡೆ, ಭೇದಿಯಾಗುವ ಲಾಲ್‌ತಿಗಡೆ (ಸಿದ್ಧಾಂತಿ. ೧೨೦). [ಸಂ. ತ್ರಿಪುಟಾ]

ತ್ರಿಪುಡ, ತಿವುಡೆ$_2$, ತ್ರಿವಿಡಿ, ತ್ರಿವುಡೆ$_1$ (ನಾ). ೧. [ಸಂಗೀತ] ತಾಳ ಭೇದಗಳಲ್ಲಿ ಒಂದು ; ತ್ರಿಪುಟತಾಳ: ಧೃವತಾಳ ಮಟ್ಟತಾಳಂ ತ್ರಿಪುಡಂ ರೂಪಕ (ಛಂದಸ್ಸಾ. ೫-೧). **ತಿವುಡೆ$_2$** : ೧. "ತಿವುಡೆ–ತ್ರಿಪುಟ = ಒಂದು ತಾಳ" (ತದೃಕೋ. ೧೭) ; ಲೀಲಾವತೀ ಪ್ರಬಂಧದಲ್ಲಿ "ತಿವುಡೆ" ಎಂದು ಕರೆದುದು ತ್ರಿಪದಿಗೆ ಹೊಂದುವ ತ್ರಿಪುಟತಾಳದ ಗತಿಯನ್ನು ಲಕ್ಷಿಸಿಯ್ಯೆ ಆಗಿರಬೇಕು (ಸಂಶೋಧ. ೧೪೬). 'ತಿವದಿ' ಪರಾ. ೨. [ನಾಟ್ಯ] ನೃತ್ಯ ಗತಿಗಳಲ್ಲಿ ಒಂದು ಬಗೆ : ಚಿಂದು ಜಕ್ಕಡಿ ಕೋಲಚಾರಿಗಳ್ ಮೊನೆಗಾಲ್ ಕಳಾಸ ಕೈಮಱೆ ತಿವುಡೆ [ಪಾಠಾಂ. ತಿವಟ] ಮಡುಹುಮುಳ್ಳನಿತು ಭೇದಂಗಳಿಂ ನರ್ತಿಸುವ ನೃತ್ಯದಬಲಾಜನಂ ಕಣ್ಗೆಸೆದುದು (ಜಬಪು. ೨-೨೯). **ತ್ರಿವಿಡಿ** : ೧. ತ್ರಿವಿಡಿ ಚಚ್ಚರಿ ಝಂಪೆಯಟಿಯೇಕತಾಳಮಂ ವಿವರವಱಿತುಂ ತಾಳಧಾರಿಗಳು ನುಡಿಸೆ (ಪ್ರಭುಪು. ೨-೬೭). **ತ್ರಿವುಡೆ$_1$** : ೧. ನಮ್ಮ ದೇಶದ ಸಂಗೀತದಲ್ಲಿ . . . ಝಂಪೆ, ಧ್ರುಪದ, ತ್ರಿವುಡೆ . . . ಎಂಬ ಹಲವು ತಾಳಪದ್ಧತಿಗಳಿರುವುವು (ಬಾಲಪ್ರ. II, ೦೦೪೦). [<ಸಂ. ತ್ರಿಪುಟ]

ತ್ರಿಪುಡೆ 'ತಿವದಿ' ನೋ.

ತ್ರಿಪುರ (ನಾ). ತಾರಕಾಸುರನ ಮಕ್ಕಳಾದ ಮೂರುಜನ ದೈತ್ಯರು ಕಟ್ಟಿಕೊಂಡ ಮೂರು ಪಟ್ಟಣಗಳು; P ಆಕಾಶದಲ್ಲಿ ವಿದ್ಯುನ್ಮಾಲಿಯ ಕಬ್ಬಿಣದ ಪಟ್ಟಣ, ಅದಕ್ಕೂ ಮೇಲೆ ಅಂತರಿಕ್ಷದಲ್ಲಿ ಕಮಲಾಕ್ಷನ ಬೆಳ್ಳಿಪಟ್ಟಣ, ಅದಕ್ಕೂ ಮೇಲೆ ತಾರಕಾಕ್ಷನ ಚಿನ್ನದಪಟ್ಟಣ: "ತ್ರಿಪುರ ಮನೆ ದೈತ್ಯಲೋಕಂ" (ಮಂಗರಾ ೦೦-೩೨) ; ತ್ರಿಪುರಂಬೊತ್ತಿಸಿದಂತೆ ಪೊತ್ತಿ ಪೊಗೆದತ್ತೆತ್ತಂ ವಿಯನ್ಮಂಡಳು (ಪಂಪಭಾ. ೧೧-೧೭) ; ತ್ರಿಪುರಂ ಬೆಂದುದು ರುದ್ರನಿಂ ಕೃತಯುಗಪ್ರಾರಂಭದೊಳ್ (ಗದಾಯು. ೧-೩೫); ಕರುಣದಿ ಮೊಲೆಯನುಣಿಸಿದ ಬಾಲಕಿಯ ಪಿಡಿದಸುವನಪಹರಿಸಿ . . . ತ್ರಿಪುರದ[ಪಾಠಾಂ. ರ] ಲಲನೆಯರ ವ್ರತಗೆಡಿಸಿ ಕೂಡಿದ ಕೆಲಸವುತ್ತಮವಾಯ್ತು (ಹರಿಸಾ. ೩೦). ೨. ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿಯೆಂಬ ಮೂರು ಜನ ದೈತ್ಯರು. 'ತ್ರಿಪುರಾರಿ' ಪರಾ. [ತ್ರಿ + ಪುರ$_2$]

ತ್ರಿಪುರಜಯಿ (ನಾ). = ತ್ರಿಪುರಾಂತಕ : "ತ್ರಿಣೇತ್ರಂ ತ್ರಿಪುರಜಯಿ [ಗಿರೀಶಂ] . . . ವೃಷಾಂಕಂ" (ವಸ್ತುಕೋ. ೩-೧೩). [ಸಂ. ತ್ರಿಪುರಜಯಿನ್]

ತ್ರಿಪುರಭಂಜನ (ನಾ). = ತ್ರಿಪುರಗಳನ್ನು ನಾಶಪಡಿಸಿದವನು; ಶಿವ : ಕೀನಾಶವಿನಾಶಕರಂ ತ್ರಿಪುರಭಂಜನಂ . . . ಶೂಲಧರಂ ಕೈಲಾಸಕ್ಕೆ ಬಿಜಯಂಗೆಯ್ದಂ (ಗಿರಿಕ. ೧೦-೮ ವ). [ತ್ರಿಪುರ + ಭಂಜನ]

ತ್ರಿಪುರವಾಸ (ನಾ). [ಸಂಗೀತ] ಹದಿನೆಂಟು ಬಗೆಯ ಕೊಳಲುಗಳಲ್ಲಿ ಒಂದು : ಜಾತಿವಾಸ ಸಜಾತಿವಾಸ ಸುಕುಮಾರಿಕಾವಾಸ ಪಕ್ಷಾವಾಸ ಭುವನಾವಾಸ ಶ್ವೇತವಾಸ ಆದಿತ್ಯವಾಸ ರುದ್ರವಾಸ ಹರಿವಾಸ ದಿಗ್ವಾಸ ನಿಧಿವಾಸ ಋಷಿವಾಸ ಕುಮಾರವಾಸ ಅಘೋರವಾಸ ಬ್ರಹ್ಮವಾಸ ತ್ರಿಪುರ ವಾಸ ಶಿವಶಕ್ತಿವಾಸ ಭ:ವನಾಧಿಪವಾಸವೆಂಬ ಹದಿನೆಂಟು ತೆಱದ ವಾಸಂಗಳ ಲಕ್ಷಣವಱಿತು (ವಿವೇಕ. ೨೩೭). [ತ್ರಿಪುರ + ವಾಸ$_1$]

ತ್ರಿಪುರಹರ (ನಾ). ತ್ರಿಪುರಗಳನ್ನು ನಾಶಮಾಡಿದವನು ; ಶಿವ ; ವೀರಮನ್ಮಥ ತ್ರಿಪುರಹರ ಜುಜ್ಝಾರಭಟ ಜಗಜಟ್ಟಿಗಿದಿರೆ ಏಕಾರಿಯೇ ಘಡ ಭೀಮನೆನುತೈದಿತು ಭಟಸ್ತೋಮ (ಕುಮಾ. ೧೯-೮). [ಸಂ.]

ತ್ರಿಪುರಾಂತಕ (ನಾ). ತ್ರಿಪುರಗಳನ್ನು ನಾಶಮಾಡಿದವನು ; ಶಿವ : ತ್ರಿಪುರಾಂತಕನಡಿಯಂ ಕೀರ್ತಿಪ ನೆವದಿಂದಾನಱಿದವೊಲುಸಿರ್ದಂ (ಕಾದ್ಯಟ. ೧-೩೦). [ತ್ರಿಪುರ + ಅಂತಕ]

ತ್ರಿಪುರಾರಿ (ನಾ). ತಾರಕಾಕ್ಷ, ಕಮಲಾಕ್ಷ ಮತ್ತು ವಿದ್ಯುನ್ಮಾಲಿಯೆಂಬ ದೈತ್ಯರ ಶತ್ರು ; ಶಿವ : ಆ ಮಹಾರ್ಣವಂ . . . ತ್ರಿಪುರಾರಿಯಂತೆ ವಿಷ ೞರಗಧಾರಿಯುಂ . . . ಎನಿಸಿದುದು (ಜಗವಿ. ೦-೪೪ ಪ); ಆಗ ತ್ರಿಪುರಾರಿಯು ಮುಖ್ಯಗಣಗಳನ್ನು ಆ ಕೆ ಯ ಸಂಗಡ ಕೊಟ್ಟು . . . ತಂದೆಯ ಮನೆಗೆ ಕಳಿಸಿದನು (ಹರಿವಂ. ೦೫). [ತ್ರಿಪುರ + ಅರಿ$_6$]

ತ್ರಿಪುರುಷ(ನಾ). ೧$_೬$ ಮೂರಂ ತಲೆಮಾರಿನ ಜನ. 'ತ್ರಿಪುರುಷಭೋಗ' ಪರಾ. ೨. ತ್ರಿ ಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ : ಈ ಪುರುಷನಲ್ಲಾ ತ್ರಿಪುರುಷ ಗುಣತ್ರಯದ ಪುರುಷ (ಲಸಪು. ೫-೬೨). ೩. ಮೂರಂ ಪುರುಷಪ್ರಮಾಣವುಳ್ಳುದಂ ; ಮೂರು ಅಳಂಗಳ ಅಳತೆ : ಬಡಗಣ ಮೇರೆ ಈಶಾನ್ಯದ ನಿಱಿಸುಂ ಗಲ್ಲಿಂಗೆ ತ್ರಿಪುರುಷದ ನಿಲವು (ಸೌಇ. XX, ೭೪-೩೭ ; 1113). [ತ್ರಿ + ಪುರುಷ]

ತ್ರಿಪುರುಷಭೋಗ (ನಾ). ಮೂರು ತಲೆಮಾರಿನ ಜನಗಳು ಅನುಭವಿಸುವ ಭೋಗ : ತ್ರಿಭೋಗ ಎಂಬುದು ಧರ್ಮಶಾಸ್ತ್ರಗಳಲ್ಲಿ ಬರುವ ಪಾರಿಭಾಷಿಕ ಪದ.'ಮೂರು ತಲೆಮಾರುಗಳು ಅನುಭವಿಸಿದ್ದು' ಎಂದು ಅದಕ್ಕೆ ಅರ್ಥ. 'ತ್ರಿಪುರುಷಭೋಗ' ಎಂದರೂ ಇದೇ ಅರ್ಥ (ಕರ್ಣಾಲ. ೪೯ ಅಡಿಟಿ). [ತ್ರಿಪುರುಷ + ಭೋಗ$_3$]

ತ್ರಿಪ್ರದಕ್ಷಿಣೆ (ನಾ). ಮೂರು ಸಲ ಮಾಡುವ ಪ್ರದಕ್ಷಿಣೆ ; ಮೂರಂ ಸಲ ಬಲವರುವಿಕೆ : ಭೂಭುಜ ತ್ರಿಪ್ರದಕ್ಷ[ಕ್ಷಿ]ಣೆಗೈದು ಸಾಷ್ಟಾಂಗ ನೀಡಲು (ಪಜ್ಜಪು. ೭-೩೫). [ತ್ರಿ + ಪ್ರದಕ್ಷಿಣೆ]

ತ್ರಿಪ್ರಾಭೃತ (ನಾ). ೧. ಭೂವಿ, ಧನ ಮತ್ತು ವಸ್ತ್ರಗಳೆಂಬ ಮೂರಂ ಉಡುಂಗೊರೆಗಳು ೨. [ಜೈನ]ಪ್ರಶಸ್ತನೋ ಅಗಮಂ ಭಾವ ಪ್ರಾಭೃತ, ಅಪ್ರಶಸ್ತನೋ ಆಗಮಭಾವ ಪ್ರಾಭೃತ ಮತ್ತು ಗ್ರಾಂಥಿಕ ಪ್ರಾಭೃತ ಎಂಬ ಮೂರಂ ಪ್ರಾಭೃತಗಳಂ : ಅತಿಶಯತವದಿಂ ಪಡೆದೊಡೆ ಚತುರಂಗಳು ಚಾರಣರ್ಧಿಯಂ ಪದೆದರ್ಹತ್ಪ್ರತಿ ಮೆಚ್ಚಿತ್ತಂ ತ್ರಿಪ್ರಾಭೃತಮನಿನಲ್ ಕೊಂಡಕುಂದ ಮುನಿಪತಿ ಸಂದಂ (ಪುಪ್ಪಪು. ೧-೦೭). [ತ್ರಿ + ಪ್ರಾಭೃತ]

ತ್ರಿಪ್ರಾಸ (ನಾ). [ಛಂದ] ಪ್ರಾಸದಲ್ಲಿ ಒಂದು ಬಗೆ ; P ಪದ್ಯದ ಪ್ರತಿಸಾಲಿನ ಮೊದಲನೆಯ ಸ್ವರಕ್ಕೂ ನಾಲ್ಕನೆಯ ಸ್ವರಕ್ಕೂ ನಡುವೆ ಮೂರು ವ್ಯಂಜನಗಳಂ ಎಲ್ಲ ಸಾಲುಗಳಲ್ಲೂ ಬರುವುದಂ : ಕಾವ್ಯರಚನೆ ಘಟ(ಗುಚ)ತಮ(ಮೆ)[ನಿ]ಪ್ಪಾ ತ್ರಿಪ್ರಾಸಂ [ಸಲೆಯಂತಾದಿ ಪ್ರಾಸಂ] ಬೇಱೆ ನಾಲ್ಕು ತೆಱನಾಗಿರ್ಪಂ (ಕವಿಜಾ. ೩-೨೩೨). [ಸಂ.]

ತ್ರಿಫಲ (ನಾ). ನೆಲ್ಲಿ, ತಾರೆ ಮತ್ತು ಅಳಲೆಯೆಂಬ ಮೂರು ಫಲಗಳು : ಲವಂಗ, ತ್ರಿಫಲ, ತುಳಸಿ . . . ಇವುಗಳನ್ನು ನಾಲ್ಕು ತಾಲ್ಕು ತೂಕ ಚೂರ್ಣವಂ ಮಾಡಿ (ಸಳಕ್ಕ. ೭೩). [ಸಂ. ತ್ರಿಫಲಾ]

ತ್ರಿಫಲೆ, ತ್ರಿಫಳೆ (ನಾ).=ತ್ರಿಫಲ : "ಪ್ರವರ – ತ್ರಿಫಲೆ, ಕುಸ್ತುಂಬರಿ, ಲಾವಂಚ [ಲಾಮಚ]" (ಓಷಧಿ. ೯೪) ; ತ್ರಿಫಲಾ = ಅಣಿಲೆ, ನೆಲ್ಲಿ, ತಾಜಿ (ವಿಜ್ಞಾವಿ. ೫೯) ; ಒಂದೆಲಗನ ಸೊಪ್ಪು . . . ತ್ರಿಫಲೆ, ಅತಿಬಜೆ . . . ಇವುಗಳನ್ನು ಸಮಾಂಶವಾಗಿ ಅನೆಯು ಮೂತ್ರದಲ್ಲಿ ಅರೆದು (ವೈದ್ಯಸಾ. II, ೩೦). **ತ್ರಿಫಳೆ** : "ಹರೀತಕೀ, ಅಭಯಾ, ಪಥ್ಯಾ –ಈ ೩ ಅಣಿಲೆ . . . ನೆಲ್ಲಿ . . . ತಾಜಿ. ಈ ಮೂಱುಂ ಕೂಡಿದೊಡೆ ತ್ರಿಫಳಾಯೆಂಬುದು" (ಹಠಾಹು. ೧೦೦-೪೬೪). [ಸಂ. ತ್ರಿಫಲಾ]

ತ್ರಿಫಳೆ 'ತ್ರಿಫಲೆ' ನೋ.

ತ್ರಿಭುವನಬುಜಗ (ನಾ). ಒಬ್ಬಾತನ ಹೆಸರು : ಬೋಗಚಂ ಬಿಟ್ಟ ಸ್ತುತಿಯೆನ್ನೆನ್ದಡೆ ಕಿಳ್ಕಯ್ಕುವವರೊರುಮಿಟ್ಟು ಕೊಟ್ಟ ತ್ರಿಭುವನಬುಜಗನಂ ಕೈಗ್ಗಜ್ಜಿ ನೆಲನಚು × × × (ಎಕ. X, ಕೋಲಾರ. ೨೩-೫; ಸು. ೯೦೦ ?). [<ತ್ರಿಭುವನ + ಬುಜಗ$_0$]

ತ್ರಿಭಂಗ (ನಾ). [ನಾಟ್ಯ] ನಿಲ್ಲುವ ಒಂದು ಭಂಗಿ ; ಶರೀರವನ್ನು ಮೂರು ಕಡೆಗಳಲ್ಲಿ (ಕತ್ತು, ಕಟಿ ಮತ್ತು ಮೊಣಕಾಲು) ಬಾಗಿಸಿರುವ ರೀತಿ,–ಭಂಗಿ : ಮೂಱಿಡೆ ಬಳ್ಕಿದ ಶಕ್ರಚಾಪಲೀಪಯ ತೆಱದಿಂ ತ್ರಿಭಂಗದೊಳ್ನೆನೆಸಿದಿರ್ದಳಿಂ ಕಾಂತೆ ರಂಗದೊಳ್ (ಪುಪ್ಪಪು. ೯-೪೨) ; ಮೇಘಶ್ಯಾಮಳಾಂಗಂ ತ್ರಿಭಂಗದಿನಿಂಬಾಗಿರೆ . . . ತಾನಾಗಳಾಡಿದ ಳೆಂಟುಂ ನೞತೋಳ್ಗಳಂ ಪಸರಿಸುತ್ತುಂ ಕನ್ನೆ ರೋದೋಂತದೊಳ್ (ಜಗವಿ. ೩-೦೬) ; ಮುಖ್ಯವಾದ ಕೆಲವು ಭಂಗಿಗಳು – ಇವು ನಾಲ್ಕು ವಿಧವಾಗಿವೆ . . . ತ್ರಿಭಂಗ – ಮೂರು ಕಡೆ ಬಾಗುವಿಕೆ (ಅಭಾನ್ಯ. ೩೩) ; ತ್ರಿಭಂಗದಲ್ಲಿರುವ ಈ ವಿಗ್ರಹಕ್ಕೆ ಪ್ರಭಾವಳಿ . . . ಕಾಲುಬೆರಳಿನ ಉಂಗುರಗಳು ಇವೆ (ಹೊಹ್ಯವಾ. ೩೪). [ತ್ರಿ + ಭಂಗ]

ತ್ರಿಭಂಗಭಂಗಿ (ನಾ).=ತ್ರಿಭಂಗ : ದಕ್ಷಿಣದಲ್ಲಿನ ತ್ರಿಭಂಗಭಂಗಿಯಲ್ಲಿನ ದೇವಿಯರ ಪ್ರತಿಮೆಗಳು . . . ನೋಟಗಾರನ "ನೇತ್ರಕೌಮುದಿ"ಯಾಗಿ ಪರಿಣಮಿಸಿವೆ (ಭಾರದ. ೫೦೯). [ತ್ರಿಭಂಗ + ಭಂಗಿ$_3$]

ತ್ರಿಭಂಗಿ$_1$ (ನಾ). "ಸೇದುವ, ಕುಡಿಯಂವ, ತಿನ್ನುವ ಮಾದಕದ್ರವ್ಯಗಳು" (ಪಸ್ನವ. ಕ. ಕೋಶ) : ಜಂಗಮಕ್ಕೆ ತಾಂಬೂಲವ ಕೊಡದೆ ತಾ ವೀಳೆಯವ ಮಾಡಿದಡೆ ತ್ರಿಭಂಗಿಯ ಕೊಂಡ ಸಮಾನ (ಪಸ್ನವ. ಕ. ೦೨೩-೨೮೦) ; ತ್ರಿಭಂಗಿಯ ತಿಂದು ಅಂದಗೆಡುವನಗೇಕೆ ಲಿಂಗದ ಸುದ್ದಿ (ಪೋಲಿಮಾ. ೦೯-೭೭). [ತ್ರಿ + ಭಂಗಿ$_1$]

ತ್ರಿಭಂಗಿ$_2$ (ನಾ). ೧. ಮೂರು ಬಾಗುಗಳನ್ನು ಉಳ್ಳುದು. ೨. ಮಡದಿ, ಮಕ್ಕಳು ಮತ್ತು ಹಣ ಎಂಬ ಮೂರು ವಸ್ತುಗಳ ಮೇಲಿನ ವ್ಯೋಹ ; ಈಷಣತ್ರಯಂ : ಇದರಿಂದವನಱಿಯದೆ ತ್ರಿಭಂಗಿಯಲ್ಲಿ ಸಿಕ್ಕಿ ಬೆಂದವರಿಗೇಕೆ ನೀಕಳಂಕಮಲ್ಲಿಕಾರ್ಜುನಾ (ಪೋಲಿಮಾ. ೭೮-೩೦೬). ೩. = ತ್ರಿಭಂಗ : "ಪಾದಂ ಕಟಿಯ ವೃತ್ತಂ ತ್ರಿಭಂಗಿ ಬಾಗೆನಲು ನಿಲುಕಡೆಯಕ್ಕುಂ" (ಮಂಗರಾ. ೨೩-೯) ; ಸರಸಲತಾತ್ರಿಭಂಗಿಯನದಿರ್ವೆ ನಿಜಾಂಗಲತಾತ್ರಿಭಂಗಿ ಚಾಮರರುಚಿಯಂ ಕಟಾಕ್ಷ ರು ಚಿ ಯೆ ೞಿ ಸೆ ಚಾಮರವಿಕ್ಕಿದರ್ ಪಯೋಧರವತಿಯರ್ (ಆಗವಿ. ೦೦-೬೩) ; ಕನ್ಯಾಜನ ಮೊಕ್ಕುದುದರಲಸರಂ ಚಿತ್ರಿಸಿದ ತ್ರಿಭಂಗಿಯ ಚಿತ್ರದ ತೆಱನಾಗಿ (ಅಯುಕಾ. ೦೧-೫೫) ; ಮತ್ತಮೊರ್ವಳ್ ವೃತ್ತಸ್ತನೆ ಚಿತ್ರಜನ ಮತ್ತಕಾಶಿನಿಯಂತೆ ಮುತ್ತಿನ ಮತ್ತವಾರಣಮಂ ತ್ರಿಭಂಗಿಯಿಂ ನೆಮ್ಮಿ ನಿಂದು (ಹಾಜಚೇ. ೦೦-೭೬ ವ) ; ನಿಂತ ನಿ ಲು ವೆ ಲ್ಲ ವೂ ತ್ರಿಭಂಗಿಯೇ (ಮುಕ್ತ. ೫೩). [ತ್ರಿ + ಭಂಗಿ$_3$]

ತ್ರಿಭಂಗಿಭಣಿತೆ (ನಾ). ಶರೀರವನ್ನು ಮೂರು ಕಡೆಗಳಲ್ಲಿ ಬಾಗಿಸಿರುವ ರೀತಿ : ಭರದಿಂ ಸಾಷ್ಟಾಂಗವೆಱಗಿ ಬಲ್ಮಿಯಮಭೀಷ್ಟಸ್ತುತಿಗೆಯ್ದುಂ ತ್ರಿಭಂಗಿಭಣಿತೆಯಿನಿಂದ್ರಂ (ಅಪಂಪು. ೫-೦೬). [ತ್ರಿಭಂಗಿ + ಭಣಿತೆ]

ತ್ರಿಭಂಡಿ (ನಾ). ಒಂದು ಮರದ ಹೆಸರು ; ಕೆಂಪು ತಿಗಡೆಮರ.
[ಸಂ. ತ್ರಿಭಂಡೀ]

ತ್ರಿಭಿನ್ನ (ನಾ). [ಸಂಗೀತ] ಹದಿನೈದು ಬಗೆಯ ದೇಶೀ ಗಮಕಗಳಲ್ಲಿ ಒಂದು : ಕಂಪಿತ ಸ್ಫುರಿತ ಲೀನ ತ್ರಿಭಿನ್ನ ಸಪ್ತದ ಆಂದೋಳಿತ ಆಹತ ವೆಂಬೇಳು ದೇಶೀಗಮಕಂಗಳಿಂತಲುಂ ತತ್ತ್ಲಕ್ಷಣಂಗಳಂ ತಿಳಿದು (ವಿವೇಕ. ೨೬೨) ; ತ್ರಿಭಿನ್ನ – ವೀಣೆಯ ಒಂದು ಸ್ವರಸ್ಥಾನದಲ್ಲಿ ಸಾರಣೆ, ಪಂಚಮ ಮತ್ತು ಮಂದ್ರ ಅನುಮಂದ್ರ ತಂತಿಗಳ ಮೇಲೂ . . . ವಿಾಟುವುದು (ಸಂಗೀತಜಂ. ೨೬). [ಸಂ.]

ತ್ರಿಭುಜ (ನಾ). [ಗಣಿತ] ಮೂರು ಸರಳರೇಖೆಗಳಿಂದ ಕೂಡಿದ ಮೂರು ಕೋಣಗಳುಳ್ಳ ಒಂದು ಆಕೃತಿ : ಭಿನ್ನರಾಶಿಗಳನ್ನು $\frac{೫}{೬}$, $\frac{೧}{೩}$, $\frac{೩}{೭}$ ಎಂದು ಬರೆದರೆ, ಅಂಶವು (Numerator) ತ್ರಿಭುಜದ ಕರ್ಣವಾಗಿಯೂ ಛೇದವು (Denominator) ಒಂದು ಬಾಹುವಾಗಿಯೂ ಆಗುವುದು (ಗಣಿತ. ೨೩ ಅಡಿಟಿ) ; ಮೂರು ಸರಳರೇಖೆಗಳಿಂದ ಕೂಡಿದ ಕ್ಷೇತ್ರಕ್ಕೆ ತ್ರಿಭುಜವೆಂದೂ ಮುಕ್ಕೋಣವೆಂದೂ ಹೆಸರು (ಭೂಮಿಅ. ೯).
[ತ್ರಿ + ಭುಜ]

ತ್ರಿಭುವನ (ನಾ). ಸ್ವರ್ಗ, ಮರ್ತ್ಯ ಮತ್ತು ಪಾತಾಳಗಳೆಂಬ ಮೂರು ಲೋಕಗಳು : ತ್ರಿಭುವನಭೂಷಣೋಪಮೆಗೆ ಸಂಗಮದೊಳ್ ವರಭಾಗವಿಾ ಸ್ವಯಂಪ್ರಭೆಗೆ (ಶಾಂತಿಪು. ೫-೨೮) ; ತ್ರಿಭುವನಮಂಗಲ ತೋರಣನಿಭಮಂ ಪ್ರಪಚನಮನೆಯ್ದಿ (ಕಂದ್ರಪು. ೦-೦೩) ; ಈ ಪುರುಷನಲ್ಲಾ ತ್ರಿಭುವನಸ್ಥಾಪನಾಚಾರ್ಯೈಕಪುರುಷನು ಈ ಪುರುಷನೈ ತಂದನಿಂದೆಮ್ಮಂ ಸಲಹಲೆಂದು (ಬಸಪು. ೫-೬೨) ; ರಣದಲಿ ತ್ರಿಭುವನವು ರಂಜಿಸಿತು ಸವೆದುದು ಸಕಲಸನ್ನಾಹ (ಕುವಾಭೀ. ೫ ಸೂಚನೆ) ; ನಲಿಯಲಾ ತ್ರಿಭುವನಂ ಭರತನೊರೆದನು ವಚನವೇದಮಂ (ತ್ರಿರಾಮಾ. ೦೬೯-೪೭೨).
ತ್ರಿಭುವನಮಲ್ಲ = ಮೂರು ಲೋಕಗಳಲ್ಲಿಯೂ ಪ್ರಸಿದ್ಧನಾದ ಮಲ್ಲ ; ℙ ಪಶ್ಚಿಮ ಚಾಲುಕ್ಯರಲ್ಲಿ ಆರನೆಯ ವಿಕ್ರಮಾದಿತ್ಯನ ಬಿರುದು : ಆತನ ಮಗಂ ತ್ರಿಭುವನಮಲ್ಲನೆನಿಸಿದ ವಿಕ್ರಮಾದಿತ್ಯದೇವಂ (ಸೌಇಇ. XX, ೧೯-೨೩; 1015). ತ್ರಿಭುವನಮಲ್ಲದೇವ=ತ್ರಿಭುವನಮಲ್ಲ : ಸತ್ಯಾಶ್ರಯಕುಳತಿಲಕಂ ಚಾಳುಕ್ಯಾಭರಣಂ ಶ್ರೀಮತ್ ತ್ರಿಭುವನಮಲ್ಲ ದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾ ಚಂದ್ರಾರ್ಕ್ಕತಾರಂಬರಂ ಸಲುತ್ತಮಿರೆ (ಸೌಇಇ. XX, ೭೫-೪ ; 1117).
[ತ್ರಿ + ಭುವನ]

ತ್ರಿಭುವನಕರ್ತಾರ (ನಾ). ಒಬ್ಬಾತನ ಹೆಸರು : ಶ್ರೀದಿಲಿಪಯ್ಯಂ ಪೃಥಿವಿ ರಾಜ್ಯಂಗೆಯೆ ತ್ರಿಭುವನಕರ್ತಾರ ಬಟಾರರ್ತ್ತಪರಾಜ್ಯಂಗೆಯ್ಯುತ್ತಿರೆ (ಎಕ. X (8), ಮುಳಬಾ. ೩೦೬-೧ ಸು. ೮೮೦). [ತ್ರಿಭುವನ + ಕರ್ತಾರ]

ತ್ರಿಭುವನಗುರು (ನಾ). ಮೂರು ಲೋಕಗಳಿಗೂ ಗುರುವಾದವನು : ತ್ರಿಭುವನಗುರು ಪರಿನಿಷ್ಕ್ರಮಣಕಲ್ಯಾಣಶಾರದಾಗಮಪ್ರತೀಕ್ಷಣದಿವ್ಯ ಹಂಸರುಂ . . . ಬಂದು (ಆದಿಪು. ೯-೭೦ ವ). [ತ್ರಿಭುವನ + ಗುರು]

ತ್ರಿಭುವನಪತಿ (ನಾ). ಮೂರು ಲೋಕಗಳಿಗೂ ಒಡೆಯನಾದವನು : ಅಂತು ನಿರ್ವರ್ತಿತತ್ರಿಭುವನಪತಿಭವೋತ್ಸವನಾಗಿ . . . ಸುರಪತಿ ಜಗತ್ಪತಿಗೆಱಗಿ ತತ್ಪಿತೃಗಳುಮಂ ಬೀಳ್ಕೊಂಡು ಕಲ್ಪಾಮರವೃಂದಸ್ಸರಂ ನಿಜನಿವಾಸಕ್ಕೆ ಪೋದಂ (ಶಾಂತಿಪು. ೦೦-೮೨ ವ); ತ್ರಿಭುವನಪತಿಗೆ ವಿವಾಹದ ವಿಭವಂ ಕರವೆಸೆಯೆ (ನೇಮಿಪು. ೦೩-೩೦). [ತ್ರಿಭುವನ + ಪತಿ]

ತ್ರಿಭುವನಮೋಹನ (ನಾ). ಮೂರು ಲೋಕಗಳನ್ನೂ ಮೋಹಗೊಳಿಸುವಂತಹುದು : ತ್ರಿಭುವನಮೋಹನ ದೀಪಪ್ರಭೆ ನಿಜಕರ್ಣೋತ್ಪಲಾಯತಕೇಕರದೃಕ್ಪ್ರಭೆ ಪುಟ್ಟಿದಳ್ (ಕಂದ್ರಪು. ೬-೦೩).
[ತ್ರಿಭುವನ + ಮೋಹನ]

ತ್ರಿಭುವನಾಧೀಶ (ನಾ). ಮೂರು ಲೋಕಗಳ ಒಡೆಯ ; ಶಿವ : ಪನ್ನಗ ಭೂಷಣಂ ತ್ರಿಭುವನಾಧೀಶಂ ತ್ರಿತಕ್ಷಾತ್ಮಕಂ ನಿರಘಂ . . . ಗೌರೀಶ ಸೊಪ್ಪಿರ್ದಂ (ಕಲಶಂ. ೫-೩೮). [ತ್ರಿಭುವನ + ಅಧೀಶ]

ತ್ರಿಭೋಗ (ನಾ). ರಾಜ, ದೇವತೆ ಹಾಗೂ ಬ್ರಾಹ್ಮಣ –ಈ ಮೂವರು ಒಟ್ಟಿಗೆ ಅನುಭೋಗಿಸುವ ದಾನ : ಹಳ್ಳದಿಂ ಮೂಡಣ ತ್ರಿಭೋಗ ಸುಂಕ ತೇಜ ಸಾಮ್ಯ ದೇವಗ್ಗೆ ಸರ್ವ್ವಬಾಧಾಪರಿಹಾರವಾಗಿ ಕೊಟ್ಟರು (ಸೌಇಇ. XX, ೨೩-೨೭ ; 1029). 'ತ್ರಿಪುರುಷಭೋಗ' ಪರಾ.
[ತ್ರಿ + ಭೋಗ್ಯ]

ತ್ರಿಭೋಗದಾನ (ನಾ). =ತ್ರಿಭೋಗ: ರಾಜ, ದೇವತೆ ಮತ್ತು ಬ್ರಾಹ್ಮಣರು –ಈ ಮೂವರು ಅನುಭವಿಸುವ ದಾನವೇ 'ತ್ರಿಭೋಗದಾನ', 'ತ್ರಿಭಿರ್ಭುಕ್ತಂ' ಎಂದರೂ ಇದೇ ಅರ್ಥ ಎಂದು ಫ್ಲೀಟ್ ಊಹಿಸಿದ್ದಾರೆ (ಕಶಾಅ. ೩೯ ಅಡಿಟಿ). [ತ್ರಿಭೋಗ + ದಾನ]

ತ್ರಿಭೋಗಾನ್ವಯಸಿದ್ಧಿ (ನಾ). = ತ್ರಿಭೋಗಾಭ್ಯಂತರಸಿದ್ಧಿ : ಇವಂ ತ್ರಿಭೋಗಾನ್ವಯಸಿದ್ಧಿಯಿಂದಾಳ್ದನುಭವಿಸುತ್ತಮಿರೆ (ಕಳುಲ. ೦೯-೨೫ ; 1094). [ತ್ರಿಭೋಗ + ಅನ್ವಯ + ಸಿದ್ಧಿ]

ತ್ರಿಭೋಗಾಭ್ಯಂತರಸಿದ್ಧಿ (ನಾ). ರಾಜ, ದೇವತೆ ಹಾಗೂ ಬ್ರಾಹ್ಮಣರು –ಈ ಮೂವರಿಗೂ ಸಂಯುಕ್ತವಾಗಿ ಕೊಟ್ಟ ದಾನ : ಶ್ರೀಮದ್ಧು ಸೂದನದೇವಗ್ಗಂ ಅಲ್ಲಿಯ ಮಹಾಜನಂ ನಾಲ್ನೂರ್ವರ್ಗ್ಗಂ ಕಾಳಕಂ ಗಣಿಗೆಯುಂ ಪ್ರತಿಷ್ಠಂ ಮಾಡಿ ತ್ರಿಭೋಗಾಭ್ಯಂತರಸಿದ್ಧಿಯಿಂ ಸರ್ಬ್ಬನಮಸ್ಕಮಾಗೆ ಕುಡೆ ... ಪಡೆದು (ಕಶಅ. ೮-೩-೨೮೫; 1062); ಚಿಹ್ನಸಹಿತಂ ತ್ರಿಭೋಗಾಭ್ಯಂತರಸಿದ್ಧಿಯಿಂ ಸರ್ಬ್ಬನಮಸ್ಕಮಾಗೆ ಕುಡೆ ಪಡೆದು (ಕೂಲ್ಕಾಶಾ. ೩-೦೦ ; 1079) ; ಶ್ರೀಮದ್ಭುವರಾಜಂ ಮಲ್ಲಿಕಾರ್ಜ್ಜುನ ದೇವರು ತರ್ದ್ದವಾಡಿಸಾಸಿರವ ತ್ರಿಭೋಗಾಭ್ಯಂತರಸಿದ್ಧಿಯಿಂದಾಳುತ್ತಮಿರೆ (ಸೌಇಇ. XX, ೭೦-೦೬ ; 1109) ; ತ್ರಿಭೋಗಾಭ್ಯನ್ತರಸಿದ್ಧಿಯಿಂದಾಳುತ್ತಮಿರೆ (ಕಶ. II, ೦೩-೦೮ ; 1116). [ತ್ರಿಭೋಗ + ಅಭ್ಯಂತರ + ಸಿದ್ಧಿ]

ತ್ರಿಮತ (ನಾ). ದ್ವೈತ, ಅದ್ವೈತ ವಂತು ವಿಶಿಷ್ಟಾದ್ವೈತಗಳೆಂಬ ಮೂರು ಮತಗಳು. [ತ್ರಿ + ಮತ]

ತ್ರಿಮತಸ್ಥ (ಗು). ೧. ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳೆಂಬ ಮೂರು ಮತಗಳಿಗೆ ಸೇರಿದ, – ಸಂಬಂಧಪಟ್ಟ : ತ್ರಿಮತಸ್ಥ ಬ್ರಾಹ್ಮಣರು ಇಂದಂ ಸಭೆ ಸೇರಿದ್ದರು (ಕೂಡಿ). (ನಾ). ೨. ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತಗಳೆಂಬ ಮೂರು ಮತಗಳಲ್ಲಿ ಯಾವುದಾದರೂ ಒಂದು ಮತಕ್ಕೆ ಸೇರಿದವನು. [ಸಂ.]

ತ್ರಿಮದ (ನಾ). ವಿದ್ಯೆ, ಧನ ಮತ್ತು ಅಭಿಜನವೆಂಬ ಮೂರು ಅಹಂಕಾರಗಳು : ತ್ರಿಮದ ಮದನಾಂಧಕರು ರೋಷಕ್ರಮಿತಹೃದಯರು ಸಾಧುಜನಸಂಗವನು ಸೇರುವರೆಂತು (ನಿಘಾಗ. ೪-೦-೨೪).
[ತ್ರಿ + ಮದ$_1$]

ತ್ರಿಮಲ (ನಾ). ೧. ಹೊನ್ನು, ಹೆಣ್ಣು ಮತ್ತು ಮಣ್ಣುಗಳೆಂಬ ಮೂರು ವಿಧವಾದ ಮಲಗಳು : ಬಿಡುವನು ಹೊನ್ನು ಹೆಣ್ಣು ಮಣ್ಣೆಂಬ ತ್ರಿಮಲದಾಸೆಯ (ಆಕಂಡೇ. ೯೮-೩೧). ೨. [ವೀಶೈ] ಜೀವನಿಗೆ ಅಂಟಿ ಕೊಳ್ಳುವ ಆಣವ, ಮಾಯಾ ಮತ್ತು ಕಾರ್ಮಿಕಗಳೆಂಬ ಮೂರರಿ ಬಗೆಯ ಮಲಗಳು : ಶ್ರೀಕುಮಲಯಾಪ್ತಚೂಡಾರತ್ನ ತದೂಪ ಲೋಕತ್ರಯಾರಾಧ್ಯ ತ್ರಿಮಲಪ್ರಹರಣ ಸುವಿವೇಕಿ ಶಿವಸಮಯರತ್ನಾಕರ (ಏಕೋಪು. ೦-೦). [ತ್ರಿ + ಮಲ$_2$]

ತ್ರಿಮಾತ್ರ (ನಾ). [ಛಂದ] ಮೂರು ಮಾತ್ರೆಗಳಿಂದ ಕೂಡಿದುದು : ದೀರ್ಘಕ್ಕಿಂತಲೂ ಸ್ವಲ್ಪ ಕಾಲಾವಕಾಶವನ್ನು ಹೆಚ್ಚಿಗೆ ತೆಗೆದು ಕೊಳ್ಳುವುದು ; ಪ್ಲುತ: ಸ್ವರ ವ್ಯಂಜನದಿನೇಕಮಾತ್ರಮಾದೊಡೆ

ಹ್ರಸ್ವಂ, ದ್ವಿಮಾತ್ರಮಾದೊಡೆ ದೀರ್ಘಂ, ತ್ರಿಮಾತ್ರಮಾದೊಡೆ ಪ್ಲುತಂ (ಶಮುದ. ೧೦ ಪ್ಕಶಿ.). [ಸಂ.]

ತ್ರಿಮಾತ್ರಕ (ನಾ). = ತ್ರಿಮಾತ್ರ : ಹ್ರಸ್ವಮದೇಕಮಾತ್ರಕಂ ದೀರ್ಘ ಮುಭಯಮಾತ್ರಕಂ ತ್ರಿಮಾತ್ರಕಂ ಪ್ಲುತಮಕ್ಕುಂ (ಶಮುದ. ೧೦). 'ಏಕಮಾತ್ರಕ' ಪರಾ. [ಸಂ.]

ತ್ರಿಮಾತ್ರಾಗಣ (ನಾ). [ಛಂದ] ಮೂರು ಮಾತ್ರೆಗಳಿಂದ ಕೂಡಿದ ಗಣ: 'ದೇವನಾವಂ' ಎಂಬಲ್ಲಿ "ನಾ" ನಿನ ಎರಡು ಮಾತ್ರೆಗಳಲ್ಲಿ ಒಂದನ್ನು ಹಿಂದಕ್ಕೂ ಮತ್ತೊಂದನ್ನು ಮುಂದಕ್ಕೂ ಸೇರಿಸಿ ಒಂದೊಂದು ಚತುರ್ಮಾತ್ರಾಗಣವೂ ತ್ರಿಮಾತ್ರಾಗಣವೂ ಆಯಿತೆಂದು ತಿಳಿಯಬಾರದು (ಕೃವಿಡಿ. ೭೧). [ಸಂ.]

ತ್ರಿಮಾರ್ಗಗೀತ (ನಾ). [ಜೈನ] ರೂಪಸ್ತವ, ಗುಣಸ್ತವ, ಮತ್ತು ವಸ್ತುಸ್ತವವೆಂಬ ಮೂರು ಬಗೆಯ ಗೀತೆ: ಓರೂರ್ಮೆ ವಶಿತ್ವಾತಿಶಯದಿಂ ವೀತರಾಗರೂಪಗುಣವಸ್ತುವರ್ಣನಾನುಬದ್ಧತ್ರಿ ಮಾರ್ಗಗೀತಂಗಳಂ ತ್ರಿವಿಧಮಾರ್ಗಂಗಳೊಳ್ ಪಾಡಿ (ಚಂದ್ರಪು. ೯-೫೫ ಪ). [ತ್ರಿ + ಮಾರ್ಗ + ಗೀತ]

ತ್ರಿಮುಖಿ (ನಾ). ೧. ಮೂರು ಮುಖ ಅಥವಾ ವಿಭಾಗಗಳು : ಗಣಿತದ ತ್ರಿಮುಖಿಗಳಾದ ಅಂಕಗಣಿತ, ಬೀಜಗಣಿತ, ರೇಪಾಗಣಿತ – ಇವುಗಳೆಲ್ಲ ಪ್ರತ್ಯೇಕವಾಗಿ ಬೋಧನೆಯಾಗಬೇಕು (ಶಿಕ್ಷಣ. ೧೬೫). ೨. ಒಂದಂ ಬಗೆಯ ಹಸ್ತಮುದ್ರೆ. [ತ್ರಿ + ಮುಖಿ]

ತ್ರಿಮೂಢತಾನಿರಸನ (ನಾ). [ಜೈನ] ಸಮ್ಯಗ್ದರ್ಶನದ ಒಂದು ಅಂಗ ; ಲೋಕಮೂಢತೆ, ದೇವಮೂಢತೆ ಮತ್ತು ಪಾಖಂಡಿವಮೂಢತೆ ಎಂಬ ಮೂರು ಬಗೆಯ ಮೌಢ್ಯವನ್ನು ಬಿಡುವುದಂ : ಮುನಿಜನ ತನುಮಳವಿಚಿಕಿತ್ಸನವರ್ಜನಮುಂ ತ್ರಿಮೂಢತಾನಿರಸನಮುಂ ಉಪಗೂಹನಮುಂ . . . ಎಂದು ಪೇಟ್ದೀಯೆಂಟು ಗುಣಂಗಳುಂ ಸಮ್ಯಗ್ದರ್ಶನಾವಯವಂಗಳ್ (ಆದಿಪು. ೫-೫೭). [ಸಂ.]

ತ್ರಿಮೂರ್ತಿ (ನಾ). ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ : ವಿವರಿಸೆ ಯಥಾ ಶಿವಮಯಂ ವಿಷ್ಣು ವೆನಿಪಾ ನುಡಿಗಳು ತ್ರಿಮೂರ್ತಿಗಳವು (ಜಸಪು. ೫೪-೭೯); ಆಧುನಿಕ ತಿಳಿವಳಿಕೆಯ ಪ್ರಕಾರ ವಿಷ್ಣು ತ್ರಿಮೂರ್ತಿಗಳಲ್ಲಿ ಒಬ್ಬನು (ಭಾರದ. ೨೮೨). [ತ್ರಿ + ಮೂರ್ತಿ]

ತ್ರಿಮೂರ್ತ್ಯಾತ್ಮಕ (ನಾ). ೧. ಮೂರು ರೂಪಗಳಿಂದ ಕೂಡಿದಂದು : ಅಭೇದ್ಯಂ ಜಂಗಮಸ್ಥವಲವಲಾ ಜಕಾರಂ ಸಾದರದೆ ಗುರುರೂಪವಾ ಗಕಾರಂ ಮಹಾಹ್ಲಾದಲಿಂಗಂ ಮಕಾರು ಜಂಗಮಂ ಜ್ಞೇಯುವೈ ದೇವಿಯಾ ತ್ರಿಮೂರ್ತ್ಯಾತ್ಮಕಂ ಜಂಗಮಂ (ವೀಶಿಪು. ೧-೩-೩೪). ೨. ಮೂರು ರೂಪ ಗಳಿಂದ ಕೂಡಿದವನು : ಸತ್ಯಂ ಸಾತ್ವಿಕಗುಣಕೆ ಮಹಾತ್ಯಾಗಂ ರಾಜಸಕ್ಕೆ ವಿಕ್ರಮಮಧಿಕೋದ್ಧತ್ಯಂ ತಮಕ್ಕೆ ನೆಲೆಯಾಯ್ತತ್ಯಂತಂ ನೃಪನಿದೇಂ ತ್ರಿಮೂರ್ತ್ಯಾತ್ಮಕನೋ (ಪ್ರಪ್ರಪು. ೩-೬). [ಸಂ.]

ತ್ರಿಮೂರ್ತ್ಯೈಕ್ಯವಾದ (ನಾ). ಬ್ರಹ್ಮ, ವಿಷ್ಣು, ಮಹೇಶ್ವರರಲ್ಲಿ ಪರಸ್ಪರ ಭೇದವಿಲ್ಲವೆಂಬ ವಾದ : ತ್ರಿಮೂರ್ತಿಗಳಿಗೆ ಮೂರ್ತಿಭೇದವೇ ವಿನಾ ಸ್ವರೂಪಭೇದವಿಲ್ಲವೆಂಬ ತ್ರಿಮೂರ್ತ್ಯೈಕ್ಯವಾದ (ಹಂದಸಾ. ೨-೩೭). [ತ್ರಿಮೂರ್ತಿ + ಐಕ್ಯ + ವಾದ್ಯ]

ತ್ರಿಯಂಬಕ (ನಾ). ೧. ಮೂರಂ ಕಣ್ಣುಗಳನ್ನು ಉಳ್ಳವನು ; ಶಿವ ; ಮಂಕ್ಕಣ್ಣ : "ಕಡಿಗಣ್ಣಂ ತ್ರಿಯಂಬಕ [ಪಾಣಾಂ. ತ್ರ್ಯಂಬಕ] ನೆನಿಪ್ಪುದು" (ಪಚಾನಿ. ೩೧) ; ಬಾಚಿರಾಜನುದಾತ್ತಮಹಿಮನು ಮರ್ತ್ಯನೇ ಸಾಕ್ಷಾತ್ ತ್ರಿಯಂಬಕನು (ಜಸಪು. ೫೪-೮೩) ; ಇಂಬುಗೆಟ್ಟುದು ರೀತಿ ರೆಣಕೆ ತ್ರಿಯಂಬಕನನಮರಾಧಿಪನ ಕೈಕೊಂಬನೇ ಕೌರವನೆನಲು ಖತಿಗೊಂಡನಾ ಭೀಮ (ಕುಪಾಭೀ. ೦-೫೯). ೨. [ಛಂದ] ದೀರ್ಘಾಕ್ಷರ ; ಗುರು (–). ನಯದಿಂ ಗುರುವೆಂಬುದು ಕೇಳ್ ತ್ರಿಯಂಬಕಂ ಲಘು ಮುರಾಂತಕಂ (ಛಂದೋಬು. ೦-೩೬). [ತ್ರಿ + ಅಂಬಕ]

ತ್ರಿಯಂಬಕಾಸ್ತ್ರ (ನಾ). ಶಿವನ ಅಸ್ತ್ರ : ಡೊಂಬಿಯೇಕೈ ಪಾರ್ಥ ಬಯಲಾ ಡಂಬರವ ನಾವಱಿಯೆವೇ ತ್ರಿಯಂಬಕಾಸ್ತ್ರದ ಕೊಡಹವಲ್ಲಾ ನಿನ್ನ ವಿಕ್ರಮಕೆ (ಕುಪಾಕ. ೩೨-೩೨). [ತ್ರಿಯಂಬಕ + ಅಸ್ತ್ರ]

ತ್ರಿಯಕ್ಷ (ನಾ). =ತ್ರಿಯಂಬಕ ೧ : 'ತ್ರಿಯಕ್ಷವಾಹ', 'ತ್ರಿಯಕ್ಷಸಖ' ಪರಾ. [<ಸಂ. ತ್ರ್ಯಕ್ಷ]

ತ್ರಿಯಕ್ಷರ (ಗು). ೧. ಮೂರು ಅಕ್ಷರಗಳುಳ್ಳ. (ನಾ). ೨. ಮೂರು ಅಕ್ಷರಗಳನ್ನೊಳಗೊಂಡುದಂ ; ಓಂಕಾರ ; ಪ್ರಣವಾಕ್ಷರ. ೩. ಚಾಡಿ ಹೇಳುವವನು ; ಪಿಸುಣ : "ದುಸ್ಥಿತಿಪ್ರೇರಕಂ ಚಹಡಂ ತ್ರಿಯಕ್ಷರಂ ಕೊಂಡಿಯಂ" (ಪುಂಗರಾ. ೭೨-೨೩). ೪. ವಂಶದ ಚರಿತ್ರೆ ಅಥವಾ ಮೂಲದಲ್ಲಿ ಆಸಕ್ತಿಯುಳ್ಳವನು. [<ಸಂ. ತ್ರ್ಯಕ್ಷರ]

ತ್ರಿಯಕ್ಷವಾಹ (ನಾ). ಶಿವನ ವಾಹನ ; ವೃಷಭ ; ಎತ್ತು : "ಉಕ್ಷಂ . . . ತ್ರಿಯಕ್ಷವಾಹಂ ಶಾಕ್ವರಮದನದ್ವಂ ಬಲಾಧ್ಯಕ್ಷಮೂ ವೃಷಭಮಾ ಖುಷಭವಾ ಗೋ ಬಾಡಬೇಯಮೆನೆಯೆತ್ತೆನಿಕ್ಕುಂ" (ಪುಂಗರಾ ೫೩-೧). [ತ್ರಿಯಕ್ಷ + ವಾಹ]

ತ್ರಿಯಕ್ಷಸಖ (ನಾ). ಶಿವನ ಸಖ ; ಕುಬೇರ : "ರಾಜರಾಜಂ ತ್ರಿಯಕ್ಷ ಸಖನೈಳಬಿಳನರ್ಥಪಂ . . . ರಾಕ್ಷಸದ್ವಿಷನೆನೆ ಕುಬೇರನೆನಿಸಿಕ್ಕುಂ" (ಪುಂಗರಾ. ೧೬-೦೫). [ತ್ರಿಯಕ್ಷ + ಸಖ]

ತ್ರಿಯಾಮೆ (ನಾ). ಮೂರು ಜಾವಗಳನ್ನು ಉಳ್ಳುದು ; ಇರಂಳು ; ರಾತ್ರಿ : "ತಮಿ ವಾ[ಸತೇಯಿ] ಶರ್ವರಿ ತಮಿಸ್ರೆ ನಿಶ ರಜನಿ . . . ಇರುಳ್ ತಾಂ ತ್ರಿಯಾಮೆ ಯಾಮಿನಿಯಕ್ಕುಂ" (ಪಸ್ಫುಕೋ. ೦೫-೫) ; ತ್ರಿಯಾಮಾತ್ರಿತಯಂಗಳಿಂದಮಾತ್ಮಸಮಾನಶ್ರಾವಕಾಗ್ರಣಿಗಳ್ಗೆ . . . ಕುಡುವ ಸಮದತ್ರಿಯುಂ (ಆದಿಪು. ೧೫-೧೩ ಪ). ; ℙ ಒಂದಂ ಯಾಮ ಎಂದರೆ ಮೂರು ಗಂಟೆಗಳ ಅವಧಿ. [ಸಂ. ತ್ರಿಯಾಮಾ]

ತ್ರಿಯಾಯು 'ತ್ರಿಯಾಯಂಷ' ನೋ.

ತ್ರಿಯಾಯುಷ, ತ್ರಿಯಾಯಳು (ನಾ). ಮೂರಂ ಮಂಡಿ ಆಯುಷ್ಯ : ಅನುನಯಪ್ರಿಯದಿಂ ತ್ರಿಯಾಯುಷಮೆನೆ ಯಜುಸ್ಸೂಕ್ತ್ಯರ್ಥಮೊದಗಿತ್ತೆನಗೆ (ಜಸಪು. ೪೩-೭೪). ತ್ರಿಯಾಯುಃ ವರಯತ್ರಿಕಶ್ಯವಾಗಸ್ತ್ಯವಾಸಿಷ್ಠಾದಿ ಪರಮಮುನಿವರರು ಧರಿಸುತ್ತೆ, ತ್ರಿಯಾಯುವಂ ನೆರೆ ಪಡೆದ ಭಸಿತ (ಸವಕೋ. ೭-೯); ℙ ಈ ಎರಡು ರೂಪಗಳೂ ವ್ಯಾಕರಣಬದ್ಧವಲ್ಲ. [< ಸಂ. ತ್ರ್ಯಾಯುಷ]

ತ್ರಿಯುಗ (ನಾ). ೧. ಕೃತ, ತ್ರೇತಾ ಮತ್ತು ದ್ವಾಪರವೆಂಬ ಮೂರಂ ಯುಂಗಗಳು. ೨. ಈ ಮೂರಂ ಯುಂಗಗಳಲ್ಲಿ ಮಾತ್ರ ಅವತರಿಸಂ ವವನು ; ವಿಷ್ಣು : ಜ್ಞಾನಶಕ್ತ್ಯಾದಿ ಷಡ್ಗುಣ ಭರಿತನಾಗಿರ್ಪುದಱಿಂದ ತ್ರಿಯುಗನೆಂದು ಹೆಸರು (ಭಾರಣಾಂ. ೪೩). [ತ್ರಿ + ಯುಗ]

ತ್ರಿರತ್ನ (ನಾ). [ಬೌದ್ಧ] ಬುದ್ಧ, ಧರ್ಮ, ಸಂಘಗಳೆಂಬ ಮೂರು ಶ್ರೇಷ್ಠತತ್ವಗಳು : ಸ್ತೂಪ, ಧರ್ಮಚಕ್ರ ಮತ್ತು ತ್ರಿರತ್ನ ಚಿಹ್ನೆಗಳು ಇದರಲ್ಲಿ ಮುಖ್ಯವಾದುವು (ಭಾರದ. ೪೯೫) ; ತ್ರಿರತ್ನದಲ್ಲಿ ನಂಬಿಕೆ ಇಟ್ಟು ಅವನ್ನು ಆಚರಿಸಿದರೆ ಇಂಥಾ ತಪ್ಪುಸಿದ್ಧಾಂತಗಳನ್ನು ನಂಬುವ ಅವಶ್ಯಕತೆಯೇ ಇಲ್ಲ (ಪ್ರಪಾಇ. I, ೪೫೪). [ತ್ರಿ + ರತ್ನ]

ತ್ರಿರತ್ನಿ (ನಾ). ಮೂರು ಗುದ್ದುವೊಳ ಉದ್ದದ ಅಳತೆ ; ಮುಷ್ಟಿ ಹಿಡಿದ ಮೊಳಕೈ ಯಂ ಮೂರರಷ್ಟು ಅಳತೆ : ರತ್ನಪ್ರಭಾಪ್ರಥಮೇಂ ದ್ರಕದೊಳ್ ತ್ರಿರತ್ನಿತದವಸಾನಪ್ರಸ್ತಾವದೊಳ್ ಸಪ್ತಕೋದಂಡ ತ್ರಿರತ್ನಿ ಷಡಂಗುಲೋತ್ಸೇಧಮುಂ (ತತ್ತ್ಪ್ರ. ೦೨೨). [ತ್ರಿ + ರತ್ನಿ]

ತ್ರಿರಾತ್ರ (ನಾ). ೧. ಮೂರು ರಾತ್ರಿಗಳಿಂದ ಕೂಡಿದುದು ; ಮೂರು ದಿನಗಳ ಅವಧಿ : ನಾನಾವಿಧಮಂತ್ರಾನುಷ್ಠಾನಪ್ರಧಾನನುಪವಾಸದಿಂ ತ್ರಿರಾತ್ರಮನಿರ್ದಂ (ಆದಿಪು.೧೨-೭೪). ೨. ಮೂರು ರಾತ್ರಿಗಳಲ್ಲಿ ಮಾಡುವ ಒಂದು ವ್ರತ. [ಸಂ.]

ತ್ರಿರೇಖೆ (ನಾ). ೧ ಮೂರು ರೇಖೆಗಳು : ನಳನಳಿಪ ನವಕಂಬುಕಾಂತಿಗೆ ನೆಲೆಯೆನಿಸಿತಲ್ಲಾ ತ್ರಿರೇ[ಪಾಣಾಂ. ರೇ]ಖಾಕಲಿತವಿಳಸಿತಕಂಧರಂ (ಬಸಪು. ೪-೨೩). ೨. ಶಂಖ. 'ತ್ರಿಣೇಕೆ' ಪರಾ. [ಸಂ.]

ತ್ರಿಲಿಂಗ (ನಾ). ೧. [ವ್ಯಾಕ] ಪುಲ್ಲಿಂಗ, ಸ್ತ್ರೀಲಿಂಗ ಮತ್ತು ನಪುಂಸಕ ಲಿಂಗಗಳೆಂಬ ಮೂರು ಲಿಂಗಗಳು: ಅವ್ಯಯಲಿಂಗಂ ಸರಿ ಸರ್ವವಿಭಕ್ತಿಗಂ ತ್ರಿಲಿಂಗಕ್ಕಂ ತಾಂ ಸರಿ ವಚನತ್ರಿತಯಕ್ಕಂ ಸರಿಯೆನಿಸಿ ಏಕಾರಮಿಲ್ಲದರ್ಥ ಮನೀಗುಂ (ಕಮಾದ. ೯೦); ೨. ಮೂರು ಲಿಂಗಗಳಲ್ಲಿಯೂ ಪ್ರಯೋಗ ವಾಗುವ ಶಬ್ದ ; ಗುಣವಾಚಕ. ೩. ಆಂಧ್ರ ಪ್ರದೇಶ: ℘ ಆಂಧ್ರ ಪ್ರದೇಶಗಳಲ್ಲಿ ಶ್ರೀಶೈಲ, ದಕ್ಷಾರಾಮ, ಕಾಳೇಶ್ವರ ಎಂಬ ಮೂರು ಲಿಂಗಗಳು ಇರುವುದರಿಂದ 'ತ್ರಿಲಿಂಗ'ವೆಂದು ಹೆಸರು. ಕೆಲವರು ವಿದ್ವಾಂಸರು 'ತ್ರಿಲಿಂಗ' ಎಂಬುದು 'ತ್ರಿಕಲಿಂಗ' ಎಂಬ ಶಬ್ದದಿಂದ ವ್ಯುತ್ಪನ್ನವಾಗಿದೆಯೆಂದು ಅಭಿಪ್ರಾಯ ಪಡುತ್ತಾರೆ. [ತ್ರಿ + ಲಿಂಗ]

ತ್ರಿಲೇಖೆ (ನಾ). = ತ್ರಿರೇಖೆ: ನಳನಳಿಪ ನವಕಂಬುಕಾಂತಿಗೆ ನೆಲೆಯೆನಿಸಿತಲ್ಲಾ ತ್ರಿಲೇ[ಪಾಣಾಂ. ರೇ]ಖಾಕಲಿತವಿಳಸಿತಕಂಧರಂ ಬಲದೇವನಂದನೆಯ (ಬಸಪು. ೪-೨೩). [ತ್ರಿ + ಲೇಖೆ]

ತ್ರಿಲೋಕ, ತ್ರಿಳೋಕ (ನಾ). =ತ್ರಿಭುವನ : ತ್ರಿಲೋಕಮಂ ಕಂಡು ಬಸಕೆ ಬರಿಸುವನೆಂತುಂ (ಕವಿಕಾ. ೩-೧೩೧); ಸಂಖ್ಯಾವಾಚಿ ಸಮಾಸಕ್ಕೆ–ಏಕಾಂಗ, ದ್ವಿಮುಖ, ತ್ರಿಲೋಕ, ಚತುರ್ವೇದ (ಕಮಾದ. ೮೩ ಪ್ರಯೋ). 'ತ್ರಿಲೋಕ ಗುರು' 'ತ್ರಿಲೋಕೇಶ್ವರ' ಪರಾ. **ತ್ರಿಳೋಕ :** ಆ ತ್ರಿಳೋಕತಿಳಕನ ಜನ್ಮೋತ್ಸವದೊಳ್ (ಆದಿಪು. ೭-೩೬ ವ); ಅಂತಕನಳವಂ ತ್ರಿಳೋಕದಟ್ಟಿವಂ ಪರಿಭಾವಿಸಿ ದೇವ ನೀಂ ಬರಂ ಪ್ರಕೃತಿಗಳಿಂಟುಮಂ ಕಿಡಿಸುವುಜ್ಜುಗದೊಳ್ ತಜಿಸಂದರಾರ್ (ಪುಗ್ಗಿಪು. ೧೩-೧೬೨). [ತ್ರಿ + ಲೋಕ]

ತ್ರಿಲೋಕಗುರು (ನಾ). ಮೂರು ಲೋಕಗಳ ಗುರು ; ಪರಮಾತ್ಮ; ಪರಮೇಶ್ವರ : "ಪರಮೇಷ್ಠಿ ಪರಂಜ್ಯೋತಿ ಸ್ವರೂಪನಾಪ್ತಂ ತ್ರಿಲೋಕ ಗುರು ಸರ್ವಜ್ಞಂ . . . ಜನೇಶ್ವರಂ ತೀರ್ಥಕರಂ" (ಪಸ್ತುಕೋ. ೨-೮); ತ್ರಿಲೋಕಗುರುವೆಂಬ ಪೆಂಪಂತುಟೇಂ (ಆದಿಪು. ೧೩-೮೭).

[ತ್ರಿಲೋಕ + ಗುರು೨]

ತ್ರಿಲೋಕಚೂಡಾಮಣಿ (ನಾ). ಮೂರೂ ಲೋಕಗಳಿಗೂ ಶಿರೋ ಭೂಷಣನಾದವನು ; ಅತಿಶ್ರೇಷ್ಠ ; ಜಿನ : ತ್ರಿಲೋಕಚೂಡಾಮಣಿ ಯುದಯದೊಳ್ . . . ದೇವಲೋಕದೊಳ್ ಶಂಖಪಟಹ ಕಂಠೀರವ ಘಂಟಾರವಂಗಳೊರ್ಮೊದಲೆಸವುದುಂ (ಶಾಂತಿಪು. ೧೦-೧ ವ).

[ತ್ರಿಲೋಕ + ಚೂಡಾಮಣಿ]

ತ್ರಿಲೋಕಜನನಿ (ನಾ). ಮೂರು ಲೋಕಗಳಿಗೂ ತಾಯಿ ; ತೀರ್ಥಂಕರನ ತಾಯಿ : ಗುಣಶೀಲವ್ರಾತದ ಮೇಗಣಾಯಮಾಯತಿಯ ಮೇಗಣಜಿ ವಜಿವಿನ ಮೇಗಣ ರೂಪುಂ ರೂಪಿನ ಮೇಗಣ ಕಾಂತತೆಯಾ ತ್ರಿಲೋಕ ಜನನಿಗೆ ಸಹಜಂ (ಶಾಂತಿಪು. ೯-೧೫೬). [ಸಂ.]

ತ್ರಿಲೋಕಪ್ರಭು (ನಾ). =ತ್ರಿಲೋಕಾಧಿಪತಿ : ಸರ್ವಲೋಕಪ್ರಿಯನಪ್ಪ ಮೇಘರಥ [ನಾ ಮುನಿಗಾನತನಾದೆಂ ತ್ರಿಲೋಕಪ್ರಭುವಪ್ಪನಾತನೆನೆ] (ಶಾಂತಿಪು. ೯-೯೭). [ತ್ರಿಲೋಕ + ಪ್ರಭು]

ತ್ರಿಲೋಕಾಂಬಿಕೆ (ನಾ). = ತ್ರಿಲೋಕಜನನಿ : ಜನಚಂದ್ರಂ . . . ತ್ರಿಲೋಕಾಂಬಿಕೆಯ ಗರ್ಭಕ್ಕವತರಿಸಿ ಪ್ರವರ್ಧಮಾನದಶಾಧೀಕನಿರೆ (ಶಾಂತಿಪು. ೯-೨೧೨ ವ). [ಸಂ.]

ತ್ರಿಲೋಕಾಧಿಪತಿ (ನಾ). ಮೂರು ಲೋಕಗಳ ಒಡೆಯ: ತ್ರಿಲೋಕಾಧಿಪತಿ ನೋಡೆ ನಾಟ್ಯರಸಕೂಪಾರಂ ಪೇರೆದಪ್ಪ ಕಪ್ಪಂಗವಿಯಾಗಿ ಕವಿಯೆ (ಶಾಂತಿಪು. ೧೦-೬೨ ವ). [ತ್ರಿಲೋಕ + ಅಧಿಪತಿ]

ತ್ರಿಲೋಕಿ (ನಾ). ಮೂರು ಲೋಕಗಳು : ಶಶ್ವತ್ತ್ರಿಲೋಕೀ ಪ್ರಣುತನುಮತಿವಿಖ್ಯಾತನುಂ . . . ಪರಮಬ್ರಹ್ಮಸದ್ಮಕ್ಕೆ ಸಂದಂ (ಆದಿಪು. ೧೭-೫೦) ; ಕಾಮತ್ರಿಲೋಕೀಜಯಾಕರಶಾತಾಸಿಲತಾಳಿಯೋ ಬಗೆವೊಡಂ ಬಂತಿರ್ದುದಿಂದ್ವಂಕಕರ್ಬುರಕಾಯಂ ಶಬರೀಚಯಂ ನೆರೆದು ವಾನಕ್ರೀಡೆಯೊಳ್ ನಾಡೆಯುಂ (ಚಂದ್ರಪು. ೫-೫೬). [ಸಂ. ತ್ರಿಲೋಕೀ]

ತ್ರಿಲೋಕೇಶ (ನಾ). = ತ್ರಿಲೋಕಾಧಿಪತಿ: "ಜನೇಂದ್ರಃ . . . ತ್ರಿಲೋಕೇಶಃ ತ್ರಿಕಾಲವಿತ್ – ಈ ರ್ ಜಿನೇಶ್ವರನ ಪೆಸರ್" (ಹಲಾಯು. ೧೫-೮೬).

[ತ್ರಿಲೋಕ + ಈಶ]

ತ್ರಿಲೋಕೇಶ್ವರ (ನಾ). =ತ್ರಿಲೋಕಾಧಿಪತಿ : ವಾಕ್ಯವೇಷ್ಪನಸಂಧಿಗೆ – ನ ದೇವಚರಿತಂಚರನೆನಿಸಿದಯ್ ತ್ರಿಲೋಕೇಶ್ವರಾ (ಕಮಾದ. ೬೧ ಪ್ರಯೋ).

[ತ್ರಿಲೋಕ + ಈಶ್ವರ]

ತ್ರಿಲೋಕ್ಯೈಕಚೂಡಾಮಣಿ (ನಾ). ಮೂರು ಲೋಕಗಳಲ್ಲೆಲ್ಲ ಶ್ರೇಷ್ಠ ನೆನಿಸಿದವನು : ತ್ರಿಲೋಕ್ಯೈಕಚೂಡಾಮಣಿಗಳ್ಸಿದ್ಧರ್ ಸ್ವಕೀಯ ಪ್ರಭುತೆ ಯನೆಮಗಂ ಮಾಭ್ಯತಿ ಪ್ರೀತಿಯಿಂದಂ (ಆದಿಪು. ೦-೨).

[ತ್ರಿಲೋಕ + ಏಕ + ಚೂಡಾಮಣಿ]

ತ್ರಿಲೋಚನ (ವಾ).=ತ್ರಿನಯನ: ತತ್ ತ್ರಿಲೋಚನನ ಗಾತ್ರವಾಗಿರುತಿಪ್ಪ ಮಾನಸಗಾತ್ರನಾಗೆಸದಿಪ್ಪ ಸದ್ಗುರುಗಾತ್ರವಲ್ಲಾ ಜಗಕೆ ಗುರುಸ್ನೇಹಿತ ರಾದವರು (ಬಸಪು. ೩೪-೭೧). [ತ್ರಿ + ಲೋಚನ]

ತ್ರಿವಚನ (ನಾ). [ವ್ಯಾಕ] ಏಕವಚನ, ದ್ವಿವಚನ ಮತ್ತು ಬಹುವಚನ ಗಳೆಂಬ ಮೂರು ವಚನಗಳು : ದ ದಪಾದಿಗಿದಾಗಮಮಪ್ಪುದು ವತ್ತಕ್ಕಿಲ್ಲದುಂ ತ್ರಿವಚನಾನುಗತಂ (ಕಮಾದ. ೩೩೧). [ತ್ರಿ + ವಚನ]

ತ್ರಿವದಿ 'ತಿವದಿ' ನೋ.

ತ್ರಿವರ್ಗ (ನಾ). ೧. ಮೂರರ ಸಮುದಾಯ,–ಸಮೂಹ: ಮೂಱಿನಿಪ ತ್ರಿಪುಟಿಯ ತ್ರಿವರ್ಗದ ತ್ರಿಕರಣಂಗಳನು . . . ಮೂಱು ಗತಿಗಳ ವಿಾಟಿ ತೋಱುವ ತುರ್ಯವೆ ಪರಮಾತ್ಮಪದ (ಅಮೃತ. ೭-೨೨). ೨. ಧರ್ಮ, ಅರ್ಥ ಮತ್ತು ಕಾಮಗಳೆಂಬ ಮೂರು ಪುರುಷಾರ್ಥಗಳು : ರಾಜ ಧರ್ಮವ ಸಲೆ ತ್ರಿವರ್ಗವ ಹೆಚ್ಚಿಸುವವಗ್ಗಳವೆನಿಪ ಮೋಕ್ಷಕೆ ತಾನೇ ಹೇತು ವಾಗಿಹುದು (ತಿಮ್ಮಕಾ. ೨-೭೦) ; ಅನುಜರಂ . . . ತ್ರಿವರ್ಗಮಂ ಕಾಂಬಂತೆ ಕಾಣುತ್ತಮಸುಪಮಪ್ರೀತಿಯಿಂ (ಶಾಪರಾ. ೨-೨). ೩. [ರಾಜನೀ] ರಾಜ್ಯದ ವೃದ್ಧಿ, ಸ್ಥಿತಿ ಮತ್ತು ಕ್ಷಯಗಳೆಂಬ ಮೂರು ಸ್ಥಿತಿಗಳು : "ಕ್ಷಯ, ಸ್ಥಾನ, ವೃದ್ಧಿಗಳು ಮೂರನ್ನೂ ತ್ರಿವರ್ಗವೆಂದು ನೀತಿಜ್ಞರು ಹೇಳುವರು" (ಸಿದ್ಧಾಂತಿ. ೩೦೭); ತ್ರಿವರ್ಗಮಂ ಸಮಾಕರಿಸಿಯುಂ . . . ಸಾಮ್ರಾಜ್ಯಪಂ ನಿಷ್ಕಂಟಕಮುಂ ನಿರಾತಂಕಮುಂ ನಿಜಾಯತ್ತ ಮುಮೆನಿಸಿದಂ (ಚಂದ್ರಪು. ೨-೭೧). [ತ್ರಿ + ವರ್ಗ]

ತ್ರಿವರ್ಗವಾದಿ (ನಾ). ಧರ್ಮ, ಅರ್ಥ ಮತ್ತು ಕಾಮಗಳಷ್ಟೆ ಮಾತ್ರವೇ ಪುರುಷಾರ್ಥಗಳೆಂದು ವಾದಿಸುವವನು : ಧರ್ಮ ಅರ್ಥ ಕಾಮ ಎಂಬ ತ್ರಿವರ್ಗವಾದಿಗಳು ಕೆಲವರೂ, ಮೋಕ್ಷವನ್ನೂ ಸೇರಿಸಿ ಚತುರ್ವರ್ಗವಾದಿಗಳು ಕೆಲವರೆಂದೂ ನಿರ್ಣಯವಾಗುತ್ತದೆ (ಹಿಂದಸಾ. ೧೫೩). [ಸಂ. ತ್ರಿವರ್ಗವಾದಿನ್]

ತ್ರಿವರ್ಣ (ನಾ). ಮೂರು ವಿಧವಾದ ಬಣ್ಣಗಳು : ಸುಜಿವ ಪುರಾಳ ಯಾನೆಚುರಪಾಂಗಮರೀಚಿಚಯಂ ತ್ರಿವರ್ಣಮಂ ಗಟ್ಟಿಯಿಸೆ (ಚಂದ್ರಪು. ೭-೧೦೭) ; ಸರಿಯಾದ ಬಣ್ಣದ ತ್ರಿವರ್ಣ ಪುಸಿಯಿಂದ . . . ಮುದ್ರಿಸ ಬೇಕು (ಮುದ್ರಕ. ೬೮). [ತ್ರಿ + ವರ್ಣ]

ತ್ರಿವರ್ಣಧ್ವಜ (ನಾ). ೧. ಮೂರು ಬಣ್ಣಗಳುಳ್ಳ ಬಾವುಟ; ೨. (ಅಶೋಕಚಕ್ರ ಸಂಕೇತದಿಂದ ಕೂಡಿದ) ಹಸಿರು, ಬಿಳಿ ಮತ್ತು ಕೇಸರಿ ಮೂರು ಬಣ್ಣಗಳಿಂದ ಕೂಡಿದ ಬಾವುಟ; ಭಾರತದ ಬಾವುಟ: ಮನೆ ಮನೆಗಳ ಮೇಲೂ ತ್ರಿವರ್ಣಧ್ವಜ, ತಳಿರು ತೋರಣಗಳ ಅಲಂಕಾರ (ಆತ್ಮಾರ್ಪ. ೧೩೨). [ತ್ರಿವರ್ಣ + ಧ್ವಜ]

ತ್ರಿವರ್ಣಮುದ್ರಣ (ನಾ). (ಚಿತ್ರ ಮುಂತಾದುವುಗಳನ್ನು) ಮೂರು ಬೇರೆ ಬೇರೆ ಬಣ್ಣಗಳಿಂದ ಕೂಡಿರುವಂತೆ ಅಚ್ಚುಮಾಡಿರುವುದು,–ಮುದ್ರಿಸಿರುವುದು: ಈ ಬಣ್ಣಗಳಲ್ಲಿ ಯಾವ ಎರಡನ್ನಾದರೂ ವಿವಿಧ ಪ್ರಮಾಣಗಳಲ್ಲಿ ಬೆರಸಿ ಯಾವ ಬಣ್ಣವನ್ನು ಬೇಕಾದರೂ ತಯಾರಿಸಬಹುದು. ಈ ತತ್ವವೇ ತ್ರಿವರ್ಣ ಮುದ್ರಣದ ಆಧಾರ (ಮುದ್ರಕ. ೬೭); ನಿನ್ನೆ ಬಿಡುಗಡೆಯಾದ ಆ ಪುಸ್ತಕದ ಮುಖಪುಟವು ತ್ರಿವರ್ಣಮುದ್ರಣದಿಂದ ಕೂಡಿದ್ದು ನೋಡಲು ಆಕರ್ಷಕವಾಗಿದೆ (ರೂಢಿ). [ತ್ರಿವರ್ಣ + ಮುದ್ರಣ]

ತ್ರಿವಲಿ$_1$, ತ್ರಿವಳಿ$_1$ (ನಾ). ೧. (ಸ್ತ್ರೀಯ) ನಾಭಿಯ ಮೇಲೆ ಅಡ್ಡಲಾಗಿರುವ ಮೂರು ಮಡಿಕೆಗಳು. ತ್ರಿವಳಿ$_1$: ೧. ಮಧ್ಯಸ್ಥಂಗಳಾಗಿರ್ದು ವಕ್ಕಲೆಯಲ್ ತಕ್ಕುದೆ ಕೆನ್ನಮಾ ತ್ರಿವಳಿಗಳ್ಗೆನ್ನಂ ಸರೋಜಾಕ್ಷಿಯಾ (ಪಂಪಭಾ. ೪-೭೪); ತ್ರಿವಳಿ ಮೈಗರೆಯೆ ಹೊಕ್ಕುಳ ಗುಣ್ಪು ಹೊಱಸೂಸೆ (ಬಸರ. ೦-೧೦೭); ಬಸಿಱ್ ಬಳೆಯೆ, ತ್ರಿವಳಿಗಳಟಿಯೆ, ಮೊಗಂ ತೆಱಂಬೊಳೆಯೆ . . . ಸೀತೆ ಬಸಿಱಿಯಾದಳ್ (ರಾಮಾಶ್ವ. ೨೦-೭). ೨. ಬೆನ್ನಿನ ಮೇಲೆ ಮೂರು ಗೆರೆಗಳನ್ನುಳ್ಳುದು; ಅಳಿಲು: "ತರುಕುಟಿ ತ್ರಿವಳಿಯೆನಲಣಿಲದು" (ಮಂಗರಾ. ೪೯-೧೩). ೩. ಒಂದು ಬಗೆಯ ವಸ್ತ್ರ; ಮೂರು ಗೆರೆಯಂಚಿನ ಸೀರೆ: ಸಂಧ್ಯಾರಾಗಂ ತ್ರಿವಳಿ . . . ತೆಳುಗಾವಿಯೆಂಬಾ ಸೀರೆಗಳಂ ಸತಿಯರೊಲೆಯೊಳುರುಪಿದರ್ (ತ್ರಿಪುವಿ. ೧೦-೨೮). ೪. ಮೂರೆಳೆಯ ಹಾರ: ಕೊರಳೊಳು ತ್ರಿವಳಿ ನ್ಯಾವಳಿ ತಾಯಿತು ಸರಪಳಿಯ ಪದಕ ಪ್ರವಳ ಮುತ್ತಿನ ಸರಪಳಿಗಳು ತೂಗಲು (ವಿದಾಕ್ಕ. ೭೧-೨). 'ತಿವಳಿ$_1$' ಪರಾ. [ತ್ರಿ + ವಲಿ]

ತ್ರಿವಲಿ$_2$, ತ್ರಿವಳಿ$_2$ (ನಾ). ಒಂದು ಬಗೆಯ ವಾದ್ಯ. ತ್ರಿವಳಿ$_2$. ತ್ರಿವಲೀತೂರ್ಯನಿರ್ಘೋಷಣ, ತ್ರಿವಳಿತೂರ್ಯನಿರ್ಘೋಷಣ = ತ್ರಿವಳಿಯೇ ಮೊದಲಾದ ಪಂಚ ಮಹಾವಾದ್ಯಗಳ ಮರ್ಯಾದೆಯುಳ್ಳವನು; ಒಂದು ಬಿರುದು: ತ್ರಿವಲೀತೂರ್ಯನಿರ್ಘೋಷಣೋ ರಟ್ಟಕುಲಭೂಷಣಃ (ಇಆ. XIX, ೨೪೭-೮೭; 1208); ಲತ್ತನೂರ ಪುರವರಾಧೀಸ್ವ[ಶ್ವ]ರಂ ತ್ರಿವಳಿತೂರ್ಯನಿರ್ಘೋಷಣಂ ಱಟ್ಟಕುಳ ಭೂಷಣಂ ಮಂಡಳಿಕಗಂಡ ತಳಪ್ರಹಾರಿ ಬಿರುದಂಕಮಾರಿ (ಕೊಲ್ಲಾಶಾ. ೨೨-೨೨; 1209). 'ತಿವಳಿ$_2$' ಪರಾ.

[ಸಂ. ತ್ರಿವಲೀ]

ತ್ರಿವಳಿ$_1$ 'ತ್ರಿವಲಿ$_1$' ನೋ.

ತ್ರಿವಳಿ$_2$ 'ತ್ರಿವಲಿ$_2$' ನೋ.

ತ್ರಿವಳೆ 'ತಿವಳಿ$_2$' ನೋ.

ತ್ರಿವಾತ (ನಾ). [ಜೈನ] ಲೋಕವನ್ನು ಹೊರಭಾಗದಲ್ಲಿ ಸುತ್ತಿಕೊಂಡಿರುವ ವಾತ, ಘನವಾತ ಮತ್ತು ತನುವಾತಗಳೆಂಬ ಮೂರು ಗಾಳಿಯ ಆವರಣಗಳು: ನುತವೇತ್ರಾಸನ ಝಲ್ಲರೀಮೃದುಮೃದಂ ಗಾಭಂ ತ್ರಿವಾತಾಭಿವೇಷ್ಟಿತಮುತ್ಪತ್ತಿಲಯೇತರಂ . . . ಜಗತ್ತ್ರಿತಯಂ ನಿಂದುದು ತಾನನಾದ್ಯನಿಧನಂ ಸ್ವಾಭಾವಿಕನ್ಯಾಯದಿಂ (ಸುಕುಮಾ. ೧೧-೪೧). [ತ್ರಿ + ವಾತ]

ತ್ರಿವಾರ (ಅ). ೧. ಮೂರು ಸಲ; ಮೂರು ಬಾರಿ. ೨. ನಿಶ್ಚಿತವಾಗಿ; ಖಚಿತವಾಗಿ: ಅಕ್ಷರಶಃ ನಿಜ, ತ್ರಿವಾರ ನಿಜ (ಪರಿಲ. ೭೧); ನನ್ನ ಈ ಪ್ರತಿಜ್ಞೆಯು ತ್ರಿವಾರ ಸತ್ಯವಾಗಿರುವುದು (ತುಳಸೀ. ೪೩). [ಸಂ.]

ತ್ರಿವಿಕ್ರಮ (ನಾ). ತನ್ನ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನೂ ವ್ಯಾಪಿಸಿದವನು; ವಾಮನ; ವಿಷ್ಣು: "ಶ್ರೀವತ್ಸಂ . . . ತ್ರಿವಿಕ್ರಮನವಂ ದಾಮೋದರಂ . . . ಸುಪರ್ಣಧ್ವಜಂ" (ವಸ್ತುಕೋ. ೪-೨೨); ಕೌಸ್ತುಭರತ್ನಮಂತದಲ್ಲದು ಕರಚಕ್ರವಲ್ಲದದು ನಾಭಿಸರೋಜಮೆನಲ್ ದಿನೇಶಬಿಂಬದ ನೆಲೆ ತಗ್ಗಿತಪ್ಪಿನಮನುಕ್ರಮದಿಂ ಬಳೆದಂ ತ್ರಿವಿಕ್ರಮಂ (ಅರ್ಧನೇ. ೬-೨೬); ರಂಗ ಬಾರೋ . . . ತ್ರಿವಿಕ್ರಮ ಬಾರೋ (ಪುರಂದ. ೫-೭೩-೨); ಧರಣಿಯುಂ ತರಣಿಯುಂ ಪಿರಿದು ಕಂಪಿಸಲಾ ತ್ರಿವಿಕ್ರಮಂ ಚಕ್ರಮಂ ಕೊಂಡು ಕಾಳೆಗಕೆ ಬರಲು (ಜೈಮಿಭಾ. ೨೫-೫೦); ಕನ್ನಡ ಕಥಾರಂಗ, ಈಚೀಚೆಗೆ ತ್ರಿವಿಕ್ರಮನಂತೆ ಬೆಳೆದ ಕಾದಂಬರಿಯ ಹಬ್ಬುಗೆಯಲ್ಲಿ . . . ಕ್ಷೀಣವಾಗಿ ಹೋಗಿದೆ (ಜಿಗುಬ. ೨). [ತ್ರಿ + ವಿಕ್ರಮ]

ತ್ರಿವಿಕ್ರಮಾಸನ (ನಾ). [ಯೋಗ] ಆಸನಗಳಲ್ಲಿ ಒಂದು ಬಗೆ: ಅಷ್ಟವಿನ್ಯಾಸಗಳು: ೧. ಉತ್ತಾನಾಸನ . . . ೭೧. ತ್ರಿವಿಕ್ರಮಾಸನ (ಭಾರದ. ೧೬೭). [ತ್ರಿವಿಕ್ರಮ + ಆಸನ]

ತ್ರಿವಿಗ್ರಹಗತಿ (ನಾ). [ಜೈನ] ಪ್ರಾಣವು ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನು ಸೇರುವ ಮುನ್ನ ಪಡೆಯುವ ಮೂರು ಗಮನಗಳು; ಪಾಣಿಮುಕ್ತ, ಲಾಂಗಲಿಕ ಮತ್ತು ಗೊಮೂತ್ರಿಕವೆಂಬ ಮೂರು ವಕ್ರಗತಿಗಳು: ಸರ್ವೋತ್ಕೃಷ್ಟವಿಗ್ರಹನಿಮಿತ್ತಂ ನಿಷ್ಕುಟಕ್ಷೇತ್ರದೊಳ್ ಪುಟ್ಟುವ ಜೀವಕ್ಕೆ ನಿಷ್ಕುಟಕ್ಷೇತ್ರಾನುಪೂರ್ವ್ಯನುಶ್ರೇಣ್ಯಜಗತ್ಯಭಾವಂ ನಿಷ್ಕುಟಕ್ಷೇತ್ರಪ್ರಾಪಣನಿಮಿತ್ತಂ ತ್ರಿವಿಗ್ರಹಗತಿಯಕ್ಕುಮೆಂದಱಿವುದು (ತತ್ತ್ವಪ್ರ. ೧೦೧). [ತ್ರಿ + ವಿಗ್ರಹ + ಗತಿ]

ತ್ರಿವಿಡಿ 'ತ್ರಿಪುಡ' ನೋ.

ತ್ರಿವಿಧ (ನಾ). ೧. ಮೂರು ರೀತಿ,–ಬಗೆ: ತ್ರಿವಿಧೋತ್ಪಾತದೊಳುರ್ವಿ ನಾಭಸವಿಕಾರಂ ದೇವತಾಶಾಂತಿಯಿಂದವೆ ಶಾಂತ್ಯಾವಹಂ (ಲೋಕೋಪ. ೪-೪). ೨. ತನು, ಮನ ಮತ್ತು ಧನವೆಂಬ ಮೂರು ವಿಷಯಗಳು: ತ್ರಿವಿಧವನು ತ್ರಿವಿಧಕ್ಕಿತ್ತು ನಾ ಬಯಲದೇಹಿಯಾದೆನಯ್ಯಾ (ಲಿಂಗವ. ೨೩-೯೩); ತ್ರಿವಿಧಕ್ಕೆ ತ್ರಿವಿಧವನಿತ್ತು ತ್ರಿವಿಧಭರಿತನಾಗಿಪ್ಪ ನಿಜಲಿಂಗಾಂಗಿಗೆ ಇಹಪರವೆಂಬ ಉಭಯವಿಲ್ಲ (ಮೋಳಿಮಾ. ೨೪-೯೪). ೩. [ವೀಶೈ]ಗುರು, ಲಿಂಗ ಮತ್ತು ಜಂಗಮವೆಂಬ ಮೂರು ಅಂಗಗಳು: ತನುವ ಕೊಟ್ಟು ಗುರುವನೊಲಿಸಬೇಕು ಮನವ ಕೊಟ್ಟು ಲಿಂಗವನೊಲಿಸಬೇಕು ಧನವ ಕೊಟ್ಟು ಜಂಗಮವನೊಲಿಸಬೇಕು ಈ ತ್ರಿವಿಧವ ಹೊಱಗು ಮಾಡಿ . . . ಕುಱುಹ ಪೂಜಿಸುವರ ಮೆಚ್ಚ ಕೂಡಲ ಸಂಗಮದೇವಾ (ಬಸವ. ೨೦೬); ತ್ರಿವಿಧಕ್ಕೆ ತ್ರಿವಿಧವನಿತ್ತು ತ್ರಿವಿಧಪ್ರಸಾದವ ಕೊಳಬಲ್ಲಡೆ ಆತನ ತ್ರಿವಿಧನಾಥನೆಂಬೆ (ಅವಜಂ. ೩೨-೧೩೮).

[ತ್ರಿ + ವಿಧ]

ತ್ರಿವಿಧಗುರುದ್ವೇಷ [ದ್ವೈತ[(ನಾ). ಉತ್ತಮರಲ್ಲಿ ದ್ವೇಷ, ಅವರ ಗುಣಗಳಲ್ಲಿ ಅಸೂಯೆ ಮತ್ತು ಅವರ ಐಶ್ವರ್ಯಾಪಹಾರ ಎಂಬ ಮೂರು ಬಗೆಯ ಗುರುದ್ವೇಷಗಳು: ದ್ವೇಷಪರಿಪಾಕಸಾಧನಗಳು ಸದಾ ದುರ್ವಿಷಯಾನುಭವಚಾಪಲ್ಯ, ತ್ರಿವಿಧಗುರುದ್ವೇಷ, ನವವಿಧಹರಿದ್ವೇಷ ಮೊದಲಾದುವು (ಹಿಂದಸಾ. ೨೯೩). [ತ್ರಿವಿಧ + ಗುರು$_2$ + ದ್ವೇಷ]

ತ್ರಿವಿಧದಾಸೋಹ (ನಾ). [ವೀಶೈ] ಮೂರು ಬಗೆಯ ಪರಮಾತ್ಮನ ಸೇವೆಗಳು; ಗುರುವಿಗೆ ತನು, ಲಿಂಗಕ್ಕೆ ಮನಸ್ಸು ಮತ್ತು ಜಂಗಮಕ್ಕೆ ಧನವನ್ನು ಅರ್ಪಿಸುವಿಕೆ: ಆಡಿದರೇನೊ ಹಾಡಿದರೇನೊ ಓದಿದರೇನೊ ತ್ರಿವಿಧ ದಾಸೋಹವಿಲ್ಲದನ್ನಕ್ಕ (ಬಸವ. ೨೦೭). [ತ್ರಿವಿಧ + ದಾಸೋಹ]

ತ್ರಿವಿಧಪದಾರ್ಥ (ನಾ). ಮೂರು ವಿಧವಾದ ಪದಾರ್ಥಗಳು: ಇಂತೀ ತ್ರಿವಿಧಪದಾರ್ಥಂಗಳಂ ಹಿಡಿದು (ಘನವ. ೬೭-೫೫).

[ತ್ರಿವಿಧ + ಪದಾರ್ಥ]

ತ್ರಿವಿಧಪ್ರಸಾದ (ನಾ). [ವೀಶೈ] ಗುರು, ಲಿಂಗ ಮತ್ತು ಜಂಗಮರಿಂದ ಪಡೆಯಲಾಗುವ ಪ್ರಸಾದ ; ಶುದ್ಧಪ್ರಸಾದ, ಸಿದ್ಧಪ್ರಸಾದ, ಪ್ರಸಿದ್ಧಪ್ರಸಾದ ಎಂಬ ಮೂರು ಬಗೆಯ ಪ್ರಸಾದಗಳು : ತ್ರಿವಿಧಪ್ರಸಾದವೆಂದೆಂಬರು ಅದೆಂತಹುದೊ (ಬಸವ. ೭೯೦) ; ಗುರುವಿನಲ್ಲಿ ಶುದ್ಧಪ್ರಸಾದ ಲಿಂಗದಲ್ಲಿ ಸಿದ್ಧಪ್ರಸಾದ ಜಂಗಮದಲ್ಲಿ ಪ್ರಸಿದ್ಧಪ್ರಸಾದ ಇಂತೀ ತ್ರಿವಿಧಪ್ರಸಾದ ಏಕಾರ್ಥವಾಗಿ ಮಹಾಘನಪರಿಪೂರ್ಣಪ್ರಸಾದವಳವಟ್ಟ ಶರಣನು ಜ್ಞಾನಿ ಅಲ್ಲ ಅಜ್ಞಾನಿ ಮುನ್ನವೇ ಅಲ್ಲ (ಮಹಾದೇ. ಬ. ೧೦೪-೨೩೫) ; ಆವಗಂ ತ್ರಿವಿಧಪ್ರಸಾದವಿಭೋಗವೇ ಸಾಕು (ಬಸಪು. ೯-೪೮). [ತ್ರಿವಿಧ + ಪ್ರಸಾದ]

ತ್ರಿವಿಧಪ್ರಸಾದಿ (ನಾ). [ವೀಶೈ] ಶುದ್ಧಪ್ರಸಾದ, ಸಿದ್ಧಪ್ರಸಾದ ಮತ್ತು ಪ್ರಸಿದ್ಧಪ್ರಸಾದಗಳೆಂಬ ಮೂರು ವಿಧವಾದ ಪ್ರಸಾದಗಳನ್ನು ಪಡೆದವನು : ಲಿಂಗನಿಷ್ಠಾಮಾನಸರು . . . ಚರಲಿಂಗ ನಿತ್ಯಾರಾಧಕರು ತ್ರಿವಿಧಪ್ರಸಾದಿಗಳು (ಬಸಪು. ೬೧-೨).

[ಸಂ. ತ್ರಿವಿಧ ಪ್ರಸಾದಿನ್]

ತ್ರಿವಿಧಭಕ್ತಿ (ನಾ). [ವೀಶೈ] ಗುರು, ಲಿಂಗ ಮತ್ತು ಜಂಗಮರಿಗೆ ಸಲ್ಲಿಸಲಾಗುವ ಭಕ್ತಿ : ಪ್ರಾರ್ಥಿತತ್ರಿವಿಧೈಕಭಕ್ತಿಸುಖಾರ್ಥಿಗಳನಾ ತ್ರಿವಿಧಭಕ್ತಿ ಸದರ್ಥ ಸುಖತರಶರಧಿಯಲಿ ನೆಱೆಯದ್ದಿ (ಬಸಪು. ೬-೨೮) : ತ್ರಿವಿಧಭಕ್ತಿಯ ಮರ್ಮವನಱಿಯದವರ ಮೆಚ್ಚ ನಮ್ಮ ಅಖಂಡೇಶ್ವರ (ಅಖಂಡೇ. ೭೫-೪೯). [ತ್ರಿವಿಧ + ಭಕ್ತಿ]

ತ್ರಿವಿಧಮಲ (ನಾ). [ವೀಶೈ] ಆಣವ, ಕಾರ್ಮಿಕ ಮತ್ತು ಮಾಯಾ ಎಂಬ ಮೂರು ವಿಧವಾದ ಮಲಗಳು : ತ್ರಿವಿಧಮಲಶುದ್ಧವಾಗಿ ಜಂಗಮವನಱಿಯಬೇಕು (ಮೋಳಿಮಾ. ೨೪-೯೪). [ತ್ರಿವಿಧ + ಮಲ$_2$]

ತ್ರಿವಿಧಮಾರ್ಗ (ನಾ). [ಸಂಗೀತ] ಹಾಡುವಾಗ ಬಳಸುವ ಶುದ್ಧ. ಸಾಳಗ ಮತ್ತು ಸಂಕೀರ್ಣವೆಂಬ ಮೂರು ಬಗೆ,–ಪ್ರಕಾರ : ಓರೊರ್ಮೆ ವಶಿತ್ವಾತಿಶಯದಿಂ ವೀತರಾಗರೂಪಗುಣವಸ್ತುವರ್ಣನಾನುಬದ್ಧ ತ್ರಿಮಾರ್ಗಗೀತಂಗಳಂ ತ್ರಿವಿಧಮಾರ್ಗಂಗಳೊಳ್ ಪಾಡಿ (ಚಂದ್ರಪು. ೯-೫೫ ವ). [ತ್ರಿವಿಧ + ಮಾರ್ಗ]

ತ್ರಿವಿಧಲಿಂಗ (ನಾ). ೧. [ವ್ಯಾಕ] ಪುಲ್ಲಿಂಗ, ಸ್ತ್ರೀಲಿಂಗ ಹಾಗು ನಪುಂಸಕ ಲಿಂಗ : ಕನ್ನಡದೊಳ್ ಪಿರಿಮಂ ಸ್ತ್ರೀಲಿಂಗಮೆಂದುಂ . . . ತ್ರಿವಿಧಲಿಂಗಮೆಂದುಂ, ವಿಶೇಷ್ಯಾಧೀನಲಿಂಗಮೆಂದುಂ, ಅವ್ಯಯಲಿಂಗಮೆಂದು ಲಿಂಗಮೊಂಬತ್ತು ತೆಱಂ (ಶಮದ. ೮೮ ವೃತ್ತಿ). ೨. [ವೀಶೈ] ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗಗಳೆಂಬ ಮೂರುತೆರದ ಲಿಂಗಗಳು.

[ತ್ರಿವಿಧ + ಲಿಂಗ]

ತ್ರಿವಿಧವಾಸನೆ (ನಾ). ತನು, ಮನ ಮತ್ತು ಧನ ಇವು–ಮೂರರಲ್ಲಿ ಇರುವ ಆಸಕ್ತಿ : ತ್ರಿವಿಧಕ್ಕೆ ತ್ರಿವಿಧವನರ್ಪಿಸಿ ತ್ರಿವಿಧವಾಸನೆಯ ಹರಿದು ತ್ರಿವಿಧವು ಒಂದಾದ ಘನವನೊಡಗೂಡಬಲ್ಲಡೆ ಸದ್‌ಭಕ್ತನೆಂಬೆನಯ್ಯ (ಅಖಂಡೇ. ೭೭-೫೫). [ತ್ರಿವಿಧ + ವಾಸನೆ]

ತ್ರಿವಿಧಶಕ್ತಿ (ನಾ). [ರಾಜನೀ] ಪ್ರಭು, ಮಂತ್ರ ಹಾಗೂ ಉತ್ಸಾಹವೆಂಬ ಮೂರು ಶಕ್ತಿಗಳು : ಅಂತೇಕಚ್ಛತ್ರೀಕೃತಭಾರತವರ್ಷನುಂ ದ್ವಿಗುಣೀಕೃತಪ್ರಕೃತಿಪ್ರಮೋದನುಂ ತ್ರಿವಿಧಶಕ್ತಿಪ್ರಯುಕ್ತನುಂ ಚತುರ್ನೃಪವಿದ್ಯಾವಿಶಾರದನುಂ. . .ದಶಾಂಗಭೋಗಸಂಗತನುಮಾಗಿ (ಚಂದ್ರಪು. ೭-೩೫ ವ) ; P ಪ್ರಭುಶಕ್ತಿ ಎಂದರೆ ಹಣ ಮತ್ತು ಸೈನ್ಯ, ಮಂತ್ರಶಕ್ತಿ ಎಂದರೆ ಜ್ಞಾನ, ಉತ್ಸಾಹಶಕ್ತಿ ಎಂದರೆ ಪರಾಕ್ರಮ.

[ತ್ರಿವಿಧ + ಶಕ್ತಿ]

ತ್ರಿವಿಧಸೂತಕಿ (ನಾ). [ವೀಶೈ] ಆಣವ, ಕಾರ್ಮಿಕ, ಮಾಯಾ ಎಂಬ ಮೂರು ಬಗೆಯ ಮಲಗಳನ್ನುಳ್ಳವನು : ಕಾಯಸೂತಕಿಗಳು ಗುರುವನಱಿಯರಾಗಿ ಭಾವಸೂತಕಿಗಳು ಲಿಂಗವನಱಿಯರಾಗಿ ತ್ರಿವಿಧಸೂತಕಿಗಳು ಜಂಗಮವನಱಿಯರಾಗಿ ತನುಶುದ್ಧವಾಗಿ ಗುರುವನಱಿಯಬೇಕು . . . ತ್ರಿವಿಧಮಲಶುದ್ಧವಾಗಿ ಜಂಗಮವನಱಿಯಬೇಕು (ಮೋಳಿಮಾ. ೨೩-೯೪). [ತ್ರಿವಿಧ + ಸೂತಕಿ]

ತ್ರಿವಿಧಾಚಾರ (ನಾ). [ವೀಶೈ] ಮೂರು ಬಗೆಯ ಆಚಾರಗಳು ; ಸದಾಚಾರ, ಶಿವಾಚಾರ, ಸಮಯಾಚಾರಗಳೆಂಬ ಮೂರು ವಿಧವಾದ ಆಚಾರಗಳು : ಗುರುವಿನಲ್ಲಿ ಸದಾಚಾರ ಲಿಂಗದಲ್ಲಿ ಶಿವಾಚಾರ ಜಂಗಮದಲ್ಲಿ ಸಮಯಾಚಾರ ಇಂತೀ ತ್ರಿವಿಧಾಚಾರಸಂಬಂಧವಾದ ಬಳಿಕ ತನ್ನ ಶೀಲಕ್ಕೆ ಶೀಲ ಸಮನಾಗದವರ ಮನೆಯ ಅನುಸರಿಸಿ ನಡೆದಡೆ . . . ಬಸವಣ್ಣ ಮೆಚ್ಚನಯ್ಯಾ (ಚನ್ನವ. ಕ. ೧೮೩-೪೦೦). 'ಪಂಚಾಚಾರ' ಪರಾ. P ಸದಾಚಾರವೆನ್ನುವುದು ಒಳ್ಳೆಯ ನಡತೆಯನ್ನೂ ಶಿವಾಚಾರವು ಲಿಂಗವೇ ಅಂಗವೆಂಬ ಭಾವನೆಯನ್ನೂ, ಸಮಯಾಚಾರವು ಜಂಗಮರಲ್ಲಿ ಭೃತ್ಯಭಾವನೆಯನ್ನೂ ಸೂಚಿಸುತ್ತದೆ.

[ತ್ರಿವಿಧ + ಆಚಾರ]

ತ್ರಿವಿಧಾತ್ಮ (ನಾ). ೧. ಜೀವಾತ್ಮ, ಅಂತರಾತ್ಮ, ಪರಮಾತ್ಮ ಎಂಬ ಮೂರು ಬಗೆಯ ಆತ್ಮಗಳು. 'ಆತ್ಮತ್ರಯ' ಪರಾ. ೨. [ವೀಶೈ] ವಿಶ್ವ, ತೈಜಸ, ಪ್ರಾಜ್ಞ ಎಂಬ ಮೂರು ಆತ್ಮಗಳು : ಎನ್ನ ತ್ರಿವಿಧಾತ್ಮರು ನಿಮ್ಮ ಹೆಂಡಿರು ಸತ್ವರಜತಮಂಗಳು ನಿಮ್ಮ ಭೃತ್ಯರಯ್ಯಾ (ವಚಸಂ. ೨೫೫-೪೫). [ತ್ರಿವಿಧ + ಆತ್ಮ]

ತ್ರಿವಿಧಾದ್ವೈತ (ನಾ). ವಾಗದ್ವೈತ, ಕ್ರಿಯಾದ್ವೈತ, ಭಾವಾದ್ವೈತಗಳೆಂಬ ಮೂರು ಅದ್ವೈತಗಳು ; P ಮಾತು, ಕ್ರಿಯೆ, ಭಾವಗಳಲ್ಲಿ ಭೇದವಿಲ್ಲದಿರುವುದು. ಇವು ಪರಮಾತ್ಮನಿಂದಲೇ ಆದುವು ಎಂಬ ತಿಳುವಳಿಕೆ : ವಾಗದ್ವೈತ, ಕ್ರಿಯಾದ್ವೈತ, ಭಾವಾದ್ವೈತ ಇಂತೀ ತ್ರಿವಿಧಾದ್ವೈತ ಲಿಂಗಸುಖಸಾಹಿತ್ಯವಾದಲ್ಲಿ ನರಕವಿಲ್ಲ (ಆದವ. ೩೨-೯೩).

[ತ್ರಿವಿಧ + ಅದ್ವೈತ]

ತ್ರಿವಿಧಿ 'ತಿವದಿ' ನೋ.

ತ್ರಿವಿಧೋದಕ (ನಾ). [ವೀಶೈ] ಗುರು, ಲಿಂಗ, ಜಂಗಮರಿಂದ ಪಡೆದ ತೀರ್ಥ ; ಗುರುಪಾದೋದಕ, ಲಿಂಗದ ಅಭಿಷೇಕೋದಕ ಮತ್ತು ಜಂಗಮ ಪಾದೋದಕ : ಒಲವಿನರ್ಪಿಸಿದ ಪ್ರಸಾದಂ ಬಳಿಕಲರ್ಪಿಸದಿಹ ಪದಾರ್ಥಂಗಳಲಿ ಕೂಡಿತೊ ಬೆರಸಿತೋ ತ್ರಿವಿಧೋದಕಂಗಳನು (ಬಸಪು. ೪೭-೧೭). [ತ್ರಿವಿಧ + ಉದಕ$_2$]

ತ್ರಿವಿಷ್ಟಪ (ನಾ). ದೇವಲೋಕ ; ಸ್ವರ್ಗ : "ಸ್ವರ್, ಸ್ವರ್ಗಃ, . . . ತ್ರಿವಿಷ್ಟಪಂ . . . ಊರ್ಧ್ವಲೋಕಃ–ಈ ೧೧ ದೇವಲೋಕದ ಪೆಸರ್" (ಹಲಾಯು. ೨-೩); ಪುರನಿಕರು ತ್ರಿವಿಷ್ಟಪವೊ ಪೇಟ್ ದಿವಿಜೇಂದ್ರ ನಿವಾಸವೋ . . . ಎಂಬಿನಂ ನರಪತಿ ಮಾಡಿದಂ ಪುರಕೆ ಪೊಂಪುಟಿಯಪ್ಪಿನಮಪ್ಪಶೋಭೆಯಂ (ಶಾಂತಿಪು. ೧೦-೬೮) ; ಕೈಲಾಸ ತ್ರಿವಿಷ್ಟಪ ನವಖಂಡಕು ನಾನೆ ಅಧಿಪ (ಕ್ರೌಂಚಧ್ವ. ೩೬-೨೬). [ಸಂ.]

ತ್ರಿವಿಷ್ಟಪಾಧಿಪ (ನಾ). ದೇವಲೋಕದ ಒಡೆಯ ; ಇಂದ್ರ : ನಿನಗೆ ತ್ರಿವಿಷ್ಟಪಾಧಿಪನೆಱಗುವನು ಪದಕೆಂಬುದಚ್ಚರಿಯೆ (ನಿಭಾಗ. ೪-೧೧-೫೬).

[ತ್ರಿವಿಷ್ಟಪ + ಅಧಿಪ]

ತ್ರಿವುಡೆ$_1$ 'ತ್ರಿಪುಡ' ನೋ.

ತ್ರಿವುಡೆ$_2$ 'ತಿವದಿ' ನೋ.

ತ್ರಿವೃತೆ (ನಾ). ಕೆಂಪು ತಿಗಡೆ ಮರ. [ಸಂ. ತ್ರಿವೃತಾ]

ತ್ರಿವೃತ್ತ (ನಾ). ಮೂರು ಸುತ್ತು ಉಳ್ಳುದು : ತ್ರಿವೃತ್ತಮೆಂಬುದು ಮೂರು ಕೂಡಿಹುದು ಕೇಳು ಚಾಪಕಮೆಂದು ಚಪ್ಪಟೆಯನೈದಿಹುದು (ರತ್ನಶಾ. ೨೦-೧೪). [ತ್ರಿ + ವೃತ್ತ]

ತ್ರಿವೇಣಿ (ನಾ). ಮೂರು ನದಿಗಳು ಸೇರುವ ಸ್ಥಳ ; ಗಂಗೆ, ಯಮುನೆ ಮತ್ತು (ಗುಪ್ತಗಾಮಿನಿಯಾದ) ಸರಸ್ವತಿ ಈ ಮೂರು ನದಿಗಳ ಸಂಗಮಸ್ಥಳ ; ಪ್ರಯಾಗ. [ತ್ರಿ + ವೇಣಿ]

ತ್ರಿವೇಣೀಸಂಗಮ (ನಾ). (ತ್ರಿವೇಣಿಯಂತೆ ಪವಿತ್ರವಾದ) ಮೂರರ ಕೂಟ, —ಸಂಗಮ : ಅವರ ಪ್ರತಿಫಲವು ವ್ರೇಮ, ಸತ್ಯ, ಗೀತೆಗಳೆಂಬ ತ್ರಿವೇಣೀಸಂಗಮವಾಗಿ ಪ್ರವಹಿಸಿತು (ಪ್ರಬಂಧ. ೮೬). [ಸಂ.]

ತ್ರಿವೇಣುಕ (ನಾ). ರಥದ ಅಥವಾ ಗಾಡಿಯ ಮಂಭಾಗದಲ್ಲಿ ನೊಗವನ್ನು ಕಟ್ಟಲು ಚಾಚಿದಂತಿರುವ. ಮೂರು ಬೊಂಬು ಅಥವಾ ಮರದ ತುಂಡುಗಳ ರಚನೆ ; ಮೂಕಿ : ಆಹವನೀಯು ಗಾರುಹಪತ್ಯ ದಕ್ಷಿಣ ವಾಯುಸಖರಾದರು ತ್ರೀವೇಣುಕವು ರಥಾಗ್ರದಲಿ (ಕುವ್ಯಾಳ. ೭-೪) ; ಕೋದಂಡ ರಥ ರಥಾಂಗ ತ್ರಿವೇಣುಕ ಯುಗಾಕ್ಷಂಗಳುರಿಗೊಳಿ ಪಾಂಡುಪುತ್ರಸೇನೆಯೊಳ್ಳಿರುಂ ಬೆದಱಿದರ್ (ಜೈಮಿಭಾ. ೮-೩೮). [ಸಂ.]

ತ್ರಿವೇದಿ (ನಾ). ೧. ಮೂರು ವೇದಗಳನ್ನು ಬಲ್ಲವನು. ೨. ನ್ಯಾಯ, ಮೀಮಾಂಸೆ, ವೇದಾಂತ ಎಂಬ ಮೂರಂ ಶಾಸ್ತ್ರಗಳನ್ನು ಬಲ್ಲವನಂ [ಸಂ. ತ್ರಿವೇದಿನ್]

ತ್ರಿಶಂಕು (ನಾ). ೧. ಸೂರ್ಯವಂಶದ ದೊರೆ ; ಹರಿಶ್ಚಂದ್ರನ ತಂದೆ : ತ್ರಿದಶಲೋಕಕ್ಕೇಱುತಿರ್ದಾ ತ್ರಿಶಂಕುನರಾಧೀಶನ ಲಕ್ಷ್ಮಿ, ಶಕ್ರನ ಮಹಾ ಹುಂಕಾರವಿಂ ಬಿರ್ದಳಿಂಬಿನೆಗಂ (ಶಾಂಪು. ೨೪); ಕುಲವಳಿದು ರಾಜ್ಯಭ್ರಷ್ಟನಾಗಿ ಚಾಂಡಾಲತ್ವವಳವಟ್ಟು ನಿಮ್ಮಯ್ಯನೆನಿಪ ತ್ರಿಶಂಕುವನು ನಾನಲ್ಲದು ದ್ಧರಿಸಿದ ಬಲವಂತರಾರ್ (ಹಡಣಾ. ೮-೩೯); P ಹರಿಶ್ಚಂದ್ರನ ತಂದೆಯಾದ ಸತ್ಯವ್ರತನೆಂಬ ದೊರೆಯು ತಾನು ಮಾಡಿದ ಪರಸ್ತ್ರೀ ಅಪಹರಣ, ಸುಳ್ಳು ಹೇಳಿದುವಂ ಮತ್ತು ಮಾಂಸಭಕ್ಷಣ ಎಂಬ ಮೂರು ಪಾಪಕಾರ್ಯಗಳಿಂದ ವಸಿಷ್ಠರ ಶಾಪಕ್ಕೆ ಗುರಿಯಾಗಿ ಚಂಡಾಲತ್ವವನ್ನು ಹೊಂದಿಯೂ ವಿಶ್ವಾಮಿತ್ರರ ಪ್ರಯತ್ನದಿಂದ ಸಶರೀರನಾಗಿ ಸ್ವರ್ಗಪ್ರವೇಶ ಮಾಡಲಂ ಯತ್ನಿಸಿ ಸಾಧ್ಯವಾಗದೆ ಮತ್ತೆ ಅವರ ಕೃಪೆಯಿಂದಲೇ ಭೂಸ್ವರ್ಗಗಳೆರಡರ ಮಧ್ಯೆ ನಿಲ್ಲಂತ್ತಾನೆ. ೨. ಪತಂಗದ ಹುಳು ; ಶಲಭ. ೩. ಚಾತಕಪಕ್ಷಿ. ೪. ಎಂಚುಹಂಳು. ೫. ಬೆಕ್ಕು. ೬. = ತ್ರಿಶಂಕುರಾಶಿ : ಇವಿಷ್ಟೂ ಒಟ್ಟು ಸೇರಿದರೆ 'ತ್ರಿಶಂಕು' ನಕ್ಷತ್ರಗಣವಾಗುತ್ತದೆ (ಜ್ಯೋತಿರ್ವಿ. ೪೮). [ಸಂ.]

ತ್ರಿಶಂಕುರಾಶಿ (ನಾ). [ಜ್ಯೋತಿ] ಒಂದು ನಕ್ಷತ್ರರಾಶಿಯ ಹೆಸರು : ಕಿನ್ನರ ಪ್ರಥಮ ದ್ವಿತೀಯಗಳ ಬಲಮಗ್ಗುಲಿಗೆ ತಿಲುಬೆಯ ಆಕಾರದಲ್ಲಿ ಹೊಳೆಯುತ್ತಿರುವ ನಾಲ್ಕು ನಕ್ಷತ್ರಗಳು ತ್ರಿಶಂಕುರಾಶಿಯ ಹೆಗ್ಗುರುತು (ನಕ್ಷತ್ರ. ೭೩). [ತ್ರಿಶಂಕು + ರಾಶಿ]

ತ್ರಿಶಂಕುಸ್ಥಾನ (ನಾ). (ಆಲಂ) ಎಲ್ಲಿಯೂ ಎಡೆಯಿಲ್ಲದಿರುವುದು ; ಯಾವಕಡೆಗೂ ಸಲ್ಲದಿರುವ ಸ್ಥಿತಿ ; ಎಡಬಿಡಂಗಿತನ : ರಂಗಸಾನಿ ಹಾಗು ಆಕೆಯ ತಂಗಿ ವಿಮಲೆಯರು ಸಮಾಜದಲ್ಲಿ ಸ್ತ್ರೀಯರಿಗಿರುವ ಇನ್ನೊಂದು ತ್ರಿಶಂಕುಸ್ಥಾನದ ಅರಿವನ್ನು ನಮಗೆ ಮಾಡಿಕೊಡುತ್ತಾರೆ (ಸಪುಚೀ. ೧೩ ಬೀ೩೪). [ತ್ರಿಶಂಕು + ಸ್ಥಾನ]

ತ್ರಿಶಂಕುಸ್ವರ್ಗ (ನಾ). ೧. ಭೂಮಿ ಮತ್ತು ಸ್ವರ್ಗಗಳ ನಡುವೆ ಇರುವುದೆಂದು ನಂಬಲಾದ ಸ್ಥಳ ; P ವಿಶ್ವಾಮಿತ್ರನು ಸೃಷ್ಟಿಸಿದನೆಂದು ನಂಬಲಾದ, ಸ್ವರ್ಗದಿಂದ ಬೇರೆಯಾದ ಮತ್ತೊಂದು ಲೋಕ. ೨. (ಆಲಂ) ಯಾವಕಡೆಗೂ ಸೇರದಿರುವ ಸ್ಥಿತಿ.

[ತ್ರಿಶಂಕು + ಸ್ವರ್ಗ]

ತ್ರಿಶತ (ನಾ). ಮೂರು ನೂರು ; ಮುನ್ನೂರು : ತ್ರಿಶತ ಸಂಯುತ ಷಷ್ಟಿರುಜೆಗಳ ವಶದಿ ನೊಂದುಮ್ಮಳಿಸುವದಱಿಂ ಶಿಶುವಲಾ ನಾನು (ಬಸಪು. ೨೪-೧೪). [ತ್ರಿ + ಶತ]

ತ್ರಿಶರ (ನಾ). ಮೂರು ಬಾಣಗಳು : ತ್ರಿಶರ–ತಿಸರ (ಕಮಿಡ. ೫೯೦ ಪ್ರಯೋ). [ತ್ರಿ + ಶರ]

ತ್ರಿಶಲ್ಯ (ನಾ). [ಜೈನ] ವಿಂಥ್ಯೆ, ಮಾಯೆ, ನಿದಾನಗಳೆಂಬ ಮೂರು ಬಗೆಯ ಮೋಹಗಳು : ಚಾರಿತ್ರವಂತನೆಂಬೊಂ ಜಿನಮತಗತ ... ತ್ರಿದಂಡ ತ್ರಿಶಲ್ಯ ತ್ರಿಗಾರವರಹಿತನುಂ (ಶಾಪುಂಪು. ೫-೧೯) ; ಪುತ್ರಂ ತ್ರಿದಂಡ ತ್ರಿಶಲ್ಯ ತ್ರಿಗಾರವಂಗಳಂ ಕ್ರಮ ಕ್ರಮದಿಂ ಕಟಲ್ದಿ ಕಳೆಯುತ್ತುಂ (ಸುಕುಮಾ. ೩-೪೬ ವ) ; P "ವ್ರತಗಳನ್ನಾಚರಿಸುವವರು ಮಾಯೆ, ವಿಂಥ್ಯಾತ್ವ, ನಿದಾನೆ ಎಂಬ ಮೂರು ಶಲ್ಯಗಳಿಲ್ಲದವರಾಗಿರಬೇಕು. ಪಂಸ್ಸಿನಲ್ಲೊಂದು, ಕ್ರಿಯೆಯಲ್ಲೊಂದು ಈ ತರದ ಸ್ಥಿತಿಯು ಮಾಯಾಶಲ್ಯವು ; ತತ್ತ್ವಾರ್ಥದಲ್ಲಿ ಶ್ರದ್ಧೆಯಿಲ್ಲದಿರುವುದು ವಿಂಥ್ಯಾತ್ವಶಲ್ಯವು ; ಭವಿಷ್ಯತ್ಕಾಲದಲ್ಲಿ ಇಂತಹ ವಿಷಯೋಪಭೋಗಗಳು ದೊರೆಯಬೇಕೆಂದು ಬಯಸುವುದು ನಿದಾನ ಶಲ್ಯವು ; ಶಲ್ಯಗಳಿರುವವರೆಗೆ ಅಹಿಂಸಾದಿ ಗಳನ್ನಾಚರಿಸಿದರೂ ಅವು ವ್ರತಗಳೆನಿಸಲಾರವು" (ಜೈನಧ. ೬೪). [ತ್ರಿ + ಶಲ್ಯ]

ತ್ರಿಶಾಲ (ಗು). ೧. ಮೂರು ಸ್ತರಗಳಿರುವ : ತತ್ಯಸಕಶಾಲಾಭ್ಯಂತರ ದೊಳ್ ತ್ರಿಶಾಲ ಪ್ರತೀತೋಪಸ್ಥಿತಾರ್ಹತ್ಪ್ರತಿವೋಪೇತ ... ಶೋಭಿತ ಮುಮೇಕಯೋಜನಪ್ರಮಾಣವಿಸ್ತಾರಮುಮಾಗಿ (ಆದಿಪು. ೧೦-೩೦ ವ). (ನಾ). ೨. ಮೂರು ಅಂತಸ್ತಿನ ಮನೆ. ಧನುರ್ಭವನಾಂತಸ್ಥ್ಯತನಾಗ ತದ್ಗುರು ಬಲೋಪೇತಂ ನಿಕೇತಂ ತ್ರಿಶಾಲವೆನಿಕ್ಕುಂ (ಜಾತಕ. ೪-೧೪); [ಸಂ.]

ತ್ರಿಶುದ್ಧಿ (ನಾ). ದೇಹ, ಮನಸ್ಸು ಮತ್ತು ಮಾತುಗಳೇಬ ತ್ರಿಕರಣಗಳಲ್ಲಿ ಶುದ್ಧವಾಗಿರುವುದು : ತ್ರಿಶುದ್ಧಿಯಿನಸುಕಂವೆವೆರಸು ಸಮಸ್ತ ಪ್ರಾಣಿಗಳ್ಗಭಯಂಗುಡುವ ದಯಾದತ್ತಿಯುಂ (ಆದಿಪು. ೧೫-೧೬ ವ) ; ಬಗೆ ಶುದ್ಧಂ ತನು ಶುದ್ಧಮಾ ಸ್ತುತಿ ಪದಾರ್ಥಂ ಶುದ್ಧವಿಂತೀ ತ್ರಿಶುದ್ಧಿಗಳಂ ಧ್ಯಾನಿಸುವೆಮ್ಮ . . . ಪರಮೇಶ್ವರರ್ ಪರಸುಗಿಂ ವಾತ್ಸಲ್ಯದಿಂ (ಶಾಂತಿಪು. ೧-೫); ಚಕ್ರವರ್ತಿಗ್ಯಹೀತಸದ್ದರ್ಶನನನಂತದರ್ಶನನಂ ತ್ರಿಶುದ್ಧಿಯಿಂ ತ್ರಿಃಪ್ರದಕ್ಷಿಣಂಗೆಯ್ದು (ಕಂದ್ರಪು. ೬-೩೭ ವ) ; ತ್ರಿಶುದ್ಧಿಯಾಗಿ ಹೇಳು ನಿನಗೆ ಆ ಧನವನ್ನು ಕೊಟ್ಟುಬಿಡುವೆನು (ಲಕ್ಷ್ಮೀಪ್ರ. ೧೬೪). [ತ್ರಿ + ಶುದ್ಧಿ]

ತ್ರಿಶೂಲ (ನಾ). ೧. ಮೂರು ಮೊನೆಗಳು ಉಳ್ಳ ಈಟಿಯಂಥ ಒಂದು ಬಗೆಯ ಆಯುಧ ; P ಇದು ಶಿವನ ಆಯುಧವೆಂದು ಪ್ರತೀತಿಯಿದೆ : ತ್ರಿಶೂಲ ಸಬಳ ಶಕ್ತಿಯ ಪರಿಗೆ ಕೊಂತಗಳನಾಂತಾಂತು ಧುರಧೀರ ಕಲಿವೀರ ಭಟರೆಯ್ದುಂದರು ದುರುಳಮಥನನಾಜ್ಞೆಯಂತಿ (ಜೀವಂಸಾಂ. ೫-೩೬). ೨. ದೇವತೆ ; ಸುರ. ೩. ಹುತ್ತ. ೪. ಕ್ರೂರನಾದವನು ; ಕ್ರೂರಿ. "ಸುರವಾರ್ಮರಿಯರ್ ಪೃತ್ತದಿ ಕ್ರೂರರ್ಗೆ ನಾಲ್ಕು ತ್ರಿಶೂಲವೆಸರ್" (ನಾನಾಳಂ. ೧೧೩) ; "ಸುರರುಂ ಪಾಮರಿಯರ್ಭುಜಂಗಭವನಂ ಕ್ರೂರಂ ತ್ರಿಶೂಲಾಹ್ವಯಂ" (ನಾನಾರ. ೯೩). P ಮೊದಲ ಅರ್ಥವನ್ನು ಬಿಟ್ಟು ಉಳಿದ ಅರ್ಥಗಳು ಸಂಸ್ಕೃತದಲ್ಲಿಲ್ಲ. [ತ್ರಿ + ಶೂಲ]

ತ್ರಿಶೂಲಧರ (ನಾ). ತ್ರಿಶೂಲವೆಂಬ ಆಯುಧವನ್ನು ಹಿಡಿದಿರುವವನು; ತ್ರಿಶೂಲಿ : ತವಂತವಮಗೆಲ್ಲ ನೊಸಲ ಕಣ್ಣವರು . . . ತವತವಮಗೆಲ್ಲ ಖಟ್ವಾಂಗ ಕಪಾಲ ತ್ರಿಶೂಲಧರರು (ಬಸವ. ೪೧೮). [ಸಂ.]

ತ್ರಿಶೂಲರೇಖೆ (ನಾ). [ಸಾಮುದ್ರಿ] ತ್ರಿಶೂಲದ ಆಕಾರವುಳ್ಳ ರೇಖೆ : ಹಣೆಯಲ್ಲಿ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ತ್ರಿಶೂಲರೇಖೆಯಿರಲು ಆಕೆ ಸಹಸ್ರ ಸ್ತ್ರೀಯರುಗಳಿಗೆ ಅಧಿಪಳಾಗುವಳು (ಸಾಮುಲ. ೧೪೧-೧೪). [ತ್ರಿಶೂಲ + ರೇಖೆ]

ತ್ರಿಶೂಲಿ (ನಾ). ೧. ತ್ರಿಶೂಲವೆಂಬ ಆಯುಧವನ್ನು ಧರಿಸಿದವನು; ಶಿವ: ಕೈಲಾಸೇಂದ್ರ ಡಮರುಗಧರ ತ್ರಿಶೂಲಿಯು ದಿಕ್ಸುಪಾಲಕನೆನಲು (ಶಿಷ್ಟಪು. ೬೩-೪೭). ೨. ತ್ರಿಶೂಲದಾಕಾರದ ಎಲೆಗಳನ್ನು ಉಳ್ಳ ಒಂದು ಬಗೆಯ ಸಸ್ಯ: "ಶೂಲಪತ್ರೀ – ತ್ರಿಶೂಲಿ" (ಓಷಧಿ. ೦೬೯).
[ಸಂ. ತ್ರಿಶೂಲಿನ್]

ತ್ರಿಶೃಂಗಿ (ನಾ). ಮೂರು ಶಿಖರಗಳನ್ನು ಉಳ್ಳ ಪರ್ವತ; ತ್ರಿಕೂಟ ಪರ್ವತ: ಸುಗಂಧಿ ಶಿಖಿ ತ್ರಿಶೃಂಗಿ . . . ಪಾರಿಜಾತವೆಂಬ ಹದಿನಾಲ್ಕು ಕುಲಾಚಲಂಗಳೇ ಪೂರ್ವೋಕ್ತ ವಿಪುಳವೆಂಬ ಕೀಲಕಪರ್ವತಕ್ಕೆ ಪಶ್ಚಿಮ ದಿಕ್ಕಿನಲ್ಲಿಹವು (ವಿಷೇಶ. ೨೦೫). [ಸಂ. ತ್ರಿಶೃಂಗಿನ್]

ತ್ರಿಶ್ರ (ನಾ). [ಸಂಗೀತ] ತಾಳದ ಒಂದು ಅಂಗ: ಮೂರು ಲಘುಗಳ ಕಾಲ: ೧) ತ್ರಿಶ್ರ ೨) ಚತುರಶ್ರ ೩) ಖಂಡ ೪) ಮಿಶ್ರ ೫) ಸಂಕೀರ್ಣ ಈ ಐದು ಜಾತಿಗಳೂ ಲಘುವಿಗೆ ಮಾತ್ರ ಸಲ್ಲುತ್ತವೆ. (ಸಂಗೀಷಂ. ೫೬). [<ಸಂ. ತ್ರ್ಯಶ್ರ]

ತ್ರಿಷವಣ (ನಾ). ಪ್ರಾತಃಕಾಲ, ಮಧ್ಯಾಹ್ನ, ಸಂಜೆಗಳೆಂಬ ದಿನದ ಮೂರು ಕಾಲಗಳು: ತ್ರಿಷವಣಸ್ನಾನದಲಿ ಜಡೆ ಬಂಧಿಸಿದ ಕೇಶದ ಜೀರ್ಣವಸನದ . . . ಮೂಢ ಜಡಾಂಧರುತಿರೆ ವಸುಧೆಯಲಿ ಚರಿಸುತ್ತ ಲಿರ್ದನು ಲೀಲೆಯಲಿ ವಿದುರ (ನಿಭಾಗ. ೩-೧-೨೮)); ನಮ್ಮ ಆಯುಷ್ಯದ ತ್ರಿಭಾಗದ ಕಾಲದಲ್ಲಿಯೂ ಭಗವದ್ರೂಪಗಳನ್ನು ತಿಳಿದು ಪೂಜಿಸುವುದೇ ತ್ರಿಷವಣದಲ್ಲಿ ಹೋಮಿಸುವ ಯೋಗವೆಂದು ಹೇಳುತ್ತಾರೆ (ಹಸಾರ. ೧೨-೩ ಅವತಾರಿಕೆ). [ಸಂ. ತ್ರಿಸವನ]

ತ್ರಿಷಷ್ಟಿ (ನಾ). ಒಂದು ಸಂಖ್ಯೆ; ಅರುವತ್ತು ಮೂರು.

ತ್ರಿಷಷ್ಟಿಪುರಾತನರು = [ಶೈವ] ಕಲಿಗಣನಾಥ, ರುದ್ರಪಶುಪತಿ. ಮುರುಘ, ಚೊಕ್ಕನಾಯನಾರ್, ತಿರುನೀಲಕಂಠ, ಕಾರಿಕಾಲಮ್ಮೆ, ನರಸಿಂಗಮೊನೆಯಾಂಡ, ಕಡವೂರಿಕಾರಿ, ತಿರುನೀಲಕಂಠಪಾಣರ್, ಚಿರುಪುಲಿಯಾಂಡ, ಸೋಮಾಸಿಮಾರ, ಅಚ್ಯುತ, ಮೊನೆಯಾಂಡ, ಮಾನಕಂಜರ, ಪಗಲ್ಚೋಳ, ಕಲಿಕಾಮ, ತಿರುಮೂಲ, ಪಗಲ್ತೊಣೆಯಾಂಡ, ಅರಿವಾಳ್ತಾಂಡ, ನೈಸ, ನೀಲನಕ್ಕ, ತಿರುಕುರುಪೆತೊಂಡ, ತಿರುನಾಳ್ಪೋವ, ಏಣಾದಿನಾಥ, ಸೇದಿರಾಜ, ಪೂಸಲೆಯಾಂಡ, ಕಂಗುಲಿಯ ಕಲಿಯ, ಇರಿಭಕ್ತ, ಕಳಚಂಗಪೆರುಮಾಳ್, ನಮಿನಂದಿ, ಅಮರನೀತಿ, ಕಲಿಕಂಭ, ಕನ್ನಪ್ಪ, ನಾಟ್ಯಮಿಗೆತಾಂಡಿ, ಒಲಘಂಢಮೂರ್ತಿ, ಅಃಪೂತಿಯಡಿಯ, ವಾಗೀಶ, ತಿರುಜ್ಞಾನ ಸಂಬಂಧಿ, ಕುಲಶ್ವರ್ಯ, ಮಂಗಾಯಕ್ಕರಸಿ, ಸೌಂದರಪಾಂಡ್ಯ, ವೇಳ್ಕುತ್ತ, ಮಹಾಕುಳಚಂಗ, ಸಾಂಖ್ಯ, ವಾಹಿಲ್ಯ, ಚಿರುತೊಣೆಯಾಂಡ, ಕಳಚತ್ತಿಯಾಂಡ, ಕೊಲ್ಪುಲಿಯಾಂಡ, ತಂಡೇಶ, ಅಚ್ಚಕಲಿಯನಾರ್, ಐಯಡಿಯ, ಚಿರುತೊಂಡ, ಅತಿಭಕ್ತ, ಕಣಂಬುಲ್ಲ ನಂಬಿ, ಇಳೆಯಾಂಡ ಗುಡಿಮಾರ, ಅಡವಘೆಯ ಪೆರುಮಾಳ್, ಇಹಃಪಗೆಯಾಂಡ, ಮೆರೆಮಿಂಡ, ಚೇರಮ, ಪಿರುವಾಳವಿಕುರಂಬ, ಜಡೆಯನಾಯನಾರ್, ಯಸ್ಯಜ್ಞಾನದೇವಿ ಮತ್ತು ಸೌಂದರನಂಬಿ ಎಂಬ ತಮಿಳುನಾಡಿನಲ್ಲಿ ಪ್ರಸಿದ್ಧರಾಗಿದ್ದ ೬೩ ಮಂದಿ ಶೈವಭಕ್ತರು. ಈ ಹೆಸರುಗಳ ಪಟ್ಟಿಯಲ್ಲಿ ವ್ಯತ್ಯಾಸಗಳಿವೆ: ಕರ್ನಾಟಕಕವಿಚಕ್ರವರ್ತಿವಿರಚಿತಮಪ್ಪ ತ್ರಿಷಷ್ಟಿಪುರಾತನಚಾರಿತ್ರದೊಳ್ (ತ್ರಿಪುವಿ. ೬೩-೨೩ ಪ). ತ್ರಿಷಷ್ಟಿಶಲಾಕಾಪುರುಷರು; = [ಜೈನ] ವೃಷಭ, ಅಜಿತ, ಸಂಭವ, ಅಭಿವಂದನ, ಸುಮತಿ, ಪದ್ಮಪ್ರಭ, ಸುಪಾರ್ಶ್ವ, ಚಂದ್ರಪ್ರಭ, ಪುಷ್ಪದಂತ, ಶೀತಲ, ಶ್ರೇಯಾಂಸ, ವಾಸುಪೂಜ್ಯ, ವಿಮಲ, ಅನಂತ, ಧರ್ಮ, ಶಾಂತಿ, ಕುಂಥು, ಅರ, ಮಲ್ಲಿ, ಮುನಿಸುವ್ರತ, ನಮಿ, ನೇಮಿ, ಪಾರ್ಶ್ವ, ವರ್ಧಮಾನರೆಂಬ ೨೪ ಜನ ತೀರ್ಥಂಕರರೂ, ಭರತ, ಸಗರ, ಮಘವಾ, ಸನತ್ಕುಮಾರ, ಶಾಂತಿ, ಕುಂಥು, ಅರ, ಸುಭೌಮ ಪದ್ಮ, ಹರಿಷೇಣ, ಜಯಸೇನ, ಬ್ರಹ್ಮದತ್ತ ಎಂಬ ೧೨ ಜನ ಚಕ್ರವರ್ತಿಗಳೂ, ವಿಜಯ, ಅಚಲ, ಸುಧರ್ಮ, ಸುಪ್ರಭ, ಸುದರ್ಶನ, ನಂದಿ, ನಂದಿಮಿತ್ರ, ರಾಮ, ಪದ್ಮರೆಂಬ ೯ ಮಂದಿ ಬಲದೇವರೂ, ತ್ರಿಪೃಷ್ಠ, ದ್ವಿಪೃಷ್ಠ, ಸ್ವಯಂಭೂ, ಪುರುಷೋತ್ತಮ, ಪುರುಷಸಿಂಹ, ಪುಂಡರೀಕ, ದತ್ತ, ಲಕ್ಷ್ಮಣ, ಕೃಷ್ಣ ಎಂಬ ೯ಮಂದಿ ವಾಸುದೇವರೂ, ಅಶ್ವಗ್ರೀವ, ತಾರಕ, ಮೇರಕ, ಮಧುಕೈಟಭ, ನಿಶುಂಭ, ಬಲಿ, ಪ್ರಹರಣ, ರಾವಣ, ಜರಾಸಂಧ ಎಂಬ ೯ ಮಂದಿ ಪ್ರತಿವಾಸುದೇವರೂ ಸೇರಿದಂತೆ ೬೩ ಜನ. [ತ್ರಿ + ಷಷ್ಟಿ]

ತ್ರಿಷ್ಟುಪ್ಪು (ನಾ). [ಛಂದ] ಪ್ರತಿಪಾದದಲ್ಲಿಯೂ ಹನ್ನೊಂದು ಅಕ್ಷರಗಳು ಇರುವ ಒಂದು ಛಂದಸ್ಸು: ಈ ಛಂದಸ್ಸುಗಳಿಗೆ ಕ್ರಮವಾಗಿ ೧. ಉಕ್ತೆ . . . ೧೧. ತ್ರಿಷ್ಟುಪ್ಪು . . . ೨೬. ಉತ್ಕೃತಿ ಎಂಬಿವು ಸಂಜ್ಞೆಗಳು (ಕೈಪಿಡಿ. ೭೮). [<ಸಂ. ತ್ರಿಷ್ಟುಭ್]

ತ್ರಿಷ್ಯ (ನಾ). ಮೂರು ಮೂಲೆಗಳಿಂದ ಕೂಡಿದುದು: ತ್ರಿಷ್ಯಮೆಂಬುದು ಮೂರು ಮೂಲೆಯದು (ರತ್ನಶಾ. ೨೦-೧೪). [<ಸಂ. ತ್ರ್ಯಸ್ರ]

ತ್ರಿಸಂಗು (ನಾ). ಒಂದು ಬಗೆಯ ಸಸ್ಯ: "ಕಾಂತ–ಹರೇಣುಕ, ದೊಡ್ಡಯಾಲಕ್ಕಿ, ನೆಲದಾಳಿ, ತ್ರಿಸಂಗು, ಪ್ರಿಯಂಗು, ಮೊಲ್ಲೆ, ಹುಲಿಹತ್ತಿ" (ಓಷಧಿ. ೨೮). [?]

ತ್ರಿಸಂಚ (ನಾ). ಮೂರರ ಕೂಟ; ಸಂಚಿತ, ಆಗಾಮಿ ಹಾಗೂ ಪ್ರಾರಬ್ಧಗಳೆಂಬ ಮೂರು ವಿಧವಾದ ಕರ್ಮಗಳ ಕೂಟ: ಸಂಚಿತ ಪ್ರಾರಬ್ಧ ಆಗಾಮಿಗಳೆಂಬ ತ್ರಿಸಂಚವನಱಿತು (ಮೋಳಿಮಾ. ೧೫೦-೫೭೦).
[ತ್ರಿ + ಸಂಚ್ಯ]

ತ್ರಿಸಂಜೆ (ನಾ). = ತ್ರಿಸಂಧ್ಯೆ ೧: ಶ್ರೀಮತು ಕುನ್ತದೇವರ್ಗ್ಗೆಯಚಳಭಕುತಿಯಿಂ ಗನ್ಧಮಂ ಅಕ್ಷತೆ ಪುಷ್ಪಧೂಪದೀ(ದ್ವೀ)ಪ ನಿವೇದ್ಯಮಂ ತ್ರಿಸಂಜೆಯ ಕಟ್ಟಳೆಪೂಜೆಯಂ ಮಾರ್ಪ್ಪ (ಎಕ. XI, ದಾವಣ. ೧೫೫-೩೮; 1124).
[<ಸಂ. ತ್ರಿಸಂಧ್ಯಾ]

ತ್ರಿಸಂಜ್ಞ (ನಾ). ಮಾತು, ನೇತ್ರಚಲನೆ, ಅಂಗಚಲನೆಗಳೆಂಬ ಮೂರು ಬಗೆಯ ಚಲನೆಗಳು: ನಂದಗೋಪನುಂ ಯಶೋದೆಯುಮಳ ವಿಗಟಿದಬಲನೊಳಕೊಂಡು ಚಂಡಾಹಿತುಂಡಖಂಡಿತಪುಂಡರೀಕಾಕ್ಷವದನ ವಿನ್ಯಸ್ತನಿರಸ್ತತರಳತಾರನೇತ್ರರುಂ ನಿಸ್ಸಂಜ್ಞತ್ರಿಸಂಜ್ಞಗಾತ್ರರುಮಾಗೆ (ಜಗವಿ. ೩-೯೫ ಪ). [ತ್ರಿ + ಸಂಜ್ಞ]

ತ್ರಿಸಂಧಿ (ನಾ). = ತ್ರಿಸಂಧ್ಯೆ ೧: ಪಂಚಾಕ್ಷರಿಯ ಪ್ರಣವವ ತಪ್ಪದೆ ತ್ರಿಸಂಧಿಯಲ್ಲಿ ನೆನಹುಗೊಳ್ಳಿ (ಶರಜ. ೪೮೨). ೨. ಲವಂಗ; ದೇವಕುಸುಮ: "ತ್ರಿಸಂಧಿಯದು ದೇವಕುಸುಮವೆನಿಕ್ಕುಂ" (ಮಂಗರಾ. ೪೦-೩೦). [ಸಂ.]

ತ್ರಿಸಂಧಿಗ್ರಾಹಿ (ನಾ). ಒಂದು ಶ್ಲೋಕವನ್ನು ಮೂರು ಬಾರಿ ಕೇಳುವಷ್ಟರಲ್ಲಿ ಅರ್ಥಮಾಡಿಕೊಂಡು ಜ್ಞಾಪಕದಲ್ಲಿಟ್ಟುಕೊಳ್ಳುವವನು. 'ಏಕಸಂಧಿಗ್ರಾಹಿ' ಪರಾ. [ಸಂ. ತ್ರಿಸಂಧಿಗ್ರಾಹಿನ್]

ತ್ರಿಸಂಧ್ಯಾಕಾಲ (ನಾ). = ತ್ರಿಸಂಧ್ಯೆ ೧: "ನಿರುತಂ ಮುಂಬಗಲೆನುತಂದುಱಿ ನಡುಕಡೆವಗಲೆನಲ್ ತ್ರಿಸಂಧ್ಯಾಕಾಲಂ" (ಕವಿಕಂ. ೧೨೦).
[ತ್ರಿ + ಸಂಧ್ಯಾ + ಕಾಲ]

ತ್ರಿಸಂಧ್ಯಾಸೇವೆ (ನಾ). ದಿನದ ಮೂರು ಸಂಧಿಕಾಲಗಳಾದ ಬೆಳಗು, ಮಧ್ಯಾಹ್ನ ಮತ್ತು ಸಂಜೆಗಳಲ್ಲಿ ಸಲ್ಲಿಸುವ ಸೇವೆ; ತ್ರಿಕಾಲಸೇವೆ: ನಿರಂತರ ತ್ರಿಸಂಧ್ಯಾಸೇವೆಯುಮೆಂದೆಂಟುಂ ತೆಱದ ಪೂಜೆಯಂಮನರ್ಕ ಪೂಜೆಯುಮಂ ಮನ್ನಿಸಿ (ಆದಿಪು. ೧೫-೧೩ ಪ). [ಸಂ. ತ್ರಿಸಂಧ್ಯಾ ಸೇವಾ]

ತ್ರಿಸಂಧ್ಯೆ (ನಾ). ೧. ದಿನದ ಮೂರು ಸಂಧಿಕಾಲಗಳು; ಬೆಳಗು ಮಧ್ಯಾಹ್ನ ಮತ್ತು ಸಂಜೆ : ನಿಯತಂ ತ್ರಿಸಂಧ್ಯೆಯೊಳ್ ಸಮತೆಯಿನಿರು ಹತ್ಪೂಜೆಯಿಂದಮಿರ್ಪಾತಂ ನಿಶ್ಚಯದಿಂ ಮೂಜನೆಯಂ ಸಾಮಯಿಕ ವ್ರತಧಾರಿ ವೆಸರೊಳಂ ಸಾಮಯಿಕಂ (ಸುಳುಮಾ. ೬-೨೬); ಶ್ರೀಮೂಲ ಸ್ಥಾನದೇವರ ಸೊಳೆವಳ ಸೋವಿನಾಯಕನ ಮಗ ಸೂಳೆವಳ ಬಸವಣಂಗೆ ದೇವಿಯಲ್ಲಿ ತ್ರಿಸಂಧ್ಯೆಯೊಳಂ ಸಂಜೆವಜೆಯುಂ ಬಾಜಂತ್ರಿಯುಂ ಹಜಿಕಾಜಿಗೆ[ಕೆ]ಯ್ಮತ್ತರು ಹಂನೆರಡು (ಜಸಪ. ೯೭-೧೧೦; 1179); ಗೆ ೨ಬ್ಬೂರೊಳು ತ್ರಿಸಂಧ್ಯೆಯಲಿ ಅನುನಯಂ ಎಗೆ ತತ್ಪ್ರಸಾದಮನನು ಭವಿಸುತಿರೆ (ಬಸಪು. ೩೭-೧೦). ೨. ಒಂದು ಬಗೆಯ ಹೂವು : ನಂದ್ಯಾವರ್ತ ತ್ರಿಸಂಧ್ಯಾ ಬಂಧೂಕ ಕದಂಬಕ . . . ಮಲ್ಲಿಕಾದ್ಯನೇಕ ಸುರಭಿ ಕುಸುಮಾಂಗಳಂ ಸಜ್ಜುಕಮಪ್ಪವಂ ಪುಟ್ಟಿಯೊಳ್ ತೀವಿಕೊಂಡು (ಪಂಚತಂ. ೧೧೭-೪). [ತ್ರಿ + ಸಂಧ್ಯೆ]

ತ್ರಿಸರ (ನಾ). ಮೂರು ಎಳೆಗಳಿಂದ ಕೂಡಿದ (ಮುತ್ತಿನ) ಸರ : ಹಾರ ತ್ರಿ[ಪಾಕಾಂ. ತಿ]ಸರ ಪಂಚಸರ . . . ತಾತಿಯನಂದಾ ರಾಯನಿತ್ತ ನಂದನೆಗೆ (ರಾಮವಿ. ೮-೪೭) ; ತ್ರಿಸರ ಕೌಸ್ತುಭಸುಕೇಯೂರದಿಂ ಹಾರದಿಂ ದೊಸೆದುಟ್ಟ ಪೊಂಬಟ್ಟೆಯುಡುಗೆಯಿಂ ತಂಡುಗೆಯಿಂದೆಸೆವ ನೀಲೋತ್ಪಲ ಶ್ಯಾಮಲಂ ಕೋಮಲಂ ಬರುತಿರ್ದಂ (ಜೈಮಿಭಾ. ೧೪-೩೭); ನಿಮ್ಮ ಗುಣಂಗಳ ಕಥೆಯನು ತಂದರೆ ಕಂಕಣವನು ತ್ರಿಸರವನು ಕೊಡು ಎಂದು ತಡೆದು (ಭೃಸೂ. ೫೯). 'ತಿಸರ$_1$' ಪರಾ. [ತ್ರಿ + ಸರ$_2$]

ತ್ರಿಸಾಕ್ಷಿ (ನಾ). ೧. ದೇಹ, ಮಾತು ಮತ್ತು ಮನಸ್ಸುಗಳೆಂಬ ಮೂರು ಸಾಕ್ಷಿಗಳು. ೨. [ಜೈನ] ಆತ್ಮ, ಇಂದ್ರ ಮತ್ತು ಸಿದ್ಧ ಎಂಬ ಮೂರು ಸಾಕ್ಷಿಗಳು : ತ್ರಿಸಾಕ್ಷಿಯಿಂ ಚತುರ್ವಿಧಾಹಾರಶರೀರನಿವೃತ್ತಿ ಶಪನಮಪ್ಪ ಸಂನ್ಯಸನಪ್ರತ್ಯಾಖ್ಯಾನಮಂ ದಯಾಂಗೆಯ್ದು (ಸುಳುಮಾ. ೧೩-೪ ವ) ; ವಸ್ತ್ರಮಾಳಾವಾಮಣಭೂಷಾವಳಿಯಂ ನಿಜತನುವಿಂ ದೇವರ ದೇವಂ ತ್ರಿಸಾಕ್ಷಿಯಿಂ ತೊಲಗಿಸಿದಂ (ಮಲ್ಲಿಪು. ೧೩-೧೪೪).

[ತ್ರಿ + ಸಾಕ್ಷಿ]

ತ್ರಿಸಾಕ್ಷಿಕ (ನಾ). [ಜೈನ] ಆತ್ಮ, ಇಂದ್ರ ಮತ್ತು ಸಿದ್ಧರೆಂಬ ಮೂರು ಬಗೆಯ ಸಾಕ್ಷಿಗಳನ್ನು ಉಳ್ಳವನು: ಸಮಸ್ತವಸ್ತುಗಳೊಳ್ ಸಮತೆಯಂ ಭಾವಿಸಿ ಬಾಹ್ಯಾಭ್ಯಂತರಪರಿಗ್ರಹಪರಿತ್ಯಾಗೋನ್ಮುಖಮಾನಸಂ ತ್ರಿಸಾಕ್ಷಿಕನಾಗಿ ವಸ್ತ್ರಾಭರಣ ಮಾಲ್ಯಾದಿಗಳಂ ಮೆಯ್ಯಿಂ ತೊಲಗಿಸಿ (ಆದಿಪು. ೯-೭೬ ವ) ; ಸಕಳೋರ್ವೀಶ್ವರ ನಾಕಿನಾಯಕಚಮೂಪರ್ಯಾಪ್ತಿಪಾತ್ರಂ ತ್ರಿಸಾಕ್ಷಿಕನಾಗಳ್ ಬಲಗೆಯ್ ನೊಸಲ್ಗೆಡದ ಕೆಯ್ ಪರ್ಯಂಕಮಪ್ಪಂತು ಸಾರ್ಚಿ . . . ಜಿನಶ್ರೀದೀಕ್ಷೆಯಂ ತಾಳ್ದಿದಂ (ಶಾಂತಿಪು. ೮-೧೨೩).

[ಸಂ.]

ತ್ರಿಸಾಲ (ನಾ). ಮೂರು ಪ್ರಾಕಾರಗಳು : ಲತಾಭವನಂಗಳಿಂದಂ ತ್ರಿಸಾಲ ಪರಿವೇಷ್ಟಿತಂಗಳಿಂದಂ (ಕಶ್ಮ. ೧-೨೮ ವ). [<ಸಂ. ತ್ರಿಶಾಲ]

ತ್ರಿಸೂಲಿ (ನಾ).=ತ್ರಿಶೂಲಿ ೨: "ಜರಟಿ-ಹುಲ್ಲು, ತ್ರಿಸೂಲಿ" (ಓಷಧಿ. ೬೦).

[<ಸಂ. ತ್ರಿಶೂಲಿನ್]

ತ್ರಿಸೆ (ನಾ). ಬಾಯಾರಿಕೆ ; ನೀರಡಿಕೆ ; ದಾಪ : ತ್ರಿಸೆ ಮೆಯ್ಯ ತಿನಿಸು ನೆಜ್ ಸೈರಿಸಬಾರದ ತಲೆಯ ನೋವು . . . ಕಿಡಿಸಲಾಜವೆ ನರರಂ (ಧರ್ಮಾಮೃ. ೧-೦೭೦). [<ಸಂ. ತೃಷಾ]

ತ್ರಿಸ್ಥಾನ (ನಾ). = ತ್ರಿಸ್ಥಾಯಿ : ಕೊರಲಂ ನಿಟ್ಟಿಗೆ ತಂದು ಪಂಶಶ್ರುತಿಯಿಂ ತ್ರಿಸ್ಥಾನ ಸಂಶುದ್ಧಿವೆತ್ತಿರೆ ನಾನಾವಿಧದಿಂ ಪ್ರಯೋಗಿಸುವುಪಾಂಗಂಗಳ್ ರಸಂಬೆತ್ತು ಬಿತ್ತರಿಪಂತಾಣತಿ ಮಾಡಿದಂ (ಮಲ್ಲಿಪು. ೮-೨೫) ; ವಸ್ತುಕ ವರ್ಣಕ ತ್ರಿಸ್ಥಾನದ ಮೇಲೆ ನುಡಿವ ನುಡಿಗಳು ಇತ್ತಿತ್ತಲಲ್ಲದೆ ಅತ್ತಲಾರು ಬಲ್ಲರು (ಅವಶಂ. ೧೩೯-೬೪೦). [ತ್ರಿ + ಸ್ಥಾನ]

ತ್ರಿಸ್ಥಾಯಿ (ನಾ). [ಸಂಗೀತ] ಮಂದ್ರ, ಮಧ್ಯಮ ಮತ್ತು ತಾರಗಳೆಂಬ ಮೂರು ವಿಧವಾದ ಸ್ಥಾಯಿಗಳು : ಒಂದೇ ಆಧಾರಶ್ರುತಿಯಲ್ಲಿ ಈ ಎರಡು ಶಾರೀರಗಳೂ ತ್ರಿಸ್ಥಾಯಿಯಲ್ಲಿ ಲೀಲಾಜಾಲವಾಗಿ ಹಾಡಲಾಗುವುದಿಲ್ಲ (ಸಂಗೀಚಂ. ೧೬೭) ; ಆತನಿಗೆ ತ್ರಿಸ್ಥಾಯಿ ಶಾರೀರವಿತ್ತು (ಸಂಗೀಶ. ೪೫). [ತ್ರಿ + ಸ್ಥಾಯಿ]

ತ್ರಿಸ್ಥಳಂ (ಅ). ಮೂರು ಪಟ್ಟು; ಮಂಮರ್ಮಿಡಿ [?] ವಿರಾಟಂ ತ್ರಿಸ್ಥಳಂ ಮುಸಗಿ ಪುರಕ್ಷೋಭಮಾಗಿರ್ದು ಸಮಸ್ತಸಾಧನಸಹಿತಂ ನಡೆಯೆ (ಬಂಹರಿ. ೧೧-೪೦ ವ). [?]

ತ್ರಿಸ್ನೇಹ (ನಾ). [ವೈದ್ಯಶಾ] ತುಪ್ಪ, ಹರಳೆಣ್ಣೆ ಮತ್ತು ಎಳ್ಳೆಣ್ಣೆ ಈ ಮೂರು ಪದಾರ್ಥಗಳ ವಿಶ್ರಣ : ವಾತಕ್ಕೆ ತ್ರಿಸ್ನೇಹವನ್ನು ಕೂಡಿಸಬೇಕಾದರೆ, ತುಪ್ಪ ಒಂದು ಪಾಲು, ಹರಳೆಣ್ಣೆ ಎರಡು ಪಾಲು, ಎಣ್ಣೆ ಮೂರು ಪಾಲು ಈ ರೀತಿ ಕೂಡಿಸುವುದು . . . ಸಕಲರೋಗಗಳನ್ನೂ ತ್ರಿಸ್ನೇಹವನೊತ್ತಿ ಅಭ್ಯಂಗನಸ್ನಾನಮಾಡಲು ಪರಿಹರಿಸುವುದು (ಸಕವೃ. ೩೭). [ತ್ರಿ + ಸ್ನೇಹ]

ತ್ರಿಸ್ರೋತೆ (ನಾ). ಮೂರು ಲೋಕಗಳಲ್ಲಿ ಪ್ರವಹಿಸುವ ನದಿ; ಗಂಗೆ : ಆ ತ್ರಿಸ್ರೋತೆಯಾದ ನದಿಯು ಮಳಿಗಾಲದ ಪ್ರವಾಹದಿಂದ ಕೂಡಿ ಆ ದಡದಿಂದ ಈ ದಡದವರೆಗೆ ತುಂಬಿ ಹರಿಯುತ್ತಿತ್ತು (ಬಂಕಿಮ. ೩೯೮).

[<ಸಂ. ತ್ರಿಸ್ರೋತಸ್]

ತ್ರಿಸ್ಲೋಕ 'ತ್ರಿಲೋಕ' ನೋ.

ತ್ರೀಂದ್ರಿಯ (ನಾ). ಸ್ಪರ್ಶ, ರಸನ ಮತ್ತು ಘ್ರಾಣೇಂದ್ರಿಯಗಳೆಂಬ ಮೂರು ಇಂದ್ರಿಯಗಳನ್ನು ಉಳ್ಳ ಜೀವ; ಕ್ರಿಮಿ ಕೀಟ ಮುಂತಾದಂವು : ಸ್ಪರ್ಶರಸನಘ್ರಾಣೇಂದ್ರಿಯ ಸಮನ್ವಿತಂಗಳಪ್ಪ ಪಿಪೀಲಿಕಾದಿ ತ್ರೀಂದ್ರಿಯಂಗಳ್ (ಆದಿಪು. ೧೦-೬೧ ವ); ಇಜುವೆ ಮೊದಲಾದ ತ್ರೀಂದ್ರಿಯಂಗಳ್ಗಂ (ತಸಾಪ್ರ. ೪೩) ; ಇಂದ್ರಗೋಪ ಪರ್ಣವೃಶ್ಚಿಕ ಸವಾದ ಕ್ರಿಮಿಕೀಟಕಾದಿ ತ್ರೀಂದ್ರಿಯಂಗಳ್ ಸ್ಪರ್ಶನ ರಸನ ಘ್ರಾಣೇಂದ್ರಿಯ ಬೋಧಕಲಿತಂಗಳಪ್ಪುವು (ತತ್ತ್ವಪ್ರ. ೯೪). [ತ್ರಿ + ಇಂದ್ರಿಯ]

ತ್ರುಟಿ (ನಾ). ೧. ಸೂಕ್ಷ್ಮವಾದುದು ; ಅಣು : "ಅಣು ಸೂಕ್ಷ್ಮಂ ಲೇಶಂ ತ್ರುಟಿ ಕಣಂ ಲವಂ ಸ್ತೋಕ . . . ಕಿಱಿದಪ್ಪುದದು" (ವಸ್ತುಕೋ. ೧೨೭-೩೬). ೨. ಕಾಲದ ಅತಿ ಸೂಕ್ಷ್ಮವಾದ ಭಾಗ ; ಒಂದು ಕ್ಷಣದ ಕಾಲುಭಾಗ : ತ್ರುಟಿಕಾಲ ಯುಗದಂತಿಹುದು ನೀನುಳಿಯೆ (ನಿಘಾಗ. ೦೦-೩೭-೧೨) ; ಇಂಥ ಮೂರು ತ್ರಸರೇಣುಗಳಷ್ಟು ಅಂತರವನ್ನು ಕ್ರಮಿಸಲಿಕ್ಕೆ ಸೂರ್ಯನಿಗೆ ಬೇಕಾಗುವ ಕಾಲಕ್ಕೆ "ತ್ರುಟಿ" ಎಂಬ ಸಂಜ್ಞೆಯು (ಧಾಮೃತ. ೫೯). ೩. ಲೋಪ ; ಭಂಗ : ಚಾರು, ಅವರೆಲ್ಲರ ಆತಿಥ್ಯದಲ್ಲಿ ತಿಲಮಾತ್ರ ತ್ರುಟಿ ಆಗಗೊಡುತ್ತಿರಲಿಲ್ಲ (ಇಪ್ರಳ. ೩೮೪) ; ತಾಯಿ ಮಗಳ ಬಾಂಧವ್ಯದಲ್ಲಿ ತ್ರುಟಿಯಾಯಿತೆಂದು ಹೇಳದಿದ್ದರೂ ಸುಖದುಃಖದ ಮಾತುಗಳ ವಿನಿಮಯ ತೀರ ಕಡಿಮೆಯಾಯಿತು (ಸಂಜೀವಿ. ೭೫). ೪. ಒಂದು ಬಗೆಯ ಪರಿಮಳ ದ್ರವ್ಯ ; ಕರ್ಪೂರ : ಲವಂಗಂ ನಾಗೋರ್ವೀರುಹಕುಸುಮಮಲ್ಲಂ ಮೆಟಸು ಸೈಂಧವಂ ಬೆಲ್ಲಂ ಪತ್ರಂ ತ್ರುಟಿಯಿನಿತುಮಂ ಕೂಡಿ . . . ಧೂಪಿಸಿ (ಶೋಕೋಚ. ೮-೫೪). ೫. ಮರಿಯುವಿಕೆ ; ತುಂಡುಮಾಡುವಿಕೆ. ೬. ಮುರಿದ ಭಾಗ ; ತುಂಡು. ೭. ಮಾತು ಮುರಿಯುವಿಕೆ ; ವಚನಭಂಗ. ೮. ಹಾನಿ ; ನಷ್ಟ. ೯. ಸಂದೇಹ ; ಸಂಶಯ. ೧೦. ಸಣ್ಣ ಜಾತಿಯ ಏಲಕ್ಕಿ. ೧೧. ಒಂದು ಬಗೆಯ ವೃಕ್ಷ. [ಸಂ.]

ತ್ರುಟಿತ (ಗು). ೧. ಭಂಗವಾದ ; ಮುರಿದ : ಕೊಪ್ಪಳದ ತ್ರುಟಿತ ಶಾಸನವು . . . ಈ ಸಂಗ್ರಹದಲ್ಲಿ ಮೊದಲಿನದು (ಶಾಸಪ. ೨ ಮುನ್ನುಡಿ). ೨ ನೋವಾದ : ಗಾಯಗೊಂಡ. (ನಾ). ೩. ಭಂಗ ; ಭಗ್ನ

ವಾದುದಂ : ಪರಂಪರೆ ತ್ರುಟಿತವಾಗಿದೆ ಎಂಬುದರಿಂದ ಅವನು ಮೊದಲಿಗನಲ್ಲ ಎಂದು ತಿಳಿಯಬೇಕಾಗಿಲ್ಲ (ಕಸಾಚ. ೨೭೯). ೪. [ಜೈನ] ಒಂದು ಕಾಲಪ್ರಮಾಣ : ಎಂಬತ್ತುನಾಲ್ಕು ಲಕ್ಷ ಗುಣಿತಕ್ರಮದಿಂದ ಕುಮುದಾಂಗ ಮತ್ತು ಕುಮುದ . . . ತ್ರುಟಿತಾಂಗ ಮತ್ತು ತ್ರುಟಿತ . . . ಎಂಬವು ಕ್ರಮದಿಂದ ಆಗುತ್ತವೆ (ಜೈನಪ. ೩೦೬). [ಸಂ.]

ತ್ರುಟಿತಾಂಗ (ನಾ).[ಜೈನ] ಒಂದು ಕಾಲಪ್ರಮಾಣ : ಎಂಬತ್ತುನಾಲ್ಕು ಲಕ್ಷ ಗುಣಿತಕ್ರಮದಿಂದ ಕುಮುದಾಂಗ ಮತ್ತು ಕುಮುದ . . . ತ್ರುಟಿತಾಂಗ ಮತ್ತು ತ್ರುಟಿತ . . . ಎಂಬವು ಕ್ರಮದಿಂದ ಆಗುತ್ತವೆ (ಜೈನಪ. ೩೦೬). [ಸಂ.]

ತ್ರುವ್ವಿ (ನಾ). ಹಾಡುವಾಗ ಪ್ರತಿಸಾಲಿನ ಕೊನೆಗೆ ಬಳಸುವ ಒಂದು ಶಬ್ದ : ಮಣ್ಣೊಳಗಾಡಿ ನೀ ಬಂದೆಯೂ ತ್ರುವ್ವಿ ಬೆಣ್ಣೆಯ ಬೇಡೆ ಬಯ್ದರೆ ಕಂದ ತ್ರುವ್ವಿ (ಪುರಂದ. ೪-೩೦೦-೭). 'ಸಂವ್ವಿ' ಪರಾ. [?]

ತ್ರೇತಾಗ್ನಿ (ನಾ). ೧. ದಕ್ಷಿಣಾಗ್ನಿ, ಗಾರ್ಹಪತ್ಯ ಮತ್ತು ಆಹವನೀಯ ಗಳೆಂಬ ಮೂರು ಅಗ್ನಿಗಳು : "ವಹ್ನಿತ್ರಿತಯಂ ತ್ರೇತಾಗ್ನಿ" (ಪಸ್ತು.ಕೋ. ೫೮-೪೧). ೨. ಅಂತಹ ಮೂರು ಅಗ್ನಿಗಳನ್ನು ಇರಿಸಿ ಕೊಂಡವನು. [ಸಂ.]

ತ್ರೇತಾಯುಗ (ನಾ). ಕೃತ, ತ್ರೇತೆ ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಲ್ಲಿ ಎರಡನೆಯ ಯುಗ : ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದ ವೆಂದನಯ್ಯ (ಅವಚಂ. ೧೩-೩೨) ; ನಡೆವುದಾದಿಯುಗಂಗಳಿಂಳು ನಾಲ್ಕಡಿ ಯೊಳುನ್ನತಧರ್ಮವಾ ಮೂಱಡಿಯೆ ನಡವುದು ಧರ್ಮವೂ ತ್ರೇತಾ ಯುಗಂಗಳ್ಗೆ (ಬಸಪು. ೨-೫). [ಸಂ.]

ತ್ರೇತೆ (ನಾ). ೧. ಮೂರರ ಗುಂಪು.-ಸಮೂಹ. ೨. = ತ್ರೇತಾಗ್ನಿ೧ : "ಹುತಾಶನ ತ್ರಿತಯನಾಮಕಂ ತ್ರೇತೆ" (ಪಸ್ತು.ಕೋ. ೦೩೯-೦೩೬) ; "ಅಗ್ನಿ ಮೂಱಿಂದೊಡನುಡಿವುದುಂ ತ್ರೇತೆಯೆಂಬುದು" (ಪುಂಗರಾ. ೦೩೮-೨). ೩. = ತ್ರೇತಾಯುಗ : ಕೃತಘ್ನಭಾವಂ ತ್ರೇತಾಪ್ರವೇಶದೊಳ್ . . . ಅಲ್ಲದೆ ಜನಪದದ ಜನಂಗಳೊಳಿಲ್ಲ (ಆಗವಿ. ೨-೦ ಪ) ; ತ್ರೇತೆಯಲಿ ರಘುರಾಮನಾಮದಿ ಸೀತೆಯಂ ಹೋಗಾಡಿ (ಬಸಪು. ೫೪-೩೯) ; ಕೃತಯುಗದವರು ತ್ರೇತೆಯವರಿಂದತಿಪರಾಕ್ರಮಯುಕ್ತರು (ಕುವ್ಯಾಆ. ೧೦-೩೩) ; ಮಂಥರೆಯ ಈ ಮಮತೆಯಾವರ್ತದೊಳ್, ಸುಟ್ಟುರಿಗೆ ಧೂಳಿ ತರಗೆಲೆ ತಿರ್ರನೆಯೆ ಸುತ್ತುವೋಲ್ ಸಿಲ್ಕಿ ಘೂರ್ಣಿಸದಿಹುದೆ ಪೇಳ್ ತ್ರೇತಾಮಹಾಯುಗಂ! (ತ್ರೇಠಾಮಾ. ೨೭-೭೦೪). ೪. ಮೂರರ ಗರ : ಕೃತದಲ್ಲಿ ನಾಲ್ಕು ಅಂಕಗಳಿರುವುವು. ಆ ಅಂಕವು ಬಿದ್ದರೆ ತ್ರೇತೆ (೩), ದ್ವಾಪರ (೨), ಕಲಿ (೧) ಎಂಬ ಗರಗಳ ಅಂಕಗಳೂ ಸೇರಿ ಹತ್ತಾಗುವುವು (ಬ್ರಹ್ಮಠಾ. ೫೦೭ ಆಡಿಟಿ). [ಸಂ. ತ್ರೇತಾ]

ತ್ರೈಕಾಲ (ನಾ). ಭೂತ, ಭವಿಷ್ಯತ್ತು ಮತ್ತು ವರ್ತಮಾನಗಳೆಂಬ ಮೂರು ಕಾಲಗಳು: ಭುವನದೊಳು ತ್ರೈಕಾಲ ತಪಸಿನ ವಿವರವನು ವಿರಚಿಸಿದನು (ರಿಚ್ಛಪು. ೧-೫೦). [ಸಂ.]

ತ್ರೈಕಾಲಿಕ (ಗು). ೧. ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂ ಕಾಲಗಳೆಂಬ ಮೂರು ಕಾಲಗಳಲ್ಲಿಯೂ ಉಂಟಾಗುವ. ೨. ಭೂತ, ಭವಿಷ್ಯತ್ತು ಮತ್ತು ವರ್ತಮಾನಗಳೆಂಬ ಮೂರು ಕಾಲಗಳಲ್ಲಿಯೂ ಇರುವ. [ಸಂ.]

ತ್ರೈಕಾಲ್ಯ (ಗು). ೧. ತ್ರಿಕಾಲಗಳಿಗೂ ಸಂಬಂಧಪಟ್ಟ; ೨. ಭೂತ, ಭವಿಷ್ಯತ್ತು ಮತ್ತು ವರ್ತಮಾನ ಕಾಲಗಳ ತಿಳಿವನ್ನು ಹೊಂದಿದ. 'ತ್ರೈಕಾಲ್ಯ ಯೋಗಿ' ಪರಾ. [ಸಂ.]

ತ್ರೈಕಾಲ್ಯಯೋಗಿ (ನಾ). ತ್ರಿಕಾಲಜ್ಞಾನಿಯಾದ ಯೋಗಿ : ತ್ರೈಕಾಲ್ಯ ಯೋಗಿ ಬಂದುದಂ . . . ಕೇಕಿಕೋಕಿಳಕಾಕಳಿಯಿಂದಱಿದು ಬನದೊಳ ಱಿದನಾಗಳ್ (ಹಂದ್ರಪು. ೨-೮೧). [ತ್ರೈಕಾಲ್ಯ + ಯೋಗಿ]

ತ್ರೈಗುಣ್ಯ (ನಾ). ಸತ್ವ, ರಜಸ್ಸು ಮತ್ತು ತಮಂಸ್ಸುಗಳೆಂಬ ಮೂರು ಗುಣಗಳು ; ತ್ರಿಗುಣ : ಪುಣ್ಯಹೀನರನಾರಯಿದು ಕಾರುಣ್ಯದಿಂದಂ ಸಲಹುವಂ ತ್ರೈಗುಣ್ಯಕಾರಣಪುರುಷನೆಲ್ಲಾ ಭಕ್ತಿಭಂಡಾರಿ (ಬಸಪು.೩೦-೧೪); ಜಗದಂಡಕರಂಡಷಂಡನನಿರ್ಮಾಣಪ್ರವೀಣನುಂ ತ್ರೈಗುಣ್ಯವಾಸನಾತೀತಂ . . . ಒಪ್ಪುತ್ತಿರ್ದಂ (ಕಬಕಂ. ೧-೮೧ ವ). [ಸಂ.]

ತ್ರೈಜಗ (ನಾ). ಸ್ವರ್ಗ, ಮರ್ತ್ಯ ಮತ್ತು ಪಾತಾಳಗಳೆಂಬ ಮೂರು ಲೋಕಗಳು ; ತ್ರಿಜಗ : ಇವರೆಲ್ಲರೂ ಯೋನಿಜರೆಂಬುದ ತ್ರೈಜಗ ಬಲ್ಲುದು (ಬಸವ. ೫೪೬) ; ಕುಹಕಮತಿಗಳು ಕಂದರ್ಪ ತ್ರೈಜಗಕೆ ತಲ್ಲಣವ (ಕುಷ್ಕಾಅ. ೦೩-೪) ; ಭಾರವಾಗಿದ್ದರೆ ಹೊಣದ ಕೈಚೀಲವು ಹಗುರವಾಗಿದ್ದರೆ ಮನವು ಅಂತಹ ಮನುಜನಿಗಾವುದಸಾಧ್ಯವು ತ್ರೈಜಗವಾತನ ವಶವು (ಇಂಚಾಪ. ೨೩೨-೪೬). [<ಸಂ. ತ್ರಿಜಗತ್]

ತ್ರೈಜಗದೀಶ (ನಾ). ಮೂರು ಲೋಕಗಳ ಒಡೆಯ : ತ್ರೈಜಗದೀಶ . . . ರಕ್ಷಿಸು ನಮ್ಮನನವರತ (ಹರಿಸಾ. ೧೧). [<ಸಂ. ತ್ರಿಜಗದೀಶ]

ತ್ರೈತ (ನಾ). ಮೂರರ ಗುಂಪು ; ತ್ರಿತಯ : ಎಲ್ಲ ಜ್ಞಾನಕರ್ಮ ಗಳಲ್ಲಿ ಕರ್ತೃ ಕರ್ಮ ಕ್ರಿಯಾಪದಗಳ ತ್ರೈತವನ್ನೂ ತ್ರಿಪುಟಿಯನ್ನೂ ಆಶ್ರಯಿಸಲೇಬೇಕು (ವಿಜ್ಞಾಮಂ. ೫೨). [ಸಂ.]

ತ್ರೈದಶ್ಯ (ಗು). ದೇವಲೋಕಕ್ಕೆ ಸಂಬಂಧಿಸಿದ ; ಸ್ವರ್ಗೀಯ : ಭೂಭೃತ್ಸುತೆ ತಾಂ ತ್ರೈದಶ್ಯಯೋಷಿಜ್ಜನಮನನುದಿನಂ ಗೆಲ್ವುದಾಶ್ಚರ್ಯಮೇ ದಲ್ (ರಾಜಚೇ. ೭-೬೨). [<ಸಂ. ತ್ರಿದಶ]

ತ್ರೈಧರೆ (ನಾ). = ತ್ರೈಜಗ : ತ್ರೈಧರೆಗೆ ಮಾರ್ಗವ ಯುಕ್ತಿಸಿದ ಸರ್ವಜ್ಞ ಚಿನ್ಮಯ ಜಿಷ್ಣು ತೀರ್ಥಕರ (ಜಿನಠಾ. ೭೨-೦೩). [<ಸಂ. ತ್ರಿಧರಾ]

ತ್ರೈನೇತ್ರ (ನಾ). ಮೂರಂ ಕಣ್ಣುಗಳು ; ತ್ರಿನೇತ್ರ. [ಸಂ.]

ತ್ರೈಪುಂಡ್ರ (ನಾ). = ತ್ರಿಪುಂಡ್ರ : ಲಲಾಟದೊಳು ತ್ರೈಪುಂಡ್ರಮುಜ್ವಳಿಸೆ (ಬಸಪು. ೪-೧೦). 'ತ್ರೈಪುಂಡ್ರಧಾರಿ' ಪರಾ. [ಸಂ.]

ತ್ರೈಪುಂಡ್ರಧಾರಿ (ನಾ). ತ್ರಿಪುಂಡ್ರವನ್ನು ಧರಿಸಿರುವವನು: ಆ ತ್ರೈಪುಂಡ್ರಧಾರಿಗೆ ನಮಿಸಿ ಬರುತಿಹ ಗಂಡ ಲಕ್ಷ್ಮಣನಿದಿರಲೇಱಿದ ಹೊಳೆವ ಮಣಿರಥವ (ಕಾತಿಕಾ. ೨೭-೨೫). [ಸಂ. ತ್ರೈಪುಂಡ್ರಧಾರಿನ್]

ತ್ರೈಪುರ (ನಾ). ದೈತ್ಯರ ಮೂರಂ ನಗರಗಳು ; ತ್ರಿಪುರ : ಕೋಪದಿಂ ಮದಗಜದನುಜನಂ ಮೆಟ್ಟಿ ಸೀಳಿದನು ತ್ರೈಪುರಂಗಳನುರುಟಿದನು (ಬಸಪು. ೧೭-೩). [ಸಂ.]

ತ್ರೈಪುರುಷ (ನಾ). ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರೆಂಬ ತ್ರಿಮೂರ್ತಿಗಳಂ : ಅಖಿಳ ಜಗತ್ಕೀರ್ತಿಳಕ್ಕೆ ಪ್ರತ್ಯಕ್ಷಂ ಮಾಡಿ ತೋಱುವನ್ತೆ ಕಟಕಕಮಳಾರ್ಕ್ಕವೆಸರ ತ್ರೈಪುರುಷದೇವರ ಶಾಲೆಯುಮಂ . . . ಮಾಡಿಸಿ (ಕಇಆ. ೫-೨-೦೭೨ ; 1058) ; ಧಾರಾಪೂರ್ವ್ವಕಂ ಮಾಡಿ ತ್ರೈಪುರುಷ ದೇವರಂ ನೋಡಿ (ಸಾಇಇ. XX, ೬೫-೪ ; 1101). [ಸಂ.]

ತ್ರೈಭುವನ (ನಾ). ಸ್ವರ್ಗ, ಮರ್ತ್ಯ ಮತ್ತು ಪಾತಾಳಗಳೆಂಬ ಮೂರು ಲೋಕಗಳು ; ತ್ರಿಭುವನ: ವೆಂಗೀವಿಷಯಂ ತ್ರೈಭುವನಂಗಳೊಳಗ್ಗಳದ ವಿಷಯಮುಪಮಾತೀತಂ (ಕಾಂತಿಪು. ೦-೪೨) ; ಈತನೇ ತ್ರೈಭುವನ ಪಾವನನಕ್ಕ (ಬಸಪು. ೫-೪೯) ; ತ್ರೈಭುವನದೊಳ್ತಾನೇ ಕೃತಾರ್ಥನಲ್ಲಾ (ಜೈಮಿಭಾ. ೨-೪೬). [ಸಂ.]

ತ್ರೈಮಲ (ನಾ). ಹೆಣ್ಣು, ಹೊನ್ನು ಮತ್ತು ಮಣ್ಣುಗಳೆಂಬ ಮೂರು ವಿಧವಾದ ಮಲಗಳು; ತ್ರಿಮಲ : ಕಾಶಿ ಕಂಚಡಿಯೇಕೆ ... ಕೇಶವನು ಕಿತ್ತಿಕೊಳಲೇಕೆ ತ್ರೈಮಲದ ಆಶೆ ಬಿಡದನಕ (ಸರ್ವಜ್ಞ. ೫೭೩). [ಸಂ.]

ತ್ರೈಮಾಸಿಕ (ಗು). ೧. ಮೂರು ತಿಂಗಳಿಗೊಮ್ಮೆ ನಡೆಯುವ : ಇದೇ ವಿಷಯದ ಮೇಲೆ ತ್ರೈಮಾಸಿಕ ಪರೀಕ್ಷೆಯಲ್ಲಿ . . . ಪ್ರಬಂಧವೊಂದನ್ನು ಬರೆಯಿರಿ (ರೂಪಸಂ. ೫೩). (ನಾ). ೨. ಸತ್ತವರಿಗಾಗಿ ಮೂರನೆಯ ತಿಂಗಳಿನಲ್ಲಿ ಮಾಡುವ ತಿಥಿ. ೩. ಮೂರು ತಿಂಗಳಿಗೊಮ್ಮೆ ಹೊರಡುವ ಪತ್ರಿಕೆ : ಹಿಂದಿನ ವರ್ಷದ ತ್ರೈಮಾಸಿಕವೊಂದರಲ್ಲಿ ಈ ಕತೆ ಪ್ರಕಟವಾಗಿದೆ (ರೂಢಿ). 'ಮಾಸಿಕ' ಪರಾ. [ಸಂ.]

ತ್ರೈಮೂರುತಿ (ನಾ). = ತ್ರೈಪುರುಷ : ಸತಿಯರ ಬಲೆಗೆ ಸಿಲುಕದರಾರು ತ್ರೈಮೂರುತಿಗಳೊಳಗಾಗಿ (ತೊರಗಾ. ೧-೫-೨೫).

[<ಸಂ. ತ್ರಿಮೂರ್ತಿ]

ತ್ರೈಮೂರ್ತಿ (ನಾ). = ತ್ರೈಪುರುಷ : ತ್ರೈಮೂರ್ತಿಯೊಳ್ ಸತ್ವಮೂರ್ತಿಯೆ ನೀಂ (ಜಗವಿ. ೧೮-೬೬) ; ಆದಿಯಲಿ ಕಮಲಾಸನನು ಮಧುಸೂದನನು ಮಧ್ಯದಲಿ ಮೇಲಣ ಹಾದಿಯಲಿ ಗಿರಿಜೇಶನಿರೆ ತ್ರೈಮೂರ್ತಿಮಯವಾಗಿ ಕಾದುಕೊಂಡಿಹರಖಿಳಲೋಕವಂ (ಕುಪ್ಯಾಉ. ೪-೧೦೭) ; ತ್ರೈಮೂರ್ತಿಗಳ ದಿವ್ಯಶಕ್ತಿಯಿಂ . . . ತೀವಿದ ಮಹಾಶರವನು . . . ಕಿವಿವರೆಗೆ ತೆಗೆದಾರ್ದು ಫಲುಗುಣನೆಚ್ಚಂ (ಜೈಮಿಭಾ. ೧೩-೪೬). [<ಸಂ. ತ್ರಿಮೂರ್ತಿ]

ತ್ರೈರಾಶಿ (ನಾ). [ಗಣಿತ] ಗಣಿತದ ಒಂದು ವಿಧಾನ ; ಮೂರು ಅಂಶಗಳ ಸಹಾಯದಿಂದ ನಾಲ್ಕನೆಯ ಅಂಶವನ್ನು ಕಂಡುಹಿಡಿಯುವ ಮಾರ್ಗ : ಈ ಪುಸ್ತಕದಲ್ಲಿ ಕ್ಷೇತ್ರಗಣಿತ, ತ್ರೈರಾಶಿ . . . ಸಮಕೋಶಕ್ಕೆ ಸಂಬಂಧಪಟ್ಟ ಲೆಕ್ಕಗಳೂ, ಒಟ್ಟು ೨೪೬ ಲೆಕ್ಕಗಳು ಒಂಬತ್ತು ಅಧ್ಯಾಯಗಳಲ್ಲಿ ಕೊಡಲ್ಪಟ್ಟಿವೆ (ಗಣಿಜ. ೧೫). 'ಪಂಚರಾಶಿ' ಪರಾ. [<ಸಂ. ತ್ರೈರಾಶಿಕ]

ತ್ರೈರಾಶಿಕ (ನಾ). = ತ್ರೈರಾಶಿ : ತ್ರೈರಾಶಿಕದ ಗಣಿತಮಱಿವುದರ್ಕೆ ಸೂತ್ರಂ (ವೃವಹಾ. ೭-೬) ; ಆಗ ನಾವು ತ್ರೈರಾಶಿಕ ಹಾಕಿ . . . ೨೮ ಜನರು ಒಂದು ತಾಸು ಕೆಲಸಮಾಡಬೇಕು ಎನ್ನುವೆವು (ಬಾಲಪ್ರ. II, ೦೦೦೦). [ಸಂ.]

ತ್ರೈರಾಸಿಕ (ನಾ). = ತ್ರೈರಾಶಿ : ಯಾ ಪ್ರಕಾರದಿಂ ಯಾವೆಯನಿಟ್ಟು ಫಲದಿಂ ಗುಣಿಸಿ ಪ್ರಮಾಣದಿಂದ ಭಾಗಿಸುವುದು ತ್ರೈರಾಸಿಕದ ಕ್ರಮ (ಭಾಸ್ಕರ. ೧೬-೪). [<ಸಂ. ತ್ರೈರಾಶಿಕ]

ತ್ರೈಲೋಕ್ಯ, ತ್ರೈಳೋಕ್ಯ (ನಾ). = ತ್ರಿಭುವನ : ತ್ರೈಲೋಕ್ಯಕ್ಷೋಭಕಾರಣ ತೀರ್ಥಕರ ಪುಣ್ಯಹೇತುಗಳಪ್ಪ ಷೋಡಶಭಾವನೆಗಳಂ ಭಾವಿಸಿ (ಆದಿಪು. ೬-೩೩ ವ) ; ಮಾರ್ಗಾಲಂಬನಮಾದುದು ತತ್ರೈಲೋಕ್ಯಶರಣ್ಯ ಸೇವ್ಯ ದಿವ್ಯಧ್ವನಿಯಿಂ (ಶಾಂತಿಪು. ೧೨-೨೮). ತ್ರೈಳೋಕ್ಯ.

ತ್ರೈಲೋಕ್ಯಮಲ್ಲ, ತ್ರೈಳೋಕ್ಯಮಲ್ಲ = ಮೂರು ಲೋಕಗಳಲ್ಲಿಯೂ ವೀರನೆಂದು ಪ್ರಸಿದ್ಧನಾದವನು ; ಒಂದು ಬಿರುದು : ಶ್ರೀಮತ್ತ್ರೈಲೋಕ್ಯಮಲ್ಲ ಭುಜಬಳ ಶಾನ್ತರದೇವಂ (ಎಕ. VIII, ನಗರ. ೫೯-೧೧ ; 1066) ; ಶ್ರೀಮತ್ತ್ರೈಳೋಕ್ಯಮಲ್ಲದೇವರ ವಿಜಯರಾಜ್ಯಂ ಪ್ರವರ್ತ್ತಿಸೆ (ಇಆ. IV, ೧೭೯-೫ ; 1048) ; ಶ್ರೀಮತ್ತ್ರೈಳೋಕ್ಯಮಲ್ಲ ದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ ಸಲುತ್ತಮಿರೆ (ಸೌಇಇ. XX, ೪೦-೪ ; 1066). [ಸಂ.]

ತ್ರೈಲೋಕ್ಯಗುರು (ನಾ). = ತ್ರಿಲೋಕಗುರು : ಮನುಷ್ಯದೇಹಮಂ ಕೆಯ್ಕೊಂಡು ತ್ರೈಲೋಕ್ಯಗುರು ಗುರುತನೂಜನ ಕೆಯ್ಯಂ ಪಿಡಿದರ ಮನೆಯಂ ಪೊಱಮಟ್ಟು . . . ಬೀಡಿಂಗೆ ವಂದು ಕುಂತಿಗೇಕಾಂತದೊಳಿಂತೆಂದಂ (ಪಂಪಭಾ. ೯-೬೦ ವ) ; ತ್ರೈಲೋಕ್ಯಗುರುಗಳ ಮಮಪ್ಪ ಕೀರ್ತಿಧರಗುರುಗಳ ಸಭಾಮಂಡಳಮಂ ಪೊಱಮಟ್ಟೊಂದಡಿ ವರ್ಪೊಡಂ ತಕ್ಕುದಲ್ತು (ಶಾಂತಿಪು. ೪-೮೨ ವ). [ತ್ರೈಲೋಕ್ಯ + ಗುರು$_2$]

ತ್ರೈಲೋಕ್ಯನಾಥ, ತ್ರೈಳೋಕ್ಯನಾಥ (ನಾ). = ತ್ರಿಲೋಕಾಧಿಪತಿ : ದೇವೋತ್ತಮಾಂಗಂಗಳುಂ ಬಾಗಿದುವಾ ತ್ರೈಲೋಕ್ಯನಾಥೋದಯ ಮನಱಿಪುವಂತಾ ತ್ರಿಳೋಕಕ್ಕಮಾಗಳ್ (ಆದಿಪು. ೭-೩೮) ; ತ್ರೈಲೋಕ್ಯನಾಥನೋಲಗಸಾಲೆಯೊಳಮರೇಂದ್ರನೊಡನೆ . . . ಕುಳ್ಳಿರ್ದೋಲಗಿಸುತ್ತಿರ್ಪನಟ್ಟಿಯಿಂ ಜಿನಪತಿಯಂ (ಸುಕುಮಾ. ೯-೩೮) ; ಉದ್ಭವಿಸಿದಂ ತ್ರೈಲೋಕ್ಯನಾಥಂ ಜಿನಂ (ಪುಷ್ಪಪು. ೧೦-೨). **ತ್ರೈಳೋಕ್ಯನಾಥ :** ತ್ರೈಳೋಕ್ಯನಾಥವಿಭವ ಸಮಾಳೋಕನ ಜಾತಹರ್ಷಪುಳಕವಿಳಾಸವ್ಯಾಳಂಬಮಾಯ್ತು . . . ಸಕಳಸಸ್ಯಸಮೂಹಂ (ಚಂದ್ರಪು. ೧೬-೪೩).

[ತ್ರೈಲೋಕ್ಯ + ನಾಥ]

ತ್ರೈಲೋಕ್ಯನೇತ್ರ (ನಾ). ಮೂರು ಲೋಕಗಳಿಗೂ ಕಣ್ಣಿನಂತಿರುವವನು; ಸೂರ್ಯ : ತ್ರೈಲೋಕ್ಯನೇತ್ರಂ ತ್ರಿವೇದಮಯಂ ಧ್ವಸ್ತತಮಸ್ತಮಂ ಹೃತನಿಶಾಟಾಟೋಪನೊಲ್ದೀಗೆ ಗೌತಮಗೋತ್ರಾಂಬುಜಷಂಡಚಂಡಕಿರಣಂ ಗಾದಿತ್ಯನುತ್ಸಾಹಮಂ (ಪಂಚತಂ. ೨-೧೨). [ತ್ರೈಲೋಕ್ಯ + ನೇತ್ರ]

ತ್ರೈಲೋಕ್ಯಮೋಹಿನಿ (ನಾ). ಮೂರು ಲೋಕಗಳನ್ನು ಮೋಹಗೊಳಿಸುವಂಥ ಒಂದು ಬಗೆಯ ವಶೀಕರಣವಿದ್ಯೆ : ಶ್ರೀಗಂಧಮಂ, ಗೋರೋಚನಮಂ . . . ಎತ್ತುನಾಲಿಗೆ, ವಿಷ್ಣುಕ್ರಾಂತಿ ಇವಂ ಒಂದೊಂದಾಗಿ ಮರ್ದಿಸಿ ತಿಲಕವಿಡೆ ತ್ರೈಲೋಕ್ಯಮೋಹಿನಿ (ವಿವೃವಿ. ೨೨೦). [ತ್ರೈಲೋಕ್ಯ + ಮೋಹಿನಿ]

ತ್ರೈಲೋಕ್ಯಲೋಚನ (ನಾ). ೧. = ತ್ರೈಲೋಕ್ಯನೇತ್ರ. ೨. ಜಿನ : ಅಂತು ವಜ್ರದಂತ ಚಕ್ರವರ್ತಿ ಲಬಾ ವಧಿಲೋಚನಂ ತ್ರೈಲೋಕ್ಯಲೋಚನಂಗೆ ಸಾಷ್ಟಾಂಗ ಪ್ರಣತನಾಗಿ (ಆದಿಪು. ೩-೨೯ ವ). [ತ್ರೈಲೋಕ್ಯ+ಲೋಚನ]

ತ್ರೈಲೋಕ್ಯಸಾರ (ನಾ). ಮೂರು ಲೋಕಗಳಲ್ಲಿಯೂ ಅತ್ಯಂತ ಶ್ರೇಷ್ಠವಾದುದು : ವಾರಾಶಿಯೊಳಿನ್ನವು ಮುತ್ತೋರನ್ನವು ಪಡೆಯಲಾಗವತಿತರಳತರ ತ್ತಾರಾಹಾರಂ ಜಿತನೀಹಾರಂ ತ್ರೈಲೋಕ್ಯಸಾರಮಿಂತಿದು ಹಾರಂ (ಆದಿಪು. ೧೨-೧೧೮) ; ಓಂ ಣಮೋ ಅರಹಂತಾಣಂ . . . ಈ ಎರಡು ತ್ರೈಲೋಕ್ಯಸಾರಮೆಂಬ ಚಕ್ರದ ಮೂಲಮಂತ್ರಂಗಳೆಂದಱಿವುದು (ಪ್ರತಿಷ್ಠಾ. ೧೦-೧೧). [ತ್ರೈಲೋಕ್ಯ + ಸಾರ$_3$]

ತ್ರೈಲೋಕ್ಯೇಶ್ವರ (ನಾ). = ತ್ರಿಲೋಕಾಧಿಪತಿ : ಅಂತು ಕನಕಶಾಂತಿ ಪಾಪೋಪಶಾಂತಿಗೆಂದು ತ್ರೈಲೋಕ್ಯೇಶ್ವರರೂಪಮಂ ಧರಿಯಿಸುವುದುಂ (ಶಾಂತಿಪು. ೯-೧೮ ವ). [ತ್ರೈಲೋಕ್ಯ + ಈಶ್ವರ]

ತ್ರೈವರ್ಣ (ನಾ). ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರೆಂಬ ಮೂರು ಜಾತಿಗಳು : ತ್ರೈವರ್ಣಂಗಳನು ಬರಲೀಯ್ಯ ನೋಲಗಸಾಲೆಗಾ ಬಸವ (ಬಿಜ್ಜಪು. ೯೧-೩). [ಸಂ.]

ತ್ರೈವರ್ಣಿಕ (ನಾ). = ತ್ರೈವರ್ಣಕ್ಕೆ ಸೇರಿದವನು : ಸ್ನಾನಧೌತವಸ್ತ್ರ ಪವಿತ್ರರಪ್ಪ ತ್ರೈವರ್ಣಿಕರು ಮೌನದಿಂ ತಂದ ವಿಶುದ್ಧಮಪ್ಪ ತೀರ್ಥೋದಕ (ಪ್ರತಿಷ್ಠಾ. ೫-೪). [ಸಂ.]

ತ್ರೈವಿಕ್ರಮ (ನಾ). = ತ್ರಿವಿಕ್ರಮ : ಪುರಹರಂ ತ್ರೈವಿಕ್ರಮನ ನಿಟ್ಟೆಲುವನುಱಿ ಮುಱಿದು ಧರಿಸಿದನು ಖಟ್ವಾಂಗವೆನಲ್ (ಬಸಪು. ೫೪-೪೩). [ಸಂ.]

ತ್ರೈವಿದ್ಯ (ನಾ). ೧. ಋಕ್ಕು, ಯಜುಸ್ಸು ಮತ್ತು ಸಾಮಗಳೆಂಬ ಮೂರು ವೇದಗಳು. ೨. ಈ ಮೂರು ವೇದಗಳನ್ನು ಅಧ್ಯಯನ ಮಾಡಿದವನು : ವೇದೋಕ್ತಸ್ಥೂಲಕರ್ಮಗಳನ್ನು ಅನುಷ್ಠಿಸುವವರು ತ್ರೈವಿದ್ಯರು (ಹಸಾರ. ೧೩-೧೮ ಪದ್ಯಾರ್ಥ). ೩. [ಜೈನ] ಷಟ್ಖಂಡಾಗಮವೆಂಬ ಗ್ರಂಥದ ಮೊದಲ ಮೂರು ಭಾಗಗಳಾದ ಜೀವಸ್ಥಾನ, ಕ್ಷುದ್ರಕಬಂಧ ಮತ್ತು ಬಂಧಸ್ವಾಮಿತ್ವವಿಚಯಗಳೆಂಬ ಮೂರು ಖಂಡಗಳನ್ನು ಅಭ್ಯಸಿಸಿದವನು : ತ್ರೈವಿದ್ಯರವರ್ಗಣಧರದೇವರ್

ಗುಣ ಭದ್ರದೇವರೆನ್ನದರೊಳರೆ (ಪಾವುಂಪು. ೩-೧೧) ; ಭಾವಿಪೊಡೆ ಮೇಘಚಂದ್ರ ತ್ರೈವಿದ್ಯರದೆಂತೊ ಶಾಂತರಸಮಂ ತಳೆದರ್ (ಪಂಂಪಾಮಾ. ೧-೧೯) ; ಮಹಾವಿಖ್ಯಾತಿಯಂ ತಾಳ್ದಿದಂ . . . ತ್ರೈವಿದ್ಯವಿದ್ಯೋದಿತ ವಿಶದಯಶಂ ಮೇಘಚಂದ್ರವ್ರತೀಂದ್ರ (ಎಕ. II, ೧೩೭-೧೩೯ ; 1115). 'ತ್ರೈವಿದ್ಯದೇವ' ಪರಾ. [ಸಂ.]

ತ್ರೈವಿದ್ಯದೇವ (ನಾ). [ಜೈನ] ಷಟ್ಖಂಡಾಗಮದ ಮೊದಲ ಮೂರು ಖಂಡಗಳನ್ನು ಅಭ್ಯಸಿಸಿದವನಂ ; P ಈ ಬಿರುದು ಮಾಘಣಂದಿ, ಅಕಲಂಕದೇವ, ರಾಮಚಂದ್ರ, ಶ್ರುತಕೀರ್ತಿ ಎಂಬ ನಾಲ್ಕು ಜನ ಜೈನಾಚಾರ್ಯರಿಗೆ ಇತ್ತು : ಈ ಮೂರು ಖಂಡಗಳನ್ನು ಪೂರ್ಣ ಅಭ್ಯಸಿಸಿದವರಿಗೆ 'ತ್ರೈವಿದ್ಯದೇವ' ಎಂಬ ಪದವಿಯನ್ನು ಕೊಡಲಾಗುತ್ತಿದ್ದಿತೆಂದು ಗೊತ್ತಾಗುತ್ತದೆ (ಜೈನಪ. ೧೬೨). [ತ್ರೈವಿದ್ಯ + ದೇವ]

ತ್ರೈವಿದ್ಯವ್ರತಿ (ನಾ). = ತ್ರೈವಿದ್ಯದೇವ : ಶ್ರುತಕೀರ್ತಿ ತ್ರೈವಿದ್ಯವ್ರತಿ ರಾಘವಪಾಂಡವೀಯಮಂ ವಿಬುಧಚಮತ್ಕೃತಿಯೆನಿಸಿ ಗತಪ್ರತ್ಯಾಗತದಿಂ ಪೇಟ್ದ ಮಲಕೀರ್ತಿಯಂ ಪ್ರಕಟಿಸಿದಂ (ಪಂಂಪಾಮಾ. ೧-೨೫). [ಸಂ. ತ್ರೈವಿದ್ಯ ವ್ರತಿನ್]

ತ್ರೈವಿದ್ಯಾಸ್ಪದ (ನಾ). ವ್ಯಾಕರಣ, ತರ್ಕ, ಜೈನಸಿದ್ಧಾಂತವೆಂಬ ಮೂರಂ ವಿದ್ಯೆಗಳಲ್ಲಿ ಪಾಂಡಿತ್ಯವುಳ್ಳವನು : ವಿದಿತ ವ್ಯಾಕರಣಾದತರ್ಕ ರ ಸಿದ್ಧಾಂತದ ವಿಶೇಷದಿಂ ತ್ರೈವಿದ್ಯಾಸ್ಪದರೆಂದಿ ಧರೆ ಬಣ್ಣಿಪುದು ದಿವಾಕರ ಸಂದಿದೇವ ಸೈದ್ಧಾಂತಿಗಳಂ (ಸುಕುಮಾ. ೧-೨೮). [ತ್ರೈವಿದ್ಯ + ಆಸ್ಪದ]

ತ್ರೈವಿದ್ಯೇಶ (ನಾ). = ತ್ರೈವಿದ್ಯ ೩ ; ತ್ರೈವಿದ್ಯೇಶಂ ಮಾಘಣಂದಿ ವ್ರತಿ ಪೆಸರ್ವಡೆದಂ (ಪಂದ್ರಪು. ೦-೩೦). [ತ್ರೈ ವಿದ್ಯ + ಈಶ]

ತ್ರೈಷಷ್ಟಿ (ನಾ). = ತ್ರಿಷಷ್ಟಿ.

ತ್ರೈಷಷ್ಟಿಪುರುಷವ್ರಾತ=ಅರುವತ್ತುಮೂರು ಜನ ಮಹಾಪುರುಷರ ಸಮೂಹ: ತ್ರೈಷಷ್ಟಿಪುರುಷವ್ರಾತವೇ ಪೌರಾಣಪುರುಷಖ್ಯಾತವದದರ್ಕ ಚತುರಕಾಲದಿ ಕಲಿಯ ಪರಿಯಂತ (ಬಿಜ್ಞಪು. ೧೪-೬೨). [ಸಂ. ತ್ರಿಷಷ್ಟಿ]

ತ್ರೈಸಂಧ್ಯೆ (ನಾ). = ತ್ರಿಸಂಧ್ಯೆ ೧ : ಅಸಮಭಕ್ತಿಪ್ರಾಣನಿಧಿ ಕರಮೊಸೆದ್ದ ಕೈಕೈಯಿಂದವಾರೋಗಿಸುತಿರಲ್ ತ್ರೈಸಂಧ್ಯ[ಪಾಠಾಂ. ಧಿ]ಯಲಿ ಲಿಂಗ ಪ್ರಸಾದವನು (ಬಸಪು. ೩೩-೧೨). [<ತ್ರೈಸಂಧ್ಯ]

ತ್ರೈಸೂಳು (ನಾ). ಮೂರು ಬಾರಿ; ಮೂರು ಸಲ : ನಿಂತ ಯೋಗಿಶ್ವರನ ನೀಕ್ಷಿಸುತ್ತೈದಿ ದಕ್ಷಿಣವನಾಂತು ತ್ರೈಸೂಳ್ಕೈದಿ ದುರಿತಕೃತಾಂತ ಜಯ ಜಯವೆಂದು ಲಕ್ಷ್ಮೀಕಾಂತ ವಂದನೆಗೈದನು (ಜಿನಧಾ. ೬೧-೧೧). P ಇದು ವ್ಯಾಕರಣಬದ್ಧವಾದ ರೂಪವಲ್ಲ

[<ತ್ರಿ + ಸೂಳು (<ಸೂಟ್)]

ತ್ರೈಳೋಕ್ಯ 'ತ್ರೈಲೋಕ್ಯ' ನೋ.

ತ್ರೈಳೋಕ್ಯನಾಥ 'ತ್ರೈಲೋಕ್ಯನಾಥ' ನೋ.

ತ್ರೋಟಕ (ಗು). ೧. ಸಂಗ್ರಹವಾಗಿ ಹೇಳಿದ ; ಚುಟುಕಾದ: ಉದ್ದವಾದ ವಾಕ್ಯಗಳಿಗಿಂತ ತೊಡದ ಶಬ್ದಗಳ ತ್ರೋಟಕ ವಾಕ್ಯಗಳನ್ನು ಬರೆಯುವುದರಲ್ಲಿ ಅವರದು ಎತ್ತಿದ ಕೈ (ಸ್ಫೂತಿಪ. ೧೧). (ನಾ). ೨. [ಕಾವ್ಯವಿ] ದೃಶ್ಯ ಕಾವ್ಯಗಳಲ್ಲಿ ಒಂದು ಭೇದ ; ಹದಿನೆಂಟು ವಿಧವಾದ ಉಪರೂಪಕ ಗಳಲ್ಲಿ ಒಂದು ; ಶೃಂಗಾರರಸಪ್ರಧಾನವಾಗಿರುವುದು : ೧. ನಾಟಿಕಾ. ೨. ತ್ರೋಟಕ . . . ೧೮. ಭಾಣಿಕಾ—ಎಂದು ಉಪರೂಪಕ ಗಳು ಹದಿನೆಂಟು ವಿಧ (ಸಂಸಾಟ. ೬೨) ; ವಿಕ್ರಮೋರ್ವಶೀಯವು ಒಂದು 'ತ್ರೋಟಕ' (ಸಂಸಾಟ. ೧೪೪) ; ತ್ರೋಟಕದಲ್ಲಿ . . . ಏಳರಿಂದ ಒಂಭತ್ತರ ವರೆಗೂ ಅಂಕಗಳಿರುತ್ತವೆ (ಕೃಬಡಿ. ೨೫೦). [ಸಂ.]

ತ್ರೋಟಿ (ನಾ). ೧. ಹಕ್ಕಿಯ ಕೊಕ್ಕು, ಚುಂಚು : "ಚಂಚೂ ತ್ರೋಟಿ ಚಂಚು ತುಂಡಂ" (ವಸ್ತುಕೋ. ೪೧-೧೧) ; "ಶಕುಂತಿಯೆನೆ ಪಕ್ಷಿಯಾ ಮುಖಮದು ತ್ರೋಟಿ ಚಂಚೂ ಚಂಚುವಕ್ಕುಂ" (ಮುಂಗರಾ. ೫೦-೧). ೨. ಪಕ್ಷಿ; ಹಕ್ಕಿ. ೩. ಒಂದಂ ಬಗೆಯ ವಿಾನು. ೪. ಒಂದು ಬಗೆಯ ಸಸ್ಯ ; ಶಿವನಿ. [ಸಂ.]

ತ್ರೋಟೀಪುಟ (ನಾ). ಕೊಕ್ಕು ; ಚಂಚುಪುಟ : ನೆಳಲರಸಿ ಬಹ ಗಜದ ಮಸ್ತಕಂ ಕಾಯ್ದು ಬೀಚಿಬೀಲಿನುತ ಪೊರಬೀಳ್ವ ಮುತ್ತ ಜಲಕಣ ವೆಂದು ಕೊಳಲಿ ಕಲಕಂಠ ತ್ರೋಟೀಪುಟದೊಳಂ ಪಿಡಿಯೆ ಚಂಚು ಚುರ್ರೆಸುತಂಟಲು (ಪಂಂಪಾಮಾ. ೩-೬-೧೧). [ಸಂ.]

ತ್ರ್ಯಂಗ (ನಾ). ಎರಡು ಕೈಗಳು ಮತ್ತು ತಲೆ—ಈ ಮೂರು ಅಂಗಗಳು: ಅಷ್ಟಾಂಗದಿಂ ಪಂಚಾಂಗದಿಂ ತ್ರ್ಯಂಗದಿಂದಯುಂ ತಂಳಿಲ್ಗಿಯ್ದು (ಹಾಲಾಸ್ಯ. ೪-೨-೧೩ ವ). [ಸಂ.]

ತ್ರ್ಯಂಬಕ (ಗು). ೧. ಮೂರು ಕಣ್ಣುಗಳುಳ್ಳ. (ನಾ). ೨. ಮೂರು ಕಣ್ಣುಗಳನ್ನು ಉಳ್ಳವನಂ ; ಶಿವ : ತ್ರ್ಯಂಬಕಲೋಚನಾರ್ಚಿಗಮಿದಗ್ಗಳ ಮೆಂಬಿನಮೇಟ್ಗಿಯೊಳ್ ಶಿಖಾಡಂಬರಮೆಯ್ದೆ (ಶಾಖ್ಯಾಪ. ೨೮) ; ತ್ರ್ಯಂಬಕನಂ ಬಲವರಲಿರಡೆಂಬೀ ಪದವೆಯ್ದವೆಂದು ನಾಲ್ಕುಂ ಕಾಲಿಂದಂ ಬಲವಂದಪಳಿಂಬಿಂತಂಬಿಕೆಯಂಬಳಿಕಿಯಾಡುವಳ್ ಶೈಶವದೊಳ್ (ಗಿರಿಕ. ೩-೭೨) ; ನಂಬಿ ಭಜಿಸುವ ಗೊಲ್ಲಳಂಗೀ ತ್ರ್ಯಂಬಕಂ ಕೈಲಾಸದುರ್ಗಾ ಡಂಬರದ ಕದಹುಗಳನಾಗಳೆ ತೆಱೆದು ಹುಗಿಸಿದನು (ಬಸಪು. ೪೩-೫೦) ; ತ್ರ್ಯಂಬಕನ ಹೋಲುವನು ರಾಘವನೆಂಬರದು ಹುಸಿಯಲ್ಲ (ಕಾಶಿಾಖ. ೧೭-೩೭). [ಸಂ.]

ತ್ರ್ಯಂಬಕಸಖ (ನಾ). ಈಶ್ವರನ ಸಖ,—ಗೆಳೆಯಂ ; ಕುಬೇರ.

[ತ್ರ್ಯಂಬಕ + ಸಖ]

ತ್ರ್ಯಂಶ (ನಾ). ಮೂರನೆಯಂ ಒಂದು ಭಾಗ : ಗ್ರಹಂ ಗ್ರಹದಿಂದಂ ನವ ಪಂಚಮಂಗಳೊಳಿರಲ್ ತ್ರ್ಯಂಶಾಂಶಮಂ . . . ಪರಸ್ಪರಂ ಸ್ವಗುಣ ದಿಂದಾಳ್ದಂ (ಜಾತಕ. ೯-೯). [ಸಂ.]

ತ್ರ್ಯಕ್ಷ (ನಾ). ಮೂರು ಕಣ್ಣುಗಳನ್ನು ಉಳ್ಳವನು ; ಶಿವ ; ಮುಕ್ಕಣ್ಣ : ದ್ವಂದ್ವಲೋಕವನಕ್ಷಿಯುಗದೆ ಪೊರೆದು ತ್ರ್ಯಕ್ಷನೊಂದರಿಂ ಮಾಯೆಯಾಟವ ವಿಾರುವಂತೆ (ಮುಂಕುಳ. ೬೯೫). [ಸಂ.]

ತ್ರ್ಯಕ್ಷರ (ಗು). ೧. ಮೂರಂ ಅಕ್ಷರಗಳಿಂದ ಕೂಡಿದ. (ನಾ). ೨. ಅ ಉ ಮ್ ಎಂಬ ಮೂರು ಅಕ್ಷರಗಳನ್ನೊಳಗೊಂಡುದು ; ಓಂಕಾರ ; ಪ್ರಣವಾಕ್ಷರ : ಜಗದೀಶ್ವರಂ ಜಂಗಮ ತ್ರ್ಯಕ್ಷರಂಗಳೊಳ್ ಹದಿನಾಲ್ಕು ಲೋಕಾಶ್ರಯಸ್ಥ ರ್ಗನಿರ್ಮಳಮರ್ತ್ಯ ಪಾತಾಳವಾದವು (ವೀಕೃಪು. ೦-೩-೩೮). 'ತ್ರ್ಯಕ್ಷರಮೂರ್ತಿ' ಪರಾ. ೩. [ಕಾವ್ಯವಿಾ] ಮೂರೇ ಅಕ್ಷರಗಳನ್ನು ಬಳಸಿ ರಚಿಸಂವ ಪದ್ಯಬಂಧ ; ಶಬ್ದಾಲಂಕಾರಪ್ರಧಾನವಾದ ಪದ್ಯಬಂಧ ; ಚಿತ್ರಕವಿತ್ವ : ಇದೇ ಶಬ್ದಾಲಂಕಾರದಲ್ಲಿ ನಿರೋಷ್ಠ್ಯ, ಅತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ತ್ರ್ಯಕ್ಷರಾದಿ ಬಂಧಗಳೆಂದು ಅನೇಕ ವಿಧವಾದ ಚಿತ್ರಕವಿತ್ವಗಳು ಯೋಜಕರ ಬುದ್ಧಿ ಬಲಾನುಸಾರವಾಗಿ ಕಲ್ಪಿತವಾಗಬಹುದು (ಕೃಬಡಿ. ೨೫೮). 'ಏಕಾಕ್ಷರ' ಪರಾ. [ಸಂ.]

ತ್ರ್ಯಕ್ಷರಮೂರ್ತಿ (ನಾ). ಓಂಕಾರಸ್ವರೂಪನಾದವನು ; ಪ್ರಣವ ಸ್ವರೂಪಿ ; ಶಿವ ; ಈಶ್ವರ : ತ್ರ್ಯಕ್ಷರಮೂರ್ತಿಯಾದ ಪರಮಪ್ರಭು ವಾದ . . . ವಿರಿಂಚಿ ಮುಖ್ಯ ಸುರವಂದಿತವಾದನುಮಾದ ಯಾ ವಿರೂಪಾಕ್ಷನೆ ದೇವನೆಂದು ನೆಱೆ ನಂಬಿದೆಂ (ಪಂಂಕಥ. XXIV ಟೀಕೆ).

[ತ್ರ್ಯಕ್ಷರ + ಮೂರ್ತಿ]

ತ್ರ್ಯಕ್ಷರಿ (ನಾ). ಮೂರು ಅಕ್ಷರಗಳನ್ನುಳ್ಳ ಮಂತ್ರ : ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ ... ಮುಂತಪ್ಪ ಪ್ರಸಿದ್ಧಮಂತ್ರಂಗಳೊಳವಲ್ಲ (ಕಾಮಾಶ್ಯ. ೧೧೬-೧).

[ಸಂ. ತ್ರ್ಯಕ್ಷರೀ]

ತ್ರ್ಯಣುಕ (ನಾ). ಮೂರು ಅಣುಗಳಿಂದ ಕೂಡಿದುದು : ಹೀಗೆ ತ್ರ್ಯಣುಕಾದಿ ಕ್ರಮದಲ್ಲಿ ಮಹಾಪೃಥಿವೀ, ಜಲ, ತೇಜಸ್ಸು, ವಾಯುಗಳು ಸೃಷ್ಟಿಸಲ್ಪಡುತ್ತವೆ (ಭಾರದ. ೩೩೦); ಸಂಖ್ಯಾವಿಶೇಷವೆಂದರೆ ಸೃಷ್ಟಿಕಾಲದಲ್ಲಿ ದ್ವ್ಯಣುಕ ತ್ರ್ಯಣುಕಗಳ ಪರಿಮಾಣವು . . . ಅಣುತರ ಅಣುತಮವಾಗ ಬೇಕಾಗುತ್ತದೆ (ಹಿಂದಣಾ. ೧೩೭). [ಸಂ.]

ತ್ರ್ಯಶ್ರೀಕೃತ (ಗು). [ನಾಟ್ಯ] ಒಂದು ಕಾಲನ್ನು ಸಮವಾಗಿ ಇರಿಸಿ ಇನ್ನೊಂದು ಕಾಲಿನ ಬೆರಳಂಗಳನ್ನು ಪಕ್ಕಕ್ಕೆ ಎದುರಾಗಿ ಮಾಡಿ ನಿಲ್ಲಿಸಿದ : ಶ್ರೀಕಪಳಲೋಚನಂ ತ್ರ್ಯಶ್ರೀಕೃತಪದನುನ್ನತೈಕಜಘನಂ ಲಲಿತಭ್ರೂಕಂ ತಿರ್ಯಗ್ವಳಿತ ವ್ಯಾಕುಂಚಿತಕಂಠನೂದುತಿರ್ದಂ ಕೊಬಲಂ (ಜಗವಿ ೩-೧). [ಸಂ.]

ತ್ರ್ಯಸ್ರ (ಗು). ೧. ಮೂರು ಕೋಣಗಳುಳ್ಳ ; ಮೂರು ಮೂಲೆಗಳುಳ್ಳ. (ನಾ). ೨. [ನಾಟ್ಯ] ಕೊರಳ ವಿನ್ಯಾಸಗಳಲ್ಲಿ ಒಂದು ; ಭುಜದ ಕಡೆಗೆ ಕೊರಳನ್ನು ಬಾಗಿಸುವ ಒಂದು ವಿನ್ಯಾಸ:ನತಮಾಗಿ ಮುಡುಹನೊಂದಿದ ನುತಗಳಮೇ ತ್ರ್ಯಸ್ರವೆಂಬ ಪೆಸರಂ ಪಡೆಗುಂ (ಕಾಸ್ಮರಂ. ೨-೧೧೭).

[ಸಂ.]

ತ್ರ್ಯಹಿಕ (ಗು). ೧. ಮೂರು ದಿನಗಳಿಗಾಗುವಷ್ಟು ಧಾನ್ಯವನ್ನು ಹೊಂದಿರುವ. (ನಾ). ೨. ಮೂರು ದಿನಗಳಿಗಾಗುವಷ್ಟು ಧಾನ್ಯವನ್ನು ಸಂಗ್ರಹಿಸಿರುವವನು : ಮೂರು ದಿವಸಕ್ಕಾಗುವಷ್ಟಿರುವವನು ತ್ರ್ಯಹಿಕನು (ಆರ್ಯಧ. ೪೬). ೩. ಮೂರು ದಿನಗಳಿಗೊಂದಾವರ್ತಿ ಬರುವ ಜ್ವರ : ತ್ರ್ಯಹಿಕವೆಂಬ ಜ್ವರವು ಮೇದಸ್ಸನ್ನು ಆಶ್ರಯಿಸಿ ಕೊಂಡು ಬರುವುದು (ಸಳವ್ಯ. ೯೮) [ಸಂ.]

ತ್ರ್ಯೂಷಣ (ನಾ). ಶುಂಠಿ, ಹಿಪ್ಪಲಿ ಮತ್ತು ಮೆಣಸಂ – ಈ ಮೂರರ ಕೂಟ; ತ್ರಿಕಟುಕ : ತ್ರಿಕಟು, ತ್ರ್ಯೂಷಣಂ, ಪ್ಯೋಷಂ–ಈ ೩ ತ್ರಿಕಟುಕಂ (ಹಲಾಯು. ೧೦೦-೪೬೩). [ಸಂ.]

-ತ್ವ (ಪ್ರ). ಒಂದು ಭಾವವಾಚಕ ಪ್ರತ್ಯಯ. 'ದಂರುಳತ್ವ' ಪರಾ.

[ಸಂ.]

ತ್ವಕ್ಕು (ನಾ). ೧. ಸ್ಪರ್ಶಜ್ಞಾನವನ್ನು ಉಂಟುಮಾಡಿಕೊಡುವ ಇಂದ್ರಿಯ ; ತೊಗಲು ; ಚರ್ಮ : "ಅಸೃಗ್ದರಃ, ಅಜಿನಂ, ಚರ್ಮ, ಕೃತ್ತಿಃ, ತ್ವಕ್–ಈ ೫ ತೊವಲ್" (ಹಲಾಯು. ೦೦೪-೮); ಶಕಾರವೆ ಬಸವಣ್ಣನ ನೇತ್ರ ವಕಾರವೆ ಬಸವಣ್ಣನ ತ್ವಕ್ಕು ಯಕಾರವೆ ಬಸವಣ್ಣನ ಶ್ರೋತ್ರ (ಪರಗೊಃ. ೧೩೬-೩೪). ೨. ಮರದ ಸಿಪ್ಪೆ ; ತೊಗಟೆ ; ತೊಕ್ಕು : "ತ್ವಕ್, ವಲ್ಕಾ, ವಲ್ಕಲಂ–ಈ ೩ ಮರದ ಹೊಱ ಸೊಪ್ಪೆ" (ಹಲಾಯು. ೩೦-೩೯) ; "ತ್ವಗ್ವಲ್ಕಲಂ ವಲ್ಕವೆನೆ ಮರದ ತಿಗುಡಕ್ಕು" (ಕುಂಗರಾ. ೩೨-೩) ; ಹಿಪ್ಪೆಮರದ ತ್ವಕ್ಕಿನ ಧಾಯೆಯುಳ್ಳ ನೀಲವರ್ಣವಾದ ಕುದುರೆ ಮೇಳವೆಂದು ಪೇಳಲ್ಪಡುವದು (ಸಾಗಂಧಿ. ೩೦೦-೦೪), [ಸಂ. ತ್ವಚ್]

ತ್ವಕ್ಪತ್ರ (ನಾ). ೧. ಲವಂಗಪಟ್ಟೆ ; ದಾಲ್ಚಿನ್ನಿ. ೨. ತಮಾಲಪತ್ರ.

[ಸಂ.]

ತ್ವಕ್ಪತ್ರಿ (ನಾ). ೧. ಹಿಂಗಿನ ಮರದ ಎಲೆ ; ಹಿಂಗುವಶ್ರಿ ೨. ತಮಾಲಪತ್ರ

[ಸಂ. ತ್ವಕ್ಪತ್ರೀ]

ತ್ವಕ್ಪುಷ್ಪ (ನಾ). ೧. ರೋಮಾಂಚ ; ಮೈನವಿರು. ೨. ಒಂದು ಬಗೆಯ ಚರ್ಮವ್ಯಾಧಿ ; ಕಜ್ಜಿ ; ತುರಿ. [ಸಂ.]

ತ್ವಕ್ಸಾರ (ನಾ). ೧. ಬಿದಿರು ; ಬೊಂಬು : "ತ್ವಚಿಸಾರಃ, ... ತ್ವಕ್ಸಾರಃ, ಮಸ್ಕರಃ—ಈ೬ ಬಿದಿರ್" (ಹಲಾಯು. ೩೪-೫೧) ; "ವಂಶಂ ... ತ್ವಕ್ಸಾರಮೆನಲುಂ ಬೆಲ್ಲ ಬಿದಿರಕ್ಕು" (ಪುಂಗರಾ. ೩೮-೩೩). ೨. ಲವಂಗಪಟ್ಟೆ ; ದಾಲ್ಚಿನ್ನಿ. ೩. ಒಂದು ಬಗೆಯ ವೃಕ್ಷ ; ತಿಗಡುಮರ. [ಸಂ.]

ತ್ವಗಸ್ಥಿಭೂತ (ಗು). (ದೇಹದಲ್ಲಿ) ಚರ್ಮ ಮತ್ತು ಎಲುಬುಗಳು ಮಾತ್ರ ಉಳಿದಿರುವ ; ಕೃಶವಾದ ; ಬಡವಾದ : ಕಾಲಾಂತರದೊಳ್ ಶ್ರೀಪ್ರಭಾದ್ರಿ ಶಿಖರಿದೊಳ್ ಪ್ರಾಯೋಪಗಮನವಿಧಿಯಿಂ ತ್ವಗಸ್ಥಿ ಭೂತಸ ರ್ವಾಂಗಂ ಧೈರ್ಯಮನೆ ಮನದೊಳಪಲಂಬಿಸಿ . . . ಪಾಯ್ದು ಪುಲಿಯೆಂಬೀ ಬಾಧೆಯೊಳ್ ಮೆಯ್ಯನೊಡ್ಡಿಸೆ (ಆದಿಪು. ೬-೫೫ ಪ).

[ಸಂ.]

ತ್ವಗಸ್ಥೀಭೂತ (ನಾ). (ದೇಹದಲ್ಲಿ) ಚರ್ಮ ಮತ್ತು ಮೂಳೆಗಳು ಮಾತ್ರ ವಿರುವುದು ; ಕೃಶವಾಗಿರುವುದು : ಮುನಿವತಿಯಿಸದಿರ್ದಾತನು ಸಪ್ತರ್ಧಿ ಸಮನ್ವೀತಂ ವ್ರತನಿಯಮಯುಕ್ತ್ವಗಸ್ಥೀಭೂತಂ (ಶಾಂತಿಪು. ೯-೧೧೩).

[ಸಂ.]

ತ್ವಗಿಂದ್ರಿಯ (ನಾ). ಸ್ಪರ್ಶದ ಜ್ಞಾನವನ್ನು ಉಂಟುಮಾಡಿಕೊಡುವ ಇಂದ್ರಿಯ ; ತೊಗಲು ; ಚರ್ಮ : ತ್ವಗಿಂದ್ರಿಯವಿಷಯದಿಂದ ಗಜ ಕೆಡುವುದು ರಾಜನ ಕೃತಕದಲ್ಲಿ (ಅಖಂಡೇ. ೭-೪); ಸ್ಪರ್ಶ ಸಾಕ್ಷಾತ್ಕಾರವನ್ನು ಉಂಟುಮಾಡುವುದಾಗಿಯೂ ಇರುವ ಇಂದ್ರಿಯವು ತ್ವಗಿಂದ್ರಿಯವೆನಿಸಿ ಕೊಳ್ಳುವುದು (ತತ್ತ್ವಪ್ರ. ೭). [ಸಂ.]

ತ್ವಗ್ಗತ (ಗು). ಚರ್ಮದೊಳಗೆ ಸೇರಿದ. 'ತ್ವಗ್ಗತಜ್ವರ' ಪರಾ. [ಸಂ.]

ತ್ವಗ್ಗತಜ್ವರ (ನಾ). ಚರ್ಮದೊಳಗೆ ಸೇರಿದ ಜ್ವರ; ಒಳಜ್ವರ: ದೇಹದಲ್ಲಿ ಅಲ್ಪವಾದ ಜ್ವರ ಮತ್ತು ದಾಹವುಂಟಾಗಿ . . . ಬೆಮರುಂಟಾಗಿರುವುದ ತ್ವಗ್ಗತಜ್ವರ ಲಕ್ಷಣಗಳು (ಸಳವ್ಯ. ೯೯). 'ಅಸ್ಥಿಗತಜ್ವರ' ಪರಾ.

[ತ್ವಗ್ಗತ + ಜ್ವರ]

ತ್ವಗ್ಜ (ಗು). ಚರ್ಮದಿಂದ ಆದ,–ಮಾಡಿದ : ತ್ರಿಜಗದ್ಭೂಷಣವಾರಣಂ ಮುಜ್ಜಯ ಪಾಯ್ದಾಲಾನಮಂ ತ್ವಗ್ಜಲೋಹಜಬಂಧಂಗಳನೆಲ್ಲಮಂ ಪಜಿವಿನಂ ಪೊಯ್ದೆತ್ತಿ ಮೊತ್ತಕ್ಕೆ ಕಾಯ್ದು (ಪಂಡಾಮಾ. ೧೫-೩೧). [ಸಂ.]

ತ್ವಗ್ವೀವಿ (ನಾ). ಒಂದು ಬಗೆಯ ಸಸ್ಯ; ಸೇಗುಡಿತೆ: "ಆರು ಮೆಣಸಿಗೆ ತ್ವಗ್ವೀವಿ ಸೇಗುಡಿತೆ" (ಪುಂಗರಾ. ೪೨-೩೭). [ಸಂ. ತ್ವಗ್ವೀವಿನ್]

ತ್ವಗ್ದೋಷ (ನಾ). ಚರ್ಮಕ್ಕೆ ಸಂಬಂಧಿಸಿದ ದೋಷ ; ಚರ್ಮದ ರೋಗ ; ತೊನ್ನು : ತ್ವಗ್ದೋಷೇ ಚ–ತೊನ್ನಿಗುಂ ಭಗಂದರಕ್ಕುಂ (ವಿವೈವಿ. ೧೬೩). [ಸಂ.]

ತಗ್ಧರ (ನಾ). (ಆನೆ, ಹುಲಿ) ಚರ್ಮವನ್ನು ಧರಿಸಿರುವವನು ; ಶಿವ.

[ಸಂ.]

ತ್ವಗ್ರೋಗ (ನಾ). ಚರ್ಮಕ್ಕೆ ಸಂಬಂಧಿಸಿದ ರೋಗ ; ಚರ್ಮರೋಗ : ಅದರಿಂದ ನಾರು, ಹುರುಕು, ಕಜ್ಜಿ . . . ಮುಂತಾದ ತ್ವಗ್ರೋಗಗಳು . . . ಮೈಯೊಳಗೆ ಸೇರುತ್ತವೆ (ಮುಂಬಯಿ. ೫-೧೫೮). [ಸಂ.]

ತ್ವಜ್ಜಲ (ನಾ). ೧. ಚರ್ಮದ ಮಂಲ,–ಕೊಳೆ. ೨. ಕೂದಲು ; ರೋಮ. [ಸಂ.]

ತ್ವಚ (ನಾ). ೧. ತೊಗಲು ; ಚರ್ಮ : "ತ್ವಚಮಜನಾಸೃಗ್ದರೆ ಕೃತ್ತಿ ಚರ್ಮಮೆನೆ ತೋ(ಲ್ತ್ವಗಾ) ಹ್ವಯಂ" (ವಸ್ತುಕೋ ೭೨-೨೮) ; "ಚರ್ಮ ತ್ವಚಂ ಕೃತ್ತಿ ಅಜಿನವದಸೃಗ್ದರೆಯೆನಲು ತೊಗಲಕ್ಕು" (ಕುಂಗರಾ. ೧೧೬-೩) ; ಪಂಚಬಾಣಂಗಳು ಪಂಚೇಂದ್ರಿಯಂಗಳು ಕರ್ಣ ನಾಸಿಕ ದೃಗು ಜಿಹ್ವೆ ತ್ವಚಂಗಳು (ಪುರಿತಿ. ೦-೬೭) ; ಕಾಪಾಲಿಶಾಸ್ತ್ರಿಗಳು ಶ್ರೀಅರವಿಂದರನ್ನು ನೋಡಿದಾಗ, ಅವರ ದೇಹದ ತ್ವಚದ ಮೇಲೆ ಅತ್ಯಾಕರ್ಷಕವಾದ ಕಾಂತಿಯೊಂದನ್ನು ಕಂಡರು (ಮಹಾಯೋ. ೧೩೪). ೨. ಲವಂಗಪಟ್ಟೆ ; ದಾಲ್ಚಿನ್ನಿ. ೩. ತೊಗಟೆ; ಸಿಪ್ಪೆ. [ಸಂ.]

ತ್ವಚಿಸಾರ (ನಾ). ಬಿದಿರು ; ವಂಶ : "ತ್ವಚಿಸಾರಃ, ಚಪಃ, ವಂಶಃ, ವೇಣುಃ, ತ್ವಕ್ಸಾರಃ, ಮಸ್ಕರಃ – ಈ ೬ ಬಿದಿರ್" (ಹಲಾಯು. ೩೪-೫೦).

[ಸಂ.]

ತ್ವಚೆ (ನಾ). ೧. ತೊಗಲು ; ಚರ್ಮ : ರುಚಿಯೊಪ್ಪೆ ರಸನೆಗದು ಶೂಲ ವಹುದುದರಕ್ಕಿ ತ್ವಚೆ ಬೇಳ್ವ ತಂಗಾಳಿಯಂ ದೇನೆಯೆದೆಗೆ (ಪುಂಕುಳ. ೩೪೭). ೨. ತೊಗಟೆ ; ಸಿಪ್ಪೆ : ಎಲೆಯ ಮೇಲೆ ಬೀಳುವ ಸೂರ್ಯ ಕಿರಣಗಳು ಎಲೆಯ ಸಣ್ಣ ದೆ ೨ಡ್ಡ ಶಿರಗಳೊಳಗಿಂದಲೂ ತ್ವಚೆಯೊಳ ಗಿಂದಲೂ ಸಮವಾಗಿ ಆರವಾರ ಹೋಗುವುದಿಲ್ಲ (ಮುಂಬಯಿ. ೫-೧೫೯).

[ಸಂ. ತ್ವಚ]

ತ್ವದೀಯ (ಗು). ನಿನ್ನ ; ನಿನಗೆ ಸೇರಿದ : ತ್ವದೀಯ ತನುಚಿಂತೆಯಂ ಪಡೆಯೆ ನಿತ್ಯನೈಶ್ಚಿಂತ್ಯಮಂ ತ್ವದೀಯ ಪದಪೂಜೆಯೊಳ್ ತೊ ಡ ರೆ (ಪಂದ್ರಪು. ೧೪-೯೩). [ಸಂ.]

ತ್ವರ (ನಾ). = ತ್ವರೆ : ರಾಮ (ತ್ವರದಿಂದದ್ದು) (ಉಂರಾಚ. ೬೫) ; ಇರಿಸಿ ಶರಧನುಗಳನು ಕರದಲಿ ತ್ವರದೆ ಬೇಂಟೆಯನಾಡಲಾ ನರವರನು ಚರಿಸಿರಲು (ರಘುವಂ. ೯-೫೦). [ಸಂ. ತ್ವರಾ]

ತ್ವರಣ (ಗು). ೧. ಆತುರಪಡುವ ; ಅವಸರದ. (ನಾ). ೨. ಆತುರ ಪಡುವಿಕೆ ; ತವಕ : "ತ್ವರಿಃ, ತ್ವರಂ. ತ್ವರಣಂ, ತ್ವರಿತಂ . . . ತ್ವರಣೇಯಂ ಈ ೮ ತವಕ." (ಕಾಶಕ್ಕ. ೦೬೭). ೩. (?) : ಷಟ್ಕರ್ಮ ಷಣ್ಮುಖರು ಪರಮತತಪತ್ವರಣ ನಿರತರು (ಸಾಇಇ. XX, ೪೭-೬೭ ; 1072). ಇದು 'ತಪಶ್ಚರಣ'ದ ಅಪಲಿಖಿತವಿರಬಹುದು [ಸಂ.]

ತ್ವರಿತ (ಗು). ೧. ವೇಗವಾದ ; ಶೀಘ್ರವಾದ. (ನಾ). ೨. ವೇಗ ; ಶೀಘ್ರತೆ ; ಅವಸರ : "ಕ್ಷಿಪ್ರಂ ತ್ವರಿತಂ . . . ಚೆಚ್ಚರಂ" (ಪಸ್ತು.ಕೋ. ೦೦೩-೦೩) ; "ತ್ವರಿತಂ ದ್ರುತಂ... ಶೀಘ್ರಮಕ್ಕುಂ" (ಮುಂಗರಾ. ೦೩೭-೭) ; ತ್ವರಿತದೆ ಹೇಮಕೂಟನಗರಕ್ಕೆರದೆಯ್ದಿ ಬಟಲ್ದವೋಲ್ಮನೋಹರಿಯಂ . . . ಆಂಗರುಚಿಯೊಳ್ ಮುಟುಗಿತ್ತು ಮನಂ ಮಹೇಶನಾ (ಕಾದಂಉ. ೩೪೯) ; ತ್ವರಿತದಿಂ ಬಂದಂ ಪ್ರಶೀಹಾರಕಂ (ಪಂರಾಮಾ. ೨-೨) ; ತರಣಿ ಶಶಿಗಳ ನೊಮ್ಮೆ ತರಲೇ ತ್ವರಿತದಲಿ ಬೆಸಸೆನಗೆ ನಾ ತಹೆನೆಂದ ಹನುಮಂತ (ಕಾಶಿಣಾ. ೨೯-೨೯) ; ರಾಜನೂ ಮೂರ್ತಿಯೂ ತ್ವರಿತದಿಂದ ನಡೆದರು (ಸಾವಿಪ್ರ. ೩೩). ೩. ವೇಗಶಾಲಿ ; ಚಟುವಟಿಕೆಯುಳ್ಳವನು; ಉತ್ಸುಕ: "ಉತ್ಸಾಳಃ, ತ್ವರಿತಃ – ಈ ೨ ಚುಜುಚುಜುಗಂ" (ಹಲಾಯು. ೭೦-೩೦೩); "ತ್ವರಿತನುತ್ಸುಕನೆನಲು .... ಚೆಚ್ಚರಿಗನಕ್ಕುಂ" (ಮುಂಗರಾ. ೭೪-೦೨). [ಸಂ.]

ತ್ವರಿತಂ (ಅ). ವೇಗವಾಗಿ ; ಶೀಘ್ರವಾಗಿ: ತ್ವರಿತಂ ಗೋಪಂ ಸಕೋಪಂ ಪೆಱಗೆ ಪರಿಯೆ (ಲೀಲಾಪ. ೫-೦೦೦) : ತ್ವರಿತಂ ಸೋಲಿಸಿ ಕನ್ನೆಯಂ ಮುರಹರಂ ಕೊಂಡುಯ್ದು (ಜಗವಿ. ೦೦-೭೭) ; ಬಳಸಿದ ಸುಖದ ತಣಿವಂಳುರಿಸಿದನುರಾಗದೊಳಿತು ತ್ವರಿತಂ [ಪಾಠಾಂ. ತುರಿತಂ, ಆತುರಂ] ತುದಿಗೇಱಿ (ನಂಬಿರ. ೦೪-೫೫). [<ತ್ವರಿತ]

ತ್ವರಿತಗೊಳಿಸು (ಕ್ರಿ). ವೇಗಗೊಳಿಸು ; ಶೀಘ್ರಗೊಳಿಸಂ : ಹಲವು ಶಿಕ್ಷಕರೂ ಪೋಷಕರೂ ಮಕ್ಕಳ ಶಿಕ್ಷಣಕಾಲದ ಪರಿಮಾಣವನ್ನು ಕಡಮೆ ಮಾಡಲು ಶಿಕ್ಷಣವನ್ನು ತ್ವರಿತಗೊಳಿಸುವುದುಂಟು (ಶಿಕ್ಷದ. ೦೯).

[ತ್ವರಿತ + ಕೊಳ್$_1$ + – ಇಸು$_3$]

ತ್ವರಿತರಗಳೆ (ನಾ). [ಛಂದ] ರಗಳೆ ಛಂದಸ್ಸಿನ ಒಂದು ಪ್ರಭೇದ ; ಮಂದಾನಿಲರಗಳೆ : ಪೊನ್ನನ ಶಾಂತಿಪುರಾಣ:–ಷಿ, ೭. ಇಲ್ಲಿ ತ್ವರಿತರಗಳೆ ಎಂಬ ಹೆಸರಿದೆ (ಕೃಛಿ. ೦೪೦) : ಪೊನ್ನನು ತನ್ನ ಶಾಂತಿಪುರಾಣದಲ್ಲಿ ರಚಿಸಿದ ಮಂದಾನಿಲರಗಳೆಯನ್ನು 'ತ್ವರಿತರಗಳೆ' ಎಂಬುದಾಗಿ ಹೆಸರಿಸಿ ದ್ದಾನೆ (ಛಂಡೋವಿ. ೦೬೭). [ತ್ವರಿತ + ರಗಳೆ]

ತ್ವರಿತೆ (ನಾ). = ತ್ವರಿತ ೨ : ತ್ವರಿತೆಯಿನಿಪ್ಪಾ ಭೂಪಸ್ಮರನಾಗ್ರಹದೂಹಿ ಯೊಡನೆ ಮತ್ಸರಿಸಿದವೋಲ್ ಏರಿದು ಪವನಂಜಯಾಹ್ವಯಮಿರದೆಯ್ದುವುದಾ ಕ್ಷಣಕೆ ಯೋಜನಶತವುಂ (ಕುಸುಮಾ. ೦೦-೦೩೭).

[ಸಂ. ತ್ವರಿತ]

ತ್ವರೆ (ನಾ). ಶೀಘ್ರತೆ ; ವೇಗ : ಕೃಷ್ಣನ ಕೊಳಲಿನ ಕರೆ – ತ್ವರೆ ತ್ವರೆ (ಗೋಕುವಿ. ೪-೪) ; ತ್ವರೆಯಿಂದ ಉದ್ದೇಶಸಾಧನೆಗಾಗಿ ಕನ್ಯಾನ್ವೇಷಣೆ ಮಾಡತೊಡಗಿದರು (ಕುರುಭಾ. ೧೩೪) ; ಹರಿಯ ಚರಿತ್ರೆಯ ಪರಿ ಎನಗ್ವೇ ಳೆಂದು ತ್ವರೆಯಿಂದ ವಿದುರ ಕೇಳಿದನು (ಕರ್ಣಾಕ. ೩೪೬).

ತ್ವರೆಮಾಡು = ತ್ವರೆಪಡಿಸು : ನಾಕವೆ ಧರೆಗಿಳಿದಂತಿದೆ ನೋಟಕ ಬಾ ಬೇಗ ಬಾ ತ್ವರೆಮಾಡು (ಇಂಡಾಪ. ೧೩೪-೫೭). [ಸಂ. ತ್ವರಾ]

ತ್ವರೆಪಡಿಸು (ಕ್ರಿ). ಅವಸರ ಮಾಡು ; ಆತುರಪಡಿಸು : ಹಿಂದೆ ನಿನಗೆ ಜೀವವನ್ನುಳಿಸಿದವನ ಪ್ರಾಣವನ್ನು ತೆಗೆಯಬೇಕೆಂದು ಹೀಗೇಕೆ ತ್ವರೆಪಡಿ ಸುವೆ? (ರಾವಿಜ. ೧೦). [ತ್ವರೆಪಡು + – ಇಸು$_3$]

ತ್ವರೆಪಡು (ಕ್ರಿ). ಆತುರಪಡು. ಅವಸರಪಡು ; 'ತ್ವರೆಪಡಿಸು' ಪರಾ

[ತ್ವರೆ + ಪಡು$_1$]

ತ್ವರ್ಯ (ನಾ).=ತ್ವರೆ : ಹಠಾತ್ತಾಗಿ ಒದಗಿದ ತ್ವರ್ಯದ ಕೆಲಸದ ಮೇಲೆ ತಮ್ಮ ಮಿತ್ರರ ಮನೆಗೆ ಹೋಗಿದ್ದ ಕಾರಣ (ನಡಡಾ. II, ೯೪೩) : ತ್ವರ್ಯದಲ್ಲಿ ಮುಖ ತೊಳೆದು ಅಡಿಗೆಗೆ ಇಟ್ಟಳು (ಕಂದಜೀ. ೦೪೦).

[<ಸಂ. ತ್ವರಾ]

ತ್ವಷ್ಟ$_1$ (ನಾ). ೧. ಮರಗೆಲಸ ಮಾಡುವವನು ; ಬಡಗಿ. ೨. ದೇವತೆ ಗಳ ಶಿಲ್ಪಿ ; ವಿಶ್ವಕರ್ಮ. [<ಸಂ. ತ್ವಷ್ಟೃ]

ತ್ವಷ್ಟ$_2$ (ಗು). ಕೆತ್ತಿದ ; ತೆಳುವಾಗಿ ಮಾಡಿದ ; ತೆಳ್ಳಗೆ ಮಾಡಿದ.

[ಸಂ.]

ತ್ವಷ್ಟೃ (ನಾ). ೧. ಮರಗೆಲಸ ಮಾಡುವವನು ; ಬಡಗಿ :"ವರ್ಧಕಿ ದಲ್ ರಥಕಾರಂ ತ್ವಷ್ಟೃ ಕಾಷ್ಟತಟ್ ತಕ್ಷಕಾಭಿಧಾನಮೆನಿಕ್ಕುಂ" (ಪಸ್ತು.ಕೋ. ೬೪-೭೩). ೨. ದೇವಶಿಲ್ಪಿ ; ವಿಶ್ವಕರ್ಮ : "ದೇವರ ವರ್ಧಕಿ ವಿಶ್ವ ಮಹೀವಿದಿತಂ ತ್ವಷ್ಟೃ ವಿಶ್ವಕರ್ಮಂ" (ಪಸ್ತು.ಕೋ. ೦೦-೫೩) ; "ತ್ವಷ್ಟೃ ವೆನೆ ವಿಶ್ವಕರ್ಮಂ" (ಮುಂಗರಾ. ೭-೨೩). ೩. ಬ್ರಹ್ಮ ; ಪ್ರಜಾಪತಿ : ಸೃಷ್ಟಿ ಚೋದನೆಗಳಿಂ ನರನೊಳಿಷ್ಟಗಳುದಯವಿಷ್ಟಸಿದ್ಧಿಗೆ ಯಂತ್ರತಂತ್ರಗಳ ಯುಕ್ತಿ, ತ್ವಷ್ಟೃ ಕುಶಲದೆ ಸೃಷ್ಟಿ ವಿಕೃತಿ (ಮುಂಕುಳ. ೮೭೦). ೪. ದ್ವಾದಶಾದಿತ್ಯರಲ್ಲಿ ಒಬ್ಬ : ಧಾತಾ ಆರ್ಯಮಾ . . . ತ್ವಷ್ಟೃ ವಿಷ್ಣುಗಳೆಂಬವರೇ ಕ್ರಮದಿಂ ದ್ವಾದಶಾದಿತ್ಯರು (ವಿವೇಕ. ೨೩೭). ೫. ವಿಷ್ಣು ; ಪರಮಾತ್ಮ. ೬. ಚಿತ್ತಾನಕ್ಷತ್ರ. [ಸಂ.]

ತ್ವಾಷ್ಟ್ರ (ನಾ). ೧. ವಿಶ್ವಕರ್ಮನ ಮಗ ; ವಿಶ್ವರೂಪ ; ವೃತ್ರಾಸುರ. (ಕ್ರಿ). ೨. ಒರಟುತನ. ೩. ಕೊಳಕುತನದ ದುಶ್ಚಟಗಳನ್ನು ಉಳ್ಳ ಮನುಷ್ಯ. [ಸಂ.]

ತ್ವಿಷಾಂಪತಿ (ನಾ). ಬೆಳಕಿನ ಒಡೆಯ; ಆದಿತ್ಯ ; ಸೂರ್ಯ : " ಶೂರಃ . . . ತ್ವಿಷಾಂಪತಿಃ, ಅಹಃಪತಿಃ, ಭಾನುಃ, ಹಂಸಃ, ಸಹಸ್ರಾಂಶುಃ, ತಪನಃ, ಸವಿತಾ, ರವಿಃ – ಈ ೩೭ ಸೂರ್ಯನ ಪೆಸರುಗಳು" (ಸಿದ್ಧಾಂತಿ. ೩೨). ☞ ಸಂಸ್ಕೃತದಲ್ಲಿ ಇವು ಎರಡು ಬೇರೆ ಬೇರೆ ಪದಗಳು. [ಸಂ.]

ತ್ವಿಷೆ (ನಾ). ಬೆಳಕು ; ಕಾಂತಿ ; ಪ್ರಕಾಶ ; ಪ್ರಭೆ. [ಸಂ. ತ್ವಿಷಾ]

ತ್ವೇಷ (ಗು). ೧. ಹೊಳೆಯುವ ; ಬೆಳಗುವ. ೨. ಆವೇಶದ ; ಉದ್ರೇಕದ. ೩. ಭಯಾನಕವಾದ ; ಉಗ್ರವಾದ. (ನಾ). ೪. ಆವೇಶ ; ಉದ್ರೇಕ : ತಮ್ಮ ತ್ವೇಷದ ಭರದಲ್ಲಿ ಕುಸುಮಾ ಕುಳಿತಿದ್ದ ಕೋಣೆಗೆ ಹೋಗಿ ಅವಳನ್ನು ಹಿಡಿದು ಹೊರಗೆ ಎಳೆತಂದು (ಸಮಜೀ. ೩೪೩); ವಿಫಲತೆಯ ಉರಿ ತಟ್ಟಿದಾಗಲೆಲ್ಲ...ಭುಸುಗುಟ್ಟಿದೆ ದ್ವೇಷ ತ್ವೇಷಗಳಿಂದ (ಹೂಕುದಾ. ೨೦೬) ; ದ್ವೇಷ ತ್ವೇಷಗಳನ್ನು ಹೂಳಿರಲ್ಲಿ! (ಕರುಶ್ರಾ. ೬೭-೬) ; ನನ್ನ ತ್ವೇಷ ಮತ್ಸರಿಷ್ಣು ಹೆಚ್ಚಿತು (ಮೀದಿಮು. ೭೮) : ನಿನ್ನ ಅಕ್ಕಾಜಿಯ ಬಗ್ಗೆ ನಿನಗೆ ತ್ವೇಷವುಂಟಾಗದೆ ಇರಲಾರದೇ (ಹೇಮಂತ. ೦೩೬). ೫. ಭಯವನ್ನುಂಟು ಮಾಡುವಿಕೆ. [ಸಂ.]

ತ್ಸತ್ರ (ನಾ). ಚತ್ರ ; ಧರ್ಮಶಾಲೆ : ಮುದ್ದೆ ದಂಡಾಯಕ್ಕರೂ ಕೋಟೀ ಶ್ವರದೇವರಲ್ಲಿ ಕಟ್ಟಿಸಿದ ತ್ಸತ್ರದ ಮಠದಲ್ಲಿ ಉಂಬ ಬ್ರಾಹ್ಮರು (ಸಾಇಇ. IX-11, ೪೧೬-೩೦ ; 1377). [P ಇದು 'ಸತ್ರ'ದ ಅಪಲಿಖಿತ.]

ತ್ಸರು (ನಾ). ಕತ್ತಿಯೇ ಮೊದಲಾದ ಆಯುಧಗಳ ಹಿಡಿ : "ತ್ಸರು೧, ಮುಷ್ಟಿ೧—ಈ ೨ ಹಿ(ಪಿ)ಡಿ" (ಹಲಾಯು. ೭೮-೩೧೯) : "ತ್ಸರು ಖಡ್ಗ ಮುಷ್ಟಿ" (ಪಸಾ. ಕೋ. ೮೫-೨೧); "ತ್ಸರುವೆಸಲ್ ಪಿಡಿ" (ಮಂಗಣ. ೮೮-೩೭).

[ಸಂ.]

ಥ (ನಾ). ೧. ಕನ್ನಡ ವರ್ಣಮಾಲೆಯ ಮೂವತ್ತೇಳನೆಯ ಅಕ್ಷರ ; ಥಕಾರ. ೨. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : "ಥಥಸಮ ದೇಟು" (ಮುಂಗಣ. ೦೦೪-೦೦).

ಥಂಡಿ 'ತಂಡಿ' ನೋ.

ಥಕ (ನಾ). (ಕುಣಿಯುವುದನ್ನು ಸೂಚಿಸುವ) ಒಂದು ಅನುಕರಣ ಶಬ್ದ. ರೈತರಿಗೆ 'ಬರದ ದೇವಿ' ಥಕ ಥೈ ಎಂದು ಕುಣಿದು ತಾಂಡವವಾಡಿಯೇ ಆಡಿದಳು (ಬರಚಾ. ೩೮).

ಥಕಥಕ (ದ್ವಿರುಕ್ತಿ): ಕುಣಿಯೋಣು ಬಾರ . . . ಕುಲುಕಿಸಿ ಕೈ ಕೈ ಮಲಕಿಸಿ ಮೈಮೈ ಥಕಥಕ ಥೈಥೈ (ಗಿರಿ. ೦೫೨-೯).

ಥಕಥಾಕು (ನಾ). ಒಂದು ಅನುಕರಣ ಶಬ್ದ : ಪ್ರಲಂಬನಹಹಾ ನೆನೆದೊಡೆ ಸಾಕು ಬಗೆ ಮುದದಿಂ ಕುಣಿವುದು ಥಕಥಾಕು(ಗೋಳುನಿ. ೦೫-೨೫).

ಥಕಪಕ (ನಾ). ಒಂದು ಅನುಕರಣ ಶಬ್ದ : ಹೊರಗೆ ದೂರದಲ್ಲಿ ನದಿಯ ನೀರು . . . ಕನ್ನಡಿಯ ತುಣುಕಿನಂತೆ, ಥಕಪಕ ಹೊಳೆಯುತ್ತಿತ್ತು (ಹೊಸಕ್ಷ. ೦೮೭).

ಥಕಾರ (ನಾ). ಥ ಎಂಬ ಅಕ್ಷರ : ಸತ್ವಮಿಶ್ರಮಪ್ಪ ಥಕಾರಂ ಬರೆಯುಂ ತಕಾರವಕ್ಕುಂ ಸ್ವರಾನ್ವಿತಂ (ಕಮದ. ೩೫೭). [ಸಂ.]

ಥಕಾಸು (ಕ್ರಿ). ದಣಿ ; ಬಳಲಂ ; ಆಯಾಸಗೊಳ್ಳಿ : ಗೌಡರು, ಕಮತಿಗ್ಯಾ ನೆಟ್ಟಗ ಇದ್ದಾರ? ನೀಲವ್ವ ಥಕಾಸಿರದೇಕು (ದೀಪಹ. I, ೨೪೮) : ತಮ್ಮಾಟಿಯ ಸಲುವಾಗಿ, ರಮಾಕಕ್ಕಿ ಥಕಾಸಿದ್ದರು (ದೀಪಹ. II, ೪೭). [ಥಕ್ಕಾ೧ (P ← ಮರಾ. ಥಕಣೇ) + – ಸು೧]

ಥಕ್ಕು (ನಾ). ಆಶ್ಚರ್ಯ ; ವಿಸ್ಮಯ : ಉಕ್ಕಿನ ಮೈಕಟ್ಟು ಸಕ್ಕರೆ ಸವಿ ಮಾತು ಥಕ್ಕು ಹಿಡಿಸುವ ನೋಡುವರಿಗೆ (ಕುಗುತಿ. ೬-೩೩).

ಥಕ್ಕಾಗು = ಚಕಿತವಾಗು ; ವಿಸ್ಮಯಂಗೊಳ್ಳು: ಮೈನವಿರ ನವಿಲು ತಕತೈಯ್ಯ ಕುಣಿದು ಥಕ್ಕಾಗಿ ನಿಂತು (ಗಂಗಾತ. ೧೯೦-೬) ; ನಾನು ಕತ್ತಲ ಕೋಣೆ ನೋಡಿ ಥಕ್ಕಾದೆ (ಪ್ರಸಾ. ೦೦೪).

[← ಮರಾ. ಥಕ್ಕ; ಹಿಂ. ಥಕ]

ಥಟಕ್ (ನಾ). ಒಂದು ಅನುಕರಣ ಶಬ್ದ. 'ಥಟಕ್ಕನೆ' ಪರಾ.

ಥಟಕ್ಕನೆ (ಅ). ಬೇಗನೆ ; ಕೂಡಲೆ ; ಒಮ್ಮೆಲೆ ; ಇದ್ದಕ್ಕಿದ್ದಂತೆ : ಅಗಾಧ ಒತ್ತಡಗಳ ಸಂಮರ್ದದಲ್ಲಿ ವಸ್ತುವಿನ ಗುಣಗಳು ಹೇಗೆ ಥಟಕ್ಕನೆ ಬದಲಾಯಿಸುವುವು ಎಂಬುದನ್ನು ತತ್ವಶಃ ಅರ್ಥಮಾಡಿಕೊಳ್ಳಲಾಯಿತು (ಭೂಹುಟ್ಟು. ೯೨) ; ಆತನ ಕಾಂತಿಯು ಥಟಕ್ಕನೆ ತಗ್ಗುತ್ತದೆ (ಜ್ಯೋತಿರ್ವಿ. ೭೦). 'ತಟಕ್ಕನೆ' ಪರಾ. [ಥಟಕ್ + – ಅನೆ೧]

ಥಟ್ಟಣೆ (ನಾ). ೧. ಗುಂಪು; ಸಮೂಹ. ೨. ಪಡೆ; ಸೈನ್ಯ : ಗಣನೆಯಿಲ್ಲದ ಗಜ ಹಯದ ಭಾರಣೆಯ ಭಾರಿಯ ಭಟರೊಡನೆ ಥಟ್ಟಣೆಯ ಮೇಲೆ ಮಹೀಶ ಹೊಕ್ಕನು ಕಾಳೆಗದ ಕಳನ (ಕುವಾ.ಭೀ. ೯-೬) ; ಗಜಿಗಟ್ಟಿದ ವಿರೋಧಿವ್ರಜದ ಥಟ್ಟಣೆಯ ಮುಱಿದು ಕುಱಿದಱಿ ಮಾಡಿ ದೊರೆಗಳ ನಱಸಿ ಕಾದಿ ವಿಭಾಡಿಸುವ ರಣದುಜದೆಕಾಜನನೆಂತು ಸೈರಿಸಿ ಗೆಲುವೆ ನೀನು (ಕುವಾ.ಕಳ. ೦೬-೨೪). 'ದಟ್ಟಣೆ' ಪರಾ.

[ಥಟ್ಟು೩ + – ಅಣೆ೩]

ಥಟ್ಟನೆ (ಅ). ಕೂಡಲೆ ; ಬೇಗನೆ : ಥಟ್ಟನೆರಗಿ ಗರುಡನ ತೆರ (ಗಜಕ. ೨೫-೦೩) ; ತನ್ನ ಚಿಂತೆಯ ಸುಳಿಯಲ್ಲೇ ಸುತ್ತಿಕೊಂಡು ನಡೆಯುತ್ತಿದ್ದ ಸೋಜ ಥಟ್ಟನೆ ತಲೆಯೆತ್ತಿ ನೋಡಿದ (ಮುಂಗಾಮು. ೦೦೬) : ಅವಳು ಥಟ್ಟನೆ ಲಜ್ಜೆತಳಾಗಿ ತನ್ನ ವಾಲಿಗೆ ಕಚ್ಚಿಕೊಂಡಳು (ನಾಪೋಲೀ. ೦೬೫); ಜಟ್ಟಿಯಾದರೂ ಥಟ್ಟನೆ ಹಾರದೇಕು (ಗಾಡ). [ಥಟ್೦ + – ಅನೆ೧]

ಥಟ್ಟಯಿಸು 'ಥಟ್ಟೈಸು' ನೋ.

ಥಟ್ಟು೧ 'ತಟ್ಟು೬' ನೋ.

ಥಟ್ಟು೨, ತಟ್ಟ೨, ತಟ್ಟು೨ (ನಾ). ೧. ಗುಂಪು ; ಸಮೂಹ : "ಜಂಗುಳಿ ತೆರಳ್ಕಿ ದೊಂದುಳಿ ನೆರವಿ ಥಟ್ಟು . . . ಸಂದಣಿ ಜಾಳಿಗೆಯುಮೆನೆ ಶ್ರೇಣಿ ಕಾಖ್ಯಂ" (ಕಬ್ಕಿಕ್ಕ. ೦೬) ; "ಥಟ್ಟಿನಲ್ ಶ್ರೇಣಿ" (ಕಶಪ. ೫೦) : ಸರಸಿಜದ ಮೋಹರದ ಮುಂದೈತಪ್ಪ ವರಿಮಳೆದ ಮೊರೆವ ತುಂಬಿಯು ಥ [ಪಾಕಾಂ. ತ]ಟ್ಟುಗಳ ತನಿವರಿವ ತಂಪಿನ ತುಱುಗಲಿನ ತತ್ಸರಸಿಯನು ದೂರದಲಿ ಕಂಡುಬ್ಬದನು ಕಲಿಭೀಮ (ಕುವಾ.ಅ. ೦೦-೪೨) : ಅಬ್ಬ ಹೊಯ್ದನು ಹೊಗುವ ತೇರಿನ ಥಟ್ಟತೂಳುವ ತೋಳಿನಾನೆಯು ಮೆಟ್ಟಿದನು ತಱಿದೊಟ್ಟಿದನು ತೇಜಿಗಳ ತಿಂತಿಣಿಯ (ಕೂಕರಣ. ೩-೬-೪೨); ದಟ್ಟವಿಸಿದಜ್ಞಿನ ತಿಮಿರದ ಥ[ಪಾಕಾಂ. ಥ]ಟ್ಟು ಮಾರ್ಗವ ಕಾಣಲೀಸದು (ನಿಘಾಗ. ೩-೮-೪). ೨. ಪಡೆ ; ಸೈನ್ಯ : "ಥಟ್ಟು ಸೈನ್ಯದೊಳ್" (ಕಚಾನಿ. ೨೯) ; ಕಾಳೆಗದೊಳ್ತಡಂಗಡಿದು ಮುಂದಣ ಥಟ್ಟನವುಂಕಿ ಪಾಯ್ದೊಡೆ (ಎಳ. VI. ತರೀಕ. ೪೫-೨೪ : 1196) ; ಕೌರವೇಂದ್ರನ ಥಟ್ಟನಲಿ ಭಟರಾರೆನುತ ತಲೆದೂಗಿದನು ಪಾರ್ಥ (ಕುವಾ.ಕಳ. ೦೪-೨೨) : ಎರಡು ಥಟ್ಟಿನ ಚೂಣಿ ಸಂದಣಿಸಿತಂರವಣೆಯೊಳು (ಪ್ರಮಿಥಾ. ೨೨-೩) : ಅಧಟಿಂದವಲಿ ಥಟ್ಟುಗಳ ಪಂದಲೆಗಳಂ ದಿಗ್ಭ್ರಂದುಬಲಿಯಿತ್ತು (ಅಪ್ರತಿ. ೬-೮). **ತಟ್ಟ೨** : ೨. ಬನ್ದುಜನವನಜಮಾರ್ತ್ತಂಡಂ ಕಾಯ್ವರ ಗಣ್ದಂ ಅರಿತುರಗತಟ್ಟಸಂಘಟ್ಟಂ (ಸಾಇಇ. XI-1, ೭೮-೮೦ ; 1045) ; ಶ್ರೀಮನ್ಮಹಾಮಂಡಳೇಸ್ವರ ಕಲಿಗಳ ಮುಖದ ಕೈ ಸಾಳುವ ತಟ್ಟ ವಿಭಾಡ ರಿವುಟಕ ಸೂಱಿಕಾಱಿ ನಗಿರೆಯ ಪುರವರಾಧೀಸ್ವರ (ಕಾ. I, ೫೦-೫; 1430). **ತಟ್ಟು೬** : ೧. ಆನೆಯ ಹಿಂಡುಗಳುಂ ಕುದುರೆಯ ತ[ಪಾಕಾಂ. ದ]ಟ್ಟುಗಳುಂ ಪದಾತಿ ಬಲ ದೊಡ್ಡುಗಳುಂ . . . ಪೊಱಮಡೆ (ನಂಬಿಕ. ೦೪-೭೩); ಜನಜನ್ಮೋತ್ಸವಮಂ ಮನಂದಣಿಯೆ ನೋಡಿತ್ತಾ . . . ದೇವಕೋಟಿ ನೆಗಟಲ್ಕಾಡಿತ್ತು, ಕೋಡಾಳಿಗಟ್ಟಿನ ತಟ್ಟಂದೆನೆ ಹಸ್ತಿ ಪೆತ್ತುದು ಮಹಾವೈಕುರ್ವಣೋತ್ಸಾಹ ಮುಂ (ಅನಂಪು. ೫-೩೮). ೨. ಪೊಗಟ್ತಿಯಂ ತಳೆದ ತೇಜಿಯ ತಟ್ಟು ತೆರಳುದೆತ್ತಲುಂ (ಕಬ್ಕಿಕಾ. ೨೦೪) : ಕರಿಘಟೆತೇಜಿಯ ತ[ಪಾಕಾಂ. ಥ]ಟ್ಟು ತೇರೊಡ್ಡುಸಂಗರ ವೀರಭಟರ ಸಮೂಹೆ ಬರುತಿದ್ದುದು (ಥರಚ. ೨೩-೦೩).

ಥಟ್ಟು ಮಾಡು = (ಸೈನ್ಯದೊಡನೆ) ಆಕ್ರಮಿಸು,—ದಾಳಿಮಾಡು,—ಮುತ್ತು: ಬೇಡಿದ ಮುನ್ನೀವುದು ವೀರವೈರಿ ವೊನೆಯೊಳ್ ಕಟ್ಟೇಳ್ಗೆಯುಂ ಥಟ್ಟುಮಾಡದ ಮುಂ ಗೆಲ್ವುದು ಭೀತನಳ್ಕಿದೆಡೆಯೊಳ್ ಕಾಯೆಂದು ದಾ[ಯ್]ವಿಟ್ಟು ನೋಡದ ಮುಂ ಕಾವುದು ವೀರಮಾರುತಿಗೆ ಬಲ್ಲಾಳಂಗೆ ಜಾತಿಬ್ರುತನ್ (ಎಳ. V, ದನ್ನಕಾ. ೦೯೭-೩೮ : 1228) ; ಕರತಳ ಖಡ್ಗಮಂ ಜಡಿದು ಪಾಂಗಱಿದೊಡ್ಡಣವೊಡ್ಡಿ ನಿಂದು ಪೇಚರರಿದೆಂಬಿನಂ ಪೊಡೆವ ಪೊಯ್ವ ತಜುಂಬುವ ಥಟ್ಟುಮಾಳ್ಪ ಮುಂಬರಿವ ಮರಳ್ಚುವಬ್ಬರಿಪ . . . ತೊಡಂಕುವಗ್ಗಲಿಪ ಬಿನ್ನಣವೊಪ್ಪೆ ಕಡಂಗಿ ಕಾದಿದರ್ (ರಾಆಶೀ. ೬-೫೩). [< ಪ್ರಾ. ಥಟ್ಟ]

ಥಟ್ಟುಗಿ 'ತಟ್ಟುಗಿ' ನೋ.

ಥಟ್ಟುಗೆಡಹು, ತಟ್ಟುಗೆಡಹಂ (ಕ್ರಿ). ಒಟ್ಟಾಗಿ ಬೀಳಿಸು ; ಗುಂಪಾಗಿ ಬೀಳುವಂತೆ ಮಾಡು : ಮೂಱು ಲೋಕದ ಧೀರ ನಿದ್ರಾಂಗನೆ ಎಲ್ಲರನೂ ಹಿಂಡಿ ಹೀರಿ ಪ್ರಾಣಾಕರ್ಷಣೆಯ ಮಾಡಿ ಥ [ಪಾಕಾಂ. ತ]ಟ್ಟು

ಗೆಡಹಿದಳಲ್ಲಾ (ಅವಜಂ.೧೫೨-೬೯೯); ಬೆಟ್ಟವನು ಬಲವೈರಿ ತಱುವವೊಲಿಭದ ಮೋಹರವ ಥಟ್ಟುಗೆಡಹಿದನು (ಕುಮ್ಯಾಕ. ೧೩-೨೬); ಥಟ್ಟನೊಳ ಹೊಗುವಾನೆ ಕುದುರೆಯ ತೇರ ತಿಂಥಿಣಿಯ ಥಟ್ಟುಗೆಡಹಿದನಂ (ತೊರರಾ. ೫-೬-೦೫); ಬಿಟ್ಟ ಮಂಡೆಯಲೊಡೆಯನೊಡಲಲಿ ಥಟ್ಟುಗೆಡಹಿದ ರೊಡಲುಗಳನೊಡಗುಟ್ಟಿದರು ಬಸುಱುಗಳನಡಿಗಡಿಗವನಿಯಲಿ ಹೊರಳಿ (ನಿಭಾಗ. ೬-೨-೨೩). ತಟ್ಟುಗೆಡಹು: ರಾಮನ ಭಟರು ತ[ಪಾಠಾಂ. ಥ]ಟ್ಟುಗೆಡಹಿ ರಾವುತರ ಹಿಡಿದರು ಸಾಲಿಟ್ಟೋಡುವ ಕುದುರೆಗಳ (ಕುರಾಸಾಂ. ೨೦-೬೦). [ಥಟ್ಟು$_2$ + ಕೆಡಹು (<ಕೆಡವು)]

ಥಟ್ಟುಗೆಡು (ಕ್ರಿ). ಗುಂಪಿನಿಂದ ಬೇರೆಯಾಗು ; ಚೆದರು ; ಚೆಲ್ಲಾಪಿಲ್ಲಿಯಾಗು : ಥಟ್ಟುಗೆಡುವಾನೆಗಳಿಗಾನೆಯ ಕಟ್ಟುತಸುರರಿಗಸುರರನು ಹೊಗಗುಟ್ಟುತೀ ಪರಿ ನಡೆಸಿ ತಂದರು ದೃಢವರಾಕ್ರಮನ (ತೊರರಾ. ೫-೬-೦೩). [ಥಟ್ಟು$_2$ + ಕೆಡು$_1$]

ಥಟ್ಟುಗೆಡೆ, ತಟ್ಟುಗೆಡೆ (ಕ್ರಿ). ೧. ಗುಂಪಾಗಿ ಬೀಳು ; ಒಟ್ಟಾಗಿ ಕೆಳಕ್ಕೆ ಬೀಳು : ಅಟ್ಟಿ ರಣದಲಿ ಕರಿಯ ಸೇನೆಯ ಥಟ್ಟುಗೆಡೆದಿಹ ಕರಗಳಿಂದವೆ ಹಿಟ್ಟುಗುಟ್ಟಿದ ತುರಗ ತುರಗದಿ ಬಲವ ಬಱುಗೈದ (ಕಾಶಿರಾ. ೩೪-೦೪) : ಬೆಟ್ಟದಂದದ ಬಲುಮರುಗಳು ಥಟ್ಟುಗೆಡೆದವು ಧರೆಗೆ (ನಿಭಾಗ. ೩-೨-೨೦); ಥಟ್ಟುಗೆಡೆದುದು ಪಗೆಯ ಪಡೆಯೊಳಕ್ಷೌಹಿಣಿಯ ಶತಕಮೊಂದೇ ಕ್ಷಣದೊಳು (ಜೈಮಿಭಾ. ೨೫-೫೦). ೨. ರಭಸದಿಂದ ಬೀಳು; ದಿಂಡುಗೆಡೆ : ಗಾಳಿಗೊಱಗಿದ ಕದಳಿಯಂತಿರೆ ಲೋಲಲೋಚನೆ ಥಟ್ಟುಗೆಡೆದಳು (ಕುಮ್ಯಾಅ. ೯-೨೬) ; ಥಟ್ಟುಗೆಡೆದಳು ಧರೆಗೆ ಸತಿ ಕಱುಗೆಟ್ಟ ತಾಯಂದದಲಿ (ನಿಭಾಗ. ೧೦-೬-೭). ತಟ್ಟುಗೆಡೆ: ೧. ತಟ್ಟುಗೆಡೆದಿಹ ವಾಜಿವಾರಣವರೂಥ ದಿಂದಿಟ್ಟಣಿಸಿ ಬಿದ್ದ ರಾಕ್ಷಸ ಮನುಜ ಕಪಿಗಳಿಂ . . . ಕಟ್ಟುಗ್ರಮಾದ ರಣರಂಗದೊಳ್ದಾಲ್ಮೀಕಿಮುನಿ ರಾಮನಂ ಕಂಡನು (ಜೈಮಿಭಾ. ೨೦-೪೮). [ಥಟ್ಟು$_2$ + ಕೆಡೆ$_1$]

ಥಟ್ಟುಚ್ಚು 'ತಟ್ಟುರ್ಚು' ನೋ.

ಥಟ್ಟುತಾಱು 'ತಟ್ಟುಂತಾಱುಂ' ನೋ.

ಥಟ್ಟುಪೊಟ್ಟು (ನಾ). ಒಂದು ಅನುಕರಣ ಶಬ್ದ : ನಿಶಾಟರನುಂಡನಗ್ನಿ ಧುಮ್ಮೆಂಬ ಥಟಚ್ಛಟೆಂಬ ಧಗೆಯೆಂಬ ಧಗದ್ಧಗೆಯೆಂಬ ಥಟ್ಟುಪೊಟ್ಟೆಂಬ ರವಂ ಕಱುತ್ತಡಸಿ ಮೆಲ್ವ ಸರಕ್ಕನುಸಾರಿಯಪ್ಪಿನಂ (ಕಾಮ್ಯಾವ. ೨೮).

ಥಟ್ಟುವರಿಯಿಸು, ತಟ್ಟುವರಿಯಿಸು (ಕ್ರಿ). ಗುಂಪಾಗಿ ಹೋಗುವಂತೆ ಮಾಡು : ಪಿಂಡಾನೆಗಳೊಂದುಗೂಡಿ ಶಿಕ್ಷೋಪಕರಣಂ ಬೆರಸು ಸುಳಿದೇಱುವ ಸುತ್ತಂ ಮೆಟ್ಟಿಸುವ ವಿಸಟಂಬರಿವಡ್ಡತರದೊಳಿಕ್ಕುವ ಥ[ಪಾಠಾಂ. ತ]ಟ್ಟುವರಿಯಿಪ ತೇರೈಪ ಬೋಳೈಪ (ರಾಜಶೇ. ೬-೧೦ ಪ). ತಟ್ಟುವರಿಯಿಸು : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಥಟ್ಟು$_2$ + ಪರಿಯಿಸು]

ಥಟ್ಟೈಸು, ತಟ್ಟೈಸು, ಥಟ್ಟಯಿಸು (ಕ್ರಿ). ೧. ಗುಂಪುಗೂಡು; ಒಟ್ಟಾಗು: ಧರಣಿಪರು ಥಟ್ಟೈಸಿ ರಿಪುಮೋಹರಕೆ ಕವಿದುದು (ಕುಮ್ಯಾದ್ರೋ. ೪-೩೦). ೨. ಮುತ್ತು; ಕವಿ: ಭೀಮನ ಬಿಡದೆ ಥಟ್ಟೈಸಿದನು ಶರನಿಕರದಲಿ ರವಿಸೂನು (ಕುಮ್ಯಾದ್ರೋ. ೦೩-೨೬). ತಟ್ಟೈಸು : ೧. ತಟ್ಟೈಸಿ ತೆಂಕ ಬಡಗಲೊಂದೆ ತೆರೆಯಿದ್ದುದಿಟ್ಟಿದ್ದರಾಚೆ ಮುನ್ನೂಱು ತೊಟ್ಟೀಚೆ ಮುನ್ನೂಱು ಪಡಲಿಗೆ ಇದ್ದುವು ಮೆಟ್ಟಕ್ಕಿ ತುಂಬಿ ಸಾಲಾಗಿ(ಭರಜ. ೩೦-೬೭). ಥಟ್ಟಯಿಸು : ೧. ಕಲ್ಪಾಂತ ಮೇಘದ ಭಾರಣೆಯನೊಟ್ಟೈಸಿ ಥಟ್ಟಯಿಸಿತ್ತು ಕುರುಸೇನೆ (ಕುಮ್ಯಾಭೀ. ೮-೧೧). [<ಥಟ್ಟಣೆ+ – ಇಸು$_3$]

ಥಟ್ಟೊಡ್ಡು (ಕ್ರಿ). ಸೈನ್ಯವನ್ನು ಒಡ್ಡು : ಪುರಮನಧಟಿಂ ಬಳಸಿ ಕಾದು ವಮರವ್ರಜಂ ಮುರಿದು ಥಟ್ಟೊಡ್ಡಿ ನಿಂದುದು ಸುರಪ ನಾಜ್ಞೆಯಿಂ (ಜಿಬಪು. ೪೩-೩). [ಥಟ್ಟು$_2$ + ಒಡ್ಡು$_1$]

ಥಡಿ 'ತಡಿ$_3$' ನೋ.

ಥಣ್ಣಗೆ 'ತಣ್ಣಗೆ$_2$' ನೋ.

ಥಣ್ಣನೆ 'ತಣ್ಣನೆ' ನೋ.

ಥಣ್ಣಿ 'ತಣ್ಣಿ' ನೋ.

ಥತ್ (ನಾ). ಅವಹೇಳನವನ್ನು ಸೂಚಿಸುವ ಒಂದು ಅನುಕರಣ ಶಬ್ದ : ಥತ್ ಏನು ಹಾಳು ಲೆಖ್ಖಗಳೋ! (ಶಾಲಿಮ. ೩).

ಥತ್ವ (ನಾ). ಥ ಎಂಬ ಅಕ್ಷರ ; ಥಕಾರ : ಸತ್ವಮಿಶ್ರಮಪ್ಪ ಥಕಾರಂ ಬರೆಯುಂ ತಕಾರಮಕ್ಕುಂ ಸ್ವರಾನ್ವಿತಂ ಥತ್ವಮೊರ್ಮೆ ದಟಹ ಮುಮಕ್ಕುಂ (ಶಮದ. ೨೫೭). [ಸಂ.]

ಥಪ್ಪಿ (ನಾ). ಕಂತೆ ; ಪಿಂಡಿ : ಬಂದ ಜೀನಸುಗಳು ವಖಾರಿಯಲ್ಲಿ ಇಳಿಸಿಕೊಂಡು ಯಾವ ಆಸಾಮಿಯವರ ಎಷ್ಟು ಮಾಲು ಬಂತು ಇದರ ಬಗ್ಗೆ ತಗಡಿನ ಮೇಲೆ ಬರದು ಥಪ್ಪಿಯ ಮೇಲೆ ಹಚ್ಚುವದು (ಮುಂಬಮ್ಯಾ. ೨೭೮). [←ಮರಾ. ಥಪ್ಪೀ]

ಥರ$_1$ (ನಾ). ಒಂದು ಅನುಕರಣ ಶಬ್ದ. 'ಥರಗುಟ್ಟು', 'ತರ$_1$' ಪರಾ.

ಥರಥರ$_1$ (ದ್ವಿರುಕ್ತಿ) ; ಅವರ ಮಾತು ಕೇಳಿ ಆಕೆ ಥರಥರ ನಡುಗಿದಳು (ರೂಢಿ).

ಥರ$_2$ 'ತರ$_3$' ನೋ.

ಥರ$_3$, ತರ$_4$ (ನಾ). ಪದರ ; ಪೊರೆ ; ಸ್ತರ : ವರದುಕೂಲದ ಪಟ್ಟ ಕರ್ಮದ ಥರಗಳಿಂ [ಪಾಠಾಂ. ಥರದದಿಂ] ದೊತ್ತಿದವು ಚಾಮೀಕರಮಯದ ಬಹುವಿಧದ ಭಾಂಡದ ಬಂಡಿ ನೂಕಿದವು (ಕುಮ್ಯಾಗ. ೪-೦೩) ; ವಾತಾವರಣದ ಬುಡದ ಥರಗಳು, ಅಂದರೆ ಭೂಮಿಯ ಸಮೀಪಕ್ಕೆ ಇರುವ ಭಾಗಗಳು ಮೇಲಿನ ಥರಗಳ ಭಾರದಿಂದ . . . ಒತ್ತಲ್ಪಟ್ಟು ಹೆಚ್ಚಿಗೆ ನಿಬಿಡವಾಗಿರುತ್ತವೆ (ಮುಂಬಯಿ. ೫-೭೫); ಕಟ್ಟೆಗಿಂತ ಗುದ್ದುಮೊಳ ಎತ್ತರವಾಗಿ ಅರ್ಧ ವರ್ತುಲಾಕೃತಿಯ ಥರ ಕಟ್ಟಿ . . . ಆ ಥರದೊಳಗೆ ಎರಡು ಮುಶಿಗಳನ್ನು ಹಾಕಿಡುವರು (ಕಭಾಗೆ. ೨೭). ತರ$_4$: ನೆಲದ ಹೊಟ್ಟೆಯೊಳಗಿನ ಮಣ್ಣಿನ ತರಗಳೂ . . . ಎಲುವುಗಳೂ, ಅಜ್ಞಾತ ಇತಿಹಾಸವನ್ನು ಉಸಿರುವ ಸಾಧನಗಳಾಗುವವು (ವಿಜಾಮಂ. ೭೦) : ಒಂದು ಭಾಷೆಯ ತರದ ಮೇಲೆ ಮತ್ತೊಂದು ಭಾಷೆಯ ಕಟ್ಟಡವು ನಿಲ್ಲುವಾಗ ಯಾವ ರೂಪವನ್ನು ತೆಗೆದುಕೊಳ್ಳುತ್ತದೆಂಬುದಕ್ಕೆ ಪಿಡ್ಗಿನ್ ಒಳ್ಳೆಯ ದೃಷ್ಟಾಂತ (ಭಾಷಾಶಾ. ೦೫); ಕ್ಷಾರಾಂಶದ ದಪ್ಪವಾದ ತರವು ಕೂಡ್ರುತ್ತದೆ (ಮುಂಬಯಿ. ೪-೦೯೮). [< ಸಂ. ಸ್ತರ]

ಥರ$_4$ 'ತರಹ' ನೋ.

ಥರಂಬಿಡಿ 'ತರಂಬಿಡಿ' ನೋ.

ಥರಗುಟ್ಟು (ಕ್ರಿ). ಗಡಗಡ ನಡುಗು,-ಕಂಪಿಸು : ಅವರ ಕೈಕಾಲುಗಳು ಥರಗುಟ್ಟಿ ನಡುಗಹತ್ತಿದವು (ಅಂಬಿಕೆ. ೦೩) ; ಮಂದಿರಕ್ಕೆ ಮಂದಿರವೇ ಥರಗುಟ್ಟಿ ನಡುಗುವಂತೆ ಚೀರುವಳು (ತುಂಗಭ. ೦೪೨). [ಥರ$_1$ + ಕುಟ್ಟು$_1$]

ಥರಥರ$_1$ 'ಥರ$_1$' ಪರಾ.

ಥರಥರ$_2$ 'ತರ$_3$' ಪರಾ.

ಥರಥರ$_3$ 'ತರಹ' ಪರಾ.

ಥರಥರನೆ (ಅ). ಗಡಗಡನೆ : ಸುದ್ದಿ ಕೇಳಿ ಥರಥರನೆ ನಡುಗಿದನು (ರೂಢಿ). [< ಥರ$_1$ + – ಅನೆ$_1$]

ಥರಥರಿಸು (ಕ್ರಿ). ನಡುಗು ; ಕಂಪಿಸು : ಬಿರುಬಿರನೆ ಕಂಗಳಂ ಬಿಟ್ಟು . . . ಥರಥರಿಸಿ ನಿಲ್ಲುತುಂ (ಜಿಬಪು. ೨-೨೬) ; ನಾಚಿಕೆ, ರೋಷ ಎರಡೂ ಸೇರಿ ಮುಖವೆಲ್ಲ ಥರಥರಿಸುತ್ತಿತ್ತು (ಸ್ವಾಮಿಸ್ನೇ. ೫೨) : ಬಾನಿನ ಅಮಲಿಗೆ ಮರುಳಾದ ನದಿಯ ನೀರು ಥರಥರಿಸತೊಡಗಿತು (ಸ್ವಪ್ನಹೊ. ೦೧೩). [< ಥರ$_1$ + – ಇಸು$_3$]

ಥರವಿಡಿ 'ತರಂಬಿಡಿ' ನೋ.

ಥರ್ಮಾಮಿಟರು (ನಾ). ಜ್ವರಮಾಪಕಯಂತ್ರ : ಕೈಯಲ್ಲಿ ಥರ್ಮಾಮಿಟರನ್ನು ಹಿಡಿದು ಮುಗುಳುನಗುತ್ತಾ ನಿಂತಿದ್ದಳು (ದೀಪರ. ೦೪).

[←ಇಂ. Thermometre]

ಥರ್ಮಾಸ್‌ಫ್ಲಾಸ್ಕು (ನಾ). ಒಳಗಿರುವ ಬಿಸಿಯಾದ ಪಾನೀಯಂ ಬಹಳ ಹೊತ್ತು ಆರದಂತೆ ಇರುವ ಏರ್ಪಾಟು ಉಳ್ಳ ಒಂದು ಬಗೆಯ ಶಾಖಪಾತ್ರೆ: ಒಂದು ಟಫನ್‌ಕ್ಯಾರಿಯರ್‌ನಲ್ಲಿ ಊಟ, ಥರ್ಮಾಸ್‌ಫ್ಲಾಸ್ಕಿನಲ್ಲಿ ಕಾಫಿ . . . ತೆಗೆದುಕೊಂಡು ಹೋಗಬೇಕಾಗುತ್ತದೆ (ನಾಡಿಗೀ. ೦೪೫). [← ಇಂ. Thermos-flask]

ಥಳಕು 'ತಳಕ್ಕು' ನೋ.

ಥಳತ್ಥಳಿಸು 'ಥಳಥಳಿಸು' ನೋ.

ಥಳಥಳ (ನಾ). ಹೊಳೆಯುವುದನ್ನು ಸೂಚಿಸುವ ಒಂದು ಅನುಕರಣ ಶಬ್ದ : ಅಂಗಳ ಎಷ್ಟು ಥಳಥಳ! ಜಾಗ ಏನು ಜಳಜಳ! (ಗಾಳಿ. ೦೦೦). 'ಥಳಥಳನೆ', 'ಥಳಥಳಿಸು' ಪರಾ.

ಥಳಥಳನೆ (ಅ). ಪ್ರಕಾಶಮಾನವಾಗಿ ; ಹೊಳಪಿನಿಂದ ಕೂಡಿ : ಥಳಥಳನೆ ಹಗಲುಳುಕು ಬೀಳ್ದವು (ಸಾಳ್ವ. ೫೧-೩೪).

[ಥಳಥಳ + – ಅನೆ$_1$]

ಥಳಥಳಾರಿಸು (ಕ್ರಿ).=ಥಳಥಳಿಸು: ಕಣ್ಣುಗಳ ಬೆಳಕು ಥಳಥಳಾರಿಸುವದಂ ನೋಡಿ (ಸಾಗಂಧಿ. ೦೯೪-೦೦). [< ಥಳಥಳಿಸು]

ಥಳಥಳಿಕೆ (ನಾ). ಹೊಳಪು ; ಪ್ರಕಾಶ : ಥಳಥಳಿಸುವ ರಥಯೂಧಪಾದಿಗಳಿಂದ ಥಳವಳನೆಸೆವ ಕೈದುಗಳ ಥಳಥಳಿಕೆಯೊಳು ಮೇಲಿಕ್ಕಿದ ಮಗಧನ ಥಳಕನೆ ಗೆಲಿದನೆ ಜಯತು (ಕಚಸಾಂ. ೭೧-೫೯).

[ಥಳಥಳ + – ಇಕೆ]

ಥಳಥಳಿಲು (ನಾ). ಒಂದು ಅನುಕರಣ ಶಬ್ದ : ಥಳ [ಪಾಣಾಂ. ೪]ಥಳಿಲು ಥಟಥಟಿಲು ಖಣಕಟಿಲುಲುಹು ಮಿಗೆ ಧನಿ ಮೆಜೆಯೆ ರಿವುಗಳ ಗೆಲುವೆ ವೆಂದುರವಣಿಸಿ ಹೊಯ್ದಾಡಿದರು ರಣದೊಳಗೆ (ಕುವಾ.ಭೀ. ೪-೪೨).

ಥಳಥಳಿಸು, ಥಳತ್ಥಳಿಸು (ಕ್ರಿ). ಪ್ರಕಾಶಿಸು ; ಹೊಳೆ ; ಮಿಂಚು : ಧನದನಗಂ ತನಗಟ್ಟಿದೊಡೆ ರಾಯಭಾರಿತನಂ ಬಾದಂತಿರ್ಪವಿದಱ ಕುಂಜೋಪಾಂತಂ ಥಳಥಳಿಸಿ ಬೆಳಗೆ ಕುಳಿಶಾಶ್ಮಂಗಳ್ (ಶಾಂತಿಪು. ೨-೦೦೫); ಪೇರುರದೊಳ್ಮಣಿಹಾರಂ ಥಳಥಳಿಸಿ ಪೊಳೆವುತಿರ್ದತ್ತು (ಕಾದಂಪು ೩೦) : ಪರಿಪರಿಯ ಸತ್ತಿಗೆಯಲ್ಲಿ ಕಡಿಯನುಗುಳ್ವಲಗುಗಳ ಥಳಥಳಿಪ ಬೆಳಗಲ್ಲಿ (ಇಷರ. ದೀ. ೩೭-೦೬) ; ಒಡೆದು ನಡುನೆತ್ತಿಯನು ಝಳಪಿಸಿ ಕಡುವೆಳಗು ಥಳಥಳಿಸಿ ತರಣಿಯ ತುಡುಕಿ ಹಾಯ್ದುದು ರಶ್ಮಿ ರಂಜಿಸಿತಪಿಳದಿಗುತಟವ (ಕುವಾ.ಪ್ರೀ. ೦೮-೭೦) : ಅವ ದಿಕ್ಕಿನಲಿ ನೋಡಲು ಥಳಥಳಿಸುವ ತೀವಿದ ಮಿಸುನಿಪಟ್ಟೆಗಳು (ಕಂನವಿ. ೮-೯) ; ಥಳಥಳಿಸುತ್ತಿದ್ದ ತಂತಮ್ಮ ಪಾತ್ರೆಗಳಲ್ಲಿ ನೀರು ತೆಗೆದುಕೊಂಡು ಹೊರಟರು (ಕಂಗಾಳ್ಳ. ೮೦). **ಥಳತ್ಥಳಿಸು** : ಸುಲಿಪಲ್ಲಳುಜಿ ಥಳತ್ಥಳಿಸೆ ಕಿಂಜೆಡೆ ಮಿಜುಗೆ ತಲೆಮಾಲಿಗಳ್ ಶೋಭೆವೆತ್ತು ರಂಜಿಸೆ . . . ವಿರೂಪಾಕ್ಷನಿರ್ದಂ ವಿಲಾಸದಿಂದ (ಕಂಪಿ. ೨-೨೨). 'ತಳತಳಿಸು' ಪರಾ. [ಥಳಥಳ + – ಇಸು$_3$]

ಥಳಪಳ (ನಾ). ಹೊಳೆಯುವುದನ್ನು ಸೂಚಿಸುವ ಒಂದು ಅನುಕರಣ ಶಬ್ದ : ಅವಳ ವಜ್ರದ ಓಲೆ ಥಳವಳ ಎಂದು ಹೊಳೆಯುತ್ತಿದೆ (ಕೂಡಿ). 'ಥಳವಳನೆ' ಪರಾ.

ಥಳಪಳನೆ (ಅ). = ಥಳಥಳನೆ : ಥಳಥಳಿಸುವ ರಥಯೂಧಪಾದಿಗಳಿಂದ ಥಳವಳನೆಸೆವ ಕೈದುಗಳ ಥಳಥಳಿಕೆಯೊಳು ಮೇಲಿಕ್ಕಿದ ಮಗಧನ ಥಳಕನೆ ಗೆಲಿದನೆ ಜಯತು (ಕಚಸಾಂ. ೭೦-೫೯). [ಥಳವಳ + – ಅನೆ$_1$]

ಥಳಪು 'ತಳಪು$_1$' ನೋ.

ಥಳವಳಗೆ (ನಾ). (?) : ಆ ಸೋಮದೇವರ ದೀವಿಗೆಗೆ ಎಣ್ಣೆ ಕೊಳಗವೊಂದು ಬಳ್ಳವೊಂದು ಮಾನವೊಂದಱ ಲಿಕ್ಕದೆ ದಿನ ಹದಿನಾಲ್ಕಕ್ಕಂ ಕೊಳಗ ಹದಿನೆಂಟು ಬಳ್ಳವೆರಡು ಥಳವಳಗೆಯ ಪಕ್ವಾನ್ನದಡಿಗೆಗೆ ಕೊಳಗ ಹತ್ತು ಬಳ್ಳವೆರಡು (ಎಕ. III, ತಿರುಮ. ೯೬-೫೦: 1276). [?]

ಥಳಿ 'ತಳಿ$_2$' ನೋ.

ಥಳಿಸು$_1$ 'ತಳಿಸು$_1$' ನೋ.

ಥಳಿಸು$_2$ 'ತಳಿಸು$_3$' ನೋ.

ಥಳುಕು 'ತಳಕ್ಕು$_2$' ನೋ.

ಥಳುಕುಬಟ್ಟು (ನಾ). "(ಉಡುಂಪು, ಮೊ.ಗಳಿಗೆ ಅಲಂಕಾರಕ್ಕಾಗಿ ಹಾಕುವ) ಹೊಳಪುಬಟ್ಟುಗಳ (ಲೈನ್ಲಂದಂ ; ಚಮಂಕಿ ; ಥಳುಕು ಬಟ್ಟು) ; ಥಳಥಳಿಸುವ ಸಣ್ಣ ವಸ್ತು" (Spangle. ಇಂಳಿನಿ).

[ಥಳುಕು (<ತಳಕ್ಕು$_2$) + ಬಟ್ಟು$_{11}$ (<ಬಟ್ಟು$_1$)]

ಥಟಿಲ್ (ನಾ). ಒಂದಂ ಅನುಕರಣ ಶಬ್ದ : ಖಟಿಲೆಂಬ . . . ಥಟಿಲೆಂಬ ಮಹಾಪ್ರಾಣಾಕ್ಷರಂಗಳೊಳ್ ಸುಟಿವುತಿರ್ಪನುಕರಣೆಯೆಲ್ಲವುಂ ನಿತ್ಯ ಜಟನೆಂಬರಾದಿಯ ಕವೀಂದ್ರರ್ (ಸಂಜೀಪ. ೯).

ಥಾಕು (ನಾ). (ಉಕ) ೧. ನಿಲುಗಡೆ ; ವಿರಾಮಂ : ಬಾಯಿಗೆ ಥಾಕ ಇಲ್ಲ (ಕೋರ್ಮಂಪು. ೦೭೦). ೨. ಸಂಬಂಧ : ಮಾತಿಗೆ ಮಾತು ಥಾಕಿಲ್ಲಲ್ಲಾ ! (ಹೊಸಂಸಾ. ೯೦). [←ಮರಾ. ಥಾಕ್]

ಥಾಟು, ತಾಟು$_5$ (ನಾ). ಡೌಲು : ಪ್ರದರ್ಶನ ; ಆಡಂಬರ ; ಶೋಭೆ : ಅಂದಿನ ಸರ್ಕಸ್ಸು ವಿಶೇಷ ಥಾಟಿನಿಂದ ಸುರುವಾಯಿತು (ಮೀದಿಪು. ೪೯) : ಒಳ್ಳೆಯ, ನಗುಮುಖದ ಹೆಣ್ಣನ್ನು ಲಗ್ನವಾಗಿ ತನ್ನ ಸಂಸಾರವನ್ನು ಒಳ್ಳೆಯ ಥಾಟಿನಿಂದ ಸಾಗಿಸಿದ್ದಾನೆ (ಪುಟಿ. ೪) ; ಉಡುಗಿಯ ಮಾಟೀನ ನಡಿಗಿಯ ಥಾಟೀನ (ಗಿರಿ. ೦೦೦-೯) ; ನಮ್ಮ ದರ್ಬಾರದ ಥಾಟನ್ನು ನೋಡಿ ಕಣ್ಣು ಕತ್ತಲುಗೂಡಿಸಿದ ಹಾಗಾದದ್ದರಿಂದ (ಧತ್ರಕ. ೦೪೦) : ನನ್ನ ಹೆಂಡತಿಯನ್ನು ಕರೆದು ತಂದು ಮನೆಗೆ ನಿಲ್ಲಿಸಿ ನಿಮ್ಮ ರಸಿಕಜೀವನ, ರಸವತ್ತಾದ ಮಾತಿನ ಥಾಟನ್ನು ತೋರಿಸಿದೆ (ಕೂನೀಕಾ. ೩೦). **ತಾಟು$_5$** : ತಾಟಿನಿಂದಾಟದಿಂ ಜಿಂಕೆಗೂ ಮೀಟಾಗಿ ನಾಟಕದ ವೋಲ್ ತಾಸಿನೊಳು ತೀರಿಹೋದೆಯಾ ? (ಅಯ್ಯಾಲಿ. ೭೦-೦೪).

[←ಮರಾ. ಥಾಟ್]

ಥಾನು (ನಾ). (ನಲವತ್ತು ಗಜಗಳ) ಬಟ್ಟೆಯಂ ಕಟ್ಟು : ಮೇಲೊಂದು ಕಸೆಯ ಅಂಗಿ ಧರಿಸಿ, ತಲೆಗೆ ಒಂದು ಥಾನು ಬಟ್ಟೆಯನ್ನು ಪಾಗು ಸುತ್ತಿ . . . ದಿಗ್ವಿಜಯಕ್ಕೆ ಹೊರಟಂತೆ ಹೊರಡುತ್ತಿದ್ದರು (ಕರಕ. ೦೦೭) : ನಾನು ರಾಜನಿಗೆ . . . ಬೆಲೆಯಾದ ಡಮಾಸ್ಕ್ ಮತ್ತು ಸಾಟಿನ್ ಬಟ್ಟೆ ಥಾನುಗಳನ್ನೂ ಅರ್ಪಿಸಿದೆ (ಕ್ರಪಾಇ. II, ೦೬೧) ; ಬಟ್ಟೆ ಒಂದು ಥಾನು (ಗಂಪ್ರ. ೭೩).

ಥಾನುಗಟ್ಟಲೆ = ಕಟ್ಟುಗಟ್ಟಲೆ : ಥಾನುಗಟ್ಟಲೆ ಬಟ್ಟೆಯಿಂದ ಯಿಜಾರ ಹೊಲಿಸಿಕೊಳ್ಳಬೇಕೆಂದರೆ ಎಷ್ಟು ಹಣವಾಗುತ್ತೆ ! (ನಾಡಿಗೀ. ೬).

[←ಹಿಂ. ಮರಾ. ಥಾನ್]

ಥಾಪನೆ 'ತಾಪಣೆ' ನೋ.

ಥಾಲಿ, ತಾಲಿ$_8$, ಥಾಳಿ (ನಾ). ಲೋಹದ ಗುಂಡನೆಯ ಸಣ್ಣ ಪಾತ್ರೆ, ತಟ್ಟೆ ಮೊದಲಾದುವು : ಚ್ಹಾವೆಯ ಬಳಿಯಲ್ಲಿ ಒಂದು ತುಂಬಿದ ತಂಬಿಗೆ, ಒಂದು ಥಾಲಿ ಕಂಡುವು (ಜನಜೀ. ೭೦) : ಒಂದು ಥಾಲಿ ಆಕಳ ಹಾಲೇ ಅವರ ರಾತ್ರಿಯ ಆಹಾರ (ಹುಬ್ಬ. ೦೧) ; ಅವಳು ಅಡುಗೇಮನೆಯಲ್ಲಿರುವ ನೆಲಂವಿನಲ್ಲಿ ಕೈ ಹಾಕಿ ತಂಬಿಗೆ ಥಾಲಿ ತೆಗೆದುಕೊಂಡಳು (ರಕ್ತಧೃ. ೦೬೮) : ತಾಟು ತಂಬಿಗೆ–ಥಾಲಿಗಳನ್ನು ಅಣಿ ಮಾಡಿದಳು (ಪ್ರೀಮುಕ. ೩). **ತಾಲಿ$_8$** : ಕೈಯಲ್ಲಿ ಬೆಳ್ಳೀ ತಾಲಿಯನ್ನು ಹಿಡಿದು ಅವರ ಮನೆಗೆ ಊಟಕ್ಕೆ ಹೋದಳು

(ನೀತಿಚಂ. XIV, ೬); ಭೋಜನವೆಂದರೆ ಹೆತ್ತು ಮೈಲಿ ಎಗ್ಗಿಲ್ಲದೆ ತಾಲಿ ಓಡಿದು ನಡೆದುಬಡುತ್ತಿದ್ದ ದಾಸಾಚಾರ್ಯ (ಸಂಸ್ಕಾರ. ೧೦); ಒಂದು ದೊಡ್ಡ ತಾಲಿಯಲ್ಲಿ ಹೆಂಡವನ್ನೂ ತಂದಳು (ಮಲಮ. ೩೩). **ಥಾಳಿ**: "ತಾಲಿ (ತಾಳಿ) – ಸ್ಥಾಲೀ = ಥಾಳಿ, ಪಾತ್ರೆ" (ತದ್ಭವ. ೧೬).

[<ಪ್ರಾ. ಥಾಲೀ./ಸಂ. ಸ್ಥಾಲೀ]

ಥಾಲೀಪಿಟ್ಟು, ತಾಲೀಪಿಟ್ಟು (ನಾ). ೧. ಅಕ್ಕಿಹಿಟ್ಟು, ಉಪ್ಪು ಮುಂತಾದುವನ್ನು ಕಲಸಿ, ಕೊಳಗದಾಕಾರದ ಅಗಲವಾದ ಬಾಯುಳ್ಳ ತಪ್ಪಲೆಯಲ್ಲಿ ತಟ್ಟಿ, ಬೇಯಿಸಿ ತಯಾರಿಸುವ ಒಂದು ಬಗೆಯ ರೊಟ್ಟಿ; ತಪ್ಪಲೆರೊಟ್ಟಿ. ೨. ಹಂಚಿನ ಮೇಲೆ ಎಣ್ಣೆಯನ್ನು ಬಳಿದು ಜೋಳದ ಹಿಟ್ಟನ್ನು ತಟ್ಟಿ ಮಾಡುವ ಒಂದು ಬಗೆಯ ಖಾದ್ಯ: ಅವನಿಗೆ ಥಾಲೀಪಿಟ್ಟು ಬಹಳ ಸೇರುತ್ತದೆ (ಸ್ಕೃತಿಚಿ. ೪೨೩); ಅಪ್ಪಗೆ ಬಂದರೆ ಅದ್ಭುತ ಸಿಟ್ಟು ಅವ್ವ ಮಾಡುವಳು ಥಾಲೀಪಿಟ್ಟು (ಕುಪದ. ೩೪). **ತಾಲೀಪಿಟ್ಟು**: ೨. ತಾಲೀಪಿಟ್ಟು ... ಅಕ್ಕೀತರಿ ಉಪ್ಪಿಟ್ಟು ಯಾವುದಾದರೊಂದು ಇರುತ್ತಿತ್ತು (ಮುಯ್ಯಿ. ೧೪). [<ಥಾಲಿ + ಪಿಟ್ಟು]

ಥಾವು 'ತಾವ್ಯೆ' ನೋ.

ಥಾಳಥಳ್ಳ (ನಾ). ಹೊಳಪು; ಪ್ರಕಾಶ; ಕಾಂತಿ: ವರಮಣಿಗೆ ದೀಧಿತಿಯು ಕುಸುಮೋತ್ಕರಗಳಿಗೆ ಸೌರಭವ ದಿವ್ಯಾಂಬರಗಳಿಗೆ ಏಗೆ ಥಾಳಥಳ್ಳ [ಪಾಠಾಂ. ಥಾಳಥಳ್ಳ]ವ ಬರಿಸಲೋಸುಗವೇ . . . ಸಿಂಗರಿಸಿದರು ಚಮೂರೆಯರು (ಆನಂದಾ. ೧-೫೩-೧೧); ಆ ವಜ್ರಕುಂಡಲಗಳ ಮುಕ್ತಾಹಾರಗಳ ಥಾಳಥಳ್ಳವು (ಸುಗುಣಾಂ. ೪೯-೨). [<ಥಳಥಳ]

ಥಾಳಿ 'ಥಾಲಿ' ನೋ.

ಥಾಱುಥಟ್ಟು 'ತಾಟುಂತಟ್ಟು' ನೋ.

ಥಿಟ್ಟಗಪಾನ (ನಾ). ಒಂದು ಊರಿನ ಹೆಸರು (?): ಸ್ವಸ್ತಿಶ್ರೀಭಣ್ಣಾರಕ ಥಿಟ್ಟಗಪಾನದಾ ತಮ್ಮಡಿಗಳ ಶಿಷ್ಯರ್ ಕಿತ್ತೆಱ್ × ದುರಾ ನಿಸಿಧಿಗೆ (ಎಕ. II. ೧೯-೧ : ಸು. 700). [?]

ಥಿಯೇಟರು, ಥೇಟರು (ನಾ). ಚಲನಚಿತ್ರ, ನಾಟಕ ಮುಂತಾದುವನ್ನು ಪ್ರದರ್ಶಿಸುವ ಮಂದಿರ: ಥಿಯೇಟರು ಬಾಗಿಲು ಕಾಯುವ ಶಿಪಾಯಿಯಿಂದ ಹಿಡಿದು (ಹೇಪುಂತ. ೩೫೫); ಪೋಲೀಸಿನವರ ಮತ್ತು ಥಿಯೇಟರಿನವರ ಮಧ್ಯಸ್ಥಿಕೆಯಿಂದ ಜಗಳ ನಿಲ್ಲುತ್ತೆ (ನಾಡಿಗೇ. ೩೨). **ಥೇಟರು**: ನಮ್ಮ ಥೇಟರಿನಲ್ಲಿ ಆ ಚಿತ್ರಪಟ ಅಂದೇ ಆರಂಭವಾಗಿತ್ತು (ಪ್ರತಿಸ. ೨).

[← ಇಂ. Theatre]

ಥೂ (ನಾ). ಉಗುಳುವಿಕೆ, ಅವಹೇಳನ ಅಥವಾ ಅಸಹ್ಯಗಳನ್ನು ಸೂಚಿಸುವ ಒಂದು ಅನುಕರಣ ಶಬ್ದ: ಥೂ! ಇಂಥಾ ಕೆಲಸ ಮಾಡಲು ಅವನಿಗೆ ಮನಸ್ಸಾದರೂ ಹೇಗೆ ಬಂತು? (ಕೂಡಿ).

ಥೂಯೆಂಜಲುಗುಳು = ಥೂಯೆನ್: ಕೈಕೆಯಂ ವಲಿದು, ಬಯಲಂ ನಿಟ್ಟಸಾಕೆಗಂಡವನಂತೆ ಥೂಯೆಂಜಲುಗುಳುತ್ತೆ, ವಿಕಲಮತಿ ದಶರಥಂ ಕಡುಭಯಂಕರನಾದಂ (ಶ್ರೀರಾಮಾ. ೯೪-೪೫೩).

ಥೂಯೆನ್ (ಕ್ರಿ). 'ಥೂ' ಎಂಬ ಶಬ್ದ ಸಹಿತವಾಗಿ ಉಗುಳು: ಎದ್ದನವನಂದಂಬುನಿಧಿಯೊಳಗದ್ದ ಗಿರಿ ನೆಗೆವಂತೆ ಬಾಯೊಳಗಿದ್ದ ರಣಧೂಳಿಯನು ಥೂಯೆಂದುಗುಳುತೆಡಬಲಕೆ (ತೊರಕಾ. ೬-೨೩-೨೨). [ಥೂ + ಎನ್[1]]

ಥೂಕರಿಸು (ಕ್ರಿ). ಉಗುಳು; ಉಗಿ: "ನಿಷೇವಃ, ನಿಷ್ಠ್ಯೂತಿಃ, ನಿಷ್ಠೀವನಂ, ನಿಷ್ಠೇವನಂ–ಳಿ ಕೇಕರಿಗೆ, ಉಗುಳುವಿಕೆ ಥೂಕರಿಸುವಿಕೆ" (ನಿಘಂತಿ. ೩೧೬); ಇಲ್ಲದ ಕಫ ಗಂಟಲಿಂದ ಕೆರೆದು ಹೊರತೆಗೆದು ಕಿಟಕಿಯಲ್ಲಿ ಥೂಕರಿಸಿದರು (ಮಾಮನ. ೧೯೦). [ಥೂಕರಣ$_0$ + – ಇಸು$_3$]

ಥೇಟ್, ತೇಟ್, ತೇಟು, ಥೇಟು (ಗು). ೧. ತದ್ರೂಪವಾದ; ವ್ಯತ್ಯಾಸವಿಲ್ಲದ; ಅದೇ ಬಗೆಯ: ಹಳ್ಳಿಶಾಲೆ ಎಂದರೆ ಮಾತ್ರ ಥೇಟ್ ಹಳ್ಳಿಶಾಲೆಯೇ (ರೂಪಸಂ. ೫೬); ಇದರ ನೀರು ಥೇಟ್ ಇಂದ್ರನ ಅಮೃತ ಎಂದು . . . ಬಣ್ಣ ಬಣ್ಣವಾಗಿ ಮಾತಾಡಿದನು (ಕಂಬಹು. ೩); ಈಗ ಥೇಟ್ ಸಿನೇಮಾನಟ ಉಷಾಕಿರಣಳಂತೆ ಕಾಣುತ್ತೀರಿ (ಎಡಹೆ. ೧೩೮). **ತೇಟ್**: ೧. ಅದರ ಅಂದ ಚಂದ ಬಣ್ಣಿಸಿ ಫಲವಿಲ್ಲ! ತೇಟ್ ಮದಮಾಳಪಕ್ಕಿ! (ಜಾಳಗಿ. ೧). ೨. ಅಪ್ಪಟವಾದ; ಶುದ್ಧವಾದ; ಚೊಕ್ಕ: ನಮ್ಮ ಸಬ್ರಾಜ ಹಟ್ಟೀಲಿ ಕಾಲಿಟ್ಟ ಗಳಿಗೆ, ಅಮುರ್ತ ಗಳಿಗೆ, ತೇಟ್ ಅಮುರ್ತಗಳಿಗೆ (ಸರ್ವಮಂ. ೯). **ತೇಟು**: ೨. ತೇಟು ಪರಂಗಿಯವನಿಗೆ ಒಂದು ಚೋಟುದ್ದ ವಂಶಪಾರಂಪರ್ಯವಾದ ಬಾಲದ ಪೊಟಕು ಇದ್ದೇ ಇರುತ್ತೆ (ಕಂನಿ. ೧೩೪). **ಥೇಟು**: ೧. ಥೇಟು ವಾತ್ಸಾಯನ ನೋಕ್ಕ ವರ್ಣನೆಯ ಚಿತ್ತಿನಿ (ಸಂಸ್ಕಾರ. ೧೦); ಬೆಳ್ಳಕ್ಕನ ರೂಪ ಅಂದರೆ ಥೇಟು ರತಿಯ ರೂಪ (ಸರಸ. ೦೬). [←ಮರಾ. ಥೇಟ್; ಹಿಂ. ಥೇಠ್]

ಥೇಟರು 'ಥಿಯೇಟರು' ನೋ.

ಥೇಟು 'ಥೇಟ್' ನೋ.

ಥೇರ, ತೇರ (ನಾ). ೧. [ಜೈನ] ಮುನಿ. 'ಥೇರಕಪ್ಪ' ಪರಾ. **ತೇರ**: ೨. ವಯಸ್ಸಾದವನು; ಹಿರಿಯ ವ್ಯಕ್ತಿ; ವೃದ್ಧ. ೩. [ಬೌದ್ಧ] ಸಾಧು. 'ತೇರವಾದ' ಪರಾ.

[<ಪಾಲಿ. ಥೇರ./ಪ್ರಾ. ಥೇರ, ಠೇರ, ಥವಿರ./ಮಾಹಾ. ಥೇರ./ಸಂ. ಸ್ಥವಿರ]

ಥೇರಕಪ್ಪ (ನಾ). [ಜೈನ] ಮುನಿಗಳ ಆಚಾರಕ್ರಮಗಳಲ್ಲಿ ಒಂದು. ಕಠಿಣ ಸನ್ಯಾಸಜೀವನವೇ ಜಿನಕಪ್ಪ. ಇಷ್ಟು ಕಠಿಣವಲ್ಲದ ಸನ್ಯಾಸಜೀವನ ಥೇರಕಪ್ಪ (ಶಾಅ. ೭೦ ಅಡಿಟ).

[<ಪ್ರಾ. ಥೇರಕಪ್ಪ. / ಸಂ. ಸ್ಥವಿರಕಲ್ಪ]

ಥೈ (ನಾ). ಕುಣಿತದ ತಾಳವನ್ನು ಸೂಚಿಸುವ ಒಂದು ಅನುಕರಣ ಶಬ್ದ: ಭರತಾರ್ಣವವು ಆದಿಶಬ್ದಗಳಾದ ತ, ಥೈ, ತೋಂ, ನಾಂಗಳನ್ನೂ ಕೊಡುತ್ತದೆ (ಭಾರದ. ೫೫೩); ತಕ್ಕ ಥೈಯಾ ಥೈಯೆನ್ನೋದೊಂದರ್ಥ ಕಾಣೆ (ನಾಪದ. ೨೦೫).

ಥೈಥೈ (ದ್ವಿರುಕ್ತಿ): ಲಾಗಾ ಹೊಡೆದನು ಮಂಗಣ್ಣ ಥೈಥೈ ಕುಣಿದನು ನರಿಯಣ್ಣ (ಕಪಪು. ೩-೬೪).

ಥೈಲಿ, ತೈಲಿ (ನಾ). ೧. ಚೀಲ; ಸಂಚಿ: ಸೊಂಟದ ಮಡಿಕೆಯಿಂದ ಪುಟ್ಟ ಥೈಲಿ ಹೊರತೆಗೆದು ಒಣಗಿದ ಎಳ್ಳದೆಲೆಗೆ ಸುಣ್ಣ ಬಳಿದು (ಹೊಸಕ್ಕಿ. ೫೦). ೨. ಹಣ ಮೊದಲಾದುವನ್ನು ಹಾಕುವ ಚೀಲ; ಹವ್ಯಿಣೆ: ಹಣದ ದೊಡ್ಡ ದೂಡ್ಡ ಥೈಲಿಗಳ ನಡುವೆ ವಾಸಮಾಡಬೇಕಾಯಿತು (ಎಮುಳ. ೬೭): ಅವರು ಬಾಯಿಕಟ್ಟಿದ ಥೈಲಿಯಲ್ಲಿಯೂ ಚರ್ಮದ ಬೈಂಡು ಹಾಕಿದ ಲೆಕ್ಕದ ಪುಸ್ತಕದಲ್ಲಿಯೂ ಹುಡುಕಾಡುತ್ತಾರೆ (ನಿಬಂಧ. II, ೨೦೫); ಇದ್ದ ನಗದು ಜವಾಹಿರಿ ಸಾಗಿದಷ್ಟು ಹಣದ ಥೈಲಿಗಳ ಕಟ್ಟಿಸಿ (ಹೈದರ. ೧೦೪): ಪೋಲಿಯಪನ ಕೈಯಲ್ಲಿ ಥೈಲಿ ಕೊಟ್ಟರೆ ಖಾಲಿಯಾಗದೆ? (ನಾಡ). **ತೈಲಿ**: (ಕ). [←ಹಿಂ. ಮರಾ. ಥೈಲೀ , ಥೈಲಾ]

ಥೊಪ್ಪನೆ (ಅ). ಥೊಪ್ ಎಂದು ಸದ್ದಾಗುವಂತೆ: ಥಮ್ಮನೆ, ಥೊಪ್ಪನೆ, ಧಣಮ್ಮನೆ (ಶಮಾದ. ೧೪ ಪ್ರಯೋ). [ಥೊಪ್$_0$ + – ಅನೆ$_1$]

ಥೋಡೆ 'ತೋಡ್ಯೆ' ನೋ.

ಥೋರ 'ತೋರ' ನೋ.

ಥೋರಕುಚ 'ತೋರಕುಚ' ನೋ.

*

ದ

ದ$_1$ (ನಾ). ೧. ಕನ್ನಡ ವರ್ಣಮಾಲೆಯ ಮೂವತ್ತೆಂಟನೆಯ ಅಕ್ಷರ; ದಕಾರ. ೨. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ: "ಭಧಸಮದೇಟು ಜದಹಮೆಂಟು" (ಮಂಗರಾ. ೦೦೪-೧೦).

–ದ$_2$ (ಪ್ರ). ಆ ಸ್ಥಳದವನು, ಅಲ್ಲಿ ಹುಟ್ಟಿದವನು ಎಂಬ ಅರ್ಥದಲ್ಲಿ ಬರುವ ಒಂದು ತದ್ಧಿತಪ್ರತ್ಯಯ: ದ = ಇರುವ (ಅಲ್ಲಿ, ಇಲ್ಲಿ, ಎಲ್ಲಿ ಎಂಬ ಪದಗಳ ಮೇಲೆ ಮಾತ್ರ ಅಲ್ಲಿದ, ಇಲ್ಲಿದ, ಎಲ್ಲಿದ, (ಕೃಪಿಡಿ. ೧೮). 'ಅಲ್ಲಿದ' ಪರಾ.

ದಂ 'ದಮ್ಮು' ನೋ.

ದಂಕಟ್ಟು 'ದಮ್ಮುಗಟ್ಟು' ನೋ.

ದಂಗಟ (ನಾ). (?): ಕಱಿಯ ಕಬ್ಬಿಲ ಬಂದು ಉಱಿಯ ಮೆಟ್ಟಿ ನೋಡಿ ಕಾಣದೆ ಮರಳಿ ಜಾಲವ ಹೊತ್ತುಕೊಂಡು ಹೋಹಾಗ ದಂಗಟನ ಪುಣಜೆಯರು ಹೊಂಗಱಿಯ ಬಿಲ್ಲುಕೋಲನೊಂದು ಕೈಯಲಿ ಪಿಡಿದು . . . ಅಂಗಯ್ಯೊಳಗೊಂದು ಹಱಿದ ತಲೆ ಮೂಡಲು ದಂಗಟನ ಹೊತ್ತು ಕೊಂಡಾಡುತ್ತಿರಲು ಸಿಂಗಾರ ಸಮಯವಾಯಿತ್ತು (ಚನ್ನವ. ಕ. ೧೪೬-೩೩೨). [?]

ದಂಗಾಗು, ಡಂಗಾಗು (ಕ್ರಿ). ೧. ಬೆರಗಾಗು; ಸೋಜಿಗಗೊಳ್ಳು; ವಿಸ್ಮಿತವಾಗು: ಲಕ್ಷ್ಮಿ ಸರಸ್ವತಿಯರಿಬ್ಬರ ಕೃಪಾದೃಷ್ಟಿಗೂ ಪಾತ್ರರಾದ ಬಾಬೂರಾಯರನ್ನು ಕಂಡರೆ ಜನ ದಂಗಾಗಿ ಹೋಗುತ್ತಿತ್ತು (ರತ್ನಗೋ. ೪): ಅವನ ಕಾರ್ಯಚಟುವಟಿಕೆಗಳಿಂದ ನೆಕ್ಲುದೋವ್ ದಂಗಾಗಿದ್ದನು (ಪುನರು. ೩೦೮). ೨. ಗಾಬರಿಗೊಳ್ಳು; ಹೆದರು; ಅಂಜು: ತನ್ನ ಮಗನ ಬಾಯಿಂದಲೆ ಆ ಮಾತು ಬಂತೆ? ಎಂದು ವೆಂಕಮ್ಮ ದಂಗಾಗಿ ಹೋದರು (ಪದ್ಮಸ. ೧೦೪); ಅಳಿಯನ ಮನೆಯವರ ಅಪೇಕ್ಷೆಯನ್ನು ಕೇಳಿ ವಿಜಯಳ ತಾಯಿ ದಂಗಾದರು (ದೂರಸ. ೧೪೬). ೩. ಪರವಶವಾಗು; ಮೈಮರೆ: ಭಜನೆಯಲ್ಲಿಯೇ ದಂಗಾಗಿದ್ದ ಅವರಾರಿಗೂ ಕೇಳಿಸಿದಂತಿರಲಿಲ್ಲ (ಗ್ರಾಮಾಯ. ೫೭೩). **ಡಂಗಾಗು**: ೧. ಬಹಳ ಚನ್ನಾಗಿ ಹಾಡಿದಳಮ್ಮ. ಸೇರಿದವರೆಲ್ಲರೂ ಡಂಗಾಗಿ ಹೋದರು (ಮಧುಸಂ. ೯).

[ದಂಗು + ಆಗು$_1$]

ದಂಗಾಮಸ್ತಿ (ನಾ). ದಾಂಡಿಗತನ; ಆಕ್ರಮಣಶೀಲತೆ; ಜಬರದಸ್ತಿ: ಮರಿಸ್ವಾಮಿಯೂ ಅವನ ಪರವಾಗಿ ಗುರುಶಾಂತಪ್ಪನೂ ದಂಗಾಮಸ್ತಿ ಮಾಡಿದರೆ ಅದನ್ನು ಖರೇಸೆಟ್ಟಿ, ಜಡಿಯಪ್ಪ, ಇಬ್ಬರೂ ನೋಡಿ ಕೊಳ್ಳುತ್ತಾರೆ (ಜರತಾ. ೧೧೭). [←ಮರಾ. ಧಿಂಗಾಮಸ್ತೀ]

ದಂಗು, ಡಂಗು (ನಾ). ೧. ಬೆರಗು; ಸೋಜಿಗ; ವಿಸ್ಮಯ. ೨. ಹೆದರಿಕೆ; ಭಯ; ಗಾಬರಿ. ೩. ಪರವಶತೆ; ತನ್ಮಯತ್ವ: ರಂಗೊಂದು ದಂಗೊಂದು ಗುಂಗೊಂದು ಒಂದಕ್ಕೊಂದು ಹತ್ತಾಗಿ ಜತ್ತಾಗಿ ಸುಳಿಧಾಂಗ (ಸಖೀಗೀ. ೫೨-೫). 'ದಂಗಾಗು' ಪರಾ. **ಡಂಗು**: ೧ 'ಡಂಗಾಗು' ಪರಾ.

[←ಪಾರ. ಹಿಂ. ಮರಾ. ದಂಗ್]

ದಂಗುಬಡಿ (ಕ್ರಿ). ಬೆರಗಾಗು; ಆಶ್ಚರ್ಯಪಡು: ಇಪ್ಪತ್ತನೆಯ ಶತಮಾನದವರೆಂದು ಹೆಮ್ಮೆಪಡುತ್ತಿದ್ದ ನಾನು ಅಂದಿನವರ ಒಳಚರಂಡಿಯ ವ್ಯವಸ್ಥೆಯನ್ನು ನೋಡಿ ದಂಗುಬಡಿದೆ (ಅನಾಮಿ. ೪೦); ಭಾರತಿ ಕೇಳಿ ದಂಗುಬಡಿದಳು (ಭಾರತಿ. ೭೮); ಒಮ್ಮೆಲೇ ದಂಗುಬಡಿದುಹೋದರು (ಚಂದುಟಿ. ೭೨). [ದಂಗು + ಬಡಿ$_1$]

ದಂಗುಬಡಿಸು (ಕ್ರಿ). ೧. ಆಶ್ಚರ್ಯವನ್ನುಂಟುಮಾಡು; ಚಕಿತಗೊಳಿಸು: ಧೈರ್ಯ ಹೇಳುವ ಕೆಲರು ದಿಕ್ಕುಗೆಡಿಸುವ ಕೆಲರು ದಂಗುಬಡಿಸುವ ದಂಭದವರು ಕೆಲರು (ನನಲ್ಲಿ. ೮-೧೨). ೨. ಗಾಬರಿಗೊಳಿಸು: ಜನರು ತೋರಿಸಿದ ಉತ್ಸಾಹ ಹಾಗೂ ಸತ್ಯಾಗ್ರಹದ ಸಂಘಟನಾಕ್ರಮಗಳು ಸರಕಾರವನ್ನು ಒಮ್ಮೆಲೇ ದಂಗುಬಡಿಸಿದುವು (ರಾಜವ. ೩೫).

[ದಂಗುಬಡು + –ಇಸು$_3$]

ದಂಗುಬಡು (ಕ್ರಿ). ಬೆರಗಾಗು; ದಂಗಾಗು: ಆ ಕೂಡಲೆ ನಾವು ಇದರ ಬೀಗ ತೆಗೆದು ನೋಡಿ ದಂಗುಬಟ್ಟೆವು (ಅಂಬಿಳ. ೨೨).

[ದಂಗು + ಪಡು$_1$]

ದಂಗುವಡೆ (ಕ್ರಿ). = ದಂಗುಬಡು: ದಂಗುವಡೆದವರಂತೆ ನಿಂತು ನೋಡುತ್ತಿದ್ದ ಸುಮತಿದೇವಿ ಥಟ್ಟನೆ ಕಟ್ಟೆಯಿಳಿದು ಬಂದು ತಾನೂ ಜಂಗಮನ ಪಾದಕ್ಕೆರಗಿದಳು (ಗಿರಿನ. ೧೭); ಕ್ಷಣಮಾತ್ರ ದಂಗುವಡೆದಂತಾಗಿ . . . ಎಚ್ಚರ ಬಂದು (ಅಶ್ವಮೇ. ೩೮). [ದಂಗು + ಪಡೆ$_1$]

ದಂಗೆ (ನಾ). (ಸರಕಾರ ಮೊದಲಾದ ಆಡಳಿತಕ್ಕೆ) ವಿರೋಧವಾಗಿ ಏಳುವ ಬಂಡಾಯ; ಪ್ರತಿಭಟನೆಯನ್ನು ಸೂಚಿಸುವುದಕ್ಕಾಗಿ ಜನ ಸಮುದಾಯ ಸೇರಿ ಕೋಲಾಹಲ ಮಾಡುವುದು; ಕಾಟಕಾಯಿ: ಶಿಪಾಯಿಗಳ ದೊಡ್ಡ ದಂಗೆಯಾದ ಬಳಿಕ ಆಗ್ರಾಪಟ್ಣಕ್ಕೆ ಬದಲಾಗಿ ಅಲಹಾಬಾದ್ ರಾಜಧಾನಿಯಾಯಿತು (ಭೂಗೋಳ. ೫೩); ವೀರನರಸಿಂಹ ರಾಯನು ಈ ದಂಗೆಗಳನ್ನು ಅಡಗಿಸಿ ಅನೇಕ ಯುದ್ಧಗಳನ್ನು ಮಾಡಬೇಕಾಯಿತು (ಕೃದೇವ. ೬). [← ಹಿಂ. ಮರಾ. ದಂಗಾ]

ದಂಗೆಕೋರ (ನಾ). ದಂಗೆ ಏಳುವುದೇ ಸ್ವಭಾವವಾಗಿರುವವನು; ಎದುರುಬೀಳುವವನು; ಬಂಡಾಯಗಾರ; ಕ್ರಾಂತಿಕಾರ: ಅವರೆಲ್ಲರೂ ದಂಗೆಕೋರರು ಮತ್ತು ಮೂರ್ಖರು (ಭಾಗ್ಯಶಿ. ೪೭); ದಂಗೆಕೋರನಿಗೂ ಮೈತ್ರಿ ಎಂದರೇನು? (ದೌಲತ್. ೧೧೧); ದರೋಡೆಕಾರರ ಮತ್ತು ದಂಗೆಕೋರರ ಉಪದ್ರವವಿದ್ದಿತು (ಝಾರಾಣಿ. ೭೭).

[ದಂಗೆ + – ಕೋರ$_3$]

ದಂಗೆಗಾರ (ನಾ). = ದಂಗೆಕೋರ: ಯಾರನ್ನು ಬಿಡಲಿ? ಯೆಹೂದ್ಯರ ಅರಸನೆಂಬ ಈ ಯೇಸುವನ್ನೊ? ಅಥವಾ ದಂಗೆಗಾರನಾದ ಬರಬ್ಬನನ್ನೊ (ಗೊಲ್ಗೊಥಾ. VII, ಮುನ್ನುಡಿ). [ದಂಗೆ + –ಗಾರ (< – ಕಾಱ)]

ದಂಗೆಯೇಳು (ಕ್ರಿ). (ಸರಕಾರ ಮೊದಲಾದ ಆಡಳಿತಕ್ಕೆ ವಿರುದ್ಧವಾಗಿ) ತಿರುಗಿಬೀಳು; ಬಂಡಾಯಹೂಡು: ಸಾಗರದ ಸೇನೆಯು ದಂಗೆಯೆದ್ದು ಸಾಗರವನ್ನು ಲೂಟಮಾಡಿತು (ಝಾರಾಣಿ. ೩೦೨); ದಂಗೆಯೆದ್ದ ಪ್ರಜಾವರ್ಗದವರಿಗೇ ಜಯವಾಗಿ ತಮ್ಮ ಬಲ್ಮೆಯೂ ತಮ್ಮ ಹಕ್ಕುಗಳೂ ಎಷ್ಟೆಂಬುದು ಜನತೆಗೆ ಮನದಟ್ಟಾಯಿತು (ಕ್ರಿಯಾಶಿ. ೩೯).

[ದಂಗೆ + ಏಳು$_1$ (< ಏಱ್$_1$)]

ದಂಟಿ (ನಾ). ಹಾದರಗಿತ್ತಿ; ಸೂಳೆ: ಒಂಟಿ ಮಾರಿ ತಂಟೆ ತೀರಿಸಿದರೂ ದಂಟಿ ಕೋಲ ಬಿಡಲಿಲ್ಲ (ಗಾದೆ). [?]

ದಂಟು (ನಾ). ೧. ಜೋಳ, ಬಿದಿರು ಮೊದಲಾದ ಸಸ್ಯಗಳ ನಾಳ,–ಕಾವು,–ಕಾಂಡ: ಅವರ ಕೈಯಲ್ಲಿ ಒಂದೊಂದು ಜೋಳದ ದಂಟೋ ಅಥವಾ ಒಂದೊಂದು ಬಿದಿರುಕೋಲೋ ಇರುತ್ತೆ (ನಾಡಿಗೇ. ೫೫). ೨. ನಿಸ್ಸತ್ವವಾದ ಕಡ್ಡಿ; ತಾವರೆ, ನೈದಿಲೆ ಮೊದಲಾದುವುಗಳ

(ಕೋಮಲವಾದ) ನಾಳ: ಕಟ್ಟಿದ ಪಟ್ಟಮೆ ಸರವಿಗೆ ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕಣ್ಗೆಟ್ಟ ಮುದುಪಂಗೆ ಪಗೆವರ ನಿಟ್ಟಿಲ್ದಂ ಮುಱುವೊಡೆನಗೆ ಪಟ್ಟಂಗಟ್ಟಾ (ಪಂಪಭಾ. ೧೦-೦೭) ; ದಂಟನೂದುವಂಗೆ ಕೊಟಲ್ ದೊರೆಕೊಂಡುದೆಂಬಂತೆ (ಧರ್ಮಾಮೃ. ೧೦-೩೮೩) ; ಮರಕತ ಮಯವಾದ ದಂಟುಗಳುಳ್ಕದ್ದಾಗಿ ವಿಕಸಿತಗಳಾದ ಸುವರ್ಣಕಮಲಗಳು (ಕೃಷ್ಣಾಶ್ವ. ೫) ; ದಂಟು ಮುರಿದರೆ ಕಂಠವಾದೀತೆ ? (ಗಾದೆ). ೩. ಒಂದು ಬಗೆಯ ತರಕಾರಿ ಸೊಪ್ಪು ; ಹುಂಳಿ, ಪಲ್ಯ ಮೊದಲಾದ ವ್ಯಂಜನ ಗಳನ್ನು ಮಾಡಲು ಉಪಯೋಗಿಸುವ ಸೊಪ್ಪು; ರಾಜಕೀರೆ (ಉಕ): ದಂಟಿನ ಸೊಪ್ಪಿನಲ್ಲಿ ಬಿಳುಪು ಮತ್ತು ಕೆಂಪುಬಣ್ಣಗಳಿರುವ ಎರಡು ವಿಧ ಗಳಿವೆ (ತರಬಿ.೧೭). ೪. (ಕರಾ) ಬ್ರಹ್ಮಚಾರಿಗೆ ಉಪನಯನದ ಕಾಲದಲ್ಲಿ ಹಿಡಿಸುವ ಮುತ್ತುಗದ ಕೋಲು ಮತ್ತು ಹಾಗೆ ಹಿಡಿಸುವ ಆಸಮಾರಂಭ. [ದೇ.॥ ತಮಿ. ಮಲ. ತಣ್ಪು ; ತುಳು. ತೆಲು. ದಂಟು; ಕುಗ. ಡಂಡಿ./ಸಂ. ತಂಡಕ, ದಂಡಕ]

ದಂಟುಬೇರು (ನಾ). ಕಬ್ಬು, ಜೋಳ ಮೊದಲಾದ ಸಸ್ಯಗಳ ಕಾಂಡ ದಿಂದ ಹೊರಡುವ ಬೇರು ; ಮರಿಬೇರು : ಕೇದಿಗೆ, ಕಾಂಡ್ಲಮರ . . . . ಮುಂತಾದ ಗಿಡಗಳಲ್ಲಿ ಕಾಂಡದಿಂದ ಅನೇಕ ದಂಟುಬೇರುಗಳು ಹೊರಡುತ್ತವೆ (ಸಸ್ಯಶಾ. ೧೫). [ದಂಟು + ಬೇರು (< ಬೇರ್)]

ದಂಟುಸೊಪ್ಪು (ನಾ). = ದಂಟು ೩ : ಹರಿವೇಸೊಪ್ಪು, ದಂಟುಸೊಪ್ಪು, ಚಿಲ್ಕರಿವೇಸೊಪ್ಪು (ಮೃಗಿಗಿ. ೬-೪೨). [ದಂಟು + ಸೊಪ್ಪು]

ದಂಟೂರ್ತ (ನಾ). ಉಪನಯನದ ನಾಲ್ಕನೇ ದಿನದ ಸಮಾರಂಭ. 'ದಂಟು' ಪರಾ. [ದಂಟು + <ಮುಹೂರ್ತ]

ದಂಟೆ (ನಾ). (ಕರಾ) ಕೋಲು : ದಂಡ : ಕೈಯಲ್ಲಿರುವ ಉದ್ದ ದಂಟೆ ಯೊಂದನ್ನು ಕೆಳಗೆ ಇರಿಸಿದ್ದನು (ನಿಷ್ಕಾಮು. ೩೦) ; ಜಾರಪ್ಪನು . . . ಒಂದು ದೊಡ್ಡ ದಂಟೆಯನ್ನು ಎತ್ತಿಕೊಂಡು ಬೇಗಬೇಗ ಬರಹತ್ತಿದನು (ಪಠಾವ. ೬೧). [← ತುಳು. ದಂಟೆ]

ದಂಡ (ನಾ). ೧. ನೇರವಾದ ಕೋಲು; ದೊಣ್ಣೆ ; ಬಡಿಗೆ: "ದಂಡಮೆನಲು ದಡಿ" (ಮಂಗರಾ. ೧೩೧-೨೦) : ದಂಡಿತವೈರಿ ವೈರಿಬಲಲೋಹಿತಬಂಧುರ ದಂಡಮಿಾ ಭುಜಾದಂಡಂ (ಗದಾಯು. ೧-೭೩). 'ಕೇತುದಂಡ' ಪರಾ. ೨. ಕಡೆಗೋಲು ; ಮಂತು. ೩. ಭೇರಿ, ನಗಾರಿ ಮೊದಲಾದುವನ್ನು ಹೊಡೆಯುವುದಕ್ಕೆ ಉಪಯೋಗಿಸುವ ಕೋಲು ; ಕುಡುಹು : "ಕಡವ ಕೋಲೊಳು ಹಱಿಯ ಕುಡುಹಿನೊಳು ದಂಡಮಕ್ಕು" (ಮಂಗರಾ. ೧೫೩-೬೦). ೪. ತಕ್ಕಡಿಯ ದಿಂಡು,—ಕೋಲು. 'ತುಲಾದಂಡ' ಪರಾ. ೫. ದೋಣಿ, ಹರಿಗೋಲುಗಳನ್ನು ನಡೆಸಲು ಉಪಯೋಗಿಸುವ ಕೋಲು,—ಹಂಟ್ಟು. ೬. ನಾಲ್ಕು ಮೊಳದ ಒಂದು ಅಳತೆ : "ಎರಡು ವೊಟನಾಗಲಾ ನಾಭಿಗೋಲೆಂದೆನಿಕ್ಕುಂ ಎರಟ್ನಾಭಿಗೋಲಾಗೆ ದಂಡಮೆನಿಕು" (ಮಂಗರಾ. ೯೬-೭೧) ; ಚತುರ್ಹಸ್ತ:—ಆ ಹಸ್ತಂಗಳು ನಾಲ್ಕಾದಡೆ, ದಂಡಃ—ಒಂದು ದಂಡವು, ಭವೇತ್—ಅಕ್ಕುಂ (ಪ್ರತಿಷ್ಠಾ. ೬-೨); ಹಸ್ತಂ ನಾಲ್ಕುಱೊಳಿಂದು ದಂಡವೆನಿಕುಂ (ವ್ಯವಹಾ. ಅನುಬಂಧ. ೨-೫೦). ೭. ಬ್ರಹ್ಮಚಾರಿಗಳು ಇಲ್ಲವೆ ಸಂನ್ಯಾಸಿಗಳು ಶಾಸ್ತ್ರೋಕ್ತವಾಗಿ ಹಿಡಿದುಕೊಳ್ಳಬೇಕಾದ ಮುತ್ತುಗ, ಬಿದಿರು ಮೊದಲಾದುವುಗಳ ಕೋಲು : ಸುಬ್ಬಣ್ಣಕಕ್ಕ ಕಾವಿಯನ್ನು ಧರಿಸಿ ಕೈಯಲ್ಲೊಂದು ದಂಡ ವನ್ನೂ ಕಮಂಡಲವನ್ನೂ ಹಿಡಿದು ಬದರಿಕಾಶ್ರಮಕ್ಕೆ ನಡೆದ (ಹೊಸಕ್ಷಿ.೨೫೩). ೮. (ರಾಜ, ನ್ಯಾಯಾಧೀಶ ಮೊದಲಾದ ಧರ್ಮರಕ್ಷಕರು ಹಿಡಿದು ಕೊಳ್ಳುವ) ಅಧಿಕಾರಸೂಚಕವಾದ ಬೆಳ್ಳಿ, ಚಿನ್ನ ಮೊದಲಾದುವು ಗಳಿಂದ ಮಾಡಿದ ಕೋಲು ; ಅಧಿಕಾರದಂಡ : ನರಪತಿಯ ದಂಡ ಲೌಕ ವಿಭವಲಾಂಛನವು (ಕವಿಪು. ೫೩-೨). ೯. ನಾಳ; ಕಾಂಡ; ದಂಟು: "ಅಬ್ಜನಾಳಂ ದಂಡಂ" (ವಸ್ತುಕೋ. ೨೫-೨೧). ೧೦. ಸ್ತಂಭ ; ಕಂಬ : ದಂಡಮೆಂಬುದು ಧ್ವಜದೊಳಗಲ್ಲದಕ್ಕಟಾ ದೇಶದೊಳಗಿಲ್ಲ (ಅಂಬಿಕ. ೨-೨೫). ೧೧. ಒಂದಂ ಬಗೆಯ ಸೇನಾವ್ಯೂಹ : ಕೋಲಿನಂತೆ ಸಾಲಾಗಿ ಸೈನ್ಯ ವನ್ನು ನಿಲ್ಲಿಸುವುದು. ೧೨. ಬೆಲ್ಲ ; ಸಾಮಾನ್ಯವಾಗಿ ದಂಡಾಕಾರ ವಾಗಿರುವ ಬೆಲ್ಲ. ೧೩. ಪುರುಷನ ಜನನೇಂದ್ರಿಯ ; ಲಿಂಗ ; ಶಿಶ್ನ : ಸಣ್ಣವರ ಮೂತ್ರದಿಂದರೆದು ದಂಡ ಪರಿಯಂತ ತೊಡೆದು ಕಾಸಲು ಆ ಕ್ಷಣವೇ ಮೂತ್ರ ಬಿಡುವುದು (ಸಕವ್ಯ. ೬೭೫). ೧೪. ಶಿಕ್ಷೆ ; ದಂಡನೆ : ತನುವಂ ಬಡಮಾಡಿ ಕಾಡಿ ದಂಡಿಸಿದಪನಂಗಜನ್ಮನ ಕರ್ತೆಯ ದಂಡದ ಪಾಂಗಿದೆಂತುಟೋ (ಪಂಪಭಾ. ೫-೧೩). ೧೫. ನಾಲ್ಕು ಬಗೆಯ ಉಪಾಯಗಳಲ್ಲಿ ಒಂದು : ಶಿಕ್ಷೆಗೆ ಒಳಪಡಿಸಿ ಹತೋಟಿಗೆ ತರುವಿಕೆ ; ಹೊಡೆದಂ ಬಡಿದು ಅಧೀನಕ್ಕೆ ತರುವಿಕೆ. ℙ ಸಾಮ, ದಾನ, ಭೇದ, ದಂಡ ಎಂಬ ನಾಲ್ಕು ಉಪಾಯಗಳಿವೆ: "ಶಿಕ್ಷಿಸಲೊಡಂಬಟ್ಟೊಡದು ದಂಡಮೆನಿಸಿಕ್ಕುಂ" (ಮಂಗರಾ. ೭೯-೬) ; ಜಗಳದ ಬಗೆ ತಾಂ ದಂಡಂ (ಹಮ್ಮೀರ. ೨-೦೨೦). ೧೬. ತಪ್ಪಿತಸ್ಥರಿಗೆ ವಿಧಿಸುವ ಜುಲ್ಮಾನೆ; ಶಿಕ್ಷೆಯ ಹಣ : "ಶಿಕ್ಷೆಯೊಳು ದಂಡಮೆಂಬುದು" (ಮಂಗರಾ. ೧೪೨-೧೭) ; ದಂಡಕ್ಕಂಜಿ ಜಂಗಮಕ್ಕೆ ಇಕ್ಕುವ . . . ನಾಟಕರಿಗೇಕೋ ಸದ್ಭಕ್ತಿ (ಹೋಮೇಶ. ೩೪-೧೪೩) ; ಫಲವತ್ತಿಲ್ಲದ ರಾಜ್ಯದಲ್ಲಿ ಪ್ರಭು ದಂಡಕ್ಕಾಸೆಗೆಯ್ವಲ್ಲಿ . . . ಸಲೆ ಬಲ್ಲರ್ ನಿಲೆ ಸಲ್ಲದೈ (ಹೋಮೇಶ. ೧೩) ; ದಾನಗೈಯೆನಲು ಕನಲುವರು ದಂಡವನು ಮೌನ ದೀಯುವರು (ಸರ್ವಜ್ಞ. ೬೭೦) : ಪಂಚಾಯ್ತರು ಆಚಾರಿಗೆ ಇನ್ನೂರು ರೂಪಾಯಿ ದಂಡ ಹಾಕಿದರು (ನನ್ಮೊಳು. ೧೫೭) ; ಮಾಡಿದ ಸೇವೆ ದಂಡಕ್ಕೆ ಸಾಲದು (ಗಾದೆ). ೧೭. ಪಡೆ ; ದಂಡು ; ಸೈನ್ಯ : "ಸೃಪಸೇನೆಯೊಳಂ ದಂಡಂ" (ವಸ್ತುಕೋ. ೧೩೮-೦೨೦) ; "ಪಡೆಯೊಳು ಶಿಕ್ಷೆಯೊಳು ದಂಡ ಮೆಂಬುದು" (ಮಂಗರಾ. ೧೪೨-೧೭). ೧೮. ಉಪಯೋಗವಿಲ್ಲದುದು ; ನಿರರ್ಥಕ ; ವ್ಯರ್ಥ : ದಂಡವದನುಳಿವ ನುಡಿ (ಮಂಕುಶ. ೪೯) ; ಕಾಲ ದಂಡ ಮಾಡುತ್ತೀರಿ (ಮುನಿಪು. ೧೦೯) ; ದಂಡದ ಕೂಳಿಗೆ ಬಿದ್ದ ನಿನಗೂ ನಾಲಿಗೆ ಬಂತೆ? (ಹೊಸಕ್ಷಿ. ೩೧) ; ಪಶ್ರಿಕೆಗಳಿಗೆ ಕಾಸುಹಾಕುವುದು ದಂಡ ಎಂದರು (ರಾಯಳಿ. ೪೯) ; ಕಳ್ಳ ಪೊಕ್ಕ ಮನೆಗೆ ಎಣ್ಣೆ ದಂಡ (ಗಾದೆ). ೧೯. ಅಲ್ಲದ ಕೆಲಸ; ಸಲ್ಲದ ಕೆಲಸ; ಅಪಕೃತ್ಯ. ೨೦. ಯಮ. ೨೧. ಶಿವ. ೨೨. ಗರ್ವ. ೨೩. ಸೂರ್ಯನ ಮೂವರು ಸೇವಕರಲ್ಲಿ ಒಬ್ಬ : "ಮಾತರಃ, ಪಿಂಗಳಃ, ದಂಡಃ, ಚಂಡಾಂಶೋಃ, ಸೂರ್ಯನ ಪಾರಿಪಾರ್ಶ್ವಕಾಃ,—ಪಾರ್ಶ್ವದೊಳಗಿರುವ ಅಂಗದೇವತೆಗಳ ಹೆಸರುಗಳು" (ಸಿದ್ಧಾಂತಿ. ೩೨). ೨೪.=ದಂಡಿ ೧೦: ದಿನಾಲು ತಪ್ಪದ ಏನಿಲ್ಲೆಂದರೂ ೨೫ 'ದಂಡ', ಮತ್ತು ೫೦ 'ಉಟಾಬಸಿ' . . . ಅವಶ್ಯವಾಗಿ ತಕ್ಕೊಳ್ಳಲಿಕ್ಕೇ ಬೇಕು (ಬ್ರಹ್ಮಚೀ. ೧೯೯). "ಅಪಕೃತ್ಯಂ ವಾದ್ಯಕೋಣಂಗುಡಂ ಅಪಮಾನಂ ಪಡೆಯಂತಕಂ ಮದನಶಿಕ್ಷೋಪಾಯ ದಂಡಾಹ್ವಯಂ" (ನಾನಾರ್ಥ. ೧೩೮). ೨೫. [ಜ್ಯೋತಿ] ತುಲಾರಾಶಿ : ಸಾರಸ ಸಖತನಯಂ ದಂಡದೊಳ್ ರೋಹಿಣೀನಂದನನಂತಾ ದ್ವಂದ್ವದೊಳ್ಶಶ್ರುತಮೆನೆ ಧಿಷಣಂ ಕರ್ಕಯೊಳ್ಸಂತ ವಿಂತಿರ್ಪಿನಮತ್ಯುತ್ಸಾಹದಿಂದಂ ಗುರುವಿನುದಯದೊಳ್ ಪುತ್ರನಂ ಪೆತ್ತಳ್ (ಸುಳುಮಾ. ೧೦-೩೭). ೨೬. ಜನನ ಕಾಲದಲ್ಲಿ ಎಲ್ಲಾ ಗ್ರಹಗಳೂ ಲಗ್ನದಿಂದ ಹತ್ತನೆಯ ಸ್ಥಾನದಿಂದ ಮುಂದೆ ಲಗ್ನಭಾವಪೂರ್ತ ಎಡೆ ಬಿಡದ ನಾಲ್ಕು ಸ್ಥಾನಗಳಲ್ಲಿ ನೆಲೆಸಿದ್ದರೆ ಒದಗುವ ಯೋಗ : ಕರ್ಮದಿಂದುದಯಗೈಹಂಬರಂ ಗ್ರಹಮನಂತರವೊಂದಿರೆ ದಂಡಸಂಜ್ಞಿಕಂ (ಜಾತಕ. ೦೩-೭). 'ದಂಡಜ' ಪರಾ. ೨೭. [ಜೈನ] ಮನಸ್ಸು, ವಾಕ್ಕು, ಕಾಯ ಎಂಬ ಮೂರು ಬಗೆಯ ಹಿಂಸೆಗಳು. 'ದಂಡತ್ರಯ' ಪರಾ.

ದಂಡ ಕೊಡು = ಜುಲ್ಮಾನೆಯನ್ನು ತೆರು; ಶಿಕ್ಷೆಯ ಹಣವನ್ನು ಸಲ್ಲಿಸು: ಇಪ್ಪತ್ತೈದುರೂಪಾಯಿ ದಂಡ ಕೊಟ್ಟು ಬಂದ (ಕೂಡಿ). [ಸಂ.]

ದಂಡಂಗೊಳ್ (ಕ್ರಿ). ೧. ಶಿಕ್ಷೆಯನ್ನು ಪಡೆ; ದಂಡನೆಗೊಳಗಾಗು; ಏಟುತಿನ್ನು: ಮತ್ತಂ ದುರ್ಗಂಧಕ್ಕಿರಲಾಜದೆ ಲೆಂಕರ್ ದಂಡಂಗೊಂಡರಂತೆ ಶಂಕಿಸುತ್ತುಂ ಪೆಱಪಿಂಗೆ . . . ತನ್ನೊಳಿಂತೆಂದಳ್ (ಧರ್ಮಾಮೃ. ೪-೧೫೯). ೨. ತಪ್ಪುಕಾಣಿಕೆಯನ್ನು ಪಡೆ; ದಂಡವನ್ನು ತೆಗೆದುಕೊಳ್ಳು; ಜುಲ್ಮಾನೆಯನ್ನು ವಸೂಲುಮಾಡು: ಅದನೆ ಪಿಡಿಯಚ್ಚು ವಿಡಿದುಂಟುಮಾಡಿ ದಂಡಂಗೊಂಡು (ಶಾಂತಿಪು. ೮-೮೪ ವ); ತಸ್ಕರರಂ ಬಾರಿಸಿ ಕಷ್ಟರಂ ಕೆಡಿಸಿ ದಂಡಂಗೊಂಡು . . . ಪಾಲಿವುದು ಧಾತ್ರೀಚಕ್ರಮಂ ಕ್ಷತ್ರಿಯಂ (ಧರ್ಮಾಮೃ. ೨-೮೪). [ದಂಡ + ಕೊಳ್$_1$]

ದಂಡಂದೆಱು, ದಂಡತೆರು (ಕ್ರಿ). ದಂಡವನ್ನು ಕೊಡು; ಜುಲ್ಮಾನೆಯನ್ನು ತೆರು: ಮಿಂಡರ್ ದಂಡಂದೆತ್ತೊಕ್ಕಲಿಗನಂತೆರ್ದೆಗಿಡೆ (ಧರ್ಮಾಮೃ. ೨-೬೯). **ದಂಡತೆರು**: ಆ ದಿನ ಹನ್ನೆರಡುಗಂಟೆಯೊಳಗಾಗಿ ವಾಪಸ್ಸು ಕೊಡದಿದ್ದರ ಅನ್ಯಾಯವಾಗಿ ದಂಡತೆರಬೇಕಾಗಿತ್ತು (ಆಲಹೂ. ೮೩). [ದಂಡ + ತೆಱು$_1$]

ದಂಡಕ$_1$ (ನಾ). ೧. ನೆಟ್ಟನೆಯ ಕೋಲು; ಗಳು: "ಗಟ^3 ದಂಡಕಂ ಸ್ತಂಭಮಕ್ಕುಂ" (ಮಂಗರಾ. ೮೫-೨೭). ೨. ನರ್ಮದಾ ಮತ್ತು ಗೋದಾವರಿ ನದಿಗಳ ನಡುವೆ ಇರುವ ಪ್ರದೇಶ; ರಾಮಾಯಣದಲ್ಲಿ ದಂಡಕಾರಣ್ಯವೆಂದು ಪ್ರಸಿದ್ಧವಾಗಿದ್ದ ಸ್ಥಳ. ೩. [ಛಂದ] ಪಾದಗಳಲ್ಲಿ ಇಪ್ಪತ್ತಾರು ಅಕ್ಷರಗಳಿಗಿಂತಲೂ ಹೆಚ್ಚು ಅಕ್ಷರಗಳನ್ನು ಹೊಂದಿರುವ ಒಂದು ವೃತ್ತ: "ಮುಟ್ಟೆ ಬಹುಪದದ ನುಡಿ ದಂಡಕಮೆನಿಕ್ಕು" (ಮಂಗರಾ. ೨೬-೨); ಉಕ್ತೆ ಅತ್ಯುಕ್ತೆ . . . ಉತ್ಕೃತಿ ಎಂದಿಪ್ಪತ್ತಾಱು ಛಂದಂಗಳಕ್ಕುಂ ಅವಱಿಂ ಪೊಱಗೆ ಮಾಳಾವೃತ್ತ ದಂಡಕಂಗಳ್ ಮಾತ್ರಾನಿಯಮಸ್ಕಂಧಕಾದಿ ಜಾತಿಗಳೆಂಬಿವಕ್ಕು (ಛಂದೋಂಬು. ೧-೪೬ ವ). ೪. ನಿಯಮಿತವಾದ ಗಣಗಳಿರುವ ಗದ್ಯ: ನಿಯತವಾದ ಗಣಗಳಿಂದ ಕೂಡಿ ಪಾದವಿಭಾಗವಿಲ್ಲದೆ ದಂಡಾಕಾರವಾಗಿರುವ ಶಬ್ದರಚನಾವಿಶೇಷವು ದಂಡಕವೆನಿಸುವುದು (ಕೈಪಿಡಿ. ೦೦೦). [ಸಂ.]

ದಂಡಕ$_2$ (ನಾ). ನಿಯಮ; ಪದ್ಧತಿ; "ವಿಧಿ, ವಾಡಿಕೆ" (ಚಿತ್ರಪಾ.ಕೋಶ); ಸೀಮೆ ಇಷ್ಟು ಲಕ್ಷದ್ದೆಂದು ಲೆಕ್ಕ ಬರೆಯಲು ದಂಡಕವಿಲ್ಲ (ಚಿತ್ರಪಾ. ೭೪); ನಮ್ಮ ದೇಶದಲ್ಲಿ ಸಿಪಾಯಿ ಜನರು ಇನಾಂ, ಏಕನಾಮು ಮೊದಲಾದ್ದನ್ನು ತೆಗೆದುಕೊಳ್ಳತಕ್ಕ ದಂಡಕವಿಲ್ಲ (ಚಿತ್ರಪಾ. ೯೫). [←ಮರಾ. ದಂಡಕ]

ದಂಡಕಾಂತ (ನಾ). ದಂಡಾಕಾರವಾದ ಅಯಸ್ಕಾಂತ: ಈ ಬಲರೇಖೆಗಳನ್ನು ಪೂರ್ಣವಾಗಿ ನೋಡಿದರೆ ಉದ್ದವಾದ ದಂಡಕಾಂತದ (Bar-Magnet) ಬಲರೇಖೆಗಳಂತೆಯೇ ಇರುವುವು (ಭೌತವಿ. ೩೩೫). [ದಂಡ + ಕಾಂತ$_2$]

ದಂಡಕಾರಣ್ಯ (ನಾ). = ದಂಡಕ$_1$ ೨: ಅದು ಮದವಿಹ್ವಳಿತನಾಗಿ . . . ದಂಡಕಾರಣ್ಯಮಪ್ಪಡವಿಯ ನಡುವೆ . . . ಪರಿಯೆ (ವಡ್ಡಾರಾ. ೧೧೦-೧೬); ಅಂತು ತಳರ್ದು ಜಲಧಿಯಂ ದಾಂಟಿ ದಂಡಕಾರಣ್ಯಮನೆಯ್ದೆವಂದು (ಪಂಠಾಮಾ. ೧೫-೨೩ ವ); ಒಲಿದು ಹೊಕ್ಕರು ದಂಡಕಾರಣ್ಯವನು ಹರುಷದಲಿ (ತೊರರಾ. ೩-೧-೧೨). [ದಂಡಕ$_1$ + ಅರಣ್ಯ]

ದಂಡಕೋಲು (ನಾ). ವಟು, ಸಂನ್ಯಾಸಿ ಮೊದಲಾದವರು ಹಿಡಿದುಕೊಳ್ಳುವ ಕೋಲು; ದಂಡ: ದಂಡಕೋಲಿನ ತುದಿಗೆ ಹಿಂಡುಕೌಪವ ಕಟ್ಟಿ ಮುಂಡೆಯರ ಕಂಡು ಮಿಡುಕುವ ಯೋಗಿಯ ಮಂಡೆ ಬೋಳೇಕೆ (ಸರ್ವಜ್ಞ. ೫೮೦); ಒಂದು ದಿನ ಒಬ್ಬ ಸಿದ್ಧನು . . . ಕೈಯಲ್ಲಿ ಪುಸ್ತಕ ದಂಡಕೋಲ ಪಿಡಿದು, ರಾಯನೆದುರಿಗೆ ಬಂದು ಇಂತೆಂದನು (ಬತ್ತೀಸ. ೫೩) [ದಂಡ + ಕೋಲು$_1$ (<ಕೋಲ್$_1$)]

ದಂಡಖಂಡ (ನಾ). ಸಣ್ಣ ಕೋಲು; ಮೋಟಂದೊಣ್ಣೆ; ಪಕ್ಷಿಪಕ್ಷಚಂಚು ಚರಣಾಭಿಘಾತದೊಳಂ ಶಿಶುಜನಾನುಪಾತದಂಡಖಂಡಾಘಾತದೊಳು ಮುದಿರ್ದು ನೆಲದೊಳ್ ಬಿರ್ದ ನೇಱಿಲ ಪಣ್ಗಳಂ . . . ಸಾರ್ಚಿಕೊಟ್ಟು (ಸುಕುಮಾ. ೪-೬೩ವ). [ದಂಡ + ಖಂಡ]

ದಂಡಜ (ನಾ). [ಜ್ಯೋತಿ] ದಂಡವೆಂಬ ಯೋಗದಲ್ಲಿ ಹುಟ್ಟಿದವನು: ವಿಯುತಪ್ರಿಯಬಂಧು ದಂಡಜಂ (ಜಾತಕ. ೧೩-೧೮). [ಸಂ.]

ದಂಡಣೆ (ನಾ). ೧. ಶಿಕ್ಷೆ: ಮೂವತ್ತೆರಡು ಘೋರಮಪ್ಪ ದಂಡಣೆಗಳಿಂದಂ ಕಳ್ಳನಂ ದಂಡಿಸಿ (ವಡ್ಡಾರಾ. ೧೨೪-೨೬); ದೊಡ್ಡಚಾಮಪ್ಪ; – (ಮೆಲ್ನಗೆಯಿಂದ) ದಣ್ಡಣೆಯಲ್ಲವಪ್ಪೆ? (ಬೆಟ್ಟಅ. ೨೧-೨೮). ೨. ಯಾತನೆ; ಹಿಂಸೆ: "ಯಾತನಾ, ಕಾರಣಾ – ಈ ೨ ದಂಡಣೆ" (ಹಲಾಯು. ೧೦೩-೪); "ಆ ಯಾತನಂ ಕಾರಣಂ ದಂಡಣೆ(ನೆ)ಯೆನಿಕ್ಕು" (ಮಂಗರಾ. ೧೧೬-೦). [<ಸಂ. ದಂಡನ./ಪ್ರಾ. ದಂಡಣ]

ದಂಡತೆರು 'ದಂಡಂದೆಱು' ನೋ.

ದಂಡತೋರಣಕ (ನಾ). ನೀರು ಸೇದುವ ಮರದ ರಾಟೆಯ ಅರೆಕಾಲುಗಳ ಸಾಲು: ಮಲಯಜವಾರಿಯಿಂ ಕುಳಿರ್ವ ಬಾವಿಗಳಲ್ಲಿ ಮೃಣಾಳ ದಂಡಮಂಡಲಿಗಳ ದಂಡತೋರಣಕದಿಂ . . ; ಸಮೆದಾಡುವ ಱಾಟಳಂಗಳಂ (ಕಾದಂಉ. ೨೦೫). [ದಂಡ + ತೋರಣಕ$_0$]

ದಂಡತ್ರಯ (ನಾ). ೧. ಮೂರು ಕೋಲುಗಳು. ೨. [ಜೈನ] ಮಾನಸಿಕ, ವಾಚಿಕ ಮತ್ತು ಶಾರೀರಕವಾದ ಮೂರು ಬಗೆಯ ದೋಷಗಳು: ಮನೋದಂಡ ವಾಗ್ದಂಡ ಕಾಯದಂಡಮೆಂಬ ದಂಡತ್ರಯಮಂ ಪರಿಹರಿಸುತ್ತುಂ (ಅಜಿಪು. ೭-೮ ವ); ನಿರ್ಜಿತದಂಡತ್ರಯಂ . . . ಘಾತಿಸಲೊಡರ್ಚಿದಂ ಘಾತಿಗಳಂ (ಪುಷ್ಪಪು. ೧೪-೧೫). P ರಾಗ, ದ್ವೇಷ, ಮೋಹ ಎಂಬ ಮೂರು ಮನೋದಂಡಗಳು. ಅನೃತ, ಉಪಘಾತ, ಪೈಶುನ್ಯ, ಪರುಷ, ಅಭಿಶಂಸನ, ಪರಿತಾಪ, ಹಿಂಸನ ಎಂಬ ಏಳು ವಾಗ್ದಂಡಗಳು. ಪ್ರಾಣಿವಧ, ಚೌರ್ಯ, ಮೈಥುನ, ಪರಿಗ್ರಹ, ಆರಂಭ, ತಾಡನ, ಉಗ್ರವೇಷ – ಇವು ಏಳು ಕಾಯದಂಡಗಳು. [ದಂಡ + ತ್ರಯ]

ದಂಡದಾಯ (ನಾ). = ದಂಡಾಯ: ತಳಸಾರಿಗೆ ಕಾಣಿಕೆ ಕವಣಾಯ ದಣ್ಡದಾಯವಿನ್ತಿನಿತುಮಂ . . . ಕೊಟ್ಟರ್ (ಸೌಇಇ. IX-1, ೦೬೨-೦೯; 1106). [ದಂಡ + ದಾಯ$_2$]

ದಂಡದೋಸ (ನಾ). = ದಂಡ ೧೬: ಕೋಗಟಿಯ ಚತುರಾಘಾಟ್ಟದೊಳ್ಗಾದ ಮಣ್ಣ ನೀರ ಸಾಮ್ಯಕ್ಕಂ ದಣ್ಡದೋಸಮೆಲ್ಲ ಬಸದಿಗೆ . . . ತಿಱುವರ್ (ಸೌಇಇ. IX-1, ೭೭-೨೮; 992). [ದಂಡ + ದೋಸ]

ದಂಡದೋಷ (ನಾ). = ದಂಡ ೧೬: ಶ್ರೀಮದನ್ಧಾಸುರದೇವರ್ಗ್ಗೆ ಪೂಲಿಯ ದಣ್ಡದೋಷದೊಳಗೊಂದು ಭಾಗಮಂ ಬಿಡೆಂದು ಸಮರ್ಪ್ಪಿಸೆ (ಎಇ. XVIII, ೧೯೦-೭; ಸು. 1104). [ದಂಡ + ದೋಷ]

ದಂಡದ್ರವ್ಯ (ನಾ). ದಂಡವಾಗಿ ವಿಧಿಸಿದ ಹಣ; ಜುಲ್ಮಾನೆಯ ಹಣ: ಯಾವುದಾದರೂ ಕರವನ್ನು ಅಥವಾ ದಂಡದ್ರವ್ಯವನ್ನು ಹಾಕುವ ಅಥವಾ ವಿಧಿಸುವ ಉದ್ದೇಶಕ್ಕಾಗಿ (ಭಾಧಾನ. ೧೮). [ದಂಡ + ದ್ರವ್ಯ]

ದಂಡಧರ (ನಾ). ೧. ಕೋಲಿನ ಆಧಾರದಿಂದ ನಡೆಯುವವನು; ಕೋಲೂರಿ ನಡೆಯುವವನು. ೨. ಯಮಂ; ಅಂತಕ: ಸುರಪತಿ ಶಿಖಿ ದಂಡಧರಂ ನಿರುತಿ ಜಳೇಶಂ ಸಮೀರಣಂ ಧನದನುಮೀಶ್ವರನೆಂಬ ಲೋಕಪಾಲರನಿರವೇಟ್ಟವರವರ ದೆಸೆಯೊಳ್ (ಶಾಂತಿಪು. ೦೦-೩೧); ದಂತವಕ್ತ್ರಂ . . . ಗೋಪನಂದನನೆಂದು ದಂಡಧರನನಂಡಲೆದುಂ ನಾಗನಿಳಯನೆಂದು ನೈಋತಿಯುಂ ನಿರಾಕರಿಸಿಯುಂ (ಜಗವಿ. ೯-೫೩ ವ); ಬಂಧುವುಂ ಮಿತ್ರನುಂ ಭೃತ್ಯನುಂ ಶತ್ರುವೊಲೆ ದಂಡಧರನೋಲಗಕೆ ನಿನ್ನನೆಳೆವವರೋ

(ಪುಂಗುಳಿ. ೦೭೭). ೧, ೨ : ದಂಡಧರನಾಗಿ ದಿಟಂ ಜವನಲ್ತು . . . ವೃದ್ಧನಿದೇಂ ವಿರುದ್ಧನೋ (ಪುಷ್ಪಪು. ೧೩-೩೫). ೩. ಅಧಿಕಾರದಂಡವನ್ನು ಹಿಡಿದಿರುವವನು; ರಾಜ; ನ್ಯಾಯಾಧೀಶ : ದಂಡಧರರಿಲ್ಲದಂದು ತಂತಮ್ಮ ವೃತ್ತಿಗಳಂ ಪ್ರಜೆಗಳತಿಕ್ರಮಿಸಿ ನಡೆವರೆಂದುಂ (ಆದಿಪು. ೯-೭೪ ವ); ಪಿಂಡೀಭೂತದಂಡಧರಾಜ್ಞಾಪರಿಸ್ಫುರಣೆಗಂ . . . ತಾನೊರ್ವನೆ ನಿರುವಮಜನ್ಮಭೂಮಿಯಾಗಿ (ಶಾಂತಿಪು. ೩-೪೯ ವ). ೪. ದ್ವಾರಪಾಲಕ; ಕಟ್ಟಿಗೆಕಾರ. ೫. ನ್ಯಾಯಾಲಯದಲ್ಲಿ ನ್ಯಾಯಾಧೀಶನು ವಿಧಿಸಿದ ಶಿಕ್ಷೆಯನ್ನು ಕಾರ್ಯಗತ ಮಾಡುವ ಅಧಿಕಾರಿ : ಪೆಂಡತಿಯು ಮೂಗನಕಾರಣದಿನರಿವವನಂ ಜವನ ಬಾಜಿಗಟ್ಟುವುದ ಧರ್ಮವೆಂದು ಧರ್ಮಾಧಿಕರಣಂ ದಂಡಧರಂಗೆ ವೇಟ್ಟುದುಂ (ಪೊಂಪತಂ. ೭೯-೧೦).

[ಸಂ.]

ದಂಡಧಾರ (ನಾ). = ದಂಡಧರ ೪ : ದಿವೌಕದಿಂ ಪೊಱಗೆ ನಿಲ್ ನಿಲ್ ಪಿಂಗು ನೀನೆಂಬ ದಂದುಗದಿಂ ದೇವರ ದಂಡಧಾರರೆರಡುಂ ಪಕ್ಷಂಗಳೊಳ್ ಸಾರೆ (ಶಾಂತಿಪು. ೧೦-೨೪). [ಸಂ.]

ದಂಡಧಾರಣ (ನಾ). ಕೋಲು ಹಿಡಿಯುವುದು : ದೊಣ್ಣೆಯಂನ್ನು ಹಿಡಿಯುವುದು : ದಂಡಧಾರಣಗುಣಂ – ದೊಣ್ಣೆಯನ್ನು ಹಿಡಿದು ಕೊಂಡು ತಿರುಗಾಡುವುದರಿಂದ . . . ದುಷ್ಟಜಂತು ಮುಂತಾದುವುಗಳ ಬಾಧೆಗಳನ್ನು ಕೆಡಿಸುವಂಥಾದ್ದಾಗಿ ಇರುವುದು (ಸಳವ್ರ. ೫೭).

[ದಂಡ + ಧಾರಣ]

ದಂಡನ (ನಾ). = ದಂಡನೆ. [ಸಂ.]

ದಂಡನಮನ (ನಾ). ನೆಲದ ಮೇಲೆ ಕೋಲಿನಂತೆ ದೇಹವನ್ನು ಚಾಚಿ ಕಾಲಿಗೆ ಬೀಳುವುದು; ದೀರ್ಘದಂಡ ನಮಸ್ಕಾರ; ದಂಡಪ್ರಣಾಮ: ಅಸಿಗಳಿಂದಲಿ ಶರವನರ್ಪಿಸಿ ಬಸಿವ ಮುಂಡದಿ ದಂಡನಮನವನೊಸೆದು ಮಾಡುವ ದನುಜಕೋಟಿಯ ಕಂಡು ಬೆಬಗಾದ (ಕಾಶಿಕಾ. ೩೯-೦೩).

[ದಂಡ + ನಮನ]

ದಂಡನಮಸ್ಕಾರ (ನಾ). = ದಂಡನಮನ : ಮಾರಿ ಮಲಯಾನಿಲಂ ನವ ನೀರಜವನಮೆಂಬ ಕೆಂಡದೊಳ್ ದಂಡನಮಸ್ಕಾರಂ ಬಂದಪಂ (ಹುಕೋಪ. ೦-೩೮). [ದಂಡ + ನಮಸ್ಕಾರ]

ದಂಡನಾಥ (ನಾ). ೧. ಸೈನ್ಯದ ನಾಯಕ; ಸೇನಾಪತಿ; ದಳವಾಯಿ : "ಆ ಚಮೂಪತಿಯನೀಕಸ್ಥನೆನೆ ದಂಡನಾಥನಕ್ಕುಂ" (ಮಂಗರಾ. ೮೦-೮); ಬಿತ್ತರಿಪರಾರ್ಗ್ಗಳ ಭಾಸ್ಕರದಣ್ಣನಾಥನಂ (ಸೌಇ. XX, ೪೬-೩೨ ; 1072); ಸಜ್ಜನಪಾರಿಜಾತನು ದಂಡನಾಥರ ದೇವ ಬಲದೇವ ಭಾವರೂಪವಿಳಾಸ ಗುಣಶೋಭಾವಹಂಗಳನಾ ಪಿತಂ ನಾನಾವಿಧದೊಳುಪಲಾಲಿಸುತ್ತಿರೆ (ಬಸಪು. ೪-೦೩); ದೊರೆಗಳ ದಂಡನಾಥರ . . . ಆಲಂಪಿನ ಕೇರಿಗಳಂ ನಿರೀಕ್ಷಿಸುತ್ತುರುತರವೀರಕ್ರಮವಿಚಾರವಿಲಾಸಮಹೀಶನೆಯ್ದಿದಂ (ಹಮ್ಮೀಣಾ. ೨-೬೯). ೨. ನ್ಯಾಯಾಧಿಪತಿ. ೩. ರಕ್ಷಕದಳದ ಮುಖ್ಯಾಧಿಕಾರಿ; ಪೋಲೀಸುಅಧಿಕಾರಿ : (ಕ). ೪. ಪ್ರಧಾನಅಧಿಕಾರಿ; ಉನ್ನತಾಧಿಕಾರಿ : ಲಂಚವನೀವ ದಂಡನಾಥರ್ಕಳಂ ಲೆಕ್ಕಕ್ಕೆ ಬಂದಿರ್ಪ ರಾಜಪುತ್ರರ್ಕಳಂ . . . ನೋಡುತಂ ಬೆಬಗಾಗುತಲ್ಲಿ ಬಸವಣ್ಣನಿರೆ (ಬಸರ. ೫-೬೪).

ದಂಡನಾಥ ಚೂಡಾಮಣಿ = ಸೇನಾಪತಿಗಳಲ್ಲಿ ಶ್ರೇಷ್ಠನಾದವನು : ಆ ದಂಡನಾಥಚೂಡಾಮಣಿಯುನ್ಮಯಾವತಾರವೆಂತೆಂದೊಡೆ (ಎಳ. VI, ತರೀಕೆ. ೪೫-೫೫ ; 1198). ದಂಡನಾಥ ತ್ರಿನೇತ್ರ = ಸೇನಾಪತಿಗಳಲ್ಲಿ ಶಿವನಂತಿರುವವನು; ಒಂದಂ ಬಿರುದು: ಈತನಂ ಪೇಳ್ವೆಡೆ ಮತ್ತಿಲ್ಲಾರುವೆಂಬಂತೆಸದವನವಿತಂ ದಂಡನಾಥ ತ್ರಿನೇತ್ರಂ (ಎಳ V ತರೀಕೆ. ೪೫-೪೯ ; 1196). [ದಂಡ + ನಾಥ]

ದಂಡನಾಯಕ (ನಾ). = ದಂಡನಾಥ ೧ : "ರಕ್ಷಿವರ್ಗಃ, ಅನೀಕಸ್ಥಃ, ಸೇನಾನೀಃ, ವಾಹಿನೀಪತಿಃ – ಈ ೪ ದಂಡನಾಯಕಂ" (ಹಲಾಯು. ೭೦-೨೭೯) ; ಅಯೋಧ್ಯನೆಂಬ ದಂಡನಾಯಕನು ಬುದ್ಧಿ ಸಾಗರನೆಂಬ ಪುರೋಹಿತನು (ಆದಿಪು. ೧೫-೩ ವ) ; ಮಹಾಸಾಮಾನ್ಯಾಧಿಪತಿ ಮಹಾ ಪ್ರಚಣ್ಡ ದಣ್ಣನಾಯಕಂ (ಸೌಇ. XX, ೪೬-೩೧ ; 1072) ; ಮಕುಟ ವರ್ಧನ ಮಂಡಳಿಕರ ದಂಡನಾಯಕರ ಧಕ್ಕುರರ ಮಹತ್ತರರಬ್ಬು ವೊತ್ತಂಗಳಿತ್ತ ಸಮಯ ತ್ಯಾಗಮತ್ತಳಗವಾಗೆ (ಅನಂಪು. ೭-೫ ವ) ; ದೇವರು ದೊಡ್ಡವನು ದಂಡನಾಯಕರೆ (ಸವತಿ. ೪೦). [ದಂಡ + ನಾಯಕ]

ದಂಡನಾಯಕಿತಿ 'ದಂಡನಾಯಕಿತ್ತಿ' ನೋ.

ದಂಡನಾಯಕಿತ್ತಿ, ದಂಡನಾಯಕಿತಿ (ನಾ). ಸೇನಾಪತಿಯ ಹೆಂಡತಿ: ಮಹಾಜನನೂಱಿಪ್ಪರ್ದಿಂಬರುಂ ಶ್ರೀಪದ್ಮನಾಯಕಿತ್ತಿ ರೆಬ್ಬಲದೇವಿಯರುಮಿಱ್ದು . . . ಬಿಟ್ಟು ಧರ್ಮ್ಮಂ (ಸೌಇ. IX-1, ೧೫೮-೫೩ ; 1090). **ದಂಡನಾಯಕಿತಿ :** ಸಿದ್ಧಾಂ[ತ]ದೇವರ ಗುಡ್ಡಿ ಜಕ್ಕಿಯವ್ವೆ ದಣ್ಣನಾಯಕಿತಿ ಸಾಹಳಿ (ಎಳ. II, ೪೨೦-೨ ; ಸು. 1120) ; ಆ ಗುಂಪಿನಲ್ಲಿ ಮಾಚಿಕಬ್ಬೆ, ಲಕ್ಷ್ಮೀಮತಿ ದಂಡನಾಯಕಿತಿ, ಜಕ್ಕಿಯಬ್ಬೆ ಇನ್ನೂ ಇತರರೂ ಇದ್ದರು (ಶಾಂತಲಾ. ೧೪೦). [ದಂಡನಾಯಕ + – ಇತ್ತಿ]

ದಂಡನೀತಿ (ನಾ). ೧. ದಂಡವನ್ನು ಪ್ರಯೋಗಿಸುವುದಂ ; ನ್ಯಾಯ ನಿರ್ವಹಣೆ. ೨. ಪ್ರಜಾಪರಿಪಾಲನೆ ಮತ್ತು ಸೈನ್ಯಕ್ಕೆ ಸಂಬಂಧಪಟ್ಟ ಶಾಸ್ತ್ರ : ರಾಜನೀತಿ ಶಾಸ್ತ್ರ : ನಿನ್ನ ದಂಡನೀತಿಯ ಪುದುವೆ ವಲಂ ದಂಡರತ್ನಮೆಂಬುದು ಪೆಜಿತೇ (ಆದಿಪು. ೦೩-೩೭) ; ದಂಡನೀತಿ ಸ್ಮಾರ್ತ ಶೌಚೋದ್ದಂಡ ವೇದಾಧ್ಯಯನನಿಪುಣನ . . . ಪೌರೋಹಿತನ ಮಾಡುವುದು (ಕುವ್ಯಾಖ್ಯಾ. ೩-೪೬) ; ರಾಜಶಾಸ್ತ್ರವನ್ನು 'ನೃಪಶಾಸ್ತ್ರ ಮತ್ತು ದಂಡನೀತಿ ಎಂದೂ 'ದಮ' ದಂಡವೆಂದೂ, ನೀತಿಶಾಸ್ತ್ರವೆಂದೂ ಕರೆದಿದ್ದಾರೆ (ಭಾರದ. ೩೭೦) ; ನ್ಯಾಯಶಾಸ್ತ್ರದಲ್ಲಿ ವಿದ್ಯೆ ಆನ್ವೀಕ್ಷಕೀ ತ್ರಯಾ ವಾರ್ತಾ ದಂಡನೀತಿ ಎಂದು ಸಾಮಾನ್ಯವಾಗಿ ನಾಲ್ಕು ವಿಧವೆಂದು ವಿಂಗಡಿಸಿರುವರು (ಹಿಂದಶಾ. ೧೧೩). [ದಂಡ + ನೀತಿ]

ದಂಡನೆ (ನಾ). ೧. ಹೊಡೆತ; ಶಿಕ್ಷೆ : ಕೊಲ್ಲದೆ ಬಂದ ತಪ್ಪಿಗೆ ವಿಹಿತ ವಿನ್ನೊಂದುಂಟು ದಂಡನೆಯಹಗೆನುತ್ತವೆ ತನ್ನ ಶರಮಂ ತಱಿದುಕೊಳಲೊಡನೆ (ಬಸಪು. ೬೧-೩೫). ೨. ಶಿಕ್ಷೆವಿಧಿಸುವುದು ; ದಂಡಿಸುವುದು : ಯಾವುದಾದರೂ ಉಚ್ಚನ್ಯಾಯಾಲಯವು ವ್ಯವಹಾರದ ಬಾಬಿನ ವ್ಯವಹರಣೆಯಲ್ಲಾಗಲಿ, ದಂಡನೆಯ ಬಾಬಿನ ವ್ಯವಹರಣೆಯಲ್ಲಾಗಲಿ . . . ಕೊಟ್ಟ ನಿರ್ಣಯ (ಭಾಧಾನ. ೭೧) ; ಅವನು ಅಪರಾಧಿ, ಭಯಂಕರದೋಷಿ, ಅವನಿಗೆ ದಂಡನೆಯಾಗಬೇಕು (ಪಾಡಿಳ. ೧೧೯) ; ದಂಡಿತನಿಗಿಂತಲೂ ದಂಡನೆ ಮಾಡಿದವನಿಗೆ ಇದರ ಜಳ ಹೆಚ್ಚು ತಾಕುವುದು (ರಂಗರೋ. ೫೬). ೩. ಯಾತನೆ ; ಕಾಟ ; ಬಾಧೆ.

[ಸಂ. ದಂಡನ]

ದಂಡನ್ಯಾಯಶಾಸ್ತ್ರ (ನಾ). ನ್ಯಾಯಾಲಯಗಳಲ್ಲಿ ಅಪರಾಧ (ಕ್ರಿಮಿನಲ್) ವಿಚಾರಣೆಗೆ ಸಂಬಂಧಪಟ್ಟ ಶಾಸ್ತ್ರ ; ನ್ಯಾಯಶಾಸ್ತ್ರ : "ದಂಡನ್ಯಾಯಶಾಸ್ತ್ರ, ಫೌಜುದಾರೀಕಾನೂನು (ಉ.ಕ) (Criminal Law. ಪತ್ರಿನಿ. ೩೭). [ದಂಡ + ನ್ಯಾಯ + ಶಾಸ್ತ್ರ]

ದಂಡಪಕ್ಷ (ನಾ). ೧. [ನಾಟ್ಯ] ಮೂವತ್ತು ನೃತ್ತಹಸ್ತಗಳಲ್ಲಿ ಒಂದು : ಕರವೊಂದು ಹಂಸಪಕ್ಷದಿನುರಕೆಯ್ದಲ್ ಮತ್ತವೊಂದು ಕಯ್ಯ ಲತಾಖ್ಯದ ಕರಮಾಗಿ ಪಸರಿಸುತ್ತದನೆರಡುಂ ಮೆಯ್ಯಾಗೆ ದಂಡಪಕ್ಷಾಖ್ಯಾನಂ (ಲಾಸ್ಯರಂ. ೩-೬೩). ೨. ನೂರೆಂಟು ಕರಣಗಳಲ್ಲಿ ಒಂದು; ಮೂವತ್ತು ಮೂರನೆಯ ಕರಣ : ಮತ್ತೀ ಪರಿಯಿಮ್ಮೆಯ್ಯೊಳೆ ತೆತ್ತಿಸಿದೊಡೆ ದಂಡ ಪಕ್ಷಕರಣಮೆನಿಕ್ಕುಂ (ಲಾಸ್ಯರಂ. ೪-೮೫). [ಸಂ.]

ದಂಡಪಾಣಿ (ನಾ). ೧. ದೊಣ್ಣೆಯನ್ನು ಹಿಡಿದುಕೊಂಡಿರುವವನು; ಕೋಲನ್ನು ಕೈಯಲ್ಲಿ ಹಿಡಿದಿರುವವನು. ೨. ದಂಡಾಯುಧವನ್ನು ಕೈಯಲ್ಲಿ ಹಿಡಿದುಕೊಂಡಿರುವವನು; ಯಮ: "ದಂಡಪಾಣಿ ಕೀನಾಶಂ ಕೃತಾಂತನಕ್ಕುಂ" (ಮುಂಗರಾ. ೦೫-೧೧); ಕೋದಂಡಪಾಣಿಗಳ್ ದಂಡಪಾಣಿಗಳೆಯೆನೆ ತಳರ್ದರ್ (ಪಂಚಾಪು. ೪-೫೧); ದಂಡಪಾಣಿಯ ಶಕ್ತಿಯಂತವೆ ಖಂಡಿಸುವ ವರಸುತನೆ ಬಾರಾ (ಲಸಪು. ೨೪-೫೯). ೩. ಅಧಿಕಾರ ಲಾಂಛನವಾದ ಚಿನ್ನ, ಬೆಳ್ಳಿಗಳಿಂದ ಮಾಡಿದ ದಂಡವನ್ನು ಕೈಯಲ್ಲಿ ಹೊಂದಿರುವವನು; ರಾಜ ಮೊದಲಾದ ವ್ಯಕ್ತಿ. ೪. ಸ್ಕಂದ; ಕುಮಾರಸ್ವಾಮಿ. ೫. ಕಟ್ಟಿಗೆಕಾರ; ಸೇವಕ. ೬. ಕಾಶೀಕ್ಷೇತ್ರದಲ್ಲಿರುವ ಒಂದು ದೇವತೆ. [ದಂಡ + ಪಾಣಿ]

ದಂಡಪಾದ (ನಾ). ೧. [ನಾಟ್ಯ] ಆಕಾಶಚಾರಿಗಳಲ್ಲಿ ಒಂದು: ದಂಡಪಾದ, ಆಕ್ಷಿಪ್ತಾಡಿತ. . . , ಉಲ್ಲೋಲ ಈ ಹತ್ತೊಂಬತ್ತೂ ದೇಶೀಯ ಸಂಬಂಧದ ಆಕಾಶಚಾರಿಗಳು (ಶಾಸ್ಕರಂ. ೬-೦೭ ವ). ೨. ನೂರೆಂಟು ಕರಣಗಳಲ್ಲಿ ಒಂದು: ಎಮಗೆ ನೂಪುರಚಾರಿಯ ಪದಯುಗದಿಂದಂ ಪಾಡಿ ದಂಡಪಾದವನೆಸಗುತ್ತೊಗೆಯಲ್ ಕರದಿಂ ಪಿಡಿದುಂ ಪುಗುಳ್ದಿರಿಸಲ್ ದಂಡಪಾದಕರಣಮೆನಿಕ್ಕುಂ (ಶಾಸ್ಕರಂ. ೪-೧೩೯). [ದಂಡ + ಪಾದ]

ದಂಡಪಾರುಷ್ಯ (ನಾ). ೧. ದುಂಡಾವರ್ತಿ; ಹಲ್ಲೆ: ವ್ಯವಹಾರವು (೧) ಋಣದಾನ (Debt) . . . (೧೧) ದಂಡಪಾರುಷ್ಯ (Assault) . . . (೧೮) ದ್ಯೂತ ಸಮಾಹ್ವಯ (Gambling) —ಎಂದು ಹದಿನೆಂಟು ವಿಧವಾಗಿ ವಿಭಜಿಸಲ್ಪಟ್ಟಿತ್ತು (ಶಾರದ. ೫೭). ೨. ಉಗ್ರಶಿಕ್ಷೆ; ಕಠಿಣಶಿಕ್ಷೆ. ೩. [ರಾಜನೀ] ಬೇಟೆ, ಜೂಜು, ಸ್ತ್ರೀವ್ಯಾಮೋಹ, ಮದ್ಯಪಾನ, ವಾಕ್ಪಾರುಷ್ಯ, ಅರ್ಥದೂಷಣ ಮತ್ತು ದಂಡಪಾರುಷ್ಯಗಳೆಂಬ ಏಳು ಬಗೆಯ ದೋಷಗಳಲ್ಲಿ ಒಂದು; ಅಪರಾಧಿಗಳಿಗೆ ವಿಹಿತವಾದ ಶಿಕ್ಷೆಯನ್ನು ವಿಧಿಸುವುದು. [ಸಂ.]

ದಂಡಪಾಶಕ (ನಾ). ಮರಣದಂಡನೆಗೆ ಒಳಗಾದವನನ್ನು ಗಲ್ಲಿಗೆ ಹಾಕುವವನು; ಮರಣದಂಡನೆಯನ್ನು ಕಾರ್ಯಗತಮಾಡುವ ಅಧಿಕಾರಿ: ಈ ಶಕಟವಾಸನಂ . . . ಶೂಲಾರೋಹಣವಂ ಮಾಡಿಸುವಂತೆ ನಾವು ಹೇಳಿ ಇದ್ದೇವೆಂದು, ದಂಡಪಾಶಕನಿಗೆ ತಿಳಿಸಿ ಬಾರೆಂದು ಉಸುರಿ (ಮುದ್ರಾಪುಂ. ೫೯೮). [ಸಂ.]

ದಂಡಪಿಂಡ (ನಾ). ವ್ಯರ್ಥವಾಗಿ ಅನ್ನವನ್ನು ಉಣ್ಣುವ, ಯಾವ ಕೆಲಸಕ್ಕೂ ಬಾರದ ವ್ಯಕ್ತಿ; ಉಂಡಾಡಿ; ಅಪ್ರಯೋಜಕ: "ಅವರೆಲ್ಲ ಕೆಲಸಕ್ಕೆ ಬಾರದ ದಂಡಪಿಂಡಗಳು" ಎಂಬ ಅಭಿಪ್ರಾಯವಿತ್ತು (ಸ್ವಪ್ನಹೂ. ೩೪).

ದಂಡಪಿಂಡ ತಿನ್ನು = ವ್ಯರ್ಥವಾಗಿ ತಿಂದು ಬದುಕು; ನಿರುಪಯುಕ್ತನಾಗಿರು: ಹಿರಿಯ ಮಗನಾದರೂ ಮನೆಗೆ ಸಹಾಯ ಮಾಡದೆ ದಂಡಪಿಂಡ ತಿನ್ನುತ್ತಿದ್ದಾನೆ (ರೂಢಿ). [ದಂಡ + ಪಿಂಡ]

ದಂಡಪ್ರಕ್ರಿಯಾಸಂಹಿತೆ (ನಾ). ನ್ಯಾಯಾಲಯದಲ್ಲಿ ಅಪರಾಧಗಳ (ಕ್ರಿಮಿನಲ್) ವಿಚಾರಣೆಯ ವಿಷಯದಲ್ಲಿ ಅನುಸರಿಸಬೇಕಾದ ಕಾರ್ಯಕ್ರಮದ ನಿಯಮಾವಳಿಗಳ ನಿರೂಪಣೆಯ ಗ್ರಂಥ: ೧೯೧೮ನೆಯ ಇಸವಿಯ ದಂಡಪ್ರಕ್ರಿಯಾಸಂಹಿತೆಯು ಮೇರೆಗೆ ತಾವು ಉಚಿತವೆಂದು ಭಾವಿಸುವ ಶಕ್ತಿಗಳನ್ನು ಪ್ರದಾನ ಮಾಡಬಹುದು (ಭಾಧಾನ. ೨೬೬). [ಸಂ. ದಂಡಪ್ರಕ್ರಿಯಾಸಂಹಿತಾ]

ದಂಡಪ್ರಣಮ (ನಾ). = ದಂಡನಮನ: ಆ ಜಂಗಮಾಕೃತಿಯವರನೀಕ್ಷಿಸಿ ಹೊಂಗುತಂ ಸಾಷ್ಟಾಂಗ ದಂಡಪ್ರಣಮವಂ ಮಾಡಿ (ಲಸಪು. ೨೫-೩೫).

[ದಂಡ + ಪ್ರಣಮ]

ದಂಡಪ್ರಣಾಮ (ನಾ). = ದಂಡನಮನ: ನಂದಿ . . . ದಂಡಪ್ರಣಾಮವ ವನಿಕ್ಕಿ ವಂದಿಸುತ (ಬಸಪು. ೨-೨೦); ದಂಡಪ್ರಣಾಮವಂ ಮಾಡುಪ . . . ಸಾಮಾಜಿಕರಂ (ಶಾಗಂಧಿ. ೪೬೬-೧). [ದಂಡ + ಪ್ರಣಾಮ]

ದಂಡಭ್ರಮ (ನಾ). ೧. ಕೋಲಿನಿಂದ ತಿವಿದು ತಿರುಗಿಸುವುದು. ೨. ಶಿಕ್ಷೆ ವಿಧಿಸುವುದರಲ್ಲಿ ಭ್ರಾಂತಿಯ ಮೂಲಕ ನಿರಪರಾಧಿಯನ್ನು ಅಪರಾಧಿಯೆಂದು ಶಿಕ್ಷಿಸುವುದು; ತಪ್ಪು ಮಾಡದವನನ್ನೂ ತಪ್ಪು ಮಾಡಿದವನೆಂದು ಭ್ರಮಿಸಿ ದಂಡಿಸುವುದು. ೧, ೨: ದಂಡಭ್ರಮಂ ಕುಲಾಲಚಕ್ರದೊಳ್ . . . ಮಹಾಮಾತ್ರವರ್ತನಂ ಸೃಣೆಯೊಳಲ್ಲದಿಲ್ಲ ಮೆಲ್ಲಿಯುಂ (ಕಂದ್ರಪು. ೩-೯ ವ). [ದಂಡ + ಭ್ರಮ]

ದಂಡಭ್ರಮರಿ (ನಾ). [ನಾಟ್ಯ] ಒಂದು ಬಗೆಯ ನರ್ತನಭಂಗಿ; ತೋಳನ್ನು ತಿರುಗಿಸುವಿಕೆ: ಅಮರೇಂದ್ರಂ ಕುಡೆ ದಂಡಭ್ರಮರಿಯನು ದ್ದಂಡಬಾಹುವಂಡಗಳೊಳಿರ್ದಮರಿಯರೇಂ ಯುಕ್ತಾಂದೋಳವನಾಡುವ ಮಾಬ್ಕಿಯಂ ಮನಂಗೊಳಿಸಿದರೋ (ಪುಪ್ಪಪು. ೧೩-೪೭).

[ದಂಡ + ಭ್ರಮರಿ$_1$]

ದಂಡಯಾತ್ರೆ (ನಾ). ೧. ಸಾಲಾಗಿ ಹೊರಡುವ ಜನರ ಗುಂಪಿನ ಪ್ರಯಾಣ. ೨. ರಾಜರು ದಿಗ್ವಿಜಯಕ್ಕಾಗಿ ಹೊರಡುವ ಸೈನ್ಯ ಸಮೇತವಾದ ಪ್ರಯಾಣ; ಸೈನಿಕ ಯಾತ್ರೆ; ಶತ್ರುಗಳ ಮೇಲೆ ದಂಡೆತ್ತಿ ಹೋಗುವುದು: ಮೈಸೂರಿನ ಸೈನ್ಯವು ಉಮ್ಮತ್ತೂರಿನ ಮೇಲೆ ದಂಡಯಾತ್ರೆ ಹೊರಟಿತು (ಶ್ರೀರಾಮಾ. ೧೩೩); ದಂಡಯಾತ್ರೆಯ ಮೇಲಿದ್ದ ಜೂಲಿಯಸ್ ಸೀಸರ್ ಐಗುಪ್ತರ ದೋಣಿಗಳಿಗೆ ಬೆಂಕಿ ಹಾಕಿದಾಗ . . . ಪುಸ್ತಕಭಂಡಾರವು ಬೂದಿಯಾಯಿತು (ಶಿಲ್ಪನಾ. ೭೫). ೩. (ಆಲಂ) ಅನುತ್ತೀರ್ಣನಾಗಿ ಮತ್ತೆ ಮತ್ತೆ ಪರೀಕ್ಷೆಗೆ ಹೋಗುವುದು: ಮೂರು ವರ್ಷದಿಂದ ಅವನು ಪರೀಕ್ಷೆಯಲ್ಲಿ ದಂಡಯಾತ್ರೆ ಮಾಡುತ್ತಿದ್ದಾನೆ (ರೂಢಿ). [ದಂಡ + ಯಾತ್ರೆ]

ದಂಡರತ್ನ (ನಾ). [ಜೈನ] ಒಂದು ಬಗೆಯ ಶ್ರೇಷ್ಠ ಆಯುಧ; ಏಳು ಬಗೆಯ ಅಜೀವ ರತ್ನಗಳಲ್ಲಿ ಒಂದು; ದಿಗ್ವಿಜಯಕಾಲದಲ್ಲಿ ಅದ್ಭುತವಾದ ಸಹಾಯವನ್ನು ಮಾಡುವ ದಿವ್ಯದಂಡ: ವಿಜಯಾರ್ಧಾಚಲ ಮಹಾಗುಹಾಗಹ್ವರಪಜ್ರಕವಾಟಪ್ಪಟವಿಘಟನಪಟುವಪ್ಪ ಚಂಡವೇಗ ಮೆಂಬ ದಂಡರತ್ನಮುಂ (ಆದಿಪು. ೦೦-೩ ವ); ತನ್ನ ಪುಣ್ಯಪ್ರಭಾವದಿಂ ನಿಯೋಗಿಸಿಟ್ಟನಿತೆ ಬೇಗದಿಂ ಬೆಟ್ಟ ಘಟ್ಟಂ ಹಳ್ಳ ಕೊಳ್ಳವೆಂಬ ವಿಷಮಭೂತಳಮನನಿತುಮಂ . . . ಸಮತಳಮುಂ ಮಾಡೆ ಕೈಗೆ ಬಂದ ದಂಡರತ್ನಮುಂ (ಚಂದ್ರಪು. ೬-೦೦೦ ವ). [ದಂಡ + ರತ್ನ]

ದಂಡರೇಚಿತ (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು: ಎಮಗೆ ದಂಡಪಾದಚಾರಿಯನೊಗೆಯಲ್ ಪದಮೆರಡಮೆರಡು ಕರಮುಂ ಬೇಗಂ ಎಮಗೆ ದಂಡಪಕ್ಷಹಸ್ತಂ ನೆಗಳ್ದಿರೆ ಕೇಳ ದಂಡರೇಚಿತಾಖ್ಯಮೆನಿಕ್ಕುಂ (ಶಾಸ್ಕರಂ. ೪-೯೩). [ಸಂ.]

ದಂಡಲ (ನಾ). ಒಂದು ಬಗೆಯ ನಾಟ್ಯ: ವೀರಣಂ ವೆಕ್ಕಣಂ ಗುಂಡಲಂ ಸದಮಲದ ದಂಡಲಂ ಲಾಸ್ಯಮೆಂದೆಂಬವಂ ತೋಱುತಿರ್ದಂ ಮಹೇಶಂ (ಜೀರಮಾ. ೧೦-೩೯). [?]

ದಂಡವಂತ (ನಾ). ಕಟ್ಟಿಗೆಕಾರ: ಸಂಸಜ್ಞೀ–ದಂಡವಂತಂ, ಸತ್ಕೃಗವಂತಂ– (ಶಬ್ದಾಸು. ೪೦೭ ಪ್ರಹೋ). [ದಂಡ + – ವಂತ]

ದಂಡವಲಗೆ (ನಾ). ಒಂದು ಬಗೆಯ ಗುರಾಣಿ; ಉದ್ದವಾದ ಗುರಾಣಿ: ಬಿಗಿದ ಬಿಲ್ಲಿನ ದಂಡವಲಗೆಯ ಮುಸುಡಿ ಮುದ್ದಿ ಕಠಾರಿಯುಬ್ಬಣದ ಗಂಡುಗಲಿಗಳು ಕವಿವರು (ಕುವಾ೬ದ್ರೋ. ೫-೭೦); ಖಡುಗದ ಮೊನೆಯು ಬೊರಿಸಿ ದಂಡವಲಗೆಯ ತೊಡೆಯೊಳೊದಱಿಸುತ . . . ಅರ್ಜುನ ಕುಮಾರನ ಕರೆದು ಹಳಚಿದನು (ಕುವಾ೬ದ್ರೋ. ೬-೫೭). [ದಂಡ+ಪಲಗೆ]

ದಂಡವಳ (ನಾ). ದಳವಾಯಿ ; ದಳಪತಿ ; ಸೇನಾಪತಿ : ವೀರಗಂಟೆ ರಾಮನಾಥದೇವರ ದಿವ್ಯ ಶ್ರೀಪಾದಪದುಮಾರಾಧಕರುಮಪ್ಪ ದಂಡವಳ ದೋಕಂಣ್ಣನ ಮಕ್ಕಳು (ಎಕ. IX(8), ಚನ್ನಪ. ೨೮೬-೪ ; 1272). 'ಪಡೆವಳ' ಪರಾ. [ದಂಡ + – ವಳ (< – ವಾಳ$_1$)]

ದಂಡವಿಘಾತಿ (ನಾ). ರಾಜನ ಸಪ್ತವ್ಯಸನಗಳಲ್ಲಿ ಒಂದು ; ವಿಧಿಸಿದ ಶಿಕ್ಷೆಯನ್ನು ಜಾರಿಗೆ ಕೊಡದಿರುವುದು ; ಶಿಕ್ಷೆಯನ್ನು ಕಾರ್ಯಗತ ಮಾಡಲು ಅಡ್ಡಿ ತರುವುದು : ದ್ಯೂತ ಮೃಗಯಾವ್ಯಸನ ಪಾರುಷ್ಯಾತಿಶಯ ಮಧುಪಾನ ಕಾಂತಾಪ್ರೀತಿ ದಂಡವಿಘಾತಿ ದೂಷಣವರ್ಥ ಸಂಗತಿಯು ಜಾತಸಪ್ತವ್ಯಸನವಿವು (ಕುವ್ಯಾಸ. ೧೨-೮೯).

[ದಂಡ + ವಿಘಾತಿ]

ದಂಡವಿಡು (ಕ್ರಿ). ದೀರ್ಘದಂಡ ನಮಸ್ಕಾರವನ್ನು ಮಾಡು ; ಪೊಡೆಮಡು : ಮೈ ದಿಂಡುಗೆಡಹಿದರೆ ಪುನರಪಿ ಜನನವಿಲ್ಲ ಸಲೆ ದಂಡ ವಿಟ್ಟವ ಮುಕ್ತನೊ (ವಿದಾಕ್ಯ. ೯೮-೫). [ದಂಡ + ಇಡು$_1$]

ದಂಡಸಂಹಿತೆ (ನಾ). = ದಂಡನ್ಯಾಯಶಾಸ್ತ್ರ : (Criminal Code, ಪತ್ರಿನಿ. ೨೭). [ದಂಡ + ಸಂಹಿತೆ]

ದಂಡಸಾಧ್ಯ (ನಾ). ಸೈನಿಕ ಶಕ್ತಿಯಿಂದ ಗೆಲ್ಲಬಹುದಾದ ವ್ಯಕ್ತಿ ; ಸೈನ್ಯದಿಂದ ಅಡಗಿಸಬಹುದಾದವನು : ವನಧಿಪರಿವೃತ ಸಮಸ್ತಾ ವನಿತಳದೊಳ್ ದಣ್ಡಸಾಧ್ಯಮಲ್ಲದೆ ತಾನಾಂಪನಿತುವರಮರಿಯರಿಲ್ಲೆಂಬಿ ನೆಗಂ ಜಯಸಿಂಹದೇವನಾಳ್ದಂ ನೆಲನಂ (ಕಇಅ. ೨-೨-೨೯ ; 1058).

[ದಂಡ + ಸಾಧ್ಯ]

ದಂಡಾಂಕಿತ (ಗು). ೧. ಸೈನ್ಯಬಲದಿಂದ ಕೂಡಿರುವ. ೨. ಶಿಕ್ಷಿಸುವುದೇ ಗುರುತಾಗಿರುವ : ಕರುಣವೀ ದಂಡಾಂಕಿತ ಪ್ರಭುತ್ವಕ್ಕೆ ಮೇಲು ಧರಣಿಪರ ಹೃದಯದಲಿ ಪಟ್ಟವದಕೆ (ಕಎಪು. ೫೩-೩). [ದಂಡ+ಅಂಕಿತ]

ದಂಡಾಕಾರ (ನಾ). ೧. ದಂಡದ ಆಕಾರ ; ಕೋಲಿನಂತಿರುವುದು. ೨. ದೀರ್ಘವಾಗಿರುವುದು : ಎಡೆಬಿಡದೆ ಮನುಷ್ಯಕಂಠದಿಂದ ಹೊರಡುವ ದಂಡಾಕಾರವಾದೊಂದು ಶಬ್ದವನ್ನು ಕೇಳಿದಳು (ಕಪಾಕುಂ. ೯೨).

ದಂಡಾಕಾರದ ಪದ್ಧತಿ = ಅರ್ಥ, ಅನ್ವಯಗಳಿಗೆ ಗಮನ ಕೊಡದೆ ಒಂದೇ ಸಮನಾಗಿ ಹೇಳಿಕೊಂಡು ಅಥವಾ ಓದಿಕೊಂಡು ಹೋಗುವ ಕ್ರಮ : ಓದುವುದರಲ್ಲಿ 'ದಂಡಾಕಾರ'ದ ಪದ್ಧತಿ ಎಂಬ ಹಳೆಯ ಕ್ರಮ ವಿದೆ. ಅದೇನೆಂದು ಓದುವವರನ್ನೆ ಕೇಳಿ ತಿಳಿಯಬೇಕಷ್ಟೆ (ದೇವಮ. ೪೦).

[ದಂಡ + ಆಕಾರ$_2$]

ದಂಡಾಜೀವಕ (ನಾ). ಮೋಸಗಾರ ; ವಂಚಕ ; ಮಾಯಾವಿ : "ಮಾಯಿಕಂ ಕುಹಕಿ ದಂಡಾಜೀವಕಂ[ಪಾಠಾಂ. ವಿತಂ] . . . ಜಿಲಿಕನೆನೆ ಮಾಯೆಗೈವವನಕ್ಕು" (ಮಂಗರಾ. ೬೭-೬).

[P ಇದು 'ದಾಂಡಾಜಿನಿಕ' ಎಂಬುದರ ಅಪಲಿಖಿತ]

ದಂಡಾಜ್ಞೆ (ನಾ). ನ್ಯಾಯಾಲಯವು ಅಪರಾಧಿಗೆ ವಿಧಿಸುವ ಶಿಕ್ಷೆಯ ತೀರ್ಪು : ಸೇನಾವಿಧಿಯ ಮೇರೆಗೆ ಸಾದರಾದ ಯಾವುದಾದರೂ ದಂಡಾಜ್ಞೆಯನ್ನು . . . ಮಾನ್ಯಗೊಳಿಸಬಹುದು (ಭಾಧಾನ. ೨೦) ; ಅಂತಿಮರೂಪದಲ್ಲಿ ದಂಡಾಜ್ಞೆ ಅವರ ಕೈಸೇರುವ ತನಕ . . . ಮೊಖ್ತಿಯಾರ್ ಸಂಪೂರ್ಣ ಜವಾಬ್ದಾರ (ಪುನರು. ೧೫೬). [ದಂಡ + ಆಜ್ಞೆ]

ದಂಡಾದಂಡಿ (ನಾ). ಪರಸ್ಪರ ದಂಡದಿಂದ ಮಾಡುವ ಯುದ್ಧ : ಅಚ್ಯುತಂಗಿದಿರಾಗಿ ದಂಡಾದಂಡಿಗನುವಾದ (ನಿಭಾಗ. ೧೦-೬೦-೨೬) ; ತರದಿ ದಂಡಾದಂಡಿ ಕೂಡೆ ಖಡ್ಗಾಖಡ್ಗಿ ಭರದ ಮುಷ್ಟಾಮುಷ್ಟಿ ಕೂಡೆ ಕೇಶಾಕೇಶಿ ಪಿರಿದು ಹಾಣಾಹಾಣಿಯಂತೆ ಹೆಲ್ಲಾಹೆಲ್ಲಿ ಯುದ್ಧಮಾದುದು (ಸಾಳ್ವಭಾ. ೨೫-೧೪) ; ಭರದಿ ದಂಡಾದಂಡಿಯೊಳು ಪಿರಿದು ಕಚಾಕಚಿ ಮುಷ್ಟಾಮುಷ್ಟಿಯಿಂದಿರದೆ ಕಾದಿದರತಿಬಳರು (ಅನಂಚ. ೧೮-೫೮) [ಸಂ.]

ದಂಡಾಧಿನಾಥ (ನಾ). ಸೈನ್ಯದ ನಾಯಕ ; ದಳವಾಯಿ ; ಸೇನಾಪತಿ. 'ದಂಡಾಧಿನಾಥತಿಳಕ' ಪರಾ. [ದಂಡ + ಅಧಿನಾಥ]

ದಂಡಾಧಿನಾಥತಿಳಕ (ನಾ). ಸೇನಾಪತಿಗಳಲ್ಲಿ ಅಗ್ರೇಸರ ; ಶ್ರೇಷ್ಠನಾದ ದಳಪತಿ : ಪರಮಗುಣರತ್ನನೆನಿಸಿದ ಸಿರಿಪತಿ ದಣ್ಡಾಧಿನಾಥತಿಳಕನೆ ಸುಜನಾ ಭರಣನ ಮಯ್ದುನನೆಸೆದು (ಸೌಇಇ. XX, ೭೪-೨೦ ; 1112).

[ದಂಡಾಧಿನಾಥ + ತಿಳಕ (= ತಿಲಕ)]

ದಂಡಾಧಿನಾಯಕ (ನಾ). = ದಂಡಾಧಿನಾಥ : ವಿಜಯಧ್ವಜಮಂ ತನಗೆತ್ತಿಸಿದಂ ದಂಡಾಧಿನಾಯಕಂ (ಸುಕುಮಾ. ೭-೫).

[ದಂಡ + ಅಧಿನಾಯಕ]

ದಂಡಾಧಿಪ (ನಾ). = ದಂಡಾಧಿನಾಥ : ಸಿದ್ಧದಂಡಾಧಿಪಂ ಹೆಚ್ಚುತಂ ಹಿಗ್ಗುತಂ . . . ಉಬ್ಬುತುಂ (ಬಸರ. ೫-೦೦೯) ; ಬಡಿದು ಕೆಡಹವನಂ ಹಿಡಿದು . . . ಕೊಲ್ಲೆಂಬ ದನಿಗಳು ಪೊಡವಿಯೊಳಗಿಲ್ಲ ಶುಭದಂಡಾಧಿಪನ ಮನೆಗಳಲಿ (ಬಸಪು ೩೭-೭೦). [ದಂಡ + ಅಧಿಪ]

ದಂಡಾಧೀಶ (ನಾ). = ದಂಡಾಧಿನಾಥ : ದಂಡಾಧೀಶರಾಲಯಂಗಳ್ ಮೆಱೆಗುಂ (ಜಗವಿ. ೨-೨೨) ; ಅಮೃತದಂಡಾಧೀಶನಂ ಪುಣ್ಯದಿಂ ಪಡೆದಂ ಪದ್ಮಜಂ (ಎಕ. VI, ತರೀಕೆ. ೪೫-೬೩ ; 1196) ; ದಂಡಾಧೀಶರ ಸಚಿವರ ಶೂರರ ತಂಡದಲಂಪಿಂದೆ ಸಭೆಯೆಸೆದುದವನಿಪನ (ಉದ್ಕಟ. ೨-೦೪) ; ನಿಂದಿರೆ ದಂಡಾಧೀಶಂ ಕುಳ್ಳಿರೆ ಮಂತ್ರಿ (ಅನಂಪು. ೦-೫೬)

[ದಂಡ + ಅಧೀಶ]

ದಂಡಾಧೀಶ್ವರ (ನಾ). = ದಂಡಾಧಿನಾಥ : ಹೆದಱೆ ದಂಡಾಧೀಶ್ವರಂ ಮನಗದಡಿ ಬೊಮ್ಮಯ್ಯಗಳನೀಕ್ಷಿಸಿ (ಬಸಪು. ೩೬-೦).

[ದಂಡ + ಅಧೀಶ್ವರ]

ದಂಡಾಧ್ಯಕ್ಷಕ (ನಾ). ದಂಡಿಸುವ ಅಧಿಕಾರವುಳ್ಳವನು ; ನ್ಯಾಯಾಧಿಪತಿ : ದಂಡಾಧ್ಯಕ್ಷಕಂ ಪಾಮರಕುಲದೊಳಗೊರ್ವಂ ಬಿಸುಟ್ಟೋಪಳಂ ಮತ್ತಱುದಿಂಗಳ್ ಪೋಗೆ ಕೂಡಿರ್ದಿರವನಱಿದು ದಂಡಕ್ಕೆ ಸರ್ವಸ್ವಮಂ . . . ಬೇಡಲ್ (ಪಂರಾಮಾ. ೦೫-೬೬ ಅಡಿಟಿ). [ಸಂ.]

ದಂಡಾನ್ವಯ (ನಾ). ಪದ್ಯಗಳಲ್ಲಿ ಜೋಡಿಸಿರುವಂತೆಯೇ ಅರ್ಥವನ್ನು ಹೇಳುವುದು ; ಅನ್ವಯಾನುಸಾರವಾಗಿ ಅರ್ಥವನ್ನು ಹೇಳದೆ, ದಂಡಾಕಾರವಾಗಿ ಪ್ರತಿ ಪದಕ್ಕೂ ಅರ್ಥವನ್ನು ಹೇಳುವುದು : ಹಿಂದೆ ಶ್ಲೋಕಗಳಿಗೆ ದಂಡಾನ್ವಯದಲ್ಲಿ ಅರ್ಥ ಹೇಳುತ್ತಿದ್ದರು (ರೂಢಿ).

[ದಂಡ + ಅನ್ವಯ]

ದಂಡಾಯ (ನಾ). ಜುಲ್ಮಾನೆಯಿಂದ ಬಂದ ಹಣ,–ಆದಾಯ ; ದಂಡದಾಯ : ಕಿಱು [ದೆಱೆ ದ] ಣ್ಡಾಯಮೆಂಬಿವು ಮೊದಲಾಗಿ (ಸೌಇಇ. XI-I, ೪೦-೦೨ ; 965) ; ಊರೊಳೇನೊನ್ದು- ಪುಟ್ಟಿದ ದಣ್ಡಾಯಮೆಲ್ಲಂ ಕೆಱೆಗಿ [ತ್ತಮ್] (ಇಆ. XIX, ೧೬೪-೦೮ ; 1040) ; ಪುರದ ಕೇರಿಯ ಮಣ್ಬಾಳ ದಂಡಾಯಮಾದುದೆಲ್ಲಂ (ಎಕ. VIII, ಸಾಗರ. ೧೦೮-೪೫ ; 1042) ; ಆಯದೆಱೆ ಹಡುವರ ಬೀರವಣ ನಲ್ತೆತ್ತು ನಲುಗಂಟಿ ನಲ್ಲಾಮ ದಣ್ಡಾಯ ತವುಡೆಯೊಳಗಾದ ಸಮಸ್ತ ಕಿಱುಕುಡವೆಲ್ಲವಂ . . . ಧಾರಾ ಪೂರ್ವ್ವಕಂ ಮಾಡಿ (ಎಕ. V, ಬೇಲೂರು. ೫೯-೮೭ ; 1174).

[ದಂಡ + ಆಯ$_7$]

ದಂಡಾಯುಧ (ನಾ). ಒಂದು ಬಗೆಯ ಆಯುಧ ; ಗದೆ : ಬಾಯಲಡಸಿದ ನಹಿತರನು ದಂಡಾಯುಧದ ನಿಲವಿನಲಿ ಸುಭಟರ ದಾಯಗೆಡಿಸಿದನು (ಕುವ್ಯಾದ್ರೋ. ೧೬-೮). [ದಂಡ + ಆಯುಧ]

ದಂಡಾಲು (ನಾ). ಒಂದು ಬಗೆಯ ಗೆಡ್ಡೆ : ತೂನಗೆಣಸು, ಮುಡಿಗೆಣಸು, ನೂರೆಲೆಗೆಣಸು, ತುಣಗೆಣಸು, ದಂಡಾಲು (ಮೃಜಿಗಿ. ೩೧-೫೯೨).

[?]

ದಂಡಾವಳಿ$_1$ (ನಾ). ಒಂದು ಬಗೆಯ ಸೀರೆ; ಕಂಬಿಅಂಚಿನ ಸೀರೆ: ಶಾವಂತಿಯಿರುವಂತಿ ರುದ್ರಗಂಟೆಯನು ದಂಡಾವಳಿಯ ಚಾಪಗಂಟೆಯು . . . ನೇತ್ರಾವಳಿಯು ಮುಖ್ಯ ನಾನಾವಿಧದ ಸೀರೆಗಳ (ನವಮೋ. ೧೭-೬೦). 'ಪಟ್ಟಾವಳಿ' ಪರಾ. [ದಂಡ + ಪಳಿ$_5$ (<ಪಟ್ಟಿ$_6$)]

ದಂಡಾವಳಿ$_2$ (ನಾ). ದಂಡದ ಆಕಾರವಾಗಿರುವ ಅಲಂಕಾರ: ಎಳೆಯ ಪಳುಕಿನ ಶಿಲೆಯೊಳಡಸಿ ಕಟ್ಟಿದ ಕಟ್ಟೆಗಳಲಿ ದಂಡಾವಳಿಯ ಸೂಸಕದ ಪತ್ರತತಿಗಳೊಳೋರಣಂಗೊಳಿಸಿ (ಹಡಕಾ. ೩-೪೦).

[ದಂಡ + ಆವಳಿ$_1$ (= ಆವಲಿ)]

ದಂಡಾಸನ (ನಾ). ಒಂದು ಬಗೆಯ ಬಿಲ್ಲು: "ದಂಡಾಸನಂ ತೀರಿ ತದ್ಬಳ ಮೆಂದು ಬಿಲ್ಲ ಭೇದಂಗಳಕ್ಕು" (ಮಂಗರಾ. ೮೭-೩೩). [ಸಂ.]

ದಂಡಾಸ್ತ್ರ (ನಾ). =ದಂಡಾಯುಧ: ವರುಣನು ವಾರುಣಾಸ್ತ್ರವನ್ನೂ . . . ಯಮನು ದಂಡಾಸ್ತ್ರವನ್ನೂ ಅವನಿಗೆ ಕೊಟ್ಟರು (ವಚಭಾ. ೧೨೬).

[ದಂಡ + ಅಸ್ತ್ರ]

ದಂಡಾಹತ (ನಾ). ಕಡೆಗೋಲಿನಿಂದ ಕಡೆದ ಮಜ್ಜಿಗೆ: "ದಂಡಾಹತಂ, ಕಾಲಶೇಯಂ, ಅರಿಷ್ಟಂ, ಗೋರಸಃ – ೪ ಕಡೆದು ತೆಗೆದ ಹಸುವಿನ ಮಜ್ಜಿಗೆ" (ಸಿದ್ಧಾಂತಿ. ೨೪೮). [ದಂಡ + ಆಹತ]

ದಂಡಾಳು (ನಾ). ದಂಡಿನಲ್ಲಿ ಕೆಲಸಮಾಡುವ ಮನುಷ್ಯ; ಭಟ; ಸೈನಿಕ; ಯೋಧ: ಅಲ್ಲಿ ಅವನಿಗೆ ಸಹಾಯಮಾಡಲು ಸಾವಿರಾರು ದಂಡಾಳುಗಳಿದ್ದರು (ಯೋಧರು. ೩); ನೀನು ಅರಸನ ದಂಡಾಳಿರಬಹುದೆಂದು ಊಹಿಸಿದೆ (ಹಾಹುತ್ತ. ೬೮); ಜಮೀನ್ದಾರನು . . . ನಾಲ್ವತ್ತು, ಐವತ್ತು ಮಂದಿ ದಂಡಾಳುಗಳನ್ನಿಟ್ಟಿದ್ದ (ಜಮೀನ್ದಾ. ೭)

[ದಂಡು (<ದಂಡಿ$_3$) + ಆಳು$_3$ (<ಆಳ್$_3$)]

ದಂಡಿ$_1$ (ನಾ). ೧. ದೊಡ್ಡತನ; ಹಿರಿಮೆ; ಮಹತ್ತ್ವ; ಘನತೆ: ದಂಡಿಯೊಳ್ ಪ್ರಚ್ಛನ್ನವೇಷದ ಖಂಡಪರಶುವೆನಲ್ ಮೆಱೆದು ಕೈಕೊಂಡು ಕೌದಿಗಳಂ ಹೊಲಿವ ಕಾಯಕವೆ ತನಗಾಗಿ (ಬಸಪು. ೨೩-೩); ಕಂಡು ಪರಮೈಶ್ವರ್ಯಮೂರ್ತಿಯ ದಂಡಿಯನು . . . ದಂಡದಂತೀಡಾಡಿದನು ಕಾಯವನು ಮೇದಿನಿಗೆ (ನಿಭಾಗ. ೬-೪-೩೫); ಪುಂಡರೀಕಾಂಬಕನು ಬಳಿಕಲಾಖಂಡಲಾದ್ಯರು ಬಂದ ಕಾರ್ಯದ ದಂಡಿಯನು ಸೂಚಿಸಿದ ಭಕ್ತಿಯೊಳಂಬಿಕಾಸತಿಗೆ (ಅಂಬಿಕಾ. ೧೦-೬೬). ೨. ಶಕ್ತಿ; ಬಲ; ಸಾಮರ್ಥ್ಯ: ಅಂಡಲೆವ ಘನಮೋಹಪಾಶಾಭೇದನಂ ಮಾಳ್ಪ ದಂಡಿಯುಳ್ಳೆನ್ನಪ್ಪ ಬಾರಾ (ಬಸಪು. ೨೪-೩೯); ಕಂಡನರ್ಜುನ ತ್ರಿಪುರದಹನದ ಖಂಡಪರಶುವೊಲಿರ್ದ ಭೀಮನ ದಂಡಿಯನು ಥಟ್ಟೈಸಿ ಭೂತಗಳೆಡಬಲದೊಳಿರಲು (ಕುಪ್ಯಾಕ. ೧೯-೬೯); ಕಂಡನಾ ಮಾರೀಚನಾತನ ದಂಡಿಯನು (ಉತ್ತರಾ. ೫-೨೭). 'ಸಮದಂಡಿ' ಪರಾ. ೩. ಶ್ರಮ; ಪ್ರಯಾಸ: ಕಂಡನಲ್ಲಿ ಮಹಾಸಮುದ್ರವ ಕಂಡುದಿಲ್ಲರಿಪುರವನಾಕ್ಷಣ . . . ದಂಡಿಲೇಸಾಯ್ತೆನುತ ಧರಣೀಮಂಡಲಕ್ಕವತರಿಸುತಿದಿರಲಿ ಕಂಡನಾ ತೃಣಬಿಂದುವನು (ತೊರರಾ. ೫-೧-೨೫). ೪. ಹೆಚ್ಚು; ಮಿಗಿಲು; ಆಧಿಕ್ಯ; ಅತಿಶಯ: ಮುನಿಗಳ್ . . . ಹರಿಸದ ದಂಡಿಯಿನಿದಿರ್ವಂದು ಮುನಿಗಳಂ ಕರೆದೊಯ್ದರ್ (ಹಾಲಾಸ್ಯ. ೧-೧-೩೬); ಎನ್ನ ಕಷ್ಟದ ದಂಡಿಯನು ತಿಳುಹು (ಅನಂರಾ. ೪-೪-೬೮); ಗಂಡನು ಮನೆಗೆ ಬರುವಾಗ್ಗೆ ದಂಡಿಯಾಗಿ ತಿಂದು ಕೂತುಕೊಂಡಳು (ಕಥಾಮಂ. IV, ೧೫). ೫. ಸೆಣಸಾಟ; ಹೋರಾಟ; ಕಾಳಗ; ಯುದ್ಧ: "ದಂಡಿಯೆನಲು ಸೆಣಸು" (ಚತುನಿ. ೧೬೫); "ದಂಡಿಯೆನಲ್ ಸೆಣಸು" (ಭಾರನಿ. ೩೬); ಈ ಕಮಲನೇತ್ರಂಗೆ ಫಡ ನೀನಾಕೆವಾಳನೆ ಶಿವಶಿವಾ ಜಗದೇಕದೈವದ ಕೂಡೆ ದಂಡಿಯೆಯೆಂದನಾ ಭೀಮ (ಕುಪ್ಯಾಸ. ೨-೮೪); ಸೀತಾಸುತಂ ಬಂದಪಂ ನಾವಿವನೊಳು ದಂಡಿಗಾಱೆವು ನಮ್ಮನೀ ಬಾಲಕಂ ಪಿಡಿದುಕೊಂಡು ಪೋಗಲಿ (ಜೈಮಿಭಾ. ೨೧-೩೬); ಕಂಡಿರೇ ಶಿವದೂತರೆಸಗಿದ ದಂಡಿಯನು (ಅಂಬಿಕಾ. ೫ ೬). ೬. ರೀತಿ; ಬಗೆ: ಕಂಡು ಮಱುಗದೆ ಸೂನೆಗಾಱನ ದಂಡಿಯಲಿ ಮಗನಂ ವಧಿಸಿ (ಬಸಪು. ೨೪-೨೧); ಗಂಡಗರ್ವವ ನುಡಿಯೆವೆಮ್ಮಯ ದಂಡಿ ತಾನದು ಬೇಱೆ (ಕುಪ್ಯಾವಿ. ೩-೫೨); ಕಂಡವರು ಬೆಱಗಾಗಿ ಬೆಬ್ಬಳಗೊಂಡು ನೋಡುತಲಿರ್ದರಾತನ ದಂಡಿಯನು ತಾವಱಿಯಲಱಿಯದೆ ಕೂಡೆ ಜನವೆಲ್ಲ (ಪ್ರಭುಲೀ. ೨೨-೩೮); ಕೆಂಡದಟ್ಟುಳಿಯಾಯ್ತು ಸುಡುತಿಹ ದಂಡಿ ತಾನಿದು ಹೊಸತು (ಕೌಶಿರಾ. ೩೨-೧೧); ಪಂಡಿತರ್ಗೀವರೊಂದೆರಡು ಪಣವ ಬಲು ಭಂಡಿ ಮುಱಿವ ತೆಱದಿಂದ ಭಂಡರ್ಗೆ ಕೊಡುವರೀ ಕಾಲದರಸುಗಳ ದಂಡಿಯಿವರೊಳೊಳ್ಬುಂಟೆ (ಕುರಾಸಾಂ. ೩೫-೮೭); ಪುಂಡರೀಕದ ಕಣ್ಣವನು ನೆಲೆಗೊಂಡನಿಂದೀಕೆಯಲಿ ಮುನ್ನಿನ ದಂಡಿಯಲ್ಲಿದು ಹೊಸತೆನುತ ಕಳವಳಿಸುತಿಂತೆಂದ (ನಿಭಾಗ. ೧೦-೩-೬); ನುತತಾಳ ಕ್ರಮ ದಂಡಿದಪ್ಪದೆ ಸುಧಾಮಾಧುರ್ಯದಿಂ ಪಾಡಿದರ್ (ಯಾದಚಂ. ೧೩-೮೭). ೭. ಸಮ; ಸಾಟಿ: ಹುರಿಗೊಂಡುದಾತನ ಸತ್ವವಾತನ ದಂಡಿಯಲಿ ಬಹರಾರು ಸುರ ನರ ನಾಗಲೋಕದಲಿ (ಕುಪ್ಯಾಗ. ೪-೬). 'ದಂಡಿಕಾಱ' ಪರಾ. ೮. ಛಲ; ಹಠ: ಗಂಡನಂತಕಪುರಕೆ ಹೋಗಲು ರಂಡೆ ಪುತ್ರನ ಪಡೆವೆನೆಂದಾ ದಂಡಿಯಲಿ ಕಾಳಿಂದಿತೀರದಲಧಿಕ ತಪಸುಗಳ ಕೊಂಡೆಸಗೆ (ಸಂಭಪ. ೨೬-೮೨); ದಂಡಿಯೊಳೇಗಳುಂ ಪ್ರಾಣಕಾಂತನಪ್ಪಿ ಕೊಂಡಿರಿ ತೊಲಗ ಬೇಡೆನುತೆ ಮಿಂಡಿಯರಿಗೆ ಬುದ್ಧಿಗಲಿಸುವಂತೆಲೆವಳ್ಳಿ ಮುಂಡಿಗೆಗಳನಡರಿದುವು (ಮೋಹತ. ೨೪-೫೩).

[ದೇ.॥ ತಮಿ. ತಣ್ಟಿ; ತೆಲು. ದಂಡಿ]

ದಂಡಿ$_2$ (ನಾ). ದಂರ್ಗೆ; ಪಾರ್ವತಿ: ಮಂಡಲತ್ರಯನಿಳಯೆ ದಂಡಿ ಜಯದುರ್ಗಿ ಫಣಿಕುಂಡಲೆ ಮಹೇಶ್ವರಿ (ಕೈವಲ್ಯ. ೧-೬-೩).

[ದಂಡ + ಇ$_2$]

ದಂಡಿ$_3$, ದಂಡು, ದಂಡೆ$_3$ (ನಾ). ೧. ಕೋಲು; ದಡಿ. 'ದಂಡಿವಲೆ' ಪರಾ. ೨. ವೀಣೆ, ತಂಬೂರಿ ಮೊದಲಾದುವುಗಳ ದಂಡ; ದಂಡಿಗೆ: ಪ್ರಾಚೀನ ವೀಣೆಗಳು ನಾನಾರೂಪಗಳಲ್ಲಿ ಕಂಡುಬಂದರೂ ಮುಖ್ಯವಾಗಿ ಬಿದಿರು ಅಥವಾ ಬೊಂಬಿನ ಉದ್ದವಾದ 'ದಂಡಿ'ಯನ್ನು ಹೊಂದಿ . . . 'ಮೇರು'ಗಳ ಮೇಲೆ ಹಾದುಹೋಗುವ ತಂತಿಗಳನ್ನು ಹೊಂದಿದ್ದವು (ಸಂಗೀಚಂ. ೩೧೦). ೩. ತುಡುಗುದನಗಳ ನಡಗೆಯ ವೇಗವನ್ನು ಕುಗ್ಗಿಸಲು ಅವುಗಳ ಕೊರಳಿಗೆ ಕಟ್ಟುವ ಮರದ ತುಂಡು; ಗುದ್ದಿ: ಆ ಕೆಂದ ಹಸುವಿಗೆ ದಂಡಿ ಹಾಕದೆ ಹೊರಗೆ ಬಿಡಬೇಡಿ (ರೂಢಿ). ೪. ತಕ್ಕಡಿಯ ಕೋಲು. 'ಅಡ್ಡದಂಡಿ' ಪರಾ. ೫. ಕೆತ್ತುವ ಆಯುಧ; ಬಾಚಿ: "ದಂಡಿಯೆನೆ ಬಾಚಿಯಕ್ಕುಂ" (ಮಂಗರಾ. ೧೧೩-೮). ದಂಡು: ೧. ತೆಱೆದ ಮೊಗಂ ಬಾಗಿದ ಬೆನ್ . . . ಊಱುವ ದಂಡು ವೆರಸು ಬರ್ಪನನಾಗಳ್ . . . ನೋಡಿ ಕಂಡು (ಜೀವಸಂ. ೨೦೮-೫೩); ಕೊಂಡನವಂ ತಪಮಂ ಗೆಡೆಗೂಂಡಿರೆ ದಂಡು ಬೂದಿ ಸೊರೆ ರುದ್ರಾಕ್ಷಂ (ಪಾರ್ಶ್ವಪು. ೪-೩೬). ೨. ದಂಡಿನಲಿ ತರುದೋಷ ನಾರಾಚ ಹರಿದ ದೋಷವಿದೆಂದು ತಂತಿಗೆ ಪಿರಿದು ದೋಷವನೊರೆದು (ಸಾಳ್ವಭಾ. ೧೮-೧೦). ೬. ವಟು, ಸಂನ್ಯಾಸಿ ಮೊದಲಾದವರು ಹಿಡಿದಿರುವ ಕೋಲು; ದಂಡ: ಕೊರಲ ಜನ್ನಿವರಂ ಕೊಡೆ ದಂಡು ಕೋವಣಂ ಕರಮೆಸೆಯುತ್ತಿರಲ್ಕೆ ಗಗನಾಂಗಣದಿಂದಿಱಿತಂದಂ . . . ನಾರದಂ (ಶಾಂತೀಶ್ವ. ೭-೯೫). ೭. ಪಡೆ; ದಳ; ಸೈನ್ಯ: ಕೀಚಕನೆಂಬಂ ಸುಯೋಧನನ ದಂಡೆಲ್ಲಮನಿಱಿದೋಡಿಸಿ (ಪಂಪಭಾ. ೮-೫೮ ವ); ದಂಡಿಂಗೆ ಪೋಪೆನೆಂದೆನೆ ಗಂಡಂ ನವಯುವತಿ ಭೀತಿಗೊಂಡಳ್ ಕೇಳ್ದು (ಪಾರ್ಶ್ವಪು. ೩-೧೫); ದಂಡು ನಡೆಯಲಿ ನಿಷಧಪುರಿಗಾ ಭಂಡನೃಪ ಪುಷ್ಕರನ ಮಾತೇನಂಡಲೆದು ಫಲವಿಲ್ಲ (ನಳಚ. ೯-೧೬); ಸೊಗಸುವ ಕೊಲ್ಲಾರಬಂಡಿಯ ಲೆಕ್ಕವ

ಬಗೆವನಾರಾ ದಂಡಿನೊಳಗೆ (ಕಂನವಿ. ೧೧-೩೩); ದಂಡಿನಲ್ಲಿ ಸೋದರಮಾವನೇ (ಗಾದೆ). ೮. ಗುಂಪು; ಸಮೂಹ: ಕರಿರಥತುರಗಚರಣೋಚ್ಚಲಿತ ಧೂಳಿಯ ದಂಡು ನಡೆದುದು ಸೂರ್ಯಮಂಡಲಕೆ (ಕುವ್ಯಾದ್ರೋ. ೧೧-೫); ಇವೆರಡು ತಂಡಗಳ ಮಧ್ಯೆ ಇರುವ ವಿಶಾಲವಾದ ಪ್ರದೇಶದಲ್ಲಿ ಸಣ್ಣಸಣ್ಣ ಉಪಗ್ರಹಗಳ ದಂಡೇ ಇರುವುದು (ಜ್ಯೋತಿರ್ವಿ. ೧೦೦); ಮಿಡಿತೆ ದಂಡು ಬಿದ್ದ ಬೆಳೆಯೆಲ್ಲಾ ಹಾಳು (ಗಾದೆ); ದಂಡಿಗೆ ದಂಡೇ ಬಂತು (ರೂಢಿ). ೯. ಸೈನ್ಯ ಇರುವ ಸ್ಥಳ; ಲಷ್ಕರು: ದಂಡಿನಲ್ಲಿರುವ ಯುನೈಟೆಡ್ ಥಿಯೋಲಾಜಿಕಲ್ ಕಾಲೇಜಿನ ಗ್ರೀಕ್ ಅಧ್ಯಾಪಕ (ಅಂತಿಗೊ. VII ಮುನ್ನುಡಿ); ಬೆಂಗಳೂರು ದಂಡು (ರೂಢಿ).

ದಂಡೆ$_3$: ೧೦. ಒಂದು ಬಗೆಯ ಅಂಗಸಾಧನೆ: ಎರಡು ಅಂಗೈಗಳನ್ನೂ ನೆಲಕ್ಕೆ ಊರಿ ಮಂಡಿಯನ್ನು ನೆಲಕ್ಕೆ ಊರದೆ ಮೂಗನ್ನು ನೆಲಕ್ಕೆ ಮುಟ್ಟಿಸಿ ಮಾಡುವ ವ್ಯಾಯಾಮ; ಸಾಮು: ದಿನವೂ ತಪ್ಪದೆ ಬಸ್ಕಿಗಳನ್ನೂ, ದಂಡೆಗಳನ್ನೂ ಹಾಕುತ್ತಿದ್ದರು (ಸಂಗೀತ. ೬೬); ನೂರುಗಟ್ಟಲೆ 'ದಂಡೆ' ಹೊಡೆದು ಬಟ್ಟೆ ಒಗೆದುಕೊಂಡು (ಡಯ್ಯಮ. ೧೧). ೧೧. ಮಲ್ಲಯುದ್ಧ ಮೊದಲಾದ ಸಂದರ್ಭದಲ್ಲಿ ಹಾಕುವ ಒಂದು ಬಗೆಯ ವರಸೆ,-ಪಟ್ಟು: ಸೆಱಗಂ ಪಾರ್ವುದೆ ಗಂಡಂ ಶರೀರ ಸಂಸಾರ ಭೋಗ ನಿರ್ವೇಗಂಗಳ್ ದೊರೆಕೊಳುತೆ ಪರಿಗ್ರಹಮಂ ಪರಿಹರಿಪುದು ಕಲಿಯ ದಂಡೆಯಂ ತೂಂಕುವವೋಲ್ (ಅಜಿಪು. ೨-೧೧೪); ಸೆಱಗಂ ಬೆಱಗಂ ಬಗೆಯದೆ ಪೊರೆಯಿಲ್ಲದೆ ಕಲಿಯ ದಂಡೆಯಂ ತೂಂಕಿದ ವೋಲ್ (ಗದಾಯು. ೨-೨೨); ಪೊಱಮಡೆ ಕಂಡು ಗಂಡು ಮಿಗೆ ದಂಡೆಯನಿತ್ತು ಕಱುತ್ತು ಪತ್ತೆ ಸಾರ್ದುಱದೆ ನಿಲುತ್ತೆ (ಗಿರಿಕ. ೧-೯೮); ಬೆಮರನಾಱಿಸಿಕೊಂಡು ವಿಗತಶ್ರಮನು ಮೊಳಕಾಲಿಕ್ಕಿ ದಂಡೆಯೊಳಮರಿ ದೇಹವ ಬಲಿದು ವಕ್ಷದೊಳೌಂಕಿ ಗಾಢದಲಿ (ಕುವ್ಯಾಅ. ೧೪-೧೧); ತುಡುಕಲೀಯದೆ ತಿರುಗಿದರು ಗಡಬಡಿಸಿ ದಂಡೆಯೊಳೊತ್ತಿದರು ಸಮಚಡಿಸಿ ನಿಂದರು (ಕುವ್ಯಾಸ. ೨-೯೫); ಕೋಪದಿಂ ಪೋಪ ಪೆರ್ಬುಲಿಯಂ ದಂಡೆಯೊಳಾಂತು ನೂಂಕಿ ತಿವಿದಂ ವಿಕ್ರಾಂತಕಂಠೀರವಂ (ಕಾವ್ಯಸಾ. ೧೧೦೬); ಹೂಡಿದನು ದಂಡೆಯನು ವಹಣಿಯ ಮಾಡುತವೆ ಚಾಣೂರ ಮಲ್ಲನು (ಸಾಳ್ಕಭಾ. ೨೨-೬೫); ದರ್ಪಕ ದೈತ್ಯವಲ್ಲಭನೊಳಗಿದಿರಾಂತು . . . ದಂಡೆಯ ಹೂಡಿ ನಿಂದಿರುವೊಪ್ಪವನೇನ ಬಣ್ಣಿಪೆನು (ಮೋಹತ. ೧೨-೮೪); ಗರ್ಜಿಸುತ್ತಿರ್ಪ ಬಗ್ಗದ ಬಲ್ಗಂಡಿಕೆಗಂಡು ಗಂಡುಗಲಿ ಬೇಡಂ ದಂಡೆಯಂ ಕೊಂಡು ನಿಂದು (ರಾಜಶೇ. ೫-೯೯). ೧೨. ಬಿಲ್ಲನ್ನು ಹಿಡಿದು ಮುಂದಕ್ಕೆ ನೀಡುವ ಎಡಗೈ; ಬಿಲ್ಲನ್ನು ಹಿಡಿಯುವ ಒಂದು ವರಸೆ: "ಬಿಲುವಿಡಿದು ನೂಂಕುವ ಕರಂ ದಂಡೆ[ಪಾಠಾಂ. ನೂಂಕುವಂ ಕರದಂಡೆ]ಯಕ್ಕು" (ಮಂಗರಾ. ೮೮-೩೬); ಪೆರ್ಬುಲಿ ಪಾಯ್ದುಗಿಯಲ್ಕೆ . . . ನುರ್ಗಿದ ದಂಡೆಯ ಭಂಗಿ ರೌದ್ರಮಾಗಿರೆ . . . ಬರುತಿರ್ದನ ದೊರ್ವ ಲುಬ್ಧಕಂ (ಜಗವಿ. ೧೬-೨೧); "ಮುಂಗಯ್" (ಅಯ್ಯಾಶಾ); ಪಸರಿಸಿ ಪರ್ಬಿದ ನೀಡಡಿ ಕುಸಿದಂಗಂ ನೀಳ್ದ ದಂಡೆ ನೆಗೆದ ಭುಜಾಗ್ರಂ . . . ಎಸೆದಿರ್ದುವು ದೃಷ್ಟಿ ಮುಷ್ಟಿ ಶರಸಂಧಾನಂ (ಗಿರಿಕ. ೮-೨೮). ೧೩. ಒಂದು ಬಗೆಯ ಆಯುಧ: ಕೊಡತಿ ಕರವತಿಗೆ ಕೂಳೆಕ್ಕವಡ ದಂಡೆ ಕಯ್‌ಹೊಡೆಯಿಟ್ಟಿ ಗೂಡುಗಳು . . . ಸಿಂಹಪ್ರಕರವೆರಸಿ ಬೇಡರು ನೆರೆದರು (ಹಡಕಾ. ೫-೯). ೧೪. ಗುರಾಣಿ; ಹರಿಗೆ: ಶ್ರೀನಾಗತಿ ಆಳ್ದನ ದಣ್ಡೆ (ಎಕ. II, ೪೫೨-೧; 1000); ಶ್ರೀಬಾಸನಣ್ಣನ ದಣ್ಡೆ (ಎಕ. II, ೪೫೩-೧; 1000); ವೆಂಗಿಮಣ್ಡಳೇಶ್ವರನುದಾರಮಹೇಶ್ವರನಯ್ಯನ ದಣ್ಡೆ ಶ್ರೀವಿಷ್ಣುವರ್ಧನಮಹಾರಾಜವಿಜಯಾದಿತ್ಯದೇವರ್ (ಎಕ. XI, ದಾವಣ ೧೧-೧೨; 1066); ದ್ರೋಣನ ಬಲುಸರಳ ಸರಿವಳೆಗೆ ದಂಡೆಯ ನೊಡ್ಡಿ ದಳವುಳಿಸಿ ... ಭೀಮ ಬೊಬ್ಬಿಱಿದು (ಕುವ್ಯಾದ್ರೋ. ೧೩-೧೨).

ದಂಡಿಂ ಮುತ್ತಿಱಿವೊಂ = ಸೈನ್ಯಕ್ಕಿಂತ ಮುಂದಾಗಿ ಇರಿಯುವವನು: ಒಂದು ಬಿರುದು: ಅಕಳಂಕಮಹೇಶ್ವರಂ ದಣ್ಡಿಂ ಮುತ್ತಿಱಿವೊಂ ಶ್ರೀಮತ್ ನರಸಿಂಗಯ್ಯ ನರಸಿಂಗೇಸ್ವರಮ್ಮಾಡಿಸಿ ಮಣಲೇವಾಡಿಯನ ಭ್ಯನ್ತರ ಸಿದ್ಧಿಯಾಗೆ ಬಿಟ್ಟಂ (ಎಕ. XIV, ಮೈಸೂರು. ೧೨೬-೫; ಸು. 900). P ಇದು 'ದಂಡಿಂ ಮುಂತಿಱುವೊಂ' ಎಂಬುದರ ಅಪಲಿಖಿತವಿರಬಹುದಂ. ದಂಡಿನ ಗೋವ=ಸೈನ್ಯವನ್ನು ಸಂರಕ್ಷಣೆ ಮಾಡುವವನು; ಒಂದು ಬಿರುದು: ಪಡೆದಂ ಸಲೆ ದಂಡಿನ ಗೋವನೆಂಬುದಂ ಬಂಟರ ಬಲ್ಲಹಂ (ಇಆ. XII, ೯೭-೨೦; 1187); ದಂಡಿನ ಗೋವ ಕುಪ್ಪದೇವರಸರು ಪುಲಿಗೆ[ಱಿ]ಮೂನೂಱು . . . ನೂಱನಾಲ್ವತ್ತನಾಳುತ್ತಮಿರ್ದ್ದು (ಸೌಇಇ. XI-i, ೩೦-೧೧; ಸು. 12ನೆಯ ಶತ); ನಿಗಳಂಕಮಲ್ಲ ದಂಡಿನ ಗೋವ (ಎಇ. XXXVII, ೨೨; 12ನೆಯ ಶತ). ದಂಡಿನ ಸ್ಥಳ=ಸೈನ್ಯವನ್ನು ಇಟ್ಟಿರುವ ಪ್ರದೇಶ; ಪಾಳ್ಯ; ಸೈನ್ಯವನ್ನು ಇಟ್ಟಿರುವ ಪಟ್ಟಣ ಅಥವಾ ಪಟ್ಟಣದ ಭಾಗ: ಕಂಟೋನ್ಮೆಂಟು, ಜಲಂಧರ್, ಅಮೃತಸಾರಿಗೆ ಆಗ್ನೇಯ, ದಂಡಿನ ಸ್ಥಳ (ಭೂಗೋಳ. ೬೦). ದಂಡಿನಾಳ್ = ದಂಡಿನವನು: ಕುಂಬಾಱರ್ ಸಂಚಳಮಿಲ್ಲದ ದಂಡಿನಾಳಂತೆ ಬೆರ್ಚೆ (ಧರ್ಮಾಮ್ಯ. ೨-೬೯). ದಂಡಿನಾಳಿಕೆ = ದೇಶದಲ್ಲಿ ದಂಗೆ, ಗೂಂಡಾಗಿರಿ ಮುಂತಾದ ವಿಶೇಷಕಾಲಗಳಲ್ಲಿ ನಡೆಯುವ ಸೈನಿಕ ಸರ್ಕಾರ; ಸೈನ್ಯಾಧಿಕಾರಿಗಳಿಂದ ನಡೆಸಲ್ಪಡುವ ರಾಜ್ಯಾಡಳಿತ: "ದಂಡಿನಾಳಿಕೆ, ಸೇನಾಪ್ರಭುತ್ವ, ಸೈನಿಕಶಾಸನ" (Martial Law. ಪತ್ರಿನಿ. ೫೩). ದಂಡಿನೊಕ್ಕಲ್ = ದಂಡಿಗೆ ಸೇರಿದವರು; ಸೈನ್ಯದವರು: ದಂಡಿನೊಕ್ಕಲುಂ ತಳದೊಕ್ಕಲುಂ ದೆವಸವಳವೆಂಣೆಗಾಣದಲ್ಲಿ ಸೊಳಸವೆರಡು (ಎಇ. XX, ೧೨-೪೮; 1167). ದಂಡುಗಲಕಿ = ಶತ್ರುಸೈನ್ಯವನ್ನು ಕಲಕುವವನು,-ಮರ್ದಿಸುವವನು,- ಸದೆಬಡಿಯುವವನು; ಒಂದಂ ಬಿರಂದಂ: ಶ್ರೀಮಂ ಮಹಾಸಾವಂತಾಧಿಪತಿ ದಂಡುಗಲಕಿ ಸಿತಗರಗಂಡ . . . ಚಿಕ್ಕಬೊಂಮಯ್ಯನಾಯಕರು ನಿಡುಗಲ್ಲ ರಾಜ್ಯವನಾಳುತ್ತಿರ್ದ್ದು (ಸೌಇಇ. IX-i, ೩೫೯-೧೦; 1340). ದಂಡು ಮಾಡು = ಸೈನ್ಯವನ್ನು ತೆಗೆದುಕೊಂಡು ಹೋಗು; ದಂಡಯಾತ್ರೆ ಮಾಡು; ಮುತ್ತು: ದಂಡುಮಾಡಿದ ನೃಪರ ತಂತಮ್ಮ ನಾಡಿಗೆ ಕಳುಹ ಚಿತ್ತೈಸು (ಭರಿಕ. ೫೩-೬೯). ದಂಡುಹೋಗು = ದಂಡುಮಾಡಂ: ಶ್ರೀವೀರ ಬುಕ್ಕರಾಯನು ಒರಗಲ್ಲದೇಸಕ್ಕೆ ದಂಡುಹೋದಲ್ಲಿ (ಎಕ. XII, ಚಿಕ್ಕನಾ. ೧೫-೩; 1384). [<ಸಂ. ದಂಡ]

ದಂಡಿ$_4$ 'ದಂಡಿಗೆ' ನೋ.

ದಂಡಿ$_5$ (ನಾ). ೧. ದಂಡವನ್ನು ಕೈಯಲ್ಲಿ ಹಿಡಿದುಕೊಂಡಿರುವವನು; ಕಟ್ಟಿಗೆಕಾರ; ವೇತ್ರಧರ; ಬಾಗಿಲಂ ಕಾಯುವವನು; ದ್ವಾರಪಾಲಕ; ಮಹಾರಾಜರಂ ಮೊದಲಾದವರ ಮುಂದೆ ದಂಡ ಹಿಡಿದುಕೊಂಡು, ಆಗಮನವನ್ನು ಸಾರುತ್ತಾ ದಾರಿ ಬಿಡಿಸುತ್ತಾ ಹೋಗುವ ರಾಜಭಟ: "ಕಟ್ಟಗೆಯವಂ ವೇತ್ರಧರನುತ್ಸಾರಕಂ ದಂಡಿಯಕ್ಕು" (ಮಂಗರಾ. ೭೯-೪). ೨. ಆಶ್ರಮೋಚಿತವಾದ ದಂಡವನ್ನು ಹೊಂದಿರುವವನು; ಬ್ರಹ್ಮಚಾರಿ; ಸಂನ್ಯಾಸಿ: ನರ್ತ್ತಕ ನಟಕ ಪರೀತ ಗಾಯಕ ದಂಡಿ ಮುಡಿ ಸಿಖಂಡಿ ಸೋಡಸ ಯಾಚಕಜನಪ್ರಮುಖ್ಯ ದೀನಾನಾಥದರಿದ್ರತಿಮಿರಹರಣದಿವಾಕರ ಸರಣಾಗತಕ್ರಿಪಾಕರ (ಸೌಇಇ. XV, ೧೯೦-೧೬; 1257). 'ಏಕದಂಡಿ', 'ತ್ರಿದಂಡಿ' ಪರಾ. ೩. ದಂಡಾಯುಧವನ್ನು ಧರಿಸಿರುವವನು; ಯಮ. ೪. ಸಂಸ್ಕೃತ ಭಾಷೆಯಲ್ಲಿ 'ಕಾವ್ಯಾದರ್ಶ' ಮೊದಲಾದ ಗ್ರಂಥಗಳನ್ನು ಬರೆದ ಕವಿ: ಮೊದಲೊಳ್ ದಂಡಿಕವೀಶ್ವರಂ ದಶಕುಮಾರಾಖ್ಯಾತ ಚಾರಿತ್ರಮಂ ಪದೆಪಿಂ ಸಂಸ್ಕೃತಭಾಷೆಯಿಂ ರಚಿಸಿದಂ (ದಶಕು. ೧-೧೭). [ಸಂ. ದಂಡಿನ್]

ದಂಡಿಕಾಜಿ (ನಾ). ಸಮಾನನಾದವನು; ಸಾಟಿಯಾದವನು: ನೀಲ ಶೈಲದ ದಂಡಿಕಾ [ಪಾಠಾಂ. ಗಾ]ಜಿನ ದೇಹಗರ್ತದ ರಕ್ತ ನಿರ್ಜರದ . . . ಬಿಡುವಂಡೆಗೆದಱಿದ ಖಳನ ಕಂಡುದು ಭೂಸುರವ್ರಾತ (ಕುವ್ಯಾಖ. ೧-೩೩).

[ದಂಡಿ$_1$ + – ಕಾಜಿ]

ದಂಡಿಕೆ (ನಾ). ೧. ಕೋಲು; ದೊಣ್ಣೆ. ೨. ಸಾಲು; ಪಂಕ್ತಿ; ಶ್ರೇಣಿ. ೩. ಹಗ್ಗ; ರಜ್ಜು. ೪. ಮುತ್ತಿನ ಸರ,–ಹಾರ. [ಸಂ. ದಂಡಿಕಾ]

ದಂಡಿಕೋಲು (ನಾ). ವಟು, ಸಂನ್ಯಾಸಿ ಮೊದಲಾದವರು ಹಿಡಿದು ಕೊಳ್ಳುವ ಕೋಲು; ದಂಡ: ಶಿವನು ಅನ್ಯಶಬ್ದವ ಕೇಳಲೊಲ್ಲದ ಭಕ್ತಿಯ ಮನವ ನೋಡುವೆನೆಂದು ಕಂತೆ ಕಮಂಡಲ ದಂಡಿಕೋಲು ಗುಂಡುಗಪ್ಪರವೆರಸಿ ಭಕ್ಷುಕಮೂರ್ತಿಯಾಗಿ ಬಂದು ಸತ್ಯಕ್ಕನ ಮನೆಯ ಮುಂದೆ ನಿಂದಿರಲು (ಕೃರಸೂ. ೩೮೦).

[ದಂಡಿ$_5$ + ಕೋಲು$_1$ (<ಕೋಲ್$_1$)]

ದಂಡಿಗ (ನಾ). ದಂಡಾಳು; ಸೈನಿಕ; ಯೋಧ: ಮೆಱಿವ ದಂಡಿಗರನ್ನಿಱಿವ ವಿಕ್ರಮೋತ್ಸುಂಗ (ಸೌಇಇ. IX-1, ೦೩೪-೯; 1059); ಭೂರಿ ಬಾಣದ ಹಿಂಡು ತಱಿದುವು ಹೊಗುವ ದಂ [ಪಾಠಾಂ. ಗಂ]ಡಿಗರ (ಕುವ್ಯಾಖ. ೧೮-೪೧). [ದಂಡು (<ದಂಡಿ$_3$) + – ಇಗ]

ದಂಡಿಗಾಯಿಗ (ನಾ). ಒಬ್ಬಾತನ ಹೆಸರು: ದಣ್ಡಿಗಾಯಿಗಜ್ಜ ಕುರುವಬ್ಬಿಗ ವುಟ್ಟಿದ ಮಗ ದಸವಮ್ಮಿಗಾಯಿಗಂ (ಎಇ VIII, ಸೊರಬ. ೩೭೦-೧೪; 951). [?]

ದಂಡಿಗೆ, ದಂಡಿ$_4$ (ನಾ). ೧. ಕೋಲು; ಬಡಿಗೆ; ದಂಡ: ಉಪಕರಣಮಂ ಬಿಸುಟು ದಂಡಿಗೆಯನಿರದ ನೆಲಕಪ್ಪಳಿಸೆ ಗುರುಬಸವನಾ ನಾಗಿದೇವರೊಡನಿಂತೆಂಬನು (ಚಬಪು. ೬೩-೦೫). ೨. ವೀಣೆ ಮುಂತಾದ ತಂತೀವಾದ್ಯಗಳಲ್ಲಿ ಬುರುಡೆಯಿಂದ ಬೇರೆಯಾದ ಭಾಗ: ತಳದ ಕಡುಗೆಂಪು ವುದಿವ್ವಳಿಸಿರೆ ಸುರಯುವತಿ ಮಧುರತಂತ್ರೀನಾದಂ ಕೊಳೆ ಬೀಣೆಯ ದಂಡಿಗೆಯುಂ ತಳರ್ತುದೆಂಬೊಂದು ಶಂಕೆಯಂ ವುಟ್ಟಿಸಿದಳ್ (ಆದಿಪು. ೭-೩೧; ವನರುಹನಾಳಂ ದಂಡಿಗೆ [ಪಾಠಾಂ ದಂಡಂ] . . . ವನರುಹ ಸೂತ್ರಂ ತಂತ್ರಿಗಳೆನೆ ಶಿವನಂ ಜಾಣೆ ವೀಣೆಯಂ ಕೇಳಿಸುವಳ್ (ಗಿರಿಳ. ೩-೯೮). ತೊಳಪ ವೀಣೆಯನಚ್ಚರಸಿಯೋರ್ವಳು ಪಿಡಿದು ಬಾಜಿಸಲು ದಂಡಿಗೆ ತಳಿತುದೋಯೆನಿಸಿದುದು ಕೆಂದಳದೊಂದು ಕೆಂಪಿನಲಿ (ಸಾಳ್ಕಥಾ. ೩೨-೨೮). ೩. ದಂಡದಿಂದ ಕೂಡಿದ ತಂತೀವಾದ್ಯ; ವೀಣೆ, ತಂಬೂರಿ ಮೊದಲಾದುವು: "ತತ. ವೀಣಾದಿಕೆ ವಾದ್ಯ=ತಂತ್ರಿಯ ಕಟ್ಟಿ ಬಾಜಿಸುವ ದಂಡಿಗೆ ಬ್ರಹ್ಮಕಂಕಣ ಮೊದಲಾದವು" (ನಾಚಶಾ. ೪); ಎನ್ನ ಕಾಯವ ದಂಡಿಗೆಯ ಮಾಡಯ್ಯ (ಬಸವ. ೩೦೦); ಪಾಡಿದರು . . . ಮಾನಿನಿಯರು ಗಳೋರಣಂಗೊಂಡು ಮಣಿಖಚಿತ ಕಾನಕದ ದಂಡಿಗೆಯ ನುಡಿಸುತ್ತ ವೊಸ ತಾನಮಾನ ಗಂಧರ್ವಕಿನ್ನರಸತೀಸಂಕುಳದ ಗಾನವಂ ಕೇಳ್ವಡಿಸಲು (ಸೌಂದಪು. ೪-೪); ದಂಡಿಗೆ ಬೆತ್ರ ಹಿಡಿಯುವುದಕ್ಕೆ ಮಂಡೆ ಮಾಟ ನಾಚುತಿದ್ದೆ ಹೆಂಡತಿ ಸಂತತಿ ಸಾವಿರವಾಗಲು ದಂಡಿಗೆ ಬೆತ್ರ ಹಿಡಿಸಿದಳಯ್ಯ (ಪುರಂದ. ೧-೯೩-೧); ದಂಡಿಗೆ ಶಂಖ ತಾಳ ತಂಬೂರಿ ಜಾಂಗಟೆಯಗೊಂಡು ನಿನ್ನಯ ಪರಮ ಪ್ರೀತ್ಯರ್ಥ ದಾಸರು . . . ಕೊಂಡಾಡೆ ಶಬ್ದ ಪ್ರತಿಶಬ್ದವಾಗುತಿದೆ (ವಿದಾಕ್ಕ. ೯೨-೬). ೪. ತಕ್ಕಡಿಯ ಕೋಲು; ತುಲಾದಂಡ: "ದಂಡಿಗೆ—ತಕ್ಕಡಿಯ ಕೋಲು" (ಜಾನಕೋ. ೩); ಯಾವುದೊಂದು ಪರಡಿಯೊಳಗಿನ ತೂಕವು ಸ್ವಲ್ಪ ಹೆಚ್ಚಾದರೆ ಅದರ ಕಡೆಯ ದಂಡಿಗೇ ತುದಿಯು ಕೆಳಗಾಗಿ ಮುಳ್ಳು ಡೊಂಕ ನಿಲ್ಲುವದು (ಮುಂಬಯಿ. ೫-೩೫). ೫. ಕೊರಳಿನ ಮೂಳೆ; ಜತ್ರು: ಜತ್ರೋಽ = ದಂಡಿಗೆಯ ಎಲುವುಗಳ ಊರ್ಧ್ವಂ (ಪಾಹಬೀ. ೩-೪-೮ ವ); ದಂಡಿಗೆಯಸ್ಥಿಯ ತೆಗೆದು ಕೋಲನೆ ಮಾಡಿ (ಅನುಭವಶಿಖಾಮಣಿ. ೩. ೦೦-೦೩-೦೫). ೬. ಮುತ್ತಿನ ಸರ,–ಹಾರ: ಗೆಂಡೆವಿಮಾನಂ ತಂದವಂಗೆ ದಂಡಿಗೆಯನಿಕ್ಕುವರ್ (ಚಳವಂ. ೭-೭). ೭. ಅಂದಣ; ಮೇನಾ: "ದಂಡಿಗೆಯೆನಲ್ಕಂದಣದ ವೆಸರವ್ಪುದು" (ಕಶಕ. ೧೩೪); ಗುಡಿಯ ಗೂಂಟಕ್ಕೆ ಬಲ್ಲಡವಿಗಳುಂ ದಂಡಿಗೆಗೆ ವೇಣು ವನಂಗಳುಂ . . . ಆ ವಡೆಗೆ ನೆಱಿಯುವೆನಿಸಿ (ಪಂಪಭಾ. ೯-೦೦೪); ಕರಣಂ ಕಳೆಯೇಱಿ ಸಿರಿವೊಗಂ ಸಂಪದವೇಱಿ ದುಂಡಿಗೆಯಿಂ ಳಿಲನಿಳಿದು (ಬಸಕ. ೧೦-೦೫); ಸುಭಟರ ಮೇಳದಲಿ ಬಂದಿಳಿದು ದಂಡಿಗೆಯಿಂದ ನಸುನಗುತೇಱಿದನು ರಥವ (ಕುವ್ಯಾಕ. ೯-೩೩); ತರಿಸಿದನು ದಂಡಿಗೆಯೊಳಗೆ ಕುಳ್ಳಿರಿಸಿ ಸತಿಯರ ಗಡಣದಲಿ ಮುಂದಿರವ ಹೊಱವಂಟರಸ ನೇಱಿದ ಗಜದ ಕಂಧರವ (ನಳಕ. ೬-೪೦); ದಂಡಿಗೆ ಪಲ್ಲಕ್ಕಿ ಬೊಕ್ಕಸ ಬಂಡಾರ ಖಂಡಿತವಾಗಿ ತುಂಬಿಪರು (ಮೋಹತ. ೩೬-೪೦); ಪಲ್ಲಕ್ಕಿ ದಂಡಿಗೆಗಳ ಮೇಲೆ ತಮ್ಮಯ ಪಲ್ಲಭೆಯರು ಬರುತಿರಲು (ಕಂನವಿ. ೧೧-೩೨); ಏಱಿ ಕನಕದಂಡಿಗೆಯಂ . . . ಸಾರಿದನಾ ರಾಯ ಬೀದಿಯಂ ದರಮನೆಯಂ (ಚಳವಿ. ೩-೧೧೫); ಅವರನ್ನು ಹಿಂಬಾಲಿಸಿ ಆನೆ, ರಥ, ವಲ್ಲಕ್ಕಿ, ದಂಡಿಗೆಗಳಲ್ಲಿ ಅನೇಕಾನೇಕ ಪರಿವಾರ . . . ತಂಡೋಪತಂಡವಾಗಿ ನೆರೆಯಿತು (ಪ್ರವಾಜ್ಞ. I, ೩೬೦). ℙ 'ಪಲ್ಲಕ್ಕಿ' ಮತ್ತು 'ದಂಡಿಗೆ' ಎಂಬ ಶಬ್ದಗಳಿಗೆ ಬೇರೆಬೇರೆ ಅರ್ಥವಿರಬೇಕು. ಆದರೆ ಒಂದೇ ಅರ್ಥದಲ್ಲಿ ಬಳಕೆಯಾಗುತ್ತಿವೆ. ೮. ಒಂದು ಅಳತೆ (?): ಭಂಡಿಗೆ ದಂಡಿಗವೊಂದು ಸೆವೆಯಂಯ್ದು ಹೂಟೆ ಎರಡಕ್ಕಂ ದಂಡಿಗೆವೊಂಡು(ದು) ಸೇವಯೆರಡು (ಎಇ. XIV, ೩೩-೩೧; 1135). **ದಂಡಿ$_4$**: ೭. ಒಂದು ರಾತ್ರಿ ಅಲ್ಲಿದ್ದು ಮಾರನೆಯ ದಿನ ದಂಡಿಯಲ್ಲಿ ಕುಳಿತು ಹೊರಟೆ (ಪ್ರವಾಜ್ಞ. I, ೪೨೪).

ದಂಡಿಗೆ ಉಂಬಳಿ, ದಂಡಿಗೆಯ ಉಂಬಳಿ = ದೇವರ ಪಲ್ಲಕ್ಕಿ ಉತ್ಸವ ಕ್ಕಾಗಿ ಕೊಡುವ ಉಂಬಳಿ,–ಭೂವಿಂ: ದೇವರಿಗೆ ದಂಡಿಗೆ ಉಂಬಳಿ ಬಗೆ . . . ಸಿವಾರ್ಪಿತವಾಗಿ ಬಿಟ್ಟು (ಎಳ. VII, ಶಿವಮೊ. ೧೭-೪; 1696); ಯಿಡುಗೂರ ಲಿಂಗಂಣಗೌಡಗೆ ಕೊಟ್ಟ ದಂಡಿಗೆಯ ಉಂಬಳಿ (ಎಳ. XII, ಗುಬ್ಬಿ. ೭೯-೪; ?).

[<ಸಂ. ದಂಡಿಕಾ./ತಮಿ. ತಣ್ಡಿಕ್ಕೈ; ತುಳು. ದಂಡಿಗೆ; ತೆಲು. ದಂಡಿಗ]

ದಂಡಿಗೆಗೋಲು (ನಾ). ತಕ್ಕಡಿಯಕೋಲು; ದಂಡಿಗೆ; ತುಲಾದಂಡ: ಬಂಟರಾಡು ಲಿಗ್ಗಿಕೋಲ ತೂಗುತಕ್ಕಡಿ ದಂಡಿಗೆಗೋಲು . . . ಬಸವನ ಮುಂದೆ ಮೆರೆವ ನಂದಿಕೋಲ (ಕೋಳಗೀ. ೦೭೭).

[ದಂಡಿಗೆ + ಕೋಲು$_1$ (<ಕೋಲ್$_1$)]

ದಂಡಿಗೆವಿಡಿ (ಕ್ರಿ). ತಂಬೂರಿ, ವೀಣೆ ಮೊದಲಾದುವನ್ನು ಹಿಡಿದು ಕೊಳ್ಳು: ಗಾಣನಾಯಕಿಯರಂದು ದಂಡಿಗೆವಿಡಿದು ಪೊಡಮಟ್ಟು ಹಾಡ ಲುದ್ಯೋಗಿಸಿದರು (ಹಡಕಾ. ೭-೩); ತಾಳ ದಂಡಿಗೆವಿಡಿದಮಳಗಾನೆಯರು . . . ಪಾಡಿದರು ಗೋಪಾಲಕೃಷ್ಣನ ಮುದ್ರಿಕೆಯ (ಮೋಹತ. ೦೪-೪೯); ಕರಿಯ ರದನಂಗಳ್ಗೆ ತಲೆಯೋಡ ಸೊರೆಗಟ್ಟಿ ನರದ ತಂತ್ರಿಯು ಪೂಡಿ ದಂಡಿಗೆವಿಡಿದು ಪಾಡಿದುವು ಕೆಲವು (ಚ್ಕಮಿಶಾ. ೨೨-೩೪). [ದಂಡಿಗೆ+ಪಿಡಿ$_1$]

ದಂಡಿತ (ಗು). ೧. ದಂಡನೆಯನ್ನು ಪಡೆದ: ಶಿಕ್ಷೆಗೊಳಗಾದ. ೨. ಸೋತ; ಪರಾಜಯಕ್ಕೊಳಗಾದ: ದಂಡಿತವೈರಿ ಚಕ್ರಧರನೆಂಬ ನೆಗಟ್ತಿಯ ಚಕ್ರವರ್ತಿ (ಶಾಂತಿಪು. ೬-೦೬); ದಂಡಿತವೈರಿ ವೈರಿಬಲ ಲೋಹಿತಬಂಧುರದಂಡವಿಸಾ ಭುಜಾದಂಡಂ (ಗದಾಯು. ೦-೬೩); (ನಾ). ೩. ದಂಡನೆಗೆ ಗುರಿಯಾದವನು; ಶಿಕ್ಷಿಸಲ್ಪಟ್ಟವನು: ದಂಡಿತನಿಗಿಂತಲೂ ದಂಡನೆ ಮಾಡಿದವನಿಗೆ ಇದರ ಜಳ ಹೆಚ್ಚು ತಾಕುವುದು (ರಂಗರೊ. ೫೬). ೪. ಅಭ್ಯಾಸದ ರೀತಿ: ಒಂದೇ ಸಮನೆ ಹೇಳುವುದು (?): ಆ ಕೊಳೆ ದೊಳ್ಳು ಮನಂಗೊಂಡಿರೆ ಪೊಕ್ಕಲ್ಲಿ ಪಾದಶುದ್ಧಿಯನಾಗಳ್ ದಂಡಿತದಿನೋದಿ ವಿಳಸನಖಂಡಿತಗುಣನುತ್ತರಾಭಿಮುಖದೊಳ್ ನಿಂದಂ (ಬಂಹರಿ. ೨-೪೦)

[ಸಂ.]

ದಂಡಿಪಳ್ಳಿ (ನಾ). ಒಂದು ಊರಿನ ಹೆಸರು : ದಂಡಿಪಳ್ಳಿಯಂ ಲೋಕಟಿಯರಸ ಕುಡೆ ನಾಗಾರ್ಜುನ ಕಾಲ್ಗೆಜೆಯೆ ಬಿಟ್ಟಯ್ಕಂ ಕಾಲಂ ಕಟ್ಟಿದೊನ್ (ಎಕ. VII (೪), ಶಿಕಾ೦. ೩೬೮-೦೩ : 902).

[? + ಪಳ್ಳಿ$_1$]

ದಂಡಿಯಾಸೆ (ನಾ). ಒಂದು ಬಗೆಯ ಸಸ್ಯ : (ಮೃಜಿಗಿ. ೩೫-೬೭).

[?]

ದಂಡಿವಲೆ (ನಾ). ಒಂದು ಬಗೆಯ ಬಲೆ; ಕೋಲಿಗೆ ಅಳವಡಿಸಿರುವ ಬಲೆ : ದಂಡಿವಲೆಗಳ ತೊಡಕುವಲೆಗಳ ಹಿಂಡುವಲೆಗಳ . . . ಕಿರಾತರು ಕೆದಱಿತಗಲದಲಿ (ಕುವ್ಯಾಅ. ೦೩-೨೩). [ದಂಡಿ$_3$ + ಬಲೆ$_1$]

ದಂಡಿಸರ (ನಾ). ತೀವ್ರತೆ; ಅತ್ಯುತ್ಕಟತೆ : ಕಂಡಳುದಕದ ನೆಲಲಿನಲಿ ಕೈಕೊಂಡ ಮಾಯಾಮೃಗದ ಮೂರ್ತಿಯ ದಂಡಿ ಸರದಭಿನವದ ಶಶುಲೀಲಾ ಕಳಾಪಕವ ಮಂಡೆಯನು ಮುರಿದೆತ್ತಿ ಸರಸಿಯ ದಂಡೆಯಲಿ ನೋಡಿದಳು (ತೊರಣಾ. ೩-೮-೩೪) ; ಕಂಡುದಾ ಕಡುಕಪಟಮೃಗ ಕೋದಂಡರಾಮನ ಮನದ ನೆನಹಿನ ದಂಡಿಸರವನು ದಾರಿದಗೆದುದು ಘೋರವಿಪಿನದಲಿ (ತೊರಣಾ. ೩-೮-೪೩) ; ಕಂಡನೀ ಪವಮಾನತನುಜನ ದಂಡಿಸರವನಿದೇನಿದೇನುದ್ದಂಡ ಮರುಳನೊ ಮೂರ್ಖನೋ . . . ಹೇಳದ ಕೇಳ್ದಿವು (ತೊರಣಾ. ೬-೫-೫೩). [ದಂಡಿ$_1$ + ?]

ದಂಡಿಸು (ಕ್ರಿ). ೧. ದಂಡನೆಗೆ ಗುರಿಪಡಿಸು ; ಶಿಕ್ಷೆಯನ್ನು ಅನುಭವಿಸುವಂತೆ ಮಾಡು ; ಶಿಕ್ಷಿಸು : ಪಗೆವರಂ ಬಗೆವಂತೆ ದಂಡಿಸಿದನೆಂದು ಮನದೊಳ್ ಮುಳಿಸಂ ಭಾವಿಸಿ ಪೊಱಮಟ್ಟು ಪೋದಂ (ವಡ್ಡಾರಾ. ೪-೦೯) ; ಈತನಂ ದಂಡಿಸೆಂದು ಯಮದಂಡಂಗೆ ಬೆಸವೇಟ್ಪೊಡೆ (ವಡ್ಡಾರಾ. ೦೩೪-೦೯) ; ತದ್ವೃತ್ತಾಂತವೆಲ್ಲಮನಱಿದು ತತ್ಪುರಾಧೀಶಂ ದಂಡಿಸೆ ಗತಜೀವಿತನಾಗಿ ಬಂವಿಲ್ಲಿ ನಕುಳನಾದಂ (ಆದಿಪು. ೫-೨೦ ವ) ; ಅಲ್ಲಿ ದುಷ್ಪರಂ ತಪೋಧನರ್ದ್ದಂಡಿಸಿ ನಡೆಯಿಸುವರ್ (ಸಾಇಇ. IX-1, ೦೦೦-೫೬ ; 1046) ; ನೃಪರ್ ನಿಷ್ಕಾರಣಂ ದಂಡಿಪರ್ (ಸೋಮೇಶ. ೫೦) ; ದಂಡಿಸುವರಾರೆನ್ನನೆಂಬುದ್ದಂಡಿಕೆಯೊಳಿಮ್ಮರ್ಥಪುಂ ನೀಂ ಕೊಂಡೆಯಲ್ಲದೆ ಮಿಕ್ಕಿನವರಾರಾದಡೇನವರೆ ದಂಡಿಸದೆ ಬಿಡುವನೆ (ಬಸಪು. ೦೦-೮); ಮಿಂಡಿವೆಂಗಳನಗಲಿದ ಚದುರರು ತಮ್ಮ ದಂಡಿಪ ಸ್ಮರಚಾಪವೆಂದು ಭಂಡಿವೆರ್ಗಡುಗೋಲುಗಳಿಂದಲಡಿಗಿಕ್ಕಿ ಖಂಡಿಸುವರು ಕಬ್ಬುಗಳನು(ವೋಹತ. ೨-೪೯). ೨. ಹೊಡೆ ; ಬಡಿ : ನವೀನ ಪದಭರಿತಮಿಂತಿದನೆ ಸತ್ಯತಿಯಂ ತವೆ ಪೇಳ್ದುದು ಪೇಳದೊಡೇಂ ಕವರ್ವರೆ ಕೋಪಿಪರೆ ನಿಂದಿಪರೆ ದಂಡಿವರೇ (ಗಿರಿಕ. ೦-೨೦); ಅಮ್ಮನ ಮಾತಿಗೆ ಕವಿಕೊಟ್ಟು ಗಿರಿಜಳನ್ನು ದಂಡಿಸಿದವನಾನೆ (ಪದ್ಮಸ. ೨೦೬). ೩. ಗದರಿಸು ; ಬಯ್ಯು : ಶಾರದೆಯನ್ನು ದಂಡಿಸಿ ಒಳಗಡೆಗೆ ಕಳುಹಿಸಿದರು (ಕಳಾಸಾ. ೭೬). ೪. ಪರಾಜಯಗೊಳಿಸು ; ಸೋಲಿಸು : ಪುರ್ಬುಗಳ್ ಕಾಮಕೋದಂಡಮಂ ದಂಡಿಸಿದವು (ಪದಪು. ೫-೪೪) ; ಇಳೆಯೊಳೊಪ್ಪುವ ವೈರಿನೃಪರ ದಂಡಿಸಿ ನೆಜೆ ಸೆಳೆದು ತಂದಾಯುಧದ ಶಾಲೆ ತೊಳಗಿದುವು (ಕಂನವಿ. ೭-೪೮). ೫. ಮುರಿ ; ಭೇದಿಸ : ಅಸವ: ಪದ್ಮವ್ಯೂಹವನು ದಂಡಿಸಿಯೆ ಧೂಳೀಪಟವ ಮಾಡಿದು ಹೆಸರುವಡೆದತಿಖಿಲರನಡೆಗೆಡಹಿದನು ರಣದೊಳಗೆ (ಕುವ್ಯಾದ್ರೋ. ೬೧೩. ಪರಿ. ೨೮೨). ೬. ಬಿಗಿಯಾಗಿ ಕಟ್ಟು ; ಬಂಧಿಸು : ಚಂಡಿಕೆಯನೊಂದ ಮಳವಾಶದಿ ದಂಡಿಸಿದ ಕೊರಳಿಂಗೆ ಪಾಶದಿ ಮಂಡಿಸಿಯೆ ನಾಭಯನು ಬಿಗಿದನು ಮೂಱುವಾಶದಲಿ (ಸಂಭಪ. ಪರಿ. ೩೦೮). ೭. ನಿಗ್ರಹ ಮಾಡು ; ಹಿಂಸೆಗೆ ಒಳಪಡಿಸು: ಪಲವು ದಿವಸಮುಗ್ರೋಗ್ರತಪದೊಳ್ ಮೆಯ್ಯಂ ದಂಡಿಸಿದ ಪರಿಶ್ರಮಂ ಪೋಗೆ (ಪಂಪಭಾ. ೮-೩೬ ವ) ; ತಱಗೆಲೆಯ ಕೈಗೊಂಡು ತಿಂಗಳು ನಾಲ್ಕ ಪವನಗ್ರಾಸದಿಂ ಬಳಿಕ ದಂಡಿಸಿದನೀ ದೇಹವನು (ಕುವ್ಯಾಅ. ೬-೨೪) ; ಹುತ್ತ ಬಡಿದರೆ ಹಾವು ಸಾವುದೆ ವ್ಯರ್ಥವಾದುಪವಾಸ ಮೊದಲಾಗುತ್ಕಲಿಹ ವ್ರತಗಳಲಿ ದೇಹವ ದಂಡಿಸಲು ಬಜಿದೆ ಮುಕ್ತಿ ದೊರಕುವದೇ (ಅಮ್ಮಕ. ೦-೩೦) ; ಶಿವಶಿವ ಸತ್ತ್ವಮೆಂತುಟೊ . . . ದಂಡಿಸಿರ್ದೊಡಲೊಳದ್ಭುತಂ (ಕಲಶಂ. ೪-೮೫); ಹೆಂಡತಿ ಮಕ್ಕಳಿಗೆಂದು ದಂಡಿಸದಿರು ದೇಹವ ಕಂಡ ವಸ್ತುವನು ಕೊಡ ದುಣದೆ ಬೈಚಿಡಲು ಕಂಡವರಿಗಹುದು (ಸರ್ವಜ್ಞ. ೬೬೮).

[ದಂಡನ + – ಇಸು$_3$]

ದಂಡಿಸೊಗೆ (?) . (?) : ನಿಜಕಿರಣದಿಂ ಬೆಳಗನಿತ್ಯನಂ ಗೋಚರಿಸುವ ದಂಡಿಸೊಗೆಗಂ ನುಡಿಸಿಯವನಪೋಲ್ನುಡಿವನ್ನಖಂಡಕೀರ್ತಿಯ ಶಾಂತ ನಂಜೀಶಗುಣಮಣಿಕರಂಡ ಪೊಗಳಲು ಬಾಲಭಾಷೆ ಪಿತೃಗೆಂತು ಕೈಕೊಂಡಂತೆ ಪೊರೆವುದೆನ್ನ (ವೀಕೃಪು. ೨-೦೦-೨). [?]

ದಂಡಿಱಿ (ಕ್ರಿ). ಸೈನ್ಯವನ್ನು ಇರಿ ; ಹೋರಾಡು : ಸ್ವಸ್ತಿ ಶ್ರೀಮತ್ ಕೊಜ್ಗೊಣಿ ಮುತ್ತರಸರಾ ಬೆಸದೆ ಕಾಡುವಟ್ಟ ದಂಡಿಱಿದು ಕೊವಳಲ ದುಳ್ ಎಱಿದೋರ್ (ಎಕ. IX, ಹೊಸಕೋ. ೫೦-೪ ; ಸು. 760).

[ದಂಡು (<ದಂಡಿ$_3$) + ಇಱಿ$_1$]

ದಂಡು 'ದಂಡಿ$_3$' ನೋ.

ದಂಡುದಾಳಿ (ನಾ). ಸೈನ್ಯದ ಮುತ್ತಿಗೆ : ಪ್ರಮಿತ್ಯೂಸ್ ಸಾವಿಲ್ಲದ ತನ್ನ ಮೇಲೆ ಉರಿಮಿಂಚು ಬಿರುಗಾಳಿ ಇವುಗಳ ದಂಡುದಾಳಿಯನ್ನೆ ಸ್ಯೂಸ್ ನಡಿಸಿದರೂ ತನಗೆ ಹೆದರಿಕೆಯಿಲ್ಲ ಎಂದನು (ಬದ್ಮಶ್ರ. XXII. ೬೮೫).

[ದಂಡು (<ದಂಡಿ$_3$) + ದಾಳಿ (<ದಾಟು)]

ದಂಡುಪಾಳ್ಯ (ನಾ). ದಂಡು ಬೀಡುಬಿಟ್ಟಿರುವ ಸ್ಥಳ.–ಶಿಬಿರ : ಸಂಜಯನು ಧೃತರಾಷ್ಟ್ರನ ಅಪ್ಪಣೆಯಿಂದ ದಂಡುಪಾಳ್ಯಕ್ಕೆ ಹೋಗಿ (ಕ್ಶಾಭೀ. ೦೭). [ದಂಡು + (<ದಂಡಿ$_3$) + ಪಾಳ್ಯ (<ಪಾಳೆಯ)]

ದಂಡುಬಿಡು (ಕ್ರಿ). ಸೈನ್ಯದ ಬಿಡಾರವನ್ನು ಏರ್ಪಡಿಸು ; ಪಾಳೆಯ ಬಿಡು ; ಠಾಣ್ಯಹಾಕು : ರಂಜಿಪ ಪುಷ್ಪವಾಟವ್ಯಂದದೊತ್ತಿನೊಳೆಯ್ದಿ ಭೂಪತಿ ದಂಡುಬಿಟ್ಟರಲು (ಬಸಪು. ೨೨-೨೮) ; ಹಲ ಹೆಣಮುರಿವ ಚಿತಾಗ್ನಿಯೆಲ್ಲೆಡೆಯೊಳುಜ್ವಲಿಸುತಿರಲು ದಂಡಧರನಾ ನೆಲ ದಂಡುಬಿಟ್ಟವರುಣಲೆಂದಡುವ ಪೇರೊಲೆಗಳಿಂಬಂತೊಪ್ಪಿದುವು (ಶ್ರೀಪಾಂ. ೯-೦೫).

[ದಂಡು (<ದಂಡಿ$_3$) + ಬಿಡು$_1$]

ದಂಡುವರ್ (ಕ್ರಿ). ಸೈನ್ಯದೊಂದಿಗೆ ಯುದ್ಧಕ್ಕೆ ಬರು; ಗುಂಪಾಗಿ ಕೂಡಿ ಆಕ್ರಮಿಸು ; ಮುತ್ತು : ಗೊಜ್ಜಗನೆಂಬ ಸಕಲ ಚಕ್ರವರ್ತಿ ಬೆಸಸೆ ದಂಡುವಂದ ಮಹಾಸಾಮಂತರಂ ಮುರಲಿಱಿದು ಗೆಲ್ದ ಸಾಮಂತ ಚೂಡಾಮಣಿಯ ಬೀರಮುಮಂ (ಪಂಪಭಾ. ೯-೫೨).

[ದಂಡು (<ದಂಡಿ$_3$) + ಬರ್$_1$]

ದಂಡುವೇಟ್ (ಕ್ರಿ). (ಯುದ್ಧಕ್ಕೆ ಹೋಗುವಂತೆ) ಆಜ್ಞಾಪಿಸು : ಅಯ್ಯಪದೇವಱ್ಗಿ ಸಾಮನ್ತಸಹಿತಂ ನಾಗತ್ತರನಂ ದಂಡುವೇಟ್ಪೊಡೆ ತುಮ್ಬೆವಾದಿಯೊಳ್ಮಾದಿ (ಎಕ. IX, ಬೆಂಗಳೂ. ೮೩-೪ ; ಸು. 990) ; ದಂಡುವೇಟ್ಪರಸಿನಂತೆ ತೂಗಿಬಿಡುವ ನಾಯಕನಂತೆ (ಧರ್ಮಾಮೃ. ೯-೫೩).

[ದಂಡು (<ದಂಡಿ$_3$) + ವೇಟ್]

ದಂಡುವೋಗು (ಕ್ರಿ). ಸೈನ್ಯಸಹಿತವಾಗಿ ನುಗ್ಗು ; ದಾಳಿಮಾಡು : ರಟ್ಟವಾಡಿ ಮೇಗೆ ದಣ್ಣುವೋದಲ್ಲಿ (ಎಕ. XII, ಮುದ್ಕಗಿ. ೯೨-೨ ; 760) ; ಕಿಜ್ಜಿಯವೊನ್ನಯ್ಯಂ ಬಲ್ಲಹನ ಬೆಸದಾಳು ಗಜಾಂಕುಸ ಚೋಟನ ಮೇಗೆ ದಣ್ಣುವೋಗಲು (ಸಾಇಇ. IX-1, ೨೫-೭; 948).

[ದಂಡು (<ದಂಡಿ$_3$) + ವೋಗು,]

ದಂಡುಳಂ (ಅ). ಹೆಚ್ಚಾಗಿ ; ಅತಿಶಯವಾಗಿ (?) : ದಿಟ ನುಡಿವನ್ಯವಾದಿ ಮುಖಮುದ್ರಿತನುದ್ದ[ತ]ವಾದಿ ವಾಗ್ಬಳೋದ್ಭಟ ಜಯಕಾಳದಂಡನ ಪಶಬ್ದ ಮದಾನ್ಧಕುವಾದಿದೈತ್ಯಧೂರ್ಜ್ಜಟಿ ಕುಟಿಲ ಪ್ರವೇಯಮದವಾದಿ

ಭಯಂಕರನೆನ್ನು ದಂಡುಳಂ ಸ್ಫುಟವಟು ಘೋಷ ದಿಕ್ತಟಮನೆಯ್ದಿತು ವಾಕುಪಟು ಗೋಪನನ್ದಿಯ (ಎಳ. II, ೬೯-೫೧ ; ಸು. 1100).

[P ಇದು 'ದಂಧಳ' ಎಂಬುದರ ಅಪಲಿಖಿತವಿರಬಹುದು]

ದಂಡುಳಿಗ (ನಾ). ಸೈನ್ಯದಲ್ಲಿರುವವನು; ದಂಡಿನಲ್ಲಿ ಕೆಲಸದಲ್ಲಿರುವವನು; ಸಿಪಾಯಿ; ಯೋಧ: ಉಳಿಗ ಪ್ರತ್ಯಯಕ್ಕೆ—ದೇವನೊಳನು ಕೂಲಮಂತಂತೆ ಬಾಟ್ಟಂ = ದೇವುಳಿಗಂ, ದಂಡುಳಿಗಂ (ಶಮದ. ೩೦೩ ಪ್ರಯೋ). [ದಂಡು (<ದಂಡಿ$_3$) + – ಉಳಿಗ$_3$]

ದಂಡುಱುಂಬೆ, ದಂಡ್ರುಂಚೆ, ದಡ್ರುಂಚೆ, ದಡ್ರುಂಚೆ, ದುಂಡುಱುಂಬೆ, ದುಂದುಱುಂಬೆ (ನಾ). ಗುಂಪಿನ ವಂಧ್ಯೆ ಜಗಳ ತರುವವಳು; ಗಂಡು ಬೀರಿ; ತುಂಟೆ, "ದಿಟ್ಟೆ" (ಪಂಪದೀ. ೩೧) : ಕೆಲದೊಳಿರ್ದ ದಂಡುಱುಂಬೆಗಳ್ ಬುದ್ಧಿವೇಟಿ (ಪಂಪಭಾ. ೩-೭೭ ವ) ; ಅಂಬೆಯೆಂಬ ದುಂ [ಪಾಣಿಂ. ದುಂ] ಡುಱುಂಬೆ ನಿನಗೆ ವಧಾರ್ಥಮಾಗಿ ಪುಟ್ಟುವೆನಕ್ಕೆಂದು ಕೋಪಾಗ್ನಿಯಿಂದಮಗ್ನಿಶರೀರೆಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಹುಟ್ಟಿ (ಪಂಪಭಾ. ೧-೮೦ ವ). **ದಂಡ್ರುಂಚೆ :** (ಃ). **ದಡ್ರುಂಚೆ :** "ದಡ್ರುಂಚೆ (ದಡ್ರುಂಚೆ) – ಸಿತಗೆ (ಶಮದ. ಪರಿ. ೨) ; "ದಡ್ರುಂಚೆಱಿಂದೆನೆ ಜಾರೆಯರೊಳು ಭೇದಂ" (ಕಶಿ. ೫೧). **ದಡ್ರುಂಚೆ :** "ದಡ್ರುಂಚೆ ಪಾಱಿಯರೆಂದು ಸಿತಗೆಯರ್" (ಶಲ್ಯಮಂ. ೬೬) ; "ದಡ್ರುಂಚೆಯೆಂದೆನಲ್ ಪಾಱಿಂದು ಸಿತಗೆಯರ್ಗಮರ್ದ ನಾಮಂ" (ಕಲ್ಕಿಪು. ೯೦). **ದುಂದುಱುಂಬೆ :** ವೇಲಿನ 'ಪಂಪಭಾ. ೧–೮೦ ಪ್ರಯೋಗದ ಪಾಠಾಂತರವನ್ನು ನೋಡಿ. **ದುಂದುಱುಂಬೆ :** ತನಗಿದಿರಾಗಿ ಬರ್ಪ ಪಾಣ್ಬೆಯಂ ದುಂದುಱುಂಬೆಯಂ ಕಂಡು (ಸುಳುಮಾ. ೭-೩೯ ವ). P ' ದಂಡ್ರುಂಚೆ'' 'ದಡ್ರುಂಚೆ' 'ದಡ್ರುಂಚೆ' ರೂಪಗಳು ಅಪಲಿಖಿತಗಳಿರಬೇಕು.

[ದಂಡು (<ದಂಡಿ$_3$) + ಉಱುಂಬು$_1$ + – ಎ$_8$]

ದಂಡುಟಿ(?) (ನಾ). ಸುಲಿಗೆ; ಸೂರೆ; ಕೊಳ್ಳೆ (?) : ದಟದುಟಮಾದುದಾಗಳಸಿಯೇಱಿಸಿದೇ [ಯೇ] ಱಿದು ಬಂದಿ ದಂಡುಟವೆಲೆ ದಂಡುಳ [ಟಂ] ಪಿಡಿದರಂಗನೆಯಂ ಪಿಡಿದೊಯ್ದರೆಂದು ತಲ್ಲಟಿಸಿ ತಡಂ ತಡಂಬರಿಯೆ ಪುಯ್ಕುಲ ಗಾವಳ ಕೆಯ್ಯನಿಟ್ಟುದು (ಅನಂಪು. ೧೧-೭೩).

[?]

ದಂಡುಟಿ (ನಾ). ಯುದ್ಧದಲ್ಲಿ ಕೊಳ್ಳೆಹೊಡೆದ ವಸ್ತು; ಯುದ್ಧದಲ್ಲಿ ಪಡೆದ ಸಾಮಾನು. 'ದಂಡಂಟಿಗೊಳ್' ಪರಾ.

[ದಂಡು (<ದಂಡಿ$_3$) + ಉಟ್ಟಿ$_3$]

ದಂಡುಟಿಗ (ನಾ). ಯುದ್ಧದಲ್ಲಿ ಸೆರೆಸಿಕ್ಕಿದವನು : "ದಂಡುಟಿಗಂ – ದಂಡದೊಳ್ ಪಡೆದವಂ" (ಶಮದ. ಪರಿ. ೧) ; ''ದಂಡದೊಳ್ಪಡೆದವಂ ದಂಡುಟಿಗನೆನಿಕ್ಕುಂ" (ಸಂಜೀವ. ೪) ; ದಂಡುಟಿಗಂ (ಶಕ್ರಾನು. ೦೪೦ ವ್ಯಾಖ್ಯಾ). [ದಂಡುಟಿ + – ಗ$_2$]

ದಂಡುಟಿಗೊಳ್ (ಕ್ರಿ). ಕಾಣಿಕೆಯಾಗಿ ಪಡೆ,–ವಸೂಲುಮಾಡು : ದಂಡೋಪನತರಾದ ಮಂಡಳಿಕರೊಳ್ ದಂಡುಟಿಗೊಂಡ ಮದವೇತಂಡ ಗಂಡಭಿತ್ತಿಗಳ ಪುಷ್ಕರಷಂಡದ ದಾನಧಾರಾನೀಕ ಶೀಕರಾಸಾರದೊಳಂ (ಅನಂಪು. ೦-೧೦೫ ವ). [ದ್ದಂಡುಟಿ + ಕೊಳ್$_1$]

ದಂಡೆ$_1$ (ನಾ). ೧. ಹೂವಿನ ಸರ, – ಮಾಲಿಕೆ : ದಾಸವಣ ದಂಡೆಯಂ ತೋರದಿಂಡೆಯಾಡಿದಂತೆ ದೆಸೆದೆಸೆಗೆ ಕೆದಱಿದ ಕಂಡದಿಂಡೆಗಳುಂ (ಪಂಪಭಾ. ೧೧-೧೪೦ ವ) ; ಆಗಳೇಱಿಸಿದ ತಿವಿರೊಳವಿಟ್ಟ ತಿಲಕದೊಳಂ ಕಟ್ಟಿದ ದಂಡೆಯೊಳಂ ಅರ್ಚಿಸಿದ ಕೊತ್ತಳದೊಳಂ . . . ಸುತ್ತಿದ ವೇವಿನ ದಂಡೆಯೊಳಂ (ಅನಂಪು. ೧೧-೮೨ ವ) ; ದೇವರಿಗೆ ಹೂವಿನ ದಂಡೆಯ ಕಟ್ಟುವ ದಾಸುಗಳು ತಿರುವೆಂಗಳದಾಸನು (ಎಳ. X (8), ಮುಳಬಾ. ೩-೭೭; 1430) ; ತರುಣಿ ನಿಜತನು ಪರಿಮಳದಲುಱಿ ಹೊರೆದ ಹೂವಿನ ದಂಡೆಯನು ನಿಜವರನ ಕೊರಳಲಿ ಹಾಯ್ಕಿದಳು (ಕುವಾ.ಆ. ೧೫-೭೫). **೨.** ಸರ; ಹಾರ: ತಲೆಯುರದ ಕರದ ಕವಡಿಕೆಯು ದಂಡೆಗಳೆಸೆಯೆ (ಕಬ್ಬಿ. ದೇ. ೧೫೭-೧೧) ; ತೋಳ ಗುಂಜಿಯ ದಂಡೆಗಳ ಕಟಿತಟದ ಸುರಗಿಗಳ ... ಶಬರಾಳಿ ಬಂದುದು ಪರ್ಣಶಾಲೆಗೆ (ತೊರಣಾ. ೩-೩-೨).**೩.** (ಹೂವಿನ) ಕುಚ್ಚು; ದಿಂಡು: ಕೆಂದಗಳ ದಂಡೆಯಂ ಮುಂಡೆಯೊಳ ಗಿಡಬಹುದೆ (ವೀಕ್ಷಾಕೋ. ೮೮-೧೭) ; ಗುಲಾಬಿಯ ದಂಡೆಯನ್ನು ಮಗಳಿಗೆ ಮುಡಿಸಲು ಕೈಲಿ ಹಿಡಿದು ನಿಂತಿದ್ದಳು (ದೂಪಬಿ. ೧೧). **೪.** ಒಂದು ಬಗೆಯ (ಶಿರಸ್ಸಿನ) ಆಭರಣ: "ವಾಲಪಾಶ್ಯಾ. ಪಾರಿತಥ್ಯಾ – ಈ ೨ ಮುಡಿಯ ಮೇಲಣ ಮುತ್ತಿನ (ನಾಜಿರಾ. ೧೫೩); ಬಿರುದಿನ ಕರಿಯ ದಂಡೆಯೆನೆ ಮಂಡಳಿಸಿದಳಿಗಳಂ ದಂಡೆ" (ವರ್ಧಪು. ೧೧-೫ ವ) [←ತೆಲು. దండ]

ದಂಡೆ$_2$ (ನಾ). ೧. ನದಿ, ಸಮುದ್ರ ಮೊದಲಾದಂವುಗಳ ದಡ; ಅಂಚು; ಕರೆ; ತೀರ: ಮಂಡೆಯನು ಮುರಿದೆತ್ತಿ ಸರಸಿಯ ದಂಡೆಯಲಿ ನೋಡಿದಳು (ತೊರಣಾ. ೩-೮-೩೪) ; ಮೂಡಲು ಕೆಱೆ ದಂಡೆ ಹತ್ತಿರ ಹುಣುಸೆ ಮರದ ಕೆಳಗೆ ನೆಟ್ಟ ತ್ರಿಶೂಲ ಕಲ್ಲು ವೀರೆ (ಎಳ. IX (8), ಬೆಂಗಳೂ. ೩೧-೭ ; 1637) ; ಹಿರಿಕೆರೆ ಹಿಂದಣ ಕೇರಿಗೆ ಮೆಳೆಯ ಮೊದಲ ಕಾಲುವೆ ದಂಡೆಯ ಗದ್ದೆ ೩ ೧೫ಕ್ಕೆ (ಎಳ. XVI, ಚಿಕ್ಕನಾ. ೫೩-೦೫ ; 1639) ; ರಾಮಗಿರಿಯ ದುರ್ಗದೊತ್ತಿನ ಮುಂದಣ ತೊಱೆಯ ದಂಡೆಯಲಿ ನಿಂದನು (ಕಂನವಿ. ೧೧-೦೧೪) ; ದೇವರು ಹೇಗೆ ದಂಡೆಗೆ ಒಯ್ದು ಮುಟ್ಟಿಸುತ್ತಾನೋ ಈ ನಡು ಸಮುದ್ರದಿಂದ (ಪ್ರಚಸ. ೯) ; ಕಪಿಲಾನದಿಯ ದಂಡೆಗೆ ಎಲ್ಲರೂ ಏಕಕಾಲದಲ್ಲಿ ಬಂದು ಸೇರಿದರು (ಶ್ರೀರಾಯು. ೦). **೨.** ಹೆತ್ತಿರ; ಸವಿಾಪ : ದಂಡೆಯೊಳ್ ಪೋಗಿ ಮಾತಾಡದೆಯಿರುವುದಂ ಕಂಡು ನನ್ನ ವಲ್ಲಭನಲ್ಲವೊ (ಸಾಗಂಧಿ. ೧೯೩-೧೭).

ದಂಡೆಗೆ ಹಚ್ಚು = ಸರಿಯಾದ ಸ್ಥಿತಿಗೆ ತರು; ದಡವಱಿಸು: ಯಾವುದಾದರೂ ಒಂದು ದಂಡೆಗೆ ಹಚ್ಚಬೇಕೆಂದು ಹಗಲಿರುಳೂ ಅನಿಸುತ್ತಿದ್ದಿತು (ಗಂಗಾಸಾ. ೧೫). **ದಂಡೆಗೆಹತ್ತು** = ೧. ದಡವನ್ನು ಸೇರು, – ಮುಟ್ಟು : ಹಸುಗಳು ದಂಡೆಗೆ ಹತ್ತಿದುವು (ಕೂಥಿ). **೨.** ಉತ್ತಮಸ್ಥಿತಿಯನ್ನು ಪಡೆ; ಕಷ್ಟದಿಂದ ಪಾರಾಗು; ಗುರಿಮುಟ್ಟು : ನನ್ನ ಮಗಳ ಜನ್ಮ ದಂಡೆಗೆ ಹತ್ತುವ ತನಕ ನಾನೇನ ಕೊಡುವಂತಿಲ್ಲ (ಅಕೋಳ. ೧೧೯). **ದಂಡೆಯ ಸೀರೆ = ಅಂಚಿನ ಸೀರೆ :** ಬಿಳಿಯ ಪತ್ತಲವನ್ನು ತ್ಯಜಿಸಿ ಇದೀಗ ಅವಳು ಬಣ್ಣಬಣ್ಣದ ದಂಡೆಯ ಸೀರೆಗಳನ್ನು ಉಡತೊಡಗಿದಳು (ಪ್ರತಿಬಿಂ. ೧೫). **ದಂಡೆ ಸೇರು** = ೧. ದಡವನ್ನು ಸೇರು; ತೀರಕ್ಕೆ ಬರು : ಅವರು ನದಿಯಲ್ಲಿ ಈಜಿಕೊಂಡು ದಂಡೆ ಸೇರಿದರು (ಕೂಥಿ). **೨.** ತಂದಿಮುಟ್ಟು; ಕೊನೆಗಾಣಿಂ : ಹೀಗೆ ಮಗನ ವಿದ್ಯೆ ದಂಡೆ ಸೇರುತ್ತಲೇ ಮಗಳ ಚಿಂತೆ ಅಮ್ಮವ್ವನನ್ನು ಕೊರೆಯತೊಡಗಿತು (ಮುಸಕೂ. ೯).

[ದೇ.ಶ ತುಳು. ದಂಡೆ; ತೆಲು. దండ]

ದಂಡೆ$_3$ 'ದಂಡಿ$_3$' ನೋ.

ದಂಡೆಕಟ್ಟು (ಕ್ರಿ). ನೀರು ಹಾಯಿಸಲು ದಡ ಕಟ್ಟು.

[ದಂಡೆ$_2$ + ಕಟ್ಟು$_1$]

ದಂಡೆಗಟ್ಟು (ಕ್ರಿ). ಹೂವು ಮೊದಲಾದುವನ್ನು ಮಾಲೆಕಟ್ಟು; ಹಾರ ಮಾಡು : ದಂಡೆಗಟ್ಟಿದ ಮಾಲತಿಯ ಮುಗುಳ ವನಮಾಲೆಗಳುಮಂ (ಜಗವಿ. ೬-೧೬ ವ) ; ಚೆಲ್ವಾಗಿರೆ ದಂಡೆಗಟ್ಟುವ . . . ಕುಮಾರಿಯರೊಪ್ಪುಗುಮಲ್ಲಿ ಸಂತತಂ (ಶಬಕಂ. ೩-೬೪). [ದಂಡೆ$_1$ + ಕಟ್ಟು$_1$]

ದಂಡೆಗರುಳ್ (ನಾ). ಹೂವಿನ ದಂಡೆಯಂತಿರುವ ಕರುಳು; ಕರುಳ ಮಾಲೆ : ಮಹಿಷಾಸುರನ ಬಿರಿವೊಡೆಯಿಂ ಸುರಿದ ದಂಡೆಗರುಳ್ಗೆ ಪಾಸಟಿಯಪ್ಪ ಅರೆಜರಿದ ಜಾದಿನ ಕೋಡುವೆಟ್ಟನೊತ್ತುಗೊಂಡು (ರಾಮಾಶ್ವ. ೭೨-೩೦). 'ದೊಂಡೆಗರುಳ್' ಪರಾ. [ದಂಡೆ$_1$ + ಕರುಳ್]

ದಂಡೆಗಲ್ಲು (ನಾ). ಅರೆಯುವ ಗುಂಡುಕಲ್ಲು: ತಂಡುಲವ ತಿಲವನುದ್ದಂ ಗೋದಿಯಂ ಜವದಿ ಚಂಡನಂಗೈವುತಂ ಸಣ್ಣಿಸುತ ನಾದಿ ಗುಡ ದಂಡೆಯಿಂ ಘಟ್ಟಿಸುತ ಬೆಣ್ಣೆಯಂ ಕೈಗಲಸಿ ದಂಡೆಗಲ್ಲಿಂ ಬೌಕಿಸಿ ತೊಂಡೆವಸುರಂ ಘೃತವ ತೊಡೆದ ಭಾಜನದೆಡೆಯ ಕಂಡವಿಸಿಯಿಂ ಪಚನಿಸಲು ಚಲ್ವಿನೊಳು ರಸಗಂಡ ಕೋವಲದ ಸೌಖ್ಯದ ಸವಿಯ ಸಕ್ಕಜದ ಮಂಡಗೆ ಶಿವಾರ್ಪಣ ಸುಖಾ (ಲಿಂಗಪು. ೮-೧೧). [ದಂಡೆ$_0$ + ಕಲ್ಲು (<ಕಲ್$_3$)]

ದಂಡೆಗುಂಟ (ಅ). ದಡವನ್ನು ಅನುಸರಿಸಿ; ದಂಡೆಯ ಉದ್ದಕ್ಕೂ: ಆರ್ಯಕುಲದ ಜನತೆ ಬಂದು ಗಂಗಾಮಾಯಿಯ ದಂಡೆಗುಂಟ ನೆಲೆಸಿ ದಂದಿನಿಂದ ಈ ನಾಡೆಲ್ಲ ಒಂದು ತಪೋವನವಾಗಿತ್ತು (ಸಮಜೀ. ೧೫೦೮); ಹೊಳೆಯ ದಂಡೆಗುಂಟ ಹೋಗುತ್ತಿದ್ದರೆ ಬಹಳ ಚೆನ್ನಾಗಿರುತ್ತದೆ (ಕೂಡಿ). [ದಂಡೆ$_2$ + ಗುಂಟ$_2$]

ದಂಡೆಗುಡು (ಕ್ರಿ). ಸಮಿಾಪಿಸು: ಸುಳಿಸುಳಿದಶ್ವಮನೇಱುತೆ ಪೊಳಯಿಸಿ ಎಗೆ ದಂಡೆಗುಡುತಿರ್ದುತೆ ಪೆಱಕಾಲ್ಗೊಳಿಸಿ ವಳಂಚಿದರ್ತುರಂಗಿಗಳದ ಱೊಳ್ (ರಾಜಶೇ. ೦೩-೮೩). [ದಂಡೆ$_2$ + ಕುಡು$_1$ (<ಕೊಡು$_1$)]

ದಂಡೆಗೊಡು (ಕ್ರಿ). ೧. ವೀರಮಂಡಿಹಾಕು; ಕುಸ್ತಿವರಸೆ ಹಾಕು; ಮುಂಡಿಯೂರಿ ಕುಳಿತುಕೊಳ್ಳು: ಮೇಲ್ವಾಯ್ದ ಪ್ಯಗೇಂದ್ರನಂ ಬಗೆಯು ದಾರ್ದುಂ ದಂಡೆಗೊಟ್ಟೆತ್ತಿ ಕಿಬ್ಬಸಱಂ ಕುತ್ತುತುರುಳ್ದಿ ಕೊಂದನವನುರ್ವೀನಾಥ ವಿಾನಧ್ವಜಂ (ಕುಸುಮಾ. ೦೪-೦೦೦); ಜಡಿದಸಿಯಂ ರಘುಳಂಪಿಸಿ ಕರಾಗ್ರದೊಳೆತ್ತಿ ಕಡಂಗಿ ಸಾರ್ದು ಬೊಬ್ಬಿಡುತೆ ಪಳಂಚ ದಂಡೆಗೊಡು ತಾರೆ ಪುಳಿಂದರಮಂದಸತ್ವದಿಂ . . . ಪೊಯ್ದುಂ (ರಾಜಶೇ. ೭-೦೨೩). [ದಂಡೆ$_3$ (<ದಂಡಿ$_3$) + ಕೊಡು$_1$]

ದಂಡೆಗೊಳ್, ದಂಡೆಗೊಳು, ದಂಡೆಗೊಳ್ಳು (ಕ್ರಿ). ೧. ಹತ್ತಿರ ಬರು; ಸಮಿಾಪಿಸು: ರಣಮಂಡಲದೊಳ್ಪೆಜತೆಗೆದಣಿಯಂ ತೆಗೆನೆಱಿದ ಬಿಲ್ಲ ವೊಲಿರ್ದ ಭಟಾಗ್ರಣಿ ವರಿದು ದಂಡೆಗೊಂಡಡ್ಡಣದಿಂದಂ ಚಂಡಶಾಸನಂ ಕೈಕೊಂಡಂ (ಅನಂಪು. ೦೧-೪೪); ಕಡುಗಮಂ ಪಿಡಿದು ಜಡಿದು ರಘುಂಕಿಸಿ ದಂಡೆಗೊಂಡ ಶಬರನಂ (ರಾಜಶೇ. ೫-೩೩ ವ). ೨. ಜೊತೆಯಾಗಿ ಹಿಡಿ: ಸದರದೆ ದಾಯಮಂ ಪಿಡಿವ ವಿತ್ತಮನೊಡ್ಡುವ . . . ಅಕ್ಷಮಂ ಕರಾಗ್ರದಿನುಱೆ ದಂಡೆಗೊಳ್ವ . . . ನೆತ್ತಗಾಱರ ವಿನೋದಮನೀಕ್ಷಿಸು ತಿರ್ದನುರ್ವಿಪಾ (ದಶಕು. ೯-೮೯). ೩. ಸಿದ್ಧನಾಗು: ಸಮರಕ್ಕೆ ದಂಡೆಗೊಂಡನು ಚಂಡಶಾಸನ ನಿಮಿಷದೊಳತಿಭರದಿಂದ (ಅನಂಚ. ೧೯-೬೮). **ದಂಡೆಗೊಳು**: ೧. ದಂಡೆಗೊಳುತ್ತದಂ ಪೊಳೆದು ಚಿಮ್ಮಿದನೀಶ್ವರನಲ್ಲಿ . . . ತದ್ಧನುವಂ ಸೆಳೆದು ಕರಾಗ್ರದಿಂದ (ಶಬಶಂ. ೪-೫೯). **ದಂಡೆಗೊಳ್ಳು**: ೩. ದಂಡೆಗೊಂಡಬ್ಬರಿಸಿ ಶಿವಿದೊಡೆ ದಿಂಡುಗೆಡದುದು ಮಲ್ಲವಡೆ (ಅಕ್ಕೂಚ. ೬-೭೦). [ದಂಡೆ$_2$ + ಕೊಳ್$_1$]

ದಂಡೆಗೊಳಿಸು (ಕ್ರಿ). ಅಳವಡಿಸು: ಗದಾದಂಡವನುರ್ಚಿದಮರಿಯಂ ನಿಮಿರ್ಚಿ ವುಲ್ಲಿಯಂ ತೆಲ್ಲೈಸಿ ಗೊಂಡೆಯವಂ ದಂಡೆಗೊಳಿಸಿ ಚಾರಣಾಕೃತಿಯಂ ಪಿಡಿದಾಗಳ್ (ದಶಕು. ೨-೨೫ ವ). [ದಂಡೆಗೊಳ್ + – ಇಸು$_3$]

ದಂಡೆಗೊಳು 'ದಂಡೆಗೊಳ್' ನೋ.

ದಂಡೆಗೊಳ್ಳು 'ದಂಡೆಗೊಳ್' ನೋ.

ದಂಡೆತೊಂಡಿಲ್ 'ದಂಡೆದೊಂಡಿಲ್' ನೋ.

ದಂಡೆತ್ತು (ಕ್ರಿ). ಸೈನ್ಯಸಮೇತ ಯುದ್ಧಕ್ಕೆ ಹೋಗು; ದಾಳಿಮಾಡು: ಶ್ರೀಮತ್ರಾಜಮಲ್ಲ ಪೆರ್ಮಾನಡಿಗಳ್ ಪೃಥಿವೀರಾಜ್ಯಂಗೆಯ್ಯುತ್ತಿರೆ ಶ್ರೀಮದೀಸರಗಣ್ಣಂ ಶ್ರೀರಾಜಪ್ರೇಮ ರಾಜಮಲ್ಲನರಿಪಂ ದಂಡೆತ್ತೆ ಬಹ ಮಳಿಬ್ಬೂರಿನ್ನಾಯಕನಪ್ಪ ವಲ್ಲವ ಬಳಮಂ (ಎಕ. III, ಮುಂಡ್ಯ. ೧೦೭-೫: 977); ಮುಂದೆ ದಂಡೆತ್ತಿ ಆ ಗಯಾಳರ ಗಾವಿಲರ ನಿರ್ಭಾಗಧೇಯರ ಪಾಡಿಯುತ್ತರಭಾಗದಲಿ ತಿರುಗಿತ್ತು ಪಾಳೆಯವು (ಕುವ್ಯಾಸ. ೩-೨೪); ಅಗಣಿತ ಬಲ ಸಹ ತಿರುಮಲರಾಜೇಂದ್ರ ನಗುತ ದಂಡೆತ್ತಿ ಸಡೆದನು (ಕಂನವಿ. ೩-೩೬); ಗ್ರೀಕರು, ಮಂಗೋಲಿಯರು, ಮುಸ್ಲಿಮರು, ಬ್ರಿಟಿಷರು ಭಾರತದ ಮೇಲೆ ದಂಡೆತ್ತಿ ಬಂದರು (ಧರ್ಮಸಾ. ೫೦). [ದಂಡು (<ದಂಡಿ$_3$) + ಎತ್ತು$_1$]

ದಂಡೆದೊಂಡಿಲ್, ದಂಡೆತೊಂಡಿಲ್ (ನಾ). ಗುಚ್ಛಾಕಾರವಾದ ತಲೆಯ ಆಭರಣ: ಪೀನವಯೋಧರೆಯರ್ ಶೈಳತನೂಜೆಗೆ ವರರತ್ನದ ದಂಡೆದೊಂಡಿಲಂ ಸೈಟಿಟ್ಟರ್ (ಗಿರಿಕ. ೧೦-೪೪). **ದಂಡೆತೊಂಡಿಲ್**: ನವರತ್ನದಿಂ ಸಮೆದ ದಂಡೆತೊಂಡಿ[ಪಾಠಾಂ. ಡ]ಲ್ಕೆಱೆಯೆ (ಮೂಷಕ. ಹ. ೬೭-೨೩). [ದಂಡೆ$_1$ + ತೊಂಡಿಲ್ (<ತೊಂಡಲ್)]

ದಂಡೆಯಡ್ಡಣ (ನಾ). = ದಂಡವಲಗೆ: ರಣದೊಳ್ ತಿಂಕಣರಾಯನಂಕದ ಚತುಸ್ಸೈನ್ಯೋತ್ಕರಂ ದಂಡೆಯಡ್ಡಣವೀತಂ (ಎಕ. XI, ಡಾವಡಿ. ೨೫-೫೬; 1224). [ದಂಡೆ$_3$ (<ದಂಡಿ$_3$) + ಅಡ್ಡಣ]

ದಂಡೆಯೊಡ್ಡು (ಕ್ರಿ). ಗುರಾಣಿಯನ್ನು ಒಡ್ಡು; ಹರಿಗೆ ಹಿಡಿ: ಆತನಸ್ತ್ರಕೆ ದಂಡೆಯೊಡ್ಡಿ ಮಹಾತಿಬಳ ಕವಿದನು (ಕುವ್ಯಾಕ್ರೋ. ೧೨-೧೭). [ದಂಡೆ$_3$ (<ದಂಡಿ$_3$) + ಒಡ್ಡು$_1$]

ದಂಡೆಹೂ (ನಾ). ದಂಡೆಯಾಗಿ ಕಟ್ಟಿದ ಹೂವು; ಹೂವಿನ ದಿಂಡು: ಚಂಡುಹೂ, ತುಂಬಿಹೂ, ಗೊಂಡೆಹೂ, ದಂಡೆಹೂ . . . ಇವುಗಳ ಸಂತೆ ಸೆರೆಯಿತು (ಸಾಸಮಾ. ೯೦). [ದಂಡೆ$_1$ + ಹೂ$_2$ (<ಪೂ$_2$)]

ದಂಡೇಶ (ನಾ). = ದಂಡನಾಥ ೧: ಅಮಿತಂ ದಂಡೇಶರತ್ನಂ . . . ವಿಷಮಸಮಯಮಾದಲ್ಲಿ ತಾನೇಕವಾಕ್ಯಂ (ಎಕ. VI, ತರೀಕೆ. ೪೫-೬೩: 1196). [ದಂಡ + ಈಶ]

ದಂಡೇಸ್ವರ (ನಾ). ಒಂದು ವೃತ್ತಿಯ ಹೆಸರು (?): ಮೂಲಗಾಟಂಗೆ ಮತ್ತರ್ ೧೩ ದಣ್ಡೇಸ್ವರಂ ಯಿಪ್ಪಂಗೆ ಮತ್ತರ್ ೧೨ (ಸಾಇಇ. XI-1, ೧೦೩-೬; 11ನೆಯ ಶತ).

ದಂಡೊಡೆ (ಕ್ರಿ). ಗುಂಪು ಚೆದರು; ಬೆಲ್ಲಾಪಿಲ್ಲಿಯಾಗು (?): ತಮ್ಮಂ ರಕ್ಷಿಸುವ ಕರ್ತರುಗಳುಬಿ ನ್ನಾರೆಂದು ದಂಡೊಡೆದು ಬಂದು ತದ್ಧನ ದೇವಿಯಳ ಬಿಡದೆ ಬೇಡಿಕೊಂಡೂ (ನವವೋ. ೧೦-೪೧). [ದಂಡು (<ದಂಡಿ$_3$) + ಒಡೆ$_1$]

ದಂಡೋಕ್ತಿ (ನಾ). ದಂಡೋಪಾಯದ ಮಾತು; ಬೆದರಿಕೆಯ ನುಡಿ: ಶಿಕ್ಷೆಯ ಮಾತು: ಸಾಮಾಭಾಸದಿಂ ದಂಡೋಕ್ತಿಯನೆ ನುಡಿಯಲೊಡಂ (ಚಂದ್ರಪು. ೬-೨೨ ವ). [ದಂಡ + ಉಕ್ತಿ]

ದಂಡೋತ್ಪಲ, ದಂಡೋತ್ಪಳ (ನಾ). ಒಂದು ಬಗೆಯ ಗಿಡ; ಸಹದೇವಿ. **ದಂಡೋತ್ಪಳ**: "ದಂಡೋತ್ಪಳಃ, ಸಹದೇ(ವಾ)ವಃ–ಳಾ ೨ ಸಹದೇವಿ" (ಹಲಾಯು. ೩೩-೪೬). [ಸಂ.]

ದಂಡೋತ್ಪಳ 'ದಂಡೋತ್ಪಲ' ನೋ.

ದಂಡೋಪನತ (ನಾ). ದಂಡನವಂಸ್ಕಾರ ಮಾಡಿದವನು: ಮನೋ[ಜ] ರಾಜನಧಿರಾಜಂಗೆ ದಂಡೋಪನತನಾಗಿ ತನ್ನ ಸರ್ವಸ್ವಮುಮನಟ್ಟಿದಂತೆ ಮುಂಚಿ ಬಂದ ವಸಂತೋತ್ಸವದೊಳ್ (ಶಾಂತಿಪು. ೯-೭೪ ವ). [ದಂಡ + ಉಪನತ]

ದಂಡೋರ 'ದಂಡೋರೆ' ನೋ.

ದಂಡೋರೆ, ದಂಡೋರ (ನಾ). ಡಂಗುರ ಸಾರುವುದು: ಘೋಷಣೆ: ಹರಾಜು ನಡೆಸುವ ಕ್ರಮವನ್ನು ಅವಶ್ಯಕವಾದ ಕಡೆಗಳಲ್ಲೆಲ್ಲಾ ಟಾಂಟಾಂ, ದಂಡೋರೆ ಮೂಲಕ ಪ್ರಸಿದ್ಧಪಡಿಸಬೇಕು (ಗ್ರಾಮಾಳ. ೬೦). **ದಂಡೋರ**: "ದಂಡೋರ = ಡಂಗರ" (ಜಾನಕೋ. ೩). [←ಹಿಂ. ಢಂಢೋರಾ./ತೆಲು. ದಂಡೋರಾ]

ದಂಡ್ರುಂಚೆ 'ದಂಡುಱುಂಬೆ' ನೋ.

ದಂತ$_1$ (ನಾ). ೧. ಆಹಾರವನ್ನು ಅಗಿಯಲು ಸಾಧಕವಾದ ಬಾಯಿಯೊಳಗಿರುವ ಒಂದು ಅವಯವ; ಹಲ್ಲು: "ದಶನಃ, ದ್ವಿಜಃ, ದಂತಃ, ರದಃ, ರದನಃ — ಈ ೫ ಪಲ್ (ಹಲ್ಲು)" (ಹಲಾಯು. ೮೭-೩೭೩); ಪೊಳೆವ ದಂತಮರೀಚಿಗಳಿಂದಮಿಶ್ವರಂಗೊಸೆದಭಿಷೇಕಮಂ ಮಗುಟಿ ಮಾಡುವವೊಲ್ ಬಗೆದೊಪ್ಪಿ ತೋಱಿದಳ್ (ಕಾದಂಪೂ. ೬೭೩); ವದನಮತಿಪ್ರಸನ್ನತೆಯನಾಳ್ದುದು ಶಾಂತಿಯನಾಂತು ದಂತವೆಯ್ದಿದು ದತಿಕಾಂತಿಯಂ . . . ಮುನಿಚಂದ್ರದೇವನಾ (ಪುಷ್ಪಪು. ೧-೩೨); ೨. ಆನೆಯ ಬಾಯಿಯಿಂದ ಈಚೆಗೆ ಹಾಯ್ದು ಬಂದಿರುವ, ದಪ್ಪವಾಗಿಯೂ ಸ್ವಲ್ಪ ನೀಳವಾಗಿಯೂ ಇರುವ ಹಲ್ಲು; ಜಂತ; ಕೋರೆ: ಮದದಂತಿ ದಂತದೊಳೆ ಕಟ್ಟಿದ ತೊಟ್ಟಿಲಂ ನಯದಿಂದಮೇಱಿ [ಸೆ] (ಪಂಪಭಾ. ೧-೪೩); ಕಡೆದರೊ ಶಂಖದಿ . . . ದಂತದಿಂದೆಸೆಯೆ ರುಚಿರೋಜ್ವಲಾಂಗಮಂ ಮಾಡಿದರೋ (ಕಾದಂಪೂ. ೬೬೭); ತೊಳಗುವಂ ದಂತದೋಲೆ ಗುರುಗಂಜಿಯ ಬಣ್ಣಸರಂ . . . ಒಪ್ಪಿರೆ ಪುಳಿಂದಿಯ ರಾದರಮರ್ತ್ಯಕಾಂತೆಯರ್ (ಶಬಶಂ. ೩-೯); ದಂತದಿಂದಲೂ ಅನೇಕ ಪ್ರತಿಮೆಗಳು ನಿರ್ಮಿತವಾಗಿರುವುವು (ಭಾರದ. ೫೦೮). ೩. ಬೆಟ್ಟದ ಕೋಡುಗಲ್ಲು,-ಶಿಖರ; ಪರ್ವತಶೃಂಗ. ೪. ಬೆಟ್ಟದ ಅಕ್ಕಪಕ್ಕ, ಬೆಟ್ಟದ ತಪ್ಪಲು. ೫. ಪೊದರು; ನಿಕುಂಜ. ೬. ಆಯುಧಗಳ ತುದಿ,-ಮೊನೆ. ೭. ಒಂದು ಬಗೆಯ ಮರ; ಜಾಪಾಳಮರ: "ಶೃಂಗಂ ತರುಭೇದ ಕಂಟಕಗಜಂ ದಶನಾದ್ರಿವಿಭೇದಮೆಂಬಿವುಂ ದಂತಮೆನಿಕ್ಕುಂ" (ನಾನಾರ. ೮೨). ೮. [ಗಣಿತ] ಮೂವತ್ತೆರಡು ಎಂಬ ಸಂಖ್ಯೆಯ ಸಂಕೇತ: "ದಂತ ಮೂವತ್ತೆರಡುಮಿಂತಿವೆಲ್ಲಂ ಭೂತಸಂಜ್ಞೆಯಕ್ಕುಂ" (ಮಂಗರಾ. ೧೦೪-೯). [ಸಂ.]

ದಂತ$_2$ (ನಾ). ಒಂದು ಬಗೆಯ ತೆರಿಗೆ: ತೆರಿಗೆಯ ವ್ಯವಸ್ಥೆಯ ಪುನರ್ ಘಟನೆ ಮಾಡಿ . . . ದಂತ, ಉಂಡಿಗೆ, ಸುಂಕ, ತಳವರಿಕೆ ಗುತ್ತಿಗೆಗಳೆಂಬ ಹದಿಮೂರು ಹೊಸ ಕರಗಳನ್ನು ನಿಯೋಜಿಸಿದರು ಬಸವಣ್ಣನವರು (ಶರಡ. ೧೨೯). [?]

ದಂತಕತೆ (ನಾ). ಯಾವ ಆಧಾರವೂ ಇಲ್ಲದೆ, ಒಬ್ಬರಿಂದೊಬ್ಬರಿಗೆ ಹರಡುತ್ತಾ ಹೋಗುವ ಕತೆ; ಬಾಯಿಂದ ಬಾಯಿಗೆ ಹಬ್ಬುತ್ತಾ ಹೋಗುವ ಕಥೆ; ಕಟ್ಟುಕತೆ: ಇಂಥ ಹಾಡುಗಳಲ್ಲಿ ಒಂದು ಜನ ಸಮುದಾಯದಲ್ಲಿ ರೂಢಿಯಾಗಿ ಹರಿದುಬಂದಿರುವ ದಂತಕತೆ, ಪುರಾಣ, ನಂಬಿಕೆಗಳು ಧಾರಾಳವಾಗಿ ಸೇರಿಕೊಂಡಿವೆ (ಜಾನಗೀ. ೧೪); ಇಲ್ಲಿ ಕೂಡಿಸಿರುವ ಘಟನಾವಳಿಗಳೂ ದಂತಕತೆಗಳೂ . . . ವೃತ್ತಿಜೀವನ ಇವುಗಳ ಬಗ್ಗೆ ಬೆಳಕು ಚೆಲ್ಲುತ್ತವೆ (ಸಂಗೀತ. VI ಪೀಠಿಕೆ); ಥೇಬಸ್ಸಿನ ಕ್ಯಾಡ್ಮಸ್ ಎಂಬವನು ಕ್ರಿ. ಪೂ. ೧೫೦೦ ರ ಸುಮಾರಿಗೆ ಪೊನೀಷಿಯದಿಂದ ಗ್ರೀಸಿಗೆ ಅಕ್ಷರಗಳನ್ನು ತಂದನೆಂದು ದಂತಕತೆಯೊಂದು ವಿವರಿಸುತ್ತದೆ (ದ್ರಾವಿವಿ. ೫೦). 'ಉದಂತ' ಪರಾ. [ದಂತ$_1$ + ಕತೆ]

ದಂತಕಥೆ (ನಾ).=ದಂತಕತೆ: ಎಲ್ಲ ಮಹಾವ್ಯಕ್ತಿಗಳ ಬಗೆಗೂ ದಂತಕಥೆಗಳು ಕಾಲಕ್ರಮೇಣ ಹುಟ್ಟಿಕೊಳ್ಳುವಂತೆ ಅಕ್ಕನ ಬಗೆಗೂ ಹುಟ್ಟಿಕೊಂಡಿವೆ (ಕರ್ನಾಕ. ೬೯); ಅಶೋಕನು ಎಂಭತ್ತುನಾಲ್ಕುಸಾವಿರ ಸ್ತೂಪಗಳನ್ನು ಕಟ್ಟಿಸಿದನೆಂದು ಬೌದ್ಧರ ದಂತಕಥೆಗಳು ಹೇಳುತ್ತವೆ (ಭಾರದ. ೪೯೫); ಸಿದ್ಧನಂಜೇಶನು ಹೇಳಿದ ಈ ಹಲ್ಲಿನ ಕಥೆ ದಂತಕಥೆಯೇ ಆಗಿರಬೇಕು (ಕಸಾಚ. ೧೭೮). [ದಂತ$_1$ + ಕಥೆ./ಹಿಂ. ಮರಾ. ದಂತಕಥಾ]

ದಂತಕಪಾಲಿಕೆ (ನಾ). ಒಂದು ಬಗೆಯ ಹಲ್ಲಿನ ಬೇನೆ,-ರೋಗ: ದಂತಕಪಾಲಿಕೆ ಎಂಬ ದಂತರೋಗದಲ್ಲಿ ದಂತಗಳು ತನ್ನ ತಾನೇ ಒಡೆದು ಉದುರಿ ಹೋಗುವವು (ವೈದ್ಯಸಾ. II, ೧೨೨). [ಸಂ. ದಂತಕಪಾಲಿಕಾ]

ದಂತಕಾಂತಿ (ನಾ). ಹಲ್ಲುಗಳ ಬೆಳಗು,-ಪ್ರಕಾಶ: ಪೊಸವೆಳ್ದಿಂಗಳ್ ಪಗಲೊಳಮೆಸೆವಂತಿರೆ ದಂತಕಾಂತಿಗಳ್ ವಿಭು ನುಡಿದಂ (ಶಾಂತಿಪು. ೮-೧೩೬); ಅರಸನಿಂತುಸಿರ್ದಂ ಸುಯ್ಯುಂದಿಸಿದಧರಕ್ಕೆ ಸುಧಾಬಿಂದುಗಳಂ ತಳಿಯೆ ದಂತಕಾಂತಿಪ್ರಸರಂ (ಯಶೋಚ. ೩-೮). [ದಂತ$_1$ + ಕಾಂತಿ]

ದಂತಕಾಷ್ಠ (ನಾ). ಹಲ್ಲನ್ನು ಉಜ್ಜಲು ಉಪಯೋಗಿಸುವ ಬೇವು ಮೊದಲಾದ ಮರಗಳ ಕಡ್ಡಿ; ಹಲ್ಲು ತಿಕ್ಕುವ ಕಡ್ಡಿ: ಪ್ರತಿದಿನ ಬೆಳಗ್ಗೆ ದಂತಕಾಷ್ಠದಿಂದ ಹಲ್ಲನ್ನೂ ನಾಲಗೆಯನ್ನೂ ತಿಕ್ಕಿಕೊಳ್ಳಬೇಕು (ಪ್ರವಾಇ. I, ೨೮೩). [ದಂತ$_1$ + ಕಾಷ್ಠ$_2$]

ದಂತಕೂಟ (ನಾ). ಆನೆಯ ದಂತದ ತುದಿ; ಆನೆಯ ಕೋರೆಯ ಮೊನೆ: ಬಲಗರ್ವಮಂ ತಾಳ್ದಿದಂ ಬಲಾಚ್ಯುತರ ಕೂಟದಿಂ ಜನಕನುಗ್ರ ವನ್ಯದ್ವಿಪಂ ಬಲಂ ಬಡೆದುದೆಂಬಿನಂ ವಿಕಟದಂತಕೂಟಂಗಳಿಂ (ಪಂರಾಮಾ. ೪-೫೩). [ದಂತ$_1$ + ಕೂಟ$_3$]

ದಂತಕ್ಷತ (ನಾ). [ಕಾಮಶಾ] ಪ್ರಣಯಪರವಶರಾದ ಸ್ತ್ರೀಪುರುಷರು ರತಿಕ್ರೀಡೆಯ ಕಾಲದಲ್ಲಿ ಪರಸ್ಪರ ಶರೀರಗಳಲ್ಲಿ ಮಾಡುವ ಹಲ್ಲಿನ ಕಚ್ಚು; ಹಲ್ಲಿನಿಂದ ಕಚ್ಚುವಿಕೆ: ಸುದತಿ ಕೇಳ್ ದಂತಕ್ಷತದ ಭೇದಮಂ ಪೇಳ್ವೆಂ (ಜನವ. ೭-೨೬); ದಂತಕ್ಷತ ನಡೆಯುವ ಹಲ್ಲುಗಳ ಸ್ವರೂಪ ಸ್ವಭಾವಗಳನ್ನೂ, ಹನ್ನೆರಡು ಬಗೆಯ ದಂತಕ್ಷತಗಳ ಹೆಸರನ್ನೂ ಹೇಳಿ . . . ಉಪಸಂಹರಿಸಿರುವನು (ಮನ್ಮವಿ. XV, ಮುನ್ನುಡಿ). 'ನಖಕ್ಷತ' ಪರಾ. [ದಂತ$_1$ + ಕ್ಷತ]

ದಂತಚಯ (ನಾ). ಹಲ್ಲುಗಳ ಸಮೂಹ,-ಸಾಲು; ದಂತಪಂಕ್ತಿ: ತನು ನಿಷ್ಪ್ರಕಂಪಮಿರೆ ದಂತಚಯಂ ಸಮನಾಗಿ ತನ್ನೊಳೊಂದಿರೆ ಸಮಸಂದುದಾ ಪರಮಯೋಗಿಗೆ ಯೋಗನಿಯೋಗಭಾವನಂ (ಅದಿಪು ೧೦-೧೪). [ದಂತ$_1$ + ಚಯ]

ದಂತಚಲನ (ನಾ). ಹಲ್ಲುಗಳು ಅಲ್ಲಾಡುವ ಒಂದು ಬಗೆಯ ಹಲ್ಲಿನ ರೋಗ: ದಂತಚಲನವೆಂಬ ದಂತರೋಗದಲ್ಲಿ ಹಲ್ಲುಗಳು ಅಲ್ಲಾಡುವವು (ವೈದ್ಯಸಾ. II, ೧೨೦). [ದಂತ$_1$ + ಚಲನ]

ದಂತಚೂರ್ಣ (ನಾ). ಹಲ್ಲನ್ನು ಉಜ್ಜಲು ಉಪಯೋಗಿಸುವ ಪುಡಿ; ಹಲ್ಲುಪುಡಿ: ಹಲ್ಲು ತೊಳೆಯುವುದಕ್ಕೆ ಉಪಯೋಗಿಸುವ ಪುಡಿ, ಸರಿ, ಮೊ.ವು: ಹಲ್ಲುಪುಡಿ; ದಂತಚೂರ್ಣ; ದಂತಧಾವಕ (Dentifrice. ಇಂಕನಿ). [ದಂತ$_1$ + ಚೂರ್ಣ$_2$]

ದಂತಚ್ಛದ (ನಾ). ಬಾಯ್ದೆರೆ: ತುಟಿ; ದಂತಚ್ಛದಾತಿರಾಗತೆ ಕುಂತಳ ಕೌಟಿಲ್ಯವೃತ್ತಿ ಪಿಂಗಿದುದಬಳಾಸಂತತಿಗೆ ಪಯಃಕೇಳಿಯೊಳ್ (ಚಂದ್ರಪು. ೭-೧೪೫); ರದನಂ ವಜ್ರಸಮಂ ಪ್ರವಾಳ ಸದೃಶಂ ದಂತಚ್ಛದಂ (ರಾಜಶೇ. ೩-೬). [ದಂತ$_1$ + ಛದ]

ದಂತದಂಶಿತ (ಗು). ಹಲ್ಲಿನಿಂದ ಕಚ್ಚಲ್ಪಟ್ಟ: ದಂತದಂಶಿತದಶನವಾಸದ ವೈರಿಹಿಂಸಾವ್ಯಸನ ವೀರಾವೇಶಿ ಬಂದನು ಕೃಪನ ಸಮ್ಮುಖಕೆ (ಕುಷ್ಯಾಗ. ೯-೪೩). [ದಂತ$_1$ + ದಂಶಿತ]

ದಂತಧಾವನ (ನಾ). ೧. ಹಲ್ಲನ್ನು ಉಜ್ಜುವುದು,-ತೊಳೆಯುವುದು: "ಮುಕ್ಕುಳಿ ದಂತಧಾವನಂ" (ಕಬ್ಬಿಕೈ. ೫-೫); ಅಂತನಂತರಂ ದಂತ ಧಾವನಾಸವನಾದಿ ವೈಭಾತಿಕಂಗಳಂ ತೀರ್ಚಿ (ಚಂದ್ರಪು. ೮-೧೦೫ ಪ); ಚತುರ ದ್ವಿಜೋಪಚಾರಂ ದಂತಧಾವನದೊಳು (ಹಡಕಾ. ೨-೧೧); ಆಲ, ಎಕ್ಕ . . . ಮೊದಲಾದ ಕಾಷ್ಠಗಳಲ್ಲಿ ದಂತಧಾವನವಂ ಮಾಡಿಕೊಂಡು . . . ನೀರನ್ನು ಚೆನ್ನಾಗಿ ಮುಕ್ಕಳಿಸಿ ಉಗಿವುದು (ಸಕವೈ. ೨೯). ೨.=ದಂತ ಕಾಷ್ಠ: (ಕಿ). ೩. ಕಾಚಿನ ಮರ; ಕಗ್ಗಲಿ ಮರ; ಖದಿರ. "ಕದರಂ ಗಾಯತ್ರಿ ದಂತಧಾವನಮದು" (ವಸ್ತುಕೋ. ೩೫-೧೫).

[ದಂತ$_1$ + ಧಾವನ]

ದಂತಧಾವನಗೆಯ್ (ಕ್ರಿ). ಹಲ್ಲನ್ನು ಉಜ್ಜು, – ತಿಕ್ಕು : ಇಂತು ವರ ಕೊಡಗೂಸು ಆಗಳೆ ದಂತಧಾವನಗೆಯ್ದು ವಿಂದು (ಚಸಪು. ೦೪-೫).

[ದಂತಧಾವನ + ಕೆಯ್$_1$]

ದಂತಧಾವನಪರ್ಣ (ನಾ). ೧. ಹಲ್ಲನ್ನು ಚೊಕ್ಕಟಗೊಳಿಸಲು ಉಪಯೋಗಿಸುವ (ಕೆಲವು ಬಗೆಯ) ಎಲೆ. ೨. ಕಗ್ಗಲಿ ಎಲೆ; ಖದಿರ ಪರ್ಣ : ಚೂರ್ಣವರ್ಣತ್ಯಾಗವಿಲ್ಲದೆ ದಂತಧಾವನವರ್ಣವನು ಸವಿದು ಭೋಗಿಸುವೊಡೆ . . . ಅವನನು ನೀಗಿ ಕಳೆವಳು ಭಾಗ್ಯವಧು (ಕುವಾ.ಚಾ. ೩-೫೯). [ದಂತಧಾವನ + ಪರ್ಣ]

ದಂತನೂತಿ (ನಾ). ಒಂದು ಬಗೆಯ ದಂತವ್ಯಾಧಿ, – ವ್ರಣ; ಹಲ್ಲಿನ ಕುರು : ಸಕ್ಕರೆ, ಏಲಕ್ಕಿವುಡಿ, ಕುರುಟಗೆ ಹಾಲು ಇಷ್ಟನ್ನೂ ಈ ಬಕ್ತಿಯಲ್ಲಿ ಒಣಗಿಸಿ ದಂತದ ವ್ರಣಕ್ಕೆ ಇಕ್ಕಿಸಲು ಗುಣವಾಗುವುದು, ದಂತನೂತಿ ಮಾಣ್ಗುಂ (ವಿವೈವಿ. ೧೩೭). [ದಂತ$_1$ + ನೂತಿ$_1$]

ದಂತಪಂಕ್ತಿ (ನಾ). ಹಲ್ಲುಗಳ ಪಂಕ್ತಿ,–ಸಾಲು : ಅವಳ ಪೊಳಿವ ರುಚಿ ರೋಷ್ಮಾಳಂಕೃತಿ ವವಳದ ದಳದಂತಾರಕ್ತಾಕೃತಿ ದಂತಪಂಕ್ತಿ, ದಾಡಿಮ ಬೀಜಾಕೃತಿ (ಸುಳುಮಾ. ೫-೩೧ ರಗಳೆ) : ಕುಂದಕುಟ್ಮಳ ಪೋಲ್ವ ದಂತಪಂಕ್ತಿಗಳೆಲ್ಲಿ (ಶವಪೋ. ೭-೦೪); ನಾಲಗೆಯ ತುದಿ ದಂತಪಂಕ್ತಿಯ ಮೇಲೆ ಒಸಡಿಗೆ ತಾಗಿ ನಿಲ್ಲುತ್ತದೆ (ದ್ರಾವಿವಿ. ೭೪೮). [ದಂತ$_1$ + ಪಂಕ್ತಿ]

ದಂತಪತ್ರ (ನಾ). ಒಂದು ಬಗೆಯ ಕಿವಿಯೋಲೆ : ವಿಭಾವರೀ ವನಿತಾ ವಿಲಾಸದಂತಪತ್ರನುಂ . . . ಕುಮುದಿನೀ ಬಾಂಧವನುದಯಿಸೆ (ಕಾದಂಉ. ೧೪೫). [ದಂತ$_1$ + ಪತ್ರ]

ದಂತಪೀಠಿಕೆ (ನಾ). ಹಲ್ಲಿನ ಪೀಠ; ಒಸಡು : ಕೆಳಗಣ ಮೇಲಣ ಪಲ್ಬೇರ್ಗಳ ಪಿಡಿದಿಹ ಸಂದು ದಂತಪೀಠಿಕೆಯಕ್ಕುಂ (ಆಶ್ವಶಾ. ೯-೩).

[ದಂತ$_1$ + ಪೀಠಿಕೆ]

ದಂತಪುಪ್ಪುಟ (ನಾ). = ದಂತನೂತಿ : ಎರಡು ಹಲ್ಲುಗಳಲ್ಲಿಯಾದರೂ ಮೂರು ಹಲ್ಲುಗಳಲ್ಲಿಯಾದರೂ ಬೆಂದಹಾಗೆ ಕಂದಿಕೊಂಡು ವಿವರ್ಣವಾಗಿಹುದು. ಈ ರೀತಿಯಲ್ಲಿ ಇದ್ದುದು ದಂತಪುಪ್ಪುಟ ಎನಿಸಿಕೊಂಬುದು (ವೈದ್ಯಸಾ. II, ೧೫೩). [ದಂತ$_1$ + ಪುಪ್ಪುಟ]

ದಂತಪ್ರಭೆ (ನಾ). ಹಲ್ಲುಗಳ ಹೊಳಪು ; ದಂತಕಾಂತಿ : ಆ ಕುವರನ ದಂತಪ್ರಭೆಯಂಬ ಶೀತಕರನುದಯದಫದ್ವಾಂತೌಘಮಧುವಮಾಲಿಕೆಯಂ ತೊಲಗಿಸೆ ಮುಗಿದುವವನ ಕರಸರಸಿರುಹಂ (ಯಶೋಧ. ೧-೬೭).

[ದಂತ$_1$ + ಪ್ರಭೆ]

ದಂತಬೇನೆ (ನಾ). ಹಲ್ಲಿನ ನೋವು ; ದಂತವ್ಯಾಧಿ : ದಂತಬೇನೆಗೆ–ಪಚ್ಚಿ ತುತ್ತ, ಜಾಪಾಳ . . . ಅರೆದು ಮೂರು ಗುಳಿಗೆಯಂ ಮಾಡಿ ಹಸುವಿನ ಹಾಲಲ್ಲಿ ಗಟ್ಟಿಮೊಸರಲ್ಲಿ ಕೆಳಮೇಲಕ್ಕೆ ಇಕ್ಕಿ ನುಂಗುವುದು (ವಿವೈವಿ. ೦೪೪).

[ದಂತ$_1$ + ಬೇನೆ]

ದಂತಮಂಜನ (ನಾ). ಹಲ್ಲನ್ನು ಉಜ್ಜಲು ಉಪಯೋಗಿಸುವ ಸಾಮಗ್ರಿ; ಹಲ್ಲುಪುಡಿ : ಸಮಾಪದ ಅಂಗಡಿಗೆ ಹೋಗಿ ಅತ್ಯವಶ್ಯವಾದ ಒಳ ಉಡುಪು, ದಂತಮಂಜನ ಮೊದಲಾದ ನಿತ್ಯೋಪಯೋಗದ ವಸ್ತುಗಳನ್ನು ಕೊಂಡು ತಂದು (ಪಂಟಕು. ೦೦೯). [ದಂತ$_1$ + ಮಂಜನ]

ದಂತಮಲ (ನಾ). ಹಲ್ಲಿನ ಕೊಳೆ ; ಕೀಚು ; ಪಿಟ್ಟು (ಕರಾ) : "ನೆಱಿ ಕೀನಿ ದಂತಮಲಮೆಂದು" (ಕವಿಕಂ. ೩೦೩). [ದಂತ$_1$ + ಮಲ್ಕ]

ದಂತಮೂಲೀಯ (ನಾ). [ವ್ಯಾಕ] ದಂತದ ಮೂಲ ಪ್ರದೇಶದಿಂದ ಹುಟ್ಟುವ ವರ್ಣ,–ಅಕ್ಷರ ; ತವರ್ಗ, ಲ ವಂತ್ತು ಸ ಅಕ್ಷರಗಳು. 'ಜಿಹ್ವಾಮೂಲೀಯ' ಪರಾ. [ಸಂ.]

ದಂತರುಚಿ (ನಾ). ಹಲ್ಲಿನ ಹೊಳಪು,–ಕಾಂತಿ : ಶ್ರವಣಕ್ಕಮರ್ದಿನ ಸರಿ ಸುರಿವವೊಲಾಗೆ ವಚೋವಿಲಾಸವಾ ಸಭೆಗತ್ಯುತ್ಸವಮಂ ಕುಡೆ ನೇರ್ಪಡೆ ಬನ್ನವಿಸಿದನಾವರಿಸೆ ದಂತರುಚಿ ತತ್ಸಭೆಯಂ (ಪಂಡಾಮಾ. ೧೦-೬೭) ; ದಂತರುಚಿನಿಚಯ ಮುಕ್ತಾಕ್ರಾಂತಂ ಭಾಸುರ ಸುವರ್ಣ ರಚಿತಂ ತದ್ವಾಕ್ಸಂತತಿ ವಿಬುಧಜನಕ್ಕೆ ನಿರಂತರ ಕಮನೀಯಮಾಯ್ತು ಕರ್ಣಾಭರಣಂ (ದಂಪ್ರಪು. ೨-೮೬). [ದಂತ$_1$ + ರುಚಿ]

ದಂತವಕ್ರ (ನಾ). ೧. ವಕ್ರವಾದ ಹಲ್ಲುಳ್ಳವನಂ. ೨. ಒಬ್ಬಾತನ ಹೆಸರು : ಪರಾಕ್ರಮಶಾಲಿಗಳಾದ ಶಿಶುಪಾಲ ದಂತವಕ್ರರು ಅವನ ಸೇನಾಪತಿಯೂ ಅನುಯಾಯಿಯೂ ಆಗಿದ್ದಾರೆ (ವಚಭಾ. ೭೭).

[ದಂತ$_1$ + ವಕ್ರ]

ದಂತವಾಸ (ನಾ). ಹಲ್ಲುಗಳಿಗೆ ತೆರೆಯಂತೆ ಇರುವುದು ; ತಂಟಿ.

[ದಂತ$_1$ + ವಾಸ$_3$]

ದಂತವೇಷ್ಟ (ನಾ). ಒಂದು ಬಗೆಯ ಹಲ್ಲಿನ ಬೇನೆ,–ರೋಗ : ದಂತಗಳಿಂದ ರಕ್ತ ಸುರಿಯುತ ನಾತ ಉಂಟಾಗಿ ದಂತಗಳು ಅಲ್ಲಾಡುವವು. ಈ ರೀತಿಯಲ್ಲಿ ಇದ್ದುದು ದಂತವೇಷ್ಟವೆನಿಸಿಕೊಂಬುದು (ವೈದ್ಯಸಾ. II, ೧೫೭).

[ದಂತ$_1$ + ವೇಷ್ಟ]

ದಂತವೈದ್ಯ (ನಾ). ಹಲ್ಲಿನ ರೋಗಗಳಿಗೆ ಚಿಕಿತ್ಸೆ ಮಾಡುವವನು ; ದಂತ ಚಿಕಿತ್ಸಕ : "ದಂತವೈದ್ಯ ; – ಚಿಕಿತ್ಸಕ" (Dentist. ಇಂಕನ್ನಿ) ; ಹಲ್ಲು ನೋವಾದರೆ ದಂತವೈದ್ಯರ ಹತ್ತಿರ ಹೋಗು (ರೂಢಿ).

[ದಂತ$_1$ + ವೈದ್ಯ]

ದಂತಶಠ (ನಾ). ೧. ಹಲ್ಲನ್ನು ಜುಮ್ಮೆನ್ನುಸುವ ಹಣ್ಣು ; ಹುಳಿ ; ಅಮ್ಲ. ೨. ನಿಂಬೆಗಿಡ ಮತ್ತು ಅದರ ಹಣ್ಣು : "ಜಂಬೀರಃ, ದಂತ ಶಠಃ, ಜಂಭಃ, ಜಂಭೀರಃ, ಜಂಭಲಃ ೫ – ನಿಂಬೇಗಿಡದ ಹೆಸರುಗಳು" (ಸಿದ್ಧಾಂತಿ. ೧೦೩). ೩. ಬೇಲದ ಮರ : "ಕಪಿತ್ಥ . . . ದಂತಶಠಃ – ೭ ಬ್ಯಾಲದ ಮರಕ್ಕೆ ಹೆಸರುಗಳು" (ಸಿದ್ಧಾಂತಿ. ೧೦೨). [ಸಂ.]

ದಂತಶಠೆ (ನಾ). ಬಹಳ ಹುಳಿಯಾದ ಎಲೆಗಳುಳ್ಳ ಒಂದು ಬಗೆಯ ಸೊಪ್ಪಿನ ಗಿಡ ; ಪುಲ್ಲಂಪುರಚಿ ; ಅಂಬಷ್ಠೆ : "ಚಾಂಗೇರೀ, ಚುಕ್ರಿಕಾ, ದಂತಶಠಾ, ಅಂಬಷ್ಠಾ, ಅಮ್ಲಲೋಣಿಕಾ – ೫ ಪುಲಂಪುರುಚೀ ಸೊಪ್ಪಿನ ಹೆಸರು" (ಸಿದ್ಧಾಂತಿ. ೧೩೬). [ಸಂ. ದಂತಶಠ]

ದಂತಶೂಲೆ (ನಾ). ಹಲ್ಲುನೋವು ; ದಂತದ ಬೇನೆ : ತಾಳಕೇಶ್ವರರಸ:– ಶೋಧಿಸಿದ ರಸ ೧೫ ತೂಕ ತಾಳಕ ೨ ತೂಕ . . . ಗುಳಿಗೆಯಂ ಮಾಡಿ ಬಾಯೊಳು ಗುಳಿಗೆಯನಿಕ್ಕಲು ಅರುಚಿ, ಮೂಗಿನ ವ್ಯಾಧಿ, ದಂತಶೂಲೆ ಇವೆಲ್ಲಾ ಕೆಡುವುವು (ವಿವೈವಿ. ೩೩). [ದಂತ$_1$ + ಶೂಲೆ]

ದಂತಹತಿ (ನಾ). = ದಂತಕ್ಷತ : ಇದು ನಖಿಕ್ಷತಮನಿಡುವಡೆ ದಂತಹತಿಯ ನೆಲೆಯಿದುವೆ ಸಮರತಿಯ ವಿವರಾ (ನವಮೋ. ೧೭-೮೩).

[ದಂತ$_1$ + ಹತಿ]

ದಂತಹರ್ಷ (ನಾ). ಒಂದು ಬಗೆಯ ದಂತರೋಗ : ದಂತಹರ್ಷ ಎಂಬ ದಂತರೋಗದಲ್ಲಿ ಹಲ್ಲುಗಳು ತಣ್ಣೀರು ತಾಕಿದರೆ ಶರಸ್ಸಿನಲ್ಲಿಯೂ ಮುಖದಲ್ಲಿಯೂ ಜಮ್ಮು ಹತ್ತಿ ಮಹಾವೇದನೆ ಉಂಟಾಗಿಹುದು (ವೈದ್ಯಸಾ. II, ೧೫೦). [ಸಂ.]

ದಂತಹೀನ (ನಾ). ೧. ಹಲ್ಲಿಲ್ಲದವನು; ಹಲ್ಲು ಬಿದ್ದು ಹೋಗಿರುವವನು. ೨. ಕಮ್ಮಿ ಹಲ್ಲುಳ್ಳವನು : ಇರಬೇಕಾದ ಹಲ್ಲುಗಳಿಗಿಂತ ಕಮ್ಮಿ ಸಂಖ್ಯೆಯ ಹಲ್ಲುಳ್ಳವನು: "ಕೆಳಗಾಱು ಮೇಲಾಱು ಹಲ್ಲಿರಲು ಜಯಮಕ್ಕು ಹೆಚ್ಚುಕುಂದಾಗೆ ದಂತಾಧಿಕಂ ದಂತಹೀನಂ" (ಮಂಗರಾ. ೮೨-೧೬). 'ದಂತಾಧಿಕ' ಪರಾ. [ದಂತ$_1$ + ಹೀನ]

ದಂತಾಂಕುರ (ನಾ). ಹಲ್ಲಿನ ಮೊಳಕೆ ; ಮೊಳೆಹಲ್ಲು : ಆ ದೇವಿಗಿಂತಿದು ಪುಣ್ಯಾಂಕುರಮೆಂಬಿನಂ ವದನದೊಳ್ ದಂತಾಂಕುರಂ ರೂಪುದೋಱಿದುವು (ಅಜಿಪು. ೫-೬೪). [ದಂತ$_1$ + ಅಂಕುರ]

ದಂತಾಂಶು (ನಾ). = ದಂತಕಾಂತಿ : ಕಾರುಣ್ಯದ ರಸದ ಪೊನಲ್ಪರ್ವು ತಿರ್ದತ್ತಿದೆಂಬೀ ತೆಱದಿಂ ದಂತಾಂಶುಜಾಳಂ ಪಸರಿಸೆ (ಕಾದಂಪೂ. ೨೩೬) ; ದಂತಾಂಶುಕೋದ್ಯನ್ಮಣಿಯಂ ದಂತಾಂಶು ತೀವುತ್ತೆಸೆಯೆ (ರಾಜಶೇ. ೫-೧೭). [ದಂತ$_1$ + ಅಂಶು]

ದಂತಾಂಶುಕ (ನಾ). = ದಂತವಾಸ : ದಂತಾಂಶುಕೋದ್ಯನ್ಮಣಿಯಂ ದಂತಾಂಶು ತೀವುತ್ತೆಸೆಯೆ (ರಾಜಶೇ. ೫-೧೭). [ದಂತ$_1$ + ಅಂಶುಕ]

ದಂತಾಗ್ರ (ನಾ). ಹಲ್ಲಿನ ಅಗ್ರ ; ತುದಿಹಲ್ಲು : ಶ್ರೀ ಬಾಳಾಮೇಲಿಖ್ಯಿ ಮೇಲೆ ಸರ್ಪ್ಪದ ಮಹಾದನ್ತಾಗ್ರದುಳ್ಸಲ್ವವೋಲ್ (ಎಕ. II, ೨೨-೧ ; ಸು. 700). [ದಂತ$_1$ + ಅಗ್ರ]

ದಂತಾದಂತಿ (ನಾ). ಹಲ್ಲಿನಿಂದ ಒಬ್ಬರಿಗೊಬ್ಬರು ಕಚ್ಚಾಡುವ ಜಗಳ : ಕೆಡಹಿ ಮೆಟ್ಟುತ್ತ ಕೇಶಾಕೇಶಿ ಬಳಿಕ ದಂತಾದಂತಿಯೆಂದೆನಿಪ್ಪಾ ಬೆಡಗಿ ನಿಂದೆಸೆವ ಮುಷ್ಪಾಮುಷ್ಟಿಯಿಂ ಪೋರೆ (ವೀಶೈಪು. ೩-೮-೧೫) ; ನಖಾನಖಿ ಪ್ರಬಳ ದಂತಾದಂತಿಯಿಂ ಕಾದಿದರ್ (ಹಮ್ಮೀರ. ೨-೮೭). 'ಕೇಶಾಕೇಶಿ' ಪರಾ. [ಸಂ.]

ದಂತಾಧಿಕ (ನಾ). ಸಾಮಾನ್ಯವಾಗಿ ಇರಬೇಕಾದ ಹಲ್ಲಿಗಿಂತಲೂ ಹೆಚ್ಚಾದ ಹಲ್ಲಿರುವುದು : "ಕೆಳಗಾಱು ಮೇಲಾಱು ಹಲ್ಲಿರಲು ಜಯಮಕ್ಕು ಹೆಚ್ಚುಕುಂದಾಗೆ ದಂತಾಧಿಕಂ ದಂತಹೀನಂ" (ಮಂಗರಾ. ೮೨-೧೬). [ದಂತ$_1$ + ಅಧಿಕ]

ದಂತಾಬಲ (ನಾ). = ದಂತಾವಲ. [ಸಂ.]

ದಂತಾಮಯ (ನಾ). ಹಲ್ಲಿನ ರೋಗ. [ದಂತ$_1$ + ಆಮಯ]

ದಂತಾರ್ಬುದ (ನಾ). ಒಂದು ಬಗೆಯ ಹಲ್ಲುಬೇನೆ : ದಂತಾರ್ಬುದಕ್ಕೆ ಗುಳ್ಳ, ಬದನೆಯ ಬೇರು, ಕಕ್ಕೆತಿಗಡು ಇವಂ ಎಣ್ಣೆಯಲ್ಲಿ ಅರೆದು ಪೂಸಲು ದಂತಾರ್ಬುದ ಮಾಣ್ಗುಂ (ವಿವೈವಿ. ೧೩೭). [ದಂತ$_1$ + ಅರ್ಬುದ$_2$]

ದಂತಾವರಣ (ನಾ). = ದಂತವಾಸ : ಆರಯೆ ದಂತಾವರಣಂ ಪ್ರವಾಳರುಚಿರ ಚ್ಛಾಯಾರುಣಾಕ್ಷೇಪಿ . . . ಸುರೂಪಾಶ್ಚರ್ಯಮಾ ಕನ್ನೆಯಾ (ಸುಕುಮಾ. ೫-೫೩). [ದಂತ$_1$ + ಆವರಣ]

ದಂತಾವಲ, ದಂತಾವಳ (ನಾ). ೧. ಆನೆ ; ಗಜ ; ದಂತಿ : ಲಲನೆಯರ ನಡೆ ಎನುತೆ ದಂತಾವಲ ಘಟೆಯ ಸಾರೆನುತೆ . . . ನೆಲದೊಡೆಯ ಜಯ ಸಿಂಹ ಕಟ್ಟಿಗೆವಿಡಿದು ನಡೆತಂದ (ಶಂಕದಾ. ೯-೨೧). **ದಂತಾವಳ:** ಸರದೊಳ್ ಲೀಲಾಸರಂ ಪುಟ್ಟಿದತ್ತೆನೆ ಮೂಡಿತ್ತವಗಾಹಮಿರ್ದು ಕೊಳದಿಂ ಕಾಯ್ದೊಂದು ದಂತಾವಳಂ (ಅರ್ಧನೇ. ೫-೧೧೨) ; ಶ್ರಾವಕರು ನೆಱೆದಾತನಂ ದಂತಾವಳಕೆ ನೂಕೆ (ಬಸಪು. ೪೯-೩೮) ; ತಳವಱರ ಸುಂಕಿಗರ ದಂತಾವಳ ರಥಾಶ್ವಾ ರೋಹಕರ . . . ನಿವಾಸಂಗಳಲಿ ವಾಸವ ಮಾಡಿಸಿದನೊಲಿದನಿಲಬಾಂಧವನ (ತೊರರಾ. ೫-೮-೫೪) ; ಹರಿ ದಂತಾವಳ ಕೋಳ ಸೈರಿಭ ಮಹಾಶಾರ್ದೂಳ ಸಂದೋಹದಾಸುರದಾ ಬೇಂಟೆಯನಾಡಿ (ಹಮ್ಮೀರ. ೭-೬೭). ೨. ಗಜಾಸುರ. 'ದಂತಾವಳಾರಿ' ಪರಾ. [ಸಂ.]

ದಂತಾವಳ 'ದಂತಾವಲ' ನೋ.

ದಂತಾವಳಾರಿ (ನಾ). ೧. ಆನೆಯ ಶತ್ರು ; ಸಿಂಹ. ೨. ಗಜಾಸುರನ ಶತ್ರು ; ಶಿವ : ಓವಿ ಮದದಂತಾವಳಂ ತಿರುವಾಕರೀಶನನಂಟದಿರೆ ದಂತಾವಳಾರಿಯ ಕಿಂಕರನನೇಗೆಯ್ವುದಾ ದಂತಿ (ಬಸಪು. ೪೯-೩೮). [ದಂತಾವಳ (= ದಂತಾವಲ) + ಅರಿ$_6$]

ದಂತಾಹತಿ (ನಾ). ಆನೆಯ ದಂತದ ಪೆಟ್ಟು,– ಹೊಡೆತ : ಮಾದ್ಯದ್ರದ ನೀಂದ್ರಸ್ಥೂಳ ದಂತಾಹತಿವಿದಳಿತ ಗೋಶೀರ್ಷಸಾರದ್ರವಾಮೋದದಿನೆತ್ತಂ ಗಂಧವಾಹಂ ಮಗಮಗಿಸೆ (ಆದಿಪು. ೧೩-೬೮). [ದಂತ$_1$ + ಆಹತಿ]

ದಂತಿ (ನಾ). ೧. ಆನೆ ; ಗಜ : "ದ್ವಿರದಂ ದಂತಿ ಮತಂಗಜಂ . . . ಸಿಂಧುರಮೆಂದಿಂತಿವು ಸಾಮಜಾಖ್ಯೆಯೊಳಭಿನ್ನಾರ್ಥಂಗಳಕ್ಕುಂ" (ವಸ್ತುಕೋ. ೮೭-೩೧) ; ಏಱಿದಂ ತ್ರಿಜಗದ್ಭೂಷಣ ದಂತಿಯಂ ರಿಪು ಚಮೂವಿದ್ರಾವಣಂ ರಾವಣಂ (ಪಂರಾಮಾ. ೧೦-೨೦೯) ; ಬೇಂಟೆಗುಜ್ಜುಗಿಸಿ ವಿಪಿನಕೆ ನಡೆವೆನಲ್ಲಿ ಶರತತಿಯ ಕಱೆವೆಂ ದಂತಿಗಳ ತಲೆಯ ಮುತ್ತುಗಳುದುರೆ ಸೀಳ್ವೆಂ (ಭಾವಚಿಂ. ೬-೫) ; ಕಾಮರೂಪದ ಅರಸನು ವಿಂಧ್ಯಗಿರಿಗಳಂತಿದ್ದ ಹತ್ತು ದಂತಿಗಳನ್ನು ಕಳಿಸಿದ್ದನು (ಶಾಂತಲಾ. ೧೧೪). ೨. ಒಂದು ಬಗೆಯ ಗಿಡ ; ಜಾಪಾಳದ ಗಿಡ. ೩. ಕರಿಯ ಉಮ್ಮತ್ತಿ ಗಿಡ : "ಮುಕೂಲಕಃ, ನಿಕುಂಭಃ, ದಂತಿಕಾ, ಪ್ರತ್ಯಕ್ಪ್ರೇಣೀ, ಉದುಂಬರ ಪರ್ಣೀ – ಈ ೫ ದಂತಿಯ ಗಿಡು" (ನಾಚಿರಾ. ೧೧) ; ಕ್ರಿಯೆಯಿಂ ನೆಲ್ಲಿಯುಮಂ ದಂತಿಯುಮಂ ರಜನಿಯುಮನರೆದು ಕುಡಿದೊಡೆ . . . ಭಗಂದರಂ ಪ್ರಶಮಿಸುಗುಂ (ಲೋಕೋಪ. ೯-೧೫೯) ; ತಿಗಡೆ ಸೈಂಧವಂ ದಂತಿಯನುಷ್ಣಜಲಮಿಶ್ರಿತದಿಂ ಮಾಡೆ ಜಯಂಗೆಯ್ಗುಂ ಸಮಸ್ತ ಶೂಲಾ(ಲ)ವ್ಯಥೆಯಂ (ಅಶ್ವಶಾ. ೧೧-೧೦) ; ಬೆಲ್ಲ, ದಂತಿ, ಚೆಂಗಣಿಗಿಲ ಕೋಷ್ಠ, ಸೀಸ, ರಕ್ತಚಂದನ ಇಷ್ಟನೂ ಎಕ್ಕದ ಹಾಲಿನಲ್ಲಿ ಅರೆದು ಕರ್ಣಿಕ ಗ್ರಂಥಿಯ ಲೇಪಿಸಲು ಗ್ರಂಥಿಶಮನವಹುದು (ವೈದ್ಯಸಾ. I, ೮೦). ℙ ಆಯುರ್ವೇದ ನಿಘಂಟುಕಾರರು ಒಂದು ಪದದ ಅರ್ಥವನ್ನು, ಆ ಪದದ ಪರ್ಯಾಯ ಶಬ್ದಗಳಿಗೆಲ್ಲಾ ಅನ್ವಯಿಸುತ್ತಾರೆ. ೪. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ : ಅಷ್ಟ, ವಸು, ದಂತಿ . . . ದಿಗ್ದಂತಿ ಇಂತಿನಿತುಂ ೮ ಕ್ಕೆ ಪೆಸರು (ವೃವಣಾ. ೧೦-೩೦) ; ಶತಮುಖೇಂದು ದಿನಪತೃತಯಾಗ್ರದೊಳಾವಗಂ ಜಿತಮನೋಭವಗಣಂ ಬರೆ ದಂತಿಯೊಳೊಪ್ಪಿ ಪದ್ಧತಿಯೊಳಲ್ಲಿ ಯತಿ ತಾಂ ನಿಲೆ ಮಂಗಳಂ (ಛಂದೋಂಬು. ೨-೧೫೯). [ಸಂ. ದಂತಿನ್]

ದಂತಿಕಪೋಲ (ನಾ). ಆನೆಯ ಕೆನ್ನೆ,– ಗಂಡಸ್ಥಲ : "ದಂತಿಕಪೋಲ ಭೇಕ ಬಲಿಜೀವನಭಂ ಕರಟಾಹ್ವಯಂ" (ನಾನಾರ. ೮೮). [ದಂತಿ + ಕಪೋಲ]

ದಂತಿಗ (ನಾ). ೧. ಆನೆಯ ಮೇಲೆ ಕುಳಿತು ಯುದ್ಧಮಾಡುವ ಸೈನಿಕ,–ಭಟ : ಮಂತ್ರೀಶಗೇಡಿ ಮನ್ಮಥಕುಮಾರಕ ತನ್ನ ತೊಂತಿದ ಖಳರನುತ್ತರಿಸಿ ಹಂತಿಯೊಳ್ ಕೆಡಹಲ್ಕೆ ಕುಂಭಾಂಡನ ಕೊಂಡು ದಂತಿಗರಡ್ಡಯಿಸಿದರು (ಮೋಹತ. ೩೪-೩೭). ೨. ಒಬ್ಬಾತನ ಹೆಸರು : ಕಂಚೆಯನಾಳ್ವ ದಂಡಿಗನ ಮೇಗೆಟ್ಟು (ಎಇ. XXXIII, ೩೩೧-೭ ; 804) ; ಅವರಿಂ ಬಟಿಯಂ ಶ್ರೀದಯಿತಂ ದನ್ತಿಗನುದಿತೋದಿತಂ (ಎಕ. XI, ಚಿತ್ರದು. ೪೯-೩೭ ; 947). [ದಂತಿ + – ಗ$_2$]

ದಂತಿಗಮನೆ (ನಾ). ಆನೆಯಂತೆ ನಡಗೆಯುಳ್ಳವಳು ; ಗಜಗಮನೆ : ದಂತಿಗಮನೆಯಳ ಮೈಗಂಧ ಪೊರಸೂಸಲು (ನವಮೋ. ೪-೪೨). [ಸಂ. ದಂತಿಗಮನಾ (ದಂತಿ + ಗಮನ + –)]

ದಂತಿಘಟೆ (ನಾ). ಆನೆಯ ಹಿಂಡು,–ಸೈನ್ಯ ; ದಂತಿಘಟೆ ದಂತಿಘಟೆಯೊಳಾಂತು ಮೊಗಮಿಕ್ಕೆಯುಂ ಜೋದರ್ ಜೋದರೊಳೇಸಾಡೆಯುಂ (ಪಂರಾಮಾ. ೧೩-೭೬ ವ) ; ದಿಂಡುಗೆಡೆದವು ದಂತಿಘಟೆ ಶತಖಂಡವಾದವು ತುರಗದಳ (ಕುವ್ಯಾವಿ. ೪-೪೯). 'ಕರಿಘಟೆ' ಪರಾ. [ದಂತಿ + ಘಟೆ]

ದಂತಿಚರ್ಮ (ನಾ). ಆನೆಯ ತೊಗಲು,– ಚರ್ಮ : ಹೊಳೆಹೊಳೆವ ಕೆಂಜಡೆಯನಹಿಪತಿಯಳುಕೆ ಬಿಗಿದನು ದಂತಿಚರ್ಮವ ನೆಲಕೆ ಮುಂಜೆಱ ಗೆಳೆಯಲುಟ್ಟನು ದೇಸಿಪರಿ ಮೆಱೆಯೆ (ಕುವ್ಯಾಕ. ೭-೧೦). [ದಂತಿ + ಚರ್ಮ]

ದಂತಿನಿ (ನಾ). ಹೆಣ್ಣು ಆನೆ ; ಪಿಡಿ : ದಂತಿನಿ ಮೊಲೆಯೂಡೆ ನಿಂದು ನಿಜಪೋತಮಂ (ಶಾಂತಿಪು. ೨-೧೦೫) ; ದಂತಿನಿ ದಂತಿಯಂ ವನದೊಳಬ್ಜಿನಿಯೊಳ್ ಕಳಹಂಸಿ ಹಂಸನಂ ಕಂತುವನಾ ರತಿಪ್ರಮದೆ ನಂದನದೊಳ್ ನೆಱೆ ಕಾಣದಂತತಿಭ್ರಾಂತಿಯನಪ್ಪುಕೆಯ್ವ ತೆಱದಿಂ (ನೇಮಿಪು. ೪-೯೪). [ಸಂ. ದಂತಿನೀ]

ದಂತಿಪ (ನಾ). ಆನೆಯನ್ನು ಕಾಪಾಡುವವನು ; ಮಾವಟಿಗ : ಪಾಡುತಿರೆ ತದ್ದಂತಿಪನತಿನೂತ್ನಗೀತವಾತನ ವಿಕಲಸ್ವಾಂತಿಗೆ ನೋಡುವ ಕೂಡುವ ಚಿಂತೆ ಕಡಲ್ವರಿದುದು (ಹುಶೋಚ. ೯-೩೫). [ಸಂ.]

ದಂತಿಪುರ (ನಾ). ಕೌರವರ ರಾಜಧಾನಿ ; ಹಸ್ತಿನಾಪುರ : ನಿಜಸೇನೆ ಬರಲು ದಂತಿಪುರಕಲ್ಲಿಯ ಸಮಸ್ತವಸ್ತುಗಳ್ಕೈದುವಂತೆ ನೇಮಿಸಿ ಮಯೂರ ಧ್ವಜಂ ಸಹಿತ ನಡೆದಂ (ಜೈಮಿಭಾ. ೩೬-೭೭). [ದಂತಿ + ಪುರ]

ದಂತಿಮುಳ್ಳು (ನಾ). ದಂತಿಗಿಡದ ಮುಳ್ಳು : ದಂತಿಮುಳ್ಳನು ಹೋಳಿಗೆ ಸಿ ಚುಚ್ಚುವದು ಕೆಂಪಿನ ಕಣಗಲು ಹೂ ೧೧ ಅರಿಶಿನ ಕೆಂಪು ಅಕ್ಷತೆ ಮನೇಬಾಗಿಲಲ್ಲಿ ಹೂಳುವದು (ಕಾತುಚಂ. ೨-೩).

[ದಂತಿ + ಮುಳ್ಳು (< ಮುಳ್ಳ್)]

ದಂತಿರಾಜ (ನಾ). ಶ್ರೇಷ್ಠವಾದ ಆನೆ ; ಗಜರಾಜ : ದಂತಿರಾಜನಂ ತೊಡರ್ಚಿ ಪಿಡಿದೊಯ್ಯನೊಯ್ಯನೆ ಪೊಱವಂಟ್ಟು (ಅನಂಪು. ೬-೯೪ ವ).

[ದಂತಿ + ರಾಜ]

ದಂತಿವೃಂದ (ನಾ). =ದಂತಿಘಟೆ: "ದಂತಿವೃಂದಂ ಘಟೆಯೆನಿಕ್ಕುಂ" (ಮುಂಗಡಾ. ೪೬-೩). [ದಂತಿ + ವೃಂದ]

ದಂತಿವ್ರಜ (ನಾ). = ದಂತಿಘಟೆ : ದಂತಿವ್ರಜದಿಂದಂ ದ್ವಿಜಸಂತತಿಯಿಂ . . . ತುಂಬಿರ್ವುದು ತನ್ಮಹಿಕಾಂತನ ಬಂಧುಗಳ ವೈರಿವರ್ಗದ ದುರ್ಗಂ (ಹರಿಪು. ೨-೦೪). [ದಂತಿ + ವ್ರಜ]

ದಂತಿವ್ರಾತ (ನಾ). = ದಂತಿಘಟೆ : ತುರಗನರರಥವಿಟ್ಟಣಿಸೆ ಸವಱಿದವು ದಂತಿವ್ರಾತವ್ಯಭಯದೊಳು (ಕುವಾ.ಭೀ. ೪-೭೪). [ದಂತಿ + ವ್ರಾತ]

ದಂತಿಶಿಶು (ನಾ). ಆನೆಯ ಮರಿ ; ಕಲಭ : ಹಯಗ್ರೀವಂ ಆ ಶ್ರಿವೃಷ್ಣಂಗಿರ್ದಿ ವನನಾಗಾರಿಯನಾಂತ ದಂತಿಶಿಶುವೊಲ್ . . . ನೀಡಿಲ್ಲ ದಳ್ಯಾಡುಗುಂ (ಶಾಂತಿಪು. ೫-೨೭). [ದಂತಿ + ಶಿಶು]

ದಂತಿಸಂತಾನ (ನಾ). = ದಂತಿಘಟೆ : ದಂತಿಸಂತಾನಮಂ ಕಿಶೋರ ಕೇಸರಿಯಳಿಸರ್ ನೆಱಿವುದು (ನೇಮಿಪು. ೯-೩೭ ವ).

[ದಂತಿ + ಸಂತಾನ]

ದಂತುರ (ಗು). ೧. ಎತ್ತರವಾದ ಹಲ್ಲುಗಳುಳ್ಳ ; ಮೇಲಕ್ಕೆ ಉಬ್ಬಿದ ಹಲ್ಲುಗಳುಳ್ಳ. ೨. ಸಮತಳವಲ್ಲದ ; ಹಳ್ಳತಿಟ್ಟಾದ ; ವಿಷಮಂತಳವಾದ : ದಂತುರ ದಿಗಂತ ಚುಂಬಿತ ಉದಯಮೇಣಸ್ತ್ರವಿದರ್ಶನಂ (ಶ್ರೀಧಾಮಾ. ೪೦೫-೫೩). ೩. ಹರಡಿರುವ ; ವ್ಯಾಪ್ತವಾದ : ತುಪ್ಪಟ ತತಿಯಿಂ ದಂತುರಮಾದೆನ್ನಂಗಮನಂತರಿಸದೆ ಕರದಿನೆಬವಿದಂ ಮನದಟಲಂ (ಕಾದಂಣಾ. ೭೩೦). [ಸಂ.]

ದಂತುರಚಕ್ರ (ನಾ). ಹಲ್ಲುಗಳನ್ನು ಹೊಂದಿರುವ ಚಕ್ರ : ದಂತುರಚಕ್ರ, ಅಂದರೆ ಹಲ್ಲುಗಳುಳ್ಳಂಥ ಚಕ್ರ . . . ಮುಳ್ಳುಗಳುಳ್ಳಂಥ ಚಕ್ರವೆಂತಲೂ ಅನ್ನಬಹುದು (ಮುಂಬಯಿ. ೩-೧೯೧ ಅಡಿಟಿ). [ದಂತುರ + ಚಕ್ರ]

ದಂತುರಿತ (ಗು). ೧. ಹರಡಿರುವ ; ವ್ಯಾಪ್ತವಾದ : ಮಹಾ ಪ್ರವಾಹಿನೀ ಸಲಿಲ ಸಂಮಿಶ್ರ ಕರ್ಪೂರದಳ ಬಹುಳಕಾಂತಿ ದಂತುರಿತ ಚಂದ್ರಕಾಂತ ಕಲಶಂಗಳಿಂ (ಪಂಡಾಮಾ. ೧೨-೨ ವ). ೨. ತುಂಬಿರುವ : ಮೌಕ್ತಿಕವಂಡ ಪದ ನಡುವಣ ಮರಕತಪರ್ಯಂಕದೊಳವಿರಳಾಶ್ರುಬಿಂದುಸಂದೋಹ ದಂತುರಿತಪಕ್ಷ್ಮವಾಲಾಲುಳಿತನೇತ್ರೆಯುಂ (ಕ ಂ ದ್ರ ಪು. ೩-೫೦ ವ). (ನಾ). ೩. ನೆಗ್ಗಿದುದು ; ಹಳ್ಳಬಿದ್ದಿರುವುದು : ವಿವಿಧಾಯುಧ ದಂತುರಿತಂಗಳಿಂದುವಾ ಸಂಗರಜಲನಿಧಿಯೊಳ್ ವರೂಥಕರಿನಿಕರಂಗಳ್ (ಪಂಪಭಾ. ೧೩-೩೫). [ಸಂ.]

ದಂತೋಷ್ಠ್ಯ (ನಾ). [ವ್ಯಾಕ] ಹಲ್ಲು ಮತ್ತು ತುಟಿಗಳ ಸಹಾಯದಿಂದ ಹುಟ್ಟುವ ವರ್ಣ,–ಸ್ವನ ; ವಕಾರ: ದಂತೋಷ್ಠ್ಯ–ವ (ಕೈಟಿಪ್ರ. ೫).

[ಸಂ.]

ದಂತ್ಯ (ನಾ). [ವ್ಯಾಕ] ದಂತಪ್ರದೇಶದಿಂದ ಹುಟ್ಟುವ ಅಕ್ಷರ ; ಹಲ್ಲಿನ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರ : ತಥದಧನ ಮತ್ತು ಲ, ಸ ವರ್ಣಗಳು : ದಂತ್ಯ ತವರ್ಗ, ಲ, ಸ. (ಕೈಟಿಪ್ರ. ೫) : ಕರ್ನಾಟ ಎಂಬ ದಂತ್ಯವರ್ಣದ ರೂಪ ಸರಿಯೆ ? (ಡ್ರಾವಿ. ೮೩). [ಸಂ.]

ದಂತ್ಯಾವಳಿ (ನಾ). =ದಂತಿಘಟೆ : ಆ ವಿಗಡವರಿವಾರವಲಿ ರಥ ಸಾವಿರವ ಮೇಳೈಸಿದರು ದಂತ್ಯಾವಳಿಯ ಬೀ ಆಣಿಸಿ ನಿಲಿಸಿದರೈದುಸಾವಿರವ (ಕುಪಾ.ಪ. ೧೯-೩). [ದಂತಿ + ಆವಳಿ$_1$ (= ಆವಲಿ)]

ದಂದಣ 'ದಣದಣ' ನೋ.

ದಂದರಹಾಳ (ನಾ). ವ್ಯರ್ಥವಾಗಿ ಖರ್ಚುಮಾಡುವವನು ; ದುಂದುಗಾರ: "ಹಣವನ್ನು ಲಕ್ಷ್ಯವಿಲ್ಲದೆ ಖರ್ಚುಮಾಡುವವನು,–ಪೋಲುಮಾಡುವವನು; ದುಂದುಗಾರ, ದಂದರಹಾಳ" (Spendthrift. ಇಂಗ್ಲಿ).

[<ದುಂದು + ಹಾಳು (<ಪಾಚ್) + – ಅ$_7$]

ದಂದರಹಾಳಿ (ನಾ). ವ್ಯರ್ಥವಾಗಿ ಖರ್ಚುಮಾಡುವವಳು ; ದುಂದುಗಾತಿ : ಅಕ್ಕಯನ್ನು ನಿಮ್ಮಪ್ಪನ ಮನೆಯಿಂದ ತಂದಿದ್ದೆಯೇನೆ ದಂದರಹಾಳಿ ? (ಮಾಮುಣಾ. ೧೦೦) ; ಬೀರಕ್ಕನು ದಂದರಹಾಳಿ, ವಿಪರೀತ ವೆಚ್ಚವನ್ನು ಮಾಡತಕ್ಕವಳು (ನೀತಿಚಿಂ. IX, ೨).

[ದಂದರಹಾಳ + – ಇ$_2$]

ದಂದವಡೆ (ಕ್ರಿ). ಬೇರೆಯಾಗು ; ವಿಯೋಗವನ್ನು ಹೊಂದು (?) : ದಂದವಡೆದೊಡಗೂಡಲಿಲ್ಲದತಿಶಯಚಿಂತೆ ಸಂದಣಿಸಿದುದು ಚಿತ್ತದೊಳು (ಸೌಂದಪು. ೦೩-೩೩) : "ಮೋಹ ತಾಳು" (ಪ್ರಭಾ.).

[<ದ್ವಂದ್ವ + ಪಡೆ$_1$]

ದಂದವೊಡೆ (ಕ್ರಿ). ವೈಷಮ್ಯವನ್ನು ಪರಿಹರಿಸು ; ವಿರೋಧವನ್ನು ನೀಗು (?) : ದೂರ್ವಾಸ ಮುನಿ ನುಡಿದಂತೆ ಕೃಷ್ಣಂಗೆ ಸಂದಗಮಣಂ ದೋರದಾಟಿಯದನಿಂದ ಸಲೆ ಸಂದ ಮರಣಂ ಸಾರ್ದುದರಿನೀಶಪ್ರಸಾದಿಗಳ ಮಹಿಮೆಯನಾವನು ದಂದವೊಡೆವಂತೆ ಬಣ್ಣಿಪನದಾರ್ಕಿರ್ದೆ ಮನದಂದು ಮತ್ತಂ ಕೇಳರೆಲೆ ವಿಪ್ರದುಷ್ಪರಿರ ಮುಂದಿನ್ನೆ ಪೇಳ್ವಂ ಸುಕೇಶಪುಂಗವನ ಕಥೆಯನದನಾಲಿಸುವುದು (ಅರಾಕ. ೬-೩೪).

[P ಇದು 'ಅಂದವಡೆ' ಎಂಬುದರ ಅಪಲಿಖಿತವಿರಬಹುದು]

ದಂದಶೂಕ (ನಾ). ಹಾವು ; ಸರ್ಪ : "ವಿಷಧರಃ, ದಂದಶೂಕಃ . . . ಭುಜಂಗಮಃ – ಈ ೨೫ ಪಾವಿನ ಪೆಸರ್" (ಹರಿಹಯು. ೦೦೩-೦೮) : ಕುಪಿತಾನೇಕವದಂದಶೂಕದವ . . . ಜರಾತಂಕಾಖಿಭೇದಂಗಳಪ್ಪುವ ಸರ್ಗಂಗ[೪]ಂ (ಆದಿಪು. ೧೬-೯); ದುರ್ಜನರಿಗಂಜುವುದು ಲೋಕವು ಸಜ್ಜನರ ಲೆಕ್ಕಿಸದು ತಾರ್ಕ್ಷ್ಯನ ಸೆಜ್ಜೆಯೊಳಗಿಹ ದಂದಶೂಕ ನನರ್ಚಿಸುವರೊಲಿದು (ಕುಪಾ.ಉ. ೪-೨೦). [ಸಂ.]

ದಂದಶೂಕಪತಾಕ (ನಾ). ಬಾವುಟದಲ್ಲಿ ಸರ್ಪದ ಗುರುತುಳ್ಳವನು ಉರಗಪತಾಕ ; ದುರ್ಯೋಧನ : ದಂದಶೂಕಪತಾಕನ ಸೆಱಗಿಲ್ಲದ ಮೆಯ್ಗೂಲಿತನಕ್ಕೆ ಮೆಚ್ಚಿ (ಗದಾಯು. ೬-೩೦ ವ).

[ಸಂ. ದಂದಶೂಕ + ಪತಾಕಾ + –]

ದಂದಶೂಕಪತಿ (ನಾ). ಹಾವುಗಳ ಒಡೆಯ ; ಸರ್ಪಶ್ರೇಷ್ಠ ; ಆದಿಶೇಷ: ಭಾಳವಿಲೋಚನಂ ದಂದಶೂಕಪತಿಹಾರವಂದಾರಸ್ಮೇರಮುಖಂ . . . ನಿಜರೂಪಂ ತೋಱಿದಂ (ರಾಜಶೇ. ೦೪-೪೬). [ದಂದಶೂಕ + ಪತಿ]

ದಂದಶೂಕಪ್ರಮಾಥಿ (ನಾ). ಹಾವುಗಳನ್ನು ಮರ್ದಿಸುವವನು,–ಕೊಲ್ಲುವವನು ; ಗರುಡ : ಮುಂದೆ ನಿಂದಿರ್ದ್ ದಂದಶೂಕಪ್ರಮಾಥಿಯಂ ಯಥೋಚಿತ ಸ್ನಿಗ್ಧಮಧುರಾಳಾಪದಿಂ ಸಂಭಾಷಿಸಿ ದೇವಕೀನಂದನಂ ಸ್ಯಂದನಮಂ ಕಿಱಿದು ನಡೆಯಿಸೆ (ಜಗವಿ. ೪-೦೦ ವ).

[ಸಂ. ದಂದಶೂಕಪ್ರಮಾಥಿನ್]

ದಂದಶೂಕಭಯ (ನಾ). ಹಾವಿನ ದೆಸೆಯಿಂದ ಉಂಟಾಗುವ ಹೆದರಿಕೆ ; ಸರ್ಪಭೀತಿ : ಅವದ್ಯಮಾದ್ಯದ್ದಂದಶೂಕಭಯಜಾಗರೂಕರ ವನಿಪಾಶ್ರಮಗಳರಸುಗೆಯ್ಯುತ್ತುಮಿರೆ (ಶಾಂತಿಪು. ೭-೧೨೩ ಪ).

[ದಂದಶೂಕ + ಭಯ]

ದಂದಶೂಕವನಿತೆ (ನಾ). ಹೆಣ್ಣುಹಾವು ; ಭುಜಂಗಿ : ದಂದಶೂಕವನಿತಾ ಜನಮಭಿಷ್ಟುತಿಗೆಯ್ದು ಬಿನ್ನವಿಸೆ (ಜಗವಿ. ೩-೧೦೩ ಪ).

[ದಂದಶೂಕ + ವನಿತೆ]

ದಂದಶೂಕವಿಭೂಷ (ನಾ). ಹಾವುಗಳೇ ಒಡವೆಯಾಗಿರುವವನು ; ನಾಗಭೂಷಣ ; ಶಿವ : ಜಯಜಯ ದಂದಶೂಕವಿಭೂಷ (ತ್ರಿಭುತಿ. ೧೨-೬). [ಸಂ.]

ದಂದಶೂಕೇಶ್ವರ (ನಾ). ಸರ್ಪರಾಜ ; ಆದಿಶೇಷ : ಸಂಜೀವಕದ ರತ್ನಮಂ ದಂದಶೂಕೇಶ್ವರಂ ಕುಡುವನೆಂಬಾಸೆಯಿಂ ಪಂಬಲಿಸುತಿರು ತಿರ್ದರು (ಚೈಮಿಭಾ. ೨೪-೨೬). [ದಂದಶೂಕ + ಈಶ್ವರ]

ದಂದಹಗೊಳಿಸು (ಕ್ರಿ). ಸುಡು; ದಹಿಸು; ಸಂತಾಪವನ್ನುಂಟುಮಾಡು; ಹಿಂಸಿಸು : ಸಾಹಸಿಯಾಕೆಯರಸನು ಅವನ ಅಗ್ರಜನು ಬಲಯುತನು ಮೂಲೋಕ ದಂದಹಗೊಳಿಪನು (ಜಿನಭಾ. ೫೦-೨೮).

[ದಂದಹ ? + ಕೊಳ್$_1$ + – ಇಸು$_3$]

ದಂದಹ್ಯಮಾನ (ಗು). ಹೆಚ್ಚಾಗಿ ಸುಡುವ ; ಅತಿಶಯವಾಗಿ ಸುಡುವ : ಧರೆಯಾಗಸವ ದಂದಹ್ಯಮಾನವ ಮಾಳ್ಪ ಉರಿವ ಬಾಣವ ಮಂತ್ರಿಸಿಡಲು (ಜ್ಞಾನಚ. ೫.೮೦).'ದಂದಹ್ಯಮಾನಗಾತ್ರೆ' ಪರಾ. [ಸಂ.]

ದಂದಹ್ಯಮಾನಗಾತ್ರೆ (ನಾ). ಬಹಳವಾಗಿ ಸುಡುತ್ತಿರುವ ಶರೀರವುಳ್ಳವಳು ; ಬಹಳ ಸಂತಾಪವನ್ನು ಅನುಭವಿಸುತ್ತಿರುವವಳು ; ತುಂಬ ವ್ಯಥಿತಳಾದವಳು: ಅಸಹ್ಯಪರಿಭವಾನಲ ದಂದಹ್ಯಮಾನಗಾತ್ರೆಯುಮಾಗಿ . . . ಪಾಂಚಾಲರಾಜತನೂಜೆ ಪವಮಾನತನೂಜನಲ್ಲಿಗವಂದಂ (ಗದಾಯು. ೦-೫೫ ಪ). [ಸಂ.ದಂದಹ್ಯಮಾನಗಾತ್ರಾ (ದಂದಹ್ಯಮಾನ+ಗಾತ್ರ+–)]

ದಂದಹ್ಯಮಾನಮಾನಸ (ನಾ). ಬಹಳ ಸಂತಾಪಪಡುತ್ತಿರುವ ಮನಸ್ಸುಳ್ಳವನು ; ಅತ್ಯಧಿಕವಾದ ಮನೋವ್ಯಥೆಯನ್ನು ಅನುಭವಿಸುತ್ತಿರುವವನು : ಕುಲಾಪವಾದ ಪರಾಭವದ ದಾವಾನಳದಿಂ ದ[ಂ]ದಹ್ಯಮಾನ ಮಾನಸನುಮಸಹ್ಯಮಾನ ಚಿಂತಾಂತರಂಗನುಮಾಗಿ (ಸುಕುಮಾ. ೨-೦೦ ಪ); ಸಲಿಲಸಂಘಾತದಿನಪಮೃತ್ಯು ಪುಟ್ಟೆ ಮಾನಸರಸಹ್ಯ ಶೋಕಾನಲ ದಂದಹ್ಯ ಮಾನಮಾನಸರಾಗೆ (ಪಂರಾಮಾ. ೦-೮೦ ಪ).

[ದಂದಹ್ಯಮಾನ + ಮಾನಸ$_2$]

ದಂದಳ 'ದಣದಣ' ನೋ.

ದಂದುಗ (ನಾ). ೧. ತೊಡಕು ; ಗೊಂದಲ ; ಸಿಕ್ಕು : ಪುರಪುರಂಧ್ರಿಯರ ಸಂದಣಿಸಿ ಬಳೆದ ಮೊಲೆಯೆಡೆಯಿನಿಟಿದೆಂದುಮಿಲ್ಲದ ಮುತ್ತಿನಾರಮಿಂದೆ ಸಂದುದೆಂಬ ಸಂದೆಗದ ದಂದುಗಮನವರೊಡನಾಡಿಗಳ ಚಿತ್ತದೊಳ್ ಬಿತ್ತಿಯುಂ (ಚಂದ್ರಪು. ೮-೪೩ ಪ); ಇಂದಿನವರಂದಿನವರ್ ಕೆಲರೆಂದು ಪಿರ್ಕುವೀ ದಂದುಗದಿಂದಮೇನೆಮಗನಿಂದ್ಯ ಕವೀಂದ್ರರೆ ವಂದ್ಯರಾವಗಂ (ಧರ್ಮನಾ. ೦-೪೨). ೨. ವ್ಯಥೆ; ದುಃಖ ; ಶ್ರಮ ; ಕ್ಲೇಶ : ಎಂದೋ ಸಂಸಾರದ ದಂದುಗ ಹಿಂಗುವುದು (ಬಸವ.೨೨); ತನ್ನ ಕೇಳೀವನಮಂ ಪರೇತ ವನಮೆಂದವನೀಶನಮಂ ಸಮಂತು ಸಂಭಾವಿಸಿದಂದು ಭಾವಿಸದನೊಂದನೆ ದಂದುಗದಿಂದಗಲ್ದುದಂ (ಚಂದ್ರಪು. ೯-೦೬) : ಕವಿತೆಯನು ಬಱಿದೆ ದಂದುಗಕ್ಕೊಳಗಾಗಿ ಪೇಳ್ದನೆಂದೆನ್ನ ನಗುವಂದಮಂ ಮಾಡದೆನಗೊಲಿದಿತ್ತನ ಮಲಮತಿಯಂ ದೇವಪುರದ ಲಕ್ಷ್ಮೀರಮಣನು (ಚೈಮಿಭಾ. ೦-೬). ೩. ಕಷ್ಟ; ತೊಂದರೆ: ಇಂದು ಸುಧಾಂಶು ರಾಜನತಿ ಶೀತಳಶೀಲನನೂನ ದಾನಿಯೇಳ್ತಂದೊಡೆ ಪಂಕಜಕೆ ಚಕ್ರಯುಗಕ್ಕಸತೀಕುಲಕ್ಕೆ ಪೋ ದಂದುಗ ಮಾಯ್ತು (ಗಿರಿಳ.೪-೦೦೪) : ಮನುಜರೆಲ್ಲರುಂ ಸಾವ ಹುಟ್ಟುವ ದಂದುಗ ಕ್ಕೊಲ್ದು ಬಱಿದೆ ಕೆಡುತಿರ್ಪರೆದನುಸಿರಲಳವೆ (ಜಿನಪು. ೩-೦೫) ; ಪಲವುಂ ಪಂಬಲೊಂದು ದಂದುಗಂ ಬೆಟ್ಟಿತಾಗೆ ಬೀಟ್ಕೊಂಡಂ (ರಾಮಾಶ್ವ. ೩೯-೦೩). ೪. ಗೋಜು ; ಗೊಡವೆ : ವಿಷಾಹಿಗಣಮನೇಕರೌದ್ರ ಮೃಗಜಾತಿ ಗಳಾಳಳರಸೆಂಬುದೊಂದು ದಂದುಗಂ . . . ಪೊಱಗೆಂದೊಡಿಂ ಸುಖ ಮನೇವೊಗಟ್ಟಪುದೊ ಭೋಗಭೂಮಿಯಾ (ಆದಿಪು. ೫-೩೦) ; ನಿಮ್ಮ ನಱಿದ ಶರಣಂಗೆ ಶಿವಪೂಜೆಯ ಮಾಡುವ ದಂದುಗವೇಕೋ (ಶೂನ್ಯಸಂ. ೦೮೫-೪) ; ಎಮಗೆ ತಪಸ್ವಿಗಳ್ಗೆ ನೃಪವಾರ್ತೆಯ ದಂದುಗಮೇವುದೆಂದು ನಿರ್ಮಮತೆಯಿನಿರ್ಪೊಡೆ (ಶಬ್ದಾನು. ೪೬೮ ವ್ಯಾಖ್ಯಾ). ೫. ಕೆಟ್ಟ ಕೆಲಸ ; ದುಷ್ಕರ್ಮ ; ಪಾಪಕೃತ್ಯ : ಹಿಂದೆ ಮಾಡಿದ ಭವಭವಂಗಳ ದಂದುಗವು ಜೀವರನು ನಾನಾಭಂದದಲಿ ಬೇಸಱಿಸಿ ಕಾಡುವದು (ಅಕ್ರೂಚ. ೩-೩೦). ೬. ಹವ್ಯಾಸ ; ಚಟ : ಕಬ್ಬದ ದಂದುಗವಿಲ್ಲದೊನನಟ್ಟ ಕಳೆವರೆ ನಾಡಿಂ (ಬಂಡರಿ. ೦-೦೫); ವ್ಯಾಪಾರ, ನೌಕರಿ ಮೊದಲಾದ ದಂದುಗಗಳ ಒತ್ತಾಯ ಕ್ಕಾಗಿ ತಾಯಿಯು ತೊಟ್ಟಲಿನ ದಾರವನ್ನು ಆಳಿನ ಕೈಯಲ್ಲಿ ಕೊಡುವ ರೂಢಿಯು ಹೆಚ್ಚಾದರೆ (ಯಕ್ಷಪ್ರ. ೦೫೪). ೭. ಒಡನಾಟ ; ಸಹವಾಸ : ಸದ್ಬ್ರಾಹ್ಮಣನ ಕನ್ನೆಯನು ಅಂದವಾಗಿರಲಗ್ನಿಸಾಕ್ಷಿಕದಿಂದ ವರಿಸುವೆನೀಗ ನಿನ್ನಯ ದಂದುಗಕ್ಕೊಳಗಾಗೆನೆಂದನು (ತಿಮ್ಮಆ. ೫-೦೩) ; ಹಿಂದೊಬ್ಬ ಋಷಿಪುತ್ರನಂದು ದಾಸಿಯಂ ಕೂಡೆ ಸಂದೇಹವಿಲ್ಲದೆ ಹಲವು ಕಾಲ ದಂದುಗ ದೊಳು ಸಿಲುಕಿ ನಿಂದು (ಪುರಂದ. ೧-೦೭೨-೨) ; ಬಂಧನವ ಮಾಡಿದರು ಸಂವ ಜ್ಞಾನಿಯೆ ಲೇಸು ಹೊಂದಿ ಸಾಸಿರವ ಕೊಟ್ಟರೂ ಕರ್ಮಿಯ ದಂದುಗವೆ ಬೇಡ (ಸರ್ವಜ್ಞ. ೪೩೦). ೮. ಕೆಲಸ ; ಉದ್ಯೋಗ ; ಕಾರ್ಯ : ಅತ್ತಲಿತ್ತಲೆಡೆಯಾಡುವ ದಂದುಗದಾಗಳೇಂ ಪೊದಟ್ಟಿಸೆದುದೊ ಚಾರುದೇವಗಣಿಕಾಮಣಿನೂಪುರ ಮಂಜುಸಿಂಜಿತಂ (ಆದಿಪು. ೭-೨೨); ನಿನ್ನನಿನ್ನಾನುಮಗಲ್ವೆನೇ ಕೆಳೆಯ ಬೆನ್ನನೆ ಬಂದವೆನಾಂತರಂ ಯಮಸ್ಥಾನ ಮನೆಯ್ದಿಸುತ್ತಿದುವೆ ದಂದುಗಂ (ಪಂಪಭಾ. ೦೩-೩) : ಜಿನಪದಸೇವೆಯ ದಂದುಗದೊಳ್ ತೊಡರ್ದನೇಂ ಮಹಾತ್ಮನೊ ದಿವಿಜಂ (ಸುಕುಮಾ. ೦೦-೬); ಮಾಟ್ಟ ಸಂಹರಿಪ ದಂದುಗಮಂ ಪೊಱಗಿಕ್ಕಿತೆಂಬ ಮೆಯ್ಸಿರಿ ಸಹಜಾತಮಾಗೆ (ಪರ್ಧಪು. ೦-೮೯). ೯. ದುಷ್ಕರ್ಮಿ ; ಪಾತಕಿ ; ಪಾಪಿಷ್ಠ : ಬೆಂದ ಸಂಸಾರದಲಿ ತೊಳಲುವ ದಂದುಗರು ಹರಿಭಕ್ತಿಶೂನ್ಯರು ನಿಂದಕರು ಹೊಱವಡಲಿ ಬಣ್ಣಿಪೆ ಹರಿಕಥಾಮೃತವ (ಕಾಶಿಕಾ. ೪-೨).

ದಂದುಗಂಬಡಿಸು (ಕ್ರಿ). ಕಷ್ಟಪಡಿಸು ; ನೋವನ್ನುಂಟುಮಾಡು ; ಪೀಡಿಸು : ಮಂದಮತಿಯುಮನಱಿದು ದಂದುಗಂಬಡಿಸುವುದಿಂದು ಶೇಖರವರಾದ್ವೈತವಱಿಯಾ (ಸಾನಂಚ. ೦-೦೯) ; ದಂದುಗಂಬಡಿಸಿದಡೆ ಭೂತದ ವೃಂದವನು ಕೊಲಿಸುವರು ಮಾಣದೆ ದಂದಶೂಕಾಖ್ಯದಲಿ (ನಿಭಾಗ. ೫-೧೦-೩೯). [ದಂದುಗಂಬಡು + – ಇಸು$_3$]

ದಂದುಗಂಬಡು, ದಂದುಗಬಡು (ಕ್ರಿ). ಕಷ್ಟವನ್ನು ಅನುಭವಿಸು ; ಕೋಟಲೆಗೊಳ್ಳು : ಸಮ್ಯಗ್ಜ್ಞಾನದುದಯದ ನೆಲೆಯ ಕಾಣಿಸದೆ ದಂದುಗಂಬಡುತಿಹುದು . . . ಜಗವೆಂದ (ಕುವ್ಯಾಲಾ. ೪-೦೬). ದಂದುಗ ಬಡು : ಕಾದಿ ದಂದುಗಬಡದ ಮುನ್ನವೇ ತನ್ನಳವಿಗೈದಿದಂಕದ ಭಟರ ತೇರ್ಗಳಂ ತೆಗೆದಿಳೆಗೆ ಮೋದಿದಂ (ಚೈಮಿಭಾ. ೭-೪೭). [ದಂದುಗ + ಪಡು$_1$]

ದಂದುಗಂಬೊಱು (ಕ್ರಿ). ತೊಡಕಿಗೆ ಸಿಕ್ಕಿಕೊಳ್ಳು : ಇಂದು ಗತಿಗೆಟ್ಟೆ ಮ್ಮುವಂ ಪೊಱಿವೆನೆಂಬೊಂದು ದಂದುಗಂಬೊತ್ತು ವಿಧವಾವಿತ್ತಮಂ ಕಳ್ದು ತಂದಿತ್ತಂ (ಪದ್ಮಕಾ. ೦೩-೯). [ದಂದುಗ + ಪೊಱು]

ದಂದುಗಗೊಳ್ (ಕ್ರಿ). ೧. ದುಃಖಪಡು ; ವ್ಯಥೆಯನ್ನು ಹೊಂದು : ದೇವದ್ರೋಹ ಪೋಗದಾಂ ಭಾರಮಲ್ಲದೆ ಧರೆಗೆ ಹಿತನಾಗೆನೆನುತುಮಾ ನಂದಿ ದಂದುಗಗೊಂಡನು (ನಂದಿಮಾ. ೯-೫೨). ೨. ತೊಂದರೆಯನ್ನು

ಹೊಂದಂ ; ಕಷ್ಟವನ್ನು ಪಡೆ : ತಾಗಿ ದಂದುಗಗೊಂಡನನುಸಾಲ್ವನಂಗೈಸಿ ಬೀಗಿದಂ ಕರ್ಣಜಂ (ಜೈಮಿಭಾ. ೨೨-೪೧). [ದಂದುಗ + ಕೊಳ್$_1$]

ದಂದುಗಬಡು 'ದಂದುಗಂಬಡು' ನೋ.

ದಂದೂರಿ (ನಾ). ವ್ಯರ್ಥವಾಗಿ ಖರ್ಚುಮಾಡುವವಳು ; ದುಂದುಗಾತಿ : ತಂದರೆ ತಾ ಹೋಗ ದಂದೂರಿ ಅತ್ತೆವ್ವಾ ಬಳಕೂತ ಬಳಕೂತ ದುಂಡ ಗೊಡ ಹೊತ್ತೊ . . . ಬಳಕು ಹೆಣ್ಣಿನ ಮ್ಯಾಗ ಬರುತಾಳ ಬರುತಾಳ ಮತ್ತೊಬ್ಬಳ್ಹ್ಯಾಂಗ (ಕಜಾಗೀ. ೨). 'ದಂದರಹಾಳಿ' ಪರಾ. [?]

ದಂಧತೆ (ನಾ). ದುರಾಸೆ ; ಲೋಭ (?) : ವಂದರೆಯ ವದನದೊಳ್ ನೆಲೆಗೈದು ವಕ್ರತರ ಬಂಧುರದ ನುಡಿಗಳಿಂದಶ್ವಪತಿಯಾತ್ಮಜೆಗೆ ದಂಧತೆಯ ಬೋಧಿಸಿ ವಿಕಾರಮಂ ಪುಟ್ಟಿಸುತಲ್ (ವೆಂಕಾರಾ. ೨-೩-೨೯).

[< ದಂಧನ ?]

ದಂಧನ, ದಂಧನೆ (ನಾ). ೧. ಮೋಸ ; ವಂಚನೆ ; ಕುತಂತ್ರ : ಇಂದು ಮುಖಿಯೆ ನೀ ಬಡಿಸೆಂದು ಕೊಟ್ಟರೆ ದಂಧನಗಳ ಮಾಡಿ ದೈತ್ಯರ ವಂಚಿಸಿದ (ಪುರಂದ. ೧-೦೩೦-೦). **ದಂಧನೆ :** ೨. ಭ್ರಮೆ; ಭ್ರಾಂತಿ ; ಮೋಹ : ಮನೆಯೆಂಬೊದೆ ಸುಮ್ಮನೆ ಮಕ್ಕಳೆಂಬೊದೆ ದಂಧನೆ (ವಾದಿಕೀ. ೩೨-೧).

[ದೇ. ॥ ತೆಲು. ದಂದನ]

ದಂಧನಂಗೆಯ್ (ಕ್ರಿ). ಮೋಸಮಾಡು ; ವಂಚಿಸು : ಬೆದಱಿಸಿ ನುಡಿದುಂ ದಂಧನಂಗೆಯ್ದುಂ ಕಾಲಮಂ ಕಳಿವೆವು (ಚಿಕವಂ. ೧೭೬-೪).

[ದಂಧನ + ಕೆಯ್$_1$]

ದಂಧನೆ 'ದಂಧನ' ನೋ.

ದಂಧೆ 'ಧಂದೆ' ನೋ.

ದಂಪತಿ (ನಾ). ೧. ಗಂಡಹೆಂಡಿರು ; ಸತಿಪತಿಗಳು : "ಮಿಥುನಂ ದಂಪತಿಗಳೆನಲು ಜಂಪತಿಗಳೆನೆ ಗಂಡಹೆಂಡಿರ್ಗೆ ಪೆಸರೆನಿಕ್ಕುಂ" (ಮಂಗರಾ. ೮-೨೪) ; ಮನ್ಮಥಕ್ರೀಡೆಗೆ ನೋಡೆ ನಾಡೆ ಗುಱಿಯಪ್ಪುವು ದಂಪತಿ ಭೋಗಭೂಮಿಯೊಳ್ (ಆದಿಪು. ೫-೪೦) ; ಅಗಲದೆ ನಲಿಯುತಿರ್ದರಾ ದಂಪತಿಗಳ್ (ಜಗವಿ. ೨-೫೨) ; ಯಾರೊಬ್ಬರಿಗೂ ತಿಳಿಸದೆ ದಂಪತಿಗಳು ಮನೆಬಿಟ್ಟಿದ್ದರು (ಶಾಂತಲಾ. ೯೦). ೨. ಜೊತೆ ; ಜೋಡು. 'ದಂಪತಿವಕ್ಕಿ' ಪರಾ. ೩. = ದಂಪತಿಕ್ಷೇತ್ರ : ವನಜಾತಾಹಿತಸೂನು ದಂಪತಿ ನವಾಂಶಸ್ಥಾಯಿ . . . ಅಖಿಳಗ್ರಹ ವಿಲಗ್ನ ಕ್ಷೇತ್ರಮಂ ವೀಕ್ಷಿಸಲ್ ಜನಿಯಿಕ್ಕುಂ ಪುರುಷತ್ರಯಂ (ಜಾತತಿ. ೩-೦೪). [ಸಂ. ದಂಪತೀ]

ದಂಪತಿಕ್ಷೇತ್ರ (ನಾ). [ಜ್ಯೋತಿ] ಮಿಥುನರಾಶಿ : ಧನುಜ್ಯೇಜಂ ಕುಜಗೇಹದೊಳ್ ನಿಲೆ ಪರಸ್ತ್ರೀಲೋಲಂ . . . ದಂಪತಿಕ್ಷೇತ್ರದೊಳ್ ಧನವಂತಂ ಧರಣೀಶಕಾರ್ಯಭರಧುರ್ಯಂ ಸತ್ಕಳಾಕೋವಿದಂ (ಜಾತತಿ. ೧೭-೨೯).

[ದಂಪತಿ + ಕ್ಷೇತ್ರ]

ದಂಪತಿಗೆಯ್ (ಕ್ರಿ). ಜೋಡಿಮಾಡು ; ಜೊತೆಗೂಡಿಸು ; ಗಂಡಹೆಂಡಿರಾಗುವಂತೆ ಮಾಡು : ಭುವನಜಂತುಗಳ ದಂಪತಿಗೆಯ್ವ ಕರ್ತುನಿನ್ನವರ ವಿವಾಹಕ್ಕೆ ಹೊಱತೆ (ಪೋಹತ. ೪೦-೪೯). [ದಂಪತಿ+ಕೆಯ್$_1$]

ದಂಪತಿಜನ (ನಾ).=ದಂಪತಿ ೧ : ವೇಳವಿಸಿರ್ದ ದಂಪತಿಜನಂ ನಲಿದಾಡುವ ರಮ್ಯಹರ್ಮ್ಯದಿಂ . . . ಎಸೆದಿರ್ಪುದಾ ಪುರಂ (ಜಗವಿ. ೨-೩೪).

[ದಂಪತಿ + ಜನ]

ದಂಪತಿಪೂಜೆ (ನಾ). ಮದುವೆ, ಮುಂಜಿ ಮೊದಲಾದ ಶುಭಕಾರ್ಯಗಳಲ್ಲಿ ಹಿರಿಯರಾದ ಸತಿಪತಿಯರಿಗೆ ಮಾಡುವ ಪೂಜೆ : ದೊರೆಗಳವರು ಪ್ರತಿದಿನದ ನಿತ್ಯದಾನ, ಗೋದಾನ, ದಂಪತಿಪೂಜೆ, ಗೋಪೂಜೆ . . . ಮುಂತಾದ ಅನೇಕ ವ್ರತದಾನ ಧರ್ಮಗಳನ್ನು ಮಾಡಿ (ಮಹಾವಂ. I, ೦೫೦) ; ಕನ್ಯಾದಾನಕ್ಕೆ ಮುಂಚೆ ನಂಟರಲ್ಲಿ ಮುಖ್ಯರಾದವರಿಗೆಲ್ಲಾ ದಂಪತಿಪೂಜೆ ಮಾಡಲಾಯಿತು (ರೂಢಿ). [ದಂಪತಿ + ಪೂಜೆ$_2$]

ದಂಪತಿವಕ್ಕಿ (ನಾ). ಗಂಡು, ಹೆಣ್ಣು ಯಾವಾಗಲೂ ಜೊತೆಯಲ್ಲೇ ಇರುವುವೆಂದು ಭಾವಿಸಲಾದ ಒಂದು ಬಗೆಯ ಹಕ್ಕಿ ; ಚಕ್ರವಾಕ ; ಎಣೆವಕ್ಕಿ : ಒಸರ್ವ ಮಕರಂದದ ತುಷಾರದ ಕೆಸಱೊಳದ್ದವು ಕೊಂಚಿಗಳು ಹಗಲೆಸೆವ ದಂಪತಿವಕ್ಕಿ ಸಾರಸ ರಾಜಹಂಸಗಳು (ಕುಪ್ಯಾಅ. ೫-೯).

[ದಂಪತಿ + ಹಕ್ಕಿ$_1$ (<ಪಕ್ಕಿ$_1$)]

ದಂಪತ್ತಿ, ದಂಪತ್ತು (ನಾ). = ದಂಪತಿ ೧ : ಧರೆಯ ಪಾಲನ ಮಾತುಗಳನಾ ಕುರುಡ ದಂಪತ್ತಿಗಳು ಕೇಳಲು (ರಘುವಂ. ೯೯-೭೮). **ದಂಪತ್ತು :** ಕಥೆಯ ದೃಷ್ಟಿಯಿಂದ ಇಲ್ಲಿ ಪ್ರಧಾನತೆ ಬರುವುದು ಮೂರು ದಂಪತ್ತುಗಳಿಗೆ (ಸಮಜೀ. ೧೬ ಪೀಠಿಕೆ) ; ಒಂದು ಕಿಟಕಿಯ ಮಗ್ಗುಲಲ್ಲಿ ಒಂದು ದಂಪತ್ತು ಕೂತಿರುತ್ತದೆ (ಪೈನಿ. ೧) ; ಒಂದು ದಂಪತ್ತು ಪಕ್ಕದ ಕೊಠಡಿಯಲ್ಲಿದೆ, ಅವರ ಮಗುವೊಂದು ನಕ್ಕು ಕೆಲೆದು ಆಟವಾಡುತ್ತಿದೆ (ಪಹಾರ. ೩೫).

[<ಸಂ. ದಂಪತೀ]

ದಂಪತ್ತು 'ದಂಪತ್ತಿ' ನೋ.

ದಂಬ, ಜಂಬ$_1$, ಜಂಭ$_1$, ಡಂಬ$_1$, ಡಂಬು, ಡಂಭ, ಡಬ್ಬು$_4$, ಡೊಂಬ$_2$, ಡೊಂಬಿ$_2$, ಡೊಂಬು$_2$, ದಂಬು (ನಾ). ೧. ಮೋಸ ; ವಂಚನೆ ; ಅಸತ್ಯದ ನಡೆನುಡಿ; ಠಕ್ಕು: "ಶಾಂಬರಿ ದಂಬವಿಮಾರ್ಪ್ಯೆ ಕುಸೃತಿ ಮಾಯೆ" (ಮಂಗರಾ. ೧೩೩-೨೮). **ಜಂಬ$_1$:** ೨. ತೋರಿಕೆಯ ಆಚಾರ ವಿಚಾರ ; ಸೋಗು ; ಬೂಟಾಟಿಕೆ ; ಆಡಂಬರ : ಎಳೆಯ ಕರುವಿಗೆ ಮೊಳೆವ ಕೊಂಬುಗಳ ಕಡಿತ ಅಂತೆಮ್ಮ ದೊರೆಸಾಮಿಗೂ ಕಲಿತ ನುಡಿತ. ಇದರ ನವೆ ತೀರಿಸಲು ನನ್ನರಿವೆ ಮೋಟುಕಂಬ ಏತಕ್ಕೂ ಸಗ್ಗದಿಹ ಮೊದ್ದುಮನವೆನ್ನ ಜಂಬ (ಗಣೇಶ. ೭೦-೨೪). ೩. ಹೆಮ್ಮೆ ; ಬಿಂಕ ; ಸೊಕ್ಕು : ತುಂಬಿ ಜಗ ಬೆಳಗಿದನು, ಜಂಬದಲಿ ದಿನಮಣಿಯು (ಕನ್ನಜಾ. ೨೦೦) : ಕಲಿತವನೆಂಬ ಜಂಬ ಅವನಿಗೆ (ಸಾಪೋಲಿ. ೦೮೪) ; ಜಂಬ ; ಬಡಾಯಿ ; ಹೆಮ್ಮೆ ; ಗರ್ವ ಅಥವಾ ಆಹಂಕಾರದ ಮಾತು ; ಆತ್ಮಸ್ತುತಿ (Boast. ಇಂಕನಿ). **ಜಂಭ$_1$:** ೩. ಬೆನ್ನೊಟ್ಟೋಡುವೆ ಗಾಳಿಗೆ ನೀನು ಜಂಭವ ಬಿಡು ಇದಂ ಕಂಡಿಹೆ ನಾನು (ಅರಳು. ೦೫೯-೦೯). **ಡಂಬ$_1$:** ೧. ಸತ್ತನೆ ಮತ್ತೆ ಪುಟ್ಟುವಂ ಗಡ ಪುಸಿ ಕಾಣ ಡಂಬಮಿದು ಖೇಚರ ನೀನಿದನೆಂತು ನಂಬಿದೋ (ಆದಿಪು. ೨-೮) ; ಹಿಡಿಂಬೆ ಡಂಬಮಿಲ್ಲದೆ ಭೀಮಸೇನನೊಳಪ್ಪೊಡಂಬಡಂ ನುಡಿಯೆ (ಪಂಪಭಾ. ೩-೦೮ ವ) ; ದುರ್ಜನಂ ನಂಬೆ ನುಡಿದು ಡಂಬಮಂ ವಿಜೃಂಭಿಸಿ (ನೇಮಿಪು. ೧೪-೩ ವ). ೨. ಹಿರಿಯ ಮಠಗಳನಾಳ್ವ ಯತಿವರರು ಕೆಲರುಂಟು ಡಂಬದಲಿ ಮೆರೆವರುಂಟು (ಕವಿಸೋ. ೦೭-೬). ೪. ತೋರಿಕೆಯ ವೇಷದವನು ; ಬೂಟಾಟಿಕೆಯವನು ; ಆಡಂಬರದವನು : ನೋಡೆ ವೇದಾದೀಕ್ಷೆಯಾದುದಾ ಡಂಬರಿಗೆ ನೋಡೆ ಬಸವನ ಕರುಣವೊದಗಿತ್ತು ಮೂರ್ಖರಿಗೆ (ಬಸರ. ೯-೫೯) ; ಶಿವ ಭಕ್ತ[ಪಾಠಾಂ. ಕ್ತಿ]ಡಂಬನೆಂದೆನಿಸಲಾಱಿಂ (ತಿರುರ. ದೇ. ೨೦-೦೬) ; ಬಱಿದೆ ಪೇಳದಿರಿದನು ಡಂಬಗೆ ಜಱಿವವಗೆ (ನಿಭಾಗ. ೧೧-೩೫-೨೦). **ಡಂಬು :** ೧. ಪ್ರಪಂಚಿನ ಡಂಬಿನಲ್ಲಿ ಎನ್ನದೊಂದು ರೂಹುಮಾಡಿ ನೀವಿರಿಸಿದಿರಿ (ಬಸವ. ೨೯); ಡಂಬು ಮಾತ್ಸರ್ಯಕ್ಕೆ ಇಂಬುಗೊಡದೆ ಇರಬಲ್ಲರೆ ಶರಣ (ಸಿಕ್ಕೇವ. ೯೪-೨೮೬). ೨. ಇವರು ಮೂವರ ಡಂಬಿನ ಭಕ್ತಿಗೆ ಹೊಱಗಣ ಹೊಲೆಯನೇ ಸಾಕ್ಷಿ (ಸರ್ವವ. ೦೮೩-೮೩೬) ; ಮಬ್ಬುದೋಱುವ ಮದದ ಡಂಬಿನ ಹಬ್ಬುಗೆಯಲಿಹ ಗುರು ನಿರೂಪದಲುಬ್ಬಿಮಾಡುವ ಮಾಟ ನಿಷ್ಫಲವೆಂದಳಾವಿಮಳೆ (ಪ್ರಭುಲೀ. ೭-೭) ; ಸುಜನರರ್ಥವನಪಹರಿಸುತಕ್ಕಜದ ಡಂಬಿನ ಯಜ್ಞಗಳ ಮಾಡುತ್ತಲಿಹರು (ನಿಭಾಗ. ೧೦-೯-೦೧). **ಡಂಭ :** ೧. ಆಂ ಭರದಿಂದೆ ನಿನ್ನಯ ಭುಜಾಬಲದೆಟ್ಟುರಮಂ ಪರೀಕ್ಷಿಸಲ್ ಡಂಭದಿನೊಂದು ರೂಹುದಳೆದಿನ್ನೆವರಂ ಪೊಣರ್ದಿಕ್ಕುವಟ್ಟು ಕಂಡೆಂ ಭವದೀಯ ಸಾಹಸಮಂ (ಚಂದ್ರಪು ೫-೮೨). ೨. ಪರಮನಿಷ್ಠ ಮೌನಿಯಂತೆ ಧರೆಯ ಮೇಲೆ ಡಂಭ

ತೋಱಿ (ಪುರಂದ. ೧-೧೮೦-೮) ; ಬಿಡು ಭಾಹ್ಯದೊಳು ಡಂಭವ ಮಾನಸ ದೊಳಗೆಡವಿಡದಿರು ಶಂಭುವ (ಕೈಕವ. ೩-೭ ಪಲ್ಲವಿ). ಡಬ್ಬು$_4$: ೨. ಚಿತ್ರ ದುತೆ ಕಣ್ಣಿಗೆ ಡಬ್ಬಾಗಿ ಕಾಣುವಂತ ಕಾವ್ಯ ಚಿತ್ರಕಾವ್ಯ (ಧ್ವನ್ಯಾಲೋ. ೨೨೬) ; ಇದೆಲ್ಲಾ ಶ್ರೀಮಂತಿಕೆಯ ಡಬ್ಬು ಎಂದು ತಿಳಿದುಕೊ (ಬರಬಾ. ೭೬). 'ಡಬ್ಬುಗಾಣ್', 'ಡಬ್ಬುಗಾತಿ' ಪರಾ. ಡೊಂಬ$_2$: ೫. ಮೋಸಗಾರ ; ವಂಚಕ ; ಕಪಟಿ : ಟಕ್ಕನ ವಚನಮಂ ನಂಬಿ ನೆರೆಯೂರ್ಗೆ ಪೋಪನುಂ ಡೊಂಬನ ಮಾತಂ ನಂಬಿ ಕೂಸುಗುಡುವನುಂ . . . ದುಃಖಕ್ಕಂ ದುರ್ಯಶಕ್ಕಂ ಭಾಜನನಕ್ಕುಂ (ಧರ್ಮಾಮ್ಯ. ೧೦-೮೦) ; ಚಂದ್ರ ಹಾಸದಿ ಡೊಂಬರಾವಣ ಹೊಡೆಯಲೀ ವಿಧಿಯಾಯ್ತು ತನಗೆಂದ (ಕೌಶಿರಾ. ೬-೫೮). ೬. ಯಕ್ಷಿಣೀವಿದ್ಯೆಯನ್ನು ಬಲ್ಲವನು ; ಐಂದ್ರಜಾಲಿಕ : ಪರಮಜಿನೋದಿತಮಲ್ಲದ ದರವುರವಿದ್ಯೆಗಳನಱಿವವಂ ತೋಱಿದೊಡಚ್ಚರಿ ಯೆನ್ನದಿವೆಲ್ಲಂ ಡೊಂಬರ ವಿದ್ಯೆಗಳೆಂದೆ ಬಗೆವನುತ್ತಮಜೈನಂ (ಸಮಪ. ೧೨-೪೩) ; ಕಂದರ್ಪನೆಂಬ ಡೊಂಬನ ಚಂದದ ಪೊಂಬೊಂಬೆವಿಂಡು ನೆರೆ ದತ್ತಾಗಳ್ (ಹಮ್ಮೀರ. ೨-೭೦) ; ಕಳ್ಳರಿಗೆ ಸುಳ್ಳರಿಗೆ ಡೊಳ್ಳರಿಗೆ ಡೊಂಬರಿಗೆ ಸುಳ್ಳುಗೊರವರಿಗೆ ಕೊಡುವವರು ಧರ್ಮಕ್ಕೆ ಎಳ್ಳಷ್ಟು ಕೊಡರು (ಸರ್ವಜ್ಞ. ೬೭೩). 'ಡೊಂಬವಿದ್ದೆ' ಪರಾ. ೭. ಹಾವನ್ನು ಆಡಿಸುವವನು ; ಹಾವಾಡಿಗ : ಉರಗನಂ ಪಿಡಿದೊಂದು ಕರಡಿಗೆಯ ನಡುವಿರಿಸಿ ಪಿರಿ ದೊಂದು ಬಿಂಬದಿಂ ಡೊಂಬನಾಗಿ (ಜ್ಞಾನಪಂ. ೪-೧೦೪). ಡೊಂಬಿ$_2$: ೧. ಡೊಂಬಿಯಲ್ಲಿದು ನೋಡೆ ಬಯಲಾಡಂಬರವು ತಾನಲ್ಲ . . . ಎಂದು ರಾವಣ ಹೆಗೆಯ ಹೊಗಳಿದನು (ಕೌಶಿರಾ. ೧೭-೩೭) ; ಕಲಹವ ತೆಗೆದು ಡೊಂಬಿಯಲಿ ಬಾದುರನನು ಕೊಲಬೇಕು (ಕುರಾಸಾಂ. ೧೮-೧೦೫) ; ವಿಕೃತ ರೂಪಿನ ಡೊಂಬಿಯೇಕಿದು ಸಕಲಧರ್ಮ ವಿಚಾರವಂತರಿಗೆ (ನಳಚ. ೮-೫೭). ಡೊಂಬು$_2$: ೧. ಸೊಬಗಂ ಕೊಂಡಾಡುವೀ ಡೊಂಬುವೇಡ (ಮಲ್ಲಿಪು. ೫-೭) ; ಶರೀರಂ ಬಡವಾದಪುದೆನ್ನದೆ ಡೊಂಬಿಲ್ಲದೆ ಶುದ್ಧವೃತ್ತಿಯೊಳ್ ನೆಱೆ ನೆಗಟ್ಟರ್ (ಧರ್ಮಾಮ್ಯ. ೧೦-೧೦೭) ; ಪಾರ್ಥ ನಿನಗೀ ಡೊಂಬಿದೇಕೈ ಹುಲುಬೃಹನ್ನಳೆತನದ ಬಹುರೂಪು (ಕುವ್ಯಾವಿ. ೬-೪೭) ; ಹುಲುಮಾನಿಸರು ಡೊಂಬಿನ ಗಾವಿಲರು ನಿನಗತಿಥಿಪೂಜೆಯನೀವವರೆ (ಅಕ್ಷೂಚ. ೮-೩೮). ೨. ನಡೆನಡೆ ಡೊಂಬುವೇಡ ನಿನಗೇಕೆ ತಪಸ್ಸಿನ ಕುತ್ತಮೆಂದು ನೇರ್ಪಡೆ ಜಡಿದಟ್ಟಿ (ಧರ್ಮಾಮ್ಯ. ೮-೮೮) ; ಮುಳಿಸಿಂದಂ ಕಂಬದಿಂ ಮೂಡಿದನೆನಿಸಿದ ಡೊಂಬಿಂಗೆ ಹೇವಯ್ಸಿ ತಾಂ ಬಿಜ್ಜಲದೇವಿರಾಣಿಗಂ ಹೊಯ್ಸಳಕುಳತಿಳಕಂ ಸೋಯಿದೇವಂಗವುರ್ಬ್ಬೀವಳಯಂ ಬಪ್ಪೆಂಬಿನಂ ಪುಟ್ಟಿದನ್ (ಎಕ. XV, ಬೇಲೂರು. ೩೪೨-೨೦ ; 1265) ; ಕೊಂಬೆನೇ ಧರ್ಮಜನ ಧರ್ಮದ ಡೊಂಬನು (ಕುವ್ಯಾಸ. ೧೫-೩೫) ; ಮೇಗಡೆ ಮೆಱೆವವರು ನಾವಲ್ಲ ನುಡಿಯಾ ಬಯಲ ಡೊಂಬೇಕೆ (ಕುವ್ಯಾಕ. ೫-೧೮) ; ಡೊಂಬಿನ ಮಲಿನ ಮಾನಸನೆತ್ತ ಫಣಿಪತಿ ಶಯನ ತಾನೆತ್ತ (ಅಕ್ಷೂಚ. ೫-೪೨) ; ಡೊಂಬಿನ ಚತುರ್ಬಲಮಿದೇಕೆ ಭೂಪಾಲರಾಡಂಬರದ ಛತ್ರಚಮರಂಗಳೇತಕೆ (ಜೈಮಿಭಾ. ೧೭-೫೪) ; ಡಂಬಕದ ಮಾತೇಕೆ ಯಿಂಬರಿಯಬೇಕು ತಮ್ಮ ಡೊಂಬಿನ ಮಹಾಶೌರ್ಯ ಕೊಂಬುದೇ ಕತ್ತಲೆಗೆ (ಲಕ್ಷ್ಮಭಾ. ೨೩-೩೬). ೫. ಕೆಲರು ಕರ್ಮದಿನೆಂಬರಕ್ಕಟ ಕೆಲರು ಬೊಮ್ಮದಿನೆಂಬರಯ್ಯೋ ಕೆಲರು ಭೋಗಾದೇವ ಮೋಕ್ಷವದೆಂಬ ಡೊಂಬುಗಳು (ಸಾನಂಚ. ೮-೬೨). ೮. ಶಕ್ತಿ ; ಮಹಿಮೆ ; ಸಾಮರ್ಥ್ಯ : ಕಾಲನ ಡೊಂಬಿದಾರಿಗೆ ಸಾಧ್ಯ ನಾವೇನೆಂಬುದಿದಕೆಂದಳಲಿದರು ಭೀಷ್ಮಾದಿ ಸಜ್ಜನರು (ಕುವ್ಯಾಸ. ೧೬-೨೬). ೯. ಠೀವಿ ; ದರ್ಪ : ಅನುಜೆ ತಳುವಿದ ಳೆಂದು ರೋಷಸ್ತನಿತಗದ್ಗದಕಂಠನೊದೆದೆದ್ದನು ಮಹೀಮಂಡಲವ ನುಗ್ರಾಂಬಕನ ಡೊಂಬಿನಲಿ (ಕುವ್ಯಾಆ. ೯-೧೮). ದಂಬು : ೧. ಸೋಮಧರ ತಾಪತ್ರಯದ ಬೇಗೆ ಪಿರಿದಲ್ಲಿ ಪುಸಿ ದಂ[ಪಾಠಾಂ. ಡಂ]ಬು ಹಿಂಸೆ ಮೂರ್ಖತೆ ಯುಂಟು ಧರೆಯೊಳಗೆ (ಬಸರ. ೧-೭೦).

ಜಂಬದ ಕೋಳಿ = ಒಣಹೆಮ್ಮೆಯ ಅಥವಾ ಆಡಂಬರದ ವ್ಯಕ್ತಿ : ಕಛೇರಿಯಲ್ಲಿ ಅವನ ಪೋಟೋ ಇಟ್ಟ ದಿನವಂತೂ ಜಂಬದ ಕೋಳಿಯ ಹಾಗೆ ಕುಣಿದದ್ದೂ ಕುಣಿದದ್ದೇ (ಯೋಧಪು. ೬). [<ಸಂ. ದಂಭ]

ದಂಬಡಿ 'ದಮ್ಮಡಿ$_3$' ನೋ.

ದಂಬಿಸು, ಡಂಬಿಸು (ಕ್ರಿ). ೧. ಆಡಂಬರವನ್ನು ತೋರಿಸಂ; ವಿಜೃಂಭಿಸು; ಅಂಬುಜೋದ್ಭವ ಸೃಷ್ಟಿ ಜಗದೊಳು ತುಂಬಿಹವು ಕಾಲೆಣಿಕೆ ಕಟ್ಟಳೆ ದಂಬಿಸಿವೆ ಮೂರು ಲೋಕದೊಳು ನಾನಾಪ್ರಕಾರದಲಿ (ಕಕ್ಕೋಕ. ೩-೧೧). ಡಂಬಿಸು : ೨. ಮೋಸಗೊಳಿಸು ; ವಂಚಿಸು : ಚಿತ್ರಕಥೆಗಳಂ ಪಟದೊಳ್ [ಬ] ರೆದು ತೋಱಿ ಪೇಟ್ದು ಲೋಗರಂ ಡಂಬಿಸಿ ಮಾರಿಕೊಳ್ವ ಬತ್ತಮಂ ಕಳ್ವೊನ್ (ವಡ್ಡಾರಾ. ೧೨-೮); ನಂಬಿಪರೆನ್ನರಪ್ಪರುಮನೇತೆಱದಿಂ ಸಲೆ ನಂಬೆ ಪಾಣ್ಬೆಯರ್ ಡಂಬಿಪ [ಪಾಠಾಂ. ನಂಬಿಪ]ರಿಂತನೇಕ ವಿಧದಿಂದೆ (ಪಂಚತಂ. ೭೮-೬) ; ಧನಮುಳ್ಳಿನಂ ಕರಂ ಡಂ [ಪಾಠಾಂ. ಡೊಂ] ಬಿಸಿ ತಿಂಬರಿಲ್ಲದೊಡೆ ಪೊರ್ದದ ನಂಟರಂ ಪಾಂಗಿದೇ ಕರಂ ನಂಬಿಸಲಾಪವೇ (ಜೀವಸಂ. ೬೯-೧೪). [ದಂಬ + – ಇಸು$_3$]

ದಂಬು 'ದಂಬ' ನೋ.

ದಂಬೆ 'ದಬ್ಬೆ$_1$' ನೋ.

ದಂಭ (ನಾ). ೧. ಮೋಸ; ಠಕ್ಕು; ವಂಚನೆ: ದಂಭದಧಿಕಾರಿಗಳ ಮಾತನು ನಂಬುತವರುತಿರ್ಪ ನೃಪತಿಯ ರಾಜ್ಯಮುಳಿಯುವುದೇ (ರಾಮಾಸಂ. ೩-೩-೬). ೨. ಆಡಂಬರ ; ಅಟಾಟೋಪ ; ಡೌಲು : ಷೋಡಶ ವಿಕಾರ–ರಾಗದ್ವೇಷ . . . ದಂಭ, ದರ್ಪ, ಅಹಂಕಾರ, ಇಚ್ಛೆ, ಭಕ್ತಿ, ಶ್ರದ್ಧೆ ಈ ಹದಿನಾರು (ಅಮೃತ. ೬-೨೬ ಅಡಿಟಿ) ; ಜಂಭಾರಿಯಿತ್ತ ಶರಚಾಪ ಗಳ ರಘುವರಗೆ ದಂಭದಿಂದೊಪ್ಪಿಸುತ ಕೃತಿಯಾದನಾ ಕುಂಭಸಂಭವಂ (ವಂಕಾರಾ. ೩-೫ ಸೂಚನೆ) ; ದಂಭವಿದ್ದವನಿಗೆ ಇಂಬು ಸಿಕ್ಕುವುದು (ಗಾದೆ). ೩. ಜಂಬ ; ಸೊಕ್ಕು ; ಹೆಮ್ಮೆ ; ಗರ್ವ : ಇತ್ತೀಚೆಗೆ ಅವನಲ್ಲಿ ತನ ಶೌರ್ಯದ ವಿಷಯವಾಗಿರುವ ಅಭಿಮಾನ ಬೆಳೆದು ದಂಭವಾಗಿ ರೂಪು ಗೊಳ್ಳುತ್ತಿತ್ತು (ನೂರಜ. ೪೯); ಒಂದು ವೇಳೆ ತಾನು ಪಿರಿಯರಸಿಯಾಗಿದ್ದು ಕೊಂಡು ಕಿರಿಯ ರಾಣಿಯ ಈ ಒಂದು ದಂಭವನ್ನು ದಮನಮಾಡಬಲ್ಲವಳೇ ಆದರೆ (ಸವತಿ. ೨೦೨). [ಸಂ.]

ದಂಭಕ (ನಾ). ಹೆಮ್ಮೆಯುಳ್ಳವನು ; ಜಂಭದವನು. [ಸಂ.]

ದಂಭತ್ವ (ನಾ). ಆಡಂಬರ : ಕುಂಭವೊಂದಱೊಳು ಜಲಮಂ ತುಂಬಿ . . . ದಂಭತ್ವದಿಂದಲಂಕರಿಸಲ್ (ವೀಕೈಪು. ೪-೨೦-೫೬). [ಸಂ.]

ದಂಭವೈರಿ (ನಾ). ಮೋಸಕ್ಕೆ ವಿರೋಧಿಯಾದವನು : ಭಕ್ತಸುರತರು ಜಿತಾಕ್ಷಂ ಸಿದ್ಧಿದಂ ದಂಭವೈರಿ ಮಾದರಸರೊಪ್ಪಿದರ್ (ಪದ್ಮಣಾ. ೨-೧೬). [ದಂಭ + ವೈರಿ]

ದಂಭಾಚಾರ (ನಾ). ಬೂಟಾಟಿಕೆಯ ನಡವಳಿಕೆ; ಆಡಂಬರ ; ಸೋಗು; ಡಂಭಾಚಾರ : ಕಂಡುದನ್ನು ಕಂಡಂತೆ ಹೇಳುವ ಕೆಚ್ಚು, ದಂಭಾಚಾರ ವನ್ನು ಕಂಡರೆ ಸಾತ್ವಿಕವಾದ ರೊಚ್ಚು–ಇದು ಅವನ ವ್ಯಕ್ತಿತ್ವದ ಪಡಿಯಚ್ಚು (ಶರಚ. ೪೭೨). [ದಂಭ + ಆಚಾರ]

ದಂಭೋಲಿ, ದಂಭೋಳಿ (ನಾ). ೧. ಇಂದ್ರನ ವಜ್ರಾಯುಧ ; ಪವಿ. ದಂಭೋಳಿ : ೧. "ಪವಿಃ . . . ದಂಭೋಳಿಃ . . . ಶಂಬಃ – ಈ ೧೨ ಇಂದ್ರನ ವಜ್ರಾಯುಧದ ಪೆಸರ್" (ಹಲಾಯು. ೦೦-೫೬); ಸಕಲಕಪಿಸಮಿತಿ ವೆರಸಹಿತಕುಲಾಚಲಚಕ್ರಚಾರ ದಂಭೋಳಿ ಜಗತ್ಪ್ರಕಟೋದ್ಯನ್ಮಹಿಮ ನೆನಿಸುವ ಕಕುದ್ಬಲಿಯೆನಿಪ ಪೆಸರ ಬಲಿದುಃಖನಿರ್ಪಂ (ಪಂಚತಂ. ೨೭೭-೫); ಅರಿಸಾಮಂತ ಕುಳಾಕುಳಾಚಳದಳದ್ದಂಭೋಳಿ ದಂಭೋಳಿ . . . ಎನಿಪಂ ಸಾವನ್ತ ನಾಗಾರ್ಜ್ಜುನಂ (ಎಕ. VI, ತರೀಕೆ. ೪೨-೩೮ ; 1206) ; ದಂಭೋಳಿಯಂ ಸೆಳೆದುಕೊ ಜವದಿ ಬಲವೆರಸು (ಲಿಂಗಪು. ೧೦-೧೮).

೨. ಸಿಡಿಲು: ಲೋಕೈಕಭೀಕರಮಾಟಂದುದು ನೀಲಮೇಘ ನಿಕಟ ಪ್ರಸ್ಫಾರ ದಂಭೋಳಿವೋಲ್ (ಪಂಠಾಮಾ. ೧೪-೧೭೪); ಬ್ರಹ್ಮಕಂದುಕದಿ ಶಂಪಾತರಂಗ ವದರೊಳು ತುಂಬಿ ಪರಿಯುತಿದೆ ದಂಭೋಳಿ ನೀನಾಗು (ಮಂಕುಕ. ೧೩೩).

[ಸಂ.]

ದಂಭೋಳಿ 'ದಂಭೋಲಿ' ನೋ.

ದಂಭೋಳಿಹಸ್ತ (ನಾ). ವಜ್ರಾಯುಧವನ್ನು ಕೈಯಲ್ಲಿ ಹೊಂದಿರುವವನು; ದೇವೇಂದ್ರ: ಜೃಂಭದ್ದಂಭೋಳಿಹಸ್ತಾಹತಚಕಿತಗತಕ್ಷ್ಮಾಧ್ರ ವಿಸ್ಫಾರವಿದ್ಯುತ್ಸಂಭಿನ್ನಂ . . . ಶುಂಭದ್ಗಂಭೀರಿಮಂ ರಂಜಿಸಿದುದಮಮ ದತ್ತೇಂದ್ರಭದ್ರಂ ಸಮುದ್ರಂ (ರಾಜಶೇ. ೧-೯೦).

[ದಂಭೋಳಿ (= ದಂಭೋಲಿ) + ಹಸ್ತ]

ದಂರೋಟ್, ದಂರೋಟು (ನಾ). ಒಂದು ಬಗೆಯ ಸಿಹಿ ಭಕ್ಷ್ಯ; ಬೂದುಗುಂಬಳಕಾಯಿ ಮೊದಲಾದವುಗಳಿಂದ ಮಾಡಿದ ಹಲ್ವ: ಏನು ಕೊಡಲಿ ಸಾರ್. ಜಾಮೂನ್. ಜಿಲೇಬಿ. ದಂರೋಟ್ (ಮಹಾಲ. ೪೬). **ದಂರೋಟು**: ದಂರೋಟೆಂದರೆ ನನಗೆ ಬಹಳ ಇಷ್ಟ (ರೂಢಿ).

[?]

ದಂರೋಟು 'ದಂರೋಟ್' ನೋ.

ದಂಶ (ನಾ). ೧. ಕಚ್ಚುವುದು; ಕಡಿತ: ಪಿರಿದಪ್ಪ ನಂಜುಪುಗುಳುರ್ಬಿ ದವಂಗಸಿತಾಹಿದಂಶಮಾದುದು (ಕಾದಂಪೂ. ೮೮೩); ಅಲ್ಪದಶನ ದಂಶ ಮಾತ್ರ ಖಂಡನೀಯ ಕರಂಗಳೆನಿಸಿದ ಮಂಡಕಂಗಳುಮಂ . . . ಪರಿಜನಕ್ಕೆಲ್ಲಂ ಬಡ್ಡಿಸಿದಾಗಳ್ (ಸುಕುಮಾ. ೦೦-೨೯ ವ). ೨. ಕಾಡುನೊಣ; ವನವಂಕ್ಷಿಕ: "ವಾನೇಯ ಮಕ್ಷಿಕಾಭಿಖ್ಯಾನಂ ದಂಶಂ" (ವಸ್ತುಕೋ. ೪೪-೨೪); ಬಿಸಿಲೈಕಿಲ್ ಪಸಿವುಗ್ರದಂಶಮಶಕ ವ್ಯಾಬಾಧೆ . . . ಎಂಬೀ ಬಾಧೆಯೊಳ್ ಮೆಯ್ಯನೊಡ್ಡಿಸೆ (ಆದಿಪು. ೬-೩೪); ಆಮಯ ದಂಶ ಮಸಕ ಶೀತೋಷ್ಣ ಕದಂಬಕ ಬಾಧಾರಹಿತನೆನಿಸಿ ಸುಕುಮಾರಂ ಸುರಕುಮಾರ [ರಂ] ಮಸುಳಿಸಿದಂ (ಸುಕುಮಾ. ೦೦-೦೦೩); ದಂಶ ಮಶಕ ಮಕ್ಷಿಕಾಭ್ರಮರ ಪತಂಗಾದಿ ಚತುರಿಂದ್ರಿಯಂಗಳ್ ಸ್ಪರ್ಶನ ರಸನ ಘ್ರಾಣ ಚಕ್ಷುರಿಂದ್ರಿಯ ಪರಿಚ್ಛಿತ್ತ್ಯುಪೇತಂಗಳಪ್ಪುವು(ತತ್ತ್ವಪ್ರ. ೯೮); ತರಕ್ಷು ದಂಶಶತ ಸಂವೃತ ಮಿರ್ದುದದೊಂದು ತಾಣದೊಳ್ (ರಾಜಶೇ. ೫-೯೨). ೩. ಹಲ್ಲಿನ ಗಾಯ. ೪. ಹಲ್ಲು; ದಂತ. [ಸಂ.]

ದಂಶಕ (ಗು). ೧. ಕಚ್ಚುವ; ಕಡಿಯುವ. (ನಾ). ೨. ಕಚ್ಚುವ ಪ್ರಾಣಿ; ಕಡಿಯುವ ಪ್ರಾಣಿ. ೩. ನೊಣ. ೪. ಹಲ್ಲಿನಿಂದ ಕಚ್ಚಿ ತಿನ್ನುವ ಉಪ್ಪಿನಕಾಯಿ ಮೊದಲಾದ ವ್ಯಂಜನ: ಸಂವರಿಸು ಬಂಡಿಯ ನಡೆಸು ಭಕ್ಷ್ಯದ ಸೂಪದಂಶಕವ ತರಿಸು (ಕುವ್ಯಾಅ. ೦೦-೧೭). [ಸಂ.]

ದಂಶನ (ನಾ). ೧. ಹಲ್ಲಿನಿಂದ ಕಚ್ಚುವುದು; ಕಡಿತ. ೨. ಕವಚ; ಜೋಡು. ೩. ಆನೆಯ ಪಕ್ಕರಕ್ಕೆ; ಹಕ್ಕರಿಕೆ: "ದಂಶನಂ ಹಕ್ಕರಿಕೆ" (ಮಂಗರಾ. ೮೬-೩೦). [ಸಂ.]

ದಂಶಿ (ನಾ). = ದಂಶ ೨: ದಂಶೀ . . . ಚಿಕ್ಕಕಾಡುನೊಣ, ಕಾಡು ಸೊಳ್ಳೆ (ಸಿದ್ಧಾಂತಿ. ೧೪೦). [ಸಂ. ದಂಶೀ]

ದಂಶಿತ (ಗು). ೧. ಕಚ್ಚಿದ. ೨. ಅಂಗಿತೊಟ್ಟಿರುವ; ಕವಚವನ್ನು ತೊಟ್ಟ. [ಸಂ.]

ದಂಷ್ಟ್ರ (ನಾ). ಆನೆ, ಹುಲಿ, ಸಿಂಹ, ಹಂದಿ ಮೊದಲಾದುವುಗಳ ಉದ್ದವಾದ, ಹೊರಹಾಯ್ದಿರುವ ಹಲ್ಲು; ಕೋರೆಹಲ್ಲು; ದಾಡೆ: ಪೊಳೆಯುತ್ತಿರ್ಪ ಮಹಾವರಾಹಾವದನೋದ್ಯದ್ದಂಷ್ಟ್ರಮಂ ನೆಮ್ಮಿನಿಂದಳೋ ಭೂಕಾಂತೆಯೆನಲ್ಕೆ (ಕಾದಂಪೂ. ೧೦೦೩). [ಸಂ. ದಂಷ್ಟ್ರಾ]

ದಂಷ್ಟ್ರಕ (ನಾ). = ದಂಷ್ಟ್ರ: ಆಕಾರಾಂ ಅಕಾರಮಾದುದರ್ಕೆ–ಕಂಧರಾ, ಉಪತ್ಯಕಾ, ದಂಷ್ಟ್ರಕಾ, ವಾಲುಕಾ–ಎಂಬಿವು ಮೊದಲಾದುವು ಕಂಧರ, ಉಪತ್ಯಕ, ಕರುಣ–ಎಂದು ಅಕಾರಾಂತಮಂ ಪಡೆಯಲೊಡಂ ಲಿಂಗಮಾಗಿ ವಿಭಕ್ತಿ ಪತ್ತುಗುಂ (ಶಮವ. ೮೨ ಪ್ರಯೋ). [<ಸಂ. ದಂಷ್ಟ್ರಿಕಾ]

ದಂಷ್ಟ್ರಾಂಕುರ (ನಾ). ಹೊರಬರುತ್ತಿರುವ ಕೋರೆದಾಡೆ; ಮೊಳೆಯುತ್ತಿರುವ ಕೋರೆಹಲ್ಲು; ಮೊಳೆಹಲ್ಲು: ಬಲದೇವ ವಾಸುದೇವರ್ . . . ಪವಿತ್ರಕ್ಷತ್ರಧರ್ಮ ಕಂಠೀರವ ದಂಷ್ಟ್ರಾಂಕುರಯುಗ್ಮಮುಂ . . . ಗುಣಗಣ ಮಣಿಗಣಕೋಶಗೃಹದಂತೆಯುಮಾಗಿ ಮಾತಾಪಿತೃಗಳನು ರಾಗದೊಡನೊಡನೆ ಪ್ರಮೋದಪ್ರವರ್ಧಮಾಗೆ (ಶಾಂತಿಪು. ೧-೮೦ ವ); ರಾತ್ರಿಂಚರಪತಿಸಿತದಂಷ್ಟ್ರಾಂಕುರಂ . . . ಬಳೆದು ಬಳಸಿದಂತಾಯ್ತು ಬೆಳ್ದಿಂಗಳೆತ್ತಂ (ರಾಜಶೇ. ೦೩-೪೨). [ಸಂ.]

ದಂಷ್ಟ್ರಾಕಿರಣ (ನಾ). ಕೋರೆಹಲ್ಲುಗಳ ಕಾಂತಿ.–ಪ್ರಕಾಶ: ರಾಕ್ಷಸರಾಜಂ . . . ದಂಷ್ಟ್ರಾಕಿರಣಧವಳಿತಾಸ್ಥಾನನಿಂತೆಂದನಾಗಳ್ (ಜಗವಿ. ೨-೪೫).

[ಸಂ.]

ದಂಷ್ಟ್ರಾಗ್ರ (ನಾ). ಕೋರೆಹಲ್ಲಿನ ತುದಿ; ದಂತಾಗ್ರ: ಆದಿವರಾಹರೂಪದೊಳೆ ನೀನಂದೆತ್ತಿದೈ ಗೋಮಿನೀಧವ ದಂಷ್ಟ್ರಾಗ್ರದ ನೀಲಜಾಲಮಣಿಯೆಂಬಂತಾಗೆ ಭೂಗೋಳಮಂ (ಜಗವಿ. ೧-೫೭); ದಾನವಹೃತ ಮೇದಿನಿಯಂ ದಂಷ್ಟ್ರಾಗ್ರದೊಳಿರಿಸಿ (ಮಾಂದಳಿ. ೪೨-೨). [ಸಂ.]

ದಂಷ್ಟ್ರಾಯುಧ (ನಾ). ೧. ಕೋರೆಹಲ್ಲೇ ಆಯುಧವಾಗಿ ಉಳ್ಳುದು; ಕಾಡುಹಂದಿ. ೨. ಕಪಿ: (ಕಿ). [ಸಂ.]

ದಂಷ್ಟ್ರಿ (ನಾ). ೧. ದಾಡೆಗಳುಳ್ಳುದು; ಕಾಡುಹಂದಿ. ೨. ಹಂದಿ: "ಕೋಳಃ, . . . ದಂಷ್ಟ್ರೀ, ಘೃಷ್ಟಿಃ, ಕಿರಿಃ–ಈ ೮ ಹಂದಿ" (ಹಲಾಯು. ೩೮-೭೩). ೩. ನೆಗ್ಗಿಲ ಮುಳ್ಳು: "ದಂಷ್ಟ್ರಿಯೆನೆ ನೆಗ್ಗಿಲಕ್ಕು" (ಮಂಗರಾ. ೩೭-೨೨). [ಸಂ. ದಂಷ್ಟ್ರಿನ್]

ದಂಷ್ಟ್ರೆ (ನಾ). = ದಂಷ್ಟ್ರ: ಅಣಲ್ಗಳ ದಾಡೆಯ ಪಲ್ಲಿಂ ಗಣಿಸುಗೆ ತಾಂ ದಂಷ್ಟ್ರೆಯೆಂಬ ಪೆಸರೆ ನಿದಾನಂ (ಅಶ್ವಶಾ. ೯-೭). [ಸಂ. ದಂಷ್ಟ್ರಾ]

ದಂಸ$_1$ (ನಾ). = ದಂಶ: ವಿದ್ಯುಚ್ಛೋರ ಭಟಾರರ್ ಪ್ರತಿಮಾಯೋಗಂ ನಿಂದೊಡೆ ದೇವತೆ ಮುಳಿದು ಪೊಱಸುಗಳನಿವಿರಿಯವು ದಂಸಮಸಕಂಗಳಂ ವಿಗುರ್ವಿಸೆ (ವಡ್ಡಾರಾ. ೦೩೪-೧೮). [<ಸಂ. ದಂಶ]

ದಂಸ$_2$ (ನಾ). (?): ಘಳಿಸಿದ ದಂಸಂ ಸೇವರು (ಬೊಂಕಶಾ. ೦೯೩೩, ಹಾವೇರಿ. ೯೫-೪; ?). [?]

ದಕ (ನಾ). ನೀರು; ಉದಕ. [ಸಂ.]

ದಕನ್ 'ದಖನ್' ನೋ.

ದಕುಪ್ಕಟ್ಟಿ 'ಧಕಲಪಟ್ಟಿ' ನೋ.

ದಕಾರ (ನಾ). ದ ಎಂಬ ಅಕ್ಷರ: "ತಾವರೆ" ಎಂಬ ಪದದ ಆದಿಯ "ತ" ಕಾರಕ್ಕೆ ಪ್ರತಿಯಾಗಿ "ದ" ಕಾರವೂ ಬಂದಿದೆ (ಮಧ್ಯಮ. ೨೦). [ಸಂ.]

ದಕಿದು (ನಾ). ಮೃದಂಗವನ್ನು ಬಾರಿಸುವುದರಲ್ಲಿ ಒಂದು ವರಸೆ: ರಿಪುವಣೆ ಸಹರಣೆ ತುಡುಕು ದಕಿದು ವತ್ಕಿರಿ ಜತಿ ಜೋಕೆಯೆಂಬ ದೇಸೆಯ ಶಬ್ದಂಗಳೆಸೆಯೆ ಬಾಜಿಸುತ್ತಿರೆಯುಂ (ಶಾಂತೀಶ್ವ. ೧೬-೬೭ ವ). [?]

ದಕೋದರ (ನಾ). = ಜಲೋದರ. [ಸಂ.]

ದಕ್ಕಡ 'ಧಕ್ಕಡ' ನೋ.

ದಕ್ಕಡತನ 'ಧಕ್ಕಡತನ' ನೋ.

ದಕ್ಕಡತಿ (ನಾ). ದಿಟ್ಟೆ; ಗಡುಸುಗಾತಿ; ಸಮರ್ಥೆ: ಕರ್ಕಸಿಯರತಿವೆಕ್ಕ ಸೊಕ್ಕಿಯರನಾರತಂ ದಕ್ಕಡತಿಯರು ಕಾಮದಿಕ್ಕೆಯರ್ (ಷತಿಲ. ೨-೭೦).

[ದಕ್ಕಡ (<ಧಕ್ಕಡ) + – ತಿ$_1$ (<–ಇತ್ತಿ)]

ದಕ್ಕಡಿಗ 'ಧಕ್ಕಡಿಗ' ನೋ.

ದಕ್ಕಡೆ 'ಧಕ್ಕಡ' ನೋ.

ದಕ್ಕಡೆಯ 'ಧಕ್ಕಡೆಯ' ನೋ.

ದಕ್ಕಡೆಯತನ 'ಧಕ್ಕಡೆಯತನ' ನೋ.

ದಕ್ಕಣ (ನಾ). ದರ್ಶನೀಯವಾದುದು: ಚೈತ್ರರಥದುನ್ನತಿಯಂ ಸಮಕಟ್ಟ ಕೊಂಡು ಸಾಧಿಸುವತಿದಕ್ಕಣಂ ಸರಿಗೆವಾಳಮೆನಿಪ್ಪ ನೆಗರ್ತೆ ಕೂಡೆ ಮಾಡಿಸಿದನದೊಂದು ನಂದನನುಂ (ಪರ್ಥಮಾ. ೬-೦೩). [<ಪ್ರಾ. ದಖ್ಖಿಣ]

ದಕ್ಕಣಿಸು (ಕ್ರಿ). ಜಬರಿಸು; ಗದರಿಸು: ಗುರುಭೀಷ್ಮರು ಮಕ್ಕಳಾಟಕೆ ಬೇಡ ನಡೆ . . . ಸಂತೈಸೆನುತ ದಕ್ಕಣಿಸಿ ವಿದುರ ಗೌತಮರು ಧೃತರಾಷ್ಟ್ರಗಂ ತಿಳುವಲ್ಕೆ ನಡೆತಂದನು (ತುಕೃಂಗ. ೨೫-೦೬).

[ದಕ್ಕಣಂ (<ಧಕ್ಕಡ) + – ಇಸು೩]

ದಕ್ಕಲು, ಧಕ್ಕಲು (ನಾ). ಮಾದಿಗರಲ್ಲಿ ಒಂದು ಒಳ ಪಂಗಡ: ಅವನು ಧಕ್ಕಲದವನು (ಎಸಮ್ಯ. XVII. ೬). **ಧಕ್ಕಲು**: ಈ ಊರಿಗೆ ಬಹಳ ಮಂದಿ ಧಕ್ಕಲುಗಳು ವಲಸೆ ಬಂದಿದ್ದಾರೆ (ಕೂಡಿ). [?]

ದಕ್ಕಳ 'ಧಕ್ಕಡ' ನೋ.

ದಕ್ಕಾಯ್ತುಯ್ಕ (ನಾ). ಒಬ್ಬಾತನ ಹೆಸರು: ದಕ್ಕಾಯ್ತುಯ್ಕಂ ಊರಂ ಆಳುತ್ತಂ ಇರೆ (ಎಳ. X, ಮುಳಿದಾ. ೨೨೯-೩ ; ೪೦೨). [? + ಆಯ್ಕ೧]

ದಕ್ಕಾಲಿ (ನಾ). ಆಲುಗಾಡದ ಕಣ್ಣುಗಂಡ್ಡೆ ; ನೋಡುವ ಸಾಮರ್ಥ್ಯವಿಲ್ಲದ ಕಣ್ಣುಗುಡ್ಡೆ : ಭರದಿಂ ಸುಜ್ಜನೆ ಸುಯ್ಕೆ ಸೂಗುಜಿಸೆ ಕಣ್ದಕ್ಕಾಲಿಗಳ್ ಬೀಟು೩ (ಕೋಕೋಪ. ೯-೨೦೬); ಶಿವಲಿಂಗಮುಂ ಮುಸುಕಿ ಬೆಳೆದುತ್ತ ಮಾಂಗವನು ಬಾವೆಂದು ದಿಟ್ಟಿಸಿ ನೋಡದೆವೆಯಿಕ್ಕದಿಹ ಕಣ್ಣ ದಕ್ಕಾಲಿಯೆಂದು . . . ಶಂಕಿಸಿ (ಸಿದ್ಧರಾ. ೨-೪) ; ಪೋಲಿಸೆ ತಮ್ಮ ಕಣ್ಣ [ಣ್ದ] ಕ್ಕಾಲಿಗಳಾಗಿರ್ದು ಬರ್ದವಲ್ಲದೆ ದಿಟಮಾಗಾಲಿಸಿ ಕಂಡೊಡೆ ನಾಣ್ಪುದೆ ಪೇಳಿಯ ಗಱಿಯಿವಳ ಜಡಿವ ಮುಡಿಯ ಬೆಡಂಗಂ (ಧರ್ಮನಾ. ೩-೯೪).

[ದಕ್ಕು೩ + ಆಲಿ೨]

ದಕ್ಕಾಲಿಬೀಳು 'ದಕ್ಕಾಲಿವೀಟು' ನೋ.

ದಕ್ಕಾಲಿಬೀಟ್ 'ದಕ್ಕಾಲಿವೀಟು' ನೋ.

ದಕ್ಕಾಲಿವೀಟು, ದಕ್ಕಾಲಿಬೀಳು, ದಕ್ಕಾಲಿಬೀಟ್ (ಕ್ರಿ). ಚಲಿಸದ ಕಣ್ಣುಗುಡ್ಡೆ ಉಂಟಾಗು: ಕಣ್ಮುಚ್ಚರೆ ದಕ್ಕಾಲಿವೀಟು೩ ಬಾಟದು ತುರಗಂ (ಅಶ್ವಶಾ. ೬-೬೨). **ದಕ್ಕಾಲಿಬೀಳು**: ದಕ್ಕಾಲಿಬಿದ್ದ ಕಣ್ಣಿನಂತೆ ಜಂಗಮದ ಮೇಲೆ ಹರುಷವಿಲ್ಲದ ನೋಟ (ಬಸಪ. ೫೭-೦೫೪). **ದಕ್ಕಾಲಿಬೀಟ್**: ಕಣ್ಗಳ್ ದಕ್ಕಾಲಿಬಿರ್ದು (ಬಂಷರಿ. ೧೪-೪೭ ವ).

[ದಕ್ಕಾಲಿ + ಬೀಟ್/೧]

ದಕ್ಕಿಣ (ನಾ). =ದಕ್ಷಿಣ : "ದಕ್ಕಿಣ – ದಕ್ಷಿಣ" (ತದ್ಭಕೋ. ೧೪).

[<ಸಂ. ದಕ್ಷಿಣ]

ದಕ್ಕಿಸು (ಕ್ರಿ). ೧. ದಕ್ಕುವಂತೆ ಮಾಡು ; ತನ್ನ ಸ್ವಾಧೀನಕ್ಕೆ ಬರುವಂತೆ ಮಾಡಿಕೊಳ್ಳು ; ತನ್ನದಾಗಿಸಿಕೊಳ್ಳು : ಬಹುಧನವ ದಕ್ಕಿಸಿಯೆ ಹೂತಿಕೊಂಡಿಹರು (ತುರಂಗ. ೩೦-೩೬). ೨. ಜೀರ್ಣಿಸಿಕೊಳ್ಳು ; ಅರಗಿಸಿಕೊಳ್ಳು : ದಕ್ಕಿಸಲಾಜದೆಯಾ ಮುನಿಯಾ ಕೂಳ ಕಕ್ಕಲು . . . ಮನದೊಳು ಮಱುಗಿ (ನೇಮಿಸಂ. ೨೦-೩೪); ವಿಷಯು ವಿಷವನುಂಡು ದಕ್ಕಿಸಬಲ್ಲ ನಿರ್ವಿಷಸಿದ್ಧ ನೀನವನೀಶ (ಧರಕ. ೨-೭೧).

ದಕ್ಕಿಸಿಕೊಳ್ಳು = ೧. ದೊರಕಿಸಿಕೊಳ್ಳು ; ಗಿಟ್ಟಿಸಂ: ಬಿಕ್ಕವನ ಹರಿಯನ್ನ ಪೂಡಿ ಪುಣ್ಯವ ದಕ್ಕಿಸಿಕೊಂಡೆ (ವಿದಾಕೃ. ೧೫೫-೩); ಮೈಸೂರಿನವರು ಕೊಳ್ಳೆಯನ್ನು ದಕ್ಕಿಸಿಕೊಂಡು ಹಿಂತಿರುಗಿದರು (ಒಡಕ. ೩೧). ೨. ಜೀರ್ಣಿಸಿಕೊಳ್ಳು; ಅರಗಿಸಿಕೊಳ್ಳು: ವಿಷವ ಪದಾರ್ಥವೆಂದು ಕೊಡಲು ಉಂಡು ದಕ್ಕಿಸಿಕೊಂಡರು (ಘನವ. ೨೫) ; ಏಳಿ ಎಚ್ಚರಿ. ಬೆಂಕೆ ಹಚ್ಚರಿ ತಿಂದು ದಕ್ಕಿಸಿಕೊಳ್ಳಲಿ (ನಿಲಮು ೪೭-೦೨). [ದಕ್ಕು೧ + – ಇಸು೩]

ದಕ್ಕು೧ (ಕ್ರಿ). ೧. ದೊರಕು ; ಸಿಕ್ಕು ; ಪ್ರಾಪ್ತವಾಗು; ಲಭಿಸು; ಗಿಟ್ಟು: ವ್ಯಾಸರುಷಿಗಂ ದಕ್ಕದೆ . . . ಜಗದೊಳಗೆ (ಸಾಸಂಡ. ೯-೦೨೨); ಮನವಿಕ್ಕಿದನಮರಾವತಿಯು ಸೊಕ್ಕಿದ ಸೂಳೆಯರಿಗೆ ತನ್ನನವರಿಗೆ ದಕ್ಕಲೀಯೆವು ನಿಮ್ಮಾಣೆ (ಕುರಾಸಾಂ. ೩೬-೦೩೪) ; ದಕ್ಕಿದುದು ತಿಟಿಯೆನುತೆ . . . ಪಿಡಿದನು (ಪಲಪು. ೫೩-೩೯) ; ಸುತ್ತೇಳು ಬೀದಿಯು ಸುತ್ತುವ ಹೆನ್ನೆಗೆ ದಕ್ಕೀತು ಪೋಕಿಯು ಗಂಡು (ಇಂಡಾಪ. ೧೯೮-೨೭) ; ಅರ್ಜುನನು ಪ್ರಾಣ ಸಹಿತನಾಗಿರಲು, ಪಾಂಡವರ ರಾಜ್ಯಧನಗಳು ತನಗೆ ದಕ್ಕುವದೆ ? (ಕೃವಾಭಾ. ೩೩). ೨. ತನ್ನಲ್ಲೇ ಉಳಿ ; ಸ್ವಾಧೀನಕ್ಕೆ ಬರು; ಹಿಡಿತಕ್ಕೆ ಸಿಕ್ಕು ; ಸಾಧ್ಯವಾಗು: ಮಂದಭಾಗ್ಯಂಗಣುಗೆ ದಕ್ಕುವನಲ್ಲ ಎನಗೆಂದ (ಕುವ್ಯಾಕ್ರೌ. ೯-೨೦) ; ನವಲಕ್ಷ ತೆಲುಗರ ಗಂಡನೆಂದೆಂಬೀ ಬವರದ ಬಲು ಬಿರುದಿನ್ನು ರವಿಶಶಿಯುಳ್ಳನ್ನವರ ದಕ್ಕಿತೆಮಗೆಂದು ತವೆ ನಲಿದನು ನರನಾಥ (ಕುರಾಸಾಂ. ೮-೯೩) ; ಸೋಮೆಯನದಾವ ತೆಱದಿಂ ಮದುವೆ ನಿಲ್ವೆನೆಂಬಾ ಪಾತು ದಕ್ಕಿತಲ್ಲಾ ಮೆಚ್ಚಬೇಡವೆ ನೀಮೆನ್ನ ಚದುರತನಕೆ (ಸಮ್ಯಕ್ಕಾ. ೬-೨೯) ; ಬಿವ್ವುಂಟುತುಗುರಿಂದಿರಿವೆಂ ಬಲ್ಗೊಡಲಿಯಾಂತೊಡಂ ದಕ್ಕುಗುಮೇ (ಪಂದ್ರಪ್ಪು. ೬-೨೬) ; ಭೂದೇವಿಗೂ ದಕ್ಕೋ ಮನುಸ್ಯಾನೀ ಅಲ್ಲೋ, ಮಗನ, ನನಗೆ ಗೊತ್ತದ (ಕಮ್ಮಟ. ೧೪) ; ಅವನೆಂದೂ ಅವರಿಗೆ ದಕ್ಕುವುದಿಲ್ಲ (ಪುನಕು. ೨೦೯) ; ಹೆತ್ತ ಮಕ್ಕಳು ಕೈಗೆ ದಕ್ಕದ ದುಃಖದಿಂದ ಇನ್ನರ್ಧ ಬಸವಳಿದು ಹೋಗಿದ್ದಳು (ನಡದಾ. II, ೧೫೫) ; ಶತ್ರುನಾಶವಾಗಿ ರಾಜ್ಯ ತನಗೇ ದಕ್ಕುವುದು ಎಂದು ದುರ್ಯೋಧನನು ಯೋಚಿಸಿದನು (ನೀತಿಚಂ. I, ೯). ೩. ಆರಗು ; ಜೀರ್ಣವಾಗು ; ಪಚನವಾಗು ; ಮೈಗೂಡು : ಎಲ್ಲ ಜಗವ ನುಂಗಿ ದಕ್ಕಿಸಿಕೊಂಡವಗೆ ಸಲ್ಲದು ರೋಗರುಜಿನವು (ಲಕ್ಷ್ಮೀಕೋ. ೩೮) ; ಉಂಡ ಅನ್ನ ದಕ್ಕದ ಲಕ್ಷಣವೆ ವಾತವ್ಯಕೋಪ (ಸಳಕ್ಕ. ೦೩೦) : ಇನ್ನೊಂದು ಬಟ್ಟಲು ಬಂದಿತು; ಅದನ್ನೂ ಕುಡಿದು ಮುಗಿಸಿದಳು; ಅದೂ ದಕ್ಕಲಿಲ್ಲ (ಕಗದ್ಯ. II, ೩೮). ೪. (ತಪ್ಪು ಮಾಡಿದರೂ) ಸರಿಯಾಗು; ವಿರುದ್ಧ ಪರಿಣಾಮವಾಗದಿರು: ದಕ್ಕೀತು ಎಂದು ತಕ್ಕದ್ದಲ್ಲದ್ದು ಮಾಡಬಾರದು (ನಾಡ). ೫. ಕುಸಿ (?): ಧನುವಂ ಕೊಂಡೊತ್ತಿ ತನ್ಮೌರ್ವಿಯನಟನಿಗೆ ಹಸ್ತಾಗ್ರದಿಂದೆತ್ತಿ ಕಂದರ್ಪನೃಪಾಲಂ ಕಾಯ್ಪಿನಿಂದೇಱಿಸುವ ಸರಭಸಕ್ಕುರ್ವಿ ತರ್ಗಿತ್ತು, ನಾಗೇಂದ್ರನ ಭೋಗಂ ಬಳ್ಕಿ ಸುಯ್ಲಿಕ್ಕಿದುದು , . . ವರಿಹತಕ್ಕುದ್ಧಘಾತಕ್ಕೆ ಬೆನ್ನೊಡ್ಡಿನ ಪೆಂಗಳ್ ದಕ್ಕಿ ಕೂರ್ಮಂ ಕುಸುರಿನೊಳರೆಮಬ್ಗಿರ್ದುದಬ್ಧೋದ್ಭವಾಂಡಂ (ಕುಸುಮಾ. ೧೦-೪೩). ℙ ಈ ಪದ್ಯಕ್ಕೆ ಪಾಠಾಂತರವೊಂದಿದೆ. (ಶಾಂತೀಶ್ವ. ೩-೯೫ ನೋ).

ದಕ್ಕಹಿಡಿ = ದಕ್ಕುವಂತೆ ಹಿಡಿ ; ಗ್ರಹಣಮಾಡು ; ಸೆರೆಹಿಡಿ : ದಕ್ಕ ಹಿಡಿವರು ಪಶುಗಳ ಮನೆಯ ಕನ್ನವಿಕ್ಕುವರಿರದೆ ಪುರಗಳ ಹೊಕ್ಕಿಱಿವರು (ಕುರಾಸಾಂ. ೧೦-೫). ದಕ್ಕಿ ಹೋಗು= ವಶವಾಗು; ಸೇರು: ಆದರಾ ಅಗ್ರಹಾರವು ಮೈಸೂರಿನಲ್ಲಿ ಕಟ್ಟಲ್ಪಟ್ಟು ಇನ್ನಾರಿಗೋ ದಕ್ಕಿ ಹೋಯಿತು (ಹುಬ್ಬಹ. ೪) ; ಅವರಿಗೆ ದೊರೆತ ಹಣವೆಲ್ಲ ದಕ್ಕಿ ಹೋಯಿತು (ಕೂಡಿ). ದಕ್ಕು ಹಾಕಿಕೊಳ್ಳು = ಸ್ವಾಧೀನ ಮಾಡಿಕೊಳ್ಳು; ವಶಪಡಿಸಿಕೊಳ್ಳು ; ತನ್ನದನ್ನಾಗಿ : ಆಭರಣಗಳಲ್ಲಿ ಬಹುಭಾಗ ಅಡವು ಇಟ್ಟುಕೊಂಡು ದಕ್ಕು ಹಾಕಿಕೊಂಡ ಅಂಶ ಮಗನಿಗೆ ತಿಳಿದಿತ್ತು (ವಂಶವೃ. ೧೯೫) : ಗುರು ರಾಜರಾಯರ ಹಣಕ್ಕೆ ಮೋಸವಾಗಿದೆ. ಕೆಲವರೆಲ್ಲಾ ದಕ್ಕುಹಾಕಿಕೊಂಡಿದಾರೆ (ಪುಚಳ. ೧೦೭).

[ದೇ.ದ್ರ ತಮಿ. ಮಲ. ತಕ್ಕು; ತುಳು. ದಕ್ಕು; ತೆಲು. ದಕ್ಕು, ಡಕ್ಕು, ತಕ್ಕು ; ಕೊಲಾ. ನಾಯ್ಕಿ. ತಕ್ ; ಗೊಂಡಿ. ತಗ್ಗುನಾ]

ದಕ್ಕು೨ 'ದರ್ಕು/೧' ನೋ.

ದಕ್ಕು೩ (ನಾ). ಸ್ವಾಧೀನ ; ವಶ : ಅವರವರಿಗೆ ದಕ್ಕಾಗಬೇಕೆಂದು ವಂಚರ ನಿರ್ಣಯ (ಗ್ರಾಮಾಯ. ೯) : ಆಸ್ತಿಯೆಲ್ಲ ಯಾರಿಗೋ ದಕ್ಕಾಗಿ ಹೋಗ ಬಹುದಿತ್ತು (ಗ್ರಾಮಾಯ. ೩೫೩). [<ದಕ್ಕು೧]

ದಕ್ಕು$_4$ 'ದರ್ಕು$_2$' ನೋ.

ದಕ್ಕುಂತಲೆ (ನಾ). ದಕ್ಕುವ ತಲೆ; ಉಳಿಯುವ ತಲೆ: ಮೇಣುಂ ಮೈಗರೆ ವಕ್ಕಿನ ತಲೆ ದಕ್ಕುಂತಲೆಯೋ ? ಇರ್ಕೆ (ರಾಮಾಶ್ವ. ೯೨-೩೦)

[ದಕ್ಕು$_1$ (< ದರ್ಕುಂದಲೆ$_1$) + ತಲೆ$_1$]

ದಕ್ಕುಂದಲೆ$_1$ 'ದರ್ಕುಂದಲೆ'$_1$ ನೋ.

ದಕ್ಕುಂದಲೆ$_2$ 'ದರ್ಕುಂ ಲೆ'$_2$ ನೋ.

ದಕ್ಕುಂದಲೆವರಿ (ಕ್ರಿ). ಸೊಕ್ಕಿನಿಂದ ಮುನ್ನುಗ್ಗು; ಗರ್ವದಿಂದ ಹಾಯು: ಉರ್ಕಿಂ ಸೊಕ್ಕಿ ದಕ್ಕುಂದಲೆವರಿದುರಿದಪ್ಪರ್ಕರಂ ನಂದಿದಪ್ಪರ್ (ಅನಂಪು. ೦೩-೧೬). [ದಕ್ಕುಂದಲೆ$_1$ (<ದರ್ಕುಂದಲೆ$_1$) + ಪರಿ$_1$]

ದಕ್ಕುಂದಲೆವಾಯ್ 'ದರ್ಕುಂದಲೆವಾಯ್' ನೋ.

ದಕ್ಕುಕೊಡು (ಕ್ರಿ). ಅಧೀನಕ್ಕೆ ಕೊಡು; ಸ್ವಾಧೀನಮಾಡು: ಈ ಮೊಹರುಗಳನ್ನು ದಕ್ಕುಕೊಟ್ಟಿಲ್ಲ. ಕೈಗಡದಂತೆ ನೀವು ತಿಳುಕೊಳ್ಳಬೇಕು (ಮುಂಬಯಿ. ೩-೯೦). [ದಕ್ಕು$_3$ + ಕೊಡು$_1$]

ದಕ್ಕುಗೊಳ್ (ಕ್ರಿ). ವಶಪಡಿಸಿಕೊಳ್ಳು; ತನ್ನದನ್ನಾಗಿ ಮಾಡಿಕೊಳ್ಳು: ತನ್ನ ಪೆಣ್ಗಳಂ ಮರುಳ್ಗೊಳಿಸಿ ದಕ್ಕುಗೊಂಡ ಶ್ರೀಕೃಷ್ಣನಂ ದೂಱುವ ವೃದ್ಧಗೋಪಿಯರ ವಚನವ್ಯಾಜದಿಂ ವಿವರಿಸುವರ್ (ಗೀತಗೋ. ೬೩-೦ ವ): ಇರ್ಕೇಱಿಯನೊಕ್ಕಲಿಕ್ಕೆ ದಕ್ಕುಗೊಳಲೊಡಮಾ ತುರುಕ ಪಡೆವಳಂ . . . ಮುಂತಣ್ಗೆ ನವೆದು (ಚಿಕವಂ. ೫೬-೯). [ದಕ್ಕು$_3$ + ಕೊಳ್$_1$]

ದಕ್ಕುಗೊಳಿಸು (ಕ್ರಿ). ವಶಪಡಿಸಿಕೊಳ್ಳು; ಸ್ವಾಧೀನಮಾಡಿಕೊಳ್ಳು: ಏನು ನೇಮದೊಳಿರ್ದುದೊ ಪೊಂಗೊಳಲೇನೋಂತುದೊ ಕೆಳದಿ ತಾನೊಲಿದಿನಿಯನ ದಕ್ಕುಗೊಳಿಸುತಿದೆ (ಗೀತಗೋ. ೦೪-೨೭ ಪಲ್ಲವಿ).

[ದಕ್ಕುಗೊಳ್ + – ಇಸು$_3$]

ದಕ್ಕುಪಾರಿ (ನಾ). ದಕ್ಕಿದ ಸೂಳೆ; ವಶಳಾದ ಜಾರೆ: ಚಿಕ್ರಪ್ರಾಯದಿ ನಿನ್ನ ರೂಪಿಗೆ ಸಿಕ್ಕಿ ದಕ್ಕಿದ ನಾರಿಯಾ ತಕ್ಕಯೊಳಗಿಂದಗಲಿ ಹೋಹರೆ ದಕ್ಕುಪಾರಿಯ ನೀರೆಯಾ ಅಕ್ಕರಿಂದಲಿ ಕರೆದು ಮನ್ನಿಸೊ (ಮಡಿಕ್ಕಾ. V, ೦೨೫೫ ಗಂಗಾಧರನ ಅಷ್ಟಕ). [ದಕ್ಕು$_3$ + ಪಾರಿ$_2$ (<ಪಾಱಿ$_1$)]

ದಕ್ಕುಬೀಳು (ಕ್ರಿ). ವಶವಾಗು; ಅಧೀನವಾಗು: ಈಗ ಬಗೆಗದಡಿನ ವೇಗಕ್ಕೆ ಸಂಚಳಿಸಿ ಸನ್ಯಾಸದ ಕಾಲಾಟಕ್ಕೆ ಸಿಲ್ಕಿ, ದಿಕ್ಕುಗೇಡಿಗೆ ದಕ್ಕುಬಿದ್ದು . . . ನಾವು ಮುಳುಗಿಹೋಗಿ ಉಸಿರಳಿಯಬಾರದು (ಮಂತ್ರಶ. ೭೨-೨೦).

[ದಕ್ಕು$_3$ + ಬೀಳು$_1$ (<ಬೀಱು$_1$)]

ದಕ್ಕೆ$_1$ 'ಡಕ್ಕೆ' ನೋ.

ದಕ್ಕೆ$_2$ 'ಧಕ್ಕೆ$_2$' ನೋ.

ದಕ್ಕೆಬಲಿ 'ಡಕ್ಕೆಬಲಿ' ನೋ.

ದಕ್ಷ (ನಾ). ೧. ಚತುರನಾದವನು; ಜಾಣ; ಸಮರ್ಥ: "ಚತುರಃ . . . ದಕ್ಷಃ, ಕುಶಲಃ . . . ಪ್ರವೀಣಃ—ಈ ೧೧ ಬಲ್ಲವಂ" (ಹಲಾಯು. ೫೫-೦೯೦); "ಚತುರಂ ಪ್ರವೀಣಂ ಕುಶಲನಭಿಜ್ಞಂ ಸುಶಿಕ್ಷಿತನೆನಲ್ ದಕ್ಷನೆನೆ . . . ಬಲ್ಲವಗೆ ನಾಮಂ" (ಮಂಗರಾ. ೬೬-೩); ಶ್ರೀರಮಣೀ ರಮಣಂಗರಿನಾರೀವೈಧವ್ಯದಿವ್ಯದೀಕ್ಷಾದಕ್ಷಂಗಾರೆಣೆ (ಪಂಚಭಾ. ೭-೦); ಉನ್ನತನ ರೂಪಾಧಿಕನ ಸಂಪೂರ್ಣ ದಕ್ಷನನನ್ಯರೆನ್ನವರೆನ್ನದನ ವರರಿಂಗಿ ತಾಕಾರಪ್ರಭೇದಕನೆ . . . ಪರಿಹಾರಕನ ಮಾಡುವುದು (ಕುವ್ಯಾಉ. ೩-೯೪); ದೇವರಾಜನು ಸ್ವತಃ ಶೂರನೂ ರಾಜ್ಯಕಾರ್ಯಭಾರದಲ್ಲಿ ದಕ್ಷನೂ ಚತುರನೂ ಇದ್ದನು (ಮುಂಬಯಿ. ೪-೮). ೨. ಬ್ರಹ್ಮನ ಮಗನಾದ ದಕ್ಷ: ದಕ್ಷ ಯಾಗವ ಮಾಡಿ (ಬಸವ. ೫೮೩); ಗಿಲಿಕೆ ಘಲಿಲೆಂದು ಲಿಯೆ ದಕ್ಷನ ತಲೆಯ ಕೋಡಿನ ತೆಱದಿ ತಗರಿನ ಬಲಿದ ಕೊಂಬಂ ತನ್ನೆಡದ ಕೈಯಲಿ ಪಿಡಿದುಕೊಂಡು (ಬಸಪು. ೨೯-೪); ನೀರೇಜಾಸನಸೂನು ದಕ್ಷನುಱ್ ಸದ್ದಾಕ್ಷಾಯಣೀದೇವಿಯಂ . . . ಪಡೆದಂ (ಹಮ್ಮೀರ. ೨-೬); ಮಾರಮಾರಣದಕ್ಷ ದಕ್ಷಮದಾಪಹಾಂಕ ವಿರಾಜಿತೇ ಧೀರ ಧೀರತಿಪಾಲ ಪಾಲನಶೀಲೆ ಪಾಲಿಪುದಂಬಿಕೇ (ರಾಜಶೇ. ೩-೦೦೪). ೩. ಮುನಿ; ತಪಸ್ವಿ. ೪. ಹನ್ನೆರಡು ಮಂದಿ ಪ್ರಾಚೀನ ಋಷಿಗಳಲ್ಲಿ ಒಬ್ಬ: ಪುಲಸ್ತ್ಯ ಪುಲಹ . . . ದಕ್ಷ ಕ್ರತು ಜಮದಗ್ನಿ ಕೌಶಿಕರೆಂಬೀ ದ್ವಾದಶಋಷಿಗಳೇ ಕ್ರಮದಿಂದವರವರಂ ಕೀರ್ತಿಸುವರು (ವಿವೇಕ. ೨೬೬). ೫. ಗಂಡುಕೋಳಿ; ಹುಂಜ: "ಮುನಿಯೊಳು ಕೋಟಿಯೊಳು ದಕ್ಷಮೆಂಬುದು" (ಮಂಗರಾ. ೦೪೨-೦೮). ೬. ಸಾಮರ್ಥ್ಯ; ಶಕ್ತಿ; ಅಣ್ಮು. ೭. ವೇಗ; ಶೀಘ್ರತೆ: "ದಕ್ಷ-ವೃದ್ಧೌ, ಶೀಘ್ರೋಚ, ವೆರ್ಚುಗೆಯೊಳಂ ವೇಗದೊಳಂ" (ಕಾಶಕ್ಕ. ೦೦೭). ೮. ಕೊಲೆ; ಹತ್ಯೆ. ೯. ಬಲಗಡೆ: "ದಕ್ಷಂ = ಬಲಗಡೆ" (ಕಾಶಕ್ಕ. ೦೦೭). [ಸಂ.]

ದಕ್ಷಕನ್ಯೆ (ನಾ). ದಕ್ಷನ ಮಗಳು; ದಾಕ್ಷಾಯಣಿ; ಪಾರ್ವತಿ.

[ದಕ್ಷ + ಕನ್ಯೆ]

ದಕ್ಷತೆ (ನಾ). ೧. ಚಾತುರ್ಯ; ಜಾಣತನ. ೨. ಸಾಮರ್ಥ್ಯ; ಶಕ್ತಿ; ಸತ್ವ; ಬಲ: ಪ್ರವಚನ ಪರಿಪಠನಕ್ಷಮತೆ ವಾಣಿಯಂ ತೀರ್ಥಯಾನ ದಕ್ಷತೆ ಪದಮಂ ಕವಿಯಂ ಜಿನವರ ಚರಿತ ಶ್ರವಣಪಟುತೆ ಪಿಂಗದನ್ನ ಮಾರ್ಜಪೆನಜನಂ (ಚಂದ್ರಪು. ೪-೧೭). ೩. ಕಾರ್ಯಪಟುತ್ವ: ಪೂರ್ವಸಿದ್ಧತೆ ಉಪಾಧ್ಯಾಯರ ಶಕ್ತಿ. ದಕ್ಷತೆ, ಕೌಶಲ್ಯ ಇವನ್ನೆಲ್ಲ ಹೆಚ್ಚಿಸುತ್ತದೆ (ಶಿಕ್ಷದ. ೨೬೩): ಹೀಗೆ ತೆಗೆದುಕೊಂಡ ಉಷ್ಣದಲ್ಲಿ ಎಷ್ಟು ಹೆಚ್ಚು ಭಾಗವನ್ನು ಅದು ಕೆಲಸವಾಗಿ ಮಾರ್ಪಡಿಸಿದರೆ ಅಷ್ಟು ದಕ್ಷತೆಯು (Efficiency) ಹೆಚ್ಚೆಂದು ನಾವು ಹೇಳಬಹುದು (ಭೌತವಿ. ೨೬೨). [ಸಂ. ದಕ್ಷತಾ]

ದಕ್ಷಬಗುರಿ (ನಾ). ವೇಗವಾಗಿ ಸುತ್ತುವ ಬುಗುರಿ (?): ವಕ್ಷರುಹಗಳೊ ಚಕ್ರವಾಕದ ಪಕ್ಷಿಗಳೊ ಪೊಸ ಪೊನ್ನ ಕಲಶಗಳಿಕ್ಷುಚಾಪನ ಕರದ ಚಂಡುಗಳ ಸಮನಾಡುತಿಹ ದಕ್ಷಬಗುರಿಗಳಂದವೋ ಮೂಲಕ್ಷಣಿಯ ಲತಿಕಾಂಗಫಲ ಲೋಕೇಕ್ಷನಂಗನೆ ಕುಟ್ಮಳಿಗಳರಿಯಂದಳಿಂದುಮುಖಿ (ಜಿನಾಮಾ. ೧೭-೪೮). 'ತಗಬುಗುರಿ ಪರಾ. [ದಕ್ಷ + ಬಗುರಿ$_0$ (<ಬೊಗರಿ)]

ದಕ್ಷಬ್ರಹ್ಮ (ನಾ). = ದಕ್ಷ ೨: ದಕ್ಷಃ — ಸರಸ್ವತೀ ಬ್ರಹ್ಮನ ಮಗನಾದ ಸತೀದೇವಿಯ ತಂದೆಯಾದ ಶಿವನ ಮಾವನಾದ ದಕ್ಷಬ್ರಹ್ಮಂ (ಕಾಶಕ್ಕ. ೦೦೭). [ಸಂ.]

ದಕ್ಷಮಖ (ನಾ). ದಕ್ಷಯಜ್ಞ: ನಾಡೆ ದಕ್ಷಮಖಶ್ರೀ ಕೆಟ್ಟುದು (ವೀರವಿ. ೦೨-೬೧). [ದಕ್ಷ + ಮಖ]

ದಕ್ಷಮಖಕ್ಷಯ (ನಾ). ದಕ್ಷನ ಯಜ್ಞವನ್ನು ಹಾಳುಗೆಡಿಸಿದವನು; ಶಿವ: ಅಕ್ಷಯಂ ನಿಟಿಲಾಕ್ಷನಭವಂ ದಕ್ಷಮಖಕ್ಷಯಕ್ಷಮನುಕ್ಷಗಂ ಪ್ರತ್ಯಕ್ಷವಾಗಿ ಸಮಕ್ಷದಲಿ ನಿಂದು (ಬಸಪು. ೨೭-೩೨).

[ದಕ್ಷಮಖ + ಕ್ಷಯ]

ದಕ್ಷಯಾಗ (ನಾ). = ದಕ್ಷಮಖ: ದಕ್ಷಯಾಗವ ನಡೆಸಲೆಂದು ಅಜಮುಖ್ಯರಾದ ಸುರರೆಲ್ಲಾ ನೆರೆದು (ಬಸವ. ೫೭೫). [ದಕ್ಷ + ಯಾಗ]

ದಕ್ಷಸಾವರ್ಣಿಕ (ನಾ). ಹದಿನಾಲ್ಕು ಮನುಗಳಲ್ಲಿ ಒಂಭತ್ತನೆಯವನು: ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ, ವೈವಸ್ವತ, ಸೂರ್ಯಸಾವರ್ಣಿಕ, ದಕ್ಷಸಾವರ್ಣಿಕ, ಬ್ರಹ್ಮಸಾವರ್ಣಿಕ, ಧರ್ಮಸಾವರ್ಣಿಕ, ರುದ್ರಸಾವರ್ಣಿಕ, ರೌಚ್ಯ, ಇಂದ್ರಸಾವರ್ಣಿಕರೆಂಬ ಹದಿನಾಲ್ಕು ಮನುಗಳೊಳಗೆ (ವಿವೇಕ. ೨೦೪). [ಸಂ.]

ದಕ್ಷಸ್ಮೃತಿ (ನಾ). ಹತ್ತೊಂಭತ್ತು ಧರ್ಮಶಾಸ್ತ್ರಗಳಲ್ಲಿ ಹದಿನಾರನೆಯದು: ಮನುಸ್ಮೃತಿ, ಅತ್ರಿಸ್ಮೃತಿ, ಹರಿತಸ್ಮೃತಿ, ವಿಷ್ಣುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ, ಉಶನಸ್ಮೃತಿ, ಆಂಗೀರಸಸ್ಮೃತಿ, ಯಮಸ್ಮೃತಿ, ಆಪಸ್ತಂಬಸ್ಮೃತಿ, ಸಂವರ್ತಸ್ಮೃತಿ, ಕಾತ್ಯಾಯನಸ್ಮೃತಿ, ಬೃಹಸ್ಪತಿಸ್ಮೃತಿ, ಪರಾಶರಸ್ಮೃತಿ, ವ್ಯಾಸಸ್ಮೃತಿ, ಶಂಖಲಿಖಿತಸ್ಮೃತಿ, ದಕ್ಷಸ್ಮೃತಿ, ಗೌತಮ

ಸ್ಮೃತಿ, ಶಾತಾತಪಸ್ಮೃತಿ, ವಶಿಷ್ಠಸ್ಮೃತಿಗಳೆಂಬವೆ ಆಯಾಯ ನಾಮಧೇಯ ಮುಳ್ಳವಱಿಂದುಕ್ತಮಾದ ಹತ್ತೊಂಭತ್ತು ಧರ್ಮಶಾಸ್ತ್ರಗಳು (ವಿವೇಕ. ೪). ☞ ಧರ್ಮಶಾಸ್ತ್ರಗಳ ಸಂಖ್ಯೆಯನ್ನು ಹದಿನೆಂಟು ಎಂದು ಹೇಳಿದವರೂ ಉಂಟು. [ಸಂ.]

ದಕ್ಷಾಧ್ವರ (ನಾ). ದಕ್ಷನ ಯಜ್ಞ ; ದಕ್ಷಬ್ರಹ್ಮನ ಯಜ್ಞ. 'ದಕ್ಷಾಧ್ವರ ಧ್ವಂಸಿ' ಪರಾ. [ದಕ್ಷ + ಅಧ್ವರ]

ದಕ್ಷಾಧ್ವರಧ್ವಂಸಕ (ನಾ). ದಕ್ಷಬ್ರಹ್ಮನ ಯಜ್ಞವನ್ನು ನಾಶಪಡಿಸಿದವನು ; ಶಿವ : "ಈಶಾನಃ : . . . ಅಂಧಕರಿಪುಃ, ದಕ್ಷಾಧ್ವರಧ್ವಂಸಕಃ . . . ನೀಲಲೋಹಿತಃ– ಈ ಳಿಶ ಮಹಾದೇವರ ಪೆಸರ್" (ಹರಾಯು. ೩-೧೧).

[ದಕ್ಷಾಧ್ವರ + ಧ್ವಂಸಕ]

ದಕ್ಷಾಧ್ವರಧ್ವಂಸಿ (ನಾ). = ದಕ್ಷಾಧ್ವರಧ್ವಂಸಕ : ತೊಡವೆಂ ಶಕ್ರನ ನಾಪುಮಂ . . . ಪರಾಭವಿಸುವೆಂ ದಕ್ಷಾಧ್ವರಧ್ವಂಸಿಯುಂ (ಜಗವಿ. ೩-೨೧); ದೇವ ಶೈವಾಚಾರ್ಯನ ಸೋಮಾಸಿಮಾರನ ಮಹಾಯಾಗಕ್ಕೆ ದಕ್ಷಾಧ್ವರ ಧ್ವಂಸಿ ಬಜಯಂಗೆಯ್ವುದೆಂದು ಬಿನ್ನಪಂ ಪೂಡೆ (ನಂಬಿರ. ೦೬-೧೩೧); ದೇವ ನಿಮ್ಮಡಿ ಸಹಿತ ಕಂಡೆನು ದೇವದೇವನ ಚರಣವನು ಸಂಭಾವಿಸಿದ ನಮ್ಮಿಬ್ಬರನು ದಕ್ಷಾಧ್ವರಧ್ವಂಸಿ (ಶುಷಾಡ್ರೋ. ೯-೪); ಪೂರ್ವದಲ್ಲಿ ದಕ್ಷಾಧ್ವರಧ್ವಂಸಿಯಾದ ಪರಮೇಶ್ವರನ ಹಣೆಗಣ್ಣಿನಲ್ಲಿ ಹುಟ್ಟಿದ ಕೋಪವೇ ಜ್ವರರೂಪವಾಗಿ ವರ್ತಿಸಿರ್ಪುದು (ಸಳಪ್ಯ. ೬೧).

[ಸಂ. ದಕ್ಷಾಧ್ವರಧ್ವಂಸಿನ್]

ದಕ್ಷಾಧ್ವರಹರ (ನಾ). =ದಕ್ಷಾಧ್ವರಧ್ವಂಸಕಃ : ಗಿರಿಶ ಶ್ರೀಕಂಠ ದಕ್ಷಾಧ್ವರಹರ ವೃಷಭಾರೂಢ . . . ವಿರೂಪಾಕ್ಷ ರಕ್ಷಿಪುದೆನ್ನಂ (ರಕ್ಷಾಶ. ೮೮). [ಸಂ.]

ದಕ್ಷಾರಿ (ನಾ). ದಕ್ಷನ ಶತ್ರು ; ವೀರಭದ್ರ : "ವೀರಂ ಭಯಂಕರಂ ದಕ್ಷಾರಿ ಶರಭನೆನೆ ವೀರಭದ್ರನೆನಿಕ್ಕು" (ಮಂಗಶಾ. ೩-೦೩).

[ದಕ್ಷ + ಅರಿ೬]

ದಕ್ಷಿಣ (ಗು). ೧. ಬಲಗಡೆಯ ; ಬಲಭಾಗದ : ದಕ್ಷಿಣ ಪಾಣಿಪಲ್ಲವಾಭಿನಯನಿವೇದಿತಾವಿನೇಯ ವಿಳಸಿತ ಚಕ್ರಾಯುಧಂ ನಿಂದಿರ್ದು (ಶಾಂತಿಪು. ೦೦-೦೬೮ ವ). ೨. ನೇರವಾದ ; ಋಜುವಾದ ; ಸರಿಯಾದ. ೩. ಚಾತುರ್ಯವುಳ್ಳ ; ಜಾಣ್ಮೆಯುಳ್ಳ. (ನಾ). ೪. ಬಲಭಾಗ ; ಬಲಗಡೆ ; ಬಲಪಕ್ಕ : "ಅಪಸವ್ಯಂ, ದಕ್ಷಿಣಂ – ಈ ೨ ಬಲಂ" (ಹರಾಯು. ೧೩೪-೬೧) ; ನವಗ್ರಹಗಳಲ್ಲಿ ದೃಷ್ಟಿಯು ವಾಮ ದಕ್ಷಿಣ ಸಮ್ಮುಖಗಳೆಂಬ ಭೇದದಿಂದ ಮೂರು ಬಗೆಯೆಂದು ತಿಳಿಯತಕ್ಕುದು (ಅರ್ಕಮಾ. ೩೯). 'ದಕ್ಷಿಣಬಾಹು' ಪರಾ. ೫. ತೆಂಕಣದಿಕ್ಕು; ತೆಂಕಲು: ವೃಷಭ ಕನ್ಯೆ ಮಕರ ಯಿಂ ೩ ರಾಶಿಯು ದಕ್ಷಿಣದಿಕ್ಕು (ಫಾಸ್ಫ. ೬೯-೩). ೬. ಭಾರತದ ದಕ್ಷಿಣಕ್ಕಿರುವ ದೇಶ; ದಕ್ಷಿಣದೇಶ. 'ದಕ್ಷಿಣಮಾರ್ಗ' ಪರಾ. ೭. ನೇರವಾದವನು ; ಸರಿಯಾದವನು : "ಸರಳ:, ದಕ್ಷಿಣ :– ಈ ೨ ಸಮ್ಬುಂ" (ಹರಾಯು. ೬೩-೩೩೦). ೮. ಶೈವ ಪ್ರಭೇದಗಳಲ್ಲಿ ಒಂದು : ಮತ್ತಮಾ ಶೈವವೇ ವಾಮ ದಕ್ಷಿಣ ವಿಶ್ರ ಸಿದ್ಧಾಂತವೆಂದು ನಾಲ್ಕುತೆಱನಾಗಿರ್ಪುದು (ವಿವೇಕ. ೬೩). ೯. [ಜ್ಯೋತಿ] ಲಗ್ನದಿಂದ ನಾಲ್ಕನೆಯ ಸ್ಥಾನ : "ದಕ್ಷಿಣ– ಚತುರ್ಥ" (ಜಾತಕ. ೨-೯ ಟೀಳ). ೧೦. ದಕ್ಷಿಣದಿಕ್ಕಿನಲ್ಲಿಟ್ಟ . ಯಾಗದ ಬೆಂಕಿ. 'ದಕ್ಷಿಣಾಗ್ನಿ' ಪರಾ. ೧೧. [ಜೈನ] ಜೈನ ಬ್ರಾಹ್ಮಣರ ಮನೆಗಳಲ್ಲಿ ಅರ್ಹಂತನ ಪೂಜೆಗಾಗಿ ಸ್ಥಾಪಿಸುವ ಮೂರು ಬಗೆಯ ಅಗ್ನಿಗಳಲ್ಲಿ ಒಂದು : ಆ ಕ್ಷಣದೊಳೀ ಅಗ್ನಿಕುಮಾರನ ಕಿರೀಟದೊಳುತ್ಪನ್ನವಾದ ಗಾರ್ಹಪತ್ಯ ಆಹವನೀಯ್ಯ ದಕ್ಷಿಣವೆಂಬ ಅಗ್ನಿತ್ರಯವೂ ಕ್ರಮವಾಗಿ ಚತುರಶ್ರ ತ್ರಿಕೋಣವೃತ್ತಕುಂಡಗಳಲ್ಲಿ ಪ್ರವೇಶವಂ ಮಾಡಿತು (ಪುರುಚ. ೨೭೪). ೧೨. [ಕಾವ್ಯಮೀ] ದಕ್ಷಿಣ, ಧೃಷ್ಟ, ಅನುಕೂಲ, ಶಠವೆಂಬ ನಾಲ್ಕು ಬಗೆಯ ಶೃಂಗಾರ ನಾಯಕರಲ್ಲಿ ಒಂದು ಬಗೆ ; ಅನೇಕ ನಾಯಿಕೆಯರಲ್ಲಿ ಸಮಾನ ಅನುರಾಗವನ್ನು ತೋರಿಸುವ ನಾಯಕ : ದೇವರಲಿ ಭಕ್ತಂಗೆ ಗುರುಜನ ಸೇವೆಯಲಿ ಸತ್ಪುತ್ರರಿಗೆ ವರಯವ್ವತದಿ ದಕ್ಷಿಣರಿಗೆಂತಿಸೆ ವೃದುತ್ಕ್ರಮಂ ಬಿಡದೆ (ವಿವೇಧ. ೨-೩೩) ; ದಕ್ಷಿಣನೆಂದರೆ, ಅನೇಕ ನಾಯಿಕೆಯರಿಂದ್ದು ಅವರೆಲ್ಲರಲ್ಲಿಯೂ ಒಂದೇ ರೀತಿಯಾದ ಪ್ರೇಮವನ್ನು ತೋರಿಸತಕ್ಕವನು (ಕೃಬಿ. ೨೦೯); ಶೃಂಗಾರನಾಯಕರಲ್ಲಿ ದಕ್ಷಿಣ, ಧೃಷ್ಟ, ಅನುಕೂಲ, ಶಠ ಎಂದು ನಾಲ್ಕು ವಿಧ (ಸೂನಾಟ. ೧೮).

ದಕ್ಷಿಣ ಅಕ್ಷಾಂಶ = ಸಮಭಾಜಕವೃತ್ತದ ದಕ್ಷಿಣಕ್ಕೆ ಗೋಳದ ಮೇಲ್ಮೈಯ ಮೇಲೆ ಅಡ್ಡಡ್ಡಲಾಗಿರುವಂತೆ ಭಾವಿಸಿರುವ ವೃತ್ತಾಕಾರದ ರೇಖೆ : ಸಮಭಾಜಕವೃತ್ತಕ್ಕೆ ಉತ್ತರದಲ್ಲಿರುವ ಅಕ್ಷಾಂಶಗಳಿಗೆ ಉತ್ತರಅಕ್ಷಾಂಶ, ದಕ್ಷಿಣದಲ್ಲಿರುವವುಗಳಿಗೆ ದಕ್ಷಿಣ ಅಕ್ಷಾಂಶ ಎಂದು ಹೆಸರು (ಭೂವಿವ. ೦೬).

[ಸಂ.]

ದಕ್ಷಿಣಕರ (ನಾ). ಬಲಗೈ ; ಬಲಹಸ್ತ : ಶಿಷ್ಯನ ಶಿರದ ಮೇಲೆಯು ತಮ್ಮ ದಕ್ಷಿಣ ಕರವ ಬಾಚುತಲಿ (ಗಗಶಾ. ೨-೩೦). [ದಕ್ಷಿಣ + ಕರ೪]

ದಕ್ಷಿಣಖುರ (ನಾ). ಬಲಗಾಲಿನ ಗೊರಸು : ನೆಲನಂ ಪೊಡವಂತಿರೆ ಬಾರಿ ವೃದಡಿಗಡಿಗೆ ಹಯಂ ತನ್ನ ತೀಕ್ಷ್ಣದಕ್ಷಿಣಖುರವಂ (ಮಲ್ಲಿಪು. ೯-೧೫೧).

[ದಕ್ಷಿಣ + ಖುರ]

ದಕ್ಷಿಣಘೂರ್ಜರಿ (ನಾ). [ಸಂಗೀತ] ಒಂದು ರಾಗದ ಹೆಸರು : ಮಹಾರಾಷ್ಟ್ರ ಘೂರ್ಜರಿ, ಸೌರಾಷ್ಟ್ರಘೂರ್ಜರಿ, ದ್ರಾವಿಡಘೂರ್ಜರಿ ದಕ್ಷಿಣಘೂರ್ಜರಿ[ಹಾಕಾಂ.ಗುಜ್ಜರಿ]ಯೆಂಬ ನಾಲ್ಕುಂ ಉಪಾಂಗ ಘೂರ್ಜರೀರಾಗಂಗಳು (ವಿವೇಕ. ೩೩೪). [ದಕ್ಷಿಣ + ಘೂರ್ಜರಿ]

ದಕ್ಷಿಣಚರಣ (ನಾ). ಬಲಗಾಲು; ಬಲಗಡೆಯ ಪಾದ : ದಿವ್ಯಚಾಪಮಂ ಪಿಡಿದು ಪೃಥಮಚಳಿತ ದಕ್ಷಿಣಚರಣನಾಗಿ ನಿಜನಿವಾಸದಿಂ ಪೊಱಮಟ್ಟು (ಪಂಪಭಾ. ೪-೦೨ ವ) ; ಆ ಶುಕಂ ರಾಜಾಭಿಮುಖನುಮುನ್ನಮಿತ ದಕ್ಷಿಣ ಚರಣನುಮತಿಸ್ಪಷ್ಟವರ್ಣಸಂಸ್ಕಾರಮಪ್ಪವಾಣಿಯಿಂ ಕೃತಜಯ ಶಬ್ದನು ಮಾಗಿ (ಕಾದಂಪೂ. ೫೮). [ದಕ್ಷಿಣ + ಚರಣ]

ದಕ್ಷಿಣತಟ (ನಾ). ಬಲಭಾಗದ ತೀರ,–ದಂಡೆ : ಆ ಮೂವರು . . . ಸೇರೆ ಸರಯೂನದಿಯ ದಕ್ಷಿಣತಟವನಲ್ಲಿ, ಸವಿಗೊರಳ ನೇಹದಿಂ ನೀಡಿದನು ಕುಶಿಕತನಯಂ ರಾಮಚಂದ್ರಂಗೆ, ಮಂಗಳಸ್ನಾತಂಗೆ, ಮಂತ್ರಸದ್ವಿದ್ಯೆಯಂ (ಶ್ರೀರಾಮಾ. ೩೦-೬೯). [ದಕ್ಷಿಣ + ತಟ೩]

ದಕ್ಷಿಣದೋರ್ದಂಡ (ನಾ). ೧. ಬಲಭುಜ. ೨. (ಆಲಂ) ಹೆಚ್ಚು ಸಹಾಯಕನಾದವನು ; ಬಲಗೈಯಂತಿರುವವನು : ಮುದಿಯಪ್ಪ ನಾಯಕೇಂದ್ರನು ರಾಜ್ಯವಾಳುತ್ತಾಯರಲು ಆತಂಗೆ ದಕ್ಷಿಣದೋರ್ದಂಡವಾದ ವೀರಮಹೇಶ್ವರರಾರಾದಕನಾದ ಶೀಲವಂತದಳವಾಯಿ . . . ಮಠ ಕೆರೆ ತೋಟಯಿ × × × ಮಾಡಿಸಿ (ಎಕ. XVI, ಚಿಕ್ಕನಾ. ೧-೦೦; 1023).

[ದಕ್ಷಿಣ + ದೋರ್ದಂಡ]

ದಕ್ಷಿಣಧ್ರುವ (ನಾ). [ಭೂಗೋಳ] ಅಕ್ಷರೇಖೆಗಳು ಕೂಡುವ ಬಿಂದು; ಅಕ್ಷರೇಖೆಗಳು ಒಗೆದೆಡೆ ಸೇರುವ ದಕ್ಷಿಣದ ತುದಿ ; ಭೂಮಿಯ ಅಕ್ಷದ ಕೆಳತುದಿ : ಭೂಮಿಯ ಅಕ್ಷವನ್ನು ಅಂದರೆ ದಕ್ಷಿಣೋತ್ತರ ಧ್ರುವರೇಖೆಯನ್ನು ವೃದ್ಧಿಸಿದರೆ ಉತ್ತರದಲ್ಲಿ ಈ ರೇಖೆಯು ಖಗೋಳವನ್ನು ಸಂಧಿಸುವ ಬಿಂದು ಖಗೋಳೀಯ ಉತ್ತರಧ್ರುವ, ದಕ್ಷಿಣದಲ್ಲಿ ಸಂಧಿಸುವ ಬಿಂದು ದಕ್ಷಿಣಧ್ರುವ (ನಕ್ಷತ್ರ. ೩೪) ; ಉತ್ತರಧ್ರುವದಿಂ ದಕ್ಷಿಣಧ್ರುವಕೂ ಚುಂಬಕ ಗಾಳಿಯು ಬೀಸುತಿದೆ (ನಾದಲೀ. ೩೦-೦) ; ದಕ್ಷಿಣದ ಕಡೆ ಇರುವ ಧ್ರುವವನ್ನು ದಕ್ಷಿಣಧ್ರುವವೆಂದೂ ಕರೆಯುತ್ತಾರೆ (ಭಾತವಿ. ೩೦೦). 'ಉತ್ತರಧ್ರುವ' ಪರಾ. [ದಕ್ಷಿಣ + ಧ್ರುವ]

ದಕ್ಷಿಣನಯನ (ನಾ). ಬಲಗಡೆಯ ಕಣ್ಣು; ಬಲಗಣ್ಣು: ತ್ರಿಪಥಗಾಮಿನಿಯೆನಿಪ ಜಾಹ್ನವಿ ಸೃಪನ ಚರಣದಲುದಿಸಿದಳು ಗಡ ತಪನ ದಕ್ಷಿಣನಯನವೆಂಬರು ಕಾಂಬೆವಾ ಕುಜುಹೆ (ಕಾತಿಕಾ. ೩೭-೭); ಸತಿಯ ದಕ್ಷಿಣನಯನವೀ ಭೂಪತಿಯ ವಾಮಭುಜಾಕ್ಷಿಗಳು ದುರ್ಗತಿಯ ಸೂಚಿಸಿ ತೋಱುತಿರ್ದುವು ಧರ್ಮನಂದನನ (ಕುವಾ.ಸ. ೧೬-೩೪). [ದಕ್ಷಿಣ + ನಯನ]

ದಕ್ಷಿಣನಾಯಕ (ನಾ). [ಕಾವ್ಯಮೀ] ಶೃಂಗಾರನಾಯಕರಲ್ಲಿ ಒಂದು ಬಗೆ; ಅನೇಕ ನಾಯಿಕೆಯರಲ್ಲಿ ಸಮಾನ ಅನುರಾಗವನ್ನು ತೋರಿಸುವವನು: ನೋಟದಿನೊರ್ವಳಂ ನಗೆಯಿನೊರ್ವಳನೊಳ್ನುಡಿಯಿಂದವೊರ್ವಳಂ ಬೀಟದಿನೊರ್ವಳಂ ಪಿಡಿಯುತ . . . ತೃಪ್ತವಡಿಸಿರ್ದನವಂ ಗುಣರತ್ನಭೂಷಣಂ (ಇವಂ ದಕ್ಷಿಣನಾಯಕಂ) (ಶಸಂ. ೩-೧೩೪). [ದಕ್ಷಿಣ + ನಾಯಕ]

ದಕ್ಷಿಣಪಕ್ಷ (ನಾ). ಬಲಪಕ್ಕ; ಬಲಗಡೆ: ಅಂತಶ್ವಗ್ರೀವಂ ನಿರಾಯುಧನುಂ ನಿರ್ವಿದ್ಯನುಮಾಗಿ ಕೆಲನಂ ನೋಡಿ ತನ್ನ ದಕ್ಷಿಣಪಕ್ಷದೊಳಿರ್ದ ಚಕ್ರಮಂ ಕೊಂಡಿಡೆ (ಶಾಂತಿಪು. ೫-೬೨ ವ). [ದಕ್ಷಿಣ + ಪಕ್ಷ]

ದಕ್ಷಿಣಪತಿ (ನಾ). ತೆಂಕಲುದಿಕ್ಕಿನ ಒಡೆಯ; ಯಮ: ಗರ್ವಿಸುವ ದಕ್ಷಿಣಪತಿಯ ಪುದವಂ ವಿಘಾಡಿಸುವ ಸರ್ವಮಂಗಳದಾಗ ಬಾರಾ (ಜಸಪು. ೨೪-೩೭). [ದಕ್ಷಿಣ + ಪತಿ$_{೩}$]

ದಕ್ಷಿಣಬಾಹು (ನಾ). ಬಲಭುಜ; ಬಲತೋಳು: ಬಾಹುಬಲಿ ತನ್ನ ದಕ್ಷಿಣಬಾಹುವ ಕೆಲದಲ್ಲಿ ನಿಂದ ಚಕ್ರಮನಾಗಳ್ ಸಾಹಸರಸಿಕಂ ಕಂಡು (ಆದಿಪು. ೧೪-೦೨೦). [ದಕ್ಷಿಣ + ಬಾಹು$_{೨}$]

ದಕ್ಷಿಣಭುಜ (ನಾ). =ದಕ್ಷಿಣಬಾಹು: ಎಂತಾನುಂ ನೆನೆದಂ ಬಹುಚಿಂತಿತಂ ಚಕ್ರೇಶನೆವ್ವ ದಿಗ್ವಿಜಯಮುಮಾದಂತೆಡಬದೆಯ್ದೆ ನಡೆದುದೆ ಸಂತವೆ ದಕ್ಷಿಣಭುಜಕ್ಕೆ ಭೂವಲ್ಲಭನಾ (ಆದಿಪು. ೦೪-೪೪); ದಕ್ಷಿಣಭುಜೋತ್ಪನ್ನನುದ್ದಾಮ ದಾರುಣ ಪ್ರತಾಪಕೋಪ ಪಾವಕ ಕಬಳಿತಾರಾತಿಬಳನೆಂಬೊಂ (ಶುಕುಮಾ. ೧-೬೯ ವ). [ದಕ್ಷಿಣ + ಭುಜ]

ದಕ್ಷಿಣಮಾರ್ಗ (ನಾ). ೧. ದಕ್ಷಿಣದೇಶದ ವಿಧಾನ,-ಪದ್ಧತಿ,-ಸಂಪ್ರದಾಯ; ಸಾತ್ವಿಕವಾದ ಕರ್ಮಮಾರ್ಗ: ದಕ್ಷಿಣಮಾರ್ಗವು ದೇವತೆಗಳ ಪೂಜೆ, ಜಪ ಇವುಗಳನ್ನು ಅಸಂಕೀರ್ಣವಾಗಿ ಆಚರಿಸುವುದಾಗಿದೆ (ಶಾಕರ. ೩೫೮). ೨. [ಕಾವ್ಯಮೀ] ಕನ್ನಡದೇಶದ ದಕ್ಷಿಣಭಾಗದಲ್ಲಿ ಪ್ರಚಾರವಾಗಿದ್ದ ಶೈಲಿ; ವಿಶೇಷವಾಗಿ ಸ್ವಭಾವೋಕ್ತಿಯಿಂದ ಕೂಡಿದ ಶೈಲಿ; ಒಂದು ಬಗೆಯ ಭಾಷಾಪ್ರಯೋಗ ಕ್ರಮ: ಸತತಂ ದಕ್ಷಿಣಮಾರ್ಗೋದಿತೋಕ್ತಿ ಭೇದಕಗುಣಂ ಸ್ವಭಾವಾಖ್ಯಾನಂ . . . ಸಮಮಧುರ ನಿಬಿಡ ಕಾಂತ ಸುಕುಮಾರ ಸುಸಮಾಹಿತ ಪ್ರಸನ್ನೋದಾರ ಪ್ರಮಿತ ಗ್ರಾಮ್ಯೋಜಸ್ವಿ ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ (ಕವಿರಾ. ೨-೫೩). 'ಉತ್ತರಮಾರ್ಗ' ಪರಾ.

[ದಕ್ಷಿಣ + ಮಾರ್ಗ]

ದಕ್ಷಿಣಮುಷ್ಟಿ (ನಾ). ಬಲಗೈಯ ಹಿಡಿ,-ಮುಷ್ಟಿ: ತನ್ನ ಮುಂತೆಗೆದ ದಕ್ಷಿಣಮುಷ್ಟಿಯೆ [ಪಾಠಾಂ. ಮುಷ್ಟಿಯೆ ದಕ್ಷಿಣ] ಕರ್ಣಮೂಲದೊಳ್ ಸೊಗಯಿಸೆ ಪಾಳಿಯಂ ನೆಱಪದಾಳ್ದಿನ ಕಜ್ಜಮನೊಕ್ಕು ಸತ್ತರಂ ನಗುವ ಪೊಲಿರ್ದನಂಗಪತಿ (ಗದಾಯು. ೩-೦೦). [ದಕ್ಷಿಣ + ಮುಷ್ಟಿ$_{೨}$]

ದಕ್ಷಿಣಮೇರು (ನಾ). ಮೇರುಪರ್ವತದ ದಕ್ಷಿಣಭಾಗ. 'ಉತ್ತರಮೇರು' ಪರಾ. [ದಕ್ಷಿಣ + ಮೇರು]

ದಕ್ಷಿಣವರ್ತನ (ನಾ). ಬಲಭಾಗಕ್ಕೆ ತಿರುಗುವಿಕೆ: ದಕ್ಷಿಣವರ್ತನದಿಂದೆ ಪಜ್ವಳಿಸುತಿರ್ದುದು ವಹ್ನಿಸಮಸ್ತಂ (ಕಂದ್ರಪು. ೩-೯೪). 'ದಕ್ಷಿಣಾವರ್ತ' ಪರಾ. [ದಕ್ಷಿಣ + ವರ್ತನ]

ದಕ್ಷಿಣಶೀತವಲಯ (ನಾ). [ಭೂಗೋಳ] ದಕ್ಷಿಣಧ್ರುವದ ಬಳಿಯಿರುವ ಅತ್ಯಂತ ಶೀತಲವಾದ ಪ್ರದೇಶ: ದಕ್ಷಿಣಶೀತವಲಯ-ಇದು ದಕ್ಷಿಣಧ್ರುವಕ್ಕೂ ಮತ್ತು ಅದಕ್ಕೆ ಉತ್ತರದಲ್ಲಿ ಸುಮಾರು ಇಪ್ಪತ್ತುಮೂರುವರೆ ಅಕ್ಷಾಂಶಭಾಗಗಳ ದೂರದಲ್ಲಿರುವ ದಕ್ಷಿಣಧ್ರುವವೃತ್ತಕ್ಕೂ ಮಧ್ಯದಲ್ಲಿರುವ ದೇಶ (ಭೂಗೋಳ. ೯). [ದಕ್ಷಿಣ + ಶೀತವಲಯ]

ದಕ್ಷಿಣಶ್ರೇಣಿ (ನಾ). ದಕ್ಷಿಣಭಾಗದ (ರಾಜ್ಯಗಳ) ಪಂಕ್ತಿ,-ಸಾಲು: ಕೇಣಮನೊಕ್ಕು ತಕ್ಕನಜುದುಕ್ಕೆವಮಂ ವೆಱಗಿಕ್ಕಿ ದಕ್ಷಿಣಶ್ರೇಣಿಯ ರಾಜ್ಯಲಕ್ಷ್ಮಿ ದಮಿತಾರಿಯ ಪೋರ್ಕುಳಿಗಿರ್ದೊಡುತ್ತರಶ್ರೇಣಿಯ ರಾಜ್ಯಲಕ್ಷ್ಮಿ ಪುರುಡಾಕೆಯೊಳಾವಗಮಾಗೆ ಲಂಚಮಂ ಮಾಣದೆ ಕೊಟ್ಟ ಪೋಲ್ ಸೊಗಯಿಸಿರ್ಪುವು ಕವ್ಪರ ಪೊನ್ನರಾಶಿಗಳ್ (ಶಾಂತಿಪು. ೩-೦೩). 'ಉತ್ತರಶ್ರೇಣಿ' ಪರಾ. [ದಕ್ಷಿಣ + ಶ್ರೇಣಿ]

ದಕ್ಷಿಣಸಮಶೀತೋಷ್ಣವಲಯ (ನಾ). [ಭೂಗೋಳ] "ಮಕರ ಸಂಕ್ರಾಂತಿವೃತ್ತಕ್ಕೂ ದಕ್ಷಿಣ ಮೇರುವೃತ್ತಕ್ಕೂ ನಡುವೆ ಇರುವ ಭಾಗವು" (ಭೂವಿಜ್ಞ. ೦೯): ದಕ್ಷಿಣಸಮಶೀತೋಷ್ಣವಲಯವು ಮಕರ ಸಂಕ್ರಾಂತಿವೃತ್ತಕ್ಕೂ ದಕ್ಷಿಣಧ್ರುವವೃತ್ತಕ್ಕೂ ಮಧ್ಯದಲ್ಲಿರುವ ದೇಶವು (ಭೂಗೋಳ. ೧೦). [ದಕ್ಷಿಣ + ಸಮಶೀತೋಷ್ಣವಲಯ]

ದಕ್ಷಿಣಸಾಗರ (ನಾ). [ಭೂಗೋಳ] ಭೂವಿಯ ದಕ್ಷಿಣ ಪ್ರದೇಶದಲ್ಲಿರುವ ಸಮುದ್ರ: (Antarctic Ocean. ಪಾರಿನಿ. ೫). 'ಉತ್ತರಸಾಗರ' ಪರಾ. [ದಕ್ಷಿಣ + ಸಾಗರ$_{೨}$]

ದಕ್ಷಿಣಸ್ಥ (ನಾ). ೧. ಬಲಗಡೆಯಲ್ಲಿರುವವನು. ೨. ರಥವನ್ನು ನಡೆಸುವವನು; ಸಾರಥಿ: "ದಕ್ಷಿಣಸ್ಥಂ ನಿಯಂತ್ರಿಯಾಕ್ಷತ್ಯ ಸೂತನೆನೆ ಸಾರಥಿಗೆ ನಾಮಮಕ್ಕುಂ" (ಮುಂಗರಾ. ೮೫-೨೫). [ಸಂ.]

ದಕ್ಷಿಣಹಸ್ತ (ನಾ . = ದಕ್ಷಿಣಕರ: ಅಂತಕಾರಾದಿ ಹಕರಾಂತ . . . ಸಂಯೋಗಾಕ್ಷರಗಳುಮಂ ಬ್ರಹ್ಮಗೆ ದಕ್ಷಿಣಹಸ್ತದೊಳುವದೇಶಂಗೆಯ್ದು (ಆದಿಪು. ೯-೩೯ ವ); ಆ ಬಾಲಿಕೆ ಗದ್ಗದಕಂಠೆ ವಾಮಕರ ಪಲ್ಲವಾಂಗುಳಿನಖಾಕ್ಷಿಪ್ತಾಶ್ರುಸ್ರವೆ ದಕ್ಷಿಣಹಸ್ತಾಭ್ಯರ್ದ್ಧಮಾನ ಸ್ತನಾಂಶುಕೆಯಾಗಿ ಬಿನ್ನವಿಕುಂ (ಶಾಂತಿಪು. ೬-೬೨ ವ). [ದಕ್ಷಿಣ + ಹಸ್ತ]

ದಕ್ಷಿಣಾಂಘ್ರಿ (ನಾ). ಬಲಗಾಲು; ದಕ್ಷಿಣ ಚರಣ: ವಿನಾಶ್ಚ ಶಂಖಚಕ್ರ ವಿತಾನಾಂಕಿತ ದಕ್ಷಿಣಾಂಘ್ರಿ ತಲವಲ್ಲವಮುತ್ಪಾನಂ ರತ್ನಾಕರದವೊಲೇ ನಮರ್ದುರ್ದೊ (ಶಾಂತಿಪು. ೩-೪೮). [ದಕ್ಷಿಣ + ಅಂಘ್ರಿ]

ದಕ್ಷಿಣಾಂಸ (ನಾ). ಬಲತೋಳು; ಬಲಭುಜ: ದಮಿತಾರಿ ಚಕ್ರಕ್ಕೆ ಕೆಯ್ಯಂ ನೀಡೆ ಅದು . . . ದಕ್ಷಿಣಾಂಸದ ಮೇಗಿರ್ದುದು ನೀಳಶೈಲತಟದೊಳ್ ತಿಗ್ಮಾಂಶುವಿರ್ದಂದದಿಂ (ಶಾಂತಿಪು. ೪-೩೩). [ದಕ್ಷಿಣ + ಅಂಸ]

ದಕ್ಷಿಣಾಕ್ಷಿ (ನಾ). ಬಲಗಣ್ಣು; ದಕ್ಷಿಣ ನಯನ: ದಿನಪನುದಯಕ್ಕೆ ನಿಲೆ . . . ಪನ್ನೆರಡನೆಯೆಡೆಯೊಳ್ ದಕ್ಷಿಣಾಕ್ಷಿರಹಿತಂ ಪತಿತಂ (ಜಾತಕ. ೧೪-೪); ನಿಜ ದಕ್ಷಿಣಾಕ್ಷಿ ದಕ್ಷಿಣಭುಜಪರಿಘಸ್ಪಂದವೊಗೆಯೆ . . . ಪವನಜವಾನ್ವಿತ ರಥದಿನೆಯ್ದಿದಂ ಗೋಕುಲಮಂ (ಜಗವಿ. ೩-೭೬). [ದಕ್ಷಿಣ + ಅಕ್ಷಿ]

ದಕ್ಷಿಣಾಕ್ಷಿಸ್ಪಂದ (ನಾ). ಬಲಗಣ್ಣು ಹಾರುವಿಕೆ,-ಅದಿರುವಿಕೆ; P ಗಂಡಸರಿಗೆ ಶುಭ, ಹೆಂಗಸರಿಗೆ ಅಶುಭವೆಂಬ ನಂಬಿಕೆ ಇದೆ: ಅರಿಮಕುಟರತ್ನಮಂ ನಿಜಚರಣಕ್ಕರ್ಘ್ಯಪ್ರದೀಪವಾಗಿಪ್ಪುದನಾ ಭರತೇಶ್ವರಂಗೆ ಕಾಣ್ಬಂತಿರೆ ಸೂಚಿಸಿದತ್ತು ದಕ್ಷಿಣಾಕ್ಷಿಸ್ಪಂದಂ (ಆದಿಪು. ೦೧-೦೨): ಇಂದುವದನೆಗೆ ದಕ್ಷಿಣಾಕ್ಷಿಸ್ಪಂದವಾಯಿತು (ಕುವಾ.ಸ. ೧೩-೪೨).

[ದಕ್ಷಿಣಾಕ್ಷಿ + ಸ್ಪಂದ]

ದಕ್ಷಿಣಾಗತಿ (ನಾ). ಸೂರ್ಯನು ಸಮಭಾಜಕ ವೃತ್ತದಿಂದ ತೆಂಕಲಿಗೆ ಸರಿದು ತನ್ನ ಭ್ರಮಣದಲ್ಲಿ ಮಾರ್ಗವನ್ನು ಬದಲಿಸಿಕೊಳ್ಳುವ ಕಾಲ: ದಕ್ಷಿಣಾಗತಿಃ ದಕ್ಷಿಣಾಯಣವೆಂಬುದೆ (ನಿಶ್ಚಾಂತಿ. ೩೭). [ಸಂ.]

ದಕ್ಷಿಣಾಗ್ನಿ (ನಾ). ೧. ಅಗ್ನಿತ್ರಯದಲ್ಲಿ ಒಂದು; ದಕ್ಷಿಣ ದಿಕ್ಕಿನಲ್ಲಿ ಇಟ್ಟಿರುವ ಯಾಗದ ಬೆಂಕಿ: "ದಕ್ಷಿಣಾಗ್ನಿಃ, ಗಾರ್ಹಪತ್ಯಃ, ಆಹವನೀಯಃ–ಈ ೩ನ್ನು ತ್ರಯೋಗ್ನಯಃ, ಪ್ರತ್ಯೇಕವಾಗಿ ತಮ್ಮ ತಮ್ಮ ಹೆಸರುಗಳಿಂದ ಪುಸಿದ್ಧವಾದ ಮೂರು ಶ್ರೌತಾಗ್ನಿಗಳು" (ಸಿದ್ಧಾಂತಿ. ೩೦೯). ೨. = ದಕ್ಷಿಣ ೧೦: ತೀರ್ಥಕರಗಣಧರಾನಗಾರ ಕೇವಳಿಗಳ್ ಪರಿನಿರ್ವಾಣ ಕ್ಷೇತ್ರದೊಳ್ ಶರೀರಸಂಸ್ಕಾರಾದಿ ಗಾರ್ಹಪತ್ಯ ದಕ್ಷಿಣಾಗ್ನ್ಯಾಹವನೀಯ ಮೆಂಬ ಪೆಸರಂ ಪಡೆದು (ಆದಿಪು. ೦೩-೧೬ ವ). [ದಕ್ಷಿಣ + ಅಗ್ನಿ]

ದಕ್ಷಿಣಾದಿ (ನಾ). ೧. ದಕ್ಷಿಣದೇಶಕ್ಕೆ ಸಂಬಂಧಿಸಿದುದು. ೨. [ಸಂಗೀತ] ದಕ್ಷಿಣದಲ್ಲಿ ಪ್ರಚುರವಾಗಿರುವ ಸಂಗೀತ ಪದ್ಧತಿ; ಕರ್ನಾಟಕ ಸಂಗೀತ: ಯಕ್ಷಗಾನದ ರೂಢಿಯ ಹಲವು ರಾಗಗಳಿಗೂ, ದಕ್ಷಿಣಾದಿಯ ಅವೇ ರಾಗಗಳಿಗೂ ಸ್ವರಪ್ರಸ್ತಾರದಲ್ಲಿ ವ್ಯತ್ಯಾಸವಿಲ್ಲ (ಯಕ್ಷಲ. ೬೩). [ದಕ್ಷಿಣ + ಆದಿ]

ದಕ್ಷಿಣಾನಿಲ (ನಾ). ದಕ್ಷಿಣ ದಿಕ್ಕಿನ ಗಾಳಿ; ತೆಂಗಾಳಿ: ಪೂಗಣ್ಯನಟ್ಟಿದ ದಕ್ಷಿಣಾನಿಲಂ ಮುಂತೆವಂದು ಸೊಗದ ಸುಗ್ಗಿವೆಸರೋಲಗಸಾಲೆಯ ಬಾಗಿಲ್ವಾಡದೊಳ್ ನಿಂದಿರ್ಪಾ ಬಸಂತನಂ ಕಂಡೆಱಗಿ (ರಾಮಾಶ್ವ. ೩೭-೧). [ದಕ್ಷಿಣ + ಅನಿಲ]

ದಕ್ಷಿಣಾಪಥ (ನಾ). ೧. ಭರತಖಂಡದ ದಕ್ಷಿಣಭಾಗ; ವಿಂಧ್ಯಪರ್ವತದಿಂದ ದಕ್ಷಿಣಕ್ಕಿರುವ ದೇಶ: ದಕ್ಷಿಣಾಪಥದಿನೊರ್ವಳ್ಕನ್ನೆ ಚಂಡಾಲೆ ದರ್ಶನತಾತ್ಪರ್ಯದ ರಾಜಕೀರಸಹಿತಂ ಬಂದಿರ್ದಪಳ್ಬಾಗಿಲೊಳ್(ಕಾದಂಪೂ. ೨೪): ಸಂಸ್ಕೃತಿಯ ದೃಷ್ಟಿಯಿಂದ ಆರ್ಯಾವರ್ತ, ದಕ್ಷಿಣಾಪಥ ಎಂಬ ಪ್ರಭೇದ ಮಾಯವಾಯಿತು (ಹುಕ್ಕಾ. ೦೦೮ ಟೀಕೆ). ೨. = ದಕ್ಷಿಣ ಮಾರ್ಗ: ವಿಲಸಿತ ಸಸ್ಯಸಂಪದಭಿರಾಮಗುಣೋದಯೆ ತಾಳ್ದಿದಳ್ದರಾಲಲನೆ ವಿಶಾಲಲಕ್ಷ್ಮಿಯನನಾರತಮೆಂಬುದು ದಕ್ಷಿಣಾಪಥಂ (ಕವಿರಾ. ೨-೨೦೮). 'ಉತ್ತರಾಪಥ' ಪರಾ. [ಸಂ.]

ದಕ್ಷಿಣಾಭಿಮುಖ (ನಾ). ತೆಂಕಲು ದಿಕ್ಕಿಗೆ ಮುಖಮಾಡಿಕೊಂಡಿರುವವನು; ದಕ್ಷಿಣಕ್ಕೆ ಹೊರಟಿರುವವನು: ದಕ್ಷಿಣಾಭಿಮುಖನಾಗಿ ನಿತ್ಯ ಪ್ರಯಾಣಂಗಳಿಂ ಬಂದು (ಆದಿಪು. ೦೩-೭೭ ವ). [ದಕ್ಷಿಣ + ಅಭಿಮುಖ]

ದಕ್ಷಿಣಾಮೂರ್ತಿ (ನಾ). ೧. ಶಿವನ ಇಪ್ಪತ್ತೈದು ಲೀಲಾಮೂರ್ತಿಗಳಲ್ಲಿ ಒಂದು; ಜ್ಞಾನಮುದ್ರಾಂಗುಳಿಯಿಂ ಶಿಷ್ಯಪ್ರಬೋಧಪ್ರದನೆಸೆದನವಂ ದಕ್ಷಿಣಾಮೂರ್ತಿದೇವಂ (ರಾಜಶೇ. ೩-೦೦೯): ಅನೇಕವಿಧವಾದ ಮೂರ್ತಿಗಳನ್ನು ಶಿವದೇವಾಲಯಗಳಲ್ಲಿ ಕಾಣಬಹುದು. 'ಅವುಳರಿ' ನ ದಕ್ಷಿಣಾಮೂರ್ತಿ ... ಇವುಗಳಲ್ಲಿ ಪ್ರಸಿದ್ಧ (ಧಾರವ. ೩೦೩). ೨. ಪಂಚಾಮಂತ್ರಗಳಲ್ಲಿ ಒಂದು: ಗಾಯತ್ರಿ ಮೃತ್ಯುಂಜಯ ದಕ್ಷಿಣಾಮೂರ್ತಿ ನೀಲಕಂಠ ಶರಭ ವೀರಭದ್ರ ವಿಘ್ನೇಶ್ವರ ವಿಶಾಖ ವಿದ್ಯೇಶ್ವರ ಬ್ರಹ್ಮ ವಿಷ್ಣು ಸೂರ್ಯ ಭೈರವ ಪಾರ್ವತಿ ಕಾಮಧೇನು ಕಲ್ಪವೃಕ್ಷ ಮಾಯಾ ಸಾವಿತ್ರೀ ಸರಸ್ವತೀ ಅಮೃತೇಶ್ವರೀ ಸಪ್ತಮಾತೃಕಾ ದುರ್ಗಾ ಕಾಳೀ ಬಗಳಾಬಾಲಾ ಲಲಿತಾ ಶೂಲಿನ್ಯಾದಿ ಮಹಾಮಂತ್ರಂಗಳಂ (ವಿವೇಕ. ೩೦). [ಸಂ.]

ದಕ್ಷಿಣಾಯಣ (ನಾ). = ದಕ್ಷಿಣಾಗತಿ: ಸೂರ್ಯನಲ್ಲಿ ರಶ್ಮೀರೂಪವಾಗಿ ದಕ್ಷಿಣಾಯಣದಲ್ಲಿ ೩೬೦೦೦ ಉತ್ತರಾಯಣದಲ್ಲಿ ೩೬೦೦೦ ರಶ್ಮಿಗಳು ಆಗುವವು (ಹಸಾರ. ೭-೨ ತಾತ್ಪರ್ಯ): ಸೂರ್ಯನು ... ದಕ್ಷಿಣದಲ್ಲಿರುವಾಗ ದಕ್ಷಿಣಾಯಣ, ಆಗ ನಮಗೆ ಚಳಿಗಾಲ (ತಂತಿಭಾ. ೨). 'ಉತ್ತರಾಯಣ' ಪರಾ. [<ಸಂ. ದಕ್ಷಿಣಾಯನ]

ದಕ್ಷಿಣಾಯನ (ನಾ). ೧. = ದಕ್ಷಿಣಾಗತಿ: ಅಂಬುದಸಮಯಂ ಮೊದಲಾಗಲ್ ಋತುಗಳ್ ಮೂಱು ದಕ್ಷಿಣಾಯನಕೆ ಸಂತತಂ ವರ್ತಿಸುಗುಂ (ಜಾತಕ. ೨೪-೪). ೨. = ದಕ್ಷಿಣಮಾರ್ಗ ೨: ಶ್ರಿದಶಗಣೀಶಮೌಳಿಮಣಿಪೀಠನಿಷೇವಿಗಳೊಳ್ಕುನೀಂದ್ರನಾ ಪದಯುಗಳಂಗಳಿಂಗಳೊಳ್ಕುದಲ್ ಬಾಗುವೆನೆಂಬುದು ದಕ್ಷಿಣಾಯನಂ (ಕವಿರಾ. ೨-೦೦೭) [ಸಂ.]

ದಕ್ಷಿಣಾಯನಪುಣ್ಯಕಾಲ (ನಾ). ಸೂರ್ಯನು ವಿಷುವದ್ರೇಖೆಯಿಂದ ದಕ್ಷಿಣಕ್ಕೆ ಸಂಚರಿಸಲು ಪ್ರಾರಂಭಮಾಡುವ ಕಾಲ; ℙ ಜುಲೈ ತಿಂಗಳ ಮಧ್ಯದಲ್ಲಿ ಬರುವ ಸಂಕ್ರಮಣ ಕಾಲ. ಸೂರ್ಯನು ಕರ್ಕಾಟಕ ರಾಶಿಯನ್ನು ಪ್ರವೇಶಿಸುವ ಈ ಕಾಲವು ಸ್ನಾನ, ಜಪ, ದಾನ, ತರ್ಪಣಗಳಿಗೆ ಪ್ರಶಸ್ತವೆಂದು ನಂಬಲಾಗಿದೆ: ಸೂರ್ಯನು ಮಿಥುನ ನಕ್ಷತ್ರದಲ್ಲಿರುತ್ತಾನೆಂದು . . . ಈ ಕಾಲವನ್ನು ದಕ್ಷಿಣಾಯನಪುಣ್ಯಕಾಲವೆಂದು ಕರೆಯುತ್ತಾರೆ (ನಕ್ಷತ್ರ. ೩೪). [ದಕ್ಷಿಣಾಯನ + ಪುಣ್ಯಕಾಲ]

ದಕ್ಷಿಣಾರ್ಥ (ನಾ). ೧. ದಕ್ಷಿಣೆಯ ಅಪೇಕ್ಷೆ; ದಾನವನ್ನು ಪಡೆಯುವ ಉದ್ದೇಶ: ನೆರೆವುತಿದೆ ನಾನಾ ದಿಗಂತದ ಧರಣೀಪರು ಕನ್ಯಾರ್ಥಿಗಳಂ ಭೂಸಾರಸಮೂಹದ ಸಾಲು ನೆರೆದುದು ದಕ್ಷಿಣಾರ್ಥದಲಿ ಎರಡಱೊಳು ನಿಮಗೇನು ಕನ್ಯಾವರಣವೋ ವೇಂಙ್ ದಕ್ಷಿಣಾರ್ಥವೊ ಬರವು ನಿಮಗಂತೀಯೆನುತ ದ್ವಿಜನಿವರ ಬೆಸಗೊಂಡ (ಕುಚ್ಚಾ. ೦೦-೦೪). ೨. ದಕ್ಷಿಣೆಯ ದ್ರವ್ಯ: ಎನಿತ ಕಿಂಚಿತ್ ಪ್ರಹಸಿತಾನನವನಜನಾಗುತ ದಕ್ಷಿಣಾರ್ಥಕ್ಕನು ಗೊಳಲು (ಬಸವ. ೪೩-೬೩). [ಸಂ.]

ದಕ್ಷಿಣಾರ್ಧ (ನಾ). ದಕ್ಷಿಣಭಾಗದ ಅರ್ಧ; ಬಲಭಾಗದ ಅರ್ಧ: ಇದರ ಅರ್ಧ ದಕ್ಷಿಣಾರ್ಧದ ನಕ್ಷತ್ರಗಳು ದಿನದಲ್ಲಿ ೧೨ ಘಂಟೆಗಳಿಗಿಂತ ಕಡಿಮೆ ಕಾಲ ನಮ್ಮ ದಿಗಂತದ ಮೇಲಿದ್ದು ಹೆಚ್ಚುಕಾಲ ಮುಳುಗಿರುತ್ತವೆ (ನಕ್ಷತ್ರ. ೩೩). [ದಕ್ಷಿಣ + ಅರ್ಧ]

ದಕ್ಷಿಣಾರ್ಹ (ಗು). ೧. ದಕ್ಷಿಣೆಯನ್ನು ಪಡೆಯಲು ಅರ್ಹತೆಯುಳ್ಳ. (ನಾ). ೨. ದಕ್ಷಿಣೆಗೆ ಯೋಗ್ಯನಾದವನು: "ದಕ್ಷಿಣೀಯಃ, ದಕ್ಷಿಣಾರ್ಹಃ, ದಾಕ್ಷಿಣ್ಯಃ – ೩ ದಕ್ಷಿಣೆಗೆ ಯೋಗ್ಯನಾದವನು" (ನಿಕ್ಕಾಂತಿ. ೨೭೯). [ದಕ್ಷಿಣ + ಅರ್ಹ]

ದಕ್ಷಿಣಾವರ್ತ (ಗು). ೧. ಬಲಭಾಗಕ್ಕೆ ತಿರುಗುವ: ಪ್ರದಕ್ಷಿಣಂ ಬಂದು ದಕ್ಷಿಣಾವರ್ತಶಿಖಾಸ್ಪದನಂ ಹೋಮಾನಳನಂ ಮಾದುವಕ್ಕಳ್ ವಿನುಪ ಲಾಜೆಯಿಂ ಪೂಜಿಸಿದರ್ (ಜಗವಿ. ೧೦-೦೩೩). (ನಾ). ೨. ಬಲಭಾಗಕ್ಕೆ ತಿರುಗುವುದು: ಕರ್ಮಭೂತಳೋಪಸರ್ಗ ವಿಧ್ವಂಸನ ನಿಮಿತ್ತಮಾಗಿ ನೀರಾಜನಂಗೆಯ್ವಂತೆ ತದ್ಧರಾನಳಂ ದಕ್ಷಿಣಾವರ್ತಮಾಗಿ ಪಜ್ವಳಿಸೆ (ಆದಿಪು. ೭-೩೭ ವ); ದಕ್ಷಿಣಾವರ್ತಮಾಗೆಸೆದುದು ಶಿಖಿ ಪಾಂಚಜನ್ಯದಂತೆ (ಶಾಲ್ಗಿಪು. ೦೨-೩). [ದಕ್ಷಿಣ + ಆವರ್ತ]

ದಕ್ಷಿಣಾವರ್ತನ (ನಾ). ದಕ್ಷಿಣಕ್ಕೆ ತಿರುಗುವುದು, – ಹೋಗುವುದು: "(ನಾವೆ) ದಕ್ಷಿಣಕ್ಕೆ ಪ್ರಯಾಣಮಾಡುವಲ್ಲಿ ಆದ ಅಕ್ಷಾಂಶವ್ಯತ್ಯಾಸ: ದಕ್ಷಿಣಾವರ್ತನ" (South.ing. ಇಂಗ್ಲಿ). [ದಕ್ಷಿಣ + ಆವರ್ತನ]

ದಕ್ಷಿಣಾವರ್ತನಾಭಿ (ನಾ). ಬಲಭಾಗಕ್ಕೆ ತಿರುಗಿರುವ ನಾಭಿ; ಬಲಸುಳಿ; ಹೊಕ್ಕುಳು: ಸರದೊಡನೆ ಗಂಭೀರಮಾದ ದಕ್ಷಿಣಾವರ್ತನಾಭಿಯುಂ ಅಧರವಲ್ಲವದೊಡನೆ ಅಶೋಕ ಪಲ್ಲವಾನುರಕ್ತಂಗಳಾದ ಪಾಣಿಪಾದತಳಂಗಳುಂ ಲಲಾಟ ಪಟ್ಟದೊಡನೆ ಲಲಿತೋನ್ನತಂಗಳಾದ ಪೊಱಅಡಿಗಳುಂ . . . ಆತ್ಮೀಯ ಯೌವನಪ್ರಾದುರ್ಭಾವಮಂ ಪ್ರಕಟಂಮಾಡೆ (ಆದಿಪು. ೩-೯ ವ). [ದಕ್ಷಿಣಾವರ್ತ + ನಾಭಿ]

ದಕ್ಷಿಣಾವೃತ್ತ [ತ್ತಿ] (ನಾ). [ಸಂಗೀತ] ಗೀತ ಹಾಗೂ ವಾದ್ಯಗುಣಗಳು ಪ್ರಧಾನವಾಗಿರುವಿಕೆ: ಯತಿಯೊಳ್ ಗೋವುಚ್ಚೆ ತನ್ನೊಳ್ ನೆಲಸಿ ನೆಗಟ್ವಿನಂ ಮಾರ್ಗದೊಳ್ ಚಿತ್ರಕೀಯಂ ಕೃತಕೂಚಾಡಂಬರಂ ರಂಜಿಸುವಿನ ಮೆಸೆಗುಂ ದಕ್ಷಿಣಾವೃತ್ತ [ತ್ತಿ] ವೃತ ಶ್ರಿತಯಾಂತರ್ವರ್ತಿ ತಾನೆಂಬಿನ ಮನುಗತ ತತ್ತ್ವಾಧಿಕೊಳ್ ತತ್ತ್ವದಿಂದನ್ವಿತಮಂ ವಿಸ್ತಾರಮತ್ಯ ಪ್ರಕಟಿತಮನದಿಂ ಮೆಚ್ಚಿದಂ ದೇವರಾಜಂ (ಅಜಿಪು. ೩-೧೨). [ಸಂ.]

ದಕ್ಷಿಣಾಶಾಪತಿ (ನಾ). ದಕ್ಷಿಣ ದಿಕ್ಪಾಲಕ; ಯಮ: "ಶಮನಃ . . . ದಕ್ಷಿಣಾಶಾಪತಿಃ, ಶ್ರಾದ್ಧದೇವಃ,–ಈ ೧೬ ಜವನ ಪೆಸರ್" (ಹರಿಶಯು. ೦೩-೭೫). [ಸಂ.]

ದಕ್ಷಿಣಾಶೆ (ನಾ). ತೆಂಕಲು; ದಕ್ಷಿಣದಿಕ್ಕು: ದಕ್ಷಿಣಾಶೆಯ ನಱುಸುಯ್ಯ ಗಾಳಿಯನೆ ಪೋಲ್ತುದು ಗಂಧವಹಂ ವಸಂತದೊಳ್ (ಶಾಂತಿಪು. ೬-೦೨೬); ಮೇರುವಿನ ದಕ್ಷಿಣಾಶೆಯೊಳು . . . ಲಕ್ಷ್ಮಿಯ ರಾಜಧಾನಿಯೆನಲೊಪ್ಪುವುದು ಚಾರುತರ ಲಾಳದೇಶಂ (ಹರಕಾ. ೦-೩೪). [ದಕ್ಷಿಣ + ಆಶೆ]

ದಕ್ಷಿಣಾಸ್ಥ (ನಾ). = ದಕ್ಷಿಣಸ್ಥ ೨: ನಿಯಂತಾ, ಪ್ರಾಜಿತಾ, ಕ್ಷತ್ತಾ, ದಕ್ಷಿಣಾಸ್ಥಃ . . . ಸೂತಃ—ಈ ೭ ಸಾರಥಿ" (ಹರಿಶಯು. ೭೩-೨೯೫).

[ಸಂ.]

ದಕ್ಷಿಣೆ (ನಾ). ೧. ಪಿತೃಕಾರ್ಯ, ದೇವತಾಪೂಜೆ, ಯಾಗ, ವ್ರತ ಮುಂತಾದ ಸಂದರ್ಭಗಳಲ್ಲಿ ಬ್ರಾಹ್ಮಣರು, ಗುರುಹಿರಿಯರಂ ಮುಂತಾದವರಿಗೆ ನೀಡುವ ಕಾಣಿಕೆ,–ಸಂಭಾವನೆ: ಆವ ಲಕ್ಷಣದ ಹಯಮದಕೆ ಋತ್ವಿಜರೆನಿಬರೆನಿಸು ದಕ್ಷಿಣೆಗಳದರಂದಮಂ ವಿಸ್ತರಿಸ ವೇಳ್ಕುದು (ಜೈಮಿಭಾ. ೨-೨೫): ತೃಪ್ತಿಯೆ ತಣಿದು ತೇಗಿದುದೆನಲ್ಕೆ ನಲಿದುದು ಜನಂ ಭಾರಕಾ ಭೋಜನಕೆ ಮೇಣ್ ದಾನ ದಕ್ಷಿಣೆಗೆ (ಶ್ರೀರಾಮಾ. ೧೧-೨೮೪). 'ಗುರುದಕ್ಷಿಣೆ' ಪರಾ. ೨. ಹಣದ ದಾನ,–ಕೊಡುಗೆ: "ದೂಗವ್ಯಯಂ ದಾನಮುತ್ಸರ್ಗಮಪವರ್ಜನಂ ದಕ್ಷಿಣೆಯುದೆ ನಿಕ್ಕುಂ" (ಮುಂಗರಾ. ೭೭-೦೪); ಬಂದ ದಕ್ಷಿಣೆ ಮೃಷ್ಟಭೋಜನದಿಂದ ತುಷ್ಟರು ನಾವು (ಕುವಾ೩ಆ. ೦೫-೩); ಮಾಡಿದನು ಮನದಣಿಯೆ ದಕ್ಷಿಣೆಗೂಡಿ ಕನ್ಯಾಧೇನು ದಾನವನು (ತೊಕರಾ. ೨-೨-೫೦); ಮುತ್ತೈದೆಯರಿಗೆ ಅರಿಶಿಣ ಕುಂಕುಮ ಫಲಪುಷ್ಪ, ತಾಂಬೂಲಗಳನ್ನೂ ದಕ್ಷಿಣೆಯನ್ನೂ ಇತ್ತು ಸತ್ಕರಿಸಿದನು (ಶ್ರೀರಾಉ. ೬) ಭಕ್ಷ್ಯವಿಲ್ಲದಿದ್ದರೂ ದಕ್ಷಿಣೆ ಸಿಕ್ಕಿದರೆ ಸಾಕು (ಗಾದೆ). [ಸಂ. ದಕ್ಷಿಣಾ]

ದಕ್ಷಿಣೆಗೊಡು (ಕ್ರಿ). ಪಿತೃಕಾರ್ಯ, ದೇವತಾಪೂಜೆ ಮುಂತಾದ ಸಂದರ್ಭಗಳಲ್ಲಿ ಗುರುಹಿರಿಯರೇ ಮೊದಲಾದವರಿಗೆ ದಾನವನ್ನು ಕೊಡು,–ದಕ್ಷಿಣೆ ನೀಡು: ಅಂತು ನಿಜಧವಳಚ್ಛತ್ರ ಚಾಮರ ಸಿಂಹಾಸನಾದಿ ರಾಜಚಿಹ್ನಂಗಳುಟ್ಟಿಯೆ ಸರ್ವಸ್ವಮಿಲ್ಲಮಂ ದಕ್ಷಿಣೆಗೊಟ್ಟು (ಕಂಪಧಾ. ೬-೪೦ ವ). [ದಕ್ಷಿಣೆ + ಕೊಡು೧]

ದಕ್ಷಿಣೇಂದ್ರ (ನಾ). ದಕ್ಷಿಣ ದಿಕ್ಕಿನ ಅಧಿಪತಿ: ಬ್ರಹ್ಮಲೋಕನಿಳಯರಪ್ಪ ಲೋಕಾಂತಿಕರುಂ ದಕ್ಷಿಣೇಂದ್ರರುಂ . . . ಭವವಲ್ಲೀದಳಫಲಮೂಲ ವಿಷಯವಮುಂ ಪಱಿದು (ಶಾಂತಿಪು. ೦೨-೪೩ ವ). P ಜೈನರ ಪ್ರಕಾರ ದಕ್ಷಿಣೇಂದ್ರರು ಸೌಧರ್ಮ, ಸನತ್ಕುಮಾರ, ಬ್ರಹ್ಮ, ಶುಕ್ರ, ಆನತ ಎಂತು ಆರಣ್ಯರೆಂದು ಆರುಮಂದಿ. [ದಕ್ಷಿಣ + ಇಂದ್ರ]

ದಖನ್, ದಕನ್ (ನಾ). ದಕ್ಷಿಣಭಾರತದ ಪ್ರದೇಶ; ನರ್ಮದಾ ಮತ್ತು ಕೃಷ್ಣಾ ನದಿಗಳ ನಡುವಿನ ಭೂಭಾಗ: ದಖನ್ನಿನ ಭಾಗವು ವಾಸಯೋಗ್ಯವಾಗಿತ್ತು (ಧಾಇಪ್ರ. ೦೫); ದಖನ್ನಿನ ಒಂದು ಭಾಗ (ಚೀನಕಾ. ೧೦೮). **ದಕನ್**: ಈ ಕಾಲದಲ್ಲಿ ದಕನ್ ಬಾದಷಹರು ದಿಲ್ಲಿ ರಾಜನಿಗೆ ವಿರುದ್ಧರಾದರು (ಉರ್ದುಪಾ. ೬).

[←ಪಾರ. ದಕನ್; ಹಿಂ. ದಖನ್, ದಕನ್; ಪ.ತಾ. ದಖ್ಖಿನ್./ಪ್ರಾ. ದಕ್ಖಿಣ]

ದಖನಿ (ಗು). ೧. ದಕ್ಷಿಣಕ್ಕಿರುವ; ದಕ್ಷಿಣದೇಶದ. (ನಾ). ೨. ದಖನ್ ಪ್ರದೇಶದ ಗುಲ್ಬರ್ಗ, ಬಿಜಾಪುರ ಪ್ರದೇಶಗಳಲ್ಲಿ ಪ್ರಚಲಿತವಾಗಿದ್ದ ಉರ್ದು ಭಾಷೆಗೆ ಮೊದಲಿನ ಒಂದು ಇಂಡೋ–ಆರ್ಯನ್ ಭಾಷೆ: (ಕ). [←ಹಿಂ. ದಕ್ಖಿನೀ; ಮರಾ. ದಖಿನೀ]

ದಖಾಫಿ 'ಧಕ್ಕಾಫಿ' ನೋ.

ದಖೀಲಿ (ನಾ). ಮೊಗಲ್‌ಸೈನ್ಯದ ಒಂದು ಪಂಗಡ: ದಖೀಲೀ ಇದಕ್ಕೆ ಸಂಬಳವೇನೋ ಸರ್ಕಾರದಿಂದ ಬರುತ್ತಿದ್ದರೂ ಇದು ಮನ್‌ಸಬ್‌ದಾರರ ಅಧೀನದಲ್ಲಿರುತ್ತಿತ್ತು (ಇಸ್ಲಾಂಸಂ. ೬೮).

[←ಅರ. ಹಿಂ. ದಖೀಲ್ = ಅಧಿಕಾರಿ]

ದಗ 'ದಗಾ' ನೋ.

ದಗಡಿ 'ಧಗಡಿ೧' ನೋ.

ದಗದ (ನಾ). (ಉಕ) ಕೆಲಸ; ಕಾರ್ಯ: ಹರಿಯ ಹೊತ್ತಿಲೆದ್ದು, ಅತ್ತಿ ಮಾವಗ ಶರಣ ಮತ್ತೊಂದು ಶರಣ ಗುರುವೀಗೆ ನಾ ಮಾಡಿ ಹೊಕ್ಕೀನಿ ಮನಿಯ ದಗದಕ (ಜನಗೀ. ೭೬); ಅಪ್ಪ ರಾಚಣ್ಣನ ತೇರೆಳೆದು ಬರುವಾಗ ತೀರಲಿಲ್ಲವ್ವ ಮನೆ ದಗದ (ಕಪ್ಪಜಾ. ೦೦); ಬೆಳತನಕ ದುಡಿಯೋವಷ್ಟು ದಗದ ಆದ್ರೂ ಐತಿರಾ ಅದು? (ಕುಮಾಕಾ. ೦೩೫); ಅವರ ಕಡೀಗೆ ತುಸು ದಗದ ಇತ್ತು (ಜೀವಪ್ರ. ೮೨). [?./ಮರಾ. ದಗದಗ = ಪರಿಶ್ರಮ.]

ದಗದಗ (ನಾ). ಒಂದು ಅನುಕರಣ ಶಬ್ದ. 'ದಗದಗನೆ' ಪರಾ.

ದಗದಗನೆ (ಅ). ದಗದಗ ಎಂಬ ಶಬ್ದದೊಡನೆ: ದೆಂಕಿ ದಗದಗನೆ ಉರಿಯಿತು (ಠೂಥಿ) [ದಗದಗ + –ಅನೆ೧]

ದಗದಗಿಸು (ಕ್ರಿ). (ಬೆಂಕಿ) ದಗದಗ ಎಂದು ಉರಿ; ಪ್ರಜ್ವಲಿಸು: ಕರಿಗಿರಿಯೊಳು ದಗದಗಿಸಿ ಹರಿಯಾವಳಿಯುರುಗುಲ್ಮದೊಳು ಭುಗುಭುಗಿಸಿ ಬರುದಿನ ಮನ್ನೆಯ ಭಟರ ಪ್ರತಾಪಾಗ್ನಿ ಮೆಱೆದುದು ರಿಪುವನದೊಳಗೆ (ಕಂನವಿ. ೦೫-೫೫). [ದಗದಗ + – ಇಸು೩]

ದಗಮು, ಧಗಮು (ನಾ). ಒಂದು ಬಗೆಯ (ಚರ್ಮದ) ವಾದ್ಯವಿಶೇಷ: ಕೊಂಬು ಬೊಂಬುಳಿ ಕಾಳೆ ಡೋಳು ದಗಮು ಚಿನ್ನ ಚಿಂಬಕವಱೆ ತಿತ್ತಿರಿಗಳ ಡೊಂಬಿಯ ಧ್ವನಿಯಿಂದ ಪೌಜುಗಳತ್ಯಾಡಂಬರದಿಂದೆಯ್ದಿದವು (ಕುಡಾಸಾಂ. ೦೨-೨೫); ಡಕ್ಕೆ ದಗಮು ಕೊಂಬು ಕೊಳಲು ತಪ್ಪಟಿ ಮೃದಂಗದ ರವ ತುಂಬಿತು ಲೋಕವನಿರದೆ (ರಾಮವಿ. ೭-೦೨); ಪೊಡೆವ . . . ತಂಬಟ ಡೋಳು ದಗಮು ಗಿಡಿಬಿಡಿಗಳ ಬಲ್ದನಿ ಮುಪ್ಪೊಡವಿಯನಡರಲು ನಡೆದುದಾ ಸೇನೆ(ದಂಪ್ರಸಾಂ. ೫೦-೬೯); ಅನ್ನಿಗರೆನಗೊಡ್ಡಿ ನಿಂದರೆ ದಗಮಿನ ಸನ್ನೆಯೊಳ್ಬಾಯ ಕುಟ್ಟಿಸುವೆ (ಧರಚ. ೪೯-೫೬); ಮೆಱೆವ ತುಡುಮು ಭೇರಿ ದಗಮು ಡಿಂಡಿಮ ಡೌಡೆ ವೊಜೆವ ದೋಲುಗಳು ಡಕ್ಕೆಗಳು (ಜ್ಞಾನಚ. ೪೦-೫೫). **ಧಗಮು**: ಭೇರಿ ತಮ್ಮಟ ನಿಸ್ಸಾಳ ಧಗಮು ರುಂಜೆ ಭೋರೆಂಬ ಶಂಖದೌಡೆಗಳು (ಜ್ಞಾನಚ. ೧೦-೭). [?]

ದಗಲಬಾಜಿ 'ದಗಲ್ಬಾಜಿ' ನೋ.

ದಗಲಬಾಜಿತನ 'ದಗಲ್ಬಾಜಿತನ' ನೋ.

ದಗಲು, ತಗಲ್೩, ತಗಲು೩ (ನಾ). ೧. ಮೋಸ; ವಂಚನೆ; ದ್ರೋಹ; ವಿಶ್ವಾಸಘಾತ: "ಠಕ್ಕತನ; ತಗಲು; (ದಗಲುಬಾಜಿ), ಅಪ್ರಾಮಾಣಿಕತನ" (ಜಾನಕೋ. ೨). **ತಗಲ್೩**: ೧. "ಮೋಸ, ವಂಚನೆ" (ಕ್ರಿಕಾ೨). **ತಗಲು೩**: ೧. ಯಾವುದರಲ್ಲಿ ಕಂಟಿಬಿಲ್ಲ ತಗಲು ಇಲ್ಲ; ಮೋಸವಿಲ್ಲ; ಮರೆಯಿಲ್ಲ (ಜನಜೀ. ೩೯). ೨. ಸುಳ್ಳು: "ತೊದಳು, ಸುಳ್ಳು . . . ಸಟೆ, ತಗಲು" (ಕಂನಹು. ೮೭). 'ತಗಲುಸಾಕ್ಷಿ' ಪರಾ.

ತಗಲುಬಗಲು = ಮೋಸ; ವಂಚನೆ: ತಗಲುಬಗಲಿನಿಂದ ದುಷ್ಟವಾಜಿಗಳಾಗ ಏಗಸಾಳ್ವನಂತೆ ಹೊಕ್ಕಿಱಿಯೆ (ಬಿಜ್ಞಕಾ. ೦೨-೩೦). **ತಗಲುಬಿಗಲ್ತನ**= ತಗಲುಬಗಲು: ಹೌದದು ಅಂಥವರು ಇರೋ ಪೊತ್ಗೇ ಮತ್ತೆ ಇಂಥ ತಗಲುಬಗಲ್ತನ ನಡಿಯೋದು (ಠಂಬಿಕ. ೦೨). **ತಗಲು ಮಾಡು** = ಮೋಸ ಮಾಡು; ವಂಚಿಸು: ಅದರಲ್ಲಿ ಒಂದು ಪೈ ಸಪ ತಗಲು ಮಾಡಿದ್ದಿಲ್ಲ (ಮುಂಬಯಿ. ೪-೫೦); ತೊಕದಲ್ಲಿ ಯಾರಾದರೂ ತಗಲುಮಾಡಿದರೆ ಆ ತೊಕಕ್ಕೆ ಸರಿಯಾಗಿ ಅವರ ದೇಹದ ಮಾಂಸವನ್ನು ತೆಗಿಸುತ್ತಿದ್ದನು (ಹಿಂಮಾಸ. ೬೦). [←ಅರ. ಹಿಂ. ಮರಾ. ದಗಲ್./ಸಂ. ಜಗಲ]

ದಗಲೆ$_1$, ತಗಲೆ (ನಾ). ಕವಚ ; ತನುತ್ರಾಣ : "ದಗಲೆ ಜವಳಿ ಜೋಡು" (ಶಬ್ದಮಂ. ೯೪) : ಶೀರ್ಷಕಂ . . . ವ್ಯೂಢಕಂಟಕ : ಈ ೧೭ ದಗಲೆಯ ತೊಟ್ಟು ಸನ್ನದ್ಧನಾಗಿದ್ದವನು (ನಾಚರಾ. ೧೩೪) : ಕೆಂಪು ದಗಲೆಯಿಂದ ಕೆಳಗಾಗಲರುಣನ ಗರಿಪಾದಕಂಸೆಯಗಲಿ ಇಂದ್ರನೀಲದ ದಾಳ ದಿಕ್ಕುಗಳನೆ ಬೆಳಗುತಲೆ (ವಾದಿಕೀ. ೧೫೦-೨) ; ಮುತ್ತಿನ ದಗಲೆ ವಜ್ರದ ಜೋಡು ಸಿರದಲಿ ಬಿತ್ತರವಹ ಸೀಸಕದ ಪುಸ್ತಂಗ ತೊಡರಾ ಗಾವಳಿಯಿಂದ ಭೂಪೋತ್ತಮ ನಡೆದನುಬ್ಬಿನಲಿ (ಕಂನವಿ. ೧೫-೧೨) ; ಸಿರದ ಮುಂಡಾಸವ ಸೀಳ್ದಿಕ್ಕಿ ದಗಲೆಯ ಪರಿಪಾಟ ಮಾಡಿದರಾಗ (ಕಂನವಿ. ೧೫-೪೬) ; ಪೊಸದಗಲೆಯಂ ಬಿಗಿದು ಅಳವಟ್ಟ ಪೊನ್ನ ಪಡಿದೇರನೇಱಿ ಮುಟ್ಟಿಯಿಸಿ ಕಱುತ್ತೆಱಗಿ (ರಾಮಾಶ್ವ. ೯೦-೨೯) ; ದಗಲೆ (ತಗಲೆ) :–ತೆಗಲೆ ಎಂಬುದು ಉರಸ್ಥಳಕ್ಕೆ ನಮ್ಮಿ ಕನ್ನಡನಾಡಿನಲ್ಲಿ ಮಾತ್ರ ರೂಢವಾದ ಹೆಸರಾದರೂ ಪಂಪಭಾರತದೊಳಗೆ ತೋರಿಬಾದುದರಿಂದ ಅದು ಅಚ್ಚಗನ್ನಡ ಎಂಬುದು ಈಗ ನಿರ್ಧಾರವಾಗಿದೆ. 'ದಗಲೆ' ಅಥವಾ 'ತಗಲೆ' ಎಂದರೆ ತೆಗಲೆಯ ಮೇಲೆ ಬಿಗಿದು ಕಟ್ಟುವ ಬಟ್ಟಲಿನಾಕಾರದ ಒಂದು ಪದಾರ್ಥ, ಇದನ್ನು 'ಉರಃಸ್ತ್ರ' ಎನ್ನಬಹುದು (ಪಾರ್ತಿಸು. ೪೭). **ತಗಲೆ :** ದಗಲೆ (ತಗಲೆ):–ತೆಗಲೆ ಎಂಬುದು ಉರಸ್ಥಳಕ್ಕೆ ನಮ್ಮಿ ಕನ್ನಡನಾಡಿನಲ್ಲಿ ರೂಢವಾದ ಹೆಸರಾದರೂ . . . ಇದನ್ನು 'ಉರುಸ್ತ್ರ' ಎನ್ನಬಹುದು (ಪಾರ್ತಿಸು. ೪೭).

ದಗಲೆಜೋಡು = ಯುದ್ಧಕಾಲದಲ್ಲಿ ಸೈನಿಕರು ಧರಿಸುವ ಕವಚ ; ತನುತ್ರಾಣ : ಜರಿಟೋಪಿ ದಗಲೆಜೋಡಿನ ರಾವುತರ ಮುಂದುರವಣಿಸುವ ನಿವನಾರೆ (ಕಂನವಿ. ೧೨-೫೮). [<ಸಂ. ಜಗಲ]

ದಗಲೆ$_2$, ಡಗಲಿ, ಡಗಲೆ, ದೊಗಲೆ, ದೊಗಳೆ (ಗು). ೧. ಸಡಿಲವಾದ ; ಅಳ್ಳಕವಾದ : ನನ್ನ ದೊರೆಯಾದ ಖಾಖಾನ್‌ಕಾಲಿಕಟ್ ದೊರೆಗೆ ಬಹುಮಾನವಾಗಿ ಕೆಲವು ಕುದುರೆಗಳನ್ನೂ, ದಗಲೆ ಅಂಗಿಗಳನ್ನೂ, ಜರತಾರಿ ಉಡುಪುಗಳನ್ನೂ . . . ಕಳುಹಿಸಿಕೊಟ್ಟಿದ್ದನು (ಪ್ರವಾಇ. II, ೧೪೯). (ನಾ). ೨. ಸಡಿಲವಾದ ಅಂಗಿ ಮೊದಲಾದುವು : ಬೂದುಬಣ್ಣದ ದಗಲೆ, ಕುರಿ ತೊವಲಿನ ಅಂಗಿ, ಜೊತೆಗೆ ಬೇಡಿ ಕೋಳಗಳ ಸೈನಿಕರ ತಂಡ ದಾರಿಯುದ್ದಕ್ಕೂ ಮುಕ್ಕಾಲು ಮೈಲಿ ದೂರದ ತನಕ ವ್ಯಾಪಿಸಿತ್ತು (ಪುನರು. ೫೫೭); ಮೈಯಿಂದ ಇಳಿಯುತ್ತಿದ್ದ ಬೆವರು ಅವನ ದಗಲೆಯನ್ನೂ ಸೊಂಟದ ಪಂಚೆಯನ್ನೂ ಒದ್ದೆಮುದ್ದೆಯನ್ನಾಗಿ ಮಾಡಿತ್ತು (ಮಲಿಮ. ೫೭೩). ೩. ಉಡುಪು ಕೊಳೆಯಾಗದಂತೆ ಮೇಲೆ ಕಟ್ಟಿಕೊಳ್ಳುವ ಉಡುಗೆ ; ಮೇಲಂಗಿ : ದಗಲೆಯನ್ನು ಎತ್ತಿಕೊಂಡು ಅದನ್ನು ಎದೆಯ ಮೇಲೆ ಹೊಂದಿಸಿ, ಕೊರಳಿಗೆ ಹಿಂಗಡೆಯಿಂದ ಕಟ್ಟುವಂತೆ ತಿಳಿಸಿದ (ಬಣ್ಣಮಾ. ೯೦) ; ಮಕ್ಕಳ ಮತ್ತು ಕೆಲಸಗಾರರ ಉಡುಪು ಕೊಳೆಯಾಗದಂತೆ ಮೇಲೆ ಹಾಕುವ ದಗಲೆ (Jumper. ಇಂಕನಿ). **ಡಗಲಿ :** ೩. ಕೆಂಪು ರುಮಾಲು ಡಗಲಿಗಳಿಂದಲಂಕೃತನಾದ ಉಸ್ಮಾನಸಾಹೇಬರು ಕರೆಯುತ್ತಾರೆಂದು ಹೇಳಲು, ಶೇಷಪ್ಪ ಮತ್ತೆ ತಿರುಗಬೇಕಾಯಿತು (ಗ್ರಾಮಾಯ. ೨೫೫) : ನಾನು ಅವರ ವಚನಕ್ಕೆ ಅನುಮತಿಸಿ, ಅವರು ಕೊಟ್ಟ ಒಂದು ಡಗಲಿಯನ್ನು ಮೈಯೊಳಗೆ ಹಾಕಿಕೊಂಡು ಅವರ ಸಂಗಡಲೆ ಬಿದ್ದೆನು (ಮಂಜುಕ. ೧೦೨) : ಅವರ ಮುರಿಗೀ ಮುಂಡಾಸ ಬಣ್ಣದ ಡಗಲಿ, ಕೈಯಾಗಿನ ಕಟಾರಿ . . . ಎಲ್ಲಾ ಗುಂಗ ಹಿಡಿಸಿ ಬಿಡತಾವ ! (ಬೆಂದಯ. ೧೦೨). **ಡಗಲೆ :** ೨. ಮೊಣಕಾಲುಗಳನ್ನು ಮುಚ್ಚುವಷ್ಟು ಉದ್ದನಾದ ಹಸುರು ರೇಸಿಮೆಯ ಡಗಲೆ ಅವನ ಸ್ಥೂಲವಾದ ಕಾಯವನ್ನು ಹೇಗೋ ಮುಚ್ಚಿತು (ಜಿರಂಗ. ೭೬). **ದೊಗಲೆ :** ೪. ಸಡಿಲು; ಅಳ್ಳಕ: ಯಾವುದೂ ಪಿಟ್ ಆಗಕೂಡದು, ಎಷ್ಟು ದೊಗಲೆ ಆದರೆ ಅಷ್ಟು ಚೆಂದ (ನನ್ನೂರು. ೧೯೦). **ದೊಗಳೆ :** ೪. ಗಂಡಸು ತುಂಬ ಉದ್ದವೂ ತೀರ ದೊಗಳೆಯೂ ಆದ ಜೈಲುಡುಪು ಧರಿಸಿದ್ದನು (ಪುನರು. ೩೩).

ದಗಲೆ ಚಡ್ಡಿ, ದೊಗಳೆ ಚಡ್ಡಿ=ಸಡಿಲವಾದ ಚಣ್ಣ,–ಚಲ್ಲಣ; ಅಳ್ಳಕವಾದ ನಿಕ್ಕರು: ರಾತ್ರಿಯಲ್ಲಾಗಲೀ, ಹಗಲಿನಲ್ಲಾಗಲಿ ದಗಲೆ ಚಡ್ಡಿಗಳನ್ನು ಹಾಕಿಕೊಂಡು ಮನೆಯಲ್ಲಿ ಓಡಾಡಬೇಡ (ಮಹಾಗ. ೧೦೨) : ಬೆಳ್ಳಿಯ ನಡುಕಟ್ಟು–ನೀಲಿಯ ಮೇಲಂಗಿ–ದೊಗಳೆಚಡ್ಡಿ (hose) ತುಪ್ಪಟದ (fur) ಜೋಡು ಕಬ್ಬಿಣದ ತಲೆಮುಚ್ಚು (casque) ಒಂದು ಛುರಿಕೆಯು ನಡುವಿನಲ್ಲಿ ನೇತಾಡುತ್ತಿದೆ (ಆರ್ಯಕ. ೦). **ದಗಲೆ ಷರಾಯಿ, ದೊಗಲೆ ಷರಾಯಿ**= ಸಡಿಲವಾದ ಇಜಾರ,–ಪಾಯಿಜಾಮ : ಮೊಣಕಾಲಿನವರೆಗೆ ಬಂದು ಅಲ್ಲಿ ಗೊಂಡೆಯ ದಾರದಿಂದ ಕಟ್ಟಿದ್ದ ದಗಲೆ ಷರಾಯಿ ; ಅದರ ಎರಡು ಪಕ್ಕದಲ್ಲೂ ಗುಂಡಿಗಳು (ಯೋಧಪು. ೮೦); ಹಿಂದೆ ಬರುತ್ತಿರುವ ಮಾರ್ವಾಡಿಗಳನ್ನಾಗಲೀ, ದೊಗಲೆ ಷರಾಯಿಯವರನ್ನಾಗಲೀ ಕಂಡು ಕಂಬಿಕೀಳಲು ಏರ್ಪಾಟುಗಳನ್ನು ಮಾಡಿಕೊಳ್ಳಬಹುದು (ನಾಡಿಗೇ. ೪೫) ; ನಮ್ಮ ಜನರು ಅನ್ಯಾಯವಾಗಿ ದೊಗಲೆ ಷರಾಯಿ ವರ್ಗದವರಲ್ಲಿ ಸಾಲ ತೆಗೆದುಕೊಂಡು ನಾನಾ ವಿಧವಾದ ಕಷ್ಟ ನಷ್ಟ, ಅಪಮಾನಗಳಿಗೆ ಗುರಿಯಾಗುತ್ತಿದ್ದಾರಲ್ಲ (ಕಸಬು. ೭೦). **ದೊಗಳೆ ಷರಟು** = ಸಡಿಲವಾದ ಅಂಗಿ: ಸಾವಿರದ ಏಳನೂರ ಮೂರು ಸಂಖ್ಯೆಯ 'ಮಲ್ಲಿನ' ದೊಗಳೆ ಷರಟು (ಬಾಳಹೊ. ೩).

[←ಹಿಂ. ದಗಲ್, ದಗಲಾ ; ಮರಾ. ಡಗಳ, ಡಘಳ]

ದಗಲ್ಬಾಜಿ, ದಗಲಬಾಜಿ (ನಾ). ೧. ಕಪಟ ; ಮೋಸ ; ವಂಚನೆ ; ದ್ರೋಹ: (ಕಿ). ೨. ಕಪಟಿ; ಮೋಸಗಾರ; ದಗಾಕೋರ: ಅವನೊಬ್ಬ ಭಾರಿ ದಗಲ್ಬಾಜಿ (ರೂಢಿ). **ದಗಲಬಾಜಿ :** ೧. "ನನ್ನ ಹತ್ರ ದಗಲಬಾಜಿ ಮಾಡ್ತೀಯಾ ?" ಎಂದು ಗಂಗನನ್ನು ಬೈದನು (ಕಾನೂರು. ೧೯೮); "ನನ್ನ ಹತ್ತಿರ ದಗಲಬಾಜಿ ಮಾಡ್ತೀಯಾ ?" ಎಂದನು (ಮಲಿಮ. ೧೨೪).

[←ಮರಾ. ದಗಲ್‌ಬಾಜೀ]

ದಗಲ್ಬಾಜಿತನ, ದಗಲಬಾಜಿತನ (ನಾ). ಮೋಸಮಾಡುವಿಕೆ ; ದಗಾ ಹಾಕುವಿಕೆ : ಆ ನಾಗಪ್ಪಯ್ಯನ ದಗಲ್‌ಬಾಜಿತನ ತಿಳಿದುದರಿಂದ, ಆ ನಾಗಪ್ಪಯ್ಯನನ್ನು ಹಿಡಿದು ತೂಗಹಾಕಬೇಕೆಂಬದಾಗಿ ಟೀಪುಸುಲ್ತಾನರು ಅಪ್ಪಣೆಕೊಟ್ಟದ್ದರಿಂದ (ರಾಜೇಂದ್ರ. ೦೭). **ದಗಲಬಾಜಿತನ :** ಸುಬ್ಬ ಕೃಷ್ಣನಿಗೆ ಮಧುಸೂದನನ ವಿಷಯದಲ್ಲಿ ವಿಶ್ವಾಸವಿತ್ತು. ಆದರೆ ಮುರಲಿಯ ದಗಲಬಾಜಿತನಕ್ಕೆ ಹೆದರುತ್ತಿದ್ದ (ರಾಗಿಚಿ. ೩೬). [ದಗಲ್ಬಾಜಿ + – ತನ]

ದಗಳು (ನಾ). ಒಂದು ಬಗೆಯ ಯುದ್ಧಸಾಧನ : ಚೇಳು ಬಾಣಗಳ ಅಾಟಳವುರಿಪೊಟ್ಟಣವೇಳುವ ಜಂತ್ರದ ದಗಳು ತೂಳುವ ಗುಂಡುಗಲ್ಗಳ ರಾಸಿ ಪಟ್ಟಣದಾಳುವೇರಿಯ ತುಂಬಿಹುವು (ಕಂನವಿ. ೬-೨೦).

[ದೇ.॥ ತೆಲು. ದಗರು]

ದಗಾ, ಡಗ್ಗೆ$_2$, ತಗ, ದಗ, ದಗ್ಗೆ$_2$, ದಹ್ಯ (ನಾ). ಮೋಸ ; ಕಪಟ ; ವಂಚನೆ ; ದ್ರೋಹ : ಕುಡಿತಕ್ಕೆ ದುಡ್ಡಿಲ್ಲದೆ ಕಳ್ಳತನ, ಮೋಸ, ದಗಾ ಆರಂಭವಾಗಿವೆ (ನನ್ನೂರು. ೩೦೫). **ಡಗ್ಗೆ$_2$:** (ಕಿ). **ತಗ :** ನೂಱನಾದೊಡೆ ಕೊಂಬುದೇಱುದೂಱಿನಬೇಡ ಮಿಾಱಿದಡೆ ತಗವ ಕೊಡುವುದು ಸಾಲಿಗನು ಗೂಱಿ ತಿಂದಾನೆ (ಸರ್ವಜ್ಞ.ಬ.೮೯೭). **ದಗ:** ಇದು ಪಶ್ಚಾತ್ತಾಪವೊ, ಸ್ವಕ್ಷೇಮ ಚಿಂತನೆಯೊ . . . ದಗವೊ ಹೃದ್ಗತವಾದ ಅಭ್ಯಾಸ ಬಿದ್ದ ಮಂತ್ರ ಮನಸ್ಸನ್ನು ಸುಳಿಯಿತು (ಸಂಸ್ಕಾರ. ೮೨); "ಎಷ್ಟು ಬಾರಿ ದಗ, ಅಧರ್ಮ ನಡೆಸಿದ ಮೇಲೆ" ನೀನೆ ನನಗ್ಕೊಟ್ಟ ದಗ. ನಾನ್ ನಿನಗ್ಹಾಕ್ದೆ–ನಾಮ (ಶಕಾರ. ೨೩). **ದಗ್ಗೆ$_2$:** ದಗೆಯೆಂಬುವದು ಹಗೆಯೇ ಸರಿ (ಗಾದೆ). **ದಹ್ಯ:** ಅಮ್ರುತೂರ ಸಂದ್ಯ ಮಂಟಪದ ಸತ್ರಕೆ ಬಿಟ ಗ್ರಾಮಯಿದಕೆ ದಹ ಮಾಡಿದವ ಹುಳತು ಸಾವರು (ಎಕ. XVI, ಕುಡಿಗೆ. ೮೭-೯; 18 ನೆಯ ಶತ).

ದಗಾ ಕೊಡು, ದಗೆ ಕೊಡು = ಮೋಸಮಾಡು ; ವಂಚಿಸು : ನನ್ನ ಹಾಗೆ ಅದೆಷ್ಟು ದೊಡ್ಡಮನುಷ್ಯರಿಗೆ ದಗಾ ಕೊಟ್ಟಿದಾನೋ (ಸಾಹೇಬ್. ೨೮೨) : ಎತ್ತಿನ ಗಾಡಿಯವರು ಮೋಸ ಕೊಟ್ಟರು, ಲಾರಿಯವರು ದಗೆ

ಕೊಟ್ಟರು (ಜಾರುದಾ. ೨೭೩). ದಗಾ ಮಾಡು=ಮೋಸಮಾಡಂ; ವಂಚಿಸು: ಆ ಚರಕಲ ರಾಜರು ಅರೆವಾಶಿ ಹಣಾ ಕೊಡದೆ ದಗಾಮಾಡಿದ ವಿವರ ಸೋಮಶೇಖರನಾಯಕರಿಗೆ ಬರೆಸಿ ಕಳುಹಿದಲ್ಲಿ (ರಾಜೇಂದ್ರ. ೭); ನಂಜಾ! ಸಾವಿರರೂಪಾಯಿಗೆ ದಗಾ ಮಾಡಿದೆಯಾ (ಮಾಂಗಲ್ಯ. ೨೫). ದಗಾ ಹಾಕು, ದಗ ಹಾಕು = ದಗಾಕೊಡಂ: ನಾನೇನೂ ಅವರ ಸಾಲಕ್ಕೆ ದಗಾಹಾಕುವುದಿಲ್ಲ (ಮಲೆಮ. ೪೭೨); ಒಂದಲ್ಲ ಎರಡಲ್ಲ ಐವತ್ತುಸಾವಿರ ರೂಪಾಯಿಗಳನ್ನು ಕಾಗದ ಪತ್ರವಿಲ್ಲದೆ ಸಾಲ ಕೊಟ್ಟ ರಾಣಿಯನ್ನು ಹಿಡಿಸಿ ಅವಳಿಗೆ ದಗ ಹಾಕಬೇಕೆಂದು ಯೋಚಿಸಿದವನು ಅವನು (ಬಂಕಿಮ. ೨೯೨).

[←ಅರ. ಪಾರ. ಹಿಂ. ಮರಾ. ದಗಾ]

ದಗಾಕೋರ, ದಗಾಖೋರ (ನಾ). ಮೋಸಗಾರ; ಕಪಟಿ; ವಂಚಕ: "ಏತಕ್ಕೂ ಹೇಸದವನು; ದಗಾಕೋರ; ಪಟಿಂಗ, ಠಕ್ಕ" (Scoundrel. ಇಂಕನಿ); ಎಲ್ಲರೂ ದಗಾಕೋರರೆ (ಜಿಂಗೂಲಿ. ೧೪೦). **ದಗಾಖೋರ:** ದಗಾಖೋರರ ಕೈಲಿ ಸಿಕ್ಕಿಬಿದ್ದು ನರೇಶನ ಮರಣ? (ಹಾಡುಹು. ೭೧): ಅವನು ದಗಾಖೋರನಾಗಿ ವಂಚನೆಯಿಂದ ಪರರ ಧನವನ್ನು ಕಸರಿಕೊಂಡಿರುವನೋ ಅಂತಹವನ ಮೇಲೆ ನಾವು ಡಕಾಯಿತಿ ನಡೆಯಿಸುತ್ತೇವೆ (ದೇವೀಜೌ. ೧೦೯); "ಅವನೆಂಥ ಸ್ವಾಮಿ...ದಗಾಖೋರ, ನಿಷ್ಪ್ರಯೋಜಕ" (ತಾಯಿಳ. ೦೬೦). [ದಗಾ + – ಕೋರ$_3$]

ದಗಾಖೋರ 'ದಗಾಕೋರ' ನೋ.

ದಗಾಬಾಜಿ (ನಾ).=ದಗಲ್ಬಾಜಿ ೧: ಅದೆಲ್ಲಾ ಬರೇ ಮೋಸ, ಸುಳ್ಳು, ದಗಾಬಾಜಿ, ಅದರಿಂದೇನೂ ಉಪಯೋಗವಿಲ್ಲ (ಸಾಹೇಬ್. ೨೮೫).

[←ಪಾರ. ಹಿಂ. ಮರಾ. ದಗಾಬಾಜೀ]

ದಗುಂತಿ, ಅದಗುಂತಿ, ಡಗುಂತಿ (ನಾ). ೧. ಹೆಚ್ಚಳ; ಅತಿಶಯ; ಆಧಿಕ್ಯ: ಅಂತೆ ಮೂಱುಮಮರಾವಾಸಂಗಳೊಳ್ ಪೇೞ್ದೊಡುತ್ತಮಸಮ್ಯಕ್ತ್ವ ಫಲಂ ದಗುಂತಿ ಮಗಳೇ ನೀನಿಂತಿದಂ ನಂಬು (ಅದಿಪು. ೫-೬೩); ಕ್ಷಮೆ ಭೂರಿ ದಗುಂತಿ ಪೆಂಪು . . . ಚತುರಾನ್ವಿತಮೆಂಬ ನೆಗರ್ತ್ತೆಯಿಂದಿಳಾವಂತರೊಳಾರುಮೇಂ ದೊರೆಗೆ ವರ್ಪರೆ (ಲೋಕೋಪ. ಪೀಠಿಕೆ. ೦-೦೧); ಹರಿರುಕ್ಮಿಣಿಯರ ರಾಗದ ಪರಮಪ್ರೇಮದ ದಗುಂತಿಯಂ ಬಣ್ಣಿಸುವಂ (ನೇಮಿಪು. ೭-೦೦೬): ಚದುರ ಚಾಗದ ದಗುಂತಿಯಂ ಮೆಱೆವ ವಿವಿಧ ವಿಟರೊಳಂ (ಪುಷ್ಪಪು. ೨-೭೭ ಪ); ಪಡೆದುದು ತನ್ನಿತಂಬಿನಿಯ ಕಾಯದ ಕಾಂತಿ ಸುಧಾಂಶುವಿಂದೆ ನೂರ್ಮಡಿಸುವ ಕಾಂತಿ ಸಂತತಿಯ ಸಾರಸಮುಚ್ಚಯದಿಂ ದಗುಂತಿಯಂ (ಮಹಾನೇ. ೮-೫೬). ೨. ಆಶ್ರಯ; ನೆಲೆ: ವಿನಯದ ಮೇರೆ ಧರ್ಮ್ಮದ ತವರ್ಮ್ಮನೆ ಸತ್ಯದ ಜನ್ಮಭೂಮಿ ಮಾಂತನದ ದಗುಂತಿ ಚಾಗದ ಮಹಾನಿಧಿ (ಎಇ. XIII. ೦೭೦-೨೬; 1055). **ಅದಗುಂತಿ:** ೧. ನೆಗೞ್ದಮರಾಂಗನಾಜನದ ರೂಪುಗಳೆಲ್ಲಮದೀಕೆಯೊಂದು ದೇಸೆಗೆ ನಿಮಿರ್ಪೊಂದು ಪುರ್ವಿನ ನಯಕ್ಕಮರ್ಪೊಂದದಗುಂತಿಗೊಂದು ಭಂಗಿಗೆ ನೆಗೞ್ವೊಂದು ಮೆಲ್ಪಿನ ತೊದಳ್ನುಡಿಗಪ್ಪೊಡಮೆಯ್ದೆವಾರವು (ಅದಿಪು. ೨-೭೫); ಸೋಂಕುವ ನಲ್ಲಳ ಸೋಂಕಲಂಪಿನುದ್ದಾನಿಯನೀಯೆ ಸಂತಸದ ದೊಂದದಗುಂತಿಯೆ ರೂಪುಗೊಂಡುದು (ಚಂದ್ರಪು. ೭-೭೯). ೨. ಅವರೊಡವುಟ್ಟಿದೊಳಱಿವಿನ ತವರೆನೆ ಧರ್ಮದದಗುಂತಿಯೆನೆ ನೆಗೞ್ದಳ್ (ಎಕ. II, ೦೩೯-೬; ಸು. 950). **ಡಗುಂತಿ:** ೧. ಆ ಮಹಿಮಾವಿಲಾಸದ ಡಗು[ನ್ತಿ]ಯ ಪೆರ್ಗ್ಗಡೆ (ಎಇ. XIX, ೨೨೦-೨೧; 1037). P ಇದು 'ದಗುಂತಿ' ಎಂಬುದರ ಅಪಲಿಖಿತವಿರಬಹುದು. [<ಅಗುಂತಿ]

ದಗೆ$_1$, ಡಗೆ$_1$, ಢಗೆ, ಧಗೆ (ನಾ). ೧. ಕಾವು; ಝಳ; ತಾಪ: ಕುದಿವ ಕೂಱಂತೆ ಕುದಿದು ದಗೆಯೇಱಿದ ಕೋಡಗದಂತೆ ಬೆಱಗಾಗಿ (ಧರ್ಮಾಮೃ. ೩-೩೫): ಮೃಗನೇತ್ರೆಯರು ಪಥಿಕರ್ಗೆ ನಗುತ ನೀರೆಱೆವುತಿಹರು ವಿರಹಾಗ್ನಿಯಿಂ ದ[ಪಾಠಾಂ. ಡ]ಗೆ ಪೆಚ್ಚಲೆದೆಯೊಳವರಿಗೆ (ಕುರಾಸಾಂ. ೨-೪೭); ವಿಪರೀತವಾಗಿ ಕಾಯುತ್ತ ದಗೆಯ ಸೀಮೆಯಾಗಿರುವ ಅರಬ್ಬೀದೇಶದಲ್ಲಿ (ಪೈಮಹ. ೫೮). **ಡಗೆ$_1$:** ೧. ಬಿಸಿಲ ಡಗೆ ತಾಗಿ ವಸುಧೆಯವರೆಲ್ಲರು ಬಾಯ ಕಿಸುವುತ್ತಿದ್ದರು (ಮನುಗುಂ. ೨೫೯-೫೦): ಶೋಕದ ಡ[ಪಾಠಾಂ. ಬ]ಗೆಯೊಳುಬ್ಬಿದ ನಗೆಯಲಾ ಸ್ವೇದದಲಿ ರೋಮಾಂಚ ದುಗುಡದಲಿ ಪರಿತೋಷ . . . ಭೀಷ್ಮಾದಿಗಳೊಳಗೆ ಪಲ್ಲಟಿಸುತಿರ್ದುದು ಪಡಿಮುಹೂರ್ತದಲಿ (ಕುವ್ಯಾಸ. ೧೫-೫); ಈ ಕಿಚ್ಚನೀಗ ಸಂಹರಿಸುವೆಂ ವರುಣಬಾಣದೊಳೆಂದು ಧನುವಿನಿಂ ಹರಿಸಿದಂ ಪಿರಿದು ಸಂಹರಿಸುವುರಿಯ ಡಗೆಯಾವರಿಸೆ ನೀರ್ ನಿಮಿಷದೊಳಗೆ (ಜಿಬಪು. ೪೦-೧೫); ಬೀಳ್ವೇಳ್ವ ಸುಳಿವ ಸುತ್ತುವ ಡಗೆಯಂ ತರಹರಿಪ ಸಾರ್ವ ಪಾರ್ವಬ್ಬರಿಪೆಸಕಂ ಮಿಾಱೆ ಕಾದಿದರ್ ಕಡುಗಲಿಗಳ್ (ಶಬಶಂ. ೪-೭೬); ಕಟ್ಟುಱದ ಡಗೆಯ ಪೇರೊಡಲ ಗೋರ ರೂವಿನ ದಾನವಂ (ರಾಮಾಶ್ವ. ೧೦೨-೦). ೨. ಬಾಯಾರಿಕೆ; ಸೇದೆ: ಬಿಱುಬಿಸಿಲ ಸೆಕೆಯುಸುರ ಬಿಸಿ ಹೊಡೆದುದುರಿಹೊತ್ತಿ ಬಾಯ್ಬತ್ತಿ ಡಗೆಸುತ್ತಿ ಸಾವಡಸುತಿದೆ (ಹಚಕಾ. ೭-೯). **ಢಗೆ:** ೧. ವಿರಹದ ಢಗೆ ರಥಾಂಗದೊಳಳಿಯೆ ರವಿಯುದಯಾಚಳಕೆ ಬಂದ (ಕುವ್ಯಾಕ. ೨-೧); ಝಳದ ಢಗೆ ಡಾವರಿಸೆ ಹೊಕ್ಕರುಕೊಳನ (ತೊರರಾ. ೨-೪-೨೨); ಢಗೆಯಿಂ ನೀರ ಪೊಕ್ಕನೊ ಮಿತ್ರನೆಂಬಂ ತಾಗಲಸ್ತಮಯ (ಅಂಬಿಕಾ. ೨೩-೬೧). ೨. ಒಡಲ ಜಡಿದವು ರೋಮರೋಮದೊಳಡಸಿದಂಬುಗಳಂಗವೇದನೆ ತೊಡಕಿತುಬ್ಬರಿಸಿದುದು ಢಗೆ ಗೋನಾಳಿ ನೀರ್ದೆಗೆಯೆ ನುಡಿಯಲಾಱೆನು (ಕುವ್ಯಾಭೀ. ೦೦-೨೪): ೩. (ಆಲಂ) ಕಳವಳ; ತಳಮಳ: ಮನದ ಢ[ಪಾಠಾಂ. ಡ]ಗೆ ಪನ್ನೀರ ಶೈತ್ಯದಿಂ ಪರಿವುದೇ (ಹಚಕಾ. ಪರಿ. ೪-೬೩). ಮನದ ಢ[ಪಾಠಾಂ. ಡ]ಗೆಯಡಗಿದವು ಮತ್ಸೇಶನ ಪುರಾಂತರದೊಳಗೆ ಮೈ ಮಱೆಸನುಪಮಿತ ಭುಜಸತ್ವರಿದ್ದರು ಭೂಪ ಕೇಳೆಂದ (ಕುವ್ಯಾವಿ. ೧-೩೨). **ಧಗೆ:** ೧. ಸುರತರುನಂದನಕ್ಕಿದಱ ನಂದನದಿಂ ಧಗೆ ಪೋಪುವಾ ಮಹೇಶ್ವರನ ಜಟಾಗ್ರದಿಂದಿಳಿದ ಗಂಗೆಯಾ (ಎಇ. XIII, ೪೪-೩೭; 1112); (P ಭಾಷಾಂತರದಲ್ಲಿ 'Danger' ಎಂದಿದೆ); ಹೊರಗೆ ಮುಗಿಲಿನಲ್ಲಿ ಮೋಡಕಟ್ಟಿ ಬಿಸಿಲಿಲ್ಲದಿದ್ದರೂ ಧಗೆ ಉಸಿರುಕಟ್ಟಿಸುತ್ತಿತ್ತು (ಚಂದತೋ. ೦೨); ಹೊಗೆ ನುಂಗುವುದಿದೆ ಧಗೆಯ ಕಳೆವುದಿದೆ ಅಡಿಯಿಂ ಮುಡಿವರ ಬೆಳಗುವುದಿದೆ ಇದೆ (ಅರಳು. ೨೬೧-೭). ೩. ಒಳಗೆಯೊತ್ತುವ ಧಗೆಯ ಹೊಱಗಣ ತಳಿತ ಬಿಮ್ಮಿನ ನಗೆಯ ನೃಪಮಂಡಲದ ಮೌಳಿಯನೇನನೆಂಬೆನು (ಕುವ್ಯಾಅ. ೦೪-೩೬); ವೆಗ್ಗಳಿಸಿ ಭೋಗಿಸಲು ಧಗೆಯಹುದಾಸಱಹುದು ಮತಿಗೆಡುವುದು ಪಗೆಯಹುದಾ ಸುಖ ತನಗೆ (ಭರಚ. ೭-೨೮).

[←ಮರಾ. ಧಗ್./ತೆಲು. ದಗ]

ದಗೆ$_2$ 'ದಗಾ' ನೋ.

ದಗ್ಗನೆ (ಅ).=ದಗದಗನೆ: ಬೆಂಕಿ ದಗ್ಗನೆ ಉರಿಯಿತು (ರೂಢಿ).

ದಗ್ಗನೆ ಹತ್ತಿಕೊಳ್ಳು = ದಗ್ಗನೆ ಉರಿ ಉಂಟಾಗು: ಬೆಂಕಿ ದಗ್ಗನೆ ಹತ್ತಿಕೊಂಡಿತು (ರೂಢಿ). [ದಗ್$_0$ + – ಅನೆ$_1$]

ದಗ್ಗಳಿ 'ದೊಗ್ಗಳೆ' ನೋ.

ದಗ್ಗುದುಳಿ (ಕ್ರಿ). ಚೆನ್ನಾಗಿ ತುಳಿ; ನಂಗ್ಗುನಂರಿ ಮಾಡು: ಖಂಡತೊಗಲೆಲು ದಗ್ಗುದುಳಿದುರೆ ಕೆಲರು ಮಾಡಿದುದು ಕರಿಗಳಳವಿಯಲಿಯುಗ್ಗಡವನೇನೆಂಬೆ (ಅಂಬಿಕಾ. ೨೯-೧೫); ಎರಡೂ ಒಳಹೊಕ್ಕು ಮನಸ್ಸನು ದಗ್ಗುದುಳಿಯುವುದೂ ಉಂಟು (ದೇಕನ್ನೆ. ೯೦).

[<ತಗ್ಗು$_1$ + ತುಳಿ$_1$ (<ತುಟ್$_1$)]

ದಗ್ಧ (ಗು). ೧. ಸುಟ್ಟ; ಬೆಂದ; ದಹಿಸಿದ: ಮೈಮರೆದಂ . . . ಸುತವಿರಹ ಸಂತಾಪದಗ್ಧವಸುಧಾಧಿಪಂ! (ಶ್ರೀರಾಮಾ. ೯೫-೪೭೩). ೨. ಬಾಡಿದ; ಬತ್ತಿದ; ಒಣಗಿದ. ೩. ಅಶುಭದ; ಅಪಶಕುನದ;

ಅಮಂಗಳದ. ೪. ದುಷ್ಟ; ಕುತ್ಸಿತವಾದ. (ನಾ). ೫. ಸಂಶಯ ವಿಲ್ಲದಿರುವುದು; ನಿಶ್ಶಂಕೆ. ೬. ಸುಟ್ಟುದು; ದಹಿಸಿದುದು. [ಸಂ.]

ದಗ್ಧಕ (ನಾ). ಸುಟ್ಟಂತಹುದು; ಹಪ್ಪಳ ಇತ್ಯಾದಿ: "ಹಪ್ಪಳಾದಿಗಳ್ ದಗ್ಧ[ಪಾತಾಂ. ಗ್ಗ]ಕ ಮಕ್ಕು" (ಮಂಗರಾ. ೬೪-೩). [ಸಂ.]

ದಗ್ಧಕರ್ಪೂರ (ನಾ). ಸುಟ್ಟ ಕರ್ಪೂರ; ಉರಿದ ಕರ್ಪೂರ: ದಗ್ಧಕರ್ಪೂರ ದಂತೆಲ್ಲಾ ಜನಂಗಳೋಳ್ ಸ್ನಿಗ್ಧಮೆನೆ ಪಸರಿಸುವ ಕಾಮಾರಿಯಗ್ನಿಕರ ರುಗ್ಧವಲಿಮಾಸ್ತ್ರ ತ್ರಿಯಕ್ಷನೆ (ವೀಶ್ಯಪು. ೩-೦೪-೦).

[ದಗ್ಧ + ಕರ್ಪೂರ]

ದಗ್ಧಪಟ (ನಾ). ಸುಟ್ಟ ಅರಿವೆ,_ ಬಟ್ಟೆ: ನಿತ್ಯನೇಮವೆಂದು ಮಾಡುವ ಭಕ್ತಿವಿದಂಗೆ ಮಾಡಿಯೂ ಮಾಡದಿದ್ದಡೇನು ದಗ್ಧಪಟದಂತೆ (ಮೋಳಿಮಾ. ೧೪-೫೦); ಅನುಭಾವಿಯಾದಡೆ ಸುಟ್ಟ ಸರವೆಯಂತಿರಬೇಕು ಅನುಭಾವಿ ಯಾದಡೆ ದಗ್ಧಪಟದಂತಿರಬೇಕು (ಅಖಂಡೇ. ೧೯೨-೧೨); ದಗ್ಧಪಟವೆಂದಿ ನಂದದಿ ತೋಱಲಿಳೆಯಲಿ ವಿದಗ್ಧರಾರದನುಟ್ಟು ತಳ್ಳಿದರು ಹಿಮಮಂ (ಕವಿಚ. III, ೧೨೦ ನಿಜದೀಪಿಕಾರತ್ನ). [ದಗ್ಧ + ಪಟ$_2$]

ದಗ್ಧಪಟನ್ಯಾಯ (ನಾ). ಸುಟ್ಟ ವಸ್ತ್ರದಂತೆ ಮೂಲರೂಪವಿದ್ದರೂ ಮೂಲಗುಣವಿಲ್ಲದ ಸ್ಥಿತಿಯನ್ನು ವಿವರಿಸುವ ಒಂದು ಬಗೆಯ ನ್ಯಾಯ: ಬಾಹ್ಯಕರಣಂಗಳು ಕರಣಮದಕ್ಕೆ ತೆಱಹುಗೊಡದೆ ಅಳವಟ್ಟು ಅವಗ್ರಹಿಸಿ ದಗ್ಧಪಟನ್ಯಾಯದ ಹಾಂಗೆ ತೋಱಿಕೆಯಿದ್ದು ಅವಱ ಗುಣ ಧರ್ಮ ಕರ್ಮಂಗಳೇನೂಯಿಲ್ಲದೆ ಸದ್ಯೋನ್ಮುಕ್ತನಾಗಿ (ಪದಗೋ. ೨-೮೦).

[ದಗ್ಧಪಟ + ನ್ಯಾಯ]

ದಗ್ಧವಾಣಿ (ನಾ). ಚೆನ್ನಾಗಿ ಮಾತನಾಡುವುದಕ್ಕೆ ಬಾರದವನು; ವಾಗ್ಮಿಯಲ್ಲದವನು: ಕವಿಯಂ ಕಂಡೊಡೆ ಶಾಸ್ತ್ರಹೀನನಿವನೆಂದಿಂತಾರ್ದು ಶಾಸ್ತ್ರಜ್ಞನಂ ಕವಿಯಲ್ಲೆಂದಣಮಾರ್ದು ಮಿಕ್ಕ ಬಹುಶಾಸ್ತ್ರಜ್ಞನಪ್ಪಾ ಮಹಾಕವಿಯಂ ಕಂಡೊಡೆದಗ್ಧವಾಣಿಯಿವನೆಂದಿಂತಾರ್ದು ಹಾಸ್ಯೋಕ್ತಿಯಿಂ ಕವಿಗಳ್ ವರ್ತಿಪರ್ (ಸೂಕ್ತಿಸು. ೦-೩೭). [ದಗ್ಧ + ವಾಣಿ$_1$]

ದಗ್ಧವಾರಿ (ನಾ). ಸುಟ್ಟು ಆವಿಯಾಗಿ ಹೋದ ನೀರು(?): ಉರಿ ದಟಿದಪ್ಪುದು ಎಮ್ಮಯ ತೋರಮೋವೆಮ್ಮ ಪುತ್ರಶೋಕಾನಲನಿಂ ನರಪಾಲ ಮತ್ತಮನಲಾಂತರಮೇವುದೊ ದಗ್ಧವಾರಿಯೆಂಬುದುಮುಂಟೆ (ಅಜಿಪು. ೦೦-೩೯). [ದಗ್ಧ + ವಾರಿ$_2$]

ದಗ್ಧಹಸ್ತ (ನಾ). ೧. [ಸಾಮುದ್ರಿ] ದುರದೃಷ್ಟಕರವಾದ ಕೈ; ಬರಿಗೈ. ೨. ಅದೃಷ್ಟವಿಲ್ಲದವನು; ಬರಿಗೈಯವನು: ಯಾವಾತನ ಹಸ್ತದಲ್ಲಿ ರೇಖೆಗಳು ಕಪ್ಪಾಗಿಯಿರಲು ಆತನನ್ನು ದಗ್ಧಹಸ್ತನೆಂದು ಹೇಳುವರು (ಸಾಮುಲ. ೯೪-೮). [ದಗ್ಧ + ಹಸ್ತ]

ದಗ್ಧಿಕೆ (ನಾ). ಸೀದುಹೋದ ಅನ್ನ; ಕರಿಕಾದ ಅನ್ನ; "ಸುಟ್ಟ ಅನ್ನ ಹೊತ್ತು" (ಗಂಗಾಮ. ೦೬೨). [ಸಂ. ದಗ್ಧಿಕಾ]

ದಗ್ಲಿ 'ದೊಗ್ಗಳೆ' ನೋ.

ದಚ್ಚಿ (ನಾ). ೧. ಹುಣಿಸೇಬೀಜದ ಬೇಳೆ; ಹುಣಿಸೆಪಕ್ಕ. ೨. ಕವಡೆ. 'ದಚ್ಚಿಬಾರ' ಪರಾ. ೩. ದಚ್ಚಿಬಾರದ ಆಟದಲ್ಲಿ ಬೀಳುವ ನಾಲ್ಕರ ಗರ; ಚೌಕ.

ದಚ್ಚಿ ಬಾಚು=ಕವಡೆಯಾಟದಲ್ಲಿ ನಾಲ್ಕರ ಗರ ಬಿದ್ದ ಕವಡೆಗಳನ್ನು ಬಾಚು: ಕೈಮೇಲೆ ಕವಡೆಯಾಡುವಾಗ ಪ್ರತಿಸಾರಿಯೂ ಕಮಲೆಯೇ ದಚ್ಚಿ ಬಾಚುತ್ತಿದ್ದಳು (ರೂಢಿ). ದಚ್ಚಿಯಾಟ = ಚೌಕಾಬಾರ: ದಚ್ಚಿಯಾಟ ಆಡೋಣ ಬಾ (ರೂಢಿ). [ದೇ.॥ ತಮಿ. ತಚ್ಚಿ; ತೆಲು. ದಚ್ಚಿ]

ದಚ್ಚಿಬಾರ (ನಾ). (ಕವಡೆಯಿಂದಾಡುವ) ಚೌಕಾಬಾರ: ದಚ್ಚಿಬಾರ ಆಡೋಣ ಬಾ (ರೂಢಿ). [ದಚ್ಚಿ + ಬಾರ್ಯ./ತಮಿ. ತಚ್ಚಿಪಾರಾ]

ದಟದಟ (ನಾ). ಒಂದು ಅನುಕರಣ ಶಬ್ದ. 'ದಟದಟಿಸು' ಪರಾ.

ದಟದಟಿಸು (ಕ್ರಿ). ದಟದಟ ಎಂದು ಶಬ್ದಮಾಡು: ಮುಗಿಲಡವಿ ಯೊಳ್ಜ್ವಾಲೆಯುಗುಳ್ದ ದವಶಿಖಿಯಂತೆ ಬಗೆಗೊಳಿಸಿ ಬಳ್ಳಿಮಿಂಚಾವಹ್ನಿ ದಟದಟಿಸಿ ದಗದಗಿಪ ದವದಂತೆ ಸಿಡಿಲ ರವವೆಸೆಯೆ (ಸೌಂದಪು. ೧೫-೩೯).

[ದಟದಟ + – ಇಸು$_3$]

ದಟಲ್ (ನಾ). ಒಂದು ಅನುಕರಣ ಶಬ್ದ: ಜೊಱ್ರೆಂಬ ಚುಮ್ಮೆಂಬ ಚಕ್ಕೆಂಬ ಛೊಕ್ಕೆಂಬ ಧಡಲೆಂಬ ದಟ[ಪಾತಾಂ. ಡಟ, ಠಣ]ಲೆಂಬ . . . ಕೂರಸಿಗಳುರವಣಿಯ ದನಿಯಡಸುತಂ ಪುಟ್ಟೆ (ಇಹರ. ದೇ. ೪೨-೦).

ದಟ್ಟ$_1$ (ನಾ). ೧. ಒತ್ತಾದುದು; ಸಾಂದ್ರವಾದುದು: "ಘನ, ನಿರಂತರ, ಸಾಂದ್ರ-ದಟ್ಟಮಾದುದು" (ನಾಚಿರಾ. ೫); "ಬಹುಳಂ ಘನಂ ಸಾಂದ್ರಮವಿರಳಂ ದಟ್ಟಮದು" (ಮಂಗರಾ. ೦೨೮-೮); ಆಶಾವಧೂ ದೌತ್ಯವರ್ತನದಿಂದಂ ಗಗನಸ್ಥಳೀಕುಲಟೆ ಕೊಂಡಳ್ ನೀಲ ಚೇಲಾವಗುಂಠ ನಮಂ ತಾನೆನೆ ದಟ್ಟಮಾಗಿದೆ ತಮಂ ತಳ್ತತ್ತು ದಿಕ್ಪ್ರಾಂತಮಂ (ಅನಂಪು. ೭-೭೩); ದಟ್ಟದ ಸೀರೆ ಬಟ್ಟನ ಬಟ್ಟುಂಗುರಯಿಟ್ಟಾ ಕಿವಿಯ ಕಲ್ಲೋಲೆ (ಶ್ರೀಪಾಲ. ೪-೭೩); ಆ ವಾಯುವೊಂದೊಂದು ತಳದೊಳ ಗಿಪ್ಪತ್ತುಸಾಸಿರಗಾವುದ ದಟ್ಟಾ ಗಾವುದಕಿಷ್ಟು ಕಡಿಮೆ ತುದಿಗವಱಲ್ಲಿ ತೀವಿರುತಿಹುವಾಱುದ್ರವ್ಯ (ಭರಚ. ೬೭-೭೧); ಗುರುವನ್ನು ಸುತ್ತಲೂ ಆವರಿಸಿಕೊಂಡಿರುವ ವಾಯುಮಂಡಲವು ಬಲು ದಟ್ಟ ಮತ್ತು ದಪ್ಪ (ಜ್ಯೋತಿರ್ವಿ. ೦೩೩). ೨. ಒತ್ತಾಗಿ ಹೆಣೆದ ಬಟ್ಟೆ: ಮಂದಲಿಗೆಯನ್ನು ಹಾಸಿ ಅದರ ಮೇಲೆ ಸತ್ತಿ ದಟ್ಟವೊಂದನ್ನು ಹಾಕಿ ಮಲಗಿಕೊಂಡೆ (ಚಂಗಾಳ್ಯ. ೨೦೬); ಹಲವಾರು ಬಣ್ಣಬಣ್ಣದ ಬಟ್ಟೆಯ ಚೂರುಗಳನ್ನು ನೇರವಾಗಿ ಕತ್ತರಿಸಿ ಸೇರಿಸಿ ಹೊಲಿದ ದಟ್ಟಗಳನ್ನು ನೆಲದ ಮೇಲೆ ಎಲ್ಲೆಲ್ಲೂ ಹಾಸಿದಂತೆ ಕಾಣಿಸುವ ಹೊಲಗದ್ದೆಗಳು(ನಂಟರು. ೧೩೦). 'ದಟ್ಟಿ$_1$' ಪರಾ. (ಗು). ೩. ದಪ್ಪವಾದ; ಮಂದವಾದ; ಸಾಂದ್ರವಾದ: ಹೊಲಸುಮೈಯವಗೇಕೆ ಹೊಸ ಕಸ್ತೂರಿ ವಾಟ ತಲೆದೋಱುವವಗೇಕೆ ದಟ್ಟ ಪುನುಗು (ಪುರಂದ. ೦-೦೦೦-೦). 'ದಟ್ಟಗತ್ತಲೆ' ಪರಾ.

[ದೇ.॥ತಮಿ. ಮಲ. ತಟ; ತುಳು. ದಟ, ದಟೊ; ತೆಲು. ದಟ್ಟ; ಕುಇ. ಡಾಟ./ಮರಾ. ದಾಟ್]

ದಟ್ಟ$_2$ (ನಾ). ಒಂದು ಬಗೆಯ ವಾದ್ಯ: ಈಶಾನ ಈಶ್ವರಮುಡಿಯಾರ್ಗ್ಗೆ ಕೊಟ್ಟ ತಿವಳಿ ೧ ದಟ್ಟ ೩ ಖಣ್ಡಿಕೆ ೩ . . . ಪಞ್ಚಮಹಾಶಬ್ದಮಂ ತ್ರಿಕಾಳಂ ಬಾಜಿಸುಂದಕ್ಕೆ (ಪ್ರುಅರಿ. ೧೯೪೬, ೨೮-೧೪; 1033). [?]

ದಟ್ಟ$_3$ (ನಾ). ಹೆಣ; ಶವ(?): ಹರ ಗಿರಿ ಬಲ ಪಾರ್ವತಿ ವಟ ತರು ಪುಳಿನಂ ದ್ವಿಫಳೆ ಪಾಣಿ ಶುಕ ನರಿ ದಟ್ಟಂ ನೊರೆ ಪುಣ್ಯ ಪಾವು ಶುಭ ಸುಖ ವರ ಸಿತ ಪದಿನೆಂಟು ನಾಮ ಶಿವಶಬ್ದಂಗಳ್ (ನಾನಾಕಂ. ೫). [?]

ದಟ್ಟಂದರಿ (ಕ್ರಿ). ಬಟ್ಟೆಯನ್ನು ಹರಿ,-ಕತ್ತರಿಸು: ಪುರ್ಚಿನಿಂ ಕುಣಿದಾಡಿ ದಟ್ಟಂದರಿವ ನಗುವ ಕವಡಿನಟಮಟದ ವೇಸಂದಳೆಯದಿರ್ಪೊಡಂ ನನ್ನಿ . . . ಪೊಡಕರಿಪ ದಾರಿಯನಿತ್ತನಿರುಕಿಸಾ ದುಃಖದಿಂ ಪರಿಪಕ್ವಮಾದೆ (ಸಂಸಪ. ೨೫-೧೪). [ದಟ್ಟ$_1$ + ತರಿ$_1$ (< ತಱಿ$_1$)]

ದಟ್ಟಕೂದಲು 'ದಟ್ಟಗೂದಲು' ನೋ.

ದಟ್ಟಗತ್ತಲೆ (ನಾ). ಸಾಂದ್ರವಾದ ಕತ್ತಲೆ; ಕಗ್ಗತ್ತಲೆ: ಪಾತಾಳದಡಿಯ ದಟ್ಟಗತ್ತಲೆಯನ್ನೆತ್ತಿ ಸತ್ಯಲೋಕದ ಪಾವಟಿಗೆಗೆ ಹೊದೆಯಿಸಿದಂತಿದೆ (ಮಂತ್ರಶ. ೯೦-೦೫). [ದಟ್ಟ$_1$ + ಕತ್ತಲೆ$_1$ (<ಕಟ್ಟಲೆ)]

ದಟ್ಟಗಾಡು (ನಾ). ಒತ್ತಾದ ಕಾಡು,-ಅರಣ್ಯ: ಮಲೆಯ ಬೀಡಿನೆದೆಯ ಮೇಲೆ ದಟ್ಟಗಾಡು ಹಬ್ಬಿರೆ (ಅನಿಕೇ. ೪೨-೬). [ದಟ್ಟ$_1$ + ಕಾಡು$_2$]

ದಟ್ಟಗೂದಲು, ದಟ್ಟಕೂದಲು (ನಾ). ಒತ್ತಾದ ಕೂದಲು: (ಕ). ದಟ್ಟಕೂದಲು: ಅವಳಿಗೆ ದಟ್ಟಕೂದಲಿದೆ (ರೂಢಿ).

[ದಟ್ಟ$_1$ + ಕೂದಲು (<ಕೂಂದಲ್)]

ದಟ್ಟಗೆ1 (ನಾ). ಸೀರೆಯ ಸೆರಗು (?) : ಎಲೆಯಕ್ಕ ನಿನ್ನ ವುರದೊಳಗೆ ಪರಮೇಶ್ವರಂ ಗೆಲವಿನಿಂ ಶ್ರೀಗಂಧವಿಧುಲೇಖನೀಲಮಂ ವಿಲಘದಿಂ ಕುಱು ಹಾಂತು ನೆಲಸಿದನಿದೇನೆಂದು ಗಿಳಿ ಕೇಳಲವಳು ನಾಣ್ಚಿ ಒಲವಿನಿಂ ದಟ್ಟಗೆಯ ಮಱಸಿಕೊಂಡಳು (ಪ್ರಭುಪು. ೪-೦೪೨). [?]

ದಟ್ಟಗೆ2 (ಅ). ಹೆಚ್ಚು ಒತ್ತಾಗಿ ; ತುಂಬ ನಿಬಿಡವಾಗಿ; ಸಾಂದ್ರವಾಗಿ: ಬೀಜಗಳನ್ನು ದಟ್ಟಗೆ ಬಿತ್ತಬಾರದು (ಕೃಷಿ). [ದಟ್ಟ1 + – ಅಗೆ3]

ದಟ್ಟಡಿ, ತಟ್ಟಡಿ (ನಾ). ವಂಕ್ಕಳು ನಡೆಗಲಿಯುವಾಗ ಹತ್ತಿರ ಹತ್ತಿರವಾಗಿ ಇಡುವ ಹೆಜ್ಜೆ ; ಒತ್ತಾದ ಹೆಜ್ಜೆ ; ತಪ್ಪುಹೆಜ್ಜೆ : ತಳರ್ನಡೆಮು ದ್ದು ಮೊಗಂ . . . ದಟ್ಟಡಿಯೊಳ್ಪಂದೋಡುವಂಗಣಂ ನೆಱೆ ತನಗೊಪ್ಪುವರ್ಭಕನನೊರ್ವನನಾಂ ಪಡೆವಂದಮಾವುದೋ (ಹುಕುಮಾ. ೯-೯೯) ; ಬ್ರಹ್ಮಾಂಡ ಪವಣಿಸಿದ ವಿಲಸಿತದ ವಿಭುವಿಂಗೆ ದಟ್ಟಡಿ ಬಳುಕು ನಡೆ ಮೆಲ್ಲಡಿಗಳೆಂಬವು ಕಿಳವವರ ಮನಸಿಂಗೆ ಮಜಿ ತಾನಲ್ಲವೇಯೆಂದ (ತೊರಕಾ. ೦-೪-೭೬) ; ಮೆಲ್ಲಮೆಲ್ಲನೆ ದಟ್ಟಡಿಯನಿಡಲ್ ಗೆಜ್ಜೆಗಳ್ ಫಲ ಫಲ್ಲೆನೆ . . . ಪಳಿಕಿನಿಂ ಸವೆದ ನೆಲೆಗಟ್ಟು ಜಾರ್ವುದು (ಪಂಪು. ೩-೪೦) ; ದಟ್ಟಡಿಯನಿಕ್ಕುವ ಬಾಲಕನಂಗದೊಂದು ಮಾರ್ಪೊಳಪಿರೆ ನೀಲಕುಟ್ಟಿಮದೊಳ್ (ರಾಮಚ. ೪-೭೨) ; ಶಿಷ್ಟಂಗೆ ತೊದಲುನುಡಿಯೇಕೆ ಕಳ್ಕಂಗೆ ದಟ್ಟಡಿಯದೇಕೆ (ಸರ್ವಜ್ಞ. ೦೦೦೩) : ಹೆಜ್ಜೆಹೆಜ್ಜೆಗೆ ತಪ್ಪ ಮಾಡಿದರೇನಹುದು ದಟ್ಟಡಿಯನಿಡದೆ ನಡೆ ಕಲಿಯಬಹುದೇ ? (ಆಡಳು. ೩೭೩-೪). **ತಟ್ಟಡಿ :** ಅಂಬೆಗಾಲಿಂದ ತೊದಲುಲಿದ ತಟ್ಟಡಿಯಿಟ್ಟು ಬೆಳಬೆಳದು (ಜಿನಮು. ೪೦-೪). [ದಟ್ಟ1 + ಅಡಿ1]

ದಟ್ಟಡಿಕಾಱಿ (ನಾ). ದೃಢವಾದ ಹೆಜ್ಜೆಯನ್ನು ಹಾಕುವವನಂ ; ಗಂಭೀರವಾದ ನಡಗೆಯನ್ನುಳ್ಳವನಂ: ಹಲವು ಪಯಣದೊಳು ದಟ್ಟಡಿಕಾಱಿ ಗಂಗಾ ಕೂಟವದು ಮುಟ್ಟಮುಟ್ಟಲಾಯ್ತೆನೆ ಬರುತಿರ್ದ (ಧರಕ. ೩೭-೩೪).

[ದಟ್ಟಡಿ + – ಕಾಱಿ]

ದಟ್ಟಡಿಯಿಡಿಸು (ಕ್ರಿ). ನಡೆಗಲಿಸು ; ತಪ್ಪುಹೆಜ್ಜೆಯನ್ನು ಹಾಕುವಂತೆ ಮಾಡು : ಪಟ್ಟಾಭಿಷೇಕಾನು ಕಟ್ಟಿದಾನೆಯ ನೋಡಿ ತೊಟ್ಟ ಭೂಷಣವು ಮಾವುತನಿಗೆ ಕೊಟ್ಟಾನು ದಳಕರ್ತ ಮೆಚ್ಚಿದನಾನೆಯ ದಟ್ಟಡಿಯಿಡಿಸಿ ನೋಡಿದರು (ಸೌಂದಾ. ೫-೬೦). [ದಟ್ಟಡಿ + ಇಡಿಸು1]

ದಟ್ಟಡಿಯಿಡು (ಕ್ರಿ). ನಡೆಯಲು ಪ್ರಾರಂಭಿಸು ; ತಪ್ಪುಹೆಜ್ಜೆ ಹಾಕು ; ನಿಧಾನವಾಗಿ ನಡೆ : ಎಡೆಯಾಡಿದವುದು ರನ್ನದ ಸೊಡರನೆ ಹರಿನೀಳ ರತ್ನಕುಟ್ಟಿಮದೊಳ್ದಟ್ಟಡಿಯಿಡುವ ತನೂಭವನಂ ನಡೆ ನೋಡಲ್ಪಡೆದ ತಾಯ ಜನ್ಮವೆ ಸಫಲಂ (ಶುಭ್ರಪು. ೩-೦೦೮) ; ಚಲನದೊಳ್ ಭವನಾಂಗಣದೊಳ್ ಕಂದನೆಂದು ದಟ್ಟಡಿಯಿಡುವಂ (ಚಂದ್ರಪು. ೩-೪೮) ; ದಟ್ಟಡಿಯಿಟ್ಟು ಭಟ್ಟಿ ತನ್ನಯ ಮನೆಮಂ ಬಂದಡರೆ ಭರಂ ಮಿಗೆ ಮುದದಿಂದಂ ಪುಷ್ಪಾಪಚಯಕೆ ಗಿರಿಸುತೆ ಬಂದಳ್ (ಗಿರಿಕ. ೪-೪೦) ; ದಟ್ಟಡಿಯಿಡುತಲೆ ಬೆಣ್ಣೆಯ ಮೆಲುವ ತೋಳನ್ನಾಡೈ (ಪುರಂದ. ೩-೦೮೯-೩) ; ಅಂಬೆಗಾಲಿಕ್ಕಿ ತೊಳಲುವನಲ್ಲ ಕಾಲು ಬಲಿದು ದಟ್ಟಡಿಯಿಡುವನಲ್ಲ ಬಾಲನೆಲ್ಲಿಗೆ ಹೋದನವ್ವ (ಮೋಹಕ. ೪-೩೩). [ದಟ್ಟಡಿ + ಇಡು1]

ದಟ್ಟಣೆ (ನಾ). ನಿಬಿಡತೆ ; ಒತ್ತಾಗಿರುವುದಂ ; ಕಿಕ್ಕಿರಿದಿರುವಿಕೆ ; ಸಾಂದ್ರತೆ ; ನೆರವಿ : ಕೊಡರಿದಡೆ ತಾಂ ಕೈಗಟ್ಟ ವ್ಯಡನೊಡನಾದಡಂಜದೆ ಗೆಲಲು ಜಂಗುಮದ ದಟ್ಟಣೆಗೆ ಸೈರಿಸುವ ಮನವಳವಟ್ಟರಲು (ಲಸಪು. ೮-೫೬) ; ಕಿಚ್ಚನುಜುಬೆಯ ದಟ್ಟಣೆಗೆ ಧಾರೆಗಳ ಬಿಡುತೆಣ್ಣೆಗಳ ವಕ್ಕಲೆಯ ಥಟ್ಟುಗೆಡುವಾನೆಗಳಿಗಾನೆಯ ಕಟ್ಟುತ (ತೊರಕಾ. ೫-೬-೦೩): ಜನವಸತಿಯ ದಟ್ಟಣೆಯಿಂದ ನಿರ್ಣಯಿಸಲ್ಪಡುವುದಾದರೆ ದ್ರಾವಿಡಜನಾಂಗದ ಗುರುತ್ವಾಕರ್ಷಣವು ಮೈಸೂರುರಾಜ್ಯದ ಸಮೀಪವರ್ತಿಯಾಗುವುದು (ತಕ್ಕಶಾ. ೪೫೩). [ದಟ್ಟಯಿಸು + – ಅಣೆ4]

ದಟ್ಟದರಿದ್ರ (ನಾ). ಕಡುಬಡವ ; ನಿರ್ಗತಿಕ : ದಟ್ಟದರಿದ್ರನಂತೆ ಕಾಸಿಗೆ ಮನವಿತ್ತನೆಂದಮಳಕೀರ್ತಿನಿತಂಬಿನಿ ದೂಱುತಿರ್ಪಳ್ (ವೀರವಿ. ೨-೫೪) : ದಟ್ಟದರಿದ್ರರು ವೊದಲಾಗಿ ಹತ್ತನು ಬಿಟ್ಟಿಹರುಂಟು ಬಾಹ್ಯದೊಳು (ಧರಕ. ೭೦-೯೨) ; ಸತಿಪತಿಯರು ರೂಪಸಂಪನ್ನರಾದರೆ ದಟ್ಟದರಿದ್ರರು ಅರರೆ ! (ಇಂಡಾಪ. ೧೪೦-೪೩) ; ಹೊಟ್ಟೆಗೆ ಹಿಟ್ಟಿಲ್ಲದ, ಮೈಗೆ ಬಟ್ಟೆಯಿಲ್ಲದ, ದಟ್ಟದರಿದ್ರರಿಗೆ ಕುಲವಂತೆ ಕುಲ (ಕುಂಗಥ. ೫೪) ; ಇನ್ನೊಬ್ಬರ ಅನುಕೂಲತೆಗೆ ಒವಗದ ಲಕ್ಷಾಧೀಶನು ದಟ್ಟದರಿದ್ರನೆಂದೇ ನನ್ನ ಅಭಿಪ್ರಾಯ (ರಂಗರೋ. ೦೫೮). [ದಟ್ಟ1 + ದರಿದ್ರ]

ದಟ್ಟದಾರಿದ್ರ್ಯ (ನಾ). ಕಡುಬಡತನ ; ನಿರ್ಗತಿಕತನ : ಶ್ರೀರಮ್ಯವಪ್ಪ ಭೋಗಂಗಳಳಿದಾ ದಟ್ಟದಾರಿದ್ರ್ಯವಾಗಲು (ವೀಶಪು. ೩-೦೬-೦೪).

[ದಟ್ಟ1 + ದಾರಿದ್ರ್ಯ]

ದಟ್ಟದಾರಿದ್ರ್ಯತ್ವ (ನಾ). = ದಟ್ಟದಾರಿದ್ರ್ಯ : ಅಕಾಲಂಗೆ ಸಕಲರಾಜ್ಯಂ ಶ್ರೀಕರಣಶುದ್ಧಂಗೆ ದಟ್ಟದಾರಿದ್ರ್ಯತ್ವಂ . . . ಮೆರೆವುದೀ ಕಲಿಯುಗದೊಳ್ (ನೀತಿಸಾ. ೦೩೨). [ದಟ್ಟ1 + ದಾರಿದ್ರ್ಯತ್ವ]

ದಟ್ಟದೊವಲ್ (ನಾ). ದಪ್ಪವಾದ ತೊಗಲು : ನಂಜುಂಡಂ ದಟ್ಟದೊ [ಪಾಣಾಂ. ದ]ವಲಂ ಪೊದೆದಗಜಿವೆರಸು ಬೆರೆವೊಡಲೊಳಿರ್ದಂ (ರಾಮಾಶ್ವ. ೦೦೫-೬). [ದಟ್ಟ1 + ತೊವಲ್2 (<ತೋಲ್1)]

ದಟ್ಟಪಳುವ (ನಾ). = ದಟ್ಟಗಾಡು : ಸಾಗಿದಳು ಹಜ್ಜೆಹಜ್ಜೆಯನಿಟ್ಟು ದಟ್ಟಪಳುವದ ಪಸುರ್ ನೆಲದೊಳ್ (ಶ್ರೀರಾಮಾ. ೦೫೬-೬೭).

[ದಟ್ಟ1 + ಪಳುವ (<ಪಟುವ)]

ದಟ್ಟಯಿಸು, ದಟ್ಟಯ್ಸು, ದಟ್ಟವಿಸು, ದಟ್ಟಿಸು1, ದಟ್ಟೈಸು (ಕ್ರಿ). ೧. ಒತ್ತಾಗು ; ಸಾಂದ್ರವಾಗು ; ದಟ್ಟವಾಗು : ಧಿಗಧಿಪರೆಣ್ದೆಸೆಗಾಂತಿರೆ ಭುಜದೊಲು ಗಗನದ ಮೇಲ್ಕಟ್ಟುಂ ದಟ್ಟಯಿ [ಪಾಕಾಂ. ದಟ್ಟೈ]ಸಲು ವಿಗೆ ಭಕ್ತರ ಜಯರವ ಒಟ್ಟಯಿಸಲು (ತಿರುನಾ. ದೇ. ೨೨೦-೫) : ಭೀಮಸೇನನ ದಂಡಿಯನು ದಟ್ಟಯಿಸೆ ಸುಯಿ ದಳ್ಳುರಿಯ ಚೂಣಿಯಲಿ ಗಂಡುಗೆದಱಿದ ರೋಷಶಿಖಿ ಹುರಿಗೊಂಡುದಕ್ಷಿಗಳಲಿ (ಕುಪಾಗ. ೯-೨೨) ; ಹೆಣೆದುಕೊಂಡವು ಗಗನ ದಿಗು ಧಾರುಣಿಗಳನು ದಟ್ಟಯಿಸಿ ರಿವುಮಾರ್ಗಣ ವಿತಾಳಿಸಿ ಮುಸುಕಿದುದು ರಘುನಂದನನ ರಥವ (ತೊರಕಾ. ೬-೫೦-೫) ; ಹೊಳೆಹೊಳೆಯುವ ಅವರ ಮುಖಗಳನ್ನು ಕಂಡು ಚಕೋರಚಯ ದಟ್ಟಯಿಸಿ ಬಂದವು (ಧಾಮಚ. ೦೩೦). **ದಟ್ಟಯ್ಸು :** ೧. ಬಟ್ಟತಂ ಮಾಡಿ ಸುತ್ತುಗಳೆತ್ತಲ್ಕಸಿತಾತಪತ್ರಮೆನಲಕ್ಕುಂ ತಾನೆಂಬಂತಿರೀ ಜಗದೊಳ್ ಕಣ್ಗೆ ವಿಚಿತ್ರಮಾಗೆ ನೆಱೆ ದಟ್ಟಯ್ಸು[ಪಾಣಾಂ. ದಟ್ಟಯಿಸು]ತ್ತನಿತ್ತಂ ತಮಂ (ಗಿರಿಕ. ೪-೬೬). **ದಟ್ಟವಿಸು:** ೧. ದಟ್ಟವಿಸಿ ದಜ್ಜಾನತಿವಿರದ ಥಟ್ಟು ಮಾರ್ಗವ ಕಾಣಲೀಸದು (ನಿಘಾಗ. ೫-೬-೪). **ದಟ್ಟಿಸು1 :** ೧. ನಟ್ಟಡವಿಯಲ್ಲಿ ಬೀಡಂ ಬಿಟ್ಟರಲಾ ಬಂಧುದತ್ತನಾತನ ಬೀಡಂ ನಟ್ಟಿರುಳು ಬಂದು ಬೇಡರ್ ದಟ್ಟಿಸಿ ಕೂಕಿಱಿದು ಸುತ್ತಿ ಮುತ್ತಿದರಾಗಳ್ (ಪುಣ್ಯಾಸ್ರ. ೪-೪) ; ತುರುಗಿ ದಟ್ಟಿಸಿದಾ ಕತ್ತಲೆಯ ವೊತ್ತದೊಳು ಸ್ಮರನಂಗಜಾತ ಪ್ರೀತರ ಕೂಡಿ . . . ಮೆಲ್ಲಡಿಗಳಿಡುತೇ ಬರುತಿರಲು (ನವಮೋ. ೦೬-೫೦). **ದಟ್ಟೈಸು:** ೧. "ದಟ್ಟೈಸಿತೆಂದೊಡತಿಸಾಂದ್ರಾರ್ಥಂ" (ಧಾರವಿ. ೩೪) : ಚಿತ್ತಕ್ಕೊಗೆಗುಮತಿಭೀತಿಯೆನಲುರ್ವಿಗೆ ದಟ್ಟೈಸಿರ್ದುದಂಧಕಾರಾಕಾರಂ (ದಶಕು. ೩-೪೩) ; ಬಾಲಕನ ಘನತೇಜಮುರ್ವಿಯ ಮೇಲೆ ಪರ್ಬಲು ಸೂಚಿಮುಖಮಂ ಕೀಲಿಸುವೊಡರಿದೆನಿಸಿ ದಟ್ಟೈಸುವ ತಮಂದದಲಿ (ಲಸಪು. ೩-೩೦) ; ದಟ್ಟೈಸಿತು ಬನಬನದಲ್ಲಿ ಕೊಳೆ ವಂಳಲೊಟ್ಟು ಗೋಮತಿಯ ತೀರದಲಿ (ಮೋಹಕ. ೪೭-೭೩) : ಕಿನ್ನರರ್ ಸಿದ್ಧ ವಿದ್ಯಾಧರರ್ ಕಿಂಪುರುಷರು ದಟ್ಟೈಸಿದರ್ (ಚಿಲಪು. ೩೦-೪೦) ; ಕತ್ತಲೆಯ ವೊತ್ತ ದಟ್ಟೈಸಲಾ ವಾರ್ತೆ ಕೇಳುತ್ತರ್ಕ ತನ್ನ ಚೂಣಿಯ ಭಟರ ಕಳು

ಹಲ್ಕೆ (ನವಮೋ. ೦೪-೩೬) ; ಬುವಿ ಬಾನಂತರವೆನ್ನುವ ಕತ್ತಲು ತುಂಬಿರಲು . . . ತಮಗಿವು ಸೇತುವೊ ಎನೆ ದಟ್ಟಿಸಿರೆ ತಾರೆಗಳು (ಗಚೇಕ. ೨೬-೪) ; ಕತ್ತಲಲಿ ಮಿಂಚು ಹೊಳೆದಂತಾಗಿ, ಬಟ್ಟೆಗೆಡುವುದು, ಕುರುಡು ದಟ್ಟಿಸಿ! (ಚಂದ್ರಸ. ೨೦-೧೯). ೨. ಹೆಚ್ಚಾಗು; ಅತಿಶಯವಾಗು: ನೆಟ್ಟನೆ ಪೃಥಿವೀ ಪತಿಗಳು ತನಯರ್ಗೆ ಪಟ್ಟವ ಕಟ್ಟಿ ಕಾಣಿಕೆಯ ಇಟ್ಟಿಱಗಿದರೇನು ಹೀನವೆ ಪರಿತೋಷ ದಟ್ಟಿಸುವುದು ಕಣ್ಮನಕೆ (ಪೋಹಚ. ೩೭-೧೨).

[ದಟ್ಟಿ$_1$ + – ಇಸು$_3$]

ದಟ್ಟಯಿಸು 'ದಟ್ಟಯಿಸು' ನೋ.

ದಟ್ಟವಳ್ಳಿ (ನಾ). ಒತ್ತಾಗಿ ಬೆಳೆದಿರುವ ಬಳ್ಳಿ ; ನಿಬಿಡವಾದ ಲತೆ : ಅತ್ತಕ್ಕೆ – ಬಟ್ಟತ್ತು ತೊಡೆ, ಬಟ್ಟದೊಡೆ, ಬೆಟ್ಟವೇಸಗೆ, ದಟ್ಟವಳ್ಳಿ – ಇವುಮದಱಿಂತೆ (ಕಮುದ. ೦೭೮ ಪ್ರಯೋ). [ದಟ್ಟಿ$_1$ + ಬಳ್ಳಿ]

ದಟ್ಟವಿಸು 'ದಟ್ಟಯಿಸು' ನೋ.

ದಟ್ಟಿಳ್ (ನಾ). ಪರಾಕ್ರಮಿ ; ಶೂರ (?) : ಅಟ್ಟದಲೆಯು ಮಾತನ್ನೆಟ್ಟನೆ ದಟ್ಟಿಳ್ಸಿರಗಂಬೆರಗುವಂ ಬಗೆಯದೆ ಕಟ್ಟಳ್ಸತ್ತನೆಜೆಯಮ್ಮ (ಸೌಇಇ. IX-1, ೩೧-೦೦ ; 966).

[P ಇದು 'ದಟ್ಟಾಳ್' ಎಂಬುದರ ಅಪಲಿಖಿತವಿರಬಹುದು.]

ದಟ್ಟಿ$_1$, ಧಟ್ಟಿ (ನಾ). ೧. ಸೊಂಟಕ್ಕೆ ಸುತ್ತುವ ವಸ್ತ್ರ ವಿಶೇಷ : ಮಡದಿಯಿಲ್ಲದೆ ಬೊಮ್ಮಚರಿಯವು ಉಡಿಗೆ ನಾರಿನ ದಟ್ಟಿಯಲ್ತೆ ತಮ್ಮಡಿಗೆ ಕಾಳಗವೇಕೆ (ಕಾಶಿರಾ. ೨೨-೪೨) ; ಉಡಿಯ ಪಟ್ಟೆದು ದಟ್ಟಿ ಬೆನ್ನ ಜಲ್ಲಿಯಂ ವೀರರೆಡಬಲದೊಳಗೈತರಲು (ಕಂನವಿ. ೦೩-೩೪) ; ನಡುವಂ ಬಿಗಿದುಡೆ ದಟ್ಟಿಯನೊಡನರಿವನಿತಾಜನಕ್ಕೆ ಜಗುಳ್ದುಂ ಮುಡಿಗಳ್ (ಚಿಕವಿ. ೩-೨೨) ; ಪಾಂಚಾಲಿಯ ದೀನಾಲಾವಗಳನ್ನು ಕೇಳಿ . . . ಭೀಮಸೇನನು . . . ಎಜ್ಜಂಭಿಸಿ ದಟ್ಟಿಯನ್ನು ಕಟ್ಟಿ (ಕೃವಾವಿ. ೪೬) : ಕಟ್ಟಿದ ದಟ್ಟಿಯ ಬಲ್ಪಿನ, ತೊಟ್ಟ ಪೊಸಗುಪ್ಪಸದ ಚಿಲ್ವಿನ . . . ಕಿಱುಜವ್ವನದ ಬಂಕದ ನಡವೊಂದು ಗಾಡಿಯ ವುಪ್ಕಲಂ (ರಾಮೂಶ್ರ. ೪೪-೦೭) ; ಸೊಂಟದಿಂದ ಕೆಳಕ್ಕೆ ನಾಲ್ಕು ಮೊಳದ್ದು ಒಂದು ದಟ್ಟಿ (ನಮ್ಮೂಕ. ೯) ; ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿ ನೋಡಿದ (ಗಾಡಿ). ೨. ಬಟ್ಟೆ ; ವಸ್ತ್ರ : ನೀಲಿಯ ದಟ್ಟಿಯನಿಳಿಗೆ ದಿಶಾಲಂಬನವಾಗೆ ಕವಿವನಸುರಾರಿಯೆನಲ್ಕಾ ಲೋಕನಕ್ಕೆ ಭಯಮಂ ಸಾಲಿಡುತಂ ತಂದನಂಧಕಾರಕಾರಂ (ನಳಚಂ. ೦೮೩) ; ಕಾಗಿನ ಸುಚಲ್ಲಣದ ದಟ್ಟಿ ಹೇರಿಟ್ಟಿ ಹಿಲ್ಲರಿ (ಕುಕ್ಕಾಂಗ. ೦೦-೦೮). ೩. ನಡುವಿನ ಸುತ್ತು, ಕಟ್ಟಿಕೊಳ್ಳುವ ಪಟ್ಟಿ ; ನಡುಕಟ್ಟು : ಕಾಶೆ ದಟ್ಟಿ ಚಲ್ಲಣಂಗಳಂ ಸಮಂತು ತೊಟ್ಟು ಬಲ್ಮೀಸೆಯಂ ಕರಾಬ್ಜತಿಂದೆ ತಿರ್ದುತೆ (ಹಾರಾಶ್ರ. ೨-೦೦-೦೬). ೪. ಬಿಕ್ಕ ಸೀರೆ ; ಕಿರಿಗೆ : ಪಟ್ಟವಾಳಿಯನುಟ್ಟು ಬನ್ನಿ ದಟ್ಟಿ ಚುಂಗ ಬಿಟ್ಟು ಬನ್ನಿ (ಪುರಂದ. ೧-೦೦೭-೭) : ಚಪ್ಪರ ಮಂಟಪದಾಗ ಹೊಕ್ಕಬಾಳ್ವೊತ್ತಾತು ಪುತ್ರಿಯು ಮಾರಿ ಬಳಲ್ಯಾವ ಬೀಗುತಿ ದಟ್ಟಿಯ ಉಡಿಸ ಮಗಳಿಗೆ (ಕೋಳಗೀ. ೫೯) ; ಉಟ್ಟ ದಟ್ಟಿ ಎಷ್ಟು ಮಾಸಿದೆ (ಮುಂಬಹು. ೦-೦೩). ೫. ಅನೇಕ ಮಡಿಕೆಗಳಿರುವಂತೆ ಬಟ್ಟೆಯನ್ನು ಸೇರಿಸಿ ಹೊಲಿದ ಹೊದಿಕೆ; ಕವುದಿ; ಲೇಪು : ಭುಜಂಗಳ ತಣ್ಪಿನೊತ್ತು ಬಿಂಕಂಬಡೆದಿರ್ದ ಕೆಳ್ಗದಟಿನೊತ್ತು ವಿಟರ್ ನೆಱೆ ಕಾವುದಲ್ಲದೀ ಕಂಬಳಿ ದಟ್ಟ ಬೂರವಡವೆಂಬವು ಕಾವುವೆ ಶೀತಕಾಲಮಂ (ಸೂಕ್ತಿಸು. ೧೧-೩೬೦). **ಧಟ್ಟಿ** : ೨. ಮುಂಭಾಗದೊಳ್ ಮುತ್ತಿನ ಸರಂಗಳಂ ಚೌಕಳಿಯಾಗಿ ಪೆಣೆದು ಕಟ್ಟಿರುವ ಧಟ್ಟಿ (ಸೌಗಂಧಿ. ೩೦೫-೯). ೩. ಬಜಿಮಂಡೆ ಪೂಸಿದ ಗಂಧ ಕಾಸೆಯ ಧಟ್ಟಿ ವೆಜ್ಜಿಯೆ ಸಬಳಿಗರೆಯ್ತಂದು ತಱುಬಿದರಂದು . . . ವಿಱುಗೆ ಸಬಳ ಕಯ್ಯೊಳಗೆ (ಕುರಾಸಾಂ. ೦೦-೩೪).

[ದೇ.ಶ ತಮಿ. ತಟ್ಟಿ; ತುಳು. ದಟ್ಟಿ, ಜಟ್ಟಿ; ತೆಲು. ದಟ್ಟಿ-/ಸಂ. ಧಟೀ]

ದಟ್ಟಿ$_2$ 'ದಡ್ಡಿ$_2$' ನೋ.

ದಟ್ಟಿ$_3$ (ನಾ). ಶೌರ್ಯ ; ಪರಾಕ್ರಮ : ಕನ್ನಡವಕ್ಕಿ ಪೊಣರ್ವಕ್ಕಿ ಮೊದಲಾದ ದಟ್ಟಿಯ ಕೂರಾಳ್ಗಳುಂ ತುತಮ್ಮ ಪಡೆವೆರಸು ಬಂದು ಕಾಣ್ಬುದುಂ (ಕಬ್ಬಿಕಾ. ೦೯೬). [<ಸಂ. ಧೃಷ್ಟಿ]

ದಟ್ಟಿಗಟ್ಟಿಸು (ಕ್ರಿ). ೧. ನಡುಕಟ್ಟನ್ನು ಬಿಗಿಸಂ. ೨. (ಆಲಂ) ಸಿದ್ಧವಾಗಿರುವಂತೆ ಮಾಡು : ಇಂತು ಮೊರೆಯಿಟ್ಟು ಪುರುಡಂ ಪುಟ್ಟಿಸಿ ದಟ್ಟಿಗಟ್ಟಿಪುದುಂ (ಚಿಕವಿ. ೨-೩೮ ವ) ; ಸರ್ವಶಕ್ತಿಯೊಳ್ ಪೊಣರಲ್ಕಾತನಂ ದಟ್ಟಿಗಟ್ಟಿಸಲೆಂದು ದೇವರ್ ತವ್ಮೊಳೆಸಗಿದ ವಿಂಭವಮುಮವನೊಳ್ ನಡೆಯುಪೌದಾಸೀನ್ಯಮುಮಂ ಬಿನ್ನವಿಸಿ (ಚಿಕವಿ. ೫೦-೮) ; ನಿನ್ನ ವಾತ್ಸಲ್ಯ ಗುಣಂ ಮುಂದುವರಿದೆನ್ನಂ ದಟ್ಟಿಗಟ್ಟಿಸುತ್ತಿದೆ (ಚಿಕವಿ. ೨೬).

[ದಟ್ಟಿಗಟ್ಟು + – ಇಸು$_3$]

ದಟ್ಟಿಗಟ್ಟು (ಕ್ರಿ). ೧. ನಡುಕಟ್ಟನ್ನು ಬಿಗಿ. ೨. (ಆಲಂ) ಸೊಂಟಕಟ್ಟು ; ಸಿದ್ಧವಾಗು; ತಯಾರಾಗು: ಜೀಯ ಪರಾಕಿದು ಬೇಱೊಂದೋಯರದಿಂ ಬಂದು ವಂದಿಪೆರ್ ಕಿಱಿಯರಸರ್ ಸಾಯಸವಡುವರ್ ಸಂತತವಿಂಯೆಸಕ ಮನೆಳಸಿ ದಟ್ಟಿಗಟ್ಟುವರನಿಬರ್ (ಚಿಕವಿ. ೫-೫೮).

[ದಟ್ಟಿ$_1$ + ಕಟ್ಟು$_1$]

ದಟ್ಟಿಗೆ$_1$ (ನಾ). (?) : ಸುರರ ಮನ್ನಿಸಿ ಕಳುಹುತೆಂದನು ನಿರುತ ನಿವ್ಮಯ ಬಾಧೆ ತನ್ನದು ಥರಥರದ ದಟ್ಟಿಗೆಯ ದೈತ್ಯರ ಹವಣು ತನಗೆಂದ (ಸಂಥಪ. ೭-೬೩). [?]

ದಟ್ಟಿಗೆ$_2$ (ನಾ). ಉಪ್ಪರಿಗೆ; ಕರುಮಾಡ; ವಂಹಡಿ (?) :

ದಟ್ಟಿಗೆಯಮನೆ = ಉಪ್ಪರಿಗೆ ಮನೆ (?) : ಕನಕಮಯ ನಿರ್ಮಿತ ಗಳಿಂದಲಿಹ ದಟ್ಟಿಗೆಯಾವನೆಯ ಸುತ್ತಲ್ ಮೆರೆವ ಮದನಗೈಗಳ ಮೇಲೆ ನಿಸದದೊಳ್ ನವಿಲ ತಂಡಗಳಿರಲ್ (ಕುಕ್ಕಾಂಗ. ೩-೪೨). [?]

ದಟ್ಟಿಚಲ್ಲಣ (ನಾ). ನಡುಪಟ್ಟಿಯುಳ್ಳ ಚಲ್ಲಣ : ದಟ್ಟಿಚಲ್ಲಣವನುಟ್ಟು ಕಠಾರಿಯಂ ನಡುವಿನೊಳು ಕಟ್ಟಿ (ಕೃಕಸೂ. ೨೫೭) ; ಮಲ್ಲಗಾಸಿಯ ದಟ್ಟಿ ಚಲ್ಲಣಗಳನುಟ್ಟು (ಸೌಂದಣಾ. ೦೨-೩೩) ; ಕಟ್ಟಿದ ದಟ್ಟಿಚಲ್ಲಣದ ಉಟ್ಟ ಮಲ್ಲಪಳಿಯ ಈ ವೇಷದಿಂದ . . . ಕುಳ್ಳಿರುತ್ತ (ವಿಗಡ. ೩೦-೨೫) ; ಕಂಠೀರವಒಡೆಯರು . . . ಅಲ್ಲಿ ಕೋಟೆ ಬಾಗಲಿಗೆ ಕಟ್ಟಿದ್ದ ದಟ್ಟಿಚಲ್ಲಣ ಗಳನ್ನು ತಮ್ಮ ಆಳಿನ ಕೈಕೋಲಿನಿಂದ ತೆಗೆಸಿ ಅನಂತರ ಕೋಟೆಯೊಳಕ್ಕೆ ಪ್ರವೇಶಮಾಡಿದರು (ಒಡಳ. ೩೫). P ಇವು ಪ್ರತ್ಯೇಕವಾಗಿಯೂ ಬಳಕೆಯಾಗುತ್ತಿವೆ. [ದಟ್ಟಿ$_1$ + ಚಲ್ಲಣ]

ದಟ್ಟಿತು, ದಟ್ಟಿತ್ತು (ನಾ). ೧. ದಪ್ಪವಾದಂದು ; ಗಾತ್ರದಿಂದ ಕೂಡಿದುದು : ಕುಟ್ಟಿ ಕಣಕದೊಳು ಸರಿ ಬೆಣ್ಣೆಯಾಜ್ಯೊಳಿಂದು ಬಟ್ಟ ವಾಲನೆಯಿಕ್ಕಿ ಮಿದಿದು ಬಟ್ಟಂ ಮಾಡಿ ದಟ್ಟತೆಂದೆನಿಸಿ ಲತೆಯಿಱಿದು ಹೆಂಚಿನೊಳಿಟ್ಟು ಸುಟ್ಟು ಪರಿಯಣಕೆ ತೆಗೆದು (ಸೂಪಕಶಾ. ೧-೦೦). (ಗಂ). ೨. ದಪ್ಪವಾದ; ದಟ್ಟವಾದ; ಗಾತ್ರವಾದ; ಮುಂದವಾದ : ಬೆಟ್ಟತು. ಬೆಟ್ಟತ್ತು, ದಟ್ಟತು, ದಟ್ಟತ್ತು (ಕಮುದ. ೬೬ ಪ್ರಯೋ). ೩. ವಿಸ್ತಾರವಾದ ; ಅಗಲವಾದ : ನೂಱು ಗಾವುದದುದ್ದ ಮೊದಲ ದಟ್ಟತು . . . ನೋಡೆ ಪಗಡೆಯ ಕಾಯಂತೆ ತೋಱುತಿದ್ದುದು ವೃಷಭಾದ್ರಿ (ಭರಕ. ೩೬-೮೦). **ದಟ್ಟಿತ್ತು** : ೧. "ವ್ಲಕ್ಷ, ವ್ರುಕ್ಷ – ಕ್ಷರಣಸ್ಮಿಗ್ಧಾರ್ಥೇ, ಒರಸುಹಣದೊಳಂ ದಟ್ಟಿತ್ಕರೊಳಂ" (ಕಾಶಕ್ಕ. ೨೬೮). ೨. ಮೇಲಿನ 'ಶಮದ' ಪ್ರಯೋಗವನ್ನು ನೋಡಿ.

ದಟ್ಟಿತಾಗು, ದಟ್ಟಿತ್ತಾಗು : ಒತ್ತಾಗು = ಸಾಂದ್ರವಾಗು ; ನಿಬಿಡವಾಗು : ದಟ್ಟಿತಾಗಿಹ ತೋಳು ತೊಡೆ ಬಾಯ್ಬಿಟ್ಟ ಬೆಟ್ಟದ ತೆರದಿ ಬಾದನು ಕೆತ್ತು ಪೇರ್ವಾರನೆ (ಜಠಾಮಾ. ೩೦-೩೬) ; ಈ ವನಮತೀವ ಭೀಕರವೆನಿಸಿದಪ್ಪುದು ನಾನಾವಿಧದ ಮರಗಿಡುಗಳಿಂದೆ ದಟ್ಟಿತ್ತಾಗಿ ಕಾವಳಂಗೊಂಡು (ಶೀಷರಾ. ೪-೨). [<ದಟ್ಟಿ$_1$]

ದಟ್ಟಿತ್ತು 'ದಟ್ಟಿತು' ನೋ.

ದಟ್ಟಿಪಂಚೆ (ನಾ). ಉಡ್ಡಲಾಗಿ ಸುತ್ತಿಕೊಳ್ಳುವ ಪಂಚೆ; ಮುಂಡು; ತಡಪು: ಅವಳ ಡೊಕೆಗೆ ಇದ್ದಾತ ಎತ್ತರವಾದ ಆಳು . . . ಒಂದು ದಟ್ಟಿಪಂಚೆಯುಟ್ಟು ಕೊಳೆಯಾದ ಒಂದು ಶರಟು ಧರಿಸಿದ್ದ (ಕುಸುಸಂ. ೩೪); ಕುಳ್ಳಗೆ ಇದಾನೆ. ಒಂದು ದಟ್ಟಿ-ಪಂಚೆ ಖಾದಿಯದು ಮೇಲಕ್ಕೊಂದು ಅರೆತೋಳಿನ ಪರಟು (ಅಂಹೊ. ೧೦೬). 'ಕಚ್ಚೆಪಂಚೆ' ಪರಾ. [ದಟ್ಟಿ$_1$ + ಪಂಚೆ]

ದಟ್ಟಿಸೀರೆ (ನಾ). ಸಣ್ಣಸೀರೆ; ಕಿರಿಗೆ: ದಟ್ಟಿಸೀರೆ, ಬೆಳ್ಳಿ ತೋಳಬಂದಿ, ಬೆಳ್ಳಿ ಕೈಕಡಗ, ಕೊರಳಲ್ಲಿ ಕೆಂಪುಹವಳದ ಸರ, ಕಿವಿಯಲ್ಲಿ ಬಂಗಾರದ ಬೆಂಡವಲಿ (ಹೊಸಂಸಾ. ೧೪೦). [ದಟ್ಟಿ$_1$ + ಸೀರೆ$_2$]

ದಟ್ಟಿಸು$_1$ 'ದಟ್ಟಯಿಸು' ನೋ.

ದಟ್ಟಿಸು$_2$, **ಧಟ್ಟಿಸು, ಧಟ್ಟ್ಯಿಸು** (ಕ್ರಿ). ೧. ಗದರಿಸು; ಬೆದರಿಸು: ನಿನ್ನ ನಿಟ್ಟಿಲುವ ಮುಜಿಪೆನೆಂದುರವಣಿಸಿ ಜಜಿಯುತ್ತ ದಟ್ಟಿಸುತ ಬಂದು (ಹಡಕಾ. ೦೨-೩೬); ದಟ್ಟಿಡಿಯಿಡುತೆಯತಹ ಹಸುಳೆಯನೊಲಿದಿಟ್ಟಿಯದಲ ದಿಟ್ಟಿಯನು ತೊಟ್ಟನೆ ಮಾಱುಗೊಂಬಳು ಬಾಲ್ಕವಟಾಯಲು ದಟ್ಟಿಸದಿಹಳೆ ಲೋಕವನು (ಅಂಜಕ. ೪-೫೬); ದಟ್ಟಿಸುತ್ತೆಲೆ ಬಸವ ಕೊಡುಕೊಡು ಪೆಟ್ಟಿಗೆಯ ಪೊನ್ನೆಲ್ಲವಂ ಹಮ್ಮೆಟ್ಟದೀಗಳೆ (ಜಸಪು. ೦೦-೩) : ತನಯರು ಗಳತಿ ದಟ್ಟಿಸುವರಂಗನೆಯರುಲ್ಲಂಘಿಸುವರಂ . . . ತಿಳಿಯೆ ದರಿದ್ರನಿಂದತಿ ಕಷ್ಟರಿಲ್ಲೆಂದ (ಚೀವಂಚ. ೭-೩); ಇರುಳಿನಲಿ ನಿದ್ರೆತಿಳಿದಾ ಹೊಲೆಯನ ವನಾವವನೊ ಮಾಂಸವ ಕಳುವವನು ಹೇಳಿನುತ ಗರ್ಜಿಸಿ ದ[ಪಾಠಾಂ. ಧ]ಟ್ಟಿಸುತಲಿರಲು (ತಿಮ್ಮಾಂ. ೫-೩೬) : ರವಿನಂದನಂ ರಯದಿ ವಾಶದಿಂ ಬಿಗಿದವನ ತವಕದಿ ಸೆಳೆಯೆ ಲಿಂಗದೊಳು ಪರಶಿವನುದಿಸಿ ಧವಳಾಂಗನಾಗಿ ದಟ್ಟಿಸುತಜನ ಮುಮ್ಮೊನೆಯ ಸಬಳದಟ್ಟುಗಿಯೊಳಿಜಿಯೆ (ಪ್ರಭುಪು. ೩-೧೦೦) : ನೋಡಿರೈ, ದೊರೆಸ್ವಾಮಿ ಹೆಂಡತಿ ನಳಿನಿ, ವಿಪರಿಗಂಡನ ನಮ್ಮಿದಿರೆ ದಟ್ಟಿಸುತಲಿರುವಳು (ಗಚೀಕ. ೭೪-೨). ೨. ಹೀಗಳೆ; ತಿರಸ್ಕರಿಸು; ಮೂದಲಿಸು: ನೇವುರದ ದನಿ ದಟ್ಟಿಸಿತು ವೇದಾವಳಿಯ ನಿರ್ಘೋಷವನು ನಾನಾವಿಭೂಷಣಕಾಂತಿ ಕೆಣಕಿತು ಮುನಿಸವಾಧಿಗಳ (ಕುವ್ಯಾಅ. ೦೪-೬); ಬೆಟ್ಟದ ಬಲ್ಮೆಯಿಂದಮ್ಮ ರಾಯಸವನು ದಟ್ಟಿಸಿ ಕಳೆದ ಕಂಪಿಲನ ಕಟ್ಟಿ ತರಿಸುವೆನು (ಕುರಾಸಾಂ. ೦೭-೮೪). ೩. ವ್ಯತಿಭಟಿಸು; ವಿರೋಧಿಸು: ದಿಟ್ಟಿಸಿ ಹೋಗೆಂಬೆ ಹೋಗದಿದ್ದರೆ ಬೆನ್ನ ಮುಟ್ಟಿ ಹೋಗೆಂದು ನೂಂಕುವೆನು ದಟ್ಟಿಸಿದರೆ ಕಟ್ಟಿ ಕಳುಹುವೆ ಶಿಬಿಕೆಯೊಳಿಟ್ಟು ಚಿಕ್ಕಮ್ಮನ ಬಳಿಗೆ (ಕರಚ. ೪೯-೫೪). ೪. ಘಟ್ಟಿಸು; ಹೊಡೆ; ತಾಗು: ಪಟ್ಟಣದುರು ವೀಧಿಗಳೊಳಗಾ ನೃಪರಿಟ್ಟಣಿಸಿಯೆ ಬರುತಿರಲು ದಟ್ಟಿಸಿ ಪೊಡವ ನಾನಾವಾದ್ಯದ ರವ ಮುಟ್ಟಿ ದಿಗಂತರಾಳವನು (ಅಂಜಕ. ೧೦-೨೭೭); ಬಿಟ್ಟನು ನಿಜವೃಷಭಾಂಕನು ಬಲವೆರಸಿಟ್ಟಣಿಸಿಯೆ ಶ್ರಿಪುರವನು ದಟ್ಟಿಸಿ ಪೊಡವ ನಾನಾವಾದ್ಯರವಗಳು ಮುಟ್ಟಿ ದಿಗಂತರಾಳವನು (ತ್ರಿಪುಸಾಂ. ೦೩-೦೫೦). **ಧಟ್ಟಿಸು** : ೧. ಸುರಪನಾನಂದರಸವಜಿತು ಬಿಜಿಗಿನ ಮೊಗ ದೊಳಿರಲು ನಾರಂದ ಧಟ್ಟಿಸುತೆದ್ದು ಕೊಡು ವಸಿಷ್ಠಂಗೆ ಭಾಷೆಯನು ಕೌಶಿಕ ಎಂದನು (ಹಡಕಾ. ೨-೩೪); ಓರೆಪೋರೆಯೊಳಾಡಿ ಧರ್ಮದ ಧಾರಣೆಯ ಧಟ್ಟಿಸುವದಿದು ಗಂಭೀರರಿಗೆ ಗರುವಾಯಿಯೇ (ಕುವ್ಯಾಸ. ೦೪-೮೪); ನೀ ತಳೋದರಿ ಕಜಿಚುಗೆಡದೀ ಪಾತಿನಲಿ ತಾ ಬಿಡುವನೇ ನಿನ್ನಾತಗಳ ನುಡಿಸೆಂದು ಖಳ ಧಟ್ಟಿಸಿದನಂಗನೆಯ (ಕುವ್ಯಾಸ. ೦೩-೦೦); ನಿನ್ನೆಯ ಪುರುಷನಪಗತನಾದ ಬಳಿಕೀ ವರಿಯ ಮೆಜಿದಿಹುದುಚಿತವೇ ಹೇಳೆಂದು ಧಟ್ಟಿಸಿದ (ಜೀವಂಚ. ೦೩-೩) ; ಮಾರೀಚನಾ ದಶಗಳನ ಧ[ಪಾಠಾಂ. ದ]ಟ್ಟಿಸಿ ಕೆಲವು ದಿನ ನೀನುಳಿವುಪಾಯವ ಮಾಡುವೆನು . . . ಕಾನೆಂದ (ತೂರಾ. ೩-೮-೦೦). ೨. ಘಟ್ಟನೆಹೆ ಬಾಣಸಿಗ ಸವಿಯೊಳಗಟ್ಟ ಕೊಳನ ತಿಂದು ದೇಹದೊಳಟ್ಟಿಯಲಿ ಸಿರವಿರಲಹಂಕಾರದಲಿ ನೀನೆಂದು ಧಟ್ಟಿಸುತ ಜೀಮೂತವಲ್ಲನು . . . ಹೊಕ್ಕನು ತೋಳ ತೆಕ್ಕೆಯ ಮಲ್ಲ ಗಾಳಗಕೆ (ಕುವ್ಯಾವಿ. ೬೫೩. ೪-೩೪). ೩. ಖರ್ವರನೆಂಬ ಜೋಗಿ ಶಿವಸಿದ್ದ ರಾಮನ ಸರ್ವಸಾಮರ್ಥ್ಯದ ಹೆಸರ ಧಟ್ಟಿಸುವೆ ವಾದಿಸುವೆ ಸೋಲಿಸುವೆನೆಂದೊಸೆದು ... ಐತಂದನು (ಸಿದ್ಧರಾ. ೭-೩೬). ೪. ತೋಳ ನೆಗಹಿನಲ್ಲಟ್ಟಿ ಹೊಯ್ದುದು ನೀಲನನು ನೀಲಾದ್ರಿಯನು ದಂಭೋಳಿ ಧ[ಪಾಠಾಂ. ದ]ಟ್ಟಿಸಿದಂತೆ ನೊಂದನು ಹೊಯ್ಲಲಿಭಪತಿಯ (ತೂರಾ. ೭-೩೨-೩೬). ೫. ನಿಗ್ರಹಿಸು; ಸೋಲಿಸು; ಹಿಡಿತಕ್ಕೆ ತರು; ಅಂಕೆಯಲ್ಲಿರಿಸು: ಪದಪಾಣಿ ಗುಹ್ಯ ಕರ್ಮೇಂದ್ರಿಯಂಗಳಲ್ಲಿ ಬೆದಜಿದಪ ಧಟ್ಟಿಸುವ ಆದಟು ಬೇಕವಜಿಲ್ಲಿ (ದೀಕ್ಷಾಕೋ. ೦೭-೦೯); ಚೋಳ ಪಾಂಡ್ಯರ ದಳವ ಧಟ್ಟಿಸಿ ಕೊಂಡನನುಪಮಸಾರವಸ್ತುಗಳ (ಕುವ್ಯಾಸ. ೫-೪೦). ಧಟ್ಟ್ಯಿಸು: ೨. ಪುಟ್ಟನೆಂದನಬೇಡ ಪರಮಶಕ್ತಿಯಂ ತಂದುಕೊಟ್ಟನು ಕೃಷ್ಣ ಮನ್ಮಥಗೆ ಧಟ್ಟ್ಯಿಸಿ ನೀ ಬಾಹುಬಲದಿಂದೆ ಕಾದಲಂ ಪೆಟ್ಟನಿಕ್ಕದೆ ಬಿಡನೆಂದ (ಹೋಹತ. ೦೨-೯).

ಧಟ್ಟಿಸುತೆ ಹೇಳು = ಒತ್ತಾಯ ಮಾಡು: ಬಿಟ್ಟು ಹೋಗುವ ಲಲನೆ ವಲ್ಲಭಗೆ ಬುದ್ಧಿಯಂ ಧಟ್ಟಿಸುತೆ ಹೇಳಿ ಮೇಲಟ್ಟಿದೊಳು ಗುಡುಹವದೆ ಬಟ್ಟಲೊಳು ಬಿಲಿಪಾಲ ಸಲಿಸೆಂದು ತಾ ತಳರ್ವಳಂತೆಯವಳಂತೆ ನೀನು ಆಟ್ಟಾಳಿಯ ಮಾಡಿದವೆ (ಪ್ರಭುಪು. ೬-೨೩). [ದಟ್ಟಿ$_3$ + – ಇಸು$_2$]

ದಟ್ಟಿ (ನಾ). ದಪ್ಪಬಿದಿರಿನ ಸೀಳು–ದಬ್ಬೆ: ಏಜನಕ್ಕೆ ಹೊರಟ ಕೇತಯ್ಯ ಚಂದದಿಂ ಬಿದಿರನುಂ ಸೋಸಿ ತರುವುದಕೆ ಹೋಗಿ ದಟ್ಟಿಯ ತರಿದು ಪೊಳವೆ ಸೀಳುತಿರೆ (ಕರಲೀ. ೦೭೨-೦೦). [<ತಟ್ಟಿ$_1$]

ದಟ್ಟ್ಯಿಸು 'ದಟ್ಟಯಿಸು' ನೋ.

ದಡ$_1$ (ನಾ). ಒಂದಂ ಅನುಕರಣ ಶಬ್ದ. 'ದಡಗಂಟ್ಟು$_1$' ಪರಾ.

ದಡದಡ (ದ್ವಿರುಕ್ತಿ) = ೧. ರಭಸ; ವೇಗ; ಜೋರು: ದಡದಡ ಎಂದು ಓಡುತ್ತಾನೆ (ಕೂಧಿ). ೨. ನಡುಕ; ಕಂಪನ: ಗದಬಡಿಸಿದುದು ಲಗ್ಗೆವಜಿ ಕೋಟಿಪಗೆಗಳಂ ಕೆಡೆಕೆಡೆಯೆನುತ್ತ ಕಹಳೆಗಳೊದರ್ದುವಳ್ಳೆರ್ದಯ ದ ಡ ದ ಡ ಂ ಗ ಳ್ ಮಾಣ್ದುದಮರರ್ಗೆ (ಜಬಪು. ೪೯-೩೦). ದಡಮಾಡು = ಅವಸರಪಡಿಸಂ: ದಡಮಾಡಿದರು ಯಮನಾಳುಗಳು ಓಡಿ ಬಂದರು ಏಳೇಳೆನುತ ಏಳಲೆಳೆದರು ಪಾಪಿಯ ಬೇಳಲೆಳೆದರು (ಪುರಂದ. ೩-೦೨೩-೦).

ದಡ$_2$ 'ದಡ್ಡೆ' ನೋ.

ದಡ$_3$ 'ತಡ$_2$' ನೋ.

ದಡ$_4$ 'ದಳ$_1$' ನೋ.

ದಡಂಗೊಳ್ (ಕ್ರಿ). ದಡ ಸೇರಂ: ಮಕರಾಕರದಿಂ ಪೊಜಿಮಾಡುವ ಕರಿಮಕರದಂತೆ ಕಮಳಾಕರದಿಂ ಪೊಜಿಮಟ್ಟು ದಡಂಗೊಳ್ವಳ್ಲಿ (ಅರ್ಧನೇ. ೩-೧೧೩ ವ).

[ದಡ$_3$ (<ತಡ$_2$) + ಕೊಳ್$_1$]

ದಡಂದಡಿಸು 'ದಡದಡಿಸು' ನೋ.

ದಡಕ್ (ನಾ). ಒಂದು ಅನುಕರಣ ಶಬ್ದ: ಅಟ್ಟದಿಂದ ಪಾತ್ರೆಯು ದಡಕ್ ಎಂದು ಬಿದ್ದಿತು (ಕೂಧಿ).

ದಡಕಟ್ಟು 'ದಡೆಕಟ್ಟು' ನೋ.

ದಡಗಲಿ (ನಾ). ದಪ್ಪನೆಯ ಹೆಂಗಸು: ಈಗ ಹೊಸದಾಗಿ ನಡೆಯುವು ದನ್ನ ಕಲೀತೀರೋ ಈ ದಡಗಲಿ ಕೋಲು ಜಾರಿ ಬಿದ್ದಿದ್ದೇ ಒಂದು ಭಯಂಕರ ವಿಚಾರವೇ! (ಅಮೂಕ. ೬೮). 'ದಡಾಲಿ' ಪರಾ. [?]

ದಡಗುಟ್ಟು$_1$ (ಕ್ರಿ). ೧. ದಡದಡ ಶಬ್ದಮಾಡು: ಗಾಡಿ ದಡಗುಟ್ಟುತ್ತಾ ಬಂತು (ಕೂಧಿ). ೨. ವೇಗದಿಂದ ಕೂಡಿರು: ಬೇಕಾದಷ್ಟು ಸಮಯ ಇದ್ದರೂ ಆಕೆ ದಡಗುಟ್ಟಿಕೊಂಡು ಕೆಲಸ ಮಾಡುತ್ತಾಳೆ (ಕೂಧಿ).

[ದಡ$_1$ + ಕುಟ್ಟು$_1$]

ದಡಗುಟ್ಟು$_2$ (ಕ್ರಿ). ದಡ ಸೂಸಿ ಹರಿ; ತುಂಬಿ ಹರಿ : ಸಾಲದ್ದಕ್ಕೆ ಕೆಲಸದ ಆಯಾಸವೂ ಸೇರಿ ಬೆವರು ದಡಗುಟ್ಟಿಕೊಂಡು ಹರಿಯುತ್ತಿದೆ (ಘಾಟೀಮು. ೦೦೩). [ದಡ$_3$ (<ತಡ$_2$) + ಕುಟ್ಟು$_1$]

ದಡದಡನೆ (ಅ). ೧. ದಡದಡ ಎಂಬ ಸದ್ದಿನೊಡನೆ : ಶ್ರೀ ಸೋಮನಾಥನು ನಡುವಿರುಳು ಭಕ್ತಂಗೊಲಿದು ದಡದಡನೆ [ಪಾಠಾಂ. ಧಡಧಡನೆ] ಕದವಂ ಹಾಱತೆಗೆಯಲು (ಬಸಪು. ೪೩-೪೭). ೨. ವೇಗವಾಗಿ : ಬೇಗನೆ ; ಶೀಘ್ರವಾಗಿ : ಆವನು ದಡದಡನೆ ಮೆಟ್ಟಲಿಳಿದನು (ರೂಢಿ).

[ದಡ$_1$ + – ಅನೆ$_1$]

ದಡದಡಿಸು, ದಡಂದಡಿಸಂ, ಧಡಧಡಿಸು$_1$ (ಕ್ರಿ). ೧. ನಡುಗು; ಅದುರು; ತತ್ತರಿಸು : ತೊಡೆ ದಡದಡಿಸೆ ನಡೆಗೆಟ್ಟು ಕಳಲುಲಿಗೆ ಬಱಿಸಲ್ವ ಕಳ ಹಂಸಮಂಡಲಕ್ಕಯಶಮಂ ಮಾಡಿಸಿಯುಂ (ಕಾದಂಉ. ೩೬) ; ಕುತ್ತಂ ಬಡೆದರಂತೆ ಬೀಟ್ವರ್ ಬಡಗೊಂದೆಯಂತೆ ದಡದಡಿಸುವರ್ (ಧರ್ಮಾಮೃ. ೩-೮೧) ; ಕಣ್ಗಳಂ ಮುಚ್ಚಿ ಸೆರೆಬಿಗಿದು ದಡದಡಿಸಿ ದೊಪ್ಪನೆ ಬಿದ್ದು (ಬಸರ. ೨-೫೮); ಕುಡಿದು ಕೊಬ್ಬಿದ ಬಸುಱು ದಡದಡಿಸಿ ತರಹರಿಸುವಡಿಯ . . . ಕಲಿವೀರ ಬಾಹುಕ ಬರುತ್ತಂ (ಹಡಕಾ. ೧೧-೦೭); ತನುವನೊಲೆದವು ದಡದಡಿಸಿ ಕಿವಿಗೊನೆಯ ಜೋಲಿಸಲಲ್ಲಿ ಮಡಿಗಾಲಿನಲಿ ಕುಸಿದವು (ಕುಮ್ಯಾವಿ. ೮-೮೩) ; ಇಂತು ನಲ್ಮೆ ಮಿಗೆ ಬಿನದಿಪ ಕಾಮಿನಿಯರ್ಗೆ . . . ನೊಸಲೊಳ್ ಬೆಮರ್ ಪನಿಯೆ ತೆಳ್ಗದಂಪು ಕೆಂಪಡರೆ ಎರ್ದೆ ದಡದಡಿಸೆ (ರಾಮಾಶ್ವ. ೦೨೩-೭). ೨. ಆತುರಪಡು ; ಸಂಭ್ರಮದಿಂದ ಕೂಡಿರು ; ತ್ವರೆಮಾಡು : ತಾಳ್ದು ಪರಮಾನಂದವಂಕುರಂದೋಱುತಂ ದಡದಡಿಸುತೆದ್ದು ತಿರುನೀಲಕಂಠರ್ಬಂದು (ತಿರುರ. ದೇ. ೨೫-೦) ; ದಡದಡಿಸಿ ಕೊಳನಿಂದ ಹೊಱಟಡಿಯಿಡುತ ಬಳಲಿದನನಿಲಸುತನವರೊಡನೆ ಮೆಯ್ಯಿಕ್ಕಿದನು (ಕುಮ್ಯಾಅ. ೬೧೩. ೨೬-೨೯) ; ಕಡು ಮಱುಗುತೆ ವಿಪ್ರಜನವೆದ್ದು ತಣ್ಣೀರ ತೊಡೆದು ಕಣ್ಗಳಿಗಾಗ ಮೆಲ್ಲನೆ ಪಿಡಿದೆತ್ತಿ ನಿಂದಿರಿಸಲು ದಡದಡಿಸುತೆ ಕೆಡಿಸಿದ ಶುಭವಸ್ತುನಿಚಯವ (ತ್ರಿಭುತಿ. ೯-೨೬). **ದಡಂದಡಿಸು** : ೧. ಅಡವಿಗಿಚ್ಚಟ್ಟಿದೆಳಹುಲ್ಲೆಯಂತೆರ್ದೆ ದಡಂದಡಿಸಿ ಪವ್ವನೆ ಪಾಱಿ ದೂವೆಯೊಳ್ ಪೊಕ್ಕುರಗಿಯಂತೆ ಬೆದಬೆದನೆ ಬೆಂದು (ಜೆಬಪು. ೦೯-೪೩). **ಧಡಧಡಿಸು$_1$** : ೧. ಕರಹತಿಗೆ ಧಡಧಡಿಸಿ . . . ಧೈರ್ಯದಲಿ ಹೊಡಕರಿಸಿ ಹೊಱಬಿನೊಳೆದ್ದು ಹೊಯ್ದನು ಪಾರ್ಥನಂದನನ (ಕುಮ್ಯಾದ್ರೋ. ೬-೫೯) ; ಧಡಧಡಿಸಿದವೊಳ್ದೊಡೆಗಳ್ ನಿಡುಸುಯ್ ಪೊಣ್ಮದುದು ಮೊಗದೆ ಬೆಮರ್ವನಿಯೊಗೆದತ್ತುಡುಗಿದುದಳವು ನಡುಂಗಿದು ದೊಡಲ್ವಿದರ್ಭಜಗೆ ವಿಪಿನಗಮನಶ್ರಮದಿಂ (ದಮಸ್ವ. ೨-೦೦). [<ತಡತಡಿಸು]

ದಡಪಡಿಸು 'ಧಡಪಡಿಸು' ನೋ.

ದಡಪಶಾಹಿ (ನಾ). ಅಧಿಕಾರದ ಬಲದಿಂದ ಜನರನ್ನು ಹತ್ತಿಕ್ಕುವುದು ; ಅನ್ಯಾಯದ ಆಳ್ವಿಕೆ ; ದಬ್ಬಾಳಿಕೆ : ಈ ಮೊದಲೇ ದಡಪಶಾಹಿಗೆ ಕಳೆಯೇರಿ ಸಾವಿರಾರು ಜನರು ತುರಂಗದಲ್ಲಿ ಬಿದ್ದಿದ್ದರು (ಕಾಂಗ್ರೆಸ. ೧೭).

[←ಮರಾ. ದಡಪ್‌ಶಾಹೀ]

ದಡಬಡ$_1$ (ನಾ). ಒಂದು ಅನುಕರಣ ಶಬ್ದ : ದಡಬಡ ಶಬ್ದಮಾಡುತ್ತ ಗಾಡಿ ಹೊರಟಿತು (ರೂಢಿ).

ದಡಬಡ$_2$ 'ಧಡಪಡ' ನೋ.

ದಡಬಡನೆ (ಅ). ಆತುರದಿಂದ ಕೂಡಿ : ಉದ್ದಿನ ಮೂಡೆಯು ದಡಬಡನೆ ಉರುಳಿ ಹೋಗುವಂತೆ ಈ ಮರಳನ್ನೂ ದಾಟಿ ... ಮರೆಯಾಗಿರುವಳು (ಹುಟ್ಟಿಹ. ೧೨೯) ; ರಂಗಪ್ಪ ಪಕ್ಕದ ಮನೆಯಲ್ಲಿ ಗುಲ್ಲು ಕೇಳಿ ದಡಬಡನೆ ಎದ್ದು ಹೊರ ನೋಡಿದ (ಚಿಗುಲ. ೩೪) ; ಹುಡುಗರ ತಲೆತಲೆ ಟೊಪ್ಪಿಯ ಆಟವ ದಡಬಡನಾಡಿಸಿ, ಮನೆಮನೆ ತೋಟವ ಅಡಿಮೇಲಾಗಿಸಿ (ಕಎಪು. ೨೮-೫). [ದಡಬಡ$_2$ (<ಧಡಪಡ) + – ಅನೆ$_1$]

ದಡಬಡಲು (ನಾ). ಆತುರ ; ವೇಗ ; ಗಡಿಬಿಡಿ : ಯಡತರದ ಕಾಂತೆಯರೆಲ್ಲಾ ದಡಬಡಲಾಗಿ ಅಲಂಕಾರಗಳಂ ಮಾಡಿಕೊಳುತ್ತಿರುವ (ಸೌಗಂಧಿ ೨೦೨-೧೫). [ದಡಬಡ$_2$ (<ಧಡಪಡ) + – ಅಲು (< – ಅಲ್$_2$)]

ದಡಬಡಿ (ನಾ). ದಪ್ಪ ; ಗಾತ್ರ : ದಡಬಡಿ ಇದ್ದರೆ ಠೊಣ್ಯನೆಂಬರು ತೆಳುವಿದ್ದರೆ ರೋಗಿಷ್ಟನೆಂಬರು (ಪುರಂದ. ೪-೬೦-೫). [?]

ದಡಬಡಿಸು$_1$ (ಕ್ರಿ). ದಡದಡ ಶಬ್ದವನ್ನು ಮಾಡು : ಸಣ್ಣ ಬಂಡಿಗಳು ದಡಬಡಿಸುತ್ತಿದ್ದುವು (ಪುನರು. ೧೮೨). [ದಡಬಡ$_1$ + – ಇಸು$_2$]

ದಡಬಡಿಸು$_2$ 'ಧಡಪಡಿಸು' ನೋ.

ದಡಮಿ 'ದುಡುಮಿ' ನೊ .

ದಡಯ 'ಧಡೆ$_1$' ನೋ.

ದಡರ್ (ನಾ). ಒಂದು ಅನುಕರಣ ಶಬ್ದ : ತಡೆಯದೇ ಕಳ್ದೊಯ್ದುದಂ ಕಂಡು ಬೆದಱಿ ಎದೆ ದ[ಪಾಠಾಂ. ಧ]ಡರೆಂದು ಬಡಿಯಲಿನ್ನೇವೆನಕಟಕಟ (ಸಮ್ಯಕೌ. ೦೦-೬೮). 'ಬಡಾರ್' ಪರಾ.

ದಡಲ್ (ನಾ). ಒಂದು ಅನುಕರಣ ಶಬ್ದ : ಬಾವಿಯಲ್ಲಿ ಕಲ್ಲು ದಡಲ್ ಎಂದು ಬಿದ್ದಿತು (ರೂಢಿ). 'ದಡಲನೆ' ಪರಾ.

ದಡಲನೆ (ಅ). ವೇಗವಾಗಿ ; ರಭಸವಾಗಿ : ಬಹುಮೃಗಗಳಂ ಕೊಂದು ಕೆಡಹಿ ಕೊಬ್ಬಱಿದು ಕಡುಲಹರಿಯಿಂ ದಡಲನೆಯ್ದುವ ಹುಲಿಗಳಾ ಪಂಕರುಹಮಿತ್ರನಪರವಾರಾಶಿಯಂ ಪುಗೆ ತದ್ವನಾಂತರದೊಳ್ ಸೊಗಯಿಸಿದುವು (ಸಮ್ಯಕೌ. ೧೦-೨೫). [ದಡಲ್ + – ಅನೆ$_1$]

ದಡಸಲು (ನಾ). ಒಂದು ಬಗೆಯ ಮರ : ಬಾಳೆ . . . (ಪರೂಷಕ) ದಡಸಲಹಣ್ಣು, ಆಮ್ರಾತ . . . ಇವುಗಳ ಫಲಗಳು ಪೌಷ್ಟಿಕ (ಅಪ್ಯಾಂಗ. ೧೪೫-೧೦೭-೦೨೦). 'ತಡಸಲ್ಲು' ಪರಾ. [?]

ದಡಸು 'ದಳಸು' ನೋ.

ದಡಸೂಸು (ಕ್ರಿ). ದಡಮೀರಿ ಹರಿ ; ಅಂಚನ್ನು ಮೀರು ; ತುಳುಕಿ ಹೊರಬರು ; ತುಂಬಿ ಹರಿ : ತುಳುಕಿದ ಮಧುರಸ ದಡಸೂಸೆ ಪರಿವ ಪೆರ್ಬೊಳೆಯೆಸೆದುದನೀಕ್ಷಿಸಿದ (ಮೋಹತ. ೫-೨೩).

[ದಡ$_3$ (<ತಡ$_2$) + ಸೂಸು$_1$]

ದಡಾಣಿ 'ದಡಾಲಿ' ನೋ.

ದಡಾರ್ (ನಾ). ಒಂದು ಅನುಕರಣ ಶಬ್ದ : ಗಾಳಿಗೆ ಬಾಗಿಲು ದಡಾರ್ ಎಂದು ಮುಚ್ಚಿಕೊಂಡಿತು (ರೂಢಿ).

ದಡಾರ (ನಾ). ಮೈಮೇಲೆಲ್ಲಾ ಗುಳ್ಳೆಗಳಾಗಿ ಬಾಧೆಯನ್ನುಂಟು ಮಾಡುವ, ಸಾಮಾನ್ಯವಾಗಿ ಮಕ್ಕಳಿಗೆ ಬರುವ ಅಂಟುರೋಗ : ಮಕ್ಕಳಲ್ಲಿ 'ದಡಾರ' (Measles) ಕಾಣಿಸುವುದಕ್ಕೆ ಮುಂಚೆ ಕಣ್ಣು ಕೆಂಪಾಗಿ ನೀರು ಸುರಿಯುವುದುಂಟು (ನಿಮ್ಮದ್ಯ. ೦೩೯) ; ಇದು ಮಕ್ಕಳ ಕಾಯಿಲೆ. ಮೈಮೇಲೆ ದಡಾರ ಬರೋದು. ಒಮ್ಮೆಯಲ್ಲ, ಒಮ್ಮೆ ನಮಗೆಲ್ಲರಿಗೂ ಬರುತ್ತೆ (ಶಾಯಿ. ೦೬೬) ; ಮಕ್ಕಳಿಗೆ ದಡಾರವೆದ್ದಾಗ ತಾಯಂದಿರು . . . ಮಾರಿಗುಡಿಗೆ ಪ್ರಯಾಣಬೆಳೆಸುವುದನ್ನು ನಾವು ಇಂದೂ ನೋಡುತ್ತಿದ್ದೇವೆ (ಕೆಲರೋ. ೧) ; ನಮ್ಮ ದೇಶದಲ್ಲಿ ದಡಾರ ಇಳಿದ ತಕ್ಷಣ ಬೇವಿನಸೊಪ್ಪು ಮತ್ತು ಅರಶಿನ ಅರೆದು ಹಚ್ಚಿ ಸ್ನಾನ ಮಾಡಿಸುವರು (ಗೃಹವಿ. ೦೫೦). 'ಗೋಣಿದಡಾರ' ಪರಾ. [?]

ದಡಾರನೆ (ಅ). ದಡಾರ್ ಎಂಬ ಶಬ್ದದೊಂದಿಗೆ : ದಡಾರನೆ ಬಾಗಿಲು ಮುಚ್ಚಿತು (ರೂಢಿ). [ದಡಾರ್ + – ಅನೆ$_1$]

ದಡಾಲಿ, ದಡಾಣಿ (ನಾ). ದಪ್ಪನೆಯ ಹೆಂಗಸು : (ಕಿ). ದಡಾಣಿ : (ಕಿ.) ದಡಾಲ್ದಿಮ್ಮಿ, ದಡರದಿಮ್ಮಿ=ಗಟವಾಣಿ; ಗಯ್ಯಾಳಿ: ದಡಾಲ್ದಿಮ್ಮಿಯ ಹಾಗೆ ಆಡಿದರೆ ಜನ ನಗುತ್ತಾರೆ (ರೂಢಿ). ದಡರದಿಮ್ಮಿಯ ಹಾಗೆ ಆಡಬೇಡ (ರೂಢಿ). [?]

ದಡಾಳಿ (ನಾ). (?): ಬಿಂಕದ ಬಿರುದಂಕದ ವಿಡಾಯದ ದಡಾಳಿಯ ವೀರಾಳಾಪದ ವಿಪುಳಪ್ರತಾಪದ ಬನ್ನಣೆಯ ಬಿನ್ನಣದ ರನ್ನದೋರಣದ . . . ಮಿಂಚಿನ ಸಂಚಯದಂತೆ ಮುಂಚುವ ಸರಳೆಸುಗೆಯ ಕೌತುಕದ ಕಡುಗಲಿ ಬಿಲ್ಲಾಳ್ಗಳ ಬೆಂಬಲಮಾಗಿರ್ದಂ (ಹಮ್ಮೀರ. ೩-೩೩ ವ). [?]

ದಡಿ$_1$, ದಡೆ$_1$ (ನಾ . ೧. ಬಿದಿರಿನ ಕೋಲು ; ಬಡಿಗೆ : "ವೈಣವಂ ಯಷ್ಟಿ ರಂಭಾದಂಡಮೆನಲು ದಡಿ" (ಮಂಗರಾ. ೧೩೧-೫೦) ; ತಲೆಯಂ ದಡಿಯಿಂ ಪೊಯ್ದುಂ (ಧರ್ಮಾಮ್ಯ. ೭-೧೦೫) ; ಗುಡಿಯೊಳಗಿರ್ದು ಗುಡಿಯ ನೇಣ ಕೊಯಿದರೆ ಗುಡಿಯ ದಡಿ[ಪಾಠಾಂ. ದಂಡಿಗೆ]ಬಿದ್ದು ಹಲ್ಲು ಹೋಹುದು ನೋಡಾ (ಬಸವ. ೫೬೬) ; ದಡಿಯಂ ಪಿಡಿದಬ್ಬರಿಸುತ್ತುಮಿರ್ಪ . . . ತತ್ಪುರೀಜನದ ಪೊದಟ್ಟ ತಲ್ಲಣದ ಮಲ್ಲಣಿ ಬೀದಿಯೊಳಾದುದದ್ಭುತಂ (ಪರ್ಧಪು. ೩-೫); ಗೂಢಗರ್ಭವನಿದ ನೋಡೊಲ್ಲೆನೆಂದವ ಕೂಡಿ ಬಡಿದು ದಡಿಯೊಳಗೆ ಜೋಡೆ ನೀನೆಸಗಿದಂದಕೆ . . . ಸಮಮಾಡಿಸದಾನು ಬಿಡುವೆನೆ (ಅಂಜಜ. ೯-೩೩) ; ನಿನ್ನ ತಲೆಗೊಂಬೆವೆಂದು ದಡಿ ಗುಂಡು ಬಡಿಯಂ ಕೊಂಡು ನೆಲದಿನಾಕಾಶಂಬರಂ ಬೆಳೆದು ಘುಡುಘುಡಿಸಿ ಬೆದಱಿಸುತ್ತಿರಲು (ಸಮ್ಯಕೌ. ೮-೬೨). (ಗು). ೨. ದಪ್ಪವಾದ ; ಗಾತ್ರದಿಂದ ಕೂಡಿದ. 'ದಡಿಗೋಲು' ಪರಾ. ದಡೆ$_1$: ೧. ಎಱದು ಸತ್ತರ್ ಅಂಕನ್ ದಡೆಯೆ ಬಡಿದು ಸುರಾಂಗನೆಯೊಳ್ನರೆದನಾತಗೆ ಕೊಟ್ಟ (ಎಕ. X, ಶ್ರೀನಿವಾ. ೬೪೨೪ ; ಸು. 930) ; ಕಾಬ ಕಣ್ಣಿದ್ದು ಕನ್ನಡಿಯ ನೋಡುವನಂತೆ ನಡೆವ ಕಾಲಿದ್ದು ದಡೆಯನೂಱಿ ನಡೆವವನಂತೆ (ಮೋಳಿಮಾ. ೧೬೭-೬೨೫).

ದಡಿಯ ಕೈಯವರು = ಕೋಲನ್ನು ಹಿಡಿದಿರುವವರು : ಬಿಡದೆ ನಾಯಕವಾಡಿ ಚೂಣಿಯ ಹಿಡಿದು ಕಾದಿತ್ತುಭಯರಾಯರು ದಡಿಯ ಕೈಯವರಿಂದ ಕವಿಸಿದರಂದು ಸಬಳಿಗರ (ಕುಮ್ಯಾಭೀ. ೪-೩೮).

[ದೇ.॥ ತಮಿ. ಮಲ. ತಟಿ]

ದಡಿ$_2$ 'ತಡಿ$_2$' ನೋ.

ದಡಿ$_3$ 'ತಡಿ$_3$' ನೋ.

ದಡಿಕಾಱ (ನಾ). ಕೋಲನ್ನು ಹಿಡಿದಿರುವವನು ; ದಂಡಧಾರಿ ; ಕಟ್ಟಿಗೆ ಕಾರ ; ವೇತ್ರಧಾರಿ : ಇಬ್ಬರು ದಡಿಕಾಱರು ಬಾಗಿಲ ಕಾಯ್ದಿಪ್ಪರು (ಅವಜಂ. ೨೨೨-೧೦೦೮) ; ಗಡಬಡಿಸದಿರಿ ಗದಱಿಕೊಳ್ಳದಿರಿ ಮೂಲೋಕ ದೊಡೆಯನ ಸಮಕ್ಷಮದಲ್ಲೆಂದು ದಡಿಕಾಱರುಗಳಡಿಗಡಿಗೆ ಪೇಳುತಿಹರು (ಜಿತುಪು. ೦-೨-೧೦೦). [ದಡಿ$_1$ + – ಕಾಱ]

ದಡಿಕೆ (ನಾ). (ಕರಾ) ಬಾಸುಳು ; ಬಾಸುಂಡೆ : ಅವರು ರಾಕ್ಷಸರ ಹಾಗೆ ಈ ಮಗುವನ್ನು ಬಡಿಯುವಾಗ ಸುಮ್ಮನಿರಬೇಕೇ ? ನೋಡು. ಇದರ ಬೆನ್ನು ಹೇಗೆ ಕೆಂಪಾಗಿ ದಡಿಕೆ ಬಂದಿದೆ (ಮುಗಿಯು. ೯೫).

[←ತುಳು. ದಡಿಕೆ]

ದಡಿಗ, ಧಡಿಗ (ನಾ). ೧. ದೊಣ್ಣೆಯನ್ನು ಹಿಡಿದವನು. ೨. ಶೂರ ; ಬಲಶಾಲಿ : ಸಡಿಲ್ದ ಪಾಲಿಗೆವಂದರಂ ಕರ್ಚಿ ಕೈಯಡ್ಡಾಯುಧಮನೀಡಾಡಿ ದಡಿಯಂ ಕೊಂಡು ಪರಿವ ದಡಿಗರುಮಂ (ಲೀಲಾವ. ೫-೧೩೪ ವ) ; ಕಾಲಾಲ್ಗಳಿಂ ಪಿಡಿದೀಡಾಡಿಯುಮರ್ದಿಯುಂ ತಿರಿಪಿಯುಂ ತೇದುಂ ತೆಱಂಬೊಯ್ದುಮಾ ದಡಿಗಂ ದಾನವನಂದದಿಂ ಕೆಡಪಿದಂ ಸಂಗ್ರಾಮ ರಂಗಾಗ್ರದೊಳ್ (ಮಹಾನೇ. ೧೨-೨೦೪) ; ದಡಿಗ ಕಾಳಗಕೈದಲಾಕ್ಷಣ ಪೊಡವಿಸುತೆಗೆಡಗಣ್ಣು ಕುಣಿದುದು (ಕೌಶಿರಾ. ೦೦-೩೨) ; ಪೊಡೆಯರಿದ್ದಾ ಮನೆಯ ಪೊಕ್ಕುದೆ ನೋಡೆನುತ ಕೋಪವನು ಪಿಡಿದಾ ದಡಿಗನಪ್ಪಳಿಸಿದರೆ ಘಾಯಕೆ ಹಿಂದೆ ತಿರುತಿರುಗಿ (ಕೃಷ್ಣಾಕ ೨೦-೦೯). ೩. ದಾಂಡಿಗ ; ದಡಿಯ : ದಡಿಗನ ಮಿಟ್ಟುವಂ ಮಿಡಿದೊಡಲ್ಲದೆ ಮಾಣೆನಮೋಘಮೆಂದು ಕೂರ್ಪುಡುಗದೆ ಬಂದು ತಾಗೆ ಯಮಳರ್ ತಡೆಗೊಂಡೊಡೆ ತಾವುಮೆಮ್ಮೊಳಂ ತೊಡರ್ದಪರ್ (ಪಂಪಭಾ. ೧೨-೧೬೨); ಮಿಂಚುದಲೆ ಒಣಕರುಂ ನಿಡುಗಯ್ಯ ದಡಿಗರುಂ . . . ಕುಳ್ಳಿರಲು (ವಾಗೀರ. ದೇ. ೨೫೪-೨೨) ; ಕಡುಗಾಯ್ದು ಲೋಹರಸಮಂ ಕುಡಿಯೆಂದವರೊಡೆದು ಬಾಯೊಳಿಱಿವರ್ಕಳ್ಳಂ ಕುಡಿದ ಕಡುಪಾಪಿಯಿವನೆಂ . . . ದಂಡಿಸುತ್ತಮಿರ್ಪರ್ದಡಿಗರ್ (ಶಾಸ್ತಟೀ. ೫೧-೫) ; ದಡಿಗಂ ರಕ್ಕಸನೆನ್ನಿದಿರ್ಗೆ ಮುಳಿಸಿಂದೆಟ್ಟಂದನಾ ಶೈಲದಿಂ (ದಶಕು. ೧೨-೬೪). ೪. ಒಬ್ಬಾತನ ಹೆಸರು: ಗಂಗಗಚ್ಚಿನ ಪಿರಿಯ ಮಗಂ ದಡಿಗಂ ವಯ್ಯೊನ್ದವಾಸಿಯಾದೊಡೆ ದಡಿಗೇಸ್ವರಮೆನ್ದಾ ದೇಗುಲಮಂ ಮಾಡಿಸಿದಂ (ಎಕ. IX. ಮಾಗಡಿ. ೭೫-೦೫ ; 960) ; ರಾಮ ಲಕ್ಷ್ಮಣರ್ಗ್ಗೆ ದಡಿಗ ಮಾಧವರೆಂದು ಪೆಸರನಿಟ್ಟು (ಎಕ. VII, ಶಿವಮೊ. ೪-೨೫ ; 1133). (ಗು). ೫. ದೊಡ್ಡದಾದ; ಗಾತ್ರವಾದ : [ವಿ]ಷ್ಣು ಭಟ್ಟೋಪಾ ಧ್ಯಾಯರಿಂಗೆ ಕೊನಿಗಾರಗದ್ದೆಯೊ[ಳಗೆ] ದಡಿಗೆ ಮೂಡೆ ೩ (ಎಇ. XXVII, ೧೬೨-೪೬ ; 1256) ; ದಡಿಗ ರಕ್ಕಸಿಯರಂತಾ ನೀಱಿ ಯಾಳಿಯರೊಡನೇಳ್ತಂದು ಬೇಗದೊಳು ಜಡಿದು ಕೆಡಪಲೆಳ್ದು ಬಂದಾ ಕಾಮುಕಿ ತೊಡರಿ ಪಿಡಿದಳು ಮತ್ತವನ (ಕುರಾಸಾಂ. ೩೨-೧೦೩). 'ದಡಿಗವೆಣ' ಪರಾ. ೬. ಬಲಿಷ್ಠವಾದ ; ಶೌರ್ಯದಿಂದ ಕೂಡಿದ : ಕಿಡಿಗಣ್ಣ ದಡಿಗಜಟ್ಟಿಗರ ಗರ್ಜನೆಗಳಿಂ ನಿಡುಗರುಳ ಮಾಲೆಯಂ ತಳೆದ ಸುರಮುನಿಗಳಿಂ . . . ದುರ್ಗಾನಿಲಯಮಂ ಮಹೋದ್ಯೋಗದಿಂ ವಸುಧಾಧಿಪಂ ಪೊಕ್ಕನತಿಮನೋರಾಗದಿಂ (ದಶಕು. ೫-೫ ರಗಳೆ) ; ದಡಿಗ ಕುಱಿಗಳನೇಳನೇಳಾಳೊಡನೆ ಕೊಂಡುರು ಕ್ರಮದಿ ತಿದ್ದಿದರೊಡನೆ (ಸಾಳ್ವಭಾ. ೧೭-೭೪). ಧಡಿಗ : ೬. ಕೊಂತ ಭಲ್ಲೆಯ ಶೂಲ ಸಬಳದಲಿ ಇಡುತ ಬಾಣದಲೆಸುತ ಕವಿದರೆ ಧಡಿಗ ದಾನವರೆರಡುಕಡೆಯಲಿ ಜಡಿದು ಹೆಮ್ಮರದಿಂದ ಹೊಡೆದೀಡಾಡಿದನು ಹನುಮ(ಕೌಶಿರಾ. ೧೧-೨೭).

[ದಡಿ$_1$ + – ಗ$_2$]

ದಡಿಗಯ್ಯ 'ದಡಿಗೆಯ್ಯ' ನೋ.

ದಡಿಗವಟಿ (ನಾ). ೧. ಒಂದು ಊರಿನ ಹೆಸರು. ೨ ಈಗಿನ ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ದಡಿಗವಾಡಿ : ಶ್ರೀ ಸತ್ಯಯೂನಾಳೆ ದಡಿಗವಟಿಯ ಮಸಿಕಲ್ಲಗಾವುಣ್ಡನ ಮಗಂ ಮಟ್ಟಿಗಂ ಸೆಡೆಯಲ್ನಾಕನ ಕಾಳೆಗದೊಳ್ ಸತ್ತಂ (ಮೈಆರಿ. ೦೯೩೬, ೪೨-೦ ; 900). ೨. ಒಂದು ಪ್ರದೇಶದ ಹೆಸರು (?) : ದೇವರ್ಗ್ಗೆ ನಿವೇದ್ಯಕ್ಕಂ ನನ್ದಾದೀವಿಗೆಗನ್ದಡಿ ಗವಟಿಯಾದ ವಿಕ್ರಮ ಚೋಳಮಣ್ಡಲದ ಕುಕ್ಕನೂರ್ನ್ನಾಡ ನಾಟ್ಗಾವುಣ್ಡಂ ಗಂಗಗಾವುಣ್ಡನ ಮಗಂ ರಟ್ಟಕುಳಕಾಲ ಚೋಳಗಾವುಣ್ಡಂಗಂ . . . ಗಟ್ಟಿಯುಂ ಕೊಣ್ಡಂ (ಎಕ. IX, ನೆಲಮಂ. ೧-೮ ; 1029). [?]

ದಡಿಗವೆಣ (ನಾ). ದೊಡ್ಡಗಾತ್ರದ ಹೆಣ : ಉಡಿದಿರ್ದ ಕಯ್ದು ನೆತ್ತರ ಕಡಲೊಳಗಡಿಗಡಿಗೆ ತಳಮನುರ್ಚುತ್ತಿರೆ ಕಾಲಿಡಲೆಡೆವಡೆಯದೆ ಕುರುಪತಿ ದಡಿಗವೆಣಂಗಳನೆ ಮೆಟ್ಟಿ ನಡೆಯುತ್ತಿರ್ದಂ (ಗದಾಯು. ೪-೦೪)

[ದಡಿಗ + ಪೆಣ]

ದಡಿಗಸೆಟ್ಟಿ (ನಾ). ಒಬ್ಬಾತನ ಹೆಸರು : ಶ್ರೀಮತ್ ಸ್ವಸ್ತ್ಯನೇಕ ಗುಣ ಗಣಾಳಂಕೃತರಪ್ಪ ದಡಿಗಸೆಟ್ಟಿಯರ ದೇವರದಾಸಯ್ಯನ ಅಬ್ಬಿಗಳ್ (ಎಕ. XV, ಹೊಳೆನ. ೬೭-೪ ; ಸು. 950). [ದಡಿಗ + ಸೆಟ್ಟಿ]

ದಡಿಗಾಳು (ನಾ). ದಪ್ಪವಾದ ಕಾಳು : ದಡಿಗಾಳುಗಳು ಬೇಗನೆ ಬೇಯುತ್ತವೆ (ರೂಢಿ). [ದಡಿ$_1$ + ಕಾಳು$_2$ (<ಕಾಟ್$_2$)]

ದಡಿಗಿರಿ (ನಾ). ದೊಡ್ಡ ಬೆಟ್ಟ ; ಭಾರಿ ಪರ್ವತ : ಕಿಡಿಗಳನು ಕಂಗಳಲಿ ಕಾಱುತ ದಡಿಗಿರಿಗಳನು ದಾಡೆಯಿಂದವೆ ಕೆಡಹುತಾಗಳೆ ಹರಿದ ರಾಕ್ಷಸಗಾಗಿ ಹರಿ ಬಳಿಕ (ಸಂಭಪ. ೭-೩೬). [ದಡಿ + ಗಿರಿ$_1$]

ದಡಿಗೆಯ್ಯ, ದಡಿಗಯ್ಯ, ದಡಿಗೈಯ (ನಾ). ಕೋಲನ್ನು ಹಿಡಿದಿರುವವನು ; ದಂಡಧರ ; ಯಮ : "ಜವನಱಂ ದಮ್ಮನು ದಡಿಗೆ[ಪಾಠಾಂ.

ಗ]ಯ್ಯ ... ನೇಸಱಣುಗನೆನಲಂತಕನೊಳೆಡೆವಿಡದ ನಾಮ" (ಶಬ್ದಮಂ. ೦೩).
ದಡಿಗಯ್ಯ : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.
ದಡಿಗೈಯ : "ದಡಿಗೈಯನೆಂದೆನಲ್ ದಮ್ಮನೆಂದೆನಲಂತಕಂ" (ಕಶರ. ೫೦).
[ದಡಿ$_1$ + ಕೆಯ್$_2$ + – ಅ$_7$]

ದಡಿಗೈಯ 'ದಡಿಗೆಯ್ಯ' ನೋ.

ದಡಿಗೊಳ್ (ಕ್ರಿ). ಕೋಲನ್ನು ಹಿಡಿ ; ದಂಡ ಹಿಡಿ : ಪುರವರವನು ನೆಱ^3 ಕವಿಸಿದ ವಜ್ರಖರ್ಪರವನುದ್ಧತ ಗದೆಯಿಂದ ಭರದಿ ಪೊಡೆಯಲದು ದಡಿಗೊಂಡ[ಡು] ಮಣ್ಣ ಬಗ್ಗರೆಯನೊಡೆದ ತೆಱನಾಯ್ತು (ನೇಮಿಸಂ. ೨೫-೫೨). [ದಡಿ$_1$ + ಕೊಳ್$_1$]

ದಡಿಗೋಲು (ನಾ). ದಪ್ಪವಾದ ಕೋಲು ; ಲಾಠಿ : ಆಗುಛೇಗೆ ಎಂಬ ದಡಿಗೋಲಿನಲ್ಲಿ ಅಗಡದ ಎಮ್ಮೆಯ ಚರ್ಮವ ತೆಗೆದು ಉಭಯನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪವ ಮಾಡಿ (ಸರ್ವಪ. ೦೦೨-೫೫೪).
[ದಡಿ$_1$ + ಕೋಲು$_1$ (<ಕೋಲ್$_1$)]

ದಡಿತ (ನಾ). (?) : ಕಿಡಿಯನುಗುವೆರಡಕ್ಷಿ ಕೆತ್ತುವ ನಿಡುಗಿವಿಗಳುಂ ತೆಱ^{3}ದ ಹಲ್ಗಳು ದಡಿತ[ಪಾಠಾಂ. ದ]ಮಂಡೆಯ ಮೇಲೆ ಮಿಡುಕುವ ಬಾಲವಾಯ ತದಿ (ಸಾಳ್ವಭಾ. ೫-೩೦). [?]

ದಡಿದೋಳ್ (ನಾ). ದಪ್ಪವಾದ ತೋಳು : ಪೇರೊಡಲುರ್ವಿನಿಂದೆ ದಡಿದೋಳ್ಗಳ ಕೊರ್ವಿನಿಳಾತಳಾಗ್ರದೊಳ್ ಬೀಱುತೆ ತಮ್ಮ ಮಂತ್ರಚಯಮಂ (ಹಾಲಾಸ್ಯ. ೨-೦೩-೨೦). [ದಡಿ$_1$ + ತೋಳ್]

ದಡಿದೋತ್ರ, ದಡಿಧೋತರ, ಧಡಿದೋತರ (ನಾ). ಅಂಚುಳ್ಳ ಪಂಚೆ: ಮಣಿದೊಡವಿನ ಪೆಡಗೆ ಪಾಗು ದಡಿದೋತ್ರದ . . . ಮಟ್ಟಿಗರೆಸೆದರ್ (ಹಮ್ಮೀರ. ೭-೦೯). **ದಡಿಧೋತರ :** ಶರೀಫರು . . . ತುದಿ ಕಾಲ್ಬೆರಳುಗಳು ಮುಚ್ಚುವಂತೆ ನಿರಿಗೆ ಹೊಯ್ದು ದಡೀಧೋತರವನ್ನು ಉಡುತ್ತಿದ್ದರು (ಶರೀಫ. ೬೦ ಕವಿಕಾವ್ಯ ಪರಿಚಯ). **ಧಡಿದೋತರ :** ಗದಗನ್ನು ದಾಟುತ್ತಲೆ ಚುಂಗುಬಿಟ್ಟು ಧಡಿದೋತರ ಉಟ್ಟ ಜನರು . . . ಕಪ್ಪುಮುಖದಲ್ಲಿ ಮುಳುಗಿಹೋದ ಸಾದಿನ ಬೊಟ್ಟು ಇಟ್ಟುಕೊಂಡ ಬಾಲಕಿಯರು–ಇವರೇ ತುಂಬಿಬಿಟ್ಟರು (ಮುಂಗಾಪು. ೨೭).
[ದಡಿ$_3$ (<ತಡಿ$_2$) + ದೋತ್ರ (<ಧೋತ್ರ)]

ದಡಿಧೋತರ 'ದಡಿದೋತ್ರ' ನೋ.

ದಡಿಯ$_1$, ಧಡಿಯ$_1$ (ನಾ). ೧. ಬಲಶಾಲಿ ; ಶಕ್ತ ; ಶೂರ : ಕೈದು ವಿಡಿಯನಾಂ ನಿನಗನಾಯುಧಂಗೆಂದು ಕೈಯ ಪಾವಂ ವಿನತಾತನಯಂ ಬಿಸುಡುವ ಪೋಲ್ ತೊಟ್ಟನೆ ಬಿಸುಟಂ ಪಿಡಿದ ಬಡಿಯನಂತಾ ದಡಿಯಂ (ಚಂದ್ರಪು. ೫-೭೭). ೨. ದಾಂಡಿಗ ; ಟೊಣಪ : ಯಾವ ಕೆಲಸಕ್ಕೂ ಬಾರದ ದಡಿಯ ಅವನು (ರೂಢಿ). **ಧಡಿಯ$_1$:** ೨. ಅವತ್ತು ಅಂಗಡಿಗೆ ಹೋಗದೆ ಮುದಿ ತಾಯಿಯನ್ನೇ ಕಳುಹಿಸಿದ ಧಡಿಯ (ಹೊಸಕ್ಷಿ. ೦೨೭). 'ದಡಿಗ' ಪರಾ. [ದೇ.॥ ತಮಿ. ಮಲ. ತಟಿಯ]

ದಡಿಯ$_2$ 'ಧಡೆ$_1$' ನೋ.

ದಡಿವಲೆ (ನಾ). ಒಂದು ಬಗೆಯ ಬಲೆ ; ದಡಿಗಳನ್ನುಳ್ಳ ಬಲೆ : ಬರಿಯಂ ಬಿಡದೆ ಹೊಡೆವ ದಡಿವಲೆಗೆ ನೊಂದೆಡೆ ಮೆಳೆಯ ಹೊಕ್ಕು ನೇಣ ಕಡಿವುತಿರೆ (ಸೋಮಚ. ೩-೦೨) ; ಸರಳ ಸೊಂಪಿನ ಸೋಹಿನಲಿ ನಿಱಿಗರುಳ ದಾವಣಿವಲೆಗಳಲಿ ಸಂಗರದ ಸುಭಟವ್ರಜದ ಮಧ್ಯದ ಗೂಡುವಲೆಗಳಲಿ ಉರುಗದೆಯ ದಡಿವಲೆಯಲಸಿ ಮುದ್ಗರದ ಸಿಡಿವಲೆಗಳಲಿ ಸಮರದೊಳರಿ ಮೃಗವ್ರಾತವನು ಭೀಮಕಿರಾತ ಕೈಕೊಂಡ (ಕುಪ್ಯಾದ್ರೋ. ೦೨-೩೦) ; ಒಡ್ಡಿದರು ದಡಿವಲೆಯ ಸಿಡಿವಲೆ ಕಡ್ಡಿವಲೆ ಕುಣಿವಲೆಯನಗಲಕೆ (ತೊರರಾ. ೩-೩-೦೨) ; ತನ್ನಾಳ್ದನಂ ಬೇಂಟೆಯೊಳ್ ಮೆಚ್ಚಿಸಿ ಬಸಂಗೆಯ್ದುಪೆನೆಂದು ದಡಿವಲೆಗಳಂ ಬಡಿಕೋಲ್ಗಳಂ ಅಂಟುಗಳೆಗಳಂ ಕಾಲ್ಗಣ್ಣಿಗಳಂ ಗಿಡುಗ ಸಾಳುವ ಜಾಯಿಲಂಗಳಂ ದೀಹದ ಮಿಗವಕ್ಕಿಗಳಂ ತರಿಸಿರಿಸಿ (ಚಿಕಪಂ. ೫-೦೬). 'ತಡಿವಲೆ' ಪರಾ. [ದಡಿ$_1$ + ಬಲೆ$_1$]

ದಡಿವಿಡಿ (ಕ್ರಿ). ಕೋಲನ್ನು ಹಿಡಿ ; ದಂಡವನ್ನು ಹಿಡಿ : ದಡಿವಿಡಿದು ಧಟ್ಟಿಸುತೆ ನಂದಿಮಾಕಾಳರತಿಬಳನಸಿತಗಳನ ಸಮ್ಮುಖದೊಳರ್ದರುನ್ನತಿ ವೆರಸಿ ಸಲುಗೆಯಿಂದೆ (ಸಿದ್ಧೇಪು. ೦-೪೩) ; ಅಧಿಕಾರದ ತಲೆಸುತ್ತು, ಕಕ್ಕಸದ ಎದೆ, ಕಿಡಿಕಣ್ಣುಗಳಿಂದ ದಡಿವಿಡಿದು ಹುಲಿಗಳಂತೆಯೇ ಬಂದು ಮದುವೆಯ ಮನೆಯನ್ನು ನುಗ್ಗಿದರು (ಕಾಲೂರ. ೦೫ ಕಥಾಸಾರ).
[ದಡಿ$_1$ + ಪಿಡಿ$_1$]

ದಡಿವೊಯಿಲ (ನಾ). ದೊಣ್ಣೆಯಿಂದ ಹೊಡೆಯುವವನು : ಕಡವೆಗ ತ್ಯಾಸ್ವಾದಿಯೆಂಬ ನರಿಮೊಲಗಳಿಗೆ ದಡಿವೊಯಿಲನೆಂಬ ಕರಡಿಯ ಗಂಡನೆಂಬ ಬಿಟ್ಟಡೆ ತೋಳ ಜಜ್ಜಾರನೆಂಬ ನರಿದಿನಿಹಿಯೆಂದೆಂಬ ಕುನ್ನಿಗಳನಾಯ್ದು ಗಡಣದಿಂ ಬೇಡವಡೆಯೊಡೆಯರೆಲ್ಲರು ನೆರೆದು (ಹಡಕಾ. ೫-೭) ; "ಕೋಲಿನ ಏಟು ; ದೊಣ್ಣೆಯ ಪೆಟ್ಟು" (ಹಡಕಾ. ಕೋಶ).
[ದಡಿ$_1$ + ಪೊಯಿಲ್ (<ಪೊಯ್ಲು) + – ಅ$_7$]

ದಡಿಸೀರೆ (ನಾ). ಅಂಚಿನ ಸೀರೆ : ದಡಿಸೀರೆ ದುಡಿಸೀರೆ ಪೊಸಸೀರೆಗಳನುಟ್ಟು ನಡು ಕನಕರುಚಿ ಪೋಲ್ವ ಕುಬುಸಗಳನುರೆ ತೊಟ್ಟು (ಸಿದ್ಧಕಾ. ೮-೦೨) ; ರಂಗೀಲಿ ಉಟ್ಟೇರಿ ರೇಸ್ಮಿ ದಡಿಸೀರೆ ಮತ್ತೆ ಹಂಗನೂಲಿನ ಪರವಿ ಮರತೆವ್ವ ನಾರಿ (ಶರೀಫ. ೨೦-೩). [ದಡಿ$_2$ (<ತಡಿ$_2$) + ಸೀರೆ$_2$]

ದಡುಂ (ನಾ). ಒಂದು ಅನುಕರಣ ಶಬ್ದ : (ಕ).

ದಡುಕಿಸು (ಕ್ರಿ). (?) : ಕಡಿಯಲು ಖಡ್ಗದಿ ತಲೆಯನು ಮಡದಿಯ ಶಿರ ತಾಗಿದಾಗ್ಯು ಛೇದಿಸದಿರಲಾ ಪೊಡವಿಪ ಚಿಂತಿಸಿ ಮನದೊಳ್ ದಡುಕಿಸಿ ತಾ ಪುನಹ ಕಡಿಯೆ ಸುರಗಣ ಮೆಚ್ಚಲ್ (ಹಮಚ. ೨೦೩).
[? + – ಇಸು$_3$]

ದಡೂತಿ 'ಧಡೂತಿ' ನೋ.

ದಡೆ$_1$ 'ದಡಿ$_1$' ನೋ.

ದಡೆ$_2$, ದಡ$_2$ (ನಾ). ತೂಕಮಾಡುವಾಗ ತಕ್ಕಡಿಯಲ್ಲಿ ಒಂದು ಕಡೆ ಪಾತ್ರೆ ಮೊದಲಾದುವನ್ನು ಇಟ್ಟು, ಅದರ ತೂಕಕ್ಕೆ ಸರಿಯಾಗಿ ಮತ್ತೊಂದು ಕಡೆ ಇಡುವ ಬಟ್ಟು, ಕಲ್ಲು ಮುಂತಾದ ವಸ್ತು ; ಪೇರು ; ಕಾಣಿ. 'ದಡೆಕಟ್ಟು' ಪರಾ. ದಡ$_2$. 'ದಡಕಟ್ಟು' ಪರಾ.
[ದೇ.॥ ತಮಿ. ತಟೈಯ ; ತೆಲು. ದಡ]

ದಡೆ$_3$ 'ಧಡೆ$_1$' ನೋ.

ದಡೆಕಟ್ಟು, ದಡಕಟ್ಟು (ಕ್ರಿ). ತಕ್ಕಡಿಯಲ್ಲಿ ಪಾತ್ರೆ ಮೊದಲಾದುವುಗಳ ತೂಕವನ್ನು ಸರಿದೂಗಿಸುವಾಗ ಮತ್ತೊಂದು ಕಡೆಗೆ ಬಟ್ಟು, ಕಲ್ಲು ಮುಂತಾದ ಸಾಮಗ್ರಿಯನ್ನು ಹಾಕಿ ತೂಕವನ್ನು ಸಮತೋಲನ ಗೊಳಿಸು; ಪೇರುಕಟ್ಟು : ದಡೆಕಟ್ಟಿ ಬೆಣ್ಣೆ ತೂಗು (ರೂಢಿ). ದಡಕಟ್ಟು: ತೂಗುವ ಮುಂಚೆ ದಡಕಟ್ಟು (ರೂಢಿ). [ದಡೆ$_2$ + ಕಟ್ಟು$_1$]

ದಡೆಮಾರು (ನಾ). (?) : ಆ ಮೇಳಣ ದಡೆಮಾರುಂಗಳಲ್ಲಿ ಮುಡಿ ೪ (ಇಆ. V, ೪೨-೩೬ ; 1587). [?]

ದಡೆಯ 'ಧಡೆ$_1$' ನೋ.

ದಡ್ಡ$_1$ (ನಾ). ಹೊಂದಿಕೆ ; ಜೋಡಣೆ ; ಸೇರಿಕೆ ; ಒತ್ತಾಗಿರುವಿಕೆ : "ಗಾಢದೊಳೆ ದಡ್ಡಂ" (ಕರ್ಣಾನಿ. ೬೦). 'ದಡ್ಡಕ್ಕರ' ಪರಾ.
[ದೇ.॥ ತೆಲು. ಜಡ್ಡ]

ದಡ್ಡ$_2$, ಧಡ್ಡ (ನಾ). ೧. ತಿಳಿಗೇಡಿ ; ಮೂರ್ಖ ; ಅಜ್ಞಾನಿ : ಅನುಸರಣೆಯಿಂದ ದಡ್ಡರೂ ದೊಡ್ಡವರಾಗಬಹುದೆ ? (ಕಭವಿ. I, ೪೦) ; ನಾ ಬಲು ದಡ್ಡ (ನನ್ನಜೊ. ೩೨) ; ದಡ್ಡನಿಗೆ ದೊಣ್ಣೆಪೆಟ್ಟು, ಜಾಣನಿಗೆ ಮಾತಿನ ಪೆಟ್ಟು (ಗಾದೆ). (ಗು). ೨. ತಿಳಿಗೇಡಿಯಾದ ; ಮೂರ್ಖ

ತನದ ; ಬುದ್ಧಿಯಿಲ್ಲದ : ಅಡ್ಡಬಿದ್ದು ಶಿಷ್ಯನ ಮಾಡಿಕೊಂಬ ದಡ್ಡ ಪ್ರಾಣಿಗಳನೇನೆಂಬೆನಯ್ಯ (ವಚಸಂ. ೧೨೮-೦೦). ಧಡ್ಡ : ೧. ನಮಗ ಧಡ್ಡರು ಅಂತ ಬಯ್ಯೋದನ್ನ ಬಿಟ್ಟು,ನಮ್ಮ ಊರವರು ಅಂತ ತಿಳಿಸಿಕೊಡು (ಕಮ್ಮಟ. ೫೭); ಈಗೇನು ಹೊತ್ತಿಲ್ಲದ ಹೊತ್ತಿನ್ಯಾಗ ಬಿರಡಿ ಹಚ್ಚಿ ಕೊಡತಾರೊ ಧಡ್ಡ ಪೋಡಿ (ವೈನಿ. ೨೬).

ದಡ್ಡ ದಾವೋದರ = ಹೆಡ್ಡನಾದವನು ಎಂಬರ್ಥದಲ್ಲಿ ಬಳಸುವ ಒಂದು ಮಾತು : ಅವನೊಬ್ಬ ದಡ್ಡ ದಾವೋದರ (ರೂಢಿ).

[ದೇ.॥ ತುಳು. ದಡ್ಡೆ ; ಕೊಡ. ದಡ್ಡೇ]

ದಡ್ಡ₃ 'ದಡ್ಡಸ' ನೋ.

ದಡ್ಡಕ್ಕರ (ನಾ). ಹೊಂದಿಕೊಂಡಿರುವ ಅಕ್ಷರ; ಒತ್ತಕ್ಷರ; ದ್ವಿತ್ವಾಕ್ಷರ; ಸಂಯುಕ್ತಾಕ್ಷರ : "ದ್ವಿತ್ವಾಕ್ಷರಮದು ದಡ್ಡಕ್ಕರಂ" (ಚತುನಿ. ೨೪) ; ಬಿಂದು ವಿಸರ್ಗಂ ವ್ಯಂಜನವೊಂದಿದ ದಡ್ಡಕ್ಕರಂ ಪದಾಂತ್ಯಂ ದೀರ್ಘಂ ಬಂದೊಡಱಿ ವನಜಮುಖಿ ಗುರುವೆಂದುಂ (ಛಂದೋಂಬು. ೦-೩೫) : ಪಿರಿಯರ್ ಸಲಿಪರ್ ದಡ್ಡಕ್ಕರದ ಱಟಕ್ಕೈದೆ ರೇಫೆವೆರಸಿದ ದಡ್ಡಕ್ಕರಮಂ ಱಟನಾಗದನುಚ್ಚರಿಸಲ್ಕಾಗಿರ್ದ ತೆಱದಿನಂತದು ಶುದ್ಧಂ (ಶಮದ. ೨೪) ; ಕಥೆಯನಾಲಿಸಿ ನವರಸಾಂಬುಧಿಯೊಳಾಳದೀ ಕಥೆಯ ನಿಂದಿಸುವರ್ ತಕಾರ ದಡ್ಡಕ್ಕರದ ಕಥೆಗಳಲ್ಲದೆ ಮನುಜರಲ್ಲವದಱಿಂ ಭಕ್ತರೀ ಕಥೆಯ ಕೇಳ್ವುದೊಲಿದು (ಜಿಬಪು. ೦-೩೦). 'ಒತ್ತಕ್ಕರ' ಪರಾ. [ದಡ್ಡ₁ + ಅಕ್ಕರ₂]

ದಡ್ಡತನ (ನಾ). ತಿಳಿಗೇಡಿತನ; ಅಜ್ಞಾನ; ಮಂಕುತನ: ದಡ್ಡತನದಿ ಹೀಗೆ ಹೆಡ್ಡೆಯಾಗಿರುವಂತ ಮಡ್ಡಿಯಾದರೆ ನಿನ್ನ ನೆನೆಯೆ (ಕಪೋತ. ೦೪-೫೦); ನಾವು ಮೌನದಿಂದಿದ್ದರೆ, ನಮ್ಮ ದಡ್ಡತನವು ಒಂದು ವೇಳೆ ಜನರಲ್ಲಿ ಪ್ರಕಟವಾಗದೆ ಇರಬಹುದು (ಮುಂಬಯಿ. ೪-೪೯) ; ತನ್ನ ಮಾತೃಭಾಷೆಯಲ್ಲಿ ಉಪನ್ಯಾಸ ಮಾಡುವದಂತೂ ಶುದ್ಧ ದಡ್ಡತನ (ಹುಚ್ಚುಹು. ೦೦೦).

[ದಡ್ಡ₂ + – ತನ]

ದಡ್ಡಸ, ದಡ್ಡ₃ (ನಾ). ಒಂದು ಬಗೆಯ ಚರ್ಮವಾದ್ಯ ; ಡೊಂಬರವನ ಡೊಳ್ಳು ; ದೊಂಬರ ಹರೆ : "ದಡ್ಡಸ = ದೊಂಬವಱಿ" (ಶಮದ. ಪರಿ. ೨) ; "ದಡ್ಡಸಮೆಂದು ಡೊಂಬವಱಿ" (ಕರ್ಣಾನಿ. ೦೮) ; ದಡ್ಡಸ ಮೆನಲ್ ಡೊಂಬರೂದುವ ವಾದ್ಯವು" (ಕಶರ. ೫೦) ; ಪೆಸರ್ ನಿನಗೆ ಕೇಳ್ ಮೊಸರ್ ಪೆಱರ್ಗೆ ನಿನ್ನ ಮೆಯ್ ಡೊಂಬ ದಡ್ಡಸಕ್ಕೆ[ಪಾಠಾಂ. ಮೆಯ್ಗೊಳ್ವ ದಡ್ಡಿಸಕ್ಕೆ] ಗುಱಿಯಪ್ಪುದೊಡ್ಡಿಱಿದು ತಿಂಬರನ್ಯಕ್ರಿಯಾವಸಾನವಿರಸಂ ಗಳಿಂದ್ರಿಯಸುಖಂಗಳಿಂತಾದ ಸಂತಸಂ ಗತವಿವೇಕ ಪೇಟ್ ನಿನಗಸಾರ ಸಂಸಾರದೊಳ್ (ಆದಿಪು. ೩-೬೦) : ನಿಮ್ಮ ದಡ್ಡಸದ ಕುಡುಹಿನಾಣತಿ ಯಂತೆಯೇ ಗಳೆಗೂಸಾಡಲುಳ್ಳ ಡೊಂಬರ ಪೋರಿಯು ನಾನು (ಮಂತ್ರಶ. ೨೯-೬). ದಡ್ಡ₃ : "ದಡ್ಡ–ಡೊಂಬರ ಡೊಳ್ಳು" (ಗಂಗಾಮ. ೦೬೩).

ದಡ್ಡಿ₁ (ನಾ). ದಡ್ಡಳಾದ ಹೆಂಗಸು ; ದಡ್ಡೆ : ಅವಳೋ ಶುದ್ಧ ದಡ್ಡಿ (ರೂಢಿ). [ದಡ್ಡ₂ + – ಇ₂]

ದಡ್ಡಿ₂, ದಟ್ಟಿ₂ (ನಾ). ೧. ತೆರೆ ; ಪರದೆ ; "ಜವನಿಕೆ" (ಚತುನಿ. ಕಿ. II, ೨೪) ; ಕೂಡೆ ಮುಸುಱುವ ಮಱಿದುಂಬಿಯ ಬಂಬಲಿಂ ಲತೆಗಳುಂ ಕರಿಯ ದಡ್ಡಿಯಂ ಕವಿದಂತೆಯುಂಮಾಗೆ (ಕಾದಂಉ. ೨೦೯); ಗುರುವ ಬಿಜಯಂಗೈಸಿ ಮನಕೆ ಪರಿತೋಷ ಪುಟ್ಟಲು ವಜ್ರಪಂಜರದ ದಡ್ಡಿಯಡ್ಡಂಬಡೆಯಲು (ಸಿದ್ಧರಾ. ೯-೫) ; ರಾಣಿಯ ವಾಸದಂದಳಕೆ ದಡ್ಡಿ ಮುಸುಂಕುವುದುಂಟು ತಮ್ಮ ನೇರಾಣಿಯ ಪೊಂಗಳಂದಳಕೆ ದಡ್ಡಿ ಮುಸುಂಕಿದನಿತ್ತೆ ಭೇದಮಾ ರಾಣಿಯ ವಾಸದೊಳ್ ತಮಗೆನಿಪ್ಪ ವಿಳಾಸಿನಿಯರ್ . . . ನಡೆ ತಂದರದೊಂದು ಲೀಲೆಯಿಂ (ಪಾರ್ಶ್ವಪು. ೮-೯೩) ; ಕವಿದ ಚಿತ್ರಾವಳಿಯ ದಡ್ಡಿಯ ವಿವಿಧ ಭಟರುಗ್ಗಡಣೆಯಲ್ಲಿ ವರೆಯುವತಿ ಬಾದಳು (ಕುಮ್ಯಾಉ. ೬-೧೮) ; ಮಣಿಮಯದ ಮುಕ್ತಾಫಲದ ಕೇವಣದ ಕನಕದ ದಡ್ಡಿ ಬಿಗಿ ದಂದಣವನೇಱಿದರರಸಿಯರು (ತೊರರಾ. ೧-೬-೫); ಅಱುವರೇ ತಾಮಸದ ದಡ್ಡಿಯ ಮಱಿಯ ಮೂರ್ಖರು (ಉತ್ತರಾ. ೦೦-೫೦) ; ಮುತ್ತಿನ ದಡ್ಡಿಯ ಪಲ್ಲಕ್ಕಿಯೇಱಿ ತಮ್ಮೊತ್ತಿನೊಳ್ಬಹ ಕೆಳದಿಯರ ಮೊತ್ತದ ದೊರೆ ಕುಮಾರಿತಿಯರಾ ಬೀದಿಯೊಳರ್ತಿಯೊಳೆಡೆಯಾಡುತಿಹರು (ಕಂನವಿ. ೭-೦೯); ಮುಗಿಲೊಡ್ಡಿನ ದಡ್ಡಿಯಂತೆ ಜವನಾಳ್ಗಳ ಜಂಗುಳಿಯಂತೆ ನಡೆವ ಕಾರೊಡಲ ಪೇರಾನೆಗಳ (ಶಾಮಾಶ್ವ. ೯೪-೯). ೨. ಮನೆಯ ಮಾಳಿಗೆ,–ಮಹಡಿ : "ದಡ್ಡಿಯೆಂದು ಮಾಳಿಗೆ"(ಕಶಸಾ.೧೬-೩೦೫);"ದಡ್ಡಿಯೆ ಮಾಳಿಗೆಯೆನಿಪುದು" (ಚತುನಿ. ೩೮); ಸೆಗಳಿಗೆ ಪೆಂಡಿರ ಮೊಲೆ ಕೆಚ್ಚಗರುವ ಪೊಗೆ ಕುಂಕಮಾಂಕ ಮೋವರಿ ನೆಲವಾಳಿಗೆ ದಡ್ಡಿಯೆಂಬಿವಮರ್ದರನಗಲ್ದುದು ಪೊಲೆಯಾಳ ತೆಱದೆ ಮುಟ್ಟದೆ ಶಿಶಿರಂ (ಪುಷ್ಪಪು. ೬-೫೩). ೩. ಮುಚ್ಚಳ್ಳ; ಮುಸುಕು ; ಆಚ್ಛಾದನ : "ದಡ್ಡಿಯೆನಲ್ಕೆ ಪಿಧಾನನಾಮದೊಳ್" (ಕರ್ಣಾನಿ. ೦೮) ; ತೆಗೆಸುವೆವು ನಾಳಿನಲಿ ನಿಮ್ಮಯ ಮೊಗದ ದುಗುಡದ ದಡ್ಡಿಯನು ಮೈದೆಗೆಯದಿರಿ ಕಲಿಯಾಗಿಯೆಂದನು ನೃಪತಿ ಸುಭಟರಿಗೆ (ಕುಮ್ಯಾಕ. ೦-೨೨) : ಪಂದಲೆಯಿಂದಮೇ ಜಗಲಿ ನಿಗ್ಗವದಿಂದಮೆ ಕಂಬಮಿಟ್ಟಿಗಾ ವಿಂದಮೆಯಡ್ಡವಾಸು ಕಣೆಯಿಂದಮೆ ಪಂಜರಗಟ್ಟು . . . ಪಲಗೆ ಯಿಂದಮೆ ದಡ್ಡಿಯುಮೆಡ್ಡಮಾಗೆ ಚೆನ್ನೊಂದಿತು ಬೀರವೆಣ್ಮದುವೆಯೊಳ್ ಪಸೆಗಿಕ್ಕಿದ ಪಂದಲಂದದಿಂ (ಚಿಕವಿ. ೨-೭೨). ೪. "ಪಂಜರ" (ಚತುನಿ. ಕಿ. I, ೦೦) : ನವನಾಳ ಬಿಂದುಗಳ ದಡ್ಡಿಯಂ ನಿಟ್ಟಿಸುತ (ಲಿಂಗಪು. ೨೨-೨೬). ದಟ್ಟಿ₂ : ೧. ಸಿದ್ಧೇಂದ್ರನಂ ತಂದು ಬಿಜಯಗೈಸಿ ಇತ್ತರದಿ ವಜ್ರಪಂಜರದ ದಟ್ಟಿಯ ಬಿಗಿದು ಸುತ್ತ ಪರಿಜನವೈದೆ ಹರಿದು ಬರುತ (ಸಿದ್ಧರಾ. ೯-೯) : ಪಸೆ ಪಂದಲ್ ದಟ್ಟಿ ಜಾಗಂ ಜಗಲಿ ಬಿಗಿದ ಭೃಂಗಾರಿ ಮೇಲ್ಕಟ್ಟು ಚಿತ್ರಂ ಪೊಸಕುಂಭಂ ಶಂಕು ನೂಲೈರಣೆ ತಳಿರ್ಗಳಸಂ . . . ಸಮಸ್ತ ಸ್ತ್ರೀಜನಂ ಕನ್ನಡಿ ಜವಳಿಗಳುದ್ವಾಹದೊಳ್ ವರ್ಣನೀಯಂ (ಸೂಕ್ತಿಸು. ೬-೦). ೩. ಗುರುವಿಗೆ ಸೂರ್ಯನ ಸುತ್ತುಬರಲು, ೧೨ ವರುಷಗಳ ಕಾಲ ಹಿಡಿಯುವುದು. ಅದರ ಸುತ್ತಲು, ಮುಗಿಲುಗಳ ದಟ್ಟಿಯ ಮೇಲೆ ದಟ್ಟಿ ಗಳಿವೆ (ಬಾಲಪ್ರ. I, ೧೮೨). 'ತಟ್ಟಿ₁' ಪರಾ.

[ದೇ.॥ ತಮಿ. ಮಲ. ತಟ್ಟಿ ; ತಟ್ಟು ; ತುಳು. ದಡೆ. ತಟ್ಟಿ ; ತೆಲು. ದಡಿ ; ಕುಯಿ. ತಟಿ]

ದಡ್ಡಿ₃ 'ದಿಡ್ಡಿ' ನೋ.

ದಡ್ಡು, ಜಡ್ಡು₂, ಜೆಡ್ಡು (ನಾ). ಮೇಲಿಂದ ಮೇಲೆ ಏಟು ಬಿದ್ದು ಘರ್ಷಣೆಯಾಗಿ ಅಥವಾ ಒತ್ತಿ ಒತ್ತಿ, ಚರ್ಮವು ಒರಟಾಗಿ ಕಾಯಿ ಗಟ್ಟುವಿಕೆ,– ಒರಟಾಗುವುದು : ಚೆಂದಳಿರ ಮೆಲ್ವಾಸಿನೊಳ್ಳಲಂಗುತಿರ್ದ ನಿನ್ನೀ ಬೆನ್ನೆಲುವಿನೊಳಾವಗಂ ಬಿಗಿದಿರ್ದ ಪಲ್ಲಣದೊತ್ತಿನಿಂದೊಗೆದ ದಡ್ಡು ಗಳುಮಂ (ಕಾದಂಉ. ೭೩೦) ; ಕಿಱಿದೆಡೆಯಯಶದ ಭವದಿಂ ಕರಟಾದ ಪೊಲಣೆಯೆ ಬುಗುಟು ನೆಗೆದೆಡೆ ಶಿರದೊಳ್ ತರದಿಂದೆ ದಡ್ಡು ನೆಗೆದಂತಿರೆ ಪಿರಿದಪಮಾನಮೆಯ್ದಿದಂ ದುಶ್ಚರಿತಂ (ಪಾರ್ಶ್ವಪು. ೪-೨೬) ; ತಿರುವೊಯ್ಲಿಂ ದಾದ ದಡ್ಡುಬ್ಬರಿಸಿ ಮೆಱಿವ ಮುಂಗೆಯ್ಗಳಿಂ ವನ್ಯಮಾತಂಗರದಾ ಘಾತಕ್ಷತಂ ಕಣ್ಗೊಳಿಪಗಲ್ದುರದಿಂ ಕಾಳಮಂ ಕಾನನಕ್ಕುಬ್ಬರಮಾಗಲ್ . . . ತಾನಿರ್ದನಾ ಬೇಡರೊಳೊರ್ವಂ (ಶಾಂತೀಶ್ವ. ೩-೭೫) ; ಬಲೆ ಕಲ್ಲಿ ಕುಬ್ಬಿಗಳ ಪೊತ್ತ ಹೆಗಲಿನ ದಡ್ಡು[ಪಾಠಾಂ. ಸೊಗಡು, ದಂಡ]ಗಳ ಪಿಡಿದ ಬಲೆ ಕೋಲ ಕುಕ್ಕುರಂಗಳ ಕೆಯ್ಯೊಳಳವಟ್ಟ ಗಿಡುಗ ಲಗುಡಗಳೆಸೆಯಲಲ್ಲಿ ವನಚರರಿಂದೆ ವನಮೆಸೆದುದು (ಜಿಬಪು. ೫೩-೨೨) ; ನಮ್ಮ ಕಾಲಿಗೆ ಅಥವಾ ಇನ್ನಾವುದಾದರೂ ಭಾಗಕ್ಕೆ ಮೇಲೆ ಮೇಲೆ ಕೆಲಸ ಬಿದ್ದು ಅಲ್ಲಿ 'ದಡ್ಡು' ಆಗಿರುತ್ತದೆ (ಪರಿನ. ೨೬). ಜಡ್ಡು₂ : ಭಕ್ತರಂ ಬಿಡದಱಿ ಜಡ್ಡಾದವೀ [ಪಾಠಾಂ. ಕಾಯ್ದುಟ್ಟಿದುವು] ಪದಂ ಭಕ್ತರ್ಗೆಯಿತ್ತಿತ್ತು ನಿಂದುದೆಮ್ಮಯ ಪದಂ (ಅನೀರ ದೇ. ೩೮-೨೫) : ದೊಡ್ಡಮಾರ್ಗಂ=ಆನೆ ಕುದುರೆಗಳೊಳಾದ

ಕಿಱುದೊಡೆಯ ಜಡ್ಡು[ಪಾಠಾಂ. ಜಿಡ್ಡು, ದಡ್ಡು] (ಶಮದ ಪರಿ. ೨). **ಜೆಡ್ಡು** : 'ಜೆಡ್ಡುಗಟ್ಟು' ಪರಾ. [ದೇ.॥ ತುಳು. ದಡ್ಡ್, ಜಡ್ಡ್]

ದಡ್ಡುಗಟ್ಟು, ಜಡ್ಡುಕಟ್ಟು, ಜಡ್ಡುಗಟ್ಟು, ಜೆಡ್ಡುಗಟ್ಟು (ಕ್ರಿ). (ಚರ್ಮ) ಮೃದುತ್ವವನ್ನು ಕಳೆದುಕೊಳ್ಳು; ಒರಟಾಗು; ಜಡವಾಗು; ಕಾಯಿಗಟ್ಟು : ಕರಿಗೊಱಡನುಡ.ವಡರ್ದವೆನಿಪ ಸೆರೆಗಾಲ್ಗಳಿಂ ಬಿಡದೆ ಪೊಡೆವಡೆ ದಡ್ಡುಗಟ್ಟಿದ ನೊಸಲ್ಗಳಿ (ಕಾದಂಉ. ೨೭೦). **ಜಡ್ಡುಕಟ್ಟು** : ಭೀಮಸೇನನು ಊದಿ ಜಡ್ಡುಕಟ್ಟಿದ್ದ ಅವಳ ಕೈಗಳನ್ನು ತನ್ನ ಕೆನ್ನೆಗಳ ಮೇಲಿಟ್ಟುಕೊಂಡು, ಮಹಾವೀರನಾದರೂ ಗೊಳೋ ಎಂದು ಅತ್ತು ಬಿಟ್ಟನು (ವಚಭಾ. ೧೯೪); ರಂಪ, ರಗಳೆಗಳಲ್ಲಿ ತಪ್ಪನ ಒಳಜೀವನ ಮೊದಲು ತನ್ನ ಸೂಕ್ಷ್ಮತೆಯನ್ನು ಕಳೆದುಕೊಂಡು ಒರಟಾಗುತ್ತದೆ, ಜಡ್ಡು ಕಟ್ಟುತ್ತದೆ (ಹೊಸಕ್ಷಿ. ೨೩೬). **ಜಡ್ಡುಗಟ್ಟು** : ಕೆನ್ನೆಗೆ ಹೊಡಕೊಂಡು ಕೈ ಕೆನ್ನೆ ಎಲ್ಲಾ ಜಡ್ಡುಗಟ್ಟಿರಬೇಕು ಪಾಪ (ಮರಳಿ. ೫); ದುಡಿದುಡಿದು ಮೈ ಜಡ್ಡುಗಟ್ಟಿಕೊಂಡಿದ್ದ ರೈತರಂತೆ ಅವನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಅತ್ಯಂತ ತ್ವರಿತವಾಗಿ ಮಾಡುತ್ತಿದ್ದನು (ಪುನರು. ೫೨೯). **ಜೆಡ್ಡುಗಟ್ಟು** : ಯಾಕನು ಗಾಂಡೀವದ ಹೆದೆಯ ಪೆಟ್ಟುಗಳಿಂದ ಎರಡು ಪಾರ್ಶ್ವಗಳಲ್ಲಿಯೂ ಎತ್ತಿನ ಹೆಗಲೋಪಾದಿಯಲ್ಲಿ ಜೆಡ್ಡುಗಟ್ಟಿ . . . ಅಂಥಾ ಅರ್ಜುನನು (ಕೃಪಾವಿ. ೪). [ದಡ್ಡು + ಕಟ್ಟು$_1$]

ದಡ್ಡುಗೈ (ನಾ). ಜಡ್ಡುಗಟ್ಟಿರುವ ಕೈ: ಅಲ್ಲೊಂದು ವಿಲಕ್ಷಣ ರೀತಿಯುಂಟು. ಅದೇನೆಂದರೆ ದಡ್ಡುಗೈಯವರು ಮಾತ್ರ ಪಂಕ್ತಿಗೆ ಕೂತು ಊಟಮಾಡ ಬಹುದು (ಪವನ. ೫೩). [ದಡ್ಡು + ಕೈ$_2$ (< ಕೆಯ್$_2$)]

ದಡ್ಡುಬೀಳು 'ದಡ್ಡುವೀಟ್' ನೋ.

ದಡ್ಡುವೀಟ್, ದಡ್ಡುಬೀಳು (ಕ್ರಿ). ಜಡ್ಡುಗಟ್ಟು; ಒರಟಾಗು; ಸೂಕ್ಷ್ಮತೆಯನ್ನು ಕಳೆದುಕೊಳ್ಳು: ಕಣಕಲ್ಲಂ ತಾಗಿದಂತಾಗೆ ಕೊಂಡಸಿಯಂಬೊಂದನೆ ದಡ್ಡುವಿರ್ದ ಹೃದಯಂ ಜಾಳಾಂದರಂಬೋಪಿನಂಬೆಸೆದೆಚ್ಚಂ ಕಡುದೇಸಿ ವೆಂಡಿರನದೇಂ ಕಾಮಂ ಛಲಗ್ರಾಹಿಯೋ (ಅರ್ಧನೇ. ೪-೧೪೬); ಕಸಕಿಲ್ಗೆಯ್ಮೆಯನೆಸಗುವ ಮಸಕದ ಕಡುದಡ್ಡುವಿಟ್ಟ ಪಡಿಗದ ಪಟನೀರ್ಪಸೆ ಯಾಜದ ಪಾಟ್ಗೈಯಿಂದ ಸತಿಯರಿದೆ ಪಿಡಿವರಯ್ಯೊ ಪೊಸಮಡಿಮೆಯ್ಯಂ (ಜಿಕವಿ. ೬-೦೨೦). **ದಡ್ಡುಬೀಳು** : ಕೆಲವು ತಾಸುಗಳ ದುರ್ಧರವಾದ ದುಃಖಾನುಭವದಿಂದ ದಡ್ಡುಬಿದ್ದು, ಅದು ಯಾತಕ್ಕೂ ಹಣಿಯದಂತಾಗಿದೆ (ಪದ್ಮನ. ೨೦); ದಿನದ ಅವನ ಮಾತು ಕೇಳಿಕೇಳಿ ಅವರಿಗೆ ದಡ್ಡು ಬಿದ್ದಂತಾಗಿತ್ತು (ಸಮಜೀ. ೧೩೨೮). [ದಡ್ಡು + ಬೀಟ್$_1$]

ದಡ್ಡೆ$_1$ (ನಾ). ದಡ್ಡ ಹೆಂಗಸು: ಯಾಕಮ್ಮಾ ಹೀಗೆ ದಡ್ಡೆಯಾಗಿಬಿಟ್ಟೆ (ಪಠಾಕ್ಷಿ. ೦೦೨). [ದಡ್ಡ$_2$ + – ಎ$_2$]

ದಡ್ಡೆ$_2$ (ನಾ). ಪ್ರಾಯದ ಹಂದಿ; ಬಲಿತ ಹಂದಿ (?): ತನ್ನ ಪ್ರಾಯದ ಮದದಿಂದ ಸಣ್ಣಮರಿಗಳೆನ್ನದೆ ಆಗ ತಾನೆ ಮರಿಹಾಕಿದ್ದವೆನ್ನದೆ ಗಬ್ಬದ ದಡ್ಡೆಗಳೆನ್ನದೆ (ಮಲೆಮ. ೦೦೩). [?]

ದಡ್ರಂಚೆ 'ದಂಡುಱುಂಬೆ' ನೋ.

ದಡ್ರಿಂಚ (ನಾ). ಜಾರ; ನೀತಿಬಾಹಿರ; ವಿಷಯಲಂಪಟ: ಕ್ರೂರಫಣಿಪಂ ತಲ್ಪಮಧಮಮಾಂಸಾದನ ಮಹೋರಗಾರಿಯೆ ವಾಹನಂ ಸಂಚಲೆ ಸ್ವೈರ ಚಾರಿಣಿಯೆ ನಿಜರಾಣಿ ನಾಣ್ಗೆಟ್ಟು ದಡ್ರಿಂಚನಾಗಿ ಗೋಪಿಯರ ನೆರದು (ಕೊಟ್ಟೂಬ. ೩-೩೨). 'ದಂಡುಱುಂಬೆ' ಪರಾ. [?]

ದಡ್ರುಂಚೆ 'ದಂಡುಱುಂಬೆ' ನೋ.

ದಢಕ್ (ನಾ). ಒಂದು ಅನುಕರಣ ಶಬ್ದ. 'ದಢಕ್ಕನೆ' ಪರಾ.

ದಢಕ್ಕನೆ (ಅ). ಇದ್ದಕ್ಕಿದ್ದದಂತೆ; ಅನಿರೀಕ್ಷಿತವಾಗಿ: ಢಕ್ಕಾನಿನಾದದಿಂ ಢಾಳಢವಳಂದ್ರ ಢಕ್ಕೆ ತನ್ನೊಡನೆ ಮಾಱಾಂತ ಢಕ್ಕಾದಿಯಾದ ಮೂಢರ್ಕಳ ಖಳರ ದಢಕ್ಕನಳಿದ ಹರಿ ಜಯತು (ಶತಸಾಂ. ೭೦-೫೬). [ದಢಕ್+ – ಅನೆ$_1$]

ದಢೀರ್ (ನಾ). ಒಂದು ಅನುಕರಣ ಶಬ್ದ : ಅಲೆಯು ಬಂದು ದೊರೆಯ ಪಾದಕ್ಕೆ ದಢೀರೆಂದು ಬಡಿದು, ಬಟ್ಟೆಯನ್ನು ಒದ್ದೆಮಾಡಿ ಹಿಂದಕ್ಕೆ ಹೋಯಿತು (ನೀತಿಚಿಂ. XI, ೨೫).

ದಣದಣ, ದಂದಣ, ದಂದಳ, ದಾಂದಣ (ನಾ). ೧. ಒಂದು ಅನುಕರಣ ಶಬ್ದ : ಕಾನನವೆಲ್ಲ ದಣದಣವೆಂದು ಪ್ರತಿಧ್ವನಿಗೊಡಹತ್ತಿತು (ಮುಂಬಯಿ. ೫-೩೦೩). **ದಂದಣ** : ೧. ದಿಂದಿಮಿ ದಂದಣ ತೊದಿಗಿದಿಮಿಕುದಿಮ್ಮೆಂದು ನಾನಾ ವಿಧದಲ್ಲಿ ವೃಂದಾರಕವೃಂದ ಬಾಜಿಸುತಿಹ ಸುರದುಂದುಭಿರವವ ಹಾಡಿದರು (ಭರತ. ೦-೯೫). **ದಂದಳ** : ೨. ಗಲಾಟೆ; ಗೊಂದಲ : ತುಂಬಿದ ಮನೆಯ ಹೊಕ್ಕಡೆ ದಂದಳ[ಪಾಠಾಂ. ದ್ವಂದ್ವ]ವಾಯಿತ್ತು ಈ ಸಂದಳಿಗಾಱದೆ ತುಂಬಿದ ಮನೆಗೆ ಕಿಚ್ಚನಿಕ್ಕಿದಡೆ ನಿಶ್ಚಿಂತವಾಯಿತ್ತು (ಲಿಂಗವ. ೪೪-೯೯). **ದಾಂದಣ** : ೧. ಕಲ್ಪಾಂತವನದ ರವದಂತಿಂಬುವಡೆದ ತದ್ಗಂಭೀರಭೇರಿಯುರುದಾಂದಣರವಂ (ಕುಮಾಪು. ೭-೯೪).

ದಂದಣ ದತ್ತಣ ಎನ್ನು = ಬೇಡಿಕೊಳ್ಳು; ದಮ್ಮಯ್ಯಾ ಎನ್ನು : ಕೂಡಲ ಸಂಗಮ ದೇವರ ಮುಂದೆ ದಂದಣ ದತ್ತಣ ಎನ್ನಿ (ಬಸವ. ೦೭೬). ದಂದಣಾ ದಂದಣಾ ಎನ್ನು=ದಂದಣ ದತ್ತಣ ಎನ್ನು: ಎನ್ನೊಡೆಯ ಸಂಗನ ಬಸವಣ್ಣ ಪಣ್ಣಿಯ ದಂದವನಿಕ್ಕಿಕೊಟ್ಟ ಆ ದಂದುಗದಲ್ಲಿದೇನೆ ಆ ಮಾತಿಂಗೆ ದಂದಣಾ ದಂದಣಾ ಎನ್ನದೆ . . . ಚಿಣ್ಣ ಹೇಳಿದ ಮಾತು ಕೇಳಿರಣ್ಣಾ (ಸರ್ವವ. ೧೮-೯೦).

ದಣಪೆ (ನಾ). ದನಕರುಗಳು ಒಳಗೆ ಬರದಂತೆ ಬೇಲಿಗೆ ಅಳವಡಿಸಿರುವ ಬಿದಿರು ಅಥವಾ ಬೊಂಬಿನ ಚೌಕಟ್ಟು : ಬೊಮ್ಮನನ್ನು ಶಪಿಸುತ್ತ ಮನೆಯ ದಣಪೆಯನ್ನು ಸಮೀಪಿಸುವಾಗ ಮೋನಪ್ಪನಾಯ್ಕರು ಭೆಟ್ಟಿಯಾದರು (ಮೂರುದಾ. ೧೦); ತುಂಗಕ್ಕ ದಣಪೆ ದಾಟಿ ತನ್ನ ಹಿತ್ತಲನ್ನು ಸೇರಿದ್ದನ್ನು ನೋಡಿದ ಚಂದ್ರಭಾಗಕ್ಕ . . . ಗಂಡನನ್ನು ಪ್ರತಿಭಟಿಸುತ್ತ ಕೇಳಿದಳು (ಮೂರುದಾ. ೩೯); ಅವರು ಗಂಗೊಳ್ಳಿಯವರ ದಣಪೆ ತಲುಪಿದ್ದರು. ಶಿನ್ನಪ್ಪ ಮಾತು ಬೆಳೆಸುವ ಮನಸ್ಸಿಲ್ಲದವನಂತೆ ದಣಪೆ ಹೊಕ್ಕ (ಆಬೋಲೀ. ೦೫೫). [<ತಡಮೆ]

ದಣಬ 'ದಳಿಂಬ' ನೋ.

ದಣಸಿ (ನಾ). (ಕರಾ) ಒಂದು ಬಗೆಯ ಮೀನು. [?]

ದಣಾಯಕ 'ದಣ್ಣಾಯಕ' ನೋ.

ದಣಾಯಕಪಟ್ಟ (ನಾ). ಸೇನಾಪತಿಯ ಪಟ್ಟ,-ಅಧಿಕಾರ : ಮನ್ನಣೆಯೊಳುಂ ದಣಾಯಕಪಟ್ಟಮಂ ಕಟ್ಟಿಯುನ್ನತದ ಭದ್ರಗಜಮಸ್ತಕವನಡರಿಸುತ (ಪ್ರಭುಪು. ೭-೨೮). [ದಣಾಯಕ (<ದಣ್ಣಾಯಕ) + ಪಟ್ಟ$_3$]

ದಣಾಯಕಸಾಮ್ಯ (ನಾ). ದಂಡನಾಯಕನಿಗೆ ಕೊಡುವ ಸುಂಕ : ದಣಾಯಕಸಾಮ್ಯ ಸಹ ಗ ೨೪ (ಮೈಆರಿ. ೧೯೩೪, ೨೭-೦೫; 1430).

[ದಣಾಯಕ (<ದಣ್ಣಾಯಕ) + ಸಾಮ್ಯ$_1$]

ದಣಾವಟಿ. 'ದಣುವಟ್ಟಿ' ನೋ.

ದಣಿ$_1$ 'ತಣಿ$_1$' ನೋ.

ದಣಿ$_2$ 'ದನಿ$_2$' ನೋ.

ದಣಿಂಬ 'ದಳಿಂಬ' ನೋ.

ದಣಿಕೆ (ನಾ). ಆಯಾಸ; ದಣಿವು : ನನಗಂತೂ ದಣಿಕೆ ಆಗಿ ನಿದ್ದೆ ಬಂದದ (ನಡದಾ. I, ೩೫೫). [ದಣಿ$_1$ (<ತಣಿ$_1$) + – ಕೆ]

ದಣಿಬ 'ದಳಿಂಬ' ನೋ.

ದಣಿಬು 'ದಳಿಂಬ' ನೋ.

ದಣಿಬೆ (ನಾ). ಒಂದು ಬಗೆಯ ಮೃಗ (?) : ಗಿಳಿಗಳನು ನವಿಲುಗಳ ವೃಶ್ಚಿಕಗಣಗಳನು ನಂದೀಶ ತಗರಿನ ದಣಿಬೆಗಳ ವರಹುಲ್ಲೆ ಮೊದಲಾಗಿರ್ದ ಮೃಗಗಣವ (ಕೋಗಯ. ೯-೩೪) [?]

ದಣಿಯಿಸು 'ತಣಿಯಿಸು' ನೋ.

ದಣಿಯುಣ್ 'ತಣಿಯುಣ್' ನೋ.

ದಣಿವಟ್ಟೆ 'ದಣುವಟ್ಟೆ' ನೋ.

ದಣಿವಾಗು (ಕ್ರಿ). ಜಡ್ಡುಬೀಳು; ಖಾಯಿಲೆಯುಂಟಾಗು: ಅವನು ದಣಿವಾಗಿ ಬಿದ್ದಿದ್ದಾನೆ (ರೂಢಿ). [ದಣಿವು (<ತಣಿವು) + ಆಗು$_1$]

ದಣಿವಾರಿಸು, ದಣುವಾರಿಸು (ಕ್ರಿ). ದಣಿವನ್ನು ನಿವಾರಿಸು; ಆಯಾಸವನ್ನು ಪರಿಹರಿಸು: ಅವರು ಮರದ ನೆರಳಿನಲ್ಲಿ ಕುಳಿತು ದಣಿವಾರಿಸಿಕೊಂಡರು (ರೂಢಿ). **ದಣುವಾರಿಸು:** ವಿಸ್ತಾರವಾದ ಸಮುದ್ರವು ದಿಗಂತದ ವರೆಗೆ ವ್ಯಾಪಿಸಿತ್ತು. ಇದನ್ನು ನೋಡುತ್ತಾ ದಣುವಾರಿಸಲಿಕ್ಕೆ ನಿಂತಾಗ ಸೂರ್ಯನು ಇನ್ನೂ ಮೂಡಿ ಬಂದಿದ್ದಿಲ್ಲ (ನಿಷ್ಕಾಮ. ೦೪೨).

[ದಣಿವು (<ತಣಿವು) + ಆರಿಸ್ಸು$_2$ (<ಆಱಿಸು)]

ದಣಿವು 'ತಣಿವು' ನೋ.

ದಣಿವುದೋರು (ಕ್ರಿ). ಆಯಾಸವನ್ನು ತೋರ್ಪಡಿಸು; ಬಳಲಿಕೆಯನ್ನು ತೋರಿಸು: ದಣಿವುದೋರದ ಆ ಮುಖದ ಮುಗುಳುನಗೆ, ಸ್ನೇಹ ತುಂಬಿದ ಜೀಕು (ನೆಲಮು. ೭೬-೧).

[ದಣಿವು (<ತಣಿವು) + ತೋರು (<ತೋಱು)]

ದಣಿವುಹತ್ತು (ಕ್ರಿ). ಆಯಾಸಹೊಂದು; ಬಳಲು: ಯಾರ ಹತ್ತಿರವೂ ಹೆಚ್ಚಿನ ಮಾತಿಲ್ಲ – ಮಾತನಾಡಿದರೇ ದಣಿವುಹತ್ತುತ್ತಿದ್ದಂತೆ (ಮೂರುದಾ. ೨೭೩). [ದಣಿವು (<ತಣಿವು) + ಹತ್ತು$_1$ (<ಪತ್ತು$_1$)]

ದಣಿವೈದಿಸು (ಕ್ರಿ). ಬಳಲುವಂತೆ ಮಾಡು; ಆಯಾಸಪಡಿಸು: ಮೆಲ್ಲಗೆ ಬಸುಱೊಳಪ್ಪಿ ದಣಿವೈದಿ[ಪಾಠಾಂ. ತಣಿವೈದಿ,ತಣಿವೆಯಿದಿ]ಸದೆ ಮಱುಗಿ ಸಿಡಿಮಿಡಿಗೊಂಡು ಕಂಬನಿಗಳು ಒಗುವ ಕಣ್ಣಿಂ ನೋಡಿ (ಸೋಮಚ. ೧-೭೬). [ದಣಿವು (<ತಣಿವು) + ಐದಿಸು (<ಎಯ್ದಿಸು)]

ದಣಿವೈದು (ಕ್ರಿ). ಆಯಾಸಹೊಂದು; ಬಳಲು. 'ದಣಿವೈದಿಸು' ಪರಾ.

[ದಣಿವು (<ತಣಿವು) + ಐದು$_1$ (<ಎಯ್ದು)]

ದಣಿಸು 'ತಣಿಯಿಸು' ನೋ.

ದಣುಬ 'ದಳಿಂಬ' ನೋ.

ದಣುವಟ್ಟಿ, ದಣಾವಟಿ., ದಣಿವಟ್ಟೆ, ದಣುವಟ್ಟೆ, ದಣುವೊಟ್ಟೆ, ಧಣುವಟ್ಟ, ಧಣುವಟ್ಟಿ, ಧನುವಟ್ಟಿ (ನಾ). ಒಂದು ಬಗೆಯ ಕುಸ್ತಿ ವರಸೆ; ಮಲ್ಲರ ಕಾಳಗದಲ್ಲಿ ಒಂದು ವರಸೆ: ಆಂ ಪಿಡಿದುದೆ ಕತ್ತರಂ ಕರವಳಂ ಸೆರವಟ್ಟಣಿ ಹತ್ತ ಡೊಕ್ಕರಂ ಚಡಿಕೆ ತುಳಾಡಿ ಪೊಟ್ಟಮುಡುಹಂ ಮುಹಡಂ ದಣುವಟ್ಟಿ ಪಟ್ಟಿಸಂ (ಅನಂಪು. ೨-೨೭); ತಳಹತ್ತಂ ದಣು [ಪಾಠಾಂ. ಧಣು, ಧನು]ವಟ್ಟಿ ಪೊಪ್ಪರಮುರೋಬಂಧಂ ಲತಾಬಂಧ ಮುಜ್ಜ್ವಳಶಾಖಾಚರಬಂಧಮಾಯತಿಕೆಬಂಧಂ ಡೊಕ್ಕರಂ ಪಟ್ಟಿಸಂ . . . ಬಾಹುತಳಂ ಚಮತ್ಕರಿಸೆ ನಾನಾ ಕೌಶಲಂದೋಱಿದರ್ (ಶಬಶಂ. ೪-೭೫). **ದಣಾವಟ್ಟಿ:** ಎಸೆವ ಮುಹಗ್ಗಳಂ ಠಡಕಿ . . . ದಣಾವಟಿ. [ಪಾಠಾಂ. ವನ್ನಿಮುಟ್ಟಿ] ಚಟ್ಟುಸಿರಣವಟ್ಟಿ ಬಾಹುದಣೆ . . . ಸಸಿಕುವೆನಿಪ್ಪ ಜೆಟ್ಟಿಗನ ನಚ್ಚಿನ ಬಿನ್ನಣವೊಪ್ಪೆ ಕಾದಿದರ್ (ಚಂದ್ರಪು. ೫-೭೮). **ದಣಿವಟ್ಟೆ:** ಪಿರಿದು ದಣಿವಟ್ಟೆ ಪಟ್ಟಿಸ ಕರವಳಯ ಭುಜಂಗ ಬಂಧತಳ ಕೊಪ್ಪರ ಡೊಕ್ಕರ ತೋರಹಸ್ತಮೆಂಬಿವನುರುತರದಿಂ ತೋಱಿ ಬಿಡದೆ ಕಾದುತ್ತಿರ್ದರ್ (ತ್ರಿಪುವಿ. ೨೬-೦೯). **ದಣುವಟ್ಟೆ:** ಎಳೆದು ದಣುವಟ್ಟೆ[ಪಾಠಾಂ. ವೊಟ್ಟೆ] ಯಲಿ ಬೊಪ್ಪರದೊಳಗೆ ಜಾಳಿಸಿ ಚಿಮ್ಮಿ ಝುಡಿತೆಯ ಸೆಳೆದು ಮುಡುಹಿನ ಲೌಕಿ ಬಿಗಿದರು ಪಟ್ಟಮುಡುಹಿನಲಿ (ಕುಮ್ಮಾಸ. ೨-೯೮). **ದಣುವೊಟ್ಟೆ:** 'ದಣುವಟ್ಟೆ' ಉಲ್ಲೇಖಕ್ಕೆ ಕೊಟ್ಟಿರುವ ಪ್ರಯೋಗದ ಪಾಠಾಂತರವನ್ನು ನೋಡಿ. **ಧಣುವಟ್ಟ:** ಕರವಳಯ ತಳಹತ್ತ ಡೊಕ್ಕರ ಶಿರವ ಧಣು ಧಣುವಟ್ಟ ತಳಪೊಪ್ಪರ ದುವಂಗುಲ ಕಂದ ಡೊಕ್ಕರ ತೋರ ಹತ್ತದಲಿ . . . ತೋಱಿದರು ಕೌಶಲವ (ಕುಮ್ಮಾಅ. ೬-೨೯). **ಧಣುವಟ್ಟಿ:** 'ದಣುವಟ್ಟಿ' ಉಲ್ಲೇಖಕ್ಕೆ ಕೊಟ್ಟಿರುವ 'ಶಬಶಂ' ಪ್ರಯೋಗದ ಪಾಠಾಂತರವನ್ನು ನೋಡಿ. **ಧನುವಟ್ಟಿ:** 'ದಣುವಟ್ಟಿ' ಉಲ್ಲೇಖಕ್ಕೆ ಕೊಟ್ಟಿರುವ 'ಶಬಶಂ' ಪ್ರಯೋಗದ ಪಾಠಾಂತರವನ್ನು ನೋಡಿ.

[?]

ದಣುವಟ್ಟೆ 'ದಣುವಟ್ಟಿ' ನೋ.

ದಣುವಾರಿಸು 'ದಣಿವಾರಿಸು' ನೋ.

ದಣುವಿಕೆ (ನಾ). ಆಯಾಸ; ಶ್ರಮ; ದಣಿವು: ವನಧಿಯೊಳು ಸಪ್ತದ್ವೀಪದ ಮೃತ್ತಿಕೆ ಹಾಕೆ ದಣ್ಣುವಿಕ್ಕಲ್ಲದೆ ಪೂರ್ಣವಹುದೆ (ವಿದಾಕ್ಯ. ೪೮-೧೬).

[ದಣುವು (<ತಣಿವು) + – ಇಕೆ]

ದಣುವು 'ತಣಿವು' ನೋ.

ದಣುವೊಟ್ಟೆ 'ದಣುವಟ್ಟಿ' ನೋ.

ದಣ್ಣ 'ದರಣ$_1$' ನೋ.

ದಣ್ಣಾಯ (ನಾ). ಜುಲ್ಮಾನೆಯಿಂದ ಬಂದ ಹಣ,–ಆದಾಯ: ಭಂಡಿಯ ಬತ್ತದ ಸುಂಕ ಉಪ್ಪರ ನೆಲವಳಿ ಅನುಪು ಆಳು ಅರ[ಕಾ]ಣಿಕೆ ಕಡಾಯಉ ದಂಣಾಯವಾರರು ಪಂನ್ ೬ (ಸೌಇಇ. IX-11, ೪೩೮-೧೭; 1418).

[<ದಂಡಾಯ]

ದಣ್ಣಾಯಕ, ಡಣಾಯಕ, ಡಣ್ಣಾಯಕ, ದಣಾಯಕ, ದಣ್ಣಾಯ್ಕ (ನಾ). ೧. ದಂಡಿನ ಒಡೆಯ; ಸೇನಾಪತಿ; ದಂಡನಾಯಕ; ಸರದಾರ: ದಾದಿ ಸೋಮೆಯ ದಂಣಾಯಕರ ಕುಮಾರ ಬಲಪ್ಪ ದಂಣಾಯಕರ ಪ್ರಧಾನ ಕಳುವ ಚಿಕವಿಠಪ್ಪನವರ ಅಕ್ಕ (ಎಕ. X (3), ಕೋಲಾರ. ೩೨-೫; 1342); ಆರಗದ ದೇವಪದಂಣಾಯಕವೊಡೆಯರ ಮಕ್ಕಳು (ಎಕ. VII, ಶಿವಪೊ. ೧೧-೯; ಸು. 1400); ಆ ನಾಡಿನ ಒಬ್ಬ ಪಡೆವಳನು ಮಿತಪರಿವಾರನಾಗಿ ದಣ್ಣಾಯಕನನ್ನು ಎದುರುಗೊಂಡನು (ಸವತಿ. ೫೫). ೨. ಉನ್ನತ ಅಧಿಕಾರಿ; ಪ್ರಧಾನಾಧಿಕಾರಿ: ಬಲ್ಲಿದನೆ ಬಾಣಾಸುರನ ಬಾಗಿಲಂ ಕಾದೆ ಕಲ್ಯಾಣದೊಳು ಬಸವ ದಣ್ಣಾಯಕಂಗೊಲಿದೆ (ಹೆಂಗೂರ. ೯೫-೧೮); ಬಿಜ್ಜಳಂ ಕಂಡು ಕೇಳ್ದು ದಣ್ಣಾಯಕರ ಪದತಳಕ್ಕೆಱಗಿ (ಬಸರ. ೬-೮೬). **ಡಣಾಯಕ:** ೧. ಚಾಮರಾಜಂಗೆ ರಾಜ್ಯಾಭಿಷೇಕಂಗೆಯ್ದು, ತನ್ನ ಕುವರಂಗೆ ಪಡುವಣ ಡಣಾಯಕನ ಕೋಂಟೆಯಂ . . . ಇತ್ತು (ಚಿಕವಂ. ೫೨-೭); ಇವರೂ ಸಹ ನಿಮ್ಮಂತೆಯೇ ಪೂರ್ವಾಶ್ರಮದಲ್ಲಿ ಡಣಾಯಕರಾಗಿದ್ದು ಈಗ ದಾಸರಾಗಿದ್ದಾರೆ (ಹೇಮಕೂ. ೮೯); ಕೊತ್ತಳದ ಮೇಲೆ ಅರಮನೆಯ ಮನ್ನೆಯರು, ಪಸಾಯಿತರು, ಡಣಾಯಕರು . . . ನಿಂತಿದ್ದರು (ರೂಲೇಖ. ೩). **ಡಣ್ಣಾಯಕ:** ೧. ಬಾಹತ್ತರ ನಿಯೋಗಾಧಿಪತಿ ಪರಮವಿಶ್ವಾಸಿ ಬಿಲವೊಳ ಡಣ್ಣಾಯಕರ ಬವಣೆಯಲು ಕೊಮಾರನ ಬೀಡಿನ ಕೊಟ್ಟಿಗೆಯ ಮಾರೆಯನಾಯಕನ ಮಗ . . . ಕಾದಿ ಹಲರಂ ಕೊಂದು (ಮೈಆರಿ. ೦೯೩೮, ೪೦-೬; 1223). **ದಣಾಯಕ:** ೧. "ದಣಾಯಕ (ದಣ್ಣಾಯಕ) = ದಂಡನಾಯಕ" (ತದ್ಯಕೋ. ೧೮); ಮಂದಿಯನಂ ಹಿಂದಕ್ಕ ನೀಉ ಆತು ಬಂನಿಯೊಂದು ಮಂಗಪ್ಪ ದಣಾಯಕರೂ ನಿರೂಪವ ಕೊಟ್ಟು (ಕಇ. I, ೩೫-೫; 1398 ?); ಗವುರಪ್ಪದಣಾಯಕರ ಕಾಲದಲೂ (ಸೌಇಎ. ೦೯೩೨, ಉಡುಪಿ. ೨೭೦-೭; 1494); ಆ ದಣಾಯಕನ ಬಳಿಯೊಳೋಲಗಿಸುತ್ತೆ ಕುಳಿತು ಶಿವಸುಖದೊಳೊಪ್ಪಿರ್ದನಾನಂದದಿಂದೆ (ಸಿದ್ಧೇಪು. ೨೧-೭೭); ಆಯತಂ ಕರೆಯಿಸೆನೆ ತನ್ನ ದಣಾಯಕನ ಕಳುಹಿದನು ಶಂಕರದಾಸಿಯಿದ್ದೆಡೆಗೆ (ಶಂಕದಾ. ೧೦-೩೪); ಸಾಲೀಮಠಕ್ಕೆ ಯಾರೋ ದಣಾಯಕರು ಬಂದಿದಾರೆ, ದಣಾಯಕರು! (ತುಂಗಭ. ೩). ೨. ಚೆನ್ನ ಬಸವಣ್ಣಂಗೆ ಕೈಮುಗಿದು ತತ್ತ್ವಸಂಪನ್ನ ಕೇಳಿದೆ ದಣಾಯಕಬಸವ ರಾಜನೈತಂದನೆನೆ (ಚಿಬಪು. ೬-೩). **ದಣ್ಣಾಯ್ಕ:** ೧. ಶ್ರೀಮನುಮಹಾ

ಪ್ರಧಾನಂ ಮೆದಗಿದೇವದಂಣಾಯ್ಕ ಮಹಾಪ್ರಧಾನಂ ಮಾಚಯ ದಂಣ್ಣಾಯ್ಕರುಂ . . . ರಾಜ್ಯಂಗೆಯುತ್ತೆಮಿರಲು (ಎಕ. XI, ಚಿತ್ರದು. ೦-೩೦ ; 1210) ; ಬಸವೆಯ ದಂಣಾಯ್ಕರ ನಿರೂಪದಿಂ (ಮೈಅರಿ. ೧೯೨೮, ೪-೫ ; 1369) ; ಶ್ರೀಮನ್ಮಹಾಪ್ರಧಾನಂ ಇರುಗಪ್ಪದಂಣಾಯ್ಕಒಡೆಯರ ಹೆಸರ ತೂಬಿನ ಕಂಭ (ಎಕ. XVI, ಕುಡಿಗೆ. ೫೦-೨ ; 1394).

[<ಸಂ. ದಂಡನಾಯಕ]

ದಣ್ಣಾಯಕಿತ್ತಿ (ನಾ). ಸೇನಾಪತಿಯ ಹೆಂಡತಿ: ಮಾದಿಗಿದೇವದಂಣ್ಣಾಯಕರ ಅರಸಿ ಮಾಯಿದೇವಿದಂಣ್ಣಾಯಕಿತ್ತಿರ ಹೆಸರ (ಎಕ. XV, ಹೊಳಿನ. ೫೯-೫೮ ; 1315). [ದಣ್ಣಾಯಕ + – ಇತ್ತಿ]

ದಣ್ಣಾಯ್ಕ 'ದಣ್ಣಾಯಕ' ನೋ.

ದಣ್ಣಿಕ್ಕು (ಕ್ರಿ). ದಂಡನಮಸ್ಕಾರ ಹಾಕು ; ಅಡ್ಡಬೀಳು : ಶಿಂಗ್ಲಾ ಚಾರಿಯು ಉದ್ದಕ್ಕೂ ದಣ್ಣಿಕ್ಕಿ ಕ್ಷಮಿಸಬೇಕು ಸ್ವಾಮಿ . . . ಎಂದನು (ಬೈಸರ್ವ. ೭). [<ದಂಡ + ಇಕ್ಕು]

ದಣ್ಣಿರು (?) (ನಾ). (?): ಮುವತ್ತುನಾಲ್ಕು ಮುಡಿ ಅಕ್ಕಿ ಗೇಣಿಯಿಕ್ಕುವ ಬಾಳು ಆ ಬಾಳಿನ ಚತುಸ್ಸೀಮೆಯ ವಿವರ ಮೂಡಲು ದಣ್ಣಿರ ಸಾಲಿಂದಂ ಪಡುವಲು ತೆಂಕಲೂ ದಣ್ಣಿರ ಸಾಲಿಂದಂ ಬಡಗಲು . . . ಗಡಿಯಿಂದಂ (ಸೌಇಇ. IX-11, ೪೬೪-೧೨ ; 1472). [?]

ದತ್ತ (ಗು). ೧. ಕೊಟ್ಟ ; ನೀಡಿದ : ಚಕ್ರವರ್ತಿ ಯತಿರಾಜಗಣಾಗ್ರಣಿ ದತ್ತವಿತ್ತಭಾಜನ ಕವಿ . . . ಜಿನಚಂದ್ರಮುನೀಂದ್ರಂ (ಶಾಂತಿಪು. ೦-೨೬) ; ತಂದೆಗವನತನಾದಂ ಆಗಿ ದೌವಾರಿಕ ದತ್ತ ಕನಕವಿಷ್ಟರಮನಗಲೆ ನೊಂಕಿ (ಪುಷ್ಪಪು. ೪-೭೦ ವ) ; ದುಸ್ತರಜ್ಞಾನಪ್ರಪಂಚತಮಸ್ತತಿಪ್ರಹರಾರ್ಥ ದತ್ತಪ್ರಸ್ತುತಜ್ಞಾನಪ್ರತಾನ ಶ್ರೀಗುರುವೆ ಜಯತು (ಬಸಪು. ೭-೧೬). ೨. ದಾನಮಾಡಿದ. 'ದತ್ತಾಪಹಾರ' ಪರಾ.(ನಾ). ೩. ಉಪಾಯನ; ಕೊಡುಗೆ ; ಕಾಣಿಕೆ ; ದಾನ : ದತ್ತಾ ಕೊಟ್ಟು ಮತ್ತೆ ಕೇಳಿದವ ಎತ್ತಿ ಗಿಂತ ಕಡೆ (ಗಾದೆ). ೪. ಸ್ವೀಕಾರಮಾಡಿಕೊಂಡ ಮಗ ; ದತ್ತು ತೆಗೆದು ಕೊಂಡ ಮಗ ; ಔರಸನಲ್ಲದ ಪುತ್ರ : ದತ್ತನು ಮಗನಲ್ಲ ಧಾವಳಿ ಮಡಿಯಲ್ಲ ಭಟ್ಟನು ಭಟನು ತಾನಲ್ಲ (ಇಂದಾಪ. ೦೭೦-೪೨). ೫. ದತ್ತಾತ್ರೇಯ. ೬. ಕೆಲವು ಹೆಸರುಗಳ ಮುಂದೆ ಸೇರುವ ಒಂದು ಪದ. ಉದಾ. ಗುರುದತ್ತ, ಭಾನುದತ್ತ.

ದತ್ತ ವಸ್ತು = ಕೊಟ್ಟ ವಸ್ತು : ಲೇಖಕನ . . . ಕಾರ್ಯ ಪೂರ್ಣಗೊಳ್ಳುವುದಕ್ಕೆ ಮುನ್ನ ಮತ್ತೊಂದು ಅಂಶ ಬೇಕಾಗುತ್ತದೆ. ದತ್ತವಸ್ತುವನ್ನು ಕ್ರಮ, ಸಾಮರಸ್ಯ, ಸೌಂದರ್ಯ, ಪರಿಣಾಮಸಾಮರ್ಥ್ಯ ಇವುಗಳ ತತ್ತ್ವಗಳಿಗನುಗುಣವಾಗಿ ರೂಪಿಸಬೇಕಾಗುತ್ತದೆ (ಸಾಹಿಪ್ರ. ೯). ದತ್ತ ಹಾಕು = ದಾನವಾಗಿ ಬರೆದುಕೊಡು : ವಿಜಯನಗರದ ಸಾಮ್ರಾಜ್ಯ ಕಾಲದಲ್ಲಿ ಮಂತ್ರಿಗಳಾದ ಮಾಧವಾಚಾರ್ಯರು . . . 'ದತ್ತ' ಹಾಕಿ ಕೊಟ್ಟರು. ಇದು ಈಗಲೂ ವಸೂಲು ಬರುತ್ತಾ ಉಂಟು (ತುಳುನಾ. ೧೦೭). ದತ್ತಾರ್ಥಿಕಾಂಚನ=ಕೇಳಿದವರಿಗೆಲ್ಲಾ ಹಣವನ್ನು ನೀಡುವವನು: ಅರ್ಥಿಜನಕ್ಕೆ ಕಾಂಚನದಾನಮಾಡಿದವನು ; ಒಂದು ಬಿರುದು : ಕಾದಂಬಚಕ್ರಿ ಮಯೂರವರ್ಮ್ಮ . . . ಸಿಂಘಲಾಂಧನ ದತ್ತಾರ್ತ್ತಿ ಕಾಂಚನ ಸಮರದಯಕಾರಣ ಪ್ರತಾಪಮಾರ್ತ್ತಂಡ ಮಾರ್ಕೊಳುವರ ಗಂಡ ನಾಮಾದಿ ಸಮಸ್ತಪ್ರಸಸ್ತಿಸಹಿತಂ (ಸೌಇಇ. XX, ೭೬-೧೨ ; 1118).

[ಸಂ.]

ದತ್ತಕ (ನಾ). ೧. ಸ್ವೀಕೃತ ಪುತ್ರ ; ತಾಯಿ ತಂದೆಗಳು ಮಕ್ಕಳಿಲ್ಲದವರಿಗೆ ದಾನಮಾಡಿ ಕೊಟ್ಟ ಮಗ ; ದತ್ತುಪುತ್ರ ; ಔರಸಪುತ್ರನಲ್ಲದ ಮಗ : ದತ್ತಕಮಗನನ್ನು ಮಾಡಿಕೊಂಡರೆ ಏನು ತಪ್ಪು ? (ವೈದ್ಯರಾ. ೪೧). ೨. ದತ್ತುಪುತ್ರಸ್ವೀಕಾರ : ಆ ಊರ ದೇಶಪಾಂಡೆಯವರ ಮನೆಯಲ್ಲಿ ಒಂದು ದತ್ತಕವಾಯಿತು(ಮೇದಿಪು. ೦);ವಶಿಷ್ಠಸ್ಮೃತಿ . . . ಗೃಹಸ್ಥಧರ್ಮ, ಪಾಪಿಷ್ಠಳಾದ ಪತ್ನಿಯ ತ್ಯಾಗ, ಅನಧ್ಯಯನ, ದತ್ತಕ, ಸಾಕ್ಷಿ, ರಾಜಧರ್ಮ ಮತ್ತು ಪ್ರಾಯಶ್ಚಿತ್ತ ವಿಚಾರಗಳಿವೆ (ಧಾರದ. ೬೬).

ದತ್ತಕ ಮಾಡಿಕೊಳ್ಳು=ದತ್ತುಮಗನನ್ನಾಗಿ ಸ್ವೀಕರಿಸು; ಮಗ್ನನನಾಗಿ ಸ್ವೀಕರಿಸು : "ತಾವು ಚಿಕ್ಕನಹಳ್ಳಿ ಚಾಮೇಅರಸಿನವರ ೩ ವರ್ಷ ವಯಸ್ಸಿನ ಪುತ್ರರನ್ನು ದತ್ತಕ ಮಾಡಿಕೊಂಡು ಆ ಬಾಲಕರಿಗೆ ಪಟ್ಟವನ್ನು ಕೊಡಬೇಕು (ಒಡಕ. ೬೦) ; ಮುಪ್ಪು ಒತ್ತಿಬರುವ ಹೊತ್ತಿನಲ್ಲಿ, ಸದ್ಗತಿಯ ಆಶೆಯಿಂದ ಪಂತಮಾಮಾ ದತ್ತಕ ಮಾಡಿಕೊಂಡಿದ್ದರು (ದೀಪಹ. II, ೦೫೭). ದತ್ತಕರಾದವರು = ಹೆಚ್ಚು ವಿಶ್ವಾಸವುಳ್ಳವರು ; ಮಾರುಹೋದವರು : ಪರಸಂಸ್ಕೃತಿಗೆ ದತ್ತಕರಾದವರು ಹೆಚ್ಚುತ್ತ ಬಂದಹಾಗೆಲ್ಲ ಜನಾಂಗವು . . . ನಾಶವನ್ನು ಪಡೆಯುವದು (ನೀಗಟ್ಟು. ೫೩). ದತ್ತಕ ಹೋಗು = ಸ್ವೀಕೃತ ಮಗನಾಗು ; ದತ್ತುಮಗನಾಗಿ ಸ್ವೀಕರಿಸಲ್ಪಡು : ಆ ಮನೆತನಕ್ಕ ದತ್ತಕ ಹೋದೆ (ಅಶ್ವಮೇ. ೨೪). [ಸಂ.]

ದತ್ತಕನಿಷ್ಠಿಕ (ನಾ). (ಎಣಿಕೆಯಲ್ಲಿ) ಕಿರುಬೆರಳನ್ನು ಮಡಿಸಿ ಎಣಿಸಬೇಕಾದವನು ; ಮೊದಲನೆಯವನು: ಸುಕವಿಜನಗಣನೆಯೊಳ್ ದತ ಕನಿಷ್ಠಿಕನಾಗೆ ಕಾಳಿದಾಸಂ ಮೊದಲೆಂದು ಕರಂ ಬಣ್ಣಿಪರದಱಿಂದೆ ಕಾಳಿದಾಸಂಗೆ ದಾಸರೆನಿಪರ್ ಕವಿಗಳ್ (ಜಗವಿ. ೧-೯) : ಈ ನೆಲದೊಳ್ ಸಂದ ಬೀರರ ಲೆಕ್ಕಕ್ಕೆ ದತ್ತಕನಿಷ್ಠಿಕನಾಗಿ ಅಲರ್ವೊಡೆಯನಡಿಮಲರ ಬಂಡುಣಿಯೆಂಬೊಂದು ಬಿರುದಂ ತಾಳ್ದಿ (ರಾಮಾಶ್ವ. ೯೬-೮).

[ಸಂ. ದತ್ತಕನಿಷ್ಠಿಕ (ದತ್ತಾ + ಕನಿಷ್ಠಿಕಾ + –)]

ದತ್ತಕಮಗಳು (ನಾ). ಸ್ವೀಕೃತಪುತ್ರಿ ; ದತ್ತುಪುತ್ರಿ : ರುಮಾದೇವಿಯು ಸಂಜೀವಿನೀ ಸ್ಟುಡಿಯೋದ 'ದತ್ತಕಮಗಳು' ಎಂಬಂತೆ ಇದ್ದಳು (ಹೇಮಂತ. ೩೨೩). [ದತ್ತಕ + ಮಗಳು (<ಮಗಳ್)]

ದತ್ತಗೇಡಿ (ನಾ). ಅದೃಷ್ಟವಿಲ್ಲದವನು ; ನತದೃಷ್ಟ ; ಕೊಟ್ಟುದನ್ನು ಹಾಳುಮಾಡಿಕೊಳ್ಳುವವನು; ದುರ್ದೈವಿ: ದತ್ತಗೇಡಿಗೆ ಕೊಟ್ಟವರಿಲ್ಲಂತ ದೈವಾನರದು ಕಸಗೊಂಡವರಿಲ್ಲಂತ . . . ವತನದಾರ ಮನ್ಯಾಗ ಹುಟ್ಟಿ ಮಾಡೇದಾಗ ಬೆಳದಿವಿ (ಅಲ್ಪವಿ. ೧೦೮). [ದತ್ತ + ಕೇಡಿ$_1$]

ದತ್ತನಂದನ (ನಾ).=ದತ್ತಕ ೧ : ತನಗೆ ತಾನೆ ದೊರಕೊಂಡವಂ ದತ್ತನಂದನನಿವಂ ತನಗೆಂದವಂ ಮುದದೊಳೆತ್ತಿಕೊಂಡು (ಜೈಮಿಭಾ. ೨೮-೫೭).

[ದತ್ತ + ನಂದನ]

ದತ್ತಪುತ್ರ (ನಾ).=ದತ್ತಕ ೧ : ಅವಂ ನರಸಿಂಗಮೊನೆಯರ್ ಪೆತ್ತ ಮಗನಲ್ಲಂ ಕೊಂಡು ಸಾಕಿದ ದತ್ತಪುತ್ರಂ (ನಂಬಿರ. ೬-೬೯); ದತ್ತಪುತ್ರನಿಗೆ ಪಿತೃಭಕ್ತಿ ಹುಟ್ಟುವದೋ ? (ಗಾದೆ). [ದತ್ತ + ಪುತ್ರ]

ದತ್ತಮಂಡಲ (ನಾ). ಕಡಪ, ಕರ್ನೂಲು, ನೆಲ್ಲೂರು, ಬಳಾರಿ ಮತ್ತು ಅನಂತಪುರ ಎಂಬ ಐದು ಜಿಲ್ಲೆಗಳಿಂದ ಕೂಡಿದ ಪ್ರದೇಶ : ಈ ಬೃಹದ್ಭಾಣರು ಈ ಕಾಲದಲ್ಲಿ ಪಲ್ಲವರ ಸಾಮಂತರಾಗಿ ದತ್ತಮಂಡಲ (Ceded Districts) ದ ಕೆಲಭಾಗ (ಶ್ರೀಶೈಲದ ಮಗ್ಗುಲಿನ ಭಾಗ) ಗಳನ್ನು ಆಳುತ್ತಿದ್ದರು (ಕರ್ಣಾಅ. ೪). [ದತ್ತ? + ಮಂಡಲ]

ದತ್ತಯ್ಯ (ನಾ). ೧. ದತ್ತಾತ್ರೇಯ. ೨. ಇನ್ನೊಬ್ಬರ ಕರುಣೆಯನ್ನು ಯಾಚಿಸುವಾಗ ಬಳಸುವ ಪದ : ಅಂಗಲಾಚಿ ಬೇಡಿಕೊಂಡು ದತ್ತಯ್ಯ ಅಂದರೂ ಅವಳು ತಾನು ಹಿಡಿದ ಹಠವನ್ನು ಸಾಧಿಸಿಯೇ ಬಿಟ್ಟಳು (ರೂಢಿ). [ದತ್ತ + ಅಯ್ಯ$_1$]

ದತ್ತಸಂಖ್ಯೆ (ನಾ). ಕೊಟ್ಟಿರುವ ಅಂಕಿ ; ಕೊಟ್ಟ ಸಂಖ್ಯೆ : ದತ್ತಸಂಖ್ಯೆಗಳು ಅಪವರ್ತನವಾಗಿರುವ ಕನಿಷ್ಠಸಂಖ್ಯೆಗೆ ಅವುಗಳ ಲಘುತಮ ಸಾಮಾನ್ಯ ಅಪವರ್ತ್ಯ (ಲ.ಸಾ.ಅ.) ಎಂದು ಹೆಸರು (ಕವಿಕೋ. I, ೩). [ದತ್ತ + ಸಂಖ್ಯೆ]

ದತ್ತಸ್ವಾತಂತ್ರ್ಯ (ನಾ). [ದ್ವೈತ] ಭಗವಂತನಂ ಜೀವನಿಗೆ ಕೊಟ್ಟ ಆಂಶಿಕವಾದ ಸ್ವಾತಂತ್ರ್ಯ: ಪರಮಾತ್ಮನು ಜೀವನಿಗೆ ಕೊಟ್ಟ ಅಲ್ಪವಾದ ದತ್ತಸ್ವಾತಂತ್ರ್ಯದಿಂದ "ಜೀವೋಪಿಕರ್ತಾ" ಎಂದು . . . ಸೂಚಿಸುತ್ತಾ ತತ್ಸಂಬಂಧವಾದ ಕೆಲವು ತತ್ವವಿಚಾರಗಳನ್ನು ಹೇಳುತ್ತಾರೆ (ಹಸಾರ. ೧೬-೦ ಅವತಾರಿಕೆ). [ದತ್ತ + ಸ್ವಾತಂತ್ರ್ಯ]

ದತ್ತಸ್ವೀಕಾರ (ನಾ). ದತ್ತು ತೆಗೆದುಕೊಳ್ಳುವಿಕೆ; ದತ್ತುಸ್ವೀಕಾರ: ಸ್ವೀಕಾರ; ದತ್ತಸ್ವೀಕಾರ (Adoption. ಇಂಕನಿ). [ದತ್ತ + ಸ್ವೀಕಾರ]

ದತ್ತಹಸ್ತ (ನಾ). ನೀಡಿದ ಕೈ; ಹಸ್ತಾವಧಾನದ ಗೌರವ: ಬಾಜಿಸೆ ಮಂಗಳಾನಕಮನಾ ದಿವಿಜೇಂದ್ರನ ದತ್ತಹಸ್ತದೊಳ್ . . . ಮುಕ್ತಿವಧೂ ವಿವಾಹಗೇಹಾಜಿರದಂತುಟಂ ಸಿವಿಗೆಯಂ ಭುವನತ್ರಯನಾಥನೇಱಿದಂ (ಮಲ್ಲಿಪು. ೦೩-೦೭೧). [ದತ್ತ + ಹಸ್ತ]

ದತ್ತಾತ್ರೇಯ (ನಾ). ಅತ್ರಿ ಮತ್ತು ಅನುಸೂಯೆಯರ ಮಗನಾದ, ವಿಷ್ಣುವಿನ ಅಂಶವುಳ್ಳ ಒಬ್ಬ ಮುನಿ: ಸುಮೇಘಪರ್ವತದಲ್ಲಿ ಅತ್ರಿ ... ದತ್ತಾತ್ರೇಯ . . . ಉಪಮನ್ಯು ಮೊದಲಾದ ಅಷ್ಟಾಶೀತಿ ಸಹಸ್ರ ಋಷಿಗಳಿಗನಂತಾಶ್ರಯಂಗಳುಂ (ವಿವೇಕ. ೨೦೬). [ಸಂ.]

ದತ್ತಾಧಿಕಾರ (ನಾ). ಕೊಟ್ಟ ಅಧಿಕಾರ,-ಪದವಿ: ಸಂಸ್ಥೆಗಳಿಗೆ ಕೆಲವು ಗೊತ್ತಾದ ಎಲ್ಲೆಗಳೊಳಗಾಗಿ ಕಾರ್ಯಾಧಿಕಾರವನ್ನು ವಹಿಸಿಕೊಡುತ್ತದೆ. ಇಂಥ ಸಂಸ್ಥೆಗಳ ಅಧಿಕಾರವು ದತ್ತಾಧಿಕಾರ (ಡೆಲಿಗೇಟೆಡ್ ಪವರ್) (ರಾಜ್ಯಶಾ. ೩೪೮). [ದತ್ತ + ಅಧಿಕಾರ]

ದತ್ತಾನಪಾಕರ್ಮ (ನಾ). ದಾನಮಾಡಿರುವುದನ್ನು ಪೂರ್ತಿ ಕೊಡದಿರುವಿಕೆ ಅಥವಾ ದಾನಮಾಡಿದುದನ್ನು ಹಿಂದಕ್ಕೆ ತೆಗೆದುಕೊಳ್ಳುವುದು: ವ್ಯವಹಾರವು (೧) ಋಣಾದಾನ (Debt) . . . (೫) ದತ್ತಾನಪಾಕರ್ಮ (Noncompletion of gift by delivery). . . (೧೮) ದ್ಯೂತಸಮಾಹ್ವಯ (Gambling)-ಎಂದು ಹದಿನೆಂಟು ವಿಧವಾಗಿ ವಿಭಜಿಸಲ್ಪಟ್ಟಿತ್ತು (ಭಾರದ. ೫೬). [ಸಂ. ದತ್ತಾನಪಾಕರ್ಮನ್]

ದತ್ತಾಪಹಾರ (ನಾ). ದಾನವಾಗಿ ಕೊಟ್ಟ ವಸ್ತುವನ್ನು ಕಸಿದುಕೊಳ್ಳುವುದು; ದಾನ ಮಾಡಿದ ವಸ್ತುವನ್ನು ಅಪಹರಿಸುವುದು. [ದತ್ತ + ಅಪಹಾರ]

ದತ್ತಾಪಹಾರಕ (ನಾ). ದಾನ ಮಾಡಿದ ವಸ್ತುವನ್ನು ಕಸಿದುಕೊಳ್ಳುವವನು: ಪರಧನಬಾಧಕನ ದತ್ತಾಪಹಾರಕನ ಜ್ವಲನದನ ಶಿಶುಘಾತಕನ ಪರಿದಳಿತಧರ್ಮನ ಗತಿಗಳಲಿ ತಾನಿಳಿವೆನಿಂದೇ ಕೊಲ್ಲದಿರ್ದರೆ ಸೂತನಂದನನ (ಕುಷ್ಯಾಕ. ೦೮-೭). [ಸಂ.]

ದತ್ತಾಪ್ರದಾನಿಕ (ನಾ). = ದತ್ತಾನಪಾಕರ್ಮ: ವ್ಯವಹಾರಕಾಂಡದಲ್ಲಿ-ಸಾಧಾರಣವ್ಯವಹಾರಮಾತೃಕಾ . . . ದತ್ತಾಪ್ರದಾನಿಕ, ಕ್ರೀತಾನುಶಯ . . . ಸ್ತ್ರೀಸಂಗ್ರಹಣ ಪ್ರಕೀರ್ಣ ಎಂಬ ೨೫ ಪ್ರಕರಣಗಳಿವೆ (ಭಾರದ. ೬೨). [ಸಂ.]

ದತ್ತಾವಧಾನ (ನಾ). ಗಮನ ಕೊಡುವವನು; ಮನಸ್ಸಿಡುವವನು: ಎಂತು ಬೆಸಗೊಂಡೆ ಬೆಸಗೊಂಡಂತಿರೆ ದತ್ತಾವಧಾನನಾಗು ಜಯಶ್ರೀಕಾಂತೆಯುಮಂ ಪರಮಶ್ರೀಕಾಂತೆಯುಮಂ ನಿನಗೆ ಕುಡುವುದೀ ಸತ್ಕಥನಂ (ಯಶೋಚ. ೧-೭೦). [ದತ್ತ + ಅವಧಾನ]

ದತ್ತಾಶಿಕ್ಷ (ನಾ). [ಗಣಿತ] ಕೂಡುವಿಕೆ; ಕೂಡುವುದು: ಯುತಂ, ಯುಕ್ತಂ, ಮಿಶ್ರಂ, ಸಮ್ಮಿಶ್ರಂ, ಸಂಯೋಗಂ, ದತ್ತಾಶಿಕ್ಷಂ . . . ಇಂತಿನಿತುಂ ಕೂಡೂದಕ್ಕೆ ಹೆಸರು (ವ್ಯವಹಾ. ೦೦-೧೯) [?]

ದತ್ತಾಳು (ನಾ). ನಿಯೋಜಿತನಾದ ಆಳು,-ಯೋಧ (?): ಅಜಂಣ ಸಾಹಣಿಯ ದತ್ತಾಳುಗಳ ಬಳಿಯ (ಸೌಇಎ. ೦೯೩೨, ಉಡುಪಿ. ೨೬೨-೯; 1334). [?]

ದತ್ತಿ (ನಾ). ೧. ದಾನವಾಗಿ ಕೊಟ್ಟ ಭೂಮಿ: ಯಾ(?) ದತ್ತಿಯಾನ್ ಕಿಡಿಪೊನ್ . . . ಸನ್ದೊನಕ್ಕುಮ್ (ಇಆ. VIII, ೨೮೫-೫; 706); ಮಹಾರಾಜಾಧಿರಾಜಪರಮೇಶ್ವರಭಟಾರರಾ ಕೊಟ್ಟ ದತ್ತಿ (ಇಆ. X, ೧೬೫-೩; 733); ಪದಿನ್ಕುಳಂ ಪಾಟುಂ ಇದಂ ಪಡೆದೋರೀಶ್ವರದಾಸರ್ ಪರಮೇಸ್ವರ ದತ್ತಿ (ಎಕ. X (S), ಚಿಕ್ಕಬ. ೦೦೬-೭೫; 850); ರಾಮಾದ್ಯನೇಕ ರಾಜದತ್ತಿ [ಪಾಕಾಂ. ದತ್ತಂ] ಗಳಪ್ಪನೇಕ ಭೂದೇವಭೋಗಾಗ್ರಹಾರಂಗಳನಾಗ್ರಹದಿಂದಟಿದು . . . ನಿರವಶೇಷದಿಂ ಕಿಡಿಸಿಯುಂ (ಪಂಚತಂ. ೨೮-೮); ಲಾಕುಳಾಗಮ ಸಮೆಯಸಮುದ್ಧರಣರಪ್ಪ ಪದ್ಮರಾಸಿ ಪಂಡಿತರ್ಗ್ಗೆ ಕಾಲಂ ಕರ್ಚ್ಚಿ ಧಾರಾಪೂರ್ವಕಂ ಮಾಡಿ ಬಿಟ್ಟ ದತ್ತಿ (ಎಕ. XVI, ಚಿಕ್ಕನಾ. ೫೪-೮; 1292); ಸ್ವಯಂಬುವದೇವರ್ಗ್ಗೆ ದತ್ತಿದೆಗಾಗಂಡ ಹಡುವಕ್ಕೆ ಬಿ ತೊಗೆ (ಮೈಆರಿ. ೦೯೪೬, ೧೦-೧೩; ಸು. 15ನೆಯ ಶತ). ೨. ದಾನವಾಗಿ ಕೊಟ್ಟ ಹಣ; ಕೊಡುಗೆ: ಆರನೆಯ ಸಂಪುಟದ ಮುದ್ರಣಕ್ಕಾಗಿ ಬಂದ ೫,೦೦೦ ಪೌಂಡುಗಳ ದತ್ತಿಯೊಂದನ್ನುಳಿದು ಮಿಕ್ಕ ಬಂಡವಾಳವನ್ನೆಲ್ಲಾ ಒದಗಿಸಿ, ಈ ಮಹಾಗ್ರಂಥದ ಮುದ್ರಣವನ್ನೂ ಪ್ರಕಾಶನವನ್ನೂ ಕೈಕೊಂಡ ಸಾಹಸಿಗಳು ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ಸಿನವರು (ಸಮಾಲೋ. ೨೬೬). ೩. [ಜೈನ] ಆರ್ಯಕರ್ಮವಾದ ಇಜ್ಯೆ, ವಾರ್ತೆ, ದತ್ತಿ, ಸ್ವಾಧ್ಯಾಯ, ಸಂಯಮ, ತಪ ಎಂಬ ಷಟ್ಕರ್ಮಗಳಲ್ಲಿ ಒಂದು; ತಂದೆ ತನ್ನ ಸಂಪತ್ತನ್ನೆಲ್ಲ ಮಗನಿಗೆ ಒಪ್ಪಿಸುವುದು: ಇಜ್ಯೆಯುಂ ವಾರ್ತೆಯುಂ ದತ್ತಿಯುಂ . . ಎಂಬೀ ಆಚಾರ್ಯಷಟ್ಕರ್ಮಂಗಳುಂ ಶ್ರಾವಕಜನಕ್ಕೆ ಕುಲಧರ್ಮಂಗಳ್ (ಜಾವುಂಪು. ೨೨೮); ನಿಜಾತ್ಮಜಂಗೆ ಸಮಸ್ತ ಗೃಹಪರಿಚ್ಛೇದ ಮನೊಪ್ಪಿಸುವ ಸಕಳದತ್ತಿಯುಮನುಳ್ಳದು ದತ್ತಿಯೆಂಬ ಮೂಱನೆ ಯಾರ್ಯಕರ್ಮಂ (ಸುಕುಮಾ. ೬-೨೫ ವ).

ದತ್ತಿ ಉಪನ್ಯಾಸ = ಯಾವುದಾದರೂ ವಿಷಯದಲ್ಲಿ ಆಸಕ್ತಿಯುಳ್ಳವರು ತಮ್ಮ ಅಥವಾ ತಮ್ಮ ಪ್ರಿಯರಾದವರ ಹೆಸರನ್ನು ಶಾಶ್ವತಗೊಳಿಸಲು ಹಣವನ್ನು ಕೊಡುಗೆಯಾಗಿ ಕೊಟ್ಟು ಅದರ ಬಡ್ಡಿಯ ಸಹಾಯದಿಂದ ಏರ್ಪಡಿಸುವ ಭಾಷಣ,-ಉಪನ್ಯಾಸ: ಕನ್ನಡ ಸಾಹಿತ್ಯಪರಿಷತ್ತಿನಲ್ಲಿ ಅನೇಕ ಉದಾರಿಗಳು ದತ್ತಿ ಉಪನ್ಯಾಸಗಳನ್ನು ಏರ್ಪಡಿಸಿದ್ದಾರೆ (ರೂಢಿ). [ಸಂ.]

ದತ್ತಿಟಿ (ನಾ). ಒಂದು ಊರಿನ ಹೆಸರು (?): ನೇಱಿಲೆಯಂ ಮಾಯೊತ್ತಿಂ ನಡಪ್ಪಳ್ಳಿ ಮೂಳಾಣಂ ನಡಲು ಎರ್ಪಳ್ಳಿ ದತ್ತಿಟಿ ಕಿಱಿಯ ಒರಲ್ಗೋಡು ಇವುಟಾ ಬತ್ತ ಇವ × ಅಕ್ಕಿ ಇಕಂಳಂ ತುಪ್ಪ ಇದು ಪ್ರವಾಹಂ (ಎಕ. VI, ಚಿಕ್ಕಮ. ೯೫-೧೬; 1025 ?). [?]

ದತ್ತು (ನಾ).=ದತ್ತಕ ೧: ಉತ್ತಮಗುಣಗಳುಳ್ಳವನನ್ನು ಸತ್ತ್ವಶಕ್ತಿಯುಳ್ಳವನನ್ನು ದತ್ತು ತೆಗೆದುಕೊಂಡು ರಾಜ್ಯವನ್ನು ಅವನ ಕೈಲಿಡುವುದು ಲೇಸು (ಶಾಂತಲಾ. ೨೦೦); ಶ್ಯಾಮಾಶಾಸ್ತ್ರಿಗಳು ಕಂಚಿಕಾಮಾಕ್ಷಮ್ಮನಿಗೆ ದತ್ತು (ಗಾನಕ. ೩೦). [<ಸಂ. ದತ್ತ]

ದತ್ತುಗೊಳ್ (ಕ್ರಿ). ದತ್ತು ತೆಗೆದುಕೊಳ್ಳು: ಪೆತ್ತೊಡಮೇಂ ಬಸಿಱೊಳ್ ಬೆಲೆಯಿತ್ತೊಡಮೇಂ ದತ್ತುಗೊಂಡು ಪೊರೆದೊಡೆ ಮೇಣಾ ತುತ್ತುವ ಮಿಟ್ಟುಗಮೊತ್ತೆಯ ಪತ್ತುವ ಮುತ್ತಬ್ಬೆಗಳ್ಗಮೆತ್ತಣ ಮಱುಕಂ (ಚಿಕವಿ. ೬-೯೦). [ದತ್ತು + ಕೊಳ್$_1$]

ದತ್ತುಪುತ್ರ (ನಾ). = ದತ್ತಕ ೧: ದತ್ತು ತೆಗೆದುಕೊಂಡಾಕ್ಷಣಕ್ಕೆ ದತ್ತುಪುತ್ರನು ಸಿಂಹಪೀಠವನ್ನೇರಬೇಕು ಎಂದೇನೂ ಇಲ್ಲ (ಸ ವ ತಿ. XIV, ಪ್ರಸ್ತಾವನೆ). [ದತ್ತು + ಪುತ್ರ]

ದತ್ತುಮಗ (ನಾ).=ದತ್ತಕ ೧: ದತ್ತುಮಗನಾತನೈ ನಮ್ಮರಸು ಕುಳಿಂದಂಗೆ (ಚಂದ್ರಸ. ೫೩-೧೪). [ದತ್ತು + ಮಗ]

ದತ್ತೂರ, ದತ್ತೂರಿ, ಧತ್ತೂರಿ (ನಾ). ಒಂದು ಬಗೆಯ ಮುಳ್ಳಿನ ಗಿಡ ; ಮದ್ದುಗುಣಿಕೆ ; ಉಮ್ಮತ್ತಿ : ಕಲ್ಪತರುವಿನ ನಾಮವ ಹಡೆದ ದತ್ತೂರದಂತೆ ಭಕ್ತರ ವಿರಕ್ತರೆಂದರೆ ಸತ್ಯರಪ್ಪರೆ (ಮೋಮಾ. ೯೯-೩೩೬) ; ದತ್ತೂ[ಜಾಕಾಂ. ತ್ತು]ರದ ಬಿತ್ತಿನಲ್ಲಿ ಕಲ್ಪತರು ಹುಟ್ಟ ಕಲ್ಪತರುವಿನ ಅಗ್ರದಲ್ಲಿ ಇಟ್ಟೆಯ ಹಣ್ಣಾಯಿತ್ತು (ಅಶ್ವಮಾ. ೧೫೬-೧೯೪) ; ಸೂಚಿಸುವ ಪುಷ್ಪಾರ್ಚನೆಯದಿದ ನವಶಾಸ್ತ್ರ ಗೋಚರವನಾಲಿಸೈ ಚಂಪಕಂ ದತ್ತೂರ ಮೇಚಕೋತ್ಪಲ ಪತಾಶಂ ಪಾಟಲಿಯ ಪಂಚವುಷ್ಪಂಗಳುತ್ತಮವಿವು (ಕಶಪು. ೬-೪-೩೯) ; ಕರೀಉಮ್ಮತ್ತಿ, ದತ್ತೂರ (ಪ್ಯಜಿಗಿ. ೨೯-೫೩೪). **ದತ್ತೂರಿ :** "ದತ್ತೂರ-ಧತ್ತೂರ-ಉನ್ಮತ್ತ (ದತ್ತೂರಿ, ದುತ್ತೂರ)" (ಶಬ್ದಕೋ. ೧೪). **ಧತ್ತೂರಿ :** ಉಮ್ಮತ್ತಿಯನ್ನು ಧತ್ತೂರಿಯೆಂದೂ ಹೇಳುತ್ತಾರೆ (ಕೂಡಿ).

ದತ್ತೂರಿ ಹಚ್ಚು = ವೋಸ ಮಾಡು ; ವಂಚಿಸು : "ದತ್ತೂರಿ-ಅಗಡು; ಕವಡು ; ವಂಚನೆ (ದತ್ತೂರಿ ಹಚ್ಚಿ)" (ಜಾನಕೋ. ೩). **ದತ್ತೂರಿ ಹಿಡಿಸು** = ವೋಸಮಾಡು ; ವಂಚಿಸು : ಹಿಸೇದ ಆಶಾಕ್ಕ ರೊಕ್ಕಾ ಕೊಟ್ಟೆ. ಪಾಂಚಸೇಕ್ಕ ಧತ್ತೂರಿ ಹಿಡಿಸಿದಂದ್ರು (ದೀಪಹ. I, ೧೩೪). 'ದುತ್ತೂರ' ಪರಾ. [<ಸಂ. ಧತ್ತೂರ]

ದತ್ತೂರರಸ (ನಾ). ಉಮ್ಮತ್ತಿಯ ಹಾಲು, -ರಸ : ಪರಿವರ್ದಿಸುವುದು ದತ್ತೂರರಸಮನಿಂಬಾಗಿ ಪಿರಿದು ನೆಲದೊಳ್ ಲವಣಂಬೆರಸೊರಸಿಕೊಂಡು ಪೂಸುಗೆ ಕರಗುಗುಮೇಬಿಂಬಿರೆಯೆನಿಪ್ಪ ಕುರಿವ್ವಂ ಬೇಗಂ (ಕಮದ. ೧೮೯ ಪ್ರಹೋ). [ದತ್ತೂರ + ರಸ]

ದತ್ತೂರಿ 'ದತ್ತೂರ' ನೋ.

ದತ್ತೆಯ್ಯ (ನಾ). ಒಬ್ಬಾತನ ಹೆಸರು : ಬಹುಧಾನ್ಯ ಸಂವತ್ಸರಂ ಪ್ರವರ್ತಿಸೆ ಸೂರ್ಯಗ್ರಹಣದನ್ದು ದತ್ತೆಯ್ಯನುಂ ತಿಂಕಯ್ಯನುಂ ಪೆರ್ವ್ಡಬ್ಬುಗೆಯ್ಕೆ ತಾಗೆರತ್ತಿಯ ಮಾಹಾಜನಕ್ಕೆ ಪೊನ್ನಬ್ಬೆ ಪೊನ್ನ ಕೊಟ್ಟು (ಎಕ. VII, ಶಿಕಾರಿ. ೬೧-೪ ; ೧೭೮). [P ಇದು 'ದತ್ತಯ್ಯ' ಇರಬಹುದು]

ದತ್ತೆಲೆ (ನಾ). ಒಂದು ಬಗೆಯ ಔಷಧಿ ಸಸ್ಯ : (ಪ್ಯಜಿಗಿ. ೬೫-೧೪೧೫). [?]

ದತ್ತ (ನಾ).=ದಕಾರ : ಅಣ್ ಪತ್ರದ ದಿಗ್ವಾಚಕದೊಳ್ ದತ್ತಂ :-ಕೆಲದಂ, ಬಲದಂ (ಕಪದ. ಮ.೧೩೧ ವೃತ್ತಿ). [ಸಂ.]

ದತ್ತವಿಧಿ (ನಾ). ದಕಾರವು ಆಗಮವಾಗುವ ನಿಯಮಂ : ಪುರುಷವರ ಮಾದೊಡತ್ತಂ ದೊರೆಕೊಳ್ಗುಮದಣ್ಪಗುಳ್ದ ದಿಗ್ವಾಚಕದೊಳ್ ಪರ ದಿಗ್ವಾಚಕದೊಳ್ ಸಂಚರಿಸುವುದಾ ತೆಱದೆ ದತ್ತವಿಧಿ ಶಾಬ್ದಿಕರಿಂ (ಕಪದ. ೦೧೦). [ದತ್ತ + ವಿಧಿ]

ದದಾತಿ (ನಾ). ಕೊರತೆ ; ಅಭಾವ : ನನಗೆ ರೊಕ್ಕದ್ದ ಯಾನ ದದಾತಿ ಇಲ್ಲ ತಗಿ (ನಡದಾ. I, ೨೯೩) ; ಮಂಬೈವ್ಯಾಂತದಲ್ಲಿ ನವಃಗೆ ನವಕರಿಯ ದದಾತಿ ಇರಲಿಲ್ಲ (ದೀಪಹ. II, ೨೩೨) : ಮನೆಯುಲ್ಲಿ ಯಾವುದಕ್ಕೂ ದದಾತಿಯಿಲ್ಲ (ಗೀಜುಗೆ. ೩೦). [←ಮರಾ. ದದಾತೀ, ದದಾತ್]

ದದಿರ್ವಾಟಿಗೆ (ನಾ). ಒಂದು ಪ್ರದೇಶದ ಹೆಸರು : ಶ್ರೀಮತ್ತ್ರೈಲೋಕ್ಯ ಮಲ್ಲನೊಟಂಬವಲ್ಲವವೆಮ್ಮಾನಡಿದೇವ ದದಿರ್ವಾಟಿಗೆ ಸಾಸಿರವುಂ ಬಲ್ಲಕುನ್ದೆ ಮೂನೂಱುಂ ಕೊನಡಿಯೂಜುಮುಂ ಸುಖಿಸಂಕತಾವಿನೋದದಿ ರಾಜ್ಯಗೆಯ್ಯುತ್ತಿರೆ (ಎಕ. VII, ಹೊನ್ನಾ. ೧೦೯-೦೨ ; 1054 ?). [?]

ದದ್ದರ$_1$ (ನಾ). ಬಾತುಕೊಳ್ಳುವಿಕೆ; ಊದಿಕೊಳ್ಳುವಿಕೆ. 'ದದ್ದರಿಸು$_1$', 'ದರ್ದರ್ಕೆ' ಪರಾ. [<ದದ್ರು ?]

ದದ್ದರ$_2$ (ನಾ). ಭಯ ; ಅಂಜಿಕೆ : ಬಿದ್ದು ಸಂಸಾರದಲಿ ಸಾಯದ ಬುದ್ಧಿಯನು ಬಲ್ಲೊಡೆ ಕೃತಾಂತನ ದದ್ದರಕೆ ಸಿಲುಕದವೊಲಚ್ಯುತನಡಿಯ ಪಿಡಿರೆಂದ (ಪ್ರಹ್ಲಾಚ. ೯-೬೨). [←ಮರಾ. ದಾದರಣೇ=ಗಾಬರಿಯಾಗು]

ದದ್ದರಿಸು$_1$ (ಕ್ರಿ). ಊದು ; ಬಾತುಕೊಳ್ಳು : ಮುಖ ದದ್ದರಿಸಿಕೊಂಡು ಜ್ವರ ಬಂದಹಾಗಿದೆ (ಕೂಡಿ). [ದದ್ದರ$_1$ + – ಇಸು$_3$]

ದದ್ದರಿಸು$_2$ (ಕ್ರಿ). ಹೆದರು ; ಗಲಿಬಿಲಿಗೊಳ್ಳು : ಗದ್ದಲಕೆ ಕಲ್ಯಾಣ ಸದ್ದೆದ್ದು ಜಲ್ಲೆಂದು ಎದ್ದು ಓಡಾಡಿ ಜನಬಿದ್ದು ಹೌಹಾರಿ ದದ್ದರಿಸಿ ಲೋಕ ಗಜಬಿಜಿಗೆ (ಕನ್ನಜಾ ೨೩೪). [ದದ್ದರ$_2$ + – ಇಸು$_3$]

ದದ್ದು$_1$ 'ತರ್ದು$_2$' ನೋ.

ದದ್ದು$_2$, **ದುದ್ದು**$_2$ (ನಾ). ೧. (ಮಡಕೆ, ಬಳೆ ಮೊದಲಾದುವು) ಬಿರುಕು ಬಿಟ್ಟಿರುವುದು, -ಸೀಳಿರುವುದು : ದದ್ದಾಗಿರುವ ಬಳೆ, ಹಾಕಿಕೊಳ್ಳಬೇಡ (ಕೂಡಿ). 'ದದ್ದು ಮಡಕೆ' ಪರಾ. ೨. ಒಡೆದ ಹಾಲಿನ ಗಟ್ಟಿ ಭಾಗ : ಒಡೆವ ಸಮಯದೊಳು ಹಾಲೊಳಗೆ ಸುಣ್ಣದ ತಿಳಿಯ ಬಿಡಲು ಜುಮ್ಮನೆ ತಿಳಿವುದು . . . ಆ ದದ್ದನು ಮಡಗಿ (ಸೂಪಣ. ೨-೫). **ದುದ್ದು**$_2$: ೨. ಒಡೆದ ಹಾಲಿನ ದುದ್ದು ನನೆಯಕ್ಕಿ ತೆಂಗಾಯನೊಡಗೂಡಿ . . . ಲದ್ದುಗೆಗಳಂ ಹಸನಾಗುವಂದದೊಳ್ ಕಟ್ಟಿ ಚತುರರ್ಗಿವ್ವುದು (ಸೂಪಣ. ೧-೫೫) ; ತುಪ್ಪದಿ ಹುರಿದ ಪಾಲ ದುದ್ದೆರಡುಳ್ಳಿ . . . ಮೆಂತೆಯದ ಚೂರ್ಣ ಹಪ್ಪಳಂ ಸಂಭಾರವಸ್ತುವಹವು (ಸೂಪಣ. ೪-೧). [?]

ದದ್ದುಮಡಕೆ (ನಾ). ಬಿರುಕು ಬಿಟ್ಟ ಮಡಕೆ : ದದ್ದುಮಡಕೆಯಲ್ಲಿ ನೀರು ಹಾಕಿದಂತೆ (ಕೂಡಿ). [ದದ್ದು$_2$ + ಮಡಕೆ]

ದದ್ದುರೋಗ (ನಾ). ಮೈಮೇಲೆ ತದ್ದಿಗಳೇಳುವ ಒಂದಂ ಬಗೆಯ ಚರ್ಮರೋಗ : ತಸ್ಕ್ರಕ್ರಿಯೆಯು ಭಾಗದಲ್ಲಿ ದದ್ದುರೋಗದವರಿಗೂ ಕಡಿಮೆಯಿರಲಿಲ್ಲ (ಹುಜ್ಮಮು. ೩೭) ; (ಅನೇಕ ವೇಳೆ ಸೊಂಟದ ಸುತ್ತ ಹರಡಿಕೆ ಇಳ್ಳುವ) ಒಂದು ಬಗೆಯ ದದ್ದುರೋಗ (Shingles. ಇಂಕನ್ನಿ).

[ದದ್ದು$_1$ (<ತರ್ದು$_2$) + ರೋಗ]

ದದ್ದುಹಿಡಿ (ಕ್ರಿ). ದದ್ದುರೋಗ ಅಂಟು : ದದ್ದುಹಿಡಿದು ನೋಟಕ್ಕೆ ಅಸಹ್ಯವಾಗಿದ್ದ ನಾಯಿಯೊಂದು . . . ಬೀದಿಯ ನಡುವೆ ನಿಂತು. ಸುತ್ತಲೂ ನೋಡಿತು (ಕಾನೂರು. ೪೯೩) : ದದ್ದುಹಿಡಿದು ಬಡಕಲಾಗಿ ಬೂದಿಬುಕ್ಕಗಳಾಗಿದ್ದ ಅವನ ಮನೆದು ನಾಯಿಗಳೂ . . . ಕೂಗ ತೊಡಗಿದ್ದುವು (ಪುಕಮ. ೦೪).

[ದದ್ದು$_1$ (<ತರ್ದು$_2$) + ಹಿಡಿ$_1$ (<ಪಿಡಿ$_1$)]

ದದ್ಯಾನ್ನ (ನಾ). ಮೊಸರಿನಲ್ಲಿ ಕಲಸಿದ ಅನ್ನ ; ಮೊಸರನ್ನ: ಕೋಳಾಲದಲಿ ಶ್ರೀಸೋಮೆಶ್ವರದೇವರಿಗೆ ದದ್ಯಾಂನ ಅವಸರ ನಯಿವೇದ್ಯಮಾಡಿ (ಎಕ. X (S), ಕೋಲಾರ. ೨೭೬-೭ ; 1540). [< ಸಂ. ದಧ್ಯನ್ನ]

ದದ್ರು (ನಾ). ೧. ಪಿತ್ತದಿಂದ ಚರ್ಮದ ಮೇಲೆ ಏಳುವ ಗಂದೆ ; ತದ್ದು : "ದದ್ರುವೆನೆ ತರ್ದನಿಕ್ಕುಂ" (ಮಂಗರಾ. ೧೦೩-೦). ೨. ಹುಳುಕಡ್ಡಿ, ಗಜಕರ್ಣ ಮುಂತಾದ ಚರ್ಮರೋಗ : ಗರಿಕೆ, ಅಳಲೆಯ ಕಾಯಿ, ಸೈಂಧವ, ತಗಚಿ, ಅಚ್ಚಿಗೆ ಇವನ್ನು ಅಂಬಿಲದಲ್ಲಾಗಲೀ ಮಜ್ಜಿಗೆಯೊಳಗಾಗಲೀ ಅರೆದು ಮೂಟು ಬಾರಿ ಪೂಸಿದರೆ ಬಹಳವಾಗಿ ಬಲಿತಿದ್ದ ದದ್ರು ತಿಮಿರಂಗಳೆಲ್ಲವಂ ಕೆಡಿಸುವದು (ವಿವೈವಿ. ೧೫೯); ಏಲಕ್ಕಿ, ಚಿತ್ರಮೂಲ . . . ತೈಲವನಟ್ಟು ಪೂಸಿದರೆ ರಕ್ತಮಂಡಲ, ಕುಷ್ಠ, ದದ್ರು, ತೊನ್ನು ಮುಂತಾದ ದುಷ್ಟವ್ರಣಗಳು, ಕರಕು ಇವೆಲ್ಲವನ್ನೂ ಕೆಡಿಸುಗುಂ (ವಿವೈವಿ. ೧೭೯) ೩. ಒಂದು ಬಗೆಯ ಕುಷ್ಠರೋಗ.

[ಸಂ.]

ದದ್ರುಘ್ನ (ನಾ). ಒಂದು ಬಗೆಯ ಗಿಡ ; ಅಗಸೆ ; ತಗಚೆ ; ಚಗಚೆ : "ಏಡಗಜಃ, ಪ್ರಪ್ತನಾಟಃ, ದದ್ರುಘ್ನಃ, ಚಕ್ರಮರ್ದನಃ – ಈ ೪ ತಗ(ಚೆ)ಟಿ" (ಹಲಾಯು. ೦೦೦-೪೬೫). [ಸಂ.]

ದದ್ರುಣ (ನಾ). ದದ್ರುರೋಗವುಳ್ಳವನಂ : "ತರ್ದುಳ್ಳವನಂ ದದ್ರುಣನೆಂಬುದು" (ಹಲಾಯು. ೪೯-೪೫೩). [ಸಂ.]

ದಧಿ (ನಾ). ಹಾಲಿಗೆ ಹೆಪ್ಪುಹಾಕುವುದರಿಂದ ಉಂಟಾಗುವ ಪದಾರ್ಥ; ಮೊಸರು: "ದಧಿಯನೆ ಮೊಸರದು" (ಮಂಗರಾ. ೫೪-೫); ಕರಮೆ ಮುನಿ ದುಗ್ಧ ದಧ್ಯಾದಿ ರಸಂಗಳನೆಯೆ ತೊಱೆದು . . . ನಾಲ್ಕನೆಯ ರಸಪರಿತ್ಯಾಗಮೆಂಬ ತಪಮಂ ತಳೆದಂ (ಚಂದ್ರಪು. ೧೧-೧೧); ದೂರ್ವೆ ದಧಿಗಳನು ತರಿಸಿದನು ಸಿದ್ಧಾರ್ಥ (ಕೌಶಿರಾ. ೩-೩೦); ಹೊನ್ನ ಹರಿವಾಣದಲಿ ಬಡಿಸಿದರೆಣ್ಣುರಿಗೆ ಬೀಸುರಿಗೆ ಮಂಡಿಗೆ ಬೆಣ್ಣೆ ಕಾಸಿದ ತುಪ್ಪ ದಧಿ ಮಧು ಕ್ಷೀರ ಸಕ್ಕರೆಯ (ಸುದಾಮ. ೪-೧೮). [ಸಂ.]

ದಧಿತೈಲ (ನಾ). ಮೊಸರು ಬೆರಸಿದ ಒಂದು ಬಗೆಯ ಔಷಧಿತೈಲ: ದಧಿತೈಲ-ಅತಿಬಜೆ, ಜಾಯಿಕಾಯಿ . . . ಅಚ್ಚಳ್ಳೆಣ್ಣೆ ಒಂದು ಪಡಿ, ಹಸುವಿನ ಮೊಸರು ಒಂದು ಪಡಿ ಎಲ್ಲಾ ಬೆರೆಯುವಂತೆ ಸೇರಿಸಿ . . . ಹೊತ್ತಿಗೆ ಗ ೧ ತೂಕ ತೈಲವನ್ನು ಸೇವಿಸಿದರೆ ಗ್ರಹಿಣಿರೋಗ ಮಾಣುವುದು (ಸಕವೈ. ಪರಿ. ೪೮೦). [ದಧಿ + ತೈಲ$_1$]

ದಧಿತ್ಥ (ನಾ). ಒಂದು ಬಗೆಯ ಮರ; ಬೇಲ; ಕಪಿತ್ಥ; ಬೆಳುವಲ: "ಕಪಿತ್ಥಃ, ದಧಿತ್ಥಃ . . . ದಂತಶಠಃ - ೭ ಬ್ಯಾಲದ ಮರಕ್ಕೆ ಪೆಸರುಗಳು" (ಸಿದ್ಧಾಂತಿ. ೧೦೬). [ಸಂ.]

ದಧಿಪುಷ್ಪಿ (ನಾ). ಒಂದು ಬಗೆಯ ಔಷಧಿ ಸಸ್ಯ: "ಖಟ್ವಾಪರ್ಯಾಯ ವಾಚಿ-ದಧಿಪುಷ್ಪಿ" (ಓಷಧಿ. ೪೪). [ಸಂ. ದಧಿಪುಷ್ಪೀ]

ದಧಿಫಲ, ದಧಿಫಳ (ನಾ). = ದಧಿತ್ಥ: "ಕಪಿತ್ಥಃ, ದಧಿತ್ಥಃ. . . . ದಧಿಫಲಃ, ಪುಷ್ಪಫಲಃ, ದಂತಶಠಃ - ೭ ಬ್ಯಾಲದ ಮರಕ್ಕೆ ಪೆಸರುಗಳು" (ಸಿದ್ಧಾಂತಿ. ೧೦೬). **ದಧಿಫಳ**: ಪಾದರಿ ಮಾದಳಂ ದಧಿಫಳಂ ಚಾಂಪೇಯಮುಂ ಕುಂಭಬಿಲ್ವಂ ದಾಳಿಂಬಮರಂ . . . ಇರ್ದ ವನಾಂತರಾಳದೊಳ್ ಪದ್ಮಾಕರಮಿರ್ಪುದು (ಹಮ್ಮೀರ. ೪-೧೭). [ಸಂ.]

ದಧಿಫಳ 'ದಧಿಫಲ' ನೋ.

ದಧಿಮಂಡ (ನಾ). ೧. ಮೊಸರಿನಲ್ಲಿರುವ ನೀರಾದ ಭಾಗ. ೨. ಮಜ್ಜಿಗೆ; ತಕ್ರ: "ದಧಿಮಂಡಃ, ಮಸ್ತು - ಈ ೨ ಮಜ್ಜಿಗೆ" (ಹಲಾಯು. ೫೩-೧೬೬). ೩. ಮೊಸರಿನ ಕೆನೆ. [ಸಂ.]

ದಧಿಮಂಥ (ನಾ). ೧. ಮೊಸರನ್ನು ಕಡೆಯುವುದು. ೨. ಮಜ್ಜಿಗೆ; ತಕ್ರ: "ದದಿಮಂಥಂ ಮಸ್ತುವೆಂಬುದಕ್ಕುಂ ಪೊಯ್ನಾರ್" (ವಸ್ತುಕೋ. ೯೨-೩); "ದಧಿಮಂಥಮೆನಲು ಕೈಯಳೆಯಕ್ಕು" (ಮಂಗರಾ. ೬೫-೬). [ದಧಿ + ಮಂಥ]

ದಧಿಮುಖ (ನಾ). ೧. ಒಂದು ಸರ್ಪದ ಹೆಸರು. ೨. ಸುಗ್ರೀವನ ಸೇನಾಪತಿಗಳಲ್ಲಿ ಒಬ್ಬನ ಹೆಸರು: ಕೋಲು ಹತ್ತಱಲೆಸಲು ದಧಿಮುಖ ರಕ್ತಮುಖನಾದ (ಕೌಶಿರಾ. ೨೮-೪೪). ೩. [ಜೈನ] ಒಂದು ಪರ್ವತದ ಹೆಸರು. ℙ ನಂದೀಶ್ವರ ದ್ವೀಪದ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಅಂಜನಗಿರಿಗಳೂ ಒಂದೊಂದು ಅಂಜನಗಿರಿಯ ನಾಲ್ಕು ಪಾರ್ಶ್ವಗಳಲ್ಲಿಯೂ ನಾಲ್ಕು ಸರೋವರಗಳೂ ಇರುವುವು. ಪ್ರತಿಯೊಂದು ಸರೋವರದ ಮಧ್ಯದಲ್ಲಿಯೂ ಮೊಸರಿನಂತೆ ಬೆಳ್ಳಗಿರುವ, ಸಹಸ್ರ ಯೋಜನ ಎತ್ತರವಾಗಿರುವ ಒಂದೊಂದು ದಧಿಮುಖ ಪರ್ವತವಿರುತ್ತದೆ. ಹೀಗೆ ದಧಿಮುಖಪರ್ವತಗಳು ಒಟ್ಟು ಹದಿನಾರು ಎಂದು ಜೈನಪುರಾಣಗಳು ಹೇಳುತ್ತವೆ: ನಂದೀಶ್ವರವರದ್ವೀಪಮದಱ ನಾಲ್ಕುಂ ದೆಶೆಯೊಳ್ ನಾಲ್ಕಂಜನಪರ್ವತಂಗಳುಮವಱ ನಾಲ್ಕುಂ ದೆಶೆಯೊಳ್ ಸಮಚತುರಸ್ರಂಗಳಪ್ಪ ದಿವ್ಯಸರೋವರಂಗಳ್ಪದಿನಾಱಪ್ಪುವವಱ ನಡುವೆ ದಧಿಮುಖಶಿಖರಿಗಳುಂ (ಸುಕುಮಾ. ೧೧-೫೦ ವ). [ಸಂ.]

ದಧಿವಡೆ (ನಾ). ಒಂದು ಬಗೆಯ ತಿನಿಸು; ಮೊಸರುವಡೆ; ತೈರೊಡೆ: ಒಡೆಯಂಬೊಡೆ ದಧಿವಡೆಯು ತಿಂಥಿಣಿ ಒಡೆಯ ಎಡೆಗೆ ಒಡನೆ ಬಡಿಸಿದೆ (ಪುರಂದ. ೧-೭೬-೩). [ದಧಿ + ವಡೆ]

ದಧಿವಿಘಾತ (ನಾ). ಕಡೆಗೋಲು; ಮಂತು: "ವೈಶಾಖಮೆನೆ ಮಂಥಮೆನೆ ದಧಿವಿಘಾತಮೆನೆ ಮಂಥಿ ಮಂಥಾನಮೆನೆ ಕಡೆಗೋಲದು" (ಮಂಗರಾ. ೫೪-೬). [ದಧಿ + ವಿಘಾತ]

ದಧಿಸಕ್ತು (ನಾ). ಮೊಸರಿನಲ್ಲಿ ಕಲಸಿದ ಹುರಿಹಿಟ್ಟು; ಕರಂಭ: "ಕರಂಭಃ, ದಧಿಸಕ್ತುಃ-ಈ ೨ ಮೊಸರೊಳ್ ಕಲಿಸಿದ ಸತ್ತುಗಂ" (ಹಲಾಯು. ೫೩-೧೬೬); "ದಧಿಸಕ್ತು ಕರಂಭಾಖ್ಯಂ" (ವಸ್ತುಕೋ. ೯೨-೩). [ದಧಿ + ಸಕ್ತು]

ದಧಿಸಾರ (ನಾ). ಬೆಣ್ಣೆ ನವನೀತ: "ದಧಿಸಾರಂ, ನವನೀತಂ - ಈ ೨ ಬೆಣ್ಣೆ" (ಹಲಾಯು. ೪೬-೧೧೯). [ದಧಿ + ಸಾರ$_3$]

ದಧಿಸೃಷ್ಟ (ನಾ). ಮೊಸರಿನಿಂದ ಸಿದ್ಧಪಡಿಸಿದ ಅಥವಾ ಮೊಸರು ಕಲಸಿದ ಖಾದ್ಯ: "ದಧಿಸೃಷ್ಟಂ ದಾಧಿಕ ನಾಮಧೇಯಕಂ" (ವಸ್ತುಕೋ. ೯೨-೩). [ದಧಿ + ಸೃಷ್ಟ]

ದಧೀಚಿ (ನಾ). ಒಬ್ಬ ಋಷಿಯ ಹೆಸರು. ℙ ವೃತ್ರಾಸುರನ ವಧೆಗಾಗಿ ದೇವತೆಗಳಿಗೆ ತನ್ನ ಬೆನ್ನಿನ ಮೂಳೆಯನ್ನು ನೀಡಿದ ಮುನಿ: ಹರನಿಳಯದೊಳು ಹುಗುವ ನಂದೀಶ್ವರನೊ ಉಪಮನ್ಯುವೊ ದಧೀಚಿಯೊ ವರಮುನಿಪ ದೂರ್ವಾಸನೋ ಭೃಗುವೋ (ಬಸಪು. ೪೬-೪೦); ಕಪಿಲಂ ಮರೀಚಿ ಜೈಮಿನಿ ಗೌತಮಂ ದಧೀಚಿ ಪುಲಸ್ತ್ಯನಾಂಗಿರಂ . . . ಸುಮಾಂಡವ್ಯರೆಂದು ತಪಗೆಯ್ವ ಮುಖ್ಯಋಷಿಯರೆನಿಕ್ಕು (ಮಂಗರಾ. ೭೬-೧೧). [ಸಂ.]

ದಧ್ಯನ್ನ (ನಾ). ಮೊಸರಿನಲ್ಲಿ ಕಲಸಿದ ಅನ್ನ; ಮೊಸರನ್ನ: ಹರಿದ್ರಾನ್ನ ಪರಮಾನ್ನ ಕೃಸರಾನ್ನ ದಧ್ಯನ್ನ ಗುಡಾನ್ನ ಶುದ್ಧಾನ್ನ ಶಾಲ್ಯನ್ನವೆಂಬ ಅಷ್ಟವಿಧಾನ್ನಂಗಳಂ (ವಿವೇಕ. ೧೦೫); ವಜ್ರದ ತಟ್ಟೆಯೊಳ್ ದಧ್ಯನ್ನವಂ . . . ಬಡಿಸಿ (ಸೌಗಂಧಿ. ೩೬-೧೮). [ದಧಿ + ಅನ್ನ$_3$]

ದಧ್ಯೋದನ (ನಾ). = ದಧ್ಯನ್ನ; ಕೊಳಚೆನೀರಿನ ಬಳಕೆಯಲಿ ಕತ್ತಲೆಯ ದಧ್ಯೋದನದಲಾಯುಷವಿಳಿದುಹೋಗದೆ ದಿನದಿನದೊಳವನೀಶ ಕೇಳೆಂದ (ಕುಮ್ಮಾಉ. ೩-೫೬). [ದಧಿ + ಓದನ]

ದನ, ದನವು (ನಾ). ೧. ಹಸು, ಎಮ್ಮೆ, ಎತ್ತು ಮೊದಲಾದ ಪ್ರಾಣಿ: ಸೆಳೆವುದಱೊಳ್ದನದೊಳುಂ ಸುಲಿ (ಶಬ್ದಮಂ. ೧೦೮); ದಾರಿಯಲ್ಲಿ ಯಾವುದಾದರೂ ಪೋಲಿಯ ದನ ಸಿಕ್ಕಬಹುದೆಂದು ನೋಡುತ್ತಾ ಬಂದರು (ಕಳಹು. ೫೦); ದನದ ಮುಂದೆ ಹೋಗಬೇಡ, ಕುದುರೆ ಹಿಂದೆ ಹೋಗಬೇಡ (ಗಾದೆ). ೨. ಮಂದೆ; ಕಾಲ್ನಡೆ: ಸಿರಿ ತನಗೆ ಕಾಂತೆ ಗಡಲೋಗರ ದನಮಂ ಕಾಯಲೇಕೆ ಸಕಳಜಗತ್ತಂ ಪರಿಪಾಲಿಸುವಾತಂ ಗಡ ನರನಾಳಾಗಿರ್ಪುದೇಕೆ ಚೋದ್ಯಮಿವೆಲ್ಲಂ (ಧರ್ಮಪ. ೨-೬೪). 'ದನಗಾಹಿ' ಪರಾ. ೩. ಧನ; ಸಂಪತ್ತು: ಧನ - ದನ, ಧಾರಾ - ದಾರೆ (ಶಮದ. ೨೫೫ ಪ್ರಯೋ); ಧನ-ದನ; ಧರ್ಮ-ದಮ್ಮ (ಶಬ್ದಾನು. ೦೪೩ ಪ್ರಯೋ). **ದನವು**: ೧. ತಲೆ ಹುಳಿತ ದನವಿನಂತೆ ಗಳುವಿನಾಶಗಾಗಿ ಇವರಿಗೆ ಲಿಂಗದ ಅನುವಿನ ಆಶೆ ಯಾಕೆ (ಮೋಳಿಮಾ. ೧೦೫-೪೧೯); ತಗರ ಕೋಡು ಬಿಳಿಯ ಸಾಸವೆ ಹಾವಿನ ಹೆರೆ ದನವಿನ ಹಲ್ಲು ಇವಂ ಕೂಸಿಂಗೆ ಧೂಪವಿಕ್ಕುವುದು (ಬಾಲಚಿ. ೧೨೫-೧೯); ದನವಿನ ವರ್ಣ ಹಾಲಲ್ಲಿ ತಿಳಿದೀತೆ? (ಗಾದೆ).

ದನ ಓಣಿ = ದನಗಳ ಓಡಾಟದಿಂದಾದ ಕಾಲುದಾರಿ; ದನಗಳು ಮೇಯಲು ಹೋಗುವ ದಾರಿ: ದೇವಯ್ಯ ಕಾಡಿನ ಕಡೆಗೆ ಏರುವ ದನ ಓಣಿಯ ಬಳಿ ನಿಂತು (ಮಲಿಮ. ೫೩೦); ದೇವಯ್ಯನಿಗೆ ಕಾಣಿಸಿತು, ಕಂಬಳಿಕೊಪ್ಪೆ ಹಾಕಿಕೊಂಡಿದ್ದ ಇಬ್ಬರು, ಬಸಿರಿಮರದ ಪಕ್ಕದ ದನ ಓಣಿಯ ಕೆಸರುಹಾದಿಯಲ್ಲಿ ಮನೆಯ ಕಡೆ ಗುಡ್ಡದಿಂದ ಇಳಿದು ಬರುತ್ತಿದ್ದುದು (ಮಲಿಮ. ೭೩೦) ದನದ ಮೈಲಿ = ಹಸುವಿನ ಕೆಚ್ಚಲಿನ ಮೇಲೆ ಏಳುವ

ಸಿಡುಬು ; ದನದ ಸಿಡುಬು: ನನಗೆ ದನದ ಮೈಲಿ (Cow-Pox) ಆಗಿದೆ ; ದನದ ಮೈಲಿ ಆದವರಿಗೆ ಸಿಡುಬು ತಗಲದು (ಮಾನಸಾ. ೩).

[<ಸಂ. ಧನ]

ದನಂಗಾಹಿತನ (ನಾ). ದನಕಾಯುವ ಕೆಲಸ ; ಗೋಪಾಲವೃತ್ತಿ : ಪಿಂಗಿದುದಿಲ್ಲಿನ್ನುಂ ಮನದಿಂ ಗೋವರ ಗಡಣದೊಳ್ ದನಂಗಾಹಿತನಂ ನೀಂಗಳದೆತ್ತಱಿವಿರ್ ಬರ್ಮಂಗಂ ಬಗೆದಱಿವುದರಿದನಂಗಾಹಿತನಂ (ಕಾವ್ಯಾವ. ೫೫೩). P ಇದಂ ಶಬ್ದಾಲಂಕಾರಕ್ಕಾಗಿ ಮಾಡಿಕೊಂಡ ರೂಪವಿರಬಹುದು. [<ದನಗಾಹಿ + – ತನ]

ದನಕರು 'ದನಕಱು' ನೋ.

ದನಕಱು, ದನಕರು (ನಾ). ಹಸು, ಎಮ್ಮೆ, ಕರು ಮೊದಲಾದುವು : ಮದುವೆ ಮುಂಜಿ ದನಕಱುಯೆಂಮೆ (ಬೊಂಕಶಾ. ೦೯೩೬, ಹಾನಗಲ್. ೮೦-೯ ; ?). **ದನಕರು :** ದನಕರುಗಳಂ ಕಾಯ್ವ ಹೊಣೆಯ ಹೊತ್ತಿದೆ ಹುಲಿಯೆ ಇನಿತು ಕಣ್ತಪ್ಪಿದರೆ ಎತ್ತು ದನಮಿಲ್ಲ (ಕಾಲೂರ. ೫೨-೮೦) ; ನಮ್ಮ ದನಕರುಗಳನ್ನು ಮೇವಿಗೆ ಬಿಟ್ಟೆದ್ದೆವು (ಆರ್ಯಕ. ೧೦).

[ದನ + ಕಱು$_2$]

ದನಗ$_1$ (ನಾ). ಗೌಳಿಗ ; ಗೋಪಾಲಕ : ಮೂಡಗೇರಿಯಲ್ಲಿ ದನಗರ ಮನೆಯ ಸ್ಥಳದೊಳ್ ಹದಿನಾಲ್ಕುಗೆಯ್ಯಡ್ಡವನೆ (ಎಇ. XIII, ೩೦-೫೩ ; 1204). [ದನ + – ಗ$_2$]

ದನಗ$_2$ (ನಾ). ೧. "ಬೀಜ ಹೊಡೆಯದ, ಆದರೂ ಬೀಜವಿಲ್ಲದ, ನಪುಂಸಕ ಟಗರು" (ನನ್ನೂರು. ಕೋಶ) : ಒಳ್ಳೆ ದನಗ ಬೆಳೆದ ಹಾಗೆ ಬೆಳೆದಿದ್ದಾನೆ (ರೂಢಿ). ೨. ಬಲಿತುದು ; ಕೊಬ್ಬಿದುದು. 'ದನಗುರಿ' ಪರಾ. [?]

ದನಗಜ್ಜಿ (ನಾ). ದಪ್ಪವಾದ ಕಜ್ಜಿ. [ದನ + ಕಜ್ಜಿ]

ದನಗಬ್ಬು (ನಾ). ಒಂದು ಬಗೆಯ ಕಬ್ಬು: ದನಗಬ್ಬಿನಿಂದ ಹಾಲು ಹೆಚ್ಚು ಬರುವುದಿಲ್ಲ (ರೂಢಿ). 'ಗೋಮಾರಿಕಬ್ಬು' ಪರಾ.

[ದನ + ಕಬ್ಬು$_2$ (<ಕರ್ವು$_1$)]

ದನಗಳ್ಳ (ನಾ). ದನಗಳನ್ನು ಕದಿಯುವವನು: ದನಗಳ್ಳ (Cattle-lifter. ಇಂಕನಿ) ; ದಾರಿಗಳ್ಳ; ದನಗಳ್ಳ (Cateran. ಇಂಕನಿ). [ದನ + ಕಳ್ಳ$_1$]

ದನಗಾಯ್ (ಕ್ರಿ). ಗೋವುಗಳನ್ನು ಕಾಯು; ದನ ಮೇಯಿಸು : ಅಂಕದರ್ಜುನ ಹೇಡಿ ಶಂಕರನು ತಿರಿದುಂಡ ಪಂಕಜನಾಭ ದನಗಾಯ್ದನುಳಿದವರ ಬಿಂಕವೇನೆಂದ (ಸರ್ವಜ್ಞ. ೮೫೪). [ದನ + ಕಾಯ್$_1$ (<ಕಾ$_1$)]

ದನಗಾಯಿ 'ದನಗಾಹಿ' ನೋ.

ದನಗಾರ (ನಾ). ದನಗಳನ್ನು ಸಾಕುವ ವೃತ್ತಿಯವನು ; ಗೋವಳ : ನಿಮ್ಮ ಕುಲಗುರು ಕೃಪಾಚಾರ್ಯರು ಸಭೆಯಲ್ಲಿ ಇರುವಾಗ ಈ ದನಗಾರನಿಗೋ ಅಗ್ರಪೂಜೆ ಮಾಡುವುದು ? (ವ್ಯಾಸಜಿ. ೦೦೮); ಹಟ್ಟಿಕಾರರಲ್ಲಿ ಕುರುಬರು ತುರುಕಾರರು ಎಂದು ಬಗೆಗಳಾದರೂ ಇವರೆಲ್ಲರೂ ದನಗಾರರು (ಕರ್ಣಾಪೂ. ೧೩) ; ಈ ಕನ್ನಡ ದನಗಾರನೇ ಮರಾಠಿಯಲ್ಲಿ ಧನಗರನಾದನು (ಕರ್ಣಾಪೂ. ೦೪). [ದನ + – ಕಾರ$_1$ (< – ಕಾಱ)]

ದನಗಾರಿಕೆ (ನಾ). ದನಗಳನ್ನು ಸಾಕುವುದು ; ಹೈನುಗಾರಿಕೆ ; ಪಶುಪಾಲನೆ : ಹಿಂದಿನ ಬೇಟೆಗಾರಿಕೆ ದನಗಾರಿಕೆಗಳು ಬಿಟ್ಟುಹೋದುವು ಎಂದಲ್ಲ (ಸಾಹಿಸಂ. ೧೩೦). [ದನಗಾರ + – ಇಕೆ]

ದನಗಾವಲು (ನಾ). ಹುಲ್ಲುಗಾವಲು ; ಗೋಮಾಳ (?) : ೩ ಲೌ ೦೪ ಸತ್ರದ ಬಗ್ಗೆ ೮ ಲೌ ೪೧೦ ವಾಲಗದವರಿಗೆ ೬ ಲೌ ೦ ದನಗಾವಲು ಬಗ್ಗೆ (ಎಕ. VIII, ತೀರ್ಥಹ. ೦೩೭. ಪುಟ. ೬೦೦ ; 1702).

[ದನ + ಕಾವಲು (<ಕಾವಲ್$_1$)]

ದನಗಾವಿ 'ದನಗಾಹಿ' ನೋ.

ದನಗಾಹಿ, ದನಗಾಯಿ, ದನಗಾವಿ (ನಾ). ದನಗಳನ್ನು ಕಾಯುವವನು; ಗೋವಳ ; ಗೋಪಾಲ : ಗೋವಳಿಗರ ಪಳ್ಳಿಯೊಳ್ ನೆಲಸಿದಾ ದನಗಾಹಿಯೆನಿಪ್ಪ ಕೃಪ್ಣನೇಂ ತಳಿಗೆಯೊಳಿಟ್ಟು ಸಂಹರಿಸನೇ ಕಲಹಂಬರಮುಂಟೆ ತನ್ನ ದೋರ್ಬಳದ ಪೊಡರ್ಪೆನುತ್ತೆ ಶಿಶುಪಾಲನನೇಳಿಸುವಂ ವೃಕಧ್ವಜಂ (ಜಗವಿ. ೧೮-೮೪) : ದನಗಾಹಿಗಳ ಸದ್ದು ಆಗಾಗ ಕೇಳಿಸುತ್ತಿರುವುದು (ಕಮ್ಮಟ. ೦) ; ದನಗಾಹಿ ಬಾಲಕರು ಹಾಡುತ್ತಿದ್ದಾರೆ (ಬೆಟ್ಟಹೊ. ೪೦). **ದನಗಾಯಿ:** ಭೂಮಿಯ ಹೊತ್ತ ಹಾವಿನ ಹೆಡೆವಣಿಯ ಕಿತ್ತು ತನ್ನಿಯೆನ್ನದೆ ದನಗಾಯಿಯ ಮತ್ತೆಮಗಿದಿರನಿಕ್ಕುವರೆ (ನೇಮಿಸಂ. ೦೬-೭೩) ; ಮನೆಗೆ ಮರಳಿ ಹೊರಟ ದನಗಾಯಿಗಳು ಮಾತ್ರ ಎದುರಾಗುತ್ತಿದ್ದರು (ಗಾಳಿಗು. ೧೬). **ದನಗಾವಿ:** ಪೋರಾಟ ಮಾಡಿದ್ಯಲ್ಲವೊ ನೀನು ಎನ್ನ ಕೂಡೆ ಸೇರಿ ಗೋಕುಲದಿ ದನಗಾವಿಯಾಗೂ (ಶ್ರೀಕೃಪಾ. ೩೧). [ದನ + ಕಾಹಿ]

ದನಗಾಹಿಗ (ನಾ). =ದನಗಾಹಿ: ದನಗಾಹಿಗರ ಕೊಳಲಿನ ಸವಿನಾದ ಎಲ್ಲವೂ ಸೊಗಸೆನಿಸಿದ್ದಿತು (ಗಿರಿಬಾ. ೨೩). [ದನಗಾಹು + – ಇಗ]

ದನಗಾಹು (ನಾ). ದನಗಳನ್ನು ಕಾಪಾಡುವುದು, –ರಕ್ಷಣೆ. 'ದನಗಾಹಿಗ' ಪರಾ. [ದನ + ಕಾಹು$_1$ (<ಕಾಪು)]

ದನಗುರಿ (ನಾ). ಬಲಿತ ಕುರಿ ; ಕೊಬ್ಬಿದ ಕುರಿ : ಮಂದೆಯಲ್ಲಿ ದನಗುರಿಗಳು ಹೆಚ್ಚಾಗಿವೆ (ರೂಢಿ). [<ದನಗ + ಕುರಿ$_3$ (< ಕುಱ್$_3$)]

ದನಗೊಡಿಗೆ (ನಾ). ಗೋಗ್ರಹಣದಲ್ಲಿ ಹೋರಾಡಿ ಸತ್ತವನಿಗೆ ಕೊಟ್ಟ ಕೊಡಿಗೆ ಹೊಲ: ಬೊಮ್ಮಯ್ಯ ಮಗ ಕಾಮಗೆ ಕೊಟ್ಟ ನೆತ್ತರುಗೊಡಿಗೆಯ ಕ್ರಮವೆಂತೆಂದರೆ ನಿಮ್ಮ ಬೊಮ್ಮಿಉ ನಮ್ಮ ಸೇವೆಗೆ ಸತ್ತ[ದ]ಕೆ ನಾಉ × × ನಡ ಕೋಣೆಗೆ ದನಗೊಡಿಗೆ ಹೊಲವಾಗಿ ಕೊಟ್ಟೆಉ (ಎಕ. VIII ಸಾಗರ. ೨೬-೭ ; 1598 ?). [ದನ + ಕೊಡಿಗೆ(<ಕೊಡಂಗೆಯ್$_2$)]

ದನಗೊಬ್ಬರ (ನಾ). ಸಗಣಿಗೊಬ್ಬರ : ರೈತರು ಈಗ ದನಗೊಬ್ಬರಕ್ಕಿಂತ ರಾಸಾಯನಿಕ ಗೊಬ್ಬರವನ್ನೇ ಹೆಚ್ಚಾಗಿ ಬಳಸುತ್ತಾರೆ (ರೂಢಿ).

[ದನ + ಗೊಬ್ಬರ$_1$]

ದನಗೊರಸುನೀರು (ನಾ). ದನದ ಗೊರಸಿನಿಂದಾದ ತಗ್ಗಿನಲ್ಲಿ ನಿಲ್ಲುವಷ್ಟು ನೀರು ; ಗೋಷ್ಪದಜಲ ; ಸ್ವಲ್ಪ ನೀರು : ಕಡಲೆನಗೆ ದನಗೊರಸುನೀರೆಂದು ತಿಳಿ, ನೆಗೆಯೆ (ಶ್ರೀರಾಮಾ. ೫೧೯-೫೧೬).

[ದನ + ಗೊರಸು$_1$ + ನೀರು$_1$ (< ನೀರ್$_1$)]

ದನಗೋಳು (ನಾ). ದನಕರುಗಳಿಗೆ ತೊಂದರೆಯಾಗುವುದು; ದನಗಳಿಗೆ ಕಷ್ಟವಾಗುವುದು : ಮುಂಗಾರುಮಳೆ ಕಾಡೆಲ್ಲ ಕಂಗಾಲಾಗುವಂತೆ ದನಗೋಳಾಗಿ ಸುರಿಯತೊಡಗಿತು (ಮಲೆಮ. ೪) ; ದನಗೋಳು ಮಳೆ ಹುಯ್ತು (ರೂಢಿ). 'ಕಾಡುಗೋಳು' ಪರಾ.

[ದನ + ಗೋಳು$_2$ (< ಗೋಟ್$_3$)]

ದನಬದುಕು (ನಾ). (ಆಲಂ) ಪಶುವಿನಂತಹ ಜೀವನ : ಕೀಳುಮಟ್ಟದ ಜೀವನ : ಹೆಣವಾದೆವು ಹೆಂಡದಲ್ಲಿ ಉರುವಲು ಬಾಳ್ಕೊಂಡದಲ್ಲಿ ದನಬದುಕಿದು ತಂಡದಲ್ಲಿ (ಮುಕ್ತಕಂ. ೬೨-೮).

[ದನ + ಬದುಕು$_2$ (< ಬರ್ದುಕು$_2$)]

ದನಬಳ (ನಾ). ಒಂದು ಬಗೆಯ ತೆರಿಗೆ : ಶ್ರೀಮಹಾಲಕ್ಷ್ಮೀದೇವಿಯ ಪ್ರತಿಷ್ಠೆಯ ಮಾಡಿಸಿ ಆ ದೇವಿಯ ನಿವೇದ್ಯಕ್ಕೆಂದು ... ೬ ಕಯ್ಯ ನೀಳದ ಅಂಗಡಿ ೧ ಅದಕ್ಕೆ ತಳಸಾರಿಗೆ ದನಬಳ ಕೊಟ ಹ [೧] . . . ಸರ್ವನಮಸ್ಯವಾಗಿ ಬಿಟ್ಟರು (ಸೌಇಇ. XV, ೨೩೨-೦೦ ; 1206) ; ಹುಲುಂಗೂರ ಹುನ್ನಿರ್ವ್ವರು ಗಾವುಂಡು ಸಮಸ್ತ ಪ್ರಜೆ ನಖರ ಮುಮ್ಮುಂ(ಮು)ರಿದಂಡಂಗಳಿಗೆ ಆ ಸ್ತ(ಸ್ಥ)ಳದ ದನಬಳವನು ಸರ್ವ್ವನಮಸ್ಯವಾಗಿ ಬಿಟ್ಟರು (ಎಇ. XVI, ೩೩೬-೩೩ ; 1255).

[P ಇದು ದನದ ಮೇಲೆ ಹಾಕುವ ತೆರಿಗೆ ಇರಬಹುದೆ ?]

ದನವು 'ದನ' ನೋ.

ದನಾಗ್ರ (ನಾ). ಒಂದು ಬಗೆಯ ಗ್ರಂದಿಗೆ ವಸ್ತು (?) : ಚೂರ್ಣಗಳು–ಶುಂಠಿ,ದಾಳಿಂಬದ ಕಾಯಿ, ಅಳಲೆಕಾಯ ಬೀಜ, ದನಾಗ್ರ ಗ ೧ ತೂಕ ಸಹ ಚೂರ್ಣವಂ ಮಾಡಿ ಬೆಲ್ಲದಿಂ ಕಲಸಿ ನಿಂದೆಯ ಕಾಯಮ್ಮನು ಮೆಲ್ಲಲು ರಕ್ತಗ್ರಹಣಿ ನಿಲುವುದು (ಸಗಪ್ಪ. ೬೩೦). [?]

ದನಿ$_1$, **ಧನಿ**$_1$ (ನಾ). ೧. ಸದ್ದು; ಸಪ್ಪಳ; ಮೊಳಗು; ಶಬ್ದ : "ಸಪ್ಪಳಬ್ಬರ ದನಿ ಸರಂ ಗಾವರಂ ಗಾವಳಿಯುಮುಲಿಯು ಧ್ವನಿಮಕ್ಕುಂ" (ಶಬ್ದಮಂ. ೭೦); ಕೂಷ್ಮಾಂಡರಸದೊಳಂ ಬೆಲ್ಲದೊಳಂ ಹಾರಕ್ಕಿನ(ಯ) ಸೊರ್ಕ ಬಿಗುಂ ವಾರಣಮದಮುಡುಗುವಂತೆ ಸಿಂಗದ ದನಿಯಿಂ (ಲೋಕೋಪ. ೦೦-೪೨); ರುಂಜೆಯ ದನಿ ದಿಕ್ಪಾಲರನಂಜಿಸೆ ತಳ್ತೊಗೆವ ಕೋಡ ಕಾಳೆಯ ದನಿ ದಿಕ್ಕುಂಜರಮಂ ಬೆದಱಿಸೆ (ಪಂಡಾಮಾ. ೪-೫೬); ಸಾರಮಸಾರವಿ ದೆಂದು ವಿಚಾರಿಸಿ ಕೈಕೊಂಡು ಕಿಡಿಸಲಾರ್ಪುದೆ ಚಿಃ ನಿಷ್ಕಾರಣಮದಱಿಂ ದನ್ಮರ್ ಬಾರಿಸೆ ಮಾಣ್ಬಂದು ಮಾವ ಕಂಚಿನ ದನಿಯೇ (ಧರ್ಮಾಮೃ. ೬-೨೭೦); ಅಲರ್ಗಳ ಸರಿ ಪೊಂಗಳ ಮಟಱಿಯೆಲರ್ಗಳ ತೀಟಂ ಸುರಾನಕದ ದನಿ ದಿವಿಜಾವಳಿಯ ಪೊಗಟ್ತಿಗಳೆಂಬೀ ಲಲಿತಾಶ್ಚರ್ಯಂಗಳಾದವೊದ ವಿದುವಯ್ದುಂ (ವರ್ಧಪು. ೧೫-೨೬); ತುಡುಕಿದವು ತಂಬಟದ ದನಿ ಜಗದಡಕಿಲನು (ಕುಪ್ಪಾದ್ಯೂ. ೦-೪೭). ೨. ಇಂಪಾದ ಸ್ವರ; ಇಂಚರ : ಇದು ಲೀಲಾಂದೋಳಮಿಂದೋಳದ ದನಿ ನೆಱಿಗೊಳ್ವನ್ನೆಗಂ ಪಾಡ ಲೆಂದೇಱಿದಳಂ ತೂಗುತ್ತುಮಿರ್ದನ್ನೆಯ ಪರಿಜು (ಆ ದಿ ಪು. ೪-೯); ಪುಗಲೆನ್ನದೆ ದಲ್ ಪುಗಿಮೆಂದು ಮೆಲ್ಪುಗುಂದದ ದನಿಯಿಂ ತಳಿರ್ತಸುಗೆಯೊಳ್ ನೆಲಸಿರ್ದ ಪಿಕಾಳಿ ಮೆಲ್ಲನೊಳ್ಳಿದು (ಪಂಪಭಾ. ೧೪-೦೩); ಆಲಿಗಳವು ನಸುಮುಚ್ಚಿ ಪಕ್ಷಯುಗ್ಮಮೆಳಲೆ ರಸಂದೆಗೆವ ದನಿ ನಿಮಿರೆ ನಾಲಗೆ ಬಿಗುರುತ್ತಿರೆ ಸವಿದುದೊಂದು ಗಿಳಿ ತನಿವಣ್ಣಂ (ಗಿರಿಕ. ೨-೩೯); ಪಾರಿವಗಳ ದನಿ ಕೊಳರ್ವಕ್ಕಿಯ ಲಲ್ಲಿ ಕೀರವಜ್ಜಿಗಳ ಬೈದಾಟ (ಕಂಸವಿ. ೦೦-೪೩). ೩. ಕಂಠ; ಶಾರೀರ : ಆಕ್ರಂದನದಿಂ ಗಂಟಲೊಡೆದು ದನಿ ಕಿಡೆ (ಕಾರಂಪೂ. ೯೪೯); ಕ್ರಮೇಣ ದನಿಯನ್ನು ದೊಡ್ಡದು ಮಾಡಿದನು (ಕಳಹು. ೩). ೪. [ಕಾವ್ಯವಿಮಾ] ವ್ಯಂಗ್ಯಾರ್ಥ : ಧ್ವನಿ : ಪದಮ ಪದಮರ್ಥಮರ್ಥಂ ಪುದಿದ ರಸಂ ತೃಪ್ತಕರರಸಂ ಭಾವಂ ಪೊಣ್ಮಿದ ಸದ್ಭಾವಂ ದನಿಯಿಂಪೊದವಿದ ದನಿಯೆನಿಸೆ ವೇಟ್ಟಪಂ ಕವಿತಿಲಕಂ (ಪುಷ್ಕಪು. ೦-೬೨). **ಧನಿ**$_1$: ೧. ಹಕ್ಕಿರ ಬರುತ್ತಿರುವ ಸ್ತೀಯ ಕಾಲಿನ ಧನಿ ಅವನ ಮನಸ್ಸನ್ನು ಎಳೆಯಿತು (ಪುಲಿನಾ. ೭೭). ೨. ಅಳುವ ಕಂದನ ಕಿರಿಕಿರಿಧನಿಯೂ ಅದನ್ನು ಸಂತೈಸಿ ಹಾಡುವ ತಾಯಿಯ ಧನಿಯೂ (ನಿಶಾಛ. ೪೯). [< ಸಂ. ಧ್ವನಿ]

ದನ್ನಿ, **ದಣ್ಣೆ**, **ಧಣೆ** (ನಾ). ಒಡೆಯ; ಯಜಮಾನ: ಅಯನದೀವಿಗೆಗೂ ದೇವರಿಗೆ ಮಾಲೆಗೂ ಕೂಡಿ ಹಂನೆರಡು ಹೊ(ಂ)ನ್ನನ್ನೂ ದನಿಯರ ಕಯ್ಯಲು ತಂದುಕೊಡುವರು ಯೀ ಧರ್ಮ್ಮವನೂ ಯೀಶ್ವರದನಿಯರ ಮಕ್ಕಳು ದಿವಾಕರದನಿಯರು ಆದಿಯಾಗಿ ನಡಸಿ ಪಾಲಿಸಿ ಬಹರು (ಸೌಇಇ. IX-11, ೪೦೭-೦೮ ; 1384) ; ಕಟಿಯ ಹಬ್ಬದಲು ಉಭಯ ಜಂಗಮರಿಗೆ ಆರೋಗಣೆಯ ಧರ್ಮಕೆ ಕೊಂಡ ಬಾಳು ಕೊಟ ಬಾಳಕಿಯ ಬಗೆಯಲು ದನಿಯರು ಮೂಲವಾಗಿ ಕೊಂಡ ಬಾಳು . . . ಬಾರಕೂರ ಪರಿವರ್ತ್ತನಕೆ ಸಲುವ ಗದ್ಯಾಣ ನೂಱು ಹೊಂನಂ ದನಿಯರ ಕೈಯಲು ಕೊಟ್ಟರು . . . ವರುಷಪ್ರತಿಯೂ ದಿವಾಕರದನಿಯರು ನಡಸಿ ಯಾ ಧ(ಂ)ರ್ಮ್ಮವನೂ ಪಾಲಿಸಿ ಬಹರು (ಸೌಇಇ. IX-11, ೪೦೩-೦೦; 1372); ದನಿಯರೇ ಬಹುದೂರದಲ್ಲಿ ಕುದುರೆಯ ಖುರಸಪ್ಪಳವು ಕೇಳಬರುತ್ತದೆ ; ಬೇಗನೆ ಓಡಿರಿ (ಮುಂದಾಕ. ೩೦). **ದಣ್ಣೆ** : "ದಣಿ (ಧಣಿ, ದನಿ) – ಧನಿನ್" (ತದ್ಭವಕೋ. ೦೮); ದಣಿಯ ಮನ ನೋಡಿದನೋ ವೇಂಕಟನ ಮನದಣಿಯ ನೋಡಿದೆ ಶಿಖಾಮಣಿ ತಿರುಮಲನ (ಪುರಂದ. ೨-೦೨೭ ಪಲ್ಲವಿ) : ದಣಿಯ ಅಪ್ಪಣೆಗೆ ತನ್ನ ಅಭಿಲಾಷೆಯೂ ನೆರೆಯಿತು (ಕಾವ್ಯಸಿ.೪೬); ವಿಕಾರಿಯಂತೆ ವಿಕಟನರ್ತನ ಮಾಡಿದ್ದೇಕೆ . . . ಅದೂನೂ ಸಾಕೆದ ದಣಿಯ ಎದುರಿಗೆ! (ತುಂಗಭ. ೨೪); ದಣೀ ತನಕ ದೂರು, ಹೊಳೀ ತನಕ ಓಟ (ಹುಟ್ಟಹ. ೦೧೪); ದಣಿ ಹೇಳಾಟ, ಬಡಗಿ ಮಾಡಾಟ (ಗಾಡ). **ಧಣಿ** : ಧಣಿ ಅನ್ನಾ ಉಂಡು ಬೆಳೆದ ದೇಹ (ಗ್ರಾಮಾಯ. ೬೦೦) ; ನಾವು ಧಣಿಗಳು, ನೀವು ಸೇವಕರು (ರಂಗಕ. ೩೮) ; ಧಣಿ ದಾನ ಕೊಡುವನು ಅಂದಾನ (ಅರಳು. ೪೩೦-೭).

[< ಸಂ. ಧನಿನ್./ತುಳು. ದನಿ, ದಣಿ./ಮರಾ. ಧನೀ, ಧಣೇ]

ದನಿಕೂರು (ಕ್ರಿ). ಗಂಟಲು ಕಟ್ಟು : ಹಾಡು ಹೇಳಲು ಆಗುತ್ತಿಲ್ಲ. ದನಿಕೂತಿದೆ (ರೂಢಿ). [ದನಿ$_1$ + ಕೂರು$_2$ (< ಕೂರ್$_3$)]

ದನಿಗುಟ್ಟು (ಕ್ರಿ). ಧ್ವನಿಮಾಡು; ಕೂಗು; ಕಿರಿಚು : ಹಟ್ಟಿಯೊಳಗಂದೆರಡು ಹೊತ್ತುಂ ಮುಟ್ಟಿ ಪೂಜಿಪ ದೇವರಿಗೆ ಮನವಿಟ್ಟು ತಾವಂತೆಜಗೆಱಿ ನಿಲಿನಿಲಿಕಿ ನೋಡುವವು . . . ದನಿಗುಟ್ಟುವವು ತಪ್ಪಿಲ್ಲವೆಮ್ಮಂ ದಿಟ್ಟಿಸೈ ಎಂಬವೊಲು ಕೇತಯ್ಯಗಳಿದಿರೊಳಹವು (ಬಸಪು. ೬೦-೭೯).

[ದನಿ$_1$ + ಕುಟ್ಟು$_{11}$]

ದನಿಗುಡು 'ದನಿಗೊಡು' ನೋ.

ದನಿಗೂಡಿಸು (ಕ್ರಿ). ೧. ಬೇರೆಯವರ ಧ್ವನಿಯೊಂದಿಗೆ ತನ್ನ ಧ್ವನಿಯನ್ನೂ ಸೇರಿಸು : ಹಾಡಿನಲ್ಲಿ ನೀನೂ ದನಿಗೂಡಿಸು (ರೂಢಿ). ೨. ಇನ್ನೊಬ್ಬರ ಅಭಿಪ್ರಾಯವನ್ನು ಅನುಮೋದಿಸು : ಉಳಿದವರು ಉಕ್ತಿಗಳು ನಿಜವಾದ ವಿಮರ್ಶಕ ವಿವೇಕದಿಂದ ಹೊರಟವೆ. ಅವಕ್ಕೆ ನಾವೂ ದನಿಗೂಡಿಸುತ್ತೇವೆ (ತವಸಿ. ೧೯೪). [ದನಿ$_1$ + ಕೂಡಿಸು]

ದನಿಗೂಡು (ಕ್ರಿ). ಸ್ವರವನ್ನು ಹೊಮ್ಮಿಸು ; ದನಿದೋರು : ಹೃದಯವು ಉಕ್ಕಿಬಂದಾಗ ಕೊರಲು ದನಿಗೂಡುವುದೆಂದು ಸರೋಜನಿದೇವಿಯು ಒಂದೆಡೆಗೆ ಹೇಳಿರುವಳು (ಪ್ರಬಂಧ. ೭೭). [ದನಿ$_1$ + ಕೂಡು$_1$]

ದನಿಗೆಡು (ಕ್ರಿ). ಧ್ವನಿ ಒಡೆ ; ಧ್ವನಿಯು ಕರ್ಕಶವಾಗು : ಜಿಡ್ಡುಪದಾರ್ಥ ತಿಂದು ದನಿಗೆಟ್ಟಿದೆ (ರೂಢಿ). [ದನಿ$_1$ + ಕೆಡು$_1$]

ದನಿಗೆಯ್, ದನಿಗೈ (ಕ್ರಿ). ಸದ್ದುಮಾಡು ; ಧ್ವನಿಮಾಡು ; ಕೂಗು : ಗೊಂಕಱುಕಪ್ಪೆ ಪಸುಂಬಂ ತತ್ಕ್ರಮದಿಂದಮೆ ದೀಪ್ತದಿಗ್ಭಾಗದೊಳ್ ದನಿಗೆಯ್ಕೆ ಮನಸ್ವಿದ್ಧಿಯನಾಗಳೆ ಉಂಟುಮಾಡುಗುಂ (ಲೋಕೋಪ. ೦೨-೦೬) ; ದನಿಗೆಯ್ಕುದು ವಿಸುಕದಿದೇಕೆನುತುಂ ಮೃಗಧೂರ್ತಸಮಿತಿ ಸಾರ್ತರೆ ಪಂಚಾನನವಿರ್ದುದು ಪಂಚತ್ವಮನನಾಕುಳಂ ಪೊರ್ದಿದಂತೆ ನಿಷ್ಕಂವತೆಯಿಂ (ವರ್ಧಪು. ೧೨-೩೩) ; ದನಿಗೆಯ್ವ ಕೂಟ ಕೋಗಿಲೆಗಳೊಪ್ಪಿದುವು (ಮೋಹತ. ೩-೨೫). **ದನಿಗೈ** : ಉಜಿ ದನಿಗೈವ ಕೊಂಬಳವಟ್ಟು ಮೆಱಿವಾ ಕಾಳೆ ಸನ್ನೆಗಳಿಸೆದುದವರೊಡನೆ (ಸಾಳ್ವಭಾ. ೩-೦೩).

[ದನಿ$_1$ + ಕೆಯ್$_1$]

ದನಿಗೇಳ್, ದನಿಗೇಳು (ಕ್ರಿ). ಧ್ವನಿಯನ್ನು ಕೇಳು; ಸ್ವರವನ್ನು ಆಲಿಸು: ಮನವಾಲ್ಕೆ ಮೆಯ್ಯಲಸಿಕೆ ಮಕ್ಕಳ ಮುದ್ದು ಬಿನದಂಗಳನು ಬಿಟ್ಟಿದ್ದುದ ನಿಗೇಳದ ಮುನ್ನ ತಾನಿದಿರ್ಗೊಂಡವನನುವರ್ಜಿತನುಸರಿಸುವುದುಂ (ಹದಿಬ. ೩-೦೩). **ದನಿಗೇಳು** : ನಾಲಗೆಯ ತೆರ ಬಾಡ ಸವಿ ತಿಳಿಯದುಂ . . . ಮುರಿದು ಕೊಲ್ಲದಿದು ಕೈಯಂತೆ ; ದನಿಗೇಳದು (ಕಎಪು. ೪೩-೭).

[ದನಿ$_1$ + ಕೇಳ್]

ದನಿಗೇಳು 'ದನಿಗೇಳ್' ನೋ.

ದನಿಗೈ 'ದನಿಗೆಯ್' ನೋ.

ದನಿಗೊಡು, ದನಿಗುಡು (ಕ್ರಿ). ೧. ಧ್ವನಿಮಾಡು ; ಕೂಗು ; ಮೊಳಗು : ದಟ್ಟಿಸುಗು ತೊಪ್ಪನೆ ಕೆಡೆಗು ದ[ಪಾಕಾಂ. ಧ]ನಿಗೊಟ್ಟು ಕರೆದು ಕರಂ ಮುಗಿದು ಹೊಡವಟ್ಟು ಗಿಣ್ಣಲನಂತು ನೂಕುಗು (ಬಸಪು. ೦೪-೦೮) ;

ತಪ್ಪೆವೆಮ್ಮಯ ವ್ರತಕೆನುತೊಱಲುತಿಪ್ಪವೊಲು ದನಿಗೊಟ್ಟು ಕರೆವುತಿಪ್ಪ ವಂಬೆಯೆನುತ್ತ ತಲೆಗಳನೆತ್ತಿ ನೋಡುವವು (ಬಸಪು. ೭೦-೨೮) ; ತೊಲಗಿ ಬಾ ಬಿದ್ದವರ ತುಳಿಯದಿರೆನುತ ದನಿಗೊಡಲು (ಕಾತಿರಾ. ೨೯-೨೫). ೨. ಪ್ರತಿಧ್ವನಿ ಮಾಡು : ಮರಗಿರದ ವ್ಯಗಗಿಗದ ಮಾತೇನರಸ ಭೀಮನ ದನಿಗೆ ಬೆಚ್ಚದೆ ಗಿರಿಗುಹೆಗಳೇ ಮಲೆತು ನಿಂದವು ದನಿಗೆ ದನಿಗೊಡುತ (ಕುವಾಕಾ. ೧೦-೧೧). **ದನಿಗುಡು:** ೧. ದನಿಗುಡೆ ಬದ್ದವಣಂ ವೇದಿನಿಸುರರುಚ್ಚರಿಪ ಮಂತ್ರದುಲಿ ಪಸರಿಸೆ (ಉದ್ಭಟ. ೯-೫೭) ; ಮುಂಡಿ ಜಗುಟಿ ನೇವುರಂ ದನಿಗುಡೆ ಬಡನಡು ಬಳ್ಕೆ . . . ಬಂದಳೊರ್ವಳ್ ನಡೆ ನೋಡಿದಳಾಗಳಂತೆ ನಾಣಟ್ಟಿವಿನೆಗಂ (ಕಬ್ಕಾ. ೩೩೫)

[ದನಿ$_1$ + ಕೊಡು$_1$]

ದನಿದೋರು 'ದನಿದೋಱು' ನೋ.

ದನಿದೋಱಿಸು (ಕ್ರಿ). ೧. (ಹೆದೆ ಮುಂತಾದುವನ್ನು) ಧ್ವನಿಯಾಗುವಂತೆ ಮಾಡು,–ಸದ್ದುಮಾಡಿಸು : ಧನುವ ನೇವರಿಸಿದನು ಕೊಪ್ಪಿನ ಕೊನೆಯನಾರ್ಕೈದುಭಯದಲಿ ಸಿಂಜನಿದು ದ[ಶಾಣಂ. ಧ]ನಿದೋಱಿಸಿದ ಸಬುಜಭವಾಂಡಘಟ ಬಿಱಿಯೆ (ತೂಕರಂ. ೩-೬-೭). ೨. ಮೊಳಗು ; ಮೊರೆ ; ಘೂರ್ಣಿಸು : ಕೇಶವ ಸರ್ವೋತ್ತಮನೆಯೆಂದು ತತ್ವವಿಲಾಸದಿ ನುಡಿದಾಮ್ನಾಯಘೋಷಣೆಯೆಂಬಂತೆ ಲವಣಾಬ್ಧಿ ವರಮಸಂತೋಷದೆ ದನಿದೋಱಿಸಿತು (ಪೋಹತ. ೨೯-೩೪). [ದನಿ$_1$ + ತೋಱಿಸು]

ದನಿದೋಱು, ದನಿದೋರು (ಕ್ರಿ). ಸದ್ದುಮಾಡು ; ಶಬ್ದಮಾಡು : ಬಂದುವಿನೊಳಗಡಗಿಪ್ಪ ನಾದ ದನಿದೋಱದಂತೆ ಪಿಂಡ ಬ್ರಹ್ಮಾಂಡಂಗಳ ಕೂಡಿಪ್ಪ ಸೌರಾಷ್ಟ್ರಸೋಮೇಶ್ವರಲಿಂಗವನಾರು ಭೇದಿಸಬಾರದಯ್ಯ (ಆದಪ. ೩-೭) ; ಅನ್ಯಭೃತಂ ದನಿದೋಱಿದನ್ನವೋರಂತೆ ವಸಂತದೇಟ್ಟಿರವು ದೋಱುವವೋಲ್ ನನೆದೋಱಿದತ್ತು ವಾಸಂತಿ (ಜಗವಿ. ೦೪-೨೦) ; ಕನರ್ಗೊನರಂ ಕರ್ದಂಕಿ ದನಿದೋಱುವ ಕೋಗಿಲೆ ಮೇಳದಾಳ್ಗಳಿಂದನೆ (ಕಬ್ಕಾ. ೬೧) ; ಸುಳಿವ ಕಟ್ಟಿಗೆಕಾಱಿರಾಸ್ಥಾನದೊಳು ಕೋಗಿಲೆಯಂತೆ ದನಿದೋಱುತಿಹರು (ಧರಕ. ೧-೬೦). **ದನಿದೋರು :** ಭೀಮನ ಕೊಳ್ಳುವ ನೇರಿ ರಾಮ ಹೊರಟನು ಅಗ ಸ್ವಾಮಿ ಮೆಲ್ಲನೆ ದನಿದೋರೊ ಎನುತ (ಸಿದ್ಧಪು. ೫-೬೧). [ದನಿ$_1$ + ತೋಱು]

ದನಿಮಾಡಿಸು (ಕ್ರಿ). ನುಡಿಸು; ಬಾರಿಸು : ಹಾಡಿಸಬೇಡ ನಾನಾವಾದ್ಯವ ದನಿಮಾಡಿಸಬೇಡೋರ್ವರೊಡನೆ ಆಡಿಸಬೇಡ ಸ್ವ ಸ್ವ ದಿ ನಿದ್ದೆಗೆಯ್ದು ದೆಂದಾಡಿದಳಾ ಚಿತ್ರಲೇಖೆ (ಪೋಹತ. ೪೭-೩೬) ; ವಾರಿಜದಳನೇತ್ರ ಬಲಗೂಡಿ ಪ್ರಸ್ಥಾನಭೇರಿಯ ದನಿಮಾಡಿಸಿದ (ಪೋಹತ. ೩೬-೨೬).

[ದನಿಮಾಡು + – ಇಸು$_3$]

ದನಿಮಾಡು (ಕ್ರಿ). ೧. ಶಬ್ದಮಾಡು ; ಜೇವೊಡೆ ; ಟಂಕಾರಮಾಡು : ಸಾರಥಿಯ ಬೋಳ್ಕೈಸಿ ಚಾಪದ ನಾರಿಯನು ದನಿಮಾಡಿ (ಕುವಾಕಾ. ೪-೦೦). ೨. ಗಟ್ಟಿಯಾಗಿ ಕೂಗು: ಓನಾಮ ಓದು ಚಿಲ್ಲಾಳ ಬಾಯೆಂದು ಚೆಂಗಳ ಕರೆದಾಳ ದನಿಮಾಡಿ (ಕೋಳಗೀ. ೧೮೦) ; ಬಾಲಸಿದ್ದ ದನಿಮಾಡಿ ತಾಯಿಗೆ ಕರೆದನು (ಸಿದ್ಧಪು. ೩-೮೭). [ದನಿ$_1$ + ಮಾಡು$_1$]

ದನಿಮಿಟು (ನಾ). ದನಿಯಂ ಮಿಡಿತ ; ಧ್ವನಿ : ಕ್ರಿಮಿ–ಕೀಟ ತುಂಬಿ ಈಟೀಟು ತುಂದಿ ದನಿಮಿಟು ತುಂಬಿ ತುಂಬಿ ಇದ್ದದ್ದು ತುಂಬಿ ಇಲ್ಲದ್ದು ತುಂಬಿ ಅಹುದಲ್ಲದೆಲ್ಲ ತುಂಬಿ (ಗಂಗಾತ. ೧೦೮-೦೩). [ದನಿ$_1$+ಮಿಟು$_3$]

ದನಿಯಿಡು (ಕ್ರಿ). ೧. ಧ್ವನಿಯನ್ನು ತೆಗೆ,–ಎತ್ತು : ದನಿಯಿಡುತುಂ . . . ಕೀರಮಿರುತಿರ್ದುದು ತತ್ಸಹಕಾರಶಾಖೆಯೊಳ್ (ಕುಸುಮಾ. ೧೩-೧೩). ೨. ಧ್ವನಿಯನ್ನು ಸೇರಿಸು ; ದನಿಮಾಡಿಸು ; ಸ್ಪಂದಿಸು : ಯಮುನೆಯ ಮರುಕದೊಂದಿಗೆ ನನ್ನ ಹೃದಯವೂ ದನಿಯಿಟ್ಟಿತು (ಆಲಹೂ. ೧೧೪). [ದನಿ$_1$ + ಇಡು$_1$]

ದನಿಯೆತ್ತು (ಕ್ರಿ). ಸ್ವರವನ್ನು ಹೊಮ್ಮಿಸು ; ಧ್ವನಿಮಾಡು : ನಡೆ ಕೆಲಕಂಚಿ ಬಿಸ್ನವಿಸು ಬೇಗದೆ ಕೋಗಿಲೆ ಪಾಡಿನೋಜೆಯಂ ಗಡಣಿಸು ತುಂಬಿ ಸೋಗೆ ದನಿಯೆತ್ತದಿರೊಯ್ಯನೆ ಬಾದು ಕುಳ್ಳಿರೀಯೆಡೆಗೆ ಬಸಂತ ಯೆಂದು ಗಿಳಿಗಳ್ ಕಡುಪಿಂ ನಡೆತಂದು ಸುತ್ತಲುಂ ವಡಿಯಜಿರಾಗಿ ಚಪ್ಪರಿಪುವೋಲಗದೊಳ್ ಸಲೆ ಕರ್ವುವಿಲ್ಲನಾ (ಕಬ್ಕಾ. ೦೩೭).

[ದನಿ$_1$ + ಎತ್ತು$_1$]

ದನಿಷ್ಠೆ (ನಾ). [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಇಪ್ಪತ್ತೂ ಮೂರನೆಯದು : "ಧನಿಷ್ಠಾ, ಶ್ರವಿಷ್ಠಾ–ಈ ೨ ದನಿಷ್ಠೆ" (ಹಲಾಯು. ೧೦-೫೧). [<ಸಂ. ಧನಿಷ್ಠಾ]

ದನಿಸಂತೆ (ನಾ). ಅನೇಕ ಶಬ್ದಗಳ ಕೂಟ ; ಗಲಾಟೆ ; ಗದ್ದಲ : ವರ್ಧಿಸಿತೊ ನೂಪುರರವಂವೆರಸಿ ಸ್ತ್ರೀಜನಾಕ್ರಂದನಂ, ಪುಷ್ಯಪ್ರಭಾತದೊಳ್ ಕ್ರೌಂಚಪಕ್ಷಿಯ ಪಂಕ್ತಿ ನೆರೆದು ಮುಗಿಲೆತ್ತರದಿ ದನಿಸಂತೆಗೈವಂತೆವೋಲ್ (ಶ್ರೀರಾಮಾ. ೯೦-೩೬೦). [ದನಿ$_1$ + ಸಂತೆ$_1$]

ದನಿಸರ (ನಾ). [ಸಂಗೀತ] ಸ್ವರ : ಒಂದು ಹರಿವ ಹಾವು ಒಂದು ದನಿಸರಕ್ಕೆ ನಿಂದ ಹಾವು ಒಂದು ಉರಿವ ಹಾವು ಮೂವಱ ನಡುವೆ ನಿಂದು ಆಡುವ ಕೋಡಗದಿರವು ಎಂತೆಂದಡೆ (ಅಷ್ಟಾಮಾ. ೧೪೭-೦೬೫). [ದನಿ$_1$ + ಸರ$_3$]

ದನು (ನಾ). ದಕ್ಷನ ಮಗಳು ; ಕಶ್ಯಪನ ಹೆಂಡತಿ ; ದಾನವರ ತಾಯಿ : "ದಾನವರ ತಾಯ್ ದನುವೆನಿಕು" (ಮಂಗರಂ. ೭-೩೪). [ಸಂ.]

ದನುಕಂಪ (ನಾ). (?) : ಒಂದನ ಕೇಳ್ ವೇಟ್ಟಿಂ ಪನ್ನೊಂದನೆ ಯುಗ ಕಾದಿಯಪ್ಪ ಪಿಂಗಳದೊಳ್ ಕಾರ್ಗೆಂದು ಮಟಿಯಿಲ್ಲ ಕಳ್ಳರ್ ಕುಂದರ್ ದನುಕಂಪಮೆಂಬ ಮತ್ಸಂ ಬರ್ಕುಂ (ಜಟ್ಕಮ. ೭-೩೪).

[P ಇದು 'ತನುಕಂಪ' ವಿರಬಹುದೆ ?]

ದನುಕುಲ (ನಾ). ದನುವಿನ ಸಂತತಿ ; ರಾಕ್ಷಸಕುಲ : ವನುಕುಲವೆಲ್ಲ ದನುಕುಲದಂತೆ ಒಬ್ಬರನ್ನೊಬ್ಬರು ತುಳಿಯುತ್ತಾರೆ (ಜಾಳಬ. ೩).

[ದನು + ಕುಲ]

ದನುಜ (ನಾ). ದನುವಿನಲ್ಲಿ ಹುಟ್ಟಿದವನು ; ದಾನವ ; ರಾಕ್ಷಸ ; P ದಿತಿ ಮತ್ತು ದನು ಇವರಿಬ್ಬರೂ ಬೇರೆ ಬೇರೆಯ ವ್ಯಕ್ತಿಗಳಾದರೂ ರಾಕ್ಷಸರ ತಾಯಿಯೆಂದು ಪರಿಗಣಿಸಲ್ಪಡುತ್ತಾರೆ : "ದನುಜರ್ ದೈತೇಯರ್ ದಿತಿತನೂಭವರ್ ಪೂರ್ವದೇವರಸುರರ್ . . . ಶುಕ್ರ ಶಿಷ್ಯರ್" (ವಸು.ಕೋ. ೬-೩೨) ; "ಆ ದನುಜರಂ ಪುಣ್ಯಜನಮೆಂಬುದು" (ಪುಂಗರಾ. ೦೫೮-೨) ; ದನುಜರ ಕಯ್ಯೊಳಿರ್ದ ಮರ್ದನಾವಗಮಿಟ್ಟಿಳ್ಕಳೆಂದು ದೈತ್ಯಮರ್ದನನೆನಿಸಿರ್ದವಂ ಕಪಟದಿಂದೆ ವಿಲಾಸಿನಿಯಾದ ವೇಷಮಂ ನೆನೆಯಿಸಿದಪ್ಪುದೀ ಪಸಿಯ ಬಣ್ಣವಿವಳ್ಗೆನೆ . . . ಆದವೊಪ್ಪಿದಳ್ (ಕಾದಂಪೂ. ೩೮). [ಸಂ.]

ದನುಜಕುಲ (ನಾ). ರಾಕ್ಷಸರ ವಂಶ ; ದನುಜಕುಲಕವ ಕೊಡಲಿಗಾವಾ ದನು ಮಹಾದೇವ (ಕಾತಿರಾ. ೩೨-೩೪). [ದನುಜ + ಕುಲ]

ದನುಜಗುರು (ನಾ). ರಾಕ್ಷಸರ ಗುರು ; ಶುಕ್ರಾಚಾರ್ಯ : ಬಹುವಕ್ಕಂ ವದ್ಮಗರ್ಭ್ಯಂ ದನುಜಗುರು ಗುರುದ್ವೇಷಿ ಜೀವಂ ಸುರಾಧೀಶಹಿತಾತ್ಮಂ ಸುಪ್ರಬುದ್ಧೋದ್ಧವನೆನಿಪವನುಂ ತಾನಕಾರ್ಯ್ಯಪ್ರಯುಕ್ತಂ (ಎಳ. VIII, ಸೂರಬ. ೦೪೦-೫೬ ; 1199). [ದನುಜ + ಗುರು$_3$]

ದನುಜಘರಟ್ಟ (ನಾ). ೧. ರಾಕ್ಷಸರಿಗೆ ಬೀಸುವ ಕಲ್ಲಿನಂತಿರುವವನಂ ; ದನುಜರನ್ನು ನಾಶಮಾಡುವವನು. ೨. ವಿಷ್ಣು : ರಾಯದನುಜ ಘರಟ್ಟ ಪಾಂಡವರಾಯ ಜಂಗಮಜೀವ ನಿರ್ಜಿತಮಾಯ ನಿಜವನು ತೋಱಿ ಪಾರ್ಥನನೊರಿದು ಬೋಧಿಸಿದ (ಕುವ್ಯಾಭೀ. ೩ ಸೂಕತಿ). ೩. ರಾಮ : ಅತ್ತ ದನುಜಘರಟ್ಟ ದೂರದಿ ಕಂಡು ನಸುನಗುತಿರ್ದ ವನದೊಳಗೆ (ಕಾತಿರಾ. ೦೮-೫೩). [ದನುಜ + ಘರಟ್ಟ]

ದನುಜಪುಂಗವ (ನಾ). ರಾಕ್ಷಸರಲ್ಲಿ ಶ್ರೇಷ್ಠನಾದವನು ; ದೈತ್ಯಶ್ರೇಷ್ಠ : ಶೂಲಾಗ್ರದೊಳಗಿರ್ದ ಕರಿದನುಜಪುಂಗವಂ ಭಾಲಾಕ್ಷನಂ ಕೀರ್ತಿಸುತ್ತ ಬಿನ್ನವಿಸಿದಂ (ವೀಶ್ವಪು. ೩-೧೮-೩೬). [ದನುಜ + ಪುಂಗವ]

ದನುಜಮಥನ (ನಾ). ರಾಕ್ಷಸರನ್ನು ನಾಶಮಾಡುವವನು ; ಕೃಷ್ಣ : ರಥದಿಂದಮಿಳಿದು ತನಗಿದಿರಾಗಿ ಬಹ ದನುಜಮಥನನಂ ಕಾಣುತೆ (ಕೃಷ್ಣಮಿಥಾ. ೧೪-೨೮). [ದನುಜ + ಮಥನ]

ದನುಜವಿರೋಧಿ (ನಾ). ರಾಕ್ಷಸರ ವೈರಿ ; ಕೃಷ್ಣ : ದನುಜವಿರೋಧಿ ಮಾಡಿದೊಡಮಾಗದ ಸಂಧಿಯೊಳೇನೊ (ಗದಾಯು. ೦-೩೬).

[ದನುಜ + ವಿರೋಧಿ]

ದನುಜಹರ (ನಾ). ರಾಕ್ಷಸರನ್ನು ನಾಶಮಾಡುವವನು ; ಕೃಷ್ಣ : ಎನಗಾ ದನುಜಹರಂ ಜನಕಂ (ಜಗವಿ. ೧-೩೪) ; ಭುಜಾಸ್ಫಾಲನವಿಬಂಧನ ಚಿತ್ರ ಗತಿಗಳಲಿ ತನತನಗೆ ಗೋವಳರು ಮಲ್ಲರನನುಕರಿಸಿ ತಿವಿದಾಡುವರು ಬಲ ದನುಜಹರರೊಡನಾಡಿಗಳು ತಾವಾಗಿ ವಿಪಿನದಲಿ (ನಿಭಾಗ. ೧೦-೧೮-೧೦).

[ಸಂ.]

ದನುಜಾಂತಕ (ನಾ). = ದನುಜಹರ : ದನುಜಾಂತಕನೆಂಬೀ ನಿನ್ನ ನಚ್ಚು ವೋದಂಕಮೆಲವೊ ಮುನ್ನೆನ್ನನ್ನಂ ದನುಜಂ ಪುಟ್ಟದೆ ಸಂದುದು ನಿನಗೀ ಪೆಸರೆನ್ನ ಮುಂದೆಯುಂ ಸಂದವುದೇ (ಪಂಪಭಾ. ೬-೫೪).

[ದನುಜ + ಅಂತಕ]

ದನುಜಾಧೀಶ್ವರ (ನಾ). ರಾಕ್ಷಸರ ರಾಜ ; ರಾವಣ : ದನುಜಾಧೀಶ್ವರನ ಪುರಾತನ ಪುಣ್ಯದ ಫಲದಿನಾಯುಧಾಗರದೊಳೇಂ ಜನಿಯಿಸಿದುದೊ . . . ಚಕ್ರಂ (ಪಂರಾಮಾ. ೧೦-೧೯೫). [ದನುಜ + ಅಧೀಶ್ವರ]

ದನುಜಾರಾತಿ (ನಾ). ೧. ರಾಕ್ಷಸರ ವೈರಿ ; ವಿಷ್ಣು : "ದನುಜಾರಾತಿ ಮುಕುಂದನಬ್ಧಿಶಯನಂ . . . ಅಬ್ಜೋದರಂ" (ವಸ್ತುಕೋ. ೪-೨೦). ೨. ಕೃಷ್ಣ : ದನುಜಾರಾತಿ ಸ್ಯಮಂತರತ್ನವ ನೃಪಂಗೀಯಲ್ಕೆ ದೂಱ್ ಪೋದುದೇ ಜನರಂ ಮೆಚ್ಚಿಸಲಾಗದೈ (ಸೋಮೇಶ. ೮೩). ೩. ದೇವತೆ : ನಿಜನೇತ್ರಂ ಲೋಕನೇತ್ರಂ ನಿಜಭರಣಮಿಳಾಚಕ್ರಭಾರಾವಹಂ ಮೇಣ್ ನಿಜವಾಹಂ ಧರ್ಮಗೇಹಂ ನಿಜಧನು ದನುಜಾರಾತಿಜಾತಾಧಿವಾಸಂ . . . ಕುಡುಗೆಮಗತುಳಶ್ರೇಯಮಂ ಶೈಲಜೇಶಂ (ರಾಜಶೇ. ೧-೨).

[ದನುಜ + ಅರಾತಿ]

ದನುಜಾರಿ (ನಾ). = ದನುಜಾರಾತಿ : ಆ ದನುಜಾರಿಯನಾತ್ಮಗರ್ಭ ದೊಳ್ ಧರಿಯಿಸಿ ನಿಂದಳೀ ಪಿರಿಯಳಿಂ ಪಿರಿಯರ್ ಪೆಱರಿಲ್ಲ ಲೋಕ ದೊಳ್ (ಜಗವಿ. ೨-೯೬) ; ಅಂಜನಾದ್ರಿಯ ಮೇಲೆ ಸಿಡಿಲೆಱಗಿದಂತಾಗೆ ದನುಜಾರಿ ಮೈಮಱೆದನು (ಕೃಷ್ಣಮಿಥಾ. ೬-೫೫). [ದನುಜ + ಅರಿ$_6$]

ದನುಜಾರಿಪ್ರಿಯೆ (ನಾ). ವಿಷ್ಣುವಿನ ಹೆಂಡತಿ ; ಲಕ್ಷ್ಮಿ : "ಶ್ರೀರಾಮೆ ಗೋವಿನಿ ವಾರಿರುಹಾವಸಥೆ ಪದ್ಮೆ ರಮೆ ಕಮಲೆ . . . ಸಿರಿ ದನುಜಾರಿ ಪ್ರಿಯೆಯೆಂದಿವಿಂದಿರಾನಾಮಂಗಳ್" (ವಸ್ತುಕೋ. ೫-೨೬).

[ದನುಜಾರಿ + ಪ್ರಿಯೆ]

ದನುಜಾರಿರಿಪು (ನಾ). ಕೃಷ್ಣನ ಶತ್ರು ; ಜರಾಸಂಧ : ದನುಜಾರಿರಿಪು ಜರಾಸಂಧನೆಂಬ ಸುತನತಿರಥಂ ಬೃಹದ್ರಥನಾಮಾವನಿಪಂಗೆ ಚಂಡಕೌಶಿಕ ಮುನೀಂದ್ರನಿಂದಾದಂ (ಕಾದಂಪೂ. ೩೪೯). [ದನುಜಾರಿ + ರಿಪು]

ದನುಜೆ (ನಾ). ರಕ್ಕಸಿ ; ರಾಕ್ಷಸಿ ; ದೈತ್ಯೆ : ದನುಜೆಯಲ್ಲಾಂ ಮನುಜೆ ಯಾನರ್ಥವಿಷಯದಾಪೇಕ್ಷೆಯಿಂ ಕೊಂಡೊಯ್ದು ಕೊಂದೆನೀ ಶಿಶುವ (ಹಡಕಾ. ೧೩-೬) ; ಮತ್ತಿದುವೆ ಹೊಮ್ಮಿಗವಧೆಗೆ ಕೋ ಮತ್ತಿದುವೆ ದನುಜೆಯ ಮೂಗ ಕೊಯ್ದಾ ಸುಭಟತನಕಿದುವೆ ಇದು ಸುಬಾಹುವ ಹರಣಕೊಂಡುದಕೆ . . . ಕೊಳ್ಳೆನುತಸುರ ರಾಮನನೆಚ್ಚು ಮೂದಲಿಸಿ (ಕೌಶಿರಾ. ೩೫-೩೦). [ಸಂ. ದನುಜಾ]

ದನುಜೇಂದ್ರ (ನಾ). ರಾಕ್ಷಸರ ರಾಜ ; ರಾಕ್ಷಸರ ದೊರೆ : ದನುಜೇಂದ್ರನ ಸೇನೆಯ ವಜ್ರನ ದೋರ್ದಂಡಂಗಳಂ ಕುಠಾರಾಯುಧದಿಂ . . . ತಱಿದಂ (ಪಂರಾಮಾ ೧೩-೧೦೪) ; ದನುಜೇಂದ್ರನ ಮಡಿವರ್ಗ ಮನೆನಗೀಯದೊಡೆ . . . ಅಗಸವೊಯ್ಲ ಸವಿಯಂ ತೋರ್ಪೆಂ (ಜಗವಿ. ೬-೭). [ದನುಜ + ಇಂದ್ರ]

ದನುಜೇಂದ್ರನಿಕೇತ (ನಾ). ರಾಕ್ಷಸರ ವಾಸಸ್ಥಾನ ; ಪಾತಾಳಲೋಕ : " ಪಾತಾಳಂ ದನುಜೇಂದ್ರನಿಕೇತಮದೋಭುವನಮುರಗಲೋಕಂ " (ವಸ್ತುಕೋ. ೧೯-೫). [ದನುಜೇಂದ್ರ + ನಿಕೇತ]

ದನುಜೇಜ್ಯ (ನಾ). = ದನುಜಗುರು : ದನುಜೇಜ್ಯಂ ಧರ್ಮ ಕರ್ಮ ತ್ರಿತನು ಧನ ಚತುಷ್ಪಂಚ ರಂಧ್ರಾಯದೊಳ್ . . . ಲೇಸೆನಿಕ್ಕುಂ (ಜಾತತಿ. ೧೦-೧೩) ; ಅನಿಮಿಷಮಂತ್ರಿಯೊಳೊಂದಿದ ಶನಿಯಿಂದಂ ಮಡಕೆ ಮಾಟ್ಟನಡಲುಂ ಬಲ್ಲಂ ದನುಜೇಜ್ಯನಿಂ ಗುಣಾಧಿಕನೆನಿಕುಮದೀ ಯೋಗ ಸಂಭವಂ ಬುಧಮಿತ್ರಾ (ಜಾತತಿ. ೧೫-೫). [ಸಂ.]

ದನುಜೋದೀರಿತ (ನಾ). [ಜೈನ] ರಾಕ್ಷಸರಿಂದ ಉಂಟಾದುದು : ಶಾರೀರ ಮಾನಸ ಕ್ಷೇತ್ರಜ ಪರಸ್ಪರೋದೀರಿತ ದನುಜೋದೀರಿತಂಗಳೆಂ ಬಯ್ದುಂ ತೆಱದ ದುಃಖಂಗಳೊಳರ್ದು (ಆದಿಪು. ೫-೮೮ ವ). ℙ ಶರೀರ ದಿಂದ, ಮನಸ್ಸಿನಿಂದ, ಕ್ಷೇತ್ರದಿಂದ, ಪರಸ್ಪರರಿಂದ ಮತ್ತು ರಾಕ್ಷಸ ರಿಂದ ಉಂಟಾದುವೆಂದು ಹೇಳಲಾಗುವ ಐದು ಬಗೆಯ ದುಃಖಗಳು.

[ದನುಜ + ಉದೀರಿತ]

ದನುನಂದನ (ನಾ). = ದನುಜ : ದನುನಂದನನಿನನಂದನನಿನನಂದನನಿನನ ನಂದನನ ನಂದನನಂ ದಿನನಂದನನೆಂದನುದಿನ ದನನಿನನಾನನ್ನನಾದೆನಾಂದಂ ನಿನ್ನಂ (ಮದತಿ. ೬-೧೦). [ದನು + ನಂದನ]

ದನುಪ್ರಭವ (ನಾ). = ದನುಜ : ದನುಪ್ರಭವದಾರಣತ್ವರೆಯ ನಿನ್ನುಮಂ ಮುಂಚೀಯನಾಥ ಭಯವಾರಣಪ್ರವಣಹಸ್ತಮುದ್ಯೋಗಿಕುಂ (ವಸ್ತುಪಂ. ೨೫). [ದನು + ಪ್ರಭವ]

ದನುಸುತ (ನಾ). = ದನುಜ : ದನುಸುತಂ ಕಿಟ್ ತನ್ನನಾ ಮುಳಿಸಿಂ ಮೃಡಾದ್ರಿಯೆ ಸಿಂಹವಾಹಿನಿಯ ರೂಪಿನೊಳಾಹವಕ್ಕೆ ಸಹಾಯಮಾಯ್ತು ರಘೂದ್ವಹಂಗೆ (ಪಂರಾಮಾ. ೧೪-೫) ; ದನುಸುತನೊರ್ವ್ವನುರ್ವ್ವರೆಯನಾ ರಸೆಗುಯ್ದೊಡವಂಗೆ ಭಂಗಮಂ ಜನಿಯಿಸಿ ತನ್ದ ಮುಂನ್ನಿನ ಮುಕುಂದನ ಶೌರ್ಯಮನಾತ್ಮವಿಕ್ರಮಂ ನೆನೆಯಿಸೆ (ಎಕ. XI, ದಾವಣ. ೩೫-೮ ; ಸು. 1160). [ದನು + ಸುತ]

ದಪ್ (ನಾ). ಒಂದು ಅನುಕರಣ ಶಬ್ದ : ಅವನು ದಪ್ ಎಂದು ಬಿದ್ದ (ರೂಢಿ) ; ಅವಳು ದಪ್ಪೆಂದು ಹೊಡೆದಳು (ರೂಢಿ).

ದಪ$_1$ (ನಾ). ಒಂದು ಅನುಕರಣ ಶಬ್ದ.

ದಪದಪ (ದ್ವಿರುಕ್ತಿ) : ಅವನಂ ಕಳ್ಳನಿಗೆ ದಪದಪ ಎಂದು ನಾಲ್ಕೇಟು ಹೊಡೆದ (ರೂಢಿ). 'ದಪದಪನೆ' ಪರಾ.

ದಪ$_2$ 'ದಫಾ' ನೋ.

ದಪಗೊಳ್ಳು (ಕ್ರಿ). ಯಾಸಗೊಳ್ಳು ; ಸುಸ್ತಾಗು : ಹೀಗೆಯೆ ದಪಗೊಂಡು ಬಿದ್ದಾಗ ಒಂದು ಮೂಲೆಯಲ್ಲಿ ಬೆಳಕು ತೋರಿತು (ಮೇದಿಮ. ೭೦).

[ದಪ.? + ಕೊಳ್ಳು$_1$ (<ಕೊಳ್$_1$)]

ದಪದಪನೆ (ಅ). ದಪದಪ ಎಂಬ ಶಬ್ದದೊಡನೆ : ಗಾಡಿ ಇದ್ದಕ್ಕಿದ್ದಂತೆ ನಿಂತಾಗ ಅದರಲ್ಲಿದ್ದ ವಸ್ತುಗಳೆಲ್ಲಾ ದಪದಪನೆ ಬಿದ್ದುಹೋದುವು (ರೂಢಿ).

[<ದಪ$_1$ + – ಅನೆ$_1$]

ದಪಾ 'ದಫಾ' ನೋ.

ದಪ್ತರ 'ದಫ್ತರು' ನೋ.

ದಪ್ತರಖಾನೆ 'ದಫ್ತರಖಾನೆ' ನೋ.

ದಪ್ತರದಾರ 'ದಫ್ತರದಾರ' ನೋ.

ದಪ್ತರು 'ದಫ್ತರು' ನೋ.

ದಪ್ಪ$_1$, ದಿಪ್ಪ (ನಾ). ೧. ತೋರ; ಗಾತ್ರ; ಗಡುತರ; ಮಂದ: "ತೋರಂ ದಪ್ಪಂ" (ಕಾಶಕ್ಯ. ೧೭೮); ಬೆರಲ ದಪ್ಪದೊಳು ಬಟುಹಾಗಿ ಕಳಿಲೆಯನ್ನುತ್ತರಿಸಿಕೊಂಡದಱ[ವೊಗರನು]ಹೋಹ ತೆಱದಿನುಕ್ಕರಿಸಿ ನೀರಂ ಹಿಂಡಿ (ಸೂಪಶಾ. ೬-೩); ಢಾಳಿಸುವ ನಿಡುಗಣ್ಗಳು ದಪ್ಪಾದ ಗಂಭೀರ ನಾಭಿಯಂ . . . ಬಟ್ಟನುಣ್ಣೊಡೆ ಜಂಘೆಗೊಪ್ಪುತ್ತಿರುವ ಮೆಲ್ಲಡಿಗಳಿಂದ ಮಖವೀರ್ಯನಾತ್ಮಜಂ ಶೋಭಿಸಿದನು (ಪರಶು. ೪-೨). (ಗು). ೨. ಒರಟಾದ; ನಯವಿಲ್ಲದ. 'ದಪ್ಪಕಾಗದ' ಪರಾ. ೩. ದೊಡ್ಡದಾದ; ಗಾತ್ರವಾದ. 'ದಪ್ಪಕ್ಕಿ' ಪರಾ. ದಿಪ್ಪ: (ನಾ). ೪. ಸಮೂಹ; ದಟ್ಟಣೆ; ಸಂದಣಿ: ಉಪ್ಪರಿಗೆಗಳಗ್ರಂಗಳೊಳೊಪ್ಪಂಬಡದಿರ್ದ ಪೊನ್ನ ಕಳಸಸಮೂಹಂ ತಪ್ಪನೆ ಪುರಮಂ ನೋಡಲ್ ದಿಪ್ಪದೆ ಬಂದಿರ್ದ ಸೂರ್ಯಕುಲಮೆನೆ ತೋರ್ಕುಂ (ಹಾಲಾಸ್ಯ. ೧-೪-೭೦). ೫. ಮಂದವಾದುದು; ದಟ್ಟವಾದುದು: ಗೋಮಯಪಂಕಮಂ ವಿಳಸಿತೋನ್ನತ ಭಸ್ಮ ಕಾರಣಮಂದು ತಮ್ಮ ಮೊಕಂಗಳೊಳ್ ದಿಪ್ಪಮಾಗೆ ಪೂಸಿಕೊಂಡು (ಹಾಲಾಸ್ಯ. ೪-೧೫-೮೦). ೬. ಕಡುವಾದುದು; ಗಟ್ಟಿಯಾದುದು: ದಿಪ್ಪಾದ ಬಣ್ಣವನ್ನು ಕೂಡ್ರಿಸಬೇಕಾದರೆ ಯೆರಡು ಮೂರು ಸಾರಿ ಬಣ್ಣದೊಳಗೆ ಯೆದ್ದಬೇಕಾಗುತ್ತದೆ (ಕಛಾಗೆ. ೧೫೩).

ದಪ್ಪವಾಗು=ಸ್ಥೂಲವಾಗು; ತೋರವಾಗು: ಅವಳು ಬರುಬರುತ್ತಾ ತುಂಬ ದಪ್ಪವಾಗುತ್ತಿದ್ದಾಳೆ (ರೂಢಿ).

[ದೇ.॥ ತುಳು. ದಪ್ಪ, ದಪ್ಪೊ; ತೆಲು. ದಪ್ಪ]

ದಪ್ಪ$_2$ (ನಾ). ೧. ಸೊಕ್ಕು; ಗರ್ವ; ಅಹಂಕಾರ: ದ್ವಿತ್ವಾಗ್ರ ರೇಫ ಲೋಪಕ್ಕೆ-ಅರ್ಘ-ಅಗ್ಗ . . . ದರ್ಪ-ದಪ್ಪ (ಶಮದ ೨೬೧ ಪ್ರಯೋ); ತಪ್ಪಿ ನುಡಿದೊಡೆ ಗರುಡದೇವನ ದಪ್ಪ[ಪಾಠಾಂ. ರ್ಪ]ವನು ಹರಿ ಸೆಳೆದು ಬಿಸುಟನು (ಕುಪ್ಯಾಉ. ೯-೧೦). ೨. ಕೆಚ್ಚು; ಶೌರ್ಯ; ಪರಾಕ್ರಮ: "ದಪ್ಪ ಪೆಟ್ಟದಟಾರ್ಪು ಸಾಸ ಪೆರ್ಚುಬ್ಬಟೆಯದಪ್ಪುದಬ್ಬರಮುನ್ನತಿಕೆಯು ಪನ್ನತಿಕೆಯೆನೆ ತಪ್ಪದಣ್ಮೆನೆ ಪರಾಕ್ರಮ ವಾಚಿ" (ಶಬ್ದಮಂ. ೩೯); "ಪನ್ನತಿಕೆ ಪೆಟ್ಟು ತಕ್ಕುಮೆಯನ್ನುಂ ತಾಂ ಸಾಸ ದಪ್ಪಮದಟಾರ್ಪಣ್ಮೆಂದೆನ್ನಲ್ ಪರಾಕ್ರಮಾಖ್ಯಂ" (ಕವಿಕಂ. ೧೨೫); ಕಡಲೊಳ್ ನೇಸಱನಟ್ಟಲುಂ . . . ಪೆಡೆಯಂ ತೊಟ್ಟನೆ ಮೆಟ್ಟಿ ಬಾಸುಗಿಯನಾದಂ ಸೀಟಲುಂ ಪೊತ್ತು ಬಾನೆಡೆಯಂ ಬೇಗದಿನೆತ್ತಲುಂ ಬಗೆದನಾಗಳ್ ದಪ್ಪದಿಂ ದಪ್ಪಗಂ (ಕಬ್ಬಿಕಾ. ೧೫೨); ದಪ್ಪ[ಪಾಠಾಂ. ರ್ಪ]ವುಳ್ಳಂಗೀಸು ಮಂಗಳವೊಪ್ಪದೇನೈ ಜಗದೊಳಾವಂಗಪ್ಪುದೀ ಬಲವೀ ನಿಗರ್ವಿತೆಯೆಂದನಾ ಮತ್ಸ್ಯ (ಕುಪ್ಯಾವಿ. ೯-೨೮); ತಪ್ಪದೆ ಲಗ್ಗೆಗೇಱಿದ ಖಳರನು ಕೊಲ್ವ ದಪ್ಪವನೇನೆಂಬೆನು (ಕಂನವಿ. ೦೪-೫೬). [<ಸಂ. ದರ್ಪ]

ದಪ್ಪಕ, ದಪ್ಪಗ (ನಾ). ಕಾಮ; ಮನ್ಮಥ: "ಕುಡುವಿಲ್ಲ ಪೂಪುಣುಂಬಂ . . . ಜೊನ್ನೊಡಲನಳಿಯಂ ದಪ್ಪಕಂ ಮಯಣನೆಂಬಿವಿಂತೊಡನೆ ಮನ್ಮಥನಾಮವು" (ಶಬ್ದಮಂ. ೮); "ದಪ್ಪಕ-ದರ್ಪಕ = ಮನ್ಮಥ"(ತದ್ಯಕೋ. ೧೮). ದಪ್ಪಕ ರತಿಯ ವಸಂತಕೇಳಿಯ ಚಿತ್ರವಿಪ್ಪುದ ನೋಡಿ ಸಂತಸದಿ ಚಪ್ಪರ ಮಂಚದ ಮೇಲೆ ಕುಂಕುಮದಲರ್ಸುಪ್ಪತ್ತಿಗೆಯಲಿ ಮಂಡಿಸಿದ (ಮೋಹತ. ೨೨-೧೨). ದಪ್ಪಗ: ಪೊತ್ತು ಬಾನೆಡೆಯಂ ಬೇಗದಿನೆತ್ತಲುಂ ಬಗೆದನಾಗಳ್ ದಪ್ಪದಿಂ ದಪ್ಪಗಂ (ಕಬ್ಬಿಕಾ. ೧೫೨); ದಪ್ಪಗನರ್ಧಾಂಗಿಯ ರೂಪಿಗಿಮ್ಮಡಿ ಸುಪ್ರೌಢಾನ್ವಿತೆ ಕೇಳು (ಮೋಹತ. ೨೨-೩೦); ತನ್ನ ನಲ್ಗೆಳೆಯನೊಂದು ಸಪರ್ಯೆಯಿಂ ಸಂತುಪ್ಪನಾಗಿ ದಪ್ಪಗಂ ಪಡೆವೆರಸುಟಿದ ಕಡೆವಗಲನಿರುಳಂ ಪುಸಿಗಾಳೆಗದುಜ್ಜುಗದೊಂದೆಣಿಕೆಯಿಂ ಕಟಿದು (ರಾಮಾಶ್ವ. ೫೭-೧೯).

[<ಸಂ. ದರ್ಪಕ]

ದಪ್ಪಕವಗೆಯ, ದಪ್ಪಗವಗೆಯ (ನಾ). ಮನ್ಮಥನ ಹಗೆ; ಶಿವ: "ಗನಹ ಮಾದೇವ ಕಣ್ಣಡಿಯ ಕಱೆಗೊರಲ ಪಿಱಿತಿನಿಯಾಣ್ಮ ದಪ್ಪಕವಗೆಯ . . . ಅಮರ್ದುವೆಣ್ಣಿನಿಯನೆಂದೆಂಬಿವೀಶ್ವರನ ನಾಮಂ" (ಶಬ್ದಮಂ. ೪); "ಮಿಗಗೈಯಂ ಕಣ್ಣಡಿಗಂ . . . ಬಾನ್ನವಿರಂ ದಪ್ಪಕವಗೆಯಂ ಮಾದೇವ ಸಬ್ಬ ಗಂದರಗಿವಿಯಂ" (ಕವಿಕಂ. ೧೬). ದಪ್ಪಗವಗೆಯ: ಪಣೆಗಣ್ಣಂ ತಾನೊಡ್ಡಿ ನಿಲ್ವುದುಮಣುವಂ ಸಿಡಿಮಿಡಿಗೊಂಡಸವಸದಿಂ ದಪ್ಪಗವಗೆಯನಂ ಕೈಯ ಪೆರ್ಮರನೊಳ್ . . . ಮಲೆದು ತಾಗಿದಂ (ರಾಮಾಶ್ವ. ೦೩೧-೨೪). [ದಪ್ಪಕ + ಪಗ್ಗೆ + -ಅ$_7$]

ದಪ್ಪಕಾಗದ (ನಾ). ತೆಳುವಲ್ಲದ ಕಾಗದ; ಒರಟು ಕಾಗದ: ಪುಸ್ತಕಗಳಿಗೆ ರಟ್ಟುಹಾಕಲು ದಪ್ಪಕಾಗದ ಬೇಕು (ರೂಢಿ). 'ತೆಳಂಕಾಗದ' ಪರಾ.

[ದಪ್ಪ$_1$ + ಕಾಗದ]

ದಪ್ಪಕ್ಕಿ (ನಾ). ಅಕ್ಕಿಯಲ್ಲಿ ಒಂದು ಬಗೆ; ಸಣ್ಣದಲ್ಲದ ಅಕ್ಕಿ: ರೊಟ್ಟಿಗೆ ದಪ್ಪಕ್ಕಿ ಚೆನ್ನ (ರೂಢಿ). 'ಸಣ್ಣಕ್ಕಿ' ಪರಾ. [ದಪ್ಪ$_1$ + ಅಕ್ಕಿ$_1$]

ದಪ್ಪಗ 'ದಪ್ಪಕ' ನೋ.

ದಪ್ಪಗಟ್ಟು (ಕ್ರಿ). ಮಂದವಾಗು; ಗಟ್ಟಿಯಾಗು: ಮಿಶ್ರಣವು ದಪ್ಪಗಟ್ಟಲು ಪ್ರಾರಂಭವಾದಾಗ ಅದಕ್ಕೆ ಸಕ್ಕರೆ, ಸುಲ್ತಾನದ್ರಾಕ್ಷೆ ಮತ್ತು ಬೆಣ್ಣೆಯನ್ನು ಸೇರಿಸಿ . . . ಮತ್ತೆ ಕಾಯಿಸಬೇಕು (ಅಡುಸೌ. ೯೭).

[ದಪ್ಪ$_1$ + ಕಟ್ಟು$_1$]

ದಪ್ಪಗವಗೆಯ 'ದಪ್ಪಕವಗೆಯ' ನೋ.

ದಪ್ಪನೂಲು (ನಾ). ದಪ್ಪವಾದ ದಾರ; ಒರಟುನೂಲು: ಮನೆಯಲ್ಲಿ ಉಡಲು ದಪ್ಪನೂಲಿನ ಸೀರೆ ಸಾಕು (ರೂಢಿ).

[ದಪ್ಪ$_1$ + ನೂಲು$_2$ (<ನೂಲ್$_2$)]

ದಪ್ಪನೆ$_1$ (ಅ). ದಪ್ ಎಂಬ ಶಬ್ದದೊಡನೆ: ಆವನು ದಪ್ಪನೆ ಬಿದ್ದುಬಿಟ್ಟ (ರೂಢಿ) [ದಪ್ + -ಅನೆ$_1$]

ದಪ್ಪನೆ$_2$, ದಪ್ಪನ್ನ, ದಪ್ಪಾನೆ (ಗು). ೧. ದಪ್ಪವಾದ; ತೋರವಾದ: ದಪ್ಪನೆ ಜಡೆಯ ಹುಡುಗಿ ಬರುತ್ತಿದ್ದಾಳೆ (ರೂಢಿ). ೨. ಒರಟಾದ: ಕಿಟಕಿಗಳಿಗೆ ತೆರೆಹಾಕಲು ದಪ್ಪನೆ ಬಟ್ಟೆ ಉಪಯೋಗಿಸಿದರೆ ಮೇಲು (ರೂಢಿ). ದಪ್ಪನ್ನ: ೧. ದಪ್ಪನ್ನ ಎಲುವು (ಮುಂಬಯಿ. ೪-೮೨). ೨. "ಸ್ಥೂಲ-ಶಾಟಕ-ದಪ್ಪನ್ನ ಅರಿವಿ" (ಗಂಗಾಮ. ೩೪೦). ದಪ್ಪಾನೆ: ೩. ಗಾತ್ರವಾದ; ದಟ್ಟವಾದ: ಆಗಳಿಂದ ೩ ತಾಸುಗಳ ತನಕ ಊರಲ್ಲೆಲ್ಲಾ ದಪ್ಪಾನೆ ಕತ್ತಲೆ ಕವಿಯಿತು (ಗೊಲ್ಲೊಥಾ. VIII ಮುನ್ನುಡಿ).

[ದಪ್ಪ$_1$ + -ಅನೆ$_2$ (< -ಅನೆಯ$_2$)]

ದಪ್ಪನ್ನ 'ದಪ್ಪನೆ$_2$' ನೋ.

ದಪ್ಪಬಟ್ಟೆ (ನಾ). ತೆಳುವಲ್ಲದ ಬಟ್ಟೆ; ಒರಟುಬಟ್ಟೆ: ಈಗಿನ ಕಾಲದಲ್ಲಿ ದಪ್ಪಬಟ್ಟೆಗೆ ಹೆಚ್ಚು ಬೇಡಿಕೆಯಿಲ್ಲ (ರೂಢಿ). [ದಪ್ಪ$_1$ + ಬಟ್ಟೆ$_2$]

ದಪ್ಪಮೆಣಸಿನಕಾಯಿ (ನಾ). ಒಂದು ಬಗೆಯ ಮೆಣಸಿನಕಾಯಿ; ಹೊಟ್ಟೆಮೆಣಸಿನಕಾಯಿ; ದೊಣ್ಣೆಮೆಣಸಿನಕಾಯಿ: ಹಗುರವಾಗಿರುವ ದಪ್ಪಮೆಣಸಿನಕಾಯಿ ಹಣ್ಣು ಅಷ್ಟು ಖಾರವಿಲ್ಲದಿರುವುದರಿಂದ ತರಕಾರಿಯಂತೆ ಉಪಯೋಗಿಸಲ್ಪಡುತ್ತದೆ (ತರಬಿ. ೫೨).

[ದಪ್ಪ$_1$ + ಮೆಣಸಿನಕಾಯಿ]

ದಪ್ಪರಿ (ನಾ). ಒಂದು ಅನುಕರಣ ಶಬ್ದ: ದಪ್ಪರಿ ದಟ್ಟುಂ ಪೊಟ್ಟೆನೆ ದೊಪ್ಪಧೊಗಪ್ಪೆನೆ ದಿಧಿಲ್ಬುಧಿಲ್ಲೆನೆ ಗದೆಗಳ್ ಸೊಪ್ಪುಸೊವಡಪ್ಪಿನಂ ಸೂಟ್ಟಪ್ಪದೆ ಕಡುಕೆಯ್ದು ಪೊಯ್ದರೊರ್ವರನೊರ್ವರ್ (ಗದಾಯು. ೮-೦೦).

ದಪ್ಪವಳಿ (ಕ್ರಿ). ಹೆಮ್ಮೆಗುಂದು: ಅಪ್ಪಾಜಿ ಹಾ ನಮ್ಮನೀಡಾಡಿ ಜಗದಗ್ರ ಕುಪ್ಪರಿಸಿದೆಯ ಹಾಯೆಂದು ದಪ್ಪವಳಿದು ಬೆದೆಬೆಂದರು ಶಿಶು ಬಿಸಿ ತುಪ್ಪವ ಕುಡಿದ ರೀತಿಯೊಳು (ಭರಜ. ೭೮-೮೦). [ದಪ್ಪ$_2$ + ಅಳಿ$_1$ (<ಅಟಿ$_1$)]

ದಪ್ಪವೇಱಿಸು (ಕ್ರಿ). ಬಲಪನ್ನು ಹೆಚ್ಚಿಸು; ಸತ್ತ್ವವನ್ನು ವರ್ಧಿಸು: ಮುಪ್ಪಾದ ನರರೊಳ್ಕೆ ಕೊಂಡರಾಕ್ಷಣದೊಳು ತುಪ್ಪಳುವಿಸೆಯ ಮಾಡಿ ದಪ್ಪವೇಱಿಸುವ ಶಕ್ತಿಯ ಧರಿಸಿದ ಹೆಱಿದುಪ್ಪವನೆಱಿದಳು ಪತಿಗೆ (ಭರಡ ೧೦-೩೩). [ದಪ್ಪ + ಏಱಿಸು]

ದಪ್ಪಾನೆ 'ದಪ್ಪನ್ನೆ' ನೋ.

ದಪ್ಪು 'ಡಪ್ಪು' ನೋ.

ದಫನ್, ದಫನ (ನಾ). (ಹೆಣವನ್ನು) ಹೂಳುವಿಕೆ, – ಹುಗಿಯುವಿಕೆ, – ಮಣ್ಣುಮಾಡುವಿಕೆ: ಅಂತ್ಯಕ್ರಿಯೆ: ದಿಕ್ಕಿಲ್ಲದ ಶವವನ್ನು ದಫನ್ ಮಾಡುವುದಕ್ಕೆ ಏರ್ಪಾಡು ಮಾಡುವುದು ಗ್ರಾಮಾಧಿಪತಿಯ ಕೆಲಸವಾಗಿರುತ್ತದೆ (ಗ್ರಾಮಾಳ. ೫೯). **ದಫನ:** ಮುಸ್ಲಿಂ ಪದ್ಧತಿಯಂತೆ, ಆ ಮುದುಕನ ದಫನ ಮಾಡಿಸಿದರು (ಅನ್ನ. ೩೪೪); ಅವನ ಜನನ, ಮದುವೆ ಮತ್ತು ದಫನಗಳ ವೃತಾಂತವು ನನಗೆ ದೊರಕಿತ್ತು (ಬಂಜನ್. ೯). [←ಅರ. ಹಿಂ. ಮರಾ. ದಫನ್.]

ದಫನ 'ದಫನ್' ನೋ.

ದಫನಕ್ರಿಯೆ (ನಾ). = ದಫನ್: ರಾಮವ್ವನ ದಫನಕ್ರಿಯೆ ಮುಗಿಸಿ ಬಂದು ತಾಯಿ ಮಕ್ಕಳಿಬ್ಬರೂ ಕಂಬನಿ ಸುರಿಸುತ್ತಾ ಕುಳಿತುಕೊಂಡಿದ್ದವರು ನನ್ನನ್ನು ಕಂಡು ಎದ್ದು ನಿಂತರು (ನಾಪೋಲೀ. ೨೦೬); ಮುಸಲ್ಮಾನ ಸಮಾಜಬಂಧುಗಳು ತಮ್ಮ ಸಂಪ್ರದಾಯದಂತೆ ದಫನಕ್ರಿಯಾದಿಗಳನ್ನು ಮಾಡುವ ಆಗ್ರಹಪಟ್ಟರು (ಶರೀಫ. ೭೯ ಕವಿಕಾವ್ಯಪರಿಚಯ). [ದಫನ (<ದಫನ್) + ಕ್ರಿಯೆ]

ದಫನಭೂಮಿ (ನಾ). ಸಮಾಧಿಮಾಡುವ ಸ್ಥಳ; ರುದ್ರಭೂಮಿ; ಸ್ಮಶಾನ: ಈಗ ಇದ್ದ ದಹನ, ದಫನಭೂಮಿಯಲ್ಲಿ ಮುಂಚಿನ ಊರಿತ್ತಂತೆ (ದೀಪಹ. II, ೩೩೩). [ದಫನ (<ದಫನ್) + ಭೂಮಿ]

ದಫಾ, ದಪ್ಪ, ದಪಾ (ನಾ). ಸರದಿ; ಸಲ; ಬಾರಿ: ಎರಡನೇ ದಫಾ ಕಾಗದ ಬರದು ಕಳುಹಿಸಿ, ತನ್ನ ಫೌಜು ತೆಗೆದುಕೊಂಡು, ಜಮಾಲಾಬಾದಿಗೆ ಹೋದನು (ರಾಚೀಂದ್ರ. ೬೦); ಜುರ್ಮಾನೆ ವಗೈರೆ ಮೊದಲೇ ಒಂದು ದಫಾ ಪಾವತಿಯಾಗಿದ್ದು ಪುನಃ ರಿಮಿಷನ್ ಆದರೂ ಅಂತಹ ಬಾಬುಗಳಿಗೆ ಪ್ರತ್ಯೇಕವಾಗಿ ಸಪ್ಲಿಮೆಂಟಲ್ ಬಿಲ್ಲನ್ನು ತಯಾರುಮಾಡಿ ರವಾನಿಸಬೇಕು (ಗ್ರಾಮಾಳ. ೬). **ದಪ್ಪ:** ನಾನಲ್ಲಿಗೆ ಎರಡು ದಪ ಹೋದೆ (ಕುನರ. ೩೩೬). **ದಪಾ:** ಈ ದವಾಕ್ಕೆ ರೋಜಾಕಡ್ಡಿಗಳಿಗೆಲ್ಲ ಪಾತಿಗಟ್ಟಿ . . . ಓಗಿಬಿಡ್ತೀನಿ (ಕಂನಿ. ೪೧೦). [←ಅರ. ಹಿಂ. ಮರಾ. ದಫಾ ;]

ದಫೇದಾರ (ನಾ). ೧. ಕೆಲವು ಸೈನಿಕರ ಮುಖ್ಯಸ್ಥ; ಸೈನ್ಯಾಧಿಕಾರಿ. ೨. ಪೋಲೀಸು ಅಧಿಕಾರಿ: ನ್ಯಾಯಾಸ್ಥಾನದ ಒಳಗಿದ್ದವರೆಲ್ಲ ಹೊರಡುತ್ತಿದ್ದಂತೆ ದಫೇದಾರ ಮೂರು ಸಾರೆ ಕೂಗಿದ (ಐತಾಂಗಿ. ೩೦೩); ದಫೇದಾರನಾಗಿದ್ದಾಗ ಇದ್ದ ದರ್ಪದ ಒಂದಿಷ್ಟು ಕುರುಹೂ ಈಗ ಅವನಲ್ಲಿ ಇರಲಿಲ್ಲ (ಅನ್ನಪೂ. ೬೫): ದಫೇದಾರ ರಂಗರಾಯನೊಟ್ಟಿಗೆ ಒನ್-ಬೈ-ಟು ಕಾಫಿ ಗುಟುಕರಿಸುತ್ತ ಕುಳಿತಿದ್ದ . . . ಯೂನಿಫಾರಂನಲ್ಲಿದ್ದ. ದಫೇದಾರನೂ ಅಲ್ಲಿಗೆ ಬಂದ (ಬಂಗಲ. ೩೪). ೩. ಜವಾನರ ಮುಖ್ಯಸ್ಥ: ಕಛೇರಿಯಲ್ಲಿ ಆರು ಜನ ಜವಾನರಿಗೂ ಇವನು ದಫೇದಾರ (ಕೂಡಿ). ೪. ಅಶ್ವದಳದ ಒಬ್ಬ ಅಧಿಕಾರಿ: (ಕ್ರಿ). [←ಮರಾ. ದಫೇದಾರ್ ; ಹಿಂ. ದಫಾದಾರ್]

ದಫೇದಾರಿ (ನಾ). ದಫೇದಾರನ ಕೆಲಸ, – ವೃತ್ತಿ: ಓದು ಮುಗಿಸಿ ಎಷ್ಟೋ ವರ್ಷಗಳಾದವು. ಈಗ ಅವನಿಗೆ ದಫೇದಾರಿ ಕೆಲಸ ಸಿಕ್ಕಿದೆ (ಕೂಡಿ). [←ಹಿಂ. ದಫಾದಾರೀ]

ದಫ್ತರ್ 'ದಫ್ತರು' ನೋ.

ದಫ್ತರ್‌ಬಂದಿ 'ದಫ್ತರಬಂದಿ' ನೋ.

ದಫ್ತರ್‌ಶಾಹಿ (ಗು). ೧. ಕಾಗದ ಪತ್ರಗಳಲ್ಲೇ ಮುಳುಗಿರುವ; ನೇರವಾಗಿ ಕ್ರಿಯಾಮುಖವಾಗದ; ಸೋಮಾರಿತನದ: ದೇಶಕ್ಕೆ ಎಂದೂ ಈ ದಫ್ತರ್‌ಶಾಹಿ ಸರಕಾರದಿಂದ ಒಳ್ಳೆಯದಾಗಲಾರದು (ಕೂಡಿ). (ನಾ). ೨. ಕಾಗದ ಪತ್ರಗಳಲ್ಲಿ ಮುಳುಗಿ ನಡೆಸುವ ಸರ್ಕಾರ, – ಅಧಿಕಾರ: ಕೆಲವು ದೇಶಗಳಲ್ಲಿ ಸರ್ಕಾರ ದಫ್ತರ್‌ಶಾಹಿಯಾಗಿದೆ (ಕೂಡಿ). [ದಫ್ತರ್ (<ದಫ್ತರು) + ಶಾಹಿ]

ದಫ್ತರ 'ದಫ್ತರು' ನೋ.

ದಫ್ತರಖಾನೆ, ದಪ್ತರಖಾನೆ (ನಾ). ಸರ್ಕಾರದ ಕಾಗದಪತ್ರಗಳನ್ನು ಇಟ್ಟಿರುವ ಕಚೇರಿ, – ಆಫೀಸು: "ಕಾಗದ ಪತ್ರಗಳನ್ನು ಇಟ್ಟಿರುವ ಸ್ಥಳ: ದಫ್ತರಖಾನೆ; ಪತ್ರಾಗಾರ" (Cartulary. ೧೦೪೩). **ದಪ್ತರಖಾನೆ:** ದೊಡ್ಡರಂಗಭೂಮಿ; ದಪ್ತರಖಾನೆ: ಮನೆಗೆ ಹಿಂದೆ ತೋಟ (ದೀವೀಕಾ ೪). [←ಮರಾ. ದಫ್ತರ್‌ಖಾನಾ; ಹಿಂ. ದಫ್ತರೀಖಾನಾ; ಪಾರ. ದಫ್ತರೀಖಾನಹ್]

ದಫ್ತರದಾರ, ದಪ್ತರದಾರ (ನಾ). ದಫ್ತರಖಾನೆಯ ಹಿರಿಯ ಅಧಿಕಾರಿ: (ಕ್ರಿ). **ದಪ್ತರದಾರ:** ಇವರು ಓರಿಸ್ಸಾ ದೇಶದ ಗಜಪತಿ ಅರಸರಲ್ಲಿ ದಪ್ತರದಾರರಾಗಿದ್ದು ರಾಜ ಪುಡೆಗಳೀರ್ವರಿಂದಲೂ ಸನ್ಮಾನ್ಯರಾಗಿದ್ದರು (ಕಥವಿ. I ೧೫). [←ಪಾರ. ಮರಾ. ದಫ್ತರ್‌ದಾರ್]

ದಫ್ತರಬಂದಿ, ದಫ್ತರ್‌ಬಂದಿ (ನಾ). ಕಚೇರಿಯ ಕಾಗದಪತ್ರ ಅಥವಾ ದಾಖಲೆಗಳ ಮೇಲ್ವಿಚಾರಕರ ಸಹಾಯಕ; ದಾಖಲೆಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಇಡುವವನು: ದಫ್ತರಬಂದಿಯಿಂದ ಹೇಳಿಸಿದ ಶಾಸನಭೋಗ ಪುರಾಣದಲ್ಲಿ ಸುಭೇದಾರಿಯು ದಶಾವತಾರಗಳೂ ಕಾಣದಾಡಿಹೋಗಿವೆ (ಗಕುದಾ. ೬). **ದಫ್ತರ್‌ಬಂದಿ:** ನಾನು ಮೊದಲಂ ಸರ್ಕಾರಿ ಕೆಲಸಕ್ಕೆ ಸೇರಿದುದು ತಾಲ್ಲೂಕುಕಛೇರಿಯಲ್ಲಿ ದಫ್ತರ್ ಬಂದಿಯಾಗಿ (ಗಕುದಾ. ೮೦). [←ಪಾರ. ಮರಾ. ದಫ್ತರ್‌ಬಂದ್]

ದಫ್ತರಿ (ನಾ). ದಫ್ತರಬಂದಿ; ಕಚೇರಿಯ ಕಾಗದಪತ್ರಗಳನ್ನು ಜೋಡಿಸಿ ಇಡುವವನು; ಗುಮಾಸ್ತ; ಕಾರಕೂನ: ನನ್ನಿಂದ. ತಮ್ಮ ಸರ್ವೀಸ್, ರೆಕಾರ್ಡು ಹಿಂದು ಮುಂದಾದದ್ದನ್ನು ಬಿಡಿಸಿ, ಜೋಡಿಸಿಕೊಂಡು . . . ಗಟ್ಟಿರಟ್ಟಿನ ಫಾಯಿಲ್‌ಬೋರ್ಡಿನಲ್ಲಿ ಬಂಧಿಸ್ತ ಮಾಡಿಸಿಕೊಂಡರು ಮತ್ತು ಹುಡುಗ ದಫ್ತರೀ ಆಗಲಿಕ್ಕೆ ಲಾಯಖ್ ಇದ್ದಾನೆಂದರು (ದೀಪಹ. II, ೦೮): ಆವರ ಖಾಸ್ ದಫ್ತರಿಯಾದನೆಂದರೂ ಅಡ್ಡಿಯಿಲ್ಲ (ದೀಪಹ. II, ೩೫೬). [←ಪಾರ. ಹಿಂ. ದಫ್ತರೀ]

ದಫ್ತರು, ದಪ್ತರ, ದಪ್ತರು, ದಫ್ತರ್, ದಫ್ತರ (ನಾ). ೧. ಸರ್ಕಾರದ ಕಾಗದಪತ್ರ, – ದಾಖಲೆ; (ವಿಶೇಷವಾಗಿ ಕಂದಾಯದ) ಲೆಕ್ಕಪತ್ರ: ರಾಜಾಸ್ಥಾನದ ಎಲ್ಲ ಅರಮನೆಗಳಿಗೂ ಭೇಟಿಕೊಟ್ಟು ಆ ಅರಮನೆಗಳಲ್ಲಿ ದೊರಕುವ ಐತಿಹಾಸಿಕ ದಫ್ತರುಗಳನ್ನು ಪರಿಶೀಲಿಸಿದ್ದರು (ಪಂಶಪ್ರ. ೩೭೦). ೨. ವ್ಯವಸ್ಥಿತವಾಗಿ ಜೋಡಿಸಿಟ್ಟ ಕಾಗದಪತ್ರಗಳ ಕಟ್ಟು: ದಾಖಲೆ ಪುಸ್ತಕ; ರಿಜಿಸ್ಟರು: ಲೆಕ್ಕಣಿಕೆ ಒಡಿದು, ತನ್ನ ದಫ್ತರನ್ನು ಬರೆಯುವ ಕುಲಕರ್ಣಿ ಅಲ್ಲಿ ಕಾಣುವ (ಗಾಳಿಗು. ೨); ಟೈಕೊಬ್ರಾಹಿ . . . ಎಂಬ ಜ್ಯೋತಿಷ್ಯನು ಕುಜಾದಿ ಗ್ರಹಗಳ ಸ್ಥಾನಗಳನ್ನು ಸೂಕ್ಷ್ಮವಾಗಿ ಗೊತ್ತುಹಚ್ಚಿ ಒಂದು ದೊಡ್ಡ ದಫ್ತರನ್ನು ಮಾಡಿಟ್ಟನು. ಈ ದಫ್ತರವು . . . ಕೆಪ್ಲರಿನ ಕೈಗೆ ಸಿಕ್ಕಿತು (ಕಿಲ್ಕಾನಾ. ೧೧). **ದಫ್ತರ:** ೨ ಯಿಸನದೀ ನಕಲನ್ನು ಸಿರಸ್ತೇದಾರರ ದಫ್ತರಕೆ ಬರಸಿಕೊಂಡು ಅಸಲ ಸನ್ನದನ್ನು ಪೆಚೆತಿಮ್ಮಯ್ಯನ ವಶಕೆ ಕೊಡುವದು (ಎಕ. VI, ಕೊಪ್ಪ. ೪೮-೫೧ ; 1911); ಯಿ ನಿರ್ಬುಪ್ಪದ ನಕಲಂನು ಸರಕಾರದ ದಫ್ತರಕ್ಕೆ ಬರ್ಸಿ (ಮೈಅರಿ. ೧೯೩೦, ೪೩-೪೩; 1812) : ಸಂನ ೧೮೧೩ ಯಿಸವಿ ದಾಖ ದಫ್ತರ ಕಂಸಡಿ ಹಿರಣ್ಯಪ್ಪ ದಿವಾನ್ ಕಛೇರಿ ಹಜೂರು (ಮೈಅರಿ. ೧೯೩೯,

೧೪-೩; 1818): ಸಾಹೇಬರು . . . ಕಾಗದವನ್ನು ದಪ್ತರದಲ್ಲಿಡಲಿಕ್ಕೆ ಶಿಕ್ಷಕರ ಕಡೆಗೆ ಕೊಟ್ಟರು (ಪಬ್ಲಿಹೂ. ೦೯). **ದಪ್ತರು** : ೨. ಭಾರತದ ಸರಕಾರೀ ಭೂಪಟಗಳಲ್ಲಿ. ದಪ್ತರಿನಲ್ಲಿ ಈ ಹೆಸರು ಬಹಿಷ್ಕೃತವಾಗಿದೆ (ಕರ್ಹಾಟ. ೧೯೬); ವಿಕ್ರಮಾದಿತ್ಯನ ಸಿಂಹಾಸನದ ಮೇಲೆ ಕುಳಿತ ಮಗು ಕೂಡ ನ್ಯಾಯವನ್ನು ಕೊಡುವಂತೆ, ಒಳ್ಳೆಯ 'ದಪ್ತರು' ಎಂಥ ಬೇವಕೂಫನನ್ನಾದರೂ ಸಾಹೇಬನನ್ನಾಗಿ ಮಾಡಬಲ್ಲದು . . . ಕಿಟ್ಟಿ ಇನ್ನೂ ದಪ್ತರಿನ ಚಾರ್ಜ್ ತೆಗೆದುಕೊಳ್ಳುವ ಮೊದಲೇ 'ನೋಡೋಣ'! ಎನ್ನಬಲ್ಲವನೆಂದ ಮೇಲೆ ಅದು ದಪ್ತರಿನ ಮಹಿಮೆಯಲ್ಲದೆ ಇನ್ನೇನು ? (ಗಂಮೂಯಿ. ೩೩). ೩. ಕಾರ್ಯಾಲಯ; ಕಚೇರಿ; ಆಫೀಸು : ಧಾರವಾಡ ಜಿಲ್ಲೆಯ ದಪ್ತರಿನಲ್ಲಿ ಈಗಿನ ಲೆಕ್ಕದ ಪದ್ಧತಿಗೆ ಹೊಂದುವಂಥ ತಾಳೇಬಂದು ಯೆಲ್ಲಕ್ಕೂ ಹಳೇದು . . . ದೊರಿಯುತ್ತದೆ (ಕಥಾಗ. ೩೯೦). **ದಫ್ತರ್**: ೧. (ಕ್ರುಗೆಚ. IV, ೭೭೭). **ದಫ್ತರ** : ೧. ಕುಲಕರ್ಣಿ ಪಟ್ವಾರಿಗಳ ದಪ್ತರದ ಭಾಷೆಯೆಲ್ಲಾ ಉರ್ದು (ಕನ್ನಸಾ. I, ೨೭). ೨. ಆಯುಧಕ್ಕೆ ಪೂಜೆಯಂ ನೆರವೇರಿಸಿ ಕಂಕಣವಿಸರ್ಜನೆಯಂ ಮಾಡಿ, ಶಖಾಸರವನೂ. ದಫ್ತರವನ್ನೂ ಸಹ ಪೂಜಿಸಿ . . . ಪೂಜೆಯಂ ಬೆಳಿಸಿದರು (ಮಹಾಪಂ I, ೩೮); ತಹನಾಮೆಯನ್ನು ಬರೆಸಿ, ತಲಚೇರಿ ಸರಕಾರಿದ ದಪ್ತರದಲ್ಲಾ ಮಡಗಿ ಇದೆ (ರಾಚೇಂದ್ರ. ೫೩); ಕುಮಾರ್ಯೆಯ್ಯನು ದಪ್ತರವನ್ನು ಹಿಡಿದು ಕೊಂಡು ಬೀದಿಯ ಬಾಗಿಲಲ್ಲಿ ನಿಂತಿದ್ದ (ಚಂಗಾಳ್ವ. ೭೩); ಹೆಗ್ಗಣಗಳೂ ಆ ದಪ್ತರಗಳ ಸಂದಿಯಲ್ಲಿ ಮನೆಮಾಡಿಕೊಂಡಿದ್ದವು (ಗರುಡಾ. ೯೦): ತಮ್ಮ ದಪ್ತರದ ಮೇಲೆ ಕಟ್ಟಿದ್ದ ರೇಷ್ಮೆಯ ವಸ್ತ್ರವನ್ನು ಬಿಚ್ಚಿ ಆ ದಪ್ತರದಿಂದ ಒಂದು ಜಾತಕವನ್ನು ತೆಗೆದು (ಶ್ರೀರಾಯ. ೭೩); ಸಿಂಗಪ್ಪಯ್ಯನವರು ತಾವು ಹೊಸದಾಗಿ ತಂದ ದಪ್ತರ ಟೌಕದೊಳಗೆ ದಪ್ತರ ಸಮೇತ ಕಟ್ಟಿಟ್ಟಿದ್ದರು (ಪನ್ನೂರು .೦೫೯). [←ಅರ. ಮರಾ. ಹಿಂ. ದಫ್ತರ್]

ದಬಕ್ (ನಾ). ಒಂದು ಅನುಕರಣ ಶಬ್ದ. 'ದಬಕ್ಕನೆ' ಪರಾ.

ದಬಕಹಾಕಿಸು (ಕ್ರಿ). ಮಂಡಿ ಊರುವಂತೆ ಮಾಡಿಸು,–ಮಡಿಚುವಂತೆ ಮಾಡಂ (?) : ರಾಜನು ತನ್ನ ಫೌಜು ಮುರಿದು ಹೋದ್ದನ್ನು ಕಂಡು ಅನೇಕಾಲಿಗೆ ದಬಕಹಾಕಿಸಿ ನಿಂತುಕೊಂಡು . . . ೬ ತಾಸಿನಿಂದ ೧೦ ಕಾಸಿನವರೆಗೂ ಯುದ್ಧಮಾಡುತಿದ್ದನು (ಚಕ್ರಪಾ. ೫೫).

[ದಬಕ? + ಹಾಕಿಸು (<ಹಾಯ್ಕಿಸು)]

ದಬಕ್ಕನೆ (ಅ). ದಬಕ್ಕೆಂಬ ಶಬ್ದದೊಡನೆ: ಗೂಡಿನಲ್ಲಿಟ್ಟಿದ್ದ ಗಂಟು ದಬಕ್ಕನೆ ಉರುಳಿಬಿತ್ತು (ಕೂಡಿ). [ದಬಕ್ + – ಅನೆ$_1$]

ದಬಡ್ಡಾಳಿಕೆ 'ಡಬಡ್ಡಾಳಿಕೆ' ನೋ.

ದಬದಬ$_1$ (ನಾ). ಒಂದು ಅನುಕರಣ ಶಬ್ದ : ಎದೆ ದಬದಬ ಎಂದು ಹೊಡೆದುಕೊಳ್ಳತೊಡಗಿತು (ಕೂಡಿ).

ದಬದಬ$_2$ (ನಾ). ಫಿರಂಗಿ ಮುಂತಾದ ಯುದ್ಧಸಾಧನಗಳನ್ನಿಡುವ ಎತ್ತರವಾದ ತಿಟ್ಟು,–ಜಗಲಿ : ನವಾಬನ ಸೇನೆಯವರು ಗಾರೆ ಬಾಗಿಲ ಬಳಿ ಒಂದು ದಬದಬ ಕಟ್ಟಿ ೬ ಫಿರಂಗಿ ಏರಿಸಿ ಹೊಡೆಯುತಾ ಬಂದರು (ಚಕ್ರಪಾ. ೧೬). [?./ತೆಲು. ದದ್ದಡ ; ದದ್ದಳ]

ದಬದಬೆ 'ಧಬಧಬೆ' ನೋ.

ದಬರಿ 'ಡಬರಿ' ನೋ.

ದಬರಿಟೊಪ್ಪಿಗೆ 'ಡಬರಿಟೊಪ್ಪಿಗೆ' ನೋ.

ದಬಾಣ 'ಡಮಾನ' ನೋ.

ದಬಾದಬಿ 'ದಬಾದಂಬಿ' ನೋ.

ದಬಾದುಬಿ, ದಬಾದಬಿ (ನಾ). ಬೆದರಿಸಿ ಮಾಡುವ ಒತ್ತಾಯ,–ಜೋರು : ಕಾವ್ಯಾಗ್ನಿಯಿಂದ ಬೇಯದ ಜೀವ, – ಕಾವ್ಯ ರಸದಲ್ಲಿ ತೊಯ್ದಾದ ಜೀವ–ಹೇಗೆ ಪರಿಶುದ್ಧವಾದೀತು ? . . . ಅದರ ಕವಿ ಮರಗಿವಿ : ಅದರ ನುಡಿ ತೊದಲ್ನುಡಿ. ಅಂಥ ಜನ ಮಾಡುವ ರಾಜ್ಯ ಶಾಸನ ದೊಂಬಿಯ ದಬಾದುಬಿ (ಸಾಹಿಶ. ೩೬) ; ನನ್ನ ಕಕ್ಷಿಗಾರನ ಮೇಲೆ ಇವರೇ ದಬಾದುಬಿ ಮಾಡಿ ಕತ್ತಿ ಕಟ್ಟಿದ್ದಾರೆ (ಚಂಡತೋ. ೧೬೨). **ದಬಾದಬಿ** : ಅವನಿಗೆ ಪೋಲಿಸರ ವಿಚಾರ ಚೆನ್ನಾಗಿ ಗೊತ್ತು ; ಇಲ್ಲಿ ಅವರ ದಬಾದಬಿಯ ಖಂಡನ ವಿಡಂಬನಾತ್ಮಕವಾದ ಒಂದು ವಿವರ ಬರುತ್ತದೆ (ಬಂಕಿಮ. ೧೦೬).

[←ಮರಾದ. ಬದುಬೀ ; ಹಿಂ. ದಬ್‌ದಬಾ = ಆಟೋಪ, ಪ್ರತಾಪ]

ದಬಾಯಿಸು (ಕ್ರಿ). ೧. ನೂಕು; ತಳ್ಳು. ಅವನ ಸುಪ್ತ ಭಾವನೆಗಳನ್ನು ದಬಾಯಿಸಿ ಶ್ರೀ ೦ (ರಂಗರೋ. ೧೨೬) ; ಬಾಗಿಲನ್ನು ದಬಾಯಿಸಿ ಹಾಕು (ಕೂಡಿ). ೨. ಗದರಿಸು; ಜಬರಿಸು : ಆ ಹೊತ್ತೇ ತೀರಿಸಿಬಿಟ್ಟೆ; ಇನ್ನೇನೂ ಕೊಡತಕ್ಕದ್ದಿಲ್ಲ ಹೋಗೆಂದು ದಬಾಯಿಸಿದನು (ಕಥಾಮಂ. IV, ೭೭) ; "ಸುಮ್ಮನಿರೋ ನೀನು, ಅವನಿಗೆ ಗೊತ್ತಾಗದಿದ್ದರೆ ಅವನೇ ಕೇಳುತ್ತಿದ್ದ" ಎಂದು ದಬಾಯಿಸಿದ (ಪರೀಕ್ಷೆ. ೮); ಅವಳೂ ನನ್ನ ಮೇಲೆ ತಿರುಗಿ ಬಿದ್ದು ದಬಾಯಿಸಿದಳು (ಆಲಹೂ. ೩೭) ; ಸ್ವಲ್ಪ ಬಲವಾಗಿ ದಬಾಯಿಸಿ ಈ ತುಂಟತನವನ್ನು ಚಿಗುರಿನಲ್ಲೇ ಚಿಗುಟಿ ಹಾಕಿದರೆ ದಾರಿಗೆ ಬರ್ತಾನೆ (ಸ್ವಾಮಿಸ್ಮ. ೧೦೫). ೩. "ಒತ್ತಾಯ ಮಾಡು ಜುಲುಮೆ ಮಾಡು" (ಜಾನಕೋ. ೩). ೪. ಅಪಹರಿಸು; ದೋಚು : ವೀರಣ್ಣನಿಗೆ ಆ ಪೆಟ್ಟಿಗೆಯಲ್ಲಿ ನಿಧಿ ಸಿಕ್ಕಿದ ವಿಚಾರ ತಿಮ್ಮಪ್ಪನ ಕಿವಿಗೂ ಬಿತ್ತು . . . ಅದು ತನ್ನ ಪಾಲಿಗೆ ಬರಬೇಕಿತ್ತು ; ವೀರಣ್ಣ ತನ್ನಿಂದ ಅದನ್ನು 'ದಬಾಯಿಸಿದ್ದೇ' ಎಂದು ಆತ ತಿಳಿದುಕೊಂಡ (ಮುಂಗಾಮು. ೬೦) ; ಗಡಿಯಾರ ಬಂದೈತೆ ? ಎಲ್ಲಿ ದಬಾಯಿಸಿದೆ (ಉಚುಗೊ. ೭೮).

[ದಬ್ಬಾ$_0$ (P ←ಹಿಂ. ದಬಾನಾ) + – ಇಸ್ಕಾ]

ದಬಾಲಿ$_1$ 'ಡವಾಲಿ' ನೋ.

ದಬಾಲಿ$_2$ (ನಾ). ದಪ್ಪನಾದ ಹೆಂಗಸು ; ಸ್ಥೂಲಕಾಯದವಳು : ಆ ದಬಾಲಿಗೆ ಕುಳಿತುಕೊಳ್ಳಲು ಇಷ್ಟು ಜಾಗ ಸಾಕಾದೀತೆ ? (ಕೂಡಿ). 'ಡುಬಲಿ' ಪರಾ. [←ಮರಾ. ಧಬಾಲೀ = ಸ್ಥೂಲ, ದಪ್ಪ]

ದಬಾವಣೆ (ನಾ). ದಬಾಯಿಸುವಿಕೆ ; ಗದರಿಸುವಿಕೆ ; ಜೋರುಮಾಡುವಿಕೆ : ನಿನ್ನ ದಬಾವಣೆ ನನ್ನ ಮುಂದೆ ನಡೆಯಲಾರದು (ಜವರಿ. ೫೫) ; ಅವನು ತೀರ ದಬಾವಣೆ ಮಾಡಿದರೆ ನನ್ನ ಹತ್ತಿರ ಬಾ (ಧರ್ಮಶ್ರೀ. ೧೦೮) ; ಈ ದಬಾವಣೆ ಮಾತು ಯಾಕಾದೀಯಾ ? (ಕೂಂಗಲ್ಕ. ೦೭).

[ದಬಾಯಿಸು + – ಅಣೆ$_4$./ಮರಾ. ದಬಾವಣೇ]

ದಬೀರ 'ಡಬೀರ' ನೋ.

ದಬ್ಬಣ 'ದಬ್ಬಳ' ನೋ.

ದಬ್ಬಣಕಾಟಿ, ಡಬ್ಬಣಕಾಟಿ, ದಬ್ಬಣಕಾಠಿ (ನಾ). ದಬ್ಬಳದ ಅಗಲ ದಪ್ಪು ಅಂಚು : ದಬ್ಬಣಕಾಟಿಯ ಮಿಸೆ ; ನಿಡಿದಾದ ಮೂಗು (ತೆಲುಗು. ೩೪). **ಡಬ್ಬಣಕಾಟಿ** : ಎತ್ತೆತ್ತಲೋ ಉಟ್ಟ 'ಡಬ್ಬಣಕಾಟಿ'ಯ ತೀರ ದಪ್ಪನಾದ, ಕೆಂಪಾದ ಧೋತರ (ಗಂಗಾಗೌ. ೨). **ದಬ್ಬಣಕಾಠಿ**: ಗೋವಿಂದ ರಾಯನು . . . ಸ್ಥೂಲಕಾಯನು. ದಬ್ಬಣಕಾಠೀ ಮಿಸೆಯುಳ್ಳವನು (ಅಂದಿಳಿ. ೦೬೦). [←ಮರಾ. ದಾಭಣಕಾಠೀ]

ದಬ್ಬಣಕಾಠಿ 'ದಬ್ಬಣಕಾಟಿ' ನೋ.

ದಬ್ಬಣಸಾಲಿ, ಡಬ್ಬಣಸಾಲಿ (ನಾ). ದಬ್ಬಳದ ಗಾತ್ರದ ಒಂದು ಬಗೆಯ ಬತ್ತ : ದಬ್ಬಣಸಾಲಿ ಅಕ್ಕಿ ದಬ್ಬಣದಂತೆ ದಪ್ಪ (ಕೂಡಿ) **ಡಬ್ಬಣಸಾಲಿ** : ಡಬ್ಬಣಸಾಲಿ ಅಕ್ಕಿ (ಕೂಡಿ).

[ದಬ್ಬಣ (<ದಬ್ಬಳ) + ಸಾಲಿ$_3$]

ದಬ್ಬಣಿಗ (ನಾ). ಸೂಜಿಕಾಯಕದವನು (?). 'ದಬ್ಬಣಿಗೆ' ಪರಾ.

[ದಬ್ಬಣ (<ದಬ್ಬಳ) + – ಇಗ]

ದಬ್ಬಣಿಗೆ (ನಾ). ಸೂಜಿಯ ಕಾಯಕ (?). 'ದಬ್ಬಣಿಗೆದೆಱಿ' ಪರಾ. [?]

ದಬ್ಬಣಿಗೆದೆಱಿ[3] (ನಾ). ದಬ್ಬಣಿಗೆ ವೃತ್ತಿಯ ಮೇಲೆ ಹಾಕುವ ತೆರಿಗೆ (?) : ಕಾರವುಣ್ಮಮಿಯಲು ಗೆಲ್ವತ್ತಿನ ಸೇಸೆ ಗದ್ಯಾಣವೊನ್ದು ಮೇದರಲ್ಲಿ ದಬ್ಬಣಿಗೆದೆಱಿಯ ನೋಡಿಕೊಂಬರು (ಶಾಇಶಿ. IX-i, ೧೭೦-೭೫ ; 1106).

[ದಬ್ಬಣಿಗೆ + ತೆಱಿ[3]]

ದಬ್ಬರಿ 'ಡಬರಿ' ನೋ.

ದಬ್ಬರೆ[1] 'ಡಬರಿ' ನೋ.

ದಬ್ಬರೆ[2] ನಾ). "ಸುಳ್ಳು" (ಜಾನಕೋ. ೩) : ಎಲ್ಲಾ ದಬ್ಬರೆ ಮಾತು (ಕೂಡಿ). [ದೇ.॥ ತಮಿ. ತಪ್ಪರೈ ; ತೆಲು. ದಬ್ಬರ, ದಬ್ಬಜ, ಡಬ್ಬಜ]

ದಬ್ಬಳ, ಡಬ್ಬಣ, ಡಬ್ಬಳ, ದಬ್ಬಣ (ನಾ). ಗೋಣಬೀಲ ಮೊದಲಾದುವನ್ನು ಹೊಲಿಯಲು ಉಪಯೋಗಿಸುವ ಸೂಜಿಯಂತಹ ದಪ್ಪ ಸಾಧನ : ದಬ್ಬಳಮಂ ಬೆರಲ್ಗಳೊಳಡಂಗುವಿನಂ ನಡೆ ಪೊಯ್ದು . . . ಒರ್ವನಂ ಬೊಬ್ಬಿಱಿದಾರ್ದು ಕೊಲ್ವ ಕೊಲೆಯಂ ಹರಿಣೇಕ್ಷಣೆ ಕಂಡು ಭೀತಿಯಿಂ (ಶುಕುಮಾ. ೭-೭) ; ಗುಡಿ ನೇಣ್ ಕಾಂಡಪಟಂ ಮೊದಲಿಂಗಳಗೆಯುಂ . . . ಕುಡುಗೋಲ್ ಕತ್ತಿಗೆ ದಬ್ಬಳಂ ಕೊಡಲಿ ಗೂಟಂ ಹಾರೆ ಹಾರಂಗಿ ಕೈಪಿಡಿದಾ ತಾವ್ರುಸಭಾಂಡವೆಂಬವಿನತುಂ ದಂಡಿಂಗೆ ಸಾಮಗ್ರಿಗಳ್ (ಸೂಕ್ತಸು. ೧೮-೨೩) ; ಸರಕಿನ ಕೋಣೆ ಕಟ್ಟಳೆಮರಂ ಕುಡುಗೋಲ್ತೆರೆ ಸೀರೆ ದಬ್ಬಳಂ ಹುರಿ ಗಡ ಹಾರೆ ಸವಗಂ ತೊದೆ ವೊಚ್ಚಯಂಗಳೆಂಬುರಂತರ ಸಾಧನಂ ಬೆರಸು ದಂಡಿನವರ್ ಪೊಜಮಟ್ಟರರ್ಥಿಯಿಂ (ತ್ರಿಪುವಿ. ೨೪-೨೮೫); ಸೂಜಿ ಮೊದಲು ದಬ್ಬಳವೆ ಕಡೆಯಾದ ಮುವ್ವತ್ತೈರಡಱಿಂ ಪೋರ್ದರಾ ದನುಜಪತಿ ಹರಿಗಳು (ವೀಶಿಪು. ೨-೧೨-೪೦) ; ಕಲ್ಲು ಚೂಪಾಗಿ ದಬ್ಬಳದಂತೆ ಚುಚ್ಚುತ್ತಿದ್ದಿತು (ಪಸ್ತಳ. ೫೮). **ಡಬ್ಬಣ :** ತಲೆಯ ಕೂದಲು ಗಳಂತೂ ಡಬ್ಬಣ ಗಡುತರ ಆಗಿರುತ್ತವೆ ! (ಮೋಹಿನೀ. ೨೮). **ಡಬ್ಬಳ :** ತಾಯಿಯೊಂದು ಕಡೆ, ತಂದೆಯೊಂದು ಕಡೆ ಸೂಜಿ ಡಬ್ಬಳ ತೆಗೆದುಕೊಂಡು ಚುಚ್ಚುತ್ತಿದ್ದರೆ ಅವನಿಗೆ ಹೇಗಿದ್ದಿರಬೇಕು ? (ಮಹಾಗ. ೮೮). **ದಬ್ಬಣ :** ಬಸಿದ ದಸಿಯೊಳ್ ತೆಗೆವುದುಂ ಕಬ್ಬುನದ ದಬ್ಬಣಂಗಳಂ ದಬ್ಬುಕದ ಡಂಗೆಗಳಿಂ ಬೆರಲ್ಗಳೊಳಡಂಗೆ ಬೆಟ್ಟುವುದುಂ (ಶುಕುಮಾ. ೧೧-೪೭ ಪ) ; ಶೂರನುಕ್ಕಿನ ದಬ್ಬಣದಿ ತಲೆಯೂಱಿ ನಿಂದನು (ಕಾತಿಕಾ. ೫-೪) ; ದಿಬ್ಬಣ ವೆರಡೊಂದು ದಿಬ್ಬಣವಾಗಿ . . . ದಬ್ಬಣದೊಳು ದಾರ ನಡೆವಂತೆ ನಡೆದುದು ಸಬ್ಬಲಗ್ಗೆಯೊಳರಮನೆಗೆ (ಭರಚ. ೭೦-೭೪).

[ದೇ.॥ ತಮಿ. ತಪ್ಪಣ ; ತುಳು. ದಬ್ಬಣ, ದಬ್ಬಣೊ, ದಬನ ; ತೆಲು. ದಬ್ಬಲ, ದಬ್ಬನ./ನುರಾ. ದಾಭಣ]

ದಬ್ಬಾಟ (ನಾ). ನೂಕುವಿಕೆ ; ತಳ್ಳುವಿಕೆ : ಜಗಳದಲ್ಲಿ ದಬ್ಬಾಟವೇ ಜಾಸ್ತಿ (ಕಸಾಪ. I, ೫೧೦). [ದಬ್ಬು[1] + ಆಟ]

ದಬ್ಬಾಡು (ಕ್ರಿ). ನೂಕು ; ತಳ್ಳು : ಜಗಳದಲ್ಲಿ ಒಬ್ಬರನ್ನೊಬ್ಬರು ದಬ್ಬಾಡಿದರು (ಕೂಡಿ). [ದಬ್ಬು[1] + ಆಡು[1]]

ದಬ್ಬಾಳಿಕೆ (ನಾ). ನಿರಂಕುಶಾಧಿಕಾರ ನಡೆಸುವುದು ; ಒತ್ತಾಯವನ್ನು ಹೇರುವುದು ; ಬಲಾತ್ಕಾರದ ಆಡಳಿತ : ತಾಯು ಸೆರೆಯಂ ಸವರಲಿಂದೆ ವೆರವಿಸಿ ಬವರ–ದಬ್ಬಾಳಿಕೆಯ ಮೆಟ್ಟಡಿಯ ತಬ್ಬಬೇಕೆ? (ಗಿಳಿವಿಂ. ೭೧-೭೬); ಬ್ರಿಟಿಷ್‌ಸಾವ್ರಾಜ್ಯಶಾಹಿಯ ಹಿಂಸೆ, ದಬ್ಬಾಳಿಕೆ, ಕ್ರೂರ ಶಿಕ್ಷೆಗಳ ಪರಿಣಾಮ ಹೀಗೇ ಆಯಿತು (ಆತ್ಮಕ್ಥ. ೧೩೦) ; ಕಾಂಗ್ರೆಸ್ಸಿನ ಶಕ್ತಿ ಹೆಚ್ಚಿದ ಹಾಗೆಲ್ಲಾ ಸರ್ಕಾರದ ದಬ್ಬಾಳಿಕೆಯೂ ಹೆಚ್ಚಾಗುತ್ತಿತ್ತು (ಪಂಜಪಂ. ೭೫) ; ಪರಕೀಯರ ದಬ್ಬಾಳಿಕೆ, ನಮ್ಮವರೆದೆಯುಬ್ಬಾಳಿಕೆ, ಮಬ್ಬಾಳಿಕೆ, ಗಬ್ಬಾಳಿಕೆ–ಎಲ್ಲ ಒಂದೆ, ಒಂದೆ (ನಡಭಂ. ೭೦-೨).

[ದಬ್ಬು[1] + ಆಳಿಕೆ (<ಆಳ್ಕೆ)]

ದಬ್ಬಿಸು, ದೊಬ್ಬಿಸು (ಕ್ರಿ). ನೂಕಿಸು ; ತಳ್ಳಿಸು : ಅವನನ್ನು ಆಚೆಗೆ ದಬ್ಬಿಸಿದರು (ಕೂಡಿ). **ದೊಬ್ಬಿಸು :** ಬಿಡಿಸುವೆನಿಂದು ತನ್ನಯ ಗರ್ವಮೆನುತಬ್ಬರಿಸಿ ದೊಬ್ಬಿಸಿದಾ (ಆನಂರಾ. ೧-೯-೮). [ದಬ್ಬು[1] + – ಇಸು[3]]

ದಬ್ಬು[1], ಡಬ್ಬು[1], ದೊಬ್ಬು (ಕ್ರಿ). ೧. ನೂಕು ; ತಳ್ಳು : ದೂಡು : ದೇವೇಂದ್ರನು ಆ ತಕ್ಷಕನನ್ನು ಕೆಳಕ್ಕೆ ದಬ್ಬಿಬಿಟ್ಟನು (ಕೃವಾಆ. ೮೧) ; ಸಬ್ಬರೀ ಜವುದಗ್ನಿಸುತನಿಂ ಮಬ್ಬು ಮುಸುಕಿದ ತೆರದೊಳಿರ್ದರು ದಬ್ಬು ತವನನು ಸಲಿ ದೈ ವಸುಧಾಧಿಪತಿಗಳನು (ರಾಮಾಸಂ. ೧-೭-೨೪) ; ಮಾರೀಚನಂ ನೂರು ಯೋಜನ ದಬ್ಬಿ ಸಮುದ್ರದಲ್ಲಿ ಕೆಡಹಿ (ಕೃಷ್ಣರಾ. ೧-೦೧). ೨. ಮುಂದೂಡು ; ಮುಂದಕ್ಕೆ ಹಾಕು : ಈ ದಿನ ನಡೆಯ ಬೇಕಾಗಿದ್ದ ಸಭೆಯನ್ನು ದಬ್ಬಿದ್ದಾರೆ (ಕೂಡಿ). **ದಬ್ಬು[1] :** ೧. ಒಬ್ಬನೆಸುವನು ಪಾರ್ಥರಿವರೆಲ್ಲರಂ ಕೂಡಿ ಬೊಬ್ಬೆಯಿಂ ಕಣೆಗಳಂ ತರಿದೊಟ್ಟಿ ನಾಯಕರು . . . ಎಸುವರಿವರಿರು ಕಡಿವನನಿತುವಂ ನರನೊಬ್ಬನೆ ಡಬ್ಬುವನು ಕಣೆಗಳನ್ನವರೆಸಲು (ಶುಕುಂಗ. ೪೬-೩೮); ಇನ್ನಾದರಬ್ಬರಿಸಿ ಪಾರ್ಥನಂ ತರುಬುವದು ಹೆಣಗುವದು ನಮ್ಮ ಕಡೆ ಬಾರದಂತೆ ಡಬ್ಬುವುದು ನೀವೆಲ್ಲರುಂ ಕೂಡಿ (ಶುಕುಂಗ. ೪೭-೭). **ದೊಬ್ಬು :** ೧. ಸಲೆ ನಿರೋಧಿಪ ರೋಗ ದುರಿತಾವಳಿಯನೆಲ್ಲವ ದೊಬ್ಬಿ ಸತ್ಪಥದಲಿ ಚಲಿಸುತಿಹ ಯೋಗಿ ಸಜ್ಜನನಾಗಿ ಸುಖಿಯಹನು (ತಿಮ್ಮಶಾಂ. ೯-೩೩) ; ಕಿವಿತಿವಿದು ಗಾಢಾಂಧ ಕಾರವ ರವಿಯ ಕಿರಣಂ ದೊಬ್ಬುವವೊಲ್ (ವಿವೇಧ. ೨-೧೯) ; ಇವನನ್ನು ಕೆಳಕ್ಕೆ ದೊಬ್ಬಿಬಿಡು (ಕಥಾಮಂ. IV, ೪೩) ; ಅಚ್ಚರಿಯಿಂದ ಗಿಳಿ ಸಾಕಿ ಕಿಚ್ಚಿಗೆ ದೊಬ್ಬಾರೋ (ಗಾಡ). ೨. ನಿಲ್ಲದಾ ಕಾಲವನು ವಿಘ್ನೆಗಳಲ್ಲಿ ಯೋಚಿಸಿ ನೆವವಿಡುತ ಭೂವಲ್ಲಭನು ದೊಬ್ಬಿದು ಸನ್ಮತವರಸ (ತಿಮ್ಮಶಾಂ. ೫-೨೭). ೩. ತೊರೆ ; ತ್ಯಜಿಸು : ಉಬ್ಬಿ ಸಂಸಾರಿಯಾಗಿ ನಿಮಿಷಕೆ ದೊಬ್ಬಿ ಸಂನ್ಯಾಸಿಯಾಗಿ (ಜ್ಞಾನಸಿಂ. ೫-೦೪೮).

[ದೇ.॥ ತುಳು. ದಬ್ಬು, ಡಬ್ಬು, ದೊಬ್ಬು ; ತೆಲು. ದ್ರೊಬ್ಬು ; ನಾಯ್ಕ. ಢೂಬ್ಬ್]

ದಬ್ಬು[2], ಡಬ್ಬು[2] (ನಾ). ಅಡಿಮೇಲು; ಬೋರಲು; ಬೆನ್ನುಮೇಲಾಗಿರುವಿಕೆ. 'ದಬ್ಬುಹಾಕು' ಪರಾ. **ಡಬ್ಬು[2] :** ಹೂಂ ! ಬೀಳಲಿ, ಡಬ್ಬು (ಹುಚ್ಚಾಟ. ೧೧೦). [?]

ದಬ್ಬುಕ, ಡಂಬುಕ, ಡಬ್ಬುಕ, ಡುಬ್ಬುಕ (ನಾ). ಕಲ್ಲನ್ನು ಸೀಳುವ ಒಂದು ಬಗೆಯ ಉಪಕರಣ; ಚಾಣ; ಉಳಿ: ಕರ್ಬೊನ್ನ ದಬ್ಬುಕಂಗಳಿಂ ತಲೆ[ಯಂ] ಸಿಪ್ಪು ಬಿ[ಚ್ಚ]ತ ಬಿರಿದು ಶತಖಂಡಂಗಳಪ್ಪನೆವೆತ್ತಿ ಪೊಯ್ಯೆಯಂ (ವರ್ಧಮಾ. ೫-೩೪ ಪ); ದಬ್ಬಳಮಂ ಬೆರಲ್ಗಳೊಳಡಂಗುವಿನಂ ನಡೆಪೊಯ್ದು ಮೂಳೆಯಂ ದಬ್ಬುಕದಿಂದೆ ನುಗ್ಗುನುಱಿಯಪ್ಪನೆಗಂ ಬಿಡೆ ಬೀಸಿ ಪೊಯ್ದು . . . ಒರ್ವನಂ ಬೊಬ್ಬಿಱಿದಾರ್ದು ಕೊಲ್ವ ಕೊಲೆಯಂ ಹರಿಣೇಕ್ಷಣೆ ಕಂಡು ಭೀತಿಯಿಂ (ಶುಕುಮಾ. ೭-೭) ; ಸಱಿಗಲ್ಲಂ ದಬ್ಬುಕದಿಂದಿಱಿದೊಡೆ ಕಿಡಿ ಹಾಱುವಂತೆ ಮುಂತೊಗೆದ ಮುಗಿಲ್ದುಱುಗಲನೆ ಖಚರಿ ಕುಚವಿಂದಿಱಿದಳ್ ಕಿಱಿಂಮಿಂಚು ನುಚ್ಚುನುಱಿಯಪ್ಪನೆಗಂ (ಅರ್ಧನೇ. ೩-೨೮) ; ಕರಗಸ ಗಾಳ ನಿಚ್ಚಣಿಗೆ ದಬ್ಬುಕವೆಂಬವನಿಕ್ಕಿ ಕಾದಿ ನಿತ್ರಿಸದೆಯೋಡಿ ಹೋದ ಬೆಳ್ಕರಳೆಯ ಬೇಂಟೆಯಲು ಕೊಲಲುವೊಲ್ಲದೆ ಕಾವನು ವಿಕ್ರ[ಮಂ] ಭೂಭುಜ (ಸಾಇಶಿ. IX-i, ೨೭೭-೭೩ ; 1183) ; ತುಂಬುರು ಮುತ್ತದಿಂದೆ ನಡೆಕಲ್ಗಳನಿಂಬಿನೆ ಬೇಯೆ ಸುಟ್ಟು(ಟ್ಟ) ಸುಣ್ಣಂಬೆರಸಿರ್ದ ನೀರನೆಱಿದಾಸಿಸು ಮೋದಿಸು ದಬ್ಬುಕಂಗಳಿಂದಂ ಬಿರಿಗುಂ ಶಿಲಾಳಿ (ಆಚ್ಯಮ. ೧೦-೫೭). **ಡಂಬುಕ :** ಬಱಿಸಿಡಿಲು ಸಿಡಿಲಂಬು ಡಂಬು[ಪಾಠಾಂ. ಡಬ್ಬು, ಡುಬ್ಬು]ಕ ಗಱಿದಳೆದ ಹಾಯ್ವುಟ್ಟ . . . ಮುಱಿಮುಱಿದು ಮೋದುವ ಭೂತಗಣದುಬ್ಬಿತದೊಡ್ಡನು ಮುಂದೆ ನಿಲಿಸಿದನಾ ಚಮೂರಮಣ (ತೂರರಾ. ೬-೧೯-೦೭). **ಡಬ್ಬುಕ :** ಡಾವರಿಪ ಡಾವರದ ಡಬ್ಬುಕದ

ಕುತ್ತುವಾರೆಯು ಬಗೆಯದಾನೆಗಳತ್ತ ಮುರಿದವು ಸಿಂಹನಾದಕೆ ಮತ್ತಗಜ ವೊಗದಿರುಹಿದವು ದಳವುಳಿಸಿದನು ಭೀಮ (ಕುವ್ಯಾಗ. ೨-೩೮); ಕುಡು ಗೋಲ್ಕೊಡಲಿ ಕೈಪಾರೆ ಗುದ್ದಲಿ ಮಚ್ಚು ಕಡುಕತ್ತಿ ಡಬ್ಬುಕ[ಪಾಠಾಂ. ದಬ್ಬುಕ, ಕಬ್ಬುನ]ಗಳನು ಬಿಡದಾಂತು ನಡದರು ಬಿಟ್ಟಯವರು ನೆಲ ವಡೆದುದೆಂದೆನಲು ಸಂದಣಿಸಿ (ಕುರಾಸಾಂ. ೪೦-೪೮). **ಡುಬ್ಬುಕ** : ಮೇಲಿನ 'ಡುಬುಕ' ಉಲ್ಲೇಖದ 'ತೊರರಾ' ಪ್ರಯೋಗದ ಪಾಠಾಂತರವನ್ನು ನೋಡಿ. [?]

ದಬ್ಬುದಲೆ (ನಾ). ೧. ತಬ್ಬಿಬ್ಬು ; ಗಾಬರಿ ; ದಿಗ್ಭ್ರಮೆ : ಕೋಟೆಯ ಮುಂದೆ ಕುಳ್ಳಿರ್ದು ಕಡು ರಿಸವಡೆದು ಹೃದಯನೊಳಿನಿಸು ದಬ್ಬುದಲೆಯಿಲ್ಲದೇ ನುಡಿಯುತೊಳ್ನುಡಿಯ ನಸುನಗೆಯಿಡುವ ಮಾಣವಕನು ಕಂಡು ತಾಂ ನುಡಿದನಿಂತು (ಸಮ್ಯಕ್ಕಾ. ೨-೬೫); ಕೊಲಬಂದ ಪಗೆಗಡಿಗಡಿಗೆ ಕಪ್ಪವ ತೆತ್ತು ನಿಲಿಸುವಂತನ್ನವಾನಗಳಾ ಸಲಿಸಿ ಹಸಿವು ತೃಷೆಗಳ ತಡೆವುತ ದಬ್ಬು ದಲೆಬಿ[ಬ]ಟ್ಟು ಬಾಳ್ವುದು ಸುಖವೆ (ಧರಕ. ೬೬-೧೦೯). 'ದಬ್ಬುದಲೆಗೊಳ್' ಪರಾ. ೨. ಒದರಾಟ; ಒದರಿಕೊಳ್ಳುವಿಕೆ; ಒದ್ದಾಡುವಿಕೆ: ಶೂಲವೇಱಿಯರೆಮುಗುಳ್ದಕ್ಷಿ ಹಲವು ಕದುಕೇಱಿನಿಂ ಸುರಿವರುಣಜಲ ದಬ್ಬುದಲೆಯನಾಡುವ ಹಸ್ತಪಾದ ಕೆದಱಿದ ಕೇಶ . . . ಕುಬುಬೆಂದು ಕೂಗುವೀ ಬಲುಗೆಯ್ಯನಿವನಾರೆನಲ್ಕೆ (ಸಮ್ಯಕ್ಕಾ. ೪-೩೦).

ದಬ್ಬುದಲೆಯು ಮಾತು = ಗದ್ಗದಿಸುವ ಮಾತು ; ತಡವರಿಸುವ ನುಡಿ : ಬೆಳ್ಗರೆವ ಕೊರಲು ಮೆಯ್ಯ ಹಬ್ಬಿದ ನಡುಕ ಹೊಯ್ವಳ್ಳಿ ದಬ್ಬು ದಲೆಯ ಮಾತು ದುರುದುರುಗಣ್ಣಿಂದುಬ್ಬಸಗೊಳುತಿದ್ದನವನು (ಶ್ರೀಪಾಲ. ೪-೭೦). [?]

ದಬ್ಬುದಲೆಗೊಳ್ (ಕ್ರಿ). ೧. ತಬ್ಬಿಬ್ಬುಗೊಳ್ಳು ; ಗಾಬರಿಯಾಗು : ದಬ್ಬುದಲೆಗೊಂಬ ವಾರಣವಾಹಕಪ್ರತತಿ ತಬ್ಬಿಬ್ಬುಗೊಂಬ ತುರಗಾ ರೋಹಕಪ್ರತತಿ (ಸಮ್ಯಕ್ಕಾ. ೪-೬೩) ; ಕಾಳಗತ್ತಲೆ ತುತ್ತುಜುಂಬಾಗಿ ತುಂಬಿದಾಭೀಳಮಪ್ಪಾರಣ್ಯಮೆಧ್ಯದೊಳ್ದಬ್ಬುದಲೆಗೊಂಡು ದಾರಿಯ ತಪ್ಪಿದಾ ಮೇಳದ ವಣಗ್ವಾಲ ಸಹಿತ ಬಂದು (ಸಮ್ಯಕ್ಕಾ. ೧೦-೪೭) ; ಅಲಘುಪರಾಕ್ರಮಿಯಾದಿತ್ಯಸೇನಗೆನ ಬಲದ ಬಲ್ಗೊಲೆಯ ಸೈರಿಸದೆ ತಲೆಬಾಲಗೆಟ್ಟು ಕೌಂತೇಯರ ಬಲ ದಬ್ಬುದಲೆಗೊಂಡುದತಿಭೀತಿಯಿಂದ (ನೇಮಿಸಂ. ೫೯-೧೦೪). ೨. ಒದರಾಡು ; ಒದ್ದಾಡು ; ಹೊಯ್ದಾಡು : ದಬ್ಬುದಲೆಗೊಂಡು ನರಲ್ವರಿವಣಂಗಳ ತಂಡವುಬ್ಬಸಂಗೊಂಡೇಳ್ವ ಬಳ್ವ ಹಯವೇತಂಡ ನಿಬ್ಬರದಿ ನಡೆದು ಪಿಡಿದಸಿಗಳಂ ಝಳಪಿಸುವ ಮುಂದೆ ಮುಗ್ಗಿಱುವ ಮುಂಡ . . . ಕಡಿಕಂಡದೊಬ್ಬುಳಿಯಿನೆಸೆವ ಬಿಸಿಯರುಣ ಜಲಗಳ ಕೊಂಡವೆಸೆದುವಾ ಧುರಧರೆಯೊಳು (ಸಮ್ಯಕ್ಕಾ. ೮-೩೦).

[ದಬ್ಬುದಲೆ + ಕೊಳ್[1]]

ದಬ್ಬುಹಾಕು, ಡಬ್ಬುಹಾಕು (ಕ್ರಿ). ತಲೆಕೆಳಗಾಗಿ ಹಾಕು; ಪಂಗುಚೆಡು; ಬೋರಲುಹಾಕು : ಹೊಲದಲ್ಲಿ ಶಿವಶರಣನ ಹೆಸರಿಲಿ ದಬ್ಬುಹಾಕುವ ಮಡಕೆಗೆ ಒಕ್ಕಲಿಗನು 'ಬೆಚ್ಚು' ಎಂದು ಕರೆದಿರಬಹುದು (ಕನ್ನಚಾ. ೧೫೭); ದಬ್ಬುಹಾಕಿದ ಕಜ್ಜಾಯ ಬೇಯಿಸುವ ಕೊಪ್ಪರಿಗೆಯು (ಕನ್ನಚಾ. ೧೫೯). **ಡಬ್ಬುಹಾಕು** : ಆಕಾಶವು ಡಬ್ಬುಹಾಕಿದ ನೀಲವರ್ಣದ ಕೊಪ್ಪರಿಗೆಯಂತೆ ತೋರುತ್ತದೆ (ಕಮುಂಬಯಿ. ೬-೩೭೬) ; ಹೋಳಿಗೆಯ ಮಣೆಯ ಮೇಲೆ ಕಬ್ಬಿಣಂಚು ಡಬ್ಬುಹಾಕಿಕೊಂಡು ಮನೆಗೆ ನಡೆದಿದ್ದಳಾಕೆ (ಅಕೋಳ. ೯) ; ಭಾವಚಿತ್ರ ಹರಿದೊಗೆಯಲಿಲ್ಲ. ಕಣ್ಣಮುಂದೆ ಬೇಡ ಎಂದು ಟ್ರಂಕಿನ ಕೆಳಭಾಗದಲ್ಲಿ ಡಬ್ಬುಹಾಕಿದ (ಅಪನಾ. ೫೬).

[ದಬ್ಬು[2] + ಹಾಕು (<ಪಾಯ್ಸು[1])]

ದಬ್ಬೆ[1], ಡಬ್ಬೆ[1], ಡೆಬ್ಬೆ[1], ದಂಬೆ, ದೆಬ್ಬೆ[1] (ನಾ). ೧. (ಜಿದಿರು, ಅಡಕೆ ಮೊದಲಾದ ಮರಗಳ) ಸೀಳು; ಗೀಳು; ಹೋಳು: ವೇಣುದಬ್ಬೆಯ ನೆಗಹಿ ಜಂತ್ರವ · ಕ್ಷೋಣಿಗಿಳುಹಿದರೀಗ ದೃಪದನು ಕಾಣದಂದದಿ ಕಟ್ಟಿ ತಂದರೆ ರಣಕೆಯೆದುರಿನಲಿ (ಜಸಭಾ. ೬೩-೩೩) ; ಮುರಿದ ಕೈಯನ್ನು 'ದಬ್ಬೆ'ಯಿಂದ ಚೆನ್ನಾಗಿ ಕಟ್ಟಿಕೊಂಡನು (ಬಂಗಾಹ. ೩೩); ಎತ್ತರದ ಜಗುಲಿ ಯಿಂದ ಮಕ್ಕಳು ಕೆಳಕ್ಕೆ ಬೀಳದಿರಲೆಂಬ ಉದ್ದೇಶದಿಂದ ಅಡಕೆಯ ಮರದ ದಬ್ಬೆಗಳನ್ನು ಅಡ್ಡವಾಗಿ ಹೊಡೆದಿದ್ದರು (ಕೂನಿಶೀ. ೧೧); ನಾಯಿಬಾಲಕ್ಕೆ ದಬ್ಬೆ ಕಟ್ಟಿದ ಹಾಗೆ (ಗಾಡ). **ಡಬ್ಬೆ[1]** : ೧. 'ಬೆನ್ನುಡಬ್ಬೆ' ಪರಾ. **ಡೆಬ್ಬೆ[1]**: (ಕ). **ದಂಬೆ** : ೨. ಗದ್ದೆ, ತೋಟಗಳಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ನೀರು ಹಾಯಿಸಲು ಏರ್ಪಡಿಸಿರುವ ಅರ್ಧಕ್ಕೆ ಸೀಳಿದ ತಾಳೆ, ತೆಂಗು, ಬಿದಿರು ಮೊದಲಾದ ಮರಗಳ ದೋಣಿ,– ಕಾಲುವೆ : ನೀರಿನ ದಂಬೆಯೊಂದು ಹರಿಯುವಲ್ಲಿ ಪಡುವಣ ಬಾನು ತೆರವಾಗಿ ಕಾಣಿಸುವಲ್ಲಿ – ನೆಲ ಸವರಿದರು (ಕುಡಿಳೂ. ೬೪); ಇದರ ಬಳಿಯಲ್ಲೇ ಗುಳುಗುಳು ಸದ್ದುಮಾಡಿ ಹರಿಯುವ ದಂಬೆನೀರು (ಬಬ್ಬಜೀ. ೭). **ದೆಬ್ಬೆ[1]**: ೧. ಬಿದಿರು ದೆಬ್ಬೆಗಳನ್ನು ದೂರ ದೂರ ಹಾಕಿ ಬಿಗಿದ ಚಪ್ಪರದ ಮಧ್ಯೆ ತಲೆ ಸಿಕ್ಕಿಹಾಕಿಕೊಂಡಿತು (ನಸೂರು. ೩೦೯); ನಾಯಿ ಬಾಲಕ್ಕೆ ದೆಬ್ಬೆ ಕಟ್ಟಿದ ಹಾಗೇನೇ (ಸಮ್ಯಳ್ಳಿ. ೮).

[ದೇ.॥ ತಮಿ. ತಪ್ಪೈ; ತುಳು. ದಬ್ಬೆ, ದೆಬ್ಬೆ, ದಂಬೆ; ತೆಲು. ದಬ್ಬ]

ದಬ್ಬೆ[2] 'ದರ್ಬೆ' ನೋ.

ದಭ್ರ (ನಾ). ೧. ಸ್ವಲ್ಪವಾದುದು ; ಅಲ್ಪವಾದುದು ; ಸಣ್ಣದು : "ಸೂಕ್ಷ್ಮಃ, ಲೇಶಃ, ಲವಃ, ಶ್ಲಕ್ಷ್ಣಃ, ಕ್ಷುದ್ರಂ, ದಭ್ರಂ . . . ಅಲ್ಪಃ, ತ್ರುಟಿಃ – ಈ ೧೫ ಕಿಱಿದು" (ಹಲಾಯು. ೦೦೪-೩) ; "ಅಲ್ಪಂ ಲವಂ ಲೇಶಂ . . . ಕ್ಷುದ್ರಮುಂ ದಭ್ರಮುಂ ವಪ್ರ ಕಿಂಚಿತ್ ತನುಸ್ತೋಕಮೆನೆ ಕಿಱಿದೆನಿಕ್ಕು" (ಪುಂಗಾರಾ. ೧೩೭-೫). ೨. ದರ್ಬಲ ; ಅಶಕ್ತ : (ಕ).

[ಸಂ.]

ದಮ (ನಾ). ೧. ಅಂಕೆಯಲ್ಲಿಡುವುದು; ಹತೋಟಿಯಲ್ಲಿಡುವುದು ; ನಿಗ್ರಹಿಸುವುದು. ೨. ಇಂದ್ರಿಯನಿಗ್ರಹ ; ಸಂಯಮ : ವೈರಾಗ್ಯಮೆ ಕುಲವಟ್ಟಿಯೆಂಬಂತೆ ತಂದೆಯಂ ಮುನ್ನಂ ನಿರ್ಮಲ ಜನದೀಕ್ಷೆಗವರ್ ಪೂಣ್ದಲಂಘ್ಯೆದಮಮಂ ಧರಿತ್ರಿಯಿಂ ಪೊಗಟ್ಪಿಸಿದರ್ (ಶಾಂತಿಪು. ೯-೩೩); ಬಾಹ್ಯಕರಣನಿಗ್ರಹವೇ ದಮವಕ್ಕುಂ (ವಿವೇಕ. ೦೫) ; ಶಮಾದಿ ಷಟ್ಕ– ಶಮ (ಮನೋನಿಗ್ರಹ), ದಮ (ಇಂದ್ರಿಯನಿಗ್ರಹ) (ಅಮೃತ. ೩-೩ ಟೀಕೆ). ೩. ದಂಡನೆ ; ಶಿಕ್ಷೆ ; ದಂಡ. ೪. ರಾಜನೀತಿ ; ದಂಡನೀತಿ: ರಾಜ ಶಾಸ್ತ್ರವನ್ನು 'ನೃಪಶಾಸ್ತ್ರ' ಮತ್ತು ದಾಂಡನೀತಿ ಎಂದೂ 'ದಮ' ದಂಡ ವೆಂದೂ, ನೀತಿಶಾಸ್ತ್ರವೆಂದೂ ಕರೆದಿದ್ದಾರೆ (ಧಾಕರ. ೩೭೦). ೫. [ದ್ವೈಮತ] ನಲವತ್ತು ಗುಣಗಳಲ್ಲಿ ಒಂದು : ರೂಪ, ರಸ, ಗಂಧ . . . ಶಮ, ದಮ, ದಯೆ, ತಿತಿಕ್ಷೆ, ಭಯ ಬಲ, ಲಜ್ಜೆ . . . ಸ್ಥೈರ್ಯ, ಶೌರ್ಯ, ಸೌಭಾಗ್ಯವೆಂದು ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಹಿಂದಸಾ. ೩೭೫). [ಸಂ.]

ದಮಗೊಳಗ (ನಾ). ಧರ್ಮಕಾರ್ಯಕ್ಕಾಗಿ ಕೊಡುವ ಧಾನ್ಯದ ಒಂದು ಅಳತೆ. – ಕೊಳಗ : ಮೂಲಸ್ಥಾನದೇವರಿಗೆ ಮತ್ತು ೩ ಕಲಿದೇವರ ಸಂದಾದೀವಿಗೆಗೆ ಗಾಣ ೧ ದೇವಗೊಳಗ ದಮಗೊಳಗವಂ ಧಾನ್ಯದಲಿ ಕುಳವಂ . . . ಕೊಟ್ಟರು (ಸೌಇಇ. IX-1, ೮೮-೨೪ ; 1034).

[<ಧರ್ಮಗೊಳಗ]

ದಮಡಿ[1] 'ದಮ್ಮಡಿ[1]' ನೋ.

ದಮಡಿ[2] 'ದಮ್ಮಡಿ[2]' ನೋ.

ದಮಡೆ 'ದಮ್ಮಡಿ[2]' ನೋ.

ದಮಣಿ, ಡಮಣಿ, ಢಮಣಿ, ದಮನಿ[2], ಧಮಣಿ (ನಾ). (ಉಕ) ಎತ್ತಿನ ಸಣ್ಣಗಾಡಿ ; ಪೆಟ್ಟಿಗೆಯಂತೆ ಚೌಕವಾಗಿದ್ದು ಒಳಗೆ ಆಸನಗಳಿರುವ

ಜೋಡೆತ್ತಿನ ಗಾಡಿ : ಭೀಮಾಚಾರ್ಯರು ಸಂಭ್ರಮದಿಂದ ದಮಣಿಯಲ್ಲಿ ಮೆರವಣಿಗೆ ತೆಗೆದಿದ್ದರು (ಸಮಜೀ. ೫೩೧). **ಡಮಣಿ :** ಡಮಣಿಯಲ್ಲಿ ಇಬ್ಬರೂ ಹೊರಟರಾಗಲಿ ಒಬ್ಬರೂ ಮಾತಾಡಲಿಲ್ಲ (ಪಹಾರ. ೩೪) ; ಶ್ಯಾಮರಾಯನನ್ನು ಕರೆದು ತರಲು ಖುದ್ದ ಅವರಿಗಾಗಿ ಡಮಣಿ ಹೋಗಿತ್ತು (ದೀಪಹ. I, ೨೩) ; ಸಾವುಕಾರ ಬಂಗಲೆಗೆ ಅವ್ವನನ್ನೂ ಸಾವುಕಾರರ ಡಮಣಿಯಲ್ಲೇ ಕರೆದೊಯ್ಯಲಾಯಿತು (ವೈನಿ. ೮೦). **ಢಮಣಿ :** ಢಮಣಿ ಹೊಡಿಯೋ ಧಂದೆ ಮಾಡುತ್ತಿದ್ದನರಿ. ಈ ಮೋಟರ ಬಂದು ನಮ್ಮ ಹೊಟ್ಟೆ ಮ್ಯಾಗ ಕಾಲಕೊಟ್ಟತರಿ (ಎಧ್ರುವ. ೧೭). **ದಮನಿ$_2$:** ಗಾಡಿಯವನು ಇಳಿದು ಬಂದು ದಮನಿಯ ಬಾಗಿಲ ತೆರೆಯಲು ಅವರೆಲ್ಲರೂ ಗಾಡಿಯಿಂದ ಇಳಿದರು (ಇಂದುಮು. ೧೫) ; ಮೇಲ್ಕಟ್ಟು ಇಲ್ಲದ 'ದಮನೀ' ಗಾಡಿಯಲ್ಲಿ ನಾವು ನಾಲ್ವರೂ ಕುಳಿತು ನಡೆದೆವು (ತೊಳಮು. ೨೬೦). **ಧಮಣಿ :** ಅವರಿಬ್ಬರೂ ಧಮಣಿಯನ್ನು ಏರಿದರು. ಧಮಣಿಯು ಹೊರಟಿತು (ರಕ್ತಧ್ವ. ೦೦೧). [←ಮರಾ. ದಮಣೀ]

ದಮಥ (ನಾ). ಇಂದ್ರಿಯನಿಗ್ರಹ ; ಜಿತೇಂದ್ರಿಯತ್ವ. [ಸಂ.]

ದಮನ (ನಾ). ೧. ಅಂಕೆಯಲ್ಲಿಡುವಿಕೆ ; ಹತ್ತಿಕ್ಕುವುದು ; ವಿಕಾಸಕ್ಕೆ ಅವಕಾಶ ಕೊಡದಿರುವುದು ; ನಿಗ್ರಹ : ಹುಟ್ಟುಗುಣಗಳನ್ನು ದಮನ ಮಾಡಲು ಯತ್ನಿಸುವುದು ಒಳ್ಳೆಯದಲ್ಲ (ಶಿಕ್ಷದ. ೮೨). ೨. ದಂಡನೆ ; ಶಿಕ್ಷೆ. ೩. [ಕಾಮಶಾ] ಪುರುಷರಲ್ಲಿ ಒಂದು ವರ್ಗ : ಅನುರಕ್ತ ಭಾವದಿಂ ಪದ್ಮಿನಿ ಮೊದಲಾಗಿರ್ಪ ನಾಲ್ಕುಜಾತಿ ಸ್ತ್ರೀಯರ್ಗಿನಿಯರ್ ವರ್ತಿಪರಿಂತು ಮದನ ಚಿತ್ರಕ ದಮ[ನ ಮಾಳ]ವಾಖ್ಯರೆನಿಪ್ಪರ್ (ಮನ್ಮವಿ. ೨-೦೦) ; ಶಂಖಿನೀಶ ದಮನಾಖ್ಯಂ ಭೂತಳಕ್ಕೊಪ್ಪುಗುಂ (ಮನ್ಮವಿ. ೨-೦೪). [ಸಂ.]

ದಮನಕ (ನಾ). ೧. ಅಡಗಿಸುವವನು ; ಹತೋಟಿಮಾಡುವವನು. ೨. (ಪಂಚತಂತ್ರದಲ್ಲಿ ಬರುವ) ಒಂದು ನರಿಯ ಹೆಸರು ; ಉಪಾಯಗಾರ ನರಿ. ೩. (ಆಲಂ) ತಂತ್ರಗಾರ ; ಉಪಾಯಗಾರ. 'ಕರಟಕ' ಪರಾ. [ಸಂ.]

ದಮನಗೊಳ್ಳು (ಕ್ರಿ). ಅದುಮಲ್ಪಡು ; ಹತ್ತಿಕ್ಕಲ್ಪಡು ; ಹತೋಟಿಗೆ ಒಳಗಾಗು : ಒಂದು ಕಡೆ ಭಯದಿಂದ ದಮನಗೊಂಡಿದ್ದ ಕಹಿಯೂ, ಮತ್ತೊಂದು ಕಡೆ ಅಧಿಕಾರ ಪ್ರತಿಷ್ಠೆಗಳ ಪ್ರಜ್ಞೆಯೂ ಎದ್ದುಕಾಣುತ್ತಿದ್ದುವು (ಪುನರು. ೨೬೦). [ದಮನ + ಕೊಳ್ಳು$_1$ (<ಕೊಳ್$_1$)]

ದಮನಶೀಲತೆ (ನಾ). ಹತ್ತಿಕ್ಕುವ ಗುಣ ; ಹತೋಟಿಮಾಡುವ ಗುಣ ; ನಿಗ್ರಹಿಸುವ ಸ್ವಭಾವ : ಅದು ದರ್ಪದಿಂದ ಕೂಡಿದ ದಮನಶೀಲತೆಯನ್ನು ಬಿಟ್ಟು ಕ್ಷಮಾಶೀಲದಿಂದ ಕೂಡಿದ ರಕ್ಷಣೆಯನ್ನು ಅನುಗ್ರಹಿಸುವುದು (ಬದ್ಧಪ್ರ. LXII ಟೀಠಿಕೆ). [ಸಂ. ದಮನಶೀಲತಾ]

ದಮನಿ$_1$ (ನಾ). ನರ ; ರಕ್ತನಾಳ ; ಸೆರೆ : ನಿನ್ನ ದಮನಿಗಳಲ್ಲಿ ವೀರರಕ್ತವಿದೆ (ದೌಲತ್. ೩೬೦). [<ಸಂ. ಧಮನಿ]

ದಮನಿ$_2$ 'ದಮಣಿ' ನೋ.

ದಮಯಂತಿ (ನಾ). ೧. ತನ್ನ ಅತಿಶಯಸೌಂದರ್ಯದಿಂದ ಇತರ ಸ್ತ್ರೀಯರ ಗರ್ವವನ್ನು ಅಡಗಿಸುವವಳು. ೨. ನಳಚಕ್ರವರ್ತಿಯ ಹೆಂಡತಿಯ ಹೆಸರು : ಬಿಸುಟನೈ ಬಳಿಕಡವಿಯೊಳಗಾಯಸವ ಸೈರಿಸಲಾಜದಾ . . . ದಮಯಂತಿಯನು ವಿಪಿನದಲಿ (ತೊರರಾ. ೩-೨-೧೪) ; ನಳನೃಪಗೆ ಸತಿಯಾದಳಾ ದಮಯಂತಿ ಮನವೊಲಿದು (ನಳಚ. ೨ ಸೂಚನೆ). [ಸಂ. ದಮಯಂತೀ]

ದಮಾಣ 'ಡಮಾನ' ನೋ.

ದಮಾನ 'ಡಮಾನ' ನೋ.

ದಮಾಮಿ 'ಡಮಾಮಿ' ನೋ.

ದಮಾಸು (ನಾ). ಚಿತ್ರದ ನೆಯ್ಗೆಯುಳ್ಳ ರೇಷ್ಮೆಯ ವಸ್ತ್ರ : ರಥದ ಅಲಂಕಾರಕ್ಕೆ . . . ೮ ದಮಾಸಿನ ವೃಷಭಧ್ವಜಗಳೂ ××× ೮ ಬನಾತಿನ ತೆರೆಗಳೂ (ಎಕ. XIV, ನಂಜನ. ೨೯೨, ಪುಟ ೦೪೨ ; 1847) ; ಪಾಗುಗಳನ್ನೂ ಸೂರಿಯಪಟಗಳನ್ನೂ ದಮಾಸುಗಳನ್ನೂ . . . ತಂದು . . . ಧರ್ಮರಾಯನ ಸಮ್ಮುಖವನ್ನು ಸೇರಿದನು (ಕೃವಾಸ. ೧೦೮). 'ಧುಮಾಸ್' ಪರಾ. P ಇಂಗ್ಲಿಷಿನಲ್ಲಿ 'ಡಮಾಸ್ಕಸ್' ಎಂಬ ಪದಕ್ಕೆ ಲ್ಯಾಟಿನ್ ಭಾಷೆಯೇ ಮೂಲವೆಂದು ಹೇಳುತ್ತಾರೆ. ಲ್ಯಾಟಿನ್‌ಭಾಷೆಯಲ್ಲಿ 'ಡಮಾಸ್ಕಸ್' ಎಂದರೆ ರೇಷ್ಮೆಯೆಂಬ ಅರ್ಥವಿದ್ದು, ರೇಷ್ಮೆಯನ್ನು ಹೆಚ್ಚಾಗಿ ತಯಾರಿಸುತ್ತಿದ್ದ ಊರಿಗೆ 'ಡಮಾಸ್ಕಸ್' ಎಂಬ ಹೆಸರು ಬಂದಿತಂತೆ. [←ಇಂ. Damask]

ದಮಿತ (ಗು). ಗೆದ್ದ ; ಅಡಗಿಸಿದ ; ನಿಗ್ರಹಿಸಿದ : "ದಮಿತಂ ದಾಂತಂ" (ವಸ್ತುಕೋ. ೦೦೬-೫೦) ; ಮಹೀಚಕ್ರಸಂಸ್ತುತದೋರ್ಮ್ಮಂಡಳ ಮಂಡಳಾಗ್ರ ದಮಿತಾನಮ್ರಾರಿ ನಮ್ರಾರಿ ಕೀರ್ತ್ತಿತ ದಿಗ್ವರ್ತ್ತಿತ ಜೈತ್ರಲಕ್ಷ್ಮಿ ಭರತ ಶ್ರೀಮಚ್ಚಮೂವಲ್ಲಭಂ (ಎಕ. VI, ಚಿಕ್ಕಮ. ೧೬೦-೮೬ ; 1137). [ಸಂ.]

ದಮಿತಾರಿ (ನಾ). ಶತ್ರುಗಳನ್ನು ಸೋಲಿಸಿದವನು : ಪರಾಕ್ರಮ ಮಿಲ್ಲೆಂದಿಳಿಕೆಗೆಯ್ದು ಭರತಂಗಿತ್ತಂ ದಮಿತಾರಿ ದಶರಥಂ ರಾಜ್ಯಮನೆಂಗುಂ ರಾಮನಿತ್ತನೆಂಗುಮೆ ಲೋಕಂ (ಪಂಠಾಮಾ. ೬-೧೪೨). [ದಮಿತ + ಅರಿ$_6$]

ದಮಿಸು (ಕ್ರಿ). ಹತೋಟಿಮಾಡು ; ಅಂಕೆಗೆ ಒಳಪಡಿಸು ; ಸಾಧಿಸು : ದಮಿಸು ಭವಮಂ ಧರ್ಮಾಕಾರೇ ದಯಾವತಿ ಪಾರ್ವತೀ (ವೃಷವಿ. ೪-೦೨೭) ; ದಮಯಂತಿಯ ದಮಿಸಿ ಮನದಿ ನಳನಳಿಸುವ ನಳನ ಆವೆಡೆಯವನೆಂಬೆನೆ ನಾ, ಎಂದೋ ನಿಮ್ಮಯ ಮಿಳನ (ಹಂಸದ. ೨೮). [ದಮನ + – ಇಸು$_3$]

ದಮುನ (ನಾ). ಬೆಂಕಿ ; ಅಗ್ನಿ : "ದಹನಂ ಕೃಶಾನು ದಮುನಂ ಚಿತ್ರಭಾನು ಹುತವಹಂ . . . ಅಗ್ನಿಯಕ್ಕುಂ" (ಮಂಗರಾ. ೦೪-೭) ; ಗಮಿಸುವಸುವಿನ ಲೋಹಮಂ ಚಿದ್ದಮುನದಿಂ ಹದಗೊಳಿಸುವಾ ಕಮ್ಮಾಱನುಂ ತಾನೆ (ಬಸಪು. ೨೦-೨೯). [ಸಂ. ದಮುನಸ್]

ದಮೆ (ನಾ). ಇಂದ್ರಿಯನಿಗ್ರಹ ; ಜಿತೇಂದ್ರಿಯತ್ವ : ದಮೆಯುಂ ಕ್ಷಮೆಯುಂ ಪುಣ್ಯಾಶ್ರಮಂಗಳೆಂದಱಿದನುಷ್ಠಿಸಲ್ ಸಿದ್ಧಂ (ಜಿನಾಲೆ. ೦೯-೦೯) ; ಭಕ್ತಿ ಶಮೆ ದಮೆ ಯೋಗ ಯಾಗ ಶ್ರುತಿಮತಮಯ ವಿರಕ್ತಿ ಘೋರವ್ರತ ತಪೋನಿಷ್ಠೆ ಜಪ ಗುಣಾಸಕ್ತತೆ . . . ಲಿಂಗಾರ್ಚನಾಸಕ್ತಿಯಿಂ ಬೆಳೆದ ಪುಣ್ಯ ದೊಳರ್ಧಮಂ ಸುಧಾಭುಕ್ತರಱಿಯಲು ಕೊಡುವೆನಾ ಹರಿಶ್ಚಂದ್ರ ಹುಸಿಯಂ ನುಡಿಯದಿರಲೆಂದನು (ಹಡಕಾ. ೨-೨೭) ; ಹದನನಱಿದಡೆ ಸಾಕು ಶ್ರುತಿವಾಕ್ಯದಲಿ ದುರ್ವಿಟನಲ್ಲ ಶಮೆ ದಮೆ ಹೃದಯದಿಂದಲಿ ಉತ್ತಮಂ ವಿದ್ವಾಂಸರಱಿತಿರಲು (ಬಸಪು. ೪೦-೦೦). [ಸಂ. ದಮ]

ದಮ್ಮ 'ಧಮ್ಮ$_1$' ನೋ.

ದಮ್ಮ$_2$ 'ದ್ರಮ್ಮ$_1$' ನೋ.

ದಮ್ಮ$_3$, ಧಮ್ಮ$_2$ (ನಾ). ದಪ್ಪವಾದುದು ; ಗಾತ್ರವಾದುದು : ಒಂದೇ ಬೆಳೆಯಾದರೂ ಬಹಳ ವಿಶೇಷವಾಗಿ ಕಾಳು ದಮ್ಮವಾಗಿ ತೀವ್ರವೇ ಬೆಳೆಯಾಗಿ ಅದು ಸರ್ವೋತ್ಕೃಷ್ಟವಾಗುವದು (ಕೃಷಿಪ್ರ. ೭೯) ; ಸಣಬಿನ ಹುರಿಯನ್ನು ನೂಲಿನ ಹಾಗೆ ಎಷ್ಟು ಸಣ್ಣಾದರೂ ಮತ್ತು ಎಷ್ಟು ದಮ್ಮವಾದರೂ ಮಾಡಲಿಕ್ಕೆ ಬರುವದು (ಕೃಷಿಪ್ರ. ೮೭). **ಧಮ್ಮ$_2$:** ಅರಕ್ಷಣದ ಬೇರು ದೊಡ್ಡದು ಅಂದರೆ ಧಮ್ಮ ಮತ್ತು ಉದ್ದಾದಂಥಾದ್ದಿರಬೇಕು (ಮುಂಬವ್ಯಾ. ೩೬).

ಧಮ್ಮದು = ದಪ್ಪವಾದುದು ಒರಟಾದುದು : ರೇಶಿಮೆ ಸಣ್ಣದು ಅಥವಾ ಧಮ್ಮ ದೋ. ಬೆಳ್ಳಗೆ ಸಫೆಯುಳ್ಳದ್ದೋ ಅಥವಾ ಮೆತ್ತಗೆ ಇದ್ದದ್ದೋ . . . ತರಿಸಿಕೊಂಡರೆ (ಮುಂಬಾ. ೩೭ ಪ್ರಸಾ.ವನಿ).

[< ದಪ್ಪ ?]

ದಮ್ಮಗಹಳೆ, ದರ್ಮಗಾಳೆ (ನಾ . ಒಂದು ಬಗೆಯ ಕಹಳೆ: ಗೆದ್ದವರು ದಯೆಯಿಂದ ಯುದ್ಧವನ್ನು ನಿಲ್ಲಿಸುವ ಸಂಕೇತವಾಗಿ ಊದುವ ಕಹಳೆ : ತೆಗೆದು ಹಿಂದಕೆ ನಿಷಧಪತಿ ಕಾಳಿಗದಿ ಹಿಡಿಸಿದ ದಮ್ಮ[ಪಾಠಾಂ. ಗೌರು, ಧರ್ಮ] ಗಹಳೆಯ (ನಳಚ. ೯-೩೭). **ದರ್ಮಗಾಳೆ :** ತಲೆಯ ಹೊಡದು ಪೆದೊಱಿಯ ಕೂಡಿ ದರ್ಮಗಾಳೆಯ ಹಿಡಿಸಿ ಬಟ್ಟಲಿ ಬಡದೆ ಹಂಪಿಗೆ ಬಂದು ಬಿಟ್ಟುದು ಮಾನವ ಹೊಯಿಸಿ ತುಂಗಭದ್ರೆಯಲಿ ಬಲೆಯವು ತೊಳೆದು (ಪ್ರುಆರಿ. ೧೯೩೦-೦-೩೨ ; 1310). 'ಅಪಹಾರ ತೂರ್ಯ' ಪರಾ. [ದಮ್ಮ$_1$ (< ಧಮ್ಮ$_1$) + ಕಹಳೆ]

ದಮ್ಮಗುತ್ತಿ (ನಾ). ಒಂದು ಬಗೆಯ ದಪ್ಪ ಬತ್ತ : ಕುಂದದ ಚಂದ್ರಲೇಖೆ ನಸುಗಂದದೆ ರಂಜಿಪ ಪುಷ್ಪಮಾಲೆ . . , ಸರ್ವಸಾಧ್ಯಂ ದಲಿನಿಪ್ಪ ಕೇಸರಿ ನಿರಂತರವೊಪ್ಪುವ ದಮ್ಮಗುತ್ತಿಯಿಂಬಿದನೇಕನಾಮದಿಸೆಗುಂ ಪ್ಯಾದು ಬಂಧುತಗಂಧಶಾಲಿಗಳ್ (ದಶಕು. ೦-೩೮). [ದಮ್ಮ$_3$ + ಗುತ್ತಿ$_1$]

ದಮ್ಮಗುರು (ನಾ). ಧರ್ಮೋಪದೇಶ ಮಾಡುವ ಗುರು; ಧರ್ಮಗುರು: ಪೊಳಗೆಱಿಯ ವಿತ್ತಿಯ ದಮ್ಮಗುರುಗಳು ಆ ಬೊಮ್ಮಗುರುಗಳು ನಾಡ ಸೇನಬೋವ ಬಾಚಂಣ್ಣ . . . ಒಳಗಾದ ಸಮಸ್ತ ಪ್ರಜೆಗಳು (ಎಕ. XI, ಚಿತ್ರದು. ೧೨-೩೪ : 1296). [ದಮ್ಮ$_1$ (< ಧಮ್ಮ$_1$) + ಗುರು$_2$]

ದಮ್ಮಜಾನ (ನಾ). [ಜೈನ] ನಾಲ್ಕು ಧ್ಯಾನಗಳಲ್ಲಿ ಒಂದು; ಧರ್ಮಧ್ಯಾನ (?): ಬಳಿಕಣುಪೆಕ್ಕೆ ಪನ್ನೆರಡಱಲ್ಲಿ ಚತುಷ್ಕದ ದಮ್ಮಜಾಗ[ನ]ದೊಳ್ ಸುಳಿಸುಳಿದಾಡಿ ಕೂಡೆ ಗುರುಪಂಚಕದೊಳ್ಪೊಳೆದಾಡಿ ಚಿತ್ತದಗ್ಗಳವನ ಡಂಗಿಸುತ್ತೊಡನೆ ತನ್ನಯ ದೇಹದೊಳಾತ್ಮನಲ್ಲಿ ನಿಂದಳಲ್ದರ್ದವಂ ತಪ ಕೃಪಾತ್ಮಸಲಾ ಅಪರಾಜಿತೇಶ್ವರಾ (ಆಪಶ. ೪). [< ಸಂ. ಧರ್ಮಧ್ಯಾನ]

ದಮ್ಮಡಯ್ಯ (ನಾ). ಒಬ್ಬಾತನ ಹೆಸರು : ಕಣ್ಣಬ್ಬರಸಿಯ ತಮ್ಮ ಚಾವಯ್ಯನುಂ ದಮ್ಮಡಯ್ಯನುಂ ನಾಗವರ್ಮನುಂ ಬಂದಿಲ್ಲಿ ದೇವರಂ ಬಂದಿಸಿದರ್ (ಎಕ. II, ೪೬೬-೧ ; ಸು. 10ನೆಯ ಶತ).

[ದಮ್ಮಡ$_0$ + ಅಯ್ಯ$_1$]

ದಮ್ಮಡಿ$_1$, ದವುಡಿ$_1$, ದಿವುಡಿ, ದಿಮ್ಮಡಿ (ನಾ). ಕೈಯಲ್ಲಿ ಹಿಡಿದು ಬಾರಿಸುವ, ಗೆಜ್ಜೆಗಳುಳ್ಳ ಚಿಕ್ಕ ತಮ್ಮಟೆಯಂತಹ ವಾದ್ಯ: ಮೂವರು ತಮ್ಮಂದಿರು ತಾಳ ದಮ್ಮಡಿಗಳನ್ನು ಬಾರಿಸುತ್ತಾ ಆಲಾಪನೆ ಮಾಡಿದರು (ಕಳವಿ. II, ೧೭೭) ; ಡೊಳ್ಳು, ಹಲಗೆ, ದಮ್ಮಡಿ, ದವ್ವು, ಟಿಮರೆ ಮೊದಲಾದ ವಾದ್ಯಗಳನ್ನು ಬಾರಿಸಿಯೂ ಏಕತಂತಿ, ಚೌಡಕಿ ತಾಳಗಳನ್ನು ನುಡಿಸಿಯೂ ಕುಣಿಯುವುದನ್ನು ಕರ್ನಾಟಕದ ತುಂಬಾ ಈಗಲೂ ನೋಡ ಬಹುದು (ಕನ್ನಜಾ. ೩೦). **ದವುಡಿ$_1$:** ತಾಳ ದವುಡಿ ಹಿಡಿದು ಏಕನಾದ ಸ್ವರದಲ್ಲಿ . . . ಹಾಡುತ್ತ ಭಜನೆ ಮಾಡುವರು (ಕಪಪು. ೬-೧೭) ; ಗುಂಗ ಮಾಟ ದವುಡಿ ಬಡಿಯುತ್ತಿದ್ದ (ಧರ್ಮಶ್ರೀ. ೬). **ದಿವುಡಿ:** ನಮ್ಮ ಸಿದ್ಧಪ್ಪ ಎಲ್ಲಾರೂ ಭಜನೀನ ಮಾಡತಿರತಾರೆ ಅಂತ ಕಣ್ಣಾ ಮುಚ್ಚಿ ದಿವುಡಿ ಹೊಡದ ಹೊಡಿತಿರತಾನು (ಹೊಸಂಸಾ. ೧೮); ಶಿವಾಯ ನಮಃ ಓಂ ಶಿವಾಯ ನಮಃ ದಿವುಡಿ ಮಿಡಿಯುತ್ತಿತ್ತು (ಹೃದಸ. ೭೩-೧). **ದಿಮ್ಮಡಿ :** ಎಂಟು ಹತ್ತು ಜನ ಡೊಳ್ಳು, ದಿಮ್ಮಡಿ, ತಾಳ ಮೊದಲಾದುವುಗಳನ್ನು ಉಪ ಯೋಗಿಸಿ ಸಪ್ಪಳ ಮಾಡುವವರು (ಮೇದಿಪು. ೧೪೩). 'ತಮಟೆ' ಪರಾ.

ದಮ್ಮಡಿ$_2$, ದಂಬಡಿ, ದವುಡಿ$_2$, ದವುಡೆ (ನಾ). ಒಂದು ಅತಿ ಚಿಕ್ಕ ನಾಣ್ಯ ; ಒಂದು ಕಾಸು : ಒಂದು ದಮ್ಮಡಿಯಿಲ್ಲ ನನ್ನ ಹತ್ತಿರ (ಪಾತ್ಕಲ್ಕ. ೬೪) ; ದಮ್ಮಡಿ ಕೂಡ ಕೊಡದ ಹಾಂಗ ಬಿಮ್ಮಗ ಹೊಂಟಾಕಿ (ಅರಳು. ೧೩೬-೧೧) : ಕಲ್ಲು ಕಡವೆಮ್ಮ ಗುಡಿ ಭಟ್ಟನೇ ದೋಭಿ, ಮನವ ಮಡಿಯಾಗಿಡಲು ದಮ್ಮಡಿಯ ತಮಡಿ ನವುಗೆ ಬೇಕೀತನಿಗೂ ನಲ್ಮೊರೆಯೆ ತಮಡಿ (ಗಡೇಶ. ೭೦-೫). **ದಂಬಡಿ :** ನಾನು ಯಾವ ಗಂಡಸಿನ ತಾಗೂ ಸುಮಸುಮಕೆ ಒಂದು ದಂಬಡೀನು ತಗಂಡವಳೆಲ್ಲ (ಪೆಂಗಳ. ೬೮). **ದವುಡಿ$_2$:** ಈಗ ಪುನಿಯೊಳಗೆ ಒಂದು ಕುರುಡು ದವುಡೀನೂ ಇಲ್ಲ (ಜನಜೀ. ೫೦); ಅವರ ಇದ್ದ ದವುಡಿಯ ಪಾನ ಹೋದಂತಾಗಿತ್ತು (ಅಪನಾ. ೨೨೩). **ದವುಡೆ :** ಶಂಬುಲಿಂಗಯ್ಯ ಇಂಬಾದ ಚೌಕವು ತುಂಬದಿ ದುಡ್ಡು ದವುಡೆಗಳನು ರಂಬೆ ಬೇಕಾದಾಗ ಮುಸುರಿಗೈಯಲಿ ತಗದು ಕೊಂಬುವೆ ಎಷ್ಟು ಭಯವಿಲ್ಲವೇಳ (ಕೋಳಗೀ. ೬೮). 'ದ್ರವ್ಯ$_1$' ಪರಾ.

[← ಹಿಂ. ದಾರಾ. ದವುಡೀ./ತಮಿ. ತವುಟಿ ; ತೆಲು. ದವ್ವಡಿ]

ದಮ್ಮಣಿ 'ದಮ್ಮಾಣಿ$_1$' ನೋ.

ದಮ್ಮಣ್ಣ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀದಮ್ಮಣ್ಣನ್ನಿ(ೀ) ತ್ಪೊಸ್ಗಣಪತಿಯುನ್ನಾಗಕುಮಾ[ರ] (ಕಇ. I, ೯-೩ ; ೨).

[ದಮ್ಮ$_1$ (<ಧಮ್ಮ$_1$) + ಅಣ್ಣ$_1$]

ದಮ್ಮದತ್ತಿ (ನಾ). = ಧರ್ಮದತ್ತಿ : ಸೋಮೇಶ್ವರದೇವರ್ಗೆ ಅರಸರ್ ದಮ್ಮದತ್ತಿಯಾಗೆ ಬಿಟ್ಟರ್ (ಎಕ. X, ಚಂತಾಮ. ೩೦-೧೭ : 1047).

[ದಮ್ಮ$_1$ (< ಧಮ್ಮ$_1$) + ದತ್ತಿ]

ದಮ್ಮನೆ (ಅ). ೧. ದಮ್ ಎಂಬ ಶಬ್ದದೊಡನೆ: ಹಮ್ಮನೆ ಹಾರಿ ದಮ್ಮನೆ ಬಿದ್ದು ಕೋಕವಂಗೈದಳು (ಕರಿಕ. ೮೦-೭). ೨. ಸಂಪೂರ್ಣವಾಗಿ; ಹೆಚ್ಚಾಗಿ.

ದಮ್ಮನೆ ತಣಿ, ದಮ್ಮನೆ ದಣಿ=೧. ಸಂಪೂರ್ಣವಾಗಿ ತೃಪ್ತಿಗೊಳ್ಳು: "ಮಾದಯತೇ = ದವ್ವನೆ ತಣಿದಪಂ" (ಕಾಶಿಕ್ಷ. ೨೭೩) : ಕವ್ವನೆ ತುಪ್ಪ ಕಜ್ಜಾಯ ಪಾಯಸದಿಂದೆ ದವ್ವನೆ ತಣಿದೆವೆಂದೆನುತ ಬೊಮ್ಮರ ಸಂತಸ ನುಡಿಯುತೆ ಸಾರ್ದರು ನಿರ್ಮಳಶಯನಸ್ಥಳಕೆ (ವೋಹತ. ೩-೫೯). ೨. ಅತಿಯಾಗಿ ಆಯಾಸಗೊಳ್ಳು ; ಬಹಳವಾಗಿ ಬಳಲು : ವನರುಹ ಭವಾಂಡಮಂ ತಿರುಗಿ ದಮ್ಮನೆ ದಣಿದು ಮೇರುವಾಗ್ರದಿ ನಿಂದಸೋ (ನವಪೋ. ೫೫-೬೩); ನಕ್ಕು ನಕ್ಕು ದವ್ವನೆ ದಣಿದು ತೇಕುತ್ತ ತೇಕುತ್ತ, ವಂಶಲೋಚನರೆಂದರು (ಎರಸಿ. ೬೩). **ದಮ್ಮನೆ ದಣಿಸು** = ಅತಿಯಾಗಿ ಆಯಾಸಗೊಳಿಸು ; ಬಹಳವಾಗಿ ಬಳಲಿಸು : ಬೊಮ್ಮ ಗಿವಮ್ಮಾಸ್ತ್ರ ಭವೇಂದ್ರಗಿಂದ್ರಾಸ್ತ್ರಗಳಿವ್ಮೊಳು ಪ್ರತಿಕೂಲವಲ್ಲ ನಿಮ್ಮ ರಕ್ಕಸಗಜ್ಜವ ತೋಱಿಸೆಂದೆಚ್ಚು ದವ್ವನೆ ದಣಿಸಿದ ಖಿಲನ (ವೋಹತ. ೪೨-೪೬); ನಳನ ದೇಶಭ್ರಷ್ಟನೆನಿಸಿತ್ತು ಧರ್ಮಜನ ದವ್ವನೆ ದಣಿಸಿತು (ನವಪೋ. ೯-೬೦). [ದವ್ + – ಅನೆ$_1$]

ದಮ್ಮಯ್ಯ (ನಾ). ೧. ಬೇಡಿಕೊಳ್ಳುವಾಗ ಬಳಸುವ ಒಂದು ಶಬ್ದ : ದೇವ ಪರಡಿಯ ಪಾಯಸವನುಣ್ಣು ದಮ್ಮಯ್ಯ (ಬಸರ. ೬-೧೨೬) ; ಹಿಮ್ಮೆಟ್ಟ ಬೇಡೆನ್ನುಯೆಮ್ಮಯ್ಯ ದಮ್ಮಯ್ಯ (ದೀಕ್ಷಾಬೋ. ೮೯-೬) ; ನಡೆ ನಡೆ ನಡೆಯೆಂದು ಮೆಲ್ಲನೆ ಪಿಡಿಯಲು ಬಿಡಿ ಬಿಡಿ ಬಿಡಿ ದಮ್ಮಯ್ಯ ಎನುತಾ (ಪುಕಂದ. ೨-೬೨-೩) : ದವ್ವಯ್ಯ ಸಾಕೆಮ್ಮನುಳುಹಿಕೊಳ್ ದಾತರಿರ ತಾತರಿರ ದೂತರಿರಯೆಂದು ಮೊಱಿಯಿಡೆ (ತಿಬಪು. ೫೬-೩೮) ; ಹಮ್ಮು ಹತ್ತಿದವನು ದಮ್ಮಯ್ಯ ಅಂದಾನೆ (ನೀತಿಜಂ. IV, ೦೧) ; ದಮ್ಮಯ್ಯ ಅಮ್ಮ ನೀ ಕರೆಯಬೇಡೌ ನಾಯ ! (ಕಎಪು. ೩೩-೨). ೨. ಒಬ್ಬಾತನ ಹೆಸರು : ಸೊತ್ತಿಯೂರೆರೆಯವು ದಮ್ಮಯ್ಯನ ಮಗ ಶ್ರೀವರ್ಮಯ್ಯ' (ಎಕ. X, ಕೋಲಾರ. ೯೦-೮೯ ; 903).

ದಮ್ಮಯ್ಯಗುಡ್ಡೆ ಇಡು = ಗೋಗರೆದು ಬೇಡು ; ಯಾಚಿಸು : ಆ ಮಗನಿಗೆ ಸರಿಯಾದ ಬುದ್ಧಿ ಕಲಿಸ್ತೀನಿ. ನಿಮ್ಮ ಬಳಿಗೆ ಬಂದು ಅವನು ದಮ್ಮಯ್ಯಗುಡ್ಡೆ ಇಟ್ಟು ಒಪ್ಪಿಸಿ ಹೋಗಬೇಕು, ಅಂಗೆ ಮಾಡ್ತೀನಿ

(ಊರುಕ. ೫೦). ದಮ್ಮಯ್ಯಗುಡ್ಡೆ ಹಾಕು = ದಮ್ಮಯ್ಯಗುಡ್ಡೆ ಇಡು: ಕೃಷ್ಣಕುಮಾರಿಯ ತಾಯಿಯು ಮಗಳನ್ನು ರಕ್ಷಿಸಿ, ರಕ್ಷಿಸಿ, ಎಂದು ಎಲ್ಲರಿಗೂ ದಮ್ಮಯ್ಯಗುಡ್ಡೆ ಹಾಕಿದಳು (ಕಗದ್ಯ. II, ೨೮); ರಾಜ ಅವನನ್ನು ಹಿಂಬಾಲಿಸಿ ದಮ್ಮಯ್ಯಗುಡ್ಡೆ ಹಾಕಿ ಗಾಮಾ ಹೇಳಿದ್ದಕ್ಕೆಲ್ಲ ಒಪ್ಪಿದ (ಪ್ರಪಾಇ. II, ೨೩೪). [ದಮ್ಮ$_1$ (< ಧಮ್ಮ$_1$) + ಅಯ್ಯ$_1$]

ದಮ್ಮಶಾಸನ, ದರ್ಮಶಾಸನ (ನಾ). ದಾನವನ್ನು ಕೊಟ್ಟು ಬರೆಸಿದ ಶಾಸನ; ದಾನಶಾಸನ: ದೇವರಾಯವೊಡೆಯರ ದಮ್ಮಶಾಸನ ನಿರೂಪದಿಂ ಬೆಳಿಮಾರನ ಹಳಿಯಡಾವುಲ ಸೂರೆನಾಯ್ಕನಂ (ಎಕ. X (S), ಮುಳಬಾ. ೯೪-೨೪; 1406). ದರ್ಮಶಾಸನ: ಪಂಚಾಂಗದವರ ದರ್ಮಶಾಸನವನೂ ಬರಸಿ ಕೊಡಬೇಕು ಎಂದು ಕೋರಲಾಗಿ (ಎಕ. X, ಬೌರಿಂಗ್. ೧೯-೬೭; 1472). [ದಮ್ಮ$_1$ (<ಧಮ್ಮ$_1$) + ಶಾಸನ]

ದಮ್ಮಸ್ 'ದಮ್ಮಸು' ನೋ.

ದಮ್ಮಸು, ದಮ್ಮಸ್, ಧಮ್ಮಸ (ನಾ). ಭೂಮಿಯನ್ನು ಗಟ್ಟಿಮಾಡಲು ಉಪಯೋಗಿಸುವ ಒಂದು ಬಗೆಯ ಸಾಧನ; ನೆಲಗಟ್ಟನ್ನು ಕುಟ್ಟಿ ಗಟ್ಟಿ ಮಾಡುವ ಸಾಧನ; ಗಟ್ಟಣೆಯ ಸಾಧನ. ದಮ್ಮಸ್: (ಕಿ). ಧಮ್ಮಸ: 'ಧಮ್ಮಸವಿಕ್ಕು' ಪರಾ.

ದಮ್ಮಸು ಮಾಡು = ನೆಲಗಟ್ಟನ್ನು ಕುಟ್ಟಿ ಗಟ್ಟಿ ಮಾಡು: ಕಾಂಕ್ರೀಟನ್ನು ತಳಪಾಯದಲ್ಲಿ ಹಾಕಬೇಕಾದಾಗ ತಳಕ್ಕೆ ನೀರನ್ನು ಹೊಯ್ದು ದಮ್ಮಸು ಮಾಡಬೇಕು (ಶಿಲ್ಪನಾ. ೨೯೦); ಸಂಜೆಯ ಹೊತ್ತಿಗೆ ಎಲ್ಲಾ ದಮ್ಮಸು ಮಾಡಿದ ಮೇಲೇ ಕೂಲಿಗಳನ್ನು ಮನೆಗೆ ಬಿಡುವುದು (ಸಾಹೇಬ್. ೦೪); ಆ ಸ್ಥಳದಲ್ಲಿ ಮತ್ತೆ ಹೊಸಮಣ್ಣನ್ನು ಹಾಕಿ ದಮ್ಮಸು ಮಾಡಬೇಕು (ಗ್ರಾಮಾಕ. ೧೨೧). [←ಪಾರ. ದಮಸ್]

ದಮ್ಮಾಣಿ$_1$, ದಮ್ಮಣಿ (ನಾ). ಧರ್ಮಾರ್ಥವಾಗಿ ದಾರಿಹೋಕರಿಗೆ ಕೊಡುವ ನೀರು, ಪಾನಕ ಮುಂತಾದ ಪಾನೀಯ: ಪೂರ್ವಪದಾಂತ್ಯಕ್ಕೆ ದೀರ್ಘಮುಂ ಉತ್ತರಪದಾದಿಗೆ ಲೋಪಮುಮಾಗಿ ಕಾಂಸ್ಯತಾಳ–ಕಂಸಾಳ; ಧರ್ಮಪಾನೀಯ – ದಮ್ಮಾಣಿ – ಎಂದಾಯ್ತು (ಶಮದ. ೨೯೩ ಪ್ರಯೋ). ದಮ್ಮಣಿ: ನಿನಗೆನ್ನೊಳ್ ದಯೆಯಿರ್ಕುಮಪ್ಪೊಡೆ ಲೋಗರನುವಿಂಗೊಂದು ದಮ್ಮಣಿಯನೇರ್ಪಡಿಸೈ (ರಾಮಾಶ್ವ. ೩೮-೨೩).

[<ಸಂ. ಧರ್ಮಪಾನೀಯ]

ದಮ್ಮಾಣಿ$_2$ (ನಾ). ಕಮ್ಮಟ; ನಾಣ್ಯಗಳನ್ನು ಮುದ್ರಿಸುವ ಸ್ಥಳ; ಟಂಕಸಾಲೆ: "ದಮ್ಮಾಣಿ – ಧ್ರಮ್ಮಾಣಿ = ಟಂಕಸಾಲೆ" (ತದ್ಭಕೋ. ೦೮); ದಮ್ಮಾಣಿ, ದ್ರಮ್ಮಾಣಿಃ .... ಟಂಕಶಾಲಾ ಇತರ್ಥ್ಯಃ (ಶಬ್ದಾನು. ೩೭೮ ವ್ಯಾಖ್ಯಾ). [?]

ದಮ್ಮಾಹಳಿ (ನಾ). ಒಂದು ಊರಿನ ಹೆಸರು: ದಂಮಾಹಳಿಯ ಮಾದಿಯಂಣ್ಣ ಆಳಿಕೆಯಲು . . . ದೇವಾಂತರಿ ಮೆದಜಯೊಗೆ ಕಂಭ ಕೊಟ್ಟ (ಎಕ. V, ಹಾಸನ. ೧೮೩-೮; ?). [?]

ದಮ್ಮಿ (ನಾ). ಧರ್ಮವಂತ: ತಮ್ಮಡಿಗೆ ಮೊಱೆವ ಶ್ವಾನಂ ದಮ್ಮಿ [ಪಾಠಾಂ. ವರ್ಮಿ, ಧರ್ಮಿ]ಯನೇಕೆ ಬಾಟಲಿತ್ತಪುದು (ಪಂಚತಂ. ೦೭೮-೧೫).

[<ಸಂ. ಧರ್ಮಿನ್]

ದಮ್ಮಿಡು (ಕ್ರಿ). ಸ್ವಲ್ಪ ವಿಶ್ರಾಂತಿ ಹೊಂದು; ವಿರಮಿಸು: ಆ ಪುಣ್ಯಪುರುಷರು ಸರಸಿಜಾಕ್ಷಿಯು ಸಹಿತ ಬಿಲದೊಳು ತೆರಳಿದರು ನಡುರಾತ್ರೆ ಸಮಯದೊಳೆಲ್ಲಿ ದಮ್ಮಿಡದೇ ತ್ವರಿತಪಯಣದೊಳೈದಿದರು (ಜಿನಭಾ. ೦೪-೦). [ದಮ್ಮು + ಇಡು$_1$]

ದಮ್ಮಿಲ್ಲ (ನಾ). ಕಟ್ಟಿದ ಮುಡಿ; ಮುಡಿಗಂಟು; ಕಬರಿ: ವರಗತಿಗೆ ವದನಾಂಬುರುಹಮಲರೆ ಪೀನಪೀವರಕುಚಾಯತಕೆ ದಮ್ಮಿಲ್ಲಮುಲ್ಲಾಸಿಸಲ್ (ನಂದಿಮಾ. ೨೩-೧೮); ಪೊಗರೊರೆವ ಪೊಂಗಲಶಕುಚಗಳ ನಗೆ ಮೊಗದ ದಮ್ಮಿಲ್ಲವೇಣಿಯ ಸೊಗಪ ಹೆಂಗಳು ವರ್ತಿಸುವರಾ ಸೊಗಸಿನಿಂದಾ (ಆದಿಪ. ೧೮-೧). [<ಸಂ. ಧಮ್ಮಿಲ್ಲ]

ದಮ್ಮು, ದಂ (ನಾ). ೧. ಉಸಿರು; ಪ್ರಾಣವಾಯು: ಕಾಮಾಕ್ಷಿಯ ಮಾತಿಗೆ ದಂಗಾಗಿ ಹೋದರು ವೆಂಕಮ್ಮ. ಮಾತನಾಡುವುದಕ್ಕೆ ಎಲ್ಲಿದೆ ದಮ್ಮು (ಪದ್ಮಸ. ೧೦೯); ಸೇತುವೆಯಿಂದ ಮನೆಯ ಚಾವಡಿಯ ತನಕ ಓಡಿಬಂದಿದ್ದ ಅವರಿಗೆ ಮಾತನಾಡುವುದಕ್ಕೆ ದಮ್ಮೇ ಇರಲಿಲ್ಲ (ದೇವಹೆಂ. ೨೩೭). ೨. ತಾಳ್ಮೆ; ಸಹನೆ: ದಮ್ಮು (ತಾಳ್ಮೆ) – ಹುಡುಗಗ ದಮ್ಮು ಇಲ್ಲ. (ಹುಡುಗನಿಗೆ ತಾಳ್ಮೆ ಇಲ್ಲ) (ಸುವರ್ಣ. ೩೨೮); ಜರಾರ ದಮ್ಮ ಅತ್ಯೋ ಇಲ್ಲೇ ಇಕೀಗಿ? ಜಗದ ಹೊರತಾಗೇ ಇಕ್ಕಿ ಒಬ್ಬಾಕಿ ಅತ್ತಿ ಆಗಿದಾಳ (ನಿಸರ್ಗ. ೦೯೦). ೩. ತ್ರಾಣ; ಚೈತನ್ಯ; ಶಕ್ತಿ: ದಮ್ಮು ಇದ್ದರೆ ಬಾರೋ, ನೋಡೋಣ (ರೂಢಿ). ೪. ಗೂರಲುರೋಗ: ಉಬ್ಬಸ; ಅಸ್ತಮ: ಆಕಳ ಹಾಲು . . . ಕೆಮ್ಮು ದಮ್ಮು . . . ಪಿತ್ತಗಳನ್ನು ಕಳೆಯುವುದು (ಅಷ್ಟಾಂಗ. ೮೯-೨೨ ಅರ್ಥ); ಸತ್ತರೇನು ಸಾರ್ಥಕತೆ ದಮ್ಮಿನಲಿ ಕೆಮ್ಮಿ ನವಿದು ನವಿದು (ಸೂರ್ಯಪಾ. ೦೬-೭); ಛೇ! ದಮ್ಮಿನವರು ಇದ್ದು ಸತ್ತಂತೆ ದಮ್ಮು ಜೋರಾಗಿದೆ, ಮಾತಾಡಿಸಿ ಹೋಗಬೇಕೆಂದು ಮೊನ್ನೆಯೇ ಹೇಳಿಕಳಿಸಿದ್ದಾರೆ (ಬೆಟ್ಟಹೊ. ೫೭). ೫. (ಆಯಾಸದಿಂದ) ನಿಂತು ನಿಧಾನವಾಗಿ ಉಸಿರು ಬಿಡುವಿಕೆ. 'ದಮ್ಮಿಡು' ಪರಾ. ೬. ಒಂದು ಹದ,–ಬಾರಿ,–ಸಾರಿ,–ಸಲ: ಇನ್ನೂ ಒಂದು ದಮ್ಮು ಬೇಯಲಿ ಇಡ್ಲಿ (ರೂಢಿ). ದಂ: ೩. ದಂ ಇದ್ದರೆ ನಾಳೆ ನೀನು ಕದ್ದುಕೊಂಡು ಬಾರೋ (ನಡೆದಾ. I, ೫೩೬). ೭. ಜುರುಕೆ: ಒಂದು ದಂ ಬೀಡಿ ಸೇದಿ ಬರುತ್ತೇನೆ (ರೂಢಿ).

[←ಪಾರ. ಹಿಂ. ಮರಾ. ದಮ್, ದಮಾ]

ದಮ್ಮುಕಟ್ಟು 'ದಮ್ಮುಗಟ್ಟು' ನೋ.

ದಮ್ಮುಗಟ್ಟು, ದಂಕಟ್ಟು, ದಮ್ಮುಕಟ್ಟು (ಕ್ರಿ). ೧. ಉಸಿರನ್ನು ಬಿಗಿಹಿಡಿ; ಶ್ವಾಸವನ್ನು ತಡೆ: (ಕಿ). ದಂಕಟ್ಟು: ೧. ಆ ಹುಡುಗ ದಂಕಟ್ಟಿ ಓಡುತ್ತಿದ್ದಾನೆ (ರೂಢಿ). ದಮ್ಮುಕಟ್ಟು: ೧. ಸ್ಕೋವೊರೋರ್ನಿಕೋವ್ ಬೆರಳುಬುಡದ ಸಂದಿಯಲ್ಲಿ ಅಪ್ಪಚ್ಚಿಯಾಗಿದ್ದ ಸಿಗರೇಟಿನ ಹೊಗೆಯನ್ನು ದಮ್ಮುಕಟ್ಟಿ ಸೇದಿದನು (ಪುನರು. ೩೬೪). ೨. ಗೂರಲು ರೋಗ ಅಂಟು: ದಮ್ಮುಕಟ್ಟಿಕೊಂಡು ಹಮ್ಮು ಕಳಕೊಂಡ (ಗಾದೆ).

[ದಮ್ಮು + ಕಟ್ಟು$_1$]

ದಮ್ಮುಗೊಳ್ಳು (ಕ್ರಿ). ಉಬ್ಬಸ ಹತ್ತು; ಶ್ವಾಸರೋಗ ಹಿಡಿ: ಮದನ ಬಾಣಂಗಳ ಪೆಟ್ಟಿಗೆ ದಣಿದು ದಮ್ಮುಗೊಂಡಿರುವನಂತೆ ಉಸುರುಗಳಂ ಬಿಡುತ (ಸೌಗಂಧಿ. ೦೯೯-೦). [ದಮ್ಮು$_2$ + ಕೊಳ್ಳು$_1$ (<ಕೊಳ್$_1$)]

ದಮ್ಮುದಿಮ್ಮನೆ (ಅ). ಒಂದು ಅನುಕರಣಾವ್ಯಯ: ಭಕ್ತನ ಬರವಿಂಗೆ ಮಂಚವನಿಳಿಯದ ಕಾರಣ ದಮ್ಮುದಿಮ್ಮನೆ ಬೆನ್ನ ಬಡಿದು ಅವಿರಟ್ಟು ಗೆಲಸಕ್ಕೆ ಹೋಗೆನಾಗಿ ಎನ್ನ ತೊಡೆಯ ಕೊಯ್ದುಕೊಂಬ (ಸರ್ವವ. ೪೭-೨೫೦).

ದಮ್ಮುಹತ್ತು (ಕ್ರಿ). ೧. ತೇಕು; ಏದು: ಒಂದೇ ಧಾಪಿನಲ್ಲಿ ಓಡಿಬಂದು ದಮ್ಮುಹತ್ತಿ ಬಾಯಿಂದ ನೊರೆಯ ತೆರೆಯನ್ನು ತೇಲಿಸುವ ಹೆಯಗ್ರೀವ ಶ್ರೇಷ್ಠನಂತೆ ಮುಸುಮುಸು ಭುಸುಭುಸುಗುಟ್ಟತೊಡಗಿದನು (ದೀಪಹ. II, ೩೪೮). ೨. ಗೂರಲು ರೋಗ ಉಂಟಾಗು: ಮೊದಲೇ ನಿತ್ರಾಣನಾಗಿದ್ದ ಮುದುಕನಿಗೆ ದಮ್ಮುಹತ್ತಿ, ಒಂದು ತಿಂಗಳಲ್ಲಿಯೇ ತೀರಿಕೊಂಡ (ರೂಢಿ). [ದಮ್ಮು + ಹತ್ತು$_1$ (<ಪತ್ತು$_1$)]

ದಮ್ಮುಹೊಡೆ (ಕ್ರಿ). ಬಾಯಿಂದ ಜೋರಾಗಿ ಎಳೆದುಕೊಳ್ಳು; ಜುರುಕೆ ಹೊಡೆ; ಸೇದು: ಕಗ್ಗತ್ತಲಿನಲ್ಲಿ ಆ ಮರದ ಬುಡದ ಕಡೆಯಿಂದ ಬೀಡಿ ದಮ್ಮುಹೊಡೆದಂತೆ ಕಾಣಿಸಿತು (ನನ್ನೂರು. ೦೯೯).

[ದಮ್ಮು + ಹೊಡೆ$_1$ (<ಪೊಡೆ$_1$)]

ದಮ್ಮೈಳೆ (ಕ್ರಿ). = ದಮ್ಮುಹೊಡೆ : ಅವನು ಬೀಡಿಯನ್ನು ದಮ್ಮೈದು ಹೊಗೆ ಬಿಟ್ಟನು (ರೂಢಿ). [ದಮ್ಮು + ಎಳೆ$_1$ (<ಎಟ್^{1})]

ದಮ್ಮೈರು (ಕ್ರಿ). ದಮ್ಮುಬರು ; ಉಬ್ಬಸಬರು ; ಗೂರಲಾಗು : ಅವನಿಗೆ ದಮ್ಮೈರಿ ಸಂಕಟಪಡುತ್ತಿದ್ದಾನೆ (ರೂಢಿ).
[ದಮ್ಮು + ಏರು$_1$ (<ಏಱ್^{1})]

ದಯ (ನಾ). ಕರುಣೆ ; ಅನುಕಂಪ ; ಕೃಪೆ : ದಯವಿಲ್ಲದ ಧರ್ಮವದೆ ವು ದಯ್ಯಾ ದಯವೇ ಬೇಕು ಸಕಲ ಪ್ರಾಣಿಗಳೆಲ್ಲಱಲ್ಲಿಯೂ ದಯವೇ ಧರ್ಮದ ಮೂಲವಯ್ಯಾ (ಬಸವ. ೨೪೭) ; ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ (ಪುರಂದ. ೨-೬೦ ಪಲ್ಲವಿ) ; ದಯವಿರಬೇಕು ಸಕಲ ಪ್ರಾಣಿಗಳಲ್ಲಿ ಭಯವಿರ ಬೇಕು ಗುರುಲಿಂಗಜಂಗಮರಲ್ಲಿ (ಅಖಂಡೇ. ೧೩೦ ೧೦೦) ; ಬಿಂದು ನಿರ್ಣಯ ವರುಹಿದನು ಪೂರ್ಣೇಂದುಬಿಂಬನ ಪೋಲ್ವ ನಗುಮುಖದಿಂದ ಗಗನಾನಂದ ಶ್ರೀಗುರು ಕಂದನಿಗೆ ಜಯದಿ (ಗಗತಾ. ೧೯ ಸೂಚನೆ) ; ಗುರುವೆ ತಮ್ಮ ದಯಕ್ಕೆ ಪಾತ್ರನಾಗಿ ಈ ಜನ್ಮವನ್ನು ನೀಗಿಕೊಳ್ಳಬೇಕೆಂದು ಇದ್ದೇನೆ (ನೀತಿಚಿಂ. IV, ೨೮). [ಸಂ. ದಯಾ]

ದಯಂಗೆಯ್, ದಯಗೆಯ್ (ಕ್ರಿ). ಕೊಡು ; ಅನುಗ್ರಹಿಸು ; ದಯ ಪಾಲಿಸು ; ಕರುಣೆಯಿಂದ ನೀಡು : ಸೋಮಶರ್ಮನ ಬಾಯಿಗನಪ್ಪ ಸೋಮಿಲನೆಂಬೊಂಗೆ ತನ್ಮಂತ್ರಿಪದವಿಯಂ ದಯಂಗೆಯ್ದು . . . (ಸುಕುಮಾ. ೩-೨೯ ವ) ; ಅಗ್ನಿಭೂತಿಯುಮವರ ಬೆಂಬಱಯನೆ ತಗುಳ್ದು ಪೋಗಿ . . . ಎನಗೆ ನಿಮ್ಮಡಿ ದೀಕ್ಷೆಯಂ ದಯಂಗೆಯ್ಯಮೆಂದು ತತ್ಕಾಳಿಕ ಕಾಲಲಬ್ಧಿಯಿಂ ಸಂವೇಗವೈರಾಗ್ಯಪರನಾಗಿ . . . ಬೇಡಿದೊಡೆ (ಸುಕುಮಾ. ೪-೩೮ ವ). **ದಯಗೆಯ್** : ದೀಕ್ಷೆಯಂ ದಯಗೆಯ್ಯಮೆಂದು ಬೇಡಿದೊಡೊಳ್ಳಿತಪ್ಪ ಮಾಹರ್ತದೊಳ್ ದೀಕ್ಷೆಯಂ ಕೊಟ್ಟು (ವಡ್ಡಾರಾ. ೬-೨) ; ಗೆದೆಯ ಪನ್ನೆರಡಱ ನಾಟ್ಯಾವುಣ್ಡ ಸೀಬಳ್ಳಿಯೆಱೆಹಯ್ಯನ ಜೇಷ್ಠಪುತ್ರ ನಂಗಮ್ಮನ ಮಗ ಚೋಗಯ್ಯಂಗೆ ದಯಗೆಯ್ದು ಕೊಟ್ಟ ಸ್ಥಿತಿ (ಎಕ. VIII, ಸೊರಬ. ೪೭೭-೦೮ ; 991). [ದಯ + ಕೆಯ್$_1$]

ದಯಕಾರ 'ದಯಕಾಱ' ನೋ.

ದಯಕಾಱ, ದಯಕಾರ (ನಾ). ಕರುಣಾಳು ; ದಯಾವಯ ; ಕೃಪೆ ಯುಳ್ಳವನು : ನಿರನುನಾಸಿಕ ಯಕಾರಕ್ಕೆ – ಬಯಕೆ, ಬಿಯದಂ, ಬಿಯಳಂ, ದಯಕಾಱಂ (ಶಮದ. ೦೬ ಪ್ರಯೋ). **ದಯಕಾರ** : ನಿಮ್ಮ ವಾದವಾಗ್ವಿತೆಗಳನ್ನು ಸ್ವಲ್ಪ ಸಂಕ್ಷಿಪ್ತಮಾಡಿ ಅರಿಕೆಮಾಡಿಕೊಳ್ಳುವಷ್ಟು ದಯಕಾರರಾಗಬೇಕೆಂಬುದು – ಈ ಮಹಾಸಭೆಯ ಸವಿನಯಪ್ರಾರ್ಥನೆ (ಮಂತ್ರಶ. ೬೯-೧೬). [ದಯ + – ಕಾಱ]

ದಯಗೆಡು (ಕ್ರಿ). ನಿಷ್ಕರುಣೆಯಾಗು ; ನಿರ್ದಯನಾಗು ; ಕ್ರೂರನಾಗು ; ಕಟುಕನಾಗು : ಎಮಗೆ ದಯಗೆಡಲಾಗದೆಲೆ ಕುಮಾರಕ (ನಂಬಿರ. ೭-೪೩) ; ಅವಳ ಅಂಗದೆಂಜಲ ಹಾಲುಮಂ ಪೇವಂಗಳಿಲ್ಲದೆ ಕುಡಿದರಿಂತಿದಕಂಗವಿಸಿ ದಯ[ಹಾಂಂ. ದಯೆ, ಮತಿ]ಗೆಟ್ಟು ಮತ್ತಾ ಹೊನ್ನ ಧೇನುವನು ಕಡಿವುತಂ (ಬಸಪು. ೫೫-೧೫). [ದಯ + ಕೆಡು$_1$]

ದಯಗೆಯ್ 'ದಯಂಗೆಯ್' ನೋ.

ದಯದೃಷ್ಟಿ (ನಾ). ಕರುಣೆಯ ದೃಷ್ಟಿ : ನಿನ್ನ ದಯದೃಷ್ಟಿಗೆ ಚಿತ್ತವಿಲ್ಲದಿರೆ ಮುನ್ನೇನು ಗತಿಯು ಎನಗೆ (ಪುರಂದ. ೪-೧೮ ಪಲ್ಲವಿ). [ದಯ + ದೃಷ್ಟಿ]

ದಯದೋಱು (ಕ್ರಿ). ಅನುಕಂಪೆಯನ್ನು ತೋರಿಸು ; ಕರುಣೆ ತೋರು : ಮಡದಿಯರು ನಿನ್ನ ಬಿಡದೆ ಬೇಡಲು ಕಡುಮಯದೋಱೆದ್ದು ಎಲ್ಲಿ ಕಲಿತೆಯ್ಯ (ಪುರಂದ. ೦-೯೬-೪). [ದಯ + ತೋಱು]

ದಯನೀಯ (ಗು). ೧. ಕರುಣಾಜನಕವಾದ ; ಅನುಕಂಪನೀಯ. (ನಾ). ೨. ಕರುಣಾಜನಕವಾದುದು : ಆ ಬಡಜೀವಿಗಳ ಅವಸ್ಥೆಯು ನಿಜ ವಾಗಿಯೂ ದಯನೀಯವಾಗಿತ್ತು (ಅಲ್ಪವಿ. ೯). [ಸಂ.]

ದಯನೀಯತೆ (ನಾ). ಕರುಣಾಜನಕ ಸ್ಥಿತಿ : ತಂದೆಯ ದಯನೀಯತೆ ಯನ್ನು ಕಂಡು ಅಪ್ಪಾ ಹೊರಡೋಣ ಎಂದರು (ಕುಟುಮೂ. ೫೯).
[ಸಂ. ದಯನೀಯತಾ]

ದಯಪಾಲಿಸು (ಕ್ರಿ). ಅನುಗ್ರಹಿಸು ; ಕೃಪೆದೋರಿ ನೀಡು : ದಯ ಪಾಲಿಸೆ ಮಾತೆ ತ್ರೈಲೋಕ್ಯವಿಖ್ಯಾತೆ (ಪುರಂದ. ೪-೧೦೩-೨) ; ಅವರು ದಯಮಾಡಿ ವಹಕೆ ದರಣ ಪ್ರಕಾರ ಕೊಡುಯಂತ ದಯಪಾಲಿಸಿ (ಎಕ. VIII, ಸಾಗರ. ೪೬-೪೫ ; 1646 ?) ; ನನ್ನ ಮೇಲೆ ಗುರುವಿಗೆ ದಯೆ ಯುಂಟಾಗಲಿಲ್ಲ ಪರ ದಯಪಾಲಿಸಲಿಲ್ಲ (ಮಚಿಸ. ೬೩) ; ನನ್ನ ಹಾರೈಕೆಯನ್ನು ದೇವರು ಇವತ್ತು ದಯಪಾಲಿಸಿದ (ಚಂಗಾಳ್ವ. ೪೩೫).
[ದಯ + ಪಾಲಿಸು]

ದಯಮಾಡಿಸು (ಕ್ರಿ). ೧. (ಕೃಪೆಯಿಂದ) ನೀಡು ; ಅನುಗ್ರಹಿಸು : ಸ್ವಾರ್ ಕಚೇರಿ ಬಕ್ಷಿ ಭೀಮರಾಯರಿಗೆ ದಯಮಾಡಿಸ್ತ ಯಿನಾಂ ಕೊಡಿಗೆ (ಎಕ. III, ನಂಜನ. ೭೦-೫ ; 1818) ; ೨. ಬರು ; ಆಗಮಿಸು : ಸವಾರಿಯು ದಯಮಾಡಿಸಿದರೆ ನಾನು ಕರೆದುಕೊಂಡು ಹೋಗುತ್ತೇನೆ (ಶಿಂತ. ೩೫೮) ; ಮಹಾರಾಜ ಹುಕ್ಕ ವಿದ್ಯಾರಣ್ಯರಿಗೆ . . . ಅಲಂಕರಿ ಸಿದ್ದ ಗುರುಪೀಠದ ಮೇಲೆ ದಯಮಾಡಿಸಬೇಕೆಂದು ವಿಜ್ಞಾಪಿಸಿಕೊಂಡನು (ನಡಿಬಾ. II, ೧೧೧). ೩. ಹೊರಡು : ತಾವು ಊರಿಗೆ ದಯಮಾಡಿಸೋದು ಯಾವಾಗ ? (ರೂಢಿ). [ದಯಮಾಡು + – ಇಸು$_3$]

ದಯಮಾಡು (ಕ್ರಿ). ೧. ಕರುಣೆತೋರು ; ಕೃಪೆಯಿಡು : ದಯಮಾಡೊ ದಯಮಾಡೊ ರಂಗ ದಯಮಾಡೊ (ಪುರಂದ. ೧-೩೩ ಪಲ್ಲವಿ) ; ಯಾತಕೆ ದಯಮಾಡಲೊಲ್ಲೆ ರಂಗಯ್ಯ (ಕನಕ. ೭೨-೮೩) ; ಶಶಿಪೋರನ ನಗೆ ಗಿಂಬಾದವನೇ ದಯಮಾಡಯ್ಯ ದಂತಾಯುಧನೇ (ಗಡೇಶ. ೧-೦೪) ; ನಾನಲ್ಪಳೆನ್ನುವ ಭಾವನೆ ಬರದಂತೆ ನನ್ನಲ್ಲಿ ದಯಮಾಡುವಂತೆ . . . ಮಾತಾಡು (ಇಂಬಾಪ. ೧೬೭-೨೩). ೨. ಕರುಣೆಯಿಂದ ನೀಡು ; ಅನುಗ್ರಹಿಸು : ಕ್ಷೇಮಮಂ ದಯಮಾಡೆನ ತಲುದ್ದಾಮಶಿವಭಾವದಿ ಶರಣಾ ವೊಗಲು (ಬಸಪು. ೨೩-೧೭). ೩. ಬರು ; ಆಗಮಿಸು : ತಾವು ಶುಚಿಯಾಗಿ ದಯಮಾಡಬೇಕು (ನೀತಿಚಿಂ. IV, ೧೮). ೪. ಹೊರಡು ; ಹೋಗು : ಇಲ್ಲಿ ನಮಗೆ ಆಜ್ಞಾಪಿಸುವುದನ್ನು ಆಜ್ಞಾಪಿಸಿ ಹಿಂದಕ್ಕೆ ದಯಮಾಡಬೇಕು (ಶಾಕುಂತ. ೫೫-೨೫). [ದಯ + ಮಾಡು$_1$]

ದಯವಿಡು (ಕ್ರಿ). = ದಯದೋಱು : ನನಗೆ ದಯವಿಟ್ಟು ಸಹಾಯ ಮಾಡಿ (ರೂಢಿ). [ದಯ + ಇಡು$_1$]

ದಯಾಂಬುಧಿ (ನಾ). ಕರುಣೆಯ ಸಾಗರದಂತಿರುವವನು ; ಬಹಳ ದಯೆ ಯುಳ್ಳವನು : ಕಬ್ಬಿಲರ ಬಳಗ ವಿನುತಿಸುತ ಸೈಗೆಡೆಡೆಗೆಡೆಗೆ ವಿನಮಿಸುತ ಬಸವಯ್ಯ ಅಭಯಾಘನ ದಯಾಂಬುಧಿಯಭಯಮಭಯವಮಾತ್ಮ ಶೇಖರನೆ ಎಂದುವುಂ (ಬಸಪು. ೫೯-೫೦) ; ಕಾದಿ ಮಡಿದಾತ್ಮಜರ ಶೋಕಮಂ ಮಱೆದು ಮಧುಸೂದನಂಗೆಱಗಿದೊಡೆ ಮಗುಳಪ್ಪಿ ಸಂತೈಸುತಾ ದಯಾಂಬುಧಿ ವಿಜಯನಂ ಕರೆದು ಮೈತ್ರಿಯಿಂದಾತನಂ ಕೂಡಿಸಿದನು (ಕೃಮಿಭಾ. ೧೪-೩೦). [ಸಂ.]

ದಯಾಕಟಾಕ್ಷ (ನಾ). ಕೃಪಾದೃಷ್ಟಿ ; ಅನುಗ್ರಹ. [ಸಂ.]

ದಯಾಕರ (ಗು). ೧. ಕೃಪೆಯನ್ನು ತೋರುವ ; ಅನುಗ್ರಹಿಸುವ ; ಕರುಣೆಗೆ ಆಕರನಾದ ; ಕೃಪಾಕರನಾದ. (ನಾ). ೨. ಕರುಣೆಯ ಗಣಿಯಾದ ವ್ಯಕ್ತಿ ; ಕೃಪಾನಿಧಿ. [ಸಂ.]

ದಯಾಕೂಪಾರ (ನಾ). ಕರುಣೆಯ ಸಾಗರದಂತಿರುವವನು ; ಬಹಳ ದಯೆಯುಳ್ಳವನು : ಶ್ರೀಪರಮಗುರು ಹಲಗೆಯಾರ್ಯ ಮುಂದಾಱನೆ ಯದೇಪರಿಯೊಳಾ ವಿಂಶಿಕೆಯೊಳೆಂಬುದಂ ದಯಾಕೂಪಾರ ನಿರವಿಸೆಂದಾ ಕೆಂಚವೀರಾಹ್ವಯಗೆಂದನಾಚಾರ್ಯಂ (ವೀಕೃಪು. ೫-೧೭-೩). [ಸಂ.]

ದಯಾಗರ್ಭ (ನಾ). ಕರುಣೆಯುಳ್ಳವನು; ಕೃಪಾಳು: ವಿಶ್ವೋರ್ಜಿತ ಶಾಸ್ತ್ರ ಗರ್ಭಪುಮಳಾಳೋಕಂ ದಯಾಗರ್ಭಮೆಂಬೀ ವಿಖ್ಯಾತಿ ಸಮಸ್ತ ದಿಕ್ಪಸರಗರ್ಭಂ ನೋಟ್ಪೊಡೆಂಬನ್ನೆಗಂ ತ್ರೈವಿದ್ಯ ಶ್ರುತಕೀರ್ತಿ ದೇವನೆಸೆದಂ (ಚಂದ್ರಪು. ೧-೩೪). [ಸಂ.]

ದಯಾಗುಣ (ನಾ). ೧. ದಯೆಯಿಂದ ಕೂಡಿದ ಸ್ವಭಾವ; ಕೃಪಾಗುಣ. ೨. ಕರುಣಾಭಾವದಿಂದ ಕೂಡಿದವನು; ಕರುಣಿ. [ಸಂ.]

ದಯಾದತ್ತಿ (ನಾ). [ಜೈನ] ದಯಾದತ್ತಿ, ಪಾತ್ರದತ್ತಿ, ಸಮದತ್ತಿ ಮತ್ತು ಅನ್ವಯದತ್ತಿ ಎಂಬ ನಾಲ್ಕು ವಿಧವಾದ ದಾನಗಳಲ್ಲಿ ಒಂದು; ಸಕಲ ಪ್ರಾಣಿಗಳಲ್ಲಿ ದಯೆ ತೋರುವಿಕೆ: ದಯಾದತ್ತಿ ಮೊದಲಾದ ಚತುರ್ವಿಧ ದತ್ತಿಯಂ (ಶಾವುಂಪು. ೪೭); ದತ್ತಿಯೆಂಬುದು ದಯಾಪಾತ್ರಸಮಂ ಸಕಲಭೇದದಿಂ ಚತುರ್ವಿಧಮಕ್ಕುಮಲ್ಲಿ ದಯಾದತ್ತಿ ಯೆಂಬುದುಮನುಕಂಪೆವೆರಸನುಗ್ರಾಹ್ಯಮಪ್ಪ ಪ್ರಾಣಂಗಳ್ಗೆ ತ್ರಿ ಶು ದ್ಧಿಯಿನಭಯದಾನಮಂ ಕೊಡುವುದು (ಶಾವುಂಪು. ೨೨೯); ಸಕಲಜೀವಂಗಳ್ಗೆ ಅನುಕಂಪಾಪೂರ್ವಕಂ ತ್ರಿಶುದ್ಧಿಯಿಂ ಅಭಯದಾನಂಗೊಡುವುದು ದಯಾದತ್ತಿ (ತತ್ತ್ವಪ್ರ. ೨೮೭). [ಸಂ.]

ದಯಾದರಿದ್ರ (ನಾ). ದಯಾಭಾವದಲ್ಲಿ ದರಿದ್ರನಾದವನು; ನಿರ್ದಯಿ: ಕಠೋರನಾದವನು; ನಿಷ್ಕರುಣಿ: ಕಂಡಕಂಡವರ ಸ್ವತ್ತನ್ನು ಅಪಹರಿಸಿ ದಯಾದರಿದ್ರರಾಗಿ ಬಾಳುತ್ತಿರುವ ಹಣಗಾರರನ್ನು ಸುಲಿದು ಸುಲಿದು . . . ಬಡಬಗ್ಗರಿಗೆ ಶಕ್ತಿಮಿರಿ ಉಪಕರಿಸಬೇಕು (ಪಿನ್ನಪೀ. ೩೦). [ಸಂ.]

ದಯಾಧಾರ (ನಾ). ೧. ದಯೆಯನ್ನೊಳಗೊಂಡಿರುವುದು. ೨. ದಯಾಮಯಿ; ಕರುಣಿ. [ಸಂ.]

ದಯಾನಿಧಿ (ನಾ). ಕರುಣೆಗೆ ಆಶ್ರಯಸ್ಥಾನವಾದವನು: ದಯಾನಿಧಿ ಮೆಚ್ಚಿ ನಿಚ್ಚಂ ತನಗೆ ಪಡಿಯಾಗಿ . . . ಒಂದು ಹಾಗಮನೀಯಲು (ಬಸಪು. ೨೮-೬); ಕಳುಹುವುದಾ ದಯಾನಿಧಿಯಡಿಗೆ ಸಾರಿದೊಡಹುದು ಪರಮಸುಖ (ಕಾತಿಕಾ. ೨೩-೦೩); ನಾನಾ ತೆಜದಿಂದೆ ಎನ್ನ ಹುಸಿ ದಿಟವ ಮಾಡಿ ಕಾಡದಿರಯ್ಯ ನೀವು ದಯಾನಿಧಿ ಎಂದು ನಂಬಿದೆನಯ್ಯ (ಆಪಂಡೀ. ೧೫೦-೬೪). [ಸಂ.]

ದಯಾಪರ (ನಾ). ದಯೆಯುಳ್ಳವನು; ಕರುಣಾಶಾಲಿ: ಸಕಲಜೀವದಯಾ ಪರನವ್ವುದಜಿನರಸನಂಜದಿರೆಂದು ಗಿಡಿಗನಂ ನೋಡಿ (ಶಾಂತಿಪು. ೯-೪೯ ವ); ಕಲಿದೇವನಂ ಫಣೆ ತಿಂದು ಸತ್ತಿತು ಮತ್ತೆಯಾ ಅಯ್ಯಂ ದಯಾಪರನಾಗಿ ಅದಱ ಪ್ರಾಣವಂ ಪಡೆದು ವಂದಿಸುತ್ತಿರೆ (ಬಸಪು. ೫೫-೨೭). [ಸಂ.]

ದಯಾಪರಿಣತಿ (ನಾ). ದಯಾಪೂರ್ಣತೆ; ದಯೆ ತುಂಬಿರುವುದು: ಸುಚರಿತ್ರದೊಳ್ ದಯಾಪರಿಣತಿಯೊಳ್ ಕಳಾವಿಭವದೊಳ್ . . . ನಿನಗಾರ್ ದೊರೆ (ಪುಷ್ಪಪು. ೧-೮೦). [ಸಂ.]

ದಯಾಪಾರಮಿತೆ (ನಾ). [ಬೌದ್ಧ] ಸದಾಚಾರಗಳಲ್ಲಿ ಒಂದು; ಕರುಣೆಯ ತುತ್ತತುದಿ; ಕೃಪೆಯ ಪರಾಕಾಷ್ಠೆ: ಪಾರಮಿತಾ ಎಂದರೆ ಪರಾಕಾಷ್ಠೆಯು, ಅಭ್ಯಾಸಸಮಾಪ್ತಿಯೆಂದರ್ಥ. ಇದರಲ್ಲಿ ದಯಾಪಾರಮಿತಾ, ದಾನಪಾರಮಿತಾ, ಶೀಲಪಾರಮಿತಾ ಮೊದಲಾದ ಸದಾಚಾರಗಳನ್ನು ಸಂಗ್ರಹಿಸಿರುವರು (ಹಿಂದಸಾ. ೪೦).

[ಸಂ. ದಯಾಪಾರಮಿತಾ]

ದಯಾಪಾರಿ (ನಾ). = ದಯಾಪರ: ಸರ್ವಜೀವ ದಯಾಪಾರಿಯೆಂದು ಭೂತದಯಕ್ಕಿಕ್ಕುವನ ಮನೆ ಸಯಿಧಾನದ ಕೇಡು (ಬಸವ. ೨೨೬).

[ಸಂ. ದಯಾಪಾರಿನ್]

ದಯಾಬ್ಧಿ (ನಾ). ಕರುಣೆಯ ಸಾಗರದಂತಿರುವವನು; ಬಹಳ ದಯೆಯುಳ್ಳವನು: ದಿಟಮುದ್ಯದ್ಭಕ್ತಿಯಿಂ ತತ್ಪದಧ್ಯಾನಂಬೆತ್ತು ದಯಾಬ್ಧಿಯಂ ಘನತಪಂಗೆಯ್ದೊಚ್ಚತಂ ಪುಚ್ಚಿಪೆಂ (ಕಲಶಂ. ೨-೯೯). [ಸಂ.]

ದಯಾಭರಣ (ನಾ). ಕರುಣೆಯಿಂದ ತುಂಬಿದವನು; ಕೃಪಾನಿಧಿ: ಸುರನರೋರಗನಮಿತಚರಣ ಜಯಜಯ ದಯಾಭರಣ ಜಯಜಯ . . . ದುರಿತಹರಣ ಜಯಜಯತುಜಯತು (ಹಡಕಾ. ೫-೬೯). [ಸಂ.]

ದಯಾಮೂಲ (ನಾ). ಕರುಣೆಯೇ ಮೂಲವಾದುದು; ಕೃಪೆಯನ್ನು ಪ್ರಧಾನಪ್ರವೃತ್ತಿಯನ್ನಾಗಿ ಉಳ್ಳದು: ಭವ್ಯನುಂ ಮಾನುಷ್ಯಭವಕ್ಕೆ ಬಂದಲ್ಲಿ ಯುಕ್ತಾಚಾರರಪ್ಪಾಚಾರ್ಯರಂ ಪೊರ್ದಿ ದಯಾಮೂಲವಪ್ಪ ಧರ್ಮಮಂ ಕೇಳ್ದು ನಂಬಿ . . . ಶ್ರಾವಕನಪ್ಪುದು (ಜೀವಸಂ. ೪-೮); ಪ್ರಾಣಹಿಂಸೆಯುಂ ಮಾಡಲ್ವೇಡ ದಯಾಮೂಲಂ ಧರ್ಮಂ ಪದುಳಿಸಿ ಕೇಳ್ಕಗನೆ ಹಿತಮಿದುಭಯಭವಕ್ಕಂ (ಯಶೋಧ. ೪-೩೫). [ಸಂ.]

ದಯಾರಸ (ನಾ). ಕರುಣೆಯ ಭಾವ; ದಯೆಯ ಭಾವ: ದೊರೆಕೊಳಿ ಕಾಲಲಬ್ಧಿ ಬಗೆದಂತಿರೆ ಕೂಡೆ ಗುರೂಪದೇಶಮಾವರಿಸೆ ಜಿನೇಂದ್ರಭಕ್ತಿ ಪೊಲಿಪೊಣ್ಮೆ ದಯಾರಸಮಿಂತು ನಾಡೆಯುಂ ಪರಿಕರದಿಂ ಮನಕ್ಕಱಿವು ಸಾರೆ . . . ದೊರೆಕೊಂಡ ದೃಷ್ಟಿವಿಭವಂ ಕಳೆಗುಂ ಖಲಕರ್ಮಬಂಧಮಂ (ಆದಿಪು. ೫-೩೩). [ಸಂ.]

ದಯಾರಸಾರ್ಣವ (ನಾ). ಕರುಣೆಯ ಸಾಗರದಂತಿರುವವನು; ಬಹಳ ದಯೆಯುಳ್ಳವನು: ಜಯ ವಿಮಳ ಕೇವಳಾಕೋದಯಗಿರಿವರ ಜಯ ದಯಾರಸಾರ್ಣವ (ಚಂದ್ರಪು. ೭-೭). [ದಯಾರಸ + ಅರ್ಣವ]

ದಯಾರ್ಣವ (ನಾ). = ದಯಾರಸಾರ್ಣವ: ನಾವಿಂದು ಧನ್ಯರ್ಕ್ಕಳೆಡೆಗೀ ದಯಾರ್ಣವಂ ಬಂದುದಚ್ಚರಿಯಲಾ ಬಾಂಧವರ ದರ್ಶನಂ ನಮಗೆ ಕೌತುಕ ಮಪ್ಪುದು (ಕೃಮಿಭಾ. ೭-೩೦). [ಸಂ.]

ದಯಾರ್ದ್ರ (ಗು). ೧. ಕರುಣೆಯಿಂದ ಕೂಡಿದ; ಅನುಕಂಪೆಯ. 'ದಯಾರ್ದ್ರಹೃದಯ' ಪರಾ. (ನಾ). ೨. ಕರುಣಾಮಯಿಯಾದವನು; ದಯೆಯಿಂದ ಕೂಡಿದವನು: ದೂರ್ವಾಸನು ಸ್ವಭಾವದಿಂದ ವಕ್ರನಾದವನು . . . ಆದರೂ ಅವನನ್ನು ಸ್ವಲ್ಪ ದಯಾರ್ದ್ರನನ್ನು ಮಾಡಿದನು (ಶಾಕುಂತ. ೪೭-೨೩). [ಸಂ.]

ದಯಾರ್ದ್ರಹೃದಯ (ನಾ). ಕರುಣೆಯಿಂದ ಕೂಡಿದ ಮನಸ್ಸುಳ್ಳವನು; ಅನುಕಂಪೆಯ ಹೃದಯವುಳ್ಳವನು: ಸಂಜ್ಞಾನಮಯಂ ದಯಾರ್ದ್ರ ಹೃದಯಂ ಸುತಪೋವಿಭವಂ ಶಿವಂಕರೋದ್ಯಾನದೊಳಿರ್ದವಂ ಪರಿವೃತವ್ರತಿ ವೃಂದಸಭಂ ಗುಣಪ್ರಭಂ (ಚಂದ್ರಪು. ೯-೦೭); ಗೊಲ್ಲನೊಬ್ಬನು ಆ ಮಗುವಿನ ಆಳಂವನ್ನು ಕೇಳಿ ದಯಾರ್ದ್ರಹೃದಯನಾಗಿ . . . ಮಗುವನ್ನೆತ್ತಿಕೊಂಡು ಮನೆಗೆ ಹೋಗಿ ಸಲಹಲೆಂದು ತನ್ನ ಸತಿಗೆ ಕೊಟ್ಟನು (ಕವಿಕ. ೯).

[ದಯಾರ್ದ್ರ + ಹೃದಯ]

ದಯಾರ್ದ್ರಹೃದಯೆ (ನಾ). ದಯೆಯಿಂದ ಕೂಡಿದ ಹೃದಯವುಳ್ಳವಳು: ಅವಳು ದಯಾರ್ದ್ರಹೃದಯೆಯಾದುದರಿಂದ ... ಅವನನ್ನು ಆತನ ದಯೆಗೆ ಪಾತ್ರನನ್ನಾಗಿ ಮಾಡಿಸುವಳೆಂದೂ ಹಿತೋಪದೇಶವನ್ನು ಮಾಡಿದನು (ಕವಿಕ. ೪೦).

[ಸಂ. ದಯಾರ್ದ್ರಹೃದಯಾ (ದಯಾರ್ದ್ರ + ಹೃದಯ + –)]

ದಯಾರ್ದ್ರೆ (ನಾ). ದಯೆಯಿಂದ ಕೂಡಿದವಳು; ಕರುಣಾಮಯಿ: ನೀನು ದಯಾರ್ದ್ರೆ, ನೀನು ನನ್ನನ್ನು ಕ್ಷಮಿಸಬೇಕು (ಶಾಂತಲಾ. ೩೩೪).

[ಸಂ. ದಯಾರ್ದ್ರಾ (ದಯಾ + ಆರ್ದ್ರ + –)]

ದಯಾಲು, ದಯಾಳು (ನಾ). ಕರುಣೆಯಿಂದ ಕೂಡಿದವನು; ಕೃಪಾಳು; ಕರುಣೆ: ನೃಪತೀ . . . ವಿಶದಶಶಧರಾಯತಕೀರ್ತೀ ವ್ಯಪಗತಭಯಾ ದಯಾಲೂ ರಿಪುವರ್ಗಮನಲೆದು ಗೆಲ್ವೆಯೂಗಾಹವದೊಳ್ (ಕವಿರಾ. ೨-೩೪). **ದಯಾಳು:** ಆ ದಯಾಳುಗಳರಸನಾ ಶೋಕೋದಧಿಗೆ ವಡಬಾಗ್ನಿ ಸಮನೆನಿ ಸಾದಿಯಲಿ ಷೋಡಶಮಹೀಶರ ಕಥೆಯ ವಿರಚಿಸಿದ (ಕುವ್ಯಾಕ್ರೋ. ೬-೩೬); ನೀನೆ ದಯಾಳೋ ನಿರ್ಮಲಚಿತ್ತ, ಗೋವಿಂದ (ಪುರಂದ. ೧-೩೮ ಪಲ್ಲವಿ);

ನೀವೆಲ್ಲರೂ ದಯಾಳುಗಳೂ ನ್ಯಾಯಪಕ್ಷಪಾತಿಗಳೂ ಆಗಿರುವುದರಿಂದ (ಮುಂಬಯಿ. ೪-೧೦೩); ದಯಾಳು ಮತ್ತು ದೂರದೃಷ್ಟಿಯುಳ್ಳಂತಹ ತಂದೆ ಭಗವಾನ್ ಚಂದ್ರರು ಮಗನ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ . . . ಇಂಗ್ಲೆಂಡಿಗೆ ಕಳುಹಿಸಿಕೊಟ್ಟರು (ಸಸ್ಕೃ. ೯೫).

ದಯಾಳಳು = ಕರುಣೆಯಿಂದ ಕೂಡಿದವಳು: ಶರಣು ಶರಣಾರ್ಥಿ ದಯಾಮೂರ್ತಳೇ ದಯಾಳಳೆ ಶರಣು ಶರಣಾರ್ಥಿ ಎನ್ನಕ್ಕ ಮಹಾದೇವಿ (ಸರ್ವವ. ೧೭೩-೮೨೦). [ಸಂ.]

ದಯಾವಂತ (ನಾ). ಕರುಣೆಯುಳ್ಳವನು; ಕರುಣಾಮಯ: ಅವನು ದಯಾವಂತನಾದುದರಿಂದ ಬೇಡುವವರ ಕಾಟ ಹೆಚ್ಚು (ರೂಢಿ).

[ಸಂ. ದಯಾವತ್]

ದಯಾವಂತೆ (ನಾ). = ದಯಾರ್ದ್ರೆ: ಅನ್ತೆನಿಸಿದಾಚಭೂಪನ ಕಾನ್ತೆ ದಯಾವಂತೆ ಭಾಗ್ಯವಂತೆ ನಿತಾಂತಂ ಶಾನ್ತೆ ನಯವಂತೆ ಸತ್ಯಳವಂತೆ ಮಹಾದೇವಿಯೆಂಬ ಪೆಸರಿಂದೆಸೆವಳ್ (ಎಇ. XX, ೧೨-೧೫; 1167).

[ದಯಾವಂತ + – ಎ$_2$]

ದಯಾವತಿ (ನಾ). = ದಯಾರ್ದ್ರೆ: ದವಿಸು ಭವಮಂ ಧರ್ಮಾಕಾರೇ ದಯಾವತಿ ಪಾರ್ವತೀ (ವೃಷವಿ. ೪-೧೨೭). [ಸಂ. ದಯಾವತೀ]

ದಯಾಸಂಪನ್ನ (ನಾ).=ದಯಾಲು: ನೀನೇ ದಯಾಸಂಪನ್ನನೋ ಕಾವೇರಿ ರಂಗ (ಪುರಂದ. ೨-೧೦೮ ಪಲ್ಲವಿ). [ಸಂ.]

ದಯಾಳು 'ದಯಾಲು' ನೋ.

ದಯಿತ (ಗು). ೧. ಇಷ್ಟವಾದ; ಬಯಸಿದ; ಪ್ರಿಯವಾದ. (ನಾ). ೨. ಕಾದಲ; ಪ್ರಿಯ: "ವಲ್ಲಭಃ, ದಯಿತಃ, ಪ್ರಿಯಃ–ಈ ೩ ಕೂರ್ಪವಂ" (ಹಲಾಯು. ೬೦-೨೧೩). ೩. ಪತಿ: "ನಾಯಕಂ . . . ಪ್ರಿಯನಧಿಪಂ ದಯಿತನೀಶಂ . . . ವಲ್ಲಭನೆನಲು ನೇತೃವೆನಲೊಡೆಯಂಗೆ ನಾಮಮಕ್ಕುಂ" (ಮಂಗರಾ. ೬೭-೬); ಶ್ರೀದಯಿತನ ಹರಿಗನ ಸಂಪಾದಿತ ಭುಜವೀರ್ಯ ಮಟ್ಟಿಟಂ ತನಗರ್ದೆಯೊಳ್ ಚೋದಿಸೆ (ಪಂಪಭಾ. ೧೩-೧) ; ಅಂತು ಕೀರ್ತಿಲತೆಯೆ ಮೂರ್ತಿಮತಿಯಾದಂತೆಯುಂ ಸರಸ್ವತಿದೇವಿಯೆ ನಿಜರೂಪಿನೊಳೊಂದಿ ಬಂದಂತೆಯುಮಾಶ್ಚೀಯ ದಯಿತನ ಮನಕ್ಕೆವರೆ ಸೂಟ್ಗೆವಂದು (ವರ್ಧಮಾ. ೦೧-೫೭ ವ); ಚಿಂತೆಯಿನ್ನೆತಂದ ದಯಿತನ ಬಳಿಯೊಳು ವಿಹಿತಮನ್ಯುಗಳನು ನೆನೆದು (ಗಾಥಾಸ. ೧೫-೬೦). [ಸಂ.]

ದಯಿತಾಸಂಬಂಧ (ನಾ). ಪತ್ನಿಯ ಸಂಬಂಧ: ದಯಿತಾಸಂಬಂಧಬಂಧಂ ಭವಪರಿಣತಿ ತನ್ಮೂಲಮಿಾ ಬೇವಸಂ ನಿಶ್ಚಯಮೆಂದಾತಂ ತೊಡರ್ಪಂ ಬಿಡಿಸಿ ಕಿಡಿಸಿ ದುರ್ಮೋಹಮಂ . . . ಅಘಮಂ ಗೆಲ್ದು ನಿರ್ಮೋಹನಾದಂ (ಶಾಂತಿಪು. ೯-೧೪). [ಸಂ.]

ದಯಿತೆ (ನಾ). ೧. ಪತ್ನಿ; ವಲ್ಲಭೆ: ದಯಿತಾಸಂಬಂಧಬಂಧಂ ಭವಪರಿಣತಿ ತನ್ಮೂಲಮಿಾ ಬೇವಸಂ (ಶಾಂತಿಪು. ೯-೧೪) ; ರತಿಯಿಚ್ಛೆಯುಂ ರತಿಯೆಂಡೆಗೆ ನಡೆಗೊಳ್ಳ ವಿಾನಕೇತನನಂತೆ ಕಾವಂಚೇತನನಾಗಿ ನಡೆದನು ನರಾಧಿಪಂ ದಯಿತೆಯ ಸಜ್ಜೆವನೆಗೆ (ಶ್ರೀರಾಮಾ ೬೭-೩೫೪) ; ದಯಿತೆಯನ್ನು ಬೇಡರ ಹೆಣ್ಣಂದೂ ವಾಸಗೃಹವನ್ನು ಕಾರಾಗಾರದ ಪಂಜರವೆಂದೂ ರೂಪ ಕಾಲಂಕಾರವನ್ನು ವಿಸ್ತರಿಸಿದ್ದರೆ ಅತ್ಯಂತ ಅನೌಚಿತ್ಯವೊದಗುತ್ತಿದ್ದಿತು (ಧ್ವನ್ಯಾಲೋ. ೮೬ ಅಡಿಟಿ). ೨. ಕಾದಲೆ; ಪ್ರಿಯೆ: ೩. ಹೆಣ್ಣು; ಸ್ತ್ರೀ: "ರಾಮಾ . . . ದಯಿತಾ, ಪ್ರತೀಪದರ್ಶಿನೀ, ವಧೂಃ, ವಶಾ, ಯುವತೀಃ–ಈ ೨೮ ಸ್ತ್ರೀಯರ್" (ಹಲಾಯು. ೭೯-೩೨೮). [ಸಂ. ದಯಿತಾ]

ದಯೆ (ನಾ). ೧. = ದಯ: "ಅನುಕ್ರೋಶಃ, ಕೃಪಾ, ಶೂಕಂ, ದಯಾ, ಕರುಣಾ, ಘೃಣಾ–ಈ ೬ ಕರುಣಾಂ" (ಹಲಾಯು. ೧೨೦-೪೯) ; "ಕರುಣಂ ಘೃಣಂ ಕೃಪೆಯನುಕ್ರೋಶಮಾಶೂಕಮೆನಲು ದಯೆಗಕ್ಕು ನಾಮಂ" (ಮಂಗರಾ. ೧೨೯-೧೫) ; ಮುನ್ನಿನ ನೆಲನಂ ಕುಡುಗೆಮಗೆನ್ನರ್ ದಾಯಿಗರೆ ಮೆನ್ನರಂತಲ್ತಿಂತಲ್ತೆನ್ನರ್ ಕರುಣಿಸಿ ದಯೆಯಿಂದಿನ್ನಿತ್ತುದೆ ಸಾಲ್ಗುಮೆಂಬರ್ (ಪಂಪಭಾ. ೯-೪೧) ; ಸತ್ಯ . . . ಧೃತಿ ದಯೆ. . . ಶೌಚವೆಂಬ ಯಮಾಂಗದಶಕಮಂ (ವಿವೇಕ. ೧೪೮) ; ತನಯ ತಿಳಿಯಾ ಬ್ರಹ್ಮಚರ್ಯವು ಕ್ಷಮೆಯುಂ ಧೃತಿ ದಯೆ ಆರ್ಜವವು . . . ವ್ರತ ನಿಯಮ ದಶಮಗಳ (ಗಗತಾ. ೧೦-೬೭) ; ಸತ್ಯ . . . ದಯೆ ಮಮತೆ – ಇವೇ ಮಾನವ ಧರ್ಮದ ಮೂಲತತ್ತ್ವಗಳು (ಧರ್ಮಸಾ ೩). ೨. ದಕ್ಷ ಪ್ರಜಾಪತಿಯ ಮಗಳು; ಧರ್ಮಪ್ರಜಾಪತಿಯ ಪತ್ನಿ. [ಸಂ. ದಯಾ]

ದಯೆಗಿಡು 'ದಯೆಗೆಡು' ನೋ.

ದಯೆಗೆಡು, ದಯೆಗಿಡು (ಕ್ರಿ). ಕರುಣೆಯಿಲ್ಲವಾಗು; ಕಠೋರವಾಗು; ಕೃಪೆಯಿಲ್ಲವಾಗು: ಕೋಮಳಶುಕಶಾಬಕಪ್ರಕರಮಂ ತೆಗೆದಂ ದಯೆಗೆಟ್ಟು ಲುಬ್ಧಕಂ (ಕಾದಂಪೂ. ೦೭೮). **ದಯೆಗಿಡು**: ನಾಟಕಮನಭಿನಯಿಸಿ ಕರಂ ಬಟಲ್ದು ನೈಪಥ್ಯಮಂ ಕಳೆಯಲ್ ಶಕ್ತಿಯಿಲ್ಲದೆ ನಿದ್ರಾಸಕ್ತರಾದೆವು ಇದರ್ಕೆ ದೇವರ್ ದಯೆಗಿಡಲ್ವೇಡಂ [ಪಾಠಾಂ. ದಯೆಗೆಯ್ಯಲ್ ಬೇಕೆಂ]ದು ಕಾಲ್ಗೆಱಗುವುದುಂ (ಪಂಚತಂ. ೧೯೬-೧೨). [ದಯೆ + ಕೆಡು$_1$]

ದಯೆಗೆಯ್ (ಕ್ರಿ). ೧. ಕರುಣಿಸು; ಕೃಪೆಮಾಡು; ಅನುಕಂಪೆತೋರು: ಶ್ರೀಮಾಜ್ಞೋಯಿನ್ದರಸರ್ ಪ್ರಭೂತುಜ್ಞ ವುರಿಯದೆಯಂ ದಯೆಗೆಯ್ದುಂ (ಮೃಅರಿ. ೧೯೪೨, ೪೭-೧೨; 790); ಕುಲಮುದ್ದಗಾಮಿಗಾಗೆ ಅರಸರ್ದ್ದಯೆಗೆಯ್ದು ಪೂರ್ವಾಚಾರದ ನಾಲ್ಕೆಟ್ಟ್ತಿನೊಳ್ವೆಟ್ಟಿಸಿ ಗೆಟ್ಟಿಯನಳದು ದಯೆಗೆಯ್ದು (ಎಕ. VIII, ಸೊರಬ. ೦೦-೦೧ ; ಸು. 800). ೨. ನೀಡು; ಕೊಡು; ಅನುಗ್ರಹಿಸು: ಭಟ್ಟಾರಾ ಎನಗೆ ದೀಕ್ಷೆಯಂ ದಯೆಗೆಯ್ಯಮೆನೆ (ವಡ್ಡಾರಾ. ೭೪-೧೨); ಪೊಡವುಡುವರ್ ಜೇಯೆಂಬರ್ ಕುಡು ದಯೆಗೆಯ್ಯೇಂ ಪ್ರಸಾದಮೆಂಬಿವು ಪೆಱರೊಳ್ ನಡೆಗೆಮ್ಮ ನಿನ್ನಯೆಡೆಯೊಳ್ ನಡೆಯಲ್ವೇಡೆನಗೆ ಕೆಳಿಯನೈ ರಾಧೇಯಾ (ಪಂಪಭಾ. ೨-೮೫) ; ಸರಸ್ವತಿಯಂದದಿಂ ಸರಸ್ವತಿ ದಯಗೆಯ್ಗೆ ನಮ್ಮೊಳನುಕೂಲತೆಯಿಂದವೆ ನಿರ್ಮಳತ್ವಮಂ (ಕಾದಂಪೂ. ೨) ; ಪೆಂಪಿನ ಕೀರ್ತಿನಾರಾಯಣಂ ದಯೆಗೆಯ್ಗೆ ಚಾಗ ಚತುರ್ಭುಜಂ ಗರುಡಧ್ವಜಂ (ಕಾವ್ಯಾವ. ೩೫೮). [ದಯೆ + ಕೆಯ್$_1$]

ದಯೆದೊಱೆ (ಕ್ರಿ).=ದಯೆಗೆಡು: ಕಡುಶೋಕದಿಂದೆ ತನು ಝೊಂಪಿಸಲ್ಕೆ ಸೆರೆ ಬಿಗಿದು ಕಂಬನಿಯಿಂದೆ ನನೆದಳಲ್ದೊರೆಯೊಳಾಳ್ದನುಜನಂಘೂರ್ಮಿಸುತೆ ನಿನಗೆ ದೋಷಮೆ ತಾನಿರಲ್ಕೆ ನಡೆ ಕಳುಹೆಂದರಸನೇಂ ದಯೆದೊಱೆದನೋ (ಚೈಮಿಭಾ. ೧೯-೫೯). [ದಯೆ + ತೊಱೆ$_1$]

ದಯೆಪಾಲಿಸು (ಕ್ರಿ). ದಯಪಾಲಿಸು; ಕೊಡು: ದೇವರು ಅವರಿಗೆ ಒಂದು ತರದ ಗಿಡಗಳನ್ನು ದಯೆಪಾಲಿಸಿದ್ದಾನೆ (ಮುಂಬಯಿ. ೩-೧೦೦).

[ದಯೆ + ಪಾಲಿಸು]

ದಯೆವೆರಸು$_1$ (ಕ್ರಿ). ದಯೆಯಿಂದ ಕೂಡಿರು; ಅನುಕಂಪೆಯಿಂದ ಕೂಡಿರು: ಪ್ರೀತಿಂಕರಶಂಕರವಿದ್ಯಾತಿಶಯನಿಧಾನ ನಿನ್ನ ದಯೆವೆರಸಿದತಿ ಪ್ರೀತಿಯೊಳಾನತ್ಯುತ್ತಮಜಾತಿಗಳೊಳ್ ಪುಟ್ಟಿ ಸುಖಮನುಣುತಂ ಬಂದಂ (ಆದಿಪು. ೫-೭೩) ; ಮೆಱೆವ ನಾನಾ ಬಗೆ ವಸ್ತುಗಳನು ದಯೆವೆರೆ[ರ]ಸುತೆ ಧರ್ಮಮಾರ್ಗದಲಿ ಕರೆಕರೆದಾಕ್ಷಣ ಕ್ರಯಕೀವ ಹರದರ ಸುರುಚಿರ ಗೃಹಗಳೊಪ್ಪಿದುವು (ಕಂನವಿ. ೬-೫೧). [ದಯೆ + ಬೆರಸು$_1$]

ದಯೆವೆರಸು$_2$ (ಅ). ಕರುಣೆಯಿಂದ ಕೂಡಿ; ದಯೆಯಿಂದ ಕೂಡಿ; ಅನುಕಂಪೆಯನ್ನು ಹೊಂದಿ: ನಿನ್ನ ದಯೆವೆರಸು ನೋಟ್ಟ ಮಹೋನ್ನತಿಯುಂ ಸತ್ಪ್ರಸಾದಮುಂ ಕಿಱುಕುಳನಪ್ಪೆನ್ನೊಂದಿಗನೊಳನುಚಿತಮಿದು (ಶಾಂತಿಪು. ೫-೯). [ದಯೆ + ಬೆರಸು$_3$]

ದಯೈಕನಿಧಿ (ನಾ). ಕರುಣೆಗೆ ಒಬ್ಬನೇ ಆಶ್ರಯನಾದವನು; ಕೃಪಾನಿಧಿ: ಕಾನೂರ್ಗಣಮುನಿಪತಿ ವಿದ್ಯಾನಿಧಿ ಗುಣನಿಧಿ ದಯೈಕನಿಧಿ . . . ಭುವನಾನತಪದಕನಕಕಮಳನಮಳಿನಚರಿತಂ (ಶಾಂತಿಪು. ೧-೦೭). [ಸಂ.]

ದಯ್ವ 'ದಯ್ವ' ನೋ.

ದರ$_1$ 'ದಾರ$_2$' ನೋ.

ದರ$_2$ (ಗು). ೧. ಸ್ವಲ್ಪ; ಕೊಂಚ; ನಸು: ಪರಿಪೂರ್ಣಚಂದ್ರನಂ ತಿಗ್ಮರೋಚಿಯಂ ಕಲ್ಪವೃಕ್ಷಮಂ ಕ್ಷೀರಜಲಾಕರಮಂ ದರವಿಕಸದ್ವಾರರಹಿತ ಮನಾಕಾಂತೆ ನಿಶೆಯ ಕಡೆಯೊಳ್ ಕಂಡಳ್ (ಪುಪ್ಪು. ೩-೧೫೦). (ನಾ). ೨. ಕುಳಿ: "ನಿಮ್ನಂ. ಅಗಾಧಂ, ಗರ್ತಃ . . . ಕುಹರಃ, ದರಃ – ಈ ೧೫ ಕಂಟಃ" (ಹಲಾಯು. ೧೦೩-೨). ೩. ಭಯ; ಆತಂಕ; ಹೆದರಿಕೆ; ತಲ್ಲಣ: "ಆತಂಕಃ, ಭಯಂ, ಆಶಂಕಾ, ದರಃ, ತ್ರಾಸಃ, ಸಾಧ್ವಸಂ–ಈ ೬ ಭಯಂ" (ಹಲಾಯು. ೧೫೦-೪೦); "ಸಾಧ್ವಸವೆನಲ್ ತ್ರಾಸವೆನೆ ದರಮದಾತಂಕ ಮಾಶಂಕೆಯೆಂದೆನೆ ಭಯಂ" (ಮಂಗರಾ. ೧೫೮-೯); ಈ ದರವ ಬಿಟ್ಟವನೊಳಾದರವ ಮಾಡು (ಮಲ್ಲಾರಿ. ೯-೨೨); ಗಿರಿಗಳ ಕಂದರಗಳ . . . ವಕ್ರಪಥಗಳ ದರ ಸುಂದರ ಶಮಕರ ರೂಪಂಗಳನರಿವೊಡೆ ನೀಂ ನಡೆದು ನೋಡು ಕೊಡಗಿನ ಬಿಡಗಂ (ವಿವೇದ. ೨೦-೭); ನಿನ್ನ ಮಾನಸವು ದರವ ಪಟ್ಟಿರ್ದಾದರೇ ನೀನಿರದೆ ಕರಗಳ ಮುಗಿದು ಬೇಗನೆ ಶರಣು ಬಂದರೆ ನಿನ್ನ ಪ್ರಾಣಗಳನ್ನು ಪೊರೆಯುವೆನು (ರಘುವಂ. ೧೦-೭೮). ೪. ಶಂಖ: ಸಂಗತಗಳಿಂದ ಚಾಮರಂಗಳಿಂ ದರಗಳಿಂ ಭಂಗಬಾರದ ರಣ ಶಪಥಗಳಿಂ ರಥಗಳಿಂ ಸುರಪತಿಯ ಬಲಮೆಸೆದುದು (ಮಲ್ಲಾರಿ. ೬-೨೬). ೫. ತೊರೆ; ಹೊನಲು. ೬. ಒಂದು ಬಗೆಯ ಸಸ್ಯ; ಒಂದಂ ವಿಷವೃಕ್ಷ: "ದರಂ ವತ್ಸನಾಭಿ" (ಓಷಧಿ. ೭೩). [ಸಂ.]

ದರ$_3$ (ನಾ). ಸರಕಿನ ನಿಗದಿಯಾದ ಬೆಲೆ,–ಕ್ರಯ: ನಡೆಯಲು ಒಂದು ದರವು ಗೊತ್ತಾಗುತ್ತದೆ (ಮುಂಬಯಿ. ೫-೫೬೦); ವರ್ತಕನ ಸಂಗಡ ಒಳ್ಳೆ ಮಾತುಗಳನ್ನಾಡುತ್ತಾ, ಕೂತುಕೊಂಡು ದರ ಹತ್ತು ಸೇರಿನ ಮೇರೆಗೆ ಒಂದು ಹಣದ ಉದ್ದು (ಕಥಾಮಂ. IV, ೦೪). [←ಹಿಂ. ಮರಾ. ದರ್]

ದರ$_4$ (ನಾ). ಪ್ರತಿಯೊಂದು. 'ದರಸಾರೆ' ಪರಾ. [← ಮರಾ. ದರ್]

ದರ$_5$ (ನಾ). (?): ಸಂಬಳ ಹಾಗ ಅನ್ನು ದರವನು × × × ಪಡಿ ತೆರುವರು (ಎಕ. IX, ಕಾನಕಾ. ೧೧೦-೩೬ ; 1306 ?). [?]

ದರಕಟ್ಟು (ಕ್ರಿ). ಬೆಲೆ ನಿರ್ಣಯಿಸು; ಕ್ರಯಕಟ್ಟು: ದರಕಟ್ಟಿ ನಾನು ಅದನ್ನು ಅವಳಿಗೆ ಹಿಂತಿರುಗಿ ಕೊಟ್ಟೆನು (ಕಮಳ. ೩೭). [ದರ$_3$+ಕಟ್ಟು$_1$]

ದರಕದಾರ (ನಾ). ಸರ್ಕಾರದ ಉನ್ನತಾಧಿಕಾರಿ: ಬೇರೆ ಬಹಂ ಜನ ಸಂಸ್ಥಾನಿಕರು, ಸರದಾರರು, ದರಕದಾರರೇ ಮೊದಲಾದವರು ಕಟಾಂಜನದ ಹೊರಗೆ ನಿಂತುಕೊಂಡಿದ್ದರು (ಸತ್ಕಸಾ. ೪೪). [←ಮರಾ. ದರಕದಾರ್]

ದರಕಾರ 'ದರಕಾರು' ನೋ.

ದರಕಾರು, ದರಕಾರ (ನಾ). ೧. ಅಗತ್ಯ; ಜರೂರು. ೨. ಲಕ್ಷ್ಯ; ಪರಿವೆ; ಗಮನ; ಎಚ್ಚರ: ವಕೀಲರು . . . ಇಲ್ಲಿಂದ ಕಚೇರಿಗೆ ಕರೆದೊಯ್ದು ಒಂದು ರೂಪಾಯಿ ದರಕಾರಿಲ್ಲದ ಚಲ್ಲಾವರಿ (ರಕ್ತಧ್ವ. ೧೯೬); ದವೇದಾರುಗಳು ಅಂದ್ರೇ ಅವನಿಗೆ ದರಕಾರೇ ಇಲ್ಲ (ಪಂಗಬ. ೩೭); ತಮ್ಮ ಮಾತಿನ ದರಕಾರೇ ಇಲ್ಲದವಳ ಹಾಗೆ ಜಗಲಿಯ ಮೆಟ್ಟಿಲುಗಳನ್ನು ಏರುತ್ತಿದ್ದಾಗ (ಮೂಕುದಾ. ೨೭). **ದರಕಾರ:** ೨. ಹೊರಟಿತ್ತು ಹಕ್ಕಿಗಳ ಗುಂಪಿನಲಿ ಎದೆಬಿರಿವ ಘೋರ ಚೀತ್ಕಾರ ತೆರೆಗಳಿಗೆಲ್ಲಿ ಅದರ ದರಕಾರ ? (ಜಂದ್ರಮಾ. ೪೮-೧೦); ಯಾರ ದರಕಾರವೂ ನಿನಗಿಲ್ಲ ಗಾಳಿ – ನೀ ಗೊಳಿಗಾಳಿ ! (ಕಉಶ್ರಾ. ೬೩-೫); ಸ್ಕೌಟ್‌ಮಾಸ್ತರರು ದರಕಾರವಿಲ್ಲದೆ ಎತ್ತಿಕೊಂಡು ದುಡುದುಡು ನಡೆಯುತ್ತಿದ್ದರು (ಪ್ರನಿ. ೫೫೭). ೩. ಸಂಬಂಧ; ಗೋಜು: ಈ ಮಾಗಣೆ ಎರಡು ನಮ್ಮದು ನಿಮಗೆ ದರಕಾರ ಇಲ್ಲಾ. ಇದರ ತಳ್ಳಿ ನೀವು ಬರುವ ಕೆಲಸವಿಲ್ಲಾ (ರಾಚೇಂದ್ರ. ೯೩). ೪. ಕಾಳಜಿ: ಹಸಿದವರಿಗೆ ತುಂಬಾ ದರಕಾರ ಮಾಡಿದೆ ಸರಕಾರ (ಅರಕೋ. ೬೭).

[←ಪಾರ. ಹಿಂ. ಮರಾ. ದರ್‌ಕಾರ್]

ದರಕು 'ತರಕು' ನೋ.

ದರಕುದನಿ (ನಾ). ಒರಟುಧ್ವನಿ; ಗಡಸು ಸ್ವರ; ಗರ್ಗರಧ್ವನಿ: (ಕ).

[ದರಕು (<ತರಕು) + ದನಿ$_1$]

ದರಖಾಸ್ತ್ 'ದರಖಾಸ್ತು' ನೋ.

ದರಖಾಸ್ತು, ದರಖಾಸ್ತ್, ದರ್ಕಾಸ್ತ್, ದರ್ಖಾಸ್ತ್, ದರ್ಖಾಸ್ತು (ನಾ). ೧. ಅರ್ಜಿ; ಮನವಿಪತ್ರ; ಬೇಡಿಕೆ: ಒಬ್ಬರ ದರ ಇನ್ನೊಬ್ಬರಿಗೆ ಗೊತ್ತಾಗದಂತೆ ಧನಾಧಿಕಾರಿಗಳಿಗೆ ದರಖಾಸ್ತು ತಲಪಿಸುತ್ತಾರೆ (ಹಡಪ್ರ. ೫೧೭); ಆ ಗ್ರಾಮದ ರೈತರೇ ಆಗಲಿ ಸಮೀಪದ ಗ್ರಾಮದ ರೈತವರ್ಗೆರೇರು ಆಗಲಿ ದರಖಾಸ್ತು ಮಾಡಿದಲ್ಲಿ ಅದಕ್ಕೆ ಸಹ ಅಮಿಲ ಶರಸ್ತೆದಾರರ ರುಜುವಿನಿಂದ ಶ್ರಯಪಟ್ಟಿ ಬರೆದು ಕೊಡುವ ಕಾಯಿದೆ ತಪ್ಪಿಸಲು (ಮಹಾವಂ. II, ೬೧); ನೀನು ಹೊಲಗದ್ದೆಗೆ ದರಖಾಸ್ತು ಮಾಡಿದರೆ ಅವೂ ಸಿಕ್ಕುತ್ತೆ (ಕಲಸಿ. ೧೪೬); ಏನೋ ಒಂದು ದರಖಾಸ್ತಿನಂತೆ ಬಂಜರು ಸ್ಥಳದಲ್ಲಿ ಅಗಳು ತೋಡಿ ಸಣ್ಣ ಮನೆ ಕಟ್ಟಿದ್ದ (ಚಿಗುಬ. ೩೭). ೨. ಸಾಗುವಳಿ ಮಾಡಲು ಸರ್ಕಾರದವರು ಕೊಡುವ ಭೂಮಿಗಾಗಿ ತೆರುವ ಹಣ; ದರಖಾಸ್ತು ಭೂಮಿಗೆ ತೆರುವ ಬೆಲೆ: ಕಂದಾಯವನ್ನು ಪೋಟಾಪೋಟಿ ಮಾಡಿ ಹೆಚ್ಚು ದರಖಾಸ್ತಿಗೆ ಒಪ್ಪಿಕೊಂಡವರಿಗೆ ಭೂಮಿಯನ್ನು ಸ್ವಾಧೀನಪಡಿಸುತ್ತಿದ್ದರು (ಜಾಮವಂ. ೩೩೯). **ದರಖಾಸ್ತ್:** ೧. ಜಮೀನನ್ನು ಸಾಗುವಳಿ ಮಾಡಲು ಅರ್ಜಿ; ಸಲ್ಲಿಕೆ; ಬೇಡಿಕೆ (ಬ್ರಿಸ್ಗ. II, ೫೪೭). **ದರ್ಕಾಸ್ತ್:** ೩. ಸಾಗುವಳಿ ಮಾಡಲು ಸರ್ಕಾರದವರು ಕೊಡುವ, ಇನ್ನೂ ಸಾಗುವಳಿಯಾಗದಿರುವ ಸರ್ಕಾರೀಭೂಮಿ: ಈ ಸಾಮ್ರಾಜ್ಯದ ವಿಚಾರದಲ್ಲಿ – ಕಾನೆ, ಬಾಣೆ, ಕುಮ್ಕಿ, ದರ್ಕಾಸ್ತ್, ತೋಡು, ಕೆರೆ ಇವುಗಳ ವಿಸ್ತೀರ್ಣಗಳೆಲ್ಲ ಬಾಯಿಪಾಠ (ಕಉಶ್ರ. ೭). **ದರ್ಖಾಸ್ತ್:** ೩. ನಿನಗೆ ಹತ್ತಿಕ್ರಿ ದರ್ಖಾಸ್ತ್ ಕೊಡಿಸುತ್ತೇನೆ (ಪಂಗೂಲಿ. ೧೪೦). **ದರ್ಖಾಸ್ತು:** ೧. ಸರಕಾರ ಹರಿಜನರಿಗೆ ಕೃಷಿಮಾಡಲು ದರ್ಖಾಸ್ತಿಗೆ ಸ್ಥಳ ಕೊಡುತ್ತಿದೆ (ಮುಡ್ನಂ. ೦೫).

[← ಹಿಂ. ಮರಾ. ದರಖಾಸ್ತ್; ಪಾರ. ದರಖ್ವಾಸ್ತ್]

ದರಖಾಸ್ತುದಾರ (ನಾ). ಅರ್ಜಿದಾರ; ಮನವಿಮಾಡಿಕೊಳ್ಳುವವನು: "ಬೇಡುವವನು; ಕೇಳಿಕೊಳ್ಳುವವನು; ಮನವಿಗಾರ; ಅರ್ಜಿದಾರ; ದರಖಾಸ್ತುದಾರ" (Applicant. ಇಂಳಿನಿ). [ದರಖಾಸ್ತು + – ದಾರ$_4$]

ದರಗ 'ದರಗಾ' ನೋ.

ದರಗಂಡಕಳ್ಳ (ನಾ). ಅನುಭವಿಯಾದ ಕಳ್ಳ; ಚೋರತನದಲ್ಲಿ ಗಟ್ಟಿಗನಾದವನು: ದರಗಂಡ ಕಳ್ಳನೊಡನೆ ಹೇಳುವ ಹಾಗೆ ಈ ತಂದೆಯಾದ ಸಬ್ ಇನ್ ಸ್ಪೇಕ್ಟರರು ಹೊಟ್ಟೆಯ ಮಗನನ್ನು ಗದರಿಸಿದರು (ರಂಗರೋ. ೧೩೦). [ದರಗಂಡ ? + ಕಳ್ಳ$_1$]

ದರಗಾ, ದರಗ, ದರಗಾಹ, ದರ್ಗಾ (ನಾ). ಮುಸಲ್ಮಾನ ಸಂತರ ಸಮಾಧಿಯಿರುವ ಪವಿತ್ರಸ್ಥಳ: ಕೊಲ್ಲಾಪುರ ಗೆಝಟಿಯರ್ ಪ್ರಕಾರ ವಿಾರಾಸಾಹೇಬರ ದರಗಾ ೧೪೯೧ ರಲ್ಲಿ ಕಟ್ಟಲ್ಪಟ್ಟಿತು (ಶಕಚ. ೬೩೦); ಖಾಜಾ ಅಬ್ಬಾಸಪೀರನ ದರಗಾದಲ್ಲಿಯೂ, ಗೋರಿಗೆ, ರಾವಜೇಕಾಕಾ ಉರುಸಿನ ವೇಳೆಗೆ ಹರಿತ ವಸ್ತ್ರ ಪರಿಧಾನಮಾಡಿ (ದೀಪಹ. I, ೧೪೪). **ದರಗ:** ದರಗ (ಪ್ರಾಎರಿ. ೧೯೩೪, B. ೧೫೫ ; 1759). **ದರಗಾಹ:** ಮಾಂಸ್ಯವಾಗಿ ದರಗಾಹದ ಧರ್ಮಕ್ಕೆ (ಸೌಇಎ. ೧೯೩೪, ಸೇಲಂ. ೧೫೫-೨೦ ; 1759). **ದರ್ಗಾ:** ಅವರು ಖಡೇಬಜಾರವನ್ನು ಸುತ್ತಿ ದರ್ಗಾದ ಹಾದಿಯಲ್ಲಿರುವ ತಯಾರೀ ಅರಿವೆಗಳ ಅಂಗಡಿಗಳನ್ನು ದಾಟಿ . . . ಪಲ್ಲೆಯ ಪೇಟೆಗೆ ಬಂದರು (ರಕ್ತಧ್ವ. ೨೨); ಬೆಳಗಾವಿಯ ಕಿಲ್ಲೇದಾರನಾದ ಅಸದ ಖಾನನ ಗೋರಿಯು ಈ ದರ್ಗಾದಲ್ಲಿರುತ್ತದೆ (ಬೀಳ. ೭೦).

[←ಪಾರ. ಹಿಂ. ದರಗಾಹ್ ; ಮರಾ. ದರಗಾ, ದರ್ಗಾ]

ದರಗಾಹ 'ದರಗಾ' ನೋ.

ದರಗು$_1$ 'ತಲಗು' ನೋ.

ದರಗು$_2$ 'ತರಕು' ನೋ.

ದರಗುನಾಲಗೆ (ನಾ). ಒರಟಾದ ನಾಲಗೆ ; ನಯವಾಗಿರದ ಜಿಹ್ವೆ : ಕರು ಪುಳಕಿತವಾಗಿ ಅವರ ಕಿವಿಗಳನ್ನು ಕೆನ್ನೆಗಳನ್ನು ತನ್ನ ಹಿತವಾದ ದರಗು ನಾಲಗೆಯಿಂದ ನೆಕ್ಕಲು ಪ್ರಾರಂಭಿಸಿತು (ಸಂಸ್ಕಾರ. ೯೭).

[ದರಗು + ನಾಲಗೆ]

ದರಚಾಗಾ (ನಾ). ಮೊಕ್ಕಾಂ (?) : ತಾರೀಖು ೯ನೇ ಜೂನ್ ಸನ್ ೧೯೨೬ನೇ ಇಸವಿ ದರಚಾಗಾ ಬೆಂಗಳೂರು (ಗುರುದ. ೧೦). [?]

ದರಜವಾಬು (ನಾ). ಲಿಖಿತ ಜವಾಬು; ಬರೆದು ಕಳಿಸಿದ ಉತ್ತರ : ಬರದು ಕಳುಹಿದಲ್ಲಿ, ಅದಕ್ಕೆ ದರಜವಾಬಾಗಿ . . . ಬರದು ಕಳುಹಿದ ಕಾಗದದಲ್ಲಿ (ರಾಷೇಂದ್ರ. ೬೦) ; ಇದಕ್ಕೆ ಬದಲು ದರಜವಾಬು ಜ್ಯೇಷ್ಠ ಶು. ೩ರಲ್ಲು ಮಹಾರಾಜರವರು ಬರದ ಕಾಗದದ ವಿವರ (ರಾಷೇಂದ್ರ. ೧೪೯).

[←ಪಾರ. ದರ್ಜವಾಬ್]

ದರಜು 'ದರದಂ' ನೋ.

ದರಣ$_1$, **ದಣ್ಣ** (ನಾ). ಒಂದು ವರಹದ ಕಾಲು ಭಾಗ: ಅವರ ದಯವಾಡಿ ವರಹಕೆ ದರಣ ಪ್ರಕಾರ ಕೊಡುಯಂತ ದಯವಾಲಿಸಿ (ಎಳ. VIII, ಸಾಗರ. ೪೬-೪೪ ; 1648 ?) **ದಣ್ಣ** : ದಿನಕ್ಕೊಂದು ದಣ್ಣದ (ಒಂದು ರೂಪಾಯಿ) ಹುದ್ದೆಗಳು ಯಾವಾಗಲೂ ಶಿರವಾಗಿರುತ್ತಿದ್ದುವು (ಕಳುಮ. ೧೭೫). [<ಸಂ. ಧರಣ = ಹದಿನಾರು ಮಾಷಗಳ ತೂಕ]

ದರಣ$_2$ (ನಾ). ಸೀಳುವಿಕೆ ; ಒಡೆಯುವಿಕೆ ; ಹರಿಯುವಿಕೆ. [ಸಂ.]

ದರದಟ್ಟಿ (ನಾ). ೧. ಹೊಟ್ಟೆಗಿಲ್ಲದ ಗರ್ಹಿತ ಸ್ಥಿತಿ; ಕಡುದರಿದ್ರಾವಸ್ಥೆ : ಅಂದಿಗೆ ಆ ಬಟ್ಟೆ, ಇಂದಿಗೆ ಈ ಬಟ್ಟೆ, ಮುಂದಕ್ಕೆ ದರದಟ್ಟಿ ಇನ್ನೆಂದು ಹೊಟ್ಟೆ ತುಂಬ ಹಿಟ್ಟು ಹಾಕಿದ್ದೀಯೆ ? (ಮುಸುಗು. ೧೦೩). ೨. ನಿರ್ಗತಿಕ; ದರಿದ್ರ: ಅವನೊಬ್ಬ ದರದಟ್ಟಿ, ಅವನಿಗೆ ಹೆಣ್ಣು ಕೊಡೋದೆ ? (ರೂಢಿ).

[?]

ದರದರ$_1$ 'ದಬದಬ' ನೋ.

ದರದರ$_2$ (ಅ). ೧. ಒಂದೇ ಸಮನೆ ; ಏಕ ಪ್ರಕಾರವಾಗಿ: ಕಣ್ಣುಗಳಿಂದ ದರದರ ಧಾರೆ ಸುರಿಯುತ್ತದೆ (ಡೀವೀಡಾ. ೭). ೨. ವೇಗವೇಗನೆ ; ಸರಸರನೆ ; ಶೀಘ್ರವಾಗಿ : ಪೆಟ್ಟಿಗೆಗಳನ್ನು ದರದರ ಎಳೆದು ಸೆಕೆಂಡ್‌ಕ್ಲಾಸ್ ಗಾಡಿಯೊಂದರಲ್ಲಿ ದಬ್ಬಿದರು (ಸ್ವಾಮಿಸ್ಮೇ. ೫೧೫). [<ದಬದಬ]

ದರದರನೆ 'ದಬದಬನೆ' ನೋ.

ದರದಳಿತ (ಗು). ಸ್ವಲ್ಪ ಅರಳಿದ ; ನಸು ತೆರದ; ತುಸು ಬಿರಿದ; ಕೊಂಚ ವಿಕಸಿತವಾದ: ದರದಳಿತಕಮಲಕುಟ್ಮಳಪರಿಮಳವೆನಿಸಿರ್ದ ಸಹಜಮುಖ ಸೌರಭಮಂ (ಕಾದಂಪೂ. ೪೨೧) ; ಸುರಪತಿಜನಪತಿವದಮಂ ದರದಳಿತ ಲತಾಂತಮಾಳೆಯಿಂದರ್ಚಿಸಿದಂ (ಪುಪ್ಪಪು. ೧೨-೧೭೦) ; ದರದಳಿತಾಂಬು ಜಾನನದೊಳೊಪ್ಪುವ ಕಸ್ತೂರಿಬೊಟ್ಟಿನಂತೆ ಸಾರ್ದಿರಲಳಿತೊಟ್ಟ ಮುತ್ತುಗಳಿ ವೆಂಬನವೊಪ್ಪಿರೆ ಸೀಕರಾಳಿ . . . ಪೊಚ್ಚ ಪೊಸವೆಣ್ಣಲೆ ಸಿಂಗರವಾಂತು ತೋಱುದಳ್ (ರಾಜಶೇ. ೨-೬). [ದರ್ + ದಳಿತ (= ದಲಿತ)]

ದರದಿನ (ನಾ). ಪ್ರತಿದಿವಸ : ನಮ್ಮ ಲುಕಸಾನಿಯಾಗುವದು ಮುಂತಾದ ಪ್ರಕಾರದ ಟಪಕೆಗಳು ದರದಿನ ಪತ್ರದಲ್ಲಿ ಬರಿಯುತ್ತಾರೆ(ಮುಂಬವ್ಯಾ. ೨೩೧).

[ದರ್ + ದಿನ]

ದರಮು, ದರಜು, ದರ್ದು$_2$ (ನಾ). ೧. ಅವಸರ ; ಗರಜು ; ಅಗತ್ಯ ; ಅವಶ್ಯಕತೆ : ಏನ ಮಾಡತೀರಿ ತೊಗೊಂಡು ಮಾಡಿಕೊಂಡ ಗಂಡಗ ಸಿಕ್ಕಂಗ ಅನ್ನವರಿಗೆ ನಮ್ಮಂಥವರ ದರದ ಎಲ್ಲುದ, ಅನ್ನಬೇಕ ? (ಕಾಗಕ. ೧೦೭) ; ಪಂಚಭೂತಗಳು ವರದರಾಗಿರಬಹುದು. ಆದರೆ ನಮಗೆ ವರವನ್ನು ಕೇಳುವ ದರದು ಬೇಕಲ್ಲ (ಶಿಲ್ಪಾ. ೪) ; ದೇವರಾಣೆಗೂ ನಿಮ್ಮ ಚಂಡಾಲಮಿತ್ರನೇ ಅಲ್ಲವೇ ಈ ಕೆಲಸ ಮಾಡಿರೋನು ? ಇನ್ನು ಯಾರಿಗೆ ಹೀಗೆ ಮಾಡಬೇಕೂಂತ ದರದು ? (ಉಮಾಶಿ. ೧೨೭) ; ನನಗೇನು ಅಂಥ ದರದು (ಕಂದಕೋ. ೧೪೫). ೨. ಗಮನ ; ಎಚ್ಚರಿಕೆ ; ಯೋಚನೆ : "ದರದು – ಕಾಳಜಿ" (ಕಾನಕೋ. ೪). **ದರಜು** : ೨. ಅಪನವರ ಮಾತೆಂದರೆ, ಕಾಕಾಲಿವರಿಗೆ ಬ್ರಹ್ಮವಾಕ್ಯ. ಅದರ ಶ್ಯಾಮರಾಯನಿಗೆ ಅದರ ದರಜಿರಲಿಲ್ಲ(ದೀಪಹ. II, ೧೧೦). **ದರ್ದು**$_2$: ೧. ನಂಗೇನು ಗೊತ್ತು ಅದರ ದರ್ದು ? (ಮಲಿಮ. ೩೦೩).

[←ಪಾರ. ಹಿಂ. ದರ್ದ್; ಮರಾ. ದರದ್, ದರ್ದ]

ದರದುರ 'ಧರಧಂರ' ನೋ.

ದರದುಹುಂಡಿ (ನಾ). ಆಗತ್ಯವನ್ನು ಪೂರೈಸಲು ಕೊಟ್ಟ ಹುಂಡಿ: ಒಬ್ಬನ ದರದು ನಿಮಿತ್ತವಾಗಿ ಅವನಿಗೆ ಹಣ ದೊರಕಿಸಲು ಕೊಟ್ಟ ಹುಂಡಿ; ದರದುಹುಂಡಿ (Accommodation Bill. ಇಂಳಿ). [ದರದು + ಹಂಡಿ]

ದರನಿಮಾಲಿತ (ಗು). ನಸುಮುಗಿದ ; ಸ್ವಲ್ಪವುಚ್ಚಿದ : ಪಮರತಸೌಖ್ಯ ದೊಳ್ ಸತಿ ದಿಗಂಬರವೇಷವನಾಂತು ಮುಕ್ತಕೇಶವದೆಸೆಯಲ್ಲಿ ಕಣ್ ದರನಿವಾಲಿತವಾಗೆ . . . ಯೋಗಿನಿಯಂತಿರೊಪ್ಪಿದಳ್ (ಕಾವ್ಯಸಾ. ೬೬).

[ದರ್ + ನಿಮಾಲಿತ]

ದರನಿಮಾಲಿತಲೋಚನ (ನಾ). ಸ್ವಲ್ಪ ವುಚ್ಚಿದ ಕಣ್ಣು; ನಸು ಮುಗಿದ ಕಣ್ಣು : ತನ್ನ ಕಣ್ಗಳಸರೆದೆಱಿದು ದರನಿಮಾಲಿತಲೋಚನ ಕಮಲಾ ಕರಮರ್ಪಂತೆಯಿರ್ದ ಶಂತನುತನೂಜನ ಕರ್ಣಾಭ್ಯರ್ಣಮಂ ಪೊರ್ದಿ (ಗದಾಯು. ೫-೪೦ ವ). [ದರನಿಮಾಲಿತ + ಲೋಚನ]

ದರನಿಮಾಲಿತಾಂಬಕ (ನಾ). ನಸು ವುಚ್ಚಿದ ಕಣ್ಣುಗಳುಳ್ಳುದು : ಪರಮಯೋಗಿಯರ್ಪಂದದಿಂದಕಂಪಿತಶರೀರನಿರ್ದುದು ಜಲಾಶಯೋ ಪಾಂತದೊಳ್ ಬಕಂ ದರನಿಮಾಲಿತಾಂಬಕನಶೇಷ ದೊಪಾಶಯಂ (ಪಂಚಾಮೃ. ೭-೪೧). [ಸಂ. (ದರನಿಮಾಲಿತ + ಅಂಬಕ + –)]

ದರಪಣ (ನಾ). ಕನ್ನಡಿ ; ಮುಕುರ: ಕರದ ಕಂಕಣಕೊಡ್ಡಲೇಕೈ ದರಪಣಪ (ಪ್ರಹ್ಲಾಚ. ೧೦-೦೨). [<ಸಂ. ದರ್ಪಣ]

ದರಬಾರ 'ದರ್ಬಾರು' ನೋ.

ದರಬಾರಿ 'ದರ್ಬಾರಿ' ನೋ.

ದರಬಾರು 'ದರ್ಬಾರು' ನೋ.

ದರಬಾರುಖರ್ಚು (ನಾ). ಸಾರ್ವಜನಿಕ ಕಾರ್ಯಕರ್ತರಿಗೆ ಲಂಚವಾಗಿ ಕೊಟ್ಟ ಹಣ : (ಕ).

[ದರಬಾರು (<ದರ್ಬಾರು) + ಖರ್ಚು (<ಕರ್ಚು)]

ದರಬೇಸಿ 'ದರವೇಶಿ' ನೋ.

ದರಮಹಾ 'ದರಮಾಹೆ' ನೋ.

ದರಮಾಹೆ, ದರಮಹಾ (ನಾ). ೧. ಮಾಸಿಕ ವೇತನ; ತಿಂಗಳ ಸಂಬಳ: ನಮ್ಮ ಭಾಷೆಯಲ್ಲಿ ತೀರ ಹೊಂದಿಕೊಂಡು ಹೋದ . . . ಶಬ್ದಗಳೆಂದರೆ– ಕೀರಿ (ಕಚ್ಚರಿ)...ದರಮಾಹೆ ; ಬೇರೀಜ್ . . . ಶಿಕ್ಕಾ ಇತ್ಯಾದಿ (ಥಾಪಾಣ. ೦೬೬). **ದರಮಹಾ** : ೨. ಪ್ರತಿತಿಂಗಳಿನದು; ಪ್ರತಿ ಮಾಸಿಕದ್ದು : (ಕ). [←ಪಾರ. ದರಮಾಹ್; ಹಿಂ. ದರಮಾಹಾ]

ದರಲೆ, ದರಳೆ (ನಾ). (ಕರಾ) ತರಗೆಲೆ : ಮರದ ಹಸಿ ಅಡರುಗಳಿಂದ ಒಂದು ಗುಡಿಸುವ ಹಿಡಿ ಮಾಡಿ, ತರಗೆಲೆ ಗುಡಿಸಿದಳು. 'ಕೂತಲ್ಲೇ ಮೂರು ಬೀಳು ಹೆಡಗೆದರಲೆಯಾಯಿತು'ಎಂದು ಹಿಗ್ಗಿದಳು(ಮುರಮು. ೩೬). **ದರಳೆ** : ಸರಸರ ಎಂದು ಸದ್ದು ಹುಟ್ಟಿಸುವ ದರಳೆಯ ಮೇಲೆ ಮೆಲ್ಲನೆ ಹೆಜ್ಜೆಯಿಡುತ್ತಾ . . . ಮನೆಗೆ ಹೋದ (ದೀವಹಿಂ. ೧೧). 'ತರಗೆಲೆ' ಪರಾ. [<ತಲಗೆಲೆ]

ದರಲೆಹಕ್ಕಿ (ನಾ). ಒಂದು ಬಗೆಯ ಪಕ್ಷಿ : ದರಲೆಹಕ್ಕಿ, ಗಿಳಿ, ಕೋಗಿಲೆ, ಡೇಗೆ, ಮತ್ತೊಂದು ಎಂದು ಸಾವಿರ ಜಾತಿಗಳಿವೆ (ಸ್ವಪ್ನಹೊ. ೧೨).
[ದರಲೆ ? + ಹಕ್ಕಿ$_1$ (<ಪಕ್ಕಿ$_1$)]

ದರವಂದ 'ದಾರವಂದ' ನೋ.

ದರವಡೆ 'ದರೋಡೆ' ನೋ.

ದರವಡೆಖೋರ 'ದರೋಡೆಖೋರ' ನೋ.

ದರವಡೆಗಾರ 'ದರೋಡೆಕಾರ' ನೋ.

ದರವಾನ, ದರ್ವಾನ (ನಾ). ಬಾಗಿಲನ್ನು ಕಾಯುವ ಆಳು; ದ್ವಾರ ಪಾಲಕ : ಪಕ್ಕದಲ್ಲಿ ಹಿತ್ತಾಳೆಕಟ್ಟಿನ ಲಾಠಿಯನ್ನು ಹಿಡಿದು ದರವಾನನು ಹೋಗುತ್ತಿದ್ದನು (ನಿಬಂಧ. II, ೩೨) ; ಹೆಬ್ಬಾಗಿಲಿನ ಸಮೀಪದಲ್ಲಿ ಬೆಳ್ಳಿಯ ಬಿಲ್ಲೆ ಸೊಂಟಕ್ಕೆ ಸುತ್ತಿಕೊಂಡು ಒಬ್ಬ (ಸಿಪಾಯಿ) ದರವಾನನು ನಿಂತಿದ್ದನು (ವಿಧಿವೈ. ೩೪) ; ದರವಾನನೊಬ್ಬ – ನಮ್ಮ ಹಿಂದಕ್ಕೆ ಬಂದ (ಆಬೂಬ. ೯). **ದರ್ವಾನ :** ಥಿಯೇಟರಿನ ದರ್ವಾನನಿಗೂ ಸಮವಸ್ತ್ರ (ರೂಢಿ).
[←ಪಾರ. ಹಿಂ. ದರ್ಬಾನ್, ದರಬಾನ್]

ದರವಾರು (ನಾ). ಪೇಟೆಯ ಧಾರಣೆಯ ವಿವರಣೆ: (ಸ್ಯಾಂಡರ್).
[ದರ$_3$ + ವಾರು$_3$ (<ವಾರಿ$_3$)]

ದರವಿಕಸಿತ (ಗು).=ದರದಳಿತ: ದರವಿಕಸಿತಮಂ ರಜದೊಳ್ ಪೊರೆದಾತ್ಮಜ ಮುಖಸರೋಜಮಂ ಮೋಹರಸಂ ತೆರೆಮಸಗೆ ನೋಟ್ಟ ಜನನಿಯ ಕರಿಯಾಲಿಗಳೆಂಬ ತುಂಬಿಗಳ್ ಧನ್ಯಂಗಳ್ (ಮಲ್ಲಿಪು. ೩-೧೨೦).
[ದರ$_2$ + ವಿಕಸಿತ]

ದರವಿಚಳದಪಾಂಗ (ನಾ). ತಂಸು ಚಂಚಲವಾಗುವ ಕಡೆಗಣ್ಣು: ಸ್ಮರವಿಶಿಖನಿಷಂಗಂ ಸಾಶ್ರುಪಾತಾಂತರಂಗಂ ದರವಿಚಳದಪಾಂಗಂ ಮ್ಲಾನಮಾಯ್ತಾ ರಥಾಂಗಂ (ಚಂದ್ರಪು. ೮-೫).
[ಸಂ. (ದರ + ವಿಚಳತ್ + ಅಪಾಂಗ)]

ದರವೀಸ (ನಾ). ಸ್ವಲ್ಪವಾದುದು ; ಅತಿಕಡಿಮೆ ; ಕಿಂಚಿತ್ತು (?) : ಕಿಱುಸುಂಕಗರಡಮಂ ಬಣ್ಣಿಗೆಯಂ ದರವೀಸಮನಳಿಪಿಕೊಣ್ಡವ (ಬೊಂಕಶಾ. ೧೯೩೮, ಇಂಡಿ. ೩೫-೩೬ ; ?). 'ತರವೀಸ' ಪರಾ. [?]

ದರವುರ (ನಾ). ಸಾಮಾನ್ಯವಾದುದು ; ತುಚ್ಛವಾದುದು ; ಕ್ಷುಲ್ಲಕವಾದುದು : ದರವುರಮುಮಂಟಸುಂಟಿಯುಮರೆವೊರಕನುಮೆನಿಸಿ ತಱತಱಂ ನುಡಿದು ಸಭಾಂತರದೊಳ್ ರಂಜಿಪುದೆ ರಸಾಂತರಂಗಳಂ ಮುಟ್ಟೆ ನುಡಿದು ರಂಜಿಸವೇಡಾ (ಅಜಿಪು .೧-೮೮) ; ದರವುರಮಲ್ಲದ ರುಜೆ ತುಚ್ಛ ವೈದ್ಯರಿಂ ತೀರ್ದವುದೆ (ವರ್ಧಪು. ೧೨-೧೧) ; ಹರನೊಳ್ ತವನಿಧಿಯಂ ತಾಂ ದರವುರವಿಲ್ಲೆನಿಸಿ ಪಡೆದು ದೇಗುಲವಂ ಪುರಹರನ ಕೈಲಾಸದಂತಿರೆ ವಿರಚಿಸಿದ ಶಂಭುಭಕ್ತಿಧಾಮಂ ರಾಮಂ (ಎಇ. V, ೨೫೨-೯೯; ಸು. 1200).
ದರವುರಮಾಗು = ಕ್ಷೀಣವಾಗು ; ಕಡಿಮೆಯಾಗು : ದರವುರ [ಪಾಕಾಂ. ದುರದರ]ಮಾಗಿ ಪೋಕು ಮಟ್ಟಿ ಪರ್ವೆಳಸೆಲ್ಲಿಯುಮಾಗದು ... ಸಲೆ ದುಷ್ಟಮಕಾಲದೇಟ್ಗಿಯೊಳ್ (ಧರ್ಮಾಮೃ. ೧೪-೧೪೬). [?]

ದರವುರಂಗಾಣ್ (ಕ್ರಿ). ಸ್ವಲ್ಪವಾದರೂ ನೋಡು; ಕಿಂಚಿತ್ತಾದರೂ ಕಾಣು: ಮನವೊಲ್ದಾತನ ಗಾಡಿಯಂ ದರವುರಂಗಂಡಾಕೆಗಳ್ ಪೂವಿನಂಬಿನ ಕೋಳ್ಗಂ . . . ತಣ್ಬನಿಯೊಳ್ಕೋಡಿಸುತಿರ್ಪ ಬಿಜ್ಜಣಿಗೆಗಂ ಪಕ್ಕಾಗದೇಂ ಪೋಪರೇ (ಆದಿಪು. ೧-೭೫). [ದರವುರ + ಕಾಣ್]

ದರವುರಗಲಿ (ನಾ). ಸಾಮಾನ್ಯ ಶೂರ (?): ಆಗಳಾ ಕಳಕಳಕ್ಕಾ ಪೊಟಲ ನೆರೆದ ದರವುರಗಲಿಗಳುಂ ಮೆಯ್ಗಲಿಗಳುಂ ಭೀಮಸೇನನ ಭೀಮಾಕಾರ ಮುಮಂ ಉಲ್ಬಣಮಾಗೆ ಮುಳಿದು ತುಟಿಯೆ ಸತ್ತ ಪೆಣಂಗಳುಮಂ ಕಂಡು ಭಯಂಗೊಂಡು ತಮ್ಮೊಳಿಂತೆಂದರ್ (ನೇಮಿಪು. ೧೦-೦೦೧ ವ).
[ದರವುರ + ಕಲಿ$_2$]

ದರವುರವಿದ್ದೆ (ನಾ). ಕ್ಷುಲ್ಲಕ ವಿದ್ಯೆ; ಅಗ್ಗದ ಜ್ಞಾನ :ಪರಮಜಿನೋದಿತ ಮಲ್ಲದ ದರವುರವಿದ್ದೆಗಳನಱಿವವಂ ತೋಱಿದೊಡಚ್ಚರಿಯೆನ್ನನಿವೆಲ್ಲಂ ಡೊಂಬರ ವಿದ್ಯೆಗಳಿಂದೆ ಬಗೆವನುತ್ತಮಜೈನಂ (ಸಮಪ. ೧೨-೯೧).
[ದರವುರ + ವಿದ್ದೆ (<ಬಿಜ್ಜೆ$_2$)]

ದರವುರಿಗ (ನಾ). ಅಲ್ಪನಾದವನು ; ನಾಡಾಡಿ (?) : ಅಂತು ಮಟ್ಟಿ ಗಾಲದ ನಾಲ್ಕುತಿಂಗಳುಂ ದರವುರಿಗರಂತರವರಿಸದೆ ಮರವೊದ ಲೊಳಿರ್ದು (ಧರ್ಮಾಮೃ. ೧೧-೨೦೪). [ದರವುರ + – ಇಗ]

ದರವೇಶಿ, ದರಬೇಸಿ, ದರವೇಸಿ, ದರ್ವೇಸಿ (ನಾ). ೧. ಮುಸಲ್ಮಾನ ಸಾಧು; ಫಕೀರ: ಇಂತು ಜಸವಡೆದಿರಲ್ಕೋರ್ವ ದರವೇಶಿ ಮೀನಂ ತಂದು (ಗುರುಚಾ. ೧೧-೧೨) ; ಇಲ್ಲಿ ಇಂಡಿಯಾದೇಶದ ದರವೇಶಿಗಳು . . . ನೆಲೆಸಿದ್ದಾರೆ (ಪ್ರವಾಇ. II, ೧೮೫). ೨. ದರಿದ್ರನಾದವನು ; ಬಡವ : ಇವನಾರೊ ಸಂನ್ಯಾಸಿ, ಅತ್ತೊಬ್ಬ ಬಿಕನಾಸಿ ಇಲ್ಲೊಬ್ಬ ದರವೇಶಿ ನರಳುತಿಹನು (ಗಂಗಾತ. ೬೧-೨). **ದರಬೇಸಿ :** ೧. ನೀವು ದರಬೇಸಿಗಳಂತೆ ಸಮಾಜದಿಂದ ದೂರವಾಗಿರಬಾರದು (ಆಕ್ಕರ. ೧೩೧). **ದರವೇಸಿ :** ೧. ಜೋಗಿ ಜಂಗಮ ದರವೇಸಿಗಳಿಗೆ . . . ಹೆಡಗೆ ಹೆಡಗೆಯೊಳನ್ನವ ನೀವ ರಾಗದ ಭವನವೊಪ್ಪಿದುವು (ಕಂನವಿ. ೨೦-೪೭). ೨. ಕೆಡ್ಡಾ ಶಾಮೈಂ ಗಾರ್ಯರ ಕಾಲವನ್ನು ಮನಸ್ಸಿನಲ್ಲಿಯೇ ಮೆಚ್ಚುತ್ತಿದ್ದ ನಾನು ಈ ದರವೇಸಿಯು ಹೊಗಳಿದರೆ ಅದಕ್ಕೆ ಸಮ್ಮತಿಯ ರುಜು ಹಾಕಿಬಿಡುವಂತಿರ ಲಿಲ್ಲ (ಶ್ರೀಕಥ. ೬೯) ; ಒಳ್ಳೆಯ ಅಡಕೆಗೆ ಎಲ್ಲಿತ್ತು ತರಗೆಲೆ; ನೆಲ್ಲಿಕಾಯಂತ ಬಟವಾನ – ಹುಡುಗಿಗೆ ಎಲ್ಲಿದ್ಯೋ ಜೋಗಿ ದರವೇಸಿ (ಹಳ್ಳಿಚಾ. ೬೧). **ದರ್ವೇಸಿ :** ೧. ಈ ಕನಸಿನಲ್ಲಿ ಅಬ್ದುಲಾಯೆಂಬ ಹೆಸರಾದ ದರ್ವೇಸಿಯು ಬರಲು, ಬಾಬರನು ಅವನಿಗೆ ಆತಿಥ್ಯ ಮಾಡಿ ಅವನನ್ನು ಕುಳ್ಳಿರಿಸಿಕೊಂಡನು (ಮೋಬಾದ. ೭). (ಗು). ೩. ದರಿದ್ರ ; ಕ್ಷುಲ್ಲಕ : ಈಗ ಅಲ್ಲಿ ಚರ್ಮ ಮಾರುತ್ತಾಳಂತೆ. ದರ್ವೇಸಿ ಹೆಂಗ್ಸು (ಹೊಸಕ್ಷಿ. ೫೯); "ಇಂಥಾ ದರ್ವೇಸಿ ಮನುಷ್ಯನನ್ನು ನಾ ಜನ್ಮದಲ್ಲಿ ನೋಡಲಿಲ್ಲ" ಎಂದರು (ಮೂರುದಾ. ೬೪).
[←ಪಾರ. ದರವೇಶ್, ದರ್ವೇಶ್; ಹಿಂ. ದರವೇಶ್, ದರ್ವೇಸ್; ಮರಾ. ದರವೇಶ್. ದರವೇಶೀ]

ದರವೇಸಿ 'ದರವೇಶಿ' ನೋ.

ದರಶನ, ದರಿಶನ (ನಾ). ಹವಳದ ಮಣಿ, ಬಿಳೀಮಣಿ ಮುಂತಾದ ಮಣಿಗಳ ಸರ : ದರಶನಕಟ್ಟುವುದು – ಜೋಗಿತ್ತೀರ ಹಾಗೆ ಬಿಳೀಮಣಿ, ಹವಳದ ಮಣಿಸರ ಹಾಕಿಕೊಳ್ಳುವುದು (ಚಿತ್ರಪಾ. ೨ ಅನುಬಂಧ). **ದರಿಶನ :** ದರಿಶನ–ಚಿಪ್ಪುಗಳಿಂದ ಕೂಡಿದ ಕೊರಳಿನ ಸರ (ಸ್ಯಾಂಡರ್). [?]

ದರಸಾರೆ (ನಾ). ಪ್ರತಿಸಲ ; ಪ್ರತಿಯೊಂದು ಬಾರಿ: ಹೋಗು ಮುಂದೆ ದರಸಾರೆ ನನಗ ಹೇಳಿ ಹೋಗುತ್ತಿದ್ದ (ಮುಗಿಮ. ೧೩೯).
[ದರ$_4$ + ಸಾರೆ$_2$ (<ಸಾರಿ$_1$)]

ದರಸಿ (ನಾ). ಔಷಧಿಗಾಗಿ ಬಳಸುವ ಗಿಡಮೂಲಿಕೆಗಳಲ್ಲಿ ಒಂದು ; ಒಂದು ಬಗೆಯ ಕಹಿಯಾದ ಮೂಲಿಕೆ : "ಯವತಿಕ್ತಾ – ದರಸಿ, ಕಾಡುವಿಟ್ಟಿ" (ಓಷಧಿ. ೧೩೧) ; ದರಸಿಗೆ ಸೆಳ್ಳನಾರಮರ್ದುವಳ್ಳಿಗೆ ಬಾಟ್ಟಿ(ಗೆ)ಯ ಸೊಪ್ಪು ಕಳ್ಳಿಗಾವರೆ ಲಶು ನದ್ವಯಕ್ಕವರೆ . . . ಪಥ್ಯ ಲವಣಕ್ಕೆ ತೊಳಂಚೆ ವಿಷಾಪಹಾರಕಂ (ಲೋಕೋಪ. ೮-೨೭); ನೀಂ ಬೇವಾದೊಡೆ ನಿನ್ನ ಕುಟುಂಬಿನಿಯುಂ ಕಯ್ಪೆಸೊರೆಯ ಕುಡಿಯೇಂ ಮಿಡಿಯೇನೆಂಬಂತೆ ದರಸಿಯಾದಳಿದೇಂ ಬಳ್ವಳಬಳೆದ ಬಂಧುತನಮಿನಿ ದಾಯ್ತೋ (ಸುಕುಮಾ ೪-೨೮) ; ಕುರುಪತಿ ನಿಮ್ಮಜ್ಜರ ನುಡಿ ದರಸಿಯ ಕಯ್ಪೆಯ ವೊಲಕ್ಕೆ ಹಿತಕರಂ (ನೇಮಿಪು. ೧೦-೧೦). [ದೇ.೫ ತುಳು.ದರಸಿಗೆ]

ದರಸ್ಮಿತ (ನಾ). ನಸುನಗೆ ; ಕಿರುನಗೆ ; ಮುಗುಳುನಗೆ ; ಮಂದಹಾಸ : ಅನಿಮಿತ್ತದರಸ್ಮಿತದಿಂದನಕ್ಷರಾಳಾಪದಿಂದಸಂಕೇತವಿಳೋಕನದಿಂದ ಕಾರಣಾ

ನಂದನದಿಂದುತ್ತಾನಶಯನದಿಂ ಹರಿಯಸೆದಂ (ಜಗವಿ. ೩-೩೯) ; ಬರುತಿರೆ ಮುಂದೆ ಪಟ್ಟಣದೆರಳ್ದೆಸೆಯೊಪ್ಪುವ ರಾಜವೀಥಿಯೊಳ್ ನೆರೆದ ಶಶಾಂಕವಕ್ತ್ರೆಯರ ಕಣ್ಗಳ ಕಾಂತಿ . . . ದರಸ್ಮಿತಕಾಂತಿಯೆಂಬ ವಿಸ್ತರಿತ ಸುಖಾಬ್ಧಿಯಂ ಸುಖದೊಳೀಸುತೆ ಬಂದನಗೇಂದ್ರವಲ್ಲಭಂ (ಗಿರಿಕ. ೩-೧೧೪). ೨. ನಸುನಗೆಯಿಂದ ಕೂಡಿದವನು ; ಮಂದಹಾಸದಿಂದ ಕೂಡಿದವನು : ದೇಶಾಧೀಶ ತನೂಭವರ್ ಸೆಡೆವುದಂ ಸಾಕೇತಸಿಂಹಾಸನಾಧೀಶಂ ಕಂಡು ದರಸ್ಮಿತಂ ದಶರಥಂ ಭೂ ವಲ್ಲರೀ ಪಲ್ಲವಾದೇಶಂ ನೋಡೆ (ಪಂರಾಮಾ. ೩-೮೩). [ದರ + ಸ್ಮಿತ]

ದರಸ್ಮೇರ (ನಾ). = ದರಸ್ಮಿತ ೧ : ವದನೇಂದುದ್ಯುತಿ ಪೊಣ್ಮೆ . . . ಸಾರ್ತಂದಳಿಂದೀವರಾಕ್ಷಿ ದರಸ್ಮೇರಮರೀಚಿ ಸೂಸೆ ಸುಧೆಯಂ ತನ್ಮಂದಿರ ಪ್ರಾಂತಮಂ (ರಾಜಶೇ. ೮-೮೨). [ದರ + ಸ್ಮೇರ]

ದರಹಮೇಷ (ಅ). ಯಾವಾಗಲೂ ; ಎಲ್ಲಾ ಕಾಲದಲ್ಲಿಯೂ : ಹಿಂದೂಸ್ಥಾನದಲ್ಲಿಂದ ಸಾವಿರಾರು ಕಿಲೋಮೀಟರ್‌ಗಳಿಂದ ದರಹಮೇಷ ಈ ಮೂಲವು ಬರುತ್ತದೆ (ಮುಂಬಪ್ರಾ. ೫೨). [ದರ + ಹವೇಷ]

ದರಹಸ (ನಾ). = ದರಸ್ಮಿತ ೧ : ಕರುಣಾಮೃತರಸದೋಕುಳಿಯಂವೆಂದೆನೆ ಮೆರೆಯ ದರಹಸಪ್ರಭೆ ಪದೆಪಿಂ ಪರಿದೊಲ್ದು ನಿಂದು ಮುಂಗಡೆ ಸಿರಿಸತಿ ನಿನ್ನಿಪ್ಪವಮಾವುದದನೊರೆಯೆಂದಳ್ (ಚಂದ್ರಪ್ರ. ೧೬-೧೬೬).

[ದರ + ಹಸ]

ದರಹಸನ (ನಾ). = ದರಸ್ಮಿತ ೧ : ಅಲಿಕಾಭಿಲಾಷಿತ್ವಾತಿಸಂಧಾನಪರತ್ವ ಪ್ರವೃದ್ಧರಾಗ ಪರಾಂಗನಾ ದರಹಸನಾದಿಗಳ್ ಸ್ತ್ರೀವೇದನೀಯದ ಅಸ್ರವಂಗಳ್ (ತತ್ತ್ವಪ್ರ. ೩೬೨). [ದರ + ಹಸನ]

ದರಹಸಿತ (ಗು). ೧. ನಸು ನಗೆಯ ; ಕಿರುನಗೆಯ ; ಮಂದಹಾಸದ : ಅಂಬಿಕೆಯ ಸೂಬಾಯ್ತೆಯಪ್ಪಾಕೆ ದರಹಸಿತವದನಾರವಿಂದೆಯಾಗಿ ಬರವಂ ಕೈಕೊಂಡಳ್ (ಪಂಚಭಾ. ೦-೮೩ ವ) ; ಮರುನ್ನಂದನಂ ದರಹಸಿತವದನಾರವಿಂದನಾಗಿ (ಗದಾಯು. ೦-೩೮ ವ) ; ನಸು ಬಿರಿದ ಪರಿಪಕ್ವದಾಡಿಮವಸರದೊಳಗರವಟ್ಟಗೆಯ ದರಹಸಿತ ಪಂಕಜಗರ್ಭಿತ ಮಕರಂದದ ತಟಾಕದಲ್ಲಿ . . . ಧೃವನೆಸಗಿಯುವವನವೆಸೆದುದೈ ಧಾರ್ಮಿಕನವೊಲು (ಕುವಾ.ಉ. ೭-೩೪). (ನಾ). ೨. ಮೆಲ್ನಗೆ ; ಮಂದಹಾಸ: ಪರುಷಾಳಾಪಮುಮಿತಿ ನಿಮ್ಮುರವೀಕ್ಷಣಮುಖವಿಕಾರಮುಂ ಮಱಸಿರೆಯುಂ ತರಳಾಪಾಂಗ ಮುಮಾಕೆಯ ದರಹಸಿತಮುಮಱಿಯೆ ಪೇಟ್ಗುದೆ(ಮೆ)ಱಿಕಮನೆರ್ದೆಯೊಳ್ (ಕವಿರಾ. ೩-೧೦೯) ; ಉದ್ಯತ್ಪರಿಮಳಮುಖಿಸರಸಿಜದೊಳ್ ದರಹಸಿತಂ ನೆಗಟ್ವಿನಂ ತೊದಳ್ನುಡಿ ನುಡಿದಂ (ಆದಿಪು. ೮-೩) ; ಶ್ರೀಮತ್ಸುಧರ್ಮ ಮುನಿಪಸ್ವಾಮಿ ... ದರಹಸಿತದಿನಂದಾ ಮುನಿಗೆಂದಂ (ಸುಳುಮಾ. ೪-೦).

[ದರ + ಹಸಿತ]

ದರಹಸಿತಮುಖ (ನಾ). ಮುಗುಳಿನಗೆಯಿಂದ ಕೂಡಿದ ಮುಖ ; ಹಸನ್ಮುಖ : ದರಹಸಿತಮುಖವಲರಿ ನೋಡುತ್ತಿರೆ ತದಾಸ್ಥಾನದೊಳಿ ನಲಿನಲಿದುರುತರ ಪ್ರಿಯಪರವಶದಿ ತನ್ನಂ ಮರೆದು ಮರೆದು (ಬಸಪು. ೬-೭೭) ; ಶರವ ಸಿರಿಹಸ್ತದಲ್ಲಿ ಮೆಲ್ಲನೆ ಬರಸೆಳೆದು ಬಿಗಿಯಪ್ಪಿ ನುಡಿದನು ದರಹಸಿತಮುಖದಿಂದ [ಪಾಣಾಂ. ವದನದಲಿ, ಮುಖನಾಗಿ] ನಿಜಶರಣಂಗೆ ವಿನಯದಲಿ (ತೊರಣಾ. ೬-೫೩-೦೦). [ದರಹಸಿತ + ಮುಖ]

ದರಹಸಿತಮುಖಿ (ನಾ). ಮಂದಹಾಸದ ಮುಖವುಳ್ಳವನು; ಹಸನ್ಮುಖಿ : ದಾಶರಥಿ ತಾನಿನಿತು ನಾನಂ ತಮ್ಮನಂ ನೋಡಿ ದರಹಸಿತಮುಖಿಯಾಗಿ ಸುಯ್ದು ಧ್ಯಾನಸ್ಥನಾದಂ (ಶ್ರೀರಾಮಾ. ೨೮೭-೬೨).

[ಸಂ. ದರಹಸಿತಮುಖಿನ್]

ದರಹಾಸ (ನಾ). = ದರಹಸಿತ ೨ : ದರಹಾಸಾಮೃತವಾರಿ ಮಜ್ಜನಜಲಂ ದೇಹಪ್ರಭಾಜಾಲಮಂಬರಶೋಭಾವಹಂ (ಅಜಿಪು. ೨-೪೨) ; ಓಲಗಕ್ಕೆ ವರ್ಪಲಘುನಿತಂಬಿಯರ್ ಸುರಪುರಂದ್ರಿಯರೆತ್ತಣನೆಂದು ನಿಟ್ಟಿಪಾಕುಲತೆಯನೊಂದೆ ಕಂಡು ದಿವಿಜಂ ತಳಿವಂ ದರಹಾಸಲಕ್ಷ್ಮಿಯಂ (ಕಂದ್ರಪು. ೪-೭೪) ; ಇಚ್ಛೆ ಯಾವುದು ಬೇಡು ನೀನೆನೆ ಅಚ್ಚುಕದ ದರಹಾಸಲಕ್ಷ್ಮಿ ಮುಖಾಬ್ಜದೊಳು ಮೊಳೆಯೆ ಪೆಚ್ಚಿ ಬಿನ್ನೈಸಿದನೆಮಗೆ (ಬಸಪು. ೩-೭೩).

[ದರ + ಹಾಸ]

ದರಹುಣಿಸೆ (ನಾ). ಒಂದು ಬಗೆಯ ಹುಣಿಸೆ (?) : ಹೊಲದ ಬರಬನ ಮೇಲೆ ದರಹುಣಿಸೆಯ ಸರಿತದಲು ಆ ಮಾರದ ಮೇಲೆ ಅದಕ್ಕೆ ಮೂಡಲು . . . ಸಲುವ ಸೀಮೆಯಷ್ಟನೂ ನೀವು ಕಟುವ ಕೆಜಿಯ ಕೆಳಯಂಕೆ ಸೀವಯನೂ ಮಾಡಿಕೊಟು (ಎಕ. X, ಮುಳಬಾ. ೬-೬ ; 1416).

[ದರ + ಹುಣಿಸೆ (<ಪುಳಸ)]

ದರಳೆ ' ರಲೆ' ನೋ.

ದರಾಂಬ (ನಾ). ಒಂದು ಬಗೆಯ ಮಂರ : ಅರಸಿನಗುರ್ಜ (ದರಾಂಬ).—ಮಧ್ಯಮ ಆಕಾರದ್ದು . . . ಇದರ ಅಂಟಿನಿಂದ ಹುಟ್ಟುವ ರೇವಾಚಿನ್ನಿಯೆಂಬ ಹಳದೀ ಬಣ್ಣದ ವ್ಯಾಪಾರವು ಬಹಳ ನಡಿಯುತ್ತದೆ (ಕಫಾಗ. ೬೫).

[?]

ದರಿ (ನಾ). ೧. ಆಳವಾದ ಕಮ್ಮರಿ; ಕಂದರ; ಕೊಳ್ಳ: "ದರೀ, ಕಂದರಃ-ಈ ೨ ದರಿಯ ಪೆಸರು" (ನಾಚರಾ. ೧೦೪); "ಕಂದರಮೆನಲು ದರಿಯಕ್ಕುಂ" (ಮಂಗರಾ. ೩೦-೩); ಕುಮಾರನಿಂದಾರೂಢಮಪ್ಪ ದುಷ್ಪಾಶ್ವಂ ಕುಮಾರನಂ ಕೊಂಡು ಮನೋವೇಗದಿಂ ಗಿರಿವನದರಿನದೀಪ್ರದೇಶಂಗಳೊಳ್ . . . ಪರಿಯುತ್ತಿರ್ದುದು (ವಡ್ಡಾಂರಾ. ೫೬-೭) ; ಅತ್ತ ಪುಲಿಯಿತ್ತ ದರಿಯೆಂದತ್ತಿತ್ತಡಿಯಿಡದೆ ಲಕ್ಷ್ಮಿ ತಳವೆಳಗಾದಳ್ (ಗದಾಯು. ೯-೧೬) ; ಗಿರಿದರಿಗಳ ವನದೊಳ್ ಬೇಡರ ಬಸಿಱಿಂಗಳ್ ಬಂದು ಪಾಪಮಂ ಸಾಲ್ವನಿತಂ ನೆರೆಪಿ ಕಡೆಗಾಲದೊಳ್ ವನಚರರ್ಕಳಂದೊಡನೆ ಸತ್ತು ಪುಲ್ಲೆಗಳಾದರ್ (ಪಂರಾಮಾ. ೦೫-೪೦) ; ದರಿಗಳೊಳು ದರ್ವೀಕರವಳಿಯಾರವಣಿಸಿದರೆ ಬಲ್ಲುದೇ ಕುಲಗಿರಿ (ಕುವಾ.ಕ್ರೌ. ೦೬-೪೧) ; ಸರುಗಳಿಂದರಿಗಳಿಂ ಹಳ್ಳದಿಂ ಕೊಳ್ಳದಿಂ . . . ಗಜರ್ವ ಮರುಳ್ಗಳಿಂ ಶಾಕಿನಿಯರಿಂ ಡಾಕಿನಿಯರಿಂದಮಾ ಪಥ ಬೆದಱಿಸುವುದು (ಚಿಬಪು. ೫೬-೨೩) ; ದರಿಯಿರದೆ ಗಿರಿಯಿಲ್ಲ, ನೆರಳಿರದೆ ಬೆಳಕಿಲ್ಲ ಮರಣವಿಲ್ಲದೆ ಜನನಜೀವನಗಳಿಲ್ಲ (ಮಂಳುಕ. ೨೯೩); ಇಂದ್ರಧನು ತಾ ಕುಸುಮಿಸಿದವೊಲು ರಂಗುಗೊಳುತಿವೆ ದರಿಗಳು (ಚಿಂತನ. ೪೮-೪). ೨. ಡೊಗರು ; ಬಿರುಕು ; ಕುಳಿ. 'ದರಿಗೆಡಹು' ಪರಾ. ೩. ಗವಿ ; ಗಂಹೆ : "ಕಂದರಂ, ಕಂದರಾ, ದರೀ-ಈ ೩ ದರಿ" (ಹಲಾಯು. ೨೪-೧೩) ; ವಿದಳತ್ಕುಂದಶಶಾಂಕಶಂಖ ಧವಳಂ ಗಂಧೇಭದಾನಾಂಬು ಪೂರ್ಣದರೀಸುಂದರ ಕಂದರಂ (ಪಂಚಭಾ. ೬-೬೨) ; ಮೇದಿನಿಯನೆತ್ತಿದಾದಿವರಾಹನಂತೆ ದರಿಗಳಂ ಕೋಡೊಳ್ ಕುಕ್ಕಿಯೆತ್ತಿ ಬಿದಿರ್ದಿಡಾಡುತ್ತಿರ್ದು (ಪಂಚತಂ. ೪೬-೧) ; ಶೂಕರಾದ್ರಿಯ ನಿಖರದಲ್ಲಿ ದರಿಯ ಬಾಗಿಲ ಮುಂದೆ ತಪಮಂ ಧರಿಸಿ ಮಂತ್ರದ ಜಪವ ಮಾಡುವ ಪರಮತರುಣಿಯ . . . ಕಂಡು ಬೆಱಗಾಗಿ (ಜ್ಞಾನಚಂ. ೨-೨). [ಸಂ.]

ದರಿಕಂದ (ನಾ). ಔಷಧಿಗಾಗಿ ಬಳಸುವ ಒಂದು ವಿಧವಾದ ಸಸ್ಯ : "ಕಂದಾರಃ—ಮಲೆಸೌತೆ, ದರಿಕಂದ, ರಕ್ತಪಿಂಡಾಲು" (ಓಷಧಿ. ೨೦).

[?]

ದರಿಗೆಡಹು (ಕ್ರಿ). ೧. ಕೊಳ್ಳದಲ್ಲಿ ನೂಕು : ನರಕದಲಿ ದರಿಗೆಡಹಿ ಬಾಯೊಳಗೆಜ್ಜಿವರಗನು ಕರಗಿಯೆದೆಯನು ಕೆರಹುಗಾಲೊಳು ಮೆಟ್ಟಿ ನಿಂದು (ನಿಢಾಗ. ೫-೧೧-೬೫). ೨. ಕುಳಿಯಾಗುವಂತೆ ಮಾಡಂ : ಗುಳಿಬೀಳಿಸು : ಪುಷ್ಪಿಯ ಕೋಲಿಂ ಭಂಗಾರಿಗಳನಿಱಿದೊಡೆವುತ್ತುಂ ಜಗಲಿಯಂ ದರಿಗೆಡಹುತುಂ ಮಂಗಳವೆಲ್ಲವನಮಂಗಳವಂ ಮಾಡುತ್ತಿರಲ್ (ನಂಬಿರ. ೬-೬೩). [ದರಿ + ಕೆಡಹು (<ಕೆಡವು)]

ದರಿಗೊಳ್ (ಕ್ರಿ). ೧. ಬರಸಕುಹೊಂದು ; ಕೊರಕಲು ಬೀಳು : ಪಳಿಕಿನ ಶಿಲಾಪಟ್ಟಂ ಪ್ರಸ್ಥಾನದೊಳ್ ವಿಜಯದ್ವಿಪಾವಳಿಯ ದರಿಗೊಂಡುದ್ದೇಶಂ ಚಕ್ರವರ್ತಿಯ ವಾಮದಗ್ಗಳದ ಸಿರಿಯಂ ಪೋಲ್ವನ್ನಂ ತದ್ದ್ವಿಪಾಳಿ ದಿಗಂತದೊಳ್ ತಳೆದುದು ಜಯಸ್ತಂಭಶ್ರೀಯಂ ತ್ರಿಕೂಟಮಹೀಧರಂ (ಶಾಂತಿಪು. ೦೦-೦೮). ೨. (ಆಲಂ) ದಂಡೆಯಂನ್ನು ಅನುಸರಿಸು ; ದಡ ಸೇರು : ದರಿಗೊಂಡೀಡಿಱಿದಾಡುತುಂ ಕೊಣಕುತುಂ (ಅಗವಿ. ೪-೨೫).

[ದರಿ + ಕೊಳ್[1]]

ದರಿತ (ಗು). ೧. ಹರಿದ ; ಸೀಳಿದ ; ವಿಭಾಗವಾದ. ೨. ಭಯಗೊಂಡಿರುವ ; ಹೆದರಿರಂವ. (ನಾ). ೩. ಪುಕ್ಕಲ ; ಹೇಡಿ ; ಹೆದರಿದವನು : "ದರಿತಃ, ಚಕಿತಃ, ಭೀತಃ . . . ಶಂಕಿತಃ –ಈ ೬ ವ(ಹ)ಂದೆ" (ಹಲಾಯು. ೫೮-೧೯) ; "ಭೀರು ಭೀತಂ ಹಂದೆ ದರಿತನಾ ಕಾತರಂ ತ್ರಸ್ತನಾ ಚಕಿತನೆನೆ ಹೇಡಿಗಭಧಾನವುಕ್ಕುಂ" (ಮುಂಗರಾ. ೬೯-೦೨). [ಸಂ.]

ದರಿದ್ರ (ಗು). ೧. ಹಾಳಾದ ; ಹೀನವಾದ. 'ದರಿದ್ರಕೆಲಸ' ಪರಾ. (ನಾ). ೨. ಬಡವ; ಬಡತನದಲ್ಲಿರುವವನು; ಹಣದ ಕೊರತೆಯುಳ್ಳವನು ; ಧನಹೀನ : "ಕ್ಷೀದ್ರಃ, ದರಿದ್ರಃ, ಅಕಿಂಚನಃ, ದುರ್ವಿಧಃ, ದುಸ್ಥಃ,ದುರ್ಗತಃ – ಈ ೬ ಬಡವಂ" (ಹಲಾಯು. ೫೭-೦೯) ; "ದುಸ್ಥರನಕಿಂಚನಂ ದುರ್ವಿಧಂ ದುರ್ಗತಂ ದರಿದ್ರಂ ಬಡವನೆಂದೆನಿಕ್ಕುಂ" (ಮುಂಗರಾ. ೬೮-೯) ; ಅರಿ ನೀಚರ್ಕ್ಷದೊಳೊಂದು ನಿಂದೊಡೆ ದರಿದ್ರಂ (ಜಾತಕ. ೦೫-೯) ; ಇಂತಹ ಎಷ್ಟು ಜನ ಶ್ರೀಮಂತರು, ನನ್ನಂತಹ ದರಿದ್ರರ ಹೊಂಗನಸನ್ನು ಹೊಡೆದು ಪುಡಿ ಪುಡಿ ಮಾಡಿಲ್ಲ ? (ನಡಡಾ. II, ೯೧೬). ೩. ಬಡತನ ; ಹೀನಸ್ಥಿತಿ ; ದಾರಿದ್ರ್ಯ : ಕನಕದ ಕೊನರಂ ತಾಳಿಸಿ ತಿನೆ . . . ತನುಗೇಱಿದ ವಿಷಮಾಗಳ್ ಕನಕದ ದೆಸೆಯಿಂ ದರಿದ್ರ ಮುಟ್ಟಿವಂತಪ್ಪಿಗುಂ (ಪಮುದ. ೧೨-೨೩) ; ದೈವದ ದಯೆ ಇದ್ದವಗೆ ದರಿದ್ರವಿಲ್ಲ (ಗಾಡ). ೪. ಅದೃಷ್ಟಹೀನ : ತೆಗೆಯಬಹುದೆ ಕಡವರವು ದರಿದ್ರಂಗೆ (ಬಸವ. ೨೬೭). ೫. ಬರ; ಕೊರತೆ: ಅಲ್ಲೇನು ಕೆಲಸಕ್ಕೆ ದರಿದ್ರ (ಮುನಿವಾ. ೧೫೬) ; ಸಮುದ್ರದ ನಂಟು ಉಪ್ಪಿಗೆ ದರಿದ್ರ (ಗಾಡ).

ದರಿದ್ರ ನಾರಾಯಣ = ದರಿದ್ರರೂಪದ ನಾರಾಯಣ ; ℙ ದರಿದ್ರ ಸೇವೆಯು ದೇವರ ಸೇವೆಯಂತೆ ಪವಿತ್ರವೆಂಬ ಭಾವನೆಯಿಂದ ಪ್ರಯೋಗವಾಗುವ ಪದ: ಬೋಲಷವಿಕರಂ ರಾಜ್ಯದ ಸರ್ವಾಧಿಕಾರವನ್ನು ನಿರ್ಗತಿಕರಾರ್ಮಿಕಶ್ರೇಣಿಯವರಿಗೆ ವಿಾಸಲಾಗಿಡಬೇಕೆಂದು ಹೇಳುವ ಮಾತು ಭಾಗವತರ ದರಿದ್ರನಾರಾಯಣ ಸಾಯುಜ್ಯವನ್ನು ಹೋಲುತ್ತದೆ (ಭಾರದ. ೩೬೫).

[ಸಂ.]

ದರಿದ್ರತನ (ನಾ). ಬಡತನ ; ದಾರಿದ್ರ್ಯ : ಎಷ್ಟು ಕೊಟ್ಟರೂ ಅವನ ದರಿದ್ರತನ ಹರಿಯಲಿಲ್ಲ (ಕೂಡಿ). [ದರಿದ್ರ + – ತನ]

ದರಿದ್ರತೆ (ನಾ). = ದರಿದ್ರತನ : ಒಂದಿದ ತಗುಳ್ದು ತಳ್ತು ಪತ್ತಿದ ರುಜೆ ಪೆಚ್ಚಿ ಸಾರ್ಚ್ಚಿದ ದರಿದ್ರತೆ ಬಟ್ಟೆಯೊಳಾದ ಸೇದೆ ಪಿಂಗಿದವುದು (ಎಕ. VIII, ನಗರ. ೪೮-೩೦ ; 1062) ; ನಿಷ್ಕಾರಮಪ್ಪ ದರಿದ್ರತೆ ಪೊರ್ದಿರೆ ಕೂಟ್ಟಂ ಸಿರಿಗಮಂದು ತಾಂ ಗೆಂಟಾದರ್ (ಧರ್ಮಾಮೃ. ೮-೦೫೯); ಸಿರಿಗೆ ದರಿದ್ರತೆ ಬಾಟ್ಕಿಗೆ ಮರಣಂ ಜರೆ ಯೌವನಕ್ಕಮಭಘಾತವೆನುತ್ತಿರೆ ಕಂಡು (ಡಂದ್ರಪು. ೨-೩೭) ; ಇನಿತು ಲಿಂಗಸದರ್ಥನಾಗಿಯುಂ ಘನ ದರಿದ್ರತೆ ಯಾದುದಯ್ಯೋ ಮನೆಯೊಳಗೆ ನೋಡಲು ತವುಡು ನೊಣವಿಂಗೆಱಗಲಿಲ್ಲ (ಬಸವ. ೨೩-೬). [ಸಂ. ದರಿದ್ರತಾ]

ದರಿದ್ರತ್ವ (ನಾ). = ದರಿದ್ರತನ. [ಸಂ.]

ದರಿದ್ರಲಕ್ಷ್ಮಿ (ನಾ). ಬಡತನಕ್ಕೆ ಅಧಿದೇವತೆಯಾದ ಲಕ್ಷ್ಮಿ : ಜ್ಯೇಷ್ಠಾದೇವಿ : "ಅಲಕ್ಷ್ಮೀಃ = ಪಾಲ್ಗಡಲ ಕಡೆತದಲ್ಲಿ ಚಂದ್ರನತ್ತಣಿಂ ಕಡೆಸಾರಿ ಹುಟ್ಟಿದ ... ಅಧರ್ಮನ ಹೆಂಡತಿಯಾದ, ಜೋಕುಮಾರನ ತಾಯಿಯಾದ, ಜೇಷ್ಠಾದೇವಿಯೆಂಬ ಹೆಸರುಳ್ಳ, ದರಿದ್ರಲಕ್ಷ್ಮಿ" (ಕಾಶಕ್ಕ. ೨೭೩).

[ದರಿದ್ರ + ಲಕ್ಷ್ಮಿ]

ದರಿಧೂಳ (ನಾ). "ಗುಡ್ಡದ ಓರೆಯಲ್ಲಿರುವ ಒಂದು ದೇವತೆ" (ಗರತಿ. ಕೋಶ) : ಗುಡ್ಡ ದಾರ್ಯಾಗ ಗುಲಗಂಜಿ ಬನದಾಗ ಒಬ್ಬನ ಹ್ಯಾಂಗಿದ್ದಿ ದರಿಧೂಳ ನಿನ ಮುಂದ ಅಬ್ಬರಿಸಿ ಗಂಗೆ ಹರಿದಾಳ (ಗರತಿ. ೪೦).

[ℙ ಇದು 'ಧೂಳಿಮಾಕಾಳ' ಎಂಬುದರ ಸಂಕ್ಷಿಪ್ತ ರೂಪವಿರಬಹುದು]

ದರಿಮುಷ್ಟಿ (ನಾ). ಒಂದು ಬಗೆಯ ಗಿಡಮೂಲಿಕೆ : "ಖಟ್ವಾಂಗೀ–ದರಿಮುಷ್ಟಿ" (ಓಷಧಿ. ೪೨). [?]

ದರಿಯಾ (ನಾ). ೧. ಕಡಲು ; ಸಮುದ್ರ. 'ದರಿಯಾಮಾರ್ಗ' ಪರಾ. ೨. ಹೊಳೆ ; ನದಿ.

ದರಿಯಾ ತೆಂಗಿನಕಾಯಿ = ಒಂದು ಬಗೆಯ ದೊಡ್ಡ ತೆಂಗಿನ ಕಾಯಿ; ℙ ಇದರ ಕರಟವನ್ನು ಸಂನ್ಯಾಸಿಗಳು ಪಾತ್ರೆಯಂತೆ ಉಪಯೋಗಿಸುತ್ತಾರೆ: ಸೂರ್ತಿಚವಾಳಾವುಂದ ಮೇಲೆ ಕಿಮ್ಮತ್ತು ಇರ್ಧತಕ್ಕ ಜಿನಸುಗಳು ೧. ಅಕ್ಕಲ ಖಾರ, ಹಲಕಿ . . . ೧೧೦. ದರಿಯಾ ತೆಂಗಿನಕಾಯಿ (ಮುಂಬವ್ಯಾ. ೦೩೪). ದರಿಯಾದೌಲತ್ = ನದಿಯ ಬಳಿಯ ಕಟ್ಟಡ ; ℙ ಶ್ರೀರಂಗಪಟ್ಟಣವಲ್ಲಿ ಕಾವೇರೀನದಿಯ ದಡದಲ್ಲಿರುವ ಟಿಪ್ಪು ಸುಲ್ತಾನನ ಅರಮನೆಯ ಹೆಸರು.

[←ಪಾರ. ದರಿಯಾ, ದರ್ಯಾ ; ಹಿಂ. ದರಿಯಾ]

ದರಿಯಾಪ್ಪು 'ದರ್ಯಾಪ್ಪು' ನೋ.

ದರಿಯಾಫ್ಪಿ 'ದರ್ಯಾಪ್ಪು' ನೋ.

ದರಿಯಾಮಾರ್ಗ (ನಾ). ಕಡಲ ಮಾರ್ಗ: ಗೋವೆಯಿಂದಾ ಇಲ್ಲಿಗೆ ಬರುವ ದರಿಯಾಮಾರ್ಗದಲ್ಲಿ ಆಗಲಿ ಕರೆಮಾರ್ಗದಲ್ಲಿ ಆಗಲಿ (ರಾಚೀಂದ್ರ. ೦೦೬).

[ದರಿಯಾ + ಮಾರ್ಗ]

ದರಿವು 'ದರ್ಶ' ನೋ.

ದರಿಶನ 'ದರಶನ' ನೋ.

ದರಿಸನ 'ದರುಶನ' ನೋ.

ದರಿಸಿನ 'ದರಂಶನ' ನೋ.

ದರಿಸು (ಕ್ರಿ). ಕುಸಿದುಬೀಳು ; ಕೊರಕಲಾಗು : ರಘು ಜಲಕ್ರೀಡೆಯಾಡಿದ ಸರೋವರತಟಂ ದರೆ ದರಿಸಿ, ಪರ್ಬಿದುದು ಸಾಂದ್ರಂ ಜಲ ಪಿಶಾಚಿ. ಪಾಚಿ (ಶ್ರೀರಾಮಾ. ೯೩೦-೬). [ದರಿ + – ಇಸು೩]

ದರು[1] (ನಾ). ೧. [ಸಂಗೀತ] ಒಂದು ಬಗೆಯ ಹಾಡು ; ಶೃಂಗಾರರಸ ಪ್ರಧಾನವಾದ ಗೀತೆ : ದರು ಪರಿ ಏಕೃತಿ ವಿಜ್ಞಾಣವೆಂಬ ಚತುರ್ವಿಧ ದಂಡರೀತಿಯಲ್ಲಿ . . . ಪಾಡಿ ಮೋಹಿಸುವ ಗಾಯಕರಿಂ (ವಿವೇಕ. ೨೩೬); ದರು – ಸಾಹಿತ್ಯ, ಧ್ರುವ ಅಥವಾ ಪ್ರಧಾನವಾಗಿದ್ದು, ಸಂಗೀತ ಗೌಣವಾಗಿರುವ ಶೃಂಗಾರರಸಪ್ರಧಾನರಚನೆ (ಸಂಗೀಷಂ. ೭೪). ೨. [ನಾಟ್ಯ] ಒಂದು ಬಗೆಯ ಶೃಂಗಾರ ನೃತ್ಯ : 'ದರು' ಎಂಬ ಒಂದು ನೃತ್ಯಜತಿಯನ್ನು ಮಾಡಿ ಒಂದೊಂದು ಪಾತ್ರವೂ ರಂಗಸ್ಥಳಕ್ಕೆ ಪ್ರವೇಶಿಸಬೇಕು (ಅಧಾನ್ಯ. ೬೩). [<ಸಂ. ಧ್ರುವ]

ದರು೨, ದರಿವು, ದರುವು[1] (ನಾ). ಕಂದರ ; ಕೊಳ್ಳ; ಕಣಿವೆ: ನಡೆನಡೆದು ನಸು ಬಳುಂಕುತ್ತೆಡಬಲನಂ ನೋಡಿ ಕೂಡೆಯಾಫ್ಫಾಣಿಸುತುಂ ಗಿಡುವಿನ ಸರುವಿನ ದರ-ವಿನ[ಪಾಠಾಂ. ದಡುವಿನ, ದೆಸುವಿನ] ಮಡುವಿನ ಬಳಿಗೊಂಡು ಶುನಕನಟ್ಟಿತು ಮೊಲನಂ (ಗಿರಿಕ. ೧-೮೬); ಕರೆದು ಕರೆದಲವತ್ತು ಹಂಬಲಿಸುತ ಬೆಟ್ಟದೊಳು ಘಟ್ಟದೊಳು ಸರುವಿನೊಳು ದರು[ಪಾಠಾಂ. ಮರು]ವಿನೊಳು ಕೆಟ್ಟ ಸಂದಿಯೊಳು ಗೊಂದಿಯೊಳಱಸಿ ಬಳಲಿ (ಸಿದ್ಧರಾ. ೨-೩೪). **ದರಿವು**: ಶ್ವೇತಪರ್ವತದ ಪಾದತಟದ ಸರಿವು ದರಿವಿನ ಹಾಲೊಜತೆ

ಸುರಿತಪ್ಪಂತೆ ಹಾಲ ಹಳ್ಳವೋಲಗದ ನಡುವೆ ಮಡುಗಟ್ಟಿ ಪರಿದು ಪೊಱಸೂಸೆ (ಬಸವ. ೦೦-೭೦). **ದರುವು₁** : ಮಿಕ್ಕ ಸರುವಿಂಗೆ ದರುವಿಂಗೆ ಹಳ್ಳಕ್ಕೆ ಕೊಳ್ಳಕ್ಕೆ ಗಿಡುವಿಂಗೆ ಮಡುವಿಂಗೆ . . . ನಾನಾ ಧ್ವನಿಗೆ ನಾನಾ ಭಯಂಕರಕಕ್ಕೆವನೆಯಾನೆಂದು ಬೊಬ್ಬಿಟ್ಟು ಪೇಳ್ದಂತೆ ಭೀಳಿಡುತ್ತಿರ್ದುದಡವಿ (ಹಜಕಾ. ೫-೨೧) ; ಭೋರೆಂದು ದರುವಿನಲ್ಲಿ ಬೀಳುವ (ಚಿತ್ರಸೃ. ೧೫ ಮುನ್ನುಡಿ). [<ಸಂ. ದರಿ.]

ದರ್ಮ (ನಾ). ಕಸುವು ; ಶಕ್ತಿ ; "ತ್ರಾಣ, ಸಾಮರ್ಥ್ಯ" (ಜಾನಕೋ. ೪) : ಆ ಕೆಲಸ ಮಾಡಲು ಅವನಿಗೆ ದರುವಿಲ್ಲ (ಕೂಡಿ). [?]

ದರುಮ 'ಧರ್ಮ₁' ನೋ.

ದರುವಕ್ಕಿ (ನಾ). ಒಂದಂ ಬಗೆಯ ಹಕ್ಕಿ (?): ಚಕೋರನಂತೆ ದಿನವನೆಣಿಸುತ್ತಿರ್ದಳವ್ವೆ ದರುವಕ್ಕಿ ಕಂಡ ಕನಸಿನಂತಿರ್ದಳವ್ವೆ ನೋಡಂಬೊಕ್ಕ ಚಂದ್ರಮನಂತಿದ್ದಳವ್ವೆ ಎಂಟನೆಯ ಅವಸ್ಥೆಯವಳು ಆಚಿತಡಿಯಲ್ಲಿದ್ದವನ ಈಚೆಯ ತಡಿಗೆ ಕರೆದುಕೊಂಬಂತೆ ಇಂದು ನಮ್ಮ ಮಹಾಲಿಂಗ ಗಜೇಶ್ವರನು ಕಂಗಳ ಕಾಮು ಕಂಗಾಹಿ ಕಂಡವ್ವಾ (ಸರ್ವಜ್ಞ. ೬೮-೫೬೯) ; ನಿಂದು ನೋಡಿದರು ಶಕುನವ ದರುವಕ್ಕಿ ಸಂಧಿಸಿ ಕೊಟುಕು ಕೊಡುತಿರ್ದ (ಗುಂಡುಸು. ೨-೦೪೪). [ದರು ? + ಪಕ್ಕಿ₁]

ದರುವು₁ 'ದರು₂' ನೊ.

ದರುವು₂ (ನಾ). ವ್ಯಾಪಿಸಿದಂದು : ತುಂಬಿದುದು. 'ದರುವು ಹಿಡಿ' ಪರಾ. [?]

ದರುವುಹಿಡಿ (ಕ್ರಿ). (ಕವಿಯ) ತುಂಬ ವ್ಯಾಪಿಸು ; ಗಡಚಿಕ್ಕು : ಹರುಷ ವಿಸ್ಮಯಗಳಿಂದ ಕೂಗು–ಪೇಕಾಟಿಗಳನ್ನು ಊರು ದರುವು ಹಿಡಿಯುವಂತೆ ಹಾಕುವವರೇ (ಕರಿಹಾ. ೫೩) ; ದನಗಳು, ನಾಯಿ, ಬೆಕ್ಕುಗಳು–ಯಾವ ಪ್ರಾಣಿಗಳಿಂದ ಆ ಹಳ್ಳಿ ತುಂಬಿರುತ್ತಿತ್ತೋ, ಅವುಗಳ ಕೂಗಿನಿಂದ ಹಳ್ಳಿಗೆ ಹಳ್ಳಿಯೇ 'ದರುವು' ಹಿಡಿಯಬೇಕಾಗಿತ್ತೊ ಆ ಯಾವ ಪ್ರಾಣಿಗಳೊಂದೂ ಆಕೆಗೆ ಕಂಡು ಬರಲಿಲ್ಲ (ಬರಹಾ. ೦೩೪).

[ದರುವು₂ + ಹಿಡಿ₁ (<ಪಿಡಿ₁)]

ದರುಶನ, ದರಿಸನ, ದರಿಸಿನ, ದರುಸನ (ನಾ). ೧. ಕಾಣುವುದು ; ನೋಡುವುದು ; ನೋಟ ; ಕಾಣ್ಕೆ : ನಿಮ್ಮಂ ನೆನೆವುದೆ ಶಿವಚಿಂತೆ ನೋಡುವುದೆ ದರುಶನಂ ಮುಟ್ಟಿದಂದೆ ಸ್ಪರ್ಶನಂ (ಬಸವ. ೬-೧೧೧) ; ಜಯಜಯೆಂದುದು ನಿಖಿಳಜಗವಕ್ಷಯನ ದರುಶನಕೆಂದು ಸುತಿಕೋಟಿಯ ಗಡಾವಣೆ ಗಾಸಿಯಾಮದು ಹರನ ಗಲ್ಲಣಿಗೆ (ಕುವಾಸ. ೬-೬೭) ; ಅಲ್ಲಿಯ ಮಹಾಜನಂಗಳು . . . ಶುಭವಾದ್ಯದೆರಸಿ ನಡೆದಿದಿರ್ವಂದು ಕನಕ ಯಜ್ಞೋಪವೀತವ ಪವಿತ್ರದ ಫಲಗಳ ದರುಶನವ ನೀಡಿ ಶ್ರುತಿ ಮಂತ್ರಾಕ್ಷತೆಯನಿತ್ತು (ಸೌಂದಪು. ೫-೨) ; ನಿಮ್ಮ ದರುಶನದಿ ಬವಣೆ ಹಿಂಗಿ ಕೃತಾರ್ಥನಾದೆನು (ನಳಚ. ೮-೬೩) ; ಸಾರದಲೆ ಸದ್ಧರ್ಮದಿಚ್ಛೆಯೆ ಚಾರುದರುಶನ (ಪಶುಪಾ. ೫-೨೦) ; ನಾ ಧನ್ಯ ನಾ ಧನ್ಯ ನಾ ಧನ್ಯನಿಂದು! ಉಪಾಧಿವಿಯ ದರುಶನಕೆ ಇಲ್ಲಿಗೈತಂದು ! (ಅನಿಕೇ. ೯-೦೨). ೨. ಕಾಣಿಕೆ ; ನಜರು : ಸೆಟ್ಟಿ ತನ್ನ ತಂದ ದರುಶನವನರಸಂಗೆ[ಪಾತಾಂ. ಕಾಣಿಕೆಯಂ] ಕೊಟ್ಟು (ಜೀವಸಂ. ೩೫೬-೦೮). ೩. [ಯೋಗ] ಯೋಗಾಭ್ಯಾಸದಲ್ಲಿ ಬರುವ ಆರಂ ಅಂತರಾಯಗಳಲ್ಲಿ ಒಂದು ; P ಪ್ರತಿಭಾ. ಶ್ರವಣ, ವಾರ್ತಾ, ದರುಶನ, ಆಸ್ವಾದನ, ವೇದನೆಗಳೆಂಬಿವು ಆರು ಅಂತರಾಯಂಗಳು ಅಥವಾ ವಿಘ್ನಗಳಂ : "ದರುಶನಗಳ್ . . . ತಲೆಯ ಮೇಲಿನಿಂದ ಹೊರಡುತ್ತಿರುವ ಬೆಳಕಿನಲ್ಲಿ ಸಿದ್ಧರನ್ನು ಕಾಣುವುದು" (ಅಮೃತ. ೬-೦೯ ಆಡಿಟಿ) ; ಮತಿಯುತನೆ ಪ್ರತಿಭಾಶ್ರವಣ ವೇದನತಿಶಯ ದ ವಾರ್ತಾದರುಶನಗಳತುಳವಪ್ಪಾಸ್ವಾದನವು ವೇದನೆಯುಮೆಂಬಾಜು . . . ಬ್ರಹ್ಮಾಭ್ಯಾಸಕಾಲದಲಂತರಾಯಗಳು (ಅಮೃತ. ೬-೦೯). ೪. [ಜೈನ] ಸಮ್ಯಕ್‌ದರ್ಶನ : ದರುಶನಮಿಲ್ಲದ ಪೆಂಡಿರ ವರಭೋಗಂ ನರಕಗತಿಯ ವೆರ್ಬಟ್ಟಿ (ಧರ್ಮಾಮೃ. ೧೦-೭೧). **ದರಿಸನ : ೫.** (ಯಾ ದಾರ್ಶನಿಕರ ತತ್ತ್ವಗಳನ್ನು ತಿಳಿಸುವ) ತತ್ತ್ವಶಾಸ್ತ್ರ : ನಿರುತದಿಂ ತನ್ನೃಪನ ಸಭೆಗೆ ವಾದಕ್ಕೆಂದು ಗುರುಪಂಡಿತೇಶನಂ ಕರೆಯಿಸಿ ಸಮಸ್ತಮತದರಿಸನಂಗಳೊಳು ವಾದಂಗೆಯ್ಯಲೆಲ್ಲಮಂ ಖಂಡಿಸಿದನತಿಪೆರ್ಮೆಯಿಂ (ಪಾಶೋಪು. ೭-೮೯). **ದರಿಸಿನ : ೨.** ತವಗೆ ನಡೆವ ದರಿಸಿನವಾನಾಚಂದ್ರಾರ್ಕ್ಕತಾರಂ ನಡವನ್ನು ಮಾಡಿಕೊಟ್ಟರು (ಸೌಇಇ. XI-11, ೧೪೧-೩೨ ; 1096). **ದರುಸನ : ೧.** ದರ್ಶನ – ದರುಸನ, ಪದ್ಮ – ಪದುಮ (ಶಮುದ. ೨೫೪ ಪ್ರಯೋ). ೨. ವಿಮಳತರಯೂಥಿಕಾಕುಸುಮದಂದದಿಂ ಗೆಯ್ದು ತಂದು ಸಖಿಯರು ದರುಸನವನಿತ್ತರುಚಿತವಾದಲರ್ದೊಡವನಿತ್ತು ಸೌಂದರನಾಥಗೆ (ಸೌಂದಪು. ೧೦-೩೮). ೩. ದರುಸನಂಗಳಿಗೆಲ್ಲ ಭಿಕ್ಷಾಟನಚರಿತ್ರ ಗುರು ಮತವದಾಗಿರಲು ಉಳಿದ ಚರಿತ್ರಗಳಿದಕೆ ಸರಿಯಿಲ್ಲವಾಗಿ ವೇಳಿದೆ (ಧರ್ಮಾಪ. ೧-೫). [<ಸಂ. ದರ್ಶನ]

ದರುಶನಗಾಣಿಕೆ (ನಾ). ರಾಜರು, ಸಾಧು, ಸಜ್ಜನರು, ಗುರುಹಿರಿಯರು ಮೊದಲಾದವರನ್ನು ನೋಡಲು ಹೋಗುವಾಗ ತೆಗೆದುಕೊಂಡು ಹೋಗುವ ನಜರು ಅಥವಾ ಕಾಣಿಕೆ ; ದರ್ಶನಕಾಣಿಕೆ : ಪರ ಮಹೀತಳದಖಿಳಜ್ಞನದುಬ್ಬರದ ದರುಶನಗಾಣಿಕೆಯನನಾಕರಿಸುತನುಪಮ ವಿಷಯವೀಥಿಯ ನೋಡುತೈತಂದ (ತೊರಹಾ. ೦-೬-೭).

[ದರುಶನ + ಕಾಣಿಕೆ (<ಕಾಣ್ಕೆ)]

ದರುಶನತಪ್ಪುಕ (ನಾ). ನೋಟದಿಂದ ಅಪರಾಧ ಮಾಡುವವನು : ದರುಶನತಪ್ಪುಕ ಪ್ರಥಮಪಾತಕ ಸ್ಪರ್ಶನತಪ್ಪುಕ ದ್ವಿತೀಯಪಾತಕ . . . ಮಾಂಸಾಹಾರಿ ಪಂಚಮಹಾಪಾತಕ ಈ ಐವರೊಡನೆ ನೀ ನಂಡಿಯಲಿಲ್ಲೈ ರಾಮನಾಥಾ (ದೇಪಾವ. ೧೯-೩೮). 'ಸ್ಪರ್ಶನತಪ್ಪುಕ' ಪರಾ. [ದರುಶನ + ತಪ್ಪುಕ]

ದರುಶನಾರ್ಥಿ (ನಾ). ನೋಡುವ ಅಪೇಕ್ಷೆಯುಳ್ಳ ವ್ಯಕ್ತಿ : ನೋಡಲಿಚ್ಛಿಸುವವನು : ಅರಸ ಬಿನ್ನಹ ಮಾವದೇವರು ದರುಶನಾರ್ಥಿಗಳೆನಲು ಮನದಲಿ ಕುರುನೃಪತಿ ಚಿಂತಿಸುತ ಬರಹೇಳೆಂದು ನೇಮಿಸಿದ (ಕುವಾಸ. ೧೨-೯). [<ಸಂ. ದರ್ಶನಾರ್ಥಿನ್]

ದರುಶೆ (ನಾ). ಸೂರ್ಯ, ಚಂದ್ರರು ಒಂದೆಡೆ ಸೇರುವ ಕಾಲ ; ಅಮಾವಾಸ್ಯೆ : ದರುಶೆಯೊಳರ್ಕನಂ ಬೆರಸಿದಿಂದುವ ಕೋಮಲಲೇಪೆಯಂತೆ ... ತತ್ಕಮಲಾಕ್ಷಿಯೊಪ್ಪಿದಳ್ (ಉದ್ಭಟ. ೫-೫೬).

[<ಸಂ. ದರ್ಶ]

ದರುಸನ 'ದರುಶನ' ನೋ.

ದರೆ₁ (ನಾ). ೧. (ದಡದಲ್ಲಿ ಕಟ್ಟುವ) ದಂಡೆ ; ದಿಂಡು ; ತೆವರು : ರಘು ಜಲಕ್ರೀಡೆಯಾಡಿದ ಸರೋವರತಟಂ ದರೆ ದರಿಸಿ, ಪರ್ಬಿದುದು ಸಾಂದ್ರಂ ಜಲಪಿಶಾಚಿ, ಪಾಚಿ (ಶ್ರೀರಾಮಾ. ೮೫೦-೬) ; ತೋಟದ ಒಂದು ಬದಿಯಲ್ಲಿ ದರೆಯಾಗಬೇಕಿತ್ತು (ಪದ್ಮಸ. ೬೫೦) ; 'ಇಕೊ' ಎಂದು ಅವ್ಯಕ್ತದಿಂದ ಬಂದದ್ದನ್ನ ಕೃತಜ್ಞತೆಯಿಂದ ಸ್ವೀಕರಿಸುವುದು. ದರೆ ಹತ್ತುವ ಪರದಾಟ ಬೇಡ (ಸಂಸ್ಕಾರ. ೦೮) ; ತನಗೆ ಎದುರಾಗಿ ಕಡಿದಾಗಿ ಎದ್ದಿದ್ದ ದರೆಯನ್ನು ಕಂಡು, ಹತ್ತಲು ಎರಡು ಮೂರು ಸಾರಿ ನೆಗೆದು ಜಾರಿಬಿದ್ದು ಸೋತು, ಹಿಂದಕ್ಕೆ ಹಾರಲು ಪ್ರಯತ್ನಿಸುತ್ತಿದ್ದಾಗ ಪುಂಜ . . . ಬಡಿಗೆಯನ್ನೆತ್ತಿ ಹಿಂದಿಯ ಸೊಂಟಕ್ಕೆ ಇಕ್ಕಿದಿಸಿ ಬಿಟ್ಟನು (ಪುಲಿಮ. ೦೩೦) ; ಆಚೆ ಹೊಳೆಯಿದೆ, ಮೂರು ಬದಿಯಲ್ಲಿ ದರೆ ಇದೆ. ಉರಿ ಮೇಲಕ್ಕೇಳಲು ಗಿಡಗಳು ಬಿಡುವುದೇ ಇಲ್ಲ (ಕಾಳಗಿ. ೪೩) ; ಬಡ ಎತ್ತಿಗೆ ದರೇ ಮೇಲಣ ಹುಲ್ಲೇ (ಗಾಡ). ೨. ನೊರಜುಗಲ್ಲು ಮತ್ತು ಮರಳು ಭೂಮಿ : ಗಣಿಗೂರ ಸನ್ದಿಗಾಲಾನಾಡ ದರೆ ಪೋಗಿ ತೇನನ್ದಾಕಕೊಳ್ಳಾಲಿಯುಳ್

ಕುಡಿತ್ತು (ಎಕ. XVI. ಗುಬ್ಬಿ. ೭೫-೫೦ ; 733) ; ಸಂಕರನಾಯಕನ ಹಿತ್ತಲ ದರೆ ಪಡುವಲು ಬಸ್ತಿಯ ದೇವಸ್ವಯಿದಕೆ ಹಂನೆರಡು ಮೂಡೆ ಬಿಟ ಧರ್ಮ (ಕಇ. I, ೫೦-೪೩ ; 432 ?) ; ಕಾಡರಂಬ ನೀರಾರಂಬಕೆ ಸಲುವ ಕೆಱೆ ಕುಂಟೆ ಕೊಣಾನು ಅಬೆ ಅಚುಕಟು ದರೆ ನೆರಳೆ ಸಕಳಾ ಬತ್ತಾಯ (ಎಕ. X (8). ಕೋಲಾರ. ೩೦೪-೦೫ ; 17 ನೆಯ ಶತ) ; ಇವು ನೆಲದಲ್ಲಿ ಜಾತಿಗಳು:-ರೇಗಡೆ, ಎರೆ . . . ದರೆ (ಕಲ್ಲುನೆಲ) (ನಮ್ಮನು. ೨೪೩). ೩. (ಕರಾ) ಬೇಲಿಗೆ ಬದಲಾಗಿ ಕಟ್ಟಿದ ಮಣ್ಣಿನ ಗೋಡೆ,- ಆವರಣ. [←ತುಳು. ದರೆ]

ದರೆ$_2$ (ನಾ). ನೆಲ ; ಭೂಮಿ ; ಧರೆ ; ಪೃಥ್ವಿ : "ಎಳೆ, ಪೊಡವಿ, ತಿರೆ, ದರೆ, ರನ್ನವಸಿಱಳ್, ಬೂವಿ, ಬುವಿ-ಈ ೭ ಭೂಮಿ" (ಕಶಸಾ. ೧೦-೨೦೦); ದರೆಯಂ ಪೊತ್ತಾನೆಯ ಕೈಗೊರೆಯೆನೆ ಕಡುವೆಟ್ಟಿತಾದ ನಾಲ್ಕುಂ ತೋಳುಂ ಕರಮೆಸೆದಿರೆ ಕುಳ್ಳಿರ್ದಂ ಸಿರಿಯರಸಂ ಕಾರಮುಗಿಲ ರೂಮೆಂಬಿ ನೆಗಂ (ಕಬ್ಬಿಕಾ. ೧೬೫). [<ಸಂ. ಧರಾ]

ದರೆಗುಂಬ (ನಾ). ಒಡೆದ ಮಡಕೆ ; ಬಿರುಕು ಬಿಟ್ಟ ಗಡಿಗೆ ; ತೂತು ಮಡಕೆ : ಅಱೆಯೊಳಗಡಿಮೇಲಾಗಿ ಬಾಳೆಯ ಬಿತ್ತಿ ದರೆಗುಂಬದಿಂ ನೀರ ತಂದು ಎಱೆವುತಿರಲು ಕಂಡು ಬಲರಾಮನಿಂತೆಂದ (ನೇಮಿಸಂ. ೩೪-೧೯೭).

[<ದರಿ + ಕುಂಬ$_2$]

ದರೆಹೊಲ (ನಾ). ಸಣ್ಣ ಸಣ್ಣ ಕಲ್ಲು ತುಂಬಿದ ಹೊಲ : ಒಂದು ದಿನ ಇವನು ಮಂಡಹಳ್ಳಿಗೆ ಹೋಗುವ ದಾರಿ ಪಕ್ಕದ ದರೆಹೊಲದಲ್ಲಿ ಸೀಳುಕ್ಕೆ ಹೊಡೀತಾ ಇದ್ದ (ನನ್ನೂರು. ೨೯೭). [ದರೆ$_1$ + ಹೊಲ (<ಪೊಲ)]

ದರೋಗ (ನಾ). ೧. (ಅಬ್ಕಾರಿ, ಪಶು, ಕಾಡು, ಉದ್ಯಾನವನ ಇತ್ಯಾದಿ ಇಲಾಖೆಗಳ) ಸರ್ಕಾರದ ಅಧಿಕಾರಿ,- ಮೇಲ್ವಿಚಾರಕ : ನಮ್ಮ ಜಾತಕದ ಯೋಗಗಳನ್ನು ತಿಳಿದು ಕೆಲಸಮಾಡಿದರೆ ಸುಂಕದ ದರೋಗ ಸಾಬರ ಕಾಟ ನಿವಾರಣೆಯಾಗುತ್ತೆ (ಮಾಮರಾ. ೦೫೨); ಎಲ್ಲವನ್ನು ತೆಗೆಯಿಸಿಕೊಂಡು ಬಾ ಎಂದು ದರೋಗರ ಅಪ್ಪಣೆಯಾಯಿತು (ಮುಸುಗ. ೧೨೩). ೨. ಕಾವಲುಗಾರ ; ಪಹರೆಯವನು : ಪೋಲೀಸು ದರೋಗನು ತಮ್ಮನ್ನು ಎಳೆದೊಯ್ಯುವ ಮೊದಲು ತಾಯಿಯನ್ನು ಕುರಿತು—"ಅಮ್ಮ ಇದೇನು ?" ಎಂದು ಕೇಳಿದನು (ಹಸಿವು. ೭) ; ಸಂಸ್ಥಾನದಲ್ಲಿ ಒಂದು ಉನ್ನತಹುದ್ದೆಯಲ್ಲಿದ್ದ ಬಕ್ಷೀಷ್‌ಆಲೀ ಎಂಬುವನನ್ನು ಬಂದೀಖಾನೆಯ (ಜೈಲ್) ದರೋಗನನ್ನಾಗಿ ನೇಮಿಸಲಾಯಿತು (ಝಾರಾಜಿ. ೦೫೬).

[←ಪಾರ. ದಾರೂಫ್, ದಾರೋಗಹ್ ; ಹಿಂ. ಮರಾ. ದರೋಗಾ, ದಾರೋಗಾ]

ದರೋಡೆ, ದರವಡೆ (ನಾ) ೧. ಭಯಗೊಳಿಸಿ ಬಲಾತ್ಕಾರವಾಗಿ ಕಸಿಯುವುದು,- ಅಪಹರಿಸುವುದು ; ಕೊಳ್ಳೆ ಹೊಡೆಯುವುದು; ಲೂಟಿ ; ಸುಲಿಗೆ : ಓ ವರ್ತಮಾನದ ಸುದ್ದಿ ಎಲ್ಲೊ ಗಲಾಟೆ, ಖೂನು, ದರೋಡೆ, ಚಕ್ರಬಂಧದ ಒಗಟ, ರಾಶಿಭವಿಷ್ಯ, ಲೂಟಿ, ಲಾಟರಿ (ಅರಳು. ೪೨೫-೨೦) ; ವಿಶ್ವನಾಥಪಂತರ ಕೊಲೆ ಮತ್ತು ಅವರ ಮನೆಯಲ್ಲಾದ ದರೋಡೆ ಇವುಗಳ ಸಮಾಚಾರವೇನಾದರೂ ನಿನಗೆ ಗೊತ್ತಿದೆಯೇ? (ವಿಧಿಪ್ಯ. ೦೯೧) ; ದಸ್ಯುಗಳು ಗುಂಪುಕಟ್ಟಿಕೊಂಡು ಬಂದು ನಡೆಸುವ ದರೋಡೆಗಳನ್ನು ಯುದ್ಧವೆನ್ನಲಾದೀತೆ? (ಶ್ರೀರಾಯ. ೧೪೯) ; ಸಭೆಯಲ್ಲಿ ನಡಸಿದ ಈ ದರೋಡೆ ನಿನಗೆ ಮುನಿಜನಗಳಿಂದ ಮರ್ಯಾದೆ ತರುವಂತಿಲ್ಲ (ಪಚಭಾ. ೦೧೫). ೨. ಲೂಟಿ ಹೊಡೆಯುವ ಜನರ ಗುಂಪು : ದರೋಡೆಯು ಬಂದಿದ್ದರೆ ಇಷ್ಟು ಅಂಜುವ ಕಾರಣವಿದ್ದಿಲ್ಲ (ಮಂದಾಕಿ. ೦೨೬). **ದರವಡೆ** ೧. ಹೊಟ್ಟೆಗೆ ದೊರೆಯದಿದ್ದ ಬಳಿಕ ಜನರು ಬರಗಾಲದಲ್ಲಿ ಕಳವು ದರವಡೆಗಳಿಗೆ ಪ್ರವೃತ್ತರಾಗುತ್ತಾರೆ (ಮೋಜೀವ. ೩).

ದರೋಡೆ ಮಾಡು = ಕೊಳ್ಳೆಹೊಡೆ ; ಲೂಟಿಮಾಡು ; ದೋಚು : ನಾನೀಗ ದರೋಡೆಮಾಡಿ ತರುವ ದ್ರವ್ಯದಿಂದ ಅನುಭವಿಸುವ ಸುಖ ಸಂತೋಷಗಳಿಗೆಲ್ಲಾ ನೀವು ಭಾಗಿಗಳಲ್ಲವೆ? (ಸುರಾ. ೩೪).

[←ಮರಾ. ದರೋಡಾ]

ದರೋಡೆಕಾತಿ (ನಾ). ದರೋಡೆ ಮಾಡುವವಳು; ಲೂಟಿ ಹೊಡೆಯುವವಳು: ಮಕ್ಕಳು ಅಳುಕಳುಕಿ ನಿಂತು ಬೆದರುಗಣ್ಣಾಗಿ ದರೋಡೆಕಾತಿಯ ಕಡೆಗೆ ದುರುಗುಟ್ಟಿಕೊಂಡು ನೋಡುತ್ತಿದ್ದರು (ಪುನರು. ೬).

[ದರೋಡೆ + – ಕಾತಿ$_5$]

ದರೋಡೆಕಾರ, ದರವಡೆಗಾರ (ನಾ). ಲೂಟಿ ಹೊಡೆಯುವವನು ; ದರೋಡೆಮಾಡುವವನು: ಒಂದು ದಿನ ಅವರು ಆತ್ರಮಕ್ಕೆ ಹೊರಗೆ ಒಂದು ಮರದ ಕೆಳಗೆ ಮೌನದಲ್ಲಿ ಮುಳುಗಿದ್ದಾಗ ಕೆಲವರು ದರೋಡೆಕಾರರು ಆ ಕಡೆ ಬಂದರು (ಪ್ಯಾಸಜಿ. ೩೬); ಕೈರೋಕ್ಕೆ ಹೋಗುವ ದಾರಿಯಲ್ಲಿ ಅನೇಕ ಸಲ ದರೋಡೆಕಾರರು ಈ ಸಾಮಾನುಗಳನ್ನು ಕಸಿದುಕೊಳ್ಳುತ್ತಾರೆ (ಪ್ರಪಾಇ. II. ೨೨೦). **ದರವಡೆಗಾರ:** ಮೊದಲೇ ದರವಡೆಗಾರರ ಹಾವಳಿಯಿಂದ ಹೈರಾಣಾಗಿದ್ದ ಹಂಸೆಯ ದೇಹ ಈಗಿನ ಮಾನಸಿಕ ಅಸ್ವಸ್ಥತೆಯಿಂದ ಮತ್ತಿಷ್ಟು ಹೈರಾಣಾಗಲು, ಅವಳು ಹಾಸಿಗೆಯಿಂದ ಎದ್ದಿರಲಿಲ್ಲ (ಹಂಸಾ. ೭೨).

[ದರೋಡೆ + – ಕಾರ$_1$ (< – ಕಾಱ)]

ದರೋಡೆಖೋರ, ದರವಡೆಖೋರ (ನಾ). = ದರೋಡೆಕಾರ : ಶಿವನಿಗೆ ತಿಳಿಯಿತು ಇವರು ಕಳ್ಳತನಕ್ಕಾಗಿ ಹೋಗುತ್ತಿದ್ದಾರೆಂದು ! ದರೋಡೆಖೋರರು !! (ದೇವಸಾ. ೦೫). **ದರವಡೆಖೋರ:** ಪ್ರತಿಯೊಬ್ಬ ದರವಡೆಖೋರನೂ, ಪ್ರತಿಯೊಬ್ಬ ಮೋಸಗಾರನೂ ನಮ್ಮ ಕಡುವೈರಿಯಾಗಿರುವನು (ಅಂಬಿಕೆ. ೨೫); ನಾವು ಕಳ್ಳರಲ್ಲ . . . ನಾವು ದರವಡೆಖೋರರು (ಅಶ್ವಮೇ. ೦೬); ಮಹಾ ಚಾಣಾಕ್ಷನಾದ ಒಬ್ಬ ದರವಡೆಖೋರನು ನನ್ನನ್ನು ಹುಚ್ಚನನ್ನಾಗಿ ಮಾಡಿ ಕೂರಿಸಿರುವನು (ಕಳ್ಳಕಾ. ೩) ; ಸಭೆಯಲ್ಲಿ ದರವಡೆಖೋರರ ಚಂದದ ಆಚರಣೆ ನಡೆದದ್ದರಿಂದ, ತಪಸ್ವಿಗಳು ಬಂದರೂ ನಿನಗೆ ಉತ್ಸಾಹವಿಲ್ಲದಾಗಿದೆ (ಮಭಾರ. ೨೨).

[ದರೋಡೆ + – ಖೋರ (– ಕೋರ$_3$)]

ದರೋದರ (ನಾ). ೧. ಪಗಡೆಯಾಟ ; ದಾಳದಾಟ. ೨. ಜೂಜುಕೋರ ; ಜೂದಾಳಿ. ೩. ಪಣ ; ಪಂಥ ; ಜೂಜು. ೪. ಪಗಡೆ : ದಾಳ. [ಸಂ.]

ದರೋಬಸ್ತು (ಗು). ಎಲ್ಲಾ ; ಸಮಗ್ರ ; ಸಮಸ್ತ ; ಸಂಪೂರ್ಣ ; ಪೂರ್ತಿಯಾದ ; ಒಟ್ಟಾದ : ಬೆಳ್ಳಾರೆ ಮಾಗಣೆ ಒಂದಕ್ಕೆ ದರೋಬಸ್ತು ಗ್ರಾಮ ದುೂವತ್ತೇಳು (ರಾಜೇಂದ್ರ. ೨೩೦) ; ಅವರಿಗೆ ಸ್ವಲ್ಪವಾದರೂ ಆಟಕಾವು ಮಾಡದೆ ದರೋಬಸ್ತು ಮಹಸೂಲು ಬಿಟ್ಟುಬಿಡುವುದು (ಮಹಾವಂ. II, ೬೭).

ದರೋಬಸ್ತರು = ಎಲ್ಲರು ; ಸಮಸ್ತರು : ದಿಗರ ತಾಲ್ಲೂಕಿಗೆ ಹೋಗಿರುವ ರೈತರು ಯಾವ ಯಾವ ತಾಲ್ಲೂಕಿನಲ್ಲಿಧಾರೆಯೊ ದರೋಬಸ್ತರ ಪತ್ತೇ ಹತ್ತಿಸಿ ಸದರಹೂ ರೈತರಿಗೆ ನಂಬಿಕೆಯಿಂದ ಕರೆತರಿಸಿ . . . ಜಿರಾಯಿತು ಕೆಲಸದಲ್ಲಿಡಬೇಕು (ಮಹಾವಂ. II, ೬೨). **ದರೋಬಸ್ತಾಗು** = ಸಂಪೂರ್ಣ ಸಜ್ಜಾಗು : ಏನೋ, ಗುತ್ತೀ ಮುಗಿಲ ಕಡೆ ನೋಡ್ತಾ ನಿಂತೆ ? ದೂರಾ ? ಒಳ್ಳೆ ದರೋಬಸ್ತಾಗಿದ್ದೀಯಲ್ಲಾ ! (ಮಲೆಮ. ೦).

[←ಪಾರ. ಮರಾ. ದರೋಬಸ್ತ್]

ದರೋಬಸ್ತುಫೌಜು (ನಾ). ಒಟ್ಟು ಸೈನ್ಯ ; ಸಮಗ್ರದಳ : ಸಂಪೂರ್ಣ ಸೇನೆ : ದರೋಬಸ್ತುಫೌಜು ಹೊರಟು ಹೊಸಕೆರೆ ಬಳಿ ನಿಂತಿತು (ಚಿತ್ರಪಾ. ೬೩). [ದರೋಬಸ್ತು + ಫೌಜು (<ಪೌಜು)]

ದರ್ಕಾಸ್ತ್ 'ದರಖಾಸ್ತು' ನೋ.

ದರ್ಕು₁, ದಕ್ಕು₂ (ಕ್ರಿ). ೧. ಅಧಿಕವಾಗು; ಹೆಚ್ಚಾಗು. 'ದರ್ಕುಸೋರಂ' ಪರಾ. ೨. ಸೊಕ್ಕಿಗೇಳು; ಅಹಂಕಾರಪಡಂ; ಗರ್ವಿಸು. ೩. ಉತ್ಸಾಹಗೊಳ್ಳು; ಸಂಭ್ರಮಗೊಳ್ಳು. 'ದರ್ಕುಂದಲೆ₁' ಪರಾ. **ದಕ್ಕು₂**: ೨. 'ದಕ್ಕುಂದಲೆ₁' ಪರಾ. [←ತಮಿ. ತರುಕ್ಕು]

ದರ್ಕು₂, ದಕ್ಕು₄ (ನಾ). ೧. ಚೂಪಾದ ಮರದ ಕೋಲು; ದಸಿ: ಸಭೆಯೊಳೀಶಾನೇಂದ್ರನೆಮ್ಮ ಸಮ್ಯಗ್ದರ್ಶನವಂ ಪೊಗಟ್ಟುದರ್ಕೆ ದರ್ಕಂ ನುಂಗಿದಂತುದ್ದಿ ೀವನಾಗಿ ಮತ್ಸರಪ್ರೇರಿತನೆವ್ಕಂ ಸೋಲಿಸಲ್ ಬಂದು ತಾನೆ ಸೋಲ್ತು ಪೋದಂ (ಶಾಂತಿಪು. ೪-೧೩೧ ಪ); ದರ್ಕು[ಪಾತಾಂ. ದಕ್ಕು] ವೆರಸಿದ ಕುಟಿಯಲ್ಲಿಯುಂ [ಉ]ವಿವೆರಸಿದ ಕಿಚ್ಚಿನಲ್ಲಿಯುಂ ಕುಕೂಲಮೆಂಬುದು (ಹರಾಯು. ೧೩೮-೪೦). ೨. ಚೂಪಾದ ತುದಿಯುಳ್ಳ ಲೋಹದ ಸಾಧನ; ಶೂಲ: ಅವರುಮಾತನಂ ಶ್ಮಶಾನಕ್ಕೆಟ್ಟಿದುಕೊಂಡು ಪೋಗಿ ದರ್ಕಂ ಬಸಿದು ಸೂಲದೊಳಿಕ್ಕುವಾಗಳ್ (ವಡ್ಡಾ.ರಾ. ೧೧೬-೩೫). ೩. ಮುಳ್ಳು; ಕೂಳೆ : ಮೂವತ್ತೆರಟ್ಕೋಟಿ ಕಸವರ ಮುವಂ ಕೊಳದ ಪುಲ್ಲ ದರ್ಕಂ ತೊಱೆವಂತನಿತುಮಂ ತೊಱೆದು (ವಡ್ಡಾ.ರಾ. ೪೬-೦೦). **ದಕ್ಕು₄**: ೧. "ಆರೋಗ್ಯ ದಸಿ ವಶಗಳೊಳ್ ದಕ್ಕು" (ಶಬ್ದಮಂ. ೬೯); ಕಲಹಂಸೆಗಳ್ ಬಲ್ಲಿತಪ್ಪ ದೊಂದು ದಕ್ಕಂ ತಂದದಱಿರಡು ಕಡೆಯುಮಂ ತಾವಡಸಿ ಕರ್ಚಿ ನಡುವೆಯಾವೆಯುಂ ಕರ್ಚಿಸಿಕೊಂಡನೇಕ ಗ್ರಾಮ ನಗರ . . . ದ್ರೋಣಾಮುಖಂಗಳಂ ಜನಪದಂಗಳಂ ಕಳಿದು ಬರುತ್ತುಂ (ಪಂಚತಂ. ೧೫೭-೦೫); ದಕ್ಕೆನೊಳ್ ಮಾಡಿದ ಮನೆ ಸೊಕ್ಕಿದಾನೆ ಸೋಂಕೆ ಕೆಡದು ಬೀಟ್ಟಂತೆ ದೋಷಿಯಪ್ಪ ದೇವನಂ ಪಿಡಿದ ಮಾನಿಸನುಂ . . . ಬೀಟ್ಗುಂ (ಧರ್ಮಾಮೃ. ೦೦-೪೪); ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇ ಬೇಕು ದಕ್ಕ ನುಂಗಿದಂತೆ ಬಿರತುಕೊಂಡಿರಬೇಡ (ಬಸವ. ೦೪೯); ಅತ್ಯುತ್ಕೃಷ್ಟ ದಕ್ಕುಳ್ಳ ಕುಟಿಯುಮಿವೆರಸು ಕಿಚ್ಚನೊಳು ಸಲೆ ಕುಕೂಲಮದೆಂಬುದು (ಪುಂಗರಾ. ೦೪೩-೦೪). ೨. ಬೊಂತಿಯಂತೆ ದಕ್ಕಿನೊಳರ್ದ ಪಂದಲೆಗಳಿಂ ಬಂದಿಕ್ಕಲಿನಂತೆ ತೆಱಪುವಾರ್ದು ಪಿಡಿವ ಶಾಕಿನಿಯರಿಂ (ಶಾವೃಸಾ. ೩೨೯ ಶೂದ್ರಳ) : ತನಗಲ್ಲದುದ ನಾಸಿಕ ವಾಸಿಸದಲ್ಲಿ ಅಲ್ಲಿಯೇ ದಸಿಯ ದಕ್ಕನೇಱಿಸುವೆನು (ಸ ಪ ಗ ವ. ೧೦೦-೩೪೯). ೩. ತಿಲಕದ ತೊಕ್ಕಪ ಮಾರ್ಗಂಗಳ ದಕ್ಕಂ ಸುಟ್ಟು ಮೂತ್ರದಿಂದರೆದು ನವೋಜ್ವಲಚೂರ್ಣವಿ ವಿಶ್ರುತದಿಂ ವಿಲೇಪನಂಗೆಯ್ದು ಕಳಿಗೆ ದುಷ್ಟ ವ್ರಣಮಂ (ಅಕ್ಕಶಾ. ೦೨-೪).

ದರ್ಕುಂದಲೆ₁, ದಕ್ಕುಂದಲೆ₁ (ನಾ). ೧. ಸೊಕ್ಕಿಗೇರುವಿಕೆ ; ಉನ್ಮತ್ತತೆ; ಉದ್ಧತಿಕೆ. ೨. ಉತ್ಸಾಹಗೊಳ್ಳುವಿಕೆ ; ಸಂಭ್ರಮ. 'ದರ್ಕುಂದಲೆ ವಾಯ್' ಪರಾ. **ದಕ್ಕುಂದಲೆ₁**: 'ದಕ್ಕುಂದಲೆವರಿ', 'ದಕ್ಕುಂದಲೆ ವಾಯ್' ಪರಾ. [ದರ್ಕು₁ + – ದಲೆ]

ದರ್ಕುಂದಲೆ₂, ದಕ್ಕುಂದಲೆ₂ (ನಾ). ಶೂಲಕ್ಕೆ ಹಾಕಿದ ತಲೆ: ಉದಂತಕ್ಕೆ ತಕ್ಕುಂದಱಿ, ದರ್ಕುಂ[ಪಾತಾಂ. ಕ್ಕುಂ] ದಲೆ, ಶಾಱುಂಬಟ್ಟಿ (ಕಮಾದ. ೦೭೭ ಪ್ರಯೋ). **ದಕ್ಕುಂದಲೆ₂**: ಅಲ್ಲಿ ಗುಡಿಗಟ್ಟಿದ ಸೀರೆಯಂತೆ ದಕ್ಕುಂದಲೆಗೆ ವಂದರುಂ ಮೆಚ್ಚುಕೆಯ್ವರಂತೆ ತೂಗುವ ತೊಗುಂದಲೆಗಳುಂ (ಬೀಹರಿ. ೨-೦೦ ಪ). [ದರ್ಕು₂ + ತಲೆ₁]

ದರ್ಕುಂದಲೆವಾಯ್, ದಕ್ಕುಂದಲೆವಾಯ್ (ಕ್ರಿ). ೧. ಸೊಕ್ಕಿನಿಂದಿರು; ಬೀಗು; ಸೆಟೆ; ಸೆಡೆ: ಱರ್ಕಿ ದರ್ಕುಂದಲೆವಾಯ್ದು ಪಂಚಶರನಂ ಮಂಚದ ಕಾಲೊಳ್ ಕಂದು ಕಟ್ಟ ನಿನ್ನ ಪಗೆಯ ಬಗೆದಂತೆ ತೀರ್ಚಿ ತೋಱುವೆಂ (ಲೀಲಾವ. ೦೦-೮೩ ಪ). ೨. ಉತ್ಸಾಹಗೊಳ್ಳು ; ಉಬ್ಬು : ಪೊರ್ಕುಳಿಯಾಡಿದುವಲರೊಳ್ . . . ತನಿಗಂಪಿಂದಟ್ಟುಮೆವಟ್ಟುವ ಕುಡಿಯೊಳ್ ದರ್ಕುಂದಲೆವಾಯ್ದುವಲ್ಲಿ ಮದಮಧುಪಂಗಳ್ (ಮಲ್ಲಿಪು. ೦೪-೦೪೪). **ದಕ್ಕುಂದಲೆವಾಯ್**: ೧ ಉದ್ಧತಿಯಿಂದಮವಂದಿರುರ್ಕಿ ದಕ್ಕುಂದಲೆವಾಯ್ವರ್ (ಸುಳುಮಾ. ೨-೮) : ಅಂತುರ್ಕಿ ಸೊರ್ಕಿಂ ದಕ್ಕುಂದಲೆವಾಯ್ದು ದೂರ್ತಿಂ ಕಣ್ಣಾಣದೆ ಸೂಳೆಗೇರಿಯಂ ಪೊಕ್ಕು (ಧರ್ಮಾಮೃ. ೨-೪೩) : ಉರ್ಕಿ ದಕ್ಕುಂದಲೆವಾಯಲ್ಕಳ್ಕಿ ವೀರಾರಿಗಳುಜದಟರ್ (ಪುಂಬರಾ. XI. ೨೪೫-೦೪ ; 1121). ೨. ತನಿವಣ್ಣ ರಸದಿಂ ಸೊರ್ಕಿತನಿ ದಕ್ಕುಂದಲೆವಾಯ್ದು ಬಗ್ಗಿಸುವ ಪಿಕಂಗಳ . . . ವೀಕ್ಷಿಸುತ್ತುಂ (ಪುಷಾನೇ. ೫-೨೦ ಪ); ಕುಸುಮಾಸವಮಂ ಸವಿದುರ್ಕಿ ಸೊಕ್ಕಿ ದಕ್ಕುಂದಲೆವಾಯ್ವಾಗಳ್ ... ಉನ್ಮದಾಳಿಗಳ್ (ಧರ್ಮನಾ. ೨-೪೩). [ದರ್ಕುಂದಲೆ₁ + ಪಾಯ್₁]

ದರ್ಕುಸೋರ್ (ಕ್ರಿ). ಅಧಿಕವಾಗಿ ಸೋರು (?) : ಸರಳಾಂಗಂ ವಿಗೆ ಕುಂದಿ ತೋಜಿ ಕಿವಿಗಳ್ ತಣ್ಪೇಜಿ ಕಣ್ದರ್ಕುಸೋರೆ ಕರಂ ಮೆಯ್ನ ವಿ ರು ದ್ಧ ಮಾ ಗಿ ನಿಲೆ ಮಾಂ (ಕುಂ) ದಾ ಯ್ತು (ಕೋಳೂರಪ. ೯-೨೦೨). "ಥಣ್ಣನೆ(ನಾಗಿ)ಯಿರುಹ" (ಕೋಳೂರಪ. ಟೀಳಿ).

[ದರ್ಕು₁ + ಸೋರ್₁]

ದಖಾಸ್ತ್ 'ದರಖಾಸ್ತು' ನೋ.

ದಖ್ಖಾಸ್ತು 'ದರಖಾಸ್ತು' ನೋ.

ದಗ್ಗಾ 'ದರಗಾ' ನೋ.

ದರ್ಜಿ (ನಾ). ಬಟ್ಟೆ ಹೊಲಿಯುವವನು ; ಸಿಂಪಿಗ ; ಚಿಪ್ಪಿಗ : ಒಮ್ಮೆಗೆ ಓಲಗದೊಳು ಕುಳಿತಿರಲು ಬಂದರೆಡೆಗೆ ಇಬ್ಬರು ದರ್ಜಿಗಳು (ಗಱಪ. ೬೦-೪) ; ಆ ಕೋಟಿಗೂ ಒಂದು ಕವಾಲು ಮಾಡಿಸಿದ್ದೆ, ದರ್ಜಿಗೆ ಹೇಳಿ (ಜಿಂಗೂಲಿ. ೧೦೨); ನಮ್ಮ ದೇಹಗಳು ನಮ್ಮ ಅಧೀನವೆ ? – ದರ್ಜಿಯವನಿಗೆ ಮಾರಿಕೊಂಡವು (ಸಾಹಜೀ. ೫೩).

[←ಪಾರ. ದರ್ಜೀ ; ಹಿಂ. ಮರಾ. ದರಜೀ, ದರ್ಜೀ]

ದರ್ಜಿಗಿತ್ತಿ (ನಾ). ಬಟ್ಟೆ ಹೊಲಿಯುವವಳು ; ಸಿಂಪಿಗಿತ್ತಿ : ದರ್ಜಿಗಿತ್ತಿಗಳು ನನ್ನ ಅಳತೆ ತೆಗೆದುಕೊಡರು (ಗಂಪ್ರ. ೭೫). [ದರ್ಜಿ + – ಗಿತ್ತಿ]

ದರ್ಜೆ (ನಾ). ೧. ವರ್ಗ; ಮಟ್ಟ; ಶ್ರೇಣಿ: ಅಕಳಿನ ಹಾಲು; ಇದರಲ್ಲಿರುವ ಸಸಾರಜನಕಗಳು ಅತ್ಯಂತ ಉತ್ತಮ ದರ್ಜೆಯವು (ಅಹುಸಾ. ೯೦); ಅವರ ಕಲಾಕೌಶಲ್ಯ ಎಷ್ಟು ಉಚ್ಚದರ್ಜೆಯದಾಗಿತ್ತು ಎಂಬುದಕ್ಕೆ ಪ್ರತ್ಯಕ್ಷ ನಿದರ್ಶನ ಈ ರತ್ನಗೋಲ (ರತ್ನಗೋ. ೫೪); ಅದಕ್ಕೆಲ್ಲಾ ಕಾರಣವೇನೆಂದರೆ, ಅವನ ಎರಡನೆಯ ದರ್ಜೆಯ ಗುಮಾಸ್ತೆ ನೌಕರಿ! (ಕಂಬಹು. ೦೭೩). ೨. ಅಂತಸ್ತು ; ಯೋಗ್ಯತೆ ; ಆಢ್ಯತೆ; ಪದವಿ ; ಗೌರವ : ಈ ತಾವು, ಶ್ಯಾಮರಾಯನ ದರ್ಜೆಗೆ ಹಲಕಾ ಎನಿಸತೊಡಗಿತು (ದೀಪಹ. II. ೦೪೩) ; ಅವರವರ ದರ್ಜೆಗೆ ತಕ್ಕಂತಹದು (ಉಡುಗೊ. ೭೮) ; ನಿಮ್ಮನ್ನು ವಿಮಾರಿ ನಿಮಗಿಂತಲೂ ಕಡಿಮೆ ದರ್ಜೆಯವರು ಆ ಪದವಿಯನ್ನು ಹೊಂದುವರು (ಮಹಾತ್ಮಾ. ೭೪) : ನಮ್ಮ ದರ್ಜೆಗೆ ವಿಮಾರಿವವನಲ್ಲ ಎಂಬ ಭಾವ ನಮ್ಮಲ್ಲಿ ಆಗಾಗ ಹುಟ್ಟುವುದು (ಕಾಪುವಿ. ೧೦೩). ೩. ತರಗತಿ ; ಇಯತ್ತೆ : ಅವನು ಳನೇ ದರ್ಜೆಯಲ್ಲಿ ಓದುತ್ತಿದ್ದಾನೆ (ಡೂಢಿ).

[←ಅರ. ದರ್ಜಾ, ದರಜಾ ; ಹಿಂ. ದರಜಾ ; ಮರಾ. ದರ್ಜಾ]

ದರ್ದು₁ 'ತರ್ದು₂' ನೋ.

ದರ್ದು₂ 'ದರದಂ' ನೋ.

ದರ್ದುರ₁ (ನಾ). ಕಪ್ಪೆ ; ಮಂಡೂಕ : "ಭೇಕಂ ಶಾಲೂರಂ ಮಂಡೂಕಂ ವರ್ಷಾಭು ದರ್ದುರಂ" (ಪಸ್ತುಕೋ. ೨೩-೮) ; "ಭೇಕಂ . . . ದರ್ದುರಂ ವೇಟ್ ಮಂಡೂಕಮಾ ಶಫರಿ ಶಾಲೂರಮೆನೆ ಕಪ್ಪೆಯಕ್ಕುಂ" (ಪಾಂಗರಾ. ೦೨೦-೮); ದರ್ದುರಂ ಚೂಡಾಮಣಿಯಾಯ್ತು, ನೆಕ್ರಂ ಚರ್ಮರತ್ನಮಾಯ್ತು (ಜಾಪುಂಪು. ೭೮) ; ಸರ್ಪಂ . . . ಕೆಲವು ದಿವಸಂ ತಲೆಯಿಕ್ಕಿ ವಟ್ಟೆರ್ದುದ ನೊಂದು ದರ್ದುರಂ ಕಂಡು (ಪಂಚತಂ. ೨೬೪-೯) ; ಹರಡೆ ಹಂಗಂ ರಾಸಭಂ ದರ್ದುರಂ ಗೌಳಿ ದರುಶನ ಸ್ವರವನಾ ವಾಮಭಾಗದೊಳೀಯೆ ಯರಲೆ ಕಾಕಂ ಹಸಃಬನಾ ನಕುಲವಿವು ಬಲದೊಳಂ ತೋಜಿ ದನಿಮಾಡಲು ವರಿವಕ್ಕಳಲವು (ಹೀರಮು. ೦೦-೩). [ಸಂ.]

ದರ್ದುರ2, ದರ್ದುಱ (ನಾ). ಬಾವು ; ಊತ ; ದದ್ದರಿಸಿಕೊಂಡುದು : ಪುರಾಕೃತಸುಕೃತ ಫಲಂಗಳವಂ ನೆನೆದನವರತಮಟ್ಟು ಬಾತ ಕಣ್ಗಳುಂ ಚಿಂತಾನಿದ್ರೆಯಿಂ ದರ್ದುರವಾದ ಮೊಗಮುಂ (ಶಾಂತಿಪು. ೪-೭೯ ವ). △ **ದರ್ದುಱ :** ಬಿಸುಸುಯ್ವ ಬೆಂಕೆಯಲೆಪಿಂ ಪಳ್ವಿರ್ದ ಬೆಳ್ವಾಯ ದರ್ದುಱಮೇಂ[ಪಾಠಾಂ. ಮರ್ಮಱನೇಂ] ಮಾಣ್ದುದೆ ತಾಂ ಗಡ (ಲೀಲಾವ. ೨-೬೫). 'ದದ್ದರ1' ಪರಾ. [?]

ದರ್ದುರಕ (ನಾ). [ಕಾಮಶಾ] ರತಿಬಂಧಗಳಲ್ಲಿ ಒಂದು: ಅಸಿಯಳಂಗತನೆ ಮಲಂಗಿ ಸಸಿನೆ ತೊಡೆಯನಿಟ್ಟು ಮಡಿಯೆ ಪಸರವಾಗೆ ಪದಮನೆರಡನೂರು ಯುಗದೊಳು ಮಿಸುಕದಂತಿರೂಱಿ ಪುಳಕಮೊಸರಲಪ್ಪಿ ಗಾಢದಿಂದವೊಸೆದು ರಮಿಪಳಿಂದೆ ದರ್ದುರಕಮೆನಿಪ್ಪುದು (ಜನವ. ೧೦-೮). [ಸಂ.]

ದರ್ದುರಿ (ನಾ). ಒಂದು ಬಗೆಯ ವಂರ; ಮಿಟ್ಲವಂರ: "ದರ್ದುರಿಯೆನಲು ಮಿಟಲಿಯಕ್ಕು" (ಮಂಗರಾ. ೩೫-೧೪). [?]

△ **ದರ್ದುಱ** 'ದರ್ದುರ2' ನೋ.

ದರ್ದ್ರು (ನಾ). ಹುಳುಕಡ್ಡಿ. [ಸಂ.]

ದರ್ಪ (ನಾ). ೧. ಹೆಮ್ಮೆ ; ಗರ್ವ ; ಸೊಕ್ಕು ; ಅಹಂಕಾರ; ಮದ : "ದರ್ಪಃ, ಮದಃ . . . ಅಹಂಕಾರಃ – ಈ ೬ ಗರ್ವಂ" (ಹಲಾಯು. ೧೦೯-೩೭) ; "ದರ್ಪಮೆನಿಸಿರ್ಪುದು ದಪ್ಪವೆನಲಕ್ಕು" (ಕಬ್ಬಿಕ್ಕ. ೯೩) ; ನಿಜಾಧೀಶ್ವರರಾಜ್ಞೆಯಿಂ ಪ್ರತ್ಯಂತವಾಸಿಗಳಾಗಿ ಮಲೆದ ರಿಪುನ್ರಿಪರ ಸಮಿತಿಯ ದರ್ಪ್ಪಮಂ ಪೊಡಪ್ಪುರ್ಮನಡಂಗಿಸಿ ತದೀಯ ಸರ್ಬ್ಬಸ್ವಮಂ ನಿಜೇಶಂಗೆ ತಂದುಕೊಟ್ಟು (ನಾಂದೇಡ್. ೩-೨೨ ವ ; 1047) ; ಹರುಷ ದರ್ಪ ಕ್ರೋಧ ಲಜ್ಜಾತುರತೆ ಮಾನ ವಿಮಾನವಿವರಲಿ ನಿರುತ ಸಮನೆಂದೆನಿಸಿ ಕೃತ್ಯಾಕೃತ್ಯಕೌಶಲವ ವಿರಚಿಸುವ ... ಕಾರ್ಯವೆಸಗುವವನೆ ಪಂಡಿತನು (ಕುಮ್ಯಾಉ. ೩-೪೪). ೨. ಠೀವಿ ; ಜರ್ಬು ; ಜೋರು ; ವೆಂಕಪ್ಪಯ್ಯ ಮೊದಲಿನಿಂದಲೂ ದರ್ಪದ ಗಂಡನಾಗಿದ್ದ ವ್ಯಕ್ತಿ (ವಿದ್ಯಾರ. ೩): ಲಂಚ ಕಡಮೆಯಾಗಬೇಕಾದರೆ ಆಡಳಿತದಲ್ಲಿ ಬಿಗಿ ಮತ್ತು ದರ್ಪ ಹೆಚ್ಚಾಗ ಬೇಕು (ಪಂಜಪಂ. ೦೬೫). ೩. ಕೆಚ್ಚು ; ಧೈರ್ಯ ; "ಅದಟು" (ಚತುನಿ. ಕಿ. I, ೯೯). [ಸಂ.]

ದರ್ಪಂಗಿಡು 'ದರ್ಪಂಗೆಡು' ನೋ.

ದರ್ಪಂಗೆಡು, ದರ್ಪಂಗಿಡು (ಕ್ರಿ). ಸೊಕ್ಕು ಅಡಗು ; ಹಮ್ಮು ಕಡಮೆಯಾಗು : ಪಂಚಾಕ್ಷರಿಯ ಪ್ರಣವವ ತಪ್ಪದೆ ತ್ರಿಸಂಧ್ಯೆಯಲ್ಲಿ ನೆನಹುಗೊಳ್ಳಿ ಇದರಿಂದ ರುಜೆ ದರ್ಪಂಗೆಡುಗು (ಸರ್ವವ. ೦೯-೯೨) ; ಬಾಳ ಬಾಯ್ದಾರೆಯ ಸೋಂಕೆಂದು ಕದಳೀದಳ ಸ್ಪರ್ಶನಕ್ಕೆ ದರ್ಪಂಗೆಟ್ಟೊ [ಪಾಠಾಂ. ಗಿಟ್ಟೊ]ಪ್ಪಂ ಗುಂದುತ್ತುಂ (ಗಿರಿಕ. ೪-೧೧೮ ವ). **ದರ್ಪಂಗಿಡು :** ಮೇಲಿನ 'ಗಿರಿಕ' ಪ್ರಯೋಗದ ಪಾಠಾಂತರವನ್ನು ನೋಡಿ. [ದರ್ಪ + ಕೆಡು1]

ದರ್ಪಕ1 (ನಾ). ಕಾಮ ; ಮನ್ಮಥ : "ಪ್ರದ್ಯುಮ್ನಃ . . . ದರ್ಪಕಃ ಶೂರ್ಪಕಾರಾತಿಃ, ... ಮನೋಭವಃ ಈ ೨೮ ಕಾಮ(ದೇವ)ನ ಪೆಸರ್" (ಹಲಾಯು. ೭-೩೪) ; ಧೈರ್ಯಂಗೆಟ್ಟು ಮೇಲ್ವಾಯ್ವ ಚೇಷ್ಟೆಗೆ ಪೌಲಸ್ತ್ಯನು ಮೊತ್ತುಗೊಟ್ಟನೆನಲಾರಂ ದರ್ಪಕಂ ದಂಡಿಸಂ (ಪಂಠಾಮಾ. ೯-೧೪೮) ; ಓರೊಂದೆ ಪೂವಿನ ಬಾಣಂಗಳು ಮೆಯ್ದೆ ಹೀನನಧಿಕಂಗಾಕ್ಷೇಪಮಂ ಮಾರ್ಪ್ಪುದಾವ ನಯಂ ದರ್ಪ್ಪಕ ಮೇಘಚಂದ್ರಮುನಿಯೊಳ್ಮಾಣ್ ನಿನ್ನ ದೋರ್ದ್ದರ್ಪ್ಪಮಂ (ಎಕ. II, ೧೨೭-೧೨೦ ; 1115) ; ಸಕಳ ನಿಕೇತನಂ ಗಳೊಳೆ ದರ್ಪಕನುನ್ನತಿ ದರ್ಪಕಾಜ್ಞೆ ದರ್ಪಕನ ಕಥಾಳಿ . . . ದರ್ಪಕ ನಾಣೆ ಸುತ್ತಲುಂ (ಗಿರಿಕ. ೪-೧೨೦) ; ಇದು ಕುಸುಮಾಸ್ತ್ರನಸ್ತ್ರಮಿದು ದರ್ಪಕನಾರ್ಪು ಮನೋಜನೋಜೆ ನೋಡಿದು ನನೆವಿಲ್ಲ ಬಲ್ಲಹನ ಚೆಲ್ವಿದು . . . ಮಾರವೀರನಗ್ಗದಸದಳಂ ಕೃತಿಧ್ವಜಮಿದೆಂದೆನಿಸಿರ್ದುದು ರೂಪು ನೀಱೆಯಾ (ರಾಜಶೇ. ೭-೬೩). [ಸಂ.]

ದರ್ಪಕ2 (ನಾ). ತರಕಲಾದುದು (?) : ದರ್ಪಕಮಲ್ಲದ ಜಿಹ್ವಂ ನೇರ್ಪಟ್ಟಸಿದಾಗಿ ನುಣ್ಪುವೆತ್ತೆಳ್ಳನಿತುಂ ಕರ್ಪಿಲ್ಲದೆ ನಿಡಿದಪ್ಪುದದಾರ್ಪ ತೆರವು ದಶನರಾಜಿಯುಂ ರಾಜಿಪುದುಂ (ಅಶ್ವಶಾ. ೧-೨೨). [?]

ದರ್ಪಕದರ್ಪಭಂಜನ (ನಾ). ೧. ಮನ್ಮಥನ ಗರ್ವಭಂಗ ಮಾಡಿದವನು; ಶಿವ. ೨. ಮನ್ಮಥನ ಸೊಕ್ಕನ್ನು ಅಳಿಸಿದವನು; ಜಿನ : ಅನಂತಬೋಧ ನಿಧಿ ನಿತ್ಯಸುಖೋನ್ಮುಖನೀ ಕುಮಾರಕಂ ಪರಿಣಯನೋತ್ಸವಕ್ಕೆ ಬಗೆ ದರ್ಪನೆ ದರ್ಪಕದರ್ಪಭಂಜನಂ (ಮಲ್ಲಿಪು. ೧೩-೮೪).

[ದರ್ಪಕ1 + ದರ್ಪ + ಭಂಜನ]

ದರ್ಪಕಧ್ವಂಸಿ (ನಾ). ಕಾಮನನ್ನು ನಾಶಮಾಡಿದವನು ; ಶಿವ : ಇಂತು ಸಕಲದೇವವಲ್ಲಭನಪ್ಪ, ಸರ್ವಾಭರಣನಂ ದರ್ಪಕಧ್ವಂಸಿಯಂ . . . ಅರ್ಚಿಸುತ್ತಮಿಪ್ಪ ಸಮಯದೊಳು (ಬಸರ. ೪-೧) ; ಕಂದರ್ಪಜನಕಾದಿಗಳ್ ಮೊಱೆಯಿಡಲ್ ಕೇಳ್ದು ತದ್ದರ್ಪಕಧ್ವಂಸಿ ತವ ವಧೆಗೆ ಬರುತಿರಲುಸಿರ ಬಂದೆವಿದು ಹದನೆಂದನು (ಚಬಪು. ೪೭-೧೭). [ಸಂ. ದರ್ಪಕಧ್ವಂಸಿನ್]

ದರ್ಪಕಪ್ರತಾಪ (ನಾ). ಕಾಮನ ಪರಾಕ್ರಮಂ ; ಮನ್ಮಥನ ಶಕ್ತಿ: ವಿಚಾರಿ ಪೊಡಿಂತಿದು ದರ್ಪಕಪ್ರತಾಪದ ಪರಿಜೊಂದು ಸಂದಣಿಯೊ ಪೇಳೆನೆ ಬಂದುದು ಭಾಮಿನೀಜನಂ (ರಾಜಶೇ. ೦೦-೧೨). [ದರ್ಪಕ1 + ಪ್ರತಾಪ]

ದರ್ಪಕವಿರೋಧಿ (ನಾ). ಮನ್ಮಥನ ಶತ್ರು ; ಶಿವ : ಬಾಣಾಸುರಂ ಸಂಗ್ರಾಮಕಾಮನಾಗಿ ತನ್ನುಪವನದೊಳ್ ಸನ್ನಿಹಿತನಾಗಿರ್ಪ ದರ್ಪಕ ವಿರೋಧಿಯನಾರಾಧಿಸಿ (ಜಗವಿ. ೧೭-೮೮ ವ). [ದರ್ಪಕ1 + ವಿರೋಧಿ]

ದರ್ಪಕಹರ (ನಾ). = ದರ್ಪಕಧ್ವಂಸಿ : ದರ್ಪಕಹರನಿಂದ ತನು ದಗ್ಧನಾದ ಕಂದರ್ಪ ನಿನ್ನಯ ಬಸಿಱೊಳಗೆ ಬರ್ಪನು ನಾ ಕೊಟ್ಟ ವರದೊಳು ತುಸು ಮಾತ್ರ ತಪ್ಪದು ಕೇಳಾಯತಾಕ್ಷಿ (ಮೋಹತ. ೪-೨೩). [ಸಂ.]

ದರ್ಪಕಾಹಿತ (ನಾ). ಮನ್ಮಥನ ವಿರೋಧಿ ; ಶಿವ : ದರ್ಪಕಾಹಿತಮೂರ್ತಿ ಮುನಿಮುಖದರ್ಪಣನು ಶಿಷ್ಯನನು ಕರೆದು ಸಮರ್ಪಿಸಿದನರಸಂಗೆ ವೇದ ವ್ಯಾಸಮುನಿರಾಯ (ಕುಮ್ಯಾಅ. ೨-೭). [ದರ್ಪಕ1 + ಅಹಿತ]

ದರ್ಪಣ (ನಾ). ಕನ್ನಡಿ; ಮುಕುರ : "ಆದರ್ಶಃ, ದರ್ಪಣಃ, ಮುಕುರಃ – ಈ ೩ ಕನ್ನಡಿ" (ಹಲಾಯು. ೯೦-೪೦೦) ; "ಆದರ್ಶನಂ ದರ್ಪಣಂ ಮುಕುರ ಮೆಂದೆನಲ್ ಕನ್ನಡಿಗೆ ನಾಮಮಕ್ಕುಂ" (ಮಂಗರಾ. ೬೧-೧೮); ಕೇರಳ ವಿಟೀ ಕಟೀಸೂತ್ರಾರುಣಮಣಿ ಮಲಯಯುವತಿದರ್ಪಣನಾಂಧ್ರೀ ನೀರಂಧ್ರ ಬಂಧುರಸ್ತನಹಾರನುದಾರಂ ಸರಸ್ವತೀಮಣಿಹಾರಂ (ಆದಿಪು. ೦-೩೨) ; ಕಂದನ ಕೈಯ ದರ್ಪಣವ ಪ್ರತಿಬಿಂಬ ನುಂಗಿತ್ತು ದಿವಾರಾತ್ರಿ ಉದಯದ ಬೆಳಗನು ಕತ್ತಲೆ ನುಂಗಿತ್ತು (ಅವಚಂ. ೪-೦೩) ; ತುಪ್ಪೇಱಿದ ದರ್ಪಣದೊಳ್ ಪಜ್ಜಳಿಸಲಾರ್ಪುದೇ ಪ್ರತಿಬಿಂಬಂ (ಯಶೋಚ. ೦-೩೯) :

[ಸಂ.]

ದರ್ಪಣನ್ಯಾಯ (ನಾ). ಒಂದು ಬಗೆಯ ನ್ಯಾಯ ; P ಕನ್ನಡಿಯಲ್ಲಿ ಪ್ರತಿಬಿಂಬಿಸುವ ಮುಖವೇ ಮೊದಲಾದುವುಗಳ ಪ್ರತಿಬಿಂಬವು ಬಿಂಬಕ್ಕಿಂತ ಬೇರೆಯಾದುದಲ್ಲ. ಹಾಗೆಯೇ ಒಂದು ವಸ್ತುವಿನಂತೆ ಮತ್ತೊಂದು ವಸ್ತುವು ಇದೆ ಎಂದು ತಿಳಿಸುವ ನ್ಯಾಯ. ಇದನ್ನೇ ಬಿಂಬ ಪ್ರತಿಬಿಂಬನ್ಯಾಯವೆಂದೂ ಹೇಳುತ್ತಾರೆ : ವರ ಸಮಾನೀಕರೊಳ್ ದರ್ಪಣನ್ಯಾಯದಿಂ ಪರಿಶೋಭಿಸುತ್ತಿಹಂ (ವೆಂಕಾರಾ. ೨-೧-೩೧)

[ದರ್ಪಣ + ನ್ಯಾಯ]

ದರ್ಪಣಮಂಟಪ (ನಾ). ಕನ್ನಡಿಯಿಂದ ರಚಿತವಾದ ಮಂಟಪ, – ಚಪ್ಪರ ; ಕನ್ನಡಿ ಜೋಡಿಸಿದ ಮಂಟಪ : ಮತ್ತಮಾ ವನಂಗಳಲ್ಲಿ ಚಿತ್ರಶಾಲೆ . . . ದರ್ಪಣಮಂಟಪ, ಪಟಮಂಟಪ, ಪುಷ್ಪಮಂಟಪ, ಚಿತ್ರಮಂಟಪ, ರತ್ನಮಂಟಪ, ತರುವಾಟಿಗಳ ತಣ್ಣೆಳಲ್ಗಳೊಳಗೆಯುಂ (ವಿವೇಕ. ೨೨೮). [ದರ್ಪಣ + ಮಂಟಪ]

ದರ್ಪಣಲಿಪಿ (ನಾ). ಒಂದು ಬಗೆಯ ಲಿಪಿ ; ಗೂಢಲಿಪಿ ; ಕನ್ನಡಿಯಲ್ಲಿ ನೋಡಿ ಓದಬಹುದಾದ ಲಿಪಿ (?) : ಲೇಖಲಿಪಿ, ದರ್ಪಣಲಿಪಿ, ರಗಣಲಿಪಿ . . . ಅಗಣಿತ ಲಿಪಿಗಳ ನೋಡಲಱಿಯದೆ ಬಿಜ್ಜಳರಾಯನ ಸಭೆಯೊಳು ಕಳಕಳಗೊಳುತಿದ್ದರು ವಿದ್ವಾಂಸರುಗಳೆಲ್ಲ (ಭಾಸ್ಕರ. ೭೭-೬).
[ದರ್ಪಣ + ಲಿಪಿ]

ದರ್ಪಣಾವಲೋಕನ (ನಾ). ಕನ್ನಡಿಯಲ್ಲಿ ನೋಡಿಕೊಳ್ಳುವಿಕೆ : ಸಕಲವಾದ ಭೂಷಣಭೂಷಿತನಾಗಿ ದರ್ಪಣಾವಲೋಕನವಂ ಮಾಡಿ, ಅಗ್ನಿ ಕಾಣಿಸಿದ್ದನ್ನು ತಿಳಿದು ನೋಡಿ ಭೋಜನ ಮಾಡಬೇಕೆಂದು ಬಲ್ಲವರ ಮತವು (ಸಕವೃ. ೪೯). [ದರ್ಪಣ + ಅವಲೋಕನ]

ದರ್ಪಪೂರಿತ (ಗು). ದರ್ಪದಿಂದ ಕೂಡಿದ ; ಠೀವಿಯಿಂದ ಕೂಡಿದ : "ಬರುತ್ತೀಯೋ ಇಲ್ಲೋ ?" ಎಂದು ಫೌಜುದಾರರು ಕೇಳಿದರು – ದರ್ಪಪೂರಿತ ಸ್ವರದಲ್ಲಿ (ನಾಪೂರೀ. ೨೪೭). [ದರ್ಪ + ಪೂರಿತ]

ದರ್ಪಮುಖ (ನಾ). ಸೊಕ್ಕೇರಿದವನು : "ಮದಮುಖರೆನೆ ದರ್ಪಮುಖರು" (ಭಾರನಿ. ೨೪). [ದರ್ಪ + ಮುಖ]

ದರ್ಪರಹಿತ (ಗು). ೧. ಅಹಂಕಾರವಿಲ್ಲದ ; ಸರಳ ಸ್ವಭಾವದ. (ನಾ). ೨. ಅಹಂಕಾರವಿಲ್ಲದವನು ; ನಿರಹಂಕಾರಿ ; ಸರಳ ಸ್ವಭಾವದವನು: ಸಿರಿಯೊಡೆಯನಾಗಿಯುಂ ದರ್ಪರಹಿತನೋದೊಡೆಯನಾಗಿಯುಂ ವಿಗಳಿತ ಮತ್ಸರಂ . . . ಏಂ ಪಿರಿಯನೊ ಖಗೇಂದ್ರಾಧೀಶಂ (ಶಾಂತಿಪು. ೩-೮೬).
[ದರ್ಪ + ರಹಿತ$_1$]

ದರ್ಪವಡೆ (ಕ್ರಿ). ಅಹಂಕಾರವನ್ನು ಹೊಂದು ; ಗರ್ವ ಪಡೆ : ದರ್ಪಕ ನೆರ್ದೆಯಲ್ಲಿ ತಿವಿದು ರಕ್ಕಸ ಬಹು ದರ್ಪವಡೆದು ನಿಂದಿರ್ದ (ಮೋಹತ. ೦೨-೬೬). [ದರ್ಪ + ಪಡೆ$_1$]

ದರ್ಪಿತ (ಗು). ೧. ದರ್ಪದ ; ಸೊಕ್ಕಿನ ; ಗರ್ವದ : ಕ್ಷಿತಿತಳದೊಳ್ ನೆಗೞ್ದಿರ್ದ ಪ್ರತಿಮಲ್ಲನನಿಕ್ಕಿ ಮುಯ್ವನಣಮಾನದೆ ದರ್ಪಿತ ದುರಿತ ಮಲ್ಲನುಮನುಡಿವ ತಕ್ಕಿನಿಂ ಸಭೆಗೆ ನಡೆದಂ (ಆದಿಪು. ೦೪-೦೩೪) ; ಸೂರ್ಪಕ ಪ್ರಹರಪ್ರಹಾರಿಗೆ ದರ್ಪಿತತ್ರಿಪುರೇಂದ್ರನಾಗ್ನಿಗಹರ್ಪತಿಪ್ರಣುತ ಪ್ರಭಾಮಯ ದಿವ್ಯದೇಹಂಗೆ . . . ಅರ್ಪಿಸುವೆನು (ಬಸಪು. ೫೮-೪೧). (ನಾ). ೨ = ದರ್ಪಿಷ್ಠ : ಆದರೆ ಅವನ ಅನುಭವಕ್ಕೆ ಇನ್ನೂ ಗೋಚರವಾಗದ ಅನೇಕ ವಿಷಯಗಳು ಈ ಪ್ರಪಂಚದಲ್ಲಿರುವುದರಿಂದ ಇಂತಹ ಭವಿಷ್ಯವನ್ನು ನುಡಿಯುವವನು ದರ್ಪಿತನೆಂದು ಹೇಳಬೇಕೇ ಹೊರತು ಅಜ್ಞನೆಂದಲ್ಲ (ಭೌತವಿ. ೨೭೭). [ಸಂ.]

ದರ್ಪಿಷ್ಠ (ನಾ). ದರ್ಪದಿಂದ ಕೂಡಿರುವವನು; ಅಹಂಕಾರಿ : ನೆರೆದಿರ್ದ ನೃಪವರರುಮಂ ಮೂದಲಿಸಿ ಮಾತಂ ಬೂತುಮನಟ್ಟುವುದುಂ ದರ್ಪಿಷ್ಠನಪ್ಪ ತ್ರಿಪೃಷ್ಠಕುಮಾರಕಂ (ಶಾಂತಿಪು. ೫-೪೭ ವ) ; ರತ್ನಸಿಂಹಾಸನದ ಮೇಲೆ ದರ್ಪಿಷ್ಠ ದರ್ಪಕಕರಿಮೃಗೇಶನಗಜಾತೆವೆರಸೋಲಗಂಗೊಟ್ಟನು (ಸಿದ್ಧರಾ. ೧-೦೮). [ಸಂ.]

ದರ್ಪಿಸು (ಕ್ರಿ). ದರ್ಪಹೊಂದು ; ಗರ್ವಪಡು ; ಹೆಮ್ಮೆತೋರು: (ಕಿ).
[ದರ್ಪ + – ಇಸು$_3$]

ದರ್ಬಾರ್‌ಚಾವಡಿ (ನಾ). ದರ್ಬಾರು ನಡೆಸುವ ಆಸ್ಥಾನ ಮಂದಿರ ; ಓಲಗಶಾಲೆ : ಮಹಾಸ್ವಾಮಿಗಳ ದರ್ಬಾರ್‌ಚಾವಡಿಯಲ್ಲಿ ಕಾಲುಮಡಿಯನ್ನಾಗಿ ಉಪಯೋಗಿಸಲು ಯೋಗ್ಯವಾಗಿದೆ (ಗಲಿಪ್ರ. ೨೩).
[ದರ್ಬಾರ್$_0$ (<ದರ್ಬಾರು) + ಚಾವಡಿ]

ದರ್ಬಾರ್‌ಭಕ್ಷಿ (ನಾ). (ಆಸ್ಥಾನದ) ಹಣಕಾಸಿನ ವ್ಯವಹಾರ ನೋಡಿಕೊಳ್ಳುವ ಅಧಿಕಾರಿ : ಕೂಡಲೆ ಮಹಾರಾಜರು . . . ದರ್ಬಾರ್‌ಭಕ್ಷಿಯವರಿಗೆ ಅದೇರೀತಿ ಅಪ್ಪಣೆಮಾಡಿದರು (ಸಂಗೀತ. ೪೯).
[ದರ್ಬಾರ್$_0$ (<ದರ್ಬಾರು) + ಭಕ್ಷಿ (<ಬಕ್ಷಿ)]

ದರ್ಬಾರಿ, ದರಬಾರಿ (ಗು). ೧. ದರ್ಬಾರಿಗೆ ಉಚಿತವಾದ; ಆಸ್ಥಾನಕ್ಕೆ ಯೋಗ್ಯವಾದ : ಪ್ರತಿಷ್ಠಿತರನ್ನೆಲ್ಲ ದರ್ಬಾರೀವಿನಯದಿಂದ ಸ್ವಾಗತಿಸಿದ (ಗ್ರಾಮಾಯ. ೮). (ನಾ). ೨. ಆಸ್ಥಾನಕ್ಕೆ ಸಂಬಂಧಿಸಿದವನು ; ಸಭಾಸದ ; ಆಸ್ಥಾನಿಕ : "ಆಸ್ಥಾನದ ದೊಡ್ಡ ಮನುಷ್ಯ; ಆಸ್ಥಾನಿಕ; ದರ್ಬಾರಿ" (Courtier. ಇಂಳನಿ). **ದರಬಾರಿ** : ೨. ನಗರದಲ್ಲಿ ಅವರಿಗೆ ಯಥೇಷ್ಟ ದರಬಾರಿಗಳು ದೊರೆತರು (ಸ್ಮೃತಿಚಿ. ೪೦೨).
[←ಪಾರ. ಹಿಂ. ದರ್ಬಾರೀ; ದರಬಾರೀ, ಮರಾ. ದರಬಾರೀ]

ದರ್ಬಾರು, ದರಬಾರ, ದರಬಾರು (ನಾ). ೧. ಆಸ್ಥಾನ; ಒಡ್ಡೋಲಗ; ರಾಜಸಭೆ : ಮಹಾರಾಜರವರ ದರ್ಬಾರಿನಲ್ಲಿ . . . ಸರದಾರರನ್ನು ಮೊಕರರ್ಮಾಡಿದರು (ಮಹಾವಂ. II, ೩) ; ಅರಸನು ದರ್ಬಾರನ್ನು ಮುಗಿಸಿ ಹೊರಟನು (ಪಂಚಾಮೃ. ೬೮) ; ಸಭೆಯು ಒಬ್ಬ ಮಹಾರಾಜನ ಅಥವಾ ಮಠಾಧಿಪತಿಯ ದೊಡ್ಡ ದರ್ಬಾರಿನಂತೆ ಕಾಣುತ್ತಿತ್ತು (ಹುಟ್ಟಹ. ೨೨). ೨. ಆಡಂಬರ ; ವೈಭವ ; ಡೌಲು : ಆತನ ದರ್ಬಾರಿಗೆ ಕೊನೆಯೇ ಇಲ್ಲ (ತತ್ವಪ್ರಾ. ೫೬೩) ; "ಆದರೆ ನೆನಪಿರಲಿ, ನನ್ನ ದರ್ಬಾರೆಲ್ಲ ಒಂದೆ ಒಂದು ಗಂಟೆಯದು" ಎಂದು ಮಾಸ್ಲೆನಿಕೋವ್ ನುಡಿದನು (ಪುನರು. ೨೨೩). ೩. ದರ್ಪದಿಂದ ಕೂಡಿದ ಅಧಿಕಾರ : "ನೀನು ಈಗಿನಿಂದ ಏಟು ಹಾಕುತ್ತಿದ್ದೀ, ದರ್ಬಾರು ನಡೆಸಲಿಕ್ಕೆ" ರಾಯರು ಹೆಂಡತಿಯ ಮಾತಿಗೆ ನಕ್ಕು ಹೇಳಿದರು (ಮರಳಿ. ೮). ೪. [ಸಂಗೀತ] ಒಂದು ರಾಗದ ಹೆಸರು: ದರ್ಬಾರು:– ೨೨ನೇ ಮೇಳಕರ್ತ ಖರಹರಪ್ರಿಯದಲ್ಲಿ ಜನ್ಯ. ಗಂಭೀರ ರಾಗ, ಉಪಾಂಗರಾಗ . . . ವೀರರಸ ಪ್ರಧಾನ ರಾಗ. ಎಲ್ಲಾ ವೇಳೆಯಲ್ಲೂ ಹಾಡಬಹುದು (ಸಂಗೀಪಂ. ೦೬೨). **ದರಬಾರ$_1$** : ೧. ; ಮಹಾರಾಜರ ದರಬಾರದ ಹಳೆಯ ಕಾಗದ ಪತ್ರಗಳನ್ನು ನೋಡುವ ಇಚ್ಛೆ ಅವರಿಗಿದ್ದಿತು (ರತ್ನಗೋ. ೭೦) ; ದರಬಾರದಿಂದ ಗಣೇಶ ನಾರಾಯಣನು ತನ್ನ ಮನೆಯ ಕಡೆಗೆ ಹೊರಟನು (ಮಂದಾಕಿ. ೨೨). **ದರಬಾರು** : ೧. ಶ್ರೀರಂಗಪಟ್ಟಣದಲ್ಲಿ ದವಲತ್ತು ಮಾಡಿದ ನವಾಬ ಹೈದರಲ್ಲಿ ಖಾನ ಬಹದರವರ ದರಬಾರಿನ ವರ್ತಮಾನದ ವಿವರ (ಹೈದರ. ೨೯): ಅದನ್ನು ಬಾದಷಹ ಕೇಳಿ ದೊಡ್ಡ ದರಬಾರು ಮಾಡಿ . . . ಬುದ್ಧಿಯನ್ನು ಅರಿಯಬೇಕು (ಕಥಾಮಂ. IV, ೫೭) ; ಶ್ರೀರಂಗಪಟ್ಟಣದ ಮಹಾಮಂಡಲೇಶ್ವರರ ದರಬಾರಿನಲ್ಲಿ ಮೈಸೂರಿನ ರಾಜಒಡೆಯರಿಗೆ ಮನ್ನಣೆಯಿದ್ದಿತು (ಶ್ರೀರಾಯ. ೫).

ದರ್ಬಾರು ನಡೆಸು, ದರಬಾರ ನಡೆಸು = ೧. ಒಡ್ಡೋಲಗ ನಡೆಸು: ಮೈಸೂರು ಮಹಾರಾಜರು ದಸರೆ ಹಬ್ಬದಲ್ಲಿ ದರ್ಬಾರು ನಡೆಸುತ್ತಿದ್ದರು (ರೂಢಿ). ಭಾರತೇಯರ ಹೃದಯ ದೈವ ಸಮ್ರಾಜ ದರಬಾರ ನಡೆಸಿದನೆಲ್ಲಿ ನೋಡಿದುವೆ ಢಿಲ್ಲಿ (ಕಎಪು. ೫೫); ೨. ಮಜಾ ಮಾಡು: ನಡೆಯುವಾಗ ಅವನು ದರ್ಬಾರು ನಡೆಸಿಬಿಟ್ಟ (ರೂಢಿ). ೩. ಅಧಿಕಾರ ನಡೆಸು : ಎಲ್ಲರ ಮೇಲೂ ದರ್ಬಾರು ನಡೆಸಿದರೆ ಸುಮ್ಮನಿರುತ್ತಾರೆಯೆ ? (ರೂಢಿ).
[←ಪಾರ. ಹಿಂ. ದರ್ಬಾರ್; ದರಬಾರ್, ಮರಾ. ದರಬಾರ್]

ದರ್ಬು (ನಾ). (?) : ಒಬ್ಬ ಪುರುಷನು ಹಲವು ಸ್ತ್ರೀಯರ ದರ್ಬಿನಲ್ಲಿ ಭೋಗಿಸುವನದು ತಾನಿಬ್ಬಿಯೊಳು ಕದಂಬರತಿಯೈ (ಕಕ್ಕೋಕ. ೦೦-೨೭).
[P ಇದು 'ತರ್ಬು' ಎಂಬುದರ ಅಪಲಿಖಿತವಿರಬಹುದು]

ದರ್ಬೆ, ದಬ್ಬೆ$_2$ (ನಾ). ಕುಶ; ದರ್ಭೆ : ಕೊರಲ ಪೊಸಜನ್ನಿವರಮೊಪ್ಪಿರೆ . . . ದರ್ಬೆ ಕರಮತಿಶಯದಿಂ ಬೆರಳೊಳ್ ರಂಜಿಸೆ ಕಾಶಾಂಬರಮೆಸೆದಿರೆ ಬಂದು ನಿಂದು ಭೂಸುರನೊರ್ವಂ ವೇದರುಕ್ಕಂ ಪೇಟ್ಟಕ್ಷತೆಯನೀವುದುಂ (ಧರ್ಮಾಮೃ. ೦-೯೫). 'ದರ್ಬೆಹುಲ್ಲು' ಪರಾ. ದಬ್ಬೆ$_2$: "ಧರ್ಭಾ – ದಬ್ಬೆ" (ಕಾಶಕ್ಯ. ೨೦೯). "ದಬ್ಬೆ–ದರ್ಭಾ = ಕುಶ" (ತದೃಕೋ. ೦೮) :
[<ಸಂ. ದರ್ಭ]

ದರ್ಬೆಹುಲ್ಲು (ನಾ). ಒಂದು ಬಗೆಯ ಹುಲ್ಲು; ಕುಶ : ನಾಳೆ ಗ್ರಹಣ, ಸ್ವಲ್ಪ ದರ್ಬೆಹುಲ್ಲು ತಾ (ಕೂಡಿ). [ದರ್ಬೆ + ಹುಲ್ಲು (<ಪುಲ್)]

ದರ್ಭ (ನಾ). ಹೋಮ, ಹವನಾದಿಗಳಿಗೆ ಬಳಸುವ, ಸೂಜಿಯಂತೆ ಮೊನೆಯಳ್ಳ ಹುಲ್ಲು; ದರ್ಭೆಯ ಹುಲ್ಲು; ಕುಶ; ದರ್ಭೆ: "ಬರ್ಹಿಃ ದರ್ಭಃ, ಕಾಥಃ, ಕುಶಃ – ಈ ೪ ಕುಶೆ" (ಹಲಾಯು. ೩೨-೩೭). [ಸಂ.]

ದರ್ಭಪರಿಸ್ತರಣ (ನಾ). ದರ್ಭೆಯನ್ನು ಹರಡಿರುವುದು; ಹಾಸಿದ ದರ್ಭೆ : ದರ್ಭವಿಷ್ಟರೇ – ದರ್ಭಪರಿಸ್ತರಣದ ಮೇಲೆ, ಶಾಯಯೇತ್ – ಪಟ್ಟಿರಿಸುವುದು (ಪ್ರತಿಪಾ. ೬-೦). [ದರ್ಭ + ಪರಿಸ್ತರಣ]

ದರ್ಭಶಯನ (ನಾ). ೧. ದರ್ಭೆಯ ಹುಲ್ಲಿನಿಂದ ಮಾಡಿದ ಹಾಸಿಗೆ; ದರ್ಭೆಹುಲ್ಲಿನ ಹಾಸಿಗೆ : ಬಲಾತಾವರ್ತರ್ ಪೂಜಾಪುರಸ್ಸರಂ ದರ್ಭ ಶಯನತಳಗತರ್ . . . ಬಂದು (ಆದಿಪು. ೦೩-೫೯ ವ); ಲಕ್ಷ್ಮಣನೊಡನೆ ದರ್ಭಶಯನದಲ್ಲಿ ಮಲಗಿದನು (ರಕಥಾ. ೪೦೦). ೨. ದಕ್ಷಿಣ ಭಾರತದಲ್ಲಿ, ರಾಮೇಶ್ವರದ ಹತ್ತಿರದಲ್ಲಿರುವ, ರಾವಣನು ದರ್ಭಶಯನದಲ್ಲಿ ಮಲಗಿದ್ದನೆಂದು ಹೇಳಲಾದ ಒಂದು ಸ್ಥಳದ ಹೆಸರು; ಒಂದು ತೀರ್ಥಕ್ಷೇತ್ರ. [ದರ್ಭ + ಶಯನ]

ದರ್ಭಶಯ್ಯೆ (ನಾ). = ದರ್ಭಶಯನ ೧ : ಅರ್ಚಿಸುವ ತುರಂಗದಂತಿರಥ ಸಂಕುಳಮೇಱುವ ದರ್ಭಶಯ್ಯೆ ಪೂಜಿಸುವ ಜಿನೇಂದ್ರಬಿಂಬಮಸೆವುಗ್ರ ರಣಾನಕರೌದ್ರಘೋಷಮೇರ್ವೆಸಕಮನುಂಟುಮಾಡಿದುದು ಪಂದೆಗಂ (ಆದಿಪು. ೦೪-೯೦). [ದರ್ಭ + ಶಯ್ಯೆ]

ದರ್ಭಾಂಕುರ (ನಾ). ದರ್ಭೆಹುಲ್ಲಿನ ತುದಿ: ಒಂದು ದಿವಸಂ ಶೋಣೆಯೆಂಬ ತೊಱೆಯ ತಡಿಯೊಳ್ ತನ್ನ ಕಾಲಂ ದರ್ಭಾಂ[ಪಾಕಾಂ. ವನ್ಮಾಂ]ಕುರಂ ನೆತ್ತರ್ವರೆ ಕೊಂಡೊಡೆ ಮುಳಿದದನಱಿಂದು ಸುಡುವೊನಂ ಸುಬಂಧು ಕಂಡು (ವಡ್ಡಾ. ೦೬೪-೦). [ದರ್ಭ + ಅಂಕುರ]

ದರ್ಭಾಧಿಕಾರ (ನಾ). ದರ್ಭೆಯನ್ನು ಧರಿಸುವ ಹಕ್ಕು; ದರ್ಭೆಯನ್ನು ಹಿಡಿದು ಕರ್ಮಾಚರಣೆ ಮಾಡುವ ಅಧಿಕಾರ : ಚಾತುರ್ವರ್ಣ್ಯದೊಳಂ ದ್ವಿಜಜಾತಿಗೆ ದರ್ಭಾಧಿಕಾರಮಲ್ಲದೆ ವಂಶೋದ್ಭೂತನೃಪೋಚಿತ ಮರಿಯಂ ಘಾತಿಪ ಶಸ್ತ್ರಾಸ್ತ್ರವರ್ಗೆ ಜಾತಿವಿರುದ್ಧಂ (ಗದಾಯು. ೫-೦೬). [ದರ್ಭ + ಅಧಿಕಾರ]

ದರ್ಭಾಸನ (ನಾ). ದರ್ಭೆಯಿಂದ ಮಾಡಿದ ಪೀಠ; ಕುಶಾಸನ : ಕಾಪಾಲಿಕನು ಕಪಾಲಕುಂಡಲೆಯನ್ನು ನವಕುಮಾರನನ್ನೂ ದರ್ಭಾಸನದ ಮೇಲೆ ಕುಳ್ಳಿರಿಸಿ, ತಾನು ತಾಂತ್ರಿಕ ಸಂಬಂಧವಾದ ಪೂಜೆಗೆ ತೊಡಗಿದನು (ಕಪಾಕುಂ. ೦೨೯). [ದರ್ಭ + ಆಸನ]

ದರ್ಭಾಸ್ತರ (ನಾ). ದರ್ಭೆಯ ಹಾಸಂ; ಹಾಸಿದ ದರ್ಭೆ : ಬದರಿಯ ಫಲಂಬೆರಸಿದಿಂಗುಳದ ಹಿಂಡಿಯಂ ದರ್ಭಾಸ್ತರದೊಳಿಟ್ಟು ಪಿಂಡವಿತ್ತನ್ (ಶಿ.ರಾಪು. ೦೬೭-೪೭೭). [ದರ್ಭ + ಆಸ್ತರ]

ದರ್ಭಾಸ್ತರಣ (ನಾ). = ದರ್ಭಾಸ್ತರ : ನಿಜವಿಜಯತುರಗರಥಂಗಳ ನರ್ಚಿಸಿ ಪೊಡವಟ್ಟು ದರ್ಭಾಸ್ತರಣದೊಳಾಯಿರುಳಂ ಕಳೆದಾಗಳ್ (ಪಂಚಕಾ. ೦೨-೫೨ ವ); ತರುಣಿ ನೀ ಹೆಸರಿಸಿದವಿವು ದುರ್ವಾರಣಸಾಧನವಮಲ ದರ್ಭಾಸ್ತರಣವಿದು ಪಾವನವಲಾ ಪ್ರಾಯೋಪವೇಶದಲಿ (ಕುವಾ.ಅ. ೫೧-೦೯). [ದರ್ಭ + ಆಸ್ತರಣ]

ದರ್ಭೆ (ನಾ). = ದರ್ಭ : "ಬರ್ಹಿಃ ಕುಶಂ ಕುಥಮೆನಲು ದರ್ಭೆಯದು" (ಮುಂಗಕಾ. ೩೪-೯); ನಿಮ್ಮ ಕೈಯಲ್ಲಿ ಕಟ್ಟಿದ ದರ್ಭೆಯ ಹುಲ್ಲು ಕೂಡಲ ಸಂಗನನಱಿಯದೆ ಮೊಱೆಯಿಡುವಂತೆ (ಬಸವ. ೪. ೩೭೯); ಬೆರಳಲಿ ಮುರಿದ ದರ್ಭೆಗಳ ಉಟ್ಟ ಬಾಸರ ಬಳಲುಗಚ್ಚೆಯನಟ್ಟಹಾಸದ ಜನದ ನಗೆಗಳ ನಟ್ಟವಿಗನೋಸರಿಸಿ ಸಭೆಯಲಿ ಮೆಲ್ಲನೈತಂದ (ಕುವಾ.ಅ. ೦೫-೦೫); [ಸಂ. ದರ್ಭ]

ದರ್ಭೋದಕ (ನಾ). ದರ್ಭೆಯಿಂದ ಸಿಂಪಡಿಸುವ ಅಥವಾ ತಳಿಯುವ ನೀರು : ಮಂತ್ರಪೂತವಾದ ಈ ದರ್ಭೋದಕದಿಂದ ನಿನ್ನ ಶರೀರದ ಬಾಧೆಯೆಲ್ಲಾ ಪರಿಹಾರವಾಗುವುದು (ಶಾಕುಂತ. ೪೨). [ದರ್ಭ + ಉದಕ]

ದರ್ಮ 'ಧರ್ಮ' ನೋ.

ದರ್ಮಗಾಳೆ 'ದಮ್ಮಗಳೆ' ನೋ.

ದರ್ಮಗೆಯ್ (ಕ್ರಿ). ಧರ್ಮಮಾಡು; ದಾನಮಾಡು; ಉದಾರವಾಗಿ ಕೊಡು : ಸಕಳ ಸಮಮೆನ್ನು ದರ್ಮಗೆಯ್ದು ಸನ್ಮಸದ × × × ನಿಜ ಸ್ಥಿತಿ (ಎಕ. III, ಕ್ಯುಸೊರು. ೪೦-೪ ; ಸು. 980 ?). [ದರ್ಮ (< ಧರ್ಮ) + ಕೆಯ್]

ದರ್ಮಶಾಸನ 'ದಮ್ಮಶಾಸನ' ನೋ.

ದರ್ಯಾಃಪು 'ದರ್ಯಾಪ್ತು' ನೋ.

ದರ್ಯಾಪ್ತಿ 'ದರ್ಯಾಪ್ತು' ನೋ.

ದರ್ಯಾಪ್ಪಿ 'ದರ್ಯಾಪ್ತು' ನೋ.

ದರ್ಯಾಪ್ತು ದರಿಯಾಪು , ದರಿಯಾಪ್ಪಿ, ದರ್ಯಾಃಪ್ತು, ದರ್ಯಾಪ್ತಿ, ದರ್ಯಾಪ್ಪಿ (ನಾ). ವಿಚಾರಣೆ; ತನಿಖೆ; ತಪಾಸಣೆ : ಉಸುರೋರ್ವ ಮುನಿಪಿಯಂ ಕರದುಕೊಂಡುದ್ದೂರಿಗೈದಿಯಾ ಖೂನಿ ದರ್ಯಾಪ್ತನ್ನು ಮಾಡಿಯಾ ಜನರೆಲ್ಲರಂ ಅದ್ದಕದಿ ಕರದುಕೊಂಡೈದುವಂತೆಯುಂ (ಅರ್ಜಾವಿ. ೩೦-೩೮). **ದರಿಯಾಪ್ತು** : ನಾಳೆ ಈ ನ್ಯಾಯ ದರಿಯಾಪ್ತು ಆಗುವಾಗ್ಗೆ ಜಬರದಸ್ತಿ ನಡೆದುದು ನಮ್ಮ ಕಡೆಯಿಂದಲೋ? ಅವರ ಕಡೆಯಿಂದಲೋ? ಎಂಬುದನ್ನು ತಿಳಿಯದೆ (ರಾಚೀಂದ್ರ. ೯೨). **ದರಿಯಾಪ್ಪಿ** : ಯಾವತ್ತು ಗೌಡ ಶ್ಯಾನುಭಾಗ ಶೆಟ್ಟ ವರ್ತಕ ವಗ್ಗೆರೆ ಜನರಿಂದ ಯಥಾವತ್ತಾಗಿ ದರಿಯಾಪ್ತಿ ಮಾಡಿ ರುಜು ಮುಚ್ಚಲಿಕೆಯು ಬರೆಸಿಕೊಂಡು ಮಾಜಿ ಆವಿಾಲಗೆ . . . ಮಹಜರು ಬರೆದು ಕೊಡಬೇಕು (ಮಹಾನಂ. II, ೫೯). **ದರ್ಯಾಃಪ್ತು** : ಚಂನ್ನಾಗಿ ದರ್ಯಾಃಪ್ತು ಮಾಡಿ ಸಾಬಕ್ಕು ಮಾಮೂಲ್ಲು ಪ್ರಕಾರಕ್ಕೆ ನಡೆದು ಕೊಳುವ ಹಾಗೆ ನಿಮ್ಮ ನಿಮ್ಮ ತಾಲ್ಕುದಲ್ಲಿ ಯಿರುವಂತ್ಹಾ ವಡೆರಿಗೆ ಜೋರ ತಾಕಿಯಿತು ಮಾಡುವದು (ಮೈಆರಿ. ೦೯೩೦, ೪೩-೪೪ ; 1812). **ದರ್ಯಾಪ್ತಿ** : ಮುಸಲ್ಮಾನರಲ್ಲಿ ಬಂದ ವ್ಯಾಜ್ಯಗಳ ದರ್ಯಾಪ್ತಿಗೂ ಹುಜೂರಲ್ಲಿ ಸದರ್ ಕೋರ್ಟು ಎಂಬದಾಗಿ ಒಂದು ನ್ಯಾಯಸ್ಥಾನ ವೇರ್ಪಟ್ಟಿತ್ತು (ಪುಹಾವಂ. II, ೩೬) ; ಇವರುಗಳ ದರ್ಯಾಪ್ತಿಯಿಂದ ಕಳವು ನಡೆದ ಮಾನೆಯ ದಿನವೇ ಲಿಂಗ ಸಾಲಿಗ್ರಾಮಕ್ಕೆ ಬಂದು . . . ಕಾಲ ಕಳೆಯುತ್ತಿದ್ದನೆಂದು ತಿಳಿದು ಬಂತು (ಕಲನ. ೧೦೫) ; ಆ ದಿವಸ ಗ್ರಾಮಾಧಿಪತಿಗಳು ಸಣ್ಣ ಮೊಕದ್ದಮೆಗಳನ್ನು ದರ್ಯಾಪ್ತಿ ಮಾಡತಕ್ಕದ್ದಲ್ಲವು (ಗ್ರಾಪಾಕಾ. ೬೬). **ದರ್ಯಾಪ್ತಿ** : ತನ್ನ ಸಮಕ್ಷಮದಲ್ಲಿ ಆರಂಭಿಸಲ್ಪಟ್ಟ ಮೊಕ್ಕದ್ದಮೆಯ ದರ್ಯಾಪ್ತಿ ಪೂರೈಸುವವರೆಗೂ ಅಂಥಾ ಮನುಷ್ಯನು ಸದರಿ ವಿಚಾರಣೆಯಲ್ಲಿ ಹಾಜರಿರಲು ಬದ್ಧನಾಗಿರತಕ್ಕದ್ದು (ಗ್ರಾಪಾಕಾ. ೧೮). [←ಪಾರ. ಹಿಂ. ದರ್ಯಾಫ್ತ್; ದರಿಯಾಫ್ತ್; ಮರಾ. ದರ್ಯಾಪ್ತ್, ದರ್ಯಾಪ್ತೀ, ದರ್ಯಾಫ್ತ್, ದರ್ಯಾಫ್ತೀ.]

ದರ್ವಾನೆ 'ದರವಾನ' ನೋ.

ದರ್ವಿ (ನಾ). ೧. ಸೌಟು; ಸಟ್ಟುಗ: "ದರ್ವೀ, ತರ್ದೂಃ, ಖಜಿಕಾ, ದಾರುಹಸ್ತಃ – ಈ ೪ ಸಟ್ಟುಗಂ" (ಹಲಾಯು. ೩೨-೧೩೭) ; "ಖಜಿಕೆ ದರ್ವೀ ದಾರುಹಸ್ತಂ ದ್ರುತಂ ಹುಟ್ಟಿನಿಕ್ಕು" (ಮುಂಗಕಾ. ೬೦-೧೪) ; ದರ್ವಿಯಂ ಸಂಪಾದಿಸಿರಲು ಕೈಯನ್ನು ಸುಟ್ಟುಕೊಳ್ಳುವದೇಕೆ (ಮುದ್ರಾಪಂ. ೧೫೨). ೨. ಯಜ್ಞ, ಯಾಗಾದಿಗಳಲ್ಲಿ ತುಪ್ಪವನ್ನು ಹಾಕಲು ಉಪಯೋಗಿಸುವ ಸೌಟನ್ನು ಹೋಲುವ ಮುತ್ತುಗ ಮೊದಲಾದ ವಂರದ ಸಾಧನ : ದಿಕ್ಪಾಲಕರನು , ಮಹೇಂದ್ರನನ್ನೂ ಆಹ್ವಾನಿಸಿ . . . ಪರಿಸ್ತರಣಗಳ

ಮೇಲೆ ದರ್ವಿ, ಸಮಿತ್ತು, ಆಜ್ಯಪಾತ್ರೆ, ಅರ್ಘ್ಯಪಾತ್ರೆ ಇವುಗಳನಿಟ್ಟು (ಶಾಂತಲಾ. ೧೦೭). ೪. ಹಾವಿನ ಹೆಡೆ. 'ದರ್ವೀಕರ' ಪರಾ. ೪. (ಆಲಂ) ಒಂದು ಸಾಧನದಂತೆ ಕೆಲಸಕ್ಕೆ ಉಪಯೋಗಿಸಿಕೊಳ್ಳುವ ವ್ಯಕ್ತಿ; ಕಾರ್ಯಸಾಧನೆಯಲ್ಲಿ ಸಹಾಯಕ: ತಮ್ಮ ಕೆಲಸಕ್ಕೆ ದರ್ವಿಯಾಗಿ ಉಪಯೋಗಿಸಲು ಇವನೇ ಪರಮಮಿತ್ರನೆಂದು ಭಾವಿಸಿಕೊಂಡಿದ್ದರು (ಅದೂಟ. ೧೬೧); ಪೆದ್ದನಾದ ಕಿಟ್ಟಿಜೋಯಿಸನೇ ಸರಿಯಾದ ದರ್ವಿಯಾಗಿದ್ದಾನೆಂದು ಯೋಚಿಸಿದರು (ಮಾಮರಾ. ೧೫೦). [ಸಂ.]

ದರ್ವೀಕರ (ನಾ). ೧. ಸಟ್ಟುಗ ಹಿಡಿದವನು; ಸೌಟು ಹಿಡಿದವನು; ಅಡಿಗೆಯವನು: ಸೊಕಮಿರ್ಕಕ್ಕಟ ದರ್ಧಪಾಣಿ ಯಮಜಂ ದರ್ವೀಕರಂ ವಾಯುಪುತ್ರಕನುಂ ಜರ್ಜರಹಸ್ತನಿಂದ್ರತನಯಂ ... ಶಸ್ತ್ರವಿಡಂಬಮೇವುದ ವರ್ಗಂ (ಗದಾಯು. ೩-೩೪). ೨. ಹಾವು; ಸರ್ಪ: "ವಿಷಧರಃ, ದಂದಶೂಕಃ . . . ದರ್ವೀಕರಃ, ದೃಕ್‌ಛ್ರುತಿಃ, ಭುಜಂಗಮಃ–ಈ ೨೫ ಪಾವಿನ ಪೆಸರ್" (ಹಲಾಯು. ೧೦೫-೧೮): ನಿಷ್ಠುರಗರಳರಸಾರ್ದ್ರಸ್ಫುರಜ್ಜಿಹ್ವ ದರ್ವೀಕರದುರ್ದರ್ಶಂ . . . ಮನಕ್ಕದ್ಭುತರಸದೊದವಂ ತಂದುದಂ ದೊಂದಗೇಂದ್ರಂ (ಚಂದ್ರಪು. ೫-೬೬). ಎಲೆಯರ್ಜುನಿಕ ನೀನಿನ್ನು ಬಿಡು ದರ್ವೀಕರವನೆನಲು (ತಿಮ್ಮಅ. ೧-೮). ೧, ೨: ಏಂ ನಿನ್ನ ಪ್ರಾಣಂಗಳ್ಗೆ ದರ್ವೀಕರನಾಗೆನೆ! (ರಾಮಾಶ್ವ. ೧೪೪-೨೮). ೩. ನಾಗರಹಾವು; ಫಣಿ: ದರ್ವೀಕರ ಮಂಡಲ ರಾಜಿಗಳೆಂಬ ಮೂರು ತೆರನಾದ ಸರ್ಪವಿಷಗಳಲ್ಲಿ ಸಳಿಯ ಸಟ್ಟಗದ ಬೇರ ನೀರಲ್ಲಿ ಅರದು ಕುಡಿಯಲು ವಿಷಹರ (ವಿಷಚಿ. ೧೦-೪). [ಸಂ.]

ದರ್ವೀಕರಾಂತಕ (ನಾ). ಸರ್ಪಕ್ಕೆ ಮೃತ್ಯುವಿನಂತಿರುವವನು; ಗರುಡ: ಕಲಾನಿಧಿ ಸಕಲಲಕ್ಷ್ಮ ದರ್ವೀಕರಾಂತಕಗಮನ ವಿಮಲತರದು [ದೃ] ಕ್ಷಣಪದ್ಮರಾಗ (ಏಕೋಪು. ೬-೧೦೦). [ದರ್ವೀಕರ + ಅಂತಕ]

ದರ್ವೇಸಿ 'ದರವೇಶಿ' ನೋ.

ದರ್ಶ (ನಾ). ೧. ನೋಟ; ತೋರಿಕೆ; ದೃಶ್ಯ. ೨. ಅಮಾವಾಸ್ಯೆ: "ಸ್ಪಷ್ಟಂ ಸೂರ್ಯೇಂದು ಸಮಾಶ್ಲಿಷ್ಟವಮಾವಾಸೆಯೆಂಬುದಕ್ಕುಂ ದರ್ಶಂ" (ವಸ್ತುಕೋ. ೧೬-೮); ದರ್ಶದ ನಿಶೆಯೊಳ್ ಧವಳಾಂಶುವಾಗಿ ತಾರಾಧವನಂ ನೀನರಸಿ ಮೊರೆವುದೇಂ ಚಪಲತೆಯೋ (ನಿಷೇದ. ೨೩-೮).

[ಸಂ.]

ದರ್ಶಕ (ಗು). ೧. ನೋಡುವ; ಕಾಣುವ. ೨. ಪರೀಕ್ಷಿಸುವ; ಪರಿಶೋಧಿಸುವ. (ನಾ). ೩. ನೋಟಕ; ಪ್ರೇಕ್ಷಕ. ೪. ತೋರಿಸುವವನು; ಪ್ರದರ್ಶಕ: ೫. ವಿವರಿಸುವಿಕೆ; ಸ್ಪಷ್ಟಪಡಿಸುವಿಕೆ. ೬. ಕಾವಲುಗಾರ; ದ್ವಾರಪಾಲಕ; ಪಹರೆಯವನು. ೭. ಪಂಡಿತ; ವಿದ್ವಾಂಸ: ಕವಿ ದರ್ಶಕರಿಂದೆಸೆದತ್ತು ಭೂತಳಂ (ವರ್ಧಪು. ೧-೧೮).

[ಸಂ.]

ದರ್ಶನ (ನಾ). ೧. ನೋಡುವಿಕೆ; ಕಾಣುವಿಕೆ; ಅವಲೋಕನ; ನೋಟ: "ನಿಭಾಳನಂ, ನಿಶಮನಂ . . . ದರ್ಶನಂ, ದೃಷ್ಟಿಃ, ದ್ಯೋತನಂ – ಈ ೮ ನೋಟಂ" (ಹಲಾಯು. ೯೩-೪೦೨); ದರ್ಶನವಘಸಮಿತಿಗೆ ಸದ್ದರ್ಶನದಿಂದಪ್ಪುದಕ್ಕೆ ನಿಮಗಕ್ಕೆ ಪುನರ್ದರ್ಶನಮೆಂದಾರಾಧಿತದರ್ಶನರಾಚಾರಣರ್ ನಭಕ್ಕೊಗೆದಾಗಳ್ (ಆದಿಪು. ೫-೬೪): "ಎದುರಿಸುವುದು" (ಆದಿಪು. ಕೋಶ); ಕೂಡಲಸಂಗನ ದರ್ಶನ ಸ್ಪರ್ಶನದಿಂದ ಮನವೊಲಿದು ನೆರೆವ ಭರವನೇನ ಹೇಳುವೆನಯ್ಯಾ (ಬಸವ. ೪೯೩): ದರ್ಶನವೆಂದರೆ ನೋಡುವಿಕೆ ಎಂದು ಅರ್ಥ (ಭಾರಧ. ೧೨೦); ದರ್ಶನ ಎಂಬ ಪದದ ಲೌಕಿಕವಾದ ಅರ್ಥ ನೋಡುವಿಕೆ ಅಥವಾ ತಿಳಿಯುವಿಕೆ (ಭಾತತ್ತ್ವ. ೧೬೫). ೨. ಕಾಣುವುದು; ಭೇಟಿಯಾಗುವುದು; ಸಂದರ್ಶನ: ಒರ್ವಳ್ ಕನ್ನೆ ಚಂಡಾಲೆ ದರ್ಶನತಾತ್ಪರ್ಯದೆ ರಾಜಕೀರಸಹಿತಂ ಬಂದಿರ್ದಪಳ್ ಬಾಗಿಲೊಳ್ (ಕಾದಂಪೂ. ೨೪): ಶ್ರೀಪೃಥುಳೈಶ್ವರ್ಯನಗತಲೇಪನ ದರ್ಶನದೊಳಾದ ಪರಮಾನಂದ ಶ್ರೀಪದದೊಳ್ ರಂಜಿಸಿದನಿಳಾಪೂಜ್ಯಂ ಪ್ರಭುಗುಣಾಬ್ಧವನಕಳಹಂಸಂ (ಪುಷ್ಪಪು. ೧೨-೧); ಹಿರಿಯರ ದರ್ಶನ ಮಾಡುವುದೆ ಸ್ನಾನ (ಪುರಂದ. ೧-೨೫-೩). ೩. ಕಾಣಿಸಿಕೊಳ್ಳುವುದು; ಪ್ರತ್ಯಕ್ಷವಾಗುವುದು. 'ದರ್ಶನಕೊಡು' ಪರಾ. ೪. ತೋರಿಸುವಿಕೆ; ಪ್ರದರ್ಶನ. ೫. ಹಿರಿಯರನ್ನು ಕಾಣುವಾಗ ಅವರಿಗೆ ಅರ್ಪಿಸುವ ಕಾಣಿಕೆ; ನಜರು: ಕರಿಕುಂಭದ ಮುತ್ತಂ ಕತ್ತುರಿಮಿಗಮಂ ಸಿಂಹಶಾಬಮಂ ದರ್ಶನಮಿತ್ತುರವಣಿಸಿ ಬಂದನಾ ಧೀವರನಾಯಕನಿಭ್ಯಕೇತು ಭೂನಾಯಕನಂ (ಅರ್ಧನೇ. ೪-೩). ೬. ಕಾಣ್ಕೆ; ಕಣಸು; ವಿಶೇಷವಾದ ಅಂತರಂಗದ ಅರಿವು: ಇಂತಹ ಶಕ್ತಿಯನ್ನು ಪಡೆದಾಗಲೇ – "ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ" ಎನ್ನುವ ದರ್ಶನ ದೊರೆತೀತು (ಸೌಂದಸ. ೯೦); ತನಗಾದ ದರ್ಶನದಿಂದ ಅವನು ಭಯಚಕಿತನಾದನು (ಪುನರು. ೧೬೨). ೭. ಅಲೌಕಿಕ ಶಕ್ತಿಗಳ ಆವೇಶ; ದೇವರು, ದೆವ್ವ ಮೊದಲಾದುವು ಮೈಮೇಲೆ ಬರುವುದು. 'ದರ್ಶನಬರು' ಪರಾ. ೮. [ತತ್ತ್ವಶಾ] ತತ್ವಕ್ಕೆ ಸಂಬಂಧಿಸಿದ ವಿಷಯ, – ಗ್ರಂಥ, – ಮೀಮಾಂಸೆ ಮುಂತಾದುವು; ಆಧ್ಯಾತ್ಮಿಕ ಸಿದ್ಧಾಂತ; ತತ್ತ್ವಶಾಸ್ತ್ರ: ಜೀವಾತ್ಮನ ಸ್ವರೂಪವೆಂಥದು? ಜೀವಾತ್ಮನ ಗುರಿ ಏನು? ಎಂಬ ಪ್ರಶ್ನೆಗಳು ಎಲ್ಲಾ ಧರ್ಮಗಳಲ್ಲಿಯೂ ಬರುತ್ತವೆ. ಇವುಗಳನ್ನು ವಿಮರ್ಶಿಸಿ ಒಂದು ತೀರ್ಮಾನಕ್ಕೆ ಬರುವ ವಾಙ್ಮಯಕ್ಕೆ ದರ್ಶನಗಳೆಂದು ಹೆಸರು (ಭಾರದ. ೨೦೭); ಈ ತತ್ವವಿಚಾರವನ್ನು ತತ್ವದರ್ಶಿಗಳಾದ ಆರು ಋಷಿಗಳು ಆರು ವಿಧವಾಗಿ ಲೋಕಕ್ಕೆ ತೋರಿಸಿಕೊಟ್ಟು ಉಪಕಾರಮಾಡಿರುತ್ತಾರೆ. ಇವರ ಗ್ರಂಥಗಳಿಗೆ ದರ್ಶನಗಳೆಂದು ಹೆಸರು (ಭಾರದ. ೨೬೯). 'ಷಡ್ದರ್ಶನ' ಪರಾ. ೯. [ಜೈನ] ಸಮ್ಯಗ್ದರ್ಶನ. 'ದರ್ಶನವಿನಯ', 'ದರ್ಶನವಿಶುದ್ಧ' ಪರಾ. [ಸಂ.]

ದರ್ಶನಕಾಣಿಕೆ (ನಾ). (ದೇವರು, ಅರಸರು ಹಾಗೂ ಅಧಿಕಾರಿಗಳ) ದರ್ಶನ ಅಥವಾ ಭೇಟಿಮಾಡಿದಾಗ ನೀಡುವ ಕಾಣಿಕೆ; ನಜರು: ಅನೇಕ ಖಿಲ್ಲತ್ತುಗಳನ್ನು ವಿಜಯನಗರದ ಸಾಮ್ರಾಟ ಶ್ರೀಕೃಷ್ಣದೇವರಾಯನಿಗೆ ದರ್ಶನಕಾಣಿಕೆಯಾಗಿ ಕೊಡಲು ಹೊತ್ತು ತರುತ್ತಿದ್ದರು (ಹೇಮಕೂ. ೧೪). [ದರ್ಶನ + ಕಾಣಿಕೆ (<ಕಾಣ್ಕೆ)]

ದರ್ಶನಕಾರ (ನಾ). ದಾರ್ಶನಿಕ; ತತ್ತ್ವಜ್ಞಾನಿ: ಈ ಅಹಂಕಾರವೆಂಬ ವೃತ್ತಿಯನ್ನು ಒಪ್ಪದ ಕಾರಣ ಪಾಶ್ಚಾತ್ಯ ದರ್ಶನಕಾರರು ಎಷ್ಟೋ ತೊಡರುಗಳಿಗೆ ಗುರಿಯಾಗಿರುತ್ತಾರೆ (ಜೀವಾತ್ಮ. ೪೫). [ಸಂ.]

ದರ್ಶನ ಕೊಡು (ಕ್ರಿ). ಕಾಣಿಸಿಕೊಳ್ಳು; ಪ್ರತ್ಯಕ್ಷವಾಗು; ಮೈದೋರು: ಭಗವಂತನಾದ ಶ್ರೀಕೃಷ್ಣನೇ ಬಂದು ದರ್ಶನಕೊಟ್ಟನಲ್ಲಾ ಎಂದು ಎಲ್ಲರೂ ಸಂತೋಷಪಟ್ಟರು (ನೀತಿಚಂ. I, ೨). [ದರ್ಶನ + ಕೊಡು$_1$]

ದರ್ಶನತಂತ್ರ (ನಾ). ತಾಂತ್ರಿಕ ಸಿದ್ಧಿಮಂತ್ರಗಳಲ್ಲಿ ಒಂದು: ಶಾಬರತಂತ್ರ ಶಾಕಿನೀತಂತ್ರ . . . ದರ್ಶನತಂತ್ರ ಖನನತಂತ್ರ ಬಂಧನತಂತ್ರ ವಚನತಂತ್ರಾದಿ ತಾಂತ್ರಿಕ ಸಿದ್ಧಿಮಂತ್ರಂಗಳಂ ದ್ರಾಮಿಡ ವೈಕೃತ ಪ್ರಾಕೃತ ಶವಥಾದಿ ಕ್ಷುದ್ರಮಂತ್ರಂಗಳಂ ಬೇಱೆ ಬೇಱೆ ಉಪದೇಶ ಅನುಷ್ಠಾನ ಪರೀಕ್ಷೆಗಳಿಂ ವಿವೇಕಿಸಿ ತಿಳಿದಿರಲಕ್ಕುಂ (ವಿವೇಕ. ೮೦).

[ದರ್ಶನ + ತಂತ್ರ]

ದರ್ಶನಧ್ವನಿ (ನಾ). (ಕಾವ್ಯದಲ್ಲಿ ಹೊರಡುವ) ತಾತ್ವಿಕವಾದ ವಿಶೇಷಾರ್ಥ; ವ್ಯಂಗ್ಯಾರ್ಥದಲ್ಲಿ ಒಂದು ಬಗೆ: ದರ್ಶನಧ್ವನಿ ರಸಾಮೃತಪಾನದಾನಂದದಿಂ (ಶ್ರೀರಾಮಾ ೮೭೬-೨೧೯); ಅತ್ಯಂತ ಸುಮಧುರ ಸುಂದರ ಭವ್ಯವಾದ ಐದು ಸೂತ್ರಗಳನ್ನು ಭಕ್ತಿ, ಪ್ರಾರ್ಥನಾ ಮತ್ತು ಕೃಪಾದೇವಿಯರ ವಾಣಿಯಲ್ಲಿ ಹಂಚಿ ಅಳವಡಿಸಿದೆ. ಬಹುಶಃ

ಆ ಹಂಚಿಕೆಯಲ್ಲಿಯೂ ಆಯಾ ದೇವಪಾತ್ರಗಳಿಗೆ ಅನ್ವಯವಾಗುವ ದರ್ಶನ ಧ್ವನಿಯನ್ನು ಸಹೃದಯೋತ್ತಮರು ಗುರುತಿಸಬಹುದೆಂದು ಭಾವಿಸುತ್ತೇನೆ (ಚಂದ್ರಸ. V ಮುನ್ನುಡಿ). [ದರ್ಶನ + ಧ್ವನಿ]

ದರ್ಶನಪ್ರತಿಮೆ (ನಾ). [ಜೈನ] ಪಂಚಮ ಗುಣಸ್ಥಾನದಲ್ಲಿರುವ ಶ್ರಾವಕನು ಧರ್ಮಮಾರ್ಗದಲ್ಲಿ ಉನ್ನತಿಯನ್ನು ಹೊಂದುವಾಗ ಸಾಧಿಸುವ ಹನ್ನೊಂದು ಮೆಟ್ಟಲುಗಳಲ್ಲಿ ಮೊದಲನೆಯದು; P ದರ್ಶನ, ವ್ರತ, ಸಾಮಾಯಿಕ, ಪ್ರೋಷಧೋಪವಾಸ, ಸಚಿತ್ತತ್ಯಾಗ, ರಾತ್ರಿಭೋಜನತ್ಯಾಗ, ಬ್ರಹ್ಮಚರ್ಯ, ಆರಂಭತ್ಯಾಗ, ಪರಿಗ್ರಹತ್ಯಾಗ, ಅನುಮತಿತ್ಯಾಗ, ಮತ್ತು ಉದ್ದಿಷ್ಟಾಹಾರ ತ್ಯಾಗಗಳೆಂಬಿವು ಹನ್ನೊಂದು ಪ್ರತಿಮೆಗಳು : ಸಮ್ಯಗ್ದರ್ಶನದೊಡನೆ ಎಂಟು ಮೂಲ ಗುಣಗಳನ್ನು ಧರಿಸುವುದೂ ಸಪ್ತವ್ಯಸನಗಳ ತ್ಯಾಗಮಾಡುವುದೂ ದರ್ಶನ ಪ್ರತಿಮೆಯೆನಿಸುವುದು (ಜೈನಧ. ೧೧೩). [ದರ್ಶನ + ಪ್ರತಿಮೆ]

ದರ್ಶನಬರು (ಕ್ರಿ). (ದೇವರು ಅಥವಾ ದೆವ್ವ) ಮೈಮೇಲೆ ಬರು; ಆವೇಶ ಬರು : ಹೆದರಿ ಕಿರುಚುತ್ತಾ ಓಡಿ, ಒಲೆಯ ಹತ್ತಿರ ಅಡುಗೆಮನೆಯಲ್ಲಿ-ದರ್ಶನ ಬರುತ್ತಾ ಕೂತಳು (ಪರಾವ. ೩೮); ಅಲ್ಲಲ್ಲಿ ಮನುಷ್ಯರ ಮೈಮೇಲೆ ದರ್ಶನಬಂದು ಮಾತನಾಡುವ ದೆವ್ವಗಳು (ಪಂಜಪಂ. ೩).

[ದರ್ಶನ + ಬರು (<ಬರ್)]

ದರ್ಶನಭ್ರಾಂತಿ (ನಾ). ನೋಡಿದುದನ್ನು ಬೇರೆ ಎಂದು ತಿಳಿಯುವುದು; ನೋಡುವಿಕೆಯಲ್ಲಿ ಉಂಟಾದ ಭ್ರಮೆ : ದರ್ಶನಭ್ರಾಂತಿ (ಭ್ರಾಂತಿ ದರ್ಶನ ಅಂದರೆ ಬೇರೆ ತಿಳಿಯುವುದು) (ಅಮೃತ. ೬-೮೮ ಟೀಕು).

[ದರ್ಶನ + ಭ್ರಾಂತಿ]

ದರ್ಶನಮಣಿ (ನಾ). ಒಂದು ಬಗೆಯ ರತ್ನ : ತನ್ನಂ ನೋಡಿದ ಮಾತ್ರದೊಳಮೃತಾಂಜನವೆಚ್ಚಿದಂತೆ ನೇತ್ರಾನಂದಕರಮಾದ ದರ್ಶನಮಣಿ ತನ್ನಂ ಧರಿಸಿದ ಮಾತ್ರದಿಂ ಕ್ಷುತ್ಪಿಪಾಸೆಗಳಿಲ್ಲದ ಅಮೃತಮಣಿ . . . ಶಿವಜ್ಞಾನವಂ ಕೊಡುವ ಜ್ಞಾನಮಣಿ . . . ಅಲ್ಲಿಯಣ ಶಿವಭಕ್ತರಿಗೆ ಸುಕೃತಾನುರೂಪದಿಂದಾನಂದಕರಗಳಾಗಿರ್ಕುಂ (ವಿವೇಳ. ೨೦೦).

[ದರ್ಶನ + ಮಣಿ]

ದರ್ಶನಮೋಹ (ನಾ). [ಜೈನ] ಮೋಹನೀಯ ಕರ್ಮದ ಎರಡು ಪ್ರಕಾರಗಳಲ್ಲಿ ಒಂದು : ಸಾತಾಸಾತಸಂವಿಭಾಗದಿನಿರ್ತೆಱನಪ್ಪ ವೇದನೀಯಮುಮಂ ದರ್ಶನಮೋಹದೊಳಂ ಚಾರಿತ್ರಮೋಹದೊಳಂ ಯಥಾಕ್ರಮದಿಂ ಸಮ್ಯಕ್ತ್ವ . . . ಸ್ತ್ರೀಪುನ್ನಪುಂಸವೇದಮೆನಿಸಿಯುಂ (ಸುಕುಮಾ. ೩-೩೯ ವ). [ದರ್ಶನ + ಮೋಹ]

ದರ್ಶನಮೋಹನೀಯ(ನಾ). [ಜೈನ]ಮೋಹನೀಯ ಕರ್ಮಗಳಲ್ಲಿ ಒಂದು ಆತ್ಮನ ಸಮ್ಯಗ್ದರ್ಶನಕ್ಕೆಅಡ್ಡಿ ಮಾಡುವಂತಹುದು: ಮಿಥ್ಯಾತ್ವ ಸಮ್ಯಕ್ಪ್ರಕೃತಿ ಸಮ್ಯಙ್ಮಿಥ್ಯಾತ್ವಮೆಂದು ತ್ರಿವಿಧಮಪ್ಪ ದರ್ಶನಮೋಹನೀಯಮಂ ನಿರ್ಮೂಲಿಸಿ (ಶಾಂತಿಪು. ೦೦-೧೦೦ ವ) : ಮೋಹನೀಯ ಕರ್ಮದಲ್ಲಿ ದರ್ಶನಮೋಹನೀಯ, ಚಾರಿತ್ರಮೋಹನೀಯ ಎಂಬ ಎರಡು ಪ್ರಕಾರಗಳು (ಜೈನಧ. ೬೩). 'ಚಾರಿತ್ರಮೋಹನೀಯ' ಪರಾ.

[ದರ್ಶನ + ಮೋಹನೀಯ]

ದರ್ಶನಯುಗ (ನಾ). ತತ್ವಮೀಮಾಂಸಕರು ಇದ್ದ ಕಾಲ; ದಾರ್ಶನಿಕರ ಯುಗ : ಶ್ರುತಿ, ಸ್ಮೃತಿ, ಆಗಮ-ಇವುಗಳ ಯುಗವಾದ ಮೇಲೆ ದರ್ಶನಯುಗ ಆರಂಭವಾಯಿತು (ಭಾರದ. ೦೨೦). [ದರ್ಶನ + ಯುಗ]

ದರ್ಶನರತ್ನ (ನಾ). [ಜೈನ] ಶ್ರೇಷ್ಠವಾದ ದರ್ಶನ; ಸಮ್ಯಗ್‌ದೃಷ್ಟಿ; ಜೀವಾದಿ ನವಪದಾರ್ಥದೊಳಾವಗಮರ್ಥಿಯನೆ ಮಾಡು ಮೂಢತ್ರಯದೊಳ್ ಭಾವಮನೆ ಬಿಸುಡು ಬೆಳಗುಗುಮೀ ವಿಧದಿಂ ನೆಗೞ್ ನಿನ್ನ ದರ್ಶನರತ್ನಂ (ಆದಿಪು. ೩-೩೬). [ದರ್ಶನ + ರತ್ನ]

ದರ್ಶನವತ್ಸಲತ್ವ, ದರ್ಶನವತ್ಸಳತ್ವ (ನಾ). [ಜೈನ] ಹದಿನಾರು ಭಾವನೆಗಳಲ್ಲಿ ಒಂದು; ದರ್ಶನದಲ್ಲಿ ವಾತ್ಸಲ್ಯವಿರುವಿಕೆ; ತತ್ವವಿಚಾರದಲ್ಲಿ ಪ್ರೀತಿಯಿರುವಿಕೆ : ದರ್ಶನವಿಶುದ್ಧಿ . . . ದರ್ಶನವತ್ಸಲತ್ವಮೆಂಬ ಷೋಡಶಭಾವನೆಗಳೊಳ್ (ಚಾವುಂಪು. ೨೬೧). ದರ್ಶನವತ್ಸಳತ್ವ :ಶಂಕಾದಿ ಮಳವಿಹೀನಮಪ್ಪ ಸಮ್ಯಗ್ದರ್ಶನ ಸಂಶುದ್ಧಿಯುಂ . . . ಸದ್ಧರ್ಮಸ್ನೇಹ ಲಕ್ಷಣೋಪೇತಮುಮಪ್ಪ ದರ್ಶನವತ್ಸಳತ್ವಮುಮೆಂಬೀ ಷೋಡಶಭಾವನೆಗಳಂ . . . ಭಾವಿಸುತ್ತುಮಿರ್ದು (ಚಂದ್ರಪು. ೧೧-೨೨ ವ). 'ಷೋಡಶಭಾವನೆ' ಪರಾ. [ಸಂ.]

ದರ್ಶನವಿನಯ (ನಾ). [ಜೈನ] ಸಮ್ಯಗ್ದರ್ಶನದ ವಿಷಯದಲ್ಲಿ ಅತ್ಯಂತ ನಿಷ್ಠಾಪೂರ್ವಕವಾಗಿ ವ್ಯವಹರಿಸುವುದು : ದ್ವಾದಶಾಂಗ ಚತುರ್ದಶ ಪ್ರಕೀರ್ಣಕಾದಿ ಶ್ರುತಸಮುದ್ರದೊಳೊಂದೊಂದಕ್ಷರಮನಕ್ಕೆ ಮೇಣು ಸಂದೇಹಂಬಡದೆ ನಂಬುವ ನಿಃಶಂಕಿ ತತ್ವಾದಿ ಗುಣಮನುಳ್ಳದು ದರ್ಶನವಿನಯಂ (ಶ್ರಾವಕಾ. ೮೭-೧). [ದರ್ಶನ + ವಿನಯ]

ದರ್ಶನವಿನ್ಯಾಸ (ನಾ). ಆಧ್ಯಾತ್ಮಿಕ ತತ್ತ್ವನಿರೂಪಣೆ; ತತ್ತ್ವವಿಷಯ; ತಾತ್ವಿಕ ರಚನೆ : ವೈದಿಕವಾಙ್ಮಯದ ಕಾವ್ಯತ್ಯವನ್ನು ರವೀಂದ್ರರೂ ದರ್ಶನವಿನ್ಯಾಸವನ್ನು ರಾಧಾಕೃಷ್ಣನೂ ವಿವರಿಸಿದರು (ಉಕ್ಕಾರ. ೧೦೯ ಪೀಠಿಕೆ). [ದರ್ಶನ + ವಿನ್ಯಾಸ]

ದರ್ಶನವಿಶುದ್ಧ (ನಾ). [ಜೈನ] ನಿರ್ಮಲವಾದ ಸಮ್ಯಕ್ ದರ್ಶನವುಳ್ಳವನು : ಪಾತ್ರಮುತ್ತಮಮಧ್ಯಮಜಘನ್ಯಭೇದದಿಂ ತ್ರಿವಿಧ ಮಕ್ಕುಮಲ್ಲಿ ದರ್ಶನವಿಶುದ್ಧನುಂ ಶೀಲಸಂಪನ್ನನುಮಪ್ಪ ಸಂಯತನುತ್ತಮಪಾತ್ರಂ (ಆದಿಪು. ೧೦-೯ ವ). [ದರ್ಶನ + ವಿಶುದ್ಧ]

ದರ್ಶನವಿಶುದ್ಧತೆ (ನಾ). = ದರ್ಶನವಿಶುದ್ಧಿ: ತವೆ ತಮದೊಡ್ಡು ರಾಜಿಸಲೊಡರ್ಚೆ ದಿಗಂಬರಲೀಲೆ ಪುಟ್ಟೆ ಭೂಭುವನಜನಕ್ಕೆ ದರ್ಶನವಿಶುದ್ಧತೆ ಕುಂದೆ (ಪುಷ್ಪಪು. ೦೩-೬೦). [ದರ್ಶನ + ವಿಶುದ್ಧತೆ]

ದರ್ಶನವಿಶುದ್ಧಿ (ನಾ). ೧. ತತ್ತ್ವದೃಷ್ಟಿ; ತಾತ್ವಿಕದೃಷ್ಟಿ : ನಾಗಚಂದ್ರ "ಕವಿಗೆ ದರ್ಶನವಿಶುದ್ಧಿಯೇ ಮೌಲ್ಯ" ಎಂದುದೂ ಬಹುಶಃ ಈ ಅರ್ಥದಲ್ಲೇ (ಸೌಂದಸ. ೩೮). ೨. [ಜೈನ] ತೀರ್ಥಂಕರ ನಾಮಕರ್ಮಕ್ಕೆ ಕಾರಣವಾಗುವ ಒಂದು ಭಾವನೆ; P ತೀರ್ಥಂಕರತ್ವಕ್ಕೆ ಕಾರಣವಾದ ಹದಿನಾರು ಭಾವನೆಗಳಲ್ಲಿ ಮೊದಲನೆಯದು. ಸಮ್ಯಗ್‌ದರ್ಶನದಲ್ಲಿ ಅತ್ಯಂತ ನಿರ್ಮಲವಾದ ಹಾಗೂ ದೃಢವಾದ ಚಿತ್ತವೃತ್ತಿ : ದರ್ಶನವಿಶುದ್ಧಿ . . . ದರ್ಶನವತ್ಸಲತ್ವಮೆಂಬ ಷೋಡಶಭಾವನೆಗಳೊಳ್ (ಚಾವುಂಪು. ೨೬೧); ಎನ್ನ ದರ್ಶನವಿಶುದ್ಧಿಯೆ ಮೂಲ್ಯಂ (ಪಂಠಾಮಾ. ೩-೦೦). [ದರ್ಶನ + ವಿಶುದ್ಧಿ]

ದರ್ಶನವಿಶುದ್ಧೆ (ನಾ). ನಿರ್ಮಲವಾದ ಸಮ್ಯಗ್ದರ್ಶನವುಳ್ಳವಳು; ಸಂಶಯರಹಿತವಾದ ತತ್ತ್ವಜ್ಞಾನವುಳ್ಳವಳು : ಸಂಕ್ಷೇಪದಿಂ ಸನ್ಮಾರ್ಗಸ್ವರೂಪನಿರೂಪಣಂಗೆಯ್ದು ವಿಷಮವಿಷಧರವಿಷಘಾತದಿಂ ನಿನಗಾಯು ರವಧಿಯುಮಿಂದಿನನಿತೆ ದರ್ಶನವಿಶುದ್ಧೆಯಾಗೆಂದು ವರಮತಪಸ್ವಿ ಪರಸಿ (ಸುಕುಮಾ. ೩-೪೪ ವ).

[ಸಂ. ದರ್ಶನವಿಶುದ್ಧಾ (ದರ್ಶನ + ವಿಶುದ್ಧ + -)]

ದರ್ಶನಶಕ್ತಿ (ನಾ). [ಜೈನ] ಕಾಣುವ ಶಕ್ತಿ: ಆತ್ಮನ ದರ್ಶನಶಕ್ತಿಯನ್ನು ಮುಚ್ಚುವ ಕರ್ಮವು ದರ್ಶನಾವರಣೀಯಕರ್ಮವೆನಿಸುವುದು (ಜೈನಪ. ೩೬೬). [ದರ್ಶನ + ಶಕ್ತಿ]

ದರ್ಶನಶುದ್ಧತೆ (ನಾ). = ದರ್ಶನವಿಶುದ್ಧಿ : ಅತಿಸೂಕ್ಷ್ಮತತ್ತ್ವಮಂ ಕಾಣ್ಬ ತನುವನೊಟ್ಟಯಿಸಿ ಕಟ್ಟುವೀ ದರ್ಶನಶುದ್ಧತೆಗಂ ದೃಢಗುಣಸುಸಮರ್ಥತೆಗಂ ಸಲೆ ದೇವಚಂದ್ರಯತಿಪತಿ ನೋಂತಂ (ಚಂದ್ರಪು. ೧-೩೨).

[ದರ್ಶನ + ಶುದ್ಧತೆ]

ದರ್ಶನಶುದ್ಧಿ (ನಾ). = ದರ್ಶನವಿಶುದ್ಧಿ : ಮುನಿಗೆ ದರ್ಶನಶುದ್ಧಿ ವಿನೇಯಂ . . . ವಾತ್ಸಲ್ಯಮಿಂತನುವಾಯ್ತಾ ತೀರ್ಥಕೃತನಾಮಕರ್ಮವನೀವ ಷೋಡಶಭಾವನೆಯೆ ಭಾವದೊಳ್ (ಅನಂಪು. ೪-೩೭).

[ದರ್ಶನ + ಶುದ್ಧಿ]

ದರ್ಶನಸುಖ (ನಾ). ನೋಟದಿಂದುಂಟಾಗುವ ಸಂತೋಷ : ಇನಿಯಳಿ ನಿಜ ಮೆನ್ನುತೆ ದರ್ಶನಸುಖಮಂ ತನ್ಮಯತೆಯನೊಂದಿದ ಮನದಿಂ ದನುಭವಿಪೆಸಗವಳಂ ನೀಂ ನೆನವಿತ್ತೀಂ ಮಗುಳ್ದು ಚಿತ್ರಗತಿಯಂ ಗೈದೈ (ಣಳಿಂತ. ೯೧-೦೩೨). [ದರ್ಶನ + ಸುಖ]

ದರ್ಶನಸ್ಥಾನ (ನಾ). ನೋಡುವಂತಹ ಸ್ಥಳ ; ಪ್ರೇಕ್ಷಣೀಯ ತಾಣ ; ನೋಡಬಹುದಾದ ಸ್ಥಾನ : ಕಟ್ಟಿದನು ಸೌಮಿತ್ರಿ . . . ಪರ್ಣ ಶಾಲೆಯನೊಂದನೆತ್ತರದೊಳಾ ಗಿರಿಯ ದರ್ಶನಸ್ಥಾನಮುಂ ದೂರ ವಿಸ್ತಾರದಾ ದೃಶ್ಯದಾ ಸ್ಥಾನದಧ್ಯಕ್ಷತಾಸ್ಥಾನಮುಂ ತಾನೆನಿಪ ಗಿರಿಭುಜ ಸ್ಥಾನವಲಿ (ಶ್ರೀರಾಮಾ. ೧೪೪-೬೨). [ದರ್ಶನ + ಸ್ಥಾನ]

ದರ್ಶನಹುಂಡಿ (ನಾ). "(ಹುಂಡಿಯಲ್ಲಿ ಬರೆದಿರಂವವನಿಗೆ, ಅಥವಾ ಆ ಹುಂಡಿಯೆನ್ನು ತರುವವನಿಗೆ, ಆದರಲ್ಲಿ ನಮೂದಿಸಿರಂವ ಹಣವನ್ನು ತನ್ನ ಲೆಕ್ಕದಿಂದ ಕೊಡಬೇಕೆಂದು ಬರೆದಿರುವ) ಹಣದ ಚೀಟಿ ; ದರ್ಶನಹುಂಡಿ ; ಚೆಕ್ಕು" (Cheque, ಇಂಕಿನಿ) : ಸರ್ಕಾರದ ಪ್ರಹರಿಯವರು ದರ್ಶನಹುಂಡಿ ತಂದಿದ್ದಾರೆ (ಅದೂಟು. ೭).

[ದರ್ಶನ + ಹುಂಡಿ$_2$]

ದರ್ಶನಾಚಾರ (ನಾ). [ಜೈನ] ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ವ್ಯವಹರಿಸುವಿಕೆ : ಸರ್ವಜ್ಞರಾದ ತೀರ್ಥಂಕರರು ಹೇಳಿದ ಜೀವಾದಿ ತತ್ವಗಳಲ್ಲಿ ಶ್ರದ್ಧೆಯಿಡುವುದು, ದರ್ಶನಾಚಾರವು (ಕ್ರಿಸಧ. ೧೦೦).

[ದರ್ಶನ + ಆಚಾರ]

ದರ್ಶನಾಭ್ಯಾಸಿ (ನಾ). ಆಧ್ಯಾತ್ಮಿಕ ತತ್ವಗಳಲ್ಲಿ ಆಸಕ್ತಿಯುಳ್ಳವನು : ಆರುದರ್ಶನಗಳನ್ನು ಮೂರುಗುಂಪುಗಳಾಗಿ ವಿಂಗಡಿಸುವ ಕ್ರಮ ದರ್ಶನಾಭ್ಯಾಸಿಗಳಲ್ಲಿ ರೂಢಿಯಲ್ಲಿದೆ (ಧಾತರ. ೧೩೨).

[ದರ್ಶನ + ಅಭ್ಯಾಸಿ]

ದರ್ಶನಾರಾಧನೆ (ನಾ). ಸಮ್ಯಗ್ ದರ್ಶನವನ್ನು ಪಾಲಿಸುವುದು : ಶಂಕಾದ್ಯಷ್ಟಮಲಂಗಳಂ ಕಳೆದು ನಿಶ್ಶಂಕಾದ್ಯಷ್ಟಗುಣಂಗಳಂ ಕೂಡುವುದು ದರ್ಶನಾರಾಧನೆ (ಜೀವಸಂ. ೩-೧೮). [ದರ್ಶನ + ಆರಾಧನೆ]

ದರ್ಶನಾವರಣ (ನಾ). [ಜೈನ] ಆತ್ಮನ ದರ್ಶನಶಕ್ತಿಯನ್ನು ಮರೆ ಮಾಡುವುದು : ಚರಮದೊಳಯ್ದು ಜ್ಞಾನಾವರಣಮುಮಂ ನಾಲ್ಕು ದರ್ಶನಾವಣಮುಮಂ ಪರಮೇಶ್ವರನೊರ್ವದಲೊಳಪಹರಿಸಿದನಯಂ ಅಂತಾರಾಯಂಗಳುಮಂ (ಮಲ್ಲಿಪು. ೧೪-೯೧) ; ದರ್ಶನಾವರಣ ಎಂದರೆ ದರ್ಶನ ಗುಣಗಳನ್ನು ತಡೆಯುವುದು (ಧಾತತ್ತ್ವ. ೩೩೭).

[ದರ್ಶನ + ಆವರಣ]

ದರ್ಶನಾವರಣಚತುಷ್ಕ (ನಾ). [ಜೈನ] ಚಕ್ಷುರ್ದರ್ಶನಾವರಣ, ಅಚಕ್ಷುರ್ದರ್ಶನಾವರಣ, ಅವಧಿದರ್ಶನಾವರಣ ಮತ್ತು ಕೇವಲದರ್ಶನಾವರಣ ಎಂಬ ದರ್ಶನಾವರಣದ ನಾಲ್ಕು ಅಂಗಗಳು: ಚಕ್ಷುರಚಕ್ಷುರವಧಿ ಕೇವಲ ದರ್ಶನಾವರಣ ಚತುಷ್ಕಮುಮುಂ ದಾನಲಾಭಭೋಗೋಪಭೋಗ ವೀರ್ಯಾಂತರಾಯ ಪಂಚಕಮುಮನೊರ್ವೊದಲೆ ಕಿಡಿಸಿ (ಆದಿಪು. ೧೧-೧೪). [ದರ್ಶನಾವರಣ + ಚತುಷ್ಕ]

ದರ್ಶನಾವರಣೀಯ (ನಾ). [ಜೈನ] ಆತ್ಮನ ಅನಂತಜ್ಞಾನ, ಅನಂತ ವೀರ್ಯ ಮೊದಲಾದ ಗುಣಗಳನ್ನು ಮಂಜಿನಗೊಳಿಸುವಂತಹ ನಾಲ್ಕು ವಿಧವಾದ ಘಾತಿಕರ್ಮಗಳಲ್ಲಿ ಒಂದು : ದರ್ಶನಾವರಣೀಯಮುಂ ನವವಿಧಮೆಂತೆನೆ ನಿದ್ರಾನಿದ್ರಾಪ್ರಚಲಾಗ್ರಚಲಾಸ್ತ್ಯಾನಗೃದ್ಧಿ ನಿದ್ರಾಪ್ರಚಲಾ ಚಕ್ಷುರಚಕ್ಷುರವಧಿ ಕೇವಲಬೋಧದರ್ಶನ ಪ್ರಜ್ಞಾನದಿನಿನಿತು ಭೇದಮಕ್ಕುಂ (ಶಾಂತಿಪು. ೦೩-೧೧ ವ); ದರ್ಶನಾವರಣೀಯೋತ್ಕರ ತಾಮಸಕ್ಕೆ ರವಿಬಿಂಬು . . . ಎಂಬಂತು ಘಾತಿ ರಿಪುವ್ರಾತ ವಿಘಾತಿಯಾಯ್ತು (ಪುಪ್ಪಪು. ೧೪-೩೭).

[ಸಂ.]

ದರ್ಶನಿಕ (ನಾ). [ಜೈನ] ಶ್ರಾವಕರ ಹನ್ನೊಂದು ತರಗತಿಗಳಲ್ಲಿ ಮೊದಲನೆಯ ತರಗತಿಯವನು : ದರ್ಶನಿಕಂ ವ್ರತಿಕಂ ಸಾಮಯಿಕಂ ಪ್ರೋಷಧೋಪವಾಸಿಕಂ ಸಚಿತ್ತವಿರತಂ ರಾತ್ರಿಭುಕ್ತವ್ರತಂ ಬ್ರಹ್ಮಚಾರಿ ಆರಂಭಕಂ ಪರಿಗ್ರಹವಿರತಂ ಅನುಮತಿವಿರತಂ ಉದ್ದಿಷ್ಟವಿರತನೆಂದಿಂತು ಪನ್ನೊಂದು ವಿಕಲ್ಪಮನುಳ್ಳ ಶ್ರಾವಕರೊಳ್ (ಸುಕುಪ್ರಾ. ೬-೩೬ ವ); ತೋಱುವ ಶಂಕೆಗಳೆಂಟುಂ ಪಾಱಿದ ದರ್ಶನಿಕರಮಲದರ್ಶನಶುದ್ಧರ್ (ಅನಂಪು. ೩-೫೮). [ಸಂ.]

ದರ್ಶನೀಯ (ಗು). ೧. ನೋಡಬಹುದಾದ ; ಕಾಣಬಹುದಾದ. ೨. ನೋಡಲು ಯೋಗ್ಯವಾದ. ೩. ಮನೋಹರವಾದ ; ಸುಂದರವಾದ. (ನಾ). ೪. ಮನೋಹರವಾದುದು ; ಸುಂದರವಾದುದು : "ಕಮನೀಯಂ ಚಾರುರಮ್ಯಂ ... ಅತಿಶಯ ಶೋಭಾನ್ವಿತಂ ದರ್ಶನೀಯಂ . . . ಮಧುರಂ ಮಂಜುಳಂ ಮಂಜುಸೌಮ್ಯಂ (ಪಸ್ತುಕೋ. ೧೦೭-೩೮) ; ಆವುದು ಚೆಲ್ವಾದುದದುವೆ ದರ್ಶನೀಯಂ (ಕಮುದ. ೦೪೩ ಪ್ರಯೋ). [ಸಂ.]

ದರ್ಶನೋತ್ಕಂಠೆ (ನಾ). ಕಾಣಲು ಅತಿಯಾದ ಉತ್ಸುಕತೆ ; ನೋಡಲು ತೀವ್ರವಾದ ಆತುರ : ಜೀವನದಲ್ಲಿ ನಮಗೆ ದರ್ಶನವನ್ನೀಯಬಹುದಾದ ರಮಣೀಯವಾದ ಸತ್ಯದ ಹಾಗೂ ಅದರ ದರ್ಶನೋತ್ಕಂಠೆಯಿಂದ ನಿತ್ಯ ನೂತನವಾಗಿ ಸಿದ್ಧವಿರುವ ಹೃದಯದ ನಡುವೆ ಒಂದು ಜವನಿಕೆಯು ಇರುತ್ತದೆ (ಪ್ರಲಂಧ. ೮). [ದರ್ಶನ + ಉತ್ಕಂಠೆ]

ದರ್ಶನೋಪಯೋಗ (ನಾ). [ಜೈನ] ದರ್ಶನೋಪಯೋಗ, ಜ್ಞಾನೋಪಯೋಗವೆಂಬ ಎರಡು ಉಪಯೋಗಗಳಲ್ಲಿ ಒಂದು : ವಿಶೇಷ ಜ್ಞಾನರಹಿತವಾದ ಸಾಮಾನ್ಯ ಅನುಭೂತಿಯು ದರ್ಶನೋಪಯೋಗವು (ಕ್ರಿಸಧ. ೩೬). [ದರ್ಶನ + ಉಪಯೋಗ]

ದರ್ಶಶ್ರಾದ್ಧ (ನಾ). ಅಮಾವಾಸ್ಯೆಯ ದಿನ ಮಾಡುವ ಶ್ರಾದ್ಧ.–ತಿಥಿ: ಅನ್ವಾಹಾರ್ಯಂ, ಮಾಸಿಕಂ – ೨ ತಿಂಗಳು ತಿಂಗಳಿಗೂ ಮಾಡತಕ್ಕ ಪಿಂಡ ಪಿತೃಯಜ್ಞಕ್ಕೆ ಹೆಸರು, ದರ್ಶಶ್ರಾದ್ಧಕ್ಕೆ ಹೆಸರು, ಮಾಸಿಕ ಶ್ರಾದ್ಧಕ್ಕೂ ಹೆಸರು (ಸಿದ್ಧಾಂತಿ. ೧೯೩). [ದರ್ಶ + ಶ್ರಾದ್ಧ]

ದರ್ಶಿತ (ಗು). ೧. ಕಂಡ; ತೋರಿದ. ೨. ತೋರಿಸಿದ; ಪ್ರದರ್ಶಿಸಿದ : (ನಾ). ೩. ತಿಳಿಸಿದುದು; ವಿವರಿಸಿದುದು: ಎಂದಿಂತು ಸಮಿಷವಪ್ರಾಸಂ ದರ್ಶಿತಮಾಯ್ತು ಪುತ್ರನು ಪ್ರಾಸಮುಂ ಸಂದಿಸಿದೆಣೆಯಕ್ಕರ ಮೊಂದೊಂದಱೊಳೆವಡೆಯುಸಿರ್ದೊಡನುಗತಮಕ್ಕುಂ (ಛಂದೋಂಬು. ೧-೪೬ ಆದಿಯ).

[ಸಂ.]

ದರ್ಶಿಸು (ಕ್ರಿ). ೧. ನೋಡು ; ಕಾಣು : ಸಸಿನೆ ಭೋರೆಂದಾತನಂ ದರ್ಶಿಸುವ ತವಕದಿ ಬಪ್ಪವರನುಷ್ಕಿಸುವ ನಿಜನೇಮಂಗಳಂ ಸಲೆ ಸಲಿಸಿದಹನೆಂದ (ಬಸಪು. ೬-೧೧). ೨. ತಿಳಿ ; ಅರಿತುಕೊಳ್ಳು: ಮಕ್ಕಳೀ ಪ್ರಯತ್ನ ಪೂರ್ವಕವಾಗಿ ನಿಯಮಗಳನ್ನೋ ತತ್ವಗಳನ್ನೋ ದರ್ಶಿಸುವಂತೆ ಮಾಡದೆ ಉಪಾಧ್ಯಾಯರು ಪುಸ್ತಕಗಳಲ್ಲಿ ಮುದ್ರಣವಾಗಿರುವ ಭಾಗಗಳನ್ನು ಬರಸಿ ಬಿಟ್ಟರೆ . . . ಅರ್ಥ ತಿಳಿಯದೆ ಕಂಠಪಾಠ ಮಾಡುತ್ತಾರೆ (ಶಿಕ್ಷಪ್ರ. ೨೨೭).

[ದರ್ಶನ + – ಇಸು]

ದರ್ಸುಕ (ನಾ). ಒಂದು ಬಗೆಯ ಮರ: ದರ್ಸುಕ (ಪಾಂಡರೀ ಧಾವಣ).–ಮಧ್ಯಮ ಆಕಾರದ್ದು. ಕಟ್ಟಿಗೆಗಳೇ ಸಾಮಾನಿಗೆ ಬರುತ್ತದೆ. ಇದರ ನಾರಿನಿಂದ ಹಗ್ಗ ಹೊಸೆಯುತ್ತಾರೆ (ಕಥಾಗ. ೪೧) ; ದರ್ಸುಕ, ಕಾಡುಕಡಲೆ (ಪ್ರಾಜಿಗಿ. ೪೧-೪೦೭). [?]

ದರ್ಹಂ (ನಾ). ಒಂದು ಬಗೆಯ ಬೆಳ್ಳಿಯ ನಾಣ್ಯ: ಅವರು ತಲೆಯೊಂದಕೆ: ನಾಲ್ಕು ಸಾವಿರ 'ದರ್ಹಂ' ನಾಣ್ಯಗಳನ್ನು ಕೊಡಬೇಕಾಗಿದ್ದಿತು (ಪೃಗಂಬ. ೩೪).
[←ಅರ. ಪಾರ. ದರಹಮ್ ; ಹಿಂ. ದಿರಮ್, ದಿರಹಮ್ ; ಮರಾ. ದಿರಮ್, ದಿರಿಮ್]

ದಲ್ (ಅ). ೧. ಖಂಡಿತವಾಗಿ; ನಿಶ್ಚಯವಾಗಿ; ನಿಸ್ಸಂದೇಹವಾಗಿ; ಸರಿಯಾಗಿ; ಸಹಜವಾಗಿ: "ಱಿಕ್ಕಟಂ ದಲೆಂದೆನಲು" (ಕಬ್ಬಿಕೈ. ೪೯); "ವಲಂ ವೆಱಂ ದಲೆಂಬಿವು ಸಾಜ ದಿಟಕೆ" (ಶಬ್ದಮಂ. ೩೫) ; ಇದು ದಲ್ ವರ್ಗ ಪ್ರಾಸಕ್ಕುದಾಹೃತಂ ಕುಱಿತು ಶಷಸವರ್ಣತ್ರಯಮುಂ ವಿದಿತ ಪ್ರಾಸ ವಿವಿಕ್ತಾಸ್ಪದದೊಳ್ನಿಲೆ ಪೇಟ್ಟೊಡದು ಸಮೀಪಪ್ರಾಸಂ (ಕವಿರಾ. ೨-೩೭) : ಯಶಂಬಡೆದಂ ಗೊಗ್ಗಿ ದಲ್ ಎಂಬುದು ಪಡೆ ಮತು × × ಲಾಯ್ತು ಭುವನದೊಳಗುಂ ಪೊಱಗುಂ (ಎಕ. XI, ಚಳ್ಳಕೆ. ೬-೫ ; ಸು. 925) ; ನೀನರಸನೆ ಎನ್ನ ರಾಜ್ಯವಿಭವಕ್ಕೆಲೆ ನೀನೆ ದಲೆಂದು ಬಂದ ಮಾಮರನನೆ ಮೂಱು ಸೂಱ್ ಪಿರಿದುಮಟ್ಕಱಿನಿಂ ಬಲವಂದನಂಗಜಂ (ಆದಿಪು. ೧೧-೧೦೦); ಕಯ್ದಾವಿಗೆಗಳ ಬೆಳಗಿಂ ಕಾಯ್ದೆಸೆವ ಸಹಸ್ರಕಿರಣನಿಂ ಭೇದಿಸಲೇಗೆಯ್ದುಂ ಬಾರದು ದಲ್ ತವೆ ಮಾಯ್ದಾ ಜವ್ವನದೊಳೊಡಲೊಳಿಡಿದಿರ್ದತಮಂ (ಕಾದಂಪೂ. ೩೨೯); ಕಡುಮೋಸಂ ಕೆಡಿಕು ದಲೈ (ಸೋಮೇಶ. ೪೩); ಏಗಂ ವಲಂ ವೆಱಂ ದಲ್ ತಾಗುಗುಮತಿ ನಿಶ್ಚಯಾರ್ಥಮಂ (ಶಮದ. ೩೦೬); ಕಣ್ ದರನಿಮೀಲಿತವಾಗೆ ದಲಾಸನಕ್ರಮಂ ಸಮನಿಸೆ ಹೂಂಕೃತ ಪ್ರಣವ ಮೊಪ್ಪೆ . . . ಯೋಗಿನಿಯಂತಿರೊಪ್ಪಿದಳ್ (ಕಾವ್ಯಸಾ. ೬೬೫); ಎಮ್ಮೊಳೆತ್ತಿ ಬಂದಿರ್ಪಂ, ಕಡುಗಲಿ ದಲಿವಂ ಕಾದಿ ಗೆಲ್ವೊಡೆಮ್ಮಿನಸದಳಂ (ರಾಮಾಶ್ವ. ೯೫-೯). ೨. ಅಲ್ಲವೇ ಎಂಬಂತೆ ಅವಧಾರಣೆಯನ್ನು ಸೂಚಿಸುವ ಮಾತು : ಅಂತೆಂಬನಾರ್ಗೆ ಪಿರಿದುಂ ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇಟೆಂತೆನಗೆ ಕೆಳೆಯನೇ (ಪಂಪಭಾ. ೨-೪೭) ; ಆನುಂ ದುಶ್ಶಾಸನನುಂ ನೀನುಂ ಮೂವರೆ ದಲಾತನುಂ ಕಟಿದ ಬಟುಕ್ಕಾನುಂ ನೀನೆ ದಲ್ (ಗದಾಯು. ೫-೧೧) ; ಬ್ರಹ್ಮನೆ [ದ]ಲ್ನಮಗಾದೀ ಬ್ರಹ್ಮಜಿನಂ ತಾನೆನುತ್ತೆ ಸಾಸಿರ್ವ್ವರುಮೀ ಬ್ರಹ್ಮಜಿನನಿಳಯಕಿತ್ತರ್ವ್ವ್ರಹ್ಮ ಜಿನಾಳಯ ಮೆನಿಪ್ಪ ಪೆಸರಂ ಮುದದಿಂ (ಸೌಇಇ. XI-i, ೫೨-೬೨ ; 1007).

ದಲ, ದಳ್ಳ (ನಾ). ೧. ಭಾಗ ; ಚೂರು ; ಅಂಶ; ಶಕಲ. ೨. ಎಸಳು; ರೇಕು ; ಪತ್ರ. 'ಚಲದಲ' ಪರಾ. ೩. ಗುಂಪು ; ತಂಡ; ಸಮೂಹ: ಈ ಜಾಗೃತಿಯಲ್ಲಿ ಚೀಣದ ನವಯುವಕದಲವು ಹೆಚ್ಚು ಕಾರ್ಯಭಾಗವನ್ನು ವಹಿಸಿತು (ಜಗಸಂ. II, ೧೦) ; ದಲದ ಮುಂದಾಳು ಮುಂದೆ ಬಂದು. . . ನಮಸ್ಕಾರಮಾಡಿ ಬರುತ್ತೇವೆ ಎಂದಳು (ಅಕ್ಕತಂ. ೬). ೪. ಸೈನ್ಯ ; ಪಡೆ: ದಲವ ಕೊಂದೀ ಕಪಿಯ ಜೀವವ ಕೊಳದೊಡಾನಿಂದ್ರಾರಿಯೇ (ಕೌಶಿರಾ. ೩೪-೧೯) ; ಕಂಡನಮಿತ ದಲ ಪದದಲನಮಂ ಸಮುದ್ಭೂತರೇಣು ಪ್ರವಾಹಮಂ (ಶ್ರೀರಾಮಾ. ೧೫೭-೧೫೦). ದಳ್ಳ : ೨. "ಬರ್ಹಂ, ಪರ್ಣಂ, ದಳಂ...ಛದಂ–ಈ ೭ ಮರದ ಎಲೆ" (ಹಲಾಯು. ೩೧-೩೦); "ಪತ್ರಂ ದಳಂ ಛದನಂ ಪಲಾಶಮೆನೆ ಪರ್ಣಮಕ್ಕುಂ" (ಮಂಗರಾ. ೩೨-೩) ; ಕೇಸರ ಲವಂಗ ದಳಂಗಳನಿಕ್ಕಿದಿಂ ಬಟಿಕದಱೊಳೆ ಸದ್ಗುಡಂ ನೆಱೆಯೆ ಧೂಪಿಸೆ ಮಜ್ಜಿಗೆಯಕ್ಕುಮುತ್ತಮಂ (ಲೋಕೋಪ. ೮-೫೩) ; ಅಂಕುರ ಪಲ್ಲವ ದಳ . . . ಪಕ್ವಫಲಗಳ ಪಂಕ್ತಿಗಳುಂ ಸಕಲರೋಗಹರಂಗಳಾಗಿ . . . ಕಂಗೊಳಿಸುತಿರ್ಕುಂ (ವಿವೇಕ. ೨೧೨). ೩. ನಾನು ಹೋಗುತ್ತಿದ್ದ ದಾರಿಯಲ್ಲಿ ಯಾವುದೋ ಒಂದು ಮದೋನ್ಮತ್ತ ಉತ್ಸವಕಾರಿ ದಳ ಹೊರಟಿದೆ (ಬಾಣಆ. ೧೨೭). ೪. ಆನೆಯ ಕುದುರೆಯ ದಳ (ಪ್ರಾಅರಿ. ೧೯೩೭, ೩೦-೨ ; ಸು. 1125) ; ಇಕ್ಕೇರಿಯ ದಳವ ಮುಱಿಯಲಱಿದು ಬೆನ್ನಟ್ಟಿ ಬಂದಾಕ್ಷಣ ಪುರವ ಮುತ್ತಿದನಾ ಖಾನ (ಕಂನವಿ. ೧೧-೪) ; ದಳ ನಡಿಸೋ ಬಂಟ ಬತ್ತಿ ನೂಕ್ಯಾನೆ ? (ಗಾದ). ೫. ನೆಲ ; ಭೂಮಿ. 'ಮನೆದಳ' ಪರಾ. ೬. ದವಸ ; ಧಾನ್ಯ. ೭. ದೈನ್ಯತೆ ; ದೀನತೆ. ೮. ವ್ಯಾಖ್ಯಾನ; ಒಕ್ಕಣೆ. ೯. ಆನೆ ; ಗಜ: "ವಕ್ಕಣೆ ಕರಿ ದಾರುಣಿ ಮೂಱಕ್ಕುಂ ದಳ ಶಬ್ದಮಕ್ಕು" (ನಾನಾಕಂ. ೧೧೦) ; "ದಳಮೆನೆ ಧಾರುಣಿಯಕ್ಕು ದಳಮೆಂದೆನೆ ಧಾನ್ಯಮಕ್ಕು ಪರಬಲಮಕ್ಕುಂ ದಳಮೆನೆ ಪಯಗಜಮಕ್ಕುಂ ದಳಮೆಂದೆನೆ ಸೈನ್ಯಮಕ್ಕು ಶಬ್ದಾಗಮದೊಳ್" (ಶಬ್ಧರ. ೧೨). ೧೦. ಒಂದು ಬಗೆಯ ಅಡಕೆ : ಹತು ದಳ ಸಲುಗೆಯೆನಿ[ತು] ದಳಸನ್ದಡ ದಳಕೆ ವೀಶವೀಶ[ಮಂ] ಲೆಕ್ಕವಿಟ್ಟು ಕೊಳ್ವುದು (ಸೌಇಇ. XI-ii, ೧೫೩-೧೭; 1103); ಅಚ್ಚಿನ ಟಂಕಸಾಲೆಯಲು ದಳಕ್ಕೆ ವೀಸ ೨ ಎಲೆಯ ಹೆಱಿನಲು ಎಲೆ ೫೦ (ಸೌಇಇ. IX-i, ೨೨೮-೧೦; 1133) ; ಅಚ್ಚಿನ ಮೊಳೆಯಲ್ಲಿ ಕೊಟ್ಟ ದಳಕ್ಕೆ ವೀಸ ೨ ಕಾಣೆ ೨ (ಎಇ. XIV, ೨೭೩-೫೦ ; 1173) ; 'ಕದರಡಕೆ'ಗೆ ಸರಿಯಾದ ತಿಂಡಿ ಸಾಮಾನು ಬರುವುದಿಲ್ಲ ಎಂದು ಶಂಕಿಸಿ . . . ಒಳ್ಳೆಯ ಹಸ ಮತ್ತು ದಳಗಳನ್ನು ಕದ್ದು ಸೇರಿಸಿಕೊಂಡು ಬಂದಿದ್ದ (ಮಲೆಮ. ೪೩೯). ೧೧. ಒಂದು ಬಗೆಯ ತೆರಿಗೆ : ಹೊಂಗೆ ಮಾನ ೧ ದಳಕ್ಕೆ ಕೊಂಬು ಬೆಲ್ಲಕ್ಕೆ ನೂಱು ಕೊಂಡು (ಸೌಇಇ. IX-i, ೨೯೭-೪೮, 1177) ; ಕರ್ಬ್ಬನ ದಳ ಮಿಡಿ ಹೆನೆಯ ಕುಳ ಮುಖ್ಯವಾದ ಸರ್ವ ಆಯವನು . . . ಧಾರಾಪೂರ್ವ್ವಕವಾಗಿ ಬಿಟ್ಟು (ಎಕ. IX, ಚನ್ನಪ. ೬೬-೦೪; 1288) ; ತುಪ್ಪ ದಳ ಮಿಳಿ ಗುಳು ನೂಲು ಮುಖ್ಯವಾದ ಯೆಲ್ಲಾ ಅಪೂರ್ಬಾಯ ಗೂಡಿಕಟ್ಟಿಕೊಟ್ಟಗುತ್ತಗೆಯ ಸಿದ್ಧಾಯ ಗದ್ಯಾಣ ನೂಱು (ಎಕ. XV, ಬೇಲೂರು. ೨೫೨-೬ ; 1298).

ದಳದಬ್ಬುಕ = ಸೈನ್ಯವನ್ನು ಸೀಳುವವನು ; ಒಂದು ಬಿರುದು : ತಂನದಟಿಂ ದಳದಬ್ಬುಕನುನ್ನತನಾಮಾದಿ ರಾಜ ದಣ್ಡಾಧೀಶಂ . . . ದಣ್ಡಾಧೀಶ್ವರಮಾದಿರಾಜನೆಸೆವಂ ದಣ್ಡೈಕ ಧರ್ಮಾತ್ಮಜಂ (ಕೊಲ್ಲಾಶಾ. ೨೩-೩೩; ?). ದಳಬದ್ಧರಾಗು = ಪಡೆಯಾಗು : ಗುಂಪಾಗು : ಪಠಾಣರು ಅಕ್ಬರ ಬಾದಷಹನಿಂದ ವಂಗದೇಶದಿಂದ ಹೊರಡಿಸಲ್ಪಟ್ಟವರಾಗಿ ಉತ್ಕಲ (ಒರಿಸ್ಸಾ) ದೇಶದಲ್ಲಿ ದಳಬದ್ಧರಾಗಿ ಬಂದು ಸೇರಿಕೊಂಡಿದ್ದರು (ಕಪಾಕುಂ. ೩೩) ; ಜಗತ್ತಿನ ಸಕಲ ದೇಶಗಳಲ್ಲೂ ಈ ಮತಾನುಯಾಯಿಗಳು ದಳಬದ್ಧರಾಗಿ . . . ಪ್ರಚಂಡ ಚಳವಳಿ ನಡೆಸುತ್ತಿರುವರು (ಧಾರದ. ೩೬೩). ಧಳಮುಟ್ಟೆ ಗಂಡ = ಶತ್ರುಸೈನ್ಯವು ಆಕ್ರಮಣ ಮಾಡಿದಾಗ ಕಲಿತನವನ್ನು ಮೆರೆಯುವ ಶೂರ; ಏಕಾಂಗಶೂರ; ಒಂದು ಬಿರುದು: ಕೊಂಕಣ ಭಯಂಕರಂ ಧಳಮುಟ್ಟೆಗಣ್ಡನಣ್ಣನಬಂಟಂ (ಸೌಇಇ. XX, ೧೯-೩೦ ; 1015); ರಟ್ಟ ಮಾರ್ತಣ್ಡಂ ಧಳಮುಟ್ಟೆಗಣ್ಡಂ (ಸೌಇಇ. XI-i, ೭೮-೧೦ ; 1041). [ಸಂ.]

ದಲತ್ಕೈರವ, ದಳತ್ಕೈರವ (ನಾ). ಅರಳುತ್ತಿರುವ ಬಿಳಿ ನೈದಿಲೆ,–ಕುಮುದ : ಇವಱ ಸಮಾಸಕ್ಕೆ – ಕ್ವಣತ್ಕಂಕಣ . . . ಚಲತ್ಕುಂತಳ, ದಲ[ಪಾಠಾಂ. ಳ]ತ್ಕೈರವ . . . ಘೋಷದರ್ಣವ – ಎಂದಿರಿಸಿ ಸಮಾಸಮಂ ಮಾಡಿ, ಎಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು (ಶಮದ. ೮೦ ಪ್ರಯೋ). ದಳತ್ಕೈರವ : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ದಲನ, ದಳನ (ನಾ). ೧. ಒಡೆಯುವಿಕೆ; ಸೀಳುವಿಕೆ : "ಹಿಟಿ–ನಿರ್ದ್ರವ ಕರಣೇ (ಹಿಂಡು), ದಲನಾರ್ಥೇ (ಸೀಳು ಎಂಬರ್ಥದಲ್ಲಿ) ಕುಳಂ" (ಶಮಧಾ). ೨. ನಾಶಪಡಿಸುವುದು ; ಹೋಗಲಾಡಿಸುವುದು : ತನ್ನ ತುಳಿತಕ್ಕೆ ತುತ್ತಾದ ವರ್ಗವನ್ನು (ದುಡಿಮೆಗಾರ ವರ್ಗವನ್ನು) ಹೆಚ್ಚಿನ ದಮನಕ್ಕೂ ದಲನಕ್ಕೂ ಗುರಿಮಾಡುವ ಹೊಸದೊಂದು ಸಾಧನವನ್ನಾಗಿ ಉಪಯೋಗಿಸ ಹತ್ತುವದು (ಮಾವಾದ. ೧೬೬). ದಳನ: ೧. ವೈರಿಭೂಭೃನ್ಮದವನ್ಮಾತಂಗ ಕುಂಭಸ್ಥಳ ದಳನ[ಖ]ರೋಗ್ರಾಸಿ ಪಂಚಾಸ್ಯ ಧೈರ್ಯಂ ವಿದಿತ ಪ್ರತ್ಯಕ್ಷ ನಾಶಾಕರಿ ನಿಕಟತಟಶ್ರಾಂತದಾನಂ ಭರಂಗೆಯ್ದಿದಿರೊಳ್ ವಿಕ್ರಾಂತ ತುಂಗಂ ಹರಿಗನಿರೆ (ಪಂಪಭಾ. ೬-೭೭). [ಸಂ.]

ದಲಪತಿ, ದಳಪತಿ (ನಾ). ೧. ಸೇನಾನಾಯಕ ; ಸೈನ್ಯಾಧಿಪತಿ ; ದಂಡನಾಯಕ: ಕುದಿವ ಚಿತ್ತದ ದೃಢತೆಗುಂದಿದ ಪದವ ಬತ್ತಿದ ಬಸುಱ ಚಿಂತಾಹೃದಯ ನೋಡುತ ಮಱೆಯ ಹೊಕ್ಕನು ದೈತ್ಯ ದಲಪತಿಯ (ಕೌಶಿಂಗಾ. ೩೨-೨೮). **ದಳಪತಿ:** ೧. ಮಗನು ದಳಪತಿಯಾದ ಗಡ ಕಾಳೆಗವ ನೋಡುವೆ ನೆಂಬವೊಲು ಜಗದಗಲದಲಿ ನೆಱೆ ಕಡಿತವಿಕ್ಕಿತು ತಿಮಿರವನದೊಳಗೆ (ಕುಮ್ಯಾಕ. ೨-೧) ; ದಳಪತಿ ಸಹ ಬಂಧುಗಳು ಕೂಡಿ ಪಂತಿಯೊಳೊಲಿದು ಭೋಜನವನು ಮಾಡಿ . . . ಹರುಷದೊಳೊಪ್ಪಿದನು (ಕಂನವಿ. ೮-೯೨) ; ಹೈದರನು ಪ್ರಸಿದ್ಧ ದಳಪತಿಯಾಗಿದ್ದನು (ಒಡೆಕ. ೮೯). ೨. ನಾಯಕ ; ಮುಂದಾಳು : ಹೇಳದೆಯೆ ಕೇಳದೆಯೆ ದಳಪತಿಯು ನುಡಿದಂತೆ ಮಾಡುವವನಾವನೋ ಅವನೆ ಸತ್ಯಾಗ್ರಹಿ (ಪಾಂಡಜ. ೨೧-೧). [ದಲ + ಪತಿ$_2$]

ದಲವಾದ್ಯ (ನಾ). ಅನೇಕರು ಸೇರಿ ನುಡಿಸುವ ವಾದ್ಯಗಳ ಸಮೂಹ ; ವಾದ್ಯವೇಳ : ದಲವಾದ್ಯ(ಬ್ಯಾಂಡು)ವೂ ಬರಲಿಲ್ಲ. ಅಂತಃಪುರದ ಸ್ತ್ರೀಯರು ಅತ್ಯಂತ ಅಸಂತುಷ್ಟರಾದರು(ಇಪ್ಪಕ. ೪೧). [ದಲ + ವಾದ್ಯ]

ದಲಾಯತ್ 'ದಲಾಯಿತ' ನೋ.

ದಲಾಯಿತ, ದಲಾಯತ್ (ನಾ). (ಬಿಲ್ಲೆ ಧರಿಸಿರುವ) ಆಳು ; ಸೇವಕ ; ದವಾಲಿ ಸಿಪಾಯಿ : ಕಷ್ಟಪಟ್ಟು ಚಾಕರಿಮಾಡುವಂಥ ದಲಾಯಿತರು ಮುಂತಾದ ಆಳುಗಳಿಗೆಲ್ಲಾ ಆರಕ್ಕೆ ಹೆಚ್ಚಿಲ್ಲ ಮೂರಕ್ಕೆ ಕಡಿಮೆಯಿಲ್ಲ ಹೀಗೆ ಸ್ವಲ್ಪ ಸ್ವಲ್ಪ ಸಂಬಳಗಳೇಯಿರುತ್ತವೆ (ಕಥಾಮ. IV, ೧೧೫). **ದಲಾಯತ್:** "ದಲಾಯಿತ, ದಲಾಯತ್" (ಮೈಗೆಜೆ. IV, ೭೬೭). [< ದಲಾಯಿತ]

ದಲಾಲ 'ದಲ್ಲಾಳ' ನೋ.

ದಲಾಲಿ 'ದಲ್ಲಾಳಿ' ನೋ.

ದಲಾಲಿಕೆ (ನಾ). ಮಧ್ಯಸ್ತಿಕೆ; ದಳ್ಳಾಳಿತನ: ಇವನ ದಲಾಲಿಕೆಯೇ ಅದಕ್ಕೆ ಕಾರಣ (ಹಹಸ. ೫೮). [ದಲಾಲಿ (<ದಲ್ಲಾಳಿ) + – ಇಕೆ]

ದಲಿತ, ದಳಿತ (ಗು). ೧. ಒಡೆದ ; ಸೀಳಿದ. ೨. ಅರಳಿದ ; ವಿಕಸಿತವಾದ. 'ದಲಿತಾಂಬುಜ' ಪರಾ. (ನಾ).೩. ಹಿಂದುಳಿದುದು : ಯಾವ ವರ್ಗವು ಇಂದಿನ ಪ್ರಚಲಿತ ವ್ಯವಸ್ಥೆಯಿಂದ ಅತ್ಯಂತ ದಲಿತವಾಗಿದೆಯೋ . . . ಅದೇ ವರ್ಗವು . . . ಜಾಗ್ರತಿಯನ್ನು ಪಡೆದುಕೊಳ್ಳಬಲ್ಲದು (ಮಾವಾದ. ೧೫೩). ೪. ಹಿಂದುಳಿದವನು; ದಮನಕ್ಕೆ ಒಳಗಾದವನು. 'ದಲಿತಜನ' ಪರಾ. **ದಳಿತ:** ೧. ಇಳಾಪ್ರಭುವೊಗೆದ ನುದಿತ ಕಾಯಪ್ರಭೆಯೊಗೆದಿರೆ ದಳಿತ ಶತ್ರುಗೋತ್ರಂ ಪುತ್ರಂ (ಪಂಪಭಾ. ೧-೧೨೭). ೨. ದಳಿತಕಮಲಚ್ಛಾಯಾಟೋಪಂ ಮನೋಜರಸಪ್ರಭಾವಳಯನಿಳಯಂ . . . ಸ್ನಿಗ್ಧಂ ವಿಳೋಕನಮೋಪಳಾ (ಪಂಪಭಾ. ೪-೭೭). ೫. [ಗಣಿತ] ಭಾಗಿಸುವುದು ; ಭಾಗಾಕಾರ : "ದಳಿತ, ಅರ್ದಿತ . . . (ಖಂ)ಡಿತ ಇಂತಿನಿತುಂ ಅರ್ಧಿಸೋದಕ್ಕೆ ಹೆಸರು" (ವ್ಯವಹಾ. ೧೧-೨೩); ಚತುಃಷಷ್ಟಿಗುಣಿತ ದ್ವಾದಶೋತ್ತರ ದ್ವಿಶತಗುಣ ಪಿಂಡಹೃತ ನದೀ ವಿಷ್ಕಂಭರಹಿತ ದಳಿತ ಮಧ್ಯಮ ಪರಿಧಿ ಕಚ್ಛಾದಿ ಗಂಧಮಾಲಿನ್ಯಾ ವಿಷಯಾಯಾಮಮಕ್ಕುಂ (ತತ್ತ್ವಪ್ರ. ೧೬೫). [ಸಂ.]

ದಲಿತಜನ, ದಳಿತಜನ (ನಾ). ದಮನಕ್ಕೆ ಒಳಗಾದವರು ; ಶೋಷಿತಜನ ; ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳಮಟ್ಟದವರು : ಉಳ್ಳವರ ನಿರ್ದಯದ ಕಲ್ಲುಗಾಣದ ಹೀನಕೃತ್ಯದಲಿ ನಿರಿನಿಟಲು ಬಡವರೆದೆಯು, ಕ್ಷಾಮಡಾಮರ ಭೀಮಗದೆಯನಪ್ಪಳಿಸುತಿರೆ ನಿತ್ರಾಣವಾಗುತಿದೆ ದಲಿತಜನವು (ಭಾವಜೀ. ೧೨-೧೬) ; ಈ ಹೊಸೂರಿನಲ್ಲಿರುವ ದಲಿತಜನರ ಸ್ಥಿತಿ – ಗತಿಗಳು ಅತ್ಯಂತ ಶೋಚನೀಯವಾಗಿದ್ದವು. (ಹೊಸೂಹ. ೦೮). **ದಳಿತಜನ:** ದಳಿತಜನದ ಹಿತವನ್ನು ಲಕ್ಷಿಸದೆ . . . ಯಾಂತ್ರಿಕವಾಗಿ ಬಂಡವಾಳದ ಚಕ್ರವನ್ನು ತಿರುಗಿಸುತ್ತಿರುವ ವಿಜ್ಞಾನ ಸಂಸ್ಕೃತಿ (ಶಿಕ್ಷದ. ೩೯೭). [ದಲಿತ + ಜನ]

ದಲಿತವರ್ಗ (ನಾ). = ದಲಿತಜನ : ದಲಿತವರ್ಗದವರಿಗಾಗಿ ಶ್ರಮಿಸಬೇಕು (ಕೊನೆಭೇ. ೨೮೩). [ದಲಿತ + ವರ್ಗ]

ದಲಿತಾಂಬುಜ, ದಳಿತಾಂಬುಜ (ನಾ). ಅರಳಿದ ತಾವರೆ; ವಿಕಸಿತವಾದ ಕಮಲ. 'ದಲಿತಾಂಬುಜನೇತ್ರೆ' ಪರಾ. **ದಳಿತಾಂಬುಜ :** 'ದಳಿತಾಂಬುಜನೇತ್ರೆ' ಪರಾ. [ದಲಿತ + ಅಂಬುಜ]

ದಲಿತಾಂಬುಜನೇತ್ರೆ, ದಳಿತಾಂಬುಜನೇತ್ರೆ (ನಾ). ಅರಳಿದ ಕಮಲದಂತೆ (ಅಗಲವಾದ) ಕಣ್ಣುಳ್ಳವಳು ; ಆಯತಾಕ್ಷಿ : ಇಂದುಯುಗಂಗಳ ಮುಂದಂ ಬಂದು ಹರದ್ವಿತಯಂಗಳ್ ನಿಂದೊಡೆ ಚಿತ್ರಪದಂ ನಾಮಂ ದಲಿ[ಪಾಠಾಂ. ಳಿ]ತಾಂಬುಜನೇತ್ರೇ (ಛಂದೋಂಬು. ೨-೯೪). **ದಲಿತಾಂಬುಜನೇತ್ರೆ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ. ದಲಿತಾಂಬುಜನೇತ್ರಾ (ದಲಿತಾಂಬುಜ + ನೇತ್ರ + –)]

–ದಲೆ (ಪ್ರ). ಭಾವನಾಮವಾಚಕ ಕೃದಂತ ಪ್ರತ್ಯಯ : 'ಆದಲೆ', 'ತವುದಲೆ', 'ಮರಳುದಲೆ' ಪರಾ.

ದಲ್ಲಗ (ನಾ). ಒಬ್ಬಾತನ ಹೆಸರು : ದಲ್ಲಗ ಪೇಟ್ದಯ್ಯನೆ ಪಾಲ × × (ಎಕ. II, ೯೦-೧ ; ಸು. 700). [?]

ದಲ್ಲಾಲಿ 'ದಲ್ಲಾಳಿ' ನೋ.

ದಲ್ಲಾಳ, ದಲಾಲ, ದಳ್ಳಾಳ (ನಾ). ಮಾರುವವರು ಮತ್ತು ಕೊಳ್ಳುವವರ ನಡುವೆ ಮಧ್ಯಸ್ಥನಾಗಿ ಕೆಲಸ ಮಾಡಿ ಅದಕ್ಕಾಗಿ ಶುಲ್ಕ ಪಡೆಯುವವನು: ಕಮಿಷನ್ ಏಜೆಂಟ್; ವ್ಯಾಪಾರಗಾರರ ಸರಕನ್ನು ನಿರ್ದಿಷ್ಟ ಲಾಭಕ್ಕಾಗಿ ಮಾರಾಟಮಾಡಿಸುವವನು ; ದಳ್ಳಾಳಿ : ಮುಂಗಡವಾಗಿ (Option) ಒಪ್ಪಂದ ಮಾಡಿಕೊಳ್ಳುವ ತರಗಿನ ದಲ್ಲಾಳರು ಬೆಳೆಗೆ ಸಂಚಕಾರ ಕೊಡುವರು (ಹಡಪ್ರ. ೧೬೧). **ದಲಾಲ:** ಸ್ಥಿರ ಹವೆಯು ಹೊರಗಿನ ಹವೆಗೂ ರಕ್ತಕ್ಕೂ ನಡುವೆ ದಲಾಲನಂತೆ ಇರುತ್ತದೆ (ಮುಂಬಯಿ. ೬-೩೦೯); ದೇವದೈವಗಳ ಅನುಗ್ರಹಕ್ಕಾಗಿ . . . ದೇವರ ದಲಾಲರಾದ ವೈದಿಕರೂ, ಕಾಜಿಗಳೂ, ಪಾದ್ರಿಗಳೂ ಉತ್ಪನ್ನರಾಗುತ್ತಾರೆ (ಮಾವಾದ. ೭೩) ; ಹುಬ್ಬಳ್ಳಿ, ಮಿರ್ಜಿ ಈ ಗ್ರಾಮಗಳಲ್ಲಿಯ ಹುಂಡೀಸಾವಕಾರರ ದಲಾಲರು ಮಾತ್ರ ಇರುತ್ತಿದ್ದರು (ಕಥಾಗೆ. ೨೭೯). **ದಳ್ಳಾಳ :** ನಾನು ಹುಡುಗೀರನ್ನ ಹುಡುಕಿಕೊಂಡು ಬರೋ ದಳ್ಳಾಳ ಎಂದು ತಿಳಿಕೊಂಡರೆ ಮಾತ್ರ ನನಗೆ ಸಹಿಸೋದಕ್ಕೆ ಆಗೋದಿಲ್ಲ (ಮಾರ್ಗದ. ೧೩೭).

[←ಅರ.ಪಾರ. ದಲ್ಲಾಲ್ ; ಹಿಂ. ಮರಾ. ದಲಾಲ್, ದಲ್ಲಾಲ್]

ದಲ್ಲಾಳಿ, ದಲಾಲಿ, ದಲ್ಲಾಲಿ, ದಳ್ಳಾಳಿ (ನಾ). ೧. ವ್ಯಾಪಾರದಲ್ಲಿ ಕೊಡುವವರ ಹಾಗು ಕೊಳ್ಳುವವರ ನಡುವೆ ವ್ಯವಹರಿಸಿ ಅದಕ್ಕಾಗಿ ಪಡೆಯುವ ಶುಲ್ಕ ; ತರಗು. 'ದಲ್ಲಾಳಿತನ', 'ದಲ್ಲಾಳಿವಟ್ಟ' ಪರಾ. ೨. = ದಲ್ಲಾಳ : ಚನ್ನಬಸಪ್ಪನ ಮಗ ರೇಶ್ಮೆ ದಲ್ಲಾಳಿ ವೀರಸೆಟಪ್ಪನ ಹೆಂಡತಿ ಗಂಗಮ್ಮನ ಭಕ್ತಿ (ಎಕ. XII, ಕುಣಿಗ. ೪೮-೨ ; 1898) ; ಅಗ್ಗವಾಗಿ ಕೊಂಡು ಲಾಭಕ್ಕೆ ಮಾರುವ ದಲ್ಲಾಳಿ ವರ್ತಕರ (ತರಗಿನ ಪೇಟೆಯ) ಗುಂಪು ಎಲ್ಲೆಲ್ಲಿಯೂ ತಾನೇ ತಾನು (ಹಡಪ್ರ. ೯). **ದಲಾಲಿ :** ೧. ಪಿತ್ರಾರ್ಜಿತ ಆಸ್ತಿಯು ಕಡಮೆಯಾಗಲು ಅವನು ಪ್ಯಾರಿಸ್‌ದಲ್ಲಿ ದಲಾಲಿಯ ವ್ಯವಹಾರ ಸಾಗಿಸುತ್ತಿದ್ದನು (ಮೊಪಾಸಾ. ೩ ಮುನ್ನುಡಿ) ; ತಾತಪ್ಪ ದನಕರುಗಳ ವ್ಯಾಪಾರದಲ್ಲಿ ದಲಾಲಿ ಮಾಡುವ (ಅಶೋಕ. ೧೯). ೨. ಬಹಳ ಕುಯುಕ್ತಿಯ ದಲಾಲಿಗಳೂ ಇದ್ದಾರೆ (ಪ್ರವಾಇ. II, ೫೦೪) ; ದಲಾಲಿ ಭೀಮಣ್ಣ, ಕಿರಾಣಿಅಂಗಡಿ ರಾಮಣ್ಣ ಮತ್ತು ಆ ಸುಗೂರ ದೇಸಾಯರು ಇಂಥಾ ಜನರು ಒಟ್ಟು ನಿಲ್ಲಧಂಗ ಮಾಡಬೇಕು (ಅಪನಾ. ೭) ; ಈ ದಲಾಲಿಯ ಸಲುವಾಗಿ ನಾನು ನನ್ನ ಆತ್ಮನಿಗೆ ಎಷ್ಟು ಅನ್ಯಾಯ ಮಾಡಬೇಕಾಗುತ್ತಿತ್ತು (ಪ್ರೇಮಾಶ್ರ. ೨೫೮). **ದಲ್ಲಾಲಿ :** ೧. ಈ ಕಾರ್ಯದಲ್ಲಿ ತಮಗೆ ಯಶ ದೊರೆತಲ್ಲಿ ರತ್ನಗೋಲದ

ಬೆಲೆಯಲ್ಲಿ ಶೇಕಡಾ ಐದರಷ್ಟು ತಮಗೆ ದಲ್ಲಾಲಿ ಕೊಡಲು ನಮ್ಮ ರಾಯರು ಸಿದ್ದರಿದ್ದಾರೆ (ರತ್ನಗೋ. ೨೭). **ದಳ್ಳಾಳಿ :** ೧. ಶೇಕಡಾ ೫ ರಂತೆ ದಳ್ಳಾಳಿ ಎಷ್ಟಾಗುತ್ತದೆಂದು ಗುಣಿಸಿಕೊಂಡನು (ಹೋಥಪು. ೩೪). ೨. ಸಾಮಾನು ಗಳನ್ನು ಮಾರಾಟ ಮಾಡಲು ಒಬ್ಬ ದಳ್ಳಾಳಿಯನ್ನು ನೇಮಿಸಿದ (ಪ್ರವಾಶಾ. II, ೩೧೮) ; ನ್ಯಾಯಾಲಯದ ದಳ್ಳಾಳಿಯನ್ನು ಕೇಳಿ ನೋಡಿ ಆತ ಗೌರ್ನರ ಮೇಲೆ ತಪ್ಪು ಹೊರಿಸ ತ್ತಾನೆ (ಪುನರು. ೨೪೩).

[←ಪಾರ. ದಲಾಲೀ, ದಲ್ಲಾಲೀ; ಹಿಂ. ದಲ್ಲಾಲಿ ; ಆರ. ದಲಾಲೀ; ಮರಾ. ದಲಾಲೀ]

ದಲ್ಲಾಳಿತನ$_1$, ದಳ್ಳಾಳಿತನ (ನಾ). ಮಧ್ಯಸ್ಥಿಕೆ ; ಮಧ್ಯಸ್ಥಗಾರನ ವೃತ್ತಿ : (ಕ). **ದಳ್ಳಾಳಿತನ :** ದಳ್ಳಾಳಿತನದಿಂದ ಆತನ ಜೀವನ ನಡೆಯು ತ್ತದೆ (ಕೂಥಿ). [ದಲ್ಲಾಳಿ + – ತನ]

ದಲ್ಲಾಳಿತನ$_2$ (ನಾ). ಧಾರ್ಷ್ಟ್ಯ ; ಮದ ; ಉನ್ಮತ್ತತೆ : ಉನ್ಮತ್ತ ಯೌವನಂ ಪೊಲ್ಲ ಮುನಿಸಿಂದ ಪೊಜಿಮಟ್ಟು ಪೊಳಲಂ ತನಗೆ ಮಾರ್ಮಲೆ ವರಿಲ್ಲವೆಂದು ದಲ್ಲಾಳಿತನದಿಂದ ದಂಡು ನಡದಂ ಧರಣಿಯೆಲ್ಲಮಾ ಬಲು ಭಾರಕಲ್ಲಾಡುವಂದದಿಂ (ಸಮ್ಮೇಶ್ವಾ. ೮-೨೫) ; ತಂದೆತಾಯಿಗಳರಸಿಗತಿ ಸಲಿಗೆವಂತರೆಂಬೊಂದು ದಲ್ಲಾಳಿತನದಿಂ ಲಂಡಪುಂಡರೊಳ್ ಮುಂದೆ ನೋಡದೆಯಾಡಿ ಕೊಟ್ಟುಕೊಂಡವರು ನೆಜಿಹೊಜಿಯವರು ನಗುವ ತೆಱದಿ ನಿಂದೆಗೊಳಗಾಗಿ (ಸಮ್ಮೇಶ್ವಾ. ೧೦-೩) ; ಒಳ್ಳಿತನುಣಲಿತ್ತು ಸಲಹು ತಿಪ್ಪೆವು ಮುಪ್ಪಿನಲ್ಲಿ ಸಾಕುವರೆಮ್ಮನೆಂದು ದಲ್ಲಾಳಿತನದಲ್ಲಿ ಹಾಲು ಹೋಹಿರಿ ಬಲು ಕಳ್ಳರಲ್ಲವೆ ಹೋಗಿರೆಂದಾ (ಥರಡ. ೪೩-೧೦೯).

[ದಲ್ಲಾಳಿ? + – ತನ]

ದಲ್ಲಾಳಿವಟ್ಟ (ನಾ). ಮಧ್ಯಸ್ಥಿಕೆಯಿಂದ ಬರುವ ಲಾಭ;–ದಳ್ಳಾಳಿತನ ದಿಂದ ದೊರೆಯುವ ಕಮಿಷನ್ : ತರಗು : ಅವರಿಗೆ ದಲ್ಲಾಳಿವಟ್ಟ (Brokerage) ಕೊಟ್ಟಲ್ಲಿ, ನಮಗೆ ಶೇರನ್ನು ಕೊಡಿಸುವುದಕ್ಕೆ, ಕೊಳ್ಳು ವುದಕ್ಕೆ ಅವರು ಸಹಾಯವಾಗುತ್ತಾರೆ (ಚಾಲಿಪ್ರ. III, ೧೪೬೩).

[ದಲ್ಲಾಳಿ + ವಟ್ಟ$_1$]

ದಲ್ಲಿಮರ (ನಾ). ಒಂದು ಬಗೆಯ ಮರ : ದೊಡ್ಡ ತೊಪ್ಪೆಮರ, ದೊಡ್ಡಿ ಮರ, ಬಂದಾರಿಮರ, ದಲ್ಲಿಮರ, ಬಟ್ಟಗ (ಮೃಜಿಗಿ. ೪೫-೪೮೫).

[? + ಮರ$_1$]

ದವ (ನಾ). ೧. ಕಾಡು ; ಅರಣ್ಯ ; ವನ : "ಅಡವಿಯಲ್ಲಿಯುಂ ದವ ದಾವ ಎಂಬುದು" (ಹಜಾಯು. ೦೩೩-೦೩) ; "ವನದಲ್ಲಿ ದವ ದಾವಮೆಂಬುದು" (ಮಂಗರಾ. ೧೩೯-೭) ; ಆ ಮರನನಾ ದವದಗ್ನಿ ಬರ್ದುಂಕಲೀಗುವೇ (ಆದಿಪು. ೯-೫೯). ೨. ಕಾಡುಗಿಚ್ಚು ; ದಾವಾಗ್ನಿ : "ನಿಮಿರ್ದ ಕಾಂತಾರ ದಲ್ಲಿಯ ಕಿಚ್ಚು ದಾವಂ [ದವಂ] (ಮಂಗೆರಾ. ೧೪-೯) ; "ವನ ಕೃಷ್ಣ ವರ್ತ್ಮಂಗೆ ದವನಾಮ" (ಕಕರ. ೩೦) ; ದವರೌದ್ರಜ್ವಲನಾದ್ಭುತಂ ಹೃದಯ ದೊಳ್ ಶೋಕಾಗ್ನಿ ಕೈಗಣ್ಮೆ ಪೊಣ್ಮುವ ಕಿಚ್ಚಂ ನದಿಪಲ್ಕೆ ಬರ್ಪ ತೆಱದಿಂ ಕಣ್ಗಳಿಂದುಣ್ಮೆ ಪೊಣ್ಮುವ ನೇತ್ರಾಂಜನವಿಶ್ರಬಾಷ್ಪಜಲಧಾರಾಬಿಂದುಗಳ್ ಕೂಡೆ (ಆಚಿಪು. ೧೦-೪೩) ; ದವರೂಪಂ ರಿಪುಕಾನನಕ್ಕೆ ಪವಿರೂಪಂ ಶತ್ರು ಶೈಳಕ್ಕೆ ಬಾಡವ ರೂಪಂ [ದ್ವಿ]ಷದರ್ಣ್ಣಕ್ಕೆ (ಎಳ. VIII, ಸೊರಬ. ೧೪೦-೫೯ ; 1198) ; ಜವನೆಂಬ ವನಕೆ ದವನೆಂದೆನಿವ ಕರ್ಗೊರಳನ ಭರ್ಗನ ಫಣಿ ಕಂಕಣನಂ ಚತುರರ್ಗೆಜಿಯುಂ ಪೊಗಳ್ದಂ ವರಗುರ್ಜರಭೂವರನಿರ ದೊಸೆದು (ಅಭಿದೀ. ೬-೨೨) ; ತದ್ರಿಪು ಮದದವಮಂ ನಂದಿಸಲ್ ಬರ್ಪ ಕಾರಂತಿರೆ ಬಾದಂ (ಕಾಜಶೀ. ೬-೧೩). "ದವದಾವ ಶಬ್ದ ವೆರಡುಂ ಪ್ರವರ್ತಿಕುಂ ವನದೊಳಂ ವನೋತ್ಥಾಗ್ನಿಯೊಳಂ" (ವಸ್ತುಕೋ. ೧೨೦-೧೬). ೩. ಕಿಚ್ಚು ; ಬೆಂಕಿ ; ಅಗ್ನಿ : ರಿಪುವಿಪಿನ ದವ ಹರಿಶ್ಚಂದ್ರಭೂಪಾಲನ ಪ್ರಬಳ ಪ್ರತಾಪ ಶರಧಿಯ ಸುಳಿಯೊ ಹೇಳಿನಲಯೋಧ್ಯಾಪುರಂ ಮೆಜಿವು ತಿರ್ದುದು (ಹಜಕಾ. ೧-೩೬). ೪. ಒಂದು ಬಗೆಯ ಮರ : ಕಂಕೇಲಿ ಮೋಚು ದವಂ ನಳಿನ ತಾಳವಿವಿಂತು ವೃಕ್ಷಮೆನಿಕುಂ (ನಾನಾರ್ಥ. ೧೧೧).

[ಸಂ.]

ದವಡ 'ಧವಡ$_1$' ನೋ.

ದವಡತನ 'ಧವಡತನ' ನೋ.

ದವಡಿಗ (ನಾ). ಹುಂಬ : ತುಂಬಿದುದು ಹೆಣನೊಟ್ಟಲಲಿ ನೆಲನಂಬರಕೆ ಜಡಿದಿಟ್ಟನೌಕುವ ಡೊಂಬಿಗರ ದವಡಿಗರ ದಕ್ಕಡರಕ್ಕಸರ ಹೆಸುಮ (ತೂರರಾ. ೫-೪-೨೨). [ದವಡ (<ಧವಡ$_1$) + – ಇಗ]

ದವಡಿತಿ (ನಾ). ೧. ಹುಂಬಹೆಣ್ಣು ; ಅವಿವೇಕಯಾದ ಹೆಣ್ಣು. ೨. ಕೆಟ್ಟನಡತೆಯ ಹೆಣ್ಣು ; ದಂಷ್ಟೆ ; ನೀಚೆ. 'ಅತಿದವಡಿತಿ' ಪರಾ.

[ದವಡ (<ಧವಡ$_1$) + – ಇತಿ$_1$ (<– ಇತ್ತಿ)]

ದವಡೆ, ಡವಡೆ$_2$, ಡವ್ವಡೆ$_2$, ದಾಡೆ$_1$, ದೌಡೆ (ನಾ). ೧ ಒಸಡು ; ದಂತ ಪೀಠ : ತಾಲು, ಕಾಕುದಂ–೨ ದವಡೆಗಳು, ವಳದವಡೆ, ಹೊರ ದವಡೆ, ಕೆಳದವಡೆ, ಮೇಲುದವಡೆ, ದಾಡೆ" (ಸಿದ್ಧಾಂತಿ. ೧೯೫) ; ಸಮವಾದ ದವಡೆಗಳು (ಸಾಗಂಧಿ. ೩೬೯-೪) ; ಅವು (ರಥಾಶ್ವಗಳು) ದವಡೆಗಳನ್ನು ಕಚ್ಚಿ ಕೊಂಡು ರೋಷಾರುಣಲೋಚನಗಳಾಗಿ ಭೂಮಿಯಲ್ಲಿ ಬಿದ್ದು (ಕೃಪಾಕ. ೦೬೧) : ಕಸ್ತೂರೀಮೃಗವು ಸಾಧಾರಣ ಹಂದಿಯಷ್ಟು ಇರುತ್ತದೆ. ಅದರ ದವಡೆಗೆ ಕೋರೇಹಲ್ಲು ಇರುವವು (ಮುಂಬಯಿ. ೪-೪೧೨) ; ಬಡವನ ಸಿಟ್ಟು ದವಡೆಗೆ ಮೂಲ (ಗಾದೆ). ೨. ಕಪೋಲಭಾಗದಲ್ಲಿ ಹಿಂಭಾಗದಲ್ಲಿರುವ ಹಲ್ಲು : ವೀರಣ್ಣನ ಧೈರ್ಯಸಾಹಸಗಳು, ಮೃತ್ಯುವಿನ ದವಡೆಗಳೊಳಗೆ ನುಗ್ಗುವ. ಕಲಿತನ ಇವುಗಳು ಈಚಣ್ಣನವರನ್ನು ರೋಮಾಂಚಗೊಳಿಸಿ ದುವು (ಹಾಹುತ್ತ. ೪೨) ; ಮೃತ್ಯುವಿನ ದವಡೆಗೇ ಸಿಕ್ಕಿದ್ದು ವಿಜಯಸಿಂಹನು ನಿರಪಾಯವಾಗಿ ತಪ್ಪಿಸಿಕೊಂಡನು (ರಾವಿಜ. ೦೬) ; ದವಡೆ ಹಲ್ಲುಗಳು ಗಟ್ಟಿಇವೆ (ಕೂಥಿ). **ಡವಡೆ$_2$:** (ಕ). **ಡವ್ವಡೆ$_2$:** (ಕ). **ದಾಡೆ$_1$:** ೧. ವಾರಿ ವಾಣದ ಸೊಪ್ಪಿನ ರಸ ಲೊಕ್ಕಿಸೊಪ್ಪಿನ ರಸ . . . ಕಲಸಿ ಗುಳಿಗೆಯಂ ಮಾಡಿ ದಾಡೆಯಲ್ಲಿರಿಸಿಕೊಂಡು ಬಂದರಸವಂ ನುಂಗಲು ಳಿ ತೆರದ ಅಜೀರ್ಣಂ ಕೆಟ್ಟು ದೀಪನವಹುದು (ಸಳಪ್ರ. ೩೬೯). **ದೌಡೆ :** ೧. ಆಡಿ ಗೆಲ್ಲುವ ನಾಲ್ಕು ಯಿಮ್ಮಡಿ ಗಜ್ಜುಗವ ಕೂಡಿದ ಗೆಳೆಯರ ಕೂಡೆ ನೋಡಿ ಬಟ್ಟಿಡುವರೆ ಮನೆಯಿಲ್ಲದಿರೆ ಬಾಲ ದೌಡೆಯೊಳಿಟ್ಟುಕೊಂಡಿಹನು (ಕಂದ್ರಹಾ. ೧-೩೪).

ದವಡೆಗೆ ಬಲಿಯಾಗು = ಬಾಯಿಗೆ ಸಿಕ್ಕು; ತುತ್ತಾಗು : ಭಾರಿಭಾರಿ ಆಸನಗಳು, ಮಂಚಗಳು, ಕನ್ನಡಿಗಳು ಸದ್ದುಮಾಡುತ್ತಾ ಬಂದು ಬೆಂಕಿಯ ದವಡೆಗೆ ಬಲಿಯಾದವು (ಆಶ್ರಮು. ೧೦೯). **ದವಡೆಯಹಲ್ಲು** = ದವಡೆ ೨ : ಎರಡೂ ದವಡೆಯ ಹಲ್ಲುಗಳು ಗಾಯದಲ್ಲಿ ಮೂಡಿದ್ದವು (ಕುಡಿಳೂ. ೪೪).

[ದೇ.॥ ತಮಿ. ತವಟ್ಟೈ; ಮಲ. ತಾಡಿ; ತುಳು. ದೌಡೆ; ತೆಲು. ದವುಡ]

ದವಡೆಸೆಳವು (ನಾ). "ಅಗಿಯುವ ಸ್ನಾಯುಂಗಳು ಸೆಳವಿನಿಂದ ದವಡೆ ಗಳಂ ತೆರೆಯಲಾಗದಂತೆ ಪುಂಟ್ಟಿಕೊಂಡಿರುವ ಒಂದು ಬಗೆಯ ಧನುರ್ವಾಯು: ದವಡೆಸೆಳವು" (Locked Jaw. ಇಂಕನ).

[ದವಡೆ + ಸೆಳವು]

ದವಣ (ನಾ). ಸರಕು (?) : ಸ್ವದೇಶ ಪರದೇಶಯಿದಂ ಬಂದಂತಹ ದವಣ ಗದ್ಯಾಣ ಸೂಜಿಕ್ಕೆ ಗದ್ಯಾಣಂವೊದಜೋಪಾದಿಯ ದವಣ ಆದಿದೇವರಿಗೆ ಸಲುವಂತಾಗಿ ಕೊಟ್ಟ ಶಾಸನ (ಎಳ. II, ೩೩೬-೩೨ ; 1288) ; ಕಬ್ಬಿಣದ ಮುದ್ದೆ ೧ ದವಣ ೧ ಕೈ ಲ್ (ಎಳ. XI, ಹಿರಿಯೂ. ೪೮-೨೬ ; 1589).

[?]

ದವಣಂದಿ (ನಾ). ಒಬ್ಬಾತನ ಹೆಸರು : ಶ್ರೀ ದವಣಂದಿ ಬಳರರ ಗುಡ್ಡ ಆಸು ×× ಬಂದು ತೀರ್ತ್ಥವ ಬಂಧಿಸಿದ (ಎಳ. II ೪೯ ; ಸು. 1000). 'ದಾವನಂದಿ' ಪರಾ. [?]

ದವಣಿ 'ದಾವಣಿ$_1$' ನೋ.

ದವಣಿಗ (ನಾ). ವ್ಯಾಪಾರಿ (?) : ಶ್ರೀ ಮಲ್ಲೊಕ್ಕಿಗುಣ್ಡಿಯ ಜೋಳ ದಂಗಡಿಯ ದವಣಿಗ ಮಹಾಜನಂ ಶ್ರೀಮರುಳೇಶ್ವರ ದೇವರಿಗೆ ಅಂಗಡಿಯ ಲರವಾನಂಗೊಳ್ವ ಸಂಟ್ಟುಗ ಭತ್ತಮಂ ಕೊಟ್ಟರು (ಕಇ. II, ೧೦-೧೫ ; 1080). [ದವಣ + – ಇಗ]

ದವತಿ 'ದವುತಿ' ನೋ.

ದವಥು (ನಾ). . ಕಿಚ್ಚು ; ಬೆಂಕಿ. ೨. ಕಾವು ; ಶಾಖ. ೩. ಸುಡುತ್ತಿರುವ ಜ್ವರ: (ಕ). ೪. ನೋವು; ಯಾತನೆ. ೫. ಆಯಾಸ; ಬಳಲಿಕೆ: "ದವಥುಃ, ಪರಿತಾಪಃ – ಈ ಎರಡು ಬಟಲಿಕೆ" (ಹಲಾಯು. ೯೮-೪೪) ; "ಪರಿತಾಪಮೆನೆ ದವಥು ಬಟಲಿಕೆ" (ಮಂಗರಾ. ೧೧೩-೨). [ಸಂ.]

ದವದಹನ (ನಾ). ಕಾಡನ್ನು ಸುಡುವ ಕಿಚ್ಚು ; ಕಾಳ್ಗಿಚ್ಚು ; ದಾವಾನಲ : ನೃಪವೃಷಭನರಾತಿನಿಕರತರು ದವದಹನಂ (ಕವಿರಾ. ೩-೧೫೭) ; ದವದಹನಂ ಕಾನನಮಂ ತವಿಪಂತಿರೆ ಬಾಡವಾನಲಂ ವಾರಧಿಯಂ ತವಿಪಂತಿರ ಪವನಸುತಂ ತವಿಸಿದನಗಣಿತಮೆನಿಪ್ಪ ದಾನವ ಬಲಮಂ (ಪಂರಾಮಾ. ೦೩-೧೨೯). [ದವ + ದಹನ]

ದವದಾಹ (ನಾ). ಕಾಳ್ಗಿಚ್ಚಿನ ಉರಿ ; ದಾವಾಗ್ನಿಯ ಜ್ವಾಲೆ : ರಾಹುವೆತ್ತಲು ಲಲಿತತಾರಾವ್ಯೂಹವೆತ್ತಲು ದಳ್ಳಿಸುವ ದವದಾಹವೆತ್ತಲು ನೀರಸದ ತೃಣರಾಶಿ ತಾನೆತ್ತ (ಕುವ್ಯಾದ್ರೋ. ೧೭-೨೪).

[ದವ + ದಾಹ]

ದವನ (ನಾ). ಸುವಾಸನೆಯ ಎಲೆಗಳುಳ್ಳ ಒಂದು ಬಗೆಯ ಗಿಡ ; ಹಬ್ಬದ ಹೂ : "ಪುಷ್ಪಮೆನೆ ದವನನಾಮಂ" (ಮಂಗರಾ. ೪೦-೩೪) ; "ಹಬ್ಬದ ಹೂವೆನಲು ದವನ" (ಕಬ್ಬಿಕೈ. ೨೨) ; ಮರುಗ ದವನಂದಳಂ ಶೈಲರುಹಂ ತಗರಂ ಖಜೋರಮೇಲೆಯಿವಂ ಕೊಂಡರೆ ನೆಲ್ಲಿ ಮೂಱುಮಡಿಯಾಗಿರೆ ಪೂರ್ವಕ್ರಮದಿನದು ಸುಗಂಧಾಮಳಕಂ (ಲೋಕೋಪ. ೭-೨೮) ; ಆ ತೋಂಟಮನಾರೊರ್ವ್ವರ್ಮ್ಮಾಡುವ ಮಾಲಗಾಱರ್ದ್ದೇವರ್ಗೆ ನಡೆಯಿಸುವ ಕಣಗಿಲೆಯ ಗಿಡುವಿರ್ಪ್ಪತ್ತು ... ದವನಂ ಮರುಗಿನ ಮಡಿಯೊಂದೊಂದ ಱಲಯ್ದು ಈ ಧರ್ಮ್ಮಮನಯ್ವತ್ತಱುವರುಂ ಕಾದು ನಡೆಯಿಸುವರ್ (ಸೌಇ. XI-1, ೧೦೮-೨೦ ; 1069) ; ಭವನವಾಸಿಗರ ಕರಂ ದವನದ ಮಡಿಯಂ ದಾಱಿಪೊಕ್ಕಂತೆ ಮಾಡಿ (ಧರ್ಮಾಮೃ. ೭-೯೫) ; ದವನದ ಸೀಗುರಿಗಳ ಪೊಣ್ಮುವ ಪೊಂಬಾಳೆಗಳ ಚಾಮರಂಗಳ . . . ವಿಚಕಿಲಕಾಯ ಕೇತುದಂಡದ ಸತಿಯರ್ (ಗಿರಿಕ. ೭-೫೫) ; ಈ ವನಿತೆ ಗುರುಪೂಜೆಯಂ ಮಾಡಳೆ ದವನದಲ್ಲಿ (ಬಸಪು. ೪೨-೧೦) ; ಬಾಳೆಯ ಹಣ್ಣು ದವನಗಳ ನೆರೆ ಜನಜಾಲ ದೇವನ ತೇರ ಮೇಲೆ ಲೀಲೆಯೊಳಗೆ ಸೂಸಿ ಗೋವಿಂದಯೆಂದೆಂಬಾಳಾಪಗಳೊಪ್ಪಿದುವು (ಕಂನವಿ. ೨೫-೧೦೮); ಶುಷ್ಕವಾವರೇನು ದವನ ಮೈಗಂಪನು ತರದೆ ಪವನ ? (ಗಂಗಾತ. ೬೮-೮).

ದವನದ ಹುಣ್ಣಿಮೆ=ಚೈತ್ರಶುದ್ಧ ಹುಣ್ಣಿಮೆ : ಚೈತ್ರಶುದ್ಧ ಹುಣ್ಣಿಮೆಯನ್ನು ವನಪೂರ್ಣಿಮಾ ಎನ್ನುತ್ತಾರೆ . . . ವನಪೂರ್ಣಿಮೆಗೆ ದವನದ ಹುಣ್ಣಿಮೆ ಎಂದು ಕನ್ನಡನಾಡಿನ ಹೆಸರು. ಆ ದಿವಸ ದೇವರಿಗೆ ದವನವನ್ನೇರಿಸಿ ಪಕ್ವಾನ್ನದ ನೈವೇದ್ಯ ಮಾಡುವರು (ಭಾಹಬೃ. ೬೬).

[ದೇ.॥ ತಮಿ. ತುಮಣ ; ತುಳು. ತೆಲು. ದವನ./ಹಿಂ. ಮರಾ. ದವಣಾ]

ದವನಮಲ್ಲಿಗೆ (ನಾ). ಒಂದು ಬಗೆಯ ಮಲ್ಲಿಗೆ ; ಕಾಡುಮಲ್ಲಿಗೆ (?): (ಪಂಡಿತ. ೮೮). [<ದವ ? + ಮಲ್ಲಿಗೆ]

ದವನಿ 'ದಾವಣಿ$_1$' ನೋ.

ದವಲತ್ 'ದೌಲತ್ತು' ನೋ.

ದವಲತ್ತು 'ದೌಲತ್ತು' ನೋ.

ದವಶಿಖಿ (ನಾ). ಕಾಡಿನ ಕಿಚ್ಚು ; ದಾವಾನಲ : ದವಶಿಖಿಯಾಗಿ ದಳ್ಳಿಸುವ ಸಂಹರಣೋಗ್ರ ಸಮೀರನಾಗಿ (ಜಗವಿ. ೧೫-೨೨) ; ಬಗೆವನೆಯೊಳಿರ್ಪ ರತಿಪನನೊಗೆದತ್ಕುಚುಗಿರಿಯ ವಿರಹಶಿಖಿ ದವಶಿಖಿ ಚುರ್ಚುಗುವೆಂದು ಮುಖಮೃಗಾಂಕಂ ಮಿಗೆ ಸುಧೆಗಱಿವಂತೆ ಕಱಿದುದವಳಶ್ರುಜಲಂ (ರಾಜಶೇ. ೭-೮೩). [ದವ + ಶಿಖಿ]

ದವಸ (ನಾ). ಕಾಳು ; ಧಾನ್ಯ : "ಘಾಸಃ, ಯವಸಃ – ಈ ೨ ದವಸಂ" (ಹಲಾಯು. ೩೨-೩೭) ; "ಧಾನ್ಯಂ ದವಸಮಕ್ಕು" (ಮಂಗರಾ. ೧೦೨-೩) ; ನೆಲ್ಲು ಜೋಳವು ಮೊದಲು ದವಸವನೆಲ್ಲವಂ ಸಂಗ್ರಹಿಸಿ (ಬಸಪು. ೧೫-೧೨); ತುಪ್ಪ ಸಖರೆ ಬಾಳೆಹಣ್ಣು ಹಾಲು ಮೊಸರು ವೀಳೆಯ ದೀವಿಗೆ ೨ ಇ ಪ್ರಮಾಣಿನ ದವಸವನೂ ಕೊಟ್ಟು ನಡಸಿ ಬರಲುಳದು (ಸೌಇಇ. IX-11, ೫೭೦-೮ ; 1534) ; ವೀಸದ ಕಾಸಿಗೆ ದವಸವ ನಾ ತಂದೆ ಕೂಸಿಗೆ ಸಾಲದು ಹೋಗೋ ದಾಸಯ್ಯ (ಪುರಂದ. ೧-೧೩೦-೩) ; ಸ್ವಾಸ್ತಿಪುರದಲಿ ಹೊಲ ಅರವಿನ ತೊಳಲ ಹೊಲ ದವಸವನು ದಾರೆನೆಱದು ಕೊಟ್ಟೆವು (ಎಕ. VI, ಕಡೂರು. ೨೫-೧೧ ; 1599) ; ಅವಧಾನಂಗಳಿಗ್ಯಾವೂರಾಯ್ತು ? ದವಸವು ನಮ್ಮಲ್ ಬಹು ಕ್ರಯವಾಯ್ತು (ನಾಪದ. ೨೦೪).

ದವಸ ಧಾನ್ಯ = ದವಸ ಮತ್ತು ಧಾನ್ಯ ; ಕಾಳು ಕಡಿ: ಈ ವರ್ಷ ಮಳೆಯ ಅಭಾವದಿಂದ ದುರ್ಭಿಕ್ಷ ಬಂದು ದವಸ ಧಾನ್ಯಗಳು ಕಡಿಮೆ ಆಗಿವೆ. (ರೂಢಿ).

[ದೇ.॥ ತಮಿ. ತವಚ ; ತುಳು. ತೆಲು. ದವಸ./ಪ್ರಾ. ಜವಸ; ಸಂ. ಯವಸ]

ದವಸಗಿತಿ (ನಾ). ಕಾಳು ಮಾರುವವಳು ; ಧಾನ್ಯವನ್ನು ಮಾರುವವಳು : ವಿಮಳ ಸತ್ತಿ ಪಂಡಿತರು ಪೂಜಾರಿ ಬಾಣಸಿಗಿತಿ ದವಸಗಿತಿ ಬ × × ತೋಟಿಗಂ ಸಂಕಿಮಯನೊಳಗಾಗಿ ಜೀರ್ಣೋಧಾರಕ್ಕಂ ವಿತ್ತಿ ಮೂವತ್ತು (ಎಕ. XII, ಗುಬ್ಬಿ. ೦೪-೬೩ ; 1140).

[<ದವಸಿಗ + – ಇತಿ$_1$ (< – ಇತ್ತಿ)]

ದವಸಾದಾಯ (ನಾ). ಧಾನ್ಯದ ರೂಪದಲ್ಲಿ ಬರುವ ವರಮಾನ, – ಆದಾಯ : ಸಕಲ ಸುವರ್ಣಾದಾಯ ದವಸಾದಾಯ ಮುಂತಾದ ಉತ್ಪತ್ಯವನೂ (ಎಕ. VI, ತರೀಕೆ. ೨೨-೪೮ ; 1681) ; ಸಕಲ ಸುವರ್ನಾದಾಯ ದವಸಾದಾಯ ಮುಂತಾದ ಆ ಸಕಲ ಸ್ವಾಮ್ಯವೂ ಸ್ವಾಮಿಯವರ ಶ್ರೀ ಭಂಡಾರಕ್ಕೆ ಸಲುವುದು (ಎಕ. XIV, ನಂಜನ. ೨೯೬-೨೪ ; 1720) ; ಸಕಲ ಸುವರ್ನಾದಾಯ ದವಸಾದಾಯ ಸಹ ಕಂಠಿ ಗು ೧೭ (ಮೈಆರಿ. ೧೯೨೮, ೪೫-೧೫ ; 1761). [ದವಸ + ಆದಾಯ]

ದವಸಾಯ (ನಾ). = ದವಸಾದಾಯ : ಶ್ರೀಮತ್ಪೆರ್ಗ್ಗಡೆ ಚಂಗದೇವಯ್ಯ × × [ಬ]ನವಾಸೆನಾಡ ದವಸಾಯದ[ಸುಂ]ಕಮಂ[ಖೇ]ಣಿಯಲು ನಡೆವುತ್ತ (ಸೌಇಇ. XX, ೬೦-೦೩ ; 1088) ; ವೀಸಮುಮಂ ದವಸಾಯದೊಳ × × × ನಮುಮಂ ಬಿಟ್ಟ (ಎಕ. VII, ಶಿಕಾರಿ. ೧೩-೧೭; 1098) ; ಹುಟ್ಟಿದ ದವಸಾಯದ ದಸವಂದ ಮುಡೆ × × × ಱಿಯುಮ ದೇವಗೇರಿಯಲೊನ್ದು [ಮಾವಟೆ]ದೆಱಿಯುಮಂ ಬಿಟ್ಟರ್ (ಕಇ. IV, ೩೯-೩೦; 1111).

[ದವಸ + ಆಯ$_7$]

ದವಸಿಗ (ನಾ). ಧಾನ್ಯ ಮಾರುವವನು ; ಕಿರಾಣಿ ವರ್ತಕ : ವೇದಾಂತದ ಸ್ವಯಂಪಾಕಿಸ್ವಾಮಿಗಳ್ಗೆ ಮತ್ತ ೧ ದವಸಿಗರಿಗೆ ಮತ್ತ ೧ ಹೂದೋಟದ ಮಾಲೆಗಾಱಗೆ ಕಮ್ಮ ೨೦ (ಎಕ. VII, ಶಿಕಾರಿ. ೧೮೫-೬೨ ; 1158) ; ಮತ್ತಂ ದವಸಿಗರ್ಗ್ಗೆ ಗಂಗನ ಗಳೆಯಲು ಕಂಬವಱುವತ್ತು ಮತ್ತಂ ದೇವರ ನೈವೇದ್ಯಕ್ಕೆ . . . ಕೊಟ್ಟ ದತ್ತಿ (ಎಕ. VI, ತರೀಕೆ. ೪೫-೧೦೦ ; 1136) ; ತಂಬುಲಂ ಪಣ್ಯವಿಾತಂಗೆ, ತಂಬುಲಿಗಂ ಏವಂ ದವಸಿಗಂ ದೂಸಿಗಂ (ಶಬ್ದಾನು. ೪೦೫ ಪ್ರಯೋ). [ದವಸ + – ಇಗ]

ದವಳ, ಢಾಳ$_2$ (ಗಂ.) ೧. ಬಿಳಿಯ ; ಬೆಳ್ಳಗಿನ. 'ದವಳಾರ' ಪರಾ. (ನಾ). ೨. ಪಂಚಮಹಾವಾದ್ಯಗಳಲ್ಲಿ ಒಂದು ; ಶಂಖ : ಶೃಂಗವಾದ್ಯವೆಂಬ ಕೊಂಬು ತಮ್ಮಟವೆಂಬ ಹಲಿಗೆ ಶಂಖವೆಂಬ ದ[ಪಾಠಾಂ. ಧ]ವಳ ಭೇರಿಯೆಂಬ ಬಾಜಾ ಜಯಘಂಟೆಯೆಂಬ ಜಾಗಟೆ ಇತ್ತೆಱದ ಪಂಚಮಹಾವಾದ್ಯಂಗಳಂ (ವಿವೇಕ. ೨೩೬). **ಢಾಳ$_2$** : ೩. ಬಿಳಿಯ ಬಣ್ಣ ; ಶ್ವೇತವರ್ಣ : ಉಚ್ಚೈಃಶ್ರವಂ ಢಾಳವಲ್ಲದೆ ನಾವು ಕಪ್ಪ ಮಾಡಲ್ಕೆ ಸಾಗದೆಂದರು ಕುವರರು (ತುರಂಗ. ೩-೨೪).

ದವಳಾಂಕ ಭೀಮ = ಒಂದು ಬಿರುದು: ಶ್ರೀ ವೀರಸದಾಶಿವರಾಯರ ಹಡಪದ ದವಳಾಙ್ಕ ಭೀಮ ಮಣಿನಾಗಪುರವರಾಧೀಶ್ವರ ಸಿಂಧುಗೋವಿಂದ ಸಿತಕರಗಂಡ, ಬರಿದ ಸಪ್ತಾಂಗಹರಣ ತುರಕದಳವಿಭಾಡರಾದ . . . ವೆಂಕಟಾದ್ರಿನಾಯಕರ (ಮೈಅರಿ. ೧೯೨೯, ೯-೧೮; 1560). [<ಸಂ. ಧವಲ]

ದವಳಾರ$_1$ (ನಾ). ಬಿಳಿಯ ಹಾರ ; ಶುಭ್ರವಾದ ಮಾಲೆ : ಪೂಸಜಾದಿಯ ಪೂ ದವಳಾರವಟ್ಕಱಂ ಜನಿಯಿಸಲಂಚೆವಾಸುಗಳೊಳೋಪಳ ಪೆರ್ಮೊಲೆವೆಂಕೆಯಿಂದದೇಂ ತನತನಗಿಕ್ಕಿ ಮೆಟ್ಟಿದುದೊ ಭೋಗಿಜನಂ ಶಿಶಿರಾತಿರೇಕಮಂ (ಜಗವಿ. ೦೪-೦೯). [ದವಳ + ಆರ$_2$]

ದವಳಾರ$_2$, ಧವಳಾರ$_1$ (ನಾ). ಬಿಳಿಯ ಬಣ್ಣದ ಮನೆ · ಸಂಣ್ಣ ಹಚ್ಚಿದ ಸೌಧ ; ಶುಭ್ರವರ್ಣದ ನಿವಾಸ : "ಸುಧಾಧವಳಿತಂ, ಸೌಧಂ – ಈ ೨ ದವಳಾರಂ" (ಹಲಾಯು. ೩೯-೧೩೯) ; ತಾರಾಚಲಂಗಳಂತೆ ದೆಸೆಯಂ ಧವಲಿಸುವ ದವಳಾರಂಗಳಿಂ ಅಕೃತ್ರಿಮವನಂಗಳಂತೆ ಸಾರ್ವರ್ತುಕಮೆನಿಪ ಗೃಹವನಂಗಳಿಂ ನಿರತಿಶಯಮಿಂದು (ಮಲ್ಲಿಪು. ೨-೫೪) ; ಎನ್ನ ದವಳಾರಮದುಂ ತಾನಮೃತಮತಿಯ ಮಾಡಂ (ಯಶೋಚ. ೩-೬೩). **ಧವಳಾರ$_1$** : ಚರಿಗೆವೊಕ್ಕಡವಿಯಂ ತೊಟಲ್ವನ್ನೆಗಂ ಪಿರಿದೊಂದು ಪೊಟಲುಂ ಧವಳಾರಂಗಳುಂ ನೆಲೆಯ ಮಾಡಂಗಳುಂ ಸೂಳೆಗೇರಿಗಳುಂ ದೇವಾಲಯಂಗಳು ಮಾನೆ ಕುದುರೆಗಳುಂ ಮಾನಸರ ಬರವುಮಂ ಪೋಗುಮಂ ಕಂಡು (ವಡ್ಡಾರಾ. ೮೯-೨೦) ; ಬನವೆತ್ತಂ ಧವಳಾರವಂಕದ ಕಳಂ ವೈಹಾಳಿ (ಎಇ. XIII, ೩೦೨-೧೦ ; 1125) ; ನೆಲ ಹುಟ್ಟಿದಂದಿನ ಧವಳಾರ ಧವಳಾರದೊಳಗೊಬ್ಬ ಸೂಳೆ ನೋಡಯ್ಯಾ ತಲೆಯಿಲ್ಲದಾತ ನಿಚ್ಚಕ್ಕೆ ಬಪ್ಪ ಕರುಳಿಲ್ಲದಾತ ಕುಂಟಣಿಯಾದ ನೋಡಯ್ಯ (ಅಪಚಂ. ೯೯-೪೪೫) ; ಚಂದ್ರಿಕೆಯನಿಳಿಪ ಧವಳಾರ ವೃಂದಂಗ[ಳ]ಂ ಇಂದ್ರನೀಲದ ಮಣಿಸ್ತಂಭನಿಳಯಂಗ[ಳ]ಂ . . . ತೋಱುತುಂ (ನಂಬಿರ. ೯-೯೦) ; ಧವಳಾಗಾರ – ಧ[ಪಾಠಾಂ. ದ]ವಳಾರ ; ಭಾಂಡಾಗಾರ-ಭಂಡಾರ (ಶಮದ. ೨೯೫ ಪ್ರಯೋ).

[<ಸಂ. ಧವಲಾಗಾರ]

ದವಳಾರ$_3$ 'ಧವಳಾರ$_2$' ನೋ.

ದವಾಖಾನೆ (ನಾ). ೧. ಔಷಧಿಗಳನ್ನು ಸಂಗ್ರಹಿಸಿಡುವ ಕೋಣೆ ; ಔಷಧಿಗಳನ್ನಿಡುವ ಮನೆ : (ಕಿ). ೨. ಆಸ್ಪತ್ರೆ ; ಚಿಕಿತ್ಸಾಲಯ ; ವೈದ್ಯಶಾಲೆ : ವಿಜಾಪುರದಲ್ಲಿ ಈಗ . . . ಹೈಸ್ಕೂಲು, ದವಾಖಾನೆ, ಪಂಚಕಚೇರಿ ಉಂಟು (ಮುಂಬಯಿ. ೪-೧೪೩) ; ಪಂಚರ ಹೊಂಡದ ಹತ್ತಿರ ಅಟ್ಟದ ಮೇಲೆ ದವಾಖಾನೆ (ಪೈನಿ. ೬೯) ; ಆರೋಗ್ಯ ಕಾಯಲಿಕ್ಕೆ ಉತ್ತಮವ್ಯವಸ್ಥೆ ಬೇಕು. ಒಂದು ದವಾಖಾನೆ ಬೇಕು (ಅಪನಾ. ೨೦೮).

[←ಅರ. ಪಾರ. ಹಿಂ. ಮರಾ. ದವಾಖಾನಾ]

ದವಾಗ್ನಿ (ನಾ)=ದವಶಿಖಿ: ಅಳುರ್ವ ದವಾಗ್ನಿಯವೊಲರ್ಕನುದಯಂಗೆಯ್ದಂ (ಕಾವ್ಯಸಾ. ೮೭೦ ಕೂದ್ರಳ) ; ಶಿವಲಿಂಗಾಂತ[ಃ]ಸ್ಥನಾಂದಂ ವಿಯತ್ ತ್ರಿಪುರಾರಣ್ಯ ದವಾಗ್ನಿ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ (ನಂಬಿರ. ೮-೪); ಪೇರಡವಿಗೈದುವ ದವಾಗ್ನಿಯುಂ ತನ್ನ ಪ್ರಚಾರಂ ನೆಗಳ್ದ ನಡುವಗಲ ರವಿಯಂ ತನ್ನ ವೀರಪ್ರತಾಪಂ ತಿರಸ್ಕರಿಸೆ ವೃಷಕೇತು ರಿಪುಸೈನ್ಯಮಂ ಪೊಕ್ಕನು (ಜೈಮಿಭಾ. ೦೨-೧೫). [ದವ + ಅಗ್ನಿ]

ದವಾನಲ (ನಾ). ಕಾಡಂಕಿಚ್ಚು : ಹೊತ್ತಿ ದವಾನಲನುರಿದಾಗ ವನದೊಳು ಸುಟ್ಟ ಮೇಲುಳಿದುದೆಷ್ಟೆಂದು ಅಗ್ನಿಯೆ ಮರವೇರಿ ನೋಳ್ಪೊಂದು ಪರಿಯೊಳು ಹೂತ ಮುತ್ತುಗ ಮರವಿಹುದು (ಇಂಚಾಪ. ೧೦೯-೩೨).

[ದವ + ಅನಲ]

ದವಾಲಿ 'ಡವಾಲಿ' ನೋ.

ದವಾಲಿಬಿಲ್ಲೆ (ನಾ). ಸೇವಕರು ಧರಿಸುವ ಗುರುತಿನ ಬಿಲ್ಲೆ : ರೇಶಿಮೆಯ ಸೀರೆಯುಟ್ಟಿದ್ದ ಪರಿಚಾರಿಕೆ ಹೆಂಗಸೂ, ದವಾಲಿಬಿಲ್ಲೆ, ರುಮಾಲು ತೊಟ್ಟ ದರವಾನ . . . ಖಾನಸಾಮಾ ಮುಂತಾದ ಸಿಬ್ಬಂದಿಯೆಲ್ಲಾ ಈಗ ಮಾಯವಾಗಿದ್ದರೇನು ? (ಸಾಹೇಬ್. ೬).

[ದವಾಲಿ (<ಡವಾಲಿ) + ಬಿಲ್ಲೆ]

ದವುತಿ, ದವತಿ, ದೌತಿ (ನಾ). ಮಸಿಕುಡಿಕೆ ; ಶಾಯಿ ಕುಡಿಕೆ : "ದವುತಿ [ಪಾಠಾಂ. ದೌತಿ] ಮಸಿಪಾತ್ರೆಯಕ್ಕು" (ಮಂಗರಾ. ೧೦೫-೧೫). **ದವತಿ** : "ಮೇಳಮಣಿ – ದವತಿ" (ಗಂಗಾಮ. ೨೬೩) ; ಅವನ ದವತಿಯೊಳಗೆ ಮಸಿ ಇದ್ದಿಲ್ಲ (ಮುಂಬಯಿ. ೦-೩೫). **ದೌತಿ** : ಪೋಡಶಿಯು ಎದ್ದು ನಿಂತಳು. ಎದುರಿಗೆ ದೌತಿ, ಟಾಕು, ಕಾಗದ ಇದ್ದವು (ಪೋಡಶಿ. ೧೦೫).

ದವುತಿ ಕುಳ್ಳಿ = ಮಸಿಕುಡಿಕೆಯನ್ನಿಡುವ ಚಿಕ್ಕ ಮೇಲುಮಣೆ : (ಕಿ).

[←ಅರ. ಪಾರ. ಹಿಂ. ದವಾತ್; ಮರಾ. ದವಾತ್, ದೌತ್]

ದಶ (ನಾ). ೧. ಒಂದು ಸಂಖ್ಯೆ ; ಹತ್ತು : ಬಿಸರುಹೋದ್ಭವಗಣಂ ರಸದಶಸ್ಥಾನದೊಳ್ (ಛಂದೋಂಬು. ೫-೨೪೮) ; ದಿಗ್ಗಜ ದಶಂಗಳದಟಿರ್ಪುದಾತಂಗೆ (ಶ್ರೀರಾಮಾ. ೩೦-೫೨). 'ದಶಕಂಠ', 'ದಶರಥ' ಪರಾ. ೨. [ಗಣಿತ] ಹಲವು ಅಂಕಿಗಳಿರುವ ಸಂಖ್ಯೆಯಲ್ಲಿ ಬಲಗಡೆಯಿಂದ ಎಡಗಡೆಗೆ ಎಣಿಸುವಾಗ ಎರಡನೆಯ ಸ್ಥಾನ : ಏಕಂ ತು ಪ್ರಥಮಂ ಸ್ಥಾನಂ ದ್ವಿತೀಯಂ ದಶಸಂಜ್ಞಿಕಂ (ವ್ಯವಹಾ. ೮-೨). [ಸಂ. ದಶನ್]

ದಶಕ (ಗು). ೧. ಹತ್ತರಿಂದ ಕೂಡಿದ. (ನಾ). ೨. ಹತ್ತುಪಟ್ಟು : ಖರ್ವ ಪದ್ಮ ಕ್ಷೋಣಿ ಶಂಖಂ ಕ್ಷಿತಿ ಕ್ಷೋಭ ಪೂರ್ವಮಪ್ಪಂಕೆಯಾದಿಗೆ ಮಹಾಶಬ್ದ ಬರೆ ತೋರ್ಪವಱ ದಶಕಂಗಳಕ್ಕಿಂತು ಚವ್ವೀಸ ತಾಣವರೆ ಸಂಖ್ಯೆಯಕ್ಕುಂ (ಮಂಗರಾ. ೧೦೫-೧೩). ೩. ಹತ್ತರ ಗುಂಪು. ೪. ಹತ್ತು ವರ್ಷಗಳ ಅವಧಿ,–ಕಾಲ ; ದಶಮಾನ: ಒಂದೆರಡು ದಶಕಗಳಿಂದಿತ್ತೀಚೆಗೆ ರಷ್ಯಾದೇಶದ ಆರ್ಥಿಕ ರಾಜಕೀಯ ಕ್ರಾಂತಿಗಳ ಪ್ರಕಾರವೂ ಅವರಿಗೆ ಅರಿವಾಗಿದೆ (ಐಶಿಸಂ. III, ಮೊದಲೆರಡುಮಾತು) ; ಈ ಭಾಷೆಯ ವ್ಯಾಕರಣ ಹಾಗೂ ಗದ್ಯಗಳನ್ನು ಕುರಿತು ಸಾಧಾರಣವಾದ ಕೆಲಸ ಈ ಶತಮಾನದ ಆಯದಿ ಒಂದೆರಡು ದಶಕಗಳಲ್ಲೇ ನಡೆಯಿತು (ದ್ರಾವಿವಿ. ೧೬೬). ೫. ಮಹಾಜನರಲ್ಲಿ ಒಬ್ಬೊಬ್ಬ ನಾಯಕನ ನೇತೃತ್ವದಲ್ಲಿ ಹತ್ತು ಹತ್ತು ಜನರಿರುವಂತೆ ವಿಭಜಿಸಿದ ಗುಂಪು : ಮೂಡಲು ಬ್ರಹ್ಮಬೆಂಚೆಯೊಳಗಣ ತೆಂಕಣ ಕುಱ್ಕೆಯಿಂ ಪಡುವಲು ದೋಣಮಯ್ಯನಾಯಕರ ದಶಕದ ಗುರುಜೆವಾಡದಿಂ ತೆಂಕಲೂರ್ಮ್ಮಧ್ಯಕವಂ ಧಾರಾಪೂರ್ವ್ವಕವಂ ಮಾಡಿ ಕೊಟ್ಟ ಕಿಸಂಮತ್ತರು ನಾಲ್ಕು ಶ್ರೀಮತು ದೋಣಮಯ್ಯನಾಯ್ಕರ ದಶಕದ ಮಹಾಜನಗಳ್ತಮ್ಮ ಹಸುಗಗೆ ಬಂದಾಲದ ಹಾಡವಂ ಧಾರಾಪೂರ್ವಕವಾಗಿ ಕೊಟ್ಟ ಕಂಬ ವೇಟ್ನೂರುಮಂ ಶ್ರೀಮಪ್ಪುರ್ಪೊತ್ತಮ ಭಟ್ಟೋಪಾಧ್ಯಾಯರ ದಶಕದ ಮಹಾಜನಂಗಳ ಕ್ರಯ ಪರಿವರ್ತನೆಯಾಗಿ ಕೊಟ್ಟು (ಸೌಇಇ. IX-1, ೨೯೫-೨೦ ; 1172) ; ಬೀಚರಸಯ್ಯಂಗಳು ತ(ಂ)ಮ್ಮ ಸೆಮ್ಮಿನ ಒಂದು ವೃತ್ತಿಗೆ ಆ ದಶಕದ ಮಹಾಜನಂಗಳನೊಡಂಬಡಿಸಿ . . . ಧಾರಾಪೂರ್ಬ್ಬಕಂ ಮಾಡಿ ಕೊಟ್ಟರು (ಸೌಇಇ. IX-1, ೨೯೫-೨೫ ; 1172) ; ಕೇಳು ಧೃತರಾಷ್ಟ್ರಾವನಿಪ ನಿನ್ನಾಳು ತಲೆಕೆಳಗಾಯ್ತು ಭೀಮನ ಧಾಳಿ ಹೆಚ್ಚಿತು ಹೊಸತು ದಶಕದ ಮಸಕ ಮಿಗಿಲಾಯ್ತು (ಕುವ್ಯಾಳ. ೦೯-೦). ೬. ದಶಕರಿಗೆ ಎಂದರೆ ಹತ್ತು ಹತ್ತು ಜನರಿರುವಂತೆ ಮಾಡಿದ ಒಂದು

ಗುಂಪಿಗೆ ಸೇರಿದ ಭೂಮಿ: ಪಡುವಲು ಪೂಲಿಯಂ ದಶಕಂ ಬಡ[ಗಲು] ವೆರ್ವಾಟ್ಟಿ ಬೇಲಿ ಬಸದಿಯ . . . ಬಿಟ್ಟರ್ (ಸೌಇಇ. XV, ೩೦-೪೯: 1146).

ದಶಕರು = ಹತ್ತು ಜನರಂ (?): ಕಡುದುರುಳ ರಕ್ಕಸರು ಕೊಡು ನಿರೂಪವ ಪೋಗಿ ವ್ಯಡಸ ಮರೆಬಿರ್ದಡಂ ಪಿಡಿದೆಳೆದು ತಪೆವೆನಲು ಹುಡುಗನಿನಿತ್ಯಾಕೆ ದಶಕರು ಪೋಗಿ ಕರಚರಣ ಪಿಡಿದೆಳೆದು ತರ್ವುದೆನಲು (ಸವಪೋ. ೦೨-೩೮): (ಸವಪೋ. ೦೨-೩೯. ನೋ). [ಸಂ.]

ದಶಕಂಠ (ನಾ). ಹತ್ತು ಕಂಠಗಳನ್ನುಳ್ಳವನು; ರಾವಣ: ಭೂಚರ ವಿಯಚ್ಚರೇಶ್ವರರಂ ತನ್ನಡಿಗೆಱಗಿಸಿ ದಶಕಂಠಂ ಪಡೆದಂ ದೆಸೆವೆಣ್ಗೆ ಕೀರ್ತಿ ವ.ಣ ಕಂಠಿಕೆಯಂ (ಪಂರಾಮಾ. ೦೦-೦೫೬); ಆಸುರಪಾಠಕರೋವಿ ಕೈವಾರಿಸಲಂ ಮುಂದೆಯ್ತಂದ ದಶಕಂಠ (ಶಾತಿಕಾ. ೩೦-೩೨). [ದಶ + ಕಂಠ]

ದಶಕಂಠವೈರಿ (ನಾ). ರಾವಣನಿಗೆ ಶತ್ರುವಾದವನು: ರಾಮ: ದಶಕಂಠ ವೈರಿಯೊಳ್ ಪೊಣರ್ದು ಶೀರ್ಣತನುವಾಗಿ ಸೆಡೆದು (ಜಗವಿ. ೬-೯೪).

[ದಶಕಂಠ + ವೈರಿ]

ದಶಕಂಧರ (ನಾ). = ದಶಕಂಠ: ಭೋಂಕನೆ ಕಂಡು ಸೀತೆ ದಶಕಂಧರನಂ ನೆಲೆವೆರ್ಚಿ ಶೋಕವಾತಂಕಮೊಡರ್ಚಿ (ಪಂರಾಮಾ. ೯-೦೦೯): ದಶಕಂಧರನ ಹತ್ತಹಿಪತಿಯು ಸಾವಿರ ತಲೆಗಳಿಣಸಲ್ಕೆ ಸರಿಯು ನಿನ್ನಯ ತಲೆಯೊಡನೆ (ಲಸಪು. ೩೮-೩೩). [ದಶ + ಕಂಧರ]

ದಶಕರಣ (ನಾ). ಹತ್ತು ಇಂದ್ರಿಯಂಗಳು; ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮಗಳೆಂಬ ಐದಂ ಜ್ಞಾನೇಂದ್ರಿಯಂ ಮತ್ತು ವಾಕ್ಕು, ಪಾಣಿ, ಪಾದ, ಪಾಯ್ಕು, ಉಪಸ್ಥೆಗಳೆಂಬ ಐದು ಕರ್ಮೇಂದ್ರಿಯಂಗಳು: ಉರು ಪರಾಕ್ರಮನರಮನೆಗೆ ದಶಕರಣಂಗಳು ಕನ್ನಡಿಯ ಸಾಲು ಗಳರವಿದೂರನ ಸದ್ವಿಹಾರಕೆ ಚಿತ್ತಮಂಟಪವು (ಹಸಾಠ. ೩-೩೨).

[ದಶ + ಕರಣ]

ದಶಕಾಮಜವ್ಯಸನ (ನಾ). ವಿಷಯಸುಖಾಭಿಲಾಷೆಯಿಂದಾಗುವ ಹತ್ತು ಬಗೆಯ ವ್ಯಸನಗಳು: "ದಶಕಾಮಜವ್ಯಸನಗಳು-ಮೃಗಯೆ; ೨. ದ್ಯೂತ; ೩. ದಿವಾನಿದ್ರೆ; ೪. ವ್ಯರ್ಥವಿಹಾರ; ೫. ವಿಷಯಲಂಪಟತ್ವ; ೬. ಮತ್ತತೆ; ೭. ನಾಟ್ಯ; ೮. ಗಾಯನ; ೯. ಕೇಳಿ; ೧೦. ಕಪಟ" (ನಾನಾಶ. ೩೦೨).

[ದಶ + ಕಾಮಜ + ವ್ಯಸನ]

ದಶಕಾಮಾವಸ್ಥೆ (ನಾ). ಕಾಮದ ಹತ್ತು ಬಗೆಯ ಅವಸ್ಥೆಗಳು: "ದಶಕಾಮಾವಸ್ಥೆಗಳು -ಅಭಿಲಾಷೆ; ೨. ಚಿಂತೆ; ೩. ಸಂಸ್ಮೃತಿ; ೪. ವಿಭುಗುಣಸ್ಮೃತಿ; ೫. ಸಂತಾಪನ; ೬. ಕ್ರಿಯಾದ್ವೇಷ; ೭. ವಿಕಲ; ೮. ಮೌನ; ೯. ಮೂರ್ಛೆ; ೧೦. ಮರಣ" (ನಾನಾಶ. ೩೦೩). P "ಅಭಿಲಾಷೆ ಚಿಂತೆ ಸಂಸ್ಮೃತಿ ವಿಭುಗುಣನುತಿ ತಾಪನಂ ಕ್ರಿಯಾದ್ವೇಷಂ ಸಂದಭಿಮಾನ ಚ್ಯುತಿ ಗಮನಂ ಕ್ಷುಂಭಿತಾತ್ಮಾವಸ್ಥೆ ಮರಣವಿಂವು ದಶಭೇದಂ" (ಶೃಂಗಾರ. ೪-೬೯). " i. ದೃಕ್‌ಸಂಗ, ಮನಸ್ಸಂಗ, ಸಂಕಲ್ಪ, ಜಾಗರ, ಕೃಶತೆ, ಅರತಿ, ಹ್ರೀತ್ಯಾಗ, ಉನ್ಮಾದ, ಮೂರ್ಛೆ, ಅಂತ. ii. ಅಭಿಲಾಷಾ, ಚಿಂತಾ, ಅನುಸ್ಮೃತಿ, ಗುಣಕೀರ್ತನೆ, ಉದ್ವೇಗ. ವಿಲಾಪ, ಉನ್ಮಾದ, ವ್ಯಾಧಿ, ಜಡತಾ, ಮರಣ." (ಶ್ರೀಪತ್ಯ. ೪೩).

[ದಶ + ಕಾಮ + ಅವಸ್ಥೆ]

ದಶಕಾರ್ಯ (ನಾ). [ವೀಶೈ] ಸದಾಚಾರದ ಕ್ಷಮೆ, ಶಾಂತಿ, ಸಂತೋಷ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಜ್ಞಾನ, ವೈರಾಗ್ಯ, ಭಸ್ಮಸೇವನೆ, ಸರ್ವಸಂಗನಿವೃತ್ತಿಗಳೆಂಬ ಹತ್ತು ಅಂಗಗಳು: ಹತ್ತು ಸನ್ಮಾರ್ಗವಂ ನಲಿದು ಕೇಳಾ ಕ್ಷಮಾ ಶಾಂತ ಸಂತೋಷ ಸತ್ಯಾಧಿಕಾಸ್ತೇಯದೊಡನೆ ಮಿಲಿತವಾ ಬ್ರಹ್ಮಚರ್ಯಂ ಜ್ಞಾನವೈರಾಗ್ಯ ಸಲೆ ಭಸ್ಮಸೇವನಂ ಸರ್ವಸಂಗ ನಿವೃತಿಯಲಘು ದಶಕಾರ್ಯ (ವೀಕೃಪು. ೬-೩-೧೧). [ದಶ + ಕಾರ್ಯ]

ದಶಕುಲಧರ್ಮ (ನಾ). [ಜೈನ] ಶ್ರಮಣನು ಅನುಸರಿಸಬೇಕಾದ ಕ್ಷಮೆ, ಮಾರ್ದವ, ಆರ್ಜವ, ಸತ್ಯ, ಶೌಚ, ಸಂಯಮ, ತಪಸ್ಸು, ತ್ಯಾಗ, ಅಕಿಂಚನ್ಯ, ಬ್ರಹ್ಮಚರ್ಯಗಳೆಂಬ ಹತ್ತು ಬಗೆಯ ಧರ್ಮಗಳು: ಭಟ್ಟಾರಕರ್ ದಶಕುಲಧರ್ಮಮುಮಂ ದ್ವಾದಶಾನುಪ್ರೇಕ್ಷೆಯುಮಂ . . . ಕೇಳ್ದು (ಶಾಪುಂಪು. ೮೩) : ಉತ್ತಮ ಕ್ಷಮಾ ಮಾರ್ದವಾರ್ಜವ ಸತ್ಯಶೌಚ ಸಂಯಮ ತಪಸ್ತ್ಯಾಗಾಕಿಂಚನ್ಯ ಬ್ರಹ್ಮಚರ್ಯಮೆಂಬೀ ದಶಕುಲ [ಪಾಣಾಂ. ಕುಶಲ]ಧರ್ಮದೊಳಂ (ಆಆಪು. ೬-೪ ಪ). [ದಶ + ಕುಲ + ಧರ್ಮ]

ದಶಕುಶಲಧರ್ಮ, ದಶಕುಶಳಧರ್ಮ (ನಾ). ೧. = ದಶಕುಲಧರ್ಮ: ನವವಿಧ ಬ್ರಹ್ಮಚರ್ಯೋಪೇತನುಂ ದಶಕುಶಲಧರ್ಮನಿಪುಣನಂ . . . ಆಗಿ (ಆಆಪು. ೩-೦ ಪ). **ದಶಕುಶಳಧರ್ಮ:** ೨.=ದಶಧರ್ಮ: ದಶಕುಶಳ ಧ(ರ್ಮೋ)ರ್ಮೋಪಾರ್ಜ್ಜಿತಾನೂನ ಪು(ಂ)ಣ್ಯಪುಂಜೋದಯ . . . ಕೀರ್ತ್ಯಲತಿಕಾಕಂದರಪ್ಪ ಶ್ರೀಮತು ರುದ್ರಶಕ್ತಿಪಂಡಿತರ ಶಿಷ್ಯರು(ಸೌಇಇ. XI-11, ೦೯೮-೦೩ : 1123 ?). [ದಶ + ಕುಶಲ + ಧರ್ಮ]

ದಶಕುಶಳಧರ್ಮ 'ದಶಕುಶಲಧರ್ಮ' ನೋ.

ದಶಕೂಟ (ನಾ). ನೆಲಗುಳ್ಳ, ಹೆಗ್ಗುಳ್ಳ, ಚಿತ್ರವಮೂಲ, ನೆಗ್ಗಿಲು, ನರುವಲು, ಕುರುಚೆ, ಕಳ್ಳಿಂಗಡಲೆ, ಬೆಲ್ಲವತ್ತ, ವಿಷ್ಣುಕ್ರಾಂತಿ ಮತ್ತು ಅಲಸಂಧಿಗಳೆಂಬ ಹತ್ತು ಬಗೆಯ ಔಷಧದ್ರವ್ಯಗಳು: ಜ್ವರಕ್ಕೆ ದಶ ಕೂಟದ ಕಷಾಯ:-ನೆಲಗುಳ್ಳ, ಹೆಗ್ಗುಳ್ಳ . . . ಅಲಸಂಧಿ ಇವನ್ನು ಕಷಾಯ ಕಾಸಿ ಕೊಡುವುದು (ವಿವೈವಿ. ೦೪೩). [ದಶ + ಕೂಟ$_1$]

ದಶಕೋಟಿ (ನಾ). ೧. ಹತ್ತು ಕೋಟಿ: ದಶಕೋಟಿ ನಾರಾಯಣರಿಗೆ ಮರಣವ ಮಾಡುವುದ ನಾ ಬಲ್ಲೆನಾಗಿ (ಲಸವ. ೩೯೦). ೨. ಸಂಖ್ಯೆಯಲ್ಲಿ ಬಲಗಡೆಯಿಂದ ಒಂಬತ್ತನೆಯ ಸ್ಥಾನ: ನವಮಂ ದಶಕೋಟಿಸ್ಥ ದಶಮಂ ಶತಕೋಟಿಕಂ (ವ್ಯವಜ್ಞಾ. ೯-೫) [ದಶ + ಕೋಟಿ$_1$]

ದಶಗಣ (ನಾ). [ವೀಶೈ] ಕನ್ನವಂರಸಿ, ಕಾಮಲದೇವಿ. ಚೋಳವ್ವ, ಬೀಚಯ್ಯ, ಬೊಪ್ಪಲದೇವಿ, ಮಾಯಿದೇವ, ದೇವಯ್ಯ, ವೀರ ಘಂಟಿಯ ವೈಲಾರಿ, ಸಿಂಗಿದೇವ, ದಶಗಣದ ಸಿಂಗಯ್ಯ ಎಂಬ ಹತ್ತು ಜನ ಶಿವಭಕ್ತರು: ಹರುಷದಿಂ ಪ್ರಮಥರಂ ರುದ್ರರಂ ತೇರಸರನುರು ದಶಗಣಂಗಳಂ ಭಕ್ತಿಯಿಂದೊರೆದು ಕೇಳ್ದು ಕೃತಕೃತ್ಯರಾಗಿ (ಲಶಿಪಂ.೩೪-೩೫).

[ದಶ + ಗಣ]

ದಶಗಳ (ನಾ).=ದಶಕಂಠ: ಲಲನೆ ಸೀತೆಯ ಬಿಡಿಸು ನೀ ದಶಗಳಗೆ ಹಿತವಹ ತನಯನಾದರೆ (ಶಾತಿಕಾ. ೨೮-೩೭). [ದಶ + ಗಳ$_3$ (= ಗಲ)]

ದಶಗಾತ್ರವಿಧಿ (ನಾ). (?) : ವೇದ, ಸ್ಮೃತಿ, ಪುರಾಣ ಮೊದಲಾದವುಗಳ ಸಮ್ಮತಿಯಂತೆ ಭರತನು ದಶಗಾತ್ರವಿಧಿಯನ್ನು ಪಾಲಿಸಿದನು (ತುಳಸೀ. ೦೬೦). [ದಶ + ಗಾತ್ರ + ವಿಧಿ]

ದಶಗುಣ$_1$ (ನಾ). ೧. ಹತ್ತುಪಟ್ಟು,-ಮಡಿ : ಅಯುತಂ ಸಹಸ್ರದಶಕಂ ಲಕ್ಷಂ ದಶಗುಣವಯುತಂ (ವಸ್ತುಕೋ. ೧೦೩-೩೩). ೨. [ಸಂಗೀತ] ಕೃತಿಗಳಲ್ಲಿರಬೇಕಾದ ಹತ್ತು ಗುಣಗಳು: ನಳಂ ಕೃತಂ ಪ್ರಸನ್ನಂ ವ್ಯಕ್ತಂ ಪೂರ್ಣಂ ಸಮಂ ಸುಕುಮಾರಂ ಸುರಕ್ತಂ ಶ್ಲಕ್ಷ್ಣಂ ಮಧುರಂ ವಿನಿಕೃಷ್ಟ ವೆಂಬ ದಶಗುಣಂಗಳಿನೆಸೆವ ಗೀತಕಾದಿ ಶುದ್ಧಪ್ರಬಂಧಂಗಳೊಳಂ ಮಾತ್ಯ ಕಾದಿ ದೇಶೀಪ್ರಬಂಧಂಗಳೊಳಂ (ಕಂದ್ರಪು. ೦೩-೭೨ ವ). [ದಶ + ಗುಣ]

ದಶಗುಣ$_2$ (ನಾ). ಅಧಿಕೃತ ದಾಖಲೆ ಪತ್ರಕ್ಕೆ ಅಂಟಿಬೇಟಿಯನ್ನು ಅಂಟಿಸದೆ ಇರುವುದಕ್ಕಾಗಿ ತೆರಬೇಕಾಗುವ ದಂಡ: (+). [?]

ದಶಗ್ರೀವ (ನಾ).=ದಶಕಂಠ: ದಶಗ್ರೀವಂ ರಣರಸೋದ್ರಿಕ್ತನಾಗಿರ್ದನಾ ಶ್ರಿಖಂಡಮಂಡಲಾಧಿಪತಿಯೊಳ್ (ಪಂರಾಮಾ. ೦೩-೩ ವ): ಹರಿಯಂತೆ ವನವಾಸಿಗಳು ದಶಗ್ರೀವನಂತಿರಲನಿಮಿಷಾರಿಗಳು . . . ನೆರೆದರವನೀಶ ನೋಲಗದೊಳು (ಹಹಶಾ. ೫-೪). [ದಶ + ಗ್ರೀವ]

ದಶಘ್ನ (ನಾ).=ದಶಗುಣ$_1$: ಪ್ರಯುತಂ ದಶಲಕ್ಷಂ ಕೋಟಿ ತಾಂ ದಶಘ್ನಂ ನಿಯುತಂ (ವಸ್ತುಕೋ. ೦೦೩-೩೩). [ಸಂ.]

ದಶದಲ, ದಶದಳ (ನಾ). ಹತ್ತು ಎಸಳು : ಆಱುದಳದ ನಳಿನಮನೂಱಿ ಶದ್ದಶದಲ [ಪಾಠಾಂ. ೪]ಸರೋಜಮನೊಂದಿ (ಬಸವು. ೩-೮). **ದಶದಳ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ದಶ + ದಲ]

ದಶದಳ 'ದಶದಲ' ನೋ.

ದಶದಾನ (ನಾ). ಹತ್ತು ಬಗೆಯ ದಾನ : "ದಶದಾನಗಳು – ೧. ಗೋ ; ೨. ಭೂ; ೩. ತಿಲ; ೪. ಹಿರಣ್ಯ; ೫ ಆಜ್ಯ; ೬. ವಸ್ತ್ರ; ೭. ಭತ್ತ; ೮. ಬೆಲ್ಲ; ೯. ಬೆಳ್ಳಿ; ೧೦. ಉಪ್ಪು" (ನಾನಾಶ. ೩೦೨). [ದಶ + ದಾನ]

ದಶದಿಕ್ಕು (ನಾ). ಪೂರ್ವ, ಆಗ್ನೇಯಂ, ದಕ್ಷಿಣ, ನೈರುತ್ಯ, ಪಶ್ಚಿಮಂ, ವಾಯವ್ಯ, ಉತ್ತರ, ಈಶಾನ್ಯ, ಊರ್ಧ್ವದಿಶೆ ಮತ್ತು ಅಧೋದಿಶೆಗಳೆಂಬ ಹತ್ತು ದಿಕ್ಕುಗಳು : ಶ್ರೋತ್ರದಲ್ಲಿ ದಶದಿಕ್ಕುವೂ ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ ಅಕ್ಷಯನಗಣಿತನು (ಬಸವ. ೫೩೬) ; ಮನುಜ ದನುಜಾಮರ ಮಹೋರಗ ಜನ ತೃಣಪ್ರತಿಯಾಯ್ತು ದಶದಿಕ್ಕಿನ ಪುರಾಧಿಪರೆಡೆಗೆ ನಡೆದುದು ದಂಡು ಬಳಿಕ (ತೊರರಾ. ೧-೮-೩೦) ; ದಶದಿಕ್ಕುಗಳನವ್ವಳಿಪ ಕೇಸುರಿಯ ಚೂಣಿಗಳ . . . ಮುಕ್ಕುಳಿಸಿ ಮೊಗೆವ ಪೆರ್ಗಿಚ್ಚುಗಳ ವೆಂಕೆ ಮೇಲಿಕ್ಕಿದುದು (ಜೈಮಿಭಾ. ೦೩-೦೨).

[ದಶ + ದಿಕ್ಕು]

ದಶದಿಶೆ (ನಾ). ೧.=ದಶದಿಕ್ಕು. ೨. ಎಲ್ಲಕಡೆ ; ಸುತ್ತಮುತ್ತು : ದಶದಿಶೆಗಳಿಂ ಮುತ್ತಿ ಬರುವ ಪ್ರಕೃತಿಗದಾರು ವಶನಾಗದಿಹ ನರನು ? (ಮಂಕುಕ. ೦೮೮). [ದಶ + ದಿಶೆ]

ದಶದಿಸೆ (ನಾ).=ದಶದಿಕ್ಕು: ಎಸೆದುವು ದಶದಿಸೆ ಪವನಂ ಕಸವಂ ಕಸಗಳೆದು ಮೆಲ್ಲವೆಲ್ಲನೆ ಕೀಡಿತ್ತು (ಶಾಂತಿಪು. ೨-೮೭). [ದಶ + ದಿಸೆ (<ದೆಸೆ$_2$)]

ದಶಧರ್ಮ (ನಾ). ೧. ಹತ್ತು ವಿಧವಾದ ಧರ್ಮ : "ದಶಧರ್ಮಲಕ್ಷಣ–ಧೃತಿ; ೨. ಕ್ಷಮಾ; ೩. ದಮೆ; ೪. ಅಸ್ತೇಯಮ್ ; ೫. ಶೌಚಂ; ೬. ಇಂದ್ರಿಯನಿಗ್ರಹ; ೭. ಧೀ; ೮. ವಿದ್ಯಾ; ೯. ಸತ್ಯಮ್; ೧೦. ಅಕ್ರೋಧ" (ನಾನಾಶ. ೩೦೩). ೨.=ದಶಕುಲಧರ್ಮ: ಉತ್ತಮಕ್ಷಮಾಮಾರ್ದವಾರ್ಜವ ಸತ್ಯಶೌಚಸಂಯಮತಪಸ್ತ್ಯಾಗಾಕಿಂಚನ್ಯಬ್ರಹ್ಮಚರ್ಯಾಪರ್ಯಾಪ್ತ ದಶಧರ್ಮಂಗಳುಮಂ ಕೈಕೊಂಡು (ಆದಿಪು. ೬-೩೦ ವ) ; ಅಂತು ದಶರಥಂ ದಶಧರ್ಮನಿರತನಪ್ಪುದುಂ (ಪಂರಾಮಾ. ೭-೮ ವ). ೩. [ಜೈನ] ಭೈಕ್ಷ, ಅಸ್ತೇಯ, ಶೌಚ, ಅಪ್ರಮಾದ, ಅವ್ಯವಾಯ, ಭೂತದಯೆ, ಕ್ಷಮಾ, ಅಕ್ರೋಧ, ಗುರುಶುಶ್ರೂಷೆ, ಸತ್ಯ ಎಂಬ ಹತ್ತು ಧರ್ಮಗಳು : ಏಕೆಂದಱಿಯೆಂ ದಶಧರ್ಮಾಕಲಿತಕರಾಗ್ರನಾದನೆನಗಿದು ಚೋದ್ಯಂ (ಕಪುದ. ೦೦೨ ಪ್ರಯೋ). [ದಶ + ಧರ್ಮ]

ದಶಧರ್ಮಧರ (ನಾ). = ದಶಧರ್ಮಧಾರಿ ೧ : [ತ್ರಿದಂಡರಹಿತರುಂ ತ್ರಿಶಲ್ಯವರ್ಜಿತರುಂ ಚತುಷ್ಕಷಾಯದೂರರುಂ . . . ದಶಧರ್ಮಧರರು ಮಾಗಿ] ಗುರುಗಳಾಜ್ಞೆಯಿಂ ಗುರುಗಳನಗಲ್ದು ವಿಹಾರಿಸುತ್ತುಂ (ಧರ್ಮಾಮೃ. ೦೧-೦೦೯). [ಸಂ.]

ದಶಧರ್ಮಧಾರ (ನಾ). = ದಶಧರ್ಮಧಾರಿ ೧ : ದಶಧರ್ಮಧಾರರಂ ಪುಷ್ಪಶರಾಟೋಪಪ್ರಹಾರರಂ ಮುನಿವರರಂ ಕುಶಲಮತಿಯಿಂದೆ ವೀತಾಂ ಕುಶನಪ್ಪಾ ಭೂಪನಂದು ಬಂದಿಸಿ (ನೇಮಿಪು. ೫-೯೬). [ಸಂ.]

ದಶಧರ್ಮಧಾರಿ (ನಾ). ೧. ಕ್ಷಮೆ, ಮಾರ್ದವ ಮೊದಲಾದ ದಶಧರ್ಮಗಳನ್ನು ಹೊಂದಿದವನು. ೨. ಹತ್ತು ಬಿಲ್ಲುಗಳನ್ನುಳ್ಳವನು. ೧, ೨ : ಮುನಿನಾಥಂ ದಶಧರ್ಮಧಾರಿ ದೃಢಷಟ್ತ್ರಿಂಶದ್ಗುಣಂ ದಿವ್ಯಬಾಣನಿಧಾನಂ ನಿನಗಿಕ್ಷುಚಾಪಮಳಿವೀಜ್ಯಾಸೂತ್ರಮೋಕೊಂದೆ ಪೂವಿನ ಬಾಣಂಗಳವಯ್ದೆ ಹೀನನಧಿಕಂಗಾಕ್ಷೇಪಮಂ ಮಾಱ್ಪುದಾವ ನಯಂ ದರ್ಪಕ ಮೇಘಚಂದ್ರಮುನಿಯೊಳ್ ಮಾಣ್ ನಿನ್ನ ದೋರ್ದರ್ಪಮಂ (ಪಂರಾಮಾ. ೦-೨೦). [ಸಂ. ದಶಧರ್ಮಧಾರಿನ್]

ದಶಧಾತು (ನಾ). ಮಳೆಯನ್ನು ಸೂಚಿಸುವ ಹತ್ತು ಲಕ್ಷಣಗಳು ; P ಸುರಧನು, ನೀರು, ಕದಿರು, ಅಭ್ರ, ಪರಿವೇಷ, ಮಿಂಚು, ಗುಡುಗು, ಶೀತ, ಶರದ ಮತ್ತು ಗಾಳಿ : ಇನ್ನು ದಶ (ಸಪ್ತ) ಧಾತುಗಳ ಪ್ರಯೋಗಂಗಳಂ ಪೇೞ್ವೆಂ:-ಸುರಧನು ನೀರ್ಗದಿರಭ್ರಂ ಪರಿವೇಷಂ ಮಿಂಚು ಮೊಱಗು ಮಱೆಯುಂ ಶೀತಂ ಶರದಂ ಗಾಳಿಯು ಮೆಂಬಿವು ಧರೆಯೊಳ್ ದಶಧಾತುವಱಿದು ಪೇೞ್ವುದು ಮಱೆಯಂ (ಅಟ್ಟಮ. ೮-೨೫). [ದಶ + ಧಾತು]

ದಶಧ್ರುವ (ನಾ). ೧. [ಅಶ್ವಶಾ] ಶಿರದಲ್ಲಿ ಎರಡು, ಅಳ್ಳೆಯಲ್ಲಿ ನಾಲ್ಕು, ನೊಸಲಲ್ಲಿ ಒಂದು, ಉದರದಲ್ಲಿ ಎರಡು, ಪ್ರೋಥದಲ್ಲಿ ಒಂದು ಇರುವ ಕುದುರೆಯ ಹತ್ತು ಸುಳಿಗಳು. ೨. ಈ ಹತ್ತು ಸುಳಿಗಳನ್ನು ಉಳ್ಳ ಕುದುರೆ : ಸಿರದೊಳೆರಡಿರಲಳ್ಳೆಯೊಳು ನಾಲ್ಕು ನೊಸಲೊಳೊಂದುರದೊಳೆರಡು ಪ್ರೋಥಕೊಂದು ಸುಱಿ ಪುಟ್ಟಿ ತೋಱಿರೆ ದಶಧ್ರುವಮಕ್ಕುವಿಲ್ಲದಿರಲಧ್ರುವಂ (ಮಂಗರಾ. ೮೨-೧೮).

[ದಶ + ಧ್ರುವ]

ದಶನ (ನಾ). ೧. ಕಚ್ಚುವುದು ; ಕಡಿಯುವುದು. ೨. ಹಲ್ಲು ; ದಂತ : "ದಶನಃ, ದ್ವಿಜಃ, ದಂತಃ, ರದಃ,ರದನಃ–ಈ ೫ ಪಲ್(ಹಲ್ಲು)"(ಹಲಾಯು. ೮೭-೩೭೩) : ದಶನಕುಮುದ್ವತಿ ಪೊಱಪೊಣ್ಮೆ ನಗೆಮೊಗಂಬೆರಸು ನೃಪಂ . . . ಪೇೞೆನೆ ತದ್ವಾರ್ತೆಯನಾಗಳಱಿಪಿದಂ (ಶಾಂತಿಪು. ೬-೩೫) : ದಶನಂ ನುಣ್ಮುತ್ತು ಮಿಂಗಳ್ಬೆಡಂಗಿಡಿದೆತ್ತಂ ಪೊಳೆವಕ್ಷಿಗಳ್ ಸಲಿಲಮಂಗದ್ಯೋತಿ ತಾನಾಗೆ ಪಾಲ್ಗಡಲೆಂಬಂತಿರೆ ಸಿಂಧುರಾಜನೊಸೆದೇಳ್ತಂದಂ ಗಭೀರಾನ್ವಿತಂ (ರಾಜಶೇ. ೧೨-೦೦೦). [ಸಂ.]

ದಶನಕಾಂತಿ (ನಾ). ಹಲ್ಲುಗಳ ಹೊಳಪು ; ದಂತಕಾಂತಿ : ಮುಂದಸ್ಮಿತಂ ಪೊಣ್ಮೆ ಮಾನಿನಿ ಲಜ್ಜಾವನತಾಸ್ಯಮಂ ದಶನಕಾಂತಿವ್ಯಾಜದಿಂ ಮುಚ್ಚಿದಳ್ (ಕಾದಂಪೂ. ೩೯೯). [ದಶನ + ಕಾಂತಿ]

ದಶನಕ್ಷತ (ನಾ). [ಕಾಮಶಾ] ಸ್ತ್ರೀಪುರುಷರು ಸಂಭೋಗಾವಸರದಲ್ಲಿ ಪರಸ್ಪರ ಶರೀರಗಳಲ್ಲಿ ಮಾಡುವ ಹಲ್ಲಿನ ಕಚ್ಚು ; ದಂತಕ್ಷತ : ನೋವನೀವ ಬಗೆಯುಳ್ಳೊಡದೇವುದೊ ನಿನ್ನ ಬಾಹುಪಾಶದೊಳೆ ತೊಡರ್ಚೊಡರ್ಚು ದಶನಕ್ಷತಪೀಡೆಯಂ . . . ತಳೋದರೀ (ಮಲ್ಲಿಪು. ೭-೬೦). [ದಶನ + ಕ್ಷತ]

ದಶನಘಟ್ಟನ (ನಾ). ಹಲ್ಲು ಕಡಿಯುವಿಕೆ,–ಮಸೆಯುವಿಕೆ : ಆಮಂತ್ರಿತ ಡಾಕಿನೀ ದಶನಘಟ್ಟನ ಜಾತವಿಭೀಷಣಂ . . . ಇದೇನಗುರ್ವನೊಳ ಕೊಂಡುದೊ ಕರ್ಣನ ಗೆಲ್ದ ಕೊಳ್ಗುಳಂ (ಪಂಪಭಾ. ೧೨-೧೨೦).

[ದಶನ + ಘಟ್ಟನ]

ದಶನಚಯ (ನಾ). ಹಲ್ಲುಗಳ ಸಾಲು; ದಂತಪಂಕ್ತಿ : ಮಿಸುಪ ಕುಸುಮ ಚಯಂಗಳನನುಕರಿಪುವೆಸೆವ ದಶನಚಯಂಗಳ್ (ಅಜಿಪು. ೨-೩೬) : ಭಾಸುರದಶನಚಯಂ ಕುಂದದೊಳ್ ಕುಂದನೆಂದುಂ ಪಡೆವನ್ನಂ ಯೌವನಶ್ರೀ ಪಡೆದುದು ನೃಪಪುತ್ರಾಂಗದೊಳ್ ನಾಡೆ ಚೆಲ್ವಂ (ಚಂದ್ರಪು. ೨-೨೩). [ದಶನ + ಚಯ]

ದಶನಚ್ಛದ (ನಾ). ಹಲ್ಲುಗಳನ್ನು ಮುಚ್ಚಿರುವುದು ; ತುಟಿ ; ಬಾಯ್ದೆರೆ: "ಅಧೋಭಾಗ ಸಮಾನಹೀನ ದಶನಚ್ಛದ ಕೆಂಪಧರಾಖ್ಯ ಸಂತತಂ" (ನಾನಾರ. ೬೮) ; ದಶನಾಂಶುಗಳಂ ಮೆಲ್ಲನೆ ದಶನಚ್ಛದಮೃದುಪಲ್ಲವದಿಂ ಮಱಸಿ ಮಾಣೆ ದೂತಂ ನುಡಿದಂ (ಆದಿಪು. ೦೪-೫೦).

[ದಶನ + ಛದ]

ದಶನದ್ಯುತಿ (ನಾ).=ದಶನಕಾಂತಿ : ಒಯ್ಯನಿರೆಂದು ತಿತಿಕ್ಷಾನ್ವಿತನನಾಕುಳಂ ನುಡಿಗುಮೆಸೆಯೆ ದಶನದ್ಯುತಿಗಳ್ (ಕಾಂತಿಪು. ೩-೯೦) : ಕನಕಾದ್ರಿಯ ನೆಳಸುವ ನೂತನಚಂದ್ರಿಕೆಯಂತಿರೆಳಸೆ ದಶನದ್ಯುತಿಗಳ್ ಜನಪತಿಯಂ ನುಡಿದಂ ಮೆಲ್ಲನೆ ಮುಕುಳಿತ ಕರಸರೋಜಂ (ಪುಷ್ಪಪು. ೫-೨) ;
[ದಶನ + ದ್ಯುತಿ]

ದಶನನಿಚಯ (ನಾ).=ದಶನಚಯ : ಸಮ್ಮಾರ್ಜಿತೋಜ್ಜಲ ದಶನನಿಚಯ ತಾಂಬೂಲಚರ್ವಣಭರಿತ ಕಪೋಲರುಂ . . . ಆಗಿ (ಜಗವಿ. ೪-೮೦).
[ದಶನ + ನಿಚಯ]

ದಶನಮಯೂಖ (ನಾ).=ದಶನಕಾಂತಿ : ಹಿಮಾಂಶು ಹರಹಿದನೆಳೆಯ ಬೆಳುದಿಂಗಳನೆನಲು ಸುರರಿಪುಕುಲಾಂತಕನು ತೊಳಪ ದಶನಮಯೂಖತತಿ ಹೊಳೆಹೊಳೆಯೆ ನುಡಿದನು (ಕುಮಾಕಾ. ೮-೭೨). [ದಶನ + ಮಯೂಖ]

ದಶನರುಚಿ (ನಾ).=ದಶನಕಾಂತಿ: ಅರಸಂ ಮುನಿಪತಿ ಪಾದಾಂಬುರುಹಕ್ಕತಿ ವಿಶದದಶನರುಚಿನಿಚಯಪರಂಪರೆಯಿಂ ಚಂದನಚರ್ಚಾವಿರಚನೆಯಂ ಮಾಟ್ಟ ತೆಱದಿನಂದಿಂತೆಂದಂ (ಚಂದ್ರಪು. ೩-೭೨). [ದಶನ + ರುಚಿ]

ದಶನವಸನ (ನಾ).=ದಶನಚ್ಛದ : ಸ್ಫುರಿಯಿಸದೆ ದಶನವಸನಾಂತರಮಾ ರಕ್ತಂಗಳಾಗದೆನಸುಂ ಕಣ್ಗಳ್ . . . ಗೆಲ್ದನಿಂತುವರಿನೃಪಬಲಮಂ (ಕ ವಿ ರಾ. ೩-೦೨೨) : ಮುಳಿದು ಘೂರ್ಣಮಾನಲೋಹಿತಲೋಚನಂ ದಶನನಿಪೀಡಿತ ದಶನವಸನನಸಿಧೇನುವಂ ಕಿಟ್ಟು . . . ಇಱಿಯಲ್ ಪರಿವಾತಂ (ಆದಿಪು. ೨-೦೪ ಪ). [ದಶನ + ವಸನ]

ದಶನವಾಸ (ನಾ).=ದಶನಚ್ಛದ. [ಸಂ. ದಶನವಾಸಸ್]

ದಶನಹತಿ (ನಾ). ೧.=ದಶನಕ್ಷತ : (ಕಿ). ೨. ಮಲ್ಲಯುದ್ಧದ ದೋಷ ಗಳಲ್ಲಿ ಒಂದು ; ಹಲ್ಲಿನಿಂದ ಕಚ್ಚುವುದು : ಕಳಂಬೊಕ್ಕು ನಿರಿಸುಗೆಯ್ದು ನಖಹತಿ ದಶನಹತಿ ಪಾದಪಾತಂ ಮುಷ್ಟಿಪಾತಮೆಂಬ ದೋಷಂಗಳಂ ಪೊರ್ದದ ನಾಲ್ಕುಂ ಸ್ಥಾನದೊಳಂ . . . ಪಲತೆಱದ ಪಾತಂಗಳೊಳಂ ನೆಱೆದು (ಚಂದ್ರಪು. ೫-೭೭ ಪ). [ದಶನ + ಹತಿ]

ದಶನಾಂಶು (ನಾ).=ದಶನಮಯೂಖ : ಇಲ್ಲಿಯೊ ಪೇಟೆಂದು ಮಹೀ ವಲ್ಲಭ ದೂತಂಗೆ ನುಡಿದು ದಶನಾಂಶುಗಳಂ ಮೆಲ್ಲನೆ ದಶನಚ್ಛದಮೃದು ಪಲ್ಲವದಿಂ ಮಱಸಿ ಮಾಣೆ ದೂತಂ ನುಡಿದಂ (ಆದಿಪು. ೧೪-೫೦); ಬಂದ ಬರವಾವುದೀ ಬರವಿಂದಂ ಚರಿತಾರ್ಥನಾದೆನಾನೆಲ್ಲಿಂದಂ ಬಂದಿರೆನ್ನೆ ನೃಪತಿ ನಾರದನೆಂದಂ ದಶನಾಂಶಂ ಕೆದಱೆ ಚಂದ್ರಾತಪಮಂ (ಪಂರಾಮಾ. ೩-೨೦); ಅಮರ್ದಿಂದರ್ಘ್ಯಮನಿತ್ತಪುದು ಮುಖೇಂದಂ ಮುನೀಂದ್ರ ಪದನಖೇಂದುಗೆನಿಪ್ಪಂತಮರೆ ದಶನಾಂಶು ನುಡಿದಂ ಕ್ರಮದಿಂ ಪ್ರಶ್ರ ಯನಿಯುಕ್ತ ಮಧುರೋಕ್ತಿಗಳಂ (ಚಂದ್ರಪು. ೫-೨೫). [ದಶನ + ಅಂಶು]

ದಶನಾಡಿ (ನಾ). ದೇಹದಲ್ಲಿರುವ ಇಡಾ, ಪಿಂಗಳಾ, ಸುಷುಮ್ನಾ, ಗಾಂಧಾರೀ, ಹಸ್ತಿಜಿಹ್ವಾ, ಪೂಷಾ, ಯಶಸ್ವಿನೀ, ಅಲಂಬುಷಾ, ಕುಹೂ, ಶಂಖಿನೀ ಎಂಬ ಹತ್ತು ನಾಡಿಗಳು : ಅರಿಯು ಈಡ್ಪಿಂಗಳ ಸುಷುಮ್ನವು ಅರಿಯು ಗಾಂಧಾರಿ ಹಸ್ತಿಜಿಹ್ವವು ಅರಿಯು ಪೂಷ ಯಶಸ್ವಿನಿಯು ಅಲಂಬುಷಾ ಕುಹೂ ಅರಿಯು ಶಂಖಿನಿಯಿಂತು ದಶ ನಾಡರಿಯಲಿಕೆ ದಶನಾಡಿ ನಾಮಿವು ಅರಿಯು ದಶನಾಡಿಗಳ ಸ್ಥಾನವ ವಿವರಿಪೆನುಯೆಂದ (ಜ್ಞಾನಸಿಂ. ೪-೬೮). [ದಶ + ನಾಡಿ$_1$]

ದಶನಾಮ (ನಾ). ಹತ್ತು ಬಗೆಯ ಹೆಸರುಗಳು : ಫಲುಗುಣ ಬೋಳವಿಸೆ ನಿಂದಿರ್ದು ಕೈಮುಗಿದುತ್ತರನು ನಗುತ . . . ನಿಮ್ಮ ದಶನಾಮಾಳಿಯನು ಪೇಳ್ದಲ್ಪಮತಿಯನು ತಿಳುಹಬೇಕೆಂದ (ಕುಮಾವಿ. ೬-೪೫); P ಅರ್ಜುನನಿಗೆ ಅರ್ಜುನ, ಫಲ್ಗುನ, ಜಿಷ್ಣು, ಕಿರೀಟಿ, ಶ್ವೇತವಾಹನ, ಬೀಭತ್ಸು, ವಿಜಯ, ಕೃಷ್ಣ, ಸವ್ಯಸಾಚಿ ಮತ್ತು ಧನಂಜಯನೆಂಬ ಹತ್ತು ಬಗೆಯ ಹೆಸರುಗಳಿವೆ. [ದಶ + ನಾಮ]

ದಶನೂತಿ (ನಾ). ಒಂದು ಬಗೆಯ ಹುಣ್ಣು,-ವ್ರಣ (?) : ಅರಿದಳ, ಬೇವಿನ ಎಲೆ, ಇವಂ ನವಸಾರದಿಂದ ಅರೆದು ಪೂಸಲು ದಶನೂತಿ ಮಾಣ್ಗುಂ (ವಿಪ್ರವಿ. ೦೩೬). [ದಶ? + ನೂತಿ$_1$]

ದಶನೌಘ (ನಾ).=ದಶನ ಚಯ : ಹೃದಯದಯಾಮೃತವಾಹಿನಿ ಪದನದೆ ಕಡೆಗೋಡಿವರಿದುದೆನೆ ನಿಜದಶನೌಘದ ವಿಶದಪ್ರಭೆ ಸಭೆಯಂ ಪುದಿಯೆ ಮಹೀವಧುಗೆ ವನಜಭವನಿಂತೆಂದಂ (ಜಗವಿ. ೧-೨೮). [ದಶನ + ಓಘ]

ದಶಪವನ (ನಾ). ದೇಹದಲ್ಲಿರುವ ಐದು ಪ್ರಾಣವಾಯುಗಳು ಮತ್ತು ಐದು ಉಪವಾಯುಗಳು : ನವಜೀವಗುಣಮಂ ಮೀಱಿ ನವಲಿಂಗಾನು ಸಂಧಾನಮನಿಂಬುಗೊಳಿಸಿಯುಂ ದಶಪವನಧರ್ಮಮಂ ತೆಮರ್ದು ದಶನಾದ ವಿನೋದದೊಳ್ಮನಮಂ ಮೇಳಯಿಸಿಯುಂ (ವೃಷವಿ. ೫-೪೦ ಪ). 'ದಶಮಾರುತ' ಪರಾ. [ದಶ + ಪವನ$_2$]

ದಶಪಾದಿ (ನಾ). ಹತ್ತು ಪಾದಗಳುಳ್ಳ ಪ್ರಾಣಿ : "ಹತ್ತು ಪಾದಗಳ ವಲ್ಕವಂತ ಪ್ರಾಣಿ : ದಶಪಾದಿ" (Decapod. ಇಂಕನಿ). [ಸಂ. ದಶಪಾದೀ]

ದಶಪೂರ್ವ (ನಾ). [ಜೈನ] ಹತ್ತು ಧಾರ್ಮಿಕಗ್ರಂಥಗಳು ; ಉತ್ಪಾದ ಪೂರ್ವ, ಆಗ್ರಾಯಣೀಯ, ವೀರ್ಯಾನುವಾದಪ್ರವಾದ, ಅಸ್ತಿ ನಾಸ್ತಿಪ್ರವಾದ, ಜ್ಞಾನಪ್ರವಾದ, ಸತ್ಯಪ್ರವಾದ, ಆತ್ಮಪ್ರವಾದ, ಕರ್ಮಪ್ರವಾದ, ಪ್ರತ್ಯಾಖ್ಯಾನ, ವಿದ್ಯಾನುವಾದ ಎಂಬ ಹತ್ತು ಗ್ರಂಥಗಳು. 'ದಶಪೂರ್ವಧರ' ಪರಾ. [ದಶ + ಪೂರ್ವ]

ದಶಪೂರ್ವಧರ (ನಾ). [ಜೈನ] ದಶಪೂರ್ವಗಳನ್ನು ಅಭ್ಯಾಸಮಾಡಿದ ವನು : ದಶಪೂರ್ವಧರರುಮೇಕಾದಶಾಂಗಧಾರಿಗಳುಮೆನಿಪ ಮುನಿಪದ ನಖದೀಪ್ತಿ . . . ಮಾಡುಗಘತಮೋ ವಿಘಟನಮಂ (ಪುಲ್ಲಿಪು. ೧-೦೨); ನಾಲ್ಸಾಸಿರ್ವರ್ ದಶಪೂರ್ವಧರರುಂ ಎರಡು ಲಕ್ಕೆಯ ಪತ್ತು ಸಾಸಿರದ ನಾಲ್ನೂರ್ವರ್ ಶಿಕ್ಷಕರುಂ (ಚಂದ್ರಪು. ೧೫-೮೦ ಪ). [ಸಂ.]

ದಶಪೂರ್ವಿ (ನಾ).=ದಶಪೂರ್ವಧರ: ದಶಪೂರ್ವಿಗಳೀವನುಪಮ ದಶವಿಧ ಸಮಕ್ಕ್ವಮಣಿಗಳೊಲ್ದಂಗೈಕಾದಶಧಾರಿಗಳೀವೇಕಾದಶನಿಳಯದ ಸಂಪದಂ ಗಳಕ್ಕೆಮಗೆಂದುಂ (ಪುಷ್ಪಪು. ೦-೧೫) : ಕ್ರಮವಾಗಿ ದಶಪೂರ್ವಿಗಳಿಗೂ ಚೌದಹಪೂರ್ವಿಗಳಿಗೂ ಬೇರೆ ಬೇರೆಯಾಗಿ ನಮಸ್ಕರಿಸಲಾಗಿದೆ (ಜೈನಪ. ೦೪೧). [ಸಂ. ದಶಪೂರ್ವಿನ್]

ದಶಬಂಧ (ನಾ). ೧. ನೀರಾವರಿಯ ಕೆರೆ, ಬಾವಿ ಮೊದಲಾದುವುಗಳ ಜೀರ್ಣೋದ್ಧಾರಕ್ಕಾಗಿ ಮೀಸಲಾಗಿರಿಸಿದ ತೆರಿಗೆಯ ಹತ್ತನೆಯ ಒಂದು ಭಾಗ. ೨. ಆ ಮೊತ್ತಕ್ಕೆ ಸಮನಾದ ಉತ್ಪನ್ನವುಳ್ಳ ಭೂಮಿ. ೩. ನೀರಾವರಿಯ ಕೆರೆ, ಕಾಲುವೆ, ಬಾವಿಗಳ ಜೀರ್ಣೋದ್ಧಾರ ಮಾಡುವವನು ಅವುಗಳಿಂದ ಸಾಗುವಳಿಯಾದ ಭೂಮಿಯ ಉತ್ಪನ್ನದ ಹತ್ತನೆಯ ಒಂದು ಭಾಗವನ್ನು ವಸೂಲು ಮಾಡ ಬಹುದಾದ ಅಧಿಕಾರ. ೪. ಆದಾಯದ ಹತ್ತನೆಯ ಒಂದು ಭಾಗಕ್ಕೆ ಸಮನಾದ ತೆರಿಗೆಯ ಹಣ : 'ದಶಬಂಧ' ಎಂಬುದಕ್ಕೆ ಸಂವಾದಿಯಾದ ಕನ್ನಡಪದ 'ಪತ್ತೊಂದಿ' (ಕಶಾಅ. ೩೭೦). 'ಧಶವಂದ' ಪರಾ. [ಸಂ.]

ದಶಬಲ, ದಶಬಳ (ನಾ). ೧. ದಾನ, ಶೀಲ, ಕ್ಷಮೆ, ವೀರ್ಯ, ಧ್ಯಾನ, ಪ್ರಜ್ಞೆ, ಬಲ, ಉಪಾಯ, ಪ್ರಣಿಧಿ, ಜ್ಞಾನಗಳೆಂಬ ಹತ್ತು ಬಗೆಯ ಸಾಮರ್ಥ್ಯ. ೨. ಈ ಹತ್ತು ಬಗೆಯ ಸಾಮರ್ಥ್ಯಗಳನ್ನುಳ್ಳವನು ; ಬುದ್ಧ : "ಬುದ್ಧನದ್ವಯವಾದಿ ದಶಬಲಂ . . . ಬೌದ್ಧಂ" (ಮಂಗರಾ. ೭-೨೩) : ದಶಬಲನಾದ ಭಗವಂತನು ತನ್ನ ನಗರಕ್ಕೆ ಬರುವನೆಂಬುದನ್ನು . . . ವಿಶಾಖಾಕನ್ಯೆಯನ್ನು ಕರೆಕಳುಹಿ ಹೇಳಿದನು (ಹತ್ತುಪು. ೦೮). ದಶಬಳ : ೨. "ಬುದ್ಧಂ ಸಮಂತಭದ್ರಂ ಸಿದ್ಧಾರ್ಥಂ ಮುನಿ ತಥಾಗತಂ ಷಡಭಿಜ್ಞಂ ಶೌದ್ದೋಧನಿ ದಶಬಳನತ್ಯುದ್ಧತಮದಮದನವಿಜಯಿ ಶಾಕ್ಯಂ ಸುಗತಂ" (ವಸ್ತುಕೋ. ೨-೦೦). [ದಶ + ಬಲ]

ದಶಬಳ 'ದಶಬಲ' ನೋ.

ದಶಭುಜ (ನಾ). ೧. ಹತ್ತು ತೋಳುಗಳಿಂ : ದಶಭುಜಂ ಪಂಚವಕ್ತ್ರಂ ತ್ರಿನೇತ್ರದಿನೊಪ್ಪೆ (ನಂಬಿಕ. ೭-೦೨೫); ಮೂಡಿದನು ಕೆಂಡಿಡೆಯ ಶಶಿಕಳೆಯು . . . ಪಂಚಮುಖದ ಎಡದ ಗಿರಿಜೆಯ ತಳಿತ ದಶಭುಜದ . . . ಕಾಶೀರಮಣ ವಿಶ್ವನಾಥಂ (ಹರಕಾ. ೦೩-೦೯). ೨. ಶಿವ : ದಶಭುಜನ ಮನೋವಲ್ಲಭ . . . ಶಶಿಧರನಂ ನೆನೆದು ಕಳೆದಳಾ ಬೇಸಗೆಯಂ (ಗಿರಿಕ. ೯-೩೦). ೩. [ರೇಖಾಗ] "ಹತ್ತು ಭುಜಗಳೂ ಕೋನಗಳೂ ಉಳ್ಳ ಸಮಂತಲಾಕೃತಿ : ದಶಾಶ್ರ ; ದಶಭುಜ ; ದಶಕೋನ" (Decagon. ಇಂಳಿ). [ದಶ + ಭುಜ]

ದಶಮ (ಗು). ೧. ಹತ್ತನೆಯಂ. (ನಾ). ೨. ಹತ್ತನೆಯದು : ಸಂಖ್ಯಾವಾಚಿ ಪ್ರತ್ಯಯಾಂತಕ್ಕೆ ದ್ವಿತಯ, ತ್ರಿತಯ, ಚತುಷ್ಕ, ಪಂಚಕ, ಷಟ್ಕ, ಸಪ್ತಕ, ಅಷ್ಟಕ, ನವಮ, ದಶಮ – ಎಂದು ಪ್ರತ್ಯಯಂ ಪತ್ತಲೊಡಂ ಎಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು (ಕವಿಪ್ರ. ೬೨ ಪ್ರಕೋ). ೩. ಹತ್ತನೆಯ ಸ್ಥಾನ : ಬಲಿಕ ನೆರೆದು ಯತಿ ದಶಮದೊಳೆ ತರತರದಿನೊಪ್ಪಿ ನಿಲೆ . . . ಕರಮೆಸೆವ ಕುಸುಮರಸನಿರತಿಶಯಮೆಂಬುದು ನಿತಾಂತಂ (ಛಂದೋಂಬು. ೩-೨೦೩). ೪. ಹತ್ತನೆಯ ಭಾಗ. [ಸಂ.]

ದಶಮದಶೆ (ನಾ). ಹತ್ತು ವಿಧವಾದ ಮದನಾವಸ್ಥೆಗಳಲ್ಲಿ ಕೊನೆಯಂದಂ; (ವಿರಹದ) ಹತ್ತನೆಯ ಅವಸ್ಥೆ ; ಮರಣ : ದಶಮದ[ಪಾಠಾಂ. ದ]ಶೆಗೆ ಪಕ್ಕಾಗದ ಮುನ್ನಂ ತಕ್ಕುದಂ ನೆಗಳ್ವೇಳ್ಕುಮೆಂದು ನುಡಿಯಲೊಡಂ (ರಾಜಶೇ. ೭-೯೩ ಪ). 'ದಶಮಾವಸ್ಥೆ' ಪರಾ. [ದಶಮ + ದಶೆ]

ದಶಮಾಂಶ (ನಾ). ೧. ಹತ್ತನೆಯ ಒಂದಂ ಭಾಗ : ಆದಿಯ ಮನ್ವಂತರದೊಳಶೀತಿ ಭಾಗಿ ಪಲ್ಕುದೊಳಾ ಮನ್ವಂತರ ದಶಮಾಂಶಂ[ಪಾಠಾಂ. ಮಾಸಂ] ಮನ್ವಂತರಮಕ್ಕುಂ ಪ್ರಸೇನಜಿತ್ಪರ್ಯಂತಂ (ಪಂಚಪು. ೦-೦೮). ೨. [ಗಣಿತ] ಏಕಸ್ಥಾನದ ಬಲಗಡೆ ಒಂದಂ ಬಿಂದುವನ್ನಿಟ್ಟು ಅಂಕಿಗಳನ್ನು ಬರೆದು ಹತ್ತನೆಯ ಭಾಗ, ನೂರನೆಯ ಭಾಗ ಎಂದಂ ಮುಂತಾಗಿ ಸೂಚಿಸುವ ಪದ್ಧತಿ; ದಶಮಾನ: ದಶಮಾಂಶಗಳು (ಡೆಸಿಮಲ್ಸ್) : ದಾಶಮಿಕ ಸಂಖ್ಯಾಕ್ರಮವನ್ನು ಪೂರ್ಣಾಂಕಗಳಿಗೆ ಬಲದಿಂದ ಎಡಕ್ಕೆ ಉಪಯೋಗಿಸುವಂತೆ, ಇದೇ ಕ್ರಮವನ್ನು ಬಿಡಿ ಸಂಖ್ಯೆಯ ಬಲಕ್ಕೆ ಉಪಯೋಗಿಸಿ, ಅಂಕಿಗಳನ್ನು ಹತ್ತರ, ನೂರರ, ಸಾವಿರದ, ಇತ್ಯಾದಿ ಭಾಗಗಳನ್ನಾಗಿ ವಿಭಾಗ ಮಾಡುವ ವಿಧಾನಕ್ಕೆ ದಶಮಾಂಶಪದ್ಧತಿ ಎಂದು ಹೆಸರು (ಕವಿಕೋ. I, ೪) ; ದಶಮಾನದ, ದಶಮಾಂಶದ, ದಶಾಂಶದ (Decimal. ಪತ್ರಿನಿ. ೨೯). [ದಶಮ + ಅಂಶ]

ದಶಮಾನ (ನಾ). ಹತ್ತು ಹತ್ತಾಗಿ ಎಣಿಸುವ ಪದ್ಧತಿ : ದಶಮಾನ ಪದ್ಧತಿ ; ದಶಮಾಂಶ, ದಶಾಂಶ (Decimal. ಪತ್ರಿನಿ. ೨೯).

[ದಶ + ಮಾನ]

ದಶಮಾರುತ (ನಾ). ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಐದು ಪ್ರಾಣವಾಯುಗಳು ಮತ್ತು ನಾಗ, ಕೃಕರ, ಕೂರ್ಮ, ದೇವದತ್ತ, ಧನಂಜಯ ಎಂಬ ಐದು ಉಪವಾಯುಗಳು : ನೂರ ಇಪ್ಪತ್ತೇಳಧಿಕ ಮೂರಾರು ಸಾವಿರ ರೂಪದಿಂ ದಶಮಾರುತರೊಳಿದ್ದವರವರ ಪೆಸರಿಂದ ಕರೆಸುವನು (ಹರಾಕ. ೬-೦೦). [ದಶ + ಮಾರುತ]

ದಶಮಾವಸ್ಥೆ (ನಾ). ಹತ್ತು ವಿಧವಾದ ಮದನಾವಸ್ಥೆಗಳಲ್ಲಿ ಕೊನೆಯಂದು ; ಮರಣಸ್ಥಿತಿ : ಆಕೆ ದಶಮಾವಸ್ಥೆಗೆ ಪಕ್ಕಾಗದನ್ನೆಗಮಿದರ್ಕೆ ತಕ್ಕುದಂ ದೇವರ್ ಸಮಕಟ್ಟುವುದು (ಕಂದ್ರಪು. ೫-೦೩೬ ಪ). 'ದಶಾವಸ್ಥೆ' ಪರಾ. [ದಶಮ + ಅವಸ್ಥೆ]

ದಶಮಿ (ನಾ). ಪ್ರತಿಯೊಂದಂ ಪಕ್ಷದ ಹತ್ತನೆಯ ದಿನ, – ತಿಥಿ : ಆ ಪಕ್ಷಂಗಳೊಳಗೆ ಅಗ್ನಿಯೇ ದೇವತೆಯಾಗುಳ್ಳ ಪಾಡ್ಯ . . . ಮನುವಧಿ ದೇವತೆಯಾದ ದಶಮಿ (ವಿಪ್ರಳೆ. ೩೨೦). 'ವಿಜಯದಶಮಿ' ಪರಾ. ೨. ಮನುಷ್ಯನ ಜೀವಿತದ ಹತ್ತನೆಯ ದಶಮಾನ; ತೊಂಬತ್ತೊಂದನೆಯ ವರ್ಷದಿಂದ ನೂರನೆಯ ವರ್ಷ ಮುಂಗಿಯಲುವವರೆಗಿನ ಅವಧಿ.

[ಸಂ. ದಶಮಿ]

ದಶಮಿ (ನಾ). (ಜೋಳ, ಸಜ್ಜೆ, ಗೋಧಿ, ಮೊದಲಾದುವುಗಳ) ಹಿಟ್ಟನ್ನು ಹಾಲಿನಲ್ಲಿ ಕಲಸಿ ಮಾಡುವ ರೊಟ್ಟಿ : ಎರಡು ನಾಯಿಗಳು . . . ಬಂದು ದಶಮಿಯ ಗಂಟಿನ ವಾಸನೆ ಬಡಿದು ಆ ಗಂಟಿಗೆ ಬಂದು ಗಂಟು ಬಿದ್ದವು (ನಿಡಾಳ. ೯೦) ; ಅತ್ತೆ ಮಾಡಿಕೊಟ್ಟ ದಶಮಿ, ಕೊರೆದ ಜುಣಕಾ, ನಾನು ಕುಟ್ಟಿದ ಖೊಬ್ರಿ ಚಟ್ನಿಪುಡಿ ಕಟ್ಟಿದೆ (ಕಪ್ಪುಹು. ೫೯) ಸಾಕಷ್ಟು ದಶಮಿಂ ಬುತ್ತಿ ಕಟ್ಟಿ ಗೋಸಂಗಡಿ ಹೋಗು (ಪಾಂಡಾಪು. ೯) ; ಸ್ನಾನ ಮುಗಿಸಿ, ನಾಕು ದಶಮಿ, ಕಾರೆಳ್ಳಿನ ಹಿಂಡಿ . . . ಹೊಡೆದು (ದೀಪಹ. II, ೭). [←ಮರಾ. ದಶಮಿಾ]

ದಶಮಿಾಸ್ಥ (ನಾ). ಜೀವಿತದ ಹತ್ತನೆಯಂ ದಶಮಾನವನ್ನು ತಲುಪಿದವನು; ತೊಂಬತ್ತು ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವನು; ಮುಂದಂಕ: "ವೃದ್ಧಂ ಸ್ಥವಿರಂ ತಾಂ ವರ್ಷೀಯಂ ಪ್ರವಯಂ ಜೀರ್ಣಂ ಜರಾರ್ದಿತಂ ದಶಮಿಾಸ್ಥಂ" (ಪಸು.ಕೋ. ೫೬-೨೭). [ಸಂ.]

ದಶಮುಖ (ನಾ). ೧. ಹತ್ತು ಮುಂಖಿಗಳಿಂ: ಒಂದು ಗೀಜಗನ ಉಪದೇಶದಿಂದ ಪೌಲಸ್ತ್ಯನಂದು ಹಡೆಯನೆ ದಶಮುಖವ (ಬಸವ. ೩೫೬). ೨. ಹತ್ತು ಮುಖಿಗಳುಳ್ಳವನಿಂ ; ರಾವಣ : ದಶಮುಖನಗಿ[ಗ]ರಿಯಂತೆ ವಾನರ ಭಜ್ಯಮಾನ ತುಂಗಶಾಲಮುಂ (ಕಾರಂಪು. ೧೦೦) ; ಅವಲೋಕಿನೀವಿದ್ಯೆ ಮನದೊಡನೆ ಬಂದು ಬಿಸನಾವುದೆನೆ ದಶಮುಖನಿವರಾರೆಂಬುದುಂ (ಪಂಡಾಪು. ೯-೬೯ ಪ); ದಶಮುಖನಲುಗಿಸಿದವುಲಹರಾದ್ರಿಯ ಗುಂವೆನಿತು (ಬಸಪು. ೦೯-೩೬). ೩. [ವೀಕ್ಷ್ಯ] ಐದು ಜ್ಞಾನೇಂದ್ರಿಯ ಮತ್ತು ಐದು ಕರ್ಮೇಂದ್ರಿಯಗಳ ಚಟುವಟಿಕೆ, – ಕ್ರಿಯೆ (?) : ಕುಲಮದ ಛಲಮದ ವಿದ್ಯಾಮದದವರ ತೋಜದಿರಾ ಅವರ ಆರೂಢ ಪದವಿಯನೆನಗೆ ತೋಜದಿರಾ . . . ಶಮೆ ದಮೆಯುಂಗಿದು ದಶಮುಖ ನಿಂದು ಲಿಂಗದಲಿ ಲೀಯವಾದವರನಲ್ಲದೆ ಎನಗೆ ತೋಜದಿರಾ (ಅಪಚಂ. ೧೦೩-೯೭೪).

[ದಶ + ಮುಖ]

ದಶಮೂಲ (ನಾ). ಮೂರೆಲೆಹೊನ್ನೆ, ಒಂದೆಲೆಹೊನ್ನೆ, ನೆಲಗುಳ್ಳ, ಹೆಬ್ಬಗುಳ್ಳ, ನೆಗ್ಗಿಲುಮಂಳ್ಳು, ಬಿಲ್ವ, ಹೂಸಲಕ್ಕಿ, ಹೆಮ್ಮರ, ಶಿವನ್ನಿ, ಪಾದರಿಗಳೆಂಬ ಹತ್ತು ಔಷಧ ಮೂಲಿಕೆಗಳು : ದಶಮೂಲವೆಂದರೆ ಬಿಲ್ವವೃಕ್ಷದ ಬೇರು, ನಱುವಲದ ಬೇರು, ಶಿವನಿಬೇರು, ಪಾದರಿ ಬೇರು, ಹೆಮ್ಮರದ ಬೇರು ಇವು ಮಹತ್ಪಂಚಮೂಲವೆನಿಸಿಕೊಂಬುವು. ಗುಳ್ಳ, ನೆಲಗುಳ್ಳ, ಎರಡೆಲೆ ಹೊನ್ನೆ, ಮೂಱೆಲೆ ಹೊನ್ನೆ, ನೆಗ್ಗಿಲು, ಇವು ಲಘುಪಂಚಮೂಲವೆನಿಸಿಕೊಂಬುವು. ಈ ಎರಡೂ ಕೂಡಿದರೆ ದಶಮೂಲವೆನಿಸಿಕೊಂಬುವು (ವೈದ್ಯಸಾ. I,೬೩); ಬಿಲ್ವವೃಕ್ಷದ ಬೇರು, ನರುವಲದ ಬೇರು, ಗುಳ್ಳದ ಬೇರು, ಪಾದರಿ ಬೇರು, ಶಿವನ್ನಿಬೇರು–ಇಂತೆಂಬ ಮಹಾಪಂಚಮೂಲ, ನೆಲಗುಳ್ಳ, ಹೆಗ್ಗುಳ್ಳ, ಎರಡೆಲೆ ಹೊನ್ನೆ, ಮೂರೆಲೆ ಹೊನ್ನೆ, ನೆಗ್ಗಿಲುಗಳೆಂಬ ಈ ಲಘುಪಂಚಮೂಲ ಕೂಡ ದಶಮೂಲವೆಂಬ ಈ ಬೇರುಗಳನ್ನು . . . ನಶ್ಯಂ ಮಾಡೆ ಸನ್ನಿಪಾತಂ ಮಾಣ್ಗುಂ (ಸಳಪ್ರ. ೦೯೦); P ಇದು ಲಘುಪಂಚಮೂಲ ಮತ್ತು ಮಹಾಪಂಚಮೂಲ ಎರಡೂ ಕೂಡಿ ಆದುದು. ಈ ಪಟ್ಟಿಯಲ್ಲಿ ವ್ಯತ್ಯಾಸವಿದೆ.

[ದಶ + ಮೂಲ]

ದಶಮೂಲಾರಿಷ್ಟ (ನಾ). ಹತ್ತು ಔಷಧಿಮೂಲಿಕೆಗಳಿಂದ ತಯಾರಿಸಿದ ಔಷಧ : ವೈದ್ಯರು ದಶಮೂಲಾರಿಷ್ಟ ತೆಗೆದುಕೊಳ್ಳಲು ಹೇಳಿದ್ದಾರೆ (ಠೂಢಿ). 'ದ್ರಾಕ್ಷಾರಿಷ್ಟ' ಪರಾ. [ದಶಮೂಲ + ಅರಿಷ್ಟ]

ದಶರಥ (ನಾ). ೧. ಹತ್ತು ದಿಕ್ಕುಗಳಲ್ಲಿಯೂ ರಥಗಳನ್ನು ನಡೆಸಬಲ್ಲ ಪನು. ೨. ಒಬ್ಬ ರಾಜನ ಹೆಸರು ; ರಾಮನ ತಂದೆ : ಮನೋಜವದಿಂ ಪರಿದುದು ಪೂರ್ಣಮನೋರಥಂ ರಥಂ ದಶರಥನಾ (ಪಂಂಪಾಮಾ. ೩-೫೮) : ರಾಯ ದಶರಥನೃಪತಿಗಖಿಳೋಪಾಯಕುಶಲ ಸುಮಂತ್ರಕನು . . . ಋಷ್ಯಶೃಂಗ ಕಥೆಯ ವರ್ಣಿಸಿದ (ತೊರಗಾ. ೦-೫ ಸೂಚನೆ). [ದಶ + ರಥ]

ದಶರಥನಂದನ (ನಾ). ದಶರಥ ಮಹಾರಾಜನ ಮಗ ; ರಾಮ : ಹನುಮನನಟ್ಟಿದ ದಶರಥನಂದನ (ಕುರಾಸಾಂ. ೧೯-೮೦).

[ದಶರಥ + ನಂದನ]

ದಶರಥಾತ್ಮಜ (ನಾ).=ದಶರಥನಂದನ : ಲಲನೆಯೊಳು ಜಮದಗ್ನಿತನಯನೊಳು . . . ದಶರಥಾತ್ಮಜನೊಳತಿ ಕಷ್ಟಿನೊಳು ಬಳುದಿನೊಳು ರಾಮವೆನಿಸಿಕ್ಕು (ಮಂಗರಾ. ೧೪೭-೪೦). [ದಶರಥ + ಆತ್ಮಜ]

ದಶರಥಿ (ನಾ). ಒಂದು ಬಗೆಯ ಅಲಂಕಾರ ವಸ್ತ್ರ ; ಗೌರವಕ್ಕೋಸ್ಕರವಾಗಿ ಕೊಡುವ ವಸ್ತ್ರ : ಕಾಲ ಕುಷ್ಟಸದ ಕಟಾಯಿಯ ಕಟ್ಟಿದ ಮೇಲುಕನ್ನದ ದಶರಥಿಯ ಬಾಲಗುಲಾಮರು ಮೆಱೆದರು ಸುರುತಾಳನೋಲಗದೊಳಗೆಡೆವಿಡದೆ (ಕುರಾಸಾಂ. ೦೯-೨೭) ; ಡಿಳ್ಳಿಯ ಸುಲ್ತಾನನ ಆಸ್ಥಾನದಲ್ಲಿದ್ದ ಖಾನರು ಕಡಿದಾಟೆ, ಜವದಾಡೆ, ದಶರಥಿ, ದುಗುಲದ ಪೈಠಣೆ, ಸುಕ್ಕುಗುಪ್ಪಸ, ಎಕಶಾಯಿಗಳಿಂದ ಅಲಂಕೃತರಾಗಿದ್ದರೆಂದು ತಿಳಿದು ಬರುತ್ತದೆ (ಕುಮಾಸಾಂ. ೩೬೦). [←ಅರ. ತಪರೀಪಾತ್]

ದಶರೂಪ (ನಾ). = ದಶರೂಪಕ. 'ದಶರೂಪಲಕ್ಷಣ' ಪರಾ.

[ದಶ + ರೂಪ]

ದಶರೂಪಕ (ನಾ). [ಕಾವ್ಯವಿಾ] ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥಿ, ಅಂಕ, ಈಹಾಮೃಗ ಎಂಬ ಹತ್ತು ಬಗೆಯ ರೂಪಕಗಳು: ಸ್ವಸಂವೇದ್ಯವಾದ ಪರಮಾನಂದ ರೂಪವಾದ ರಸದ ಸವಿಯೇ ದಶರೂಪಕಗಳ ಫಲ (ದಶರೂ. ೪).

[ದಶ + ರೂಪಕ]

ದಶರೂಪಲಕ್ಷಣ (ನಾ). ಹತ್ತು ಬಗೆಯ ರೂಪಕಗಳ ಲಕ್ಷಣ: ನಾಟಕವುಂ ಪ್ರಕರಣವುಂ ಚಾರಣವುಂ ಭಾಣವುಂ ಸಮವಕಾರಣಮಂ ಡಿಮವುಂ ಈಹಾಮೃಗಮುಂ ವ್ಯಾಯೋಗಮುಂ ಪ್ರಹಸನವುಂ ವೀಥಿಯುಮೆಂಬ ದಶರೂಪಕಲಕ್ಷಣಮುಮಂ ಪಾತ್ರಸಂಕ್ರಮಣದೊಳ್ ನೆಱೆಯೆ ತೋಱಿ (ಅಜಿಪು. ೫-೩೦ ಪ); P ಇಲ್ಲಿ 'ಅಂಕ'ದ ಬದಲು 'ಚಾರಣ' ಉಪಯೋಗವಾಗಿದೆ. [ದಶರೂಪ + ಲಕ್ಷಣ]

ದಶಲಕ್ಷ (ನಾ). ೧. ಹತ್ತು ಲಕ್ಷ : "ಪ್ರಯುತಂ ದಶಲಕ್ಷಂ" (ವಸ್ತುಕೋ. ೦೦೩-೩೩). ೨. ಸಂಖ್ಯೆಯಲ್ಲಿ ಬಲಗಡೆಯಿಂದ ಏಳನೆಯ ಸ್ಥಾನ : ಸಪ್ತಮಂ ದಶಲಕ್ಷಂ ತು ಅಷ್ಟಮಂ ಕೋಟಿರುಚ್ಯತೆ (ವ್ಯವಹಾ. ೧-೫). 'ಶತಲಕ್ಷ' ಪರಾ. [ದಶ + ಲಕ್ಷ]

ದಶಲಕ್ಷಣ (ನಾ). [ಜೈನ] ಮಾಘಚೈತ್ರ ಮತ್ತು ಭಾದ್ರಪದ ತಿಂಗಳ ಶುದ್ಧ ಪಂಚಮಿಯಿಂದ ಚತುರ್ದಶಿವರೆಗಿನ ಪರ್ವದಿನಗಳು ; P ಇವುಗಳಲ್ಲಿ ಉತ್ತಮ, ಮಧ್ಯಮ, ಜಘನ್ಯವೆಂದು ಮೂರು ಬಗೆಗಳಿವೆ. ಈ ವ್ರತವನ್ನು ಹತ್ತು ವರ್ಷಗಳವರೆಗೆ ಮಾಡುವರು. ಈ ಅವಧಿಯಲ್ಲಿ ಜೈನಗೃಹಸ್ಥರು ಪೂಜೆ, ಪಠನ, ಉಪವಾಸ ವ್ರತಾಚರಣೆ, ದಶಲಕ್ಷಣಧರ್ಮಅಧ್ಯಯನ, ದಶಾಧ್ಯಾಯ ಸೂತ್ರಗಳ ಪಠನ ಇತ್ಯಾದಿಗಳಲ್ಲಿ ಸಮಯವನ್ನು ಕಳೆಯುವರು : ಜೈನ ದರ್ಶನವು ಆಧ್ಯಾತ್ಮಿಕ ಸಾಧನೆಗೆ ಸಹಾಯವಾಗುವಂತೆ ಆಷ್ಟಾಹ್ನಿಕ, ದಶಲಕ್ಷಣ ಮೊದಲಾದ ಪರ್ವದಿನಗಳನ್ನು ಕಲ್ಪಿಸಿ ಕೊಟ್ಟಿದೆ (ಜೈನಪ. ೫೬೯).

[ದಶ + ಲಕ್ಷಣ]

ದಶವಂದ 'ದಶವಂಧ' ನೋ.

ದಶವಂಧ, ದಶವಂದ, ದಶವನ್ನ, ದಸವಂದ, ಧಸವಂಧ (ನಾ). ೧. = ದಶಬಂಧ ೧ : ಪ್ರಭುಗಳ್ಗೆ ಅಳದು ಭೂಮಿಗೆ ನೂಱಕ್ಕೆ ಹತ್ತರೋಪಾದಿಯ ದಶವಂಧಮನಿಕ್ಕಿ . . . ಪರಮೇಶ್ವರ ದತ್ತಿಯಾಗಿ ಪಡೆದು (ಎಇ. XVI, ೪೯-೫೨ ; 1147). ೨. = ದಶಬಂಧ ೨ : ಆತನ ಕಯೊಳಂ ಧಾರಾಪೂರ್ವ್ವಕಮಾಗೆ ಪಡೆದು ತಮ್ಮ ದಶವನ್ನದ ಗುಡ್ಡೆ ಮಾನ್ಯದಲ್ಬಿಟ್ಟ ದಯಿಕಾಲ ಮತ್ತರು ಮೂನೂಱೆಪ್ಪತ್ತಂಕದೊಳಂ (ಕಇಆ. ೯-೩-೩೦೦ : 1062). **ದಶವಂದ:** ೧. ಮಾಣಿಯಾಯುಧ ಬೆರಸು ಮಣ್ಡವವೇಱಲ್ಲಲ್ಲದಿನ್ತೀದೆಣ್ಡದೊಳಂ ಕವರ್ತ್ತೆಯೊಳವಪುತ್ರಿಕದ್ರವ್ಯದ ದಶವನ್ನದೊಳಂ ಪುಟ್ಟಿದ ದ್ರವ್ಯಮುವಂ ಕಳೆ ಮದ್ದಳೆಯ ಪಣಮುಂ ದೇಯಿಂಗೆಱೆಗೆ (ಎಇ. XX, ೬೯-೪೦ ; 1012) ; ಬಹಿತ್ರದ ನಾರಣವೆರ್ಗ್ಗಡೆ ನಂದಾದೀವಿಗೆಗಮಷ್ಟ ವಿಧಾರ್ಚನೆಗವೊಂದು ಗಾಣಮುಮಂ ಹೇಱಿನ ಸುಂಕದ ದಶವಂದಮುಮಂ ಬಿಟ್ಟಂ (ಎಕೆ. IV, ನಾಗಮಂ. ೭೦-೫೮; 1178). 'ಪತ್ತೊಂದಿ'ಪರಾ. **ದಶವನ್ನ :** ೧. ಕೋಗಳಿನಾಡೊಳ್ . . . ದೇಗುಲಕಂ ಜಿನಾಲಯಕವಾರವೆಗಂ ಕೆಱೆ ಭಾವಿ ಸತ್ರಕಂ ರಾಗದೆ ತನ್ನ ವನ್ನಯದ ಸುಂಕದೊಳಂ ದಶವನ್ನವಿಟ್ಟ ನಿನ್ತಾಗರಮುಳ್ಳಿನಂ ನೆಗರ್ಟ್ಟ(ಟ್ಟ) ಬಮ್ಮರಸಂ ಗುಣರತ್ನದಾಗರಂ (ಇಆ. XXX, ೦೦೭ ; 1108). **ದಸವಂದ :** ೧. ಆ ಊರಿಂಗೆ ಹಿರಿಯ ಕೋಲ ಮತ್ತರಂ ೫೦೦೦ ಗೌಡಿಂಗೆ ಮತ್ತರು ೧೨ ನೂರಕ್ಕೆ ಹತ್ತು ದಸವಂದ ಮೂಲಿಸ್ಥಾನದೇವರಿಂಗೆ ಮತ್ತರು ೨೦೦ (ಕೊಲ್ಹಾಪು. ೩೭-೨೨ ; 1003) ; ತಮಗೆ ನಡೆವ ಕಿಱುಕುಳ ಸುಂಕದೊಳಗೆ ಬಿಲ್ಕಡೆಯ ಎಲೆಯ ಪೇಱುಂಗೆ ದಸವನ್ನಮುವಂ . . . ಬಿಟ್ಟ (ಎಕೆ. VII, ಶಿಕಾರಿ. ೦೩-೦೬ ; 1098) ; ಆ ಸ್ಥಳದಲು ಪುಟ್ಟಿದ ಪೊನ್ನಲು ಸುಂಕವೆಗ್ಗಡೆಗಳು ದಸವಂದವಂ ಬಿಟ್ಟರು (ಸೌಇಇ. IX-1, ೨೩೯-೨೦ ; 1142) ; ಕಾಡೆಱೆಯಂಗೆ ಪಡೆದುದಱೊಳು ದಸವಂದವನೀವೆನೆಂದು ಪರಸಿಯುಂ (ಪಸಾರ ೪೬೮). ೨. ಪಸರಿಸೆ ಸಮ್ಮತಿ ತನ್ನಯ ದಸವನ್ನದ ನೇಸಣಂಗಳೊಳ್ ಕೆಲವರ್ಕ್ಕಸದೃಶ ನಿತ್ತಿತ್ತುದನೀ ವಸುಧೆಗೆ ನೆಗಳ್ವನ್ತು ಶಾಸನಂ ಬರೆಯಿಸಿದೊಂ (ಎಇ. IV ೬೪-೨೪; 945); ಈ ಭೂಮಿಯ ತೆಂಕಣ ಕಡೆಯಿಂನ್ನೇಸಱಲು ದಸವಂದಕೆಕೆ ಮತ್ತರ್ ಹತ್ತೊ[ಂ]ಭತ್ತು (ಸೌಇಇ. XX, ೦೪೪-೬೫ ; 1166) ; ಆ ಕೆಱೆಯ ಕೆಳನ ಗದೆಯ ವೋಲೆ ನಿಮ್ಮ ದಸವಂದದ ಗದೆ ಸಹವಾಗಿ ವಿರಾಡಿಸಿ (ಎಕೆ. X, ಮುಳಬಾ. ೧೭೨-೦೪ ; 1496) ; ಗಾವುಣ್ಡವೊಲದ ದಸವಂದದ ಭೂಮಿಯಲ್ಲಿ (ಬೊಂಕಶಾ. ೦೯೩೬, ಲಕ್ಷ್ಮೇಶ್ವರ. ೨೬-೦೭ ; ?). **ಧಸವಂಧ :** ೨. ಪಱೆಕಾಱ ಬಾ × × ಗಂಗೆ ಧಸವಂಧವುಂ ಬಿಟ್ಟರ್ (ಎಇ. XVI, ೩೩೦-೩೪ ; 1077). [<ಸಂ. ದಶಬಂಧ]

ದಶವಕ್ತ್ರ (ನಾ). ಹತ್ತು ಮುಂಖಗಳನ್ನುಳ್ಳವನು ; ರಾವಣ.

[ದಶ + ವಕ್ತ್ರ]

ದಶವದನ (ನಾ). = ದಶವಕ್ತ್ರ : ದಶವದನೋನ್ಮೂಲನ ಭಯವಶದಿಂ ಕೈಲಾಸಲಕ್ಷ್ಮಿ ಬಂದಳೋ (ಕಾದಂಪೂ. ೬೬೫) ; ಸೀತೆಯಂ ಕಂಡು ಬನವಂ ಕಿಳ್ದು ತಾಗಿದ ನಿಶಾಟರಂ ಸದೆದು ಲಂಕೆಯನುರಿಪಿ ದಶವದನನಂ ಭಂಗಿಸಿ (ಶ್ರೀಮಿಧಾ. ೦೬-೩೪). [ದಶ + ವದನ]

ದಶವನ್ನ 'ದಶವಂಧ' ನೋ.

ದಶವರೂಥ (ನಾ).=ದಶರಥ ೨. 'ದಶವರೂಥಜ' ಪರಾ.

[ದಶ + ವರೂಥ]

ದಶವರೂಥಜ (ನಾ). ದಶರಥನಂದನ : ಬಿಲ್ವಿದ್ದೆಯ ಕಲಿತನು ದಶವರೂಥಜನ ಕೈಚಳಕವೆಂಬಂತೆ (ಪೋಜಕ. ೦೭-೮೦). [ಸಂ.]

ದಶವಾಯು (ನಾ). = ದಶಮಾರುತ : ದಶವಾಯುಗಳ ಸ್ಥಾನಂಗಳಾವುವೆಂದಡೆ ಗುಹ್ಯದಲ್ಲಿ ಅಪಾನವಾಯು ನಾಭಿಯಲ್ಲಿ ಸಮಾನವಾಯು . . . ಜಿಹ್ವೆಯಲ್ಲಿ ಧನಂಜಯವಾಯು (ಪನ್ನಪ. ಕೆ. ೪೦೦-೮೬೯) ; ವಾಯು

ಒಂದಲ್ಲದೆ ದಶವಾಯುವಿಲ್ಲವೆಂದೆ (ಪೋಳಿಮಾ. ೦-೦) : ದಶವಿಧೇಂದ್ರಿಯಗಳು ನಾನಲ್ಲ ದಶವಾಯುಗಳು ನಾನಲ್ಲ (ಮಹಾದೇ. ಕ. ೦೪೩-೩೪೦) : ತನ್ನ ರೂಪು ದಶವಾಯುಗಳ ಕೂಡಿ ದೆಸೆವರಿದು ಮುಂ ಮಲಗಳೆಸಕದಿಂ ತನುದುರ್ಗಮಂ ಬಲಿದುದು (ಮನೋವಿ. ೦-೦೪) : ದಶವಿಧೇಂದ್ರಿಯದ ದುರ್ಗುಣತತಿಯ ಸಂಹರಿಸಿ ದಶವಾಯುಗಳ ಚೇಷ್ಟೆಯಂ ಪೊರ್ದಲೀಯದಾ ದಶವಿಧದ ಪಾದೋದಕ ಪ್ರಸಾದ ಕ್ರಮಂಗಳನಱಪಿ ಶಿಷ್ಯಾಳಿಗೆ (ವೀಶೈಪು. ೩-೦೦-೨). [ದಶ + ವಾಯು]

ದಶವಿ, ದಸವೆ, ದಸಿವೆ (ನಾ). = ದಶವಿ$_1$: "ದಶವಿಯೆನೆ ದಶವಿ" (ಶಕರ. ೫೦). ದಸವೆ: ದಶವಿ, ದಸವೆ ; ಏಕಾದಶಿ, ಏಯಾರಸೆ (ಶಬ್ದಾನು. ೦೬೦ ಪ್ರಯೋ). ದಸಿವೆ: ದೋದಸೆ, ಏಕಾದಸೆ, ದಸಿವೆ . . . ಇಷ್ಟೆಲ್ಲ ಹೊರತಾಗಿದ್ದುವು (ಮುಂಗಾಪು. ೮೭). [<ಸಂ. ದಶಮಿ]

ದಶವಿಧ (ನಾ). ಹತ್ತು ತೆರ,–ಬಗೆ : ತನ್ನಣುಗಂಗೆ . . . ದಶವಿಧದ ಧೂಪಮಂ ಸುಟ್ಟಪಿಳಗ್ರಹ ಸೋಂಕದಂತೆ ಸಕಲೋಪಚಾರಂಗಳಂ ಸಲಹುತಿರ್ದಳು (ಸಪಮೋ. ೦೫-೫೭). [ದಶ + ವಿಧ]

ದಶವಿಧಧರ್ಮ (ನಾ). = ದಶಕುಲಧರ್ಮ : ಉತ್ತಮಕ್ಷಮಾದಿ ದಶವಿಧ ಧರ್ಮಮುಮಂ . . . ಶಬ್ದ ಸ್ಪರ್ಶನಾದಿ ಪಂಚೇಂದ್ರಿಯವಿಷಯ ವಿಚ್ಛಿತ್ತಿಯುಂ ತನ್ನೊಳುಂ ಸಚ್ಛಿನ್ನಮಾಗಿ (ಪುಷ್ಪಪು. ೦೪-೦೬ ಪ).

[ದಶವಿಧ + ಧರ್ಮ]

ದಶವಿಧನಾದ (ನಾ). (ತಪಸ್ಸನ್ನಾಚರಿಸುವಾಗ ಕೇಳಿ ಬರುವ) ಭ್ರಮರ, ಶಂಖ, ಮೃದಂಗ, ತಾಳ, ಘಂಟೆ, ವೀಣೆ, ಭೇರಿ, ದುಂದುಭಿ, ಸಮುದ್ರಘರ್ಜನೆ ಮತ್ತು ಮೇಘಘರ್ಜನೆಗಳೆಂಬ ಹತ್ತು ಬಗೆಯ ನಾದಗಳು: ದಶವಿಧನಾದಮಂ ಪದೆದುಕೇಳ್ದ ಸಮುಜ್ಜ್ವಳಿಂದುತೇಜಮಂ ಸ್ವಶುಭಚಿದಕ್ಷಿಯಿಂ ಬಿಡದೆ ನೋಳ್ಪ . . . ವಿಳಾಸಮಳುಂಬಮಾತನೊಳ್ (ಶಪಶಂ. ೨-೯೬) ; ಆ ವೀಣೆಯು ದಶವಿಧನಾದಗಳನ್ನೂ ನುಡಿಯುತ್ತದೆ. ಸಂಗೀತವಿದುಷಿಯಂತೆ ಬೇಕಾದ ರಾಗವನ್ನು ಹಾಡುತ್ತದೆ (ಮಹಾಪ. ೦೬೬).

[ದಶವಿಧ + ನಾದ$_1$]

ದಶವಿಧಪಾದೋದಕ (ನಾ). [ವೀಶೈ] ಪಾದೋದಕ, ಲಿಂಗೋದಕ, ಮಜ್ಜನೋದಕ, ಸ್ಪರ್ಶನೋದಕ, ಅವಧಾನೋದಕ, ಆಪ್ರಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಮತ್ತು ಸತ್ಕೋದಕಗಳೆಂಬ ಹತ್ತು ಬಗೆಯ ಪಾದೋದಕ,–ಪಾದತೀರ್ಥ : ಪ್ರಥಮದಲ್ಲಿ ಸ್ಪರ್ಶನವೆಂಬ ಸ್ಪರ್ಶನ ಗುಣದಿಂದೆ ಪಾದೋದಕ ದ್ವಿತೀಯದಲ್ಲಿ ಅಂಗಗುಣವಳಿಯುತ್ತಾಗಿ ಲಿಂಗಮುಖದಿಂದ ಬಂದುದು ಲಿಂಗೋದಕ . . . ನವಮದಲ್ಲಿ ನಾಮ ಸೀಮೆಯಿಲ್ಲವಾಗಿ ನಿರ್ನಾಮೋದಕ ದಶಮದಲ್ಲಿ ಹುಸಿಯಿಲ್ಲ ನಿತ್ಕೋದಕ ಇಂತು ದಶವಿಧಪಾದೋದಕ [ಪಾಣಾಂ. ಉದಕ] (ಚನ್ನಬ. ಕ. ೬೪೭-೦೪೦೦). [ದಶವಿಧ + ಪಾದೋದಕ]

ದಶವಿಧಶ್ರವಣಧರ್ಮ (ನಾ). = ದಶಕುಲಧರ್ಮ : ನವವಿಧಬ್ರಹ್ಮಚರ್ಯೋರ್ಜಿತನುಂ ಪರಿಗೃಹೀತ ದಶವಿಧಶ್ರವಣಧರ್ಮನುಂ (ಪಾಪುಂಪು. ೫-೨೩). [ದಶವಿಧ + ಶ್ರವಣ$_2$ + ಧರ್ಮ]

ದಶವಿಧಸತ್ಯ (ನಾ). [ಜೈನ] ಹತ್ತು ಬಗೆಯ ಸತ್ಯ ; "ಸತ್ಯವು ಜನಪದ, ಸಮ್ಮತಿ, ಸ್ಥಾಪನಾ, ನಾಮ, ರೂಪ, ಪ್ರತೀತ್ಯ, ವ್ಯವಹಾರ, ಸಂಭಾವನಾ, ಭಾವ, ಉಪಮಾಗಳೆಂದು ಹತ್ತು ವಿಧವಾಗಿದೆ" (ಪ್ರಾಸಪ. ೨೯೬) ; ನಾಮಸತ್ಯರೂಪಸತ್ಯಾದಿ ದಶವಿಧ ಸತ್ಯಮುಂ (ಪುಷ್ಪಪು. ೦೪-೦೬ ಪ). [ದಶವಿಧ + ಸತ್ಯ]

ದಶವಿಧಾತಿಶಯ (ನಾ). [ಜೈನ] ೧. ತೀರ್ಥಂಕರನ ಜನ್ಮಕಾಲದಲ್ಲಿ ಆಗುವ ಹತ್ತು ಅತಿಶಯ ; ಇ ಮಲಮೂತ್ರರಹಿತ ಶರೀರ, ಬೆವರು ಇಲ್ಲದಿರುವುದು, ಬಿಳಿಯ ನೆತ್ತರು, ವಜ್ರವೃಷಭ ನಾರಾಚ ಸಂಹನನ, ಸಮಚತುರಸ್ರ ಸಂಸ್ಥಾನ, ಅದ್ಭುತರೂಪ, ಅತಿಸುಗಂಧ, ಸಾವಿರದೆಂಟು ಲಕ್ಷಣ, ಅಸಮಾನ ಬಲ ಮತ್ತು ಪ್ರಿಯವಚನ. ೨. ಕೇವಲ ಜ್ಞಾನದಿಂದ ಉಂಟಾಗುವ ಹತ್ತು ಅತಿಶಯಗಳು ; ಇ ಕಣ್ಣಿಮಿಂಟುಕಿಸದಿರುವುದು, ಉಗುರು ಮತ್ತು ಕೂದಲು ಬೆಳೆಯದಿರುವುದು, ಊಟ ಮಾಡದೆ ಇರುವುದು, ಮುಪ್ಪು ಬಾರದಿರುವುದು, ನೆರಳು ಬೀಳದಿರುವುದು, ನಾಲ್ಕು ಕಡೆ ನೋಡಿ ನಾಲ್ಕು ಕಡೆ ಮಾತನಾಡುವ ಶಕ್ತಿ, ಸುತ್ತಮುತ್ತ ನೂರು ಯೋಜನಗಳವರೆಗೆ ಸುಭಿಕ್ಷ, ಉಪಸರ್ಗ ಮತ್ತು ದುಃಖ ಆಗದಿರುವುದು, ಆಕಾಶಗಮನ ಮತ್ತು ಸಮಸ್ತ ವಿದ್ಯೆಗಳಲ್ಲಿ ನೈಪುಣ್ಯ. [ದಶವಿಧ + ಅತಿಶಯ]

ದಶವಿಧಾವಸ್ಥೆ (ನಾ). = ದಶಾವಸ್ಥೆ : ಕವಿಮುಖ್ಯರಱಿಗೆ ಲೋಕ ವ್ಯವಹಾರ ಪ್ರಚುರ ದಶವಿಧಾವಸ್ಥೆಗಳಂ (ಶೃಂಗಾರ. ೪-೬೮).

[ದಶವಿಧ + ಅವಸ್ಥೆ]

ದಶವಿಧೇಂದ್ರಿಯ (ನಾ). ಶ್ರೋತೃ, ತ್ವಕ್ಕು, ಚಕ್ಷುಸ್ಸು, ಜಿಹ್ವೆ, ನಾಸಿಕಗಳೆಂಬ ಐದು ಜ್ಞಾನೇಂದ್ರಿಯಗಳು ಮತ್ತು ವಾಕ್ಕು, ಪಾಣಿ, ಪಾದ, ವಾಯು, ಉಪಸ್ಥಗಳೆಂಬ ಐದು ಕರ್ಮೇಂದ್ರಿಯಗಳು : ಆದಿಸಂಬಂಧವಪ್ಪ ಭೂತಂಗಳು ನಾನಲ್ಲ ದಶವಿಧೇಂದ್ರಿಯಂಗಳು ನಾನಲ್ಲ ದಶವಾಯುಗಳು ನಾನಲ್ಲ (ಮಹಾದೇ. ಕ. ೦೪೩-೩೪೦) ; ದಶವಿಧೇಂದ್ರಿಯದ ದುರ್ಗುಣತತಿಯ ಸಂಹರಿಸಿ . . . ದಶವಿಧದ ಪಾದೋದಕ ಪ್ರಸಾದಕ್ರಮಂಗಳನಱಪಿ ಶಿಷ್ಯಾಳಿಗೆ (ವೀಶೈಪು. ೩-೦೦-೨). [ದಶವಿಧ + ಇಂದ್ರಿಯ]

ದಶವೈಕಾಲಿಕೆ (ನಾ). [ಜೈನ] ಹದಿನಾಲ್ಕು ಅಂಗಬಾಹ್ಯಆಗಮಂಗಳಲ್ಲಿ ಏಳನೆಯದು ; ಇ ಇದರಲ್ಲಿ ಕಾಲ, ವಿಕಾಲಗಳ ನಿರೂಪಣೆ ಇದೆ : ಅಂಗಬಾಹ್ಯಂ ಸಾಮಾಯಿಕಮುಂ ಚತುರ್ವಿಂಶತಿಸ್ತವನಮುಂ ವಂದನೆಯುಂ . . . ದಶವೈಕಾಲಿಕೆಯುಂ . . . ಮಹಾಪುಂಡರೀಕಮುಂ ಅಶೀತಿಕೆಯುಂ ಎಂದು ಪದಿನಾಲ್ಕು ತೆಱಂ (ತತ್ತ್ವಪ್ರ. ೬೫) ; ದಶವೈಕಾಲಿಕೆಯೆಂಬುದು ನಿಯಮದಿಂ ದ್ರವ್ಯಕ್ಷೇತ್ರಕಾಲಭಾವಾಶ್ರಯದಿಂ ಪಂಚಾಚಾರ ವಿಧಿಯಂ ಉದಾಹರಿಸುಗುಂ (ತತ್ತ್ವಪ್ರ. ೬೫). [ದಶ + ವೈಕಾಲಿಕೆ]

ದಶವ್ಯಾಕರಣ (ನಾ). ಐಂದ್ರ, ಚಾಂದ್ರ, ಕಾಶಕೃತ್ಸ್ನ, ಕೌಮಾರ, ಶಾಕಟಾಯನ, ಸಾರಸ್ವತ, ಶಾಕಲ, ಆಪಿಶಲ, ಕಾತಂತ್ರ, ಮತ್ತು ಪಾಣಿನೀಯ ಎಂಬ ಹತ್ತು ವ್ಯಾಕರಣಗಳು: ಸಂಖ್ಯಾವಾಚಿ ಸಮಾಸಕ್ಕೆ– ಏಕಾಂಗ, ದ್ವಿಮುಖ . . . ನವನಿಧಿ. ದಶವ್ಯಾಕರಣ (ಕಮಾದ. ೬೨ ಪ್ರಯೋ). [ದಶ + ವ್ಯಾಕರಣ]

ದಶಶತ (ನಾ). ೧. ಹತ್ತು ನೂರು ; ಸಾವಿರ ; ಸಹಸ್ರ : "ಸಹಸ್ರಂ ದಶಶತಂ" (ವಸ್ತುಕೋ. ೦೦೩-೩೩) ; ಸಲೆ ದಿನಂಪ್ರತಿಯಿಂದ ಗಂಗಾಮಳ ಸಲಿಲವಂ ತಂದು ನಿರ್ಮಳಕಳಶದಶಶತದಿಂ ಶಿವಂಗಭಿಷೇಕವಂ ಮಾಡಿ (ಬಸಪು. ೪೩-೦೯) ; ವಿಗತಸುಜ್ಞಾನಿಯಂ ಪರಿಪೋಷಿತಾಶಾಧೀನನಂ ದುಃಕೃತಯುತನನಪರಾಧ ದಶ[ಪಾಣಾಂ. ಶತ]ಶತನ ಎನ್ನನೇನಂ ಮಾಡಿಕೊಂಬೆನೊ (ಬಸಪು. ೬೦-೫೬). ೨. ಹತ್ತು ಅಧಿಕವಾದ ಒಂದು ನೂರು ; ಒಂದಂನೂರ ಹತ್ತು. ೩. ಅಸಂಖ್ಯ ; ಅಮಿತ. 'ದಶಶತಕರ', 'ದಶಶತಕಿರಣ' ಪರಾ. [ದಶ + ಶತ]

ದಶಶತಕರ (ನಾ). ೧. ಸಹಸ್ರ ಕಿರಣಗಳು : ತನ್ನ ದಶಶತಕರದಿ ಗಗನವೆಂದೆಂಬ ಜೇಗಟೆಯಿಂದ ಧರೆಗೆ ಡಂಗುರವೊಯ್ಯಲೆಂದಂದು ನಿಂದಿರ್ದನೋ ಎಂಬಂತೆ ರವಿಯುದಯಗಿರಿಗೆ ಬಂದಂ (ಸಿದ್ಧರಾ. ೨-೮). ೨. ಅಸಂಖ್ಯ ಕಿರಣಗಳನ್ನುಳ್ಳವನು ; ಸೂರ್ಯ : ಆ ಬದ್ದೆಗಂಗೆ ವೈರಿ ತಮೋಬಳ ದಶಶತಕರಂ ವಿರಾಜಿತವಿಜಯಶ್ರೀ ಬಾಹುಯುದ್ಧಮಲ್ಲಂ (ಪಂಪಭಾ. ೦-೩೦): [ದಶಶತ + ಕರ$_3$]

ದಶಶತಕಿರಣ (ನಾ). = ದಶಶತಕರ ೨ : ನಿನ್ನ ದೊರೆಯನೆ ಮಗನಕ್ಕಂ ದಾಹ್ವಾನಂಗೆಯ್ಯಲೊಡಂ ದಲ್ ಧರೆಗಿಟ್ಟಿದನಂದು ದಶಶತಕಿರಣಂ (ಪಂಪಭಾ. ೦-೯೦). [ದಶಶತ + ಕಿರಣ್$_1$]

ದಶಶತದಳ (ನಾ). ಸಾವಿರ ಎಸಳುಗಳನ್ನುಳ್ಳದಂ; ಸಹಸ್ರದಳ ಕಮಲ ; ತಾವರೆ : ಶತಮಖಾಮರ ನತಚರಣದಶಶತದಳಂ . . . ಸಸ್ಮಿತವದನ ದಶಶತದಳಂ ಪ್ರತ್ಯಕ್ಷಮಾಗಿರ್ದು (ಬಸಪು. ೦೬-೫೬). [ದಶಶತ + ದಳ$_3$ (= ದಲ)]

ದಶಶತದ್ಯುತಿ (ನಾ).=ದಶಶತಕರ ೧ : ಶತದಳಾಸದನತಳ ತೇಜೋಜಿತ ದಶಶತದ್ಯುತಿ ವಿತತಿ ಸಸ್ಮಿತವದನ ದಶಶತದಳಂ ಪ್ರತ್ಯಕ್ಷಮಾಗಿರ್ದು (ಬಸಪು. ೦೬-೫೬). [ದಶಶತ + ದ್ಯುತಿ]

ದಶಶತನೇತ್ರ (ನಾ). ಸಾವಿರ ಕಣ್ಣುಗಳನ್ನುಳ್ಳವನು ; ಸಹಸ್ರಾಕ್ಷ ; ದೇವೇಂದ್ರ : "ಸುತ್ರಾಮಾಖ್ಯಂ ದಶಶತನೇತ್ರಂ ಕುಲಿಶಾಯುಧಂ . . . ಪಾಕನಮುಚಿ ಜಂಭದ್ವಿಷ್ಟಂ" (ವಸ್ತು ಕೋ. ೬-೩೪). [ದಶಶತ + ನೇತ್ರ]

ದಶಶತಪತ್ರ (ನಾ).=ದಶಶತದಳ : ಪತ್ರವಾಹನನೇತ್ರ ದಶಶತಪತ್ರ ಸಂಚಯ ವಿತ್ರವಂಡಲ ಪತ್ರವಾಹನಪುತ್ರ . . . ಗುರುಸಿದ್ಧೇಶ ಮಾಂ ತ್ರಾಹಿ (ಬಸಪು. ೦೦-೫೬). [ದಶಶತ + ಪತ್ರ]

ದಶಶಿರ (ನಾ). ೧. ಹತ್ತು ತಲೆಗಳು : ತ್ರೇತೆಯಲಿ ರಘುರಾಮನಾಮದಿ ಸೀತೆಯಂ ಹೋಗಾಡಿ ದಶಶಿರದಾತನಿಂ ಬ್ರಹ್ಮಶಿಗೆ ಸಿಕ್ಕಿ ತೊಳಲ್ದಡಿಸುತಿರನೇ (ಬಸಪು. ೫೪-೫೯). ೨. ಹತ್ತು ತಲೆಗಳುಳ್ಳವನು ; ರಾವಣ : ಇವನೆ ರಾವಣನೆಂಬ ರಕ್ಕಸನಿವನೆ ದಶಶಿರನೆಂಬ ವೀರನು (ಕಾಶಿಖಂ. ೨೦-೨೪) ; ದಶರಥಾತ್ಮಜ ನೀನು ಲಂಕೆಯೊಳಸುರ ವೀರರು ಕುಂಭಕರ್ಣನು ದಶಶಿರನು ಮೊದಲಾದ ದುರ್ಜನರೆಲ್ಲರನು ಮಡುಹಿ (ರಾಮಚ. ೫೦-೪) ; ದಶಶಿರಂ ತಪದಿಂದಲೆದ್ದೀಶವದಯುಗಕೆ ಸಸಿನದಿಂ ನಮಿಸಲು (ಜೀಪು. ೯-೦) ; ದಿಗ್ಜಜದಶಂಗಳದಟರ್ವುದಾತಂಗೆ ಮೇಣ್ ದಶಶಿರಂ ತಾನೆಂಬರಯ್ (ಶ್ರೀರಾಮಾ. ೩೦-೫೩). [ದಶ + ಶಿರ$_1$]

ದಶಸಾರ (ನಾ). ೧. [ವೈದ್ಯ] ರೋಗನಿವಾರಕವಾದ ಹತ್ತು ಬಗೆಯ ಸತ್ತ್ವಪೂರ್ಣ ಔಷಧ ದ್ರವ್ಯ : ದಶಸಾರಪ್ರಯೋಗ–ಯಷ್ಟಿಮಧುಕ, ನೆಲ್ಲಿಕಾಯಿ, ದ್ರಾಕ್ಷಿಹಣ್ಣು, ಏಲಕ್ಕಿ, ಶ್ರೀಗಂಧ, ಇಪ್ಪೆಹೂವು, ಖರ್ಜೂರ, ಕೊತ್ತಂಬರಿ, ದಾಳಿಂಬದ ಹಣ್ಣು ಇವನ್ನೆಲ್ಲಾ ಸಮಭಾಗ ಚೂರ್ಣಂಗೈದು ಇಷ್ಟರ ಸಮ ಸಕ್ಕರೆವೆರಸಿ ಉದಯದಲ್ಲಿ ಸೇವಿಸಲು ಸಕಲ ಪಿತ್ತವಿಕಾರಂ ಮಾಣ್ಗುಂ (ಸಳವ್ಯ. ೦೪೩). 'ದಶಸಾರಚೂರ್ಣ' ಪರಾ. ೨. [ವೀಶೈ] (?): ನವಸಾರ ಅಷ್ಟಸಾರ ದಶಸಾರ ಪಂಚಸಾರ ಚತುಷ್ಸಾರಯೇಕಸಾರ ಯಿಂತಿವನತಿಗಳಿದ ಮಹಾಮಹಿಮನ ನಿಲವು ಲಿಂಗದಲ್ಲಿ ಸಂಪೂರ್ಣ (ಪಡಗೋ. ೦೭೩-೧೨). [ದಶ + ಸಾರ$_3$]

ದಶಸಾರಚೂರ್ಣ (ನಾ). [ವೈದ್ಯ] ದಶಸಾರವೆಂಬ ಔಷಧದ್ರವ್ಯಗಳಿಂದ ಮಾಡಿದ ಚೂರ್ಣ : ದಶಸಾರಚೂರ್ಣ–ಯಷ್ಟಿಮಧುಕ, ನೆಲ್ಲಿಚಿಟ್ಟು, ಶಿಲಾಧಾತು, ಕಿರುನೆಲ್ಲಿ, ಏಲಕ್ಕಿ, ಶ್ರೀಗಂಧ, ಇಪ್ಪೆಹೂವು, ಖರ್ಜೂರ, ದಾಳಿಂಬದ ಓಟೆ ಇವಂ ಸಮಭಾಗ ಚೂರ್ಣವಂ ಮಾಡಿ. ಎಳನೀರು . . . ಯಾವುದರಲ್ಲಾದರೂ ಕಲಸಿಕೊಡಲು ಪೈತ್ಯದಿಂದಾದ ಸಕಲ ವ್ಯಾಧಿಯು ಪರಿಹರ (ಸಳವ್ಯ. ೦೪೩). [ದಶಸಾರ + ಚೂರ್ಣ$_3$]

ದಶಸಾಹಸ್ರ (ನಾ). ೧. ಹತ್ತು ಸಾವಿರ. ೨. [ಗಣಿತ] ಸಂಖ್ಯೆಯಲ್ಲಿ ಬಲಗಡೆಯಿಂದ ಐದನೆಯ ಸ್ಥಾನ : ಪಂಚಮಂ ದಶಸಾಹಸ್ರಂ ಷಷ್ಠಮಂ ಲಕ್ಷಮೇವ ಚ (ವ್ಯವಹಾ. ೯-೩). [ದಶ + ಸಾಹಸ್ರ]

ದಶಸಿದ್ಧಿ (ನಾ). ರಾಜಸಯೋಗದ ಅನೂರ್ಮಿಮತ್ವ, ದೂರಶ್ರವಣತ್ವ, ದೂರದರ್ಶಿತ್ವ, ಕಾಮರೂಪತ್ವ, ಪರಕಾಯಪ್ರವೇಶಿತ್ವ, ಸ್ವಚ್ಛಂದಮೃತ್ಯುತ್ವ, ದೇವತೆಗಳ ಮಂತ್ರ ದೇವಕನ್ನೆಯರ ಸಹಕ್ರೀಡೆಯಂನ್ನು ನೋಡಂವಿಕೆ, ಯಥಾ ಸಂಕಲ್ಪಸಿದ್ಧಿ, ಅಪ್ರತಿಹತವಾದ ಆಜ್ಞಾಶಕ್ತಿಗಳೆಂಬ ಹತ್ತು ಬಗೆಯ ಸಿದ್ಧಿಗಳಂ : ಶುದ್ಧ ಬ್ರಹ್ಮದ ಸನ್ನಿಧಿಯಲಿವು ಇದ್ದಿಹವು ಮಹ ಅಷ್ಟಸಿದ್ಧಿಯು ಸಿದ್ಧ ಕೇಳ್ಸಾತ್ವೀಕವಿವು ರಾಜಸದ ದಶಸಿದ್ಧಿಯಿದ್ದಿಹವು ನಾ ಹೇಳ್ದೆ ಸಗುಣಾಗಿದ್ದ ಯೋಗದ ಮನೆಯೊಳಗೆ ಯಿವುಯಿದ್ದಿಹವು (ಜ್ಞಾಸಸಿಂ. ೫೦-೫೩). [ದಶ + ಸಿದ್ಧಿ]

ದಶಾಂಗ (ಗು). ೧. ಹತ್ತು ಅಂಗಗಳನ್ನುಳ್ಳ. (ನಾ). ೨. ಹತ್ತು ಅಂಗಗಳು ಅಥವಾ ಅಂಶಗಳು : ವ್ರರ ನಿಧಿ ಶಯ್ಯಾಸನ ರಾಜ್ಯರತ್ನ ವಾಹನ ವರೂಥಿನೀ ನಾಟ್ಯಸಭಾಪರಿಕರ ಸಹಿತಂ ಧರತೇಶ್ವರಂಗೆ ಸಮ ಸಂದುದೀ ದಶಾಂಗಂ ಭೋಗಂ (ಆದಿಪು. ೧೩-೩). ೩. ಧೂಪಹಾಕಲುಂ ಬಳಸುವ ಹತ್ತುಬಗೆಯಂ ಸುಗಂಧದ್ರವ್ಯಗಳು : "ದಶಾಂಗಗಳು – ಧೂಪ; ೨. ರಾಳ; ೩. ಚಂದನ; ೪. ಕರ್ಪೂರ; ೫. ಗೌಲ; ೬. ನಖ; ೭. ಕುಂಗಿ; ೮. ಗುಗ್ಗುಲ; ೯. ಘೃತ; ೧೦. ಗಂಧ" (ನಾನಾಕ. ೩೦೩) ; ಎಸೆವ ಕಾಳಾಗರು ದಶಾಂಗಮಂ ಬೀಸಿ ರಂಜಿಸುವ ರತುನಾರತಿಯನೆತ್ತಿ (ಹಡಕಾ. ಹರಿ. ೫೦೭-೬೭) ; ಗರ್ಭಗುಡಿಯಿಂದ ಹೂ, ಹಣ್ಣು, ನೈವೇದ್ಯ, ದಶಾಂಗ,ಗುಗ್ಗುಳ, ಸಾಂಬ್ರಾಣಿಗಳ ವಾಸನೆ ಬರುತ್ತಿದೆ (ಪಂಯಾಕೃ. ೫೦) ; ಹಾಲಮಡ್ಡಿ ಕರ್ವುರ ಶಿಲಾರಸ ದೇವದಾರ ಲೋಲ ನಾಗರವೋತಿ ಚಂದನ ಕರ್ಚುರ ರಾಳ ಗುಗ್ಗುಳದ ದಶಾಂಗ (ಸಿದ್ಧಪು. ೦೯-೩). ೪. [ಜೈನ] ಭೋಗಭೂಮಿಯಂ ಹತ್ತು ಕಲ್ಪವೃಕ್ಷಗಳಂ : ಮದ್ಯವಿಭೂಷಣ ಮಾಲ್ಯ ತೋದ್ಯ ಸ್ರಗ್ಗೃವನ ಭಾಜನಾಶನ ದೀಪಜ್ಯೋದ್ಯಜ್ಯೋತಿಷ್ಕಿತಿಯೊಳಮು ದ್ಯೋತಿಸೆ ತುದಿಯೊಳಂಗಮಿಂತು ದಶಾಂಗಂ (ಆದಿಪು. ೩-೩೦). 'ದಶಾಂಗ ಕಲ್ಪಕುಜ' ಪರಾ. [ದಶ + ಅಂಗ$_3$]

ದಶಾಂಗಕಲ್ಪಕುಜ (ನಾ). [ಜೈನ] ಭೋಗಭೂಮಿಯ ನಿವಾಸಿಗಳಿಗೆ ಮದ್ಯಾಂಗ, ಭೂಷಣಾಂಗ, ಮಸ್ಯಾಂಗ, ತೂರ್ಯಾಂಗ, ಮಾಲ್ಯಾಂಗ, ಗೃಹಾಂಗ, ಭಾಜನಾಂಗ, ಭೋಜನಾಂಗ, ಜ್ಯೋತಿರಂಗ ಮತ್ತು ದೀಪಾಂಗಗಳೆಂಬ ಹತ್ತು ಬಗೆಯ ಭೋಗವಸ್ತುಗಳನ್ನು ಕೊಡುವ ಕಲ್ಪವೃಕ್ಷ : ೀದು ಶಾಲ್ಮಲಿಪಾದಪಮಿಂತಿದು ಜಂಬೂವೃಕ್ಷಮಿದುವೆ ಕುರುಭೂಮಿಗಳೊಪ್ಪಿದುವರ್ಧಚಂದ್ರನಾಕಾರದಿನುಚಿತ ದಶಾಂಗಕಲ್ಪಕುಜ ನಿಳಯಂಗಳ್ (ಆದಿಪು. ೩-೩೬). [ದಶಾಂಗ + ಕಲ್ಪಕುಜ]

ದಶಾಂಗಕಲ್ಪತರು (ನಾ). = ದಶಾಂಗಕಲ್ಪಕುಜ : ಕುಸುಮ ಸ್ರಗ್ವಸನಾನ್ನ ಪಾನ ವಿವಿಧಾತೋದ್ಯಪ್ರಕಾಶ . . . ವಿಭೂಷಾನೀಕಮಂ ಕೊಟ್ಟು ಸಂತಸಮಂ ಮಾಡೆ ದಶಾಂಗಕಲ್ಪತರುಗಳ್ ಸ್ವರ್ಗಕ್ಕೆ ಸಂಸಾರಸಾರ ಸುಖಕ್ಕಗ್ಗಳಮೆನ್ನದಾ ಪ್ರಥಮಕಾಲ ಶ್ರೀಯನೀವನ್ನೆವೆಂ (ಪಂಡಾಮಾ. ೦-೬೬). [ದಶಾಂಗ + ಕಲ್ಪತರು]

ದಶಾಂಗಭೋಗ (ನಾ). [ಜೈನ] ಚಕ್ರವರ್ತಿಗಳಿಗೆ ಲಭಿಸುವ ಹತ್ತು ಬಗೆಯ ಭೋಗಗಳಂ ; "ದಿವ್ಯನಗರ, ಚತುರ್ದಶರತ್ನಗಳಂ, ನವ ನಿಧಿ, ಸೈನ್ಯ, ಭೋಜನ, ಭಾಜನ, ಶಯ್ಯಾ, ಆಸನ, ವಾಹನ, ನಾಟ್ಯ ಇವು ದಶಾಂಗಭೋಗಗಳು" (ಆದಿಪು. ಕೋಶ) ; ಈ ಪುರುಷರತ್ನಾಕರಂ ದಶಾಂಗಭೋಗದೊಳ್ ಕೂಡಿದಂ (ಆದಿಪು. ೬-೨೪ ಪ) ; ಪದ್ಮಂ . . . ದಶಾಂಗಭೋಗಮನನುಭವಿಸಿ (ಶಾಪುಂಪು. ೨೪೦-೯) ; ಏಕಚ್ಛತ್ರೀಕೃತ ಭಾರತವರ್ಷನುಂ . . . ನವನಿಧಿಸನಾಥ ಶ್ರೀನಿವಾಸನುಂ ದಶಾಂಗಭೋಗಸಂಗತನುಮಾಗಿ (ಚಂದ್ರಪು. ೬-೩೩ ವ).

[ದಶಾಂಗ + ಭೋಗ]

ದಶಾಂಶ (ನಾ). ೧. ಹತ್ತು ಅಂಶಗಳು ಅಥವಾ ಭಾಗಗಳಂ : (೬). ೨. ಹತ್ತನೆಯ ಒಂದು ಭಾಗ : (೬). ೩. [ಗಣಿತ] ಹತ್ತು ಹತ್ತಾಗಿ ಎಣಿಸುವ ಪದ್ಧತಿ ; ದಶಮಾನಪದ್ಧತಿ : ದಶಮಾನಪದ್ಧತಿ ; ದಶಮಾಂಶ, ದಶಾಂಶ (Decimal, ಪತ್ರಿ.ವಿ. ೫೯). [ದಶ + ಅಂಶ]

ದಶಾನನ (ನಾ). ೧. ಹತ್ತು ಮುಖಗಳು. 'ದಶಾನನತೆ' ಪರಾ. ೨. ಹತ್ತು ಮುಖಗಳನ್ನುಳ್ಳವನು; ರಾವಣ: ಜಲನಿಧಿಯಂ ಪಾಯ್ದೊರ್ವನೆ ನಿಲಿಕಿ ದಶಾನನನ ಪೊಟಲನಾ ಲಂಕೆಯನಾಕುಲಮಿಲ್ಲ ದಿಱಿದ(ದು) ನಿಂದಂ (ಕವಿರಾ. ೩-೧೧೦); ಸಿಂಹಪೀಠದಿನಿರದೆಟ್ಟನಸ್ತಮಿತ ಪುಣ್ಯದಶಾನನನಾ ದಶಾನನಂ (ಪಂರಾಮಾ. ೯-೬೩); ರಾಘವಂ ಮಾಡಿದು ಪಹತಿಯಿಂ ದಶಾನನಂಗೆ ದಾಯವಂ ವೇಳ್ದವನ ವಂಶಮಂ ಸವಱಿಸಿದ ಮಾಯಕಾರ್ತಿಯವೊಲ್ (ಶೈಮಿಧಾ. ೯-೨೨). [ದಶ + ಆನನ]

ದಶಾನನತೆ (ನಾ). ಹತ್ತು ಮುಖಗಳನ್ನು ಹೊಂದಿರುವಿಕೆ: ಪದನಖದೊಳ್ ದಶಾನನತೆ ನಮ್ರನ್ರಿಪಾಳಿ ಮುಪಾಂಕದಿಂ ಜಯಾಸ್ಪದ ಭೂಜದಲ್ಲಿ ಷಣ್ಮುಖತೆ . . . ಚತುರ್ವ್ವದನತೆ ವಕ್ತ್ರದೊಳ್ ಚತುರವಾಣಿಯನೊಪ್ಪಿರಲೆನ್ತು ನೋರ್ಪ್ಪಡಭ್ಯುದಯಮನೆಯ್ದಿದತ್ತು ಪಲವುಂ ಮುಖದಿಂ ತವೆ ಕೀರ್ತ್ತಿಗಂಗನೊಳ್ (ಎಕ. VII, ಶಿವಮೊ. ೯-೮೪; 1122).

[ಸಂ. ದಶಾನನತಾ]

ದಶಾನೀಕಿನಿ (ನಾ). ಹತ್ತು ಅನೀಕಿನಿ; ಒಂದು ಅಕ್ಷೌಹಿಣಿ: ಈ ಅನೀಕಿನಿ ಎಂಬ ಬಲದ ಲೆಕ್ಕವನಿಕ್ಕಿ ದಶಾನೀ[ಕಿನಿ] ಮತ್ತೊಮ್ಮೆ ೧೦ಱಿಂದ ಗುಣಿಸಲು ಬಂದ ಲಬ್ಧ] ಆನೆ ೨೧೮[೭೦] ರಥ ೨೧೮೭೦ ಕುದಿರೆ ೬೫೬೧೦ ಕಾಲಾಳು ೧೦೯೩೫೦. ಇದು ೧ ಅಕ್ಷೌಹಿಣಿ ಬಲದ ಮಿತವೆನಿಸುವುದು (ವ್ಯವಹಾ. ಆನು. ೧-೦೦) 'ಅನೀಕಿನಿ' ಪರಾ.

[ದಶ + ಅನೀಕಿನಿ]

ದಶಾವಂತ (ನಾ). ಭಾಗ್ಯವಂತ; ಸುದೈವಿ. [ಸಂ. ದಶಾವತ್]

ದಶಾವತಾರ (ನಾ). ೧. (ವಿಷ್ಣುವಿನ) ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಪರಶುರಾಮ, ರಾಮ, ಕೃಷ್ಣ, ಬುದ್ಧ ಮತ್ತು ಕಲ್ಕಿ ಎಂಬ ಹತ್ತು ಅವತಾರಗಳು: ಅನಿಮೇಷಾದ್ಯವತಾರಂ ತನಗಾಯ್ತು ದಶಾವತಾರಂ (ಗದಾಯು ೩-೪೪); ವಿಷ್ಣು ಬಲ್ಲಿದನೆಂಬೆನೆ ದಶಾವತಾರದಲ್ಲಿ ಭಂಗವಟ್ಟುದಕ್ಕೆ ಕಡೆಯಿಲ್ಲ (ಬಸವ. ೫೫೦); ಜಗತೀಮಣ್ಡನ ಪುಣ್ಡರೀಕನಯನಂ ಲಕ್ಷೀಯುತಂ ಭೂರಿ ಸತ್ವಗುಣಾಧಾರನಿಳಾಧರಂ ವಿಬುಧಲೋಕಾಹ್ಲಾದನಂ ಪಾಪ ದೈತ್ಯಗಣಧ್ವಂಸಿ ದಶಾವತಾರವಿದಿತಂ ನಿತ್ಯಂ ವಿನತ್ಯನ್ವಿತಂ ಜಗದೊಳ್ ಕೇಶವದೇವನೊಲ್ದು ಕಳೆವಂ ಸ್ವಾತ್ಮಾನತಕ್ಲೇಶವಂ (ಎಕ. VI, ಕಡೂರು. ೬೬-೨೬; 1172). ೨. ಹತ್ತು ಅವತಾರಗಳನ್ನು ತಾಳಿದವನು; ವಿಷ್ಣು.

ದಶಾವತಾರದ ಆಟ=೧. (ಹೆಚ್ಚಾಗಿ) ವಿಷ್ಣುವಿನ ಹತ್ತು ಅವತಾರದ ಕಥೆಗಳನ್ನೇ ವಸ್ತುವಾಗಿ ಉಳ್ಳ ಆಟ; ಬಯಲಾಟ: (ಕ). ೨.=ದಶಾವತಾರಗಂಜೀಪು. **ದಶಾವತಾರ ಮೇಳ** = ೧. ಬಯಲಾಟವನ್ನಾಡುವವರ ಗುಂಪು, -ಮೇಳ. ೨. = ದಶಾವತಾರದ ಆಟ ೧.: ಅವರು ಆಡುವ ಕಥಾನಕಗಳು ಹೆಚ್ಚಾಗಿ ವಿಷ್ಣುವಿನ ದಶಾವತಾರಗಳಿಗೆ ಸಂಬಂಧಿಸಿದುದರಿಂದ, ಅವನ್ನು 'ದಶಾವತಾರಮೇಳ'ಗಳೆಂದೂ ಕರೆಯುವ ವಾಡಿಕೆಯುಂಟು (ಯಕ್ಷಬ. ೧೯). [ಸಂ.]

ದಶಾವತಾರ ಗಂಜೀಪು (ನಾ). (ವಿಷ್ಣುವಿನ) ಹತ್ತು ಅವತಾರಗಳ ಚಿತ್ರಗಳನ್ನುಳ್ಳ ಇಸ್ಪೀಟಾಟದ ರೀತಿಯ ಎಲೆಗಳಿಂದಾಡುವ ಆಟ.

[ದಶಾವತಾರ + ಗಂಜೀಪು]

ದಶಾವಸ್ಥೆ (ನಾ). ೧. ದೃಕ್‌ಸಂಗ, ಮನಸ್ಸಂಗ, ಸಂಕಲ್ಪ, ಜಾಗರ, ಕೃಶತೆ, ಅರತಿ, ಹ್ರೀಕ್ಯಾ, ಉನ್ಮಾದ, ಮೂರ್ಛೆ ಮತ್ತು ಅಂತಗಳೆಂಬ ವಿರಹದ ಹತ್ತು ಅವಸ್ಥೆಗಳು: ಅಳುಪಿ ನೋಡಿದಡೊಂದು ಚಿಂತಿಸಿದಡೆರಡು ಸುಯ್ ಮೊಳೆಯೆ ಮೂಱು ಜ್ವರಂ ತೋಱಿದಡೆ ನಾಲ್ಕು ಮೆಯ್ಯಿಳುಹಲಯ್ದೂಟಮಂ ಬಿಡಲಾಱು ವಿಕಳವೆಡೆಗೊಳಲೇಳು ಕಡುಮೋನಮಂ ತಳೆಯಲೆಂಟತಿ ಮೂರ್ಛೆ ಮೂಡಲೊಂಬತ್ತು ತನುವಳಿಯೆ ಹತ್ತಿವು ದಶಾವಸ್ಥೆ (ಹಡಕಾ. ೪-೪೩); ಎಱಗಿ ನೋಡುವುದೊಂದಱಲಿ ಎರಡಱಲಿ ಚಿಂತನೆ . . . ಮೇಣ್ ಹತ್ತಱಲಿ ಮರಣ ಇವು ದಶಾವಸ್ಥೆಗಳೆನಲು ಹೇಳುವವು ವಿರಹಿಜನರ್ಗೆ (ಬಸಪು. ೩೫-೩೩); ನಿಟ್ಟಿಸಿ ನೋಡಿದ ವೆಣ್ಗೆ ದಶಾವಸ್ಥೆ ಹುಟ್ಟುವುದಬಲೆ ಚಿತ್ರೈಸು (ಕಂನವಿ. ೯-೪೯).

[ಸಂ. ದಶಾವಸ್ಥಾ (ದಶನ್ + ಅವಸ್ಥಾ)]

ದಶಾವಸ್ಥೆಗೊಳ್ (ಕ್ರಿ). ವಿರಹದ ಹತ್ತು ಅವಸ್ಥೆಗಳಿಗೆ ಪಕ್ಕಾಗು; ವಿರಹತಾಪವನ್ನು ಅನುಭವಿಸು: ಸಖಿಯೋ ಬೆಳುದಿಂಗಳು ಬಿಸಿಲಾದವೇ . . . ದಶಾವಸ್ಥೆಗೊಂಡೆನು ಮಹಾಲಿಂಗ ಗಜೇಶ್ವರನುಳಿದಡೆ (ಸರ್ವಜ. ೭೩-೩೯೯). [ದಶಾವಸ್ಥೆ + ಕೊಳ್$_1$]

ದಶಾಸ್ಯ (ನಾ). = ದಶಾನನ ೨: ಸಹಸ್ರಜಿಹ್ವೆಯೊಳಮಜಾಂಡಮಂ ಪುದಿದು ಬರ್ಪ ದಶಾಸ್ಯನ ವಹ್ನಿಬಾಣಮಂ . . . ತವಿಸಿದಂ ಹರಿ ವಾರುಣ ದಿವ್ಯಬಾಣದಿಂ (ಪಂರಾಮಾ. ೦೪-೦೬೦); ನರಕನಾತಂ ಲೋಕಸಂಹಾರ ಮೂರ್ತಿ ದಶಾಸ್ಯಾದಿಗಳಿಂ ಬಲಾಧಿಕಂ (ಜಗವಿ. ೧-೬೯).

[ದಶ + ಆಸ್ಯ]

ದಶಾಸ್ಯಾಂತಕ (ನಾ). ರಾವಣನನ್ನು ಸಂಹಾರಮಾಡಿದವನು; ರಾಮ: ಚಿರಂತನಕಾರ್ಯಂಗಳೊಳಂ ಹನೂಮಂತನಂತಪ್ಪನಂ ದಶಾಸ್ಯಾಂತಕಂ ದೂತನಾಗಿ ಕಳಿಪಿದಂ (ಪಂಚತಂ. ೨೩೮-೭). [ದಶಾಸ್ಯ + ಅಂತಕ]

ದಶಾಹೀನ (ನಾ). ೧. ನಿರ್ಭಾಗ್ಯ; ನತದೃಷ್ಟ. ೨. ಬತ್ತಿ ಇಲ್ಲದಂದು. ೧, ೨: ದಿನದೀಪವಂತೆ ದಶಾಹೀನನು (ಗಾದೆ). [ಸಂ.]

ದಶೆ (ನಾ). ೧. ಅವಸ್ಥೆ; ಸ್ಥಿತಿ; ಇರುವಿಕೆ: ಸತ್ಯದುತ್ತರೋತ್ತರ ದಶೆ ಸತ್ಯದಾಯತಮಪ್ಪಮೃತೇಶ್ವರ ದಂಡನಾಯಕಂ (ಎಕ. VI, ತರೀಕೆ. ೪೫-೬೨; 1196); ಈ ಚಂದ್ರನೀ ಶುಕ್ಲಪಕ್ಷಮಾ ಶುಕ್ಲಪಕ್ಷಕೆ ಸೇರ್ವ ಮುನ್ನಮೆ ದಶಾನನನ ದಶೆ ಸೇರ್ವುದಾ ದಕ್ಷಿಣದ ದಿಶೆಗೆ (ಶ್ರೀರಾಮಾ. ೬೨೮-೨೮೦); ಸೃಷ್ಟಿಕಥೆ ಕಟ್ಟುಕಥೆ; ಎಲಯಕಥೆ ಬರಿಯಕಥೆ ಹುಟ್ಟು ಸಾವುಗಳೊಂದೆ ಪುರುಳಿನೆರಡು ದಶೆ (ಮಂಕುಶಿ. ೦೩೯). ೨. ಬಾಲ್ಯ, ಕೌಮಾರ್ಯ, ಯೌವನ ಮತ್ತು ವಾರ್ಧಕ್ಯಗಳೆಂಬ ಜೀವಿತದ ನಾಲ್ಕು ಅವಸ್ಥೆಗಳು. ೩. ಜೀವನದ ಅವಸ್ಥೆ; ಒಳ್ಳೆಯ ಅಥವಾ ಕೆಟ್ಟ ಸ್ಥಿತಿ. ೪. ಸುದೈವ; ಭಾಗ್ಯ. ೫. (ಒಳ್ಳೆಯ ಮತ್ತು ಕೆಟ್ಟ) ಕರ್ಮಗಳ ಫಲ; ಕರ್ಮಪರಿಪಾಕ: "ಕರ್ಮದ ಪರಿಪಾಕದಲ್ಲಿಯುಂ ದಶಾ ಎಂಬುದು" (ಹಲಾಯು. ೦೩೩-೦೩). ೬. (ಜನ್ಮನಕ್ಷತ್ರವನ್ನು ಅನುಸರಿಸಿ) ನವಗ್ರಹಗಳು ತಮ್ಮ ಚಲನೆಯಿಂದ ಮನುಷ್ಯನ ಜೀವನದ ಮೇಲೆ ಕಾಲ ಕಾಲಕ್ಕೆ ಬೀರುವ ಶುಭಾಶುಭ ಪ್ರಭಾವ, -ಪರಿಣಾಮ; ಗ್ರಹಗತಿ. ೭. ಮನಸ್ಸಿನ ಸ್ಥಿತಿ. ೮. ಬಟ್ಟೆಯ ಅಂಚು; ಕರೆ: "ವರ್ತಿಃ, ವಸ್ತ್ರಿ, ದಶಾ, ಸಿಚಃ – ಈ ಳ ಸೀರೆಯ ಕಱೆ" (ಹಲಾಯು. ೯೦-೩೯೭). ೯. ದೀಪದ ಬತ್ತಿ. ೧೦. ಹೊಸಬಟ್ಟೆ. ೧೧. ಕರ್ತವ್ಯ; ಧರ್ಮ. ೧೨. ಪೂರ್ವಕಾಲ; ಆದಿಕಾಲ. ೧೩. ಬಿಲ್ಲಿನ ಹೆದೆ; ಮೌರ್ವಿ. ೧೪. ಬಾಣ. ೧೫. ಮೊಲ. [ಸಂ. ದಶಾ]

ದಶೆಮುಷಿ (?) (ನಾ). (?): ಅವರು ಬಿಜಯಂಗೈವ ಸಮಯದಲವನ ತಳಿಗೆನಗೆಂದರಿರುವ ನವಸತಿಯಲಿ ಸಮಾಹಿತ ದಶೆಮುಷಿಯಲ್ಲಿರುತಿರಲೂ (ಅರಾಮಾ. ೩-೦೦-೮). [?]

ದಷ್ಟ (ಗು). ೧. (ಹಾವು ಮೊದಲಾದುವುಗಳು) ಕಚ್ಚಿದ; ಕಡಿದ: ಉರಗನೌಡಿದೊಡದಱ ವಕ್ತ್ರದೊಳಿರದೆ ಮೇಣಾ ದಷ್ಟದೇಹದೊಳಿರದೆ ರುಧಿರವು ಪೋಪವೊಲು ದುಷ್ಟಾಧಿಕಾರಿಗಳ ಒರಸೊರಸಿನಿಂ ಜನಪದದ ಧನ ಹರಿವುದರಸಂಗಲಸಿದಾ ಪ್ರಜೆಗಿರದುಭಯ ಪಿಂಗುವುದನಱಿ (ಶುಷ್ಕಾಶಾ. ೩-೦೩). (ನಾ). ೨. (ಹಾವು ಮೊದಲಾದುವುಗಳು) ಕಡಿದವನು: ಗುಂಡಿಗೆಯ ನೀರನಭಿಮಂತ್ರಿಸಿ ತಳಿಯಲೊಡಂ ಕುಮಾರಂ

ದಪ್ಪನಿಪ್ಪನಂ ಕಂಡಂತೆ ಭೋಂಕನೆದ್ದು ಕುಳ್ಳಿರ್ದನಂ ಕಂಡು (ಪಂಚತಂ. ೦೦೩-೦೯); ಗೋಣೊಡಗಿರೆ ಮೂಗಿನೊಳ್ ನುಡಿಯೆ ಬಾಯ್ ಪೆಡೆ ದಪ್ಪನ ಸಾವು ನಿಶ್ಚಯಂ (ಕೋಕೋಪ. ೦೦-೯). ೩. (ಹಾವು ಮೊದಲಾದುವುಗಳಂ) ಕಚ್ಚಿ ವಿಷ ಮತ್ತು ಕಚ್ಚಿದ ಜಾಗ: "ಸರ್ಪ ಕಚ್ಚಿದುದು ದಪ್ಪವೆನಿಕ್ಕು" (ಪುಂಗರಾ. ೦೦೩-೮); "ವಂದು ಹಲ್ಲು ನಟ್ಟ ಘಾಯ ದಪ್ಪವೆನಿಸಿಕೊಂಬುದು" (ವಿಪಡ. ೮-೩). ೪. ತಿನ್ನುವುದು; ಊಟಮಾಡುವುದು: ಕಪ್ಪದಿಂ ಫಲವೇನು ಪೋದವರಿಗೀ ವಸ್ತವಿಷ್ಟಮವ್ವುದೆ ನರಕ ಸಗ್ಗ ಮೆರಡರೊಳಲ್ಲಿ ದಪ್ಪಮಾಗಿಹುದ ಕಂಡಿರ್ಪರಾರ್ ಲೋಕದೊಳು ಚಿತ್ರಜ್ಞಾಂಚಲ್ಮಮಲ್ಲೆ (ವಂಕಾರಾ. ೩-೩೩-೪೫).

[ಸಂ.]

ದಪ್ಪತೆ (ನಾ). (ಹಾವು ಮೊದಲಾದುವುಗಳು) ಕಚ್ಚಿರುವ ಸ್ಥಿತಿ: ರತಿ ಮೂರ್ಛಿತೆ ಜೋಲ್ವ ದೇಹದಿಂ ಸೊಗಯಿಸಿದಳ್ ಭುಜಂಗ ಪರಿದಷ್ಟತೆಯಂ ತವೆ ಸೂಚಿಪಂದದಿಂ (ರಾಜಶೇ. ೦೦-೦೭೯). [ಸಂ. ದಷ್ಟತಾ]

ದಪ್ಪದಂತ (ನಾ). [ನಾಟ್ಯ] ಹಲ್ಲುಗಳಿಂದ ತುಟಿಯನ್ನು ಕಚ್ಚಿ ಭಾವಗಳನ್ನು ಸೂಚಿಸುವ ಒಂದು ಭಂಗಿ,-ಅಭಿನಯ; ℙ "ಅವುಡನ್ನು ಹಲ್ಲುಗಳಿಂದ ಕಚ್ಚುವುದು. ಕೋಪದಲ್ಲಿ ಇದನ್ನು ವಿನಿಯೋಗಿಸಬೇಕು" (ಶಾಸ್ತ್ರಂ. ೩೮೦ ಗದ್ಯಾನುವಾದ): ಅವುಡೊಂದಲೊಡನೆ ದಪ್ಪಂ (ಶಾಸ್ತ್ರಂ. ೩-೯೦). [ದಷ್ಟ + ದಂತ$_1$]

ದಪ್ಪಪುಪ್ಪ (ಗು). ೧. ಯಂಥೇಚ್ಛವಾಗಿ ತಿಂದಂ, ಚೆನ್ನಾಗಿ ಬೆಳೆದ; ಗಟ್ಟಿಮುಟ್ಟಾದ: ಸಾಕಷ್ಟು ದಪ್ಪಪುಪ್ಪವಾಗಿದ್ದ ದೇಹದ ಉಲ್ಲಸದ ಮುಖಮುದ್ರೆಯಂ ಯುವಕ ಮಲ್ಲಾವುರ (ನಾಪೋಲೀ. ೩೩); ಐಶ್ವರ್ಯದ ಕಡಲಿನಲ್ಲಿ ಮಿಂದು ದಪ್ಪಪುಪ್ಪವಾಗಿ ಬೆಳೆದಿತ್ತು ಆಕೆಯ ಶರೀರ (ಕೊನೆಘೋ. ೬೯). (ನಾ). ೨. ಗಟ್ಟಿಮುಟ್ಟಾದವನಂ; ಸಶಕ್ತ; ದೃಢಕಾಯಂ: ಅವರು ದಪ್ಪಪುಪ್ಪರಿದ್ದರಂ (ನಾಡಿಗೀ. ೫೦೩).

[←ಮರಾ. ಧಪ್ಪಪುಷ್ಪ./ಸಂ. ಧೃಷ್ಟಪುಷ್ಪ]

ದಪ್ಪೆ (ನಾ). (ಹಾವಿನಿಂದ) ಕಚ್ಚಿಸಿಕೊಂಡವಳು; ಕಡಿಸಿಕೊಂಡವಳು: ದಪ್ಪೆಯಂ ಕಾದಿರ್ದನೆಂದನೊರ್ವಂ . . . ವಂಟಿಸಿ ಕುಱಿದಂದನೆಂದನೊರ್ವಂ (ಸುಳುಮಾ. ೭-೦೫). [ಸಂ. ದಷ್ಟಾ]

ದಸ್‌ಬೊಕ್ಸ (ನಾ). (ಸೈನ್ಯಕ್ಕೆ ಸಂಬಂಧಪಟ್ಟ) ಹಣವಿಟ್ಟುಕೊಳ್ಳುವ ಅಧಿಕಾರ (?): ಶ್ರೀ ಚಾಮರಾಜೇಂದ್ರವಡೆಯರವರ ಪಾದಶೇವಕನಾದ ಬಸಪ್ಪನವರ ಮಗ ದಸ್‌ಬೊಕ್ಸದ ನಂಜಪ್ಪನು ಈಶ್ವರಪ್ರೀತ್ಯರ್ಥವಾಗಿ ರಚಿಸರ್ ಪಟ್ಟ ಕಟ್ಟಿ (ಮೈಆರಿ. ೦೪೭೭, ೫೫-೬ : 1882).

[ℙ ಇದು 'ದಸ್ತ್‌ಬೊಕ್ಕಸ' ಎಂಬುದರ ಅಪಲಿಖಿತವಿರಬಹುದು]

ದಸ$_1$ (ನಾ). ಒಂದು ಅನುಕರಣ ಶಬ್ದ. 'ದಸಗುಡು' ಪರಾ.

ದಸ$_2$, ದಹ$_1$, ದಾ$_3$, ದಾಹ$_1$ (ನಾ). ೧. ಹತ್ತು. 'ದಸಸಿರ' ಪರಾ. **ದಹ$_1$**: ೧. 'ದಹಕೋಟಿ' 'ದಹಲಕ್ಷ' ಪರಾ. ೨. [ಗಣಿತ] ಒಂದಂಸಂಖ್ಯೆಯಲ್ಲಿ ದಶಮಸ್ಥಾನದಲ್ಲಿರುವ ಅಂಕಿ: ಏಕಂ ದಹಂ ಶತಂ ಸಹಸ್ರಂ ದಶಸಹಸ್ರಂ . . . ಇಂತು ಚಿವ್ವೀಸ ತಾಣವರೆ ಸಂಖ್ಯೆಯಕ್ಕುಂ (ಪುಂಗರಾ. ೦೦೩-೦೩). **ದಾ$_3$**: ೧. 'ದಾಸಾವೀರ' ಪರಾ. **ದಾಹ$_1$**: ೧. ಉಗ್ಗಡಣೆ.-ಎಕ್ಕಂ, ದಾಹಂ, ಶತಂ, ಸಾವಿರ, ದಾಸಾವಿರ (ಪ್ರವಹಾ. ೪-೨೩); ಯಕ್ಕಂ, ದಾಹಂ, ಶತಂ, ಸಾವಿರ, ದಾಸಾವಿರ, ಲಕ್ಷ, ದಹಲಕ್ಷ . . . ಇವು ೩೨ ವುಳಡಣೆ ಹೆಸರುಗಳ್ (ಶಾಸ್ಕರ. ೦೦-೬).

[<ಪ್ರಾ. ದಸ, ದಹ/ಸಂ. ದಶನ್]

ದಸಳ್$_1$ (ನಾ). ಒಂದು ಅನುಕರಣ ಶಬ್ದ: ಮುಂದಿನ ಪರಿಣಾಮವನ್ನು ಮನಸ್ಸಿನಲ್ಲಿ ತಂದರೆ ಎದೆಯು ದಸಕ್ಕೆನ್ನುವದು (ತುಳೀ. ೦೦೯); ಅವಳ ಎದೆ ದಸಕ್ಕೆಂದಿತು (ಒಡ್ಡಿಯು. ೮೬).

ದಸಕ (ನಾ).=ದಶಕ ೬: ಬಲ್ಲಗವುಡನ ವುಂಬಳಿಯು ಗದ್ದೆ ಗಣ್ಣಮಡವೆಯು ಪಿಳ್ಳಿಯಪ್ಪನ ದಸಕದಿಂ ಪಡು[ವ]ಗದ್ದೆ ಕಂಬ ೫೦ ಅಲದ ಕೆಯಿ ಕಂಬ ೪೦೦ (ಎಕ್ಷ. VI, ಕಡೂರು. ೫೪-೦೦ : ?). [?]

ದಸಕತು 'ದಸಕತ್ತು' ನೋ.

ದಸಕತುಮೊಹರ 'ದಸಕತ್ತುಮೊಹರು' ನೋ.

ದಸಕತ್ತು, ದಸಕತು, ದಸ್ಕತಂ, ದಸ್ಕತ್ತು, ದಸ್ತಕತ್ತು (ನಾ). ೧. ಸಹಿ; ರುಜು; ಅಂಕಿತ: ದೇವಾಲಯಕ್ಕೆ ಸಹ ನಮ್ಮ ರುಜು ಮೊಹರು ಖಾಸ ದಸಕತ್ತಿನಿಂದ ಪ್ರತ್ಯೇಕವಾಗಿ ದಾನಶಾಸನಂಗಳಂ ಬರೆಸಿಕೊಟ್ಟು (ಎಕ್ಷ. III, ಮ್ಯಸೂರು. ೦-೦೦ : 1822); ಪ್ರತ್ಯೇಕ ಪ್ರತ್ಯೇಕವಾಗಿ ದಾನಶಾಸನವನ್ನು ಬರೆಯಿಸಿ ಅವರವರ ದಸಕತ್ತು ಮಾಡಿಸಿಕೊಟ್ಟು (ಶಾಮುನಂ. I, ೩೦೪); ಶಬ್ದ ಮಾತ್ರದಿಂದಲೇ ಧೂರೆಗಳೆಂದೆನ್ನಿಸಿ ನಿರೂಪದ ದಸಕತ್ತುಗಳನ್ನು ಮಾತ್ರ ಮಾಡಿಸುತ್ತಾ . . . ಸಕಲ ಕಾರ್ಯಗಳನ್ನೂ ತಾವೇ ನಡೆಯಿಸುತ್ತಿದ್ದರು (ಶಾಮುನಂ. II, ೦೫೭). ೨. ಕೈಬರೆಹ; ಹಸ್ತಾಕ್ಷರ: (ಕ). **ದಸಕತು**: ೧. 'ದಸಕತುಮೊಹರ' ಪರಾ. **ದಸ್ಕತು**: ೧. ಪಾಣಕೃಷ್ಣಯ್ಯನಾ ರಾಜೆ ತೀರ್ಮಾನದ ಅರ್ಜಿಗೆ ಸಾಕ್ಷಿ-ದಸ್ಕತು ಹಾಕಿದಾಗ ಅವನೂ ಸು ಮಾ ರು ಮೂವತ್ತುವರ್ಷಕ್ಕಾದರೂ ಮಿಂದವನಾಗಿರಬಹುದು (ಪಾತಿಸು. ೫); ಅರ್ಜಿಯ ಕೆಳಗಡೆ ದಸ್ಕತುಹಾಕಿ ಸಾಕ್ಷಿ ಹೇಳಬೇಕಾದ ಕರ್ತವ್ಯ ನನ್ನದು (ಕಾವೀರಿ. ೬೯). **ದಸ್ಕತ್ತು**: ೧. ಆ ಕಾಗದಕ್ಕೆ ದಸ್ಕತ್ತು ಮಾಡಿಕೊಡಿ ಎಂತ ಕೋಟಿಅರಸುಗಳು ತಮ್ಮ ಕೈಲಿ ಕೊಟ್ಟಾರು (ರಾಚೋಂದ್ರ. ೦೯); ದಸ್ಕತ್ತು ಹಾಕಿ ರಾಮರಾಯ ನೋಟೀಸು ಪಡಕೊಂಡ (ಕುರುಕಾ. ೮). **ದಸ್ತಕತ್ತು**: ೧. ಆ ನೌಕರರುಗಳ ದಸ್ತಕತ್ತುಗಳನು (ಕೈಬರಹ ಅಥವಾ ಹೆಬ್ಬೆಟ್ಟಿನ ಗುರುತುಗಳನ್ನು) ತೆಗೆದುಕೊಳ್ಳಬೇಕು (ಗ್ರಾಮಾಳ. ೬).

[← ಪಾರ. ಹಿಂ. ದಸಖತ್, ದಸ್ತಖತ್; ಮರಾ. ದಸಕತ್, ದಸ್ಕತ್, ದಸ್ತತ್]

ದಸಕತ್ತುಮೊಹರು, ದಸಕತಂಮೊಹರ, ದಸ್ಕತಂಮೊಹರ (ನಾ). ಅಂಕಿತವನ್ನೊಳಗೊಂಡ ಮುದ್ರೆ; ರುಜುವಿನಿಂದ ಕೂಡಿದ ಮುದ್ರೆ: ಪಾವಂದರು ಕರಾರುನಾಮೆ ಬರಶಿ ದಸಕತ್ತುಮೊಹರ ಮಾಡಿಶಿ ಕೊಟ್ಟದ್ದರಿಂದಾ ಹೈದರಲ್ಲಿಪಾನರು ವಪ್ಪಿಕೊಂಡರು (ಹೈದರ. ೬೫); ತಸದೀಕಿಗೆ ದಸಕತ್ತುಮೊಹರು ಮಾಡಿಶಿರುವ ಪ್ರಕಾರ (ಎಕ್ಷ. III, ತಿರುಮ. ೫೭-೩೦; 1855); ಅಪ್ಪಣೆಯಾದಂತೆ ನಿರೂಪ ಬರೆದು ಆ ನಕಲನ್ನು ಬರೆದುಕೊಂಡು ನಿರೂಪಕ್ಕೆ ಧೂರೆಗಳ ದಸಕತ್ತುಮೊಹರು ಮಾಡಿಸಿ (ಶಾಮುನಂ. ೦೩೯). **ದಸಕತುಮೊಹರ**: ಕೃಷ್ಣಾಯಂಬದಾಗಿ ದಸಕತುಮೊಹರಾ ಶ್ರೀಚಾಮರಾಜವಡೇರ ತನುಜ ಕೃಷ್ಣರಾಜವಡೇರುಯಂಬದಾಗಿ ಬಾಳಬಂದು ಅಕ್ಷರದಲು ಶಾಯಿ ಮೊಹರಾ ಮಾಡಿಯಿದೆ (ಎಕ್ಷ. VI, ಕೊಪ್ಪ. ೪೯-೫೭ ; 1811). **ದಸ್ಕತುಮೊಹರ**: ಆ ರಾಜರು ಆನೆ ಭಾಷೆ ಹಾಕಿ ಕರಾರುನಾಮಾ ದಸ್ಕತುಮೊಹರದಿಂದ ಬರಹದಲ್ಲಿ . . . ಬರೆಸಿ ಕಳುಹಿಸಿದರಿಂದ (ರಾಚೋಂದ್ರ. ೬). [ದಸಕತ್ತು + ಮೊಹರು]

ದಸಕು (ನಾ). (ಜೋಳ, ರಾಗಿ, ಗೋಧಿ ಮೊದಲಾದ) ಕಾಳುಗಳ ಮೇಲಿನ ತೆಳುವಾದ ಪದರ; ಹೊಟ್ಟು; ತೌಡು: ರಾಗಿಯಲ್ಲಿ ದಸಕು ಹೆಚ್ಚಾಗಿದೆ (ಕೂಡಿ). .[?]

ದಸಗುಡು (ಕ್ರಿ). ಉಬ್ಬಸಪಡು; ಏದುಸಿರು ಬಿಡು; "ತೇಕು" (ಹಾಸಕೋ.೮). [ದಸ$_1$ + ಕುಡು$_1$ (<ಕೊಡು$_1$)]

ದಸಧರ್ಮ (ನಾ). = ದಶಧರ್ಮ ೨: ಶ್ರೀಮತು ರುದ್ರಶಕ್ತಿಪಂಡಿತರ ಶಿಷ್ಯರು ದಸಧರ್ಮ್ಮ ನಿರ್ಮ್ಮಿತರಷ್ಟ, ಶ್ರೀಸೋಮೇಶ್ವರಪಂಡಿತರ ಶಿಷ್ಯರು (ಸೌಶಾ. XI-11, ೦೯೪-೦೩ : 1123). [<ಸಂ. ದಶಧರ್ಮ]

ದಸಬುಸನೆ (ಅ). ಅವಸರವಸರವಾಗಿ ; ಗಡಿಬಿಡಿಯಲ್ಲಿ : ಅಮ್ಮ . . . ದಸಬುಸನೆ ಅಪ್ಪನ ರೂಮಿಗೆ ಓಡಿದಳು (ಸ್ವಾಮಿಸ್ಕೇ. ೦೩೯).

[ದಸಬುಸ$_0$ + – ಅನೆ$_1$]

ದಸಮಾಹೆ (ನಾ). ಒಂದು ವರ್ಷದ ಕೆಲಸಕ್ಕಾಗಿ ಕೊಡುವ ಹತ್ತು ತಿಂಗಳ ಸಂಬಳ : (ಕ). [ದಸ$_2$ + ಮಾಹೆ]

ದಸರ 'ದಸರಾ' ನೋ.

ದಸರಾ, ದಸರ, ದಸರೆ$_2$ (ನಾ). ೧. ಆಶ್ವೀನ ಶುಕ್ಲಪಕ್ಷ ಪಾಡ್ಯದಿಂದ ದಶಮಿಯವರೆಗಿನ ಹತ್ತು ದಿನಗಳ ಹಬ್ಬ.–ಉತ್ಸವ : ದಸರಾ ರಜ ಬಂದಾಗ ನಿಮ್ಮ ಊರಿಗೆ ಬರುತ್ತೇನೆ (ರೂಢಿ). **ದಸರ**: ೧. ಕಣ್ಣು ಮೂಗಲಿ ನನ್ನ ಹೆಣ್ಣುಮಗಳು ಚೆಲುವೆ ಬಣ್ಣಕೆ ನನ್ನ ಸೊಸೆ ಚೆಲುವೆ ದಸರಕ್ಕೆ ಬನ್ನೀ ಮುಡಿವಾಗ ಮಗ ಚೆಲುವ (ಡಮಪ. ೧೭-೦೬) ; ಸ್ವಂತಕ್ಕೆ ಹೊಸ ಮನೆಯೊಂದನು ಕಟ್ಟಿದೆ ಒಂಬತ್ತು ವರುಷದ ಹಿಂದೆ ಮನೆಯೊಕ್ಕಲಿಗೆ ಬಂದರೂರವರೊಲವಿಂದೆ ಅದೆ ಕಡೆ ದಸರವು ಎಂದೆ (ಇಂಜಾಪ. ೫೦-೪೦). **ದಸರೆ$_2$**: ೧. ದಸರೆಯ ಹಬ್ಬದಲ್ಲಿ ನಾವು ಪರಸ್ಪರ ಬನ್ನಿಯ ಎಸಳುಗಳನ್ನು ಕೊಡುತ್ತಾ ಬಂಗಾರವನ್ನು ತೆಗೆದುಕೊಂಡು ಬಂಗಾರದಂತೆ ಇರೋಣ ಎನ್ನುವ ವಾಡಿಕೆಯಿದೆ (ರಂಗರೋ. ೧೧೨); ದಸರೆಯ ಬಿಡುವಿನಲ್ಲಿ ಹೀಗೆಯೇ ಅಡ್ಡಾಡುತ್ತಿರುತ್ತೇನೆ (ದಲಿಕು. ೨೪). ೨. ಆಶ್ವೀನಮಾಸ ಶುಕ್ಲಪಕ್ಷದ ದಶಮಿಂ ; ನವರಾತ್ರಿಉತ್ಸವದ ಕೊನೆಯ ದಿವಸ ; ವಿಜಯದಶಮಿ: "ದಸರೆ–ದಶಹರಾ = ಒಂದು ಹಬ್ಬ" (ತದ್ಭಕೋ. ೦೯).

[←ಮರಾ. ದಸರಾ./ಸಂ. ದಶಹರಾ]

ದಸರಿ, ದಸರೆ$_1$, ದಸುರಿ (ನಾ). ಒಂದು ಬಗೆಯ ವಸ್ತ್ರ ; ರೇಷ್ಮೆವಸ್ತ್ರ : ದಸರಿ ಗಬ್ಬುಳನೀಲಿಗಂಧ ಸಂಧ್ಯಾರಾಗ ಕುಸುಮಿಯಾವಂಚೆ ದೋರಿಯ ನಾಗವಟ್ಟೆ ಪುಲ್ಲಿ ಸುವರ್ಣ ಪಳಿ ಮದವಿ ಮಂಜಿಷ್ಠೆ ದೇವಾಂಗಮೆಂದು ಪಟಭೇದಮಕ್ಕುಂ" (ಮಂಗರಾ. ೧೦೦-೨೮); ದಸ[ಪಾಠಾಂ. ಶ]ರಿಯ ಸೀರೆಗಳಂ ಸ್ನೇಹಸುಧಾಜಲ ಭೋಜನಂಗಳಂ ಪಾರ್ವಂ ಗೃಧ್ರಸಮಾಸ್ಯಂ ಕಂಬಳ ಚರ್ಮ ಸಮೇತಂ ಘಟಗೃಹಾದಿಮದ್ರೇಕ್ಕಾಣಂ (ಜಾಸತಿ. ೦೯-೩೦) ; ಧಗ ಧಗಿಪ ಕೆಂಡಂಗಳಂ ಬಗಿಬಗಿದು ದಸರಿಯ ಪೊತ್ತಿಯಲಿ ಬಿಗಿಬಿಗಿದು ಕರಯುಗಳಂಗಳಿಂ ತೆಗೆದೊಪ್ಪಿ ಛಲವೊಪ್ಪಿ ನೆಗಳನೇ ಶಿವಪಂಡಿತಂ (ಬಸಪು. ೫೫-೨೫) ; ಹಸುರ್ಗೂಳ ಹರಿವಾಣಗಳೊಳು ತುಂಬಿ ರಂಜಿಸುವ ರತ್ನಾ ರತಿವೆಳಗಿ ದಸರಿ ಪಟ್ಟಾವಳಿ ಚಿತ್ರವಸ್ತ್ರವ ನಿವಳಿಸಿದರಚ್ಯುತನಂಘ್ರಿಗಳಲಿ (ಮೋಹತ. ೪೨-೨೭)-; ಪಳಿ ಪಟ್ಟೆ ಪುಲ್ಲಿ ಚೀನಾಂಬರ ದಸರಿ ಗಬ್ಬುಳಗಂದಿ ಮೇಘವಣ್ಣಿಗೆಯಾ ತಲೆಯ ಮೇಲೆಲ್ಲರ್ಗೆ ಕಱೆದರು ವಸ್ತ್ರದ ಮಳೆ ತಾನೆ ಕಱೆದುದೆಂಬಂತೆ (ಭರಜ. ೭೩-೧೦೩) ; ಸದ್ಭಕ್ತತತಿ ಕೆಂಡಮಂ ದಸರಿವಸ್ತ್ರದಿ ಕಟ್ಟಿ (ಸಿದ್ಧೇಪು. ೦೪-೧೩); ಎಷ್ಟು ಹೇಳಿದರೂ ಕೇಳೊಲ್ಲೊಕ್ಕಲಗಿತ್ತಿ ಹಾಸೆ ವಜ್ಜರದ ದಸರೀಯ (ಜಗೀತೆ. ೨೭). **ದಸರೆ$_1$** : ದೇವರ ಚೈತ್ರಪವಿತ್ರಕೆಂದು ಕುಕ್ಕನೂರ ಮೂವತ್ತರೊಳಗೆಲ್ಲಿಯಾದೊಡಂ ಗುಡಿಯ ಬೀಡಿಗಂ ಅಡಕೆ ಮೆಣಸು ದಸರೆಯ ಮಳವೆ . . . ಕತ್ತೆಯಲು ಕೋಣನಲು ಏನ ಹೇರಿ ಬಂದಡಂ . . . ಹತ್ತಕೊಂದು ದಶವಂದವಾಗಿ . . . ಧಾರಾಪೂರ್ವಕಂ ಬಿಟ್ಟೇ × × × (ಶಾಸಪ. ೪೪-೪ ; 12ನೆಯ ಶತ). **ದಸುರಿ**: ಪಸುಬೆಯಂಗಡಿ ಗಂಧಿಗರ ಪ್ರಸರದ ಮುಂದೆ ದಸುರಿ ಪಟ್ಟೆಯ ಮಳಿಗೆಗಳು ಹಸುರ ತಾಪತ್ತಿ ಸಕಲಾತಿಯ ಮಾಱುವ ರಸಿಕರೊಪ್ಪಿದರಂಗಡಿಯೊಳು (ಬಸಪು. ೦-೪೮).

[<ಪ್ರಾ. ಟಸರ./ಸಂ. ತ್ರಸರ./ಇಂ. Tusser]

ದಸರಿದೊಡಕು (ನಾ). ರೇಷಿಮೆಯ ದಾರದಲ್ಲಿ ಕಟ್ಟಿದ, ಬಿಚ್ಚಲು ಕಷ್ಟವಾದ ಗಂಟು ; "ರೇಶಿಮೆಯ ತೊಡಕಂ ; ಬಿಚ್ಚಬಾರದ ಗಂಟು" (ಶೂನ್ಯಸಂ. ಕೋಶ) : ಅಂತರಂಗದೊಳಗೆ ಅದೆ ಎಂದರೇನು ಹೇಳಾ ಮನಮುಟ್ಟಿ ಕಾಣಬಾರದು ಬಹಿರಂಗದಲ್ಲಿ ಅದೆ ಎಂದರೆ ಪೂಜಿಸುವನ್ನಕ್ಕರ ಕಾಣಬಾರದು ಸಾಕಾರವಲ್ಲದ ನಿರಾಕಾರಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು ಎನ್ನ ಮನದೊಳಗೆ ಘನವನನುಗೊಳಿಸಿ ತೋಱುವರಿಲ್ಲದ ಕಾರಣ ಎನ್ನ ಅಜಗಣ್ಣನಿಕ್ಕಿದ ದಸ[ಪಾಠಾಂ. ಶ]ರಿದೊಡಕಿಂಗೆ ಬೆಱಗಾದೆನು (ಶೂನ್ಯಸಂ. ೩೨-೨೦); ಅಲ್ಲಿಗಲ್ಲಿಗೆ ಮಂಡಲಂಗೊಂಡು ಕಂಡರಂ ದಸರಿದೊಡಕಾದ ತೊದಳ್ನುಡಿಯಿಂದು ಕರೆದು ಬಯ್ಯುತ್ತುಂ (ಬಾಧಪು. ೦೦-೦೩೯ ಪ); ಎಲ್ಲಿ ಸಂಜನಿಸಿದುವು ನಿಮ್ಮೊಡಲಲ್ಲಿ ಪೇಳಿದ ದಸರಿದೊಡಕಿನ ಸೊಲ್ಲಿನಂಗ ವನೆನುತೆ ಕೇಳಿದಳಾಕೆಯಲ್ಲಮನ (ಪ್ರಭುಲೀ. ೦೨-೨೨).

[ದಸರಿ + ತೊಡಕು$_2$ (<ತೊಡಂಕು$_2$)]

ದಸರಿಬಳ್ಳಿ (ನಾ). ನೀರಿನ ಮೇಲೆ ಹಬ್ಬುವ ಒಂದು ಬಗೆಯ ಬಳ್ಳಿ : ಧಗಡಿಬಳ್ಳಿ, ದಸರಿಬಳ್ಳಿ, ಆಡಂಬುಬಳ್ಳಿ, ಯಡಾನಿಬಳ್ಳಿ (ಮೈಜಿಗಿ. ೨೩-೪೨೪). [ದಸರಿ$_0$ + ಬಳ್ಳಿ]

ದಸರೆ$_1$ 'ದಸರಿ' ನೋ.

ದಸರೆ$_2$ 'ದಸರಾ' ನೋ.

ದಸವಂದ 'ದಶವಂಧ' ನೋ.

ದಸವರ್ಮ (ನಾ). ಒಬ್ಬಾತನ ಹೆಸರು : ಕಯ್ಯೋಗೆವಡೆಯ ಬೆಳ್ಳಬ್ಬೂರ ದಸವರ್ಮ್ಮಗಾಯಿಗ ತಾಗರತಿಯ ಮಹಾಜನಕ್ಕೆ ಸುವರ್ಣ್ಣದನಮಂ ಕೊಟ್ಟು (ಎಕ. VIII, ಸೊರಬ. ೫೭೦-೧೦ ; 951) ; ಆತನ ತಮ್ಮಂ ಭುವನಯ್ಯವಂಲ್ಲನೆನಿಸಿದ ದಸವರ್ಮ್ಮದೇವ (ಸೌಇಇ. XX, ೦೯-೨೩ ; 1015). [ಸಂ. ದಶವರ್ಮನ್]

ದಸವೆ 'ದಶವಿ' ನೋ.

ದಸಸಿರ (ನಾ). ೧. ಹತ್ತು ತಲೆಗಳು : (ಕ). ೨. ಹತ್ತು ತಲೆಗಳನ್ನುಳ್ಳವನು : ಎರಡು ಪದಂಗಳಪಭ್ರಂಶಕ್ಕೆ – ಅಚ್ಛಸ್ಪಟಿಕ-ಅಚ್ಛವಳಿಕು . . . ದಶಶಿರ-ದಸಸಿರ (ಶಮದ. ೨೮೯ ಪ್ರಯೋ). [ದಸ + ಸಿರ$_2$]

ದಸಳ (ನಾ). ಉದುರಾಗಿರುವುದು (?) : ನುಗ್ಗೆ ಚಕ್ಕೋತ ಬಸಲೆಯಿಂ ಲವಣವೆರದೂ ದಸಳಮಾಗಿರಲು ತೆಂಗಾಯ ತಿರುಳಂ ನೀಡಿ (ಲಿಂಗಪು. ೮-೩೬).

[?]

ದಸಿ (ನಾ). ೧. (ಮರ, ಲೋಹ ಮೊದಲಾದುವುಗಳ) ಚೂಪಾದ ಗೂಟ ; ಶೂಲ: "ಆರೋಗ್ಯ ದಸಿ ವಶಗಳೊಳ್ ದಕ್ಕು" (ಶಬ್ದಮಂ. ೭೯); ಇಕ್ಷುಯಂತ್ರಂಗಳಿಂ ಪಿಟ್ಟುವುದುಂ ಬಸಿದ ದಸಿಯೊಳ್ ತೆಗೆವುದುಂ ಕಬ್ಬುನದ ದಬ್ಬಣಂಗಳಂ . . . ಬೆರಲ್ಗಳೊಳಡಂಗೆ ಬೆಟ್ಟುವುದುಂ (ಸುಕುಮಾ. ೧೧-೪೭ ಪ) ; ದೆಸೆದೆಸೆಗೆ ಸೀಳ್ದೀಡಾಡಿಯುಂ ಬಾಯೊಳಗೆ ದಸಿಯುಂ ಪೆಟ್ಟಿಯುಂ (ಧರ್ಮಾಮೃ. ೩-೭೩) ; ತನಗಲ್ಲದಾದುದ ನಾಸಿಕ ವಾಸಿಸಿದಲ್ಲಿ ಅಲ್ಲಿಯೇ ದಸಿಯ ದಕ್ಕನೇಱಿಸುವೆನು (ವಜಶಾ. I, ೦೨೭) ; ಎನಿತಡಗನೂಡೆಯುಂ ಬಾಯಾಡಿ ನಲಿಯದೆ ತಿಂಬಡಗಂ ತೋಡಿಕೊಂಡು ಕಾಡುವ ಕೂಸಂ ದಸಿಯೊಳಸೆಯಿಱಿದು ಬಿಸಿಯಡಗಂ ಬಾಯೊಳ್ಗಿಡಿದು ತಿನ್ನುತಿನ್ನೆಂದವುಡಂ ತಿಂಬ ತಾಯಿರಕ್ಕಸಿಯರುಮಂ (ಅರ್ಧನೇ. ೫-೪೦ ಪ); ಎಸೆವ ಕೋಟೆಯ ತೆನೆಗಳಲಿ ಕಟ್ಟಿಸಿ ಪತಾಕೆಗಳಂ ಬಸಿದ್ಯಬಲುದಸಿಗಳಂ ಮಲಗಿಸಿ ಮರಂಗಳನಿರಿಸಿಯೆಡೆಗೆಡೆಗೆ (ಬಸಪು. ೧೬-೧೧); ಮುಗಿಲ ಮುಟ್ಟುವ ಕೋಟೆಯ ತೆನೆಯೆಡೆಯೆಡೆ ಹೊಗರೆದ್ದ ದಸಿಮೊನೆ ಶೂಲ ಝಗಝಗಿಸುವ ಹೇರಿಟ್ಟ ಮರುಳುಗೈಗಳುಗುಳುತಿರ್ದುವು ಕೆಂಗಿಡಿಗಳ (ಕಂನವಿ. ೧೧-೧೩೦) ; ಲಕ್ಷ್ಮಣನಸಿ ದಸಿಯಾಯ್ತು ಗಡ ! (ರಾಮಾಶ್ವ. ೧೬೦-೫) ; ಅಂಗಳದ ಸುತ್ತ ಚೂಪುಮೊನೆಯ ದಸಿಗಳ ಎತ್ತರದ ಬೇಲಿಯಿತ್ತು (ಪುನರು. ೫೧೧) ; ಮುಳ್ಳು ತೆಗೆದು ದಸಿ ಹೆಟ್ಟಿದ ಹಾಗೆ (ಗಾದೆ). ೨. ಮುಳ್ಳು ; ಕಂಟಕ : ಕಡುಮುದದಿಂ ಧೂಪದ ಕಾವಡಿಯಂ ಪೊತ್ತಿರದೆ ಚೆಚ್ಚರಂ ಬರೆ ದಸಿ ಮೆಲ್ಲಡಿಯಂ ಕಟ್ಟುಗಿಯಲ್ನಡೆಯುಡುಗಿ ಬಬಲ್ದಬಲ್ದನೋಹಿಲದೇವಂ (ಉದ್ಯಟ. ೧೦-೧೦೩) ; ನಿಲ್ಲದಾತನು ನಡೆಯೆ ಮೇಗಾಲಲ್ಲಿ ದಸಿ ಮೊನೆ

ದೋಱಲು (ಬಸಪು. ೪೬-೮೬) ; ಗಿರಿಯಿಂದ ಧೂಪವನು ತರುವ ನಡುಪಥ ದಲ್ಲಿ ಚರಣದೊಳಗೊಂದು ದಸಿ ಮುಱಿದು ಮಱುಮೊನೆದೋಱಿ ನರ ಬಿಗಿದು ನಡೆಗೆಡಲು (ಪ್ರೌಢರಾ. ೧೭-೩೦); ನೂಕುವೆ ಕಕ್ಕುದಱಿ ಕೇತಕೆಸಳ ದಸಿಯಲಿ (ನಿಜಸಾಂ. ೩-೯೦) ; ಕಾಲೊಳು ಮೂಡಿದ ದಸಿ ಮುಳ್ಳುಗಳು ತಾಕಿ ಸೀಳಿದ ಮೈಗಾಯದಿಂದ . . . ಜನಜಾಲವೈದಿತು ದೆಸೆದೆಸೆಗೆ (ಕಂನವಿ. ೧೧-೫೦). ೩. ಒಂದು ಬಗೆಯ ಬಾಣ : ಹಿಳಿಕು ಕವಲಂಬು ಬೋಳೆವಿದಿರೆಲೆ ಮಿಟ್ಟೆಯಾ ಮೊಳೆತೊಡಕು . . . ತಳುಕ ಚೌದಾರೆ ದಸಿ ಬಿಸುಗದಿರು ಸವಿವಾಯನೆಂಬ ನಾನಾಸರಳನು ಸೆಳೆದು ನೀಡಡಿಯಿಟ್ಟು (ಸೋಮಜ್ ೫-೨೬).೪. ಅಡಕೆ ಮತ್ತು ತೆಂಗಿನ ಗೊನೆ ಬಿಡುವ ಮುನ್ನ ಕಾಣಿಸಿಕೊಳ್ಳುವ ಚೂಪಾದ ಮೊಳಕೆ,–ಮೋತೆ: ಅಡಕೆತೋಟಕೆ ಗಿಲ್ಕೆ ಮಂಚದ ಬೀಗ ನಾನುಂಟು ಅಡಕೆ ದಸಿಯಾಗಿ ಎಲೆ ನಲ್ಲೆ ನೀನುಂಟು ಬಾಳೆ ಸುಳಿಯಾಗಿ(ಹಳ್ಳಿಯ. ೫೮);ತೆಂಗಿನ ಮರ ದಸಿ ನೂಕಿದೆ (ರೂಢಿ).೫. ಮರದ ಕಂಬ: ಒಂದು ದಸಿ ನೆಡಿಸಿ ಇಲ್ಲೆ ಇವನ್ನ ಶೂಲಕ್ಕೆ ಏರಿಸು (ಚಿಕರಾ. ೩೫೧).

[ದೇ. ॥ ತುಳು. ದಸಿ]

ದಸಿಕ (ನಾ). ಶೂಲಕ್ಕೇರಿಸುವವನು : ಪೊಲೆಯರುಂ ಡೊಂಬರಾಗಿಯುಂ ದಸಿಕರಾಗಿಯುಂ . . . ಇಂದ್ರಾದಿ ದೇವರ್ಕಳ್ಗೆ ಕಿಂಕರರಾಗಿ ಬೆಸಕೆಯ್ವುತ್ತು ಮನೋದುಃಖರೂಪ ಅಸಾತಾವೇದನೀಯಮನನುಭವಿಸುವರು (ಪಸಾರ. ೪೯೨-೪) ; ಇಕ ಪ್ರತ್ಯಯಕ್ಕೆ–ಕರಿಕಂ, ಅಸಿಕಂ, ದಸಿಕಂ, ಬಾರಿಕಂ (ಶಮದ. ೨೦೩ ಪ್ರಯೋ). [ದಸಿ + – ಇಕ]

ದಸಿಕು, ದಸಿಗೆ (ನಾ). "ದಸಿ; ತಿವಿಗೋಲು" (ಪಂಪನಿ) : ದಸಿಕೊಂದಕ್ಕುಂ ಬೇಡಂಗಿಸಲ್ಕೆ ದೊರೆ ದೃಗಮನೀ ಜಗಂಗಳನಳ್ಳಾಡಿಸುವ ಮದೀಯೋಗ್ರಾಸ್ತ್ರಂ ಪೆಸರ್ಗೊಳಲೇಂ ತನಗೆ ದೊರೆಯೆ ಖಳನಳವಱಿಯಂ (ಪಂಪಭಾ. ೮-೧೯). **ದಸಿಗೆ** : ಹೊಗೆ ಹಾಕಿ, ದಸಿಗೇಲಿ ಇರ್ದು, ತೆಗೆದ್ದು, ದಿಂಡೆ ಬರ್ಕ! (ಮಲೆಮ. ೭೬). [<ದಸಿ]

ದಸಿಕೋಲ್ 'ದಸಿಗೋಲ್' ನೋ.

ದಸಿಗಾಲ್ (ನಾ). (?): ನೆಕ್ಕ ಕದಂಪು ಕಂಪಿಪಧರಂ ಮಿಗೆ ಕೆಂಪ ಡರ್ದಕ್ಷಿ ಬಿಟ್ಟ ಬಾಯ್ . . . ಅರ್ವಿಪ ಪುರ್ವು ಕೆಂಗದಿರ್ ಮಿಕ್ಕು ಮರಲ್ದ ದಾಡೆ ದಸಿಗಾಲ್ ಮಸಿಮೆಯ್ ಬಿಱುಸಾದ ಕೆಯ್ ಮರುಳ್ವಕ್ಕದ ನಿಟ್ಟೊಡಲ್ ಮಸೆದ ಕತ್ತಿಗೆ ಕಣ್ಬೊಲನಾದುವೆತ್ತಲುಂ (ಪರ್ಧಪು. ೧೫-೩೮) [?]

ದಸಿಗೆ 'ದಸಿಕು' ನೋ.

ದಸಿಗೋಲ್, ದಸಿಕೋಲ್ (ನಾ). ಚೂಪಾದ ತುದಿಯುಳ್ಳ ತಿವಿಯುವ ಕೋಲು ; ಚುಚ್ಚುವ ಕೋಲು: ದಸಿಕೋಲ್, ದಸಿಗೋಲ್ (ಶಬ್ದಾನು. ೩೩೪ ಪ್ರಯೋ). **ದಸಿಕೋಲ್** : ಮೇಲಿನ ಪ್ರಯೋಗವನ್ನು ನೋಡಿ.

[ದಸಿ + ಕೋಲ್$_1$]

ದಸಿಮೆ 'ದಶವಿ' ನೋ.

ದಸಿವೆಟ್ಟು (ಕ್ರಿ). ಗೂಟವನ್ನು ಬಡಿ : ಮುಳ್ಳಂ ತೆಗೆದು ದಸಿವೆಟ್ಟಿದಂ [ಪಾಠಾಂ. ದಸಿಯ ಬಿಟ್ಟಂ]ತಾಯ್ತು (ಕಲ್ಲರ. ೨೩೧-೧೨).

[ದಸಿ + ಬೆಟ್ಟು$_1$]

ದಸುರಿ 'ದಸರಿ' ನೋ.

ದಸೆ, ಜಸೆ, ದೆಶೆ$_1$, ದೆಸೆ$_1$ (ನಾ). ೧. ಗತಿ; ಅವಸ್ಥೆ ; ಸ್ಥಿತಿ : ರಾಮಲಕ್ಷ್ಮಣರ ಮಹಾಪ್ರಭಾವಮನದಂ ನೆಱೆ ಬಣ್ಣಿಸೆ ಕೇಳ್ದು ಖೇಚರಾಗ್ರಣಿ ಕಿಱಿದಾಯ್ತು ನಮ್ಮ ದಸೆ ಕೇವಲರಲ್ಲರವರ್ ದಿಟಕ್ಕೆ ಕಾರಣಪುರುಷರ್ ತ್ರಿಖಂಡ ಭರತೋರ್ವಿಗೆ ವಲ್ಲಭರಾಗದಿರ್ಪರೇ (ಪಂರಾಮಾ. ೬-೮) ; ಗಿರಿಶ–ಗಿರಿಸ, ದಶಾ–ದಸೆ (ಶಮದ. ೨೫೩ ಪ್ರಯೋ). ೨. ಅದೃಷ್ಟ; ಸೌಭಾಗ್ಯ; ಸಂದೈವ : ದಸೆ ಬರುವಾಗ್ಯೆ ಹಸೇ ಮೇಲೆ ರತ್ನ ಬಿತ್ತು (ಗಾದೆ). ಜಸೆ : ೧. ಜವ್ವನದ ಜಸೆ[ಪಾಠಾಂ. ದೆಸೆ]ಗದೇಂ ಬಂದನೋ ಪಾರಿಜಾತಾಂಕುರ ಮಿಂದ್ರೋದ್ಯಾನದೊಳ್ ಬಳ್ವಳಮೆ ಬಳೆದು ಕೈವಂದವೋಲ್ ತೀರ್ಥನಾಥಂ (ಅನಂಪು. ೬-೨೦). **ದೆಶೆ$_1$** : ೧. ಹಿಂದೆ ಬಡತನದಲ್ಲಿದ್ದರೂ, ಕೆಲಸವಾದ ಈಗೆರಡು ವರ್ಷಗಳಿಂದ ಗುಂಡಪ್ಪನ ಸಂಸಾರ ಸ್ವಲ್ಪ ಅನುಕೂಲ ದೆಶೆಗೆ ಬಂದಿತ್ತು (ಕೊನೆಭೇ. ೧೬). ೨. ಅವನಿಗೀಗ ಒಳ್ಳೆಯ ದೆಶೆ ; ಮುಟ್ಟಿದ್ದೆಲ್ಲ ಚಿನ್ನವಾಗುತ್ತಿದೆ (ರೂಢಿ). **ದೆಸೆ$_1$** : ೧. ಅನುವದಿಸಿದಪುದು ನುಡಿ ನುಡಿದ ನಿತುಮನೆನೆ ತೊದಳ ತೊದಳ ದೆಸೆಯಿಲ್ಲೆನೆ ಮಾತಿನ ಪಸುಗೆ ಪಸುಗೆವಡೆ ದತ್ತೆನೆ ನುಡಿದಂ ಮಧುರಮೃದುಗಭೀರಧ್ವನಿಯಿಂ (ಆದಿಪು. ೨-೦೦) ; ಏವದ ಮುಳಿಸಿನ ಕಾರಣಮಾವುದೊ ನೀಂ ನನ್ನ ತಾಯ ತಂದೆಯ ದೆಸೆಯಂ ಭಾವಿಸದೆ ಕರ್ಣ ನುಡಿವಂತಾವುದು ಸಮಕಟ್ಟುನಿನಗಮರಿಕೇಸರಿಗಂ (ಪಂಪಭಾ. ೨-೮೨) ; ಉಸಿರೆ ಗಡ ಸೀಮೆ ಬಾಟ್ಕಿಯ ದೆಸೆಯೊಳ್ ಗಾಳಿಯೆ ಗಡದುವುಮದಱಿಸಕಂ ಭಾವಿಸುವೊಡೆ ಚಲತೆ ಗಡಿನ್ನೇವೆಸರ್ಗೊಂಡಪುದಣ್ಣ ನರರ ಚಿರಜೀವಿತೆಯಂ (ಚಂದ್ರಪು. ೨-೩೨). ೨. ಮಾರಮಥನನ ನೆರೆಯ ಹೊಕ್ಕರು ಬಿಡುವೆನೇ ನಿನ್ನ ಚೋರವಿದ್ಯದಲೋಡು ನೋಡುವೆ ತೀರಿತೆಲವೋ ನಿನ್ನ ದೆಸೆಯೆಂದಾರಿ ಬಾಣವ ಸೆಳೆದೊಡಸುರನ ಮರಣ ಸೂಚಿಸಿತು (ಕೌಶಿರಾ. ೩೬.೭೧).

ದೆಸೆ ಕೂಡು = ಅದೃಷ್ಟವುಂಟಾಗು : ದೆಸೆ ಕೂಡಿ ಬಂದರೆ ಹಿಡಿದ ಕೆಲಸವೆಲ್ಲಾ ಜಯವಾಗುತ್ತದೆ (ರೂಢಿ). [<ಪ್ರಾ. ದಸಾ./ಸಂ. ದಶಾ]

ದಸ್ಕತು 'ದಸಕತ್ತು' ನೋ.

ದಸ್ಕತುಮೊಹರ 'ದಸಕತ್ತುಮೊಹರು' ನೋ.

ದಸ್ಕತ್ತು 'ದಸಕತ್ತು' ನೋ.

ದಸ್ತಐವಜ 'ದಸ್ತಾವೇಜು' ನೋ.

ದಸ್ತಕತ್ತು 'ದಸಕತ್ತು' ನೋ.

ದಸ್ತಕು (ನಾ). ೧. ರಹದಾರಿಯ ಪರವಾನಿಗೆ : (ಸ್ಯಾಂಡರ್). ೨. ಹಾಜರಿ ಆಜ್ಞೆ : ಕರೆ ಆಜ್ಞೆ : (ಸ್ಯಾಂಡರ್).

[←ಪಾರ. ಹಿಂ. ಮರಾ. ದಸ್ತಕ್]

ದಸ್ತಗಿರಿ (ನಾ). ಸೆರೆ ಹಿಡಿಯುವುದು; ಬಂಧನ; ಕೈದು: ನ್ಯಾಯಾಧೀಶರು ಕೋಪಗೊಂಡು ಬಸಪ್ಪನ ದಸ್ತಗಿರಿಗಾಗಿ ವಾರಂಟನ್ನು ಹೊರಡಿಸಿದರು (ಪಂಜಪಂ. ೨೦೪) ; ಅವನು ದಸ್ತಗಿರಿಯಾದಾಗ ಅವನ ಬಳಿ . . . ಒಟ್ಟು ಸಾವಿರದೆಂಟುನೂರು ರೂಪಾಯಿಗಳಿದ್ದುವು (ವೀರಯೋ. ೨೦) ; ನ್ಯಾಯಾಧೀಶರು ಯಾವ ತಪ್ಪು ಮಾಡಿದರೂ ಅವರನ್ನು ವೈಸರಾಯ್ ಅಪ್ಪಣೆ ಇಲ್ಲದೆ ದಸ್ತಗಿರಿ ಮಾಡಕೂಡದು (ಪ್ರವಾಇ. II, ೪೮೩) ; ದಸ್ತಗಿರಿಯಾಗಲು ಮನಸ್ಸನ್ನು ಸ್ಥಿರಮಾಡಿಕೊಂಡಿರುವಿಯಾ ? (ದೇವೀಪೌ. ೧೩೦).

[←ಪಾರ. ದಸ್ತಗಿರೀ ; ಮರಾ. ದಸ್ತಗೀರ್]

ದಸ್ತರ್‌ಹಾನು (ನಾ). (ಮುಸಲ್ಮಾನರು) ಊಟದ ತಟ್ಟೆಗಳನ್ನಿಡಲು ಹಾಸುವ ಬಟ್ಟೆ : 'ಹತ್ತುಜನ ಒಂದು ದಸ್ತರ್‌ಹಾನಿನ ಮೇಲೆ (ಊಟದ ಚಾಪೆ) ಕುಳಿತು ಊಟ ಮಾಡುತ್ತಾರೆ (ಭಾರದ. ೪೧೫).

[←ಹಿಂ. ದಸ್ತರ್‌ಖಾನ್; ಪಾರ. ದಸ್ತರ್‌ಖ್ವಾನ್]

ದಸ್ತಾವೇಜು, ದಸ್ತಐವಜ, ದಸ್ತೇವಾಜು, ದಸ್ತೈವಜು, ದಸ್ತೈವೇಜು (ನಾ). ೧. ಪ್ರಮಾಣಭೂತವಾದ ಕಾಗದ ಪತ್ರ ; ಒಪ್ಪಿ ಸಹಿ ಮಾಡಿರುವ ಪತ್ರ ; ದಾಖಲೆ ; ಕರಾರುಪತ್ರ : ಪ್ರಮುಖ ಭಕ್ತಾದಿಗಳನ್ನು ಕರೆಯಿಸಿ ವಿಲ್ ದಸ್ತಾವೇಜು ಬರೆಯಿಸಿ ರಿಜಿಸ್ಟರ್ ಮಾಡಿಸಿದರು (ಗುರುದ. ೧೩) ; ಕೋರ್ಟಿನಿಂದ ಸಾದರಾಗುವ ಸಮನುಗಳ, ಡಿಕ್ರಿಗಳ, ದಸ್ತಾವೇಜುಗಳ ನಕಲುಗಳ ಮೇಲೆ ಒತ್ತುವುದಕ್ಕಾಗಿ ಉಪಯೋಗಿಸಬೇಕು (ಗ್ರಾಮಾಕ. ೧೯) ; ಹೊಲ ಮಾರೋಕೆ ನನಗೆ ಅಧಿಕಾರ ಕೊಟ್ಟಿದೀಂತ ಒಂದು ದಸ್ತಾವೇಜಾದರೂ ಆಗಬೇಕು (ಬನಶಂ. ೭೫) ; ಐದುಸಾವಿರಕ್ಕೆ

ಒಳ್ಳೆಯ ಆಸ್ತಿಯೊಂದು ಕೈಸೇರಿದ ಹಾಗೆಯೇ ಎಂದು ಅಡವು ದಸ್ತಾವೇಜು ಮಾಡಿಸಿಕೊಂಡ ವಾಸುದೇವಯ್ಯ ಸಂತೋಷಪಟ್ಟಿದ್ದರು (ತ್ಯಾಗಮ. ೬೦). ೨. ರಸೀದಿ ; ಸಲ್ಲಿಕೆಚೀಟಿ ; ಪಾವತಿ : (ಕಿ). **ದಸ್ತಐವಜ :** ೧. ಅಧಿಕಾರಿಗಳು ಸಹಿ ಮಾಡಿದ ಚೆಕ್ಕುಗಳನ್ನು ಇತರ ದಸ್ತಐವಜಗಳನ್ನು ಮಾನ್ಯ ಮಾಡಬೇಕಾದ ಬಗ್ಗೆ ಅಧಿಕಾರವನ್ನು ಕೊಟ್ಟಿದೆ (ಬ್ಯಾಂಕಳ್ಕೆ. ೫೨). **ದಸ್ತೇವಾಜು :** ೧. ಬ್ಯಾಂಕುಗಳ ಪಾಸ್‌ಬುಕ್ಕು ಎಲ್ಲ ದಸ್ತೇವಾಜು ಟ್ರಂಕಿನಲ್ಲಿ ಹಾಕು (ಅರರೋ. ೫೦). **ದಸ್ತೈವಜು:** ೧. ನಿಮ್ಮ ಖಾವಂದರು ಈ ಮೇರೆ ದಸ್ತೈವಜು ಬರೆದು ಕಳುಹಿಹಿದಂತೆ (ರಾಜೇಂದ್ರ. ೬೫) ; ಪಂಚಾಯತರು . . . ವಿಚಾರಣೆಮಾಡಿ ದಸ್ತೈವಜು ಮುಂತಾದ ದಾಖಲೆಯೇನಾದರೂ ಇದ್ದರೆ ತರಿಸಿ ನೋಡಿ ಶೀರ್ಮಾನ ಹೇಳುತ್ತಿದ್ದರು (ಮಹಾವಂ. II, ೨೫) ; ಎಲ್ಲರ ವಯಸ್ಸಿನ ದಸ್ತೈವಜು ನನ್ನಲ್ಲಿಲ್ಲ (ದೇವದಾ. ೩೩). **ದಸ್ತೈವೇಜು :** ೧. ಸ್ರಿಷ್ಟನೆ ದಸ್ತೈವೇಜೆಂದು ತಿಳಿದು ನಿಜವಾದ ದಸ್ತೈವೇಜೆಂದು ಉಪಯೋಗಿಸಿದರೂ . . . ಶಿಕ್ಷೆಗೆ ಗುರಿಯಾಗುವರು (ಗ್ರಾಮಾಕ. ೬೫).

[←ಪಾರ. ಹಿಂ. ದಸ್ತಾವೇಜ್ ; ಮರಾ. ದಸ್ತಾಯವಜ್, ದಸ್ತಾವೇಜ್, ದಸ್ತೈವಜ್]

ದಸ್ತು, ದಸ್ತೆ, (ನಾ). ೧. ಇಸ್ಪೀಟು ಆಟದಲ್ಲಿ ಆಟಗಾರರಿಗೆ ಹಂಚಿದ ನಾಲ್ಕು ಎಲೆಗಳು,–ಒಂದು ಕೈ : (ಕಿ). ೨. ಇಪ್ಪತ್ತುನಾಲ್ಕು, ಬರೆಯುವ ಹಾಳೆಗಳ ಕಟ್ಟು : ೨೪ ಕಾಗದಗಳು ಅಂದರೆ ೧ ದಸ್ತು ಅಥವಾ ಕೊಯರ (ಮುಂಬಪ್ಪಾ. ೧೩೯). **ದಸ್ತೆ :** ೩. ಸೈನ್ಯದ ತುಕಡಿ ; ದಳ : ಮಹಾಮರಜಾಖಾನನ ದಸ್ತೆಯವರು ನೂರುಲ್ ಆಪರಖಾನನ ದಸ್ತೆಯವರು (ರಾಜೇಂದ್ರ. ೨೪೫) ; ಸ್ವಲ್ಪ ದೂರದಲ್ಲಿ ಕುದುರೆಗಳ ಖುರಪುಟ ಧ್ವನಿಯು ಕೇಳಿಬಂತು. ಅದು ಆಂಗ್ಲೇಯರ ದಸ್ತೆಯದಾಗಿದ್ದಿತು (ಝಾರಾಣಿ. ೪೭೫). [←ಪಾರ. ದಸ್ತಾ, ದಸ್ತ್ ; ಹಿಂ. ಮರಾ. ದಸ್ತಾ]

ದಸ್ತೂರ 'ದಸ್ತೂರಿ' ನೋ.

ದಸ್ತೂರಿ, ದಸ್ತೂರ, ದಸ್ತೂರು, ದಸ್ಥೂರು (ನಾ). ೧. ಪದ್ಧತಿ ; ವಾಡಿಕೆ; ರೀತಿ; ಕ್ರಮ: ಜಮಾಮರ್ದಿಯಿಂದಲೂ ನಮ್ಮ ಸತ್ಯದಿಂದಲೂ ವಾಜಬಿ ವಿಚಾರದಿಂದಲೂ ನಮ್ಮ ಸರಕಾರದ ದಸ್ತೂರಿಯಿಂದ ಆ ಶೀಮೆಯ ಕದೀಂ ಖಾವಂದರ ಹವಾಲೆ ಮಾಡಿ ಇದ್ದೇವೆ (ರಾಜೇಂದ್ರ. ೧೦೪). ೨. (ಸೇವಕರು ತಮ್ಮ ಯಜಮಾನರಿಗಾಗಿ ವಸ್ತುಗಳನ್ನು ಕೊಂಡು ಕೊಂಡಾಗ ವ್ಯಾಪಾರಿಗಳು) ವಾಡಿಕೆಯಾಗಿ ಕೊಡುವ ಮಾಮೂಲು. (ಮೈಗೆಜಿ. IV, ೭೭೭). **ದಸ್ತೂರ :** ೩. ಬರವಣಿಗೆ ; ಕೈಬರಹ : ನಮ್ಮ ಮಾಸ್ತರ ಬೆಂಕಣ್ಣನ ಕಡಿಂದ ಎರಡು ಅರ್ಜಿ ಬರಿಸಿ ಕಳಸಶೀನಿ, ಒಟ್ಟಿಗೆಲ್ಲಾ ದಸ್ತೂರ ಅವರ ಬರೀತಾರ (ಗ್ರಾಮಾಯ. ೩೩೬). **ದಸ್ತೂರು :** (ಕಿ). **ದಸ್ಥೂರು :** ೧. ಆಚಾರ ವಿಚಾರ ವಿಚಾರಣೆ ಮಾಡುವಲ್ಲು ಯವರ್ರುವಡವೆ ತೆಗೆದುಕೊಂಡಿದ್ದವರ ವಿಚಾರಣೆ ಮಾಡಿ ಬರಮಾಡಿಕೊಳ್ಳುವಲ್ಲು ನೀಉ ಅಡಿಸಡಿಗಳ ಮಾಡದಂತೆ ಸಾಬಕ್ಕೂ ದಸ್ಥೂರ್ರು ಪ್ರಕಾರಕ್ಕೆ ಸರ[ಪ]ರಾಸು ನಡ್ಸಿಕೊಂಡು ಬರ್ರುವದು (ಮೈಅರಿ. ೦೯೩೦, ೪೩-೨೭ ; 1812).

[←ಪಾರ. ಹಿಂ. ದಸ್ತೂರೀ, ದಸ್ತೂರ್; ಮರಾ. ದಸ್ತೂರ್, ದಸ್ತುರೀ]

ದಸ್ತೆ 'ದಸ್ತು' ನೋ.

ದಸ್ತೇವಾಜು 'ದಸ್ತಾವೇಜು' ನೋ.

ದಸ್ತೈವಜು 'ದಸ್ತಾವೇಜು' ನೋ.

ದಸ್ತೈವೇಜು 'ದಸ್ತಾವೇಜು' ನೋ.

ದಸ್ಥೂರು 'ದಸ್ತೂರಿ' ನೋ.

ದಸ್ಯು (ನಾ). ೧. ರಾಕ್ಷಸರಲ್ಲಿ ಒಂದು ವರ್ಗ : ಉತ್ತರಾಶಯಕಿಹುದು ದೇವರು ಚಿತ್ತವಿಸು ಧ್ರುಮಕೂಲ್ಯವೆನಿಪ್ಪ ಉತ್ತಮದ ಸುಕ್ಷೇತ್ರವಲ್ಲಿಹು ದಖಿಳ ದಸ್ಯುಗಳ (ಕೌಶಿರಾ. ೦೫-೬೭). ೨. ಅನಾರ್ಯ ಜನಾಂಗದವನು; ಅನಾರ್ಯ ; ಮ್ಲೇಚ್ಛ : ಮುಂದೆ ದಸ್ಯುಗಳೇಳುವನು ಕ್ಷಣದಿಂದ ಕಾಶ್ಮೀರಕರ ಸಾಧಿಸಿ ಬಂದು ದಶಮಂಡಲದ ಲೋಹಿತರನು ವಿಭಾಡಿಸಿದ (ಕುಪ್ಯಾಸ. ೩-೨೬) ; ಅಲ್ಲಿದ್ದ ಜನರೆಲ್ಲರನ್ನೂ ಒಟ್ಟಿಗೆ ದಸ್ಯುಗಳೆಂಬುದಾಗಿ ಆರ್ಯರು ಕರೆದರು (ಭಾಇಪ್ರ. ೨೪). ೩. ಕಳ್ಳ; ಚೋರ: ಐಕಾಗಾರಿಕಃ, ತಸ್ಕರಃ, ದಸ್ಯುಃ... ಪಾರಿಪಂಥಿಕಃ, ಸ್ತೇನಃ–ಈ ೧೦ ಕಳ್ಳಂ" (ಹಲಾಯು. ೫೬-೧೮೩); ಮುನಿಯಿಂದೆ ಲಕ್ಷ್ಮಣ ರಾಮರರಿಯುತಿರೆ ಮುಂದಿರ್ದ ಮಾರ್ಗದ ಮಹಾರಣ್ಯಗಹನಮಂ . . . ದಸ್ಯು ಕೈರಾತ ರುಧಿರಾಶನಪ್ರಿಯತೆಯಂ (ಶ್ರೀರಾಮಾ. ೦೭೮-೭೦) ; ಆಳುಗಳು ಆ ವನದಲ್ಲಿದ್ದ ದಸ್ಯುಗಳ ವಶಕ್ಕೆ ಈ ಬ್ರಾಹ್ಮಣನನ್ನು ಒಪ್ಪಿಸಲಾಗಿ ಆ ಕಳ್ಳರು . . . ಇವನನ್ನು ನಾವು ಮುಟ್ಟುವವರಲ್ಲ ಎಂದು ಹೇಳಿದರು (ನೀತಿಚಿ. XII, ೧೫). ೪. ಹಗೆ; ವೈರಿ; ಶತ್ರು: "ವಿರೋಧಿ ದಸ್ಯು ವಿಪಕ್ಷಂ . . . ವಿದ್ವಿಷಂ ವಿದ್ವಿಷ್ಟಂ" (ವಸ್ತುಕೋ. ೯೯-೧೦). ೫. ಭ್ರಷ್ಟ; ನೀಚ ; ದುಷ್ಟ. [ಸಂ.]

ದಸ್ಯುದಾರಿ (ನಾ). ನೇರವಲ್ಲದ ದಾರಿ,–ಮಾರ್ಗ : ಅದೇನೋ ಅಪ್ಪಟ ದಸ್ಯುದಾರಿಯೆ ಆಗಿತ್ತು (ಮಲಿಮ. ೭೭೨). [ದಸ್ಯು + ದಾರಿ]

ದಸ್ಯುಶಿಶು (ನಾ). ಅನಾರ್ಯರ ಮಗಂ : ನಡೆದು ನೋಡಲ್ಕೆ ಕಾಣಿಸಿತೊಂದು ದಸ್ಯುಶಿಶು (ಶ್ರೀರಾಮಾ. ೨೨-೫೭೮). [ದಸ್ಯು + ಶಿಶು]

ದಸ್ರ (ನಾ). ೧. ಅಶ್ವಿನೀ ದೇವತೆಗಳಲ್ಲಿ ಒಬ್ಬ ; ದೇವತೆಗಳ ವೈದ್ಯ : "ನಾಸತ್ಯೌ. ಅಶ್ವಿನೌ, ದಸ್ರೌ, ದೇವಚಿಕಿತ್ಸಕೌ – ಈ ೪ ದೇವರ ವೈದ್ಯರ್" (ಹಲಾಯು. ೧೫-೮೪); "ದಸ್ರರಶ್ವಿನಿಯರಾ ದಿವಿವೈದ್ಯರು"(ಮಂಗರಾ. ೭-೨೩). ೨. ಅಶ್ವಿನೀ ನಕ್ಷತ್ರಗಳು ; ೫ ಅಶ್ವಿನೀ ದೇವತೆಗಳು ಅವಳಿ ಜವಳಿ ದೇವತೆಗಳು. ಇವರಲ್ಲಿ ಒಬ್ಬನಿಗೆ 'ದಸ್ರ' ಎಂದೂ ಮತ್ತೊಬ್ಬನಿಗೆ 'ನಾಸತ್ಯ' ನೆಂದೂ ಬೇರೆಬೇರೆ ಹೆಸರಿದೆ. ಆದರೂ 'ಅಶ್ವಿನೀ' ಎಂಬುದನ್ನು ಇಬ್ಬರಿಗೂ ಅನ್ವಯಿಸುವಂತೆ, 'ದಸ್ರ' ಶಬ್ದವನ್ನು ಇಬ್ಬರಿಗೂ ಅನ್ವಯಿಸಿ ಹೇಳುತ್ತಾರೆ.

ದಸ್ರಾತ್ಮಜರ್ = ಅಶ್ವಿನೀ ದೇವತೆಗಳ ಮಕ್ಕಳು ; ನಕುಲ–ಸಹದೇವರು : ಸೊಕಮಿರ್ಕಕ್ಕಟ ದರ್ಭಪಾಣಿ ಯಮಜಂ ದರ್ವೀಕರಂ ವಾಯುಪುತ್ರಕನುಂ ಜರ್ಜರಹಸ್ತನಿಂದ್ರತನಯಂ ದಸ್ರಾತ್ಮಜರ್ ದಂಡಮುಷ್ಟಿಕರರ್ ಶಸ್ತ್ರವಿಡಂಬಮೇವುದವರ್ಗಂ (ಗದಾಯು. ೩-೩೪). [ಸಂ.]

ದಸ್ಸಾಲಾ (ನಾ). ಹತ್ತು ವರ್ಷಗಳ ಅವಧಿ ; ದಶಕ : ಪೂರ್ಣಯ್ಯನವರ ಕಾರ್ಕರ್ದಿಯಲ್ಲಿ ದಸ್ಸಾಲಾ ಸರಾಸರಿ ವರ್ಷವೊಂದಕ್ಕೆ ೮೬೫ ಲಕ್ಷ ರೂಪಾಯಿ ಎಲ್ಲಾ ಬಾಬುಗಳಿಂದಲೂ ಒಟ್ಟು ಹುಟ್ಟುವಳಿಯಾದಂತೆ ತಿಳಿದು ಬಂದಿದೆ (ಮಹಾವಂ. II, ೩೨) ; ಖಾವಂದರವರ ದೌಲತ್ತಿನ ಕಾಲ ಮೊದಲನೆಯ ದಸ್ಸಾಲಾದಲ್ಲಿ ಜಮಾನಿನ ವರಮಾನ ವರ್ಷಕ್ಕೆ ಸರಾಸರಿ ೬೫೫ ಲಕ್ಷ [←ಪಾರ. ದಹಸಾಲ್]

ದಸ್ಸಿವ (ನಾ). ಹತ್ತನೆಯ ಒಂದು ಅಂಶ,–ಭಾಗ (?) : ಬಿಜಯಿತ ಗಾವುಣ್ಡನ ಮಗಂ ಅಮ್ಮಡಿಗಾವುಣ್ಡಂ ನೊಳಂಬೆಯ ಗ್ವಾರ್ಮ್ಮಣ್ಡನ ಭಾಗದ ದಸ್ಸಿವ ಭಾಗಂಗೊಣ್ಡು ಕೆಱೆಯ ಕಟ್ಟಿಸಿದಂ (ಮೈಅರಿ. ೦೯೩೦, ೪೩-೭ ;994). 'ದಸಕ' ಪರಾ. [?]

ದಹ$_1$ 'ದಸ$_2$' ನೋ.

ದಹ$_2$ 'ದಗಾ' ನೋ.

ದಹಕಿ (ನಾ). (?) : ರಾಣಿ ಸಾಹೇಬರು ಕೊಟ್ಟ ಕವಲಿನ ಮೇರೆಗೆ ನಮಗೆ ಅವರಿಗೆ ಬರುವದಲ್ಲಿ ದಹಕಿ ಬರುವಂತೆಯೂ . . . ದೈವಕ್ಕೆ ಪ್ರತಿಯಾಗಿ ದಯೆ ಮಾಡಿಸಬೇಕು (ಜಾಮವಂ. ೨೨೦). [?]

ದಹಕೋಟಿ, ದಾಕೋಟಿ (ನಾ). ಹತ್ತುಕೋಟಿ ; ದಶಕೋಟಿ : ದಶ ಸಹಸ್ರಂ ಲಕ್ಷಮಾ ದಹಲಕ್ಷಕೋಟಿ ದಹಕೋಟಿ ಶತಕೋಟಿಯ

ರ್ಬುದ ನ್ಯರ್ಬುದಂ . . . ಇಂತು ಚವ್ವೀಸ ತಾಣವರ ಸಂಖ್ಯೆಯಕ್ಕುಂ (ಮಂಗರಾ. ೧೦೩-೧೨) ; ಲಕ್ಷ ದಹಲಕ್ಷಾ ಕೋಟಿ ದಹಕೋಟಿ ಶತಕೋಟಿ ಅರ್ಬುದಾ . . . ಇವು ೩೨ ವುಘಡಣೆ ಹೆಸರುಗಳೂ (ಭಾಸ್ಕರ. ೧೦-೬). **ದಾಕೋಟಿ :** ಉಗ್ಗಡಣೆ–ಎಕ್ಕಂ, ದಾಹಂ, ಶತಂ, ಸಾವಿರ, ದಾಸಾವಿರ, ಲಕ್ಷ, ದಾಲಕ್ಷ, ಕೋಟಿ, ದಾಕೋಟಿ, ಶತಕೋಟಿ . . . ಪರಿಮಿತ, ಮಹಾಪರಿಮಿತ. ಈ ೪೦ ಸ್ಥಾನದ ಉಗ್ಗಡಣೆ (ವೃವಹಾ. ೮-೨೩).

[ದಹ$_1$ (<ದಸ$_2$) + ಕೋಟಿ$_1$]

ದಹನ (ನಾ). ೧. ಸುಡುವಿಕೆ ; ಉರಿಸುವಿಕೆ : "ಭರ್ಜನಂ ದಹನಮೆನಲು ಸುಡುಹಂ" (ಮಂಗರಾ. ೧೪-೯) ; ಸುವರ್ಣಪಾಷಾಣಮೊಂತು ಪಿಂಡೀಬದ್ಧ ದಹನ ತಾಪನ ತಾಡನ ಕ್ರಿಯೆಗಳಿಂ ಶುದ್ಧಲೋಹಮಕ್ಕುಮಂತೆ ಭವ್ಯನುಂ ಮನುಷ್ಯಭವಕ್ಕೆ ವಂದಲ್ಲಿ ಯುಕ್ತಾಚಾರರಪ್ಪಾಚಾರ್ಯರಂ ಪೊರ್ದಿ . . . ಶ್ರಾವಕನಪ್ಪುದು (ಜೀವಸಂ. ೪-೬). ೨. ದಿಕ್ಪಾಲಕರಲ್ಲಿ ಒಬ್ಬ ; ಅಗ್ನಿ: "ಕೃಶಾನುವಗ್ನಿ ದಹನಂ ಹವ್ಯಾಶನಂ ವಹ್ನಿ ವಾಯುಸಖಂ . . . ಧೂಮಧ್ವಜಂ ಪಾವಕಂ" (ವಸ್ತುಕೋ. ೭-೩೯); ಆ ನಾಗರ ಖಂಡಂಗಳುಮಂ ನಾಗರಖಂಡಮುಮನಳುರ್ದು ಕೊಂಡಂ ದಹನಂ (ಪಂಪಭಾ. ೫-೮೯) ; ಸುರಪತಿ ದಹನಂ ಧರ್ಮಂ ನಿರುತಿ . . . ಎಂಬ ದಿಕ್ಪಾಳರುಮಂ ದಶದಿಶೆಯೊಳಿರಿಸಿ (ಚಂದ್ರಪು. ೧೨-೧೧೩). ೩. ಶವವನ್ನು ಸುಡುವುದಂ ; ಅಂತ್ಯಸಂಸ್ಕಾರ: ಪೊರಮಟ್ಟಳರಮನೆಯಿನಾ ಮುದುಕಿ, ಮಸಣದೊಳ್ ದಹನದುಃಖದೊಳರ್ದರಾರುಂ ತಿಳಿಯದಂತೆ (ತ್ರಿಲೋಮಾ. ೧೨೧-೨೬೯). ೪. ಒಂದಂ ನರಕ : ದಹನ, ಅಸ್ರಹ್ರದ, ತೀಕ್ಷ್ಣಾಯಸ್ತಂಭ, ಶಕುನಿಪೊಯಹ್ರದ, ಮಹಾವರ್ತಕವೆಂಬೈದು ಮಂತ್ರಿನರಕಂಗಳೊಡಗೂಡಿ (ವಿವೇಕ. ೧೯೨). [ಸಂ.]

ದಹನಂಗೊಳಿಸು (ಕ್ರಿ). ಸುಡು ; ಉರಿಸು : ನಳನಾಸ್ತ್ರನಮಳತರಕಳೇವರವ . . . ದಹನಂಗೊಳಿಸಿ ಭಸ್ಮೀಕೃತಂ ಗೆಯ್ಯಲು (ನಳಮೋ. ೬-೩೧).

[ದಹನ + ಕೊಳ್$_1$ + – ಇಸು$_3$]

ದಹನಕರ್ಮ (ನಾ). ಸುಡುವ ಕೆಲಸ; ದಹಿಸುವ ಕಾರ್ಯ: ಅರಿಪುರತ್ರಯ ದಹನಕರ್ಮಸ್ಫುರಣವಸ್ಮತ್ಕಾರ್ಯವದು ಗೋಚರಿಸಿತಲ್ಲಿಂ ಮೇಲಣಂಚಿ ತಾನುಚಿತ ಕೃತ್ಯವನು ಕರುಣಿ ನೀನೆ ಬಲ್ಲೆ (ಕುಮಾಕ. ೭-೪೪).

[ದಹನ + ಕರ್ಮ]

ದಹನಕುಂಡ (ನಾ). ಅಗ್ನಿಕುಂಡ: "ದಹನಕುಂಡ: ದಾಹಕ" (Incinerator. ಇಂಗಿನಿ). [ದಹನ + ಕುಂಡ$_1$]

ದಹನಕ್ರಿಯೆ (ನಾ). (ಶವವನ್ನು) ಸುಡುವ ಕ್ರಿಯೆ : ಜಲದಾನಕ್ರಿಯೆಯಂ ದೃಗ್ಜಲದಿಂ ಕೋಪಾಗ್ನಿಯಿಂದ ದಹನಕ್ರಿಯೆಯಂ ಕೆಳೆಯಂಗೆ ಮಾಡಿದಯ್ (ಗದಾಯು. ೫-೩೨) ; ದಹನಕ್ರಿಯೆ ಮುಗಿಸಿಕೊಂಡು ಬರುವಾಗ ಹೊತ್ತು ಮೂರಿತ್ತು (ರೂಢಿ). [ದಹನ + ಕ್ರಿಯೆ]

ದಹನಜಿಹ್ವಾಂತಕ (ನಾ). ದಕ್ಷನ ಯಜ್ಞಾಗ್ನಿಜ್ವಾಲೆಯನ್ನು ನಾಶ ಮಾಡಿದವನಂ ಶಿವ ; (?) : ಗಹನ ದಹನದೊಳಹಿತರಿಕ್ಕಳು ದಹನ ವಾಱುತು ದಹಿಸಲಮ್ಮದೆ ದಹನಜಿಹ್ವಾಂತಕಶರಣನಂ ದಹನವೇಗುವುದು (ಬಸಪು. ೪೯-೪೦). [P ಇದು 'ದಹನಜಿಹ್ವಾಂಬಕ' ಎಂದಿರಬಹುದೇ ?]

ದಹನತಂತ್ರ (ನಾ). ತಾಂತ್ರಿಕ ಸಿದ್ಧಿಮಂತ್ರಗಳಲ್ಲಿ ಒಂದು ; ತಂತ್ರಶಾಸ್ತ್ರದಲ್ಲಿ ಸಿದ್ಧಿಯನ್ನುಂಟುಮಾಡುವ ಮಂತ್ರಗಳಲ್ಲಿ ಒಂದು : ಶಾಬರ ತಂತ್ರ, ಶಾಕಿನೀತಂತ್ರ, ಡಾಕಿನೀತಂತ್ರ ... ದಹನತಂತ್ರ, ದರ್ಶನತಂತ್ರ, ಖನನತಂತ್ರ, ಬಂಧನತಂತ್ರ, ವಚನತಂತ್ರಾದಿ ತಾಂತ್ರಿಕ ಸಿದ್ಧಿಮಂತ್ರಂಗಳಂ (ವಿವೇಕ. ೮೦). [ದಹನ + ತಂತ್ರ]

ದಹನಧರ್ಮ (ನಾ). ಸುಡುವ ಸ್ವಭಾದವನು ; ಅಗ್ನಿ. 'ದಹನ ಧರ್ಮಾಂಬಕ' ಪರಾ. [ದಹನ + ಧರ್ಮ]

ದಹನಧರ್ಮಾಂಬಕ (ನಾ). ಸುಡುವ ಕಣ್ಣು ; ಅಗ್ನಿನೇತ್ರ : ಘರ್ಮಾಂಶುಕಶತಕೋಟಿ ಸುಪ್ರಕಾಶನು ದಹನಧರ್ಮಾಂಬಕವ ತೆರೆವ ಸಮಯ ತವಸಿಗೆ ಹಿಂಸೆಕರ್ಮ ತರವಲ್ಲೆಂದು . . . ಬಿಡಿಸದಾದಿರಿಯಕ್ಕಟಾ (ನಳಮೋ. ೭-೨೬). [ದಹನಧರ್ಮ + ಅಂಬಕ]

ದಹನಲೋಚನ (ನಾ). ಅಗ್ನಿಯೇ ಕಣ್ಣಾಗಿ ಉಳ್ಳವನು ; ಶಿವ : ಅಹುದೆ ಇದಕೇನಾಯ್ತವಂಗಾ ದಹನಲೋಚನನಡ್ಡಮೋ ಆಗ್ರಹಿಸಿಕೊಂಡಡೆ ಕೊಳಲಿ ಎನ್ನಧಿಕಾರವಂ ರುದ್ರ (ಬಸಪು. ೪೦-೨೭).

[ದಹನ + ಲೋಚನ]

ದಹನಸಂಸ್ಕಾರ (ನಾ). ಸತ್ತವರನ್ನು ಬೆಂಕಿಯಿಂದ ಸುಡುವ ಕರ್ಮ.

[ದಹನ + ಸಂಸ್ಕಾರ]

ದಹನಾಕ್ರಾಂತ (ಗು). ೧. ಉರಿ ತಗುಲಿದ ; ಬೆಂಕಿಯಿಂದ ಆವರಿಸಿದ. (ನಾ). ೨. ಉರಿ ತಗುಲಿದುದು; ಬೆಂಕಿಯಿಂದ ಆವರಿಸಿದುದು : ಅಹಹಾ ! ನೋಡ ರಹಸ್ಯದೊಳ್ ಬಳಕೆವೆತ್ತೀ ಚಿತ್ತದಭ್ಯಾಸದಿಂ ದಹನಾಕ್ರಾಂತಮೆನಿಪ್ಪ ಮಂದಿರದವೋಲ್ ಕಾಣ್ಬೆಂ ಜನಾಕೀರ್ಣಮಂ (ಶಾಕುಂತ. ೬೪-೧೦೦). [ದಹನ + ಆಕ್ರಾಂತ]

ದಹನಾರ್ಚಿ (ನಾ). ಅಗ್ನಿಯ ಜ್ವಾಲೆ ; ಉರಿಯ ನಾಲಗೆ : ಆಕಾಶ ಸ್ಫಟಿಕಾಂತರಿತ ದಹನಾರ್ಚಿಯಂತಾನುಮಚ್ಛಸಲಿಲವ್ಯವಹಿತಪದ್ಮರಾಗ ಮಣಿಯಂತಾನುಂ ತನ್ನ ಬೆಳಗೆ ಬೆಳಗಾಗೆ ಶುದ್ಧ ಗರ್ಭಾವಾಸದೊಳ್ ಜಿನಾರ್ಭಕಂ ಬಳೆಯೆ (ಶಾಂತಿಪು. ೯-೨೦); ಪತಿಯೊಡನೆನ್ನ ತಂಗೆ ದಹನಾರ್ಚಿಯೊಳೊಂದೆ ಮುಹೂರ್ತದೊಳ್ ದಿವೋದಿತತನುವಾದಳಾಂ ಪಿರಿಯೆನಪ್ಪುದಱಂ ಪಿರಿದಪ್ಪ ದಾರುಣವ್ರತ ದಹನಾರ್ಚಿಯಿಂದನುದಿನಂ ತನುವಂ ತನುಮಾಡುತಿರ್ಪೆಂ (ಅಜಿಪು. ೧-೪೯). [ದಹನ + ಅರ್ಚಿ]

ದಹನಾಶೆ (ನಾ). ಆಗ್ನೇಯಂ ದಿಕ್ಕು : ಅಹಿಮಕರಂ ಪೊಡೆಯಿಸುವಂ ದಹನಾಶೆಗೆ ರಥಮನರುಣನಿಂ ದಿನಮುಖದೊಳ್ (ಲೀಲಾವ. ೯-೭).

[ಸಂ. ದಹನಾಶಾ]

ದಹನೋಪಲ, ದಹನೋಪಳ (ನಾ). ಸೂರ್ಯಕಾಂತಶಿಲೆ ; ಸ್ಫಟಿಕ ಶಿಲೆ. ದಹನೋಪಳ : "ಸ್ಫಟಿಕಃ, ಸೂರ್ಯಕಾಂತಃ,...ದಹನೋಪಳ ಈ ೪ ಸ್ಫಟಿಕಂ" (ಹಲಾಯು. ೨೯-೨೨). [ದಹನ + ಉಪಲ]

ದಹನೋಪಳ 'ದಹನೋಪಲ' ನೋ.

ದಹರ (ಗು). ೧. ಸೂಕ್ಷ್ಮವಾದ. 'ದಹರಾಕಾಶ' ಪರಾ. (ನಾ). ೨. [ಯೋಗ] ಹೃದಯದಲ್ಲಿರುವ ಸೂಕ್ಷ್ಮವಾದ ಆಕಾಶ ; ಹೃದಯಾಕಾಶ : ಕೇಳು ದಹರದ ಕಮಲದಿಳೆಯಾದ್ಯಪ್ಪಮಾತೃಕೆಯಾ ಶೀಲವಿಡಿದು ಹಕಾರ ಮೊದಲಾ ಮೇಲಿಹ ಸಕಾರಾಂತರೂಪಂದಾಳಿ ತೋರೂದಪ್ಪದಳಗಳ ಕೀಲು ತಿಳಿಯೆಂದ (ಗಗತಾ. ೨೦-೬೬). [ಸಂ.]

ದಹರಾಕಾಶ (ನಾ). ಸೂಕ್ಷ್ಮವಾದ ಹೃದಯಾಕಾಶ : ಹೃದಯದಂಗುಷ್ಠಮಾತ್ರದ ದಹರಾಕಾಶ ಪದಮಧ್ಯದೆಡೆಯಲ್ಲಿ ಚಲಿಸದೆ (ಪರಬೋ. ೫-೦೦-೩) ; ಅರಿಯು ದಹರಾಕಾಶಲಕ್ಷಣ ನೆರಳ ತೈಲದಿ ನೋಡಿ ಮೇಲಿನಲಿರುವ ಮತ್ಸ್ಯವನೆಚ್ಚನರ್ಜುನ ಅದರ ತೆರನಂತೆ ತಿರುಹಿ ದೃಷ್ಟಿಯು ತನ್ನಲೇ ತಾ ನಿಲಿಸಿ ಅರ್ಥಾಕ್ಷಿಂದ ತಾನೆಯು ಗುರಿಯು ಲಕ್ಷಿಸಿಯಿಹುದೆ ದಹರಾಕಾಶ ಲಕ್ಷ್ಯಿಂದ (ಜ್ಞಾನಸಿಂ. ೨೦-೩); ದಹರಾಕಾಶದಲ್ಲಿ ಬೆಳಗುತ್ತಿರುವ ಜ್ಯೋತಿರ್ಲಿಂಗದ ಸಾಕ್ಷಾತ್ಕಾರವಾಗುವುದು (ಭಾರದ. ೨೩೧).

[ದಹರ + ಆಕಾಶ]

ದಹರೋಪಾಸನೆ (ನಾ). ದಹರಾಕಾಶದಲ್ಲಿರುವ ಸೂಕ್ಷ್ಮ ವಸ್ತುವಿನ ಅಂದರೆ ಪರಮಾತ್ಮನ ಉಪಾಸನೆ : ಛಾಂದೋಗ್ಯೋಪನಿಷತ್ತು . . . ಇದರಲ್ಲಿ . . . ದಹರೋಪಾಸನೆ, ಇಂದ್ರ ವಿರೋಚನರ ಉಪಾಖ್ಯಾನ ಮೊದಲಾದ ವಿಷಯಗಳಿವೆ (ಭಾರದ. ೩೮). [ದಹರ + ಉಪಾಸನೆ]

ದಹಲಕ್ಷ, ದಾಲಕ್ಷ (ನಾ). ಹತ್ತು ಲಕ್ಷ : "ಏಕಂ ದಹಂ ಶತಂ ಸಹಸ್ರಂ ದಶಸಹಸ್ರಂ ಲಕ್ಷಮಾ ದಹಲಕ್ಷ ಕೋಟಿ ದಹಕೋಟಿ ಶತಕೋಟಿಯಬರ್ಬು ದನ್ಯರ್ಬುದಂ ... ೞಂತು ಚಿವ್ವೀಸ ತಾಣವರೆ ಸಂಖ್ಯೆಯಕ್ಕುಂ" (ಮಂಗರಾ. ೦೨೫-೧೨) ; ದಾಸಾವಿರ ಲಕ್ಷ ದಹಲಕ್ಷಾ ಕೋಟಿ ದಹಕೋಟಿ . . . ೞವು ೩೨ ವುಳಡಣೆ ಹಸರುಗಳೂ (ಕಾಸ್ಕರ. ೦೦-೬) ; ೞದನ್ನು ೞವ್ವತ್ತು ದಹಲಕ್ಷ ಅರ್ಹತರು ಕಡೆದರೆಂದು ಹೇಳುತ್ತಾರೆ (ಪ್ರವಾಸ. I, ೨೫೨). **ದಾಲಕ್ಷ :** ಎಕ್ಕಂ, ದಾಹಂ ... ಲಕ್ಷ, ದಾಲಕ್ಷ . . . ಪರಿಮಿತ, ಮಹಾ ಪರಿಮಿತ ಈ ೪೦ ಸ್ಥಾನದ ಉಗ್ಗಡಣೆ (ವ್ಯಪಹಾ. ೮-೨೫).

[ದಹ$_1$ (<ದಸ$_2$) + ಲಕ್ಷ]

ದಹಳಿ (ನಾ). ಒಂದು ದೇಶದ ಹೆಸರಂ ; "ಚೇದಿರಾಜ್ಯ" (ಶಾಪಮಂ ೨೭೦ ಟಿಕ್ಕತ) : ಪೊಗೆಯುತ್ತಿರ್ದ್ದಪ್ಪಿದಿನ್ನುಂ ದಹಳಿ ಹಿಮನಗಾರಣ್ಯಮುಂ ಲಾಳನಿನ್ನುಂ ವುಗಲನ್ದಿರ್ದ್ದಪ್ಪಿನಿನ್ನುಂ ನೆಲಸದೆ ತಿವುಳಂ ಲಂಕೆಯುಂ ತೆಂಕ ಲೋಡಲ್ ಜಗೆಯುತ್ತಿರ್ದ್ದಪ್ಪನ್ . . . ಏಂ ಬಲ್ಲಿದನೊ ಚಕಿತವಿದ್ವಿಷ್ಟ ನೆಂಬೀ ನೊಳಂಬಂ (ಕ್ಯಾಆರಿ. ೦೯೫೯, ೬೫-೬೬ ; 1024 ?) : (ಎಳ. VII, ತಿಕಾರಿ. ೫೯೭-೯ ; 1080 ನೋ.) 'ಡಹಾಳ' ಪರಾ. [?]

ದಹಿಕ (ಗು). ದೇಹಸಂಬಂಧವಾದ; ದೈಹಿಕ : ದಹಿಕ ದೈಶಿಕ ಕಾಲಿಕತ್ರಯ ಗಹನ ಕರ್ಮಗಳುಂಟು ಇದರೊಳು ವಿಹಿತ ಕರ್ಮಗಳರಿತು ನಿಷ್ಕಾಮಕನು ನೀನಾಗಿ (ಹಸಾರ. ೯-೪).

[P ಇಲ್ಲಿ 'ದೈಹಿಕ' ಎಂಬುದನ್ನು ಛಂದಸ್ಸಿಗಾಗಿ 'ದಹಿಕ' ಎಂದು ಮಾಡಿಕೊಂಡಿರಬಹುದು]

ದಹಿಸು (ಕ್ರಿ). ೧. ಸುಡು ; ಉರಿಸು : ನಿನ್ನಂ . . . ದಹಿಸಲಿಲ್ಲೀತರ್ಕಿ ತಾನಗ್ನಿ ವೇಟಲಿ ಪಾಪಾತ್ಮನೆ (ಕಾದಂಬಾ. ೫೭೪) ; ಕಡೆಗಾಲದೊಳು ಜಗವ ಮೊಗೆದು ದಹಿಸುವ ನಡುಗಣ್ಣ ಬೆಂಕಿಯಿಂದೊಗೆದು ನೆಗೆದೆಯ್ದೆ ಘುಡು ಘುಡಿಸಿ ಏರೇಶ್ವರಂ ನೆರೆದ ದೇವರ ಹಿಂಡನಂಡಲೆದು ಮೊದಲಿಗರನು ಹುಡಿಗುಟ್ಟಿ (ಹಡಕಾ. ೧೦-೪೪) ; ಅಹುದು ಸಂಜಯ ಶೋಕಶಿಖಿ ನೆಟ್ಟಿ ದಹಿಸಿತೆನ್ನನು ಬೆಂದ ವಸ್ತುಗೆ ದಹನವುಂಟೇ ಎಂಬ ನಾಣ್ನುಡಿ ನಮ್ಮೊಳಾದುದ್ದಲಾ (ಕುವ್ಯಾಕ. ೦-೬) ; ತನುಗಾಶ್ರಿ ನಿನ್ನ ತಪಿವಂ ಮನುಜನಾವಗಮುಮೆನ್ನನಾದೊಡೆ ದಹಿವಂ (ಣಕುಂತ. ೩೮-೬೮). ೨. ಉರಿದಂಹೋಗು ; ಸಂಟ್ಟುಹೋಗಂ: ನನ್ನ ಶತ್ರುಗಳು ಅಸೂಯಾಗ್ನಿ ಯಿಂದ ದಹಿಸಿಹೋಗುವರು (ಹಂಗಾಳ್ಳ. ೬-೦೫). [ದಹನ + – ಇಸು$_5$]

ದಹ್ಯ (ಗು). ಸಂಡಬಹುದಾದ ; ಉರಿಸಬಹುದಾದ : ಅಸಂಶಯ ದಹ್ಯ ದಗ್ಧವೆಕ್ಕು (ನಾಸಾರ. ೧೩೪). [ಸಂ.]

ದಳ್ (ನಾ). ಒಂದಂ ಅನುಕರಣ ಶಬ್ದ. 'ದಳ್ಳಿಸಂ', 'ದಳಿರಿ$_1$', 'ದಳ್ಳಿನ್' ಪರಾ.

ದಳ$_1$, ದಡ$_4$ (ನಾ). ೧. ದಟ್ಟವಾದಂದಂ ; ಸಾಂದ್ರವಾದಂದು : ಘುಳುಘುಳಿಸುತೇಳ್ವ ಬೊಬ್ಬುಳಿಗಳಂ . . . ದಳದ ಪವಳದ ನಿಮಿರ್ದ ಕುಡಿಗಳಂ ತಡಿಗಳಿಂದಾ ಕದಲ್ಚಣ್ಗಿಸದುದು (ಕ್ಕಮಿಧಾ. ೬-೩). **ದಡ$_4$:** ೨. ದೃಢತೆ : ನೀನು . . . ನಾಲ್ಕು ದಿನ ಹೆಟ್ಟಿಗೆ ಗಂಜಿ ಬಿದ್ದರೆ ದಡವಾಗುತ್ತಿದ್ದಿ (ರಾಣಾದೇ. ೬೩).

ದಳಮಾಗು, ದಳವಾಗು = ದಟ್ಟೈಸು ; ಸಾಂದ್ರವಾಗು : ಮದನ ಧನುರ್ಧರಂಗೆ ದೊಣೆಯಾದ ತಳಿರ್ ಸರಲಾದ ಪೂ ಬಸಂತದ ಮೊದಲಂಗ ಜಂಗೆ ದಳವಾದೆಲೆ ಮುದ್ದಿರವಾದ ಕೆಯ್ ಬಸಂತದ ನಡು . . . ಆಗೆ ಸುಗ್ಗಿಯೆ ಮನೋಜನ ಕೆಯ್ವಿಡಿಯಲ್ತೆ ಮಾಮರಂ (ಶಾಂತಿಪು. ೯-೬೫) ; ಕೆಂದಳದೊಂದು ಕೆಂಪು ಕಿಸುಸಂದೆಯನಂಜಿಸೆ ಕರ್ಪುವೆತ್ತ ಕೇಸಂ ದಳವಾದ ಕಟ್ಟಲೆಯನೇಳಿಸೆ (ಕಬ್ಬಿಕಾ. ೧೩೦). [?./ತಮಿ. ತಳ ; ತೆಲು. ದಳ]

ದಳ$_2$ 'ದಲ' ನೋ.

ದಳಂ (ನಾ). ಒಂದು ಅನುಕರಣ ಶಬ್ದ : ಶ್ರೀ ಸೋಮನಾಥನ ಕುಮಾರ ನಾದಯ್ಯನೆಸವಾಸುರದ ಮಹಿಮೆ ಮನದೊಳ್ನಾಂಟಿ ಬೇರ್ವರಿದು ಕೇಸ[ಸು]ರಿಯವೊಲು ದಳಂ[ಪಾಠಾಂ. ಳೆಂ]ದಳ್ಳಿ[ಪಾಠಾಂ. ದಳೆಂದಳಿ] ಱಿದು ಹೃದಯಮಂ ಸುಡೆ ಬೆಂದು ಕಂದಿ ನೊಂದು (ಸೋಪುಡ. ೩-೧).

ದಳಂಗಟ್ಟು (ಕ್ರಿ). (?) : ಮಸಗಿದ ಕಡಲ ತೆರೆಗಳಂತೆ ತರತರದಿಂ ದಳಂಗಟ್ಟಿ ತೋರ್ಪ ತುರಗದಬಮಂ ಮುಂದಿಟ್ಟುಕೊಂಡು (ವರ್ಧಮಾ. ೪-೪೨ ವ) ; "ಸಾಲಾಗಿ ನಿಲ್ಲಂ" (?) (ವರ್ಧಮಾ. ಕೋಶ) :

[ದಳ್ಳ (= ದಲ) + ಕಟ್ಟು$_1$]

ದಳಂಗೊಳಿಸು (ಕ್ರಿ). ಹೆಚ್ಚುಮಾಡು ; ಅಧಿಕಗೊಳಿಸಂ : ಸೌರಭಮಂ ದಳಂಗೊಳಿಸೆ ಬಣ್ಣದೆ ನುಣ್ಣನೆ ರಾತ್ರಿ ಮಾಳಿಕಾಕಾರೆ ತೊಡರ್ಚ್ ನಾರುಗಿದ ತಿಂಗಳ ತಣ್ಗದಿರಂ ನಮೇರು ಮಂದಾರದರಲ್ಗಳಂ ತನಗೆ ನೀಡಿದಳೆಂದೊಲ ಎಂದೆ ನೋಡಿದಳ್ . . . ವಾರಿಜ ವಕ್ತ್ರೆ ಕೈರವ ವಿಮೊಚನೆ ಮಾಲೆಯುಂ (ಅನಂಪು. ೪-೦೦೪). [ದಳ$_1$ + ಕೊಳ್$_1$ + –ಇಸು$_5$]

ದಳಂಬಡೆ (ಕ್ರಿ). ೧. ದಪ್ಪವಾಗು ; ಸಾಂದ್ರವಾಗು : (ಕ). ೨. ಹೆಚ್ಚು ; ವೃದ್ಧಿಯಾಗು : ಕಳ್ಳೊಳಮುಮರ್ದಿನೊಳಂ ಪುಟ್ಟಿದ ಪೆಂಡಿರಂತೆ ಸೊಗಯಿಸುವ ವಲರುಮೊಳ್ವೆಂಡಿರೊಂದೆಡೆಯೊಳಿರ್ದು ಕಾಮದೇವನೆಂಬ ಬಳಮರ್ದುಕಾಱನ ಮಾಡಿದ ಮರ್ದಿನಂತೆ ಬಳೆದು ದಳಂಬಡೆದು ಮೂನೂಱಱುವತ್ತು ಜಾತಿಯ ಕಳ್ಗಳಂ ಮುಂದಿಟ್ಟು ಮಧುಮಂತ್ರದಿಂ ಮಧುದೇವತೆಗಳನರ್ಚಿಸಿ (ಪಂಪಧಾ. ೪-೮೭ ವ) ; "ದಳಂಬಡೆದುಂ,–ವೃದ್ಧಿಯಾಗಿ" (ಪಂಪದೀ. ೦೬೭) ; "ಗರಿಗಟ್ಟಿಕೊಳ್ಳಿ, ಬಲವಾಗಂ,ಸಾರವುಳ್ಳಿದಾಗಂ" (ಪ್ರಳಣ್ಮ) ; ಬಳವದವಾರೆ ವೇದರುತಿ ಗೇಯರವಂ ಪಟಹಸ್ವನಂ ಪುರೀ ಕಳಕಳದಿಂದಳಂ ಬಡೆದು . . . ದಿಗಿಭವ್ರಜ ಬ್ಯಂಹಿತ ಧೂರಿನಾದದಿಂ ಜಳಧಿಯನಾಂತು ಘೂರ್ಣಿಪಿನಮಾ ಗೃಹಮಂ ವುಗುತಂದನಚ್ಯುತಂ (ಅಗವಿ. ೦೦-೦೩೧). 'ದಳವೇಱು$_1$' ಪರಾ. [ದಳ$_1$ + ಪಡೆ$_1$]

ದಳಗೆ 'ದಳಗೆ$_1$' ನೋ.

ದಳತೆರೆ 'ದಳದೆರೆ' ನೋ.

ದಳತ್ಕೈರವ 'ದಲತ್ಕೈರವ' ನೋ.

ದಳತ್ಕೋಕನದ (ನಾ). ಅರಳುತ್ತಿರುವ ತಾವರೆ ; ವಿಕಸಿಸುವ ಕಮಲ. 'ದಳತ್ಕೋಕನದ ಜಠರ' ಪರಾ.

[ಸಂ. ದಲತ್ಕೋಕನದ]

ದಳತ್ಕೋಕನದಜಠರ (ನಾ). ಕಮಲವನ್ನು ನಾಭಿಯಲ್ಲಿ ಉಳ್ಳವನಂ ; ಕಮಲನಾಭ ; ವಿಷ್ಣು : ದಳತ್ಕೋಕನದಜಠರನಂ ನಿರ್ವ್ಯಾಕುಳವಿಂತೆಂದಂ ಧರ್ಮತನಯಂ ನುಡಿದಂ (ಪಂಪಧಾ. ೯-೦೪).

[ಸಂ. ದಲತ್ಕೋಕನದಜಠರ]

ದಳತ್ಪದ್ಮ (ನಾ). ಅರಳುತ್ತಿರುವ ಕಮಲ,–ತಾವರೆ : ವಿಧುವಿಂದಂ ವಿಬುಧೋತ್ಕರ ಪ್ರಿಯಕರಂ . . . ದಳತ್ಪದದಿಂದಧಿಕ ಶ್ರೀನಿಲಯಂ ಸುಪುತ್ರನೊಗೆತರ್ಕುಂ ನಿಮ್ಮೊಳುರ್ವೀಶ್ವರಾ (ಪುಪ್ಪಪು. ೩-೦೩೨).

[ಸಂ. ದಲತ್ಪದ್ಮ]

ದಳದಳ (ನಾ). ಒಂದಂ ಅನುಕರಣ ಶಬ್ದ : ಆ ಹುಡುಗಿ ದುಃಖದಿಂದ ದಳದಳ ಕಣ್ಣೀರು ಸುರಿಸುತ್ತಾ ಬಂದಳು (ಕ೩೧). 'ದಳದಳನೆ', 'ದಳ ದಳಿಸು' ಪರಾ.

ದಳದಳನೆ (ಅ). ದಳದಳ ಎಂದು ; ಸರಸರನೆ ; ವೇಗವಾಗಿ : ಆ ಆಯ್ದುಕ್ಕಿಯ ಮಾರಿತಂದೆಗಳು ಸಂತೋಷಚಿತ್ತರಾಗಿ ದಳದಳನೆ ಬಸವೇಶ್ವರನ ಅಂಗಳಕ್ಕೆ ಬಂದು (ಶೂನ್ಯಸಂ. ೩೬೨) ; ದಳದಳನಿಳತಹ ಸುಧೆಯನು ವಿದ್ಯುದ್ಬಳಗವ ತೇಜಃಪುಂಜವ . . . ಮರೆಯದಿರೆಂದನು ವೇಶಿಕನು (ಯೋಗಾಂವಿ. ೪-೨೨) ; ಕಂಗಳಿಂದೋಡುತಿರೆ ದಳದಳನೆ ಹರ್ಷಾಶ್ರು

ವಾರಿಪೂರ (ರೇವಡ. ೭-೦೬); ಸರ್ವಾಂಗದೊಳ್ಪುಳಕದಗೆಯೊಗೆಯೆ ದಳದಳನೆ ಹರುಷಾಂಬುಧಾರಾಪ್ರವಾಹ ಕಂಗಳಿಂದಿಳಿವನ್ನಂ (ಮದೇಪು. ೧-೬); ಕಣ್ಣೀರು ದಳದಳನೆ ಇಳಿಯಹತ್ತಿದವು (ಚಂದುಟಿ. ೩೧). 'ದಡಬಡನೆ', 'ಧಳಧಳನೆ' ಪರಾ. [ದಳದಳ + – ಅನೆ$_1$]

ದಳದಳಿತ (ಗು). ದಳಬಿರಿದ; ಅರಳಿದ; ವಿಕಸಿತವಾದ: ವಳ್ಳಿಯ ಕತ್ತಲೆವಾಂಬನ ದಳದಳಿತ ಸಂಜೆಮಲ್ಲೆಗಳ ಪೂವೆಂಬಿನ ಬೆಳದಿಂಗಳಿಂದೆನೆ ಕಣ್ಬಯಲ ಚಲುವನೀವುದರಸಿಯಕೆಱೆಯೊಳು (ಮೈಅರಿ. ೧೯೨೮, ೯-೩೦; 1184). [ಸಂ. ದಲದಲಿತ]

ದಳದಳಿಸು, ದಳ್ದಳಿಸು (ಕ್ರಿ). ೧. ದಳ ದಳನೆ ಸುರಿ; ಧಾರಾಕಾರವಾಗಿ ಹರಿ: ಎನ್ನ ತನಯನನುಯ್ದಂ ರಾಕ್ಷಸನೆಂದಟ್ಟಳ್ ಧವಳೇಕ್ಷಣೆ ದಳದಳಿಸಿ ಸುರಿಯೆ ಬಾಷ್ಪಜಲಂಗಳ್ (ಪಂರಾಮಾ. ೪-೨೩). ೨. ಹೆಚ್ಚಾಗಿ ಹೊಳೆ; ತಳತಳಿಸು; ನಳನಳಿಸು: ತಳ್ತ ಮಾಧವೀಲತೆಯ ಜೊಂಪದಿನೊಳಗೆ ದಳದಳಿಸಿ ಪೊಳೆವೆಳದಳಿರ ಗೊಂದಣದಿನೊಂದಿ ಸಂದಣಿಸಿ ಸೌಂದರಮಾದ ಮಾಕಂದ ಭೂರುಹಸಂದೋಹದೊಳಗೆ ಸುತ್ತಿ ಪತ್ತಿದ ತಳ್ತಶೋಕಾನೋಕಹಾನೀಕ ದೋಲಗಶಾಲೆಯಂ . . . ಪೊಕ್ಕು (ನೇಮಿಪು. ೧೩-೨೦ ವ); ಎಳದಳಿರ ತುಱುಗಲೊಳ್ ನೆಱೆ ದಳದಳಿಪೆಳಮಾವಿನಳ್ಳೆಗೊಂಬಂ ತಳ್ಪೊಯ್ದು (ಕಾವ್ಯಾವ. ೨೪೨). **ದಳ್ದಳಿಸು**: ೨. ಬೆಳ್ದಿಂಗಳ ಪೊರೆವೊರೆಯೊಳ್ ದಳ್ದಳಿ [ಪಾಠಾಂ. ಗಳ್ದಳಿ, ಗಟ್ಟಟಿ]ಸದೆ ಮಿನುಕುತಿರ್ಪ ತಾರಾಳಿಯವೊಲ್ (ಅನಂಪು. ೫-೭೩). [ದಳದಳ + – ಇಸು$_3$]

ದಳದುಳ$_1$ (ನಾ). ಒಂದು ಅನುಕರಣ ಶಬ್ದ. 'ದಳದುಳನೆ' ಪರಾ.

ದಳದುಳ$_2$ 'ದಟದುಟ' ನೋ.

ದಳದುಳಕಾಱ, ದಳದುಳಿಗಾಱ, ದಳವುಳಕಾಱ, ದಳವುಳಿಕಾಱ (ನಾ). ಸೂರೆಗೊಳ್ಳುವವನು; ಕೊಳ್ಳೆ ಹೊಡೆಯುವವನು; ಲೂಟಿ ಮಾಡುವವನು; ದಾಳಿಕಾರ; ಸೂರೆಗಾರ. 'ರಾಯಂದಳದುಳಕಾಱ' ಪರಾ. **ದಳದುಳಿಗಾಱ**: ದಳದುಳಿಗಾಱನೆನಿಪ ದಂತವಕ್ರನು (ಕರ್ಣವ್ಯ. ೫-೫). **ದಳವುಳಕಾಱ**: ಸದ್ಭಕ್ತಿ ಸೂಱೆಗಾಱಂ ಮುಕ್ತಿ ದಳವುಳಕಾಱನೆನಿಪ ಬಸವರಾಜಂ ಭಕ್ತರಂ ಕಂಡು (ಬಸರ. ೮-೪); ದಕ್ಷನ ಹೋಮ ದಳವುಳಕಾಱ ಹರ ನಿಸ್ಸೀಮದಲಿ ಪುರ ಮೂಱ ಗೆಲಿದನು ಸಲಹಿದನು ಸುರರ (ಕುಪ್ಯಾಕ. ೨ ಸೂಚನೆ); ಮುಂದೆ ಮುಂದರಿರಾಯ ದಳವುಳಕಾಱ ಲಕ್ಷ್ಮಣನಿರ್ದನು (ತೊರರಾ. ೬-೨೧-೨೦); ದ್ರಾವಿಡ ಧರಣೀಶತಿಮಿರಮಾರ್ತಂಡನೆಱೆಯಾಂಧ್ರಮನ್ನೆಯದಳವುಳಕಾಱ ನೆಂದಿರದೆ ಪಾಡಿದರಂಗನೆಯರು (ಕಂನವಿ. ೮-೭೬). **ದಳವುಳಿಕಾಱ**: ಇದೆಲ್ಲಿಯ ಲಾವಣ್ಯದ ಲಾವುಲಿಗಂ ಜವ್ವನದ ಸೂಱೆಕಾಱಂ ಮನದ ಮಲ್ಲಳಿಕಾಱಂ ಚಿತ್ತದ ದಳವು[ಪಾಠಾಂ. ದು]ಳಿಕಾಱಂ ಬಂದಂ ಏಗುವೆನೇಗುವೆಂ (ನಂಬಿರ. ೧೨-೬೦). [ದಳದುಳ$_2$ (<ದಟದುಟ) + – ಕಾಱ]

ದಳದುಳನೆ (ಅ). ಸರಸರನೆ; ವೇಗವಾಗಿ; ಲಗುಬಗೆಯಿಂದ: ದಳದುಳನಾಗಳೆ ಕೂಡೆಂಟು ಮಂದಿ ಕೋಮಲೆಯರು ರಾಯನ ಮುಂದೆ ಜಲಕನ್ನಿಕಾನಾಟ್ಯಕೆಂದು ನಿಂದರು ಮರುಳು ಚೆಲುವನದೇನ ಬಣ್ಣಿಪೆನು (ಭರಡ. ೧೩-೯೩). [ದಳದುಳ$_1$ + – ಅನೆ$_1$]

ದಳದುಳವಾಯ್ 'ದಟದಂಟವಾಯ್' ನೋ.

ದಳದುಳಿ 'ದಟದಂಟ' ನೋ.

ದಳದುಳಿಗ, ದಳವುಳಿಗ (ನಾ). = ದಳದುಳಕಾಱ: ಎಲೆಲೆ ನರನೋ ಸುಭಟಜೀವನದಳದು[ಪಾಠಾಂ. ವು]ಳಿಗನೋ (ಕುಪ್ಯಾವಿ. ೭-೩೪); ಜನನಿಯ ಜಠರವ ವೇಷ್ಟಿಸಿ ದಳದುಳಿಗನವೊಲು ಗಡಬಡಿಸಿ (ಯೋಗಾಂವಿ. ೦-೪೪); ಕ್ಷಳ ಱಟ ಕುಳಗಳ ತಿಳಿವಿನಿಸಿಲ್ಲದೆ ಪಳಿಯಾದೊಂದೆರಡಾಯ್ಕುಳಿ ವಾತಿನ ಅಳಿಗಬ್ಬಿಗ ದಳದುಳಿಗರ್ ತಿಳಿಯಲಸಾಧ್ಯಮದೀ ಕಾವ್ಯಂ (ಪ್ರಭುಪು.೧-೪೯).

ದಳವುಳಿಗ: ೧. ಕಣ್ಗೆ ಮಂಗಳವಾದ ಕೈವಲ್ಯ ದಳವು[ಪಾಠಾಂ. ದು]ಳಿಗನ ಆ ಸತಿಯರೊಲಿದು ಬಲಗೊಂಡೆಱಗಿ (ಸಿದ್ಧರಾ. ೧-೫೭); ಒಳಗಾದಳೆನಗೆ ಬಾಲಕಿ ಕಾಮಭೂಪನ ದಳವುಳಿಗನ ದೆಸೆಯಿಂದ (ಅಂಜಡ. ೧೪-೨೨೭).

[ದಳದುಳ$_2$ (<ದಟದುಟ) + – ಇಗ]

ದಳದುಳಿಗಾಱ 'ದಳದಂಳಕಾಱ' ನೋ.

ದಳದುಳಿಸು, ದಳವುಳಿಸು (ಕ್ರಿ). ಆಕ್ರಮಿಸು; ದಾಳಿಮಾಡು; ಕೋಲಾಹಲಮಾಡು; ಕ್ಷೋಭೆಗೊಳಿಸು; ರಭಸದಿಂದ ಮುನ್ನುಗ್ಗು: ತೆಂಕಮುಖವಾಗಿ ಧಾಳಿಕಾಱರು ದಳದುಳಿಸಿ [ಪಾಠಾಂ. ದಳದುಳದ] ಭೂಪಾಲಭೂಮಿಯ ಹೊಕ್ಕು ಗಂಗಾಕೂಲದಲಿ ಸಂಗಮಡ ಸಾಗರಕಾಗಿ ವಹಿಲದಲಿ (ತೊರರಾ. ೪-೦೦-೦); ಮಗುಳೆದ್ದು ಬಂದಾವಾಸದಲಿ ದಳದು [ಪಾಠಾಂ. ವು]ಳಿಸಿ ಶಕ್ರನ ಮುಱಿದು ಸುಮನಸರ ದೇಶದಿಂದಱೆಯಟ್ಟಿ (ಅಕ್ರೂಡ. ೧-೮); ತಳುವದೆ ಬೆಟ್ಟದ ಚಾಮೇಂದ್ರ ಬಲಸಹ ದಳದುಳಿಸಿದನು ಹಂಚೆಯಕೆ (ಕಂನವಿ. ೩-೬೩). **ದಳವುಳಿಸು**: ಸರ್ವ ಸೈನಿಕವೆರಸಿ ನಿಂದಿರ ಲೊರ್ವನೇ ದಳವುಳಿಸಿ ದ್ರುಪದನ ನಿರ್ವಹಿಸಿ ತಾ ಹಿಡಿದು ಕಟ್ಟಿದ ನಿಮಿಷ ಮಾತ್ರದಲಿ (ಸಂಭಪ. ೦೮-೯೮); ನಿಲುಕಿ ಹೊಳೆದವು ನೇಣ ಸಡಿಲಿಸಿ ಕುಲಗಿರಿಯ ಹೆಡತಲೆಯಂನಡರಿದವು . . . ದಳವುಳಿಸಿದವು . . . ಮನೋವೇಗಾಯ್ಲವಾಜಿಯ ಥಟ್ಟ ನೂಕಿದರು (ಕುಪ್ಯಾಭೀ. ೪-೫೨); ಮದಮುಖರಲೈ ರಕ್ಕಸರು ತೋಱಿದ ಮಹೋತ್ಪಾತವನು ಬಗೆಯದೆ ಕದನಕೋಲಾಹಳರು ದಳವುಳಿಸಿದರು ಧಾಳಿಯಲಿ (ತೊರರಾ. ೩-೫-೯).

[ದಳದುಳ$_2$ (<ದಟದುಟ) + – ಇಸು$_3$]

ದಳದೆರೆ, ದಳತೆರೆ (ಕ್ರಿ). ಎಸಳಂಗಳನ್ನು ಬಿಚ್ಚು; ಅರಳಂ; ವಿಕಾಸವಾಗಂ: ಕಮಲಿನಿಯು ತಾನು ದರಹಸಿತವದನದಿಂದಿನಿಯನರುಣತೆಯಾಂತು ದಳದೆರೆದು ಬಿರಿದರಳ್ದು ಮೊರೆಯುತಿಹಳು (ವಿಸೀಗೀ. ೨೯-೧೬). **ದಳತೆರೆ**: ಹಿಂದೆ ಎಂದೂ ತಾನು ಅನುಭವಿಸದಿದ್ದ ವಿಶೇಷವಾದೊಂದು ಭಾವನೆ ಮನಸ್ಸಿನ ಸರೋವರದಲ್ಲಿ ದಳತೆರೆಯುತ್ತಿತ್ತು (ಅನಾಥ. ೪೮).

[ದಳ$_2$ (=ದಲ) + ತೆರೆ$_1$ (<ತೆಱೆ$_1$)]

ದಳನ 'ದಲನ' ನೋ.

ದಳನಾಯಕ (ನಾ). ದಳಪತಿ; ಸೇನಾಪತಿ: ಬಳಿಕ ಹೊಂಕರಿಸುತಂಗಜನು ತೊಲಗಿ ದೂರದೊಳಿದ್ದ ಗುಣವಸಂತಕನೆಂಬ ದಳನಾಯಕನ ನೋಡಿ ನುಡಿದ (ಭರಡ. ೪೮-೯೫). [ದಳ$_2$ (= ದಲ) + ನಾಯಕ]

ದಳಪ (ನಾ). = ದಳನಾಯಕ: ನೀಡಿರಿದು ಕೆಡಹಿದರ್ ದಳಪನಾ ಕ್ಷೋಭೆಯಿಂ ಬೆದರಿ ದಳಪಾರುತಿರಲು (ಜಿನಮು. ೮-೧೮). [ಸಂ. ದಲಪ]

ದಳಪತಿ 'ದಲಪತಿ' ನೋ.

ದಳಪತಿತನ (ನಾ). ಸೇನಾಪತಿತ್ವ; ದಳದ ಮುಖಂಡತ್ವ: ಕಂಠೀರವ ನರಸೇಂದ್ರನಂದು . . . ಮುಂದಣ ದಳಪತಿತನವ ಲಿಂಗೇಂದ್ರನಿಗಂದು ಕೊಡುವೊಡುಜ್ಜುಗಿಸಿದ (ಕಂನವಿ. ೦೯-೯೫).

[ದಳಪತಿ (= ದಲಪತಿ) + – ತನ]

ದಳಬಳ (ನಾ). ಒಂದು ಬಗೆಯ ಔಷಧಿ ಮೂಲಿಕೆ; ಕಚೋರ: ದಳಬಳ (ಕಚೋರ)ದ ಹಸಿಗಡ್ಡೆಯ ರಸ ಒಂದು ಚಮಚೆಗೆ ಅಷ್ಟೇ ನೀರುಳ್ಳಿ ರಸ ಕೂಡಿಸಿ ಕೊಡುವುದು (ಮನೆಮ. ೦೪). [?]

ದಳಬೆಸ (ನಾ). ದಳಗಳನ್ನು ಬಿಡಿಸುವ ಕಾರ್ಯ; ಕುಸುರಿಗೆಲಸ (?): ಕರುಮಾಡಂ ರಮ್ಯಹರ್ಮ್ಯಾಚಳದಳವಿಗಳುಂಬಂ ಹಿಮಾದ್ರೀಂದ್ರ ಸಾನೂತ್ಕರಕಾಂತಂ ಬಳ್ಳಿಮಾಡಂಗಳ ಬಳಗಮದೇನೆಂಬ ಪೆಂಪುರ್ವದೇನೆಂಬಿರವಿಂದೊಳ್ಪಿಂಬದೇನೆಂಬ ದಳಬೆಸನದೇನೆಂಬ ಮಿಕ್ಕೊಳ್ಪದೇನೆಂಬ ರಸಂಬೆತ್ತೊಳ್ಪದೇನೆಂಬಮಿತಗುಣಮದೇನೆಂಬ ಚಿತ್ರಪ್ರಪಂಚಂ (ಶಾಂತಿಪು. ೯-೧೪೮). [ದಳ$_2$ (= ದಲ) + ಬೆಸ$_1$]

ದಳಭವನ (ನಾ). ಎಲೆಮನೆ ; ಪರ್ಣಕುಟಿ : ಲವನೆ ಕೇಳಾ ದಿನವನಾ ದಳಭವನದಲಿ ನೂಕಿದರು (ತೊರರಾ. ೨-೬-೨೭). [ಸಂ. ದಲಭವನ]

ದಳಮಳ (ನಾ). ತುಂಬಿ ತುಳುಕುವುದು ; ಡಮಡಮಿಸುವುದು : ವರ್ಷಾಕಾಲದಲ್ಲಿ ವನಜ್ಯೋತ್ಸ್ನೀ ಎಂಬ ಲತೆಯು ತನ್ನ ಪತ್ರರಾಶಿಯ ಬಾಹುಳ್ಯದಿಂದ ಹೇಗೆ ದಳಮಳಮಾಡುವುದೋ ಅವಳ ಶರೀರವೂ ಹಾಗೆ ಪೂರ್ಣತೆಯಿಂದ ದಳಮಳವಾಗುತ್ತಿದ್ದಿತು (ಕಪಾಕುಂ. ೪೩). 'ದಳಮಳ' ಪರಾ. [←ಮರಾ. ದಳಮಳ್]

ದಳಮೇಱು 'ದಳವೇಱು$_1$' ನೋ.

ದಳವಡಿಗ (ನಾ). ಸೈನ್ಯದಲ್ಲಿ ವ್ಯವಹರಿಸುವವನು ; ಸೈನಿಕ; ಯೋಧ : ಮಣಿಮಯ ಹಜಾರದೊಳು ಬಿತ್ತರದ ದಳವಡಿಗರೊಡನೆ ಸೇನಾನಿಯಿರೆ ರಾಯ ರಾವುತರೊಗ್ಗಿನಲಿ (ಸವಮೋ. ೨೬-೩೭). [ದಳವಡೆ + – ಇಗ]

ದಳವಡೆ (ನಾ). ಸೈನ್ಯದ ತುಕಡಿ ; ಪಡೆ : ಗುರಿಕಾರ ನಾಯಕರು ದಳವಡೆಯ ಜಟ್ಟಿಗಳು ಕರಣಿಕರು ಕಣಜ ಬೋ ರಕ್ಕಸರಾಯಭಾರಿಗಳು . . . ಮುಂತಾದಯಸಮಸದ್ಬುಧಜನರು ಮುಖ್ಯವಿನಿಯೋಗ ದೊಡ್ಡೋಲಗದ ಮಧ್ಯದಲೀ ಶಶಿಮೌಳಿಯಂದದಿ ಸಮಸ್ತ ಪ್ರಭುವರನೆನಿಸಿ (ಸವಮೋ. ೩-೨೫). P ಇದು ಒಂದೇ ಅರ್ಥದ ಎರಡು ಶಬ್ದಗಳು ಸೇರಿ ಆಗಿರುವ ರೂಪ. [ದಳ್$_2$ (= ದಲ) + ಪಡೆ$_2$]

ದಳವಯ 'ದಳವಾಯ್' ನೋ.

ದಳವರಿ (ಕ್ರಿ). ದಾಂಗುಡಿಯಿಡು ; ಹಬ್ಬು ; ವ್ಯಾಪಿಸು : ಗಳಬಳಿಪ ಗದ್ಗದು ದಳವರಿವ ಮೋಹಲತೆ ತುಳುಕಿ ತುಂತುರುಗೆದರ್ವ ಘರ್ಮಂ (ಕೈಕವ. ೦-೬-೪). [ದಳ್$_2$ (= ದಲ) + ಪರಿ$_2$]

ದಳವಾಡ (ನಾ). ೧. ಸೇನಾಸಮೂಹ ; ಪಡೆಯ ಸಾಲು ; ಸೈನ್ಯ : ಸಂಭ್ರಮದೆ ದಳವಾಡವೋಲೈಸೆ (ರೇವಡ. ೦೦೫-೩) ; ದಳವಾಡಸಹಿತ ಬೈಚಪ್ಪ ದುರ್ಗವ ಹೊಕ್ಕು ತಳುವದದಱ ಬಲಿಕೆಯನು ಬಳಸಿ ಬಳಸಿ ನೋಡಿ (ಕುರಾಸಾಂ. ೩೭-೫೦) ; ತಿರುವಡಿಯ ರಾಜ್ಯಕೆ ಮನ್ಯರನೂ ದಳವಾಡವನೂ ಕಳುಹಿಸಲಾಗಿ (ಸೌಇಇ. IX-11, ೫೫೦-೧ ; 1532) : ವಿಭೀಷಣ ಬಂದಿನ್ನು ಪೊಳಮೋಸಗೊಟ್ಟ ಕಾರಣದಿ ಕಳಿದುಳಿದವನ ಮರ್ದಿಸಿಯಲ್ಲದೆ ನಿನ್ನ ದಳವಾಡವೇನು ನೀನೇನು (ಮೋಹತ. ೪೦-೨೫) ; ಹೊಳೆವ ತ್ರಿಶೂಲಮುಮ್ಮೊನೆಯಿಂದೆ ಕೆಂಗಿಡಿಗಳನುಗುಳ್ದುರಿಯ ನಿಷ್ಠುರದಿ ದಳವಾಡ ದಹನವ ಮಾಡುತ್ತೆ ಹರಿಯುರಸ್ಥಲದಲ್ಲಿ ಬಂದು ಮೋಹಿಸಿತು (ಮೋಹತ. ೪೦-೭೬) : ಆಗ ಕೌರವರಾಯ ಸರ್ವ ದಳವಾಡದಿಂದ ಮುತ್ತಯ್ಯನಿಂಗೆ ಸರಿಬಲವಾಗಿ ಬರಲು ಬಳಿಕಿತ್ತ ಕಳುಪಿದ ನರನ ಬೆಂಬಲಕೆ ಪಾಂಚಾಲಮತ್ಸ್ಯನಂ (ತುರಂಗ. ೪೭-೨೦). ೨. ಸೇನೆಯ ನೆಲೆ ; ಶಿಬಿರ ; ಪಾಳೆಯ : ಬಳಿಕಾ ಯುಧಿಷ್ಠಿರಂ ಭೀತಿಯನ್ನಪಹರಿಸಿ ತನ್ನ ದಳವಾಡದಿಂದಾ ತತುಕ್ಷಣ ಪೊರಡಲೊದರಿದವು ಭೇರಿ ನಿಸ್ಸಾಳಂಗಳುರವಣಿಯೊಳು (ತುರಂಗ. ೪೯-೦) ; ಮೆರೆವ ಮಣಿಕನಕಂಗಳನ್ನಿತ್ತು ಕುರುನೃಪನ ಸುಭಟರಂ ಕಳುಪಿಸಿದನು ಭರದೊಳೈತಂದವರು ಪೋದ ವೃತ್ತಾಂತ ಮನ್ನರುಪಿದರು ಕೌರವಂಗನಿಲಜನ ಮತವ ವಿಸ್ತರಿಸಿದರು ಕದನಕಂ ಬರಲಾಗ ಕೌರವರು ಸರ್ವ ದಳವಾಡದಿಂದ (ತುರಂಗ. ೬೪-೧೯).

[ದಳ್$_2$ (= ದಲ) + ವಾಡ$_2$]

ದಳವಾಯ್, ದಳವಯ, ದಳವಾಯಿ, ದಟವಾಯ್, ದಟವಾಯಿ (ನಾ). ೧. ದಳನಾಯಕ ; ಸೇನಾಪತಿ : ಸುಲಿತಿಂದು ರಾಜ್ಯವನಿತಂ ನೀವೇಕೆ ತಾವೇತಕೆಂದುಳಿದರ್ಗೀಯಂದೆ ತಾನೆ ಕಾಲಯಮನಂತತ್ಯುಗ್ರಮಂ ತಾಳ್ದಿದಾ ದಳವಾಯೇ ಬಳಿಮಾರಿಯೈ (ಸೋಮೇಶ. ೬೪) ; ಆರಿಯರ ದಳವಾಯ ಕೂಚರಸನು ಎತ್ತಿ ಬಂದು ಎಣಿಕಲನುಯಿಱಿದು ಸೆಱೆ ಸೂಱೆಗೊಣ್ಡು ಹೋಹಲ್ಲಿ (ಎಕ. XII, ಪಾವಗ. ೪೮-೧ : 1285?) ; ನೀವು ಕಟಕಾಚಾರ್ಯಪುತ್ರರು ನೀವಿರಲು ಕೃಪನಿರಲು ದಳವಾಯ್ ನಾವಹೆವೆ (ಕುವ್ಯಾಶ. ೧-೨೦); ಚತುರಂಗಬಲಸಹಿತವಾಗಿ ಬಲಾಹಕನೆಂಬ ದಳವಾಯನು ಕಳುಹಿಸಿ (ವಚಕಾ. ೮-೨೦) ; ಅವನ ದಳವಾಯ್ ದಧಕಿಸ್ ಎದೆಗೀಟಿ ನೆಟ್ಟು ಪಡಗಿಂದ ನೆಗೆದಾಲಿ ಮುಳುಗಿದನ್ (ಪಾರಸಿ. ೦೩-೩೦೬). ದಳವಯ: ೧. ಕರಿಮುಖಂ ದಳವಯಂ ಜ್ಯೋತಿಷಂ ರವಿ ಯಜ್ಞಪುರುಷ ಬಾಣಸಿಗ ಯಮ ತಳವಾಱ (ಲಶಿಚಿಂ. ೫-೧೩); P ಇದು ಛಂದಸ್ಸಿಗಾಗಿ ಮಾಡಿ ಕೊಂಡ ರೂಪ. ದಳವಾಯಿ: ೧. ಬಲುಬಲಸಹಿತಲೆಮ್ಮಯ ದಳವಾಯಿ ಹಿಂದುಳಿದನಿಲ್ಲಿಲ್ಲ ಮುಖಿಗಳೆನೆ (ಸೊಬಸೋ. ೬-೨೦); ಬಾಗಿಲ ದಳವಾಯಿ ವೆಂಗಳರಾಜ ಹುಹಾ ಅರಸುಗಳು . . . ಕುಕ್ಕಸಮುದ್ರದ ಕೆಱೆಯ ಕಟ್ಟಿಸಿದರು (ಎಕ. VI, ಕಡೂರು. ೦೬೦-೬; 1542); ದಳವಾಯಿ ಚಂನ್ನಮ ನಾಯಕರ ಮಕ್ಕಳು ದಳವಾಯಿ ಕ್ರುಷ್ಟಪ ನಾಯ[ಕ]ರೂ (ಸೌಇಇ. IX-1, ೬೦೫-೫ ; 1543) ; ಪೊಡವಿಪ ದಳವಾಯಿ ನಂಜರಾಜೇಂದ್ರ ತನ್ನೊಡೆಯನ ಕಾರ್ಯದೇಳಿಗೆಯ ಗಡಣವ ಚರಿತೆಯಾಗೊಲಿದು ಪೇಳಿಸಿದನು (ಕಂನವಿ. ೧-೨೮) : ನಿಮ್ಮ ಮಗನಿಗೆ ದಳವಾಯಿಯಾಗುವ ಯೋಗವಿದೆ (ಜಿಂಗಾಳ್ಳ. ೪) ; ಎಳೆಗರು ಎತ್ತಲ್ಲ ದಳವಾಯಿ ದೊರೆಯಲ್ಲ ಮನೆಗೆ ಬಂದಳಿಯ ಮಗನಲ್ಲ (ಹಳ್ಳಿಬಾ. ೬೫). ೨. (ಹಿಂದಿನ ಮೈಸೂರು ಸಂಸ್ಥಾನದಲ್ಲಿ) ಪ್ರಧಾನಿ ; ಮಹಾಮಾತ್ಯ : △ ದಟವಾಯ್ : ೧. ಏಟುಮ್ ಬಾಗಿಲೊಳೇಟ್ ದಟವಾಯ್ಗಳ್ ಏಟ್ ದಟವಾಯ್ಗಳನಿದಿರಿಸಿ ನಿಂದರ್ (ಅಂತಿಗೊ ೭-೧೨೬). △ ದಟವಾಯಿ : ೧. ದಟವಾಯಿ ರಾಮರಾಜಂ ಬಟಿಕಟಿಜಸದೊಡನೆ ವೆರಸಿಯಾಳ್ದನ ಸಿರಿಗಂದಟುಪಿಯಳಿ ಯನೆನಿಸಿಯುಮೊಡನಟಿದಂ (ಚಿಕವಿ. ೨-೧೬).

[<ಸಂ. ದಲಪತಿ./ತಮಿ. ತಳಿವಾಯ್; ತುಳು. ತೆಲು. ದಳವಾಯಿ./ ಮರಾ. ದಳವಈ, ದಳವಾಯಿಾ, ದಳವೈ; P ಸಂ. 'ಪತಿ' ಎಂಬುದು ಪ್ರಾ. 'ಪಇ' ಎಂದಾಗಿದ್ದು ದಲಪತಿ > ದಲಪಇ > ದಳವಯಿ > ದಳವಾಯಿ > ದಳವಾಯ್ ಎಂದು ಆಗಿರಬೇಕು]

ದಳವಾಯಿ 'ದಳವಾಯ್' ನೋ.

ದಳವಾಯಿತನ 'ದಳವಾಯ್ತನ' ನೋ.

ದಳವಾಯಿವರ್ಯ (ನಾ). ದಳವಾಯಿಶ್ರೇಷ್ಠ : ದಳವಾಯಿವರ್ಯ, ಮುಂದಣ ಶ್ರೀಮನ್ಮಹಾರಾಜ ಮಹಾಸ್ವಾಮಿಯವರೆಂದು ನಿಷ್ಕೃಷ್ಟರಾಗಿರುವ ಈಗಳಿನ ಕಿರಿಯರಸ ಪಟ್ಟದ ಶ್ರೀರಾಜಒಡೆಯರವರ ಸನ್ನಿಧಾನವು ಒಡ್ಡೋಲಗಕ್ಕೆ ಬಿಜಯಮಾಡಿದೊಡನೆಯೇ ಆಸ್ಥಾನಿಕರೆಲ್ಲ . . . ನಮಸ್ಕರಿಸಿ ಗೌರವಿಸಿಕೊಳ್ಳಬೇಡವೆ ? (ಬೆಟ್ಟಅ. ೩೪-೦೦).

[ದಳವಾಯಿ (<ದಳವಾಯ್) + ವರ್ಯ]

ದಳವಾಯ್ತನ, ದಳವಾಯಿತನ (ನಾ). ೧. ಸೇನಾಪತಿಯ ಹುದ್ದೆ ; ಪ್ರಧಾನಿಯ ಹುದ್ದೆ,–ಅಧಿಕಾರ. ೨. ದಳವಾಯಿಯ ಕೆಲಸ : ಈ ಅಸಮಾಧಾನದಿಂದ ನಿನ್ನ ದಳವಾಯ್ತನದ ಜೀವನದ ಮೂಲಶಕ್ತಿಯೇ ಬೇರಳಿದು–ಪ್ರಳಯವಾಗಿ ಹೋಗುತ್ತಿದೆಯಹುದು! (ಬೆಟ್ಟಅ. ೩೪-೨೩). ದಳವಾಯಿತನ : ೧. ಖಂಡೇರಾಯನಿಗೆ ದಿವಾನಪದವಿಯೂ ಹೈದರನಿಗೆ ದಳವಾಯಿತನವೂ ಗೊತ್ತಾದವು (ಒಡಕ. ೬೬) ; ಪೂರ್ವಿಕರು ಒಬ್ಬರೂ ದಳವಾಯಿತನವು ನೇಮಕ ಮಾಡಲಿಲ್ಲ (ಮಹಾವಂ. I, ೪೬). ೨. ದಳವಾಯಿತನವು ವಿಪತ್ಕರವು (ಸುಗುಗಂ. ೧೧-೨೦).

[ದಳವಾಯ್ + – ತನ]

ದಳವಿಡು (ಕ್ರಿ). ಚಿಗುರು ; ಅಂಕುರಿಸು ; ಮೊಳೆ : ಹೊಳೆವ ಹೊಂಜೆಳೆ ಮೆಯ್ಯ ಸೊಬಗಿಯ ಕಳಶಕುಚವರೆದೋಱೆ ಹೃದಯದಿ ದಳವಿಡುವ ಮೋಹದೊಳೆ ಯುವನೆವೆಹಳಚದೀಕ್ಷಿಸಿ ಹಿಗ್ಗುವಂತೆ (ಕೈಕವ. ೩-೫-೩).

[ದಳ್$_2$ (= ದಲ) + ಇಡು$_1$]

ದಳವುಳ 'ದಟದಂಟ' ನೋ.

ದಳವುಳಕಾಱ 'ದಳದಂಳಕಾಱ' ನೋ.

ದಳವುಳಿ 'ದಟದಂಟ' ನೋ.

ದಳವುಳಿಕಾಱ 'ದಳದಂಳಕಾಱ' ನೋ.

ದಳವುಳಿಗ 'ದಳದಂಳಿಗ' ನೋ.

ದಳವುಳಿಗೊಳ್ (ಕ್ರಿ). ಕಸಿ ; ದೋಚು ; ಸುಲಿಗೆಮಾಡು : ಅರೆಬರ ಧೃತಿಯಂ ನೆಱೆ ಕವರುತ ಮತ್ತರೆಬರ ಪೆಂಪಂ ದಳವುಳಿಗೊಳುತುಂ ಸ್ಮರ ಚಕ್ರೇಶನ ಸಲ್ಗೆಯ ಮದವತ್ಪ್ರಾಯಿತೆಯೆಯ್ದಿದಳು (ಜಯಕಾ. ೫-೫೦).

[ದಳವುಳಿ (<ದಟದುಟ) + ಕೊಳ್$_1$]

ದಳವುಳಿಸು 'ದಳದಂಳಿಸಂ' ನೋ.

ದಳವೆತ್ತು (ಕ್ರಿ). ದಂಡೆತ್ತು ; ದಂಡಂಸಹಿತವಾಗಿ ದಾಳಿಮಾಡು : ಅಲಂಬುಸ ಶ್ರುತಾಯುಗಳೂ ಸನ್ನದ್ಧರಾಗಿ . . . ಪಾಂಡವ ಬಲಗಳ ಮೇಲೆ ದಳವೆತ್ತಿ ಬಂದರು (ಕೃಪಾಧೀ. ೧೫೫).

[ದಳ$_2$ (= ದಲ) + ಎತ್ತು$_1$]

ದಳವೇರು 'ದಳವೇಱು$_2$' ನೋ.

ದಳವೇಱಿಸು (ಕ್ರಿ). ಹೆಚ್ಚಿಸು ; ವೃದ್ಧಿಗೊಳಿಸು : ನನಗಣಿಯನರ್ಚಿಪಂತೆ ಚಂದ್ರಕಳೆಯಂ ದಳವೇರಿಱಿಪಂತೆ ಪುಣ್ಯಮಂ ಪುಟವಿಡುವಂತೆ . . . ಹರನ ಮನೋರಥಮಂ ಮದವೇಱಿಪಂತೆ ಪಾರ್ವತಿಗೆ ಸುವಾಸಿನಿಯರ್ ಸಿಂಗರಮಂ ಮಾಡಿ (ಗಿರಿಕ. ೧೦-೪೫ ಪ) ; ಇನಿಯರ ಕಂತುರಾಗರಸಮಂ ದಳವೇಱಿಸುವಂತೆ . . . ಕೆಂದಳಿರ ಪೊಂಪುಳಿ ಪಪ್ಪುಕಮಾಯ್ತಶೋಕೆಯೊಳ್ (ಅನಂಪು. ೬-೭೭). [ದಳವೇಱು$_1$ + – ಇಸು$_3$]

ದಳವೇಱು$_1$, ದಳವೇಱು (ಕ್ರಿ). ೧. ದಟ್ಟವಾಗು ; ನಿಬಿಡವಾಗು ; ಸಾಂದ್ರವಾಗು : ಅಳಿಯ ಕಪ್ಪನು ನೀಲಮೇಘದಸಿತವನು . . . ಎಳೆದು ಕೊಂಡೊಡಗೂಡಿ ತುಳಿದು ಪಿಳಿದಬುಜಜಂ ಬೆಳಗು ಮುಳಂಗಲು ಬಳಿದನೋ ಬಯಲನೆಂದೆನಿಸಿ ದಳವೇಱಿತೊತ್ತರಿಸಿ ಮೋಡಗತ್ತಲೆ ಗಾಳಿ ಹನಿ ಮಿಂಚು ಮೊಳಗು ಸಹಿತ (ಸಿದ್ಧರಾ. ೭-೩೭) : ಪೊರೆ ಪೊರೆಯಾಗಿ ದಳವೇಱಿ ಬಹುಳತರ ಧವಳತೆಯನಾಂತ ಮುಗಿಲ ಮೊತ್ತಮೆತ್ತಲುಂ ಬಿತ್ತರಂಬಡೆಯೆ (ಬಾಧಪು. ೪-೬೭ ಪ). ೨. ಹೆಚ್ಚಾಗು ; ವೃದ್ಧಿಹೊಂದು; ಏಳಿಗೆಯಾಗು : ಉತ್ಸವಕರಮೆನೆ ಬೆಳಪ ಶರತ್ಸಮಯದೊಳಿಂದುಕಾಂತಿ ದಳವೇಱುವಪೋಲ್ ವತ್ಸಳರೆನಿಸುವ ಬುಧರಿನಮತ್ಸರರಿಂ ಕೃತಿ ಕೃತಾರ್ಥ ಮಕ್ಕುಮಮೋಘಂ (ಜಗವಿ. ೧-೧೧) ; ದಳವೇಱಿದುತ್ಸವದ ಹೆಚ್ಚುಗೆಯ ಬೀಜಮಂ ಬೆಳೆಸುವೈಸಲ್ಕೆಯಿಂತಾದನಿನ್ನಾವಾಗಳೆಳಸಿ ಮೊಲೆಯುಂಬನೋ (ಸೋಮದ. ೧-೭೫); ಹೊಸವೊಲುಮೆ ದಳವೇಱಿ ಸಲೆ ಪಸರಿಸಿ ಮಹದ್ಗುರುವಿನ ಚರಣ ಸಾರಸಯುಗವನಾನಂದಜಲದಿಂ ತೊಳೆದು (ಬಸಪು. ೪-೫೯) : ಬೇಗುದಿಯ ದುಮ್ಮಾನ ದಳವೇಱಿದುದು ಹೇಱಿತು ಭೀತಿ ಭೂಪತಿಗೆ (ಕುಪ್ಯಾಗ. ೧-೬೨). **ದಳಮೇಱು** : ೨. ನೆಱೆಯೆ ನೆಗರ್ತೆ ವೆತ್ತುದು ನಿಯೋಗಮಗುಂದಲೆಯಾಯ್ತು ತೇಜಮಚ್ಚಿಱಿದುದು ಮಿಕ್ಕ ಬಿಚ್ಚತಿಕೆ . . . ದಳಮೇಱಿದುದಕ್ಕರಂ ಪಗಣ್ಡಿಱಿದುದು ಪೌರುಷಂ ಸಫಳಮಾದುದು ಮಾನ್ಯತೆ ಮಾದಿರಾಜನೊಳ್ (ಸೌಇಇ. XI-II, ೧೪೭-೩೭ ; 1099). [ದಳ$_1$ + ಏಱು$_1$ (<ಏಱ್$_1$)]

ದಳವೇಱು$_2$, ದಳವೇರು (ಕ್ರಿ). ೧. ಅರಳು; ವಿಕಾಸಗೊಳ್ಳು; ವಿಕಸಿಸು : ವನಜಂಗಳ್ ದಳವೇಱೆ ಚೂತಲತೆಗಳ್ ನೀರೇಱೆ . . . ಬಂದುದು ವಸಂತಂ (ಧರ್ಮಾಮೃ. ೧೩-೧೦) ; ಅಳಿಯೆಱಗದನಿಲನಲುಗದ ರವಿಕರಂ ಪುಗದ ಸುಳಿಗೊಂಡು ದಳವೇಱಿ ಹಸುರಳಿದು ಬೆಳುಪುಳಿದ ಸುರುಚಿರ ಮೆನಿಪ್ಪ ಮಿಸಲ ಮೊಗ್ಗೆಯಂ ಕೊಂಡು (ಬಸರ. ೩-೨೦). ೨. ಕಾಂತಿ ಹೊಂದು: ಮುಗುಳ ಮಾಲೆ ಸುಯ್ಯನಱುಗಂಪಿನೊಳಿರ್ಮಡಿ ಗಮ್ಮನಾಗೆ ಸೆಳ್ಳುಗುರ್ವೆಳಗಿಂದರಲ್ಗಳ ದಳಂ ದಳವೇಱೆ ಮದಾಳಿ ಮೆಲ್ಲಮೆಲ್ಲಗೆ ಸುತಿಗೂಡೆ ಕಂಕಣದ ನುಣ್ಣರದೊಳ್ . . . ಅಲರ್ಗಟ್ಟುವುದಂಗನಾಜನಂ (ಪರ್ಧಪು. ೧-೩೪) ; ಬಾಗುತೆ ಬಲಿಯುತೆ ಪೊಳೆದಿನಿದಾಗುತೆ ದಳವೇಱು ತಿಡಿದಿಡಿದು ಹಿಗ್ಗುತೆ ಪಣ್ಣಾ [ಪಾಠಾಂ. ದಳಮೇಱಿ ಹಿಗ್ಗುತ್ತವೆ ಹೂದಾ] ಗುತೆ ಕಾಯ್ಗಳ್ ಪೊಱಮಡೆ ಬೀಗುತ್ತುಂ ಬೆಳೆದುವಲ್ಲಿ ಕದಳೀಷಂಡಂ (ಗಿರಿಕ. ೨-೫೦). ೩. ಉಬ್ಬು ; ಹಿಗ್ಗು ; ಸಂತಸಗೊಳ್ಳು ; ಉತ್ಸಾಹಗೊಳ್ಳು : ಮಾಂಗೊನರಂ ನಸುಗರ್ಚಿ ಸೊರ್ಕಿನಿಂ ತನು ದಳವೇಱೆ ಕಂಠವಿವರಂ ತೊವರೇಱಿ ಪಟುತ್ವವೇಱೆ ಕಾಮನ ನನೆಯಂಬುಗಳ್ ವಿರದಿಂವೃಂದದ ಮೆಲ್ಲರ್ದೆಯಂ ಪುಗಲ್ . . . ಪುಗಲ್‌ಪುಗಲೆಂದುದು ಕೋಕಿಲವ್ರಜಂ (ಜಗವಿ. ೧೪-೩೮) ; ಪುಟವೆದ್ದು ಹೊಂಗುತಂ ದಳವೇಱಿ ಹಿಗ್ಗುತಂ ನಟ್ಟಿರ್ಪ ನೋಟದಿಂದೋಜೆಯಂ ಮೀಱುತಂ (ಬಸರ. ೩-೧೦೩) ; ತಲೆದಡವಿ ತರ್ಕವಿಸಿ . . . ಅಂಜದಿರೆಂದೆನ್ನೊಳು ನುಡಿಯೆ ಹಬ್ಬಿ ಹಸರಿಸಿ ದಳವೇಱುವೆನಾಂ (ಶಂಕಕಂ. ೭೦); ಇನಿಯಳ ಗರ್ಭದಂದವಂ ನೋಡಲ್ಚಿತ್ತಂ ದಳವೇಱುತ್ತಿರೆ ಬಂದಂದೊಳಪೊಕ್ಕಂ ತದೀಯ ಮಣಿಮಯ ಗೃಹಮಂ (ರಾಜಶೇ. ೪-೪೪). **ದಳವೇರು** : ೨. ನನ್ನ ಮಿದುಳು ದಳವೇರಿ ದಳ್ಳಿಸಿತು ಸ್ವರ್ಣದೀಪ್ತಿ ಇಳಿಯೆ ಮನದ ಕರಿನೆರೆಯ ಹುಳುಗಳೆಲ್ಲ ಹೊತ್ತೇರಿ ನಿದ್ದೆ ತಿಳಿಯೆ (ಅರಳು. ೧೯೧-೦), ೪. ಚಿಗುರು; ಎಲೆಬಿಡು ; ಪಲ್ಲವಿಸು : ಬಿದುರು ಸಹ ಹೂ ಬಿಡುವುದುಂಟು. ಆದರೆ ಯಾವಾಗ ಅದು ದಳವೇರಿ ಹೂ ಬಿಟ್ಟೀತು ಇದರ ನಿಯಮವಿಲ್ಲ (ಇಪ್ಪಕ. ೨೮೦).

[ದಳ$_2$ (= ದಲ) + ಏಱು$_1$ (<ಏಱ್$_1$)]

ದಳಸಂಘಾತ (ನಾ). ಪಡೆಯ ಒಡ್ಡು ; ಸೇನಾಜಾಲ : ಈತನೊಡ್ಡಿನ ಸಾರೆ ಸಂಗರಕಾತುಕೊಂಡದೆ ಕೃಪನ ದಳಸಂಘಾತವೊಂದಕ್ಷೋಣಿ ಸುಭಟರ ಸಾಲ ಮಧ್ಯದಲಿ (ಕುಪ್ಯಾಧೀ. ೩-೧೨). [ದಳ$_2$ (= ದಲ) + ಸಂಘಾತ]

ದಳಸರ(ನಾ). ೧. ದಟ್ಟಣೆ; ಸಾಂದ್ರತೆ; ಹುಲುಸು: ಪೈರು ದಳಸರವಾಗಿ ಬೆಳೆಯಿತು (ರೂಢಿ). ೨. ಗಟ್ಟಿಮುಟ್ಟಾಗಿರುವಿಕೆ ; ದೇಹದಾರ್ಢ್ಯ : (ಸ್ಯಾಂಡರ್). ೩. ದರ್ಪ : ಅರಸನು ದಳಸರದಿಂದ ಆಳಿದನು (ರೂಢಿ).

[ದಳ$_1$ + – ಸರ$_7$./ತುಳು. ತೆಲು. ದಳಸರಿ]

ದಳಸು, ದಡಸು (ನಾ). ೧. ಮಂದವಾದುದು ; ಗಟ್ಟಿಯಾದುದು; ೨. ದಟ್ಟವಾದದು ; ಒತ್ತಾದುದು : "ದಡಸು, ಸಾಂದ್ರ, ಒತ್ತು" (ಪ್ರಭಣ್ಣ). ರಾಗಿ ದಳಸಾಗಿ ಬೆಳೆದಿದೆ (ರೂಢಿ). ೩. ಗಟ್ಟಿಮುಟ್ಟಾಗಿರುವಿಕೆ; ದೃಢತೆ : (ಸ್ಯಾಂಡರ್). **ದಡಸು** : ೧. ಚಿನ್ನವು ವ್ಯವಹಾರದಲ್ಲಿ ಎಲ್ಲಕ್ಕೂ ಹೆಚ್ಚು ದಡಸಾದ ಪದಾರ್ಥವಿರುತ್ತದೆ (ಮುಂಬಯಿ. ೫-೩೪) ; ಇದು ವರ್ಣವೂ ಗಂಧವೂ ಇಲ್ಲದ್ದಾಗಿ ಎಣ್ಣೆಯಂತೆ ಸ್ವಲ್ಪ ದಡಸಾಗಿರುವುದು (ಮುಂಬಯಿ. ೬-೩೫). [ದಳ$_1$ + – ಸು$_2$]

ದಳಾದುಳಿ 'ದಟದುಟ' ನೋ.

ದಳಿ$_1$ 'ತಳಿ$_2$' ನೋ.

ದಳಿ$_2$ (ನಾ). ೧. ಎಲೆ ; ಪತ್ರ : "ದಳಿ = ಪತ್ರಂ" (ಶಮದ. ಪರಿ. ೨). ೨. (ಕರಾ) ತಡಿಕೆ ; ಮರದ ಸಲಕೆಗಳಿಂದ ಎಡೆ ಬಿಟ್ಟು ಮಾಡಿದ ಗೋಡೆ; ತಟ್ಟಿಗೋಡೆ: ಅದರ ಆಚಿನ ಚಾವಡಿ, ಅಡುಗೆಯ ಮನೆಗಳು, ನೀಲವಾದ ಲಾಯಗಳು. ಅವಕ್ಕೆ ಎದುರಿನ ದಳಿಯಿಂದ ಒಳಗಡೆ ಬೆಳಕು ಬರುತ್ತದೆ (ನಂಬಿನಾ. ೪). 'ತಟಿ', 'ದಳಿಕೋಣೆ' ಪರಾ.

[ದೇ.II ತಮಿ. ತಟ್ಟೈ; ಮಲ. ತಟ; ತುಳು. ದಳಿ./ಸಂ. ದಲ]

ದಳಿಂಬ, ದಣಬ, ದಣಿಂಬ, ದಣಿಬ, ದಣಿಬು, ದಣುಬ, ದಳಿವ (ನಾ). ೧. ಶುಭ್ರವಾದ ಬಟ್ಟೆ ; ದುಕೂಲ ; ಮಂಡಿ : ವಿವಾಹಮಂಟಪದ ನಡುವಣ ಮಣಿಮಯ ವೇದಿಕೆಯ ಹಾಟಕಪೀಠದ ಮೇಲೆ ಪಾಸಿದ ದುಗುಲದ ದಳಿಂಬದೊಳಿರಿಸಿದಾಗಳ್ (ಆದಿಪು. ೪-೪೭ ಪ); ತೀರ್ಥಜಲಂಗಳಂ

ಮಿಂದು ದಳಿಂಬವನುಟ್ಟು ಮುತ್ತಿನ ತೊಡಿಗೆಗಳಂ ತೊಟ್ಟು ದರ್ಭ ಶಯನದೊಳಿರ್ದು (ಪಂಪಭಾ. ೧-೧೧೮ ವ); ವಧೂಕಾಂತರಿರ್ವರುಮಂ ವಿವಾಹವೇದಿಕಾಮಧ್ಯದೊಳ್ ದಳಿಂಬದಿಂ ಪಚ್ಚವಡಿಸಿದ ಪಳಿಕಿನ ಪಟ್ಟವಣೆಯೊಳಿರಿಸಿ (ಚಂದ್ರಪು. ೬-೭೦ ವ); ಪರದಂ ಕೂಟಂ ಕಲಸಿ ಪಲವುಂ ಬಾಡುವೆರಸಿ ಕೂಟನೊಂದು ದಳಿಂಬದ ಕಪ್ಪಟದೊಳ್ ಕಟ್ಟಿ ಕೊಟ್ಟಡೆ (ಬಂಹರಿ. ೧೪-೩೦ ವ); ಪಾಸಿದ ದಳಿಂಬಮುಗುರ್ಗಳ ಕೇಸಡಿಗಳ ಚರಣಭೂಷಣಗಳ ರುಚಿಯಿಂ ಬಾಸಣಿಸಿ ಚಿತ್ರಪಟಮಂ ಪಾಸಿದವೊಲಿರೆ (ಅನಂಪು. ೬-೫೪); ತಿಳಿನಗೆಯ ಮಣಿವಾರಿಯೊಳ್ ಮಿಂದಳುಟ್ಟಳು ಮುಡಿ ಮುಳುಗೆ ಬಿಳಿ ದಳಿಂಬಮಂ ಮಡಿಗೆ ನೂರ್ಮಡಿ ಮೆರೆಯೆ ಕಡುನೋಂಪಿ (ಶ್ರೀರಾಮಾ. ೮೬೧-೨೯೨). ೨. ಹಾಸಿಗೆ; ಶಯ್ಯೆ: ಗಂಧರ್ವಕನ್ಯಾಕರ ಗ್ರಹಣಪೂರ್ವಕಂ ಬಂದಾಕೆವೆರಸು ದಳಿಂಬದೊಳ್ಕುಳ್ಳಿರ್ದು (ಕಾದಂಉ. ೩೨೦); ಅವನಿಪಾಲಕನಲರ್ಗಳ ತಲೆಗಿಂಬಿನಿಂದಮಲರ ಮಲಂಗಿಂದಲರ ದಳಿಂಬದಿನಿಂಬಾದಲರ್ವಾಸಿನ ಮೇಲೆ ಲೀಲೆಯಿಂ ಕುಳ್ಳಿರ್ದಂ (ಪಾರ್ಶ್ವಪು. ೯-೩೦). ದಣಬ: ೧. ಬಂದ ಸುಕುಮಾರಕರುವೆರಸವ ಮಿಂದು ದಣಬವನುಟ್ಟು (ಪಶುಭಾ. ೬-೬). ದಣಿಂಬ: ೧. ತೊಳಗುವ ದಣಿಂಬಂಗಳಂ ಮೇಲೆ ಮಿಗೆ ಹಾಸಿ ಅಳಿಗಳಱಸುವ ಸುಪ್ರಸವಕುಲಮುಮಂ ಹಾಸಿ (ಪಾಹೂರ. ಹ. ೩೨೫-೧೨); ಮೊಳೆವ ಪುಳಕಂಗಳಾಭರಣಮಂ ತೊಟ್ಟು ಸಂತಸದಣಿಂಬವನುಟ್ಟು (ಸಿದ್ಧರಾ. ೩-೪೦). ೩. ಮಡಿಯಾದ ಸೀರೆ; ಶುಭ್ರವಾದ ಸೀರೆ: ಚಾತುರ್ಥಿಕಾಸ್ನಾನಮಂ ಮಾಡುತಂ ದಣಿಂಬವನುಟ್ಟಳು (ಚೇರಮ. ೩-೮); ಪರಿಮಳೋದಕದಿಂ ಜಳಕಂಬೆಂಕ್ಕು ದಣಿಂಬಮನುಟ್ಟು . . . ಸಡಗರದಿನೇಳ್ತಂದು ಶಿವಾಲಯಮಂ ಪೊಕ್ಕು (ವೃಷವಿ. ೯-೭೦ ವ). ದಣಿಬ: ೧. ಧೋತ್ರದ ದಣಿಬವನು ನಿಱಿವಿಡಿದು ಮಹಳದ ಮನೆಯ ಚೌಕದಲಿ ಮಣೆಗೆ ಮಂಡಿಸಿ ಕುಳ್ಳಿತುಂಬೌತಣದ ವಿದ್ಯವ ಬಲ್ಲಿರಲ್ಲದೆ ರಣವಿಚಾರದ ವಿದ್ಯೆ ನಿಮಗೇಕೆ (ಕುವ್ಯಾವಿ. ೭-೦೨); ಸುಲಿದು ಪಲ್ಗಳ ಮಿಂದು ದಣಿಬದ ಸೀರೆಯನೊಲಿದುಟ್ಟು . . . ಅರ್ಚಿಸಿದಳು (ಕುರಾಸಾಂ. ೨೬-೧); ಉರೆ ಸಚೇಲಸ್ನಾನಮಂ ಮಾಡಿ ದಣಿಬವನು ಧರಿಸಿ (ಮಹಾಂತೇ. ೧೩-೧೫). ೨. ಪಾಸಿದ ದಣಿಬದೊಳೆಲ್ಲರು ಪಲ್ಯಂಕಾಸನದೊಳ ಗೊಲ್ದು ಕುಳಿತು ... ಭಾಸುರ ಸ್ತುತಿಯ ಮಾಡಿದರು (ಭರಚ. ೧೮-೮೩); ದುಗುಲ ಪಾಸಿದ ದಣಿಬದ ಮೇಲೆ ಮುದದಿಂ ಸುಗುಣದಂಪತಿಗಳೀರ್ವರನು ಅಗಣಿತಹರುಷದಿ ನಡಸಿದರು (ಅನಂಪ. ೭-೧೧೪). ೩. ಕೊಡಗೂಸು ವಾಗಳೆ ದಂತಧಾವನಗೆಯ್ದು ಮಿಂದೊಲವಾಂತು ದಣಿಬವನುಟ್ಟು ಭಸಿತ ವನಿಟ್ಟು ಭಾಳದಲಿ (ಬಸಪು. ೧೪-೫). ದಣಿಬು: ೧. ಉಟ್ಟ ದಣಿಬು ಸುಲಿ ಪಲ್ಬಿಟ್ಟ ನಿಡುಜಡೆ ಇಟ್ಟ ವಿಭೂತಿಯ ಬೊಟ್ಟು ಕಟ್ಟಿದ ಬಹುರಕ್ಷೆ ಹೊಸ ಪೊಂಜುರಿಗೆಯ ಕಟ್ಟಾಳು ಕಣ್ಗೆ ರಾಜಿಸಿದ (ಶ್ರೀಪಾಲ. ೮-೩೮). ದಣುಬ: ೧. ಆ ರಾಜಭವನದೊಳೊದಱುವ ಪರಿಚಾರಕಿಯರ್ ಕೆದಱುವ ಪೂವಲಿ ಗಳ್ . . . ಪಾಸುವ ದಣುಬಂಗಳ್ಸೂಸುವ ನೀರಾಜನಂಗಳ್ (ನಾಗಕು. ೫-೬೦ ವ). ದಳಿವ: ೧. ತೊಟ್ಟೆಕ್ಕವಡಂ ಮರವಿಲ್ ಕಟ್ಟಿದ ಪಣೆಕಟ್ಟು ಬೇಂಟೆವಱ ದೊರೆಯೊಳೊಡಂಬಟ್ಟಸಿಯ ಸುರಗಿ ದಳಿವದ ತೊಟ್ಟಂಗಿಗೆ ತನ್ನೊಳ ಮರೆ ಬೇಂಟೆಯನೊರ್ವಂ ಬಂಮ (ಪಂಪಭಾ. ೫-೩೬); "ಮೇಲುಹೊದಿಕೆ" (ಪಂಪದೀ. ೧೯೩).

[?$_2$/ತುಳು. ದಳಿಯ = ಮೈಲಿಗೆ ಕಳೆಯುವುದು, ಮಡಿಮಾಡುವುದು; ತೆಲು. ದಡಿವ, ದಡಿಬ, ದಡಿಮ. ದಲಿಮ = ಉತ್ತರೀಯ, ದುಪ್ಪಟಿ./ಪ್ರಾ. ತಲಿಮ./ಸಂ. ತಲಿಮ]

ದಳಿಕೋಣೆ (ನಾ). ಒಂದು ಪಾರ್ಶ್ವದಲ್ಲಿ ಗೋಡೆಯ ಬದಲು ಮರದ ಕಟಕಟೆ ಅಥವಾ ಕಟಾಂಜನವಿರುವ ಕೋಣೆ: (ಕಿಸಂಗ್ಲಾ. ೮೧).

[ದಳಿ$_2$ + ಕೋಣೆ$_2$ (<ಕೋಣ್)]

ದಳಿಗವಟಿಗೆ (ನಾ). ಒಂದು ನಾಡಿನ ಹೆಸರು: ಸ್ವಸ್ತಿಶ್ರೀ ಕನ್ನರ ಬಲ್ಲಹ ದಳಿಗವಟಿಗೆಯನಾಳೆ ಮರಗಲ್ಲಗಾಮುಣ್ಡನ ಮಗ ದವೋದೆಱಿ ಮಣ್ಣು ಲೋರಮಿಕೆಗಾಳೊಳ್ಕಾದಿ ಪುಳಗಣ್ಣೊಳು ಸತ್ತು ಸಗ್ಗಿಯಾದಂ (ಎಕ. X (8), ಮಳವ. ೧೮೭-೩; ಸು. 820). 'ದಡಿಗವಟಿ' 'ದಟಿಗವಾಡಿ' ಪರಾ. [?]

ದಳಿಗೆ$_1$, ದಳಗೆ (ನಾ). ೧. ಹೊಲಿಗೆ: ಅಂಗಿಗೆ ಒಂದು ದಳಿಗೆ ಹಾಕಿಸಿ ಕೊಂಡು ಬಾ (ರೂಢಿ). ದಳಗೆ: ೨. ಜೋಡಿಸಿ ಹೊಲಿದುದು; ಹೊಲಿಗೆಯ ರೇಖೆ: (ಕಿ). [< ದಳೆ$_1$]

ದಳಿಗೆ$_2$ (ನಾ). ಒಂದು ಬಗೆಯ ಪಾತ್ರೆ: ಧೂಪ – ಒಂದೆಲಗನಸೊಪ್ಪು, ಗಾಂಧಾರಿಸೊಪ್ಪು . . . ಆಡಿನ ಹಿಕ್ಕೆ ಇವುಗಳನ್ನೆಲ್ಲಾ ದಳಿಗೆಯಲ್ಲಿ ಹಾಕಿ . . . ಕುದಿ ಬರುವ ಹಾಗೆ ಕಾಯಿಸಿ ಆ ಹೊಗೆಯಿಂದುಬ್ಬೆಯ ಕಾಯಿಸಲು ವಾತಜ್ವರಂ ತೀರ್ಗುಂ (ಸಕವೈ. ೬೯). 'ಅಳಗೆ$_1$', 'ಅಳಿಗೆ' ಪರಾ.

ದಳಿತ 'ದಲಿತ' ನೋ.

ದಳಿತಜನ 'ದಲಿತಜನ' ನೋ.

ದಳಿತಮರ್ಯಾದ (ನಾ). ಮರ್ಯಾದೆ ಇಲ್ಲದವನು; ನೀತಿಯಿಲ್ಲದವನು; ಮಾನಗೇಡಿ: ಖಳನ ಧೂರ್ತನ ನಾಸ್ತಿಕನ ಚಂಚಳನ ಪರಿನಿಕ್ಷೇಪಹಾರಿಯ ದಳಿತಮರ್ಯಾದನ ಕೃತಘ್ನನ ಭರ್ತೃನಿಂದಕನ . . . ವಿಕಳವ್ರತನ ಲೋಕಾವಳಿಗಳಾಗಲಿ ಕೊಲ್ಲದಿದ್ದರೆ ನಾಳೆ ಸೈಂಧವನ (ಕುವ್ಯಾದ್ರೋ. ೮-೩೮).

[ಸಂ. ದಲಿತಮರ್ಯಾದ (ದಲಿತ + ಮರ್ಯಾದಾ + –)]

ದಳಿತಮಾರ (ನಾ). ಕಾಮನನ್ನು ನಾಶಮಾಡಿದವನು; ಮನ್ಮಥನನ್ನು ಗೆದ್ದವನು: ಜಯ ಜಿನೇಂದ್ರ ನತಸುರೇಂದ್ರ ದುರಿತದೂರ ದಳಿತಮಾರ (ಅಜಿಪು. ೭-೧೫ ರಗಳೆ). [ಸಂ. ದಲಿತಮಾರ]

ದಳಿತಾಂಬುಜ 'ದಲಿತಾಂಬುಜ' ನೋ.

ದಳಿತಾಂಬುಜನೇತ್ರೆ 'ದಲಿತಾಂಬುಜನೇತ್ರೆ' ನೋ.

ದಳಿತಾಬ್ಜ (ನಾ). ೧. ಅರಳಿದ ತಾವರೆ,–ಕಮಲ: ದಳಿತಾಬ್ಜಪ್ರಸರಂ ಸರಂ ಕುಸುಮಮಾಳಾರಾಮಮಾರಾಮಂ (ಜಗವಿ. ೨-೨). ೨. ಅರಳಿದ ಕಮಲಗಳನ್ನುಳ್ಳುದು; ಬಿರಿದ ತಾವರೆಯಿಂದ ಕೂಡಿದುದು. ೧,೨: ಕೊಳಗಳ್ ದಳಿತಾಬ್ಜಂಗಳ್ ದಳಿತಾಬ್ಜಂಗಳ್ ಸಮೃದ್ಧಮಧುಗಳ್ . . . ಬನದೊಳ್ (ಕಾವ್ಯಾವ. ೬೨೩). [ದಳಿತ (= ದಲಿತ) + ಅಬ್ಜ]

ದಳಿತೇಂದೀವರ (ನಾ). ಅರಳಿದ ಕನ್ನೈದಿಲೆ: ಒಂದಿನಿತು ಧೈರ್ಯಮಂ ದಳಿತೇಂದೀವರನಯನೆ ತಾಳ್ದು (ಚಂದ್ರಪು. ೮-೯).

[ದಳಿತ (= ದಲಿತ) + ಇಂದೀವರ]

ದಳಿತೇಕ್ಷಣೆ (ನಾ). ತೆರೆದ ಕಣ್ಣವಳು; ಬಿಡುಗಣ್ಣವಳು: ಬೆಮರ್ತುದು ತನುಶಶಿಮಣಿಶಲಾಕೆ ದಳಿತೇಕ್ಷಣೆಯಾ (ಲೀಲಾವ. ೭-೯೦).

[ಸಂ. ದಲಿತೇಕ್ಷಣಾ (ದಲಿತ + ಈಕ್ಷಣ + –)]

ದಳಿಯಿಸು 'ದಳಿಸು$_2$' ನೋ.

ದಳಿವ 'ದಳಿಂಬ' ನೋ.

ದಳಿವಿಡಿ (ಕ್ರಿ). "ಕೂಡಿಸು, ತೆತ್ತಿಸು, ಹತ್ತಿಸು, ಕಟ್ಟಿಸು" (ಆದಿಪು. ಕೋಶ): ಹಾರಾದ್ಯಾಭರಣಂಗಳಿನಾ ರೂಪಾಶ್ಚರ್ಯಮಾಗೆ ಮಾಣಿಕಚಟ್ಟಂ ನೀರಂಜಿಸಿ ದಳಿವಿಡಿದ ಮಹಾರತ್ನದ ದೊರೆಗೆವಂದುದಾ ಸ್ತ್ರೀರತ್ನಂ (ಆದಿಪು. ೪-೪೨). [ದಳಿ$_0$ (<ದಳೆ$_1$) + ಪಿಡಿ$_1$]

ದಳಿಸು$_1$ (ಕ್ರಿ). ಅರಳು; ದಳ ಬಿಡು: ಇಂದು ಕೆಂದಾವರೆಯ ದಳ ದಳಿಸಿ ದಾರಿಯಲಿ ಗಂಧದೌತಣ ಹೋಗಿ ಬರುವ ಜನಕೆ (ನಡಬಂ. ೨೦-೧).

[ದಳ$_2$ (= ದಲ) + – ಇಸು$_3$]

ದಳಿಸು$_2$, ದಳಿಯಿಸು (ಕ್ರಿ). ೧. ನಾಶಮಾಡು; ಹಾಳುಮಾಡು: ಎನ್ನಂ ದಹಿಸಿ ದಳಿಸುವ ದವಾಗ್ನಿಗೆಯುನ್ನತಿಕೆಯ ಸತ್ತ್ವಮನಿರದೊದವಿಪ

. . . ಗಾಳಿ ಎನ್ನೊಳೆ ಪುಗೆ ಕೇಡೆನಗಿರದಪ್ಪುದು (ಜಯಕಾ. ೧೫-೨೭). ದಳಿಯಿಸು : ೨. ಸೀಳಂ ; ಬಗಿ: ಅಸುಹೃತ್ಕರಿಯಂ ಹೆಲಿ ದಳಿಯಿಸು ವಂದುಚ್ಚಳಿಸಿ ಪುದಿದ ನೆತ್ತರ ಕೆಂಪಾಗಸದೊಳ್ ತೋಱುವುದಿನ್ನುಂ ಕಿಸು ಸಂಜೆಯ ನೆವದೆ ದಿವದ ರಾತ್ರಿಯ ಪುಗಿಲೊಳ್ (ಜಗವಿ. ೮-೪೪).

[ದಳನ (= ದಲನ) + – ಇಸ್ಸು$_3$]

ದಳ್ಳೆ$_1$ (ಕ್ರಿ). ೧. (ಮರದಲ್ಲಿ ಎಲೆ, ಹೂವು, ಹಣ್ಣು ಮೊದಲಾದಂವು) ಒತ್ತಾಗಿ ಬೆಳೆ; ದಟ್ಟವಾಗಿ ಬೆಳೆ; ವಿಪುಲವಾಗಂ: ಮುಗಿಲ್ಗಳತಿ . . . ಪೆರ್ಮಳೆಯನು ಸೂಸದು ದಳೆದ ಪೂ ತಳಿರ್ಗಳಿಂಪಿನ ಸೊಂಪು ಮಾಸದು ತರುಗಳಲ್ಲಿ ಪಣ್ಕಾಯ್ಗಳಂ ಬೀಯಲೀಸದು ಸಮಸ್ತ ಋತುಸಮಯಂ ಗಳಚಲೇಂದ್ರತನುಜೆ ತಪಮಿರೆ ಬನದೊಳು (ಜೈಮಿಭಾ. ೦೬-೦೭). ೨. ಹೊಲಿಗೆ ಹಾಕು ; ಹೊಲಿ : ಸಕಲ ಶರೀರದಂಗಿಯ ಪೊಲಿದುವಾಯುಃ ಕರ್ಮದೆಳೆಗಳನು ಸೇರಿಸಿಯೆ ದಳೆದಂಬರವನು ವಿಸ್ತಾರದಾಕಾಶವನು ಮಿಗೆ ಗೂಡಾರಮಂ ಪೊಲಿದೆತ್ತಿದಂ ಕನಕಾದ್ರಿಕಂಬದೊಳು (ಶಂಕದಾ. ೪-೩೨). ೩. (ಮೈ ಮೇಲೆ ಸಿಡುಬು ಮುಂತಾದಂವು) ಸಂರಿ : 'ತಳ್ಳೆ$_1$' ಪರಾ. [ದೇ.॥ ತಮಿ. ತಳ್ಳೆ, ತಟ್ಟೆ; ಮಲ.ತಟ್ಟೆ]

ದಳ್ಳೆ$_2$ 'ತಳ್ಳೆ$_3$' ನೋ.

ದಳ್ಳೆ$_3$ (ನಾ). ೧. ಎರಡು ಬಟ್ಟೆಗಳ ಅಂಚುಗಳನ್ನು ಜೋಡಿಸಿ ಹೊಲಿದ ರೇಖೆ ; ಕೂಡು ಹೊಲಿಗೆಯ ರೇಖೆ : (ಕ). ೨. ಗದ್ದೆಯ ಹಾಳೆ ; ಕಾಲುವೆ ದಂಡೆಯ ಗದ್ದೆ ಖ ೧ಕ್ಕೆ ದಳೆವೈನ ಮೊದಲ ದಳೆ ೧ಕ್ಕೆ ಸೀಳು ೩ಕ್ಕೆ ಖ ೧/೪ ಸೀಳು ೩ಕ್ಕೆ ಖ ೧/೪ ಮೂರನೆ ದಳೆ ಸೀಳು ೨ಕ್ಕೆ ಖ ೧/೪ ನಾಲ್ಕನೆ ದಳೆ ಸೀಳು ೨ಕ್ಕೆ ಖ ೧೦ ಅಂತೂ ಸೀಳು ೧೦ಕ್ಕೆ ದಳೆ ೪ಕೆಖ ೧೦ (ಎಕ. XVI, ಚಿಕ್ಕನಾ. ೫೩-೦೬ ; 1639).

[ದೇ.॥ ತಮಿ. ತಳ್ಳೆ]

ದಳೆಕಟ್ಟು (ಕ್ರಿ). (ಹಾಲು ಕರೆಯುವಾಗ) ಹಸು ಮೊದಲಾದಂವುಗಳ ಕಾಲಿಗೆ ಹಗ್ಗವನ್ನು ಕಟ್ಟು : (ಸ್ಯಾಂಡರ್).

[ದಳ್ಳೆ$_2$ (< ತಳ್ಳೆ$_3$) + ಕಟ್ಟು$_1$]

ದಳೆಯಿಕ್ಕಿಸು (ಕ್ರಿ). ದನದ ಕಾಲುಂಗಳಿಗೆ ಹಗ್ಗವನ್ನು ಕಟ್ಟಿಸು : ಕಱೆವ ಕಟ್ಟುವ ಲಾಲಿಸುವ ಮೈದುಱಿಸಿ ದಳೆಯಿಕ್ಕಿಸುವ ಕಱುಗಳ ಕರೆಕರೆದು ಮುಂಡಾಡಿ ತಟ್ಟುವ . . . ಲೀಲೆಯಲಿ ಹರಿಯಿರೆ ಕಂಡನಕ್ರೂರ (ಅಕ್ರೂಚ. ೨-೫೨). [ದಳೆಯಿಕ್ಕು (<ತಳೆಯಿಕ್ಕು) + – ಇಸ್ಸು$_3$]

ದಳೆಯಿಕ್ಕು 'ತಳೆಯಿಕ್ಕು' ನೋ.

ದಳೆಹಾಕು (ಕ್ರಿ). = ದಳೆಕಟ್ಟು : ಈ ಹಸುವಿಗೆ ದಳೆಹಾಕದಿದ್ದರೆ ಹಾಲು ಕರೆಯಲು ಆಗುವುದಿಲ್ಲ. (ರೂಢಿ).

[ದಳ್ಳೆ$_2$ (<ತಳ್ಳೆ$_3$) + ಹಾಕು (< ಪಾಯ್ಕು$_1$)]

ದಳ್ದಳಿ 'ದಟ್ಟಿಟಿ' ನೋ.

ದಳ್ದಳಿಸು 'ದಳದಳಿಸು' ನೋ.

ದಳ್ಳಾಳ 'ದಲ್ಲಾಳ' ನೋ.

ದಳ್ಳಾಳತನ, ದಳ್ಳಾಳ್ತನ (ನಾ). ೧. ಮಧ್ಯಸ್ಥನಾಗಿರುವಿಕೆ : ನಮ್ಮೂರಿನಲ್ಲಿ ಮೂರು ಅಂತಸ್ತಿನ ಜನರಿದ್ದರೆಂದು ಧಾರಾಳವಾಗಿ ಹೇಳಬಹುದು. ಒಂದು ಯಜಮಾನಿಕೆ, ಎರಡನೇದು ಆಳುತನ, ಮೂರನೇದು ಇವರಿಬ್ಬರ ದಳ್ಳಾಳತನ (ಹುಟ್ಟಿಹ. ೬೬). ದಳ್ಳಾಳ್ತನ : ೨. ದಲ್ಲಾಳಿಯ ವೃತ್ತಿ ; ಇನ್ನೊಬ್ಬರ ಮಾಲಿಗೆ ಗಿರಾಕಿಯನ್ನು ಹೊಂದಿಸಿಕೊಡುವ ಕೆಲಸ : ನಗರದೊಳಗಿನ ವ್ಯಾಪಾರ ಮಾತ್ರವಲ್ಲ, ಹೊರನಾಡುಗಳ ವ್ಯಾಪಾರೀ ದಳ್ಳಾಳ್ತನವೂ ಅವರಿಗಿತ್ತು (ಕಾಬಝಾ. ೭೫).

[ದಳ್ಳಾಳ (< ದಲ್ಲಾಳ) + – ತನ]

ದಳ್ಳಾಳಿ 'ದಲ್ಲಾಳಿ' ನೋ.

ದಳ್ಳಾಳಿತನ 'ದಲ್ಲಾಳಿತನ$_1$' ನೋ.

ದಳ್ಳಾಳ್ತನ 'ದಳ್ಳಾಳತನ' ನೋ.

ದಳ್ಳಿಸು (ಕ್ರಿ). ೧. ಉರಿಯೇಳಂ ; ಭಂಗಿಲಿಡು ; ಪ್ರಜ್ವಲಿಸಂ ; ಧಗಧಗಿಸಂ : ನಿಶಾಚರಬಲಮಱವಱಗಾದ ಕಾಡನಳುರ್ವ ಬೇಗೆಯ ದಳ್ಳುರಿಯಂತೆ ದಳ್ಳಿಸಿ ಕೊಳ್ಳೆಂದರಾತಿಬಲಮನಳುರೆ . . . ಬಂದು ತಾಗಿದಾಗಳ್ (ಪಂಪಭಾ. ೧೨-೭ ಪ) ; ಅದ್ಭುತನಟನಿಟಿಲಾಲೋಲಕೀಲಾಕ್ಷಿವೋಲ್ ದಳ್ಳಿಸೆ ಕೋಪಾರಕ್ತನೇತ್ರಂ (ಗದಾಯು. ೭-೩೦) ; ಶಿಶಿರೈಕ ನಿಧಾನಮಪ್ಪ ಚಂದನದೊಳೆ ಪುಟ್ಟಿ ಕಿಚ್ಚು ಸುಡದಿರ್ಪುದೆ [ತತ್ಪ್ರಶಮೈಕಕಾರಣಂ ವನನಿಧಿಯಾದೊಡೇ] ನುರಿಯದಿರ್ಪುದೆ ದಳ್ಳಿಸಿ ಬಾಡಬಾನಲಂ (ಕಾದಂಪೂ. ೫೪೦); ದಳ್ಳಿಸೆ ವಹ್ನಿಜ್ವಾಲೆ ದೀರ್ಣಾನನಕುಹರಸಹಸ್ರಂಗಳಿಂ . . . ಫಣಸಹಸ್ರಂಗಳಂ ಬಿರ್ಚಿ ಕಣ್ಗರ್ವಿಸಿ ವಜ್ರಾವರ್ತಚಾಪಂ ಪಡೆದುದು ಭಯಮಂ ಕಾಳಕಾಳಾಹಿರೂಪಂ (ಪಂರಾಮಾ. ೫-೭೪) ; ಘೃತಾಹುತಿವಡೆದನಲನಂತೆ ಮಿಗೆ ದಳ್ಳಿಸಿದಂ (ಶಮದ. ೨೩೦ ಪ್ರಯೋ) ; ಒಡನೊಡನೆ ಕೈಮಾಡಿದನು ಕೈಗಡಿಯನಂಬಿನ ಧಾರೆ ದಳ್ಳಿಸಿ ಕಿಡಿಗೆದಱಿದವು ನೃಪನ ರಥಸಾರಥಿ ಹಯಾಳಿಯಲಿ (ಕುಪ್ಯಾಶ. ೨-೫೭) ; ಉಕ್ಕಿಱಿವ ಕೋಪಾಗ್ನಿ ದಳ್ಳಿಸಿ ದಿಕ್ಕುಗಳನಳ್ಳಿಱಿಯೆ ಲಕ್ಷ್ಮಣನೆಕ್ಕತುಳದಲಿ ಬಂದನು (ತೊರರಾ. ೨-೩-೦೦) ; ಕಡಲೊಡಲ ವಡಬಂ ಬಿಡದೆ ತೀಡುವ ಬಿಱುಗಾಳಿಯ ತೀಟದಿಂ ದಳ್ಳಿಸಲೊಡಮೆಡೆಗೊಂಡ ಬೆಟ್ಟುಗಳ್ ಕರಂ ಸೀಕರಿವೋಗೆ ಪುಟ್ಟಿತಕ್ಕುಂ (ರಾಮಾಶ್ವ. ೨-೨೯). ೨. ಸಂಡಂ ; ದಹಿಸಂ : ವಿಷವನಹಿರಾಜನನಿತಱೊಳುಗುಳೆಯಾ ವಿಷಜ್ವಾಲೆಯಾ ಋಷೀಶ್ವರನ ದಳ್ಳಿಸಲಾಗಳು (ಪಾಸೋಪು. ೧೦-೨೦೬). ೩. ಕವಿ ; ಆವರಿಸಂ ; ಮುತ್ತು ; ವ್ಯಾಪಿಸಂ : "ಅಳುರ್ಕೆಯೆಂದುಂ ದಳ್ಳಿಸಿತೆಂದುಂ ಆವರಿಸಿದುದು". (ಕಶಸಾ ೬೬-೪೭೭) ; "ದಳ್ಳಿಸಿತೆಂದಳುರ್ಕೆಯೆಂದಾವರಿಸಿದುದಕೆ ಪೊಸನಾಮಮಕ್ಕು" (ಕಬ್ಬಿಕ್ಕ. ೫೨); ಇಂಚರಮಂ ವಿಪಂಚಿ ಮೆಱೆದತ್ತಿಲ್ಲೇಕೆ ತನ್ವಂಗಿ ನಿನ್ನ ಸಭಾಸದ್ಮದೊಳೇಕೆ ದಳ್ಳಿಸಿದುದಿಲ್ಲುತ್ತಾನ ವಂಶಸ್ವನಂ (ಮಲ್ಲಿಪು. ೪-೯) ೪. ಹೆಚ್ಚು ; ಉಕ್ಕೇರಂ : ಉಕ್ಕು : ದಳ್ಳಿಸಿ ಕುಕಿಲುತ್ತಂಬುಧಿಯಲ್ಲೋಲಂ ನೆಗಟ್ ನಲಿದು ನರ್ತಿಸಿ ನಡೆದತ್ತಳ್ಳಾಡೆ ನೆಲಂ ಬಲಮದು ಕೊಳ್ಳೆಂದು ಗುಹಾರವಂ ಪೊದಟ್ದೆಸೆ ವಿನೆಗಂ (ಆದಿಪು. ೧೩-೫೩) ; ಕೊಳ್ಳೆನೆ ಕೊಳ್ಳಿವೀಸೆ ಪಡೆಯಂದೆರಡುಂ ದಿಗಧೀಶರೋಡಿದರ್ . . . ಎತ್ತಲುಂ ದಳ್ಳಿಸಿದತ್ತೊ ವೀರರಸವಾರಿಧಿ ವಾತಮಹಾಪ್ರಘಾತದಿಂ ನಿಲ್ಲದೆನಿಪ್ಪಿನಂ ರವಳಿ ಘೋಷಿಸೆ ಭೈರವಮಾದುದಾರಣಂ (ನೇಮಿಪು. ೦೦-೦೨೩) ; ತಿರ್ದುವಂ ಪ್ರಸರದ್ದಂತಿಯ ದಂತದೊಳ್ ಹರಿಯ ದಂಷ್ಟ್ರಾಲೇಖೆಯಂ ಕಿಟ್ತು ತೆತ್ತಿಸುವಂ ಲೀಲೆಯೊಳರ್ಧಚಂದ್ರಶರಮಂ ಮಾಟ್ಟಿಟ್ಟಿಯಿಂದಣ್ಮು ದ[ಪಾಶಾಂ. ವ]ಳ್ಳಿಸೆ ಸಿಂಹೀಶತನೇತ್ರದತ್ತ ಪತಿ ಶೋಕಾವೃಂದಕಂ ವಿಂಧ್ಯಕಂ (ಅರ್ಧನೇ. ೩-೫೩). ೫. ಹೊಳೆ ; ಥಳಥಳಿಸು: ದಿವಿಜೇಂದ್ರಭವನಮೆಂಬೀ ನಿವಾಸದಿಂದತ್ತ ಮತ್ತೆ ಮೇಲಿರ್ದಪುದೆಂದವಗಯಿಪವೊಲಲ್ಲಿಯ ವಾತವಿಧೂತವಿನೂತಕೇತುಗಳ್ ದಳ್ಳಿಸುಗುಂ (ಸುಳುಮಾ. ೧೦-೪೯); ದಾಂಗುಡಿವಿಟ್ಟು ದಳ್ಳಿಸುವ ಕೆಂದಳದಿಂದೊಸೆದೆತ್ತಿ ಲಕ್ಷ್ಮಿ ಕಾಮಂಗೆ ಮಗಂಗೆ ಶೈಶವನಿರೀಕ್ಷಣಕೇಳಿಗೆ ನೇತ್ರಸೂತ್ರದಿಂದಿಂಗಡಲೆಂಬ ಸೆಜ್ಜೆವನೆಯೊಳ್ತೆರೆದೊಟ್ಟಿಲ ಮೇಲೆ ಕೆಂಬರಲ್ದಿಂಗಣಿಗಟ್ಟಿದಂತುದಯಶೈಲಶಿಖಂಡದೊಳಿಂದುಮಂಡಲಂ (ಮಲ್ಲಿಪು. ೭-೨೯). ೬. ಮುಂಚಾಚು; ಮುಂಬರಂ: ಅಳಿನೀಲೀಕಂಚುಕಂ ದಳ್ಳಿಸೆ ಮೊಲೆಯಲೆಪಿಂ ಕಯ್ಯಸೋಂಕಿಂದೆ ಕೆಂಪಂ ತಳೆದೊಪ್ಪಂಬೆತ್ತ ಪೊಂಬೆತ್ತದ ಸೆಳೆಗೆ ತಳಿರ್ಮೂಡಿದಂತಾಗೆ . . . ಎಸೆದು ಬಂದಳ್ ಪ್ರತೀಹಾರಿಯೊರ್ಬಳ್ (ಲೀಲಾವ. ೪-೭೩); "ನೂಕಲ್ಪಡಂ" (ಪ್ರಭಣ್ಣ). ೭. ಅದಿರು ; ಅಳ್ಳಾಡು ; ಅಲಂಗಂ: ಸಿಡಿಲು ಹೊಡೆದಡೆ ಸಿಗುಱುದೋಱದ ಕಡುಹಿನಗ್ಗದ ಶೈಲನುಗ್ಗಿಯದಡಿಗೆ ದ[ಪಾಶಾಂ. ಧ]ಳ್ಳಿ ಸುವುದೆ (ತೊರರಾ. ೬-೨೭-೨೮).

೮. (ಆಲಂ) (ಕೋಪ, ಗರ್ವ, ಅಹಂಕಾರ ಮೊದಲಾದುವುಗಳಿಂದ) ಕೆರಳಂ ; ಉರಿ ; "ಗರ್ವದಿಂದ ಮೆರೆ" (ಪಂಪನಿ) : ಆ ದುಶ್ಶಾಸನನಂ ಪೊರಳ್ಚಿ ರಣದೊಳ್ ಕೊಂದೀ ಮರುತ್ಪುತ್ರನಿಂತಾದಂ ದಳ್ಳಿಸೆ ನೋಡಿ ನೋಡಿ ಪುದುವಾಟಿಂತಕ್ಕುಂ (ಪಂಪಭಾ. ೧೩-೮೮) ; ಬಸಿವ ರಕುತವ ಬಳಿದು ಖಾತಿಯ ಮಸಕದಲಿ ಕೈಮಱಿದು ಮಿಗೆ ದಳ್ಳಿಸುತ ಹೊಗರಿಡು ತೌಡುಗಚ್ಚುತ ಹುಬ್ಬುಗಳ ಬಲಿದು . . . ಪುನರಪಿ ಕಱಿದನಂಬುಗಳ (ಕುಪ್ಯಾಭೀ. ೯-೩೯). ೯. (ಆಲಂ) ಸಡಗರಿಸಂ ; ಸಂಭ್ರಮಿಸು ; ಅತಿ ಆನಂದಪಡು : ಗಿಳಿಗಳೊಳೆ ಗಳಪಿ ಮೊಱಿವಳಿಕುಳದೊಡನಾಳ್ಳಿಸಿ ಪುರುಳಿಯೊಡನೆಳಸಿ ನವಿಲ್ಗಳ ಬಳಗದೊಡನೆ ನರ್ತಿಸಿ ವಿಳಾಸಿನೀನಿವಹ ಮಾಗಳೇಂ ದಳ್ಳಿಸಿತೋ (ಆದಿಪು. ೧೧-೮೨). [ದಳ್ + – ಇಸು$_3$]

ದಳ್ಳಿಱಿ (ಕ್ರಿ). ೧. ತಿವಿ ; ಇರಿ ; ಚುಚ್ಚು : ಮುಗಿಲಂ ಮರಗಳ ತುದಿಗೋಡುಗಳೊಳೆ ದಳ್ಳಿಱಿದೊಡುದಿರ್ದು ಕೆದಱಿದ ಕಿಱುದಾರೆಗಳೆನಿಪುವು ಕಾನನದೊಳೊಗುಮಿಗೆ ಪರೆದಿರ್ದ ಪಿರಿಯ ನೆಲ್ಲಿಯ ಕಾಯ್ಗಳ್ (ಲೀಲಾವ. ೬-೩೪). ೨. ಕಾಂತಿ ಹೊಂದು ; ಶೋಭೆಯನ್ನು ಪಡೆ ; ಹೊಳೆ : ಏಱಿ ವಿಮಾನಮಂ ಕೃತಕಗಾಯಿಕೆಯರ್ ಧವಳಾಭ್ರ ಕೂಟದೊಳ್ ತೋಱುವ ಮಿಂಚಿನಂತೆ ಮುಗಿಲೊಡ್ಡೊಡೆದಿಬ್ಬಗಿಯಾಗಿ ನಿರ್ಭರಂ ಪಾಱಿ ಪತಾಕೆಗಳ್ ಮಗುಟ್ಟು ಮಿಳ್ಳಿಸಿ ದಳ್ಳಿಱಿದಾಡೆ ಯಾನವೇಂ ಕೀಱಿದುದೋ ನಭಃಪ್ರಸೃತಿಗಿಟ್ಟೆಡೆಯಾದುದೆಂಬಿನಂ (ಶಾಂತಿಪು. ೨-೮೨) : ಒಳ್ಳಾನೆಗೋಡಲಱಿಯದ ಬೆಳ್ಳಾಳವೊಲಗಿದು ಕಂಡು ಲಾವಣ್ಯರಸಂ ತಳ್ಳಂಕುಗುಟ್ಟೆ ಮಿಳ್ಳಿಸಿ ದಳ್ಳಿಱಿದಾಡುವ ಜಿನೇಂದ್ರಶಿಶುವಂ ತಳದಿಂ (ಶಾಂತಿಪು. ೧೦-೮). 'ಅಳ್ಳಿಱಿ' ಪರಾ. [ದಳ್ + ಇಱಿ$_1$]

ದಳ್ಳುಬಾಱು 'ತಳ್ಳವಾಱು$_1$' ನೋ.

ದಳ್ಳುರಿ$_1$ (ಕ್ರಿ). ೧. ತೀವ್ರವಾಗಿ ಉರಿ ; ಭುಗಿಲಿಡು ; ಪ್ರಜ್ವಲಿಸು : ೨. (ಆಲಂ) ಕೊಬ್ಬಿನಿಂದ ಉರಿ ; ಗರ್ವದಿಂದ ಮೆರೆದಾಡು. ೧, ೨ : ಮೋಹದಿಂ ನೀಂ ಮಾಡಿದ ಪಲ್ಲವು ಪೊಲ್ಲಮೆಗಳಂ ಸೈರಿಸಿರ್ದೊಡಂ ನೀಂ ಕೊರ್ವಿ ಗಾಳಿಯೊಳ್ಕೂಡಿದ ಕಿರ್ಚಿನಂತೆ ದಳ್ಳುರಿದು ಪೊಟಲೊಳಗೆ ಮುನ್ನಿನೆಡೆಗೀಗಳುಂ ಪಿರಿದಬ[ಬ್ಬ]ರಮಂ ಮಾಡಿದೆ (ಧರ್ಮಾಮ್ಯ. ೨-೯೯). [ದಳ್ + ಉರಿ$_1$]

ದಳ್ಳುರಿ$_2$ (ನಾ). ೧. ಭುಗಿಲಿಡುವ ಕಿಚ್ಚು ; ದೊಡ್ಡ ಉರಿ ; ಪ್ರಜ್ವಲಿಸುವ ಜ್ವಾಲೆ : "ದಳ್ಳುರಿಯು ಪೇರುರಿಯು ಘನಜ್ವಲಿತದೊಳು" (ಶಬ್ದಮಂ. ೦೨) ; ಮುಳಿಸಿನ ದಳ್ಳುರಿಗಳನುಗುಟುತ್ತುಂ ಚಕ್ರರತ್ನಮಂ ಬಗೆದು ಬೆಸಸಿದಂ ಭರತೇಶಂ (ಆದಿಪು. ೧೪-೧೧೫) ; ವಿಜಾತಿರೂಪಮಲ್ಲದ ವಿನತಾಸುತಂ ಮಿಳಿರ್ವ್ವ ದಳ್ಳುರಿಯಲ್ಲದ ವಹ್ನಿ ಕಾಳನಲ್ಲದ ಜವನಬ್ಧಿ ಮಧ್ಯಗತನಲ್ಲದ ಬಾಡಬಂ (ಕಇ. V, ೫೨-೧೮ ; 1087) ; ಸೋಂಕಿದ ಗಾಳಿ ದಳ್ಳುರಿವೊಲಾದುದು ಪೊಕ್ಕ ಸರೋವರಾಂಬು ಕಾಯ್ಪಿಂ ಕುದಿದತ್ತು . . . ನಿಜಾಂಗತಾಪದಿಂ ಪಂಕರುಹಾಕ್ಷಿ ಕಾಮಶಿಖಿ ಪೆಣ್ಬರಿಜಂ ತಳೆದಂತೆ ತೋಱಿದಳ್ (ಕಾವ್ಯಸಾ. ೬೦೩) ; ಬಗೆದು ಧಂಧಗಧಗಧಗಂ ಘುಳುಘುಳೆಂದುಬ್ಬಿ ನೆಗೆದು ದಳ್ಳುರಿ ಬಳ್ಳಿವರಿದು ಕತ್ತಲಿಸಿ . . . ದಾವಾಗ್ನಿ ಮುತ್ತಿತ್ತು ನಾಲ್ದೆಸೆಯನಂ (ಹದಕಾ. ೧೦-೬); ಅರಗಿನರಸನ ಬಾಗಿಲಲಿ ದಳ್ಳುರಿಗೆ ತಡವೇ (ಕುಪ್ಯಾದ್ರೋ. ೫-೪೧) ; ಆ ದಳ್ಳುರಿಯ ಕೆಂಬೊಗೆಯು ಎತ್ತಲೂ ಚಿಮ್ಮಿ ಕಾಡ ದಾರಿಗರನ್ನು ಭೀತಿಗೊಳಿಸಿದೆ (ನೂರಜ. ೦). ೨. ಬಿಸಿ ; ಝಳ ; ತಾಪ ; ಶಾಖ: ಸಕಲದಿಗಂತರಂಗಳೊಳ್ ದಳ್ಳುರಿಯನುಗುಟ್ಟ ತೀವ್ರರಶ್ಮಿಜಾಲಮಂ ಪಸರಿಸುತ್ತಂ ನಿದಾಘಸಮಯ ಸಹಸ್ರಭಾನುಮಂಡಲಂ ಮಧ್ಯಾಹ್ನವರ್ತಿಯಾಗೆ (ಕಾದಂಉ. ೪೫೭) ; ನಾಸಿಕದುಸಿರ ದಳ್ಳುರಿ ಮೂಕುತಿ ಗಂಧಗ್ರಾಸ ಸಂತಾಗಿ ಮೆಯ್ಯೊಳಗೆ ಪೂಸಿದ ಸಿರಿಗಂದ ಕರಿಕಾದುದು (ಮೋಹತ. ೨೮-೧೭) ;

ದಳ್ಳುರಿಗರೋತ್ತಮ = ವಿಷಜ್ವಾಲೆಯುಳ್ಳ ಮಹಾಪರ್ಸ : ರಜ್ಜುವ ದೆತ್ತ ದಳ್ಳುರಿಗರೋತ್ತಮನೆತ್ತ ವಜ್ರವೆತ್ತಾಲಿಕಲ್ಲೆತ್ತ ಮಜ್ಜೀವಿತೇಶ್ವರ ನೆತ್ತ ನೀನೆತ್ತ ಕೇಳ್ ದುರ್ಜೀವಿ ತೆರಳೆಂದಳೊಲಿದು (ಮೋಹತ. ೬-೨೪); "ದಳ್ಳುರಿಯಂತೆ ಉರಿಯುತ್ತಿರುವ ವಿಷಜ್ವಾಲೆಯಿಂದ ಮಹಿವೆಂ ಹೊಂದಿದ ಕೃಷ್ಣಸರ್ಪ (?)" (ಮೋಹತ. ಅಡಿಟಿ). ದಳ್ಳುರಿಗೆಂಡ = ನಿಗಿನಿಗಿಕೆಂಡ ; ತಳಲುಗೆಂಡ : ಸಿರಿಖಂಡದನುಲೇಪ ತನುವಿಗತಿಶಯತಾಪ . . . ಪರಪಿದಸುಗೆಯ ತಳಿರ ತಂಡ ದಳ್ಳುರಿಗೆಂಡ (ಸೌಂದಪು. ೮-೭೬). ದಳ್ಳುರಿ ಜ್ವಾಲೆ = ಧಗಧಗಿಸುವ ಉರಿಯ ನಾಲಗೆ : ಕಾಳುಕಿಚ್ಚೆದ್ದಡವಿಯನು ಕುಡಿನಾಲಗೆಯೊಳಳವಡಿಸಿ ದಳ್ಳುರಿ ಜ್ವಾಲೆ ತಗ್ಗಿದವೋಲು . . . ಸುರಪಾಲತನಯನ ತನಯನಸ್ತಮಿಸಿದನು ರಣದೊಳಗೆ (ಕುಪ್ಯಾದ್ರೋ. ೬-೬೦). [ದಳ್ + ಉರಿ$_2$]

ದಳ್ಳುರಿತಿರುಳು 'ದಳ್ಳುರಿದಿರುಳು' ನೋ.

ದಳ್ಳುರಿದಿರುಳು, ದಳ್ಳುರಿತಿರುಳು (ನಾ). ಉರಿಯುತ್ತಿರುವ ಬೆಂಕಿಯ ತಿರುಳು ; ಗಟ್ಟಿಕೆಂಡ : ಮುಳಿದು ಮಿಸೆಯ ಮುರಿದು ಹುಬ್ಬನು ಬಲಿದು ದಳ್ಳುರಿದಿರುಳನಕ್ಷಿಗಳೊಳಗೆ ಪಸರಿಸಿ ಘುಡುಘುಡಿಸಿ ರೋಮಾಳಿ ಸೈನಿಮಿರೆ . . . ಭಾರ್ಗವದತ್ತಬಾಣಕೆ ನೀಡಿದನು ಕರವ (ಕುಪ್ಯಾದ್ರೋ. ೧೩-೫೧). ದಳ್ಳುರಿತಿರುಳು : ನೆರೆದುದಸುರರು ಕಾಲಕೂಟದ ಕರುವಿನೆರ ಕವೊ ಸಿಡಿಲ ದಳ್ಳುತಿರಿರುಳ ದಡ್ಡಿಯೊ ವಿಲಯಭೈರವನುಬ್ಬಟೆಯ ಪಡೆಯೊ . . . ಗಾಢಾಯ ತೇಜದ ದುರುಳ ದಾನವ ಭಟರು ಬಂದುದು ಕೋಟಿ ಸಂಖ್ಯೆಯಲಿ (ಕುಪ್ಯಾಅ. ೧೨-೨೯). [ದಳ್ಳುರಿ$_2$ + ತಿರುಳು (<ತಿರುಳ್)]

ದಳ್ಳುರಿದುಱುಗಲು (ನಾ). ಉರಿಯುತ್ತಿರುವ ಜ್ವಾಲೆಯ ಸಮೂಹ,– ಗುಂಪು ; ಜ್ವಾಲಾಸಮೂಹ : ಹೊಗೆಯನೊದೆದೊಳಬಿದ್ದು ಕಿಡಿಗಳನುಗಿದು ದಳ್ಳುರಿದುಱುಗಲನು ತನಿಬಿಗಿದು ಭೀಮನ ರಥದ ಸುತ್ತಲು ಸೂಸಿ ತೆರೆಮಸಗೆ . . . ಉರವಣಿಸಿತಮಳಾಸ್ತ್ರ (ಕುಪ್ಯಾದ್ರೋ. ೧೯-೪೭); ಬಿಱುನಗೆಯಲಿಂದ್ರಾರಿ ದಳ್ಳುರಿದುಱುಗಲಿನ ಕೊಳ್ಳಿಗಳಲಿದ್ದೆಸೆಗೊಱಗ ದಂತಿರೆ ಕಟ್ಟಿದರು ಕಂಭದಲಿ ಹಳವಿಗೆಯ (ತೊರರಾ. ೫-೭-೦೦).

[ದಳ್ಳುರಿ$_2$ + ತುಱುಗಲು (<ತುಱುಂಗಲ್)]

ದಳ್ಳುರಿಧಾರೆ (ನಾ). ದಳ್ಳುರಿಯಂತೆ ಹೊಳೆಯುವ ಅಲಗು : ಸಾರಥಿಯ ಕೊಂದಲ್ಲದರ್ಜುನ ತೀರುವವನಲ್ಲೆನುತ ದಳ್ಳುರಿಧಾರೆಯಂಬೈದ ಬಲಿ ದೇವನನೆಸಲು (ಕುಪ್ಯಾದ್ರೋ. ೩-೫೪). [ದಳ್ಳುರಿ$_2$ + ಧಾರೆ]

ದಳ್ಳೆನ್ (ಕ್ರಿ). 'ದಳ್' ಎಂದು ಶಬ್ದ ಮಾಡು: ಇವೆ ಕೋಪಾನಲಧೂಮ ಲೇಪೆಯೆನೆ ಪುರ್ವುರ್ವೆಟ್ಟು ಜರ್ವಲ್ ತಗುಳ್ದುವು . . . ಕೋಪಾನಲ ತಾಪದಿಂ ರಣರಸಂ ದಳ್ಳೆಂದು ಕಾಯ್ದುಕ್ಕುವಂತೆವೊಲಾಗಳ್ ಬೆಮರ್ಗಳ್ ಕಪೋಲತಲದೊಳ್ ತಳ್ಳೊಯ್ದುವಾ ದೈತ್ಯನಾ (ಪಂರಾಮಾ. ೯-೪೮) ; ನಿಶಾಚರನ ಕೋಪೋಗ್ರಾನಳಂ ಪೊತ್ತುತುಂ ಪೊಗೆಯುತ್ತುಂ ಕಿಡಿಗುಟ್ಟುತುಂ ಮಸೆಯುತುಂ ದಳ್ಳೆಂಬ ಭೋರೆಂಬ ಭುಗ್‌ಭುಗಿಲೆಂಬೇಟ್ಗೆಯನಾಂತು ಕೇಸುರಿಗಳಂ ಸೂಸಿತ್ತಗುರ್ವಪ್ಪಿನಂ (ಜಗವಿ. ೧೫-೪೦) ; ಜವದಿಂ ಬಂದುದು ದಳ್ಳೆನುತ್ತುರಿವ ಮೆಯ್ಯುಂ ಧೂಮದುರ್ಬೆಂಬ ಜರ್ಬುವ ಪುರ್ಬುಂ . . . ರೌದ್ರಜ್ವರಂ ತಪ್ತಹೇಮವಿಭೂಷಂ ತ್ರಿಶಿರತ್ರಿಪಾದ ವರುಣಾಕ್ಷಂ ರೂಕ್ಷರಕ್ಷಾಯುಧಂ (ಜಗವಿ. ೦೮-೦೩). [ದಳ್ + ಎನ್$_1$]

ದಱದಱ, ದರದರ$_1$ (ನಾ). ಒಂದು ಅನುಕರಣ ಪದ : ದಱದಱ ಮೆಂದೆಟಿದು ಪುಯ್ಯಲಿಡೆಯಿಡೆ ಕೊಲ್ಗುಂ (ಅಜಿಪು. ೧೦-೨೮) ; ಧುಳು ಧುಳುಂ ದೊಪ್ಪೆಂಬ ಗುಱುಗುಱು ಧಳಧಳಂ ಜೋಱಿಂಬ ದಱದಱ ದೊಳದೊಳೆಂಬೀ ಧ್ವನಿಗಳವನಿಗೆ ಭಯವನೀವುತಿರೆ (ಸಾನಂದ. ೮-೧೩). ದರದರ$_1$: ಕುರ್ಚಿಯನ್ನು ಕೈಗೆ ಎತ್ತಿಕೊಳ್ಳದೆ ದರದರ ಎಂದು ಎಳೆದು ನೆಲವನ್ನು ಗಾರು ಮಾಡಬೇಡ (ರೂಢಿ). 'ದರದರನೆ' ಪರಾ.

ದಱದಱನೆ, ದರದರನೆ (ಅ). (ಎಳೆದುಕೊಂಡು ಹೋಗುವಾಗ) ದರದರ ಎಂದಂ : ತಲೆನವಿರಂ ಹಿಡಿದು ದಱದಱನೆಟ್ಟಿದುಕೊಂಡು ಬಂದಂ (ಪಡ್ಮಾರಾ. ೧೧೭-೨೫); ದಱದಱನೆಟ್ಟಿಯೆಟ್ಟಿ ಪಿಡಿಪಿಡಿ ತಱಿತಱಿ . . . ಕೊಱ್ಱಿಕೊಱ್ಱಿಯೆಂದೊದಱಿ ಗಜಱಿ ಗರ್ಜಿಸಿ ಮುಳಿವರ್ (ಅಜಿಪು. ೧೧-೯); ಕಿಡಿಪೇಂ ಕರ್ಮಮನೊಳ್ಪಂ ಪಡೆವೆನೆನುತ್ತಿರಲಾತ್ಮನಾತ್ಮನ ಕಾಲಂ ಪಿಡಿದು ದಱದಱನೆ ಕರ್ಮಕ್ಕಳಿಪಿಂದೆಟ್ಟಿದೊಯ್ದು ನೂಂಕುಗುಂ ಸಂಸೃತಿಯೊಳ್ (ಸಮಪ. ೧೩-೫೨). **ದರದರನೆ** : ಹಿಂದೆ ಮುಂದೆ ನೋಡದೆ ದರದರನೆ ಎಳೆದೊಯ್ದರು (ರೂಢಿ). [ದಱದಱ + – ಅನ್ನೆ$_1$]

ದಟ (ನಾ). ೧. ಬಲ ; ಸೈನ್ಯ ; ಪಡೆ : "ಪಡೆ, ಅಣಿ, ದಟಂ, ಒಡ್ಡು ಬಲಂ–ಈ ೫ ಸೇನೆ" (ಕಶಸಾ. ೧೪-೨೮೦); ಕೆದಱಿ ಚತುರ್ಬಲಂ ಬೆದಱಿ ತಳ್ತ ದಟಂ ಕೆಡೆದಱ್ಗೆ ತಱ್ಗಿ ಮಾಣದೆ ಪೆಱಗಿಟ್ಟು ಬಾಯ್ವಿಡೆ ಘಟಾಳಿ ಮಾಣದೆ ಪೆಣೆದಂ ಹರಂ ದಿಗಿಭದೊಳ್ ದಿಗಿಭಂ ಪೆಣೆವಂತೆ ಪಾರ್ಥನೊಳ್ (ಪಂಪಭಾ. ೮-೨೧); ನಾಲ್ಕುಂ ದಟಂ ನೂಂಕೆ ನುರ್ಗುವೆಂ (ಕಬ್ಬಿಕಾ. ೧೫೪); ಊರವರ್ ಪುರದಿಂದಂ ಪೊಱಮಟ್ಟು ಪೊಕ್ಕು ದಟಮಂ ನೆರ್ಗುತ್ತೆ ನುರ್ಗುತ್ತೆಯೊತ್ತರದೊಳ್ ಮತ್ತಿದಿರಾಗೆ . . . ಶಿವಂ ಬಟ್ಟಾಡಿ ಬಿಟ್ಟೋಡಿದಂ (ಜಿಕವಿ. ೫-೨೨). ೨. ಕಂದುರೆಗಳ ಪಡೆ ; ತುರಗಬಲ : "ದಟಂ = ತುರಂಗಬಲಂ, ಸಾಮಾನ್ಯಬಲಂ" (ಶಮದ. ಪರಿ. ೧). ೩. ಸೈನ್ಯದ ತುಕಡಿ ; ಸೈನ್ಯವಿಭಾಗ : "ತುರಂಗಬಲದೊಳಮಲ್ಪಬಲದೊಳಂ ದಟವೆಸರ್" (ಸಂಜೀವ. ೧೪).

ದಟವೋಡೆಗಂಡ = ಸೈನ್ಯವು ಓಡಿದಾಗಲೂ ಏಕಾಂಗಶೂರನಾಗಿ ಹೋರಾಡುವವನು ; ಏಕಾಂಗಶೂರ ; ಒಂದಂ ಬಿರುದು : ಮಹಾಸಾಮನ್ತಂ ದಟವೋಡೆಗಣ್ಡನ್ದ್ರಮ್ಮಂಡಳಾಣ್ಮನುಜ್ಞೆನಿಭುಜಙ್ಗಂ ಶ್ರೀಮತ್ಕೃಸೂದ್ರಕಯ್ಯ (ಎಕ. XI, ಹೊಳಲ್ಕೆ. ೨೩-೭ ; 968).

[P ಇದು ದ್ರಾವಿಡ ಶಬ್ದವೆಂದು ಕೆಲವರ ಅಭಿಪ್ರಾಯ]

ದಟಂಬಟನೆ (ಅ). ಒಂದಂ ಅನುಕರಣಾವ್ಯಯ : ಸೀರ್ಪನಿ ಸಿಡಿಯೆ ತೆರೆ ಮಸಗೆ ಕೊಳಂ ತಳಮಳಮಾಗೆ ಮೀಂಗಳ್ ಮೆಯ್ಗರೆಯೆ ದಟಂಬಟನೆ ಕೈಕಾಲ್ಗಳೊಳೀಸುವ ಕಾವನ ಪಟ್ಟದಾನೆಗಳೆಂಬೋಲಾಡಿದರ್ ಬಾಲೆಯರ್ (ರಾಮಾಶ್ವ. ೧೨೩-೨೪). [ದಟಂಬಟ$_0$ + – ಅನ್ನೆ$_1$]

ದಟದುಟ, ದಳದುಳ$_2$, ದಳದುಳಿ, ದಳವುಳ, ದಳವುಳಿ, ದಳಾದುಳಿ, ದಟವುಟ (ನಾ). ೧. ಬಲವಾದ ಸುಲಿಗೆ ; ತುಂಬು ಸೂರೆ ; ಅಧಿಕವಾದ ಕೊಳ್ಳೆ ; ಹೆಚ್ಚಾದ ಲೂಟಿ : "ದಟದುಟಂ (ದಟವುಟಂ) = ಬಲ್ಸೂಱ್" (ಶಮದ. ಪರಿ. ೦) ; "ಬಲ್ಸೂಱ್ಯೊಳಂ ದಟದುಟಮೆಂದೆನೆ" (ಕರ್ಣಾನಿ. ೮೨) ; ದಟದುಟಮಾದುದಾಗಳಸಿಯೇಱಿಸಿದೇ [ಯೇ] ಱಿದು ಬಂದಿ ಬಂದಿ ದಂಡುಟಮೆಲೆ ದಂಡುಳಂ ಪಿಡಿದರಂಗನೆಯಂ ಪಿಡಿದೊಯ್ದರೆಂದು ತಲ್ಲಱಿಸಿ (ಅನಂಪು. ೧೧-೭೩) ; ಗರಗರಿಕೆಯ ದಟದುಟದ ಬಿಂಕದ ಬೀರರುಗ್ಗಡಣೆ ಪಿರಿದಾಗೆ . . . ಪಡೆ ನಡೆಯುತುಮಿರ್ದುದು (ರಾಮಾಶ್ವ. ೫೦-೮). **ದಳದುಳ$_2$** : ೧. ಭಕ್ತಿದಳದುಳದಿಂದ ಬಂದಿಕಾಱರಾಗಿ ಬಂದು ಹೊಕ್ಕಡೆ ಬದನೆಯ ಕಾಯಿಗಳು ಬಾಣಲಿಂಗವಾಗವೆ ನಮ್ಮ ಬಸವಣ್ಣನ ದೃಷ್ಟಿ ತಾಗಲು (ಚನ್ನವ. ಕ. ೮೯-೧೯೧) ; ಹುಸಿ ಕಳವು ದುಷ್ಕೃತಿ . . . ದಳದುಳ ನುಸುಳು ಹಿಂಸೆ ವಿವಾದ . . . ದೋಷಪ್ರಸರವಿಲ್ಲಾ ನೃಪನ ಕಾಲದೊಳ್ (ಜೀವಂಚ. ೨-೫೨) ; ಬೆಳುಗವತೆಯನ್ಯಾಯವಾಱಡಿ ಕಳವು ದಳದು[ಪಾಠಾಂ. ವು]ಳ ಬಂದಿ ಡಾವರ ಕೊಲೆ ಹುಸಿಗಳಿಲ್ಲಿವರ ರಾಜ್ಯದೊಳು (ಕುವ್ಯಾಅ. ೧೮-೦೭) ; ಮರ್ಕಟರ ದಳದುಳದ ದೂಱಿನ ದಕ್ಕಡೆಯತನ ಬಿದ್ದುದೈ ಕರ್ಣಕ್ಕೆ (ತೊರರಾ. ೪-೧೦-೦೭). ೨. ದಾಳಿ ; ಮುತ್ತಿಗೆ ; ಆಕ್ರಮಣ : ರಾಯಕುವರನ ಮದುವೆಗಬ್ಬದಳಾಯತಾಕ್ಷಿಯರನು ವಿಚಾರಿಸಿ ಹಾಯಿದನು ದಳದುಳದೊಳೊಂದು ವಿವಾಹಮಂಟಪಕೆ (ಕುವ್ಯಾಅ. ೨-೩೨) ; ಗಿಳಿಯ ಹಿಂಡುಗಳೆತ್ತ ಗಿಡಿಗನ ದಳದುಳವು ತಾನೆತ್ತ ಭೀಮನ ಸುಳಿವು ಗಡ ಕಾಲೂಱುವವೆ ಕರಿಘಟೆಗಳೊಗ್ಗಿನಲಿ (ಕುವ್ಯಾದ್ರೋ. ೨-೮೦). ೩. ಲೂಟಿ ಮಾಡುವ ಸೈನ್ಯ,–ದಳ : ಚರಣಗತಿಯಲಿ ಬಪ್ಪರಾ ಸರೋಜಾನನೆಯರೊಂಬತ್ತುಕೋಟಿ ಬರಲು ಅರಲ ಬಾಣ ಹೊಲಬು ಗೆಡುವ ಕಾನನವೊ ಹಿಮಕರನ ಮನೆಗೊಲಿದು ದಾಳಿಯನಿಡುವ ದಳದುಳವೊ ವರತಪೋಧನರ ನಿಷ್ಕಾಮನಿಧಿಯಂ ಕಳುವ ಚೋರರೆ ನಲೆಯ್ತಂದರು (ಹಡಕಾ. ೩-೨೪). ೪. ಉತ್ಸಾಹ ; ಸಡಗರ ; ಸಂಭ್ರಮ : ಕವಿತೆ ಕಲ್ಪನಶಕ್ತಿ ವಿರಚಿಸುವಿಂದ್ರಜಾಲಗಳಲ್ಲವಯ್ ಕವಿಯ ಪಿಂತಣ ಜನ್ಮಕೋಟಿಯೊಡರ್ಚಿಯಾಳ್ಗೊಂಡನುಭವಂ ವಿವಿಧಕೃತಿ ಸಾಕ್ಷಿತೆ ತಪಂ ಸತ್ಯಾನುಸನ್ಧಾನಂಗಳಾನವನ ನೆನೆಪಿಂ ದಳದುಳದೆ ಸೌನ್ದರ್ಯಮನುವದಿ ಪುಜ್ಜುಗಂ (ಸಂಸಪ. ೧೮-೪೬). **ದಳದುಳಿ** : ೧. 'ದಳದುಳಿಗಾಱ' ಪರಾ. **ದಳವುಳ** : ೧. ಕಳವಿಂದೆ ಬಲ್ಪಿಂದೆ ದಳವುಳದಿನರ್ಥದಿಂ ಚೆಲುವೆಂಬ ತೊವಲ ಮಱಿಗಱುವಿನಿಂದೆ ಪಲತೆಱದಿನಕಟ ಪರಲಲನೆಯರನೊಯ್ಯಲಾ ಪೊಲೆಮನದೆ ಕೆಡಿಸುವುದನೀಕ್ಷಿಸುವುದು (ಸಾನಂದ. ೫-೧೮); ಹುಸಿ ನುಸುಳು ಡೊಳ್ಳಾಸ ಹಿಂಸಾವ್ಯಸನವಾಱಡಿ ಬಂದಿ ದಳವು[ಪಾಠಾಂ. ದು]ಳವಸುರಭಯ ದುರ್ಭಿಕ್ಷ ಎಂಬಿವರೆಸಕ ಹೊದ್ದದಯೋಧಿಪನ ಧರಣೀತಳಾಗ್ರದಲಿ (ತೊರರಾ. ೧-೩-೨೭). ೩. ಕಾಮನ ಕಾರಾಗಾರದೊಳಿರ್ಪಂತೆ ಕೇಳೀವನದೊಳಿರ್ಪ ಬಾಲಕಿಗೆ ಚಂದ್ರನ ದಾಳಿ ಆಳಿಗಳ ದಳವು[ಪಾಠಾಂ. ದು]ಳಂ ಬಸಂತನ ಬಂದಿ . . . ಶಿಶಿರೋಪಚಾರದ ದಂಡಣೆಯಖಂಡಿತಮಾಗೆ (ಗಿರಿಕ. ೪-೧೦೮ ಪ) ; ತಳಿತ ಝಲ್ಲರಿಗಳಿಗೆ ಗಗನದ ವಳಯವೈದದು . . . ದಿಗುವಳಯವಿಟ್ಟೆಡೆಯಾಗೆ ರಥಹಯ ದಳವುಳಕೆ ಕುರುಸೇನೆ ನಡೆದುದು ದೊರೆಯ ನೇಮದಲಿ (ಕುವ್ಯಾದ್ರೋ. ೧-೪೫). **ದಳವುಳಿ**. 'ದಳವುಳಿಗ', 'ದಳವುಳಿಗೊಳ್' ಪರಾ. **ದಳಾದುಳಿ** : ೧. ಬಡವರೆಂದು ಮಱಿ ಮಗ್ಗುಲಲ್ಲಿ ಕೊಂಬುದು ತುಡುಗುಣಿ ಪ್ರಸಾದ ನಚ್ಚುಮಚ್ಚಿನಲ್ಲಿ ಎಳೆದು ಸೆಳೆದುಕೊಂಬುದು ದಳಾ[ಪಾಠಾಂ. ಳ]ದುಳಿಪ್ರಸಾದ (ಚನ್ನವ. ಕ. ೨೭೦-೫೭೬). **ದಟವುಟ** : ೧. "ದಟವುಟಂ ಬಲ್ಸೂಱ್" (ಸಂಜೀವ. ೩) ; ದಟವುಟವಾಱಡಿ . . . ಲಂಚಂ ಕಳವು ಪಿಸುಣ್ ಪಸವು ಬಱಂ ಪಱಿವಱಿ ವಲಸೊಲಸು ಕುತ್ತುಮಿಲ್ಲಾ ನಾಡೊಳ್ (ಶಬ್ದಾನು. ೧೪೦ ವ್ಯಾಖ್ಯಾ). ೫. "ಅಬ್ಬರ ; ಗಲಾಟೆ" (ಪ್ರಭಣ್ಮ) : ಕಿವಿಯಂ ಪಳಂಚಲೆವ ಮಂಚದ ಶಕುನಿಯಂಚೆಯ ಗಿಳಿಯ ಪುರುಳಿಯ ಪಾರಿವದ ಕೊರಲುಲಿಯ ದಟವುಟ ವನಾಲಿಸಿ (ಚಂದ್ರಪು. ೮-೬೬ ಪ); ಜವನ ದೂಱುಗಾಱರ ಜಂಗುಱಿ ನೇಣ ಶೂಲದ ಕರಗಸದ ಇಟ್ಟಿಯ ಕವೆಗೋಲ ಇರ್ಕುಟಿಯ . . . ಪರುಟವಣೆಯ ಸಡಗರದ ದಟವುಟದಿಂ ಬಂದು ಮುತ್ತಿ ಮುತ್ತಿ ಅಱಗುಲಿ ಜೀವಾತ್ಮನಂ ಸೆಱಿವಿಡಿದತ್ತು (ರಾಮಾಶ್ವ. ೭೯-೨೨) ; "ದಾಂಧಲೆ" (ರಾಮಾಶ್ವ. ಕೋಶ) ; "ಅಬ್ಬರ ; ಹಾವಳಿ" (ಪ್ರಭಣ್ಮ).

ದಳದುಳಮಾಗು, ದಳದುಳವಾಗು = ೧. ಸೂರೆಹೋಗು ; ಲೂಟಿಯಾಗು : ಮೊಳೆತುವೊಂದೊಂದು ನಕ್ಷತ್ರ ಕ್ಷತ್ರತ್ವದೊಂದಳವು ದಳದುಳ ಮಾಯ್ತು ಕಾಮಿಜನಕಂಗಜಂ ಗೆಲಿದನೀ ಜಗವ ಗಮನೋದ್ಯುಕ್ತನಾಗಿ ನೇಸಱ್ ಬೀಳಲೇವೇಳ್ವೆನು (ಚಿಬಪು. ೯-೫); ಕಾಳಲದೇವಿಯ ಕುಮಾರ ಪಾಣ್ಡ್ಯದೇವ ಮಹಾದೇವನವರು ದಳದುಳವಾಗಿ ಆ ಮರಕಾಲನ ಕೊಂದು ವಸ್ತು ವಾಹನವನು ಕೊಣ್ಡುದಕ್ಕೆ (ಎಕ. VI, ಚಿಕ್ಕಮ. ೩೬-೭ ; 1292) ; ದಳವು ದಳವುಳವಾಯ್ತು . . . ತನಿಸೊಕ್ಕಿ ದೆಸೆಪಟದುಳಿದು ಸೌಭದ್ರೇಯ ಭೃಂಗನ ಬಿಲುದನಿಯ ಭರವಂಜಿಸಿತು ಜಯಯುವತಿ ವಿರಹಿಗಳ (ಕುವ್ಯಾದ್ರೋ. ೭-೩೧). ದಳದುಳ ಮಾಡು = ಲೂಟಿ ಮಾಡು : ಚರಲಿಂಗ ಮಿಂತು ದಳದುಳ ಮಾಡೆ ಮುನ್ನಿರ್ದ ಸರಳ ಪೆಟ್ಟಿರ್ದನಂ ಪೆರ್ಚಿ ತುಳ್ಳಾಡುತಿರೆ ಕರಮೆ ವರ್ಧಿಸುತಿರಲ್ಗೋಕುಲಂ (ಆರಾಜ. ೧೩-೪೫).

ದಟದುಟವಾಯ್, ದಳದಂಳವಾಯ್ (ಕ್ರಿ). ದಾಳಿಮಾಡಿ ಸೂರೆಗೊಳ್ಳು,-ಕೊಳ್ಳೆಹೊಡೆ,-ಲೂಟಿಮಾಡು : ದಟದುಟವಾಯ್ದವೋಲ್ ಸಕಲಸೈನ್ಯಯುತಂ ಧಲಿ ಚಂಡವರ್ಮನಾಗಳೆ ಮುಳಿದಂಗಭೂಪತಿಯ ಸತ್ವಮನೊರ್ಮೆಯೆ ಸೂ ಱೆ ಗೊ ಂ ಡು (ದಶಕು. ೮ ೩೨೨) ; ನಿಶ್ಶಂಕ ಮಾಗಿರ್ಪ ತೆಲುಂಗಪಾಳೆಯವುಂ ದಟದುಟವಾಯ್ದು (ಚಿಕವಿ. ೨-೪೯). **ದಳದುಳವಾಯ್** : ತಾನು ಆರ ಮೇ ಲೆ ಯಾ ದ ರೂ ದಳದುಳ ವಾಯ್ದಾಗ ಕೈಸಾರ್ವ ದೇಶಕೋಶ ಧನಕನಕ ವಸ್ತ್ರಭೂಷಣ ಧಾನ್ಯಾದಿಗಳಲ್ಲಿ (ಬಿರುಗಂ. ೩೬-೧೫). [ದಟದುಟ + ಪಾಯ್$_1$]

ದಟಮುಖ (ನಾ). ಸೈನ್ಯದ ಮುಂಭಾಗ ; ಚೂಣಿ.

ದಟಮುಖಧವಳ = ಸೇನೆಯ ಅಗ್ರಭಾಗದಲ್ಲಿ ಶೋಭಿಸುವವನು ; ಒಂದು ಬಿರುದು : ಗುಣಕ್ಕೆ ನಲ್ಲ ಗಣೇಶಂ, ದಟಮುಖಧವಳಂ, ದಟಮುಖಾದಿತ್ಯಂ, ರಾಯಕೋಳಾಹಳಂ ಈ ತೆಱದೆ ಬಿರುದಿನೊಳ್ ಎತ್ತಾನುಂ ಸಲ್ವುದು (ಶಮದ. ೧೭೪ ಪ್ರಯೋ). ದಟಮುಖಾದಿತ್ಯ = ಸೈನ್ಯದ ಅಗ್ರಭಾಗದಲ್ಲಿ ಸೂರ್ಯನಂತೆ ಪ್ರತಾಪಶಾಲಿಯಾದವನು ; ಒಂದು ಬಿರುದು : ಗುಣಕ್ಕೆ . . . ದಟಮುಖಾದಿತ್ಯಂ, ರಾಯಕೋಳಾಹಳಂ (ಶಮದ. ೧೭೪ ಪ್ರಯೋ). [ದಟ + ಮುಖ]

ದಟವಡು (ಕ್ರಿ). ಪಡೆಯಾಗು ; ದಳವಾಗು ; ಗುಂಪಾಗು : ಕಟ್ಟುಱ ದೊಳಿಟ್ಟಣಿಸಿ ಮುಟ್ಟಿ ನಡೆದಾರ್ಪಿಂ . . . ನೆಟ್ಟನಿನಿಸಂ ಪಿಮ್ಮೆಟ್ಟಿ ದಟ ವಟ್ಟಡರೆಯಟ್ಟಳೆವರಂ ಕೈಗೊಟ್ಟು ಪುಯಿಲಿಟ್ಟರೆನೆ ದಿಟ್ಟತನಮೆಂತೋ (ಚಿಕವಿ. ೨-೪೩). [ದಟ + ಪಡು$_1$]

△ **ದಟವಾಯ್** ' ದಳವಾಯ್' ನೋ.

△ **ದಟವಾಯಿ** 'ದಳವಾಯ್' ನೋ.

ದಟವುಟ 'ದಟದುಟ' ನೋ.

ದಟಿಗವಾಡಿ (ನಾ). ಒಂದು ಸ್ಥಳದ ಹೆಸರು : ಅಯ್ಯಪದೇವನ ಮಗಂ ಗನ್ನರಸಂ ದಟಿಗವಾಡಿಯ ಕುಱುಕ್ಷನ್ದಟ್ಟಿಯನಾಳುತ್ತಿರೆ (ಎಕ. IX, ಹೊಸಕೋ. ೧೧೧-೪; 997); ದಟಿಗವಾಡಿಯಾನ ವಿಕ್ರಮಚೋಟಮಣ್ಡಲದ ಮಣ್ಣೆನಾಡ ಕೇಸೂರ ಬಣ್ಣಕರ ಬಲಿವಒ (ಮೈಆರಿ. ೧೯೦೫, ೧೯-೬ ; 1050). 'ದಳಿಗವಟಿಗ' ಪರಾ. [ದಟಿಗ$_0$ + ಪಾಡಿ$_2$]

ದಟಿ (ನಾ). ಒಂದು ವೃತ್ತಿಯ ಹೆಸರು (?) :

ದಟಿಯರು=(?): ಪೆರ್ವ್ವಯಲ ಕವ್ವಿಚ್ಚರು ದಟಿಯರು ಕುರ[ಬ]ರು ಗಣಿಗರು ಪೆಮ್ಮದವರು ಆನಂದರು ಎನೆತ್ತರು ಸಾಕ್ಷಿ (ಇಆ. XIV, ೨೩೩-೫೯; ಸು. ೪ನೆಯ ಶತ). [?]

ದಟ್ಟಟಿ, ದಳ್ದಳಿ (ನಾ). ಸಂಕೋಲೆ ; ಕೋಳ ; ಸರಪಣಿ : "ದಟ್ಟಟಿ= ಸಂಕಲೆ" (ಶಮದ. ಪರಿ. ೧) ; "ದಟ್ಟಟಿಯೆಂದು ಸಂಕಲೆಯೊಳಾಯ್ತು" (ಕರ್ಣಾನಿ. ೭೩). **ದಳ್ದಳಿ** : ಮುಳಿಸಿಂದಂ ಭೂತವೃಂದಂ ಕೊಳುಗುಳದೆಡೆಯೊಳ್ ಸಿಲ್ಕಿದಸ್ವಪ್ನರಂ ದಳ್ದಳಿಯಂ ಕಯ್ಕಾಲ್ಗೆ ಮತ್ತಾ ಜಠರಗಳಕೆ ತಂದಂತವಂ ಮೇಳಿಸುತ್ತಂ . . . ಕಟ್ಟುತ್ತುಂ ಬಳಿಕ್ಕಂತವರ್ಗಳನೆಳ ತಂದೊಪ್ಪಿಸುತ್ತಿರ್ದುದೇಗಂ (ವೀರವಿ. ೧೨-೬೯). [?]

ದಾ$_1$ (ನಾ). ಒಂದು ಅನುಕರಣ ಶಬ್ದ : ದಾಯೆನೆ ನೋಡುವ ಕರೆದಯ್ಯಾ ಯೆನಲಾರೈವ ... ಮೆಯ್ಮುರಿದಾಯಿರವಿಂದತ್ತಲೆಸೆದಮತಿಯತಿಶಯಮಂ (ಮಹಾನೇ. ೬-೭); ಸೆಱಗಿನೊಳಗಡಗಿ ನೋಡುತಲಿದಾ[ಪಾಠಾಂ. ಬಾ]ಎನುತ ಚೈಮುಂಡಾಡಿ ಮುಂದಲೆವಿಡಿದು ಕುಣಿಕುಣಿದಾಡಿ (ಪ್ರಭುಲೀ. ೩-೨೯) ; ಬೇಡುವರ್‌ಕೆಯ್ಗಳೊಳ್ ಮೆಯ್ಗಳೊಳ್ ಬಾಯ್ಗಳೊಳಗಾಡಿಸುವ ರಾಯೆಂದುದಾಯೆಂದು ಬಾಯೆಂದು ಪಾ ಡು ವ ರ್ . . . ಕುವರನಂ (ಜಿಬಪು. ೫-೨೬) ; ಪಡಿನೆಳಲಂ ಮಣಿಕುಟ್ಟಿಮದೆಡೆಯೊಳ್ ನಡೆ ನೋಡಿ ನೋಡಿ ದಾಯೆನುತುಂ (ರಾಜಶೇ. ೩-೫೨).

ದಾ$_2$ 'ದಸ$_2$' ನೋ.

ದಾ$_3$ (ನಾ). [ಗಣಿತ] ಆರು ಎಂಬ ಸಂಖ್ಯೆಯ ಸಂಕೇತ : "ದಾ, ಖರ . . . ವದನ ? ಇಂತಿನಿತುಂ ೬ಕ್ಕೆ ಪೆಸರು" (ವ್ಯವಹಾ. ೧೦-೨೩). [?]

ದಾಂಗುಡಿ 'ದಾಂಟುಂಗುಡಿ' ನೋ.

ದಾಂಗುಡಿಬಿಡು 'ದಾಂಗುಡಿವಿಡು' ನೋ.

ದಾಂಗುಡಿಯಿಡು (ಕ್ರಿ). ೧. ಕುಡಿ ಚಾಚು ; ಕುಡಿ ಹಬ್ಬು : ಬಿಸರುಹ ನೇತ್ರೆಯೊಳ್ನಡು ಪೊದಟ್ಟುದು ದಾಂಗುಡಿಯಿಟ್ಟು ಬಾಸೆ ನೀಳ್ದೆಸೆದುದು ಪಿಂಗಿ ಪೋದುದು ವಳಿತ್ರಿತಯಂ (ಪಂಚತಂ. ೧೮೪-೧೦) ; ಅಂಗಣದೊಳ ಗಾಡುವ ಭೂಮಿವರನಂಗನೆಯರ ದಿಟ್ಟಿವೆಳಗು ದಾಂಗುಡಿಯಿಡಲಿಕ್ಕಿದ ಹೊಸ ಮುತ್ತಿನ ರಂಗವಲ್ಲಿಯ ತೆಱನಹುದು (ಶ್ರೀಪಾಲ. ೨-೪). ೨. ಹಬ್ಬು ; ವೃದ್ಧಿಯಾಗು ; ವ್ಯಾಪಿಸು ; ಮುಂದುವರಿ : ದಾಂಗುಡಿಯಿಟ್ಟುದಿಂ ಗಡಲ ಬೆಳ್ಪು ಕರಂ ಮೊಳೆಪೊದುದಿಂದುಕಾಂತಂಗಳ ಬೆಳ್ಪು ಮೂಡಿದುದು ನೆಯ್ದಿಲ ಬೆಳ್ಪು (ಲೀಲಾವ. ೨-೨೧) ; ಹೆಂಗಳು ಮತ್ತೆಂಟುದೆಸೆಗೆ ದಾಂಗುಡಿಯಿಟ್ಟು ಸಾಲ್ವಿಡಿದಾಗ ಶೃಂಗಾರಗಂಗೆ ಪರಿವವೊಲಾಡಿದರು (ಭರಡ. ೧೩-೯೮) ; ಆನಂದವಾರಾಶಿ ದಾಂಗುಡಿ [ಪಾಠಾಂ. ತಾಂಕುಡಿ, ತಾಂಗುಡಿ]ಯಿಟ್ಟುದು ಸಲೆ ಸೌಖ್ಯಮೇ ರೂಪನಾಂತು ನಡೆತಂದುದು (ಜಿಬಪು. ೨೦-೬) ; ವಿಜಯಾಂಶುವೃದ್ಧಿ ದಾಂಗುಡಿಯಿಡೆ ಧರ್ಮರಾಜ್ಯಮೆನಿ ಸುತ್ತಖಿಲಾವನಿಭಾಗಮಂ ಜಸಂಬಡೆದಿರೆ ಕೃಷ್ಣರಾಯನೆನಿಪೊಳ್ವೆಸರೀಯರ ಸಿಂಗೆ ಸಂಗತಂ (ಚಿಕವಿ. ೨-೧೦) ; ಅಮರರ್ವೆರಸಿ ಬಳೆವುದು ಶಂಕರ ಲಲಿತಾ ಲಾಸ್ಯಂ . . . ಹರಿವಾಣೀವಾದನಕನುಕೂಲಂ ದಾಂಗುಡಿಯಿಡುವೊಲು ಮಾಯಾಜಾಲಂ (ಗಜೇಶ. ೧೯-೪೯೦).

[ದಾಂಗುಡಿ (<ದಾಂಟುಂಗುಡಿ) + ಇಡು$_1$]

ದಾಂಗುಡಿವಡೆ (ಕ್ರಿ). ಕುಡಿಯಿಡು ; ಬೆಳೆ : ಕಡುಚೆಲ್ವುವಡೆದು ಬಳಸಿಯು ಮೆಡೆಯುಡುಗದೆ ಕಾಂತೆಯರ್ ನಯಂಬಿಡದಿರೆ ದಾಂಗುಡಿವಡೆವ ಕಲ್ಪಲತೆಗಳ ನಡುವಣ ಕಲ್ಪಾವನೀಜಮಿರ್ಪಂತಿರ್ದಂ (ಸುಕುಮಾ. ೧೦-೦೦೧).

[ದಾಂಗುಡಿ (<ದಾಂಟುಂಗುಡಿ) + ಪಡೆ$_1$]

ದಾಂಗುಡಿವರಿ (ಕ್ರಿ). ಕುಡಿ ಹಬ್ಬು ; ಮುಂದೆ ಚಾಚು : ಮರದಿಂದ ಮರಕ್ಕೆ ದಾಂಗುಡಿವರಿವೆಳಲತೆಯಂತೆ ನೀತಿಮಾಂಧಾತನೊಳಾವರಿಸಿರ್ದು ರಾಜವಿದ್ಯಾಧರನಲ್ಲಿಗೆ ರಾಜ್ಯಲಕ್ಷ್ಮಿ ನಿಲುಕಿದಳಾಗಳ್ (ಕಾದಂಪೂ. ೫೮೧).

[ದಾಂಗುಡಿ (<ದಾಂಟುಂಗುಡಿ) + ಪರಿ$_1$]

ದಾಂಗುಡಿವಿಡಿಸು (ಕ್ರಿ). ವೃದ್ಧಿಯಾಗುವಂತೆ ಮಾಡು ; ಬೆಳೆಸು : ಆ ಎಲ್ಲ ಝುರಿಗಳಿಂದ ತಮ್ಮ ಭಕ್ತಜೀವನದ ಬಳ್ಳಿಗೆ ನೀರುಣಿಸಿ ದಾಂಗುಡಿವಿಡಿಸಿದರು (ತವನಿ. ೧೬೧). [ದಾಂಗುಡಿವಿಡು + – ಇಸು$_3$]

ದಾಂಗುಡಿವಿಡು, ದಾಂಗುಡಿಬಿಡು (ಕ್ರಿ). ಹಬ್ಬು ; ವ್ಯಾಪಿಸು ; ಮುಂದುವರಿ : ವಿಕಟಾಕ್ಷರಂಗಳೊಳ್ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂಗುಡಿವಿಡುವಂತೆ ನೀಟ್ದು ನಿಲೆ ಪೇಟ್ವುದು ನೀತಿನಿರಂತರ ಕ್ರಮಂ (ಕವಿರಾ. ೦-೧೪೮); ಅಂತು ತನ್ನ ತಾಂಡವಾರಂಭದೊಳಳವಿಗಟಿದ ರಾಗದಿಂ ನಿರ್ಮಿಸಿದ ಭುಜಶಾಖಾಸಹಸ್ರಂಗಳೊಳ್ ದಾಂಗುಡಿವಿಟ್ಟನಂಗಜಂ ಗಮಲತೆಗಳನನುಕರಿಸಿ ದೇವಗಣಿಕೆಯರಾಡುವಾಗಳ್ (ಆದಿಪು. ೭-೦೨೨ ವ) ; ಚಾಗದ ಕೀರ್ತಿವಲ್ಲಿ ದಾಂಗುಡಿವಿಡೆ (ಗದಾಯು. ೧೦-೫); ತಳಿವುದು ಮಾಂಸವಾರಿಯಂ ಸಸಿಗಳೊದವಿ ದಾಂಗುಡಿವಿಡುಗುಂ(ಲೋಕೋಪ. ೬-೭). **ದಾಂಗುಡಿಬಿಡು** : ಹೊಕ್ಕುಳ ಬಳ್ಳಿ ಹರಿದಂದಿನಿಂದಲೂ ನಡೆದಿದೆ ಸಂಯೋಗಕ್ಕಾಗಿ ನಿರಂತರ ತಪ: ದಾಂಗುಡಿಬಿಟ್ಟಿದೆ ವಾತ್ಸಲ್ಯದ ಬಯಕೆಯಾಗಿ (ಮೂರುದಾ. ೨೦೬) ; ಹೊಸಹರುಷಗಳ ಬಳ್ಳಿಗಳು ಕೊನರಿ ಕುಡಿಯೊಡೆದು ದಾಂಗುಡಿಬಿಡುವಂತಿಲ್ಲ (ಹಾಹುತ್ತ. ೯೯).

[ದಾಂಗುಡಿ (<ದಾಂಟುಂಗುಡಿ) + ಬಿಡು$_1$]

ದಾಂಟಿಸು$_1$, ದಾಟಿಸು (ಕ್ರಿ). . ಈ ಕಡೆಯಿಂದ ಆ ಕಡೆಗೆ ಹಾಯಿಸು; ಹಾರಿಸು; ನೆಗೆಸು: ತುರಗವನು ಮಡದಿಂದೊತ್ತಿ ದಾಂಟಿಸಿದನಾ ಮಹಾದ್ವಾರವನು (ರೇವಣ. ೯-೪) ೨. ಆಚೆಗೆ ಒಯ್ಯು; ಕಡೆಹಾಯಿಸು; ತಟಹಾಯಿಸು; ಪಾರುಗಾಣಿಸು: ಸಂಸರಣಮಹಾಸಮುದ್ರಮನತೀವ ಸರೌದ್ರಮನೆಯ್ದೆ ದಾಂಟಿಸಿಂ ಕರುಣದಿನೆಮ್ಮಂ (ನೇಮಿಪು. ೧೪-೧೦೦); ಅದು ಸಂಸಾರಾಬ್ಧಿಯಂ ದಾಂಟಿಸುವುದದು ದುರಾಚಾರ ದುರ್ಬುದ್ಧಿಯಂ ಕೀಳ್ವುದು . . . ಲಿಂಗಾರೂಢನಂ ಮಾಡುವುದು ಶರಣಸಾಂಗತ್ಯವು (ರಕ್ಷಾಶ. ೫೭); ಸ್ವಕುಲದಖಿಲರಂ ಘೋರಭವವಾರ್ಧಿಯಿಂ ದಾಂಟಿಸುವನೆಂದು ಬೋಧಾಯನಸುಶಾಖೆಯುಲಿಗುಂ (ಪದ್ಮರಾ. ೧೧-೧೨೫); ಪೆಸರುವಡೆದ ಮಧುರಸವಾಹಿನಿಯ ದಾಂಟಿಸಲು ಚಂದನಡೋಣಿಗಡರ್ದು (ಪೋಹತ. ೫-೨೬). ೩. ದಮನ ಮಾಡು; ನಿಗ್ರಹಿಸು: "ದಾಂತಃ, ದಮಿತಃ – ದಾಂಟಿಸಲ್ಪಟ್ಟುದು" (ಸಾಚಿರಾ. ೬) ೪. ಮೀರಿಸು: ನಿಱಿಗಳನಿಕ್ಕೆ ದಾಂಟಿಸದೆ ದುಂಡಿಸುವಾಕೆಯನೊತ್ತೆಗೊಳ್ಳದಂತೆಱಿಯದೆ ತೇಪೆಗುಳ್ಳ ಬಳಿನೀರ್ಗಳನಗ್ಗದ ಪೆಣ್ಗೆ ಮೆಯ್ಯನೆಯ್ದಿಱಿಯದೆ (ಲೀಲಾವ. ೨-೯೩). ೫. ಮೀರು; ಅತಿಕ್ರಮಿಸು: ಮೃತ್ಯುವ ಜವನ ಮಾರಿಯ ದಾಂಟಿಸುವ ವೇದಾಂತಿಗಳ ಪಾಟಿ ಶಿವನ ಪೊಸ ಕರವಾಳು . . . ಶಂಕರನೊಲುಮೆಯುಳ್ಳಾಳು (ಬಸಪು. ೬-೧೦). **ದಾಟಿಸು**: ೨. ನಾನು ಅವಳಿಗೆ ಊಟದ ಮನೆಯ ಹೊಸಲು ದಾಟಿಸಿ ಅಡಿಗೆಯ ಮನೆಯೊಳಕ್ಕೆ ಕರೆದು ಕೊಂಡು ಹೋದೆ (ಚೆಂಗಾಳ್ವ. ೧೩); ಎಲೈ ಅಗ್ನಿಯೆ . . . ನೀನೇ ಅನ್ನ ಸಾಧಕನು, ಪಾಪದಿಂದ ದಾಟಿಸತಕ್ಕವನು (ಪುಕ್ಕಾರ. ೨೫). ೬. ಸಾಗಿಸು; ಕಳುಹಿಸು; ರವಾನಿಸು; ಹೋಗುವಂತೆ ಮಾಡು: ಸುಗ್ರೀವ ಹಾಯೆನುತೊದಱಿ ರಣದಲಿ ಜೀವವನು ದಾಟಿಸಿ [ಪಾಶಾಂ. ಜಾಳಿಸಿ, ಜಾಱಿಸಿ]ದನಾ ಧ್ವನಿಗೇಳಿಸಿತು ಕಿವಿಗೆ (ತೊರರಾ. ೪-೨-೨೮); ಸೂಟಿಯ ಬಾಣಗಳಿಂದಿಟ್ಟು ಜೀವವ ದಾಟಿಸಿದರು ಯಮಪುರಿಗೆ (ಕಂನವಿ. ೧೮-೭೬); ಕನ್ಯಾದಾನವೆನ್ನುವುದು ಒಂದು ಕೈಯಿಂದ ಇನ್ನೊಂದು ಕೈಗೆ ದನಕರುಗಳನ್ನು ದಾಟಿಸಿದ ಹಾಗೆ (ವಡಭಾ. ೭೦); ದ್ರುಪದನು ರಾಜಾಧಿರಾಜನಾದ ತನಗೆ ಬಡಹಾರವರ ಗೆಳೆತನವೆಲ್ಲಿಯದೆಂದು ಅವನನ್ನು ಹೊರಗಣಿಂದ ಹೊರಕ್ಕೇ ದಾಟಿಸಿಬಿಟ್ಟನು (ನೀಗಟ್ಟು. ೦೧೪).

ದಾಟಿಸಿಕೊಳ್ = ರಕ್ಷಿಸು; ಆಶ್ರಯ ಕೊಡು; ಕಾಪಾಡು: ದೈತ್ಯವಧೂಟಿಯ ಕರೆದು ತನ್ನೊಡನೆ ಸೂಟಿಯೊಳ್ ಸಾವಂತೆ ಕೆಯ್ಯ ಖಡ್ಗವನಿಕ್ಕಿ ದಾಟಿಸಿಕೊಂಡಳೆಲ್ಲರನು (ಪೋಹತ. ೩೩-೩೮).

[ದಾಂಟು$_1$ + – ಇಸು$_3$]

ದಾಂಟಿಸು$_2$ 'ತಾಂಟಿಸು' ನೋ.

ದಾಂಟು$_1$, ದಾಟು$_1$ (ಕ್ರಿ). ೧. ಹಾರು; ನೆಗೆ; ಜಿಗಿ; ಲಂಘಿಸು: "ದಾಂಟು–ಲಂಘನೇ" (ಶಮಧಾ); "ಲಂಘಿಸುವುದಕ್ಕೆ ದಾಂಟೆಂದು" (ಕಶರ ೧೨೫); ಸುಹೃಚ್ಛೋಕಾಂಧನೆಂ ಮಗುಟ್ಟಿಮರ್ತ್ಯಮಾರ್ಗದೊಳ್ ಪರಿಯುತ್ತಮೊರ್ವ ವೈಮಾನಿಕನಂ ಭರದಿಂ ದಾಂಟುವುದುಂ (ಕಾದಂಉ. ೬೧೪). ೨. ಹಾಯ್ದು ಹೋಗು; ಮುಂದೆ ಸಾಗು; ತಟಹಾಯು; ಆಚೆಗೆ ಹೋಗು: ವಿಷಯಾಧಿಪತಿಗಳಪ್ಪರಸುಗಳೆಲ್ಲಂ ನೆರೆದಿರ್ದಲ್ಲಿಯಾರುಮಂ ಮೆಚ್ಚದೆ ದಾಂಟಿ ಪೋಗಿ ಕುಬೇರಕಾಂತಂಗೆ ಮಾಲೆಯಂ ಸೂಡಿದಳ್ (ವಡ್ಡಾರಾ. ೪೧-೪); ಭೀಮನಂ ಪೊಣರ್ದು ನೆಲಕ್ಕಿಕ್ಕಿ ಬೆನ್ನಂ ಮೆಟ್ಟಿ ದಾಂಟುವ ಮದಗಜದಂತೆ ಕೊಲಲೊಲ್ಲದೆ ದಾಂಟಿದಾಗಳ್ (ಪಂಪಭಾ. ೦೩-೪೦ ಪ); ರುಧಿರಸ್ರೋತಂಗಳಂ ದಾಂಟಿದಾಂಟಿಭದೋರ್ನೀಲಲತಾಪ್ರತಾನವಿಪಿನವ್ರಾತಂಗಳೊಳ್ಸಿಲ್ಕಿಸಿಲ್ಕಿ (ಗದಾಯು. ೪-೪೭); ಗರಳಪುರದ ನದಿಯನು ದಾಂಟಿ ಬಲ ಸಹ ನೆಱಿಯರ್ಧರಾತ್ರೆಯೊಳಾಗ . . . ಅರಿತಂತ್ರವ ತಱಿದೊಟ್ಟಿದನು (ಕಂನವಿ. ೩-೫೫). ೩. ಬಿಟ್ಟು ಹೋಗು; ತೊರೆದು ಹೋಗು: ಉತ್ತರಗುಡದೆ ಜಲವೀಂಟಿದನು ದಾಂಟಿದುದಸು ಕೆಳೇಬರವ (ಕುವ್ಯಾಅ. ೨೩-೨೧). ೪. ಮೀರು; ಪಾಲಿಸದೆ ಇರು; ಅತಿಕ್ರಮಿಸು: ಸಪ್ತಸಮುದ್ರಂ ಕರೆಗಣ್ಮೆ ತನ್ನವಧಿಯಂ ದಾಂಟಿತ್ತು . . . ಎಂಬೊಂದು ಸಂದೇಹಮಂ ಪೊಸತಂ ಭೂಭುವನಕ್ಕೆ ಮಾಡಿದುದು ತತ್ಸನ್ನಾಹಭೇರೀರವಂ (ಪಂಪಭಾ. ೯-೯೪); ಯತಿಯೆಂಬುದು ಗಣನಿಯತಂ ಪ್ರತೀತಮುಸಿರ್ವಾಣಮಂತದಂ ದಾಂಟಲ್ಕಾ ಯತಿ ಕೆಡುಗುಂ ದಾಂಟಿದೊಡಾ ಯತಿ ಕೆಡೆ ಕವಿತಾಭಿಧಾನಮೇನೆಸೆದಪುದೆ (ಛಂದೋಂಬು. ೧-೪೫); ರವಿ ಮಾಱಿಟ್ಟಳೆದಂ ವಿಯತ್ತಳಮನಾಶಾಸೀಮೆಯಂ ದಾಂಟುವನ್ನೆವರಂ ತನ್ನ ಕರಂಗಳಿಂದೆನೆ ಪೆಱಂಗೇಂ ಮೊಗ್ಗೆ (ಪಂಠಾಮಾ. ೧-೩೯); ನಿಱಿಯನಿಕ್ಕಿ ದಾಂಟಿದರೆ ಅಂತೆನ್ನ ನಂಬಾ (ಬಸವ. ೫೦೦); ಉಟ್ಟ ನಿಱಿ ದಾಂಟಿದೊಡೆ ಕಚ್ಚುವುದೆ ದೈವಮಂ ಮುಟ್ಟಿದೊಡೆ ಬೆರಳು ಹತ್ತುವುದೆ (ಸೋಮಚ. ೨-೪೦); ನಿಱಿಯ ದಾಂಟಲು ಕಚ್ಚುವುದೆ ಬಳಿನೀರ್ಗುಡಿಯಲೀಯುದರ ಉರಿವುದೆ (ಜೀವಂಚ. ೧೭-೫೭); ಅಣ್ಣನಾಜ್ಞೆಯ ಚಿತ್ತದಲಿ ನೀವ್ ದಾಂಟದಿಹುದಾರಣ್ಯವಾಸದಲಿ (ಕುವ್ಯಾಅ. ಓರಿಇ. ೪-೫೯); ಉಟ್ಟ ಸೀರೆಯ ದಾಂಟು ಮುಟ್ಟಿನ್ನು ದೈವವ (ಅಮುಸಾಂ. ೩-೭೩); ಬಳಿನೀರ ಕುಡಿದು ನಿಱಿಯ ದಾಂಟಿ ಪುತ್ತೂದಿ ಬಳಿಸಂದಿನಿಯರ ಚಿತ್ತವನು ತಿಳಿಸಿ ಕಾಲ್ವಿಡಿದೊಡಗೂಡುವ ಗಳಿಸಾಳಿ ಬೆಲೆವೆಣ್ಗಳು (ಕುರಾಸಾಂ. ೨೮-೮೮). **ದಾಟು$_1$**: ೨. ಹಳುವ ದಾಟಲಿ ದ್ರುಪದನಂದನೆಯಳಲಶಿಖಿಗಿಂಧನವಲೇ ಕುರುಕುಲದ ಕರಡದ ಬಣಬೆ ಕಾದುರುಹುವುದು ಕೇಳೆಂದ (ಕುವ್ಯಾಅ. ೨-೩೨); ದಾನದ ಕೈಯ ತೋಱಿಸಬೇಕು ಅದಱಿಂದ ನದಿಯ ದಾಟುತಿಯಪ್ಪ (ಪುರಂದ ೧-೧೮೧-೨೧); ಸೆಱೆ ತುಱು ಸಹಿತ ಸೋಸಲೆಯ ಕಡುವ ದಾಟಿ ಪಿರಿದು ಮಾರ್ಬಲಗೂಡಿ ಬಂದು (ಕಂನವಿ. ೩-೫೭); ನೀನು ಇನ್ನು ಸಂಸಾರವೆಂಬ ಮಹಾಸಾಗರದೊಳಗಿಂದ ದಾಟಿಹೋಗತಕ್ಕವನು (ಮುಂಬಯಿ. ೪-೩೯); ಹೊಳೆ ದಾಟಿದ ಮೇಲೆ ಅಂಬಿಗರ ಮಿಂಡ (ಗಾದೆ). ೮. ಗತಿಸು; ಸಾಯು; ತೀರಿಹೋಗು; ಮುಗಿ; ಕೊನೆಗೊಳ್ಳು: ಅವನು ದಾಟಿಕೊಂಡನು (ಮುಂಬಯಿ. ೫-೧೯೯).

[ದೇ. ॥ ತಮಿ. ತಾಣ್ಟು; ಮಲ. ತಾಣ್ಟು. ತಾಟ್ಟು; ತುಳು. ದಾಂಟು; ತೆಲು. ದಾಟು]

ದಾಂಟು$_2$ 'ತಾಂಟು' ನೋ.

ದಾಂಟು$_3$, ದಾಟು$_3$ (ನಾ). ೧. ನೆಗೆತ; ಜಿಗಿತ. 'ಮಾಱಿದಾಂಟಂ' ಪರಾ. ೨. ಹಾದುಹೋಗುವಿಕೆ; ಹಾಯುವಿಕೆ: (ಕ). ೩. ಹಬ್ಬುವಿಕೆ; ಚಾಚುವಿಕೆ. 'ದಾಂಟಂಗುಡಿ' ಪರಾ. ೪. (?): ಇಱಿಯೆ ಮುಸುಕಿಟ್ಟು ಬಾಗಿಲ ಬಱಿಯನೆ ಪರಿತಂದು ದಾ(ದ)ಂಟನೂರಿ(ಱಿ) ಸಿರೊ(ರೆ)ಜಂ ಬಿಡದೆ ನಡುಗುತ್ತುಮೊಯ್ಯನೆ ಮಱಿಯಂ ಬೆಸಗೊಂಡೊಡಮಕ್ಕುಮಿದುವೊಂದು ಮತಂ (ಇಟ್ಟಮ. ೧-೩೯). **ದಾಟು$_2$**: ೨. ಕರವಾಳೋನ್ಮುಖ ಚಣ್ಡವಜ್ರಹತಿಯಂ ಬಿಳ್ದನ್ಯಮತ್ತೇಭ ಭೂವರದಿಂದುಣ್ಮುವ ರಕ್ತವಾಹಿನಿಯುಮಂ ಕಣ್ಡಯ್ದಿ ಭೂತಬ್ರಜಂ ಶ್ವರಿತಂ ಮುಣ್ಡದ ತೆಪ್ಪದಿಂ ಶಿರದಲಾಂ ಬದ್ಧದಿಂ ದಾಟು ಭೀಕರವಾಗಿರ್ದ್ದುದು ಬಿಟ್ಟಿದೇವನಿಱಿದತ್ಯುಗ್ರಾಜಿರಂಗಾಂಗಣಂ (ಎಕ. XVI (8), ಚಿಕ್ಕನಾ. ೯೮-೪೪; 1169). ೫. ದಾಟುವಂತಹ ಸ್ಥಳ,–ಎಡೆ: ಕೋಟೆಯಿದ್ದುದು . . . ಘೋಟಕದ ಮದಕರಿಯ ಕಂಡಿಯ ದಾಟುಗಳ[ಪಾಶಾಂ. ದ] ಹುಲಿ ಮುಖದ ವಂಕದ ಕೂಟದುರುವಿಲಾಸದ ವಿವಿಧರಚನೆಯಲಿ (ತೊರರಾ. ೫-೨-೪). ೬. ಸಂಗ್ರಹ; ಅಡಕಗೊಳಿಸುವಿಕೆ. 'ದಾಟುಕಥೆ' ಪರಾ. ೭. ದೃಷ್ಟಿದೋಷ, ಕಾಲುಧೂಳು ಮುಂತಾದುವುಗಳ ಪರಿಹಾರಕ್ಕಾಗಿ ನಿವಾಳಿಸಿ ಎಸೆದ ಪದಾರ್ಥಗಳನ್ನು ದಾಟುವುದರಿಂದ ಉಂಟಾಗುವ ಅನಾರೋಗ್ಯ. 'ಕಾಲುರಂಜು', 'ದಾಟುತೆಗೆ' ಪರಾ.

ದಾಟಾಗು = ನಿವಾಳಿಸಿ ಎಸೆದ ಪದಾರ್ಥಗಳನ್ನು ದಾಟಿ ಅನಾರೋಗ್ಯವುಂಟಾಗು; ಕಾಲುರಂಜು ಆಗು : ದಾಟು ತೆಗೆಯುವುದು : ದಾಟಾಗಿದ್ದರೆ, ಅಂದರೆ ಏನಾದರೂ ದೋಷದ ಕಾರಣ ತೊಡೆ ಅಥವಾ ಕಾಲು ಊದಿಕೊಂಡಿದ್ದರೆ . . . ಮಾಡುವ ಶಾಂತಿ (ನನ್ನೂರು. ಕೋಶ).

[<ದಾಂಟು$_1$]

ದಾಂಟುಂಗುಡಿ, ದಾಂಗುಡಿ (ನಾ). ಉದ್ದವಾದ ಕುಡಿ ; ಚಾಚಿಕೊಂಡಿರುವ ಕುಡಿ : "ದಾಂಗುಡಿಯೆಂದು ದಾಂಟುಂಗುಡಿಯೆಂಬರ್" (ಕಶಸಾ. ೨೭-೫೭೪) ; "ದಾಂಗುಡಿಯೆನ್ನಲ್ ನೆಟ್ಟನೆ ದಾಂಟುಂಗುಡಿ" (ಕವಿಕಂ. ೨೨೮) ; ಕಟಂಜನವನ್ನು ದಾಂಟುಂಗುಡಿಯನ್ನೆಂಬಂತೆ ಕಳೆದುಹೋಗಿ, ತಿರುಗಿ ನಿಂತು, ನಿಟ್ಟುಸಿರ್ಗೊಂಡು, ಹೊರಡಲನುವಾಗುತ್ತಿರುವನು (ಬೆಟ್ಟಅ. ೧೧೨-೧೪). **ದಾಂಗುಡಿ** : "ದಾಂಗುಡಿಯೆಂದು ದಾಂಟುಂಗುಡಿಯೆಂಬರ್" (ಕಶಸಾ. ೨೭-೫೭೪); "ದಾಂಗುಡಿಯೆನ್ನಲ್ ನೆಟ್ಟನೆ ದಾಂಟುಂಗುಡಿ" (ಕವಿಕಂ. ೨೨೮) ; ಸೋರ್ವ ಸೋನೆಯೊಳೆ ದಾಂಗುಡಿಯಿಂದೆಸೆ ದಿರ್ಪ್ಪುವು (ಎಇ. XIII, ೩೩೧-೨೯ ; 929) ; ತಳ್ತು ಕಟ್ಟಿದ ಗುಡಿ ರಂಗವಲ್ಲಿಗಳೆ ದಾಂಗುಡಿಯಂತಿರೆ ಸೂಸೆ ಸೇಸೆಯಂ ಸುದತಿಯರ್ (ಪಂಪಭಾ. ೫-೧೦೫) ; ಪಸರಿಸೆ ಸುತ್ತಲುಂ ಗುಡಿಯ ದಾಂಗುಡಿ ಮುತ್ತಿನ ರಂಗವಲ್ಲಿ ನಾಲ್ದೆಸೆಯೊಳಮರ್ಕೆವೆತ್ತ ಪಟಹಧ್ವನಿ (ಸುಕುಮಾ. ೧೦-೨೬) ; ಗಱಿಕೆಯ ತೊಳಚಿಯ ದಾಂಗುಡಿಯಂ ಚಿವುಂಟಿ (ರಾಮಾಶ್ವ. ೪೩-೧೭).

[ದಾಂಟು$_1$ + ಕುಡಿ$_2$; P 'ದಾವುಕುಡಿ'ಯಿಂದಲೂ ಇದಕ್ಕೆ ನಿಷ್ಪತ್ತಿ ಹೇಳಬಹುದು]

ದಾಂಟುಗಳೆ (ನಾ). ಹಳ್ಳವನ್ನು ದಾಟಲು ಹಾಕಿರುವ ಬಿದಿರಿನ ಕೋಲು, ಗಳು, ಬೊಂಬು ಇತ್ಯಾದಿ : ಕಾಡುಮೇಡುಗಳುಳಿದು ಪಾಡಿಗಳ ಬಳಿ ವಿಡಿದು ತೋಡುಗಳ ದಾಂಟುಗಳೆಗಳ ತೂಗಿ ನಡೆದು (ಕಾಲೂರ. ೧೫೦-೩೩೦).

[ದಾಂಟು$_1$ + ಗಳೆ (<ಗಟ್)]

ದಾಂಟುಗೊಡು (ಕ್ರಿ). ದಾಟಲು ಅವಕಾಶ ಕೊಡು : ಏಱುಗೊಂಡೆಕ್ಕಲನ ದಾಂಟುಗೊಟ್ಟ ಪಾವಿನ ಪೊಸವಗೆಯೊಂದು ಮಸಕದಿಂ ಕಿಡಿಕಿಡಿವೋಗಿ ಕುಡಿವರಿವ ಮಿಾಸೆಯಂ ತಿರ್ದುತ (ರಾಮಾಶ್ವ. ೮೫-೧೮).

[ದಾಂಟು$_3$ + ಕೊಡು$_1$]

ದಾಂಟುದಾಣ (ನಾ). ದಾಟುವ ಸ್ಥಳ ; ಹಾಯ್ಗಡ : ದಾಂಟುದಾಣದಾ ಬಿರುವೊನಲ್ ಕಾಲ್ಗಡ್ಡಮಾಗಿ ಕಣ್ಗಡ್ಡಮಾದುದೊ ಮುಂದೆ ಕಾಳಿಂದಿಯಾ (ಶ್ರೀರಾಮಾ. ೧೩೮-೩೬೮). [ದಾಂಟು$_1$ + ತಾಣ]

ದಾಂಟುಮರ 'ದಾಂಟುವರ' ನೋ.

ದಾಂಟುವರ, ದಾಂಟುಮರ, ದಾಟುಮರ (ನಾ). ೧. = ದಾಂಟುಗಳೆ : ತೆಪತ್ತ ಕಾಲ್ಗಳಿಂ ದಾಂಟುವರವಳೆದಂ (ಕಾಲೂರ. ೧೩೭-೨೯೬). **ದಾಂಟುಮರ** : ೧. ಹಿಂದೆ ಪೋಗುವುದೇಕೆ ದಾರಿಯಿದನುಂ ಬಲ್ಲೆನೆಂದಿರ್ಪ ದಾಂಟುಮರದೆಡೆಗೆ ನಡೆತಂದಂ (ಕಾಲೂರ. ೧೩೭-೨೯೫). **ದಾಟುಮರ** : ೨. ನೆಲಬಾವಿಯ ಮೇಲೆ ಅಡ್ಡವಾಗಿ ಹಾಸುವ ಗಳು : ದಾಟುಮರ ಮುರಿದು ಬಾವಿಯಲ್ಲಿ ಬಿದ್ದನು (ರೂಢಿ). [ದಾಂಟು$_1$ + ಮರ$_1$]

ದಾಂಡಗಾಯಿ (ನಾ). ಪುಂಡುಗಾರಿಕೆ ; ಪುಂಡಾಟ : ಅಂತೆಯೇ ಪಡದಪ್ಪ ಕೊಟ್ಟ ಅರ್ಜಿ ನಾನಾನ ಪ ಕರಣದ ಬಗ್ಗೆ ಇರದೆ ದಾದಾ ತನ್ನ ಮೇಲೆ ಏರಿ ಬಂದು ದಾಂಡಗಾಯಿ ಮಾಡಿದ ಬಗ್ಗೆ ಇರಬೇಕು ಎಂದು ಅವರಿಗನಿಸಿತ್ತು (ಗ್ರಾಮಾಯ. ೧೧೩). 'ಕಾಟಕಾಯಿ' ಪರಾ.

[←ಮರಾ. ದಾಂಡಗಾಈ]

ದಾಂಡಪಟೆ 'ದಾಂಡಪಟ್ಟೆ' ನೋ.

ದಾಂಡಪಟ್ಟೆ, ದಾಂಡಪಟೆ (ನಾ). ಒಂದು ಕೈಯ್ಯಲ್ಲಿ ಉದ್ದವಾದ ಕತ್ತಿಯನ್ನೂ ಮತ್ತೊಂದು ಕೆಯಲ್ಲಿ ಕೋಲನ್ನೂ ಹಿಡಿದು ಮಾಡುವ ಕಸರತ್ತು : ಕುಸ್ತಿಯಲ್ಲಿ ಅರ್ಜುನದಾಸನ ಕೈ ಮೇಲಾದರೆ, ದಾಂಡಪಟೆಯಲ್ಲಿ ರಾಜವರ್ಧನನ ಪರಿಶ್ರಮ ಹೆಚ್ಚು (ಪರಮೇ. ೨). **ದಾಂಡಪಟೆ** : ಚಿಕ್ಕಂದಿನಿಂದ ಗರಡೀ ಸಾಧಕ, ದಾಂಡಪಟೆ, ಕುಸ್ತಿ ಮುಂತಾದ ಶೌರ್ಯದ ಅಭ್ಯಾಸಗಳನ್ನು ಇವರು ಮಾಡುತ್ತಾರೆ (ಕಭಾಗೆ. ೦೦೪).

[←ಮರಾ. ದಾಂಡ್‌ಪಟ್ಟಾ]

ದಾಂಡಾಜಿನಿಕ (ನಾ). ಮೋಸಗಾರ ; ವಂಚಕ; ಮಾಯಾವಿ: "ದಾಂಡಾಜ[ಜಿ]ನಿಕಃ, ಕುಹಕಃ, ಕಾಪಟಿಕಃ, ಜಾಲಿಕಃ, ಕೌಸೃತಿಕಃ, ಧೂರ್ತಃ, ವ್ಯಂಸಕಃ, ಮಾಯಾವೀ, ಮಾಯಿಕಃ, ಮಾಯಿ-ಈ ೧೦ ಮಾಯಾವಿ" (ಹಲಾಯು. ೫೮-೧೯೪). [ಸಂ.]

ದಾಂಡಿ (ನಾ). ಸಮುದ್ರತೀರದಲ್ಲಿ ಗುರುತಿಗಾಗಿ ನೆಟ್ಟ ಕಲ್ಲು : (ಕಿಸಂಗ್ಲಾ. ೧೩೫). [ದೇ.॥ ತುಳು. ದಾಂಡಿ]

ದಾಂಡಿಗ, ಧಾಂಡಿಗ (ನಾ). ೧. ಗಟ್ಟಿಗ ; ಕಟ್ಟುಮಸ್ತಾದ ಆಳು ; ಶಕ್ತಿವಂತ ; ಕಸುವುಳ್ಳವನು ; "ಬಲವುಳ್ಳ ದೊಡ್ಡ ಆಳು ; ಬಲವಂತ ; ಶಕ್ತಿವಾನ" (ಜಾನಕೋ. ೪): ಮನೆಯಲ್ಲಿ ಕರೆಯುವ ಎರಡು ಎಮ್ಮೆಗಳು, ಎರಡು ಹಸುಗಳು, ದುಡಿಯಲು ಇಬ್ಬರು ದಾಂಡಿಗರಾದ ಆಳುಗಳು (ಬೆವರಿ. ೧೩೨). ೨. ಒರಟು ವ್ಯಕ್ತಿ ; ಅಸಂಸ್ಕೃತ ; ಹುಂಬ : ಕರೆಯದೇ ಮಾಡದೇ ನಾವಿಬ್ಬರು ದಾಂಡಿಗರು ಹೋದರೆ ಕತ್ತು ಹಿಡಿದು ತಳ್ಳಿಯಾರು (ಮಧುಸಂ. ೩೮). **ಧಾಂಡಿಗ** : ೧. ಧಾಂಡಿಗರಾದ ಯುವಕರೂ ಹೆದರುವ ಹುಲಿಗಳನ್ನು ನೀನು ಕೊಲ್ಲಲಾಪೆಯಾ ? (ಈಕಥೆ. ೧೫) ; ನಾನು ಬಹಳ ಚೆನ್ನಾಗಿ ಬೆಳೆದು ಧಾಂಡಿಗನಾಗಿದ್ದೆ (ಗರುಡಾ. ೮೩); ಅಲ್ಲೊಬ್ಬ ಧಾಂಡಿಗನು ಬಂದವರನ್ನೆಲ್ಲ ಭುಜದ ಮೇಲೆ ಕೂರಿಸಿಕೊಂಡು ನದಿಯನ್ನು ದಾಟಿಸುವನು (ದೇಶಾಂಕ. ೭೫). 'ದಡಿಗ$_2$' ಪರಾ. [←ಮರಾ. ದಾಂಡಗಾ]

ದಾಂಡಿಗತನ (ನಾ). ಒರಟುತನ : ಅವನ ದಾಂಡಿಗತನದಿಂದ ಎಲ್ಲರಿಗೂ ಬೇಸರವಾಯಿತು (ರೂಢಿ). [ದಾಂಡಿಗ + – ತನ]

ದಾಂಡು (ನಾ). ೧. ಚಿಣ್ಣಿಕೋಲಾಟದಲ್ಲಿ ಚಿಣ್ಣಿಯನ್ನು ಹೊಡೆಯಲು ಬಳಸುವ ಕೋಲು. 'ಚಿಣ್ಣಿದಾಂಡು' ಪರಾ. ೨. ಕ್ರಿಕೆಟ್ ಮೊದಲಾದ ಆಟಗಳಲ್ಲಿ ಚೆಂಡನ್ನು ಹೊಡೆಯುವ ಸಾಧನ ; ಬ್ಯಾಟು : ಹೃತ್ಪಿಂಡ ಚೆಂಡು, ಬೆನ್ನೆಲುಬು ದಾಂಡು (ನಡಬಂ. ೧೦೨-೨೦) ; ಕ್ರಿಕೆಟ್ ಆಟದ ದಾಂಡು ; ಚಪ್ಪಟೆ ದಾಂಡು, ಬ್ಯಾಟು (Bat. ಇಂಕನಿ).

[←ಮರಾ. ದಾಂಡ್, ದಾಂಡಾ]

ದಾಂಡೆ (ನಾ). (ಕರಾ) ಒಂದು ಬಗೆಯ ಮೀನು. [?]

ದಾಂತ$_1$ (ನಾ). ದಕಾರದಲ್ಲಿ ಕೊನೆಗೊಳ್ಳುವ ಶಬ್ದ ; ಕೊನೆಯಲ್ಲಿ ದಕಾರವಿರುವಂತಹುದು : "ದಾಂತಕ್ಕೆ-ಆಟ್ದು (ಅಟ್ದು)-ಜಲಮಗ್ನೇ (ಮುಳುಗ)" (ಶಮಭಾ). [ದ$_1$ + ಅಂತ]

ದಾಂತ$_2$ (ಗು). ೧. ನಿಗ್ರಹಗೊಂಡ ; ದಮನವಾದ. ೨. ಪಳಗಿಸಿದ ; ಸಾಧುಗೊಳಿಸಿದ. (ನಾ). ೩. ಇಂದ್ರಿಯನಿಗ್ರಹ : ದಾಂತರಹಿತನ ನಶುಚಿಯಂ ವಿಭ್ರಾಂತವಂ . . . ಸಲಹು (ಬಸಪು. ೨೨-೫೦). ೪. ಇಂದ್ರಿಯನಿಗ್ರಹವನ್ನು ಉಳ್ಳವನು : "ದಾಂತಃ, ದಮಿತಃ-ಇಂದ್ರಿಯನಿಗ್ರಹವುಳ್ಳವನಿಗೂ, ನಿಗ್ರಹಿಸಲ್ಪಟ್ಟ ಇಂದ್ರಿಯಕ್ಕು ಪೆಸರು" (ಸಿದ್ಧಾಂತಿ. ೩೪೯). ೫. ತಪಶ್ಚರ್ಯೆಯಂ ಮೂಲಕ ಇಂದ್ರಿಯಗಳನ್ನು ನಿಗ್ರಹಿಸಿದವನು; ತಪಸ್ಸಿನ ಕ್ಲೇಶವನ್ನು ಸಹಿಸಿಕೊಳ್ಳುವವನು : "ತಪದ ಬಾಧೆಯಂ ಸೈರಿಸುವಾತನಂ ದಾಂತನೆಂಬುದು" (ಹಲಾಯು. ೬೬-೨೪೫) ; "ಸಂದ ತಪಬಾಧೆಯಂ ಸೈರಿಸುವವಂ ದಾಂತನಕ್ಕು" (ಮಂಗರಾ. ೭೪-೪); ಸಮಜೀವಿಯಾಗಿ ದಾಂತನಾದವನಿಗೆ . . . ಉಪಶಾಂತನಾದಂಥವನಿಗೆ ಕ್ರೋಧವೆಲ್ಲಿಯದು ? (ಬುದ್ಧಪ. ೬೫) ; ದಾಂತನಲ್ಲದವನು ಲೋಕನಿಷ್ಠ ; ಬ್ರಹ್ಮನಿಷ್ಠನಲ್ಲ (ಭಾತತ್ತ್ವ. ೫೦೬). [ಸಂ.]

ದಾಂತತೆ (ನಾ). ಇಂದ್ರಿಯನಿಗ್ರಹ; ಸಂಯಮ: ದಾಂತತೆ ಎಂದರೆ ಮನಸ್ಸು ಮತ್ತು ಇಂದ್ರಿಯಗಳ ಸ್ವಾಭಾವಿಕವಾದ ಪ್ರವೃತ್ತಿಗೆ ತಾನು ಅಧೀನವಾಗದೆ, ತನ್ನ ಇಚ್ಛೆಯಂತೆ ಅವುಗಳನ್ನು ನಿಯಮಿಸುವುದು (ಭಾತತ್ತ್ವ. ಉಪೋದ್ಘಾತ. XIV). [ಸಂ. ದಾಂತತಾ]

ದಾಂತಿ (ನಾ). ೧. ಇಂದ್ರಿಯನಿಗ್ರಹ; ಸಂಯಮ: ದಾಂತಿಯೇ ಸುಖಭೋಗ ಮಾಯಾಶ್ರಾಂತಿಯೇ ಮಹಾತ್ಮೆಯಿವು ಋಷಿಸಂತತಿಗೆ ವರ್ತನವಲೇ ವೈದಿಕವಿಧಾನದಲಿ (ಕುಪ್ಯಾಅ. ೫-೧೯); ನಿಮಗೆ ಐವತ್ತು ತುಂಬಿತು. ಈಗ ಮಡಿ ಮಂತ್ರ ಶಾಂತಿ ದಾಂತಿಗೆ ತಕ್ಕ ಕಾಲ (ದೀಪಮ. ೬೦-೫). ೨. ತಪಸ್ಸಿನ ಕಷ್ಟಗಳನ್ನು ಸಹಿಸಿಕೊಳ್ಳುವಿಕೆ. [ಸಂ.]

ದಾಂದಣ 'ದಣದಣ' ನೋ.

ದಾಂದಲೆ 'ಧಾಂದಲೆ' ನೋ.

ದಾಂಧಣ (ನಾ). ಒಂದು ಅನುಕರಣ ಶಬ್ದ: ನಟಿಸಿ ರಾಜನ ರಾಜಗೃಹದ ಮೇಲಾಕಾಶಘಟನೆಯೊಳದ್ಭುತವಾಗಿ ಝಟಿ ದಾಂಧಣ [ಪಾಕಾಂ. ದಾಂದಳ] ದಿಂದಿಮಿಕು ದಿಮ್ಮೆನೆ ಸುರಪಟಹನಿನಾದ ಕೇಳುತದೆ (ಭರಚ. ೩-೧೧೦).

ದಾಂಧಣರ್ (ನಾ). ಒಂದು ಅನುಕರಣ ಶಬ್ದ: ದಾಂಧಣರೆನುತ ಭೇರಿ ನವಪೊತ್ತು ಕಹಳಾದಿ ದುಂದುಭಿಧ್ವಾನ ದಶದಿಕ್ಕುಗಳನಾವರಿಸೆ (ಕೃಷ್ಣವಿ. ೨-೩೦).

ದಾಂಧಲೆ 'ಧಾಂದಲೆ' ನೋ.

ದಾಂಧಳನೆ (ಅ). ಒಂದು ಅನುಕರಣಾವ್ಯಯ: ಮೇರುವಿನ ಮೇಲೆ ಶಂಖಧ್ವನಿಸಹಿತ ಭೇರಿ ದಾಂಧಳನುಲಿವುದು (ಕೃಕವ. ೪-೯-೪).

[ದಾಂಧಳ$_0$ + – ಅನೆ$_1$]

ದಾಂಪತ್ಯ (ನಾ). ದಂಪತಿಗಳಾಗಿರುವಿಕೆ; ಗಂಡಹೆಂಡಿರಾಗಿರುವಿಕೆ; ದಂಪತಿಗಳ ಜೀವನ; ಇರವಿನೊಳರಿವಿನ ಮರುಳೇ ನಲವು... ನಿಮ್ಮಾ ದಾಂಪತ್ಯದೊಳಿದ ಕಾಂಬೆ ಅಸ್ತು ಅಸ್ತು ಸ್ವಸ್ತಿ ಸ್ವಸ್ತಿ ಎಂಬೆ (ಗಣೇಶ. ೫-೧೦೯); ಕೇವಲ ಬೌದ್ಧಿಕ ಮೈತ್ರಿಯೇ ಸಾಕಾದಲ್ಲಿ, ಬೇರೆ ಲಿಂಗಗಳು ಜೊತೆಗೂಡಿ ದಾಂಪತ್ಯವನ್ನು ಹೂಡುವುದೇ ಬೇಡ (ದೂರಸ. ೨೯); ದಾಂಪತ್ಯದ ನೊಗ ಕತ್ತಿನಿಂದ ಕಳಚಿ ಬಿತ್ತು (ಯೋಧಪು. ೯೪).

[ಸಂ.]

ದಾಂಪತ್ಯಜೀವನ (ನಾ). ಗಂಡಹೆಂಡಿರ ಜೀವನ; ಸಂಸಾರ: ಒಮ್ಮೊಮ್ಮೆ ಈ ಪ್ರಣಯವು ದಾಂಪತ್ಯಜೀವನಕ್ಕಿಂತಲೂ ಬಾಧುರವಾದುದು (ಕನ್ನಜಾ. ೦೧೫). [ದಾಂಪತ್ಯ + ಜೀವನ]

ದಾಂಪತ್ಯಧರ್ಮ (ನಾ). ದಾಂಪತ್ಯ ಜೀವನದ ನಡೆವಳಿ,–ಆಚಾರ: ಗೃಹ ಪವಿತ್ರವಾಗಿರಲೆಂದು, ದಾಂಪತ್ಯಧರ್ಮದಲ್ಲಿ ಅನುಮಾನಿಕ ಕಾಲ್ಪನಿಕ ಕಲಂಕ ಕೂಡ ಲೇಶಮಾತ್ರವೂ ಸ್ಪರ್ಶಿಸದೆ ಇರಲೆಂದು, ಸಾಧ್ವಿಯರಾದ ಸ್ತ್ರೀಯರ ಈ ಮಿತಿಮೀರಿದ ಜಾಗರೂಕತೆಯಲ್ಲಿ... ಒಂದು ಬಗೆಯ ಮಾಧುರ್ಯ ಉಂಟು (ಇಪ್ಪಳ. ೨೬೦). [ದಾಂಪತ್ಯ + ಧರ್ಮ]

ದಾಂಪತ್ಯಪ್ರೇಮ (ನಾ). ದಂಪತಿಗಳಲ್ಲಿರುವ ಪರಸ್ಪರವಾದ ಅನುರಾಗ,–ಪ್ರೀತಿ: ಶುದ್ಧ ದಾಂಪತ್ಯಪ್ರೇಮವೇನೆಂಬುದನ್ನು ನೀನು ಅರಿಯಲಾರದೆ ಹೋದೆ (ಹೂಸಕ್ಷಿ. ೧೦). [ದಾಂಪತ್ಯ + ಪ್ರೇಮ]

ದಾಂಪತ್ಯಯೋಗ (ನಾ). ದಾಂಪತ್ಯದ ಸಂಬಂಧ: ಇಲ್ಲವೋ ಪೆರ್ಕುಡಿಯ ಪೆರ್ಮೆಯವರೊಡನೆ, ಪಂಬಲಿಸಲೇವುದಯ್ ದಾಂಪತ್ಯಯೋಗಮನ್? (ಬದ್ಧಪ್ರ. ೪೭-೦೦೨೪). [ದಾಂಪತ್ಯ + ಯೋಗ]

ದಾಂಪತ್ಯವಿಚ್ಛೇದನ (ನಾ). ದಂಪತಿಗಳು ಬೇರ್ಪಡುವಿಕೆ; ಗಂಡ–ಹೆಂಡಿರು ತಮ್ಮ ಪರಸ್ಪರ ಸಂಬಂಧವನ್ನು ರದ್ದುಪಡಿಸಿ ಬೇರೆ ಬೇರೆಯಾಗುವಿಕೆ; ಸೋಡಚೀಟಿ; ಘಟಸ್ಫೋಟ; ಪಾರೀಖತ್ತು (ಉಕ): ದಾಂಪತ್ಯ ವಿಚ್ಛೇದನಕ್ಕೆ ಅವಕಾಶವಿರುವ ವಿಚಾರ ಮುಂತಾದುವುಗಳ ಸಂಬಂಧವಾಗಿ ಹೊಸ ಕಾನೂನು ರಚನೆಯಾಗಿರುವುದರಿಂದ ಮಹಿಳೆಯರ ಸ್ಥಿತಿಯು ಉತ್ತಮವಾಗುವ ಸೂಚನೆಗಳು ತೋರುತ್ತಿವೆ (ಭಾರದ. ೩೯೨).

[ದಾಂಪತ್ಯ + ವಿಚ್ಛೇದನ]

ದಾಂಪತ್ಯಸಂಬಂಧ (ನಾ). ದಂಪತಿಗಳ ಸಾಂಸಾರಿಕ ಸಂಬಂಧ: ನಿಮ್ಮ ದಾಂಪತ್ಯಸಂಬಂಧವನ್ನು ವಿಚ್ಛೇದಮಾಡುವುದು ಮಹಾಪಾತಕವೆಂತಲೂ ತಿಳಿದಿದ್ದೇನೆ (ಕಪಾಕುಂ. ೧೨೧). [ದಾಂಪತ್ಯ + ಸಂಬಂಧ]

ದಾಂಬರು 'ಡಾಮರ್$_2$' ನೋ.

ದಾಂಭಿಕ (ಗು). ೧. ಕಪಟದ; ವೇಷಧಾರಿಯಾದ. ೨. ಆಡಂಬರದ; ಜಂಬದ. (ನಾ). ೩. ವೇಷಧಾರಿ; ಕಪಟಿ; ಸೋಗಿನವನು: ದುರ್ವಿನೀತ ಬ್ರಾಹ್ಮಣ ಏಳು ಭಿಕ್ಷಾಜೀವಿ! ...ದಾಂಭಿಕ! (ಬಾಣಅ. ೮೩); ದುರ್ಗುಣಘರಟ್ಟ ಘಟ್ಟವಾಳಯ್ಯ ದಾಂಭಿಕರಿಗೆ, ನಾಮಧಾರಿಗಳಿಗೆ... ಸಿಂಹಸ್ವಪ್ನವಾಗಿ ಉಳಿದಿದ್ದಾನೆ (ಶರಚ. ೩೭೫). [ಸಂ.]

ದಾಕ 'ಡಾಗು$_1$' ನೋ.

ದಾಕಲು 'ದಾಖಲೆ' ನೋ.

ದಾಕಿಡು (ಕ್ರಿ). ದೂರದೂರಕ್ಕೆ ಹೆಜ್ಜೆಹಾಕು; ದಾಟುಹೆಜ್ಜೆ ಹಾಕು: ಸಾಕಿಂದು ತಪಸಿಗೆಯ್ದುವರೊಡನೆಮಗಾಸೆಯೇಕೆಂದು ನಾವು ಜಾಱುವೆವು ದಾಕಿಟ್ಟು ಹತ್ತೆಂಟು ಹಜ್ಜೆಯ ತಾವೆಯ್ದಿ ತಾಕಿ ಕೈವಿಡಿದೊಯ್ದರೆಮ್ಮ (ಭರಚ. ೭೦-೪೩). [ದಾಕು$_2$ + ಇಡು$_1$]

ದಾಕು$_1$ 'ಡಾಗು$_1$' ನೋ.

ದಾಕು$_2$ (ನಾ). ದೊಡ್ಡ ಹೆಜ್ಜೆ; ದಾಟು ಹೆಜ್ಜೆ: ಮೂಲೋಕವ ಚೋಟಿಕ್ಕುವಂತೆ ದಾಕೊಂದಱೊಳು ಕೋಟಿವಾರ್ಧಿಯ ಪಾಯ್ವ ನಿರಾಕು ಲೋನ್ನತಿಯಿರ್ದುದೊಳಗೆ (ಭರಚ. ೭೪-೧೭). 'ದಾಪು' ಪರಾ. [?]

ದಾಕುದಾರ 'ಡಾಕ್ಟರು' ನೋ.

ದಾಕುಹಾಕು (ಕ್ರಿ). ಮೈಲಿ ಚುಚ್ಚು; ದೇವಿಹಾಕು; ಸಿಡುಬುಹಾಕು: ಮಗುವು ಹುಟ್ಟಿದ ನಾಲ್ಕು ತಿಂಗಳಿನಿಂದ ಹಿಡಿದು ಒಂದು ವರುಷದೊಳಗೆ ಕಡ್ಡಾಯವಾಗಿ, ಮೈಲಿಗೆ, ಕಾಲರಾ... ಇತ್ಯಾದಿ ೧೮ ಬೇನೆಗಳಿಗಾಗಿ ದಾಕುಹಾಕುವ ಯೋಚನೆಯು ನಡೆದಿದೆ (ದೇವದೂ. ೨೫೨); ಜನ್ನರನು ದನದ ಮೈಲಿಯ ಬೊಕ್ಕೆಗಳ ಕೀವನ್ನು ತೆಗೆದು ಶಸ್ತ್ರದಿಂದ ಫಿಪ್ಪನ ಚರ್ಮದ ಮೇಲೆ ಗಾಯಮಾಡಿ ರಕ್ತದಲ್ಲಿ ಸೇರಿಸಿದನು. ಇದೇ ಮೊತ್ತ ಮೊದಲು ದಾಕುಹಾಕಿದ ಉದಾಹರಣೆಯು (ಮಾನಸ. ೪).

[ದಾಕು$_1$ (<ಡಾಗು$_1$) + ಹಾಕು (<ಪಾಯ್ಕು$_1$)]

ದಾಕೋಟಿ 'ದಹಕೋಟಿ' ನೋ.

ದಾಕ್ತಾರ 'ಡಾಕ್ಟರು' ನೋ.

ದಾಕ್ಷ (ಗು). ದಕ್ಷನಿಗೆ ಸಂಬಂಧಪಟ್ಟ. [ಸಂ.]

ದಾಕ್ಷಾಯಣಿ (ನಾ). ೧. ದಕ್ಷನ ಮಗಳು; ಸತೀದೇವಿ; ಪಾರ್ವತಿ; ಗೌರಿ: "ರುದ್ರಾಣೀ, ಶರ್ವಾಣೀ... ದಾಕ್ಷಾಯಣೀ, ಶಿವಾ... ಮೇನಕಾತ್ಮಜಾ – ಈ ೨೧ ಗೌರೀದೇವಿಯ ಪೆಸರ್" (ಹಲಾಯು. ೪-೧೫); ದಕ್ಷನುದರದಲಿ ಸಂಭವಿಸಿದಳು ದಾಕ್ಷಾಯಣೀನಾಮದಿಂ (ಲಶಿಚಿಂ. ೧೩-೨); ನೀರೇಜಾಸನಸೂನು ದಕ್ಷನುಱ ಸದ್ದಾಕ್ಷಾಯಣೀದೇವಿಯಂ ... ಪಡೆದಂ (ಹಮ್ಮೀರ. ೨-೬). ೨. ಇಪ್ಪತ್ತೇಳು ನಕ್ಷತ್ರಗಳಲ್ಲಿ ಯಾವುದಾದರೂ ಒಂದು; P ದಕ್ಷಬ್ರಹ್ಮನಿಗೆ ವೀರಿಣಿ ಎಂಬುವಳಲ್ಲಿ ಹುಟ್ಟಿದ ಅಶ್ವಿನೀ ಮೊದಲಾದ ಇಪ್ಪತ್ತೇಳು ಜನ ನಕ್ಷತ್ರಕನ್ಯೆಯರು. ಇವರೆಲ್ಲಾ ಚಂದ್ರನ ಪತ್ನಿಯರು: "ಅಶ್ವಿನೀ ಮುಂತಾದ ೨೭ ನಕ್ಷತ್ರಗಳೂ ದಾಕ್ಷಾಯಣ್ಯಃ. ದಾಕ್ಷಾಯಣಿಯರೆನಿಸಲ್ಪಡುತ್ತವೆ" (ಸಿದ್ಧಾಂತಿ. ೩೦).

[ಸಂ. ದಾಕ್ಷಾಯಣೀ]

ದಾಕ್ಷಾಯಣೀರಮಣ (ನಾ). ೧. ಶಿವ. ೨. ಚಂದ್ರ: "ಇಂದುಃ, ಚಂದ್ರಃ . . . ವಿಧುಃ, ದಾಕ್ಷಾಯಣೀರಮಣಃ—ಈ ೨೧ ಚಂದ್ರನ ಪೆಸರ್" (ಹಲಾಯು. ೮-೪೨). [ಸಂ.]

ದಾಕ್ಷಾಯ್ಯ (ನಾ). ರಣಹದ್ದು; ದೊಡ್ಡಹದ್ದು; ಗೃಧ್ರ. [ಸಂ.]

ದಾಕ್ಷಿಣಾತ್ಯ (ಗು). ೧. ದಕ್ಷಿಣಕ್ಕೆ ಸಂಬಂಧಿಸಿದ: ಇದು ದಾಕ್ಷಿಣಾತ್ಯ ಕವಿಮಾರ್ಗಮುದಾರಮುದೀಚ್ಯದುರುವಿಶೇಷಣಯುತಮಪ್ಪುದು (ಕವಿರಾ. ೨-೭೯). (ನಾ). ೨. ದಕ್ಷಿಣ ಭಾರತದಲ್ಲಿ ವಾಸಿಸುವ ಜನ: ವಿಂಧ್ಯ-ಪರ್ವತದ ದಕ್ಷಿಣದಲ್ಲಿರುವ ಪ್ರದೇಶವನ್ನು ದಕ್ಷಿಣಭಾರತವೆಂದು ಪರಿಗಣಿಸಬಹುದು. ಇಲ್ಲಿ ವಾಸಮಾಡುವ ಜನರು ದಾಕ್ಷಿಣಾತ್ಯರು (ಭಾರದ. ೩೯೫); ಆರ್ಯಸಂಸ್ಕೃತಿಯ ನಿಜವಾದ ರಕ್ಷಕರು ದಾಕ್ಷಿಣಾತ್ಯರು (ಚುಕ್ಕಾರ. ೧೧೦ ಪೀಠಿಕೆ). ೩. [ಸಂಗೀತ] ಒಂದು ರಾಗದ ಹೆಸರು: ಕೌಶಿಕಿ, ವೇಳಾವಳಿ . . . ದಾಕ್ಷಿಣಾತ್ಯ [ಪಾಠಾಂ. ದಕ್ಷಿಣಾದಿತ್ಯ] . . . ಶಯ ಸೋದರಿಯೆಂಬ ಮೂವತ್ತುನಾಲ್ಕು ರಾಗಂಗಳೇ ಭಾಷಾಂಗದಿಂದ ಪುಟ್ಟಿದವು (ವಿವೇಕ. ೨೩೩). [ಸಂ.]

ದಾಕ್ಷಿಣಾತ್ಯಕ (ನಾ). [ಕಾವ್ಯಮೀ] ದಕ್ಷಿಣಮಾರ್ಗ: ಮನದೊಳಗಾಗಳುಂ ನಿಱಿಸದಾ ಮುಳಿಸಂ ಗತರಾಗಮೋಹನೊಯ್ಯನೆ ಮುನಿ ನಾಥನೆಂಬ ವಚನಾಂತರಮಿಂತಿದು ದಾಕ್ಷಿಣಾತ್ಯಕಂ (ಕವಿರಾ. ೨-೧೦೬). [ಸಂ.]

ದಾಕ್ಷಿಣಾತ್ಯಪಾಠ (ನಾ). ದಕ್ಷಿಣ ಭಾರತದಲ್ಲಿ ದೊರೆಯುವ ಪಾಠ: ಮಹಾಭಾರತಕ್ಕೆ ದಾಕ್ಷಿಣಾತ್ಯಪಾಠ, ಔತ್ತರೇಯಪಾಠವೆಂದು ಎರಡು ಪಾಠಗಳಿವೆ (ಭಾರದ. ೯೬). 'ಔತ್ತರೇಯಪಾಠ' ಪರಾ.

[ದಾಕ್ಷಿಣಾತ್ಯ + ಪಾಠ$_2$]

ದಾಕ್ಷಿಣಾತ್ಯಸಂಗೀತ (ನಾ). ದಕ್ಷಿಣ ಭಾರತದಲ್ಲಿ ಪ್ರಚುರವಾದ ಸಂಗೀತ; ಕರ್ಣಾಟಕ ಸಂಗೀತ: ಈಚೆಗೆ ದಾಕ್ಷಿಣಾತ್ಯಸಂಗೀತದಲ್ಲಿ ಹೆಚ್ಚಿನ ಪ್ರೀತ್ಯಾದರಗಳು ಅಂಕುರಿಸಿರುವಂತೆ ಕಾಣುತ್ತದೆ (ಸಂಗೀಚಂ. ೧೮೩).

[ದಾಕ್ಷಿಣಾತ್ಯ + ಸಂಗೀತ]

ಣದಾಕ್ಷಿಣಾತ್ಯೆ (ನಾ). ೧. ದಕ್ಷಿಣದೇಶದಲ್ಲಿ ವಾಸಿಸುವವಳು ಅಥವಾ ಹುಟ್ಟಿದವಳು. ೨. [ಸಂಗೀತ] ದಕ್ಷಿಣ ಭಾರತದಲ್ಲಿ ಪ್ರಚುರವಾದ ವೃತ್ತಿ,-ಪದ್ಧತಿ: ಮನಾವತಿಯುಂ ದಾಕ್ಷಿಣಾತ್ಯೆಯುಂ ಪಾಂಚಾಲಿಯುಂ ಮಾದ್ರ ಮಾಗಧಿಯುಮೆಂಬ ನಾಲ್ಕುಂ ವೃತ್ತಿಯುಮಂ (ಅಜಿಪು. ೫-೩೦ ವ).

[ಸಂ. ದಾಕ್ಷಿಣಾತ್ಯಾ]

ದಾಕ್ಷಿಣ್ಯ (ಗು). ೧. ದಕ್ಷಿಣೆಗೆ ಸಂಬಂಧಿಸಿದ; ಉಪಾಯನಕ್ಕೆ ಸೇರಿದ. (ನಾ). ೨. ದಕ್ಷಿಣೆಗೆ ಯೋಗ್ಯನಾದವನು: "ದಕ್ಷಿಣೇಯಃ, ದಕ್ಷಿಣಾರ್ಹಃ, ದಾಕ್ಷಿಣ್ಯಃ -೩ ದಕ್ಷಿಣೆಗೆ ಯೋಗ್ಯನಾದವನು, ಧಾರಾಳವಾಗಿ ಕೊಡತಕ್ಕವನು" (ಸಿದ್ಧಾಂತಿ. ೨೭೯). ೩. ಸಂಕೋಚ; ಭಿಡೆ: "ಬಿಡೆಯಮೆನಲ್ ದಾಕ್ಷಿಣ್ಯಂ" (ಚತುನಿ. ೨೧೨). ೪. ದಯೆ; ಅನುಕಂಪ; ಕರುಣೆ; ವಂರುಕ: ಅರಸುಗಳ್ ತಮಗೆನಿತುಂ ಸಮಚಿತ್ತಮಿಲ್ಲದಿರ್ದೊಡಂ ಸಮ್ಮುಖಕ್ಕೆ ಬಂದ ಪ್ರಾಣಿಮಾತ್ರಕ್ಕೆ ಪರಾಙ್ಮುಖರಾಗಲಾಗದು ದಾಕ್ಷಿಣ್ಯಂ ಬೇಟ್ಕುಮೆಂಬ ನೀತಿಯುಂಟು (ಪಂಚತಂ. ೩೩-೧೧); ಮನೆಯಲ್ಲಿ ಇಟ್ಟುಕೊಂಡು ತೋರಿಸಿದ ಈ ಹೆಚ್ಚಿನ ದಾಕ್ಷಿಣ್ಯಕ್ಕೆ ಪ್ರತಿಯಾಗಿ ಅವನಿಂದ ಹೆಚ್ಚಿನ ಕೆಲಸವನ್ನು ಆದಾಯ ಮಾಡಿದರೆ ಸರಿ ಇಪ್ಪಕ. ೩೦೩). ೫. ಜಾಣತನ. ೬. ಸಾಮರ್ಥ್ಯ. ೭. ಇನ್ನೊಬ್ಬರ ವಂನಸ್ಸನ್ನು ಅನುಸರಿಸಿ ನಡೆಯುವಿಕೆ; ಇನ್ನೊಬ್ಬರಿಗೆ ನೋವಾಗದಂತೆ ನಡೆಯುವಿಕೆ; ಸೌಜನ್ಯ: ಒದವಿದ ದಾಕ್ಷಿಣ್ಯಕ್ಕುಂ ವಿದಗ್ಧವೃತ್ತಿಗಂ . . . ಮೊದಲೆನಿಸಿದ ಸಕಲಗುಣಾಸ್ಪದರಂ ಜಗದೊಳಗೆ ಪಡೆವುದಸದಳಮಲ್ತೆ (ಕಾದಂಪೂ. ೪೦); ಕಾಮದಿಂ ಕೋಪದಿಂ ಕೂರ್ಪರ ದಾಕ್ಷಿಣ್ಯಂಗಳಿಂ . . . ದೇವ ನಿಮ್ಮಂ ಸ್ಮರಿಯಿಪ್ಪಂತಿತ್ತು (ರಕ್ಷಾಶ. ೭೦); ದಾಕ್ಷಿಣ್ಯಕ್ಕೆ ಬಸುರಾಗಿ ಹೆರೋಕೆ ತಾವಿಲ್ಲ (ಗಾದೆ). 'ಮುಖದಾಕ್ಷಿಣ್ಯ' ಪರಾ. ೮. ದಕ್ಷಿಣದೇಶಕ್ಕೆ ಸೇರಿದವನ. [ಸಂ.]

ದಾಕ್ಷಿಣ್ಯಪರ (ನಾ). ಸೌಜನ್ಯ ಸ್ವಭಾವದವನು; ಇನ್ನೊಬ್ಬರ ಭಿಡೆ ಮುರವತ್ತಿಗೆ ಒಳಗಾಗುವವನು: ನ್ಯಾಯನಿಷ್ಠುರಿ ದಾಕ್ಷಿಣ್ಯಪರನು ನಾನಲ್ಲ ಲೋಕವಿರೋಧಿ ಶರಣನಾರಿಗಂಜುವನಲ್ಲ (ಬಸವ. ೭೫೩). [ಸಂ.]

ದಾಕ್ಷಿಣ್ಯವಂತ (ನಾ). ನಮ್ರತೆಯಿಂದ ಕೂಡಿದವನು: ಆತ ತುಂಬಾ ದಾಕ್ಷಿಣ್ಯವಂತ (ರೂಢಿ). [ದಾಕ್ಷಿಣ್ಯ + – ವಂತ]

ದಾಕ್ಷಿಣ್ಯವರ್ತಿ (ನಾ). ೧. ನಮ್ರತೆಯಿಂದ ವ್ಯವಹರಿಸುವವನು. ೨. ದಕ್ಷಿಣದೇಶದಲ್ಲಿ ವಾಸಿಸುವವನು; ದಕ್ಷಿಣದೇಶದವನು. ೧, ೨: ವಿದ್ಯಾಧರರ್ನಭೋಜನರೆನಿಸರೆಲ್ಲರುಂ ದಾಕ್ಷಿಣ್ಯವರ್ತಿಗಳ್ತಿಳಿಯೆ ಲಂಕಾನಿವಾಸಿಗಳೆನಿಸರು (ಚೈಮಿಭಾ. ೨-೧೦). [ಸಂ. ದಾಕ್ಷಿಣ್ಯವರ್ತಿನ್]

ದಾಖಲ್ 'ದಾಖಲೆ' ನೋ.

ದಾಖಲ 'ದಾಖಲೆ' ನೋ.

ದಾಖಲಾತಿ, ದಾಖಲಾತು, ದಾಖಲಾತೆ (ನಾ). ೧. ಕಾಗದಪತ್ರ; ದಫ್ತರು: ಪಿತೂರಿ ನಡೆಸಿದ್ದಾರೆಂದು ದಾಖಲಾತಿಗಳಿವೆ (ದೌಲತ್. ೧೪೭); ಅವನು ಮಂಶಲಾಂಛನ ದಾಖಲಾತಿ ಇಲಾಖೆಯಲ್ಲಿದ್ದಾನೆ (ಪುನರು. ೩೨೯). ೨. ರುಜುವಾತು. ೩. ಪ್ರವೇಶ; ಸೇರಿಸುವಿಕೆ: ಶಾಲೆಗೆ ಮಕ್ಕಳನ್ನು ದಾಖಲಾತಿ ಮಾಡಿಸುವರು (ರೂಢಿ). **ದಾಖಲಾತು:** (ಕಿ). **ದಾಖಲಾತೆ:** ೧. ಪಾರ್ಲಿಮೆಂಟಿನ ದಾಖಲಾತೆಗಳಲ್ಲಿ ನಾನು ಓದಿದ್ದೇನೆ (ಥೇಮ್ಸ್‌ಗಂ. ೬೦).

[ದಾಖಲ್ (<ದಾಖಲೆ) + – ಆತಿ]

ದಾಖಲಾತು 'ದಾಖಲಾತಿ' ನೋ.

ದಾಖಲಾತೆ 'ದಾಖಲಾತಿ' ನೋ.

ದಾಖಲು 'ದಾಖಲೆ' ನೋ.

ದಾಖಲೆ, ದಾಕಲು, ದಾಖಲ್, ದಾಖಲ, ದಾಖಲು (ನಾ). ೧. ಲೆಕ್ಕಕ್ಕೆ ಸೇರಿದುದು; ಲೆಕ್ಕಕ್ಕೆ ಸಂದಾಯವಾದುದು: (ಕಿ). ೨. ಆಧಾರ ಪೂರ್ವಕವಾದ ಪ್ರಮಾಣಬದ್ಧವಾದ ಕಾಗದ ಪತ್ರಗಳಲ್ಲಿ ಸೇರಿಸಿದ ಒಕ್ಕಣಿಕೆ,-ನಮೂದು: ಅಗತ್ಯವಾದ ನೂತನ ಅಂಕಿ ಅಂಶಗಳನ್ನೂ ಹೊಸ ದಾಖಲೆಗಳನ್ನೂ ಅಳವಡಿಸಲು ಅವಕಾಶವಿರಬೇಕು (ಶಿಕ್ಷದ. ೩೭೫). ೩. (ಒಂದು ಸಂಗತಿಯನ್ನು ಸ್ಥಾಪಿಸುವುದಕ್ಕೆ ಪೂರಕವಾದ) ಲಿಖಿತ; ರುಜುವಾತು; ಪ್ರಮಾಣಬದ್ಧವಾದ ಕಾಗದ,-ಪತ್ರ; ಸರ್ಕಾರಿ ದಫ್ತರದಲ್ಲಿ ನಮೂದಾದ ಕಾಗದ: ದೇವರಿಗೆ ನಿತ್ಯ ನೈಮಿತ್ತಿಕ ಪೂಜಾ ನಡಯೂ ಬಗ್ಗೆ ತಸದೀಕು ದಾಖಲೆಯು ಮಾಡಿಸಿ (ಎಕ. III, ತಿರುಮ. ೫೭-೩೧; 1855); ಗ್ರಾಮದ ಸರ್ವೆ ನಂಬರು ಒಂದು ಒಬ್ಬನ ಹೆಸರಿಗೆ ಪಟ್ಟೆಯಿರುತ್ತಾ ದಾಖಲೆಯಿಲ್ಲದೆ ಒಳ ಅನುಭವದಾರರು ಅನೇಕ ಮಂದಿ ಇರುತ್ತಾರೆ (ಭೂಮಿಅ. ೩೬); ಆ ಪಾದ್ರಿಯ ಪ್ರದೇಶದಲ್ಲಿ ಅದಕ್ಕೂ ಮೊದಲಿನ ಯಾವ ಕಾಲದ ದಾಖಲೆಗಳನ್ನೂ ಇಡಲಾಗಲಿಲ್ಲ (ಬೆಂಜನ್. ೧೦); ತೊರೆಯರು ಈಚೆಗೆ ಆ ಮಾರ್ಗವಾಗಿ ಹೋದ ದಾಖಲೆ ಇಲ್ಲ (ಕಲನೆ. ೨೦೫); ತನ್ನ ತಂದೆಯ ಆಸ್ತಿಯನ್ನು ವಿಲೇವಾರಿ ಮಾಡುವ ಹಕ್ಕಿದೆಯೆನ್ನುವುದಕ್ಕೆ ದಾಖಲೆಯೇನೂ ಸಿಕ್ಕಿಲ್ಲವಂತೆ (ಯೋಧಪು. ೩೭). ೪. ಸೇರುವಿಕೆ; ಹಾಜರಾಗುವಿಕೆ: ಇಲ್ಲಿಗೆ ದಾಖಲೆಯಾದ ದಿನ ಹೇಗಿದ್ದನೋ ಹಾಗೇ ಇದ್ದ (ವೀರಯೋ. ೪). **ದಾಕಲು:** ೩. ವಿಷಯವನ್ನು ಸ್ಪಷ್ಟಪಡಿಸುವಂತಹ ದಾಕಲುಗಳೂ ಸಿಕ್ಕಿದವು (ರೂಢಿ). **ದಾಖಲ್:** ೪. ಮೂರು ಗಂಟೆಗೆ ದಾಖಲ್ ಆದನು ತಂಗಿವೂರಿನ ಒಳಗೆ (ಕರ್ಣಾಸಂ. ೮೪). **ದಾಖಲ:** ೩. ಮದ್ದಗಿರಿ ಸರಕಾರ

ದಾಖಲ ರಿಯಾಸತ ಮೈಸೂರ ಚಿದಾನಂದ ಮದ್ದಗಿರಿ ಕಸಬೆ ಬೆಟ್ಟದ ಹಿಂದೆ ಸುತ್ತಾ ಆಡವಿಗಿಡಾ ಕಡದು (ಮೈಆರಿ. ೧೯೨೯, ೯೪-೩ ; 1813) ; ಊರಿನವರು ನಾವು ಎಂಟು ಹತ್ತು ಕುಳ, ತಿರುಪತಿ ವೆಂಕಟರಮಣಸ್ವಾಮಿ ಒಕ್ಕಲು; ಯಾವ ಕಾಲಕ್ಕೋ ದಾಖಲ ಆದದ್ದು (ಜಿಂಗೂಲಿ. ೮). **ದಾಖಲು:** ೩. ಆಸ್ತಿಯ ಮೇಲೆ ತನ್ನ ಹಕ್ಕನ್ನು ಸ್ಥಾಪಿಸುವುದಕ್ಕೆ ಸಾಕಷ್ಟು ದಾಖಲುಗಳನ್ನೂ ಸಿದ್ಧಪಡಿಸಿದ್ದನು (ರೂಢಿ).

ದಾಖಲೆದೂಖಲೆ (ದ್ವಿರುಕ್ತಿ): ದಾಖಲೆದೂಖಲೆಗಳೇನೂ ಸಿಕ್ಕಿರಲಿಲ್ಲ (ರೂಢಿ). **ದಾಖಲಾಗು** = ೧. ನಮೂದಾಗು : ಹಿಂದಿನ ದಿನದ ವ್ಯಾಪಾರ ದಾಖಲಾಗದೆ ಇರುವುದು ಕಂಡು ಬಂತು (ಮರಳಿ ೧೫೪). ೨. ಸೇರು; ಒಳಪಡು : ಹುರುಳಿ ಶೀತ್ತುರ ಮೂಗಣೆಗೆ ದಾಖಲಾಗಿಯಿರುವ ಮುಳು ಬಾಗಿಲೆಂಬ ಗ್ರಾಮ (ಮೈಆರಿ. ೧೯೩೪, ೫೨-೫; 1812). ೩. ಬರು ; ಹಾಜರಾಗು : ಭಾರಿ ಫೌಜು ಸಮೇತ ಬಂದು ಜಮಾಲಾಬಾದಿಗೆ ದಾಖಲಾದಲ್ಲಿ (ರಾಜೇಂದ್ರ. ೬೦); ಹೊಸದಾಗಿ ದಾಖಲಾಗುವವರು ದಾಖಲಾಗುತ್ತಿದ್ದರು (ದುಂಬಿಕ. ೧೬೫). **ದಾಖಲುಮಾಡು, ದಾಕಲುಮಾಡು, ದಾಖಲ್ಮಾಡು** = ಹಾಜರುಪಡಿಸು; ಮನವಿಮಾಡು ; ಪಟ್ಟಿಗೆ ಸೇರಿಸು ; ನಮೂದಿಸು : ಇದಕ್ಕೆ ತಪ್ಪಿದ್ದಲ್ಲಿ ನಿಮ್ಮ ಮೇಲೆ ಯೋಗ್ಯವಾದ ವ್ಯವಹರಣೆ ಹೂಡಿ ದಾವಾ ದಾಖಲುಮಾಡಲಾಗುವುದು (ಕುರುಕಾ. ೫); ಕಾರ್ಡಿನಲ್ಲಿ ಒಂದು ವಾರಕ್ಕೆ ಗೆರೆ ಎಳೆದು ಒಂದು ವಾರದ ರೇಶನ್ ಕೊಟ್ಟದಾಗಿ ದಾಕಲುಮಾಡಿ (ದೇಶಧು. ೬೭) ; ಮತ್ತೆ ಯಾವಾಗಲಾದರೂ ಅರ್ಜಿಯನ್ನು ದಾಖಲ್ಮಾಡುವ (ಝಾರಾಜಿ. ೦೦೭) ; ಗ್ರಾಮದ ಕೋರ್ಟಿನಲ್ಲಿ ದಾಖಲ್ಮಾಡಬಹುದಾದ ಯಾವುದಾದರೂ ವ್ಯಾಜ್ಯದಲ್ಲಿ ವಾದಿಯಂ . . . ವಿಚಾರಿಸಲ್ಪಡಬೇಕೆಂದು ಕೇಳಬಹುದು (ಗ್ರಾಮಾಕ. ೧೭); **ದಾಖಲೆಮಾಡಿಸು** = ದಾಖಲೆ ಪುಸ್ತಕದಲ್ಲಿ ಬರೆಯಿಸು,-ನಮೂದಿಸು ; ನೋಂದಣಿಮಾಡಿಸು : "ದಾಖಲೆಮಾಡು; ದಾಖಲೆಮಾಡಿಸು ; ರಿಜಿಸ್ಟರಿನಲ್ಲಿ ಬರೆ,-ಬರಸು. ರಿಜಿಸ್ಟರುಮಾಡು; ನೋಂದಣಿಮಾಡು" (Register. ಪತ್ರಿನಿ. ೬೮). **ದಾಖಲೆ ಮುರಿ** = ಹಿಂದಿನ ದಾಖಲೆಗಳನ್ನೆಲ್ಲ ಮೀರಿಸು ; ವಿಕ್ರಮವನ್ನು ಸ್ಥಾಪಿಸು : ದಾಖಲೆ ಮುರಿಯುವಂತಹ ಆಟವನ್ನು ಇಂದು ಅವನು ಆಡಿದನು (ರೂಢಿ). **ದಾಖಲೆ ಸ್ಥಾಪಿಸು** = ದಾಖಲೆ ಮುರಿ : ದಾಖಲೆ ಸ್ಥಾಪಿಸುವಂತಹ ಕಾರ್ಯವನ್ನು ಅವರು ಮಾಡಿ ತೋರಿಸಿದರು (ರೂಢಿ).

[←ಪಾರ. ಹಿಂ. ದಾಖಿಲ್, ದಾಖಿಲಾ; ಮರಾ. ದಾಖಲ್, ದಾಖಲಾ]

ದಾಖಲೆಗ್ರಾಮ (ನಾ). ದೊಡ್ಡ ಗ್ರಾಮಕ್ಕೆ ಸೇರಿದಂತಿರುವ ಸಣ್ಣ ಗ್ರಾಮ ; ಉಪಗ್ರಾಮ : (ರೈಸ್‌ಗೆ. ೫೪೬). [ದಾಖಲೆ + ಗ್ರಾಮ]

ದಾಖಲೆಪುಸ್ತಕ (ನಾ). ನಿಗದಿಮಾಡಿದ ವಿಷಯಗಳನ್ನೊಳಗೊಂಡ ಕಾಗದ ಪತ್ರಗಳ ಹೊತ್ತಗೆ : "ದಾಖಲೆಪುಸ್ತಕ, ರಿಜಿಸ್ಟರು" (Register. ಪತ್ರಿನಿ ೬೮). [ದಾಖಲೆ + ಪುಸ್ತಕ]

ದಾಗಡಿ 'ದಾಗುಡಿ' ನೋ.

ದಾಗದೂಜಿ, ದಾಗುದೂಜಿ (ನಾ). ದುರಸ್ತುಮಾಡಿಸುವಿಕೆ; ಜೀರ್ಣೋದ್ಧಾರ; ರಿಪೇರಿ : ಸರಕಾರದವರು ಇನ್ನೂ ಉಳಿದ ಇಮಾರತುಗಳ ದಾಗದೂಜಿಗಾಗಿ ವರ್ಷಕ್ಕೆ ೧೦೦೦ ರೂಪಾಯಿ ವೆಚ್ಚ ಮಾಡುತ್ತ ಬಂದದ್ದರಿಂದ ಈ ಹೊತ್ತಿಗೆ ಹಲಕೆಲವು ಇಮಾರತುಗಳು ಜೀವದಿಂದ ಉಳಿದಿರುತ್ತವೆ (ಕಭಾಗೆ. ೫೪೧); ಆಗಾಗ್ಗೆ ಭಾವಣಿ ವಗೈರೆ ದಾಗದೂಜಿ ಮಾಡಿಸದೆ ನೋಡಿಕೊಳ್ಳದೆ . . . ದವಸ ಕೆಟ್ಟು ಸರಕಾರಕ್ಕೆ ನಷ್ಟವಾದಲ್ಲಿ ಅದರ ಜವಾಬು ಅಮೀಲನು ಕೊಡಬೇಕಾದೀತು (ಮಹಾಮಂ. II, ೭೩). **ದಾಗುದೂಜಿ:** (ಕಿ).

[←ಮರಾ. ಡಾಗಡುಜೀ, ಡಾಗಡೋಜೀ, ದಾಗದುಜೀ, ದಾಗದೋಜೀ]

ದಾಗಿನೆ 'ದಾಗೀನು' ನೋ.

ದಾಗೀನ 'ದಾಗೀನು' ನೋ.

ದಾಗೀನು, ಡಾಗೀನು, ದಾಗಿನೆ, ದಾಗೀನ, ದಾಗೀನೆ (ನಾ). ೧. ನಗ ; ಒಡವೆ ; ಆಭರಣ : ಮೈಮೇಲೆ ದಾಗೀನನ್ನು ಕೈಗೆ ಸಿಕ್ಕಷ್ಟಕ್ಕೆ ಒತ್ತೆಯಿಟ್ಟೊ, ಮಾರಿಯೋ ಜೂಜಾಡುವ ಜನ ಇನ್ನೂ ಕೆಲವರು (ದಿವಾಲ. ೩೯) ; ದಾಗೀನುಗಳನ್ನು ಕಟ್ಟಿಕೊಂಡು ಮಾಡುವದಾದರೂ ಏನು? (ಸ್ಮೃತಿಚಿ. ೨೦೪). **ಡಾಗೀನು** : ೧. ಧಾರೆಯ ಸೀರೆ ಡಾಗೀನುಗಳನ್ನೆಲ್ಲ ತೆಗೆದಿಟ್ಟು . . . ಚಿನ್ನಮ್ಮ ಬೆಂಕಿ ಕಾಯಿಸಿಕೊಂಡಳು (ಮಲೆಮ. ೬೮೬). **ದಾಗಿನೆ** : ೧. ಇಡಲಿಕ್ಕೆ ದಾಗಿನೆಗಳಂತೂ ಕೇಳಲೇ ಬೇಡಿರಿ (ಮೋಹಿನೀ. ೧೩) ; "ಸ್ವಾಮಿ! ಈ ದಾಗಿನೆಯು ನನಗೆ ಒಪ್ಪುತ್ತದೆಯೇ?" ಎಂದು ಹಾಸ್ಯವದನದಿಂದ ಕೇಳಿದಳು (ಪಾಗ್ಗೇವಿ. ೨೮೪). ೨. ವ್ಯಾಪಾರಿಗಳ ಬಳಿಗೆ ಕಳುಹಿಸುವ ಸರಕಿನ ಮೂಟೆ, ಹೊರೆ, ಕಟ್ಟು, ಪಿಂಡಿ ಮುಂತಾದುವು : ಮಾರಾಟಕ್ಕಾಗಿ ಬರುವ ಕಿರಾಣಿ ಜೀನಸಿನ ಮಜೂರಿ ಆಯಾಯ ಜೀನಸಿನ ದಾಗಿನೆಯ ಸ್ವರೂಪದ ಮೇಲಿಂದ ನಿಶ್ಚಯಿಸಬೇಕಾಗುತ್ತದೆ (ಮುಂಬಪ್ಯಾ. ೦೩). **ದಾಗೀನ** : ೧. ಶಹಾಪುರದಂಥ ದೊಡ್ಡ ದೊಡ್ಡ ವ್ಯವಹಾರದ ಗ್ರಾಮದಲ್ಲಿ ಬಂಗಾರದ ಗಟ್ಟಿದಾಗೀನಗಳನ್ನು ಪೊತ್ತಿ ಇಟ್ಟು ಬಹಳ ಹಣ ತಕ್ಕೊಂಡರೆ . . . ಬಡ್ಡಿಯಿಂದ ಹಣ ದೊರಿಯುತ್ತದೆ (ಕಭಾಗೆ. ೨೮೪). **ದಾಗೀನೆ** : ೧. ಒಬ್ಬ ಅಕ್ಕಸಾಲಿಗನು ದಾಗೀನೆಗಳನ್ನು ಮಾಡುವ ಒಂದು ಅಂಗಡಿಯನ್ನು ಇಟ್ಟಿದ್ದನು (ರಾಪಹಂ. ೪೯).

[←ಮರಾ. ದಾಗಿನಾ, ಡಾಗಿನಾ, ಡಾಗಿಣಾ]

ದಾಗೀನೆ 'ದಾಗೀನು' ನೋ.

ದಾಗುಡಿ, ದಾಗಡಿ, ಧಗಡಿ₂ (ನಾ). ನೀರಿನ ಮೇಲೆ ಹಬ್ಬುವ ಒಂದು ವಿಧವಾದ ಬಳ್ಳಿ : "ದಾಗುಡಿಯಧೋಮುಖಿ" (ಮಂಗರಾ. ೪೦-೩೩) ; "ದೀರ್ಘಕಾಂಡಾ-ದಾಗುಡಿ" (ಓಷಧಿ. ೭೬) ; ಕೆಂಪಿನ ಕಣಿಗಿಲೆಯಾಶ್ವರಿ ಕೆಂಪಿನಪಾಮಾರ್ಗ ದಾಗುಡಿಗಳೆಂಬಿವಱೊಳ್ ಸೊಂಪುಳ್ಳ ಬೇರ್ಗಳಂತಂದು (ಐಮದ. ೧೬-೦೪೭) ; ಕಿರುಗಡಸಿಗೆ, ನೈದಿಲಗೆಡ್ಡೆ, ದಾಗುಡಿಯ ಬೇರು ಇವುಗಳಂ ಪ್ರತ್ಯೇಕವಾಗಿ ಆಡಿನ ಹಾಲಿಂದ ಅರೆದು ಕುಡಿಯ ಕೊಡಿಸಲು ಆಡು, ಹೋತ, ಕುರಿ ಇವುಗಳ ವಿಷ ಪರಿಹರವಹುದು (ವೈದ್ಯಸಾ. II, ೨೦೯) ; ಹತ್ತಿಸೊಪ್ಪು ಒಂದು ಹಿಡಿ ... ದಾಗುಡಿಸೊಪ್ಪು ಒಂದು ಹಿಡಿ ಇವಂ ಹಸುವಿನ ಹಾಲಲ್ಲಿ ಶರ್ಕರೆವೆರಸಿ ತೆಗೆದುಕೊಳ್ಳೆ ಹೆನ್ನೆತ್ತರು ಮಾಣ್ಗುಂ (ಸಕವೈ. ೦೯೬). **ದಾಗಡಿ** : ದಾಗಡೀ ಎಲೆ ಕಷಾಯದಲ್ಲಿ ಜೀರಿಗೆ, ಏಲಕ್ಕಿ, ಲವಂಗ, ಸಕ್ಕರೆ ಇವುಗಳ ಚೂರ್ಣವನ್ನು ಕಲಸಿ ಕುಡಿಯಲು ರಕ್ತವಾಂತಿ ಹರ (ಸಕವೈ. ಪರಿ. ೪೨೩); ಮದಿಯ ಹುಲ್ಲು ಆಪು ಬಹು ದಿವಸದ ದಾಗಡಿಯ ಬಳ್ಳಿಗಳನ್ನು . . . ಒಂದಾದರೂ ಪೂರ್ಣ ಜಲದ ಸೂಚನೆಯಾದ ಮೂಲಿಕೆಯ ಗಿಡಗಳು ಯಾವ ಸ್ಥಳದಲ್ಲಿ ಕಾಣುತ್ತವೆಯೋ ಅಂಥ ಸ್ಥಳದಲ್ಲಿ ಬಾವಿಯನ್ನು ತೆಗಿಸಬೇಕು (ಕೃಷಿಪ್ರ. ೯೯); ಗ್ವಾಡೀಯ ನೆಳ್ಳೀಲಿ ದಾಗಡಿಬಳ್ಳಿ ಹೆಣೆಯೂನ ನಾಡ ಧೂಳವನ ಮಾರಿ ಮ್ಯಾಲೆ (ಲೋಕಗೀ. ೧೫೭). **ಧಗಡಿ₂**: ಧಗಡಿಬಳ್ಳಿ, ದಸರಿಬಳ್ಳಿ, ಆಡಂಬು ಬಳ್ಳಿ, ಯಡಾನಿಬಳ್ಳಿ (ಮೈಜಿಗಿ. ೨೩-೪೨೪). [?]

ದಾಗುದೂಜಿ 'ದಾಗದೂಜಿ' ನೋ.

ದಾಗ್ದಾರು 'ಡಾಕ್ಟರು' ನೋ.

ದಾಘ (ನಾ). ಉರಿ ; ತಾಪ ; ಬೇಗೆ ; ದಾಹ : ಮೋಘಮನಖಿಲ ಪರಿಗ್ರಹದಾಘಮನೀ ಕೈಕೆ ಬೇಡೆ ಧರೆಯಂ ತೃಣದಿಂ ಲಾಘವಮೆನೆ ಬಗೆದು (ಪಂರಾಮಾ. ೬-೦೦೯) ; ಪರ್ವಿದುದತಿಶಯ ದೃಗ್ಲಾನಿ ದಾಘಂ ನಿದಾಘಂ (ಜಗವಿ. ೦೬-೭೦) ; ಸಮುದ್ಧೂತಮಾಘಂ . . . ಜನಿತ ಜನಮನೋಗ್ಲಾನಿ ದಾಘಂ ನಿದಾಘಂ (ಚಂದ್ರಪು. ೯-೬೫). [ಸಂ.]

ದಾಚಿನ (ನಾ). ಹಲ್ಲಿಗೆ ಪಚ್ಚಿಕೊಳ್ಳುವ ಹಿಟ್ಟು; ಹಲ್ಲಿಟ್ಟು : ಎಸೆವ ಮುತ್ತನು ಪೋಲ್ವ ದಂತಪಂಕ್ತಿಗಳ್ಗೆ ಪೊಳ್ಪಿ ದಾಚಿನ ಸವರಿ ಬೆಲ್ವಿ ಕುರುಳನು ತಿದ್ದಿ (ಜಾಜಾಕಳ. ೧೦). 'ಜಾಚೇಲು' ಪರಾ.

[← ಮರಾ. ದಾಚ್ಣಾ, ದಾಧೇನಾ./ಸಂ. ದಂತಚ್ಛಾದನ]

ದಾಟಿ$_1$ 'ದಾಟು' ನೋ.

ದಾಟಿ$_2$, **ಧಾಟಿ**$_2$ (ನಾ). ೧. ಕ್ರಮ; ರೀತಿ; ಶೈಲಿ; ಧೋರಣೆ. ೨. ಸಂಗೀತದಲ್ಲಿನ ಸ್ವರಗತಿ, ವಿರಿಚಿತ, ಲಯ, ಹಾಡಿನ ರೀತಿ, ಚಾಲು, ಕ್ರಮ ಇತ್ಯಾದಿ : ಅಂತದು ಪಾಡಿನ ಜೋಡಿನ ದಾಟಿಯ್ಕೆಸ (ರಾಮಾಶ್ವ. ೮೯-೦೨) ; ದಾಸರ ದಾಟಿಯಲ್ಲಿ ಹಾಡುತ್ತಾ, ಬಂದ ಹಾದಿಗೆ ಸಂಪ್ರ ಇಲ್ಲವೆಂದು ಮನೆಯ ಹಾದಿ ಹಿಡಿದ (ಹುಚ್ಚುಹು. ೨೩). ೩. ಒಂದು ಶಾಸ್ತ್ರದ ರೂಢಿ,–ಸಂಪ್ರದಾಯ : (ಕ). **ಧಾಟಿ**$_2$: ೧. ಹಿಡಿ ಮತ್ತ ಹಿಂದಿನ ಧಾಟಿ ಗಿರಣಿಯ ಬಂಬು ಕರೆಯುವದು ಏಳು ! ಆಯಿತು ಏಳು (ಅರಳು. ೪೨೬-೨೭) ; ಅದರೊಳಗೆ ರನ್ನ ಮಹಾಕವಿಯ ವೀರಪಾಕ್ಕದ ಉದಾತ್ತ ಧಾಟಿ ಎದ್ದುಕಾಣುತ್ತದೆ (ರಾಜವ. ೫೯) ; ಅವಳು ಮಾತನಾಡಿದ ರೀತಿಗೆ ಆನಂದ ಪೆಚ್ಚಾಗಿ ಕುಳಿತ (ದೂಂಸ. ೬೭). ೨. ಸಂಗೀತಶಾಸ್ತ್ರ ವರಿಯದವರು ಹಳೆಯ ಧಾಟಿಗಳಲ್ಲಿ ಇನ್ನೂ ಸೊಗಸಾಗಿ ಕೀರ್ತನೆಗಳನ್ನು ಹಾಡುತ್ತಿರುವುದನ್ನು ಕೇಳಿದರೆ . . : ಈ ಸಂಪ್ರದಾಯವನ್ನು ಉಳಿಸಿ ಕೊಳ್ಳುವುದು ಉಚಿತವೆಂದು ತೋರುತ್ತದೆ (ಜಗದಾ. ೭೬) ; 'ಇಂದ್ರ ಚಾಪ'ದ ಪದ್ಯಗಳು ಸಾಂಗತ್ಯದ ಧಾಟಿಯಲ್ಲಿವೆ (ಇಂದಾಪ. III ಅರಿಕೆ) ; ರಾಗದ ಸಾಟಿಗೆ ತೂಗ್ಯಾಡೊ ಧಾಟಿಗೆ ಒಲಿಧಾಡೊ ರೀತಿಗೆ ಹಾಡ್ಯಾಸೊ ಗೀತಿಗೆ (ಗಂಗಾವ. ೬೨-೩) ; ಆರೆಮರೆವು ಮಾಡುವೀ ಬಂಧ ಯಾವುದೀ ಛಂದ ಯಾವುದೀ ಧಾಟಿ (ನಾದಲೀ. ೭೬-೦೯).

[?./ಮರಾ. ಧಾಟೀ./ತಮಿ. ತಾಟ್ಪಿ]

ದಾಟಿಸು 'ದಾಟಿಸು$_1$' ನೋ.

ದಾಟು$_1$ 'ದಾಂಟು$_1$' ನೋ.

ದಾಟು$_2$ 'ದಾಂಟು$_3$' ನೋ.

ದಾಟುಕಥೆ (ನಾ). ಸಂಗ್ರಹಿಸಿದ ಕಥೆ; ಕಥಾಸಂಗ್ರಹ; ಕಥೆಯ ಸಾರಾಂಶ : (ಕ). [ದಾಟು$_2$ (< ದಾಂಟು$_3$) + ಕಥೆ]

ದಾಟುಗಾಲು (ನಾ). ದೂರ ದೂರಕ್ಕೆ ಹಾಕುವ ಹೆಜ್ಜೆ ; ದಾಪುಗಾಲು: ಇಂದು ಆರ್ಟ್ ತನ್ನ ಕಳೆಯನ್ನೂ ನಾಚಿಕೆಯನ್ನೂ ತೊರೆದು, ನೃತ್ಯವನ್ನು ಮರೆತು ದಾಟುಗಾಲು ಹಾಕುತ್ತ ತಿರುಗುತ್ತಿದೆ (ನಿಬಂಧ. II, ೨೦೮).

[ದಾಟು$_2$ (< ದಾಂಟು$_3$) + ಕಾಲು$_1$ (<ಕಾಲ್$_1$)]

ದಾಟುಗೆರೆ (ನಾ). ಒಂದನ್ನೊಂದು ಕತ್ತರಿಸುವ ಎರಡು ಗೆರೆಗಳ ಚಿಹ್ನೆ ; ಬಿಟ್ಟುಹೋದುದನ್ನು ತಿಳಿಸುವ ಚಿಹ್ನೆ ; ಕತ್ತರಿಚಿಹ್ನೆ (×) : ಆ ಮೇಲಿನ ಶಾಸನಗಳಲ್ಲಿ ಮತ್ತು ಹಸ್ತಪ್ರತಿಗಳಲ್ಲಿ ಬಿಟ್ಟುಹೋಗಿರುವ ಜಾಗವನ್ನು ನಾವು ಕಾಕವಾದ, ಹಂಸಪಾದ ಎಂದು ಕರೆಯುವ ಚಿಕ್ಕದಾದ ನೆರೆಗೆರೆ ಅಥವಾ ಬಾಗಿದ ದಾಟುಗೆರೆ (Cross) ಗಳಿಂದ ಸೂಚಿಸಲಾಗಿದೆ (ಭಾರದ. ೫೦). [ದಾಟು$_2$ (< ದಾಂಟು$_3$) + ಗೆರೆ (<ಗೆಜ್ಜೆ)]

ದಾಟುತೆಗೆ (ಕ್ರಿ). ದೃಷ್ಟಿದೋಷ, ಕಾಲಂಧೂಳಿ ವಮಂತಾದುವುಗಳ ಪರಿಹಾರಕ್ಕಾಗಿ ನಿವಾಳಿಸಿ ಎಸೆದ ಪದಾರ್ಥಗಳನ್ನು ದಾಟುವುದರಿಂದ ಉಂಟಾಗುವ ದೋಷವನ್ನು (ಅನಾರೋಗ್ಯವನ್ನು) ಪರಿಹರಿಸು.–ನಿವಾರಿಸು ; ಸೋಂಕುದೋಷವನ್ನು ಹೋಗಲಾಡಿಸು : ಸಂಜೆ ಆಯಿತೆಂದರೆ ಆಚಾರ್ರು ಕಂಕಾಳಲ್ಲಿ ಸೀಸೆ ಇರುಕಿಕೊಂಡು ಮೇಲೊಂದು ಬಟ್ಟೆ ಹೊದೆದು . . . ಚೀಟು ಕಟ್ಟುವ, 'ದಾಟುತೆಗೆ' ಯುವ ಅಥವಾ ಅನ್ನ ತೆಗೆದುಹಾಕುವ ನೆಪದಲ್ಲಿ ಬಾಂಡೇದಾಸನ ಪಡಪಾನಿ ಕಡೆಗೆ ಹೋಗಿ ಬರುತ್ತಿದ್ದರು (ನಸ್ಕೂಳು. ೧೮೯). [ದಾಟು$_2$ (<ದಾಂಟು$_3$) + ತೆಗೆ$_1$]

ದಾಟುದೀಟು (ನಾ). ಕುದುರೆಯನ್ನು ನಡೆಸುವ ಬಗೆಗಳಲ್ಲಿ ಒಂದು : ವಲ್ಲಣಮಂ ಕಟ್ಟಿಯೇಜಿ . . . ಈಶ್ವರನ ದಕ್ಷತನಮುಂ ತನ್ನೊಳಗ ವಡಿಸಿ ದಾಟುದೀಟು ಹೊಳಹು ಹೊಮ್ಮಿಚ್ಚುವಡೆ ಮೋಡಿ ಭವರಿ ಛಂಡನೆ ಅಳಿಲುಳಿತ ತವರ ತರಹಮೆಂಬ ನವೀನಗತಿಗಳೊಳು ತನ್ನ ಮನಮೆ ಹಯದ ತನುಗತಿಗಳಾದಂತೆ ವಾಹವಿನ್ಯಾಣಂಗಳಂ ತೋಱುತ (ಪುಣ್ಯಾಸ್ರ. ೬-೫೧ ವ). [?]

ದಾಟುಬೊಕ್ಕೆ (ನಾ). ದೃಷ್ಟಿದೋಷ, ಕಾಲುಧೂಳಿ ಮುಂತಾದುವುಗಳಿ ಪರಿಹಾರಕ್ಕಾಗಿ ನಿವಾಳಿಸಿ ಎಸೆದ ಪದಾರ್ಥಗಳನ್ನು ದಾಟುವುದ ರಿಂದ ಕಾಲಿನಲ್ಲಿ ಏಳುವ ಬೊಕ್ಕೆ : ದಾಟುಬೊಕ್ಕೆಯು ಅವನನ್ನು ಬಹಳ ಹೆಜಗಿಸಿತು (ರೂಢಿ). [ದಾಟು$_2$ (<ದಾಂಟು$_3$) + ಬೊಕ್ಕೆ$_1$]

ದಾಟುಮರ 'ದಾಂಟುವರ' ನೋ.

ದಾಟುಹೊಲಿಗೆ (ನಾ). ದೂರದೂರಕ್ಕೆ ಉದ್ದವಾಗಿ ಹಾಕಿದ ಹೊಲಿಗೆ; ದೂರದೂರಕ್ಕೆ ಟಾಕು ಹಾಕಿದ್ದು ; "ಉದ್ದಹೊಲಿಗೆ" (ಕಾನಕೋ. ೪).

[ದಾಟು$_2$ (< ದಾಂಟು$_3$) + ಹೊಲಿಗೆ (<ಪೊಲ್ಗಿ]

ದಾಡನೆ (ಅ). ಒಂದು ಅನುಕರಣಾವ್ಯಯ : ಓಡುತೋಡುತ ಹೋಗಿ ದಾಡನೆ ಬಿದ್ದೀತು ಜಂಕಿ ನೋಡಿ ನೋವಾಯಿತು ಯತೀಶಗೆ (ಸಿದ್ಧಪು. ೧೦-೦೭).

ದಾಡದಾಡನೆ (ದ್ವಿರುಕ್ತಿ) : ಗಾಢವಾದಿಂಚರದ ತಾಣದೆ . . . ದಾಡದಾಡನೆ ಹೊರಡುತಿಹ ಕಟುರವವನಾಲಿವುದು (ರಘುವಂ. ೧೪೪-೦೩).

ದಾಡಾಬಂಧ, ದಾಡೆಬಂಧ (ನಾ). ೧. ದವಡೆಗಳನ್ನು ತೆರೆಯದಂತೆ (ಮಂತ್ರದಿಂದ) ಕಟ್ಟುವುದು ; ಒಸಡಿನ ಚಲನೆಯನ್ನು ಬಂಧಿಸಿ ಮೊತನಾಡದಂತೆ ಮಾಡುವುದು ; ಬಾಯಿ ಕಟ್ಟುವುದು : ದಾಡಾಬಂಧ . . . ಮಂತ್ರತಂತ್ರಸಿದ್ಧಿ ಇವೆಲ್ಲವ ಕಲಿತಡೇನೋ ಔಷಕ್ಕಿವಿದ್ಯಾ ಕಳಾವಿದನೆನಿಸಿಕೊಂಬನೆಲ್ಲದೆ ಲಿಂಗವಂತನೆನಿಸಿಕೊಂಬುದಿಲ್ಲ (ಮಡಿಮಾ. ೪೭-೭೧) ; ಉರಗನ ಬಿಡಲದು ಧರೆಯನವ್ಪಳಿಸುತ . . . ತ್ವರಿತದಿಂ ಬರುತಿರೆ ದಾಡಾಬಂಧವನರಮಗ ಮಾಡಿ ಮಂತ್ರಿಸಲು (ಕ್ಕಾನಚ. ೨೩-೭೦). ೨. ಹಲ್ಲು ಕಚ್ಚಿರುವಿಕೆ ; ಒಂದು ಬಗೆಯ ಸ್ನಾಯುಂರೋಗ ; ಹಲ್ಲು ಕಚ್ಚು : ನಸ್ಯದ ಗುಣ–ನಸ್ಯವಂ ಮಾಡಲು ದಾಡಾಬಂಧ, ಕಪೋಲಸ್ತಂಭ . . . ವರಿಹರಿಸುವುದು (ಸಳವ್ಯ. ೩೭). **ದಾಡೆಬಂಧ** : ೨. ಸೂಚೀಮುಖರಸ:–ರಸ, ಗಂಧಕ . . . ದಾಡೆಬಂಧ, ಕಣ್ಣು ಮುಚ್ಚಿರುವುದು, ಧನುರ್ವಾತ, . . . ತ್ರಿದೋಷ, ಹದಿಮೂಱುಪ್ರಕಾರದ ಸನ್ನಿವಾತ ಹರ (ವಿವೈವಿ. ೫೭).

[ದಾಡಾ$_0$ (P <ಪ್ರಾ. ದಾಢಾ) + ಬಂಧ]

ದಾಡಾಬಂಧನ (ನಾ). = ದಾಡಾಬಂಧ ೧ : ವೇದಾಗಮೋಕ್ತದಿಂದವರವರ ಮತವಂ ಖಂಡಿಸಿ, ದಾಡಾಬಂಧನವಾಗಿ ಬಂಧಿಸಿ, ಪೂರ್ವದ ಪುರಾತನರು ಸಮಸ್ತ ಸಮಯಮಂ ಸಂಹರಿಸಿದುದಂ ವೇಳಲು (ಭೈರಸೂ. ೧೧).

[ದಾಡಾ$_0$ (P <ಪ್ರಾ. ದಾಢಾ) + ಬಂಧನ]

ದಾಡಿ$_1$ (ನಾ). ಮುಖದ ಕೆಳಭಾಗದಲ್ಲಿರುವ ಕೂದಲು ; ಗಡ್ಡ ; ಶ್ರೀಧರನೊಳಗೆ ಆವ್ಪ ದಾಡಿಯ ವೀರರಿಂತು ಸಮ್ಮತಗೈದರು (ಜಿನಮು. ೧೨-೨) ; ಇಂಬಾದ ಎದೆಯ ಮೇಲೆ ಬಿಳಿದಾದ ದಾಡಿಯು ಹಾರುತ್ತಿತ್ತು (ಕೋಹಿನೂ. ೬೮). [<ಪ್ರಾ. ದಾಢಿಆ./ಸಂ. ದಾಢಿಕಾ]

ದಾಡಿ$_2$ 'ದಾಡೆ$_2$' ನೋ.

ದಾಡಿ$_3$ 'ಧಾಡಿ' ನೋ.

ದಾಡಿಂಬ (ನಾ). ಸಿಹಿಯಾದ ಕೆಂಪು ಕಾಳುಗಳನ್ನುಳ್ಳ ಒಂದು ಬಗೆಯ ಹಣ್ಣು ; ದಾಳಿಂಬೆ : ದಾಡಿಂಬದ ಹೂ ಮಾವಿನ ಬತ್ತಿಳಿಯ ಕರಿಕೆ ಶರ್ಕರೆಯಿನಿತಂ ಧಾವಿಸುವುದಕ್ಕಿಗಚ್ಚಿಂದೀವುದು ನಸ್ಯಮನೆ ರಕ್ತಪಿತ್ತಂ ವಿನಾಶಂ (ಕಲ್ಯಾಕಾ. ೫-೦೩). [ಸಂ.]

ದಾಡಿಂಬೆ (ನಾ). = ದಾಡಿಂಬ: "ಕರಕಃ, ದಾಡಿಮಃ– ೨ ದಾಡಿಂಬೇಗಿಡ, ನಾಳಿಂಬೇಗಿಡ, ದಾಳಿಂಬರೀ" (ಸಿದ್ಧಾಂತ. ೦೦೧). [ಸಂ. ದಾಡಿಂಬ]

ದಾಡಿಮ (ನಾ). = ದಾಡಿಂಬ: "ಕರಕಮೆನೆ ದಾಡಿಮಮೆನಲ್ಕೆ ದಾಳಿಂಬ ಮದು" (ಮಂಗಣ. ೩೭-೧೭); "ವೆಸರಕ್ಕು ದಾಡಿಮಕೆ ದಾಳಿಂಬವೆಂದು" (ಶಶಿ. ೦೩೫); ಪರಿಪಕ್ವಫಲರಸಾಸ್ವಾದನೋತ್ಸುಕ ಶುಕಚಂಚು ಸಂಚಾರ ದಿನಲ್ಲೊಕ್ಕು ಕುಂಕುಮಂಬೊರೆದ ಕರ್ವುರವಳುಕಂ ಕೆದಱು ದಂತಿರ್ದ ದಾಡಿಮದೀಜರಾಜಿಯೊಳಂ (ಪಂಪಭಾ. ೨-೩೩); ಬೀಡಿವರ್ಣಂ ತುಱುಗಿರ್ದ ದಾಡಿಮಚಯಂ (ಜಗವಿ. ೨-೦೫); ನಸುಬಿರಿದ ಪರಿಪಕ್ವ ದಾಡಿಮವಸರ ದೊಳಗರವಟ್ಟಗೆಯ ದರಹಸಿತವಂಕಜಗಳಿತಮಕರಂದದ ತಟಾಕದಲಿ (ಕುವ್ಯಾಸು. ೭-೩೪); ದಾಡಿಮದ ಬೀಜ ರತ್ನವಾದಾವೇ (ಗಾಥೆ).

[ಸಂ.]

ದಾಡಿಮಾಷ್ಟಕ (ನಾ). ದಾಳಿಂಬೆಯಿಂದ ಮಾಡಿದ, ವೈದ್ಯಕ್ಕೆ ಉಪಯೋಗಿಸುವ ಒಂದಂ ಬಗೆಯ ಚೂರ್ಣ: ದಾಡಿಮಾಷ್ಟಕ–ತವಕ್ಷೀರ ೨ ವರಹ ತೂಕ . . . ಸಕ್ಕರೆ ಎಂಟು ಹಲ ಈ ರೀತಿಯಲ್ಲಿ ಕೂಡಿ ಚೂರ್ಣವ ಮಾಡಿ ಪ್ರತಿದಿನ ಉದಯದಲ್ಲಿ ಸೇವಿಸಲು ಸಕಲ ಗ್ರಹಣಿ ಹರ (ಸಳಪ್ಯ. ೩೩೩). [ದಾಡಿಮ + ಅಷ್ಟಕ]

ದಾಡಿಮಿಫಳ (ನಾ). ದಾಳಿಂಬೆ ಹಣ್ಣು: ಬಿರಿಕಿನೊಳೊಯ್ಯನೊಯ್ಯನೆರೆದೋಱುವ ಬಿತ್ತುಗಳಿಂ ವಿಳಾಸಮಾವರಿಸಿದ ದಾಡಿಮಿಫಳಮನೊಯ್ಯನೆ ಚುಂಬಿಸಿ ಬರ್ಪ ಕಾಂತನಂ ತರುಚರಕಾಂತೆ ಕಂಡು (ಪುಷ್ಪಪು. ೫-೮೭).

[ಸಂ. ದಾಡಿಮಿಫಲ]

ದಾಡೆ$_1$ 'ದವಡೆ' ನೋ.

ದಾಡೆ$_2$, **ದಾಡಿ**$_2$ (ನಾ). ೧. ಕೋರೆಯಂ ಹಲ್ಲು: "ಆಶೀಃ, ದಂಷ್ಟ್ರಾ—ಈ ೨ ಹಾವಿನ ದಾಡೆ" (ಹಂಪಾಯು. ೦೦೬-೩೦); ಮಗಂ ನಾಲ್ಕು ದಾಡೆವೆರಸು ಪುಟ್ಟಿದೊಡಾತಂಗೆ ತಾಯುಂ ತಂದೆಯುಂ ಚಾಣಾಕ್ಯನೆಂಬ ವೆಸರನಿಟ್ಟರ್ (ವಡ್ಡಾರಾ. ೧೮೩-೪); ಮಸಿಯಂ ಪುಂಜಿಸಿದಂತುಟಪ್ಪ ತನು ನೀಳಾಂಭೋಧರಂ ದಾಡೆಗಳ್ ಪೊಸ ವಿಂಚುಗ್ರವಿಲೋಚನಂ ದಿವಿಜ ಗೋಪಂ ಕಾರೊಮೇಣ್ ಕಾಳ ರಕ್ಕಸನೋ ಪೇಟಿನೆ ಬಂದು ತಾಗೆ (ಪಂಪಭಾ. ೭-೨೭); ಪೊರೆದರೊ ನೆತ್ತರಿಂದನಿಪ ನಾಲಗೆಯಿಂ ಬಿಡೆ ಸಿಂಹಕೇಸರದವೊಲಿರ್ದ ದಾಡೆಗಳ ಕಾಂತಿಯನಾಂತ ವರಾಹಘಾತದರರ್ಥರ ತನುಗಳ್ಗಿಜಕ್ರಮವನೊಯ್ಯನೆ ನಾಲಗೆಯಿಂದೆ ತೋಱುವಂತಿರೆ (ಕಾದಂಪು. ೦೬೭); ವಿಱುಗುವ ದಾಡೆಯಿಂದಣೆದು ಪೆರ್ದರಿಯಂ ಕರದಿಂದಮೆತ್ತುತುಂ . . . ಬರುತಿರ್ದುದು ಭೀಕರನೊಂದು ಸೂಕರಂ (ಕಾವ್ಯಸಾ. ೦೦೧೨); ವಸಿದು ಕನಲ್ದ ರಾಹುವಿನ ದಾಡೆಯ ಕೂರ್ಮೊನೆ ಸೋಂಕದೊರ್ಮೆಯುಂ ಕಿಸುಗದಿರೊಂದಿ ಕಂದಿ ಕಡಲೊಳ್ಬಿಟದಾ ದ್ವಿಜರಾಜತೇಜಮುಂ ಪಸಗೆದಿಸಲ್ಕೆ (ಚಕವಿ. ೦-೬) ೨. ಹಲ್ಲು; ದಂತ. 'ದಾಡೆಗಡಿ' ವರ್ಸಾ. **ದಾಡಿ**$_2$: ೧. ದಾಪಿಲಿ ಧರೆಯನೆತ್ತಿದ ವಿಜಯವಿಠಲ ನೋಡಿ ನಗುತಿಪ್ಪ ಮಾನವರಾಟಕ್ಕೆ (ವಿಠಾಸು. ೪೪-೪); ಮನವೆಂಬ ಕರ್ಮವನ್ನು ಸಂಕಲ್ಪವೆಂಬ ದಾಡಿಯಲ್ಲಿ ಸಂಚಿತ ಪ್ರಾ ಆಗಾವಿಂ ಎಂಬ ಕರ್ಮ ತ್ರಯಂಗಳ ನವಗ್ರಹಿಸಿಕೊಂಡಿರುತ್ತಿಹುದೆಂಬುದೀಗ ಕೋಡಗದಣಲಿನಲ್ಲಿ ಮೂರಗುಳ ಕಂಡೆನೆಂಬ ಶಬ್ದಕ್ಕರ್ಥ (ಪೋಳಿಮಾ. ೨೨೫-೭೭೮ ಟೀಕೆ). ೨. ಓಡಿನಂತಾಗೆ ಕೆರೆ ಭಾವಿಗಳ್ ನೀರಿಲ್ಲ ದಾಡಿಯಂ ಕಟ್ಟಿದರ್ಸಕಲ ಮನುಜರ್ ಬೇಸಗೆಯ ಬೇಗೆಯಿಂದ (ಮಹಾವಿ. ೧೪-೧೧೨). [<ಪ್ರಾ. ದಾಢಾ./ಸಂ. ದಂಷ್ಟ್ರಾ]

ದಾಡೆಗಡಿ (ಕ್ರಿ). ಹಲ್ಲು ಕಡಿ; ಹಲ್ಲು ಮಸೆ: ಆಗಳವರ ಸಂರಂಭವಂ ಕಂಡು ರೋಷಾವೇಶಮಂ ಕೆಯ್ಕೊಂಡು ದಾಡೆಗಡಿದು ಮಾರ್ಮಲೆತು ಮಾಮಸಕಂ ಮಸಗಿ ... ಅಟ್ಟೆಯಂ ಕೊಱಿದು ತಿಂದುದು ತೇಗಿದುದುಗ್ರ ಸೂಕರಂ (ಕಬಶಂ. ೪-೧೫ ವ) [ದಾಡೆ$_2$ + ಕಡಿ$_1$]

ದಾಡೆಗಳೆ (ಕ್ರಿ). ಹಲ್ಲನ್ನು ಕೀಳಂ, – ತೆಗೆದಂಹಾಕು: ದುರ್ಯೋಧನಂ ದಾಡೆಗಳೆದ ಕುಳಿಕನಂತೆಯುಂ ಕೋಡುಡಿದ ಮದಹಸ್ತಿಯಂತೆಯುಂ ನವಿ ಮುಡಿದ ಸಿಂಹದಂತೆಯುಂ ಗಳಿತಗರ್ವನಾಗಿ ಪಾಂಡವರ ಮೊಗವಂ ನೋಡಲ್ ನಾಣ್ಚೆ (ಪಂಪಭಾ. ೭-೩೯ ಪ). [ದಾಡೆ$_2$ + ಕಳೆ$_1$]

ದಾಡೆಗುಟ್ಟು (ಕ್ರಿ). = ದಾಡೆಗಡಿ: ವರಾಹರೂಪದ ಮೂಕದಾನವಂ . . . ಬಾಯ್ಗೂಯೆ ದಿಗ್ಗಜಂ ವೆಱಗಿಟ್ಟುವಾಂ[ತ]ರದ ತೊಟ್ಟನೆ ದಾಡೆಗುಟ್ಟೆ ಕಟಲ್ದು ತಾರಗೆಗಳ್ ನಭಂ ಬೆರ[ಸು]ಬಿಟ್ಟುವು (ಪಂಪಭಾ. ೮-೧೫); ಎಕ್ಕಲಂ ದಾಡೆಗುಟ್ಟುತ್ತೆರಡುಂ ಕಣ್ಣಿಂ ಸ್ಫುಲಿಂಗಂ ಸುರಿದ ಪುವೆನೆ ನೋಡುತ್ತ (ಗಿರಿಕ. ೧-೧೦೦); ದಾಡೆಗುಟ್ಟ ತಾಂ ತಾಗಲಿದಿರ್ಕೊಂಡುಡಿದ ಕಾಲನ ಸೈರಿಭದಂತೆ ಬರ್ಪಿನಂ (ರಾಜಶೇ. ೫-೯೦).

[ದಾಡೆ$_2$ + ಕುಟ್ಟು$_{1,1}$]

ದಾಡೆಬಂಧ 'ದಾಡಾಬಂಧ' ನೋ.

ದಾಡೆಯಾಡು (ಕ್ರಿ). ದವಡೆಯನ್ನು ಆಡಿಸಂ; ಬಾಯಾಡಂ: ಆಡು ಹಲ್ಲ ತಿಂಬಲ್ಲಿ ಕೋಡಗ ನೋಡಿ ಬಾಲವ ತಿಂದಿತ್ತು, ಕೋಡಗ ದಾಡೆಯಾಡುವಾಗ ಬಳ್ಳಿ ಮಾತಸುವಾದಿದುದಿಲ್ಲಿ (ಪುನುಗುಂ. ೪-೮೩).

[ದಾಡೆ$_1$ (<ದವಡೆ) + ಆಡು$_1$]

ದಾಣ, ಡಾಣ, ಡಾಣೆ$_3$, **ಡಾಣೆ**$_1$, **ಢಾಣೆ**$_2$, **ದಾಣೆ**$_1$, **ದಾಣೆ**$_1$ (ನಾ). ೧. ದವಸ; ಧಾನ್ಯದ ಕಾಳು; ದಾಣ ತುಂಬಿ ಕುದುರೆಯ ಬಾಯಿಗೆ ಕಟ್ಟುವ ದಾಣದ ಚೀಲ; ತೋಬರ(೦) (Nose-bag. ಇಂಕಸಿ). **ಡಾಣ**: (ಕ). **ಡಾಣೆ**$_3$: ೨. ಕಡಲೆಹಿಟ್ಟಿನಿಂದ ಕರಿದು ಮಾಡುವ ಒಂದು ಬಗೆಯ ತಿನಿಸು: ಸ್ವಲ್ಪ ಹೊತ್ತಿನಲ್ಲೇ ಜಮ್ಮಾನದ ಮೇಲೆ ಡಾಣೆ, ಮಂಡಕ್ಕಿಯ ರಾಶಿ ಇರುತ್ತಿತ್ತು (ಪುಕಳೆ. ೩೫). **ಡಾಣೆ**$_1$: ೧, ೨: "ಡಾಣೆ – ಧಾನ್ಯ, ತಿನ್ನುವ ಪದಾರ್ಥ" (ಕೂನ್ಯಸಂ. ಕೋಶ). **ಢಾಣೆ**$_2$: ೨. ನಾನು ಹೊಟೆಲಲ್ಲಿ ಬಾಣಾಲೆಯ ಮುಂದೆ ಬೆವರು ಸುರಿಸುತ್ತಾ ಢಾಣೇ ತಿಕ್ಕಿ ತಿಕ್ಕಿ ಒಣಗೋದು! ಎಂದು ಭುಸುಭುಸಿದರು (ಪಕ. ೩೫). **ದಾಣೆ**$_1$: ೨. ತಪ್ಪುವದಿಲ್ಲಪ್ಪಾ ಎರಡು ಪೊತ್ತು ದಾಣೆ ತಿಂದ ಮೇಲೆ ತಿರಗತೈತೆ ಮೇಗಲ ಓಣಿ (ಶರೀಕ. ೪೭-೨); ಈ ಬೂಂದಿನ ದಾಣೆಯನ್ನು ತೆಗೆದು ಕೊಂಡರೆ ಶರೀರಕ್ಕೆ ಆರೋಗ್ಯವಾಗಿರುವದು (ಕೃಷಪ್ರ. ೧೯೯); ಪುಗ್ಗೆ ದಾಣೆಯ ಆಸೆ ತೋರಿಸಿ ಮಾತನಾಡಲೆತ್ನಿಸಿದರೂ ಆಕೆ ಅವನೊಂದಿಗೆ ಮಾತನ್ನೂ ಆಡಲಿಲ್ಲ (ಗಂಗಾಗೌ. ೦೩೬). **ದಾಣೆ**$_1$: ೧. ಕುದುರೆ ದಾಣೆ ಬಗೆ ತೆರುವ ಭೂಮಿ ವಳಗೆ ಪಾಲಿಸಿಕೊಂಡದಂ (ಮ್ಯಆರಿ. ೧೯೩೦, ೯೦-೦೨; 1708): ಒಳಗಿನ ಕಾಳುಗಳು ಸಣ್ಣದಿದ್ದದ್ದರಿಂದ ದಾಣೆಗಳು ಚಪ್ಪಟಾಗಿರುತ್ತವೆ (ಮುಂಬಪ್ರಾ. ೫೧). [←ಮರಾ. ದಾಣಾ; ಹಿಂ. ದಾನಾ./ಸಂ. ಧಾನಾ]

ದಾಣಧಡಿಯ (ನಾ). ಬೊಜ್ಜಿ ದೇಹದವನಂ; ದಡಿಗ; ದಾಂಡಿಗ ದಾಣಧಡಿಯ ನೀನು! (ದುರಂಪಾ. ೬೫). [ದಾಣ$_0$ (<ಢಾಣೆ$_1$) + ಧಡಿಯ]

ದಾಣಾ 'ಢಾಣೆ$_1$' ನೋ.

ದಾಣೆ$_1$ 'ದಾಣ' ನೋ.

ದಾಣೆ$_2$ 'ಢಾಣೆ$_1$' ನೋ.

ದಾಣೆ$_1$ 'ದಾಣ' ನೋ.

ದಾಣೆ$_2$ 'ಢಾಣೆ$_1$' ನೋ.

ದಾತ$_1$ 'ದಾತಾರ$_1$' ನೋ.

ದಾತ$_2$ (ನಾ). ಕೊಡುವವನು; ದಾನಿ: ನಿರುತಂ ಸತ್ಯವಿಗೊರ್ವ ಗರ್ವಿ ಪುಸಿಯುತ್ಕಂ ಲೋಭಯಾಗಲ್ ನಿಜಂ ಧರೆಯೊಳ್ ದಾತರು ಪುಟ್ಟರೇ (ಸೋಮೇಶ. ೫೬); ದಾತೃ ಶಬ್ದದ ತಕಾರಕ್ಕೆ – ದಾತ (ಶಮದ. ೮೪

ಪ್ರಯೋ) ; ನೀತಿವಿದನಾಚಾರಸಂಪನ್ನನುತ್ತಮಂ ದಾತನೆಂಬಿನಿಸು ಗುಣ ಮುಳ್ಳ ಕುವರಂ ನಿನ್ನನೀ ತಪ್ತತೈಲದೊಳಗೆಂತಕಟ ಬೀಳಿಸುವೆಂ (ಜೈಮಿಭಾ. ೧೧-೩೨). [<ಸಂ. ದಾತೃ]

ದಾತ್ಯ (ಗು). ಕತ್ತರಿಸಿದ ; ಕೊಯ್ದ. [ಸಂ.]

ದಾತವ್ಯ (ಗು). ೧. ಕೊಡಬೇಕಾದ ; ಕೊಡುವ. ೨. ಕೊಡಲು ಅರ್ಹವಾದ : ಪ್ರವಿಲಸದ್ಗೀರ್ವಾಣದಾತವ್ಯ ಸಾಯಕ ಸಂಪೂರ್ಣ ಕಳಾಪ್ರವೀಣನಿಳಾಭಾರಕ್ಷಮಾಕ್ಷೂಣನಂ (ಪಂಪಭಾ. ೧-೧೩೪). [ಸಂ.]

ದಾತಾರ$_1$, ದಾತ$_1$ (ನಾ). ೧. ಸ್ವಾಮಿ ; ಒಡೆಯ ; ಯಜಮಾನ : ಈ ಧರ್ಮಮಂ ಕೈಕೊಣ್ಡು ನಡೆಯಿಸುವ ದಾತಾರಂ ಮನ್ನೆಯ ಕಾಯಿಂಮ್ಮ (ಸೌಇಇ. XX, ೩೪-೨೨ ; 1053) ; ಹೊರೆದ ದಾತಾರಂಗೆ ಹಗೆವರ ಶಿರವನರಿದೊಪ್ಪಿಸುವೆನೆಂಬೀ ಭರದೊಳಿರ್ದೆನು (ಕುವ್ಯಾಉ. ೧೦-೧೪) ; ನೀನೆ ಕಟ್ಟಾಳೆಂಬರೀಗಳಿಂತಳಿದಪರೆ ದಾತಾರ ವೀರ ಸುಕುಮಾರ ಧೀರ (ಜೈಮಿಭಾ. ೧೩-೬೦). ೨. ವಾರಸುದಾರ ; ಸಂಬಂಧಪಟ್ಟವನು : ದಾತಾರರೇ ಇಲ್ಲವಂತೆ ಆ ಹೆಣಕ್ಕೆ (ಸಂಸ್ಕಾರ. ೯೯) ; ಅಲ್ಲವಾದರೆ ಮೂಡೋಡಿಯ ಆ ಚಿನ್ನದಂಥಾ ಭೂಮಿ, ಹಾಳುಬಿದ್ದು ದಾತಾರರಿಲ್ಲದೆ ಹೀಗೆ ಕಾಡು ಬೆಳೆಯುತ್ತಿತ್ತೇ ? (ಚಿಗುಳ. ೯೯). **ದಾತ**$_1$: ೧. ಎನ್ನ ದಾತನೆ ಎನ್ನ ತಾತನೆ ಎನ್ನ ಭಕ್ತಿತ್ರಯನಿಧಾನವೆ . . . ಇಂದಡಗಿದೈ ನೀನು (ಬಸಪು. ೩೬-೩) ; ಆಳು ಕಟ್ಟಿದವನೆ ಅರಸು, ಕಾಳು ಇಕ್ಕಿದವನೆ ದಾತ (ಗಾದೆ). [<ಸಂ. ಧಾತೃ]

ದಾತಾರ$_2$ (ನಾ). ಕೊಡುವವನು ; ದಾನಿ : ಪರಮಾತ್ಮನೇ ಕೊಡುವ ದಾತಾರನೆಂದು ಅರಿತು ಭೋಗಿಸಿ . . . ನಿಮಿಷ ಶಕಲಗಳ ಬಿಡದಿರಲು ಧನ್ಯವಹುದು (ಕಎಪು. ೫೨-೩) ; ದಾನಭಾಗಿಗಳೂ ದಾತಾರರೂ . . . ಇದ್ದರೆಂಬುದು . . . ನಿಶ್ಚಿತವಾಗಿದ್ದರೆ ಅಂಥ ಶಾಸನಗಳು ನಂಬಿಕೆಗರ್ಹೆ ವಲ್ಲ(ಕರ್ಣಅ. ೧೦೪). [ಸಂ. ದಾತೃ]

ದಾತೃ (ಗು). ೧. ದಾನಮಾಡುವ ; ನೀಡುವ ; ಕೊಡುವ. (ನಾ). ೨. ಕೊಡುವವನು ; ದಾನಮಾಡುವವನು : ದಾನಲಕ್ಷಣಮಪ್ಪಡೆ ದಾತೃವೆಂದುಂ ದೇಯಮೆಂದುಂ ಪಾತ್ರಮೆಂದುಂ ತ್ರಿವಿಧಮಕ್ಕುಮಲ್ಲಿ ಶ್ರದ್ಧಾದಿ ಸಪ್ತಗುಣಸಂಪನ್ನಂ ದಾತೃವಕ್ಕುಂ (ಜಾವುಂಪು. ೨೨೬) ; ಭಕ್ತಿಜ್ಞಾನ . . . ಸಮಾಯುಕ್ತಂ ಸಪ್ತಗುಣಂ ಜೈನೋಕ್ತಿಯಿನಾ ದಾತೃವೆನಿಪ ಭವ್ಯಂಗಕ್ಕುಂ (ಚಂದ್ರಪು. ೩-೩೧) ; ಇಂದ್ರನು . . . ಅಯ್ಯಾ ದಾತೃವೆ, ನನಗೆ ಬಹು ಕಷ್ಟ ಸಂಭವಿಸಿರುವುದು, ನೀನು ಪರಿಹಾರ ಮಾಡಬೇಕೆಂದನು (ನೀತಿಚಿಂ. XIV, ೦೦) ; ದಾತೃ ರಾಜನಾಗಬಹುದು ; ನಾಡಿನ ಶ್ರೀಮಂತರಾಗಬಹುದು (ಸವತಿ. ೪೩). [ಸಂ.]

ದಾತೃತ್ವ (ನಾ). ದಾನಕೊಡುವ ಅಥವಾ ನೀಡುವ ಸ್ವಭಾವ ; ಔದಾರ್ಯ ; ಉದಾರತೆ ; ದಾನಪರತೆ. [ಸಂ.]

ದಾತ್ಯೂಹ (ನಾ). ಒಂದು ಬಗೆಯ ಜಲಪಕ್ಷಿ ; ನೀರುಕೋಳಿ : "ದಾತ್ಯೂಹಃ, ಜಳರಂಕುಃ – ಈ ೨ ಜಾಮಹಂ" (ಹಲಾಯು. ೪೨-೯೬) ; "ಜಳರಂಕು ದಾತ್ಯೂಹಮೆನಲಾ ನಿರುಗನಕ್ಕು" (ಮಂಗರಾ. ೫೨-೧೦). [ಸಂ.]

ದಾತ್ಯೂಹಕ (ನಾ). = ದಾತ್ಯೂಹ : ಕೇಳಾಲಿಸದೊ ಕೂಗುತಿದೆ. ಆ ದರಿಯ ದುಮುಕುತಿಹ ವನನಿರ್ಝರದ ಮೊರೆಯ ಮೀರಿ ದಾತ್ಯೂಹಕಂ! (ಶ್ರೀರಾಮಾ. ೨೮೭-೧). [ಸಂ.]

ದಾತ್ರ (ನಾ). ಕುಡುಗೋಲು : "ಲವಿತ್ರಂ, ದಾತ್ರಂ–ಈ ೨ ಕುಡುಗೋಲ್" (ಹಲಾಯು. ೯೪-೪೨೩) ; "ದಾಳಿ ಲೂನಂ ಕೊಯ್ಲು ಕುತ್ತರಿ ಬಣಂಬೆ ಕುಡು(ಡಿ)ಗೋಲು ದಾತ್ರಂ ಲವಿತ್ರಮೆನಿಕ್ಕು" (ಮಂಗರಾ ೧೦೯-೨) ; ಕಂಸಪ್ರಭೃತಿದಿತಿಜರಂ ಕೊಲ್ವೆ ನಾನೆಂದು ಪೂಣ್ಡಚ್ಯುತದೇವಂ ದೇವಕೀ ಗರ್ಭದೊಳುದಯಿಸಲೆಂದಿರ್ದನೆಂಬಂತಿದಂ ವೇಟ್ಟಿತಿಮಾತ್ರಂ ಪಾಂಡು ಗಾತ್ರಂ ತಳರ್ದನಫಲತಾದಾತ್ರನಾ ಬ್ರಹ್ಮಪುತ್ರಂ (ಜಗವಿ. ೨-೪೪) ; ಉತ್ತಮಗುರುರಾಜದೇಶಮಿರ್ಕುಂ ಶುಭದಿಂ ಜತ್ತುಕದ ಕರ್ಮಲತೆ ಗಳನುತ್ತರಿಸುವ ದಾತ್ರಚಿತ್ರಮನುರಾಜೀಯಂ (ಹಮ್ಮೀರ. ೧-೪೭). [ಸಂ.]

ದಾದ (ನಾ). ೧. ಅಪ್ಪ ; ತಂದೆ ; ಜನಕ : ದಾದನೆದುರಿಗೆ ಬಂದು ಶಿಶುವದು ಪಾದಪದ್ಮಗಳನ್ನು ವಂದಿಸೆ ಮೋದಸಾಗರದಲ್ಲಿ ರಾಜನು ಮಜ್ಜನಂಗೈದ (ರಘುವಂ. ೨೭-೨೫). ೨. ಹಿರಿಯರನ್ನು ಅಥವಾ ಪೂಜ್ಯರನ್ನು ಗೌರವ ವಾಗಿ ಸಂಬೋಧಿಸುವಾಗ ಹೇಳುವ ಮಾತು . ಆಧಿ ದುಃಖಗಳಿಂದ ರಕ್ಷಿಸಿ ದಾದನೇ ಪರಿಪಾಲಿಸೆನ್ನನು (ರಘುವಂ.೭೮-೧೨). [<ಸಂ. ತಾತ]

ದಾದರಾ, ದಾದ್ರ (ನಾ). ೧. [ಸಂಗೀತ] ಒಂದು ಬಗೆಯ ತಾಳ ; ರೂಪಕತಾಳ : ನಮ್ಮ ದೇಶದ ಸಂಗೀತದಲ್ಲಿ ರೂಪಕ (ದಾದರಾ), ಆದಿ (ತ್ರಿವಟ), ಝುಂಪೆ, ದ್ರುಪದ, ತ್ರಿವುಡೆ (ಢಮಾರ), ಧೂಮಾಳಿ ಎಕ್ಕಾ ಎಂಬ ಹಲವು ತಾಳಪದ್ಧತಿಗಳಿರುವುವು (ಬಾಲಪ್ರ. II, ೧೦೪೦). **ದಾದ್ರ** : ೨. ಒಂದು ಬಗೆಯ ಪ್ರೇಮಗೀತೆ : ಕೊನೆಗೆ ನೃತ್ಯಗಾರನು ಕುಳಿತು ಕೊಂಡು ಠುಮ್ರಿ, ಥಪ್ಪ, ದಾದ್ರ, ಗಜಲ್ ಮುಂತಾದ ಪ್ರೇಮಗೀತೆ ಗಳನ್ನು ಹಾಡಿ, ಅವಕ್ಕೆ ಅನುಗುಣವಾಗಿ ಅಭಿನಯ ಪ್ರದರ್ಶನ ಕೊಡುತ್ತಾನೆ (ಅಭಾನ್ಯ. ೯೧). [←ಹಿಂ. ಮರಾ. ದಾದರಾ]

ದಾದಿ, ದಾಯಿ (ನಾ). ೧. ಸಾಕುತಾಯಿ ; ಮಕ್ಕಳನ್ನು ಸಾಕುವವಳು : "ಓತು ಸಾಕಿದ ಧಾತ್ರಿ ದಾದಿಯೆನಿಸಿಕ್ಕುಂ" (ಮಂಗರಾ. ೯೨-೦೨); ಜಿತಶತು ವೆಂಬೊನರಸನಾತನರಸಿ ಇಳಾಮಹಾದೇವಿಯೆಂಬೊಳಾ ೮ರಸನ ದಾದಿ [ಪಾಠಾಂ. ಇರ್ವರ್ಗಂ ಮಗಳ್] ವಿನಯಮತಿಯೆಂಬೊಳಂತವರ್ಗಳಿಪ್ರ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ (ವಡ್ಡಾರಾ. ೧೦೬-೧೬) ; ಅಬ್ಬೆ ದಾದಿ ಪರಿಚಾರಕರೀರಿಲ ಕಾಪು ಕಾಪೆ ಕೂರ್ತಿಟ್ಟವರಾತ್ಮಪುಣ್ಯಮೆ ವಿಪುಣ್ಯರನೋಳಿಯೆ ಕಾಪು ಕಾಗುಮೇ (ಶಾಂತಿಪು. ೬-೧೦೬) ; ಆಗಳುಮಾದಂ ದಾದಿಗಾಯಾಸಮನೊಡರಿಪ ಮುದ್ದಾತ್ಮಜಂಗೆಂದು ತೋರ್ಕುಂ (ಕಾದಂಪೂ. ೩೫೮) ; ದಾದಿಯ ಸೆಱಗಂ ಪಿಡಿದು ನಡೆವಲ್ಲಿ ರಾಜವೀಥಿಯೊಳ್ ಸುಳಿವ ಜವ್ವನಿಗರಂ ಕಂಡು (ಗಿರಿಕ. ೨-೧೦೫ ಪ). ೨. ತಾಯಿಗೆ ಬದಲಾಗಿ ಹಾಲುಕೊಟ್ಟು ಸಾಕುವ ಸೇವಕಿ ; ಹಾಲೂಡುವವಳು : ದಾದಿ ಪಸುಳೆಯಂ ಪಾಲಂ ಕುಡಿಯಿಸಿ ದಳ್ (ಶಬ್ದಾನು. ೨೦೭ ಪ್ರಯೋ). ೩. ದಾಸಿ ; ಸೇವಕಿ ; ಆಳು ; ತೊತ್ತು : "ಆಳು, ತೊತ್ತು, ದಾದಿ, ದಾಸಿ, ದಾಸ, ಅಡಿಗ, ಲೆಂಕ" (ಕಂನುಹು. ೭೮) ; ಅಂತು . . . ಕಾಮಗ್ರಹಗೃಹೀತೆಯಾಗಿರೆ . . . ಗದ್ಗದಾಶ್ರು ಮೋಕ್ಷಮೂರ್ಧಾದಿ ನಾನಾ ವಿಕಾರಂಗಳನೊಡನೊಡನೆ ತೋಱುವುದುಮಾಕೆಯ ದಾದಿಯ ಮಗಳ್ ಚೂತಲತಿಕೆಯೆಂಬಳ್ ಕಂಡು (ಪಂಪಭಾ. ೪-೫೯ ಪ) ; ತುಂಬಿಗುರುಳ ತುಱುಬಿಕ್ಕಿ ದಾದಿಯರು ನಿತಂಬಿನಿ ಯೊಡನೆ ಪೇಳಿದರು (ಮೋಹತ. ೯-೧೬) ; ದಾದಿಯರ ಮಾತಿನಿಂದ ಆ ವೃತ್ತಾಂತವನ್ನು ಯಥಾರ್ಥವಾಗಿ ತಿಳಿದು (ಕೃವಾಉ. ೨೯೦). ೪. ಆಸ್ಪತ್ರೆ ಯಲ್ಲಿ ರೋಗಿಗಳ ಸೇವೆಯನ್ನು ಮಾಡುವವಳು ; ನರ್ಸ : ಅನಲಾ ದಾದಿಯಾಗಿ ಬೆಳಗಾಂವಿಯ ಆಸ್ಪತ್ರೆಯನ್ನು ಸೇರಿದ ದಿನ ಜೀವಮಾನವೆಲ್ಲ ಹೊಸಹೊಸದಾಗಿ ಕಾಣಹತ್ತಿತು (ದಾದಿ. ೩). **ದಾಯಿ** : ೧. ಕುಮಾ[ರತೈ] ಲಪದೇವರ ದಾಯಿ ಮೇಲಾಳಿಕೆಯ ಭೋಗಿಯಬ್ಬರಸಿಯು (ಕಇ. II. ೧೨-೩೭ ; 1114) ; ಕನ್ನಿ–ಗೆಳತಿ–ಮಡದಿ–ದಾಯಿ (ಹಾಡುಪಾ. ೪೧-೧೪), ೨. ದಾಯಿ ಹಾಲನೆ ನಂಬಿ ಬಾಯಾರಿ ಬಸವಳಿದು (ಗಿಳಿವಿಂ. ೩೫-೧). ೩. ಆಂ ದಾಯಿ, ಆಂ ಮರಂ (ಶಬ್ದಾನು. ೧೦೪ಪ್ರಯೋ). ೪. ಡಾಕ್ಟರು ಚೀಟಿ ಬರೆದು ದಾಯಿಯ ಕೈಯಲ್ಲಿ ಕೊಡುತ್ತಾನೆ (ಕಎಪು. ೪-೫೧).

[<ಸಂ. ಧಾತ್ರೀ./ಪ್ರಾ. ಧಾತೀ./ಪಾರ.ದಾಯಹ್]

ದಾದಿಕಾಱಿ (ನಾ). ದಾದಿಯಂ ಕೆಲಸಮಮಾಡುವವನು ; ಪರಿಚಾರಕ : ಸೇವಕ. 'ದಾದಿಕಾಱಿವೆಸ' ಪರಾ. [ದಾದಿ + ಕಾಱಿ]

ದಾದಿಕಾಱಿವೆಸ (ನಾ). ದಾದಿಯಂ ಕೆಲಸ: ಉಸುರೆ ದಿವಿಜೇಶ್ವರಂ ಪರಿವೆಸದಮರರ್ ದಾದಿಕಾಱಿವೆಸದಮರರದೇಂ ಬೆಸಗಲಿಗಳ್ ಬರ್ಪರೊ (ಅಜಪು. ೫-೭೬). [ದಾದಿಕಾಱಿ + ಬೆಸ$_1$]

ದಾದಿಗ (ನಾ). ಒಬ್ಬಾತನ ಹೆಸರು : ಚೋಲಮಹಾರಾಜನ ಆಳ್ ದಾದಿಯನ್ ದಾದಿಗ ×× ಮಹೇಂದ್ರರೊಳ್ ನಡಿ ದಳಮಣ್ಣು (ಎಳ. I, ಗೋರೀಪಿ. ೭೫-೪ ; ಸು. 900). [?]

ದಾದಿತನ (ನಾ). ಸಾಕಂತಾಯಿಯಂ ಕೆಲಸ: ತಮ್ಮ ಆಶಾಶಿಶುಗಳು, ತಮ್ಮ ಶಿಷ್ಯರ ದಾದಿತನದ ಒಲುಮೆಯಲ್ಲಿ ಬೆಳೆದು ಘಟ್ಟಿಘಟ್ಟಿಯಾಗುತ್ತಿದ್ದುದನ್ನು, ಕಣ್ಣಾರೆ ಕಂಡು ಕುಣಿದಾಡಿದರು (ಕಬಸಾ. V. ೬೧೫).

[ದಾದಿ + ತನ]

ದಾದಿವೆಣ್ (ನಾ). ದಾದಿಯಾದ ಹೆಣ್ಣು ; ಸೇವಕಿ : ವಂಗಳಕಾಯನಡೆದ ಬಾಲನ ದಾದಿವೆಂಗಳು ಸಂರಕ್ಷಿಸಲು ಅಂಗಜ ರತಿದೇವಿಯರ ಸಂತಸ ತುಂಬಿ ತಿಂಗಳಾದುದು ಕುಮಾರನಿಗೆ (ಮೋಹತ. ೦೭-೫೯).

[ದಾದಿ + ವೆಣ್]

ದಾದು (ನಾ). ೧. ಲಕ್ಷ್ಯ ; ಗಮನ ; ಕಾಳಜಿ ; ಎಚ್ಚರ ; ಸುತ್ತಲೂ ಅಷ್ಟೆಲ್ಲಾ ಜನರು ಓಡಾಡುತ್ತಿದ್ದಾರೆ, ನೋಡುತ್ತಿದ್ದಾರೆ. ಇವರಿಗೆ ಒಂದರ ದಾದೂ ಇಲ್ಲ (ಆಳಿ. ೫೯) ; ಇಂಥಾ ಗೊಂದಲದಲ್ಲಿ ನಮ್ಮ ದಾದು ಹೇಗೆ ಹತ್ತೀತಂ ಮಾಸ್ತರ್ ? (ಪ್ರಣಾಸ. ೦೧). ೨. ಗಮನ ಕೊಡುವವನು : ವೇದವೇದದವಾದ ಭೇದ ಹುಟ್ಟಿಸಿ ಜಗಕೆ ದಾದು ಯಾರಿಲ್ಲ ಹೇಳುವುದಕ್ಕೆ ಬಸವಣ್ಣ ಭೇದ ಅಳುಕಿಸಿದ ಕುಲ ಕುಲಕೆ (ಕನ್ನಆ. ೩೩೦). ೩. ಯಜಮಾನ ; ಒಡೆಯ. ೪. ಪ್ರಶಂಸೆ ; ಮೆಚ್ಚಿಗೆ.

ದಾದುಫರ್ಯಾದಿ, ದಾದ್‌ಫರ್ಯಾದಿ = ೧. ವಾರಸುದಾರ ; ಯಜಮಾನ ; ಒಡೆಯ : ಈ ಆಸ್ತಿಗೆ ದಾದು ಫರ್ಯಾದೀನೇ ಇಲ್ಲ (ರೂಢಿ). ೨. ತಕರಾರು ; ವಿಚಾರಣೆ : ಪಾರುಪತ್ಯಮಾಡುವಂಥಾವ ಮೊಕಸ್ತರು ಸಹ ನಿಮ್ಮ ಸುಖದುಃಖ ದಾದಫರ್ಯಾದಿ ವಿಚಾರಿಸದೆ (ಶಾಕೀಂದ್ರ. ೦೨೫). ದಾದುಮಾಡು=ಲಕ್ಷ್ಯಕೊಡು; ಗಮನ ನೀಡು: ಪೋಲೀಸರಿಗೆ ಕಂಪ್ಲೇಂಟ್ ಕೊಟ್ಟರೆ ಯಾರೂ ದಾದು ಮಾಡಲಿಲ್ಲ (ಚ್ಯಾಠಾಮೀ. ೦೩೧); ಅವಳು ತಿಳಿದುಕೊಂಡದ್ದರ ದಾಖಲೆಯನ್ನು ಕೂಡ ದಾದುಮಾಡದೆ ಹೊರಟ (ದೀಪಹ. II, ೯೮). ದಾದುಮುಟ್ಟು =ತಕರಾರು ಬರುವುದು,–ತಲಪು: ಸರಕಾರಕೂ ದಾದುಮುಟ್ಟಿ ಅದರ ವಿಚಾರ ಮಾಡೂತನಕ ಜನರನ್ನೇನು ಉಪವಾಸ ಕೊಲ್ಲೂದದ ಏನು ? (ಆನಟೀ. ೦೦) ದಾದುಹತ್ತು = ದಾದಂಬರುವುದು : ಅಲ್ಲಿ ನಮ್ಮ ದಾದು ಹತ್ತಲಿಕ್ಕಿಲ್ಲ (ಕಂಕು. ೩೮); ಸನ್ನಿಧಿಯ ತನಕ ದಾದು ಹತ್ತಲಿಲ್ಲ (ಕಥವಿ. II, ೬೪೦). [←ಪಾರ. ಮರಾ. ದಾದ್]

ದಾದ್ರ 'ದಾದರಾ' ನೋ.

ದಾಧಿಕ (ಗಂ). ೧. ಮೊಸರಿನಿಂದ ತಯಾರಿಸಿದ. (ನಾ). ೨. ಮೊಸರಿನಿಂದ ಮಾಡಿದ ಒಂದಂ ಬಗೆಯ ಖಾದ್ಯ: "ಮೊಸರೊಳೆ ಮಾಡಿದುದು ದಾಧಿಕಮೆಂಬುದು" (ಹಲಾಯು. ೫೪-೦೬೭). [ಸಂ.]

ದಾಧಿಕ್ಯ (ನಾ). = ದಾಧಿಕ : "ಎಲೆಕಾಯಿ ಮೊದಲಾದುವಂ ಮೊಸರಲ್ಲಿ ಕಲಿಸಿದೊಡೆ ದಾಧಿಕ್ಯಮೆಂದನಿಕ್ಕುಂ" (ಮಂಗರಾ ೬೪-೨). [ಸಂ.]

ದಾನ (ನಾ). ೧. ಕೊಡುಗೆ ; ಕಾಣಿಕೆ ; ಉಪಾಯನ : "ವಿಶ್ರಾಣನಂ. . . . ಉತ್ಸರ್ಗಃ. ಪ್ರದೇ(ಶ)ನಂ. ದಾನಂ–ಈ ೧೦ ಕೂಡುವುದು" (ಹಲಾಯು. ೬೯-೨೬೫); ಅಂತು ಭವಿಷ್ಯ ದ್ದ್ವಿಜನ್ಮವರ್ಣಕರ್ಮಧ್ಯಯನಾಧ್ಯಾಪನ ದಾನ ಪ್ರತಿಗ್ರಹ ಯಜನಯಾಜನ ವಿಶಿಷ್ಟ ವೃತ್ತಿಯುಮಂ (ಆದಿಪು. ೪-೭೩ ಪ) ; ಎತ್ತು ನಿಮ್ಮ ದಾನ ಬಿತ್ತು ನಿಮ್ಮ ದಾನ ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ (ಡೀದಾವ. ೪೨-೮೨) ; ಕೊಡಬೇಕುತ್ತಮನಾದವಂಗೆ ಮಗಳಂ ಸತ್ಪಾತ್ರಕಂ ದಾನಮಂ (ಸೋಮೇಶ. ೭೯); ಹೊಱಗೆ ದಾನವ ಬೇಡಿದವರುಂಟೆ ಕೊಟ್ಟು ಬೇಸಱದ ಮುಗುದರಸು ದೊರೆತಿದನಲೇ ಎಂದು (ಹಜಕಾ. ೯-೭) ; ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು (ಸರ್ವಜ್ಞ. ೭೦೭). ೨. ಸಾಮ, ದಾನ, ಭೇದ, ದಂಡಗಳೆಂಬ ಚತುರೋಪಾಯಗಳಲ್ಲಿ ಒಂದಂ : "ಕೊಟ್ಟು ಕೊಳ್ವುದು ದಾನಮೆನಿಸಿಕ್ಕು . . . ಸೈರಣೆ ಸಾಮಮಕ್ಕು ತಾವಿಂತಿವೆಯ್ದಿ ಮುಟ್ಟೆ ಚತುರೋಪಾಯಮಕ್ಕುಂ" (ಮಂಗರಾ. ೬೯-೭) ; ಪಗೆಗೇನನಾದೊಡಂ ಕೊಟ್ಟಗಲದೆ ನೆಲೆ ನಂಟುಮಾಡಿಕೊಂಬುದು ದಾನಂ (ಹಮ್ಮೀರ. ೨-೦೩೧); ರಾಜ್ಯವನ್ನು ಪುನಃ ಪಡೆಯಲು ಸಾಮ ದಾನ ಮತ್ತು ಭೇದೋಪಾಯಗಳನ್ನು ಬಳಸಿ ವಿಫಲವಾದ ಮೇಲೆ ಯುದ್ಧಸನ್ನಾಹವಾಗುತ್ತದೆ (ಕಾರಪ. ೯೯) ೩. ಮದವೇರಿದ ಆನೆಯಂ ಕುಂಭಸ್ಥಳದಿಂದ ಸುರಿಯುವ ಮದಜಲ ; ಮದೋದಕ : ನಿನ್ನಯ ಸಂತಾನವು ವಿಚ್ಛಿನ್ನಂ ಕ್ಷಿತಿಭಾರಧಾರಣೋಚಿತ ಗುಣ ಸಂಪನ್ನಮೆನಲ್ಕೆಗಟ್ಟುಂ ಭೂಪೋನ್ನತ ದಿಙ್ನಾಗದಾನಸಂದಂದದಿನೆಂದುಂ (ಕಾದಂಪೂ. ೩೭೬). ೧. ೩ : ಎನ್ನ ದಾನಮಿದಾಗಳುಂ ಮಧುಪಾಶ್ರಯಂ ಧರೆಗವ್ಯವಚ್ಛಿನ್ನ ದಾನಮಿದಾಗಳುಂ ವಿಬುಧಾಶ್ರಯಂ ಗೆಲೆವಂದನೆನ್ನನ್ನಿಜೋನ್ನತಿಯಿಂದಮಿಂ ಪತಿಯೆಂದು ಮೆಚ್ಚಿ ವಿನಾಯಕಂ ತಾನ್ನಿವಿರ್ಚುಗೆ ಕಬ್ಬವುಂ (ಪಂಪಭಾ. ೧-೭). ೪. ಪವಿತ್ರವಾದ ಜಲ,–ತೀರ್ಥ (?) : ಎಕ್ಕವಿಂಡೊಬ್ಬನಿಂದವಜಶವಮಂ ತರಿಸಿ ಸುಕ್ಕಿ ತಮು ಮುರುಟಿದವಱೊಳು ದಾನವುಂ ಚೆಲ್ಲಿ ಮಕ್ಕಳನಱಸುತೇಳೆ ಕರೆದಮೃತಕರದಿ ತಡವಲು ರೋಮ ಕೋಮಳಿಸಿತು (ಸಿದ್ಧರಾ. ೯-೩೦). [ಸಂ.]

ದಾನಂಗುಡು 'ದಾನಂಗೊಡು' ನೋ.

ದಾನಂಗೊಡು, ದಾನಂಗುಡು (ಕ್ರಿ). ದಾನಮಾಡಂ, – ಕೊಡು ; ಸಮರ್ಪಿಸಂ : ನನ್ದಗುನ್ದರ್ಗೆ ದಾನಂಗೊಟ್ಟದು ಕೆಸುಗೊಳದ ಮಾಡಸಂ ಒನ್ದಡುವುಮರ್ದೂರೊಳ್ (ಎಳ. IV, ಹೆಗ್ಗಡ. ೪-೩೬ ; ಸು. 760) ; ಸಾಸಿರ ಕವಿಲೆಯಸಳಂಕಾರಸಹಿತಂ ಚತುರ್ವೇದ ಪಾರಗರಪ್ಪ ಸಾಸಿರ್ವರು ಬ್ರಾಹ್ಮಣರ್ಗ್ಗಂ ದಾನಂಗೊಟ್ಟ ಫಲಮಕ್ಕುಂ (ಸೌಇಇ. XX, ೪೬-೮೩; 1072); ಈ ಧರ್ಮಮನಾರೋರ್ಬ್ಬರು ಪ್ರತಿಪಾಲಿಸಿದವರಿಗೆ ವಾರಣಾಸಿಯಲು ಸಾಸಿರ ಕವಿಲೆಯಂ ಉತ್ತಮರಪ್ಪ ಬ್ರಾಹ್ಮಣರಿಗೆ ದಾನಂಗೊಟ್ಟ ಪುಣ್ಯವಕ್ಕು (ಸೌಇಇ. XX, ೬೫-೦೩ ; 1101). ದಾನಂಗುಡು : ತನ್ನೆಂದಂದದಿಂದೆ ನಡೆಯಿಸಿದಂ ದಾನಂಗುಡುವದೊಂದಲಂಪಿನ ಪೆಂಪಿಂ (ಆದಿಪು. ೧೫-೫೧).

[ದಾನ + ಕೊಡು$_1$]

ದಾನಗುಣ (ನಾ). ದಾನ ಮಾಡಂವ ಸ್ವಭಾವ ; ಕೊಡುವ ಪ್ರವೃತ್ತಿ ; ಔದಾರ್ಯ: ಚಂದ್ರಬಲಮಂ ಕೈವಾರದಿಂದಂ ತದಾನನಚಂದ್ರಂ ಕುಡೆ ದೇಸೆ ಪೊಚ್ಚಪೊಸತಾಯ್ತೆಂಬನ್ನೆಗಂ ಮಾಟ್ಕಿ ನೂತನಕಂದರ್ಪನನೂನದಾನ ಗುಣದಿಂ ಚಾಳುಕ್ಯಕಂದರ್ಪನಾ (ಗದಾಯು. ೦-೬) ; ಅತಿಶಯಮಪ್ಪುತ್ತು ದಾನಗುಣಂ (ಎಳ. VI, ೪೫-೫೫ ; 1196) ; ದಾನಗುಣವಿಲ್ಲದನ ಸಿರಿಯಭಿಮಾನವಿಲ್ಲದ ಭಾರ್ಯೆ . . . ಪ್ರವರ್ಧನವಹುದೆ ಲೋಕದೊಳು (ಬಸಪು. ೩೭-೩೨). [ದಾನ + ಗುಣ]

ದಾನಗೈ (ಕ್ರಿ). ದಾನನೀಡು ; ದಾನಮಾಡಂ : ಯಾಚಕಜನಂಗಳಿಗೆ ಬೇಡಿದಂದದಿ ದಾನಗೈದು (ನವಮೋ. ೨-೪೨).

[ದಾನ + ಗೈ (<ಕೆಯ್$_1$)]

ದಾನಚಿಂತಾಮಣಿ (ನಾ). ೧. ದಾನ ನೀಡುವುದರಲ್ಲಿ ಚಿಂತಾಮಣಿಯಂತಿರುವ ವ್ಯಕ್ತಿ ; ಉದಾರವಾಗಿ ದಾನ ಕೊಡುವ ವ್ಯಕ್ತಿ: ಎನ್ನ ಅತಿಪ್ರೀತಿಯಿಂ ಧರ್ಮಚಿತ್ತಂ ವರದತ್ತಂ ದಾನಚಿಂತಾಮಣಿಯೆನಿಸಿ

ಯಶೋಭಾರಮಂ ತಾಳ್ದಿ ನಿಂದಂ (ಅಜಿಪು ೧೨-೫) ; ನೋಡಿದಂಗನೆಯರ ನೇತ್ರ ಚಕೋರಕೆ ಕೂಡೊಪ್ಪುತಿಹ ಪೂರ್ಣಚಂದ್ರ ರೂಢಿಪ ದಾನಚಿಂತಾಮಣಿ ಜಯತೆಂದು ಪಾಡಿದರು (ಕಂನವಿ. ೮-೪೦) ; ಅದರಲ್ಲಿ ಬೇರೆ ದೊಡ್ಡ ದಾನಚಿಂತಾಮಣಿಯಂತೆ ಅವಳು (ಕಂಬಹು. ೫೨). ೨. ಅತ್ತಿಮಂಬ್ಬೆಗೆ ಇದ್ದ ಬಿರುದು: ಸಂದ ದಾನಚಿಂತಾಮಣಿ ತನ್ನದೊಂದು ಪಿತೃಭಕ್ತತೆಯಂ ಮೆಱೆಯಲ್ ಪುರಾಣಚೂಡಾಮಣಿಯಂ ನಿಮಿರ್ಚಿದಳ್ (ಶಾಂತಿಪು. ಪರಿ. ೧) ; ಪರಮ ಶ್ರಾವಕಿ ನೀನೆ ದಾನಿಯೆ ವಲಂ ಶ್ರೀದಾನಚಿಂತಾಮಣಿ (ಅಜಿಪು. ೧೨-೭) ; ಮಹಾಸತೀರತ್ನಂ ಕುಳಪತ್ನಿಯಾಗಿ ಗುಣದಂಕ ಕಾರ್ತ್ತಿಯುಂ ಕವಿವರಕಾಮಧೇನುವುಂ ಕಟಕಪವಿತ್ರೆಯುಂ ಜಿನಧರ್ಮ್ಮ ಪತಾಕೆಯುಮೆನಿಸಿದ ದಾನಚಿನ್ತಾಮಣಿಯ ಮಹಾಪ್ರಭಾವಮೇದೋರೆಂತೆನೆ (ಸಾಇಇ. XI-1, ೫೩-೦೮; 1007). [ದಾನ+ಚಿಂತಾಮಣಿ]

ದಾನತೀರ್ಥಪ್ರವರ್ತಕ (ನಾ). [ಜೈನ] ಚರ್ಯೆಗೆ ಬಂದ ಜೈನ ತಪಸ್ವಿಗೆ ಮೊದಲನೆಯ ಭಿಕ್ಷೆಯನ್ನು ನೀಡಂವವನು (?): ಈ ಭವಕ್ಕೆಂಟನೆಯ ಭವದೊಳ್ ಭರತದೊಳ್ ನೀನಾದಿತೀರ್ಥಪ್ರವರ್ತಕನಾದಂದೀ ಶ್ರೀಮತಿ ದಾನತೀರ್ಥಪ್ರವರ್ತಕಂ ಶ್ರೇಯಾಂಸನೆಕ್ಕುಂ (ಅಜಿಪು. ೭-೦೩ ವ).

[ದಾನ + ತೀರ್ಥ + ಪ್ರವರ್ತಕ]

ದಾನತೆ (ನಾ). ೧. ಆನೆಯಂ ಕುಂಭಸ್ಥಳದಿಂದ ಮಂದಜಲ ಹರಿಯಿಪಿಕೆ. ೨. ಉದಾರತೆ; ಔದಾರ್ಯ; ದಾತೃತ್ವ; ದಾನಗುಣ. 'ಗಳಿತ ದಾನತೆ' ಪರಾ. [ಸಂ. ದಾನತಾ]

ದಾನದಂತಿ (ನಾ). ಮಂದೋದಕವನ್ನು ಸುರಿಸುತ್ತಿರುವ ಆನೆ; ಮಂದ್ದಾನೆ: ನಿಜಗವಃನಕ್ಕೆ ಮಚ್ಚರಿಪ ಮುಂಥರಯಾನದ ದಾನದಂತಿಯುಂ . . . ಕನಸು ಪದಿನಾಱುಮನಂಬುಜವದನೆ ಕಂಡಳ್ (ಪುಪ್ಪಪು ೯-೯೮)

[ದಾನ + ದಂತಿ]

ದಾನಧಾರಾಂಬು (ನಾ). ಸುರಿಸುತ್ತಿರುವ ಮಂದಜಲ: ದೆಸೆಯಂ ಖಡ್ಗಾಂಶುಜಾಲ ಬೆಳಗೆ ಧರಣಿಯಂ ದಾನಧಾರಾಂಬು ಜೌಗೇಟ್ಸೆ ರೋದೋಭಾಗಮುಂ ಕೇತುತತಿ ವೃದಿಯೆ (ಚಂದ್ರಪು. ೦೦-೫೮).

[ಸಂ. (ದಾನ + ಧಾರಾ + ಅಂಬು)]

ದಾನಧಾರೆ (ನಾ). = ದಾನಧಾರಾಂಬು : ಆ ವನಂ . . . ದಾನಧಾರೆಯಂತೆ ಪುಂಡರೀಕ ಗಂಡಕಮಂಡಿತಮುಂ . . . ತತತಾವಸಸಮುಚ್ಚಯಮಾಗಿಯುಮಶೋಕಸಂಗತಮೆನಿಸಿರ್ದುದು (ರಾಜಶೇ. ೫-೭೮ ವ) ; ಅಂತು ಇಟ್ಟಿತರ್ಪ ಸೊವಡುಗುವ ದಾನಧಾರೆಯ . . . ಕಾರೊಡಲ ಪೇರಾನೆಗಳ (ರಾಮಾಶ್ವ. ೯೪-೪). [ದಾನ + ಧಾರೆ]

ದಾನನಂದನ (ನಾ). ದಾನ ನೀಡಿ ಸಂತೋಷಪಡಿಸುವವನು; ಉದಾರಿ: ದಾನನಂದನ ಮಾನಾಮಾನಂ ಮಾನಿನೀ ಮನೋಮದನಂ (ಕುರತಿ. ೬-೧೦).

[ದಾನ + ನಂದನ]

ದಾನಪಟ್ಟೆ (ನಾ).=ದಾನಪತ್ರ: ಕೊಂಡಪ್ಪ ಪೊಡೆಯರು ತಿರುಮಲದೇವರಿಗೆ ಕೊಟ್ಟ ದಾನಪಟ್ಟೆ (ಸಾಇಇ. IX-11, ೫೫೩-೦೪; 1583); ಮರಿಸಿದ್ದಿಗವ್ವಡಗೆ ಬರಸಿಕೊಟ್ಟ ಭೂಸ್ವಾಸ್ಥ ದಾನಪಟ್ಟೆ ಕ್ರಮವೆಂತೆಂದರೆ (ಎಕ. XVI, ಚಿಕ್ಕನಾ. ೯೪-೬ ; 1746). [ದಾನ + ಪಟ್ಟೆ]

ದಾನಪತ್ರ (ನಾ). ದಾನ ಕೊಟ್ಟದ್ದಕ್ಕಾಗಿ ಬರೆಸಿದ ದಾಖಲೆ : (Deed of gift. ಪಾಠಿನಿ. ೪೭). [ದಾನ + ಪತ್ರ]

ದಾನಪರ (ನಾ). ೧. ದಾನ ಕೊಡಂವುದರಲ್ಲಿ ನಿರತನಾದವನು. ೨. ಮದೋದಕವನ್ನು ಸುರಿಸಂತ್ತಿರಂವ ಆನೆ. ೧, ೨ : ದಾನಪರನಂ ನಿಜೋನ್ನತಮಾನನನಾರೂಢ ವಿಪುಳವಂಶನನಂತೊಂದಾನೆಯನಪಾಯ ಪಂಕದೊಳೇನುಂ ತಳ್ವಿಲ್ಲದಿರ್ದುದಂ ಕಾಣಿಸಿದಂ (ಕವಿಕಾ. ೩-೦೨೯).

[ಸಂ.]

ದಾನಪರಾಯಣ (ನಾ). ದಾನ ಮಾಡುವುದರಲ್ಲಿ ಬಹಳ ಆಸಕ್ತಿಯುಳ್ಳವನು. 'ದಾನಪರಾಯಣತೆ' ಪರಾ. [ಸಂ.]

ದಾನಪರಾಯಣತೆ (ನಾ). ದಾನ ಮಾಡುತ್ತಲೇ ಇರುವ ಗುಣ : ಇದಕ್ಕೆ ಭಾರತದೇಶದ ರಾಜರುಗಳ ದಾನಪರಾಯಣತೆ, ಜನರ ಪರೋತ್ಕರ್ಷ ಸಹಿಷ್ಣುತೆ, ತಾಳ್ಮೆ ಬಹುಮಟ್ಟಿಗೆ ಸಹಾಯಕವಾಗಿದ್ದವು (ಭಾರದ. ೦೦೪).

[ಸಂ. ದಾನಪರಾಯಣತಾ]

ದಾನಪಾತ್ರ (ನಾ). ದಾನ ತೆಗೆದುಕೊಳ್ಳಲು ಯೋಗ್ಯತೆ ಅಥವಾ ಅರ್ಹತೆಯುಳ್ಳವನು. [ದಾನ +ಪಾತ್ರ]

ದಾನಪಾರಮಿತೆ (ನಾ). [ಬೌದ್ಧ] ಸದಾಚಾರಗಳಲ್ಲಿ ಒಂದು ; ಅತ್ಯಧಿಕವಾಗಿ ದಾನಮಾಡುವಿಕೆ: ಪಾರಮಿತಾ ಎಂದರೆ ಪರಾಕಾಷ್ಠೆಯು, ಅಭ್ಯಾಸ ಸಮಾಪ್ತಿಯೆಂದರ್ಥ. ಇದರಲ್ಲಿ ದಯಾಪಾರಮಿತಾ, ದಾನಪಾರಮಿತಾ, ಶೀಲಪಾರಮಿತಾ ಮೊದಲಾದ ಸದಾಚಾರಗಳನ್ನು ಸಂಗ್ರಹಿಸಿರುವರು (ಹಿಂದಸಾ. ೪೦). [ಸಂ. ದಾನಪಾರಮಿತಾ]

ದಾನಪ್ರವೃತ್ತಿ (ನಾ). ದಾನಮಾಡುವ ಸ್ವಭಾವ ; ದಾನಗುಣ : ಆ ದಾನಪ್ರವೃತ್ತಿಯಿಂದಲೇ ಬಡವನಾಗಿ ನಾನು ನಿಮ್ಮ ಮರೆಹೊಕ್ಕಿರುವುದು (ಭಾರದ. ೪೦೯). [ದಾನ + ಪ್ರವೃತ್ತಿ]

ದಾನಪ್ರಿಯೆ (ನಾ). ದಾನಮಾಡಂವುದರಲ್ಲಿ ಸಂತೋಷವನ್ನು ಹೊಂದಂವವಳು ; ದಾನಮಾಡಲು ಆಶಿಸುವವಳಂ : ಕೊಡುಗೈಯಂವಳಂ : ಆ ಪೃಥ್ವೀವಲ್ಲಭನ ಮನಃಪ್ರಿಯೆ ಹರಚರಣಯುಗಳಪೂಜಪ್ರಿಯೆ ದಾನಪ್ರಿಯೆ ಮಾಳಲದೇವಿ (ಸಾಇಇ. XX. ೪೯-೩೮ ; 1078 ?).

[ಸಂ. ದಾನಪ್ರಿಯಾ]

ದಾನಪ್ಲವ (ನಾ). ಮಂದಜಲ ಪ್ರವಾಹ :ಮಾರ್ಗಾನೇಕ ತೋಯಾಶಯ ಮನುರುರಜಂ ಪೀಱಿ ದಾನಪ್ಲವಂ ಪೂರಿಸೆ ತೋಱಿತ್ತೆತ್ತವಾದಂ ಹರಣ ಭರಣ ಚಾತುರ್ಯಮಂ ಚಾತುರಂಗಂ (ಚಂದ್ರಪು. ೦೦-೩೦).

[ದಾನ + ಪ್ಲವ]

ದಾನಮಾರ್ಗ (ನಾ). ದಾನದ ರೀತಿ,-ಕ್ರಮ: ಬಲ್ಲಿದಾಹಾರಭಯಶಾಸ್ತ್ರಾನ್ನಲ್ಲಿ ಭೇಷಜವೆಂಬವಿವು ಎಲ್ಲಕಾದಿಯ ದಾನಮಾರ್ಗವನೀಕ್ಷನೆನೆ ಮುನಿಪ (ಅಜಪು. ೪೭-೫೩). [ದಾನ + ಮಾರ್ಗ]

ದಾನಮುದ್ರೆ (ನಾ). ವರ ಕೊಡುವುದನ್ನು ಸೂಚಿಸಂವಂತೆ ತೆರೆದ ಅಂಗೈಯನ್ನು ಕೆಳಗೆ ತೋರಿಸುವ ಮುದ್ರೆ: ಉತ್ತರ ಅಂಕಣದಲ್ಲಿ ವಿಜಯನಗರ ಕಾಲದ ಲಕ್ಷ್ಮಿ, ನಾಲ್ಕು ಕೈಗಳಲ್ಲಿ ಅಭಯ, ಪದ್ಮ, ದಾನ ಮುದ್ರೆ ಹೊಂದಿರುವಳು (ಹೊಯ್ಸಣಾ. ೭೦). [ದಾನ + ಮುದ್ರೆ]

ದಾನಮೂಲ (ನಾ). ದಾನ ಕೊಡಬೇಕಾಗಿರಂವ ಭೂವಿಯಂ ಸಾಗುವಳಿಯಂ ಹಕ್ಕಂ : ಸರ್ವಪರಿಹಾರವಾಗಿ ದಾನಮೂಲಗಳನ್ನು ವಡಂಬಡಿಸಿ ದಾನಮೂಲವನ್ನು ಬಿಡಿಸಿ . . . ಧಾರೆಯೆರೆದು ಕೊಟ್ಟು (ಮೈಆರಿ. ೧೯೩೪, ೩೭-೩೪ ; 1480). [ದಾನ + ಮೂಲ]

ದಾನರಾಜಿ (ನಾ). ೧. ದಾನದ ಸಮೂಹ ; ದಾನಪರಂಪರೆ. ೨. ಮಂದೋದಕದ ಧಾರೆ. ೧, ೨ : ಮಾನಸದ ಹೊಂದಾವರೆಯ ಸೆಳೆದು ಭಂಗಿಸುತದನು . . . ದಾನರಾಜಿಯನಂತೆ ಸಂತತವು ಮೆರೆಯುತಿಹ ಬಾಹುದಂಡಗಳವನ ಗಜಪತಿಗಳು (ಧ್ವನ್ಯಾಲೋ. ೯೦).

[ದಾನ + ರಾಜಿ$_1$]

ದಾನರುಚಿ (ನಾ). ೧. ದಾನ ಕೊಡಂವುದರಲ್ಲಿ ಇರಂವ ಆಸಕ್ತಿ. ೨. ದಾನ ಕೊಡಲಂ ಆಸಕ್ತಿಯುಳ್ಳ ವ್ಯಕ್ತಿ ; ದಾನಮಾಡುವ ಅಪೇಕ್ಷೆಯುಳ್ಳ ವ್ಯಕ್ತಿ ; ಉದಾರಿ : ಕೇಳ್, ಸರಸಿ, ನೀಂ ಕರುಣಿ, ಧರ್ಮವಂತಿ, ದಾನರುಚಿ ನಾಥನಿಲ್ಲದ ತರುಣಿಯಾಂ, ನನ್ನ ಬಾಳ್ ಬರಿಯ ಪಾಳ್ (ಶ್ರೀರಾಮಾ. ೨೨೭-೩೩೯). [ದಾನ + ರುಚಿ]

ದಾನವ (ನಾ). ದನುವಿನ ಪುತ್ರ: ದೈತ್ಯ; ರಾಕ್ಷಸ; "ಅಸುರಃ, ದಾನವಃ, ದೈತ್ಯಃ, ದೈತೇಯಃ . . . ಪಾತಾಲನಿಲಯಃ – ಈ ೮ ಅಸುರರ ಪೆಸರ್" (ಹಲಾಯು. ೩-೩); ರಣಾಂಗಣದಂತೆ ಜವಮೂರೆ ಚಿತಪ್ರಹರಣ ವಿಶೀರ್ಣರೂಪಮುಂ ದಂತಿದಾನವವಿಲೀನಶಶೀಮುಖಮುಂ (ಕಂದ್ರಪು. ೩-೩೨ ಪ); ದಾನವನೊಂದು ಸೆಱಿಯಿಂ ರಕ್ಷಿಸಯ್. ಎಂದು ಕೀಱಿದಳ್ (ರಾಮಾಶ್ವ. ೬೪-೪೦).

ದಾನವಘರಟ್ಟ = ರಾಕ್ಷಸರಿಗೆ ಅರಿಯಂವ ಕಲ್ಲಿನಂತಿರುವವನಂ; ರಾಕ್ಷಸರನ್ನು ನಾಶಗೊಳಿಸಿದವನಂ; ಕೃಷ್ಣ: ಕಟ್ಟುಗ್ರ ಕೋಪದಿಂದೈತಪ್ಪ ದಾನವಘರಟ್ಟನಂ ತಡೆದು ತಾವಶ್ರಧ್ವಜಂ ಕಾಳಗಂಗೊಟ್ಟನು (ಕೃಮಿಭಾ. ೨೩-೩೦). [ಸಂ.]

ದಾನವಕುಲ (ನಾ). ರಾಕ್ಷಸ ಜಾತಿ: ಕಾಳಾಯಸ ಬಾಣಾಳಿಗಳಿಂ ದಾನವ ಕುಲಕಾಳಯಮಂ ಕಾಳಯುವನನಂ ಪುಣ್ದೆಚ್ಚಂ (ಜಗವಿ. ೯-೩೭).

[ದಾನವ + ಕುಲ]

ದಾನವಖಿಳ (ನಾ). ನೀಚನಾದ ರಾಕ್ಷಸ: ಆ ರಾಮನಂ ಪೊತ್ತುಕೊಂಡ ಗಲುತ್ತುಂ ದಿಗಿಭಂಬರಂ ಬಳೆಯುತುಂ ನಾಕಂಬರಂ ಪಾಱುತುಂ ಗಗನಾಗ್ರಂಬರವಿಂತು ದಾನವಖಿಳಂ ಪೋತಂದನಾಟೋಪದಿಂ (ಜಗವಿ. ೪-೫೩).

[ದಾನವ + ಖಿಳ$_1$ (= ಖಿಲ)]

ದಾನವದಲ್ಲಣ (ನಾ). ರಾಕ್ಷಸರಿಗೆ ಭಯಾನಕನಾದವನು: ಬಲ್ಲ ಬಹುಗುಣಭಂತ ದಾನವದಲ್ಲಣ ಜಗನ್ನಾಥವಿಠಲನು ಸೊಲ್ಲ ಲಾಲಿಸಿ ಸ್ತಂಭದಿಂದಲಿ ಬಂದ (ಜಗದಾ. ೩೦). [ದಾನವ + ತಲ್ಲಣ (< ತಲ್ಲಟ)]

ದಾನವಧ್ವಂಸಿ (ನಾ). ೧. ರಾಕ್ಷಸರನ್ನು ನಾಶಗೊಳಿಸಿದವನಂ; ದೈತ್ಯರ ವೈರಿ. ೨. ಶ್ರೀರಾವಂ: ಹಿಂದಿಪ್ಪ ತರಳನೆನ್ನ ಕುಮಾರ ಶಕ್ತರಿ ಸಿರಿಯ ನೀಗಿದ ಪಾಪಿಯೆಂದೆನೆ ಕರೆದು ಕಾಣಿಸು ಕಾವೆನೆಂದನು ದಾನವಧ್ವಂಸಿ (ಕಾಶಿಕಾ. ೩೨-೩೩). ೩. ಶ್ರೀಕೃಷ್ಣ: ನೀಲಾಚಲನಿಕಾಯದ ಸೌಂದರಾಂಗದ ಕೌಸ್ತುಭಪ್ರಭೆಯಿಂದ ಕಾಂಚನರಥವನಿಳಿದನು ದಾನವಧ್ವಂಸಿ [ಪಾಕಾಂ. ದಾನವಾರಾತಿ] (ಕುಪ್ಪಾಸ. ೮-೩೭). [ಸಂ. ದಾನವಧ್ವಂಸಿನ್]

ದಾನವಪತಿ (ನಾ). ೧. ರಾಕ್ಷಸರ ರಾಜ. ೨. ಯವನರ ಒಡೆಯಂ; ಸುಲ್ತಾನ: ಬಾದುರನು ದಾನವಪತಿಗೆ ಸಲಾಮನೊಲಿದು ಮಾಡುತಾನದ ನುಡಿದನಿಂತೆಂದು (ಕುರಾಸಾ. ೮೮-೭೮). [ದಾನವ + ಪತಿ$_2$]

ದಾನವಮರ್ದನ (ನಾ). ರಾಕ್ಷಸರನ್ನು ನಾಶಗೊಳಿಸಿದವನು: ಜಂಬೂದ್ವೀಪಂ ತಾನೆಸೆದುದು ವೃತ್ತತೆಯಿಂ ದಾನವಮರ್ದನನ ಕೂರ್ಮ ಮೂರ್ತಿಯ ತೆಱದಿಂ (ಜಗವಿ. ೦-೩೪). [ದಾನವ + ಮರ್ದನ]

ದಾನವರಾಜ (ನಾ). ರಾಕ್ಷಸರ ಒಡೆಯ; ದೈತ್ಯರ ಅಧಿಪತಿ: ಲಂಕಾನಗರಕ್ಕೆ ನಂದನವನಕ್ಕೆ ವಿನಾಶಮನೀವುವೆತ್ತಿದೇಂ ದಾನವರಾಜ ದುರ್ವಿಲಸಿತೋತ್ಕಟ ಸಂಕಟ ವೇಗಮಾಗದೇ (ಪಂರಾಪು. ೧೧-೧೫೭).

[ದಾನವ + ರಾಜ]

ದಾನವರಾಜಮಂತ್ರಿ (ನಾ). ೧. ರಾಕ್ಷಸರಾಜನ ಮಂತ್ರಿ; ಶುಕ್ರ. ೨. ಶುಕ್ರಗ್ರಹ: ದಿನರಾಜ ತಾರಕರಾಜ ಕುಜ ಬುಧ ಜೀವ ದಾನವರಾಜ ವಂಂತ್ರಿ ವಿಕರ್ತನೋದ್ಭವ ರಾಹು ಕೇತುಗಳು (ಬಸಪು. ೦೦-೩೦).

[ದಾನವರಾಜ + ಮಂತ್ರಿ]

ದಾನವರಿಪು (ನಾ). ೧. ದಾನವರ ವೈರಿ; ವಿಷ್ಣು. ೨. ಕೃಷ್ಣ: ಆನಱಿವೆಂ ಪೃಥೆಯಱಿವಳ್ದಾನವರಿಪ್ರವಱಿವಸರ್ಕನಱಿವಂ . . . ನೀನಾರ್ಗೆಂದು (ಗದಾಯು. ೩-೦೮); ಕೌಸ್ತುಭಂದಾಳ್ದದನೀತಂ ಕೇವಲಂ ದಾನವರಿಪುವೆ ವೆಱಂಗೆಲ್ಲಿತೀ ದಿವ್ಯರೂಪಂ (ಜಗವಿ. ೩-೨); ದಾನವರಿಪು ಚಕ್ರಂಗೊಳೆ ಕೌರವಾರಿ ಗದೆಗೊಳೆ ಪೊಣರ್ಕೆಗಾವಂ ನಿಲ್ವಂ (ಕಮಾದ. ೧೭೭ ಪ್ರಯೋ). [ದಾನವ + ರಿಪು]

ದಾನವವಿದ್ಯೆ (ನಾ). ರಾಕ್ಷಸವಿದ್ಯೆ; ಅಮಾನುಷವಾದ ನಡವಳಿಕೆ: ಹೆಣನನಱಸುತ ರಕುತಪಾನಕೆ ಸೆಣಸಿ ಶಾಕಿನಿ ಢಾಕಿನಿಯರೊಳು ಹೆಣಗಿ ಗೆಲುವುದೆಯಾಯ್ತು ದಾನವವಿದ್ಯೆ ಜಗವಱಿಯೆ (ಕುಪ್ಪಾಕ್ರೋ. ೧೫-೫೫).

[ದಾನವ + ವಿದ್ಯೆ]

ದಾನವಸೂದನ (ನಾ). = ದಾನವಧ್ವಂಸಿ ೩: ದಾನವಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ (ಕುಪ್ಪಾಉ. ೧೦-೩).

[ದಾನವ + ಸೂದನ]

ದಾನವಸೇನೆ (ನಾ). ರಾಕ್ಷಸರ ಪಡೆ; ದೈತ್ಯರ ಸೈನ್ಯ: ದಾನವಸೇನಾ ಕಾಲಕಲ್ಪಂಗಳವನನವದಾವಂಗೆ ರಕ್ಷಾರ್ಥಮೊಂದೊಂದವತಾರಂಗೆ ನ್ದು ದೇವಂಗೆನುತೆ (ಜಗವಿ. ೧-೩೫). [ದಾನವ + ಸೇನೆ]

ದಾನವಹಿ (ನಾ). ದಾನಕೊಟ್ಟದ್ದಕ್ಕಾಗಿ ಬರೆಯಿಸಿದ ದಾಖಲೆ; ದಾನಪತ್ರ: ವಂಹಾನಾಡಿನವರ್ರು ಕಲ್ಲೂರ್ರಾ ಕೆಂಪದಾಸೈಯಿಗೆ ದಾನವಹಿ ಬರದ ಕೊಟ್ಟದ್ದೂ (ಎಳ. XVI, ಗುಬ್ಬಿ. ೭೪-೫೯; ಸು. 1672).

[ದಾನ + ವಹಿ]

ದಾನವಾಂತಕ (ನಾ). = ದಾನವಧ್ವಂಸಿ ೩: ದಾನವಾಂತಕನಾ ಯುಗದೊಳೇ ತಾನೊಗೆಯಾನೇ ಕೃಷ್ಣನೆಂಬಭಧಾನದಲಿ (ಬಸಪು. ೫೪-೩೩); ದಾನವಾಂತಕನುರವನೆಚ್ಚನು ಜೋಡನೊಡೆಬಿಗಿದು (ಕುಪ್ಪಾಕ. ೩೩-೦೪).

[ದಾನವ + ಅಂತಕ]

ದಾನವಾರಣ (ನಾ). ೧. ದಾನಕೊಡಲು ಅಡ್ಡಿಪಡಿಸುವುದು. ೨. ವಂದಜಲವನ್ನು ಸುರಿಸುತ್ತಿರುವ ಆನೆ; ಮುದವೇರಿದ ಆನೆ. ೧, ೨: ಅರಣ್ಯದೋರ್ದ್ದಾನವಾರಣಂ . . . ವಸಂತದೊಳ್ಮಾರಹಿತಮುಂಟಲ್ಲದಿಲ್ಲ ವಿವು ಮತ್ತೆಲ್ಲಿಯು ಧರ್ಮಜನ ನೆಲದೊಳು (ಕೃಮಿಭಾ. ೨-೮).

[ದಾನ + ವಾರಣ]

ದಾನವಾರಾತಿ (ನಾ).=ದಾನವರಿಪು: ನೀಲಾಚಲ ನಿಕಾಯದ ಸೌಂದರಾಂಗದ ಕೌಸ್ತುಭಪ್ರಭೆಯಿಂದ ಕಾಂಚನ ರಥವನಿಳಿದನು ದಾನವಾರಾತಿ [ಪಾಕಾಂ. ದಾನವಧ್ವಂಸಿ] (ಕುಪ್ಪಾಉ. ೮-೩೭); ದಾನವಾರಾತಿಯಂ ನಿಜಭೃತ್ಯನಂ ಕರೆದು ... ಕೊಂದು ಬಾಯೆನೆ (ವೀಪ್ರಪು.೪-೦೦-೩೦). [ದಾನವ+ಅರಾತಿ]

ದಾನವಾರಿ$_1$ (ನಾ). ೧. ರಾಕ್ಷಸರ ಶತ್ರು; ದೇವತೆ: ದಾರುದಾರುಣನಂ ದಾನವಾರಿವಾರಿತಲೋಕನಂ ಬಾರ ಬಾ ರಣಮಂ ನೋಡಾ (ಕವಿಗಾ. ೨-೦೩೦). ೨. ಇಂದ್ರ. ೩. ಶಿವ. ೪. ವಿಷ್ಣು; ಕೃಷ್ಣ: ಅಂದು ಮೊದಲಾಗಿ ತನ್ನಿಚ್ಛೆಯಿಂ ಚಂದ್ರಹಾಸಂ ದಾನವಾರಿಯಂ ಬಿಡದೆ ಬಾಲಕ್ರೀಡೆಯಿಂದುತ್ಸವಂಗಳಂ ಮಾಡಿ (ಕೃಮಿಭಾ. ೫೯-೬). [ದಾನವ + ಅರಿ$_2$]

ದಾನವಾರಿ$_2$ (ನಾ). ಆನೆಯ ಮದೋದಕ: ಶಾಮಳಾಂಗಮಾಗಿ ತೀವಿ ತಳ್ತ ಭೃಂಗಬ್ಯೂಹದಿಂ . . . ವಾ ಮ ವಾ ಗಿ ತಾಳ್ದ ಮಕರಂದ ದಾನವಾರಿಯಿಂ ಕಾಮಸಾಮಜೋಪಮಾನಮಾದುದೊಂದು ಮಾಮರಂ (ಪೃಷ. ೪-೩೮). [ದಾನ + ವಾರಿ$_2$]

ದಾನವಿ (ನಾ). ರಾಕ್ಷಸಿ: ದೋರೆಗರುಳಲಿ ದಾನವಿಯರೊಡಲೇಱು ಹತ್ತದೆ ಹಬ್ಬವಾಗದೆ ಭೂರಿ ಬೇತಾಳರಿಗೆ (ಕುಪ್ಪಾವಿ. ೫-೨೫). [ಸಂ. ದಾನವೀ]

ದಾನವಿಕ (ಗು). ರಾಕ್ಷಸೀಯವಾದ; ಅಮಾನುಷವಾದ; ಕ್ರೂರವಾದ: ಜೈಲುಪಾನೆಯ ದಾನವಿಕ ನಿಷ್ಕರುಣೆಯಿಂದಲೂ ಸೈನ್ಯನಿವಾಸದ ಸಶಸ್ತ್ರ ಭ್ರಷ್ಟಕುಟಿ ವಿಕ್ಷೇಪದಿಂದಲೂ ಪೃಥ್ವಿಯ ಮರ್ಮಾಂತಿಕ ಟೀಡೆ ಉತ್ತರೋತ್ತರ ದುಃಸಹವಾಗುತ್ತ ಹೋಗುತ್ತದೆ (ನಿಬಂಧ. I, ೯). [ಸಂ.]

ದಾನವಿಘ್ನ (ನಾ). ದಾನಕಾರ್ಯಕ್ಕೆ ಉಂಟು ಮಾಡುವ ಅಡ್ಡಿ.– ವಿಘ್ನ: ಹಸ್ತಿನಾಪುರದೊಡೆಯನಪಾತ್ರನೆಂಬ ಮುನಿ ದಾನವಿಘ್ನದಿಂ ತಿರ್ಯಗ್ಗತಿಯೊಳು ಅಸಂಖ್ಯಾತ ಭವಂಗಳಂ ಬಂದು (ಪುಣ್ಯಾಸ್ರ. ೦೦-೩೦ ವ)

[ದಾನ + ವಿಘ್ನ]

ದಾನವಿಧಾನ (ನಾ). ದಾನಮಾಡುವ ಕ್ರಮ,-ರೀತಿ: ದಾನವಿಧಾನ[ಮುಖ] ಬುಧರಲ್ಲಿ ××× ಸಲನ್ನದಾನಮನ್ನೆ ××× ಕೇಶಿಯಣ್ಣನೇನ್ಮಾನಿಸ ×× ದಾನಸುರ (ಸೌಇ. XX, ೭೦-೩೩ ; 1108). [ದಾನ + ವಿಧಾನ]

ದಾನವಿನೋದ (ಗು). ದಾನಮಾಡಿ ಸಂತೋಷವನ್ನು ಹೊಂದುವ,-ಪಡೆಯುವ. 'ದಾನವಿನೋದವೃತ್ತಿ' ಪರಾ. (ನಾ). ೨. ದಾನ ಮಾಡುವುದರಲ್ಲಿ ಸಂತೋಷವುಳ್ಳವನು: ದಾನವಿನೋದನ ದಾನ ವರ್ಷದಿಂ ವಿಬುಧದ್ರುಮಕದಂಬಮಂಕುರಿತಮಾಗೆಯುಂ (ಮಲ್ಲಿಪು ೮-೭೫). [ದಾನ + ವಿನೋದ]

ದಾನವಿನೋದವೃತ್ತಿ (ನಾ). ದಾನ ಮಾಡುವುದರಿಂದ ಸಂತೋಷವನ್ನು ಹೊಂದುವ ಸ್ವಭಾವ: ಬಸವನ ಭಕ್ತಿಯಂ ಬಸವರಾಜನ ದಾನವಿನೋದವೃತ್ತಿಯುಂ . . . ನಲಿದು ಕೇಳುತೆ . . . ಬರುತಿರ್ದರು (ಬಸಕಿ. ೧೧-೧). [ದಾನವಿನೋದ + ವೃತ್ತಿ]

ದಾನವಿರಹಿತ (ನಾ). ದಾನಕೊಡದವನು ; ಲೋಭಿ ; ಕೃಪಣ : ದಾನ ವಿರಹಿತರಾಗಿ ಜನಿಸಿದ ಮಾನವರು ದಾರಿದ್ರರು (ಕುಪ್ಯಾಖ್ಯ. ೪-೦೦೫). [ದಾನ + ವಿರಹಿತ]

ದಾನವೇಶ್ವರ(ನಾ).=ದಾನವರಾಜ: ಅಡುತಿಹ ಶಿಶುವನು ಹೀನದಯದಿಂದೆ ಪಿಡಿದೆತ್ತಿಕೊಂಡುಯ್ದರ್ . . . ಪ್ರಹ್ಲಾದನಂ ದಾನವೇಶ್ವರನಾಜ್ಞೆಯಿಂ ಕಾಳರಕ್ಕಸರ್ಬಂದು ಕೈದುಡುಕಿದಂತೆ (ಕೃಮಿಭಾ. ೫೯-೩೦). [ದಾನವ + ಈಶ್ವರ]

ದಾನವ್ಯಸನಿ (ನಾ). ದಾನ ಕೊಡುವುದರಲ್ಲಿ ಅಸಕ್ತಿಯುಳ್ಳ ವ್ಯಕ್ತಿ ; ದಾನ ಮಾಡುವುದೇ ಶೀಲವಾಗಿರುವವನು : ವಸುಮತಿ ವೆಸರನ್ವರ್ಥಂ ವಸುಧೆಗೆನಲ್ ಕಱಿದಂ ಪೊನ್ನ ಮಟಿಯಂ ದಾನವ್ಯಸನಿ ದಶರಥನದೇಂ ಪೊಸಯಿಸಿದನೊ . . . ಉತ್ಸವಮಂ(ಪಂಡಾಪು. ೩-೦೪೩) ; ನಿರ್ಮಳನಚಿತ್ತದ ಖತಿಯೊ ದಾನವ್ಯಸನಿಯೊಡವೆಗಳೊ (ಕುಪ್ಯಾಪ್ರೋ. ೧೯-೮). [ದಾನ + ವ್ಯಸನಿ]

ದಾನವ್ರತ (ನಾ). [ಜೈನ] ನಾಲ್ಕು ಶಿಕ್ಷಾವ್ರತಗಳಲ್ಲಿ ಒಂದಂ ; ದಾನ ಮಾಡುವ ವ್ರತ: ಶೀಲೋಪವಾಸಮುಂ ದಾನವ್ರತವುಂ ನಿಖಿಲ ಸಮತೆಯುಂ ಸನ್ಯಾಸವ್ರಜನಮುಮೆಂಬಿವು ಶಿಕ್ಷಾವ್ರತವಿದು ನಾಲ್ಕುತೆಱ ನನೂನಾಗಮದೊಳ್ (ಶಾಂತಿಪು. ೧-೯೦); Pಇದಕ್ಕೆ ಅತಿಥಿ ಸಂವಿಭಾಗವೆಂದು ಹೆಸರಂ. [ದಾನ + ವ್ರತ]

ದಾನಶಾಲೆ (ನಾ). ದಾನವನ್ನು ನೀಡುವ ಮನೆ ; ಧರ್ಮಶಾಲೆ : ದಾನಶಾಲಾ-ದಾನಸಾಲೆ, ಪಟ್ಟಶಾಲಾ-ಪಟ್ಟಸಾಲೆ (ಕಮದ. ೨೮೯ ಪ್ರಯೋ). [ದಾನ + ಶಾಲೆ]

ದಾನಶಾಸನ (ನಾ). ದಾನ ಕೊಟ್ಟುದರ ವಿವರಗಳನ್ನು ತಿಳಿಸುವ ಶಾಸನ: ತಾಮ್ರಪಟಗಳು ಬಹುಮಟ್ಟಿಗೆ ದಾನಶಾಸನಗಳು (ಕಶಾಲ. ೩೩); ಮುಖ್ಯವಾಗಿ ದೇವಸ್ಥಾನಗಳಿಗೆ, ಮಠಗಳಿಗೆ . . . ಸಾರೋದ್ಧಾರವಾಗಿ ನಡೆಯಲೆಂದು ಹೊಲವನ್ನೋ ಹಣವನ್ನೋ ಮನೆಯನ್ನೋ ಆದಾಯದ ಒಂದು ಭಾಗವನ್ನೋ ಬಿಟ್ಟುಕೊಟ್ಟ ವಿಷಯವನ್ನು ಹೇಳುವ ಶಾಸನಗಳು ದಾನಶಾಸನಗಳು (ಕಶಾಲ. ೩೩). [ದಾನ + ಶಾಸನ]

ದಾನಶೀಲ (ನಾ). ದಾನಮಾಡುವ ಸ್ವಭಾವವುಳ್ಳವನು ; ಉದಾರಿ : ಲುಬ್ಧ ಶಿರೋಮಣಿಯಾದ ದುಷ್ಟಬುದ್ಧಿಗೂ ದಾನಶೀಲನಾದ ಸತ್ಕೀರ್ತಿಗೂ ದಿನಕ್ರಮವಾಗಿ ದ್ವೇಷವು ಹೆಚ್ಚಲಾರಂಭವಾಯಿತು (ಕವಿಕ. ೧). [ದಾನ + ಶೀಲ]

ದಾನಶೀಲತೆ (ನಾ). ದಾನಮಾಡುವ ಸ್ವಭಾವ : ಕರ್ಣನು ತನ್ನ ದಾನ ಶೀಲತೆಯಿಂದ ಅತ್ಯಂತ ಖ್ಯಾತಿಯನ್ನು ಪಡೆದಿದ್ದನು (ಏಟ್ಟೂಣಾಂ. ೧೦). [ಸಂ. ದಾನಶೀಲತಾ]

ದಾನಶೂರ (ನಾ). ೧. ದಾನಮಾಡುವವರಲ್ಲಿ ವಿಂಗಿಲಾದವನು,-ಗಟ್ಟಿಗ : ದಾನಶೂರರಲ್ಲಿಯೆ ರಣಶೂರರಲ್ಲಿಯೆ ವಿಭೋಗಿಗಳಲ್ಲಿಯೆ ಬಾಗಿವ್ಯಂದವಲ್ಲಿಯೆ ಎನೆ ಸಾರಮೆಂಬಿನಗಮಾ ಮಹಿ ಪೋಲ್ವುದು ಭೋಗ ಭೂಮಿಯಂ (ಪುಪ್ಪಪು. ೯-೧೬). ೨. ಕರ್ಣನಿಗೆ ಇದ್ದ ಬಿರುದಂ.

ದಾನಶೂರಕರ್ಣ = ದಾನಮಾಡುವುದರಲ್ಲಿ ಕರ್ಣನಂತಿರುವವನು ; ಕೊಡುಗೈಯವನು : ತನ್ನ ಹತ್ತಿರ ಇರುವುದನ್ನೆಲ್ಲಾ ಹಿಂದೆ ಮುಂದೆ ನೋಡದೆ ಕೊಡುವ ದಾನಶೂರಕರ್ಣ ಇವನು (ಕೂಫಿ). [ದಾನ + ಶೂರ]

ದಾನಶೌಂಡ (ನಾ). = ದಾನಶೂರ ೧ : ನವರತ್ನಾಭಿದಯಿಂ ಪ್ರತಿಷ್ಠೆಗೊಳಿಪಂದಾ ದಾನಶೌಂಡಂ ನೃಪವ್ರವರಂ . . . ವಿಭುವಿಂ ನೇರ್ವಟ್ಟುಮಾ ಗೋಪುರಂ ಸ್ತವನೀಯಂ ಮುಗಿಲೇಱಿ ವಿಂಚಿ ಪೊಳೆಗುಂ (ಪ್ರಸೂಪು. ೩-೮೫). [ದಾನ + ಶೌಂಡ]

ದಾನಶೌರ್ಯ (ನಾ). ದಾನಕೊಡುವುದರಲ್ಲಿ ವಿಂಗಿಲಾಗಿರುವಿಕೆ,-ಗಟ್ಟಿತನ : ನಿನ್ನ ರಣವೀರ್ಯವನ್ನೂ, ದಾನಶೌರ್ಯವನ್ನೂ ನಾನು ಬಲ್ಲೆ (ವಡಭಾ. ೩೭೮). [ದಾನ + ಶೌರ್ಯ]

ದಾನಸಾಗರಶ್ರಾದ್ಧ (ನಾ). ಒಂದಂ ಬಗೆಯಂ ಶ್ರಾದ್ಧ; P ಭೂವಿಂ, ಆಸನ, ಮೊದಲಾದ ಹದಿನಾರಂ ಪದಾರ್ಥಗಳನ್ನು ಹದಿನಾರು ಸಂಖ್ಯೆಯಂಲ್ಲಿ ದಾನಮಾಡುವ, ಗೌಡದೇಶದಲ್ಲಿ ವ್ಯಸಿದ್ಧವಾಗಿರುವ ಒಂದು ಪಿತೃವಿಧಿ : ಹರೇಂದ್ರಕೃಷ್ಣ ಬಹದ್ದೂರ್ ಎಂಬುವರು ತಮ್ಮ ಅಜ್ಜಿಯ ದಾನಸಾಗರಶ್ರಾದ್ಧವನ್ನು ಮಾಡಿ ಸಾವಿರಾರು ಜನರಿಗೆ ಸಂತರ್ಪಣೆ ನಡೆಸಿದರು (ಐತಿಪು. ೪೪೩). [ದಾನಸಾಗರ? + ಶ್ರಾದ್ಧ]

ದಾನಸಾಲೆ (ನಾ). = ದಾನಶಾಲೆ : ಅತನ ಮನೋನಯನವಲ್ಲಭೆ ಪ್ರತ್ಯಕ್ಷ ಕಲಿಕಾಲಗೌರಿ ಲಕ್ಷ್ಮೀಸಮನ್ವಿತೆ ಶ್ರೀಮತ್ಪ[ದ್ಮ]ಬ್ಬರಸಿಯುರ್ತ್ತಮ್ಮ ಬಸದಿಗೆ ದಾನಸಾಲೆಗೆ ಬಿಡಿಸೆ (ಸೌಇ. XI-i, ೩೮-೭ ; 950) ; ಪರವದಂ ತದ್ಭವಮಾದ ಸಮಾಸಕ್ಕೆ-ಉತ್ತರದೇಶ-ಉತ್ತರದೇಸ . . . ದಾನಶಾಲಾ-ದಾನಸಾಲೆ (ಕಮದ. ೨೮೯ ಪ್ರಯೋ) ; ಪಾದರಕ್ಕೆ, ಪರಬೊಮ್ಮಂ, ದಾನಸಾಲೆ (ಶಬ್ದಾನು. ೫೭೭ ಪ್ರಯೋ). [ದಾನ + ಸಾಲೆ]

ದಾನಾಂತರಾಯ (ನಾ). [ಜೈನ] ಮೋಕ್ಷ ಸಾಧಕರಿಗೆ ನಡುವೆ ಉಂಟಾಗುವ ವಿಘ್ನಗಳಲ್ಲಿ ಒಂದಂ ; ದಾನವನ್ನು ಮಾಡದಂತೆ ತಡೆಯುವ ಕರ್ಮ : ದಾನಾಂತರಾಯ-ದಾನ ಮಾಡಬೇಕೆಂದು ಇಚ್ಛೆ ಇದ್ದರೂ ಮಾಡಗೊಡದ ಕರ್ಮಪ್ರಕೃತಿ (ಕೃಸಪ. ೩೭೭). [ದಾನ + ಅಂತರಾಯ]

ದಾನಾಂಧ (ಗಂ). (ಆಲಂ) ಮದವೇರಿದ ; ಮಂದದಿಂದ ಸೊಕ್ಕಿದ : ಕೃತವರ್ಮನಾತನ ಕೆಲದೊಳೊಂದಕ್ಷೋಹಿಣೀ ಬಲಂಬೆರಸು ಸುತ್ತಿಱಿದು ಕನಕದಂಡಮಂಡಿತ ವಿಚಿತ್ರಾತಪತ್ರಂಗಳ ನಡುವೆ ಮಣಿ ದುರೀಷಿಗಳ್ಪೊಳೆಯೆ ದಾನಾಂಧ[ಮ]ಯ್ವತ್ತು ಸಾವಿರ ಮದದಾನೆಬೆರಸು ನಾನಾ ವಾಹನಂಗಳನೇಱಿ ನಿಂದರ್ (ಪಂಪಭಾ. ೬,೫. ೧೦-೫೭ ಪ) ; 'ಮದಾಂಧ' ಪರಾ. [ದಾನ + ಅಂಧ]

ದಾನಾಂಬು (ನಾ). ಮದೋದಕ ; ಮದಜಲ. 'ದಾನಾಂಬುಧಾರೆ' ಪರಾ. [ದಾನ + ಅಂಬು]

ದಾನಾಂಬುಧಾರೆ (ನಾ). ಮದೋದಕ ಧಾರೆ : ಎರಡುಂ ಕಟದಿಂದೊಗೆದನವರತಂ ದಾನಾಂಬುಧಾರೆ ಮುಸಲಸ್ಥೂಲಂ ಸುರಿತರುತಿರೆ ಕರಿ ಕಟ್ಟಾ ಸುರಮಾದುದು ಕಣ್ಗೆ ಮೂಱುಕೈಯಾನೆಯವೋಲ್ (ಕಂದ್ರಪು. ೯-೮೯) [ದಾನಾಂಬು + ಧಾರೆ]

ದಾನಾನುಮೋದ (ನಾ). ದಾನಮಾಡಲು ಕೊಡುವ ಒಪ್ಪಿಗೆ,-ಸಮ್ಮತಿ: ತನ್ಮನಿಗಳ ಪಾದವ್ರಕ್ಷಾಳನೋದಕದೊಳ್ ಪೊರಳ್ದು ವೃಷ್ಟವರ್ಷದ ಪೊಗಳೊಳ್ ಪುದಿದು ದಾನಾನುಮೋದ ಪ್ರಭಾವದಿಂದುಭಶಮಭಾವಮಂ

ತಾಳ್ದಿ (ಆದಿಪು. ೫-೨ ವ) ; ಪ್ರಮದೆಯರಾ ನೃಪ ದಾನಾನುಮೋದದಿಂದಲ್ಲಿ ಬಂದು ಪುಟ್ಟಿದರೇನುತ್ತಮಮೊ ಮುನಿದಾನ ದಾನಾನುಮೋದ ಸುಕೃತಾಗ್ರಗಣ್ಯ ಪುಣ್ಯಮಗಣ್ಯಂ (ಶಾಂತಿಪು. ೬-೧೩೪).

[ದಾನ + ಅನುಮೋದ]

ದಾನಿ$_1$ (ನಾ). ೧. ದಾನ ಮಾಡುವವನು : ವಾಚ್ಯಲಿಂಗಮೆಂದು ವಿಶೇಷ್ಯಾಧೀನಲಿಂಗಕ್ಕೆ – ನೇರಿದನಿವಂ . . . ಅಭಿಮಾನಿ, ದಾನಿ, ಸಾಧು (ಶಮದ. ೮೮ ಪ್ರಯೋ) ; ದಾನಿಗಳು ದುಷ್ಪಾತ್ರದಲಿ ಗುಣಮೌನಿಗಳು ಗರ್ವಿತರು ಮಿಥ್ಯಾಜ್ಞಾನಿಗಳು ಕಲಿಯುಗದ ಮನುಜರು (ಕುಪ್ಯಾಅ. ೧೦-೩೪) ; ದಾನಿ ದಯಾಧರ್ಮಿ ಸಕಲ ಸುಕಲಾಕುಶಲಂ . . . ಭೂನಾಥನೆ ನಿನಗೆ ಪುತ್ರನಾದಪನೇಳ್ಳೆ (ಹಮ್ಮೀರ. ೨-೧೩) ; ದೀನ ನಾನು ಸಮಸ್ತ ಲೋಕಕೆ ದಾನಿ ನೀನು (ಹರಿಸಾ. ೪೯) ; ದೀನನ ಸಂಗಕ್ಕಿಂತಲೂ ದಾನಿಯ ಬಡಿದಾಟ ಲೇಸು (ಗಾದೆ). 'ಮಹಾದಾನಿ' ಪರಾ. ೨. (ಶತ್ರುಗಳನ್ನು ಕತ್ತಿಯಿಂದ) ಕತ್ತರಿಸುವವನು : ದಾನಿಯುಮಂ ಶೂರನುಮಂ ತಾನೆಟ್ಟಱಿಕುಂ ಗದಾನಿಲಂ (ಗದಾಯು. ೮-೩೩). [ಸಂ. ದಾನಿನ್]

ದಾನಿ$_2$, ದಾನು (ನಾ). ೧. ಕರಂಡಕ : ಒಂದು ಕಾಜಿನ ದಾನಿ (Flask) ಯನ್ನು ತಂದು ಆದರಲ್ಲಿಷ್ಟು ನೀರನ್ನು ಹಾಕಿ ಕಾಯಿಸುವ (ಜಾಂಪ್ರ. II, ೬೩೯). ೨. ಹೂವು, ಊದುಕಡ್ಡಿ ಮುಂತಾದುವನ್ನು ಸಿಕ್ಕಿಸುವ ಪಾತ್ರೆ : ಗೋಡೆಯ ಪಕ್ಕದಲ್ಲಿ ಸ್ವರ್ಣಪುತ್ಥಳಿಗಳು ಹಸ್ತಗಳಲ್ಲಿ ಊದು ಬತ್ತಿಯ ದಾನಿಗಳನ್ನು ಹಿಡಿದು ಆರಾಧಿಸುತ್ತ ನಿಂತಿರುವಂತೆ ಅಲಂಕರಿಸಲ್ಪಟ್ಟಿದ್ದಿತು (ಶ್ರೀರಾಯ. ೧೪೬). 'ಅತ್ತರುದಾನಿ', ಪನ್ನೀರುದಾನಿ', 'ಪೀಕದಾನಿ' ಪರಾ. ದಾನು. 'ಊದದಾನು', 'ಪುಷ್ಪದಾನು' ಪರಾ. [←ಪಾರ. ಹಿಂ. ದಾನ್. / ಸಂ. ಧಾನೀ]

ದಾನಿ$_3$ (ನಾ). (ಕರಾ) "ಹಲಸಿನ ಬೀಜ" (ಸಿರಿಕೋ. ೨೫೧). [?]

ದಾನಿಗವುಂಡ (ನಾ). ಒಬ್ಬಾತನ ಹೆಸರು : ಎಲವರದ ಕಧವಬೂರ ಮಾಯಗಾವುಣ್ಡರ ಮಗ × × ತಮ್ಮ ದಾನಿಗವುಣ್ಡ ಮಣ್ಡಿಕಲ್ಲ ಊಱಱಿವಿನೊಳ್ ಕಾದಿ ಸತ್ತಮ್ (ಎಕ. X, ಮುಳಬಾ. ೨೫೬-೭ ; ಸು. 1000). [ದಾನಿ$_0$ + ಗವುಂಡ (<ಗಾಮುಂಡ)]

ದಾನು 'ದಾನಿ$_2$' ನೋ.

ದಾಪಿಡು (ಕ್ರಿ). ದೊಡ್ಡ ಹೆಜ್ಜೆ ಹಾಕು ; ದಾಪುಕಾಲು ಹಾಕು : ದೀಪದ ಕಲಿಯಾರ ಕಾಪಾಲಿಗುಡಿಯ ಕಂಡು ದಾಪಿಡುತಲಿ ಬಂದು ಗೋಪುರದಿ ನಿಂದು (ಶರಲೀ. ೩೯೫-೪). [ದಾಪು$_1$ (<ಚಾಪು$_1$) + ಇಡು$_1$]

ದಾಪು$_1$ 'ಚಾಪು$_1$' ನೋ.

ದಾಪು$_2$ (ನಾ). ಅಡಗಿಕೊಳ್ಳುವ ಸ್ಥಳ ; ರಕ್ಷಣೆಯ ಜಾಗ : "(ಬೆನ್ನಟ್ಟಿ ಬರುವವರಿಂದ, ಅಪಾಯದಿಂದ ಅಥವಾ ತೊಂದರೆಯಿಂದ ತಪ್ಪಿಸಿಕೊಳ್ಳಲು ಅಡಗಿಕೊಳ್ಳುವ)ಮರೆ (ಯಸ್ಥಾನ) : ದಾಪು ; ಆಶ್ರಯ : ರಕ್ಷಣಸ್ಥಾನ" (Refuge. ಇಂಕನಿ). 'ತಾಪು' ಪರಾ.

[←ತುಳು. ತಾಪು, ದಾಪು = ಅಡಗಿಸಿಟ್ಟ ಸೈನ್ಯ]

ದಾಪು$_3$ (ಗು). ಪಳಗಿಸಿದ; ಶಿಕ್ಷೆಮಾಡಿ ಸಿದ್ಧಪಡಿಸಿದ.

ದಾಪಿನಾನೆ = ಪಳಗಿಸಿದ ಆನೆ : ಅರಣ್ಯದಲ್ಲಿರುವ ಗಜಮಂ ದಾಪಿನಾನೆಗಳಿಂದ ವಂಚನೆಗೆಯ್ಸಿ ಹಿಡಿತಂದು ಪಟ್ಟದಾನೆಯಂ ಮಾಡುವಂತೆ ನಾನು ವಿರಚಿಸುವ ಉಪಾಯಕೌಶಲ್ಯವು ಅವನಂ ತಾನಾಗಿ ಇಲ್ಲಿಗೆ ಬರುವಂತೆ ಮಾಡೀತು ಎಂದು ನಿಚ್ಚೈಸಿದನು (ಮುದ್ರಾಮಂ. ೨೧೮). [?]

ದಾಪುಗಾಲು 'ಚಾಪುಗಾಲು' ನೋ.

ದಾಪುನಡಗೆ (ನಾ). ದೊಡ್ಡ ಹೆಜ್ಜೆಯ ನಡಗೆ ; ಮಾರು ನಡಗೆ : ಅವಳು ಏನೂ ಮಾತಾಡದೆ ಮರುಕ್ಷಣವೆ ತನ್ನ ದಾಪುನಡಗೆಯನ್ನು ಮತ್ತೆ ಮುಂದುವರಿಸಿದಳು (ಪುನರು. ೧೪೩). [ದಾಪು$_1$ (<ಚಾಪು$_1$)+ ನಡಗೆ]

ದಾಪುಹಾಕು (ಕ್ರಿ). ೧. ದೂರದೂರಕ್ಕೆ ಕಾಲಿಡು ; ದಾಪುಹೆಜ್ಜೆಯಿಡು: ತರುಣ ರೈತನೊಬ್ಬ ಉದ್ದುದ್ದವಾಗಿ ದಾಪುಹಾಕುತ್ತ . . . ಬರುತ್ತಿದ್ದನು (ಪುನರು. ೨೭೬). ೨. ದೊಡ್ಡ ಹೆಜ್ಜೆಗಳಿಂದ ಅಳೆ : (ಕಿ).

[ದಾಪು$_1$ (<ಚಾಪು$_1$) + ಹಾಕು (<ಪಾಯ್ಕು$_1$)]

ದಾಪುಹೆಜ್ಜೆ (ನಾ). = ದಾಪುಗಾಲು : ಬಹಳ ಹೊತ್ತು ದಾಪುಹೆಜ್ಜೆ ಹಾಕುತ್ತ ತಿರುಗಾಡುತ್ತಿದ್ದನು (ಪುನರು. ೮೩).

[ದಾಪು$_1$ (<ಚಾಪು$_1$) + ಹೆಜ್ಜೆ (< ಪಜ್ಜೆ)]

ದಾಬು 'ಡಾಬು' ನೋ.

ದಾಬೋಟ 'ದಾಬೋಟಾ' ನೋ.

ದಾಬೋಟಾ, ದಾಬೋಟ (ನಾ). (ಉಕ) ಒಂದು ವಿಧವಾದ ಸಕ್ಕರೆ ; ಬೂರಾಸಕ್ಕರೆ : ದಾಬೋಟಾ ಸಕ್ಕರೆಗೆ (ಪಾನು. ೨೦, ಕಲಮು. ೩೨) (ಮುಂಬವ್ಯಾ. ಪ್ರಸ್ತಾವನೆ ೨೦). ದಾಬೋಟ : ದಾಬೋಟ ಚಿನಯಿ ಸಕ್ಕರಿ (ಮುಂಬವ್ಯಾ. ೧೨೩). [←ಮರಾ. ದಾಬೋಟಾ, ದಾಭೋಟಾ]

ದಾಬೋಲಿಕದಲಿ (ನಾ). ಒಂದು ವಿಧವಾವ ನಾಣ್ಯ : ದುರ್ಗವು ಕೈವಶವಾದ ಮೇಲೆ ಈ ದೊರೆಯ ಬೊಕ್ಕಸದಲ್ಲಿದ್ದು ಹಗೆಗಳ ಕೈಗೆ ಸಿಕ್ಕಿದ ನಾಣ್ಯಗಳ ವಿವರ : ೬,೪೦೦,೦೦೦ ಬೆಳ್ಳೀನಾಣ್ಯ . . . ೨,೫೦೦,೦೦೦ ದಾಬೋಲಿ ಕದಲಿ . . . ಚವುರಿ (ಚತ್ರಪಾ. ೧೦೩).

[?./ಮರಾ. ದಾಭೋಳೀ ಲಾರೀ = ದಾಭೋಳ್ ಎಂಬ ಸ್ಥಳದಲ್ಲಿ ಟಂಕಗೊಂಡ ನಾಣ್ಯ, ಹಳೆಯ ನಾಣ್ಯ]

ದಾಮ$_1$ (ನಾ). ನೆಲೆ ; ಆಶ್ರಯ ; ಬೀಡು ; ಮನೆ : ಮಹಾಕಾಲನ ದೆಸೆಯಿಂ ಈ ಮೆಯ್ವಳಿಯೆ ಸಂಸಾರದುಃಖಕೆ ನಾನು ದಾಮವಾಹೆನು (ಪೂಜ್ಯಪ. ೧೦-೪೧) ; ಭೂವನವ ಗೆಲ್ದ ಕಾಮನ ದಾಮದ ಮುಂದೆ ನವರತ್ನಕಂಭಗಳಿಂದ ಸವೆದ ತೋರಣವೆನಲೆಸೆವ ಗಣಿಕೆಯರ ನವಿಲುಯ್ಯಾಲೆ ನೋಡು ರಾಯ (ತರ್ಕಕಾ. ೪-೪೩). [<ಸಂ. ಧಾಮನ್]

ದಾಮ$_2$ (ನಾ). ೧. ಹುರಿ ; ಹಗ್ಗ ; ಕಣ್ಣಿ ; ಪಾಶ : "ಸಂಧಾನಂ, ದಾಮನೀ, ದಾಮ – ಈ ೩ ಕಣ್ಣಿ" (ಹಲಾಯು. ೪೬-೧೨೨) ; "ಸಂಧಾನ ಮನೆ ದಾಮಂಮೆನಿಕುಂ" (ಮಂಗರಾ. ೫೪-೬) ; "ಅಗ್ಗರಣೆ ದಾವೆಂದು ದಾಮಂ" (ಕವಿಕಂ. ೨೫೧) ; ಲೋಕದ ಕಣ್ಗೆ ದಾಮಮಾದುವು ಸುಧೆಯಾದು ವೀಂಟುವ ಚಕೋರಿಗೆ ಚಂದ್ರನ ಚಾರುಕಾಂತಿಗಳ್ (ಲೀಲಾವ. ೨-೧೫) ; ವಿಗಡ ಬಸವಂ . . . ತೊಡರ್ದ ದಾಮಂಗಳೆಲ್ಲಂ ಪರಿದುವಗಡು ರಕ್ಕಸರ ಸೇನಾಶರಧಿಯಂ ಪೊಕ್ಕು ಕಲಕಿದನು (ಜಿಬಪು. ೪೪-೧೬). ೨. ನಡುಪಟ್ಟೆ; ಡಾಬು ; ಒಡ್ಯಾಣ ; ಪೋಖಲೆ. 'ಕಾಂಚೀದಾಮ' ಪರಾ. ೩. ಹಾರ ; ದಂಡೆ : ಮಜ್ಜನ ಭೋಜನ . . . ಸುರಭಿ ಕುಸುಮ ದಾಮಾದಿಗಳಿಂ ಸಂತಸಂಬಡಿಸಿ (ಪಂಪಭಾ. ೪-೪೩ ವ) ; ನೇಮಿಸಿದ ಚಂಪಕಮುಕುಲ ದಾಮದ ಬಾಗಿಲ್ವಾಡದ ಬಗೆಗೊಳಿಪ ಧೂಪಾಮೋದದೊಳ್ಪೊಱೆದ ದವನದ ಸೀಗುಱಿಯಂ . . . ಪಿಡಿದು ನಿಂದ ಯಂತ್ರಪುತ್ರಿಕೆಗಳ (ರಾಜಶೇ. ೧೩-೪೫ ವ). ೪. ಹಣೆಯ ಮೇಲೆ ಕಟ್ಟುವ ಹೂವಿನ ಮಾಲೆ, ಪಟ್ಟ, ಬಾಸಿಂಗ, ಇತ್ಯಾದಿ. ೫. [ಜ್ಯೋತಿ] ಏಳು ಸಂಖ್ಯಾಯೋಗಗಳಲ್ಲಿ ಒಂದು ; ಏಳು ಗ್ರಹಗಳೂ (ರಾಹು, ಕೇತುಗಳನ್ನು ಬಿಟ್ಟು) ಆರು ರಾಶಿಗಳಲ್ಲಿ ಸೇರಿರುವ ಯೋಗ; P ಈ ಯೋಗದಲ್ಲಿ ಹುಟ್ಟಿದವನು ದಾನಿ, ಪರೋಪಕಾರಿ ಮತ್ತು ಗೋಸಮೃದ್ಧಿಯುಳ್ಳವನಾಗಿರುತ್ತಾನೆಂಬ ನಂಬಿಕೆಯಿದೆ : ಸಪ್ತಗ್ರಹಂ . . . ಷಡಾವಾಸದೊಳ್ ನಿಲೆ ದಾಮಂ (ಜಾತತಿ. ೧೩-೫). 'ನಾಭಸಯೋಗ' ಪರಾ.

[ಸಂ. ದಾಮನ್]

ದಾಮಕ (ನಾ). ಮಾಲೆ ; ಹಾರ: ಒಡವುಟ್ಟಿದ ತಳದಳಿಸುವ ತುಡುಗೆಯ ದುಗುಲದ ನಮೇರುದಾಮಕದೊಳ್ ಪಚ್ಚುಡಿದುದು ಪರಾರ್ಧ್ಯಕೂಟದ

ಬೆಡಂಗೊಡಂಬಟ್ಟುದಿರ್ವರಹಮಿಂದ್ರರೊಳಂ (ಶಾಂತಿಪು. ೯-೦೩೦); ಆಮೋದಮುದಿತ ಮಧುಕರದಾಮಕದೊಳ್ ನೀಲರತ್ನ ದಾಮಂ ಮಲ್ಲೀದಾಮಕದೊಳ್ ಮುಕ್ತಾಫಲದಾಮಂ ತಡವಾದುವೊಡನೆ ಮಣಿ ಮಂಡಪದೊಳ್ (ಪಂಚಾಮಾ. ೫-೦೧೫). [ಸಂ.]

ದಾಮಗಂಟಿ (ನಾ). ಕಡ್ಡಿಯಂಚಿನ ಅಥವಾ ಕಡ್ಡಿಯಂತಹ ಗೆರೆಗಳಿಂದ ಕೂಡಿದ ಸೀರೆ (?) : ಕುಸುಮಗಂಟಿಯು ವರ್ಣಾತ್ಯಾಗ ಸುವರ್ಣವು ದಸರಿದೋನಿಯ ದಾಮಗಂಟಿ (?) ಹಸುರು ಬಿಳಿಯ ಪಟ್ಟೆ ಬಾಣ ಗೆರೆ ಗಳೆಂಬ ಕುಶಲದ ಸೀರೆಯೊಪ್ಪಿದವು (ಅಮುಸಾಂ. ೪-೧೫).

[ದಾಮ$_2$ + ಗಂಟಿ$_0$]

ದಾಮಡಿಗಟ (ನಾ). ಒಂದಂ ಊರಿನ ಹೆಸರಂ (?) : ತೊಱೆನಾಡಯ ನೂರುಂ ನಾ × × × ಆಳೆ ದಾಮಡಿಗಟಂ ಪೆರ್ಗ್ಗಡೆ × × × ಱೆಯುಂ ಪೊಗೆ ಭೋಗೆಯುಂ ಪಾರವಾರಿಯುಂ (ಎಳ. IV, ಹೆಗ್ಗಡ. ೯೩-೪; ಸು. 780). [ದಾಮಡಿ$_0$ + ಗಟ್ಟಿ$_0$ (<ಗಟ್ಟಿ$_1$)]

ದಾಮದೂಮ 'ಧಾಮಂಧೂಮಂ' ನೋ.

ದಾಮನಿ (ನಾ). ದನಕರುಗಳನ್ನು ಕಟ್ಟುವ ಹಗ್ಗ ; ದಾವಣಿ ಹಗ್ಗ : "ಸಂಧಾ[ದಾ]ನಂ, ದಾಮನೀ, ದಾಮ-ಈ ೩ ಕಣ್ಣಿ" (ಹಲಾಯು. ೪೬-೧೨೨); "ದಾಮನಿಯೆನಲು ದಾವಣಿ" (ಮಂಗರಾ. ೦೦೯-೩).

[ಸಂ. ದಾಮನೀ]

ದಾಮರಿಗ (ನಾ). ಯೋಧ ; ಭಟ : ತನ್ನಸಾಳ್ವ ಪ್ರಭು ಮೇರಂ ಬೆಸಸೆ ದಾಮರಿಗರನಟ್ಟಿ ಇಱಿದು . . . ಬಿಟ್ಟನ್ (ಎಳ. X, ಶ್ರೀನಿವಾ. ೫-೭; ಸು. 780). 'ಅಯ್ದಾಮರಿಗ', 'ಡಾವರಿಗ' ಪರಾ.

[ದಾಮರ$_0$ + – ಇಗ]

ದಾಮಸಂಜನಿತ (ನಾ). ದಾಮಯೋಗದಲ್ಲಿ ಹಂಟ್ಟಿದವನಂ: ದಾಮಸಂಜ ನಿತಂ ದಾನಿ ಪರೋಪಕಾರಿ ಪಶುಪಾಲಂ (ಜಾತತಿ. ೧೩-೧೬).

[ದಾಮ$_2$ + ಸಂಜನಿತ]

ದಾಮಾಶಯ 'ದಾಮಾಷೆ' ನೋ.

ದಾಮಾಶಾಯಿ 'ದಾಮಾಷೆ' ನೋ.

ದಾಮಾಶೆ 'ದಾಮಾಷೆ' ನೋ.

ದಾಮಾಷಾ 'ದಾಮಾಷೆ' ನೋ.

ದಾಮಾಷೆ, ದಾಮಾಶಯಂ, ದಾಮಾಶಾಯಿ, ದಾಮಾಶೆ, ದಾಮಾಷಾ, ದೌಮಾಷಾಯಂ (ನಾ). ೧. ತಕ್ಕ ಪ್ರಮಾಣ ; ಸರಿಯಾದ ಪಾಲು : ಒಣಕ್ರಮದಲ್ಲಿ ಮೊದಲು ಸುಣ್ಣಕಲ್ಲನ್ನೂ ಮಣ್ಣನ್ನೂ ಅರೆದು ತಿರುಗು ತ್ತಿರುವ ಒಣಗಿಸುವ ಯಂತ್ರಗಳಲ್ಲಿ ಒಣಗಿಸಿ ಸರಿಯಾದ ದಾಮಾಷೆಯಲ್ಲಿ ಬೆರಸುತ್ತಾರೆ (ಶಿಶ್ವಿನಾ. ೨೮೮). ೨. ದಿವಾಳಿಕೋರನ ಹಣ ಅಥವಾ ಆಸ್ತಿಯನ್ನು ಸಾಲ ಕೊಟ್ಟವರಿಗೆ, ಅವರು ಕೊಟ್ಟ ಸಾಲದ ಪ್ರಮಾಣಕ್ಕೆ ಅನುಸಾರವಾಗಿ ಹಂಚುವುದು. ದಾಮಾಶಯ : ೩. ಪ್ರಮಾಣ : ಭೂಮಿ ಮತ್ತು ಸಂಪತ್ತನ್ನು ದಾಮಾಶಯ ರೀತ್ಯಾ ಹಂಚುವುದು (ಬಶಿಸಂ. ೧೫೪); ಪಾಲುಗಾರರ ಓಟಿನ ಮೇಲೆ ಅಧಿಕಾರ ಪಡೆದ ಡಿರೆಕ್ಟರರು, ಇದು ಇಂತಿಷ್ಟು ದಾಮಾಶಯದಲ್ಲಿರಬೇಕು ಎಂದು ನಿರ್ಣಯಿಸುವರು(ಬಾಲಪ್ರ. III, ೧೫೬೨); ಗುಣಗಳ ದಾಮಾಶಯಕ್ಕೆ ತಕ್ಕಂತೆ ಆ ವ್ಯಕ್ತಿಗಳನ್ನು ಒಳ್ಳೆಯವರೆಂದೋ ಕೆಟ್ಟವರೆಂದೋ ಕರೆಯುತ್ತೇವೆ (ರಂಗವ. ೨೬೯) ದಾಮಾಶಾಯಿ : ೧. (ರೈಸ್‌ಗೆ. II, ೫೪೬). ದಾಮಾಶೆ: ೩. ಉಳಿದ ಅಂಶವು ಬೇರೆ ಬೇರೆ ಗಿರಾಕಿಗಳು ಕೊಂಡ ವಸ್ತುಗಳ ಮೌಲ್ಯದ ದಾಮಾಶೆಯಲ್ಲಿ ಅವರಿಗೇನೆ ಹಂಚಲ್ಪಡುವುದು. (ಬಾಲಪ್ರ. II, ೮೯೩). ದಾಮಾಷಾ : ೧. ಹೆಚ್ಚುಕಡಮೆಯಾದ ಗೇಣಿಯನ್ನು ಅವರವರು ಸಾಗುವಳಿ ಜಮೀನಿನ ಆಧಾರದ ಮೇಲೆ ದಾಮಾಷಾ ಹಂಚಿಕೊಂಡು . . . ಗೇಣಿ ಕೊಡಲೇಬೇಕು (ಪ್ರಪಾಇ. II, ೪೭೫); ಸದರಿ ಖರ್ಚು ಯಾವ ಕಕ್ಷಿಗಾರರಿಂದ ಮತ್ತು ಯಾವ ದಾಮಾಷಾ ಮೇರಿಗೆ ಪಾವತಿಯಾಗ ತಕ್ಕುದು-ಈ ವಿವರಗಳನ್ನೂ ನಮೂದಿಸತಕ್ಕದ್ದು (ಗ್ರಾಮಾಳ. ೩೨); ಪ್ರಾತಿನಿಧ್ಯವು ಗಣಿತಶಾಸ್ತ್ರ ಪ್ರಕಾರ – ಸಂಖ್ಯಾಪರಿಮಾಣಾನುಗುಣವಾಗಿ (ಪ್ರೊಪೋರ್ಷನಲ್ = ದಾಮಾಷಾ) ಇರಬೇಕೆಂಬುದು ಅವರ ಸಲಹೆ (ರಾಜ್ಯಶಾ. ೩೩೮); ಉಳಿದ ಭಾಗವನ್ನು ಸರಕಿನಲ್ಲಿ ಆಯಾ ರಾಷ್ಟ್ರಕ್ಕೆ ಇರುವ ಆಸಕ್ತಿಯ ದಾಮಾಷಾ (Proportion) ಆಧಾರದ ಮೇಲೆಯೂ ಹಂಚಿ ಕೊಂಡು ವಹಿಸುವುವು (ಅಂತಸಂ ೧೯೦). ದೌಮಾಷಾಯ : ೧. ಹೈದರು ಸೋತುಹೋದ ಅನಂತರ ಯುದ್ಧಕ್ಕಾಗಿ ಅಡ್ವಾನ್ಸು ಕೊಡುವ ಹಣವನ್ನು 'ದೌಮಾಷಾಯ' ಪ್ರಕಾರ ನನಗೆ ಕೊಡಿಸಿಕೊಟ್ಟು (ಚಾಮವಂ. ೨೧೭).

[←ಹಿಂ. ದಾಮಾಸಾಹಿ ; ಮರಾ. ದಾಮಾಶಾಈ, ದಾಮಾಶಾಹೀ]

ದಾಮಿಳಿ 'ದಾವಣಿ$_1$' ನೋ.

ದಾಮು (ನಾ). ೧. ಮೌಲ್ಯ ; "ಬೆಲೆ" (ಜಾನಶೋ. ೪). ೨. ಒಂದು ಬಗೆಯ ತಾಮ್ರದ. ನಾಣ್ಯ : ಒಂದು ಕರೋರ ದಾಮುಗಳೆಂದರೆ ೨೫ ಸಾವಿರ ರೂಪಾಯಿಗಳು. ೦ ರೂಪಾಯಿಗೆ ೪೦ ದಾಮುಂಗಳು (ಅಳ್ಳರ. ೧೨೬ ಅಡಿಟಿ). 'ದ್ರಮ್ಮ' ಪರಾ. [←ಹಿಂ. ಮರಾ. ದಾಮ್]

ದಾಮೋದರ (ನಾ). ೧. ಹೊಟ್ಟೆಯ ಸುತ್ತ ಹಗ್ಗವುಳ್ಳವನು ; ಹಗ್ಗ ದಿಂದ ಬಿಗಿದ ಹೊಟ್ಟೆಯುಳ್ಳವನು ; ಕೃಷ್ಣ ; P ಈ ಹೆಸರು ಶ್ರೀಕೃಷ್ಣನಿಗಷ್ಟೇ ಅಲ್ಲದೆ ಮಹಾವಿಷ್ಣುವಿಗೂ ಅನ್ವಯಿಸುತ್ತದೆ ಎಂಬುದಕ್ಕೆ ಆಧಾರಗಳಿವೆ. ಶ್ರೀಕೃಷ್ಣನು ಶೈಶವದಲ್ಲಿ ಬಹಳ ತುಂಟ ನಾಗಿದ್ದನು. ತಾಯಿಯಾದ ಯಶೋದೆಯು ಅವನ ತುಂಟತನ ವನ್ನು ತಾಳಲಾರದೆ ಅವನ ಹೊಟ್ಟೆಗೆ ಹಗ್ಗವನ್ನು ಸುತ್ತಿ ಒಂದು ಒರಳುಕಲ್ಲಿಗೆ ಕಟ್ಟಿಹಾಕಿದ್ದಳು. ಅದರಿಂದ ಶ್ರೀಕೃಷ್ಣನಿಗೆ ದಾಮವು (ಹಗ್ಗವು) ಉದರದಲ್ಲಿ (ಹೊಟ್ಟೆಯಲ್ಲಿ)ರುವವನು ಎಂಬ ಅರ್ಥ ದಲ್ಲಿ 'ದಾಮೋದರ' ಎಂಬ ಹೆಸರು ಪ್ರಸಿದ್ಧವಾಯಿತು ಎಂದು ಹರಿವಂಶದಲ್ಲಿ ಹೇಳಿದ್ದರೆ, ವಿಷ್ಣು ಸಹಸ್ರನಾಮದ ಶಂಕರ ಭಾಷ್ಯ ದಲ್ಲಿ 'ದಮಾದಿ ಸಾಧನಗಳಿಂದ' 'ಉತ್' 'ಅರಾ' ಯಾವ ಉತ್ಕೃಷ್ಟ ವಾದ ಬುದ್ಧಿಯುಂಟಾಗುತ್ತದೆಯೋ ಆ ಬುದ್ಧಿಯಿಂದ ಗಮ್ಯನಾದ ವನು 'ದಾಮೋದರನೆಂದು' ಅಥವಾ ಲೋಕದಲ್ಲಿ ಅರ್ಥಪ್ರತಿ ಪಾದಕವಾದ ಎಲ್ಲಾ ಪದಗಳಿಗೂ ದಾಮವೆಂದು ಹೆಸರಿದ್ದು, ಆ ದಾಮಗಳು ಯಾರ ಉದರದಲ್ಲಿ ಅಡಕವಾಗಿವೆಯೋ ಅವನು 'ದಾಮೋದರ' ನೆಂದೂ ವಿವರಣೆ ಇದೆ : "ವಿಷ್ಣುಃ, ಕೃಷ್ಣಃ . . . ದಾಮೋದರಃ, ಶ್ರೀಧರ . . . ಗದಾಧರಃ-ಈ ೪೫ ನಾರಾಯಣನ ಪೆಸರ್" (ಹಲಾಯು. ೫-೨೫); ಹರಿ ಶೌರಿ . . . ಹೃಷೀಕೇಶನಚ್ಯುತ ನುಪೇಂದ್ರಂ ಬಭ್ರು ದಾಮೋದರಂ" (ಮಂಗರಾ. ೫-೧೭); ನಂದಗೋಪಂ ಪೊಱಪೊಱಲಿಂ ಬಂದು ಭಗ್ನವಾಗಿರ್ದಾ ಮಹಾಸ್ಕಂಧ ಶಾಖಾರ್ಜುನ ವಿಟಪಿಯುಮಂ ದರಸ್ಮಿತಭಿನ್ನೋಷ್ಠಪುಟನಾಗಿರ್ದ ದಾಮೋದರನುಮಂ ಕಂಡು (ಜಗವಿ. ೩-೩೮ ಪ); ವೇದಶಾಸ್ತ್ರಾಗಮ ಶ್ರುತಿ ಸ್ಮೃತಿಯಾದಿಯಾದ ಪ್ರೋಕ್ತಗಳ ದಾಮೋದರಂಬುಜಜಾತನೀಶ್ವರ ಮುಖ್ಯ ನಿರ್ಜರರು (ಶಂಳದಾ. ೮-೩೯); ಏನು, ಕಂಸಭೃತ್ಯನಾದ ದಾಮೋದರನು ನಿನಗೆ ಪುರುಷೋತ್ತಮನೋ (ಭಾಸನಾ. ೩೪). ೨. ದಪ್ಪಗಿರುವವನು; ಸ್ಥೂಲ ವಾಗಿರುವವನು. ೩. (ಆಲಂ) ಹೊಟ್ಟೆ ದಪ್ಪನಾಗಿರುವವನು ; ಡೊಳ್ಳುಹೊಟ್ಟೆಯವನು : ಮಲೇರಿಯದ ಬಾಧೆಯಿಂದ ಎಲ್ಲರೂ ದಾಮೋದರರೇ (ಚಿಗುಳ. ೪೮). [ದಾಮ$_2$ + ಉದರ]

ದಾಯ$_1$ (ನಾ). ೧. ಪಗಡೆಯಾಟದಲ್ಲಿ ಬೀಳುವ ಗರ ಅಥವಾ ಸುಖ್ಯೆ; ಪಗಡೆಯ ಗರ : ಪಾಸಂಗೆಯಂ ಪೊರಳ್ಚಿ ಮುನ್ನ ನೆತ್ತಮನಱಿಯದನಂ

ತವರ ದಾಯಮನಾಡೆ (ಪಂಪಭಾ. ೬-೭೦ ಪ) ; ನೆತ್ತವ ಭರದಿಂದಾಡುತ್ತಿರೆ ಖುರೆ ಮುತ್ತುವ ದಾಯಕ್ಕುತ್ಸವಿಸ ತ್ತಿರೆ (ಉದ್ಯರ. ಹ. ೧೮೭-೦೮) ; ಚೌಕ ದುಗನಿತ್ತಿಗ[ಬಾರಮ]ನೆಂಬ ದಾಯಮಂ ಬಾರಿಸಿ ಬೇಡಿ ದಾಳಮಳವ ಟ್ಟಿರೆ (ಪುಷ್ಯಾಸ್ತ. ೪-೦೮); ರಾಯ ಸೋತನು ಶಕುನಿ ಬೇಡಿದ ದಾಯ ತಹ ಹವ್ಮಿಗೆಯಲೊದಗಿದವಾಯತದ ಕೃತ್ರಿಮವಲೇ ಕೌರವರ ಸಂಕೇತ (ಕುಷ್ಯಾಸ. ೧೩-೫೦) ; ನೆತ್ತದ ಹಾಸಂಗಿ ಎತ್ತ ಬಿದ್ದರು ದಾಯ (ಸರ್ವಜ್ಞ. ೪೦೭). ೨. ಸಮಯಂ ; ಅವಕಾಶ ; ಅನುಕೂಲ ; ಸೌಕರ್ಯ : ದಾಯವಿದು ತವಗೆಂದು ದೈತ್ಯನಿಕಾಯ ಬಂದು ರಸಾತಳಕೆ ಕುರುರಾಯ ನನು ಕೊಂಡೊಯ್ದು ತಿಳುಹಿದರು (ಕುಷ್ಯಾಅ. ೨೧-೬೩). 'ದಾಯಂಗಾಱ' ಪರಾ. ೩. ಹಂಚಿಕೆ ; ಉಪಾಯಂ ; ರೀತಿ; ಮಾರ್ಗ: ತಾಯಿ ಕಲಿಸಿದ ಬುದ್ಧಿಯೊದವಿನ ದಾಯದಲಿ ಬಿನ್ನವಿಸೆ ರಾತ್ರಿಯು ಬೀಯವಾಗಲಿಯೆಂದು ಪತಿ ಸತಿಗಱುಪಲು (ಸಂಭಪ. ೨೫-೪೭); ಮುಂದಣಿನ ಮುಂಗುಡಿಯ ದಾಯಕೆ ದಾರಿ ಯಾವುದು ವೀರ ಹೇಳೆಂದ (ತೊರರಾ. ೬-೧೧-೨) ; ಹಲವು ದಾಯವ ಪೇಳಿ ನಾ ಪೋಗೆ ಬಾಲನ ಸಲಹಿದಳತಿಕಾಂಕ್ಷೆಯಲಿ ನಲಿದು (ಮೋಹತ. ೧೩-೪೪). ೪. ಕುತಂತ್ರ ; ಕುಯುಂಕ್ತಿ: ನ್ಯಾಯವ ತಿಳಿಯದೆ ಮಾಯವ ಮಾಡಿದೆ ದಾಯವು ತಿಳಿಯಿತಂ ನನಗೆ (ಕಂಸವಿ. ೬-೧೮೦). ೫. ಚಾಡಿ ; ದೂರು : ರಾಘವಂ ಮಾಡಿದುಪಹತಿಯಿಂ ದಶಾನನಂಗೆ ದಾಯವಂ ಪೇಳ್ದವನ ವಂಶಮಂ ಸಪಱಿಸಿದ ಮಾಯಕಾರ್ತಿಯವೊಲು (ಶೈಮಿಭಾ. ೯-೨೨). ೬. ಒಪ್ಪ ; ಓರಣ ; ಅಣಿ : ಆಯತಿಕೆಯಿಂ ರುದ್ರ ಕನ್ಯೆಯರ ಕೆಲಕೆಲರ್ಸಹಿತಮತಿಭಕ್ತಿಯಿಂದೆ ದಾಯದಿಂದೆಱಗಿ ಬೀಳ್ಕೊಂಡು (ಶಿಬಪು. ೩-೨೯); ಅಲ್ಲಲ್ಲಿಗೆ ದಾಯ ಮಿಗೆ ನಿಲಿಸಿದರೊ ಪೇಡರರ್ತಮ್ಮ ಶೋಭಾಯಮಾನಾಲಯಂಗಳನೆನಲ್ಕಣ್ಗೆ ರಮಣೀಯಮಾಗಿ(ಶೈಮಿಭಾ. ೩-೨೦). ೭. ಸಮತೋಲನ ; ಆಯ; ತೂಕ; ಸ್ಥಿರತೆ: ಹೊಗೆಬಂಡಿಯ ನಿಲ್ದಾಣಕ್ಕೆ ಐದು ಮೈಲಿಗಳ ದೂರದಲ್ಲಿಯೇ . . . ಕಾಲುದಾರಿಯು ಸಣ್ಣದಾಗಿರ ವದು ; ದಾಯ ತಪ್ಪಿತೆಂದರೆ ಮನುಷ್ಯನು ಅಧಃಪಾತಾಳಕ್ಕೆ ಬಿದ್ದು ನುಚ್ಚುನೂರಾಗಿ ಹೋಗುವನು (ಬೆನ್ನಬೇ. ೬೦). ೮. ಕಾರ್ಯ ; ಕೆಲಸ : "ದಾಯಮುಮೆನೆ ಕಾರ್ಯಮಕ್ಕು" (ಕವಿಕಂ. ೦೫೦); ಸಾಧನದ ದಾಯಮನ್ನೆಳಸುವುದು ಮತಿ ಗುರುರಾಯ (ಗಗತಾ. ೧೩-೦೦). ೯. ಅಳತೆ; ಪ್ರಮಾಣ ; ಅಂತರ: ಆಯುವನಾತ್ಮ ದಾಯದೊಳಗಪಹರಿಕುಂ (ಜಾತತಿ. ೮-೭) ; ತೆಂಗಿನ ಸಸಿಗಳ ದಾಯ ಸರಿಯಾಗಿದೆ (ರೂಢಿ). 'ಅಂಕಣದಾಯ' ಪರಾ. ೧೦. ವಿಸ್ತಾರ: ಬಾಯೊಳಗೆ ಬ್ರಹ್ಮಾಂಡಕೋಟಿಯ ದಾಯವನು ತೋರಿಸಿಯ ತಾಯಿಗೆ ಮಾಯದಲಿ ಮಗುವಾಗಿ (ಗಗತಾ. ೫-೨೪). ೧೧. ಅಳವು; ಶಕ್ತಿ; ಸಾಮರ್ಥ್ಯ : ಧರಣೀಶನಂ ಹುಸಿಕನೆನಿಸಿ ವಾಸಿಷ್ಠ ಮುನಿವರನಂ ವ್ರತಭ್ರಷ್ಟನಂ ಮಾಡಿದವೆನೆಂಬ ಭರಕೆ ಬಲವಾದುದನುವಿಂಗೆ ತನುವಾಯ್ತುವಾಯಕ್ಕೆ ದಾಯಂ ಮೊಳೆತುದು (ಹಷಕಾ. ೩-೦೩) ; ರಾಯ ಹೊಕ್ಕನು ಭೀಮಸೇನನ ದಾಯ ಬಾಹೋ ಧರ್ಮಪುತ್ರನ ದಾಯ ವಲ್ಲಿದು ನೂಕೆನುತ (ಕುಷ್ಯಾಕ. ೩-೭) ; ದಾಯದ ಪಂತವೆ ನಿಮಗೆಂದು ಸುಭಟನಿಕಾಯ ಮುತ್ತಿತು ತಂರುಕರನು (ಕಂಸವಿ. ೦೫-೩೪). ೧೨. ವಿಚಾರ; ಆಲೋಚನೆ ; ಪರಿಶೀಲನೆ. 'ದಾಯಂಗೊಳ್' ಪರಾ.

ದಾಯ ಬೇಂಟೆಕಾಱ = ಗುರಿಯಿಟ್ಟು ಹೊಡೆಯಲು ಸಮರ್ಥನಾದ ವನು ; ಒಂದು ಬಿರುದು : ಅಳಿಂ ಮುನ್ನಿಱಿವನುಂ ದಾಯಬೇಣ್ಟೆ ಕಾಱನುಂ (ಎಕ. VI, ಕಡೂರು. ೦೫೭-೫೦; 1191).

ದಾಯ್ಯ (ನಾ). ೧. ಕಾಣಿಕೆ ; ಉಡುಗೊರೆ ; ಉಪಾಯನ. ೨. ಮಂದುವೆ ಯಲ್ಲಿ ವಧೂವರರು ಪಡೆಯುವ ಕಾಣಿಕೆ ; ಬಳುವಳಿ. ೩. ತನ್ನ ಪಾಲಿಗೆ ಬಂದ ಆಸ್ತಿ; ಪಿತ್ರಾರ್ಜಿತ ಸ್ವತ್ತು: ಬಳಸುತುಣುತಿರೆ. ದಾಯ ವನು ನೆರೆಉಳಿದು ತನ್ನಯ ಮನೆಯಲಿ. ತಳೆದು ತೃಪ್ತಿಯ ಬಾಳ್ವೆವೇಳೆಯ ಕಳೆವನೇ. ಸುಖಿಮನುಜನೈ (ಕಎಪು. ೪೦-೦). ೪. ಪಾಲು ; ಭಾಗ. ೫. ಭಾಗ ಮಾಡುವಿಕೆ; ವಿತರಣೆ; ಆಸ್ತಿಯ ಹಂಚಿಕೆ. ೬. ವಾಸಿಸುವ ಸ್ಥಳ ; ವಸತಿ ; ನಿವೇಶನ ; ದಾಯವಿಲ್ಲದೆಯಾಶ್ರಮಂಗಳ ದಾಯವನು ಸುಟ್ಟುದಕೆ ನಿನ್ನಯ ಕಾಯುವುರಿಯಲಿಯೆನಲು (ಸಂಭಪ. ೬-೪). ೭. ಆಟ. ೮. ಪಾಲುಗಾರಿಕೆ : ಯಿಬ್ಬರು ದಾಯದಲ್ಲಿ ಸೇರಿ (ಸೌಇಎ. ೧೯೪೪, ಸಂಡೂರು. ೭೫-೨ ; 1450). ೯. ಆಸ್ತಿ ; ಸಂಪತ್ತು. ೧೦. ದಾನ : "ಹೊನ್ನಿನೊಳು ನಿರುತ ದಾನವಿಶೇಷದೊಳು ಭಾಗ ಸಂಖ್ಯೆಯೊಳು ದಾಯ ಮೆಂಬುದಕ್ಕು" (ಮಂಗರಾ. ೦೪೪-೨೭). ೧೧. ಗಳಿಕೆ ; ಸಂಪಾದನೆ. 'ದಾಯಂಗಾಱಿಕೆ' ಪರಾ. ೧೨. ಒಂದು ಬಗೆಯ ತೆರಿಗೆ : ಮಂನೆಯ ವಾಯದಾಯಮಿವು ಸಲ್ಲವು ಸರ್ವ್ವನಮಸ್ಯಮೆಂದು ಬಿಟ್ಟಂ (ಎಇ. XXVII, ೧೫-೫೭ ; 1114) ; ಮನ್ನೆ × ಗಾಣಿಕೆ ಸೇಸೆ ತಪ್ಪನ್ನೆಯ ವಾಯ ದಾಯ ಮಿವು ಸಲ್ಲವು (ಸೌಇಇ. IX-I, ೨೫೦-೪೫ ; 1149). ೧೩. (ಆಲಂ) ಹಂಗು ; ಋಣ : ಗುಣ ಪಸಾಯದ ಕಾಣಿಕೆಯ ಹರಿಯಣದ ಹಂತಿಯ ದಾಯದೂಟಕೆ ಋಣಿಗಳಾದೆವೆ ಶಿವಶಿವಾ ಎಂದೊಳರಿತಖಿಳಬಲ (ಕುಷ್ಯಾಕ. ೧೩-೨). [ಸಂ.]

ದಾಯಂಗಿಡಿಸು, ದಾಯಗೆಡಿಸು (ಕ್ರಿ). ಶಕ್ತಿಯು ಕುಂದುವಂತೆ ಮಾಡು; ಸಾಮರ್ಥ್ಯಗೆಡಿಸು; ಶಕ್ತಿಗುಂದಿಸು: ಗಡಿಗಡಿಯವರುಂ ದಾಯಂಗಿಡಿಸದ ತೆಱದೊಳ್ ರಾಯಸಮಂ ಬೇಟ್ಟನಿತ್ತು ಕಳುಪುವುದುಚಿತಂ (ಜಿಕವಿ. ೨-೦೨೪). ದಾಯಗೆಡಿಸು : ದಂಡಾಯುಧದ ನಿಲವಿನಲಿ ಸುಭಟರ ದಾಯ ಗೆಡಿಸಿದನು (ಕುಷ್ಯಾಪ್ರೋ. ೧೯-೮); ತಾಯಿಮಕ್ಕಳು ತಂಗಿ ನಾದುನಿಯಾಯ ತಾಂಬಕಿ ಪ್ರೀಯ್ಯಯಂಬಭಿಪ್ರಾಯವರಿಸದ ಮೋಹಮಲ್ಲನ ಪಿಡಿದ ಚಿತ್ತ ವನು ದಾಯಗೆಡಿಸದೆ ಸರ್ವಜನ ವಿಕಲಾಯಗೊಂಡಿಹರರುಹ ಕೇವಲ ಮಾಯೆಯನು ಪರಿಹರಿಸಿ ರಕ್ಷಿಸು (ಜಿನಸಾ. ೫೮).

[ದಾಯ್ಯ + ಕಿಡಿಸು (<ಕೆಡಿಸು)]

ದಾಯಂಗೊಡು (ಕ್ರಿ). ಅವಕಾಶ ಕೊಡು, – ನೀಡು : ಅರಸಂ ದಾಯಂ ಗೊಟ್ಟನೆಂದು ಸಾಮಂತರ ನಿಯೋಗಿಗಳ ಅರಸಿಯರ ಗೋವುಗಳೊಳ್ಳಿದು ವಪ್ಪ ಎಮ್ಮೆಯುಂ ಪಸುಗಳುಮನಾಯ್ದುಕೊಂಡು (ಪಡ್ಡಾರಾ. ೨೨-೪).

[ದಾಯ್ಯ + ಕೊಡು]

ದಾಯಂಬಡೆ (ಕ್ರಿ). ೧. (ಪಗಡೆಯ) ಗರವನ್ನು ಪಡೆ. ೨. ತನ್ನ ಪಾಲನ್ನು ಪಡೆ. ೧, ೨ : ಅಣುಗಾಳಂತೆ ದಾಯಂಬಡೆದು[ಂ] ಮೇಳ ದಂಕದಂತೆ ಸುಟಿಯಱಿದು[ಂ] ಡೊಂಬರ ಕೋಡಗದಂತಾಡಿ ಗೆಲ್ದು (ಪಂಪಭಾ. ೬-೭೨ ಪ). [ದಾಯ್ಯ + ಪಡೆ ; ದಾಯ್ಯ + ಪಡೆ]

ದಾಯಕ (ನಾ). ೧. ಕೊಡುವವನು; ದಾನ ಮಾಡುವವನು ; ದಾನಿ ; ಉದಾರಿ. ೨. ದಾಯಾದಿ ; ಆಸ್ತಿಗೆ ಹಕ್ಕುದಾರನಾದ ಬಂಧು : (+). ೩. ಶತ್ರುಗಳನ್ನು ಕತ್ತರಿಸುವವನು ; ಹಗೆಗಳನ್ನು ಖಂಡಿಸುವ ವನು ; ಯೋಧ ; ಸೈನಿಕ : ಇತ್ತ ಕುರುನೃಪಗೆ ಸಮರದೋಳ್ ತೋರಿ ದುದುಭಯಗಳಂ ಬೀರಿದುದು ದಾಯಕರು ಜಾರಿದುದು ಕಂಡ ಕಡೆಗೆ (ತುರಂಗೆ. ೪೬-೪೩). [ಸಂ.]

ದಾಯಕಾತಿ (ನಾ). ಸಲಂಗೆಯುಳ್ಳವಳು: ದಾಯಕಾತಿಯಱಿಳು[ಪಾಕಾಂ. ದಾಯಗಾಱುಕೆಯಲ್ಲಿ] ತನ್ನ ಮೇಲಣ ಭ್ರಾಂತ ಬಾಯಾಱಗೊಡೆನೆಂದು ಲಲಿತಕಾಯಕಾಂತಿಯ ರಸಭರಿತ ಗಿಂಡಿಯ ಹಿಡಿದಾಯತೆಯಿರ್ದಳೊ ತ್ತಿನಲಿ (ಮೋಹತ. ೪-೯). [ದಾಯ್ಯ + – ಕಾತಿ]

ದಾಯಗ (ನಾ). = ದಾಯಿಗ (?) : ಸ್ವಸ್ತಿಶ್ರೀ ಗೊಗ್ಗಿಯಮನೆವಗತಿ ಎಱಿ ಬೀರಯ್ಯ ಉತ್ತವಗಳ್ಳಗುಂ ಎಡವರಿಯುಂ ದಾಯಗ ಸಮ್ಮನ್ನದಿ ನೆಡವರಿ ಊರಮೇಲೆ ವಳುಲುತ್ತವಗಡ × × × ಕಾದಿ ಉತ್ತವಗಳ್ಳಂಗಾಗೆ ಎಱಿಬೀರಯ್ಯ ಸತ್ತ (ಎಕ. III, ಮೈಸೂರು. ೪೦-೨ ; ಸು. 990 ?). [?]

ದಾಯಗಲ್ಲು (ನಾ). ಒಂದು ಊರಿನ ಹೆಸರಂ ಮತ್ತು ಅಲ್ಲಿ ತಯಾರಾಗುವ ಸೀರೆ : ಗುಜ್ಜರಿ ಸಿಂಗಳ ಗುಲುಗಂಜಿ ಮಡಿಯು ಗಂಗಪುರವು ದಾಯಗಲ್ಲು ಕರಾಳೆಯುತ್ತುಂಗ ವಿಳಾಸ ವಿಭ್ರಾಂತು (ಅಮುಸಾಂ. ೪-೧೨). [?]

ದಾಯಗಾಱ (ನಾ). ಅವಕಾಶವನ್ನು ಉಪಯೋಗಿಸಿಕೊಳ್ಳುವವನು; ಸಮಯಸಾಧಕ; ಸ್ವಾರ್ಥಿ : ದಾಯಗಾಱನ ಶೀಲ ತ್ರಿವಿಧ ಧಾಳಕನ ಭಕ್ತಿ ಶಬರನ ದಯ ಚೋರನ ಲಲ್ಲೆ ಕಳ್ಳೆಯ ಬಲ್ಲತನ ಇವೆಲ್ಲವು ಕಲಿಯ ಮಣಿಯಂತೆ ಅಲ್ಲಿಗಲ್ಲಿಗೆ ದಾಯ (ಐಲೇಶ್ವ. ೪೨೬-೯). [ದಾಯ₁ + – ಕಾಱ]

ದಾಯಗಾಱಿಕೆ (ನಾ). ಸ್ವಂತಕ್ಕೆ ಮಾಡಿಕೊಳ್ಳುವ ಸಂಪಾದನೆ,–ಗಳಿಕೆ: ಭಕ್ತರು ಕಾಯಕವೆಂದು ದಾಯಗಾಱಿಕೆಯಲ್ಲಿ ತಂದು ದಾಸೋಹವ ಮಾಡಬಹುದೆ (ಶೂನ್ಯಸಂ. ೨೬೩-೧೩). [ದಾಯಗಾಱ + – ಇಕೆ]

ದಾಯಗೆಡಿಸು 'ದಾಯಂಗಿಡಿಸಂ' ನೋ.

ದಾಯಗೆಡು₁ (ಕ್ರಿ). ಸಮತೆಯನ್ನು ಕಳೆದಂಕೊಳ್ಳು; ತೂಕತಪ್ಪು : ಈ ಅಂತರ್ಭೇದದಿಂದ ರಾಜಕಾರ್ಯವು ದಾಯಗೆಟ್ಟಿತು (ಅರ್ಯಕೀ. ೧೦೪).
[ದಾಯ₁ + ಕೆಡು₁]

ದಾಯಗೆಡು₂ (ಕ್ರಿ). ಪಾಲನ್ನು ಕಳೆದಂಕೊಳ್ಳು : ದಾಯಾದ್ಯವಿಷಯದಿ ಹಿಂದೆ ಕೆಲಂಬರು ದಾಯಗೆಟ್ಟವರುಂಟು ಜೀಯ (ನಾಗಳು. ೧೧-೧೦).
[ದಾಯ₂ + ಕೆಡು₁]

ದಾಯಗೊಡು (ಕ್ರಿ). ದಾನಕೊಡಂ; ಕಾಣಿಕೆ ನೀಡಂ; ದತ್ತಿಬಿಡು : ಅವನ್ಗೆ ವಂಶೋತ್ಪತ್ತಿಯಾಗೆ ದಾಯಗೊಟ್ಟುದುಮದೆಗೂಟುಂಬಿಟ್ಟೌದೆಯು (ಎಕ. X, ಶ್ರೀನಿವಾ. ೬-೧೦ ; ಸು. 780). [ದಾಯ₂ + ಕೊಡು₁]

ದಾಯಗೊಳ್ (ಕ್ರಿ). ವಿಚಾರಮಾಡು ; ಆಲೋಚಿಸಂ ; ಪರಿಶೀಲಿಸು : ಪ್ರಾಯದೋಱಿತು ಮದುವೆಯ ಮಾಡಬೇಕೆಂದು ದಾಯಗೊಂಡಿರ್ದೆವು (ಭರಣಿ. ೭೦-೨೮). [ದಾಯ₁ + ಕೊಳ್₁]

ದಾಯದೋಱು (ಕ್ರಿ). ಮಾರ್ಗವನ್ನು ತೋರಿಸಂ; ದಾರಿಯನ್ನು ಕಾಣಿಸು : ತಾಯಿಲ್ಲ ತಂದೆಯಿಲ್ಲಂತ್ಯವಿಲ್ಲಾದಿಯಿಲ್ಲಾಯಾಸವಿನಿತಿಲ್ಲದಭವ ದಾಯದೋಱಿನಗೆ (ಭರಣಿ. ೪೭-೧). [ದಾಯ₁ + ತೋಱು]

ದಾಯದ್ರಮ್ಮ (ನಾ). ಒಂದಂ ಬಗೆಯ ತೆರಿಗೆ (?) : ಪೊಳಲ ಮನ್ನೆಯ ದಾನಿಕೆಯುಳ್ವ [ದೀಪು]ಮಂ ದಾಯದ್ರಮ್ಮದ ಕಿಱುದೆಱಿಗಳುಮಂ ಸರ್ವ್ವಬಾಧಾಪರಿಹಾರಮಾಗೆ ಬಿಟ್ಟು ನಡೆಯಿಸಿದ (ಸೌಇಇ. XX, ೪೭-೩೭; 1074). [ದಾಯ₂ + ದ್ರಮ್ಮ]

ದಾಯನಿರ್ಣಯ (ನಾ). ಆಸ್ತಿ ವಿಭಾಗದ ತೀರ್ಮಾನ : ವಿವದಿಗಳಾ ದಾಯನಿರ್ಣಯಕೆ ಯೋಜಿಸುವಂತೆ, ನೀಂ ಜಗದ ಶ್ರೇಯಸ್ಸಿಗುಜ್ಜುಗಿಸು (ಮಂಕುಕ. ೮೧೪). [ದಾಯ₂ + ನಿರ್ಣಯ]

ದಾಯಬೀಳು (ಕ್ರಿ). ೧. ಗರ ಬೀಳು. ೨. ಅವಕಾಶ ಉಂಟಾಗು ; ಸಂಸಮಯ ಉಂಟಾಗು : ದಾಯಬಿದ್ದಾಗ ಹಾಯಬೇಕಂ (ಗಾದೆ).
[ದಾಯ₁ + ಬೀಳು₁ (<ಬೀಟ್₁)]

ದಾಯಭಾಗ (ನಾ). ಆಸ್ತಿಯ ಭಾಗ ; ಸಂಪತ್ತಿನ ಭಾಗ: ದಾಯಭಾಗದ ವಿಷಯದಲ್ಲಿ ಅನೇಕ ವಿವಾದಗಳು ನಡೆದು ಕಡೆಗೆ . . . ರಾಜ್ಯವನ್ನು ಹೊಂದುವ ಸಂದರ್ಭ ಬಂದಿತು (ಭಾತತ್ತ್ವ. ೯೯); ಈ ಸಿದ್ಧಾಂತದ ಮೇಲೆಯೇ ಸರ್ವರಲ್ಲಿಯೂ ಧರ್ಮ, ಚಾರಿತ್ರ್ಯ, ದಾಯಭಾಗ ಮುಂತಾದುವುಗಳು ವ್ಯವಸ್ಥಿತವಾಗಿರುವುದು (ಆರ್ಯಧ. ೧೬೨).
[ದಾಯ₂ + ಭಾಗ]

ದಾಯರೆ (ಗು). ೧. ಪ್ರಾಂತೀಯಂ. ೨. ಕರಾವಳಿಯಲ್ಲಿ ವಾಸಿಸುವ : ಕೆಲವು ದಾಯರೆ ಮುಸಲ್ಮಾನ್ ಜಮೀನ್‌ದಾರುಗಳೂ, ವರ್ತಕರೂ ಇದ್ದರು (ಕೆಲನೆ. ೨೦೪).
[←ಪಾರ. ದಯಾರ್, ದಾಯರಾ=ವೃತ್ತ; ಹಿಂ. ದಯಾರ್, ದಿಯಾರಾ]

ದಾಯವಾದಿ (ನಾ). ಆಸ್ತಿಯ ಭಾಗಕ್ಕಾಗಿ ವಾದ ಮಾಡುವವನು ; ದಾಯಾದಿ ; ನಂಬಬಹುದೇ ದಾಯವಾದಿಗಳೆಂಬ ಪಾಪಿಗಳೇನ ಮಾಡರು ತಿಂಬವನೆ ಕೊಲುವಲ್ಲಿ ಕರುಣೆಗಳುಂಟೆ ಭಾವಿಸಲು (ಕೌಶಿರಾ. ೦೮-೩೯) ; ದಾಯವಾದಿಗಳರಿದಡಂ ಯಲವೊ ಸಂಜಯ ವಿಡಾಯಿಗೆಡುವುದು ರಾಜ್ಯಕಾರ್ಯಗಳ್ (ತುರಂಗ. ೭೩-೬೦).
[ಸಂ. ದಾಯವಾದಿನ್]

ದಾಯವಾದ್ಯ (ನಾ). = ದಾಯವಾದಿ : ಸುಡು ತನ್ನ ಪ್ರಾಣವಂ ದಾಯವಾದ್ಯರ ಕೈಯ ಬಿಡಿಸಿಕೊಂಡಾ ಜೀವವಿದ್ದೇನು ಫಲ (ತುರಂಗ. ೩೪-೦೪).
[<ಸಂ. ದಾಯಾದ್ಯ]

ದಾಯವಿಭಾಗ (ನಾ). ೧. ಪಿತ್ರಾರ್ಜಿತವಾದ ಆಸ್ತಿಯಲ್ಲಿಯ ಭಾಗ ಅಥವಾ ಪಾಲು : ವ್ಯವಹಾರ – ಅಷ್ಟಾದಶ ವಿಭಾಗಗಳು, ಸಭಾ . . . ನಿಯೋಗ, ದಾಯವಿಭಾಗ, ಅನಧ್ಯಯನ, ವರ್ಣಸಂಕರನಿಂದಾ, ಆಪದ್ಧರ್ಮಗಳು (ಭಾರದ. ೬೨). ೨. ಬರಬೇಕಾದ ಸ್ವತ್ತಿನ ಪಾಲು ; ಹಂಚಿಕೆ : ಯಜ್ಞದ ದಾಯವಿಭಾಗದಲ್ಲಿ ಪ್ರಮಿತ್ಯೂಸ್ ಸ್ಯೂಸನ್ನು ವಂಚಿಸಿದ (ಬದ್ಧಪ್ರ. V, ಬೀಠಿಕೆ). [ದಾಯ₂ + ವಿಭಾಗ]

ದಾಯಾದ (ನಾ). ೧. ಪಿತ್ರಾರ್ಜಿತವಾದ ಆಸ್ತಿಯಲ್ಲಿ ಭಾಗವನ್ನು ಪಡೆಯುವವನು ; ಪಾಲುಗಾರ ; ಜ್ಞಾತಿ : ಎಮ್ಮ ದಾಯಾದನುಂ ಕೋಪದಿನೆನ್ನೊಳ್ ಕಾದಲೆಂದುಬ್ಬರಿಸಿದ ಸಮರಾಟೋಪದಿಂ ನಿಂದೊಡಂ ಮಾಣ್ಬುದು (ಅದಿಪು. ೧೪-೮೫) ; ಒಡವುಟ್ಟಿದ ಕೌಸ್ತುಭಮಿರ್ಪೆಡೆಗಂ ದಾಯಾದನಪ್ಪೆನೆನ್ನೆಗಮೆಂದಂದುಡುಪತಿಕಳೆ ನೆಲಸಿತ್ತೆನೆ ಪೊಡೆಯಲರನ ಕೊರಲ ಪುಲಿಯುಗುರ್ ಕರಮೆಸೆಗುಂ (ಜಗವಿ. ೩-೪೪) ; ಧುರದೊಳ್ ತನ್ನಯ ವೀರರೊಳ್ ಪ್ರಜೆಗಳೊಳ್ ದಾಯಾದರೊಳ್ . . . ಸ್ತ್ರೀಯರೊಳ್ ದೊರೆಗಳ್ಗೆಳ್ಚಱು ಬೇಕೆಲೈ (ಸೋಮೇಶ. ೫೭) ; ದಾಯಾದರಿಲ್ಲ ಮಾರ್ಮಲೆವ ಪರಮಂಡಲದ ನಾಯಕರ ಸುಳಿವಿಲ್ಲ ನಿನ್ನಾಳ್ಕೆಗೆಲ್ಲಿಯುಮ ಪಾಯಮವನಿಯೊಳಿಲ್ಲ (ಜೈಮಿಭಾ. ೨-೫೪). ೨. ಆಸ್ತಿಯ ಉತ್ತರಾಧಿಕಾರಿ ; ಹಕ್ಕುದಾರ. ೩. ಮಗ ; ಪುತ್ರ. ೪. ಸತ್ತ ಬಂಧುಗಳಿಗೆ ಪಿಂಡಾದಿಗಳನ್ನು ನೀಡುವ ಕರ್ಮಗಳನ್ನು ಆಚರಿಸುವಲ್ಲಿ ಭಾಗಿಯಾಗತಕ್ಕ ಬಂಧುವರ್ಗದವನು.

ದಾಯಾದ ಮಲ್ಲ= ದಾಯಾದಿಗಳಿಗೆ ಭಯಂಕರನಾದವನು,– ಜಟ್ಟಿಯಂತಿರುವವನು ; ಒಂದು ಬಿರುದು : ಶ್ರೀಯುಂ ಕುರುಭೂ ಭೃದ್ಬಲತೋಯಧಿಯೊಳ್ ಕಡೆದು ಪಡೆದು ಭುಜಮಂದರದಿಂ ದಾಯಾದ ಮಲ್ಲನೆನಿಸಿದಹೇಯಂ ಭುಜಬಲವಿಭಾಸಿ ಸಾಹಸಭೀಮಂ (ಗದಾಯು. ೨-೧).
[ಸಂ.]

ದಾಯಾದವಿಷಯ (ನಾ). ಪಿತ್ರಾರ್ಜಿತವಾದ ಆಸ್ತಿಯ ವಿಷಯ ಸೋದರರ ಮನ ಕದಡಿದವು ದಾಯಾದವಿಷಯದಲಿ (ಕುಟ್ಯಾಉ. ೨-೨೭).
[ದಾಯಾದ + ವಿಷಯ]

ದಾಯಾದಿ₁ (ನಾ). ೧. ಆಸ್ತಿಯಲ್ಲಿ ಪಾಲನ್ನು ಪಡೆಯುವವನು ; ಅಣ್ಣ ಅಥವಾ ತಮ್ಮ. ೨. ಅಣ್ಣ ತಮ್ಮಂದಿರ ಮಕ್ಕಳು ; ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು. ೩. ಒಂದೇ ಕುಟುಂಬಕ್ಕೆ ಸೇರಿದ ಪೀಳಿಗೆಯವರು; ವಂಶಜ: ಜ್ಞಾತಿ: ಇವರಿಗೆ ಕೌರವರೆಂಬ ದಾಯಾದಿಗಳಿದ್ದರು (ನೀತಿಚಿಂ. I, ೯); ದೇಶಪದ್ಧತಿಯಂತೆ ರಾಜ್ಯವು ಹಿರಿಯನಾಗಿದ್ದ ದಾಯಾದಿಯಾರಿಸ್ತೇಯನ ಕೈಸೇರಿತು (ಮಣಿಸ. ೮೭) ; ಹುಟ್ಟುತ್ತಾ ಅಣ್ಣ–ತಮ್ಮ, ಬೆಳೆದಮೇಲೆ ದಾಯಾದಿ (ಗಾದೆ) ; ಸವತಿ ಸಣ್ಣವಳಲ್ಲ, ದಾಯಾದಿ ಚಿಕ್ಕವನಲ್ಲ (ಗಾದೆ). [<ಸಂ. ದಾಯಾದ್ಯ]

ದಾಯಾದಿ₂ (ನಾ). ೧. ಆಸ್ತಿಯ ಹಕ್ಕು ಉಳ್ಳವಳು. ೨. ಮಗಳು.
[ಸಂ. ದಾಯಾದೀ]

ದಾಯಾದಿತನ (ನಾ). = ದಾಯಿಗತನ ೧ : ಈ ವಿಷಯದಲ್ಲಿ ನೀವು ದಾಯಾದಿತನವನ್ನು ತೋರತಕ್ಕದ್ದಲ್ಲ (ಭಾಮಿ. ೭೫).

[ದಾಯಾದಿ$_1$ + – ತನ]

ದಾಯಾದ್ಯ (ನಾ). ೧. ಅಣ್ಣ ತಮ್ಮಂದಿರಿಗೆ ಬರಬೇಕಾದ ಪಿತ್ರಾರ್ಜಿತವಾದ ಆಸ್ತಿ ; ಆಸ್ತಿಯಲ್ಲಿ ಬರಬೇಕಾದ ಪಾಲು.–ಭಾಗ : ನವಗೆ ಬರಬೇಕಾದ ದಾಯಾದ್ಯವೇನಂಟೋ, ಅದ ಹಂಚಿಕೊಡುವುದಿಂದು (ಭಾಸನಾ. ೪೧). ೨. ಚಿಕ್ಕಪ್ಪನ ಅಥವಾ ದೊಡ್ಡಪ್ಪನ ಮಗ; ಪಾಲುಗಾರಿಕೆ ಯುಳ್ಳವನು; ದಾಯಂವಾದಿ: ಮಕ್ಕಳಿಲ್ಲದಿದ್ದಡೆ ಮಗಳು ಮಗಳ ಮಕ್ಕಳು ದಾಯಾದ್ಯರ ವಿಲ್ಲದೆ ನಿಸ್ಸನ್ತತಿಯಾದವ [ರೆ|ಲ್ಲವನರಸುಕಾ[ಣಿಕೆ] . . . ಕುಡಃವುದು (ಕಇಆ. ೩೬-೩೯-೪೧ ; 1110); ಉದಯಂದಲಿದ್ದು ಪತ್ರೆ ಪುಷ್ಪಗಳಿಗೆ ಹೋಗುವ ಅಣ್ಣಗಳು ನೀವು ಕೇಳಿರೊ ನೀವು ಗಿಡದ ವೈರಿಗಳೋ ಗಿಡದ ದಾಯಾದ್ಯರೋ (ವಚಸಂ. ೦೪೦-೩೦ ಅಂದಿವ) ; ಹೆಱುವೆನಾ ಮುನ್ನೆಂದು ಗರ್ಭವ ಧರಿಸಿದೆನು . . . ವರುಷವೆರಡಾಯ್ತಿದಱ ಭಾರವ ಧರಿಸಿದೆನು ದಾಯಾದ್ಯರೊಳಗವತರಿಸಿದನು ಮಗನೆನುತ ಮುಖದಿರುಹಿದಳು ಗಾಂಧಾರಿ (ಕುಪ್ಪಾಖ. ೪-೪೪) ; ಹೆಂಡತಿಯು ತನ್ನ ದಾಯಾದ್ಯರ ಮನೆಯಲ್ಲಿ ಕಷ್ಟದಿಂದ ಜೀವನ ಸಾಗಿಸುತ್ತಿದ್ದಳು (ನಿಷ್ಕಾಮು. ೯). ೩. ಬಲತಾಯಿಯ ಮಗ ; ಮಲ ಅಣ್ಣ ಅಥವಾ ಮಲ ತಮ್ಮ : "ಉಪಮಾತೆಯೆನೆ ಬಲದಾಯೆ ನಿಕ್ಕುಮಾಕೆಗೆ ವುಟ್ಟಿದಾತ ದಾಯಾದ್ಯನು" (ಕುಂಗರಾ. ೯೨-೦೩). [ಸಂ.]

ದಾಯಾಧಿಕಾರ (ನಾ). ಪಿತ್ರಾರ್ಜಿತವಾದ ಆಸ್ತಿಗೆ ಸಂಬಂಧಪಟ್ಟ ಅಧಿಕಾರ ; ಆನುವಂಶಿಕ ಹಕ್ಕು : ಅವಳ ಗಂಡನಿಗೆ ಪ್ರಿಯವೆಂದು ತೋರಬಹುದಾದ ದಾಯಾಧಿಕಾರದ ಬಗೆಗೆ ತನ್ನ ನಿರ್ಧಾರವನ್ನು ಸೂಚಿಸಿದಾಗ, ಅವಳ ಮುಖದಲ್ಲಿ ಮಿಂಚಿದ ಕಾಂತಿಯನ್ನು ಸ್ಪಷ್ಟವಾಗಿ ಗಮನಿಸಿದನು (ಪುಸರು. ೪೭೪). [ದಾಯ್ಯ + ಅಧಿಕಾರ]

ದಾಯಾರ್ಧ (ನಾ). ಆಸ್ತಿಯಲ್ಲಿ ಅರ್ಧ ಭಾಗ : ಗೃಹಯುಗ್ಮಂ ನೆಲಸಿರ್ದೂಡೊಂಡೆ ಗೃಹದೊಳ್ ದಾಯಾರ್ಧಮಂ . . . ಆಳ್ಗುಂ (ಕಾತಪ. ೯-೪). [ದಾಯ್ಯ$_2$ + ಅರ್ಧ]

ದಾಯಿ 'ದಾದಿ' ನೋ.

ದಾಯಿಗ (ನಾ). ೧.=ದಾಯಾದಿ$_1$ ೨ : "ದಾಯಾದರೊಳ್ ದಾಯಿಗಂ" (ಕರ್ಣಾನಿ. ೩) ; ಅವರ ದಾಯಿಗಂ ಕಾಸ್ತ್ರಂಗಳಿಂ ಬಲ್ಲೊಂಗಂ ಮಂತ್ರಿಪದವಿಯುಂ ಕೊಟ್ಟುದಂ ಕೇಳ್ದು (ವಡ್ಡಾರಾ. ೨-೨೫) ; ಕಾಡೊಳ್ ಬೇಡರಂತೆ ತೊಟಲ್ವ ದಾಯಿಗರ ಕಂದಿ ಕುಂದಿದ ವೊಗಂಗಳಂ ನೋಡುವುದುಂ (ಪಂಪಭಾ. ೭-೩೨ ಪ); ಬಲ್ಮೊಗದಿಂದಿರ್ದು ಪದಾರ್ತ್ಥಮಂ ಬಿಸುಟು ತಮುಳ್ಳಾರ್ತ್ಥಮಂ ಬಯ್ತ್ರಿ ಬಂದಿಗೆ ಕಳ್ಳಂಗರಸಿಂಗೆ ದಾಯಿಗರಿಗಂ ಕಟ್ಟೋವತಂ ಮಾಟ್ಪ ಲೋಭಿಗಳೇಂ ಪೋಲ್ವರೆ . . . ರಾಮನಂ (ಕಇಆ. ೭೮-೦೩-೨೬ ; 1088) ; ಕಾಂಚನಮವ್ವೊಡೆ ದಾಯಿಗರಿಂದನುನಯದಿಂ ಶಕ್ಕರಿಂದಮಬ್ಬಿವುದು ಬೇಗಂ (ಧರ್ಮಾಮ್ಯು. ೭-೦೪೩) ; ಜನಪನಾ ದಾಯಿಗನ ಮಜುಜೂಜನಲಿ ಗೆಲಿದನು (ತೊರಕಾ. ೩-೨-೨೩) ; ಕಾದವರುಂಟು ದಾಯಿಗರ್ ಪಗೆಗಳಗ್ರಜಾನುಜರ್ . . . ಕಂಡೆನಿಲ್ಲ ಕೇಳ್ದೆನಿಲ್ಲೀ ತೆಱನ ದೊರೆವೆತ್ತ ಸೆಣಸಂ (ರಾಮಾಶ್ವ. ೧೬೨-೨). ೨. ಮಗ : "ಪುತ್ರನಲ್ಲಿ ದಾಯಿಗನೆಂಬುದು" (ಮುಂಗರಾ. ೦೪೨-೦೮) ೩. ಮಲತಮ್ಮ ಅಥವಾ ಮಲಅಣ್ಣ : (ಪ). ೪. (ಆಲಂ) ಪುಣ್ಯದಲ್ಲಿ ಪಾಲುಗಾರ ; ಪುಣ್ಯಸಾಧಕ ; ಪುಣ್ಯಶಾಲಿ : ಬೀಯ ಮಾಡಿಯೆ ಲಿಂಗದಲಿ ನಿಜಕಾಯ ನಿಲುವೊಡೆ ನಿತ್ಯರವ್ವೊಡೆ ದಾಯಿಗರು ಲಾಲಿಸುವುದೀ ಪ್ರಭುಲಿಂಗ ಲೀಲೆಯನು (ಪ್ರಭುಲೀ. ೦-೦೦).

ದಾಯಿಗದಲ್ಲಳ = (ಶತ್ರುಗಳಾದ) ದಾಯಾದಿಗಳಿಗೆ ಭಯಂವನ್ನುಂಟುಮಾಡುವವನು : ಒಂದು ಬಿರುದಂ : ಸಕಳಗುಣಗಣೋತ್ತುಂಗ ಮಾವನ ಸಿಂಗ ಜಿತವೈರಿಸಂಕುಳ ದಾಯಿಗದಲ್ಲಳಂ ಶ್ರೀಮತ್ ಕಲಿಯಃಮ್ಮರಸಂ (ಎಇ. XIX, ೦೪೦-೩೦ ; 1046). **ದಾಯಿಗ ಮುರಾರಿ** = ಒಂದು ಬಿರುದಂ : ಗೋತ್ರಪವಿತ್ರಂ ವರಾಂಗನಾಪುತ್ರಂ ದಾಯಿಗಮುರಾರಿ ವಿನಯೋಪಕಾರಿ (ಎಇ. XII, ತಿಪಟೂ. ೦೦೪-೦೬ ; 1130). [ದಾಯ್ಯ + – ಗ]

ದಾಯಿಗತನ (ನಾ). ೧. ದಾಯಾದಿಯಾಗಿರುವಿಕೆ : (ಪ). ೨. ದಾಯಾದಿಯಂ ಸ್ವಭಾವ ; ವೈರ ; ದ್ವೇಷ : ಕಡಂಗಿ ವಿಗೆ ತಳ್ಪಿಱಿಯಲ್ಕೆಂದಾನುಂ ಬುದಿರ್ದರಿದೇಂ ದಾಯಿಗತನಮನೆಮಗವರ್ ತೋಱಿದಪರ್ (ಪಂಪಭಾ. ೦೦-೩) ; ನೀಮೆಲ್ಲಂ ದಾಯಿಗತನಮನಿಲ್ಲಿ ತೋಱಿಲ್ಲಗದು (ಗದಾಯು. ೭-೭೨); ಪೂಣ್ದೆನ್ನೊಳಂ ದಾಯಿಗತನಮನಿವಂ ತೋರ್ದೆ (ಪಂರಾಮಾ. ೦೨-೭೩). [ದಾಯಿಗ + – ತನ]

ದಾಯಿತ (ನಾ). ಆತ್ಮೀಯ ; ಪ್ರೀತಿಪಾತ್ರನಾದವನು ; ಇಷ್ಟವಿಂತ್ರ (?) : ದಾಯಿತರಿಂ ಪೆಸರ್ವೆತ್ತ ಪಸಾಯಿತರಿಂ ಸುಘಟ ಚೇಟಕ ಪ್ರಕಟ ವಿಹಾನಾಯಕರಿಂ ನಿರುಪಮ ತೋಭಾಯತಮಾಯ್ತೋಲಗಂ (ಕುಸುಮಾ. ೩-೮೮). 'ದಾಯಿದ' ಪರಾ. [?]

ದಾಯಿತ್ವ (ನಾ). ೧. ಕೊಡಬೇಕಾದುದಂ. ೨. ಸಾಲ–ಸೋಲ ವಂಂತಾದ ಹಣಕಾಸಿನ ಜವಾಬ್ದಾರಿ.–ಬಾಧ್ಯತೆ : ಭಾರತ ಡೊಮಿನಿಯನ್ನಿನ ಎಲ್ಲ ಅಧಿಕಾರಗಳೂ, ದಾಯಿತ್ವಗಳೂ, ಆಧಾರಗಳೂ . . . ಕ್ರಮವಾಗಿ ಭಾರತ ಸರ್ಕಾರದ ಮತ್ತು ಆಯಾ ರಾಜ್ಯಪಾಲಪ್ರಾಂತಕ್ಕೆ ಸಂವಾದಿಯಾದ ರಾಜ್ಯದ ಅಧಿಕಾರಗಳೂ, ದಾಯಿತ್ವಗಳೂ, ಆಧಾರಗಳೂ ಆಗಿರತಕ್ಕುದು (ಭಾರಾಸಿ. ೦೬೯). ೩. ಕೊಡುವಿಕೆ ; ನೀಡುವಿಕೆ : ಆ ಸಂಪತ್ತನ್ನು ದೇಶದೇಶಾಂತರಗಳ ಎಲ್ಲರಿಗೂ ದಾನಮಾಡಬೇಕೆಂಬ ಒಮ್ಮನೆಯ ದಾಯಿತ್ವಜ್ಞಾನವನ್ನು ಅವರು ಪಡೆದಿದ್ದುದು (ನಿದಂಧ. I, ೩೩೭). [ಸಂ.]

ದಾಯಿದ (ನಾ). = ದಾಯಿತ (?) : ಚಕ್ರವರ್ತಿ ಸ್ವಕೀಯ ರಸನೆಗತೀವ ಸ್ವಾದುವಾದ ವಸ್ತುಗಳಂ ಕುಮಾರಾವರೋಧವಧೂವಿಳಾಸಿವರ್ಗಕಂ ದಾಯಿದ ಪಸಾಯತರ್ಗಂ ಕಳಪುತ್ತುಂ (ಶಾಂತೀಶ್ವ. ೦೫-೭೦ ಪ).

[<ದಾಯಾದ್ಯ ?]

ದಾಯಿದೊಡ (?). (ನಾ). ಒಂದು ಬಗೆಯ ತೆರಿಗೆ (?) : ಶ್ರೀಮನು ಮಹಾ ಮಂಡಳೇಶ್ವರಂ ಬೋ(೦)ಮಿದೇವರಸರ್ಗ್ಗೆ ಉರೆಗುರಕೆ ಕೊಟ್ಟು ದಾಯಿದೊಡ (?) ಸರ್ವ್ವ ನಮಸ್ಯಂ ಮಾಡಿ ವಿರಿಂಗಲ್ಲದ ದಕ್ಷಿಣ ದಿಶಾಭಾ[ಗ]ದಲ್ಲಿ ತಾ ಪ್ರತಿಷ್ಠೆ ಮಾಡಿದ ಹಯಿಮೇಶ್ವರದೇ[ವ]ರಿಗೆ ಬಿಟ್ಟ ಕೆಯ ಮತ್ತರು ೬ (ಶಾಇಶಾ. XX, ೦೪೯-೩೦ ; 1208). [?]

ದಾರ$_1$ (ನಾ). ನೂಲು ; ಎಳೆ ; ಸೂತ್ರ : ಮುನ್ನವೆಂಬ ಬಟಿಕೆಂಬ ಜನೋಕ್ತಿಯೊಳಾಯ್ತು ಸೂಚಿಶಕ್ತಿಗೆ ನೃಪರಾನೆ ದಾರದವೊಲಾದುವು ರಾಜಕುಮಾರರಾನೆಗಳ್ (ಗದಾಯು. ೦-೦೬) ; ಸೂಜಿಯ ಬಟಿಯ ದಾರದಂತೆ (ಧರ್ಮಾಮ್ಯು. ೦೪-೦೦೪) ; ಬಿಡುಮಂತ್ರು ಘನೋಪಳದೊಂದು ರೂಪದಿಂ ಸುರಿಯಲನಂತರಂ ಬಱಿಯ ದಾರವೆಟಿಲ್ದಪುದೆಂಬ ಚಿಲ್ವನಾವರಿಸಿದುವು . . . ವಾರಿಧಾರೆಗಳ್ (ಆಗವಿ. ೪-೩೭) ; ದಾರ ಉರಗನ ವಿಡಿವಣಿಯ ಗೊಂಡೆಯದ ಕಿಗ್ಗಟ್ಟಿಸೆಯಿ ವಶುವತಿಯ (ಕುವ್ಯಾಳ. ೭-೦೨); ಒಟ್ಟು ಬಟ್ಟೆಮಾಡುವ ಕೆಲಸವನ್ನು ತೆಗೆದುಕೊಂಡರೆ ದಾರದ ಎಳೆ ತೆಗೆಯುವುದೇ ಒಂದು ಭಾಗ (ಹಡಿಪ್ರ. ೮) ; ಎಲ್ಲಾ ನಾರುಗಳಿಂದ ಎಳೆಗಳನ್ನು ತೆಗೆದು ದಾರಗಳನ್ನಾಗಿ ಹೊಸೆದು, ದಾರಗಳಿಂದ ಬಟ್ಟೆಯನ್ನು ತಯಾರಿಸಲಾಗುತ್ತದೆ (ಗೃಹವಿ. ೭೩).

[?./ತಮಿ. ತಾರ್, ತಾರ ; ತುಳು. ತೆಲು.ದಾರ. / ಹ್ರಾ. ದಾರ = ಕಟೇ ಸೂತ್ರ. / ಸಂ. ದೋರ]

ದಾರ$_2$, ದರ$_1$, ದೋರ$_2$ (ನಾ). ಬಾಗಿಲು; ದ್ವಾರ: ದರ ದಾರ ಬಾರ ಮಕ್ಕುಂ ಪರದಾ ದ್ವಾರಕ್ಕೆ ಪೂರ್ವದೊಳ್ ತದ್ಭವಮಾಗಿರೆ (ಶಮದ. ೨೯೬). ದರ$_1$: ಮೇಲಿನ 'ಶವಂದ' ಪ್ರಯೋಗವನ್ನು ನೋಡಿ. ದೋರ$_2$] ಬುದು ಕಾಷ್ಠಾಂಗಾರೆ ದೋರದಿ ಹೊಂದಿಸಿಹ ಹೊಂಗಂಟೆಯನು ಸಾನಂದದಲಿ ದನಿಗೆಯ್ದೆ (ಚೀವಂಚ. ೩-೧೪). [<ಪ್ರಾ. ದಾರ. / ಸಂ. ದ್ವಾರ:

ದಾರ$_3$ (ನಾ). ೧. ಬಿರುಕು; ಸೀಳು; ತೂತು; ರಂಧ್ರ. ೨. ಉತ್ತ ಭೂಮಿ. ೩. ಹೆಂಡತಿ; ಪತ್ನಿ; ಭಾರ್ಯೆ: "ದಾರಾಃ, ಕ್ಷೇತ್ರಂ, ಕಳತ್ರಂ . . . ಗೃಹಿಣೀ, ಗೃಹಾಃ – ಈ ೧೩ ಹೆಂಡತಿ" (ಹಲಾಯು. ೫೦-೩೪೦); "ದಾರಂ ಕಳತ್ರಂ . . . ಪತ್ನಿ ಮಹಿಳೆಯೆನೆ ಹೆಂಡತಿಗೆ ನಾಮಮಕ್ಕುಂ" (ಮಂಗರಾ. ೯೦-೬); ಪ್ರಭುಗಳ ಆಯುರ್ದಾಯ ದಾರಾ ಪುತ್ರಾದಿ ಕ್ಷೇತ್ರಗಳನ್ನು ಅವರು ಸೂಕ್ಷ್ಮವಾಗಿ ಗುಣಿಸಿ ನೋಡಿರಲಿಲ್ಲ (ಶಾಂತಲಾ. ೯೫). 'ದಾರಪರಿಗ್ರಹ' ಪರಾ. [ಸಂ.]

-ದಾರ$_4$ (ಪ್ರ). ಹೊಂದಿರುವವನು; ಪಡೆದಿರುವವನು ಎಂಬ ಅರ್ಥದಲ್ಲಿ ಸೇರುವ ಒಂದು ತದ್ಧಿತಪ್ರತ್ಯಯಂ. 'ಅಬ್ರುದಾರ', 'ಅಮಲ್ದಾರ', 'ಆಡಳಿತದಾರ' ಪರಾ. [←ಪಾರ. ಹಿಂ. ಮರಾ. ದಾರ್]

ದಾರಂದ 'ದಾರವಂದ' ನೋ.

ದಾರಕ (ನಾ). ೧. ಬಾಲಕ; ಗಂಡುಮಗು; ಕುಮಾರ; ಹುಡುಗ; ಮಗ: ಸುಂದರ ದಾರ ದಾರಕೋದಾರ ವಿಮೋಹದೊಳ್ ತೊಡರ್ದು ದಾರುಣದುಃಖಮನೆಯ್ದುದಿರ್ಕುಮೇ (ಅಜಿಪು. ೨-೩೬); ಕಪಿಳನೆಂಬ ಧೂಮಕೇಶಂಗೆ ದಾರಕನಾದಂ ಕಡೆಯೊಳ್ (ಪಂಪಾಮಾ. ೬-೩೭); ದಾರಕನಂ ಘನತೇಜಸ್ಸಾರನನಾವೆಂದು ನಲ್ಮೆಯಿಂದೆತ್ತುವೆನೋ (ಪುಷ್ಪಪು. ೩-೯೩); ನೀರೆಯುರ್ಮುತ್ತಿನಕ್ಷತೆಯ ದಾರಕನ ಮೇಲೆ ತಳಿದು ಹರಸಿದ ರಾಪಾರವರ್ಷ ಬದುಕೆಂದು (ಕ್ಷಾನಪ. ೩-೧೫೫); ಆಲಯದಿ ದಾರಕರ ಸಂಬಂಧ ಬಹುಳಂ (ಪಂಚಾರಾ. ೨-೧೦-೫೦). ೨. ತರುಣ; ಯುವಕ: "ದಾರಕಃ, ತರುಣಃ, ಯುವಾ – ಈ ೩ ಜವ್ವನಿಗಂ" (ಹಲಾಯು. ೫೩-೩೪೯). [ಸಂ.]

ದಾರಕಮಲ್ಲ (ನಾ). ಬಾಲಕರಲ್ಲಿ ಗಟ್ಟಿಗ; ಬಲಿಷ್ಠನಾದ ಹುಡುಗ: ದಾರಕಮಲ್ಲನೆಲ್ಲಿದನಮಾನುಷಖೇಳನದೆಲ್ಲಿದಂ ವ್ರಜಾಂಭೋರುಹಮಿತ್ರನೆಲ್ಲಿದನನಂತಸಹಾಯನದೆಲ್ಲಿದಂ . . . ಎಲ್ಲಿದನಬ್ಜಲೋಚನಂ (ಜಗವಿ. ೩-೯೦).
[ದಾರಕ + ಮಲ್ಲ]

ದಾರಗಟ್ಟು (ನಾ). ದಾರದಿಂದ ಕಟ್ಟಿರುವಂತಹುದು: ದಡದಡನೆ ಹೋಗಿ, ನಂಜರಾಜಯ್ಯನ ಹಸ್ತಗಳಿಂದ ಆ ಪುಟಕಿಯನ್ನೆಳೆದೀಯಸಿ ಕೊಂಡು, ತನ್ನ ಕರವಾಳಿಂದ ಮುದ್ರೆಯನ್ನು ದಾರಗಟ್ಟನ್ನು ಗವಸಣಿಕೆಯನ್ನು ಅರಿದು ಬಿಸುಟ್ಟು (ಸುಂಶ್ರಶ. ೦೬-೬). [ದಾರ$_1$ + ಕಟ್ಟು$_2$]

ದಾರಗೊಂಡೆ (ನಾ). ನೂಲಿನಿಂದ ಮಾಡಿದ ಕುಚ್ಚು: (ಕ).
[ದಾರ$_1$ + ಗೊಂಡೆ (<ಕೊಂಡ್ಯ$_4$)]

ದಾರಣ (ನಾ). ೧. ಒಡೆಯುವಿಕೆ; ಹರಿಯುವಿಕೆ; ವಿಭಜಿಸುವಿಕೆ. ೨. ತೆರೆಯುವಿಕೆ; ಹೊರಗೆಡಹುವಿಕೆ. 'ಅವದಾರಣ' ಪರಾ. [ಸಂ.]

ದಾರಣೆ 'ಧಾರಣೆ$_2$' ನೋ.

ದಾರಣೆವಾಸಿ 'ಧಾರಣೆವಾಸಿ' ನೋ.

ದಾರದ (ನಾ). ಒಂದು ವಿಧವಾದ ವಿಷ; ಪಾದರಸ; ಇಂಗಲೀಕ; P ಕಾಕೋಲ, ಕಾಲಕೂಟ, ಹಲಾಹಲ, ಸೌರಾಷ್ಟ್ರಿಕ, ಶೌಕ್ಲಿಕೇಯ, ಬ್ರಹ್ಮಪುತ್ರ, ಪ್ರದೀಪನ, ದಾರದ ವಂತ್ತು ವತ್ಸನಾಭ ಎಂಬುವು ವಿಷಭೇದಗಳು: "ಬ್ರಹ್ಮಪುತ್ರಃ, ಶೌ(ಕ್ಲಿ)ಲ್ಕಿಕೇಯಃ, ದಾರದಃ . . . ತೀಕ್ಷ್ಣಃ, ವಿಷಂ – ಈ ೯ ವಿಷಂ" (ಹಲಾಯು. ೦೦೬-೨೪); "ದಾರದ – ನಂಜು, ವಿಷ" (ಗಂಗಾಮ. ೧೬೫). [ಸಂ.]

ದಾರಪರಿಗ್ರಹ (ನಾ). ಮದುವೆಯಾಗುವುದು: ನವಕುಮಾರನು ವೈಗರಾದಿಂದ ಪುನಃ ದಾರಪರಿಗ್ರಹ ಮಾಡಲಿಲ್ಲ (ಶಪಾಕಂ. ೩೪); ದಾರಪರಿಗ್ರಹಕ್ಕೆ ವಿಮುಖರಾದರೂ ತಮ್ಮನ ಮದುವೆಗಾಗಿ ಪ್ರಯಾಸಪಟ್ಟರಿ (ಭೀಷ್ಮಚ. ೩೬). [ದಾರ$_3$ + ಪರಿಗ್ರಹ]

ದಾರವ (ಗು). ಮರದ; ಮರದಿಂದ ಮಾಡಿದ. [ಸಂ.]

ದಾರವಂದ, ದರವಂದ, ದಾರಂದ (ನಾ). ೧. ಬಾಗಿಲ ಚೌಕಟ್ಟು; ಬಾಗಿಲುವಾಡ: ಅಗಲಕ್ಕಿರ್ಮಡಿ ನೀಳಮಾಗೆ ತರುಗಳ್ ಬೇಱೊಲ್ಲ ದೊಂದಾಗೆ ಮಾಡುಗೆ ನೇರ್ಪಟ್ಟೆರೆ ದಾರವಂದಮನದರ್ಕಾದೋಜೆಯಂ ಮಾಟ್ಕೆ ವಾಜಿಗಜಾರೂಢಮನನ್ಯಮಂ ನಿಜಗೃಹದ್ವಾರಾಂತರೋದ್ದೇಶಮಂ ಪುಗುವಾಗಲ್ (ಲೋಕೋಪ. ೩-೩೨); ಒಂಬತ್ತು ಬಾಗಿಲಿಗೆ ಕದವನಿಕ್ಕಿ ಒಂದು ಬಾಗಿಲ ಅಗುಳಿ ದಾರವಂದವನಿಕ್ಕಿ ಬಲಿಯಲು ತಿರುಗುವುದಕ್ಕೆ ತಾವು ಕಾಣದೆ (ಲಿಂಗವ. ೪. ೭೩-೭೫); ಮಣಿದಾರವಂದಮಂ ಪಿಡಿದಣಮಿಾಕ್ಷಿಸುತ್ತುಮೆಲ್ಲರ ಸುಮ್ಮನೆ ಯೆಮ್ಮಗ್ರಣಿಯನ್ನುಂ ದಾರನೆನುತ್ತೆಣಿಸುತ್ತೆಸೆದಿರ್ದಳ್ (ಉದ್ಭಟ. ೦೦-೫೫); ಸುಪುತ್ರ ಮಾಕಯ್ಯನು ಮಾಡಿಸಿದ ದೇವರ ಪೀಠ ಜಾಳಾಂಧರ ದಾರವಂದ (ಎಕ. XII, ಚಿಕ್ಕನಾ. ೨೫-೬; 1312 ?) ವಿಳಸಿತ ಮಹಾಮರಕತದ ದಾರವಂದಮುಂ ತೊಳಪ ವೈಡೂರ್ಯಗಳುಂ ನಾಡೆ ಕಂಗೊಳಿಸೆ ಮೆಱೆದುದು (ಸಿದ್ಧೇಪು. ೦-೩೦). ೨. ಸಾಗವಂದಿಗೆ: ಗೋಮೇಧಿಕದ ದಾರವಂದದಿಂ, ಪವಳದ ಪಟ್ಟಿಯಿಂ, ಮರಕತದೊಂದು ಕಳಸದಿಂ ತಾರಗೆವಟ್ಟೆ ಮುಟ್ಟಿ ನಿಗುರ್ದು ಸೈಪಿನಾಗರಂ ಬೋಲ್ . . . ಕಣ್ಗೆಡ್ಡಮಾಗಿ ರಂಜಿಕುಂ (ರಾಮಾಶ್ವ. ೫೪-೨೨); ಚಪ್ಪಲನ್ನು ಸೂರಿಗೆ ಸಿಕ್ಕಿಸಿ ಅಥವಾ ಬಾಗಿಲ ದಾರವಂದದ ಮೇಲೆ ಇರಿಸಬಾರದು (ಬಣ್ಣಮಾ. ೪೪). **ದರವಂದ**: ೧. ಕೊರುವರಿ ಯೆಪತ್ತು ಕಂಭ(ಂ)ಕ್ಕೆ ಎರಡು ದರವಂದಕ್ಕಂ ಕೊಟ್ಟ ಗದ್ಯಾಣ ಮೂವತ್ತು (ಸೌಇ. XV, ೫೫೬-೬; 1076). **ದಾರಂದ**: ೧. ಬಾಗಿಲಿನ ದಾರಂದಗಳು ಗಡಚು, ಅದರಲ್ಲಿ ಶಂಖ, ಚಕ್ರ, ಗದಾಪದ್ಮಗಳೂ, ಗಿಳಿ, ನವಿಲು, ಇತ್ಯಾದಿ ಬಡಗಿಯ ಕೆಲಾಕೌಶಲ್ಯಗಳೂ ಇವೆ (ಕೃಹಿಾ. ೦೯); ಬಾಗಿಲಿನ ದಾರಂದಕ್ಕೊರಗಿ ಕೆಲಸದಾಳು ಸೋನ್ಕಾ ನಿಂತಿದ್ದ (ಪಾತ್ಕಲ್ಯ. ೦೩); ಕೋಣೆಯ ಬಾಗಿಲಿನ ದಾರಂದಕ್ಕೊರಗಿ ಸುಮಿತ್ರೆ ನಿಂತಿದ್ದಳು (ಅಸುರ. ೨೫); ಮನೆ ಬಾಗಿಲಿನ ದಾರಂದ ಹಣೆಗೆ ಬಡಿದುದೂ ಉಂಟು (ಮರಮ. ೦೦೪).
[<ಸಂ. ದ್ವಾರಬಂಧ]

ದಾರವಟ್ಟ, ದ್ವಾರವಟ್ಟ (ನಾ). ೧. ಹೆಬ್ಬಾಗಿಲು; ಗೋಪುರ; ಪುರದ್ವಾರ: "ಗೋಪುರಮಾ ಪುರದ್ವಾರಮೆನೆ ದಾರವಟ್ಟ [ಪಾಕಾಂ. ದಾರವಟ]ಮಕ್ಕುಂ" (ಮಂಗರಾ. ೫೭-೪); ಪ್ರಣವ ಪಂಚಾಕ್ಷರಿಯಂಗುಳಿ ದಾರವಟ್ಟ[ಪಾಕಾಂ. ಗುಡಿಯ ದ್ವಾರವಾಟ, ದ್ವಾರವಟ್ಟ]ಮೊಪ್ಪುತ್ತಿರೆ (ಹನ್ನವ. ಕ. ೦೪೯-೩೪೦); ಮರದ ಕೊಂಬಿನೊಳ್ ಬರೆದು ಕಟ್ಟಿದ ಕಪ್ಪಡಮುಮಿರ್ದಪ್ಪುದೆಂದು ಪಿತೃವನಪಾಳಕಂ ಕಪಾಳಕುಂಡಳಂ ದಾರವಟ್ಟಕ್ಕೆ ಬಂದು (ಅರ್ಧನೇ. ೩-೪೦ ಸ); ವತ್ಸರೋವಕ್ಕೆ ಈಶ್ವರ – ಈಸರ . . . ದ್ವಾರಪಟ್ಟ – ದಾರವಟ್ಟ (ಶಮದ. ೨೮೦ ಪ್ರಯೋ); ವರುಣ ಸೂನು ಜಯಂತ ನಳಕೂಬರರು ಸಮಯವನೊಮ್ಮೆ ಕಾಣದೆ ವರುಷ ಪೋಲ್ಮೆಸುವರು ಸೌಧದ ದಾರವಟ್ಟದಲಿ (ಶುಷ್ಕಾಅ. ೮-೯); ಕಳಿದು ಹೊಕ್ಕರು ಹೊಳೆವ ವಜ್ರೋಪಲ ಕವಾಟದ ದಾರವಟ್ಟಂಗಳನು (ನಿಧಾಗ. ೩-೬-೭). ೨. ಹೊಸ್ತಿಲು: (ಕ). ೩. ಕೈಸಾಲೆ; ಮೊಗಸಾಲೆ: "ಪ್ರಘಾಣಃ, ಪ್ರಘಣಃ, ಅಳಿಂದಃ–ಈ ೩ ಹನ್ನೆರಡು ಕಂಬದ ಕಡೆಯ ದಾರವಟ್ಟದ ಪೆಸಶು" (ನಾಶಿರಾ. ೦೦೪); ಮೂಱು ತಟ್ಟೆಯ ನಡುವೆ ಒಂದು ಕಂಭವ ನೆಟ್ಟು ಎಂಬತ್ತುನಾಲ್ಕು ಲಕ್ಷ ದಾರವಟ್ಟವ ಕಟ್ಟಿ ಅದಱ ಮೇಲೆ ನಿಂದಾಡುತ್ತಿರಲಾಗಿ ನಡುವಣ ಕಂಭ ಮುಱಿದು ಬೀಳುತ್ತಿರಲಾಗಿ

(ಮೋಳಿಮಾ. ೨೫೭-೮೦೮). ದ್ವಾರವಟ್ಟ: ಮೇಲಿನ ಚನ್ನವ. ಕ.೧೪೯-೩೪೦ ಪ್ರಯೋಗದ ಪಾಠಾಂತರವನ್ನು ನೋಡಿ ; ಕನಕಮಯ ಚಿತ್ರಗೆಲಸದ ದ್ವಾರವಟ್ಟಮಂ ಮಿನುಗುತಿಹ ರತ್ನಕೀಲಿತ ಕಳಶದುಪ್ಪರಿಗೆ ಮನೆ ಮನೋಹರ ವಿಶಾಲಂಬಡೆದು ರಾಜಿಸಲು (ಗುರುಚಾ. ೮-೪೩) ; ಶಶಿವದನೆ ಯೋರ್ವಳೊಡಲಿತ್ತು ಜೊನ್ನಕೆ ದ್ವಾರವಟ್ಟದೊಳು ನಿಂದಿರ್ದಳು (ರಾಘಚ. ೭-೪೫) ; ದ್ವಾರವಟ್ಟದ ಮುಂದೆ ನಿಂತ ವರಪ್ರಭು ಸಿದ್ಧರಾಮರ ಬರವ ಕಂಡು (ಸಿದ್ಧಪು. ೨೮-೮೪) ; ಆ ಪುರದ ದ್ವಾರವಟ್ಟದ ಮುಂದೆ ಶಾಸನ ದೊಳು ಕಲ್ಯಾಣದ ಮಹಾತ್ಮೆಯನು . . . ಜರೆದಿಡಲು (ಕೂನ್ಯಸಂ. ೮೩-೧೭). [<ಸಂ. ದ್ವಾರವಟ್ಟ./ಮರಾ. ದಾರವಟಾ]

ದಾರವಟ್ಟಗ (ನಾ). ಬಾಗಿಲನ್ನು ಕಾಯುವವನು ; ದ್ವಾರಪಾಲಕ : ಪಂಡಿತೆ ವಟ್ಟೈಸಿ ಪುಗುವುದುಂ ದಾರವಟ್ಟಗಂ ದಟ್ಟಿಸಿ ಕೊರಳಂ ಪಿಡಿದು ನೂಂಕೆ (ಪುಷ್ಯಾಸ್ರ. ೫-೨೮ ವ). [ದಾರವಟ್ಟ + – ಗ$_2$]

ದಾರವಟ್ಟಲು 'ದಾರೆವಟ್ಟಲ್' ನೋ.

ದಾರವಾಜ (ನಾ). ಬಾಗಿಲು ; ದ್ವಾರ : ಎಲುವಿನ ತೊಲೆಗಳು . . . ಹುಳುವಿನ ಡೋಣಿಗಳು ಜಂತಿನ ಬಣಬೆಗಳು ಇಂತಪ್ಪ ಗೃಹಕ್ಕೆ ಎಂಟು ರವಕ್ಕಿಗಳು ಬಾಯಿ ಎಂಬುದೇ ಒಂದು ದೊಡ್ಡ ದಾರವಾಜವು (ವಚಶಾ. I, ೨೫೧-೨೮). [←ಪಾರ. ದರ್‌ವಾಜಹ್ ; ಹಿಂ. ಮರಾ. ದರ್‌ವಾಜಾ]

ದಾರಸಂಗ್ರಹ (ನಾ).=ದಾರಪರಿಗ್ರಹ : ಅಂತಾಗಿ ದಾರಸಂಗ್ರಹ ಪರ್ಣ ಶಾಲೆಗಳನಿಂತೊಲ್ಲದಚಿರಕಾಲದೊಳಳಿವ ಕಾಯಮಿದಕೆಂತಿರ್ದೊಡೇನೆಂದು ತಲೆಗೆ ತಱಗೆಲೆವಿಡಿದುತಾಂ ಪೊತ್ತುಗಳೆವೆನು (ಜೈಮಿಭಾ. ೩೨-೩೦).

[ದಾರ$_3$ + ಸಂಗ್ರಹ]

ದಾರಾಢ್ಯ (ನಾ). ಗಡುಸಂತನ; ಗಟ್ಟಿತನ: ತನ್ನ ಅಣ್ಣನಿಗಿರುವ ದಾರಾಢ್ಯ ದಲ್ಲಿ ಅರ್ಧ ಪಾಲಷ್ಟೂ ಇವನಿಗೆ ಇಲ್ಲ (ರೂಢಿ). [<ಸಂ. ದಾರ್ಢ್ಯ]

ದಾರಿ (ನಾ). ೧. ಹಾದಿ ; ಬಟ್ಟೆ; ಮಾರ್ಗ: ನರಕದ ದಾರಿ ಮಹಾನಿಷ್ಠುರ ದುಃಖದ ಬಿತ್ತು ಪುಣ್ಯದ ಕ್ಷಯಮಳಿಪಿಂಗಿರಲೆಡೆ ಕೊಲೆಯ ತವರ್ಮನೆ (ಧರ್ಮಾಮೃ. ೧೨-೨೩೩ ಅಡಿಟಿ); ಅನೆಯೂ ಆ ದಾರಿಯಲ್ಲಿ ಹೋಯಿತ್ತೆಂದಡೆ ಆಡೂ ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ (ಬಸವ. ೩೨೮) ; ಹೋಗದ ಊರಿನ ಬಾರದ ದಾರಿಯ ಕಂಡು ಸುಖಿಯಾದೆನಯ್ಯ (ಅದವ. ೪೧-೧೦೬); ದಾರಿ ಮೃತ್ಯುವ ನುಂಗಿ ನಗುತ್ತಿದ್ದಿತ್ತು (ಅವಚಂ. ೨೬-೧೦೧) ; ದಾರಿ ಯೊಳಿಡುಕುಱೊಳೋಣಿಯೊಳಾರವೆಗಳ ತಳದೊಳಂಗಡಿಗಳೊಳ್ . . . ಬೇರೂಱಿತು ಜಾರರನುಭವಂ ಕಳ್ತಲೆಯೊಳ್ (ಗಿರಿಕ. ೪-೮೩) ; ಆ ಬ್ರಹ್ಮ ಪುರಿಯ ಪಡುವಲು ದಾರಿಯಿಂ (ಎಇ. XIX, ೨೫-೫೩ ; 1245); ಸಾರತರ ಸುಕೃತವನು ಸಂಚಿಸಿ ಧೀರರೈದುವ ಸತ್ಯಲೋಕದ ದಾರಿಯೆಂಬಂದದಲಿ ಗಂಗೆಯ ಧಾರೆ ಮೆಱೆದಿಹುದು (ಕುಮಾಅ. ೭-೩೩) ; ದಾರಿ ಯಾವುದಯ್ಯ ವೈಕುಂಠಕ್ಕೆ ಹಾದಿ ತೋಱಿಸಯ್ಯ (ಪುರಂದ. ೨-೧೩೭ ಪಲ್ಲವಿ) ; ಊರಿಂಗೆ ದಾರಿಯನು ಯಾರು ತೋಱಿದರೇನು (ಸರ್ವಜ್ಞ. ೩೮); ಕನ್ನಡವೇ ತಾಯಿ ಕನ್ನಡವೇ ತಂದೆ ಕನ್ನಡವೇ ದಾರಿ ಮುಂದೆ (ಇಂಜಾಪ. ೮೦-೮೬) ; ಬಂದ ದಾರಿಗೆ ಸುಂಕವಿಲ್ಲ (ಗಾಜೆ). ೨. ರೀತಿ; ಕ್ರಮ; ಉಪಾಯ: ಹಾಗಾದರೆ ಈ ಪಾಶದಿಂದ ಮುಕ್ತವಾಗುವ ದಾರಿಯಿಲ್ಲವೇ ? (ಧರ್ಮಸಾ. ೧೩೨). ೩. ನಡತೆ ; ನೀತಿ; ಶೀಲ ; ಆಚಾರ : ಕೆಟ್ಟ ಸಹವಾಸದಿಂದ ಅವನು ದಾರಿಯನ್ನು ತಪ್ಪಿದ (ರೂಢಿ); ಆ ಹುಡುಗನ ದಾರಿಯೇ ಸರಿಯಿಲ್ಲ (ರೂಢಿ). 'ದಾರಿದಪ್ಪು', 'ದಾರಿಬಿಡು' ಪರಾ. ೪. (ಆಲಂ) ಬರುವಿಕೆಯ ಅಥವಾ ಆಗಮನದ ಸಮಯ. 'ದಾರಿಕಾಯು' ಪರಾ. ೫. (?) : ಕ್ಷೀರಾಬ್ಧಿಯ ನೀರಲ್ಲದೆ ಧೀರನ ಮಜ್ಜನಕೆ ಪೆಱವು ನೀರ್ ತಗವೆಂದಾ ವಾರಾಶಿವರಂ ಸುರಜನ ದಾರಿ ಮನೋಹಾರಿ ನೀಳ್ದುವೆರಡುಂ ಕೆಲದೊಳ್ (ಆದಿಪು. ೭-೮೨).

ದಾರಿ ಗುಂಟ, ದಾರಿಯ ಗುಂಟ = ಹಾದಿಯುದ್ದಕ್ಕೂ : ದಾರಿಗುಂಟ ನಡೆಯುವುದು ನಿನ್ನ ಕೆಲಸವಲ್ಲವೇ ? (ಪರಪ. ೨೮) ; ದಾರಿಯ ಗುಂಟ ದೀಪವಾಗದೇಕು (ಅಪನಾ. ೭). ದಾರಿಗೆ ತರು = ಒಳ್ಳೆಯ ನಡತೆಯನ್ನು ಕಲಿಸು ; ಪಳಗಿಸು : ಕೆಡುತ್ತಿರುವವನನ್ನು ದಾರಿಗೆ ತರಬೇಕಾಗಿದೆ (ರೂಢಿ). ದಾರಿಗೆ ಬರು = ಸರಿಯಾದ ರೀತಿಯನ್ನು ಅನುಸರಿಸು : ಆ ಮೂರ್ಖ ದಾರಿಗೆ ಬರಲಿಲ್ಲ (ವಚಭಾ. ೨೬೨). ದಾರಿಗೆ ಹಚ್ಚು = ವ್ಯವಸ್ಥೆಯನ್ನುಂಟು ಮಾಡು ; ಏರ್ಪಾಟುಮಾಡು : ನಾನವನಿಗೆ ನೀರು ಕುಡಿಯುವ ಪಾತ್ರೆ, ಒಂದಿಷ್ಟು ಫರಾಳ, ಹಾಸಿಗೆ, ಹೊದಿಕೆ ಕೊಟ್ಟು ದಾರಿಗೆ ಹಚ್ಚಿದೆ (ಸ್ಮೃತಿಚಿ. ೨೬೪). ದಾರಿ ತಪ್ಪಿಸು = ಮಾರ್ಗ ತಪ್ಪುವಂತೆ ಮಾಡು ; ಕೆಟ್ಟ ದಾರಿ ಹಿಡಿಯುವಂತೆ ಮಾಡು: ಅವನಿಗೆ ದಾರಿ ತಪ್ಪಿಸುವಂತಹ ಸ್ನೇಹಿತರೇ ಹೆಚ್ಚು ಮಂದಿ (ರೂಢಿ). ದಾರಿಯ ತೆಗೆ = ಹಾದಿಯನ್ನು ಮಾಡಿಕೊಳ್ಳು ; ಮಾರ್ಗವನ್ನು ತಿಳಿ : ಬಗಿದು ಹೊಕ್ಕರು ಮೆಳೆಗಳನು ಮಿಂಚುಗಳ ಕಂಬೆಳಗಿನಲಿ ದಾರಿಯ ತೆಗೆತೆಗೆದು ಸಾರಿದರು (ಕುಮಾಅ. ೯-೨೪). ದಾರಿಯ ದೀಪ = ಹಾದಿಯ ಬೆಳಕು ; ಮಾರ್ಗದರ್ಶನವನ್ನುಂಟುಮಾಡುವ ಪ್ರಭೆ : ಅವರು ದಾರಿಯ ದೀಪವಾದರು ಬಾಳಿಗೆ (ಇಂಜಾಪ. ೩-೫).

[ದೇ.॥ ತಮಿ. ಅತರ್, ತಾರಿ, ತಾರೈ; ತುಳು. ತೆಲು. ದಾರಿ]

ದಾರಿಕ (ನಾ). ಹಾದಿಯಲ್ಲಿ ಹೋಗುವವನು; "ದಾರಿಗ, ದಾರಿಹೋಕ" (ಜಾನಕೋ. ೪). [ದಾರಿ + – ಕ$_2$]

ದಾರಿಕಟ್ಟು (ಕ್ರಿ). ಹಾದಿಗೆ ಅಡ್ಡಬರು; ಅಡ್ಡಗಟ್ಟು; ರಸ್ತೆಯಲ್ಲಿ ಬಂದು ತರುಬು : ಹಠಾತ್ತಾಗಿ ಕಳ್ಳರು ಬಂದು ದಾರಿಕಟ್ಟಿ ಮೇಲೆ ಬಿದ್ದು . . . ಕುಳಿತಿದ್ದ ಸುಂದರಾಂಗಿಯನ್ನು ಹೊರಕ್ಕೆ ಎಳೆದರು (ಭಾರವೀ. ೨).

[ದಾರಿ + ಕಟ್ಟು$_1$]

ದಾರಿಕಾಯು (ಕ್ರಿ). (ಆಲಂ) (ಯಾವುದಾದರೂ ವಸ್ತು ಅಥವಾ ಯಾರಾದರೊಬ್ಬರ ಬರವನ್ನು) ಎದುರುನೋಡು,–ನಿರೀಕ್ಷಿಸು ; ಹಾದಿನೋಡು : ಎತ್ತಿನ ಬಂಡಿಯಿಳಿದು, ಬಸ್ಸಿನ ದಾರಿಕಾಯ್ದು, ಕಾರಿನಲ್ಲಿ ತೂರಿ, ಹಡಗ ಬಿಟ್ಟು ವಿಮಾನದಲಿ ಹಾರಿ ಗೋಲಗಳ ಮೇಲೆ ದಾಳಿಮಾಡಿದ್ದೇವೆ (ನೆಲಮು. ೩೦-೨೮); ಅವರೆಲ್ಲ ಗಪ್‌ಚಿಪ್ ಉಪಹಾರ ಮಾಡಿ ಬೀಗರ ದಾರಿ ಕಾಯುತ್ತಾ ಕುಳಿತರು (ಸ್ಮೃತಿಚಿ. ೨೫).

[ದಾರಿ + ಕಾಯು$_1$ (<ಕಾ$_1$)]

ದಾರಿಕಾರ 'ದಾರಿಕಾಱ' ನೋ.

ದಾರಿಕಾಱ, ದಾರಿಕಾರ, ದಾರಿಗಾರ (ನಾ). ಹಾದಿಯಲ್ಲಿ ಹೋಗುವ ವನು ; ಪಯಣಿಗ ; ಪಥಿಕ : ಊರಿಗೆಯ್ದಿದ ಮಾರಿ ಬೀರಸೆಟ್ಟಿಯ ಹೊಯ್ದ ದಾರಿಕಾಱರ ಗಾದೆಯಂತೆ (ಭರಜ. ೪೮-೯೪). ದಾರಿಕಾರ : ದಾರಿಕಾರರ ಹಾಗೆ, ನೀರಡಿಸಿ ಬೇಸಿಗೆಯ ನಡುಹಗಲಿನಲ್ಲಿ ನಡೆದು (ಸಪೀಗೀ. ೭೦-೩) ; ನೀರಡಿಸಿ ಬಂದನವನಾ ಜಗದ ದಾರಿಕಾರ (ನೆಲಮು. ೪೩-೧೭) ; ಮರೆಯದಿರು ರಾಜಕುವರ ಪಥದಿ ನೀನೊಬ್ಬನೇ ದಾರಿಕಾರ (ಸ್ವದರ್ಶಿ. ೨೯); ಸಂದರ್ಭ ಸಿಕ್ಕಿದಾಗಲೆಲ್ಲ ದಾರಿಕಾರರನ್ನು ಹಿಡಿದು ಕೊಳ್ಳೆ ಹೊಡೆಯುತ್ತ ಜೀವನ ಸಾಗಿಸಿದ್ದರು. (ಅಶ್ರಮ. ೫೦). ದಾರಿಗಾರ : (ಕಿ).

[ದಾರಿ + – ಕಾಱ]

ದಾರಿಕೆ (ನಾ). ೧. ಕನ್ಯೆ; ಹೆಣ್ಣುಮಗಳು; ಹುಡುಗಿ: ನೀರ ಬೊಬ್ಬುಳಿಕೆ ಕಾಮನ ಬಿಲ್ಲು ಸಂಜೆಯೋಳ್ತೋಱುವ ಕೆಂಪು ಪುಲ್ವನಿಯು ದಾರಿಸಂಗಡ ದಾರಿಕೆಯರ ಚಿತ್ತದವೊಲು ಆರಯ್ಯಲೆಲ್ಲವಧ್ರುವವು (ಶಾಂತೀಚ. ೮-೮೯). ೨. ಸೂಳೆ ; ವೇಶ್ಯೆ ; ವಾರಾಂಗನೆ : ಘನತರಭೋಗಮಂ ಗತಿಯ ವಕ್ರತೆಯಂ ತೆಱಪಾಗೆ ಸಾರ್ದು ಮೆಲ್ಲನೆ ಪುಗುವಂದಮಂ ನೆಱೆಯೆ ಭಾವಿಸಿ ಬಂದ ಭುಜಂಗನಂ ಭುಜಂಗನೆ ದಿಟಮೆಂದು ದಾರಿಕೆ ಮಯೂರಿಕೆ ಯಂದದಿನೇಂ ಕನಲ್ದಳೋ (ಚಂದ್ರಪು. ೮-೫೮). [ಸಂ. ದಾರಿಕಾ]

ದಾರಿಕೆಳೆ (ನಾ). ೧. ದಾರಿಯಂ ಸ್ನೇಹ; ಹಾದಿಯಂ ಗೆಳೆತನ. ೨. (ಆಲಂ) ತಾತ್ಕಾಲಿಕ ಸ್ನೇಹ ; ನಶ್ವರವಾದ ಸಂಬಂಧ : ಮೀರೆ ಮೋಹವನು ಸಂಸಾರದಿಂ ಭಯವೇನು ದಾರಿಕೆಳೆಯದು ನಿನಗೆ ? (ಮಂಕುಶ. ೬೧೪).
[ದಾರಿ + ಕೆಳೆ$_2$]

ದಾರಿಗ (ನಾ). = ದಾರಿಕಾಱ : ತೀರೆಲು ತೃಷೆ ನೀರು ತೀರಲು ಸಂತಾಪ ತೀರಲವರ ನೋಳ್ಪಾಸೆ ತೀರದೆ ನಿಂದಿರುತಿರೆ ಭೂರಿದಾರಿಗರಾ ವಾರಿಮಂಡಪ ಗಳೊಳು (ಅಂಜದ. ೨-೧೦೭); ನೀರಡಿಸಿ ಕಾಲ್ಗಳಱತವವಾರೆಯೆ ಜಳಮಿಲ್ಲ ಕೆಲವು ಕೆಱತೊಱಗಳೊಳಂ ನೀರೊಳ್ತಿಳಿಗೊಳ ಕಾದುದು ದಾರಿಗರುಂ ಬಿಡದಂತುಱ ಬೀಳ್ವರ್ ನೆಳಲೊಳ್ (ಹಮ್ಮೀರ. ೪-೬೭) ; ಮಿಗೆ ಕುವರಗೆ ಶಶಿಪ್ರಭೆಯ ಚೆಲ್ವಿಕೆಯ ದಾರಿಗ ವೇಳ್ದನೆಂದನಾ ಮುನಿಪ (ಶಂಪ್ರಸಾಂ. ೭); ದಾರಿಗರೂರುಗರ್ನಾಡುಗರಿಹ ಪರಿವಾರ ವಿದ್ವಾಂಸರು ನೃಪರು ನೀರುಗಣ್ಣೊಳು ಹಗಲಿರುಳು ಗೋಳಿಟ್ಟರು (ಭರತ. ೭೮-೧೦೩) ; ರಸ ದಾಳಿಗರ್ವುಗಳ ಸೋಗೆಗಳ ಪಸುರುವೊಗರಾಗಸಕೆ ಪರ್ವುತಿಹುದಾ ನಾಡೊಳೆಲ್ಲಿಯುಂ ದಾರಿಗರ ಕಣ್ಗೆ ಕೌತುಕಮಾಗಲು (ಚೈಮಿಭಾ. ೩-೫).
[ದಾರಿ + – ಗ$_2$]

ದಾರಿಗಳ್ಳ (ನಾ). ಮಾರ್ಗದಲ್ಲಿ ದರೋಡೆ ಮಾಡುವ ಕಳ್ಳ; ಹಾದಿಗಳ್ಳ: ದಾರಿಗಳ್ಳರ ಕೈಗೆ ಸಿಕ್ಕಿ ಅವರು ಹಣವನ್ನೆಲ್ಲಾ ಕಳೆದುಕೊಂಡಿದ್ದರು (ರೂಢಿ). [ದಾರಿ + ಕಳ್ಳ$_1$]

ದಾರಿಗಾಣ್ (ಕ್ರಿ). ೧. ದಾರಿಯಂನ್ನು ತಿಳಿ. ೨. ಉಪಾಯವನ್ನು ತಿಳಿ : ಅಕ್ಕ ಮಾತ್ರ ವಿಹ್ವಲಳಾಗಿ ದಾರಿಗಾಣದೆ ಒಳಗೆ ಓಡಿಬಂದು (ಕಪುನೆ. ೨೦೦).
[ದಾರಿ + ಕಾಣ್]

ದಾರಿಗಾಣಿಸು (ಕ್ರಿ). ಮಾರ್ಗ ತೋರಿಸು; ದಾರಿತೋರಂ : ಎದೆಗೊಂಡು ದಾರಿಗಾಣಿಸುವ ಈ ವಾಗ್ಜ್ಯೋತಿ (ನಾಡೋಜ. ೩೭). [ದಾರಿ + ಕಾಣಿಸು]

ದಾರಿಗಾರ 'ದಾರಿಕಾಱ' ನೋ.

ದಾರಿಗುಟಿಗ (ನಾ). ಹಾದಿಯಂನ್ನು ಸವೆಸುವವನಂ ; ದಾರಿಹೋಕ ; ಪಯಣಿಗ । ದಾರಿಗುಟಿಗಂ ಪಾರಿಪಂಥಿಕಃ (ಶಬ್ದಾನು. ೫೪೮ ಪ್ಯಾಖ್ಯಾ).
[ದಾರಿ + – ಕುಟಿಗ$_1$]

ದಾರಿಗೆಡು (ಕ್ರಿ). ಮಾರ್ಗತಪ್ಪು ; ದಾರಿ ತಿಳಿಯದಾಗು : ಬಿರುದರ್ ಕರಿಗಿಕ್ಕಿದ ಕಳ್ಳನಂತೆ ಜರಿಯೆ ಬೀರರ್ ದಾರಿಗೆಟ್ಟರಂತೆ ಬೆದಱ (ಧರ್ಮಾಮ್ಯ. ೨-೬೯). [ದಾರಿ + ಕೆಡು$_1$]

ದಾರಿಗೊಳ್, ದಾರಿಗೊಳ್ಳು (ಕ್ರಿ). ಹಾದಿಹಿಡಿ ; ಮಾರ್ಗಹಿಡಿ : ದಾರಿಗೊಂಡು ಹೋಹವರೆಲ್ಲ ನೀವು ಕೇಳಿರೇ (ಅವದಂ. ೧೦೫-೪೭೯) ; ವೀರ ಕೋಪಾಟೋಪದಿಂ ಮದವಾರಣಂ ಬರೆ ಕಾಣುತಂ ಬಾಹೂರ ಬೊಮ್ಮಯ್ಯಂ ಬಗೆಯದಂಜದೆ ತೊಲಗದಿಂತು ದಾರಿಗೊಂಡೆಯ್ತರಲ ದುಗ್ರಾಕಾರದಿಂ ಮೇಲ್ಪರಿಯೆ (ಬಸಪು. ೨೨-೩೦). **ದಾರಿಗೊಳ್ಳು** : ಶಾಪವ ನಿತ್ತು ದೂರ್ವಾಸ ತನ್ನ ದಾರಿಗೊಂಡು ತಾನು ಹೋದಲ್ಲಿ (ಸಳಪ್ಯ. ೮).
[ದಾರಿ + ಕೊಳ್$_1$]

ದಾರಿಗೊಳ್ಳು 'ದಾರಿಗೊಳ್' ನೋ.

ದಾರಿಡು (ಕ್ರಿ). ಸುರಿ ; ಹರಿ ; ಪ್ರವಹಿಸು ; ಧಾರಾಕಾರವಾಗಿ ಹರಿ : ಚೂತಫಲದಾಸಾರ ದಾಡಿಮಕಡರೆ ತದ್ರಸ ಕದಳಿಗಳ ಮೇಲೆ ದಾರಿಡಲು (ಜೀವಂಚ. ೨-೮) ; ಶೈಲದೆಡಬಲದೊಱತೆಯೆನೆ ಸುಕಪೋಲದಲಿ ದಾರಿಡುವ ಮದಜಲ ಧಾರೆಗಳ . . . ನೋಡಿದರು (ಕುಪ್ಯಾಉ. ೧೦-೧೯).
[ದಾರೆ$_2$ + ಇಡು$_1$]

ದಾರಿತ (ಗಂ). ಒಡೆದ ; ಭೇದಿಸಿದ ; ಸೀಳಿದ ; ಕತ್ತರಿಸಿದ ; ಹರಿದ : ದುಃಖಕ್ರಕಚದಾರಿತ ದಾರುದಾರುಣಕರುಣಾಕೃಷ್ಟಬಾಷ್ಪಜಲಲುಳಿತ ಲೋಚನಂ ಬಂದು ನೆಗಪೆ (ಲೀಲಾವ. ೧೪-೬೯ ಪ). [ಸಂ.]

ದಾರಿತಪ್ಪು 'ದಾರಿದಪ್ಪು' ನೋ.

ದಾರಿತುಳಿ (ಕ್ರಿ). ಹಾದಿಯಲ್ಲಿ ನಡೆದು ಸಾಗು.–ಮುಂದೆ ಹೋಗು ; ನಡೆ: ಬಿಸಿಲಿನಲ್ಲಿ ದಾರಿತುಳಿಯುವಾಗ ಅನೇಕ ವಿಧವಾದ ಆಲೋಚನೆಗಳು, ನೆನಪುಗಳು ಅವಳ ಮನಸ್ಸಿನಲ್ಲಿ ಸುಳಿಯುತ್ತಿದ್ದುವು (ದೂರಸ. ೯೮).
[ದಾರಿ + ತುಳಿ$_1$ (<ತುಱಿ$_1$)]

ದಾರಿತೆಗೆ 'ದಾರಿದೆಗೆ' ನೋ.

ದಾರಿತೋರ್ 'ದಾರಿದೋಱು' ನೋ.

ದಾರಿತೋರಿಕೆ (ನಾ). ಮಾರ್ಗದರ್ಶನ : ನಾಗವರ್ಮನು ಕಾಣದ, ೮೦೦ ವರ್ಷಗಳ ಹೊಸ ಹಾಡುಕಟ್ಟುಗಳ ದಾರಿತೋರಿಕೆಯ ಮೇಲೂ, ಇಂಗ್ಲಿಷ್ ಛಂದಸ್ಸಿನ ಸ್ವಾತಂತ್ರ್ಯ ವೈವಿಧ್ಯ ಸೌಂದರ್ಯಗಳ ಪ್ರೇರಣೆಯ ಮೇಲೂ . . . ಸರಳರಗಳೆಯನ್ನೂ ಪ್ರಯೋಗಿಸುತ್ತಾ ಇದ್ದಾರೆ (ಕೈಬಿಡಿ. ೧೧೮).
[ದಾರಿತೋರು (<ದಾರಿದೋಱು) + – ಇಕೆ]

ದಾರಿತೋರು 'ದಾರಿದೋಱು' ನೋ.

ದಾರಿತೋಱು 'ದಾರಿದೋಱು' ನೋ.

ದಾರಿದಪ್ಪು, ದಾರಿತಪ್ಪು (ಕ್ರಿ). ೧. ಮಾರ್ಗವನ್ನು ಕಳೆದುಕೊಳ್ಳು ; ಹಾದಿತಪ್ಪು : ದಾರಿದ[ಪಾಠಾಂ. ತ]ಪ್ಪಿದೆವಱಸಿ ಧಾಜದ್ವಾರವನು ಹೇಳೌ ಸ್ವಯಂಪ್ರಭೆ ಧಾರುಣೀಶನ ಹಗೆಯ ನಗರಕೆ ಹೋಗಬೇಕು (ತೊರಣಾ. ೪-೧೦-೨೫); ದಾರಿದಪ್ಪಿದವರಿಗೆ ವಿಭ್ರಮೆ ತೋರಿದಂತೆ (ಪದಕಾ. ೨೪-೧೨). ೨. ಧರ್ಮಮಾರ್ಗವನ್ನು ಬಿಡು; ಅನ್ಯಾಯಕ್ಕೆ ಬೀಳು ; ಕೆಟ್ಟ ದಾರಿ ಹಿಡಿ : ದಾರಿದಪ್ಪಿದ ಮನುಷ್ಯನನ್ನು ಬಹಳ ಚಾತುರ್ಯದಿಂದ ದಾರಿಗೆ ತಂದುಕೊಂಡಳು (ರೂಢಿ). **ದಾರಿತಪ್ಪು** : ೧. ನನ್ನ ಭಾಗ್ಯ ದೇವತೆಯು ದಾರಿತಪ್ಪಿ ಬಂದಳೋ ಹೇಗೊ (ಜಿದೇವ. ೧೬೯) ; ಬೋಳನು ದಾರಿತಪ್ಪಿ ನಡೆದಿದ್ದನು (ಕಾಲೂರ. ಕಥಾಸಾರ ೧೦).
[ದಾರಿ + ತಪ್ಪು$_1$]

ದಾರಿದೀಪ (ನಾ). ೧. ಬೀದಿಗಳಲ್ಲಿ ಸಾಲಾಗಿ ಹಾಕಿರುವ (ವಿದ್ಯುಚ್ಛಕ್ತಿಯ) ದೀಪ : ಆ ಸಣ್ಣ ಹಳ್ಳಿಯಲ್ಲಿ ಇತ್ತೀಚೆಗೆ ದಾರಿ ದೀಪ ಗಳನ್ನು ಹಾಕಿದ್ದಾರೆ (ರೂಢಿ). ೨. (ಆಲಂ) ಬದುಕಿನ ಮಾರ್ಗದರ್ಶನ ಮಾಡುವ ಬೆಳಕು.–ದಾರಿಯಂನ್ನು ತೋರಿಸುವ ಬೆಳಕು: ಈ ವಿಚಾರ ಓಸಿಯನಸ್‌ಗೆ ದಾರಿದೀಪವಾಗಿ ಕಂಡಿತು (ಬದ್ಧಪ್ರ. XVI ಪೀಠಿಕೆ) ; 'ಗೀತಾಂಜಲಿ' ಯಂಥ ಅಮೂಲ್ಯ ಗ್ರಂಥಗಳು ನಮ್ಮ ದಾರಿದೀಪವಾಗ ಬೇಕು (ಧರ್ಮಸಾ. ೯೫). [ದಾರಿ + ದೀಪ$_2$]

ದಾರಿದೆಗೆ, ದಾರಿತೆಗೆ (ಕ್ರಿ). ೧. ದಾರಿಹಿಡಿ ; ಹೊರಡು : ಆ ಗಜದಿಂ ಪಲರುಂ ಸೀಱಿಸಿ ವಿಜಯೋದ್ಯೋಗಕ್ಕೆ ದಾರಿದೆಗೆದನಲಂಪಿಂ (ದಶಕು. ೭-೧೦೪) ; ಆ ಪರ್ವತಾಗ್ರದ ಚಾರಣರು ಚದುರೆಯರು ಸಿದ್ಧರು ಮುಗ್ಧೆ ಯರು ಕಪಿಯ ಭೈರವಾಡಂಬರಕೆ ಬೆದಱಿದು ದಾರಿದೆಗೆದರು ಸುರಪುರಕೆ (ತೊರಣಾ. ೪-೧೨-೨೧). **ದಾರಿತೆಗೆ** : ೨. ಹಾದಿಯಂನ್ನು ಕಂಡುಹಿಡಿ ; ಮಾರ್ಗವನ್ನು ಕಲ್ಪಿಸು : ಕಾದಿರಮಿಯಾ ಗಿರಿಧರನ ಕಿವಿಯಲ್ಲಿ ಮೆಲ್ಲನೆ ಹೇಳಿದ : ಮಹಾರಾಜ, ಮನೋಹರಗೆ ಏನಾರ ದಾರೀತೆಗೀರಿ (ಪ್ರೇಮಾಶ್ರ. ೧೩). [ದಾರಿ + ತೆಗೆ$_1$]

ದಾರಿದೋಂಟ (ನಾ). ಮಾರ್ಗದಲ್ಲಿರುವ ತೋಟ : ತರತರದ ಬಳ್ಳಿ ಗಿಡುಮರಗಳಿಂದಿಡಿದ ದಾರಿದೋಂಟಂಗಳಂ ಸೋವುತ್ತೆ ಕಣ್ ಕಿವಿಗಳೆಚ್ಚರಿ ಕೆಯಿಂ . . . ಪ್ರವೇಶಿಸಿದನಯ್ ಶಿಖರತ್ರಯವ್ಯಾಪಿಯಾ ದಶಗ್ರೀವ ಪುರದ ಪಾಪದ ಸಾಂದ್ರಕೇಂದ್ರಮಂ (ಶ್ರೀರಾಮಾ. ೪೪೭-೫೦).
[ದಾರಿ + ತೋಂಟ]

ದಾರಿದೋಱು, ದಾರಿತೋರ್, ದಾರಿತೋರು, ದಾರಿತೋಱು (ಕ್ರಿ). ಹಾದಿತೋರು ; ಮಾರ್ಗ ಕಾಣಿಸು; ಉಪಾಯ ತಿಳಿಸು; ಗತಿ

ಭೃಂಗಿಯು ವೀರಭದ್ರಾದಿ ಪ್ರಮಥರೋಲೈಷ ಸಮಯದೊಳು (ಬಸಪು. ೧-೫೨). ೨. ಕೃಷ್ಣನ ಸಾರಥಿ: ನಾಗಾರಿಕೇತನಂ ದಾರುಕಾನ್ವಿತಂ ವರೂಥಸ್ಥನಾಗಿ ಕುಶಸ್ಥಳಕ್ಕೆ ತಳರ್ದಂ (ಜಗವಿ. ೯-೫೩ ವ); ಘನ ಬಳಾಹಕ ಸೈನ್ಯ ಸುಗ್ರೀವನನು ನಿರ್ಮಳ ಮೇಘಪುಷ್ಪನನನುವಿನಲಿ ಹೂಡಿದನು ದಾರುಕ ಹೇಮಮಯ ರಥವ (ಕುಮ್ಯಾಉ. ೭-೬); ಪಾಥೋರುಹಾಕ್ಷನಂ ದಾರುಕಂನಿಟ್ಟಿಸಿ ವರೂಥಮಂ ತಿರುಗಿಸಿದನು (ಜೈಮಿಭಾ. ೭-೫೬). ೩. ದೇವದಾರಂ ಮರ. ೪. ಮರ; ಕಟ್ಟಿಗೆ; ಕಾಷ್ಠ. 'ದಾರುಕಾಸನ' ಪರಾ. ೫. [ವೀಶೈ] ಪಂಚಾಚಾರ್ಯರಲ್ಲಿ ಒಬ್ಬ; ಪಂಚಪೀಠಗಳಲ್ಲಿ ಒಂದಾದ ಉಜ್ಜಯಿನಿ ಪೀಠದ ಸ್ಥಾಪಕ. 'ದಾರುಕಪೀಠ' ಪರಾ.

[ಸಂ.]

ದಾರುಕಪೀಠ (ನಾ). [ವೀಶೈ] ಪಂಚಪೀಠಗಳಲ್ಲಿ ಒಂದು; ಉಜ್ಜಯಿನಿಯ ಪೀಠ: ಉಜ್ಜಯಿನಿಯಲ್ಲಿ ದಾರುಕಪೀಠವಿದೆ; ಬಾಳೆ ಹೊನ್ನೂರಿನಲ್ಲಿ ರೇಣುಕಪೀಠವಿದೆ (ರೂಢಿ).

[ದಾರುಕ + ಪೀಠ]

ದಾರುಕರ್ಮ (ನಾ). ಮರದ ಕೆಲಸ; ಬಡಗಿಯ ಉದ್ಯೋಗ: ದಾರುಕರ್ಮ ವಾಸ್ತುವಿದ್ಯಾಪೂರ್ವಯಂತ್ರ ಪ್ರಯೋಗ ವಿ[ಷಾ]ಪಹರಣ ಸರಭೇದ ರತಿತಂತ್ರೇಂದ್ರ ಜಾಲ ವಿವಿಧ ವಿದ್ಯೆಗಳೊಳಂ . . . ಜಾಣ (?) [ನು]ಮಾಗಿ (ಪಂಪಭಾ. ೨-೩೪ ವ). [ದಾರು$_2$ + ಕರ್ಮ]

ದಾರುಕಾಸನ (ನಾ). ಮರದ ಪೀಠ; ಮರದ ಮಣೆ: ದಾರುಕಾಸನ ಭಾಗ್ಯಹಾನಿಯು (ಗಗತಾ. ೪-೨೨). [ದಾರುಕ + ಆಸನ]

ದಾರುಕುಲ (ನಾ). ಮರಗಳ ಸಮೂಹ: ಫಲವೀವ ವೃಕ್ಷಮಂ ಬಿಟ್ಟು ನೀರಸ ದಾರುಕುಲಕಾಲವಾಲಮಂ ತಿರ್ದಿಸಿ (ಆರಾಚ. ೧೨-೨೭).

[ದಾರು$_2$ + ಕುಲ]

ದಾರುಜೀವನ (ನಾ). (ಆಅಂ) ನೀರಸವಾದ ಜೀವನ; ಸ್ವಾರಸ್ಯವಿಲ್ಲದ ಬಾಳಂ: ತಾವು ಅನೋನ್ಯವಾಗಿರದೆ, ಮಾತುಕಥೆ ಕೂಡ ಇಲ್ಲದೆ, ಮಸಣ ಮೌನದಿಂದ ದಾರುಜೀವನವನ್ನು ಜೀವಿಸುವುದು ಸಾವಿಗಿಂತ ಕಡೆ! (ಬಂಕಿಮ. ೨೧೨). [ದಾರು$_2$ + ಜೀವನ]

ದಾರುಣ (ಗು). ೧. ಕ್ರೂರವಾದ; ಭಯಂಕರವಾದ; ಉಗ್ರವಾದ; ಕಠಿಣವಾದ: ಮುನಿಜನಕಿಷ್ಟವಿಘ್ನಂಗಳಂ ದಾರುಣ ದೈತ್ಯರ್ ಮಾಡೆ (ಪಂಪಭಾ. ೪-೧೧); ಕನಕ ಶಾಂತಿ ತಪೋಧನನುಂ ಧ್ಯಾನಾನಲಸಂಧುಕ್ಷ್ಯ ಮಾಣದಾರುಣದುರಿತಾರಣ್ಯನಾಗಿ ಯೋಗದೊಳಿರೆ (ಶಾಂತಿಪು. ೯-೧೯ ವ); ವೀರರಸಂ ಬವರಿಸುಗುಮುದಾರೋತ್ಸಾಹ ಪ್ರವೃತ್ತಿ ಕಾರಣ ಕಾರ್ಯಂ ದಾರುಣ ರೋಷಾವೇಶ ವಿಕಾರಭವಂ ರೌದ್ರಮೆಂಬ ರಸಮದು ನೆಗಟ್ಗುಂ (ಕಾವ್ಯಾವ. ೮೦೬). (ನಾ). ೨. ಭಯಂಕರವಾದುದು; ಕ್ರೂರವಾದುದು; ಕಠಿಣವಾದುದು: ಕಾನನಂ ಕಣ್ಗೆ ದೂರಕೆ ನುಣ್ಪು ದೋರ್ದಡಂ ಬಾಳ್ಕೆಗತಿ ದಾರುಣಂ (ಶ್ರೀರಾಮಾ. ೮೮-೨೮೬). ೩. ಕ್ರೂರಿ; ಹಿಂಸಿಸುವವನು; ನಿಷ್ಕರುಣೆ; ನಿರ್ದಯಿ: ರವಿ ಚಾಪಕ್ಷೇತ್ರದೊಳ್ ನಿಂದೊಡೆ ಧನಪತಿ ಸತ್ಪೂಜಿತಂ ದಾರುಣಂ ವೈದ್ಯವಿದಂ ತಕ್ಷೋಪಜೀವ್ಯಂ (ಜಾತತಿ. ೦೭-೧೭); ಓಹೋ ಹೋ ಹಾ ಮಾಣ ದಾರುಣ ಮಾಣೆಂದೊಱಲುತ್ತೆ ಬೀಟ್ ತವೆ ಪೀರ್ದಂ ಪೂತನಾಜೀವಮಂ (ಜಗವಿ. ೩-೨೪); ನಾನೆ ದಾರುಣನೆಂದಿದೇತಕೆ ಬೀಗುವೆ ಸುಮ್ಮನೆ ಓ ಹಾಲಾಹಲವೆ (ಇಂಜಾಪ. ೨೨೦-೯೫). ೪. ಕ್ರೂರತನ; ಉಗ್ರತೆ; ನೋವು: ದಾರುಣದ ಕರ್ಮ ನಿಯತಿಯನಿನಿತು ಶಿಥಿಲಿಪುದು ಕಾರುಣ್ಯದಿಂ ದೈವ (ಮಂಕುಕ. ೫೦೯). ೫. ಒಂದು ನರಕದ ಹೆಸರು: ಬಳಿಕ ಕುಂಭೀಪಾಕ ಸುಪಾಕ ಪ್ರಮುಖ ದಾರುಣ ಅಂಗಾರಕಮೆಂಬೈದು ಮಂತ್ರಿ ನರಕಂಗಳಿಂ ಸೇರಿ ತರಳತಾರ ವೆಂಬರಸುನರಕವಿಹುದು (ವಿವೇಕ. ೧೮೦). [ಸಂ.]

ದಾರುಣತೆ (ನಾ). ಉಗ್ರತೆ; ಕ್ರೌರ್ಯ; ಭಯಂಕರತೆ: ದೈವದ ದಾರುಣತೆಯುಮಂ ಶೋಕೋದ್ರೇಕಮುಮಂ ದುಃಖದ ದುಸ್ಸಹತೆಯುಮಂ ಪದಾರ್ಥದನಿತ್ಯತೆಯುಮಂ ಭಾವಿಸಿ ನೋಡಿ (ಕಾದಂಪೂ. ೯೫೨).

[ಸಂ. ದಾರುಣತಾ]

ದಾರುಣಮುಖ (ನಾ). ಕ್ರೂರವಾದ ಮುಖವುಳ್ಳವನು; ಅತ್ಯಂತ ಕಟುವಾಗಿ ಮಾತನಾಡುವವನು: ವಿದ್ವತ್ಸಭಾಮಧ್ಯದೊಳ್ ಕಾಳೋಗ್ರೋರಗನಂತೆ ದಾರುಣಮುಖರ್ ದುಷ್ಟರ್ ಖಳರ್ ದುರ್ಮುಖರ್ ದೋಷಾನ್ವೇಷಣರಪ್ಪವರ್ ಪಟುದೊಡೇನಂ ಮಾಟ್ಪರೇಗೆಯ್ಯರೋ (ಸುಕುಮಾ. ೧-೪೭). [ದಾರುಣ + ಮುಖ]

ದಾರುಣವಡೆ (ಕ್ರಿ). ಉಗ್ರತೆಯನ್ನು ಹೊಂದು; ಕ್ರೂರವಾಗು; ಸೊಗಯಿಪ ಸತಿಯತಿಕಾರ್ಶ್ಯಂದಳೆದೊಪ್ಪಿದಳು ದಾರುಣವಡೆದ ನಿದಾಘ ಸಮಯ ಕಾಸಾರದ ಭಂಗಿಯುಮಂ ಸಿತಪಕ್ಷಂ ತೀರಿದ ನಿರ್ಮಲಶಶಿಬಿಂಬದ ಭಂಗಿಯುಮಂ ನೆನೆಯಿಸುತ (ಜಯಕಾ. ೪-೩೨). [ದಾರುಣ + ಪಡೆ$_1$]

ದಾರುದಾರುಣ (ನಾ). ಮರದ ಹಾಗೆ ಒರಟಾದುದು: ದಾರುದಾರುಣನಂ ದಾನವಾರಿವಾರಿತಲೋಕನಂ ಬಾರಬಾರಣಮಂ ನೋಡಾ ಸಾರಸಾರಾಂಬು ದಾಭಮಂ (ಕವಿರಾ. ೨-೧೩೦); ಮಕರಂದನರಸನವಸ್ಥೆಯಂ ಕಂಡು ದುಃಖ ಕ್ರಕಚದಾರಿತ ದಾರುದಾರುಣ ಕರುಣಾಕೃಷ್ಟ ಬಾಷ್ಪಜಲಲುಳಿತಲೋಚನಂ ಬಂದು ನೆಗಪೆ (ಲೀಲಾವ. ೧೪-೬೯ ವ). [ದಾರು$_2$ + ದಾರುಣ]

ದಾರುಪಾಶವಿಧಿ (ನಾ). ಹಗ್ಗದಿಂದ ಮರಕ್ಕೆ ಕಟ್ಟುವ ಕ್ರಮ (?): ಅಪರಾಂತ ಮಹಿಪಸಮದ ದ್ವಿಪಂಗಳಂ ಪಿಡಿಯಲವನಿನಾಥನ ಸೇನಾಧಿಪನ ತಲೆವಿಲ್ಲೆ ದಲ್ ದಾರುಪಾಶವಿಧಿಯಾಯ್ತು ಬಂದು ಕಾಣ್ಬನ್ನೆವರಂ (ಶಾಂತಿಪು. ೧೧-೧೯). [ದಾರು$_2$ + ಪಾಶ + ವಿಧಿ]

ದಾರುವಂದಿ (ನಾ). ಒಂದು ಬಗೆಯ ಹಂದಿ; ಕಾಡುಹಂದಿ: ಉಡುವು ಹೆಬ್ಬಾವು ಮುಂಗುರಿ ದಾರುವಂದಿಯು ಕಡವೆ ಕೆನ್ನಾಯಿ ಕೊಂಡಗುರಿಯುಂ (ಮಾದೇಸಾಂ. ೦-೫೮). [ದಾರು$_2$ + ಪಂದಿ]

ದಾರುಹರಿದ್ರೆ (ನಾ). ಮರದರಿಸಿನ; ಅಂಬೆಹಳದಿ: "ಪೀತದ್ರುಃ, ಕಾಲೇಯಕಃ . . . ದಾರುಹರಿದ್ರಾ, ಪರ್ಜನೀ-೭ ಮರದರಿಸಿನ, ಕಸ್ತೂರಿ ಅರಿಸಿನವೆಂದು ಕೆಲವರನ್ನುವರು" (ಸಿದ್ಧಾಂತಿ. ೦೩೫).

[ಸಂ. ದಾರುಹರಿದ್ರಾ]

ದಾರುಹಸ್ತ (ನಾ). ಮರದ ಸೌಟು; ಹುಟ್ಟು; ಸಟ್ಟುಗ; ಮರದ ಚಮಚೆ: "ದರ್ವೀ, ತರ್ದೂಃ, ಖಜಿಕಾ, ದಾರುಹಸ್ತಃ-ಈ ೪ ಸಟ್ಟುಗಂ" (ಹಲಾಯು. ೫೨-೧೫೭); "ಖಜಿಕೆ ದರ್ವೀ ದಾರುಹಸ್ತಂ ದ್ರುತಂ ಹುಟ್ಟೆನಿಕ್ಕು" (ಮಂಗರಾ. ೬೧-೧೮). [ದಾರು$_2$ + ಹಸ್ತ]

ದಾರುಹಸ್ತಕ (ನಾ). = ದಾರುಹಸ್ತ: "ತಂಡೂಃ, ದಾರುಹಸ್ತಕಃ - ೨ ಕೈಬಟ್ಲ ಪೆಸರುಗಳು. ಮರದ ಸೊಟಕ; ಮರದ ಸೌಟು" (ಸಿದ್ಧಾಂತಿ. ೨೮೪). [ದಾರು$_2$ + ಹಸ್ತಕ]

ದಾರೆ$_1$ (ನಾ). ೧. (ನೀರು) ಧಾರೆಯಾಗಿ ಹರಿಯುವಿಕೆ; ಧಾರಾಕಾರವಾಗಿ ಬೀಳುವಿಕೆ: ಧಕಾರಕ್ಕೆ ದಕಾರಂ - ಧಾರಾ - ದಾರೆ; ಧೂಪ - ದೂಪ (ಶಮದ. ೨೫೫ ಪ್ರಯೋ); ಜೀರದಲಿ ನೆಱ^3 ತುಂಬಿದಂತಿರೆ ಪೂರವಿಸಿ ಬುದಿಲೆನಿಸಿ ಭಸಿತದ ದಾ[ಪಾಣಾಂ. ಧಾ] ರೆ ಪೊಱಮಡೆ ಜೀರ್ಕೊಳವೆಯಲಿ ಚಿಮ್ಮಿದಂತಾಯ್ತು (ಬಸಪು. ೪೪-೧೫). 'ಅಳುಂದಾರೆ' ಪರಾ. ೨. ಪ್ರಧಾನವಾದ ಗೆರೆ; ಪ್ರಮುಖ ಗೆರೆ; ಮುಖ್ಯವಾದ ಗೀಟು; ಅಂಚು: ಮೇಲಣ ವಟ್ಟಕ್ಕೆ ಎಂಟು ದಾರೆಯ ಏಣಂ ಮುಱಿದು ಗರಿಗೆವಟ್ಟ ವರ್ತುಳಾಕಾರದಿಂ ಶುದ್ಧವ ಮಾಡಿ (ಸರ್ವವ. ೧೨೦-೬೦೭). ೩. ಕತ್ತಿಯ ಅಲಗು,-ಅಂಚು: ಕಂತು ಹೊಡೆದೊಡೆ ಮುನೀಶ್ವರ ಕಠಿನಮನಕಾಂತಂ ದಾರೆಗಳು ಮುಱಿದಲಗುಗಳಯುಕ್ಕುಗಳ ಬಳಗವೊ . . . ಎನಿಸಿ

(ಹಜಕಾ. ೩-೩೭). ೪. [ಅಶ್ವಶಾ] ಕುದುರೆಯಂ ನಡಗೆಯಂ ಐದು ರೀತಿಗಳಲ್ಲಿ ಒಂದು: ತುರಗವನೇರಿ ದಾರೆಗಳಿಂದ [ಕೋರಿಪ ?] ಪರಿಪರಿ ವಿಡಾಯದಿಂದ ತಿರುಗಿಸುವನಂ (ಗೋಪುಕೀ. ೩-೩೦)· 'ದಾರೆಗತಿ' ಪರಾ. [<ಸಂ. ಧಾರಾ]

ದಾರೆ (ನಾ). ಹೆಂಡತಿ ; ಪತ್ನಿ : ದಶರಥನ್ಯವಂ, ತನ್ನವೊಲೆ ನಾರುಮಡಿಯುಟ್ಟು ನೋಂಪಿಗೆ ನಿಂದ ದಾರೆಯರ್ವರಸಿ ತನುಜಾತಕಾಮೇಷ್ಟಿಯಂ ಕೈಕೊಂಡು (ಶ್ರೀಧಾಮಾ. ೦೦-೨೯), [ಸಂ. ದಾರ]

ದಾರೆ (ನಾ). ಒಂದಂ ಬಗೆಯಂ ಸಸ್ಯ : "ಉಪಹಾರಿ – ದಾರೆ, ಹೀರೆ" (ಓಷಧಿ. ೧೬). 'ದಾಹೀರೆ' ಪರಾ. [?]

ದಾರೆಕಟ್ಟು (ನಾ). ೧. ವಾಮಾಚಾರದ ವ್ಯವಹಾರಗಳಲ್ಲಿ ಒಂದು ; ಕತ್ತಿಯಂ ಬಾಯಿ ಚಲಿಸದಂತೆ ನಿಲ್ಲಿಸಂವ ಒಂದಂ ತಂತ್ರದ ಸಾಧನೆ : ಖಡ್ಗಸ್ತಂಭನ. ೨. ಹಾಗೆ ನಿಲ್ಲಿಸಂವ ಕ್ರಿಯೆ: ಆತನು ಮಂತ್ರ, ತಂತ್ರ . . . ದಾರೆಕಟ್ಟು, ಮೊನೆಕಟ್ಟಿಂಬ ಕುವಿದ್ಯದಿಂ ಗೆಲುವನೆಂದು ಬಂದವನ . . . ನಿವಾರಿಸಿ (ಕೃಕಶಾ. ೪೬೬). [ದಾರೆ + ಕಟ್ಟು]

ದಾರೆಗಡಗ (ನಾ). (ವಿವಾಹ ಸಮಯದಲ್ಲಿ) ಹೆಣ್ಣಿಗೆ ಧಾರೆಯೆರೆಯುವ ಮುಷ್ಟಿ ತೊಡಿಸುವ ಕಡಗ: ದಾರೆಗಡಗ ತೇವುರ ಪೊಸರನ್ನದ ಜಾರುತರದ ಸೂಡಗವನು ನಾರಿಯ ಕರಯುಗದೊಳಂದು ಸಖಿಯರು ಸೇರಿಸಿದರು ನಲವಿನಲಿ (ಅಂಜಚ. ೮-೬೫) ; ಗಿಳಿದಾಲಿ ತೋಳಬಂದಿ ದಾರೆಗಡಗಂ . . . ತೊಂಡಿಲ್ಗಳಿಂದಲಂಕೃತೆಯಾದ . . . ಕನ್ನಿಕೆಯಂ . . . ಪಸೆಯ ಜಗಲಿಗೆ ಬಿಜಯಂಗೆಯ್ಸುತಮಿರ್ದಿನಮಾಗಳ್ (ಹಾಡಾಸ್ಕ. ೪-೯-೬೪ ಪ). [ದಾರೆ$_1$ + ಕಡಗ$_1$]

ದಾರೆಗತಿ (ನಾ). [ಅಶ್ವಶಾ] ಕುದುರೆಯ ನಡಗೆಯಂ ಐದು ರೀತಿಗಳಲ್ಲಿ ಒಂದು: ದಾರೆಗತಿ ಲಯ ಪೊಯ್ದು ಕಾಯಕ್ಷಂ ತಿತಿಕ್ಷೆ ಕುತನೆಂರಿ ತುರ(ಗ?) ಸಮಾನಂ ಧಾರಿಕೊಸಿ ಮುಷ್ಟಿಭಾಗಂ ವ್ಯೂಹಂ ನಿವರ್ತನೆ ಪದಂ ಯತಿ ಗಾತ್ರವೆ ವಿಮಾರ್ಗಂ (ಪುಜಚಿ. ೧-೩೦). [ದಾರೆ$_1$ + ಗತಿ]

ದಾರೆಗಿಂಡಿ (ನಾ). ೧. ನೀರಂ, ಹಾಲು ಮೊದಲಾದ ದ್ರವಪದಾರ್ಥಗಳನ್ನು ಹೊರಸೂಸಲಂ ಸೊಂಡಿಲಂತಹ ಆಕಾರವಿರುವ ಗಿಂಡಿ ; ಸೊಂಡಿವಿಂಳ್ಕೆ (ಉಕ). ೨. ನೀರಂ ಕುಡಿಯಂವ ಪಾತ್ರೆ.

[ದಾರೆ$_1$ + ಗಿಂಡಿ]

ದಾರೆಬಟ್ಟಲು 'ದಾರೆವಟ್ಟಲ್' ನೋ.

ದಾರೆವಟ್ಟಲ್, ದಾರ್ವಟ್ಟಲಂ, ದಾರೆಬಟ್ಟಲಂ, ದಾರೆವಟ್ಟಲಂ (ನಾ). ಜರಡಿ ; ಚಾಳನಿ ; ಒಂದರಿ ; "ಚಾಲನಿ, ತಿತವು" (ಪಾಪರಾ. ೪). **ದಾರವಟ್ಟಲು**: ದಾ[ಪಾಣಾಂ. ಧಾ]ರವಟ್ಟಲ ತೆಱದಿ ನಿನ್ನ ಕುಮಾರಿ ಕಸವನೆ ಪಿಡಿಯೆ ನೀನವಿಚಾರಿಯಾದ್ಯೆ ರಾಜಪುತ್ರ ಸಮಾಜವನು ಬಸುಟು (ಸಾಳ್ಕಥಾ. ೦೯-೬೭). **ದಾರೆಬಟ್ಟಲು**: ರಸವನ್ನು ತ್ಯಜಿಸಿ ಕಸವನ್ನು ಹಿಡಿಯುವ ದಾರೆಬಟ್ಟಲಂತಹ ಜನರಿಗೆ, ದುರಾಸೆಯುಳ್ಳವರಿಗೆ . . . ಎಂದಿಗೂ ಸೊಗಸುವುದಿಲ್ಲವೆಂದೂ ಚಂದ್ರಕವಿಯ ಸ್ಪಷ್ಟವಾದ ಅಭಿಪ್ರಾಯ (ಶಂಚಕ. XLV ವಿಮರ್ಶೆ). **ದಾರೆವಟ್ಟಲು**: ಮೋಕ್ಷದ ಬಗೆಗಾಣ್ವವರ್ಗೆ ಸೊಗಯಿಪ್ಪುದಿದಲ್ಲದೆ ದಾರೆ[ಪಾಣಾಂ. ದಾರ]ವಟ್ಟಲಂದದಿ ರಸಮಂ ಬಡುತ್ತೆ ಕಸಮಂ ಪಿಡಿದಿರ್ಪ ದುರಾಸೆಯರ್ಗೆ . . . ಸೊಗಯಿಪ್ಪುದೆ (ಶಂಕಕ. ೬).

[ದಾರೆ$_1$ + ಬಟ್ಟಲ್]

ದಾರೆವಟ್ಟಲು 'ದಾರೆವಟ್ಟಲ್' ನೋ.

ದಾರೆಹುಳಿ, ಧಾರೆಹುಳಿ (ನಾ). (ಕರಾ) ಒಂದಂ ಬಗೆಯಂ ಮರ ಮತ್ತಂ ಅದರ ಹಣ್ಣು ; ಕವಂರಿಕೆ : ಕಮರಕ್‌ಮರ, ಕಮರಾಕ್ಷಿ, ದಾರೆಹುಳಿ (ಮೃಕಿಗಿ. ೦೦-೦೬೪). **ಧಾರೆಹುಳಿ** : ಧಾರೆಹುಳಿ ಉಷ್ಣನಕಾಯಿ (ಕೂಧಿ).

[←ತುಳು. ದಾರೆಪುಳಿ]

ದಾರೇಷಣ (ನಾ). ಹೆಂಡತಿಯಂನ್ನು ಬಯಸಂವಿಕೆ ; ಸಂಸಾರಿಯಾಗಂವ ಅಪೇಕ್ಷೆ : ಪ್ರಕೃತಿಯು–ಮೂರು ಪರಿಚ್ಛೇದ ಸ್ವರೂಪಳು, ಸತ್ವ ಪರಿಚ್ಛೇದ, ರಜಃ ಪರಿಚ್ಛೇದ, ತಮಃ ಪರಿಚ್ಛೇದವೆಂದು ಈ ಮೂರರಲ್ಲಿ ವಿಶ್ವ, ತೈಜಸ, ಪ್ರಾಜ್ಞ ಎಂಬ ಮೂರು ರೂಪಗಳಿಂದ ಶ್ರೀ ಪರಮಾತ್ಮನು ವಾಸ ಮಾಡುವನು. ದಾರೇಷಣ, ಪುತ್ರೇಷಣ, ವಿತ್ತೇಷಣವೆಂಬ ಈಷಣತ್ರಯದಲ್ಲಿ ಆತ್ಮ, ಅಂತರಾತ್ಮ, ಪರಮಾತ್ಮನೆಂಬ ರೂಪತ್ರಯಗಳಿಂದ ವಾಸವಮಾಡುವನು (ಹಸಾರ ೨೪-೧೦ ಟೀಳು). [<ಸಂ. ದಾರೈಷಣ]

ದಾರೊಕ್ಕಲು (ನಾ). ಸಂಬಳದಾಳಂಗಳನ್ನು ಇಟ್ಟು ವ್ಯವಸಾಯಂ ಮಾಡಿಸಂವ ಒಕ್ಕಲಂ ; ದೊಡ್ಡ ಒಕ್ಕಲು. 'ಕೂಡೊಕ್ಕಲಂ' ಪರಾ.

[ದಾರು$_0$ + ಒಕ್ಕಲು(<ಒಕ್ಕಲ್)]

ದಾರ್ಢ್ಯ (ನಾ). ೧. ಗಟ್ಟಿಯಾಗಿರಂವಿಕೆ ; ಬಿಗಿಯಾಗಿರಂವಿಕೆ ; ಗಡುಸು. ೨. ಧೈರ್ಯ; ಬಲ ; ಶಕ್ತಿ : ತನುವೋಳ್ ದಾರ್ಢ್ಯಂ ಸವಮಂಶೊಪ್ಪುವಾ ಸುಖ ವುರ್ವಾರ್ಜಿತ ವುಣ್ಮವೈ (ಸೋಪುಚ. ೪೬). ೩. ಸ್ಥಿರವಾದುದಂ ; ದೃಢವಾದಂದಂ. 'ಧರ್ಮದಾರ್ಢ್ಯ' ಪರಾ. [ಸಂ.]

ದಾರ್ವ (ಗು). ವಂರದ ; ವಂರದಿಂದ ಮಾಡಿದ. [ಸಂ.]

ದಾರ್ವಾಘಾಟ (ನಾ). ಮರಕುಟುಕ ಪಕ್ಷಿ : "ಶತಪತ್ರಕಃ, ದಾರ್ವಾಘಾಟಃ – ೨ ಮರಕುಟಿಕನ ಹಕ್ಕಿ" (ನಿಘಂ೦ತಿ. ೧೫೮). [ಸಂ.]

ದಾರ್ವಿ (ನಾ). ವಂರದರಿಸಿನ ; ದಾರುಹರಿದ್ರ : "ಸದಾಯಗತ–ದಾರ್ವಿ" (ಓಷಧಿ. ೦೭೪). [ಸಂ. ದಾರ್ವೀ]

ದಾರ್ವಿಕೆ (ನಾ): ೧. ಮರದರಿಸಿನದಿಂದ ಮಾಡಿದ ಕಾಡಿಗೆ ಅಥವಾ ಕಣ್ಮಪ್ಪು ; ರಸಾಂಜನ : "ದಾರ್ವಿಕಾ, ಕ್ವಾಥೋದ್ಭವಂ, ತುತ್ಥಂ, ರಸಾಂಜನಂ, ರಸಗರ್ಭಂ, ತಾರ್ಕ್ಷ್ಯಶೈಲಂ – ೬ ರಸಾಂಜನದ ಹೆಸರುಗಳು" (ನಿಘಂ೦ತಿ. ೦೩೯). ೨. ಒಂದಂ ಬಗೆಯಂ ಸಸ್ಯ ; ಎತ್ತುನಾಲಿಗೆ ಗಿಡ ; ಗೋಜಿಹ್ವೆ : "ಗೋಜಿಹ್ವಾ, ದಾರ್ವಿಕಾ – ೨ ಎತ್ತುನಾಲಗೆ ಗಿಡದ ಹೆಸರುಗಳು" (ನಿಘಂ೦ತಿ. ೦೩೯). [ಸಂ. ದಾರ್ವಿಕಾ]

ದಾರ್ಶನಿಕ (ಗು). ೧. ತತ್ವಜ್ಞಾನಕ್ಕೆ ಸಂಬಂಧಿಸಿದ : ಈಸ್ಮಿಲಸ್ಸಿನ ಕೃತಿಗಳಲ್ಲಿ ಈ ಪ್ರಶ್ನೆ . . . ದಾರ್ಶನಿಕತರ್ಕವಾಗಿ ಎತ್ತಿ ಕಾಣದಿದ್ದರೂ ಅದನ್ನು ಗುರುತಿಸಲಾಗದಷ್ಟು ಅಸ್ಪಷ್ಟವಾಗಿಯೂ ಇಲ್ಲ (ಬದ್ಮಪ್ರ. LXVI ಟೀಳಿ). (ನಾ). ೨. ದರ್ಶನಗಳನ್ನು ತಿಳಿದವನಂ ; ತತ್ವಜ್ಞಾನಿ ; ವೇದಾಂತಿ: ದಾರ್ಶನಿಕನು ನೀರನ್ನು ಶೋಧಿಸಿ ಕುಡಿಯುವನು (ಧಾರದ, ೦೬೩) ; ಆದ್ದರಿಂದಲೇ ಆತ್ಮಶಕ್ತಿ, ಆತ್ಮವಿಶ್ವಾಸ . . . ಇತ್ಯಾದಿಗಳಿಗೆ ಕೆಲವು ದಾರ್ಶನಿಕರು ಮಹತ್ವದ ಸ್ಥಾನವನ್ನು ಕೊಟ್ಟಿರುವುದು (ಶಿಕ್ಷದ, ೪೫೯) ; "ನಮ್ಮ ಇರವಿನ ಅರಿವು ನಮಗೆ ಪ್ರತಿಕ್ಷಣದಲ್ಲಿಯೂ ಆಗುತ್ತಿರುತ್ತದೆ . . . ಅದರ ಅಸ್ತಿತ್ವದಲ್ಲಿ ನಮಗೆ ಸಂದೇಹವೇ ಇಲ್ಲ" ವೆಂದು ಹಲವು ದಾರ್ಶನಿಕರು ಹೇಳುತ್ತಿರುತ್ತಾರೆ (ಜೀವಾಶ್ಮ. ೪೬); ಆಧುನಿಕ ಮಹಾವಿಜ್ಞಾನಿಗಳನ್ನು ದಾರ್ಶನಿಕರ ಸಾಲಿಗೇ ಸೇರಿಸಬೇಕೆಂದನ್ನಿಸುತ್ತದೆ (ಹುಳ್ಕಾರ, ೬ ಟೀಳಿ). ೩. [ಜೈನ] ನೈಷ್ಠಿಕ ಶ್ರಾವಕರಲ್ಲಿಯಂ ಹನ್ನೊಂದಂ ತರಗತಿಗಳಲ್ಲಿ ಮೊದಲನೆಯಂ ತರಗತಿಯವನು : ಇಂತು ದಾರ್ಶನಿಕಂ ವ್ರತಿಕಂ ಸಾಮಯಿಕಂ ಪ್ರೋಷಧೋಪವಾಸಂ ಸಚ್ಚಿತ್ತವಿರತಂ ರಾತ್ರಿಭುಕ್ತಂ ಬ್ರಹ್ಮಚಾರಿ ಆರಂಭನಿವೃತ್ತಂ ಪರಿಗ್ರಹವಿರತಂ ಅನುಮತಿವಿರತಂ ಉದ್ದಿಷ್ಟವಿರತಂ ಎಂದು ಶ್ರಾವಕಸ್ಥಾನಂ ಪನ್ನೊಂದಕ್ಕುಂ (ಧರ್ಪ್ರಮ್ಯ. ೪-೦೪೭) ; ದಾರ್ಶನಿಕ – ಇವನು ನೈಷ್ಠಿಕ ಶ್ರಾವಕರಲ್ಲಿ ಮೊದಲನೆಯ ತರಗತಿಯವನು (ಕ್ರಿಸಪ. ೪೬೬). [ಸಂ.]

ದಾರ್ಶನಿಕವಾಣಿ (ನಾ). ತತ್ವಜ್ಞಾನಿಗಳ ಮಾತು ; ದಾರ್ಶನಿಕರ ನುಡಿ : ಈ ದಾರ್ಶನಿಕವಾಣಿಗಾದರೂ ಅದರ ದಾರ್ಶನಿಕಶಕ್ತಿ ಹಾಗು ದಾರ್ಶನಿಕ ಅಭಿವ್ಯಕ್ತಿಗಳಿಗನುಗುಣವಾಗಿ ಬೇರೆ ಬೇರೆ ಶ್ರೇಣಿಗಳಿರುತ್ತದೆ (ಕ್ರಬಂಧ. ೦೨೫). [ದಾರ್ಶನಿಕ + ವಾಣಿ$_1$]

ದಾರ್ಷ್ಟಾಂತಿಕ (ಗು). ೧. ದೃಷ್ಟಾಂತದೊಡನೆ ಕೂಡಿದ ; ದೃಷ್ಟಾಂತದಿಂದ ವಿವರಿಸಲ್ಪಟ್ಟ.(ನಾ).೨. ದೃಷ್ಟಾಂತದಿಂದ ಸ್ಥಿರಪಡಿಸಿದಂದು: ಜ್ಞಾನದ ಕರ್ಮವು ಇಲ್ಲದಿದ್ದರೂ 'ಅದು ಯೋಚಿಸಿ ನೋಡೀತು' (ತದ್ವೈಷಿಕ) ಎಂದು ಕರ್ತೃತ್ವನ್ನು ಹೇಳಬಹುದಾಗಿದೆ. ಆದ್ದರಿಂದ ದೃಷ್ಟಾಂತ ದಾರ್ಷ್ಟಾಂತಿಕಗಳಿಗೆ ಹೋಲಿಕೆ ಇಲ್ಲದೆ ಇಲ್ಲ (ಬ್ರಹ್ಮಭಾ. ೮೪).

[ಸಂ.]

ದಾಲ (ನಾ).೧. ಒಂದು ವಿಧವಾದ ಕಾಡಂಜೇನು. ೨. ಮಕರಂದ ; ಪುಷ್ಪಪರಾಗ. [ಸಂ.]

ದಾಲಕ್ಷ 'ದಹಲಕ್ಷ' ನೋ.

ದಾಲಚಿನಿ 'ದಾಲಚಿನ್ನಿ' ನೋ.

ದಾಲಚಿನ್ನಿ, ದಾಲಚಿನಿ, ದಾಲಚಿನ್ನೆ, ದಾಲ್ಚಿನ್ನಿ, ದಾಲ್ಚಿನ್ನೆ (ನಾ). ಸಾಂಬಾರಿಗೆ ಬಳಸುವ ಮಸಾಲೆಯ ಸಾಮಾನುಗಳಲ್ಲಿ ಒಂದು ; ಮಸಾಲೆಚಕ್ಕೆ ; ಲವಂಗ ಪಟ್ಟೆ : ಸಿಂಹಲ ದ್ವೀಪದಲ್ಲಿ ದಾಲಚಿನ್ನಿ, ಮೆಣಸು ಮುಂತಾದ ಮಸಾಲೀ ಸರಕುಗಳು . . . ಬಹಳ ಆಗುತ್ತವೆ (ಮುಂಬಯಿ. ೪-೨೦೦) ; ಸೀಮೆಸುಣ್ಣದ ಪುಡಿ ೨ ತೊಲ . . . ದಾಲಚಿನ್ನಿ ೧ ತೊಲ-ಇವುಗಳನ್ನೆಲ್ಲಾ ಚೆನ್ನಾಗಿ ಪುಡಿಮಾಡಿ . . . ಎರಡಾವೃತ್ತಿ ಕುಡಿಸುವುದು (ಗ್ರಾಮಾಕ. ೧೨೪). **ದಾಲಚಿನಿ** : ಲೋಭಾನ, ಕಾಚು . . . ದಾಲಚಿನಿಯ ಎಣ್ಣೆ, ಗುಲಾಬನೀರು ಮುಂತಾದವುಗಳು (ಮುಂಬಪ್ಪಾ. ೯೯). **ದಾಲಚಿನ್ನೆ** : ದಾಲಚಿನ್ನೆ ಅಡವಿಯಲ್ಲಿ ಸಾಧಾರಣ. ಬಹಳ ಎತ್ತರ ವಾಗುವುದಿಲ್ಲ. ಕಾಯಿಗೆಳಿಂದ ಎಣ್ಣೆ ಹೊರಡುತ್ತದೆ. ಅದು ಔಷಧಕ್ಕೆ ಬರುತ್ತದೆ (ಕಥಾಗ. ೪೦). **ದಾಲ್ಚಿನ್ನಿ** : ಜಾಯಿಕಾಯಿ, ಏಲಕ್ಕಿ . . . ದಾಲ್ಚಿನ್ನಿ, ಲವಂಗಪತ್ರೆ . . . ಚೂರ್ಣಿಸಿ ಜೇನುತುಪ್ಪದಲ್ಲಿ ಕಲಿಸಿ ತೆಗೆದು ಕೊಳಲು ಬಹುಮೂತ್ರ ಕಲ್ಲುಕಟ್ಟು ಸಹ ಮಾಣುವುವು (ಸಕವೈ. ೫೦೦ ಪರಿ) ; ಕ್ರಿ.ಪೂ. ೧೫ನೆಯ ಶತಮಾನದ ಈಜಿಪ್ಟ್ ಶಿಲಾಶಾಸನಗಳಲ್ಲಿ ಕಂಡುಬರುವ ಲವಂಗಪಟ್ಟೆ ಅಥವಾ ದಾಲ್ಚಿನ್ನಿ ಮಲಬಾರಿನಲ್ಲಿ ಉತ್ಪನ್ನ ವಾಗುವ ವಸ್ತುವನ್ನೇ ಪ್ರಾಯಶಃ ಸೂಚಿಸುತ್ತದೆ (ವಭಾಇ. ೩೨). **ದಾಲ್ಚಿನ್ನೆ** : ಸಿಂಹಳ ದ್ವೀಪದಲ್ಲಿ ದಾಲ್ಚಿನ್ನೆಯ ಗಿಡಗಳು ಬಹಳ (ಮುಂಬಯಿ. ೩-೬೩).

[←ಪಾರ. ಹಿಂ. ದಾರ್ಚೀನೀ ; ಮರಾ.ದಾರುಚಿನೀ, ದಾಲ್‌ಚಿನೀ]

ದಾಲಚಿನ್ನೆ 'ದಾಲಚಿನ್ನಿ' ನೋ.

ದಾಲಿಮ (ನಾ). = ದಾಳಿಂಬ. [ಸಂ.]

ದಾಲುಮರ (ನಾ). ಒಂದು ಬಗೆಯ ಮರ : ಹೆಸವ . . . ಕವಲು, ಗಂಡಗರಿಗೆ, ದಾಲುಮರ, ಅರಸಿನಬೂರುಗ (ನಮ್ಮನು. ೨೩೬).

[ದಾಲು? + ಮರ$_1$]

ದಾಲ್ಚಿನ್ನಿ 'ದಾಲಚಿನ್ನಿ' ನೋ.

ದಾಲ್ಚಿನ್ನೆ 'ದಾಲಚಿನ್ನಿ' ನೋ.

ದಾವ$_1$ 'ದಾವುದು' ಪರಾ.

ದಾವ$_2$ (ನಾ). ೧. ಕಾಡು ; ಅಡವಿ ; ಕಾನನ : "ಅಡವಿಯಲ್ಲಿಯುಂ, ದವ, ದಾವ ಎಂಬುದು" (ಹಲಾಯು. ೦೩೩-೧೩) ; ಭವದಾವದಲ್ಲಿ ತೊಳಲುವ ಜೀವರಿಗೆ ಸದಾ ಶಿವಪಥವ ತೋರ್ಪ ಗುರುವರ್ಯ ಬಿನ್ನ ಪವನವಧರಿಪುದೀಗ (ಅನುಸಾ. ೨-೦-೨). ೨. ಕಾಡುಗಿಚ್ಚು ; ಕಾಳ್ಗಿಚ್ಚು ; ಕಾಡಂಬೇಗ್ಗೆ : "ವನವಹ್ನಿಃ, ದವಃ, ದಾವಃ-ಈ ಮೂಱು ಕಾಟ್ಕಿಚ್ಚು" (ಹಲಾಯು ೧೩-೭೦); "ನಿಮಿರ್ದ ಕಾಂತಾರದಲ್ಲಿಯ ಕಿಚ್ಚು ದಾವಂ [ದವಂ]" (ಮಂಗರಾ. ೧೪-೯) ; ಶಾಶ್ವತನವತರಿಸಿರ್ದಂ ಗದಾಶಂಖಚಕ್ರಾಂಕಿತಹಸ್ತಂ ವಾಸುದೇವಂ ದನುಜವಿಪಿನದಾವಂ,ಸಮಸ್ತಪ್ರಭಾವಂ (ಜಗವಿ. ೨-೦೦೦). ೩. ಕಿಚ್ಚು ; ಬೆಂಕಿ ; ಶಾಖ. [ಸಂ.]

ದಾವಂತ 'ಧಾವಂತ' ನೋ.

ದಾವಂತಬಡಿಸು (ಕ್ರಿ). ಗಾಸಿಪಡಿಸು ; ಬಳಲಿಸು ; ಆಯಾಸವನ್ನುಂಟು ಮಾಡು : ದಾವಂತಬಡಿಸಿ ದೇಹವನು ಪಸಿದಿರಲೇಕೆ ಶ್ರೀವರನನಂತನಾಮ ದೊಳು (ತಿರುಶ. ೭-೩೦).

[ದಾವಂತಬಡು (<ಧಾವಂತಪಡು) + – ಇಸು$_3$]

ದಾವಂತಬಡು 'ಧಾವಂತಪಡು' ನೋ.

ದಾವಡಸು (ಕ್ರಿ). ಬಾಯಾರು ; ನೀರಡಿಕೆಯುಂಟಾಗು : ಮೃಗವನ್ನು ಕಾಣದಿರಲು ಬಳಲಿ ಬಸವಳಿದು ದೂವಡಿಸಿ [ದಾವಡಸಿ] ನೀರಂ ಕಾಣ ದಳಲಿಯರಸುತ್ತಿರಲು (ತುರಂಗ. ೩೪-೪೭).

[ದಾವು$_1$ <ಡಾಹ) + ಅಡಸು]

ದಾವಣ$_1$ (ನಾ). ಚಪ್ಪರ ; ಹಂದರ : ಪಾದರಿಯ ನೆಲೆವಾಡಂಗಳೊಳಂ ದವನದ ದಾವಣಂಗಳೊಳಂ ಮಲ್ಲಿಗೆಯ ಮನೆಗಳೊಳಂ ಕಪ್ಪುರದ ಸೊದೆಯೊಳಂ ಸೊಂಪುವಡೆದ ಕಂಪಿನ ಪೊಟಲೆಂಬ ಬೀಡು ಬಗೆಗೊಳಿಸು ತಿರ್ಪುದು (ಕಬ್ಬಿಕಾ. ೦೦೮); ದುರ್ಗತಿಕ್ಲೇಶಕರಮಪ್ಪ ಮದ್ಯಂ ದೇವತೆಗೆಂದುಂ ಮಂತ್ರಸಿದ್ಧರ್ಥಮಾಗಿಯುಂ ಮನೆ ಕೊಟ್ಟಗೆ ದಾವಣ ರಾಶಿ ತೋಂಟಂ ಮೊದಲಾದುವನರ್ಚಿಸಲೆಂದುಂ ಮನವಚನಕಾಯದಿಂ ಮಾಡಲಾಗದು ಮಾಡಿಸಲಾಗದು ಮಾಡುವನ್ಯರ್ಗೊಡಂಬಡಲಾಗದು (ಪಸಾರ. ೨೯೮). 'ಕಾವಣ' ಪರಾ.

[ದೇ.॥ ತಮಿ. ತಾವಳ ; ತೆಲು. ತಾವಲ = ನಿವಾಸ, ವಾಸಸ್ಥಾನ]

ದಾವಣ$_2$ (ನಾ). ಒಬ್ಬಾತನ ಹೆಸರು : ಸಿರದ ದವೆಟಿಯರ ಮಗ ದಾವಣ ಗವುದದ ವಂಹಾ ಜನಕ್ಕೆ ಕೊಟ್ಟದು ಶಾಲೆ (ಎಕ. VII, ಶಿಕಾರಿ. ೪೫ (b)-೩೩; ಸು. 890 ?). [<ದೇವಣ್ಣ]

ದಾವಣ$_3$ 'ದಾಹಣಿ' ನೋ.

ದಾವಣಪೇರುಂದವ್ವ (ನಾ). ಒಬ್ಬಾಕೆಯ ಹೆಸರು : ಇ ಧಮ್ಮದಿ ದಾವಣ ಪೇರುನ್ದವ್ವಜ್ಗಿ ಕೊಟ್ಟೊದು ಐಗುಳ ಕಟನಿ ಪರಿಹಾರ (ಎಕ. X,ಶ್ರೀನಿವಾ. ೬-೧೩ ; ಸು. 780). [ದಾವಣ$_2$ + ಪೇರುಂದವ್ವ$_3$]

ದಾವಣಿ$_1$, ಡಾಣಿ$_1$, ಡಾವಣ, ಡಾವಣಿ, ಡಾವಣೆ, ಢಾವಣಿ, ದವಣಿ, ದವನಿ, ದಾಮಿಳಿ, ದಾವುಣಿ (ನಾ). ೧. (ದನಕರುಗಳನ್ನು ಸಾಲಾಗಿ ಕಟ್ಟುವ) ಹಗ್ಗ ; ಹುರಿ ; ಪಾಶ : "ದಾಮಿಳಿಯೆನಲು ದಾವಣಿ" (ಮಂಗರಾ. ೦೦೯-೩) ; ದಾವಣಿ[ಪಾಶಾಂ. ಣಿ]ಯೊಳ್ಕಟ್ಟಿರ್ದಾ ಜೀವಧನಮ ದೊಂದೆ ಮಗ್ಗುಲಿಂದಿರದೊಡವಿನ್ನೇವೇಟ್ಟುದಧಿಕಮೆನಿಸುವ ಜೀವಧನಮ ನೆಂದು ಸೇಸೆದಳಿವವರ್ಮೂಢರ್ (ಸಮಾಪ ೩೮೨-೩೮ ಅನುಬಂಧ. ೦); ಆವ ಕುಲದಲಿ ಪುಟ್ಟಲಿ ಪರವೆಣ್ಗಳ ಭಾವಿಸನಾವನವನಿಗೆ ದೇವರು ಸರಿಯಲ್ಲ ನರಪಶುಗಳ ಬಲು ದಾವಣಿಯವನೆ (ಕುರಾಸಾಂ. ೦-೯೪) ; ಕಾವು ಗೋಚರ ಮಾಗದಿರೆ ಕೋಪ ವೆಗ್ಗಳಿಸಿ ತೀವಿ ಭಿದುರೋಪಮಿತ ಶಬ್ದವೇಧಿಯ ತೆಗೆದು ದಾವಣಿಯನಿಟ್ಟು [ಪಾಶಾಂ. ರಾವವನ್ನರಿದು] ಕೊಂದವೆನೆನಲು ಭಾವವನ್ನರಿದು ಯಕ್ಷಿಣಿಯು ಜವದಿ ಮುಂಬರಿದು (ವಂಕಾರಾ. ೧-೧೨-೪೨); ಕೊರಳ ದಾವಣಿಗೆ ಕುಣಿಕೆ ಬೇಕು ಕವಲೆತ್ತಿಗೂಸು ಕಣಿಕೆ (ಅರಳು. ೨೯೨-೭); ಪುಂಡಿ ನಾರಿನ ಹಗ್ಗ ಹೊಸೆಯುವುದು, ಎತ್ತು ದನ ಕಟ್ಟುವ ದಾವಣಿ ತಿರುಪುವುದು (ಮಲಿಮ. ೭೦). ೨. ಕಟ್ಟು ; ಬಂಧನ: ಹೊಟ್ಟೆಯ ಪಾಡಿಗೆ ದುಡಿಯುವ ದಾವಣಿಯಲಿ ಸಿಕ್ಕಿ ಚಲಿಸುತ್ತಿವೆ ದಿಟ ನಿನಗಾ ಸಂಕುಲ ಪಂಕ್ತಿಯ ಬಕಪಕ್ಷಿ (ಅನಿಕೇ. ೪೬-೧೦); ನಾವಾದರೂ ಅರಸರ ದಾವಣಿಯಲ್ಲಿ ಸೇರತಕ್ಕವರೆ (ಮಭಾರ. ೩೦). ೩. ಸಾಲು ; ಪಂಕ್ತಿ : ಆಟಾಟಿಗೆ ಬಲ್ಲಾಳನ ದಾಟಿಯಂ ದಾವಣಿಯ ತುರಗ ದಟ ಖುರಹತಿಯಿಂ ಪೇಟಿ ಪೆಸರಿಲ್ಲದಂತಿರೆ ಪಾಟುಾದುವು ವೈರಿದುರ್ಗಮೆನಿತೊಳವನಿತುಂ (ಯಕೋಚ. ೧-೧೪) ; ಧರಣೀದೇವರನು ಸತ್ಕರಿಸಿ ತಿಲಭೂರತ್ನರುಕ್ಮದಲ್ಲಿ ಧಾ[ದಾ[

ವಣಿ[ಪಾಠಾಂ. ೪]ಯ ಸುರಭಿಗಳನಖಿಳ ಮಹಾವಿಭವಸಹಿತೆಱೆದು ಧಾರೆಯನಾವರಾಂಬಂಧಿಯಿತ್ತನು (ನಿಭಾಗ. ೦೦-೭೮-೨). ೪. ಗುಂಪು; ನೆರವಿ; ಸಮೂಹ: ಭೈರವನ ತೆತ್ತಿಗರ ದಾವಣಿಯೊಳಣ್ಣನ ಮತ್ತವಾರಣ ಭೀಮಸೇನನನಿತ್ತ ನೋಡೈ ಮಗನೆ ಕುರುಕುಲಕೇಣಿಕಾಱನನು (ಕುಪ್ಯಾಭೀ. ೨-೦೬); ದೇವ ನೀ ಭಹನೆಂದು ಬಂದರು ದಾವಣಿಯ ಹವಣಱಿದು ಬಳಿಕ ಮಹಾವಿಳಾಸದೊಳೊಪ್ಪವಿಟ್ಟರು ತಮ್ಮ ನಗರಿಗಳ (ಕುಪ್ಯಾವಿ. ೦೦-೪೭). ೫. ದನಗಳನ್ನು ಕಟ್ಟುವ ಸ್ಥಳ; ಕೊಟ್ಟಿಗೆ: ಇನ್ನು ಛತ್ರಕ್ಕೆ ಹೋಗಿ ಊಟ ತೀರಿಸಿಕೊಂಡು ನಮ್ಮ ದಾವಣಿಯ ಹತ್ತಿರ ಹಿಂತಿರುಗಿ ಬಂದು . . . ಕುಳಿತುಕೊಂಡವು (ಜಿಂಗಾಳ್ಕ. ೩೫೩). ಡಾಣಿ$_1$: (ಕ). ಡಾವಣ: ೧. ಅಣಿಯುಳ್ ಜಾವಣಮೊಡ್ಡುವೊನ್ (ಎಇ. IX, ೦೯-೦೦; 300). ಡಾವಣಿ: ೨. ಕಣಿಗಳೋ ಕಲ್ಪಾಂತ ವಹ್ನಿಯ ಡೊಣಿಗಳೋ ಹಾಳಾಹಳದ ಡಾವಣಿಗಳೋ ನಾವಱಿಯೆವು (ಕುಪ್ಯಾಳ. ೨೦-೯); ಹ್ಯಾವರಿಕೆ ಸಂಸಾರ ಡಾವಣಿಯ ನಡುವೆ ಕೊರಳಾವಲಿಗೆ ಸಿಗಬಿದ್ದು ಮಿಡುಕುತಿಪ್ಪ ಜೀವಾಧಮನು ನಿನ್ನ ಮೆಚ್ಚಿಸಲಾಪೆನೆ (ವಿಸ್ತೋಸು. ೩೦-೦). ಡಾವಣೆ: ೧. ವಾರುವಗಳ ಡಾವಣೆ ನೇಣ್ಗಳ ಬಲು ಬೀರುಗುಣಿಕೆಗಳ ಪಱಿದು ಕೇರಿ ಕೇರಿಯೊಳು ತಮ್ಮಿಚ್ಚೆಯೊಳಗೆ ಸಲೆ ತಾಱುಮಾಱಾಗಿಯೋಡಿದುವು (ಕಂಪವಿ. ೦೫-೯೦). ಧಾವಣಿ: ೩. 'ಧಾವಣಿಗಿರಿ' ಪರಾ. ದವಣಿ: ೫. ಇನ್ನು ಈ ಮನೆಯೊಳಗೆ ಮಲಗಿಕೊಂಡರೆ ದನದ ದವಣಿಯೊಳಗೆ ಮಲಗಿದ ಹಾಗೆ (ಪ್ರಪಾಚಿ. ೨೦). ದವನಿ: ೫. ತಾರಕ್ಕ ಕಟ್ಟೆಯ ಮೇಲಿಂದ ಒಮ್ಮೆಲೇ ಕೆಳಗುರುಳಿ ಬಿದ್ದಳು ದನಗಳನ್ನು ಕಟ್ಟುವ ದವನಿಯಲ್ಲಿ (ನಿಸರ್ಗ. ೩೪೯). ದಾಮಿಳಿ: ೧. "ದಾಮಿಳಿಯೆನಲು ದಾವಣಿ" (ಮಂಗರಾ. ೦೦೯-೩). ದಾವುಣಿ: ೧. ಏರಿದನು ಕೈಯೊಡನೆ ಖಳನೇಳ್ನೂರು ಘಂಟೆಯ ರಥವ ಮದಕರಿ ಮೂರು ಸಾವಿರ ಸೇರಿದವು ದಾವುಣಿಯ ನೊಗಗಳಲಿ . . . ಹದಿನಾರು ಸಾವಿರ ಬಂಡಿಯಲಿ ನೂಕಿದುವು (ಆಯಿಕಾ. ೦೯-೩೦). [<ಸಂ. ದಾಮನೀ]

ದಾವಣಿ$_2$, ಧಾವಳಿ (ನಾ). ಲಂಗವುಟ್ಟ ಹೆಣ್ಣುವಂಕ್ಕಳಂ ಧರಿಸುವ ಮೇಲಂಹೊದಿಕೆ: ವೈಷ್ಣವಭಕ್ತರು ಅವಳ ದಾವಣಿಯ ಸೆರಗು ಮಾತ್ರ ಪರಮಾತ್ಮನ ಮೇಲಿರುವುದನ್ನು ಕಂಡರು (ಭಕ್ತಿಮಿ. ೯೨). ಧಾವಳಿ: ಪಟೇಲರ ಮಗ ನನ್ನನ್ನು ದುರುಗಟ್ಟಿ ನೋಡಿ ನಾನು ಹೊದ್ದಿದ್ದ ಧಾವಳಿಯನ್ನು ಕಿತ್ತೆಸೆದ (ಗೋಪುರ. ೩೫); ಕಾಲಿನ ಕಿರಿಗೆಜ್ಜೆಗಳಿಂದ ಹಿಡಿದು ತಲೆಯ ಮೇಲೆ ಹೊದೆದಿದ್ದ ಧಾವಳಿಯವರೆಗೆ ಎಲ್ಲವೂ ಸ್ಥಳೀಯ ಉಡುಗೆಯೇ ಆಗಿದ್ದಿತು (ಝಾರಾಚಿ. ೯೦).

[←ಪಾರ. ದಾಮನೀ; ಹಿಂ. ದಾಮನ್ = ಸೆರಗು, ಅಂಚು]

ದಾವಣಿ$_3$ 'ದಾಹಣಿ' ನೋ

ದಾವಣಿಗಟ್ಟು$_1$, ಡಾವಣಿಕಟ್ಟು (ಕ್ರಿ). ೧. ಸಾಲಾಗಂ; ಸಾಲುಗಟ್ಟು: ದಾವಣಿಗಟ್ಟಿದ ಮಧುಕರಜೀವಧನಕ್ಕಿಕ್ಕುವಂತೆ ಮೇಪಂ ಸಖಿ ಲೀಲಾವತಿಯ ಪಂತಿಗುರುಳೊಳ್ ಪೂವಿನ ಕೇಸರದ ರಜಮನೊರ್ವಳ್ ತಳಿದಳ್ (ಲೀಲಾವ. ೦೨-೬೦). ೨. ಸಾಲಾಗಿ ಕಟ್ಟು; ಮಾಲೆಗಟ್ಟು: ಮಱಿಮೀಂಗಳ ದಾವಣಿಗಟ್ಟಿದವೋಲ್ ಬೆಳ್ದಿಂಗಳ ಹಕ್ಕಿಯ ಹಸುಳೆಗಳ ಲಾವಣಿಗೆಯ ಮುಸುಕಿದವೋಲ್ . . . ಕುವರನ ಲಾವಣ್ಯಾಂಗ ಮನಡರ್ದುವು ಪುರಸತಿಯರ ಕಣ್ಗಳ ಬೆಳಗು (ಜಯಕಾ. ೦೦-೫೫). ಡಾವಣಿಕಟ್ಟು: (ಕ). [ದಾವಣಿ$_1$ + ಕಟ್ಟು$_1$]

ದಾವಣಿಗಟ್ಟು$_2$ (ನಾ). (ಹೂವನ್ನು) ಸಾಲಾಗಿ ಕಟ್ಟಿರುವಂತಹಂದಂ; ಮಾಲೆ: ನನೆಯಂ ದಾವಣಿಗಟ್ಟಂ ಕಟ್ಟುತ್ತಿನಿಯರ್ಗೊಪ್ಪಿಸಿ ಕೊಡುವ ಪೊಲಿತ್ತರ್ವನಿತೆಯರಾ ಪೂವಿನ ಪೇಟೆಯೊಳ್ಬಾಸಿಗಮಂ ವಿಟರ್ಗೆ (ಜಯಕಾ. ೦-೫೮). [ದಾವಣಿ$_1$ + ಕಟ್ಟು$_2$]

ದಾವಣಿಗುಱಿ (ನಾ). ಹಗ್ಗದಿಂದ ಸಾಲಾಗಿ ಕಟ್ಟಿದ ಕುರಿ: ನಿನ್ನಸಿ ಮುಖದಿಂ ದಾವಣಿಗುಱಿಯಂ ತಱಿದೊಡೆ ದೇವಿ ಶುಭೇತರವಿನಾಶಮಂ ದಯೆಗೆಯ್ಗುಂ (ಯಶೋಚ. ೩-೧೩). [ದಾವಣಿ$_1$ + ಕುಱಿ$_3$]

ದಾವಣಿಗೊಂಟ (ನಾ). ಹಗ್ಗ ಬಿಗಿಯಲು ಹೊಡೆಯುವ ಗೂಟ: ದಾವಣಿಗೊಂಟಮಂ ಪೊಡೆವ ಕಾಟ್ಕುರುಳಂ ಪರಿದಾಯ್ವ ಪೇರ್ಗಳಂ ಠಾವಱಿದೊಟ್ಟಿಲೊಟ್ಟುವ . . . ಅಡುವ ದೋಲಿಗರಿಂದೆಸೆದಂ ವಣಿಗ್ವರಂ (ದಶಕು. ೪-೭೮). [ದಾವಣಿ$_1$ + ಗೊಂಟ]

ದಾವಣಿಗೆ (ನಾ). = ದಾಹಣಿ: ದಾವಣಿಗೆಯೊಳ್ ಕುಟ್ಟಿ (ಲಕ್ಷ್ಮಭಾ. ೭-೬-೬). [ದಾವಣಿ$_3$ (<ದಾಹಣಿ) + – ಗೆ]

ದಾವಣಿಗೆಡಹು (ಕ್ರಿ). ಸಾಲಿನಲ್ಲಿ ಉರುಳಿಸು: ಮಗಧನ ಹೆಣನ ದಾವಣಿ {ಣಿ}ಗೆಡಹಿದನು ಸಮರಂಗಭೂಮಿಯಲಿ (ಕುಪ್ಯಾದ್ರೋ. ಓರಿಇ ಪು. ೨೮೦).

[ದಾವಣಿ$_1$ + ಕೆಡಹು (<ಕೆಡಪು)]

ದಾವಣಿಗೊಳ್ (ಕ್ರಿ). ಗುಂಪುಗೂಡು; ಒಟ್ಟಾಗು: ದಾವಣಿ [ಪಾಠಾಂ. ಗಾವಳಿ]ಗೊಂಡೆಱಿಗಿದ ಭೃಂಗಾವಳಿಯಂ ಸೋವಲ್ (ಲೀಲಾವ. ೦೩-೭೬).

[ದಾವಣಿ$_1$ + ಕೊಳ್$_1$]

ದಾವಣಿಸುಳಿ (ನಾ). ಕೊರಳಿನ ಹತ್ತಿರ (ಹಗ್ಗ ಕಟ್ಟುವ ಬಳಿ) ಇರುವ ಸುಳಿ: ದನಾ ಪರೀಕ್ಷೆ ಮಾಡೋವಾಗ ಹೀನಸುಳಿ, ಪಾತಾಳಸುಳಿ, ದಾವಣಿಸುಳಿ . . . ಕೋರಬಗ್ರಿ, ಕೊವ್ಹಲ್ಲು ಇವೆಲ್ಲಾನೂ ಚಂದಾಗಿ ನೋಡಿ ಒಳ್ಳೆ ಸುಳಿ ಇರೋದ ತತ್ತಾಲಾ (ಹುಟ್ಟಿಹ. ೦೩೯).

[ದಾವಣಿ$_1$ + ಸುಳಿ$_2$ (<ಸುಟ್ಟಿ$_2$)]

ದಾವಣೆ 'ದಾಹಣಿ' ನೋ.

ದಾವತಿ 'ಧಾವತಿ' ನೋ.

ದಾವತಿಗೊಳ್ 'ಧಾವತಿಗೊಳ್' ನೋ.

ದಾವತಿಪಡಿಸು (ಕ್ರಿ). ಸಂಕಟವನ್ನುಂಟುಮಾಡು; ಆಯಾಸಗೊಳಿಸು:

[ದಾವತಿಪಡು (<ಧಾವತಿಬಡು) + – ಇಸು$_3$]

ದಾವತಿಪಡು 'ಧಾವತಿಬಡು' ನೋ.

ದಾವತಿಬಡು 'ಧಾವತಿಬಡು' ನೋ.

ದಾವತಿವೆಱು (ಕ್ರಿ). ಬಳಲಿಕೆಯನ್ನು ಹೊಂದು; ಶ್ರಮಪಡು: ದಾವತಿವೆತ್ತುವಂದ ಋತುಪರ್ಣನೃಪಂ ಪುರದೊಳ್ ನಿರಂತರಂ ತೀವಿದ ವಾರ್ತೆಯಂ ಪಲಬರಿಂ ತಿಳಿವಂತಿರೆ ಕೇಳ್ದು (ನಳಚಂ. ೭೪೮).

[ದಾವತಿ (<ಧಾವತಿ) + ಪೆಱು$_1$]

ದಾವತಿಹಿಡಿ (ಕ್ರಿ). ಕೆಲಸವನ್ನು ಪ್ರಾರಂಭಿಸು; ಕಾರ್ಯೋನ್ಮುಖನಾಗು: ಮಾಳೂನನ್ನು ನೋಡಿ ಮುಂಗೈ ತಗುಲಿಸಿ ಕೆಳದನಿಯಲ್ಲಿ ಕೇಳಿದನು "ದಾವತಿ ಹಿಡಿಯಲಾ ?" (ಪವನ. ೧೩).

[ದಾವತಿ (<ಧಾವತಿ) + ಹಿಡಿ$_1$ (<ಪಿಡಿ$_1$)]

ದಾವದಗ್ಧ (ಗಂ). ಕಾಳ್ಗಿಚ್ಚಿನಿಂದ ಸುಟ್ಟ: ಎನೆ ದಾವದಗ್ಧಗಿರಿ ನೂತನ ಜಳದಜಳಂಗಳಿಂದಮಾಱುವವೋಲ್ ಭೋಂಕನೆ ಭರತನನಾಱಿಸಿದಂ ಮುನಿವಿನುತ ಗಣಾಧಿನಾಥವಚನಾಮೃತದಿಂ (ಆದಿಪು. ೦೬-೬೦).

[ದಾವ$_2$ + ದಗ್ಧ]

ದಾವದಹನ (ನಾ). ಕಾಡಿನ ಕಿಚ್ಚು; ಕಾಳ್ಗಿಚ್ಚು: ಮದನದಾವದಹನಂ ತಳ್ತಿರ್ದಪುದಿಲ್ಲ ನಿನ್ನಂ (ಕಾದಂಪೂ. ೮೯೯). [ದಾವ$_2$ + ದಹನ]

ದಾವಧೂಮ (ನಾ). ಕಾಡಂಕಿಚ್ಚಿನ ಹೊಗೆ: ಆವು(ವಿ)ಗೆಯ ಕಿಚ್ಚಿನಂತೆ ದಾವಧೂಮ [ಪಾಠಾಂ. ಧಾಮಧೂಮ] ವಾದಂತೆ ಆವ ಓಡ ಸುಟ್ಟನೆಂದ ಱಿಯೆನವ್ವಾ (ಸರ್ವವ. ೭೫-೪೦೫). [ದಾವ$_2$ + ಧೂಮ]

ದಾವಪಾವಕ (ನಾ). = ದಾವದಹನ: ದಾವಪಾವಕಂ ಬಳಸೆ ಸುರುಳ್ದ ಬಾಳ ಸಹಕಾರಮಹೀರುಹಂ (ಆದಿಪು. ೨-೫೯); ದಾವಪಾವಕಜಾಲೆಯಂ

ಕಂಡ ವನಶಿಖಂಡಿಯಂತೆಯುಂ ಗರುಡಚಂಚುವಂ ಕಂಡ ಕಂಚುಕೀಂದ್ರ ನಂತೆಯುಂ ಭಯಂಗೊಂಡು (ಪುಷ್ಪಪು. ೦೩-೨೬ ಪ).

[ದಾವ$_2$ + ಪಾವಕ]

ದಾವಯ್ಯ (ನಾ). ಒಬ್ಬಾತನ ಹೆಸರು : ಸ್ವಸ್ತಿ ಶ್ರೀ ದಾವಯ್ಯನ ಕಿಱಿಯ ನಾರಾಯಣಂ ರಾಜಾಶ್ರಯ ವಿಣ್ಣಗರ ದೇವರ್ಗ್ಗೆ ತನ್ನ ಪಡುವಣ ತೋಂಟ್ಟ ಕಟನಿಯಲ್ (ಎಕ. XIV, ಮಳವ. ೧೨೫-೦ ; ಸು. 1014).

[<ದೇವಯ್ಯ]

ದಾವರ 'ಡಾವರ' ನೋ.

ದಾವರಂಗ (ನಾ). ಒಂದು ಸ್ಥಳದ ಹೆಸರು : ದಾವರಙ್ಗದ ದೊದಿಪನ್ದಿ ಗಲಿಯು ಕೆಲ್ಲೂರು ಕಬೂರುಮೊಳನಿಕೆ (ಎಕ. XII, ತಿಪಟೂ. ೧೦-೩; ಸು. 920 ?). [?]

ದಾವರಿಸು 'ಡಾವರಿಸು' ನೋ.

ದಾವಶಿಖಿ (ನಾ). = ದಾವದಹನ : ಉಗ್ರಾರಿವಂಶಲತಾವಲ್ಲರಿಗಳ್ಗೆ ದಾವಶಿಖಿವೊಲ್ಮೆಯ್ದೋಱಿ (ಪಂಪಭಾ. ೩-೩೩) ; ರತ್ನಶಿಲಾಗೃಹಮಂ ಸಿಡಿಲಂತಿರೆ ಧವಲಹಾರಮಂ ದಾವಶಿಖಿವೊಲಳುರ್ದುದು ದಹನಂ (ಪಂರಾಮಾ. ೧೧-೦೪೧). [ದಾವ$_2$ + ಶಿಖಿ]

ದಾವಾ, ದಾವೆ$_1$ (ನಾ). (ವ್ಯವಹಾರಕ್ಕೆ ಸಂಬಂಧಿಸಿದ) ವ್ಯಾಜ್ಯ ; ಮೊಕದ್ದಮೆ ; ಕಟ್ಲೆ : ವಾದಿಯು ದಾಖಲ್ಮಾಡಿದ ದಾವಾಕ್ಕೆ ಪ್ರತಿ ವಾದಿಯ ಉತ್ತರವೂ ಅದಕ್ಕೆ ವಾದಿಯ ಜವಾಬೂ . . . ಕೋರ್ಟಿಗೆ ದಾಖಲಾಗುತ್ತಿದ್ದುವು (ಮಹಾವಂ. II, ೪೫). **ದಾವೆ$_1$** : ಕೋರ್ಟಿನಲ್ಲಿ ದಾವೆಗಳನ್ನು ಹಾಕಿದರೆ ಆ ದಾವೆಗಳ ತೀರ್ಮಾನ ಪ್ರತಿವಾದಿಗೆ ಬರೆದು ಕೊಟ್ಟ ಪತ್ರದ ಆಧಾರದ ಮೇಲೆ ಆಗುತ್ತದೆ (ಪ್ರಪಾಇ. I, ೩೮೭); ಆಸ್ತಿ, ಸಂವಿದೆಗಳು, ಅಧಿಕಾರಗಳು, ದಾಯಿತ್ವಗಳು, ಆಭಾರಗಳು ಮತ್ತು ದಾವೆಗಳು (ಭಾಧಾನ. ೦೬೯) ; ರೆಗ್ಯುಲೇಷನಿನ ೬ನೆಯ ಪ್ರಕರಣದ ಮೇರೆ ದಾವೆಗಳನ್ನು ವಿಚಾರಿಸುವ ಬಗ್ಗೆ . . . ಹೆಸರುಗಳು ಸೇರಿರತಕ್ಕದ್ದು (ಗ್ರಾಮಾಕ. ೧೧).

ದಾವಾ ಅರ್ಜಿ = ಕೋರ್ಟಿನಲ್ಲಿ ತಗಾದೆ ಹೂಡಲು ಕೊಡುವ ಅರಿಕೆ: ವಾದಿಯು ತನ್ನ ದಾವಾ ಅರ್ಜಿಯಲ್ಲಿ ಅಂಥಾ ಮನುಷ್ಯನನ್ನು ನೇಮಿಸಿದ್ದರೆ . . . ಆತನಿಗೆ ತಿಳಿಸತಕ್ಕದ್ದು (ಗ್ರಾಮಾಕ. ೦೭). **ದಾವಾದಾಖಲೆ** = ತಗಾದೆಯ ಅರಿಕೆಯನ್ನು ದಾಖಲು ಮಾಡಿಸುವುದು : ಲಿಖಿತ ಮೂಲಕವಾಗಿ ದಾವಾದಾಖಲೆಯನ್ನು ಪಡೆದು ಅದಕ್ಕೆ ಉತ್ತರ ಪ್ರತ್ಯುತ್ತರ ಗಳನ್ನು ಬರೆಸುವ ಪದ್ಧತಿಯಿರಲಿಲ್ಲ (ಮಹಾವಂ.II, ೨೮). **ದಾವಾ ಮಾಡು, ದಾವೆ ಮಾಡು** = ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡು : ಸೆಟ್ಟಿ ದಾವಾ ಮಾಡವನೆ (ಮಾಂಗಲ್ಯ. ೦೯) ; ವಕೀಲರ ಮನೆಗೆ ಹೋಗಿ ಕೋರ್ಟಿನಲ್ಲಿ ದಾವೇ ಮಾಡಬೇಕೇ (ಮೋಹಿನೀ. ೧೨೪). **ದಾವಾ ಸೊತ್ತು** = ತಗಾದೆಯಲ್ಲಿ ರುವ ಭೂವಿಂ; ವ್ಯಾಜ್ಯದಆಸ್ತಿ : (ಕಿ). **ದಾವಾ ಹಾಕು, ದಾವ ಹಾಕು**= ಕೋರ್ಟಿನಲ್ಲಿ ವ್ಯಾಜ್ಯ ಹೂಡು ; ಮೊಕದ್ದಮೆ ನಡೆಸು : ನಿಮ್ಮ ತಂದೆಯವರ ಮೇಲೆ ದಾವಾ ಹಾಕಿ ಬಿಟ್ಟೇನು(ಹನ್ನೊಂದ. ೫೧); ಕಂಪನಿಯ ಡೈರೆಕ್ಟರುಗಳಲ್ಲಿ ಯಾರ ಮೇಲಾದರೂ ದಾವಾ ಹಾಕಿ ಸಾಲದ ಪೂರ್ತಿ ಹಣ ವನ್ನು ಅವರಿಂದ ವಸೂಲುಮಾಡಿಕೊಳ್ಳಬಹುದು (ಹಡಪ್ರ. ೦೨೯ ಅಡಿಟಿ); ಕೋರ್ಟಿಗೆ ಹೋಗಿ ಕಳಸಯ್ಯನ ಮೇಲೆ ದಾವಾ ಹಾಕಿದ (ಗಂಗಾಳ. ೩೩). **ದಾವೆ ಹೂಡು** = ದಾವಾ ಹಾಕು : ನನಗೆ ನಾಳೆ ದಾವೆ ಹೂಡಬೇಕಾಗಿ ಬರುತ್ತದೆ (ಪ್ರಕಾಶ. ೦೪೭) [←ಅರ. ಹಿಂ. ಮರಾ. ದಾವಾ]

ದಾವಾಗ್ನಿ (ನಾ). ೧. = ದಾವದಹನ : ತೀವ್ರ ದಾವಾಗ್ನಿವೊಲುರಿದವು ದುರ್ಬೀತಳಂ (ಸುಕುಮಾ. ೪-೦೩) ; ದಾವಾಗ್ನಿಯನೆಟ್ಟಱಿಪ ಮಹಾ ವಾಯುವಿನಂತೆ ತಮ್ಮ ಮನದಳಿಪಂ ನಾನಾ ವಿಧ ದುರಾಗಮೋಕ್ತಿ ಗಳಾವಗಮೆಟ್ಟರಿಸೆ (ವರ್ಧಪು. ೧೧-೪೨) ; ಅಡವಿವಿಡಿದೋಡುತಿಹ ಗಜಂ ದಾವಾಗ್ನಿ ತನುವೊತ್ತು ಬೀದಿವರಿವಂತಿರ್ದುದು (ಹಡಕಾ. ೫-೩೬) ; ಇಡಿದ ಧೂಳಿಯ ಧೂಮರಾಶಿಯ ಪಡೆ ವಿರಾಟನ ಮಗನ ಕಂಗಳಿಗೊಡನೊಡನೆ ದಾವಾಗ್ನಿಯಂತಿರೆ ತೋಱಿತಿದಿರಿನಲಿ (ಕುಪ್ಯಾವಿ. ೬-೩) ; ಅವಳ ಮನಸ್ಸಿ ನಲ್ಲಿ ಯಾವುದೊ ದಾವಾಗ್ನಿ ಎದ್ದಿದೆ (ಶಾಂತಲಾ. ೨೭೬). ೨. ಪಂಚಾಗ್ನಿ ಗಳಲ್ಲಿ ಒಂದು : ಗ್ರೀಷ್ಮಾದಿ ರೂಪಕಾಲಾಗ್ನಿ ಆತಪರೂಪ ಸೂರ್ಯಾಗ್ನಿ ಪುಣ್ಯಾಭಿವ್ಯಕ್ತರೂಪ ಸೂರ್ಯಕಾಂತಾಗ್ನಿ ವೇಣ್ವಭಿವ್ಯಕ್ತ ದಾವಾಗ್ನಿ ದೇಹಾಂತರ್ಗತ ಉದರಾಗ್ನಿಗಳೆಂಬ ಪಂಚಾಗ್ನಿಗಳಂ (ವಿವೇಕ. ೦೪೪).

[ದಾವ$_2$ + ಅಗ್ನಿ]

ದಾವಾದಾರ, ದಾವೆದಾರ (ನಾ). ವ್ಯಾಜ್ಯ ಹೂಡಿದವನು : ಕೋರ್ಟಿನ ಕೊನೆಯ ತೀರ್ಮಾನದ ಮೇರೆಗೆ ದಾವಾದಾರನೇ ಜಾಮೀನು ತೆರ ಬೇಕಾಯಿತು (ರೂಢಿ). **ದಾವೆದಾರ** : (ಕಿ). [ದಾವಾ + – ದಾರ$_4$]

ದಾವಾನಲ, ದಾವಾನಳ (ನಾ). = ದಾವದಹನ : "ಬನಬೆಂಕಿಯೆ ದಾವಾ ನಲಂ" (ಕವಿಕಂ. ೫೮) ; ಮಹಾಸ್ಮರವಿಪಿನದಾವಾನಲ ಕೃಪಾವನಧಿ ಬಲಿದುರುಶೃಂಗಿಯಾದಂದವೊ (ಏಕೋಪು. ೨-೬). **ದಾವಾನಳ** : ಆತ್ಮ ಜರಿನಾದ ಕುಲಾಪವಾದ ಪರಾಭವದ ದಾವಾನಳದಿಂ . . . ಚಿಂತಾಂತ ರಂಗನುಮಾಗಿ (ಸುಕುಮಾ. ೨-೦೦ ಪ) ; ಲಲಿತ ಚಂದ್ರಿಕೆಗೇಕೆ ದಾವಾನಳನ ಖಾಡಾಖಾಡಿ (ಕುಪ್ಯಾದ್ರೋ. ೪-೪೮) ; ಲಲಿತನಿರ್ಮಲಚಂದ್ರಕಾಂತದ ಶಿಲೆಯ ಹತ್ತಿರೆ ಲತೆಯ ದಾವಾನಳನು ಕೊಳಲಾ ಜ್ವಾಲೆಯಾ ಶಿಲೆಯೊಳಗೆ ತೋರ್ಪಂತೆ (ಪ್ರಭುಲೀ. ೭-೨೫). [ದಾವ$_2$ + ಅನಲ]

ದಾವಾನಲಚೂರ್ಣ (ನಾ). ಒಂದು ವಿಧವಾದ ಚೂರ್ಣ : ದಾವಾನಲ ಚೂರ್ಣ–ಹಿಂಗು, ವಾಯುವಿಳಂಗ, ಪಂಚಲವಣ, ಕರ್ಕಾಟಕ ಶೃಂಗಿ, ತಾರೇಕಾಯಿ, ನೆಲ್ಲೀಚಟ್ಟು, ತ್ರಿಕಟುಕ, ಚವ್ಯ, ಚಿತ್ರಮೂಲ, ಮೋಡಿ, ಕೊನ್ನಾರಿಗೆಡ್ಡೆ, ಕಟುಕರೋಹಿಣಿ, ಕರೀಜೀರಿಗೆ, ಬಿಳೀಜೀರಿಗೆ, ಕೊಡಸಿಗೆ ಬೀಜ, ಚಂಗಲ್ವಕೋಷ್ಟ, ಹೆಗ್ಗುಳ್ಳ, ನೆಲಗುಳ್ಳ, ತಿಗಡೆ, ಗಜಹಿಪ್ಪಲಿ, ಸಿಹಿಹಾಲೆಬೇರು, ವಿಷಖದ್ದಿ, ಈಶ್ವರೀಬೇರು, ಗಂಟುಭಾರಂಗಿ, ಯವ ಕ್ಷಾರ, ಸರ್ಜಕ್ಷಾರ, ಬಿಳಿಗಾರ, ಅರಿಸಿನ, ಮರದರಿಸಿನ ಇವನ್ನು ಸಮಾಂಶ ಚೂರ್ಣಮಾಡಿ ಬೆಲ್ಲ ಅಥವಾ ಜೇನು ತುಪ್ಪದೊಡನೆ ತೆಗೆದುಕೊಳ್ಳಲು ಕಾಸ ಶ್ವಾಸ, ಅಜೀರ್ಣ, ವಾತತಿಮಿರ, ತ್ರಿದೋಷಶೂಲೆ, ಸಹ ಪರಿಹಾರ ವಾಗುವುವು (ಸಕವೈ. ಪರಿ. ೪೩೬).

[ದಾವಾನಲ? + ಚೂರ್ಣ$_2$]

ದಾವಾನಳ 'ದಾವಾನಲ' ನೋ.

ದಾವಾರಿ (?). (?) : ವೃಷಗ ವೃಶ್ಚಿಕಗಮನ ದಾವಾರಿ ಕಂಸಮಂ ತೊಲೆಯದಿರ್ಪ (ಏಕೋಪು. ೨). [?]

ದಾವು$_1$ 'ಡಾಹ' ನೋ.

ದಾವು$_2$ (ನಾ). ಹಗ್ಗ ; ಹುರಿ; ರಜ್ಜು : "ತಳ್ಳೆಂದುಂ ದಾವೆಂದುಂ ಅಗ್ಗರಣೆ ಯೆಂದುಂ ರಜ್ಜು" (ಕಶಸಾ. ೩೦-೩೪೦) ; ದಾವಿನ್ನಡುವಂ ತೊಡರ್ಚಿ ದೃಢವಾಗಲುಲೂಖಲದಲ್ಲಿ ಕಟ್ಟಿ ಪೋಗಿನ್ನು . . . ನೋಟಿಪ್ಪೆನೆಂಬುದುಂ (ಜಗವಿ. ೩-೩೭) ; ದಾವುಂ–ದಾವು (ಶಮದ. ೨೭೮ ಪ್ರಯೋ) ; ಮುನ್ನೇಂ ಕಟ್ಟದೆ ಮಾಣ್ದರೇ ಕಡೆವ ದಾವಿಂದೆನ್ನಂ (ಅಪ್ರತಿ. ೪೪-೨೩) ; ಎನ್ನೀ ಅಟಿ ಮೆಯ್ಯಂ ಬಾವಿ ದಾವುಗಳ್ಗೊಪ್ಪಿಸಿ ಎನ್ನಿನಿಯನಂ ಮಗುಟ್ಟುಂ ಕಾಣಲಕ್ಕು ಮೆಂದೊಡೇವೆನ್ನೆ (ರಾಮಾಶ್ವ. ೪೨-೦). [<ಸಂ. ದಾಮನ್]

ದಾವುಣಿ 'ದಾವಣಿ$_1$' ನೋ.

ದಾವುದು (ಸ). ರೂಪಗಳು (ಪುಂ. ಸ್ತ್ರೀ ಬಹುವ) ದಾರು$_1$, (ವಿಶೇ) ದಾವ$_1$. ಪ್ರಶ್ನಾರ್ಥಕ ಸರ್ವನಾಮ : ದಾವುದು ದಾರಿ ಆ ಊರಿಗೆ (ರೂಢಿ).

ದಾರು$_1$ = ಅದು ಯಾರಂ ; "ಯಾರಂ" (ಜಾನಕೋ. ೪) : ದಾರಿಗೆ ದಾರು ಮತ್ತಿಲ್ಲ ದೃಢ ಸೇರಿತು ಮನವಮು ಮನೆ ಮನೆಯೊಳಗೆಲ್ಲ (ಪುರಂದ. ೦-೪೨-೬); ಅಂತರಂಗದ ಒಳಗೆ ಭ್ರಾಂತಿ ಬಿಡಿಸುವ ಎಮ್ಮೆ ಅಂತು ದಾರಿಗು ತಿಳಿಯದಂಥ ಎಮ್ಮೆ (ಪುರಂದ. ೨-೩೫-೩); ದಾರೊಡೆಯನೊ ದಾರ್ಪತ್ತನೊ ನೀರೆ ಇವಳ ಸೊಬಗಿದೇನೊ (ರತ್ನಾಕ. ೩೦) : ಈ ಮತ್ತೊಬ್ಬ ನಾಲ್ಕನೇ ಸ್ತ್ರೀಯು ದಾರಪ್ಪಾ? (ಉರಾಚ. ೦೪); ಸೋರುತಿಹುದು ಮನೆಯ ಮಾಳಿಗಿ ದಾರು ಗಟ್ಟಿ ಮಾಳ್ಪರಿಲ್ಲ ಕಾಳಕತ್ತಲೆಯೊಳಗೆ ನಾನು ಮೇಲಕೇರಿ ಮೆಟ್ಟಲಾರೆ (ಕರೀಫ. ೦೯-೦) : ಎಲೈ ಭಗವತಿಯರಿರಾ ! ನೀವು ದಾರು ? (ಮುಂಬಯಿ. ೪-೩೯೯). ದಾವ$_1$= ಅದು ಯಾವ; "ಯಾವ" (ಜಾನಕೋ. ೪); ನಿನ್ನ ಶೀಲ ಸೌಂದರ್ಯವನು ಧರೆಯೊಳಗೆ ವರ್ಣಿಸುವ ಕವಿಯು ದಾವಾ (ಪಾದಿಕೀ. ೪-೦); ಈಗ ಆ ರಾಜನು ದಾವ ಕಾರ್ಯದಲ್ಲಿ ಆಸಕ್ತನಾಗಿದ್ದಾನೆ (ಉರಾಚ. ೪೩). 'ಆವುದಂ', 'ಯಾವುದಂ' ಪರಾ.

[<ಅದು$_1$ + ಆವುದು]

ದಾವೆ$_1$ 'ದಾವಾ' ನೋ.

ದಾವೆ$_2$ (ನಾ). ೧. ಹಗ್ಗ (?) : ನಿನ್ನಯ ನಣ್ಪೆ ದಲೆಂದು ತಂದ ಹುಟ್ಟಿಗೆಯಿಟ್ಟಿದೇಟ್ಟೊಳಂಗಟ್ಟಿದು ಸೇದೆಯ ಜಾವಿಯೊ ಬಂದ ದಾವೆ[ಪಾಠಾಂ. ತಾವಿ]ಯೋ (ಲೀಲಾವ. ೨-೧೦೦). ೨. (?): "ದಾವೆ[ಪಾಠಾಂ. ರಾವೆ]ಯೆನೆ ಸಾವೆಯಕ್ಕುಂ" (ಮಂಗರಾ. ೩೬-೦೮). [?]

ದಾವೆದಾರ 'ದಾವಾದಾರ' ನೋ.

ದಾಶ (ನಾ). ೧. ಬೆಸ್ತರವನಂ ; ಮೀನಂಗಾರ : ಆ ಮೀನನೊರ್ವಂ ಜಾಲಗಾಱಂ ಜಾಲದೊಳ್ ಪಿಡಿದಲ್ಲಿಗರಸಪ್ಪ ದಾಶನಲ್ಲಿಗುಯ್ದು ತೋಱಿ ದೊಡೆ (ಪಂಪಭಾ. ೦-೬೮ ಪ). ೨. ಆಳಂ ; ದಾಸ ; ಸೇವಕ : ಮಹಾಬಲಶಾಲಿಯಾದ ಜರಾಸಂಧನು, ಕೃಷ್ಣನು ದಾಶನೆಂದು ಅವನೊಡನೆಯುದ್ಧಕ್ಕೆ ಹೋಗಲಿಲ್ಲ (ಪಚಭಾ. ೮೩). 'ದಾಶಾರ್ಹ' ಪರಾ. [ಸಂ.]

ದಾಶಮಿಕ (ಗಂ). ಹತ್ತನೆಯಂ ; ಹತ್ತು ಹತ್ತಾಗಿ ಎಣಿಸಿದ ; ಹತ್ತು ಹತ್ತು ಹಿಡಿದಂ ಹೋಗುವ : "ದಾಶಮಿಕ, ದಶಮಲವ" (Decimal. ಪಾರಿನಿ. ೨೬). [ಸಂ.]

ದಾಶಮಿಕಪದ್ಧತಿ (ನಾ). [ಗಣಿತ] ಹತ್ತು ಹತ್ತರಂತೆ ಏರುತ್ತಾ ಅಥವಾ ಇಳಿಯುತ್ತಾ ಹೋಗುವ ಎಣಿಕೆಯ ಕ್ರಮ : ಈತನ ಸಲಹೆಗಳ ಪ್ರಕಾರವೇ, ದಾಶಮಿಕಪದ್ಧತಿಯು ಜಾರಿಗೆ ಬಂದಿತು (ಗಣಿಚ. ೦೩೮).

[ದಾಶಮಿಕ + ಪದ್ಧತಿ]

ದಾಶರಥಿ (ನಾ). ದಶರಥನ ಮಗ ; ಶ್ರೀರಾಮ : ರತ್ನ ಪ್ರದೀಪಮಯಮಾಯ್ತು ತಮಮೆಲ್ಲಮುಂ ರಘುಜಪ್ರತಾಪಮಯಮಾಯ್ತು ಮೂಜಗಮೆಲ್ಲಮುಂ ದಾಶರಥಿ ರಾಜ್ಯಮಂ ಪಾಲಿಸೆ (ಚೈಮಿಭಾ. ೦೮-೦೨). [ಸಂ.]

ದಾಶಾರ್ಹ (ನಾ). ೧. ದಶಾರ್ಹನ ವಂಶದವನು; ಯದುವಂಶದವನು. ೨. ಕೃಷ್ಣ. [ಸಂ.]

ದಾಶಾಳ 'ದಾಸವಣ' ನೋ.

ದಾಶಿವಾಳ 'ದಾಸವಣ' ನೋ.

ದಾಷ್ಟಿಕ$_1$ 'ದಾಷ್ಟೀಕ' ನೋ.

ದಾಷ್ಟಿಕ$_2$ (ನಾ). ಹಾವು ಕಚ್ಚಿದವನಂ : ಇಲ್ಲಿಯೆ ಇರುಳೀ ದಾಷ್ಟಿಕಂಗೆ ಜಾವಮಿರಿಮೆಂದು ಪೇಟ್ದು ಪೋದಂ (ಪಡ್ಮಾರಾ. ೦೪-೨೫). [ಸಂ.]

ದಾಷ್ಟಿಕತನ (ನಾ). ಎದೆಗಾರಿಕೆ ; ದಿಟ್ಟತನ ; ಕೆಚ್ಚು : ದಾಷ್ಟಿಕತನಗೆಟ್ಟು ದರಹಾಸಮುಖಿ ಪರಿವೇಷ್ಟಿಸಿದಮಳ ಸೌಂದರದಿ ಚೇಷ್ಟಿಪ ವೇಶ್ಯಾ ಭುಜಂಗರ ಮಧುಪಾನಗೋಷ್ಠಿಯ ಸೊಬಗನೀಕ್ಷಿಸಿದ (ಮೋಹತ. ೦೯-೯೬); ಅವಳು ಹಳ್ಳಿಯ ಹೆಣ್ಣಾದುದರಿಂದ ಅಪ್ಪೊಂದು ದಾಷ್ಟಿಕತನವುಳ್ಳವಳಾಗಿರಲಿಲ್ಲ (ಮೂಲಾನ. ೦೩). [ದಾಷ್ಟಿಕ$_1$ (<ದಾಷ್ಟೀಕ) + - ತನ]

ದಾಷ್ಟೀಕ, ದಾಷ್ಟಿಕ$_1$ (ನಾ). ೧. ಎದೆಗಾರಿಕೆ ; ಧೈರ್ಯ ; ದಕ್ಷತೆ : ಜಾಣತನ ದಾಷ್ಟೀಕ ದೇಹತ್ರಾಣ ನಡೆನುಡಿಗಳಲಿ ಸಕಲ ಪ್ರಾಣಿಗಳಲತ್ಯಧಿಕನಾಗಿರುತಿರ್ದು (ನಿಭಾಗ. ೦೦-೦೩-೮) : ಮನದೊಳು ಕಳವಳಗೊಳುತ ಕೇಳಿದಡೆಯೇನು ದಾಷ್ಟೀಕವೆಂದು ತೋರುವುದೊ (ಸೌಗಂಧಿ. ೨೫೯-೦೫). ೨. ದಕ್ಷನೂ ಪ್ರಭಾವಶಾಲಿಯೂ ಆದವನಂ : (ಕಿ). ೩. ಒರಟ ; ನಿರ್ಲಜ್ಜ. ದಾಷ್ಟಿಕ$_1$: ೧. ಅದರಲ್ಲಿ ಅಭಿರುಚಿಯಿಲ್ಲದಿದ್ದರೂ ಇದೆಯೆಂದು ಸಾಧಿಸುವ ದಾಷ್ಟಿಕ ಅವರಲ್ಲಿತ್ತು (ನಾಡಿಗೇ. ೦) ; ಕಲಾವಿದರಲ್ಲಿ ದಾಷ್ಟಿಕವಿಲ್ಲದಿರುವುದರಿಂದಲೋ ಅವರಿಗೆ ತಕ್ಕ ಪ್ರೋತ್ಸಾಹವಿಲ್ಲದಿರುವುದರಿಂದಲೋ ಈ ಪದ್ಧತಿಗಳು ಅಷ್ಟು ಪ್ರಖ್ಯಾತವಾಗಿಲ್ಲ (ಭಾರದ. ೫೬೨).

ದಾಷ್ಟಿಕವಾಗು = ದೃಢತೆ ಹೊಂದಂ; ಗಟ್ಟಿಯಾಗಿರಂ: ಹುಡುಗನಿಗೆ ವಿದ್ಯೆಯ ಹಂಬಲವಿದೆ. ದಾಷ್ಟೀಕವಾಗಿದ್ದಾನೆ (ಹತ್ತುಮ. ೧೦೨).

[<ಸಂ. ಧಾರ್ಷ್ಟಿಕ]

ದಾಸ (ನಾ). ೧. ಆಳಂ ; ತೊತ್ತು; ಊಳಿಗದವನಂ; ಸೇವಕ : "ದಾಸಃ, ದಾಸೇರಕಃ—ಈ ೨ ತೊ (ಟ್ತು)ತ್ತಿನ ಮಗಂ" (ಹಲಾಯು. ೬೦-೨೦೦) ; ಕಾಳಿದಾಸಂಗೆ ದಾಸರೆನಿಪರ್ ಕವಿಗಳ್ (ಜಗವಿ. ೦-೯); ಈಶ ನಿಮ್ಮ ದಾಸರ ದಾಸಿಯ ದಾಸ[ಪಾಠಾಂ. ಸಿ] ನಾನಯ್ಯ (ಬಸವ. ೩೪೧) ; ದಾಸನ ಮಾಡಿಕೋ ಎನ್ನ ಸ್ವಾಮಿ ಸಾಸಿರ ನಾಮದ ವೆಂಕಟರಮಣ (ಪುರಂದ. ೦-೯ ಪಲ್ಲವಿ) ; ದಾಸನಾಗಿಹ ಕೂಸು ಮೊರೆಯಿಡಲಾ ಸಮಯಕೈತಂದು (ಗಗತಾ. ೦೯-೨೬). ೨. ವೈಷ್ಣವ ಪಂಥದ ಭಕ್ತ ; ಹರಿದಾಸ ; ದಾಸಯ್ಯ ; ದಾಸಕೂಟಕ್ಕೆ ಸೇರಿದ ವ್ಯಕ್ತಿ: ಅಷ್ಟವಿಧಾರ್ಚನೆ ಮಠಪತಿ ದಾಸ ವೈಷ್ಣವ ರಾಹಾರದಾನಕಂ ಬಿಟ್ಟ ದತ್ತಿ (ಎಕ. XIV, ಸಾಗಮಂ ೦೪೦-೬೬ ; ಸು. 1224) ; ದಾಸರ ನಿಂದಿಸಬೇಡ ಮನುಜ ಹರಿದಾಸರ ನಿಂದಿಸಬೇಡ (ಪುರಂದ. ೦-೧೦ ಪಲ್ಲವಿ) ; ದಾಸನೆಂತಾಗುವೆನು ಧರೆಯೊಳಗೆ ನಾನು ವಾಸುದೇವನಲ್ಲಿ ಲೇಶಭಕಂತಿಯ ಕಾಣೆ (ಪುರಂದ. ೪-೦೬೩ ಪಲ್ಲವಿ) : ದಾಸರು ಬಂದಾರ ಮದುವಿಗೆ (ಲೋಕಗೀ. ೨೫) : ಹರಿದಾಸರಲ್ಲಿ ದಾಸರು, ವ್ಯಾಸರು ಎಂದು ಎರಡು ವಿಧ (ಭಾರದ. ೩೦೦). ೩. ಒಂದಂ ಜಾತಿ ; P ಸಾಮಾನ್ಯವಾಗಿ ಇವರಂ ಒಂದಂ ಕಡೆ ನಿಲ್ಲದೆ ಊರಿಂದೂರಿಗೆ ಸಂಚಾರಮಾಡುತ್ತಾ ಕೀರ್ತನೆ, ಭಜನೆ ಮುಂತಾದುವುಗಳಿಂದ ಹೊಟ್ಟೆ ಹೊರೆದಂ ಕೊಳ್ಳುವರಂ : ದಾಸರು . . . ಇವರಲ್ಲಿ ತಿರುಮಲದಾಸರೆಂತಲೂ ಗಂಡುದಾಸರೆಂತಲೂ ಯೆರಡು ವೊಳಭೇದಗಳಿವೆ (ಕಭಾಗೆ. ೨೦೭). ೪. ಮೀನಂಗಾರ; ಬೆಸ್ತ: ನುತ ದಾಸಾನ್ವಯ ನಾಯಕಸುತ ನಾನೆನಗಿದಿರ ದಾರುಮಿಲ್ಲಂ ಜಗದೊಳ್ (ಹಾಲಾಸ್ಯ. ೪-೯-೫೨).

ದಾಸಮಕ್ಕಳು = ಆಳುಮಕ್ಕಳಂ ; ತೊತ್ತಿನ ಮಕ್ಕಳು ; ಭಕ್ತರಂ : ಶ್ರೀ ಭೇರುಂಡೇಶ್ವರ ದೇವರ್ಗ್ಗೆ . . . ಸಮಸ್ತಪ್ರಜೆ ದಾಸಮಕ್ಕಳು ತಂಮ . . . ಕೊಟ್ಟ (ಎಕ. VII (8), ಶಿಕಾರಿ. ೩೫೪; ಸು. 1250). ದಾಸರ ಆಟ, ದಾಸರಾಟ = ದಾಸರಂ ಆಡುವ ನಾಟಕ ; ಬಯಲಾಟದ ಒಂದಂ ಪ್ರಕಾರ : ದಾಸರ ಆಟ ಆಟವಲ್ಲ ದೋಸೆಯ ಊಟ ಊಟವಲ್ಲ (ಗಾಜ); ಅವನು 'ದಾಸರಾಟ' ನೋಡುವುದಕ್ಕೆಂದು ಪಕ್ಕದ ಹಳ್ಳಿಗೆ ಹೋಗಿದ್ದನು (ರೂಢಿ). ದಾಸರ ಪದ = ದಾಸರಂಗಳ ಹಾಡು; ಹರಿದಾಸರ ಕೀರ್ತನೆ: 'ದಾಸರ ಪದದಲ್ಲಿ ತಪ್ಪಿಲ್ಲ, ತಂಗಡೀ ಹೂವಿನಲ್ಲಿ ವಾಸನೆಯಿಲ್ಲ' ವೆಂದು ಹರಿದಾಸರನ್ನು ನಿಂದಿಸುವವರ ವಾಗ್ಬಂಧನವಾಗುತ್ತದೆ (ಕಭವಿ. II, ೦೨೫). ದಾಸರ ಸಾನಿ = ವೇಶ್ಯಾವೃತ್ತಿಯವಳಂ : "ದೇವದಾಸಿ. ಕಸಬಿ" (ಜಾನಕೋ. ೪). ದಾಸಾನುದಾಸ = ಅಡಿಯಾಳಂ ; ಸೇವಕರ ಸೇವಕ : ಅವಳನ್ನು ಕ್ಷಣಮಾತ್ರವೂ ಎದುರಿಸಲಾರದೆ ಮಿತಿಮೀರಿ ಮೋಹಗೊಂಡು ದಾಸಾನುದಾಸನಾಗಿ ಅವಳಿಗೆ ಶರಣು ಬಿದ್ದೆ (ಯೋಧಪು. ೪೯). [ಸಂ.]

ದಾಸಕಬ್ಬು 'ದಾಸರಿಕಬ್ಬು' ನೋ.

ದಾಸಕೂಟ (ನಾ). ಹರಿದಾಸರ ಪಂಥ : ದಾಸಪಂಥ; ವೈಷ್ಣವ ಪಂಥದ ಭಕ್ತರ ಕೂಟ : ಶ್ರೀ ಪುರಂದರದಾಸರಾಯರಿಂದ ಸ್ಥಾಪಿತವಾದ ದಾಸ ಕೂಟವು . . . ಪುನಃ ಉದ್ಧೃತವಾಯಿತು (ವಿದಾಕ್ಯ. ೫ ಪೀಠಿಕೆ); ದಾಸಪಂಥ ಅಥವಾ ದಾಸಕೂಟ ಬಂದದ್ದು ಇವರ ಕಾಲದಲ್ಲೇ (ಭಾರದ. ೨೯೩) ; ಪುರಂದರದಾಸರದ್ದು ಒಂದು ಕೂಟ; ಅದು 'ದಾಸಕೂಟ'; ನಮ್ಮಂಥವರದ್ದು ಮತ್ತೊಂದು ಕೂಟ; ಇದು ವ್ಯಾಸಕೂಟ! (ಹೇಮಕೂ. ೦೦೨). 'ವ್ಯಾಸಕೂಟ' ಪರಾ. [ದಾಸ + ಕೂಟ$_1$]

ದಾಸಗಾವುಂಡ (ನಾ). ಒಬ್ಬಾತನ ಹೆಸರು : ವಲ್ಯಣಗಾವುಂಡನುಂ ಸತ್ಯಣನುಂ ದಾಸಗಾವುಂಡನುಂ ಮಾಚಿಸೆಟ್ಟಿಯುಂ (ಕಇಅ. ೦೦೫-೦೦-೨೦ ; 1067). [ದಾಸ + ಗಾವುಂಡ(<ಗಾಮುಂಡ)]

ದಾಸಗಿತ್ತಿ (ನಾ) ದಾಸನ ಹೆಂಡತಿ ; (ಕಿ). [ದಾಸ + – ಗಿತ್ತಿ]

ದಾಸಗೆಲಸ (ನಾ). ಆಳು ಮಾಡುವ ಕೆಲಸ ; ಸೇವಕವೃತ್ತಿ ; ಸೇವೆ : ಒಸಗೆಯಾಯಿತ್ತೆನ್ನ ದಾಸ [ಪಾಶಾಂ. ದಾಸಿ] ಗೆಲಸಕೆ ಬದುಕಿದೆ ನಾನೆನುತ ತಾಂ ಅಸಮ ಜಂಗಮದರುಶನಾಪೇಕ್ಷತೆಯೊಳೆಯ್ತಂದು (ಬಸಪು. ೨೦-೬).
[ದಾಸ + ಕೆಲಸ]

ದಾಸಡಿ (ನಾ). ಒಬ್ಬಾತನ ಹೆಸರು : ವಳ್ಳಿಗ್ಗಾಮೆಯರ ದಾಸಡಿಯುಂ ಅಮಲಿಯರ ದೇವಡಿಯುಂ ವೆದೆವಳ್ಳಿಯರಾ ದೇವಡಿಯುಂ ಅಲಂವಳ್ಳಿಯರಾ ರವಿಚನ್ದನುಂ (ಎಕ. VII, ಶಿಕಾರಿ. ೦೫೪-೭ ; ಸು. 685).

ದಾಸಣ 'ದಾಸವಣ' ನೋ.

ದಾಸತ್ವ (ನಾ). ದಾಸನಾಗಿರುವಿಕೆ ; ಗುಲಾಮತನ ; ಸೇವಕತನ. ೨. ಹರಿದಾಸನಾಗುವಿಕೆ ; ದಾಸಯ್ಯನಾಗುವಿಕೆ : ವ್ಯರ್ಥವಲ್ಲವೇ ಜನುಮ ವ್ಯರ್ಥವಲ್ಲವೇ . . . ದಾಸರೊಡನೆ ಆಡದವನ ದಾಸರ ಕೂಡೆ ಪಾಡದವನ ದಾಸರ ಕೊಂಡಾಡದವನ ದಾಸತ್ವ ಪೊಂದದವನ (ಪುರಂದ. ೩-೦೪೩-೫) ; ಜಗನ್ನಾಥದಾಸರು ದಾಸತ್ವ ವಹಿಸುವುದಕ್ಕೆ ಮುಂಚೆ ಸಂಸ್ಕೃತ ಶಾಸ್ತ್ರಾಭ್ಯಾಸಬಲದಿಂದ ಆಚಾರ್ಯರ ಠೀವಿಯನ್ನು ನಡೆಸುತ್ತ ಬಂದರು (ಶಮಪಾಂ. ೯೫). ೩. ಶಿವಶರಣನಾಗುವಿಕೆ : ದಾಸತ್ವ ವೀರ ದಾಸತ್ವ ಭೃತ್ಯತ್ವ ವೀರಭೃತ್ಯತ್ವ ಸಮಯಾಚಾರತ್ವ ಸಕಲಾವಸ್ಥಾತ್ವಂಗಳೆಂಬ ಷಡ್ವಿಧ ಸಜ್ಜನತ್ವಯುಕ್ತನಾಗಿ . . . ಜಗತ್ಪೂಜ್ಯನಪ್ಪಾತನೇ ವೀರಶೈವನಪ್ಪ (ವಿಪೇಕ. ೦೦). [ಸಂ.]

ದಾಸದೀಕ್ಷೆ (ನಾ). ಹರಿದಾಸನಾಗುವುದಕ್ಕೆ ಪಡೆಯಬೇಕಾದ ದೀಕ್ಷೆ : ನೀವು ದಾಸದೀಕ್ಷೆಯನ್ನು ಸ್ವೀಕರಿಸಿ, 'ಪುರಂದರದಾಸ'ರೆಂಬ ಅಭಿಧಾನದಿಂದ ಪ್ರಸಿದ್ಧರಾಗಿರಿ (ಹೇಮಕೂ. ೭೬). [ದಾಸ + ದೀಕ್ಷೆ]

ದಾಸನೂರ್ (ನಾ). ಒಂದು ಊರಿನ ಹೆಸರು : ಅಲ್ಲಿಂದ ಬಡಗಲು ಪೊಟಿಯೂರ ಬೆದಿರೂರ ದಾಸನೂರ ಮುಕ್ಕೂಟ ಸಂಧಿಯಲು (ಮೈಅರಿ. ೦೯೨೫, ೦೦೫-೪೭ ; 684). [<ದಾಸ + ಊರ್]

ದಾಸಪಂಕ್ತಿ (ನಾ). = ದಾಸಕೂಟ : ಪುರಂದರದಾಸರು ದಾಸಪಂಕ್ತಿಯಲ್ಲಿ ಶ್ರೇಷ್ಠರಾದವರಾದರೂ ದಾಸಪರಂಪರೆ . . . ನರಹರಿತೀರ್ಥರಿಂದ ಬೆಳೆದು ಬಂದಿರುವುದು ಚಾರಿತ್ರಿಕವಾಗಿ ಕಾಣುತ್ತದೆ (ಭಾರದ. ೨೯೩).
[ದಾಸ + ಪಂಕ್ತಿ]

ದಾಸಪಂಥ (ನಾ). = ದಾಸಕೂಟ : ದಾಸಪಂಥ ಅಥವಾ ದಾಸಕೂಟ ಬಂದದ್ದು ಇವರ ಕಾಲದಲ್ಲೆ (ಭಾರದ. ೨೯೩).
[ದಾಸ + ಪಂಥ$_2$ (<ಪಂತ$_3$)]

ದಾಸಪಟ್ಟೆ (ನಾ). ದಾಸಯ್ಯಗಳು ಹಾಕಿಕೊಳ್ಳುವ ನಾಮ : ಕೆಂಬರು ಹಣೆಯ ದಾಸಪಟ್ಟೆಯ ಮೇಲೆ, ಅಲಂಕಾರಾರ್ಥವಾಗಿ ಇಳಿಬಿಟ್ಟಿದ್ದ ಗೆಜ್ಜೆಯ ಕುಚ್ಚಿನಿಂದ ಗಲಿರುಗಲಿರೆಂದು ಕಿಂಕಿಣಿನಾದ ಹೊಮ್ಮುತ್ತಿತ್ತು (ಮಲೆಮ. ೪೨೨). [ದಾಸ + ಪಟ್ಟೆ$_1$]

ದಾಸಪದವಿ (ನಾ). ಹರಿದಾಸನ ಸ್ಥಾನ : ನಿಮ್ಮನ್ನು ಎಂತೋ ಅಂತೆಯೇ ಆತನನ್ನೂ ದಾಸಪದವಿಯಿತ್ತು ಅನುಗ್ರಹಿಸಿದ್ದೇವೆ (ಹೇಮಕೂ. ೯೩).
[ದಾಸ + ಪದವಿ]

ದಾಸಪದ್ಧತಿ (ನಾ). ಗುಲಾಮಗಿರಿ : ದಾಸಪದ್ಧತಿ (ಗುಲಾಮಪದ್ಧತಿ), ಸಹಗಮನ . . . ಕಾಲಕ್ರಮದಲ್ಲಿ ಹೇಗೋ ಆಚರಣೆಗೆ ಬಂದವು (ಭಾರದ. ೩೮೬). [ದಾಸ + ಪದ್ಧತಿ]

ದಾಸಪರಂಪರೆ (ನಾ). ಹರಿದಾಸರ ಸಂಪ್ರದಾಯ : ದಾಸಪರಂಪರೆ ಶ್ರೀಮನ್ಮಧ್ವಾಚಾರ್ಯರ ಕಾಲದಿಂದ ಆರಂಭವಾಗಿ ನರಹರಿತೀರ್ಥರಿಂದ ಬೆಳೆದು ಬಂದಿರುವುದು ಚಾರಿತ್ರಿಕವಾಗಿ ಕಾಣುತ್ತದೆ (ಭಾರದ. ೨೯೩).
[ದಾಸ + ಪರಂಪರೆ]

ದಾಸಬಣಜಿಗ (ನಾ). ಬಣಜಿಗರಲ್ಲಿ ಭಕ್ತಿಪಂಥಕ್ಕೆ ಸಂಬಂಧಪಟ್ಟಿರುವ ಒಂದು ಪಂಗಡ : ಹರಿದಾಸ ದಾಸಬಣಜಿಗರಿಂದ ಬಸ್ತಿಗಳ ಕೀಳಿಸುತ ತರಿಸೊಂದು ಕೆರೆಯನ್ನು ವಿಸ್ತಾರದಿಂ ಮಾಡಿಸದಕೆ ರಾಮಾನುಜರ ಕೆರೆಯೆಂದು ಪೆಸರನಿಟ್ಟು (ಅರ್ಜಾವಿ. ೨೭-೯).
[ದಾಸ + ಬಣಜಿಗ (<ಬಣಂಜಿಗ)]

ದಾಸಭಾವ (ನಾ). ೧. ಆಳಿನ ಮನೋಭಾವ ; ಕಿಂಕರ ಭಾವ : ಒಪ್ಪವಾಯಿತು ದಾಸಭಾವದೊಳಿಪ್ಪ ಭಾವವೆನುತ್ತ ನಿಂಬಿಯನಪ್ಪಿ ಮುಂಡಾಡುತ್ತ (ಬಸಪು. ೨೪-೮೬). [ದಾಸ + ಭಾವ$_2$]

ದಾಸಮಾರ್ಗ (ನಾ). ಸಾಧಕನು ಸೇವಾಮನೋವೃತ್ತಿಯಿಂದ ಪರವನ್ನು ಸಾಧಿಸುವ ಭಕ್ತಿಮಾರ್ಗ : ದಾಸಮಾರ್ಗದಲ್ಲಿ ಸಾಧಕನು ದೇವಸ್ಥಾನಗಳಲ್ಲಿ ಶಿವಾರ್ಚನೆಗೆ ಸಲಕರಣೆಗಳನ್ನೊದಗಿಸಿ . . . ಸಾಲೋಕ್ಯ ಪದವಿಯನ್ನು ಹೊಂದುವನು (ಭಾರದ. ೨೦೭). [ದಾಸ + ಮಾರ್ಗ]

ದಾಸಯ್ಯ (ನಾ). ೧. ವಿಷ್ಣುವಿನ ಆರಾಧಕ ; ದಾಸ : ಊರಿಗೆ ಬಂದರೆ ದಾಸಯ್ಯ ನಮ್ಮ ಕೇರಿಗೆ ಬಾ ಕಂಡ್ಯ ದಾಸಯ್ಯಪು (ರಂದ. ೨-೮೭ ಪಲ್ಲವಿ) ; ನಾಗಾರಾಧನೆಯಲ್ಲಿ ಪಾತ್ರವಹಿಸುವ 'ವೈದ್ಯರು' ಅಂತಹ ವ್ಯಾವಸಾಯಿಕ ಜನಗಳು 'ದಾಸಯ್ಯ'ಗಳ ವರ್ಗ ಅಂಥದು (ಜಾನಗೀ. ೦೦). ೨. ಊರಿಂದೂರಿಗೆ ದೇವರ ಹೆಸರಿನಲ್ಲಿ ಪ್ರಯಾಣ ಮಾಡುತ್ತಾ ಸಾಗುವವನು : ಸಾವಿರ ಬಾರಿ ಗೋವಿಂದ ಎನ್ನಬಹುದು ಒಬ್ಬ ದಾಸಯ್ಯಗೆ ಭಿಕ್ಷೆ ನೀಡೋದು ಕಷ್ಟ (ಗಾದೆ). ೩. ಒಬ್ಬಾತನ ಹೆಸರು : ಬಿಟ್ಟಿಯಗನ ಪೆರ್ಗ್ಗಡೆ ದಾಸಯ್ಯನ ಮಗಂ ಭೀಮಯ್ಯಂ (ಎಕ. VIII, ಸೊರಬ. ೫೩೦-೮; 967). ೪. (ಆಲಂ) ನಿರ್ಗತಿಕ : ಬೀದಿಯ ದಾಸಯ್ಯನನ್ನು ವಂದುವೆಯಾಗಲು ಒಪ್ಪಿಕೊಂಡಳು (ರೂಢಿ). [ದಾಸ + ಅಯ್ಯ$_1$]

ದಾಸರ 'ದಾಸರಿ' ನೋ.

ದಾಸರಕಬ್ಬು 'ದಾಸರಿಕಬ್ಬು' ನೋ.

ದಾಸರಹಾವು 'ದಾಸರಿಹಾವು' ನೋ.

ದಾಸರಿ, ದಾಸರ (ನಾ). ಹರಿದಾಸ ; ದಾಸಯ್ಯ : ದೀವಟಿಗೆಯವನ ಪಕ್ಕದಲ್ಲಿ ಬಲಗಡೆ ದಾಸರಿಯೊಬ್ಬನು ಹಳದಿನಾಮವೊಂದನ್ನಿಟ್ಟು ಕೈಲಿ ಜಾಗಟೆ ಬಡಿಯುತ್ತ ಆಗಾಗ್ಗೆ ಶಂಖವೂದುತ್ತ ಹೋಗುತ್ತಿರುವನು (ಪಂಯಾತ್ರೆ. ೫೦). ದಾಸರ : 'ದಾಸರಕಬ್ಬು', ದಾಸರಹಾವು' ಪರಾ.
[?./ತಮಿ. ತಾಚರಿ, ತೆಲು. ದಾಸರಿ./ಸಂ. ದಾಸೇರ = ದಾಸಿಯ ವಂಗ ; ಸೇವಕ, ಆಳು]

ದಾಸರಿಕಬ್ಬು, ದಾಸಕಬ್ಬು, ದಾಸರಕಬ್ಬು (ನಾ). ದಾಸರ ನಾಮದಂತೆ ಉದ್ದ ಗೆರೆಗಳನ್ನು ಉಳ್ಳ ಕಬ್ಬು ; ಪಟಾವಳಿ ಕಬ್ಬು : ದಾಸರಿಕಬ್ಬಿಗೆ ಪಟಾವಳಿಯೆಂದೂ ಹೆಸರು (ರೂಢಿ). ದಾಸಕಬ್ಬು : ನಮ್ಮ ದೇಶದಲ್ಲಿ ರಸದಾಳಿ ದಾಸಕಬ್ಬುಗಳು ಹೆಸರಾದುವು (ಪಾಲಪ್ರ. II, ೬೪೯) : ಹೆಗಲ ಮೇಲೆ ಒಂದು ತಕ್ಕಮಟ್ಟಿಗೆ ದೊಡ್ಡದೆ ಆದ ದಾಸಕಬ್ಬಿನ ಹೊರೆ ಇತ್ತು

(ಮಲೆಮ. ೪೨೩). **ದಾಸರಕಬ್ಬು :** ಅವುಗಳಲ್ಲಿ ರಸದಾಳಿಕಬ್ಬು ಎಂದರೂ ದಾಸರಕಬ್ಬು ಎಂದರೂ ಒಂದೇ (ಕೃಷಿಪ್ರ. ೦೮೨).

[ದಾಸರಿ + ಕಬ್ಬು$_2$ (<ಕರ್ವು$_1$)]

ದಾಸರಿಹಾವು, ದಾಸರಹಾವು (ನಾ). ಹಣೆಯಂಮೇಲೆ ಬಿಳಿಯಂ ನಾಮದ ಪಟ್ಟೆಯಂತಿರುವ ಗುರುತುಳ್ಳ ಒಂದು ಬಗೆಯ ಹಾವು; ಹೆಬ್ಬಾವು: (ಕಿ). **ದಾಸರಹಾವು :** (ಕಿ). [ದಾಸರಿ$_1$ + ಹಾವು (<ಪಾವು$_1$)]

ದಾಸವಣ ದಾಶಾಳ, ದಾಶಿವಾಳ, ದಾಸಣ, ದಾಸವಾಣ, ದಾಸವಾಳ, ದಾಸಳ, ದಾಸಾಣ, ದಾಸಾಳ, ದಾಸಿವಣ, ದಾಸಿವಾಣ, ದಾಸಿವಾಳ (ನಾ). ಒಂದು ಬಗೆಯ ಸಸ್ಯ ಮತ್ತು ಅದರ ಹೂವು: "ರುದ್ರ ಪುಷ್ಪಂ, ಜಪಾ–ಈ ೨ ದಾಸವಣಂ" (ಹಲಾಯು. ೩೫-೫೪) : ದಾಸವಣ [ಪಾಠಾಂ. ದಾಸಣ] ದಂಡೆಯಂ ತೋರದಿಂಡೆಯಾಡಿದಂತೆ ದೆಸೆದೆಸೆಗೆ ಕೆದಱಿದ ಕಂಡದಿಂಡೆಗಳುಂ . . . ಪಾಱುವ ನೆತ್ತರ ಸುಟ್ಟುರೆಗಳುಮತಿ ಭಯಂಕರಾಕಾರಮಾಗೆ (ಪಂಪಭಾ. ೦೦-೦೪೦ ವ). **ದಾಶಾಳ:** ಈ ಪರೀಕ್ಷೆಯ ಸಲುವಾಗಿ ನೀಲವರ್ಣದ ಗೋಕರ್ಣ ಎಂಬ ಹೂವನ್ನಾಗಲಿ ಕೆಂಪು ದಾಶಾಳದ ಹೂವನ್ನಾಗಲಿ ತಂದು . . . ಇಡಬೇಕು (ಮುಂಬಯಿ. ೬-೩೩). **ದಾಶಿವಾಳ :** ಕೆಂಪು ದಾಶಿವಾಳ ಬಿಳಿಯ ದಾಶಿವಾಳ ಚಂಡುದಾಶಿವಾಳ . . . ಇರವಂತಿಗೆ ಇವುಗಳಲ್ಲಿ ಕೆಲವು ಕೊಲ್ಲೆಗಳನ್ನು ಕೆಲವು ಅಂಟುಗಳನ್ನು ಮಾಡಿ ಹಚ್ಚಬೇಕು (ಕೃಷಿಪ್ರ. ೨೦೦). **ದಾಸಣ :** "ಜಪಾರುದ್ರಮೆನೆ ದಾಸಣಂ" (ಮಂಗರಾ. ೩೮-೨೪) ; ಸೊರೆ ದಾಸಣ [ಪಾಠಾಂ. ದಾಣ]ಮುಂ ಮುಳ್ವತ್ತರಿಗೆಯೆನಿಪ್ಪಿವಱ ಬೇರ್ಗಳೊಳ್ ಮೆಚ್ಚಿದುದಂ ಕೊರಲೊಳ್ ಕಟ್ಟುಗೆ ಬರ್ಕುಂ . . . ಶಿಶುವಿನ ಪಲ್ಗಳ್ (ಲೋಕೋಪ. ೯-೧೮೫); ಕೇತಕಿಯೆಸಳ ಕೂರಲಗು ದಾಸಣದ ಗೊಂಡೆಯಂ ನನೆಗಣೆಗಳಂ ತಳೆದ ಸಂಪಗೆಯ ಬಿರಿಮುಗುಳ ಮೂಡಿಗೆ ತುಂಬಿಗಳ ರವದ ನಾರಿ . . . ಬೆರಸಿ ಮನ್ಮಥನೆಸೆದನು (ಸಿದ್ಧರಾ. ೪-೬೪) ; ಕೆದಱಿದ ನೆಣದ ಹಸರ ರಂಜಿಸಸಿದುದು ರಣದೇವತೆ ಮೆಚ್ಚಿ ರಾಮಗೆ ಕಱಿದ ದಾಸಣದ ಪೂವಿನ ಮಳೆಯಂತೆ (ಕುರಾಸಾಂ. ೪೩-೦೦೦) ; ಮಿನುಪ ಸಸಿವಣಿಯು ದಾಸಣದ ಸನ್ನಿಧಿಯಳಿಯೆ ಘನಕಾಂತಿಮಯವೆನಿಸಿ ಬೆಳಗುತಿರುವಂತೆ (ಕೈಕವ. ೦೨೩-೦೬-೨). **ದಾಸವಾಣ :** ತಿಲಕ ಸರಸಿಜ ದಾಸವಾಣ ಕುವಲಯ . . . ಅಲರ್ಗಳಿರುತಿಹವೆಮ್ಮ ಮೈಯೊಳಗೆ (ಅರ್ಜಾ ೯ವಿ. ೦೬-೩೫). **ದಾಸವಾಳ :** ದಾಸವಾಳ, ಮೂಲಂಗಿ, ಹತ್ತಿ ಮುಂತಾದ ಹೂವುಗಳಲ್ಲಿ ಸಾಮಾನ್ಯವಾಗಿ ಪುಷ್ಪತಲ ಕೋನಾಕಾರವಾಗಿ ಉಬ್ಬಿಕೊಂಡಿದೆ (ಸಸ್ಯಶಾ. ೫೫). **ದಾಸಳ:** "ಓಡ್ರಪುಷ್ಪ, ಜಪೆ – ದಾಸ[ಪಾಠಾಂ.ಸಾ]ಳ" (ನಾಚರಾ. ಕಿ) ; ಕೆಂದಾವರೆಯ ದಾಸಳ [ಪಾಠಾಂ. ಣ]ದ ಪೂವಿನ ವರ್ಣದ ಸಂಪದದಿಂ ಮದದಿಂ ಮುದದಿಂ ದೊಪ್ಪಿತ್ತು ಚಂದ್ರಬಿಂಬವಿಡ್ಡಂಬಂ (ಗಿರಿಕ. ೪-೯೮). **ದಾಸಾಣ:** "ರುದ್ರ ಪುಷ್ಪಂ, ಜಪಾಪುಷ್ಪಂ–ಈ ೨ ದಾಸಾಣ" (ನಾಚರಾ. ೦೦೯); ಪಳುಕಿನೊಳು ತೋರ್ಪ ಕೆಂಬೆಳಗು ಪುಸಿ ದಾಸಾಣ (ಅನುಸಾ. ೬-೩-೭) ; ಸಿರಿಗಂಧಂ ಜಾಜಿ ದಾಸಾಣ ಸೇವಂತಿಗೆ . . . ಇರ್ಕುಂ (ಹಮ್ಮೀರ. ೬-೪೬); ದಾಸಾಣದ ಮೊಗ್ಗೆಯನಾದರೂ ಚಿಲುಕೀರೆಯ ದೇರನಾದರೂ ಅಕ್ಕಿಗಚ್ಚಿನಿಂದ ಅರೆದು ಹೇನುತುಪ್ಪ ಬೆರಸಿ ಕುಡಿಯ ಕೊಡೆ ಗರ್ಭಿಣಿಸ್ತ್ರೀಯರಿಗೆ ಕೆಂಪಾದ ಪ್ರದರ ಹರವಹುದು (ವೈದ್ಯಸಾ. I, ೪೭೩). **ದಾಸಾಳ :** "ನವಮಾಲಿಕಾ – ಮೊಲ್ಲೆ, ದಾಸಾಳ, ಜಾಜಿ" (ಓಷಧಿ. ೮೪); ದಾಸಾಳದಲರ [ಪಾಠಾಂ. ದಾಸಳದಲರಂ] ಕುಂಕುಮಕೇಸರದ ಬೆಳರ್ತ ಬಣ್ಣದಂತಿರೆ ರಕ್ತ ಸೂಸಿ ತುದಿಗಿವಿಯ ನೊತ್ತಿದೊಡಾ ಸಿಸು ಪದಿನೆಂಟು ವರ್ಷಂ ನೆಱೆ ಬಾಟ್ಗುಂ (ಅಶ್ವಶಾ. ೬-೭೦) ; ಸಂಜೆಗೆಂಪು-ದಾಸಾಳ ಬಣ್ಣದವನಾಗಿ ನೀನು ಮೆರುಗಿ (ಮೇಘದೂ. ೧೦-೩೬) ; ನಮ್ಮ ಮೈಯೊಳಗಣ ರಕ್ತವೂ ಕೆಂಪು, ದಾಸಾಳದ ಹೂವೂ ಅದರಂತೆ (ಮುಂಬಯಿ. ೦-೦೨). **ದಾಸಿವಣ :** ಎಱೆಯೆ ಸಿತ ಪ್ರಯುತಾಸವಮಂ ಪೊಯ್ಗೆರ್ಮೆಯ ಪಾಲಂ ದಾಸಿವಣದ ಪೂ ಬಿಳಿದಕ್ಕುಂ (ಲೋಕೋಪ. ೯-೫೦). **ದಾಸಿವಾಣ :** ಕೆಂಪು ಸುತ್ತು ದಾಸಿವಾಣದ ಹೂವಿನಂತೆಯೂ ಯಿಂತು ಯಂಟು ಬಗೆ ಹೊಳವಿನ ರತ್ನವು ಕ್ಷತ್ರಿಯ ಜಾತಿಯಾದ ಕುರುವಿಂದವೆಂದು ತಿಳಿಯತಕ್ಕದ್ದು (ಸೌಗಂಧಿ. ೩೬೬-೦೪). **ದಾಸಿವಾಳ :** ಹೊಳೆಯ ನಡುಕುರುವದೊಳು ದಾಸಿವಾಳದ ಪುಷ್ಪದಿಂದ ಲಿಂಗಾರ್ಚನೆಯನಾಸರದೆ ಮಾಡುತಿರೆ (ಗುರುಜಾ. ೮-೬೫).

[ದೇ. ಕಿ ತುಳು. ದಾಸನ, ದಾಸಾನೊ, ದಾಸಾಳೊ ; ತೆಲು. ದಾಸನ]

ದಾಸವರ್ಣ (ನಾ). ನಾಲ್ಕು ವರ್ಣಗಳಲ್ಲಿ ಒಂದು ; ಶೂದ್ರವರ್ಣ 'ದಸ್ಯು'ವೆಂದೂ 'ದಾಸವರ್ಣ'ದವನೆಂದೂ ಅವರು ಕರೆಯುವ ಈ ಶತ್ರುವಿನೊಡನೆ ಹೋರಾಡುವಾಗ ಅವರಿಗೆ ಜಯಗಳಿಸಿ ಕೊಡುವುದಕ್ಕೆ ಇಂದ್ರನಂಥ ಶೂರನಾದ ದೇವತೆಯೇ ಹೆಚ್ಚು ಪ್ರಿಯನಾದನು (ಭಾರದ. ೨೦).

[ದಾಸ + ವರ್ಣ]

ದಾಸವಾಙ್ಮಯ (ನಾ).=ದಾಸಸಾಹಿತ್ಯ: ದಾಸವಾಙ್ಮಯದ ಬೆಳವಣಿಗೆಯಲ್ಲಿ ಚಾರಿತ್ರಿಕವಾಗಿ ನಾಲ್ಕು ಹಂತಗಳನ್ನು ಗುರುತಿಸಬಹುದು (ಜಗದಾ. ೫೦).

[ದಾಸ + ವಾಙ್ಮಯ]

ದಾಸವಾಣ 'ದಾಸವಣ' ನೋ.

ದಾಸವಾಳ 'ದಾಸವಣ' ನೋ.

ದಾಸವೂಳಿಗ (ನಾ). ಆಳಿನ ಕೆಲಸ : ದಾಸವೂಳಿಗಕ್ಕೆ ಯಾರೂ ಇಲ್ಲವೆಂದು . . . ಹೇಳಲಾಗಿ (ಮೈಅರಿ. ೧೯೨೯, ೭-೯ : 1673).

[ದಾಸ + ಊಳಿಗ (< ಊಟಿಗ)]

ದಾಸಸಾಹಿತ್ಯ (ನಾ). ಕನ್ನಡ ಸಾಹಿತ್ಯಪರಂಪರೆಯಲ್ಲಿ ಹರಿದಾಸರು ರಚಿಸಿದ, ಸಂಗೀತ ಪ್ರಧಾನವಾದ ಸಾಹಿತ್ಯರೂಪ; ದಾಸರ ಪದಗಳು: ದಾಸಸಾಹಿತ್ಯ ಭಕ್ತಿಮಾರ್ಗದ ಸಾಹಿತ್ಯದಲ್ಲಿ ಒಂದು ಮಹತ್ವದ ಸ್ಥಾನವನ್ನು ಪಡೆದಿದೆ (ಭಾರದ. ೩೦೦) ; ದಾಸಸಾಹಿತ್ಯದಲ್ಲಿಶಬ್ದಗಳ ಜೋಡುಕಟ್ಟು ಬಹು ಸುಂದರವಾಗಿದೆ (ಜಗದಾ. ೭೦). [ದಾಸ + ಸಾಹಿತ್ಯ]

ದಾಸಳ 'ದಾಸವಣ' ನೋ.

ದಾಸಾಣ 'ದಾಸವಣ' ನೋ.

ದಾಸಾವಿರ (ನಾ). ಹತ್ತು ಸಾವಿರ : ಎಕ್ಕಂ, ದಾಹಂ, ಶತಂ, ಸಾವಿರ, ದಾಸಾವಿರ, ಲಕ್ಷ, ದಾಲಕ್ಷ . . . ಪರಿಮಿತ, ಮಹಾಪರಿಮಿತ–ಈ ೪೦ ಸ್ಥಾನದ ಉಗ್ಗಡಣೆ (ವೃವಹಾ. ೮-೨೫) ; ದಾಸಾವಿರ, ಲಕ್ಷ, ದಹಲಕ್ಷ . . . ಇವು ೩೨ ವುಘಡಣೆ ಹೆಸರುಗಳು (ಭಾಸ್ಕರ. ೦೦-೬).

[ದ್ವಾ$_2$ (<ದಸ್ಯ$_2$) + ಸಾವಿರ]

ದಾಸಾಳ 'ದಾಸವಣ' ನೋ.

ದಾಸಿ (ನಾ). ೧. ಹೆಣ್ಣಾಳು ; ಸೇವಕಿ ; ತೊತ್ತು ; ಪರಿಚಾರಿಕೆ : ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ (ಬಸವ. ೪೭೨) ; ಅರವಿಂದಗಂಧಿಯ ದಾಸಿ ತಾನೆಯಿತಂದವರ್ಗಳಿಗಱುಹಿದಳು (ಬಸವು. ೪೧-೨೪). ೨. ಸೂಳೆ ; ವೇಶ್ಯೆ. ೩. ಒಂದು ಬಗೆಯ ಗಿಡ : "ನೀಲೀ, ಝಿಂಟೀ, ಬಾಣಾ, ದಾಸೀ, ಆರ್ತಗಳಃ–೫. ಕರೀ ಹುವ್ವುಳ್ಳ ಗೋರಂಟದ ಹೆಸರುಗಳು" (ಸಿದ್ಧಾಂತಿ. ೦೨೯). [ಸಂ. ದಾಸೀ]

ದಾಸಿಕೆ (ನಾ). ಸೇವಕತನ ; ದಾಸನಾಗಿರುವಿಕೆ : ಲಿಂಗಾಂಗ ಸಂಬಂಧ ಘಟಿಸಿದ ಶರಣ ತನುಮನ ಪ್ರಾಣೇಂದ್ರಿಯಗಳು ಮೊದಲಾದ ಅಜ್ಞಾನ ಪ್ರಪಂಚಿನ ವರ್ತನೆಯ ಆಸೆ ನಿವೃತ್ತಿಯಾಗಿತ್ತೆಂಬುದೀಗ ಹೊತ್ತ ದಾಸಿಕೆ ಹುಸಿಯಾಯಿತ್ತೆಂಬ ಶಬ್ದಕ್ಕರ್ಥ (ಗುಪ್ತಮಂ. ೧೫-೦೮೭): ನಾಸಿಕವನುಳ್ಳವನು ಹೋಗಲೆ ದಾಸಿಕೆಯ ನಮ್ಮಸುರರೊಳಗೆ ವಿನಾಶವಡೆದವನೊಬ್ಬ ನೀನೇ ಸಾರು ಹೋಗೆಂದ (ಪ್ರಹ್ಲಾದ. ೧೦-೨೦). [ದಾಸ + – ಇಕೆ]

ದಾಸಿಗ (ನಾ). (?) : ದೇಸಿಗನವ್ವನಂ ಭಯದಿ ನೋಡುವನಂ ಕರಮಂಜಿ ದಾತನಂ ದಾಸಿಗನಲ್ಲದಾತನನಣಂ ಧನಹೀನನನಂಜಿ ಕಾಗುಮೆಂಬಾಸಿಯೊಳಂ ಬೆಯೆಂದು ಪುಲುಗರ್ಚಿದನಂ ಕೊಲಲಾಗದೆಂಬವಂ ವೇಸದೆ ವಾಳವುಳ್ಳ ನಿನಿತುಳ್ಳ ಮೃಗಂಗಳನೆಂತು ಕೊಲ್ವನೋ (ಪಸಾಕ. ೨೯೮).

[P ಇದು 'ದೇಸಿಗ' ಎಂಬುದರ ಅಪಲಿಖಿತವಿರಬಹುದೆ ?]

ದಾಸಿಗೆ (ನಾ).=ದಾಸಿಕೆ (?) : ಶ್ರೀಸಂಕರದೇವರ ನಂದಾದೀವಿಗೆಗೆ . . . ಸಂಕರದಾಸಿಎ ಕೊಟ್ಟ ದಾಸಿಗೆ ಸುಂಕದ ಹೆಗ್ಗಡೆ ಬೊವ್ವಡೆ ಒಳಗಾಗಿ ಸುಂಕ ಆಯದಾಯ ಸಮಸ್ತಮ ಸ್ಯೆವಾಧಿ ಧಾರಾಪೂರ್ವಕ ಮಾಡಿಬಿಟ್ಟರು (ಎಕ. III, ಮ್ಯಸೂರು. ೬-೦೪ ; 1176). [<ದಾಸಿಕೆ ?]

ದಾಸಿಪತ್ರ (ನಾ). ಊಳಿಗ ; ಸೇವೆ : ಬೀರವ್ಮನ ಕಾಲಮಾನಿತುಂ ದಾಸಿವತ್ರಕ್ಕೆ ನಿಂದರ್ (ಸಾಇಇ. XX, ೪೯-೨೩ ; 1076 ?).

[P ಇದು 'ದಾಸಿಪಾತ್ರ' ಎಂಬುದರ ಅಪಲಿಖಿತವಿರಬಹುದು]

ದಾಸಿವಣ 'ದಾಸವಣ' ನೋ.

ದಾಸಿವಾಣ 'ದಾಸವಣ' ನೋ.

ದಾಸಿವಾಳ 'ದಾಸವಣ' ನೋ.

ದಾಸೀಪುತ್ರ (ನಾ). ದಾಸಿಯಂ ವಂಗ ; ತೊತ್ತು : ದಾಸೀಪುತ್ರನಾಗಲಿ ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ (ಬಸಪು. ೪೦).

[ಸಂ.]

ದಾಸೀಸುತ (ನಾ). ತೊತ್ತಿನ ಮಗ ; ಸೇವಕಿಯ ಮಗ : "ಗೋವ್ಯಃ, ದಾಸೀಸುತಃ–ಈ ೨ ತೊಟ್ಟಿನ ಮಗಂ" (ಹಠಾಯು. ೮೨-೪೮೭). [ಸಂ.]

ದಾಸು (ನಾ). ಸೇವಕ ; ದಾಸ : ದೇವರಿಗೆ ಹೂವಿನ ದಂಡೆಯ ಕಟ್ಟುವ ದಾಸುಗಳು ತಿರುಮಾಳದಾಸನು ಹಿರಿಯದಾಸನು (ಎಕ. X, ಮಾಲೂರು. ೩-೨೨ : 1431). [<ದಾಸ]

ದಾಸೆ (ನಾ). ಮಚ್ಚೆ : ಆ ಕೋಣನ ಮಂಡದ ಮೇಲೆ ಸೂರ್ಯಪಾನ ಹೂವಿನಂತೆ ಬಿಳಿ–ಹಳದಿ ಕೂದಲಿನ ದೊಡ್ಡ ದಾಸೆ (ಮಚ್ಚೆ)ಯಿತ್ತು (ಕಂಬಹು. ೪೫). [?]

ದಾಸೆಯ (ನಾ). ಒಬ್ಬಾತನ ಹೆಸರಂ (?) : ಶ್ರೀ ಸಿದ್ಧೇಶ್ವರದೇವರ ಪಾದಾರಾಧಕರುಮಪ್ಪ ನಾಡಿಗ ದಾಸೆಯನ ಮಗಂ ಬಾರಿಕೆ ಬೆದ್ದಮನು ತನಗಂ ಮುಕ್ತಿಪದಾರ್ತ್ಥವಾಗಿ . . . ಸುರಲೋಕಪ್ರಾಪ್ತನಾದಂ (ಎಕ. VII, ಶಿವಮೊ. ೩೮-೩ ; ?). [<ದಾಸಯ್ಯ]

ದಾಸೆಯನಾಯಕ (ನಾ). ಒಬ್ಬಾತನ ಹೆಸರಂ : ಎಲವಟ್ಟಿಯ ದಾಸೆಯ ನಾಯಕನ ನಿಸಿದ್ದಿಯಪ್ಪ ಭೂಮಿಯಿದು (ಎಕ. VII. ಶಿವಮೊ. ೫೮-೩; ?).

[ದಾಸೆಯ + ನಾಯಕ]

ದಾಸೇಯ (ನಾ). ಸೇವಕ ; ಆಳು : ನಿನ್ನಂತಹ ಪ್ರಧಾನನಾದರೆ, ಬ್ರಹ್ಮ ಸಭೆಯೂ ದೀನದಾಸೇಯ ಸ್ತುತಿಪಾಠಕರ ಸಂತೆಯಾಗುವುದು (ಪುಂತ್ಯಕ. ೨೦-೦೩).

[ಸಂ.]

ದಾಸೇರ (ನಾ).=ದಾಸೇಯ : "ಭೃತ್ಯಃ, ದಾಸೇರಃ, ದಾಸೇಯಃ, ದಾಸಃ . . . ಪರಿಚಾರಕಃ – ೧೧ ಬಂಟನ ಪೆಸರು, ಚಾಕರಿಯವನು" (ಸಿದ್ಧಾಂತಿ. ೩೦೨).

[ಸಂ.]

ದಾಸೇರಕ (ನಾ). ೧. ಪರಿಚಾರಿಕೆಯ ಮಗ ; ತೊತ್ತಿನ ಮಗ ; ಆಳು ; ಸೇವಕ: "ದಾಸಃ, ದಾಸೇರಕಃ–ಈ ೨ ಕೊ(ಬ್ಚಿ)ತ್ತಿನ ಮಗಂ" (ಹಠಾಯು. ೬೦-೩೦೦) ; ಅಂತಃಪುರದಾಸೇರಕನನೇಱಿ ಕಿಂಚಿದಾಕುಂಚಿತಾಗ್ರ ತರ್ಜನೀ ನಿಶಿತಾಂಕುಶನಂತಃಪುರಪ್ರಮದವನಪ್ರವಿಷ್ಟನಾಗಿ (ಆದಿಪು. ೮-೪೦ ಪ) ; ಈ ಸಕಲ ಧರೆಯನುಗ್ರಭೂಜಾಸಿಯೊಳಳವಡಿಸಿ . . . ರಿವುದಾರಕರಂ ದಾಸೇರಕರೆನೆ ಪೊಡರ್ವುಗಿಡೆ ನಡೆಯಿಸಿದಂ (ಪಂರಾಮಾ. ೩-೬೦) : ಒರ್ವ ಭಕ್ತಂ ವೃಥಾ ಗೃಹಗೃಹಕ್ಕೆ ಮುಂಕೊಂಡು ದಾಸೇರಕನ ಪೊಂಗಿನಂ ಪೋಗಿ (ಕೂಟ್ಯೂಪ. ೧೬-೭೬). ೨. ಒಂಟೆ : "ದಾಸೇರಕಃ, ಕ್ರಮೇಳಕಃ, ಉಷ್ಟ್ರಃ, ಮಯಃ, ರವಣಃ, ಕರಭಃ, ಶ್ಯಂಖಿಳಕಃ – ಈ ೭ ಒಟ್ಟೆ" (ಹಠಾಯು. ೪೭-೦೨೩) ; ಅಂತಕನ ದೆಸೆಗೆ ದಾಸೇರಕವನೇಱಿ ಪೋಪಂ (ಕ್ರಮಿಥಾ. ೨೪-೪೬). [ಸಂ.]

ದಾಸೊತ್ತು (ನಾ). ಶಕ್ತಿ ; ತಾಕತ್ತು ; ಸಾಮರ್ಥ್ಯ : ಬಾಯೊಳ್ಳಸಂಗವು ನ್ನಾಡಿದರೆ ದಾಸೊತ್ತು ಸಾಲದ್ಯೆ ತನಗೆಂದನು (ತುರಂಗ. ೪೩-೫೦). [?]

ದಾಸೋಗ (ನಾ). ಜಂಗಮ ಭೋಜನ ; ಪುಣ್ಯಸಂಪಾದನೆಗಾಗಿ ಜಂಗವಂರಿಗೆ ಮಾಡಂವ ಊಟದ ಸಮಾರಾಧನೆ : ಊರ್ಲಿಯ 'ದಾಸೋಗ'ದಲ್ಲಿ ಅವರಿಗೆ ಅನ್ನದ ವ್ಯವಸ್ಥೆ ಮಾಡಿಯೋ ವಾರದ ಮನೆಗಳಲ್ಲಿ ಕೆಲವರನ್ನು ಕಳಿಸಿಯೋ ಅವರ ಉವಜೀವನ ಸಾಗಿಸುತ್ತಿದ್ದರು (ಮುಗಿಮು. ೬) ; ಆಗ ಭಿಕ್ಷಾನ್ನಗಳಿಂದ ತೃಪ್ತವಾಗುತ್ತಿದ್ದ ಶಿಷ್ಯರು ಈಗ ಆ ಅನ್ನವನ್ನು 'ದಾಸೋಗ'ದಲ್ಲಿ ವಾರದ ವನೆಗಳಲ್ಲಿಯೂ ಪಡೆಯುತ್ತಿದ್ದಾರೆ (ಹಬ್ಕಬ. ೦೯೪) ; ನಿಮ್ಮಂತ ಕುಡುಕರಿಗೆಲ್ಲಿಂದ ತರಲಿ ಕೂಳು ? ಇಲ್ಲೇನು ದಾಸೋಗ ನಡೆಯುತ್ತದೆಯೇ (ಕವನ. ೬). [<ದಾಸೋಹ]

ದಾಸೋಹ (ನಾ). ೧. ನಾನು ದಾಸನೆಂಬ ಭಾವನೆ : ಪ್ರಸಾದಲಿಂಗ ಭಕ್ತನಾದೊಡೆ ದಾಸೋಹವಿಲ್ಲದಿರಬೇಕು (ಆರಪ. ೯-೦೨) ; ಸಂಕಟವೆ ಇಲ್ಲದವಗೆ ವೆಂಕಟನು ಬೇಕೆ ಸಂತೋಷವುಳ್ಳವಗೆ ದಾಸೋಹವೇಕೆ ? (ಗಡೇಶ. ೭೦-೦೨). ೨. = ದಾಸೋಗ : ಯಾ ಮಠದಲ್ಲಿ ಕಟ್ಟಿಸಿದ ಅಡಿಗೆ ಮನೆ ಉಗ್ರಾಣದ ಮನೆಯೂ ಈ ತೋಟದ ಸ್ವಾಮಿಯು ದಾಸೋಹಕ್ಕೆ ಸಲುವದು (ಎಕ. XVI, ಕುಣಿಗ. ೪೯ ೪೦ ; ಸು. 1480) ; ಬೆಳಸು ದವಸ ಗಳನ್ನು ಮಠದ ದಾಸೋಹಕ್ಕೆ ಕೊಡುತ್ತಾನೆ (ಕನ್ನಡಾ. ೫). ೩. [ವೀಶೈ] ಕಿಂಕರಭಾವದಿಂದ ಮಾಡುವ ಗುರು ಲಿಂಗ ಜಂಗವಂ ಸೇವೆ: ಅಯ್ಯಾ ನಿಮ್ಮ ಶರಣರ ದಾಸೋಹಕ್ಕೆ ಎನ್ನ ತನು ಮನ ಧನವಲಸದಂತೆ ಮಾಡಯ್ಯ (ಬಸವ. ೪೫೮) ; ನಿಮ್ಮ ಜಂಗಮವನುದಾಸೀನವ ಮಾಡಿ ದಾಸೋಹವಿಲ್ಲದ ಅತಿದೂಷಕದ್ರೋಹಿ ನಾನಯ್ಯ (ಆರಿವ. ೩೩-೩೪) : ಸವಿನಯಂಗಳ ಮೇಟಿ ದಾಸೋಹವನಲರ್ಚುವ ಚೇಟಿ ಮೃತ್ಯುವ ಜವನ ಮಾರಿಯ ದಾಟಿ ವೇದಾಂತಾವಾದಿಗಳ ವಾಟ (ಬಸಪು. ೬-೦೦). [<ದಾಸೆ ೨ೇಹಂ]

ದಾಸೋಹಂ (ನಾ). ನಾನು ದಾಸನೆಂಬ ಭಾವನೆ: ಸೋಹಮೆನ್ನ ಬೇಡೆಲೊ ದಾಸೋಹಮೆಂದು ಪೇಳೆಲವೊ (ಪುರಂದ. ೦-೦೭೫-೦) : ಸೋಹಂ ಎಂದಡೆ ಅಂತರಂಗದ ಗರ್ವ ಶಿವೋಹಂ ಎಂದಡೆ ಬಹಿರಂಗದ ಅಹಂಕಾರ ಈ ಉಭಯವನಳಿದು ದಾಸೋಹಂ ಎಂದಡೆ ಪರಮಪದವು (ಅಖಂಡೇ. ೮೦-೭೧). [P ಸಂಸ್ಕೃತದಲ್ಲಿ 'ದಾಸಃ ಅಹಂ' ಎಂಬುದು ಒಂದು ವಾಕ್ಯ. ಕನ್ನಡದಲ್ಲಿ ಇದು ಒಂದು ಪದವಾಗಿ ಬಳಕೆಯಾಗಿದೆ]

ದಾಸೋಹಂಭಾವ (ನಾ). ದಾಸನ ಭಾವನೆ; ಭಕ್ತಭಾವ: ಸರ್ವಪದಾರ್ಥ ಗಳನ್ನೂ ಶಿವನಿಗರ್ಪಿಸುವ ಸಮರ್ಪಣಕ್ರಿಯೆಯಲ್ಲಿ ಮಾತ್ರ 'ದಾಸೋಹಂ' ಎಂದರೆ, ನಾನು ಶಿವನ ದಾಸನು ಎಂದು ಸರ್ವಾಚರಣೆಯನ್ನು ನೆರವೇರಿಸ ತಕ್ಕದು, ಹೀಗೆ ಆಚರಿಸುವುದೇ ದಾಸೋಹಂಭಾವವು (ಶಿವಾಸೂ. ೦೩೧) ; ದಾಸೋಹಂಭಾವಮನುಳಿದಾ ಸೋಹಂಭಾವದೆಡೆಗಾ ಮನವಿಕ್ಕದೆ ನೀಂ ಲೇಸನೊಡರ್ಚಿದೆ ಫಲರೆ (ವೃಷವಿ. ೫೩-೪೨) ; ದಾಸೋಹಂಭಾವವನೆ ಕರುಣಿಸಿ ಬದುಕಿಸಯ್ಯ (ಅಖಂಡೇ. ೮೦-೭೧). [ದಾಸೋಹಂ + ಭಾವ್ಯ]

ದಾಸೋಹತನ (ನಾ). ದಾಸನಾಗಿರುವಿಕೆ ; ಸೇವಾವೃತ್ತಿ : ಹದುಳಿಗರು ದಾ ಸೋ ಹ ತ ನ ದ ಲಿ ವಿದಿತಕಾಮಕ್ರೋಧಲೋಭಾಸ್ಪದವಿರಹಿತರ ವರ್ಗಳಿರವಂ ಕೇಳು (ಬಸಪು. ೩೪-೪೩) ; ಬೇಡಿದವರಿಗೆ ಬೇಡಿತನು ಕೈಗೂಡಿಸುವ ದಾಸೋಹತನದಲಿ ಮಾಡುತಿರ್ದನು (ಪ್ರಭುಲೀ. ೯-೩೭).

[ದಾಸೋಹ + – ತನ]

ದಾಸೋಹಭಾವ (ನಾ). = ದಾಸೋಹಭಾವನೆ: ಈಚೀಚೆಗೆ ಜನರಲ್ಲಿ ದಾಸೋಹಭಾವ ಕಡಮೆಯಾಗುತ್ತಿದೆ (ಕೂಢಿ). [ದಾಸೋಹ + ಭಾವ$_{೬}$]

ದಾಸೋಹಭಾವನೆ (ನಾ). ಭಕ್ತಭಾವ; ದಾಸನ ಭಾವ: ವ್ಯಜನರಹಿತನು ಲಿಂಗಜಂಗವ್ಯಭಜನಶೀಲನೆನಿಲ್ಕೆ ಭಕ್ತವ್ರಜದೊಳಗೆ ದಾಸೋಹಭಾವನೆಯಿಂದ ಪೆಂವೆಸೆದು (ಐಸಪು. ೩೦-೩). [ದಾಸೋಹ + ಭಾವನೆ]

ದಾಸೋಹಿ (ನಾ). [ವೀಶೈ] ದಾಸನೆಂಬ ಭಾವದಿಂದ ಸೇವಾಪ್ರವೃತ್ತಿಯಲ್ಲಿ ತೊಡಗಿರುವವನು; ಕಿಂಕರಭಾವವುಳ್ಳವನು; ಭಕ್ತ: ಮನದ ಕೊನೆಯ ಮೊನೆಯ ಮೇಲೆ ಪುನೆಯ ಮಾಡಿಕೊಂಡಿಪ್ಪನೊಬ್ಬ ದಾಸೋಹಿ (ಐಸಪ. ೯೦೩) ; ವೇಷ ನಿರ್ವಯಲಾಗಿ ಆಶೆ ರೋಷವ ಬಿಟ್ಟು ದಾಸೋಹಿಯಾಗಿದ್ದರೆ ಗೊಹೇಶ್ವರಲಿಂಗವು ತಾನೇ (ಅವಚ. ೨೦೩-೯೨೨) ; ಮುಂದ ನೆಣಿಸದ ದಿನದಿನಕೆ ಪರಮಾಯು ಸಲೆ ಸಂದುದೆನಿಪಾ ದೃಢತೆ ನೆಲಗೊಂಡು ಚರಲಿಂಗಕಂದಂದಿಗೇನುವಂ ವಂಚಿಸದೆ ಮಾಡುತಿಹ ದಾಸೋಹಿ ಸದೃಕ್ಕನು (ಶಿವಗೀ. ೦೫-೩೯) ; ಬೆಂದುದನು ಬಿತ್ತಿ ಬೆಳೆದುಂಬ ದಾಸೋಹಿ ಇಂದುಧರನಕ್ಕು (ಸರ್ವಜ್ಞ. ೬೦೦). [ದಾಸೋಹ + – ಇ$_{೩}$]

ದಾಸೋಹಿತನ (ನಾ).=ದಾಸೋಹತನ: ಕುಸುಮಶರನುಪಟಳಕೆ ನೊಂದು ಬಂದವನಲ್ಲ . . . ನಿನ್ನ ದಾಸೋಹಿತನವಾ ವಸುಧೆಯೊಳು ಹಿಸುಕೆ ಪಸರಿಸೆ ಬಂದೆನು (ಸಿದ್ಧೇಪು. ೦೦-೩೫). [ದಾಸೋಹಿ + – ತನ]

ದಾಸ್ತಾನು (ನಾ). ಸಂಗ್ರಹ; ಶೇಖರಣೆ; ಶೇಖರಿಸಿಟ್ಟ ಸಾಮಾನು,–ಸರಕು: ದಾಸ್ತಾನುಗಳ ಲೆಕ್ಕ ಸರಿಯಾಗಿಲ್ಲವೆಂದು ಎರಡು ಮೂರು ಸಾರೆ ಆಡಳಿತದವರು ರಾಮಕೃಷ್ಣಯ್ಯನಿಗೆ ಎಚ್ಚರಿಕೆ ಕೊಟ್ಟಿದ್ದರು (ರಂಗವ. ೩೭೨); ಗ್ರಾಮನೌಕರರಲ್ಲೂ ದಾಸ್ತಾನನ್ನು ಇಡುತ್ತಿದ್ದೆ (ಕಂಬಿ. ೨೪೦) ; ಮುಂದಿನ ಓಟಿನ ಬೇಟೆಯ ಕಾಲದಲ್ಲಿ ಈ ಕಸವೇ ಕೈಮಾಡಿ ತೋರಿಸೋ ದಾಸ್ತಾನು (ಮಾಮುನಿ. ೬೭) : ಸ್ವಲ್ಪ ದವಸ, ದಾಸ್ತಾನು ಇಟ್ಟುಕೊಂಡಿದ್ದಾರೆ (ದೌಂಶ್. ೨೪೭). [←ಮರಾ. ದಾಸ್ತಾನ್; ಪಾರ. ದಾಶ್ತನ್]

ದಾಸ್ತಾನಿಡು (ಕ್ರಿ). ಸಂಗ್ರಹಿಸಿ ಇಡಂ; ಕಾಯ್ದಿಡಂ: ಅಕ್ಕಿಯನ್ನು ಬಹಳ ಆರೋಗ್ಯಕರಸ್ಥಿತಿಯಲ್ಲಿ ದಾಸ್ತಾನಿಡಬೇಕು (ಆಡುಸೊ. ೭೪).

[ದಾಸ್ತಾನು + ಇಡು$_{೧}$]

ದಾಸ್ಯ (ನಾ). ೧. ಸೇವಕತನ ; ಆಳುತನ ; ಗುಲಾಮಗಿರಿ ; ಅಧೀನತೆ: ನಮ್ಮಲ್ಲಿಯ ಮನೋಡಾಢ್ಯ, ಸ್ವಾರ್ಥ ... ನಮ್ಮ ದಾಸ್ಯಕ್ಕೆ ಕಾರಣವಾಗಿವೆ (ಧರ್ಮಸಾ. ೩೨) ; ದ್ವೈತವೇದಾಂತದಲ್ಲಂತೂ ಮುಕ್ತನಿಗೆ ಪರಮಾತ್ಮನ ದಾಸ್ಯವು ಮುಕ್ತಿಯಲ್ಲೂ ತಪ್ಪುವಂತಿಲ್ಲ (ಶಕ್ತಿ. ೦೯). ೨. ನವವಿಧವಾದ ಭಕ್ತಿಗಳಲ್ಲಿ ಒಂದು ; ದಾಸನೆಂಬ ಭಾವದಿಂದ ಮಾಡುವ ಭಕ್ತಿ: "ಶ್ರವಣಂ, ಕೀರ್ತನಂ, ವಿಷ್ಣೋಃಸ್ಮರಣಂ, ಪಾದಸೇವನಂ, ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ, ಆತ್ಮನಿವೇದನಂ" ಎಂಬ ೯ ವಿಧ ಭಕ್ತಿಯಿಂದ ಪರಮಾತ್ಮನನ್ನು ಭಜಿಸುತ್ತಾ (ಹಸಾರ. ೨೦-೩೦ ತಾತ್ಪರ್ಯ). [ಸಂ.]

ದಾಸ್ಯದೀಕ್ಷೆ (ನಾ). ಸೇವಕನಾಗುವಿಕೆ ; ಗುಲಾಮಗಿರಿ : ಎಮ್ಮಂ ಗೆಲ್ದು ದಾಸ್ಯದೀಕ್ಷೆಯನೀಯೆ ಪೂಣ್ದು ತರಿಸಂದು ಬೀಡುಬಿಟ್ಟಿಹರಲ್ಲಿ (ಶ್ರೀರಾಮಾ. ೫೫೩-೧೬). [ದಾಸ್ಯ + ದೀಕ್ಷೆ]

ದಾಸ್ಯಪದ್ಧತಿ (ನಾ). ಮನುಷ್ಯರನ್ನು ಕೊಂಡುಂಕೊಂಡು ಆಳಾಗಿ ದುಡಿಸಿಕೊಳ್ಳುವ ಪದ್ಧತಿ ; ಗುಲಾಮಗಿರಿಯ ಪದ್ಧತಿ : ಅನಾಗರಿಕ ದಾಸ್ಯ ಪದ್ಧತಿಯು ಅವನಿಗೆ ಅದು ನಾಂದಿಯಾಗಿತ್ತು (ಪುನರು. ೨೬೨).

[ದಾಸ್ಯ + ಪದ್ಧತಿ]

ದಾಸ್ಯಶೃಂಖಲೆ (ನಾ). ಆಳುತನದ ಬಂಧನ; ಗುಲಾಮಗಿರಿಯ ಬೇಡಿ,–ಸರಪಣಿ: ವಿಶ್ವಬಂಧು ಪ್ರಮಿತ್ಯೂಸ್ಗೆ ಉಂಟಾದ ಈ ದಾಸ್ಯಶೃಂಖಲೆ ಘೋರಶಿಕ್ಷೆ ವೇದನೆಯು ಶೀಕ್ಷ್ಣತೆ ವಿಶ್ವಪ್ರಕೃತಿಯಲ್ಲಿ ತಳಮಳದ ಹೊನಲಬ್ಬಿಸಿತು (ಅದ್ಭಶ್ರ. XVI ಟೀಠಿಳಿ). [ದಾಸ್ಯ + ಶೃಂಖಲೆ]

ದಾಹ$_{೧}$ 'ದಸ್ಯ' ನೋ.

ದಾಹ$_{೨}$ (ನಾ). ೧. ಉರಿ ; ಕಿಚ್ಚು. ೨. (ಮನಸ್ಸಿನ) ತಾಪ ; ಬೇಗೆ : ಅರಿಗನ ಬೇಟದೊಂದೆ ಪೊಸಬೇಟದ ಕೇಸರಿಯಿಂದಮೆಯ್ದೆ ದಳ್ಳುರಿ ನೆಗೆದಂದು . . . ಕೆಳದಿಯರನದಿಪ್ಪುತ್ತಿರೆ ನೋಡೆ ದಾಹವೊತ್ತರಿಸಿದುದೊಂದು ಪೊನ್ನ ಸಲಗಿರ್ವವೊಲಿರ್ದುದು ಮೆಯ್ ಸಂಭದ್ರಯಾ (ಪಂಪಭಾ. ೩-೮). ೩. ನೀರಡಿಕೆ ; ಬಾಯಾರಿಕೆ ; ತೃಷ್ಣೆ : ಜಾಹ್ನವಿಯೊಳಾಳ್ದಂಗೆ ದಾಹಮೆತ್ತಣದು (ಜೈಮಿಭಾ. ೦೪-೩೦) ; ತೃಷ್ಣೆಯೆಂದೊಡಂ, ದಾಹಮೆಂದೊಡಂ, ಬಾಯಾರಿಕೆಯೆಂದೊಡಂ ನೀರಡಿಕೆಯೆಂದರಿವುದು (ಸಳವ್ಯ. ೨೮೨) : ನನಗೆ ಬಹಳ ದಾಹ ಆಗಿದೆ (ಮುನಿಮಾ. ೦೦೭). ೪. ತೀಕ್ಷ್ಣವಾದ ಆಕಾಂಕ್ಷೆ ; ತೀವ್ರವಾದ ಅಭೀಪ್ಸೆ. [ಸಂ.]

ದಾಹಕ (ಗು). ೧. (ವಸ್ತುಗಳನ್ನು) ದಹಿಸಂವ ; ಸುಡುವ. 'ದಾಹಶಕ್ತಿ' ಪರಾ. (ನಾ). ೨. ಬೆಂಕಿ ; ಅಗ್ನಿ : ದಾಹಕದೊಳಂ ನೆಲೆಯಹ ಪ್ರಾಕಾಶತಮುಮೆನಿಸಿಯಲ್ಲಿಯುಂ ಶಿಖಿಯಂಶದಿಂ ಪ್ರಕಾಶದೊಲವಾಗಿ ಲೋಹಾಂಶದಿಂ ಪ್ರಕಾಶ್ಯಮುಮಾಗುತಲೆ (ವೀಕ್ಕಪು. ೫-೪-೦೬). [ಸಂ.]

ದಾಹಕಶಕ್ತಿ (ನಾ). ಸುಡುವ ಸತ್ವ ; ದಹಿಸುವ ಶಕ್ತಿ : ತೇಜಸ್ಸಿನಲ್ಲಿ ದಾಹಕಶಕ್ತಿಯೂ, ವಾಯುವಿನಲ್ಲಿ ಚಲನಶಕ್ತಿಯೂ . . . ಸ್ವಭಾವಿಕವಾಗಿ ನೆಲೆಸಿರುವುದನ್ನು . . . ಕಾಣಬಹುದಾಗಿದೆ (ಶಕ್ತಿ. ೩೦).

[ದಾಹಕ + ಶಕ್ತಿ]

ದಾಹಗೊಳ್ಳು (ಕ್ರಿ). ಬಾಯಾರಿಕೆಯನ್ನು ಹೊಂದು : ದಾಹಗೊಂಡಿದ್ದ ನಾಲಗೆಗೆ ಎಳನೀರು ಬಹಳ ರುಚಿಯಾಗಿ ಕಾಣಿಸಿತು (ಕೂಢಿ). ೨. ತೀಕ್ಷ್ಣವಾದ ಬಯಕೆಯನ್ನು ಹೊಂದು : ಸಂಪೂರ್ಣವಿಷಯವನ್ನು ತಿಳಿಯುವವರೆಗೆ ದಾಹಗೊಂಡ ಅವರ ಮನಸ್ಸು ತಣಿಯುವುದಿಲ್ಲ (ಕೂಢಿ).

[ದಾಹ$_{೨}$ + ಕೊಳ್ಳು$_{೧}$ (<ಕೊಳ್$_{೧}$)]

ದಾಹಜ್ವರ (ನಾ). ೧. ತೀವ್ರವಾದ ಉಷ್ಣದಿಂದ ಉಂಟಾಗುವ ಜ್ವರ : ಜೇನಿಕರ್ಪೂರ, ಯಷ್ಟಿಮಧುಕ . . . ಅಕ್ಕಿಗಟ್ಟಿನಿಂದರೆದು ಕುಡಿಯೆ ದಾಹಜ್ವರ ಪರಿಹಾರವಾಗುವುದು (ಸಳವ್ಯ. ೬೭) : ನಾಭಿ ೭ ಭಾಗ, ಗಂಧಕ ೬ ಭಾಗ, ಉಮ್ಮತ್ತದ ಬೀಜ ೪ ಭಾಗ . . . ರಸದಲ್ಲಿ ಮರ್ದಿಸಿ ಹೆಸರುಗಾತ್ರದ ಗುಳಿಗೆಯಂ ದಾಹಜ್ವರಕ್ಕೆ ಕೊಡುವುದು (ವಿವ್ಯವಿ. ೯೭). ೨. (ಆಲಂ) ವಿರಹ ಜ್ವರ : ವಾರಿಜ ಮುಳಯಜ ಮುಳಯಸವಿಮಾರಣಂ ಚಂದ್ರಾಂಶು ಚಂದ್ರಕಾಂತ ದ್ರವಕರ್ಪೂರ ಮೃಣಾಲಾದಿಗಳುಂ ಬಾರಿಸಲಾಜವೆ ದಲವನೆ ದಾಹಜ್ವರಮಂ (ಆದಿಪು. ೩-೦೩); ದಾಹಜ್ವರಮುರಿಯುಶ್ರಿರಲ್ ಚಂದನದ್ರವ್ಯಾದಿ ಶೀತಲಕ್ರಿಯೆಯುಂ ಸಂತಾವವಂನೆಂತುಂ ಆಱಿಸಲಾಱದೆ ಇರೆ (ಶಾಪುಂಪು. ೦೩). [ದಾಹ$_{೨}$ + ಜ್ವರ]

ದಾಹಜ್ವರಕಲ್ಕ (ನಾ). ದಾಹಜ್ವರವನ್ನು ನಿವಾರಿಸಲು ತಯಾರಿಸಿದ ಔಷಧದ್ರವ್ಯ : ದಾಹಜ್ವರಕಲ್ಕ – ಕೇದಿಗೆ ಬೀಳಿನ ರಸದಲ್ಲಿ ನೆಲದಾಳವನ್ನರೆದು ಕುಡಿಯೆ ದಾಹಜ್ವರ ಪರಿಹಾರವಾಗುವುದು (ಸಳವ್ಯ. ೬೭).

[ದಾಹಜ್ವರ + ಕಲ್ಕ]

ದಾಹಣಿ, ದಾವಣ$_{೨}$, ದಾವಣ್ಯ, ದಾವಣೆ (ನಾ). ರಾಕ್ಷಸರ ಕತ್ತಿ ; ದೊಡ್ಡ ಕತ್ತಿ: "ರಕ್ಕಸಗತ್ತಿಯೊಳೆ ದಾಹಣಿಯೆನಲ್ಪಡೆಗುಂ" (ಕರ್ಣಾನಿ. ೦೫). **ದಾವಣ$_{೨}$** : ದೇವಸತ್ವವದ ವಜ್ರಾಂಗಿ ಸೀಸಕ ಮೇಲಾವರಿಸಿದ ಲೋಚು ಸುರಗಿ ದಾವಣ ಕರಣನಿಗ್ರಹವನೆ (ವರ್ಧಕ.೦೦-೯೫). **ದಾವಣ್ಯ**: 'ದಾವಣಿಗೆ' ಪರಾ. **ದಾವಣೆ** : ಕೊಡಲಿ ಕತ್ತಿ ಕುಡುಗೋಲು . . . ಕೊಂತ ದಾವಣೆ ಮೊದಲಾದಾಯುಧಂಗಳ್ (ಶ್ರಾವಕಾ. ೦೩೦-೦೦). 'ಡಾಕಿನಿ' ಪರಾ. [?]

ದಾಹನ (ನಾ). ೧. ಸುಡಿಸುವುದಂ; ದಹಿಸುವಂತೆ ಮಾಡುವುದಂ. 'ದಾಹನಕರ್ಮ' ಪರಾ. ೨. ಬರೆಯೆಳೆಯುವುದಂ ; ಬರೆ ಹಾಕಂ

ವುದು : ತಾಂತ್ರಿಕ ವೈದಿಕವೆಂಬೆರಡು ಪೂಜಾಭೇದಂಗಳಂ ಶೋಷಣ ದಾ [ಪಾಕಾಂ. ದ]ಹನ ಪ್ಲಾವನಗಳೆಂಬ ಮೂಱು ಕ್ರಿಯೆಗಳಂ (ವಿವೇಕ. ೦೦೩). ೩. ಒಂದು ಬಗೆಯ ಆಯುಧ ವಿಶೇಷ: ಬಿಲ್ಲು ತೀರು . . . ದಾಹನ ಶಲಲೀ ಭಲ್ಲ . . . ಮಾಯೂರಿ, ಖೇಟಕ ಮುಂತಾದ ಶತ್ರುಜಯಾತ್ಮ ರಕ್ಷಾಧಿಸಾಧನ ವಿಶೇಷಂಗಳಿಂದಲುಂ (ವಿವೇಕ. ೨೬೨). [ಸಂ.]

ದಾಹನಕರ್ಮ (ನಾ).=ದಹನಕರ್ಮ: ನೂತನ ಮನೋಜನಾ ಖಳಪತಿಯ ಮರ್ದಿಸಲು . . . ದಾಹನಕರ್ಮಮಂ ಗೈಸಿ (ನವಮೋ. ೦೩-೫).

[ದಾಹನ + ಕರ್ಮ]

ದಾಹನಿವಾರಣೆ (ನಾ). ನೀರಡಿಕೆಯನ್ನು ಹೋಗಲಾಡಿಸಿಕೊಳ್ಳುವುದು; ಬಾಯಾರಿಕೆಯನ್ನು ಪರಿಹರಿಸಿಕೊಳ್ಳುವುದು : (ಕಿ).

[ದಾಹ$_2$ + ನಿವಾರಣೆ]

ದಾಹರೋಗಿ (ನಾ). ನೀರಡಿಕೆಯಿಂದ ಬಳಲುತ್ತಿರುವ ರೋಗಿ : ಪಿತ್ತರೋಗಿ, ಜ್ವರರೋಗಿ, ಹಸಿದವನು, ದಾಹರೋಗಿ . . . ಮೇಹ ರೋಗಿ ಇವೇ ಮೊದಲಾದ ರೋಗವುಳ್ಳವರು ಮರ್ದನಕ್ಕೆ ಅಯೋಗ್ಯರು (ಸಕಪ್ಪ. ೩೦). [ದಾಹ$_2$ + ರೋಗಿ]

ದಾಹಿಕಾಶಕ್ತಿ (ನಾ). ಸುಡುವ ಶಕ್ತಿ ; ದಹಿಸುವ ಸಾಮರ್ಥ್ಯ : ಸತಿಯ ವಿಶುದ್ಧಾಚಾರಂ ಹುತಾಶನ ಪ್ರಬಲದಾಹಿಕಾಶಕ್ತಿಯುಮಂ ಪ್ರತಿಬಂಧಿಸಿದುದು ಚೋದ್ಯಮೆ (ಪಂಠಾಮಾ. ೦೬-೨೯). [ಸಂ.]

ದಾಹಿಣಿ (ನಾ). (ವಿರಹವೆಂಬ) ದಾಹದಿಂದ ಬಳಲುತ್ತಿರುವವಳು ; ತಾಪದಿಂದ ನೋಯುತ್ತಿರುವವಳು : ಅವರೆಲ್ಲ ಅಲ್ಲಿ ಬಂದು ಸುವಾಸನೆಯ ನೀರಿನ ಸಾಗರವನ್ನೇ ನಿರ್ಮಿಸಿದ್ದರು ! ಆದರೂ ಆ ದಾಹಿಣಿಯ ತಾಪ ತಣಿಯುತ್ತಿರಲಿಲ್ಲ (ಕಂಬಹು. ೮೦). [?]

ದಾಹಿಸು (ಕ್ರಿ). ದಹಿಸು ; ಸುಡು ; ತಾಪವನ್ನುಂಟುಮಾಡು : ವಿಜಯಪಟಹಮಂ ಪೊಯ್ಸಿ ಕೊಳ್ಕೊ[ಡೆಯಂ] ಬೆಳಸಿ ಬೀಡಂ ಬಿಟ್ಟರ್ದು ವಿಶ್ವಾವಸು ಮೊದಲಾಗೆ ಸತ್ತ ನಾಯಕರಂ ದಾಹಿ [ಪಾಕಾಂ. ಜಾನಿ]ಸ ವೇಟ್ದು (ಬಂಹರಿ. ೬-೭೦ ವ); ದುಃಖಸೌಖ್ಯದ ತಾರತಮ್ಯತೆಯಂ ಉಸುರಂ ಪಸರಣವಿಲ್ಲದೆ ಎನ್ನುಬ್ಬಸದ ಭೀತಿಯ ಬೇಗೆ ಮಿಗೆ ದಾಹಿಸುವುದೈ ಕಾರುಣ್ಯ ನಿಧಿಯೆಂದೊರಲಿದಳು (ಕುಪ್ಯಾಸ. ೦೪-೦೨೮) ; ಬಲು ಝಳದ ರಘಾಡಿಯನಟ್ಟಿದನು ದೆಸೆದೆಸೆಗೆ ದಾಹಿಸಲು ನೆಳಲು ಹೊಗಿಸಿದನೆಲ್ಲರನು ಜಕ್ಕುಲಿಸಿ ಜಗವನು ಸುರಿದು ಬಿಸಿಲನು ಬೆಳೆಯಿಸಿದನು ಗ್ರೀಷ್ಮಋತು ಬೆದಱಿಸಿ ಜಗತ್ರಯವ (ನಿಭಾಗ. ೦೦-೦೮-೨). [ದಾಹ$_2$ + – ಇಸು$_3$]

ದಾಹೀರೆ (ನಾ). ಒಂದು ಬಗೆಯ ಔಷಧಿ ಸಸ್ಯ : "ಕನಕಪುಷ್ಪಿ–ದಾಹೀರೆ, ನೆಲದಾಳು ಹೊನ್ನಾವರೆ" (ಓಷಧಿ. ೨೬). [?]

ದಾಹೋತ್ತರ (ನಾ). ಬೆಂಕಿಯಲ್ಲಿ ಸುಟ್ಟು ಶುದ್ಧವಾದುದು ; ಪುಟ ವಿಟ್ಟು ತೆಗೆದುದು : ಮಾದ್ರಿ ಪಾಂಡುರಾಜನೊಡನೆ ದಾ [ಪಾಕಾಂ. ಡಾ] ಹೋತ್ತರದಂತೆ (?) ಕಿರ್ಚಿಂಗೆ ಕುಲದೊಳಂ ಚಲದೊಳಮಾ[ವ] ಕಂದುಂ ಕುಂದುಮಿಲ್ಲದೆ ತನ್ನೊರೆಗಂ ದೊರೆಗಮಾರುಮಿಲ್ಲೆನಿಸಿದಾಗಳ್ (ಪಂಪಭಾ. ೨-೨೬ ವ) ; ದಾಹೋತ್ತರಮಪ್ಪ ಪೊನ್ನ ಪೊಳಪಂ ಗೆಲೆವಂದುದು ಕಾಂತಿ ಕಾಂತೆಯಾ (ಅಜಿಪು. ೨-೩೭). [ಸಂ.]

ದಾಳ$_1$,ಢಾಳ$_3$ (ನಾ). ಪಗಡೆಯಾಟದಲ್ಲಿ ಗರಕ್ಕಾಗಿ ಉರುಳಿಸೆಂವ ಆಟದ ಸಾಧನ : ಚೌಕ ದುಗನಿದ್ದುಗನಿತ್ತಿಗನೆಂಬ ದಾಯಮಂ ಪೋರಿಸಿ ಬೇಡಿದ ದಾಳಮಳವಟ್ಟರೆ (ಪುಣ್ಯಾಸ್ರ. ೪-೦೮) ; ಆಗಳಾ ಪಕ್ಷಿಗಳು ನಿನ್ನಯ ರಾಜ್ಯಭೋಗವನು ಬೇಗದಿಂದಪಹರಿಸಿಕೊಂಡನ ಭಾಗದಾ ದಾಳಗಳು ತಿಳಿಯೆಂದಾಗಸದೊಳಡಗಿದುವು ವಿಸ್ಮಯಮಾಗೆ ನಿಮಿಷದಲಿ (ನಳಚ. ೫-೫); ಕುರಿತ ನೆತ್ತಗಳಂ ಬೀಳದೆ ದಾಳಗಳು ಪರಾಙ್ಮುಖವಾಗಿ ಬೀಳುವುದನ್ನು ತಿಳಿದಿದ್ದರೂ (ಕೃಪಾಉ. ೩) : ಈ ಗಾಂಧಾರರಾಜನು ದಾಳಗಳ ಮೋಸದಿಂದೆಸೆಯುತ್ತ, ಗರ್ವದಲಿ ನಗುತಿಹನು (ಭಾಸನಾ. ೩೨). **ಢಾಳ$_3$** : ಢಾಳದ ಬೆಂಬಱಿವಿಡಿದು ಛಡಾಳಿಸೆ ದೃಗ್ರುಚಿ ಸುಧರ್ಮಸುತೆ . . . ಧರಣೀಪಾಲಕನೊಡನೊಲ್ದು ಲೆತ್ತವಾಡುತ್ತೆಸೆದಳ್ (ಉದ್ಯಟ. ೦೦-೦೬) ; ತಿಳಿಹಿದ ದ್ಯೂತಕೌಶಲವ . . . ವರಗೃಹದ ದಶಚೌಕವೆರಡಱ ಪರಿಯ ಢಾಳವು ತನಗೆ ಬೀಳುವ ಲಕ್ಷಭೇದನವ (ಸಂಭಪ. ೨೭-೨೦).

ದಾಳ ಹಾಕು = ೧. (ಪಗಡೆಯ ಆಟದಲ್ಲಿ) ನೆತ್ತವನ್ನು ಹಾಕು. ೨. ಆಟ ಮೊದಲುಮಾಡು ; ನಿರ್ಧಾರದ ಹೆಜ್ಜೆಯಿಡು : ಚನ್ನವ್ವನು ದಾಳ ಹಾಕಿ ಬಿಟ್ಟಳು (ಮುನಿಮಾ. ೦೩೯). [?]

ದಾಳ$_2$, ಢಾಳ$_4$ (ನಾ). ಒಂದು ವಾದ್ಯ ವಿಶೇಷ (?) : ಎರಡು ವೇಳೆ ನಡೆಯುತ್ತಿದ್ದ ದಾಳ ದಮಾಣ ಭೇರಿ ಮುಂತಾದ ಓಲಗಗಳಿಗೆ ಈಗ ದಿಳ್ಳಿಯಿಂದ ಬಂದ ನವಪತ್ತನ್ನು ಪ್ರತಿದಿನದಲ್ಲಿಯೂ ನಾಲ್ಕುವೇಳೆ ನಡೆಯುವಂತೆ ಕಟ್ಟಳೆ ಮಾಡಿದರು (ಜಾಮವಂ. ೦೩೮); ಎರಡು ವೇಳೆ ದಾಳ ದಮಾಣ ಭೇರಿ ಮುಂತಾದ ಓಲಗಗಳಿಗೆ ಈಗ ದಿಳ್ಳಿಯಿಂದ ಬಂದ ನೌಬತ್ತನ್ನು ಪ್ರತಿನಿತ್ಯದಲ್ಲಿಯೂ ನಾಲ್ಕುವೇಳೆ ನಡೆಸುವಂತೆ ಕಟ್ಟಳೆ ಮಾಡಿದರು (ಮಹಾವಂ. I, ೦೪೬) : ರೇಮಟಿ ವೆಂಕಟಾದ್ರಿನಾಯಕನಂ ಸೋಲಿಸಿ ಅಪನ ದಾಳ ದಮಾಣ ಅಂದಳಾದಿಗಳಂ ಸೂರೆಗೊಂಡ ಅದ್ವಿತೀಯ ಶೂರ (ಸುಗುಗಂ. ೦೩೫-೫) ; ನಾಯಕನು ದಾಳ, ದಮಾಣ, ಅಂದಳ ಮುಂತಾದವುಗಳಿಂದೊಡಗೂಡಿ ಶ್ರೀರಂಗಪಟ್ಟಣಕ್ಕೆ ಹೋಗುತ್ತಿದ್ದಾಗ ಚಾಮರಾಜ ಒಡೆಯರು ಆತನನ್ನು ಕಾಳಗಕ್ಕೆ ಕರೆದರು (ಒಡಕ. ೦೦). **ಢಾಳ$_4$** : ಢಕ್ಕಾನಿನಾದದಿಂ ಢಾಳ ಢವಳಂಧ್ರ ಢಕ್ಕೆ ತನ್ನೊಡನೆ ಮಾರಾಂತ ಢಕ್ಕಾದಿಯಾದ ಮೂಢರ್ಕಳ ದಢಕ್ಕನಳಿದ ಹರಿ ಜಯತು (ಶತಸಾಂ. ೭೦-೫೬). 'ದವಳ' ಪರಾ. [?]

ದಾಳಕ (ನಾ). ಅರಿದಾಳ ; ಹರಿತಾಲ : ಸಿರಿಕಂಡಂ ರುಜೆ ಮಾಂಸಿ ನಟ್ಟಿಮಧುಕಂ ವಕ್ರಂ ಹರಿದ್ರಾದ್ವಯಂ ಸಿರಿಸಂ ದಾ(ತಾ)ಳಕಮೇಲೆಯೆಂಬಿ ನಿತುಮಂ ಶೀತಾಂಬುವಿಂ ಪೂಸೆ ಸಂಹರಿಕು ... ಜ್ವರಮಸ್ತ್ರಪ್ರಹರವ್ರಣಂ ಗಳೆನಿಪೀ ದೋಷಂಗಳಂ (ಲೋಕೋಪ. ೯-೦೬೩). [<ಸಂ. ತಾಲಕ]

ದಾಳಾದಾಳಿ 'ದಾಟೂದಾಟೂ' ನೋ.

ದಾಳಾದೂಳಿ 'ದಾಟೂದಾಟೂ' ನೋ.

ದಾಳಾಧೂಳಿ 'ದಾಟೂದಾಟೂ' ನೋ.

ದಾಳಿ 'ದಾಟೂ' ನೋ.

ದಾಳಿಂಬ, ಡಾಡಿಮ, ಡಾಲಿಮ, ಡಾಳಿಂಬ, ಡಾಳಿಂಬೆ, ಡಾಳಿಂಬ್ರ, ಡಾಳಿಮ, ದಾಳಿಂಬರ, ದಾಳಿಂಬರಿ, ದಾಳಿಂಬೆ (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು ; ದಾಳಿಂಬೆ : ೧. "ದಾಡಿಮ ಮೆನಲ್ ದಾಳಿಂಬಮದು" (ಮಂಗರಾ. ೩೬-೦೭); "ದಾಳಿಂಬಮೆ ದಾಡಿಮಂ" (ಚತುನಿ. ೦೯); "ಆ ದಾಡಿಮಕ್ಕೆ ದಾಳಿಂಬವಾಯ್ತು" (ಸಂಜೀವ. ೩೦) : ಪೂಸ ಕೆಂದಳಿರ್ಗಳ ದಾಳಿಂಬಸಾರಮಂ ಕಟ್ಟಿ ತನ್ನ ಬಣ್ಣದೊಳದು ರಂಜಿಸೆ (ಶಾಂತಿಪು. ೮-೦೬), ಆ ಪೊದಱ ಮೊದಲೊಳೊದವಿ ಬೆಳೆದು ಬೀಗಿ ತಮ್ಮಿಂ ತಾವೆ ಬಿರಿದು ಬಿರಿವಟ್ಟು ಸುರಿವ ದಾಳಿಂಬದ ಪಣ್ಗಳ ತನಿರಸದ ಪರಿಪೊನಲೆ ಪರಿನೀರಾಗೆ (ಪಂಚತಂ. ೦೦೭-೦೫) ; ಮಲ್ಲಿಗೆಯಲ್ಲದೆ ಸಂಪಗೆಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದೆಂಗಲ್ಲದೆ ಮಾವಲ್ಲದೆ ಕೌಂಗಲ್ಲದೆ ಗಿಡುಮರಗಳೆಂಬುವಿಲ್ಲಾ ನಾಡೊಳ್ (ಕಬ್ಬಿಕಾ. ೨೦) ; ಇಂಬಿಲ್ಲ ಪಲ್ಗಿರಿದುಸಿರುವ ಪೋಲ್ಮಲಿಸಿ ದಾಳಿಂಬದ ಮರಗಳೊಪ್ಪಿಹುವು (ಕಂನವಿ. ೫-೮೦) ; ಮೈ ಮುರಿದು ಬಿರಿದ ದಾಳಿಂಬದಂತೆ ಜೀವನದ ಪ್ರಭೆಯು ನುಗ್ಗಿ (ಅರಳು. ೪೩೨-೦೭) ; ದಾಳಿಂಬ–ಈ ಎಲೆಯಂ ನೀರಲ್ಲಿ ಅರೆದು ಕುಡಿಯೆ ಮೈಲೆ ರೋಗ ಗುಣ (ವಿವೈವಿ. ೫). **ಡಾಡಿಮ** : ೧. "ಡಾಡಿಮ–ಡಾಳಿಮ, ಕರಕ" (ನಾಚಿರಾ. ಕಿ). **ಡಾಲಿಮ** : (ಕಿ). **ಡಾಳಿಂಬ** : (ಕಿ). **ಡಾಳಿಂಬೆ** : (ಕಿ).

ದಾಳಿಂಬ್ರ: (ಕ). **ದಾಳಿಮ:** ೧. 'ಡಾ ಡಿ ಮ' ಉಲ್ಲೇಖಕ್ಕೆ ಕೊಟ್ಟಿರುವ 'ನಾಚಿರಾ'. ಕಿ. ಪ್ರಯೋಗವನ್ನು ನೋಡಿ. **ದಾಳಿಂಬರ:** ೧. ಸೂರ್ತಿ ಚವಾಳಾಮಣದ ಕಿಮ್ಮತ್ತು ಇರತಕ್ಕ ಜೀನಸಗಳು ೧, ಅಕ್ಕಲಖಾರ . . . ೧೦೫, ದಾಳಿಂಬರದ ತೊಗಟೆ (ಮುಂಬವ್ಯಾ. ೧೨೪). **ದಾಳಿಂಬರಿ:** ೧. "ಕರಕಃ, ದಾಡಿಮಃ–೨ ದಾಡಿಂಬೇಗಿಡ, ನಾಳಿಂಬೇಗಿಡ, ದಾಳಿಂಬರೀ ಗಿಡ" (ಸಿದ್ಧಾಂತಿ. ೧೦೦). **ದಾಳಿಂಬೆ:** ೧. ನಿಂಬೆ . . . ದಾಳಿಂಬೆ, ಅಂಜೂರ–ಇವೇ ಮುಂತಾದ ಹಲವು ಹಣ್ಣುಗಿಡಗಳನ್ನು ತೋಟಗಳಲ್ಲಿ ಬೆಳೆಯಬಹುದು (ವ್ಯವಸು. ೫೮). ೨. ಮೊರಸು ಒಕ್ಕಲಿಗರಲ್ಲಿ ಒಂದು ಪಂಗಡ: (ಎಸಮ್ಯ. XV, ೨೪೩).

ದಾಳಿಂಬದ ಚೂರ್ಣ, ದಾಳಿಂಬಾದಿ ಚೂರ್ಣ = ದಾಳಿಂಬೆಯಿಂದ ತಯಾರಿಸಿದ ಚೂರ್ಣ: ದಾಳಿಂಬದ ಚೂರ್ಣ–ದಾಳಿಂಬದ ಕಾಯ ತೊಕ್ಕು, ಮಾವಿನ ಬೀಜ . . . ಚೂರ್ಣಿಸಿ ಮೊಸರಿನಲ್ಲಿ ಕಲಸಿ ಕೊಡಲು ಸರ್ವಾತಿಸಾರ . . . ಕೆಡುಗುಂ (ಸಕವೈ. ೩೨೮); ದಾಳಿಂಬಾದಿ ಚೂರ್ಣ–ದಾಳಿಂಬದ ಕಾಯ ತೊಕ್ಕು, ಮಾವಿನ ಬೀಜ . . . ಚೂರ್ಣವ ಮಾಡಿ ಎಮ್ಮೆಯ ಕಟ್ಟುಮೊಸರಿನಲ್ಲಿ ಸೇವಿಸೆ ರಕ್ತಾತಿಸಾರ, ಆಮಾತಿಸಾರ ಹೊಟ್ಟೆಶೂಲೆ ಸಹ ಪರಿಹರ (ಸಕವೈ. ೩೧೨). **ದಾಳಿಂಬದ ಪಂಚಾಂಗ** = ದಾಳಿಂಬೆಯ ಮರದ ಐದು ಅಂಗಗಳು (ಹೂ, ಎಲೆ, ಕಾಯಿ, ತೊಗಟೆ, ಹಣ್ಣು): ದಾಳಿಂಬದ ಪಂಚಾಂಗ ಬಿಳು ಸಾಸುವೆ ತೈಲದೊಳಟ್ಟು ಯೋನಿಗೆ ಪೂಸುವುದು (ಕಾಮಶಾ. ೧೦–೨೭೪). **ದಾಳಿಂಬಾದಿವಟಕ** = ದಾಳಿಂಬೆ, ಬಿಲ್ವಪತ್ರೆಹೀಚು ಮೊದಲಾದುವುಗಳಿಂದ ಮಾಡಿದ ಗುಳಿಗೆ: ದಾಳಿಂಬಾದಿವಟಕ–ದಾಳಿಂಬಪಂಚಕ, ಬಿಲ್ವಪತ್ರೆಹೀಚು . . . ಮುಳ್ಳುಕೊಗ್ಗಿಬೇರಿನ ಪಟ್ಟೆ ಇವಂ ಸಮಭಾಗವಾಗಿ ಎಮ್ಮೆಮೊಸರಿಂದರೆದು . . . ಗುಳಿಗೆಯಂ ಮಾಡಿ ಒಣಗಿಸಿ ಜೇನುತುಪ್ಪದಿಂದ ಒಂದು ಗುಳಿಗೆಯಂ ತೆಗೆದುಕೊಳ್ಳಲು ಹೊಟ್ಟೆಬೇನೆ ನಿಲ್ಗುಂ (ಸಕವೈ. ೩೪೬).

[<ಪ್ರಾ. ದಾಡಿಮ, ದಾಲಿಮ./ಸಂ. ದಾಡಿಂಬ, ದಾಡಿಮ, ದಾಲಿಮ]

ದಾಳಿಂಬಗೆ (ನಾ). (?): ದಾಳಿಂಬದ ಕಿಱುನನೆಗಳ್ ದಾಳಿಂಬ [ಪಾಕಾಂ. ಬಿ]ಗೆ ಮೆಱೆಯೆ ಮುಗುಳ ಮುತ್ತಿನಲೊರ್ವಳ್ ಬಾಳಕಿ ಪಂಚಶರಂಗೊಯ್ದೇಳಿಸಿದಳ್ ಪಂಚಶರನ ಶರಪರಿಣತಿಯಿಂ (ಅನಂಪು. ೭–೨೦). [?]

ದಾಳಿಂಬರ 'ದಾಳಿಂಬ' ನೋ.

ದಾಳಿಂಬರಿ 'ದಾಳಿಂಬ' ನೋ.

ದಾಳಿಂಬವಣ್ (ನಾ). ದಾಳಿಂಬೆಯ ಹಣ್ಣು: ಬಕ್ಕೆವಲಸುಗಳ ಪಣ್ಗೊನೆಗಳಂ ಬಿತ್ತುಗಳ ವೆಕ್ಕಸಂ ಬಿರಿದ ದಾಳಿಂಬವಣ್ಗೊನೆಗಳಂ ಮುಕ್ಕಣ್ಣನೆಡೆಗೆ ವನಪಾಲಕಂ ಪೊರಿಸಿಕೊಂಡೈತಂದನು (ಜೆಬಪು. ೪೫–೨೯); ವನಪಾಲಂ ಕಾಣ್ಕೆಗೈದಂ . . . ದಾಳಿಂಬವಣ್ಣಂ ಸುರಯಿಯನುರು ಚಾಂಪೇಯಮಂ (ರಾಜಶೇ. ೧೦–೨). [ದಾಳಿಂಬ + ಪಣ್$_3$]

ದಾಳಿಂಬಾಷ್ಟಕ (ನಾ). = ದಾಡಿಮಾಷ್ಟಕ: ದಾಳಿಂಬಾಷ್ಟಕ–ತವಕ್ಷೀರ ಗ ಳ ತೂಕ, ಏಲಕ್ಕಿ ಗ ರ ತೂಕ . . . ಚೂರ್ಣಿಸಿ . . . ಜೇನುತುಪ್ಪದಿಂ ಸೇವಿಸಲು . . . ಕ್ಷಯರೋಗ ಸಹ ಮಾಣ್ಗುಂ (ಸಕವೈ. ೩೨೮).

[ದಾಳಿಂಬ + ಅಷ್ಟಕ]

ದಾಳಿಂಬೆ 'ದಾಳಿಂಬ' ನೋ.

ದಾಳಿಕಾಱ 'ದಾಟಿಕಾಱ' ನೋ.

ದಾಳಿಕ್ಕು (ಕ್ರಿ). ದಾಳಿಯಿಡು; ಮಂತ್ತು: ಬಲುಬೇಡವಡೆ ಕಡಗಿ ಹರಕರಿಸಿ ನಡೆಯೆ ಕೈಮಿಕ್ಕು ಹೇರಡವಿ ಗೋಳಿಡಲು ದಾಳಿಕ್ಕಿದಂ ನಿಜದೇಶಜನ ವನಧಿಕುಮುದಸಖನು (ಹಚಕಾ. ೫–೧೪). [ದಾಳಿ (<ದಾಟಿ) + ಇಕ್ಕು]

ದಾಳಿಗ (ನಾ). ದಾಳಿ ಮಾಡುವವನು; ಆಕ್ರಮಣಗಾರ: ಇತ್ತಲಸುರನ ದಾಳಿಗರ್ಗೆ ಸೆಱೆಸೂಱೆಗಳನಿತ್ತ ರಾಜ್ಯದ ಜನಂ ಪೊಱಬಾಗಿಲೊಳ್ ಮೊಱೆಯಿಡುತ್ತಿರಲ್ ಕೇಳ್ದು (ಜೆಬಪು. ೪೮–೦೩): ಕೋಟೆಯನ್ನು ಬಲಾಧಿಕನಾಗಿರುವ ಪ್ರಚಣ್ಡ ಶತ್ರುದಾಳಿಗನಿಂದ ತಾನೇ ಹೇಗೆಯಾದರೂ ಕಾಪಿಟ್ಟು ಉಳಿಹಿಕೊಳ್ಳಬೇಕಾಗಿರುವ ಭಾರಣೆಯ ಭಾರವನ್ನೂ (ಬೆಟ್ಟಅ ೭೨–೨೦). [ದಾಳಿ (<ದಾಟಿ) + – ಇಗ]

ದಾಳಿಡು 'ದಾಟಿಯಿಡು' ನೋ.

ದಾಳಿಯಿಡಿಸು (ಕ್ರಿ). ಆಕ್ರಮಣಮಾಡಿಸು; ದಾಳಿಯಿಡುವಂತೆ ಮಾಡು; ದಾಳಿ ಮಾಡಲು ಅನುಮತಿಯನ್ನು ಕೊಡು: ಸುಡಿಸು ಕೈಲಾಸಮಂ ಕೆಡಿಸು ಹರಸಾಸಮಂ ತಡೆಸದೆನ್ನಿಂ ದಾಳಿಯಿ [ಪಾಕಾಂ. ಇ] ಡಿಸು ಬೇಗದೊಳು (ಜೆಬಪು. ೪೭–೨೨).

[ದಾಳಿಯಿಡು (<ದಾಟಿಯಿಡು) + – ಇಸು$_2$]

ದಾಳಿಯಿಡು 'ದಾಟಿಯಿಡು' ನೋ.

ದಾಳಿವರಿ, ಧಾಳಿವರಿ, ಧಾಟಿವರಿ (ಕ್ರಿ). ದಾಳಿಮಾಡು; ಮುತ್ತಿಗೆಹಾಕು: ಪ್ರಾಣವಿಲ್ಲದ ಸೇನೆ ಪದ್ಮಸಂಖ್ಯೆಯು ಕೋಟಿ ದಾಳಿವರಿದುದು ಎಂಟು ಜಾವದೊಳಗೆ ಜಾಲಗಾಱನ ಕೈಯ ಮಾಣಿಕ್ಯ ಸಿಕ್ಕದೆ ಆಳಿಗೊಂಡಿತ್ತು ಜಗವ ಬೇಳುಮಾಡಿ (ಸರ್ವವ. ೮೯–೪೯೫). **ಧಾಳಿವರಿ:** ಅಲ್ಲಿಗಲ್ಲಿಗೆ ಧಾಳಿವರಿದವರೆಲ್ಲರನು ನೆಱೆ ಕೊಲ್ವುದು (ನಿಧಾಗ. ೭–೨–೬). **ಧಾಟಿವರಿ:** ಸಾನ್ತರನ ಮೇಲೆ ಮೂಕರಸಂ ಧಾಟಿಟ್ಟಲ್ಲಿ ನಾಗಾರ್ಜ್ಜುನಯ್ಯನ ಮಗಂ ಮನ್ನೆಯ ನಾಗವರ್ಮ್ಮಂ ತಾನುಂ ಧಾಟಿವರಿದಲ್ಲಿ ಸತ್ತು ಸುರಲೋಕಕ್ಕೆ ಸನ್ದಂ (ಎಕ. VII, ಶಿಕಾರಿ. ೨೨೦–೧೨ : 1015).

[ದಾಳಿ (<ದಾಟಿ) + ಪರಿ$_2$]

ದಾಳಿವರಿಸು (ಕ್ರಿ). ದಾಳಿಮಾಡಿಸು; ದಾಳಿಮಾಡಲು ಕಳಿಸು: ಶಾದುಲ್ಲ ಖಾನನ ಪೌಜುವೆರಸು ಸುಬೇದಾರ ಲಿಂಗಪ್ಪನಂ ಮಾಯಾವಿಗಳ ಸೀಮೆಯ ಮೇಲೆ ದಾಳಿವರಿಸಲು (ಕೆಳನ್ಯ. ೧೦–೭೦). [ದಾಳಿವರಿ + – ಇಸು$_3$]

ದಾಳಿವೂ (ನಾ). (?): ಮುನಿಗಣೇಶ್ವರರೊಡನೆ ದಾಳಿವೂಗೊಯ್ವೊಡನೆ ವರ್ಷ ಗೋಳಾಂಗೂಳಂಗಳುಮಂ ನೋಡಿ (ಪಂಪಭಾ. ೧–೧೧೫ ವ): "ದಾಳಿವೊಗೊಯ್ವ = ದಾಳಿಹೂವನ್ನು ಕೊಯ್ಯುವ" (ಪಂಪದೀ. ೪೪).

[?]

ದಾಳಿಹೋಗು 'ದಾಟಿವೋಗು' ನೋ.

ದಾಳೆಯ (ನಾ). ಒಂದು ಬಗೆಯ ಪಾತ್ರೆ; ಕುಡಿಯುವ ಪಾತ್ರೆ (?): ಮಗಮಗಿಸುವ ಕಂಪೊದವಿರ್ಪ ತಕ್ರಮಂ ತೀವಿದ ದಾಳೆಯಮಂ ಮೃಗಾಕ್ಷಿಯರ್ತಂದಿಟ್ಟರ್ (ಶಾಂತೀಶ್ವ. ೧೫–೭೦). 'ತಾಲಿ$_2$' ಪರಾ.

[<ಸಂ. ಸ್ಥಾಲೀ ?]

ದಾಳೆಸಿಂಪು (ನಾ). (ಕರಾ) ಒಂದು ಬಗೆಯ ಮೀನು.

[ದಾಳೆ ? + ಸಿಂಪು$_1$]

ದಾಟೂದಾಟಿ, ದಾಳಾದಾಳಿ, ದಾಳಾದೂಳಿ, ದಾಳಾಧೂಳಿ, ಧಾಳಾಧೂಳಿ, ಧಾಟೂಧಾಟಿ (ನಾ). ೧. ವೇಗ; ರಭಸ: ದಾಟೂದಾಟಿಯಿ ಬಂದು ಪ್ರತಿಪಾಲಪುರಮಂ ಪೊಕ್ಕು (ಧರ್ಮಾಮ್ಯ. ೦೦–೧೨೭). ೨. ಪರಸ್ಪರ ಆಕ್ರಮಣ: ಮುಟ್ಟಾಮುಟ್ಟಿ, ಹೆಲ್ಲಾಹೆಲ್ಲಿ, ದಾಟೂದಾಟಿ, ದೆಕ್ಕಾದೆಕ್ಕಿ, (ಹಾಣಾಹಾಣಿ) ಹಣಾಹಣಿ (ಶಮದ. ೧೮೫ ಪ್ರಯೋ). **ದಾಳಾದಾಳಿ:** ೩. ಆಕ್ರಮಣ; ಮುತ್ತಿಗೆ: ಮನ್ಮಥನಳಿದೊಡೆ ಮತ್ತೆ ದಾಳಾದಾಳಿ ಮಾಡುವೆನು (ವರ್ಧಚ. ೧೨–೩೯); ಧರ್ಮಯುದ್ಧದ ದಾಳಾದಾಳಿಯಲ್ಲಿ ಕದನ ವಿತ್ತು, ದೈವವಶದಿಂದ ಸೋಲ್ತು (ಬೆಟ್ಟಅ. ೧೨೩–೧೮). **ದಾಳಾದೂಳಿ:** (ಕ). **ದಾಳಾಧೂಳಿ:** ೩. ಬಿಡದೆ ದೆಖ್ಖಾದೆಖ್ಖಿಯಲಿ ಧೃತಿಗೆಡದೆ ದಾಳಾಧೂಳಿಯಲಿ ಬಲುಗಡಿಯ ಖಾಡಾಖಾಡಿಯಲಿ ಕಾದಿದರು ಕಡುಹಿನಲಿ (ತೂರರಾ. ೬–೪೬–೫೬). **ಧಾಳಾಧೂಳಿ:** ೧. ಇಱಿತಕಂಜದಿರಂಜದಿರು ಕೈ ಮಱೆಯದಿರು ಕಲಿಯಾಗೆನುತ ಬೊಬ್ಬಿಱಿದು ಧಾಳಾಧೂಳಿಯಲಿ ತಾಗಿದನು

ಕಲಿಕರ್ಣ (ಕುವ್ಯಾಕ. ೦೩-೨೮). ೩. ಕಾಳಗದೊಳಿಟ್ಟೊರಸಿ ಬಾಣನ ತೋಳ ತಱಿವಂದಾಯ್ತು ಧಾ[ಪಾಕಾಂ. ದಾ]ಳಾಧೂಳಿಯಾಹವವಿಂದುಮೌಳಿಯೊಳೆಮಗೆ ಮುಳಿಸಿನಲಿ (ಕುವ್ಯಾಉ. ೧-೩೮) ; ಬೆರಸಿ ಧಾಳಾಧೂಳಿಯಲಿ ಪೊಪ್ಪರಿಸಿ ಖಾಡಾಖಾಡಿಯಲಿ . . . ಕಾದಿತು ಸೇನೆ ಸೇನೆಯಲಿ (ತೊರರಾ. ೬-೩೮-೩). ೪. ಅಬ್ಬರ ; ಆರ್ಭಟೆ ; ಜೋರಂ : ದುಗನ ಹಾಯಿಕು ತನಗೆ ಹಾಯ್ಕಿತ್ತಿಗನವೆಂಬಬ್ಬರದ ಹಾಸಂಗಿಗಳ . . . ತಳಸಾರಿಗಳ ಧಾ[ಪಾಕಾಂ. ದಾ]ಳಾಧೂಳಿ ಮಸಗಿತು (ಕುವ್ಯಾಸ. ೦೩-೫೦). ೫. ಸಡಗರ ; ಸಂಭ್ರಮಂ : ಹೇಳಲೇನದನಶ್ವಮೇಧದ ಬೇಳುವೆಯ ಸಂಭ್ರಮದ ಧಾಳಾಧೂಳಿಯಲಿ ಶಿವಿದಾಡಿದವು ಜಿಹ್ವೆಗಳು ಹುತವಹನ (ತೊರರಾ. ೧-೭-೪೮): ಪ್ರೇಮಸಂಕೇತಗಳನೆಂದು ಧಾಳಾಧೂಳಿಯಿಂದ ಕುಣಿದೆನು ನಾನು ವ್ರಾತ್ಯಶುಕ ದಂತೆ ಮಾಮರನ ಚಿಗುರನ್ನು ಕನಸಿನಲ್ಲಿಯೆ ಕಂಡು ಕಣ್ಮುಚ್ಚಿ ಕುಕಿಲುತಿಹ ತರುಣಪಿಕದಂತೆ (ಸಖೀಗೀ. ೫೫-೫) ; ನಲಿವಿನ ನಲಿನವು ತಾನೇ ತಾನಾಗಿಯೇ ಬಿಚ್ಚಿ ಏಳ್ಮಡಿ ಧಾಳಾಧೂಳಿಯ (ಚೈತ್ಯಾಲ ೫೩-೪).

ಧಾಟಾಧಾಟಿ : ೧. ತಪೋಧನರ ದೇವತಾರಾಧನೆಗೆ ಕಾಲಾತಿಕ್ರಮ ಮಾಗಲೀಯದೆ ಧಾಟಾಧಾಟಿಯಲ್ಲಿ ಬರ್ಪ ಪರಿಚಾರಕರ ನೆರವಿಯುಮಂ ಕಂಡು (ಪಂಚತಂ. ೧೦೭-೧೦).

ದಾಳಾದೂಳಿಯಾಗು, ದಾಳಾಧೂಳಿಯಾಗು = ಆಕ್ರಮಣಕ್ಕೆ ಒಳಗಾಗು ; ನಾಶವಾಗು : ಈ ರಂಗಪ್ಪನ ದಾಳಿ ಹೊರಟುದೆಂದರೆ ಕನ್ನಡದೊಳಗಿನ ತಂಟೆಗಾರರೆಲ್ಲ ದಾಳಾದೂಳಿಯಾಗುವರು (ನಡೆದಾ. I, ೪೩೭) ; ಏನು ಮಾಡಿದರೂ ಕಾಲಗತಿಯಲ್ಲಿ ಎಲ್ಲವೂ ದಾಳಾಧೂಳಿಯಾಗುತ್ತದೆ (ದೇಕನ್ಯೆ. ೦೪೦).

[<ದಾಟಿ./P ಕೆಲವು ವೇಳೆ ಇವುಗಳು 'ದಾಟಿ' ಶಬ್ದದ ದ್ವಿರುಕ್ತಿಯಾಗಿಯೂ ಬಳಕೆಯಾಗಿರಬಹುದು]

ದಾಟಿ, ಡಾಳಿ₂, ದಾಟಿ₁, ದಾಳಿ, ಧಾಳಿ, ಧಾಟಿ (ನಾ). ಲಗ್ಗೆ ; ಮುತ್ತಿಗೆ ; ಆಕ್ರಮಣ : "ಅವಸ್ಕಂದಃ, ಪ್ರಪಾತಃ – ಈ ೨ ದಾಟಿ" (ಹಲಾಯು. ೭೪-೨೯೮) ; "ಪ್ರಪಾತಮದವಸ್ಕಂದಮೆನೆ ದಾಟಿ [ಪಾಕಾಂ. ಧಾಳಿ]" (ಮಂಗರಾ. ೮೫-೨೬) ; ದಾಟಿ ಬಂದುದೆಂದಂಜಿ ತ್ರಸ್ತಾಭಿಭೂತನಾಗಿಯೋಡಲ್ (ಪಡ್ಮಾರಾ. ೧೬೩-೧೨); ಘನದ ಕರಗಿದುದನಱಿದಪಘನದ ವಿಳಾಸಮನದೆಂತು ನಂಬುವುದೋ ಘನಾಘನದಿಂದಮಱಿಯಲಾದುದು ಘನಾಘನಂ ಜವನ ದಾಟಿಗಿಲ್ಲೆಂಬಿನಿತಂ (ಆದಿಪು. ೪-೬೫); ಅಲ್ಲಿಗೆ ನಿಟ್ಟಾಲಿಯಾಗಿ ದಾಟಿಯನಿಟ್ಟು ಮುಟ್ಟೆವಂದು ಬಾಯ್ಮಾಡಿ ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯೂತ್ತಮೌಜಸರಂ ಕೊಂದು (ಪಂಪಭಾ. ೧೩-೦೦೬ ಪ) : ಇವಳ ಕಟಾಕ್ಷಮೆನ್ನೆರ್ದೆಯನುರ್ಚಿಪುದೀಕೆಯ ರೂಪು ದಾಟಿಯೊಳ್ ಕವಿದಪುದು (ಧರ್ಮಾಮ್ಯ. ೦೩-೦೦೪) ; ಆಟಾಟಿಗೆ ಬಲ್ಲಾಳನ ದಾಟಿಯ ದಾವಣಿಯ ತುರಗದಲಿ ಖುರಹತಿಯಿಂ ಪೇಟಿ ಪೆಸರಿಲ್ಲದಂತಿರೆ ಪಾಟಾದುವು ವೈರಿದುರ್ಗಮೆನಿತೊಳವನಿತುಂ (ಯಶೋಚ. ೧-೧೪) ; ಕೈಲಾಸಕ್ಕಲಂಪಾಂತು ಚೇರಮನೇಂ ದಾಟಿಯನಿಕ್ಕನೇ (ಉದ್ಯಟಿ. ೦೨-೨೪). **ಡಾಳಿ₂** : ಬಂದುದಾ ಸಚಿವಸಿದ್ಧಂಗೆ ಸ್ವರ್ಗದ ಡಾಳಿ[ಪಾಕಾಂ. ಧಾಳಿ] ನಿಂದು ದೇಹವನಲೆದುದಲ್ಲಿ ರೋಗದ ಕೇಳಿ (ಬಸರ. ೫-೦೪೭). **ದಾಟಿ₁** : ಕೋಟಿ ಕೋಟ್ಯಾವಧಿಕವಾಗಿ ಭವಾಟಿಯಲಿ ವಾಸನಾಪರಿಪಾಟಿಯೇ ಪ್ರಾಬಲ್ಯಮಂ ತಮ್ಮೊಳಗೆ ತಾವೈದಿ ದಾಟಿಯಂ ಮಾಡುವವು (ವಿವೇಧ. ೫-೩೨). **ದಾಳಿ** : ಗಗನತಳಂಬರಂ ನೆಗೆದ ಧಾಳಿಯ ಧೂಳಿಗೆ ಬೆರ್ಚ್ಚಿ ದಾಳಿಗಂ ತೆಗೆದು ವನಾನ್ತಮಂ ಪುಗೆ (ಸೌಇಇ. XI-ii, ೦೪೭-೦೦ ; 1099); ದಾಳಿಯನಿಟ್ಟಱಿಯಟ್ಟಿ ಪಾಂಡ್ಯನಂ ಚಾಳಿಸಿ (ಮೃಅರಿ. ೦೯೩೦, ೧-೩೫ ; ಸು. 1180) ; ಕಾಮನ ಕಾರಾಗಾರದೊಳಿರ್ಪಂತೆ ಕೇಳೀವನದೊಳಿರ್ಪ ಬಾಲಕಿಗೆ ಚಂದ್ರನ ದಾಳಿ . . . ಶಿಶಿರೋಪಚಾರದ ದಂಡಣೆಯಖಂಡಿತವಾಗೆ (ಗಿರಿಕ. ೪-೧೦೮ ಪ); ಝಗಝಗಿಸಿ ಹೊಳೆಹೊಳೆವ ಬಾಯ್ದಾರೆಗಳ ಬೆಳಗಿನ ದಾಳಿ ಧೀಂಕಿಡೆ ಮೊಗೆದವರ್ಜುನನಂಬು ರಿವು ಚತುರಂಗ ಜೀವನವ(ಕುವ್ಯಾಭೀ.೮-೫೦): ಮಾಂಸದ ಸವಿಗೆ ಗಂಟಲ ಗಾಳವನುಮಿಗೆ ಕಚ್ಚಿ ದುಷ್ಟನ ದಾಳಿಗೊಳಗಹ ಮೀನಿನಂತಿರೆ ವಿಷಯಸುಖಗಳಿಗೆ ಲೋಲರಾದರು (ಪ್ರಭುಲೀ. ೦೩-೬೦); ಕಾಳಗಗೈದನ್ಯರಬಲೆಯ ತಹುದೆಂದು ದಾಳಿಯ ಬಿಡುವೆವೆ ನಾವು (ಧರಚ. ೫೬-೬೭) : ಮೇಲಕೈದುವ ಬಾಣಗಳ ದಾಳಿಯೊಪ್ಪಿದುದು (ಕಂನವಿ. ೧೨-೨೦). **ಧಾಳಿ** : ಧಾಳಿಯೊಳಂಧ್ರನಂ ಪಿಡಿದಪೆಂ ಮಗಧೇಶನನಿಕ್ಕಿ ಮೆಟ್ಟಿಪೆಂ (ಸೌಇಇ. XI-i, ೫೨-೦೪ ; 1007); ದಿನಪನ ಧಾಳಿ ರಾತ್ರೀಶನ ಮೇಲೆ ಪಾಳೆಯವೆರಸು ಬಪ್ಪುದು (ಅಂಜಚ. ೮-೦೪೨); ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ (ಪುರಂದ. ೧-೦೪-೨); ತರಣಿಯ ಕಿರಣದ ಧಾಳಿಗೆ ಕತ್ರಲೆಯುರವಣೆ ಮೆಱೆವುದೆ (ಕಂನವಿ. ೩-೦೭). **ಧಾಟಿ** : "ಧಾಟಿ ಧಾಟಿ" (ಸಂಜೀವ. ೦೯) : ಬಟ್ಟಿಕೆಱೆಯ ಧಾಟಿಗೆ ಮುಱಿಯವಡದ ಪೊಲನ ಕೊಳ್ವೆನೆನ್ದು ಬನ್ದೊಡ್ಡಿ ನಿನ್ದಾನೆಂಬ ಮಾತಂ ಕೇಳ್ದು (ಸೌಇಇ. XI-i, ೨೧-೬; 893).

ದಾಳಿ ಹೊರಡು = ಆಕ್ರಮಣಕ್ಕೆ ಸಿದ್ಧವಾಗಿ ಹೋಗು : ನೀನೂ ಚತುರಂಗಬಲಸಮೇತನಾಗಿ ವಿರಾಟನ ಮೇಲೆ ದಾಳಿಹೊರಟು ಹಸುಗಳನ್ನು ಹಿಡಿತರುವುದು ಯುಕ್ತವು (ಕೃವಾವಿ. ೫೪). **ದಾಟಿ ಮಾಡು, ದಾಳಿ ಮಾಡು, ಧಾಳಿಮಾಡು** = ಮುತ್ತು ; ಆಕ್ರಮಿಸು : ಎಟ್ಟಿಟ್ಟೆ ಕಾಟ್ಟಿಟ್ಟೆಯೊಳ್ ತಳರ್ವರ್ ಗಂಡರ ಗಂಡ ಪಾಂಡ್ಯಸತಿಯರ್ ನೀಂ ದಾಟಿ ಮಾಟ್ಟನ್ನೆಗಂ (ಅಪ್ರತಿ. ೪೬-೭) ; ಪೊಟಲಂ ಲೀಲೆಯೊಳ್ ದಾಟಿಮಾಟ್ಟುಂ (ಚಕವಿ. ೩-೫೪) ; ಹಡಗ ಬಿಟ್ಟು ವಿಮಾನದಲಿ ಹಾರಿ ಗೋಲುಗಳ ಮೇಲೆ ದಾಳಿಮಾಡಿದ್ದೇವೆ (ನೆಲಮು. ೩೦-೨೮): ಧಾಳಿಮಾಡುವೆ ವರುಣಲೋಕವ ಹಾಳುಮಾಡುವೆನು (ಕೌಶಿರಾ. ೦೫-೪೦); ಅಂಗದೇಶವ ಧಾಳಿಮಾಡುವರ ಕಟಕಟ ಸೆಱೆಸೂಱೆಗಳ ಪಿಡಿದು ಕಾಳುಮಾಡುವರು (ಹರಿಸಾ. ೯೦). **ಧಾಳಿಯನಿಕ್ಕು**=ದಾಳಿಮಾಡು; ಮುತ್ತಿಗೆ ಹಾಕು:ತ್ರಿಭುವನ ಗಿರಿಯರಸು ತ್ರೈಲೋಕಪಟ್ಟಣಕ್ಕೆ ಧಾಳಿಯನಿಕ್ಕಿದರು (ಸರ್ವವ. ೧೫೩-೭೩೦) ; **ಧಾಟಿಯನಿಡು, ಧಾಳಿಯನಿಡು**=ದಾಳಿಯನಿಕ್ಕು: ಾಟಿಯನಿಟ್ಟರಿಧರಿತ್ರೀ ಪಾಳರ ಸಂಪತ್ತಿಯೆಲ್ಲಮಂ ತಂದೊಡೆ (ಬಾಧಪು. ೨-೨೦) ; ಪಡೆವಳ ಗಂಗಿಮಯ್ಯ ಬೆಳಗವರ್ತ್ತಿಯ × × × ಮೇಲೆ ಧಾಳಿಯನಿಟ್ಟಳೆವಳಿದು ಪಲರಳಿವಿನಲು ತನ್ನ ಪರಿಚ್ಛೇದಿಸಿ (ಎಕ. VII, ಶಿವಮೊ. ೫೬-೨೫ ; 1125).

[ದೇ.ಶಿ?/ ಪ್ರಾ. ಧಾಡೀ./ ಸಂ. ಧಾಟೀ]

ದಾಟಿಕಾಱ, ದಾಳಿಕಾಱ, ಧಾಳಿಕಾರ (ನಾ). ಮುತ್ತಿಗೆ ಹಾಕುವವನು; ಆಕ್ರಮಣ ಮಾಡುವವನು ; ಲೂಟಿ ಹೊಡೆಯುವವನು ; ದರೋಡೆ ಮಾಡುವವನು : ಬಣ್ಣದಿಂ ಮದುವೆಯಂ ದಾಟಿಕಾಱರಿಂದರಸುಗಳಂ . . . ಅಱಿವಂತೆ (ಧರ್ಮಾಮ್ಯ. ೯-೬೮). **ದಾಳಿಕಾಱ** : ದಾಳಿಕಾಱಂಗೆ ಧರ್ಮವುಂಟೆ ಕಂಗಳಿಗೆ ಕರುಳುಂಟೆ (ಅವಚಂ. ೩೨-೦೪೪) ; ಏಳು ವ್ಯಾಸನವೆಂಬ ದಾಳಿಕಾಱರು ಕರವಾಳ ಜಡಿದು . . . ನುಡಿದರು ಕಡೆಗಾಲದ ಸಿಡಿಲಿನಂದದೊಳು (ತ್ರಿಪುಸಾಂ. ೦೫೨). **ಧಾಳಿಕಾರ** : ಧಾಳಿಕಾರರಿಗೆ ಸ್ವಾಭಾವಿಕವಾದ ಜಲಮಾರ್ಗವು ದೊರೆಯಲಿಲ್ಲ (ದಧಾಇ. ೩) : ಭಾರತೀಯರು ಮುಸಲ್ಮಾನ್ ಧಾಳಿಕಾರರ ಆಕ್ರಮಣಗಳಿಂದ ನರಳುತ್ತಿದ್ದರು (ಭಾರದ. ೫೨೮). [ದಾಟಿ + – ಕಾಱ]

ದಾಟಿಗಿಱು (ಕ್ರಿ). ಆಕ್ರಮಣವೆಂದು ಭಾವಿಸು : ಪೂಗಳಿಂ ಕೆದಱುವ ಧೂಳಿ ಪಾಡುವ ಮದಾಳಿ ಪೊದಟ್ಟಲರೋಳಿಯೆಂಬಿನಂ ಮದನನ ದಾಟಿಗೆತ್ತು ಸುಗಿದಿರ್ಪುದು ಪಾಂಥಜನಂ ನಿರಂತರಂ (ಪುಷ್ಪಪು. ೨-೨೦).

[ದಾಟಿ + ಗಿಱು]

ದಾಟಿಡು 'ದಾಟಿಯಿಡು' ನೋ.

ದಾಟಿಪೊಗು (ಕ್ರಿ). ಆಕ್ರಮಣಕ್ಕಾಗಿ ಪ್ರವೇಶಿಸಂ; ಮುಂತ್ತಲುಂ ಬರಂ: ಭವನವಾಸಿಗರಂ ಕರಂ ದವನದ ಮಡಿಯಂ ದಾಟಿಪೊಕ್ಕಂತೆ ಮಾಡಿ (ಧರ್ಮಾಮೃ. ೭-೯೫). [ದಾಟಿ + ಪೊಗು (<ಪುಗು)]

ದಾಟಿಯಿಡು, ದಾಳಿಡಂ, ದಾಳಿಯಿಡಂ, ದಾಟಿಡು, ಧಾಳಿಡಂ, ಧಾಳಿಯಿಡು, ಧಾಟಿಡಂ (ಕ್ರಿ). ಏರಿಹೋಗು; ಮುತ್ತಿಗೆಯಿಡು; ಲಗ್ಗೆ ಹಾಕು; ಆಕ್ರಮಣಮಾಡು: ದಾಟಿಯಿಡುವಂಗಂದಂಬರಂ ತ್ಯಾಗಿಗಂ ಭಾಸ್ವದ್ದೇವಗಣಂಗಳಿಂದಱಿದು ವೇಟಲ್ಲಲ್ಲಿಗೆ (ಧಂದೋಂದು. ೦-೪೩); ಪುಳಿಂದರೆವಿನ್ನಾ ವಿಷಯಕ್ಕೆ ದಾಟಿಯಿಡಲುಜ್ಜುಗದಿಂದಿರೆ (ಪು ಪ್ರ ಪು. ೩-೦೫೬); ದೇವವಲ್ಲಭನ ಪತ್ತನಕೀಗಳೆ ದಾಟಿಯಿಟ್ಟು . . . ಇರುಳಿಡೆ ಗಾಳಿಗಕ್ಕೆ ನಡೆವಂತೆವೊಲಿರ್ದುದು ದಾವಪಾವಕಂ (ದಕಳು. ೨-೧೦೩); ಆ ಕಿಯ ಭರ್ತಾರನಾಕ್ಲೇಶಮಂ ಕೇಳಿಯಲ್ಲಿಗೆ ದಾಟಿಯಿಟ್ಟು ಕಾಲನೊಳ್ಕಾದಿ ಗೆಲ್ದವನಂ ಕಟ್ಟಿ ಆ ಬ್ರಾಹ್ಮಣಿಯಂ ತಂದಂ (ಧರ್ಮಪ. ೪-೩೦ ವ). **ದಾಳಿಡು**: ಕಾದಬೇಕೆಂದಿಳೆಯ ರಾಜಾಳಿಯಂ ಕೂಡಿ ದಾಳಿಟ್ಟು . . . ವೆರ್ಬಡೆ ನಡೆದುದು (ಧಾವಚಂ. ೯-೬). **ದಾಳಿಯಿಡು**: ದಾಳಿಯಿಟ್ಟರು ಹರಿದು ದಿಕ್ಕಿನ ಮೂಲೆಯವರಂಜಿದರು (ನಳಕ. ೯-೩೧); ಪ್ರಪಂಚದ ಯೋಚನೆಗೆ ಇನ್ನೆಲ್ಲೂ ಸ್ಥಳವಿರದೆ ಅವನೆಡೆಗೇ ದಾಳಿಯಿಡುವಂತಿತ್ತು (ರೂಪಸ. ೪). **ದಾಟಿಡು**: "ದಾಟಿಡು (ದಾಟಿ + ಇಡು) – ದೂರ ಧಾವನೇ (ನುಗ್ಗಿಹೋಗು)" (ಕಮಧಾ); "ದಾ [ಪಾಠಾಂ. ಧಾ] ಟಿಡುವ ಗಂಬರ ಸೋಲ್ತವಂಗೆರವಿ ಬಯಸ್ಥುವಗೆ ಸ್ವರ್ಗಗಣವುಂ ಪೇಳಲುಚಿತ ಮಕ್ಕುಂ" (ಪುಂಗಡಾ. ೦೦೭-೩೧); ಕೊಲ್ಲೆಂಬ ಘೋರಸ್ವನಂ ಪೊಣ್ಮಿರೆ ವನ್ಯ ಪ್ರಾಣಿಗಳ್ಗಂತಕನ ಪಡೆಯೆ ದಾಟಿಟ್ಟವೋಲ್ ಬೇಡರಿರ್ದರ್ (ಜಗವಿ. ೦೬-೦೫); ಬೇಂಟೆಗೆ . . . ಪೊಲಮಟ್ಟು ಕಾಳಂ ದಾಟಿಟ್ಟು ಗಹನದುರ್ಗಮಂ ನಿರ್ಘೃಣವೃತ್ತಿಯಿಂ ಮುತ್ತುವಂತೆ ಮುತ್ತಿ (ಪಾರ್ಶ್ವಪು. ೦೨-೭೫ ವ); ಮುಂದುಮೊಗದಿಂ ಪೂರ್ಣೇಂದುಬಿಂಬಕ್ಕೆ ದಾಟಿಡುವಂತೆಲ್ಲರ ಧೈರ್ಯಮಂ ಮೊಲೆಯ ಬಿಣ್ಮಂ ನುಗಿರ್ ನೂಂಕಲ್ಕೆ (ಅನಂಪು. ೮-೬); ಕಾಯ್ದು ದಾಟಿಡುವಪೆಲಾ ಬನಕ್ಕೆ ನಡೆತಂದುದು ವೆಂಡಿರ ತಂಡಂ (ಕಲ್ಕಿಕಾ. ೯೨). **ಧಾಳಿಡು**: ಅರಿನೃಪತಿಗಳಂ ಧಾಳಿಟ್ಟು ಕೊಲ್ಲುಮವನೀಪಾಳಂ ತ್ರೈಲೋಕ್ಯಮಲ್ಲನಾಹವಮಲ್ಲಂ (ಸೌಇಇ. IX-II, ೧೦೨-೬ : 1046); ಕಾಮನ ಹೆಸರನಡಗಿಸಲು ಧಾಳಿಡುವ ಪಡೆಯೊ (ಸಿದ್ಧಾ. ೨-೪೦); ಪ್ರಾಗ್ಜ್ಯೋತಿಷಕೆ ಧಾಳಿಟ್ಟನಲ್ಲಿ ಮಹಾತಿಬಲನವನೊಡನೆ ಬಲುಹಾಯ್ದು ರ್ಜುನನ ಸಮರ (ಕುಮ್ಯಾಸ. ೩-೦೪); **ಧಾಳಿಯಿಡು**: ಧಾಳಿಯಿಟ್ಟೆಯ್ದಿ . . . ಪಾಂಡ್ಯನಂ ಖಿನ್ನಿಸಲ್ . . . ಬಂದಂ (ಸೌಇಇ.XX, ೪೯-೦೯ : 1078 ?); ದಿವಿಜರ ಹಿಂಡು ಗೋಳಿಡೆ ಧಾಳಿಯಿಟ್ಟನು ಚಂಡ ಗಾಂಡೀವಿ (ಕುಮ್ಯಾಭ. ೫೦ ಸೂಚನೆ); ಆ ದುರಾಗ್ರಹಿ ಧಾಳಿಯಿಟ್ಟನು ಧೂರ್ಜಟಿಯ ಗಿರಿಗೆ (ತೊರಣಾ. ೧-೮-೩೧). **ಧಾಟಿಡು**: ಸಾನ್ತರನ ಮೇಲೆ ಮೂಕರಸಂ ಧಾಟಿಟ್ಟಲ್ಲಿ ನಾಗಾರ್ಜುನಯ್ಯನ ಮಗಂ ಮನ್ನೆಯ ನಾಗವರ್ಮ್ಮ ತಾನುಂ ಧಾಟಿವರಿದಲ್ಲಿ ಸತ್ತು ಸುರಲೋಕಕ್ಕೆ ಸಂದಂ (ಎಕ. VII, ಶಿಕಾರಿ ೩೫೦-೧೦: 1015). [ದಾಟಿ + ಇಡು1]

ದಾಟಿಪೋಗು, ದಾಳಿಹೋಗಂ (ಕ್ರಿ). ೧. ಆಕ್ರಮಣಕ್ಕಾಗಿ ಹೊರಡಂ: ಚರಪುರುಷರನಟ್ಟಿ ಬೇಗಂ ದಾಟಿಪೋಗಿ ಜಲಕ್ರೀಡೆಯಾಡುವನನಱಿದು (ವಡ್ಡಾರಾ. ೦೬೬-೧); **ದಾಳಿಹೋಗು**: ೨. ದಾಳಿಗೆ ಈಡಾಗಂ: ದಾಳಿಹೋದ ಆಳಿನ ಉಸುರಿನಲ್ಲಿ ಒಂದು ವೇಣು ಹುಟ್ಟಿತ್ತು (ಕೋಲಶಾಂ. ೩೭-೩೬). [ದಾಟಿ + ಪೋಗು1]

ದಾಟಿಸಾಂತರ (ನಾ). ಒಬ್ಬಾತನ ಹೆಸರು: ದಾಟಿಸಾನ್ತರನ ಮಗಂ ಸಾನ್ತರಾಯ ರಾಜ್ಯಂಗೆಯೆ (ಎಕ. VIII, ಸಾಗರ. ೦೦೦-೩ : 986 ?).

[ದಾಟಿ0 + ಸಾಂತರ0]

ದಾಟಿಸಿಂದ (ನಾ). ಒಬ್ಬಾತನ ಹೆಸರು: ಸ್ವಸ್ತಿಶ್ರೀದಾಟಿಸಿನ್ದರ್ ಜಯಮೆವ್ವ ಸವತ್ಸರದ ಉತ್ತರಾಯಣ ಸಂಕ್ರಾನ್ತಿ ಅನ್ದು ನಾಲ್ಗಣ್ಣುಗದ ದೆದೆಮಣ್ಣನ್ ಕೌಣ್ಡಿನ್ಯಗೋತ್ರದ ದೇವದತ್ತರ್ಗ್ಗೆ ಇತ್ತಾರ್ (ಎಕ. XVI, ಪಾವುಗ. ೧೧-೦ : 764). [ದಾಟಿ0 + ಸಿಂದ2]

–ದಿ (ಪ್ರ). ಒಂದು ಕೃದಂತ ಭಾವನಾವಂ ಪ್ರತ್ಯಯಂ. 'ಇಟ್ಟಿ'. 'ಬಿಡದಿ' ಪರಾ.

ದಿಂ (ನಾ). ಒಂದಂ ಅನುಕರಣ ಶಬ್ದ: ಸುಮ್ಮಾನದಿಂದ ಪಟ್ಟಂಡದ ದೊರೆಗಳ ತಮ್ಮವರನೆ ಮಾಡಿಕೊಂಡು ದಿವ್ಮೆಂಬ ವಾದ್ಯಕೋಟಿಗಳಲ್ಲಿ ದೊರೆ ನೋಡಿ ಬಿವ್ಮೆನುತೆಯ್ತರುತಿರ್ದ (ಧರಕ. ೪೯-೭೦); 'ದಿವಂ೦ಡಿಂ', 'ದಿಮ್ಮಿಡಂ', ಪರಾ.

ದಿಂಕ (ನಾ). ಹೇನಿನ ಮೊಟ್ಟೆ,–ತಕ್ತಿ; ಸೀರಂ. [ಸಂ.]

ದಿಂಕಿಕ್ಕು (ಕ್ರಿ). ನೆಗೆ; ಚಿಮ್ಮು: ಮುಂದೆ ದಿಂಕಿಕ್ಕುವ ಹುಲ್ಲೆವಿಂಡನದು ಕಂಡುಱೆ ಲಂಘಿಸಿ ಪಾಯ್ದು ನೆತ್ತರಿಂ ಸೊಕ್ಕಿರುತಿರ್ಪ ವೆರ್ಬುಲಿಯ ನೊರ್ವನೆ ಪೊಯ್ದಂ (ನಳಪಂ. ೭೭). [ದಿಂಕು (<ಧೀಂಕು) + ಇಕ್ಕು]

ದಿಂಕಿಡಿಸು (ಕ್ರಿ). ಮುಸುಕಂ; ಆವರಿಸು; ಆಕ್ರಮಿಸು: ಪಟುಪಾಕರ ನಿರವಧಿರವಂಗಳ ಕೋಳಾಹಳಮೆಲ್ಲವೊರ್ಮೊದಲೊಳ್ ಭೋರೆಂದು ನೆಗೆದು ದೆಸೆಯಂ ಮುಸುಂಕಿ ದಿಂಕಿಡಿಸುತ್ತುಮಿರೆ (ಪಾಧಪು. ೧೩-೭ ವ).

[ದಿಂಕಿಡು (<ಧೀಂಕಿಡು) + – ಇಸು3]

ದಿಂಕಿಡು 'ಧೀಂಕಿಡು' ನೋ.

ದಿಂಕು 'ಧೀಂಕು' ನೋ.

ದಿಂಕುಗೊಳ್ (ಕ್ರಿ). ನೆಗೆದು ಚುಚ್ಚು; ಹಾರಿ ಬಂದು ತಿವಿ: ನಡುವ ಸರಲ್ಗೆ ಮೆಯ್ಯೊಳಗಡಂಗುವ ಸಂಕುಗೆ ದಿಂಕುಗೊಳ್ವ ಕಕ್ಕಡಗಿದಿರುರ್ಬು ವಿಟ್ಟಗಿದಿರಾನೆಯ ಕೋಟ್ಮಳಿ ಕೋಳ್ಗೆ ನೊಂದು ಬಾಯ್ವಿಡದೆ . . . ಬಿಟ್ಟುವಿರ್ದ ನೆಲೆಯಿಂ ಕೆಲವ್ಮನ್ದ ಗಂಧಸಿಂಧುರಂ (ಹಂಪಧಾ. ೧೦-೪೪); "ದಿಂಕುಗೊಳ್ವ = ಹಾರಿ ಬರುವ" (ಪಂಪದೀ. ೩೭೦).

[ದಿಂಕು (<ಧೀಂಕು) + ಕೊಳ್1]

ದಿಂಕುವಾಟು (ಕ್ರಿ). (ಸಂತೋಷದಿಂದ) ನೆಗೆದಾಡಂ; ಕುಣಿದಾಡು; ಪ್ರಟಹಾರು: ಕುಸುಮಾಸ್ತ್ರನೆಚ್ಚೊಡೆದು ಪುಟ್ಟಿಸಿ ರಾಗದಿನುರ್ವಿ ದಿಂ[ಪಾಠಾಂ. ಧಿಂ] ಕುವಾಱಿದಪನೆನಿಪ್ಪಿನಂ ಸ್ಮರಜಸಾಧ್ವಸದಿಂ ದಿಗಿಲ್ದೆಂದು ಗೂಡುವಾಯ್ದುದು. ನೃಪಕನ್ನೆಗಾಗಳೆರ್ದೆ ನೋಡಲೊಡಂ ಮನಃವಂಶ ವೇರುವಂ (ವರ್ಧಪು. ೬-೧೩). [ದಿಂಕು (<ಧೀಂಕು) + ಪಾಟು1]

ದಿಂಗು 'ಧಿಂಗಂ' ನೋ.

ದಿಂಗುವಿಡಿ (ಕ್ರಿ). (?): ಶಿರೆಯೊಳಗಿಪ್ಪ ಕುಲಾಲ ಬೆಳಗಿ ತೊಳಗುವ ಆ ಮಲಿನರ ಮುಖವ ಕಂಡು ಮತ್ತೆ ದಿಂಗುವಿಡಿಯಲೇಕೋ ದಿಂಗುವಿಡಿದು ಭಂಡರಾದ ಲಿಂಡರಿಗೇಕೋ ಲಿಂಗದ ಸುದ್ದಿ (ಕೋಲಮಾ. ೧೮೪-೬೯೩).

[ದಿಂಗು0 + ಪಿಡಿ1]

ದಿಂಟೆ 'ತಿಟ್ಟು3' ನೋ.

ದಿಂಡ1, ದಿಂಡಲ, ಡಿಂಡಿಗ, ದಿಂಡಗ, ದಿಂಡಲ, ದಿಂಡಲು1, ದಿಂಡಿಗ1, ದಿಂಡಂಗ, ದುಂಡಿ3, ದುಂಡಿಗ, ದುಂದಂಲು (ನಾ). (ಚೆನ್ನಾಗಿ ಉರಿಯಂವ ಗಟ್ಟಿಯಾದ) ಒಂದು ಬಗೆಯ ಮರ, – ವೃಕ್ಷ: ದಿಂಡ ತಂಡಸ (ಕೇವಡ. ೩೭-೦೩): ಒಪ್ಪುವವಮಳ ಸಿರಿಖಂಡದಿಂ ದಿಂಡದಿಂ ಪರಿವಿಡಿಯೆ ನಿಗುರ್ದ ಹೆತ್ತೇಗದಿಂ ತೇಗದಿಂ ಕಾನನಂ ಕಣ್ಗೆಸೆದುದು (ಕಾಳಿಪ. ೧೭-೩೪): ತುಂಬುರ ಬನ್ನಿ ಗೊಟ್ಟಕ್ಕಿ ದಿಂಡ (ಕುಕ್ಕಾಂಗ. ೯-೩೬). **ಡಿಂಡಲ**: ಶೋಣಕ = ಡಿಂಡಲಮರ (ಗಂಗಾಮ. ೩೧೦). **ಡಿಂಡಿಗ**: ಡಿಂಡಿಗ, ಬೆಜ್ಜಲು (ಪ್ರಾಣಿ. ೭-೧೦೯). **ದಿಂಡಗ**: (ಕ). **ದಿಂಡಲ**: ಆಲಮಾ ಬಸರಿ ದಿಂಡಲ [ಪಾಠಾಂ. ದಿಂಡಂ] ತುಂಡಸಂ ನೆಲ್ಲಿ ಜಾಲಮಾ

ಹೊನ್ನರಳಿ . . . ಮೊದಲಾದ ವೃಕ್ಷಂಗಳಿಂ ವನಮೆಸೆದುದು (ಜೆಬಪು. ೩೩-೧೮); ಅತ್ತಿ ಮತ್ತಿ ಮಧುಕಂ ಮಗ್ಗಾರೆ ಪಚ್ಚಾರಿ ದಿಂಡ [ಪಾಕಾಂ. ಡಿ] ಲವಾಲಂ ಬೆಳವಿಂಗಳಂ ಪುಣಿಸೆ ಜಾಲಂ (ರಾಜಶೇ. ೩-೩೬); ಕಾರಾ ಚಮಂಕೋಲೆ ದಿಂಡಲ . . . ಎಕ್ಕೆ ಮೊದಲಾದುರ್ವೀರುಹಂ ರಾಜಿಕುಂ (ಯಾದಕಂ. ೪-೪೫); ದಿಂಡಲ(ಧಾವರಾ) . . . ಬನದೊಳಗೆ ಇಮಾರತಿಗೆ ಬರುವ ಹಾಗೆ ಎತ್ತರವಾಗಿ ಬೆಳೆಯುತ್ತದೆ. ಕಟ್ಟಿಗೆ ಬೆಳ್ಳಗೆ, ಬಿರುಸು, ಜಿಗುಟುಳ್ಳದ್ದು (ಕಥಾಗೆ. ೪೧). **ದಿಂಡಲು$_1$:** ತಗ್ಗಿಬೇರು . . . ದಿಂಡಲಬೇರು, ಹೆಗ್ಗುಳದ ಬೇರು, ಶುಂಠಿ ಇವಂ ಕಷಾಯವಿಕ್ಕಿ ಕೊಡಲು ಸಕಲ ಸನ್ನಿದೋಷವು ಪರಿಹರ (ಸಕವೈ. ೧೭೪). **ದಿಂಡಿಗ$_1$:** ಮರಗಳು: ಹೆಸವ, ಹೆಬ್ಬಲಸು . . . ದಿಂಡಿಗ, ಬೂರಗ (ನಮ್ಮನು. ೨೩೬). **ದಿಂಡುಗ:** ದಿಂಡುಗ = "ದಿಂಡದ ಮರ" (ಪ್ರಭಣ್ಣ). **ದುಂಡಿ$_3$:** "ಮಂಡೂಕಪರ್ಣ, ಪತ್ರೋರ್ಣಃ, ನಟಃ, ಕಟ್ವಂಗಃ, ಡುಂಡುಕಃ – ಈ ೫ ದುಂಡಿಗಿಡುವಿನ ಪೆಸರು" (ನಾಚಿರಾ. ೧೦೮) ; **ದುಂಡಿಗ:** ಹಾಲೆ ತಾಳಂಕೋಲೆ ದಿಂಡ ದುಂಡಿಗ ಬೋರೆ . . . ಪೇರಿಪ್ಪೆ ತುಪ್ಪೆಗಳಿರ್ಪುವು (ನಂದಿಮಾ. ೧೧-೩೬). **ದುಂದುಲು:** "ಶ್ಯೋನಾಕ – ದುಂದುಲು" (ಓಷಧಿ. ೧೭೨)

[← ತೆಲು. ದುಂಡಿಕ, ದುಂಡಿಗ, ದುಂಡಿಲ, ದುಂಡುಗ, ದುಂದಿಲ]

ದಿಂಡ$_2$ (ನಾ). ಒಂದಂ ಬಗೆಯಂ ಹೂವಿನ ಬಳ್ಳಿ ; ಗಿರಿಕರ್ಣಿಕೆ : "ಗಿರಿಕರ್ಣಿಕೆಯ ದ ಪ ರಾ ಜಿ ತಂ ದಿಂಡ [ಪಾಕಾಂ. ದಿಂದ]ಮದು" (ಮಂಗರಾ. ೩೪-೧೧). [←ತೆಲು. ದಿಂಟೆನ]

ದಿಂಡ$_3$ 'ದಿಂಡು' ನೋ.

ದಿಂಡ$_4$, ಡಿಂಡ (ನಾ). ೧. ಸೊಕ್ಕಿದವನು; ಉದ್ಧತ: ಅವಳನ್ನು ನಿಂದಿಸಿದ ದಿಂಡರನ್ನು ನಿಪಾತ ಮಾಡಿಬಿಡುವೆನೆಂದು ಭಾಷೆಯನ್ನು ಕೊಟ್ಟು . . . ಮನೆಗೆ ಮರಳಿದನು (ಪಾಗ್ಯೇವಿ. ೩೬). ೨. (ದೇವರಂತೆ) ಶಕ್ತ ; ಸಮರ್ಥ ; ಅಧಿಕ ಬಲಶಾಲಿ : ನಿನ್ನನತ್ಯಾದರದಿಂ ದೇವನೆ ದಿಂಡನೆ ಯೆಂದೊಡೆ ದೇವಂ ನೀನೆಂತದೆಂತು ದೊಡ್ಡಿದನಪ್ಪೈ (ಧರ್ಮಾಮ್ಯ. ೯-೧೧೬) ; ದೇವರನೆತ್ತ ಬಲ್ಲನವರೊತ್ತಿನ ದಿಂಡರನೆತ್ತ ಬಲ್ಲ (ಶತಕ. ೭೦). ತಲೆ ಮೇಲೆತ್ತಿ ನೋಡಿದಾಗ ದೇವರೂ ಕಾಣಿಸಲಿಲ್ಲ ದಿಂಡರೂ ಕಾಣಿಸಲಿಲ್ಲ (ಕಥಾಮಂ. IV, ೧೧೦). **ಡಿಂಡ:** ೧. ಬಂಧು ಬಳಗ ಕಂಡು ಬಿಡಿಸಿ ಕೊಂಬರಾರೊ ಡಿಂಡ ಯಮನ ದೂತರೆಳೆಯೆ (ಕನಕ. ೩೦-೧).

[ದಿಂಡು + – ಅ$_6$]

ದಿಂಡಗ 'ದಿಂಡ$_1$' ನೋ.

ದಿಂಡತನ 'ದಿಂಡಂತನ' ನೋ.

ದಿಂಡಲ 'ದಿಂಡ$_1$' ನೋ.

ದಿಂಡಲು$_1$ 'ದಿಂಡ$_1$' ನೋ.

ದಿಂಡಲು$_2$ (ನಾ). (ಉಕ) ಪ್ರಸ್ತ ; ಶೋಭನ. 'ಮರುದಿಂಡಲು' ಪರಾ. [?]

ದಿಂಡಾಳು (ನಾ). ಶಕ್ತಿಶಾಲಿ ; ಬಲಶಾಲಿ : ದಿಂಡಾಳುಗಳನ್ನು ಕರೆದರೆ ಮಿಂಡಾದ ಕೆಲಸವು ಆಗುತ್ತದೆ (ಗಾದೆ). [ದಿಂಡು+ಅಳು$_3$ (<ಆಳ್$_3$)]

ದಿಂಡಿ$_1$ (ನಾ). ಬಾಳೆಯೆಲೆಯಲ್ಲಿ ಅಗ್ರವನ್ನು ಕತ್ತರಿಸಿ ತೆಗೆದ ಹಿಂದಿನ ಭಾಗ. 'ಅಗ್ರ' ಪರಾ. [<ದಿಂಡು]

ದಿಂಡಿ$_2$ (ನಾ). ೧. ಭಜನೆಯ ಮೇಳ,–ಮೆರವಣಿಗೆ : ಒಂದು ದಿನ ಟಿಳಕರು ಕೆಲ ಕ್ರಿಸ್ತೀಯರೊಡನೆ ತಿರುಗಾಡ ಹೋದಾಗ ಅತ್ತಣಿಂದ ಒಂದು ಭಜನೆಯ ಮೇಳ (ದಿಂಡೀ) ಬಂತು (ಸ್ಮೃತಿಚಿ. ೩೩೮). 'ದಿಂಡೀಯಾತ್ರೆ' ಪರಾ. ೨. ದೇವಾಲಯಗಳಲ್ಲಿ ಪ್ರಾಕಾರದ ಒಳಭಾಗದಲ್ಲಿ ಭಜನೆಯೊಂದಿಗೆ ಎಳೆಯುವ ಚಿಕ್ಕ ತೇರು ; ಸಣ್ಣ ಉತ್ಸವ.

ದಿಂಡಿನುತ್ಸವ = ದೇವಾಲಯಂಗಳಲ್ಲಿ ದೇವರಿಗೆ ನಡೆಸುವ ಚಿಕ್ಕ ತೇರಿನ ಉತ್ಸವ,–ರಥೋತ್ಸವ : ಬಳಿಕಾಗ ದಶಮಿಯ ದಿಂಡಿನುತ್ಸವ ದಲಿ ನಳಿನಾಕ್ಷ ಪಶ್ಚಿಮರಂಗ ಘಳಿಲನೆ ಸರ್ವಸಃಭ್ರಮವ ಬೀಱುತ್ತಲಾ ಪೊಳಲೊಳು ಮೆಱೆಯುತ್ತೈತಂದ (ಕಂನವಿ. ೯-೫೯).

[←ಮರಾ. ದಿಂಡೀ]

ದಿಂಡಿಗ$_1$ 'ದಿಂಡ$_1$' ನೋ.

ದಿಂಡಿಗ$_2$ (ನಾ). ಒರಟನಾದವನು ; ಉದ್ಧತ. 'ದಿಂಡಿಗತನ' ಪರಾ.

[ದಿಂಡ$_4$ + – ಇಗ]

ದಿಂಡಿಗಗಾಮುಂಡ (ನಾ). ಒಬ್ಬಾತನ ಹೆಸರು : ಗಾದಿಯರ ದಿಣ್ಡಿಗ ಗಾಮುಣ್ಡರುಮೆನ್ನುವರು × × × ವಂಗರು ವಲ್ಲಭಗಾಮುಣ್ಡರುಂ (ಎಕ. II, ೩೫-೭ ; ಸು. 800). [ದಿಂಡಿಗ$_0$ + ಗಾಮುಂಡ]

ದಿಂಡಿಗತನ (ನಾ). ಒರಟುಸ್ವಭಾವ ; ಉದ್ಧಟತನ : ನೀನು ಶುದ್ಧ ಪೋಕರಿ ಹುಡುಗಿ ! ತೊಂಡೆದ್ದ ದಿಂಡಿಗತನದ ಪುಂಡಹೆಣ್ಣು ! (ಮಂತ್ರಶ. ೨೪-೧೭). [ದಿಂಡಿಗ$_2$ + – ತನ]

ದಿಂಡಿಗರ (ನಾ). ಒಬ್ಬಾತನ ಹೆಸರು : ಪೃಥಿವೀ ಕೊಂಗುಣಿ ಮಹಾ ರಾಜಾಧಿರಾಜ ಬಾಣವಂಶೋತ್ಭವ ಶ್ರೀದಿಂಡಿಗರರ್ಕಟ್ಟಪ್ಪುನಾಡುಸಾಸಿರ ದೊಟ್ನೂಱು ಮಾನಾಳುತ್ತಿಟ್ಟು (ಮೈಅರಿ. ೧೯೨೭, ೧೦೮-೪೦ ; ಸು. 726).

[ದಿಂಡಿಗ$_0$ + ಅರ್$_4$]

ದಿಂಡಿಯ 'ದಿಂಡೆಯ' ನೋ.

ದಿಂಡೀಯಾತ್ರೆ (ನಾ). ಭಜನೆಯ ಮೇಳದೊಂದಿಗೆ ಹೊರಡುವ ಯಾತ್ರೆ : ಹೊರಡು ಪಂಡರಪುರದ ತನಕ ದಿಂಡೀಯಾತ್ರೆ ಆ ಸೇತು ಹಿಮಗಿರಿಗೆ ಹಡದಿ ಹಾಸು (ನೆಲಮು. ೧೯-೩). [ದಿಂಡಿ$_2$ + ಯಾತ್ರೆ]

ದಿಂಡೀರಪಿಂಡ (ನಾ).=ಡಿಂಡೀರಪಿಂಡ: ಕಣ್ಡೂರ್ಗ್ಗಣಾಬ್ಧಿಚಂದ್ರನಖಣ್ಡಿತ ಸುತಪೊ ವಿಭಾಸಿ ಖಣ್ಡಿತ ಮದನಂ ದಿಣ್ಡೀರಪಿಣ್ಡ ಸುರವೇದಣ್ಡಯಶಟ್ಟ ಣ್ಡನರ್ಹಣನ್ದಿ ಮುನೀಂದ್ರ (ಸೌಇಇ. XX. ೧೮-೨೮ ;980).

[<ಸಂ. ಡಿಂಡೀರಪಿಂಡ]

ದಿಂಡು, ದಿಂಡ$_3$, ದಿಡ್ಡು (ನಾ). ೧. (ಬಟ್ಟೆ, ಸೌದೆ ಮೊದಲಾದವು ಗಳ) ಗಂಟು ; ಪಿಂಡಿ ; ಕಟ್ಟು ; ಹೊರೆ : ಬಳಗಜವಳಿಗೆಂದು ಬಂದ ಚೀನದುಕೂಲದ ಹಾರಾವಳಿಯ ಪಲವು ದಿಂಡುಗಳುಮಂ ಯಾಚಕ ಕೋಟಿಗೆ ಬೇಡಿದುದನೀಯಲೆಂದು ಪೂಜಿಸಿದ ಪೊನ್ನರಾಶಿಯುಮನನಂತ ಮತಿ ನೋಡಿ (ಧರ್ಮಾಮ್ಯ. ೩-೨೫೨) ; ಹಂಸಾವಳಿ ಗಜಾವಳಿ ಮೊದಲಾದ ಪಟ್ಟಾವಳಿಯ ದಿಂಡುಗಳಂ ತರಿಸಿ (ಬಸರ. ೮-೧೨) ; ವಿವಿಧ ರತ್ನಾಭರಣ ಕಾಂಚನ ನವದುಕೂಲದ ದಿಂಡಿನಲಿ ಬುಧನಿವಹ ದಣಿದುದನಂತ ಕೃಪಣಾನಾಥಜನಸಹಿತ (ಕುಪ್ಯಾಸ. ೧-೧೮) ; ಎಣ್ಣೆಯನಡಕಿರೋ ಸೀರೆಗಳ ದಿಂಡನು ಬಿಡಿಸಿರೋ ತೋದುಡಿಸಿರೋ ತಡವೇನು ಬೇಗೆನುತ . . . ನಿಡಿಯ ಬಾಲವ ಸುತ್ತುತಿರ್ದರು (ತೊರರಾ. ೫-೮-೮) ; ಪುಲಿದೊಗಲ ಪೊಱೆ ಜೇನುತುಪ್ಪದ ನಳಿಗೆ ಮೇಣದ ಮುದ್ದೆ ಆನೆಯ ತಲೆಯ ಮುತ್ತಿನ ಪುಡಿಕೆ ಚಮರೀವಾಲಗಳ ದಿಂಡು (ಸಾಳ್ವಭಾ. ೧೬-೬); ದೇವಾಂಗ ಚಿತ್ರಾವಳಿ ಸುವರ್ಣಾವಳಿಯ ವಸನದ ದಿಂಡನರ್ಪಿಸಿದ (ಅಕ್ರೂಪ. ೮-೪೦). ೨. ಒತ್ತಾಗಿ ಕಟ್ಟಿರುವ ಹಾರ,–ದಂಡೆ : ಸುಮದಂಡೆಗಳ ಮಾಲತಿಯ ಕುಸುಮ ನವಪರಿಮಳದ ಬಂಡುಳ್ಳ ದಿಂಡುಗಳ ಮೊನೆ ಮಲ್ಲಿಗೆಯ ಬೀಡು ತುರಾಯಿಗಳ ಸೊಬಗು (ಪತುಪು. ೧-೫-೫೩). 'ದಿಂಡುಕಟ್ಟು' ಪರಾ. ೩. ಮರದ ಕಾಂಡ,–ತಾಳಂ : "ಪ್ರಕಾಂಡ. ಸ್ಕಂಧ–ಮರದ ಮೊದಲಿಂದ ಕೊಂಬುಪರ್ಯಂತರಮಿರ್ದ ನಡುವಣ ದಿಂಡು" (ನಾಚಿರಾ. ೯). ೪. (ಬಾಳೆಯ) ಕಾಂಡ ಅಥವಾ ದಂಟಿನೊಳಗಿರುವ ಭಾಗ : ಅಪೂರ್ವಂಗಳಾಗಿ ತೊಳಗುವ ಕಿಱುದೊಡೆಗಳುಡುವಡರ್ದನ್ನಮಾರೂಢ

ಸರ್ವಜ್ಞನ ದೊಡ್ಡ ಮಾರ್ಗಿಂಗಳಿಳವಾಟಿಯ ದಿಂ[ಪಾಣಂ. ದಂ] ಡಿನೊಳ್ ಸಾಣೆಗಟ್ಟಿದಂತಾದುವು (ಪಂಪಭಾ. ೨-೩೯); ದೊರೆಕೊಳೆ ಬಾಟಿಯ ದಿಂಡಿನ ತಿರುಳಿಂಳ್ ಮತ್ಸ್ಯಾಕ್ಷಿ ಮೂಲಮಂ ಸುಣ್ಣಮುಮಂ ಬೆರಸಿ (ಕೋಕೋಪ. ೮-೧೯); ಮುಱಿವೆಂ . . . ಬಾಟಿಯ ದಿಂಡಂ ಮುಱಿಮತ ಕಾವನಾನೆಯ ಕೊಂಬಂ (ಕಬ್ಕಾಕಾ. ೨೪೪). ೫. ಕೋಲು; ದಂಡ: ಖಂಡಣೆಗೆಯ್ದ ಕಾರ್ಮುಕದರ್ಧಭಾಗದ ದಿಂಡನೆ ತಿರುಹಿ ಮನ್ಮಥನ ಮುಂಡೆಯ ಮೇಲೆ ಗಟ್ಟಿಸಲೊಡ್ಡಿಕೊಳಲು ಕೋದಂಡವಿಕ್ಕಡಿಯಾಯ್ತು ಕರದೆ (ಪೋಹತ. ೧೨-೬೪). ೬. ತುಂಡು; ಚೂರು: ಮುಂಡಿಸಿತು ನೊರೆರಕುತ ಕರುಳಿನ ಜೊಂಡು ಮಸಗಿತು ಕಡಿದ ಖಂಡದ ದಿಂಡು ತಳತುದು . . . ಕಾಲಾಂತಕನ ಹೆಬ್ಬಳಸು ಹುಲುಸಾಯ್ತು (ಶಾಕ್ಕಾಭೀ. ೯-೧೩). ೭. (ಕುಂಟೆ ಮೊದಲಾದ ಉಪಕರಣಗಳಿಗಾಗಿ ಉಪಯೋಗಿಸುವ) ಮರದ ತುಂಡು.–ಕೊರಡು: "ದಿಂಡು–ಕುಂಟೆಯ ದಿಂಡು; ಕೂರಿಗಿಯ ದಿಂಡು; ಕಟ್ಟಗೆಯ ತುಂಡು . . . ಗಳೇದ ಸಾಮಾನ್" (ಜಾನಪೋ. ೫). ೮. ಕಟ್ಟಡಗಳ ತಳಪಾಯಕ್ಕೆ ಉಪಯೋಗಿಸುವ ಕಲ್ಲು,–ದೊಡ್ಡದಾದ ಗುಂಡುಕಲ್ಲು: ಚಪ್ಪಕಮಾದ ವಜ್ರದ ದಿಂಡುಗಳ್ (ಸೌಗಂಧಿ ೩೩೮-೫); ಕಲ್ಲಿನ ದಿಂಡುಗಳನ್ನು ಕೂಚ ಗಳನ್ನು ತುಂಬಿದ ಗಾಡಿಗಳನ್ನು ಎಳೆಯುವ ಕುದುರೆಗಳ, ತಂದುದನ್ನು ಗಾಡಿಗಳಿಂದ ಇಳಿಸಿಕೊಳ್ಳುವ ಸಲಗಗಳ ಸಂಖ್ಯೆ ಹೆಚ್ಚು ಕಡಿಮೆ ದುಡಿಯುವ ಮುಂದಿಗಿಂತ ಕಡಿಮೆಯೇನಿರಲಿಲ್ಲ (ಶವಚ. ೭೮). ೯. ಚಿನ್ನ ಮುಂತಾದ ಲೋಹಗಳ ಗಟ್ಟಿ: ಪೋಗಲಣ್ಮದೆ ಚಿನ್ನದ ದಿಂಡಿರ್ದಡೆಯಂ ಪೊಕ್ಕ ಮೇಲೊಂದು ಚಿನ್ನದ ದಿಂಡಂ ತೆಗೆದುಕೊಂಡು (ಧರ್ಮಾಮೃ. ೦೩-೭೩). ೧೦. ಅಂಚು; ದಡ; ದಂಡೆ. 'ದಿಂಡುಕಟ್ಟು' ಪರಾ. ೧೧. (ಹಣ್ಣು, ಕಾಳು ಮೊದಲಾದವುಗಳ) ಒಳಭಾಗ; ತಿರುಳು: ಉಂಡಿಗುಂಬಳ ಕಾಯ . . . ತೊಟ್ಟಿನ ಬಳಿಯ ತೋಡಿ ಗುಂಡಿಯಂ ಮಾಡಿ ಸೆರೆಗತ್ತಿಯೊಳು ಮತ್ತದಱ ದಿಂಡುಮಂ ಪೂರಿಸಿದ ಬಿತ್ತಮಂ ನೆಱೆದದಱೊಳಿನಿಸಿಲ್ಲದಂತೆ ತೆಗೆದು (ಸೂಪಶಾ. ೫-೨೩). ೧೨. ಶರೀರ; ಒಡಲು; ದೇಹ; ಮೈ: ಲಿಂಗವ ಕೈಯಲ್ಲಿ ಹಿಡಿದು ಅವರಂಗದಿಚ್ಛೆಯ ನುಡಿದು ತನ್ನ ದಿಂಡ ಹೊರೆಯಲೀಕೋ (ವೀಶಮಾ. ೧೦೫-೪೧೭); ದಿಂಡುದಿರಿಸಿ [ಪಾಣಾಂ. ದಿಂಡುರಿಸಿದ] ತಲೆ ಖಂಡಿಸಿ ಹೊಯ್ಯುತ ಸೆಂಡಾಟಮನಾ ತಲೆಗಳನಾಡುತ ಮುಂಡಂಗಳ ನೆಲೆಯೊಳುಯಾಡಿಸುತಿರ್ದ[ಪನಂದಾ] ನಟನಂತೆ (ಕುಮುರಾ. ೯-೪೯). ೧೩. ರುಂಡವಿಲ್ಲದ ದೇಹ; ಮುಂಡ: "ಅಟ್ಟಿ, ಧಡ" (ಕಂಸುಹು. ೭೪). ೧೪. ಗಟ್ಟಿಯಾದ ಭಾಗ; ಗಡುಸಾದ ಭಾಗ; ಅಪಕ್ವವಾದ ಭಾಗ: ಅನ್ನ ಸರಿಯಾಗಿ ಬೆಂದಿಲ್ಲ, ಇನ್ನೂ ದಿಂಡಿದೆ (ಕೂಧಿ); ಹಾಲು ಒಡೆದರೆ ನೀರು ಬೇರೆ, ದಿಂಡು ಬೇರೆಯಾಗುತ್ತದೆ (ಕೂಧಿ). ೧೫. ಸ್ಥೂಲವಾದುದಂದಂ; ದಪ್ಪವಾದುದು: ಚಿಂದಿನಂದದಿ ಬಿಗಿದ ಮಾಂಸದ ದಿಂಡು ವೊಲೆಗಳು ಮುಖವು ಶ್ಲೇಷ್ಮದ ಜೊಂಡು (ಅಮೃತ. ೨-೪೧); ಗೂಳಿಯ ಹಿಣಲಂತಿರೆ ಹೆಗಲವರಿಗೆ ಮಂಡಿಯ ಮುಟ್ಟುವ ತೋಳ್‌ದಿಂಡು (ಅಜಕ್ಕ. ೯೭-೩೦). 'ದಿಂಡುಕ' ಪರಾ. ೧೬. ಬಾಳೆಯ ದಿಂಡಿನಿಂದ ಮಾಡಿದ ಪಲ್ಕ,–ತಾಳಿದ: ಇಂದು ನಮ್ಮ ಮನೆಯಲ್ಲಿ ದಿಂಡು ಮಾಡಿದ್ದರು (ಕೂಧಿ). ೧೭. ಪುಷ್ಟಿಕರವಾದುದು; ಪುಷ್ಟಿದಾಯಕವಾದುದು: ಗೋಧಿಯು ಅಕ್ಕಿಗಿಂತ ದಿಂಡಾದ ಆಹಾರಧಾನ್ಯ (ಕೂಧಿ). ೧೮. ಮೂಲಸತ್ತ್ವ,–ಸಾರ; ಒಳ ತಿರುಳು: ಶೈವಕರುಣಾಂಶುಗಳ ಎಳೆಬಿಡಿಸುವೆಸಕದಿಂಳು ದಿಂಡಿನೀ ಜೀವಾತ್ಮವನೆ ಮಾರೆವೆಯೆಂತು? (ಪುಲದೀ. ೩೯-೮). ೧೯. ಬಲ; ಕಸುವು; ಶಕ್ತಿ. 'ದಿಂಡಾಳು' ಪರಾ. ೨೦. ಧೈರ್ಯ; ದಿಟ್ಟತನ. 'ದಿಂಡುಗೆಡು' ಪರಾ. ೨೧. ಗರ್ವ; ಸೊಕ್ಕು: ಅಹಂಕಾರ: ಒಂದಿನಂ ಮುಚ್ಚಂಜೆ ಹೆಸಿಮಣ್ಣಿನುಂಡೆ, ಗುದ್ದುವೊರುವೊಡ್ಡನನು ಸಂತೆಯಲಿ ಕಂಡೆ, ನಾಲಗೆಯ ಸಾಲದುಲಿಯಿಂ ಗೊಜಗಿತಿಂತು–'ಮೆಲ್ಲನೆಲೆ ತಟ್ಟಣ್ಣ! ನನ್ನೊಳೀ ದಿಂಡೇ?' (ಗಿಳಿವಿ. ೧೩೦-೩೭). ೨೨. ಬೂಜು; ಬಿರಡೆ (?): ಬಳೆಯ ಕುಪ್ಪಿಗೆಗೆತ್ತು . . . ಅದರ ಬಾಯಿಗೆ ಬಳಹದ ದಿಂಡನಿಕ್ಕಿ ವಜ್ರ ಗಾರೆಯಂ ಮಾಡಿ (ವಾಶಾಚಿ. ೩೯-೪). ದಿಂಡ್ಕ: ೧೩. ನಿನ್ನ ರುಂಡವನ್ನು ದಿಂಡದಿಂದ ಬೇರೆ ಮಾಡದೆ ಘಾಕ್ಷನು ಎಂದೂ ಬಿಡಲಿಕ್ಕಿಲ್ಲ (ಅಂದಿಕ. ೧೧೩): ತಾನು ಅವನ ರುಂಡವನ್ನು ದಿಂಡದಿಂದ ಬೇರೆ ಮಾಡಿದ್ದು (ಪುನಿಬಿ. ೧೬೧); ಪ್ರತಿಯೊಂದು ನಾಟಕದಲ್ಲಿ ಕೆಲವು ದಿಂಡಗಳೂ ಹಲವು ಡೌಗಿಗಳೂ ಬರುತ್ತಿದ್ದವು (ಜನನಾ. VII ಪ್ರಸ್ತಾವನೆ). ೨೧. 'ದಿಂಡತನ' ಪರಾ. ದಿಡ್ಡು: ೨೩. ಹಸುವಿನ ಕೊರಳಿಗೆ ಕಟ್ಟುವ ಗುದಿ,–ಗುದ್ದಿ: (ಸ್ಕಾಂಡಕ್). ೨೪. (ಆಲಂ) ಹೂರೆ; ಭಾರ: ದೊಡ್ಡ ಧ್ಯೇಯವನ್ನು ಕಟ್ಟಿಕೊಂಡಿರುವ ನನಗೆ ಕೊರಳಿಗೆ ಅವಳು ಒಂದು ದಿಡ್ಡಾಗುವ ಬದಲಾಗಿ ಈಗ ನನ್ನ ಅಬಾಧಿತಸ್ವಾತಂತ್ರ್ಯವೇ ನನಗೆ ದೊಡ್ಡದು (ನಿಹ್ಕಾಮು. ೧೧೦).

ದಿಂಡಾಗು, ದಿಡ್ಡಾಗು=೧.(ಕೊಂಬೆಯಿಲ್ಲದ ವಂರದಂತೆ)ಬೋಳಾಗು; ಬರಿಗೈಯಾಗು; ಹುರುಳಿಲ್ಲದಾಗು: ಕಂಡು ಸತ್ಕರಿಸಿ ಮುನಿ ಮಧುರ ವಚನದಲಿ ಮುಂಕೊಂಡಾ ಭರದ್ವಾಜಸುತನೊಳಿಂತೆಂದನೀ ಮಂಡಲವ ಭೂಸುರರ್ಗಿತ್ತೆವೆಮಗೇನುಂಟು ಭಾಗ್ಯವೀಯಲ್ಕೆ ನಿಮಗೆ ದಿಂಡಾದೆ ಧನಹೀನನಿಂದೇನು ಭಾರಿ ಕೋದಂಡವೊಂದಿದೆ' (ಲಕ್ಷ್ಮಣ. ೨೮-೩೦). ೨. ಸೊಕ್ಕೇರು; ಮದವೇರು: "ವರ್ಷತೀತಿ ದಿಂಡಾದವುದೆಂಬುದು; ಹಾಷ್ಟಿಗಾ=ಮದಂ" (ಕಾಶಕ್ಕ. ೩೦). ೩. ಭರ್ತಿಯಾಗು; ಗಡದ್ದಾಗು; ಪುಷ್ಟವಾಗು: ಮಲ್ಲಣ್ಣನಿಗೆ ಹೊಟ್ಟೆಗೆ ತುಂಬ ದಿಂಡಾಗಿತ್ತು (ಮಧ್ವ. ೦೪). ೪. ಹೊರೆಯಾಗು; ಭಾರವಾಗು: ದೊಡ್ಡ ಧ್ಯೇಯವನ್ನು ಕಟ್ಟಿಕೊಂಡಿರುವ ನನಗೆ ಕೊರಳಿಗೆ ಅವಳು ಒಂದು ದಿಡ್ಡಾಗುವ ಬದಲಾಗಿ ಈಗ ನನ್ನ ಅಬಾಧಿತಸ್ವಾತಂತ್ರ್ಯವೇ ನನಗೆ ದೊಡ್ಡದು (ನಿಹ್ಕಾಮು. ೧೧೦) **ದಿಂಡಿನ ಕೋಸಂಬರಿ**=ಬಾಳೆಯ ದಿಂಡಿನಿಂದ ತಯಾರಿಸಿದ ಕೋಸಂಬರಿ: ದಿಂಡಿನ ಕೋಸಂಬರಿ ಬಹಳ ರುಚಿಯಾಗಿರುತ್ತದೆ (ಕೂಧಿ). **ದಿಂಡಿನ ಪಲ್ಕ**=ಬಾಳೆಯ ದಿಂಡಿನಿಂದ ಮಾಡಿದ ಪಲ್ಕ,–ತಾಳಿದ: ಹಾಗಲಕಾಯಿ ಗೊಜ್ಜು, ದಿಂಡಿನ ಪಲ್ಕ ಗೋಚರಿಸಲಿಲ್ಲವಲ್ಲ (ಜಾಳಹೊ. ೪೩); ತಿಥಿಯ ದಿನ ದಿಂಡಿನ ಪಲ್ಕ ಮಾಡುತ್ತಾರೆ (ಕೂಧಿ). **ದಿಂಡಿನ ಹುಳಿ**=ಬಾಳೆಯ ದಿಂಡಿನಿಂದ ತಯಾರಿಸಿದ ಹುಳಿ,–ಮೇಲೋಗರ: ದಿಂಡಿನ ಹುಳಿಯೆಂದರೆ ನನಗೆ ಬಹಳ ಇಷ್ಟ (ಕೂಧಿ). **ದಿಂಡು ಜಡಿ**=ಗುಂಪನ್ನು ಚದರಿಸು: ಮೆಲ್ಲಡಿ ತಡವಾಗಿ ದಿಂಡುಜಡಿವುದ್ದುಗದಿಂದನಿಯೆತ್ತಿ ಮುಂ ತೊದಳ್‌ನುಡಿಗೊಳಿ ಲೀಲೆಯಿಂದೆಱಗೆ ಶಾಳಿವನಕ್ಕೆ ಶುಕಾಳಿ (ಸೂಕ್ಕಸು. ೪-೭೦).

[ದೇ.ತ ಮಲ. ತಿಣ್ಪು; ಕೊಡ. ದಿಣ್ಡೇ; ತುಳು.ದಿಂಡು; ತೆಲು. ದಿಂಡು, ದ್ರಿಂಡು./ಮರಾ. ದಿಂಡ್]

ದಿಂಡುಕ(ನಾ). ೧. ಸ್ಥೂಲ ಶರೀರವುಳ್ಳವನು; ಸ್ಥೂಲದೇಹಿ; "ಟೊಣಪ" (ಕಂಸುಹು. ೮೩): ಉಕ ಪ್ರತ್ಯಯಕ್ಕೆ – ಕಟ್ಟುಕಂ . . . ಬೊಂದುಕಂ, ದಿಂಡುಕಂ (ಶಮದ. ೩೦೩ ಪ್ರಯೋ); ಬೊಂದುಕಂ, ದಿಂಡುಕಂ (ಶಕ್ಕಾಸು. ೪೪೧ ಪ್ರಹೋ). ೨. ಭಯವೂ ವಿವೇಕವೂ ಇಲ್ಲದ ಒರಟು ಮನುಷ್ಯ: "ತುಂಟ, ಪೋರ, ಪೋಕರಿ, ಆಗಡ" (ಕಂಸುಹು. ೮೩).

[ದಿಂಡು + – ಉಕ (< – ಉಗ)]

ದಿಂಡುಕಟ್ಟು (ಕ್ರಿ). ೧. (ಹೂವಿನ) ದಂಡೆಯನ್ನು ಕಟ್ಟು; ಹಾರವನ್ನು ಕಟ್ಟು: ಗುಡ್ಡದ ಮೇಲಕ್ಕಾದರೂ ಹೋಗಿ ಹೂಕೊಯ್ದುಕೊಂಡು ಬಾ ದಿಂಡುಕಟ್ಟಿಕೊಡ್ತೇನೆ (ನಿಕಾಉ.೭) ೨. (ಪಾತಿ, ಮೊದಲಾದವುಗಳಿಗೆ)

ಅಂಚೆನ್ನು ಕಟ್ಟು; ದಂಡೆಯಂನ್ನು ಮಾಡು: ಅವರು ಹೂಗಿಡಗಳ ಪಾತಿಗಳಲ್ಲಿ ಸರಿಯಾಗಿ ನೀರು ನಿಲ್ಲುವಂತೆ ದಿಂಡುಕಟ್ಟಿದ್ದಾರೆ (ಕೂಡಿ). ೩. (ಬಟ್ಟೆ ಮೊದಲಾದುವುಗಳ) ಅಂಚನ್ನು ಕಟ್ಟು; ಕರೆಕಟ್ಟು: ಅವರು ಸೀರೆಯ ಸೆರಗಿಗೆ ದಿಂಡುಕಟ್ಟುತ್ತಿದ್ದಾರೆ (ಕೂಡಿ).

[ದಿಂಡು + ಕಟ್ಟು]

ದಿಂಡುಕಾಱಿ (ನಾ). ಶಕ್ತಿಶಾಲಿ; ಬಲಶಾಲಿ: ನಡೆವಳಿಕಾಱಂ, ದಿಂಡುಕಾಱಂ, ಬಲ್ಮಾಱಂ (ಧಾಕಾಭೂ. ೬-೧೭೧ ಉದಾ). [ದಿಂಡು + ಕಾಱಿ]

ದಿಂಡುಗ 'ದಿಂಡ್ $_1$' ನೋ.

ದಿಂಡುಗಲ್ಲು (ನಾ). ಮನೆಯ ತಳಪಾಯಕ್ಕೆ ಹಾಕುವ ಕಲ್ಲು; ಕಲ್ಲಿನ ದಿಂಡು: ಮನೆಯ ತಳಪಾಯಕ್ಕಾಗಿ ದಿಂಡುಗಲ್ಲುಗಳನ್ನು ರಾಶಿಮಾಡಿದ್ದರು (ಕೂಡಿ). [ದಿಂಡು + ಕಲ್ಲು (<ಕಲ್ಲ್)]

ದಿಂಡುಗವಿ (ಕ್ರಿ). ದಿಟ್ಟತನದಿಂದ ಮೇಲೆಬೀಳು; ಸೊಕ್ಕಿನಿಂದ ಆಕ್ರಮಿಸು: ದಿಂಡುಗವಿವನ ಬಾಯೊಳಗೆ ದೋರ್ದಂಡವನು ನೂಕಿದನು (ನಿಧಾಗ ೧೦-೩೧-೦೬). [ದಿಂಡು + ಕವಿ $_1$]

ದಿಂಡುಗುಂಡಿಗೆ (ನಾ). ೧. ಸೊಕ್ಕಿನಿಂದ ಕೂಡಿದ ಎದೆ,–ಹೃದಯ. ೨. ಸೊಕ್ಕು; ಗರ್ವ: ತುರುಕರ ದಿಂಡುಗುಂಡಿಗೆಯ ಹಿಂದಿದ ನಿನ್ನೆಯ ಬಾಹುದಂಡಮಂ ಪೊಗಳ್ವೆನೆ? (ಗಿಳಿವಿ. ೫೨-೮).

[ದಿಂಡು + ಗುಂಡಿಗೆ $_1$]

ದಿಂಡುಗೆಡಪು, ದಿಂಡಂಗೆಡಹಂ (ಕ್ರಿ). ೧. ರಾಶಿರಾಶಿಯಾಗಿ ಬೀಳಿಸು,–ಕೆಡಹು: ಕರಚಂಡಾಘಾತದೊಳ್ ತೊಂಡುಗೆಡದ ತುರಗದಟಂಗಳುಂ ಬಱಸಿಡಿಲ ಬಳಗಂ ಚಂದಣದ ವೆರ್ಮರಗಾಡಂ ದಿಂಡುಗೆಡಪಿದಂತಿರ್ದುವು (ಅನಂಪು. ೦೪-೭ ಪ); ಭದ್ರಾವತೀಶ್ವರನ ಸುತನ ಸೈನ್ಯಂ ನಡೆದು ಬಂದಾ ವ್ಯಕೋದರನ ಮುತ್ತಿದೊಡವನ್ನಿಜಗದಾದಂಡಮಂ ಕೊಂಡು ದಿಂಡುಗೆಡಪಿದೊಡೆ . . . ಬೆಱಗಾದರು (ಕೃಮಿಭಾ. ೪-೫೬). **ದಿಂಡುಗೆಡಹು**: ೨. ದಿಂಡುರುಳುವಂತೆ ಕೆಡಹಂ; ಕೆಳಕ್ಕೆ ಉರುಳಿಸು: ಬಂಡವ ತುಂಬಿದ ಹಸುಬೆ ಕೊಂಡವನ ನುಂಗಿತ್ತು ಆ ಬೀಲದ ಮದ್ದ ನುಂಗಿದವನ ಕಂಡವ ನೊಡೆದು ದಿಂಡುಗೆಡಹಿತ್ತು ತನುವ (ಪೋಳಮಾ. ೨೪೬-೬೪); ಚಂಡಿ ತನವನು ಮಾದು ಮಿಗೆ ಕೈಕೊಂಡು ಫಲುಗುಣನೆಸಲಿ ತನುವನು ದಿಂಡುಗೆಡಹಲಿ ಬಳಿಕ ಗೆಲುವಿರಿ ಕೌರವೇಶ್ವರನ (ಕುವ್ಯಾಥೀ. ೬-೩೬); ತೊಂಡ ದೈತ್ಯರ ಬಸುಱ ಬಗಿಬಗಿ ದಿಂಡುಗೆಡಹೋ . . . ಎನುತ ಮರ್ಕಟತಂಡ ಕವಿದುದು (ಕಾಶಿರಾ. ೩೨-೦೬); ದಿಂಡುಗೆಡಹುವೆನಿವನ ನೆಂದಾ ಉದ್ದಂಡನು ಕೊಬ್ಬಿಱಿದೇಱಿ (ನೇಮಿಸಂ. ೧೩-೩೩). ೩. ಅಡ್ಡ ಬಿದ್ದು ನಮಸ್ಕರಿಸು; ಸಾಷ್ಟಾಂಗವೆರಗು: ಶಂಭು ನೆಲಸಿದನಾತ ನಿದಿರನಲಿ ಕಂಡು ವುರುಷಾಮೃಗ ಶರೀರವ ದಿಂಡುಗೆಡಹಿತು (ಕುವ್ಯಾಸ. ೬೫ಆ. ೬-೩೦). [ದಿಂಡು + ಕೆಡಪು]

ದಿಂಡುಗೆಡಹು 'ದಿಂಡುಗೆಡಪು' ನೋ.

ದಿಂಡುಗೆಡು (ಕ್ರಿ). ಧೈರ್ಯಗೆಡು; ಅಂಜು; ಹೆದರು: ಅವುಗಳಿಂದ ಅವನು ದಿಂಡುಗೆಡಲಿಲ್ಲ (ಪ್ರಮುಹ.೧೧). [ದಿಂಡು + ಕೆಡು $_1$]

ದಿಂಡುಗೆಡೆ (ಕ್ರಿ). ೧. ಉರುಂಳಿ ಬೀಳು; ಕುಸಿದು ಬೀಳು: ಗಂಡನುಳ್ಳಮ್ಮನ ಒಡವೆರೆದಾತ ನರಕದಲ್ಲಿ ದಿಂಡುಗೆಡದಿವ್ಪನ್ನೆ (ಧರ್ಮಾವ. ೩೨-೩೬); ದಿಂಡು ಗೆಡೆಯಲಿ ಮೇರು ಮೇದಿನಿ ನಿಲಲಿ ವಿತಳದಲಿ (ಕುವ್ಯಾಥೀ. ೬-೨೭); ದಿಂಡುಗೆಡೆದುದು ನೆಲಕೆ ರಕ್ಕಸ ದಿಂಡೆಯನ ಕೌಕುಳದ ರಕುತದ ಮುಂಡವು (ತೊರಕಾ. ೧-೧೧-೧೪); ದಿಂಡುಗೆಡೆದು ಪಶ್ಚಿಮವಾರಿಧಿಯೊಳು ಖಂಡ ಶಶಾಂಕನಳಿಯೆ (ಜಯಭಾ. ೦೪-೪೦); ಗಾಳಿಗೆ ಬಾಟ್ ದಿಂಡುಗೆಡೆವಂತೆ ಕಾಲಾಳ್ಗಳ್ ಕೆಡೆದುವು (ರಾಮಾಶ್ವ. ೦೩೦-೦೬). ೨. ಸಾಷ್ಟಾಂಗ ಬಿದ್ದು ನಮಸ್ಕರಿಸು; ಅಡ್ಡಬೀಳು: ಕಂಡು ಪೊನ್ನಾಂಬಲನ ಶ್ರೀಪಾದ ಯುಗಳಮಂ ದಿಂಡುಗೆಡೆದಟ್ಟಿಕೊಂಡನು ಹರನ ಚರಣಮಂ (ಸಾಮೂಕ. ೬೫-೦೪); ಕಂಡು ಮೈಯ್ಯಿಕ್ಕಿಸಿದನತಿಥಿಗೆ ದಿಂಡುಗೆಡೆದನು (ಸಂಧಪ. ೦೦-೦೬); ಕಾಣ್ಕೆಯಂ ಮುಂದಿರಿಸಿ ದಿಂಡುಗೆಡೆದೆದ್ದು . ಮಗುಳೆಱಿಗಲು (ಜಬಪು. ೫೬-೫೦). [ದಿಂಡು + ಕೆಡೆ $_1$]

ದಿಂಡುಡಿಗೆ (ನಾ). ೧. ಗುಂಡಗೆ ಸುತ್ತಿರುವ ಬಟ್ಟೆ: ಪೆಂಡತಿಯ ನುಡಿಗೇಳಿ ಶಾಟಿಯಂ ಕಟಿತಟದಿ ದಿಂಡುಡಿಗೆಯಂಗೈದು ಭೃಗ್ವಂಗಿರಾಧ ನಡೆಗೊಂಡು ರಘುವೀರನರಮನೆಯ ಬಾಗಿಲ್ಗಳಂ ಕಳಿದು ಮುದದಿಂದ ಪೊಕ್ಕ (ವೆಂಕಾಕಾ. ೨-೦೦-೫೦). ೨. (ಆಲಂ) ಅಸ್ತವ್ಯಸ್ತವಾದ ಬಟ್ಟೆ; ಅವಸರದಲ್ಲಿ ಸುತ್ತಿಕೊಂಡ, ಮುದುರಿರುವ ವಸ್ತ್ರ: ಅಗಲಸುರೆಯರಾ ವುರೋತ್ತರಭಾಗದಲಿ ಹೊರವಂಟು ರಣಕದಿರಾಗಿ ದಿಂಡುಡಿಗೆಯಲಿ ಕೆದರಿದ ಕೇಶಭಾರದಲಿ ಜಾಗಜಾಗದಿ ನಿಂದು ಗುಂಪುಗಳಾಗಿ ಪತಿಸುತ ಸೋದರಾದಿ ವಿಯೋಗದುಃಖದೊಳೊರಲಿದರು (ಅನಂಕಾ. ೬-೧೬-೨).

[ದಿಂಡು + ಉಡಿಗೆ $_1$ (<ಉಡುಗೆ)]

ದಿಂಡುತನ, ದಿಂಡತನ (ನಾ). ಸೊಕ್ಕು; ಗರ್ವ; ಅಹಂಕಾರ: ದಿಂಡುತನದಲಿ ಕೊಂಡು ಗದುಗವ ಕೊಂಡವೋಲಿಲ್ಲೀನು ಸಾಗದು ರಂಡೆಯರೆ ಹೋಗೆಂದು ನುಡಿದನು ನಗುತ ಕೌರವನು (ಜಿನಧಾ. ೬-೫). **ದಿಂಡತನ**: ಕಟ್ಟಬೇಕು ಕಾಟದೆಮ್ಮೆ ಅದಱ ಹಯನ ಎಷ್ಟಾದರು ಉಣಬೇಕು . . . ಚಂಡಿತನವೆಂಬ ಹಿಂಡಿ ಇಡಬೇಕು ದಿಂಡತನವೆಂಬ ಪೆಂಡೆ ಮೇವು ಪುಂಡತನವೆಂಬೊ ಪಿಂಡಿ ರುಬ್ಬಿಡಬೇಕು (ಪುರಂದ. ೨-೫೫-೨): ಕೊಂಡೆಯರ ಮಾತ ಕೆವಿಗೊಂಡು ಕುಲವನಿಕ್ಕಿ ದಿಂಡತನದಿ ಕೆಡದಿರು (ಪಾರ್ಶಿಸು. ೦೦೩).

[ದಿಂಡು + – ತನ]

ದಿಂಡುದರಿ 'ದಿಂಡುಂದಱಿ' ನೋ.

ದಿಂಡುದಳಿರು (ಕ್ರಿ). (ಆಲಂ) ಅಧಿಕವಾಗು; ಹೆಚ್ಚಾಗು: ಕಂಡು ದೂರದಲಾ ಮುಕುಂದನಖಿಂಡಮೂರ್ತಿಯನು ಕೈಕೊಂಡವಂತರ್ಧಾನ ವನು ಬಹಿರಂಗವೃತ್ತಿಗಳು ದಿಂಡುದಳಿತುದು ಪುಳಕ (ನಿಧಾಗ. ೦೦-೭೨-೩೮).

[ದಿಂಡು + ತಳಿರು $_1$ (<ತಳಿರ್ $_1$)]

ದಿಂಡುದಱಿ, ದಿಂಡುದರಿ (ಕ್ರಿ). ತುಂಡುಮಾಡು; ಚೂರುಮಾಡು: ದಿಂಡುದಱಿದನು ಶ್ರಾವಕರನೇರಂಡವನವಂ ಪೊಕ್ಕ ಮದವೇತಂಡದಂದದಿ (ಜಪಪು. ೫೦-೬೯); ದಿಂಡುದಱಿದನು ದಾನವರ ಕಡಿಖಂಡಮಯ ಮಾಯ್ವುವನಿ ರಕುತದ ದೊಂಡೆಗೆಸಱಿನೊಳದ್ದುದಗಣಿತ ರಥಗಜಾಶ್ವಚಯ (ಕಾಪ್ಯಾಳ. ೬-೩೦); ಚಂಡದೇವತೆಗಳನಾರಾಧಿಸಿದಳು ದಿಂಡುದಱಿದು ಕುಱಿಗಳನು (ಕುಡಾಸಾಂ. ೨೬-೬); ದಿಂಡುದಱಿದಹಿತರಂ ಭೀಷ್ಮನಂ ಕೊಂದನು (ಕೃಮಿಭಾ. ೨೪-೦೬); ದಿಂಡುದಱಿದು ಕೆಡಹಿದ ಸಾಲ ಕೊಲ್ಲಾರ ಬಂಡಿಗಳಿಸೆದುವಾ ಧುರದೆ (ಕಂನವಿ. ೦೫-೬೬). **ದಿಂಡುದರಿ**: ಇಂದ್ರನ ಮಗ ಅರ್ಜುನ ಭೀಷ್ಮಾದಿ ವೈರಿಗಳನ್ನು ದಿಂಡುದರಿದ (ಬಿದುರಿ. ೦೦೩).

ದಿಂಡುದಱಿದಱಿ = ಕಾಂಡಪವನ್ನು ಕತ್ತರಿಸುವಂತೆ ಕತ್ತರಿಸು,–ತರಿ: ದಿಂಡುದಱಿದಱಿದವನ ಸೇನೆಯ ಹಿಂಡ ಬಱಿಕ್ಕಿದವನ ಕೊಂದನು (ಸಂಧಪ ೫೬-೦೫೦). [ದಿಂಡು + ತಱಿ $_1$]

ದಿಂಡುದಿರುಹು (ಕ್ರಿ). ೧. ಸುತ್ತಲೂ ತಿರುಗು: ಕೊಂಡನಾ ತುರಗವ ನದಾಕ್ಷಣ ಗಂಡುಗಲಿ ಮನವಳುಕದಾಗಳು ದಂಡೆಯಿದು ಲೇಸೆನುತ ಮಿಱಿಲಿಕೆ ತುರಗ ಖುರಗಳಲಿ ದಿಂಡುದಿರುಹುತ್ತಿರಲು (ಸಂಧಪ ೩-೦೪). ೨. ಸುತ್ತು; ಹುರಿಮಾಡು: ಕಣ್ಣಲಿ ಕೆಂಡವನು ಕಾಱುತ್ತ, ಗರ್ಜಿಸಿ ಕೆದಱಿ ಮಿಸೆಗಳ ದಿಂಡುದಿರುಹುತ್ತುಗಿದು ಸಮರಕೆ ಗಂಡುಗಲಿ ಹೊಱಮಂಟನು (ನಿಧಾಗ. ೦೦-೬೬-೦೫). ೩. ಸುತ್ತಲೂ ತಿರುಗಿಸು: ಗಂಡುಗಲಿ ಬರಲವನ ಹಸ್ತವ ದಿಂಡುದಿರುಹುತ ಗದೆಯಲಿಟ್ಟನು ದಾನವಧ್ವಂಸಿ (ನಿಧಾಗ. ೦೦-೭೦-೨೩). [ದಿಂಡು + ತಿರುಹು (<ತಿರಿವು $_1$)]

ದಿಂಡುಮಗುಟ್ (ಕ್ರಿ). (ದೇಹ) ಹಿಮ್ಮೆಟ್ಟಿ ಬೀಳು; ಉರುಳಿ ಬೀಳು; ದಿಂಡುಗೆಡೆ : ಮದಹಸ್ತಿಮಸ್ತಕಂಗಳನೋಸರಿಸಿ ರಥಮಂ ಪರಿಯಿಸುವ ರಥಚೋದಕರುಂ ರಥಚೋದಕರ ಬಿಟ್ಟ ಬಾಯ್ ಬಿಟ್ಟಂತಿರೆ ತಮ್ಮ ಕರುಳ್ಗಳೊಳ್ ತವೆ ತೊಡರ್ದು ಕೀಟಂ ಕರ್ಚಿ ದಿಂಡುಮಗುಟ್ಟು ಕೆಡೆವ ಜಾತ್ಯಶ್ವಂಗಳುಂ (ಪಂಪಭಾ. ೦೦-೧೧೬ ವ). [ದಿಂಡು + ಮಗುಟ್]

ದಿಂಡುರುಳ್, ದಿಂಡುರುಳು (ಕ್ರಿ). ೧. ಮರದ ಕಾಂಡದಂತೆ ನೆಲದ ಮೇಲೆ ಉರುಳು : ಗಂಡೇಳ್ವ ಭೂತಮು ತ್ಪ್ರೇತಜಾತಂಗಳಿಂ ದಿಂಡುರುಳ್ವ ಪೊರಳ್ವ ನೆರಳ್ವಾ ಪರಾಕ್ರಮಿಗಳಿಂ . . . ತದ್ರಣಾಂಕಣಮೆಸೆದುದು (ಜಿಬಪು. ೧೬-೨೦). ದಿಂಡುರುಳು : ೧. ಅಱಿಯಲಣಂ ಬಂದುದಿಲ್ಲೆತ್ತಲುಂ ದಿಂಡುರುಳುತ್ತಿರ್ಪನ್ಯಸೈನ್ಯಂಗಳ ತಲೆಗಳೆ ಕಾಣಲ್ಕೆ ಬಂದತ್ತದೆತ್ತಂ (ಚಂದ್ರಪು. ೫-೦೦೯); ಸಾಲ್ವನಳವಳಿದನು ದಿಂಡುರುಳಿತಾತನ ಚತುರ್ಬಲಂ (ಜೈಮಿಭಾ. ೭-೬೨); ಖಂಡೆಯಗಳ ಪೆಟ್ಟಿನೊಳಗೆ ಗುರಾಣಿಗಳ್ತುಂಡಿಸಿ ತಲೆ ಸೀಳಾಗಿ ಖಂಡಿಸಿ ಸಿಂಗಾಡಿ ದೊಣೆಯಂಬು ಪುಡಿಯೆದ್ದು ದಿಂಡುರುಳಿತು ಖಾನರಾಜಿ (ಕಂನವಿ. ೧೪-೭೪); ಚಂಡ ಖಗಮೃಗರವಕೆ ಬೆದಱುತ ದಿಂಡುರುಳಿ ಪೊರಳುತ್ತಲಿರ್ದರು ನಾರಿಯರು ಬನದಿ (ಕೃಕರ್ಣಾ. ೩-೮೩). ೨. ಮೈಯನ್ನು ಉರುಳಿಸುತ್ತಾ ದೇವರಿಗೆ ಪ್ರದಕ್ಷಿಣೆ ಹಾಕು ; ಉರುಳುಸೇವೆ ಮಾಡು : ಸ್ವಾಮಿಗೆ ದಿಂಡುರುಳುವ ಸೇವೆಯನ್ನು ಮಾಡುವವರೆಷ್ಟೋ ಮಂದಿ (ರೂಢಿ).

ದಿಂಡುರುಳು ಸೇವೆ = ಶರೀರವನ್ನು ಉರುಳಿಸುತ್ತಾ ದೇವರಿಗೆ ಪ್ರದಕ್ಷಿಣೆ ಹಾಕುವ ಸೇವೆ ; ಉರುಳುಸೇವೆ : ಅವರು ದೇವರಿಗೆ ದಿಂಡುರುಳು ಸೇವೆಯನ್ನು ಒಪ್ಪಿಸುವ ಹರಕೆ ಹೊತ್ತಿದ್ದಾರೆ (ರೂಢಿ).

[ದಿಂಡು + ಉರುಳ್$_1$]

ದಿಂಡುರುಳಿಕೆ (ನಾ). ದೇಹವನ್ನು ಉರುಳಿಸಿ ಪ್ರದಕ್ಷಿಣೆ ಹಾಕುವಿಕೆ : ಒಲ್ಲೆನೆಂದೇಕೆನ್ನುವನು ? ದಿಂಡುರುಳಿಕೆ ಹಾಕುತ್ತಾನೆ ದಿಂಡುರುಳಿಕೆ (ಹುಚ್ಚಾಟ. ೬೨). [ದಿಂಡುರುಳು (<ದಿಂಡುರುಳ್) + – ಇಕೆ]

ದಿಂಡುರುಳಿಚು 'ದಿಂಡುರುಳ್ಚು' ನೋ.

ದಿಂಡುರುಳು 'ದಿಂಡುರುಳ್' ನೋ.

ದಿಂಡುರುಳ್ಚಿಸು (ಕ್ರಿ). ಮರದ ಕೊರಡು ಉರುಳುವಂತೆ ಉರುಳಿಸು : ಗಜರಾಜಿಯಂ ದಿಂಡುರುಳ್ಚಿಸಿ ತೇರ್ಗಳಂ ಛತ್ರ ಚಾಮರಾಳಿಗಳ್ವೆರಸಿ ನಿಟ್ಟೊರಸಿ . . . ಸವಱಿದುದು ಸುಭಟರಂ ಮತ್ತಗಜವು (ಜಿಬಪು. ೨೮-೨೪). [ದಿಂಡುರುಳ್ಚು + – ಇಸ್ಸು$_3$]

ದಿಂಡುರುಳ್ಚು, ದಿಂಡುರುಳಿಚು (ಕ್ರಿ). ೧. ಮರದ ಕೊರಡು ಉರುಳುವಂತೆ ಉರುಳಿಸು: ಮಿಕ್ಕು ಮಿಱಿ ಪೊಕ್ಕಿಱಿದಟ್ಟೆಯಂ ಮುಟ್ಟಿ ಮುಱಿದು ಮುಂಡಮಂ ದಿಂಡುರುಳ್ಚಿ ರುಂಡಮಂ ಸೆಂಡಾಡಿ (ರಾಮಾಶ್ವ. ೧೪೪-೧೦). ೨. (ಆಲಂ) ಸೋಲಿಸು ; ಹತೋಟಿಗೆ ತರು : ದಿಂಡುರುಳ್ಚಿದೆವಾಳ್ದ ಗಿದಿರಾದರಂ ಸುಕೋದಂಡರೂಪಿಂ ಸ್ವಾಮಿಹಿತಕೆನ್ನು ತಮ್ಮೊಳುದ್ದಂ ಡತೆಯ ಬಿರುದೆತ್ತಿತೆನೆ ಸೋಗೆವಸುರ ಕಬ್ಬಿನ ಕೊರ್ಬು ಕಣ್ಗೆಸೆದುದು (ಜಿಬಪು. ೧೧-೧೦); ಮೂಜಗವನೈದೆ ಕುಸುಮಾಸ್ತ್ರದಿಂ ದಿಂಡುರುಳ್ಚುವ ಶಂಬರಾರಿಗಿದಿರಾರೆನಲು (ಜೈಮಿಭಾ. ೨೨-೨೦). ದಿಂಡುರುಳಿಚು : ೨. ಕವಿದರು ಕದಳಿಯನು ಮದಕರಿಯು ತೊತ್ತಳ ದುಳಿದವೊಲು ದಿಂಡುರುಳಿಚಿದರಗಕೋಟಿಯನು ಶತಮನ್ಯುವಂದದಲಿ (ಕುಪ್ಯಾಭೀ. ೪-೬೩).

[ದಿಂಡು + ಉರುಳ್ಚು]

ದಿಂಡುರ್ಚಿ (ನಾ). ದಿಟ್ಟೆ ; ಉದ್ಧತೆ (?) : ಕೂಡೆ ಕುಣಿಯುತ್ತುಂ ಬಂದು ಸಲ್ವನ್ನಮಾಹರಚೇಳಕ್ರಿಯೆ ಭೂಪನಂ ಸುಲಿದುಕೊಂಡರ್ ಪಾಯ್ದು ದಿಂಡು[ಪಾಠಾಂ. ದು]ರ್ಚಿಯರ್ (ಅನಂಪು. ೫-೬). 'ದಂಡುಱುಂಬೆ' ಪರಾ. [?]

ದಿಂಡುವಾಯ್ (ಕ್ರಿ). ಪರಾಕ್ರಮದಿಂದ ಮೇಲೆ ನುಗ್ಗು ; ರಭಸದಿಂದ ಮೇಲೆ ಬೀಳು : ಆಲಗನೊಯ್ಯನೆ ಕಿತ್ತಡೆ ಕಂಡು ದಿಂಡುವಾಯ್ದೆತ್ತಿದ ಹಂದಿಯಂ ಮುಳಿದು ಕುತ್ತಿದನೊತ್ತಿದನಾ ವನೇಚರಂ (ಸೂಕ್ತಿಸು. ೩-೦೩೨); ವೈರಿಕ್ಷಿತಿಪನ ಭಟರಂ ದಿಂಡುವಾಯ್ದೆಚ್ಚು ಬೇಗಂ (ದಶಕು. ೭-೭೦) ; ಮುಂಗಾಲ್ಗಳಂ ನೆಗಪಿ ನಿಲ್ವ . . . ದುಂಡಿಪ ದಿಂಡುವಾ[ಪಾಠಾಂ. ಪಾ]ಯ್ವ ಬವರಿವರಿವ ಚಮ್ಮಟಿಗೆಗೆ ಚಳಿಯದ ಕಡಿಯಾಣಮಂ ಕೈಕೊಳದ ಬಗೆಯಂ ಬಗೆದಂತೆ ಕಂಡು (ರಾಜಶೇ. ೬-೧೧ ವ) ; ಪಿರ್ಬರಿಯೊಳೆ ಸುತ್ತಿ ಪಾಯತಿಕೆಯಿಂ ಮಿಗೆ ನರ್ತಿಪ ದಿಂಡುವಾಯಲುಪ್ಪರಿಪ . . . ವಾಹಳಿತನಂ ಬಗೆಗೊಂಡುದು ಮಂತ್ರಿಪುತ್ರನಾ (ರಾಜಶೇ. ೧೩-೮೨).

[ದಿಂಡು + ಪಾಯ್$_1$]

ದಿಂಡುವಿಡಿ (ಕ್ರಿ). ಗುಂಪುಗೂಡು : "ಎಕ್ಕೆಕ್ಕೆನೆ ದಿಂಡುವಿಡಿದು ಬಪ್ಪುದು ದಕ್ಕುಂ" (ರನ್ನಕಂ. ೩). [ದಿಂಡು + ಪಿಡಿ$_1$]

ದಿಂಡೆ$_1$ 'ತಿಟ್ಟು$_3$' ನೋ.

ದಿಂಡೆ$_2$ (ನಾ). ದುಷ್ಟ ಸ್ವಭಾವದವಳು ; ಉದ್ಧತೆ ದಿಂಡೇರಿಗುಂಟು ಜಗಭಂಡರಿಗುಂಟು ಅಂಡಲೆವರಿಗಿಲ್ಲವೀ ಕಾಲ (ಪುರಂದ. ೧-೦೨೦-೦) ; ಮತ್ತೊವ[ವೆ]ರ್ ದಿಂಡೆಯರತಿಹಾಸ್ಯದಿಂದಲಿ ಮುತ್ತೈದೆ ಮುಂಡೆಯಾದಳು ಕೇಳು ರಾಯ(ಮೋಳಿಪು. ೪-೨೨); ಗಂಡನೊಲುಮೆಗು ಸುತರಹಡೆಯಲು ಬಂದು ಭೂತಾಹುತಿಗೆ ಪೇಸದ ದಿಂಡೆಯರ ಚರ್ಯವನು ತಿಳಿಯದ ರಾರು(ಜಿರಾಮಾ. ೩೪೮-೪೪) ; ನಿಮಗೆಲ್ಲ...ಕುತ್ತಿಗೆ ಅವುಚಿ ಹಿಡಿಯಬೇಕಿತ್ತು . . . ಅವನು ಹೇಳೋದೂ ಹೀಗೆ. ನೀನೂ ಸೊಕ್ಕಿದೆ ದಿಂಡೆ, ಹೀಗೆಯೇ ಹೇಳುವಿಯಲ್ಲ ! (ಜೀವಮ. ೬೫) ; ಎನ್ನನು ಗುದ್ದಿ ನಡೆದಳಾ ದಿಂಡೆ ಕಡು ಮುಳಿದು ಮುನಿದು (ಪಲಾನ. ೪೯-೮) ; ಗಂಡನ ಮನೆಯವರು ನುಡಿದರೆ ಮರುನುಡಿಯಬಾರದು ದಿಂಡೆ ಎಂದೆನಿಸಿಕೊಳ್ಳಲೇಬಾರದು (ನಂಬಿನಾ. ೦೧).

[ದಿಂಡ$_4$ + – ಎ$_2$]

ದಿಂಡೆ$_3$ (ನಾ). ೧. ದುಷ್ಟ ; ಉದ್ಧತ : ಈ ಹುಡುಗನು ಬಾಲ್ಯದಿಂದಲೂ . . . ಓದುಬರಹದಲ್ಲಿ ಇಷ್ಟವಿಲ್ಲದೆ ದಿಂಡೆಯಾಗಿ ತಿರುಗುತ್ತಿದ್ದನು (ನೀತಿಚಿಂ. II, ೦೧); ಅದಕ್ಕೇನು ಧಾಡಿ ? ದಿಂಡೆ ದುಣ್ಣ ದಾಂಡಿಗ ನಾಯಿ! (ಮಲೆಮ. ೭೨೫); ದುಷ್ಟರಾಗಿದ್ದ ಕೆಲವು ಪಾಳಯಗಾರರು . . . ಹೆಂಗಸರಿಗೆ ಅನೇಕ ಅವಮಾನಗಳನ್ನು ಮಾಡುತ್ತಾ ದಿಂಡೆಯಾಗಿದ್ದ ಕಾರಣ ಪಾಳಯಗಾರ ಎಂಬ ಶಬ್ದವು ದುಷ್ಟನಾದ ಪ್ರಮುಖ ಎಂಬುದಾಗಿ ಪ್ರಯೋಗಿಸುವಷ್ಟು ನೀಚವಾದ ರೂಢಿಯನ್ನು ಸಹಾ ಒಳಗೊಂಡಿದೆ (ಪಾಳಗಾ. ೩). ೨. ದಡಿಯ ; ದಾಂಡಿಗ. 'ದಿಂಡೆಗ' ಪರಾ.

ದಿಂಡೆಯ ಮತ = ೧. ದುಷ್ಟನ ಮತ ; ಉದ್ಧತನ ಅಭಿಪ್ರಾಯ. ೨.ಲೌಕಿಕವಾದ; ಚಾರ್ವಾಕಮತ : ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಯಾದೆವೆಂಬ ದಿಂಡೆಯ ಮತದ [ಪಾಠಾಂ. ಮಾತಿನ] ಹಿರಿಯರುಗಳೆಲ್ಲ ಕೇಳಿರೋ (ಮೋಳಿಮಾ. ೬೨-೨೫೫). [ದೇ.ತಿತುಳು. ದಿಂಡೆ]

ದಿಂಡೆ$_4$ (ನಾ). (?) : ಒಂದು ಶಿಲೆಯೊಡೆದು ಮೂಱಾದ ಭೇದವ ನೋಡಾ ಒಂದು ಶಿಲೆ ಶೂಲ ಕಪಾಲ ದಿಂಡೆ ಡಮರುಗ ರುಂಡಮಾಲೆ ಐದು ತಲೆ ತಲೆಯೊಳಗೊಬ್ಬಳು ತೊಡೆಯೊಳಗೊಬ್ಬಳು ಇಂತೀ ಕಡುಗಲಿಯ ದೇವನೆಂದೆಂಬರು ನೋಡಾ (ಮೋಳಿಮಾ. ೧೧೫-೪೫೨) ; ಬೇಡುವ ಭಂಡನ ಕೊಡದೆ ಹೋರುವ ಲಂಡನ ಉಭಯದ ದ್ರವ್ಯವ ತಂದು ಅಲ್ಲಿ ಉಂಡು ಸುಖಿಯಾದೆಹೆನೆಂಬ ಉಭಯಭಂಡನ ದಿಂಡೆ ಕೆಡೆಯದು (ಸರ್ವವ. ೭೮-೪೩೧). [?]

ದಿಂಡೆಗ (ನಾ). ದಡಿಯ ; ದಾಂಡಿಗ : ಗಂಡನಾ ಕೈ ಬಾಯ ಮಂತ್ರಿಸಿ ದಿಂಡೆಗರು ಕಟ್ಟಿದರು ಬಳಿಕೀ ಗಂಡನೇ ಗಂಡನೊಯೆನುತೆ ಮತ್ತೊಂದ ನೆಣಿಸಿದಳು (ಸಾಳ್ವಭಾ. ೫-೫೨). [ದಿಂಡೆ$_3$ + – ಗ$_2$]

ದಿಂಡೆಗಾರ 'ದಿಂಡೆಗಾಱ' ನೋ.

ದಿಂಡೆಗಾಱ, ದಿಂಡೆಗಾರ (ನಾ). ದುಷ್ಟ ; ಉದ್ಧತ : ಕಂಡ ಕಲ್ಲುಗಳಿಗೆ ಕೈಮುಗಿದು ಸಾಕಾದೆ ದಿಂಡೆಗಾಱರ ಮನೆಗೆ ಬಲು ತಿರುಗಿದೆ ಶುಂಡಾಲ ನಂತೆನ್ನ ಮತಿ ಮಂದವಾಯಿತ್ತೈ (ಪುರಂದ. ೦-೩೫-೦). **ದಿಂಡೆಗಾರ :** ತುಂಟ, ಪೋರ . . . ದಿಂಡೆಯ, ದಿಂಡೆಗಾರ . . . ಕೂಳ, ಗೂಳಿ (ಕಂನುಹು. ೮೫). [ದಿಂಡೆ$_3$ + – ಕಾಱ]

ದಿಂಡೆತನ (ನಾ). "ತುಂಟಾಟ ; ಪೋಕರಿತನ" (ಪ್ರಭಣ್ಣ).
[ದಿಂಡೆ$_3$ + – ತನ]

ದಿಂಡೆಬಸವಿ (ನಾ). ದುಷ್ಟೆ ; ಗಯ್ಯಾಳಿ : ಮನೇಲ್ಲಿರೋ ದಿಂಡೆಬಸವೀನೆ ಮನೇ ಅಡಕೇನೆಲ್ಲ ಕದ್ದು ಸಾಬರಿಗೆ ಕೊಟ್ಟು ಕೊಬ್ರಿ ಬೆಲ್ಲ ತಿಂತಾ ಕೂತ್ರೇ ಆ ಅರಿಯದ ಹುಡುಗನಿಗೆ ಯಾಕೆ ಸುಮ್ಮನೆ ಹೊಡೀತೀಯಾ ? (ಮಲೆಮ. ೪೪೯). [ದಿಂಡೆ$_2$ + ಬಸವಿ]

ದಿಂಡೆಯ, ದಿಂಡಿಯ (ನಾ). ೧. ದುಷ್ಟ ; ದುರುಳ ; ಉದ್ಧತ : ಮಂಡಲವದಿಲ್ಲವಾ ಮಂಡಲೇಶ್ವರರಿಲ್ಲ . . . ಕೊಂಡೆಯರುವಿಲ್ಲ ದಿಂಡೆಯರುವಿಲ್ಲ (ಸಾನಂಚ. ೫-೨೩) ; ಕೊಂಡೆಯನ ದಿಂಡೆಯನ ಲಂಡನಂ ಬಂಡನಂ ವಿಷಯಿಯಂ . . . ತಾಮಸದೇಹಿಯಂ (ಸಿದ್ಧೇಪು ೬-೯೮) ; ಆ ದುರುಳರು ಖುಲ್ಲ ದಿಂಡೆಯರಿಂದೆಖನನವಂ ಮಾಡಿಸಿದೊಡಲ್ಲಿ ವೃಷಭೇಶ್ವರಂ ಪ್ರತ್ಯಕ್ಷಮಾಗೆ (ರಾಘಚ. ೧೯-೬೮) ; ದಿಂಡೆಯನಿವಂ ನಮ್ಮ ಶಿಷ್ಯರ ತಂಡದೊಳಗಿರಬೇಡವೆನುತಂ ಪೊಱಡಿಸಿದನವನ (ಶಂಕದಾ. ೧೩-೬೬); ಭಂಡಗಳ ನುಡಿಯುವ ದಿಂಡೆಯನ ಹಿಡಿತಂದು ಖಂಡಿಸಿರಿ (ಸರ್ವಜ್ಞ. ೧೨೫೦). ೨. ಸ್ಥೂಲದೇಹಿ ; ದಡಿಯ ; ದಡಿಗ : ಆ ಗುಹಾಸುರ ದಿಂಡೆಯನ ಕೆಡೆಯಿಱಿದು ಶೂಲಿಯ ಮಂಡನವ ಕೈಕೊಂಡು ಕೊಂದನು ಕೋಟಿಕಾಸ್ಯಜನ (ಸಂಭಪ. ೨೬-೧೨೯). ೩. ಶೂರ ; ಪರಾಕ್ರಮಿ : ಮಂಡಳಿಕ ರುದ್ದಂಡನಾಯಕರು ಸಾಮಂತ ದಿಂಡೆಯರು ಅಧಿಕಾರಿ ಸಜ್ಜನರು ರಾಯರುಂ (ಸಿದ್ಧರಾ. ೮-೭೧) ; ದಿಂಡೆಯಂ ಪಲವಂಗದಿಂ ದೆನ್ನಸುವ ಕೊಂಡಲ್ಲದಿರನೆಂದು ನಿರ್ಧರಿಸಿ ವಿಜಯಕೋದಂಡಮಂ ದನಿ ಮಾಡುತಿದಿರಾಗಿ ನುಡಿಸಿದಂ ಮಧುರವಚನಂಗಳಿಂದೆ (ಚಿಬಪು. ೩೯-೩೯) ; ಅರುವತ್ತು ಸಾವಿರ ಮಹಾದಿಂಡೆಯರು ಜನಿಸಲಿ ವಿದರ್ಭೆಗಂ (ತುರಂಗ. ೩೦-೩೩). ೪. ಸೇವಕ ; ಆಳು; ಊಳಿಗದವನು: ನಿನ್ನ ಚಮ್ಮಾವುಗೆಯ ಹೊತ್ತು ಬರುವ ಬೋವರ ಲೆಂಕನಯ್ಯ ನಿನ್ನ ಪಡುಗವ ಹಿಡಿವ ದಿಂಡೆಯಯ್ಯ (ಘನವ. ೮-೫); P ಇದು 'ದಿಂಡೆಯನಯ್ಯ' ಎಂಬುದರ ಅಪಲಿಖಿತ ವಿರಬಹುದು. **ದಿಂಡಿಯ :** ೩. ಸಂದ ಜಗಳ ಕಾಳಗದಂತೆ ಕಯಿ ಮುಟಿ ಕೊಂಡಾಡುವರು ದಿಂಡಿಯರು (ತರ್ಕಕೌ. ೧-೯೭).
[ದಿಂಡೆ$_3$ + –ಅ$_7$]

ದಿಂಡೆಯತನ (ನಾ). ೧. ಗರ್ವ ; ಸೊಕ್ಕು ; ಉದ್ಧಟತನ : ಹಾಗಲ್ಲದೆ ದಿಂಡೆಯತನದಿಂದ ಹೋರಿ ಮಕ್ಕಳಿಗೆ ಸಂದೇಹತನವ ಕಟ್ಟಬಹುದೆ (ಏಲೇಶ್ವ. ೭೦) ; ದಿಂಡೆಯತನದೊಳಾಡಿ ಹೋಗಿ ನಾಣ್ಚಿದೆ ಸಿರಿಯ ಗಂಡ ಗರ್ವವನುಡುಗು ನಮ್ಮೊಳೆಂದೆನೆ (ವೀಶೈಪು. ೬-೦-೨೩) ; ಭೂತಹಿತರೆನಿಸಿ ಬಂದಿವರ ದಿಂಡೆಯತನಂಗಳಂ ನೋಡಲನುಚಿತವೆಂದು ಮುನ್ನಿರ್ದ ನಿಜ ರೂಪಿನಿಂ ಮಂಡಿಸಿ ದಯಾಲೋಕನದಿ ನೋಡೆ (ಗುರುಜಾ. ೩-೫) ; ದಿಂಡೆಯತನಂ ಮಿಕ್ಕು ನಮ್ಮವರ್ಗಂ ತೊಲಗದಂಡಲೆದು ಕೊರಚಾಡುವರ್ಗಡಾ ತಮ್ಮ ಗುರು ಪಂಡಿತನೆನುತ್ತೆ ಬರಿದಬ್ಬರಿಸಿ ಪೇಳುವರ್ನಿರ್ಬುದ್ಧಿ ಶೂದ್ರರೊಡನೆ (ಕೊಟ್ಟೂಬ. ೩-೯). ೨. ಶೌರ್ಯ ; ಪರಾಕ್ರಮ ; ದಿಟ್ಟತನ : ನಸೆಮಾಡಿ ಹಾದರಕೆ ಹೊಕ್ಕು ಜಾರತ್ವದೊಂದೆಸಕದಿಂ ಬಾಳ್ದು ದಿಂಡೆಯತನದೆ ಕೆಲವು ರಕ್ಕಸರನುಱಿ ಕೊಂದು (ಚಿಬಪು. ೫೨-೩೦).
[ದಿಂಡೆಯ + – ತನ]

ದಿಂಡೆವೆಣ್ (ನಾ). ೧. ಉದ್ಧತಳಾದ ಹೆಣ್ಣು. ೨. (ಆಲಂ) ಏರುಂಜವ್ವನೆ : ದುಂಡುಮಲ್ಲಿಗೆ ಮುಡಿದು ಕೊಳಲನೂದಿ ಪಾಡುತ ದಿಂಡೆವೆಂಗಳ [ಪಾಠಾಂ. ಹಿಂಡುವೆಣ್ಗಳ] ಮುದ್ದುಮುಖದ ಸೊಬಗ ನೋಡುತ ಭಂಡು ಮಾಡಿ ಬಾಲೆಯರೊಡನೆ ಸರಸವಾಡುತ (ಪುರಂದ. ೨-೮೨-೧). [ದಿಂಡೆ$_2$ + ಪೆಣ್]

ದಿಂಡೋಡಿಗ (ನಾ). ಬಿದ್ದು ಓಡುವವನು ; ಹೇಡಿ (?) : ಬೋಡದಲೆ ಬರಿಗೈಯ ಮಲಿನವ ಗೂಡಿಸಿದ ನಿಜವಸನವೀ ದಿಂಡೋಡಿಗನೆ ನೀನಾರು ಯಿಾ ಚೆಲ್ವಿಕೆಯನೇನಿಂತು ಮಾಡಿಕೊಂಡೈ (ಜಿನಭಾ. ೫೭-೫೯).
[ದಿಂಡು + ಓಡಿಗ]

ದಿಂಪ (ನಾ). (ಕರಾ) ಏತದಲ್ಲಿ ನೀರನ್ನು ಮೇಲಕ್ಕೆತ್ತುವಾಗ ನೆಲಕ್ಕೆ ತಾಗುವ ಭಾಗ: ದಿಂಪದ ಕೆಳಗೆ ನಿಲ್ಲಬೇಡ ತಮ್ಮ, ದಿಂಪದ ಕಲ್ಲು ಹೆರಿದು ಬಿದ್ದೀತು (ರೂಢಿ). [?]

ದಿಂಬ$_1$ 'ದಿಬ್ಬ$_1$' ನೋ.

ದಿಂಬ$_2$ (ನಾ). ಒಂದು ಜಾತಿ,–ಪಂಗಡ (?) : ದಿಂಬರ ಸೋಮಕ ಗಉಂಡನ ಮಕ್ಕಳು ರಾಮಗಉಂಡ ಮಂಚೆಗಉಂಡ . . . ಯಿಂತೀ ಅನಿಬರು (ಎಕ. III, ಮಳವ. ೬೦-೭ : 1153 ?). [?]

ದಿಂಬು$_1$ 'ದಿಬ್ಬ$_1$' ನೋ.

ದಿಂಬು$_2$ (ನಾ). ೧. (ಬೆನ್ನು, ತಲೆಗಳಿಗೆ) ಆಸರೆಯಾಗಿ ಇಟ್ಟುಕೊಳ್ಳುವ ಒರಗು,–ಮೆತ್ತೆ : ಒರಗಿ ದಿಂಬಿನ ಮೇಲೆ ದಕ್ಷಿಣಕರವ ಮೊಣಕಾಲಿನೊಳು ನಿಡಿದಾಗಿರಿಸಿ (ಜಿನಭಾ. ೨೭-೩೫); ಅಲ್ಲಿ ಬಹು ಬೆಲೆಯ ರತ್ನಗಂಬಳಿಗಳಾಗಲಿ ರೇಷ್ಮೆ ದಿಂಬುಗಳಾಗಲಿ ಇರಲಿಲ್ಲ (ನಗೆಹೊ. ೧೦೭) ; ಅದರ ಇಕ್ಕಡೆಗಳಲ್ಲೂ ದಿಂಬುಗಳು ಇಡಲ್ಪಟ್ಟಿದ್ದವು (ಬಾಣಆ. ೩೯); ಅಂಗಡಿಯಲ್ಲಿ ದಿಂಬಿಗೊರಗಿ ಕುಳಿತಿದ್ದ ನಿರ್ಮಲಸೆಟ್ಟಿಗೆ ಅದರ ಅರಿವಿದ್ದ ಹಾಗಿರಲಿಲ್ಲ (ಗಿರಿನ. ೧೧). ೨. (ಆಲಂ) ಆಧಾರ ; ಆಸರೆ : ಹೀಗೆ ನಂಬಿಗೆಯನ್ನೆ ದಿಂಬು ಮಾಡಿಕೊಂಡು ವ್ಯವಹಾರವು ಬಿದ್ದುಕೊಂಡಿದ್ದರೆ ಆ ಮಾತು ಬೇರೆ (ವೈದ್ಯರಾ. ೬ ಮುನ್ನುಡಿ). 'ತಲೆದಿಂಬು' ಪರಾ. [<ಇಂಬು$_1$]

ದಿಕಾಮಲಿ 'ಡಿಕಮಲಿ' ನೋ.

ದಿಕ್ಕ (ನಾ). ಹೊಲೆಯರಲ್ಲಿ ಒಂದು ಒಳಪಂಗಡ : ಭೈರ, ದಿಕ್ಕ – ಎಂದು ಹಲವಾರು ಒಳಪಂಗಡಗಳ ಹೊಲೆಯರು ಬೆಂಗೂರಲ್ಲಿ ಇದ್ದಾರೆ (ದಂಬನಾ. ೧೯) : ದಟ್ಟಿ ದಿಕ್ಕಾ! ಮಾರಿ ಮುಂಡಾಳ! ಹುಟ್ಟು ಹೊಲೆಯ! ಪೋಲಾ! ಚಂಡ ಚಂಡಾಳ (ಕಎಪು. ೫೬). [ದೇ.॥ ತುಳು. ದಿಕ್ಕೆ]

ದಿಕ್ಕಟ (ನಾ). [ಸಂಗೀತ] ತಾಳವನ್ನು ಸೂಚಿಸುವ ಒಂದು ಅನುಕರಣ ಶಬ್ದ : ಝೆಂ ಝೆಂ ಖಿಱ್ಱಟ ನಟ ಖಿಱ್ಱೆನುತಂ ತಂದ್ರಂ ದಿಕ್ಕಟ ದಿಕ್ಕಟ ಮೆನುತಂ (ತಿರುನಾ. ದೇ. ೨೨೨-೧೧).

ದಿಕ್ಕನೆ (ಅ). ಒಂದು ಅನುಕರಣಾವ್ಯಯ ; ಇದ್ದಕ್ಕಿದ್ದಂತೆ ; ಕೂಡಲೆ: ಆ ನಾಯಕಿಯಿದಿರ್ವರೆ ಕಾಣುತ ದಿಕ್ಕನೆ ದಿಟ್ಟಿದೆಱೆದೆನೆನುತಂ ಹುಸಿದಳದೊರ್ವಳ್ ಚದುರೆ (ಜಯಕಾ. ೧೪-೬೧) ; ಅಕ್ಕ ನಾಗಲೆಯರು ಚಿಕ್ಕ ಡಣಾಯಕರು ದಿಕ್ಕನೆ ಬಂದು (ಕೋಡಚ. ೨-೪೫). [ದಿಕ್$_0$ + – ಅನೆ$_1$]

ದಿಕ್ಕರಿ (ನಾ). ೧. ಎಂಟು ದಿಕ್ಕುಗಳಲ್ಲಿಯೂ ಭೂಮಿಯನ್ನು ಹೊತ್ತಿರುವುದೆಂದು ನಂಬಲಾದ ಐರಾವತವೇ ಮೊದಲಾದ ಎಂಟು ಆನೆಗಳಲ್ಲಿ ಒಂದು ; ದಿಗ್ಗಜ : ದಿಕ್ಕರಿವೋಲ್ ಕೃಷ್ಣಂ ಮುಱಿದಿಕ್ಕಿ ನೆಲಕ್ಕಾರ್ದು ಬಿರ್ದು ಕಂಸಂ ಮಣ್ಣಂ ಮುಕ್ಕಿದಪನೆಂದು ಪೇಟ್ದಪಳಕ್ಕುವೆಂ (ಅರ್ಧನೇ. ೭-೩೯) : ದಿಕ್ಕರಿ ಕರ್ಣಕೋಟರದೊಳುಳ್ಕಿ . . . ಮಿಕ್ಕ ಜಗತ್ಪ್ರದೇಶಮಂ ಮುಕ್ಕಳಿಸಿತ್ತು (ಚಂದ್ರಪು. ೧೦-೨): ಬಂಧಿಸಿ ಧರೆಯ ದಿಕ್ಪಾಲಕರ ದಿಕ್ಕರಿಯ ಸುತ್ತುಮುತ್ತಿನಲಿರಿಸಿ (ಗಗತಾ. ೫-೨೨). ೨. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ. [ಸಂ. ದಿಕ್ಕರಿನ್]

ದಿಕ್ಕರಿಕರ (ನಾ). ದಿಕ್ಕಿನ ಆನೆಯಂ ಅಥವಾ ದಿಗ್ಗಜದ ಸೊಂಡಿಲು : ಅಂತು ದಿಕ್ಕರಿಕರಾನುಕಾರಿಗಳಪ್ಪ ನಿಜಭುಜಸ್ತಂಭಂಗಳಿಂ ಕುರುಕುಲ ಮಹೀಶನ ಕದಳೀಸ್ತಂಭಂಗಳನನುಕರಿಸುವ ತೊಡೆಗಳನುಡಿದು . . . ಕುರುಕುಲಾಂತಕಂ ಮಾಮಸಕಂ ಮಸಗಿ (ಗದಾಯು. ೮-೩೭ ಪ) ; ಆಗಳತಿ ಭಕ್ತಿಯಿಂದೆಱಗುವಂತೆಱಗುವಿಭಪತಿಯ ಮೇಗಣ್ಗೆ ದಿಕ್ಕರಿಕರಾನುಕಾರಿ ನಿಜಭುಜಾದಂಡಂಗಳಂ ನೀಡಿ ಶಚೀದೇವಿಯಿಂ ತೆಗೆದು . . . ಎತ್ತಿ ಕೊಂಡು (ಪುಷ್ಪಪು. ೦೦-೧೯ ಪ). [ದಿಕ್ಕರಿ + ಕರ]

ದಿಕ್ಕರಿನಿಚಯ (ನಾ). ಐರಾವತವೇ ಮೊದಲಾದ ಎಂಟು ಆನೆಗಳು ; ದಿಗ್ಗಜಗಳ ಗುಂಪು,–ಸಮೂಹ : ದಿಕ್ಕರಿನಿಚಯಂ ಬೆರ್ಚಲ್ . . . ದಿವಿಜರ ಕಿವಿಯಂ ಜಕ್ಕುಲಿಸಿ ನೆಗೆದು ಭುವನಮನೊಕ್ಕಲಿಸಿದುದಾ ಗಭೀರ ಭೇರೀನಾದಂ (ನೇಮಿಪು. ೦೦-೮೪) [ದಿಕ್ಕರಿ + ನಿಚಯ]

ದಿಕ್ಕಾಪಾಲು 'ದಿಕ್ಕು' ಪರಾ.

ದಿಕ್ಕಾಮಲ್ಲಿ 'ಡಿಕಮಲಿ' ನೋ.

ದಿಕ್ಕಾಲಬದ್ಧ (ಗು). ದೇಶಕಾಲಗಳಿಗೆ ಪರಿಏಂತವಾದ,–ಬದ್ಧವಾದ : ಈ ಶಬ್ದಸೃಷ್ಟಿಯ ಹೊರಮೈಯು ದಿಕ್ಕಾಲಬದ್ಧಸ್ವರೂಪದ್ದೆನಿಸಿದರೂ, ಅದರ ಅಂತಸ್ಥ ಅರ್ಥವು ದಿಕ್ಕಾಲಗಳ ಪರಿಮಿತಿಯನ್ನು ಮೀರಿ ನಿಲ್ಲಬಲ್ಲುದಾಗಿದೆ (ಕರ್ಣಾಟ. ೯) ; ಸಂಸ್ಕೃತಿಯ ಏರಿಳಿತಗಳ ಸಮೀಕ್ಷೆಯಲ್ಲಿ, ದಿಕ್ಕಾಲ ಬದ್ಧ ಪರಿಸ್ಥಿತಿಯಲ್ಲಿ ಕಾಣಿಸಿಕೊಂಡ ಯಾವ ನಡೆವಳಿ ನುಡಿವಳಿಯೂ ತಿರಸ್ಕಾರಾರ್ಹವಲ್ಲ (ಕರ್ಣಾಟ. ೨೦೩). [ಸಂ.]

ದಿಕ್ಕಾಲಾತೀತ (ಗು). ೧. ದೇಶ ಕಾಲಗಳ ಪರಿಮಿತಿಯನ್ನು ಮೀರಿದ : ಚೆತ್ತೈಕಾಗ್ರದ ಸಾಧನದಿಂದ ದಿಕ್ಕಾಲಾತೀತ ಅಖಂಡಿತ ಸನಾತನ ಸತ್ಯದಲ್ಲಿ ವಿಲೀನವಾಗುವ ದಾರಿ (ಕರ್ಣಾಟ. ೩೮). (ನಾ). ೨. ದೇವರು ; ಪರಮಾತ್ಮ. [ಸಂ.]

ದಿಕ್ಕು (ನಾ). ೧. ದಿಸೆ; ದೆಶೆ: "ದೆಸೆ ಗೋಂಟೆನಲ್ ದಿಕ್ಕಕ್ಕು" (ಕಬ್ಬಿಕ್ಕ. ೦೩); "ಗೋಂಟು ದೆಸೆ ದಿಕ್ಕೆಂಬುದಕ್ಕು ದಿಶಾನಾಮದೊಳ್ ಸಂತತಂ" (ಶಬ್ದಮಂ. ೦೪) ; ದಿಕ್ಕನಿತುಂ ತೋಱುದುವು (ಕಾವ್ಯಾವ. ೦೯೩) : ದಿಕ್ಕಿನೊಳಂ ವಿಯತ್ತಲದೊಳಂ ಗಿಡಿದಂತಿರೆ ನಿಂದ ದೇವಲೋಕಕ್ಕಕಿವಿಸ್ಮಯಂ ನೆಗೞ್ದ (ಅನಂಪು. ೩-೨೬) ; ಇಂಬಿನ ರವವೆಂಟುದಿಕ್ಕಿನ ಹೊರಿಗೆಯ ಮುಂಬರಿದೊಡನೆ ಪರಿದುದು (ಕಂಪವಿ. ೦೦-೨೪). ೨. ಗತಿ ; ಆಶ್ರಯ ; ನೆಲೆ ; ಆಧಾರ : ಆವ ಪರಿಯಲಿ ನಿನ್ನನಲ್ಲದೆ ಭಾವದೊಳು ಮತ್ತೊಂದನಱಯೆನು ದೇವ ದಿಕ್ಕಾರುಂಟೆನಗೆ (ಬಸಪು. ೦೩-೫); ಗತಸೂನುವಿವನೆಂದೆನ್ನ ಹೊಗಿಸರು ಸ್ವರ್ಗವನು ಸುರರು ಏನು ಮಾಡುವೆನೇನು ದಿಕ್ಕೆನಗೇನು ಹದನೆಂದಳಲಿ (ತೊರರಾ. ೦-೪-೪) ; ಇನ್ನು ಮುಂದೆ ಮಾವಯ್ಯನೇ ನಿನಗೆ ದಿಕ್ಕು (ಹೊಸಕ್ಕಿ. ೨೭). ೩. ದೇಶ ; ಸೀಮೆ ; ನಾಡು: ದಿಕ್ಕುಗಳೆಲ್ಲಮಂ ನೆಱೆಯೆ ಸಾಧಿಸಿ ಕಪ್ಪಮನೆಯ್ದೆ ಕೊಂಬೆನು (ಪಾಂಪು. ೨-೦೬). ೪. ದಾರಿ ; ಮಾರ್ಗ : ಅವನಿಗೆ ಗಾಬರಿಯಿಂದ ದಿಕ್ಕೇ ಕಾಣದಾಗಿದೆ (ರೂಢಿ). ೫. [ಜೈನ] ಪೃಥ್ವಿ, ಜಲ, ತೇಜಸ್ಸು, ವಾಯು, ಮನಸ್ಸು ಮಂತ್ತು ದಿಕ್ಕುಗಳೆಂಬ ಆರು ದ್ರವ್ಯಗಳಲ್ಲಿ ಒಂದು : ಪೃಥ್ವಿ ಜಲ ತೇಜಸ್ಸು ವಾಯು ಮನಸ್ಸು ಎಂಬ ಐದು ದ್ರವ್ಯಗಳು ಪುದ್ಗಲದಲ್ಲಿ ಸೇರಿದುವು, ದಿಕ್ಕು ಎಂಬುದು ಸೂರ್ಯನ ಉದಯಾಸ್ತಗಳಿಂದ ಆಕಾಶದಲ್ಲೇ ಸೇರಿತು (ಹಿಂದುಗಾ. ೮೦). ೬. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ : "ಅಷ್ಟ, ವಸು, ದಂತಿ, ದುರಿತ, ಕರ್ಮ, ದಿಸೆ, ದಿಕ್ಕು . . . ದಿಗ್ದಂತಿ ಇಂತಿನಿತುಂ ಒಕ್ಕೆ ಪೆಸರು" (ಸ್ವಪಹಾ. ೦೦-೩೦).

ದಿಕ್ಕು ದಿಕ್ಕು = (ದ್ವಿರುಕ್ತಿ) : ವಾರುವಗಳಿಗೆ ಹೊಯ್ದವು ಗುಡಿಗಳು ಮದವಾರಣಗಳಿಗೆ ಗುಡಿಗಳು ಓರಣದಿಂದೆತ್ತಿದವು ದಿಕ್ಕುದಿಕ್ಕಿನೊಳು (ಕುರಾಸಾಂ. ೧೯-೩೧). ದಿಕ್ಕ ಮುರಿ=ದಿಕ್ಕಾಪಾಲಾಗು: ಶತ್ರುಗಳು ದುರ್ಗದವರ ಏಟನ್ನು ತಡೆಯಲಾರದೆ ದಿಕ್ಕ ಮುರಿದು ಓಡಿದರು (ಚಿತ್ರಪಾ. ೫೩). ದಿಕ್ಕಾಗು = ನೆರವಾಗು ; ಆಶ್ರಯವಾಗು : ಅಕ್ಕರವ ತೊಡೆದಿಹುದು ಮುಕ್ಕಣ್ಣಗಳವಲ್ಲ ರಕ್ಕಸನು ಸೀತೆ ಒಯ್ವಾಗ ಆರಾರು ದಿಕ್ಕಾಗಲಿಲ್ಲ (ಸರ್ವಜ್ಞ. ೮೫೨) ; ತೀರ್ಥಹಳ್ಳಿಯೊಳೋದುವಂದವರೆಲ್ಲರು ನೆರವಿತ್ತರನಗೆ ದಿಕ್ಕಾಗಿ (ಇಂಜಾಪ. ೧೫-೬೫). ದಿಕ್ಕಾಪಾಲಾಗು = ದಿಕ್ಕು ದಿಕ್ಕಿಗೆ ಚೆದರು; ಚೆಲ್ಲಾಪಿಲ್ಲಿಯಾಗು : ಬಿರುಗಾಳಿಗೆ ಸಿಕ್ಕ ಹಡಗುಗಳು ದಿಕ್ಕಾಪಾಲಾದುವು (ಪ್ರವಾಇ. II, ೨೨೬) ; ಖಂಡೇರಾಯನ ಸೈನ್ಯವೆಲ್ಲವೂ ಈ ರೀತಿಯಲ್ಲಿ ದಿಕ್ಕಾಪಾಲಾಯಿತು (ಒಡೆಕ. ೯೪); ಕಳ್ಳರೆಲ್ಲರೂ ದಿಕ್ಕಾಪಾಲಾಗಿ ಪಲಾಯನ ಮಾಡಿದರು (ಭಾರವೀ. ೩). ದಿಕ್ಕಾಪಾಲು = ದಿಕ್ಕು ದಿಕ್ಕಿಗೆ ಚೆದರುವಿಕೆ ; ಚೆಲ್ಲಾಪಿಲ್ಲಿ : ಅಂಗಳದಿ ಬೆಳೆಸಿದ್ದ . . . ಕರಿತುಳಸಿ ಬಿಳಿನಿತ್ಯಪುಷ್ಪ ಎಲ್ಲ ದಿಕ್ಕಾಪಾಲು (ಸಪ್ತಧ್ವ. ೬-೦). ದಿಕ್ಕಾಮುಕ್ಕು = ದಿಕ್ಕಾಪಾಲು : ಕಕ್ಕಾಬಿಕ್ಕಿ ಜಗಳದ ಸೊಕ್ಕು ಜಗಳವು ದಿಕ್ಕಾಮುಕ್ಕು (ಧಂಡೋಲಾ. ೧೪). ದಿಕ್ಕು ತೋಚು = ದಾರಿಕಾಣು ; ಉಪಾಯಗಾಣು : ಊಟ ಮಾಡುತ್ತಿದ್ದ ರಾಜನು ದಿಕ್ಕುತೋಚದೆ ಹೆಂಡತಿಯ ಸಹಾಯದಿಂದ ಕಿಟಕಿಯ ಮೂಲಕ ತಪ್ಪಿಸಿಕೊಂಡು ಹೋದನು (ಇಂಕಿಮ. ೦೮೩). ದಿಕ್ಕುದಿವಾಣಿ, ದಿಕ್ಕು ದಿವಾನಿ, ದಿಕ್ಕುದಿವಾಳಿ = ೧. (ಪ್ರಯಾಣದ) ಗುರಿ : ಆಯಾಸದಿಂದ ಕಾಲುಗಳನ್ನು ಎಳೆಯುತ್ತ ನಡೆಯುತ್ತಿದ್ದ ಪ್ರಾಣೇಶಾಚಾರ್ಯರಿಗೆ ಬಹಳ ಹೊತ್ತು ತನ್ನ ದಿಕ್ಕುದಿವಾಣಿ ಲೆಖ್ಖಕ್ಕೇ ಬರಲಿಲ್ಲ (ಸಂಸ್ಕಾರ. ೯೩). ೨. ಆಶ್ರಯ; ನೆಲೆ : ದಿಕ್ಕುದಿವಾಳಿಯಿಲ್ಲದ ಗೊಂದಲದಲ್ಲಿ ಸ್ವಾಮಿನಾಥ ಬದುಕಿದ್ದೇ ಹೆಚ್ಚು (ಸ್ವಾಮಿಸ್ವೇ. ೦೨೧) : ದಿಕ್ಕುದಿವಾಳಿಯಿಲ್ಲದ ಭಿಕಾರಿಗಳನ್ನು ಹಿಡಿದು ಗುಲಾಮರನ್ನಾಗಿ ಮಾಡುತ್ತಾನೆ (ಪ್ರವಾಇ. II, ೪೦೪): ೩. ದಾರಿ ; ಮಾರ್ಗ : ಕಾಶಿಯ ದಿಕ್ಕುದಿವಾನಿ ತಿಳಿದು ಪ್ರಯಾಣ ಬೆಳೆಸಿದರು (ಕರುಳ. ೪೪). ದಿಕ್ಕು ದೆಸೆ = ೧. ಆಸರೆ; ನೆಲೆ; ಆಧಾರ. ಮಿಕ್ಕಾದವರ ಹೆಣ್ಣು ಹೊನ್ನು ಮಣ್ಣೆನವರೆಂದು ದಿಕ್ಕು ದೆಸೆ ಎಂದು ಅಂಗೀಕರಿಸಿದಡೆ ಭಕ್ತರು ಸತ್ಕರಿಗೆ ಮುನ್ನವೆ ಹೊಱಗೆ (ಬಲೀಶ್ವ. ೩೦) ; ಬ್ರಹ್ಮೋಕ್ತ ಸಕಲಪ್ರಾಣಿಗಳಿಗೆಯ್ದೆ ನೀವೆಯಲ್ಲಾ ದಿಕ್ಕುದೆಸೆಯುಂ ಭಾವದೊಳು ಕರುಣಾರಸಂ ಮಿಗೆ ದೇವ ನೀನೆ ಮಗಭಯಮುಂ ಕೊಟ್ಟೋವಿ ಸಲಹೆನುತ (ಬಸಪು. ೨೮-೬೭). ೨. ಪೂರ್ವಾಪರ ವಿಷಯ : ನಮ್ಮ ಪ್ರಯಾಣ ಹೊರಟಿರುವುದು ಕಾಶಿಗೆ. ನೀವು ಜೊತೆಗೆ ಬಂದದ್ದು ಸಂತೋಷ. ಆದರೆ ನಿಮ್ಮ ದಿಕ್ಕು ದೆಸೆ ತಿಳಿಯಲಿಲ್ಲ ? (ಹೊಸಕ್ಕಿ. ೩೩).

[< ಸಂ. ದಿಶ್]

ದಿಕ್ಕುಂಜ (ನಾ). ದಿಕ್ಕುಗಳ ಸಮೂಹ : ಹಾರ ನೀಹಾರಾರುಚಿ ಬ್ಯಾಭಾಸಿಕೀ[ರ್ತ್ತಿ]ದ್ಯುತಿಧವಳಿತ ದಿಕ್ಕುಂಜ ಚೌ ವೇ ದಿ ಭಟ್ಟ (ಕಇಅ. ೭೯-೦೩-೧೧ ; ಸು. 1088). [ಸಂ.]

ದಿಕ್ಕುಂಜರ (ನಾ).=ದಿಗ್ಗಜ : ಅರ್ತ್ಥಿಸುವಂಗೆ ಸಲ್ವನಮಿತಂ ದಂಡೇಶ ದಿಕ್ಕುಂಜರಂ (ಎಕೆ. VI, ತರೀಕೆ. ೪೫-೬೮ ; 1196) ; ಬಿಜ್ಜಳರಾಯನಿಂದೆ ಪಡೆದಂ ದಂಡೇಶ ದಿಕ್ಕುಂಜರಂ (ಬಸರ. ೬-೦); ಉದಿತ ಮದೋದ್ರೇಕನಲ್ಲದ ರಾಜದಿಕ್ಕುಂಜರನುಂ . . . ದಶಾನನಾಸ್ತಂಗತಪ್ರಾಭವನಲ್ಲದ ಪುಣ್ಯಜಿನೇಶ್ವರನುಮೆನಿಸಿ (ಪುಷ್ಪಪು. ೩-೨೦ ಪ). [ಸಂ.]

ದಿಕ್ಕುಂಭಿ (ನಾ).=ದಿಗ್ಗಜ : ಕುಳಭೂಭೃತ್ಕೂಟದೊಳ್ ಮಾಣಿಕದೆಳವಿಸಿ ಲೆಂತಂತೆ ದಿಕ್ಕುಂಭಿಕುಂಭಸ್ಥಳದೊಳ್ಸಿಂದೂರಮೆಂತಂತೆ . . . ಪರ್ವಿತ್ತು ರಾಗಾವಿಳಮಷ್ಟಂತುರ್ವಿಯೆಲ್ಲಂ ದಶರಥವಸುಧಾಧೀಶತೇಜಃಪ್ರಕಾಶಂ (ಪಂರಾಮಾ. ೩-೦೩). [ಸಂ. ದಿಕ್ಕುಂಭಿನ್]

ದಿಕ್ಕುಗೆಡು, ದಿಕ್ಕೆಡು (ಕ್ರಿ). ೧. ಗತಿಗೆಡು; ಆಶ್ರಯ ತಪ್ಪು; ಕಂಗೆಡು. ದಿಕ್ಕುಗೆಟ್ಟೆನನಾಥಬಂಧುವೆ ರಕ್ಷಿಸೆನುತಿರಲು (ಕಾಶಿರಾ. ೩೭-೧೬) ; ಮೊದಲೇ ತಾಯಿಯನ್ನು ಕಳೆದುಕೊಂಡು ನಾನು ದಿಕ್ಕುಗೆಟ್ಟಿದ್ದೆ

(ಬದುಜ. ೩೨) ; ದಿಕ್ಕುಗೆಟ್ಟ ಬಡಜನ, ರೆವಿನ್ಯೂಇನ್ಸ್‌ಪೆಕ್ಟರು ಕೃಷ್ಣ ಮೂರ್ತಿ ಹಾಗೂ ಗುರುರಾಜರಾಯರ ಬಳಿ ಹೋಗಿ ಗೋಳನ್ನು ಹೇಳಿ ಕೊಳ್ಳುತ್ತಿದ್ದರು (ಮಾರಳಿ. ೧೨). ೨. ರೀತಿತಪ್ಪು ; ಕ್ರಮತಪ್ಪು ; ಮಾರ್ಗತಪ್ಪು : ದಿನದಿನ ಯಾವುದೋ ಗುರಿ ತಪ್ಪಿ ಸಾಗುತ ದಿಕ್ಕುಗೆಟ್ಟಿದೆ ಈ ಮನ (ವಿಜದ. ೫೪-೬). **ದಿಕ್ಕೆಡು** : ೧. ಕಾಡು ಬಿದ್ದು ದಿಕ್ಕೆಟ್ಟು ಓಡಿ ಹೋದರು (ದೇವೀಪಾ. ೩೨) ; ದಿಕ್ಕೆಟ್ಟು ಹೊರಟಿತ್ತು ಗೋಡೆಯಲ್ಲಿ ಶಿಗಣೆಯಾ ಗುಂಪು (ಚಂದ್ರಮಾ. ೨೪-೭) : ಅತಿ ಸ್ವಲ್ಪಕಾಲದಲ್ಲಿಯೇ ಖಂಡೇರಾಯನ ದಿಕ್ಕೆಟ್ಟ ಸೈನ್ಯವು ಚದರಿ . . . ಶರಣಾಗತರಾಗಿಯೂ ಆದರು (ಒಡೆಗ. ೧೩) : ದಾರಿ ಕಾಣದ ಪಥಿಕನಂತೆ ದಿಕ್ಕೆಟ್ಟು ಕುಳಿತು ಬಿಟ್ಟಿದ್ದಳು (ತೇಪೋಡ. ೧೫). [ದಿಕ್ಕು + ಕೆಡು$_1$]

ದಿಕ್ಕುಗೇಡಿ, ದಿಕ್ಕೇಡಿ, ದಿಗ್ಗೇಡಿ (ನಾ). ಮಾರ್ಗ ಅಥವಾ ಬಗೆಯನ್ನು ಕಂಡುಕೊಳ್ಳಲಾರದ ವ್ಯಕ್ತಿ ; ಕಂಗೆಟ್ಟ ವ್ಯಕ್ತಿ : ಹತ್ತಾರು ವರುಷದ ಹಿಂದಿನ ನೆನಹೊಂದು ಚಿತ್ತದೊಳೊತ್ತುವುದೆಂದು ದಿಕ್ಕುಗೇಡಿಯ ಹಾಗೆ ಏನೊಂದು ತೋಚದೆ ಬವಳಿಗೊಂಡಳು ನಲ್ಲೆ ಬರಿದೆ (ಇಂಶಾಪ. ೩೨-೪೭). **ದಿಕ್ಕೇಡಿ** : ಯಾವುದಕ್ಕೂ ಗತಿಯಿಲ್ಲದ . . . ದಿಕ್ಕಿಲ್ಲದ 'ದಿಕ್ಕೇಡಿ' ನೀನು (ಬರಹಾ. ೧೫೩). **ದಿಗ್ಗೇಡಿ** : ಸ್ಮಶಾನದಲ್ಲಿ ಅಂಡಲೆಯುತ್ತ ದಿಗ್ಗೇಡಿಯಾದ ಭಾರತಮಾತೆಯ ಸೇವೆಗಾಗಿ ನರಹರಿಯು ಮುನ್ನಡೆದಿದ್ದ (ಸಮುಜೀ. ೭೭೬). [ದಿಕ್ಕು + ಕೇಡಿ$_1$]

ದಿಕ್ಕುಗೇಡು (ನಾ). ಮಾರ್ಗ ತಪ್ಪುವಿಕೆ ; ಕ್ರಮ ತಪ್ಪುವಿಕೆ : ಈಗ ಬಗೆಗದಡಿನ ವೇಗಕ್ಕೆ ಸಂಚಳಿಸಿ, ಸನ್ಯಾಸದ ಕಾಲಾಟಕ್ಕೆ ಸಿಲ್ಕಿ, ದಿಕ್ಕುಗೇಡಿಗೆ ದಕ್ಕುಬಿದ್ದು, ಸುವ್ಯಕ್ತವೂ ಆವಶ್ಯಕವೂ ತಪ್ಪದುದೂ ಸುಲಭವೂ ಎಂದು ಭಾಸವಾಗುವ ತೀರ್ಕಣೆಯನ್ನು ಬಾಯ್ದುಡುಕಿ, ಆ ಪೊಣವುಲ್ಲೊಡನೆ . . . ಸೂಚಿಸುವುದೂ ಈ ಮಹಾಸಭೆಗೆ ಅವಿನಯದ ಪುನರುಕ್ತವಹುದು (ಮುಂಪ್ರಶ. ೭೨-೨೦). [ದಿಕ್ಕು + ಕೇಡು]

ದಿಕ್ಕುತಪ್ಪಿಸು (ಕ್ರಿ). ದಿಗ್ಭ್ರಮೆಗೊಳಿಸು ; ದಾರಿ ಕಾಣದಂತೆ ಮಾಡು ; ತಪ್ಪುದಾರಿಗೆ ಒಯ್ಯು : ನದಿಯ ಉಯಿಲು ಅಂಗರನನ್ನು ದಿಕ್ಕುತಪ್ಪಿಸುತ್ತಿತ್ತು (ಹೊಸಕ್ಷಿ. ೬೩). [ದಿಕ್ಕುತಪ್ಪು + – ಇಸು$_3$]

ದಿಕ್ಕುತಪ್ಪು (ಕ್ರಿ). ದಿಗ್ಭ್ರಮೆಯಾಗು ; ದಾರಿ ತೋರದಂತಾಗು. 'ದಿಕ್ಕುತಪ್ಪಿಸು' ಪರಾ. [ದಿಕ್ಕು + ತಪ್ಪು$_1$]

ದಿಕ್ಕುಮಾರ (ನಾ). = ದಿಕ್ಪಾಲಕ : ವಜ್ರಬಾಹುಕುಮಾರು ವಾರಣವ್ರ ನೇಱಿದಂ ದಿಗ್ವಾರಣಮಂ ದಿಕ್ಕುಮಾರರೇಱುವ ತೆಱದಿಂ (ಪಂಚಾಮಾ. ೨-೯)

[ಸಂ.]

ದಿಕ್ಕುವಾಯ್ (ಕ್ರಿ). ದಿಕ್ಕುದಿಕ್ಕಿಗೆ ಓಡು ; ದಿಕ್ಕಾಪಾಲಾಗು ; ಚದರು : ವಿಷ್ಣು ತರಹರಿಸದೋಡಿದನಜಂ ಮಾಯವಾದನಾ ಸುರವಮುಖ್ಯರು ದಿಕ್ಕುವಾಯ್ದರೆನಲಱುವುವನ ಚರಣಾಂಬುಜಕ್ಕೆ ಶರಣು (ಲಶಿಚಂ. ೧೭-೧೮).

[ದಿಕ್ಕು + ಪಾಯ್$_1$]

ದಿಕ್ಕುಸೂಚಿ (ನಾ). ದಿಕ್ಕನ್ನು ತೋರಿಸುವ ಸಾಧನ ; ಮಾರ್ಗವನ್ನು ಕಾಣಿಸುವ ಉಪಕರಣ : ಅವನು ನಿರೀಕ್ಷಿಸಿದ್ದ ಕಡೆಯೇ ವಿದ್ರೋಹದ ಕಿಡಿ ಹಾರಿತ್ತು. ಅದು ಅವನ ಪಾಲಿಗೆ ಒಂದು ದಿಕ್ಕುಸೂಚಿಯಾಗಿತ್ತು (ರಾಚ್ಚೋದ. ೧೫೩). [<ದಿಕ್ಸೂಚಿ]

ದಿಕ್ಕೆಡು 'ದಿಕ್ಕುಗೆಡು' ನೋ.

ದಿಕ್ಕೇಡಿ 'ದಿಕ್ಕುಗೇಡಿ' ನೋ.

ದಿಕ್ಚಕ್ರ (ನಾ). ೧. ದಿಕ್ಕುಗಳ ಪರಿಧಿ,– ವಲಯ. ೨. ಭೂಮಂಡಲ ; ಜಗತ್ತು : ನಭಮಂ ಸಂಜೆಮುಗಿಲ್ ಪಗಿಲ್ತ ತೆಱದಿಂ ತಳ್ಪೊಯ್ಯ ಭೂಪಾಮಣಿಪ್ರಭೆ ದಿಚ್ಚಕ್ರಮನಚ್ಚಜೊನ್ನಮೆಳಸಿತ್ತೆಂಬನ್ನೆಗಂ ತುಂಬೆ (ಚಂದ್ರಪು. ೬-೬೯). [ಸಂ.]

ದಿಕ್ತಟ (ನಾ). ದಿಕ್ಕಿನ ತುದಿ ; ದಿಗಂತ ; ದಿಕ್ಪ್ರದೇಶ : ವಿರಾಜಿತ ಕೀರ್ತಿಶ್ರೀಯುಂ ದಿಕ್ತಟದೊಳ್ ತಳೆದು (ಸುಕುಮಾ. ೬-೧) ; ಆ ಶಿಶುವಿನಟ್ಟೆ ತೆಕ್ಕನೆ ತೀವಿತ್ತನಿತುಂ ದಿಕ್ತಟಮಂ ಭೋರೆನೆ ಶಂಕಾಕುಳಿತಮಪ್ಪಿನಂ ಭುವನಜನಂ (ಜಗವಿ. ೩-೦೨) ; ಸ್ಫಟಿಕಲಿಂಗಸ್ಫುಟಮರೀಚಿಗೆ ಚಟುಲ ಧಾಸ್ಕರ ಕರಪಟಲವನು ಘಟಿಸದಡಗಲು ದಿಕ್ತಟಂಗಳೊಳಾವರಿಸಲೊಡನೆ (ಬಸಪು. ೫೦-೬೦) ; ದಿಕ್ತಟದ ದೂರದೊಳಯೋಧ್ಯಾಪುರದ ಮೇಘಚುಂಬಿತ ಸೌಧಗೋಪುರಂಗಳ ಪಂಕ್ತಿ ಪ್ರಾಭಾತಸುಂದರಾರುಣಹೇಮಕಾಂತಿಯೊಳ್ ಮಿರುಮಿರುಗಿ ಕರೆದು ಕಾಣ್ಬನ್ನೆಗಂ (ಶ್ರೀರಾಮಾ. ೧೦೫-೦೪೦). [ಸಂ.]

ದಿಕ್ಪತಿ (ನಾ). ದಿಕ್ಕಿನ ಒಡೆಯ,–ಪ್ರಭು ; ದಿಕ್ಪಾಲ : ದೆಸೆದೆಸೆಗೋಡಿದನ್ಯಕರಿ ದಿಕ್ಕರಿಯಾದುದರಾತಿಭೂಭುಜಪ್ರಸರಮೆ ದಿಕ್ಪತಿ ಪ್ರಸರಮಾದುದು ವೈರಿಬಲಂ (ಗದಾಯು. ೧-೫೩) ; ಶತಮುಖ ಹುತವಹ ಯಮ ನೈರುತಿ ವರುಣ ಮರುತ್ಕುಬೇರ ಶೂಲಧರರ್ ದಿಕ್ಪತಿಗಳವರೆಣ್ಬರುಂ (ವಸ್ತುಕೋ. ೯-೪೮). [ಸಂ.]

ದಿಕ್ಪತ್ರ (ನಾ). ದಿಕ್ಕುಗಳ ಭಾಗ,–ಪ್ರದೇಶ : ಅಲ್ಲಿ ಮೊದಲ ದೇವತೆ ಜಯಾದೇವಿಯೆಂಬುದು ಮತ್ತೊರ್ವಳು ವಿಜಯಾದೇವಿಯೆಂಬುದು . . . ಈ ನಾಲ್ವರುಂ ದಿಕ್ಪತ್ರಂಗಳ ದೇವತೆಗಳು (ಪ್ರತಿಷ್ಠಾ. ೯-೧). [ಸಂ.]

ದಿಕ್ಪರಿವೃಢ (ನಾ). ೧. ದಿಕ್ಕುಗಳ ಮೇಲಿನ ಒಡೆತನ,–ಪ್ರಭುತ್ವ : ಸುರಕುಜಮಂ ಪಳಂಚಲೆವ[ದಾ]ವ ಗುಣಂ ಸಲೆ ಸಂದ ವಜ್ರಪಂಜರಮನ ನಾರತಂ ಪಳಿವುತಿರ್ಪುದು ... ತನ್ನ ಗಂಭೀರಗುಣಂ ಸಮನ್ತು ದಿಕ್ಪರಿವೃಢ ದೇಳ್ಗೆಯಂ ನಗುವುದುದ್ಭಗುಣ [ಕ]ಲಿ ಕನ್ನಭೂಪನ (ಸೌಇಇ. XX, ೫೦-೧೪; ?). ೨. ದಿಕ್ಕುಗಳ ಒಡೆಯ–ಪ್ರಭು : ಕರಸಿದನು ನಿಜನಗರಿಗಾ ನಿರ್ಜರ ನಿಕರವಾ ಸತಿಯರಾ ದಿಕ್ಪರಿವೃಢರು ಕೊಂಡಾಡಿತೆನ್ನನು (ಕುಮಾಅ. ೧೧-೨೯). [ಸಂ.]

ದಿಕ್ಪಾರ (ನಾ). ದಿಕ್ಕುಗಳ ಎಲ್ಲೆ,–ಸೀಮೆ : ಶಿವಿರಾಭ್ಯುತ್ಥಿತ ಕಾಹಳಾಘನರವಂ ಮುಟ್ಟಿತ್ತು ದಿಕ್ಪಾರಮಂ (ಚಂದ್ರಪು. ೧೦-೦೮). [ಸಂ.]

ದಿಕ್ಪಾಲ (ನಾ). ದಿಕ್ಕಿನ ಒಡೆಯ,–ಪ್ರಭು : ಗಾಳಿ ದೈವವಿದೆಂಬಡಂ ದಿಕ್ಪಾಲನಾಗಿಂತೊಂದು ದಿಕ್ಕಿನ ಮೂಲೆಯಲಿ ತಾನಿಹನೆ (ಬಸಪು. ೫೪-೦೨)ಂ ಕಂಡು ಬಲ್ಲಾ ಎನಲು ಪವನಜ ತೊಂಡ ರಾವಣ ನುಡಿದನೆಲವೊ ಕಂಡ; ನಾ ಬಲ್ಲಂತೆ ನೀ ಮುನ್ನಾವ ದಿಕ್ಪಾಲ (ಕೌಶಿಕಾ. ೨೨-೦೨). [ಸಂ.]

ದಿಕ್ಪಾಲಕ (ನಾ).=ದಿಕ್ಪಾಲ: ದೇವ ದಿಕ್ಪಾಲಕರು ವಸುಗಳು . . . ಕಮಲಜ ರಾವರಾದರು ಪೂಜಿಸಲಿಬೇಕೀ ಮಹಾಗಣಪತಿಯನು (ಗಗತಾ. ೩-೦೦).

[ಸಂ.]

ದಿಕ್ಪಾಲಕನಗರ (ನಾ). ದಿಕ್ಪಾಲನ ಪಟ್ಟಣ,-ರಾಜಧಾನಿ; P "ದಿಕ್ಪಾಲಕ ನಗರಗಳು: (i) ಅಮರಾವತಿ, ತೇಜೋವತಿ, ಸಂಯಮಿನಿ, ನಯನವತಿ, ಅಂಭೋವತಿ, ಭೋಗವತಿ, ಅಲಕಾವತಿ, ರೌಪ್ಯವತಿ (ಯಪೂರ. ೪೮೫). (ii) ಅಮರಾವತಿ, ತೇಜೋವತಿ, ಸಂಯಮಿ, ರಕ್ಷೋವತಿ, ಶುದ್ಧಿಮತಿ, ಗಂಧವತಿ, ಮಹೋದಯ, ಯಶೋವತಿ (ವಿಪಂ. ೪-೩೪೨, ೩೪೩). (iii) ಅಮರಾವತಿ, ತೇಜೋವತಿ, ಸಂಯಮಿನಿ, ಕೃಷ್ಣಾಂಗನೆ, ಶ್ರದ್ಧಾವತಿ, ಗಂಧವತಿ, ಮಹೋದಯ, ಯಶೋವತಿ (ಭಾಗ. ಅ. ೦೬ ಸ್ಕಂದ ೫ ಶ್ರೀಮದ್ಭಾಗವತವು iv-೮೬)" (ಶ್ರೀವತ್ಸ. ೧೯೯). [ದಿಕ್ಪಾಲಕ + ನಗರ]

ದಿಕ್ಪಾಲತನ (ನಾ). ದಿಕ್ಕಿನ ಆಧಿಪತ್ಯ,–ಒಡೆತನ: ಕಾಲ ನಡುಗಿದನಿತಱಲಿ ದಿಕ್ಪಾಲತನವನು ಬಿಸುಟು ನಿರುತಿಯ ಮೇಲೆ ಮೇಲಲ್ಲಿಂದ ನಡೆದಾಕರಿಸಿದನು ಧನವ (ತೊರಕಾ. ೦-೮-೩೫). [ದಿಕ್ಪಾಲ + – ತನ]

ದಿಕ್ಪುರ (ನಾ).=ದಿಕ್ಪಾಲಕನಗರ : ದಿಕ್ಪುರಗಳಾ ವಿಗಡಜಂಝಾಮಾರುತ ನೊಡನೆ ಪಾರ್ದು ಗಗನಾಂಗಣದಿ ಸುಳಿಗೊಂಡಿರೆ (ನವಮೋ. ೬-೭). [ಸಂ.]

ದಿಕ್ಪ್ರದರ್ಶನ (ನಾ). ಸ್ಥೂಲ ಪರಿಚಯ,–ನಿರ್ದೇಶನ: ಸ್ಥೂಲ ನಿರ್ದೇಶ: ದಿಕ್ಪ್ರದರ್ಶನ (Adumbration. ಇಂಗ್ಲಿ) : ಇಲ್ಲಿ ಅದರ ದಿಕ್ಪ್ರದರ್ಶನವನ್ನು ಮಾತ್ರ ಮಾಡುತ್ತೇವೆ (ಧ್ವನ್ಯಾಲೋ. ೬೬). [ಸಂ.]

ದಿಕ್ಪ್ರಸರ (ನಾ). ದಿಕ್ಕುಗಳ ಸಮೂಹ,–ಗುಂಪು : ಲಸದಗುರು ಸುರಭಿ ಸಾರಪ್ರಸರಂ ನವಧೂಪಧೂಮಮಮರಾದ್ರಿಯನಾಗಸವಂನಮರೇಂದ್ರರಂ ದಿಕ್ಪ್ರಸರಮನೇಂ ಪುದಿದು ನಿಲೆ ಪುದುಂಗೊಳಿಸಿದುದೋ (ಶಾಂತಿಪು. ೧೦-೬೩) : ಈ ವಿಖ್ಯಾತಿ ಸಮಸ್ತ ದಿಕ್ಪ್ರಸರಗರ್ಭಂ ನೋಟ್ಕೊಡೆಂಬನ್ನೆಗಂ ತ್ರೈವಿದ್ಯಶ್ರುತಕೀರ್ತಿದೇವನೆಸೆದಂ (ಜಂದ್ರಪು. ೦-೩೪). [ಸಂ.]

ದಿಕ್ಶಿರ (ನಾ). ದಿಕ್ಕಿನ ಶಿರ,–ಅಗ್ರಭಾಗ : ಬಹುವಾದ್ಯರವ ದಿಕ್ಶಿರವೊಡೆಯೆ ಸೂಳ್ಪಿಸೆ ಮೇಳ್ಪಿಸಿದನು ಮೋಹರವ (ಕುವ್ಯಾಉ. ೨೨-೩). [ಸಂ.]

ದಿಕ್ಕುಂಡಾಲ (ನಾ). = ದಿಗ್ಗಜ : ನಡುಗಿದುದು ಬ್ರಹ್ಮಾಂಡ ಪೊಡವಿ ಜಡಿಯಲು . . . ವಂಡಿದವಡಿಗಳನು ದಿಕ್ಕುಂಡಾಲಗಳುಮಿರದೆ ಕಡಲೇಳು ಕೂಡಿದವು (ನವಮೋ. ೦೨-೭೨). [ಸಂ.]

ದಿಕ್ಸಂಧಿ (ನಾ). ದಿಕ್ಕುಗಳ ಜೋಡಣೆ ; ದಿಕ್ಕುಗಳ ಸೇರುವೆ,–ಕೂಟ : ದಂಧಣಂ ಧಳಧಳಧಳಂಧಳಧ್ವನಿಗೆ ದಿಕ್ಸಂಧಿಗಳ್ ಸಡಿಲಲ್ . . . ಜಗದೊಳಗಂಧಕಾಸುರನ ಭೇರೀರವಂ ಪೊಣ್ಮಿದುದನೇನೆಂಬೆನದ್ಭುತವನು (ಪಚಪು. ೪೭-೩೦). [ಸಂ.]

ದಿಕ್ಸೂಚನೆ (ನಾ). = ದಿಕ್ಪ್ರದರ್ಶನ : ನಾವು ಮೇಲೆ ತೋರಿಸಿರುವುದು ಕೇವಲ ಅವುಗಳ ದಿಕ್ಸೂಚನೆ (ಧ್ವನ್ಯಾಲೋ. ೦೭). [ಸಂ. ದಿಕ್ಸೂಚನಾ]

ದಿಕ್ಸೂಚಿ (ನಾ). ೧. (ನಾವಿಕರು) ಮಾರ್ಗ ಅಥವಾ ದಿಕ್ಕನ್ನು ತಿಳಿಯಲು ಉಪಯೋಗಿಸುವ ಉಪಕರಣ; ಉತ್ತರಮುಖಿ ; ಕಾಂತಧ್ರುವ ಸೂಚಿ : ನಾವಿಕರಿಗೆ ದಿಕ್ಕನ್ನು ತಿಳಿಯಲು ಅತ್ಯಂತ ಉಪಯೋಗಕರವಾಗಿ ದಿಕ್ಸೂಚಿ ಅಥವಾ ಉತ್ತರಮುಖಿ (Compass) ಎಂಬ ಹೆಸರಿನಿಂದ ಈ ಉಪಕರಣವು ಬಹಳ ದಿನಗಳಿಂದಲೂ ಬಳಕೆಯಲ್ಲಿದೆ (ಭಾತವಿ. ೩೦೦) ; ಈ ಸ್ವಪ್ನಜೀವಿಗಳು ದಿಕ್ಸೂಚಿಯನ್ನು ಸಹ ಬಯಸದೆ ತೇಜಸ್ಸಾಗರದಲ್ಲಿ ಯಾತ್ರೆ ಹೊರಡುತ್ತಾರೆ (ಹೋಧಪು. ೪೩). ೨. ಮಾರ್ಗವನ್ನು ಕಾಣಿಸುವ ಸಾಧನ ; ಮಾರ್ಗದರ್ಶಿ : ಅದರ ಶಬ್ದಾರ್ಥವೇ ಅದರ ಅಂತರಾರ್ಥವನ್ನು ತಿಳಿಸುವ ದಿಕ್ಸೂಚಿಯಾಗಿದೆ (ತಕ್ಕಶಾ. ೭೨); ಅಲೆ ಅಲೆಯಾಗಿ ಹೊಮ್ಮಿಬರುವ ರಚನೆಗಳನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ದಿಕ್ಸೂಚಿಯಂತಿದೆ ತಂಬೂರಿ ಮತ್ತು ಅದರ ಶ್ರುತಿ (ಭಾರದ. ೫೫೬). [ಸಂ. ದಿಕ್ಸೂಚಿನ್]

ದಿಕ್ಸ್ವಸ್ತಿಕ (ನಾ). ೧. [ನಾಟ್ಯ] ನೂರೆಂಟು ಬಗೆಯ ಕರಣಗಳಲ್ಲಿ ಒಂದು ; "ಎಡಗಡೆ, ಬಲಗಡೆ, ಮುಂದೆ, ಹಿಂದೆ ಈ ನಾಲ್ಕು ಕಡೆಗಳಲ್ಲೂ ಕೈಗಳ ಜೊತೆಯಲ್ಲಿ ಕಾಲುಗಳನ್ನೂ ಚಲಿಸುತ್ತ, ಕೈ ಮತ್ತು ಕಾಲುಗಳನ್ನು ಪುನಃ ಪುನಃ ಸ್ವಸ್ತಿಕದಂತೆ ನಿಲ್ಲಿಸುವುದು" (ಶಾಸ್ಕರಂ. ೫೯೯ ಗದ್ಯಾನುವಾದ); P "ತಲವುಪ್ಪವುಟ, ಲೀನ, ವಿವರ್ತಿತ, ವಲಿತೋರು, ಮಂಡಲಸ್ವಸ್ತಿಕ, ವಕ್ಷಸ್ವಸ್ತಿಕ, ಆಕ್ಷಿಪ್ತರೇಚಿತ, ಅರ್ಧಸ್ವಸ್ತಿಕ, ದಿಕ್ಸ್ವಸ್ತಿಕ, ಪೃಷ್ಠಸ್ವಸ್ತಿಕ, ಸ್ವಸ್ತಿಕ, ಅಂಚಿತ, ಅಪವಿದ್ಧ, ಸಮನಕ, ವಂತ್ತ, ಸ್ವಸ್ತಿಕರೇಚಿತ, ನಿಕುಟ್ಟಕ, [ಅರ್ಧ ನಿಕುಟ್ಟಕ], ಕಟೀಛಿನ್ನ, ಕಟಿಸಮ, ಭುಜಂಗತ್ರಾಸಿತ, [ಅ]ಲಾತ, [ವಿ]ಕ್ಷಿಪ್ತಾಕ್ಷಿಪ್ತ, [ನಿ]ಕುಂಚಿತ, ಘೂರ್ಣಿತ, ಊರ್ಧ್ವಜಾನು, ಅರ್ಧರೇಚಿತ, ವಂತ್ತಲ್ಲಿ, ಅರ್ಧವಂತ್ತಲ್ಲಿ, ರೇಚಕನಿಕುಟ್ಟ, ಲಲಿತ, ವಲಿತ, ದಂಡಪಕ್ಷ, ಪಾದಾಪವಿದ್ಧ, ನೂಪುರ, ಭ್ರಮರ, ಛಿನ್ನ, ಭುಜಂಗತ್ರಸ್ತರೇಚಿತ, ಭುಜಂಗಾಂಚಿತಕ, ದಂಡರೇಚಿತ, ಚತುರ, ಕಟಿಭ್ರಾಂತ, ವ್ಯಂಶಿತ, ಕ್ರಾಂತ, ವೈಶಾಖಿರೇಚಿತ, ವೃಶ್ಚಿಕ, ವೃಶ್ಚಿಕನಿಕುಟ್ಟಕ, ವೃಶ್ಚಿಕರೇಚಿತ, ಲತಾವೃಶ್ಚಿಕ, ಆಕ್ಷಿಪ್ತ , ಅರ್ಗಲ, ತಲವಿಲಾಸಿತ, ಲಲಾಟತಿಲಕ, ಪಾರ್ಶ್ವನಿಕುಟ್ಟಕ, ಚಕ್ರಮಂಡಲ, ಉರೋಮಂಡಲ, ಆವರ್ತ, ಕುಂಚಿತ, ಡೋಲಪಾದ, ವಿವೃತ್ತ, ವಿನಿವೃತ್ತ, ಪಾರ್ಶ್ವಕ್ರಾಂತ, ನಿಶುಂಭಿತ, ವಿದ್ಯುದ್ಭ್ರಾಂತ, ಅತಿಕ್ರಾಂತ, ವಿಕ್ಷಿಪ್ತ, ವಿವರ್ತ, ಗಜಕ್ರೀಡಿತ, ಗಂಡಸೂಚೀ, ಗರುಡಪ್ಲುತ, ತಲಸಂಸ್ಫೋಟಿತ, ಪಾರ್ಶ್ವಜಾನು, ಗೃಧ್ರಾವಲೀನಕ, ಸೂಚೀ, ಅರ್ಧಸೂಚೀ, ಸೂಚೀವಿದ್ಧ, ಹರಿಣಪ್ಲುತ, ಹರಿವೃತ್ತ, ದಂಡಪಾದ, ಮಯೂರಲಲಿತ, ಪ್ರೇಂಖೋಲಿತ, ಸನ್ನತ, ಸರ್ಪಿತ, ಕರಿಹಸ್ತ, ಪ್ರಸರ್ಪಿತ, ಅಪಕ್ರಾಂತ, ನಿತಂಬ, ಸ್ಖಲಿತ, ಸಿಂಹಕ್ರೀಡಿತ, ಸಿಂಹಾಕರ್ಷಿತ, ಅವಹಿತ್ಥ, ನಿವೇಶ, ಏಲಾಕ್ರೀಡಿತ, ಜನಿತ, ಉಪಸೃತ, ತಲಸಂಘಟ್ಟಿತ, ಉದ್ವೃತ್ತ, ವಿಷ್ಣುಕ್ರಾಂತ, ಲೋಳಿತ, ಮದಸ್ಖಲಿತ, ಸಂಭ್ರಾಂತ, ವಿಷ್ಕಂಭ, ಉದ್ಘಟ್ಟಿತ, ಶಕಟಾಸ್ಯ, ಊರೂದ್ವೃತ್ತ, ವೃಷಭಕ್ರೀಡಿತ, ನಾಗಾಪಸರ್ಪಿತ, ಗಂಗಾವತರಣ —ಈ ನೂಟಿಂಟು ಕರಣಂಗಳ್" (ಶಾಸ್ಕರಂ. ೪-೪೨ ಪ) : ಎಡಬಲದ ಮುಂತು ಪಿಂತುಗಳೆಡೆಯೊಳ್ ಕೈ ಬೆರಲ್ಗಳೊಡನೆ ಕಾಲ್ಗಳ್ ಚಲಿಸುತ್ತಡಿಗಡಿಗೆ ಸ್ವಸ್ತಿಕಮಾವಾದಡೆ ದಿಕ್ಸ್ವಸ್ತಿಕವೆನಿಪ್ಪ ಕರಣಮದಕ್ಕುಂ (ಶಾಸ್ಕರಂ. ೪-೫೦). ೨. [ಜೈನ] ಒಂದು ಸಭಾಭವನದ ಹೆಸರು: ವೈಜಯಂತಿಯೆಂಬ ದಿವ್ಯಪ್ರಾಸಾದಮುಂ ದಿಕ್ಸ್ವಸ್ತಿಕಮೆಂಬ ಸಭಾಭೂಮಿಯುಂ (ಆದಿಪು. ೦೫-೩ ಪ); ಸರ್ವತೋಭದ್ರನಾಮಗೋಪುರಂಗಳಿಂದಂ ವೈಜಯಂತಿಯೆಂಬ ಪ್ರಾಸಾದದಿಂದಂ ದಿಕ್ಸ್ವಸ್ತಿಕಮೆಂಬ ಸಭಾಭವನದಿಂ ನಂದ್ಯಾವರ್ತಪ್ರಕಾಶಮೆಂಬ ಶಿಬಿರನಿವೇಶಂಗಳಿಂದಂ (ಶಾಂತಿಪು. ೦೧-೮೪ ಪ) ; ಮಣಿಮಯೂ ಕೃತ್ರಿಮ ಚೈತ್ಯಗೃಹರುಚಿರಮೆನಿಪ . . . ದಿಕ್ಸ್ವಸ್ತಿಕದ ನಂದಿಯಂ ನಂದನದ ನಂದೋತ್ತರೆಯುಂ (ಜಂದ್ರಪು. ೦೦-೦೫೫ ಪ). [ಸಂ.]

ದಿಖಾವು, ದಿಕಾವು (ನಾ). ಆಡಂಬರ ; ಡೌಲು ; ಜರ್ಬು : ಆ ಜನಗಳ ಜುಬ್ಬ, ಚಳನ, ವೇಶಗಳ ವಿಜೃಂಭಣೆಯಿಂದ ಮಾಸ್ತವಕ್ಕೆ ಮಿಂಚಿದ ದಿಖಾವು ಇತ್ತು (ಕಲನಿ. ೦೯೦). **ದಿಕಾವು** : ಅಪ್ಪರಲ್ಲಿ ದಿಕಾವಾಗಿ ಉಡುವು ಧರಿಸಿದ ಸಹಾಯಾಧಿಕಾರಿ . . . ಬಂದನು (ಪುನರು. ೨೨೯).

[←ಹಿಂ. ಮರಾ. ದಿಖಾಊ]

ದಿಗಂತ (ನಾ). ಭೂಮಿಯೂ ಆಕಾಶವೂ ಸೇರಿರುವ ಹಾಗೆ ಕಾಣುವ ದಿಕ್ಕಿನ ಕೊನೆಯ ಭಾಗ,–ತುದಿ; ಕ್ಷಿತಿಜ ; ದಿಶಾಂತ : ಬಾಳುಡಿ ವಾಜಿ ಬೀಟಿ ಪಗಲುಳ್ಕದವೋಲ್ ರುಧಿರಂ ದಿಗಂತಮಂ ಮೇಳಿಸಿ ಕೊರ್ವಿ ಕಲ್ಪದವಸಾನದ ಸಂಜೆಮುಗಿಲ್ಗಳಂದಮಂ ಪಾಳಿಸೆ (ಹುಶಾಮೂ. ೦೩-೬೩) ; ಸರಸಭಕ್ತಿಸಮೇತ ಸುವ್ರತಚರಿತಲೋಲ ವಿಧೂತಕಾಲ ಸ್ಥಿರ ದಿಗಂತಯಶೋವಿಶಾಲಪ್ರಹತಭವಮಾಲ (ಬಸಪು. ೩೮-೬೭) ; ವನಭೂನ ರಾತ್ರಿಯಾಶಾದಿಗಂತದೊಳ್ ವರ್ಷದಾರ್ತೀರ್ವಾದಮುದ್ರೆಯಿಂದೇರ್ದುದೆನೆ ಬಂದನೋಲಗಕೆ ವಿಶ್ವಾಮಿತ್ರಮುನಿವರಂ (ಶ್ರೀರಾಮೂ. ೨೮-೮).

ದಿಗ್ದಿಗಂತ = ದಿಕ್ಕು ಮತ್ತು ದಿಗಂತ: ಮೊಗಮೆತ್ತಿ ಪಂಚವಟ ಕುಟಜ ರಾಜಿಯ ನೆತ್ತಿಯಂ ನೋಡಿ ಕೊರಳೆತ್ತಿ ಕೂಗಿದನ್, ದಿಗ್ದಿಗಂತೋದ್ಭವಂ ಮರುದನು ಮೊಳಗುವಂತೆ (ಶ್ರೀರಾಮೂ. ೨೩೫-೭೨೨) ; ಉಪನಿಷತ್ಪುಗಳು . . . ದಿಗ್ದಿಗಂತಗಳನ್ನು ಪಾವನಗೊಳಿಸುವ ಭಕ್ತಿರಸದ ಅಮರವಾಹಿನಿ (ಭಾರದ. ೩೪) : ದಿಗ್‌ದಿಗಂತದಲಿ ಹಣಿಸಿ ಬಾ ಚರಾಚರಗಳಿಗೆ ಉಣಿಸಿ ಬಾ ಇಳಿದು ಬಾ ತಾಯಿ ಇಳಿದು ಬಾ (ಗಂಗಾತ. ೬೭-೬).

[ಸಂ.]

ದಿಗಂತಗ (ನಾ). [ಛಂದ] ಅತ್ಯುಕ್ತಿಯೆಂಬ ಛಂದಸ್ಸಿನಲ್ಲಿ ಹುಟ್ಟಿದ ಒಂದು ವೃತ್ತ : ಪ್ರತಿಸಾಲಿನಲ್ಲಿಯೂ ಒಂದಂ ಲಘು ಮತ್ತು ಒಂದು ಗುರು ಬರುವ ನಾಲ್ಕುಸಾಲಿನ ವೃತ್ತ: ಅಗೋಪಗಂ ದಿಗಂತಗಂ (ಛಂದೋಂಬು. ೨-೫೪). [ಸಂ.]

ದಿಗಂತರ (ನಾ). ೧. ದಿಕ್ಕುಗಳ ಮಧ್ಯಭಾಗ : ಆಕಾಶ ; ಗಗನ : ಛತ್ರ ಚಾಮರ ಪತಾಕಾಕೀರ್ಣಗಗನಮಂಡಳಮುಂ ಪಟಹಕಹಳಾದಿಧ್ವನಿಬಧಿರಿತ ದಿಗಂತರನುಮಾಗಿ ರಾವಣಂ ಕಾದಲ್ ಪೊಱಮಡುವುದುಂ (ಕಾಪುಂಪು. ೩೧೩) ; ಸಕಳದಿಗನ್ತರಪ್ರವರ್ತಿತಕೀರ್ತ್ಯಿ (ಶಾಇತಿ. XX, ೪೬-೧೪ ; 1072). ೨. ದಿಕ್ಕು; ದೆಸೆ : ನೀನೇ ಹೋಹುದ್ಯ ನಿನಗಾವುದಭಿಮತವಾ ದಿಗಂತರಕೆ (ಕುವ್ಯಾಸ. ೧೩-೭೫). [ಸಂ.]

ದಿಗಂತರಕ್ಷಿತ (ನಾ). [ಜೈನ] ಲೋಕಾಂತಿಕ ದೇವರುಂಗಳಲ್ಲಿ ಒಂದು ಒಳಭೇದದ ಹೆಸರು : ಗರ್ದತೋಯತುಷಿತಾಂತರದೊಳ್ ನಿರ್ಮಾಣರಜೋದಿಗಂತರಕ್ಷಿತರುಂ ತುಷಿತಾವ್ಯಾಬಾಧಾಮಧ್ಯದೊಳ್ ಆತ್ಮರಕ್ಷಿತ ಸರ್ವರಕ್ಷಿತರುಂ . . . ಅರಿಷ್ಟಸಾರಸ್ವತಮಧ್ಯದೊಳ್ ಅಶ್ವವಿಶ್ವರುಂ ಇರ್ವರ್ (ತತ್ತ್ವಪ್ರ. ೩೩೨) ; ನಿರ್ಮಾಣರಜಸ್ತ್ರಿದಶರ್ ಇರ್ವತ್ತಮೂಱು ಸಾಸಿರದ ಇರ್ವತ್ತಮೂವರ್ ದಿಗಂತರಕ್ಷಿತಾಮರರಿರ್ವತ್ತೈದುಸಾಸಿರದ ಇರ್ವತ್ತೈದು (ತತ್ತ್ವಪ್ರ. ೩೩೩). [ಸಂ.]

ದಿಗಂತರಾಳ (ನಾ). ದಿಕ್ಕುಗಳ ಮಧ್ಯಭಾಗ,–ಒಳಭಾಗ ; ಆಕಾಶ : ಮತ್ತಮಧುಕರನಿಕರಝಂಕಾರಪರೀತದಿಗಂತರಾಳದೊಳ್ (ಶಾಂತಿಪು. ೧೦-೭೭ ಪ) ; ದಟ್ಟಿಸಿ ಪೊಡೆವ ನಾನಾವಾದ್ಯರವಗಳು ಮುಟ್ಟಿ ದಿಗಂತರಾಳವನು (ತ್ರಿಪುಸಾಂ. ೧೬-೧೭೦). [ಸಂ. ದಿಗಂತರಾಲ]

ದಿಗಂತರೋಪಗತ (ಗು). ದಿಗಂತರವನ್ನು ಮುಟ್ಟಿದ ; ದಿಕ್ಕಿನ ಕೊನೆಗೆ ಹೋದ : ನಿರೀಕ್ಷಿಸಿ ನಿಕೃಷ್ಟದುಷ್ಪಗಣರಂ ಗತಪ್ರಜ್ಞ[ರ]ಂ ನಿರಂತರ ದಿಗಂತರೋಪಗತ ದುರ್ಯಶಃಪ್ರಾಪ್ತರಂ (ಸುಕುಮಾ. ೩-೦೯).

[ದಿಗಂತರ + ಉಪಗತ]

ದಿಗಂತವ್ಯಾಪ್ತ (ಗು). ದಿಕ್ಕು ದಿಕ್ಕಿಗೂ ವ್ಯಾಪಿಸಿದ,–ಹರಡಿದ : ಪೊರೆದು ಹೊಯ್ಯುವ ಮಳೆಯಿಂದ ಕೂಡಿದ ಪ್ರಚಂಡಮಾರುತವು ಎದ್ದು ದಿಗಂತವ್ಯಾಪ್ತವಾಗಿದ್ದಿತು (ಕಪಾಕುಂ. ೩). [ದಿಗಂತ + ವ್ಯಾಪ್ತ]

ದಿಗಂಬರ (ನಾ). ೧. ಬೆತ್ತಲೆಯಾಗಿರುವುದು ; ನಗ್ನತೆ ; ದಿಗಂಬರತ್ವ : ಮಂಗಳವೇ ಮಜ್ಜನವೆನಗೆ . . . ದಿಗಂಬರವೇ ದಿವ್ಯಾಂಬರವೆನಗೆ (ಸುಹಾದೇ. ಬ. ೩೬-೭೪) ; ಜಡೆ ಬೋಳು ಲೋಚು ದಿಗಂಬರವನ್ನು ಅಳವಡಿಸಿಕೊಂಡು ನಟಿಸುವ ಅಣ್ಣಗಳಿರಾ ನಿಮ್ಮ ಜಡೆ ಯಾವುದು ಬೋಳಾವುದು ಲೋಚವಾವುದು ದಿಗಂಬರವಾವುದು (ಅಕಾಂಡೇ. ೧೩೭-೧೦೮). ೨. ಆಕಾಶವೇ ಬಟ್ಟೆಯಾಗುಳ್ಳವನು; ಬೆತ್ತಲೆಯಾಗಿರುವವನು ; ನಗ್ನ : ಸತಿಯನುಳಿದತಿದಿಗಂಬರನಾಗಿ ಮುಕ್ತಕೇಶಿತನಾಗಿ ನರಕಪಾಲದೊಳು ಸುರೆಯೆಱೆದು ಕುಡಿಯುತ ತೆಂಕಮುಖವಾಗಿ ಹೋಹೆಂ (ಜಕಥಾ. ೨-೨೨); ನಳ . . . ರಾಣಿಯು ಕೂಡಿಕೊಳುತ್ತ ಕಾನನವ ಪೊಕ್ಕು ದಿಗಂಬರನಾಗಿ ಭಿಕ್ಷಮಂ ಬೇಡನೆ (ಕಪಾಕಂ. ೭೩) ; ಆಗ ಈತನು ದಿಗಂಬರನಾಗಿದ್ದನು (ಧಾರವ. ೦೬೮). ೩. ಭೈರವ ; ಶಿವ ; ಮಹೇಶ್ವರ : "ಘೋರಮೂರ್ತಿಯು ಖಡ್ಗಹಸ್ತಂ ದಿಗಂಬರಂ ಭೈರವನ ಪೆಸರಕ್ಕುಂ" (ಪುಂಗರಾ. ೩-೦೫) ; ದಿಗಂಬರನ ಶರಣರ್ಗುಡುಗೆಗೊಟ್ಟು ಸಿಂಗರದತ್ತಮನಂ ಸೆಳೆದಾಭರಣಂಗಳ ಪೆಟ್ಟಿಗೆಯಂ ತರಿಸಿ (ಬಸವ. ೯-೦೬). ೪. ಅಂಧಕಾರ ; ತಮಸ್ಸು. ೫. ಆಗಸ ; ಗಗನ ; ಆಕಾಶ : ತೊಳತೊಳಗೆ ದಿಗಂಬರಮಂ ಬೆಳಗುವ ರುಚಿಯಿರ್ದುಮೇನೊ ಸಕಲಜನಾಂತಸ್ಥಳಮಂ ತಮ್ಮೊದಯದೊಳಳಿಸಿದರೆ [ತಮ್ಮುದಯದೊಳ್ ಬೆಳಗಿದರೀ] ರವಿಗಳೆ ಮಗೆ ಕವಿಗಳೆ ವಂದ್ಯರ್ (ದರ್ಪಣಾ. ೧-೩೩). ೬. [ಜೈನ] ತಪೋದೀಕ್ಷೆಯನ್ನು ಪಡೆದ ಜೈನಸಂನ್ಯಾಸಿ ; ಸವಣ : "ಸಾಧು ನಿರ್ಗ್ರಂಥರಾನಗ್ನಾಟರು ಜೈನರ್ ದಿಗಂಬರರ್ ಜೀವಕರ್" (ಮಂಗರಾ. ೬೬-೦); ಪೋಗಿ ದಿಗಂಬರನಂ ಪರಮಾಗವಂಕೋವಿದನನಮಿತಗುಣವಾರಿಧಿಯಂ ರಾಗ ದ್ವೇಷಂಗಳ್ತನಗಾಗದನಾ ಕಂಡು ನಿಲ್ವುದುಂ ತನ್ನನಿಪಂ (ಸುಕುಮಾ. ೩-೦೭); ವೈದಿಕಗ್ರಂಥಗಳಿಂದ ದಿಗಂಬರರು ಶ್ರಮಣರು . . . ಇರುತ್ತಿದ್ದರೆಂದು ತಿಳಿದು ಬರುವುದರಿಂದ ಈ ಸಂಪ್ರದಾಯವು ಅನಾದಿ ಕಾಲದ್ದು ಎಂದು ತಿಳಿಯ ಬಹುದು (ಹಿಂದಸಾ. ೭೨). 'ದಿಗಂಬರದೀಕ್ಷೆ' ಪರಾ. ೭. ಜೈನರ ಒಂದು ಪಂಥ : ಈ ಸಂಪ್ರದಾಯದಲ್ಲಿ ದಿಗಂಬರ, ಶ್ವೇತಾಂಬರ ಎಂಬ ಪ್ರಭೇದವಿದ್ದರೂ . . . ಈ ಗ್ರಂಥಗಳು ಸರ್ವಸಮ್ಮತಗಳಾಗಿರುವುವು (ಹಿಂದಸಾ. ೭೪) : ಜೈನರ ಪ್ರತಿಮೆಗಳು ಕೆಲವು ಶ್ವೇತಾಂಬರಪಂಕ್ತಿಗೆ ಸೇರಿದವು, ಮತ್ತೆ ಕೆಲವು ದಿಗಂಬರಪಂಕ್ತಿಗೆ ಸೇರಿದವು (ಧಾರವ. ೫೧೩); ಶ್ವೇತಾಂಬರ ದಿಗಂಬರರೆಂದು ಎರಡು ಪಂಗಡಗಳಾಗಿ ಒಡೆದದ್ದು . . . ಭದ್ರಬಾಹುವಿನ ಕಾಲದಲ್ಲಿ (ಕಜಾಅ. ೬೯). [ಸಂ.]

ದಿಗಂಬರತ್ವ (ನಾ). ಬೆತ್ತಲೆಯಾಗಿರುವಿಕೆ ; ನಗ್ನತೆ : ಮಹಾತ್ಮರುಗಳು ಮಾತ್ರ ಈಗ ದಿಗಂಬರತ್ವವನ್ನು ಸ್ವೀಕರಿಸಿ ಅದರ ಪವಿತ್ರತೆಯನ್ನು ಸಾರಿದ್ದಾರೆ (ಧಾರವ. ೦೮೩). [ಸಂ.]

ದಿಗಂಬರದೀಕ್ಷೆ (ನಾ). [ಜೈನ] ಸಂನ್ಯಾಸದೀಕ್ಷೆ : ವಿಶಾಖಭೂತಿಯೊಡನೆ ವಿಶ್ವನಂದಿಯುಂ ದಿಗಂಬರದೀಕ್ಷೆಯಂ ಕೆಯ್ಕೊಂಡಂ (ಶಾಂತಿಪು. ೭-೫೮ ಪ).

[ದಿಗಂಬರ + ದೀಕ್ಷೆ]

ದಿಗಂಬರಮುದ್ರೆ (ನಾ). [ಜೈನ] ಬೆತ್ತಲೆಯಾಗಿರುವಿಕೆ ; ಬಟ್ಟೆಯನ್ನು ಧರಿಸದಿರುವಿಕೆ; ನಗ್ನತೆ: ಜೈನದೀಕ್ಷೆಯ ಕೊನೆಯ ಹಂತವಾದ ದಿಗಂಬರ ಮುದ್ರೆಯ ವಿಷಯದಲ್ಲಿ ಜನರು ಅರಿವಿಲ್ಲದೆ ಲಘುವಾಗಿ ಮಾತನಾಡುವುದುಂಟು (ಧಾರವ. ೦೮೩). [ದಿಗಂಬರ + ಮುದ್ರೆ]

ದಿಗಂಬರರೂಪ (ನಾ). ನಗ್ನರೂಪ ; ಬೆತ್ತಲೆಯ ಸ್ಥಿತಿ : ಆದಿತೀರ್ಥಕರ್ತಾರನ ದಿಗಂಬರರೂಪಮುಂ ಕಾಣಲೊಡಂ ಶ್ರೀಮತಿಯಾದ ಭವದೊಳ್ ವಜ್ರಜಂಘನುಂ ತಾನುಮಿರ್ದ ಸರ್ವಸರೋವರದೊಳ್ ಚಾರಣಯುಗಳಕ್ಕೆ ವಿಧಿಪೂರ್ವಕಂ ಮಹಾದಾನಮನಿತ್ತ (ಆದಿಪು. ೯-೦೩೦ ಪ).

[ದಿಗಂಬರ + ರೂಪ]

ದಿಗಂಬರಲೀಲೆ (ನಾ). ೧. ಆಕಾಶದ ಶೋಭೆ. ೨. [ಜೈನ] ಬೆತ್ತಲೆಯಾಗಿರುವ ಸಂನ್ಯಾಸದ ಶೋಭೆ. ೧, ೨ : ತವೆ ತಮ್ಮ ದೊಡ್ಡ ರಾಜಸಲೊಡರ್ಚಿ ದಿಗಂಬರಲೀಲೆ ಪುಟ್ಟಿ ಭೂಭುವನಜನಕ್ಕೆ ದರ್ಶನವಿಶುದ್ಧತೆ . . . ಜಿನಂ ಸಿವಿಗೆಯನೇಱುವಂತುದಯಶೈಲಮನೇಱಿದ ನಂಬುಜಪ್ರಿಯಂ (ಪುಷ್ಪಪು. ೧೩-೬೦). [ದಿಗಂಬರ + ಲೀಲೆ]

ದಿಗಂಬರವಿಳಾಸ (ನಾ). [ಜೈನ] ಬೆತ್ತಲೆಯಾಗಿರುವ ಸಂನ್ಯಾಸದ ಶೋಭೆ: ದಿಗಂಬರವಿಳಾಸಮಂ ಬಯಕೆ ತೀರ್ವಿನಂ ತಾಳ್ದಿದಂ ಯುಗಂಧರ ಮಹಾಮುನೀಂದ್ರ ಪದಪಂಕಜೋಪಾಂತದೊಳ್ (ಆದಿಪು. ೩-೫೭).

[ದಿಗಂಬರ + ವಿಳಾಸ (= ವಿಲಾಸ)]

ದಿಗಂಬರವೇಷ (ನಾ). = ದಿಗಂಬರತ್ವ : ಸಮರತಸೌಖ್ಯದೊಳ್ ಸತಿ ದಿಗಂಬರವೇಷಮನಾಂತು . . . ತನ್ಮನೋರಮಣನ ಹೃನ್ನಿಧಾನಮನು ವಾರ್ಜಿಪ ಯೋಗಿನಿಯಂತಿರೊಪ್ಪಿದಳ್(ಕಾವ್ಯಾ. ೬೬). [ದಿಗಂಬರ+ವೇಷ]

ದಿಗಂಬರಿ$_1$ (ನಾ). ನಗ್ನರೂಪದಲ್ಲಿರುವ ಸಂನ್ಯಾಸಿ : ಉಡು ವಿಕಾಂತ ನಿವಾಸಿಯೆ ತೋಳ ದಿಗಂಬರಿಯೆ ಎತ್ತು ಬ್ರಹ್ಮಚಾರಿಯೆ ಬಾವುಲು ತಲೆಕೆಳಗಾಗಿರ್ದೊಡೆ ತಪಸ್ವಿಯೆ (ಸರ್ವಜ್ಞ. ೫೦-೬೬). [< ಸಂ. ದಿಗಂಬರೆ]

ದಿಗಂಬರಿ$_2$ (ನಾ). ನಗ್ನಳಾಗಿರುವವಳು ; ಬೆತ್ತಲೆಯಾಗಿರುವವಳು : ಕನಕವುಥಳಿಗೆ ಶಶಿಗಲ್ಲೊಪ್ಪವಿಟ್ಟು ತತ್ಕೊಳದ ಪರಿವೇಷದೊಳು ನಿಲಿಸಿದೊಲು ಹೆಟ್ಟಿಗೆಯ ರಂಗದೆಳವಳಗಿನಲಿ ದಿಗಂಬರಿಯರಂತೆ ಪರಿಶೋಭಿಸುತಿರೆ (ನವಪೋ. ೦೦-೫೭). [ಸಂ. ದಿಗಂಬರೀ]

ದಿಗಂಬರೆ (ನಾ). ಬೆತ್ತಲೆಯಾದವಳು ; ನಗ್ನೆ : ತನಿವೇಟದಲಿ ತಾಮಸಿ ದಿಗಂ[ಪಾಕಾಂ. ನಿಶಾಂ, ನಿರಂ]ಬರೆಯಾಗಿ ನಲಿದಪ್ಪಿದಳು ನಿಜಪತಿಯ (ತೂರರಾ. ೫-೩-೪). [<ಸಂ. ದಿಗಂಬರೀ]

ದಿಗಡುದಿಮ್ಮಿ (ನಾ). ಸೊಕ್ಕಿದವಳು ; ಕೊಬ್ಬಿದವಳು ; ಸ್ವೇಚ್ಛಾವೃತ್ತಿಯವಳು : ಆ ದಿಗಡುದಿಮ್ಮಿ ಸುನಂದಾ . . . ಅವಳ ದೆಸೆಯಿಂದ ಕೆಟ್ಟು ಹೋಗಿ ಬಿಟ್ಟದ್ದನಾತ (ಪಾಳಿ. ೫೨).

[ದಿಗಡು$_0$ (←P ಹಿಂ. ಮರಾ. ಧೀಂಗಡ್) + ದಿಮ್ಮಿ$_0$]

ದಿಗಣ, ಜಿಗಣ, ದಿಗಿಣ (ನಾ). ಮದ್ದಳೆಯ ಶಬ್ದಕ್ಕೆ ಸರಿಯಾಗಿ ಕುಣಿಯುವ ಕುಣಿತ. **ಜಿಗಣ:** ತಾಳಮದ್ದಲೆ ಜಿಗಣಕ್ಕೆ ಸರಿಯಾಗಿ ಕುಣಿತಹಾಕಿ . . . ನಲಿಯುವುದು ಒಂದು ಭಾಗ (ಹುಟ್ಟುಹ. ೮೨). **ದಿಗಿಣ:** 'ನನ್ನ ವೇಷ ಚಂದ . . . ನನ್ನ ದಿಗಿಣ ಬಲ' ಎಂದು ಬರಿದೆ ಅವರವರೇ ಅದನ್ನು ಕೊಚ್ಚಿಕೊಂಡರೆ ಸಾಕೇನು ? (ಸ್ವಪ್ನಹೊ. ೦೩೭).

ದಿಗಣ ಹಾಕು = ಮದ್ದಳೆಯ ತಾಳಕ್ಕೆ ಸರಿಯಾಗಿ ಕುಣಿ : ಇವೆಲ್ಲ ಒಂದು ಕುಣಿತವೋ ? ಬರಿದೆ ಕುಣಿದರೆ ಸರಿಯೆ ; ಇವಕ್ಕೆ ಗತ್ತು ಬೇಕೇ ? ಇದೆಲ್ಲ ಬರಿದೆ ದಿಗಣ ಹಾಕುವುದು (ಹಹಸ. ೩೫). [?]

ದಿಗದಿಗನೆ (ಅ). ಒಂದು ಅನುಕರಣಾವ್ಯಯ ; ಬೇಗಬೇಗನೆ ; ರಭಸದೊಡನೆ : ದಿಗಿದಿಗಿ [ದಿಗದಿಗ] ನೊಡನಿದಿರಾಗಿ ಬಹಳು ನಸುನಗುತ ರಾಯನನಪ್ಪುವಂತೆ ಭುಗಿಲನೆ ತಿರುಗುವಳರಸನೊಳ್ಮನಿದಡ್ಡ ಮೊಗವಿಕ್ಕಿ ಹೋಹಳೆಂಬಂತೆ (ಧರಚ. ೦೩-೭೫); ದಿಗಿದಿಗಿ [ದಿಗದಿಗ] ವೆಯ್ತಂದು ಕಡೆಯ ಬಾಗಿಲ ಸಾರ್ದು (ಧರಚ. ೪೬-೪೦). [ದಿಗದಿಗ$_0$ + –ಅನೆ$_1$]

ದಿಗಧಿಪ (ನಾ). ದಿಕ್ಕಿನ ಒಡೆಯ,– ದಿಕ್ಪಾಲಕ : ಸ್ತಂಬೇರಮನೆಂಟು ಮನೊತ್ತಂಬದೆ ದಿಗಧಿಪರೊಳೀಟ್ಟುಕೊಂಡು . . . ಖಳಂ ಶಿಕ್ಷಿಸಿದಂ (ಆಗವಿ. ೧೧-೪೦) ; ದಿಗಧಿಪರಂ ತೆರಳ್ಚುವೆವೊ ನಾಗನಿವಾಸದ ಶೇಷನಂ ಬರಲ್ ತೆಗೆವೆವೊ ... ಬಗೆಮಿಗೆ ಪೇಟಿಮೆಂಬ ಕಡುಪಂ ತಳೆದಿರ್ದವಿಳಾಧಿನಾಯಕಾ (ದಶಕು. ೪-೦೬). [ಸಂ.]

ದಿಗಧೀಶ (ನಾ). = ದಿಗಧಿಪ : ಮಹಿಳಾಸಹಿತಂ ವಾಹನಸಹಿತಂ ಸಂಗೀತ ಸಹಿತಮತಿಶುದ್ಧಮನಸ್ಸಹಿತಂ ನಿಜವಿವಿಧಾಯುಧಸಹಿತಂ ನಿಲವೇಟ್ದು ನೆಲೆಯೊಳಿರೆ ದಿಗಧೀಶರ್ (ಶಾಂತಿಪು. ೦೦-೩೨) ; ದಿಗಧೀಶರ್ ಜಗದೀಶರೊಳ್ ಪೊಲಗಿಡಲ್ ದಿಗ್ದಂತಿಗಳ್ ಸೈನ್ಯದಂತಿಗಳೊಳ್ ಪಲ್ಲಟವಾಗಲ್ (ಆಗವಿ. ೦೫-೪೦); ಆಯೆಡವಂಕ ಬಲವಂಕದಿ ಕೇಶವಾಂಬುಜಪತ್ರಯಿಂದ್ರಾಗ್ನಿಯಮ ನಿರುತಿ ಪಾಶಧರರನಿಲವಿತ್ತವನೀಶನೆಂಬ ದಿಗಧೀಶರಿರ್ದರು (ಪಿದ್ಗರಾ. ೧-೧೪). [ಸಂ.]

ದಿಗಧೀಶಕಾಂತೆ (ನಾ). ದಿಕ್ಕಿನ ಒಡೆಯನಾದವನ ಸತಿ,–ಕಾಂತೆ ; P ಶಚೀದೇವಿ, ಸ್ವಾಹಾ ಮತ್ತು ಸ್ವಧಾ, ಶ್ಯಾಮಲಾದೇವಿ, ದೀರ್ಘಾದೇವಿ, ಋದ್ಧಿ ಮತ್ತು ವಾರುಣಿ, ಅಂಜನಾ, ಋದ್ಧಿ, ಶಿವೆ–ಇವರು ಕ್ರಮವಾಗಿ ಅಷ್ಟದಿಕ್ಪಾಲಕರ ಪತ್ನಿಯರು : ದಿಗಧೀಶಕಾಂತೆಯರ್ ಮಿಂದೊಗೆದಾಗಳ್ತಂದು ಕೇಶಸಂಸ್ಕಾರಕ್ಕಾವಗಮಂತೆ ಧೂಪವರ್ತಿಯೆ ಪೊಗೆದತ್ತೆನಿಸಿ ದೆಸೆದೆಸೆಯೊಳೆಸೆದತ್ತು ತಮಂ (ಪಾರ್ಶ್ವಪು. ೦೦-೦೩).

[ದಿಗಧೀಶ + ಕಾಂತೆ]

ದಿಗಧೀಶಪದವಿ (ನಾ). ದಿಕ್ಪಾಲಕನ ಅಧಿಕಾರ : ಧನಕ್ಕೊಡೆಯಂ ಕುಬೇರನಾಗಿ ಮೆಱೆದಿರ್ಪುದೆಂದು ದಿಗಧೀಶಪದವಿಯಿತ್ತು . . . ಭಕ್ತರಂ ಪೊರೆಯುತಿರ್ದಂ (ಅದ್ಯುತ. ೧೯-೯).

[ದಿಗಧೀಶ + ಪದವಿ]

ದಿಗರ್ 'ದಿಗರು' ನೋ.

ದಿಗರ್‌ಜವಾಬು 'ದಿಗರುಜವಾಬು' ನೋ.

ದಿಗರ 'ದಿಗರು' ನೋ.

ದಿಗರು, ಡಿಗರು, ದಿಗರ್, ದಿಗರ, ದಿಗುರು (ನಾ). ೧. ಪ್ರತಿಯಾಗಿ ಹೇಳುವುದು ; "ಎದಂರುವಾದಿಸಂವುದಂ ; ವಾದ" (ಜಾನಕೋ. ೫). 'ದಿಗರುಜವಾಬು' ಪರಾ. **ಡಿಗರು:** ೨. "ಸೊಕ್ಕು ; ಗರ್ವ" (ಜಾನಕೋ. ೬೩). **ದಿಗರ್:** (ಗು). ೩. ಅನ್ಯ ; ಬೇರೆಯಾದ: (ಕ).

ದಿಗರ : ೩. ದಿಗರ ತಾಲ್ಲೂಕಿಗೆ ಹೋಗಿರುವ ರೈತರು . . . ಜರಾಯಿತು ಕೆಲಸದಲ್ಲಿಡಬೇಕು (ಮಹಾವಂ. II, ೬೨). **ದಿಗುರು:** ೧. 'ದಿಗುರುತ್ತರ' ಪರಾ. [← ಪಾರ. ಮರಾ. ದಿಗರ್ ; ಹಿಂ. ದಿಗರ್, ದಿಗಾರ್]

ದಿಗರುಜವಾಬು, ದಿಗರ್‌ಜವಾಬು (ನಾ). ಎದುರುತ್ತರ ; "ವಿರುದ್ಧ ಮಾತಾಡುವುದು" (ಜಾನಕೋ. ೫). **ದಿಗರ್‌ಜವಾಬು :** ವಿಪ್ರಲಂಭಃ, ವಿಸಂವಾದಃ – ೨ ವಿಪರೀತವಾಗಿ ನುಡಿಯುವದು ಅಂದರೆ ಕ್ರಮತಪ್ಪಿ ಮಾತಾಡುವದು, ಅಥವಾ ದಿಗರ್‌ಜವಾಬು ಕೊಡುವದು (ಸಿದ್ಧಾಂತಿ. ೬೯).

[ದಿಗರು + ಜವಾಬು]

ದಿಗವಲೋಕನ (ನಾ). ಎಲ್ಲಾ ದಿಕ್ಕುಗಳನ್ನು ನೋಡುವುದಂ. 'ದಿಗವಲೋಕನಗೃಹ' ಪರಾ. [ಸಂ.]

ದಿಗವಲೋಕನಗೃಹ (ನಾ). ಎಲ್ಲಾ ದಿಕ್ಕುಗಳನ್ನೂ ನೋಡಲಾಗುವಂತೆ ಕಟ್ಟಿದ (ಎತ್ತರವಾದ) ಮನೆ : ಗಿರಿಕೂಟಮೆಂಬ ದಿಗವಲೋಕನ ಗೃಹಮುಂ ವರ್ಧಮಾನಮೆಂಬೀಕ್ಷಣಪ್ರಿಯ ಪ್ರೇಕ್ಷಾಗೃಹಮುಂ (ಆದಿಪು. ೧೩-೩ ವ) ; ದಿಕ್‌ಸ್ವಸ್ತಿಕಮೆಂಬ ಸುಧಾಭೂಮಿಯುಂ ಸುವಿಧೆಯೆಂಬ ಚಕ್ರಮುಮವಾಯಪ್ಪಿಯುಂ ಗಿರಿಕೂಟಮುಮೆಂಬ ದಿಗವಲೋಕನ ಗೃಹಮುಂ (ಅಜಿಪು. ೦೦-೦ ವ).. [ದಿಗವಲೋಕನ + ಗೃಹ]

ದಿಗಟ (ನಾ). ಒಂದಂ ಮನೆತನದ ಹೆಸರು; ಸ್ವಸ್ತಿಶ್ರೀದಿಗಟರ ಬೆಸುಗಿ ಕೊಟ್ಟದು ಗೋಸಹಸ್ರ ನಾಲ್ಮುಕೇರಿಗೆ ನೆಜಿಯೆ ಗೋಸ[ಹ]ಸ್ರಂ (ಎಕ. VII, ಶಿಕಾ. ೪೫-೩೦ ; ಸು. 890 ?). [?]

ದಿಗಾರ (ನಾ). [ಅಶ್ವಶಾ] ಕುದುರೆಗೆ ಬರುವ ಒಂದು ಬಗೆಯ ಬೇನೆ,– ಶೂಲೆ : ನಾಲ್ಕನೆಯ ಜಾವದ ಶೂಲೆಗೆ ದಿಗಾರವೆಂಬುದು (ಅಶ್ವಟೀ. ೦೦೨-೦೦). [?]

ದಿಗಾಳಿ (ನಾ). ದಿಕ್ಕುಗಳ ಗುಂಪು,–ಸಾಲು : ವಾಜಿ ಸಿಂಧುರ ರಥವ್ಯಂದ ಮಾರ್ಭಟಿಸಿ . . . ಪೋರ್ದುದು ಭೂಮಿ ದಿಗಾಳಿ ಕಂಪಿಸೆ (ಹಮ್ಮೀರ. ೩-೪೦). [ಸಂ. ದಿಗಾಲಿ]

ದಿಗಿಣ 'ದಿಗಣ' ನೋ.

ದಿಗಿಭ (ನಾ).=ದಿಗ್ಗಜ ೧ : ದಿಗಿಭ ನಿಭಂಗಳಪ್ಪ ಸಮುದ್ದಿರದಂಗಳ ಯುದ್ಧ ಕೇಳಿಯಂ ಬಗೆಗೊಳೆ ನೋಡಲುಂ ನೆಗಟ್ದ ಮಲ್ಲರುಮಂ ಪಿಡಿದೊತ್ತಿ (ಆದಿಪು. ೯-೪೮) ; ಡ್ಯಾರಾವಕ್ಕಗಿದಳ್ಳಿ ಬಳ್ಳೆ ದಿಗಿಭಂ ಕೋದಂದದೊಳ್ಪೂಡಿ ಕೊಂಡಾರುತ್ತುಂ ನಿಶಿತಾಸ್ತ್ರದಿಂದಿಸೆ (ಪಂಡಾಪು. ೦೩-೦೫೦) ; ಜಲಧಿ ಮೇರೆಯನೊದೆದು ಹಾಯಲಿ ನೆಲನನಿಳುಹಲಿ ದಿಗಿಭವಿನಮಂಡಲಕೆ ಕಾಳಿಕೆಯಡಲಿ ನಡೆದಾಡಲಿ ಕುಲಾದ್ರಿಗಳು (ಕುಪ್ಯಾವಿ. ೬-೩೬). [ಸಂ.]

ದಿಗಿಭೇಂದ್ರ (ನಾ). ದಿಗ್ಗಜಗಳಲ್ಲಿ ಶ್ರೇಷ್ಠವಾದುದು ; ಐರಾವತ : ನೆಗಟ್ದ ಮರುನಗೇಂದ್ರಮನಾ ದಿಗಿಭೇಂದ್ರಂ ಪೊರ್ದಿದಲ್ಲಿ ಸುರತೂರ್ಯರವಂ ನೆಗಟ್ವಿನೆಗಂ ಕನಕಾದ್ರಿಗೆ ಖಗಾದ್ರಿ ಸಂತಸದೆ ಬಿರ್ದುವಂದಂತಿರ್ಕುಂ (ಅಜಿಪು. ೪-೩೬). [ದಿಗಿಭ + ಇಂದ್ರ]

ದಿಗಿಲ್, ದಿಗಿಲು (ನಾ). ೧. ಒಂದು ಅನುಕರಣ ಶಬ್ದ. 'ದಿಗಿಲನೆ' ಪರಾ. ೨. ಹೆದರಿಕೆ ; ಭಯ ; "ಜಜ್ವರಿತ ಧೈರ್ಯ" (ಚತುನಿ. ೪. I, ೬೪). **ದಿಗಿಲು :** ೨. ಪುಟ್ಟ ದಿಗಿಲುರದಲ್ಲಿ ನಯನಗಳಿಟ್ಟು ನೋಡಂಗಾಂಗ ಭಸಿತದಿ ಕಟ್ಟಿದುರುಲಿಂಗವನು ಕಂಡಳು (ಬಿಜ್ಜಪು. ೯೪-೦೬) ; ಹಿರಿತನಕೂ ಕಿರಿತನವೇ ಮಿಗಿಲು ಇದರೊಳಿಲ್ಲ ಔಚಿತ್ಯದ ದಿಗಿಲು (ಗಚೇಶ. ೩-೨೮) : ಇನ್ನು ಅವನಿಗೆ ಯಾರ ದಿಗಿಲೂ ಇಲ್ಲ (ಅರ್ಜುಕ. ೦೪).

೩. ದಿಗ್ಭ್ರಮೆ ; ದಂಗು ; ಕಕ್ಕಾವಿಕ್ಕಿ. 'ದಿಗಿಲುಗೊಳು' ಪರಾ.

ದಿಗಿಲುಭುಗಿಲಾಗು = ಗಾಬರಿಯುಂಟಾಗು ; ತಳವುಂಳವಾಗು : ಗೌರಿಗೆ ಎದೆಯಲ್ಲೆಲ್ಲಾ ದಿಗಿಲುಭುಗಿಲಾಯಿತು (ನಡಡಾ. II, ೯೯೨).

[ದೇ.॥ ತಮಿ. ತಿಕಿಲ್, ತಿಕಿರ್ ; ತುಳು. ದಿಗಿಲ್ ; ತೆಲು. ದಿಗುಲು]

ದಿಗಿಲನೆ (ಅ). ದಿಗಿಲ್ ಎಂದು : ಪಗಲು ಕಡೆಗಾಣೆ ತಮವೆಂಬ ಗಿಡುಗಂ ಗಳ್ಕಿ ಖಗದ ಮಱಿಗಳು ಬಿಗುರ್ತೋಡಿ ಮನೆ ಮನೆಯ ಗೂಡುಗಳ ಪೊಕ್ಕೆದೆ ದಿಗಿಲನುರಿಯಲಂತ್ಯದ ಗುಣವ ಸಾರುತಸ್ಪೃಶ್ಯಮಾಗಿ ಮೊಗವೆಯ್ದೆ ಹೊತ್ತಿ ಹೊಗೆವಂತುರಿಯುತಿರ್ಪ ದೀಪಗಳ ಸಂತೈಸಲೈತಂದಂದದಿಂ ಪೂರ್ವ ನಗದಗ್ರದೊಳಗುದಯವಾದನಾ ತರಣಿ (ಭಾವಜೀ. ೭-೦೪). 'ಧಿಗಿಲನೆ' ಪರಾ. [ದಿಗಿಲ್ + – ಅನೆ$_1$]

ದಿಗಿಲಾನ್ (ಕ್ರಿ). ಭಯವನ್ನು ಹೊಂದು ; ಹೆದರು : ದಿಗಿಲಾಂತು ಪತ್ರೋಪಹಾರವ ತಂದಿತ್ತರವಗೆ (ಮೋಹತ. ೦೯-೭೨); ವಿಗಡವಾಗಿದೆ ನಿನ್ನ ಪಯಣಿಕ್ಕೆಯೆನ್ನದೆ ದಿಗಿಲಾಂತುದೀ ಗಳಿಗೆಯೊಳು ಅಗಲಿದೊಡೆಂತು ಜೀವಿಪೆನು (ಮೋಹತ. ೨೮-೩೯). [ದಿಗಿಲ್ + ಆನ್$_1$]

ದಿಗಿಲಿಸು (ಕ್ರಿ). ೧. ಶೋಭಿಸುವಂತೆ ಮಾಡು ; ವಿಜೃಂಭಿಸುವಂತೆ ಮಾಡು; ಮೆರೆಸು (?) : ಬಂದನೊಲವಿಂ ಗೊರವ ಕುಂಕುಮ ಗಂಧದನು ಲೇಪನದ ಕೊರಳೊಳಗೊಂದಿದೊಚ್ಚರಗವಡೆಗಳ ಕಂಬಳಿಯ ಕುಪ್ಪಸದ ಚಂದದಿಂ ಪೀಲಿಯ ಚಮರ ಛತ್ರಂ ದಿಗಿಲಿಸುತೆ ತುರಗಗಮನದಿ ಮುಂದೆ ನುಡಿಸುವ ಢಕ್ಕೆಗಳ ಕೊಂಬುಗಳ ರವ ಮೊಳಗೆ (ಶಂಕದಾ. ೧೩-೩೩) ; "ಅಲ್ಲಾಡಿಸು" (ಶಂಕದಾ. ಕೋಶ). ೨. (?) : ಸಚ್ಚಿದಾನಂದೈಕ ಭಕ್ತರು ನಿಚ್ಚಳದಿ ಹರಶರಣರೈತಂದುಚ್ಚವದಿ ಗಣಪರ್ವಗಳ ಮಾಡಿದರು ತಮ ತಮಗೆ ಅಚ್ಚರಿಯವಹ ಸಂಭ್ರಮಂಗಳ ಸಚ್ಚರಿತ ದಿಗಿಲಿಸುತೆ ಲಿಂಗದಿ ಬೆಚ್ಚುತಾನಂದಾರ್ಣವದೊಳೋಲಾಡುತೊಪ್ಪಿದರು (ಶಂಕದಾ. ೫-೨೮) ; "ದಂಗಾಗುವಂತೆ ವರ್ಣಿಸು" (ಶಂಕದಾ. ಕೋಶ).

[ದಿಗಿಲ್$_0$ + – ಇಸು$_3$]

ದಿಗಿಲು 'ದಿಗಿಲ್' ನೋ.

ದಿಗಿಲುಗನಸು (ನಾ). ಗಾಬರಿಗೊಳಿಸುವ ಕನಸು : ಹಗಲುಗನಸುಗಳು ದಿಗಿಲುಗನಸುಗಳು ಬರಲು ಜಾತ್ರೆಗಾಗಿ ಹೃದಯ ಹೃದಯಗಳ ಕೂಡಲಾಗುವುದು ದೇವಯಾತ್ರೆಗಾಗಿ (ಸೂರ್ಯಪಾ. ೩೪-೧೧).

[ದಿಗಿಲು (<ದಿಗಿಲ್) + ಕನಸು]

ದಿಗಿಲುಗೊಳ್, ದಿಗಿಲುಗೊಳು, ದಿಗಿಲುಗೊಳ್ಳು (ಕ್ರಿ). ೧. ಹೆದರು ; ಅಂಜು ; ಭಯಪಡು. 'ದಿಗಿಲುಗೊಳಿಸು' ಪರಾ. ದಿಗಿಲುಗೊಳು : ೨. ದಿಗ್ಭ್ರಮೆಗೊಳ್ಳು; ದಿಕ್ಕು ತೋಚದಂತಾಗು. ದುಗುಡದಿಂ ಬಳಲುವನು! ಹೇರನಿಳಿಸಿದೆಯಾ? ದಿಗಿಲುಗೊಳುವನು! ನೀನು ದಾರಿ ತಿಳಿಸಿದೆಯಾ? (ಕಎಪು. ೩೬-೦). ದಿಗಿಲುಗೊಳ್ಳು : ೧. ಮುಗಿಲ ಚರಿತೆಯ ಕೇಳಿರಿ! ಮೊಗವ ಕಂದಿಸಿ ನುಡಿಯ ನಂದಿಸಿ ದಿಗಿಲುಗೊಳ್ಳಲು ಬೇಡಿರಿ (ಕಎಪು. ೩೦-೦೪) ; ನಾನು ದಿಗಿಲುಗೊಂಡು ತಕ್ಷಣ ಎದ್ದು ಕಛೇರಿಗೆ ಬಂದೆ (ನಾಪೋಲೀ. ೩೮). ೨. ಗಿರಿಯ ದಿಗಿಲುಗೊಂಡು ಕಂಬದಂತೆ ನಿಂತುಕೊಂಡಿದ್ದ (ಮಾಡ್ಯುಹ. ೯೦) ; ಆದಿನಾಥ ದಿಗಿಲುಗೊಂಡು ಪ್ರಶ್ನಿಸಿದ (ಆಶ್ರಮಾ. ೧೨).

[ದಿಗಿಲು (<ದಿಗಿಲ್) + ಕೊಳ್$_1$]

ದಿಗಿಲುಗೊಳಿಸು (ಕ್ರಿ). ಹೆದರಿಕೊಳ್ಳುವಂತೆ ಮಾಡು ; ಭಯಪಡುವಂತೆ ಮಾಡು : (+). [ದಿಗಿಲುಗೊಳ್ + – ಇಸು$_3$]

ದಿಗಿಲುಗೊಳು 'ದಿಗಿಲುಗೊಳ್' ನೋ.

ದಿಗಿಲುಗೊಳ್ಳು 'ದಿಗಿಲುಗೊಳ್' ನೋ.

ದಿಗಿಲುಬಡಿ (ಕ್ರಿ). ಹೆದರಿಕೆಯಾಗು ; ಭಯವುಂಟಾಗು : ರಂಗಣ್ಣನಿಗೆ 'ಇದು ಏನೋ ಪೇಚೇ ಬಾತು' ಎಂದು ದಿಗಿಲುಬಡಿದರೂ ತೋರಗೊಡಲಿಲ್ಲ (ಅಪನಾ. ೧೩). [ದಿಗಿಲು (<ದಿಗಿಲ್) + ಬಡಿ$_1$]

ದಿಗಿಲುಬೀಳು (ಕ್ರಿ). ಗಾಬರಿಯುಂಟಾಗು ; ಅಂಜಿಕೆಯಾಗು ; ಭಯವಾಗು : ಅದು ಕೋಣವೋ ಬ್ರಹ್ಮರಾಕ್ಷಸವೋ ಎಂದು ಅವನಿಗೆ ದಿಗಿಲು ಬಿತ್ತು (ಕಂಬಹು. ೫೦). [ದಿಗಿಲು (<ದಿಗಿಲ್) + ಬೀಳು$_1$ (<ಬೀಟ್$_1$)]

ದಿಗಿಲುಹಾರು (ಕ್ರಿ). ದಿಗ್ಭ್ರಮೆಯಾಗು ; ಗಾಬರಿಬೀಳು : ಐದು ನಿಮಿಷಕ್ಕೊಂದು ರೈಲು ಬರುವ ಗದ್ದಲ ನೋಡಿಯೇ, ನನಗೆ ದಿಗಿಲುಹಾರಿದೆ (ಆಳನಿ. ೧೦೯). [ದಿಗಿಲು (<ದಿಗಿಲ್) + ಹಾರು$_2$ (<ಪಾಱು$_1$)]

ದಿಗಿಲೆನ್ (ಕ್ರಿ). ಹೌಹಾರು ; ಭಯಪಡು : ಸ್ಮರಜಸಾಧ್ವಸದಿಂ ದಿ[ಪಾಠಾಂ. ಧಿ]ಗಿಲೆಂದು ಗೂಡುವಾಯ್ದುದು ನೃಪಕನ್ನೆಗಾಗಳೆರ್ದೆ ನೋಡಲೊಡಂ ಮನುವಂಶಮೇರುವಂ (ವರ್ಧಪು. ೬-೧೩) ; ದಿಗಿಲೆಂದಿತ್ತು ವಿಯೋಗಿವೃಂದ ಹೃದಯಂ ವಾಸಂತಿಕಾಪಾಸದೊಳ್ (ಗಿರಿಕ. ೭-೩೮) ; ಬಸವಯ್ಯ ಹೊಗಳುತಿರಲ್ ಹದನಱಿದೆದೆ ದಿ[ಪಾಠಾಂ. ಧಿ]ಗಿಲೆನುತ್ತಾ ಕಿನ್ನರಯ್ಯನು ಮುಗಿದ ಕೈಗಳುವೆರಸಿ ಪರಿತಂದ (ಬಸಪು. ೨೯-೩೨) ; ಕಾಂತರಾಲಿಂಗನದೊಳು ಪೊಂಚಿರ್ದ ಕಾಮಿನಿಯರೆದೆ ದಿ[ಪಾಠಾಂ. ಧಿ]ಗಿಲೆನಲ್ (ಚೈಮಿಧಾ. ೨೬-೨೪). [ದಿಗಿಲ್ + ಎನ್$_1$]

ದಿಗಿಲೇಳು (ಕ್ರಿ). ದಿಗಿಲ್ ಎಂದು ಏಳು ; ರಭಸದಿಂದ ಏಳು : ದಿಗಿಲೆದ್ದ ಗಾಳಿಗಳ ಬಿಗಿದಿಟ್ಟು ಹಗಲ ಹೆಗಲಿನ ಮೇಲೆಯೊಂದು ಕಾಲನ್ನಿಟ್ಟು ಮುಗಿಲಿನೊಳು ಮುಗಿಯದಂತಾಗಿ ಮೇಲಕೆ ಸಾಗಿ ನಿಂತೆಯೊ ವಿರಾಟನಾಗಿ (ಗರಿ. ೯-೧೩). [ದಿಗಿಲ್ + ಏಳು$_1$ (<ಏಟ್$_1$)]

ದಿಗೀಶ (ನಾ). = ದಿಕ್ಪತಿ : ಶ್ರೀಶಭಾಷಾಧೀಶರುಂ ದೇವೇಶ ಮುಖ್ಯ ದಿಗೀಶರುಂ . . . ಯೋಗಾಚಾರ್ಯರುಂ ನೆರೆದೋಲಯಿಸುತಿರಲು (ಬಸಪು. ೨೪-೪೮). [ಸಂ.]

ದಿಗೀಶ್ವರ (ನಾ). = ದಿಕ್ಪತಿ : ಸರವೆತ್ತಿ ಪಾಡುವೈದೆಯರ ಗಾನಂ ದಿಗೀಶ್ವರರ ಕಿವಿಗಾನಂದಮಂ ಕಱಿಯೆ (ಜಿಬಪು. ೬-೫೪). [ಸಂ.]

ದಿಗುಜಾತ (ನಾ). ದಿಕ್ಕುಗಳ ಗುಂಪು,–ಸಮೂಹ : ಭೂತಳವನಂಬರವನಾ ದಿಗುಜಾತವನು ಬೆಳಗುತ್ತ ಸುಜನವ್ರಾತವೀಕ್ಷಿಸಲೈದಿತೀ ಪುನರ್ಭವದ ಸಂಸ್ಥಿತಿಯ (ನಿಭಾಗ. ೬-೧೧-೨೭). [<ಸಂ. ದಿಗ್ಜಾತ]

ದಿಗುಜಾಲ (ನಾ). = ದಿಗುಜಾತ : ಸೂಳು ಮಿಗಲಳ್ಳಿರಿದವುರು ನಿಸ್ಸಾಳ ಕೋಟಿಗಳುದಯದಲಿ ದಿಗುಜಾಲ ಜರಿಯಲು . . . ನಡೆದುದು ಸೇನೆ ರವಿನಂದನನ ನೇಮದಲಿ (ಕುವ್ಯಾಕ. ೨-೨). [<ಸಂ. ದಿಗ್ಜಾಲ]

ದಿಗುಡು 'ತಿಗುಡು$_1$' ನೋ.

ದಿಗುತಟ (ನಾ). = ದಿಕ್ತಟ : "ದಿಗುತಟ – ದಿಕ್ತಟ – ದಿಗಂತ" (ತದ್ಯಕೋ. ೧೯) ; ಪೂರ್ಣಶಶಿಮಂಡಲದವೊಲು ತನುಕಾಂತಿ ತಿವಿದುದು ನಿಖಿಳ ದಿಗುತಟವ (ಕುವ್ಯಾಕ. ೮-೧೯) ; ಹತ್ತು ದಿಗುತಟ ತುಂಬೆ ರಾಯರ ಮೊತ್ತ ಗಟ್ಟಿದ ಸೇನೆ ಸಹಿತವೆಯೆತ್ತಿ ಬಂದುದು ಜನಕಭೂಪನ ರಾಜಮಂದಿರಕೆ (ಕೌಶಿರಾ. ೨-೮). [<ಸಂ. ದಿಕ್ತಟ]

ದಿಗುದಂತಿ (ನಾ). = ದಿಗ್ಗಜ ೧ : ಅಗುರ್ವ್ವವೆತ್ತು ಪೋಲ್ತುದು ದಿಗುದಂತಿಯಂ ವಿಜಯಕಾರಣವಣ್ಣನ ಗಂಧವಾರಣ (ಎಕ. VII, ಚನ್ನಗಿ. ೩೯-೩೨ ; 1149) ; ಕೀರ್ತ್ತಿಯಷ್ಟದಿಗುದಂತಿಪರೀತ ಮಹೀತಳಾಗ್ರದೊಳು (ಎಕ. XV, ಅರಸೀ. ೨೧೭-೪೬ ; 1232) ; ಪ್ರಳಯಜಲನಿಧಿಯಂತೆ ದಳಬರಲಿಳೆ ಕುಸಿಯೆ ಕಮಠಂಗೆ ಮೇಲುಸುರುಲಿಯೆ ದಿಗುದಂತಿಗಳು ಮೊಣಕಾಲೂರಿ ಮನಗುಂದೆ (ಕುವ್ಯಾಲಾ. ೧೦-೪೦). [<ಸಂ. ದಿಗ್ದಂತಿನ್]

ದಿಗುನಿಚಯ (ನಾ). ದಿಕ್ಕುಗಳ ಗುಂಪು,–ಸಮೂಹ : ತನುರುಚಿ ವಿಶದದಿಂದಾವರಿಸಿ ದಿಗುನಿ [ಪಾಠಾಂ. ಪ್ರ]ಚಯದೊಳು ಥಳಥಳಿಸಿ ಬೆಳಗಿದುದೇನ ಬಣ್ಣಿಸುವೆ (ಬಸಪು. ೮-೦೦). [<ಸಂ. ದಿಙ್ನಿಚಯ]

ದಿಗುಪಾಲ (ನಾ). ದಿಕ್ಕಿನ ಒಡೆಯ,–ಪ್ರಭು ; ದಿಕ್ಪಾಲ : ಧ್ಯಾನದಲಿ ಕೈವಯಿಗಿದು ಶಂಕರ ನೀನೆ ಗತಿಯೆಂದೆನುತಲಾ ಶಶಿ ಭಾನು ದಿಗುಪಾಲರಿಗೆ ನಮಿಸುತ ಕೇಳಿ ನೀವೆಂದ (ಕುವ್ಯಾಅ. ೩-೨೮). [<ಸಂ. ದಿಕ್ಪಾಲ]

ದಿಗುಪಾಲಕ (ನಾ). = ದಿಗುಪಾಲ : ದಿಗುಪಾಲಕರು ನಿಜಮಂದಿರಕೆ ಸರಿದರು (ಕುವ್ಯಾಅ. ೧೩-೦೨). [<ಸಂ. ದಿಕ್ಪಾಲಕ]

ದಿಗುಬಂಧನ (ನಾ). ೧.=ದಿಗ್ಬಂಧನ ೧. ೨. (ಪ್ರಾಣಿಗಳಿಗೆ ಓಡಿ ಹೋಗಲುಂ ಅವಕಾಶವಿಲ್ಲದಂತೆ) ಎಲ್ಲ ಕಡೆಗಳಿಂದಲೂ ಅಡ್ಡಿ ಮಾಡುವಿಕೆ,–ನಿರ್ಬಂಧಪಡಿಸುವಿಕೆ: ಎಡೆಗೊಡದು ಬೇಂಟೆ ದಿಗುಬಂಧನಂ ಮಾಡು ಕಾಡೊಡೆಯನಂ ನೋನು ಸೊಕ್ಕಿನ ಧೂವಮಂ ಬೀಸು (ಹಪಕಾ. ೫-೫೯). [<ಸಂ. ದಿಗ್ಬಂಧನ]

ದಿಗುಬಲಿ (ನಾ). = ದಿಗ್ಬಲಿ ೨: ತಿಳಿಯದೊಡಲಂ ಕಡಿಕಡಿದು ದಿಗುಬಲಿಯನೀಯಲೆ ನೋಡುವಂ (ಬಸಪು. ೪೫-೨೮); ಅವರ ತನುವನು ಯುದ್ಧರಂಗದಲಿ ದಿಗುಬಲಿಯ ಕೊಡಿಸುವೆನು (ಕುವಾಆ. ೯-೭); ನಿಃಶಂಕರಹ ಮೂವರನು ದಿಗುಬಲಿಯ ಕೊಡುವೆನೆಂದೆನುತ (ಕಾತಿರಾ. ೩೯-೪೭); ಅವನಂ ಸೀಳ್ದು ದಿಗುಬಲಿಯನೀಯಬೇಕಲ್ಲದೆ ಬಾಳ್ವುದೇ ಕೆನುತಿಂದ್ರನಂ ವೃತ್ರಜಂಭರಾರ್ದಿಚ್ಚರಂದು (ಜಬಪು. ೪೯-೧೩). [<ಸಂ. ದಿಗ್ಬಲಿ]

ದಿಗುಬಲಿಗೊಡು (ಕ್ರಿ). ೧. ದಿಕ್ಕುಗಳಿಗೆ ಬಲಿಯನ್ನು ಕೊಡು. ೨. (ಆಲಂ) ಚೂರುಚೂರಾಗುವಂತೆ ಕಡಿದುಂ ಎಸೆ,–ಬಿಸುಡು: ಅಡವಿಯಲಿ ಹಿಂದೆಮ್ಮ ತಂದೆಯ ಕೆಡಹಿದಾತನೆ ಸಿಕ್ಕಿದೆಯಲಾ ಕಡಿದು ದಿಗುಬಲಿಗೊಡುವೆ- ಬಿಡ ಬಿಡ ಹೋಹೆಯೆನ್ನೆತ್ತ . . . ಎನುತಸುರ ರಾಮನನೆಚ್ಚ ಮೂದಲಿಸಿ (ಕಾತಿರಾ. ೩೩-೩೮); ನೆಲೆ ನಿಮ್ಮ ನೆನೆಯಲೊಲ್ಲದ ಕುಜೀವನಮಂ ಸುಡುವೆನೆಡುವೆ ದಿಗುಬಲಿಗೊಡುವೆಂ (ಕಂಕಳಂ. ೦೬). [ದಿಗುಬಲಿ + ಕೊಡು$_1$]

ದಿಗುಬಲಿಯಿಕ್ಕು (ಕ್ರಿ).=ದಿಗುಬಲಿಗೊಡು ೨: ಹೊಕ್ಕು ಹಗೆಗಳ ಹೊಯ್ದು, ದಿಗುಬಲಿಯಿಕ್ಕಿ ನನ್ನಯ ಹರುಷಜಲಧಿಯನುಕ್ಕಿಸಲು ಬೇಕು (ಕುವಾಭೀ. ೦-೫೫). [ದಿಗುಬಲಿ + ಇಕ್ಕು]

ದಿಗುಭಾಗ (ನಾ). ದಿಕ್ಕಿನ ಭಾಗ; ದೆಸೆ: ಮೇರುಪರ್ವ್ವತದ ದಕ್ಷಿಣ ದಿಗುಭಾಗದ ಧರತಕ್ಷೇತ್ರದೊಳು (ಇಆ. XII, ೯೬-೧೪; 1187); ಅಗಳಾವುದು ನೆಲನು ನಥ ದಿಗುಭಾಗವೆಲ್ಲಿಯದನೆಲು ಕಣಿಗಳು ತೂಗಿ ತುಜುಗಿದವರಿಭಟನ ಕರಿಘಟೆಯ ಮೈಗಳಲಿ (ಕುವಾಕ. ೩-೦೯). [<ಸಂ. ದಿಗ್ಭಾಗ]

ದಿಗುಭ್ರಮೆ (ನಾ). ದಿಕ್ಕುತೋಚದಿರುವಿಕೆ; ಗಾಬರಿ: ರಣಮಹೀಸಂತ ಮಸಶಾಂತೇಕ್ಷಣರು ದಿಗುಭ್ರಮೆಯಲಿ ಸ್ವಕೀಯ ಕ್ಷಣನವನು ರಚಿಸಿದರು (ಕುವಾಡ್ರೋ. ೦೫-೩೦). [<ದಿಗ್ಭ್ರಮೆ]

ದಿಗುಮಂಡಲ (ನಾ). = ದಿಙ್ಮಂಡಲ: ಉದ್ದಂಡ ವದಹತಿಗಿಳಿ ಚಲಿಸಿ ದಿಗುಮಂಡಲಂ ಕಿವುಡಾಗೆ ಬಹುವಾದ್ಯದ್ವನಿಗಳಿಂದ (ಬಸಪು. ೫-೧೪); ಇಳಿದುದೀ ಕಣನೊಳಗೆ ದಿಗುಮಂಡಲದ ಸಂಧ್ಯಾರಾಗವೆನೆ ಪರಿದಳಿತ ಚತುರಂಗದಲಿ ಮಸಗಿದುದರುಣಜಲರಾಶಿ (ಕುವಾಡ್ರೋ. ೧೫-೫೬). [<ಸಂ. ದಿಙ್ಮಂಡಲ]

ದಿಗುಮತಿ (ನಾ). ೧. (ಹಡಗಿನಲ್ಲಿ ಬಂದ) ಸರಕನ್ನು ಇಳಿಸುವಿಕೆ. ೨. ಆಮದು ಮಾಡಿಕೊಳ್ಳುವಿಕೆ: ಇತರ ದೇಶಗಳಿಂದ ಬರುವ ಸರಕುಗಳು (ದಿಗುಮತಿ)–ಹತ್ತಿಯಿಂದ ತಯಾರಾಗುವ ಬಟ್ಟೆಗಳೂ . . . ಉಪ್ಪೂ ಎಣ್ಣೆ (ಭೂಗೋಳ. ೪೯). 'ಎಗುಮತಿ', 'ಎಗುಮತಿ ದಿಗುವಂತಿ' ಪರಾ. [←ತೆಲು. ದಿಗುಮತಿ]

ದಿಗುಮುಖ (ನಾ).=ದಿಙ್ಮುಖ. 'ದಿಗುಮುಖಂಗಿಡಿಸು' ಪರಾ. [<ಸಂ. ದಿಙ್ಮುಖ]

ದಿಗುಮುಖಂಗಿಡಿಸು (ಕ್ರಿ). ದಿಕ್ಕುಗಳನ್ನೆಲ್ಲ ಮುಚ್ಚು; ದಿಕ್ಕುಕಾಣದಂತೆ ಮಾಡಂ: ಬಂದ ಮಳೆಯೊಳು ಕವಿದ ಕತ್ತಲೆ ಕರಂ ಹೆಚ್ಚಿ ಸಂದಣಿಸಿ ದಿಗುಮುಖಂಗಿಡಿಸಿ ಜಗಮಂ ಮುಚ್ಚೆ (ಇಕರ. ದೇ. ೩೩-೨). [ದಿಗುಮುಖ + ಕಿಡಿಸು (<ಕೆಡಿಸು)]

ದಿಗುರು 'ದಿಗರು' ನೋ.

ದಿಗುರುತ್ತರ (ನಾ). ಎದುರಂತ್ತರ: ಒರಟು ಉತ್ತರ; ಸೊಕ್ಕಿನಿಂದ ಕೂಡಿದ ಉತ್ತರ: ಅದಕ್ಕವನು ದಿಗುರುತ್ತರವ ಕೊಟ್ಟುದರಿಂದ ಹುಮಾಯೂನನು ಗುಜರಾಥವನ್ನೊಳನುಗ್ಗಲಿಕ್ಕೆ ಹೊರಟನು (ಪೋಡಾದ. ೩೭). [ದಿಗುರು (<ದಿಗರು) + ಉತ್ತರ]

ದಿಗುವಳಯ, ದಿಗ್ವಳಿಯ(ನಾ). = ದಿಗ್ವಲಯ: ಕಲಿಗಳುಬ್ಬಿನ ರೋಷ ತಾವಸ ತುಳುಕಿತೆನೆ ದಿಗುವಳಯದಲಿ ಕುದಿವೆಳಗ ಕುದಿಕುದಿದುತರುತಿರ್ದುದು ತಿಮಿರಲತೆ ಜಗವ (ಕುವಾಡ್ರೋ. ೧೩-೩೭); ಇಳಿದರಂದಾ ದುರ್ಗವ ದಿಗುವಳಯ ಬೆಸಲಾದಂತೆ (ತೊರಠಾ. ೬-೧೭-೦೦). **ದಿಗ್ವಳಿಯ**: ಪದ್ಮಾವತೀಲಬ್ಧ ವರಪ್ರಸಾದಂ ಯಶಸ್ಪ್ರಧಾಧವಳಿತ ದಿಗ್ವಳಿಯಸುಂ ... ಶ್ರೀಮನ್ಮಹಾಮಂಡಳೇಶ್ವರಂ ಪೂಂಡೂ[ರ]ಪಲ್ಲವರಸರ್ (ಕಇಆ. ೪೦-೩೯-೦೨; 1087). [<ಸಂ. ದಿಗ್ವಲಯ]

ದಿಗುವಿಜಯ (ನಾ).=ದಿಗ್ವಿಜಯ ೧: ಭುಜಪರಾಕ್ರಮಚಕ್ರಿಯನು ದಿಗು ವಿಜಯವಿಕ್ರಮಚಕ್ರಿಯನು ನೃಪ ಸೃಜಿಸಿದನು ನಿಜಮಹಿಮೆಯಲಿ ದಶರಥ ಮಹೀಪತಿಯ (ತೊರಠಾ. ೦-೩-೦೬). [<ಸಂ. ದಿಗ್ವಿಜಯ]

ದಿಗ್ಗಜ (ನಾ). ೧. ಎಂಟು ದಿಕ್ಕುಗಳಲ್ಲಿಯೂ ಭೂಮಿಯನ್ನು ಹೊತ್ತಿರುವ ಐರಾವತವೇ ಮೊದಲಾದ ಎಂಟು ಆನೆಗಳಲ್ಲಿ ಒಂದು: P ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ ಮತ್ತು ಸುಪ್ರತೀಕ ಇವು ಅಷ್ಟ ದಿಗ್ಗಜಗಳು: "ಐರಾವತಂ . . . ಸುಪ್ರತೀಕಮೆನೆ ಪರಿವಿಡಿಯ ದಿಗ್ಗಜಂ" (ಪುಂಗಠಾ. ೦೬-೦೮); ಅಹಿಪತಿ ಪೆಡೆಯಂ ಬಿರ್ಚಿದಂ ದಿಗ್ಗಜಂ ಭೋರೆನೆ ದಾನಾನಾಸಾರಮಂ ಸೂಸಿದುವು ಕಮಠನುಂ ತೂಗಿದಂ ಹರ್ಷದಿಂದಂ (ಜಗವಿ. ೩-೪); ನೂಕಿದನು ಭಗದತ್ತನನಿಬರ ಮೇಲೆ ದಿಗ್ಗಜವ (ಕುವಾಡ್ರೋ. ೩-೪೦): ದಿಗ್ಗಜಗಳು ಭೂಮಿಯನ್ನು ಅಷ್ಟದಿಕ್ಕುಗಳಲ್ಲಿಯೂ ಹೊತ್ತು ಕೊಂಡಿರುವುವು (ಜ್ಯೋತಿರ್ವಿ. ೧೦). ೨. (ಆಲಂ) ಪಾಂಡಿತ್ಯ, ಬಹುಶ್ರುತತ್ವ, ಪರಾಕ್ರಮ ಮೊದಲಾದಂವುಗಳಲ್ಲಿ ಖ್ಯಾತಿಯನ್ನು ಹೊಂದಿದ ವ್ಯಕ್ತಿ; ಉದ್ದಾಮ ವ್ಯಕ್ತಿ: ಅವರು ಕನ್ನಡದ ದಿಗ್ಗಜಗಳಲ್ಲಿ ಒಬ್ಬರು (ಕೂಥಿ). ೩. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ: ಅಷ್ಟ, ವಸು, ಗಜ, ದಿಗ್ಗಜ . . . ದಿಗ್ದಂತಿ ಇಂತಿನಿತುಂ ರಕ್ಕೆ ಹೆಸರು (ವ್ಯವಹಾ. ೧೦-೧). [ಸಂ.]

ದಿಗ್ಗಜರಾಜಿ (ನಾ). ದಿಗ್ಗಜಗಳ ಗುಂಪು,–ಸಮೂಹ; ಐರಾವತವೇ ಮೊದಲಾದ ಎಂಟು ಆನೆಗಳು: ತಿದಿಪೋಲ್ ದಿಗ್ಗಜರಾಜಿ ಗೋಣ್ಮುಸಿದು ವಕ್ಕೃಶ್ವಾಸಮಂ ಬೀಱುತಿರ್ದುದು . . . ಖಳನೃಪಾಲಾಕ್ಷೌಹಿಣೀಭಾರದಿಂ (ಜಗವಿ. ೦-೩೦). [ದಿಗ್ಗಜ + ರಾಜಿ$_1$]

ದಿಗ್ಗನೆ (ಅ). ತಕ್ಷಣ; ಕೂಡಲೆ: ಒರ್ವಳೆ ದಿಗ್ಗನೆಯಿಂದ ಬಂದಳೀ ತರುಣಿ ಬನಕ್ಕೆ (ಆನಂಪು. ೬-೧೩); ಇವರನ್ನು ಕಂಡು ದಿಗ್ಗನೆದ್ದನು (ಪುನಿಪಾ. ೧೫೦); ನಮ್ಮ ಪೂರ್ವದ ಪರಾಕ್ರಮಿಗಳು ದಿಗ್ಗನೇಳುವರು (ಕಬ್ಮಹೂ. ೯೦). [ದಿಗ್$_0$ + – ಅನೆ$_1$]

ದಿಗ್ಗವಿಗೆ (ನಾ). ಒಂದಂ ಊರಿನ ಹೆಸರುಂ: ಆ [ಹೊ]ಲಂ ನಾಗವಾವಿಯ ದಿಗ್ಗವಿಗೆಯ ಅಱಲೂರ ಎಡೆವಾ ಅನದ [ಕೆ]ಳಗೆ ಭ ಟ್ಟಾ ದ ರ್ಶ ನ ವ್ಯಾಖ್ಯಾತೃಗೆ ಮತ್ತರು ೩೫ ನ್ಯಾಸವ್ಯಾಖ್ಯಾತೃಗೆ ಮತ್ತರು ೩೦ ಪ್ರಭಾಕರ ವ್ಯಾಖ್ಯಾತೃಗೆ ಮತ್ತರು ೪೫ (ಕಇಆ. ೬-೨-೨೦೩; 1058). [?]

ದಿಗ್ಗೇಡಿ 'ದಿಕ್ಕುಗೇಡಿ' ನೋ.

ದಿಗ್ಗತ (ಗು). ದಿಕ್ಕುಗಳನ್ನು ಮುಟ್ಟಿದ,–ತಾಗಿದ: ವಿಲಸದ್ಧವಳ ಸ ಮ್ಯ ಗ್ಯ ನ ತರ ಯದ್ಧರಾಖಿಳ ದಿಗ್ಗ[ಗ್ಯ]ತಯಶೋರಾಶಿ ಭಕ್ತ ಸಮುದ್ಧರಣ ಬಸವ (ಬಸಪು. ೩೮-೦). [ಸಂ.]

ದಿಗ್ಗಿಗೆ (ನಾ). ಕೆರೆ ; ಕೊಳ ; ಸರೋವರ : ಎಸೆದಿಬ್ದವೊ ಸೇವ್ಯಮಾಗಿ ನಾನಾವಿಧಮಪ್ಪ ಚತ್ರವಱವಂಟಗೆ ದಿಗ್ಗಿಗೆ ಸಾಲ್ಕ ನನ್ದನಂ ಬಾವಿ ತಟಾಕಮಗ್ಗಿಟ[ಗೆ]ಯಾರವೆ [ವಿಷ್ಣು]ಗೃಹಂ ಶಿವಾಲಯಂ (ಕಇ. ೪, ೧೩-೪೦ : 1080). [<ಪ್ರಾ. ದಿಗ್ಗಿಆ./ಸಂ. ದೀರ್ಘಿಕಾ]

ದಿಗ್ಜಯ (ನಾ). = ದಿಗ್ವಿಜಯ ೧. 'ದಿಗ್ಜಯಂಗೆಯ್' ಪರಾ. [ಸಂ.]

ದಿಗ್ಜಯಂಗೆಯ್ (ಕ್ರಿ). ದಿಗ್ವಿಜಯವನ್ನು ಮಾಡು : ವನಿತಾಸಂಕುಳ ಮಿಂಬುಕೆಯ್ಕೆ ನಿಜತೇಜಂ ದಿಗ್ಜಯಂಗೆಯ್ಕೆ . . . ಕೃಷ್ಣನ ಕಾರುಣ್ಯ ಮನವ್ಪುಕೆಯ್ದಂರಸುಗೆಯ್ದಂ ಲೀಲೆಯಿಂದಾಹುಕಂ (ಜಗವಿ. ೭-೨).

[ದಿಗ್ಜಯ + ಕೆಯ್[1]]

ದಿಗ್ಜಯೋದ್ಯಮ (ನಾ). ದಿಕ್ಕುಗಳನ್ನು ಗೆಲ್ಲುವ ಕಾರ್ಯ; ದಿಗ್ವಿಜಯದ ಪ್ರಯತ್ನ : ಆತನ ದಿಗ್ಜಯೋದ್ಯಮವನಾಂ ಏಗೆ ವೇಟದೊಡೇನೊ (ಪುಷ್ಪಪು. ೩-೧೯). [ದಿಗ್ಜಯ + ಉದ್ಯಮ]

ದಿಗ್ದಂತಿ (ನಾ). ೧.=ದಿಗ್ಗಜ ೧ : ವನನಾಗಾರಿಯನಾಂತ ದಂತಿಶಿಶುವೋಲ್ ದಿಗ್ದಂತಿಯೊಳ್ ಪೋರ್ದ ಹೀನನವೋಲ್ (ಶಾಂತಿಪು. ೫-೨೭) ; ಆ ಗಂಭೀರ ದಿಗ್ದಂತಿ, ತೊರೆದು ಗಾಂಭೀರ್ಯಮಂ, ತರಳಚಂಚಲಚಿತ್ತದಿಂ ಬೀದಿ ವರಿವುದಯ್ ದೆಸೆದೆಸೆಗೆ (ಶ್ರೀಧಾಪು. ೯೩-೪೬೨). ೨. = ದಿಗ್ಗಜ ೨ : ಕನ್ನಡ ನಾಡಿನ ಇಬ್ಬರು ಹಿರಿಯ ದಿಗ್ದಂತಿಗಳಿಂದ ನನಗಾಗಿರುವ ಮಹೋಪಕಾರವನ್ನು ಕೃತಜ್ಞತೆಯಿಂದ ಕರ ಜೋಡಿಸಿ ಸ್ಮರಿಸುತ್ತೇನೆ (ಸವತಿ. XV ಪ್ರಸ್ತಾವನೆ). ೩. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ : ವ್ಯೋಮದ್ವಯಂ ಮುಂತೆ ದಿನೇಶ ಪಾವಕರ್ ತಾಮೊಂದಿ ದಿಗ್ದಂತಿಯೊಳಾಗೆ ವಿಶ್ರಮಂ (ಧಂರೋಂಬು. ೨-೦೫೯).

[ಸಂ. ದಿಗ್ದಂತಿನ್]

ದಿಗ್ದಂತಿಯೂಥ (ನಾ). ದಿಗ್ಗಜಗಳ ಗುಂಪು,–ಸಮೂಹ : ದಿಗ್ದಂತಿ ಯೂಥಕ್ಕೆ ಚಿಬ್ಬುಮನುದ್ಯಾನವನಕ್ಕೆ ಪೂದುಜುಗಲಂ ... ಮೆಯ್ವೆರ್ಚಿಸಲ್ ಸಾಲ್ದು ತಳ್ತಮರ್ದೊಪ್ಪಿರ್ದುದುದೀರ್ಣಕೀರ್ಣವವನಾಂಭಃಶೀಕರಂ ಶ್ರೀಕರಂ (ಪುಷ್ಪಪು. ೧೦-೭೩). [ದಿಗ್ದಂತಿ + ಯೂಥ]

ದಿಗ್ದರ್ಶಕ (ಗು). ೧. ದಾರಿತೋರಿಸುವ ; ಮಾರ್ಗದರ್ಶನ ಮಾಡುವ. (ನಾ). ೨. ನಾಟ್ಯ, ನಾಟಕ,ಚಲನಚಿತ್ರ ಮೊದಲಾದುವುಗಳನ್ನು ನಿರ್ದೇಶಿಸುವವನು ; ಸೂಚನೆಗಳನ್ನು ಕೊಡುವವನು : ದಿಗ್ದರ್ಶಕ ಹಾಗೂ ಕಲಾವಂತರು ಒಬ್ಬರಿಗೊಬ್ಬರು ಪೂರಕವಾಗಿರುವರು (ಪ್ರಬಂಧ. ೩೯). 'ನಾಟ್ಯದಿಗ್ದರ್ಶಕ' ಪರಾ. [ಸಂ.]

ದಿಗ್ದರ್ಶನ (ನಾ). ೧. ದಿಕ್ಕುಗಳನ್ನು ತೋರಿಸುವುದಂ. ೨. ನಾಟ್ಯ, ನಾಟಕ, ಚಲನಚಿತ್ರ ಮೊದಲಾದುವನ್ನು ನಿರ್ದೇಶಿಸುವುದು. ೩. ಸ್ಥೂಲವಾದ ನಿರೂಪಣೆ,–ವಿವರ : ಅದರ ದಿಗ್ದರ್ಶನವು ಮಾತ್ರ ನಮಗೆ ದೊರೆತಿದೆ (ತಪನಿ ೧೩) ; ಆ ಉತ್ತರದ ದಿಗ್ದರ್ಶನವನ್ನು ಮಾತ್ರ ಮಾಡುವೆವು (ವಚರ. ೨೯). ೪. ಉತ್ತರಮುಖಿ ; ದಿಕ್ಸೂಚಿ.

[ಸಂ.]

ದಿಗ್ದಾಹ (ನಾ). ದಿಕ್ಕುಗಳಲ್ಲಿ ಅಸ್ವಾಭಾವಿಕವಾಗಿ ಬೆಂಕಿ ಕಾಣಿಸಿಕೊಳ್ಳುವ ಉತ್ಪಾತ; ಅಪಶಕುನಗಳಲ್ಲಿ ಒಂದು; ಈ ರೀತಿ ಕಾಣಿಸಿಕೊಳ್ಳುವ ಬೆಂಕಿಯು ರಾಜಭಯ, ದೇಶನಾಶ ಮುಂತಾದಂವನ್ನು ಸೂಚಿಸುತ್ತದೆ ಎಂಬ ನಂಬಿಕೆಯಿದೆ : ರಜಮುಂ ದಿಗ್ದಾಮಮುಂ ಸಂದಣಿಸೆ ಪರುಷವಾತಾಹತಿ ಪ್ರೋಚ್ಚಳತ್ಸಾಪಜ ಸೇನಾಕುಂಭಸಿಂದೂರಮು ಮೊದವಿದ ದಿಗ್ದಾಹಮುಂ ಕೂಡೆ (ಆದಿಪು. ೦೪-೮೯). [ಸಂ.]

ದಿಗ್ದೇಶ (ನಾ). ದಿಕ್ಕುಗಳ ಪ್ರದೇಶ,-ಭಾಗ : ಪಕ್ಷಿರಾಜನ ತೀಕ್ಷ್ಣದಕ್ಷಿ ಯೋಲ್ ನೋಡಿದನು ಕಣ್ಣಟ್ಟ ದಿಗ್ದೇಶಮಂ (ಶ್ರೀಧಾಪು. ೧೫೭-೧೪೦).

[ಸಂ.]

ದಿಗ್ದೇವತೆ (ನಾ). ದಿಕ್ಕಿನ ದೇವತೆ : ದೆಸೆದೆಸೆಯೆನಿತಕ್ಕಂ ದರಹಸಿತಾನನ ವಳಯದಂತೆ ಸೊಗಯಿಪ ಪದ್ಮಾದಿ ಸರೋವರಂಗಳೊಳ್ ಪಳಯಿಸಿದ ರಿವರ್ ದೇವ ಪೆಸರೆ ದಿಗ್ದೇವತೆಯರ್ (ಅನಂಪು. ೪-೭೪).

[ಸಂ. ದಿಗ್ದೇವತಾ]

ದಿಗ್ಧ (ಗು). ೧. ಲೇಪನ ಮಾಡಿದ ; ಬಳಿದ ; ಲೇಪಿಸಿದ: "ಉಪಲಿಪ್ತಂ ದಿಗ್ಧಂ" (ವಸ್ತುಕೋ. ೦೦೫-೪೧) ; ವರಮಂಶಿವಭಕ್ತನಾ ವಿಷ್ಣುವೆಂತೆನಲ್ ಭಸ್ಮ ದಿಗ್ಧಾಂಗಂ ತ್ರಿಪುಂಡ್ರಾಂಕಿತೋತ್ಕೃಷ್ಟಲಂ (ಪದ್ಮಕಾ. ೦೧-೦೬೦) ; ವ್ಯಾಧ ವಿಷದಿಗ್ಧಬಾಣಕ್ಕುರುಳಿ ಬೀಳಲ್ಕೆ ವೆಣ್ಣಾನೆ ತಾಂ ಗಂಡಾನೆ ಸೊಂಡಿಲಿಂದದನಪ್ಪಿ (ಶ್ರೀರಾಪು. ೬೭-೪೭೨). ೨. ಬೆಳೆದಿರುವ ; ವೃದ್ಧಿ ಹೊಂದಿರುವ. (ನಾ). ೩. ವಿಷವನ್ನು ಬಳಿದ ಬಾಣ : "ದಿಗ್ಧಃ, ಲಿಪ್ತಃ – ೨ ವಿಷಾಕ್ತೆ, ನಂಜು ಪೂಸಿದ ಕೋಲು, ವಿಷ ಬಳಿಯಲ್ಪಟ್ಟ ಸರಳು, ವಿಷಬಾಣ" (ಸಿದ್ಧಾಂತಿ. ೨೬೩). ೪. ಎಣ್ಣೆ ; ತೈಲ. ೫. ಬೆಂಕಿ ; ಅಗ್ನಿ. [ಸಂ.]

ದಿಗ್ಧವ (ನಾ). = ದಿಕ್ಪಾಲ : ಇವನಿಂದಂ ಕಣ್ಣೆನೇಳುಂ ಕಡಲ ಕಡೆಯನೇಳುಂ ಕುಭೃತ್ಕೂಟಮಂ ದಿಗ್ಧವದಂತಿವ್ರಾತಮುಂ (ಎಳ. VII, ಶಿವಮೊ. ೬೪-೪ ; 1112 ?). [ಸಂ.]

ದಿಗ್ಧಿಕೆ (ನಾ). ಒಂದು ಬಗೆಯ ಸಸ್ಯ ; ನೆಲಗುಳ್ಳ : "ದಿಗ್ಧಿಕಾ –ನೆಲಗುಳ್ಳ" (ಓಷಧಿ. ೭೫). [?]

ದಿಗ್ಮೂಮ (ನಾ). ದಿಕ್ಕುಗಳಲ್ಲಿ ಅಸ್ವಾಭಾವಿಕವಾಗಿ ಕಾಣಿಸಿಕೊಳ್ಳುವ ಹೊಗೆ : ರಜಮುಂ ದಿಗ್ಮೂಮಮುಂ ಸಂದಣಿಸೆ ಪರುಷವಾತಾಹತಿ ಪ್ರೋಚ್ಚಳತ್ಸಾಪಜ ಸೇನಾಕುಂಭಸಿಂದೂರಮುಮೊದವಿದ ದಿಗ್ದಾಹಮುಂ ಕೂಡೆ . . . ದೆಸೆ ಬರ್ವಂತೆ ಬಂದೊಡ್ಡಿ ನಿಂದಂ (ಆದಿಪು. ೦೪-೮೯). 'ದಿಗ್ದಾಹ' ಪರಾ. [ಸಂ.]

ದಿಗ್ಬಂಧ (ನಾ). ೧. ತಡೆಯುವಿಕೆ ; ನಿರ್ಬಂಧ ; ನಿಗ್ರಹ. ೨. ಜಪ ಹೋಮಾದಿ ಕರ್ಮಗಳಲ್ಲಿ ಮಾಡಬೇಕಾದ ಒಂದು ಆಂಗಿಕ ಕ್ರಿಯೆ: ಕಾಯ ದಿಗ್ಬಂಧ ಪ್ರಣಾಮ ವಿಧೇಯವರ್ಚನೆ ಯೋಗಸಿದ್ಧಿ ನಿಕಾಯ ನಾಲ್ಕರ ಇಂದ್ರಿಯ ಸ್ಥಿತಗತಿಯನಾರ್ಕೆದು ಆಯವನು ಎವರಿಸುತ (ಕುವ್ಯಾಕಾ. ೪-೩೫). [ಸಂ.]

ದಿಗ್ಬಂಧನ (ನಾ). ೧. ಕೇಡನ್ನು ತಡೆಯುವುದಕ್ಕಾಗಿ ಮಂತ್ರಶಕ್ತಿಯಿಂದ ಮಾಡುವ ದಿಕ್ಕುಗಳ ಬಂಧನ : ಮಂತ್ರಸಿದ್ಧಿ ಸೂಚಕವಾದ ಮಾತೃಕಾ ಚಕ್ರ, ಸರ್ವತೋಭದ್ರ, ಕೂರ್ಮಚಕ್ರ, ದಿಗ್ಬಂಧನ, ರಕ್ಷಾಯಂತ್ರಾದಿ ಗಳ ಕ್ರಮವನಱಿತು (ವಿಕೇಳ. ೯೦) ; ಅಸುರ ಮಾಯಾಮಂತ್ರಮಂ ಜಪಿಸಿ ಫಣೆಯೊಳಂ ಭುಜಮನು ಧರಿಸಿ ದಿಗ್ಬಂಧನಗಳಗ್ಗೈದು (ಸಪಮೋ. ೩೬-೦೩). ೨. ಅಂಗಾಂಗಗಳ ಚಲನವಿರದಂತೆ ಮಂತ್ರಶಕ್ತಿಯಿಂದ ಬಂಧಿಸುವಿಕೆ. ೩. (ಎಲ್ಲಾ ಕಡೆಯಿಂದಲೂ ಉಂಟಾದ) ನಿರ್ಬಂಧ,–ಇಕ್ಕಟ್ಟು : ಸನ್ನಿವೇಶದ ದಿಗ್ಬಂಧನದಿಂದ, ಅಂದು ನನ್ನ ಕೈಕಾಲು ಕಟ್ಟಿದ್ದವು (ನಿಕಾಂ. ೧೦೮). [ಸಂ.]

ದಿಗ್ಬಲಿ (ನಾ). ೧. ದಿಕ್ಕುಗಳಿಗೆ ಕೊಡುವ ಬಲಿ ; ಮನೆಯಂ ವಯಂದೆ ದಿಕ್ಕುಗಳಿಗೆ ಅನ್ನವನ್ನು ಎಸೆದು ಮಾಡುವ ಬಲಿ ; ಬಲಿಕೊಟ್ಟ ಪ್ರಾಣಿಯ ಮಾಂಸದ ತುಂಡುಗಳನ್ನು ಹಾಗೂ ರಕ್ತವನ್ನು ಅಥವಾ ಕೆಂಪುಬಣ್ಣದ ಅನ್ನವನ್ನು ದೇವಾಲಯ ಹಾಗೂ ಹಳ್ಳಿಯ ಸುತ್ತಲೂ ದಿಕ್ಕುಗಳಿಗೆ ಬಲಿಯೆಂದು ಚೆಲ್ಲುವಿಕೆ : ಗೃಹಪ್ರವೇಶದ ಸಂದರ್ಭದಲ್ಲಿ ಮನೆಯ ಯಜಮಾನರು ಗೃಹಶಾಂತಿಗಾಗಿ ದಿಗ್ಬಲಿಯನ್ನು ಕೊಟ್ಟರು (ಕೂಡಿ). ೨.. (ಆಲಂ) ಕೊಂದು ಬಿಸುಡುವಿಕೆ : ತನ್ನವರಿಗಕ್ಷಿಣೆ ರಕ್ಕಸರ ತಲೆಗಳನರಿದು ದಿಗ್ಬಲಿಯ ಕೊಟ್ಟನಂತುಗ್ರದಿಂದ (ವೀ ಶಿ ಪು. ೨-೦೦-೯). [ಸಂ. [

ದಿಗ್ಬಲಿಗೆದರು (ಕ್ರಿ). ದಿಕ್ಕುದಿಕ್ಕಿಗೆ ಎಸೆ ; ದಿಕ್ಪಾಲಾಗಿ ಬಿಸುಡು : ಆ ಭಿಕಾರಿ ರಾಯನನ್ನೂ ಅವನ ಜನರನ್ನೂ ತುಂಡುತುಂಡಾಗಿ ಕತ್ತರಿಸಿ, ದಿಗ್ಬಲಿಗೆದರಿ, ಅಳ್ಳಾಡಿಸಿ ಧ್ವಂಸ ಮಾಡಿಬಿಡುವನು (ಮಂತ್ರಶ. ೪೭-೧೨).

[ದಿಗ್ಬಲಿ + ಕೆದರು (<ಕೆದಱ್$_1$)]

ದಿಗ್ಬರಿತ (ಗು). ದಿಗಂತವನ್ನು ತುಂಬಿದ,–ವ್ಯಾಪಿಸಿದ : ಕುಮಾರಸ್ವಾಮಿಗಂದು ಬತ್ತರಿಸಿದಂ ವೇದಾಂತಶಾಸ್ತ್ರಮಂ ದಕ್ಷಿಣಾಮೂರ್ತಿ ದಿಗ್ಬರಿತಕೀರ್ತಿ (ವೀರಶೈವು. ೫-೨೦-೧೮). [ಸಂ.]

ದಿಗ್ಭವ (ನಾ). ದಿಕ್ಕಿನಿಂದ ಹುಟ್ಟಿದುದು ; ವೈಹಾಯಸ, ಭೌಮ, ದಿಗ್ಭವ, ಸೈನ್ಯಜ, ಗೃಹೋದ್ಭೂತಗಳೆಂಬ ಐದು ರೀತಿಯ ಉತ್ಪಾತಗಳಲ್ಲಿ ಒಂದು : ವೈಹಾಯಸ ಭೌಮ ದಿಗ್ಭವ ಸೈನ್ಯಜ ಗೃಹೋದ್ಭೂತಂಗಳಯ್ದು ತೆಱದುತ್ಪಾತಂಗಳೊಡನೊಡನೆ ನೆಗೆದುವಾಗಳ್ (ಶಾಂತಿಪು. ೩-೧೦೬.ವ). 'ದಿಗ್ದಾಹ' ಪರಾ. [ಸಂ.]

ದಿಗ್ಭ್ರಮೆ (ನಾ). ದಾರಿ ಅಥವಾ ಮಾರ್ಗ ತಪ್ಪಿಹೋದ ಸ್ಥಿತಿ ; ಉಪಾಯ ತೋರದ ಸ್ಥಿತಿ ; ವಿಸ್ಮಯ ; ಗಾಬರಿ : ಇನಮಂಡಲಕೆ ದಿಗ್ಭ್ರಮೆಯಾಯ್ತು ನಭದಲಿ ಸುಳಿವ ಸುರರ ವಿಮಾನತತಿ ಚೆಲ್ಲಿದವು ದೆಸೆ ದೆಸೆಗೆ (ಶಾಪ್ರಾಅ. ೨೦-೨೯); ಯಾವ ದಿಕ್ಕಿನಲ್ಲಿಯೂ ಏನೇನೂ ಕಾಣುತ್ತಿರಲಿಲ್ಲ ನಾವಿಕರಿಗೆ ದಿಗ್ಭ್ರಮೆಯುಂಟಾಗಿದೆಯೆಂದು ಗೊತ್ತಾಯಿತು (ಶಾಕುಂ.೩).

[ಸಂ. ದಿಗ್ಭ್ರಮ]

ದಿಗ್ಭ್ರಮೆಗೊಳಿಸು (ಕ್ರಿ). ಬೆರಗುಗೊಳಿಸು ; ವಿಸ್ಮಯವನ್ನುಂಟುಮಾಡು : ಕುಂಚವನ್ನಾಡಿಸುವುದರಲ್ಲಿ ಅಜಂತಾ ಕಲಾಕಾರರ . . . . ನಿರ್ಮಾಣತಂತ್ರ ವಿಶ್ವದ ಎಲ್ಲಾ ಕಲಾವಿಮರ್ಶಕರನ್ನು ದಿಗ್ಭ್ರಮೆಗೊಳಿಸಿದೆ (ಧಾರದ. ೩೨೫). [ದಿಗ್ಭ್ರಮೆ + ಕೊಳ್$_1$ + – ಇಸು$_3$]

ದಿಗ್ಭ್ರಮೆಹಿಡಿಸು (ಕ್ರಿ). ಗಾಬರಿಗೊಳಿಸು ; ವಿಸ್ಮಯತರು : ಭಿನ್ನ ಭಿನ್ನ ಪ್ರಭಾವಗಳ ಅಲೆಗಳು ಸಾಮಾನ್ಯರಿಗೆ ದಿಗ್ಭ್ರಮೆಹಿಡಿಸುವಂತೆ ಹೊಯ್ದಾಡುತ್ತಿವೆ (ರಿಕ್ಷದ. ೬೯).

[ದಿಗ್ಭ್ರಮೆ + ಹಿಡಿಸು (<ಪಿಡಿಯಿಸು)]

ದಿಗ್ಭ್ರಾಂತ (ಗು). ೧. ದಿಕ್ಕು ತೋಚದಂತಹ; ಗಾಬರಿಗೊಂಡ. (ನಾ). ೨. ಗಾಬರಿಗೊಂಡವನು; ದಿಗ್ಭ್ರಮೆಗೊಳಗಾದವನು : ಅಲ್ಲಮಪ್ರಭು ಒಂದು ಕ್ಷಣ ಆಗಿಹೋದ ಅಪಘಾತಕ್ಕೆ ಮರುಗಿ ದಿಗ್ಭ್ರಾಂತನಾಗಿ ಶೋಕಿಸುತ್ತಾನೆ (ಶೂನ್ಯಸಂ. ೦೩೯) ; ವೈತರಣೀ ನದಿಯ ಪರಿಸರ. ಅದನ್ನು ನೋಡಿ ಮುನಿ ದಿಗ್ಭ್ರಾಂತನಾಗುತ್ತಾನೆ (ಸಡಾ. I, ೩೪೦). [ಸಂ.]

ದಿಗ್ಭ್ರಾಂತಿ (ನಾ). = ದಿಗ್ಭ್ರಮೆ. [ಸಂ.]

ದಿಗ್ಭ್ರಾಮಿತ (ನಾ). ಗದಾಯುದ್ಧದ ವರಸೆಗಳಲ್ಲಿ ಒಂದು : ವಿಳಂಬಿತ ಮಾಕುಂಚಿತಮಾಸ್ಫೋಟಿತಮಾಕ್ಷಿಪ್ತಮುದ್ಭ್ರಾಮಿತಂ ದಿಗ್ಭ್ರಾಮಿತಂ . . . . ಎಂಬೆಂಟುಂ ತೆಱದ ಪ್ರಹರಣಂಗಳೊಳಂ ಅತಿಪರಿಚಿತರಾಗಿ ವೈಶಾಖ ಸ್ಥಾನದೊಳ್ ನಿಂದು (ಗದಾಯು. ೮-೦ ವ). 'ಉದ್ಭ್ರಾಮಿತ' ಪರಾ.

[ಸಂ.]

ದಿಗ್ಮದನಿ (ನಾ). = ದಿಗ್ಗಜ ೧ : ಮದಧಾರಾವೃಷ್ಟಿ (ಪಂಕಂ) ಮಸಗಿಸೆ ಪೆಲನಂ ಘೋಷಘಂಟಾರವಂ ದಿಗ್ಮದನಿಃಶ್ರೋತ್ರಕ್ಕೆ ಸಂಪಾದಿಸೆ ಬಧಿರತೆಯಂ. . . ಬಂದುದಂದನ್ಯಚಕ್ರಕ್ಕಿದು ಕಳ್ಪಾಂತಾಧ್ರಮೆಂಬಂತಃದಿತರಿಪುವನೋದ್ಯೈನ್ಯಮುಗ್ರೇಭಸೈನ್ಯಂ (ಪುಪ್ಪಪು. ೩-೯). [ಸಂ. ದಿಗ್ಮದನಿನ್]

ದಿಗ್ಮಣಿ (ನಾ). ದಿಕ್ಕಿನ ಒಡೆಯ,–ಪ್ರಭು ; ದಿಕ್ಪತಿ : ವಿಗ್ರಹಸಮಯ ನಿಗ್ರಹ ಹಿತಾನುಗ್ರಹಗರಳಭುಗ್ರಸನನುತದಿಗ್ಮಣಿ ಶೈವಾಗ್ರಗಣ್ಯವುದಗ್ರ ಬಲಶೌರ್ಯ . . . ಭಕ್ತಿಸಮಗ್ರ ಬಸವೇಶ (ಬಸಪು. ೫೪-೬೬); ದಿಗ್ಮಣಿ ನುತಪಾದಶತಪತ್ರ ಫಣಿಯಗ್ರಸೂತ್ರ ಧಾವಳ್ಳಗಾತ್ರಾ . . . ವಾಗ್ರಚನೆಯಿಂದ ಕೃತಿಯ ನಡಸುಗೆ ವೊಲಿದು (ಸವಮೋ. ೩-೦). [ಸಂ.]

ದಿಗ್ರಾಜಿ (ನಾ). ಎಲ್ಲ ದಿಕ್ಕು : ಬನವಂ ಕೆಂದಳಿರಿಂದೆ ಬಾಸಣಿಸುತಂ ದಿಗ್ರಾಜಿಯಂ ಬಂದ ಮಾವಿನ ಕಂಪಿಂದಮೆ ಪೂಸುತಂ (ಶಾದಂಉ. ೭೯೧).

[ಸಂ.]

ದಿಗ್ವರ (ನಾ). = ದಿಗ್ರಮಣ : ಉರ್ಕಳಿದರ್ ದಿಗ್ವರರಂಜಿದರ್ ದಿವಿಜರುರ್ವೀಧ್ರವ್ರಜಂ ಸೀಳ್ದುದು (ರಾಜಶೇ. ೫-೩೬) ; ಪೂಮಳೆಯು ಸುರಿಯೆ ದೇವಾಸುರಹರಿಯಜಮನುಮುನಿಗರುಡಗಾಂಧರ್ವದಿಗ್ವರರು (ಕೃಕಸೂ. ೧೩೫). [ಸಂ.]

ದಿಗ್ವಲಯ, ದಿಗ್ವಳಯ (ನಾ). ದಿಕ್ಕುಗಳ ಆವರಣ,–ಪ್ರದೇಶ : ಧುರಧೀರ ನುಗ್ಗಹಳ್ಳಿಯ ರಾಯ ಭೂವರನ ಪರಮಪ್ರಧಾನ ಸುಕಲಾಪ್ರವೀಣಂ ಕೀರ್ತಿಭರಿತ ದಿಗ್ವಲ [ಪಾಠಾಂ. ೪] ಯಂ (ಕಬೃಕೈ. ೦೦೦).

ದಿಗ್ವಳಯ : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ಸಂ.]

ದಿಗ್ವಳಯ 'ದಿಗ್ವಲಯ' ನೋ.

ದಿಗ್ವಳೆಯ 'ದಿಗುವಳಯ' ನೋ.

ದಿಗ್ವಾಚಕ (ನಾ). [ವ್ಯಾಕ] ದಿಕ್ಕನ್ನು ತಿಳಿಸುವ ಶಬ್ದ : ಉಕಾರಾಂತ ದಿಗ್ವಾಚಕಂಗಳ್ಗೆತ್ವಮಕ್ಕುಂ (ಕಮದ. ೧೦೯ ವೃತ್ತಿ) ; ಪೂರ್ವಪದವಾಗಿ ಬರುವ ಪಿಂದು, ಮುಂದು, ಪೆಱಗು, ಒಳಗು ಮೊದಲಾದ ದಿಗ್ವಾಚಕಗಳಿಗೆ ಸಾಮಾನ್ಯವಾಗಿ ಅಂತ್ಯಾಕ್ಷರವು ಲೋಪವಾಗಿ ಅವುಗಳ ಪ್ರಕೃತಿರೂಪ ಬರುತ್ತದೆ (ಕೈಸಿಡಿ. ೨೬). [ಸಂ.]

ದಿಗ್ವಾಚಿ (ನಾ).=ದಿಗ್ವಾಚಕ : ಅಲ್ಲಿಯೊಳೆಂಬವು ಮಿಕ್ಕೆಡೆಗೆಲ್ಲಂ ದಿಗ್ವಾಚಿಯಪ್ಪದಂತಕ್ಕಲ್ಮತ್ತಲ್ಲಿಯುದಂತಕ್ಕೆತ್ವಂ ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್ (ಕಮದ. ೧೦೯). [ಸಂ. ದಿಗ್ವಾಚಿನ್]

ದಿಗ್ವಾರಣ(ನಾ).=ದಿಗ್ಗಜ ೧: ರಣಪಟಹರವಂ ದಿಗ್ವಾರಣ ಕರ್ಣಾಭ್ಯರ್ಣಮುಂ ಪಳಂಚಲೆಯೆ (ಪಂರಾಮಾ. ೦೦-೩೦) ; ದಿಗ್ವಾರಣದ ಮಱಯುಂಬುದೇ ಬಂದೂರುವಂದಿಯ ಮೊಲೆಯನು (ಬಸಪು. ೧೦-೧೦). [ಸಂ.]

ದಿಗ್ವಾಸ$_1$ (ನಾ). ಹದಿನೆಂಟು ಬಗೆಯ ಕೊಳಲುಗಳಲ್ಲಿ ಒಂದು: ಹದಿನೆಂಟು ಗುಳ ಮೊದಲಾಗಿ ಒಂದಂಗುಳ ಪರ್ಯಂತಮಾದ ಪರಿಮಾಣಕ್ರಮವುವಿದು ಜಾತಿವಾಸ, ಸುಜಾತಿವಾಸ, ಸುಕುಮಾರಿಕಾವಾಸ, ಪಕ್ಷಾವಾಸ, ಭುವನಾವಾಸ, ಶ್ವೇತವಾಸ, ಆದಿತ್ಯವಾಸ, ರುದ್ರವಾಸ, ಹರಿವಾಸ, ದಿಗ್ವಾಸ, ನಿಧಿವಾಸ, ಋಷಿವಾಸ, ಕುಮಾರವಾಸ, ಅಘೋರವಾಸ, ಬ್ರಹ್ಮವಾಸ, ತ್ರಿಪುರವಾಸ, ಶಿವಶಕ್ತಿವಾಸ, ಭುವನಾಧಿಪವಾಸವೆಂಬ ಹದಿನೆಂಟು ತೆಱದ ವಾಸಂಗಳ ಲಕ್ಷಣವಱಿತು (ವಿವೇಶ. ೨೩೬). P ಕೊಳಲಿನ ಧ್ವನಿಪ್ರಭೇದವೆಂದು ಭರತಕೋಶದಲ್ಲಿ ಹೇಳಿದೆ. [<ಸಂ. ದಿಗ್ವಾಂಶ]

ದಿಗ್ವಾಸ$_2$ (ನಾ). ೧. ದಿಕ್ಕನ್ನು ಬಟ್ಟೆಯಾಗಿ ಉಳ್ಳವನು ; ನಗ್ನ. ೨. ದಿಗಂಬರ ; ಶಿವ. ೩. ದಿಗಂಬರನಾದ ಜೈನ ಭಿಕ್ಷು,–ಜೈನ ಸಂನ್ಯಾಸಿ : "ನಗ್ನಾಟಃ, ದಿಗ್ವಾಸಾಃ, ಕ್ಷಪಣಃ, ಶ್ರಮಣಃ . . . ಸಾಧುಃ–ಈ ೧೦ ಸವಣರ ಪೆಸರ್" (ಹಲಾಯು. ೫೭-೧೮೯). [ಸಂ. ದಿಗ್ವಾಸಸ್]

ದಿಗ್ವಿಜಯ (ನಾ). ೧. ಎಲ್ಲ ದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು : ಆದಿವಂಶಾವತಾರಸಂಭವಂ ರಂಗಪ್ರವೇಶಂ . . . ಇಂದ್ರಪ್ರಸ್ಥಪ್ರವೇಶಂ ಅರ್ಜುನದಿಗ್ವಿಜಯಂ . . . ಅರ್ಜುನಾಭಿಷೇಕಂ ಪೆಱವುಮುಮಾಖ್ಯಾನ ಕಥೆಗಳೊಳಮೊಂದುಂ ಕುಂದಲೀಯದೆ ಪೇಟ್ಟಿಂ (ಪಂಪಭಾ. ೧೪-೩೨ ವ) ; ವಸಂತದೊಳ್ ಮಾವು ಬಂದುದು ಶರದೊಳ್ ದಿಗ್ವಿಜಯಮುಚಿತಂ (ಕಮದ. ೧೩೩ ಪ್ರಯೋ) ; ಹಸನಾಯ್ತು ದಿಗ್ವಿಜಯದೊಳ್ ಗೊರವನೆಂದು ಪಾಲಿಸಿದವವನೇ ಜಗತ್ಕರ್ತೃ ಗಡವೆನುತಾಗ . . . ಒಡನೊಡನೆ ಗರ್ಜಿಸಿದನು (ಚಿಬಪು. ೪೭-೦೯) ; ನಿನ್ನಾಳ್ಕೆಗೆಲ್ಲಿಯುಮಪಾಯಮವನಿಯೊಳಿಲ್ಲಮಿನ್ನು ದಿಗ್ವಿಜಯಮಿಲ್ಲವಸರದ ಬೇಂಟೆಯಿಲ್ಲ (ಚೈಮಿಭಾ.

೨-೩೪) ; ಪೂರ್ವಪದ್ಧತಿವಿಡಿದು ಮಾಳ್ಪ ದಿಗ್ವಿಜಯ ಹಯಮೇಧ ಮೊದ ಲಾದುವಂ ತೋರೆದು (ಶ್ರೀರಾಮಾ. ೯-೩೪೩) ; ಪ್ರಭುವು ಹೀಗೆ ದಕ್ಷಿಣ ಪೂರ್ವದೇಶಗಳ ದಿಗ್ವಿಜಯವನ್ನು ಪೂರ್ಣಗೊಳಿಸಿದರು (ಶಾಂತಲಾ. ೦೩೪).

೨. [ಜೈನ] ಅಯ್ವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು: ದಿಗ್ವಿಜಯ ಚಕ್ರಾಭಿಷೇಕ ಸಾಮ್ರಾಜ್ಯ . . . ನಿರ್ವೃತಿಯೆಂಬಯ್ವತ್ತು ಮೂಱು ಗರ್ಭಾದಿ ನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯ ಕ್ರಿಯೆಗಳುಂ (ಆದಿಪು. ೧೫-೦೫ ವ) ; ದಿಗ್ವಿಜಯಮುಮಂ ಚಕ್ರಾಭಿಷೇಕಮುಂ ಸಾಮ್ರಾಜ್ಯಮುಂ . . . ಅಪ್ಪಯ್ವತ್ತುಮೂಱು ಗರ್ಭಾನ್ವಯ ಕ್ರಿಯೆಯೊಳ್ (ಚಾವುಂಪು. ೩೦೨). 'ದೀಕ್ಷೆ' ಪರಾ. [ಸಂ.]

ದಿಗ್ವಿತತಿ (ನಾ). ದಿಕ್ಕುಗಳ ಗುಂಪು,–ಸಮೂಹ; ಎಲ್ಲ ದಿಕ್ಕುಗಳು: ಆಟಿಕೆಯ್ದನೆಂದು ದಶಮುಖ ಕುಲದೇವತೆಯ ಪುಯ್ಕಲಿಡುವಪೋಲ್ ದಿಗ್ವಿತತಿಯನಾವರಿಸಿದತ್ತು ಭೇರೀನಾದಂ (ಪಂಡಾಮಾ. ೧೪-೦೩೩). [ಸಂ.]

ದಿಗ್ವಿರತಿ (ನಾ). = ದಿಗ್ವ್ರತ: ದಿಗ್ವಿರತಿಯುಂ ದೇಶವಿರತಿಯುಂ ಅನರ್ಥ ದಂಡವಿರತಿಯುಮೆಂದಿವು ಗುಣವ್ರತಂ ಮೂಱು ಭೇದಮಕ್ಕುಂ (ಪಜಾಠ. ೩೧೧). [ಸಂ.]

ದಿಗ್ವಿವರ (ನಾ). ದಿಕ್ಕುಗಳ ಒಳಭಾಗ,–ಅವಕಾಶ; ದಿಗಂತರ: ಅಂತು ಚತುರಂಗಸೇನೆ ಯುಗಾಂತಕರವ ವರ್ಣವಾರವಂ ಘನರವಮೆಂಬಂತಾಗೆ ತಾಗೆ ದಿಗ್ವಿವರಾಂತರವಂ (ಣಂತಿಪು. ೧೦-೧೩೦). [ಸಂ.]

ದಿಗ್ವ್ರತ (ನಾ). [ಜೈನ] ಶ್ರಾವಕನ ವ್ರತಗಳಲ್ಲಿ ಒಂದು; ಒಂದು ಮೇರೆಯನ್ನು ಇಟ್ಟುಕೊಂಡು ಅದಷ್ಟೇ ಸ್ಥಳದಲ್ಲಿಯೇ ವಿಹರಿಸುವೆನೆಂದು ಮಾಡಿಕೊಳ್ಳುವ ನಿಯಮ,–ವ್ರತ: ಮಿಗಿಲಾಗಿರೆ ಸೀಮೆಯನವಧಿಗುಯ್ವುದುಂ ಮಱಿದು ಮೊದಲ ಪವಣಂ ಪೆಱತಂ ಬಗೆವುದುಮೂರ್ಧ್ವಾಧಸ್ತಿರ್ಯಗ್ಗತಿಕ್ರಮಮುಂ ವ್ಯತಿಕ್ರಮಂ ದಿಗ್ವ್ರತದೊಳ್ (ವರ್ಧಮಾ. ೭-೧೩); ದಿಗ್ವ್ರತ . . . ನಾಲ್ಕೂ ದಿಕ್ಕುಗಳಲ್ಲಿರುವ ನದಿ, ಪರ್ವತ ಮೊದಲಾದುವುಗಳ ಮೇರೆಯನ್ನು ಗೊತ್ತುಮಾಡಿ ಅವನ್ನು ದಾಟಿ ಆಮರಣವೂ ಹೋಗುವುದಿಲ್ಲವೆಂದು ನಿಶ್ಚಯ ಮಾಡುವುದು (ಕ್ರಿಸಧ. ೬೯). [ಸಂ.]

ದಿಙ್ನಾಗ (ನಾ). ೧. = ದಿಗ್ಗಜ೧: ದಿಙ್ನಾಗಯುದ್ಧಕ್ಕೆ ಕೃತ್ರಿಮಮಾರ್ಗಳಾ ಬಂಧಮೆಂಬಿವನೊಳಕೊಂಡ ಹಿಮವದ್ವಿಜಯಾರ್ಧನೀಲನಿಷಧ ಮಹೀಧರಂಗಳಂ ಪೋಲ್ತು (ಶಾಂತಿಪು. ೩-೦೯೪); ಶೇಷನಂ ಪೊಸೆವ ದಿಙ್ನಾಗಂಗಳಂ ಪೊಯ್ದು ಳೀಳಿಡಿಪ . . . ಉಡುಸಂತಾನಮನಾದುರ್ದಿರ್ಚುವ ಗಣಗಳ್ ಬಂದರಾನಂದದಿಂ (ಗಿರಿಕ. ೦೦-೭೪). ೨. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ: ವಸು ಕರಿ ದಿಙ್ನಾಗಂ . . . ವಾರಣ ಮಾರಯೆಯೆಂಟಕ್ಕೆ ನಾಮಮಿದು (ವ್ಯವಹಾ. ೯-೩೦). [ಸಂ.]

ದಿಙ್ನಾಥ (ನಾ). = ದಿಕ್ಪಾಲ: ನೆಲನಂ ಘಟ್ಟಿಸೆ ಕವಂತನ ಬೆನ್ನೆಲು ನೆಗ್ಗಲ್ತಿರೆ ಜಿನ ಗಾಳಿಗೆ ದಿಙ್ನಾಥರ್ನೆಲೆದಪ್ಪಲು ಶಕ್ತಿಸಿ ಭಾಷೆಯನಪಧರಿಸವ ಧರಿಸೆಂದಂ ಪಟುಭಟನು (ವೀರೇಶ. ೨-೦೦). [ಸಂ.]

ದಿಙ್ನಿಕರ (ನಾ). ದಿಕ್ಕುಗಳ ಸಮೂಹ,–ಗುಂಪು: ದಿಙ್ನಿಕರಕ್ಕೆ ಪೆರ್ಚಿ ಕಡುಕರ್ಬೊಗೆಯಂ ಕಿಡಿಯಿಂ ನೆಗಬ್ದ ದಾವಾಗ್ನಿ ಕವಲ್ದು ಪರ್ವೆ (ನಳಕಂ. ೩೮೪). [ಸಂ.]

ದಿಙ್ಮಂಡಲ, ದಿಙ್ಮಂಡಳ (ನಾ). ದಿಕ್ಕುಗಳ ಸಮೂಹ,–ಗುಂಪು: ಅಜಿಯ ರೆನ್ನನು ಶಕ್ರನಂದೇ ತಱುಬಿ ದಿಙ್ಮಂಡಲವ ಮುಸುಕಿದರಿಱಿತೆಱಂಜದ ದಿಟ್ಟನಾವನು ಸುರರೆ ಥಟ್ಟನಲಿ (ಕುವ್ಯಾಉ. ೧೨-೩೭). **ದಿಙ್ಮಂಡಳ**: ನಿರ್ವರ್ತಿತಜನ್ಮಾಭಿಷೇಕನನೇಕದುಂದುಭಿಧ್ವನಿತ ಸಕಳದಿಙ್ಮಂಡಳನಾಖಂಡಳ ನಮರಸವಿತಿವೆರಸಯೋಧ್ಯಾಪುರಪ್ರಮುಖನಾದಾಗಳ್ (ಆಚಿಪು. ೬-೧೦೬ ವ). [ಸಂ.]

ದಿಙ್ಮಂಡಳ 'ದಿಙ್ಮಂಡಲ' ನೋ.

ದಿಙ್ಮಾತ್ರ (ನಾ). ಹೀಗಿರುವುದೆಂ–ಎಂದು ಮಾತ್ರ ಹೇಳುವ ವಿವರಣೆ; ಸ್ಥೂಲ ನಿರ್ದೇಶ,–ಪರಿಚಯ: ಶ್ರವಣಸುಖಮೆಂದೆ ದಿಙ್ಮಾತ್ರೆವರ್ಣನಂಗೆಯ್ವೆನುಂತದೇನೆಸ್ಸಳವೇ (ಆದಿಪು. ೦೯-೩೦). [ಸಂ.]

ದಿಙ್ಮುಖ (ನಾ). ದಿಕ್ಕಿನ ಮುಖ,–ಮುಂಭಾಗ: ನಾನಾ ರತ್ನಮಯಂಗಳುಪ್ರತಿಹತ ಪ್ರಭಾದ್ಯೋತಿತದಿಙ್ಮುಖಂಗಳುಮಪ್ಪ ಕಲ್ಪವೃಕ್ಷಂಗಳ್ (ಆದಿಪು. ೩-೩೦ ವ) ; ಕಂಡೊ . . . ಆಖಂಡಲ ದಿಙ್ಮುಖದೆ ಬಂದು ಸರ್ವಗ್ರಾಸಂಗೊಂಡತ್ಪರಾದಿತ್ಯನ ಮಂಡಲಮಂ (ಗದಾಯು. ೧-೨೬) ; ಕೆಂಪು ವಿಡಿದಡಗುವಿನನುದಯಿಪಿಂದು ಸಲೆ ಮೂಡಲೊಪ್ಪಿದುವುಭಯ ದಿಙ್ಮುಖಗಳು (ಹಪಚಾ. ೪-೭೪). [ಸಂ.]

ದಿಙ್ಮೂಢ (ನಾ). ದಿಕ್ಕು ತೋಚದವನು; ಗಾಬರಿಗೊಂಡವನು; ದಿಗ್ಭ್ರಮೆ ಹಿಡಿದವನು; ದಿಗ್ಭ್ರಾಂತ: ಅವಿವೇಕಾತ್ಮತೆಯಿಂದೆ ಮೆಯ್ಮಱೆಯದಾಂ ದಿಙ್ಮೂಢನಾಗಿರ್ದನಿನ್ನೆವರಂ (ಸುಳುಮಾ. ೧೩-೧೫) ; 'ಸಾನಿ'ಯನ್ನು ಮನೆಗೆ ಊಟಕ್ಕೆ ಕರೆತಂದ ದೇಸಾಯರು ಜಾನಕಿಬಾಯರ ಪ್ರವೇಶದಿಂದ ದಿಙ್ಮೂಢರಾಗುತ್ತಾರೆ (ಸಮಾಚೇ. ೬ ಬೀಳಿ) ; ಅವಿನಾಶರಿಗೆ ಕೂಡಲೆ ಏನೂ ತೋರದೆ, ದಿಙ್ಮೂಢರಾಗಿ ನೋಡುತ್ತಿದ್ದು "ನೀವು ಹೇಳುತ್ತಿರುವುದಾದರೂ ಏನು?" ಎಂದು ಕೇಳಿದರು (ಶೀಪ್ರಶ್ನೆ. ೫೫) ; ಮುಂಗಾರಿನ ಮುಂಗೋವಳೆ ಬಾನೇ ದಿಙ್ಮೂಢ (ನಳಮು. ೬-೦೦) ; ಲೋಕಮಾನ್ಯರ ಬಗೆಗೆ ಯೋಚಿಸಿದಾಗಲೆಲ್ಲ ಅವರನ್ನು ರಾಜಕಾರಣಿಯೆಂದು ಕರೆಯಬಹುದೆ . . . ತತ್ತ್ವಜ್ಞಾನಿಗಳೆಂದು ಉದ್ಘೋಷಿಸಬಹುದೆ ? – ಎಂದೆಲ್ಲ ದಿಙ್ಮೂಢರಾಗುತ್ತೇವೆ (ಧರ್ಮಸಾ. ೦೨೮). [ಸಂ.]

ದಿಟ್ಟ₁ (ನಾ). ೧. ನಿಜ; ಸತ್ಯ; ವಾಸ್ತವ: "ನನ್ನಿ, ನಿಕ್ಕುವಂ, ನಿಸದಂ, ಸಾಜಂ, ನನಸು, ದಿಟ್ಟಂ – ಈ ೬ ಸತ್ಯಂ" (ಶಶಸಾ. ೦೩-೨೩೪) ; ಆಂ ದಿಟಮಾಗಿ ಶಲ್ಯನಳವಂ ನೆಱಿ ಮುನ್ನೆಱಿದಿರ್ದುವೆನ್ನ ತಪ್ಪಂದಿರನೇಕಕಾದಿಸುವೆಂ (ಪಂಪಭಾ. ೦೩-೩೨) ; ಸಟೆ ದಿಟವೆಂಬುವೆರಡುವಿಡಿದು ನಡೆವುದೀ ಲೋಕವೆಲ್ಲವು (ಮಹಾದೇ. ಬ. ೩೬-೦೪೦) ; ಶಿವನಾದೊಡೇಂ ವೃಷಿ ದಿಟಕ್ಕೆ ನಿಲ್ವುದೆ ಜಗದೊಳ್ (ಗಿರಿಕ. ೯-೦೧೬) ; ಕುರುರಾಯನಾಡಿತ್ತು ದಿಟವೆನುತ ಹೊಗರ್ಂಬ ಹೊದೆಗೆದಱಿ ನೋಯಿಸಿದನುರವಣಿಸಿ ಹರಿತಹ ನಾಯಕರನು (ಕುವ್ಯಾದ್ರೋ. ೧-೫೮) ; ಪರಿಕಿಸೆ ಲೋಕದೊಳಗಾ ಸರಸಜಾಕ್ಷಿಯ ಬಗೆಗೆ ಸರಿ ದೊರೆಯಿಲ್ಲವಿಂದು ದಿಟವು (ನಳಕ. ೨-೫) ; ಪುಸಿಯಂ ದಿಟಂ ವಿಷಮ ನಮೃತಂ ಪುಣ್ಯಮಾ ಪಾಪವ ಸಲೆ ತೆವರ್ಪಂತೆ ಪರವಾದಮಂ ಗೆಲ್ದು (ಕುಬಪು. ೩-೩೮). ೨. ಪರವಸ್ತು; ಪರಮಾತ್ಮ; ಪದವಾಕ್ಯವಿದರಾಗವಾದಗ ಣಯ ಬಿಟ್ಟು ಒದವಿಪರು ದಿಟದರಿವ (ಮಂಕುಳ. ೪೧).

ದಿಟ್ಟ 'ದಿಟಂ' ನೋ.

ದಿಟಂ, ದಿಟ್ಟ₂ (ಅ). ನಿಶ್ಚಯವಾಗಿಯೂ; ನಿಜವಾಗಿಯೂ; ಸತ್ಯವಾಗಿಯೂ: ಎಸೆವ ಸಾನಂದದಿಂ ದಿಟನುಮರ್ದ ಪಾರಿಜಾತದ ವಿಟಪಿಗೆ ಕೌಸ್ತುಭದ ಸುತ್ತು ಸೊಗಯಿಪ ತೆಱದಿಂ (ಣಂತಿಪು. ೩-೪೩) ; ಪುತ್ರ ಮುಖಾಬ್ಜಲೋಕನ ಮಾತ್ರದೊಳಂ ಪಿತೃ ತಪಕ್ಕೆ ಪೋಕುಂ ಚಿತ್ರಂ ಪುತ್ರಂ ಮುಮುಕ್ಷುದರ್ಶನ ಮಾತ್ರದೆ ಜಿನದೀಕ್ಷೆಯಂ ದಿಟಂ ಕೈಕೊಳ್ಗುಂ (ಸುಕುಮಾ. ೯-೦೦೦) : ನೋಡ ಮರುಳ್ಮಗಳೆ ದಿಟಂ ಪಾಡುವುದೆಗ್ಗಲ್ತಿ ನಿನ್ನನೆಟ್ಟ ರೊಳಾಂ ಮುದ್ದಾಡಿಸೆ ಮುನಿಸನ್ನಿಧಿಯೊಳ್ಕಾಡಿದುದಂ ಧಾಂದಸಿಕ್ಕೆಯೊಂದೊದವಿಂದಂ (ಧರ್ಮಪ್ಯ. ೩-೨೫೭) : ದೇವ ದಿಟಂ ನಿಮ್ಮಯ ಚೇತೋವೃತ್ತಿಯ ತೆಱದಿನೀ ಸರೋವರಸಲಿಲಂ ಪಾವನಮೆನಿಸುಂ ಸ್ವಚ್ಛಂ (ಕುಸುಮಾ. ೯-೪೦). **ದಿಟ್ಟ**₂: ದೇವ ನೀ ದಿಟ ಕೊಲುವಡೆಯು ನಾ ಸಾವೆನೇ (ಕುವ್ಯಾಛೀ. ೬-೪೩) ; ಲೇಸನಾಡಿದೆ ಕರ್ಣ ದಿಟ ನೀನೀಸು ಸಮ್ಯಜ್ಞಾನಿಯೆಂಬುದನೀಸು ದಿನ ನಾವಱಿಯೆವೈ (ಕುವ್ಯಾದ್ರೋ. ೦-೩೦) ; ನೋಡಿರೈ ಪರಿವಾರ ಮನುಜನ ಬೀಡು ಕರ ಸೋಜಗವು ದಿಟ (ಕಾತಿಕಾ.

೦೬-೦೬) ; ಆವ ಬಲು ಬಿಲು ಜಾಣತನದ ಮಹಾವಿಚಿತ್ರ ಪ್ರೌಢಿಯೋ ದಿಟ ದೇವನಲ್ಲಾ ಮೇಲೆ ದೈತ್ಯಾಂತಕನಲಾ ರಣಕೆ (ತೊರಕಾ. ೦-೦೦-೦೪).

ದಿಟದಿಟ, ದಿಶದಿಶಂ (ದ್ವಿರುಕ್ತಿ) : ಹಲವು ವೇದ ಪುರಾಣ ಶಾಸ್ತ್ರವ ತಿಳಿದು ನೀ ಮರುಳಾದೆ ದಿಟದಿಟ ಕೊಲುವರೇ ಸರಿಯಂದದವಳನು ಧರ್ಮವೇ ನಿನಗೆ (ಕಾತಿಕಾ. ೩೭-೦೪); ಯಿಂತೆರಡಱ ಬೆಂಗೆ ಪುಣ್ಯ ಪಾಪಂಗಳು ಪಾದ್ದುರ್ಗ ಕೊಂಡೊಯ್ವುದು ತಪ್ಪದು ದಿಶದಿಶಂ ಸತ್ಯಂಗಂಡಿರೇ (ಎಇ. XXIII, ೦೯-೦೪ ; 1265). [<ದಿಟ್ಟ]

ದಿಟಕರಿಸು (ಕ್ರಿ). ಪ್ರತ್ಯಕ್ಷವಾಗಿ ತೋರು. – ಕಾಣು ; ಸಾಕ್ಷಾತ್ಕಾರವಾಗು : ಘಟದಲ್ಲಿ ಆತ್ಮ ದಿಟಕರಿಸುವುದಿಲ್ಲ ಎಂದು ಅಱಿದ ಮತ್ತೆ (ಪುಸುಗುಂ. ೨೬-೭೪) ; ವಾಯು ಅಡಗಿದ ವಾರಿಧಿಯಂತೆ ಅಸು ಅಡಗಿದ ಘಟಚಿಹ್ನದಂತೆ ದಿಟಕರಿಸು ಗುಡಿಯ ಗುಮ್ಮಟನಾಥನ ಅಗಮ್ಯೇಶ್ವರ ಲಿಂಗದಲ್ಲಿ ಪರಿಪೂರಿತವಾಗಿರು (ಪುಸುಗುಂ. ೨೭-೭೬).

[<ದಿಟ್ಟ + – ಇಸು]

ದಿಟಪುಟ (ನಾ). ೧. ವ್ಯಕ್ತವಾದುದು ; ಸ್ಪಷ್ಟವಾದುದು. ೨. ಸತ್ಯ ; ನಿಜ : ಕಟಕದೊಳು ಶ್ರಿಪುರಾರಿಯಂ ದಿಟಪುಟದಿ ಕರದೋ ಎಂದೆನಿಸಿದು ತ್ಕಟದ ಭಕ್ತನು ಕಿನ್ನರಯ್ಯನು (ಬಸಪು. ೨೮ ಸೂಚನೆ) : ನಾವ್ ದಿಟಪುಟವನುಡಿದರೆ ಪಾತಿಯಾದುದೆ ನಿಮ್ಮ ಚಿತ್ತದಲಿ (ಕುವ್ಯಾದ್ಯೋ. ೦-೬೫) : ನಿಮ್ಮ ಮಾತು ದಿಟಪುಟವು ಸ್ಫಟಿಕ ಅದಕಿಲ್ಲ ಬೇರೆ ತಂತ್ರ (ನಿಂಮು. ೩೫-೯). ೩. ಪರಮ ಸತ್ಯ ; ಪರವಸ್ತು ; ಶಾಶ್ವತವಾದುದು ; ಸ್ಥಿರವಾದುದು ; ಸತ್ಯವಾದುದು : ದಿಟಪುಟವನತಿಗಳೆದು ಸಟೆಯ ಬಯಸುವರೆ (ತೂನ್ಯಸಂ. ೨೩-೦೦) ; ಎಮ್ಮ ಪಟುಭಟರಾದರೂ ಸ್ಫಟಿಕದ ಮಱಿಯಲ್ಲಿ ಅಡಗಬೇಕು ದಿಟಪುಟವನಱಿದಡೂ ಗುರು ಕೊಟ್ಟ ನಿಟಲಲೋಚನನು ಘಟಿಸಬೇಕು (ಮೋಳಿಮಾ. ೫೦-೮೨) ; ಹುಸಿಯ ಮಾಯಾತಮಕ್ಕೆ ದಿಟಪುಟ ದಿವಾಕರ ಎನ್ನೊಡೆಯ (ಸಿದ್ಧೇವ. ೪೦-೦೦೦).

ದಿಟಪುಟಮಾಗು, ದಿಟಪುಟವಾಗು = ವ್ಯಕ್ತವಾಗು ; ಸ್ಪಷ್ಟವಾಗು : ದಿಟಪುಟಮಾದ ಬಹುಲಾಕೆಯೊಳತಿಮಧುರಮಾಗೆ ಕರ್ತರಿ ಸಮುಗರ್ತರಿಯುರ್ಧಗರ್ತರಿ ಮೊದಲಾದನೇಕ ಶಬ್ದಸಂಪಾದನದಿಂ ಸನ್ನೆಗೆಯ್ದು ತೋರ್ಪುದುಂ (ಪುಜಾನೇ. ೪-೫೫ ವ) ; ಪ್ರವ್ಯಕ್ತಯತಿ ಪ್ರಯೋಗತ್ವಂ= ದಿಟಪುಟವಪ್ಪ (ವ್ಯಕ್ತವಹ ಕಾಳಾಸಮನುಳ್ಳುದು) ಜಾತಿಯಂ ಬಾಜಿಪುದುಂ (ನೀತಿವಾ. ೩೦-೦೦). [<ದಿಟ್ಟ]

ದಿಟಪುಟಗೆಡು (ಕ್ರಿ). ನಿಜಾಂಶ ತಿಳಿಯದಿರು ; ಸತ್ಯ ತಿಳಿಯದಿರು : ದಿಕ್ಕಾರು ದೆಸೆಯಾರು ದಿಟಪುಟಗೆಟ್ಟೆನು ಹಿಕ್ಕಿ ಹೇಳ್ವೊಡೆ ಹಿತರಿಲ್ಲ ಅಕ್ಕಱಿಂ ರಂಗನೆ ಗತಿಯೆಂದಿರುವಳನಕ್ಕಟಕ್ಕಟ ಕಾಣ್ಬುದೆಂದೊ (ಕಶಸಾಂ. ೩೫-೦೫).

[ದಿಟಪುಟ + ಕೆಡು]

ದಿಟಪುಟವೆಱು (ಕ್ರಿ). ಸತ್ಯವನ್ನು ಹೊಂದು ; ಸಾಕ್ಷಾತ್ಕಾರವನ್ನು ಪಡೆ: ಟಕ್ಕುಟವಳಿ ತಟವಟಪಟಮಾಟವ ಬಿಟ್ಟಕ್ಕಱಿಂ ದಿಟಪುಟವೆತ್ತು ಟಕ್ಕನುಳಿದು ತಟ್ಟತಟ್ಟನೆ ಜಪಿಸಲಿಂಟಕ್ಷರಕಾಗಿ ಮೆಯ್ದೋರ್ವೆ (ಕಶಸಾಂ. ೭೦-೫೫).

[ದಿಟಪುಟ + ಪೆಱು]

ದಿಟಮಾತು 'ದಿಟವಾತು' ನೋ.

ದಿಟವಂತ (ನಾ). ನಿಜವನ್ನು ಆಡುವವನು ; ಸತ್ಯಮಾರ್ಗದಲ್ಲಿ ನಡೆಯುವವನು ; ಸತ್ಯವಂತ : "ಸೇದ್ಯಾ, ಸೇಧಕಃ, ಸಿದ್ಧಃ, ಸಿದ್ಧವಾನ್-ಈ ೪ ದಿಟವಂತಂ" (ಕಾಶಳ್ಳ. ೦೬೮). [ದಿಟ್ಟ + – ವಂತ]

ದಿಟವಾತು, ದಿಟಮಾತು (ನಾ). ನಿಜವಾದ ಮಾತು.–ನುಡಿ : "ದಿಟವಾ [ಪಾಠಾಂ. ಮಾ]ತು ಸೂನ್ಯತವಕ್ಕೆ" (ಪುಂಗರಾ. ೨೫-೦). ದಿಟಮಾತು : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ದಿಟ್ಟ + ಮಾತು]

ದಿಟ್ಟ₁, **ಧಿಟ್ಟ** (ಗು). ೧. ಧೈರ್ಯದಿಂದ ಕೂಡಿದ ; ಧೀರತನವುಳ್ಳ : ಅಪ್ಪಮದಗಳೆನಿಪಟ್ಟಳೆಗಳು ಮೂಱು ಪಟ್ಟಣದಪ್ಪದಿಕ್ಕಿನೊಳು ಮುಟ್ಟ ಬಾರದು ಹರಿಹರಬೊಮ್ಮರಾದಿಯ ದಿಟ್ಟ ಮಹಾಪುರುಷರಿಗೆ (ತ್ರಿಪುಸಾಂ. ೪-೪೬). ೨. ಉದ್ಧಟತನದ ; ಸೊಕ್ಕಿನ : ದಿಟ್ಟ ಹೆಂಗಸೆ ನೃಪರ ಬಸುಱಲಿ ಹುಟ್ಟು ನೀ ಹೋಗೆಂದು ಶಾಪವ ಕೊಟ್ಟನು (ಕುವ್ಯಾಆ. ೭೧೩. ೩೩-೩೪). ೩. ಗಟ್ಟಿಮುಟ್ಟಾದ ; ಬಲವಾದ : (ಕ). (ನಾ). ೪. ಧೈರ್ಯಶಾಲಿ; ಧೀರವ್ಯಕ್ತಿ ; ಸಮರ್ಥ ; ಸಾಹಸಿ : ಜಿನವಾಕ್ಯಾಂಬುಧಿಯುಮನುಱ ದೀಸುವೆನೆಂಬ ದಿಟ್ಟರಿಮ್ಮಂ ಪೆಱರಾರ್ (ಧರ್ಮಾಮೃ. ೦-೩೨) ; ಎಲೆ ಮಱಿಯ ನೀರ ಸುಟ್ಟ ಬೂದಿಯದು ಪೂಜಿಸಿ ಸಿದ್ಧಿಗಳ ಗುದ್ದಾಟಕ್ಕೊಳಗಾದವರ ಕಡೆಮೆಟ್ಟ ಬಿಟ್ಟಪ್ಪನೈ ಬೆಟ್ಟಜೆವತಿ ದಿಟ್ಟ ಕಪಿಲಸಿದ್ಧ (ಸಿದ್ಧಚ. ೪. ೪೩-೪೬೩) ; ದಿಟ್ಟ ನೀನಹೆ ಪುಂಡರೀಕಯೆಸುತ ಬಲು ಬಟ್ಟ ಸರಳುಗಳ ತೊಟ್ಟು ಕಟ್ಟಾಳುಗಳಧಿರಾಜನೆಸಲು (ಅಂಜಚ. ೬-೦೪೩) ; ದಿಟ್ಟನೈ ಗುರು ಸೂನು ಶಿವ ಜಗಜಟ್ಟಿಯಲ್ಲಾ (ಕುವ್ಯಾಳ. ೦೪-೩೫) : ಅಂದು ಕಾಳಿಂಗನ ಪೆಡೆಯ ತುಳಿದ ದಿಟ್ಟ ನಂದನ ಕಂದ ಮುಕುಂದ ಕಾಣಮ್ಮ (ಪುರಂದ. ೨-೭೦-೦) ; ಸ್ವಭಾವತಃ ನಾನು ದಿಟ್ಟಳಿದ್ದೇನೆ (ಹೇಮಾಂಕ. ೨೭೦). ೫. ಧೃಷ್ಟ ; ಸೊಕ್ಕಿದವನು ; ಕೊಬ್ಬಿದವನು ; ಉದ್ಧಟ : ಕಟ್ಟತುರಿದೆಸೆ ನಾಲ್ಕಱಲಿ ಬೆನ್ನಟ್ಟಿ ಹೊಯ್ದುದು ಬಿನುಗುಗಳ . . . ದಿಟ್ಟರುರಿದುದು ವೀರರಸುಗಳು ಬಟ್ಟರಭವ ದ್ರೋಹಿಗಳು ನೆಱಿ ಕೆಟ್ಟ ಕೇಡಿಂಗಾರು ಮಱುಗುವರು (ಕುವ್ಯಾಳ. ೬-೪೦) : ಎಲೆ ದಿಟ್ಟ, ನಗುವೆಯು ನನ್ನ ಎನಗೇತಕೆಯೋ ಮದುವೆಯ ಬನ್ನ! (ಗಕೀಶ. ೫.-೦೦೬). **ಧಿಟ್ಟ** : ೧. ಧಿಟ್ಟ ಜೀವಿಗಳ ಧಂಗದ ಬರಿಯಂತರಂಗ (ವಿಸೀಗೀ. ೩-೦೦) : ನಟ್ಟ ಕಂಬದ ಹಾಗೆ ಧಿಟ್ಟವೀರನಿರಬೇಕು (ಗಾದೆ). ೪. ವೃಥಾ ಕೆಡೆನುಡಿಯನುಡಿದರೆ ಧಿ[ಪಾಠಾಂ. ದಿ]ಟ್ಟನೆಂಬರೆ ವೀರರಾದವರು (ಕುವ್ಯಾದ್ಯೋ. ೦೫-೬೬) ; ಧಿಟ್ಟ ಕೇಳು ನಿರಂತರವು ಕೈಗಟ್ಟಿ ನಿಂದೂಳಿಗವನೆಸಗಲು ನಿಟ್ಟಿಸನು ವರಮಾತ್ಮ (ಗಗಶಾ. ೦೨-೭೮).

ದಿಟ್ಟವಣಾಡು = ಉದ್ಧಟತನದಿಂದ ಮಾತನಾಡು ; ಸೊಕ್ಕಿನಿಂದ ಮಾತನಾಡು : ಹಿಂದು ದಿಟ್ಟವನಾಡಿ ಸಕಲರ ಮೆಚ್ಚಿಪುದುರುತರ ಮೌಖರ್ಯದೋಷ (ಪೂಜ್ಯಚ. ೬-೪೫).

[<ಪ್ರಾ. ಧಿಟ್ಟ./ ಸಂ. ಧೃಷ್ಟ]

ದಿಟ್ಟ₂ (ನಾ). ದೃಢಸ್ಥಿತಿ ; ನೆಲೆ : ಹುಟ್ಟದುದು ದೇವಾಂಗನಾಜನ ನೆಟ್ಟನೆಯದೀರೇಳುಲೋಕದ ದಿಟ್ಟವನು ನಿರ್ಮಿಸಲಿಕಾಯ್ತು ಮನುಜ ವರ್ಗದಲಿ ಹುಟ್ಟದವರೊಂದೊಂದು ಕೆಲಸವ ನೆಟ್ಟನಾಶ್ರಯಿಸಿದರು (ಸಿಂಧಚ. ೫-೩೦) : ಅವಶ್ಯವಾದ ಪತ್ರವ್ಯವಹಾರ ನಡೆದು ಒಂದು ದಿಟ್ಟವನ್ನು ಮುಟ್ಟುವುದಕ್ಕೆ ಇನ್ನು ಎರಡು ಅಥವಾ ಮೂರು ತಿಂಗಳು ಆಗಬಹುದು (ಚಳಚಾ. ೩೭೫). [<ತಿಟ್ಟ]

ದಿಟ್ಟಂಗೊಳಿಸು (ಕ್ರಿ). ದೃಢಪಡಿಸು ; ಸ್ಪಷ್ಟಪಡಿಸು : ವಸಂತಕನೀ ಕೇರಿಯೊಳ್ ತಿರುಗಿ ವರಿಣತನಾದುದಱಿಂದೆಯುಮೆಮಗೆ ಹಿತಪರನಾದುದ ಱಿಂದೆಯುಂ ... ಇದೊಂದು ನೆವದೊಳ್ ದಿಟ್ಟಂಗೊಳಿಸಿದನೆಂದಾಳೋಚಿಸಿ (ಚಳವಿ. ೬-೭೭ ವ). [ದಿಟ್ಟ + ಕೊಳ್ + – ಇಸು]

ದಿಟ್ಟಂಜಮಾಬಂದಿ 'ಡಿಟ್ಟಂಜಮಾಬಂದಿ' ನೋ.

ದಿಟ್ಟಗಾರ (ನಾ). ಧೈರ್ಯಶಾಲಿ ; ಧೀರ : (ಕ).

[ದಿಟ್ಟ + – ಗಾರ (< – ಕಾಱ)]

ದಿಟ್ಟತನ, ಧಿಟ್ಟತನ (ನಾ). ೧. ಧೈರ್ಯ ; ಸಾಹಸ : "ಕಡ್ಡಮೆನಲ್ ದಿಟ್ಟತನಂ[ಪಾಠಾಂ. ನಹುಂ]" (ಕಶುನಿ. ೩೮) ; ದಾನವರ ಥಟ್ಟಣಿಗೆ ನಿಲುವರನಾನು ಕಾಣೆನು ದಿಟ್ಟತನದಲಿ ತಾನೆ ನಿಂದನು ಕೌರವೇಂದ್ರನು ಸಕಲಬಲ ಸಹಿತ (ಕುವ್ಯಾದ್ಯೋ. ೦೫-೩೨) ; ಅವನ ದಿಟ್ಟತನವ ಸುರಪುಂತಿ ಕಂಡು

ನೀನಾರ ದೂತಂ ನಮ್ಮ ಪುರಕದೇಂ ಕಾರಣಂ ಬಂದೆ . . . ಪೇಳೆಂದು ಬೆಸಗೊಳಲ್ (ಚಿಬಪು. ೨೩-೨೦); ಆ ಭೂಪನ ದಿಟ್ಟತನಕೆ ಸರಿಯುಂಟೆ (ಕಂನವಿ. ೦೮-೫೩). ೨. ಧಾರ್ಷ್ಟ್ಯ ; ಉದ್ಧತಿಕೆ : ಹರಹರಾ ನೀನಿಪ್ಪ ಠಾವನೆಱಿಯದೆ ಅಪ್ಪವಿಧಾರ್ಚನೆ ಮೋಡಶೋಪಚಾರಮಂ ಮಾಡಿಹೆನೆಂಬ ವರ ದಿಟ್ಟತನವ ನೋಡಾ (ಅವಶಂ. ೦೮೫-೮೫೩); ಪಟ್ಟಣದೊಳು ಜನ ಕೊಟ್ಟ ಹಣವನೆಡೆವೆಟ್ಟು ಬಾಹಿರಮಟ್ಟವೆಂದು ದಿಟ್ಟತನದೆ ಪೆಸರಿಟ್ಟು ವಟ್ಟವ ಕೊಂಬ ಸೆಟ್ಟಿಗಳಿರುತಿಹರಲ್ಲಿ (ಅಂಚಿಪ. ೩-೮೩). ೩. ಶೌರ್ಯ ; ಬಲ ; ಶಕ್ತಿ ; ದಾರ್ಢ್ಯ : ಬೆಟ್ಟುಗಳ ರಟ್ಟೆಯಂ ಕುಟ್ಟಿದಮಾರಾವತಿಯ ದಿಟ್ಟತನವಂ ನೋಳ್ಪೆನೆಂದು . . . ಬಂದುದೋ (ಹಹಕಾ ಪರಿ ೨೦೪) ; ಭೀತಿ ಬಿಗಿದುದು ದಿಟ್ಟತನದನುಧಾತುಗೆಟ್ಟುದು (ಕುಮಾಕಾ. ೩-೨೫) ; ದೆಟ್ಟದೆ ಚಾಮೇಂದ್ರನೆನೆ ರಿಪುಭೂಪರ ಪಟ್ಟದಂಗನೆಯರ ಗರ್ಭ ಮಟ್ಟುಳುಕಿಗೆ ಬಂದು ಕರಗುವುವಾತನ ದಿಟ್ಟತನವದೇವೇಳ್ವೆ (ಕಂನವಿ. ೩-೯೮). ಧಿಟ್ಟತನ : ೧. ಧಿ[ಪಾಣಾಂ. ದಿ]ಟ್ಟತನ ಪೊಳ್ಪಾಯ್ತು ಶೌರ್ಯದ ಘಟ್ಟ ಕರಗಿತು (ಕುಮಾಧೀ. ೮-೬೨) ; ಶ್ರದ್ಧೆಯೊಡನೆ ಮಾತ್ರ ಅವನ ಧಿಟ್ಟತನ ನಡೆಯುತ್ತಿತ್ತು (ಪ್ರೇಮಾಶ್ರ. ೨೪೬). ೨. ಈ ಧಿಟ್ಟತನವು ಸಹನವಾಗಲಿಲ್ಲ (ಸಮಜೀ. ೪೦). [ದಿಟ್ಟ$_1$ + – ತನ]

ದಿಟ್ಟಪಡಿಸು (ಕ್ರಿ). ದೃಢಪಡಿಸು ; ಖಚಿತಪಡಿಸು: ಚಿಕ್ಕವರಾದಾಗ್ಯೂ ವಿವೇಕಶಾಲಿಗಳು ಕಾರ್ಯಗಳನ್ನು ದಿಟ್ಟಪಡಿಸುವರು (ಕಥಾಮಂ. IV, ೦೦).

[ದಿಟ್ಟ$_3$ + ಪಡಿಸು]

ದಿಟ್ಟಮನುಷ್ಯ (ನಾ). = ದಿಟ್ಟಗಾರ : ಮೇಜರ್ ಬಟ್ಲರನು ಮೊದಲಿನಿಂದಲೂ ದಿಟ್ಟಮನುಷ್ಯ (ಮಹಾತ್ಮಾ. ೬೬). [ದಿಟ್ಟ$_1$ + ಮನುಷ್ಯ]

ದಿಟ್ಟವಾಳ (ನಾ). ಧೈರ್ಯಶಾಲಿ; ಧೀರ:ಅಸಮಸೆಗೆ ಮೈಯಳುಕದೆಱಗುವ ಹುಸಿವ ಜಾಱುವ ಹೊಳೆವ ಹಣುಗುವ ಬೆಸುವ ಬಿಡಿಸುವ ದಿಟ್ಟ [ಪಾಣಾಂ. ಷ್ಟಿ]ವಾಳರು ಹೊಕ್ಕು ಹೆಣಗಿದರು (ಕುಮಾಸ. ೨-೦೦೫).

[ದಿಟ್ಟ$_1$ + – ವಾಳ$_1$]

ದಿಟ್ಟಸೊಕ್ಕು (ನಾ). ಅಧಿಕವಾದ ಸೊಕ್ಕು,–ಉದ್ಧಟತನ : ನಿನ್ನ ಈ ಬಿರುಸಿನ ಗಡಸನ್ನು ಸೆಡಕನ್ನು ಬಲ್ಮೆಯಿಂದಿಳಿಹಿ, ಮನ್ಮಥನಿಗಲರಲೊಲ್ಲದ ನಿನ್ನ ಅಶಾಸಿತಯುವ್ವನಕ್ಕುಳ್ಳ ದಿಟ್ಟಸೊಕ್ಕನ್ನು ತಿದ್ದಿ ತಿಳಿಯಿಸಿಕೊಂಡು (ಪಂಚತ್ರ. ೫೯-೨೪). [ದಿಟ್ಟ$_1$ + ಸೊಕ್ಕು$_4$ (<ಸೊರ್ಕು$_3$)]

ದಿಟ್ಟಾಯ್ಲ (ನಾ). ಧೀರ ; ಸಾಹಸಿ. 'ದಿಟ್ಟಾಯ್ಲತನ' ಪರಾ.

[ದಿಟ್ಟ$_1$ + –ಆಯ್ಲ (<– ಆಯಿಲ$_3$)]

ದಿಟ್ಟಾಯ್ಲತನ (ನಾ). ಧೀರತನ ; ಸಾಹಸ : ಧನು ಮುಱಿಯೆ ದಿಟ್ಟಾಯ್ಲತನವಿಃತನಲಿ ಸಾಕಿನ್ನೆನುತ ಗುರುನಂದನನು ಮುಱಿದನು ಹೊಗರುವೋರೆಯ ಹೊತ್ತ ದುಗುಡದಲಿ (ಕುಮಾಕಾ. ೧೪-೩೦).

[ದಿಟ್ಟಾಯ್ಲ + – ತನ]

ದಿಟ್ಟಿ, ದಿಷ್ಟಿ$_1$ (ನಾ). ೧. ಕಣ್ಣು ; ನೇತ್ರ : "ಅಷ್ಟಿ, ಆಲಿ, ದಿಟ್ಟಿ–ಈ ೩ ನಯನಂ" (ಕಶಸಾ. ೨೦-೪೨೫) ; ಮೆಯ್ಯೆಲ್ಲಂ ದಿಟ್ಟಿಗಳಾದೊಡಿಂದ್ರನೆನಿಸಲ್ಕಾರ್ತಂ ಮಹೇಂದ್ರಾಂತಕಂ (ಕಾವ್ಯಸಾ. ೫೫೦ ಶೂದ್ರಕ) ; ಆಗಸದೊಳಗೊಂದು ಮಹೀಭಾಗದೊಳನ್ನೊಂದು ದಾಡೆಯಾಗಿರೆ ವನದಿಂ ಬೇಗಂ ಬರ್ಪಳ ದಿಟ್ಟಿಗಳಾಗಳೆ ಪತ್ತಿದುವು ಗೆಂಟಱೊಳ್ ಮಾರುತಿಯಂ (ಪಂಪಭಾ. ೩-೦೩) ; ಮರಲ್ದ ದಿಟ್ಟಿ ಕತ್ತರಿಮೊನೆಗೊಂಡೆಟಲ್ವ ಕಿವಿ ಸೂಚಿಸಿದಪ್ಪುದು ಸೋಲ್ತ ಭಾವಮಂ (ಕಾದಂಪೂ. ೬೫೦) ; ನಟ್ಟ ದಿಟ್ಟಿಗಳ್ವೆರಸು ನಿನ್ನನೆ ನೊಡುತ್ತುಮಿರ್ಕುಮಪ್ಪೊಡೆ (ಪಂಪತಂ. ೧೬೬-೦೨) ; ಕಿವಿಗಳೆಳ(ಟಿ)ಲ್ದು ತೂಱುವೊಡೆ ಮೆಯ್ ಬಿಗಿದಪ್ಪೊಡೆ ದಿಟ್ಟಿ ನೆತ್ತಿಗೇಱುವೊಡದಱಿಂದೆ ಕಣ್ ಗುಱಿದು ತೋಱಿದೊಡೆಟ್ಟುಗೆ ಪಟ್ಟ ಸೂ[ತ್ರಭಸ್ಮ]ವಂ (ಲೋಕೋಪ. ೯-೨೦೯) ; ಹತ್ತೆಸಾರ್ದೆಯ್ದಿ ಕಣ್ಣೊಡೆದಿರ್ದುದಂ ಕಂಡು . . . ದಿಟ್ಟಿಯಿಂತೇಕಾಯ್ತು ಉರಿದೆ ನಾಂ ಉರಿದೆ ನಾಂ ಎನ್ನೊಡೆಯನೇ ಸೈರಿಸಲ್ಕಾಪೆನೇ ... ಎಂದು (ಕರ್ಣಾ. ದೇ. ೦೪೭-೮); ಪಱಿದಿಟ್ಟ ದಿಟ್ಟಿಯ ಬಳಿಕೊರ್ವನ ಕಾಲ ಮುಱಿದಿಟ್ಟ ನಿಟ್ಟಲುಗಳನು ನಿಱಿನಿಟಲೆಂಬಂತೆ ಕಿತ್ತು ಮಸ್ತಕವನು ತಿಱಿಕಲ್ಲನಾಡಿ ಬೊಬ್ಬಱಿಪೆದ (ಮೋಹಶ. ೧೩-೩೭). ೨. ದೃಷ್ಟಿ; ನೋಟ: "ದಿಟ್ಟಿಯೆಂದೆನೆ ದೃಷ್ಟಿಯಕ್ಕುಂ" (ಕಶರ. ೩೦); ತಾಂ ಪಿಂಗದೆ ನಟ್ಟ ದಿಟ್ಟಿಯನವಂ ಕಿಱಲೆಂದನುಗೆಯ್ದು ತೂಗಿದಂ (ಆದಿಪು. ೧೨-೦೫) ; ಪದಪಿಂ ನಟ್ಟರೆ ದಿಟ್ಟಿಯಂ ತೆಗೆದೆನೆಂತೆಂತಾನುಮುದ್ವೇಗದಿಂ (ಕಾದಂಪೂ. ೬೭೩) ; ಬೆಟ್ಟಮದೊಂದು . . . ದಿಟ್ಟಿಗೆಡೆಯಾದುದು ಕರ್ವುವಿಲ್ಲನಾ (ಕಬ್ಬಿಗಾ ೨೨೦). ೩. ಕೆಟ್ಟ ಪರಿಣಾಮವನ್ನುಂಟುಮಾಡುವ ನೋಟ ; ಕಣ್ಣೆಂಜಲು ; ದೃಷ್ಟಿದೋಷ : ಕಟ್ಟುಗೆ ಕೊರಲೊಳ್ ಸೀರೆಯ ಪೊಟ್ಟಣಿ(ಳ)ಮಂ ಮಾಡಿ ಧಾನ್ಯಸಮೇತಂ ನೋಡಲ್ ದಿಟ್ಟಿಗಳಾಗವು ವಾಜಿಗಂ (ಅಶ್ವಶಾ. ೮-೦೮) ; ಅಮರಗಣದಿಂ ದಿಟ್ಟಿಯಾದವುದು ಮತ್ಸುತಂಗೆಂದು ಗಿರಿರಾಜತನುಜೆ ಮಮತೆಯಿಂ ತದ್ಗರ್ಭರಕ್ಷಣಕೆ ಬರೆವ ಕಾಳಿಮಲೇಖೆಯೋ . . . ಎನಲ್ ಕಪ್ಪಡರ್ದ ನಿಡುಬಾಸೆ ಕಣ್ಗೆಸೆದುದು (ಚಿಬಪು. ೪-೦೨). ೪. ಲಕ್ಷ್ಯ ; ಗಮನ : ತಳಿರ ಕಳಿಕೆಯ ಪೊಸ ಪೂವಿನ ಮೇಗೆ ದಿಟ್ಟಿಯಾಗಿರೆ ವನಜಾನನೆಯರ್ ವಿಳಾಸವನಮಂ ಪೊಕ್ಕರ್ (ಆದಿಪು. ೦೦-೬೯) ; ಎಲೆ ಆದಿತ್ಯ! ನಿನ್ನ ಕುಲವಧುವಿವಳ್ . . . ಅಂತದಱಿಂ ಇವಳೊಳ್ ದಿಟ್ಟಿಯಿರ್ಕೆ (ರಾಮಾಶ್ವ. ೩೯-೮). **ದಿಷ್ಟಿ$_1$** : ೩. 'ದಿಷ್ಟಿಬೊಟ್ಟು', 'ದಿಷ್ಟಿಮಣಿಸರ' ಪರಾ.

ದಿಟ್ಟಿಗೆವರ್ = ಕಣ್ಣಿಗೆ ಬೀಳು : ದಿಟ್ಟಿಗೆವರೆ ಬಂಧವಿಧಂ ಕಟ್ಟಿದ ಪಲತೆಱದ ಮಣಿಯ ಸೂಸಕದ ನೆಟಲ್ (ಚಂದ್ರಪು. ೬-೪೬). ದಿಟ್ಟಿಗೊಟ್ಟು= ದೃಷ್ಟಿಗೆ ಬೀಳು : ಎನ್ನಾ ಪೆಂಡಶಿಯಂ ಜಾನಕಿಯಂ ರಕ್ಕಸಂ ರಾವಣಂ ಕಳ್ದುಯ್ದಂ ಆದೊಡಂತಾ ದುಟ್ಟಂ ದಿಟ್ಟಿಗೊಟ್ಟದನಿಲ್ಲಂ (ಅದ್ಭುತ. ೫೬-೦೨). ದಿಟ್ಟಿ ಮೂಱಱ ದೇವ = ಮೂರು ಕಣ್ಣುಗಳುಳ್ಳವನು ; ಮೂಕ್ಕಣ್ಣ ; ಶಿವ: ದಿಟ್ಟಿ ಮೂಱಱ ದೇವನಂ ಕಂಡು ಕಾಣದ ಜ್ಞಾನಿಗಳೆನುತ್ತ ಬಾಯ ಬಿಟ್ಟು ಪಲಬುವರು (ವೀರಶೈಪು. ೨-೯-೨೬). ದಿಟ್ಟಿ ಮೂಱಱರಸ= ದಿಟ್ಟಿ ಮೂಱಱದೇವ : ದಿಟ್ಟಿ ಮೂಱ[ಮೂಱಱ]ರಸಂ ನಾರಾಯಣಪ್ರಿಯಂ ಕಾಮಾರಿಯಾರೋಗಣಿಗೆ ನಡೆತಂದು (ಗಿರಿಕ. ೦೦-೯೮ ಪ).

[<ಸಂ. ದೃಷ್ಟಿ]

ದಿಟ್ಟಿಗ (ನಾ). ನೋಡುವವನು ; ನೋಟಕ ; ಪ್ರೇಕ್ಷಕ : ಆ ಹುರವ ನಿಟ್ಟಿಪ ದಿಟ್ಟಿಗರ ಬಗೆಗೆ . . . ಕಲಧೌತರೌಪ್ಯಗಳ ಸೌಧಸಮಾಜ ರಾಜಿಪುವು (ಪುದೇಪು. ೨-೩೮). [ದಿಟ್ಟಿ + – ಗ$_3$]

ದಿಟ್ಟಿಗರ್ಪು (ನಾ). ಕಣ್ಣೆಂಜಲಾಗದಿರಲು (ಗಲ್ಲ, ಹಣೆಗಳ ಮೇಲೆ) ಇಡುವ ಕಪ್ಪು, – ಕಾಡಿಗೆ ; ದೃಷ್ಟಿ ತಾಗದಿರಲು ಇಡುವ ಕಪ್ಪು ; ಬೊಟ್ಟು ; ದೃಷ್ಟಿಬೊಟ್ಟು : ಸುಱಿಗುರುಳೊಳ್ನೊಸಲ್ ಮಿಸುಪ ಸಾದಿನ ಬೊಟ್ಟು ಪೊದಟ್ಟ ಗಲ್ಲದೊಳ್ ತೊಳಗುವ ದಿಟ್ಟಿಗರ್ಪು . . . ಮನಂಗೊಳೆ (ಚಿಕವಿ. ೩-೫೨). [ದಿಟ್ಟಿ + ಕರ್ಪು$_1$]

ದಿಟ್ಟಿಗಿಡಿಯ (ನಾ). ಕಣ್ಣಿನಲ್ಲಿ ಬೆಂಕಿಯನ್ನುಳ್ಳವನು ; ಕಿಡಿಗಣ್ಣ ; ಶಿವ : ದಿಟ್ಟಿಗಿಡಿಯನೊಲು ತದ್ಭಕ್ತರಾ ನಿಂದೆಯಿಂ ರಾಘವಂಗಾಯ್ತು ಕೇಡು (ರಾಘಚ. ೪-೨೦) ; ಮುಟ್ಟಬಾರದ ಕಿಚ್ಚ ನುಂಗಲು ಹೊಟ್ಟೆ ಬೇಯದೆ ಮಾಣ್ಬುದೇ ಇದ ದಿಟ್ಟಿಗಿಡಿಯಂ ಬಲ್ಲನೆನುತಲಿ ಮಱುಗಿದಳು ರಮಣಿ (ಶಂಕದಾ. ೭-೦೬). [ದಿಟ್ಟಿ + ಕಿಡಿ + – ಅ$_7$]

ದಿಟ್ಟಿಗೆಡು (ಕ್ರಿ). ಕಂಗೆಡು ; ದಿಕ್ಕುಗಾಣದಂತಾಗು : ಚಿಂತಿಪ ಸುಯ್ವ ಜಾನಿಸುವ ಕಂದುವ ಕುಂದುವ ದಿಟ್ಟಿಗೆಟ್ಟುವಿಭ್ರಾಂತಿಪ ಲಜ್ಜೆಯಂ ಮುಱಿವ ಕೊಳ್ಮುಗದಾಪ್ತರ ಮಾತುಗೇಳದಿರ್ಪಂತುಟನೊಲ್ದಗಲ್ದವರೊಳಾಗಿಪರಂಗ ನೆಯರ್ಕಳೇ ಜರಾಕಾಂತೆ ನರಂಗೆ ತಾನಗಲದಾಗಿಪಳೇಂ ವಿಪರೀತವೃತ್ತಿಯೋ

(ಪುಪ್ಪ. ೦೩-೩೮) : ಪೊಡೆಮರಳ್ವಂ ನಿಲ್ವನಳಲುವಂ ಬಳಲುವಂ ಬಟ್ಟೆಯೊಳ್ಪಟ್ಟಗೆಟ್ಟು (ಕ್ರಮಪ್ರಾ. ೦೯-೩೦) : [ದಿಟ್ಟ + ಕೆಡು$_1$]

ದಿಟ್ಟಗೊಡು (ಕ್ರಿ). ದೃಷ್ಟಿಕೊಡು ; ನೋಡು : ಉದಯದೊಳೂರೆ ನಟ್ಟ ನಡುವಿರ್ದನನತ್ತಲೆ ದಿಟ್ಟಗೊಟ್ಟು ಮಾಣದೆ ಶುನಕಂಗಳೊಳ್ಪಡವನೀಪತಿಗಕ್ಕುಮವಾಯಂ (ಕೋಕೋಪ. ೦೨-೩೦). [ದಿಟ್ಟ + ಕೊಡು$_1$]

ದಿಟ್ಟಗೊನೆ (ನಾ). ಕಡೆಗಣ್ಣು ; ಕಟಾಕ್ಷ ; ಅಪಾಂಗ : ಕಟ್ಟರ್ದ ಹಾರಾದಿಗಳ್ಪಱಿದುದಿರ್ವವೋಲ್ ದಿಟ್ಟಗೊನೆಗಳ ಕಾಂತಿ ಸೂಸುತಿರೆ (ಕ್ರಮಿಪಾ. ೩೩-೩೫). [ದಿಟ್ಟ + ಕೊನೆ$_3$]

ದಿಟ್ಟಗೊನೆವೆಳಗು (ನಾ). ಕಡೆಗಣ್ಣಿನ ಕಾಂತಿ,–ಬೆಳಗು : ಆದಿಪುರುಷನ ದಿಟ್ಟಗೊನೆವೆಳಗ ಸೋಂಕಿನಂ ಭೂದೇವತೆಗೆ ಸಾತ್ವಿಕಂ ತನುವಿನೊಳ್ ಸ್ವೇದಾಂಬುವುಣ್ಮೆ ಪುಳಕಂ ಪೊಣ್ಮೆ ರಾರಾಜಿಪಂದವೋಯೆಂಬ ಪಾಂಗಿಂ (ಪರ್ಮಠಾ. ೬-೭೩). [ದಿಟ್ಟಗೊನೆ + ಬೆಳಗು$_2$]

ದಿಟ್ಟಗೊಳ್, ದಿಟ್ಟಗೊಳ್ಳು (ಕ್ರಿ). ಕಣ್ಣಿಗೆ ಬೀಳು ; ಕಾಣು ; ದೃಷ್ಟಿಗೆ ಸಿಗು. 'ದಿಟ್ಟಗೊಳಿಸು' ಪರಾ. **ದಿಟ್ಟಗೊಳ್ಳು** : ಕಟ್ಟದರು ಸಾಗರವ ಕಲುಮರಮುಟ್ಟಿನಲಿ ಸುರನರಭುಜಂಗರೆ ದಿಟ್ಟಗೊಳ್ಳದ ದುರ್ಗವನು ಕೆಡಹಿದರು ಕದನದಲಿ (ತೂಲಕಾ. ೬-೧೯-೪). [ದಿಟ್ಟ + ಕೊಳ್$_1$]

ದಿಟ್ಟಗೊಳಿಸು (ಕ್ರಿ). ೧. ದೃಷ್ಟಿಗೆ ಬೀಳಂ ; ಕಾಣಿಸಿಕೊಳ್ಳು : ಬೆಳ್ದಾವರೆಯೊಳೆಱಗಿದಳಿಕುಲಂ ಗಗನಾಗ್ರದೊಳ್ದನದಿನಕೆ ಬೆಳೆವ ಚಂದ್ರಶಲೆ ಕನಕಾದ್ರಿಯೊಳ್ದಿಟ್ಟಗೊಳಿಸುವಸಿತಾಂಬುದಂ ರಾರಾಜಿಸುವ ತೆಱದೊಳು (ಕ್ರಮಿಪಾ. ೦೪-೩೩). ೨. ದೃಷ್ಟಿಯನ್ನು ಆಕರ್ಷಿಸು ; ಮನೋಹರವಾಗು ; **ಕಣ್ಸೆಳೆ** : ನಿಟ್ಟಿದೆಯರ್ ಕರತಂದಾ . . . ಸೌಂದರವತಿಯಂ ದಿಟ್ಟಗೊಳಿಪ್ಪ ಕಟಾಣಿಮುತ್ತುಗಳಳವಟ್ಟ ಮೆಟ್ಟಕ್ಕಿ ಗೂಡಿಗಳೊಳುದ್ಭಟಾಂಕಂ ಬೆಸಸುರ್ವೀಸುರತತಿ ಸಂಭ್ರಮದಿಂದಂ ನಿಲಿಸೆ (ಅರ್ಕಪು. ೯-೩೭ ಪ).

[ದಿಟ್ಟಗೊಳ್ + – ಇಸು$_3$]

ದಿಟ್ಟಗೊಳ್ಳು 'ದಿಟ್ಟಗೊಳ್' ನೋ.

ದಿಟ್ಟತಾಗು (ಕ್ರಿ). ದೃಷ್ಟಿತಾಗು ; ಕಣ್ಣಿಂಜಲಾಗಂ : ದಿಟ್ಟತಾಗುಗುಮೆಂದು ಕತ್ತುರಿಯ ಗೆರೆಯನಱಿಯಟ್ಟೆ (ಪರ್ಮಠಾ. ೩-೨೮).

[ದಿಟ್ಟ + ತಾಗು$_1$ (<ತಾಂಕು$_1$)]

ದಿಟ್ಟತೀವು (ಕ್ರಿ). ಕಣ್ಣುತುಂಬು ; ಕಣ್ಣಿಗೆ ತೃಪ್ತಿಯಾಗು : ದಿಟ್ಟತೀವಲು ನೋಳ್ಪ ಜನಕೆ ತಾನಥಿಮುಖಂ ಮುಟ್ಟುವರ ಮುದ್ದು ಮುದ್ದಾಡಿಪರ ನಿಜಸುಖಂ (ಲಸರ. ೦-೦೪೦). [ದಿಟ್ಟ + ತೀವು]

ದಿಟ್ಟದಂಡೆ (ನಾ). ದೃಷ್ಟಿದೋಷ ಪರಿಹಾರಕ್ಕಾಗಿ ಧರಿಸುವ ಆಭರಣದಂತಹ ದಂಡೆ : ಕಡಗ ಕಂಕಣ ಸೂಡಗ ಹೊನ್ನ ಬಳೆ ಬಾದಿ ಖಡೆಯ ಪೆಂಡೆಯ ದಿಟ್ಟದಂಡೆ (ಶಾಶಾಸಂ. ೧-೦೦೬) : ಅರಳೆಲೆ ಮಾಗಾಯಿ ಪುಲಿಯುಗುರುಡಿನೂಲು . . . ದಿಟ್ಟದಂಡೆ ಮೆಱಿಯಲಾ ತರುಣನೆಸೆದನು (ಶಾಶಾಸಂ. ೪-೭೭). [ದಿಟ್ಟ + ದಂಡೆ$_1$]

ದಿಟ್ಟದಾಹಕ (ನಾ). ಕಣ್ಣಿನಲ್ಲಿ ಬೆಂಕಿಯುಳ್ಳವನು ; ಅಗ್ನಿನೇತ್ರ ; ಶಿವ : ದಿಟ್ಟದಾಹಕನ ಮಸ್ತಕ ಮುಱಿವಂದದಿ ಮೆಟ್ಟ ಕೆಂಗಿಡಿಗಳ ಕಱಿದುಪುಟ್ಟಿಸಿ ಹೃದಯಸಂತಾಪವ ತಪವನೆಬ್ಬಟ್ಟುವೆನೆಂದನಬ್ಜಾರಿ (ಪೋಹತ. ೬-೩೦).

[ದಿಟ್ಟ + ದಾಹಕ]

ದಿಟ್ಟದೆಱಿ^{1} (ಕ್ರಿ). ಕಣ್ಣನ್ನು ತೆರೆ,–ಬಿಡು : ಮೆಲ್ಲನೆ ದಿಟ್ಟದೆಱಿದು ವಸಂತತಿಲಕೆಯ ನಿಟ್ಟಿಸಿಯೆ ಕಾಣದೆ ವಿಕಲನಾದನು ವಣಿಗ್ವರನು (ಸಾಳ್ಕಥಾ. ೦೬-೩೩). [ದಿಟ್ಟ +ತೆಱಿ$_1$]

ದಿಟ್ಟದೋಸ (ನಾ). ಕಣ್ಣಿಂಜಲಂ ; ದೃಷ್ಟಿದೋಷ : ದಿಟ್ಟದೋಸಂ ತಟ್ಟದಂತೆರಡುಂ ಮೆಲ್ಲದಾವುಗಳೊಳಿಟ್ಟ ಕಾಡಗೆಬೊಟ್ಟುಂ (ಚಕವಿ. ೪-೮೮ ಪ). [ದಿಟ್ಟ + ದೋಸ]

ದಿಟ್ಟನಡು (ಕ್ರಿ). ೧. ದೃಷ್ಟಿಯಿಡು ; ಎವೆಯಿಕ್ಕದೆ ನೋಡು ; ಕಣ್ಣಿಟ್ಟು ನೋಡು : ಧಿಗಿಲನೆ ಮನಂ ಬೆದಱಿ ಪರವ ಕಾಣುತ್ತಲ್ಲಿ ಮಿಗೆ ದಿಟ್ಟನ[ಪಾಠಾಂ. ಯಿ]ಟ್ಟು ನೋಡುತ್ತಿರಲ್ಕಂತಲ್ಲಿ (ಸಂಲಿರ ೪-೧೦೩). ೨. ದೃಷ್ಟಿತಾಗು; ಕಣ್ಣಿಂಜಲಾಗು: ಮಡದಿ ರನ್ನೆಯ ಸಿರಿಮುಡಿಗರಿಸಿನಡ ಪಾವುಡೆಯ ಬಂಧಿಸಿ ಕೆಲರ್ದಿಟ್ಟಿಸದದಂತೆ ಹಣಿಗೆ ಕಟ್ಟಿನ ಬೊಟ್ಟನಿಟ್ಟರು (ಪೋಹತ. ೦೭-೪೪). [ದಿಟ್ಟ + ನಡು$_1$]

ದಿಟ್ಟಬಿಸ 'ದಿಟ್ಟವಿಸ' ನೋ.

ದಿಟ್ಟಬೊಂಬೆ (ನಾ). ಕಣ್ಣೊಳಗಿನ ಬೊಂಬೆ,–ಹಾಹೆ,–ಪಾಪೆ : ದಿಟ್ಟಬೊಂಬೆಗಳು ವಸಂತದೊಳಗೆ ಕೋಲ ನೆಟ್ಟನೆ ಪೊಡವಂದದೊಳು (ಕ್ರೀಪಾರಿ. ೪-೦೨೬). [ದಿಟ್ಟ + ಬೊಂಬೆ]

ದಿಟ್ಟಬೊಟ್ಟು, ದಿಷ್ಟಿಬೊಟ್ಟು (ನಾ). ದೃಷ್ಟಿದೋಷ ತಾಗಬಾರದೆಂದು ಕೆನ್ನೆ ಅಥವಾ ಗಲ್ಲದ ಮೇಲೆ ಇಡುವ ಬೊಟ್ಟು,–ಗುರುತಂ: ಎಳಗಲ್ಲದೊಳಿಟ್ಟ ದಿಟ್ಟಬೊಟ್ಟಂ ಕಳಿಗೊಂಡೊಪ್ಪುವ ಪಚ್ಚೆಗನ್ನವಚ್ಚಂ (ಚಳವಿ. ೩-೪೪) ; ಮೆಲ್ಲಗದಪುಗಳೊಳಿಟ್ಟ ಕತ್ತುರಿಯ ದಿಟ್ಟಬೊಟ್ಟಂ (ಚಳವಂ. ೬೫-೦೭). **ದಿಷ್ಟಿಬೊಟ್ಟು** : ಘರ್ಮೋದಯದಿ ತನುವ ಪ್ರಕ್ಷಾಳಿಸಿ ದಿಷ್ಟಿಬೊಟ್ಟಿಟ್ಟು (ನವಪೋ. ೧೧-೪೪).

[ದಿಟ್ಟ + ಬೊಟ್ಟು$_2$ (<ಬಟ್ಟು$_1$)]

ದಿಟ್ಟವಾರಿ, ದಿಟ್ಟವಾರೆ (ನಾ). ಕಣ್ಣಳವು ; ಕಣ್ಣಳತೆ ; ದೃಷ್ಟಿಪಥ ; ಕಣ್ಪೊಲ (?) : ದಿಟ್ಟವಾರಿಯ ಧೀರರ ಪಾರ್ಥರ ಗಣಕೆಯರ ವೀರರ ಹರಿವಾಣದಾಯದ ಲೆಂಕರ ಬಿಂಕದಂಕಾಜರ ಮಾಸಾಳ್ಕಳ . . . ಒತ್ತರದ ತಿಂಥಿಣಿಯನೊತ್ತರಿಸಿ (ಲಸರ. ೬-೩೦) : "ತನಗೂ ದೇವರಿಗೂ ನಡುವೆ ಬಂದವರನ್ನು ಕತ್ತರಿಸುತ್ತೇನೆಂಬ ಪ್ರತಿಜ್ಞೆ" (ಲಸರ. ಕೋಶ) ; ದಿಟ್ಟ[ಪಾಠಾಂ. ದಿಶಿ. ದ್ರಿಷ್ಟಿ]ವಾರಿಯ ಮೇಳದಾಳೋಚನೆಗಳೊಳಳವಟ್ಟು ಹತ್ತೈದು ಗಣನಾಥರ್ವೆರಸಿ ತನ್ನ ಪಟ್ಟದಂಗನೆ ಸಹಿತ ಸುಖದ ಸುಗ್ಗಿಯ ಮೇಲೆ ಶೂಲಿ ವರಿಣಾಮವಿರಲು (ಸೋಮಶ. ೧-೩೪) ; ದಿಟ್ಟ[ಟ್ಟಿ]ವಾರಿಯೊಳುಳ್ಳ [ಪಾಠಾಂ. ದಿಟ್ಟಗಾಂಬನಿತೆಡೆಯ] ನೀರೆಲ್ಲವಂ ಕೆಡಿಸಿ ಮುಟ್ಟಿ ನಾನಾ ಕ್ರೂರಮೃಗವಾಗಿ ಬಂದಡ್ಡಗಟ್ಟಿ ಗರ್ಜಿಸುತ ಮಾಯಾವೇಷದಿಂದೊಡನೆ ಬಾದ ವಿಶ್ವಾಮಿತ್ರನು (ಹಕಥಾ. ೯-೩೨) ; ಇರದೆ ನಿಜವುಸುರಾಟದೆಡೆಯೊಳು ಹರಿಯ ದರ್ಪವನಳಿದು ಕಾಯ್ದುರು ಕರುಣಿಯುಭವನ ದಿಟ್ಟವಾರಿಯ ಪೋಲಗದೊಳೊಪ್ಪೆ (ಸಾನಂಕ. ೯-೩೬). **ದಿಟ್ಟವಾರೆ** : ಕಡುಗಿದರೆ ಕಾಲಂಗೆ ಬರುದಿನ ತೊಡರನಿಸ್ಕ್ಯವ ಜವನ ದಾಡೆಯ ತುಡುಕುವಗ್ಗದ ವೀರರೆಸೆದುದು ದಿಟ್ಟವಾರೆಯಲಿ (ಶುವ್ಯಾಕಾ. ೯-೪೩). [ದಿಟ್ಟ + ವಾರಿ?]

ದಿಟ್ಟವಾರೆ 'ದಿಟ್ಟವಾರಿ' ನೋ.

ದಿಟ್ಟವಿಸ, ದಿಟ್ಟಬಿಸ (ನಾ). ೧. ಕೆಟ್ಟ ಪರಿಣಾಮವನ್ನುಂಟುಮಾಡುವ ಕಣ್ಣು ; ಕೆಟ್ಟಕಣ್ಣು : (ಕ). ೨. ಕೆಟ್ಟಕಣ್ಣಿನಿಂದ ಉಂಟಾಗುವ ಪರಿಣಾಮ ; ಕಣ್ಣಿಂಜಲು : "ದಿಟ್ಟಬಿ(ವಿ)ಸ–ದೃಷ್ಟಿವಿಷ = ಕಣ್ಣಿಂಜಲು" (ಕದ್ಯಕೋ. ೦೯) : ರಾಜ್ಯವಿಭವೋದಯದಿಂದೆ ವಿರಾಜಪಂಗೆ ದಿಟ್ಟವಿಸಮು[ಪಾಠಾಂ.ಷ]ಮಪ್ಪುದೆಂದು ಪದಪಿ ಪ್ರಭೂಸುನುಂಗೆ ತಾನೆ ರಕ್ಕೆ ಗಟ್ಟಿವ ತೆಱದಿಂದೆ ಕಟ್ಟದನಿಳಾಪತಿ ತನ್ನಧಿರಾಜಪಟ್ಟಮಾ (ಕಂದ್ರಪು. ೬-೧೦೨). **ದಿಟ್ಟವಿಸ** : ಷಿ. ಹಾವು : ಎರಡು ಪದಂಗಳಪಭ್ರಂಶಕ್ಕೆ–ಅಚ್ಚ ಸ್ಪಟಿ–ಅಚ್ಚವಳಿಕು . . . ದೃಷ್ಟಿವಿಷ–ದಿಟ್ಟಬಿಸ, ದಿಟ್ಟವಿಸ (ಶಮದ. ೨೯೯ ಪ್ರಹೋ). [ದಿಟ್ಟ + ವಿಸ]

ದಿಟ್ಟವೆಳಗು (ನಾ). ಕಣ್ಣಿನ ಕಾಂತಿ,–ಬೆಳಗು,–ಪ್ರಕಾಶ: ದಿಟ್ಟವೆಳಗಿನಿಂ ನಿವಳಿಸುವಂತೆಯುಂ ಕಣ್ಣೊಳಗಿಟ್ಟು ಮುಚ್ಚುವಂತೆಯುಂ ಬಗೆಯೊಳೆ ತೆಗೆದಪ್ಪುವಂತೆಯುಂ ಅಕ್ಷೂಣಲಕ್ಷಣಲಕ್ಷಿತಂಗಳವು ಪುತ್ರನಂಗಪ್ರತ್ಯಂಗಂ

ಗಳಂ ನೀಡುಂ ಭಾವಿಸಿ ನೋಡಿ (ಚಂದ್ರಪು. ೩-೧೦೨ ಪ) ; ಅಂಗನೆಯ ರ ದಿಟ್ಟಿವೆಳಗು . . . ಹೊಸಮುತ್ತಿನ ರಂಗವಲ್ಲಿಯ ತೆಱನಹುದು (ಶ್ರೀಪಾಲ. ೨-೪). [ದಿಟ್ಟಿ + ಬೆಳಗು$_2$]

ದಿಟ್ಟಿಸರ (ನಾ). (ಕುದುರೆಯ ಕೊರಳಿಗೆ ತೊಡಿಸುವ) ಒಂದು ಬಗೆಯ ಆಭರಣ: ಇಕ್ಕಿದ ಪಕ್ಕರಕ್ಕೆ ನಿಡುರುಲ್ಲಿ ತೊಡಂಕುವ ತೋರಗೊಂಡೆಯುಂ ಸೆಕ್ಕಿದ ಖಂಡೆಯುಂ ಬಿಗಿದ ಬಿಲ್ ಪೊದೆದುಂಬಿದ ಬೋಳೆಯುಂಬು ಕಂದಕ್ಕ ಮರ್ದಿಟ್ಟ ದಿಟ್ಟಿಸರ ಪೊಂಬಲೆಗಳ್ ಮೊಗರುಬಮೊಂದು ಪೊಂಬಕ್ಕಿಯ ತೊಕ್ಕು ಮೆಯ್ಗರೆಯೆ ಬಾಸಿಗದಿಂ ಮೆಱೆದತ್ತು ಸಪ್ತಿಗಳ್ (ಚಿಕವಿ. ೨-೯೬). [ದಿಟ್ಟಿ + ಸರ$_4$]

ದಿಟ್ಟಿಸಲಿಸು (ಕ್ರಿ). ಕಣ್ಣಾಹಾಯಿಸು ; ನೋಡು : ಹೊಗುಹೊಗುತ ಹೊರಬರುವ ಮಾನುಷ್ಯವಾಹಿನಿಯ ಕಲ್ಲೋಲಲೀಲೆಯೊಳು ದಿಟ್ಟಿಸಲಿಸಿ ಶುಭ ಜಾಗಟೆ ದನಿಯ ಕೈವಾರದೊಳು ನಾಮದುಗ್ಗಡಣಿಯಿರಿವಿನೇರುವೆ ಯಾಲಿಸಿ (ಪುಲಿದೇ. ೪೬-೬). [ದಿಟ್ಟಿ + ಸಲಿಸು]

ದಿಟ್ಟಿಸು (ಕ್ರಿ). ೧. ನೋಡು ; ಅವಲೋಕಿಸು ; ದೃಷ್ಟಿಸು : ಎಡನಂ ಬಲನಂ ದಿಟ್ಟಿಸುತೆ ನಿಂದು ನಿಲ್ಲದೆ ನಿಟ್ಟೋಟದೊಳೋಡಿತೆಸೆವ ಮಸಕದ ಶಶಕಂ (ಗಿರಿಕ. ೧-೮೬) ; ದಿಟ್ಟಿಪರೆ ದಿಟ್ಟಿಗಳಿಗಚ್ಚರಿ ಹುಟ್ಟಿ ಪೊನ್ನುಕ್ಕಿದಡೆ ಹರುಷಂಬಟ್ಟು ಭೂಪಂ ಬಸವರಸನಂ ಕೀರ್ತಿಸುತಮಿರಲು (ಬಸಪು. ೧೧-೧೫) ; ಅಕ್ಕಱಿಂದಾಲಿಂಗಿಸಿ ದಿಟ್ಟಿಸಿ ಬೊಟ್ಟಾಡಿ . . . ಪುಷ್ಪ ಪರಿಮಳದಂತೆ ನಾ ನೀನುಭಯವಿಲ್ಲದಂತೆ ಕೂಡೆನ್ನ ಪ್ರಾಣೇಶನೇ (ಪುನವ. ೨-೦) ; ಅವಿದ್ಯೆಯುಂ ದಿಟ್ಟಿಪರೆ ಭಾವಾನುಸಾರದಿ ತೋರುತಿಹಳು (ಗಗತಾ. ೧೯-೧೯). ೨. ಹುಡುಕು : ಕುಟ್ಟೆಂಬ ನುಡಿ ವ್ರೀಹಿಯೊಳಲ್ಲದೆ ಬೇರೆ ದಿಟ್ಟಿಸಲಾ ನಾಡೊಳಿಲ್ಲ (ಶಂಸವಿ. ೨-೧೫). 'ನಿಟ್ಟಿಸು' ಪರಾ.

ದಿಟ್ಟಿಸಿ ನೋಡು = ಎವೆಯಿಕ್ಕದೆ ನೋಡು : ಚಂದನೆಯ ಚಂದಮಂ ಸೆಟ್ಟಿತಿ ದಿಟ್ಟಿಸಿ ನೋಡಿ (ಪರ್ಧಪು. ೧೫-೫೩ ಪ) ; ದಿಟ್ಟಿಸಿ ನೋಡದೆವೆ ಯಿಕ್ಕದಿಹ ಕಣ್ಣ ದಕ್ಕಾಲಿಯೆಂದು ನಿರ್ಮಲ ದೇಹಮಂ ರಸವಱತು ಬೆಳೆದಂಗವೆಂದು . . . ದೂರದಿಂದೆ ದೀವಿಗೆವಿಡಿದು ದಿಟ್ಟಿಸಿದರು (ಸಿದ್ಧರಾ. ೨-೪) ; ಅಸುರೆ ದಿಟ್ಟಿಸಿ ನೋಡಿದಳು ಶಿಶುವ (ಕುಮಾಸ. ೨-೪೪); ಅವಳನ್ನೇ ಒಮ್ಮೆ ದಿಟ್ಟಿಸಿ ನೋಡಿದ (ಹಾಹುತ್ತ. ೬೬). [ದಿಟ್ಟಿ + – ಇಸು$_3$]

ದಿಟ್ಟಿಹತ್ತು (ಕ್ರಿ). ದೃಷ್ಟಿತಾಗು ; ಕಣ್ಣೆಂಜಲಾಗು : ಮುಟ್ಟಲು ಮಾಸುವದು ದಿಟ್ಟಿಹತ್ತೀತೆಂದು ಬಟ್ಟೇಡತಿದ್ದೆ ಭಸಿತದ ಹಣಿಮೇಲೆ ಸುಟ್ಟು ಹೋಗಲೆಂದು ಕೆಟ್ಟಗಣ್ಣು (ಸಿದ್ಧಪು. ೪-೯೪). [ದಿಟ್ಟಿ + ಹತ್ತು$_1$ (<ಪತ್ತು$_1$)]

ದಿಟ್ಟಿಹಾಯಿಸು (ಕ್ರಿ). ದೃಷ್ಟಿಬೀರು ; ನೋಡು : ದುಷ್ಟಬುದ್ಧಿ ಅತ್ತಿತ್ತ ದಿಟ್ಟಿಹಾಯಿಸದೆ ಶ್ರೀಮದ್‌ಗಾಂಭೀರ್ಯಕ್ಕೆ ಊನ ಬರಬಾರದೆಂಬಂತೆ . . . ಮುಂಬರಿಯುತ್ತುನೆ (ಚಂದ್ರಸ. ೬). [ದಿಟ್ಟಿ + ಹಾಯಿಸು (<ಪಾಯಿಸು)]

ದಿಟ್ಟಿ$_1$ (ನಾ). ೧. ದಿಟ್ಟತನವುಳ್ಳವಳು ; ಧೈರ್ಯಶಾಲಿನಿ : ತುಂಬ ಒಳ್ಳೆಯ ಹುಡುಗಿ; ದಿಟ್ಟಿ (ದೀಪದ. ೧೪೮). ೨. ಉದ್ದಟೆ ; ಗಡಸುಗಾತಿ: ದಿಟ್ಟೆಯರು ಕುಟಿಲೆಯರು ಕುಹಕದ ಘಟ್ಟಿಯರು ಲಟ್ಟೆಯರು (ಬಸಪು. ೪೦-೫೬) ; ಅರರೆ ಹೆಂಗಸು ದಿಟ್ಟೆ ಮೋನದೊಳಿರಲಿದಾವಂತರವು ರಾಯನ ಹೊರೆಯಲೀ ಬಾಯ್ಬಡಿಕತನ ಗರುವಾಯಿಯೇಯೆನಲು (ಕುಮಾವಿ. ೩-೨೬). ೩. ಚಮರೆ ; ಜಾಣೆ : ಹೊಳೆವುತಿದ್ದರು ಮನಸಿಜನ ಮಾಸಾಳುಗಳಂತೆ ದಿಟ್ಟೆಯರು (ಧರಚ. ೧೨-೯೧); ಮುಟ್ಟಿದರೆ ಕಂದದಿರದಿವಳ ಸುಕುಮಾರತನು ದಿಟ್ಟೆಯರದೆಂತೊ ನವಕುಂಕುಮವನೀಗ ನುಂಪಿಟ್ಟರು (ಕೃಮಿಪಾ. ೩೦-೬). [ದಿಟ್ಟ$_1$ + – ಎ$_2$]

ದಿಟ್ಟಿ$_2$ (ನಾ). ದೃಷ್ಟಿ (?) : ದಿಟ್ಟಿ ಮುರಿವಲ್ಲಿ ಕಡುಪಿನೊಳ್ ಮುರಿದ ಯಿಲ್ಲಿಲ್ಲಿಯ ಬಿನ್ನಣವನ್ನೆಱೆಯೆ ಕಲ್ಪದೆ ಬೀರರ ಬೀರನಂ ಗಿಡೆಗಳಾಭರಣನಂ ನೋಡಿ ಕಲ್ಲಾ (ಎಕ. II, ೧೩೩-೧೨೭ ; 982). [P ಇದು 'ದಿಟ್ಟಿ' ಎಂಬುದರ ಅಪಲಿಖಿತವಿರಬಹುದು]

ದಿಟ್ಟೆದೆ (ನಾ). ಧೈರ್ಯದಿಂದ ಕೂಡಿದ ಮನಸ್ಸು,–ಹೃದಯ : ನಿಮ್ಮ ದಿಟ್ಟೆದೆಯ ಸಾಹಸದ ಸ್ವಾಮಿನಿಷ್ಠೆಯಿಂದ ತಪ್ಪಿಸಿ ಕಾಪಾಡಿಕೊಂಡು ಬರುತ್ತ . . . ಪಾವನರಾಗಿರುವ ಶೂರರ ಮನೆತನದವರು ನೀವು (ಮಂತ್ರಶ. ೫೦-೦೭). [ದಿಟ್ಟಿ$_1$ + ಎದೆ (<ಎರ್ದೆ)]

ದಿಡ, ಧಡ$_3$ (ಗು). ೧. ದೃಢವಾದ ; ಬಲವಾದ: ದೃಢ, ದಿಡ (ಶಬ್ದಾನು. ೧೪೩ ಪ್ರಯೋ). (ನಾ). ೨. ದೃಢತೆ ; ಸ್ಥಿರತೆ ; ಬಲ : "ದಿಡ (ದುಡ) ದೃಢ = ಸ್ಥಿರತೆ" (ತದ್ಭವಕೋ. ೧೯) ; ಭೀತಿಯನೆದೆಯೊಳಿನ್ನಿಡಸಲ್ಲ ನಂಬುವುದಿದನು ದಿಡಮಾಗಿ (ರಾಮಾಸಂ. ೩-೧-೩೦). ೩. ಸತ್ಯ ; ನಿಜ : ಮೃಡನೆರೆಯೆ ಮಗಳ ಮುಡಿಯಂ ಕೊಯ್ದು ಕೊಡೆ ಮದುವೆಯೆಡೆ ಯೊಳಾ ಬೀಯಗರ್ಮುಳಿದು ಕಾದುವ ಘೌಜು ದಿಡದೊಳು ತುಱುಂಬ ನಾದಂತೆ ತೊಂಡಲು ಸಹಿತ ಹಿಡಿದಳ್ತಿಯಾಗಿದೆಯಲಾ (ವೀರಶೈವ. ೮-೨-೮). ೪. ಭರವಸೆ ; ನಂಬಿಕೆ. 'ದಿಡಂದಳೆ' ಪರಾ. ೫. ದೃಢವಾದುದು ; ಗಟ್ಟಿಯಾದುದು ; ಮನಮುಟ್ಟುವಂತಹುದು : ನಾಡೆ ಮುನ್ನರಿತ ಪಾಠವನು . . . ದಿಡವೊ[ವ]ಪ್ಪುವೊಲು ಪಾಡು (ಕಿರೀಟೇ. ೩-೦೫). ೬. ಶಾಶ್ವತ ವಾದುದು : ತಂಬೂರಿ ಶ್ರುತಿಗೆ ಸೀತಾರ ಜತಿಗೆ ದಿಡದಾದಿ ಮಿಟಿ ದಾಟಿ ಕುಂಭನಿಯ ತುಂಬಿ ಅಂಬರವ ತುಂಬಿ ತುಂಬಿಸದಳೆಂಥ ಲಹರಿ (ಗಂಗಾತ. ೧೦೯-೦೫). ಧಡ$_3$: ೭. ಗಟ್ಟಿಮುಟ್ಟಾದುದು; ಶಕ್ತಿಯುಂತ ವಾದುದು: ಕೈಕಾಲು ಧಡವಿದ್ದರೆ ಯಾರಾದರೂ ಕೇಳಿಯಾರು(ಸ್ಕೃತಿಚಿ. ೨೦೭) : ಪಾಪ ಮೂಕಿ ! ಕೈಕಾಲು ಧಡಾ ಇಲ್ಲಾ ! (ಧರ್ಮಸೆ. ೧೨೮). [<ಸಂ. ದೃಢ]

ದಿಡಂದಳೆ (ಕ್ರಿ). ದೃಢತೆಯನ್ನು ಹೊಂದು; ಭರವಸೆಯನ್ನು ಹೊಂದು: ಅಗಲದೀಕ್ಷಿಸುತಿರ್ಪಿನಂ ತದವಜ್ಞೆಯಿಂ ಖಲಚೋಳನಾ ಸ್ಮಗಿತ ಸೇನೆಯದೆಯ್ದು ವೇಗದೆ ಲೂಟಿಸುತ್ತಿರೆ ನಾಡನಾ ಜಗತಿಯಾಳ್ಳನದೆಲ್ಲಮಂ ನಡೆ ಕೇಳ್ದು ಸುಂದರಪಾದದೊಳ್ ಮಿಗೆ ದಿಡಂದಳೆಯುತ್ತಹೋ ಹರ ಶಂಭುವೆಂದತಿ ಕೋಪದಿಂ (ಹಾಲಾಸ್ಯ. ೩-೮-೪೪). [ದಿಡ + ತಳೆ$_1$]

ದಿಡಕಿ, ದಿಡಕೆ (ನಾ). ಹಸು, ಕರ ಗಳು ಗುಟುರುಂ ಹಾಕುವುದನ್ನು ಸೂಚಿಸುವ ಶಬ್ದ. ದಿಡಕೆ.

ದಿಡಕಿ ಹಾಕು = ಗುಟುರುಹಾಕು : ಒಂದು ಅರಗಳಿಗೆ ತಡವಾದರೂ ಕಾಲು ಕೆದರುತ್ತ ದಿಡಕಿ ಹಾಕಿ (ಒದರುತ್ತ) 'ಅಂಬಾ' ಎಂದು ಕೂಗುವಳು ಬನಶಂಕರಿಯನ್ನು (ಸುವಸಂ. ೬೬). ದಿಡಕೆ ಹೊಡೆ = ದಿಡಕಿ ಹಾಕು : ಕೋಟೆ ಬಸವಣ್ಣ ದಿಡಕೆ ಹೊಡೆಯುತ್ತ ಎದ್ದು ಬಂದು (ಚೆಳುಮ. ೩೨).

ದಿಡಕೆ 'ದಿಡಕಿ' ನೋ.

ದಿಡಗು 'ದಿಡುಗು$_1$' ನೋ.

ದಿಡಗೊಳ್ಳು (ಕ್ರಿ). ಬಲವಾಗು ; ದೃಢಗೊಳ್ಳು : (ಕಿ). [ದಿಡ + ಕೊಳ್ಳು$_1$ (<ಕೊಳ್$_1$)]

ದಿಡುಗು$_1$, ದಿಡಗು (ನಾ). ೧. ಜಲಪಾತ ; ಧಬಧಬೆ : ದಿಡುಗೋ ಗುಡುಗೋ ಜೋಗ ಪ್ರಪಾತ (ಮುಕ್ತಕಂ. ೭೦-೮) ; ದಿಡುಗದೊ ಗುಡುಗುಡು ಗುಡುಗುತಿದೆ (ಉಯ್ಯಾಲೆ. ೭೬-೩). ದಿಡಗು : ೨. ಜೋರು; ರಭಸ : ಕಡಗವಿಲ್ಲದ ಕೈಯೂ ದಿಡಗವಿಲ್ಲದ ಹೊಳೆಯು ಹಡದವ್ವ ಇಲ್ಲದ ತವರಿಗೆ ಹೋದರ ನಡುದಾರ್ಯಾಗ ವಸ್ತಿ ಹೋದ್ಹಾಂಗ (ಆನಗೀ. ೫೫). ೩. (ಆಲಂ) ಉತ್ಸಾಹ : ರಾಮೋತ್ಸವಸಮಯದಲ್ಲಾತೂ ಅವನ ದಿಡಗು ಯಾರಿಗೂ ಇರುತ್ತಿರಲಿಲ್ಲ (ರಾಗಿಚಿ. ೧೨೨).

ದಿಡುಗು₂ (ನಾ). ಹಿಂಡು ; ಸಮೂಹ (?) : ಇಡೆ ಬಡಿಕೋಲೊಳು ತೊಡರಿ ತೊಪ್ಪನೆ ಬೀಳಲೊಡನೆದ್ದು ಪರಿವ ಮಱಿಗಳ ದಿಡುಗುಗಾಣುತ ಲಿದಿರಡಸಿ ತಿವಿದು ನೂಂಕಿ ಕೆಡಹಿದನೋರ್ವ ಲುಬ್ಧಕನು (ಭೈರವೇ. ೩-೨೦).

[?]

ದಿಡ್ಡಣಗೆವಡೆ (ನಾ). ಒಂದು ವಿಧವಾದ ವಡೆ : ಅರೆದ ಕಡಲೆ ಹೆಸರು ಉದ್ದ ಸರಿಗೂಡಿಸದೆ[ದ] ಮಣಸುಳ್ಳಿ ಶುಂಠಿಗಳನುದ್ದಿಟ್ಟ ಹೂರಣಕ್ಕಾ ಕಣಕದೊಡೆಯುಮಂ ಹೊದ್ದಿಸಿಯವಂ ತುಪ್ಪದೊಳು ಪಾಕಂ ಮಾಡೆ ದಿಡ್ಡಣಗೆವ[ಪಾಠಾಂ. ಯೊ]ಡೆವಸರಾದುದು (ಸೂಪಶಾ. ೦-೬೬).

[ದಿಡ್ಡಣಗೆ ? + ವಡೆ]

ದಿಡ್ಡಿ, ದಡ್ಡಿ₃, ದಿಡ್ಡೆ₂ (ನಾ). ೧. ಹೆಬ್ಬಾಗಿಲಲ್ಲಿ ಅಥವಾ ಅವರ ಪಕ್ಕದಲ್ಲಿ ಅದಂ ತೆರೆಯದಿರುವಾಗ ಉಪಯೋಗಿಸುವಂತಹ ಸಣ್ಣ ಬಾಗಿಲು,–ಕಿಂಡಿ : ಪದಿನಾಱುದಿಡ್ಡಿ ಬತ್ತೀಸಬಲದ್ವಾರ ವಿಧುಮಿತ್ರ ದುಪಲದಿಂ ಬಿಗಿದ ರುಧಿರಾಪುರದಾಳುವೇರಿಯ ಸೌಭಾಗ್ಯದುದಯವನೇನ ಬಣ್ಣಿಸುವೆ (ಮೋಹತ. ೨೦-೦೪) ; ಕೊತ್ತಳದ ಹುಲಿಮುಖದ ದಿಡ್ಡಿಗಳ ಸರಿಸದೊಳ್ ಪತ್ತಿದರ್ ಸಾಲ ನಿಚ್ಚಣಕೆಗಳ ಮೇಲೆ (ಚಿಬಪು ೪೨-೩೫) ; ನಾಲ್ಕುವೇದವೇ ನಾಲ್ಕುದ್ವಾರಮಾಗೊಪ್ಪುಗುಂ ನಾಲ್ಕು ಪದ ಬೀದಿ ಪದಿನೆಂಟು ವಿಭವಂ ದಿಡ್ಡಿ (ಪ್ರಭುಪು. ೨-೧೪); ನೀರ ತುಂಬುವ ದಿಡ್ಡಿಯೊಳ ಸುರಂಗದ್ವಾರ ತೋಱುತು ಕಣ್ಗೆ ಕೌತುಕವ (ಕಂನವಿ. ೦೧-೦೩೭) ; ಶೃಂಗಾರದ ತೋಟದ ದಿಡ್ಡಿಯಲ್ಲಿ ಹೊರಟು ಅವನ ಸಮೀಪಕ್ಕೆ ಹೋಗು ವಾಗ ದಾರಿಯಲ್ಲಿ ಯೋಚಿಸಿದೆನು (ವಡಕಾ. ೩೪) ; ನಗರದ ಪಶ್ಚಿಮ ದಿಡ್ಡಿಯಿಂದ ಹಾದುಹೋಗುತ್ತಾ (ಜೀನಾದಾ. ೩೩). ೨. ಹಿತ್ತಿಲು ; ಮನೆಯ ಹಿಂಭಾಗ : ಗಿರಿಜಾನ ಮನೆಯ ದಿಡ್ಡಿಯಲ್ಲಿ ಒಂದು ಏಳು ಮಕ್ಕಳ ತಾಯಿಯ ಶಿಲಾಪ್ರತಿಮೆ ಇತ್ತು (ದೀಪಹ. II, ೪೪೭). **ದಡ್ಡಿ₃** : ೧. ಹೊಗಿಸಬೇಡಾರುವನು ಕರ್ಣಾದಿಗಳು ಮೊದಲಾಗೆಂದು ದಡ್ಡಿ ಯನುಗುಳುಗಂಡಿಯ ಕಾಹಕೊಟ್ಟನು ತನ್ನ ಬೇಹವರೆ (ಕುಮಾಅ. ೨೦-೧೭). **ದಿಡ್ಡೆ₂** : ೧. ಕೆ[ತ]ಱಿದುಟಿ ದಾರಿವೆಂಚೆಯೆರ್ದೆ ಕಮ್ಮರಗಲ್ ಮೊಲೆಯೆ ತ್ತುಗುಂಡು ನಾಣ್ಟಱಿಯೆಸೆವೂರ ದಿಡ್ಡೆ ಮೊಗವೋಜನ ಕನ್ನಡಿ ಪಾದವಟ್ಟೆ ಗೋಲ್ (ಕಾವ್ಯಸಾ. ೧೦೦೩); ಎಲೆಲೆ ಸೇರಿದರಗಳ ದಿಡ್ಡೆಯಂ ಸುಮನಸರ್ ಚಲಿಸದಿರಿಯೆಂದಸಿ ಮುಸುಂಡಿ ಮುದ್ಗರ ಗದಾವಳಿಯಿಂದೆ ಬೊಬ್ಬಱಿದು ಹೂಣಲಿಡುತಿರ್ದರಾ ಸುರಭಟರ್ ಸುರಭಟರನು (ಚಿಬಪು. ೪೨-೨೬) ; ಕಿಱುದಿಡ್ಡೆಗಳಿಂದ ಚೋರಗಂಡಿಗಳಿಂದ ವರವಜ್ರದರ್ಗಳದಿಂದ ಅರಿರಾಯರ ಹಮ್ಮ ಹಾರಿಸುತಾ ಕೋಂಟೆ ಮೆಱೆದುದು (ಜ್ಞಾನಚಿ. ೦-೦೨೩).

[ದೇ.ಪ ತಮಿ. ತಿಟ್ಟ = ತಿಟಕಿ ; ತುಳು. ಜಿಡ್ಡಿ ; ತೆಲು. ದಿಡ್ಡಿ]

ದಿಡ್ಡಿಬಾಗಿಲು (ನಾ). = ದಿಡ್ಡಿ ೧ : ಊರು ದಿಡ್ಡಿಬಾಗಿಲಿನ ಸೂರಿನ ಕೆಳಗಡೆ ಬಿಳೆಯ ಹಲಗೆಯ ಮೇಲೆ ಕರಿಯ ಬಣ್ಣದಲ್ಲಿ ಈ ರೀತಿ ಬರೆದಿದೆ (ಮಲಿನಾ. ೨೩) ; ದಿಡ್ಡೀಬಾಗಿಲ ಮೇಲೆತ್ತರದಲಿ ಬರುದನಿ ಬೀರುತ್ತ ದಿಗಿಲೆರಚುತ ಬಲ್‌ಬುರುಜುಗಳಿದ್ದವು (ನಾಪದ. ೧೬೯) ; ಸತ್ಯಪ್ಪನ ತಾಳ್ಮೆಗೇಡಿತನ ಅವಳನ್ನು ಅಪ್ಪುಬೇಗ ತಾಯ್ತನದ ದಿಡ್ಡಿಬಾಗಿಲಲ್ಲಿ ನೂಕುತ್ತಲಿತ್ತು (ನಡದಾ. II, ೮೯೨).

[ದಿಡ್ಡಿ + ಬಾಗಿಲು (<ಬಾಗಿಲ್)]

ದಿಡ್ಡು 'ದಿಂಡು' ನೋ.

ದಿಡ್ಡೆ₁ 'ತಿಟ್ಟು₃' ನೋ.

ದಿಡ್ಡೆ₂ 'ದಿಡ್ಡಿ' ನೋ.

ದಿಢೀರ್ (ಅ). ಒಂದು ಅನುಕರಣಾವ್ಯಯ ; ಒಮ್ಮೆಂದೊಮ್ಮೆಲೆ ; ತಕ್ಷಣದಲ್ಲಿ ; ಆ ಕ್ಷಣದಲ್ಲಿ : ಹೇಳದೆ ಮಾಡದೆ ದಿಢೀರಂತ ಬಂದರು (ರೂಢಿ). P ಇದರೊಂದಿಗೆ ಅನೇಕ ಶಬ್ದಗಳು ಸೇರಿ, 'ತಕ್ಷಣದಲ್ಲಿ ತಯಾರಾಗುವ ಪದಾರ್ಥ' ಎಂಬ ಅರ್ಥದಲ್ಲಿ ಅನೇಕ ಹೊಸ ಶಬ್ದಗಳು ಬಳಕೆಗೆ ಬಂದಿವೆ. ಉದಾ. ದಿಢೀರ್ ಇಡ್ಲಿ, ದಿಢೀರ್ ಕಾಫಿ, ದಿಢೀರ್ ಜಿಲೇಬಿ, ದಿಢೀರ್ ದೋಸೆ ಇತ್ಯಾದಿ.

ದಿಣೆ 'ದಿಣ್ಣೆ' ನೋ.

ದಿಣ್ಣೆ, ತೆಣೆ, ದಿಣೆ, ದಿನ್ನೆ (ನಾ). ೧. ತೆವರು ; ದಿಬ್ಬ ; ಬೋರೆ : ಪೇರೊಟ್ಟೆಯ ತುಟ್ಟಲೆ 'ಎರೆ ಪಡಿಯೆ ಗೊನಸು ಭೂಮಿಲ್ಮಣಿಸೆಯೆ ಬಬ್ಬಾಗಿಲ ಹುಸಗೂರ ದ್ವಿಸನ್ನಿ ನಡಿಯೆ ಪಡುವ ನೋಡಿ ಮಣಲದಿಣ್ಣೆ . . . ಮೂಡನದಿ ಕೊಲದ ಗುಣ್ಡೆಯೆ ಕೂಡಿತ್ತು (ಎಕ. III, ನಂಜನ. ೧೨೨-೨೦ ; 266 ? ಕೃಶಾ) ; ಅತಿವೇಗದೊಳೆರ್ದು ನಾಲ್ಕೆರಡಾಳುದ್ದದ ದೊಂದು ಕಾಣಲ್ ಬಪ್ಪ ದಿಣ್ಣೆ[ಪಾಠಾಂ. ಡಿಣೆ, ದಿಣೆ]ಯಂ ಗಳಗಳನೇಱಿ ಕಣಗಿಲೆಯ ಸೊಪ್ಪಂ ಪಿಡಿದು ಸಿಂಹಧ್ವನಿಯಿಂ ಶಿವದಿಟ್ಟು (ನಂಬಿರ. ೬-೦೦೬) ; ನಿಱಿ ನಿಱಿದು ತೆರೆಯಱಿದು ಕಿಱುಮಟಲದಿಣ್ಣೆಯೊಳ್ ಪರಿವ ಬರಿಪೊನಲೆಸೆದುವೋರೊಂದು ತಾಣದೊಳ್ (ಅನಂಪು. ೯-೧೭ ೧ಗಳೆ); ಪರಿವಡೆದ ಪೊಱವಾಱಿಂಬ ಮಣಲದಿಣ್ಣೆ ನೀಱಿಯರ ಬಲ್ಲಹನೆಂಬ ನೀರ್ವಕ್ಕಿಯ ಕಾಲಾಟಕ್ಕೆಡೆಗುಡೆಯುಂ (ಕಬ್ಬಿಕಾ. ೧೨೩) ; ಬೆಟ್ಟಕ್ಕಿಂತಲೂ ಚಿಕ್ಕದಾದರೆ ಗುಡ್ಡ, ದಿಣ್ಣೆ, ತಿಟ್ಟು . . . ತೆವರು ಎಂಬ ಹೆಸರುಗಳು ಬರುತ್ತವೆ (ಕೂಗೋಳ. ೧೧). ೨. ಕಟ್ಟೆ ; ವೇದಿಕೆ : ಜೂದಿನ ದಿಣ್ಣೆ [ಪಾಠಾಂ. ದಿಂಟೆ]ಯೊಳ್ ಜೂದಾಡಿ ಗೆಲ್ದು ಕೈಕೊಂಡ ಪೊನ್ನ ರಾಸಿಗಳ (ಕಬ್ಬಿಕಾ. ೪೪). ೩. ರಾಶಿ ; ಗುಂಪು ; ಸಮೂಹ : ಮನವು ಮೌನದಲಿ ಹೆಪ್ಪುಗೊಂಡಿರಲು ಮಂಜು ದಿಣ್ಣೆಯಂತೆ (ಅರಳು. ೪೦೪-೧೧). **ತೆಣೆ** : ೨. ಚಿನ್ನಮ್ಮ ತೆಣೆಯ ಮೇಲೆ ಕೂತುಕೊಂಡು ಮಾಡಿನ ನೆರಳು ತುಳಸಿಯ ಕಟ್ಟೆಯನ್ನು ದಾಟಿ ತೆಣೆಯ ಹತ್ತಿರಕ್ಕೆ ಬರುವುದನ್ನೇ ಕಾಯುತ್ತಾ ಕುಳಿತಳು (ಮಲೆಮ. ೮೮) ; ಆಬೋಲೀನ . . . ದೇಗುಲ ಹೊಕ್ಕು ಪಡಸಾಲೆಯ ತೆಣೆಯೊಂದರಲ್ಲಿ ಹಾಯಾಗಿ ಕುಳಿತಳು (ಆಬೋಲೀ. ೧೫) ; ಸಿದ್ದಣ್ಣನು ತೆಣೆಯ ಮೇಲೆ ನಿಂತು, ಬಗ್ಗಿ ಭಕ್ತಿಯಿಂದ ಗೌಡರಿಗೆ ನಮಸ್ಕರಿಸಿದನು (ಪಂಜಪಂ. ೩೦). **ದಿಣೆ** : ೧. ಇಸಾನದೆ ಬದಣಿಗುಪ್ಪೆಯ ದಾಸನೂರ ಪೊಟ್ಟದ ತ್ರಿಸಂಧಿಯ ತಟಾಕಮೆ ಕೊಡಿಗಟ್ಟ ಚಿಣ್ಣಾಮಿಕ್ಷಮೆ ಕೆಂತಱಮ್ಮಿನ ದಿಣೆ ಇಂ ಪೂರ್ಬ್ಬದೆ ಕೂಡಿತ್ತು ಸೀಮಾಂತರಂ (ಎಕ. I, ೦-೩೦:466) ; ಕಾಲುವೆಯ ಪಡುವಣ ದಿಣೆಯಾಗಿದ್ದುದನು ಆ ದೇವರ ಶ್ರೀವೈಷ್ಣವರಿಗೆ ಮಾಱಿಕೊಂಡು (ಮೈಅರಿ. ೦೯೪೭, ೩೦-೧೨ ; 1314). **ದಿನ್ನೆ** : ೧. ಕೆಂಬರೆಯ ಸ್ರೋತ ಪರಲ ದಿನ್ನೆ ಪ್ರಾಪ್ಯ ತಥಾತು ದಕ್ಷಿಣ ಗ್ರಾಮ (ಇಆ. VIII, ೯೫-೨; 444 ಕೃಶಾ); ಮುನೇಶ್ವರನ ಗುಡಿಯವರೆಗೂ ನಿರ್ಜನವಾದ ದಿನ್ನೆ, ಕೊರಕಲು ಪ್ರದೇಶ (ಊರುಳ. ೧೩೦); ದಿನ್ನೇ ಮೇಲೆ ಮಳೆ ಹೊಯ್ದುರೆ ಹಳ್ಳಕ್ಕೇ ಬರುವುದು (ಗಾಡ). 'ದಿಂಟೆ' ಪರಾ.

[ದೇ.ಪ ತಮಿ. ತಿಣ್ಣೈ ; ಮಲ. ತಿಣ, ತಿಣ್ಣ ; ತುಳು. ತಿಣೆ, ದಿಣ್ಣೆ ತೆಲು. ತಿನ್ನೆ, ದಿಣ್ಣೆ]

ದಿತ (ಗು). ೧. ಕತ್ತರಿಸಿದ ; ತುಂಡುಮಾಡಿದ. (ನಾ). ೨. ಕತ್ತರಿಸಿ ದುದು : "ದಾತಂ ಲೂನಂ ದಿತಮಱಿಗೆ" (ವಸ್ತುಕೋ. ೧೦೬-೪೯) ; "ಛಿನ್ನಂ . . . ದಿತಂ, ಛಿತಂ, ವೃಕ್ಣಂ – ೮ ಕುಯ್ಯಲ್ಪಟ್ಟದ್ದು, ಕತ್ತರಿಸ ಲ್ಪಟ್ಟದ್ದು" (ಸಿದ್ಧಾಂತಿ. ೩೦೩). [ಸಂ.]

ದಿತಿ (ನಾ). ಕಶ್ಯಪನ ಹೆಂಡತಿಯರಲ್ಲಿ ಒಬ್ಬಳು ; ದೈತ್ಯರ ತಾಯಿ : "ದೈತ್ಯರ ತಾಯಿ ದಿತಿ, ದೇವರ್ಕಳ ತಾಯಿ ಅದಿತಿ, ದಾನವರ ತಾಯಿ ದನು, ನಾಗರ್ಕಳ ತಾಯಿ ಖದ್ರೂಃ ಎಂಬುದು" (ಹಲಾಯು. ೨೦-೧೦೯) ; "ಅಸುರರಂ ಪಡೆದಾಕೆ ದಿತಿಯೆಂದೆನಿಕ್ಕುಂ" (ಮಂಗರಾ. ೭-೨೪) ; "ದಿತಿಃ– ದಕ್ಷನ ಮಗಳ್, ಕಶ್ಯಪನ ಹೊಡತಿ, ರಕ್ಕಸನ ತಾಯಿ" (ಕಾಶಕ್ಕ. ೧೮೬). 'ದಿತಿಜ' ಪರಾ. [ಸಂ.]

ದಿತಿಜ (ನಾ). ೧. ದಿತಿಯ ಮಗ ; ದೈತ್ಯ : ''ಸುರವೈರಿಗಳು ದಾನವರು ನಾಗಲೋಕಮಂದಿರರು ದಿತಿಜರು ಶುಕ್ರಶಿಷ್ಯರಸುರರು ಪೂರ್ವಸುರರೆನಲು ದೈತ್ಯರು" (ಮಂಗರಾ. ೩-೯). ೨. ನಿರರುತಿ ; ನೈಋತ್ಯ ದಿಕ್ಕಿನ ಅಧಿಪತಿ : ದಿವಿಜವಾರವರನುಂ ದಹನನಾ ರವಿತನೂಜಂ ಧೀರದಿತಿಜಂ ವಿನುತ ನೀರನಿಲಯಂ ಪೃಥುಸವಿಾರನನಘಂ . . . ಸೇರಿ ನೆರೆದೊಪ್ಪಿರೆ ಕೃಪಾರಸಸಮುದ್ರನಗಜಾರಮಣನುಜ್ವಳ ಪುರಾರಿ ಮೆಱೆದಿರ್ದಂ (ರಾಜಶೇ. ೧೪-೮೮). [ಸಂ.]

ದಿತಿಜಕುಲ, ದಿತಿಜಕುಳ (ನಾ). ದೈತ್ಯರ ಕುಲ,–ವಂಶ : ತನಗೆ ಕೊಟ್ಟ ಕೋಡಿಂಗೊಡಂಬಟ್ಟ ದಿತಿಜಕುಲದಾವಾನಲನುಮನರಾತಿಕಾಲಾನಲನು ಮನನಲನಿಷ್ಪಾರ್ಥಸಿದ್ಧಿಯಕ್ಕುಮೆಂದು ಪರಸಿ (ಪಂಪಭಾ. ೫-೭೭ ಪ). **ದಿತಿಜಕುಳ** : ನಸು ಕಿನಿಸದೆ ಮಿಗೆ ಕಿನಿಸಿ ದಿತಿಜಕುಳದವದಹನಂ ಮುಳಿದು ತನಗರ್ಘ್ಯಮೆತ್ತಿದ ತಳಿಗೆಯೊಳಿಡೆ ತಿಱಿದ ತೆಱದೆ ತಲೆ ಪಱಿದಾಗಳ್ (ಪಂಪಭಾ. ೬-೬೩). [ದಿತಿಜ + ಕುಲ]

ದಿತಿಜಕುಳ 'ದಿತಿಜಕುಲ' ನೋ.

ದಿತಿಜಾರಿ (ನಾ). ರಾಕ್ಷಸರ ವೈರಿ ; ಕೃಷ್ಣ : ದಿತಿಜಾರಿಯ ಭೈಕೃತದೊಡನೆ ತಗುಳ್ದುಣ್ಮಿದುದು ಕೆರಳ್ದಿಭೇಂದ್ರದ ಗಳಬೃಂಹಿತಮುಂ ಮದಧಾರಾ ಝಾತ್ಕೃತಮುಂ (ಜಗವಿ. ೬-೫೧). [ದಿತಿಜ + ಅರಿ$_6$]

ದಿತಿಜೇಜ್ಯ (ನಾ). ದೈತ್ಯರಿಗೆ ಪೂಜ್ಯನಾದವನು ; ದೈತ್ಯರ ಗುರು; ಶುಕ್ರ: ದಿತಿಜೇಜ್ಯಾಲಯ ಲಗ್ನದೊಳ್ ಮಹಿಸುತತ್ರಿಂಶಾಂಶಕಂ ನಿಂದೊಡಲ್ಲಿ ತುಷಾರದ್ಯುತಿ ಕೂಡಿದಂದಸತಿ . . . ಶಕ್ರೇಜ್ಯಾಂಶದೊಳ್ ಸದ್ಗುಣಾನ್ವಿತೆಯಕ್ಕುಂ (ಜಾತತಿ. ೨೨-೪). [ಸಂ.]

ದಿತಿತನೂಭವ (ನಾ).=ದಿತಿಜ ೧ : "ದನುಜರ್ ದೈತೇಯರ್ ದಿತಿತನೂಭವರ್ ಪೂರ್ವದೇವರಸುರರ್ ಪಾತಾಳನಿವಾಸಿಗಳ್ ಸುರದ್ವಿಷರೆನೆ ದೈತ್ಯರ್ ಶುಕ್ರಶಿಷ್ಯರಾರ್ಗಮದೃಶ್ಯರ್" (ವಸ್ತುಕೋ. ೬-೩೨).

[ದಿತಿ + ತನೂಭವ]

ದಿತಿನಂದನ (ನಾ).=ದಿತಿಜ ೧ : ದಿತಿನಂದನರ ಪತಿಯ ನೇಮದಿಂದೋರ್ವಸತಿ ರತಿಗೆ ಕೊಡಲಸಿಧಾರೆಯಲ್ಲಿ ಮೆಲ್ಲನೆ ಸೀಳೆ ಅತಿ ಚೆಲ್ವ ಶಿಶು ಮತ್ಸ್ಯಗರ್ಭದಲ್ಲಿರೆ ನೋಡಿ . . . ಬಲು ಮೋಹವುಂಟಾಗೆ (ಪ್ರೌಢರಾ. ೧೧-೩೩).

[ದಿತಿ + ನಂದನ]

ದಿತಿಸುತ (ನಾ).=ದಿತಿಜ ೧ : ದಿತಿಸುತರಂ ಕಂಸಾದ್ಯರನತಿಬಳರಂ ಕೊಲ್ದೆ ನಿಟಿಪುವೆಂ ಭೂಭರಮಂ (ಜಗವಿ. ೦-೭೯). [ದಿತಿ + ಸುತ]

ದಿದ್ದ (ನಾ). (?) : ಕಣಿಕಮನಾಜ್ಯದಿಂ ತೊಡೆದು ಮೋದಿಸಿ ದಿದ್ದಮುಮಾಗೆ ಪೊಯ್ದು ಬಲ್ಕಣಿತನದಿಂದಮೊತ್ತಿ ಮಿದಿದು (ಲೋಕೋಪ. ೮-೧೫); "ದಿದ್ದಮುಮಾಗೆ = ಚೆನ್ನಾಗಿ ಗಟ್ಟಿಯಾಗಿ" (ಲೋಕೋಪ. ಟೀಕು).

[?]

ದಿಧಿಲ್, ದಿಧಿಲು (ನಾ). ಒಂದು ಅನುಕರಣ ಶಬ್ದ : ದೊಪ್ಪ ಧೊಗಪ್ಪೆನೆ ದಿಧಿಲ್ಬುಧಿಲ್ಲೆನೆ ಗದೆಗಳ್ ಸೊಪ್ಪುಸೊವಡಪ್ಪಿನಂ ಸೂಟ್ಟಿಪ್ಪದೆ ಕಡುಕೆಯ್ದು ಪೊಯ್ದರೊರ್ವರನೊರ್ವರ್ (ಗದಾಯು. ೮-೧೧). **ದಿಧಿಲು** : ಕಡೆದರುಱೆ ದಿಧಿಲು ಬುದ್ಬುಧಿಲೆಂಬ ರವದಿಂದ (ವೀಶೈಪು. ೩-೧೬-೨೩).

ದಿಧಿಲು 'ದಿಧಿಲ್' ನೋ.

ದಿಧಿಷು (ನಾ). ೧. (ಯಾವುದೇ ವಸ್ತುವನ್ನು) ದೊರಕಿಸುವ ಪ್ರಯತ್ನ. ೨. ಗಂಡ ; ಪತಿ. ೩. ಮೊದಲನೆಯ ಗಂಡನಿಂದ ವಿಚ್ಛೇದನ ಪಡೆದವಳನ್ನು ಮದುವೆಯಾದವನು; ಎರಡನೆಯ ಪತಿ: "ದಿಧಿಷುಃ, ತಸ್ಯಾಃ, ಪತಿಃ–ಮದುವೆಯಾಗಿದ್ದವಳನ್ನು ಪುನರ್ವಿವಾಹ ಮಾಡಿಕೊಂಡವನ ಹೆಸರುಗಳು" (ಸಿದ್ಧಾಂತಿ. ೦೭೩). ೪. ಕುಮಾರಿ ವಿಧವೆಯಾಗಿದ್ದು ಎರಡನೆಯ ಸಲ ಮದುವೆಯಾದವಳು. [ಸಂ.]

ದಿಧಿಷೂ (ನಾ). ೧. ಕುಮಾರಿ ವಿಧವೆಯಾಗಿದ್ದು ಮರುವಿವಾಹವಾದವಳು: "ಪುನರ್ಭೂಃ, ದಿಧಿಷೂಃ, ದ್ವಿಃಊಢಾ–ಎರಡು ಸಾರಿ ಮದುವೆಯಾದವಳ ಹೆಸರುಗಳು" (ಸಿದ್ಧಾಂತಿ. ೧೫೦) ; "ಪುನರ್ಭೂಃ, ದಿಧಿಷೂಃ–ಈ ೨ ಮಱುವಾಟವಳ್" (ಹಲಾಯು. ೮೦-೩೩೦) ; "ದಿಧಿಷೂ [ಪಾಠಾಂ. ದಿಗ್ವಿಭು] ಪುನರ್ಭೂವೆನಲು ಮಱುವಾಳ ಕಾಂತೆಯಕ್ಕುಂ" (ಮಂಗರಾ. ೮೯-೩). ೨. ತಂಗಿ ಮದುವೆಯಾಗಿದ್ದರೂ ತಾನು ಇನ್ನೂ ಮದುವೆಯಾಗದಿರುವವಳು. ೩. ಅಕ್ಕನಿಗಿಂತ ಮೊದಲೇ ಮದುವೆಯಾದವಳು. 'ದಿಧಿಷೂಪತಿ' ಪರಾ. [ಸಂ.]

ದಿಧಿಷೂಪತಿ (ನಾ). ೧. ಅಕ್ಕನಿಗೆ ಮದುವೆಯಾಗುವ ಮುಂಚೆ ಅವಳ ತಂಗಿಯನ್ನು ಮದುವೆಯಾದವನು : ಪಿರಿಯಳ್ಗೆ ಮುನ್ನಮೇ ಕಿಱಿಯಳಂ ಮದುವೆಯಾದ ದಿಧಿಷೂಪತಿಗಳುಂ (ಭಾರಶಾಂ. ೨೪೫-೩೪). ೨. ಸಹೋದರನು ಮೃತನಾದರೆ, ಅವನ ಪತ್ನಿಯಲ್ಲಿ ರಮಿಸುವವನು.

[ದಿಧಿಷೂ + ಪತಿ$_2$]

ದಿನ್‌ಇಲಾಹಿ 'ದೀನ್‌ಇಲಾಹಿ' ನೋ.

ದಿನ (ನಾ). ೧. ಸೂರ್ಯನು ಬೆಳಗುವಷ್ಟು ಕಾಲ ; ಹಗಲು ; ದಿವಸ : "ದಿವಸಂ ದಿನಂ ದಿವಾಹಂ ದ್ಯು ವಾಸರಂ ಘಸ್ರಮೆನೆ ಪಗಲ್" (ವಸ್ತುಕೋ. ೧೫-೪) ; ದಿನದೊಳ್ ಸಜಳತೆಯಿಂ ಮತ್ಸ್ಯನಳಿನಮಂ ಮತ್ತಮಿರುಳೊಳುನ್ನಿದ್ರತೆಯಿಂದೆನಸುಂ ಚಕೋರ ಕುಮುದಮನನುಕರಿಸಿದುದಾವಿಯೋಗವಿಧುರೆಯ ಕಣ್ಗಳ್ (ಚಂದ್ರಪು. ೫-೦೨೫). ೨. ಒಂದು ದಿವಸ ; ಒಂದು ಹಗಲು, ಒಂದು ರಾತ್ರಿಗಳಿಂದ ಕೂಡಿದ ಕಾಲ; ಇಪ್ಪತ್ನಾಲ್ಕು ಗಂಟೆಗಳ ಕಾಲ ; ; ಎಂಟು ಜಾವ : ದಿನವು ಬೇಱಿಲ್ಲ ತಿರುನಾಳೆ ದಿನವಾ ಪುರಕೆ ಮನವು ಬೇಱಿಲ್ಲ ಶಿವಭಕ್ತಿ ಮನವಾ ಪುರಕೆ (ತಿರುರ. ದೇ. ೩-೦೪) ; ದಿನಮೆಲ್ಲಂ ನಿಯಮವ್ರತಕ್ಕೆ (ಶಾಂತೀಶ್ವ. ೨-೧೦) ; ಝಾವವೆಂಟಾಗೆ ಪಗಲಿರುಳಿಂದಱುವತ್ತುಘಳಿಗೆಯೊಂದುದಿನವಹುದು (ವಿವೇಕ. ೩೨೦). ೩. ತಿಥಿ ; ಶ್ರಾದ್ಧ : ದಿನದ್ದ (ಉತ್ತರಕ್ರಿಯೆ) ತಯಾರಿ ನಡಸೀದಿ ಕಾಣಸ್ತೇತಿ ? (ನಿಸರ್ಗ. ೦೨೨). 'ತದ್ದಿನ', 'ದಿನ ಕರ್ಮ' ಪರಾ. ೪. ಆಡಳಿತದ ಅವಧಿ ಅಥವಾ ಅಧಿಕಾರದ ಸಮಯ : ರಾಮಾಭಟರ ಅಯ್ಯನವರ ಕಾರ್ಯ್ಯಕ್ಕೆ ಕರ್ತರಾದ ಲಕುಮರಪಯ್ಯನವರ ದಿನದಲು (ಎಕ. X (5), ಕೋಲಾರ. ೨೭೭-೩ ; 1540). 'ಕಾರಕರ್ದಿ' ಪರಾ. ೫. ಪಡಿತರ ; ರೇಷನ್ನು : ನೆರೆದಿರುವ ಜನರೆಲ್ಲರ ರೇಷನ್‌ಕಾರ್ಡುಗಳನ್ನು ಸಂಗ್ರಹಿಸಿ ಒಬ್ಬೊಬ್ಬರನ್ನೇ ಕರೆದು ಅವರಿಗೆ ದಿನ ಕೊಡಿಸುತ್ತಿದ್ದರು (ಪುರಳಿ. ೦೨). ೬. ಯೋಗ್ಯವಾದ ಕಾಲ ; ಹದಗಾಲ ; ತತು : ದಿನ ಹೋಗಿ ಮಳೆಗಾಲವೇ (ಗಾದೆ). ೭. [ಗಣಿತ] ಮೂವತ್ತು ಎಂಬ ಸಂಖ್ಯೆಯ ಸಂಕೇತ : "ದಿನವೆನಲು ಮೂವತ್ತು" (ಮಂಗರಾ. ೧೦೪-೯).

ದಿನಂದಿನ, ದಿನದಿನ, ದಿನದಿನಂ, ದಿನಾದಿನಾ, ದಿನೇದಿನೇ (ದ್ವಿರುಕ್ತಿ) = ೧. ಆಯಾದಿನ ; ಅಂದಂದು ೨. ಪ್ರತಿದಿನ; ಪ್ರತಿನಿತ್ಯ : ತನುವನೆಲ್ಲವನೆಯ್ದೆ ಪೊಸಚಂದನಮದಾಗಲು ತೇದು ತೇದಿಂತನುನಯದಿ ದಿನದಿನದ ನೇಮಂ ತಪ್ಪದರ್ಪಿಸುವೆ (ಬಸಪು. ೨೭-೩) ; ಪಾಡಿವದೆಳವೆಱೆ ಪುಣ್ಣವಿಂ ವರೆಗಂ ರೂಡಿಸಿ ದಿನದಿನದಪ್ಪದೆ ಕಲೆಯೊಳ್ ಕೂಡಿ ಬಳೆದು ಕುವಲಯ ಕತ್ಯಾನಂದಮನೀವಂದದೊಳು (ಜಯಕಾ. ೨-೬೫) ; ದಿನದಿನ ಶನಿ ಕಾಡಿದರೆ ಬಾಳೋದು ಯಾವಾಗ ? (ಗಾದೆ). ೧, ೨ : ದೇಶವಿದೇಶೀಯ ರಾಜಕೀಯಗಳನ್ನು ಕುರಿತು ದಿನಂದಿನದ ವಾರ್ತೆಗಳನ್ನು ತಿಳಿದುಕೊಳ್ಳುತ್ತಾನೆ (ಒಂಟಿದ. ೨೫೫). ೩. ದಿನದಿಂದ ದಿನಕ್ಕೆ ; ದಿನ ಕಳೆದಂತೆ ; ದಿನ ಕ್ರಮೇಣ: ಗೆರೆನಗೆಯ ಕಿರಿಯೊಡಲ ಪಸುಳೆದಿಂಗಳ್ ದಿನಂದಿನದಿನಂ ಬಳೆವಂತೆ(ಶ್ರೀರಾಮಾ. ೧೬-೪೩೫) ; ದಿನೇದಿನೇ ನಶಿಸತೊಡಗಿರುವ ಈ ಜನಾಂಗ

ಗಳ ಭಾಷೆಗಳನ್ನು ಕುರಿತು ಹೆಚ್ಚು ಸಂಶೋಧನೆ ನಡೆಯುವುದು ಅಗತ್ಯ (ದ್ರಾವಿವಿ. ೨೦೩); ಚಿತೆಯಿಂದ ದಿನೇದಿನೇ ಆತ ಕುಂದುತ್ತಿದ್ದಾನೆ (ಕಟಿಕ. ೬೭). ೪. ಪ್ರತಿದಿನವೂ; ದಿನನಿತ್ಯವೂ: ಮಲಗಿಕೋ ಹೋಗು, ದಿನಾ ದಿನಾ ನಾನು ಹೇಳಬೇಕೆ (ಸಣ್ಣಕ. X, ೧೩). ದಿನ ಎಣಿಸು = (ಜೀವನದ ಕೊನೆಯಲ್ಲಿ) ಸಾವಿನ ದಿನವನ್ನು ಎದುರು ನೋಡು; ಕಡೆಗಾಲ ವನ್ನು ನಿರೀಕ್ಷಿಸು: ಅವರು ತೀರ ಅನಾರೋಗ್ಯದಿಂದ ದಿನ ಎಣಿಸುವ ಸ್ಥಿತಿಗೆ ಬಂದಿದ್ದಾರೆ (ರೂಢಿ). ದಿನಂದಪ್ಪದೆ = ಒಂದು ದಿನವನ್ನೂ ಬಿಡದೆ; ಪ್ರತಿನಿತ್ಯವೂ: ಇರ್ಪೆವೆಮ್ಮಯ ಮನಂ ಬಂದೆಡೆಗಳೊಳ್ ಪೋಗಿ ಬರ್ಪೆವು ದಿನಂದಪ್ಪದೆ (ಜಿಬಪು. ೪೭-೧೭). ದಿನಂಪ್ರತಿ = ಪ್ರತಿದಿನ; ಪ್ರತಿನಿತ್ಯ: ದಿನಂಪ್ರತಿಯೊಳಾ ಬಾಲೆಯತ್ಯಂತ ಪ್ರಯತ್ನದಿ ಜನ್ನಿಗೆಯ ಹಾಲಂ ಕಱೆದು ಕಾಸಿ ಕ್ಷಿಪ್ರದಿಂದು ತಂದುಕೊಡಲು (ಬಸಪು. ೧೪-೨೩); ದಿನಂಪ್ರತಿ ಸಭೆಗಳಾಗುತ್ತಿದ್ದವು (ಉರ್ದುಪಾ. ೧೮); ವಾರಕ್ಕೆ ೩-೪ ಸರ್ತಿ ಅಪಸ್ಮಾರ ಬಡಿದರೆ ಸಾಕಷ್ಟು ಔಷಧಿಗಳನ್ನು ದಿನಂಪ್ರತಿ ಬಿಡದೆ ಕೊಟ್ಟು, ಮೂರ್ಛೆ ಬರದಂತೆ ಮಾಡಬಹುದು (ಮನೋನಂ. ೪೬). ದಿನ ಕೂಡಿಬರು = ಒಳ್ಳೆಯ ಸಮಯ ಹೊಂದಿಬರು; ಅದೃಷ್ಟ ಒದಗು: ಯಾವುದಕ್ಕೂ ದಿನ ಕೂಡಿಬರಬೇಕು (ರೂಢಿ). ದಿನ ಕೂಡು = (ಶುಭಕಾರ್ಯ ಮುಂತಾದುವಕ್ಕೆ) ದಿನ ಹೊಂದಿಕೆಯಾಗು,-ಸೇರು: ಅವನ ಜಾತಕಕ್ಕೆ ದಿನ ಕೂಡಲಿಲ್ಲ (ರೂಢಿ). ದಿನ ಕೇಳು = (ಶುಭಕಾರ್ಯ ಮೊದಲಾದುವುಗಳಿಗಾಗಿ) ಒಳ್ಳೆಯ ದಿನವನ್ನು ವಿಚಾರಿಸು; ತಿಥಿ, ನಕ್ಷತ್ರಗಳನ್ನು ವಿಚಾರಿಸು: ಅವರು ಜೋಯಿಸರ ಬಳಿಗೆ, ಮಗಳ ಮದುವೆಗೆ ದಿನ ಕೇಳಲು ಹೋಗಿದ್ದಾರೆ (ರೂಢಿ). ದಿನಕ್ರಮವಾಗಿ = ದಿನಕ್ರಮೇಣ: ಲುಬ್ಧಶಿರೋಮಣಿಯಾದ ದುಷ್ಟಬುದ್ಧಿಗೂ ದಾನಶೀಲನಾದ ಸತ್ಯಕೀರ್ತಿಗೂ ದಿನಕ್ರಮವಾಗಿ ದ್ವೇಷವು ಹೆಚ್ಚಲಾರಂಭವಾಯಿತು (ಕವಿಕ. ೦). ದಿನಕ್ರಮೇಣ = ದಿನದಿಂದ ದಿನಕ್ಕೆ; ದಿನ ಕಳೆದಂತೆ: ದಿನಕ್ರಮೇಣ ಅವರ ಸ್ಥಿತಿ ಸುಧಾರಿಸಿತು (ರೂಢಿ). ದಿನಗಟ್ಟಲೆ, ದಿನಗಟ್ಲೆ = ೧. ಪ್ರತಿದಿನ; ದಿನನಿತ್ಯ: ಅವರು ದಿನಗಟ್ಟಲೆಯಲ್ಲಿ ತೀರ ಸಾಮಾನ್ಯ ಉಡುಪು ಧರಿಸುತ್ತಾರೆ (ರೂಢಿ); "ದಿನಗಟ್ಲೆ-ನಿತ್ಯ; ದಿನಾಲು" (ಜಾನಕೋ. ೫). ೨. ಹಲವು ದಿನಗಳ ವರೆಗೆ: ದಿನಗಟ್ಟಲೆ ಉಪವಾಸ ಮಾಡುವುದು ಮೈಗೆ ಒಳ್ಳೆಯದಲ್ಲ (ರೂಢಿ). ದಿನಗಳ ಮೇಲೆ ಬೀಳು = ಹಲವು ದಿನಗಳ ಕಾಲ ಬೇಕಾಗು; ತುಂಬ ದಿನಗಳ ಸಮಯ ಹಿಡಿ: ಹೀಗೆ ಮೊದಲಿನ ದಾಖಲೆಯನ್ನು ಕೊಟ್ಟು ಬರಿಯುವದರಿಂದ ತಕ್ಷಣವೇ ಖರೀದಿಯಾಗದೆ ದಿನಗಳ ಮೇಲೆ ಬೀಳುವದು (ಮುಂಬವ್ಯಾ. ೬೯). ದಿನ ಗೊತ್ತುಮಾಡು = ದಿನ ನಿಶ್ಚಯಿಸು: ಮದುವೆಗೆ ಅಂದೇನೆ ದಿನ ಗೊತ್ತುಮಾಡಿದರು (ರೂಢಿ). ದಿನ ತಪ್ಪಿ ದಿನ = ದಿನಬಿಟ್ಟು ದಿನ: ಪೀನಸಕ್ಕೆ:-ಅರಿದಳ . . . ಚಿತ್ರಮೂಲದ ತಿಗಡು, ಇವಂ ಸಮಾನಂಗೊಂಡು ಚೂರ್ಣವಂ ಮಾಡಿ ಈ ಚೂರ್ಣದಲ್ಲಿ ಹೊಗೆ ದಿನತಪ್ಪಿ ದಿನ ಕೊಟ್ಟು ಸಬಸಿಗೆಸೊಪ್ಪಿನ ಎಸರಲ್ಲಿ ಊಟಕ್ಕೆ ಇಕ್ಕುವುದು (ವಿವೈವಿ. ೦೦೦). ದಿನ ತಳ್ಳು = ದಿನ ನೂಕು: ಅವರು ಕಷ್ಟದಿಂದ ದಿನ ತಳ್ಳುತ್ತಿದ್ದಾರೆ (ರೂಢಿ). ದಿನ ತುಂಬು = ಗರ್ಭಿಣಿಗೆ ನವಮಾಸ ಪೂರ್ಣವಾಗು,-ಹೆರಿಗೆಯ ಕಾಲ ಸಮೀಪವಾಗು: ಆಗ ನನಗೆ ಎರಡನೆಯ ಬಸಿರು, ದಿನ ತುಂಬಿತ್ತು (ಸ್ಕೃತಿಜಿ. ೮೫); ರಮಾಬಾಯಿ ದಿನ ತುಂಬಿದ ಬಸುರಿ (ಶ್ರೀರಂಗ. ೧೮). ದಿನದಂತೆ = ಎಂದಿನಂತೆ; ಪ್ರತಿನಿತ್ಯದ ಹಾಗೆ: ಗಂಡುಹೆಣ್ಣು ದಿನದಂತೆ ಎದ್ದು ದಿನದಾಟವಾಡುತಿರಲು ನಿನ್ನೆ ನಾಳೆಗಳ ಸಂಧಿಯಲ್ಲಿ ಜನ ನೋಟ ನೋಡುತಿರಲು (ಸೂರ್ಯಪಾ. ೩೪-೫). ದಿನ ದಾಟು = ದಿನ ಮೀರು: ಅವನು ದಿನ ದಾಟಿ ಬಂದರೆ ಏನೂ ಮಾಡಲಾಗುವುದಿಲ್ಲ (ರೂಢಿ). ದಿನದಿನಕೆ, ದಿನ ದಿನಕ್ಕೆ = ೧. ಪ್ರತಿದಿನಕ್ಕೆ; ಆಯಾಯಾ ದಿನಕ್ಕೆ; ದಿನನಿತ್ಯಕ್ಕೆ: ದಿನದಿನಕೆ ಪಡಿಯಂ ಕೊಡುವನುಮೆಯಿನಿಯನಾ ನಂಬ್ಯಣ್ಣಗೀಗಳು ಜನವಱಿಯೆ ಪಡಿಯಂ ಕೊಡುವನೀ ಕಿನ್ನರಯ್ಯಂಗೆ (ಬಸಪು. ೨೯-೧೧); ಮನವೊಲಿದು ಪರ್ಬಂಗಳಂ ದಿನದಿನಕೆ ಮಾಡಿಹೆನು (ಬಸಪು. ೪೮-೧೬). ೨. = ದಿನಕ್ರಮೇಣ: ಲತಾಂಗಿಯ ಜಠರವದು ದಿನದಿನಕೆ ನುಣ್ಬುಂ ಪೆಂಪುಮಿಂಪು ಕೊನರ್ದು ಬಲಿದೊಂಬತ್ತುತಿಂಗಳು ತುಂಬಿ (ಬಸಪು. ೩-೪); ಮೆಱೆದುದವರಭ್ಯುದಯ ದಿನದಿನಕೆ (ತೊರರಾ. ೧-೮-೮೨); ಅವಳಲ್ಲಿ ದಿನದಿನಕ್ಕೆ ಒಳ್ಳೆಯ ಗುಣಗಳು ಬೆಳೆಯುತ್ತಿದ್ದವು (ಸಣ್ಣಕ. X, ೧೭); ಕಾದಂಬಿನಿಯು ದಿನದಿನಕ್ಕೆ ದುರ್ಜ್ಞೇಯಳಾಗುತ್ತ ಹೊರಟಂತೆ, ಯೋಗಮಾಯೆ ಅವಳ ಮೇಲೆ ಅಷ್ಟಷ್ಟು ಕುಪಿತಳಾಗಹತ್ತಿದಳು (ಇಪ್ಪಕ. ೨೩). ದಿನದೊಳಗೆ ಬೀಳು = ದಿನ ತುಂಬು: ಆಕೆಗೆ ಎರಡನೆಯ ಬಸಿರು ದಿನದೊಳಗೆ ಬಿದ್ದಿದೆ (ರೂಢಿ). ದಿನ ನಡೆ = ಜೀವನ ನಡೆ; ಬದುಕು ಸಾಗು: ಅವರ ಸಂಪಾದನೆಯಲ್ಲಿ ದಿನ ನಡೆಯುವುದೇ ಕಷ್ಟವಾಗಿದೆ (ರೂಢಿ). ದಿನನಿತ್ಯ = ಪ್ರತಿದಿನ; ಪ್ರತಿನಿತ್ಯ: ಬಹುಮಂದಿ ಸುಳಿವರು ಸುಗುಣ ಸಂಪನ್ನರು ದಿನನಿತ್ಯ ನೂರಾರುಜನರು (ಇಂಜಾಪ. ೧೫೦-೩೯); ಅವಳ ಆಲೋಚನೆಗಳು ಅವಾಸ್ತವ ಪ್ರಪಂಚದ ದಿನನಿತ್ಯದ ಸಮಸ್ಯೆಗಳ ಜಟಿಲತೆಯಿಂದ ಒಡಗೂಡಿರುತ್ತಿದ್ದುದರಿಂದ ಅವಳ ಮನಸ್ಸು ಆ ಹೊರೆಯಿಂದಲೇ ಕುಗ್ಗಿ ಹೋಗಿ ಕಲ್ಪನೆಯ ಕುದುರೆಗಳನ್ನೇರಲಾರದಂತಾಗಿದ್ದವು (ಕುಸುಸಂ. ೦೧). ದಿನ ನಿಶ್ಚಯಿಸು = (ಶುಭಕಾರ್ಯಗಳಿಗೆ) ದಿನವನ್ನು ಗೊತ್ತುಮಾಡು; ಮುಂಹೂರ್ತವನ್ನು ನಿಶ್ಚಯಮಾಡು: ದಿನ ನಿಶ್ಚಯಿಸಿದ. ಊರಿಗೆ ಮರಳಿದ (ಕುಡಿಕೊ. ೨೨೭). ದಿನ ನೂಕು = (ನೆಮ್ಮದಿಯಿಲ್ಲದೆ) ಜೀವನವನ್ನು ಸಾಗಿಸು; (ಕಷ್ಟದಿಂದ) ದಿನಗಳನ್ನು ಕಳೆ: ಅವರು ಮಗನ ನಿರೀಕ್ಷೆಯಲ್ಲೇ ದಿನ ನೂಕುತ್ತಿದ್ದಾರೆ (ರೂಢಿ). ದಿನ ನೋಡು = ದಿನ ನಿಶ್ಚಯಿಸು: ಅವರು ಮಗಳ ಮದುವೆಗೆ ದಿನ ನೋಡುತ್ತಿದ್ದಾರೆ (ರೂಢಿ). ದಿನಪಡಿ = ಅತಿಥಿ ಮುಂತಾದವರಿಗೆ ಅಡಿಗೆ ಮಾಡಿಕೊಂಡು ಊಟ ಮಾಡುವುದಕ್ಕಾಗಿ ಕೊಡುವ ಒಂದು ದಿನಕ್ಕಾಗುವಷ್ಟು ಅಕ್ಕಿ, ಬೇಳೆ ಮುಂತಾದ ಪದಾರ್ಥಗಳು,-ಸ್ವಯಂಪಾಕದ ಸಾಮಗ್ರಿ: ನಮ್ಮ ಮನೆಗೆ ಬಂದ ಶಾಸ್ತ್ರಿಗಳು ಸ್ವಯಂಪಾಕದ ವ್ರತವನ್ನು ಪಾಲಿಸುವವರಾದ್ದರಿಂದ ಅವರಿಗೆ ದಿನಪಡಿ ಕೊಟ್ಟೆವು (ರೂಢಿ). 'ಅಕ್ಕಿಪಡಿ' ಪರಾ. ದಿನ ಬರು = ಕಾಲ ಒದಗು; ಸಮಯ ಸನ್ನಿಹಿತವಾಗು: ದಿನ ಬಂದಾಗ ಎಲ್ಲವೂ ನಡೆದುಹೋಗುತ್ತವೆ (ರೂಢಿ). ದಿನ ಬಿಟ್ಟು ದಿನ = ೧. ಕ್ರಮವಾಗಿ ಒಂದು ದಿನವನ್ನು ಬಿಟ್ಟು ಮತ್ತೊಂದು ದಿನ: ನನ್ನ ಹೆಂಡತಿ ತಾನೂ ಮೂರು ಕಾಸು ಗಳಿಸ್ತೇನೆ ಅಂತ, ದಿನ ಬಿಟ್ಟು ದಿನ ನನ್ನ ಜೊತೆಗೆ ಸೌದೆಗೆ ಬರ್ತಾಳೆ (ಸಣ್ಣಕ. VII, ೫೨); ಈ ಔಷಧಿಯನ್ನು ದಿನ ಬಿಟ್ಟು ದಿನ ತೆಗೆದುಕೊಳ್ಳಬೇಕು (ರೂಢಿ). ೨. ದಿನದಿಂದ ದಿನಕ್ಕೆ; ದಿನಕ್ರಮೇಣ: ಯಾಕೋ ಏನೋ ನನ್ನ ಮರವೆ; ದಿನ ಬಿಟ್ಟು ದಿನ ಹೆಚ್ಚಾಗುತ್ತಿದೆ (ಮರಮ. ೨೫). ದಿನಬೆಳಗೂ = ೧. ಪ್ರತಿದಿನವೂ; ಪ್ರತಿನಿತ್ಯವೂ: ದಿನಬೆಳಗೂ ನಿಮ್ಮಂಥವರೇ ಬರಲಿ ಅಂತಾ ನಾವು ದೊಡ್ಡ ಮಳಿಗೆ ಬಾಗಿಲು ತೆರೆದುಕೊಂಡು ಕುಳಿತಿದ್ದೀವಿ ಅಲ್ಲವೆ? (ಹೇಮಕೂ. ೦೩); ಇನ್ನು ದಿನಬೆಳಗೂ ಇದೇ. ಹೆದರಿ ಏನು ಪ್ರಯೋಜನ? (ಕಮನೆ. ೧೬೧). ೨. ದಿನವೆಲ್ಲ; ಇಡೀದಿನ; ದಿನಪೂರ್ತಿ; ಅಹೋರಾತ್ರಿ: ದಿನಬೆಳಗೂ ರಾಮಾಯಣ ಕೇಳಿ, ರಾಮನಿಗೂ ಸೀತೆಗೂ ಏನಾಯಿತು ಎಂದಂತೆ (ಗಾದೆ). ದಿನ ಮಾಡು = ಪಿತೃಕಾರ್ಯವನ್ನು ಮಾಡು; ಶ್ರಾದ್ಧವನ್ನು ನಡೆಸು: ಮಗನು ಪರದೇಶದಲ್ಲಿದ್ದುದರಿಂದ ತಂದೆಯ ದಿನಮಾಡಲು ಸಾಧ್ಯವಾಗಲಿಲ್ಲ (ರೂಢಿ). ದಿನ ಮೀರು = ಅವಧಿ ಮೀರು; ಗಡುವು ಕಳೆದುಹೋಗು: ಸಬ್ಬಸಿಗೆ ಘೃತ . . . ದಿನ ಮೀರಿ ನೆರೆಯದ ಕನ್ನೆಯರು ಸೇವಿಸೆ ಋತುವಹರು (ಸಕವೈ. ೧೨೫). ದಿನಮೇಕು ಮಾಡು = ಕಾಲವನ್ನು ತಳ್ಳು; ತಡಮಾಡು; ಕಾಲವಂಚನೆ ಮಾಡು: ದಿನಮೇಕುಮಾಡುತ್ತ ನಡೆದದ್ದಲ್ಲದೆ ಅವರನ್ನು

ಮುರಿಯುವುದಕ್ಕೆ ಸಂಬಳದ ದಂಡಾಳುಗಳನ್ನು . . . ಕೂಡಿಸ ಹತ್ತಿದನು (ಇಂಗ್ಲಂಡ. ೪೯) ; ಅವನು ನನ್ನ ಹಣವನ್ನು ಕೊಡದೆ ದಿನವೇಕು ಮಾಡುತ್ತಿದ್ದಾನೆ (ರೂಢಿ). ದಿನರಾತ್ರಿ = ಹಗಲುರಾತ್ರಿ ; ದಿನಪೂರ್ತಿ; ಅಹೋರಾತ್ರಿ : ಅವರು ಕೆಲಸವನ್ನು ಬೇಗ ಮುಗಿಸಬೇಕೆಂದು ದಿನರಾತ್ರಿ ಮಾಡುತ್ತಿದ್ದಾರೆ (ರೂಢಿ). ದಿನ ಲೆಕ್ಕಹಾಕು = ದಿನ ಎಣಿಸು : ಅವರು ಬದುಕುವ ಆಸೆಯನ್ನೇ ಬಿಟ್ಟು ದಿನ ಲೆಕ್ಕ ಹಾಕುತ್ತಿದ್ದಾರೆ (ರೂಢಿ). ದಿನವಹಿ = : ೧. ಪ್ರತಿದಿನ ; ಪ್ರತಿನಿತ್ಯ; ದಿನಾಲು: ಯದುಗಿರೀಶಗೆ ನಮಿಸಲೋಸುಗ ಮುದದಿ ದಿನವಹಿ ಬರ್ಪ ಶಕ್ರನ ಕುದುರೆಗಳ ಪಸುರೊಗರು ಗಿರಿಮನೆಗಳಲಿ ಪಸರಿಸಲು (ಅರ್ಜಾವಿ. ೨೮-೧೪) ; ಅವಳು ದಿನವಹಿ ಬರುವ ಹೊತ್ತೂ ಇದೇ (ಜಿಳಜೀ. ೨೩) ; ಹುಟ್ಟಿದ ಮಗು ದಿನವಹಿ ೧೯-೨೦ ಗಂಟೆ ನಿದ್ದೆ ಮಾಡುತ್ತವೆ (ಗೃಹವಿ. ೧೧೨); ದಿನವಹಿ ಕನಿಷ್ಪಪಕ್ಷ ಆರುಆಣಿಗಳನ್ನಾದರೂ ಸಂಪಾದಿಸುತ್ತಿದ್ದಾರೆ (ಭಾಗ್ಯಶ್ರೀ. ೩೦). ೨. = ದಿನರಾತ್ರಿ : ಅವರು ದಿನವಹಿ ಮಾತನಾಡಿದರೂ ಆಯಾಸಗೊಳ್ಳುವುದಿಲ್ಲ (ರೂಢಿ). ದಿನವಾಗು = ದಿನ ತುಂಬು : ಆಕೆಗೆ ದಿನವಾಗಿದೆ (ರೂಢಿ). ದಿನವಿಳಿ = ಹೊತ್ತು ಇಳಿ ; ಸಾಯಂಕಾಲವಾಗು : ನನ್ನ ಕೆಲಸ ಮುಗಿಯುವ ವೇಳೆಗೆ ದಿನವಿಳಿಯುವ ಹೊತ್ತಾಯಿತು (ರೂಢಿ). ದಿನವೇರು = ಹೊತ್ತು ಏರು ; ಬೆಳಗಿನ ಸಮಯ ಏರಾರು : ಬೇಸಿಗೆಕಾಲದಲ್ಲಿ ದಿನವೇರಿದಂತೆ ಬಿಸಿಲ ಬೇಗೆ ಹೆಚ್ಚು (ರೂಢಿ). ದಿನ ಶುದ್ಧಿ ನೋಡು = ಆಯುಷ್ಕರ್ಮ ಮೊದಲಾದ ಕಾರ್ಯಗಳಿಗೆ ಒಳ್ಳೆಯ ದಿನವನ್ನು ನೋಡು : ಆಚಾರ್ಯರು ಇಂದು ದಿನಶುದ್ಧಿ ನೋಡಿದ್ದಾರೆ (ರೂಢಿ). ದಿನ ಸರಿ = ಕಾಲ ಹೋಗು ; ಸಮಯ ಕಳೆ ; ದಿನವು ಕಳೆದುಹೋಗು : ದಿನ ಸರಿದಂತೆ, ಕೆಂಪಿಯ ಹೆಸರಿಲ್ಲದ ಬೇನೆ, ಪ್ರಬಲಿಸಿತು (ಕುಡಿಕೂ. ೨೪೬). ದಿನ ಸಾಗು = ಬದುಕು ನಡೆ ; ಜೀವನ ಸಾಗು : ಕಷ್ಟವೋ ಕಾರ್ಪಣ್ಯವೋ ದಿನ ಸಾಗುತ್ತಿದೆ (ರೂಢಿ). ದಿನ ಹಾಕು = ಕಾಲ ತಳ್ಳು ; ಬದುಕು ಸಾಗಿಸು ; ಜೀವನ ನಡೆಸು . ಇಂದು ನಾಳೆ ಎಂದು ದಿನ ಹಾಕುತ್ತ ಸಾವಿನ ಬಾಗಿಲಿಗೆ ಬಂದು, ಅಲ್ಲಿಂದ ಚಂಗನೆ ತಪ್ಪಿಸಿಕೊಂಡು ಹೋಗಬಹುದೆಂದರೆ ಸಾಧ್ಯವಿಲ್ಲ (ಶಾಳಲ. ೩೧) ; ಸಾಕಷ್ಟು ಮರೆ ಬಿಟ್ಟು ಅದನ್ನು ಪ್ರಯೋಗ ಮಾಡಿದರೆ ಅದರ ಸ್ವಾರಸ್ಯ ಇನ್ನೂ ಹೆಚ್ಚುವದೆಂದು ನಂಬಿ ನಾವು ದಿನ ಹಾಕುತ್ತಿದ್ದೆವು (ಕುಡಿಮಾ. ೦೩). ದಿನ ಹೇಳು = ಪಂಚಾಗ ಹೇಳು ; ಜ್ಯೋತಿಷ್ಯವನ್ನು ಹೇಳು : ನಮ್ಮೂರ ಜೋಯಿಸರು ಚೆನ್ನಾಗಿ ದಿನ ಹೇಳುತ್ತಾರೆ (ರೂಢಿ). ದಿನ ಹೋಗು= ವಯಸ್ಸಾಗು: ಬಿದ್ದಿಯಬೇ ಮುದುಕಿ ನೀ ದಿನ ಹೋದಾಕಿ, ಬಲು ಜೋಕಿ (ಕರೀಕ. ೩೩-೨). ದಿನಾ = ದಿನಾಗಲೂ : ಮುದುಕಿ . . . ದಿನಾ ಬರುವುದಾದರೆ ಬಾ, ವಿಶಾಯಿ ನಿನಗೆ ಬೇಕಾದಷ್ಟು ಕೊಡುತ್ತೇನೆ, ಎಂದಳು (ಸ್ಮಾಳ. X, ೩೪); ದಿನಾ ಹೀಗೆ ಮಾಡ್ತೀಯಮ್ಮ (ಡೂಪಿಟ್ಟಿ. ೩). ದಿನಾಗಲೂ, ದಿನಾಲು, ದಿನಾಲೂ = ಪ್ರತಿದಿನ ; ಪ್ರತಿನಿತ್ಯ : ಅವರು ದಿನಾಗಲೂ ನಮ್ಮ ಮನೆಗೆ ಬರುತ್ತಾರೆ (ರೂಢಿ) ; ನೀವು ದಿನಾಲು ಉದ್ಯಾನಕ್ಕೇಕೆ ಬರುವುದಿಲ್ಲ (ಮುಂದಾಕಿ. ೩೭) ; ದಿನಾಲು ಆ ವಿಗ್ರಹಗಳಿಗೆ ಹೊಗಾರ ಶಿವಪ್ಪನು ಪೂಜೆ ಸಲ್ಲಿಸುತ್ತಾನೆ (ಹಬ್ಬಿಬ. ೯) ; ನೀನು ದಿನಾಲು ಸಾಲೆಯ ಆಟದ ಬಯಲಿನಲ್ಲಿರುವ ಬನ್ನಿಯ ಗಿಡದ ಹತ್ತಿರ ಬರುತ್ತಿರು (ಕಂಗರೋ. ೧೭೫) ; ಇವರನ್ನೆಲ್ಲ ನಾವು ದಿನಾಲು ನಮ್ಮ ಸುತ್ತಮುತ್ತು ಕಾಣಬಹುದು (ಗೊತ್ತುಗು. ೧೩) ; ಮನೆಯವರು ದಿನಾಲೂ ಒಂದಲ್ಲ ಒಂದು ರೀತಿಯಿಂದ ಆ ಹುಡುಗನ ಮತ್ತು ಅವರ ಮನೆಯವರ ಗುಣಗಾನ ಮಾಡಿದ್ದೂ ಮಾಡಿದ್ದೇ (ಸುವಸಂ. ೦೪). [ಸಂ.]

ದಿನಂಗಳೆ, ದಿನಕಳೆ, ದಿನಗಳಿ, ದಿನಗಳೆ (ಕ್ರಿ). ೧. ಕಾಲವನ್ನು ಕಳೆ ; ಸಮಯವನ್ನು ಕಳೆ : ಇಂತೀ ನರಾಮರಲೋಕಾವನಕೀರ್ತನೀಯಗಳೆನಿಪ್ಪನ್ಯೋನ್ಯಕೃತ್ಯಂಗಳಿಂ ಮರಳಲ್ ನೂರುಯುಗಂ ದಿನಂಗಳೆದು ನೀವಾನಂದದಿಂ ಬಾಳಿರೈ (ಶಾಕುಂತ. ೧೧೩- ೧೪೭). **ದಿನಕಳೆ : ೨.** ಬದುಕನ್ನು ಸಾಗಿಸು ; ಜೀವನವನ್ನು ನಡೆಸು : ಎಲ್ಲೋ ಹೇಗೋ ದಿನ ಕಳೆಯುವುದು, ಎಂದು ಯೋಚಿಸಿಕೊಂಡರು (ಸ್ಮಾಳ. X, ೩೦). **ದಿನಗಳಿ: ೩.** ಕಾಲ ಕಳೆದುಹೋಗು ; ಅವಧಿ ವಿಸ್ತಾರಿ ಹೋಗು : ಸತಿ ಸಂತತಿಗೆ ಬಯಸಿ ದಿನಗಳಿ[ಪಾಕಾಂ. ೪]ದುದಿನ್ನಿಲ್ಲ ಋತುಸಮಯಮೆಂದನುಗೆ ಪೇಳ್ದೊಡಲ್ಲಿರ್ದನು (ಕೃಮಿಭಾ. ೧೧-೩೯). **ದಿನಗಳೆ : ೩.** ಮೇಲಿನ 'ಜೈಮಿಭಾ ವ್ಯಯೋಗದ ಪ್ರಾಥಾಂತರವನ್ನು ನೋಡಿ.

[ದಿನ + ಕಳೆ$_{3}$ (< ಕಲಿ$_{1}$)]

ದಿನಕರ (ನಾ). ೧. ಹಗಲನ್ನು ಉಂಟುಮಾಡುವವನು ; ಸೂರ್ಯ ; ಆದಿತ್ಯ : "ಆದಿತ್ಯಃ, ಸವಿತಾ . . . ದಿನಕರಃ, ಸೂರಃ, ಅಂಶುಮಾಲೀ . . . ತ್ರಯಾತನಃ–ಈ ೪೭ ಆದಿತ್ಯನ ಪೆಸರ್" (ಹಲಾಯು. ೭-೩೫); ಧರಾಧಿಪಾ ನಿನ್ನನ್ನಂ ವಿತತಯಶನಿಲಯ ತಾರಾಪತಿ ದಿನಕರ ಸದೃಶತೇಜ ನೆಂಬುದುಮುಂಟೇ (ಕವಿಕಾ. ೩-೦೪) ; ದಿನಕರನಸ್ತಮಸ್ತಕಮನಾಸೆಪಡಲ್ ಬಗೆದಪ್ಪನೇಕೆ (ಪಂಪಶಾ. ೧೦-೦೪೫) ; ದಿನಕರ ಹಿಮಕರ ನಕ್ಷತ್ರ ನಿಖಿಲ ತಾರಾಗ್ರಹಂಗಳತ್ಯಾಗ್ರಹದಿಂ ಕನಕಮಹೀಧರಮಂ ನಿಚ್ಚ ನಿಚ್ಚ ವೋರಂತೆ ಸಂತತಂ ಬಲವರ್ಕುಂ (ಸುಳುಮಾ. ೧೦-೩೦) ; ಮತ್ತಮಲ್ಲಿ ಮನಸಿಜನ ಬಿಲ್ಲ ಜೀಜದಿಂ ಬೆಳಿಯದಿಕ್ಷುದಂಡವಿಲ್ಲ . . . ದಿನಕರನ ಕರದ ಕಮಳದೊಡ ವುಟ್ಟದ ಕಮಳವನಂಗಳಿಲ್ಲ (ಪುಷ್ಪಪು. ೯-೩೦ ವ). ೨. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ: ದಿನಕರರೆಡೆಯೊಳ್ ಯತಿ ನಿರ [ಪಾಕಾಂ. ಯ] ತಂ (ಧಂದೋಂಬು. ೨-೦೯೩). [ಸಂ.]

ದಿನಕರತನಯ (ನಾ). ೧. ಸೂರ್ಯನ ಮಗ. ೨. ಕರ್ಣ : ದಿನಕರತನಯನ ದುಶ್ಶಾಸನನ ವಿಯೋಗದೊಳಮಿಂದುವರೆಗಂ ನೋವಿಲ್ಲೆನಗಹಿತರೊಡನೆ ಸಂಧಿಗುಡೆನೆ ನೊಂದಂ (ಗದಾಯು. ೬-೭). ೩. ಶನಿ. ೪. ಸುಗ್ರೀವ. ೫. ಯಮ. [ದಿನಕರ + ತನಯ]

ದಿನಕರತೇಜ (ನಾ). ಸೂರ್ಯನ ಕಾಂತಿ,–ಪ್ರಕಾಶ : ದಿನಕರತೇಜಮುಂ ಕ್ರಮದಿನೊಯ್ಯನೆ[ಯಪ್ಪುದ]ದತ್ತ ದಕ್ಷಿಣಾಯನದೊಳ್ . . . ಶಾಂತಿ ನಾಥನ ವಿತತಪ್ರತಾಪಶಿಖಿ ಕಣ್ಣಳೊಳುಳ್ಕೆ (ಶಾಂತಿಪು. ೧೧-೬).

[ದಿನಕರ + ತೇಜ$_{1}$]

ದಿನಕರಯ್ಯ (ನಾ). ಒಬ್ಬಾತನ ಹೆಸರು : ಎರೆಯೂರ ದಿನಕರಯ್ಯ ಸೆಟ್ಟಿಯ ಲಿಕಿತಂ (ಎಕ್ಷ. IV. ಎಳಂದೂ. ೨೫-೦೫ ; ಸು. 925 ?).

[ದಿನಕರ + ಅಯ್ಯ$_{1}$]

ದಿನಕರಸುತ (ನಾ). ೧. ಸೂರ್ಯನ ಮಗ. ೨. ಕರ್ಣ : ದಿನಕರಸುತ ವಚನಂ ರಾಮನೇಸು ಕಂಡರಿಸಿ ಕಲ್ಲೊಳಿಟ್ಟಕ್ಕರಮೆಂಬಿನಿಗಮೆಸೆದಪುದು ನೃಪಶಾಸನಮೆನಿಸುವ ನನ್ನಿ ನ್ನಿನಾರಾಯಣನ (ಆಆಪು. ೦೨-೨೫). ೩. ಶನಿ. ೪. ಸುಗ್ರೀವ. ೫. ಯಮ. [ದಿನಕರ + ಸುತ]

ದಿನಕರಾತ್ಮಜೆ (ನಾ). ಸೂರ್ಯನ ಮಗಳು ; ಯಮುನಾನದಿ : "ಕಾಳಿಂದೀ, ದಿನಕರಾತ್ಮಜಾ, ಯಮುನಾ–ಈ ೩ ಯಮುನೆ" (ಹಲಾಯು. ೧೧೦-೩೨). [ಸಂ. ದಿನಕರಾತ್ಮಜಾ]

ದಿನಕರೋಪಲ (ನಾ). ಸೂರ್ಯಕಾಂತ ಶಿಲೆ : ಹರಿಮಣಿಯಜಿಯೊಳ್ಕಿಜುಗುತ್ತಿರೆ ವಿಧುಂತುದಂ ವೃತ್ತತೆವೆತ್ತ ದಿನಕರೋಪಲಮಿದು ಭಾಸ್ಕರಬಿಂಬಮೆಂದು ಬಂದಾ ಗರಣದ ಸಮಯದೆ ಪಿಡಿವುದದಾ (ರಾಜಶೇ. ೬-೨೨). [ದಿನಕರ + ಉಪಲ]

ದಿನಕರ್ಮ (ನಾ). ಸತ್ಪುರುಷರಿಗೆ ಮಾಡುವ ಉತ್ಕರಕ್ರಿಯೆ ; ಅಪರ ಕರ್ಮ ; ಪಿತೃಕರ್ಮ : ದಿನಕರ್ಮಗಳು ಮುಗಿದೊಡನೆ (ಮುನಿಮಾ. ೩೧).

[ದಿನ + ಕರ್ಮ]

ದಿನಕಳೆ 'ದಿನಂಗಳೆ' ನೋ.

ದಿನಕೂಟ (ನಾ). [ಜ್ಯೋತಿ] ವಿವಾಹೋಪಯುಕ್ತವಾದ ದ್ವಾದಶ ಕೂಟಗಳಲ್ಲಿ ಒಂದು; ℙ ಕನ್ಯೆಯ ನಕ್ಷತ್ರದಿಂದ ವರನ ನಕ್ಷತ್ರದ ವರೆಗೆ (ಎರಡೂ ಸೇರಿ) ಒಂಬತ್ತೊಂಬತ್ತಾಗಿ ಎಣಿಸುವಾಗ–೨,೪, ೬,೮,೯ ಆದರೆ ದಿನಕೂಟವಿದೆಯೆಂದು ತಿಳಿಯಬೇಕು: ದಿನಕೂಟ ಇಲ್ಲದಿದ್ದರೂ ಗಣಕೂಟ ಚೆನ್ನಾಗಿದೆಯಲ್ಲ (ಕೂಡಿ). [ದಿನ + ಕೂಟ$_1$]

ದಿನಕೃತ್ತನೂಭವ (ನಾ). ೧. ಸೂರ್ಯನ ಮಗ. ೨. ಕರ್ಣ: ದಿನಕೃತ್ತನೂಭವಂಗತಿಘನದಾನಿಗೆ . . . ಅವನಿಯೊಳದಟ್ಟಾರ್ ದೊರೆ ವೇಟಂ (ನೇಮಿಪು. ೦೦-೦೩೦). ಪಿ. ಶನಿ. ೪. ಸುಗ್ರೀವ. ೫. ಯವಂ. [ಸಂ.]

ದಿನಕೃತ್ತು (ನಾ). ಸೂರ್ಯ; ಆದಿತ್ಯ; ದಿನಕರ: ಹತವೈರಿ ಕ್ಷತ್ರಚಕ್ರಂ ಭಯಚಕಿತ ಜಗದ್ವೀರಚಕ್ರಂ ವಿನಮ್ರಕ್ಷಿತಿಚಕ್ರಂ ದೀಪದೀಪ್ತಿ ಪ್ರತಿಹತ ದಿನಕೃಚ್ಛಕ್ರ ತೀವ್ರಾಂಶು ಚಕ್ರಂ (ಆದಿಪು. ೧೪-೩). 'ದಿನಕೃತ್ತನೂಭವ' ಪರಾ. [ಸಂ. ದಿನಕೃತ್]

ದಿನಕೃದ್ಬಿಂಬ (ನಾ). ಸೂರ್ಯನ ಬಿಂಬ: ದಿನಕೃದ್ಬಿಂಬ ಸ್ಫುರದ್ದರ್ಪಣ ಕಲಿತ ಕರಾಳ ತ್ರಿಶೂಲಂ . . . ಕಾಣಲಾದತ್ತದಾಗಳ್ (ಕಾದಂಬ. ೩೬೮). [ಸಂ.]

ದಿನಕೃದ್ರಥ (ನಾ). ಸೂರ್ಯನ ರಥ: ರಥಮಂ ನುರ್ಗೊತ್ತುತೆ ಸಾರಥಿಯಂ ತೊಡವಿತಿದಂ ನಭಕ್ಕಿಡೆ ದಿನಕೃದ್ರಥದೊಳಗೆ ಬಿಳ್ದ ತತ್ಸಾರಥಿಯೆನಿಸಿದನ ವನನೂರು (ರಾಜಶೇ. ೬-೬೭). [ಸಂ.]

ದಿನಕೃನ್ಮಂಡಲ, ದಿನಕೃನ್ಮಂಡಳ (ನಾ). =ದಿನಕೃದ್ಬಿಂಬ: ದಿನಕೃನ್ಮಂಡಲ ಮುರ್ವಿಯೊಳ್ ನೆಲಸಿತೋ (ಧರ್ಮಾಮೃ. ೯-೦೦೪). **ದಿನಕೃನ್ಮಂಡಳ**: ಚಳಿಯಿಸಲಮರಾಚಲಮಂ ತುಳುಂಕಲಂಭೋನಿಧಾನಮಂ ದಿನಕೃನ್ಮಂಡಳ ಮನಿಳಿಗಿಟ್ಟಿಪಲೆಂದಾಜಲಂಪಟಂ ದೆಸೆಗೆ ಮುಸಗಿದಂ ದನುಜೇಂದ್ರಂ (ಪಂಡಾಮಾ. ೧೩-೦೩೩). [ಸಂ.]

ದಿನಕೃನ್ಮಂಡಳ 'ದಿನಕೃನ್ಮಂಡಲ' ನೋ.

ದಿನಗಂಡ (ನಾ). ದಿನಕ್ಕೊಮ್ಮೆ ಅಥವಾ ದಿನೇ ದಿನೇ ಬರುವ ದೊಡ್ಡ ತೊಂದರೆ,–ವಿವತ್ತು: ಹಿಂದೂಗಳ ಪಾಲಿಗೆ ಈ ಯವನರ ದಬ್ಬಾಳಿಕೆ ದಿನಗಂಡ ಕ್ಷಣಗಂಡಗಳಾಗಿವೆ (ರಾಜ್ಯೋದ. ೧೩೦). 'ಕ್ಷಣಗಂಡ' ಪರಾ. [ದಿನ + ಗಂಡ$_3$]

ದಿನಗಣನೆ (ನಾ). ಪ್ರತಿದಿನದ ಗಣನೆ,–ಲೆಕ್ಕ: ದಿನಗಣನೆ ಹದಿನೆಂಟು ಕೋಟಿಯ ಕನಕವಂದಿನ ದಿನದಿ ಚಿಲ್ಲಿದನನುಪವಿತ ಧನರತುನ ಭಂಡಾರವನು ತೆಗೆತೆಗೆಸಿ ಮನದಣಿಯೆ ಯಾಚಕರಗಿತ್ತುದನೆನಗೆ ಬಣ್ಣಿಸಲಳವೆ (ಕುವಾ.ಕ. ೯-೦೮). [ದಿನ + ಗಣನೆ]

ದಿನಗಳೆ 'ದಿನಂಗಳೆ' ನೋ.

ದಿನಗಳೆ 'ದಿನಂಗಳೆ' ನೋ.

ದಿನಗೂಲಿ (ನಾ). ೧. ಒಂದು ದಿನದ ಕೆಲಸಕ್ಕೆ ಕೊಡುವ ಕೂಲಿ; ಚೆಂಗೂಲಿ: ದಿನದ ಲೆಕ್ಕ ಮಾಡಿದರೆ ದಿನಗೂಲಿ ಆಯ್ತು (ಸಣ್ಣಾ. IX, ೯೫): ಅವರು ದಿನಗೂಲಿ ಕೊಟ್ಟು ಕೆಲಸ ಮಾಡಿಸುತ್ತಾರೆ (ಕೂಡಿ). ೨. ಪ್ರತಿದಿನವೂ ಮಾಡುವ ಕೂಲಿ ಕೆಲಸ; ಒಂದು ದಿನದ ಕೆಲಸಕ್ಕೆ ಅಂದೇ ಕೂಲಿಯನ್ನು ಪಡೆಯುವ ಕೆಲಸ: ನೀನು ಬಂದು ಇಲ್ಲಿ ದಿನಗೂಲೀನಾ ಮಾಡಿದ್ದು? (ಸಣ್ಣಾ. IX, ೯೫): ಅವನು ದಿನಗೂಲಿಯಿಂದ ಜೀವನ ನಡೆಸುತ್ತಾನೆ (ಕೂಡಿ). ಪಿ. ಪ್ರತಿದಿನವೂ ಕೂಲಿಕೆಲಸ ಮಾಡುವವನು: ಅವನೊಬ್ಬ ದಿನಗೂಲಿ (ಕೂಡಿ). [ದಿನ + ಕೂಲಿ$_1$]

ದಿನಚರಿ$_1$ 'ದಿನಚರಿಯ' ನೋ.

ದಿನಚರಿ$_2$ (ಅ). ಪ್ರತಿದಿನವೂ: ದಿನಂಪ್ರತಿ: ಬಳಿಕಮ್ಮಾವಿನ ಪಣ್ಣಿತ್ತಾ ಅರಗಿಳಿಯಂ ದಿನಚರಿ ಬರವೇಳುತ್ತಿಂ ಕಳುಹಿ ಕಮಲಲೋಚನೆ ತನ್ನಯ ಮನದೊಳಗಿಂತೆಣಿಸಿದಳು (ಜಯಭಾ. ೨-೩೫). [<ದಿನಚರಿಯ]

ದಿನಚರಿಯ, ದಿನಚರಿ$_1$ (ನಾ). ೧. ಪ್ರತಿದಿನವೂ ಮಾಡುವ ಕೆಲಸ,–ಆಚರಣೆ: ಇನಿತುವನು ತಪ್ಪದೆ ನಡೆಸಲಾ ಜನಪನಾರೋಗ್ಯಕ್ಕೆ ಸುಖ ಸಂಜನಿಸುವುದು ದಿನಚರಿಯದಿಂದವನೀಶ ಕೇಳೆಂದ (ಕುವಾ.ಕ. ೩-೭೧). **ದಿನಚರಿ$_1$**: ೧. ಸಂಶೋಧನಾಕಾರ್ಯಗಳಲ್ಲಿ ಮಗ್ನರಾದವರಿಗೆ ದಿನಚರಿಯು ಕೆಲಸಗಳೇ ಹೆಚ್ಚಾದರೆ ಅವರಿಂದ ಆಗಬೇಕಾದಷ್ಟು ಉಪಯುಕ್ತಕಾರ್ಯ ವಾಗುವುದಿಲ್ಲ (ಸಸ್ಕೃ. ೬೨); ಶ್ರೀಧರನ ದಿನಚರಿಯಲ್ಲಿ ಆತ ಅತ್ಯಂತ ಪ್ರಯಾಸಪಟ್ಟು ಮಾಡುತ್ತಿದ್ದ ಕೆಲಸ, ತನ್ನ ಆಫೀಸಿಗೆ ಹೋಗುವ ಸಿದ್ಧತೆ (ಪಾತ್ಪಲ್ಯ. ೨೭): ಹೀಗಾದಲ್ಲಿ ನಮ್ಮ ದಿನಚರಿಯನ್ನು ಘಂಟೆಗಳಿಗೆ ಹೊಂದಿಸಿ ಕೊಂಡು ಕೆಲಸ ಮಾಡಬೇಕಾದರೆ, ನಾವೆಲ್ಲರೂ ಖಗೋಳಜ್ಞರಾಗಬೇಕಾಗುತ್ತದೆ (ನಕ್ಷತ್ರ. ೫೪); ಇವರ ಸ್ನಾನ ಪಾನ, ಉಡುಗೆ ತೊಡಿಗೆ, ಊಟ, ನಿದ್ದೆ, ಆಟ ಪಾಠ–ಇವೆಲ್ಲಾ ದಿನಚರಿಗಳಿಗೆ ಈ ಮನೆಯಲ್ಲಿ ಆಸ್ಪದವಿರುತ್ತದೆ (ಗೃಹವಿ. ೧೫೨). ೨. ದಿನವೂ ಮಾಡುವ ಕೆಲಸ ಮುಂತಾದುವನ್ನು ಬರೆದಿಡುವ ಪುಸ್ತಕ; ದಿನವಹಿ; ಡೈರಿ: ಕೆಲವಾರು ಘಟನಾವಳಿಗಳನ್ನು ಪ್ರಸಿದ್ಧ ಸಂಗೀತಗಾರರ ದಿನಚರಿಗಳಿಂದಲೇ ಆರಿಸಿಕೊಂಡಿದ್ದೇನೆ (ಸಂಗೀತ. vi ಬೀ೨೪): ನನ್ನ ದಿನಚರಿಯಲ್ಲಿ ಮೂಡಿದೆ ಕವಿಯು ಹಾಡಿದ ಚೌಪದಿ (ನಂಪು. ೫೨-೨೦); ಬಹುಮಟ್ಟಿಗೆ ಆತನ ದಿನಚರಿಯಿಂದ ತೆಗೆದದ್ದು (ನನ್ನಜೀ. ೪೪).

ದಿನಚರಿ ಪುಸ್ತಕ = (ಅಂದಂದಿನ ವ್ಯಾಪಾರ ಒಂದೊಂದನ್ನೂ ಅದಂ ಆದ ಹಾಗೆಲ್ಲ ಬರೆದುಕೊಂಡು, ಅದನ್ನು ಯಾವಯಾವ ಜಮಾ ಖರ್ಚು ಬಾಬಿಗೆ ಸೇರಿಸಬೇಕೆಂಬುದನ್ನು ನಮೂದಿಸಿಂವ ಪುಸ್ತಕ: "ದಿನಚರಿಪುಸ್ತಕ; ರೋಜುಪುಸ್ತಕ "(Journal. ಪತ್ರಿನಿ. ೪೪) [<ಸಂ. ದಿನಚರ್ಯಾ]

ದಿನಚರ್ಯ (ನಾ). = ದಿನಚರಿಯ ೧: ಭೋಜರಾಜಸಂಹಿತೆಯಲ್ಲಿ ದಿನ ಚರ್ಯೆ, ಅರಸುಗಳು ಪ್ರತಿನಿತ್ಯವೂ ನಡೆವ ಕಟ್ಟಳೆ, ಪ್ರಭಾತದರ್ಶನ ಯೋಗ್ಯ (ಸಕವ್ಯ. ೨೮). [ಸಂ. ದಿನಚರ್ಯಾ]

ದಿನಚಲನ(ನಾ). ಒಂದು ದಿನದ ಚಲನೆ; ದೈನಂದಿನ ಚಲನೆ: ಭೂಮಿಯು ೨೪ ಘಂಟೆಗಳಲ್ಲಿ ಒಂದು ಸಲ, ಆಡುವ ಬುಗುರಿಯಂತೆ, ತನ್ನ ಸುತ್ತಲೂ ತಾನೇ ಹೊರಳುತ್ತದೆ. ಈ ಚಲನೆಗೆ ಭೂಮಿಯ "ದಿನಚಲನ (Diurnal Motion)" ಎಂದು ಹೆಸರು (ಭೂಗೋಳ. ೩). [ದಿನ + ಚಲನ]

ದಿನದೀಪ (ನಾ). ೧. ಹಗಲಿನಲ್ಲಿ ಹಚ್ಚಿದ ದೀಪ: ದಿನದೀಪದಂತೆ ದಶಾ ಹೀನನು (ಗಾಡ). ೨. ಸೂರ್ಯ. [ದಿನ + ದೀಪ$_3$]

ದಿನನಾಥ (ನಾ). ೧. ಹಗಲಿನ ಒಡೆಯ; ಸೂರ್ಯ: ಅಮರಾನೀಕದ ಸುತ್ತು ಪೋಲೆ ದಿನನಾಥಾವಂಧ್ಯಸಂಧ್ಯಾಭ್ರವಿಭ್ರಮಮಂ ವಾಹನ ದೇವದಂತಿ ಶಿರದೊಳ್ ಕೂರಂಕುಸಂ ಚಾರಣಕ್ರಮದಿಂದಾದಱುವಕ್ಕು ನಾಲ್ಕು ಪೊಳಿಂ ಕಣ್ಗೊಪ್ಪೆ (ಜಾಂತಿಪು. ೪-೧೦೬); ದಿನನಾಥಂ ವಿಥುನರ್ಕ್ಷದೊಳ್ ನೆಲಸೆ ವಿದ್ಯಾಪಾರಗಂ ಜ್ಞಾನಿ ಧನ್ಯನೆನಿಕ್ಕುಂ (ಜಾತಕ. ೦೭-೦೩). ೨. [ಗಣಿತ] ಹನ್ನೆರಡಂ ಎಂಬ ಸಂಖ್ಯೆಯ ಸಂಕೇತ: ತ್ರಿದಶ ಚಂದ್ರಗಣತ್ರಯವಾಗಲೆ ಧಾತ್ರಿ ಮಾರುತ ಯುಗ್ಮಲಗಂಗಳಾ ಪದದೊಳಿರೆ ವಿಶ್ರವಣಂ ದಿನನಾಥಸ್ಥಾನದೊಳಾಗೆ (ಧಂಡೋಂಬು. ೨-೦೭೯). [ದಿನ + ನಾಥ]

ದಿನನಾಯಕ (ನಾ).=ದಿನನಾಥ ೧: ದಿನನಾಯಂಕನಪರದಿಗಂಗನೆಯೊಳ್ನಿರೆದು ದಿತರಾಗದಾದಂ (ಕವಿರಾ ೩-೩೪). [ದಿನ + ನಾಯಕ]

ದಿನಪ (ನಾ). ೧. ಸೂರ್ಯ; ರವಿ: ದಿನಪಂ ತೋರ್ಪಂ ಮಧ್ಯಂದಿನದೊಳ್ ತೇಜದ ಪೊಡರ್ಪಂ (ಗದಾಯು. ೧-೩೦); ಎನ್ನುದಯಮನಾನಿಂ ತಡೆದಿರ್ಪುದೂ ಪದನಲ್ತೆಂದು ದಿನಪನುದಯಂಗೆಯ್ದಂ (ಪಂಡಾಮಾ. ೧೩-೯೪); ಜಗದಲಿ ದಿನಪನಿದಿರಲಿ ದಿಟ್ಟತನವೇ ತಮದ ಗಾವಳಿಗೆ

(ಕುಪ್ಯಾವಿ. ೫-೧೪). ೨. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ: ಕರಿ ದಿನಪ ರಾಜ ರಾವಣಕರ ಪರಿಸಂಖ್ಯಾಕ್ಷರಂ ಪೊದಟ್ಟಿಸೆಯೆ ಗಣಾಂತರಿತಂ ಪದಚತುರೂರ್ಧ್ವಂ (ಛಂದೋಂಬು. ೩-೨೧೫). ೩. [ಛಂದ] ಅಕ್ಷರಗಣಗಳಲ್ಲಿ ಒಂದು ; ಜಗಣ(ಲ-ಲ): ಕೋಕನದವೈರಿ ದಿನಪಂಗಾ ಕಡೆಗೆ ವಾಯು ಬರೆ ಕೇಳಾ ಕಮಲಲೋಚನೆ ಪೆಸರ್ನಾಕಿಗನಿನಾದುದಯಂ (ಛಂದೋಂಬು. ೨-೧೦೦). [ಸಂ.]

ದಿನಪಕುಲ (ನಾ). ಸೂರ್ಯನ ವಂಶ,-ಕುಲ: ದಿನಪಕುಲತಿಲಕನೇಕಾಂತ ದೊಳ್ನಗರಶೋಧನೆಯ ಚಾರರೊಳೊರ್ವನಂ ಕರೆಸಿ ಕೇಳ್ದನಿಂತು (ಚೈಮಿಭಾ. ೧೮-೪೧). [ದಿನಪ + ಕುಲ]

ದಿನಪತಿ (ನಾ). ಸೂರ್ಯ; ದಿನಕರ ; ದಿನಪ : "ಪ್ರಭುವುಂ ದಿನಪತಿಯುಂ ಮಿನರ್" (ಪಸ್ತುಕೋ. ೧೧೮-೪) ; ದಿನಪತಿಯುಂ ದಿನಮುಂ ಬಿಡದನು ಬಂಧ ದಿನಗಲದಂತೆ ಪೊಲ್ . . . ಪದಪಿಂದಮೊರ್ವರೊರ್ವರ ನಗಲರ್ (ಕಾದಂಪೂ. ೪೪೦) ; ದಿನಪತಿ ಇಳಿದನಪರಾಂಬುಧಿಗೆ (ಕುಪ್ಯಾಉ. ೦೦-೨೪). [ದಿನ + ಪತಿ₂]

ದಿನಪತಿವಾರ (ನಾ). ಭಾನುವಾರ ; ಆದಿತ್ಯವಾರ : ಸಿತಪಕ್ಷದ ಪಂಚಮಿ ದಿನಪತಿವಾರಂ . . . ನೆಗಟ್ಟುದೀ ಮತ್ಕೃತಿ (ಆದಿಪು. ೧೬-೭೭).

[ದಿನಪತಿ + ವಾರ₃]

ದಿನಪತ್ರಿಕೆ (ನಾ). ದಿನವೂ ಬರುವ ಪತ್ರಿಕೆ ; ದೈನಂದಿನ ವೃತ್ತಪತ್ರಿಕೆ : ದಿನಪತ್ರಿಕೆಯಲ್ಲಿ ದುಡಿಯುವವನಾದುದರಿಂದ ಸಾಮಾನ್ಯ ರಾಜಕೀಯ ವಿಚಾರಗಳು ತಿಳಿದೇ ತಿಳಿಯುತ್ತವೆ (ಒಂಟಿದ. ೨೫೫) ; ದಿನಪತ್ರಿಕೆಯವರು ಬಂದು ಇವನ ಆತ್ಮಕಥೇನ ಕೇಳಿದರು (ವೀರಯೋ. ೨೦). [ದಿನ + ಪತ್ರಿಕೆ]

ದಿನಪಾಂಶು (ನಾ). ಸೂರ್ಯಕಿರಣ: ಭುಗುಭುಗನುರ್ಚಿಪಾಯ್ದು ಸಲೆ ದೇಹರಸಂ ಬಿಡುತೋಡಿತೆಲ್ಲಿಯುಂ ಮೊಗರಸವೋಡಿತಿಲ್ಲ ದಿನ ಪಾಂಶುಗ[ಳ]ಟ್ಟಿ ಶರೀರಯಷ್ಟಿ ತೊಟ್ಟಗೆ ಕಡುಗಂದಿ ಕುಂದೆ ಬಡವಾದುದು (ಸುಕುಮಾ. ೧೨-೪೦). [ದಿನಪ + ಅಂಶು]

ದಿನಬಳಕೆ (ನಾ). ೧. ಪ್ರತಿನಿತ್ಯದ ಬಳಕೆ,-ಉಪಯೋಗ ; ದಿನನಿತ್ಯದ ಪ್ರಯೋಜನ : ಈ ಸೀರೆ ದಿನಬಳಕೆಗೆ ಬರುವುದಿಲ್ಲ (ರೂಢಿ). ೨. ಪ್ರತಿ ದಿನವೂ ಬಳಸುವಂತಹುದು ; ದಿನನಿತ್ಯದ ಉಪಯೋಗದಲ್ಲಿರು ವಂತಹುದು : ಶರೀಫರು ಜನಪದ ಕವಿ ; ಜನರ ದಿನಬಳಕೆಯ ಮಾತು ಗಳಲ್ಲಿ ಪದ ಕಟ್ಟಿ ಹಾಡಿದ ಕವಿ (ಶರೀಫ. ! ಪೊದಲಮಾತು); ಅವನ ಬಾಯಲ್ಲಿ ಸಾವು ದಿನಬಳಕೆಯ ಮಾತಾಗಿದೆ (ಹೊಸಕ್ಕಿ. ೧೯೭) ; ಹೃದಯಸ್ಪರ್ಶಿ ಯಾಗುವ ಆವರಣವನ್ನು ಕಲ್ಪಿಸುವ ಶಕ್ತಿ ದಿನಬಳಕೆಯ ಗದ್ಯಕ್ಕೆ ಸಾಲದು (ಜಗದಾ. ೬೨). ೩. (ಆಲಂ) ತೀರ ಪರಿಚಿತವಾದುದು : ದಿನಬಳಕೆಯ ಮನೆಯಂಗಳದಲ್ಲೂ ಕವಿ ಚೆಲುವನ್ನು ಕಂಡು ನಲವನ್ನು ಪಡೆಯುತ್ತಾನೆ (ಸೌಂದಸ. ೨೪) ; ದಿನಬಳಕೆಯಲಿ ನಿನ್ನ ಚೆಲುವು ಮಾಸದು, ಬಲ್ಲೆ; ವರುಷವೆಲ್ಲ ವಸಂತ ನೀನರಿಯದೊಲವು (ಶಿಲಾಲ. ೮೫-೬). [ದಿನ+ಬಳಕೆ]

ದಿನಬಾಳ್ವೆ 'ದಿನಬಾಟ್ವೆ' ನೋ.

ದಿನಬಾಟ್ವೆ, ದಿನಬಾಳ್ವೆ (ನಾ). ಒಂದು ದಿನದ ಬಾಳ್ವೆ,-ಜೀವಮಾನ ; ಕ್ಷಣಿಕವಾದ ಬದುಕು : ಇನ್ ನಿನ್ನ ದಿನಬಾಟ್ವೆ ಪುಟುಗಳ್ಗೆ ಕಳ್ದುಗುಡು ಪೋಗು ದೇವಮಾನ್ಯಂಗಳನ್ (ಬದ್ಧಪ್ರ. ೬-೦೦೨). ದಿನಬಾಳ್ವೆ: ಮನುಷ್ಯರೆಲ್ಲ ಅವನ ಕಣ್ಣಿಗೆ ದಿನಬಾಳ್ವೆಯ ಹುಳುಗಳು (ಬದ್ಧಪ್ರ. XLVI ಮುನ್ನುಡಿ).

[ದಿನ + ಬಾಟ್ವೆ]

ದಿನಭತ್ಯ (ನಾ). ಒಂದು ದಿನದ ಕೆಲಸಕ್ಕೆ(ಆಯಾ ದಿನವೇ)ಕೊಡಲಾಗುವ ಭತ್ಯ,-ಪ್ರತಿಫಲ ; ದಿನಗೂಲಿ : ಆ ಸಾಲ ತೀರುವೆಗಾಗಿ ದಿನಭತ್ಯ ದಿಂದಲೇ ಹಣ ಮುರಿದು ಕೊಡುತ್ತಿದ್ದನೆಂತಲೂ ಸಾರ್ಜೆಂಟ್ ನೆಕ್ಲು ದೋವನಿಗೆ ವಿವರಿಸಿದನು (ಪುನರು. ೫೦೬). [ದಿನ + ಭತ್ಯ]

ದಿನಮಣಿ (ನಾ). ಸೂರ್ಯ : "ಆದಿತ್ಯಃ, ಸವಿತಾ . . . ದಿನಮಣಿಃ, ಭಾಸ್ವಾನ್ . . . ತ್ರಯಿಾತನುಃ-ಈ ೪೭ ಆದಿತ್ಯನ ಪೆಸರ್" (ಹಲಾಯು. ೭-೩೫) ; ಧರ್ಮಾತ್ಮಜಂ . . . ಏಂ ತೇಜದಿಂ ರಾಜಿಸಿರ್ದನೊ ಚಿತ್ರಂ ನರಲೋಕದೊಳ್ ದಿನಮಣಿ ದ್ವೈರಾಜ್ಯಮಾಯ್ತೆಂಬಿನಂ (ಜಗವಿ. ೧೭-೦೩); ಆ ದಿನಮಣಿಯ ಮಗನುದ್ದಂಡ ಕರ್ಣನ ಕಂಡಳಾ ಕುಂತಿ (ಕುಪ್ಯಾಉ. ೧೦ ಸೂಚನೆ) ; ದಿನಮಣಿಗೆ ಮುನ್ನಿನ ಮಣಿಹವಾಯಿತು ತ್ರಿಣಯನಿಲಯ ದಲಡಗಿ ಹಗಲನು ಕಳೆದ ಹನುಮಂತ (ಕೌಶಿರಾ. ೧೦-೧೭).

[ದಿನ + ಮಣಿ₃]

ದಿನಮಧ್ಯ (ನಾ). ದಿನದ ಮಧ್ಯದ ಅವಧಿ,-ಕಾಲ ; ಮಧ್ಯಾಹ್ನ : ಆ ಬಳಿಕ ದಿನಮಧ್ಯದ ಊಟವನ್ನು (Lunch) ಮುಗಿಸಿಕೊಂಡು . . . ರಾಕ್‌ಫೆಲರ್ ಪ್ರತಿಷ್ಠಾನದ ಮಹಾಸೌಧಕ್ಕೆ (Rockfeller Centre) ಹೋಗಿ ಶ್ರೀ ಗಿ-ಅವರನ್ನು ಕಂಡೆ (ನಂಟರು. ೧೦೯). [ದಿನ + ಮಧ್ಯ₁]

ದಿನಮಾನ (ನಾ). ೧. ಒಂದು ದಿನದ ಅವಧಿ,-ಕಾಲ ; ಒಂದು ದಿನದ ಪ್ರಮಾಣ ; ಇಪ್ಪತ್ನಾಲ್ಕು ಗಂಟೆಗಳ ಸಮಯ : ದಿವಸ್ಪತಿಯು ದಿನ ಮಾನದಿಂಬೆಳದಲಸಿ ಪಶ್ಚಿಮದ ಸತಿಯಲ್ಲಿಗೈದಿ ಮಲಗಿದನೊ...ಎಂಬ ತೆರದಿ ರವಿಯಸ್ತಮಿಸಲು (ನವಮೋ. ೧೭-೭). ೨. ಕಾಲ ; ಸಮಯ ; ಅವಧಿ : ಎಚ್ಚರ ಮುಂದಣ ದಿನಮಾನ ಕೆಟ್ಟೀತು ಹುಯ್ಯಲೊ ಡಂಗುರವಾ (ಎಬಕಾ. ೧೦೯-೨) ; ಇಂಥ ಅತ್ಯುಷ್ಣ ದಿನಮಾನದ ಮಧ್ಯಾಹ್ನದಲ್ಲಿ ಸಹ ಜಯಪಾಲನು ಮನೆಯಲ್ಲಿರಲಿಲ್ಲ (ಜಯಂತ. ೧೫೭) ; ನೋಡ್‌ನೋಡ್ತ ದಿನಮಾನಾ ಆಡಾಡ್ತ ಆಯುಷ್ಯ ನಡದದ ನಡದದ (ಗರಿ. ೧೦೦-೧). ೩. ಪ್ರತಿನಿತ್ಯ ; ಪ್ರತಿದಿನ : ತಿರುಮಲದೇವರಿಗೆ ನಂದಾದೀಪ್ತಿಗೂ ದಿನಮಾನಾ ವೆಚಕು ಬಸವರಸವೊಡೆಯರು ಧಾರಾಪೂರ್ವ[ಕ]ವಾಗಿ ಧಾರೆಯನೆಱದು ಕೊಟದು (ಸೌಇಇ. IX-.11, ೪೭೬-೦೨ ; 1506)

[ದಿನ + ಮಾನ]

ದಿನಮಾಳಿಕೆ (ನಾ). ದಿನಗಳ ಸರಣಿ,-ಸಾಲು : ಆ ದೇವಿ . . . ಮಟ್ಟಿ ಗಾಲದ ದಿನಮಾಳಿಕೆಯಂತೆ ವಿದೂರಿತರಜೋವ್ರಜೆಯುಂ ಪ್ರಭಾಕರ ಪ್ರಭೆಯಂತೆ ಪ್ರತಿಧ್ವಸ್ತ ತಮಃಪ್ರಕರೆಯುಮೆನಿಪಳ್ (ಬಾಧಪು. ೨-೫೯ ವ).

[ದಿನ + ಮಾಳಿಕೆ (= ಮಾಲಿಕೆ)]

ದಿನಮುಖ (ನಾ). ಹಗಲಿನ ಪ್ರಾರಂಭದ ಕಾಲ ; ಮುಂಜಾವ ; ಪ್ರಾತಃಕಾಲ; ಹೊತ್ತಾರೆ: ದಿನಮುಖದೊಳ್ ಸಂಚರಿಸುವ ವನಕರಿಗಳ ಕರ್ಣತಾಳಗಂಭೀರತರಧ್ವನಿಗೆಳಸಿ ರಾಗದಿಂ ಸೋಗೆನವಿಲ್ಗಳ ಪಿಂಡು ನಲಿದು ನರ್ತಿಸಿತಾಗಳ್ (ಕಾಂದಪೂ. ೧೪೯) ; ಪರೆದುದು ಸಂಧ್ಯಾರುಚಿ ಮೆಯ್ಗರೆದುದು ತಾರಾಳಿ . . . ನೆರೆದುದು ಚಕ್ರಾಹ್ವಯದ್ವಯಂ ದಿನಮುಖದೊಳ್ (ಚಂದ್ರಪು. ೮-೦೦೦); ಇಂದ್ರದಿಙ್ಮಂಡಲದಿ, ಪೂರ್ವವಧು ಇನಿತು ಕಣ್ದೆರೆದಂತೆ, ದಿನಮುಖದ ಕೆಂಗಾಂತಿ ಕುಡಿವರಿದುದು (ಚಿತ್ರಾಂಗ. ೭-೧೯೩). [ದಿನ + ಮುಖ]

ದಿನರಾಜ (ನಾ). ಸೂರ್ಯ : ತೇಜದಿಂ ದಿನರಾಜ ತಾರಕರಾಜ ಕುಜ ಬುಧ ಜೀವ ದಾನವರಾಜಮಂತ್ರಿವಿಕರ್ತನೋದ್ಭವ ರಾಹುಕೇತುಗಳು ಓಜೆಯೊಳು . . . ರಾಜೇಶಾನರೋಲೈಸೆ (ಬಸಪು. ೧೦-೩೦).

[ದಿನ + ರಾಜ]

ದಿನವರ್ತನೆ (ನಾ). ಅರ್ಚಕರು ಹಾಗೂ ಜೋಯಿಸರಿಗೆ ಬರುವ ದಿನದ ಭತ್ಯ ಅಥವಾ ದಕ್ಷಿಣೆ : (ಕಿ). [ದಿನ + ವರ್ತನೆ]

ದಿನವಹಿ₁ (ನಾ). ದಿನಚರಿಯ ಪಟ್ಟಿ ಅಥವಾ ಪುಸ್ತಕ ; ಡೈರಿ : ಆ ದಿವಸದ ತೀರ್ವಿಕೆಯನ್ನು ದಿನವಹಿಗೆ ಬರಿಸಿ ಕೋರ್ಟು ಬರಖಾಸ್ತೆಂದು ಹುಕುಂ ಮಾಡಿದನು (ಕಥಾಮಂ. IV, ೮೫). [ದಿನ + ವಹಿ]

ದಿನವಹಿ₂ 'ದಿನ' ಪರಾ.

ದಿನವ್ರತ (ನಾ). [ಜೈನ] ಕೆಲವು ದಿನಗಳವರೆಗೆ ಮಾಡುವ ವ್ರತ (?) : ಮುನಿವಾಸಕಡಿಯಿಟ್ಟು ಮುನಿಗಳಿಗೆಲ್ಲ ವಂದನೆಗೆಯ್ದನಬಲೆಯರ್ವೆರಸಿ ದಿನವ್ರತ ದಿಗ್ವ್ರತ ಮಿತಪರಿಗ್ರಹವ ಮತ್ತನಶನವ್ರತವ ಕೈಕೊಂಡು (ಭರಜ. ೧೭-೬೧) ; ಆ ಜಿನಮುನಿಗಳ ಸಮಕ್ಷದಲ್ಲಿ ಆ ವನಜಮುಖಿಯರು ದಿನವ್ರತ, ದಿಗ್ವ್ರತ, ಮಿತಪರಿಗ್ರಹವ್ರತ, ಅನಶನವ್ರತ ಇವುಗಳನ್ನು ಕೈಕೊಂಡರು (ಮಾಮಲ್ಲಿ. ೦೨೬). [ದಿನ + ವ್ರತ]

ದಿನಸಾಮ್ಯ (ನಾ). ತಡ ; ಸಾವಕಾಶ ; ದಿನಗಳನ್ನು ತಳ್ಳುವುದು : ಅಪಸ್ಮಾರ ಬೆಱಗು ಮಹೋದರ ಕಾಯಿಲೆ ಇವಕ್ಕೆ ಆದಿಯಲ್ಲಿ ದಿನಸಾಮ್ಯ ವಿಲ್ಲದೆ ಶೀಘ್ರದಲ್ಲಿಯೇ ಪ್ರತೀಕಾರ ಮಾಡುವುದು. ದಿನಸಾಮ್ಯ ಮಾಡಿದರೆ ಅಸಾಧ್ಯವಹವು (ವೈದ್ಯಸಾ. I, ೨೬). [ದಿನ + ಸಾಮ್ಯ]

ದಿನಸಿ 'ಜಿನಸು' ನೋ.

ದಿನಸು 'ಜಿನಸು' ನೋ.

ದಿನಸ್ವಾಮಿ (ನಾ). ಸೂರ್ಯ : ಮೂಡುತ್ತಿದ್ದ ದಿನಸ್ವಾಮಿಗೆ ಕೈಮುಗಿಯುತ್ತಾ ನಕ್ಕು ಹೇಳಿದನು ಗುತ್ತಿ (ಮಲೆಮಾ. ೨೬೧). [ದಿನ + ಸ್ವಾಮಿ]

ದಿನಹರಣ (ನಾ). ತಡಮಾಡುವುದು ; ದಿನ ಕಳೆಯುವುದು : ಆ ರಾಜರು ಇಂದು ನಾಳೆ ಕೊಡುತ್ತೇವೆಯೆಂತ ದಿನಹರಣ ಮಾಡಿದರಿಂದ (ರಾಜೇಂದ್ರ. ೧೧). [ದಿನ + ಹರಣ$_2$]

ದಿನಾಂಕ (ನಾ). ದಿನದ ಸಂಖ್ಯೆ ; ತಾರೀಖು ; ತೇದಿ : ದಿನಾಂಕ ನನಗೆ ಚೆನ್ನಾಗಿ ನೆನಪಿದೆ (ಹೊಸಕ್ಷಿ. ೭) ; ಜಗದೀಶಚಂದ್ರಬೋಸರು ೧೮೫೮ರ ನವೆಂಬರ್ ೩೦ನೇ ದಿನಾಂಕ ಪೂರ್ವಬಂಗಾಳದ ಡಾಕ್ಕಾಜಿಲ್ಲೆಯ ಫರೀದ್‌ಪುರದಲ್ಲಿ ಜನಿಸಿದರು (ಸಸ್ಯಕ. ೯೩). [ದಿನ + ಅಂಕ$_2$]

ದಿನಾಂತ (ನಾ). ಹಗಲಿನ ಕಡೆಯ ಭಾಗ; ಸಂಜೆ: "ದಿನಾಂತಃ, ಸಾಯಂ-೨ ಸಾಯಂಕಾಲದ ಹೆಸರು" (ಸಿದ್ಧಾಂತಿ. ೩೪) ; ದಿನಾಂತಂಬರೆಗಂ ತಡೆದು ಬಟ್ಟೆಕೆಲ್ಲಿಯುಂ ನಿಲ್ಲದೆ . . . ಬಂದು (ಪಂಚತಂ. ೮೯-೧೦) ; ದಿನಾಂತದೊಳ ಗಣ್ಯಪುಣ್ಯಲಾವಣ್ಯಸಂಪನ್ನೆಯಪ್ಪ ಕನ್ನೆಯಂ ತನಗಾಟಿಸಿ ಬಂದೊಡವೊಲ್ಲದೆ ಮೊಱೆಗೊಂಡು ಕಟ್ಟಿಪಿದ ಧನದೇವನ ಸಮಾನಮಾವನುಮಿಲ್ಲ (ಸುಕುಮಾ. ೭-೨೭ ಪ). [ದಿನ + ಅಂತ$_2$]

ದಿನಾಚರಣೆ (ನಾ). ದಿನವನ್ನು ಆಚರಿಸುವುದು : ನಾವು ಹೊಸವರ್ಷದ ದಿನಾಚರಣೆಯಲ್ಲಿ ನಮ್ಮ ನಾಯಿಯ ಉಪಾಯಗಳನ್ನು ತೋರಿಸಲು ಅವಕಾಶ ಕೊಡುತ್ತೀರಾ ? ಎಂದು ಕೇಳಿದ (ಶಾಲೆಮ. ೧೯೯); P ಯಾವುದಾದರೊಂದು ಘಟನೆಯ ಅಥವಾ ವ್ಯಕ್ತಿಯ ಸ್ಮರಣೆಗಾಗಿ ನಿರ್ದಿಷ್ಟ ದಿನಾಂಕದಂದು ನಡೆಸುವ ಆಚರಣೆ. ಉದಾ : ಮಕ್ಕಳ ದಿನಾಚರಣೆ, ಸ್ವಾತಂತ್ರ್ಯ ದಿನಾಚರಣೆ ಇತ್ಯಾದಿ. [ದಿನ + ಆಚರಣೆ]

ದಿನಾದಿ (ನಾ). ದಿನದ ಮೊದಲು ; ಪ್ರಾತಃಕಾಲ. [ದಿನ + ಆದಿ$_2$]

ದಿನಾಧಿನಾಯಕ (ನಾ). = ದಿನಪ ೧ : ನಲ್ಲರಗಲ್ಕೆಯಿಲ್ಲದೆಡೆಯಸ್ತಮಯಕ್ಕೆ ದಿನಾಧಿನಾಯಕಂ ಸಲ್ಲದ ತಾಣಮಂಗಜಶರಾಹತಿ ಪೊರ್ದದ ದೇಶಮುಳ್ಳೊಡಂತಲ್ಲಿಯೆ ಮಾಟ್ಕೆ ಮಜ್ಜನಮಂ (ಪಂದ್ರಪು. ೮-೭).
[ದಿನ + ಅಧಿನಾಯಕ]

ದಿನಾಧಿಪ (ನಾ). = ದಿನಪ ೧ : ಸತತಂ ಬುಧಾವಸಥನಾಗಿ ದಿನಾಧಿಪನಂತೆ ತೀವ್ರನಲ್ಲದೆ . . . ಸಂದನಿಳಾತಳಾಗ್ರದೊಳ್ (ಸುಕುಮಾ. ೯-೮೩) ; ಕಟ್ಟಲೆ ಪಿರಿದಾದೊಡಮೇಂ ಮಾರ್ತಲೆಯೆ ದಿನಾಧಿಪಂಗೆ (ಪಂರಾಮಾ. ೧೦-೨೩೫). [ದಿನ + ಅಧಿಪ]

ದಿನಾಧಿಪಕ್ಷೇತ್ರ (ನಾ). [ಜ್ಯೋತಿ] ಸೂರ್ಯನ ರಾಶಿ ; ಸಿಂಹರಾಶಿ : ಹಿಮಾಂಶುಗೃಹದೊಳ್ ಸುರೇಜ್ಯನಿರೆ . . . ದಿನಾಧಿಪಕ್ಷೇತ್ರದೊಳ್ ಚಮೂಪತಿ ಕುಳೀರ ಸಂಸ್ಥ ಫಲಭಾಗಿಯಂತಾ ನರಂ (ಜಾತತಿ. ೧೭-೨೮).
[ದಿನಾಧಿಪ + ಕ್ಷೇತ್ರ]

ದಿನಾಧಿಪತಿ (ನಾ). = ದಿನಪ ೧ : ದಿನಾಧಿಪತಿಯೇಱಿ ನಿಂದ ರಥಮಂ ನಭೋವೀಧಿಯೊಳ್ ಘನಾಘನ ಕದಂಬಕಂ ಬಳಸುವಂದದಿಂ (ಪಂದ್ರಪು. ೬-೨೯). [ದಿನ + ಅಧಿಪತಿ]

ದಿನಾಧೀಶ (ನಾ). = ದಿನಪ ೧. 'ತರುಣದಿನಾಧೀಶ' ಪರಾ.
[ದಿನ + ಅಧೀಶ]

ದಿನಾರು 'ದೀನಾರ' ನೋ.

ದಿನಾವಸಾನ (ನಾ). = ದಿನಾಂತ. [ದಿನ + ಅವಸಾನ]

ದಿನಿಸು 'ಜಿನಸು' ನೋ.

ದಿನೇಂದ್ರ (ನಾ). = ದಿನಪ ೧. 'ದಿನೇಂದ್ರಕಾಂತ' ಪರಾ.
[ದಿನ + ಇಂದ್ರ]

ದಿನೇಂದ್ರಕಾಂತ (ನಾ). = ದಿನಕರೋಪಲ : ದಿನೇಂದ್ರಕಾಂತಾನಂತಮಣಿಗಣಖಚಿತಲಾಲಿತ್ಯಸಾಂದ್ರರಮ್ಯಸ್ಥಾನಮಂಟಪ ಚಂದ್ರಕಾಂತದ ಕುಟ್ಟಿಮದೊಳಗಜೇಂದ್ರನಿರ್ದನು ರತ್ನಮಯ ಸಿಂಹಾಸನದ ಮೇಲೆ (ಬಸಪು. ೦-೪೦).
[ದಿನೇಂದ್ರ + ಕಾಂತ$_2$]

ದಿನೇಶ (ನಾ). ೧. ಸೂರ್ಯ ; ಆದಿತ್ಯ : ಬಾಳ ದಿನೇಶಬಿಂಬದ ನೆಟಲ್ ಜಲದೊಳ್ ನೆಲಸಿತ್ತೊ (ಪಂಪಭಾ. ೧-೯೬) ; ದಿನೇಶನೊಳಂಬಿನೊಳು ಪಕ್ಷಿಯೊಳು ಗೃಹದೊಳಮಮರರೊಳು ಖಗಮೆನಿಕ್ಕುಂ (ಮಂಗರಾ. ೧೪೯-೪೭) ; ಸೀಸಕವೆ ರವಿಕಾಂತವಾಗಿ ದಿನೇಶನನು ಕೆಣಕಿದವೊಲಿಂದವನೀಶ ನೀತನ ನಂಬಿ ಕೆಟ್ಟನು (ಕುವ್ಯಾಕ. ೯-೧೪). ೨. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ : ಶರ್ವಂ ವಿಶ್ರಮಣಂ ದಿನೇಶರೆಡೆಯೊಳ್ ನಿಲ್ಕುಂ (ಛಂದೋಂಬು. ೨-೦೭೪). ೩. [ಛಂದ] ಒಂದು ಅಕ್ಷರಗಣ ; ಜಗಣ (ಲ-ಲ) : ವ್ಯೋಮದ್ವಯಂ ಮುಂತೆ ದಿನೇಶ ಪಾವಕರ್ ತಾಮೊಂದಿ ದಿಗ್ದಂತಿಯೊಳಾಗೆ ವಿಶ್ರಮಂ (ಛಂದೋಂಬು. ೨-೦೨೯). [ದಿನ + ಈಶ]

ದಿನೇಶಗೃಹ (ನಾ). [ಜ್ಯೋತಿ] ಸೂರ್ಯನ ರಾಶಿ ; ಸಿಂಹರಾಶಿ : ಇರೆ ಧಾತ್ರೀತನಯಂ ದಿನೇಶಗೃಹದೊಳ್ . . . ಕ್ಲೇಶಸಹಿಷ್ಣು ನಿಸ್ವನೆನಿಕುಂ (ಜಾತತಿ. ೧೭-೨೦). [ದಿನೇಶ + ಗೃಹ]

ದಿನೇಶತನಯ (ನಾ). ೧. ಸೂರ್ಯನ ಮಗ. ೨. ಕರ್ಣ : ನುಡಿ ನಿನಗಂ ದಿನೇಶತನಯಂಗಮದೆನ್ನೆಯ ಪಕ್ಕದಾದೊಡಂ ಮಿಡುಕದೆ ಕೇಳ್ವೆನಲ್ಲಿ ಸಮನಿರ್ವರುಂ (ಪಂಪಭಾ. ೧೩-೨೮). ೩. ಶನಿ. ೪. ಸುಗ್ರೀವ. ೫. ಯಮ.
[ದಿನೇಶ + ತನಯ]

ದಿನೇಶವಂಶ (ನಾ). ಸೂರ್ಯನ ಕುಲ,-ವಂಶ ; ದಿನಪಕುಲ : ಸಲೆ ನಿಲೆ ದಿನೇಶವಂಶದ ಲಕ್ಷ್ಮಿ ನೆಲಸಿರ್ಪ ಜಲಜದೆಸಳ್ಗಳೊ (ಹಡಕಾ. ೦-೩೮).
[ದಿನೇಶ + ವಂಶ]

ದಿನೇಶಹಯ (ನಾ). . ಸೂರ್ಯನ (ಏಳು) ಕುದುರೆ ; P ಗಾಯತ್ರೀ, ಬೃಹತೀ, ಉಷ್ಣಿಕ್, ಜಗತೀ, ತ್ರಿಷ್ಟುಪ್, ಅನುಷ್ಟುಪ್, ಪಂಕ್ತಿ ಇವು ಛಂದೋರೂಪವಾದ ಸೂರ್ಯನ ರಥದ ಏಳು ಕುದುರೆಗಳು. ೨. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : ಸುರಪುರೇಂದು ದಿವಸಾಧಿಪಾಗ್ನಿಗಳ್ ಬರೆ ದಿನೇಶಹಯದೊಳ್ ವಿರಾಮಮಾಗಿರೆ . . . ನಿರುಪಮಂ (ಛಂದೋಂಬು. ೨-೧೩೧). [ದಿನೇಶ + ಹಯ]

ದಿನೇಶೋದಯ (ನಾ). ಸೂರ್ಯನ ಉದಯ ; ಹೊತ್ತು ಹುಟ್ಟುವುದು : ಪಂಚವಟಿಯೊಳ್ ದಿನೇಶೋದಯದ ಶಾದ್ವಲದ ಪಸುರ್‌ಗರುಕೆಯೊಳ್ ತೃಣಸುಂದರಿಯ ಮೂಗುತಿಯ ಮುತ್ತು ಪನಿಯಂತೆ ಮಿರುಮಿರುಗಿ ಮೆರೆವ ಹಿಮಬಿಂದುವುಂ (ಶ್ರೀರಾಮಾ. ೫-೦೦೩). [ದಿನೇಶ + ಉದಯ]

ದಿನ್ನ (ನಾ). ಭಾರ ; ಒಜ್ಜೆ : ದಡೆಕೋಲ್ ಕೆಳಗುಂ ಮೇಲುಂ ದಿನ್ನದಿಂ ಹಗುರಿಂದೆಯುಂ ಸರಿಯಿಂ ಸರಿಯಪ್ಪಂತೆ ಮೆಯ್ಯುಮುಣ್ಪಿಂದಮಪ್ಪುದು (ಸೌನಂದ. ೧೪-೫). [<ತಿಣ್ಣ]

ದಿಣ್ಣೆ 'ದಿಣ್ಣೆ' ನೋ.

ದಿಪುತ 'ದೀಪುತ' ನೋ.

ದಿಪ್ಪ 'ದಪ್ಪ$_1$' ನೋ.

ದಿಬ್ಬ$_1$, ದಿಂಬ$_1$, ದಿಂಬ್ಬು$_1$, ದಿಬ್ಬು, ದಿಬ್ಬೆ$_1$ (ನಾ). ಎತ್ತರವಾದ ಪ್ರದೇಶ; ತಿಟ್ಟು; ದಿಣ್ಣೆ; ತೆವರು; ಬೋರೆ: ಹುಲ್ಲು ಹೂವು ಆದರೇನು, ಹಬ್ಬದುಬ್ಬನಲ್ಲಿವೆ; ದಿಬ್ಬಗಳನು ತಬ್ಬಲೆಂದು ಎಲ್ಲ ನೆಲಕು ಹಬ್ಬಿವೆ (ಸಖೀಗೀ. ೭೭-೫); ದಿಬ್ಬಗಳ ಮೇಲೆಯೂ ಗುಡ್ಡಗಳ ಮೇಲೆಯೂ ಮೇಯಲಿಕ್ಕೆ ಹೋಗುತ್ತವೆ (ಮುಂಬಯಿ. ೩-೧೧); ಅತ್ತ ಕಾಣುತ್ತಿರುವುದೇ ಮಹಾನವಮಿಯ ದಿಬ್ಬ (ಹೇಮಕೂ. ೨೦); ಊರ ಮುಂದಿನ ಸೀಮೆಯ ಬನ್ನಿಯ ದಿಬ್ಬಕ್ಕೆ ಎಲ್ಲರೂ ಸಾಗಿ ಬರುವರು (ಕನ್ನಡಾ. ೧೬೧); ದಿಬ್ಬಗಳ ಮೇಲೆ ಬಗೆಬಗೆಯ ಮರಗಿಡಗಳು . . . ಬೆಳೆದು ಆಕಾಶವನ್ನು ಚುಂಬಿಸುತ್ತಾ ನಿಂತಿದ್ದವು (ಮಗಮಾಂ. ೩೪). **ದಿಂಬ$_1$**: ೧. ಈ ಕಲ್ಲಿಗೆ ತೆಂಕಲು ಗುರುವನಪುರದ ಯೆಲ್ಲೆ ಕಲ್ಲಿನ ಬಳಿಯ ದಿಂಬದಲ್ಲಿ ನೆಟ್ಟ ಕಲ್ಲು ೧ (ಎಕ. XIV, ಮೈಸೂರು., ೧೧೬-೩೩; 1664); ತೆಂಕ ನಡದು ಭೂತಾಳೆ ದಿಂಬದ ತಿಟ್ಟು ತೋರಣಕ್ಕೆ . . . ಪಡುವ ಮುಖವಾಗಿ ತಿದ್ದಿದ ಕಲ್ಲು ೧ (ಎಕ. III, ತಿರುಮ. ೬೩-೬೫೩; 1748). ೨. ಏರಿ; ದಡ; ತೀರ: ದೇಗುಲದ ಕೆರೆಯ ಕೆಳಗೆ ಕಚ್ಚವಿಯಂಗೆ ದಿಂಬದೊಳೆ ಬಿಟ್ಟ ಗಟ್ಟಿ ಗಳೆಯ ಮತ್ತರ್ ೩ (ಎಕ. VII, ಶಿಕಾರಿ. ೧೦-೧೫; 1032); ಪರಿವಾ ಸರಸ್ವತಿಯ ದಿಂಬದೋಳ್ ಪರ್ನಶಾಲೆಯ ರಚಿಸಿಕೊಂಡು ತಪಸಂ ಮಾಡುತಿರುತಿರ್ದರು (ತುರಂಗ. ೮೪-೭). **ದಿಂಬ್ಬು$_1$**: ೧. ಬಡಗಣ ದಿಂಬಿನ ನೀರ್ವ್ವರಿ ಚಿಕ್ಕ ಬಣಜಿಗನ ಕೆಱೆಯ ಬಡಗಣ ಕೋಡಿ (ಎಕ. VII, ಶಿವಮೊ. ೪-೭೭; 1122). **ದಿಬ್ಬು**: ೧. ಯಾವ ರಾಸುಗಳಾಗಲಿ . . . ಬಚ್ಚಲು ಮೊಹರಿಗಳ ಮೇಲೂ ಕಟ್ಟೆ ದಿಬ್ಬುಗಳ ಮೇಲೂ ಅಥವಾ ಪಕ್ಕಗಳಲ್ಲಿಯೂ . . . ಮೇಯುತ್ತಿರುವ ಕಾಲದಲ್ಲಿ ಹಿಡಿದು . . . ತೊಂಡುವಾಡೆ ದೊಡ್ಡಿಗೆ ದಾಖಲ್ಮಾಡಬೇಕು (ಗ್ರಾಮಾಕ. ೧೦೭) **ದಿಬ್ಬೆ$_1$**: ೧. ಹಳ್ಳಿಗೆ ಹೋದ ಬಟ್ಟೆಯ ದಿಬ್ಬೆಯ ಸಾರಣ ಹುಲು ಮಾಡಿಯ ಗಡಿ (ಎಕ. II, ೩೯೭-೪೩; 1179 ?).

[ದೇ.ಸಿ ತಮಿ. ತಿಪ್ಪೈ; ತೆಲು. ದಿಬ್ಬ; ಪರ್ಜಿ. ಡಿಬ್ಬ; ಕುಇ. ಡೆಪ; ಕುವಿ. ದೆಬ್ಬೆ]

ದಿಬ್ಬ$_2$ 'ದಿಬ್ಯ' ನೋ.

ದಿಬ್ಬಣ 'ಬಿರ್ದಿನ' ನೋ.

ದಿಬ್ಬಣಂಬೋಗು (ಕ್ರಿ). (ಮದುಮಕ್ಕಳೊಡನೆ) ಮೆರವಣಿಗೆ ಹೊರಡು: ಮದುವಣಿಗನಿಲ್ಲದೆ ದಿಬ್ಬಣಂಬೋಪೆನೆಂಬಂತೆ ಬಟ್ಟೆಯ ಱಿಯದೆ ಪೊಲಂಬಿಗನಪ್ಪೆನೆಂಬಂತೆ (ಧರ್ಮಾಮೃ. ೪-೫೦).

[ದಿಬ್ಬಣ (<ಬಿರ್ದಿನ) + ಪೋಗು$_1$]

ದಿಬ್ಬಣಿಗ, ನಿಬ್ಬಣಿಗ (ನಾ). ಮದುವೆಯ ಮೆರವಣಿಗೆಯಲ್ಲಿ ಹೊರಡುವವನು; ಬೀಗರ ಗುಂಪಿನವನು: ನೊರೆಯ ಪಾಲ್ಸಕ್ಕರೆಯೆ ದಿಬ್ಬಣಿಗರಿಗೆ ಮೊಗೆದೀಂಟಲೆಱೆದರು (ಕೌಶಿರಾ. ೨-೬೯); ನೆರೆದ ನರೇಂದ್ರರೆಲ್ಲರು ದಿಬ್ಬಣಿಗರಾಗೆ ಧರೆಯೆಲ್ಲ ಕೊಂಡಾಡುವಂತೆ ವರಸುತೆ ರೋಹಣಿಯನು ವಸುದೇವ ಭೂವರಗೆ ಮದುವೆ ಮಾಡಿದನು (ನೇಮಿಸಂ. ೧೨-೧೦೪); ವರನಲಾ ಸಾಕ್ಷಾತ್ ವಿಶ್ವಂಭರನು ವಧುವೆ ಲಕ್ಷುಮಿ ದಿಬ್ಬಣಿಗರು ವಿರಿಂಚಿ ಭವೇಂದ್ರ ಮುಖ್ಯಾಮರರು ಭೂವರರು (ನಿಭಾಗ. ೧೦-೬೦-೪೬); ಸುರರು ದಿಬ್ಬಣಿಗರಿಂದ್ರನು ಸೇವಕ ಶಚಿ ವಿರಚಿಸುವಳು ಮಂಗಲವ (ಚಂಪ್ರಸಾಂ. ೨೫-೧೦೫); ಯಾರು ಹೊರಡದಿದ್ದರೂ ದಿಬ್ಬಣಿಗರು ಹೊರಡಬೇಡವೆ? (ಮರಮ. ೩); ದಿಬ್ಬಣಿಗರು ಬಾಯಾರಿ ಮೇಲುಸಿರು ಬಿಟ್ಟರೂ . . . ಧಾರೆಯ ಸಮಯವನ್ನು ಬದಲಿಸುವಂತಿಲ್ಲ (ಪಾಚಿಕೆ. ೧೬). **ನಿಬ್ಬಣಿಗ**: ಗುರುವೆ ತೆತ್ತಿಗನಾದ ಲಿಂಗವೆ ಮದವಳಿಗನಾದ ನಾನು ಮದವಳಿಗೆಯಾದೆನು ವಸುಧೆಯ ಭಕ್ತರೆಲ್ಲರು ನಿಬ್ಬಣಿಗರಾದರು (ಮಹಾದೇ. ಬ. ೧೧೪-೨೫೮); ಸ್ವಯಂಬರಕ್ಕೆ ನೆರೆದರಸು ಮಕ್ಕಳೆಲ್ಲಂ ನಿಬ್ಬಣಿಗರಾಗೆ ರೋಹಿಣಿಯೊಳ್ ಮದುವೆ ನಿಂದು (ಅರ್ಧನೇ. ೬-೪೭ ಪ); ಮುದದಿಂ ಕೂರ್ತೊಡವಂದ ನಿಬ್ಬಣಿಗರಂ ಸಂಗೀತ ಸಾಹಿತ್ಯ ಕೋವಿದರಂ . . . ಪದಪಿಂ ಪಂಕ್ತಿಗಳಾಗಿ ಕುಳ್ಳರಿಸಿದರ್ ವಾಕ್ಯೋಪಚಾರಂಗಳಿಂ (ನಳಚಂ. ೪೩೫); ಆ ರಥವನೊಡನೇಱಿ ಕಂಸನುದಾರಮತಿ ತಂಗಿಯನು ಕಳುಹುತ ಭೂರಿ ವಿಭವದಲಂದು ನಡೆದನು ನಿಬ್ಬಣಿಗರೊಡನೆ (ನಿಭಾಗ. ೧೦-೨-೪); ಅಂತರಂತರವಱಿದು ಬಂದ ನಿಬ್ಬಣಿಗರ್ಗನಂತ ಮಾಗಿರ್ದ ಪಡಿಬೀಡಾರಮಂ ತೋಱಿ (ಚಬಪು. ೩೭-೬).

[ದಿಬ್ಬಣ (<ಬಿರ್ದಿನ) + – ಇಗ]

ದಿಬ್ಬು 'ದಿಬ್ಬ$_1$' ನೋ.

ದಿಬ್ಬೆ$_1$ 'ದಿಬ್ಬ$_1$' ನೋ.

ದಿಬ್ಬೆ$_2$ 'ದಿಬ್ಯ' ನೋ.

ದಿಬ್ಯ, ದಿಬ್ಬ$_2$ ದಿಬ್ಬೆ$_2$, (ಗು). ೧. ಮನೋಹರವಾದ; ಶ್ರೇಷ್ಠವಾದ; ಉತ್ತಮವಾದ: ಶ್ರೀಗೋಕರ್ಣ್ಣ (ಕರ್ಣ) ದೇವರ ದಿಬ್ಯ ಶ್ರೀಪಾದಪದ್ಮಾರಾಧಕರುಂ ಪರಬಳಸಾಧಕರುಂ (ಎಇ. XXVII, ೧೬೧-೧೬; 1225). (ನಾ). ೨. ಮನೋಹರವಾದುದು; ಶ್ರೇಷ್ಠವಾದುದು: ಅದು ದಿಬ್ಯಮದು ಸೇಬ್ಯಮದು ಸೌಮ್ಯಮದು ಸುಖಾಧಾರಸಂಸಾರಸಾರಂ (ಸುಕುಮಾ. ೧೨-೫೧). ೩. ಸಾಕ್ಷಿ, ಪುರಾವೆ, ಆಧಾರಗಳಿಲ್ಲದೆ, ಮಾನುಷ ಪ್ರಮಾಣಗಳಿಂದ ಅಪರಾಧಗಳನ್ನು ನಿರ್ಣಯಿಸಲು ಸಾಧ್ಯವಾಗದಿದ್ದಾಗ ಪ್ರಯೋಗಿಸುತ್ತಿದ್ದ ದಿವ್ಯ ಪರೀಕ್ಷೆ; ಆರೋಪಿತನು ಬೆಂಕಿ ಮುಂತಾದ ಪ್ರಮಾಣ ವಸ್ತುಗಳನ್ನು ಮುಟ್ಟಿ ಸತ್ಯವನ್ನು ಸಿದ್ಧಪಡಿಸಬೇಕಾದ ಉಗ್ರಪರೀಕ್ಷೆ. ೪ ಆರೋಪಿತನಿಗೆ ಪ್ರಮಾಣವಸ್ತುವಿನಿಂದ ಹಾನಿಯಾದರೆ ಅಪರಾಧಿಯೆಂದೂ, ಹಾನಿಯಾಗದಿದ್ದರೆ ನಿರಪರಾಧಿಯೆಂದೂ ತೀರ್ಮಾನವಾಗುತ್ತಿದ್ದಿತು. ಇವು ಸಪ್ತದಿವ್ಯಗಳು, ನವದಿವ್ಯಗಳು ಮತ್ತು ದಶದಿವ್ಯಗಳು ಎಂದು ಬೇರೆಬೇರೆ ಅಭಿಪ್ರಾಯಗಳಿವೆ. ಧಟ (ತಕ್ಕಡಿ), ಅಗ್ನಿ, ಜಲ, ವಿಷ, ಕೋಶ (ಬೊಗಸೆ), ತಂಡುಲ (ಅಕ್ಕಿ), ತಪ್ತಮಾಷಕ (ಕಾಯಿಸಿದ ಚಿನ್ನದ ನಾಣ್ಯ), ಫಾಲ (ಲೋಹದ ಪಟ್ಟಿ) ಮತ್ತು ಧರ್ಮಜ (ಧರ್ಮದಿಂದ ಉಂಟಾದುದು) ಇವು ಪ್ರಮಾಣಭೂತವಾದ ಒಂಬತ್ತು ಬಗೆಯ ದಿವ್ಯಗಳು. ೧. ಧಟ (ತಕ್ಕಡಿ): ಶಾಸ್ತ್ರೋಕ್ತವಾದ ರೀತಿಯಿಂದ ತಕ್ಕಡಿಯೊಂದನ್ನು ನಿರ್ಮಿಸಿ ಪೂಜೆಮಾಡಿ, ತಕ್ಕಡಿಯ ಒಂದು ಕಡೆ ಆರೋಪಿಯನ್ನು ಕುಳ್ಳಿರಿಸಿ, ಮತ್ತೊಂದು ಕಡೆ ಇಟ್ಟಿಗೆಗಳನ್ನಿಟ್ಟು ಸಮತೂಕ ಮಾಡಿಕೊಳ್ಳಬೇಕು. ಅನಂತರ ಅವನನ್ನು ಕೆಳಗಿಳಿಸಿ ಮತ್ತೊಮ್ಮೆ ತಕ್ಕಡಿಯನ್ನು ಪೂಜಿಸಿ, ಪ್ರಾರ್ಥಿಸಿ ಅವನನ್ನು ಕುಳ್ಳಿರಿಸಬೇಕು. ಆಗ ಆರೋಪಿಯು ಕುಳಿತಿರುವ ತಟ್ಟೆಯು ಮೇಲಕ್ಕೆ ಹೋದರೆ ಅವನು ನಿರ್ದೋಷಿಯೆಂದೂ, ಕೆಳಕ್ಕೆ ಬಂದರೆ ದೋಷಿಯೆಂದೂ ನಿರ್ಣಯಿಸುವುದು. ೨. ಅಗ್ನಿ: ಆರೋಪಿಯ ಬೊಗಸೆಯಲ್ಲಿ ಏಳು ಅರಳಿಯ ಎಲೆಗಳನ್ನಿಟ್ಟು, ಅವುಗಳನ್ನು ಏಳು ದಾರಗಳಿಂದ ಅಂಗೈ ಪೂರ್ತಿ ಸುತ್ತಿದ ಬಳಿಕ ಅಗ್ನಿಯನ್ನು ಪ್ರಾರ್ಥಿಸಿ ಕೆಂಪಗೆ ಕಾದ ಕಬ್ಬಿಣದ ಗುಂಡನ್ನು ಅವನ ಬೊಗಸೆಯಲ್ಲಿಡಬೇಕು. ಅವನು ಅಲ್ಲಿ ಬರೆದಿರುವ ಏಳು ಮಂಡಲಗಳನ್ನು ನಿಧಾನವಾಗಿ ದಾಟಿಕೊಂಡು ಹೋಗಿ ಕಬ್ಬಿಣದ ಗುಂಡನ್ನು ಕೆಳಗಿಟ್ಟಾಗ ಅವನ ಕೈ ಸುಡದೆ ಇದ್ದರೆ ನಿರ್ದೋಷಿಯೆಂದೂ ಸುಟ್ಟರೆ ದೋಷಿಯೆಂದೂ ನಿರ್ಣಯಿಸುವುದು. ೩. ಜಲ: ಆರೋಪಿಯು, ನೀರಿನಲ್ಲಿ ನಿಂತಿರುವ ಒಬ್ಬ ಕಟ್ಟುಮಸ್ತಾದ ಮನುಷ್ಯನ ಕಾಲನ್ನು ನೀರಿನಲ್ಲಿ

ಮುಳುಗಿ ಹಿಡಿದುಕೊಂಡಿರಬೇಕು. ಕೂಡಲೆ ದಡದಲ್ಲಿರುವ ಬಿಲ್ಲುಗಾರನು ದಡದಲ್ಲಿಯೇ ದೂರದಲ್ಲಿ ನಿಂತಿರುವ ಮತ್ತೊಬ್ಬ ವ್ಯಕ್ತಿಯ ಕಡೆಗೆ ಬಾಣವನ್ನು ಬಿಟ್ಟ ಮೇಲೆ ಆ ಮತ್ತೊಬ್ಬ ವ್ಯಕ್ತಿಯು ತನ್ನ ಬಳಿಗೆ ಬಂದ ಬಾಣವನ್ನು ತೆಗೆದುಕೊಂಡು ಆರೋಪಿಯು ನೀರಿನಲ್ಲಿ ಇರುವ ಬಳಿಗೆ ವೇಗವಾಗಿ ಬಂದಾಗ, ಆರೋಪಿಯು ಇನ್ನೂ ನೀರಿನಲ್ಲಿ ಮುಳುಗಿಯೇ ಇದ್ದರೆ, ಆತ ನಿರ್ದೋಷಿಯೆಂದೂ ಇಲ್ಲದಿದ್ದರೆ ದೋಷಿಯೆಂದೂ ನಿರ್ಣಯಿಸುವುದು. ೪. ವಿಷ: ಸಂಬಂಧಪಟ್ಟ ಪೂರ್ವ ವಿಧಿಗಳನ್ನು ಮಾಡಿದ ನಂತರ ಆರೋಪಿಯು ದೇವರನ್ನು ಪ್ರಾರ್ಥಿಸಿ ವಿಷವನ್ನು ಪಾನಮಾಡಬೇಕು. ಯಾವ ತೊಂದರೆಯೂ ಆಗದೆ ವಿಷವು ಜೀರ್ಣವಾದರೆ ಅವನು ನಿರ್ದೋಷಿಯೆಂದೂ ಇಲ್ಲದಿದ್ದರೆ ದೋಷಿಯೆಂದೂ ನಿರ್ಣಯಿಸುವುದು. ೫. ಕೋಶ (ಬೊಗಸೆ): ಸೂರ್ಯನೇ ಮೊದಲಾದ ಉಗ್ರದೇವತೆಗಳ ಪ್ರತಿಮೆಗಳನ್ನು ಪೂಜಿಸಿ, ಅಭಿಷೇಕ ಮಾಡಿದ ನೀರಿನಲ್ಲಿ ಮೂರು ಬೊಗಸೆಯನ್ನು ಆರೋಪಿಗೆ ಕುಡಿಯಿಸಬೇಕು. ಅವನಿಗೆ ಹದಿನಾಲ್ಕು ದಿನಗಳೊಳಗೆ ಯಾವ ವಿಪತ್ತೂ ಒದಗದಿದ್ದರೆ ಅವನು ನಿರ್ದೋಷಿಯೆಂದೂ, ಒದಗಿದರೆ ದೋಷಿಯೆಂದೂ ನಿರ್ಣಯಿಸುವುದು. ೬. ತಂಡುಲ (ಅಕ್ಕಿ): ಒಂದು ಮಣ್ಣಿನ ಪಾತ್ರೆಯಲ್ಲಿ ಬೆಳ್ಳಗಿರುವ ಅಕ್ಕಿಕಾಳುಗಳನ್ನು ಹಾಕಿ ದೇವರ ಅಭಿಷೇಕದ ನೀರಿನಲ್ಲಿ ಒಂದು ರಾತ್ರಿ ನೆನೆಯಿಸಿ, ಮರುದಿನ ಬೆಳಗ್ಗೆ ಆರೋಪಿಯು ಸೂರ್ಯನ ಎದುರಿಗೆ ನಿಂತು ಆ ಅಕ್ಕಿಯನ್ನು ಅಗಿದು, ಒಂದು ಭೂರ್ಜಪತ್ರ ಅಥವಾ ಅರಳಿಯ ಎಲೆಯ ಮೇಲೆ ಉಗಿಯುವಂತೆ ಮಾಡಬೇಕು. ದವಡೆಗೆ ಘಾಸಿಯಾಗಿದ್ದು ಅಕ್ಕಿ ಕಾಳುಗಳು ರಕ್ತಸಿಕ್ತವಾಗಿದ್ದರೆ ಮತ್ತು ಕೈಕಾಲುಗಳು ನಡುಗುತ್ತಿದ್ದರೆ ಅವನು ದೋಷಿಯೆಂದೂ ಇಲ್ಲದಿದ್ದರೆ ನಿರ್ದೋಷಿಯೆಂದೂ ನಿರ್ಣಯಿಸುವುದು. ೭. ತಪ್ತ ಮಾಷ (ಕಾಯಿಸಿದ ಚಿನ್ನದ ನಾಣ್ಯ): ಕಬ್ಬಿಣ, ತಾಮ್ರ ಮೊದಲಾದ ಲೋಹದ ಅಥವಾ ಮಣ್ಣಿನ, ನಾಲ್ಕು ಅಂಗುಲ ಎತ್ತರದ ಒಂದು ಪಾತ್ರೆಯಲ್ಲಿ ಎಣ್ಣೆ ಅಥವಾ ತುಪ್ಪವನ್ನು ಕುದಿಯುವಂತೆ ಕಾಯಿಸಿ, ಅದರೊಳಗೆ ಒಂದು ಮಾಷ (ಚಿನ್ನದ ನಾಣ್ಯ)ವನ್ನು ಹಾಕಬೇಕು. ಆರೋಪಿಯು ಅದನ್ನು ತನ್ನ ಕೈಗಳಿಂದ ಹೊರಗೆ ತೆಗೆದಾಗ ಅವನ ಕೈಗೆ ಯಾವ ಬಾಧೆಯೂ ಉಂಟಾಗದಿದ್ದರೆ ಅವನು ನಿರ್ದೋಷಿಯೆಂದೂ ಉಂಟಾದರೆ ದೋಷಿಯೆಂದೂ ನಿರ್ಣಯಿಸುವುದು. ೮. ಫಾಲ (ಲೋಹದ ಪಟ್ಟಿ): ಹಿಂದಿನಂತೆ ಕುದಿಯುವ ಎಣ್ಣೆ ಅಥವಾ ತುಪ್ಪದ ಪಾತ್ರೆಗೆ, ಎಂಟು ಅಂಗುಲ ಉದ್ದ ಹಾಗೂ ನಾಲ್ಕು ಅಂಗುಲ ಅಗಲದ ಕಬ್ಬಿಣದ ಪಟ್ಟಿಯನ್ನು ಹಾಕಬೇಕು. ಆರೋಪಿಯು ತನ್ನ ಕೈಗಳಿಂದ ಅದನ್ನು ಹೊರಗೆ ತೆಗೆದಾಗ ಕೈಗೆ ಏನೂ ಬಾಧೆಯಾಗದಿದ್ದರೆ ನಿರ್ದೋಷಿಯೆಂದೂ, ಆದರೆ ದೋಷಿಯೆಂದೂ ನಿರ್ಣಯಿಸುವುದು. ಕೆಲವು ಸ್ಮೃತಿಗಳಲ್ಲಿ ನಾಲಿಗೆಯಿಂದ ನೆಕ್ಕಬೇಕೆಂದು ಹೇಳಿದೆ. ೯. ಧರ್ಮಜ (ಧರ್ಮದಿಂದ ಉಂಟಾದುದು): ಎರಡು ಪಟ್ಟಿಕೆಗಳನ್ನು ತೆಗೆದುಕೊಂದು, ಒಂದರಲ್ಲಿ 'ದೋಷಿ' ಎಂದೂ ಮತ್ತೊಂದರಲ್ಲಿ 'ನಿರ್ದೋಷಿ' ಎಂದೂ ಬರೆದು ಎರಡನ್ನೂ ಒಂದು ಕುಂಭದಲ್ಲಿ ಹಾಕಿ ಕುಂಭವನ್ನು ಪೂಜಿಸಿ ಆರೋಪಿಯ ಕೈಯಿಂದ ಒಂದು ಪಟ್ಟಿಕೆಯನ್ನು ಎತ್ತಿಸಬೇಕು. ಅದರಲ್ಲಿ 'ದೋಷಿ' ಎಂದಿದ್ದರೆ ದೋಷಿಯೆಂದೂ, 'ನಿರ್ದೋಷಿ' ಎಂದಿದ್ದರೆ ನಿರ್ದೋಷಿಯೆಂದೂ ನಿರ್ಣಯಿಸುವುದು. ಇವೆಲ್ಲವೂ ಯಾಜ್ಞವಲ್ಕ್ಯಸ್ಮೃತಿಯ ವ್ಯವಹಾರ ಕಾಂಡದ ದಿವ್ಯಪ್ರಕರಣದಲ್ಲಿ ನಿರೂಪಿತವಾಗಿವೆ. ಇವಲ್ಲದೆ ಈಚೆಗೆ ಕೆಲವರು 'ತುಲಸಿ'ಯನ್ನೂ ಇವುಗಳ ಜೊತೆಗೆ ಸೇರಿಸಿ ದಶದಿವ್ಯಗಳು ಎಂದು ಹೇಳುತ್ತಾರೆ. ೪. ಆಣೆ; ಪ್ರಮಾಣ: ಏನ ಬೇಡಿದುದನೀವನಾಗಿ ನಂಬಿಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ (ಬಸವ. ೨೩೬); ಇನ್ನೂ ತಪ್ಪಿದೆನಾದರೆ ನಿಮ್ಮ ಪಾದವೇ ದಿಬ್ಯ (ಬಸವ. ೩೨೨). ದಿಬ್ಬ$_2$: ೧. ಕಿವಿಗಿನಿದಪ್ಪ ದಿಬ್ಬ ಸವಿಗಬ್ಬವುನೋದಿಸುತೊರ್ಮೆ ಕಣ್ಗಳೆ ಕರಿಸೆ ರಸಂಗಳಂ ನಟಪ ನಾಟಕಮಂ ನೆರೆ ನೋಡುತೊರ್ಮೆ . . . ವಿವಿಧ ವಿನೋದದಿಂ ಕಳೆಗುಮಪ್ರತಿಮಂ ಸೊಗದಿಂದೆ ಕಾಲಮಂ (ಜಿಕವಿ. ೫-೦೫೮). ೪. ದಿವ್ಯದ ಪರೀಕ್ಷೆಗೆ ಉಪಯೋಗಿಸುವ ಕಾಯಿಸಿದ ಕಬ್ಬಿಣ, ಎಣ್ಣೆ ಇತ್ಯಾದಿ ಪ್ರಮಾಣ ವಸ್ತು: ದಿಬ್ಬವ ಕೈದುಡುಕಿದೊಡೆ ಕೈ ಬೇವುದಲ್ಲದೆ ಮೈ ಬೇಯದು ಒಲಿದವರನಗಲಿದರೆ ಸರ್ವಾಂಗವು ಬೇವುದವ್ವಾ (ಗಂಭಾ. ೧೦-೭). ದಿಬ್ಬೆ$_2$: ೩. ಕುಲಗಿರಿ ಕಾಯ್ದ ಕರ್ಬುನದ ಬೆಟ್ಟುವೊಲಿರ್ದುವು ಧಾತ್ರಿ ಕಾದ ಕಾವಲಿಯವೊಲಿರ್ದುದಂಬುನಿಧಿ ದಿಬ್ಬೆಗೆ ಕಾಸಿದ ತೈಲದಂದದಿಂ ತಲೆದಳೆದುಕ್ಕುತಿರ್ದುವು (ಸೂಕ್ತಿಸು. ೧೦-೧೦೧). ೪. ಗಂಡ ಪೆಂಡಿರು ತಾವು ನಿರ್ದೋಷರೆಂದೆಡೆಗೊಂಡು ದಿಬ್ಬೆಗೆ ಕೈಯನಿಕ್ಕಿ ಕೆಂಡವ ಪಿಡಿದು ತಂದೀವಂತೆ ಕೊಟ್ಟಳು ಗಂಡಗೊರ್ವಳು ಮಾಣಿಕವನು (ಭರಜ. ೫-೪೮).

ದಿಬ್ಯದ ತೊಲೆ = ದಿವ್ಯದ ಪರೀಕ್ಷೆಯಲ್ಲಿ ಪ್ರಮಾಣವಸ್ತುವಾಗಿ ಬಳಸುವ ತಕ್ಕಡಿ: "ಧಟ – ದಿಬ್ಯದ ತೊಲೆ" (ನಾಜಿರಾ. ೯).

[<ಸಂ. ದಿವ್ಯ]

ದಿಬ್ಯಂಬಿಡಿ (ಕ್ರಿ). (ಕಾಯಿಸಿದ ಕಬ್ಬಿಣ, ಅಗ್ನಿ ಮುಂತಾದ ಪ್ರಮಾಣ ವಸ್ತುಗಳನ್ನು ಮುಟ್ಟಿ) ಪ್ರಮಾಣ ಮಾಡು; ದಿವ್ಯವನ್ನು ಹಿಡಿ: ತನ್ಮೃಗಶಾಬಾಕ್ಷಿಯ ಕಂಪು ತಟ್ಟಿ ಮಧುಪಂಬೋಲ್ ಸೋಲ್ತು ಕಂಡೊಲ್ದು ನಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು (ಪಂಪಭಾ. ೦-೭೦).

[ದಿಬ್ಯ + ಪಿಡಿ$_1$]

ದಿಬ್ಯಗತಿ (ನಾ). ಶ್ರೇಷ್ಠವಾದ ಗತಿ,–ಪದವಿ; ಉತ್ತಮವಾದ ಸ್ಥಾನ 'ದಿಬ್ಯಗತಿವೆಱು' ಪರಾ. [<ಸಂ. ದಿವ್ಯಗತಿ]

ದಿಬ್ಯಗತಿವೆಱು (ಕ್ರಿ). ಶ್ರೇಷ್ಠವಾದ ಪದವಿಯನ್ನು ಹೊಂದು; ಸ್ವರ್ಗವನ್ನು ಪಡೆ: ವಿಸ್ತರ ದೇವಾನಕವುಣ್ಮೆ ದಿಬ್ಯಗತಿವೆತ್ತಂ ಧಾತ್ರಿ ಭಾಪ್ಪೆಂ ಬಿನಂ(ಸೌಇಇ. XX. ೨೪೮-೨೯; 1228). [ದಿಬ್ಯಗತಿ + ಪೆಱು$_1$]

ದಿಬ್ಯದೇಹ (ನಾ). ಶ್ರೇಷ್ಠವಾದ ಶರೀರ; ಉತ್ತಮವಾದ ಮೈ: ಮುನ್ನೆ ಕುಂಕುಮಪಂಕಿತಮಪ್ಪ ದಿಬ್ಯದೇಹದೊಳ್ ಬೆಮರ ಬಿಂದುಗಳಂ ಕಂಡು ನೆತ್ತರೆಂದು ಬಗೆದು ಮೂರ್ಛೆಗೆ ಸಲ್ವಾಕೆಯೆ ಈಗಳ್ ಮಗನಂ ಪೋಟ್ಟು ತಿಂದಪ್ಪಯ್ (ವಡ್ಡಾರಾ. ೪೮-೨೨). [<ಸಂ. ದಿವ್ಯದೇಹ]

ದಿಬ್ಯಸಭೆ (ನಾ). ಶ್ರೇಷ್ಠವಾದ ಸಭೆ; ಉತ್ತಮವಾದ ಗೋಷ್ಠಿ: ಮುನ್ನೆ ನೀನ್ . . . ಪೆಂಡವಾಸದಗ್ಗಳದ ಸೂಳೆಯರ್ಕಳಿಂದಂ ಪರಿವಾರದಿಂದಮಿಂತಪ್ಪ ದಿಬ್ಯಸಭೆಯಿಂದಂ ಪರಿವೇಷ್ಟಿತನಾಗಿ ಆಟಪಾಟ ವಿನೋದಂಗಳಿಂದಿರ್ಪಾತನಯ್ (ವಡ್ಡಾರಾ. ೦೩೯-೨೪). [<ಸಂ. ದಿವ್ಯಸಭಾ]

ದಿಬ್ಯಾಹಾರ (ನಾ). ಶ್ರೇಷ್ಠವಾದ ಆಹಾರ; ಉತ್ತಮವಾದ ಆಹಾರ: ಮತ್ತಮೃತೋಪಮಮಪ್ಪ ದಿಬ್ಯಾಹಾರಮನುಣ್ಬಾತನಯ್ ಈಗಳ್ ಕಪ್ಪೆಗಳುಂ . . . ಮೊದಲಾಗೊಡೆಯ ಜೀವರಾಶಿಗಳಂ ಕೊಂದು ತಿನ್ಬೆಯಾದಯ್ (ವಡ್ಡಾರಾ. ೦೪೦-೩). [<ಸಂ. ದಿವ್ಯಾಹಾರ]

ದಿಮಡಿ 'ದಮ್ಮಡಿ$_1$' ನೋ.

ದಿಮಾಕು, ಧಿಮಾಕು (ನಾ). ೧. ಜಂಬ; ಸೊಕ್ಕು; ಗರ್ವ; ಅಹಂಕಾರ ಇವರ ದಿಮಾಕನ್ನು ಮುರಿಯದಿದ್ದರೆ ನಾನು ಸರಸಿಯೇ ಅಲ್ಲ (ಶಾಗೆಕ. ೭೩); ದಿಮಾಕಿನ ಮಾತನಾಡ್ತಾ ಕುಳಿತಿದ್ದ (ಹಂದತೋ. ೧೪೮); ರೇವಕ್ಕನ ದಿಮಾಕು ಇವರ ಮುಂದೆ ಮಾತ್ರ ಹೆಡೆಯೆತ್ತುತ್ತಿರಲಿಲ್ಲ (ಬೆಳುಮ. ೩೦); ಬಹಳ ಹೆಚ್ಚಾಯಿತು ಈ ದಿಮಾಕು (ಈಪಸೊ. ೧೪); ಅವಳಿಗೆ ಯಾವಾಗಲೂ

ದಿಮಾಕು ! ನಾನೆ ಯಾವಾಗಲೂ ಸೋಲದೇಕೇನು? (ಮಲಿಮ. ೪೪೬).
ದಿಮಾಕು : ೧. ಗಂಡ ಬಟ್ಟೋಗಿದ್ರೂನೂ ಎಂಥ ದಿಮಾಕು ! (ಬಸಪಂ. ೩೮೩); ರೊಕ್ಕದ ದಿಮಾಕಿನ್ಯಾಗ ನಿಮ್ಮ ಮಗಾ ಇನ್ನೊಮ್ಮೆ ಹಿಂಗ ಮಾಡಿದರ ಬಿಕ್ಕಿ ನೀರ ಬೇಡಲಾಕಿಲ್ಲ ತಿಳೀತ ? (ನಡಡಾ. I, ೩೯೦). ೨. ಡೌಲು ; ಠೀವಿ ; ಬೆಡಗು ; ವೈಯಾರ : ಬೀದಿಹೋಕರ ಕಡೆಗೆ ಕಣ್ಣು ಹಾರಿಸುತ್ತ ದಿಮಾಕಿನಿಂದ ತಮ್ಮ ಆಸನಗಳಲ್ಲೊರಗಿ ಕುಳಿತಿದ್ದ . . . ಬಂಡಿಗಾವರು– ಇವರೆಲ್ಲ ಚೆನ್ನಾಗಿ ತಿಂದುಂಡವರಂತೆ ಕಾಣುತ್ತಿದ್ದರು (ಪುನರು. ೩೦೯) ; ಬಂದಿಗೆಯನ್ನು ಸೊಂಟದ ಮೇಲೆ ಇರಿಸಿಕೊಂಡು ಊರ ಮುಂದಿನ ಭಾವಿಗೆ ದಿಮಾಕಿನಿಂದ ಹೊರಟಳು (ಮುಗಮೂ. ೧೦೭).

[←ಆರ. ದಿಮಾಗ್, ದಿಮಾಘ್; ಹಿಂ. ದಿಮಾಕ್, ದಿಮಾಗ್; ಮರಾ. ದಿಮಾಖ್]

ದಿಮಿ (ನಾ). ಒಂದು ಅನುಕರಣ ಶಬ್ದ : ಧಿಗಿಧಿಮಿದ್ದಿಮಿ ಘುಳ್ಳು ನೆಳ್ಳುಂ ಘಣಿಲು ಘಣ್ ಘಣ್ ಘಣ್ ಧಂ ಧಗಂ ಘುಳುಘುಳು ಘಟಿಲ್ ಘಟಿಲೆಂಬ ಕಟವಟ ನಿಟಲು ನಿಱಿಲೆಂಬ . . . ಧ್ವನಿಗಳವನಿಗೆ ಭಯವನೀವುತಿರೆ (ಸಾನಂಚ. ೮-೧೩). 'ದಿಮಿಗುಡು' ಪರಾ.

ದಿಂದಿಮಿ, ದಿಮಿದಿಮಿ (ದ್ವಿರುಕ್ತಿ) = ೧. ನೃತ್ಯ, ಸಂಗೀತಗಳ ತಾಳವನ್ನು ಸೂಚಿಸುವ ಒಂದಂ ಅನುಕರಣ ಶಬ್ದ : ದಿಂದಿಮಿ ದಣ್ಣಂ ತೊದಿಗಿದಿಮಿಕು ದಿಮ್ಮೆಂದು ನಾನಾ ವಿಧದಲ್ಲಿ . . . ಸುರದುಂದುಭಿ ರವವ ಹಾಡಿದರು (ಕಠಚ. ೧-೯೩). ೨. ಗಲಾಟೆ ; ಗದ್ದಲ : ಒಳಗೆ ನಿಂತು ವಟಗುಟ್ಟಿ ದೇಸತ್ತ ಸುಬ್ಬಕ್ಕ ಹೊರಕಟ್ಟಿಗೆ ಬಂದು ಕುಳಿತು ಊರಿನಲ್ಲಿನ ದಿಮಿದಿಮಿಯನ್ನು ನೋಡುತ್ತ ಮೂಗಿಗೆ ಬೆರಳಿಟ್ಟರು (ದಾಳೂಟ. ೧೦೭).

ದಿಮಿಕಿಟ(ನಾ).ಕಂಠಿತದತಾಳವನ್ನು ಸೂಚಿಸಂವ ಅನಂಕರಣ ಶಬ್ದ : (ಕ).

ದಿಮಿಗುಡು (ಕ್ರಿ). ದಿಮಿ ಎಂದು ಸದ್ದುಮಾಡುಂ : ಆಕಾಶದಲ್ಲಿ ದುಂದುಭಿಯ ನಾದವು ದಿಮಿಗುಟ್ಟಹತ್ತಿತು (ಶುಸೀ. ೩೪).

[ದಿಮಿ + ಕುಡು$_1$ (<ಕೊಡು$_1$)]

ದಿಮಿದಿಮಿಸು (ಕ್ರಿ). = ದಿಮಿಗುಡು : ವರ್ಗವು ದಿಮಿದಿಮಿಸುವಂತೆ ಬಲವಂತನು ಕೂಗಿದನು (ರಕ್ತಧ್ವ. ೧೫೭). [<ದಿಮಿ + – ಇಸು$_5$]

ದಿಮಿಸಾಲೆ 'ದಂಮ್ಮಿಸಾಲು' ನೋ.

ದಿಮ್ಮುಡು (ಕ್ರಿ). ದಿಮ್ ಎಂದಂ ಶಬ್ದವಾಗು : ಜಗ್ಗಲಿಗೆ ಮೊದಲಾದ ದಿಮ್ಮುಡುವ ವಾದ್ಯಗಳನ್ನು . . . ಹಿಡಿದು ಜನರು ಗುಂಪಿಟ್ಟು ಹಾಡಿ ಕುಣಿಯುವರು (ಕನ್ನಚಾ. ೩೧). [ದಿಂ + ಕುಡು$_1$ (<ಕೊಡು$_1$)]

ದಿಮ್ಮಿ (ನಾ). ಒಂದಂ ಬಗೆಯ ವಾದ್ಯ : ಮದ್ದಲಿ, ದಿಮ್ಮಿ, ದಪ್ಪು, ದುಂದುಭಿ, ತಾಳ, ಚೈಯಾಕ (ಚಿಳ್ಳಂಕ), ಡೊಳ್ಳು, ಜಗ್ಗಲಿಗೆ ಮೊದಲಾದವುಗಳ ಸಂಜೋಡಣೆ ಮಾಡಿ . . . ಕುಣಿಯುತ್ತಾರೆ (ಕನ್ನಚಾ. ೩೯) ; ಕಣೆ, ದಿಮ್ಮಿ ಮೊದಲಾದ ವಾದ್ಯಗಳನ್ನು ನಂಡಿಸುತ್ತ ಮಳೆಯ ಭವಿಷ್ಯವನ್ನು ಜನಪದದಲ್ಲಿ ಸಾರುವುದನ್ನು ನೋಡಿ ಮನಗಾಣಬಹುದು (ಕನ್ನಚಾ. ೧೬೧).

ದಿಮ್ಮಿಗೆ (ಅ). ೧. ಗಟ್ಟಿಯಾಗಿ ; ಬಲವಾಗಿ ; ದೃಢವಾಗಿ : ಕೊಟ್ಟ ದಿಮ್ಮಿಗಿದೆ (ಕೂಡಿ) ; ಪಾತ್ರೆಯನ್ನು ದಿಮ್ಮಿಗೆ ಹಿಡಿದುಕೊ (ಕೂಡಿ). ೨. "ಜೋರಾಗಿ ; ರಭಸದಿಂದ" (ಪ್ರಕಡಿ.). [<ದಿಮ್ಮಿತು + – ಅಗೆ$_3$]

ದಿಮ್ಮಿಡಿ 'ದವ್ಮಡಿ$_1$' ನೋ.

ದಿಮ್ಮಿದಿರುಗ, ದಿಮ್ಮುದಿರುಗ (ನಾ). ಸಂಮ್ಮನೆ ತಿರುಗುವವನಂ.– ಸುತ್ತಾಡುಂವವನಂ : ಅವನೊಬ್ಬ ದಿಮ್ಮದಿರುಗ, ಯಾವ ಕಾರ್ಯಕ್ಕೂ ಬಾರದವನು (ಕೂಡಿ). **ದಿಮ್ಮುದಿರುಗ** : ಹಡೆದವರ ತಲೆಗೆ ಮರಳು ಚಿಲ್ಲಿದ್ಯಂತೆ ವಂಡದೇರ ಕೂಡ್ಯಾಡಿ ಕಲಿತ್ಕಲ್ಲೊ ಬೆಡಗ ದಿಮ್ಮುದಿ [ಪಾಠಾಂ. ದೆ] ರುಗ ಸೊಕ್ಕಿ ವೊರುಗ ಬಿಡು ಎನ್ನ ಸೆಱಗ (ಕನಕ. ೫೫-೩).

[ದಿಮ್ಮದಿರುಗು + – ಅ$_7$]

ದಿಮ್ಮದಿರುಗು. ದಿವ್ಮುದಿರುಗು$_1$ (ಕ್ರಿ). ೧. ಸುಮ್ಮನೆ ತಿರುಗಂ,– ಸುತ್ತು. ೨ (ಆಲಂ) ವೃಥಾ ಶ್ರಮಿಸು: ಸುಮ್ಮನೆ ಘನವುಂಕ್ತಿ ಸುವಿವನು ಬಯಸುತೆ ದಿಮ್ಮದಿರುಗಿ ಸಾಯುದಿರು ಮುಂದ ಮನುಜಾ (ಕೈಳವ. ೫-೬೫ ಪಲ್ಲವಿ). **ದಿಮ್ಮುದಿರುಗು**$_1$ ೧. 'ದಿಮ್ಮದಿರುಗ' ಪರಾ.

[<ದಿಮ್ಮನೆ + ತಿರುಗು$_1$]

ದಿಮ್ಮನೆ (ಅ). ೧. ಇದ್ದಕ್ಕಿದ್ದಂತೆ ; ಥಟ್ಟನೆ : ದಿ [ಪಾಠಾಂ. ಧಿ] ಮ್ಮನೆ ನಿಂದು ಭುಗಿಲೆಂದನು ಕಿರೀಟ (ಕುವ್ಯಾಸಿ. ೩-೮) ; ದಿಮ್ಮನೆಯೆದ್ದು ಪೋಗುವಳ ತಕ್ಕೈಯಂ ಪಿಡಿದಪ್ಪ (ನವವೋ. ೯-೩೮); ಶ್ರೀ ರಾವಂಚೆಂದ್ರಪಂ ದಿಮ್ಮನೆಟ್ಟು ದಿಗ್ಭ್ರಮೆಯಿಂ ಕಣ್ಗೆಟ್ಟು ಚಿಂತಾಪರವಶತೆಯಿಂ ನಡೆಗಂಬಂ ಬರ್ವುದೆನೆ ಬಂದು (ರಾಮಾಶ್ವ. ೧೯-೧೯) ; ದಿಮ್ಮನೆದ್ದಳು ಬೆಳ್ಳಿ ತಾಯಿ ಕೈ ಪಿಡಿಯೆ (ಕಾಲೂರ. ೧೬೬-೩೬೯). ೨. ರಭಸದಿಂದ; ಜೋರಾಗಿ : ಎತ್ತಿ ಹಾಯ್ಕಿದ ಹೆಣನುವುಂಬರದತ್ತಲಿದ್ದು ನೆಲಕ್ಕೆ ದಿಮ್ಮನೆ ಕೆಡಯೆ ಸಭೆ [ಪಾಠಾಂ. ಲಿರ್ದುದು ಕೆಡೆಯಲಾಗಳೆ ಸಭೆ ನಡುಗಿ] ಬೆದಱಿ (ಬಸಪು. ೩೨-೪೩); ದಿಮ್ಮನೆ ಶರಂ ನೆಲಕೆ ಬೀಳೆ (ಗುರುಚಾ. ೯-೬೩). ೩. ಸುಮ್ಮನೆ ; ಮೌನವಾಗಿ : ತಡವಮಾಡಿ ಬಂದನೆಂದತ್ತಳು ಬೈದಳು ಸುಯ್ದಳು ಸಿಟ್ಟುಮಾಡಿದಳು ದಿಮ್ಮನೆ ಕುಳಿತಳು ಹುಬ್ಬನು ಮುರಿದಳು ವಂತ್ತಿದ್ದು ಅಬ್ಬರಿಸಿದಳು (ಇಂದಾಶ. ೦೬೮-೩೬). 'ಧಿಮ್ಮನೆ' ಪರಾ. [ದಿಂ + – ಅನೆ$_1$]

ದಿಮ್ಮಿ$_1$ (ನಾ). ೧. ದಿಣ್ಣೆ; ಕಿಟ್ಟು; ಎತ್ತರವಾದ ಪ್ರದೇಶ : (ಕ). ೨. ಮರದ ದಿಂಡು,–ತೊಲೆ : ಅನೆ ದೊಡ್ಡ ಮರದ ದಿಮ್ಮಿಯನ್ನು ಸೊಂಡಿಲಲ್ಲಿ ಹಿಡಿದು . . . ಹೋಯಿತು (ಪ್ರವಾಖ್ಯಾ. II, ೧೫೯) ; ದೊಡ್ಡ ದೊಡ್ಡ ಮರದ ದಿಮ್ಮಿಗಳನ್ನು ಸಾಗಿಸಿಕೊಂಡು ಹೋಗಿ ಮಹಾರಾಜರಿಗೆ ಒಪ್ಪಿಸಿದರು (ಪ್ರಸರ್ವ. ೧೪) ; ದಿಮ್ಮಿಗಳನ್ನ ಸೈಜುವಾರು ಗರಗಸದಿಂದ ನಾವು ಮೊದಲು ಕುಯ್ದು ಹಾಕಬೇಕು (ಜಂಗೂಲಿ. ೦೦೩). ೩. ಕೆಸರಂ ; ಬದಿ ; "ಉಬ್ಬಲ" (ಜಾನಕೋಚ. ೫). ೪. ಕವಚ ; ಅಂಗಿ : "ತನುತ್ರಂ . . . ಉರಚ್ಛದಃ, ಕಟಕಃ, ಜಾಗರಃ, ಕವಚಃ 2 ಎದೆಗೆ ರಕ್ಷಕವಾದ ತೊಗಲ ದಿಮ್ಮಿಗೂ ಪಾದರಕ್ಷೆಗೂ ಪೆಸರುಗಳು" (ಸಿದ್ಧಾಂತಿ. ೩೨೦).

[ದೇ.ಶ ತೆಲು. ದಿಮ್ಮ; ಪರ್ಜ. ದೆಮ್ಮ]

ದಿಮ್ಮಿ$_2$ 'ದಂಮ್ಮಿ' ನೋ.

ದಿಮ್ಮಿಡಿ 'ದಿಮ್ಮುಹಿಡಿ' ನೋ.

ದಿಮ್ಮಿಡು (ಕ್ರಿ). ದಿಮ್ ಎಂದು ಶಬ್ದವುಂಟಾಗುಂವಂತೆ ಮಾಡು : ದಿಮ್ಮಿಡುವ ಘಣಾಘಣಾ ಎಂಬ ಗಂಟೆಯ ರವಕ್ಕೆ ಬೆರ್ಮೆಗೊಳುತ (ರಾಸಪ. ೪. ೫೬-೪). [ದಿಂ + ಇಡು$_1$]

ದಿಮ್ಮಿತು, ದಿಮ್ಮಿತ್ತು (ನಾ). ೧. ಗಟ್ಟಿಯಾದುಂದು ; ದಪ್ಪನಾದುದು ; ಭಾರವಾದುದಂ : ಏಮ್ಮ ಕಂಥೆಗೆ ಕೌವಕೆಣೆಯೆನಲಮ್ಮೆನಾದಡೆಯವರಲ ಪಾಡಿನ ದಿಮ್ಮಿತಪ್ಪಾ ಕಂಥೆಯುಂ ಕೌಪೀನವುಂ ಕೊಟ್ಟು (ಬಸಪು. ೨೭-೪೪). ೨. ಹೊರೆ ; ಭಾರ : ತುಂಬರ್ದ ಬಂಡಿಗೆ ವೊಱಿಂ ದಿಮ್ಮಿತೇ (ಹಡಡಾ. ೮-೩೭). ೩. ಹಿರಿದಾದುದು ; ಘನವಾದುದುಂ ; ಶ್ರೇಷ್ಠವಾದುದುಂ ; ದೊಡ್ಡದು : "ದಿಮ್ಮಿತೆನಲ್ಕೆ ದೊಡ್ಡಿತುಂ" (ಕಡಾಗಿ. ೧೬) ; ತುಂತುಹಾರುವನಲ್ಲ ಸಾಕ್ಷಾತ ಬೊಮ್ಮನಪ್ಪನು ಆಗಿ ಬುಧರೊಳು ದಿಮ್ಮಿತಪ್ಪಖಿಳಾಗಮಜ್ಞನು (ಬಸಪು. ೩೫-೩೩) ; ಅವನ ಮೈಸೋಂಕಿಲ್ಲವುಂ ದಿಮ್ಮಿತಪ್ಪೊಡನಾಟವವನಿರವೆ ಯೋಗವಾತಂ ಮಾತನಾಡಿರ್ದುದೆ ವಲಂ ಧ್ಯಾನಂ (ಪದ್ಮಕಾ. ೧೩-೪೦) ; ಇನಿತೊಂದು ವೆರ್ಮೆಯ ಕ್ಷೇತ್ರದೊಂದು ಮೈಮೆ ದಿಮ್ಮಿತು (ರಾಮಾಶ್ವ. ೮೨-೩೭). ೪. ಕಷ್ಟಕರವಾದುದು; ಕಠಿಣವಾದುದು: ಗರ್ವವ ನೆಮ್ಮಿದರೆ ತದ್ಗರ್ವದಿಂದುಜಿ ದಿಮ್ಮಿತಹುದಾ ಕಾರ್ಯ (ಕುವ್ಯಾಉ. ೪-೩೭). **ದಿಮ್ಮಿತ್ತು** : ೨. ಬಳ್ಳಿಗೆ ಕಾಯಿ ದಿಮ್ಮಿತ್ತೇ (ಬಸಪು. ೬೦).

ದಿಮ್ಮಿದ = ೧. ದೊಡ್ಡತನದ ; ದೊಡ್ಡಸ್ತಿಕೆಯ : ಕಾಕ ನುಡಿಯದೆ ಸುಮ್ಮನಿರಿ ನೀವೇಕೆ ದಿಮ್ಮಿದ ವಾಕ್ಯ ವಸ್ತುವಿವೇಕ ನಿಮಗೆಲ್ಲಿಯದು ನೀವು ಸುಮಾರ್ಗಬಾಹಿರರು (ಶಂಕಿದಾ. ೧೫-೧೦). ೨. ಹಿರಿಯನಾದವನು; ಪ್ರೌಢ ; ಶ್ರೇಷ್ಠ : "ಸೈದರೆಂದುಂ, ದಿಮ್ಮಿದರೆಂದುಂ, ಗಹನರೆಂದುಂ, ನೇಱಿದರೆಂದುಂ–ಈ ೪ ಪಿರಿಯರ್ಗೆ ಪೆಸರ್" (ಕಶಸಾ. ೧೭-೩೩೨) ; ಪಾಡೆ ಚಿರಂಟಿಯರ್ಪರಸೆ ದಿಮ್ಮಿದರ್ . . . ಸತಿಗೂಡಿ ತದುದ್ಭಟ ರಾಜಕುಂಜರಂ ಕೂಡೆ ವಿವಾಹಮಂಟಪಕೆ ಮೆಲ್ಲನೆ ಬಂದನ ನೂನರಾಗದಿಂ (ಉದ್ಯಟ. ೯-೭೦) ; ದಿಮ್ಮಿದರಕ್ಕರಕ್ಕಱಿವರೊಳ್ ನುಡಿಯೊಳ್ ಕಡುಜಾಣರ್ (ಕಬ್ಬಿಗಾ. ೧೦) ; ಎಲೆ ದೇವ ಬೆಟ್ಟದಂತಪ್ಪ ದಿಮ್ಮಿದನಣುಗಿ ಸಲುಗೆಯೂಗಿರ್ದವಳನೆನ್ನನೊತ್ತಿದೆ ಯೆಡದ ಕೆಲಕೆ (ವೀಶೈಪು. ೩-೨೦-೧); ದಿ [ಪಾಠಾಂ. ನಿ]ಮ್ಮಿದರ್ ಗುಜುಗುಜಿಸದಿರಿಮತುಳರುದ್ರಗಣಮುಮ್ಮಸಗಬೇಡೆಂದು ... ಭರಾಭರಿಗಳಂ ಮಾಡುತಿರ್ದರತಿಭಕ್ತಿಯಿಂದೆ (ಜಿಬಪು. ೨-೨೬) ; ಗಿರಿಶಭಕ್ತೆಯ ಶಿಶುವಂ ದಿಮ್ಮಿದರಲ್ತೆನೆ ಕಡುಪಿಂದಾಂ ಮಡಿಪಿದೆನೆನ್ನವೋಲ್ ಕೃತಘ್ನರುಮೊಳರೇ (ರಾಜಶೇ. ೧೪-೨೪). ೩. ಗಟ್ಟಿಗ ; ಪರಾಕ್ರಮಿ; ಬಲಶಾಲಿ: ನಿಮ್ಮ ರಾಯನ ಪೊರೆಯ ಪರಿವಾರದೊಳ್ನೀವೆ ದಿಮ್ಮಿದರೊ ಮತ್ತೆ ಕೆಲರೊಳರೊ (ಚೈಮಿಭಾ. ೪-೨೨). ೪. ತಿಳಿದವನು ; ಬಲ್ಲಿದ : ರತ್ನಪರೀಕ್ಷೆಯ ಮಾಡುವ ಅಣ್ಣಗಳೆಲ್ಲ ದಿಮ್ಮಿದರಯ್ಯಾ (ಸಿದ್ಧವ. ೬೧-೩೩೮); ದಿಮ್ಮಿದರಮ್ಮಮ್ಮೆನೆ ಹೊರೆಯಣುಗಿಂದೆಮ್ಮಯ್ಯಾ ದಮ್ಮಯ್ಯಾ ನಿಮ್ಮಯ ಸೊಮ್ಮಯ್ಯಾರಯ್ಯಮೆನಲ್ಕೆ (ಉದ್ಯದೇ. ೭-೪೭) ; ಕ್ಷತ್ರಿಯರ್ಗೆ ದಿಮ್ಮಿದರೊಳ್ ಪೊಣರ್ಕೆ ಸಲ್ಲದೆಂದುಂ ಮೇಣ್ ಅದರೊಳುಂ ಇಕ್ಷ್ವಾಕುಕುಲದವರ್ಗೆಮಗೆ ದೋಸಂ ತಟ್ಟುವುದೆಂದು ಪೇಱೆ (ಅದ್ಭುತ. ೩೨-೨೨) ; ದಿಮ್ಮಿದರಳ್ಕರ್ ಶರೀರದೆಡರ್ಗಳ್ಗೆಂದುಂ (ನೀತಿಮಂ. ೦-೨೯); ದಿಮ್ಮಿದರಪ್ಪ ಕಬ್ಬಿಗರಿಂ ಕನ್ನಡನುಡಿಯೊಳ್ಪರಿವರ್ತನಂಗೆಯಿಸಿ ತನ್ನ ಪೆಸರಿಂದೊಂದು ಕರ್ಣಾಟಕನಾಟಕಸಭೆಯಂ ಕಲ್ಪಿಸಿದಂ (ಮರಾಚ. ೬-೩೮). ೫. ಹೊರೆಯಾದವನು ; ಭಾರವಾದವನು (?) : ಅನಾಥೆಯನು ಕರುಣಿಸಿ ನೋಡದೆ ಅಱಿ ಕಂಡೆ ತಾದೆ ಕಣ್ಣಂಗೆ ದಿಮ್ಮಿದನೆಯೆನೆ ಬೆಱಗಾಗಿದೇ ನೆನಲು ತಾನೆಯೊಯ್ದಾಗ ಮತ್ತಱಿಯದಂದದಲೆನ್ನ ಬೆಸಗೊಂಡಪಂ ನೋಡಿರಯ್ಯ ಎನುತೊಱಲ್ದತ್ತಳು (ಸಿದ್ಧರಾ ೯-೩೧).

ದಿಮ್ಮಿತ್ತು 'ದಿಮ್ಮಿತು' ನೋ.

ದಿಮ್ಮಿಸಾಲು 'ದುಮ್ಮಿಸಾಲು' ನೋ.

ದಿಮ್ಮು (ನಾ). ೧. ತಲೆ ತಿರುಗುವಿಕೆ ; ತಲೆಸುತ್ತು ; ಬವಳಿ. 'ದಿಮ್ಮುಹಿಡಿ','ದಿಮ್ಮೇರು' ಪರಾ. ೨. ತಿಳಿಗೇಡಿತನ ; ಹುಚ್ಚು ; ಮರುಳಂತನ : ಆಡುವ ಆಟ ತಪ್ಪಿ ಅದು ಆಟದವನ ಮನಸಿಗೆ ಕಿಂಕರದೋಱಿದ ಮತ್ತೆ ಕೊಡಬೇಕೆಂಬ ಮತ್ತೆ ಆ ಲಾಗು ಬಂದಿತ್ತೆಂಬ ದಿಮ್ಮುಮನುಜರುಗಳಿಗೆ ಹೇಳುವದುಂಟೆ (ಮೋಳಿಮಾ. ೮೮-೩೫೦). ೩. ಒಣ ಅಭಿಮಾನ ; ಹೆಮ್ಮೆ ; ಜಂಭ : ಸೊಕ್ಕಿನವನಲ್ಲದಿದ್ದರೂ ತನ್ನ ದಿಮ್ಮಿನಲ್ಲಿರುವನು (ನಿರಾಧ. ೭೮) ; ನಾವು ನಿರಕ್ಷರಸ್ಥರಾದರೂ ಪಂಡಿತರೆನಿಸಿಕೊಳ್ಳಬೇಕೆಂಬ ದಿಮ್ಮು (ಕಯಾತ್ರೆ. ೫೭); ತಲೆಯ ದಿಮ್ಮು ಇಳಿಸೀತು ಸುಮ್ಮನೇ ನೀ ಸೆಟೆದರೆ ತಾಗಿ (ಸೂರ್ಯಪಾ. ೩೮-೧೫).

[ದೇ.ಕ ತೆಲು. ದಿಮ್ಮು, ದಿಮ್ಮ]

ದಿಮ್ಮುದಿರುಗ 'ದಿಮ್ಮದಿರುಗ' ನೋ.

ದಿಮ್ಮುದಿರುಗು$_1$ 'ದಿಮ್ಮದಿರುಗು' ನೋ.

ದಿಮ್ಮುದಿರುಗು$_2$ (ನಾ). ಸುಮ್ಮನೆ ಸುತ್ತುವಿಕೆ, – ತಿರುಗುವಿಕೆ : ಸೂತಿವಾಯು ಗರ್ಜಿಸಿ ಕೋಟಿ ಸಿಡಿಲಂತೆ ಪೊಡೆಯೆ ದಿಗ್ಭ್ರಾಂತಿಯಿಂ ದಿಮ್ಮುದಿರುಗೊಡೆಯುತೆ . . . ನೆಲಕ್ಕಧೋಮುಖಮುರುಳಿ ಚೇತರಿಸುವಂ (ಕೈಕವ. ೨-೪-೩). [<ದಿಮ್ಮದಿರುಗು]

ದಿಮ್ಮುದೆಗೆ (ಕ್ರಿ). ಅಹಂಕಾರ ಪಡು ; ಹೆಮ್ಮೆಪಡು (?) : ನಮಿಸಿ ದಿಮ್ಮುದೆಗೆಯದಿರ್ಪ ಕ್ರಮವಱಿದಮಾತ್ಯರಳ್ಕಿ ನಮಿಸಿಯಕ್ಕನುರುನವಿರಾಗದಿರವ ಪೊಗಳುತ (ಮದೇಪು. ೨೨-೪೭). [ದಿಮ್ಮು + ತೆಗೆ$_1$]

ದಿಮ್ಮುಹತ್ತು (ಕ್ರಿ). ಬವಳಿ ಹತ್ತು ; ದಿಮ್ಮೇರು : (ಕ).

[ದಿಮ್ಮು + ಹತ್ತು$_1$ (<ಪತ್ತು$_1$)]

ದಿಮ್ಮುಹಿಡಿ, ದಿಮ್ಮಿಡಿ (ಕ್ರಿ). ೧. = ದಿಮ್ಮುಹತ್ತು : ಘುಮ್ಮಿಡುವ ಬಿಲುದನಿಗೆ ಲೋಕವು ದಿಮ್ಮುಹಿಡಿವಂದದಲಿ ಜರಿದುದು (ಕೋಗಯ. ೧೦-೧೯) ; ತಲೆ ದಿಮ್ಮುಹಿಡಿದಿದೆ (ರಕ್ತಧ್ವ. ೧೭೧). ದಿಮ್ಮಿಡಿ : ಮೂಗಿನೊಳಂ ಬಾಯೊಳಂ ನೆತ್ತರು ಸುರಿಯುತ ತಲೆ ದಿಮ್ಮಿಡಿದು ನಡುಗಿ (ಕಗವಿ. ೯೪-೧ ; ವಿಷ್ಣುಪು). [ದಿಮ್ಮು + ಹಿಡಿ$_1$ (<ಪಿಡಿ$_1$)]

ದಿಮ್ಮೆನ್ನು (ಕ್ರಿ). ತಲೆಸುತ್ತು ಬರು ; ಬವಳಿ ಬರು : ತೀವ್ರಸಂತಾಪದಿಂದ ತಲೆ ದಿಮ್ಮೆನ್ನತೊಡಗಿತ್ತು (ಗಂಮಾಯಿ. ೯೨).

[ದಿಮ್ಮು + ಎನ್ನು (<ಎನ್$_1$)]

ದಿಮ್ಮೇರು (ಕ್ರಿ). ತಲೆಸುತ್ತಿ ಬರು ; ಬವಳಿ ಹತ್ತು ; ದಿಮ್ಮುಹತ್ತು : (ಕ). [ದಿಮ್ಮು + ಏರು$_1$ (<ಏಱ್$_1$)]

ದಿಮ್ಮೇಳು (ಕ್ರಿ). = ದಿಮ್ಮುಹತ್ತು : ಒಮ್ಮನವೆರಸಿ ತಪೋನ್ನತಿವಡೆದಿರ್ದ ನಿರ್ಮಳಾತ್ಮಕ ಶಿವನೊಡಲ ದಿಮ್ಮೇಳೆ ಹೊಯ್ವೆನೆಂದೆನುತ ಮಂದಾನಿಲ ಕಮ್ಮಲರ್ಗೋಲಗೆ ನುಡಿದ (ಮೋಹತ. ೬-೨೩).

[ದಿಮ್ಮು + ಏಳು$_1$ (<ಏಱ್$_1$)]

ದಿರಸು, ದಿರಿಸು, ದಿರುಸು, ದುರಸು (ನಾ). ಉಡುಪು ; ಉಡುಗೆ : ದರ್ಬಾರಿಗಾಗಿ ಬಹು ಬೆಲೆಬಾಳುವ ದಿರಸನ್ನು ಹೊಲಿಸಿದ್ದನು (ಚಿತ್ರಕೊ. ೫೩) ; ದಿರಸು ಹೇಗೇ ಅಂತೀರಿ ? (ಸುವಸಂ. ೫೨) ; ಅರಸನ ಮಕಮಲ್ಲಿನ ದಿರಸೆಲ್ಲ ಹರಿಹರಿದು ಮಗುವಿನ ಅಂಗೀಕುಲಾವೀ ಮಾಡಿಬಿಟ್ಟರು (ಕರ್ಣಾಸಂ. ೧೦೦) ; ನಾಯಕನು ದಿರಸು ಒಪ್ಪಿಸಿಕೊಂಡು ಬಂದ (ಮಲ್ಲಿ. ೫೨) ; ಅವರೆಲ್ಲರಿಗೂ ಅಂಗರೇಕು ದಿರಸುಗಳೂ . . . ಈಟಿ ಭಲ್ಲೆಗಳು ಸರಪರಾಜು ಮಾಡಲ್ಪಟ್ಟಿದ್ದವು (ಶ್ರೀರಾಯ. ೧೧೭). ದಿರಿಸು : ಇವನ ದಿರಿಸು – ಡೌಲು – ಮೋಜುಗಳಿಗೆ ಸಂಪೂರ್ಣ ಮರುಳಾದವನೆಂದರೆ ಬಲರಾಮ (ಮಾಮನೆ. ೧೪). ದಿರುಸು : ಆ ದೀವಗಳನ್ನು ಹೊತ್ತವರೂ ಸಿಪಾಯಿಗಳಂತೆ ಕದನದ ದಿರುಸನ್ನೇ ಹಾಕಿಕೊಂಡು ಕೈದುಗಳನ್ನು ಹಿಡಿದಿದ್ದಾರೆ (ಘಾಟೀಮು. ೩೭). ದುರಸು (ಉಕ) : ಹೊಟ್ಟೆಗೆ ಗತಿಯಿಲ್ಲ ಕಿಸೆಯಲ್ಲಿ ಕಾಸಿಲ್ಲ ದುರಸು ನೋಡಿದರೆ ಕೋಟೆ ಸಾವುಕಾರನದು (ಗಾದೆ).

[←ಇಂ. Dress]

ದಿರಿಸು 'ದಿರಸು' ನೋ.

ದಿರುಸು 'ದಿರಸು' ನೋ.

ದಿರ್ಬಲ್ಲು (ನಾ). ಒಂದು ಊರಿನ ಹೆಸರು : ಕೋಟಗಾಮುಣ್ಡನುಂ ಮಾದಿಗಾಮುಣ್ಡನ ಸಹಿತ ದಿರ್ಬಲ್ಲು ಮಾದರ[ನುಂ] (ಸಾಇಇ. XI-i, ೭-೨೨ ; 837). [?]

ದಿರ್ರನೆ (ಅ). ಸರಕ್ಕನೆ ; ಬೇಗನೆ ; ಶೀಘ್ರವಾಗಿ : ಶೀಘ್ರದಲೆಡಬಲಕೆ ದಿರ್ರನೆ ತಿರುಗಿ ಮದವುಡುಗ ಬಳಲಿಸಿ ಸಿಂಗದಂದದಿ ಬೆಂಗೆ ಲಂಘಿಸಿದ (ಸಾಳ್ವಭಾ. ೧೬-೧೪). [ದಿರ್$_0$ + – ಅನೆ$_1$]

ದಿಲ್ (ನಾ). ಹೃದಯ ; ಮನಸ್ಸು : ಈ ಮಾತು ಕೇಳಿ ನಮ್ಮ ದಿಲ್ ಬಹಾಳ ಖುಷ ಆಗಿದಾವ್ (ಮೋಹಿನೀ. ೬೦).

[←ಪಾರ. ಹಿಂ. ಮರಾ. ದಿಲ್]

ದಿಲ್‌ಗಾರ (ನಾ). ಸ್ಥಿರಹೃದಯವುಳ್ಳವನು ; ಎದೆಗಾರ ; ಧೈರ್ಯಶಾಲಿ : ನಮ್ಮ ಜನ ಎಂಥಾ ದಿಲ್‌ಗಾರರು ಅನ್ನೋದು ಈ ಬಿಳೀಜನದ ಮನಸ್ಸಿಗೆ ಬರಬೇಕು (ಮಲ್ಲಿ. ೫೩). [ದಿಲ್ + –ಗಾರ (< – ಕಾಱ)]

ದಿಲ್‌ಗೀರು (ನಾ). ವಿಷಾದ ; ಖೇದ ; ಖಿನ್ನತೆ : ಈಗ ಅವರು ತಮ್ಮ ಹುಕುಂ ಪ್ರಕಾರ ಹೊರಟು ರವಾನೆ ಆಗುತ್ತಾ ಇದ್ದಾರೆ. ಆದ್ದರಿಂದ ನಮ್ಮನಸಿಗೆ ಬಹಳ ದಿಲ್‌ಗೀರು ಆಗುತ್ತಾ ಇದೆ (ರಾಜೇಂದ್ರ. ೧೦೮).

[←ಪಾರ. ಹಿಂ. ಮರಾ. ದಿಲ್‌ಗೀರ್ = ವಿಷಾದವುಳ್ಳ]

ದಿಲ್‌ದಾರ್, ದಿಲ್‌ದಾರ (ಗು). ೧. ಉದಾರನಾದ ; ಔದಾರ್ಯವುಳ್ಳ : ರಾವಜೀಕಾಕಾ ಮಾತ್ರ ದಿಲ್‌ದಾರ್ ಮನುಷ್ಯರು (ದೀಪಹ. I, ೩೩). **ದಿಲ್‌ದಾರ** : (ನಾ). ೨. ಸಹೃದಯಂ ; ರಸಿಕ. 'ದಿಲ್‌ದಾರತನ' ಪರಾ. [←ಪಾರ. ಹಿಂ. ಮರಾ. ದಿಲ್‌ದಾರ್]

ದಿಲ್‌ದಾರ 'ದಿಲ್‌ದಾರ್' ನೋ.

ದಿಲ್‌ದಾರತನ (ನಾ). ಸಹೃದಯತೆ ; ರಸಿಕತೆ : ಸೂರ್ಯನಿಗು ಏನೊ ದಿಲ್‌ದಾರತನ ; ಅವನ ಮೋರೆ ತಿವಿದರು ಮೋಡ ನಕ್ಕು ನಡೆದ (ಚಂಡಮ. ೪೮-೨೨). [ದಿಲ್‌ದಾರ (<ದಿಲ್‌ದಾರ್) + – ತನ]

ದಿಲ್‌ಭರವಸಾ (ನಾ). ಮನಸ್ಸಿಗೆ ಧೈರ್ಯ ತುಂಬುವ ಮಾತು ; ಉತ್ತೇಜನ ; ಆಶ್ವಾಸನೆ : ಕೌಲಿಗೆ ಬಂದಂಥವರಿಗೆ ಕೌಲುನಂಬಿಗೆ ಕೊಟ್ಟು, ದಿಲ್‌ಭರವಸಾ ಹೇಳಿ. ಬಂದುಬಸ್ತು ಮಾಡಿಕೊಂಡು, ಈಶ್ವರೈಯನು ಇರುತ್ತಿದ್ದಲ್ಲಿ . . . ಪಟ್ಟಣದಲ್ಲಿ ಫಿರಂಗಿ ಆವಾಜು ಬಂದಾಯಿತು (ರಾಜೇಂದ್ರ. ೯೭).

[←ಮರಾ. ದಿಲ್‌ಭರವಸಾ, ದಿಲ್‌ಭರೋಸಾ]

ದಿಲ್‌ರುಬಾ, ದಿಲ್‌ರೂಬಾ, ದಿಲ್ರುಬಾ (ನಾ). ಒಂದು ಬಗೆಯ ತಂತ್ರೀವಾದ್ಯ : ಆ ಖಾನನಿಗೆ 'ದಿಲ್‌ರುಬಾ' ಕೇಳುವ ಹುಚ್ಚು ಬಹಳ (ರಾಜಯೋ. ೬೭) ; ಇಂಡಿಯಾದಲ್ಲಿ ಮುಖ್ಯವಾದುವು . . . ತಬಲ, ದಿಲ್‌ರುಬಾ ಮೊದಲಾದುವು (ಇಸ್ಲಾಂಸಂ. ೧೩೬). **ದಿಲ್‌ರೂಬಾ** : ದಿಲ್‌ರೂಬಾ ಔತ್ತರೇಯ ಸಂಗೀತದಲ್ಲಿ ಹೆಚ್ಚು ಉಪಯೋಗವಾಗಿರುವ ವಾದ್ಯ (ಸಂಗೀಚಂ. ೧೧೮). **ದಿಲ್ರುಬಾ** : ಅನಂತರದ ಸ್ಥಾನವು ಸಾರಂಗ, ದಿಲ್ರುಬಾ, ಇಸ್ರಾಜ್ ಮೊದಲಾದುವುಗಳಿಗೆ ಸೇರುವುದು (ಪಾಲಪ್ರ. II, ೧೧೦೭).

[←ಪಾರ. ಹಿಂ. ಮರಾ. ದಿಲ್‌ರುಬಾ = ಪ್ರಿಯಕರ, ಪ್ರೇಮಿ]

ದಿಲ್‌ರೂಬಾ 'ದಿಲ್‌ರುಬಾ' ನೋ.

ದಿಲಾಸು (ನಾ). ಸಾಂತ್ವನ ; ಆಶ್ವಾಸನೆ : ನಿಯೋಗಿಗಳಂ ಕಳುಪಿರಲ ವರ್ಗಳಂ ಮನ್ನಿಸಿ ದಿಲಾಸನಿತ್ತು ರಾಯಸವಂ ಬರೆಸಿ (ಕೆಳನ್ಯ. ೧೦-೬೬) ; ಆವುದೊಂದು ಕಜ್ಜಕಮಾವಿರ್ವೆವೆಂದು ಧೈರ್ಯಂ ಪೇಳ್ದು ದಿಲಾಸನಿತ್ತುಚಿತಾಭರಣಾಂಬರಾದಿಗಳಿಂ ಪಿರಿದು ಸನ್ಮಾನಿಸಿ . . . ಬೀಳ್ಕೊಟ್ಟನು (ಕೆಳನ್ಯ. ೧೧-೫೩). [←ಹಿಂ. ಮರಾ. ದಿಲಾಸಾ]

ದಿಲಿಪ್ಪ (ನಾ). ಒಬ್ಬಾತನ ಹೆಸರು : ದಿಲಿಪ್ಪನು ನರಸಿಙ್ಗನು ಸತ್ತಕ್ಕ ಸಗ್ಗಕೆ ಪೋದರ್ (ಎಕ. XII, ಶಿರಾ. ೫೯-೩ ; ಸು. 920)

[<ಸಂ. ದಿಲೀಪ]

ದಿಲ್ರುಬಾ 'ದಿಲ್‌ರುಬಾ' ನೋ.

ದಿವ (ನಾ). ೧. ದೇವಲೋಕ ; ಸ್ವರ್ಗ : "ನಾಕಂ ತ್ರಿವಿಷ್ಟಪಂ ದಿವಮೆಂದಿಂತಿದು ತಾನಮರ್ತ್ಯಭವನಂ" (ವಸ್ತುಕೋ. ೬-೩೦) ; ಹರಿ ತನ್ನ ದಕ್ಷಿಣೇಂದ್ರರ್ವೆರಸು ಶಚೀದೇವಿವೆರಸು ಲೋಕೇಶ ಜನಂಬೆರಸು ದಿವದಿಂದ ಮಿಲ್ಲಿಗೆವರಲೊಡವಾ ಭವದೊಳಂತೆ ಮುಕ್ತಿಗೆ ಸಲ್ವರ್ (ಅಜಿಪು. ೫-೪೯) ; ತೆಱೆದವನೆ ದಿವದ ಪಡಿಗಳ್ ತೆಱೆದುವದೇನರಿದೆ ಜೈನಪದಸೇವನೆಯಿಂ (ಸುಕುಮಾ. ೯-೧೯) ; ಅರಸಂ ದಿವಕ್ಕೆ ಸಂದಂ ಕಡೆಯೊಳ್ (ಪಂಠಾಮಾ. ೧೦-೧೨೦). ೨. ಆಕಾಶ ; ಗಗನ : ದಿವಕ್ಕವಯವದಿಂದಡರೆ ನೋಡಿದಂ ಯುವರಾಜಂ (ಆದಿಪು. ೧೬-೪೨) ; ಕೋಂಟೆಯ ಚೆಲ್ವು ಪೊಗಟಲರಿದೆನಿಸಿರೆ ನೆಗೆದುದು ಮಿಳಿರ್ವ ಪತಾಕಾವಳಿ ದಿವಮನೆಯ್ದೆ (ಪಂಪಭಾ. ೪-೯ ವ) ; ದಿವಮಂ ಜಕ್ಕುಲಿವ ವರೂಥ ವೈಜಯಂತಿಗಳ ಪೊಯ್ಲೊಳ್ (ಜಗವಿ. ೧೮-೪೬) ; ರಾತ್ರಿಯಂ ಬೆಳಗಲಿರ್ದ ಪೂರ್ಣೇಂದುವಿನಂತೆ ದಿವಮಂ ಧವಳಿಸಲಿರ್ದ ಸಹಸ್ರಕರನಂತೆ ಇರ್ದವಂ (ನಂಬಿರ. ೪-೧೮). ೩. ಹಗಲು ; ದಿನ : "ವಾಸರಮಹದ್ಯುದಿನಂ ದಿವಂ ಘಸ್ರಮಾ ದಿವಸಮೆನೆ ಹಗಲ ಪೆಸರೆನಿಕ್ಕುಂ" (ಮಂಗರಾ. ೨೦-೬) ; ಇದು ದಿವಮೋ ರಾತ್ರಿಯೊ ಮೇಣಿದು ದುಃಖಮೊ ರುಜೆಯೊ ಕಳವಳಮೊ ಪೇಟ್ (ಕಾದಂಪೂ. ೭೮೬). ೪. [ಛಂದ] ಒಂದು ಅಕ್ಷರಗಣ ; ನಗಣ (ಲಲಲ) : ಶ್ವಸನೇಂದುಜ್ವಲನಂ ದಿವಂ ಧರೆ ಜಲಂ ದೈತ್ಯಾದಿ ಕಾಮಾಂತಕ ಪ್ರಸರೋದ್ಯದ್ಗಣದಿಂ ತ್ರಯೋದಶಯತಿ ಪ್ರಸ್ತಾರಮಾಗಿರ್ದೊಡೆ . . . ಮತ್ತೇಭವಿಕ್ರೀಡಿತಂ (ಛಂದೋಂಬು. ೨-೦೭೫).

ದಿವನೇಱು = ಸ್ವರ್ಗಸ್ಥನಾಗು ; ದಿವಂಗತನಾಗು : ಬೂವಯ್ಯನ ಮಂಗಂ ಬಿದಿಯಾಯ್ತು ತುಱುಯನಿಕ್ಕಿಸಿ ಕಾದಿ ಸತ್ತು ದಿವನೇಱಿದ (ಎಕ. II, ೩೯೪-೧೨ ; 884 ?). ದಿವವೈದ್ಯರು = ಅಶ್ವಿನೀದೇವತೆಗಳು ; ಸ್ವರ್ಗದಲ್ಲಿಯ ವೈದ್ಯರು : "ದಸ್ರರಶ್ವಿಯರಾ ದಿವವೈದ್ಯರು" (ಮಂಗರಾ. ೭-೨೩). [ಸಂ.]

ದಿವಂಗತ (ಗು). ಸ್ವರ್ಗಕ್ಕೆ ಸಂದ ; ಸ್ವರ್ಗಸ್ಥನಾದ ; ಮೃತನಾದ : ಹಳಗನ್ನಡ ಸಾಹಿತ್ಯದೊಳಗಿನ ದುರಂತವಿನ್ಯಾಸದ ವಿಲಾಸವನ್ನು ಎತ್ತಿ ತೋರಿಸಿದ ಶ್ರೇಯಸ್ಸು ದಿವಂಗತ ಶ್ರೀಮಾನ್ ಶ್ರೀಕಂಠಯ್ಯನವರಿಗೆ ಸಲ್ಲುವುದು (ಸಾಹಿಸ. ೧೦೭) ; ದಿವಂಗತ ಲಾಲಾಲಜಪತರಾಯರು ಇಂಥ ಶಿಕ್ಷಣ ನಮ್ಮ ಜನಾಂಗದ ಪುರೋಭಿವೃದ್ಧಿಗೆ ನೆರವಾಗುವುದಿಲ್ಲವೆಂದು ಸಾರಿ . . . ಎಚ್ಚರಿಸಿದರು (ಶಿಕ್ಷದ. ೩೮೧). [ಸಂ.]

ದಿವಕುಜ (ನಾ). ದೇವಲೋಕದ ವೃಕ್ಷ ; ಕಲ್ಪವೃಕ್ಷ : ಬಿಟ್ಟು ಇವ ಕನಕಾದಿ ದಶವಿಧ ಒಟ್ಟಿನೊಳು ಜೀವನಿಗೆ ಹಿತವೆಂಬುಟ್ಟ ತೊರದಾಹಾರ ಧಾನದಿ ಪಡೆವ ದಿವಕುಜವ (ಬಿಜ್ಜಪು. ೮೮-೫೪). [ದಿವ + ಕುಜ]

ದಿವಟಿ 'ದೀವಟಿಗೆ' ನೋ.

ದಿವರಾಜ (ನಾ). ಸ್ವರ್ಗಕ್ಕೆ ಒಡೆಯನಾದವನು,– ರಾಜನಾದವನು : ಇಂದ್ರ : ದಿವರಾಜಸನ್ನಿಭ ಯುವರಾಜನೆಯ್ತಂದನವಧಾನ ಸ್ವಾಮಿ ಪರಾಕು (ಭರಕ. ೫೮-೫೦). [ದಿವ + ರಾಜ]

ದಿವರಾತ್ರಿ (ನಾ). ಹಗಲು ಮತ್ತು ರಾತ್ರಿ : ದ್ವಯವಿಡಿದುದಕ್ಕೆ ಎರಡಿಲ್ಲದೆ ಮೀಱಲಿಲ್ಲವಾಗಿ ಜಗವನಱಿವುದಕ್ಕೆ ದಿವರಾತ್ರಿಯಲ್ಲದೆ ಮೀಱಿ ತೋಱಲಿಲ್ಲವಾಗಿ (ಮೋಳಿಮಾ. ೧-೧) ; ತನ್ನ ತಾನಱಿದ ಎಚ್ಚಱಿಕೆಯಲ್ಲಿ ಅಹುದು ಅಲ್ಲವೆಂಬುದ ಕುಱುಹದೋಱಿ ದಿವರಾತ್ರಿಯಲ್ಲಿ ಉಭಯಕ್ಕೂ ದೃಕ್ಕು ಸರಿಗಾಬುದಾಗಿ ಲಕ್ಷವ ಬಿಟ್ಟು ನಿರ್ಲಕ್ಷವ ಕಂಡು ನಿಶ್ಚಯವಾಯಿತ್ತೆಂಬುದಕ್ಕೆ ಸೂಚನೆ (ಮೋಳಿಮಾ. ೧೮೯-೭೧೧) ; ತವರೂರ ಮಱೆಯಿಸಿ ನಿದ್ರೆಯ ತೊಱೆಯಿಸಿ . . . ನಮ್ಮ ದಿವರಾತ್ರಿಯೆನ್ನದೆ ಸುಖದೊಳೋಲಾಡಿಸುವವಗಡ (ಭರಕ. ೬-೩೯). [ದಿವ + ರಾತ್ರಿ]

ದಿವರಾತ್ರೆ (ನಾ). = ದಿವರಾತ್ರಿ : ದಿವರಾತ್ರೆಯೊಳಂ ಶಿವಶಿವಶಿವಯೆಂಬೀ ನೆನಹನೆನಗೆ ಕೊಟ್ಟರೆ ತಾರಾ ರವಿ ಶಶಿ ನಭವುಳ್ಳನಕಂ ನಿಮಗೆಱಗುವೆನಾಂ (ಶಂಕಕಂ. ೨೭). [ದಿವ + ರಾತ್ರೆ]

ದಿವಶೀಅಮಾವಾಸ್ಯೆ, ದೀವಸಿ ಅಮಾವಾಸ್ಯೆ (ನಾ). (ಉಕ) ಆಷಾಢ ಬಹುಳ ಅಮಾವಾಸ್ಯೆ ; ನಾಗರ ಅಮಾವಾಸ್ಯೆ ; ಭೀಮನ ಅಮಾವಾಸ್ಯೆ : ನಿನ್ನ ಮನೆಯಲ್ಲಿ ಹಳೆಯದಾದ, ಅಳತೆಗೆ ಬಾರದ ಬಟ್ಟೆಗಳಿದ್ದರೆ ಕೊಡು ನೋಡೋಣ ! ಇಂದು ದಿವಶೀ ಅಮಾವಾಸ್ಯೆ (ಸ್ಕೃತಿಚಿ. ೪೯೨). **ದೀವಸಿ ಅಮಾವಾಸ್ಯೆ** : ಆಷಾಢ ಬಹುಳ ೩೦ನೆಯ ತಿಥಿಯನ್ನು ದೀವಸಿ (ಅಮಾವಾಸ್ಯೆ) ಎನ್ನುತ್ತಾರೆ (ಭಾಹಬ್ಯ. ೯೮) ; ℙ ಶ್ರಾವಣ ಶುಕ್ಲ ಐದನೆಯ ದಿನವಾದ ನಾಗಪಂಚಮಿಯ ಕೊನೆಯಲ್ಲಿ ಬರುವ ಅಮಾವಾಸ್ಯೆಯನ್ನು ನಾಗರಅಮಾವಾಸ್ಯೆಯೆನ್ನುತ್ತಾರೆ. ಮದುವೆ

ಯಾದ ಹೆಣ್ಣುಮಕ್ಕಳಂ ದಿವಶೀ ಎಂಬ ದೇವತೆಯನ್ನು ಅಂದಂ ಪೂಜಿಸಂವುದರಿಂದ ಇದಕ್ಕೆ ದಿವಶೀ ಅಮಾವಾಸ್ಯೆಯೆಂಬ ಹೆಸರೂ ಬಳಕೆಯಲ್ಲಿದೆ. [ದಿವಶೀ$_0$ (P←ಮರಾ. ದಿವಶೀ) + ಅಮಾವಾಸ್ಯೆ]

ದಿವಸ (ನಾ). ೧. ಬೆಳಗಿನಿಂದ ಸಾಯಂಕಾಲದವರೆಗಿನ ಅವಧಿ; ಹಗಲು: "ದಿವಸಃ, ದಿವಾ, ದಿನಂ . . . ಘಸ್ರಃ – ಈ ೭ ಹಗಲ್" (ಹಲಾಯು. ೧೮-೨೦೬); "ವಾಸರಮಹ ದ್ಯು ದಿನಂ ದಿವಂ ಘಸ್ರಮಾ ದಿವಸ ಮೆನೆ ಹಗಲ ಪೆಸರೆನಿಕ್ಕುಂ" (ಮಂಗರಾ. ೨೦-೬). ೨. ಹಗಲು ಮತ್ತು ರಾತ್ರಿ ಕೂಡಿದ ಒಂದಂ ದಿನ; ಇಪ್ಪತ್ನಾಲ್ಕು ಗಂಟೆಗಳ ಅವಧಿ: ಪ್ರಶಸ್ತ ದಿವಸವಾರನಕ್ಷತ್ರಮುಹೂರ್ತದೊಳ್ ಮುಂಜಿಬಂಧನಕ್ರಿಯೆಯಂ ಮಾಡಿದ ಬಟ್ಟಿಕ್ಕೆ (ವಡ್ಡಾರಾ. ೭೩-೨೦); ದಿವಸಂಗಳ್ ವಿಧುಬಿಂಬಚುಂಬಿತ ನಭೋಭಾಗಂಗಳಾದಂದು (ಆದಿಪು. ೧೨-೨೨); ಆ ಕೀರ್ತಿಧರ ನರೇಂದ್ರನೊಂದು ದಿವಸಂ . . . ಒಡ್ಡೋಲಗದೊಳಿರ್ಪುದುಂ (ಪಂಚಾಮಾ. ೨-೨೯ ವ); ಒಂದು ತಿಂಗಳು ಬಿಟ್ಟು ಹೆಚ್ಚಿಗೆ ದಿವಸ ರಕಮು ನಿಂತರೆ (ಮುಂಬವ್ಯಾ. ೨೨ ಪ್ರಸ್ತಾವನೆ); ದಿವಸಕ್ಕೆ ತಕ್ಕ ದವಸವಾಗುವುದು (ಗಾಡಿ). ೩. ತಿಥಿ: ಅಲ್ಲಿಂ ಬಟ್ಟಿಯಂ ತಲೆಯಂ ಕಿರಿಯಿಸಿ ದಿವಸಮನಲಸದೆ ಬೆಸಗೊಳ್ವನಂತು ಗಾವಿಲನಕ್ಕುಂ (ಕವಿರಾ. ೩-೧೪೫).

ದಿವಸಂಬರಂ = ದಿನಗಳವರೆಗೂ: ಜಿನಭವನದೊಳೆಂಟು ದಿವಸಂಬರಂ ಮಹಾಮಹಮೆಂಬ ಜಿನಮಹಿಮೆಯಂ ಮಹಾವಿಭೂತಿಯಿಂ ಮಹಾಬಳಂ ಮಾಡಿ (ಆದಿಪು. ೨-೪೬ ವ). ದಿವಸ ಕೇಳು=ಶುಭ ಅಥವಾ ಅಶುಭದಿವಸವನ್ನು ವಿಚಾರಿಸು: ದಿವಸ ಕೇಳಿ ಲಗ್ನವನ್ನು ಇಡಿಸಬೇಕು (ರೂಢಿ).

[ಸಂ.]

ದಿವಸಕರ (ನಾ). ೧. ಸೂರ್ಯ; ದಿನಕರ: ದಿವಸಕರಂ ಉದಯಗಿರಿ ಶಿಖರವಿಶೇಷವಿಭೂಷಣಂ ತಮೋರಿಪುಬಳಮಂ ಪ್ರವಿಲೀನಂ ಮಾಡಿದಂ (ಕವಿರಾ. ೩-೫೭); ದಿವಸಕರಾದರ್ಶನ ಬದ್ಧವಿವರ ನವವನಜದೊಳೆಡೆವಡೆಯದ ವರಕೈರವಮಿತ್ರಕಿರಣದಂತವಳ ವಚನಂ (ಶಾಂತಿಪು. ೫-೧೪೫). ೨. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ: ವನಥಾತ್ರೀ ಚಕ್ರಂ . . . ಪದದ ಕಡೆಯೊಳ್ ಚೆಲ್ವನಾಳ್ದೆಯ್ದೆ ನಿಲ್ಕುಂ ವಿಶ್ರಾಮಂ ದಿವಸಕರನೊಳ್ (ಛಂದೋಂಬು. ೨-೧೬೨). [ಸಂ.]

ದಿವಸಕರೋದಯ (ನಾ). ಸೂರ್ಯೋದಯ: ದಿವಸಕರೋದಯಂ ತಡೆದ ಪೂರ್ವದಿಶಾರಮೆ ಮರ್ವು ಕೊರ್ವಿ ತೋಱುವ ತೆಱದಿಂದೆ ಮುನ್ನೆ ತನು ಕಾಂತಿ ಕಟಲ್ದುದು (ಪುಷ್ಪಪು. ೩-೧೦೦). [ದಿವಸಕರ + ಉದಯ]

ದಿವಸಪತಿ (ನಾ). ಹಗಲಿನ ಒಡೆಯ,-ಪ್ರಭು; ಸೂರ್ಯ: ಪಾವಕ ದಿವಸಪತಿ ಹಿಮಕರರೆ ಕಣ್ಣುಗಳು (ಪ್ರಭುಲೀ. ೨-೧೦). [ದಿವಸ + ಪತಿ$_2$]

ದಿವಸಮುಖ (ನಾ). ಪ್ರಾತಃಕಾಲ; ಹಗಲಿನ ಪ್ರಾರಂಭಕಾಲ; ದಿನಮುಖ: "ಪ್ರತ್ಯೂಷಂ ದಿವಸಮುಖಂ ಪ್ರಾತಃಕಾಲ್ಯವುಷಃಸಮಯಂ ಪ್ರಭಾತಮದು ಗೋಸರ್ಗಂ" (ವಸ್ತುಕೋ. ೧೫-೪). [ದಿವಸ + ಮುಖ]

ದಿವಸವಲ್ಲಭ (ನಾ). = ದಿವಸಪತಿ: ರಿಪುಸುಭಟನಂ ಮೂಱು ಬಾಣದೊಳೆಚ್ಚು ದಿವಸವಲ್ಲಭನ ಮಂಡಲದಲ್ಲಿಗೈದಿಸಿ ಪಚಾರಿಸಿ ಜಱಿದು ಕೂಡೆ ಬೊಬ್ಬಿಱಿದನು (ಚೈಮಿಭಾ. ೨೩-೨೦). [ದಿವಸ + ವಲ್ಲಭ]

ದಿವಸವಿರಾಮ (ನಾ). ಹಗಲಿನ ಕೊನೆ; ಸಾಯಂಕಾಲ; ಸಂಜೆ: ದೋಷಾಭಿಸಂಧಿ ದಿವಸವಿರಾಮದೊಳ್ ಅವ್ಯವಸ್ಥೆ ಜಡಾಶ್ರಯದೊಳ್ . . . ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೧ ವ).

[ದಿವಸ + ವಿರಾಮ]

ದಿವಸವ್ಯಾಪಾರ (ನಾ). ದಿನದ ವ್ಯವಹಾರ,-ಕೆಲಸ,-ನಡವಳಿಕೆ: ದಿವಸವ್ಯಾಪಾರಮಂ ತೀರ್ಚುವಂತು ತದಧಿಕೃತ ಜನಂಗಳುಮನಲಸಿಕೆಯಾಗದಂತು . . . ಕಳಿಪಿ (ಚಂದ್ರಪು. ೫-೧೨೨ ವ). [ದಿವಸ + ವ್ಯಾಪಾರ]

ದಿವಸಾಂತ (ನಾ). ಹಗಲಿನ ಕೊನೆ; ಸಾಯಂಕಾಲ: "ದಿವಸಾಂತವಪ್ಪಿರುಳು ಸಾಯಂಕಾಲಮೆನಿಕು" (ಮಂಗರಾ. ೨೦-೭). [ದಿವಸ + ಅಂತ$_2$]

ದಿವಸಾಂಧ (ನಾ). ೧. ಹಗಲು ಹೊತ್ತಿನಲ್ಲಿ ಕುರುಡಾದಂದು. ೨. ಗೂಬೆ: ಸಮಸ್ತ ವಾಯಸನಿಕಾಯಮಂ ನೆರಪಿಕೊಂಡು ದಿವಸಾಂಧನಪ್ಪರಿಮರ್ದನನಂ ನಮ್ಮ ತಂದೆಯಪ್ಪರವಿಂದಮಿತ್ರನಂ ಬಲದಿಂ ಕಾದಿಕೊಂದೆವಪ್ಪೊಡೆ ಸುಖದಿಂ ಬಾಟ್ವೆವು (ಪಂಚತಂ. ೨೦೬-೧೩).

[ದಿವಸ + ಅಂಧ]

ದಿವಸಾಧಿಪ (ನಾ). ೧. ಸೂರ್ಯ. ೨. [ಗಣಿತ] ಹನ್ನೆರಡು ಎಂಬ ಸಂಖ್ಯೆಯ ಸಂಕೇತ: ಪವಮಾನ ಚತುಷ್ಕಯುತಂ ಯತಿಯುಂ ದಿವಸಾಧಿಪರೊಳ್ ನಿಲೆ ವಸ್ತುಕವಿಪ್ರವರಸ್ತುತಮಪ್ಪದು ತೋಟಕಂ (ಛಂದೋಂಬು. ೨-೧೨೬). [ದಿವಸ + ಅಧಿಪ]

ದಿವಸಾವಸಾನ (ನಾ). ಹಗಲಿನ ಕೊನೆ; ಸಾಯಂಕಾಲ: [ಸುಯೋಧನಂ] ...ತದ್ದಿವಸಾವಸಾನ ಸಮಯದೊಳ್ ಪ್ರಾಣವಿಸರ್ಜನೋನ್ಮುಖನಾದಂ (ಗದಾಯು. ೯-೩೪ ವ); ದಿವಸಾವಸಾನದೊಳ್ ಪೆರ್ಚುವಂತೆ ತಮದೊಡ್ಡು ಪೆರ್ಚಿದತ್ತು . . . ಉತ್ಕಟಕೋಪಂ (ವರ್ಧಪು. ೩-೧೭).

[ದಿವಸ + ಅವಸಾನ]

ದಿವಸಾಷ್ಟಕ (ನಾ). ಎಂಟಂ ದಿನಗಳು: ರಸವೃತ್ತಿಯ ನೃತ್ತಮಂ ಪ್ರವರ್ತಿಸಿ ಮಗುಟ್ಟಾಪ್ರಕಾರದಿನನುಷ್ಠಿಸಿದಂ ದಿವಸಾಷ್ಟಕಂಬರಂ (ಚಂದ್ರಪು. ೪-೬೯).

[ದಿವಸ + ಅಷ್ಟಕ]

ದಿವಸೇಂದ್ರ (ನಾ). ಹಗಲಿನ ಒಡೆಯ,-ಪ್ರಭು; ಸೂರ್ಯ; ಆದಿತ್ಯ: "ರವಿ ಮಾರ್ತಂಡಂ . . . ದಿವಸೇಂದ್ರಂ ಬ್ರಧ್ನನಂಶು . . . ತರಣಿ ಸಪ್ತಾಶ್ವನಾದಿತ್ಯನಕ್ಕುಂ" (ವಸ್ತುಕೋ. ೧೧-೬೪); ದಿವಸೇಂದ್ರನಂತೆ ಸತತಂ ಭುವನವ್ಯಾಪ್ತಪ್ರತಾಪನಂಭೋನಿಧಿಯಂತವಿಕಳಗಾಂಭೀರ್ಯಯುತಂ (ವರ್ಧಪು. ೧-೭೮); ದಿವಸೇಂದ್ರನ ಕಿರಣದಂತೆ ಪರಮಾತ್ಮನ ಪರಿಣಾಮದಂತೆ ಲೋಕದಾಲೋಕದಂತೆ . . . ನಳನಳಿಸಿ ಬಳೆಯುತಿರ್ದಳ್ (ಗಿರಿಕ. ೩-೬೯ ವ). [ದಿವಸ + ಇಂದ್ರ]

ದಿವಸೇಂದ್ರಾತ್ಮಜ (ನಾ). ೧. ಸೂರ್ಯನ ಮಂಗ. ೨. ಶನಿ: ಚಾಂದ್ರಿಯೊಳೊಡಗೂಡಿದ ದಿವಸೇಂದ್ರಾತ್ಮಜನಿಂ ಮಹೇಂದ್ರಜಾಲಜ್ಞಂ (ಜಾತತಿ. ೧೫-೪). ೩. ಯಮ. ೪. ಸುಗ್ರೀವ. ೫. ಕರ್ಣ.

[ದಿವಸೇಂದ್ರ + ಆತ್ಮಜ]

ದಿವಸೇಂದ್ರಾನ್ವಾಯ (ನಾ). ಸೂರ್ಯನ ವಂಶ; ರವಿವಂಶ: ದಿವಸೇಂದ್ರಾನ್ವಾಯ ಸೋಮಾನ್ವಯ ಯದುಕುಲ ರಾಜಾಧಿರಾಜನ್ಯಕಂ ... ನೆರೆದುದ ಶೇಷಂ ಪ್ರಪೂಜಾಭಿಲಾಷಂ (ಜಗವಿ. ೧೭-೧೫).

[ದಿವಸೇಂದ್ರ + ಅನ್ವಾಯ]

ದಿವಸೇಂದ್ರಾಲಯ (ನಾ). [ಜ್ಯೋತಿ] ಸೂರ್ಯನ ಮನೆ; ಸಿಂಹರಾಶಿ: ದಿವಸೇಂದ್ರಾಲಯದೊಳ್ ಬುಧಂ ನೆಲಸೆ . . . ಜ್ಞಾನಹೀನಂ ಪರಾಭವಯುಕ್ತಂ (ಜಾತತಿ. ೧೭-೨೪). [ದಿವಸೇಂದ್ರ + ಆಲಯ]

ದಿವಸೇಶ (ನಾ). ಹಗಲಿನ ಒಡೆಯ; ಸೂರ್ಯ: ದಿವಸೇಶ ರಾತ್ರೀಶಾಧಿಕ ಗ್ರಹ ತಾರಕಾವಳಿಯಧೀಶ ಸಕಲ ಮುನೀಶರುಂ . . . ನೆರೆದೋಲಯಿಸುತಿರಲು (ಬಸಪು. ೨೪-೪೮). [ದಿವಸ + ಈಶ]

ದಿವಸ್ಪತಿ (ನಾ). ೧. ಸ್ವರ್ಗದ ಒಡೆಯ; ಇಂದ್ರ: "ಪುರುಹೂತಂ ಮಘವಂ ದಿವಸ್ಪತಿ . . . ವಾಸವಂ" (ವಸ್ತುಕೋ. ೬-೩೩). ೨. ಹಗಲಿನ ಒಡೆಯ; ಸೂರ್ಯ: ದಿವಸ್ಪತಿಗೆ ಪ್ರತಾಪಮಂ ಸುರಪತಿಗೆ ಭೋಗಮಂ ರತಿಪತಿಗೆ ಮೂಲೋಕವಾವರಿಸುವ ರೂಪಂ ಸರಿತ್ಪತಿಗೆ ಗಂಭೀರತೆಯನು ಸ್ವಾಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ . . . ಎಮಗಿಷ್ಟಸಿದ್ಧಿಯಂ ಮಾಳ್ಕೆ (ಹಚಕಾ. ೧-೧) [ಸಂ.]

ದಿವಾಂಧ (ನಾ). ೧. = ದಿವಸಾಂಧ ೧ : ನಾವೆಲ್ಲರುಂ ರಾತ್ರ್ಯಂಧರುಮವರೆಲ್ಲರುಂ ದಿವಾಂಧರುಮಪ್ಪುದಱಿಂ ಸಂಧಾನವೆಂತುಮಾಗಲಱಿಯದು (ಪಂಚತಂ. ೩೫೧-೭೦). ೨. = ದಿವಸಾಂಧ ೨ : ಪರಪುಟ್ಟನಿಂಗದಿರ್ವಕ್ಕಿ ಬಾನಾಡಿ ಹಿಂಗುರು ದಿವಾಂಧಂ (ಕುಮಾಪು. ೪-೧೯೮). [ದಿವ + ಅಂಧ]

ದಿವಾಂಧಕಿ (ನಾ). ಸುಂಡಿಲಿ. [ಸಂ. ದಿವಾಂಧಕೀ]

ದಿವಾಂಧತೆ (ನಾ). ಹಗಲುಂ ಹೊತ್ತು ಕಣ್ಣು ಕಾಣದಿರುವುದಂ : (Day blindness. ಪಾಣಿನಿ. ೫೭). [ಸಂ. ದಿವಾಂಧತಾ]

ದಿವಾಕರ (ನಾ). ೧. = ದಿವಸಕರ ೧ : ದಿವಾಕರರ್ ವ್ಯಾಕೃತಿನಾವಿಗಳ್ನೋಲ್ ದಿವಕ್ಕೆ ಪನ್ನಿರ್ವರೆ ಮುಖ್ಯರಾದರ್ (ಕಾಕ್ಕಾವ. ೧೩); (ಕಮುದ. ೪ ಪ್ರಯೋ ನೋ); ಉದಯ ಗಿರೀಂದ್ರ ಮಧ್ಯದೊಳಗನೂನ ಸಹಸ್ರ ಕರಂಗಳಿಂದವಭ್ಯುದಯಮನುಂಟುಮಾಡಲೊಗೆದಿರ್ದ ದಿವಾಕರನಂತೆ ... ನಂಬಿಯಣ್ಣನೊಪ್ಪಿದಂ (ನಂದಿಕ. ೪-೨); ಮುನಿಸಮುದಾಯ ಸಮೇತಂ ವಿನೇಯಜನವನಜವನದಿವಾಕರನಂತಾ ಮುನಿವನುವದಾಸಮಂ ಪರ್ವ ನಿಮಿತ್ತಂ ತಳೆದು (ಹುಕೋಕ. ೧-೪೬). ೨. = ದಿವಸಕರ ೨ : ದಿವಾಕರಾ ಕಾಶ ದಿನೇಶ ಪಾವಕರ್ ಸುವಿಶ್ರಮಂ ಬಂದಿರೆ ಸಪ್ತಸಂಖ್ಯೆಯೊಳ್ ಸವಿಸ್ತರಂ ನಿಲ್ವಿರೆ ಸಂದುದಿಂತುದಾತ್ತವಂಶೆ ವಂಶಸ್ಥಮೆನಿಪ್ಪನಾಮದಿಂ (ಧಂಡೋಂಬು. ೨-೦೨೮). [ಸಂ.]

ದಿವಾಕರಣಂದಿ (ನಾ). ಒಬ್ಬಾತನ ಹೆಸರು : P ಜೈನರ ಒಬ್ಬ ಪ್ರಸಿದ್ಧ ಮುನಿಯ ಹೆಸರು : ಉಭಯಸಿದ್ಧಾನ್ತಚೂಡಾಮಣಿಗಳುಂ ತ್ರೈವಿದ್ಯ ದೇವರುಮೆನಿಸಿದ ಶ್ರೀದಿವಾಕರಣನ್ದಿಸಿದ್ಧಾನ್ತರತ್ನಾಕರ ದೇವರ ಶಿಷ್ಯರ್ (ಎಳ. VIII, ನಗರ. ೫೭-೯೦ ; ಸು. 1077). [ದಿವಾಕರ + <ನಂದಿ]

ದಿವಾಕರತನಯ (ನಾ). ೧. ಸೂರ್ಯನ ಮಗ. ೨. ಕರ್ಣ : ಎಲೆ ದಿವಾಕರತನಯ ನಿನ್ನಯ ಕುಲವನಱಿಯೆಯಲಾ (ಕುವ್ಯಾಖ್ಯಾ. ೧೦-೫). ೩. ಶನಿ. ೪. ಯಮಂ. ೫. ಸುಗ್ರೀವ. [ದಿವಾಕರ + ತನಯ]

ದಿವಾಕೀರ್ತಿ (ನಾ). ೧. ನಾಯಿಂದ; ಕ್ಷೌರಿಕ; P ರಾಶ್ರಿ ಕ್ಷೌರವು ನಿಷಿದ್ಧವಾದುದರಿಂದ ಹಗಲು ಹೊತ್ತಿನಲ್ಲಿ ಮಾತ್ರ ಕರೆಯಲ್ಪಡುವವನು : "ಕ್ಷುರಮರ್ದೀ, ದಿವಾಕೀರ್ತಿಃ, ಚಂಡಿಳಃ, ನಾಪಿತಃ – ಈ ೪ ನಾವಿದಂ" (ಹಲಾಯು. ೪೭-೪೫). ೨. ಹೊಲೆಯ ; ಚಂಡಾಲ : "ದಿವಾಕೀರ್ತಿ ಪೊಲೆಯನುಂ ನಾಪಿತನುಂ" (ವಸು.ಶೋ. ೧೨೮-೬೧). ಬಡಗಿಯು ಅಕ್ಕಸಾಲಿಯು ಧ್ವಜಕಾರನು ಕಾಣಕರ ಸೂನು ಇವರೆಲ್ಲಾ ದಿವಾಕೀರ್ತಿ ಸಮರು (ಕುಶಿ. ೨೩). ೩. ಚರ್ಮಾರ : "ಪೊಲೆಯಂ ಕ್ಷೌರಕ ಚರ್ಮಕೃತ್ತ್ರಯ ದಿವಾಕೀರ್ತ್ಯಾಹ್ವಯಂ" (ನಾನಾರ್ಥ. ೧೫೩). ೪. ಗೂಬೆ ; ಉಲೂಕ. [ಸಂ.]

ದಿವಾಕೀರ್ತಿಕ (ನಾ). = ದಿವಾಕೀರ್ತಿ ೧ : ಕುಂಭಕಾರ ಸ್ವರ್ಣಕಾರ ಪರ್ಣಕಾರುಕ ವಸ್ತ್ರಶೋಧಕ ದಿವಾಕೀರ್ತಿಕ ಮುಂತಾದ ನಾನಾ ಕೈವಾಡ ಕರಣ ಚಮತ್ಕಾರವಿಶಾರದರಾದ ನಾನಾವಿಧ ಜಾತಿಜನರ್ಗಾಸ್ಪದ ನಿವೇಶನಂಗಳಂ ಕಲ್ಪಿಸಿ (ಕಳಸ್ಥ. ೬-೨). [ಸಂ.]

ದಿವಾಚರ (ನಾ). ೧. ಹಗಲಿನಲ್ಲಿ ಮಾತ್ರ ಸಂಚರಿಸುವ ವ್ಯಕ್ತಿ : ರಾತ್ರಿಂಚರರು ಕರಿಚುತ್ತ ಅಲೆಯುವುದಕ್ಕೆ ಹೊರಟರು. ದಿವಾಚರರು ನಿದ್ರಾವಶರಾದರು (ವಡಕಾ. ೩೦೪). ೨. ಚಂಡಾಲ ; ಹೊಲೆಯ. [ಸಂ.]

ದಿವಾಣ, ದಿವಾನ್, ದಿವಾನ್ತ, ದಿವಾನಂ, ದೀವಾಣ (ನಾ). ೧. ರಾಜ ಸಭಾಗೃಹ ; ಸಭಾಸ್ಥಾನ ; ದರ್ಬಾರು ; ಚಾವಡಿ : ದಿವಾಣದೊಳ್ ಮಂತ್ರಿಯರೆ . . . ಕಂಡು (ಲಕಿಚಂ. ೩೨-೬೨) ; ರಾಮನಾಥ ದಂಡಾಧಿಪ ಗೂಡಿ ದಿವಾಣಕೆ ಬಂದು (ಕುರಾಸಾಂ. ೧೦-೦೨) ; ಬಾಣಾಸುರ ಪೊಂಬಾವುಗೆ ವೆರಸಿ ದಿವಾಣವ ಪುಗಲೊಡರ್ಚಿದನು(ಪೋಕಥ. ೩೦-೫೯); ತನ್ನೊಡಲಕಾಣಲೀಯದೆ ಹೊಕ್ಕಳು ಕೃಷ್ಣರಾಯ ದಿವಾಣ ದ್ವಾರಂಗಳನುಳಿದು (ಪೋಕಥ. ೨೯-೩೭) ; ದಿವಾಣದ ಯಕ್ಕಟಿಗರೆಱಿಯ ಹನುಮನಂ ಕರೆದು (ಪ್ರಕುಪು. ೬-೭೮) ; ಸಮಸ್ತ ವಾಣಿಜರಯಂಗಡಿಸಾಲು ವ್ರಜೆಯು ಪರಿವಾರವಾಳಿಯ ವಿಕ್ಕಿ ಕಾಯ್ದರಂಬುಜದಳವಿಶಾಲನೇತ್ರನ ದಿವಾಣಮನುಯತಿಜಾಗ್ರದಿಂ ವೀರಭಟರು (ನವಕೋ. ೨೯-೩೭). ೨. ಆಡಳಿತಾಧಿಕಾರಿ ; ಕಾರಭಾರಿ : ಈಗಿನ ಶ್ರೀಗಳು ಮಠದ ದಿವಾಣರಿದ್ದಾಗ ನನ್ನ ಮಗಳು ಬಂದು ಶ್ಲೋಕ ಅಂದು ತೋರಿಸಿದಳು (ಅಕ್ಷಮೋ. ೭). ೩. ಮುಖ್ಯಮಂತ್ರಿ ; ವಜೀರ : ಪೂರ್ಣಯ್ಯನವರು ಮೈಸೂರಿನ ಮೊದಲನೆಯ ದಿವಾಣರು (ಕೂಧಿ). ೪. ತಾಲೂಕಿನ ಕಂದಾಯದ ಕೆಲಸ ನೋಡಿಕೊಳ್ಳುವ ಅಧಿಕಾರಿ. ೫. ಸರ್ಕಾರ. ೬. ಸರ್ಕಾರದ ಬೊಕ್ಕಸ ; ರಾಜ್ಯಾಧಿಕಾರಕ್ಕೆ ಸೇರಿದುದು : "ದಿವಾಣ – ಸರ್ಕಾರ (ರೆವಿನ್ಯೂ) ಬೊಕ್ಕಸ" (ಚ ತ್ರ ಪಾ. ಅನುಬಂಧ. ೪) ; ಆತನ ಮನೆ ಎಟ್ಟಿಪುರದಲ್ಲಿ ಯಿದ ಕಾರಣ ದಿವಾಣದ ರಸ್ತೆನ ಹಣವನು ಯೆಲೆಕೆಂಬಾವಿಯವರ ಮನೆಯೊಳಗೆ ಯಿಡಲಾಗಿ (ಎಳ. XII, ಪೊಳಕಾ. ೨೫-೪೦ ; 1665). ೭. ಒಂದು ಬಗೆಯ ಆಸನ ; ಸೋಫಾ : ಅವರು ತುಂಬಾ ಬಳಲಿದ್ದ ಕಾರಣ ಮನೆಗೆ ಹಿಂತಿರುಗಿದವರೇ ದಿವಾಣದಲ್ಲಿ ಒರಗಿದರು (ಕೂಧಿ) **ದಿವಾನ್** : ೫. ಸೂಪ್ರಿನ್‌ಟೆಂಡ್ಯಾಂಟ್ ಕೇವಟನ್ ಲೇಹಾರಡಿ ಸಾಹೆಬರವರ ದಿವ್ಸದಲ್ಲು ದಿವಾನ್ ಪೊಂನವು ಯಿಬೊವು ಕ ವಿಾನಾಕ್ಷೈಯ ಸಹ ಸೂಕ್ಷನವಾಗಿ ವಿರಚಿಶಿ ವೊಪ್ಪಸ್ತ ಬೆಳಿಪೀಠ (ಎಳ. I (R), ೨೪-೩ ; 1839). 'ದಿವಾನ್ ಕಚೇರಿ' ಪರಾ **ದಿವಾನ** : ೨. ಇಂಗ್ಲೀಷರು ಆಗ ಬಂಗಾಳದ ದಿವಾನರಾಗಿದ್ದರು (ಲಂಕಿಮು. ೩೭೨). ೩. ಒಂದು ಸಲ ಮೈಸೂರು ದಿವಾನರು ಬಂದು ಇಲ್ಲಿಯ ಸೊಬಗನ್ನು ನೋಡಿ (ಹುಬ್ಬಹ. ೭೦). **ದಿವಾನು** : ೮. ರಾಜ್ಯಸಭೆ : ದಿವಾನನ್ನು ಎಂದರೆ ರಾಜ್ಯಸಭೆಯನ್ನು ಕೂಡಿಸಬೇಕೆಂದು . . . ಅವಿಾರ ಅಪ್ಪಣೆ ಮಾಡಿದನು (ನಗಹೊ. ೧೩೦); **ದೀವಾಣ**: ೧. ದೀವಾಣವು ದೀವದ ಮೃಗ ವಾಸವು ಪಾವನತರದ ಹಜಾರ ಜಾವಗಳನು ಸೂಚಿಪ ಫಳಿಯಾರದ ಭಾವ ವನದನೇನೆಂಬೆ (ಅಂಜಹ. ೦೨-೩೮). ದೀವಾಣದೊಳು ಕುಳ್ಳಿರ್ದ ಕುಮಾರರು ದೇವರಾಜನ ವಿಭವದೊಳು ಸಾವಧಾನದೊಳಾಳ ನೋಡುತಿರಲು ಬಂದರಾ ವಹಿಲದೊಳತಿರಥರು (ಅಂಜಹ. ೬-೭೭).

[←ಮರಾ. ದಿವಾಣ್, ದಿವಾನ್ ; ಅರ. ಪಾರ. ದೀವಾನ್ ; ಹಿಂ. ದಿವಾನ್, ದೀವಾನ್]

ದಿವಾಣಖಾನೆ, ದಿವಾನ್‌ಖಾನೆ, ದಿವಾನಖಾನ, ದಿವಾನಖಾನೆ (ನಾ). ಭೇಟಿಯಾಗಲು ಬಂದವರನ್ನು ಸ್ವಾಗತಿಸಿ ಕುಳ್ಳಿರಿಸುವ ಸ್ಥಳ ; ಮನೆಯ ಮುಂಭಾಗದ ಹಜಾರ,–ಕೊಠಡಿ : ದಿವಾಣಖಾನೆಗೆ ಹೋಗಿ ಎಲ್ಲರ ಊಟದ ವ್ಯವಸ್ಥೆಗೆ ಹುಕುಂ ಬಿಟ್ಟನು (ಹೂರಿ. ೪೨) ; ಇದು ಜಗನ್ನಾಥಸ್ವಾಮಿಯ ದಿವಾಣಖಾನೆ, ಅದು ಅನ್ನಪೂರ್ಣಾದೇವಿಯ ಭಂಡಾರ (ಲಕಣಾ. ೮೩). **ದಿವಾನ್‌ಖಾನೆ** : ೧. ನಾವು ಸುಸಜ್ಜಿತವಾದ ದಿವಾನ್ ಖಾನೆಯಲ್ಲಿ ನಾಲ್ಕೂವರೆ ಘಂಟೆ ಆಗುವುದನ್ನೂ ವಿಶ್ವೇಶ್ವರಯ್ಯನವರು ಬರುವುದನ್ನೂ ನಿರೀಕ್ಷಿಸುತ್ತಾ ಕುಳಿತೆವು (ನಂಟರು. ೫೯). ೨. ರಾಜ ಸಭಾ ಗೃಹ ; ಓಲಗಶಾಲೆ : ದ್ವಾರಪಾಲಕನು ಮಹಾರಾಜರವರ ದಿವಾನ್ ಖಾನೆಯೊಳಗೆ ವೈಷ್ಣವಿಯನ್ನು ಕರೆದೊಯ್ದನು (ಶ್ರೀರಾಖು. ೬೩). **ದಿವಾನಖಾನ**: ೨. ಗುತ್ತಿಗೆಯ ಕ್ರಮವೆಂತೆಂದರೆ ನಂವು ದಿವಾನಖಾನ × ಹ × ಯರ (ಎಳ. III (R), ಗುಂಡ್ಲುಪೇ. ೪೬-೬; 1569). **ದಿವಾನಖಾನೆ**: ೧. ರಾಯರ ಮನೆಯ ದಿವಾನಖಾನೆಯನ್ನು ನೋಡಬಾರದೆ ! (ಅಲಮು. ೨೩) ; ಆ ದಿವಾನಖಾನೆಯಲ್ಲೊಂದು ಸೋಫವೂ, ಅದರ ಮುಂದೊಂದು ಮೇಜೂ ಇದ್ದುವು (ಪುನರು. ೩೩೭).

[←ಮರಾ. ದಿವಾಣ್‌ಖಾನ ; ಪಾರ. ಹಿಂ. ದೀವಾನ್‌ಖಾನಾ]

ದಿವಾಣಗಿರಿ, ದಿವಾನಗಿರಿ (ನಾ). ಮಂತ್ರಿಪದವಿ ; ಮಂತ್ರಿಯ ಕೆಲಸ,-ಅಧಿಕಾರ : (ಕ). **ದಿವಾನಗಿರಿ :** ಸಂಸ್ಥಾನಗಳಲ್ಲಿ ಮಠದ ಶಿಷ್ಯರು ದಿವಾನಗಿರಿ ಮೊದಲಾದ ಮಹಾಪದವಿಗಳನ್ನು ವಹಿಸಿದ್ದ ಕಾಲ (ಕಥವಿ. II, ೩೧೩) ; ಏಕಾಂಬರೆ ಮುದಲಿಯಾರರು ಈ ಪ್ರಾಂತ್ಯವನ್ನು ಆಳುತ್ತಿದ್ದ ನವಾಬರಲ್ಲಿ, ದಿವಾನಗಿರಿ ನಡಿಸಿ ತುಂಬಾ ಆಸ್ತಿ ಮಾಡಿದರು (ಕ್ರಕಾಪ. ೧).

[←ಮರಾ. ದಿವಾಣ್‌ಗಿರೀ]

ದಿವಾಣಚಾವಡಿ (ನಾ). = ದಿವಾಣ ೧ : ಕುಸುಕ ಹಜಾರ ದಿ[ಪಾಣಂ. ದಿ] ವಾಣ ಚಾವಡಿ ಪೊಸಕಿಸುಗಲ್ಲ ಹರ್ಮ್ಯತತಿಗಳಂ . . . ರಾಜಿಸಿದುದಂದಾ ರಾಜನಿಳಯ (ರಾಜವಿ. ೩-೧೩೬) ; ಕುಸುಮ ಹಜಾರ ದಿವಾಣಚಾವಡಿ ಹೊನ್ನ ಕುಸುರಿವೆಸಳ ಮಾಡಗಳ ವಿಸರವೆಸೆಯಲರಮನೆ ಕಣ್ಗೆ ರಾರಾಜಿಸು ತಿಹುದೇನ ಬಣ್ಣಿವೆನು (ಕುಂಜಸಾಂ. ೫-೫). [ದಿವಾಣ + ಚಾವಡಿ]

ದಿವಾಣಹಜಾರ (ನಾ). = ದಿವಾಣ ೧ : ಮುಗಿಲ ಮುಟ್ಟುವ ದಿವಾಣ ಹಜಾರವು ಸೊಗಸಿನ ಚಿತ್ರ ಚವಡಿಯೂ (ಜಿನಕ. ೭-೭೧).

[ದಿವಾಣ + ಹಜಾರ$_1$]

ದಿವಾಣಿ, ದಿವಾನಿ (ಗು). ೧. ಆಸ್ತಿಪಾಸ್ತಿಗಳಿಗೆ ಸಂಬಂಧಪಟ್ಟ ; ಸಿವಿಲ್ ಬಾಬತ್ತಿಗೆ ಸೇರಿದ ; ದಂಡ್ಯಾಪರಾಧವಲ್ಲದ ; ತಕ್ಸೀರಿಲ್ಲದ : ಇವನು ಮಹತ್ವದ ದಿವಾಣೀ, ಫೌಜದಾರೀ ವ್ಯಾಜ್ಯಗಳನ್ನು ತೀರಿಸುವನು (ಕಾರವ. ೬೬). **ದಿವಾನಿ** (ನಾ). ೨. ಕಂದಾಯವನ್ನು ವಸೂಲುಮಾಡುವ ಹಕ್ಕು : ಬಂಗಾಳದ ಕೆಳಗಿನ ರಾಜ್ಯಗಳ ಕಂದಾಯವನ್ನು ವಸೂಲು ಮಾಡುವ ಹಕ್ಕು (ದಿವಾನಿ) ೧೭೬೫ ರಲ್ಲಿ ಇಂಗ್ಲಿಷರ ವಶವಾಯಿತು (ಭೂಗೋಳ. ೪೨). ೩. ಸಚಿವ; ಮಂತ್ರಿ : ವಜೀರ ಪಟಾಣರ್ದಿವಾನಿಯರೆಡ ಬಲದೊಳಗೆ ಜೀನವುಟ್ಟಂತೆ ಮುಸುಕಿ ಬಲ ಬರುತಿದೆ ನೀವೆಚ್ಚರಿಸುತ ಬಿನ್ನೈಸೆ (ಸೌಂದಳಾ. ೫-೭). [←ಮರಾ. ದಿವಾಣೀ; ಫಾರ. ಹಿಂ. ದಿವಾನೀ]

ದಿವಾಣಿಅದಾಲತ್ (ನಾ).=ದಿವಾಣಿಕೋರ್ಟು: ಬೇರೆಯವರಿಗೆ ನೇಕಾರನು ತನ್ನ ಬಟ್ಟೆಗಳನ್ನು ಮಾರಿದರೆ ದಿವಾಣಿ ಅದಾಲತ್ (ನ್ಯಾಯ. ಕಚೇರಿ) ದಲ್ಲಿ ಅವನ ಮೇಲೆ ವ್ಯಾಜ್ಯ ಹೂಡುತ್ತಿದ್ದರು (ಪಾದಿಣ. ೪೪).

[ದಿವಾಣಿ + ಅದಾಲತ್$_{ಫಾ}$ (<ಅದಾಲತು)]

ದಿವಾಣಿಕಜ್ಜಿ (ನಾ). ದಿವಾಣಿ ವ್ಯಾಜ್ಯ ; ಆಸ್ತಿಪಾಸ್ತಿಗೆ ಸಂಬಂಧಪಟ್ಟ ವ್ಯಾಜ್ಯ : ದಿವಾಣೀಕಜ್ಜಿಗಳನ್ನು ಮುಸಲ್ಮಾನ ಅಥವಾ ಹಿಂದೂಶಾಸ್ತ್ರಗಳ ಆಧಾರದಿಂದ ಅವರವರ ಜಾತಿಯ ಪ್ರಕಾರ, ತೀರ್ಪುಮಾಡುವಂತೆ ವಿವ್ರಡಿಸಿದ್ದನು (ಹಿಂದುಶಾ. ೧೭೬). [ದಿವಾಣಿ + ಕಜ್ಜಿ]

ದಿವಾಣಿಕೋರ್ಟು (ನಾ). ಆಸ್ತಿಪಾಸ್ತಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ನಿರ್ಣಯಿಸುವ ನ್ಯಾಯಾಲಯ ; ಸಿವಿಲ್‌ಕೋರ್ಟು : ದಿವಾಣಿ ಕೋರ್ಟಿನ ಬೆಲೀಫರು ಜಪ್ತಿಯ ವಾರಂಟನ್ನೂ ತುರಂಗ ವಾರಂಟನ್ನೂ ಕೈಯಲ್ಲಿ ಹಿಡಕೊಂಡು ಎಡತಾಕುತ್ತಾರೆ (ಮೋಹನೀ. ೫).

[ದಿವಾಣಿ +ಕೋರ್ಟು]

ದಿವಾಣಿಬಾಬು (ನಾ). ಆಸ್ತಿಪಾಸ್ತಿಗೆ ಸಂಬಂಧಿಸಿದ ವಿಷಯ : ಕೊಂಡು ಕೊಳ್ಳುವ ವ್ಯವಹಾರ, ಕರಾರುಪತ್ರ, ದಾನಕೊಡುವುದು, ಪಿತ್ರಾರ್ಜಿತ ಸೊತ್ತಿನ ಬಾಧ್ಯಸ್ಥಿಕೆ ಮುಂತಾದ "ದಿವಾಣಿ" ಬಾಬುಗಳ ಬಗ್ಗೆ ಕಾಯದೆ ಗಳಾಗಿದ್ದವು (ಹಿಂದುಶಾ. ೬೨). [ದಿವಾಣಿ + ಬಾಬು$_1$]

ದಿವಾನ್ ‘ದಿವಾಣ’ ನೋ.

ದಿವಾನ್‌ಕಚೇರಿ, ದಿವಾನ್ ಕಛೇರಿ (ನಾ). ಸಿವಿಲ್ ಬಾಬತ್ತಿನ ವಿಷಯಗಳನ್ನು ನಿರ್ಣಯಿಸುವ ಕಚೇರಿ: ೧೮೧೩ ಇಸವಿ ದಾಖದಪ್ಪರ ಕಂನಡಿ ಹಿರಣ್ಣಪ್ಪ ದಿವಾನಕಚೇರಿ ಹಜೂರು (ಮೈಆರಿ. ೧೯೫೯, ೯೪-೪ ; 1813). **ದಿವಾನ್‌ಕಛೇರಿ :** ಕಛೇರಿಗಳು-೧ ದಿವಾನ ಕಛೇರಿ . . . ೧೮ ಜಿಲ್ಲೋ ಕಛೇರಿ (ಮಹಾಪಂ. II, ೩೮). [ದಿವಾನ್ (<ದಿವಾಣ) + ಕಚೇರಿ]

ದಿವಾನ್‌ಕಛೇರಿ ‘ದಿವಾನ್‌ಕಚೇರಿ’ ನೋ.

ದಿವಾನ್‌ಖಾನೆ ‘ದಿವಾಣಖಾನೆ’ ನೋ.

ದಿವಾನ ‘ದಿವಾಣ’ ನೋ.

ದಿವಾನಖಾನ ‘ದಿವಾಣಖಾನೆ’ ನೋ.

ದಿವಾನಖಾನೆ ‘ದಿವಾಣಖಾನೆ’ ನೋ.

ದಿವಾನಗಿರಿ ‘ದಿವಾಣಗಿರಿ’ ನೋ.

ದಿವಾನಾ (ಗು). ಮೂರ್ಖನಾದ ; ಪೆದ್ದ ; ಹುಚ್ಚಾದ : (ಕ).

[←ಫಾರ. ಹಿಂ. ದೀವಾನಾ; ಮರಾ. ದಿವಾಣಾ, ದಿವಾನಾ]

ದಿವಾನಾಡಿ (ನಾ). ಶರೀರದ ಎಡಭಾಗದಲ್ಲಿರುವ ನಾಡಿ: ಈ ಸ್ತ್ರೀಪುರುಷ ನಾಡಿಗಳಿಗೆ ದಿವಾನಾಡಿಗಳೆಂತಲೂ, ರಾತ್ರಿನಾಡಿಗಳೆಂತಲೂ ವ್ಯವಹಾರ ಉಂಟು (ಹಸಾರ. ೪-೬ ಶಾಸ್ತ್ರಿಯರ್). ‘ಪುರುಷನಾಡಿ’ ಪರಾ. [ಸಂ.]

ದಿವಾನಿ ‘ದಿವಾಣಿ’ ನೋ.

ದಿವಾನು ‘ದಿವಾಣ’ ನೋ.

ದಿವಾಬಲಿ (ನಾ). ಹಗಲಿನಲ್ಲಿ ಬಲಿಷ್ಠವಾದುದಂ: ಲಲನಾ ವೃಶ್ಚಿಕ ತೌಳಿ ಕುಂಭ ಹರಿಗಳ್ ಶೀರ್ಷೋದಯಂಗಳ್ ದಿವಾಬಲಿಗಳ್ (ಜಾತಕ. ೧-೪೯).

[ಸಂ. ದಿವಾಬಲಿನ್]

ದಿವಾಮಧ್ಯ (ನಾ). ದಿನದ ಮಧ್ಯದ ಅವಧಿ; ಮಧ್ಯಾಹ್ನ. [ಸಂ.]

ದಿವಾಮೈಥುನ (ನಾ). ಹಗಲಿನಲ್ಲಿ ನಡೆಸುವ ಸಂಭೋಗ : ದಿವಾ ಮೈಥುನ ದಿವಾನಿದ್ರೆಗಳಂ ಮಾಡಲಾಗದಂ (ವಿವೇಕ. ೦೫೦); ವಿವಾಹವಾದ ಸ್ತ್ರೀಯಲ್ಲೂ ದಿವಾಮೈಥುನವನ್ನು ಈ ನೆಲೆಯ ಗೃಹಸ್ಥನು ಬಿಡುತ್ತಾನೆ (ಭಾರದ. ೧೮೪). [ಸಂ.]

ದಿವಾಮೈಥುನವಿರತ (ನಾ). [ಜೈನ] ಹಗಲಿನಲ್ಲಿ ನಡೆಸುವ ಸಂಭೋಗ ಅಥವಾ ಅದರ ಬಯಕೆಯನ್ನು ನಿಷೇಧಿಸುವ ವ್ರತವನ್ನು ಕೈಗೊಂಡವನಂ : ದರ್ಶನಿಕಃ ದರ್ಶನೀಕನೆಂದು ಅರ್ಥ ಅನಂತರದಲ್ಲಿ ವ್ರತಿಕಃ ವ್ರತಿಕನೆಂದು . . . ದಿವಾಮೈಥುನವಿರತೌಃ ದಿವಮೈಥುನವಿರತವೆಂಬೀ ಸಚ್ಚಿತ್ರದಲ್ಲಿಯೆಯಿಹುದು (ಸಾಗಾಧ. ೫೯-೨).

[ದಿವಾಮೈಥುನ + ವಿರತ]

ದಿವಾಮೈಥುನವಿರತಿ (ನಾ). [ಜೈನ] ಹಗಲಿನಲ್ಲಿ ಸಂಭೋಗವನ್ನು ಅಥವಾ ಅದರ ಬಯಕೆಯನ್ನು ನಿಷೇಧಿಸುವ ವ್ರತ : ದಿವಾಮೈಥುನವಿರತಿ:-ಇಲ್ಲಿ ಮೈಥುನ ಶಬ್ದಕ್ಕೆ ವಿಶಾಲವಾದ ಅರ್ಥವಿದೆ. ಮೈಥುನವೆಂದರೆ ಕೇವಲ ಕಾಯಿಕ ಭೋಗವೆಂದಿಷ್ಟೇ ಅಲ್ಲ . . . ಮನ ವಚನಗಳು ಶುದ್ಧವಾಗಿರುವ ಉದ್ದೇಶದಿಂದ ದಿವಾಮೈಥುನವಿರತಿಯನ್ನು ಜೈನಶಾಸ್ತ್ರಗಳು ಒತ್ತಿ ಹೇಳುತ್ತಿವೆ (ಜೈನಪ. ೪೭೭).

[ದಿವಾಮೈಥುನ + ವಿರತಿ]

ದಿವಾರಾತ್ರ (ನಾ). = ದಿವಾರಾತ್ರಿ. [ಸಂ.]

ದಿವಾರಾತ್ರಿ (ನಾ). ೧. ಹಗಲು ಮತ್ತು ರಾತ್ರಿ: ದಿವಾರಾತ್ರಿಯುಳ್ಳನ್ನಬರೆ ಎನ್ನ ಮನ ಜಿಹ್ವೆ ನೇತ್ರಂಗಳಿಗೆ ಬಂಧನಂಗಳೆಂಬಿವು ಮುಂದುಗೆಡುವವಯ್ಯ (ಕನವ. ೩-೧) ; ಅಂದು ಮೊದಲಾಗಿ ಮಾಲಿನಿ ದಿವಾರಾತ್ರಿಯೊಳ್ಕಂದದೆ ಕೃತಾಂತನಂ ನಾನಾವಿಧಾನಗಳಿಂದೆ ಪೂಜಿಸುತಿರ್ದಳು (ಜೈಮಿಭಾ. ೨೭-೧೭). ೨. ಹಗಲು ಅಥವಾ ರಾತ್ರಿ : (ಕ). ‘ದಿವರಾತ್ರಿ’ ಪರಾ.

[<ಸಂ. ದಿವಾರಾತ್ರ]

ದಿವಾವಸಾನ (ನಾ). = ದಿವಸಾಂತ. [ದಿವ + ಅವಸಾನ]

ದಿವಾಸ್ವಾಪ (ನಾ). ಹಗಲಿನಲ್ಲಿ ಮಾಡುವ ನಿದ್ರೆ ; ಹಗಲುನಿದ್ದೆ : ಶ್ರೀ ಪದ್ಮದೊಳೊದವೆ ಮನಸ್ತಾಪಂ ಪುಟ್ಟಿದುದೊ ತಮಗೆ ರುಚಿಯಾಯ್ತೊ ದಿವಾಸ್ವಾಪ[ಪಾಣಂ. ದಿವಸ್ವಾಪ]ದಿನೆನೆ ನಯವಿಮುಖದವೊಲೊಪ್ಪಿದುವು ಮಧುಪ್ರವೇಶದೊಳ್ ಕುಮುದಾಂಗಳ್ (ಲೀಲಾವ. ೯-೮೭). [ಸಂ.]

ದಿವಾಳಿ₁, ದೀವಳಿ (ನಾ).=ದೀಪಾವಳಿ: "ದಿವಾಳಿ (ದಿವಳಿ)–ದೀಪಾವಳೀ" (ತದ್ಭಕೋ. ೧೯) : ನಿವಾಳಿಗೆ ತಂದ ಬಟ್ಟೆ ಕಚ್ಚಿಗೆ ಆದರೆ ದಿವಾಳಿಗೆ ಏನು ಮಾಡ್ಯಾನು? (ಗಾದೆ). **ದೀವಳಿ:** ದೀವಳಿಯ ಚತುರ್ದಶಿಗಳೊಳಾವಗಮಲು ಗಗನವೆಲ್ಲವುಂ ಪಾಡಿಸಿಕೊಂಡಾ ವಾಸರದೊಳು ಕಟ್ಟಿದೊಡೇವೇಬ್ಬುದೆ ಭೂತರಕ್ಷೆಯೆಂಬರ್ಮೂಢರ್ (ಸಮಪ. ೩೭೮-೧೩ ಅನುಬಂಧ).

[<ಸಂ. ದೀಪಾವಲೀ]

ದಿವಾಳಿ₂ (ನಾ). ೧. ಎಲ್ಲವನ್ನೂ ಕಳೆದುಕೊಂಡು ದಾರಿದ್ರ್ಯಕ್ಕೆ ಗುರಿಯಾದವನಂ; ಪಾಪರು ; ನಿರ್ಗತಿಕ; ನಾದಾರಿ (ಉಕ) : ಧನವಿದ್ದರೂ ಕೊರಗುವ ಸ್ಥಿತಿಗೂ ದಿವಾಳಿಯು ಕೊರಗುವ ಸ್ಥಿತಿಗೂ ವ್ಯತ್ಯಾಸವುಂಟೇ (ಜೀವಾತ್ಮ. ೩೭೩). ೨. ಅತಿಯಾದ ಖರ್ಚು ; ದಂಂದಂಗಾರಿಕೆ: ಅಂದು ಸೇತುರಾಮನಿಗೆ ದಳ್ಳಾಳಿಗಳಿಂದ ವಿಶೇಷ ಹಣವು ಸಿಕ್ಕಿದ್ದಿತು. ಅದರ ದಿವಾಳಿಯಲ್ಲಿ ಮದಿರಾಪಾನ ಅಧಿಕವಾಯಿತು (ಜಯಂತ. ೩೭೩).

ದಿವಾಳಿ ಎಬ್ಬಿಸು = ಏನೂ ಉಳಿಯದಂತೆ ಮಾಡು : ಮನೆಯನ್ನು ಗುಡಿಸಿಬಿಡಲು ನನಗೆ ಯಾವಾಗ ಅವಕಾಶವಾದೀತು ಎಂಬುದೇ ಟಳಕರ ಚಿಂತೆ. ನಾನು ಹೊರಬಿದ್ದೆನೋ, ಅವರು ದಿವಾಳಿ ಎಬ್ಬಿಸಿದರೇ. ಆಮೇಲೆ ನನ್ನ ಶಂಖವಾದ್ಯ! (ಸ್ಮೃತಿಚಿ. ೩೧೯). **ದಿವಾಳಿ ಏಳು** = ಎಲ್ಲವನ್ನೂ ಕಳೆದುಂಕೊಂಡು ದಾರಿದ್ರ್ಯಕ್ಕೆ ಗುರಿಯಾಗು ; ಪಾಪರಾಗು : ಆತ ಯಾವುದೋ ವ್ಯವಹಾರದಲ್ಲಿ ಸಿಲುಕಿಕೊಂಡು ದಿವಾಳಿ ಏಳುವ ಸ್ಥಿತಿಗೆ ಬಂದ (ಕೂಡಿ). **ದಿವಾಳಿ ತೆಗೆ** = ೧. ಪೂರ್ಣ ದಾರಿದ್ರ್ಯಕ್ಕೊಳಗಾಗು ; ನಿರ್ಗತಿಕವಾಗು : ಕನ್ನಡ ಕಂಪನಿ ದಿವಾಳಿ ತೆಗೆಯುವ ಸ್ಥಿತಿಗೆ ಬಂದು (ನಾಪೋೀ. ೧೬೧). ೨. = ದಿವಾಳಿ ಎಬ್ಬಿಸು : ಇದರ ವ್ಯವಹಾರವನ್ನೆಲ್ಲ ಸೆಕ್ರೆಟರಿಯ ಕೈಗೊಪ್ಪಿಸಿಬಿಟ್ಟರೆ ಎಲ್ಲ ದಿವಾಳಿ ತೆಗೆದು ಬಿಟ್ಟಾಳು (ಬದುಜ. ೧೪೧). **ದಿವಾಳಿದಾಸ** = ನಿರ್ಗತಿಕ ; ದರಿದ್ರ : ಅವನೇನೋ ದಿವಾಳಿದಾಸ ನಿರಬಹುದು (ವಿಧಿವ್ಯ. ೩೨). **ದಿವಾಳಿಯಾಗು** = ದಿವಾಳಿ ತೆಗೆ ೧ : ಇಂದು ಶ್ರೀಮಂತರಾಗಿದ್ದವರು ನಾಳೆ ದಿವಾಳಿಯಾಗುವುದೂ ಇದೆ (ವಿಧಿವ್ಯ. ೯೧) ; ಇಂದೋ ನಾಳೆಯೋ ದಿವಾಳಿಯಾಗುವ ಕಾರ್ಖಾನೆ ಅದು (ಸಾವಿಸ. ೩) ; **ದಿವಾಳಿಹನುಮ** = "ದುಂದಂಗಾರೆ" (ಜಾನಕೋ. ೫).

[←ಮರಾ. ದಿವಾಳೂ, ದಿವಾಳೇ ; ಹಿಂ. ದಿವಾಲಾ]

ದಿವಾಳಿಖೋರ (ನಾ). ೧. ದರಿದ್ರ : ನಿರ್ಗತಿಕ ; ಪಾಪರಾದವನು ; ನಿಮ್ಮಲ್ಲಿ ದಯೆಯನ್ನು ಕಂಡು ನಾನು ಯಾವ ಗಾಳಿಗೋಪುರವನ್ನೂ ಕಟ್ಟಲಾರೆ ಅಥವಾ ನಿಮ್ಮನ್ನು ದಯಾಶೂನ್ಯ ದಿವಾಳಿಖೋರರನ್ನಾಗಿಯೂ ಮಾಡಲಾರೆ (ಜಯಂತ. ೪೬೪). ೨. ದಂಂದುವೆಚ್ಚ ಮಾಡುವವನಂ ; ದಂಂದುಗಾರ : (ಈ). [←ಮರಾ. ದಿವಾಳಿಖೋರ್]

ದಿವಾಳಿತನ (ನಾ). ಸಾಲ ತೀರಿಸಲಾಗದಿರಂವುದು ; ಪಾಪರಾಗಂವುದಂ : ದಿವಾಳಿತನ ಮತ್ತು ಶೋಧಾಕ್ಷಮತೆ (ಧಾದಾನ. ೩೯೪).

[ದಿವಾಳಿ₂ + – ತನ]

ದಿವಿ (ನಾ). ೧. ಸ್ವರ್ಗ ; ದೇವಲೋಕ : ಕೊಟ್ಟಿಗೆ ಮನೆಯಲ್ಲಿ ಅಟ್ಟವು ದಿವಿಯಲ್ಲ ಫಟ್ಟವು ಮೇರು ತಾನಲ್ಲ (ತಿಂತಾಪ. ೧೧೧-೪೨) ; ಓ ದಿವ್ಯ ಚೇತನೆಗಳೆ . . . ಬೆವಿಗೆ ದಿವಿಯ ತನ್ನಿ! (ಅನಿಕೀ. ೨೧-೬). ೨. ಗಗನ ; ಆಕಾಶ: ಇಂದುರುಚಿ ಬಲಿದುದೂ ಹರಸ್ಮೇರಂ ದಿವಿಯೊಳಾಕಾರವಮಾಯ್ತೊ ಹಿಮಂದಳಿದುದೋ ಕರಿಣಮಂ ಸುಧೆ ಬೆಳೆದಚಲಮಾಯ್ತೊ . . . ಎಸೆ ರಜತಾದ್ರಿ ರಂಜಿಪುದು (ಬಸಪು. ೧-೩೮) ; ಭರತನು ಮೇಣು ಮುಂದಲೆವಿಡಿದು ನೆಲಕಪ್ಪಳಿಸಿ ಚಿಮ್ಮಿದ ದಿವಿಗೆ ಮಂದರೆಯಾ (ಆನಂರಾ. ೨-೩-೨೫). ೩. ದಿನ; ಹಗಲು. ೪. [ಗಣಿತ] ಸೊನ್ನೆ ಎಂಬುದರ ಸಂಕೇತ: ಗಗನಾಂಬರ ದಿವಿಯು ಶೂನ್ಯಂ (ಧಾಸ್ಕರ. ೭೪-೬). [<ಸಂ. ದಿವ]

ದಿವಿಜ (ಗು). ೧. ಸ್ವರ್ಗದಲ್ಲಿ ಹುಟ್ಟಿದ,– ಜನಿಸಿದ ; ದೇವಲೋಕಕ್ಕೆ ಸಂಬಂಧಿಸಿದ ; ಶ್ರೇಷ್ಠವಾದ. 'ದಿವಿಜಕಂಜ' ಪರಾ. (ನಾ). ೨. ಸ್ವರ್ಗದಲ್ಲಿ ಹುಟ್ಟಿದವನು; ದೇವತೆ: ದಿವಿಜನೋ ಫಣನಾಯಕನೋ ಮನೋಭವನಿವಂ ಕರಮೊಪ್ಪಿದಂ (ಕವಿಗಾ. ೧-೧೪೦) ; ಪೆಂಪಿನ ಜಿತ ಶತ್ರುವುಂ ವಿಜಯಸೇನೆಯುಮಿರ್ವರೆ ಪುಣ್ಯಭಾಜನರ್ ಎಂದು ದಿವಿಜರೆಲ್ಲಂ ಪೊಗಟ್ (ಆಜಿಪು. ೪-೧೯ ವ) ; ವನಜಜ ಬನ್ನಿಂ . . . ಪದಾವನತಿ. ಯಿನೇಲ್ ಮಹೇಂದ್ರ ದಿವಿಜರ್ ವುಗೆ ಬಾರಿಸವೇಡೆನುತ್ತೆ . . . ಸುಟ್ಟ ಯೊಳ್ ಕನವರಿಸುತ್ತುಮಿರ್ಪ ಹರಿ ಗೋಪಿಗೆ ವಿಸ್ಮಯಮಂ ಸೆಗಟ್ಟಿದಂ (ಜಗವಿ. ೩-೫೮). ೩. [ಛಂದ] ಒಂದಂ ಅಕ್ಷರಗಣ; ನಗಣ (ಲ ಲ ಲ): ದಿವಿಜ ದಿನಾಧಿವ ಭಾನು ಶೀತಕರಾಗ್ನಿಯೆಂದಿವು ನೆರೆದಿಂಬೆನೆ ಬಂದೂಡಾಯತಿ ಹತ್ತಉತ್ತವತರಿಸಿರ್ದೊಡಮಂಬುಜಾಯತಲೋಚನೇ ನವನಲಿನಂ (ಛಂದೋಂಬು. ೨-೧೫೭). [ಸಂ.]

ದಿವಿಜಗ್ಗಟವಲ್ಲಹ = ಒಂದು ಬಿರುದಂ : ಒಗಬಳ್ಳಿಯುಳಿಪಿದು ವಿಟ್ಟಿಂ ಗುಣಶೀಲರಾಣದ ಸೀ × × ವೊಟ್ಟರಾವ ಕೊವಳಾಟ ಮಹೇಸ್ವರ ದಿವಿಜಗ್ಗಟವಲ್ಲಹ ಪೆಂಮಾಳ್ವಡಿಂ (ಎಕ. XVI, ತುಮಕೂ. ೯೧-೦೪ ; ಸು. 775). [ಸಂ.]

ದಿವಿಜಕಲ್ಪಲತೆ (ನಾ). [ಛಂದ] ಒಂದಂ ಅರ್ಧಸಮವೃತ್ತದ ಹೆಸರು: ಪಾವಕಾಮರಗಣಾನಲಂ ಲಗಂ ದಿವಿಜಚಂದ್ರಕುಮುದಾರಿ ಪಾವಕಂ ಭಾವಿಸುತ್ತುಮಿರೆ ಕೋಮಲಾಂಗಿಯೇ ದಿವಿಜ [ಪಾಠಾಂ. ಕೋಮಲೋಕ್ತಿ ಸಂಭವಿಸಿ] ಕಲ್ಪಲತೆಯಪ್ಪು ನಾಮದಿಂ (ಛಂರೂ೧೦ಬು. ೩-೩೦೪). [ದಿವಿಜ + ಕಲ್ಪಲತೆ]

ದಿವಿಜಕಾಂತೆ (ನಾ). ದೇವತಾಸ್ತ್ರೀ ; ಅಪ್ಸರೆ : ಅವಯವಶೋಭೆಯಿಂ ದಿವಿಜಕಾಂತೆಯರಂ ಎಗುವೀ ಎಲಾಸಿನೀನಿವಹದ ವಕ್ಕದೊಳ್ಸರಸಿಜಂ . . . ನೇತ್ರದೊಳ್ ಕುವಳಯಮಲ್ತೆ ಮಚ್ಚರಿಸುತಿರ್ಪುವು (ಮಲ್ಲಿಪು. ೬-೯೩)

[ದಿವಿಜ + ಕಾಂತೆ]

ದಿವಿಜಕುಜ (ನಾ). (ಕೇಳಿದಂದನ್ನು ನೀಡುವುದೆಂದು ನಂಬಲಾದ) ದೇವಲೋಕದ ವೃಕ್ಷ; ಕಲ್ಪವೃಕ್ಷ: ದಿವಿಜಕುಜಂಗಳಾರವೆಗಳಾದುವು ಸಿದ್ಧರಸಂ ತಟಾಕಮಾದುವು (ಪಂರಾಮಾ. ೩-೧೧೯) ; ದಿವಿಜಕುಜಂಗಳ್ ಪುಟ್ಟಿದುವು (ವರ್ಧಪು. ೬-೩೦) ; ದಿವಿಜತರುಜದೇಳ್ದ ಕೀಳ್ವಡೆ ಸುವಸ್ತ್ರಮಣಿಭೂಷಣಾಂಗಳಂ ಪದದಿತ್ತಂ (ರಾಜಶೀ. ೧೨-೯೯). [ದಿವಿಜ + ಕುಜ]

ದಿವಿಜಕುಜಾತ (ನಾ). = ದಿವಿಜಕುಜ : ಸಕಳಫಳೈಶ್ವರ್ಯದಿಂ ಲೋಕಮಂ ರಕ್ಷಿಸುತ್ತಿರ್ಕ್ಕಾ ಪೂರ್ಣಚೇತೋರಥಯುತಂ ಕಮಳಾಕಲ್ಪವಲ್ಲೀವಿಳಾಸಾವಸಥಂ ಶ್ರೀವಿಷ್ಣುದಂಡಾಧಿಪ ದಿವಿಜಕುಜಾತಂ (ಎಕ. V, ಕೀರೂರು. ೧೭-೩೭ ; 1136). [ದಿವಿಜ + ಕುಜಾತ]

ದಿವಿಜಕ್ಷ್ಮಾಜ (ನಾ). = ದಿವಿಜಕುಜ: ಪತಾಕಾನ್ವಿತಂಗಳ್ದಿವಿಜಕ್ಷ್ಮಾಜಪ್ರಸೂನ ಪ್ರಸರ ಸರಯುತಂಗಳ್ಕಪಾವುಷ್ಕಕಂಗಳ್ (ರಾಜಶೀ. ೧೪-೧೨೬).

[ದಿವಿಜ + ಕ್ಷ್ಮಾಜ]

ದಿವಿಜಪೇಟಕ (ನಾ).=ದಿವಿಜಪುರ : ಸವವಯಸ ದಿವಿಜಪೇಟಕ ನವಪೇಟಕ ನಿಕರಮಗಲದಿರಲಬ್ಧಿಯ ಮೇರುವ ಕೆಲದ ಗಿರಿಕದಂಬಕದವಜ್ಜಿಯಂ ಪೋಲ್ತುದಾ ಕುಮಾರನ ಕೆಲದೊಳ್ (ಶಾಂತಿಪು ೧೦-೪೧).

[ದಿವಿಜ +ಪೇಟಕ]

ದಿವಿಜಗಜ (ನಾ). ದೇವಲೋಕದ ಆನೆ; ಐರಾವತ: "ಐರಾವಣಮಭ್ರ ಚ್ವಿಪಮೈರಾವತಮಭ್ರಮೂಷ್ರಿಯಂ ದಿವಿಜಗಜಂ" (ವಸ್ತುಕೋ. ೭-೩೭); ದಿವಿಜಗಜಂ ಸೆಜ್ಜರದಿಂದವೆಬ್ಬುದು (ಜಗವಿ. ೧೭-೦೩೮) : ದಿವಿಜಗಜಾಗ್ರ ದೊಳಿರ್ದುಂ ಭುವನಾಗ್ರದೊಳಿರ್ದನೆನಿಸಿದಂ (ಚಂದ್ರಪು. ೦೨-೧೭೫).

[ದಿವಿಜ + ಗಜ]

ದಿವಿಜಚಾಪ (ನಾ). ಕಾಮನ ಬಿಲ್ಲು ; ಇಂದ್ರಚಾಪ : ದಿವಿಜಚಾಪಮೆಂತಂ ತುಟೆ ಭವವಿಭವಾಭಿಜಾತ್ಯಮೆಂತುಮನಿತ್ಯಂ (ಸುಕುಮಾ. ೧೨-೨೭).
[ದಿವಿಜ + ಚಾಪ]

ದಿವಿಜಜನ (ನಾ). ದೇವಲೋಕದ ಜನ ; ದೇವತೆಗಳ ಸಮೂಹ : ದಿವಿಜಜನಸೇವಿತಂ ಭುವನವಂದ್ಯಮಾಹ್ಲಾದಿತತ್ರಿಲೋಕಂ (ಆದಿಪು. ೧೦-೫೮); ನಿನಗನ್ವರ್ಥಂ ಶ್ರೀಧರವಿನುತಾಹ್ವಯಮೆಂದು ಪೊಗಟ್ಟುದಾ ದಿವಿಜಜನಂ (ಪಂಪ್ರಪು. ೪-೬೮). [ದಿವಿಜ + ಜನ]

ದಿವಿಜತಟಿನಿ (ನಾ). ದೇವಲೋಕದ ನದಿ ; ದೇವಗಂಗೆ : ಅರ್ಜುನನ ತಲೆಯನಾತನ ಸುತಂ ಕೊಚ್ಚಿ ಕೆಡಹಲಿ ತಿಂಗಳಾಱಕಾಹವದೊಳೆಂದುಚ್ಚರಿಸಿ ಶಾಪಮಂ ಕೊಟ್ಟಡಗಿದಳ್ಜಲದ ಮಧ್ಯದೊಳ್ದಿವಿಜತಟಿನಿ (ಕೃಮಿಭಾ. ೯-೩೨). [ದಿವಿಜ + ತಟಿನಿ]

ದಿವಿಜತನಯ (ನಾ). ೧. ಇಂದ್ರನ ಮಗ. ೨. ಅರ್ಜುನ : ದಿವಿಜತನಯಂಗೆ ಮುಖ್ಯಂ ರವಿಜಂಗಂದಾದನೆನಗೆ ಕಣ್ಣೊಳ್ ಕಾಣಂ ಕಿವಿಯೊಳ್ ಕೇಳಂ ಕಾಣ್ಬಂದವೆಂತು ಕೇಳ್ವಂದುಮೆಂತು ತಲೆಯಿಲ್ಲದರಂ (ಗದಾಯು. ೫-೩೬). ೩. ಜಯಂತ. ೪. ವಾಲಿ.
[ದಿವಿಜ + ತನಯ]

ದಿವಿಜತುರಂಗ (ನಾ). ದೇವಲೋಕದ ಕುದುರೆ ; ಇಂದ್ರನ ಪಟ್ಟದ ಕುದುರೆ ; ಉಚ್ಚೈಶ್ರವಸ್ಸು : "[ತುರಗಮ]ದುಚ್ಚೈಶ್ರವಸಮದುವೆ ದಿವಿಜತುರಂಗಂ" (ವಸ್ತುಕೋ. ೭-೩೬). [ದಿವಿಜ + ತುರಂಗ$_1$]

ದಿವಿಜತೆ (ನಾ). ದೇವತೆಯಾಗಿರುವಿಕೆ : ದೇವಲೋಕದಲ್ಲಿ ಹುಟ್ಟಿರುವಿಕೆ; ದೈವತ್ವ: ದಿವಿಜತೆಯಿಂ ದಿವಸಂಗಳ ಪವಣಱಿಯಲ್ಬಾರದಾದೊಡಂ ಸೊಗಯಿಸಿ ತೋರ್ಪವಯವದಿಂದಂ ಪದಿನೆಂಟು ಬರಿಸದಾಕೃತಿಯಿನಬ್ಜಮುಖಿ ಕಣ್ಗೆಸೆದಳ್ (ಕಾದಂಪೂ. ೬೮೦) ; ದಿವಿಜತೆಯ ಮೂರ್ತಿಯೆ ಮೆಯ್ಯಿಕ್ಕುವುದು ತಾನೆ ಗಡ ಮಾಣ್ದುದದು ಚೆಲ್ವಲ್ತೆಂದವನ ಮನುಜತೆಯ ತನು ನೋಟ್ಪವರೊಳ್ ಮಾಣಿಸಿದುದಾದಮೆಮೆಯಿಕ್ಕುವುದಂ (ಪಂಪ್ರಪು. ೪-೮೩). [ಸಂ. ದಿವಿಜತಾ]

ದಿವಿಜದಲ್ಲಣ (ನಾ). ದೇವತೆಗಳಿಗೆ ಹೆದರಿಕೆಯನ್ನುಂಟುಮಾಡುವವನು; ದೇವತೆಗಳನ್ನು ತಲ್ಲಣಗೊಳಿಸುವವನು: ದಿವಿಜದಲ್ಲಣ ಜೀಯ ಕಾದುವನಿವನು ಸಾವನ್ನೆವರ ಸವೆಯನು ಸಮರದಲಿ ನಿಪುಣ (ಕೌಶಿಕಾ. ೩೦-೨೨).
[ದಿವಿಜ + ತಲ್ಲಣ (<ತಲ್ಲಟ)]

ದಿವಿಜದೀರ್ಘಿಕೆ (ನಾ). ದೇವಲೋಕದ ನದಿ ; ಗಂಗಾ ನದಿ : ಅಂತು ಪಾತಾಳಮೂಲಂಬರಂ ಮುಟುಗಿ ದಿವಿಜದೀರ್ಘಿಕೆಯೊಳ್ ಮುಟುಗಿ ನೆಗೆವ ಅಭ್ರಮೂಪತಿಯಂತೆ ನೆಗೆಯಲೊಡಂ (ಪಂಪ್ರಪು. ೫-೪೩ ವ). [ದಿವಿಜ + ದೀರ್ಘಿಕೆ]

ದಿವಿಜಧುನಿ (ನಾ). ದೇವಲೋಕದ ನದಿ ; ಗಂಗಾನದಿ : ಸ್ಫುರಿಪಾಭದಾನದಿಯುತ್ತರಗಿರಿಯೆಲ್ಲಮನತಿಕ್ರಮಿಸಿ ಬಳಿಕೆ ಪೊನಲ್ವರಿದು ಕುರುವಹದೊಳ್ ಸಾಗರಮಂ ಕೂಡಿದುರು ದಿವಿಜಧುನಿಯಂತೆಸೆಗುಂ (ವಿಷ್ಣುಪು. ೭-೬೧).
[ದಿವಿಜ + ಧುನಿ]

ದಿವಿಜಧೇನು (ನಾ). (ಕೇಳಿದುದನ್ನು ಕೊಡುವುದೆಂದು ನಂಬಲಾದ) ದೇವಲೋಕದ ಹಸು ; ಕಾಮಧೇನು : ಶರಣಮೊರಟದ ಬಂಕತಂದೆಗೆ ಕೊಱಡು ಕೊನರ್ದು ನಿಮಿರ್ದವೊಲು ಅಚ್ಚರಿಯ ದಸರಯ್ಯಗಳ ದಿವ್ಯ ಶಿರೋದಿವಿಜಧೇನು ಕರದ ಕಱುಗಳನೀದವೊಲು (ಬಸವು. ೩೮-೪೦).
[ದಿವಿಜ + ಧೇನು]

ದಿವಿಜನದಿ (ನಾ).=ದಿವಜಧುನಿ: ದಿವಿಜನದೀತರಂಗಧವಂ ನಿಜನಿರ್ಮಲ ಕೀರ್ತಿವಲ್ಲಿ ಭೂಭುವನಮನಾವಗಂ ಪುದಿವಿನಂ . . . ತಳೆದಂ ಸರಸ್ವತೀ ಶ್ರವಣವಿಭೂಷಣಪ್ರಥಿತವಾಗ್ವಿಭವಂ ಕವಿತಾಮನೋಕರಂ (ಪಂಠಾಮಾ. ೧೨-೯೯) ; ದಿವಿಜನದಿಯ ಕೈರವಂಗಳ ಕುಟ್ಮಳಾವಳಿಗಳೋ ಮಿಸುಪ ತೋರಮಲ್ಲಿಗೆಯರಳಿನಿಂ ವಿಷ್ಣುಪದವನೊಲಿದಾರಾಧಿಸಿದಳೋ ನಿಶಾನಾರಿ ಎನೆ ತರಳತಾರಾಳಿ ಕಣ್ಗೆಸೆದುದು (ಹಡಕಾ. ೩-೭೯).

ದಿವಿಜನದಿಯಾತ್ಮಜ=ಗಂಗೆಯ ಪುತ್ರ; ಭೀಷ್ಮ: ದಿವಿಜನದಿಯಾತ್ಮಜಗೆ ನಗುತಸುರಾರಿಯಿಂತೆಂದ (ತಿಮ್ಮಕಾಂ. ೨-೪೫). [ದಿವಿಜ + ನದಿ]

ದಿವಿಜನದೀಸೂನು (ನಾ). ಗಂಗೆಯ ಪುತ್ರ ; ಭೀಷ್ಮ : ಕವಲಂಬುಂ ತಲೆಗಿಂಬಿನ ಕವುಳುಡೆ ಶಂಮಂಚವೆರಸಿದರಲೆಯ ಹಾಸೆಂಬಿವು ಬಾಣಗಣದಿನೆಸೆದಿರೆ ದಿವಿಜನದೀಸೂನು ಶಸ್ತ್ರಶಯನದೊಳಿರ್ದಂ (ಗದಾಯು. ೫-೩೯).
[ಸಂ.]

ದಿವಿಜನಾಯಕ (ನಾ). ದೇವತೆಗಳ ಒಡೆಯ,-ಪ್ರಭು ; ದೇವೇಂದ್ರ : ಮಂದರಶೈಲಮಂ ದಿವಿಜನಾಯಕನೆಯ್ತರೆ . . . ಪಾಂಡುಕದಿನಾ ಗಿರಿರಾಜ ವಿಲಾಸಮಟ್ತಿಯಂ ತಂದುದು (ಶಾಂತಿಪು. ೫-೨). [ದಿವಿಜ + ನಾಯಕ]

ದಿವಿಜನಿಕಾಯ (ನಾ). ದೇವತೆಗಳ ಗುಂಪು,-ಸಮೂಹ: ದಿವಿಜನಿಕಾಯದ ಜಯಜಯರವದಿಂದಂ . . . ಎಸೆದುದು ಸಮವಸರಣ ದುಂದುಭಿನಿನದಂ (ಆದಿಪು. ೧೪-೧೩೬) [ದಿವಿಜ + ನಿಕಾಯ]

ದಿವಿಜನಿವಾಸ (ನಾ). ದೇವತೆಗಳ ವಾಸಸ್ಥಾನ; ಸ್ವರ್ಗ: ದಿವಿಜನಿವಾಸಂಗಳ ದಿವಿಜವಿಟಪಿಗಳ . . . ವಿಶೇಷಸುಖಮನೊಸೆದನುಭವಿಸುತುಮಿರೆ ಪಲವು ಕಾಲಮಂತಾ ದಿವಿಜಂ (ವರ್ಧಪು. ೧೦-೫೫). [ದಿವಿಜ + ನಿವಾಸ]

ದಿವಿಜಪತಿ (ನಾ).=ದಿವಿಜನಾಯಕ : ಕಂಡಂ ದಿವಿಜಪತಿ ತನ್ನ ಮುನ್ನಿನ ಭವಮಂ (ಶಾಂತಿಪು. ೭-೧೯); ಅದು ಗುಹ್ಯಕೋಪಗತಸಂಪದಮೆಂದಕುಲೀನಮೆಂದು ಬಹುವಿಷಧರಮೆಂದೊದವಿದ ಮಹತ್ವದಿಂದಿಟ್ಟಿವುದು ಧನಪತಿ ದಿವಿಜಪತಿ ಫಣಾಪತಿಪುರಮಂ (ಪುಷ್ಪಪು. ೨-೩೩). [ದಿವಿಜ + ಪತಿ$_2$]

ದಿವಿಜಪದ (ನಾ). ೧. ಸ್ವರ್ಗ ; ದೇವಲೋಕ. ೨. ಆಕಾಶ ; ಗಗನ : ಶ್ರವಣಭೂಷಣದಿಂದೆ ಹಸ್ತಾಭರಣದಿಂದೆ ದಿವಿಜಪದಮೆಸೆವಂತೆ ಕುಂತಳ ಶ್ರೀಯ ವೈಭವದಿಂದೆ ರಮಣೀಯಕಾಂಚೀಪ್ರದೇಶದಿಂ ಭೂಭಾಗಮೊಪ್ಪುವಂತೆ . . . ವಿಷಯೆ ಕಂಗೊಳಿಸಿರ್ದಳು (ಕೃಮಿಭಾ. ೩೦-೧೦).
[ದಿವಿಜ + ಪದ$_2$]

ದಿವಿಜಪುರ (ನಾ). ೧. ದೇವತೆಗಳ ಪಟ್ಟಣ ; ಅಮರಾವತಿ : ೨. = ದಿವಿಜ ೩ : ದಿವಿಜಪುರ ಯುಗಯುಗದೆ ನಿಲಲನಿಲಂ ಶೀತಕರ ತ್ರಿತೆಯಂ ಕಡೆಯೊಳ್ ಭವನಿರೆ ಕರಿಗಿರಿಗಣನೆಗಳೊಳಗಂ ತಟ್ಟಿಸೆಗುಂ ಪದವಿಶ್ರಮಣಂ (ಛಂದೋಂಬು. ೨-೧೯೬). [ದಿವಿಜ + ಪುರ$_2$]

ದಿವಿಜಪುರಿ (ನಾ). ಇಂದ್ರನ ನಗರ ; ಅಮರಾವತಿ : ಸರಳನೊಂದನೆ ತೊಡಚುತೆಚ್ಚೊಡೆ ತೆರಳಿತಗಣಿತಬಾಣವಂಬಿನ ಶರಧಿಮೇರೆಯನೊಡೆದು ಬರುತಿರೆ ದಿವಿಜಪುರಿಗೆನುತ (ಸಂಭಪ. ೨೦-೮೬). [ದಿವಿಜ + ಪುರಿ$_6$]

ದಿವಿಜಪೇಟಕ (ನಾ). ದೇವತೆಗಳ ಸಮೂಹ : ಬಂದುದು ದೇವ ದಿವಿಜಪೇಟಕಮನಿತುಂ (ಆದಿಪು. ೯-೧೦). [ದಿವಿಜ + ಪೇಟಕ]

ದಿವಿಜಭವನ (ನಾ). ದೇವತೆಗಳ ವಾಸಸ್ಥಾನ ; ಸ್ವರ್ಗ : ದಿವಿಜಭವನಕ್ಕೆ ಹಾ ದಾನವೇಂದ್ರ ನೀನತಿಥಿಯಾದೆ (ಪಂಠಾಮಾ. ೧೪-೧೯೯).
[ದಿವಿಜ + ಭವನ]

ದಿವಿಜಮಂತ್ರಿ (ನಾ). ದೇವತೆಗಳ ಮಂತ್ರಿ ; ಬೃಹಸ್ಪತಿ : "ಅಂಗಿರಸ ಸುರೇಜ್ಯಂ ಧಿಷಣಂ ಗೀಃಪತಿ ದಿವಿಜಮಂತ್ರಿ ವಾಚಸ್ಪತಿ ಮತ್ತಾಂಗಿರಸಂ ವಾಕ್ಪತಿ ಜೀವಂ ಗುರುವೆಂಬಿನಿತುಮಿವು ಬೃಹಸ್ಪತಿನಾಮಂ" (ವಸ್ತುಕೋ. ೧೩-೭೩). [ದಿವಿಜ + ಮಂತ್ರಿ]

ದಿವಿಜಮಹೀಜ (ನಾ). ದೇವಲೋಕದ ವೃಕ್ಷ ; ಕಲ್ಪವೃಕ್ಷ : ದಿವಿಜಮಹೀಜಮಂ ಮನುಜನುಯ್ವೊಡೆ ಸೈರಿಸೆ ಪುಟ್ಟುಗುಂ ಪರಾಭವಂ (ಜಗವಿ. ೧೮-೬೦). [ದಿವಿಜ + ಮಹೀಜ].

ದಿವಿಜರಾಜ (ನಾ). ದೇವತೆಗಳ ಒಡೆಯ.–ಇಂದ್ರ : ದಾದಿಯುಮಾ ಸುಕುಮಾರಿಕೆಗಾದರದಿನವಂತಿನಾಥನಂ ತೋಳಿಂದಳಿಂದೂದಯಕಾಂತನ ನಹಿತನಿಷೂದನನಂ ದಿವಿಜರಾಜಲೀಲಾಸ್ಪದನಂ (ಶಾಂತಿಪು. ೩-೧೧೭) ; ನವಂಗೀ ದಿವಿಜರಾಜನಿಂ ಪ್ರಯೋಜನಮಿಲ್ಲ (ಜಗವಿ. ೪-೭೭ ವ).

[ದಿವಿಜ + ರಾಜ]

ದಿವಿಜರಾಯ (ನಾ). = ದಿವಿಜರಾಜ : ಇಳಿದು ರಥವನು ದಿವಿಜರಾಯನ ನಿಳಯವನು ಹೊಕ್ಕನು (ಕುವ್ಯಾಅ. ೭-೭೩). [ದಿವಿಜ + ರಾಯ]

ದಿವಿಜವಧು (ನಾ). ದೇವತಾಸ್ತ್ರೀ : ಅಪ್ಸರೆ : ಶಶಿವ ದಿವಿಜವಧುಗಳ ತೋಳ ತೆಕ್ಕೆಗೆ ಒಡಲನಿತ್ತನು (ಕುವಾದ್ರೌ. ೫-೭೪). [ದಿವಿಜ + ವಧು]

ದಿವಿಜವಧೂಟಿ (ನಾ). = ದಿವಿಜವಧು : ದಿವಿಜವಧೂಟಿಯರಧರಚ್ಛವಿ ಕುಂಕುಮಪಂಕದಿಂದೆ ಕೇಕರರೋಚಿಃಪ್ರವಿಮಳಮಳಯರುಹಸ್ಮಿತ ಧವಳಾ ಕ್ಷತಕುಸುಮವಿಸರದಿಂದರ್ಚಿಸುವರ್ (ಪಾರ್ಶ್ವಪು. ೧೬-೫೦).

[ದಿವಿಜ + ವಧೂಟಿ]

ದಿವಿಜವನಿತೆ(ನಾ).=ದಿವಿಜವಧು: ದಿವಿಜವನಿತಾಸವಿಭ್ರಮಧವಳಾಪಾಂಗಮ ನಿಜಾಯುರಂಭೋನಿಧಿಯಂ ತವೆ ಪೀರ್ದುದೆನಿಸೆ (ಆದಿಪು. ೫-೯೯)

[ದಿವಿಜ + ವನಿತೆ]

ದಿವಿಜವಲ್ಲಭ (ನಾ). = ದಿವಿಜನಾಯಕ : ತದ್ದಿವಿಜವಲ್ಲಭಂ ಶ್ರೀಧರನಂ ನಿಪುಣಂ ಪೂಜಿಸಿದಂ (ಆದಿಪು. ೫-೯೮). [ದಿವಿಜ + ವಲ್ಲಭ]

ದಿವಿಜವಿಮಾನ(ನಾ). ೧. ದೇವಲೋಕದ ವಿಮಾನ; ಪುಷ್ಪಕ. ೨.[ಜೈನ] ಸ್ವರ್ಗದ ಒಂದು ವಿಭಾಗ; ಈ ದೇವತೆಗಳಂ ವಾಸಿಸುವ, ಒಂದೊಂದು ಜಿನಮಂದಿರವಿರಂವ ಇಂದ್ರಕ, ಶ್ರೇಣೀಬದ್ಧ, ಪ್ರಕೀರ್ಣಕಗಳೆಂಬ ಮೂರು ಪ್ರಕಾರದ ಎಂಬತ್ತ್ಯಾನಾಲ್ಕುಲಕ್ಷ ಐವತ್ತೇಳಂಸಾವಿರದ ಮೂವತ್ತುಮೂರಂ ಸ್ಥಾನಗಳಂ : ದಿವಿಜವಿಮಾನಂ ಮಾಡದವಿವು ವಾಡಿದುವೆಂಬ ಭೇದಮಲ್ಲದೆ ಚಿಲ್ವಿಂ ನವರತ್ನರಚನೆಯಿಂ ಭೇದವಿಲ್ಲ ತತ್ಪುರದ ಭವನಮೆನಿತನಿತಜೊಳಂ (ಪಂಚಾಮೃ. ೧-೦೨೩). 'ವಿಮಾನ' ಪರಾ. [ದಿವಿಜ + ವಿಮಾನ]

ದಿವಿಜಶರಾಸನ (ನಾ). = ದಿವಿಜಚಾಪ: ನವರತ್ನದ ಪಂಜರದೊಳ್ ದಿವಿಜ ಶರಾಸನದ ಮಱಿಯನಿರಿಸಿದವೊಲ್ ಸುತ್ತುವ ಸೋಗೆಯ ಸುತ್ತಿ ನೊಳಾಡುವ ಕೇಕಿಯ ಭಂಗಿ ಲೋಕಮಂ ಸೋಲಿಸುಗುಂ (ಹುಕೋಡ. ೩-೩೭). [ದಿವಿಜ + ಶರಾಸನ]

ದಿವಿಜಸಿಂಧು (ನಾ). = ದಿವಿಜನದಿ. [ದಿವಿಜ + ಸಿಂಧು]

ದಿವಿಜಸ್ತ್ರೀ (ನಾ).=ದಿವಿಜವಧು : ದಿವಿಜಸ್ತ್ರೀದಳನಾಭರಾಮರಶನಂ . . . ಚಿತ್ತೋದ್ಭತ್ತವೀಚಾರಸಾರವಿನೋದಂಗಳಿನಂದದೇಂ ನಲಿದನೋ ಕಲ್ಪಾ ಮರಂ ಕಲ್ಪದೊಳ್ (ಶುಕುಮಾ. ೯-೩೫). [ದಿವಿಜ + ಸ್ತ್ರೀ]

ದಿವಿಜಾಂಗನೆ (ನಾ). = ದಿವಿಜವಧು: ದಿವಿಜಾಂಗನೆಯರ ವಿಳಸಿತ ಧವಳಾ ಪಾಂಗ ಪ್ರಭಾಲಸಚ್ಚಂದ್ರಿಕೆ ವರ್ಮೆ ವಿಯತ್ತಳದೊಳ್ (ವರ್ಧಪು. ೧೨-೫೩); ದಿವಿಜಾಂಗನೆಯರ್ ನರ್ತಿಪರ್ . . . ಅಭಿನಯ್ಸುತ್ತಂ ನವ ನಾಟ್ಯರಸಾಧಿದೇವತೆಯರೆಂಬಿನೆಗಂ (ಪಾರ್ಶ್ವಪು. ೧೬-೬೩).

[ದಿವಿಜ + ಅಂಗನೆ]

ದಿವಿಜಾಂಗರಕ್ಷ (ನಾ). ದೇವತೆಗಳ ಮೈಗಾವಲಿನವನು.–ಅಂಗರಕ್ಷಕ : ಆ ಕುಮಾರರಂ ಸುಂದರಿಯರ್ ನಯಂಬೆರಸು ಸೋಂಕಿರೆ ತನ್ನೊಡನಿಂದ್ರ ನಾಜ್ಞೆಯಿಂದಂ ದಿವಿಜಾಂಗರಕ್ಷರಿರೆ (ಶಾಂತಿಪು. ೯-೫೯).

[ದಿವಿಜ + ಅಂಗರಕ್ಷ]

ದಿವಿಜಾಂಗರಕ್ಷಕ (ನಾ). = ದಿವಿಜಾಂಗರಕ್ಷ: ದಿವಿಜಾಂಗರಕ್ಷಕರುಮಂ ಸುರ ಲೋಕಕ್ಷೀರಪಯೋರಸಂಗಳುಮಂ . . . ನಿಯೋಜಿಸಿ (ಶಾಂತಿಪು. ೦೦-೬೦ ವ). [ದಿವಿಜ + ಅಂಗರಕ್ಷಕ]

ದಿವಿಜಾಂಶಕಿ (ನಾ). ದಿವಿಜಾಂಶವುಳ್ಳವಳು ; ದೇವಾಂಶ ಸಂಭೂತೆ : ಅನೂನದಾನ ಮೃದುವಾಕ್ಯಮಹಾಮಹಿಮಾಶಿವಕ್ಕೆ ಸೌಂದರತರವುಷ್ಣ ವಸ್ತ್ರವರಭೂಷಣೆ . . . ಪತಿಭಕ್ತೆಯಾಗೆ ದಿವಿಜಾಂಶಕಿಯೆಂದಱಿ (ಮುರಶಿ. ೩-೧). [ಸಂ. ದಿವಿಜಾಂಶಕಾ]

ದಿವಿಜಾಚಳ (ನಾ). (ಚಿನ್ನದ್ದೆಂದು ನಂಬಲಾದ) ದೇವತೆಗಳ ಬೆಟ್ಟ ; ಮೇರುಪರ್ವತ : ದಿವಿಜಾಚಳಮಂ ಪೊರ್ದುವ ನವಗ್ರಹಂಗಳ ವಿಳಾಸಮಂ ಕೀಟ್ಪಡಿಸಲ್ ನವರತ್ನಘಟಿಂಗಳ್ನೆರೆದುವು (ಮಧ್ವಪು. ೦೨-೧೪೦).

[ದಿವಿಜ + ಅಚಳ (= ಚಲ)]

ದಿವಿಜಾದ್ರಿ (ನಾ). = ದಿವಿಜಾಚಳ : ದಿವಿಜಾದ್ರಿ ವಿರಾಜಿಸಿದುದು ಸುವರ್ಣ ವಿಭ್ರಮದೆ (ಶಾಂತೀಶ್ವ. ೧೪-೬೪); ಎಸೆವುದು ಸತ್ಸಂತಾನಯುತಂ ದಿವಿಜಾದ್ರಿ ಸಮಾನೀಕೃತ ಸಹಜಕವಿಸರೋವರಹಂಸಂ (ಪುಷ್ಪಪು. ೩-೧).

[ದಿವಿಜ + ಅದ್ರಿ]

ದಿವಿಜಾಧಿನಾಥ (ನಾ). = ದಿವಿಜರಾಜ : ಆ ದಿವಿಜಾಧಿನಾಥಮತದಿಂ ಸ್ವನಿತಾಮರಬೃಂದವಂದು ಗಂಧೋದಕವೃಷ್ಟಿಯಂ ಸುರಿವರ್ (ಶಾಂತಿಪು. ೧೨-೨೨). [ದಿವಿಜ + ಅಧಿನಾಥ]

ದಿವಿಜಾಧಿಪ (ನಾ). = ದಿವಿಜರಾಜ: ಆ ದಿವದಿಂದಮಸಾರತವಾ ದಿವಿಜಾಧಿಪನೆ ಬೆಸಸೆ ಪೂವಂ ದೇವಂಗಾದರದಿನಡಕೆ (ಆಚಿಪು. ೫-೭೩) : ಆ ದಿವಿಜಾಧಿಪರ್ ಸುರಿವ ಪಂಚಮವಾರ್ಧಿಯ ಪಾಲ್ ವಿಲೋಚನಾಹ್ಲಾದಿ ಮುಸುಂಕೆ . . . .ಮೆಱೆದಂ ಭುವನೈಕಮಂಗಳಂ (ಅನಂಪು. ೫-೫೯).

[ದಿವಿಜ + ಅಧಿಪ]

ದಿವಿಜಾಧಿವಾಸ (ನಾ). ದೇವತೆಗಳ ವಾಸಸ್ಥಾನ ; ಸ್ವರ್ಗ : "ನಾಕಂ ದಿವಿಜಾಧಿವಾಸಮುಂ ಘನಪಥಮುಂ . . . ತಾನಕ್ಕುಂ (ಪಸ್ತುಕೋ. ೧೨೦-೩೦). [ದಿವಿಜ + ಅಧಿವಾಸ]

ದಿವಿಜಾಧೀಶ (ನಾ).=ದಿವಿಜರಾಜ : ದಿವಿಜಾಧೀಶನ ಕೊಟ್ಟ ಶಕ್ತಿಯನದಂ ಕರ್ಣಂ ನರಂಗೆಂದು ಬಯ್ವಿನಂದಿಂದಬೆವೆಯ್ದೆವಂದೊಡದಱಿಂದಿಂದಾ ತನಂ ಕೊಂದಂ (ಪಂಪಭಾ. ೧೨-೦೬). [ದಿವಿಜ + ಅಧೀಶ]

ದಿವಿಜಾಧೀಶ್ವರ (ನಾ). = ದಿವಿಜರಾಜ : ದಿವಿಜಾಧೀಶ್ವರನೊರ್ವನೆ ಪವಿತ್ರ ನಾದನೆ ಪವಿತ್ರಮಾಯ್ತುಮರನಗಂ (ಆಚಿಪು. ೪-೭೩).

[ದಿವಿಜ + ಅಧೀಶ್ವರ]

ದಿವಿಜಾನಕ (ನಾ). ದೇವತೆಗಳ ಭೇರಿ; ದೇವದುಂದುಂಭಿ : ದಿವಿಜಾನಕರವದೊಳ್ಪಚ್ಚಿವಭಕ್ಷಂ ಬೆರಸು ದಿವ್ಯಪುಷ್ಪಕವತ್ಕುತ್ಸವದೆ . . . ಬಂದತ್ತಾಗಳ್ (ತ್ರಿಪುವಿ. ೪೭-೦೪). [ದಿವಿಜ + ಆನಕ]

ದಿವಿಜಾನೋಕಹ (ನಾ). ದೇವಲೋಕದ ವೃಕ್ಷ ; ಕಲ್ಪವೃಕ್ಷ : ದಿವಿಜಾನೋಕಹ ಕಾಮಧೇನುಗಳೆ ದಿವ್ಯಾವಾಸ ದಿವ್ಯಾನ್ನ ದಿವ್ಯವಿಲೇಪಾದ್ಯಭಿವಾಂಛೆಯಂ ಶಿಬಿರದೊಳ್ ತಂದಿತ್ತುವಂದಿಂದಿರಾಧವನಾಜ್ಞಾಪಿಸೆ (ಜಗವಿ. ೦೬-೬೭). [ದಿವಿಜ + ಆನೋಕಹ]

ದಿವಿಜಾಪಗೆ (ನಾ).=ದಿವಿಜಧುನಿ : ದಿವಿಜಾಪಗಾತಟದುಪವನದೊಳಿರಿನೃಪ ವನಕ್ಕುಪದ್ರವಕಾರಿಯಾಗಿ ನೆಲಂ ಮೂರಿವಿಟ್ಟಂತೆ ಬಿಟ್ಟರ್ದಜಾತಶತ್ರು ವನವನತೋತ್ತಮಾಂಗಳಾಗಿ ಕಂಡು (ಪಂಪಭಾ. ೯-೮೭ ವ) ; ದಿವಿಜಾಪಗೆಯಂ ತಾಳುತ್ತವೆ ದಿವದೆ ವಿಭಕ್ತರಶ್ಮಿಯಾಗರ್ ತಾರಾನಿವಹವ ನಡೆಯಿಂವ ಪರಿವಹ ಪವನನ ಮೂರ್ಗವಿದು ವಿಷ್ಣುವಿಕ್ರಮವುತ್ತಂ (ಶಾ ಕು ಂ ಕ. ೦೦೦-೦೬೯). [ಸಂ. ದಿವಿಜಾ + ಆಪಗಾ]

ದಿವಿಜಾಮಾತ್ಯ (ನಾ). =ದಿವಿಜವಂತ್ರಿ : ತೊಲೆಯೊಳು ದೈತ್ಯಾಮಾತ್ಯಂ ನಿಲೆ ದಿವಿಜಾಮಾತ್ಯಕಾತ್ಮ ಶುಂಗೋದಯದೊಳ್ ನಿಲೆ ವೃಷಭಡೊಳುಡು ನಾಥಂ ನಿಲೆ ಪುಟ್ಟಿದ ಮನುಜನವನಿಪಾಲಕನಕ್ಕುಂ (ಜಾಕತಿ. ೦೨-೦೬).

[ದಿವಿಜ + ಅಮಾತ್ಯ]

ದಿವಿಜಾರಾಧ್ಯ (ನಾ). ದೇವತೆಗಳಿಗೆ ಪೂಜ್ಯನಾದವನಂ; ದೇವತೆಗಳಿಂದ ಆರಾಧಿಸಲ್ಪಡುವವನು ; ಜಿನ : ದಿವಿಜಾರಾಧ್ಯನ ನಿಂದ ಮುನ್ನಡಿಗೆ ವಾನವ್ಯಂತರರ್ ಮಾಟ್ಪರಷ್ಟವಿಧಾಭ್ಯರ್ಚನಮಂ (ಅನಂಪು.೯-೯೬); ದಿವಿಜಾರಾಧ್ಯಜಿನಾರ್ಭಕಾವತರಣಕ್ಕತ್ಯಂತಯೋಗ್ಯಂ (ಶಾಂತೀಶ್ವ. ೧೩-೨೩೦). [ದಿವಿಜ + ಆರಾಧ್ಯ]

ದಿವಿಜಾರಿ (ನಾ). ದೇವತೆಗಳ ಶತ್ರು ; ದೈತ್ಯ ; ರಕ್ಕಸ. [ದಿವಿಜ + ಅರಿ]

ದಿವಿಜಾವಾಸ (ನಾ). ದೇವತೆಗಳ ಆವಾಸಸ್ಥಾನ; ದೇವಲೋಕ: ದಿವಿಜಾವಾಸದೊಳುಳ್ಳ ದಿವ್ಯಫಳಪುಷ್ಪೋದ್ಗಂಧಿಗಂಧಾದಿವಸ್ತುವನೊಂದೊಂದನೆ ಕೊಂಡು (ವರ್ಧಮಾ. ೧೪-೧೧). [ದಿವಿಜ + ಆವಾಸ]

ದಿವಿಜಾಶಾಗಿರಿ (ನಾ). ಪೂರ್ವದಿಕ್ಕಿನ ಬೆಟ್ಟ; ಉದಯಾಚಲ: ದಿವಿಜಾಶಾಗಿರಿಕೂಟಕೇಸರಿ ವಿಯನ್ಮಂದಾಕಿನೀಹಂಸೆ . . . ಅನಂಗಮಂಗಳ ವಧೂಟೀದರ್ಪಣಂ ತಾನಿದೆಂಬ ವಿಲಾಸಕ್ಕೆ ನಿವಾಸಮಾಯ್ತುದಯದೊಳ್ ಪೀಯೂಷರುಙ್ಮಂಡಲಂ (ಅನಂಪು. ೭-೮೨). [ಸಂ.]

ದಿವಿಜಾಶೆ (ನಾ). ಪೂರ್ವದಿಕ್ಕು. 'ದಿವಿಜಾಶಾಗಿರಿ' ಪರಾ. [ಸಂ. ದಿವಿಜಾಶಾ]

ದಿವಿಜಾಶ್ವ (ನಾ). ದೇವಲೋಕದ ಕಂದುರೆ. 'ದಿವಿಜಾಶ್ವತ್ಥಾಮಂ' ಪರಾ. [ಸಂ.]

ದಿವಿಜಾಶ್ವತ್ಥಾಮ (ನಾ). ದೇವಲೋಕದಲ್ಲಿ ಹುಟ್ಟಿದ ಕಂದುರೆಯಂ ಕೆನೆತ,-ಹೇಷಾರವ : ದಿವಿಜಾಶ್ವತ್ಥಾಮದೊಳೀ ಭುವನಂಗಳ್ ನಡುಗೆ ಶಿಶು ಸರಂಗೆಯ್ದೊಡೆ ನಕ್ಕವಯವದೆ ಕುಂಭಸಂಭವನಿವನಶ್ವತ್ಥಾಮನೆಂದು ಪೆಸರಿಡೆ ನೆಗಟ್ಟಂ (ಪಂಪಭಾ. ೨-೪೪). 'ಅಶ್ವತ್ಥಾಮ' ಪರಾ. [ಸಂ. ದಿವಿಜಾಶ್ವತ್ಥಾಮನ್]

ದಿವಿಜಾಸನ (ನಾ). ದಿವ್ಯವಾದ ಪೀಠ; ಉತ್ತಮವಾದ ಆಸನ : ಮಾಗಧನಂ... ಮುನ್ನಮಿಕ್ಕಿದ ದಿವಿಜಾಸನದೊಳ್ ಬಟಿಯಂ ಕುಳ್ಳಿರ್ದನೆಂದಂ ತೊಳಗಿ ಬೆಳಗೆ ದಶನದ್ಯುತಿಗಳ್ (ಶಾಂತಿಪು. ೧೦-೧೭೮). [ದಿವಿಜ + ಆಸನ]

ದಿವಿಜೆ (ನಾ). ದೇವಲೋಕದಲ್ಲಿ ಹುಟ್ಟಿದವಳು ; ದೇವತಾಸ್ತ್ರೀ ; ದಿವಿಜವಧು : ಸಪ್ತಮಾತೃಕೆಯರ ದಿವಿಜೆಯರ ಸಿದ್ಧಕರ್ನಿಕೆಯರ ಮಹಾಶಕ್ತಿಗಳ ವಂಗಡವೋಲಯಿಸುತಿರಲು (ಬಸಪು. ೧೦-೩೧). [ಸಂ. ದಿವಿಜಾ]

ದಿವಿಜೇಂದ್ರ (ನಾ). ದೇವತೆಗಳ ಒಡೆಯ; ದೇವೇಂದ್ರ: ನಡೆ ನೋಡಲ್ ದಿವಿಜೇಂದ್ರನೆಯ್ದೆ ಪೊಗಟಲ್ . . . ನಾಮಾರ್ಪೆಮೆ[ಮೆಂತು]ಮೆಂದು ವಿಬುಧರ್ ಮೌನವ್ರತಂಗೊಂಡರ್ (ಶಾಂತಿಪು. ೯-೧೫೭); ನತ ದಿವಿಜೇಂದ್ರಾ ಹೀಂದ್ರ ವಾಸುಪೂಜ್ಯ ಜಿನೇಂದ್ರಾ (ಸುಕುಮಾ. ೪-೪೮). [ದಿವಿಜ + ಇಂದ್ರ]

ದಿವಿಜೇಂದ್ರತನಯ (ನಾ). ೧. ಇಂದ್ರನ ಮಗ. ೨. ಅರ್ಜುನ : ದಿವಿಜೇಂದ್ರತನಯ ಕೇಳು (ಜೈಮಿಭಾ. ೩೦-೨೪). ೩. ಜಯಂತ. ೪. ವಾಲಿ. [ದಿವಿಜೇಂದ್ರ + ತನಯ]

ದಿವಿಜೇಂದ್ರಾವಾಸ (ನಾ). ಇಂದ್ರನ ವಾಸಸ್ಥಾನ : ಇಂದ್ರಲೋಕ : ದಿವಿಜೇಂದ್ರಾವಾಸದೊಳ್ ಮುನ್ನೊಡನೆ ದಿವಿಜಭೋಗಂಗಳಂ ಭೋಗಿಸಿರ್ದೀ ಭವದೊಳ್ ಬಂದು (ಅದಿಪು. ೪-೬೧). [ದಿವಿಜೇಂದ್ರ + ಆವಾಸ]

ದಿವಿಜೇಂದ್ರೇಭ (ನಾ). ಇಂದ್ರನ ಆನೆ ; ಐರಾವತ : ದಿವಿಜೇಂದ್ರೇಭಕ್ಕೆ ಮೂವತ್ತೆರಡೆ ಮೊಗಂ (ಪುಲ್ಲಿಪು. ೧೨-೨೧); ದಿವಿಜೇಂದ್ರೇಭದ ಬೆಂಗೆ ವಂದು ವಿನಯ ಪ್ರಾಧಾನ್ಯಮಾನ್ಯೋಕ್ತಿಯಿಂ ಭವನೇಂದ್ರಾದ್ಯಮರೇಂದ್ರಂ ಕಳಿಪಿ (ಅನಂಪು. ೫-೧೦೦). [ದಿವಿಜೇಂದ್ರ + ಇಭ]

ದಿವಿಜೇಜ್ಯ (ನಾ). ದೇವತೆಗಳಿಂದ ಪೂಜಿಸಲ್ಪಡುವವನು; ದೇವತೆಗಳ ಗುರು ; ಬೃಹಸ್ಪತಿ : ದಿವಿಜೇಜ್ಯಂಗೆ ಶನೈಶ್ಚರಂ . . . ಉದಾಸೀನಂ ಗ್ರಹಾನೀಕದೊಳ್ (ಜಾತತಿ. ೨-೧೫). [ಸಂ.]

ದಿವಿಜೇಶ್ವರ (ನಾ). ದೇವತೆಗಳ ಒಡೆಯ ; ಇಂದ್ರ : ಆ ದಿವಿಜೇಶ್ವರಂಗೆ ಸತ್ಯಭಾಮಾರ್ಯೆ ಸುಪ್ರಭೆಯೆಂಬ ದೇವಿಯಾದಳ್ (ಶಾಂತಿಪು. ೭-೨೯ ವ). [ದಿವಿಜ + ಈಶ್ವರ]

ದಿವಿಜೋರ್ವೀಜ (ನಾ). ದೇವಭೂಮಿಯಲ್ಲಿ ಹುಟ್ಟಿದ ಮರ ; ದೇವಲೋಕದ ವೃಕ್ಷ ; ಕಲ್ಪವೃಕ್ಷ : ಆ ಜಾಯಾದ್ವಯಕಂ ಕ್ಷಿತಿರಾಜಂಗಮ ಪೂರ್ವತುಂಗಜಂಗಮದಿವಿಜೋರ್ವಿಜಮಿವೆನೆ ಪುಟ್ಟಿದರ ಪರಾಜಿತನ ಮನಂತವೀರ್ಯನುಂ ಪ್ರಿಯತನಯರ್ (ಶಾಂತಿಪು. ೧-೭೭). [ದಿವಿಜ + ಉರ್ವೀಜ]

ದಿವಿಜೋರ್ವೀಧರ (ನಾ). (ಚಿನ್ನದ್ದೆಂದು ನಂಬಲಾದ) ದೇವತೆಗಳ ಬೆಟ್ಟ ; ಮೇರುಪರ್ವತ : ದಿವಿಜೋರ್ವೀಧರ ಕರ್ಣಿಕಾವಿಳಸಿತಂ . . . ರಾರಾಜಿಕುಂ ಲವಣಾಂಭೋಧಿಸರೋವರಪ್ರಥಿತಜಂಬೂದ್ವೀಪ ನೀರೇರುಹಂ (ಅನಂಪು. ೧-೭೩). [ದಿವಿಜ + ಉರ್ವೀಧರ]

ದಿವಿಜೋರ್ವೀರುಹ (ನಾ). = ದಿವಿಜೋರ್ವೀಜ : ದಿವಿಜೋರ್ವೀರುಹ ಮಿತ್ತ ದೇವರ ಮನೋವ್ಯಾಪಾರದಿಂದಾದ ದೇವವಿಮಾನಂ . . . ಎಂಬಿನೆಗಂ ಸ್ವಯಂವರಗೃಹಂ ಕಣ್ಗೇಂ ಬೆಡಂಗಾದುದೋ (ಪಂಡಾಮಾ. ೫-೩೫). [ದಿವಿಜ + ಉರ್ವೀರುಹ]

ದಿವಿನಾಯಕ (ನಾ). = ದಿವಿಜಪತಿ. [ದಿವಿ + ನಾಯಕ]

ದಿವಿಭಾಗ (ನಾ). ಗಗನ ; ಆಕಾಶ : ಮೇರುವಿನ ಬಣ್ಣಮಂ ಪಿಡಿದ ದಿವಿಭಾಗಮಂ ಜನವನೆಚ್ಚರಿಪಂತೆ[ಪಾಠಾಂ. ದಿವಿಜರ ಭೋಗಮಜನ ಗುಣಮೆಚ್ಚರಿಸೆ]ಕೆಂಧೂಳಿ ಮಸಗಿತಾಗ (ಜೈಮಿಭಾ. ೧೨-೭). [ದಿವಿ + ಭಾಗ]

ದಿವಿರ (ನಾ). ಲೇಖಕ ; ಲಿಪಿಕಾರ : ದೆಬೀರ್ (=ಲೇಖಕ) ಎಂಬ ಪಾರಶೀ ಶಬ್ದ ದಿವಿರ, ದಿವೀರ ಎಂಬ ರೂಪಕಗಳಲ್ಲಿ ಕ್ರಿ.ಶ. ೭-೮ನೆಯ ಶತಮಾನಗಳಲ್ಲಿ ಲಿಖಿತವಾದ ಕೆಲವು ವಲಭೀಶಾಸನಗಳಲ್ಲಿ ದೊರೆಯುತ್ತದೆ (ಕನ್ನಸಂ. ೪೭) 'ಡಬೀರ' ಪರಾ. [ಪಾರ. ಹಿಂ. ದಬೀರ್]

ದಿವಿರಪತಿ (ನಾ). ಶ್ರೇಷ್ಠನಾದ ಲೇಖಕ ; ಉತ್ತಮನಾದ ಲಿಪಿಕಾರ : ಕ್ರಿ. ಪೂ. ನಾಲ್ಕನೆಯ ಶತಮಾನಕ್ಕಾಗಲೇ ಲೇಖಕವೃತ್ತಿಯವನನ್ನು ಲಿಪಿಕಾರ ಅಥವಾ ಲಿಬಿಕಾರ ಎಂದು ಕರೆದಿದೆ. ಕ್ರಿ.ಶ. ಏಳು ಮತ್ತು ಎಂಟನೆಯ ಶತಮಾನಗಳಲ್ಲಿ ಅವನನ್ನು ದಿವಿರಪತಿ ಎಂದು ನಿರ್ದೇಶಿಸಲಾಗಿದೆ (ಭಾರಪ. ೧೮). [ದಿವಿರ + ಪತಿ]

ದಿವಿಷನ್ಮಣಿ (ನಾ). (ಬೇಡಿದಂದನ್ನು ಕೊಡುವುದೆಂದು ನಂಬಲಾದ) ದೇವಲೋಕದ ಮಣಿ ; ಚಿಂತಾಮಣಿ : ಉತ್ತಮ ಪುಣ್ಯದೇಟ್ಗೆಯಿಂ ಮಹಿಯೊಳೆ ಸತ್ಕವಿತ್ವದಿವಿಷನ್ಮಣಿ ಸಾರ್ಗುಮದೀಗುಮದ್ಭುತಾವಹ ಸುಖಮಂ (ಶಬಶಂ. ೫-೬೦). [ಸಂ.]

ದಿವೇಶ (ನಾ). = ದಿವಿಜರಾಜ : "ಪುರುಹೂತಂ ಮಘವಂ . . . ದಶಶತನೇತ್ರಂ ಕುಲಿಶಾಯುಧಂ ಋಭುಕ್ಷು ದಿವೇಶಂ" (ವಸ್ತುಕೋ. ೬-೩೪). [ದಿವ + ಈಶ]

ದಿವೈಶ್ವರ್ಯ (ನಾ). ಸ್ವರ್ಗದ ಐಶ್ವರ್ಯ : ತ್ರಿಶದ್ದೇವೇಂದ್ರಂ ಮಣಿ ಚೂಳನೆಂಬ ಪೆಸರಿಂ ಪೆತ್ತಂ ದಿವೈಶ್ವರ್ಯಮಂ (ಶಾಂತಿಪು. ೭-೭೩). [ದಿವ + ಐಶ್ವರ್ಯ]

ದಿವೋದ್ಭೂತ (ನಾ). ಸ್ವರ್ಗದಲ್ಲಿ ಹುಟ್ಟಿದುದು : ಧೃತನಿರಯಜಾರ್ಯವರಚರಮತನು ದಿವೋದ್ಭೂತನನಪವರ್ತ್ಯಾಯುಷ್ಯಸ್ಥಿತರುಟಿದ ಸಕಲ ತತ್ವಪ್ರತತಿಗಳುಪಸಂಹೃತಾಪವರ್ತ್ಯಾಯುಷ್ಯರ್ (ಸುಕುಮಾ. ೮-೧೪) [ದಿವ + ಉದ್ಭೂತ]

ದಿವೌಕ (ನಾ). ದೇವತೆಗಳ ಮನೆ ; ಸ್ವರ್ಗ ; ದೇವಲೋಕ : ಪೋ ಪೋ ಪುಗಲ್[ಪುಗಲಿ]ತ್ತತ್ತ ದಿವೌಕದಿಂ ಪೊಱಗೆ ನಿಲ್ ನಿಲ್ ಬಿಂಗು ನೀನೆಂಬ ದಂದುಗದಿಂ ದೇವರ ದಂಡಧಾರೆರಿರಡುಂ ಪಕ್ಷಂಗಳೊಳ್ ಸಾಹಿ (ಶಾಂತಿಪು. ೧೦-೩೪). [ಸಂ. ದಿವೌಕಸ್]

ದಿವೌಕಸ (ನಾ). ಸ್ವರ್ಗವನ್ನೇ ಮನೆಯಾಗಿ ಉಳ್ಳವನು : ದೇವತೆ : "ದಿವೌಕಸರ್ ದೇವರ್ಕಳ್" (ವಸ್ತು.ಕೋ. ೬-೩೦) ; ಆ ಕುಮಾರವಿಯೋಗ ವಹ್ನಿಗೆ ಯಾಕೆಯಳಲು ಸವಿಾರವಾಯ್ತು ದಿವೌಕಸರ ಸಮ್ಮೇಳವೇ ಪುರುಷಾರ್ಥ ತನಗೆಂದ (ಕುವಾ.ಕ್ರೋ. ೬-೧೪) ; ನಲಿದು ನಡೆತರುತೊಂದು ವಿಪಿನದ ಸಲೆ ಸೊಬಗ ಕಂಡಲ್ಲಿ ನಿಂತಾ ಸುಲಭವನವನು ನಿಟ್ಟಿಸುತಲಿರ್ದರ್ ದಿವೌಕಸರು (ಸನತ್ಕು. ೧೬-೧೩). [ಸಂ.]

ದಿವ್ಯ (ಗು). ೧. ಸ್ವರ್ಗದಲ್ಲಿ ಹುಟ್ಟಿದ ; ಸ್ವರ್ಗದ ; ಸ್ವರ್ಗೀಯ. 'ದಿವ್ಯ ಕರಿ', 'ದಿವ್ಯನಗ' ಪರಾ. ೨. ಮನೋಹರವಾದ; ರಮಣೀಯವಾದ: ದಿವ್ಯಲೇಪನಭಾಸ್ವದ್ದಿವ್ಯಾಕೃತಿಯಂ ಧರಿಸಿ ದಿವ್ಯಗಭೀರೋಕ್ತಿಯಿಂದಮಾಗಳ್ ಪೇಟ್ಟಂ (ಜಗವಿ. ೪-೮೧). ೩. ಶ್ರೇಷ್ಠವಾದ; ಉತ್ತಮವಾದ : ದಾನವರಿವು ಧಂಜಸೆ ನಿಜದಿವ್ಯವಿಭವದಿಂ ದೆಸೆಗೆ ಮಸಗಿದಂ ದಶವದನಂ (ಪಂಂಮಾ. ೧೪-೧೬೨) ; ಅಂಜಲಿ ನೀಡಿ ದಿವ್ಯಪಾಯಸಪೂರ್ಣ ಪಾತ್ರೆಯಂ ವಿನಯದಿಂ ಕೊಂಡು (ಶ್ರೀರಾಮಾ. ೧೪-೩೬೪). 'ದಿವ್ಯಕಳೆ' ಪರಾ. ೪. ಆಕಾಶದಲ್ಲಿರುವ ; ಆಕಾಶದಿಂದ ಉಂಟಾದ,–ಹುಟ್ಟಿದ. ೫. ಅದ್ಭುತವಾದ ; ಆಶ್ಚರ್ಯಕರವಾದ. 'ದಿವ್ಯಾಂಜನ' ಪರಾ. (ನಾ). ೬. ಶ್ರೇಷ್ಠವಾದುದು ; ಉತ್ತಮವಾದುದಂ : ಮರಕತನಗಂ ದಿವ್ಯಂ ಮರ್ತ್ಯೋತ್ತಮಾಕೃತಿಯೆಂಬಿನಂ ವಿರಚಿಸಿದನಂತಾದಿಬ್ರಹ್ಮಂ (ಆದಿಪು. ೦೪-೪೪) ; ವನನಿಧಿಯೊಳಿನಗೆ ಕೆಯ್ಸಾರ್ದನಿತಂ ವಸ್ತುಗಳನುಬಿಪ ದೋಲಗಿಸಿದನಿನ್ನೆನಗದುವೆ ದಿವ್ಯಂ (ಶಾಂತಿಪು. ೦೦-೦೭೭). ೭. ಮನೋಹರವಾದುದಂ ; ರಮಣೀಯವಾದುದಂ. ೮. ಅತಿಮಾನುಷವಾದುದು; ಅತೀಂದ್ರಿಯವಾದುದು; ಅಲೌಕಿಕವಾದುದು: ಪ್ರತ್ಯಕ್ಷವು ಲೌಕಿಕ, ದಿವ್ಯವೆಂಬೆ ಎರಡು ಪ್ರಕಾರ . . . ದಿವ್ಯವು ಭಗವದನುಗ್ರಹದಿಂದ ಬರತಕ್ಕ ಯೋಗಿ ಪ್ರತ್ಯಕ್ಷ (ಹಿಂದಸಾ. ೨೪೧) ; 'ಪ್ರಕೃತಿ'ಯಲ್ಲಿ 'ಉತ್ತಮ', 'ಮಧ್ಯಮ', 'ಅಧಮ' ಮತ್ತು 'ದಿವ್ಯ', 'ಮಾನುಷ' ಇವೇ ಮೊದಲಾದ ಭೇದಗಳಿವೆ (ದೃಷ್ಟಾಕೋ. ೦೪೭). ೯. ಶ್ರೇಷ್ಠನಾದವನು ; ಉತ್ತಮ ವ್ಯಕ್ತಿ : ಜನಧರ್ಮದ ವೆರ್ಮೆಗೆ ರಾಗಿಸರೆ ಭವ್ಯರಜಿವಿನ ದಿವ್ಯರ್ (ಶಾಂತಿಪು. ೧೨-೩೬). ೧೦. ದೈವ ; ದೇವತೆ : ಎನ್ನ ತಮ್ಮಂದಿರ್ಗಿನಿತಂ ಮಾಡಿದ ದಿವ್ಯಮಿಾ ದಿವ್ಯಮಕ್ಕುಮೆಂದದಱಿ ಬೆಸಗೊಂಡುದರ್ಕೆಲ್ಲಂ ಮಱುಮಾತುಗುಡುವುದುಂ ಮೆಟ್ಟಿ ತನ್ನ ಸ್ವರೂಪಮಂ ತೋಱಿ (ಪಂಪಭಾ. ೮-೪೭ ಪ). ೧೧. ಬೆಂಕಿ ಮೊದಲಾದ ಪ್ರಮಾಣವಸ್ತುಗಳನ್ನು ಮುಟ್ಟಿ ಪ್ರಮಾಣಿಸಬೇಕಾದ ಉಗ್ರಪರೀಕ್ಷೆ : ನಿಶ್ಚಿತವಾದ ಸಾಕ್ಷಿ, ಆಧಾರಗಳಿಲ್ಲದಾಗ ಅಪರಾಧವನ್ನು ನಿರ್ಣಯಿಸಲು ಮಾಡುವ ಉಗ್ರಪರೀಕ್ಷೆ: ದೋಷಿ ಪಿಡಿವಂತೆ ದಿವ್ಯದ ಕಾಸಿದ ಕುಟುಮಂ . . . ಪಿಡಿದಂ ಸಾಸಿಗನವಿವೇಕಿ ಸೀತೆಯಂ ದಶಕಂಠಂ (ಪಂಂಮಾ. ೯-೧೦೧) ; ಉರಿಯ ಹಾಳಾಹಳದ ದಿವ್ಯಮಂ ಗೆಲಿದನು (ಸಿದ್ಧಕಾ. ೧-೧೦) ; ಕಂಡರನಾಸೆಗೆಯ್ವೊಡೆನ್ನಿನಿಯನ ಮೂರ್ತಿ ದಿವ್ಯವದಱಿಂ ನಳನಿರ್ಕೆ ನಟರ್ ಕೊಲಂಗುಗೆಂದನುವಮವಾಲೆಯಂ ನೆಗಪಿದಳ್ (ನಳಕಂ. ೪೦೧). 'ದಿಬ್ಯ' ಪರಾ. ೧೨. ರುಚಿಯಾದುದಂ ; ಸ್ವಾದು : ಅವರ ಮನೆಯಲ್ಲಿ ಬೀಗರೂಟ ಬಹಳ ದಿವ್ಯವಾಗಿತ್ತು (ಕೂಡಿ). ೧೩. [ಶೈವ] ಶೈವಾಗಮಗಳಲ್ಲಿ ಒಂದಂ ವಿಧ : ಶೈವಾಗಮಗಳು . . . ಬೋಧಕ – ಬೋಧ್ಯ ಸಂಬಂಧದಲ್ಲಿ "ಪರ, ಮಹಾ, ಅಂತರಾಳ, ದಿವ್ಯ ದಿವ್ಯಾದಿವ್ಯ, ಅದಿವ್ಯ" ಗಳೆಂದು ಆರು ಬಗೆಯಾಗಿದೆ (ಭಾರತ. ೭೩). ೧೪. [ಸಂಗೀತ] ರಾಗಗಳಲ್ಲಿ ಒಂದು : ಮಧು ಮಾಧವಿ ಶಂಕರಾಭರಣ . . . ದಿವ್ಯ[ಪಾಣಾಂ. ದಿವಿ] . . . ಕರ್ಣಾಟ ಬಂಗಾಳವೆಂಬಿವ್ಪತ್ತು ರಾಗಂಗಳೇ ರಾಗಾಂಗದಿಂದುದಿಸಿದವು (ವಿವೇಕ. ೩೪೯).

ದಿವ್ಯಮಾಡು = ಅದ್ಭುತವಾದಂದನ್ನು ಮಾಡು : 'ಏನು ದಿವ್ಯಮಾಡಿದಳು ? ಎಂದು ಯಾರಾದರೂ ಕೇಳಬಹುದು (ನಿಕಾಧ. ೪೨). [ಸಂ.]

ದಿವ್ಯಂಬಿಡಿ (ಕ್ರಿ). = ದಿಬ್ಯಂಬಿಡಿ : ಕೆಲರ್ ನೆತ್ತರೊಳ್ ವಿಂದು ತಮಗೆ ದೋಷವಿಲ್ಲೆಂದದರ್ಕೆ ದಿವ್ಯಂಬಿಡುವಂತೆ ನಂಬಿಸರ್ ಚಲಂಬಿಡಿದು ನಿಂದಾಂತರ್ (ಶಾಂತಿಪು. ೪-೩೦ ಪ) ; ನಲ್ಮೆಗೆ ದಿವ್ಯಂಬಿಡಿದಳೊ ಪೇಟಿಂ (ಕಾದ್ರಪು. ೫-೧೩೦). [ದಿವ್ಯ + ಪಿಡಿ]

ದಿವ್ಯಕರಿ (ನಾ). ಸ್ವರ್ಗದ ಆನೆ ; ಐರಾವತ : ಆಕಳಂಕಾನನವಿಂದುವಂಗೆಲೆ ಧರಾಭಾರಾವಹಂ ಬಾಪುದಿವ್ಯಕರಿಶ್ರೀಕರಮಂ ಕರಿಣಿ ಜಱಿಯೆ (ರಾಜಶೇ. ೩-೩). [ದಿವ್ಯ + ಕರಿ]

ದಿವ್ಯಕಳೆ (ನಾ). ದೈವಿಕವಾದ ತೇಜಸ್ಸು ; ಶ್ರೇಷ್ಠವಾದ ಕಾಂತಿ : ಅವರ ದಿವ್ಯಕಳೆಯೇ ಅವರು ಮಹಾತ್ಮರೆಂಬುದನ್ನು ಸೂಚಿಸುತ್ತದೆ (ಕೂಡಿ).

[ದಿವ್ಯ + ಕಳೆ (= ಕಲೆ)]

ದಿವ್ಯಕಾಂತಿ (ನಾ). ದೇವತಾಸ್ತ್ರೀ ; ದಿವಿದೆ : ಅಂತು ದಿವ್ಯಕಾಂತೆಯು ರೊಡರ್ಚಿದ ಪವಿತ್ರೀಕರಣಚೈತ್ರಾಗಮಂ ಜಗತ್ತ್ರಿತಯಾಂಬಕೆಯು ತನುಲತೆಗೆ ಕುಸುಮೋದ್ಗಮನಸಮಯಮುಂ ತರಲೊಡಂ (ಅನಂಪು. ೪-೪೨ ವ).

[ದಿವ್ಯ + ಕಾಂತಿ]

ದಿವ್ಯಕ್ಷೇತ್ರ (ನಾ). ಶ್ರೇಷ್ಠವಾದ ಸ್ಥಳ ; ಪುಣ್ಯಕ್ಷೇತ್ರ : ಅಡಿಗಡಿಗೆ ಸ್ನಾನನಿಧಿ ಅಡಿಗಡಿಗೆ ದಿವ್ಯಕ್ಷೇತ್ರ (ಬಸವ. ೦೩೩). [ದಿವ್ಯ + ಕ್ಷೇತ್ರ]

ದಿವ್ಯಗಜ (ನಾ). = ದಿವ್ಯಕರಿ : ವನಲತೆಯಾದ ಕಲ್ಪಲತೆ ವನ್ಯಮಹೀರುಹವಾದ ಕಲ್ಪನಂದನತರು . . . ಚರದ್ವನಗಜವಾದ ದಿವ್ಯಗಜಮೆಂಬುದನಾನೆಲನುಂಟುವಾಡುಗುಂ (ಶಾಂತಿಪು. ೯-೦೩೪). [ದಿವ್ಯ + ಗಜ]

ದಿವ್ಯಗಾನ (ನಾ). ಮನೋಹರವಾದ ಹಾಡು,– ಗಾಯನ : ನಿನ್ನಿಚ್ಛೆ ಬಂದಾಗ ಶಾಂತಿ ತರುವೆ ದಿವ್ಯಗಾನವನೂದಿ ಸಂತೈಸುವೆ ಎದೆ ಮನಸು ದೇಹಗಳ ಹಗುರಗೈವೆ (ದ್ರಾಕ್ಷಿದಾ. ೧೦-೦೯). [ದಿವ್ಯ + ಗಾನ]

ದಿವ್ಯಗಾಯನ (ನಾ). ೧. ಮನೋಹರವಾದ ಹಾಡುಗಾರಿಕೆ,– ಸಂಗೀತ. ೨. ಸ್ವರ್ಗಲೋಕದ ಹಾಡುಗಾರ ; ಗಂಧರ್ವ : (ಕ).

[ದಿವ್ಯ + ಗಾಯನ]

ದಿವ್ಯಚಕ್ಷು (ನಾ). ೧. ಚರ್ಮಚಕ್ಷುಸ್ಸಿನಿಂದ ನೋಡಲಾಗದ ವಸ್ತುವನ್ನು ನೋಡುವ ಚೆಕ್ಷುಸ್ಸು ; ಜ್ಞಾನದೃಷ್ಟಿ : ತುರಂಗತ್ವಮೆನಗೆ ಮೂಡಿದೊಡಮೆನ್ನ ಕೆಳೆಯನೊಡಗೂಡಿ ಕಾಲಮಂ ಕಳಿಪುವರ್ತು ನಿನ್ನ ದಿವ್ಯಚಕ್ಷುಗಳಿಂ ನೋಡಿ ಬೆಸಸೆಂಬುದುಂ (ಕಾದಂಬ. ೭೦೯) ; ಶ್ರೀಕೃಷ್ಣನು ಅರ್ಜುನನಿಗೆ ದಿವ್ಯಚಕ್ಷುಗಳನ್ನು ದಯಪಾಲಿಸಿ ತೋರಿಸಿದ ವಿಶ್ವರೂಪಕ್ಕಿಂತಲೂ ತತ್ವತಃ ಬೇರೇನೂ ಅಲ್ಲ (ಪ್ರಬಂಧ. ೪೨). ೩. ದಿವ್ಯಜ್ಞಾನವುಳ್ಳವನು ; ದಿವ್ಯದೃಷ್ಟಿಯುಳ್ಳವನು : ಮಹಾತ್ಮಾ ಗಾಂಧಿಯಂಥ ದಿವ್ಯಚಕ್ಷುಗಳು ದೇಶದಲ್ಲಿ ಸಹಸ್ರ ವರುಷಗಳಿಗೊಮ್ಮೆ ಜನಿಸಬಹುದು (ಕೂಡಿ). [ದಿವ್ಯ + ಚಕ್ಷು]

ದಿವ್ಯಚಿತ್ತ (ನಾ). ೧. ಶುದ್ಧವಾದ ಅಂತರಂಗ; ಪವಿತ್ರವಾದ ಮನಸ್ಸು : ದಿವ್ಯಚಿತ್ತದೊಳವಧರಿಸು (ತಿಪು. ೪-೧೧) ; ಇದಂ ದಿವ್ಯ ಚಿತ್ತದೊಳವಧರಿಸಿ ಯುಕ್ತತರ ವಿಚಾರದೊಳ್ ನೆಗಟ್ಟುದು (ಶಾಂತಿಪು. ೦೦-೦೦೨ ಪ). ೨. ಶುದ್ಧವಾದ ಅಂತರಂಗವುಳ್ಳವನು ; ಪವಿತ್ರವಾದ ಮನಸ್ಸುಳ್ಳವನು: ನಡೆ ನೋಡಿ ನೋಡಿ ಜನಚಂದ್ರಂ ದಿವ್ಯಚಿತ್ತಂ ಮಹೋತ್ತಮಸತ್ವಂ ವಿಭು ಕೆಮ್ಮಗರ್ವದುಮಳುರ್ತೊಂದಂಬನಿಂದೆಚ್ಚಂ (ಶಾಂತಿಪು. ೪-೪೪). [ದಿವ್ಯ + ಚಿತ್ತ]

ದಿವ್ಯಚ್ಛಾಯೆ (ನಾ). ರಮಣೀಯವಾದ ಬಿಂಬ,-ಛಾಯೆ : ಪೊಳೆವೆಳ ನೇಸಱಂ ಸೆಱೆಗೆಯ್ವ ಮಣಿಕುಟ್ಟಿಮಭೂಮಿಭಾಗದೊಳಮಮಿತವಿಕ್ರಮ ದೇವನ ದಿವ್ಯಚ್ಛಾಯೆ ಪ್ರತಿಬಿಂಬಿಸೆ (ಶಾಂತಿಪು. ೯-೩೩ ಪ).

[ಸಂ.ದಿವ್ಯಚ್ಛಾಯಾ]

ದಿವ್ಯಜಾತಿ (ನಾ). [ಜೈನ] ಪಾರಿವ್ರಾಜ್ಯಲಕ್ಷಣಗಳನ್ನು ತಿಳಿಸುವ ಜಾತಿ ಎಂಬ ಸೂತ್ರಪದದ ನಾಲ್ಕು ವಿಭಾಗಗಳಲ್ಲಿ ಒಂದು; P ಜಾತಿಯಲ್ಲಿ ದಿವ್ಯ, ವಿಜಯ, ಪರಮ ಮತ್ತು ಅನುಪಮ ಎಂದು ನಾಲ್ಕು ವಿಭಾಗಗಳಿವೆ. ದಿವ್ಯಜಾತಿಯಿಂದ ಅಹಮಿಂದ್ರತ್ವವುಂಟಾಗುತ್ತದೆ. ವಿಜಯ ಜಾತಿಯಿಂದ ಚಕ್ರವರ್ತಿತ್ವವುಂಟಾಗುತ್ತದೆ. ಪರಮಜಾತಿಯಿಂದ ಆರ್ಹಂತ್ಯವುಂಟಾಗುತ್ತದೆ ಮತ್ತು ಅನುಪಮ ಜಾತಿಯಿಂದ ಸಿದ್ಧತ್ವವುಂಟಾಗುತ್ತದೆ : ದಿವ್ಯಜಾತಿಯಿಂದ ಹಮಿಂದ್ರತ್ವಮುಂ . . . ಪಡೆಯಲಕ್ಕುಂ (ಜಾವುಂಪು. ೨೨೮). [ದಿವ್ಯ + ಜಾತಿ]

ದಿವ್ಯಜೀವನ (ನಾ). ಶ್ರೇಷ್ಠವಾದ ಜೀವನ ; ಉತ್ತಮವಾದ ಬಾಳು : ದುಡಿದು ಕಟ್ಟಿದ ದಿವ್ಯಜೀವನ ಕ್ಷಣಿಕವಾದರು ಪಾವನ! (ವಿಜಿದ. ೧೬-೩).

[ದಿವ್ಯ + ಜೀವನ]

ದಿವ್ಯಜೀವಿ (ನಾ). ಶ್ರೇಷ್ಠವಾದ ಜೀವನವನ್ನು ನಡೆಸುವ ವ್ಯಕ್ತಿ : ಮಾನವ ಪ್ರೇಮ, ನೀತಿ-ನಿಷ್ಠೆ . . . ಅದಕ್ಕೆ ಮಾದರಿಯಾಗಿ ಉನ್ನತ ಶರಣಮಾರ್ಗದಲ್ಲಿರುವ ದಿವ್ಯಜೀವಿಗಳ ಅನುಭಾವ ಗೋಷ್ಠಿ, ಇದು ಅವರ ಹಿರಿಗನಸಾಗಿತ್ತು (ಕರ್ನಾಳ. ೩೬). [ದಿವ್ಯ + ಜೀವಿ$_1$]

ದಿವ್ಯಜೋತಿ (ನಾ).=ದಿವ್ಯಜ್ಯೋತಿ ೧: ಖವಖವಿಸುವ ಸಾಲು ದಿವ್ಯಜೋತಿಗಳಾ ಭವನವ ತೀವಿಕೊಂಡಿರಲು (ಕಂನವಿ. ೮-೮೩). [ದಿವ್ಯ + ಜೋತಿ]

ದಿವ್ಯಜ್ಞಾನ (ನಾ). ಉತ್ಕೃಷ್ಟವಾದ ಜ್ಞಾನ ; ಅಲೌಕಿಕವಾದ ಜ್ಞಾನ,-ತಿಳುವಳಿಕೆ : ಐಕ್ಯನ ಸಮರಸಭಕ್ತಿಯನೊಳಕೊಂಡು ತೋಱುತ್ತಿಹುದು ಮಹಾಲಿಂಗವೆಂಬುದೀಗ ದಿವ್ಯಜ್ಞಾನವೆಂಬ ಶಬ್ದಕ್ಕರ್ಥ (ಅಜಿಮಾ. ೭೫-೫೧); ವಂಶಾಲಂಕಾರನಾದ ದಿವ್ಯಜ್ಞಾನವುಳ್ಳ ಪುತ್ರನನ್ನು ನಿಷ್ಕಾರಣಕ್ಕಾಗಿ ವಧಿಸಿ, ತಾನು ಮಹಾಪಾತಕಿಯೂ ಕುಲದ್ರೋಹಿಯೂ ಆದೆನೆಂಬುದು ಅವನ ಮನಸ್ಸಿಗೆ ಚೆನ್ನಾಗಿ ಗೋಚರವಾಯಿತು (ಕಲಾಧ. ೭೪).

[ದಿವ್ಯ + ಜ್ಞಾನ]

ದಿವ್ಯಜ್ಞಾನಿ (ನಾ). ಉತ್ಕೃಷ್ಟವಾದ ಜ್ಞಾನವನ್ನು ಉಳ್ಳವನು; ಅಲೌಕಿಕ ವಸ್ತುಜ್ಞಾನವನ್ನುಳ್ಳವನು : ದಿವ್ಯಜ್ಞಾನಿಗಳನಲ್ಲಿರ್ದರಂ ಕಂಡು . . . ಅವರ ವಚನದಿನಾತ್ಮೀಯ ಪಿತೃಮರಣಮುಮನಾತನ ನರಕಗತಿಗಮನ ಮುಮನಱಿದು (ಅದಿಪು. ೨-೧೪ ಪ) ; ಆನಱಿವೆಂ . . . ದಿವ್ಯಜ್ಞಾನಿ ಸಹದೇವನಱಿವಂ ನೀನಾರ್ಗೆಂದಾರುಮಱಿಯರಂಗಾಧಿಪತೀ (ಗದಾಯು. ೫-೧೮) ; ಈ ಆತ್ಮ ಮೇಲು ಮೇಲಕ್ಕೇರಿ ಪರಿಪೂರ್ಣತೆಯನ್ನು ಪಡೆದಂತೆಲ್ಲ ದಿವ್ಯಜ್ಞಾನಿಗಳ (ಪೈಗಂಬರ್) ಮತ್ತು ದೇವದೂತರ ಅವಸ್ಥೆ ಬರುತ್ತದೆ (ಇಸ್ಲಾಂಸಂ. ೨೨೫). [ಸಂ. ದಿವ್ಯಜ್ಞಾನಿನ್]

ದಿವ್ಯಜ್ಯೋತಿ (ನಾ). ೧. ಲೋಕೋತ್ತರವಾದ ಬೆಳಕು,-ಕಾಂತಿ : ದೇವರ್ಕಳ ದಿವ್ಯಮೌಳಿಮಣಿಮಾಳಾದೀಪ್ತಿಯುಂ . . . ಜಿನೇಂದ್ರತನು ದಿವ್ಯಜ್ಯೋ [ಪಾಠಾಂ. ದ್ಯೋ] ತಿಯುಂ ಧಾಟಿಯಿಟ್ಟು ವಿಯಚ್ಚಕ್ರದೊಳಿಕ್ಕಿ ಮೆಟ್ಟಿದುವನಂತಾರ್ಕಪ್ರಭಾಚಕ್ರಮಂ (ಮಲ್ಲಿಪು. ೧೩-೧೭೫) ; ಅವರ ದಿವ್ಯಜ್ಯೋತಿಯೂ, ಅವರು ಬೋಧಿಸಿರುವ ತತ್ವೋಪದೇಶಗಳೂ . . . ಭಾರತೀಯರಿಗೆಲ್ಲಾ ಪ್ರಕಾಶವನ್ನು ಕೊಡುತ್ತವೆ (ಶಾಂಪಜೀ. ೬೫). ೨. ದೇವರು ; ಪರಮಾತ್ಮ : "ಅಕ್ಷರ" ವೆಂದು ಪ್ರಶಂಸಿತವಾಗಿರುವ ದಿವ್ಯಜ್ಯೋತಿಯೆ ಸಕಲ ಜಗತ್ತಿಗೂ ಮೂಲ (ಭುಕ್ತಾರ. ೫೨ ಪೀಠಿಕೆ) : ತುಳುವದ ಜನಸಾಮಾನ್ಯರಿಗೆ ಈ ಭೂತಗಳು 'ದಿವ್ಯಜ್ಯೋತಿ' ಗಳಾಗಿದ್ದವು ಎಂದೂ ಹೇಳಬಹುದು (ತುಳುವಾ. ೨೫೩). [ದಿವ್ಯ + ಜ್ಯೋತಿ]

ದಿವ್ಯತನು (ನಾ). ದೈವಿಕವಾದ ದೇಹ ; ಪವಿತ್ರವಾದ ದೇಹ ; ಶ್ರೇಷ್ಠವಾದ ಶರೀರ : ನೀಲಮಣಿಕುಟ್ಟಿಮಭೂತಳದರ್ಪಣೈಕಬಿಂಬದೊಳಹಮಿಂದ್ರದಿವ್ಯತನು ಬಿಂಬಿಸೆ (ಶಾಂತಿಪು. ೯-೧೨೨) ; ಆರತಿಯೆತ್ತಿದಳಭವನ ದಿವ್ಯತನುಗೆ ಶಚಿ (ಅನಂಪು. ೫-೮೫). [ದಿವ್ಯ + ತನು]

ದಿವ್ಯತಪೋಧನ (ನಾ). ಶ್ರೇಷ್ಠ ತಪಸ್ವಿ : ಆ ದಿವ್ಯತಪೋಧನನಕ್ಷೋದಂ ಧ್ಯಾನಿಸಿದನನಿತುಮಂ ಕ್ರಮದಿಂ . . . ಅನುಪ್ರೇಕ್ಷೆಗಳಂ (ಶಾಂತಿಪು. ೯-೧೮೦). [ದಿವ್ಯ + ತಪೋಧನ]

ದಿವ್ಯತೆ (ನಾ). ದೇವನಾಗಿರುವಿಕೆ ; ದೇವತ್ವ : ರಹಸ್ಯವನ್ನರಿತು ಮಾಡಿದ ಕರ್ಮವು ದಿವ್ಯತೆಯನ್ನುಂಟುಮಾಡಿ ಪಾಪದಿಂದ ವಿಮುಕ್ತಿಗೊಳಿಸುವದು (ಧರ್ಮಸಾ. ೧೦೬) ; ಜಗದೆಲ್ಲ ಐಶ್ವರ್ಯ ಪದವಿ ಹಿರಿಹೆಮ್ಮೆಗಳು ಉಂಟಾದರೇಂ ಬಂತೆ ದಿವ್ಯತೆಯ ಸೊಬಗು! (ದ್ರಾಕ್ಷಿದಾ. ೫೦-೨೧).

[ಸಂ. ದಿವ್ಯತಾ]

ದಿವ್ಯದರ್ಶನ (ನಾ). ಶ್ರೇಷ್ಠವಾದುದರ ಕಾಣ್ಕೆ ; ಸಾಕ್ಷಾತ್ಕಾರ ಪರಮಾತ್ಮಸ್ವರೂಪದ ದಿವ್ಯದರ್ಶನವನ್ನು ಜೀವನು ಹೇಗೆ ಪಡೆಯುವನೆಂಬುದನ್ನು ದರ್ಶನಭಾಗವು ತಿಳಿಸುತ್ತದೆ (ಶಕ್ತಿವಿ. ೨೦).

[ದಿವ್ಯ + ದರ್ಶನ]

ದಿವ್ಯದೃಷ್ಟಿ (ನಾ). ಅತೀಂದ್ರಿಯ ದೃಷ್ಟಿ ; ಅಸಾಧಾರಣವಾದ ಪ್ರಜ್ಞೆ : ಯೋಗದ ಬಲಮುಣ್ಮೆ ಪೊಣ್ಮೆ ನಿಲೆ ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನಧಿವ್ಯದೃಷ್ಟಿಮಂತ್ರದೊಳೆ ಪೊದಟ್ಟುದಾ ಸತಿಯರಿರ್ವರೊಳಂ ನವಗರ್ಭವಿಭ್ರಮಂ (ಪಂಪಭಾ. ೧-೮೫); ಅನನ್ಯೆ, ಅವ್ಯಯೆ ಎಂದು ಮುನಿಗಳಿಟ್ಟ ಪೆಸರ್. ಎನ್ನಿರವನೊಂದುಟಿಯದಱಿಯಲ್‌ವೇಟ್ಟುಮಾದೊಡೆ, ದಿವ್ಯದೃಷ್ಟಿಯಿಂ ನೋಟ್ಟುದು (ಅದ್ಭುತ. ೫೩-೨೦) ; ಋಷಿಗಳು ತಮ್ಮ ದಿವ್ಯದೃಷ್ಟಿಯಿಂದ ಕಂಡ ದೇವತಾ ಮೂರ್ತಿಗಳನ್ನು ಸ್ಥೂಲಪದಾರ್ಥಗಳಿಂದ ಮಾಡಿ ತೋರಿಸುವ ಸಾಮರ್ಥ್ಯ ಹೊಂದಿದ್ದ ಶಿಲ್ಪಿಗಳು . . . ಸಮಾಜದಲ್ಲಿದ್ದರೆಂದು ನಂಬುವುದು ಸಹಜವೇ ಆಗಿದೆ (ಭಾರದ. ೫೦೯) ; ಭಗವಕಿತನ ಸದ್ಯದ ಜೀರ್ಣಶಕ್ತಿಗೆ ಅನುಗುಣವಾಗುವಂತಹ ಕೋಮಲಾಹಾರ ಎಲ್ಲಿ ದೊರಕಬಹುದೆಂಬುದನ್ನು ಮಹಾಮೌದ್ಗಲ್ಯಾಯನನು ತನ್ನ ದಿವ್ಯದೃಷ್ಟಿಯಿಂದ ಕಂಡುಕೊಂಡನು (ಹಕ್ತುಮ. ೦೧೯). [ದಿವ್ಯ + ದೃಷ್ಟಿ]

ದಿವ್ಯದೇಹ (ನಾ). = ದಿವ್ಯತನು : ಸಹಜವಿಭೂಷಣಪ್ರತತಿಪಲ್ಲವಮಿಲ್ಲದ ದಿವ್ಯದೇಹ (ಶಾಂತಿಪು. ೯-೩೪). [ದಿವ್ಯ + ದೇಹ]

ದಿವ್ಯದ್ಯೋತಿ (ನಾ). ಲೋಕೋತ್ತರವಾದ ಕಾಂತಿ,-ಬೆಳಕು: ದೇವರ್ಕಳ ದಿವ್ಯಮೌಳಿಮಣಿಮಾಳಾದೀಪ್ತಿಯುಂ . . . ಜಿನೇಂದ್ರತನು ದಿವ್ಯದ್ಯೋ[ಪಾಠಾಂ. ಜ್ಯೋ]ತಿಯುಂ ಧಾಟಿಯಿಟ್ಟು ವಿಯಚ್ಚಕ್ರದೊಳಿಕ್ಕಿ ಮೆಟ್ಟಿದುವನಂತಾರ್ಕಪ್ರಭಾಚಕ್ರಮಂ (ಮಲ್ಲಿಪು. ೧೩-೧೭೫).

[ದಿವ್ಯ + ದ್ಯೋತಿ$_1$]

ದಿವ್ಯದ್ವಿಪ (ನಾ). ೧. ಶ್ರೇಷ್ಠವಾದ ಆನೆ. ೨. ದೇವಲೋಕದ ಆನೆ. ೧, ೨ : ನೀರಾಟಕೆಂದೆಯ್ದಿ ಸಾರ್ದಿರೆ ದಿವ್ಯದ್ವಿಪಮಿಂಬುಗೊಂಡು ಜಳಮಂ ರಂಭಾದಿಗಳ್ಳೇವಿಸುತ್ತಿರೆ . . . ನಿರ್ಜರ ಗಂಗಾನದಿ ತಾನಿದೆಂಬ ತೆಱದಿಂ ಕಾವೇರಿ ಕಾಣ್ಗೊಪ್ಪುಗುಂ (ರಾಜಶೇ. ೨-೪). [ದಿವ್ಯ + ದ್ವಿಪ]

ದಿವ್ಯಧ್ವನಿ (ನಾ). ೧. ಶ್ರೇಷ್ಠವಾದ ಮಾತು : ಪವಿತ್ರವಾದ ನುಡಿ : ಕೇಳಿದಿರೊ ದಿವ್ಯಧ್ವನಿ ಜೀವದ ಣಮೋಕಾರ ಕನ್ನಡದ ಟಂಕಾರ (ಜೀವಲ. ೫೯-೯). ೨. [ಜೈನ] ಸಮವಸರಣಸಮಯದಲ್ಲಿ ಅರ್ಹಂತನಿಗೆ ಪ್ರಾಪ್ತವಾಗುವ ಅಸಾಧಾರಣಪರಿಣಾಮವುಳ್ಳ ಮಾತಿನ ಶಕ್ತಿ ಆ ತ್ರಿಲೋಕತಿಲಕಂಗೆ ದಿವ್ಯಧ್ವನಿ ನೆಗಟ್ಟುದು (ಅದಿಪು. ೬-೨೪ ಪ) ; ಬೆಸಸಿದನಘಾರಿ ದಿವ್ಯಧ್ವನಿಯಿಂ (ಶಾಂತಿಪು. ೬-೮೫). [ದಿವ್ಯ + ಧ್ವನಿ]

ದಿವ್ಯನಗ (ನಾ). ೧. ದೇವಲೋಕದ ವೃಕ್ಷ; ಕಲ್ಪವೃಕ್ಷ : ವಿತರಣದಿಂದೆ ದಿವ್ಯನಗಮಂ ನಗಮಂ ಘನಧೈರ್ಯದಿಂದೆ ವಿಶ್ರುತಯಶದಿಂದೆ ಪದ್ಮ ರಿಪುವಂ ರಿಪುವಂ . . . ಜಯಿಸಿರ್ದನುದಾತ್ತವೈಭವಂ (ರಾಜಶೇ. ೪-೧೧೧). ೨. ದೇವತೆಗಳ ಬೆಟ್ಟ; ಮೇರುಪರ್ವತ. [ದಿವ್ಯ + ನಗ$_4$]

ದಿವ್ಯನಿಧಾನ (ನಾ). ೧. ಶ್ರೇಷ್ಠವಾದ ನಿಧಿ,-ಧನ. ೨. ಶ್ರೇಷ್ಠತೆಗೆ ಆಕರವಾಗಿರುವವನು : ಶ್ರೀ ಶಾಂತೀಶಂ ತ್ರಿಜಗದಧೀಶಂ ಕೇವಳ ವಿಬೋಧವಿನಿರೋಧಪದಾರ್ಥಶೇಷರೂಪನಮರನರೇಶಸಭಾವೃತನುದಾತ್ತ ದಿವ್ಯನಿಧಾನಂ (ಶಾಂತಿಪು. ೧೨-೧). [ದಿವ್ಯ + ನಿಧಾನ]

ದಿವ್ಯನಿನಾದ (ನಾ). ಶ್ರೇಷ್ಠವಾದ ಮಾತು : ಪೊದಟ್ಟುದರ್ಹನ್ಮುಖೇಂದು ದಿವ್ಯನಿನಾದಂ (ಶಾಂತಿಪು. ೬-೩೮). [ದಿವ್ಯ + ನಿನಾದ]

ದಿವ್ಯಪ್ರಭಾವ (ನಾ). ೧. ಅಲೌಕಿಕವಾದ ಪರಿಣಾಮ; ದೇವಲೋಕದ ಪರಿಣಾಮ : ಅಂತು ದಿವ್ಯಪ್ರಭಾವದಿಂ ಸಕಳರ್ತುಕಸೌಂದರ್ಯಮುಮಂ ಬೇಱೆವೇಱೆ ತೋಱುವ ರಾಜ್ಯಲಕ್ಷ್ಮೀವಲ್ಲಭಂ ವನಲಕ್ಷ್ಮಿಯಂ ನೋಡುವಾಗಳ್ (ಆದಿಪು. ೦೧-೯೦ ವ). ೨. ಶ್ರೇಷ್ಠವಾದ ಶಕ್ತಿಯಿಂದ ಕೂಡಿದವನು : ಈ ಗಿರಿದುರ್ಗಮಂ ದಾಂಟಿ ಬಂದ ಬಲ್ಲಾಳ್ ದಿವ್ಯನಕ್ಕೆ ದಿವ್ಯಪ್ರಭಾವನಕ್ಕುಮಮೋಘನಕ್ಕುಂ (ಆದಿಪು. ೧೩-೩೭ ವ).

[ದಿವ್ಯ + ಪ್ರಭಾವ]

ದಿವ್ಯಪ್ರಾಸಾದ (ನಾ). ಭವ್ಯವಾದ ಮಂದಿರ; ಉತ್ತಮವಾದ ಉಪ್ಪರಿಗೆಯ ಮನೆ : ಸರ್ವತೋಭದ್ರಮೆಂಬ ಗೋಪುರದೊಳಂ ಕೂಡಿದ ವೈಜಯಂತಿಯೆಂಬ ದಿವ್ಯಪ್ರಾಸಾದಮುಂ ದಿಕ್ಸ್ವಸ್ತಿಕಮೆಂಬ ಸಭಾಭೂಮಿಯುಂ (ಆದಿಪು. ೧೫-೩ ವ). [ದಿವ್ಯ + ಪ್ರಾಸಾದ]

ದಿವ್ಯಪ್ರೇಮ (ನಾ). ದೇವರೊಡನೆ ಇರುವ ಪ್ರೀತಿ; ದೈವಿಕವಾದ ಪ್ರೇಮ : ಗಂಡಸಿಗೂ ಹೆಂಗಸಿಗೂ ಇರುವ ಸಂಬಂಧ ಪ್ರಕೃತಿಗೂ ಪುರುಷನಿಗೂ (ದೇವರಿಗೂ) ಇರುವಂಥಾದ್ದು. ಸ್ತ್ರೀ ಪುರುಷರ ಪ್ರೇಮ ಹೀಗಿದ್ದರೆ ಅದು ದಿವ್ಯಪ್ರೇಮವಾಗುತ್ತದೆ (ಇಸ್ಲಾಂಸಂ. ೨೮೦).

[ದಿವ್ಯ + ಪ್ರೇಮ]

ದಿವ್ಯಭಾಷೆ (ನಾ). ೧. ದೇವಭಾಷೆ : ಆವುದೋ ದಿವ್ಯಭಾಷೆಗಳ ಸಂದೇಶವನು ಕೊಡಲೆಂದು, ಮಡಿಮಡಿದು ಮೇಲೇರುತಿವೆ (ನಲ್ಕೆ. ೫೬-೨೨). ೨. = ದಿವ್ಯಧ್ವನಿ ೨ : ದಿವ್ಯಭಾಷೆ ಸುರತೂರ್ಯರವಂ ಪೂಮಟೆ ಕೇಸರಿಪೀಠಂ ಭಾಮಂಡಳಮೆಸೆಯೆ ನೆಗಟ್ದನಾದಿಜಿನಂ (ಜಾಪುಂಪು. ೦) ; ಆವರಿಸಿರ್ದಘಾತಿಘನಕಾಂಡಪಟಂ ಪೆಱಪಿಂಗೆ ದಿವ್ಯಭಾಷಾವಧುವಿಂಗೆ ರಾಘವಯತಿಪ್ರವರಂ ವರನಾಗೆ (ಪಂಠಾಮಾ. ೧೬-೬೮). [ದಿವ್ಯ + ಭಾಷೆ]

ದಿವ್ಯಭೋಗ (ನಾ). ಸ್ವರ್ಗಸುಖ; ಉತ್ಕೃಷ್ಟವಾದ ಭೋಗ : ಅಂತು ದಿವ್ಯಭೋಗ ಸಂಪತ್ಪರಂಪರಾಪರಿಗತನಾಗಿ (ಆದಿಪು. ೬-೧೭ ವ).

[ದಿವ್ಯ + ಭೋಗ]

ದಿವ್ಯಮಂತ್ರ (ನಾ). ಶ್ರೇಷ್ಠವಾದ ಉಪದೇಶ; ಪವಿತ್ರವಾದ ಬೋಧೆ ಸಲಹಿದೊಡೆಯನ ದಿವ್ಯಮಂತ್ರವ ಕಲಿಸಿದಾಚಾರ್ಯನನು ಅನುವರದೊಳಗೆ ತಲೆಗಾಯಿದನ . . . ಮಱೆದವನಿಳಿದನೈ ಕುಲಕೋಟಿಸಹಿತ ಮಹಾಂಧನರಕದಲಿ (ಕುಪ್ಯಾಉ. ೩-೪೨); ಧರ್ಮವೇ ಜಯವೆಂಬ ದಿವ್ಯಮಂತ್ರ ಮರ್ಮವನಱಿತು ಮಾಡಲು ಬೇಕು ತಂತ್ರ (ಪುಠಂದ. ೨-೭೫ ಅನುಪಲ್ಲವಿ).

[ದಿವ್ಯ + ಮಂತ್ರ]

ದಿವ್ಯಮಾನುಷ (ನಾ). ದೇವಾಂಶಸಂಭೂತನಾದ ವ್ಯಕ್ತಿ; ದೇವತ್ವವನ್ನು ಪಡೆದ ಮನುಷ್ಯ: ಬೌದ್ಧಶಿಲ್ಪದಲ್ಲಿ, ನಮಗೆ, ಯಮಾಂತಕ, ಜಂಭಳ, ಸಂವರ ಮುಂತಾದ ಸಂರಕ್ಷಕ ದೇವತಾವಿಗ್ರಹಗಳೂ . . . ನಾಗಾರ್ಜುನ, ಪದ್ಮಸಂಭವ ಮುಂತಾದ 'ದಿವ್ಯಮಾನುಷ'ರ ಮೂರ್ತಿಗಳೂ ಲಬ್ಧವಾಗುತ್ತವೆ (ಭಾರದ. ೫೦೫). [ದಿವ್ಯ + ಮಾನುಷ]

ದಿವ್ಯಮುನಿ (ನಾ). ಶ್ರೇಷ್ಠನಾದ ಮುನಿ,-ತಪಸ್ವಿ: ಮನದೊಳ್ ಸೋಲ್ತು ಮುನೀಂದ್ರನಾಕೆಯೊಡಲೀ ದುರ್ಗಂಧವೋಪಂತೆ . . . ಮಾಡಿ . . . ಕೂಡುವೆಡೆಯೊಳ್ ಜ್ಞಾನಸ್ವರೂಪಂ ಮಹಾಮುನಿಪಂ ಪುಟ್ಟಿದನಂತು ದಿವ್ಯಮುನಿಗಳ್ಗೇಗೆಯ್ದೊಡಂ ತೀರದೇ (ಪಂಪಭಾ. ೧-೬೯).

[ದಿವ್ಯ + ಮುನಿ$_3$]

ದಿವ್ಯಮೂರ್ತಿ (ನಾ). ಶ್ರೇಷ್ಠವಾದ ಸ್ವರೂಪ; ರಮಣೀಯವಾದ ರೂಪ : ಪರಮೌದಾರಿಕ ದಿವ್ಯಮೂರ್ತಿ ವಸನಾಳಂಕಾರ ಮಂದಾರ ಶೇಖರರಮ್ಯಂ ಧೃತಯೌವನಂ (ಆದಿಪು. ೮-೫) ; ತನ್ನ ಶರೀರದ ಕೇಡಂ ಬಗೆಯದೆ ಮಹಾತಪದೊಳ್ನೆಗಟ್ದೊಡೆ ದಿವ್ಯಮೂರ್ತಿಯುಂ ವಿಜಯಮೂರ್ತಿಯುಂ ಪರಮಮೂರ್ತಿಯುಂ ಅನುಪಮಮೂರ್ತಿಯುಮಂ ಪಡೆಯಲಕ್ಕುಂ (ಜಾಪುಂಪು. ೨೨೯). [ದಿವ್ಯ + ಮೂರ್ತಿ]

ದಿವ್ಯಮೂಲ (ನಾ). ೧. ದೇವಾಂಶದ ಆದಿ; ದೇವಮೂಲ : ಈ ಬುದ್ಧ್ಯಾತ್ಮಕ ಆತ್ಮ ಅಭೌತವಾಗಿದ್ದು ಆದಿಕಾರಣವಾದ ದಿವ್ಯಮೂಲದಿಂದ ಬಂದದ್ದು (ಇಸ್ಲಾಂಸಂ. ೨೨೫). ೨. ಒಂದು ಬಗೆಯ ಬೇರು : ಶೈತ್ಯ ಸೌರಭ್ಯ ಮಾದ್ಯಮೆಂಬ ತ್ರಿವಿಧಮದಸಮೃದ್ಧಮಾದ ಪನ್ನೀರು . . . ದಿವ್ಯಮೂಲ ಪರಿಮಳಮೃಗ ಕರ್ಪೂರವೃಕ್ಷ ಹಿಮಾದಿ ಸಂಪರ್ಕದಿಂ ರಮ್ಯಮಾದ ಮಂದಮಾರುತಸ್ಪರ್ಶನದಿಂದಪೇಕ್ಷಣೀಯಮಾಗಿರ್ಕುಂ (ವಿವೇಕ. ೨೦೩). [ದಿವ್ಯ + ಮೂಲ]

ದಿವ್ಯರೂಪ (ನಾ). ಅಲೌಕಿಕವಾದ ರೂಪ; ಅತ್ಯಂತ ಸುಂದರವಾದ ರೂಪ : ಈತಂ ಕೇವಲಂ ದಾನವರಿಪುವೆ ಪೆಱಂಗೆಲ್ಲಿತೀ ದಿವ್ಯರೂಪಂ (ಜಗವಿ. ೩-೨); ವಿಶ್ವರೂಪಂ . . . ತನ್ನ ದಿವ್ಯರೂಪಮನಡಂಗಿಸಿ (ಜಗವಿ. ೩-೬ ವ). [ದಿವ್ಯ + ರೂಪ]

ದಿವ್ಯಲಿಂಗಿಭಟಾರ (ನಾ). ಒಬ್ಬಾತನ ಹೆಸರು: ಶ್ರೀ ದಿವ್ಯಲಿಂಗಿಭಟಾರರ್ಗ್ಗೆ ಸೂದ್ರಕಯ್ಯಂ ಕಾಲ್ಗೆಱೆಯೆ (ಎಕ. XI, ಹೊಳೆಲ್ಕೆ. ೨೩-೧೬; 968). [ದಿವ್ಯಲಿಂಗಿ$_0$ + ಭಟಾರ (<ಭಟಾರ)]

ದಿವ್ಯವಚನ (ನಾ). ಅಲೌಕಿಕವಾದ ಮಾತು; ಪವಿತ್ರವಾದ ನುಡಿ : ದಿವ್ಯವಚನಮರೀಚಿಮಾಲಿರೋಚಿರ್ನಿಚಯ ತ್ರಿಜಗಚ್ಚೂಡಾಮಣಿಯಂ . . . ಎನಿತಾನುಂ ಸ್ತುತಿಗಳಿಂ ಸ್ತುತಿಯಿಸಿ (ಶಾಂತಿಪು. ೯-೬೯ ವ) ; ವಿಯತ್ತಳದೊಳಿರ್ದ ಚಂದ್ರಮಂ ತನ್ನ ದಿವ್ಯವಚನದಿನಾಱಿಸಿದುದುಮಂ ನೀನುಂ ಕಾದಂಬರಿಯುಂ ಕೇಳ್ದಿರ್ (ಕಾದಂಉ. ೬೨೩) ; ತಾಲ್ವೋಷ್ಠವ್ಯಾಪಾರವಿರಹಿತಮುಮಪ್ಪ ದಿವ್ಯವಚನಾಮೃತಮುಮಂ (ಆಜಿಪು. ೬-೧೫ ವ).

[ದಿವ್ಯ + ವಚನ]

ದಿವ್ಯವತಿ (ನಾ). [ಸಂಗೀತ] ಮಧ್ಯಮಗ್ರಾಮದಲ್ಲಿ ಹುಟ್ಟುವ ಹತ್ತು ರಾಗಗಳಲ್ಲಿ ಒಂದು : ಗಾಂಧಾರಿ ರಕ್ಷೋಗಾಂಧಾರಿ . . . ದಿವ್ಯವತಿ . . . ಕೌಶಿಕಿಯೆಂಬ ಹತ್ತು ರಾಗಂಗಳು ಮಧ್ಯಮಗ್ರಾಮದಿಂ ಪುಟ್ಟಿದವು (ವಿವೇಕ. ೨೩೩), 'ಗ್ರಾಮ' ಪರಾ. [ಸಂ. ದಿವ್ಯವತೀ]

ದಿವ್ಯವಧು (ನಾ). ದೇವತಾಸ್ತ್ರೀ; ದಿವಿಜೆ: ಜತ್ತವಟ್ಟದ ಮಣಿಯಂತದೇಂ ಪದುಳಮಾದುದೊ ದಿವ್ಯವಧೂಕದಂಬಕಂ (ಆದಿಪು. ೭-೧೨೫).

[ದಿವ್ಯ + ವಧು]

ದಿವ್ಯವಪು (ನಾ). ದಿವ್ಯವಾದ ದೇಹ; ಶಾಂತಿಯಂತವಾದ ದೇಹ,-ಶರೀರ: ಪಳುಕಿನ ಪಾಪೆಯನಮರ್ದಿಂ ಕೊಳೆದಂತೊರ್ಮೊಟದ ದಿವ್ಯವಪು . . . ಏಂ ವಿಳಾಸಮಂ ತಾಳ್ದಿದುದೋ (ಆದಿಪು. ೬-೩೯).

[ದಿವ್ಯ + ವಪು]

ದಿವ್ಯವರುಷ (ನಾ). ದೇವತೆಗಳ ಒಂದು ವರ್ಷ; P ಮನುಷ್ಯರ ಒಂದು ವರ್ಷವೆಂದರೆ ದೇವತೆಗಳ ಒಂದು ದಿವಸವೆಂಬ ಲೆಕ್ಕದಿಂದ ದಿವ್ಯವರುಷ ನಮ್ಮ ಮುನ್ನೂರರುವತ್ತು ವರ್ಷಗಳ ಅವಧಿ. ಅದರಲ್ಲಿ

ಉತ್ತರಾಯಣವೇ ಹಗಲು, ದಕ್ಷಿಣಾಯನವೇ ರಾತ್ರಿ : ಅಜನುದರ ದೊಳು ದಿವ್ಯವರುಷಸಾಹಸ್ರ ನೀರಜನಯನ ನೀನಿರಲ್ಕೆ (ವೀಶ್ಯಪು. ೩-೫-೩೫) ; ಮಾಣದೀರ್ವರು ದಿವ್ಯವರುಷಪರಿಯಂತವಕ್ಷೀಣಯುದ್ಧಂ ಮಾಡಿ (ವೀಶ್ಯಪು. ೩-೧೨-೧೦). [ದಿವ್ಯ + ವರುಷ]

ದಿವ್ಯವಸನ (ನಾ). ಉತ್ತಮವಾದ ಬಟ್ಟೆ ; ಶ್ರೇಷ್ಠವಾದ ವಸ್ತ್ರ : ಕ್ಷೌಮ ದುಕೂಲಾದಿ ದಿವ್ಯವಸನ ವಿವಿಧಪ್ರಾವರಣವಿಶೇಷಂಗಳುಂ (ಆದಿಪು. ೧೫-೩ ವ). [ದಿವ್ಯ + ವಸನ]

ದಿವ್ಯವಾಣಿ (ನಾ). ದೇವರ ಮಾತು ; ಅಶರೀರವಾಣಿ; ದಿವ್ಯಧ್ವನಿ: ಗೌರೀ ಮಂದಿರದಲ್ಲಿ ನಿನಗೆ ಕೇಳಿದ ದಿವ್ಯವಾಣಿ ಸುಳ್ಳಾಗುವುದುಂಟೇ ? (ಗುರುಚಿ. ೯೪) ; ವೇದವಲ್ಲಿ ಕಣ್ಣನ್ನು ಆರ್ಧಮುಚ್ಚಿ ಯಾವುದೋ ದಿವ್ಯವಾಣಿ ಕೇಳು ತ್ತಿರುವವರಂತೆ ಸಂತೃಪ್ತರಾದರು (ನಿಂದನೆ. ೨). [ದಿವ್ಯ + ವಾಣಿ$_1$]

ದಿವ್ಯವಿಧಿ (ನಾ). ದೇವತೆಗಳು ಮಾನವರಿಗೆ ಮಾಡಿರುವರೆಂದು ನಂಬ ಲಾದ ನಿಯಮ ; ದೈವದ ನಿಯಮ : ಸೆಳೆವೊಂದು ದಿವ್ಯವಿಧಿಯಿಂದ ಜಗವೆಲ್ಲ ಬೇರೆ ಇರಲಾರದೆಯೆ. ಮೀರದೆಯೆ, ಸೇರುವುವು: ನೀನೇಕೆ ಬೇರೆ ಇರುವೆ ? (ಇಂಗೀತ. ೪೮-೬). [ದಿವ್ಯ + ವಿಧಿ]

ದಿವ್ಯವಿಷ್ಟರ (ನಾ). ಶ್ರೇಷ್ಠವಾದ ಆಸನ,-ಪೀಠ : ಕರಮಿಂಬಾಗಿರೆ ಚಾಮರಯುಗ್ಮಮದಾಗಳೆ ನಿಲೆ ದಿವ್ಯವಿಷ್ಟರಂ ಮಣಿಖಚಿತಂ (ಆದಿಪು. ೧೪-೧೪೬). [ದಿವ್ಯ + ವಿಷ್ಟರ]

ದಿವ್ಯಶಕ್ತಿ (ನಾ). ಅದ್ಭುತವಾದ ಶಕ್ತಿ ; ಅಸಾಧಾರಣವಾದ ಶಕ್ತಿ : ದಿವ್ಯ ಶಕ್ತಿಪ್ರಭಾವದಿಂದ ಮಾನುಷಾರಣ್ಯಂಗಳ ಮಹಾದ್ರುಮಂಗಳಂ ತರಿಸಿ ನಡಿಸಿ (ಆದಿಪು. ೧೩-೫೨ ವ) ; ದೇವರು ಉಂಟುಮಾಡಿದ ಸೃಷ್ಟಿಯು ಆತನ ದಿವ್ಯಶಕ್ತಿ ಜ್ಞಾನಗಳ ಕನ್ನಡಿಯಾಗಿದೆ (ಮುಂಬಯಿ. ೪-೬೦). [ದಿವ್ಯ+ಶಕ್ತಿ]

ದಿವ್ಯಶಯ್ಯೆ (ನಾ). ಉತ್ತಮವಾದ ಹಾಸಿಗೆ,-ಶಯ್ಯೆ : ಲೌಕಿಕಶಾಸ್ತ್ರ ನಿವರ್ತನಂ ಬೆರಸು ಪಲವುಂ ತೆಱದ ಪಱೆಗಳುಂ . . . ದಿವ್ಯಶಯ್ಯಾಸನ ನಾನಾ ಸದನಂಗಳುಂ (ಆದಿಪು. ೧೫-೩ ವ) ; ಜಯಲಕ್ಷ್ಮೀನಿಭೆಯಪ್ಪ ಸೂಱರಸಿಗಂ ಭೂಪಂಗಮಾ ದಿವ್ಯಶಯ್ಯೆಯಿನೇಟಲ್ಕಿದೆ ಪೊಟ್ಟು (ಶಾಂತಿಪು. ೧೦-೧೫೬). [ದಿವ್ಯ + ಶಯ್ಯೆ]

ದಿವ್ಯಶರೀರ (ನಾ). ಕಾಂತಿಯುತವಾದ ದೇಹ ಕೊಳೆ ನೋಡುವ ಕಣ್ಗಳಸುಂಗೊಳೆ ದಿವ್ಯಶರೀರಮಂತುಮಲ್ಲದೆಯುಂ ತಾಂ ತೊಳತೊಳ ತೊಳಗೆ ನಿಶಾಕರವಿಳಂಬಿಯಾಯ್ತುಮಿತವಿಕ್ರಮಪ್ರಭೆ ದಿವದೊಳ್ (ಶಾಂತಿಪು. ೯-೩೫). ೨. ಕಾಂತಿಯುತವಾದ ದೇಹವನ್ನುಳ್ಳವನು : ಅಂತರ್ಚಿಸಿ ಪೊಡಮಟ್ಟು ಪರಮೌದಾರಿಕದಿವ್ಯಶರೀರನುಂ . . . ಅಪ್ಪ ತೀರ್ಥಂಕರ ಕುಮಾರಂಗೆ (ಶಾಂತಿಪು. ೧೦-೫೬ ವ). [ದಿವ್ಯ + ಶರೀರ]

ದಿವ್ಯಸಂಭವ (ನಾ). ೧. ದೈವಾಂಶದಿಂದ ಕೂಡಿದವನು : ಸ್ಥಿತ ಭೌಮೋತ್ತರದೇಯಸ್ಥಿತಿ ಬೆಸದೊಳ್ ಗರ್ಭಸಂಭವಕ್ಕಭಿಮತದುನ್ನತ ದಿವ್ಯಸಂಭವರ್ಗನುಚಿತಮೆಂಬರಿತೀಶ ನಿಮಗೆ ಪೆಱರುಪದೇಶಂ (ಶಾಂತಿಪು. ೧೧-೯೭). ೨. ದೈವಾಂಶದಿಂದ ಹುಟ್ಟಿದುದು; ಅಯೋನಿಜ : ಬಲ್ಲರಿಗೆ ದಿವ್ಯಸಂಭವಮಲ್ಲದೆ ದೊರ ಗರ್ಭಸಂಭವಂಗಳ್ಗಿಲ್ಲೆಲ್ಲೆಲ್ಲಿಯುಮೆನೆ ಪಿರಿದುಂ ತಲೆವಲ್ಲಿದುವಱುವತ್ತು ಸಾಸಿರಂ ಮದಕರಿಗಳ್ (ಶಾಂತಿಪು. ೧೦-೧೦೬). [ದಿವ್ಯ + ಸಂಭವ]

ದಿವ್ಯಸಂಯೋಗ (ನಾ). ದೇವತೆಗಳ ಸಂಪರ್ಕ,-ಒಡನಾಟ : ಅಂತು ದಿವ್ಯಸಂಯೋಗದೊಳಿರ್ವರುಂ ಗರ್ಭಮಂ ತಾಳ್ದರ್ (ಪಂಪಭಾ. ೧-೮೫ ವ). [ದಿವ್ಯ + ಸಂಯೋಗ]

ದಿವ್ಯಸಾಹಸ್ರವರ್ಷ (ನಾ). ದೇವಮಾನದ ಸಹಸ್ರವರ್ಷ: ನಾರದಂ ದಿವ್ಯ ಸಾಹಸ್ರವರ್ಷ ಪರ್ಯಂತಮಭ್ಯಾಸಿಸುತಿರ್ದು . . . ನೈಪುಣ್ಯವಂ ಪಡೆದಂ (ಅದ್ಭುತ. ೨೫-೭). [ದಿವ್ಯ + ಸಾಹಸ್ರ + ವರ್ಷ]

ದಿವ್ಯಸುಖ (ನಾ). ದೇವಲೋಕದ ಭೋಗ ; ಸ್ವರ್ಗಸುಖ: ಮಹೇಂದ್ರಾ ಮರೇಶ್ವರನಭೂತೋಪಮ ದಿವ್ಯಸುಖಮನನುಭವಿಸಿ (ಶಾಂತಿಪು. ೯-೧೨೯ವ); ಮಹೇಂದ್ರಾಮರಂ ಮೂವತ್ತುಮೂಱು ಸಾಗರೋಪಮಯುಷ್ಯಂಬರ ಮನನ್ಯಸಾಮಾನ್ಯದಿವ್ಯಸುಖಮನನುಭವಿಸುತ್ತುಮಿರೆ (ಶಾಂತಿಪು. ೯-೧೬೧ ವ). [ದಿವ್ಯ + ಸುಖ]

ದಿವ್ಯಸೌಂದರಿ (ನಾ). ದೇವಲೋಕದ ಸುಂದರಿ ; ಸುರಸುಂದರಿ : ಉನ್ಮದ ಭೃಂಗಮಾಲಿಕಾರವಮುಖರೀಕೃತಾಮ್ರವನಶೋಭಿತಮಾಶ್ರಿತ ದಿವ್ಯಸೌಂದರೀನಿವಹನಿಕೀರ್ಣಚಂಪಕವನಂ ಕರ ಮೊಪ್ಪುಗುಂ (ಆದಿಪು. ೧೩-೬೦). [ದಿವ್ಯ + ಸೌಂದರಿ]

ದಿವ್ಯಸ್ತುತಿ (ನಾ). ದಿವ್ಯಶಕ್ತಿಯುಳ್ಳವರು ಮಾಡಿದ ಸ್ತೋತ್ರ,-ಹೊಗಳಿಕೆ, -ಸ್ತುತಿ : ವೇದದಱಿಕೆಗಳಡಗದು [ಪಾಠಾಂ. ಱಸುವು.] ಪನಿಷದಾದಿದಿವ್ಯಸ್ತುತಿಯ ಗಡಣೆಗೆ ಹೋದ ಹೊಲಬಳವಡದ ಮುನಿಗಳ ಮುಖಕೆ ಮನಗುಡದ ಕಾದಿ ಕಡಗುವ ತಾರ್ಕಿಕರು . . . ನಿಜವನಱಿ ಯದನಾದಿಸಿದ್ಧನ ಬರವ ಕಂಡನು ಬಾಗಿಲಲಿ ವಿದುರ (ಕುವ್ಯಾಳು. ೮-೯). [ದಿವ್ಯ + ಸ್ತುತಿ]

ದಿವ್ಯಸ್ನಾನ (ನಾ). ವಾಯವ್ಯ, ವಾರುಣ, ದಿವ್ಯ, ಮಾನಸ, ಆಗ್ನೇಯಂ ಗಳೆಂಬ ಐದು ವಿಧವಾದ ಸ್ನಾನಗಳಲ್ಲಿ ಒಂದು ; ಬಿಸಿಲಿನಿಂದ ಕೂಡಿದ ಮಳೆಯಲ್ಲಿ ಮಾಡುವ ಸ್ನಾನ : ದಿವ್ಯಸ್ನಾನ ವಾರುಣಸ್ನಾನ ವಾಯವ್ಯಸ್ನಾನ ಮಾನಸಸ್ನಾನ ಆಗ್ನೇಯಸ್ನಾನವೆಂಬ ಪಂಚವಿಧಸ್ನಾನಂ ಗಳೊಳಗೆ (ವಿವೇಕ. ೧೪೫) ; ಬಿಸಿಲಿನಿಂದ ಕೂಡಿದ ಮಳೆಯಿಂದ ಮಾಡು ವುದೇ ದಿವ್ಯಸ್ನಾನವು (ಅಷ್ಟಾವಿ. ೪). [ದಿವ್ಯ + ಸ್ನಾನ]

ದಿವ್ಯಸ್ಪರ್ಶ (ನಾ). ದೈವಿಕವಾದ ಅನುಭವ ; ಸಾಕ್ಷಾತ್ಕಾರವಾದ ಅನು ಭವ : ಅತ್ತ ಹೊರಳಲು ಸ್ಪರ್ಶ ಇತ್ತ ಹೊರಳಲು ಸ್ಪರ್ಶ ಎತ್ತೆತ್ತಲು ಸ್ಪರ್ಶ ದಿವ್ಯಸ್ಪರ್ಶ (ನನಲ್ಲ. ೧೫-೧೩). [ದಿವ್ಯ + ಸ್ಪರ್ಶ]

ದಿವ್ಯಸ್ಮಿತ (ನಾ). ಮನೋಹರವಾದ ಮುಗುಳ್ನಗೆ : ನಗುತಿಹ ದೇವರ ದಿವ್ಯಸ್ಮಿತವೆನೆ ಮಳೆಬಿಸಿಲಿದೊ ಮಲೆ ಮೇಲುಗಡೆ (ಮಾಂದಳಿ. ೫೮-೭). [ದಿವ್ಯ + ಸ್ಮಿತ]

ದಿವ್ಯಹಂಸ (ನಾ). ೧. ಶ್ರೇಷ್ಠವಾದ ಹಂಸಪಕ್ಷಿ. ೨. ಶ್ರೇಷ್ಠನಾದ ಸಂನ್ಯಾಸಿ. ೧, ೨ : ತ್ರಿಭುವನಗುರುಪರಿನಿಷ್ಕ್ರಮಣಕಲ್ಯಾಣ ಶಾರದಾಗಮ ಪ್ರತೀಕ್ಷಣ ದಿವ್ಯಹಂಸರುಂ ಬ್ರಹ್ಮಕಲ್ಪಾಂತ ನಿವಾಸಿಗಳುಮಪ್ಪ ಸಾರಸ್ವತಾದಿತ್ಯ . . . ಅರಿಷ್ಟರೆಂಬೆಣ್ಬರುಂ ಲೋಕಾಂತಿಕದೇವರ್ ಬಂದು (ಆದಿಪು. ೯-೬೦ ವ). 'ಪರಮಹಂಸ' ಪರಾ. [ದಿವ್ಯ+ಹಂಸ]

ದಿವ್ಯಾಂಗ (ನಾ). ೧. ದೈವಿಕವಾದ ಶರೀರ : ದ್ವಾವಿಂಶತ್ಯಂಬುಧಿ ಮಿತ ಜೀವಿತಮುಂ ಮೂಱು ಮೊಱದ ದಿವ್ಯಾಂಗಮುಮಾ ದೇವಂಗಾಯ್ತು (ಆದಿಪು. ೬-೧೭); ಅಂಗನೆಯ ಸರ್ವಾಂಗಮಂ ದಿವ್ಯಾಂಗಮಾಗಿರಲೀಯಲಾ ಲಲಿತಾಂಗಿ ಸರ್ವಾಂಗದೊಳೆಱಗಿ ವಂದಿಸುತ ಮುಂದಿರಲು (ಬಸವು. ೫೭-೬೧). ೨. ಮನೋಹರವಾದ ದೇಹ : ಮಡದಿಯ ದಿವ್ಯಾಂಗಮೇಂ ಮನಂಗೊಳಿಸಿದುದೊ (ರಾಜಶೇ. ೩-೦೬). [ದಿವ್ಯ + ಅಂಗ$_2$]

ದಿವ್ಯಾಂಗಂದಳೆ (ಕ್ರಿ). ಸುಂದರವಾದ ದೇಹವನ್ನು ಹೊಂದು,-ತಳೆ : ಅಂಗನೆಯಂಗದ ಕಾಮಂ ಮುನ್ನಿನನಂಗತೆಯಂ ಪರಿಹರಿಸಿ ಬಳಿಕ ದಿವ್ಯಾಂಗಂದಳೆದೊಪ್ಪಂಬಡೆದಂದದಿಂ (ಜಯಕಾ. ೨-೫೮). [ದಿವ್ಯಾಂಗ + ತಳೆ$_1$]

ದಿವ್ಯಾಂಗನೆ (ನಾ). ದೇವಲೋಕದ ಸ್ತ್ರೀ : ದಿವ್ಯಾಂಗನಾಭಾವಾಪಾಂಗ ನಿರೀಕ್ಷಣಾಮೃತಕೃತಾನಂಗೋತ್ಸವಂ (ಆದಿಪು. ೨-೬) : ದಿವ್ಯಾಂಗನೆ ನೋಡಿದಳ್ ತಗುಳ್ದು ಚಂದ್ರಾಪೀಡ ಭೂಪಾಲನಂ (ಕಾದಂಪು. ೬೮೮) [ಸಂ. ದಿವ್ಯಾಂಗನಾ]

ದಿವ್ಯಾಂಗಿ (ನಾ). ದಿವ್ಯಾಂಗವನ್ನು ಹೊಂದಿರುವವಳು : ಮಿಗಿಲೆನಿಸಿ ನಡೆದಳು ದೇವನರ್ಧಾಂಗಿ ನಿರುಪಮಚಿದಂಬುಜವತಂಗಿ ದಿವ್ಯಾಂಗಿ ಶಂಕರ ವಿಲಸದಂತರಂಗಿ (ವೀಕೃಪು. ೩-೨-೩೬). [ಸಂ. ದಿವ್ಯಾಂಗೀ]

ದಿವ್ಯಾಂಜನ (ನಾ). ಕಣ್ಣಿಗೆ ಅದ್ಭುತಶಕ್ತಿಯಂಸ್ನು ನೀಡುವ ಅಂಜನ,-ಲೇಪನದ್ರವ್ಯ,-ಕಾಡಿಗೆ : ಮರುಜವಣಿ . . . ಸಂತೋಷಣ ದಿವ್ಯಾಂಜನ . . . ಸಿದ್ಧಲೇಪಾದಿ ಸುವಸ್ತುಗಳನೇಕಮಾಗಿ ಅಲ್ಲಿಯಣ ಶಿವಭಕ್ತಂಗೆ ಸುಕೃತಾನುರೂಪದಿಂದಾನಂದಕರಗಳಾಗಿರ್ಕುಂ (ವಿವೇಕ. ೨೦೦).

[ದಿವ್ಯ + ಅಂಜನ]

ದಿವ್ಯಾಂಬರ (ನಾ). ಉತ್ತಮವಾದ ಬಟ್ಟೆ,-ಉಡುಪು : ಬಾಡದ ಬಾಸಿಗ ಮುಡಿ ಚೆಲ್ವೋಡದ ದಿವ್ಯಾಂಬರಂ ಮನಂಗೊಳೆ (ಆದಿಪು. ೬-೪೦); ಪುಣಿ ಭೂಷಣ ದಿವ್ಯಾಂಬರಗಣಂಗಳಂ ತಣಿಯೆ ಕೊಟ್ಟು (ಶಾಂತಿಪು. ೦೧-೧೦೩) ; ಮಂಗಳವೇ ಮಜ್ಜನವೆನಗೆ . . . ದಿಗಂಬರವೇ ದಿವ್ಯಾಂಬರವೆನಗೆ (ಮಹಾದೇ. ಬ. ೩೬-೭೪). [ದಿವ್ಯ + ಅಂಬರ]

ದಿವ್ಯಾಂಬು (ನಾ). ಪವಿತ್ರವಾದ ನೀರು ; ದೇವಲೋಕದ ನೀರು : ಅಚ್ಛಸ್ಫಟಿಕಕಳಶಮಂ ತೀವಿ ದಿವ್ಯಾಂಬುವಿಂ ನಾಕಜನಾಥಂ ಮಜ್ಜನಕ್ಕೆತ್ತಿದ ತೆಱದ ಸುಧಾಸೂತಿ ಕಣ್ಗೆಡ್ಡವಾದಂ (ಆದಿಪು. ೦೨-೮).

[ದಿವ್ಯ + ಅಂಬ್ಬು]

ದಿವ್ಯಾಕಾರ (ನಾ). ೧. ಸುಂದರವಾದ ರೂಪ,-ಆಕಾರ : ಮಾಯಾದೇವಿ ಲೋಕತ್ರಯಜನನಿ ಮದಾಜ್ಞಾಸಮುತ್ಪನ್ನೆಯುಷ್ಮತ್ಕಲೆ ದಿವ್ಯಾಕಾರದಿಂ ಪುಟ್ಟುಗೆ (ಜಗವಿ. ೩-೩೮). ೨. ಸುಂದರವಾದ ರೂಪವನ್ನುಳ್ಳವನು : ಮಹಾಪ್ರಮಾಣಪುರುಷನುಂ ಮಹಾ ಪುರುಷ ಲಕ್ಷಣೋಪೇತನುಂ ದಿವ್ಯಾಕಾರನುಮೆನಿಸಿದ ಮಹಾನುಭಾವಂ (ಕಾದಂಪು. ೯೩೬).

[ದಿವ್ಯ + ಆಕಾರ]

ದಿವ್ಯಾಕಾರೆ(ನಾ). ಸುಂದರವಾದ ರೂಪವನ್ನುಳ್ಳವಳು: ಒರ್ವಳತ್ಯುತ್ತಮ ದಿವ್ಯಾಕಾರೆ ಕುಳ್ಳಿರ್ದತನುಹರನನಾರಾಧಿಸುತ್ತಿರ್ದಳಾಗಳ್ (ಕಾದಂಪು. ೬೫೯). [ದಿವ್ಯಾಕಾರ + – ಎ]

ದಿವ್ಯಾಕೃತಿ (ನಾ). ೧. ಸುಂದರವಾದ ರೂಪ,-ಆಕಾರ : ದಿವ್ಯಾಲಂಕಾರ ದಿವ್ಯಲೇಪನ ಭಾಸ್ವದ್ದಿವ್ಯಾಕೃತಿಯಂ ಧರಿಯಿಸಿ (ಜಗವಿ. ೪-೪೧). ೨.ಸುಂದರವಾದ ರೂಪವನ್ನು ಉಳ್ಳವನು: ಶ್ರೀ ಕುರುಭೂಮಿಭವಂ ದಿವ್ಯಾಕೃತಿ ಜನಚಂದ್ರದೇವನಿರೆ (ಶಾಂತಿಪು. ೭-೧). [ದಿವ್ಯ + ಆಕೃತಿ]

ದಿವ್ಯಾಗಮ (ನಾ). ೧. ಶ್ರೇಷ್ಠವಾದ ಆಗಮಂ, ೨. ವಾತುಲ, ಉತ್ತರ ವಾತುಲ, ಕಾಲಜ್ಞಾನ, ಪರಾಜಿತ, ಸರ್ವಾಗಮ, ಸರ್ವಾಪ್ಯಾಗಮಂ, ಶ್ರೇಷ್ಠಾಗಮ, ದಿವ್ಯಾಗಮ, ಶುದ್ಧಾಗಮ, ಮಹದಾಗಮಂ, ವಿಶ್ವಾಸಾಗಮಂ ಮತ್ತು ವಿಶ್ವಾತ್ಮಕಾಗಮವೆಂದು ವಾತೂಲಾಗಮದ ಹನ್ನೆರಡು ಭೇದಗಳಲ್ಲಿ ಒಂದು: ವಾತೂಲ ಉತ್ತರವಾತೂಲ ಕಾಲಜ್ಞಾನ ಪರಾಜಿತ . . . ದಿವ್ಯಾಗಮ ಶುದ್ಧಾಗಮ . . . ವಾತೂಲಾಗಮದ ದ್ವಾದಶ ಭೇದಂಗಳು (ವಿವೇಕ. ೭೬). [ದಿವ್ಯ + ಆಗಮ].

ದಿವ್ಯಾಜ್ಞೆ (ನಾ). [ಜೈನ] ಪಾರಿವ್ರಾಜ್ಯಲಕ್ಷಣಗಳನ್ನು ತಿಳಿಸುವ ಆಜ್ಞೆ ಎಂಬ ಸೂತ್ರಪದದ ಮೂರು ಬಗೆಗಳಲ್ಲಿ ಒಂದು; P ದಿವ್ಯಾಜ್ಞೆ, ವಿಜಯಾಜ್ಞೆ ಮತ್ತು ಪರಮಾಜ್ಞೆ ಎಂಬ ಮೂರು ಬಗೆಗಳಲ್ಲಿ ಮೊದಲನೆಯದು. ದಿವ್ಯಾಜ್ಞೆಯಿಂದ ದೇವತೆಗಳನ್ನು ವಶೀಕೃತರನ್ನಾಗಿ ಮಾಡಿಕೊಳ್ಳಬಹುದು: ನಿಜಾಜ್ಞಾಭಿಮಾನಪರಿತ್ಯಾಗದಿಂ ಮೌನವ್ರತಧಾರಿಯಾಗಿ ತಪದೊಳಿಸಗಿದೊಡೆ ದಿವ್ಯವಿಜಯಪರಮಜ್ಞಾನ ಪ್ರಾಪ್ತಿಯಕ್ಕುಂ ಅಲ್ಲಿ ದಿವ್ಯಾ[ಜ್ಞಾಂ. ದೇವಾ]ಜ್ಞೆಯೆಂಬುದು ದೇವೇಂದ್ರ ಪುಣ್ಯದಿಂ ದೇವರ್ಕಳಂ ವಶೀಕೃತಂ ಮಾಡ್ಪುದು (ಜಾವುಂಪು. ೨೫೦).

[ದಿವ್ಯ + ಆಜ್ಞೆ]

ದಿವ್ಯಾದಿವ್ಯ (ನಾ). [ಶೈವ] ಶೈವಾಗವಂದ ಆರು ಬಗೆಗಳಲ್ಲಿ ಒಂದಂ : ಶೈವಾಗಮಗಳು . . . ಬೋಧಕ – ಬೋಧ್ಯಸಂಬಂಧದಲ್ಲಿ "ಪರ, ಮಹಾನ್, ಅಂತರಾಳ, ದಿವ್ಯ, ದಿವ್ಯಾದಿವ್ಯ, ಅದಿವ್ಯ"ಗಳೆಂದು ಆರು ಬಗೆಯಾಗಿವೆ (ಶಾಕರ. ೭೩). [ಸಂ.]

ದಿವ್ಯಾನಂದ (ನಾ). ಪರಮಾನಂದ; ಬ್ರಹ್ಮಾನಂದ : ಜೀವನದಲ್ಲಿ ದಿವ್ಯತ್ವವನ್ನು ಪ್ರಕಾಶವಡಿಸಿ ದಿವ್ಯಾನಂದದ ಅನುಭವವನ್ನು ಪಡೆಯಲು ಯಾವ ಸಿದ್ಧತೆಗಳು ಅತ್ಯವಶ್ಯವೊ ಆ ನಿಯಮಗಳು ಜೀವನಕ್ಕೆ ಮಾರ್ಗದರ್ಶಕವಾಗಿವೆ (ಶುಕ್ಲಾರ. ೮೮ ಟೀ೨೪). [ದಿವ್ಯ + ಆನಂದ]

ದಿವ್ಯಾನುಭವ (ನಾ). ಶ್ರೇಷ್ಠವಾದ ಅನುಭವ : ಈ ದಿವ್ಯಾನುಭವಕ್ಕೆ ಏನನ್ನರ್ಪಿಸಿದರೂ ಕಡಿಮೆ (ಸಮಜೀ. ೨೫೩). [ದಿವ್ಯ + ಅನುಭವ]

ದಿವ್ಯಾನುಭಾವ (ನಾ). ೧. = ದಿವ್ಯಾನುಭೂತಿ. ೨. ಅಸಾಧಾರಣ ಸಾಮರ್ಥ್ಯವುಳ್ಳವನು ; ಮಹಾನುಭಾವ : ಮತ್ತಮಾ ದಿವ್ಯಾನುಭಾವಂ ಐರಾವತಗಜಕುಂಭಸ್ಥಾರಣವಿಶ್ಲಥವಿಕಾಸಿಕೇಯೂರಂ ಕೇಯೂರದೊಳೊರಸೆ . . . ಇರ್ಪನರ್ಹದಾಸ್ಥಾಯಿಕೆಯೊಳ್ (ಶಾಂತಿಪು. ೫-೧೫೨ ಪ).

[ದಿವ್ಯ + ಅನುಭಾವ]

ದಿವ್ಯಾನುಭೂತಿ (ನಾ). ಅತೀಂದ್ರಿಯವಾದ ಅನುಭವ; ಪರಮಾನಂದ: ಸೌಂದರ್ಯಕ್ಕೆ . . . ನಮ್ಮಲ್ಲಿ ದಿವ್ಯಾನುಭೂತಿಯನ್ನು ಉಂಟುಮಾಡುವ ಶಕ್ತಿಯಿದೆ (ಸೌಂದಸಿ. ೯೦). [ದಿವ್ಯ + ಅನುಭೂತಿ]

ದಿವ್ಯಾನ್ನ (ನಾ). ಉತ್ತಮವಾದ ಅನ್ನ ; ಶ್ರೇಷ್ಠವಾದ ಅನ್ನ : ಹಂಸೆಯ ತುಪ್ಪಳ ಹಾಸಿನ ಮೇಲೆ ಬಿಜಯಂಗೆಯ್ಸಿ ದಿವ್ಯಾನ್ನ ದಿವ್ಯಫಳ ದಿವ್ಯಾಮೃತ ರಸಂಗಳನೂಡಿ ದಿವ್ಯಾಭರಣ ದಿವ್ಯವಸ್ತ್ರಂಗಳಿಂದಲಂಕರಿಸಿ (ನಂದಿಕ. ೨-೬೮); ಶಾಲಿಯ ದಿವ್ಯಾನ್ನ ಸದ್ಯೋಘೃತಗಳ ಲೋಲಾಕ್ಷಿಯರು ಬಡಿಸಿದರು (ಕಂನವಿ. ೮-೮೩). [ದಿವ್ಯ + ಅನ್ನ]

ದಿವ್ಯಾಪಗೆ (ನಾ). ದೇವಲೋಕದ ನದಿ ; ಗಂಗೆ : ಸಂಧ್ಯಾವಂದನಾದಿಗಳ ಮಾಡಿ ಸುಮ್ಮಾನದಿಂ ಪಿತೃದೇವತೆಗಳ ತೋಷಣೆಗೊಳಿಸಿ ಸಾನಂದದಿಂದ ಕೃತಕೃತ್ಯರಾಗುತೆ ನುತಿಸಿ ದಿವ್ಯಾಪಗೋತ್ತಮೆಯನು (ವಂಕಾರಾ. ೧-೦೪-೮೩). [ಸಂ. ದಿವ್ಯಾಪಗಾ]

ದಿವ್ಯಾಭರಣ (ನಾ). ಶ್ರೇಷ್ಠವಾದ ಆಭರಣ,-ಒಡವೆ : ಸುರಭಿಕುಸುಮ ದಾಮಂ ಬಾಡಿನೀರೋಡೆ ದಿವ್ಯಾಭರಣರುಚಿ ಗಳಸ್ತೋದಸ್ತಸೂರ್ಯಾಂಶುಗಳ್ವೋಲಿರೆ ಮಸುಳೆ ನಿಜಾಂಗಂ (ಶಾಂತಿಪು. ೭-೩೮).

[ದಿವ್ಯ + ಆಭರಣ]

ದಿವ್ಯಾಯುಧ (ನಾ). ಶ್ರೇಷ್ಠವಾದ ಆಯುಧ : ದಿವ್ಯಾಯುಧಂಗಳಂ ಗೆಲೆ ದಿವ್ಯಾಯುಧಮಸುರವಡೆಯನನಿಲತನೂಜಂ . . . ಪಿಶಾಚವಡೆಗೆ ಬಾಣಸುಗೆಯ್ದಂ (ಹಂಪಾಪು. ೦೩-೦೩೦). [ದಿವ್ಯ + ಆಯುಧ]

ದಿವ್ಯಾರ್ಚನೆ (ನಾ). ೧. ಶ್ರೇಷ್ಠವಾದ ಪೂಜೆ ; ಉತ್ಕೃಷ್ಟವಾದ ಅರ್ಚನೆ: ದಿವ್ಯಾರ್ಚನೆಯೊಳೆ ಮೆಱೆದಂ ಭಕ್ತಿಯಂ ಚಕ್ರನಾಥಂ (ಆದಿಪು. ೧೬-೨). ೨. ಮಂತ್ರ, ಪುಷ್ಪ ಮೊದಲಾದ ಶ್ರೇಷ್ಠವಾದ ಪೂಜಾಸಾಧನ : ಸಹಸ್ರನಾಮಾಂಕಿತ ಸ್ತುತಿಗಳಿಂ ಸ್ತುತಿಯಿಸಿ ದಿವ್ಯಾರ್ಚನೆಗಳಿಂದರ್ಚಿಸಿ (ಆದಿಪು. ೦೩-೩೧ ಪ). [ದಿವ್ಯ + ಅರ್ಚನೆ]

ದಿವ್ಯಾಲಂಕಾರ (ನಾ). ಶ್ರೇಷ್ಠವಾದ ಅಲಂಕಾರ,-ಆಭರಣ : ದಿವ್ಯಾಲಂಕಾರ ದಿವ್ಯಲೇಪನ ಭಾಸ್ವದ್ದಿವ್ಯಾಕೃತಿಯಂ ಧರಿಯಿಸಿ (ಜಗವಿ. ೪-೪೧) ; ಸರ್ವರಿಗೂ ಆಚಾರವೇ ದಿವ್ಯಾಲಂಕಾರವೆನಿಸಿದೆ (ಶಕ್ತಿವಿ. ೮೩).

[ದಿವ್ಯ + ಅಲಂಕಾರ]

ದಿವ್ಯಾಲಾಪ (ನಾ). ಉತ್ಕೃಷ್ಟವಾದ ಮಾತು ; ಉಚಿತವಾದ ನುಡಿ : ದಿವ್ಯಾಲಾಪದಿಂದಾಗ ಸೂತನಾ ಮುನಿಗಳಿದಿರಿನೊಳು ಶರಭನ ಪೊಗಳಿದ (ವೀಕೃಪು. ೩-೬-೪೩). [ದಿವ್ಯ + ಆಲಾಪ]

ದಿವ್ಯಾವತಾರ (ನಾ). ಶ್ರೇಷ್ಠವಾದ ಅವತಾರ; ಪ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ ಮತ್ತು ವಾಮನ ಎಂಬ ವಿಷ್ಣುವಿನ ಮೊದಲ ಐದು ಅವತಾರಗಳಿಗೆ ದಿವ್ಯಾವತಾರ ಎಂದು ಹೆಸರು: ಮೊದಲಿನ ಐದು ದಿವ್ಯಾವತಾರಗಳು (ಕಾಕರ. ೦೪೩). 'ಪೂರ್ಣಾವತಾರ' ಪರಾ.

[ದಿವ್ಯ + ಅವತಾರ]

ದಿವ್ಯಾವಧಿ (ನಾ). [ಜೈನ] ಶ್ರೇಷ್ಠವಾದ ಅವಧಿಜ್ಞಾನ; ತ್ರಿಕಾಲ ಗಳಲ್ಲಿ ನಡೆದ, ನಡೆಯುವ, ನಡೆಯಬಹುದಾದುದನ್ನು ತಿಳಿಯುವ ಜ್ಞಾನ: ಆಕಾರೋಪಲಕ್ಷಿತದಿಂದತ್ಯಾಸನ್ನಭವ್ಯನೆಂದು ನಿಶ್ಚಯಿಸಿ ದಿವ್ಯಾವಧಿಯಂ ಪ್ರಯೋಗಿಸಿ ನೋಡಿ (ಸುಳುಮಾ. ೩-೮). 'ಅವಧಿಜ್ಞಾನ' ಪರಾ.

[ದಿವ್ಯ + ಅವಧಿ]

ದಿವ್ಯಾವಧಿಬೋಧ (ನಾ). [ಜೈನ] ಶ್ರೇಷ್ಠವಾದ ಅವಧಿಜ್ಞಾನವನ್ನು ಹೊಂದಿರುವವನು: ನಿರ್ವ್ಯಾಜಮಿಂತನೆಂದಾ ದಿವ್ಯಾವಧಿಬೋಧರಱಿದು ತವಮಂ ಕೊಟ್ಪರ್ (ಸುಳುಮಾ. ೩-೩೩). 'ಅವಧಿಬೋಧ' ಪರಾ.

[ದಿವ್ಯಾವಧಿ + ಬೋಧ]

ದಿವ್ಯಾಶ್ರಮ (ನಾ). (ಋಷಿಗಳ) ಪವಿತ್ರವಾದ ಆಶ್ರಮ,–ವಾಸಸ್ಥಾನ: ಅಧ್ಯಯನಕಾಲದ ಬ್ರಹ್ಮಚರ್ಯಾವಸ್ಥೆ ಋಷಿಗಳ ದಿವ್ಯಾಶ್ರಮದಲ್ಲಿ (ಋಶ್ಯಾರ. ೮೮ ಟೀಠಿ). [ದಿವ್ಯ + ಆಶ್ರಮ]

ದಿವ್ಯಾಶ್ವ (ನಾ). ಉತ್ತಮವಾದ ಕುದುರೆ; ಶ್ರೇಷ್ಠವಾದ ಕುದುರೆ: ತುರಗಾಸುರನ ಪಡೆದೋರ್ಕೆಯಂತಿರ್ದ ದಿವ್ಯಾಶ್ವಂಗಳ ಕಟ್ಟುವ ದೀರ್ಘ ಪಟಮಂಡಪಂಗಳಿಂದಮತಿಮನೋಹರವಾದ (ಶಾಂತಿಪು. ೦೨-೦೪೭ ವ). [ದಿವ್ಯ + ಅಶ್ವ]

ದಿವ್ಯಾಸ್ತ್ರ (ನಾ). ದೇವತಾಮಂತ್ರಗಳಿಂದ ಅಭಿಮಂತ್ರಿಸಿ ಬಿಡುವ ಬಾಣ: ಆ ದಿವ್ಯಾಸ್ತ್ರಂಗಳಂ ಸಾಧಿಸಲೆ ನೆಗಟ್ಟ ಪಾರಾಶರಂ ವೇಟ್ ಮುನ್ನಂ ಪೋದಂ (ಪಂಪಭಾ. ೮-೩೦): ಆರ್ ವೀರಾಗ್ರೇಸರನಪ್ಪ ಮಾರುತಿಯ ದಿವ್ಯಾಸ್ತ್ರಕ್ಕೆ ಮೆಯ್ಸಾರ್ಚುವರ್ (ಪಂರಾಮಾ. ೦೩-೦೩೦).

[ದಿವ್ಯ + ಅಸ್ತ್ರ]

ದಿವ್ಯಾಹಾರ (ನಾ). ಶ್ರೇಷ್ಠವಾದ ಆಹಾರ; ಒಳ್ಳೆಯ ಆಹಾರ: ಮಹಾಕಲ್ಯಾಣಕಾರಮೆಂಬ ದಿವ್ಯಾಹಾರಮುಂ ಅಮೃತಗರ್ಭಂಗಳೆಂಬ ಸದ್ಯೋಘೃತಮುಂ . . . ಅಮೃತರಸಾಯನಮೆಂಬ ಪಾನಮುಂ (ಆದಿಪು. ೧೫-೩ ವ); ಉರ್ವರಾಸ್ಯತಿಲಕನಪ್ಪ ಮೇಘರಥನರೇಂದ್ರನುವ[ವಾ]ಸದ ಮೇಗೆ ದೊರೆಕೊಂಡುತ್ತಮಪಾತ್ರದಾನದ ಸಂತಸದಿಂ ತ ಣ ದು ದಂ ಪುನರುಕ್ತಂ ಮಾಟ್ಪಂತೆ ದಿವ್ಯಾಹಾರಮುಂ ಪಾರಿ ಸುಖಮಿರೆ (ಶಾಂತಿಪು. ೯-೯೫ ವ). [ದಿವ್ಯ + ಆಹಾರ]

ದಿವ್ಯೋಕ್ತಿ (ನಾ). ೧. ದೇವತೆಗಳ ಮಾತು; ಭವಿಷ್ಯನುಡಿಯುವುದು: ದೈವಪ್ರೇರಣೆಯ, ದಿವ್ಯೋಕ್ತಿಯ, ಮನುಷ್ಯರೂಪದ (ಅಥವಾ ಇತರ) ವಾಹಕ (Oracle. ಇಂಗ್ಲಿ). ೨. ಉತ್ತಮವಾದ ಮಾತು,–ನುಡಿ.

[ದಿವ್ಯ + ಉಕ್ತಿ]

ದಿವ್ಯೋಪದೇಶ (ನಾ). ಶ್ರೇಷ್ಠವಾದ ಉಪದೇಶ,–ಬೋಧೆ: ಮುನ್ನಂ ನಿನ್ನನೆನ್ನಲ್ಲಿಗೆ ಬರಿಸಿದ ದಿವ್ಯೋಪದೇಶಂ ಸಮಂತಿದು ಮುನ್ನಂ ನಿನ್ನ ತತ್ತ್ವಕ್ಕೆಳಸಿದ ಹಿತಮಂ ಮಾಡಿದಾ ಜೋಯಿಸಂ ಬಂದುದು ಕೈಕೊಳ್ ನಿನ್ನ ಚಿತ್ತಂ ಬಯಸುವ ವಿಲಸನ್ನೂತ್ನಸಜ್ಜಾನರತ್ನಂ (ಸುಳುಮಾ. ೪-೨).

[ದಿವ್ಯ + ಉಪದೇಶ]

ದಿವ್ಯೌಷಧ (ನಾ).=ದಿವ್ಯೌಷಧಿ: ದಿವ್ಯೌಷಧಮೆನಿಸಿದೌಷಧರ್ಧಿ ಕಿಯ್ಕೊಳ್ಕಿದ ನೀರಸಂ ಮೃದುರಸಾಯನಮಪ್ಪ ರಸರ್ಧಿಯಳ್ಕುದುಬಳರ್ಧಿಯುಂಡಂ ಮಿಕ್ಕನ್ನವಿರ್ದಾಸ್ಪದಮುಂಟು ಕಟಕಕ್ಕಮೆನಿಸುವ ಕ್ಷೀಣರ್ಧಿಯಿಂತು ಸಪ್ತರ್ಧಿಯಂ ಮುನಿ ತಾಳ್ದಿದಂ (ಆನಂಪು. ೪-೩೦). [ದಿವ್ಯ + ಔಷಧ]

ದಿವ್ಯೌಷಧಿ (ನಾ). ಶ್ರೇಷ್ಠವಾದ ಔಷಧಿ; ಪರಿಣಾಮಕಾರಿಯಾದ ಔಷಧಿ: ಆ ಪುಸ್ತಾವದೊಳ್ ಫಲಪಾಕ ವಿರಾಮಂಗಳಪ್ಪ ಗರ್ಭಷಷ್ಠಿ ವ್ರೀಹಿಯವಗೋಧೂಮಾದಿ ಮಹೌಷಧಿಗಳುಮಂ ತಿಳಾತಸೀಕುಸುಂಭಾದಿ ದಿವ್ಯೌಷಧಿಗಳುಮಂ (ಚಾಪುಂಪು. ೩೩-೬); ಅಮಿತಾಯುಷ್ಕಂ ದೊರೆಕೊಂಡ ಮನುಷ್ಯಂಗಖಿಳಮಂತ್ರದಿವ್ಯೌಷಧಿ ಸಿದ್ಧಿ . . . ದೊರೆಕೊಳ್ಗುಂ (ಚಾತಪ್ರ. ೮-೦೬). [ದಿವ್ಯ + ಔಷಧಿ]

ದಿವ್ಯೌಷಧಿಗ (ನಾ). ಶ್ರೇಷ್ಠವಾದ ಔಷಧಿಗಳನ್ನು ಕೊಡುವವನು: ಪರಿಣಾಮಕಾರಿಯಾದ ಔಷಧಿಗಳನ್ನು ಕೊಡುವವನು: ಜೀವವ ತೊಱೆದಪರನೆಬ್ಬಿಸುವ ದಿವ್ಯೌಷಧಿಗ ನೀನಲ್ಲ (ತೂರರಾ. ೬-೪೧-೪೪).

[ದಿವ್ಯೌಷಧಿ + – ಗ]

ದಿಶಾಂತ (ನಾ). ದಿಕ್ಕಿನ ಕೊನೆಯ ಭಾಗ; ದಿಗಂತ. [ಸಂ.]

ದಿಶಾಂತರ (ನಾ). ದಿಕ್ಕುಗಳ ಮಧ್ಯಭಾಗ,– ಪ್ರದೇಶ: ನಿಜರೂಪ ವಿಜಿತ ಮಕರಧ್ವಜನಖಿಳದಿಶಾಂತರಪ್ರತಿಷ್ಠಿತ ಕೀರ್ತಿಧ್ವಜಸದನಾಳ್ವಂ (ಚಂದ್ರಪು. ೬-೬). [ಸಂ.]

ದಿಶಾಂತರಯಶ (ನಾ). ದಿಕ್ಕುದಿಕ್ಕುಗಳಲ್ಲಿಯೂ ಕೀರ್ತಿಯನ್ನು ಗಳಿಸಿದವನು: ಧರ್ಮದ ಮೇರುಗಳ್ದಿಶಾನ್ತರಯಶರುತ್ತಮರ್ (ಕೌಇಇ. XX, ೩೭-೦೩; 1064). [ದಿಶಾಂತರ + ಯಶ]

ದಿಶಾಕರಟಿ (ನಾ). ಎಂಟು ದಿಕ್ಕುಗಳಲ್ಲಿಯೂ ಭೂಮಿಯನ್ನು ಹೊತ್ತಿರುವುದೆಂದು ನಂಬಲಾದ ಐರಾವತವೇ ಮೊದಲಾದ ಎಂಟು ಆನೆಗಳಲ್ಲಿ ಒಂದಂ; ದಿಗ್ಗಜ: ವಸುಂಧರೆ ನಿಲ್ವನ್ನೆವರಂ ದಿಶಾಕರಟಿ ಕರ್ಣಾಸ್ಫಾಲನಂ ಮಾಡುಗುಂ (ಪಂರಾಮಾ. ೬-೦೪೪). [ಸಂ. ದಿಶಾಕರಟಿನ್]

ದಿಶಾಕರಿ (ನಾ). ೧.=ದಿಶಾಕರಟಿ. ೨. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ: ಸುರಪತೀತಕರಾಗ್ನಿಮಾರುತಭಾನುಯುಗ್ಮಗಣಂಗಳಂ ಪರ ದೊಳೊಪ್ಪೆ ಹಿಮಾಂಶುಶೇಖರನಿರ್ದು ವಿಶ್ರಮಣಾ ದಿಶಾಕರಿಯೊಳಾಗಿರೆ ಸಂದುದಿಂತಿದು . . . ನಾಮದಿಂ ತರಳಂ (ಧಂಡೋಂಪಾ. ೨-೦೬೧).

[ಸಂ. ದಿಶಾಕರಿನ್]

ದಿಶಾಗಜ (ನಾ). ೧.=ದಿಶಾಕರಟಿ: ಮೇರುವನೊತ್ತಿ ಕಿಬ್ಬೊಡೆ ವಯೋ ಮಯವಾಯ್ತೊ ನಭಂ ನೆಲಕ್ಕನಾಧಾರತೆಯಿಂದೆ ಬಿಟ್ಟುದೊ ದಿಶಾಗಜ ರಾಜಿಯ ವಾರಿಕೇಳಿಕಾಸಾರಮೊ . . . ಎನೆ ಕೌತುಕವಾಯ್ತು ಮಹಾ ಸರೋವರಂ (ಚಂದ್ರಪು. ೫-೩೮). ೨. = ದಿಶಾಕರಿ ೨: ಏಗಳುಂ ಯತಿ ದಿಶಾಗಜದೊಳ್ ನಿಂದಾಗಳಗ್ನಿ ದಿವಿಜೇಂದು ಹರರ್ಸಂಯೋಗಮಾಗಿರೆ . . . ಸ್ವಾಗತಂ ನೆಗಟ್ಟ ನಾಕಿಗನಿಂದಂ (ಧಂಡೋಂಬು. ೨-೦೨೯). [ಸಂ.]

ದಿಶಾಘಾಟ (ನಾ). ದಿಕ್ಕಿನ ನೆಲೆ: ನೆಲನಿಲ್ಲಿಂದಿತ್ತಲಿಲ್ಲಿಂಬನಮನಿತೆ ದಿಶಾ ಘಾಟಮೆಂಬನ್ನೆಗಂ ಕಟ್ಟಲೆ ಚಂದ್ರಾದಿತ್ಯತೇಜಕ್ಕಧಿರದಿದಿರನೊಡ್ಡಿರ್ದು ದೆಂಬನ್ನೆಗಂ ಕಟ್ಟಲಿಸುತ್ತಿರ್ದತ್ತು (ಪಂರಾಮಾ. ೬-೦೨೬). [ಸಂ.]

ದಿಶಾಚಕ್ರ (ನಾ). ದಿಕ್ಕುಗಳ ಪರಿಧಿ; ದಿಕ್ಚಕ್ರ: ಪ್ರಭಾಪ್ರಜ್ವಳಿತದಶದಿಶಾ ಚಕ್ರಂ . . . ಇರ್ದತ್ತೊಳಪುಗದೆ ಪುರೋವಾಂತರದೊಳ್ (ಆದಿಪು. ೧೪-೩): ಚಕ್ರಾಕಾರದಿನೊಗೆವ ದಿಶಾಚಕ್ರದಿಂ ಸ್ಫುರದ್ವಿಸ್ಫುಲಿಂಗದಿನುರಿಲಿಂಗಮಿರ್ಪಂತಿರ್ದ ಸಕಲಕುಲಾಚಲಚಕ್ರದಿಂ (ಗದಾಯು. ೮-೩೦ ವ): ದೀಕ್ಷಿತಗುರು ಧರ್ಮದ್ರೋಹಚಕ್ರಂ ಸುಗಿದು ಪುಗೆ ದಿಶಾಚಕ್ರಮಂ ತತ್ಸಭಾಗ್ರೇಸರಮೇನು ದ್ಯೋತದಿಂ ಬಾಸಣಿಸಿದುದೊ ವಿಯಚ್ಚಕ್ರಮಂ ಧರ್ಮಚಕ್ರಂ (ಪುಟ್ಟಿಪು. ೦೪-೨೫೩). [ಸಂ.]

ದಿಶಾದಂತಿ (ನಾ). = ದಿಶಾಕರಟಿ: ದಿಶಾದಂತಿಗಳ್ಬರಿಗಂ ತಂದೆಯು ಕೀರ್ತಿಯೇಂ ಬಳೆದುದೋ (ಗದಾಯು. ೦-೦೩); ಶ್ರಿದಶರ್ ಬಾಜಿಪ ದಿವ್ಯ ತೂರ್ಯರವಮಂ ನಿಷ್ಕಂಪಕರ್ಣಂಗಳಾಗಿ ದಿಶಾದಂತಿಗಳಾಲಿಪಲ್ಲಿ (ಪುಪ್ಪ. ೦೦-೦೦). [ಸಂ. ದಿಶಾದಂತಿನ್]

ದಿಶಾಧಿಪ (ನಾ). ದಿಕ್ಕಿನ ಒಡೆಯ,–ಪ್ರಭು ; ದಿಕ್ಪಾಲಕ: ಸುರರಾಜನಗ್ನಿ ಕಾಲಂ ನಿರುತಿ ವರುಣನಾ ಮರುತಂ ಕುಬೇರನೀಶಂ ದಿಶಾಧಿಪರು (ಮಂಗರಾ. ೧೭-೧೪) ; ಆವ ದಿಶಾಧಿಪರತ್ತ ನಡೆಯಲು ಆವೆ ಹಗೆಗಳಲಿ ಸಪ್ತಾಂಗವ ಹಿಡಿಯಲು ಬೆಸಸುಪೊಡೇಳೇಳಿಲೆ ಸುಕುಮಾರ (ಹಡಕಾ. ೦೨-೩೦ ರಗಳೆ).

[ಸಂ.]

ದಿಶಾಧೂಮ (ನಾ). ದಿಕ್ಕುಗಳಲ್ಲಿ ಕಾಣಿಸಿಕೊಳ್ಳುವ ಬೆಂಕಿಯ ಹೊಗೆ: ದಿಗ್ಧೂಮ: ಧೂಮಮಯಮಾದ ದಿಶಾಧೂಮಂ ಕವಿದಂತಾಭೀಳಮಾಗೆ (ಶಾಂತಿಪು. ೬-೯೮ ವ). [ಸಂ.]

ದಿಶಾಪಟ (ನಾ). ೧. (ಶತ್ರುಗಳನ್ನು) ದಿಕ್ಕುದಿಕ್ಕಿಗೆ ಚೆದರುವಂತೆ ಮಾಡುವಿಕೆ ; ದಿಕ್ಕಾಪಾಲು ಮಾಡುವಿಕೆ. ೨. = ದಿಶಾಪಟಮಲ್ಲ : ರಥಕ್ಕೆ ದಾನವಕುಲದಿಶಾಪಟ ಕೃಷ್ಣ ಬಿಜಯಂಗೈದನೊಲವಿನಲಿ (ಕುವಾ೩ಉ. ೬-೮); ಭಾಪು ಪಾಂಡವಬಲದಿಶಾಪಟ ರಾಯಮದನಪ್ರಳಯಹರ ಭಾಪೆಂದು ಹೊಗಳಿತು ವಂದಿಸಂದೋಹ (ಕುವಾಳ. ೩೬-೪೮). [ಸಂ.]

ದಿಶಾಪಟಮಲ್ಲ (ನಾ). (ಶತ್ರುಗಳನ್ನು) ದಿಕ್ಕುದಿಕ್ಕಿಗೆ ಚೆದರಿಸುವವನು,–ದಿಕ್ಕಾಪಾಲು ಮಾಡುವವನು : ಪೊದದ ದುಗುಲಂ ರಣನಿಶಾಟಗಣ ದಿಶಾಪಟಮಲ್ಲನ ಚೆಲ್ವಿನ ಬೆಳ್ದಟ್ಟಿಯಂ ಪಟಿಯೆ (ರಾಮಾಶ್ವ. ೦೩೯-೦೨). [ದಿಶಾಪಟ + ಮಲ್ಲ]

ದಿಶಾಪಟ್ಟ (ನಾ). ೧. (ಶತ್ರುಗಳನ್ನು) ದಿಕ್ಕುದಿಕ್ಕಿಗೆ ಚೆದರುವಂತೆ ಮಾಡುವಿಕೆ. ೨. = ದಿಶಾಪಟಮಲ್ಲ : ಕುರುವಂಶದಿಶಾಪಟ್ಟನುಂ ಸಂಧ್ಯಾರಾಗಸನ್ನಿಕಾಶ ದುರ್ನಿರೀಕ್ಷ್ಯಕಟಾಕ್ಷವಿಕ್ಷೇಪಲಕ್ಷಿತನುಂ . . . ದುರ್ಯೋಧನವಿಶೇಷಣಾನ್ವೇಷಣಾರ್ಥಂ ಮಾಮಸಕಂ ಮಸಗಿ (ಗದಾಯು ೬-೩೬ ವ). [ಸಂ.]

ದಿಶಾಪರಿಧಿ (ನಾ). ದಿಕ್ಕುಗಳ ಆವರಣ,–ಪ್ರದೇಶ ; ದಿಗ್ವಲಯಂ : ಪರಿಣತ ಗಂಧಶಾಲಿವನ ಗಂಧದಿನುಲ್ಲಸಿತಾಂಬುಜಾಕರೋತ್ಕರನವಗಂಧದಿಂ ಪ್ರಚುರಚಂದನನಂದನ ಗಂಧದಿಂ ದಿಶಾಪರಿಧಿಯನೆಯ್ದೆ ಬಾಸಣಿಸುತಿರ್ಪುದು (ಚಂದ್ರಪು. ೩-೦೧). [ಸಂ.]

ದಿಶಾಬಲಿ (ನಾ). ದಿಕ್ಕುಗಳಿಗೆ ಕೊಡುವ ಬಲಿ ; ದಿಗ್ಬಲಿ. [ಸಂ.]

ದಿಶಾಭಿತ್ತಿ (ನಾ). ದಿಕ್ಕುಗಳ ಪ್ರದೇಶ ; ದಿಗಂತಪ್ರದೇಶ : ಕೈತಪ್ಪಿ ಬಿದ್ದುಂಜನಂ ಕೆದಱಿತ್ತಿಂಬಿನಮುರ್ಬಿ ಮರ್ಬು ಪರಿದತ್ತೆತ್ತಂ ದಿಶಾಭಿತ್ತಿಯೊಳ್ (ದಶಕು. ೩-೩೩). [ಸಂ.]

ದಿಶಾಪ್ರಸರ (ನಾ). = ದಿಶಾವಳಯ : ದಿಶಾಪ್ರಸರಂ ಕವಿವಂತೆ ನೂಂಕಲೌವ್ವಳಿಸುವ ಗಂಧಸಿನ್ಧುರಘಟಾಳಿಗೆ ಬೊಬ್ಬಿಱಿದು ನೂಂಕಿದನಗ್ಗದ ಪಟ್ಟದಾನೆಯಂ (ಎಳ. VI, ತರೀಕೆ. ೪೫-೪೪ ; 1196). [ಸಂ.]

ದಿಶಾಮಂಡಲ (ನಾ). ೧. ದಿಕ್ಕುಗಳ ಸಮೂಹ,–ಗುಂಪು: ಇದಱೊಳ್ ಶ್ವೇತಾತಪತ್ರಸ್ಥಗಿತದಶದಿಶಾಮಂಡಲಂ ರಾಜಚಕ್ರಂ ಪುದಿದಟ್ಟಾಡಿತ್ತು . . . ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶಪ್ರಪಂಚಂ (ಪಂಪಭಾ. ೦೨-೧೫೬). ೨. ದಿಕ್ಕುಗಳ ವಲಯ ; ದಿಙ್ಮಂಡಲ : ಮುಂಕೊಂಬ ಮುಂದಿ ಕುದುರೆಗೆ ಧರಾಮಂಡಲಂ ಸಂಕುಲದ ವಾದ್ಯಧ್ವನಿಗೆ ದಿಶಾಮಂಡಲಂ . . . ಸಂಕೋಚಮೆನೆ ಬಂದು ಪಿಡಿದು ಪಾರ್ಥನ ತುರಗಮಂ ಕಟ್ಟಿ ಬಳಸಿ ಪದ್ಮವ್ಯೂಹವಾಗಿ ನಿಂದಾರ್ದುದಾ ಸೇನೆ (ಜೈಮಿಭಾ. ೦೨-೯). [ಸಂ.]

ದಿಶಾಮಾತಂಗ (ನಾ). =ದಿಶಾಕರಟಿ : ಅರರೆ ನಡೆದುದಂ ಸೇನೆ ಕುಲಗಿರಿಯೆರಡು ಕೂರುಮ ಫಣಿಪರಿಬ್ಬಿಬ್ಬರ ದಿಶಾಮಾತಂಗಗಳ ಹೆದಿನಾಜಿನಳವಡಿಸಿ (ಕುವಾಭೀ. ೦-೩೦). [ಸಂ.]

ದಿಶಾಮೂಢ (ನಾ). ದಿಗ್ಭ್ರಮೆಗೊಂಡವನು ; ದಾರಿತೋಚದವನಂ ; ದಿಕ್ಕುಗೆಟ್ಟವನು: ದಿಙ್ಮೂಢ : ಸಾಗರಸೇನಮುನಿವರರ್ದಿಶಾಮೂಢರಾಗಿ ಪೊಲಗೆಟ್ಟರ್ದಂದು (ಜಾವುಂಪು. ೦೯೩). [ಸಂ.]

ದಿಶಾವರ (ನಾ). ೧. ದಿಕ್ಕು ; ದೆಸೆ ; ದಿಕ್ಕಿನ ಆವರಣ : ಸೌರಾಷ್ಟ್ರ ಗೌಡ ವಿಷಯಂ ಮೊದಲಾಗಿಯುತ್ತರದಿಶಾವರದರಸುಮಕ್ಕಳಿಲ್ಲರುಮಂ . . . ಶ್ರೀಪಾದಾರಾಧನ ದೀಕ್ಷೆಯ ಕೈಕೊಳ್ದಿಸೆ (ಸೌಇಇ. XX, ೪೭-೩೬ : 1072) ; ಶ್ರೀಪುತ್ತಿಭುವನಮಲ್ಲದೇವರು ಭೋಜನ ಮೇಲೆ ಪಶ್ಚಿಮ ದಿಶಾವರಕ್ಕೆತ್ತಿದಲ್ಲಿ (ಸೌಇಇ. XX, ೬೪-೩ : 1100) : ಉತ್ತರದ ಪೂರ್ವದ ಪರಮತೀರ್ಥ ವ್ಯಾತವನು ವಿಸ್ತರಿಸಿ ಸಾಗರತೀರದಲಿ ದಕ್ಷಿಣದಿಶಾವರಕೆ ತಿರುಗಿದನು (ಕುವಾಆ. ೧೯-೦೩). ೨. ದಿಕ್ಕುಗಳ ಒಡೆಯಂ: ದಿಕ್ಪತಿ : ಆ ವಿಗಡರಡಿಗಡಿಗೆ ತಾಟಪ ರಾವರಭಸದ ಬೊಬ್ಬೆಗಳಿಗೆ ದಿಶಾವರರು ನಡನಡುಗೆ (ಬಸಪು. ೫-೪೦). [ಸಂ.]

ದಿಶಾವಲೋಕನ, ದಿಶಾವಳೋಕನ (ನಾ). ಎಲ್ಲಾ ದಿಕ್ಕುಗಳ ಕಡೆಗೂ ನೋಡುವುದು ; ದಿಗವಲೋಕನ: ಸಪ್ತತಳಪ್ರಾಸಾದದ ಮೇಲಿರ್ದರು ವಿಷ್ಟಪರಿವಾರಸಹಿತಂ ದಿಶಾವಲೋ[ಪಾಣಾಂ. ಳೋ]ಕನಂಗೆಯ್ಯುತ್ತಂ ಸುಖಸಂಕಥಾವಿನೋದದಿಂದಿರ್ದನ್ನೆಗಂ (ವಡ್ಡಾರಾ. ೪೩-೩) ; ನಳಿನಕೇತುವುಂ ವ್ಯಾಸಾದದುಪರಿಮಭೂಮಿಯೊಳ್ ಇರ್ದು ದಿಶಾವಲೋಕನಂಗೆಯ್ಯುತ್ತಿರೆ (ಶಾಂತಿಪು. ೯-೦೨ ವ). **ದಿಶಾವಳೋಕನ** : ಒಂದು ದಿವಸಂ ಕರುಮಾಡದ ಮೇಗಣ ನೆಲೆಯೊಳಿರ್ದರಸಂ ದಿಶಾವಳೋಕನಂಗೆಯ್ಯುತ್ತಿರ್ದಾತಂ ಬೆಟ್ಟದ ಮೇಗಾ ತಪಮಿರ್ದ ಋಷಿಯರಂ ಕಂಡು (ವಡ್ಡಾರಾ. ೧೬೦-೦೪). [ಸಂ.]

ದಿಶಾವಳಯ (ನಾ). ದಿಕ್ಕುಗಳ ಆವರಣ ; ದಿಗ್ವಲಯಂ : ಎಡಗಿಱಿದೆತ್ತಲುಂ ನಡೆಪ ದಂತಿಘಟಾಳಿಯನೆತ್ತಪೋದುದಾವೆಡೆಯದು ವೇಟ್ ದಿಶಾವಳಯಮೆಂಬಿನಮಾದುದದೊಂದು ವಿಸ್ಮಯಂ (ಆದಿಪು. ೧೨-೬೨).

[ಸಂ. ದಿಶಾವಲಯ]

ದಿಶಾವಳಿ (ನಾ). ದಿಕ್ಕುಗಳ ಸಮೂಹ,–ಗುಂಪು : ಅತ್ತ ಕಱಿವಂಬಿನ ಬಲ್ಸರಿಯಿಂದಮಾ ದಿಶಾವಳಿ ಮಸುಳ್ದಿಂತು ನೀಳ್ದಪುದು (ಪಂಪಭಾ. ೧೦-೧೦) : ಇದೆ ಬಹಳ ಭೂಕಂಪದದುಭುತವಿದೆ ದಿಶಾವಳಿ ಧೂಮಕೇತುಗಳಿದೆ ಪಕಾಕಾಭಂಗವಿದೆ ವಿಪರೀತ ಪರಿವೇಶ ಇದು ಸಮಾಹಿತವಲ್ಲ (ಕುವಾವಿ. ೬-೩). [ಸಂ. ದಿಶಾವಲಿ]

ದಿಶಾವಳೋಕನ 'ದಿಶಾವಲೋಕನ' ನೋ.

ದಿಶಾಸಿಂಧುರ (ನಾ). = ದಿಶಾಕರಟಿ : ಬುಧಜನದೊದವಿರ್ದಾಪತ್ಕುಧರಮು ನೌದಾರ್ಯ ವಜ್ರದಿಂ ಪೊಯ್ದು ಯಶೋಂಬುಧಿಯೊಳಿವಗಾಹಮಿರಿಸಿದನ ಧನರ ನಿಧಿ ಮಾಧವಂ ದಿಶಾಸಿಂಧುರಮಂ (ಶಾಪಮಂ. ೧೪೬೧ ; 1151).

[ಸಂ.]

ದಿಶಾಸ್ಥಗಿತ (ನಾ). ದಿಕ್ಕುಗಳನ್ನು ನುಚ್ಚಿದುದು,–ಆವರಿಸಿದುದು : ದಿನನಾಥ ರಥಪ್ರಸ್ಥಾನಪಾಂಸುವೆನಿಸಿ ದಿಶಾಸ್ಥಗಿತಂ ರಂಜಿಸಿತ್ತು ಸಂಧ್ಯಾರಾಗಂ (ಮಲ್ಲಿಪು. ೬-೧೦೩). [ಸಂ.]

ದಿಶಾಳಿ (ನಾ). = ದಿಶಾವಳಿ : ಸಕಲ ದಿಶಾಳಿಯಂ ಪುದಿದ ಶಾಳಿವನಂ ಶಶಿಕಾಂತನಿರ್ಗತೋದಕನವನಾಳಿಕೇರ ಜಲಪೂರಸಿತೇಕ್ಷುರಸ ಪ್ರವಾಹ ಮಾತ್ಮಕಮೆನೆ ಸಂತತಂ ಬೆಳೆಯೆ (ಪುಲ್ಲಿಪು. ೨-೦೬) : ಶಾಳಿಗಳಂ ಬಹು ಪರಿಮಳಶಾಳಿಗಳಂ ನಿಕಟಕುಮುದ ಸೌಗಂಧ್ಯಕೃತಾಶಾಳಿಗಳಂ ರುಚಿನಿಚಿತ ದಿಶಾಳಿಗಳಂ ಬೆಳೆಪ ನೆಲನೆ ಪೊಲನಾ ನೆಲದೊಳ್ (ಪುಪ್ಪಪು. ೨-೦೪).

[ಸಂ. ದಿಶಾಲಿ]

ದಿಶೆ (ನಾ). ೧. ದಿಕ್ಕು ; ದೆಸೆ ; ನಿಟ್ಟು : "ಹರಿದಾಶೆದಿಕ್ಕಕುಭಾಕಾಷ್ಠೆಗೋ ದಿಶೆಯೆನಲು ದಿಕ್ಕಿಂಗೆ ನಾಮಮಕ್ಕುಂ" (ಮಂಗರಾ. ೧೭-೦೪). ಅಂತೆಳೆಯುಂ ದಿಶೆಯುಂ ನಭಮುಂ ತನ್ಮಯಮಾಗೆ ನಡವ ಪಡವೆರ ಸೆಟ್ಟಂದಂ ತಾ ನೃವತಿ ರಥಾವರ್ತಾಂತಿಕದೊಳ್ ಬೀಡುವಿಟ್ಟಂ (ವರ್ಧಪು. ೮-೦೪). ೨. ರೀತಿ ; ಮಾರ್ಗ : ಈ ದಿಶೆಯಲ್ಲಿ ಉಪಯುಕ್ತಬರಹಗಳಿಂದ ಹೆಚ್ಚಿನ ಮಾಹಿತಿ ನೀಡಿದರು (ದ್ರಾವಿವಿ. ೪೩೦) ; ಪ್ರೇಮದ ಎರಡು

ದಿಶೆಗಳು ಏಕಸೂತ್ರವಾಗಿ ಹೋಗಿವೆ (ಬಾಡಿಪ. ೪೦೧). ೩. [ಗಣಿತ] ಹತ್ತ್ರ ಎಂಬ ಸಂಖ್ಯೆಯ ಸಂಕೇತ: "ದಿಶ[ಶ] ಹತ್ತ್ರು" (ಮಂಗರಾ. ೧೦೪-೪). ೪. ಎಂಟು ಎಂಬ ಸಂಖ್ಯೆಯ ಸಂಕೇತ: ಕುಶಂ ವಾರ್ಧಿಪರ್ಯಾಯ ಮಕ್ಕುಂ ವಿರಾಮಂ ದಿಶಾಸಂಖ್ಯೆಯಕ್ಕುಂ (ಛಂದೋಂಬು. ೨-೧೨೬).

[ಸಂ. ದಿಶಾ]

ದಿಶೇಂದ್ರ (ನಾ). ದಿಕ್ಕುಗಳ ಒಡೆಯ; ದಿಕ್ಪಾಲ: ಪಟಹ ಡಿಂಡಿಮ ಶಂಖ ತಾಳಕಹಳಾಬಹುಳನಾದಬಧಿರೀಕೃತದಿಶೇಂದ್ರಂ ಸಿಂಹಳೇಂದ್ರಂ ಸಾಂದ್ರ ಹರ್ಷಮನಾಂತು ನಡೆದು (ರಾಜಶೇ. ೬-೧೩೭ ವ). [ಸಂ.]

ದಿಶೇಭ (ನಾ). = ದಿಶಾಕರಟಿ: ಅತಿ ದಿಶೇಭ[ಪಾಣಾಂ. ವಿತತದಿನಿಭ] ಶಿರೋಜಮೌಕ್ತಿಕತತಿಮರೀಚಿಯನನುಕರಿಸಿ (ಬಸಪು. ೩೬-೪). [ಸಂ.]

ದಿಶ್ಯ (ಗು). ೧. ದಿಕ್ಕಿಗೆ ಸಂಬಂಧಿಸಿದ. ೨. ಒಂದು ನಿರ್ದಿಷ್ಟವಾದ ದಿಕ್ಕಿನಲ್ಲಿ ಸ್ಥಿತವಾದ. (ನಾ). ೩. ದಿಕ್ಕುಗಳಲ್ಲಿ ಹುಟ್ಟಿದ ವಸ್ತು: "ದಿಶ್ಯಂ (ದಿಗ್ಭವ) ದಿಕ್ಕುಗಳಲ್ಲಿ ಹುಟ್ಟಿದ ವಸ್ತುವಿನ ಹೆಸರು" (ಸಿದ್ಧಾಂತಿ. ೩೭). [ಸಂ.]

ದಿಷ್ಟ (ಗು). ೧. ತೋರಿಸಿದ; ಕಾಣಿಸಿದ: ನಂದಿಕೇಶ್ವರ ಭೃಂಗಿ ನಾಟ್ಯ ನಮ್ಮ ಲಿಂಗನ ಮುಂದೆ ಇದಕ್ಕೆ ದಿಷ್ಟ ದೀವಿಗೆ ನಮ್ಮ ಲಿಂಗನ ಮುಂದೆ (ಬಸವ. ೮೬೫). ೨. ಭದ್ರಪಡಿಸಿದ; ಸ್ಥಿರವಾದ. (ನಾ). ೩. ನಿಯಮ ಕ್ಕೊಳಗಾಗುವಿಕೆ; ನಿಷ್ಠೆಗೊಳಗಾಗುವಿಕೆ: ದಿಷ್ಟದ ದೂರ್ವಾಸನನತಿ ದುಷ್ಪಾಸುರನಾರಿ ನೆರೆದಳ್ (ಹಮ್ಮೀರ. ೬-೪೦). ೪. ಗುರಿ; ಉದ್ದೇಶ. ೫. ಆಜ್ಞೆ; ಆದೇಶ. ೬. ನಿಯಮಕ್ಕೆ; ನಿಯೋಜನೆ. ೭. ದೈವ; ವಿಧಿ; ಅದೃಷ್ಟ: "ಯಮ ನಿಯತಿ ದಿಷ್ಟ ವಿಧಿ ನಾಮಮಯಾನಯ ರೂಪಮಂತದಕ್ಕುಂ ದೈವಂ" (ವಸ್ತುಕೋ. ೧೦-೫೫). ೮. ಕಾಲ; ಸಮಯ: "ದಿಷ್ಟಮೆನೆ ಕಾಲಮಕ್ಕುಂ" (ಮಂಗರಾ. ೧೯-೪). [ಸಂ.]

ದಿಷ್ಟಿ[1] 'ದಿಟ್ಟಿ' ನೋ.

ದಿಷ್ಟಿ[2] (ನಾ). ೧. ಹರ್ಷ; ಸುಖ; ಸಂತೋಷ. ೨. ವಿಧಿ; ಭಾಗ್ಯ; ಅದೃಷ್ಟ: "ದಿಷ್ಟಿ ಸುಖಾನಂದ ದೈವವಚನಮುದಕ್ಕುಂ" (ವಸ್ತುಕೋ. ೧೩೦-೭೨). ೩. ಒಂದು ಅಳತೆ,-ಪರಿಮಾಣ; ಎಂಟು ಅಂಗುಲಗಳ ಅಳತೆ. ೪. ಗೊತ್ತುಪಡಿಸುವುದು; ನಿಯೋಜಿಸುವುದು. [ಸಂ.]

ದಿಷ್ಟಿಬೊಟ್ಟು 'ದಿಟ್ಟಿಬೊಟ್ಟು' ನೋ.

ದಿಷ್ಟಿಮಣಿಸರ (ನಾ). ದೃಷ್ಟಿ ತಾಗದಿರಲೆಂದು ಹಾಕಿರುವ ಮಣಿಗಳ ಸರ, - ಆಭರಣ: ದಿಷ್ಟಿಮಣಿಸರವನ್ನು ಶುಚಿಗೊಳಿಸಿ ಹಾಕಿದ್ದಳು (ಮಲಿಮ. ೮೧). [ದಿಷ್ಟಿ[1] (<ದಿಟ್ಟಿ) + ಮಣಿಸರ]

ದಿಸಾಪಟ್ಟ (ನಾ). = ದಿಶಾಪಟಮಲ್ಲ: ಕೊಯತೂರ ತುಳಿವ ಹೆಂಜೆಱು ದಿಸಾಪಟ್ಟ ಸಂಗ್ರಾಮ ಜತ್ತಲಟ್ಟ (ಎಳ. II, ೧೪೬-೩೬ ; 1131); ಗಿರಿ ದುರ್ಗಮಲ್ಲಪಶ್ಚಿಮರಾಯ ಭೋಜದೇವ ದಿಸಾ[ಶಾ]ಪಟ್ಟ ಶ್ರೀಮತು ಪ್ರತಾಪಚಕ್ರವರ್ತ್ತಿ ಸಿಂಗಣದೇವ (ಎಇ. XXX, ೩೭-೬ ; 1220).

[<ಸಂ. ದಿಶಾಪಟ್ಟ]

ದಿಸಾವಳಿ (ನಾ). ದಿಕ್ಕುಗಳ ಸಮೂಹ: ಎಲೆಲೆ ಜಲನಿಧಿಯೆ ಗೋತ್ರಾ ಚಳಮೆ ದಿಸಾವಳಿಯೆ ವೈರಿ ದೆಸೆಗೆಟ್ಟು ಬರಲ್ ಪೊಳಕೊಳ್ಳದಿರೊಳ ಕೊಳ್ಳದಿರೊಳಕೊಳ್ಳದಿರೆಂದು ಭೇರಿ ಸಾಱಿದುದಾಗಳ್ (ಸೌಇಇ. XX, ೪೯-೧೬ ; 1076 ?).

[P ಇದು 'ದಿಶಾವಳಿ' ಎಂಬುದರ ಅಪಲಿಖಿತವಿರಬಹುದು]

ದಿಸೆ 'ದೆಸೆ' ನೋ.

ದಿಳೀಪಯ್ಯ (ನಾ). ಒಬ್ಬಾತನ ಹೆಸರು; P ನೊಳಂಬ ವಂಶದ ಒಬ್ಬ ರಾಜನ ಹೆಸರು: ಶ್ರೀಮದ್ದಿಳೀಪಯ್ಯಂ ಪೃಥುವೀರಾಜ್ಯಂಗೆಯ್ಯುತ್ತಿರೆ (ಎಳ. X, ಮುಳಬಾ. ೫೧-೧ ; ಸು. 950?). [ದಿಳೀಪ[೧] + ಅಯ್ಯ[1]]

ದಿಳ್ಳ 'ಢಿಳ್ಳ' ನೋ.

ದಿಳ್ಳಿಸು 'ಡಿಳ್ಳಿಸು' ನೋ.

ದೀಂಕಿಡು 'ಧೀಂಕಿಡು' ನೋ.

ದೀಂಕು 'ಧೀಂಕು' ನೋ.

ದೀಂಟು 'ತಿಟ್ಟ್ರಿಸ' ನೋ.

ದೀಂಟೆ 'ತಿಟ್ಟ್ರಿಸ' ನೋ.

ದೀಕೆ (ನಾ). = ದೀಕ್ಷೆ ೧: ಅದ್ವಿತ್ವದ ಕಕಾರಕ್ಕೆ-ದೀಕ್ಷಾ-ದೀಕೆ; ಪರೀಕ್ಷಾ-ಪರಿಕೆ(ಶಮದ. ೩೬೨ ಪ್ರಯೋ) ; ದೀಕ್ಷೆ, ದೀಕೆ; ಕ್ಷೇಪಣ, ಕೇವಣ (ಶಬ್ದಾನು. ೧೫೫ ಪ್ರಯೋ). [<ಸಂ. ದೀಕ್ಷಾ]

ದೀಕ್ಷಾಕರ್ಮ (ನಾ). ವ್ರತ; ನಿಯಮ: ದಾನಧರ್ಮಪರೋಪಕಾರ ವಿಧಾನದೀಕ್ಷಾಕರ್ಮನಿಷ್ಠರು ಮಾನನೀಯರಲೇ ಮಹೀಪತಿ ಕೇಳು (ಕುವ್ಯಾಉ. ೪-೩೯). [ಸಂ.]

ದೀಕ್ಷಾಕ್ರಮ (ನಾ). (ವ್ರತಾಚರಣೆ ಮೊದಲಾದ) ನಿಯಮಗಳ ಅನುಷ್ಠಾನದ ಕ್ರಮ,-ವಿಧಾನ: ಶೈವಾಗಮಾನುಷ್ಠಾನ ಮಾಡಲು ಅಧಿಕಾರ ಪಡೆಯುವ ಮಾನವನಿಗಾಗಿ . . . ದೀಕ್ಷಾಕ್ರಮವು ಶಾಖಾ, ಸೂತ್ರ, ಗೋತ್ರಪರಂಪರೆಯಲ್ಲಿ . . . ವಿವಿಧ ರೂಪಗಳಿಂದ ನಿರೂಪಿತ ವಾಗಿದೆ (ಶಾರದ. ೭೩). [ಸಂ.]

ದೀಕ್ಷಾಗುರು (ನಾ). ಉಪದೇಶ ಮಾಡುವ ಗುರು; ಸಂನ್ಯಾಸ, ವ್ರತ, ನಿಯಮವೇ ಮೊದಲಾದ ದೀಕ್ಷೆಗಳನ್ನು ಕೊಡುವ ಅಧಿಕಾರವುಳ್ಳ ಗುರು: ಗುರುಗೆ ವಿದ್ಯಾಗುರು ಸಂಭವಿಸಂ ದೀಕ್ಷಾಗುರು ಸಂಭವಿಸನುಮೆನೆ ತನಗೆ ತಾನೆ ಗುರುವಾಗಿರ್ಪಂ (ಅಜಪು. ೫-೭೯); ಸಕಲ ದೇವ ದೀಕ್ಷಾಗುರು . . . ಅಗ್ನಿಯೊಳುಪ್ಪಂ ಪ್ಪಗುವಂತೆ ಶಿವಲಿಂಗದೊಳ್ ಪುಗಲ್ (ನಂಬಿರ. ೮-೨) ; ಬಾಹುಬಲಿಸಿದ್ಧಾನ್ತ ದೇವರೆ ದೀಕ್ಷಾಗುರುಗಳ್ (ಪ್ರುಆರಿ. ೧೯೨೯, ೧೪-೨೨ ; 1236). [ಸಂ.]

ದೀಕ್ಷಾಗ್ರಹಣ (ನಾ). ೧. ವ್ರತನಿಯಮ ಸ್ವೀಕಾರ: ದೀಕ್ಷಾಗ್ರಹಣ ಮಾಡದ ಆಗಮಾನುಷ್ಠಾನವು . . . ನಿರರ್ಥಕ (ಫಲಪ್ರದಗಳಾಗುವುದಿಲ್ಲ) ಗಳಾಗುವುದೆಂಬುದು ಆಗಮದ ಸಿದ್ಧಾಂತ (ಶಾರದ. ೭೩). ೨. [ಜೈನ] ಸಂನ್ಯಾಸ ದೀಕ್ಷೆಯ ಸ್ವೀಕಾರ; ಸಂನ್ಯಾಸವನ್ನು ಹೊಂದುವಿಕೆ: ಅಂತು ದೀಕ್ಷಾಗ್ರಹಣಾನಂತರ ಸಮಯಸಮುತ್ಪನ್ನಸಪ್ತರ್ದ್ಧಿಜ್ಞಾನ ಚತುಷ್ಟಯಂ ಪ್ರಥಮಗಣಧರನಾದಂ (ಆದಿಪು. ೧೦-೪೬ ವ) ; ಆಕೆಯ ಪರಿಚ್ಛೇದಿಸಿದ ಬಗೆಯ ಸಮಕಟ್ಟಂ ಬಗೆದಱಿದು ದೀಕ್ಷಾಗ್ರಹಣಪೂರ್ವಕಂ ಸಂನ್ಯಸನಪ್ರತ್ಯಾಖ್ಯಾನಮಂ ಕೊಟ್ಟಾರ್ಯಿಕಾಪ್ರಧಾನೆಯರಂ ಕರೆದು ನೀಮಿವರಂ ನೋನಿಸಿಮೆಂದೊಡೆ (ಬಂಹರಿ. ೧೦-೩೦ ವ). [ಸಂ.]

ದೀಕ್ಷಾಚಾರ್ಯ (ನಾ). = ದೀಕ್ಷಾಗುರು: ಕರ್ಣಾಟಕ ಕಾವ್ಯಲಕ್ಷಣ ದೀಕ್ಷಾ ಚಾರ್ಯಂ (ಹಚಿಕಾ. ಪರಿ ೩೩೦).

[P ಇದು 'ಶಿಕ್ಷಾಚಾರ್ಯ' ಎಂದು ಇರಬಹುದೆ?]

ದೀಕ್ಷಾತ್ರಯ (ನಾ). [ವೀಶೈ] ವೇಧೆ, ವಂತ್ರ ಮತ್ತು ಕ್ರಿಯೆಗಳೆಂಬ ಮೂರುವಿಧವಾದ ದೀಕ್ಷೆಗಳು: ಗುರುವು ಶಿಷ್ಯನ ಶರೀರತ್ರಯದಲ್ಲಿರುವ ಮಲತ್ರಯಗಳನ್ನು ದೀಕ್ಷಾತ್ರಯದಿಂದ ಸುಟ್ಟು, ಆ ಶರೀರತ್ರಯದಲ್ಲಿ ಲಿಂಗತ್ರಯಗಳ ಸಂಯೋಗವನ್ನುಂಟುಮಾಡುವನು (ಶಿವಾಸೂ. ೬೪) ; ಮೂರು ಶರೀರಗಳಲ್ಲಿ ಸಂಬಂಧಿಸಿರುವ ಆಣವಾದಿ ತ್ರಿಮಲಗಳನ್ನು ಗುರುವು ವೇಧಾದಿ ದೀಕ್ಷಾತ್ರಯದಿಂದ ಪರಿಹರಿಸಿ, ಇಷ್ಟ ಪ್ರಾಣ ಭಾವವೆಂಬ ಲಿಂಗತ್ರಯಗಳನ್ನು ದೇಹತ್ರಯದಲ್ಲಿ . . . ಪ್ರತಿಷ್ಠಿಸುವನು (ಶತಳ. ೧೬ ವಿಜಾಠ); ಮಲತ್ರಯಗಳನ್ನು ವೇಧಾ, ಮಂತ್ರ, ಕ್ರಿಯೆಗಳೆಂಬ ದೀಕ್ಷಾತ್ರಯದಿಂದ ಸುಟ್ಟು . . . ಮಂತ್ರಶರೀರಿಯೆನಿಸುವನು (ಅಷ್ಟಾವಿ. ೧). 'ಕ್ರಿಯಾದೀಕ್ಷೆ' ಪರಾ. [ಸಂ.]

ದೀಕ್ಷಾಧ್ಯಯನ (ನಾ). [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು; ಸಂನ್ಯಾಸವನ್ನು ಸ್ವೀಕರಿಸುವುದು: ದೀಕ್ಷಾಧ್ಯಯನಮುಂ ಜಿನರೂಪತ್ವಮುಂ . . . ಅಪ್ಪಯ್ವತ್ತುಮೂಱು ಗರ್ಭಾನ್ವಯಕ್ರಿಯೆಯೊಳು (ಶಾವುಂಪು. ೩೫೯). 'ದೀಕ್ಷೆ' ಪರಾ. [ಸಂ.]

ದೀಕ್ಷಾನ್ವಯಕ್ರಿಯೆ(ನಾ). [ಜೈನ] ದೀಕ್ಷೆಯನ್ನು ಗುರುವಿನಿಂದ ಸ್ವೀಕರಿಸಿ ಅಧ್ಯಯನ ಪ್ರಾರಂಭಮಾಡುವುದು; ℙ ಇದರಲ್ಲಿ ೪೮ ಕ್ರಿಯೆಗಳಿವೆ: ೧. ದೀಕ್ಷಾನ್ವಯ ಕ್ರಿಯೆ ಅಥವಾ ಅವತಾರ ಕ್ರಿಯೆ: "ಅಹಿಂಸಾ ಪರಮೋ ಧರ್ಮಃ "ಎಂಬ ತತ್ವವನ್ನು ಪ್ರತಿಪಾದಿಸುವ ಜೈನಸಿದ್ಧಾಂತವೇ ಆತ್ಮಕಲ್ಯಾಣಕ್ಕೆ ಶ್ರೇಷ್ಠವಾದ ಸಾಧನವೆಂದು ನಂಬಿ, ಆರ್ಹರಾದ ಜೈನಾಚಾರ್ಯರಿಂದ ಜಿನದೀಕ್ಷೆಯನ್ನು ಪಡೆಯುವುದು. ೨. ವ್ರತ್ತಲಾಭ: ಅಂದಿನಿಂದಲೆ ಗುರುಗಳ ಪಾದಕಮಲಗಳಿಗೆ ಎರಗಿ ವಿಧಿಪೂರ್ವಕವಾಗಿ ವ್ರತಗಳನ್ನು ಕೈಗೊಳ್ಳುವುದು. ೩. ಸ್ಥಾನಲಾಭ: ಅವನಿಗೆ ಉಪವಾಸ ಮಾಡಿಸಿ ಜಿನಾಲಯದಲ್ಲಿ ಜಿನಪ್ರತಿಮೆಗೆ ಅಭಿಮುಖವಾಗಿ ಕುಳ್ಳಿರಿಸಿ ಅವನ ಮಸ್ತಕವನ್ನು ಸ್ಪರ್ಶಮಾಡಿ "ನೀನು ಈ ದೀಕ್ಷೆಯಿಂದ ಪವಿತ್ರನಾದೆ" ಎಂದು ಅಸಂಗ್ರಹಿಸಿ, ಶೇಷಾಕ್ಷತೆಯನ್ನು ಕೊಟ್ಟು, ಪಂಚನಮಸ್ಕಾರ ಮಂತ್ರಗಳನ್ನು ಉಪದೇಶಮಾಡಿ, ಪಾರಣೆಗೆ ಅನುಮತಿಯನ್ನು ಕೊಡುವುದು. ೪. ಗ್ರಹಣಕ್ರಿಯೆ: ಇದುವರೆಗೆ ತನ್ನ ಮನೆಯಲ್ಲಿ ಪೂಜಿಸುತ್ತಿದ್ದ ಹಿಂದಿನ ಸಂಪ್ರದಾಯದ ದೇವತಾಪ್ರತಿಮೆಗಳನ್ನು ತೆಗೆದುಹಾಕಿ ಜೈನ ಸಂಪ್ರದಾಯದ ದೇವತೆಗಳನ್ನು ಪೂಜಿಸಲು ಪ್ರಾರಂಭಿಸುವುದು. ೫. ಪೂಜಾರಾಧ್ಯಕ್ರಿಯೆ: ಪೂಜೆ ಮತ್ತು ಉಪವಾಸಗಳ ಜೊತೆಯಲ್ಲಿಯೆ ದ್ವಾದಶಾಂಗಗಳ ಅರ್ಥವನ್ನು ಶ್ರವಣ ಮಾಡುವುದು. ೬. ಪುಣ್ಯಯಜ್ಞಕ್ರಿಯೆ: ತನ್ನಂತೆಯೆ ಇರುವವರೊಂದಿಗೆ ಕೂಡಿ ಹದಿನಾಲ್ಕು ಪೂರ್ವವಿದ್ಯೆಗಳ ಅರ್ಥವನ್ನು ಜಿಜ್ಞಾಸೆಮಾಡುತ್ತಾ ಪುಣ್ಯವನ್ನು ವೃದ್ಧಿಪಡಿಸಿಕೊಳ್ಳುವುದು. ೭. ದೃಢಚರ್ಯೆ: ಜೈನ ಮತದ ಧರ್ಮಗ್ರಂಥಗಳನ್ನು ವ್ಯಾಸಂಗಮಾಡಿ ಜ್ಞಾನಾಭಿವೃದ್ಧಿಗೆ ಸಹಾಯಕವಾದ ಇತರ ಗ್ರಂಥಗಳನ್ನು ವ್ಯಾಸಂಗಮಾಡುವುದು. ೮. ಉಪಯೋಗಿತೆ: ಮೇಲಿನ ಸಾಧನೆಗಳನ್ನು ಸಾಧಿಸಿ ಪರ್ವದಿನದ ಉಪವಾಸದ ಕೊನೆಯಲ್ಲಿ ಅರ್ಧರಾತ್ರಿ ಸಮಯದಲ್ಲಿ ಪ್ರತಿಮಾಯೋಗಧಾರಣೆಮಾಡುವುದು (ಆಹಾರತ್ಯಾಗ ಮಾಡಿ ಒಂದೇ ಸ್ಥಳದಲ್ಲಿ ನಿಂತುಕೊಂಡು ತಪಸ್ಸುಮಾಡುವುದು). ೯. ಉಪನೀತಿ: ದೇವತಾಗುರುಗಳ ಸನ್ನಿಧಿಯಲ್ಲಿ ಜೈನಸಂಪ್ರದಾಯದಂತೆ ಶ್ವೇತವಸ್ತ್ರ, ಯಜ್ಞೋಪವೀತಗಳನ್ನು ಧರಿಸುವುದು. ಗೋತ್ರ ಮತ್ತು ನಾಮಧೇಯಗಳನ್ನು ಜೈನಪದ್ಧತಿಯಂತೆ ಬದಲಾಯಿಸುವುದು. ಹೀಗೆ ಶ್ರಾವಕದೀಕ್ಷೆಯನ್ನು ಹೊಂದುವುದು. ೧೦. ವ್ರತಚರ್ಯೆ: ಶ್ರಾವಕಾಚಾರವನ್ನು ಚೆನ್ನಾಗಿ ಅಭ್ಯಾಸ ಮಾಡುವುದು ಹಾಗು ಅನುಷ್ಠಾನಕ್ಕೆ ತರುವುದು. ೧೧. ವ್ರತಾಚರಣಕ್ರಿಯೆ: ಹೀಗೆ ಅಭ್ಯಾಸಮಾಡಿದ ಶ್ರಾವಕನು ಗುರುಗಳ ಸನ್ನಿಧಿಯಲ್ಲಿ ವಿಧ್ಯುಕ್ತ ಕ್ರಮದಿಂದ ಸ್ನಾತಕನಂತೆ ಬೇರೆ ವೇಷಭೂಷಣಗಳನ್ನು ಧರಿಸುವುದು. ೧೨. ವಿವಾಹಕ್ರಿಯೆ: ಜೈನಮತಕ್ಕೆ ಸೇರುವ ಮೊದಲು ಮದುವೆ ಮಾಡಿಕೊಂಡಿದ್ದಾದರೆ ಅವಳನ್ನೂ ಜೈನದೀಕ್ಷೆಯಿಂದ ಸಂಸ್ಕರಿಸಿ ಜೈನಸಂಪ್ರದಾಯದಂತೆ ಪುನರ್ವಿವಾಹಮಾಡಿಕೊಳ್ಳುವುದು. ೧೩. ವರ್ಣಲಾಭಕ್ರಿಯೆ: ಗೃಹಸ್ಥನಾದಮೇಲೆ ಜೈನ ಮಹಾಜನರ ಅನುಮತಿಯನ್ನು ಗಳಿಸಿ ಅವರೊಂದಿಗೆ ಭೋಜನ ಪ್ರತಿಭೋಜನ ಸಂಬಂಧ ಬೆಳೆಸುವುದು. ಇವೇ ಮೊದಲಾದ ವ್ಯವಹಾರವನ್ನು ತಾನೂ ಅವರಲ್ಲಿ ಒಬ್ಬನಂತೆ ನಡೆಸಲು ಪೂರ್ಣಾವಕಾಶವನ್ನು ಪಡೆಯುವುದು; ಜೈನಜಾತಿಗೆ ಸೇರಿ ವ್ಯವಹರಿಸಲು ಕುಲವೃದ್ಧರ ಒಪ್ಪಿಗೆ ಪಡೆಯುವುದು. ೧೪. ಕುಲಚರ್ಯೆ: ಜೈನರ ಆಚಾರ ವ್ಯವಹಾರಗಳನ್ನು ಪರಿಪಾಲಿಸುತ್ತಾ ನಿಷ್ಠರಾದ ಜೈನರಂತೆ ದೇವಪೂಜೆ ಮೊದಲಾದ ಷಟ್ಕರ್ಮಗಳನ್ನು ಆಚರಿಸುವುದು. ೧೫. ಗೃಹೇಶಿತೃಕ್ರಿಯೆ: ತನ್ನ ಸದಾಚಾರಾದಿ ಸದ್ಗುಣಗಳಿಂದ ಗೃಹಸ್ಥರ ಮುಖ್ಯಸ್ಥನಾಗುವುದು. ೧೬. ಪ್ರಶಾಂತತಾ ಕ್ರಿಯೆ: ನಾನಾ ವಿಧವಾದ ಉಪವಾಸ ಮೊದಲಾದುವುಗಳಿಂದ ವಿರಕ್ತಿಯನ್ನು ಪಡೆಯುವುದು. ೧೭. ಗೃಹತ್ಯಾಗಕ್ರಿಯೆ: ಗರ್ಭಾನ್ವಯ ಕ್ರಿಯೆಯಲ್ಲಿ ಹೇಳಿರುವಂತೆಯೊ ಮಕ್ಕಳಿಗೆ ಗೃಹಕೃತ್ಯವನ್ನು ವಹಿಸಿ ಮನೆಬಿಟ್ಟು ಹೊರಡುವುದು. ೧೮. ದೀಕ್ಷಾದ್ಯಕ್ರಿಯೆ: ತಪೋವನದಲ್ಲಿ ಏಕವಸ್ತ್ರಧಾರಣೆಮಾಡುವುದು. ೧೯. ಜಿನರೂಪತಾಕ್ರಿಯೆ: ವಸ್ತ್ರತ್ಯಾಗ ಮಾಡಿ ದಿಗಂಬರನಾಗುವುದು. ಇಲ್ಲಿಂದ ಮುಂದಿನ ಉಳಿದ ಮೌನಾಧ್ಯಯನವೃತ್ತಿಯಿಂದ ಅಗ್ರನಿರ್ವೃತಿಯವರೆಗಿನ ಇಪ್ಪತ್ತೊಂಬತ್ತು ಕ್ರಿಯೆಗಳು ಸ್ವಲ್ಪವೂ ವ್ಯತ್ಯಾಸವಿಲ್ಲದೆ ಗರ್ಭಾನ್ವಯ ಕ್ರಿಯೆಯಲ್ಲಿ ಹೇಳಿರುವಂತೆಯೇ ಇವೆ. 'ದೀಕ್ಷೆ' ಪರಾ: ನಾಲ್ವತ್ತೈಂಟು ದೀಕ್ಷಾನ್ವಯಕ್ರಿಯೆಗಳುಮಂ . . . ಅಱಿಪಿ (ಆದಿಪು. ೧೫-೧೬ ಪ); ಮತ್ತಮೈವತ್ತುಮೂಱು ಗರ್ಭಾಧಾನಾದಿ ಗರ್ಭಾನ್ವಯ ಕ್ರಿಯೆಗಳುಮಂ ನಾಲ್ವತ್ತೆಂಟವತಾರಾದಿ ದೀಕ್ಷಾನ್ವಯಕ್ರಿಯೆಗಳುಮಂ (ಶಾವುಂಪು. ೪೭); ಸದೃಷ್ಟಿ ಶಾಂತಚಿತ್ತಂ ದೀಕ್ಷೆಯಂ ಕೈಕೊಳ್ವನ್ನೆಗ ಮೇಕಾದಶಾಧಿಕಧರನಾಗಿ ದೀಕ್ಷಾಗ್ರಹಣೋದ್ಯುಕ್ತನಾಗಿರ್ದಡದು ದೀಕ್ಷಾನ್ವಯಕ್ರಿಯೆ (ಶಾವುಂಪು. ೩೪೪). [ಸಂ. ದೀಕ್ಷಾನ್ವಯಕ್ರಿಯಾ]

ದೀಕ್ಷಾಪ್ರಧಾನ (ನಾ). ಮಂತ್ರಗ್ರಹಣ, ಸಂನ್ಯಾಸವೇ ಮೊದಲಾದ ದೀಕ್ಷೆಗಳನ್ನೇ ಪ್ರಧಾನವಾಗಿ ಉಳ್ಳುದು: ಅಗಮಗಳು ದೀಕ್ಷಾಪ್ರಧಾನವಾದ ಆತ್ಮಾರ್ಥ-ಪರಾರ್ಥಗಳೆಂಬ ಎರಡು ವಿಧವಾದ ಭಗವದುಪಾಸನೆಯ ಆಚರಣೆಗೂ ಆಶ್ರಯವಾಗಿರುವುದು ಸ್ಪಷ್ಟವಾಗುತ್ತದೆ (ಧಾರಿದ. ೭೧). [ಸಂ.]

ದೀಕ್ಷಾಬ್ರಹ್ಮಚಾರಿ (ನಾ). [ಜೈನ] ಬ್ರಹ್ಮಚರ್ಯದೀಕ್ಷೆಯನ್ನು ಪಡೆದವನು: ದೀಕ್ಷಾಬ್ರಹ್ಮಚಾರಿಯುಂಬೊಂ ವೇಷಮೊಂದುವಿಲ್ಲದಾಗಮಾಭ್ಯಾಸಂಗೆಯ್ದು ಗೃಹಸ್ಥನೊಳ್ನಿಗಟ್ಟಂ (ಶಾವುಂಪು. ೩೪೭). [ಸಂ. ದೀಕ್ಷಾಬ್ರಹ್ಮಚಾರಿನ್]

ದೀಕ್ಷಾವಸ್ತ್ರ (ನಾ). ಮದುವೆ, ವ್ರತ, ನಿಯಮಗಳ ಪಾಲನೆಯೆನ್ನು ಸ್ವೀಕಾರಮಾಡುವ ಸಮಯದಲ್ಲಿ ಉಡುವ ವಸ್ತ್ರ: ದೀಕ್ಷಾವಸ್ತ್ರವನ್ನು ವರನಿಗೆ ಕನ್ಯೆಯ ಸೋದರರಮಾವನು ಉಡಿಸುವ ಪದ್ಧತಿಯಿದೆ (ಆರ್ಜುಧ. ೧೩೨). [ಸಂ.]

ದೀಕ್ಷಾವಿಧಜ್ಞ (ನಾ). ಯಜ್ಞಯಾಗಾದಿಗಳ ನಿಯಮವನ್ನು ಅರಿತವನು: ಸೇವಕರು ಮಂತ್ರಿಪ್ರಕರ ದೀಕ್ಷಾವಿಧಜ್ಞರು ಪೂಜನಾರ್ಥರು . . . ಬಂದು (ಬಸಪು. ೫೮-೧೫). [ಸಂ.]

ದೀಕ್ಷಾವಿಧಿ (ನಾ). ಯಜ್ಞಯಾಗಾದಿಗಳಲ್ಲಿ ಆಚರಿಸಬೇಕಾದ ನಿಯಮ, -ಕ್ರಮ, -ವಿಧಾನ: ಗುರು ದೀಕ್ಷಾವಿಧಿಗಳ್ಗೆ ಮುಂತ್ರಿ ಹಿತಕಾರ್ಯಾಲೋಚನಕ್ಕೆ . . . ಮೇಳದಾಳ್ ಪರಿಹಾಸಕ್ಕೆನಿಸಿರ್ದನೆಂತು ಮಱಿವಂ ದುರ್ಯೋಧನಂ ಕರ್ಣನಂ (ಗದಾಯು. ೫-೪೪). [ಸಂ.]

ದೀಕ್ಷಾಸಂಸ್ಕಾರ (ನಾ). [ವೀಶೈ] ಶಿಷ್ಯತ್ವವನ್ನು ಪಡೆಯುವ ಸಂಸ್ಕಾರ; ಶಿಷ್ಯನಾಗಿ ಹೊಂದುವ ಸಂಸ್ಕಾರ: ಈ ಬಗೆಯ ಗುರು ಶಿಷ್ಯ ಸಮಾಗಮದಿಂದ ಶಿಷ್ಯನಲ್ಲಿ ಮಹತ್ಪರಿಣಾಮವುಂಟಾಗಿ ವಿವೇಕೋದಯವಾಗುತ್ತದೆ. ಇಂತಹ ಸಮಾಗಮಕ್ಕೆ ಶಕ್ತಿವಿಶಿಷ್ಟಾದ್ವೈತ ವೇದಾಂತದಲ್ಲಿ ದೀಕ್ಷಾಸಂಸ್ಕಾರವೆನ್ನುತ್ತಾರೆ (ಶಕ್ತಿವಿ. ೪೪). [ಸಂ.]

ದೀಕ್ಷಾಸಂಸ್ಕೃತ (ನಾ). [ವೀಶೈ] ದೀಕ್ಷಾ ಸಂಸ್ಕಾರವನ್ನು ಹೊಂದಿರುವವನು; ಮಂತ್ರೋಪದೇಶದಿಂದ ಸಂಸ್ಕರಿಸಲ್ಪಟ್ಟವನು: ಜೀವನು ದೀಕ್ಷಾಸಂಸ್ಕೃತನಾಗಿ ಭಕ್ತನಾದ ಮೇಲೆ ಶಿವನ ಅರ್ಚನೆಯಲ್ಲಿ ನಿರತನಾಗುವನು (ಶಕ್ತಿವಿ. ೧೦೦). [ಸಂ.]

ದೀಕ್ಷಾಸ್ನಾನ (ನಾ). [ಕ್ರೈಸ್ತ] ಕ್ರೈಸ್ತರು ದೀಕ್ಷೆಕೊಡುವುದಕ್ಕೆ ಮೊದಲು ಪವಿತ್ರವಾದ ನೀರಿನಿಂದ ಮಾಡಿಸುವ ಸ್ನಾನ: (ಕ್ರೈಸ್ತರ) ಶುದ್ಧಿಸಂಸ್ಕಾರದಲ್ಲಿ ಅಥವಾ ಮತಕ್ಕೆ ಸೇರಿಸಿಕೊಂಡು ನಾಮಕರಣ ಮಾಡುವಾಗ, ಮಾಡಿಸುವ ಸ್ನಾನ, ಸಂಪ್ರೋಕ್ಷಣೆ: ದೀಕ್ಷಾಸ್ನಾನ; ಜ್ಞಾನಸ್ನಾನ (Baptism. ಇಂಕಾ). [ಸಂ.]

ದೀಕ್ಷಿತ (ನಾ). ೧. ಒಂದು ಕಾರ್ಯವನ್ನು ಮಾಡಿ ಮುಗಿಸಬೇಕೆಂಬ ದೃಢಸಂಕಲ್ಪವನ್ನು ಸ್ವೀಕಾರಮಾಡಿದವನು; ವ್ರತವನ್ನು ಹಿಡಿದವನು: ದಿವಿಜೇಜ್ಯಂ ನಿಲೆ ಜನ್ಮಲಗ್ನಗೃಹದೊಳ್ ಪ್ರಾಜ್ಞಂ . . : ಧರ್ಮದೊಳ್ ದೀಕ್ಷಿತಂ (ಜಾತಕ. ೧೮-೧೧); ಆರ ದಳಪದು ಧುರ ಪಲಾಯನ ಚಾರು ದೀಕ್ಷಿತರಾಯ್ತು ಫಲುಗುಣ ಧಾರುಣೀಪತಿಯಾಣೆ ಹೇಳೆಂದಸುರರಿಪು ನುಡಿದ (ಕುವಾ೪. ೧೪-೬); ದುಷ್ಪಶಿಕ್ಷಣದೀಕ್ಷಿತರ ರಾವುಲಕ್ಷ್ಮಣರ ಕೋದಂಡಠಂಕಾರಮಂತ್ರಚಿಚ್ಛಕ್ತಿಯ ಶರಾಘಾತಕಳೆದನ್ ಸುಬಾಹು (ಶ್ರೀರಾಮಾ. ೩೫-೦೮೯). ೨. ಯಾಗವನ್ನು ಮಾಡುವವನು: "ಯಷ್ಟಾ, ಯಜಮಾನಃ, ಆದೇಷ್ಟಾ, ದೀಕ್ಷಿತಃ, ವ್ರತೀ, ಇಜ್ಯಾಶೀಲಃ, ಯಾಯಜೂಕಃ, ಯಜ್ವಾ, ಯಾಸುತೀವಳಃ – ಈ ೯ ಯಾಗ ಮಾಡುವಾತಂ" (ಹಲಾಯು. ೬೯-೨೬೭); "ಯಜಮಾನನಿಜ್ಯಾಗಪವ್ರತಿ ಯಜ್ವನಾ ದೀಕ್ಷಿತನೆನಿಕ್ಕು" (ಮಂಗರಾ. ೭೭-೦೪); ಅರಸಂ ದೀಕ್ಷಿತನಲ್ಲಿ ಋತ್ವಿಜರುಮೆವಿಮ್ಮಾ ನಾಲ್ವರುಂ (ಗದಾಯು. ೪-೪೬). ೩. ಸೋಮಯಾಗವನ್ನು ಮಾಡಿದವನು; ಸೋಮಯಾಜಿ: "ಸೋಮಯಾಗವ ಮಾಡಿದಾತನಾದಡೆ ದೀಕ್ಷಿತನೆನಿಸುಗು" (ನಾಚಿರಾ. ೧೩೬); P ಈ ಯಾಗವನ್ನು ಮಾಡಿದವರ ಮನೆತನಕ್ಕೂ ಈ ಹೆಸರುಂಟು. ೪. ಶಿಷ್ಯ: "ಮೌಖಂ ದೀಕ್ಷಿತನಂತೇವಾಸಿ ಶಿಷ್ಯನೆನಿಕುಂ ಧಾತ್ರಂ" (ವಸು.ಕೋ. ೩೭-೩೩).

[ಸಂ.]

ದೀಕ್ಷಿತತನ (ನಾ). ಯಾಗವನ್ನು ಮಾಡುವಿಕೆ; ದೀಕ್ಷಿತನಾಗಿರುವಿಕೆ: ಕರಿಯ ಚರ್ಮದ ಹೊದಿಕೆಗಳ ನಿಡುಗರುಳ ಸವ್ಯಪವಿತ್ರಸೂತ್ರದ . . . ದಕ್ಷಿಣಕರದ ಕತ್ತಿಯಲಾಭಚಾರಾಧ್ವರದ ದೀಕ್ಷಿತತನವ ಕೈಕೊಂಡನು ದಶಗ್ರೀವ (ತೊರಾ. ೬-೪೯-೦೩). [ದೀಕ್ಷಿತ + – ತನ]

ದೀಕ್ಷಿಸು (ಕ್ರಿ). ಉಪದೇಶವನ್ನು ಕೊಡು,–ನೀಡು: ಬಹಿರಂಗದಲ್ಲಿ ಶ್ರೀಗುರುಲಿಂಗವಾಗಿ ದೀಕ್ಷಿಸಿ [ಪಾಣಾ. ಉಪದೇಶಮಂ ಕೊಟ್ಟು]ರಕ್ಷಿಸಿದೆ . . . ಜಂಗಮಲಿಂಗವಾಗಿ ಅವಗುಣಾಂಗಳೆಲ್ಲವನೂ ಕಳೆದು ಶಿಕ್ಷಿಸಿ ರಕ್ಷಿಸಿದೆ (ಉರಿಪಿ. ಕ. ೮೨-೦೩೬). [ದೀಕ್ಷೆ + – ಇಸ್ಯ]

ದೀಕ್ಷೆ (ನಾ). ೧. ವಂದುವೆ, ಉಪನಯನ, ವ್ರತ, ಮುಂತಾದ ಪವಿತ್ರ ಕಾರ್ಯಕ್ಕಾಗಿ ಆರಂಭದಲ್ಲಿ ನಡೆಸುವ ಸಂಸ್ಕಾರ. ೨. ವ್ರತ; ನಿಯಮ: ಕಟ್ಟಬೇಕೀ ನಾಡ ತೊಟ್ಟು ಹೊಸದೀಕ್ಷೆಯನು ಕಪ್ಪಗಳ ಕಂಕಣವ ಕೈಗೆ ಕಟ್ಟಿ (ನಲಮು. ೧೯-೦೩); ದೀಕ್ಷೆ, ಯೋಗ, ಯಾಗ, ಜಪ, ಧ್ಯಾನ ಮೊದಲಾದವುಗಳು ಜ್ಞಾನವಿಕಾಸಕ್ಕೆ ಕಾರಣವಾಗಿರುವ ಕರ್ಮಗಳು (ಭಾರದ. ೨೦೩). ೩. ಉಪದೇಶವನ್ನು ನೀಡುವುದು: ಮಂತ್ರೋಪದೇಶ: ಎಮ್ಮ ಜೋಯಿಸಮೆಮ್ಮಂತಪ್ಪ ರೂಪಿನ ಋಷಿಯರ್ಗಲ್ಲದೆ ಪೇಟಲುಂ ಕಲಲುಮಾಗದೆಂದೊಡೆ ಅಂತಪ್ಪ ದೀಕ್ಷೆಯಂ ದಯಗೆಯ್ಯಿಮೆಂದು ಬೇಡಿದೊಡೊಳ್ಳಿತಪ್ಪ ಮುಹೂರ್ತದೊಳ್ ದೀಕ್ಷೆಯಂ ಕೊಟ್ಟು (ಪಡ್ಡಾರಾ. ೬-೧); ಆ ಭಟ್ಟಾರಕರ್ ದಯೆಗೆಯ್ದ ದೀಕ್ಷೆಯೆಂಬ ಕಲ್ಪಲತೆಯ ಫಲದಿಂದಮೃತಪದವಿಯಂ ಪಡೆದಂ (ಆದಿಪು. ೫-೦೩ ಪ). ೪. ನಿರ್ಧಾರ; ಶಪಥ; ಪ್ರತಿಜ್ಞೆ: ದೀಕ್ಷೆಯಂ ಕೈಕೊಂಡು ಹಠಮೂರ್ಕಿಯಾಗೀಕೆ ಪೊಕ್ಕಳಾ ಕೋಪಗೃಹಮಂ (ಶ್ರೀರಾಮಾ. ೬೬-೩೭). ೫. (ಹೆಂಡತಿಯು ಗರ್ಭಿಣಿಯಾದಾಗ, ಬೇರೆ ವ್ರತಗಳನ್ನು ಕೈಕೊಂಡ ಸಂದರ್ಭದಲ್ಲಿ) ಮುಂಡನ ಮಾಡಿಸಿಕೊಳ್ಳದಿರುವುದಂ.. 'ದೀಕ್ಷೆ ಬಿಡು' ಪರಾ. ೬. [ಜೈನ] ಐಪತ್ತ್ರಮೂರಂ ಗರ್ಭಾನ್ವಯ ಕ್ರಿಯೆಗಳಲ್ಲಿ ಒಂದು; ಸಂನ್ಯಾಸವನ್ನು ಸ್ವೀಕರಿಸುವುದು; ಸಂನ್ಯಾಸಸ್ವೀಕಾರ; P ೫೩. ಗರ್ಭಾನ್ವಯ ಕ್ರಿಯೆಗಳು. ೧. ಆಧಾನ: ಋತುಮತಿಯಾದ ಧರ್ಮಪತ್ನಿಯಲ್ಲಿ ಗರ್ಭಾಧಾನ; ನಿಷೇಕ. ೨. ಪ್ರೀತಿ: ಗರ್ಭವತಿಯಾದ ಮೂರನೆಯ ತಿಂಗಳಲ್ಲಿ ಮಾಡುವ ಜಿನಪೂಜೆ. ೩. ಸುಪ್ರೀತಿ: ಗರ್ಭಾಧಾನವಾದ ಐದನೆಯ ತಿಂಗಳಲ್ಲಿ ಮಾಡುವ ಸಂಸ್ಕಾರ. ೪. ಧೃತಿ: ಏಳನೆಯ ತಿಂಗಳಲ್ಲಿ ಮೇಲಿನಂತೆಯೆ ಮಾಡುವ ಸಂಸ್ಕಾರ; ವಿಶೇಷ. ೫. ಮೋದ: ಒಂಬತ್ತನೆಯ ತಿಂಗಳಲ್ಲಿ ಮಾಡುವ ಸಂಸ್ಕಾರ. ಗರ್ಭರಕ್ಷೆಗಾಗಿ ಗರ್ಭಿಣಿಗೆ ರಕ್ಷಾಬಂಧವನ್ನು ಮಾಡುವುದು. ೬. ಪ್ರಿಯೋದ್ಭವ: ಮಗು ಹುಟ್ಟಿದಾಗ ಮಾಡುವ ಶಾಸ್ತ್ರೀಯವಾದ ವಿಧಿ; ಜಾತಕರ್ಮ. ೭. ನಾಮಕರ್ಮ: ಮಗು ಹುಟ್ಟಿದ ಹನ್ನೆರಡು ದಿನಗಳ ನಂತರ ಮಾಡುವ ವಿಧಿ; ಹೆಸರಿಡುವ ವಿಧಿ; ನಾಮಕರಣ. ೮. ಬಹಿರ್ಯಾನ: ಮಗು ಹುಟ್ಟಿದ ಎರಡು, ಮೂರು ಅಥವಾ ನಾಲ್ಕನೆಯ ತಿಂಗಳಲ್ಲಿ ಅನುಕೂಲವಾದ ಶುಭ ದಿವಸ ಮಗುವನ್ನು ಪ್ರಸೂತಿಗೃಹದಿಂದ ಹೊರಕ್ಕೆ ಕರೆದುಕೊಂಡು ಹೋಗುವುದು; ಉಪನಿಷ್ಕ್ರಮಣ. ೯. ನಿಷದ್ಯೆ: ಶಿಶುವನ್ನು ಉತ್ತಮವಾದ ಆಸನದ ಮೇಲೆ ಕುಳ್ಳಿರಿಸಿ ಸಿದ್ಧಾರ್ಚನೆ ಮೊದಲಾದ ವಿಧಿಗಳನ್ನು ನೆರವೇರಿಸುವುದು. ೧೦. ಅನ್ನಪ್ರಾಶನ: ಏಳು ಅಥವಾ ಎಂಟನೆಯ ತಿಂಗಳಲ್ಲಿ ಮಗುವಿಗೆ ಅನ್ನ ತಿನ್ನಿಸುವ ವಿಧಿ. ೧೧. ವ್ಯುಷ್ಟಿ: ಮಗುವಿನ ಮೊದಲನೆಯ ವರ್ಷದ ಹುಟ್ಟಿದ ಹಬ್ಬ. ೧೨. ಕೇಶವಾಪ: ಶುಭದಿನದಲ್ಲಿ ಮಗುವಿಗೆ ಜುಟ್ಟು ಬಿಡಿಸುವುದು; ಚೌಲ. ೧೩. ಲಿಪಿ ಸಂಖ್ಯಾನ ಸಂಗ್ರಹ: ಐದನೆಯ ವರ್ಷದಲ್ಲಿ ಅಕ್ಷರಾಭ್ಯಾಸವನ್ನು ಮಾಡಿಸುವ ವಿಧಿ. ೧೪. ಉಪನಯನ: ಗರ್ಭಾಷ್ಟಮದಲ್ಲಿ ಮಾಡುವ ಸಂಸ್ಕಾರ; ಮುಂಜಿ. ೧೫. ವ್ರತಚರ್ಯೆ: ಜೈನಸಂಪ್ರದಾಯದಂತೆ ಮಾಡುವ ಬ್ರಹ್ಮಚರ್ಯಾನುಷ್ಠಾನ. ೧೬. ವ್ರತಾಚರಣ: ವಿದ್ಯಾಭ್ಯಾಸ ಮುಗಿದ ಮೇಲೆ ಅಂದರೆ ಹನ್ನೆರಡು ಅಥವಾ ಹದಿನಾರು ವರ್ಷಗಳಾದ ಮೇಲೆ ಮಾಡುವ ವ್ರತ; ಮಧುಮಾಂಸಾದಿಗಳನ್ನು ಬಿಟ್ಟು ಶುದ್ಧ ಜೀವನ ನಡೆಸುವುದು. ೧೭. ವಿವಾಹ: ಅನುರೂಪಳಾದ ಕನ್ಯೆಯನ್ನು ಮದುವೆಯಾಗುವುದು. ೧೮. ವರ್ಣಲಾಭ: ಮದುವೆಯಾದ ಮೇಲೆ ತಂದೆಯ ಅನುಮತಿಯಂತೆ ಬೇರೆ ಸಂಸಾರಮಾಡುವುದು ಮತ್ತು ತಂದೆಯು ಕೊಟ್ಟ ದಾಯಭಾಗವನ್ನು ತೆಗೆದುಕೊಂಡು ಸ್ವತಂತ್ರನಾದ ಗೃಹಸ್ಥನಾಗುವುದು. ೧೯. ಕುಲಚರ್ಯೆ: ಗೃಹಸ್ಥನಾಗಿ ತನ್ನ ಕುಲಾಚಾರವನ್ನು ಅನುಸರಿಸುವುದು. ೨೦. ಗೃಹೀಶಿತಾ: ತನ್ನ ಮಾದರಿಯಾದ ನಡವಳಿಕೆಯಿಂದ ಗೃಹಸ್ಥರಲ್ಲಿ ಗಣ್ಯನೆನಿಸಿಕೊಳ್ಳುವುದು. ೨೧. ಪ್ರಶಾಂತಿ: ವಂಶೋದ್ಧಾರಕನಾದ ಮಗನನ್ನು ಪಡೆದು, ಅವನು ಸಮರ್ಥನಾದ ಮೇಲೆ ಸಂಸಾರವನ್ನು ಅವನಿಗೆ ವಹಿಸಿ ತಾನು ಸಂಸಾರದಿಂದ ನಿವೃತ್ತನಾಗುವುದು. ೨೨. ಗೃಹತ್ಯಾಗ: ತನ್ನ ಧನ, ಭೂಮಿ, ಮೊದಲಾದ ಸಂಪತ್ತನ್ನು ಕೊಡಬೇಕಾದವರಿಗೆ ಕೊಟ್ಟು ಆತ್ಮಕಲ್ಯಾಣಸಾಧನೆಗಾಗಿ ಮನೆ ಬಿಟ್ಟು ಹೊರಡುವುದು. ೨೩. ದೀಕ್ಷಾದ್ಯ: ದೀಕ್ಷೆಯನ್ನು ಸ್ವೀಕರಿಸು

ವುದಕ್ಕೆ ಮೊದಲು ಏಕವಸ್ತ್ರಧಾರಣೆ ಮೊದಲಾದ ನಿಯಮಗಳನ್ನು ತಾಳುವುದಂ. ೨೪. ಜಿನರೂಪತೆ : ಬಟ್ಟೆ ಮೊದಲಾದ ಎಲ್ಲ ಪರಿಗ್ರಹವನ್ನು ತ್ಯಾಗಮಾಡಿ ಜಿನರೂಪವನ್ನು ಅಂದರೆ ದಿಗಂಬರತ್ವವನ್ನು ಪಡೆಯುವುದು. ೨೫. ಮೌನಾಧ್ಯಯನ ವೃತ್ತಿ : ಉಪವಾಸಾನಂತರದ ಪಾರಣೆ ಸಮಯದಲ್ಲಿ ವಾಙ್ನಿಯಮವನ್ನು ತಾಳುವುದು ಹಾಗೂ ಶಾಸ್ತ್ರಾಭ್ಯಾಸವನ್ನು ಮೌನವಾಗಿ ಮಾಡುವುದು. ೨೬. ತೀರ್ಥಕೃದ್ಭಾವನೆ : ತೀರ್ಥಂಕರ ಸ್ಥಾನದ ಭಾವನೆಗಳನ್ನು ಅಭ್ಯಾಸಮಾಡುವುದು; ಸಮ್ಯಗ್ದರ್ಶನ, ವಿಶುದ್ಧಿ, ಮೊದಲಾದ ಲಕ್ಷಣಗಳನ್ನು ಹೊಂದುವುದು. ೨೭. ಗುರುಸ್ಥಾನಾಭ್ಯುಪಗಮ : ತನ್ನ ಪಾಂಡಿತ್ಯ, ಸಾಧನೆ ಮೊದಲಾದ ಗುಣಗಳಿಂದ ಶಿಷ್ಯ ಸಂಗ್ರಹವಾಗಿ ಗುರುಸ್ಥಾನವನ್ನು ಪಡೆಯುವುದು. ೨೮. ಗಣೋಪಗ್ರಹಣ : ತನ್ನನ್ನು ಆಶ್ರಯಿಸಲು ಬಂದ ಮುನಿಸಂಘವನ್ನು ಪೋಷಿಸುತ್ತಾ, ಜ್ಞಾನಾರ್ಥಿಗಳಿಗೆ ಜ್ಞಾನವನ್ನು, ದೀಕ್ಷಾರ್ಥಿಗಳಿಗೆ ದೀಕ್ಷೆಯನ್ನು, ಧರ್ಮಾರ್ಥಿಗಳಿಗೆ ಧರ್ಮವನ್ನು ನೀಡುತ್ತಾ ಮುನಿಗಣವನ್ನು ಪೋಷಿಸುವುದು. ೨೯. ಸ್ವಗುರುಸ್ಥಾನಾವಾಪ್ತಿ : ಹೀಗೆ ಮುನಿಗಣಕ್ಕೆ ಪೋಷಕನಾಗಿದ್ದು ತನ್ನ ಗುರು ಅಲಂಕರಿಸಿದ್ದ ಸ್ಥಾನವನ್ನು ಅಲಂಕರಿಸುವುದು. ೩೦. ನಿಸ್ಸಂಗತ್ವಾತ್ಮಭಾವನೆ : ಯೋಗ್ಯನಾದ ಶಿಷ್ಯನನ್ನು ಪರಿಗ್ರಹಿಸಿ ತನ್ನ ಕರ್ತವ್ಯಭಾರವನ್ನು ಆತನಿಗೆ ವಹಿಸಿ ತಾನು ನಿಸ್ಸಂಗನಾಗಿ ತನ್ನ ಆತ್ಮವು ಎಲ್ಲಾ ಬಗೆಯ ಪರಿಗ್ರಹದಿಂದಲೂ ಬಿಡುಗಡೆ ಹೊಂದಿದೆ ಎಂಬ ಭಾವನೆಯನ್ನು ಸಾಧಿಸುವುದು. ೩೧. ನಿರ್ವಾಣಸಂಪ್ರಾಪ್ತಿ : ಈ ರೀತಿಯಂ ಆತ್ಮಸಂಸ್ಕಾರವನ್ನು ಮಾಡಿಕೊಂಡು ಸಲ್ಲೇಖನವ್ರತವನ್ನು ಕೈಗೊಳ್ಳಲು ಧ್ಯಾನಕ್ಕಾಗಿ ಪ್ರಯತ್ನಿಸುವುದು. ೩೨. ಯೋಗನಿರ್ವಾಣ ಸಾಧನೆ : ಆಹಾರವನ್ನು ಹಾಗೂ ಶರೀರವನ್ನು ಬಿಡಲಿರುವವನಾಗಿ ಸಮಾಧಿಯಿಂದ ಮನಸ್ಸಿನಲ್ಲಿ ಪರಮಾನಂದವನ್ನು ಸಾಧಿಸುವುದು. ೩೩. ಇಂದ್ರೋಪಪಾದ ಕ್ರಿಯೆ : ಹೀಗೆ ಸಮಾಧಿಯಿಂದ ಪ್ರಾಣ ಪರಿತ್ಯಾಗಮಾಡಿ, ಇಂದ್ರನಾಗಿ ಅಣಿಮಾದ್ಯಷ್ಟವೈಸಿದ್ಧಿಗಳನ್ನೂ ಸಂಪೂರ್ಣ ಯೌವನವನ್ನೂ ಪರಮಾನಂದವನ್ನೂ ಪಡೆಯುವುದು. ೩೪. ಇಂದ್ರಾಭಿಷೇಕ : ಬಳಿಕ ಜನ್ಮಾಂತರಜ್ಞಾನವನ್ನು ಪಡೆದು ದಿವ್ಯಸಿಂಹಾಸನಾರೂಢನಾಗಿ, ದೇವತೆಗಳಿಂದ ಅಭಿಷಿಕ್ತನಾಗಿ ಕಿರೀಟ ಕುಂಡಲಾದಿಗಳನ್ನು ಧರಿಸಿ ಶೋಭಿಸುವುದು. ೩೫. ವಿಧಿದಾನ : ತನಗೆ ನಮಸ್ಕರಿಸುತ್ತಿರುವ ದೇವತೆಗಳನ್ನು ಸತ್ಕರಿಸಿ ಅವರವರ ಸ್ಥಾನದಲ್ಲಿ ಅವರವರನ್ನು ನೇಮಿಸುವುದು. ೩೬. ಸುಖೋದಯ : ಹೀಗೆ ಸನ್ಮಾನಿತರಾದ ದೇವತೆಗಳಿಂದ ಸುತ್ತುವರಿಯಲ್ಪಟ್ಟವನಾಗಿ ಬಹುಕಾಲ ದಿವ್ಯಸುಖವನ್ನು ಅನುಭವಿಸುವುದು. ೩೭. ಇಂದ್ರತ್ಯಾಗ : ಹೀಗೆ ಇಂದ್ರಪದವಿಯನ್ನು ಅನುಭವಿಸಿ, ಅಲ್ಲಿ ತನ್ನ ಆಯುಸ್ಸು ಮುಗಿಯುತ್ತಾ ಬಂದಂದನ್ನರಿತು ತನ್ನನ್ನು ಓಲೈಸುತ್ತಿರುವ ದೇವತೆಗಳನ್ನು ಬೀಳ್ಕೊಟ್ಟು ನಿರಾತಂಕವಾಗಿ ಇಂದ್ರಪದವಿಯನ್ನು ತ್ಯಾಗ ಮಾಡುವುದು. ೩೮. ಇಂದ್ರಾವತಾರ : ಭೂಲೋಕದಲ್ಲಿ ಜನಿಸಿ ಬೇಗನೆ ಸಿದ್ಧಿಯನ್ನು ಪಡೆಯಬೇಕೆಂಬ ಆಸಕ್ತಿಯಿಂದ ಅರ್ಹತ್ಪೂಜೆಯನ್ನು ಮುಂಗಿಸಿ ಜನಿಸುವುದು. ಆಗ ಆತನ ತಾಯಿಗೆ ಹದಿನಾರು ಬಗೆಯ ಶುಭಸ್ವಪ್ನಗಳಾಗುತ್ತವೆ. ೩೯. ಹಿರಣ್ಯಜನ್ಮತೆ : ಚಕ್ರವರ್ತಿಯಂ ಮನೆಯಲ್ಲಿ ಪಟ್ಟದ ರಾಣಿಯ ಗರ್ಭದಲ್ಲಿ ಅವತರಿಸುವುದು. ಹೀಗೆ ಅವತರಿಸುವುದಕ್ಕೆ ಮುಂಚಿನ ಆರು ತಿಂಗಳಿಂದಲೇ ಕುಬೇರನು ಸುವರ್ಣವೃಷ್ಟಿಯಂನ್ನು ಕರೆಯಂವನು ಅಲ್ಲದೆ ಇನ್ನೂ ಅನೇಕ ಶುಭಶಕುನಗಳುಂಟಾಗುವುವು. ಹೀಗೆ ಹಿರಣ್ಯ (ಚಿನ್ನ) ದ ಮಳೆಯಿಂದ ಸೂಚಿಸಲ್ಪಡುವ ಜನ್ಮ. ೪೦. ಮಂದರೇಂದ್ರಾಭಿಷೇಕ : ಹೀಗೆ ಹುಟ್ಟಿದ ಜಿನಶಿಶುವನ್ನು ದೇವತೆಗಳು ಮಂದರಪರ್ವತಕ್ಕೆ ತೆಗೆದುಕೊಂಡು ಹೋಗಿ ಕ್ಷೀರ ಸಮುದ್ರದ ನಿರ್ಮಲವಾದ ಹಾಲಿನಿಂದ ಅಭಿಷೇಕಮಾಡುವುದು. ೪೧. ಗುರುಪೂಜೆ : ಜಿನಕುಮಾರನಿಗೆ ಯಾವ ಗುರುವಿನಿಂದಲೂ ಉಪದೇಶವಾಗದಿದ್ದರೂ ಸ್ವತಃ ಸರ್ವಜ್ಞನಾದಂದರಿಂದ ಇಂದ್ರಾದಿಗಳು ಜಗದ್ಗುರುವೆಂದು ಪೂಜಿಸುವುದು. ೪೨. ಯೌವರಾಜ್ಯ : ಸಕಾಲದಲ್ಲಿ ತಂದೆಯಿಂದ ಯುವರಾಜಪಟ್ಟವನ್ನು ಪಡೆದು ರಾಜ್ಯಕ್ಕೆ ಉತ್ತರಾಧಿಕಾರಿಯಾಗುವುದಂ. ೪೩. ಸ್ವರಾಜ್ಯ : ಬಳಿಕ ತಂದೆ ಕೊಟ್ಟ ರಾಜ್ಯಭಾರವನ್ನು ವಹಿಸಿಕೊಂಡು ಸಾಮಂತರಾಜರಿಂದ ಓಲೈಸಲ್ಪಡುವುದು. ೪೪. ಚಕ್ರಲಾಭ : ನಿಧಿ ಹಾಗು ರತ್ನಗಳ ಪ್ರಾಪ್ತಿಯಾದ ಮೇಲೆ ರಾಜರೆಲ್ಲರೂ ಚಕ್ರವರ್ತಿಪದವಿಯಲ್ಲಿ ಅಭಿಷೇಕ ಮಾಡಿ ಪೂಜಿಸುವುದಂ. ೪೫. ದಿಗ್ವಿಜಯ : ಚಕ್ರರತ್ನವನ್ನು ಪಡೆದ ನಂತರ ಆದನ್ನು ಮುಂದಿಟ್ಟುಕೊಂಡು ನಾಲ್ಕು ಸಮುದ್ರಗಳ ಮಧ್ಯವರ್ತಿಯಾದ ಭೂಮಿಯನ್ನು ಕೈವಶಪಡಿಸಿಕೊಳ್ಳುವುದಂ. ೪೬. ಚಕ್ರಾಭಿಷೇಕ : ಚಕ್ರರತ್ನವನ್ನು ಮುಂದಿಟ್ಟುಕೊಂಡಂ ರಾಜಧಾನಿಯಂನ್ನು ಪ್ರವೇಶಿಸಿದ ನಂತರ ವಿಜೃಂಭಣೆಯಿಂದ ನಡೆಯುವ ಸಾಮ್ರಾಜ್ಯಪಟ್ಟಾಭಿಷೇಕ. ೪೭. ಸಾಮ್ರಾಜ್ಯ : ಭೂಮಂಡಲಾಧಿಪತ್ಯವನ್ನು ಪಡೆದು ದುಷ್ಟಶಿಕ್ಷಣ, ಶಿಷ್ಟಪರಿಪಾಲನೆಯನ್ನು ಮಾಡುತ್ತಾ ಧರ್ಮದಿಂದ ರಾಜ್ಯಪರಿಪಾಲನೆಮಾಡುವುದು. ೪೮. ಪರಿಷ್ಕ್ರಮಣ (ನಿಷ್ಕ್ರಾಂತಿ) : ರಾಜ್ಯವನ್ನು ಬಹುಕಾಲ ಪರಿಪಾಲಿಸಿದ ನಂತರ ಯಾವುದೋ ಒಂದು ಕಾಲದಲ್ಲಿ ವಿರಕ್ತಿಯುಂಟಾಗಿ, ಜ್ಯೇಷ್ಠಪುತ್ರನಿಗೆ ರಾಜ್ಯಭಾರವನ್ನು ವಹಿಸಿ, ಹೇಳಬೇಕಾದುದನ್ನು ಹೇಳಿ ಮನೆಯಂನ್ನು ತ್ಯಜಿಸಿ ಹೊರಡುವುದು. ೪೯. ಯೋಗಸಂಗ್ರಹ : ಸರ್ವಸಂಗಪರಿತ್ಯಾಗ ಮಾಡಿ ಕಠಿನವಾದ ತಪಸ್ಸನ್ನು ಆಚರಿಸುತ್ತಾ ಬಾಹ್ಯಾಂತರಂಗಗಳ ಮಲವನ್ನು ನೀಗಿ ಕೇವಲಜ್ಞಾನವನ್ನು ಪಡೆಯುವುದು. ಜ್ಞಾನ ಮತ್ತು ಧ್ಯಾನದ ಸಂಯೋಗವೇ ಯೋಗ. ಅದರಿಂದ ಅತಿಶಯವಾದ ತೇಜಸ್ಸನ್ನು ಪಡೆಯಂಬಹುದಂ. ೫೦. ಆರ್ಹಂತ್ಯಕ್ರಿಯೆ : ಕೇವಲಜ್ಞಾನವು ಉಂಟಾದ ಮೇಲೆ ಕೆಲವು ಬಹಿರಂಗ ಪವಾಡಗಳು ಉಂಟಾಗುವುವು. ಇಂತಹ ಪ್ರಾತಿಹಾರ್ಯಾಷ್ಟಕ (ಎಂಟು ಪವಾಡಗಳಂ) ಮೊದಲಾದ ವಿಭೂತಿಗಳ ಆವಿರ್ಭಾವ. ೫೧. ವಿಹಾರಕ್ರಿಯೆ : ಧರ್ಮಚಕ್ರವನ್ನು ಮುಂದಿಟ್ಟುಕೊಂಡು ಭೂಮಂಡಲದಲ್ಲಿ ವಿಹರಿಸುವುದು. ೫೨. ಜನರ ಅನುಗ್ರಹಕ್ಕಾಗಿ ಮಾಡುತ್ತಿದ್ದ ತೀರ್ಥಾಟನೆಯಂನ್ನು, ಸವಂವಸರಣವನ್ನು (ಧರ್ಮೋಪದೇಶಕ್ಕಾಗಿಏರ್ಪಾಡುಮಾಡುತ್ತಿದ್ದ ಸಭೆಯಂನ್ನು) ತ್ಯಜಿಸುವುದು. ೫೩. ಅಗ್ರನಿರ್ವೃತಿ : ಹೀಗೆ ಎಲ್ಲಾ ಯೋಗಗಳನ್ನು ಬಿಟ್ಟು ಅಘಾತಿಕರ್ಮಗಳನ್ನು ನಾಶಮಾಡಿದ ಜಿನಸ್ವಾಮಿಯು ಸ್ವಭಾವವಾಗಿಯೇ ಉತ್ಪನ್ನವಾಗುವ ಸತತೋರ್ಧ್ವಗತಿಯನ್ನು ಪಡೆದು ಉತೃಷ್ಟವಾದ ಮೋಕ್ಷಸ್ಥಾನವನ್ನು ಪಡೆಯುವುದು. ಹೀಗೆ ಒಟ್ಟು ಐವತ್ಮೂರುಂ ಗರ್ಭಾನ್ವಯಂಕ್ರಿಯೆಗಳಂ : ಮತ್ತಂ ದ್ವಾದಶಾಂಗದೊಳ್ ಪೇಟ್ದ ಆಧಾನ . . . ದೀಕ್ಷಾಜನರೂಪ ಮೌನಾಧ್ಯಯನವೃತ್ತಿ . . . ಅಗ್ರನಿರ್ವೃತಿ ಎಂದು ಅಮ್ಮುತ್ತಮ್ಮುಮುಂ ಗರ್ಭಾದಿನಿರ್ವಾಣಪರ್ಯಂತಂಗಳಪ್ಪ ಗರ್ಭಾನ್ವಯ ಕ್ರಿಯೆಗಳುಮುಂ (ಆದಿಪು. ೦೫-೦೫ ವ); ದೀಕ್ಷೆಯನೀವುದೆನುತ್ತೆ ಮುಮುಕ್ಷುಗೆ ಬಿನ್ನವಿಸೆ . . . ಸಾಕ್ಷಾನ್ಮೋಕ್ಷಮಾರ್ಗಮೆನಿಪ ದಿಗಂಬರದೀಕ್ಷೆಯಂ ಕೈಕೊಂಡು (ಪಾರ್ಶ್ವಪು. ೪-೯೯); ಸಂಸಾರಭೀರುತ್ವದಿಂ . . . ದೀಕ್ಷೆಯುಂ ಕೆಯ್ಕೊಂಡು

(ಪುಷ್ಪಪು. ೯-೭ ವ). 'ದೀಕ್ಷಾನ್ವಯಕ್ರಿಯೆ' ಪರಾ. ೭. [ವೀಶೈ] ಗುರುವು ಶಿಷ್ಯನಿಗೆ ಅನುಗ್ರಹಿಸುವ ಮನಸ್ಸಂಸ್ಕಾರ ವಿಶೇಷ: ದೀಯತೇ ಎನೆ ಲಿಂಗಸಂಬಂಧ ತತ್‌ಕ್ಷಣಂ ಕ್ಷೀಯತೇ ಎನೆ ಮಲತ್ರಯ ಹರಣವದಱಿಂದ ದೀಯತೇ ಕ್ಷೀಯತೇ ಎಂಬುಭಯಪದಯೋಗವೇ ದೀಕ್ಷೆಯೆಂದೆನಿಪುದು (ಲಶಿಚಿಂ. ೫೨-೮); ಯಾವುದರಿಂದ ಶಿಷ್ಯನಿಗೆ ಲಿಂಗ ಸಂಬಂಧವು ಪ್ರಾಪ್ತವಾಗುವುದೋ . . . ಮತ್ತು ಅವನ ಮಲತ್ರಯವು ನಿವರ್ತಿಸಲ್ಪಡುವುದೋ . . . ಅದು ದೀಕ್ಷೆಯೆಂದು ಹೇಳಲ್ಪಡುವುದು (ಶಿವಾಸೂ. ೭೧-೭೮ ಟೀಕೆ); ಶಿವಾರ್ಚನಾದಿ ಕರ್ಮಗಳಲ್ಲಿ ಯೋಗ್ಯತೆಯನ್ನು ಉಂಟುಮಾಡುವುದಾಗಿಯೂ . . . ಮಲತ್ರಯಗಳನ್ನು ನಾಶ ಮಾಡುವುದಾಗಿಯೂ ಇರುವುದೇ ದೀಕ್ಷೆಯೆನಿಸಿಕೊಳ್ಳುವುದು (ಅಪ್ಪಾವಿ. ೧).

[ಸಂ. ದೀಕ್ಷಾ]

ದೀಕ್ಷೆಗುಡು (ಕ್ರಿ). [ಜೈನ] ಸಂನ್ಯಾಸದ ದೀಕ್ಷೆಯನ್ನು ಕೊಡು,–ನಿಯಮವನ್ನು ನೀಡು: ಕರಮೊಳ್ಳಿದನಿವನೆಂದೊರ್ವರ ಶಿಷ್ಯನನೂಱ ತೋಱ ನುಡಿದೊಯ್ಯನೆ ಮಾಣ್ದರದೊಯ್ದು ದೀಕ್ಷೆಗುಡುವಂ (ಧರ್ಮಾಮೃ. ೫-೦೦೦). [ದೀಕ್ಷೆ + ಕುಡು$_1$ (<ಕೊಡು$_1$)]

ದೀಕ್ಷೆಗೆಯ್ (ಕ್ರಿ). ೧. [ಜೈನ] ಸಂನ್ಯಾಸದೀಕ್ಷೆಯನ್ನು ಸ್ವೀಕಾರ ಮಾಡು: ಇಂತೀಯೆರಡುಂ ಧರ್ಮದೊಳಾವುದಂ ಕೈಕೊಳಲಾರ್ಕುಮದಂ ಕೈಕೊಂಡು ನೆಗಟ್ಟುದು ಮೇಗಳ ಭವಂಗಳೊಳ್ ಚಕ್ರವರ್ತಿತ್ವಮುಮಂ ಪಡೆದನುಕ್ರಮದಿಂ ದೀಕ್ಷೆಗೆಯ್ದು ಭುವನತ್ರಯಸ್ವಾಮಿಯಾಗಿರ್ದು (ಬಂಹರಿ. ೧೦-೦೦ ವ). ೨. [ವೀಶೈ] ಲಿಂಗಧಾರಣೆ ಮಾಡಿಸು: ಪುತ್ರಂಗೆ ತ್ರಿವಿಧ ದೀಕ್ಷೆಗಳಿಂ ತ್ರಿಲಿಂಗಗಳ ನಲಿದು ತ್ರಿವಿಧಾಂಗಂಗಳೊಳು ಪ್ರತಿಷ್ಠಿಸಿ ಶರಣ ಕುಲಕೀ ಪ್ರಕಾರದೊಳ್ ದೀಕ್ಷೆಗೆಯ್ಯೆಂದು ಕೃಪೆಯೊಳ್ ನಿರೂಪಿಸುವನೋ ಪೇಳೆನಲ್ ಮೊದಲ ಲಿಂಗವನೆ ದೀಕ್ಷೆಯಿನಿತ್ತನು (ಜಿಬಪು. ೫-೨೪).

[ದೀಕ್ಷೆ + ಕೆಯ್$_1$]

ದೀಕ್ಷೆಗೊಳ್ (ಕ್ರಿ). ೧. (ಯಾಗದ ಆರಂಭದಲ್ಲಿ ನಡೆಸುವ) ಸಂಸ್ಕಾರವನ್ನು ಹೊಂದು,–ಪಡೆ: ದೀಕ್ಷೆಗೊಂಡಿರ್ಪನಣ್ಣದೇವಂ ತಾನುಮನ್ನೆಗಂ ವ್ರತಿಯಾಗಿ ಪೆಣೊಳ್ಳೆರೆಯೆನು (ಜೈಮಿಭಾ. ೧೬-೧೭). ೨. ವ್ರತಧಾರಿಯಾಗು; ನಿಯಮವನ್ನು ಸ್ವೀಕರಿಸು. ೩. [ಜೈನ] ಸಂನ್ಯಾಸವನ್ನು ಹೊಂದು,–ಪಡೆ: ತನ್ನದೀತೀರದ ಜಿನಾಗಾರದೊಳಿರ್ದ ಶತಕೇತುಗಳೆಂಬ ಗಣಧರಸ್ವಾಮಿಗಳ ಸಮಕ್ಷದೊಳ್ ದೀಕ್ಷೆಗೊಂಡಲ್ಲಿಯೆ ನಿಂದರ್ (ಪಂರಾಮಾ. ೭-೭ ವ). [ದೀಕ್ಷೆ + ಕೊಳ್$_1$]

ದೀಕ್ಷೆಪಡೆ (ಕ್ರಿ). ವ್ರತ ತೊಡು; ನಿರ್ಧಾರ ಕೈಗೊಳ್ಳು: ಪರಂಪರೆ ತೈಲ ಹೀರಿ, ಹೊಸಬತ್ತಿಯಲಿ ಸ್ವಂತಬೆಳಕು ಹಿಡಿದು ಎದೆಹಣತೆಯಲಿ ಸಲಿಸು ಶ್ರದ್ಧಾಂಜಲಿಯ ಅವನ ಹೊಂಗನಸುಗಳ ದೀಕ್ಷೆಪಡೆದು (ನೆಲಮು. ೫೧-೧೨); ನಾವೆಲ್ಲರಾ ನಾಯಕನ ದಳದಿ ದೀಕ್ಷೆಪಡೆದು, ಮಾರಿ ಬಳಸುವ ಬನ್ನಿ ಬುದ್ಧಿಯನು ಶ್ರದ್ಧೆಯನು (ಇಂಗೀತ. ೧೦೫-೧೫). [ದೀಕ್ಷೆ+ಪಡೆ$_1$]

ದೀಕ್ಷೆಬಿಡು (ಕ್ರಿ). ವ್ರತನಿಮಿತ್ತವಾಗಿ ಕ್ಷೌರ ಮಾಡಿಸಿಕೊಳ್ಳದಿರು; ಕೂದಲು ಬೆಳೆಸು: ಇದೇನು? ದೀಕ್ಷೆ ಬಿಟ್ಟಿದ್ದೀರಿ? (ರೂಢಿ).

[ದೀಕ್ಷೆ + ಬಿಡು$_1$]

ದೀಕ್ಷೆಬೀಳ್ (ಕ್ರಿ). [ಜೈನ] ಸಂನ್ಯಾಸವನ್ನು ಸ್ವೀಕರಿಸು: ಸ್ವಸ್ಥಿ ಶ್ರೀಪುರುಷ ಮಹಾ × × × ಪೃಥುವಿರಾಜ್ಯ ಕೆಯೆ ಅರಟ್ಟಿ× × ರಮ್ಮಗನ್ದಿರ್ ಸಿಙ್ಗಂ ದೀಕ್ಷೆಬೀಳಾದು ಅರಟ್ಟಿ ತೀರರ್ ಕುಡಲೂರದ ಗೊಟ್ಟೆ ಮಡಿ ಒಡೆಯಂಬರಾಳ್ವಿತಯ (ಎಕ. III, ಮೈಸೂರು. ೨೫-೩; ಸು. 750).

[ದೀಕ್ಷೆ + ಬೀಳ್$_1$ (<ಬೀಱ್$_1$) [

ದೀಕ್ಷೆಬೆಳಸು (ಕ್ರಿ).=ದೀಕ್ಷೆಬಿಡು: "ಏನು, ದೀಕ್ಷೆ ಬೆಳಸಿದ್ದೀರಿ?" (ಗಾಳಿಪ. ೭೭). [ದೀಕ್ಷೆ + ಬೆಳಸು$_1$ (<ಬೆಳೆಯಿಸು)]

ದೀಕ್ಷೆಯಿಕ್ಕು (ಕ್ರಿ). ಉಪದೇಶಮಾಡು: ನೋಡುವರೊಳ್ ಮನಂ ಬಯಸುವಂತಿರೆ ನಲ್ಮೆ ತುಳುಂಕೆ ಬಿಂಕದಿಂ ನೋಡುವುದು . . . ಇತ್ತು ಕೂಡುವರೊಳಿಲ್ಲದ ಬೇಟಮನುಂಟುಮಾಡೆ ನೀಂ ಕೂಡುವುದೆಂದು ಮುತ್ತ ಮುದುಗುಂಟಣಿ ಪುತ್ರಿಗೆ ದೀಕ್ಷೆಯಿಕ್ಕಿದಳ್ (ಜಗವಿ. ೧೬-೧೨೫); (ಸೂಕ್ತಿಸು. ೮-೪೩೧ ನೋ). [ದೀಕ್ಷೆ + ಇಕ್ಕು]

ದೀಕ್ಷೆವಹಿಸು (ಕ್ರಿ). ಯಾಗದ ಯಜಮಾನನಾಗು; ಯಾಗ ಮಾಡುವ ಕಾರ್ಯವನ್ನು ಕೈಕೊಳ್ಳು: ಕೃಷ್ಣ, ನಿನ್ನ ದಯೆಯಿಂದ ಈ ಭೂಮಿಯೆಲ್ಲವೂ ನನ್ನ ವಶವಾಗಿದೆ . . . ಈಗ ರಾಜಸೂಯಯಾಗವನ್ನು ನಡೆಸಬೇಕೆಂದಿದ್ದೇನೆ; ನೀನು ಇದರಲ್ಲಿ ದೀಕ್ಷೆವಹಿಸು (ವಚಭಾ. ೮೦).

[ದೀಕ್ಷೆ + ವಹಿಸು]

ದೀಕ್ಷೋಪವಾಸ (ನಾ). [ಜೈನ] ಯಾವುದಾದರೂ ವ್ರತಕ್ಕಾಗಿ ಮಾಡುವ ಉಪವಾಸ: ವಿನಯಂಧರಭಟಾರರ ಪಕ್ಕದೆ ತಪಂಬಟ್ಟು ದೀಕ್ಷೋಪವಾಸ ತ್ರಿರಾತ್ರಂಗೆಯ್ದು ಶರೀರಸಂಧಾರಣನಿಮಿತ್ತಂ ಚರಿಗೆ ವೊಕ್ಕೊಡೆ (ವಡ್ಡಾರಾ. ೬೮-೨೪); ಆ ಮುನೀಂದ್ರೋತ್ತಮಂ ತ್ರಿರಾತ್ರಂ ದೀಕ್ಷೋಪವಾಸಂಗೆಯ್ದು . . . ಅನಗಾರವೇಳೆಯೊಳ್ ಮಾದಿರಾಭಿಧಾನ ಪುರಕ್ಕೆ ಚರಿಗೆಗೆ ವರೆ (ಶಾಂತಿಪು. ೧೧-೧೦೬). [ಸಂ.]

ದೀಡ, ದೀಡು$_2$ (ನಾ). ಒಂದೂವರೆ: ಈಗಂತೂ ವರ್ಷ ದೀಡವರ್ಷ ಆತು ಮುಂಬೈಯಾಗ ಇದ್ದಾನ (ದೀಪಹ. II, ೩೫); ಇಂದು ದೀಡತಾಸಿನ ಮೇಲೆ ಮಲಗಿದೆ (ಸ್ವಪ್ನದ. ೧೦೭); ಒಂದು ಲಕ್ಷ ಜನರು ಹತರಾಗಿ ದೀಡಲಕ್ಷ ಸೈನಿಕರು ಸೆರೆ ಸಿಕ್ಕಿದ್ದರಿಂದ ಅಶೋಕನು ... ಉದಾಸೀನನೂ ಪಶ್ಚಾತ್ತಾಪದಗ್ಧನೂ ಆದನು (ಹಿಂದುಇ. ೪೩). **ದೀಡು$_2$**: ಏನಂದ್ರ ದೀಡು ಸಾವಿರ ತಗೊಂಡು ಹೋಗಿ ಕಿಸೇದಾಗ ಹಾಕಿದಿವಿ (ಧನಂಜ. ೫೭).

ದೀಡನಮಸ್ಕಾರ = ದೇವರಿಗೆ ಹರಕೆ ಹೊತ್ತು ತೇರಿನ ಹಿಂದಿನಿಂದ ಬೀದಿಗುಂಟ ದಂಡವತ್ ನಮಸ್ಕಾರ ಹಾಕುತ್ತಾ ಹೋಗುವುದು; P ಒಂದು ಸಲ ದಂಡವತ್ ನಮಸ್ಕಾರ ಹಾಕಿ ಆ ಸ್ಥಳದಿಂದಲೇ ಕೈಯಲ್ಲಿ ಹಿಡಿದ ಕೋಲಿನಿಂದ ದೇಹದ ಒಂದೂವರೆ ಭಾಗದಷ್ಟು ಉದ್ದವಾಗುವಲ್ಲಿಗೆ ಗೆರೆ ಎಳೆದು, ಮತ್ತೆ ಆ ಗೆರೆಯಿಂದ ಹೀಗೆಯೇ ನಮಸ್ಕಾರವನ್ನು ಮುಂದುವರಿಸಿಕೊಂಡು ಹೋಗುವುದು. ಇದೊಂದು ಬಗೆಯ ಹರಕೆ. ದೀಡುಗೇಣು = ಒಂದೂವರೆ ಗೇಣು: ಗೇಣು ದೀಡುಗೇಣು ಒಡ್ಡು ಇಟ್ಟು . . . ನೀರು ನಿಲ್ಲುವ ಹಾಗೆ ಸಿದ್ಧಮಾಡಿ (ಕೃಷಿಪ್ರ. ೫೪). ದೀಡುತಿಂಗಳು = ಒಂದೂವರೆ ತಿಂಗಳು: ದೀಡು ತಿಂಗಳಾಗಿತ್ತು – ತಡೆದು ಹೊರಗೆ ಕುಳಿತಳು (ಸುವರ್ಣ. ೫೧).

[<ಪ್ರಾ. ದಿವಡ್ಡ./ಮರಾ. ದೀಢ್; ಹಿಂ. ಡೇಢ್]

ದೀಡಪಂಡಿತ (ನಾ). ಪಂಡಿತನೆಂದು ತಿಳಿದುಕೊಂಡಿರುವ ಮೂರ್ಖ; ಪಂಡಿತಂಮನ್ಯ: ಹಳ್ಳಿಗಳಿಗಿಂತ ಪಟ್ಟಣಗಳಲ್ಲಿ ಇಂತಹ ಹತವೀರ್ಯರಾದ ದೀಡಪಂಡಿತ ಸಂಖ್ಯೆಯು ಮಿತಿಮೀರಿರುತ್ತದೆ (ಬ್ರಹ್ಮಜೀ. ೧೭); ಆ 'ದೀಡಪಂಡಿತರು' ನನ್ನಂತಹ ಚಪ್ಪಲಿಗಳನ್ನು ಕಳೆದುಕೊಂಡಿದ್ದರೆ ಹೇಳುತ್ತಿದ್ದೆ (ಮುಂಗಾಪು. ೭). [ದೀಡ + ಪಂಡಿತ]

ದೀಡಿ (ನಾ). ವಕ್ರತೆ; ವ್ಯಂಗ್ಯ; ಕೊಂಕು: ಗಂಡಿಲ್ಲದಿರುವುದು ಮುಂಡೇರ ಗುರುತಂತ ಮನೆಮಾರು ಹಾಳು ದೇಗುಲಂತ ದೀಡಿಯ ನುಡಿದು ತಮ್ಮೂರಿಗೆ ಹಾರ್ಯಾವ (ಕನ್ನಜಾ. ೩೪೦); ನಾ ಹೀಂಗ ದೀಡಿ ಮಾತಾಡಿಸಿಕೊಂಡಿಲ್ಲಾ ಅಂದೆ (ಹೊಸಂಸಾ. ೧೧೦); ದೀಡೀಮಾತು ಸಾಕು ನಾ ಹೇಳಿದ್ದು ನೀ ಕೇಳಲಿಕ್ಕೇ ಬೇಕು (ಧನಂಜ. ೧೯). [←ಮರಾ. ತೀಡ್]

ದೀಡು$_1$ (ನಾ). ಆಶ್ರಯ; ನೆಲೆ; ಬೀಡು (?): ಪಾತಕಂಗಳ ಬೀಡು ಸ್ಮೃತಿ ಮೃತಿ ಸೂತಕಂಗಳ ದೀಡು . . . ಈ ರಚನೆಯಿಂ ಸ್ಥೂಲ ತನುವಿದು ನೀರ ಬೊಬ್ಬುಳಿಯಂತೆ ಕ್ಷಣಿಕಂ (ಗಗತಾ. ೧೦-೩೮). [<ಈಡು4]

ದೀಡು₂ 'ದೀಡ' ನೋ.

ದೀಡ್ಯು (ನಾ). ಅಡವು ; ಒತ್ತೆ ; ಈಡಂ : ಪಿತ್ರಾರ್ಜಿತವಾಗಿ ಬಂದಿದ್ದ ಚಿರಸ್ವತ್ತುಗಳೆಲ್ಲ ದೀಡಾಗಿದ್ದವು (ಮಲೆಮ. ೨೦೯) ; ಒಂದು ಪದಾರ್ಥವನ್ನು ಒತ್ತೆ ಇಟ್ಟು ಅದಕ್ಕೆ ತಕ್ಕ ಹಣವನ್ನು ತೆಗೆದುಕೊಳ್ಳುವುದು ದೀಡು ಎಂದಾಗಿದೆ (ನಮ್ಮನು. ೦೩೪) ; ಸ್ಥಿರಚರ ಸೊತ್ತುಗಳನ್ನು ಹಲವು ವಿಧದಲ್ಲಿ ಖಾತರಿ ಮಾಡಲಾಗುವುದು. ಅವುಗಳಲ್ಲಿ ದೀಡು, ಭೋಗ್ಯ, ಮೈಸಾಲಪತಂ ಹೆಚ್ಚು ಬಳಕೆಯಲ್ಲಿದೆ (ಗಂಗಾಳ. ೯೦). 'ಈಡ್ಯು₁' ಪರಾ.

ದೀಡು ಮಾಡು = ಅಡವು ಇಡು ; ಈಡುಮಾಡು : ಏನಾದರೂ ದೀಡು ಮಾಡಿದರೆ ಹಣ ಕೊಡ್ಬೇಕು (ಬೆಳುಮ. ೮೯). [←ಇಂ. Deed]

ದೀಡುಪತ್ರ (ನಾ). ಅಡವು ಇಟ್ಟದ್ದಕ್ಕೆ ದಾಖಲೆಯಾಗಿ ಬರೆದಂ ಕೊಡುವ ಪತ್ರ ; ಅಡಮಾನ ಪತ್ರ : ಕ್ರಯಪತ್ರ, ದೀಡುಪತ್ರ ಮುಂತಾದುವುಗಳನ್ನು ಮಾಡಿಸಲಿಚ್ಛಿಸಿದ ತಾಲ್ಲೂಕಿನ ಜನರೆಲ್ಲರೂ ಭಟ್ಟರನ್ನು ಆಶ್ರಯಿಸುತ್ತಿದ್ದರು (ಪಂಜಪಂ. ೩). [ದೀಡ್ಯು₃ + ಪತ್ರ]

ದೀಡೆ (ನಾ). ಒಂದೂವರೆಯಂ ಮಗ್ಗಿ : ಕಾಲು, ಅರ್ಧ, ಪೌಣೆ, ಸವ್ವಾ, ದೀಡೆ, ಅಡೀಚೆಗಳನ್ನು ಕಂಠಪಾಠ ಮಾಡಿಸಿದ್ದರು (ಗಾಳಿಪ. ೧೭೮).

[←ಹಿಂ. ಡೇಢಾ]

ದೀದಿವಿ (ಗು). ೧. ಪ್ರಕಾಶಿಸುವ; ಹೊಳೆಯುವ. (ನಾ). ೨. ಹೊಳಪು; ಪ್ರಕಾಶ. ೩. ಅಗ್ನಿ. ೪. ಗುರು ; ಬೃಹಸ್ಪತಿ. ೫. ದೇವಲೋಕ ; ಸ್ವರ್ಗ. ೬. ಮೋಕ್ಷ. ೭. ಅನ್ನ : "ಅಂಧಃ . . . ದೀದಿವಿಃ, ಅನ್ನಂ, ಓದನಂ, ಭಿಸ್ಸಾ, ಅಶನಂ, ಆಹಾರಃ–ಈ ೯ ಕೂಟ್" (ಹಲಾಯು. ೫೬-೦೬೪). [ಸಂ.]

ದೀದೀ (ನಾ). ಹಿರಿಯ ಸಹೋದರಿ ; ಅಕ್ಕ : ಸ್ಟಾನ್ಲಿಯನ್ನು ದೀದೀ (ಅಕ್ಕ) ಎಂತಲೂ ಕರೆಯುತ್ತಿದ್ದಳು (ಸಸ್ಯಕ. ೪೪). [←ಹಿಂ. ದೀದೀ]

ದೀಧಿತಿ (ನಾ). ೧. ಹೊಳಪು; ಪ್ರಕಾಶ; ಕಾಂತಿ: ಸರಸಿರುಹವಿಂದುದೀಧಿತಿ ಪರಾಜಿತಶ್ರೀವಿಲಾಸವಿಾ ನಿನ್ನ ಮುಖಂ (ಕವಿರಾ. ೩-೭೦) ; ಮಿಱುಗುವ ರತ್ನಭಿತ್ತಿಗಳ ದೀಧಿತಿಯಂ ನಿಜದೇಹದೀಪ್ತಿಗಳ್ ಮಱಸೆ (ಆದಿಪು. ೨-೬೨) ; ಪಳುಕಿನ ಪಾದಪೀಠಂ . . . ತನ್ನ ಕೇಸಡಿಯ ಕೆಂಪಿನೊಳುಜ್ಜ್ವಲಚಿತ್ತಭಿತ್ತಿ ನಿಸ್ತುಳ ನಿಜ ಮೌಕ್ತಿಕಾಭರಣ ದೀಧಿತಿಯಿಂ ತೆರೆಸುತ್ತಿದಂತೆ ಕಣ್ಗೊಳಿಸೆ (ಮಲ್ಲಿಪು. ೩-೯೭) ; ನಾಸಾಗ್ರದ ಮುತ್ತಿನ ಮಣಿರದನಚ್ಛದದೀಧಿತಿ ಪುದಿಯೆ ಕೆಂಪನಾಳ್ದೊಲೆಸೆಗುಂ (ರಾಜಶೇ. ೧೨-೭೯). ೩. ಕಿರಣ ; ಕದಿರು : "ಕರಮುಸ್ರಮಂಶುವಸುರೋಚಿ ದೀಧಿತಿ ಮರೀಚಿ ರುಚಿ ದ್ಯುತಿ ಪ್ರಗ್ರಹಂ ದೀಪ್ತಿ . . . ಪ್ರದ್ಯೋತಮಾ ರಶ್ಮಿ" (ಮಂಗರಾ. ೧೦-೩); ಹಿಮಕರನಾತ್ಮಶೀತರುಚಿಯಂ ದಿನನಾಯಕನುಷ್ಣದೀಧಿತಿಕ್ರಮಮಂ . . . ಉತ್ತಮ ಕುಲಶೈಲಮುನ್ನತಿಯನೇಳಿದವಾಗೆ ಬಿಸುಟ್ಟೊಡಂ ಬಿಸು[ಟ್ಕೆಮ] ಬಿಸುಡೆಂ ಮದೀಯ ಪುರುಷವ್ರತಮೊಂದುಮನೀಗಳ್ (ಪಂಪಭಾ. ೧-೮೩) ; ಅನುವಿಸಿದುದು ರಜತಾಚಲದನರ್ಘ್ಯಮಣಿವಿಕಟ ಕೂಟಮಂ ದಶರಥರಾಮನ ಮಣಿಮಯಮಕುಟಂ ಕಾಮನ ಬಿಲ್ಲಂ ಬೀಱ್ ಬೇಱ್ ನಿಜ ದೀಧಿತಿಗಳ್ (ಪಂರಾಮಾ. ೫-೦೩೪). [ಸಂ.]

ದೀನ್‌ಇಲಾಹಿ, ದಿನ್‌ಇಲಾಹಿ (ನಾ). ವಿವಿಧ ಮತಗಳ ಆಧ್ಯಾತ್ಮಿಕ ಮತ್ತು ತಾತ್ವಿಕ ಸಂಪ್ರದಾಯಗಳನ್ನು ಸಮನ್ವಯಿಸಿಕೊಳ್ಳುವಂತೆ ಅಕ್ಬರನಿಂದ ಸ್ಥಾಪಿಸಲ್ಪಟ್ಟ ಒಂದು ಮತ : ಈ ಎಲ್ಲವುಗಳ ಜೊತೆಗೆ, ಸೂರ್ಯಪೂಜಾಪ್ರಧಾನವಾದ ಅಕ್ಬರ ಚಕ್ರವರ್ತಿಯ 'ದೀನ್ ಇಲಾಹಿ' ಎಂಬ ಹೊಸಧರ್ಮವೂ ಒಂದು (ಭಾರದ. ೪೬೧). ದಿನ್‌ಇಲಾಹಿ : ಅವರೊಳಗಿನ ವೈರವು ಶಾಂತವಾಗಲೆಂದು "ದಿನ್ ಇಲಾಹಿ" ಎಂಬ ಹೊಸದೊಂದು ಪಂಥವನ್ನು ತೊಡಗಿದನು (ಬಾಲಪ್ರ. III. ೧೨೩೨).

[←ಅರ. ದೀನ್ ಏ ಇಲಾಹೀ = ದೇವರ ಧರ್ಮ]

ದೀನ್‌ದಾರ್ (ನಾ). ಮುಸಲ್ಮಾನ ಧರ್ಮದಲ್ಲಿ ನಿಷ್ಠೆಯುಳ್ಳವನು : ಮೊದಲಿನಿಂದಲೂ ಹಿಂದುಗಳನ್ನು ಮುರಿದು ದೀನ್‌ದಾರ್ ಜನರು ಪ್ರಬಲವಾಗುತಾ ಬರುತಿದಾರೆ (ಚಿತ್ರಪ್ರಾ. ೮೪). [←ಅರ. ಹಿಂ. ದೀನ್‌ದಾರ್]

ದೀನ (ಗು). ೧. ದೈನ್ಯದಿಂದ ಕೂಡಿದ ; ಶೋಚನೀಯ ಸ್ಥಿತಿಯ ; ಮರುಕ ಹುಟ್ಟಿಸುವಂತಹ; ಅನುಕಂಪವನ್ನುಂಟು ಮಾಡುವ. 'ದೀನದೃಷ್ಟಿ' ಪರಾ. ೨. ಬಡತನದ ; ದಾರಿದ್ರ್ಯದ ; ಬಡವನಾದ. 'ದೀನಜನ' ಪರಾ. ೩. ದುಃಖಕ್ಕೆ ಈಡಾದ ; ಖಿನ್ನವಾದ ; ಸಂಕಟಕ್ಕೆ ಗುರಿಯಾದ. 'ದೀನಾನನ' ಪರಾ. ೪. ಹಾಳಾದ ; ನಾಶವಾದ. ೫. ದುರಾಶೆಯ ; ಅತ್ಯಾಸೆಯ ; ಲೋಭದಿಂದ ಕೂಡಿದ. ೬. ಭಯಗೊಂಡ ; ಹೆದರಿದ. 'ದೀನಧ್ವನಿ', 'ದೀನಭಾವ' ಪರಾ. ೭. ದುರ್ಬಲವಾದ. ೮. ನಮ್ರ ; ವಿನೀತ. (ನಾ). ೯. ಬಡವ ; ದರಿದ್ರ : ದೀನ ನಾನು ಸಮಸ್ತಲೋಕಕೆ ದಾನಿ ನೀನು (ಹರಿಸಾ. ೪೯). ೧೦. ದುಃಖ ; ಸಂಕಟ : ಮಾನಿಸರೊಳ್ಳುಂ ಬಾಟುಮ[ದೇನೊ]ಪ್ಪಮದೇನಸಾರವಿಸ್ತಾರಮದೇಂ ಮಾನಮದೇಂ ವಿಪುಳಮದೇಂ ದೀನಮದೇಂ ಸ್ತೋಕಸುಖಮದೇನಧ್ರುವಮೋ (ಶಾಂತಿಪು. ೯-೧೦೨). ೧೧. ಜಿಪುಣ ; ಲೋಭಿ : "ಕದರ್ಯಃ, ದಿ(ಹಿ)ನಃ, ಕೀನಾಶಃ . . . ಈ ೫ ಲೋಭಿ" (ಹಲಾಯು. ೫೭-೧೯೨) ; "ದೀನಂ ಕದರ್ಯಂ ಲೋಭಿ ಕೀನಾಶನಕ್ಕುಂ" (ಮಂಗರಾ. ೬೮-೭) ; "ಲೋಭನ್, ಲೋಭಕಃ, ಲುಬ್ಧಃ, ಲುಬ್ಧವಾನ್, ಈ ೪ ದೀನಂ" (ಕಾಶಕ್ಯ. ೨೦೭) ; ದೀನಂ ದಾನವಿಧಾನವಾಣಿಗೆ ಮನಂದಪ್ಪನೇ ಸತ್ಯಪಾಹೀನಂ ಶಾಂತಿ ಸುಖೋಕ್ತಿಗೇಳ್ವನೆ (ವೃಷವಿ. ೧೨-೩೪) ; ದೀನನ ಸಿರಿಗಿಂತ ದಾನಿಯ ಬಡತನ ಮೇಲು (ಗಾದೆ).

ದೀನದಯಾಪರ=ಬಡವರ ವಿಷಯದಲ್ಲಿ ದಯೆಯಿಂದ ಕೂಡಿರುವ ವ್ಯಕ್ತಿ : ದೀನದಯಾಪರಳಾದ ಆ ಸ್ತ್ರೀರತ್ನವು . . . ಅವನ ಪದವಿಯನ್ನು ಅವನಿಗೆ ಹಿಂತಿರುಗಿ ಕೊಡಬೇಕೆಂದು ಪ್ರಾರ್ಥಿಸತೊಡಗಿದಳು (ಕವಿಕ. ೪೦). ದೀನದಲಿತ, ದೀನದಳಿತ = ನಿರ್ಗತಿಕ ಮತ್ತು ಶೋಷಣೆಗೆ ಒಳಗಾದವನು : ನೀವು ಸೆರೆಮನೆಗಳಿಗೆ ಹೋಗಿ ತ್ಯಾಗ ಮಾಡಿದ್ದು . . . ಸರ್ವಜನರ ಹಿತಕ್ಕಾಗಿ; ದೀನದಲಿತರ ಉದ್ಧಾರಕ್ಕಾಗಿ (ಪಂಜಪಂ. ೧೮೨) ; ದೀನದಲಿತರಿಗೆ ಕೊಡುಗೈವೀರನಾಗಿ ವಿಶ್ವಾನುಕಂಪ ತೋರಿರುವೆ (ದಾನಚಿಂ. ೨೧) ; ಆತ ದೀನದಳಿತರ ಸಂಕಟವನ್ನು ಪರಿಹಾರ ಮಾಡುತ್ತಾನೆ (ತತ್ವಪ್ರಾ. ೫೬೨). [ಸಂ.]

ದೀನಜನ (ನಾ). ೧. ಬಡತನದಿಂದ ಕೂಡಿದ ಜನ ; ನಿರ್ಗತಿಕ ಜನ : ದೀನಜನ ದಾರಿದ್ರ್ಯ ಫಣಿಕುಲ ವೈನತೇಯನು ನಿಶ್ಚಲಿತ ಸುಮ್ಮಾನದಲಿ ಷೋಡಶ ಮಹಾದಾನಗಳ ವಿರಚಿಸಿದ (ತಿಮ್ಮಶಾಂ. ೦-೯). ೨. ತಿಳುವಳಿಕೆಯಿಲ್ಲದ ಜನ; ಪಾಮರ ಜನ: ಮಾನಿಸರೊಳ್ಳುಂ ಬಾಟುಮ[ದೇನೊ]ಪ್ಪಮದೇಂ . . . ದೀನಮದೇಂ ಸ್ತೋಕಸುಖಮದೇನಧ್ರುವಮೋ ಎಂದು ದೀನಜನ ದುರ್ಲಭಬುದ್ಧಿಯಪ್ಪ ಪ್ರಿಯಮಿತ್ರೆ ತನ್ನಂತರಂಗದೊಳ್ ಬಗೆದು (ಶಾಂತಿಪು. ೯-೧೦೨ ವ). [ದೀನ + ಜನ]

ದೀನತನ (ನಾ). ೧. ವಿನಯ; ನಮ್ರತೆ; ದೈನ್ಯ. ೨. ಬಡತನ; ದಾರಿದ್ರ್ಯ. ೩. ದುಃಖ; ಸಂಕಟ. ೪. ಜಿಪುಣತನ; ಲೋಭ : "ಲುಬ್ಧಿಃ, ಲುಬ್ಧಂ, ಲೋಭನಂ, ಲೋಭನೀಯಂ–ಈ ೪ ದೀನತನಂ" (ಕಾಶಕ್ಯ. ೨೦೭) ; ದೀನತನದಲಿ ದ್ರವ್ಯ ಗಳಿಸಬೇಡ ದೀನನಾಥನ ನೀ ಮರೆಯಬೇಡ (ಪುರಂದ. ೫-೦೦೦-೧); ಆನೆಗಂಜಿಕೆಯೇಕೆ ದಾನಿಗೆ ದೀನತನವೇಕೆ ಜ್ಞಾನಿಗೆ ಹೀನತನವೇಕೆ (ಸರ್ವಜ್ಞ. ೪೪೩). [ದೀನ + – ತನ]

ದೀನತೆ (ನಾ). ೧. ಕೃಶತೆ ; ದುರ್ಬಲತೆ ; ಅಶಕ್ತತೆ : ಪಗೆನೆಯ್ದಿಲ್ ನಗುವಂತು ದೀನತೆ ದಿನಕ್ಕಪ್ಪಂತು ಕೂರ್ಪಂಬುಜಂ ಸುಗಿವಂತಾಯ್ತು ಸಖಂಗೆ ಕಾಲವಶದಿಂ ತೇಜಕ್ಷಯಂ (ಪುಷ್ಪಪು. ೬-೪೦). ೨. ದೈನ್ಯಭಾವನೆ ;

ವಿನಯಂ : ಕಾನನದಿ ಮಲ್ಲಿಗೆಯುಂ ಮೌನದಿಂ ಬಿರಿದು ನಿಜಸೌರಭವ ಸೂಸಿ ನಲವಿಂ ತಾನೆಲೆಯ ಪಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ(ನಿವೇದ ೪೯-೧೧). [ಸಂ. ದೀನತಾ]

ದೀನತ್ವ (ನಾ). ಬಾಡುವಿಕೆ; ಕಂದುವಿಕೆ : ಕನತ್ಕನಕಾಂಭೋಜನಿಭಾನನಕ್ಕೆ ಪಿರಿದುಂ ದೀನತ್ವಮಂ . . . ಚಿತ್ತಕ್ಕೆ ಸಂತಾಪಮಂ ನಿನಗಂ ಮಾಡಿದ ನಾವನಾತನೆ ವಲಂ ಗಂಧೇಭವಿದ್ಯಾಧರಂ (ಪಂಪಭಾ. ೪-೬೪). [ಸಂ.]

ದೀನದನಿ (ನಾ). ಅನುಕಂಪೆಯಿಂದ ಕೂಡಿದ ದನಿ : ಕಾಕಘೂಕಾದಿ ಗರ್ಗರರವವ ನೀಕರಿಸುವ ದೀನದನಿಯಿಂದ ಮೊಱೆಯಿಡಲೋಕರಿಸುಗು ದೆಸೆ ರವವ (ವರ್ಧಚ. ೮-೯೭). [ದೀನ + ದನಿ$_1$]

ದೀನದೃಷ್ಟಿ (ನಾ). ಅನುಕಂಪನೀಯವಾದ ದೃಷ್ಟಿ ; ಅಸಹಾಯಕವಾದ ನೋಟ : ಅವಳು ಮಾತೆತ್ತಲಿಲ್ಲ. ದೀನದೃಷ್ಟಿಯಿಂದ ಮುದುಕಿಯನ್ನೇ ನೋಡುತ್ತಾ ಕುಳಿತಿದ್ದಳು (ಹಳ್ಳಿಹಾ. ೧೧೩). [ದೀನ + ದೃಷ್ಟಿ]

ದೀನಪಾಲನೆ (ನಾ). ಬಡವರನ್ನು ಕಾಪಾಡುವಿಕೆ ; ಬಡವರ ಪಾಲನೆ : ದೀನಪಾಲನೆಯ ಭರದಲ್ಲಿ ಜಮೀನದಾರಿಯನ್ನೇ ಕಳೆದುಕೊಳ್ಳಬೇಕೆಂದು ಇದರರ್ಥವಲ್ಲ (ಪ್ರೇಮಾಶ್ರ. ೧೭). [ದೀನ + ಪಾಲನೆ]

ದೀನಭಾವ (ನಾ). ೧. ದೈನ್ಯಕ್ಕೆ ಒಳಗಾಗಿರುವೆನೆಂಬ ಭಾವ : ಜನಕ ರಾಜನ ಪುತ್ರಿಯೆ ತ್ವರೆಮಾಡು ತ್ವರೆಮಾಡು. ಇನ್ನು ಮೇಲೆ ನನ್ನ ಆಜ್ಞೆಯಿಂದ ಈ ದೀನಭಾವಮಂ ಬಿಟ್ಟು ವೇಗದಿಂ ಬಂದು ಸಂತಾಪಹರವಾದ ಸ್ಪರ್ಶವುಳ್ಳ ನಿನ್ನ ಹಸ್ತದಿಂ ಸ್ಪರ್ಶಿಸಿ ನನ್ನ ಪುತ್ರನಾದ ಈ ರಾಮಭದ್ರನಂ ಜೀವವಂತನಂ ಮಾಡು (ಕಗವಿ. ೧೦೮ ಉತ್ತರಾ). ೨. ತೊಂದರೆ ; ಕ್ಲೇಶ ; ಕಷ್ಟ ; ಆರ್ತತೆ : ಮುನಿರಾಜ ಸಂಸಾರಭಯದಿಂ ದೀನಭಾವಮಂ ತಾಳ್ದಿದೆಮ್ಮನುದ್ಧರಿಸೆ ನಿಮಗಮಂತೆಯೆಂದು ತನ್ನ ಹೃದಯದ ಪರಿಚ್ಛೇದ ಮೆನೆ ನಿಲೆ ನುಡಿದು (ಚಂದ್ರಪು. ೯-೪೧ ವ). [ದೀನ + ಭಾವ$_2$]

ದೀನವಾಣಿ (ನಾ). ದುಃಖದಿಂದ ಕೂಡಿದ ಸ್ವರ,-ಧ್ವನಿ : ಕಂಡವದೊ ದೂಳಿನಲಿ ಎರಡು ಕರಿತತ್ತಿ ! ಬಾಗಿದೆನ್ನಯ ಕಿವಿಗೆ ಕೇಳಿಸಿತು ಕೋಗಿಲೆಯ ದೀನವಾಣಿ (ಕೋಗಿಲೆ. ೪-೯೯). [ದೀನ + ವಾಣಿ$_1$]

ದೀನಸು 'ಜಿನಸು' ನೋ.

ದೀನಾನನ (ನಾ). ೧. ದುಃಖದಿಂದ ಕೂಡಿದ ಮುಖ; ಬಾಡಿದ ಮುಖ. ೨. ಬಾಡಿದ ಮುಖವುಳ್ಳವನು: ನದೀತನೂಜ ಭಾರದ್ವಾಜ ಕೃಪರವಿರಳ ಬಾಷ್ಪವಾರಿದುರ್ದಿನ ದೀನಾನನರಾಗಿರೆ (ಪಂಪಭಾ. ೩-೮ ವ).

[ದೀನ + ಆನನ]

ದೀನಾರ, ದಿನಾರು (ನಾ). ೧. ಪ್ರಾಚೀನ ಕಾಲದಲ್ಲಿದ್ದ ಒಂದು ಚಿನ್ನದ ನಾಣ್ಯ,-ಸುವರ್ಣದ ಒಂದು ನಾಣ್ಯ : ಪರಸೇನನೆಂಬೊಂ ಜೂದಾಡಿ ಯಕ್ಷಧೂರ್ತನೆಂಬೊಂಗೆ ಸಾಸಿರ ದೀನಾರಮಂ ಸೋಲ್ತು ಸೋಲಮಂ ಕುಡಲಾಱದೆ ಅರಸನಾಣೆಯಂ ಮಿಕ್ಕು ಪೋಪ[ನ್] (ವಡ್ಡಾರಾ. ೧೪-೫) ; ಒಂದು ಕೋಟಿ ದೀನಾರಮನಾ ಮೃಗನಯನೆ ಕೊಟ್ಟು ಕೊಂಡಳ್ ನೆಗಟ್ತಿವೆತ್ತಿರ್ದ ರತ್ನಮಯಕಂಬಳಮಂ (ಸುಕುಮಾ. ೧೦-೧೧೮) ; ಒಯ್ಯಿಮೆನೆ ದೀನಾರಮಂ ದಿನಂಪ್ರತಿ ಸಾಸಿರಮಾ ಪರ್ವ ದಿನದೊಳ್ ಪತ್ತು ಸಾಸಿರಂ ಎಂಬೀ ಗಣನೆಯಿಂ . . . ತರಿಸೆ (ನೇಮಿಪು. ೪-೫೫ ವ) ; ಮಹಮೂದನಿಗೆ ೭ ಲಕ್ಷ ಸುವರ್ಣ ದೀನಾರಗಳು . . . ೨೦೦ ಮಣ ಬಂಗಾರದ ಗಟ್ಟಿಗಳು . . . ದೊರೆತವು (ಹಿಂಮುಸ. ೨೯); ಒಂದು ದೀನಾರಕ್ಕೆ ಐವರು ಖೊಕ್ರರಂತೆ ವ್ಯಾಪಾರವಾಯಿತು (ಭಾಇಪ್ರ. ೩೪೬). ೨. ಚಿನ್ನದ ಆಭರಣ. ೩. ಚಿನ್ನದ ಒಂದು ತೂಕ. ದಿನಾರು: ೧. ದೇವಸ್ಥಾನದಲ್ಲಿ ಸಿಕ್ಕಿದ ಸಾಮಾನುಗಳ ಬೆಲೆ ಇಪ್ಪತ್ತುಸಾವಿರ ಸಾವಿರ ದಿನಾರುಗಳಿಗಿಂತಲೂ ಹೆಚ್ಚಾಗಿತ್ತು (ಪ್ರವಾಇ. I, ೩೨೮).

[ಸಂ. ದೀನಾರ./ಪಾರ. ದಿನಾರ್, ದಿನ್ನಾರ್ <ಗ್ರೀಕ್. ದಿನೇರಿಯಸ್]

ದೀನಾರ್ಥಿ (ನಾ). ಕಷ್ಟದಲ್ಲಿರುವ ಯಾಚಕ : ದೀನಾರ್ತ್ಥಿಗಂ ಬಡವರ್ಗ್ಗೆಱೆ[ದ]ರ್ಗ್ಗಿತ್ತು ಕೀರ್ತಿವಡೆದ × × × (ಸೌಇಇ. XX, ೭೦-೨೬ ; 1108). [ದೀನ + ಅರ್ಥಿ$_2$]

ದೀನಾಲಾಪ (ನಾ). ದುಃಖದಿಂದ ಕೂಡಿದ ನುಡಿ : ಅವನಾಡಿದ ದೀನಾಲಾಪಗಳನ್ನು ಕೇಳಿ . . . ಸಮಾಧಾನ ಪಡಿಸಿದನು (ಕವಿಕ. ೪೦).

[ದೀನ + ಆಲಾಪ]

ದೀನಾಸ್ಯೆ (ನಾ). ದುಃಖದಿಂದ ಬಾಡಿದ ಮುಖವುಳ್ಳವಳು : ದೀನಾಸ್ಯೆ ಜನನಿ ಬಂದೆನಿತಾನುಂ ಪೊಟ್ತಾರ್ದು ಮನೆಗೆ ಪೋದಳ್ (ಕಾದಂಪೂ. ೮೭೧).

[ಸಂ. ದೀನಾಸ್ಯಾ]

ದೀನೆ (ನಾ). ಅನುಕಂಪೆಗೆ ಅರ್ಹಳಾದವಳು : ದೀನೆಯಂತಾದಳು ಮನದೊಳು ಕಸಿವಿಸಿಗೊಂಡಳು ನೊಂದಳು ಸೊರಗಿ (ಇಂಜಾಪ. ೪೩-೩).

[ಸಂ. ದೀನಾ]

ದೀಪ$_1$, ದೀಪು, ದೀವ$_2$, ದೀವಿ$_1$ (ನಾ). ನೀರಿನಿಂದ ಸುತ್ತುವರಿದ ಭೂಭಾಗ; ದ್ವೀಪ: ಮೇರುವೆ ಮಧ್ಯದೊಳ್ ನೆಲಸೆ ಸುತ್ತಿಱಿದಿರ್ಪುದು ಜಂಬುದೀಪಮಂ ಕ್ಷಾರಪಯೋಧಿ (ಅನಂಪು. ೧-೬೨) ; ವತ್ವಲೋಪಕ್ಕೆ – ಈಶ್ವರ – ಈಸರ . . . ದ್ವೀಪ – ದೀಪ, ದೀವಿ (ಶಮದ. ೨೮೧ ಪ್ರಯೋ); ಲಕ್ಷ್ಮಿಯವೊಲೊಪ್ಪಮನಾಳ್ದುದು ದೀಪಮಾವಗಂ (ಬಾಧಪು. ೧-೬೪). **ದೀಪು** : ಯರಡು ವಕೀಲರ ನೇಮಕಮಾಡಿ, ಫರಾಶೀಸರ ದೀಪಿನಲ್ಲಿ ಹುಕುಂ ಮಾಡಿ ಕಳುಹಿಸಿದರು (ರಾಜೇಂದ್ರ. ೮೦). **ದೀವ$_2$** : ದ್ವೀಪಂ-ದೀವಂ (ಶಮದ. ನ. ೨೯೬ ಪ್ರಯೋ). **ದೀವಿ$_1$** : "ದೀವಿ (ದೀಪ)-ದ್ವೀಪ" (ತದ್ಭಕೋ. ೧೯); ಮಿಸುಪುಷ್ಪುಗಡಲ ಮಧ್ಯದೊಳುದ್ದಾಮತೆಯಂ ಪಡೆದೊಪ್ಪುವ ಜಂಬೂನಾಮದ ದೀವಿ ಕರಂ ನಯನಾನಂದ ಮನಿರದೊದವಿಸಿತು (ಜಯಕಾ. ೧-೩೧) ; ಬಾವಿಯೊಳಗೆ ಕಪ್ಪೆ ಬಾಳ್ವಂತೆ ನಾವೊಂದು ದೀವಿಯೊಳಿದ್ದವರೈಸೆ (ಭರಚ. ೨೫-೬೭) ; ಈ ಜಂಬೂ ದ್ವೀಪಕೆ ತೆಂಕಲ್ಗೆ ಲಂಕೆಯೆಂಬೊಂದು ದೀವಿಯಿರ್ಕುಂ (ಅದ್ಭುತ. ೨೮-೨೨).

ದೀಪದೀಪ, ದೀವದೀವ (ದ್ವಿರುಕ್ತಿ) : ದೀಪದೀಪವ ತೊಳಲಿ ಕರ್ಮ ಕಳಾಪದಲಿ ಕುದಿಕುದಿದು ನಾನಾ ರೂಪಿನಿಂದಾರ್ಜಿಸುವ ಧರ್ಮದ ಗೊಡವೆ ತಾನೇಕೆ (ಕುವ್ಯಾಉ. ೩-೯) ; ಪೆರ್ವಡಗುಗಳಿಂ ಬಂದ ದೀವದೀವದ ಮೇಲಾದೊಡಮೆಗಳಂ ಬೇಹರಿಸಲ್ಗಡಣಿಪ ವಣಿಜರುಲಿವಬ್ಧಿರವಮಂ ಪಳಿಗುಂ (ಮರಾಚ. ೧೨೮-೨೫). [<ಪ್ರಾ. ದೀಪ, ದೀವ./ಸಂ. ದ್ವೀಪ]

ದೀಪ$_2$ (ನಾ). ೧. ದೀವಿಗೆ ; ಸೊಡರು : ವಿನಮ್ರಕ್ಷಿತಿಚಕ್ರಂ ದೀಪ [ಪಾಠಾಂ. ಪ್ರ]ದೀಪ್ತಿ ಪ್ರತಿಹತದಿನಕೃಚ್ಚಕ್ರ ತೀವ್ರಾಂಶುಚಕ್ರಂ . . . ಇರ್ದತ್ತೊಳಪುಗದೆ ಪುರೋಪಾಂತದೊಳ್ ಚಕ್ರರತ್ನಂ (ಆದಿಪು. ೧೪-೩) ; ಅಂತು ನೋಡೆ ನೋಡೆ ಗಾಳಿ ತೀಡಿದ ದೀಪರೂಪದಂದದಿಂ ಶಾರದನೀರದಾಕಾರದಂದದಿಂದದೃಶ್ಯಾಕಾರನಾಗಿ (ಸುಕುಮಾ. ೧೦-೮ ವ) ; ದೀಪಮನೊಯ್ಯನಾರಿಸಿ . . . ಚಾಪಲನೇತ್ರೆಯೊರ್ವಳುಪವಲ್ಲಭನೊಳ್ ಸೊಗಸುಣ್ಮೆ ಕೂಡಿದಳ್ (ಉದ್ಭಟ. ೧೦-೧೦೮) ; ಗಿರಿಜ ಕೂರು ಹಾಕುತ್ತಿದ್ದ ದೀಪವನ್ನು ಬಾಯಿಂದ ಗಾಳಿಹಾಕಿ ಆರಿಸಿದಳು (ಪದ್ಮಸ. ೪೦). ೨. ಬೆಳಕಿನ ಕುಡಿ ; ಬೆಳಕು : "ಬೆಳಕೆನೆ ದೀಪಂ" (ರನ್ನಕಂ. ೫).

ದೀಪ ಆರಿಸು = ದೀಪವನ್ನು ನಂದಿಸು ; ದೀಪ ಕಳೆ : ರೂಮಿನ ದೀಪ ಆರಿಸಿ ಬಾಗಿಲನ್ನು ಮುಂದೆಳೆದುಕೊಂಡು ಶೇಖರನ ಬಳಿಗೆ ಬಂದ (ದೂಬೆಟ್ಟ. ೧೫); ದೀಪ ಆರಿಸಿ ಮಲಗಿಕೊಳ್ಳಿ (ದೂಬೆಟ್ಟ. ೩೨). ದೀಪ ಉರಿಸು = ಸೊಡರನ್ನು ಬೆಳಗುವಂತೆ ಮಾಡು ; ದೀಪ ಹತ್ತಿಸು : ಪಕ್ಕನೆ ಒಳಗಿನ ಎಣ್ಣೆ ಖರ್ಚಾದರೆ, ದೇವರ ದೀಪ ಉರಿಸುವಾಗ ನೆನವಾಗಿ, ಯಾರ್ಯಾರನ್ನೋ ಬೇಡುವ ಪ್ರಸಂಗ ಬರುತ್ತಿತ್ತಲ್ಲಾ ಎನಿಸಿತು (ಮರಮ. ೨೫) ; ಹೊತ್ತು ಮುಣುಗಿದ ಮೇಲೆ ಚೋಮನ ಗುಡಿಸಲಲ್ಲಿ

ದೀಪ ಉರಿಸಿದವರಿಲ್ಲ (ಚೋಮದು. ೧೧). **ದೀಪ ಕಂತಿಸು** = ಸೊಡರನ್ನು ಆರಿಸಂ,– ನಂದಿಸಂ : ಹಳ್ಳಿಗಳಲ್ಲಿ ಏಳು, ಎಂಟು ಗಂಟೆಗೆಲ್ಲಾ ದೀಪ ಕಂತಿಸಿ ಬಿಡುತ್ತಾರೆ (ಕೂಥಿ). **ದೀಪ ಕಚ್ಚಿಸು** = ಸೊಡರನ್ನು ಬೆಳಗಿಸು : ದೇವರ ಮುಂದಿನ ದೀಪ ಕಚ್ಚಿಸಿ ಕಡ್ಡಿ ಬೆಳಗು (ಕೂಥಿ). **ದೀಪ ಕಚ್ಚು** = ದೀಪ ಕಚ್ಚಿಸು : ಜೋಪಾನವಾಗಿ ಮಕ್ಕಳನ್ನು ರೈಲಿಗೆ ಮುಟ್ಟಿಸಿ ದೀಪ ಕಚ್ಚೋ ಹೊತ್ತಿಗೆ ಬಂದು ಬಿಡ್ತೀ ಅಲ್ಲವೇನೋ (ಸಣ್ಣಕ. X, ೨೨). **ದೀಪ ಕಳೆ** = ದೀಪ ಕಂತಿಸು : ರಾಧಕ್ಕ ಅದೇ ಆಗ ಊಟ ಉಡಿಗೆ ಮುಗಿಸಿ ಕೊಂಡು ದೀಪ ಕಳೆದಿದ್ದರು (ಗಂಗಾಸಾ. ೪೫). **ದೀಪ ತುಂಬು** = ದೀಪ ಕಂತಿಸಂ: ಹಳ್ಳಿಯ ಜನ ಬೆಳಗಿನ ಜಾವ ಏಳುವುದರಿಂದ ರಾತ್ರಿಯ ಹೊತ್ತು ಬೇಗನೆ ದೀಪ ತುಂಬಿ ಮಲಗಿ ಬಿಡುತ್ತಾರೆ (ಕೂಥಿ). **ದೀಪ ತೆಗೆ** = ದೀಪ ಕಂತಿಸು : ಮಲಗುವ ಮುಂಚೆ ದೀಪ ತೆಗೆದು ಮಲಗು (ಕೂಥಿ). **ದೀಪದ ಎಣ್ಣೆ, ದೀಪದೆಣ್ಣೆ** = ೧. ದೀಪಕ್ಕೆ ಬಳಸುವ ಹಿಪ್ಪೆ ಎಣ್ಣೆ, ಹರಳೆಣ್ಣೆ, ಹೊಂಗೆಯೆಣ್ಣೆ ಮುಂತಾದಂವು : 'ನೀವು ಕೊಡುವುದೇಕೆ–ಕಳೆದ ವರ್ಷ ದಿಂದ ದೀಪದ ಎಣ್ಣೆಯಿಂದ ಹಿಡಿದು ಪ್ರತಿಯೊಂದಕ್ಕೂ ನಾನು ಕೊಡು ತಿದ್ದೇನಲ್ಲ' ಎಂದರು (ಮರಮ. ೨೩೩) ; ಸಂತೆಗೆ ಹೋಗಿ ದೀಪದ ಎಣ್ಣೆ ತರಬೇಕು (ಕೂಥಿ). ೨. ಸೀಮೆಎಣ್ಣೆ : "(ಪೆಟ್ರೋಲಿಯಂ, ಕಲ್ಲಿದ್ದಲು, ಪ್ಯಾರಫಿನ್, ಮೊ. ಗಳಿಂದ ಬಟ್ಟಿಯಿಳಿಸಿ ತೆಗೆದ) ದೀಪದೆಣ್ಣೆ; ಕೆರೋಸೀನ್ ಎಣ್ಣೆ ; ಸೀಮೆಯೆಣ್ಣೆ" (Kerosene. ಇಂಕಸ). **ದೀಪದ ಕಂಭ, ದೀಪದ ಕಂಬ** = ದೀಪಕಂಭ ೧ : ಬೆಸ್ತರು ದೀವಟಿಗೆಯವರು ದೀಪದ ಕಂಭದವರು ಇವರಿಗೆಲ್ಲಾ ಗೊತ್ತುಗಾರರನ್ನೂ ಶಾನುಭೋಗರನ್ನೂ ನೇಮಿಸಿದರು (ಜಾಮವಂ. ೧೦-೧೩೭) ; ನನ್ನ ಹಾಡನ್ನು ಯಾರು ಕೇಳುತ್ತಾರೆ! ಬಡಹಳ್ಳಿ ಗಳು, ಗಿಡಬಳ್ಳಿಗಳು, ದೀಪದ ಕಂಬಗಳು (ಹುಕ್ಕುಹು. ೧೭). **ದೀಪದ ಕಡ್ಡಿ** = ಸೊಡರನ್ನು ಹಚ್ಚುವ ಕಡ್ಡಿ ; ಬೆಂಕಿಕಡ್ಡಿ : ಸದರಿ ಮದ್ದಿನ ಜೀನಸು ಗಳು ಮತ್ತು ದೀಪದ ಕಡ್ಡಿಗಳು ... ಎರಡು ದಿವಸ ಮಾತ್ರ ರೇಲ್ವೆದವರು ಏರಿಸುತ್ತಾರೆ (ಮುಂಬವ್ಯಾ. ೨೨೦). **ದೀಪದ ಕುಡಿ** = ದೀವಿಗೆಯಂ ಜ್ವಾಲೆ,– ಶಿಖೆ : ಉರಿಯುವ ಬತ್ತಿಯ ತುದಿಯಲ್ಲಿ ಕರಿ ಕಟ್ಟಿಕೊಂಡರೆ ಅವನ್ನು ತೊಡೆದು ಹಾಕಿ ದೀಪದ ಕುಡಿ ಮತ್ತಷ್ಟು ಉಜ್ವಲವಾಗಿ ತೊಳಗಿ ಬೆಳಗ ಲೆಸಗುವಂತೆ (ಕಾನೂರು. ೬೩೨) ; ದೀಪದ ಕುಡಿಯನ್ನು ಸ್ವಲ್ಪ ದೊಡ್ಡದು ಮಾಡು (ಕೂಥಿ). **ದೀಪದ ಪೆಟ್ಟಿಗೆ** = ಸೊಡರನ್ನು ಹೊತ್ತಿಸುವ ಕಡ್ಡಿಗಳ ಪೆಟ್ಟಿಗೆ ; ಬೆಂಕಿಪೊಟ್ಟಣ : ಮದ್ದಿನ ಜೀನಸು ಪಟಾಕ್ಷಿ ಮತ್ತು ಫಾಯರ್ ಬಾಕ್ಷ ಅಂದರೆ ದೀಪದ ಪೆಟ್ಟಿಗೆ (ಮುಂಬವ್ಯಾ. ೩೮ ಪ್ರಸ್ತಾವನೆ). **ದೀಪದ ಮಲ್ಲಿ** = ಎರಡಂ ಕೈಗಳಲ್ಲಿಯೂ ಹಣತೆಗಳನ್ನು ಹಿಡಿದಿರಂವ ಹೆಂಗಸಿನ ಲೋಹದ ವಿಗ್ರಹ; ℙ ದೇವತಾವಿಗ್ರಹದ ಎರಡೂ ಪಕ್ಕಗಳಲ್ಲಿಯೂ ಇಂತಹ ಎರಡು ಪ್ರತಿಬಿಂಬಗಳನ್ನು ಇರಿಸುವುದಂಂಟಂ : ಎಲೆಲೆ! ದೀಪದ ಮಲ್ಲಿ, ಎದೆಯ ಕತ್ತಲೆಯಲ್ಲಿ ಪದುಮದೀಪವ ಹಿಡಿದು ಬಾಗಿ ನಿಂತು ಕವಿಗಿನಿತೆ ಬೆಳಕಿಲ್ಲಿ ಎಂಬ ಕಿರುನಗೆಯಲ್ಲಿ (ದೀಪಮ. ೧೯-೧); ಕಲ್ಲಾಗಿ ನಿಂತಿರುವ ಹೆಣ್ಣು, ದೀಪದ ಮಲ್ಲಿ ಬಿಲ್ಲುಬಾಣವ ತೊಟ್ಟು ಹೊರಟವನ ಗುರಿಯೆಲ್ಲಿ ? (ನಲಮು. ೬೨-೧೩). **ದೀಪದ ಮಾರಾಯಿ** = ಒಂದಂ ಕ್ಷುದ್ರ ದೇವತೆಯ ಹೆಸರಂ: ಕೊಳ್ಳಿ ಪಚ್ಚಿಸಿಕೊಂಬ ದೀಪದ ಮಾರಾಯಿ ಎಲ್ಲರು ದಾಟುವ ಹೊಸ್ತಲು . . . ಎಲ್ಲ ನಾನಾಕದಾ ಕಳ್ಳದೇವತೆಗಳ ನಿಲ್ಲದೆ ಒಲಿಸಿದರು (ವಿಸಾಸು. ೫೮-೨). **ದೀಪದ ಮೊಗ್ಗು** = ಬೆಳಕಿನ ಕುಡಿ : ಇರುಳೆದೆಯ ಪದಕದಂತುರಿವ ದೀಪದ ಮೊಗ್ಗು ತಲೆದೂಗಿ ತೆಪ್ಪಗಾಯಿತು (ದೀಪಮ. ೪೫-೩); ದೀಪದ ಮೊಗ್ಗನ್ನು ಸ್ವಲ್ಪ ದೊಡ್ಡದು ಮಾಡು (ಕೂಥಿ). **ದೀಪದ ಹುಳು** = ಸೊಡರಿನಿಂದ ಆಕರ್ಷಿತವಾಗಂವ ರೆಕ್ಕೆಯ ಹುಳು ; ಪತಂಗ : ಗರ್ಭಗುಡಿಯಲಿ ಪಣತಿ ಉರಿದಿದೆ ನಿರಾತಂಕ ಬಂದು ಬಡಿದರು ನೂರು ದೀಪದ ಹುಳು ! (ದೀಪಧಾ. ೩೮-೫) ; ದೀಪದ ಹುಳುಗಳು ಹೆಚ್ಚಾಗಿದೆಯಾದ್ದರಿಂದ ಇಂದು ಮಳೆ ಖಂಡಿತಾ ಬರುತ್ತದೆ (ಕೂಥಿ). **ದೀಪ ದೊಡ್ಡದು ಮಾಡು** = ೧. ಸೊಡರಿನಿಂದ ಪ್ರಕಾಶವನ್ನು ಹೆಚ್ಚು ಮಾಡು: 'ಏನು ? ಏನು ?' ಎಂದು ಕೇಳುತ್ತ ಸೀತಮ್ಮ ದೀಪ ದೊಡ್ಡದು ಮಾಡಿ ಎದ್ದರು (ಡಾಳಿ. ೧೩೦); ದೀಪ ದೊಡ್ಡದು ಮಾಡಿ ಆಕೆಯ ಹಾಸಿಗೆಯನ್ನು ತಾನೇ ಪಡಸಾಲೆಗೆ ತಂದು . . . "ನನ್ನು ಭಯವಿಲ್ಲ ಮಲಗು" ಎಂದರು (ದೇವಹಿಂ. ೧೦೧). ೨. ಸೊಡರನ್ನು ಆರಿಸಂ,–ನಂದಿಸಂ : ಆ ರಾತ್ರಿ ಅಪೂರ್ವ ದೀಪ ದೊಡ್ಡದು ಮಾಡಿ ಮಲಗಿದನು (ಇಕ್ಷ್ವಕ. ೫೮) ; ದೀಪ ದೊಡ್ಡದು ಮಾಡಿ ಮಲಗು (ಕೂಥಿ). **ದೀಪ ಬೆಳಸು** = (ವಂಶದ ವಿಷಯ ದಲ್ಲಿ) ಅಭಿವೃದ್ಧಿ ಪಡಿಸು; ಏಳಿಗೆ ಹೊಂದುವಂತೆ ಮಾಡಂ : ನೀನೇ ಮನೆಬಿಟ್ಟು ಹೋದರೆ ಇಲ್ಲಿ ದೀಪ ಬೆಳಸೋರು ಯಾರು? (ಜಳುಮ. ೨೩೦). **ದೀಪ ಮಾಡು** = ಬೆಳಕು ಮಾಡು : ಮೆಲ್ಲನೆ ಪಕ್ಕದಲ್ಲಿದ್ದ ಜಿಗ್ಗು ಒಟ್ಟಿ ಜ್ವಾಲೆ ಹೊಮ್ಮುವಂತೆ ಮಾಡಿ, ತೊರಂಗಲ ಎಣ್ಣೆ ಹಾಕಿದ್ದ ಹಣತೆಯ ಬತ್ತಿಯನ್ನು ಹೊತ್ತಿಸಿ ದೀಪ ಮಾಡಿದನು (ಮು ಕ ಮ. ೨೦೯). **ದೀಪ ಮುಟ್ಟಿಸು** = ಸೊಡರನ್ನು ಹತ್ತಿಸಂ : ಸಂಜೆಯಾಯಿತು. ದೀಪ ಮುಟ್ಟಿಸಿ ಓದಲು ಕುಳಿತುಕೋ (ಕೂಥಿ). **ದೀಪವನೆತ್ತು** = ಆರತಿಮಾಡಂ : ನಿನಗೆ ಧೂಪವನಿಕ್ಕುವಲ್ಲಿ ನಾ ಭಾವಿ ನೀ ನಿರ್ಭಾವಿ ನಿನಗೆ ದೀಪವನೆತ್ತುವಲ್ಲಿ ನಾ ಜ್ಯೋತಿ ನೀನು ಬೆಳಗು (ಕೂತೀಮಾ. ೭೬-೧೩೦). **ದೀಪವುರಿ, ದೀಪ ಉರಿ** = ಸೊಡರಂ ಬೆಳಗಂ: ನೀರಡಿಕೆಯ ದೀಪವುರಿಯುತಿದೆ ಕವಿತೆಯ ತುಟಿಯಲಿ ಸಣ್ಣಗೆ (ಶಿಶಾಂ. ೪೨-೪) ; ಒಂದೊಂದು ಸಾರಿ ರಾತ್ರಿ ಎರಡು ಅಥವಾ ಮೂರು ಗಂಟೆಯವರೆಗೂ ಅವನ ಕೊಠಡಿಯಲ್ಲಿ ದೀಪವುರಿಯುತ್ತಿತ್ತು (ಕಾನೂರು. ೩೩೦) ; ತನ್ನ ಮಾರವೆಯಿಂದ, ಮನೆಯ ದೀಪ ಉರಿಯ ದಂತಾಗುತ್ತಿತ್ತಲ್ಲ (ಮರಮ. ೨೫). **ದೀಪ ಹಚ್ಚಿಸು** = ದೀಪ ಕಚ್ಚಿಸಂ : ರಾತ್ರಿ ಒಂದು ಹೊತ್ತಿನಲ್ಲಿ . . . ದೀಪ ಹಚ್ಚಿಸಿ ನೋಡುತ್ತಾಳೆ–ಮೂರು ಗಂಟೆ (ತಾಯಿಳ. ೮೩). **ದೀಪ ಹಚ್ಚು** = ೧. ಸೊಡರು ಬೆಳಗು: ತುಪ್ಪದೊಳ್ಕೆರೆಸಿದ ಮೂಱು ಬತ್ತಿಯನಿಟ್ಟು ಒಪ್ಪುವ ದೀಪಕೆ ದೀಪ ಹಚ್ಚಿತಪ್ಪದೆ ಸಕಲ ಪಾಪ ಗಳ ಸಂಹರಿಸುವ ಅಪ್ಪ ವಿಠಲನ ಪಾದಕ್ಕೆ ಬೆಳಗುವ (ಪುರಂದ. ೧-೨೨೬-೨) ; ಹೊಲೆ ಕಳೆದ ಮೇಲೆ ಸವಿಾಪ ಹೋಗಬಹುದು ; ದೀಪ ಹಚ್ಚಬಹುದು (ಕುಡಿಕೂ. ೧೭); ತುಟೀ ಮೇಲೆ ದೀಪ ಹಚ್ಚಿದ ಹಾಗೆ (ಗಾಡ). ೨.=ದೀಪ ಬೆಳಸು : ನಮ್ಮ ಮನೆ ದೀಪ ಹಚ್ಚಿದೋರು ನೀವು (ಕಂದತೋ. ೨೧೫). **ದೀಪ ಹತ್ತಿಕೊಳ್ಳು** = ಸೊಡರು ಬೆಳಗು : 'ಇಂಟರ್‌ವಲ್'ನಲ್ಲಿ ದೀಪ ಹತ್ತಿಕೊಂಡಿತು (ಕೂಪಟ್ಟ. ೧೦೮). **ದೀಪ ಹಾಕು** = ದೀಪ ಹೊತ್ತಿಸು : ವಿಮಲೆ ಕೂಗಿಕೊಂಡು ದಿಗ್ಗನೆ ಎದ್ದಳು-ದೀಪ ಹಾಕಿದಳು (ಬದುಕ್ಕ. ೧೪೧). **ದೀಪ ಹೊತ್ತಿಸು** = ಸೊಡರನ್ನು ಬೆಳಗಿಸು: ಸರೋಜ ದೀಪ ಹೊತ್ತಿಸಿ, ಒಲೆ ಹಚ್ಚಲು ಅಡಿಗೆಯ ಮನೆಗೆ ಹೋದಳು (ತಾಯಿಳ. ೨೮೩). [ಸಂ.]

ದೀಪ್ಯ (ನಾ). (?) : ದೀಪದ ನಂದ್ರವಾರುಣಿಯ ಪಣ್ಣೊಳ್ ತೀವುಗೆ ಪಾರದಾಖ್ಯಮಂ ದೀಪದಿನ ಪ್ರಸಿದ್ಧಿಯೊಳ್ ಪನ್ನೆರಡಪ್ಪ ದಿನಂಗಳಿರ್ದುದಂ ಲೋಪವಮಾಗದಂತಿರೆ ಸುರಕ್ಷಿತಮಾದುದಱಿಂದೆ ಬೀಜ ನಿಷ್ಪಾಪಮಾ ನಿಟ್ಟು ನೀಂ ಗಣಕೆಯಗ್ರದೊಳಂ ತಿಳಿಪಲ್ಕಮಾಕ್ಷಣಂ (ಅಮದ. ೧೧-೪೭) ; ದೀಪದೆ ನಂಬಿರಲ್ಕಿದಱ ನಾಲ್ಕುದಿನಂಗಳೊಳಲ್ಲದಂದು ನಿಷ್ಪಾಪನೆ ಯಾದೊಡಂ ಗ್ರಹಣದಂದನುರಾಗದೆ ತಂದು ಮೌನಿ ನಿಷ್ಪಾಪಮೆನಿಪ್ಪ ಬಂಜೆ ಮಡುವಾಗಲ ಗೆಡ್ಡೆಯನಂತೆ ಸನ್ಗಿಸಲ್ ತಾಪಿತ ತಾವ್ರುದೊ ಳ್ಕಗಡನದ್ದುಗೆ ಕಾಸುಗೆಯಂತದಱೊಳ್ (ಅಮದ. ೧೬-೧೪೪). [?]

ದೀಪಕ (ಗು). ೧. ಪ್ರಕಾಶಗೊಳಿಸುವ ; ಬೆಳಗಂವ. ೨. ಅಂದ ಗೊಳಿಸುವ ; ಸೊಗಸಂಗೊಳಿಸುವ. ೩. ಉದ್ರೇಕಿಸುವ ; ಉತ್ತೇಜಿಸುವ. ೪. ಪಚನಕ್ರಿಯೆಯನ್ನು ಹೆಚ್ಚಿಸುವ ; ಪಾಚಕ. (ನಾ). ೫. ದೀಪ ; ದೀವಿಗೆ. ೬. ಉರಿಯುವ ಅನಿಲದ ದೀಪಗಳಲ್ಲಿ

ಜ್ವಾಲೆಗೆ ಆಕಾರವನ್ನು ಕೊಡುವ ಭಾಗ ; ಜ್ವಾಲಕ : ದೀಪಕದ (Burner) ಮೇಲೆ ಚಿಮಣಿಯನ್ನು ಹಾಕುವುದೂ ಇದೇ ಉದ್ದೇಶದಿಂದ (ಛಾಶಿ. ೩೯೪). ೭. ಬೆಳಕನ್ನು ಉಂಟುಮಾಡುವಿಕೆ ; ದೀಪ ಹೊತ್ತಿಸುವುದು. ೮. ವಿವರಣೆ ; ವರ್ಣನೆ. 'ವಾಕ್ಯದೀಪಕ' ಪರಾ. ೯. [ಸಂಗೀತ] ಒಂದಂ ರಾಗದ ಹೆಸರಂ ; P ಈ ರಾಗವನ್ನು ಹಾಡಿದರೆ ಜ್ಯೋತಿಗಳು ತಾವಾಗಿ ಹತ್ತಿಕೊಳ್ಳುತ್ತವೆ ಎಂಬ ನಂಬಿಕೆ ಇದೆ : ಗುಂಡಕ್ರಿಯಾ ಮತ್ತು ಶ್ರೀರಾಗಗಳು ಕಲ್ಲನ್ನು ಕರಗಿಸುವುದು ... ದೀಪಕರಾಗವು ಬೆಂಕಿ ಹತ್ತಿಸುವುದು . . . ಮುಂತಾದ ಭಾವನೆಗಳೂ ಅದರ ಕಥೆಗಳೂ ಇವೆ (ಭಾರದ. ೫೪೪) ; ತಮ್ಮ ಗಾಯನವೈಖರಿಯಿಂದ 'ದೀಪಕ' ರಾಗ ಹಾಡಿ ಜ್ಯೋತಿ ಬೆಳಗುವಂತೆಯೂ . . . ಮಾಡಿದ ತಾನ್‌ಸೇನರ ಕಥೆಗಳನ್ನು ಕೇಳದವರಿಲ್ಲ (ಸಂಗೀಪಂ. ೩೦೩). ೧೦. [ಕಾವ್ಯಮಿಮಾ] ಅರ್ಥಾಲಂಕಾರಗಳಲ್ಲಿ ಒಂದು ; ಪ್ರಸ್ತುತ ವಂತ್ತು ಅಪ್ರಸ್ತುತ ವಸ್ತುಗಳಲ್ಲಿ ಒಂದೇ ಧರ್ಮವಿದೆ ಎಂದಂ ವರ್ಣಿಸುವುದು : ಜಾತಿಕ್ರಿಯಾಗುಣದ್ರವ್ಯಾತಿಶಯವಿಶೇಷಿಯಪ್ಪ ಪದವೊರ್ಬಳಿ ನಿಂದೀ ತೆಱದಿನುಬಿದ ಕಾವ್ಯಸಮೇತಿಗಮುಪಕಾರ ಯೋಗ್ಯ ದೀಪಕವುಕ್ಕುಂ (ಕವಿಕಾ. ೩-೫೩) ; ವರ್ಣ್ಯವಾದ ವಸ್ತು ಗಮವರ್ಣ್ಯವಾದ ಪ ಸ್ತು ಗ ವೊ ಂದು ಧರ್ಮವುನ್ವಿತವುಪ್ಪಂತೆ ಪೇಟಿಯುದು ದೀಪಕಮೆನಿಪುದು (ಅಪ್ರತಿ. ೫೭-೨). ೧೧. [ನಾಟ್ಯ] ಒಂದಂ ಬಗೆಯ ನೃತ್ಯ. 'ದೀಪಕನೃತ್ಯ' ಪರಾ. [ಸಂ.]

ದೀಪಕಂಬ 'ದೀಪಕಂಭ' ನೋ.

ದೀಪಕಂಭ, ದೀಪಕಂಬ (ನಾ). ೧. ಸೊಡರುಗಳನ್ನು ಹೊಂದಿಸಿ ಮಾಡಿದ ಲೋಹ ಮುಂತಾದ ಕಂಬ: ಸಲೆ ಪದಕಮಂ ವಾಱಿ ಸತಿ ದೀವಳಿಗೆಯಲು ಹೊಸ ದೀಪಕಂಭಂ[ಪಾಠಾಂ. ಬಂ]ಗಳನುಮಾ ರವಾಣಿಗೆ ಮಾಡಿಸಿ ಎತ್ತಿಸಿದಳಲ್ಲ (ಬಸಪು. ೪೩-೦೩). ೨. ದೀಪದ ಹಣತೆಯನ್ನಿಡಲು ಮಾಡಿದ ಮರದ ಕಂಬ. ' ತಾಣದೀವಿಗೆ' ಪರಾ. **ದೀಪಕಂಬ** : ೧. ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ದೀಪ್ಯ + ಕಂಭ]

ದೀಪಕಣಗಿಲು (ನಾ). ಒಂದಂ ಬಗೆಯ ಕಣಗಿಲು ಗಿಡ ಮತ್ತು ಅದರ ಹೂವು : ಊರ ಮುಂದೆ ಒಂದು ದೊಡ್ಡ ಕೊಣ. ಕೊಣದ ಸುತ್ತು ದೀಪಕಣಗಿಲು ಹೂವಿನ ಒಂದೆರಡು ಮರಗಳು (ನನ್ಮೈರು. ೬).

[< ದೇವಗಣಗಿಲು]

ದೀಪಕನೃತ್ಯ (ನಾ). [ನಾಟ್ಯ] ಭಕ್ತಿರಸಪೂರ್ಣವಾದ ಜಾನಪದಗೀತೆ ಹಾಗೂ ಕೆಲವು ವಾದ್ಯಗಳೊಂದಿಗೆ ಸಾಗುವ ಒಂದು ಬಗೆಯ ನೃತ್ಯ : ಮಹಾರಾಷ್ಟ್ರದ ಕೊಂಚ ಮುಂದುವರಿದ ಜನತೆಯದೆನ್ನಲಾದ ನೃತ್ಯಗಳಲ್ಲಿ ದೀಪಕನೃತ್ಯ ಹೆಚ್ಚು ಪ್ರಚಾರದಲ್ಲಿದೆ (ಭಾರಜಾ. ೧೦೩).

[ದೀಪಕ + ನೃತ್ಯ]

ದೀಪಕಲಿಕೆ, ದೀಪಕಳಿಕೆ (ನಾ). ದೀಪದ ಕುಡಿ,–ಶಿಖೆ : ಲಲನಾನಿಕಾಯ ನಿವಳಿತ ನೀರಾಜನ ದೀಪಕಲಿ[ಪಾಠಾಂ. ಳಿ]ಕಾ ಪ್ರತಿಫಳಿತಮೌಳಿ ಮಾಣಿಕ್ಯನುಂ . . . ಆಗಿ (ಪಂದ್ರಪು. ೯-೨೪ ವ). **ದೀಪಕಳಿಕೆ** : ನೀರಾಜನ ದೀಪಕಳಿಕಾ ಶ್ರೇಣೀಶೋಣಾಂಶು ಬಾಲಾತಪಪ್ರಸರಪಿಶಂಗಮುಂ (ಜಗವಿ. ೪-೮೨ ವ); ಆಱಿಂಬ ದೀಪಕಳಿಕೆಗೆ ಬಿಱುಗಾಳಿ ಗುತೊದ ? ಬಣಬೆಗೆ ಕಿಡಿ ಪೆರ್ಮಱವೆಯ್ಮೆ ಯ್ಸಿ ರಿ ಪಾತಕದೆಱದಿಟ್ಟಪಯಸದ ಬೆಟ್ಟು ಕಾಮನ ಕೆಯ್ತಂ (ಶಾಂತೀಶ್ವ. ೩-೭೨) ; ಕಂತುರಾಜನ ಸಮ್ಮೋಹದೀಪಕಳಿಕೆಯಂತ ಕಮನೀಯಕಾಯಕಾಂತಿಸಂತತಿಯಿಂದುಜ್ವಳಿಸುತ್ತುಮಿರ್ದ . . . ಶೃಂಗಾರವತೀ ದೇವಿಯಂ ಕಂಡು (ಜಪಪು. ೧೧-೮೭ ವ).

[ದೀಪ್ಯ + ಕಲಿಕೆ]

ದೀಪಕಳಾಪ (ನಾ). ಸೊಡರುಗಳ ಸಮೂಹ,–ಗುಂಪು: ದೀಪಕಳಾಪಮಂ ತಳೆದು ಬಾಲಿಕೆಯರ್ಬರೆ ಸುತ್ತಿ ಮುತ್ತಿ ತಾರಾಪತಿ ತಾರೆಗಳ್ವೆರಸು ಮುಂದರಮಂ ಬಲಗೊಳ್ವ ಮಾಟ್ಕೆಯಿಂ . . . ಅದೇಂ ಬಲಗೊಂಡನೊ ಭಕ್ತಿಪೂರ್ವಕಂ (ಪಂರಾಮಾ. ೬-೩೭). [ದೀಪ್ಯ + ಕಳಾಪ (= ಕಲಾಪ್ಯ)]

ದೀಪಕಳಿಕೆ 'ದೀಪಕಲಿಕೆ' ನೋ.

ದೀಪಕಾಲಂಕಾರ (ನಾ). = ದೀಪಕ ೧೦ : ಪಾರ್ವರ್ ಪಳನುಡಿವುರುಳಂ ಪೆರ್ವೆಲೆಯಂ ಪರದರೊಕ್ಕಲಿಗರನುವೆಳಸಂ ಪರ್ವಿದ ಸೈಪಿನ ದೊರೆಗಳ್ ಸಾರ್ವರ್ ಚಿಕದೇವರಾಯನಡಿದಾವರೆಯಂ ಇದಱಿೊಳ್ 'ದೊರೆಗಳ್ ಚಿಕದೇವರಾಯನಡಿಯಂ ಸಾರ್ವರ್.' ಎಂಬ ವರ್ಣ್ಯವಾದರ್ಥಮಂ ಅರ್ಪಣ್ಯರಾದ ಪಾರ್ವರ್ ಮುಂತಾದವಱಿೊಳನ್ವಿತವಾಗಿ ಪೇಟ್ದುದಱಿಂ ದೀಪಕಾಲಂಕಾರಂ (ಅಪ್ರತಿ. ೫೮-೮) ; ಪ್ರಸ್ತುತ ಮತ್ತು ಅಪ್ರಸ್ತುತ ವಸ್ತುಗಳಲ್ಲಿ ಒಂದೇ ಧರ್ಮವಿದೆ ಎಂದು ವರ್ಣಿಸಿದರೆ ಅದು ದೀಪಕಾಲಂಕಾರವಾಗುತ್ತದೆ (ಕೃಬಡಿ. ೩೬೧). [ದೀಪಕ + ಅಲಂಕಾರ]

ದೀಪತೋರಣ (ನಾ). ದೀಪಗಳ ಮಾಲೆ,–ತೋರಣ : ಮನೆಮನೆಯ ಮೇಲೆ ಗೋಪುರದ ಭುವನೇಶ್ವರಿಯ ಪರಿಜನಾವರಿಸಿ ರಘುಗರ್ಭುಗಿಸಿದುವು. ಪುಳಿಬಿಲ್ಲಿನೋಕುಳಿಯನೆರಚಿ, ಬಣ್ಣ ಬಣ್ಣದ ದೀಪತೋರಣಂ (ಶ್ರೀರಾಮಾ. ೪೪೯-೮೩). [ದೀಪ್ಯ + ತೋರಣ]

ದೀಪದಾನ (ನಾ). ೧. ದುರ್ದಾನಗಳಲ್ಲಿ ಒಂದಂ ; ಉತ್ತರಕ್ರಿಯೆಯ ಸಂದರ್ಭದಲ್ಲಿ ಮಾಡುವ ಒಂದು ಬಗೆಯ ದಾನ. ೨. ಪುಲೆನಾಡಿನಲ್ಲಿ ಪ್ರಚಲಿತವಿರುವ ಒಂದು ಪದ್ಧತಿ ; ಪರಸ್ಥಳದಿಂದ ಬಂದು ಮನೆ ಮನೆಗಳಿಗೆ ದೀಪವನ್ನು ಹಚ್ಚಿಕೊಟ್ಟು ಹೋಗುವ ಪದ್ಧತಿ.

[ದೀಪ್ಯ + ದಾನ]

ದೀಪದಾನಿ (ನಾ). ಬೆಳಕನ್ನು ದಾನಮಾಡಿದವನು : ದಾರಿಗಾಣದ ಕಣ್ಗೆ ಹೆದ್ದಾರಿಯಾಗಿದ್ದೆ ಓ ಕವೀಂದ್ರ ! ಆಧುನಿಕನಿಗೆ ಗುರುವು, ನವ್ಯಕಗೆ ದೀಪದಾನಿ ಓ ಋಷೀಂದ್ರ (ಜಿಂತನ. ೭೦-೫). [ಸಂ. ದೀಪದಾನಿನ್]

ದೀಪದಿನ (ನಾ). ಶುಕ್ಲಪಕ್ಷ : ದೀಪದ ನಿಂದ್ರವಾರುಣಿಯ ಪಣ್ಣೊಳಿ ತೀವುಗೆ ಪಾರದಾಖ್ಯಮಂ ದೀಪದಿನಪ್ರಸಿದ್ಧಿಯೊಳಿ ಪನ್ನೆರಡಪ್ಪ ದಿನಂಗಳಿರ್ದುದಂ ಲೋಪವುದಾಗದಂತಿರೆ ಸುರಕ್ಷಿತವಾದುದಱಿೊಂದೆ ಬೀಜ ನಿಷ್ಪಾಪವು ನಿಟ್ಟು ನೀಂ ಗಣಕೆಯಗ್ರದೊಳಂ ತಿಳಿಪಲ್ಕುಮಾಕ್ಷಣಂ (ಖಮದ. ೧೧-೪೭).

[ದೀಪ್ಯ + ದಿನ]

ದೀಪದ್ಯುತಿ (ನಾ). ದೀವಿಗೆಯ ಪ್ರಕಾಶ,–ಕಾಂತಿ: ರತಿನಾಟಕಾಭಿನಯಮಂ ಕೃತಕೃತ್ಯಂ ಮಾಡಿ ರಯ್ಯಮಾಗಿರೆ ದೀಪದ್ಯುತಿ ಯುವತಿಯರೊಳ್ ನಿದ್ರಾವತಾರವಾದತ್ತು ಮೂಡವೆಳಗವ್ಯಾಗಳ್ (ಜಗವಿ. ೧೬-೧೩೬).

[ದೀಪ್ಯ + ದ್ಯುತಿ]

ದೀಪದ್ರಾಕ್ಷಿ (ನಾ). = ದೀಪದ್ರಾಕ್ಷೆ ೧ : "ಪಟಿಕಾ – ದೀಪದ್ರಾಕ್ಷಿ, ಚವ್ಯ" (ಓಷಧಿ. ೯೧). [ದೀಪ್ಯ + ದ್ರಾಕ್ಷಿ]

ದೀಪದ್ರಾಕ್ಷೆ (ನಾ). ೧. ಒಣಗಿದ ದ್ರಾಕ್ಷಿಹಣ್ಣು : (ಕ). ೨. ಒಂದು ಬಗೆಯ ದ್ರಾಕ್ಷಿಯ ಬಳ್ಳಿ : "ಅಮೃತಾ–ಅಮರದುವಳ್ಳಿ . . . ಮದ್ಯ, ದೀಪದ್ರಾಕ್ಷೆ. . . ಕೋಟಿಕುಟುಮ" (ಓಷಧಿ. ೪); ಕಳಿತ ಬಾಳೆಯ ಹಣ್ಣು ಖರ್ಜೂರದ ತನಿವಣ್ಣು . . . ದೀಪದ್ರಾಕ್ಷೆಗಳ ಹಣ್ಣನೊಂದಾಗಿ ಕೂಡಿ ತುಪ್ಪದೊಳು ಕಲಸಿ (ಸೂಪಶಾ. ೧-೩೦). [ದೀಪ್ಯ + ದ್ರಾಕ್ಷೆ]

ದೀಪಧಾರಿ (ನಾ). ಕೈಯಲ್ಲಿ ಸೊಡರನ್ನು ಹಿಡಿದು ಮುಂದೆ ಹೋಗುವವನು ; ಬೆಳಕನ್ನು ತೋರುವವನು : ಹಗಲು ಸತತೋದ್ಯೋಗಿ, ಇರುಳಂ ಕಿಂದರಜೋಗಿ ನಿದ್ದೆ ಎಲ್ಲೊ ಯಕ್ಷಲೋಕಸಂಚಾರಿ, ಇವನೆಳೆಯ ಕಂಗಳಲಿ ಹೊಳೆವ ತಿಂಗಳ ಬೆಳಕು ದಿನದ ದಾರಿಯೊಳಿಮಗೆ ದೀಪಧಾರಿ (ದೀಪಧಾ. ೫೮-೧೬). [ಸಂ. ದೀಪಧಾರಿನ್]

ದೀಪಧ್ವಜ (ನಾ). ದೀಪದ ಕಂಬ: ಕೋ[ಟಿ]ಯ ದೀಪಧ್ವಜ [ತಾಂ] ಸೀಗಿರಿ ದಾರಿಸುವೆ × × × [ಜ]ಗದೇಕದೀಪಂ ಕಳಂ ಬಲದ ಸಲೆ ಕಟ್ಟರಿಂಬು ದಾಗದು [ಮೆ] ಸಿಡಿಪ ಮನ್ನಣೆಯ ಬೆಳ್ಳಿಯ ಬಟ್ಟಲ ತಂಬುಲಂ ಜಯಗೊ × ಪಡೆದಂ (ಸೌಇಇ. XX, ೩೦-೮ ; 1044).

[ದೀಪ್ಯ + ಧ್ವಜ]

ದೀಪನ (ಗು). ೧. ಪ್ರಕಾಶಗೊಳಿಸುವ ; ಹೊತ್ತಿಸುವ ; ಉದ್ದೀಪನಗೊಳಿಸುವ. ೨. ಜೀರ್ಣಶಕ್ತಿಯನ್ನು ಹೆಚ್ಚು ಮಾಡುವ ; ಜೀರ್ಣಗೊಳಿಸಂವ. (ನಾ). ೩. ಹೊತ್ತಿಸುವುದಂ ; ಉರಿಯುಂವಂತೆ ಮಾಡುವುದಂ ; ಪ್ರಕಾಶಗೊಳಿಸುವಿಕೆ : ಒಂದೊಂದು ಅರ್ಥದಿಂದ ದೀಪನಗೊಂಡಿದೆ (ಚಿತ್ರಸ್ಯ. ೦೨ ಮುನ್ನುಡಿ). ೪. ಜೀರ್ಣಶಕ್ತಿಯಂನ್ನು ಹೆಚ್ಚಿಸಂವಿಕೆ : ಲಂಘನವು ದೀಪನ ಪಾಚನಗಳನ್ನುಂಟು ಮಾಡಿ . . . ಜ್ವರ ಶ್ಲೇಷ್ಮ ಮುಂತಾದ ವ್ಯಾಧಿಗಳನ್ನು . . . ಪರಿಹರಿಸುವುದು (ಸಕವೈ. ೨೮). [ಸಂ.]

ದೀಪನಗವಳ (ನಾ). (ಕಾಮುವನ್ನು) ಉದ್ದೀಪನಗೊಳಿಸುವ ತಾಂಬೂಲ ; ಉತ್ತೇಜಕವಾದ ತಂಬುಲ : ದೀಪನಗವಳವಿದೆನುತ ಚೆಂದುಟಿಯ ಪ್ರಾಣೋಪನ ಬಾಯೊಳಿಕ್ಕುವರು (ಮೋಹತ. ೦೮-೮೯).

[ದೀಪನ + ಕವಳ್ (= ಕವಲ)]

ದೀಪನಗೈ (ಕ್ರಿ). ಪ್ರಕಾಶವನ್ನು ಹೆಚ್ಚಿಸು,– ಉದ್ದೀಪಿಸು ; ಬೆಳಗಿಸು : ಆಗಾಮಿಕ ಶ್ಯಾಮಲ ಆನಂದವ ಭೂದೇವಿಯ ಅಂತಃಕರಣದಲಿ ದೀಪನ ಗೈದೈತರುತಿಹನು (ಪಾಂಡಜ. ೩೩-೦೪). [ದೀಪನ + ಗೈ (<ಕೆಯ್$_1$)]

ದೀಪನಚೂರ್ಣ (ನಾ). ಜೀರ್ಣಶಕ್ತಿಯಂನ್ನು ಹೆಚ್ಚಿಸುವ ಔಷಧಿಯ ಹುಡಿ ; ಪಾಚಕಚೂರ್ಣ: ಆರ ದೀಪನಚೂರ್ಣಬಲದಲಿ ವೀರರುದ್ರನು ಜಗವ ನುಂಗುವನು (ಕುಮ್ಮಾದ್ರೋ. ೧೦-೫೨).

[ದೀಪನ + ಚೂರ್ಣ$_2$]

ದೀಪಮಾನೆಯ (ನಾ). ದೀಪಕ್ಕಾಗಿ ಕೊಟ್ಟ ಕೊಡುಗೆ (?) : ದೀಪ ಮಾನೆಯ ಕೊಟ್ಟ ಧೂಪಮಾನೆಯ ಕೊಟ್ಟ ಸೋಪಾನ ಕಟ್ಟ ಭೀಮೆಯೊಳು ಇಳಿಯುದಕೆ ಸೋಪಾನಮಾನೆ ವತನಿತ್ತ (ಕನ್ನಜಾ. ೩೦೬).

[ದೀಪ್ಯ + ಮಾನೆಯ (<ಮನ್ನೆಯ]

ದೀಪಮಾಲೆ$_1$ (ನಾ). ೧. ದೀಪಗಳ ಸಾಲು. ೨. ದೀಪಗಳನ್ನು ಹಚ್ಚಿ ತೂಗಿಬಿಡುವ, ತ್ರಿಕೋಣಾಕಾರದ ಕಟ್ಟನ್ನು ಮೇಲ್ಭಾಗದಲ್ಲಿ ಹೊಂದಿರುವ ಕಂಭ : ನೆಗ್ಬುತ್ತುರ್ಗ ಶಿವಾಲಯಪ್ರತತಿಯಾದಿ ತ್ಯಾಲಯಂ ಸಾಲೆ ವಿಹ್ನಗೃಹಂ ಬುದ್ಧವಿಹಾರ ಮಹಾಭವನಂ ನಾಗಾಲಯಂ ಬಾವಿ [ದಿ]ಗ್ಗಿಗೆ ಶತ್ರಂ ಕೆಱೆ ದೀಪಮಾಲೆಯೆನೆ ನಾನಾ ಧರ್ಮ್ಮಮಂ ಮಾಡಿಸಲ್ (ಸೌಇಇ. XX, ೪೯-೩೯; 1076 ?) ; ಮಂಗಳ ವಾದ್ಯಮಬ್ಬರವಮುಣ್ಮುವ ಮಿಂಚದು ದೀಪಮಾಲೆಯುತ್ತುಂಗಪಯೋದ ವಿಟ್ಟ ತೆರೆ ತೋರಣಮಿಂದಿರವಿಲ್ಲುವೃಷ್ಟಿಯೇ ಸಂಗತಧಾರೆಯಾಲಿವರ ಲೊಪ್ಪುವ ಮುತ್ತಿನ ಸೇಸೆಯಾಗೆ (ರಾಜಶೇ. ೮-೦೦೮).

ದೀಪಮಾಲೆಯ ಕಂಬ=ದೀಪಾಲೆಕಂಭ ೨: ಗುಡಿಯ ಮುಂದಿನ ದೀಪ ಮಾಲೆಯ ಕಂಬದತ್ತ ಮೊಮ್ಮಗಳನ್ನು ಕರೆದು ತಂದಳು (ಗಂಗಾಸಾ. ೦೩) ; ಎದ್ದೇಳುತಿದೆ ಮುಂದೆ ದೀಪಮಾಲೆಯ ಕಂಬ ಉದಯವಾಗಲಿ ಒಳಗೆ ಚೈತ್ಯಬಿಂಬ (ನಿಂಮು. ೪-೦೩). [ದೀಪ್ಯ + ಮಾಲೆ]

ದೀಪಮಾಲ್ಯೆ (ನಾ). ಒಂದು ಬಗೆಯಂ ಸಸ್ಯ : ದೀಪಮಾಲೆ – ಸಣ್ಣಗಿಡ : ದೊಡ್ಡ ಬಳಿ ಹೂಗಳಾಗುತ್ತವೆ. ಕಟ್ಟಗೆ ಬಿಳೀದು, ಸಣ್ಣಯೆಳೆಯುಳ್ಳದ್ದು (ಕಥಾಗ. ೪೧). [←ಮರಾ. ದೀಪಮಾಳ್]

ದೀಪವರ್ತಿ (ನಾ). ದೀಪದ ಬತ್ತಿ ; ಸೊಡರಿನ ಕುಡಿ : ಉಟ್ಟಿದ ಸಮ ಸ್ತೋರ್ವಿಗಳ್ನಪ್ಯಂಪ್ರಿಯುಗಕ್ಕೆಱಗುಗುಂ ಸ್ಮರದ್ದೀಪವರ್ತಿ ನಿಧಿಗೆಱಗುವ ವೋಲ್ (ಶಾಂತಿಪು. ೧೦-೧೩೦) : ನಿದಾಘದ ದೀಪ [ಪಾಠಾಂ. ಪ್ರ] ವರ್ತಿ ಯೊಳ್ ಕಾಸೆ ತೆರಳ್ದ ಪಿಂಜರಿಯಂವೋಲ್ ಕಿಸುಸಂಜೆ ತೆರಳ್ದಿನಂ ಪಟಂಗಾಸಿಸ ಪೊನ್ನಗಂಟಿಯಂವೊಲೊಪ್ಪಿದುದುದ್ಗತ ಭಾನುಮಂಡಲಂ (ಅಜಿಪು. ೬-೭೦) ; ಯೌವನವನವಸನ್ಯಲಕ್ಷ್ಮಿ ಸೌಭಾಗ್ಯನಿಧಾನದೀಪವರ್ತ್ತಿ (ಸೌಇಇ. XX, ೪೬-೦೪ ; 1072) ; ದೀಪವರ್ತಿ ನಿಧಿಗೆಱಗುವವೊಲ್ ಗುಣ ನಿಧಿಗೆ ರಾಜಲೋಕದ ಮಣಿಮಯಮಕುಟಂಗಳನಿತುಮೇನೆಱಗಿದುವೋ (ಪುಗ್ಗಿಪು. ೮-೦೬೮); ಮೂಲಸ್ಥಾನದ ದೇವಗ್ಗೆ ಖಂಡಸ್ಫುಟಿತ ಜೇರ್ನ್ನೋ ದ್ದಾರ ದೀಪವರ್ತ್ತಿ ನಿವೇದ್ಯಕ್ಕೆನ್ದು . . . ಧಾರಾಪೂರ್ವ್ವಕಂ ಮಾಡಿ ಬಿಟ್ಟ ಕೆಯಿ (ಸೌಇಇ. XX, ೮೦-೪೫; 1120) ; ಜಯ ದಿವಿಜಕರೀಟ ದೀಪ ವರ್ತಿ ನಿಧಾನಾ (ಹಂದ್ರಪು. ೬-೭) ; ಎಱಗಿದಳಿಂದ್ರಕಾಂತಿ ಶುಭರತ್ನ ಮನಾಂತ ನಿಧಾನಲಕ್ಷ್ಮಿಗೊಲ್ದೆಱಗುವ ದೀಪವರ್ತಿಯವೊಲಾನತಕಂಧರೆ ಸಾಮರಾಗದಿಂ (ಅನಂಪು. ೫-೦೨); P ನಿಧಿಯಿದ್ದ ಕಡೆಗೆ ದೀಪದ ಕುಡಿ ವಾಲುವುದೆಂಬ ನಂಬಿಕೆ ಇದೆ. [ದೀಪ್ಯ + ವರ್ತಿ]

ದೀಪವಿಕಲ್ಪ (ನಾ). ದೀಪದಂತೆ ಇರುವಂತಹುದು: ನೆಗಟ್ಪೆ ಮೇಣುದಿತ ನಿರ್ಮಳಕೀರ್ತಿವಿತಾನಮಂ ಜಗದಗಾಧವಿವರೋದರ ದೀಪವಿಕಲ್ಪಮಂ ಕೂಡೆ ಪೇಟ್ದ ನುತಕಾವ್ಯಮಂ (ಕವಿಹಾ. ೩-೨೨೨)· [ದೀಪ್ಯ + ವಿಕಲ್ಪ]

ದೀಪಶಿಖಿ (ನಾ.) ಸೊಡರಿನ ಬೆಂಕಿ : ನಿನ್ನಂಗರಮ್ಮತಾ ದೀಪಶಿಖಿ ಪಾರ್ಥನ ವಿರಾಗದ ಪತಂಗಮಂ, ಶೂನ್ಯತೆ ಸಮೀರನಂ ಸೆಳೆವಂತೆ, ಸೆಳೆಸೆದು ಸುಟ್ಟುರಿಸಿ ಜಾಜ್ವಲ್ಯಮಷ್ಟಂತೆವೋಲ್ ನೆಗಳ್ದವೆಂ (ಜಿತ್ರಾಂಗ. ೪೯-೮೦೦). [ದೀಪ್ಯ + ಶಿಖಿ]

ದೀಪಶಿಖೆ (ನಾ). ಸೊಡರಿನ ಕುಡಿ,–ಶಿಖೆ : ರೂಪವೇದನಾ ವಿಜ್ಞಾನ ಸಂಜ್ಞಾನ ಸಂಸ್ಕಾ (ಸಾ) ರಂಗಳೆಂಬಯ್ದು ಸ್ಕಂಧಂಗಳ್ ದೀಪಶಿಖಾ ರೂಪದಿಂ ಕ್ಷಣವಿಳಂಬಿಗಳ್ (ಶಾಂತಿಪು. ೮-೦೪೨ ವ) ; ಸ್ವಲ್ಪ ಕಾಲದಲ್ಲೇ ಅವರಂಗಜೇಬನು ದೀಪಶಿಖೆಯಿಂದ ಸಮುದ್ರವನ್ನು ಶೋಷಣಮಾಡುವುದೂ ಬಾಯಿಯ ಉಸಿರಿನಿಂದ ತಪನರಶ್ಮಿಯನ್ನು ಆಳಿಸುವುದೂ ಮನುಷ್ಯನಿಗೆ ಸಾಧ್ಯವಾದ ಕೆಲಸವಲ್ಲವೆಂದು ತಿಳಿದುಕೊಂಡನು (ಕೋಹಿನೂ. ೩).

[ದೀಪ್ಯ + ಶಿಖೆ]

ದೀಪಸ್ತಂಭ (ನಾ). ೧. = ದೀಪಕಂಭ ೧ : ಕರವತಿಗೆ ಹೊಂಗಳಸ ಹೊಂಗೊಪ್ಪರಿಗೆ ದೀಪಸ್ತಂಭ . . . ವೈಡೂರಿಯದ ಪಡಿಗವ ಚರರು ತಂದೊಟ್ಟಿದರು ಬಾಡಿಗೆ ಭಾರಸಂಖ್ಯೆಯಲಿ (ಕುಪ್ಕಾಗ. ೪-೦೩). ೨. ಹಬ್ಬದ ದಿನಗಳಲ್ಲಿ ಹಚ್ಚಿಡುವ ದೀಪಗಳಿಗೆ ಆಧಾರವಾಗಿ ನಿಲ್ಲಿಸಿದ, ದೇವಸ್ಥಾನದ ಮುಂದಿನ ಕಲ್ಲಿನ ಕಂಭ ; ದೀಪಮಾಲೆಕಂಬ : ವಮಾವು ಹೂವಿನ ತೇರು, ಹೊಂಗೆ ತುಂಬಿದ ಬಸುರಿ – ಉರಿವ ದೀಪಸ್ತಂಭವಗೊ ಬೂರಲ (ದೀಪಧಾ. ೬-೦೪). [ದೀಪ್ಯ + ಸ್ತಂಭ]

ದೀಪಸ್ಪರ್ಶನ (ನಾ). ಸೊಡರು ಹತ್ತಿಸುವುದು : ದೀಪಸ್ಪರ್ಶನಮಾದ ವರ್ತಿ ನಿಮಿಷಕ್ಕಾ ದೀಪರೂಪಂ ಸಮಂತಾ ಪೊತ್ತೆಯ್ದುವವೊಲ್ . . . ಅಮಿತತೇಜಂ ಹೃದ್ಯವಿದ್ಯಾವಿಳಾಸೋಪೇತಾತ್ಮಕನಾದನಾ ಮುನಿಯ ತನ್ಮಾಹಾತ್ಮ್ಯಮಿನ್ನೆಂತುಟೋ (ಶಾಂತೀಶ್ವ. ೪-೦೧೩).

[ದೀಪ್ಯ + ಸ್ಪರ್ಶನ]

ದೀಪಾಂಕುರ (ನಾ). ಸೊಡರಿನ ಕುಡಿ ; ದೀಪಕಲಿಕೆ : ಧೂಪಧೂಮಾ ವೋದಿತಾಭ್ಯಂತರದೊಳಲಘುತರ ವಿಳಸದರುಣಮಣಿ ದೀಪ್ರದೀಪಾಂಕುರ ದೊಳಮರೆ ನರವಿಮಾನಾಪಹಾಸವಾಸಗೃಹದೊಳ್ . . . ಆತ್ಮೀಯ ಪ್ರಾಣೇಶ್ವರಿ ಸಹಿತಂ ಸುಖಸುಪ್ತನಾಗಿ (ವರ್ಧಮಾ. ೫-೨ ವ); ನಿನ್ನೆಳೆವೆಳ ಗೇವುದೆಂದು ತೇಜೋನಿಳಯಂ ಮನ್ನಿಸನೆನೆ ಜನನಿಯ ಕೈಯನ್ನಿವರ್ವಂ ಪಿಡಿಯಲೆಂದು ದೀಪಾಂಕುರಮಂ (ಪುಗ್ಗಿಪು. ೦೩-೫೬).

[ದೀಪ್ಯ + ಅಂಕುರ]

ದೀಪಾಂಕುರಂಗೈ (ಕ್ರಿ). ಸೊಡರಿನ ಕಂಡಿಯನ್ನು ಹೊತ್ತಿಸು ; ದೀಪ ಹಚ್ಚು : ಬಾಳ್ವೆಯ ಸೊಡರ್ ತಾನಾರ್ವ ಮುನ್ನಮಿನ್ನೊಂದು ಬತ್ತಿಯ ಕುಡಿಗೆ ದೀಪಾಂಕುರಂಗೈದು ಪೊತ್ತಿಸದೆ ಪೋದೊಡಾಂ ನಿ ಲ ದ ರಿ ಕೆ ನೇಸರ್ಬಳಿಗೆ ಕಳ್ತಲೆಯನಡಕಿ ಪೋದಂತುಟಲ್ತೆ ? (ಶ್ರೀರಾಮಾ. ೮-೨೦೫).

[ದೀಪಾಂಕುರ + ಗೈ (<ಕೆಯ್$_1$)]

ದೀಪಾಂಗ (ನಾ). [ಜೈನ] ಮದ್ಯಾಂಗ, ಭೂಷಣಾಂಗ, ವಸ್ತ್ರಾಂಗ, ತೂರ್ಯಾಂಗ, ಮಾಲ್ಯಾಂಗ, ಗೃಹಾಂಗ, ಭಾಜನಾಂಗ, ಭೋಜನಾಂಗ, ಜ್ಯೋತಿರಂಗ ಮತ್ತು ದೀಪಾಂಗಗಳೆಂಬ ಹತ್ತು ವಿಧವಾದ ಕಲ್ಪವೃಕ್ಷಗಳಲ್ಲಿ ಒಂದು ; ದೀಪಗಳನ್ನು ಒದಗಿಸುವ ಕಲ್ಪವೃಕ್ಷ : ಸೊಗಯಿಸುವುವು ದೀಪಾಂಗ ಜ್ಯೋತಿರಂಗ ಕಲ್ಪಕುಜಂಗಳ್ (ಆದಿಪು. ೩-೪೦) ; ದೀಪಾಂಗಮೆಂಬುದು ನಿಜಭವನಾಭ್ಯಂತರ ಸಮಸ್ತವಸ್ತು ಪ್ರಕಾಶನಪರಂಗಳವ್ವ ಪ್ರದೀಪವಿಶೇಷಂಗಳನೀವುದು (ಶಾಪುಂಪು. ೯) ; ವಸನಾಂಗಾತೋದ್ಯಾಂಗ ಪ್ರಸವಾಂಗ ಜ್ಯೋತಿರಂಗ ದೀಪಾಂಗಾನ್ನಾಂಗ . . . ದಶಕಲ್ಪಕುಜಂ (ಕಂದ್ರಪು. ೩-೩೪). 'ದಶಾಂಗಕಲ್ಪಕುಜ' ಪರಾ.

[ದೀಪ$_2$ + ಅಂಗ$_8$]

ದೀಪಾಂಗಕುಜ (ನಾ). = ದೀಪಾಂಗ : ತಳದಳಿಸಿ ತೊಳಗಿ ಬೆಳಗುವ ವಿಳಸನ್ಮಣಿಕಿರಣಶಿಖಿಯ ಬಳಗದ ಬೆಳಗಂ ತಳೆದಿಸೆವ ತಾಣದೀವಿಗೆಗಳನ ವರ್ಗೀಗುಂ ಪ್ರದೀಪ ದೀಪಾಂಗಕುಜಂ (ಶಾಂತಿಪು. ೬-೧೧೭).

[ದೀಪಾಂಗ + ಕುಜ]

ದೀಪಾಂಗವೃಕ್ಷ (ನಾ). = ದೀಪಾಂಗ : ವ ಸ್ತ್ರಾಂ ಗ ವಿ ಭೂ ಷ ಣಾಂ ಗ ವಿ ಕ ಸನ್ಮಾಲ್ಯಾಂಗ ದೀಪಾಂಗವೃಕ್ಷದ ದಿವ್ಯಾಂಬರದಿಂದಲಂಕರಣದಿಂ ಪೂಮಾಲೆಯಿಂದ . . . ಪೂಜಿಸಿದನಿಂದ್ರಂ ತಪ್ತಿತೃದ್ವಂದ್ವಮಂ (ಪುಪ್ಪಪು. ೧೨-೧೩). [ದೀಪಾಂಗ + ವೃಕ್ಷ]

ದೀಪಾಗ್ನಿ (ನಾ). ಸೊಡರಿನ ಉರಿ ; ಹಣತೆಯ ಜ್ವಾಲೆ : ಒಂದೆರಡು ಕುದಿಗೊಮ್ಮೆಯೊಂದೊಂದಳಗೆಗೆಱೆದುವೊಂದು ಹವಣಾಗಿ ಹೊಗೆಯಿಲ್ಲದಿಹ ದೀಪಾಗ್ನಿಯಿಂದಮೊಂದಂದದೊಳು ಸಟ್ಟುಗವಿಡಿದು ತೊಳಸಿ ತಱುಪಿ ನೆಮ್ಮೆಯ ಹಾಲನು ಒಂದಿನಿಸು ಹೊತ್ತಿಸದೆ ನಾಲ್ಕೊಂದೆನಿಸಿ ಕಾಸಲು (ಸೂಪಶಾ. ೩-೨) ; ಮಣಿಶಿಲೆ, ಗಂಧಕ . . . ಇವಂ ಕೂಡಿ ಒಂದು ದಿನ ದೀಪಾಗ್ನಿಯಿಂದುಟ್ಟು . . . ಜೇನುತುಪ್ಪದಿಂದಾರು ತಿಂಗಳು ಕೊಳ್ಳಲು ಸಕಲ ಸನ್ನಿಪಾತ, ಸಮಸ್ತ ಕುಷ್ಠರೋಗ ಸಹ ಮಾಣ್ಗುಂ (ಸಳಪ್ರ. ೧೭೮).

[ದೀಪ$_2$ + ಅಗ್ನಿ]

ದೀಪಾನನ (ನಾ). ದೀಪದ ಮುಖ,–ಕುಡಿ : ಮಾನನಿಧಿಯೇ ಸರ್ವ ರತಿ ಕಾಲದಲ್ಲಿ ದೀಪಾನನದೊಳಿವ್ವೆಯಾಗಿದು ನಿನಗೆ ನಿಂದೆಯಲ್ಲೆಂದನಂತಾ ಮುರಾರಿ (ವೀಶ್ರಪು. ೩-೧೯-೩೬). [ದೀಪ$_2$ + ಆನನ]

ದೀಪಾರತಿ, ದೀಪಾರ್ತಿ (ನಾ). ೧. (ಅನೇಕ ಸೊಡರುಗಳಿಂದ ಕೂಡಿರುವ) ಮಂಗಳಾರತಿ ಮಾಡುವ ಸಾಧನ. ೨. ಅನೇಕ ದೀಪಗಳಿಂದ ಕೂಡಿದ ಆರತಿ ; ಅನೇಕ ದೀಪಗಳನ್ನು ಹತ್ತಿಸಿ ಮಾಡುವ ಆರತಿ: ಕೋಪದಲ್ಲಿ ಶ ವ ಕ ಳಿ ಯ ದ ಕರಡಿಗೆಯಂತೆ ಮುಱಿದ ಧೂಪಗುಂಡಿಗೆಯನೊಡೆದ ದೀಪಾರತಿಯ ನಂದಿಸಿದ ಒವ್ವ ಪರಿಯಾಣದೋಗರವ ತುಡುಕಿದ ಪಾಪ ಕರ್ಮ ... ನಿಮ್ಮ ಶರಣ (ಬಸವ. ೪೦೦); ದಶಾಂಗಾಮಿಳಿತ ಧೂಪವನಿತ್ತು ದೀಪಾರತಿಯನೆತ್ತುವನು (ಬಸಪು. ೩೧-೨೨) ; ದೇವನಿಗೆ ಮತ್ತೆ ಹೊಸ ದೀಪಾರತಿಯನ್ನು ಬೆಳಗಿದನು (ಶಾಂತಲಾ. ೨೯೯). **ದೀಪಾರ್ತಿ** : ೨. ಮಲ್ಲಿ ಕಾರ್ಜುನಸ್ವಾಮಿ ಗುಡಿಯಲ್ಲಿ ದೀಪಾರ್ತಿ ಸಮಯದಲ್ಲಿ ಬಹಳ ಜನ ಸೇರಿದ್ದರು (ಕೂಳಿ). [ದೀಪ$_2$ + ಆರತಿ$_1$]

ದೀಪಾರಾಧನೆ (ನಾ). (ದೇವತೆಗಳಿಗೆ) ಸೊಡರುಗಳನ್ನು ಹತ್ತಿಸಿ ಮಾಡುವ ಆರಾಧನೆ ; ಜ್ವಾಲೆಗಳನ್ನು ಬೆಳಗಿಸಿ ನಡೆಸಂವ ಪೂಜೆ : ಕಾರ್ತ್ತಿಕದ ಪುಂಣವೆಯು ದೀಪಾರಾಧನೆಗೆ ಪಾಲಿಸ್ತೆವು (ಎಕ. IV (R), ಎಳಂದೂ. ೦೯-೦೨ ; 1510) ; ಶ್ರೀ ನಂಜುಡೇಶ್ವರಸ್ವಾಮಿಯವರ ಮಹಾ ಸನ್ನಿಧಾನಕ್ಕೆ ಅಂಗರಂಗ ವೈಭೋಗ ಪಡಿತರ ದೀಪಾರಾಧನೆ ನಂದಾದೀವಿಗೆ ನೈವೇದ್ಯ . . . ವರ್ಷ ವರ್ಷವೂ ಸಲಿಗೆಯೊಪ್ಪಿಸುವ ದೇವದಾಯದ ಕಾಣ್ಕೆ (ಶಿಶಾಗಂ. ೨೭-೭). [ದೀಪ$_2$ + ಆರಾಧನೆ]

ದೀಪಾರ್ಚಿ (ನಾ). ಸೊಡರಿನ ಉರಿ,–ಜ್ವಾಲೆ : ಕಿಡಿ ನಿಶ್ಯೇಷಮಘಾತಿ ಪಜ್ಜಳಿಸೆ ತನ್ನೆಂಟುಂ ಗುಣಂ ಕೂಡೆ ನೇರ್ಪಡೆ ದೀಪಾರ್ಚಿಗಳಂತಿ ರೂರ್ಧ್ವಗತಿ ಮೂಱುಂ ಲೋಕದಿಂ ಮೇಲೆ ಬೆಳ್ಗೊಡೆಯಿರ್ಪಂತಮೊಲಿರ್ದ ಸಿದ್ಧನಿಲಯಕ್ಕಾನಂದದಿಂ ಪೋಗಿ (ಪಂಡಾಮಾ. ೧೬-೪೨) ; ಸಮಸ್ತ ಜೀವಾದಿ ಪದಾರ್ಥಂಗಳುಂ ಶರೀರೇಂದ್ರಿಯ ಬುದ್ಧಿಗಳುಂ ದೀಪಾರ್ಚಿಗಳವೋಲ್ ಕ್ಷಣದಿಂ ಮೇಲೆ ನಿಲ್ವುವಲ್ಲೆಂದು ಕ್ಷಣಕ್ಕೈಕಾಂತವಾದಮುಂ ಪಡಿಯುಚ್ಚು ಎಡಿದು ನುಡಿವ ಬೌದ್ಧನೇಕಾಂತಮಿಥ್ಯಾತ್ವಮುಂ (ಪಶಾಸ್ತ್ರ. ೪).

[ದೀಪ$_2$ + ಅರ್ಚಿ]

ದೀಪಾರ್ತಿ 'ದೀಪಾರತಿ' ನೋ.

ದೀಪಾಲಂಕಾರ (ನಾ). ಅನೇಕ ಸೊಡರುಂಗಳಿಂದ ಮಾಡುವ ಅಲಂಕಾರ; ದೀಪೋತ್ಸವ: ದೀಪಾವಳಿಯ ದೀಪೋತ್ಸವವನ್ನೂ ನಾಟಿಸುತ್ತಿತ್ತು ಅಂದಿನ ರಾತ್ರಿಯ ದೀಪಾಲಂಕಾರ (ಹೇಮುಕೂ. ೭). [ದೀಪ$_2$ + ಅಲಂಕಾರ]

ದೀಪಾಲಿಕಂಭ (ನಾ). ೧. ದೀಪಗಳ ಸಾಲು. ೨. ದೀಪಗಳ ಸಾಲನ್ನು ಹೊಂದಿರುವ ತ್ರಿಕೋಣಾಕಾರದ ಕಟ್ಟನ್ನು ಮೇಲ್ಭಾಗದಲ್ಲಿ ಉಳ್ಳ ಕಂಬ: ಹಳ್ಳಿಗಳ ಉತ್ಸವಗಳಲ್ಲಿ ದೀಪಾಲಿಕಂಭಗಳನ್ನು ಬೆಳಗುತ್ತಾರೆ (ಕೂಳಿ).

[<ದೀಪಮಾಲೆ + ಕಂಭ]

ದೀಪಾವಳಿ (ನಾ). ೧. ದೀಪಗಳ ಸಾಲು,–ಸಮೂಹ : ಬೆಳಗುವ ಮಣಿಮಯ ಲಲಿತೋಜ್ವಲ ದೀಪಾವಳಿಯ ಬೆಳಗನಲ್ಲದ ಮನೆಯೊಳ್ ಬೆಳಗುವ ತೊಳಗುವ ಸೊಡರ್ಗಳ ಬೆಳಗಂ ಕನಸಿನೊಳವಾಗಿಯುಂ ಕಂಡಱಿಯಂ (ಸುಕುಮಾ. ೦೦-೧೦೬) ; ದೀಪಾವಳಿಗಳೆಸೆದವಖಿಳ ಗೃ ಹಾ ವ ಳಿ ಯೊಳ್ (ಸೂಕ್ತಿಸು. ೮-೦೮೭); ಗಿಡಗಂಟಿ ಮೈಮನಕೆ ಹೊನ್ನೆ ಪುಳಗಳ ವಿಣುಕು–ಬಲಿಸುತಿಹ ದೀಪಾವಳಿ (ನಿಂಮು. ೪೦-೧೧). ೨. ಕಾರ್ತಿಕ ಶುದ್ಧ ಪಾಡ್ಯದ ದಿನ ಬಲಿಚಕ್ರವರ್ತಿಯ ಹೆಸರಿನಲ್ಲಿ ಆಚರಿಸುವ ಹಬ್ಬ ; ಸಾಲು ಸಾಲಾದ ದೀಪಗಳಿಂದ ಮನೆ, ದೇವಾಲಯ ಮೊದಲಾದಂವುಗಳನ್ನು ಅಲಂಕರಿಸುವ ಹಬ್ಬ : ಸಂದ ಬಾದುಬೆ ದೀಪಾವಳಿ ಕಾರಪುಣ್ಣಮೆಯೆನಿಪ್ಪೀ ಮೂಱು ಪರ್ವ್ವಂಗಳೊಳ್ (ಸಾಇತಿ. XI-1, ೫೨-೬೬ ; 1007) ; ಆ ದಿನ ಜ್ಞಾನಸೂರ್ಯನಾದ ಸ್ವಾಮಿಯು ಕಣ್ಮರೆಯಾದುದರಿಂದ ರಾತ್ರಿಯೆಲ್ಲವೂ ಜನತೆ ದೀಪಗಳನ್ನು ಹೊತ್ತಿಸಿಕೊಂಡು ಸ್ವಾಮಿಯ ಪೂಜೋತ್ಸವಗಳಲ್ಲಿ ನಿರತರಾಗಿದ್ದರು. ಇದಕ್ಕೆ ದೀಪಾವಳಿ ಹಬ್ಬವೆಂದು ಹೆಸರಾಯಿತು (ಧಾಸರ. ೧೭೨) ; ದೇಶದಲ್ಲಿ ದೀಪಾವಳಿಯ ದಿನವಿದೆಂದು ಶಾಶ್ವತದಿ ಹರಸಿದೆವು ಬಾಲಕರು ಬಂದು (ಕಎಪು. ೧೫-೧) ; ದೀಪಾವಳಿಯ ಅರ್ಥ ವೇನೋ –ಕಾರ್ತೀಕಮಾಸದಲ್ಲಿ ಎಲ್ಲೆಲ್ಲೂ ದೀಪಗಳನ್ನು ಹಚ್ಚಿ, ಹೊಳೆಯ ದೀಪವನ್ನಿ ತೇಲಿ ಬಿಡುವುದೇಕೋ ಅರ್ಥವಾಗುವುದಿಲ್ಲ (ಬಂಕಿಪು. ೪೪೧).

[ದೀಪ$_2$ + ಆವಳಿ$_1$ (= ಆವಲಿ)]

ದೀಪಾವಳಿಕೆ (ನಾ). = ದೀಪಾವಳಿ ೨ : ದೀಪಾ[ವಳಿಕೆ]ಯ ನಿವೇದ್ಯಕ್ಕಾಗಿ ದಂಣಾಯಕರು×××ಂಣಗಳು ಮುಗಲೂರ ರಾಜ್ಯಧಿಪತ್ಯವನು ಮಾಡುತ್ತಾ (ಸಾಇತಿ. IX-11, ೪೪೪-೧೫ ; 1460). [ಸಂ. ದೀಪಾವಲಿಕಾ]

ದೀಪಾಳಿ (ನಾ). = ದೀಪಾವಳಿ ೧ : ರಣ ಮಹೀಮಂಡಲದ ಭೈರವಗಣದ ದೀಪಾಳಿಯೊ ಮಹೇಶನ ಹಣೆಯ ಹಾತವಹನಟ್ಟಹಾಸವೊ (ತೊರಾ. ೬-೩೭-೩) : ಮಸುಳಿದುದು ಕಾಂತಿ ದೀಪಾಳಿಗಳ್ಗೆ (ಶ್ರೀರಾಮಾ. ೪೪೦-೦೩೧).

[ದೀಪ$_2$ + ಆಳಿ$_4$ (= ಆಲಿ$_4$)]

ದೀಪಾಳಿಗೆ, ದೀವಳಿಗೆ, ದೀವಾಳಿಗೆ, ದೀಹಳಿಗೆ (ನಾ). ೧. = ದೀಪಾವಳಿ ೧ : "ದೀವಳಿಗೆ (ದೀಪಾಳಿಗೆ, ದೀವಾಳಿಗೆ)–ದೀಪಾವಲಿಕಾ = ದೀಪಮಾಲೆ" (ತದ್ಭಕೋ. ೧೯). ೨. = ದೀಪಾವಳಿ ೨ : ಗಾಣವೆಯಿಲಿಗೆ ಕೊಣ್ಡೆ ಮುಟ್ಟಿಗೆ ಪಡಿಯಳೆ ಯಜ್ಞದಲೊನ್ದು ಗದ್ಯಾಣ . . . ಅಯ್ದು ಪಣಂ ಮದುವೆಯಲೆರಡು ಪಣಂ ಮಣಿಯಲೊನ್ದು ಪಣಂ ಬಾದುಬೆ ಕಾರಪುಣ್ಣಮಿ ದೀಪಾಳಿಗೆ ಮೂಱು ಪರ್ವ್ವದೊಳಂ ಪ್ರತ್ಯೇಕವೊನ್ದು ಗದ್ಯಾಣ (ಎಇ. XX, ೬-೩೫ ; 1012) ; ಆವಳಿಕೆಗೆ–ದೀಪಾವಳಿಕಾ = ದೀಪಾಳಿಗೆ (ಶಮದ. ೨೯೫ ಪ್ರಯೋ). **ದೀವಳಿಗೆ** : ೧. ಮೇಲಿನ 'ತದ್ಭಕೋ' ಪ್ರಯೋಗವನ್ನು ನೋಡಿ. ೨. ಕುಂಟಣಿಯ ಕೂರ್ಮೆಯಂತೆ ಪಶುವಿನ ಕರೆಹದಂತೆ ದೀವಳಿಗೆ ಯೂಟವಂತೆ . . . ಕಡೆಯೊಳ್ ಪೇಸುಪಥಮುಮಶೋಭೆಯುಮಾಗದೆ ಪೋಗದು (ಧರ್ಮಾಮೃ. ೬-೧೨೨) ; ಹರಿಯ ಲೆಂಕರುಗಳಿಂಡೆಯ ಹಬ್ಬ ವೆಂದಾಡುವರು ಬಹಳ ದೀಪಗಳನಳ್ತಿಯಿಂದಂ ಬೆಳಗುತಿರಲು ದೀವಳಿಗೆ ಯಾದುದು ಕಣಾ (ವೀಶೈಪು ೩-೧೧-೧೬) ; ಉಂಡದ್ದೇ ಉಗಾದಿ ಮಿಂದದ್ದೇ ದೀವಳಿಗೆ (ಗಾದೆ). ೩. ಹಬ್ಬ ; ಪರ್ವ ; ಉತ್ಸವ : ಓಪಳೆ ಕೂರ್ಮೆ ಗೆಟ್ಟೆನಗೆ ನೀನೇನಾನುಮೊಂದೇವಮಂ ಮನದೊಳ್ ಮಾಡಿದೊಡಂದೆ ದೀವಳಿಗೆಯಂ ಮಾನಾಮಿಯಂ ಮಾಡೆನೇ (ಪಂಪಭಾ. ೪-೯೩). **ದೀವಾಳಿಗೆ** : ೧. ದೀವಳಿಗೆ, ದೀವಾಳಿಗೆ. ಉಭಯತ್ರಾಪಿ ದೀಪಾವಳಿಕಾ (ಶಬ್ದಾನು. ೩೭೮ ವ್ಯಾಖ್ಯಾ). **ದೀಹಳಿಗೆ.**

ದೀವಳಿಗೆಯ ಕಟ್ಟಲೆ = ದೀಪಾವಳೀ ಅಮಾವಾಸ್ಯೆ : ದೀವಳಿಗೆಯ ಕಟ್ಟಲೆಯೊಳ್ ದೀವಿಗೆಗಳು ಬೆಳಪ ತೆಱದೆ ಕಲಿಕಾಲದೆ ಮಿಥ್ಯಾವ್ರತ ತಮಿಸ್ರರಪ್ಪ ಜನಾವಳಿಗಳ ನಡುವೆ ಬೆಳಗುತಿರ್ಪರ್ಜೈನರ್ (ಸಮಪ. ೬-೮೮). **ದೀವಳಿಗೆಯ ಪರ್ಬ, ದೀವಳಿಗೆ ಹಬ್ಬ, ದೀಹಳಿಗೆಯ ಹಬ್ಬ** = ದೀಪಾವಳಿ ೨ : ದೀವಳಿಗೆಯ ಪರ್ಬದಂದು ಸೊಡರ್ವತ್ತಿಸುವ ನೆವದೊಳ್ ನಮಗ ಪಾಯಮಂ ಬಗೆವರಕ್ಕುಮೆಂದಱಿದು (ಬಂಹರಿ. ೧೦-೩೯ ವ); ಗಂಗೇಗೌರೀ ಹಬ್ಬ ಮುಂದೆ ದೀವಳಿಗೆ ಹಬ್ಬ ಎಂದೀಗೆ ಬಂದೀತೆ ಶಿವರಾತ್ರಿ (ನನ್ನೂರು. ೪೧) ; ಭೋಜನ ಕಾಣಿಕೆ ದೀಹಳಿಗೆಯ ಹಬ್ಬಕೆ (ಸೌಇಎ. ೧೯೩೨, ಉಡುಪಿ. ೨೮೨-೧೫ ; 1432). **ದೀವಳಿಗೆಯ ಪರ್ವ** = ದೀಪಾವಳಿ ೨ : ದೀವಳಿಗೆಯ ಪರ್ವದನ್ದು (ಹೈಆರಿ. ೧೯೩೬, ೨೬-೨೯ ; 872).

[<ಸಂ. ದೀಪಾವಲಿಕಾ]

ದೀಪಿಕಾಂಕುರ (ನಾ). ಸೊಡರಿನ ಕುಡಿ, –ತುದಿ : ನಾಡೆ ಪೊದಳ್ದು ನೀಳ್ದವರ ಸುಯ್ಗಳ ಗಾಳಿಯೊಳೊಯ್ಯನೊಯ್ಯನಳ್ಳಾಡುವುದಾಯ್ತು ತತ್ಸುರತಮಂದಿರದುಜ್ವಳ ದೀಪಿಕಾಂಕುರಂ (ಪಂಪಭಾ. ೩-೮೩). [ಸಂ.]

ದೀಪಿಕಾಗೃಹ (ನಾ). ಗುಹೆ (?) : ಪರಮ ಯೋಗೀಂದ್ರಾ ಪರ್ವತದ ಶಿಖರಾಗ್ರದೊಳಗೊಂದು ದೀಪಿಕಾಗೃಹದಲ್ಲಿ ಚಿರಕಾಲವಿರ್ದು (ಸಾರಂಗ. ೩೧). [ಸಂ.]

ದೀಪಿಕೆ (ನಾ). ೧. ಸೊಡರು ; ದೀವಿಗೆ : ನೋಡಿ ನಾಣ್ಟ ತಲೆಯಂ ತೆಗೆ ವಂತಿರೆ ಪಾತ್ರಮಧ್ಯದೊಳ್ ತೆಗೆದುಡುಗಿರ್ದುವೊಳ್ಗುಡಿಗಳಂ ರತದೀಪಿಕೆ ಗಳ್ ನಿಶಾಂತದೊಳ್ (ಲೀಲಾವ. ೩-೧೮); ನಿನ್ನ ಕಟೂಕ್ತಿ ಮಂತ್ರಮೆನಗೆಚ್ಚ ಶರಾವಳಿ ಪುಷ್ಪಸಂಚಯಂ ನಿನ್ನ ಸರೋಷವೀಕ್ಷಣದ ದೀಧಿತಿ ದೀಪಿಕೆ ಯರ್ಚನೋಚಿತಂ (ಶಬಶಂ. ೫-೪೧). ೨. ಬೆಳಕು ; ಕಾಂತಿ ; ಪ್ರಕಾಶ. ೩. (ಆಲಂ) ಮಾರ್ಗದರ್ಶಿಕೆ ; ವ್ಯಾಖ್ಯಾನ ರೂಪವಾದ ವಿವರಣ ಗ್ರಂಥ ; ಟೀಕಾಗ್ರಂಥ : ದೊಡ್ಡಬೆಲೆ ಲಕ್ಷ್ಮಿನರಸಿಂಹಾಚಾರ್ಯನಿಂ ರಚಿತಮಾದ ಪಂಪಭಾರತ ದೀಪಿಕೆಯೆಂಬ ಟೀಕೆಯೊಳ್ ಚತುರ್ದಶಾಶ್ವಾಸಂ ಸಂಪೂರ್ಣಂ (ಪಂಪದೀ. ೫೭೯). [ಸಂ. ದೀಪಿಕಾ]

ದೀಪಿತ (ಗು). ೧. ಪ್ರಕಾಶಗೊಳಿಸಿದ ; ಸ್ಪಷ್ಟವಾಗಿ ತಿಳಿಸಿದ : ಅಕ್ಷಯದ ಧರ್ಮಾರ್ಥಕಾಮವಿಮೋಕ್ಷ ದೀಪಿತ ಮಾರ್ಗಸಂತತ ಲಕ್ಷಣ ಸ್ಥಾಪಿತ ಸಮುನ್ನತಮಹಿತಸಿತಕೀರ್ತಿ (ಬಸಪು. ೪೬-೩). ೨. ರೇಗಿದ ; ಉದ್ರೇಕ ಗೊಂಡ : ಕೋಪದೀಪಿತರೂಪನಾಗಿಯುಮಾಪತಿಪ್ರತಿಮಂ ಪ್ರತಾಪಾ ಟೋಪದಿಂದಿಂತೆಂದನು (ಬಸಪು. ೫೪-೨). [ಸಂ.]

ದೀಪಿಸು (ಕ್ರಿ). ೧. ಹೊಳೆ ; ಪ್ರಕಾಶಿಸು : ಅವಿಚಲನದನುವೆ ಮನ ವಾದುದೋ ಘನ ಕಾತರವೆ ಕರಂ ಕಣ್ಗಳಾದುವೊ ಸಾತ್ವಿಕವೆ ದೀಪಿಸುವ ತೊಡಿಗೆಯಾದುದೋಯೆನೆ ಪರವಶೀಭೂತನಾಗಿ (ಪದ್ಮರಾ. ೭-೩೬) ; ತಾರಾ ಪಥವನಳ್ಳಿಱಿವ ಕನಕಕಳಶಂಗಳಿಂ ದೀಪಿಸುತೆ . . . ದಿವ್ಯಲಿಂಗನಾಲಯ ವೆಸೆದುದು (ಸಿದ್ಧೇಪು. ೨-೨೩) ; ರಾಜೇಂದ್ರನಾಸ್ಥಾನದಲ್ಲಿ ದಿನಕರನಂದದಿಂ ದೀಪಿಸುತ್ತಿರುವ ನವರತ್ನ ಸಿಂಹಾಸನಾರೂಢನಾಗಿ (ಸೌಗಂಧಿ. ೪-೪). ೨. ಪ್ರಕಾಶಗೊಳಿಸು ; ಸ್ಪಷ್ಟವಾಗಿ ತಿಳಿಯುವಂತೆ ಮಾಡು : ಒಂದೊಂದು ಉಪಮೆ ಉಪಮಾನದ ಸ್ಥಿತಿ ವಿಶೇಷವನ್ನು ದೀಪಿಸುವಾಗ ನಯಸೇನನ ಈ ಸಾದೃಶ್ಯಲಕ್ಷ್ಮಿ ತನ್ನೆಲ್ಲ ಬೆಡಗಿನಿಂದ ಸುಳಿಯುತ್ತಾಳೆ (ತವನಿ. ೯೨). [ದೀಪನ + – ಇಸು$_3$]

ದೀಪು 'ದೀಪ$_1$' ನೋ.

ದೀಪುತ, ದಿಪುತ (ಗು). ಹೊಳೆಯುವ ; ಪ್ರಕಾಶಿಸುವ ; ತೇಜಸ್ಸಿನಿಂದ ಕೂಡಿದ : ಕೀರ್ತಿ ಅಪಕೀರ್ತಿ ನಿನ್ನದು ಕಾಣೊ ದೀಪುತಮೂರ್ತಿ ವಿಜಯ ವಿಠಲ ಎನ್ನಾಳುವ ಸ್ವಾಮಿ (ಮೋಕ್ಷದೀ. ೧೧-೮). **ದಿಪುತ** : ಚಪಲನಯನ ತಿಮ್ಮ ವಿಜಯವಿಠ್ಠಲ ಸದಾ ದಿಪುತನಾಗಿ ತನ್ನ ಭಕ್ತರ್ಗೆ ಭಜಕರಿಗೆ ಪೊಳೆವನು (ತೀರ್ಥಮ. ೯೦) ; ತಪನಾಬ್ಜವಂಶದಲಿ ದಿಪುತರಾದವರನೆ ಕೃಪವನಧಿ ಹರಿಪೊಲಿವಾ (ವಿಪಕೀ. ೨ ಪಲ್ಲವಿ). [<ಸಂ. ದೀಪ್ತ]

ದೀಪೋತ್ಸವ (ನಾ). ಸಾಲಂ ಸಾಲಾಗಿ ದೀವಿಗೆಗಳನ್ನು ಬೆಳಗಿಸಿ ಮಾಡುವ ಉತ್ಸವ : ಹೂದಿಂಗಳೈತರಲ್ಕೊಸಗೆಯಿಂ ಬನದೇವಿ ದೀಪೋತ್ಸವಂಗೈವಳ್ (ಶ್ರೀರಾಮಾ. ೧೪೦-೪೦೯) ; ಆ ರಾತ್ರಿ ನಿಮ್ಮ ಮನೆಯಲ್ಲಿ ದೀಪೋತ್ಸವ (ಹೊಸಕ್ಷಿ. ೭) ; ಅವರ ಕಚೇರಿಗಳೆಂದರೆ ಕೀರ್ತಿಯ ದೀಪೋತ್ಸವಗಳಂತಿದ್ದುವು (ಸಂಗೀತ. ೨೬). [ದೀಪ$_2$ + ಉತ್ಸವ]

ದೀಪ್ತ (ಗು). ೧. ಪ್ರಕಾಶಮಾನವಾದ ; ಹೊಳೆಯುವ : ಬಳಿಕ ಯೋಜನಗಂಧಿಯಲಿ ಮಕ್ಕಳುಗಳವತರಿಸಿದರು ದೀಪ್ತಜ್ವಲನತೇಜರು ಕಲ್ಪಭೂಜರು ಹಿಮಕರಾನ್ವಯಕೆ (ಕುಪ್ಯಾಆ. ೨-೩೦). ೨. ಉರಿಯುವ ; ಜ್ವಲಿಸುವ. 'ದೀಪ್ತತಪ', 'ದೀಪ್ತಶಿಖರ' ಪರಾ. ೩. ಉರಿಯುವಂತೆ ಮಾಡಿದ; ಹೊತ್ತಿಸಿದ. (ನಾ). ೪. ಹೊಳಪಿನಿಂದ ಕೂಡಿದುದು ; ಕಾಂತಿಯುತವಾದುದು : ಅದೆಲ್ಲವೂ ಈ ದರ್ಶನದಿಂದ ದೀಪ್ತವಾಗಿರು ತ್ತದೆ (ಸೌಂದಸೆ. ೪೦) ; ಪ್ರತಿಭೆಯಿಂದ ದೀಪ್ತವಾದ ಕಾವ್ಯವ್ಯಾಪಾರದ ಉಳಿವಿಗೆ ಇವು ಮುಖ್ಯವಾಗಿ ಬೇಕು (ಕಾವ್ಯಕು. ೧೨). ೫. ಹಗಲು ; ಬೆಳಕು : ಧಾರುಣಿ ನಡುಗುವುದಂ ಘೊಳ್ಳೆನಲ್ದೀಪ್ತದೊಳ್ಬಳ್ಳುಗಳೂಳು ತ್ತಿರ್ಪುದಂ . . . ಕಂಡು ತಮ್ಮೊಳ್ಬಗೆದರ್ ನೈಮಿತ್ತಿಕರ್ನಾಳಿನ ಕದನದೊಳಕ್ಕುಂ ದಶಾಸ್ಯಂಗಪಾಯಂ (ಪಂರಾಮಾ. ೧೪-೧೨೨). ೬. ಕಾಮಿಕ, ಯೋಗಜ, ಅಚಿಂತ್ಯ, ಕಾರಣ, ಅಜಿತ, ದೀಪ್ತ, ಸೂಕ್ಷ್ಮ, ಸಾಹಸ್ರ, ಅಂಶುಮಾನ್, ಸಂಪ್ರಭೇದ, ವಿಜಯ, ನಿಶ್ವಾಸ, ಸ್ವಾಯುಭುವ, ಅನಲ, ವೀರ, ರೌರವ, ಮಕುಟ, ವಿಮಲ, ಚಂದ್ರಜ್ಞಾನ, ಬಿಂಬ, ಪ್ರೋದ್ಗೀತ, ಲಲಿತ, ಸಿದ್ಧ, ಸಂತಾನ, ಶರ್ವ, ಪಾನಮೇಶ್ವರ, ಕಿರಣ, ವಾತುಲಗಳೆಂಬ ಇಪ್ಪತ್ತೆಂಟು ಬಗೆಯ ಶೈವಾಗಮಗಳಲ್ಲಿ ಒಂದು : ಕಾಮಿಕ . . . ಅಜಿತ, ದೀಪ್ತ, ಸೂಕ್ಷ್ಮ . . . ವಾತುಲಗಳೆಂಬ ಇಪ್ಪತ್ತೆಂಟು ಶಿವಾಗಮಗಳು (ಭಾರದ. ೭೨). 'ಕಾಮಿಕ' ಪರಾ. ೭. ಪೂರ್ವದಿಕ್ಕು : ಮರಸರ್ಪಂ ಮೂಡೆ ಮೂಡಲ್ ನೃಪತಿಗೆ ಪಡುವಲ್ ಮರ್ತ್ಯವರ್ಗಕ್ಕೆ ತೆಂಕಲ್ ಧರಣೀ ಭೃದ್ದಂಡನಾಥಾಗ್ರಣಿಗೆ ಬಡಗಲಂತಾ ಪುರೋಧಂಗಪಾಯಂ ದೊರೆ

ಕೊಳ್ಗುಂ ಸುತ್ತಲುಂ ತೋಱಿದೊಡೆ ಜನಪಗಂ ನಾಡೆಯುಂ ಭೀತಿಯೆತ್ತಂ ಪಿರಿದಕ್ಕುಂ ಶಂತದೊಳ್ ತೋರ್ಪೊಡೆ ನೃಪತಿಜಯಂ ದೀಪ್ತದೊಳ್ ಭೂಪನಾಶಂ (ಲೋಕೋಪ. ೪-೪೦). 'ದೀಪ್ತದಿಕ್ಕು' (ಲೋಕೋಪ. ೬೯೪).

[ಸಂ.]

ದೀಪ್ತತಪ (ನಾ). [ಜೈನ] ಶರೀರದಲ್ಲಿ ಕಾಂತಿ ಹೆಚ್ಚುವಿಕೆ ; ತಪಸ್ಸಿನಿಂದ ಯೋಗಿಗಳಿಗೆ ಉಂಟಾಗುವ ಋದ್ಧಿಗಳಲ್ಲಿ ಒಂದಂ ; P ಇದರಿಂದ ಯೋಗಿಗೆ ಮನಸ್ಸು, ವಾಕ್ಕು, ಕಾಯಂಗಳು ಬಲಗೊಂಡುಂ, ಸೂರ್ಯನಿಗೆ ಸಮಾನವಾದ ಪ್ರಕಾಶ, ಅಂದರೆ ಶರೀರಕಾಂತಿಯುಂಟಾಗುತ್ತದೆ: ಪೊಂವುಬಿವೋಯ್ತು ದೀಪ್ತತಪಮೆಂಬನಮರ್ಕಕರಂಗಳತ್ತಮಿತ್ತಂ ಪುದಿದುಷ್ಣರಶ್ಮಿ ಪುರುಷಾಕೃತಿಯಂತಿರೆ . . . ತಂ[ದುದಂ]ದು ಬರ್ದೊಂ ಪರೆದಿರ್ದವೋಲ್ ಮುನಿಗೆ ಕಲ್ನೆಲೆ ಬಲ್ನೆಲೆಯಂ ನಿದಾಘದೊಳ್ (ಶಾಂತಿಪು. ೯-೦೦೮) ; ಶರೀರದ ಕಾಂತಿ ಪೆರ್ಚುವುದುಂ ದೀಪ್ತತಪಮೆಂಬುದುಂ (ಶ್ರಾವಕಾ. ೯೪-೩೨).

[ದೀಪ್ತ + ತಪ]

ದೀಪ್ತಶಿಖರ (ನಾ). ಉರಿಯುವ ಶಿಖರ : ಅಪರಜಲಧಿಯೊಳುರಿವ ವಡಬನ ದೀಪ್ತಶಿಖರದೊಳಿಗುವಂತೆ ಪತಂಗಮಂಡಲವಿಳಿದುದಂಬರವ (ಕುವ್ಯಾದ್ಭೂ. ೩-೭೦). [ದೀಪ್ತ + ಶಿಖರ]

ದೀಪ್ತಶಿಖೆ (ನಾ). ಉರಿಯುವ ದೀಪದ ಕುಡಿ,–ಶಿಖೆ : ಮನುಷ್ಯತ್ವದ ಗಭೀರತಮ ಆಕಾಂಕ್ಷೆಯ ದೀಪ್ತಶಿಖೆಯ ಸಮ್ಮುಖದಲ್ಲಿ ಯಾವನನ್ನು ಅವನು ಅಂದು ಕಾಣುತ್ತಿರುವನೋ ಆತನು ನರೋತ್ತಮನು (ನಿಬಂಧ. I, ೪). [ದೀಪ್ತ + ಶಿಖೆ]

ದೀಪ್ತಾಗಮ (ನಾ). =ದೀಪ್ತ ೬ : ಮತ್ತಮಾ ಸಿದ್ಧಾಂತಭೇದಂಗಳಾವಾವ ವೆಂದೊಡೆ ಕಾಮಿಕಾಗಮ . . . ದೀಪ್ತಾಗಮ ಸೂಕ್ಷ್ಮಾಗಮ ವಾತೂಲಾಗಮವೆಂಬವಿಪ್ಪತ್ತೆಂಟು ದಿವ್ಯಾಗಮಗಳಕ್ಕು (ವಿವೇಕ. ೬೮). 'ಕಾಮಿಕಾಗಮ' ಪರಾ. [ದೀಪ್ತ + ಆಗಮ]

ದೀಪ್ತಿ (ನಾ). ೧. ಪ್ರಕಾಶ ; ಬೆಳಕು ; ಹೊಳಪು ; ಕಾಂತಿ : "ವರ್ಚಃ . . . ದೀಪ್ತಿಃ . . . ಪ್ರಭಾ, ರಶ್ಮಿಃ – ಈ ೧೧ ದೀಪ್ತಿ" (ಹಲಾಯು. ೦೨-೬೫) : ವಿನವುಕ್ಷಿಶಿಚಕ್ರಂ ದೀಪದೀಪ್ತಿಪ್ರತಿಹತದಿನಕೃಚ್ಚಕ್ರ ತೀವ್ರಾಂಶು ಚಕ್ರಂ . . . ಇರ್ದತ್ತೊಳವುಗದೆ ಪುರೋವಾಂತದೊಳ್ ಚಕ್ರರತ್ನಂ (ಆದಿಪು. ೦೪-೩) ; ನುಡಿದರೆ ಮುತ್ತಿನ ಹಾರದಂತಿರಬೇಕು ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು (ಬಸವ. ೦೦೨) ; ದೀಪಕ್ಕೆ ದೀಪ್ತಿಗೆ ಭೇದವುಂಟೇ ಅಯ್ಯಾ (ಮಹಾದೇ. ಬ. ೭೩-೦೫೧) ; ದೀಪ್ತಿಯನುಳಿದುವು ಭಗಣಂ ಸುಪ್ತಜನಂ ನಿದ್ರೆದಿಳಿದುದಿದೆ ಕೋಕಂ ತನ್ನಾಪ್ತನನಱಸುತ್ತಿರುಳ ಸಮಾಪ್ತಿ ಕರಂ ಹತ್ತೆ ಸಾರ್ದುದು (ಗಿರಿಕ. ೪-೦೬೦). ೨. ದೀವಿಗೆ; ದೀಪ: "ಆ ದೀವಿಗೆ ಜ್ಯೋತಿ ದೀಪ್ತಿ ಗೃಹಭಾನುವಕ್ಕುಂ" (ಮಂಗರಾ. ೬೦-೦೮) : ಜೀವಂ ತೊಲಗಿದೊಡಲಿಂಗೆ ಕೈಲವಿಂಗಿದ ದೀಪ್ತಿಗುದಕವಱತ ಘನತಟಾಕಕ್ಕೆ ... ನೆಟ್ಟನೆ ಜೋಡಿಯಾದುದಾ ಪುರಜನಂ ಪರಿಜನಂ ಜನಪತಿ ಹರಿಶ್ಚಂದ್ರನೆಲ್ಲವಂ ಮುನಿಗಿತ್ತರಣ್ಯಕ್ಕೆ ನಡೆವಾಗಲು (ಹರಕಾ. ೯-೩೪). ೩. ಕಿರಣ ; ಕದಿರು ; ರಶ್ಮಿ: "ಕರಮುಸ್ರಮಂಶು...ದೀಪ್ತಿ ಘೃಷ್ಟಿ...ಪ್ರದ್ಯೋತಮಾ ರಶ್ಮಿ" (ಮಂಗರಾ. ೦೦-೬) : ದಿನಕರನುದಯಿಸಲೊಡಮೇಂ ದಿನದೀಪ್ತಿಗಳೊಡನೆ ಬಾದು ನೆಲಸುವವೊಲ್ ಪ್ರಾಕ್ತನ ಜನ್ಮವಿದ್ಯೆಗಳ್ ಬಂದನಿತುಂ ನೆಲಸಿದವು ಸಕಲ ವಿದ್ಯಾನಿಧಿಯೊಳ್ (ಅಜಿಪು. ೫-೬೮). ೪. (ಸೆಳೆದು ಬಿಟ್ಟ ಬಾಣದ) ವೇಗ,–ತೀವ್ರತೆ : "ದೀಪ್ತಿಃ, ವೇಗಃ, ತೀವ್ರತಾ – ಈ ೩ ಅಂಬಿನ ವೇಗಂ" (ಹಲಾಯು. ೭೭-೩೦೬) : "ಅಂಬುಗಳ ವೇಗಮದು ದೀಪ್ತಿಯೆನಿಕುಂ" (ಮಂಗರಾ. ೪೭-೩೫) : ಪ್ರಾಪ್ತರ ಕಳುಹಲೆದ್ದನು ತಾಯ ಮನೆಗತಿ ದೀಪ್ತಿಯೊಳಾ[ಪಾಕಾಂ. ದೀಪ್ತದೊಳಾ] ನಮಿರಾಜ (ಧ ರ ಪ. ೩೭-೪೨). ೫. ಆಕಾಶದಿಂದ ಕೆಳಗೆ ಬೀಳುವ ತೇಜಃಪುಂಜ ವಸ್ತು ; ಉಲ್ಕೆ : (ಪ). ೬. [ಕಾವ್ಯವಿಮಾ] ಸಹೃದಯನ ಮನಸ್ಸಿನಲ್ಲಿ ಉಂಟಾಗುವ ಭಾವವಿಸ್ತಾರ,–ವ್ಯಾಪಕತೆ,–ಭಾವತೀವ್ರತೆ,–ಭಾವೋದ್ರೇಕ: ಕಾವ್ಯದಲ್ಲಿರುವ 'ರೌದ್ರ' ಮೊದಲಾದ ರಸಗಳು ದೀಪ್ತಿಯನ್ನು ಹೆಚ್ಚಾಗಿ ಉಂಟು ಮಾಡುತ್ತವೆ (ಧ್ವನ್ಯಾಲೋ. ೭೦): ಸಹೃದಯನ ಮನಸ್ಸಿನ ವಿಕಾಸ, ವಿಸ್ತಾರ, ಉಜ್ವಲತೆಗಳು ದೀಪ್ತಿಯೆನಿಸುತ್ತವೆ (ಧ್ವನ್ಯಾಲೋ. ೭೦ ಅಡಿಟಿ).

[ಸಂ.]

ದೀಪ್ತಿಕೆ (ನಾ). ದೀವಿಗೆ; ದೀಪ : ಗೃಹಸಮುಚಿತದೊಳ್ ತೊಳಗಿ ಬೆಳಗಿದುವು ದೀಪ್ತಿಕೆಗಳ್ (ಸೂಕ್ತಿಸು. ೯-೦೮೫). [ಸಂ. ದೀಪ್ತಿಕಾ]

ದೀಪ್ತಿದಾನಂಗೆಯ್ (ಕ್ರಿ). ಬೆಳಕನ್ನು ನೀಡು,–ಕೊಡು: ದೀಪವಿನ್ನೊಂದು ದೀಪಕೆ ದೀಪ್ತಿದಾನಂಗೆಯ್ದುದೆನೆ (ಶ್ರೀಕಾಮಾ. ೫೮೯-೦೪೯).

[ದೀಪ್ತಿ + ದಾನ + ಕೆಯ್[1]]

ದೀಪ್ತಿನ್ಯಾಯ (ನಾ). ಒಂದಂ ಬಗೆಯ ನ್ಯಾಯ ; P ನಾಟಕದಲ್ಲಿ ಶೃಂಗಾರಾದಿ ರಸಗಳನ್ನು ಉದ್ದೀಪನ (ಪರಿಪೋಷ)ಗೊಳಿಸುವ ವಸಂತಋತುಂ, ಚಂದ್ರೋದಯ ಮೊದಲಾದ ಉದ್ದೀಪನ ವಿಭಾವಗಳಂತೆ ಒಂದು ವಿಷಯಂವನ್ನು ಉದ್ದೀಪಿಸುವ ನ್ಯಾಯ : ಆಯತೆವ್ಮವತಾರವೀ ರಾಮಾಯಣದ ನಾಟಕಕೆ ದೀಪ್ತಿನ್ಯಾಯದವೊಲ್ (ತೊರರಾ. ೦-೦೬-೦೬). [ದೀಪ್ತಿ + ನ್ಯಾಯ]

ದೀಪ್ತಿಮಂತ (ಗು). ಕಾಂತಿಯಿಂದೊಡಗೂಡಿದ; ಪ್ರಜ್ವಲಿಸುವ : ಅವನ ದೀಪ್ತಿಮಂತವಾದ ವಿಂಚಿನಂಥ ಆತ್ಮವನ್ನು ನನ್ನಲ್ಲಿ ಹಿಡಿದಿಡುವುದು ಶಕ್ಯವೇ (ಮುಕ್ತ. ೯). [ಸಂ. ದೀಪ್ತಿಮತ್]

ದೀಪ್ತೌಷಧಿ (ನಾ). ತೀಕ್ಷ್ಣವಾದ ಔಷಧಿ ; ಹೆಚ್ಚು ಪರಿಣಾಮನ್ನುಂಟು ಮಾಡುವ ಔಷಧಿ : ಆ ಪ್ರಸ್ತಾಪದೊಳ್ ಫಲವಾಕವಿರಾಮಂಗಳಪ್ಪ ಗರ್ಭಷಷ್ಠಿವ್ರೀಹಿಯವಗೋಧೂಮಾದಿ ಮಹೌಷಧಿಗಳುಂ ತಿಲತೆಸೀ ಕುಸುಂಭಾದಿ ದೀಪ್ತೌ[ಪಾಕಾಂ. ಪ್ತೌ]ಷಧಿಗಳುಂ ಯಾವನಾಳ ಕಂಗು ಕೋದ್ರವಾದಿ ಸರ್ವೌಷಧಿಗಳುಂ (ಆದಿಪು. ೯-೭೧ ವ). [ದೀಪ್ತ + ಔಷಧಿ]

ದೀಪ್ಯ (ನಾ). ೧. ನೀರುಹಿಪ್ಪಲಿ. ೨. ಓಮ ; ವಾದಕ್ಕೆ. ೩. ಜೀರಿಗೆ.

[ಸಂ.]

ದೀಪ್ಪು (ಗು). ೧. ಹೊಳೆಯುವ; ಪ್ರಕಾಶಿಸುವ : ಧೂಪ ಧೂಮಾಪೋದಿತಾಭ್ರಂತರದೊಳಲಘುತರ ವಿಳಸದರುಣಮಣಿ ದೀಪ್ತ ದೀಪಾಂಕುರದೊಳಮರನರವಿಮಾನಾಪಹಾಸವಾಸಗೃಹದೊಳ್ . . . ಆತ್ಮೀಯ ಪ್ರಾಣೇಶ್ವರಿ ಸಹಿತಂ ಸುಖಸುಪ್ತನಾಗಿ (ವರ್ಧಮಾ. ೫-೨ ವ). ೨. ತೀವ್ರವಾದ ; ಉಜ್ವಲವಾದ : ಹರಿ ಹರ ಹಿರಣ್ಯಗರ್ಭರನುರವಣೆಯಿಂ ಗೆಲ್ದ ಕಾಮನಂ ದೀಪ್ತತಪೋಭರದಿಂದುರಿಪಿದರೆನೆ ಬಿತ್ತರಿಸದರಾರ್ ವೀರಣಂದಿ ಸೈದ್ಧಾಂತಿಕರಂ (ಪಂಚಾಮಾ. ೧-೩೬) : ದೀಪ್ತಸುವರ್ಣವಪ್ರವಿಪುಳಪ್ರಭೆಗಳ್ ಬಳೆದುಂಟುಮಾಡೆ ಸೂರ್ಯಪ್ರಭೆಯುಕ್ಕಿದುಕ್ಕನಿರುಳುಂ ಪಗಲುಂ . . . ಶುಭ್ರಸೌಧ ಪ್ರಭೆಗಳ್ ಶಶಿಪ್ರಭೆಯ ಮಾಡಿದ ಮಾಟವನುಂಟು ಮಾಡೆ (ಅರ್ಧನೇ. ೩-೭೯). (ನಾ). ೩. ಪ್ರಕಾಶಮಾನವಾದುದು ; ಕಾಂತಿಯುತವಾದುದು : ಪರಿಪಾತ್ರಿತಯಕ್ಕೆ ಚತುಶ್ಕರಾಸನಾಂತರದೆ ಸುರಶರಾಸನಭಾಭಾಸುರಮೊಪ್ಪಿ ಶೋಭಿಗುಂ ಪಂಚರತ್ನಪ್ರಾಂಶೂಚ್ಚ ದೀಪ್ತದೀಪ್ರಂ ವಪ್ರಂ (ಆದಿಪು. ೬-೦೦೪). ೪. ಬೆಂಕಿ ; ಅಗ್ನಿ. [ಸಂ.]

ದೀರ್ಘ (ನಾ). ಒಂದಂ ಬಗೆಯ ಹಣ್ಣು : ಹಲಸಿನಹಣ್ಣೋ ದೀರ್ಘನ ಹಣ್ಣೋ ಮಾವಿನಹಣ್ಣೋ ಕಲ್ಲುಸಂಪಗೆಹಣ್ಣೋ ಕುಯ್ಯುವೆದು, ಉರುಳು ಒಡ್ಡಿ ಹುಂಡುಕೋಳಿ . . . ಹಿಡಿಯುವುದು, ಮೊದಲಾದ . . . ಸಾಹಸಗಳಲ್ಲಿ ತಿಮ್ಮಪ್ಪ ಅಣ್ಣನೊಡನೆ ಭಾಗಿಯಾಗಿ ಸಂತೋಷಪಟ್ಟಿದ್ದನು (ಮಲಪ. ೫೬೩). [?]

ದೀರ್ಘ (ಗು). ೧. ಉದ್ದವಾದ ; ನೀಳವಾದ. 'ದೀರ್ಘಕೇಶ' ಪರಾ. (ನಾ). ೨. ನೀಳವಾದುದು ; ಉದ್ದವಾದುದು ; ಲಂಬವಾದುದು : "ಸಮುದಗ್ರಮುನ್ನತಂ ತುಂಗಮುಚ್ಚ್ರಿತಂ ಪ್ರಾಂಶು ದೀರ್ಘಮುಚ್ಚಂ" (ಪಸು.ಕೋ. ೧೦೪-೩೭) ; "ದೀರ್ಘಮಾಯತಂ ನೀಳಕ್ಕೆ ಪೆಸರಿನಿಕ್ಕುಂ" (ಕುಂಗಣಾ. ೧೩೨-೨೪). ೩. [ವ್ಯಾಕ] ಉಚ್ಚಾರಣೆಗೆ ಎರಡು ಹ್ರಸ್ವಾಕ್ಷರ ಗಳಷ್ಟು ಕಾಲವನ್ನು ತೆಗೆದುಕೊಳ್ಳುವ ಸ್ವರ ಮತ್ತು ಅಂಥ ಸ್ವರ ಸಹಿತವಾದ ವ್ಯಂಜನ : ಗಜ ದೀರ್ಘಂ ಬಿಂದು ವೃಷಭ ವಂ[ವ್ಯಂ]ಜನ ಶರಭಂ (ಛಂದೋಲು. ೦-೪೬ ಆಡಿಟಿ) ; ಸ್ವರ ಸಂಜ್ಞಿಕಂಗಳವರ್ದೊಂದಿರೆ ಮುಂದೆ ವಿಕಲ್ಪದಿಂ ದ್ವಿತೀಯೆಗೆ ದೀರ್ಘಂ ದೊರೆಕೊಳ್ಗುಮೆಲ್ಲಿಯಾನುಂ ಪುರಾತನೋಕ್ತಿಗಳಂತದಲ್ಲಿ ಯಥೇಷ್ಟಂ (ಕಾಕ್ಕಾವ. ೧೩೪) : ಕ್ರಮದಿಂ ಹ್ರಸ್ವಕ್ಕಂ ಹ್ರಸ್ವವೊದವೆ ದೀರ್ಘಕ್ಕೆ ದೀರ್ಘವೊದವೆ ತ ಗುಳ್ಗುಂ ಸಮಸಂದಾ ಯುಗಳಂಗಳೊಳ್ . . . ಸವರ್ಣವಿಧಾನಂ (ಶಮದ. ೬) ; ವಿದಿತ ಸಮಾನಂಗಳ ಪೂರ್ವದಕ್ಕರಂ ಹ್ರಸ್ವಮದಱ ಪರದಕ್ಕರಮುಂತದು ದೀರ್ಘಂ (ಶಮದ. ೯) ; ಸ್ವರಗಳಲ್ಲಿ ಹ್ರಸ್ವವೆಂದೂ, ದೀರ್ಘವೆಂದೂ ಎರಡು ವಿಧ (ಶಕ್ಕಾ.ದ. ೧). ೪. [ಛಂದ] ಉಚ್ಚಾರಣೆಯಲ್ಲಿ ಎರಡು ಮಾತ್ರೆಗಳ ಕಾಲವನ್ನು ತೆಗೆದುಕೊಳ್ಳುವ ಅಕ್ಷರ ; ಗುರು (–) : ಉಚ್ಚಾರಣೆಯಲ್ಲಿ ಎರಡು ಮಾತ್ರಾಕಾಲ ತಗಲುವಂಥದು ದೀರ್ಘ (ಸಂಚೋಧ. ೦೦೩). ೫. [ಸಂಗೀತ] ಇಪ್ಪತ್ತೆರಡು ವಿಧವಾದ ಶ್ರುತಿಗಮಕಗಳಲ್ಲಿ ಒಂದು: ಸ್ಫುರಿತ ಪ್ರಮಿತ ದೀರ್ಘ ಲಲಿತ . . . ಕೋಮಲವೆಂಬ ಇಪ್ಪತ್ತೆರಡೇ ಶ್ರುತಿಗಮಕಗಳಿಂತಲುಂ (ವಿವೇಕ. ೩೪೮). 'ಶ್ರುತಿ' ಪರಾ. ೬. [ಸಂಗೀತ] (?) : ಆ ರಾಗಂಗಳಂ ಪಾಡುವಲ್ಲಿ ಗ್ರಾಮವರ್ಜ್ಯಂಗಳಂ ತೊಱೆದು ಜನ್ಯಜನಕಂಗಳಂ ಬಳ್ಗಿಗೊಳಿಸಿ . . . ಮಂದ್ರ ಮಧ್ಯ ವೇಗ ಕುಂಚನ ಉಚ್ಚರಾನನ ಸ್ತಂಭನ ದೀರ್ಘಭೇದಗಳಿಂ ರವವಿಕಲ್ಪಗಳಂ ತೋಱಿ (ವಿವೇಕ. ೩೫೨).

ದೀರ್ಘವಾಗು = ದೊಡ್ಡದಾಗು ; ಉದ್ದವಾಗು : ಸೂರ್ಯೋದಯದಿಂದ ಸೂರ್ಯಾಸ್ತಮದವರೆಗೆ ಕಾಲಮಾನ ಕೆಲವು ತಿಂಗಳು ಕಡಮೆ ಕೆಲವು ತಿಂಗಳು ದೀರ್ಘವಾಗಿ ಇರುವುದಕ್ಕೆ ಈ ಓರೆಯೇ ಕಾರಣ (ಆಕಾಶ. ೧೭) ; ಅವರ ಉಪನ್ಯಾಸವು ದೀರ್ಘವಾಗಿತ್ತು. ಆದರೆ ಸ್ವಾರಸ್ಯವಾಗಿರಲಿಲ್ಲ (ರೂಢಿ). [ಸಂ.]

ದೀರ್ಘಕಂಠ (ನಾ). ೧. ಉದ್ದವಾದ ಕುತ್ತಿಗೆಯನ್ನುಳ್ಳದು. ೨. ಬಕ. ೩. ಜಿರಾಫೆ ಎಂಬ ಹೆಸರಿನ ನಕ್ಷತ್ರರಾಶಿ : ಧ್ರುವನಕ್ಷತ್ರಕ್ಕೂ ವಿಜಯ ಸಾರಥಿಗೂ ಮಧ್ಯ ಇರುವ ಕ್ಷೀಣಕಾಂತಿ ನಕ್ಷತ್ರಗಳ ರಾಶಿಯು ಕಮೆಲೊ ಲಾರ್ಡಲಿಸ್ ಅಂದರೆ ಜಿರಾಫೆ. ಇದನ್ನು ನಾವು ದೀರ್ಘಕಂಠನೆಂದು ಗುರುತಿಸಿದ್ದೇವೆ (ನಕ್ಷತ್ರ. ೩೦). [ದೀರ್ಘ + ಕಂಠ]

ದೀರ್ಘಕರ (ನಾ). ೧. ಉದ್ದವಾದ ತೋಳು; ಆಜಾನುಬಾಹುವಾದ ಕೈ. ೨. ನೀಳವಾದ ಸೊಂಡಿಲು. ೧, ೨ : ನಿಜಾಭ್ಯುದಯನಿವೇದ ದೀರ್ಘಕರವೊಪ್ಪೆ ಜಗತ್ತ್ರಿಯನಾದ ದೇವನಂಕದ ಗಣನಾಯಕಂ (ಗದಾಯು. ೧-೦೦). [ದೀರ್ಘ + ಕರ]

ದೀರ್ಘಕಾಲ (ನಾ). ಬಹಳ ಕಾಲ ; ಹೆಚ್ಚು ಕಾಲ : ಪ್ರರೂಢಮೆಂಬುದು ದೀರ್ಘಕಾಲಪ್ರವೃತ್ತಮುಮನಾದ್ಯನಿಧನಮಪ್ಪ ಧರ್ಮಂ (ಜಾವುಂಪು. ೭); ಲೋಕವ್ಯಾಪಾರವೆಲ್ಲ ತನ್ನ ಪಾಲಿಗೆ ಸ್ತಬ್ಧವಾಯಿತೇನೋ ಎಂಬಂತೆ ದೀರ್ಘಕಾಲ ಅವಿ ಮಲಗಿದ್ದಳು (ಬನಶಂ. ೧೯೮).

[ದೀರ್ಘ + ಕಾಲ]

ದೀರ್ಘಕಾಲಿಕ (ಗಂ). ಹೆಚ್ಚು ಕಾಲದವರೆಗೆ ಇರುವ ; ಬಹಳ ಕಾಲದ: ದೀರ್ಘಕಾಲಿಕ ಯೋಜನೆಗೆ ಹೆಚ್ಚು ಹಣವನ್ನು ನಿರೀಕ್ಷಿಸಬಹುದು (ರೂಢಿ).

[ಸಂ.]

ದೀರ್ಘಕೇಶ (ನಾ). ೧. ಉದ್ದವಾದ ಕೂದಲು : ಗಂಡಸರು ದೀರ್ಘಕೇಶವನ್ನು ಹಿಂದೆ ಗಂಟುಹಾಕಿ ಪಟ್ಟವನ್ನು ಸುತ್ತಿಕೊಳ್ಳುತ್ತಿದ್ದರು (ಭಾರದ. ೦೩). ೨. ಉದ್ದವಾದ ಕೂದಲನ್ನುಳ್ಳುದು : ಸ್ನಿಗ್ಧಕೃಷ್ಣ ಬಹುಲದೀರ್ಘಕೇಶನುಂ . . . ಸಪ್ರದ್ಯಾಸ್ಥಿ ತನುಮಪ್ಪ ವಿಜಯ ಪರ್ವತ ಗಜೇಂದ್ರಂ ಬಂದು ಮುಂದೆ ನಿಲ್ವುದುಂ (ಆದಿಪು. ೦೨-೫೬ ವ).

[ದೀರ್ಘ + ಕೇಶ]

ದೀರ್ಘಕೇಶಿ (ನಾ). ಉದ್ದವಾದ ಕೂದಲುಳ್ಳವನು : ಹಿಪ್ಪಗಳು ದೀರ್ಘಕೇಶಿಗಳು (ರೂಢಿ). [ಸಂ. ದೀರ್ಘಕೇಶಿನ್]

ದೀರ್ಘಕೋಶಿ (ನಾ). = ದೀರ್ಘಕೋಶಿಕೆ. [ಸಂ. ದೀರ್ಘಕೋಶೀ]

ದೀರ್ಘಕೋಶಿಕೆ (ನಾ). ಒಂದು ಬಗೆಯ ದೊಡ್ಡ ಜಿಗಣೆ: "ದುರ್ನಾಮಾ, ದೀರ್ಘಕೋಶಿಕಾ-೨ ಅನೆಗಳ ರಕ್ತವನ್ನು ಹೀರಲುಳ್ಳ ದೊಡ್ಡ ಜಿಗಣೆ ಪೆಸರು. ಅಂದರೆ ಹೆಜ್ಜಿಗಣೆ" (ನಿಘಂ.೦೫. ೮೪). [ಸಂ. ದೀರ್ಘಕೋಶಿಕಾ]

ದೀರ್ಘಗೊಳಿಸು (ಕ್ರಿ). ೧. ಉದ್ದವಾಗುವಂತೆ ಮಾಡು; ವಿಸ್ತರಿಸು; ಬೆಳಸು : ಈ ವಿಷಯದಲ್ಲಿ ಕಾಲವನ್ನು ದೀರ್ಘಗೊಳಿಸುವುದು ತರವಲ್ಲ (ರೂಢಿ). ೨. [ಛಂದ] ಅಕ್ಷರವನ್ನು ಎರಡುಮಾತ್ರೆಗಳ ಕಾಲಕ್ಕೆ ಏಳವಡಿಸು.—ಗುರುವನ್ನಾಗಿ ಮಾಡು : ಎರಡನೆಯ ಸಾಲಿನಲ್ಲಿ "ಸಿಡಿಲು" ಎಂಬುದಕ್ಕೂ ಇದೇ ನಾಲ್ಕುಮಾತ್ರೆಯ ಕಾಲ; ಇಲ್ಲಿಯ ಮೂರು ಲಘುಗಳಲ್ಲಿ ಯಾವುದನ್ನು ಆರ್ಥ ಕೆಡದಂತೆ ದೀರ್ಘಗೊಳಿಸುವುದು ? (ಸಮೂರೋ. ೩೨೭). [ದೀರ್ಘ + ಕೊಳ್[1] + –ಇಸು]

ದೀರ್ಘಜೀವಿ (ನಾ). ಬಹಳ ಕಾಲ ಜೀವಿಸುವಂತಹುದು ; ಚಿರಂಜೀವಿ: ತುರಗದ ಕಿವಿಯುಂ ಪಾಳಿಸಿ ಸುರಗೋಪಚ್ಛಾಯೆಯಿಂದಮಮರಣಜಲಂ ಪಾಯ್ತುರುತಿರೆ ದೀರ್ಘಜೀವಿ ನೆತ್ತರ್ ಸುರಿಯದ ಕಿವಿಯಿಂದಮಲ್ಪ ಜೀವಿತನಕ್ಕುಂ (ಅಶ್ವಶಾ. ೩-೨೫). [ದೀರ್ಘ + ಜೀವಿ]

ದೀರ್ಘತಮವೃತ್ತ (ನಾ). [ರೇಖಾಗ] ಒಂದು ಶಂಕುವನ್ನು ಅದರ ಆಧಾರಕ್ಷೇತ್ರಕ್ಕೂ ಮೈಗೂ ಇರುವ ಕೋನಕ್ಕಿಂತ ಹೆಚ್ಚಾದ ಕೋನದಲ್ಲಿ ಒಂದು ಸಮಕ್ಷೇತ್ರದಿಂದ ಕತ್ತರಿಸಿದರೆ ಉಂಟಾಗುವ ವಕ್ರರೇಖೆ : ಬೈಸಿಕಲ್ ಲಾಂಛ್ರದಿಂದ ನೆಲದ ಮೇಲೆ ಬಿದ್ದಿರುವ ಬೆಳಕಿನ ಪರಿಧಿಯಂ ದೀರ್ಘತಮವೃತ್ತಕ್ಕೆ ಉದಾಹರಣೆ (ಛಾಕವಿ. ೩೫).

[ದೀರ್ಘತಮ್ಯ + ವೃತ್ತ]

ದೀರ್ಘತರವೃತ್ತ (ನಾ). [ರೇಖಾಗ] ಶಂಕುವಿನ (ಓರೆಯ) ಪಕ್ಕಕ್ಕೆ ಸಮಾನಾಂತರವುಳ್ಳ ಯಾವುದಾದರೊಂದು ಸಮಂತಲಕ್ಷೇತ್ರದಿಂದ ಆ ಶಂಕುವನ್ನು ಕತ್ತರಿಸಿದರೆ ಆಗುವ ಸಮಂತಲ ವಕ್ರರೇಖೆ : ಪರವಲಯ : ಒಂದು ಕಲ್ಲನ್ನು ಓರೆಯಾಗಿ ಮೇಲಕ್ಕೆಸೆದರೆ ಅದರ ಪಥವು ದೀರ್ಘತರವೃತ್ತವಾಗಿರುವುದು (ಛಾಕವಿ. ೩೫). [ದೀರ್ಘತರ + ವೃತ್ತ]

ದೀರ್ಘತುಂಡಿ (ನಾ). ೧. ಉದ್ದವಾದ ಮೂತಿಯನ್ನುಳ್ಳದಂ; ನೀಳವಾದ ಮುಖವುಳ್ಳದು. ೨. ಸೊಂಡಿಲಿ. [ಸಂ. ದೀರ್ಘತುಂಡೀ]

ದೀರ್ಘತೆ (ನಾ). ಉದ್ದವಾಗಿರುವಿಕೆ ; ನೀಳವಾಗಿರುವಿಕೆ.

[ಸಂ. ದೀರ್ಘತಾ]

ದೀರ್ಘತ್ರಿಭುಜ (ನಾ). [ರೇಖಾಗ] ಸಮದ್ವಿಭುಜ ತ್ರಿಭುಜ: ಇದ್ದೆಸೆಯ ಭುಜವು ಸಮವಿರೆ ಮಧ್ಯವ ತಾಸಳೆದು ಉಳಿದ ಭುಜವೊಂದನು ವಾನ್ತರ್ದಿಸಿ ಗುಣಿಸಲುಂ ಕಂಬವು ನಿರ್ಧರದಿಂ ದೀರ್ಘತ್ರಿಭುಜೆಗಕ್ಕುಂ ನಿರುತಂ (ಕ್ಷೇತ್ರಗ. ೧೩-೧೦). [ದೀರ್ಘ + ತ್ರಿಭುಜ]

ದೀರ್ಘದಂಡಪ್ರಣಾಮ (ನಾ). (ಕೋಲಿನಂತೆ) ಉದ್ದವಾಗಿ ಭೂಮಿಯ ಮೇಲೆ ಮಲಗಿ ಮಾಡುವ ನಮಸ್ಕಾರ ; ಸಾಷ್ಟಾಂಗ ನಮಸ್ಕಾರ : ಶಿವಪ್ಪನಾಯಕ ದೀರ್ಘದಂಡವ್ರಣಾಮಗಳನ್ನು ಮಹಾಪ್ರಭುಗಳಿಗೆ ಅರ್ಪಿಸಿ . . . ಹೊರಬಿದ್ದ (ಹೇಮಕೂ. ೦೭). [ದೀರ್ಘ + ದಂಡಪ್ರಣಾಮ]

ದೀರ್ಘದರ್ಶಿ (ನಾ). ೧. ಮುಂದಾಲೋಚನೆಯಳ್ಳವನಂ. ೨. ಭೂತ ಮತ್ತು ಭವಿಷ್ಯತ್ತನ್ನು ಕಂಡಿತು ಯೋಚಿಸುವವನು; ಹಿಂದು ಮುಂದಂ ಕುರಿತು ಆಲೋಚಿಸುವವನು: ರಾಜರ್ಷಿಯಾ ದೀರ್ಘ ದರ್ಶಿಯಾ ಸಮದರ್ಶಿ ತಾಂ ಸಮಬುದ್ಧಿಯಿಂ ದರ್ವದಿಂ ಪ್ರಲಿಸಿರ್ದನು ರಾಜ್ಯಮಂ (ಶ್ರೀರಾಮಾ. ೭-೦೬೯). ೩. ವಿವೇಕಿ; ಬುದ್ಧಿವಂತ.

[ಸಂ. ದೀರ್ಘದರ್ಶಿನ್]

ದೀರ್ಘದರ್ಶಿನಿ (ನಾ). ಮುಂಬರುವುದನ್ನು ಕುರಿತು ಆಲೋಚಿಸುವ ವಳು; ಮುಂದಾಲೋಚನೆಯುಳ್ಳವಳು: ಮೂರ್ಖವೋದತ್ತಿಗೆಯ ನೋಡಿ ಸೌಮಿತ್ರಿ "ಅಗ್ರಜನೆ, ದೀರ್ಘದರ್ಶಿನಿ ದಿಟಂ ಆ ಕೈಕೆ!" ಎಂದಾರ್ಧಟಿಸಿ ಬಾಣಮಂ ಪೂಡಿ ರಯವನೆಚ್ಚನ್ ರಾಕ್ಷಸಾಕೃತಿಗೆ (ಶ್ರೀರಾಮಾ. ೦೭೦-೧೪೭). [ಸಂ. ದೀರ್ಘದರ್ಶಿನೀ]

ದೀರ್ಘದೃಷ್ಟಿ (ನಾ). ೧. ಮುಂದಾಲೋಚನೆ; ದೂರದೃಷ್ಟಿ. ೨. ವಿವೇಕ; ಮುಂಜಾಗ್ರತೆ. ೩. ಮುಂದೆ ನಡೆಯುವುದನ್ನು ತಿಳಿಯುವ ಶಕ್ತಿಯುಳ್ಳವನಂ; ದೂರದೃಷ್ಟಿಯುಳ್ಳವನಂ: "ಮುಂದಣಿವನಂ ದೀರ್ಘದೃಷ್ಟಿಯೆಂಬುದು" (ಹರಾಯು. ೬೨-೩೨೧); "ದೀರ್ಘದೃಷ್ಟಿಯೆನೆ ಪಲುಂದಱಿವವಂ" (ಕುಂಗರಾ. ೭೧-೦೯); ಪ್ರಜೆಗಳು . . . ಬಿರುಗಣ್ಗಳ ದೀರ್ಘದೃಷ್ಟಿಯಿಂದೀಕ್ಷಿಸುತ್ತ (ಕುಗುಗಂ. ೮೫-೫). 'ದೀರ್ಘದರ್ಶಿ' ಪರಾ. [ದೀರ್ಘ + ದೃಷ್ಟಿ]

ದೀರ್ಘದೇಹಿ (ನಾ). ೧. ದೊಡ್ಡ ಶರೀರವುಳ್ಳವನಂ; ಗಾತ್ರ ವಾಗಿರುವವನಂ; ಮಹಾಕಾಯಂ: ರಕ್ಕಸರನಿಬರೆಲ್ಲರುಂ ದೀರ್ಘ ದೇಹಿಗಳ್ವೆಕ್ಕಸದ ಕೋಪಿಗಳ್ (ಕ್ರಮಿಧಾ. ೦೬-೨೩). ೨. ಹೆಗ್ಗಣ: "ದೀರ್ಘದೇಹೀ, ಮೂಷಿಕಾ–೨ ಹೆಗ್ಗಣಗಳ ಹೆಸರು" (ಸಿದ್ಧಾಂತಿ. ೦೩೭).

[ಸಂ. ದೀರ್ಘದೇಹಿನ್]

ದೀರ್ಘದ್ವೇಷ (ನಾ). ಬಹಳ ಕಾಲದಿಂದಿರುವ ವೈರ; ಬದ್ಧವೈರ: ದೀರ್ಘದ್ವೇಷವಂ ಮಾಡಲಾಗದು (ವಿವೇಕ. ೦೩೧); ದೀರ್ಘದ್ವೇಷವು ನಮ್ಮ ಹಳ್ಳಿಯವರಿಗೆ ಸ್ವಲ್ಪವೂ ಬೇಕಾಗಿರಲಿಲ್ಲ (ಹುಬ್ಬಹ. ೮೦).

[ದೀರ್ಘ + ದ್ವೇಷ]

ದೀರ್ಘದ್ವೇಷಿ (ನಾ). ಬಹಳ ಕಾಲದಿಂದ ವೈರವುಳ್ಳವನು; ಬದ್ಧವೈರಿ.

[ಸಂ. ದೀರ್ಘದ್ವೇಷಿನ್]

ದೀರ್ಘಧನು (ನಾ). ಉದ್ದವಾದ ಬಿಲ್ಲು: ವೀರುರಂ ಕಿಱಿಯ ನಡು ಕೊದ್ದಿದ ವೆಗಲು ಪಿಡಿದ ಕೂರಂಬು ದೀರ್ಘಧನುವೆರಸಿ ನೆರೆದುದಂ ಕಾನನಾರಿಗಳ್ಗೆನಿಪ್ಪ ಶಬರಾಧಿಪರು (ಪಚಕಾ. ೫-೨). [ದೀರ್ಘ + ಧನು]

ದೀರ್ಘನಾಡಿ (ನಾ). ಶರೀರದ ಒಂದು ನಾಡಿಯ ಹೆಸರು: ಮಯೂರ ನಾಡಿ ... ದೀರ್ಘನಾಡಿ ... ಸಂತೋಷ ನಾಡಿ ಇಂತೀ ನಾಡಿಗಳೊಳಗಾದ ಶರೀರದಲ್ಲಿ ತೋರುವ ನಾಡಿ ಜೀರ್ಣವರ್ಣದಂತೆ (ಶರಪ. ೪೮೦).

[ದೀರ್ಘ + ನಾಡಿ$_1$]

ದೀರ್ಘನಿದ್ರಿತ (ನಾ). ಮರಣ ಹೊಂದಿದವನಂ; ಸತ್ತವನು: ಕೆಲವು ಕಾಲದಿನಾತನ ತಂದೆ ಮಹಾದ್ರುಮಂ ದೀರ್ಘನಿದ್ರಿತನಪ್ಪುದುಂ ಕಚದ್ರುಮಂ ರಾಜಪದವಿಯೊಳ್ ನಿಂದಂ (ಪಂಚತಂ. ೩೭-೨೩). [ಸಂ.]

ದೀರ್ಘನಿದ್ರೆ (ನಾ). ಸಾವು; ಮರಣ: "ನಿಧನಂ, ನಾಶಃ, ಮೃತ್ಯುಃ . . . ದೀರ್ಘನಿದ್ರಾ–ಈ ೧೨ ಸಾವು" (ಹರಾಯು. ೦೦೩-೬): "ಮೃತ್ಯು ಮರಣಂ ದೀರ್ಘನಿದ್ರೆ . . . ಎನೆ ಸಾವಕ್ಕುಂ" (ಮುಂಗರಾ. ೧೧೬-೩): ಈಗಳ್ ನಿನಗಿಂತೀ ದೀರ್ಘನಿದ್ರೆಯಂ ಮಾಡಿದನೇ (ಗದಾಯು. ೫-೫೦): ಮಱಿದೊಱಗಿದಂತಲ್ಲಿ ದೀರ್ಘನಿದ್ರೆಯೊಳಿರಲು ಹೊಱಗೆ ಶಶಿಧರನಿತ್ತ ಹಸಿದನೆಂದೆನುತಿರಲು (ಇಳಿರ. ರೇ. ೫೪-೧೭): ಯಮಧರ್ಮರಾಜನು ಅವನಿಗೆ ದೀರ್ಘನಿದ್ರೆ ತಂದಿದ್ದಾನೆ (ವಡಧಾ ೩೮೪). [ದೀರ್ಘ + ನಿದ್ರೆ]

ದೀರ್ಘಪೃಷ್ಠ (ನಾ). ಹಾವು: "ಆಶೀವಿಷಃ, ದೀರ್ಘವೃಷ್ಠಃ–ಈ ೨ ನಿಮಿರ್ದ ಪಾ(ಹಾ)ವು" (ಹರಾಯು. ೦೦೩-೦೯). [ದೀರ್ಘ + ವೃಷ್ಠ]

ದೀರ್ಘಪ್ರಜ್ಞ (ನಾ). ಆಳವಾಗಿ ಆಲೋಚನೆ ಮಾಡುವವನು; ಮುಂದಾಲೋಚನೆ ಮಾಡುವವನು: ಅಡಕತಲ್ಲಿಯ ಧನ ಪಯೋಧಿಯ ಕಡೆಯ ಕೋಟೆಯ ಮುಱಿಯಲವನೆದೆಯೊಡದು ದೀರ್ಘಪ್ರಜ್ಞನಿತ್ತನು ಬೇಹ ವಸ್ತುಗಳ (ಕುಪಾಸ. ೪-೪). [ದೀರ್ಘ + ಪ್ರಜ್ಞ]

ದೀರ್ಘಪ್ರಣಾಮ (ನಾ). =ದೀರ್ಘದಂಡಪ್ರಣಾಮಂ: ಸೇಟ ಗಿರಿದಾಸರಂ ದೀರ್ಘಪ್ರಣಾಮ ಹಾಕಿದರು (ಕಂಲಹು. ೯೩). [ದೀರ್ಘ + ಪ್ರಣಾಮ]

ದೀರ್ಘರೋಗ (ನಾ). ಬಹಳ ಕಾಲದ ರೋಗ; ಹಳೆಯ ಖಾಯಿಲೆ: ನಾಲಗೆಯು ಅತಿದೀರ್ಘವಾಗಿಯಾದರೂ ಅತಿಗಿಡ್ಡನಾಗಿಯಾದರೂ ಇದ್ದರೆ ದೀರ್ಘರೋಗದಿಂದ ಮರಣವೆಂದರಿವುದು (ಸಳಪ್ಯ. ೦೪).

[ದೀರ್ಘ + ರೋಗ]

ದೀರ್ಘರೋಷಿ (ನಾ). ಬಹಳ ಕಾಲ ಕ್ರೋಧವನ್ನಿಟ್ಟುಕೊಂಡಿರುವ ವನು: ಜ್ಞಾತಿ ಬಹಿಷ್ಕೃತಂ ವ್ಯಸನಿ ದೈವವರಂ ಶಿಶು ದೀರ್ಘರೋಷಿ ಸತ್ಯೇತರನಸ್ಥಿರಂ . . . ಎನಿಪ ನರಪನೊಳೆಂದುಂ ವಿಜಿಗೀಷುಗಳಪ್ಪ ಮಹೀಭುಜರೆಂದುಂ ಸಂಧಿ ಮಾಡರ್ (ಪಂಚತಂ. ೩೫೦-೬). [ಸಂ. ದೀರ್ಘರೋಷಿನ್]

ದೀರ್ಘಲಲಿತ (ನಾ). [ಸಂಗೀತ] ಇಪ್ಪತ್ತೆರಡಂ ಶ್ರುತಿಗಮಕಗಳಲ್ಲಿ ಒಂದಂ: ಸಂತ ಪ್ರಮಿತ ದೀರ್ಘ ಲಲಿತ . . . ದೀರ್ಘ ಲ [ಪಾತಾಂ. ಲಾ]ಲಿತ . . . ಕೋಮಲವೆಂಬ ಇಪ್ಪತ್ತೆರಡೇ ಶ್ರುತಿಗಮಕ ಗಳಿಂತಲುಂ (ವಿವೇಕ. ೩೪೮). 'ಶ್ರುತಿ' ಪರಾ. [ದೀರ್ಘ + ಲಲಿತ]

ದೀರ್ಘವರ್ತುಲ (ನಾ). ಅಂಡಾಕಾರವಾದ ವೃತ್ತ; ದೀರ್ಘವಾದ ಗೋಳ: ಅವರ ಎಲೆಗಳು ದೀರ್ಘವರ್ತುಲಾಕಾರ (ಮುಂಬಯಿ. ೪-೩೪).

[ದೀರ್ಘ + ವರ್ತುಲ]

ದೀರ್ಘವೃಂತ (ನಾ). ಉದ್ದವಾದ ಕಾಂಡವನ್ನುಳ್ಳಿದಂ; ಹೆಮ್ಮರ: "ಮಂಡೂಕವರ್ಣಃ . . . ದೀರ್ಘವೃಂತಃ, ಕಾಟನ್ನೆಟಃ, ಶೋಣಕಃ, ಅರಳುಃ–೧೨ ಹೆಮ್ಮರದ ಹೆಸರುಗಳು" (ಸಿದ್ಧಾಂತಿ. ೦೨೩).

[ದೀರ್ಘ + ವೃಂತ]

ದೀರ್ಘವೃತ್ತ (ನಾ). ಅಂಡಾಕಾರದ ಸಂತ್ತು,–ಗೋಳ: ಭೂಮಿಯು ಸೂರ್ಯನ ಸುತ್ತು ತಿರುಗುವ ಹಾದಿಯು, ಸರಿವೃತ್ತಾಕಾರವಾಗಿರದೆ, ದೀರ್ಘವೃತ್ತವಾಗಿದೆ (ಜಾಂಶಾ. I, ೩೦೧): ದೀರ್ಘವೃತ್ತ (Ellipse) ವು ಭಾರತೀಯರಿಗೆ ವೇದಗಳ ಕಾಲದಲ್ಲಿಯೇ ತಿಳಿದಿತ್ತು (ಶಕೃಶಾ. ೪೭೧).

[ದೀರ್ಘ + ವೃತ್ತ$_1$]

ದೀರ್ಘವ್ಯಾಧಿ (ನಾ). =ದೀರ್ಘರೋಗ: (Chronic Complaint. ಇಂಳಿನಿ).

[ದೀರ್ಘ + ವ್ಯಾಧಿ]

ದೀರ್ಘಶಯನ (ನಾ). = ದೀರ್ಘನಿದ್ರೆ. 'ದೀರ್ಘಶಯನಂಗೆಯ್' ಪರಾ. [ದೀರ್ಘ + ಶಯನ]

ದೀರ್ಘಶಯನಂಗೆಯ್ (ಕ್ರಿ). ಸಾವನ್ನು ಹೊಂದಂ; ಮರಣವನ್ನು ಹೊಂದಂ: ಏರ್ಗಳಿಂದೊರ್ಗುಡಿಸಿ ಸಾರಥಿ ಬಿಳಲ್ಕೆ ಕೆನ್ನೀರ್ಗಾರಿ ದೀರ್ಘಶಯನಂಗೆಯ್ಕೆ ಕುದುರೆಗಳ್ನೇರ್ಗೋಲ ಪೋರ್ಗಳಾ ನೃಪನಂಗ ದೊಳ್ಮಾಣಿಸಿದುವು ಜಾಳಂಧ್ರದಂತೆ (ಕ್ರಮಿಧಾ. ೪-೩೫).

[ದೀರ್ಘಶಯನ + ಕೆಯ್$_1$]

ದೀರ್ಘಶ್ಮಶ್ರು (ನಾ). ನೀಳವಾದ ಗಡ್ಡ,–ದಾಡಿ: ಗಂಡಸರು ದೀರ್ಘಕೇಶ ವನ್ನು ಹಿಂದೆ ಗಂಟುಹಾಕಿ ಜಟ್ಟವನ್ನು ಸುತ್ತಿಕೊಳ್ಳುತ್ತಿದ್ದರು ಮತ್ತು ದೀರ್ಘಶ್ಮಶ್ರು ಬೆಳಸಿ ವಿಾಸೆಯನ್ನು ಮಾತ್ರ ತೆಗಿಸುತ್ತಿದ್ದರು (ಭಾರದ. ೦೩).

[ದೀರ್ಘ + ಶ್ಮಶ್ರು]

ದೀರ್ಘಶ್ರುತಿ (ನಾ). ನಿಡಿದಾದ ನಾದ ; ಬಹುಂದೂರದವರೆಗೆ ಕೇಳಿಸುವಂತಹ ನಾದ : ನಾತಿದೂರದೊಳೊಂದು ಪೊಣ್ಮಿದುದು, ಸೀಳ್ದವೋಲ್ ವನ್ಯನಿಶ್ಶಬ್ದಮಂ ದೀರ್ಘಶ್ರುತಿಯ ಸೀಳ್ (ಶ್ರೀರಾಮಾ. ೨೯೦-೦೬೯).

[ದೀರ್ಘ + ಶ್ರುತಿ]

ದೀರ್ಘಶ್ವಾಸ (ನಾ). ನಿಟ್ಟುಸಿರು : ಅಲಘುತರವರಿವೇದನಾವಿಹ್ವಳಿತಕಂಠಗತಾತ್ಮನೂರ್ಧ್ವಸ್ಖಲಿತ ದೀರ್ಘಶ್ವಾಸನಿದ್ದನು ಕೌರವರ ರಾಯ (ಕುಪ್ಯಾಗ. ೦೦-೨). [ದೀರ್ಘ + ಶ್ವಾಸ]

ದೀರ್ಘಸತ್ರ (ನಾ). ೧. ಬಹು ಸಮಯದವರೆಗೆ ನಡೆಯುವ ಯಾಗ ; ಸೋಮಯಜ್ಞ : ಋಷಿಗಳು ಮತ್ತು ರಾಜರ್ಷಿಗಳು ಮಾಡುತ್ತಿದ್ದ ದೀರ್ಘಸತ್ರಯಾಗಗಳಲ್ಲಿ ಸೂತರು ಈ ಪುರಾಣಗಳನ್ನು ಹೇಳುತ್ತಿದ್ದರು (ಧಾರದ. ೧೩೮). ೨. ಬಹುಕಾಲ ಯಾಗ ಮಾಡುವವನು.

[ದೀರ್ಘ + ಸತ್ರ]

ದೀರ್ಘಸುಮಂಗಲಿ (ನಾ). ಬಹುಕಾಲ ಐದೆಯಾಗಿರುವವಳು ; ಬಹುಕಾಲ ಗಂಡನನ್ನು ಹೊಂದಿರುವವಳು ; ಮುತ್ತೈದೆ : ಬ್ರಾಹ್ಮಣರಿಗೂ ಮುದುಕರಿಗೂ ಅತ್ತೆಮಾವಂದಿರಿಗೂ ನಮಸ್ಕರಿಸಿ, ಅವರಿಂದ 'ದೀರ್ಘಸುಮಂಗಲಿಯಾಗು' ಎಂದು ಆಶೀರ್ವಾದ ಪಡೆದಳು (ಪಚಧಾ. ೧೬೯). [ಸಂ. ದೀರ್ಘಸುಮಂಗಲೀ]

ದೀರ್ಘಸೂತ್ರ (ನಾ). ೧. ತಡಮಾಡುವವನು ; ಸಾವಕಾಶವಾಗಿ ಕೆಲಸ ಮಾಡುವವನು ; ಜಡ ; ಆಲಸಿ : "ಅಳಸಂ ಮಂದಂ ಜಡಂ ಮಂಥರನೆನಿ[ಪನವನುಂ] ಶೀತಲಂ ದೀರ್ಘಸೂತ್ರಂ" (ವಸ್ತುಕೋ. ೦೦೦-೧೧). ೨. ಉದ್ದವಾದ ಎಳೆಗಳುಳ್ಳದು. ೧, ೨ : ಎಳೆಯಳ ನಳಿತೋಳಂದಂದಳೆವೆನೆನುತ್ತೆಳಸಿ ತಳೆಯದಳಲಿಂ ಜಲದೊಳ್ಮುಳುಗಿತು ಮೃಣಾಳಮಿಷ್ಟ ಮನಿಳೆಯೊಳ್ತಿಳಿ ದೀರ್ಘಸೂತ್ರನೇಂ ಪಡೆದಪನೇ (ರಾಜಶೇ. ೭-೪೦).

[ದೀರ್ಘ + ಸೂತ್ರ]

ದೀರ್ಘಸೂತ್ರಿ (ನಾ). ಸಾವಕಾಶವಾಗಿ ಕೆಲಸ ಮಾಡುವವನು; ವಿಳಂಬಿ : "ದೀರ್ಘಸೂತ್ರೀ, ಜಡಕ್ರಿಯಃ-ಈ ೨ ತಡೆದು ಗೆಯ್ವವಂ" (ಹಲಾಯು. ೬೩-೨೨೮) ; ದೀರ್ಘಸೂತ್ರಿಗಳವರ ಸಂಗದಿಂ ಕಿಡುವುದೆ ದಿಟಂ ನಮ್ಮ ಕಜ್ಜಂ (ಶ್ರೀರಾಮಾ. ೩೦೨-೨೧). [ಸಂ. ದೀರ್ಘಸೂತ್ರಿನ್]

ದೀರ್ಘಸ್ವರ (ನಾ). [ವ್ಯಾಕ] ಉಚ್ಚಾರಣೆಗೆ ಎರಡು ಹ್ರಸ್ವಾಕ್ಷರಗಳಷ್ಟು ಕಾಲವನ್ನು ತೆಗೆದುಕೊಳ್ಳುವ ಸ್ವರ : ಉಚ್ಚಾರಣೆಗೆ ಹೆಚ್ಚು ಕಾಲ ಬೇಕಾಗುವ ಆ, ಈ, ಊ, ಋ, ಏ, ಓ ಎಂಬುವಕ್ಕೆ ದೀರ್ಘಸ್ವರಗಳೆಂದೂ ಹೆಸರು (ಮಧ್ಯಸು. ೧೩). [ದೀರ್ಘ + ಸ್ವರ]

ದೀರ್ಘಾಕಾರ (ನಾ). ೧. ಎತ್ತರವಾದ ಆಕಾರ. ೨. ಎತ್ತರವಾದ ಆಕಾರವುಳ್ಳವನು : ಕಘಾತ್ಮಂ ದೀರ್ಘಾಕಾರಂ ಸುಬುದ್ಧಿ ಮೇದಸ್ಸಾರಂ ನಸುಕೆಂಚತಲೆಯವಕ್ಕುಂ ಜೀವಂ (ಜಾತತಿ. ೨-೨೩). [ದೀರ್ಘ + ಆಕಾರ್ಯ]

ದೀರ್ಘಾಕ್ಷರ (ನಾ). = ದೀರ್ಘ ೩ : ಉಭಯಮಾತ್ರಂ = ಎರಡು ಮಾತ್ರೆಯನುಳ್ಳದು, ದೀರ್ಘಂ = ದೀರ್ಘಾಕ್ಷರಂ (ಅಪ್ಪುದು) (ಶಮದ. ೦೦ ಟೀಕೆ).

[ದೀರ್ಘ + ಅಕ್ಷರ]

ದೀರ್ಘಾದೇಶ (ನಾ). [ವ್ಯಾಕ] ಒಂದು ಸ್ವರಕ್ಕೆ ಪ್ರತಿಯಾಗಿ ಮತ್ತೊಂದು ದೀರ್ಘಸ್ವರವು ಬರುವುದು : ತುದಿಯೊಳ್ ದೀರ್ಘಾದೇಶಂ ಪೊದಟ್ಟು ಷಷ್ಠೀವಿಭಕ್ತಿಗರೆಬರ ಮತದಿಂ ಪುದಿದಿರ್ಕುಂ (ಕಾಪ್ಯಾವ. ೦೩೬). [ದೀರ್ಘ + ಆದೇಶ]

ದೀರ್ಘಾಯಿತ (ನಾ). [ಸಂಗೀತ] ಇಪ್ಪತ್ತೆರಡು ಶ್ರುತಿಗಮಕಗಳಲ್ಲಿ ಒಂದು : ಸ್ಫುರಿತ . . . ದೀರ್ಘಾಯಿತ [ಪಾಠಾಂ. ದೀರ್ಘಿತ] . . . ಕೋಮಲವೆಂಬ ಇಪ್ಪತ್ತೆರಡೇ ಶ್ರುತಿಗಮಕಗಳೆಂತಲುಂ (ವಿವೇಕ. ೨೪೮). 'ಶ್ರುತಿ' ಪರಾ. [ಸಂ.]

ದೀರ್ಘಾಯು (ನಾ). ೧. ಹೆಚ್ಚು ಕಾಲ ಬದುಕಿರುವಿಕೆ ; ಬಹಳ ಕಾಲದ ಬಾಳು: ಮಾಡುಗೆ . . . ಈಶನಿಷ್ಟಸುಖಮಂ ದುರ್ಗಂಗೆ ದೀರ್ಘಾಯುಮಂ (ಪಂಚತಂ. ೦-೮) ; ಕುಡುಗೆ ಕಂದರ್ಪಂಗೆ ದೀರ್ಘಾಯುವಂ (ಲೀಲಾವ. ೩-೭೦) ; ಎಮಗೀ ಯುಗಕೆ ನೀವಲ್ಲದೆ ದೀರ್ಘಾಯುವಂ ಕೊಡುವವನ ದಾವಂ ವೇಮನಾರಾಧ್ಯ (ಬಸಪು. ೪೬-೪೧) ; ಮಿಗೆ ದೀರ್ಘಾಯುವಿರೆ ಮುನಿದು ಕಲಿ ಜವರಾಯಂ ಕೊಲಲಾಱಂ (ಹಮ್ಮೀರ. ೮-೨೮). ೨. ಹೆಚ್ಚು ಕಾಲ ಬದುಕಿರುವವನು : ದೊರೆಕೊಂಡಂದಧಿಯೋಗಂ ನರಪತಿ ದೀರ್ಘಾಯು ವಿಭವಸಂಯುತನಭಯಂ ನಿರುಜಂ ಸುಖಾನ್ವಿತಂ ಜಿತವಿರೋಧಿ ತಾನೆನಿಸಿ ವರ್ತಿಕುಂ (ಜಾತತಿ. ೧೪-೧೧); ಭಾವಿಸಿ ಪರಸಿದಡೆ ದೀರ್ಘಾಯುವಾಗಿರೆ ಕರುಣಿಸಬೇಕು (ಬಸಪು. ೪೬-೧೭). [ಸಂ.]

ದೀರ್ಘಾಯುಷಿ (ನಾ).=ದೀರ್ಘಾಯು ೨ : ಹಿರಿಯರು ದೀರ್ಘಾಯುಷಿಯಾಗು ಎಂದು ಆಶೀರ್ವದಿಸಿದರು (ರೂಢಿ). [ಸಂ. ದೀರ್ಘಾಯುಷೀನ್]

ದೀರ್ಘಾಯುಷ್ಯ (ನಾ).=ದೀರ್ಘಾಯು ೧ : ವಜ್ರ ವೃಷಭ ನಾರಾಚಾಸ್ಥಿ ಸಂಧಿಬಂಧಮುಂ . . . ಲಕ್ಷಸಮಾಸಮ್ಮಿತಾನಪವರ್ತಿತ ದೀರ್ಘಾಯುಷ್ಯಮುಂ ತನಗನುಸಂಗತಮಾಗೆ (ಶಾಂತಿಪು. ೦೦-೯೪ ವ) ; ಪ್ರಾತಃಕಾಲದಲ್ಲಿ ಏಳದೆ ಬಹಳ ಹೊತ್ತಿನ ತನಕ ಮಲಗಿ ನಿದ್ದೆ ಮಾಡುವವರು ದೀರ್ಘಾಯುಷ್ಯವನ್ನೂ ಘನತೆಯನ್ನೂ ಪಡೆಯಲಾರರು (ಮುಂಬಯಿ. ೪-೧೯೧).

[ದೀರ್ಘ + ಆಯುಷ್ಯ]

ದೀರ್ಘಾಯುಸ್ಸು (ನಾ). ೧.=ದೀರ್ಘಾಯು ೧ : ದೀರ್ಘಾಯುಸ್ಸಿಗಾಗಿ ಪ್ರಾರ್ಥನೆಯಿದ್ದರೂ ಐಹಿಕವಾದ ಪಾರ್ಥಿವಜೀವನವೆ ಶಾಶ್ವತವೆಂದು ಅವರು ಅರಿಯಲಿಲ್ಲ (ಪುಶ್ಶಾರ. ೮೦ ಪೀಠಿಕೆ). ೨. ಕಾಗೆ. ೩. ಮಾರ್ಕಂಡೇಯ. [ಸಂ. ದೀರ್ಘಾಯುಸ್]

ದೀರ್ಘಾಲೋಚನೆ (ನಾ). ಆಳವಾದ ಯೋಚನೆ,-ಚಿಂತನೆ : "ಏನೇ ಮಂಗ್ಲೀ . . . ಭಾಳ ದೀರ್ಘಾಲೋಚನೆ ಮಾಡ್ತಾ ಇರೋ ಹಾಗಿದೆ!" ಎಂದು ನಗೆಯಾಡಿದನು (ಸರ್ವಮಂ. ೩೦೯) ; ಹೂವಯ್ಯ . . . ತಾನು ಸೀತೆಮನೆಯಲ್ಲಿ ಕೇಳಿದ ಒಂದು ವಿಚಾರವನ್ನು ಕುರಿತು ದೀರ್ಘಾಲೋಚನೆ ಮಾಡತೊಡಗಿದ್ದನು (ಕಾನೂರು. ೫೫೯). [ದೀರ್ಘ + ಆಲೋಚನೆ]

ದೀರ್ಘಾವಧಿ (ನಾ). ಬಹಳ ಕಾಲ,-ಅವಧಿ : ಈ ಕೆಲಸಕ್ಕೆ ದೀರ್ಘಾವಧಿ ಬೇಕು (ರೂಢಿ).

ದೀರ್ಘಾವಧಿ ಬೆಳೆ=ಬೆಳೆಯುವುದಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳುವ ಬೆಳೆ : ಈಗ ಬಳಕೆಗೆ ಬಂದಿರುವ ಹೊಸ ಬೇಸಾಯ ಪದ್ಧತಿಯಿಂದ ದೀರ್ಘಾವಧಿ ಬೆಳೆಗಿಂತ ಅಲ್ಪಾವಧಿ ಬೆಳೆಗೆ ಪ್ರೋತ್ಸಾಹ ಹೆಚ್ಚಿದೆ (ರೂಢಿ). **ದೀರ್ಘಾವಧಿ ಯೋಜನೆ** = ಹೆಚ್ಚು ಕಾಲ ತೆಗೆದುಕೊಳ್ಳುವ ಯೋಜನೆ : ಪಂಚವಾರ್ಷಿಕಯೋಜನೆಯ ಜೊತೆಗೆ ದೀರ್ಘಾವಧಿಯೋಜನೆಗಳು ಅಗತ್ಯವೆಂಬುದನ್ನು ನಾವು ಮನಗಂಡಿದ್ದೇವೆ (ರೂಢಿ). **ದೀರ್ಘಾವಧಿ ಸಾಲ** = ಹೆಚ್ಚು ಕಾಲದವರೆಗೆ ಕಂತುಗಳನ್ನು ವಿಸ್ತರಿಸಿದ ಸಾಲ ; ವಾಯಿದೆ ಹೆಚ್ಚು ಇರುವ ಸಾಲ : ಬ್ಯಾಂಕುಗಳು ರೈತರಿಗೆ ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಒದಗಿಸುತ್ತವೆ (ರೂಢಿ).

[ದೀರ್ಘ + ಅವಧಿ]

ದೀರ್ಘಿಕೆ (ನಾ). ೧. ಉದ್ದವಾದ ಕೊಳ : ಕುಂದದೆ ಪೆರ್ಚುವ ತೋಯದಿಂದಮಾ ನಗರದ ಬಾವಿವೊಕ್ಕರಣೆ ದೀರ್ಘಿಕೆ . . . ಪಳ್ಳಮೊಱವೆಂಬ ಜಲಾಶಯಮಿಂತು ಸುತ್ತಲುಂ (ಪುಷ್ಪಪು. ೨-೫೪) ; ಬಗರಗೆ ದೀರ್ಘಿಕೆ ಹೊಕ್ಕರಣೆಯ ಬಾವಿ . . . ಪೂಗೊಳನಿಲ್ಲದ ನಗರವಿಲ್ಲಾ ನಾಡೊಳಗೆ (ರಾಮವಿ. ೨-೨೭). ೨. ಸರಸ್ಸು : ಕಲ್ಯಾಣಿ ; ಪುಷ್ಕರಿಣಿ : "ವಾಪಿ ದೀರ್ಘಿಕೆ ಪರಿಖಾತಂ ದೇವಖಾತಮಕ್ಕುಮಖಾತಂ" (ವಸ್ತುಕೋ. ೨೪-೦೫); ಶತಸಹಸ್ರಮುಖಾವಹ ಜಾನುದಘ್ನ ದೀರ್ಘಿಕಾಂಭಃಕುಲ್ಯಾಪ್ರವಾಹಂ

ಗಳಂ ಜಲದುರ್ಗಂಗಳೆಂದೆ ನೂಂಕಿ ಕದಡಿಯುಂ (ಆದಿಪು. ೮-೪೦ ವ) : ಏನಂ ಪೇಟ್ಟುದೊ ಸಿರಿಯುದ್ದಾನಿಯನೆಣ್ಣೆಯೊಳೆ ತೀವಿ ದೀರ್ಘಿಕೆಗಳನಂತಾ ನೃಪತಿ ನಿಚ್ಚಲಯ್ನೂಱಾನೆಯನವಗಾಹಮಿರಿಸುವಂ ಬೋದನದೊಳ್ (ಪಂಪಭಾ. ೧-೧೭) ; ಕೈರವ ಪುಂಡರೀಕ ಪುಂಡಷಂಡದಿನೆಸೆದಿರ್ಪ ದೀರ್ಘ್ಯಿಕೆಗಳಿಂದ ಮನೋಹರವಾಗಿ ಕುಕ್ಕನೂರುದಿತಯಶೋವಿಧಾನದಿನಳಂಕೃತವಾದುದು ಭೂಮಿಭಾಗದೊಳು (ಶಾಸಪ. ೮೨; 1138). ೩. ನದಿ : ಪಾವನ ಮಲಪ್ರಹರಿಯೆಂಬ ದೀರ್ಘಿಕೆ ಪರಿದಳೆಲ್ಲ ಜೀವಿಗಳಿಗೊಲಿದು (ಗುರುಚಾ. ೧-೧೫). [ಸಂ. ದೀರ್ಘಿಕಾ]

ದೀರ್ಘೀಕರಣ (ನಾ). ೧. ವಿಸ್ತರಿಸುವುದು ; ಲಂಬಗೊಳಿಸುವುದು : "ಉದ್ದವಾಗುವುದು ; ಉದ್ದ ಮಾಡುವುದು ; ದೀರ್ಘೀಕರಣ ; ಲಂಬನೆ" (Elongation. ಇಂಕನಿ). ೨. [ವ್ಯಾಕ] ದೀರ್ಘಸ್ವರ ಪ್ರಯೋಗ ; ಸ್ವರವನ್ನು ಎಳೆದು ಉಚ್ಚರಿಸುವುದು : 'ದೇಗುಲಮಾನ್, ಏಱಿದಾರ್, ತಪ್ಪಾದೆ' ಈ ತೆರದ ದೀರ್ಘೀಕರಣವು ಎಲ್ಲಿಯೂ ಇಲ್ಲ (ಕಸಾಚ. ೬೬).

[ಸಂ.]

ದೀರ್ಘೋಕ್ತಿ (ನಾ). [ವ್ಯಾಕ] ದೀರ್ಘಸ್ವರದ ಪ್ರಯೋಗ: ಸಂಬೋಧನೆ ದೀರ್ಘೋಕ್ತಿಯೊಳಿಂಬಾಗಿರೆ ಬರ್ಕುಂ (ಕವಿರಾ. ೨-೨೩).

[ದೀರ್ಘ + ಉಕ್ತಿ]

ದೀರ್ಘೋಚ್ಛ್ರಿತ (ನಾ). [ಸಂಗೀತ] ಇಪ್ಪತ್ತೆರಡು ಶ್ರುತಿಗಮಕಗಳಲ್ಲಿ ಒಂದು : ಸ್ಫುರಿತ . . . ದೀರ್ಘೋಚ್ಛ್ರಿತ . . . . ಕೋಮಲವೆಂಬ ಇಪ್ಪತ್ತೆರಡೇ ಶ್ರುತಿಗಮಕಗಳೆಂತಲುಂ (ವಿವೇಕ. ೨೪೮). 'ಶ್ರುತಿ' ಪರಾ.

[ದೀರ್ಘ + ಉಚ್ಛ್ರಿತ]

ದೀರ್ಘೋದ್ಯೋಗ (ನಾ). ೧. ಬಹುಕಾಲದವರೆಗೆ ಮಾಡುವ ಕೆಲಸ ; ಸಂತತವಾಗಿ ಮಾಡುವ ಕಾರ್ಯ. ೨. ಸಂತತವಾಗಿ ಮಾಡುವ ಪ್ರಯತ್ನ : ನಿತ್ಯಜೀವನದಲ್ಲಿ ಯಶಸ್ಸು ದೊರೆಯುವುದು ತಾಳ್ಮೆ. ದೀರ್ಘೋದ್ಯೋಗಗಳಿಂದಲೇ ಹೊರತು ಜಾದುವಿನ ಕಳ್ಳದಾರಿಯಿಂದಲ್ಲ (ಕಥಕ. ೧೦೨). [ದೀರ್ಘ + ಉದ್ಯೋಗ]

ದೀರ್ಣ (ಗು). ೧. ಒಡೆದ ; ಸೀಳಿದ. ೨. ಹೆದರಿದ ; ಭಯಗೊಂಡ. ೩. ತೆರೆದ ; ಬಿರಿದ. 'ದೀರ್ಣಾನನ' ಪರಾ. [ಸಂ.]

ದೀರ್ಣಾನನ (ನಾ). ತೆರೆದ ಬಾಯಿ : ರಸನಾಶಂಪಾಶತಂ ಸಂಚಳಿಸೆ ಪುದಿಯೆ ಪೂತ್ಕಾರಮಾ ಶಾಂತಮಂ ದಳ್ಳಿಸೆ ವಹ್ನಿಜ್ವಾಲೆ ದೀರ್ಣಾ [ಪಾಠಾಂ. ನಾಗಾ] ನನ ಕುಹರಸಹಸ್ರಂಗಳಿಂ ಕಣ್ಗಳಿಂದೆಣ್ದೆಸೆಗಂಗಾರಂಗಳೆತ್ತಂ ಕೆದಱಿ ಫಣಸಹಸ್ರಂಗಳಂ ಬಿರ್ಚಿ ಕಣ್ಗರ್ವಿಸಿ ವಜ್ರಾವರ್ತಚಾಪಂ ಪಡೆದುದು ಭಯಮಂ ಕಾಳಕಾಳಾಹಿರೂಪಂ (ಪಂರಾಮಾ. ೫-೭೪).

[ದೀರ್ಣ + ಆನನ]

ದೀವ$_1$, ದೀಹ (ನಾ). ೧. ಬೇಟೆಯಲ್ಲಿ ಕ್ರೂರಮೃಗಗಳನ್ನು ಆಕರ್ಷಿಸುವುದಕ್ಕಾಗಿ ಬಳಸುವ ಪ್ರಾಣಿ; ಬೇಟೆಗೆ ಉಪಯೋಗಿಸಲು ಪಳಗಿಸಿದ ಪ್ರಾಣಿ : ಅಮೃತಮತಿ ಗಡ ಯಶೋಧರನ ಮನಃಪ್ರಿಯೆಯಾಕೆ ದೀವಮಾಗೆ ಪುಳಿಂದಂ ಸುಮನೋಬಾಣಂ ತದ್ಭೂರಮಣನನೊಲಿವಂತೆ ಗೋರಿಗೊಳಿಸುತ್ತಿರ್ಕುಂ(ಯಶೋಧ. ೨-೯). ೨. ಸಾಕಿದ ಪ್ರಾಣಿ. ದೀಹ: ೨. ವೃಕ ಶಾರ್ದೂಲ ಕೇಸರಿ ಕದಲಿ ಕಳಭ ಕ್ರೋಡ ಖಿಳಿ ಲೂಲಾಯ ಸಾರಂಗ ಮದದ ರಹಿಯಲಿ ಮಾನಿಸರು ಸೋಂಕಿದೊಡೆ ಸೆಡೆಯವು ಹೊಲನ ಹೊದಱಿಕ್ಕಿದವು ದೀಹದ ಹಿಂಡಿನಂತಿರೆ (ಕುಮ್ಯಾಅ. ೧೩-೧೬). ೩. ಆಕರ್ಷಣೆಯ ಸಾಧನ ; ಮೋಹವನ್ನುಂಟುಮಾಡುವ ಸಾಧನ: ಎನ್ನ ಪಸರಿಸಿದ ಚಿತ್ರಪಟಮೆಂಬ ದೀಹಕ್ಕೆ ಖೇಚರ ಭೂಚರಯುವಮೃಗಂಗಳೆಳಸಿ ಬಂದು (ಆದಿಪು. ೩-೮೬ ವ) : ಜಾಲಗಾಱನ ಕೈಯ ದೀಹ [ಪಾಠಾಂ. ಪ]ದಂತೆ ಬಾಲೆಯರ ಮನದ ಸೋಲುವೆಯಂತೆ ಇಂತಿವರನಳವಾಡಿ ಸಿಕ್ಕಿಸುವ ಪೋಲಿಗಾಱರಿಗೆಲ್ಲಿಯದೋ ಸತ್ಯ (ಮೋಳಿಮಾ. ೬೫-೨೬೪)-; ಚರಿಸುವ ವಿಚರ ಕರಣವೆಂಬ ಖಗವಿಂಡಿಗಿರದೊಡ್ಡಿದ ದೀಹವೆನಲು ಮೆಱೆದುದು ಸೂಳೆಗೇರಿಯ ಸಾಲು (ಕಂನವಿ. ೬-೯೨).

ದೀವದ ಖಗಮೃಗ = ಸಾಕಿದ ಪಕ್ಷಿ ಮತ್ತು ಪ್ರಾಣಿ : ಉಡುಪಾನನೆ ಗಿಂತೆಯ್ದಿದ ನೋವವಳಡಪ ಡವಕೆ ಕೈಪಿಡಿ ಕೌಳುಡೆ ತೊಡವುಡಿಗೆ ಚಮರ ಸೀಗುರಿ ಬಿಜ್ಜಣ ಮುಡಿವೂ ಕರಗಂಬೊತ್ತ ಮಡದಿಯರ್ಗಂ ದೀವದ ಖಗಮೃಗಕಂ ಬಿಡದಡಿಸಿತು ತರುಮೂಲಮನೊಂದಿದ ಕಡುನೋವಾ ಶಾಖಾ ಸಂತತಿಗಿರದೆಯ್ದುವ ಮಾಳ್ಕೆಯೊಳು (ಜಯಕಾ. ೨-೪೦). ದೀವದ ನವಿಲ್, ದೀಹದ ನವಿಲ್ = ೧. ಹೆಣ್ಣುನವಿಲನ್ನು ಹಿಡಿಯಲು, ಉಪಯೋಗಿಸುವ ನವಿಲು. ೨. ಸಾಕಿದ ನವಿಲು; ಮಯೂರ: ಕಾಮ ಕಾಳೋರಗಲೇಖೆಯಂತೆ ನಿಮಿರ್ವ ನೀಲಮಣಿಸ್ತಂಭದುನ್ಮುಖ ಮಯೂಖಲೇಖೆಯಂ ಕರ್ದುಂಕುವ ದೀವದ ನವಿಲ್ಗಳುಂ . . . ಅತಿ ರಮಣೀಯಮಾಗೆ (ಪಂರಾಮಾ. ೩-೭೫ ವ) : ಹರಿನೀಲಮಣಿಯ ಸೂಸಕದ ನೆಟಲ್ಗಳನಸಿತಾಹಿಗಳೆಂದೊಸೆದೆಳಸುವ ದೀಹದ ನವಿಲ್ಗಳೊಪ್ಪುಗುಮುವ ಱೊಳ್ (ಜಗವಿ. ೯-೦೨೮). ದೀವದ ಪುಲ್ಲೆ, ದೀವದ ಹುಲ್ಲೆ, ದೀಹದ ಪುಲ್ಲೆ, ದೀಹದ ಹುಲ್ಲೆ = ಬೇಟೆಯಲ್ಲಿ ಮೃಗಗಳನ್ನು ಆಕರ್ಷಿಸುವುದಕ್ಕಾಗಿ ಬಳಸುವ ಜಿಂಕೆ,-ಚಿಗರೆ : ಆ ವನಿತೆಯರ್ ಮನೋಜನ ದೀವದ ಪುಲ್ಲೆಗಮನಂಗರಾಜನವರಾಜ್ಞೀವಾಸಕ್ಕಂ ದೊರೆ (ಶಾಂತಿಪು. ೩-೧೯) : ಮನೋಜನ ದೀವದ ಪುಲ್ಲೆಗಳೆನಿಸಿದುವು ನೆರೆದ ಪೆಂಡಿರ ತಂಡಂ (ಸುಕುಮಾ. ೧೧-೨೧) ; ಒಲವಿಂದೆಯ್ದಿ ಪರಿವ ದೀವ [ಪಾಠಾಂ. ಹ]ದ ಹುಲ್ಲೆಗಳನಾ ಲಲನೆ ನೋಡಿದಳು (ಕುರಾಸಾಂ. ೭-೫೭) : ಕರತಳದೊಳ್ ತೀವಿದ ಮಾರಕತಮುದ್ರಿಕೆಯ ಪಸುರ್ವೆಳಗುಗಳನಾ ಪಸುರ್ವುಲ್ಲೆಗೆತ್ತು ಮುಸುಂಡಿನೊಳಾರಯ್ವ ದೀಹ[ಪಾಠಾಂ. ವ]ದ ಪುಲ್ಲೆಯ ಕೊಣಸುಗಳ್ಗೆ ಪುಲ್ಲೆಸಟು ಸೆಟೆದು ನೀಡುತುಂ (ಲೀಲಾವ. ೪-೧೬ ವ); ನಗಿಸುವ ಕೋಡಗಂ ನೆರೆದು ನೋಡುವ ದೀಹದ ಹುಲ್ಲೆ ಸೋಗೆಯಂ ನೆಗಪಿ ತುಡುಂಕಿ ಮೆಟ್ಟುವ ನವಿಲ್ (ಸೂಕ್ತಿಸು. ೧೧-೭೪). ದೀವದ ಬೇಂಟೆ = ಪಕ್ಷಿ, ಪ್ರಾಣಿಗಳನ್ನು ಆಕರ್ಷಣೆಯಾಗಿ ಒಡ್ಡಿ, ಅವುಗಳ ಆಸೆಯಿಂದ ಬರುವ ಇತರ ಪ್ರಾಣಿಗಳನ್ನು ಬೇಟೆಯಾಡುವಿಕೆ ; ಬೇಟೆಯಲ್ಲಿ ಒಂದು ವಿಧ : ದೀವದ ಬೇಂಟೆಯಂ ಬಿನ್ನಪಂಗೆಯ್ವೊಡೆ ಕಟಿವು[ಮು]ಟಿವುಂ ಕಾಪುಂ ಮೇಪುಂ . . . ಆನೆ ಬಲ್ಲೆಂ (ಪಂಪಭಾ. ೫-೪೩ ವ). ದೀವದ ಮೃಗ = ಬೇಟೆಯಲ್ಲಿ ಕ್ರೂರಮೃಗಗಳನ್ನು ಆಕರ್ಷಿಸುವುದಕ್ಕಾಗಿ ಬಳಸುವ ಪ್ರಾಣಿ : ಹಾಸದ ಕುನ್ನಿ ದೀವದ ಮೃಗಂ ಬಲೆ ಪೆರ್ವಡಿ . . . ಎಂಬೀ ಸಮಕಟ್ಟು ಪಾಪದೆಱೆವೆಟ್ಟು ಜಳಸ್ಥಳಪಾರದಿಂ ಕ್ರಿಯೋಲ್ಲಾಸ ಮನುಂಟುಮಾಡಿ ಪೊಱಮಟ್ಟುದು ಬೇಂಟೆಗೆ ಲುಬ್ಧಕವ್ರಜಂ (ಪುಷ್ಪಪು. ೫-೯೯). ದೀವದ ರಾಜಹಂಸೆ=ಸಾಕಿದ ಅರಸಂಚೆ : ಲೀಲಾಲಸಗಮನಮಂ ಗಜಗಮನೆಯರ್ಗುಪದೇಶಂಗೆಯ್ವ ದೀವದ ರಾಜಹಂಸೆಗಳುಮಂ . . . . ಕೊಟ್ಟು ಪಂಡಿತೆಯುಮನೊಡವೋಪಂತು ಮಾಡಿ (ಆದಿಪು. ೪-೫೪ ವ). ದೀವದ ರಾಯ = ಬೇಟೆಯಾಡುವ ಸಾಧನವಾಗಿ ಬಳಸುವ ಪ್ರಾಣಿಗಳಂತೆ ಸೆರೆಯಲ್ಲಿಟ್ಟ ರಾಜ : ಇತರ ರಾಜರನ್ನು ಶರಣಾಗತರಾಗಿ ಮಾಡಲು ಸೆಳೆಯಾಗಿ ಮಾಡಿಕೊಂಡ ರಾಜ: ಕದಪಂ ಪೊಯ್ವನ್ದುದ ಕ್ಕೇಗೊಳಿಸಿ ತಿವುಳನಂ ಗಣ್ಡುದೊತ್ತಾಳ್ದನೊತ್ತಂಬದೆ ಮೂಗಿಟ್ಟೇಱಿದಂ ಮಾಳವನನಿರದೆ ಸಱ್ಱಿಂಬಿನಂ ಮೆಟ್ಟಿಸಿಟ್ಟಿಕ್ಕಿದನಂಗಾಧೀಶನಂ ರಾಯರನೆ ಬದಿಮೊಲಂಗೊಣ್ಡು ತನ್ದತ್ತಿಯಿಂ ದೀವದ ರಾಯರ್ಮ್ಮಾಡಿ ಕಾರಾಗೃಹದೊಳಿರಿಸಿದಂ (ಮೈಆರಿ. ೧೯೨೯, ೬೫-೧೯ ; 1091). ದೀವದ ಹರಿಣಿ = ದೀವದ ಪುಲ್ಲೆ : ಪಚ್ಚೆಯ ಜಗಲಿಯ ಚೆಲ್ವಿಂಗೆ ಕಣ್ದೆಱವಿಯಾದಂತೆ ತೆಱಂಬೊಳೆವ ದೀವದ ಹರಿಣಿಗಳ ಲೋಚನಪ್ರತಿಬಿಂಬಗಳುಂ . . . ಅತಿ

ರಮಣೀಯವಾಗೆ (ಪಂಠಾಮಾ. ೩-೭೫ ಪ). ದೀವದ ಹುಲಿ, ದೀಹದ ಪುಲಿ, ದೀಹದ ಹುಲಿ = ಬೇಟೆಯಲ್ಲಿ ಇತರ ಮೃಗಗಳನ್ನು ಆಕರ್ಷಿಸಲು, ಸೆಳೆಯಾಗಿ ಒಡ್ಡಲು ಉಪಯೋಗಿಸುವ ಹುಲಿ : ಗಿಡಗ ದೀವ[ಪಾಠಾಂ. ಹ] ದ ಹುಲಿ ಸಾಳುವ ಕರಿ ಕೋಣ ಹಿಡಿಯೆರಲೆಯ ಮೊತ್ತವನು ತಡೆಯದೆ ಕೊಂಡೆಯ್ತಂದರು ಬೇಟೆಯ ಕಡುಗಲಿಗಳು (ಕುರಾಸಾಂ. ೨೭-೪೪); ಸಾಹಸದ ಬೇಟೆಯಾಡಲ್ ತೋಹಿನೊಳಂ ನಿಂದು ಬೇಡರಾಡಂಬರದಿಂ ದೀಹದ ಪುಲಿಗಳನಿರಿಸುತೆ ಸೋಹಿದರ್ (ಹಮ್ಮೀರ. ೪-೪೨) ; ಲಂಘಿಸಿ ನೆಲನನೊದೆದು ಪುಟನೆಗೆದು ಗರ್ಜಿಸುತ ಬರೆ ಹೆದಱಿ ಕಂಗೆಟ್ಟು ಡೆಂಡಣಿಸಿ ಸರಳಿಸುವ ಹರಿಣಂಗಳಂ ಮೋದಿ ಮುಱಿದಟ್ಟಿ ಕೆಡಹಿದವು ದೀಹದ ಹುಲಿಗಳು (ಹಡಕಾ. ೫-೩೧). ದೀಹದ ಸಾಳುವ = ಪಕ್ಷಿಗಳ ಬೇಟೆಗೆ ಪಳಗಿಸಿ ಉಪಯೋಗಿಸುವ ಪಕ್ಷಿ ; ಡೇಗೆ : ಬೋಳೆಗಳ ಮಿಟ್ಟೆಗಳ ದೀಹದ ಸಾಳುವನ ಗಳೆಯಂಟುಗಳ ಶಬರಾಳಿ ಬಂದುದು ಪರ್ಣಶಾಲೆಗೆ (ತೊರರಾ. ೩-೩-೩).

[<ಪ್ರಾ. ದೀವಿಆ./ಸಂ. ದೀಪಕ./ತೆಲು. ದೀಮ. ದೀಮು]

ದೀವ$_2$ 'ದೀಪ$_1$' ನೋ.

ದೀವ$_3$, ದೀವಿ$_2$ (ನಾ). ದೀವಿಗೆ ; ಸೊಡರು ; ದೀಪ : "ದೀವ-ದೀಪ = ಸೊಡರು" (ತದ್ಭಕೋ. ೦೯) ; ದೀವಶಬ್ದೋ ದೀಪವಚನಃ (ಶಬ್ದಾನು. ೪೪೧ ವ್ಯಾಖ್ಯಾ). ದೀವಿ$_2$: 'ದೀವಿಜಾಲ' ಪರಾ.

[<ಪ್ರಾ. ದೀವ./ಸಂ. ದೀಪ]

ದೀವ$_4$ (ನಾ). ೧. ಮೀನು ಹಿಡಿಯುವವನು; ಬೆಸ್ತ: "ಧೀವಃ, ಧೀವರಃ = ದೀವಂ" (ಕಾಶಕ್ಯ. ೫೨) ; ಸನ್ಯಾಸಿಯೊಬ್ಬಂ ದೀವನರಸಿಯಂ ಹೋಗು ತಿರ್ದೊಮ್ಮೆ ಬಂದ ಗಾವಳಿಗೆ ಹೆದಱಿ ಅಂಜಣಿಗೆಯೊಳಗಡಗಲಾ ದೀವ ನಱಿಯದೆ ಸುರಿದ ಸುರೆಯಿಂದ ಸತ್ತವಂ ಭಾವಿಸಲು ಲಿಂಗವಾದ ವಿಭಾಂಡೇಶನಂ ಕಂಡನಂದವನೀಶನು (ಹಡಕಾ. ೧೦-೪೩) ; ಮೀನನ್ನು ಹಿಡಿದು ಜೀವಿಸುತ್ತಿದ್ದವರು ದೀವರು (ಕಶಾಅ. ೪೪೨) : ದೀವರ ಹೆಂಗಸರ ಕಳ್ಳನೋಟ, ಯಾರಾರೋ ಹಬ್ಬಿಸಿದ್ದ ಸುದ್ದಿ . . . ಇವೆಲ್ಲ ಅವಳ ಸಾವಿಗೆ ಕಾರಣವಾಗುತ್ತವೆ (ಆಬೋಲೀ. II ಮುನ್ನುಡಿ). ೨. ಬೇಡ ; ಶಬರ : ಕಣುವೆ ಕಾವ ದೀವರಿಗೆ ಅರಮನೆಯವರ ಮುಖಾಂತ್ರ ವಿಂಗಡದಲೂ ಸಲುವದು (ಎಕ. VIII, ತೀರ್ಥಹ. ೯೪-೨೩ ; 1632).

[<ಸಂ. ಧೀವನ್]

ದೀವ$_5$ (ನಾ). (?) : ಆವುದು ಬಾಗಿದುದುಮಧಿಕ ಬಸನಂ ಕೇವಲಮಾಗೆ ನೆಗೆವುದು ಚಿತಾವಯವಂ ದೀ[ಪಾಠಾಂ. ದಿ]ವದಿಂ ನಿಂದು ಸಿತಗನಂ ನುಡಿದುವು ಭಾವಿಸೆ ಬಗೆಗೊಳದಾರ ಕೊರ್ಣದಿಯಂ (ಕವಿಠಾ. ೨-೧೫೦). [?]

ದೀವಗಾಱ (ನಾ). ಪ್ರಾಣಿಗಳನ್ನು ಆಕರ್ಷಣೆಯಾಗಿ ಒಡ್ಡಿ ಅವುಗಳ ಆಸೆಯಿಂದ ಬರುವ ಇತರ ಪ್ರಾಣಿಗಳನ್ನು ವಂಚಿಸಿ ಬಲೆಗೆ ಕೆಡಹುವವನು ; ದೀವದ ಮೃಗಗಳ ಸಹಾಯದಿಂದ ಬೇಟೆಯಾಡುವವನು: ಮನೋಜನೆಂಬ ದೀವಗಾಱನ ಪುಲ್ಲೆಗಳಂತೆ ತಂತಮ್ಮ ಮನೆಯ ಮುಂದಣ ಪಚ್ಚೆಯ ಜಗಲಿಗಳೊಳಂ . . . ತಂಡತಂಡದೆ ನೆರೆದಿರ್ದ ಪೆಂಡವಾಸ ದೊಳ್ವೆಂಡಿರಂ ಕಂಡು (ಪಂಪಭಾ. ೪-೮೪ ಪ). [ದೀವ$_1$ + – ಕಾಱ]

ದೀವಟಿ 'ದೀವಟಿಗೆ' ನೋ.

ದೀವಟಿಕಳ್ಳ 'ದೀವಟಿಗೆಕಳ್ಳ' ನೋ.

ದೀವಟಿಗ, ದೀವಟ್ಟಿಗ (ನಾ). ದೀಪವನ್ನು ಹಿಡಿಯುವವನು; ಪಂಜು ಹಿಡಿಯುವ ವೃತ್ತಿಯವನು : ಕರ್ಗತ್ತಲೆಯೊಳಿಡೆಯಾಡುತೆಡಹದಂತೆ ತನಗೆ ತಾಂ ದೀವಟಿಗನಾದನೊ . . . ಎಂದೆನಿಸಿ ಮೆಱೆದನಚಳಿತ ಸಿದ್ಧನು (ಸಿದ್ಧರಾ. ೭-೩೯) : ಅಟಿಗ ಪ್ರತ್ಯಯಕ್ಕೆ-ಕೊಲ್ಲಟಿಗಂ, ದೀವಟಿಗಂ, ಮಾವಟಿಗಂ (ಶಮದ. ೨೦೪ ಪ್ರಯೋ) : ರವಿಶಶಿಗಳೊಪ್ಪುವ ದೀವಟಿಗರು (ತೊರರಾ. ೧-೮-೬೩) : ದೀವಟಿಗರು ಕೊಟ್ಟಿಗೆಯರು ವರತುರಗಾವಳಿಗಳ ನೆಱೆ ಪಿಡಿವ ಕೋವಿದನಿವಹ ಗಜಾರೋಹಕರ ಗೃಹ ತೀವಿಹುವಾ ಪಟ್ಟಣದೆ (ಕಂನವಿ. ೬-೫೭); ಇಬ್ಬರು ದೀವಟಿಗರು . . . ಅವರವರ ಮನೆ ಮುಟ್ಟ ಹೋಗಿ ತಲಪಿಸಿದರು (ಸವತಿ. ೪೨). ದೀವಟ್ಟಿಗ : ತೆಗೆಸು ಚೂಣಿಯ ಬಲವ ದೀವಟ್ಟಿಗರ ಕರೆಕರೆ ತೈಲಪೂರ್ಣದ ತೊಗಲ ಕುನಿಕಿಲ ಬಂಡಿ ಕವಿಯಲಿ ಕೋಟಿ ಸಂಖ್ಯೆಯಲಿ (ಕುವ್ಯಾದ್ರೋ. ೧೫-೩೨); ℙ ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪ.

[ದೀವ$_3$ + –ಅಟಿಗ; ℙ ಇದನ್ನು ದೀವಟಿಗೆ + – ಅ$_7$ ಎಂದೂ ಬಿಡಿಸಬಹುದು.]

ದೀವಟಿಗೆ, ದಿವಟಿ, ದೀವಟಿ (ನಾ). ಪಂಜು ; ಹಿಲಾಲು : "ಪಂಜುಃ = ದೀವಟಿಗೆ" (ಕಾಶಕ್ಯ. ೬೫) : ಕಾಂತಿಯಿಂದಂಗಡಿಗಳೊಳ್ ಸರ್ವಜನತಾ ಗೃಹಾಂತದೊಳ್ ದೊರೆದೊರೆಗಳೋಲಗದೊಳೊಪ್ಪಿದುವನಂತದೀಪಂ ದೊಡ್ಡದೀವಟಿಗೆಗಳ್ ನಭದ ನಕ್ಷತ್ರಜಾಲದಂತೆ (ಜಿಬಪು. ೪೮-೩೨) : ದೆಸೆದೆಸೆಗಳ ಬೆಳಗುತ ದೀವಟಿಗೆಗಳೆಸೆದುವು (ಕಂನವಿ. ೮-೨೨) : ದೀವಟಿಗೆಗಳನ್ನು ಹಿಡಿದುಕೊಂಡು ಹೋಗಿ ನೆಲಮಾಳಿಗೆಗಳನ್ನೆಲ್ಲಾ ಹುಡುಕಿದರು (ಶ್ರೀರಾಯ. ೧೩೦) : ದಾಸಿಯರು ಕೈಯ ದೀವಟಿಗೆಗಳಿಗೆ ಗುಗ್ಗುಳವನ್ನೆರಚಿ ಉರಿ ಮಾಡಿದರು (ಸವತಿ. ೪) : ದೀವಟಿಗೆ ಮುಂದೆ ದೀಪವೇ (ಗಾದೆ). ದಿವಟಿ : ಕರದ ದಿವಟಿ ಹಿಲಾಲುಗಳ ಭಾಸುರ ಜಗಂಜ್ಯೋತಿಗಳ ಕಾಂತಿಸ್ಫುರಿತ ಸೂರ್ಯಜ್ಯೋತಿಗಳ ಸಾಲುಗಳು ಬೆಳಬೆಳಗೇ (ಅನಂರಾ. ೧-೨೪-೩೫). ದೀವಟಿ : 'ದೀವಟಿಕಳ್ಳ' ಪರಾ; ℙ ದಿವಟಿ, ದೀವಟಿ ಎರಡೂ ಶಬ್ದಗಳು 'ದೀವಟಿಗೆ' ಎಂಬುದರ ಸವಕಳಿ ರೂಪವಿರಬಹುದೆ ?

ದೀವಟಿಗೆಯವ = ದೀವಟಿಗ : ಚಾವಡಿಯ ಕಾವಲ್ಗಾರರು ನೀಠುಗಂಟ ದೀವಟಿಗೆಯವ . . . ಕಂದಾಚಾರದವರು ಕಳ್ಳಬಂಟರು ಅವರು ಇವರು-ಎಲ್ಲಾರ್ಗೂವೆ, ಸೇನಾಯಮುದ್ರೆ, ಕಡತದ ಕಾಣಿಕೆ . . . ಅದು, ಇದು-ಎನ್ನುತ ಎಲ್ಲಾವನ್ನೂ ಸಲ್ಲಿಸಿಕೊಳ್ಳುತ್ತಾರೆ (ಬಿಟ್ಟಅ. ೧೫೫-೨೦); ಆಟದವನಿಗೆ ದೀವಟಿಗೆಯವನ ಮೇಲೇ ಕಣ್ಣು (ಗಾದೆ).

[?./ಸಂ. ದೀಪವರ್ತಿಕಾ./ಮರಾ. ದಿವಟೀ./ತೆಲು. ದೀವಟಿ, ದೀವಟೀ, ದಿವ್ವಟಿ]

ದೀವಟಿಗೆಕಳ್ಳ, ದೀವಟಿಕಳ್ಳ (ನಾ). ಬೆಂಕಿ ಹೊತ್ತಿಸಿ ಅದರ ದೆಸೆಯಿಂದಾದ ಅವಸ್ಥೆಯಲ್ಲಿ ಕಳ್ಳತನ ಮಾಡುವವನು; ಪಂಜು ಹಿಡಿದು ಸೂರೆ ಮಾಡುವ ಕಳ್ಳ; ಪಂಜುಗಳ್ಳ: ಹಿಂದೆ ದೀವಟಿಗೆ ಕಳ್ಳರ ಹಾವಳಿ ಬಹಳವಾಗಿತ್ತು (ರೂಢಿ). ದೀವಟಿಕಳ್ಳ : (ಕಿ).

[ದೀವಟಿಗೆ + ಕಳ್ಳ$_1$]

ದೀವಟಿಗೆಮಾನ್ಯ (ನಾ). ದೀವಟಿಗರಿಗೆ ಕೊಟ್ಟ ಉಂಬಳಿ,-ವೃತ್ತಿ; ದೀಪ ಹಿಡಿಯುವವರಿಗೆ ಉಪಯೋಗಕ್ಕಾಗಿ ಕೊಟ್ಟ ಭೂಮಿ : (ಕಿ).

[ದೀವಟಿಗೆ + ಮಾನ್ಯ]

ದೀವಟಿಗೆವೆಣ್ (ನಾ). ದೀಪವನ್ನು ಹಿಡಿಯುವವಳು; ದೀಪವನ್ನು ಹಿಡಿಯುವ ಸೇವಕಿ: ಕಾಳಾಂಜಿ ಕುಂಚ ಹಡಪ ಪಾವುಗೆ ರತ್ನದಾಲವಟ್ಟವು ಬೊಂಬಾಳ ಸಾಲ ದೀವಟಿಗೆವೆಣ್ಗಳು ಭೂಪನಿದಿರಿನೊಳ್ ಮೇಳದೊಳೆಸೆ ದರರ್ತಿಯಲಿ (ಕಂನವಿ. ೮-೫೧). [ದೀವಟಿಗೆ + ಪೆಣ್]

ದೀವಟಿಗೆ ಸಲಾಂ, ದೀವಟಿಗೆ ಸಲಾಮು (ನಾ). ಪ್ರತಿದಿನ ಸಾಯಂಕಾಲ, ರಾಜ, ಗುರು ಮತ್ತು ಇತರ ಶ್ರೇಷ್ಠಪುರುಷರುಗಳ ಅಥವಾ ದೇವತಾವಿಗ್ರಹಗಳ ಮುಂದೆ ಉರಿಯುತ್ತಿರುವ ಪಂಜುಗಳನ್ನಾಡಿಸಿ ಗೌರವ ಸೂಚಿಸುವ ಒಂದು ಆಚರಣೆ : ಪಟ್ಟದಾನೆ ಕುದುರೆಗಳು ನದೀತೀರಕ್ಕೆ ಪೋಗಿ ಅಲ್ಲಿ ಆಗತಕ್ಕ ಪೂಜೆ ದೀವಟಿಗೆ ಸಲಾಂ

ಮೊದಲಾದುದನ್ನು ನೆರವೇರಿಸಿಕೊಂಡು ಬರುತ್ತಲಿರುವ ಸಮಯದಲ್ಲಿ ದೊರೆಗಳವರಿಗೆ ದೀವಟಿಗೆಸಲಾಂ ಆದ ನಂತರ (ಮಹಾಪಂ. I, ೩೬); ಆ ಕಂಬಕ್ಕೆ ಈಗಲೂ ಮಹಾಪೂಜೆ ವೇಳೆ, ದೀವಟಿಗೇಸಲಾಂ ಮಾಡಿ ಮಹಾಪೂಜೆಗೆ ಆಮಂತ್ರಣ ಕೊಡುವ ಪದ್ಧತಿ ಇದೆ (ತುಳುನಾ. ೦೧೯). **ದೀವಟಿಗೆಸಲಾಮು** : (ಕಿ). [ದೀವಟಿಗೆ + ಸಲಾಂ]

ದೀವಟಿಗೆಸಲಾಮು 'ದೀವಟಿಗೆಸಲಾಂ' ನೋ.

ದೀವಟಿಗೆಸೇವೆ (ನಾ). ಪಂಜುಗಳಿಂದ ನೀವಳಿಸಿ ಸಲ್ಲಿಸುವ ಸೇವೆ : ನೋಡ ಬನ್ನಿರೊ ಜನರು ಶ್ರೀಕೃಷ್ಣನ ಜೋಡು ದೀವಟಿಗೆ ಸೇವೆ (ಪುರಂದ. ೨-೪೨ ಪಲ್ಲವಿ) ; ದೀವಟಿಗೆಸೇವೆಯಾದ ನಂತರ ದೇವರ ಮೆರವಣಿಗೆ ಹೊರಡುತ್ತದೆ (ರೂಢಿ). [ದೀವಟಿಗೆ + ಸೇವೆ$_1$]

ದೀವಟ್ಟಿಗ 'ದೀವಟಿಗ' ನೋ.

ದೀವಬ್ಬರಸಿ (ನಾ). ಒಬ್ಬಾಕೆಯ ಹೆಸರು : ಶ್ರೀವಧು ಧರೆ ಪೋಟಲ್ಲೋ ರಾವ ನ್ರಿಪಙ್ಗಗ್ರಮಹಿಷಿ ಭುವನಾಂಬಿಕೆ ವಾಗ್ದೇವಿಯರ ದೊರೆಯರೆನಿಸಿದ ದೀವಬ್ಬರಸಿಯರ ದೊರೆಗೆಟ್ಟರ್ ಪೆಱರೊಳರೆ (ಎಕ. X, ಮುಳಿಕಾ. ೩೮-೩; ಸು. 890). [ದೀವಬ್ಬೆ + ಅರಸಿ]

ದೀವಬ್ಬೆ (ನಾ). ಒಬ್ಬಾಕೆಯ ಹೆಸರು: ಸ್ವಸ್ತಿ ಶ್ರೀಮದ್ ಸಕರರ ಸೂಳೆಯಬ್ಬೆಯ ಮಗಳ್ದೀವಬ್ಬೆ ಮಾಡಿಸಿದ ತೂಮ್ಬು (ಎಕ. IX (8), ಚನ್ನಪ. ೨೮೬-೨ ; 886). [ದೀವ$_0$ + ಅಬ್ಬೆ$_1$]

ದೀವರಿಗೆ (ನಾ). ಒಂದು ಬಗೆಯ ಸಸ್ಯ : ದೇವಗರಿಗೆ . . . ದೀವರಿಗೆ, ಕಾಡುಜೀರಕ (ಮೃಜಿಗಿ. ೩೮-೭೫೯). [?]

ದೀವಸ, ಧೀವಸ (ನಾ). ೧. ಬುದ್ಧಿಗೆ ಸಂಬಂಧಿಸಿದುದು; ಆಲೋಚನೆ; ಅಭಿಪ್ರಾಯ. ೨. ಧೈರ್ಯ ; ಕೆಚ್ಚು : ಇರುಳಳಿದೀ ದಿವಸವ ದೀವಸಂ ಮಾಳ್ಪ ತರಣಿ ತರಣಿಗಂಬರವನು ವಿರಚಿಸಿದಬ್ಬರುಹನೆ ಪರಿಕಿಸದಿಂತು ಪರಶಿವನೇಕೆ ಪೆತ್ತನೊಯೆಂದ (ಸೂಲಸೋ. ೨೩-೫೭) : ಇನಿಸುಂ ಚೊಕ್ಕಳಿಕೆಯ ದೀವಸಮೋಸರಿಸದೆ ತಕ್ಕಳಿಯದೆ ತದ್ದೀರೋದಾತ್ತಂ ಮೇರುವಿನಂತಿರ್ದಂ (ಜಯಕಾ. ೧೬-೧೫). **ಧೀವಸ** : ೨. "ಧೀವಸಮೆಂ ದೆನಲುಸಿರ್ದೆಂ ಧೈರ್ಯಾರ್ಥಮಂ" (ಚತುನಿ. ೧೦೭). ೩. ನಿಷ್ಠೆ; ದಾರ್ಢ್ಯ: ದೇಶಿಯನಾಡಿದಳು ಪರವೆನಾಚಿ ವಲ್ಮೀಕನಾಥನ ಮುಂಬಿನೊಳು ರಸಿಕರೆ ದೆಯನಲ್ಲಾಡಿಸುತ ಯತಿಜನದ ಧೀವಸವನೀಡಾಡುತ (ಸೌಂದಪು. ೮-೧೧). ೪. ಉದ್ಧಟತನ ; ಧಾರ್ಷ್ಟ್ಯ : ಕೊಡಲು ಹುಸಿದಡವಿಗಟ್ಟಿ ಬೈಚಿಟ್ಟ ನೆಂಬುದನಿಂತು ಎಸೆವ ವೇದಂಗಳೊಳು ಕೇಳಿ ಪೊಗಳುವಡರಿದು ನಿನ್ನ ಧೀವಸವೆಂದನು (ಹಜಕಾ. ೨-೦೮). [<ಸಂ. ಧೀವಶ]

ದೀವಸಂಗೆಡು (ಕ್ರಿ). ಧೈರ್ಯಗೆಡು : ಬಗೆದನಂದು ಪೂರ್ವಾಚಲದೊಳು ಆವರಿಸಿ ಜಗವ ದಶದಿಶೆಯ ಮುದ್ರಿಸಿದ ತಮ ದೀವಸಂಗೆಟ್ಟೋಡೆ ಮುಂಚೂಣಿಯೊಳ್ಪದ್ಮಿನೀವಲ್ಲಭಂ (ಕೊಟ್ಟೂಲ. ೩-೩).

[ದೀವಸ + ಕೆಡು$_1$]

ದೀವಸಿ, ಧೀವಸಿ (ನಾ). ದಿಟ್ಟ ; ಸಾಹಸಿ ; ಶೂರ : ದೊರೆಗಳೊಡನೀ ಥಟ್ಟಿಗೊಬ್ಬನೆ ನಿಲುವೆನೆಂದನದಾವ ಸತ್ವನಿಧಿ . . . ಈ ಪರಿ ಮುಟ್ಟೆ ದೀವಸಿಯಾವನೆಂದುದು ನಿಖಿಳ ಪರಿವಾರ (ಕುಪ್ಯಾಗ. ೫-೪೪). **ಧೀವಸಿ** : ಬಿರುದಭಟರೌಕಿದರು ರಾಯನ ಧುರದ ಧೀವಸಿಗಳು ನಿಹಾರದಲುರ ವಣಿಸಿದರು ಶಲ್ಯನಂಬಿನ ಮಳೆಯ ಮನ್ನಿಸದೆ (ಕುಪ್ಯಾಶ. ೨-೪೨).

[<ಸಂ. ಧೀವಶಿನ್]

ದೀವಸಿಅಮಾವಾಸ್ಯೆ 'ದಿವಶೀಅಮಾವಾಸ್ಯೆ' ನೋ.

ದೀವಸಿಕೆ (ನಾ). ಧೈರ್ಯ ; ಸಾಹಸ : ಬಿಸಿಲು ಮಳೆ ಚಳಿಗಳಿಗೆ ಸಲೆ ಸೈರಿಸುವ ದೇಹವೆ ನಿನ್ನದಿದು ದೀವಸಿಕೆಗಾವಂಜುವೆವು [ಪಾಕಾಂ. ಧೀವಸತನ ಕ್ಕಾವಂಜುವೆವು] (ತೊರರಾ. ೨-೩-೩೫). [ದೀವಸ + – ಇಕೆ]

ದೀವಸಿಗ, ಧೀವಸಿಗ (ನಾ).=ದೀವಸಿ : ದೇವ ದನುಜ ನರೋರಗರ ಸುಭಟಾವಳಿಯೊಳಿವನಂತೆ ಧೈರ್ಯದ ದೀವಸಿಗರುಂಟೇ ವಿಚಾರಿಸಲೆಂದನಸುರೇಂದ್ರ (ತೊರರಾ.೬-೨೦-೫೬); "ಜಾಗರೂಕನಾದವನು, ಎಚ್ಚರಿಕೆಯುಳ್ಳವನು, ಸಾಹಸಿ" (ಪ್ರಭಣ್ಣ); ಆವ ದೀವಸಿಗನ ಆಟಪಾಟ ಕೂಟಗಳಲ್ಲಿ ಕಲೆತು, ಆ ನಿಶ್ಚಿಂತಸ್ಥಿತಿಯ ಉತ್ಸವದ ಆನನ್ದದ ಅನ್ತಸ್ಸತ್ತ್ವದಿಂದ ಜೀವಿಸಿದ್ದೆವೋ, ಆ ಕಂಠೀರವನು . . . ತಪ್ಪಿಸಿಕೊಂಡು . . . ಬದುಕಿಕೊಂಡನು (ವಿಗಡ. ೩೪-೧೨). **ಧೀವಸಿಗ** : ಹ್ಯಾವಾಡಿಗನನು ಗೆಲುವೆ ನೆನುತಲಿ ಧೀವಸಿಗ ತಿರುಗಿದನು ಪುನರಪಿ ತಾಯ ಮಂದಿರಕೆ (ಪ್ರಹ್ಲಾಚ. ೪-೬). [ದೀವಸ + –ಇಗ]

ದೀವಳಿ 'ದಿವಾಳಿ$_1$' ನೋ.

ದೀವಳಿಗೆ 'ದೀಪಾಳಿಗೆ' ನೋ.

ದೀವಾಣ 'ದಿವಾಣ' ನೋ.

ದೀವಾಳಿಗೆ 'ದೀಪಾಳಿಗೆ' ನೋ.

ದೀವಾಳೀಚರಧವಳ (ನಾ). ಒಂದು ಬಿರುದು (?) : ಸೋಮೇಶ್ವರ ದಾಸಿಯಾಶ್ರಿತಜನಕಲ್ಪವೃಕ್ಷಂ ದೀವಾಳೀಚರಧವಳಂ (ಎಇ. XII, ೨೬೯-೧೧ ; 1040). [?]

ದೀವಿ$_1$ 'ದೀಪ$_1$' ನೋ.

ದೀವಿ$_2$ 'ದೀವ$_3$' ನೋ.

ದೀವಿ$_3$ (ನಾ). (?) : "ವಂಕಿಯೆನೆ ದೀವಿ[ಪಾಕಾಂ. ದಿವ] ಮೇದರಕತ್ತಿಯಕ್ಕು" (ಮಂಗರಾ. ೦೧೩-೮). [?]

ದೀವಿಕರೆ (ನಾ). ದ್ವೀಪದ ತಡಿ,–ತೀರ : ದೀವಿಕರೆಯರೆಗಳಿನ್ ಮೊಳಗೆ ಮಾರುಲಿಗಳ್ ಬೆದರಿ, ಎದೆಗುಂದಿ, ಪೆಚ್ಚಾದರೆಮ್ಮವರು ಕೇಳ್ದೊಡನೆ ! (ಪಾರಸಿ. ೧೫-೩೫೪). [ದೀವಿ$_1$ (<ದೀಪ$_1$) + ಕರೆ$_4$]

ದೀವಿಗೆ (ನಾ). ಸೊಡರು; ದೀಪ : "ಆ ದೀವಿಗೆ ಜ್ಯೋತಿ ದೀಪ್ತಿ ಗೃಹ ಭಾನುವಕ್ಕು" (ಮಂಗರಾ. ೬೧-೧೮); ದೀವಿಗೆಗಳ್ ಜಲಕ್ಕನೆಕ್ಕೆಕ್ಕೆಯಿನಿಟ್ಟಳಂ ಬೆಳಗುತಿರ್ದುವೆರಟ್ಟಿಸೆಯೊಡ್ಡಣಂಗಳೊಳ್ (ಪಂಪಭಾ. ೧೨-೫); ದೀವಿಗೆಗಳಂ ಪಿಡಿದು ದೀಪಧಾರಿಣಿಯರ್ವಂದು (ಕಾದಂಉ. ೩೨೨); ಕೊಸಗಿನ ಪೂವಿನೊಪ್ಪು ಸುರಹೊನ್ನೆಯ ಪುಷ್ಪದ ಚೆಲ್ವು . . . ರಂಜಿಸೆ ವನದೇವಿಯರ್ ನಲಿದು ಮನ್ಮಥರಾಜನ ಬರ್ಪುದಕ್ಕೆ ರಾಗಿಸಿ ಮನವೊಲ್ದು ಪೊತ್ತಿಸಿದ ದೀವಿಗೆಯಂದದಿನೊಪ್ಪಿ ತೋಱುಗುಂ (ಧರ್ಮಾಮ್ಯ. ೧೩-೧೩) : ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಂತೆ ಆನು ಮಾಡಿದ ಭಕ್ತಿ ಎನಗಿಂತಾಯಿತ್ತು (ಬಸವ. ೮೯೦) ; ಪಲವುಂ ದೀವಿಗೆಗಳ್ . . . ಒಪ್ಪು ತಿರ್ದುವಾ ಮನೆಮನೆಯೊಳ್ (ಗಿರಿಕ. ೪-೮೦) : ಎರಡು ಬಲದಲಿ ಹಿಡಿದ ದೀವಿಗೆ ನಂದಿದವು (ಕುಪ್ಯಾದ್ರೋ. ೧೬-೬).

ದೀವಿಗೆಯೆಣ್ಣೆ = ದೀಪ ಉರಿಸಲು ಬಳಸುವ ಹರಳೆಣ್ಣೆ, ಎಳ್ಳೆಣ್ಣೆ, ಹೊಂಗೆಯೆಣ್ಣೆ ಮುಂತಾದುವು : (ಕಿ). [< ಸಂ. ದೀಪಿಕಾ]

ದೀವಿಗೆಗಂಬ (ನಾ).=ದೀಪಕಂಭ ೧ : ಮಿಗೆ ರಮ್ಯವಡೆದ ಹೊಂಬರಿಯಣ ತಳಿಗೆ ತಂಬಿಗೆ ಗಿಂಡಿ ಗಿಣ್ಣಲುಗಳನು ನಗೆಮೊಗದರ್ಪಣ ಹಂಸೆ ಪುತ್ತಳಿಯ ದೀವಿಗೆಗಂಬಗಳನಿತ್ತನೊಲಿದು (ಮೋಹತ. ೧೫-೧೮).

[ದೀವಿಗೆ + ಕಂಬ$_1$ (< ಕಂಭ)]

ದೀವಿಗೆವಿಡಿ (ಕ್ರಿ). ದೀಪವನ್ನು ಹಿಡಿ: ಉಸಿರನಾರೈದು ನಿರ್ಜೀವನೆಂದೆಂದು ಶಂಕಿಸಿ ನೋಡಲಮ್ಮದೊಯ್ಯನೆ ದೂರದಿಂದೆ ದೀವಿಗೆವಿಡಿದು ದಿಟ್ಟಿಸಿದರು (ಸಿದ್ಧರಾ. ೨-೪). [ದೀವಿಗೆ + ಪಿಡಿ$_1$]

ದೀವಿಜಾಲ (ನಾ). ದೀಪಗಳ ಸಾಲು,–ಶ್ರೇಣಿ,–ಸಮೂಹ : ತಳತಳಿಪ ದೀವಿಜಾಲಮಂ ಸಂದಳಿಸಿರೆ (ಬೊಂಕಶಾ. ೧೯೪೫, ಬಂಕಾಪುರ. ೨೬-೪ ; 1076). [ದೀವಿ$_2$ (<ದೀವ$_3$) + ಜಾಲ$_1$]

ದೀವಿನಾಡು (ನಾ). ದ್ವೀಪದ ಪ್ರದೇಶ: ಕೇಳಿ ಬಲ್ಲೆವು ಲಂಕೆಯಂ ತೆಂಕಣದ ಕಡಲ ನಡುವಣ ದೀವಿನಾಡಂ (ಶ್ರೀರಾಮಾ. ೨೯೬-೨೯೯).

[ದೀವಿ$_1$ (<ದೀಪ$_1$) + ನಾಡು]

ದೀವಿಸು (ಕ್ರಿ). ಆಶೀರ್ವದಿಸಂ; ಆಶೀರ್ವಾದ ಮಾಡಂ; ಹರಸು: "ಎಲೈ ಭಕ್ತರೇ ನಿಮಗೂ ಮಹಿಳೇಶ್ವರಿಗೂ ಶಿವಾನುಗ್ರಹಮುಂಟಾಗಲಿ" ಎಂದು ದೀವಿಸಿದರು (ಪುರಾವಿ. ೧೬೭). [← ತೆಲು. ದೀವಿಂಚು]

ದೀವಿಹಲಸು (ನಾ). ಒಂದಂ ಬಗೆಯಂ ಹಲಸು; ಸೀಮೆಹಲಸು; ದ್ವೀಪದ ಹಲಸು: ಸೀಮೆಹಲಸು, ದೀವಿಹಲಸು, ರೊಟ್ಟೀಹಲಸು (ಮೃಚಿಗಿ. ೯-೧೬೦); ಆಲೂಗಡ್ಡೆ . . . ಬಾಳೆಕಾಯಿ, ದೀವಿಹಲಸು, ಹಲಸಿನ ಕಾಯಿಯ ಸೊಳೆ ಇತ್ಯಾದಿಗಳನ್ನೂ ಈ ರೀತಿ ಕರಿಯಬಹುದು (ಅಡುಸೌ. ೯೦). [ದೀವಿ$_1$ (<ದೀಪ$_1$) + ಹಲಸು (<ಪನಸು)]

ದೀಹ 'ದೀವ$_1$' ನೋ.

ದೀಹಳಿಗೆ 'ದೀಪಾಳಿಗೆ' ನೋ.

ದೀಹಾರ (ನಾ). ದೀಹದ ಮೃಗಗಳನ್ನು ಇಡುವ ಜಾಗ,-ಸ್ಥಳ: ಇದು ದೀಹಾರದ ಗೇಹದಂತೆ ಹರಿಣೀರಮ್ಯಂ ಗ್ರಹಗ್ರಾಮದಂತುದಿತಕ್ರೋಡ ವಿಭಾಸಿ ಕೋಶಗೃಹದಂತಷ್ಟಾಪದಾಧಿಷ್ಠಿತಂ ಕದನೋರ್ವೀತಳದಂತೆ ದಾರುಣಚಮೂರಾವಸ್ಥಿತಕ್ಷೋಭಿತಂ ಮದವತ್ಕುಂಜರಗಾತ್ರದಂತೆ ವಿಳಸ ದ್ಭಭ್ರೂಪ್ರಭಾವಿಧ್ರಮಂ (ಪುಷ್ಪಪು. ೫-೬೮): "ದೇಹಾರ (ದೇವಾರ ಎಂದಿರಬಹುದು)" (ಪುಷ್ಪಪು. ಅಡಿಟಿ). [ದೀಹ (<ದೀವ$_1$)+<ಆಗಾರ]

ದು, ದೂ (ನಾ). ಎರಡು ಎಂಬ ಸಂಖ್ಯೆ: ಏಕದ್ವಿತ್ರಿ ಚತುಃ ಶಬ್ದಾಕೃತಿಗೆಕ್ಕ ದುತಿಚೌಗಳಾದೇಶಂಗಳ್ (ಕಮದ. ೨೯೦). 'ದುಗುಣ', 'ದುಗ್ಗಾಣಿ' ಪರಾ. ದೂ: "ದು (ದೂ)-ದ್ವಿ=ಎರಡು" (ತದ್ಭಕೋ. ೨೦). 'ದೂಜಾವ' ಪರಾ. [<ಸಂ. ದ್ವಿ]

ದುಂ (ನಾ). ಒಂದು ಅನುಕರಣ ಶಬ್ದ: ದುಡುಹೆಂಬ ದುಮ್ಮೆಂಬ . . . ಖಣಿಲೆಂಬ ಕಟಲೆಂಬ ದನಿ (ವೀಶ್ಯಪು. ೨-೦೦-೮); 'ದುಂ' 'ದುಂ' ಎಂಬ ಸಪ್ಪಳ ಮಾಡುವ ವಾದ್ಯಗಳನ್ನು ಬಾರಿಸಿ ಹಾಡುವ ವಾಡಿಕೆಯು ಮೊದಲಿ ನಿಂದಲೂ ಬಂದಿದೆ (ಕನ್ನಜಾ. ೯೩).

ದುಂಕಿ (ನಾ). (ಕರಾ) ಗಾಣವನ್ನು ಎಳೆಯುವಾಗ ಗಾಣದ ಮರಕ್ಕೆ ಸಮತೋಲನ ಬರುವಂತೆ ಮಾಡಲು ಗಾಣದ ಮರದ ಮೇಲೆ ಇಡುವ ಭಾರ: ಹೂಡಲಿಕ್ಕೆ ಬರದ ಎತ್ತು ಗಾಣಕ್ಕೆ ಕಟ್ಟಿದರೆ ದುಂಕಿ ಎಳೆದೀತೇ (ರೂಢಿ). [?]

ದುಂಡಂಕಿ 'ದುಂಡಂಕೆ' ನೋ.

ದುಂಡಂಕೆ, ದುಂಡಂಕಿ (ನಾ). ಪೂರ್ಣ ಅಂಕಿ; ಬಟುವು ಸಂಖ್ಯೆ: ಕೃಪಣತನ ಇಲ್ಲಿಯೂ ಬಿಡಲಿಲ್ಲವೊ? ದುಂಡಂಕೆ ಹೇಳಬೇಕು (ಗಾಳಿಪ ೨೨). ದುಂಡಂಕಿ: ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದಾಗಲೆಲ್ಲ ಸಾಮಾನ್ಯವಾಗಿ ದುಂಡಂಕಿ ಹಾಕು ತ್ತಾರೆ (ರೂಢಿ). [ದುಂಡು$_1$ + ಅಂಕ್ಕೆ]

ದುಂಡಂಚು (ನಾ). ಸೀರೆ, ಪಂಚೆ ಮೊದಲಾದುವುಗಳ ದಪ್ಪವಾದ ಅಂಚು,-ಗುಂಡಂಚು,-ದುಂಡಾಕಾರವಾಗಿರುವ ಅಂಚು.

ದುಂಡಂಚಿನ ಪಂಚೆ = ಗುಂಡಂಚಿನ ದೋತರ: ದುಂಡಂಚಿನ ಪಂಚೆ ಉಟ್ಟುಕೊಂಡು ಜರೀಶಲ್ಯ ಹೊದ್ದುಕೊಂಡು ರಾಯರು ಹೊರಟರು(ರೂಢಿ). 'ದುಂಡಂಚಿನ ಸೀರೆ =ದಪ್ಪದಾದ ಅಂಚಿನ ಸೀರೆ; ಗುಂಡಂಚಿನ ಸೀರೆ: ದುಂಡಂಚಿನ ಸೀರೆ ತುಂಬಾ ಬಾಳಿಕೆ ಬರುತ್ತದೆ (ರೂಢಿ).

[ದುಂಡು$_1$ + ಅಂಚು$_2$]

ದುಂಡಕ್ಕಿ (ನಾ). ೧. ಗುಂಡಗಿರುವ ಅಕ್ಕಿ: ಹಂಡಕ್ಕಿ ದುಂಡಕ್ಕಿ ದುಂಡು ರಾಜಣದಕ್ಕಿ . . . ನೆಲ್ಲಕ್ಕಿ ಬಂದವೆ ನಮ್ಮ ಅರಮನೆಗೆ (ನಾಪದ. ೧೧೫). ೨. ನುಚಾ ಗದ ಅಕ್ಕಿ. [ದುಂಡು$_1$ + ಅಕ್ಕಿ$_1$]

ದುಂಡಗೆ$_1$ (ನಾ). ಒಬ್ಬಾತನ ಹೆಸರು (?): ಪುತ್ತೂರುಡೆ ಶಿವಮಾರಮ್ಮಂ ದುಣ್ಡಗೆರ್ಗ್ಗಂ ನಲ್ಲತ್ತೂರೊಡೆ ಒಗ್ಗಮನೆ ಬಳೆಗಮಂ ಅಯ್ದೂಮ್ಬು ಮೆದ ಕಟನಿಯು ಎಟ್ಟೂಮ್ಬು ಬಾಳೆತೊಟ್ಟಪ್ಪಟ್ಟು ಬ್ರಹ್ಮದೇಯಂ ಕೊಟ್ಟೋದು (ಎಕ. X, ಕೋಲಾರ. ೨೩೦-೩ : ಸು. 800 ?). [?]

ದುಂಡಗೆ$_2$ (ಅ). ೧. ಗುಂಡಾಗಿ; ವರ್ತುಲಾಕಾರವಾಗಿ: ಪೃಥ್ವಿ . . . ಗೋಲವದೆ ಅಂದರೆ ಕಿತ್ತಳೇ ಹಣ್ಣಿನಂತೆ ದುಂಡಗದೆ (ಮುಂಬಯಿ. ೪-೬೪); ದಪ್ಪಗೆ, ದುಂಡಗೆ, ಏನನೊ ಒಂದನು ಉರುಳಿಸಿಕೊಂಡವ ತಂದ. ದಪ್ಪಗೆ, ನುಣ್ಣಗೆ, ದುಂಡಗೆ ಇರುವುದು, ಅಜ್ಜ ಇದೇನೆಂದು ಕೇಳಲು ಬಂದ (ಇಂಗೀತ. ೩೨-೦೧). ೨. ತುಂಬಿಕೊಂಡಿರುವಂತೆ; ದಪ್ಪವಾಗಿ: ದುಂಡಗೆ ಇರುವ ತೆನೆಗಳ ಭಾರದಿಂದ ಜೋಳದ ದಂಟುಗಳು ತಲೆಯನ್ನು ಬೊಗ್ಗಿಸಿವೆ (ಮಂಜುಳ. ೨). ೩. ಬೋಳಾಗಿ. 'ದುರುದುಂಡಗೆ' ಪರಾ.

ದುಂಡಗಿಡು=ಗಂಟುಮಾಡು; ದೊಡ್ಡ ಮೊತ್ತವಾಗಿಸು: ಹೊಟ್ಟೆನೆತ್ತಿ ಕಟ್ಟಿ ನಾವು ದುಡ್ಡನ್ನು ದುಂಡಗಿಡುತ್ತೇವೆ (ಜಮೀನ್ಯಾ. ೧೯). ದುಂಡಗೆ ಮಾಡು = ಕೂಡಿಡು; ಪೇರಿಸಿಡು: ಆಟವು ಮುಗಿಯುತ್ತ ಬಂದಿತು, ರೂಪಾಯಿಗಳನ್ನು ದುಂಡಗೆ ಮಾಡಹತ್ತಿದರು (ಕೂತಕಾ. ೨೫).

[ದುಂಡು$_1$ + – ಅಗೆ$_3$]

ದುಂಡನೆ (ಗು). ದುಂಡಗಿರುವ; ದಪ್ಪನಾದ: ಪಕ್ಕದ ಕುರ್ಚಿಯ ಪೀಠದಿ ಸುಖದಾಸನವಂ ಕೊಂಡಿಹ ಮಾಟದಿ ದುಂಡನೆ ಕಾಲ್ಗಳ ಮೇಲೆತ್ತಿಟ್ಟು ಹೊಟ್ಟೆಯ ಮೇಗಡೆ ಸೊಂಡಿಲನಿಟ್ಟು (ಗಣೇಶ.೨-೩೩). [ದುಂಡು$_1$+–ಅನೆ$_1$]

ದುಂಡರಳ್ಗಡಲೆ (ನಾ). ದುಂಡಗೆ ಹುರಿದು ಉಪ್ಪು ಕಾರ ಬೆರಸಿದ ಕಡಲೆ; ಉಪ್ಪುಗಡಲೆ (?): ಸಂಡಿಗೆ ಸಂಭಾರಗಡಲೆ . . . ದುಂಡರಳ್ಗಡಲೆ ಭಕ್ಷ್ಯಗಳ ಬಡ್ಡಿಸಿಕೊಳುತುಂಡರು ನೆಱ್ ಸೊಕ್ಕುವನಕ (ಮೋಹತ. ೦೮-೮೭). [ದುಂಡು$_1$ + ಅರಳ್$_3$ + ಕಡಲೆ]

ದುಂಡರಿಸು (ಕ್ರಿ). (ಉಕ) ಹೊಟ್ಟೆ ತೊಳಸು; ಹೊಟ್ಟೆಯಲ್ಲಿ ಮರಳಿ ದಂತಾಗು: ಅವಳಿಗೆ ಹೊಟ್ಟೆದುಂಡರಿಸಿತು, ಕಾರಿಬಿಟ್ಟಳು (ರೂಢಿ).

[<ದುಂಡು$_1$ + – ಇಸು$_3$]

ದುಂಡಾಪು (ನಾ). ದುಂಡಾಗಿರುವ ಒಂದು ಬಗೆಯ ಆಪುಹುಲ್ಲು: "ತೃಣಚ್ಛದಃ – ದುಂಡಾಪಿನ ಹುಲ್ಲು" (ಓಷಧಿ. ೭೨); "ದೀರ್ಘನಾಳಂ-ದುಂಡಾಪು" (ಓಷಧಿ. ೭೬); "ಪೇಲವ-ಮುಸ್ತೆ, ದುಂಡಾಪು" (ಓಷಧಿ. ೦೦೩).

[ದುಂಡು$_1$ + ಆಪು$_1$]

ದುಂಡಾಮ (ನಾ). ಒಂದು ಬಗೆಯ ಸಸ್ಯ: "ಅನಾಹ್ವಯಃ-ದುಂಡಾಮ" (ಓಷಧಿ. ೬). [ದುಂಡು$_1$ + ಆಮ$_2$]

ದುಂಡಾವರ್ತಿ (ನಾ). ೧. ಪುಂಡತನ; ಪುಂಡಾಟಿಕೆ: ಅಂಥಾ ದುಂಡಾ ವರ್ತಿಯವರೇನು ನಮ್ಮವರು (ಮಾಮನೆ. ೧೬೫); ಅಡ್ಡಿ ಬಂದರೆ ದುಂಡಾ ವರ್ತಿಯ ಹೆಸರಿನಲ್ಲಿ ಪೋಲೀಸಿನವರ ಸಹಾಯ ಪಡೆಯಬಹುದು (ಗಂಗಾಳ. ೩೪); ೨. ಪುಂಡಾಟಿಕೆ ಮಾಡುವವನು; ಪುಂಡ: ತಮಸಾವನದಿಂದ ಮುಂದೆ ಪ್ರಯಾಣ ಮಾಡಿ ಜಾಲಂಧರನಾಡಿಗೆ ಬಂದೆವು. ಇಲ್ಲಿಯ ಜನ ದುಂಡಾವರ್ತಿಗಳು (ಪ್ರವಾಇ. I, ೨೦೬). [ದುಂಡು$_2$ + <ವೃತ್ತಿ$_2$?]

ದುಂಡಿ$_1$ (ನಾ). ೧. ಹೆಂಗಸು; ಸ್ತ್ರೀ: ಗಂಡಗೆ ತಕ್ಕಂಥ ದುಂಡೀರು ಬರುತಾರೆ ಗಂಡನ ಮಡದೀ ನಡಿ ಮುಂದೆ (ನಾಪದ. ೨೬). ೨. ಮೈತುಂಬಿಕೊಂಡಿರು ವವಳು; ಚೆಲುವೆ: ದುಂಡಿ ನಿನ್ನಯ ಕೈಯ ತೋಱು ನೀನುಂಡೂಟ ಕಂಡ ಕನಸ ಹೇಳುವೆನು (ನೇಮಿಸಂ. ೨೦-೫೫); ದುಡುದುಡನೆಯ್ತಂದು ದುಂಡಿಯರಾ ಚೆಲ್ವರೊಡೆಯನ ಚೆಲ್ವ ನೋಡಿದರು (ಭರಣ. ೨೦-೭೪); ದುಂಡೀ ನಿನ ಗಂಡ ಪ್ರಚಂಡ ಉದ್ದಂಡ ದನುಜರ ಗಂಟಲಗಾಣ (ಶ್ರೀಕೃಪಾ. ೭೬); ಕೈ ತಾರೆ ದುಂಡೀ ಕೈ ನೋಡಿ ಕಣಿಯಾನು ಹೇಳ್ತೀನಿ (ಹುಟ್ಟಹ. ೪೩). [←ತೆಲು. ದುಂಡಿ]

ದುಂಡಿ₃ (ನಾ). ಗುಂಡಗಿರುವ ಕಲ್ಲು ; ಕಲ್ಲುಗುಂಡು : ದುಂಡಿಯ ಹೊಱಸಲಿ ಗುಂಡಿಯ ಕೂಡಲಿ ಹೆಂಡೆ ಕಲ್ಲಿನೊಳಿಟ್ಟು ಕೊಲಲಿ ಖಂಡವ ಕೊಯ್ಕೆ ಸಾಲವ ತಿದ್ದದಿರುಯೆಂದು ವೊಂಡ ಹೇಳಿದ ಮಗನೊಡನೆ (ಅಮುಸಾಂ. ೩-೧೩೦) : ನೆಲದ ಹೊಟ್ಟೆ ಬದುಕ ನೋಡು ಗಟ್ಟಿಗಲ್ಲು ಹಿಟ್ಟು ಮಟ್ಟ ಪದರು ಗುಂಡು ದುಂಡಿ ಬಂಡೆ (ಮೂತರ್ತಿಕಾ. ೧೩-೩) ; ತಣ್ಣೀರಿನ ವುಣ್ಣುಹರವಿಯಲ್ಲ. ಕಾದ ಕಬ್ಬುನದ ಕೆಂಡದ ದುಂಡಿ ! ಕಂಗೆಂಡದ ಹೆದ್ದುಂಡಿ ! (ತುಂಗಭ. ೧೦೯) ; ಪೂಡಾರಿಯು ತನ್ನ ಎರಡೂ ಕೈಗಳಿಂದ ಆ ದುಂಡಿಯನ್ನು ಎತ್ತುವನು (ಗಂಗಾಸಾ. ೧೪); ಭಲ್ಲರು . . . ಶತ್ರುಗಳ ವೇಲೆ ಒಗೆಯುವುದಕ್ಕೆ ದೊಡ್ಡ ದೊಡ್ಡ ದುಂಡಿಗಳು ಇಟ್ಟುಕೊಂಡು . . . ಸಿದ್ಧರಾಗಿದ್ದರು (ಶಕ್ರಸಾ. ೮೦). [<ದುಂಡು₁]

ದುಂಡಿ₃ 'ದಿಂಡ₁' ನೋ.

ದುಂಡಿಗ 'ದಿಂಡ₁' ನೋ.

ದುಂಡಿಗು (ನಾ). ೧. ಬೇಲಿಗೆ ಹಾಕಲು ಉಪಯೋಗಿಸುವ ವೊನೆಯಾದ ಎಲೆಗಳನ್ನುಳ್ಳ ಒಂದು ಬಗೆಯ ಸಸ್ಯ : (ಕ). [?]

ದುಂಡಿಗೆ (ನಾ). (?): ಅರಸರ ದಂಡ್ಡಿಗೆವೆರಸಿಬ್ಬ ವೊನ್ನ ಕೆಯ್ದಿಱಿಯಪ್ಪಂ ಗೊಪ್ಪಸಿವೆಂನ್ದು ತನ್ದು ಭಗವನ್ತರ ಕಯ್ಗಳಾನಿ ಕೊಟ್ಟು (ಎಳ III, ನೇಜನ. ೭೪-೧೩ ; ಸು. ೪೦೦). [?]

ದುಂಡಿಜೆ (ನಾ). ಚದುರಂಗ ಅಥವಾ ಪಗಡೆಯಾಟದ ಕಾಯಿ : "ಮಂಡಿಜೆಯು ಮಂ ಬಸುಗೆ ಸಾರಿಯಿಂದಕ್ಕುಂ" (ಕಬ್ಕಿಕ್ಕ. ೮೦) : "ದುಂಡಿಜೆಯು ಬಸುಗೆಯನೆ ಸಾರಿ" (ಕಲ್ಕಮಂ. ೪೦). [?]

ದುಂಡಿಸು (ಕ್ರಿ). ೧. ಗುಂಡಾಗುವಂತೆ ಮಾಡು; ಸುತ್ತು : ಕಡುವೇಗದಿಂದ ಲಂಘಿಸುತ ಬಾಲವನು ಕಾನೊಡನೆ ದುಂಡಿಸುತ ಬಾಯ್ದೆಱೆದು (ಜ್ಞಾನಚ. ೧೨-೫೭). ೨. ವರ್ತುಲಾಕಾರವಾಗಿ ಚಲಿಸು; ಸುತ್ತುಹಾಕು; ತಿರುಗು: ಹಿಂದೆ ಮೆಟ್ಟುವ ಕೆಲಕೆ ಚಿಮ್ಮುವ ದುಂಡಿಸಿ ನೆಗೆವ . . . ಸುಕಳಾಶ್ವಮಂ ವೇಗದಿಂ ಬೆಂಗೆವಾಯ್ದು (ಗಿರಿಕ. ೨-೧೦೫ ವ) : ಲೀಲೆ ಕಾಲಾದಂತೆ ತಿರುಗಿ ಬಂದಾಡುತುಂ ದುಂಡಿಸಿ ಪುಟಂ ನೆಗೆದು ವೆರ್ಚಿ ಪೊರೆಯೇಱುತುಂ . . . ಇಂತು ಮಧ್ಯಾಹ್ನಪರ್ಯಂತವರ್ಚಿಸಿ (ಶಾಮರ. ಹ. ೨೩೦-೦೪): "ಪ್ರದಕ್ಷಿಣೆ ಹಾಕು" (ಶಾಮರ. ಹ. ಕೋಶ) : ಹೊಳೆವ ದುಂಡಿಸುವೊತ್ತುವೆತ್ತುವ ಮಲೆವ . . . ಕಡವುಗಳ ಬಿಡದಳಲಿಸುವ ಸೂಳೆಳತೆಯಂ ಕೈಕೊಂಡುದಾ ತುರಗಂ (ಕುಮುರಾ. ೭-೭೦); ಎಡಿವ ಕಡಿಗಡಿಸಿ ವಾರ್ವ ದುಂಡಿವ ದಿಂಡು ವಾಯ್ವ ... ಕೈಕೊಳದ ಬಗೆಯಂ ಬಗೆದಂತೆ ಕಂಡು (ರಾಜಶೇ. ೬-೧೦೮). ೩. ಚಲಿಸು; ಹೊರಳು; ಚಂಚಲವಾಗು : ತೊಂದು ವಿಕ್ಕುದು ಮುಖ ರಸಂ ಜವ್ವನಂ ಮಸಗೆ ದುಂಡಿಸಲ್ತೊಡಗಿದವು ಕಂಗಳಿರಡುಂ ದೆಸೆಗೆ ... ನವಯವ್ವನಂ ಪೇಱುತಿರೆ (ನಿಂಬರ.ಕ.೪೦೬-೭೦). ೪. ವಕ್ರವಾಗಿ ಚಲಿಸು ; ಅಂಕುಡೊಂಕಾಗಿ ಚಲಿಸು ; ನುಣುಚಿಕೊಳ್ಳು : ಕಂಡುದು ಮೃಗಮಲ್ಲಿ ಭಯಗೊಂಡುದು ವೆಪ್ಪಳಿಸುತದಿರುತೋಡಲ್ಕೆ ಕರಂ ದುಂಡಿಸುತಿರ್ದವುದಂ ದುರುಚಂಡಾಸ್ಯದಿನಚಲ ಶಬರನಿಸೆ ಕಾನನದೊಳ್ (ಗಿರಿಕ. ೧-೯೦). ೫. ಮೈ ತುಂಬಿಕೊಂಡಿರು ; ದಷ್ಟಪುಷ್ಟವಾಗಿರು : ನಿಱಿಗಳನಿಕ್ಕಿ ದಾಂಟಿಸದೆ ದುಂಡಿಸುವಾಕೆಯನೊತ್ತಿಗೊಳ್ಳದಂತೆಱಿಪುದು . . . ಮತ್ತೆ ವೇಸಿ ವೆಜರವ್ವದವೋಲ್ ಸ್ಮರಭೈರವಂಗೆ ವೆಣ್ಣುಱಿಗಳನಿಕ್ಕದೊಂದೆರಡನೇಂ ವಿಟವೃತ್ತಿಗೆ ಮುಯ್ವನಾಂಪುದೇ (ಲೀಲಾವ. ೨-೯೩) ; ದುಂಡಿಸಿ ಬಂಕದಿಂ ಬಿಗಿದ ವೆರ್ವೊಲೆಗಳ್ (ಕಾವ್ಯಸಾ. ೩೮೩) : ತಿರುಜವ್ವನದ ಕನ್ನೆವೆಣ್ಣು ದುಂಡಿಸಿದ ನುಣ್ಪಿನ ವೆಯ್ಪೊಬಗು (ಪುಂತ್ರಶ. ೮೯-೧೮). ೬. ಒಟ್ಟಾಗು ; ದಟ್ಟವಿಸು ; ಗುಂಪಾಗು : ಗುಂಡು ಹಾರಕಾವ ಬಂಡೇವು ತೂರಕಾವ ಮುಂಡ ಬಾಗಿ ಜನತಂಡ ನಿಂತ ದೊರೆಸದರ ವೆಟ್ಟಲು ದುಂಡಿಸಿ ಕೀರಿಟ್ಟು ನುಡಿ ಕಾಳ ಹೆಬ್ಬಾಗಿಲಕ (ಕೋಳಗೀ. ೩೦೦). [ದುಂಡು₁ + – ಇಸು₃]

ದುಂಡು₁ (ನಾ). ೧. ಚೆಂಡಿನಂತೆ ಗುಂಡಾಗಿರುವುದು,–ಬಟ್ಟುವಾದುದು; ವೃತ್ತಾಕಾರವಾಗಿರುವುದು : ದುಂಡು ಉಕ್ಕಿನ ದಪ್ಪ . . . ೨॥ ಇಂಚಿನ ತನಕ ಇರುತ್ತದೆ (ಮುಂಬವ್ಯಾ. ೧೨೭). ೨. ವರ್ತುಲ; ಮಂಡಲ; ವೃತ್ತ : ಆ ವರ್ತುಲದ ಸುತ್ತ ಇನ್ನೊಂದು ದೊಡ್ಡ ದುಂಡು ಸುತ್ತಿ, ಈಗ ವೊದಲಿನದು ಚಿಕ್ಕದಾಯಿತಲ್ಲ ಎಂದನಂತೆ ! (ಪ್ರಹಾಸ. ೯). ೩. ಒಂದು ಬಗೆಯ ಟೊಳ್ಳಾದ ಕೈಬಳೆ ; ಕಡಗ : (ಕ). ೪. ಸ್ಥೂಲವಾದುದು ; ತುಂಬಿಕೊಂಡಿರುವುದು; ದಷ್ಟಪುಷ್ಟವಾದುದು : ಆನೆಯು ಮೆಯ್ಯುಟ್ಟು ದುಂಡು (ಮುಂಬಯಿ. ೪-೨೩).

ದುಂಡಾಗು = ದಪ್ಪವಪುಷ್ಟವಾಗು ; ದಪ್ಪವಾಗು : ಕೆಲವು ಮಕ್ಕಳಿಗೆ ಏನು ತಿನ್ನಿಸಿದರೂ ಅವು ದುಂಡಾಗುವುದಿಲ್ಲ (ಕೂಥಿ). **ದುಂಡಾಡು** = ಹಾಲಿನಿಂದ ತುಂಬಿಕೊಳ್ಳು ; ಕಾಳಾಗು : ಧತ್ತ ದುಂಡಾಡುತ್ತಿವೆ (ಕೂಥಿ). **ದುಂಡು ತಗಡು** = ವರ್ತುಲಾಕಾರದ ಲೋಹದ ಹಾಳೆ : ಆ ದೀಪದ ಬೆಳಕಿನ ದಾರಿಯಲ್ಲಿ, ಸುಮಾರು ಮೂವತ್ತು ರಂಧ್ರಗಳಿಂದೊಡಗೂಡಿದ ಒಂದು ದುಂಡು ತಗಡನ್ನಿಟ್ಟರುತ್ತಾರೆ (ವಿಜ್ಞಾವಿ. ೯೮).

[ದೇ.ಪ್ರ ತುಳು. ದುಂಡು, ದೊಂಡಿ]

ದುಂಡು₂ (ನಾ). ಧೂರ್ತ : ಮಿಂಡ ದುಂಡು [ಪಾಣಾಂ. ಡಿ] ಗಳರ್ಥಿಕಾಜಿರು ಗಂಡಿಗರು ಗರ್ವಿತರು . . . ಖಂಡಿಯದ ಕಲಿಕೆಗಳ ತರಳರ ತಂಡ ಕೂಡಿತು (ತೊಡರಾ. ೩-೩-೦೪). [←ತೆಲು. ದುಂಡಗ = ಧೂರ್ತಕೃತ್ಯ]

ದುಂಡುಕಡಗ (ನಾ). = ದುಂಡು₁ ೩ : (ಕ). [ದುಂಡು₁ + ಕಡಗ]

ದುಂಡುಕರ (ನಾ). ಒಂದು ಬಗೆಯ ಮರ ; ಅಳಂಗಿ : (ಕ). [?]

ದುಂಡುಕಳ್ಳಿ 'ದುಂಡುಗಳ್ಳಿ' ನೋ.

ದುಂಡುಕೆ (ನಾ). ಒಂದು ಬಗೆಯ ಸಸ್ಯ : "ಱುಡೂಕ – ದುಂಡುಕೆ" (ಓಷಧಿ. ೬೪). [?]

ದುಂಡುಗಳ್ಳಿ, ದುಂಡುಕಳ್ಳಿ (ನಾ). ಒಂದು ಬಗೆಯ ಕಳ್ಳಿ : (ಕ). **ದುಂಡು ಕಳ್ಳಿ** : (ಪಂಡಿತ. ೮೮). [ದುಂಡು₁ + ಕಳ್ಳಿ₂]

ದುಂಡುಗಾಮುಂಡ (ನಾ). ಒಬ್ಬಾತನ ಹೆಸರು : ಶ್ರೀವುರದಾ ದುಣ್ದು ಗಾಮುಣ್ದರಾ ತೋಣ್ಪದಾ ಪಡುವಾಯೊನ್ದು ತೋಣ್ಪ (ಎಳ. IV, ನಾಗಮಂ. ೮೫-೬೭ ; 776). [ದುಂಡು₁ + ಗಾಮುಂಡ]

ದುಂಡುತಗಸಿ (ನಾ). ಒಂದು ಬಗೆಯ ಅಗಸೆ : ಸೊಪ್ಪುಗಳು : ಅಗಸೆ ... ಬಿಳೀಸಾಸಿವೆ, ಕಾರೇ, ದುಂಡುತಗಸಿ, ಸಕೋಟಿ (ನಮ್ಮನು. ೨೩೭).

[ದುಂಡು₁ + ತಗಸಿ (< ತಗಚಿ)]

ದುಂಡುದಂಡೆ (ನಾ). ದುಂಡಾದ ಮಾಲೆ; ಗುಂಡಾಗಿ ಕಟ್ಟಿರುವ ಹಾರ : ಸಂಪಗೆಯ ದುಂಡುದಂಡೆಗಲುಂಪಂ ಮಲ್ಲಿಗೆಯ ದಂಡೆಯುಂ ಕೆಳೆಗೊಳಿಪಂ ತಿಂಪಡರೆ ತೋಳ್ಗೆ ಪೌಕ್ಕಿಕದಿಂ ಪುದಿದುರು ಬಾಹುಪೂರಮುಂ ಪದದಿತ್ತಳ್ (ರಾಜಶೇ. ೮-೨೩). [ದುಂಡು₁ + ದಂಡೆ₁]

ದುಂಡುದೋಳು (ನಾ). ತುಂಬಿದ ತೋಳು; ಶಕ್ತಿಯುತವಾದ ಬಾಹು : ಚಿಂಡಾಡಿದಂತೆ ಕುಂಭವನೆತ್ತಿ ಗಜಗಳ ಸುಂಡಿಲ ನಗುಪ ಚಿಲ್ವಿಕೆಯ ದುಂಡುದೋಳೆತ್ತಿ ಸ್ವಾಮಿಯ ವೇಲೆ ಸುರಿವನಖಂಡಿತದವ್ಯತಧಾರೆಗಳಾ (ಭರಕ. ೧೬-೯೮) : ಇಳೆಯ ಸೋಂಕುವ ದುಂಡುದೋಳು ಬೆಳಗುತ ವಾಕಾ೯ದ ಫಣಿವನ ಫಣಾವಳಿಯ ರತ್ನವ ಪಳಚಿದುವು (ಕಂನವಿ. ೨೦-೨೬).

[ದುಂಡು₁ + ತೋಳು (<ತೋಳ್)]

ದುಂಡುಬಳೆ (ನಾ). = ದುಂಡು₁ ೩ : (ಕ). [ದುಂಡು₁ + ಬಳೆ₃]

ದುಂಡುಭ (ನಾ). ನೀರು ಹಾವು : ಬಳ್ಳೆ : "ದುಂಡುಭಂ ರಾಜಳನೆನಲೊಳ್ಳಿಗಕ್ಕು ನಾಮಂ" (ಪುಂಗರಾ. ೧೧೬-೩). [ಸಂ.]

ದುಂಡುಮಲ್ಲಿಗೆ (ನಾ). ಒಂದು ಬಗೆಯ ಮಲ್ಲಿಗೆ; ಗುಂಡುಮಲ್ಲಿಗೆ : ಮಾಧವಿ : "ದುಂಡುಮಲ್ಲಿಗೆಯು ಪ್ರಮದನಿಯಕ್ಕುಂ" (ಪುಂಗರಾ.

೩೮-೨೪) : "ವೃತ್ತಮಲ್ಲಿಕಾ–ದುಂಡುಮಲ್ಲಿಗೆ" (ಓಷಧಿ. ೧೩೮) : ಓಜೆಯಿಂ ದುಂಡುಮಲ್ಲಿಗೆಯ ಪದಕವನಿತ್ತು ಮರುಗದೊಡ್ಡಣಿಗಳಿಂ ಗಜಚರ್ಮಮಂ ತೊಡಿಸಿ (ಪುಷ್ಪರ. ೧೦-೮) : ಎಳೆವರೆಯದ ಪುರುಷನನೆಳೆವೆಂಗಳು ನಲಿದಪ್ಪಿದೊಂದು ವಿಲಾಸ ಎಳೆಮಾವನಪ್ಪಿದ ದುಂಡುಮಲ್ಲಿಗೆಗಳಂತಿಳೆಗೊಪ್ಪುತಿಹುದು (ಭರತ. ೭-೭) ; ಕತ್ತುರಿ ಸೇವಂತಿಗೆ ದುಂಡುಮಲ್ಲಿಗೆ ಮೊತ್ತದ ಜಾಜಿ ಸಂಪಗೆಯ ಇತ್ತರದಲಿ ಮಾಲೆಗಟ್ಟಿ ಮಾಱುವ ಹೆಂಗಳರ್ತಿಯನೇನ ಬಣ್ಣಿಸುವೆ (ಕಂನವಿ. ೬-೮೨) ; ಮಾಧವೀಪುಷ್ಪವನ್ನು (ದುಂಡುಮಲ್ಲಿಗೆ) ಧರಿಸುವುದರಿಂದ ವಾತ ಶ್ಲೇಷ್ಮಗಳು ನಾಶವಾಗುವುವು (ಸಕವೈ. ೪೪).

ದುಂಡುಮಲ್ಲಿಗೆಗೋಲು = ಗುಂಡುಮಲ್ಲಿಗೆ ಹೂವಿನ ಬಾಣ ; (ಮನ್ಮಥನ) ಹೂಬಾಣ : ಮಂಡಳಿಸಿರ್ದ ಮಾನಿನಿರನ್ನೆಯರ ನೋಡಿ ಕಂಡ ನಿಷ್ಕಾಮಾತುರರು ದುಂಡುಮಲ್ಲಿಗೆಗೋಲು ತಾಗಲು ತಪಗೆಟ್ಟು ಬೆಂಡಾದರತಿವಿರಹದಲಿ (ಮೋಹತ. ೪೧-೨೨). [ದುಂಡು$_1$ + ಮಲ್ಲಿಗೆ]

ದುಂಡುಮುಖ (ನಾ). ಗುಂಡಗಿರುವ ಮುಖ : ಬಟ್ಟತಲೆ, ದುಂಡುಮುಖ, ಕಿವಿಯವರೆಗೂ ಕಣ್ಣು, ಇಷ್ಟಾಗಿ ಶಾಸ್ತ್ರಕ್ಕೆ ಹತ್ತು ಕೂದಲು (ದೀಪಮ. ೪೧-೨೨). [ದುಂಡು$_1$ + ಮುಖ]

ದುಂಡುಮುಡಿ (ನಾ). ಗುಂಡಾಗಿ ಕಟ್ಟಿದ ತುರುಬು,–ಗಂಟು : ಹೊಸ ಹೊಂಗೇದಗೆಯೆಸಳ್ಗಳ್ ನವಶಸ್ತ್ರತತಿ ದುಂಡುಮುಡಿಯೆ ಪೀಲಿಯ ಪಳಯಿಗೆಯನೆ ತೊಂಡೆದುಟಿಯ ತರುಣೀರತ್ನದ ನುಣ್ಮಂಡೆ ಮನೋಭವನೇಱುವ ಪೂದೇರಂದದಿನೊಪ್ಪಿದುದು (ಜಯಕಾ. ೫-೬).

[ದುಂಡು$_1$ + ಮುಡಿ$_3$]

ದುಂಡುಮುತ್ತು (ನಾ). ಗುಂಡಾಗಿರುವ ಮುತ್ತು, – ಮೌಕ್ತಿಕ : ತಂಡ ತಂಡದಿ ಹೊಱವಳಯದಿ ಡಿಂಡೀರಪಾಂಡುರ ಶಂಖಪ್ರವಾಳ ದುಂಡುಮುತ್ತುಗಳಿಂದೆ ಮೇರೆಯಬ್ಧಿಯ ಕೊರಲ್ದಂಡೆಯಂತಿರ್ದುದೇನೆಂಬೆ (ಮೋಹತ. ೨-೬) : ದುಂಡುಮುತ್ತಿನ ರತ್ನ ಕೇವಣಿಸಿದ ಹೊನ್ನ ತೊಂಡಲ ಸೂಡಿದು ಮುದದಿ ಖಂಡೇಂದುಮುಖಕೆ ಕತ್ತುರಿಯಿಟ್ಟು (ಮೋಹತ. ೧೩-೬೫). [ದುಂಡು$_1$ + ಮುತ್ತು$_5$]

ದುಂಡುಮೇಜು (ನಾ). ವರ್ತುಲಾಕೃತಿಯ ಮೇಲ್ಮೈಯುಳ್ಳ ಮೇಜು; ವರ್ತುಲಾಕಾರದ ಮೇಜು: ಕಾಫೀಭವನದ ಸುಂದರವಾದ ಕೈದೋಟದಲ್ಲಿ ಒಂದು ದುಂಡುಮೇಜಿನ ಸುತ್ತಲೂ ನಾವು ಕುಳಿತಿದ್ದೆವು (ಚೆಂದುಟಿ. ೪೧).

ದುಂಡುಮೇಜಿನ ಪರಿಷತ್ತು, ದುಂಡುಮೇಜು ಪರಿಷತ್ತು="ಎಲ್ಲ ಸದಸ್ಯರಿಗೂ ಸಮಾನ ಗೌರವವಿರುವ ಸಮ್ಮೇಳನ; ಮಂಡಲ ಗೋಷ್ಠಿ ; ದುಂಡಂಮೇಜಿನ ಪರಿಷತ್ತು" (Round table conference. ಇಂಕನಿ) : ಬಳಿಯ ಹೊಂಡದ ದುಂಡುಮೇಜು ಪರಿಷತ್ತಿನಲಿ ಕಪ್ಪೆಗಳು ಚಪ್ಪಾಳೆ ತಟ್ಟಿ, ಜಿಗಿದಾಡುತಿವೆ ತಮ್ಮ ಪಕ್ಷವೆ ಕೊನೆಗೆ ಗೆದ್ದ ಹಾಗೆ! (ದೀಪಧಾ. ೧೦-೧೬). ದುಂಡುಮೇಜಿನ ಸಭೆ = ದುಂಡುಮೇಜಿನ ಪರಿಷತ್ತು : ೧೯೩೧ರಲ್ಲಿ ಇಂಗ್ಲೆಂಡಿನಲ್ಲಿ ನಡೆದ ದುಂಡುಮೇಜಿನ ಸಭೆಯಲ್ಲಿ ಗಾಂಧೀಜಿ ಪಾಲ್ಗೊಂಡಿದ್ದರು (ರೂಢಿ). [ದುಂಡು$_1$ + ಮೇಜು]

ದುಂಡುಮೊಗ (ನಾ). = ದುಂಡುಮುಖ : ದುಂಡುಮೊಗ ತಿದ್ದಿ ಬೆಳೆದಿತ್ತು (ರಕ್ಷಧ್ವ. ೩೩೦). [ದುಂಡು$_1$ + ಮೊಗ]

ದುಂಡುರುಪೆ, ದುಂದುರುಪೆ (ನಾ). ಒಂದು ಬಗೆಯ ಸಸ್ಯ : "ಅಶ್ವತ್ಥ ಫಲಾ – ದುಂಡುರುಪೆ" (ಓಷಧಿ. ೭) : "ಡೋಲಾಫಲ, ಹಿಪ್ಪೆ, ಎಸಗ, ದುಂಡುರುಪೆ, ಹೆಮ್ಮರ" (ಓಷಧಿ. ೬೪). ದುಂದುರುಪೆ : "ದೋಲಾಫಲಃ– ಎಲವ, ದುಂದುರುಪೆ" (ಓಧಿ. ೮೦) ; "ಟುಂಡುಕ ದುಂದುರುಪೆ" (ಅಕಾನಿ. ೦೧-೭) : ಆಡವಿ ಹಾಗಲದ ಗೆಡ್ಡೆ ದುಂದುರುಪೆ ಗೆಡ್ಡೆ [ಪಾಠಾಂ. ದುಮ್ಮಲಪಿ ಗಡ್ಡೆ] . . . ಅರೆಧು ಕೊಟ್ಟು ಬಿಸಿನೀರಂ ಕುಡಿಯಿಸೆ ಚೆನ್ನಾಗಿ ವಿರೇಚನ ಮಕ್ಕು (ಸಕವೈ. ೨೯೯). [?]

ದುಂಡುಸಂಪಿಗೆ (ನಾ). ಒಂದು ಬಗೆಯ ಗುಂಡಾದ ಸಂಪಿಗೆ : ಪುಷ್ಪವೃಕ್ಷಗಳಲ್ಲಿ ದೊಡ್ಡ ವೃಕ್ಷಗಳಾಗ ತಕ್ಕ ಸುಂದರ ಪುಷ್ಪಗಿಡಗಳು ಸಂಪಿಗೆ ವನ ಸಂಪಿಗೆ . . . ದುಂಡುಸಂಪಿಗೆ ಇವುಗಳೆಲ್ಲ ಬೀಜಗಳಾಗಿವೆ (ಕೃಷಿಪ್ರ. ೨೦೦). [ದುಂಡು$_1$ + ಸಂಪಿಗೆ (< ಸಂಪಗೆ)]

ದುಂಡುಸಮುದ್ರ (ನಾ). ಒಂದು ಸ್ಥಳದ ಹೆಸರು ; ಉತ್ತರ ಪೂರ್ವ್ವಸ್ಯಾನ್ದಿಶಿ ಕಳಮ್ಬೆತ್ತಿಗಟ್ಟು ಇಮಾನ್ಯಾನ್ಯಾನಿ ಕ್ಷೇತ್ರಾನ್ತರಾಣಿ ದತ್ತಾನಿ ದುಣ್ಡುಸಮುದ್ರದಾ ವಯಲುಳ್ಕಿಱುದಾಱಾಮೆಗೆ ಪದಿರ್ಕ್ಕಣ್ಡುಗಂ ಮಣ್ಣಂ ಪಟ್ಟಿಯಾ ಎರೆನಲ್ಲೂರಾ ಉಪ್ಪಾರ್ಟು ಒರ್ಕ್ಕಣ್ಡುಗ (ಎಕ. IV, ನಾಗಮಂ. ೮೫-೬೫ ; 776). [ದುಂಡು$_1$ + ಸಮುದ್ರ$_1$]

ದುಂಡುಳಿ (ನಾ). ಗುಂಡಗಿರುವ ಉಳಿ,–ಚಾಣ.

[ದುಂಡು$_1$ + ಉಳಿ$_5$]

ದುಂಡುಱುಂಬೆ 'ದಂಡುಱುಂಬೆ' ನೋ.

ದುಂಡುಱುವೆ (ನಾ). ಅತಿಶಯವಾದ ತಾಪ : ಬೆಂಡಾದಳಂಗಜಾತನ ನೋಡಲವನಸ್ತ್ರ ಕೊಂಡವು ಕುಚದ ಮಧ್ಯದಲಿ ದುಂಡುರು[ಱು]ವೆ [ಪಾಠಾಂ. ದಿಂಡುರುಮೆ]ಯ ಮಾಡುತಿರಲುಚ್ಚರಿಸಿದಳು ಕೆಂಡಗಣ್ಣನ ಮಂತ್ರಮಯವ (ಮೋಹತ. ೨೯-೪೯).

[ದುಂಡು$_1$ + ಉಱುವೆ (<ಉಱುಬೆ)]

ದುಂದಕಾರ (ನಾ). ಕಗ್ಗತ್ತಲೆ ; ಅಂಧಕಾರ : ಗಾಳಿ ಉಕ್ಕಿ ಒದರಿತಾಗ, ಗಿಡದ ಸಾಲು ಅದುರಿತಾಗ, ಅತ್ತ ಇತ್ತ ಅಂಧಕಾರ, ನೋಡಿದತ್ತ ದುಂದಕಾರ (ನನಲ್ಲ. ೮೩-೧೨).

[←ಮರಾ. ಧುಂದಕಾರ್ ; ಹಿಂ. ಧುಂಧುಕಾರ್]

ದುಂದಾಗು$_1$ 'ದುಂದು$_1$' ಪರಾ.

ದುಂದಾಗು$_2$ 'ದುಂದು$_3$' ಪರಾ.

ದುಂದು$_1$ (ನಾ). ೧. ವಿಂತಿಯಿಲ್ಲದೆ ಖರ್ಚು ಮಾಡುವುದು ; ಅಗತ್ಯವಲ್ಲದ ಹೆಚ್ಚು ವೆಚ್ಚ ; ಪೋಲು ಮಾಡುವಿಕೆ : ವ್ಯರ್ಥವೆಂದೆನಿಪುದಲ ಸೃಷ್ಟಿಯಲಿ ಬಹುಭಾಗ ? ಅರ್ಥವೇಂ ಕ್ರಿಮಿಕೀಟಕೋಟಿ ರಚನೆಯಲಿ ? ಕರ್ತನಾಲೋಚಿಸದ ದುಂದಿನವನೆಂಬ ನುಡಿಯರ್ಥದೃಷ್ಟಿಯ ವಿವರ (ಮಂಕುಳ. ೬೬) ; ಇನ್ನೂ ನಿಮಗೆ ದುಂದುಖರ್ಚಿನ ಚಟ ಬಿಟ್ಟಿಲ್ಲ (ಮಹಾಗ. ೩೫೪). ೨. ದುಂದುಗಾರ : ಬಂಗಾರದ ತಗಡಿನಲಿ ಬರೆದಿಡಬೇಕಾದ ಪದ್ಯ. ಕಲ್ಲಿನಲ್ಲಿ ಕಟೆದಿಟ್ಟರು ನಮ್ಮ ದುಂದು ಕಲೋಪಾಸಕರು (ಸಾಹಿವಿ. ೩೯). ೩. ಆಡಂಬರ ; ಪ್ರದರ್ಶನ ; ವೈಭವ ; ಡಂಬ : ದುಂದಿಗಾಗಿ ನೂರಾರು ರೂಪಾಯಿ ಪೋಲುಮಾಡುವ ಜನ ನಮ್ಮ ಬಳಗದ ಬಗ್ಗೆ ಮೂಗುಮುರಿದರು (ಜೀವನ. ೨ ಅರಿಕೆ).

ದುಂದಾಗು$_1$ = ವೈಭವದಿಂದ ಕೂಡಿರು : ಏನು ದುಂದಾತು ನಿನ್ನಿನ ಮೇಜವಾನಿ (ಎತ್ತಿಕೈ. ೨೬). ದುಂದಾಟ = ದುಂದು$_1$: (ಕಿ). ದುಂದು ಮಾಡು = ೧. ವೃಥಾ ಖರ್ಚುಮಾಡು ; ಪೋಲು ಮಾಡು ; ಹಾಳು ಮಾಡು : ಮೂಱು ದಿನದೊಳಗೆ ದುಂದು ಮಾಡಿದ ಕಾರಣದೊಳಿಂದು ಘನಪುಣ್ಯವಾಯ್ತನ್ನದಾನದಿಂದೆನ್ನ ಮನಕೆ ಬರ್ಪಂತೆ ದೃಷ್ಟಂದೋಱೆ ಕೊಡಿಯಂದನು (ವೀಕೈಪು. ೪-೧-೩೬); ಸಿಕ್ಕಾಪಟ್ಟೆ ದುಡ್ಡು ದುಂದುಮಾಡುವುದು ಸೈನಿಕರ ಪ್ರತಿನಿತ್ಯದ ಹವ್ಯಾಸವಾಗಿತ್ತು (ಪುನರು. ೬೨) ; ಅವರ ಆಸ್ತಿಯ ಅರ್ಧಪಾಲನ್ನೆಲ್ಲ ನೀನು ದುಂದು ಮಾಡಿ ಕಳೆದೆ. ಉಳಿದ ಅರ್ಧ ಜುಗಾರಿ ಆಡಿದೆ . . . ಜನರು ನಗುವಂತಾಯಿತು (ಮುಂಗಾಮು. ೪). ೨. ವೈಭವದಿಂದ ಕೂಡು ; ಆಡಂಬರವನ್ನು ಹೊಂದು : ಹತ್ತ ಬಲ್ಲವರಿಗೆ ಕತ್ತಿಯ ಕೊಡುವೆನ ಹತ್ತಿ ಮಂಟಪ ಬಿಗಿರೆಂದ ಮಲಸಜ್ಜ ದುಂದುಮಾಡಿ ಮಣ್ಣ ಕೊಡಿರೆಂದ (ಲೋಕಗೀ. ೨೦೦).

[ದೇ.॥ ತುಳು. ದುಂದು]

ದುಂದು₂ (ನಾ). ೧. ಒಂದು ಬಗೆಯ ಚರ್ಮವಾದ್ಯ. ೨. ಕೃಷ್ಣನ ತಂದೆ; ವಸುದೇವ. [ಸಂ.]

ದುಂದು₃ (ನಾ). ಮಾದಕ ವಸ್ತು ವಿನಿಂದ ಉಂಟಾಗುವ ಅಮಲು,–ಮತ್ತು: ಬಯ್ದಾಡುತ ಸುಮ್ಮ ಸುಮ್ಮ ಬಿದ್ದಿಹನಗೊ ಅಣ್ಣ, ತಮ್ಮ ಕುಡಿದು ದುಂದು ಕಂದಮ್ಮ (ಅರಳು. ೧೩೦-೧೭).

ದುಂದಾಗು₃ = ಅಮಲೇರು; ಮತ್ತು ಬರು.–ಉಂಟಾಗು: ನೀವು ಕುಡಿದು ದುಂದಾಗಿದ್ದರೂ ನನಗೆ ಸಿಟ್ಟು ಬರುತ್ತಿದ್ದಿಲ್ಲ! (ದೇವದಾ. ೯೩); ಇವರು ಹೀಗೆ ದುಂದಾಗಿ ಬಿದ್ದಿರುವುದನ್ನು ನೋಡಿದರೆ (ಕುರಿಹಿಂ. ೦೦೬).

[← ಮರಾ. ಧುಂದ್]

ದುಂದುಗಾರ (ನಾ). ವಿಂತಿಯಿಲ್ಲದೆ ಖರ್ಚುಮಾಡುವವನು; ಹಣ ಪೋಲು ಮಾಡುವವನು: ದುಂದುಗಾರರು ಈ ಹೊತ್ತು ದೊರೆತ ಸಂಪತ್ತಿಯನ್ನು ಈ ಹೊತ್ತೇ ಆದಷ್ಟು ಪ್ರಕಾರದಿಂದ ಭೋಗಿಸಲಿಕ್ಕೆ ಹವಣಿಸುತ್ತಾರೆ (ಮುಂಬಯಿ. ೩-೨೪೭); ದುಂದುಗಾರ ಚಂದಿರನು ಇಣಿಕಿದನು ಬೆಳಕೆ ಸಾಲದಾಗಿ ರಸಿಕ ನೀತಿಯಲಿ ಬೆರೆಸಿ ಬಳಸುವನು ತಮವ ಸಾಲವಾಗಿ (ಅರಳು. ೪೦೪-೩); ನೀನು ಬಹಳ ದುಂದುಗಾರನಾಗಿ ತೋರುತ್ತಿ (ಕಥಾಮಂ. IV, ೪); ದುಂದುಗಾರರಿಗೆ ಎಷ್ಟು ಸಂಪಾದನೆಯಾದರೂ ಬಡತನ ತಪ್ಪುವುದಿಲ್ಲ (ನೀತಿಚಂ. IX, ೩೨).

[ದುಂದು₁ + – ಗಾರ(< – ಕಾಱ)]

ದುಂದುಗಾರತನ (ನಾ). ವಿಂತಿಯಿಲ್ಲದೆ ಖರ್ಚುಮಾಡುವಿಕೆ: (೬).

[ದುಂದುಗಾರ + – ತನ]

ದುಂದುಗಾರಿಕೆ (ನಾ). ೧. =ದುಂದಂಗಾರತನ: ತವಕ್ಕಿ ದುಂದುಗಾರಿಕೆಯ ಬಗ್ಗೆ ಅವರಿಗೆ ಸಂತೋಷ (ನನ್ನಜೂ. ೩೧); ನಾನೂ ಮೊದಲಿನಿಂದ ದುಂದುಗಾರಿಕೆಯಲ್ಲಿ ಬೆಳೆದವಳು (ಕುಂಳುಮ. ೪); ಹೀಗೆ ದುಂದುಗಾರಿಕೆ ಕಲಿತರೆ ಈಗ ಪರವಾಗಿಲ್ಲವಾದರೂ ಮುಂದೆ ಕಷ್ಟವೆನಿಸೀತು (ಚಾಡಿಬ. ೭೬). ೨. ಯಥೇಚ್ಛವಾಗಿರುವಿಕೆ; ಹುಲುಸಾಗಿರುವಿಕೆ; ಎರಚಾಟ; ಸುಗ್ಗಿ: ರಸ್ತೆಯ ಎರಡು ಕಡೆಗಳಲ್ಲೂ ಹುಟ್ಟುಹುಟ್ಟಾಗಿ ಹಸುರಿನ ದುಂದುಗಾರಿಕೆಯನು ನೋಡುತ್ತಾ, ಅವನು ಪ್ರಯಾಣ ಮಾಡುತ್ತಿದ್ದ (ದೂರಸೆ. ೦೩೬).

[ದುಂದುಗಾರ + – ಇಕೆ]

ದುಂದುಗಾರ್ತಿ (ನಾ). ವಿಂತಿಯಿಲ್ಲದೆ ಖರ್ಚುಮಾಡುವವಳು; ವ್ಯರ್ಥವಾಗಿ ಪೋಲು ಮಾಡುವವಳು: ನಾನೆಂದೂ ದುಂದುಗಾರ್ತಿಯಲ್ಲ (ಕುಂಳುಮ. ೯೩). [ದುಂದುಗಾರ + – ತಿ₁ (<–ಇತ್ತಿ)]

ದುಂದುಗೆಡಿಸು (ಕ್ರಿ). ಅಪವ್ಯಯ ಮಾಡಿ ಕಳೆದುಕೊಳ್ಳು; ಪೋಲು ಮಾಡು: ಮನೆ ಮಾರು ಮಾಡಿ ನೆಮ್ಮದಿಯಾಗಿ ಬಾಳಿದಿಂತಲಿವನೇತಕೆ ಬೆಸದರೊಡನೆ, ಹರಯವನೇಕೆ ಮರಳಿನೊಂಟಿಯೊಳಿಂತು ದುಂದುಗೆಡಿಸುವನು (ಗೊಕ್ಕೊಥಾ. ೨-೪೧). [ದುಂದು₁ + ಕೆಡಿಸು₁]

ದುಂದುತನ (ನಾ). =ದುಂದುಗಾರತನ: ಅವನ ದುಂದುತನವೇ ಅವನಿಗೆ ಮುಳುವಾಯಿತು (ಕೂಡಿ). [ದುಂದು₁ + – ತನ]

ದುಂದುಬಾಳು (ನಾ). ದಂದರಹಾಳಂತನದ ಬದುಕು; ವ್ಯರ್ಥವಾಗಿ ಖರ್ಚುಮಾಡುವ ಜೀವನ: ಇತರ ಸಹೋದ್ಯೋಗಿಗಳಂತೆ ಅವನೂ ದುಂದುಬಾಳನ್ನು ಬದುಕಲು ಸಿದ್ಧನಾದನು (ಪುನರು. ೬೨).

[ದುಂದು₁ + ಬಾಳು₂ (<ಬಾಟ್₂)]

ದುಂದುಬೀಳು (ಕ್ರಿ). ಹೆಚ್ಚಾಗು; ವಿಂತಿಮೀರು: ಗಂಗಿ ಗೌರಿ ಜಗಳ ದುಂದುಬಿದ್ದಾವಂದ ಅಂಗಳದ ಕಲ್ಲ ಶಿವ ಮೆಟ್ಟ ಕೇಳ್ಯಾನ ಗಂಗಿ ನಿನ ಬಾಯಿ ಬಲುಬಾಯಿ (ಕನ್ನಜಾ. ೦೨೬). [ದುಂದು₁ + ಬೀಳು₁ (<ಬೀಟ್₁)]

ದುಂದುಭಿ₁ (ನಾ). =ದುಂದಂಮೆ ೨: 'ದುಂದುಭಿಗಳು' ಕನ್ನಡಿಗರಿಗೇನು ಅಪರಿಚಿತವಲ್ಲ. ಶಿವಶರಣರು ತಮ್ಮ ಕಾಲಜ್ಞಾನದ ಹಾಡುಗಳನ್ನು ಹೋಳಿಯ ದುಂದುಭಿಯಲ್ಲಿ ಹಾಡಿದ್ದಾರೆ . . . 'ದುಂದುಭಿ' ಹಾಗು 'ದುಂದುಮಿ' ಇವು ಎರಡೂ ವಾದ್ಯಗಳಿದ್ದರೂ, ಹಾಡುವ ತಾಳ, ಲಯ, ಗತಿ, ರಾಗ ಮೊದಲಾದವುಗಳು, ಬೇರೆಬೇರೆ ಇವೆ (ಕನ್ನಜಾ. ೯೩). [<ದುಂದುಮೆ]

ದುಂದುಭಿ₂ (ನಾ). ೧. ಒಂದು ಬಗೆಯ ಚರ್ಮವಾದ್ಯ; ದೊಡ್ಡ ಭೇರಿ; ನಗಾರಿ: "ಪಿರಿದಪ್ಪ ಭೇರಿ ದುಂದುಭಿ" (ಪಸ್ತು ಕೋ. ೭೯-೩೬); "ರವ ಮಿಕ್ಕ ಹಜಿ ದುಂದುಭಿಯೆನಿಕ್ಕು" (ಮಂಗರಾ. ೬-೩೦); ದುಂದುಭಿ ಗಭೀರನಿನದಂ . . . ಜಿನಚರಣಕಮಲಭೃಂಗಂ ಪಂಪಂ (ಆದಿಪು. ೦-೩೩); ದುಂದುಭಿಗಭೀರರವ ಸುರದುಂದುಭಿಗಳ್ಗಗನತಳದೊಳಿಸದವುವು (ಅಜಿಪು. ೯-೦೩); ಮೊಱೆಯೆ ದುಂದುಭಿ ಶಂಖ ಕಹಳಾ ವರಮೃದಂಗಾದಿಗಳು . . . ದೇವ ಹೊಱವಂಟ (ಕುವಾಉ. ೬-೩); ದುಂದುಭಿಗಳು ಧಂಧಣ ರೆನುತಿರೆ . . . ಬಿಟ್ಟನು ವಾಳೆಯವ (ಕುರಾಸಾಂ. ೦೬-೩೦); ರಕ್ತಕಲಿತ ದುಂದುಭಿ [ಚಾಕಾಂ. ವಿ]ಯಂತೆ ಸ್ವನಿಸ್ಮಿಗ್ಧಹರ್ಯಕ್ಷತನುಜಶ್ಮಶ್ರುಪ್ರವರ ಮೆನಿಪ ಶುಭಲಕ್ಷಣಂ ದಿವ್ಯಭೂಷಾಯುಕ್ತ ಲೋಹಿತಾನನದ ಸೊಬಗು (ವಂಕಾರಾ. ೦-೮-೩೩). ೨. ಅರವತ್ತು ಸಂವತ್ಸರಗಳಲ್ಲಿ ಐವತ್ತಾರನೆಯದು: ದುಂದುಭಿಸಂವತ್ಸರೋದ್ಭವಂ . . . ಸಾರದುಂದುಭಿ ಪತಿ ಚರಣಕಮಲಭೃಂಗಂ ಪಂಪಂ (ಆದಿಪು. ೦-೩೩); ಮತ್ತಮಾ ವರುಷವೇ ಪ್ರಭವ ವಿಭವ . . . ದುಂದುಭಿ ರುಧಿರೋದ್ಗಾರಿ ರಕ್ತಾಕ್ಷಿ ಕ್ರೋಧನ ಅಕ್ಷಯವೆಂದಱುವತ್ತು, ತೆಱನಾಗಿಹುದು (ವಿವೇಳ. ೩೨೦). ೩. ಪಗಡೆಯಾಟದಲ್ಲಿ ಬೀಳುವ ಇತ್ತಿಗದ ಗರ. ೪. ವಾಲಿಯಿಂದ ಹತನಾದ ಒಬ್ಬ ರಾಕ್ಷಸನ ಹೆಸರು: ನೀಂ ಪೇಳ್ದುದಿದೆ ಕಣಾ ನಿನ್ನಗ್ರಜಂ ಕೊಂದು ಬಿಸುಟ ದುಂದುಭಿ? (ಶ್ರೀರಾಮಾ. ೨೪೮-೩೬೪); ಕಿಷ್ಕಿಂಧಕಾಂಡ ಬ್ರಹ್ಮಾಂಡ. ದುಂದುಭಿ ಹೆಣದ ಸುತ್ತಲೂ ಮರ್ಕಟೋತ್ತಮರ ಎದೆ ದುಂದುನ್ಮತ್ತ (ಪಂಡಿಮ. ೩೨-೬). [ಸಂ.]

ದುಂದುಭಧ್ವನಿ (ನಾ). ಭೇರಿಯ ಶಬ್ದ.–ಸ್ವರ: ಗಂಭೀರಾಯತ ದುಂದುಭಿ ಧ್ವನಿ ರಥ ಜ್ಯಾ ದೀರ್ಘರಾವಂಗಳುಂ . . . ದಿಗಂತಂ ತಾಗೆ (ಜಮಿಸ್ಕಾ. ೩-೦೨). [ದುಂದುಭಿ₂ + ಧ್ವನಿ]

ದುಂದುಭಿನಾದ (ನಾ). = ದುಂದುಭಿಧ್ವನಿ: ದುಂದುಭಿನಾದಮಾವರಿಸೆ ದಿಕ್ತಟಮಂ (ಪಂರಾಮಾ. ೧೬-೬೯). [ದುಂದುಭಿ₂ + ನಾದ₁]

ದುಂದುಭಿನಿನಾದ (ನಾ). =ದುಂದುಭಿಧ್ವನಿ: ದುಂದುಭಿನಿನಾದಮುಖರಿತ ಮಂದಾರನಮೇರುವಿಕಚಕುಸುಮಾಸಾರಂ ಸಂದಿಸೆ ಕೇವಲಿಪೂಜೆಗೆ ಬಂದತ್ತು ಚತುರ್ನಿಕಾಯಂ ದೇವನಿಕಾಯಂ (ಪಂರಾಮಾ. ೮-೩೦); ದುಂದುಭಿನಿನಾದ ವಾದಂತೆ ಪಂವನ ವಾಗ್ವರಿ ದುಮ್ಮಿಕ್ಕಿತು! (ದಾನಚಿಂ.೦೩).

[ದುಂದುಭಿ₂ + ನಿನಾದ]

ದುಂದುಭಿನಿಸ್ವನ (ನಾ). =ದುಂದುಭಿಧ್ವನಿ: ದುಂದುಭಿನಿಸ್ವನಂ ನೆಗಳೆ . . . ತನ್ನ ನಂದನಂಗಂದನುರಾಗದಿಂ ಪರಸಿ ಕಟ್ಟಪದನೊಲ್ದಧಿರಾಜ ಪಟ್ಟಮಂ (ಕ್ರಿಪುವಿ. ೧೯-೩೦). [ದುಂದುಭಿ₂ + ನಿಸ್ವನ]

ದುಂದುಭಪದ (ನಾ). ಹರೆಯೊಂದಿಗೆ ಹಾಡುವ ಹಾಡು; ಹೋಳೀ ಪದ: ಚಾಲುಕ್ಯರ ಪೂರ್ವದಲ್ಲಿಯೇ ನಮ್ಮಲ್ಲಿ ವರ್ಣಕಸಾಹಿತ್ಯವಿತ್ತು . . . ಶೃಂಗಾರಿಕ ದುಂದುಭಪದಗಳು, ಹೆಣ್ಣುಮಕ್ಕಳು ಹೇಳುವ ತ್ರಿಪದಿಯೊಳಗಿನ ಒನಕೆವಾಡುಗಳು (ಸಾಹಿವಿ. ೮೩); ದುಂದುಭಿಪದಗಳ ಚೆಂದಾಗಿ ಕೇಳಿರಿ (ಕನ್ನಜಾ. ೯೪). [ದುಂದುಭಿ₂ + ಪದ₂]

ದುಂದುಭಿರವ (ನಾ). =ದುಂದುಭಿಧ್ವನಿ: ವಿವೋಹಮೃಗಮಂ ವಿಘ್ನಾ ಕಂದರದೊಳ್ ಬಿದಜಿಟ್ಟುವ ದುಂದುಭಿರವದಂತಿರೊಗೆಯೆ ಗಂಭೀರರವಂ (ಹುಶೋಚಿ. ೪-೨೨); ಧಂಧಂಧವೆಂಬುವಾ ಭೇರಿ ದುಂದುಭಿರವಕೆ ನಡುಗೆ ಗಿರಿವನಗೃಹಾಕಿಷ್ಕಿಂಧೆ (ಶ್ರೀರಾಮಾ ೨೯೬-೩೦೦). [ದುಂದುಭಿ₂ + ರವ]

ದುಂದುಮಿ 'ದುಂದುಮೆ' ನೋ.

ದುಂದುಮಿಪದ (ನಾ).=ದುಂದುಭಿಪದ: "ದುಂದುಮಿಪದ=ಹೋಳಿಯ ಅಶ್ಲೀಲ ಹಾಡು"(ಜಾನಕೋ. ೬). [ದುಂದುಮಿ (<ದುಂದುಮೆ)+ಪದ$_2$]

ದುಂದುಮಿಸು 'ದುಮುದುಮಿಸು' ನೋ.

ದುಂದುಮೆ, ದುಂದುಮಿ, ದುಂದುವೆ (ನಾ). ೧. ಹರೆ; ಡಂಗುರ: ಸುರದುಂದುಮೆಯೆಸೆಯುತ್ತಿರೆ ಸುರಕನ್ನೆಯರೊಲ್ದು ಚಾಮರಂಗಳನಿಕ್ಕಲ್ ಕರಮೆಸೆವ ಸುರವಿಮಾನದೊಳಿರಲುಯ್ದರ್ ಕೇತಮಲ್ಲನಾಯಕನಸುವಂ (ಎಕ. V, ಚೆನ್ನರಾ. ೨೦೫-೧೪; ಸು. 1200). 'ದುಂದುಮೆಂಗೇಳ್' ಪರಾ. ೨. ಹರೆಯ ಧ್ವನಿಯೊಡನೆ ಹಾಡುವ ಹಾಡು; ಒಂದು ಬಗೆಯ ಬಾಜನಗಬ್ಬ: ಈ ದೀರ್ಘವಾದ ದುಂದುಮೆ ಬಹುಮಟ್ಟಿಗೆ ಕಾವ್ಯದ ಸರಣಿಯನ್ನೂ ಸ್ವಾರಸ್ಯವನ್ನೂ ಪಡೆದಿದ್ದು ತನ್ನ ಗುರಿಯನ್ನು ಸಾಧಿಸಿದೆ ಎನ್ನಬಹುದು (ಕುಮಾಸಾಂ. ೨೫೬). **ದುಂದುಮಿ**: ೨. 'ದುಂದುಮಿ'ಯು ಹೋಳಿಯ ಪದದ ಒಂದು ಉತ್ಕೃಷ್ಟವಾದ ಕುಸುಕು (ಕನ್ನಜಾ. ೯೩). **ದುಂದುವೆ**: ೧. ಅಸಿಯ ಗಸಣಿಯುಂ ದೂವೆಯ ಬೆವಸಮುಂ ದುಂದುವೆಯ ದಂದುಗಂ ಮಾಡಿ (ಎಕ. XI, ಮೊಳಕಾ. ೨೦-೪೧; 1278 ?).

ದುಂದುಮೆಗಾಲ (ನಾ). ವೈಭವದ ಕಾಲ; ಉಚ್ಛ್ರಾಯ (?): ತನ್ನೊಡನಿಂದ್ರನಾಜ್ಞೆಯಿಂದಂ ದಿವಿಜಾಂಗರಕ್ಷಕರಿರೆ ಮಾಸರಮಾರದನೆಯ್ದೆ ಬಣ್ಣಿಪರ್ ದುಂದುಮೆಗಾಲವಂ ಘನರಥಾವನಿಪಾಲನ ರಾಜ್ಯಕಾಲಮಂ (ಶಾಂತಿಪು. ೯-೫೯): ಗುರು ಕನ್ನೆಗೆ ಬಂದಿರೆ . . . ಧರ್ಮಕ್ಕೆಱಗಿರ್ಪರ್ ಮನುಜರೆಯ್ದೆ ದುಂದುಮೆಗಾಲಂ (ಅಟ್ಟಮ. ೧೨ ೧೪೪).

[ದುಂದುಮೆ$_0$ + ಕಾಲ]

ದುಂದುಮೆಗೇಳ್ (ಕ್ರಿ). ದುಂದುಮೆಯೆಂಬ ಹಾಡಿನಲ್ಲಿ ಹಾಡಿರುವುದನ್ನು ಕೇಳು: ಧರೆಯೊಳಗಿಂತೀ ನಗರದ ಪರದರ್ ಸಂಪನ್ನರೆಂದು ದುಂದುಮೆಗೇಳ್ದೆಂ (ಸುಕುಮಾ. ೧೦-೧೧೭) [ದುಂದುಮೆ + ಕೇಳ್]

ದುಂದುರುಪೆ 'ದುಂಡುರುಪೆ' ನೋ.

ದುಂದುಲು 'ದಿಂಡ$_1$' ನೋ.

ದುಂದುವೆ 'ದುಂದುಮೆ' ನೋ.

ದುಂದುವೆಚ್ಚ (ನಾ). ಅತಿಯಾಗಿ ಮಾಡುವ ಖರ್ಚು: ಅಷ್ಟೊಂದು ದುಂದುವೆಚ್ಚಕ್ಕೆ ದುಡ್ಡು ಎಲ್ಲಿಂದ ಬರುತ್ತಿತ್ತೋ ಹೇಳುವಂತಿರಲಿಲ್ಲ (ಪುನರು. ೬೨); ಶ್ರೀಮಂತರು ದುಂದುವೆಚ್ಚ ಮಾಡುವುದರಲ್ಲಿ ಸ್ಪರ್ಧೆ ನಡೆಸುತ್ತಾರೆ (ಪ್ರವಾಇ. I, ೨೦೭). [ದುಂದು$_1$ + ವೆಚ್ಚ]

ದುಂದುವೈಭವ (ನಾ). ಮಿತಿಮೀರಿದ ಖರ್ಚಿನಿಂದ ಕೂಡಿದ ವೈಭವ,-ಶ್ರೀಮಂತಿಕೆ: ಸುಲಭವಾಗಿ ಸಂಪಾದಿಸಿದ ಬಿಟ್ಟಿಹಣದ ಮಾಲೀಕತ್ವವನ್ನು ಸೂಚಿಸುವ ದುಂದುವೈಭವ ಆ ವಾತಾವರಣದಲ್ಲಿ ತುಂಬಿ ತುಳುಕುತ್ತಿತ್ತು (ಪುನರು. ೨೦೦). [ದುಂದು$_1$ + ವೈಭವ]

ದುಂದುಱು (ನಾ). ತಲೆಯಲ್ಲಿ ಹುಣ್ಣಾಗಿ ಹುಳುಗಳು ಸೇರಿಕೊಳ್ಳುವ ಒಂದು ಬಗೆಯ ರೋಗ: ಕೋಷ್ಠಮನೆ ಪುರಿದರೆದು ತಿಳತೈಳಮನೆಱ ದಱೆವೊರಸಿದಂದು ದುಂದುಱು ಕಿಡುಗುಂ(ಲೋಕೋಪ.೯-೫೬);"ಮಂಡೆಯ ಒಳಗಣ ಪುಟು" (ಲೋಕೋಪ. ಟೀಕೆ); ಅರಗಾಮಳಕಫಳಂ . . . ಯೆಕ್ಕೆ ಇವಂ ಕೊಂಡರೆದಿಂಬಾಗಿರೆ ಪೂಸುಗೆ ಶಿರೋವ್ರಣಂ ತರ್ದು ದುಂದುಱಿಂಬಿ [ಪಾಠಾಂ. ತುಱಿಯೆಂಬಿ]ವು ಕಿಡುಗುಂ (ಲೋಕೋಪ. ೯-೫೮). [?]

ದುಂದುಱುಂಬೆ 'ದಂಡುಱುಂಬೆ' ನೋ.

ದುಂಪ (ನಾ). ಮರ, ಗಿಡ ಮುಂತಾದುವುಗಳ ಅಡಿಭಾಗ; ಬೇರು: (ಕಿ).

[ದೇ.॥ ತೆಲು. ದುಂಪ]

ದುಂಪದೂಳಿ, ದುಂಪಾದೂಳಿ (ನಾ). ೧. ದೂಳಿಪಟ; ನಾಶ: ಮೊರಸರ ಗಂಡನು ಪರಬಲ ದುಂಪದೂಳಿ . . . ಮೊದಲಾದ ಬಿರುದಿನಾನೆಗಳೈದಿದವು (ಕಂನವಿ. ೩-೪೨). **ದುಂಪಾದೂಳಿ**: ೨. ಮನಸ್ಸಿಗೆ ಬಂದಂತೆ ವ್ಯಯಮಾಡುವುದು; ದುಂದುವೆಚ್ಚ: ನಿಮ್ಮಪ್ಪನ ಮನೆಯಿಂದ ಬರುವಾಗ ಒಂದು ಗಾಡಿ ರಂಗವಲ್ಲಿಯನ್ನು ಹೇರಿಸಿಕೊಂಡು ಬಂದವಳಿಗಿಂತಲೂ ಹೆಚ್ಚಾಗಿ ದುಂಪಾದೂಳಿ ಮಾಡುತೀಯೆ (ಮಾಮರಾ. ೮೧).

[←ತೆಲು. ದುಮಾದೂಳಿ = ಅಧಿಕವಾದ ಧೂಳು]

ದುಂಪರಾಸ್ಮೆ, ದುಮ್ಮರಾಸ್ಮೆ (ನಾ). ಒಂದು ಬಗೆಯ ಸಸ್ಯ: "ಏಲಾಪರ್ಣೀ, ಸುವಹಾ, ರಾಸ್ನಾ, ಯುಕ್ತರಸಾ-೪ ಸಣ್ಣ ದುಂಪರಾಸ್ಮೆ, ರಾಸ್ಮೆ" (ಸಿದ್ಧಾಂತಿ. ೧೨೬). ದುಂಪರಾಸ್ಮೆ, ನೀಲಿದೇರು . . . ಕಷಾಯ ವಿಟ್ಟು ಕೊಡಲು ವಿಷಮಶೀತಜ್ವರ ಗುಣಮಕ್ಕುಂ (ಸಕವೈ. ೧೦೭). **ದುಮ್ಮರಾಸ್ಮೆ**: ಶುಂಠಿ, ದುಮ್ಮರಾಸ್ಮೆ, ಹಾಲೆಬೇರು . . . ಕಷಾಯವಿಕ್ಕಿ ಕೊಡಲು ವಿಷಮಶೀತಜ್ವರ ಗುಣಮಕ್ಕುಂ (ಸಕವೈ. ೧೦೭).

[ದುಂಪ + ರಾಸ್ಮೆ./ತಮಿ. ತುಮ್ಬರಾಷ್ಟಕ; ತೆಲು. ದುಂಪರಾಸ್ಪ]

ದುಂಪಾದೂಳಿ 'ದುಂಪದೂಳಿ' ನೋ.

ದುಂಪು, ದುಂಬು, ದುಂಬೆ$_2$, ದುಪ್ಪು$_1$, ದುಮ್ಮು$_2$ (ನಾ). ಮಣ್ಣು; ಮರಳು; ಧೂಳು: ಕಡುಛಲದಿ ರಾಕ್ಷಸರು ಕಪಿಗಳ ತಡೆಗಡಿದು ಡೆಂಕಣಿ ಮಕರದಿಬ್ಬಿಗಳಿಡುವ ಕೈಗುಂಡು ಕವಣಿನ ಲಗ್ಗೆ ದುಂಪುಗಳ . . . ಬಡಿವ ಕೊಡತಿಗಳೊಡನೆ ಘಾತಿಸಿ ಕೆಡಹುತಿರ್ದುದು ನಾಲ್ಕು ದೆಸೆಯೊಳು ವೀರ ಬೊಬ್ಬೆಯಲಿ (ಅನಂರಾ. ೫-೮-೪೯). ೨. (ಆಲಂ). ಮಣ್ಣೆರಚುವುದು; ಮಸಿ ಬಳಿಯುವುದು: ಗುಂಪು ಸರಿಸವತಿಯರು ಗುಪಿತದಲಿ ನಗುತಿಹರು ದುಂಪು ವಳಿತಲ್ಲ ಅನ್ಯಾಯವಿದು ಸಲ್ಲಾ (ಶ್ರೀಕೃಪಾ. ೪೦). **ದುಂಬು**: ೧. "ಧೂಸು; ಧೂಳು" (ಜಾನಕೋ. ೬). **ದುಂಬೆ$_2$**: ೧. ಮೇಲಿದ್ದ ಧೂಳು ದುಂಬೆಗಳನ್ನೆಲ್ಲ ಪೊರಕೆಯಿಂದ ಬಡಿದು ಹೋಗಲಾಡಿಸಿದರು (ಮೂಲಾನ. ೧೦೮). **ದುಪ್ಪು$_1$**: ೩. (ಕರಾ). ಮಣ್ಣಿನ ಚಿಕ್ಕ ಹುಡಿ. **ದುಮ್ಮು$_2$**: ೧. 'ದುಮ್ಮೆಸಗು' ಪರಾ.

[ದೇ.॥ ತಮಿ. ತುಮ್ಬು; ತೆಲು. ದುಮು, ದುಮ್ಮು]

ದುಂಬಾಬಾಟು (?). (?): ಭಕ್ತಜನಾಭಿವೃದ್ಧಿ ರಾಯಭಾಟ ಶೃಂಗಾರ ಹಾರಮಂ ನೀತಿಗಾರ ದುಂಬಾಬಾಟು ನವನೀತಿರಾಯ . . . ಬುಕಣ್ಣ ನವರು (ಎಕ. III, ಮಳವ. ೪೩-೫; 1394).

ದುಂಬಾಲ 'ದುಂಬಾಲು' ನೋ.

ದುಂಬಾಲಗೊಳ್ (ಕ್ರಿ). =ದುಂಬಾಲು ಬೀಳು: ಕೊರಳ ಲಿಂಗ ಹರಿಯಲು ಛಲದಿಂದ ಲಿಂಗವ ಕೇಳದೆ ಮಲೆತು ಪೋಗಲು ಲಿಂಗ ದುಂಬಾಲಗೊಂಡಿತು (ಬಿಜ್ಜರಾ. ೧೦-೧೬೭); ಪೋಗಲೀಸದೆ ಬಿಡೆನೆಂದು ದುಂಬಾಲಗೊಂಡು ಅಕಳಂಕ ಮಂತ್ರಿ ತಾ ಬಸವನ (ಬಿಜ್ಜರಾ. ೧೨-೮೦).

[ದುಂಬಾಲ (<ದುಂಬಾಲು) + ಕೊಳ್$_1$]

ದುಂಬಾಲಬೀಳು 'ದುಂಬಾಲುಬೀಳು' ನೋ.

ದುಂಬಾಲು, ದುಂಬಾಲ (ನಾ). ೧. ಹಿಂಭಾಗ; ಹಿಂಬದಿ. ೨. (ಆಲಂಗೆ ಅಂಗಲಾಚಿ ಬೇಡಿಕೊಳ್ಳುವಿಕೆ; ಒತ್ತಾಯಪಡಿಸುವಿಕೆ: "ನನ; ಇಪ್ಪತ್ತೈದನೆಯ ಮಗನಿಗೆ ಚಿಕ್ಕಕತೆಗಳ ಸ್ಪರ್ಧೆಯಲ್ಲಿ ಹದಿನೇಳನೇ ಬಹುಮಾನ ದೊರೆತಿದೆ. ಆ ಕತೆಯನ್ನಿಷ್ಟೆ ಓದಿಹೋಗಿ, ಮೂಪತ್ತೇ ಪುಟಗಳ ಚಿಕ್ಕ ಕತೆ" ಎಂದಿನ್ನೊಬ್ಬರ ದುಂಬಾಲು (ಹುಚ್ಚುಹು. ೨೮). 'ದುಂಬಾಲು ಬೀಳು' ಪರಾ. **ದುಂಬಾಲ**: ೨. "ಬೆನ್ನು ಹತ್ತುವುದು; ಒಂದೇ ಸವನೆ ಗಂಟು ಬೀಳುವುದು" (ಜಾನಕೋ. ೭). 'ದುಂಬಾಲ ಬೀಳು' ಪರಾ.

[←ಪಾರ. ದುಂಬಾಲಾ; ಮರಾ. ದುಂಬಾಲಾ, ದುಮಾಲಾ]

ದುಂಬಾಲುಬೀಳು, ದುಂಬಾಲಬೀಳು (ಕ್ರಿ). ಅಂಗಲಾಚಿ ಬೇಡಿಕೊಳ್ಳು ಒತ್ತಾಯಪಡಿಸು: ದುಂಬಾಲುಬಿರ್ದೆಱಗಿ ತಱುಬಿದಂತುರುಬಿರ್ದರು (ಪರಶು. ೨೯-೩೧); ಅತ್ತೆಯು ಈಗಾಗಲೇ ಸಾಮಾನಿನ ವ್ಯವಸ್ಥೆಗೆ

ದುಂಬಾಲು ಬಿದ್ದಿದ್ದಾಳೆ (ಅಕೋಕ. ೭೯) ; ಹೋಗುವ ಮುಂಚೆ ಮದುವೆಯಾಗೆಂದು ದುಂಬಾಲು ಬಿದ್ದಳು (ಹೊಸಕ್ಷ. ೨೩೪). **ದುಂಬಾಲಬೀಳು :** ತನ್ನ ತಾನೆ ದುಂಬಾಲಬಿದ್ದ ಕವಿನೆರಳ ದೊಗು ನೊಗು (ಅರಳು. ೩೫೫-೧೧); ಹೀಗೇಕೆ ದುಂಬಾಲಬಿದ್ದಿರುವಿ ಅಕ್ಕಾಜಿ ? (ಹೇಮಂತ. ೭೧) ; ಪಾಠ ಹೇಳಿದ ಸಂಬಳವನ್ನು ೧-೨ ತಿಂಗಳು ಕೊಡದಿದ್ದರೂ ಕಿಟ್ಟಯೇನು ದುಂಬಾಲ ಬೀಳುತ್ತಿರಲಿಲ್ಲ (ದಾಸಹು. ೭೬) ; ಅವನು ಸಾಹೇಬರಿಗೆ ದುಂಬಾಲ ಬಿದ್ದನು (ಸ್ಕೂಲಮಿ. ೬೩). [ದುಂಬಾಲು + ಬೀಳು$_1$ (<ಬೀಳ್$_1$)]

ದುಂಬಿ 'ತುಂಬಿ$_1$' ನೋ.

ದುಂಬಿಗುರುಳು 'ತುಂಬಿಗುರುಳ್' ನೋ.

ದುಂಬಿವಣ್ಣ (ನಾ). ದುಂಬಿಯ ಬಣ್ಣ ; ಕಪ್ಪುಬಣ್ಣ : ಮುಗುಳು ನಗೆಯನ್ನು ಸೂಸುತ್ತಿದ್ದ ದುಂಬಿವಣ್ಣದ ಅವಳ ಕಣ್ಣುಗಳನ್ನು ನೋಡಿದಾಗ ಅವನ ಹೃದಯದಲ್ಲಿ ಸಂತೋಷೋನ್ಮಾದ ಉಕ್ಕುತ್ತಿತ್ತು (ಪುನರು. ೬೬). [ದುಂಬಿ (<ತುಂಬಿ$_1$) + ಬಣ್ಣ$_1$]

ದುಂಬಿಹುಳು (ನಾ). (ದುಂಬಿಯ ಜಾತಿಗೆ ಸೇರಿದ) ಒಂದು ಬಗೆಯ ದಪ್ಪ ಕೀಟ; ಗುಂಗಿಹುಳು: ತಂಗು-ಇದು ಧ್ರುವಪ್ಪೆರು ಎನಿಸಿಕೊಳ್ಳುತ್ತದೆ . . . ಇದಕ್ಕೆ ಮುಖ್ಯವಾದ ಶತ್ರು ದುಂಬಿಹುಳು (ಪ್ರವಮ. ೫೫). [ದುಂಬಿ (<ತುಂಬಿ$_1$) + ಹುಳು$_2$ (<ಪುಟು$_1$)]

ದುಂಬು 'ದಂಬು' ನೋ..

ದುಂಬಿ$_1$ 'ತುಂಬಿ$_1$' ನೋ.

ದುಂಬಿ$_2$ 'ದುಂಪು' ನೋ.

ದುಃಕಲಹ (ನಾ). ಕೆಟ್ಟ ಕಲಹ.-ಜಗಳ. [ಸಂ.]

ದುಃಕವಿ (ನಾ). ಕೆಟ್ಟ ಕವಿ : ಸತ್ಕವಿ ರುಚಿಕಾಲೋದ್ಭವಂ ನರನುತಿಯವನೆ ದುಃಕವಿ (ವೀಶ್ವಪು. ೭-೨-೧೯). [ಸಂ.]

ದುಃಕಳೇವರ (ನಾ . ಕೆಟ್ಟ ಶರೀರ : ಕಡುಗಪ್ಪಮೆನಿಪ್ಪ ದುಃಕಳೇವರಮಿದ ನೊಳ್ಳಿತೆಂಬರಱಿವಿಲ್ಲದವರ್ (ಸಮಪ. ೭-೩೪). [ಸಂ. ದುಃಕಲೇವರ]

ದುಃಖ (ನಾ). ೧. ಕಳವಳ ; ನೋವು ; ಬಾಧೆ ; ವೇದನೆ : "ಆಬಾಧಾ, ವೇದನಾ, ದುಃಖಂ, ಆರ್ತಿಃ, ಪೀಡಾ, ವ್ಯಥಾ-ಈ ೬ ದುಃಖಂ" (ಹಲಾಯು. ೧೦೩-೪) ; "ಅಪಬಾಧೆ ವೇದನೆ ವ್ಯಥೆ ಪೀಡೆಯಾರ್ತಿಯೆಂಬಿವು ದುಃಖಮೆನಿಸಕ್ಕುಂ" (ಮುಂಗರಾ. ೧೦೬-೨); ಶಾರೀರ ಮಾನಸ ಕ್ಷೇತ್ರಜ ಪರಸ್ಪರೋದೀರಿತದನುಜೋದೀರಿತಂಗಳೆಂಬಯ್ದುಂ ತೆಱದ ದುಃಖಂಗಳೊಳ್ (ಆದಿಪು. ೩-೮೫ ವ); ವೀರಸುತಜನನಿಗೀ ಗಾಂಧಾರಿಗೆ ದುಃಖಶತಜನನಿವೆಸರಾಯ್ತಾಗಳ್ ಕೌರವಪತಿ ದುಃಖಮಹಾಭಾರಮನಾಂತಾಯಸಕ್ಕೆ ಗುಱಿಯಾದುದಱಿಂ (ಗದಾಯು. ೪-೩) ; ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲಸಂಗಮದೇವ (ಬಸವ. ೧೩೪). ಈ ಜಗದೊಳ್ ವಿತ್ರವಿವಪತ್ತಿಗಾರ ಬಗೆಯುಂ ದುಃಖಕ್ಕೆ ಪಕ್ಕಾಗದೇ (ಪುಷ್ಪಪು. ೬-೪೦); ರೊಕ್ಕ ಎರಡಕ್ಕು ದುಃಖ ಕಾಣಕ್ಕ (ಪುರಂದ. ೨-೪೭ ಪಲ್ಲವಿ) ; ದುಃಖದ ಮೇಲೆ ಸುಖ, ಸುಖದ ಮೇಲೆ ದುಃಖ (ಗಾದ). ೨. ಕಷ್ಟ : ತೊಂದರೆ ; ಕ್ಲೇಶ : "ದುಃಖದೊಳು ತನ್ನಿಂದ ವಿಸಾರ್ದರೊಳತ್ಯಯಮೆನಿಕ್ಕುಂ" (ಮುಂಗರಾ. ೧೪೨-೨೦) ; ಈ ದುಃಖಂ ತನಗೇಕೆ ಪೇಟಾ (ಧರ್ಮಾಮೃ. ೪-೮೨) ; ಏನು ಬಂತೋ ದುಃಖ, ಏನು ಬಂತೋ ರೋಷ, ಕ್ರೂರಮಾನಸನು ಮಾಡಿ ಬೀರಿದಳು ಬದುಕ! (ಇಂಗೀತ. ೬೩-೨೪).

ದುಃಖಕೊಡು = ತೊಂದರೆ ಕೊಡು ; ಕ್ಲೇಶವನ್ನುಂಟು ಮಾಡು : ಅನ್ಯರಿಗೆ ದುಃಖಕೊಡುವುದು ತರವಲ್ಲ (ಕೂಡಿ). **ದುಃಖದ ಕೂಳು** = ಸತ್ತವರ ಮನೆಯಲ್ಲಿ ಅವರ ಬಂಧುಗಳು ಹತ್ತು ದಿನದವರೆಗೆ ತಂದಿಡುವ ಆಹಾರ : ಸತ್ತವರ ಮನೆಗೆ ಅಕ್ಕಪಕ್ಕದ ಮನೆಯ ಸೆಂಟರಿಷ್ಟರೂ ದುಃಖದ ಕೂಳೆಂದು ಅಟ್ಟ ಅಡಿಗೆಯನ್ನು ಹತ್ತುದಿನಗಳವರೆಗೂ ತಂದಿಡುತ್ತಿದ್ದರಂತೆ (ಹುಬ್ಬಹ. ೭೮). **ದುಃಖಮಾಡು** = ೧. ವೇದನೆಯನ್ನುಂಟುಮಾಡಂ ; ಬಾಧೆ ಪಡಿಸು. ೨. ದುಃಖಿಸು: ಶೋಕಿಸು. [ಸಂ.]

ದುಃಖಂಗೆಯ್ (ಕ್ರಿ).=ದುಃಖಿಬಡು: ಗಾಂಧಾರಿ ತನ್ನ ಮಿತ್ರನ ಮಕ್ಕಳಂ ನೆನೆದು ದುಃಖಂ ಮೆಜುಕಳಿಸಿ ದುಃಖಂಗೆಯ್ದೆ (ಗದಾಯು. ೪-೩. ಪ). [ದುಃಖ + ಕೆಯ್$_1$]

ದುಃಖಂಬಡು, ದುಃಖಿಪಡಂ, ದುಃಖಿಬಡಂ (ಕ್ರಿ). ಬಾಧೆಯನ್ನು ಅನುಭವಿಸು ; ವ್ಯಥೆಪಡು : ಪಾವಮಂ ಪೊರ್ದಿ ನಾರಕಬಾಧೆಗೊಳಗಾಗಿ ಪಲಕಾಲಂ ದುಃಖಂಬಡುವರ್ (ಧರ್ಮಾಮೃ. ೪-೩೮). **ದುಃಖಿಪಡು :** ಕನಸಿನ ಪೊನ್ನ ಕಾಣದೆ ದುಃಖಿಪಡುವರೆ (ಕುಮಾರವ್ಯಾ. ೭-೩೮) : ಯುದ್ಧದಲ್ಲಿ ಹಗೆಗಳ ಬಾಣದಿಂದ ಲಕ್ಷ್ಮಣನು ಮೂರ್ಛೆಹೋದದ್ದು ಅಣ್ಣನಾದ ರಾಮನು ದುಃಖಿಪಟ್ಟದ್ದೂ ಸರಿಯಷ್ಟೆ (ನೀತಿಚಂ. VIII, ೧೭); ಹೆತ್ತ ತಂದೆ ತಾಯಿಗಳನ್ನು ಕಳೆದುಕೊಂಡಂತೆ ದುಃಖಿಪಟ್ಟರು ಜನರು (ಶಾಂತಲಾ. ೫೦). **ದುಃಖಿಬಡು :** ಜನನಮರಣಂಗಳಿಂದೆ ದುಃಖಿಬಡುತಿರ್ಪುವು ನೋಡಾ ಸಕಲ ಪ್ರಾಣಿಗಳು (ಅಖಂಡೇ. ೧೬೧-೨೩). [ದುಃಖ + ಪಡು$_1$]

ದುಃಖಕರ (ಗು). ೧. ನೋವನ್ನುಂಟು ಮಾಡುವ ; ತೊಂದರೆ ತರಂ ವಂತಹ.(ನಾ). ೨. ಯಾತನೆಯನ್ನುಂಟುಮಾಡುವುದು; ವ್ಯಥೆಯನ್ನುಂಟುಮಾಡುವುದು: ವಂಚಕೋಶದ ಮೇಳದಿಂ ಜಡದೃಶ್ಯ ದುಃಖಕರಾಳಿಯಿಂದಲಶುದ್ಧತರದಿಂದಿವದ ನಿತ್ಯದೊಳು ಜಾಳಿಸಿದ ದೇಹ (ಸದ್ಗುರು. ೪-೮) ; ಇದು ತುಂಬಾ ದುಃಖಕರವಾದದ್ದು (ವಚಕಾ. ೧೩೧). [ಸಂ.]

ದುಃಖಕಾತರೆ (ನಾ). ವೇದನೆಯಿಂದ ಕಳವಳಗೊಂಡವಳು: ಅಕ್ಕ ಅವನಿಂದು ಮಹಾರೌದ್ರ ಸಂಕಟಕೆ ಸಿಲುಕುವನು ಎಂದರಿತು ದುಃಖಕಾತರೆಯಾಗಿ ನಿನ್ನ ಬೇಡಲು ಓಡಿ ಬಂದೆ (ಕಂದ್ರಸ. ೨). [ದುಃಖ + ಕಾತರೆ]

ದುಃಖಿಗೊಳ್ (ಕ್ರಿ). = ದುಃಖಿಬಡು : ದುಃಖಿಗೊಳದಿರು ತಾವವುದು ಗುಡುಗು ಅಳಲವೇಡೇಳು (ಬಸಪು. ೪೫-೫೩). [ದುಃಖ + ಕೊಳ್$_1$]

ದುಃಖಿಗ್ರಸ್ತೆ (ನಾ). = ದುಃಖಿತೆ : ನೀವೆಲ್ಲಾ ನೆನೆದುಕೊಳ್ಳುವಷ್ಟು ದುಃಖಿಗ್ರಸ್ತೆ ನಾನಲ್ಲವೇ ಅಲ್ಲ (ಪಶ. ೪೯). [ಸಂ. ದುಃಖಿಗ್ರಸ್ತಾ]

ದುಃಖಿಜೀವನ (ನಾ). ವ್ಯಥೆಯಿಂದ ಕೂಡಿರುವ ಬಾಳು ; ಕಷ್ಟದ ಬದುಕು : (ಕ). [ದುಃಖ + ಜೀವನ]

ದುಃಖಿಜೀವಿ (ನಾ). ಸಂಕಟದ ಬದುಕನ್ನು ಸಾಗಿಸುವವನು ; ವ್ಯಥೆಯಿಂದಕೂಡಿ ಬದುಕುವವನು: ಆ ದುಃಖಿಜೀವಿಯಂ ಕಂಡಾ ದೊರೆಯ ಮುಮ್ಮುಕ್ಷುಗಂ ನಿರೀಕ್ಷಿಸಲೊಡನಂದಾದುದು ಬಾಷ್ಪಪ್ರಸರಂ (ಸುಳುಮಾ. ೪-೬೨). [ದುಃಖ + ಜೀವಿ$_1$]

ದುಃಖತ್ರಯ (ನಾ). ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕ ಗಳೆಂಬ ಮೂರು ಬಗೆಯ ಕ್ಲೇಶಗಳು : ತನಯ ಕೇಳಾಲಸ್ಯ ರೋಗ ಗಳನುಗತದ ದುಃಖತ್ರಯಂಗಳು . . . ದರುಶನ ಭ್ರಾಂತಿಯಶ್ರದ್ಧೆಗಳು ವಿಘ್ನಗಳು (ಅಮೃತ. ೬-೮೮). 'ತಾಪತ್ರಯ' ಪರಾ. [ದುಃಖ + ತ್ರಯ]

ದುಃಖದ (ನಾ). ಕ್ಲೇಶವನ್ನುಂಟುಮಾಡುವಂತಹುದು : ಸಂಸಾರಂ ತೀವ್ರತರ ದುಃಖದಂ ನಾಳೀವ್ರಣ ಸದೃಶಂ ಶರೀರಿಗದ ಕಿಡೆ ನೆಗಟುಂ (ಶಾಂತಿಪು. ೭-೬) : ಪಲ್ಲವ ಸವಿಪಲ್ಲವ ಪೇಟಯ್ಕೋ ದುರ್ವ್ಯೋಹವೊಂದೆ ದುಃಖದಮಲ್ತೆ (ಉಷಾಪ. ೩೩೧). [ಸಂ.]

ದುಃಖನಿವಾರಣೆ (ನಾ). ವ್ಯಥೆಯನ್ನುಇಲ್ಲದಂತೆ ಮಾಡುವಿಕೆ.-ಪರಿಹರಿಸುವಿಕೆ : ಅವರ ದುಃಖನಿವಾರಣೆಯಾಗುವಂತೆ ಏನಾದರೊಂದು ಪರಿಹಾರವನ್ನು ಸೂಚಿಸಬೇಕು (ಕೂಡಿ). [ದುಃಖ + ನಿವಾರಣೆ]

ದುಃಖಪಡಿಸು (ಕ್ರಿ). ವ್ಯಥೆ ಪಡುವಂತೆ ಮಾಡು ; ಸಂಕಟವನ್ನುಂಟು ಮಾಡು : ಆಕೆಯನ್ನು ದುಃಖಪಡಿಸುವುದು ತರವಲ್ಲ (ರೂಢಿ).
[ದುಃಖಪಡು (<ದುಃಖಂಬಡು) + – ಇಸ್ಸು$_3$]

ದುಃಖಪಡು 'ದುಃಖಂಬಡು' ನೋ.

ದುಃಖಬಡು 'ದುಃಖಂಬಡು' ನೋ.

ದುಃಖಭಾಜನ (ನಾ). ವ್ಯಥೆಗೆ ಪಾತ್ರನಾದವನು ; ಸಂಕಟವನ್ನು ಹೊಂದಿದವನು : ಮತ್ತೇನುಂ ಮಾಣದೆ ದುಷ್ಟವಾಜಿ ತರೆ ಬುದೀ ಬಾವಿಯೊಳ್ ಬಿಟ್ಟು ಬಂದಾನಿಂತೊರ್ವನೆ ದುಃಖಭಾಜನನೆನಿಪ್ಪಂತಾಯ್ತುದೇಂ ಕರ್ಮವೋ (ಜೀವಸಂ. ೫೪-೧೩). [ದುಃಖ + ಭಾಜನ]

ದುಃಖಭಾಜನೆ (ನಾ). ಸಂಕಟವನ್ನು ಹೊಂದಿದವಳು ; ದುಃಖಕ್ಕೆ ಗುರಿಯಾದವಳು : ಆರ್ಯಪುತ್ರನೆ, ದುಃಖಭಾಜನೆಯಾದ ನನ್ನನ್ನು ಆಮೇಲೆ ಹೇಗೆ ಸ್ಮರಿಸಿದೆ ? (ಶಾಕುಂತ. ೧೦೦-೮). [ಸಂ. ದುಃಖಭಾಜನಾ]

ದುಃಖಭೋಗ (ನಾ). ಕಷ್ಟವನ್ನು ಅನುಭವಿಸುವುದು ; ಸಂಕಟದ ಅನುಭವ : ಅವಳಿಗೂ ದುಃಖಭೋಗವೆಂಬ ಶಿಕ್ಷಣವಾಗಬೇಕಾಗಿತ್ತೆಂದು ತೋರುತ್ತದೆ (ಬಂಕಿಮ. ೬೦). [ದುಃಖ + ಭೋಗ]

ದುಃಖಮಿಶ್ರ (ನಾ). ಸಂಕಟದಿಂದ ಕೂಡಿರುವುದು : ಸುಖಾನುಭವ ಮತ್ತು ದುಃಖಾನುಭವ ಇವೆರಡೂ ಸೇರಿ ಇಷ್ಟತ್ತೊಂದು. ಇವುಗಳೆಲ್ಲಾ ದುಃಖಮೂಲವಾಗಿಯೂ ದುಃಖಮಿಶ್ರವಾಗಿಯೂ ದುಃಖ ಸಾಧನವಾಗಿಯೂ ಇರುವುದರಿಂದ ವಿವೇಕಿಗಳಿಗೆ ದುಃಖಮಯ (ಹಿಂದಸಾ. ೦೧೬).
[ದುಃಖ + ಮಿಶ್ರ]

ದುಃಖಮೂಲ (ನಾ). ಸಂಕಟಕ್ಕೆ ಕಾರಣವಾದುದು : ಇವುಗಳೆಲ್ಲಾ ದುಃಖಮೂಲವಾಗಿಯೂ ದುಃಖಮಿಶ್ರವಾಗಿಯೂ ದುಃಖಸಾಧನವಾಗಿಯೂ ಇರುವುದರಿಂದ ವಿವೇಕಿಗಳಿಗೆ ದುಃಖಮಯ (ಹಿಂದಸಾ. ೦೧೬).
[ದುಃಖ + ಮೂಲ]

ದುಃಖರಾಗ (ನಾ). ಶೋಕಪೂರ್ಣವಾದ ರಾಗ ; ಕರುಣೆಯನ್ನು ಉದ್ದೀಪಿಸುವ ರಾಗ : ಮೃದುವಾಗಿ ದುಃಖರಾಗವನೆತ್ತಿ ನುಡಿಸಿದೆನು, ಮೃದುವಾಗಿ ಹಾಡಿದೆನು ಕರುಣಕಥೆಯ (ಇಂಗೀತ. ೪೪-೨೧).
[ದುಃಖ + ರಾಗ]

ದುಃಖವಾದ (ನಾ). ಜೀವನವು ದುಃಖಮಯವೆಂಬ ಸಿದ್ಧಾಂತ : ಭರತಖಂಡದಲ್ಲಿ ಬೌದ್ಧದರ್ಶನವೊಂದರಲ್ಲಿಯೇ 'ದುಃಖವಾದ'ದ ವಿಶಿಷ್ಟ ಪ್ರತಿಪಾದನೆ ಕಂಡುಬರುತ್ತದೆ (ಶ್ರೇಷ್ಠಪ್ರ. ೩೯). [ದುಃಖ + ವಾದ$_3$]

ದುಃಖವಿಹ್ವಳ (ನಾ). ವೇದನೆಯಿಂದ ಕಳವಳಿಸುತ್ತಿರುವವನು ; ಸಂಕಟದಿಂದ ಪರಿತಪಿಸುತ್ತಿರುವವನು : ಅಲ್ಲಿಯೆ ನಿಂದು ದುಃಖವಿಹ್ವಳನೆದೆ ದೋಱಿ ನೂಂಕಿ ಕುಡುತುಂ ಕರುಣಂ ಪಿರಿದಾಗಿ ಪಿಂಬಗಲ್ ಕಳೆವಿನ ಮಿರ್ದನಾ ಪರಮಯೋಗಿ (ಸುಕುಮಾ. ೪-೬೩).
[ದುಃಖ + ವಿಹ್ವಳ (= ವಿಹ್ವಲ)]

ದುಃಖವೆರಸು (ಕ್ರಿ). ಸಂಕಟಪಡು ; ಯಾತನೆಪಡು : ನಲ್ಲನನಱಸುತಲಿ . . . ಚಂದ್ರಮುಖಿ ಬಂದಳು ದುಃಖವೆರಸಿ (ಮೋಹತ. ೨೭-೫೦).
[ದುಃಖ + ಬೆರಸು$_1$]

ದುಃಖಶತ (ನಾ). ಅನೇಕ ಕಷ್ಟ : ತನಯಶತಮಾದುದಲ್ತೆನಗನಿವಾರಿತ ದುಃಖಶತಮೆ ತಾನಾದುದು (ಪಂಪಭಾ. ೧೪-೮) : ವೀರಶತಜನನಿಗೀಗಾಂಧಾರಿಗೆ ದುಃಖಶತ[ಪಾಠಾಂ. ಶತದುಃಖ]ಜನನಿವೆಸರಾಯ್ತಾಗಳ್ (ಗದಾಯು. ೪-೫). [ದುಃಖ + ಶತ]

ದುಃಖಶಮನ (ನಾ). ೧. ನೋವನ್ನು ಉಪಶಮನಗೊಳಿಸುವುದು. ೨. ಯಾತನೆ ಕೊನೆಗಾಣುವುದು,–ಮುಗಿಯುವುದು : (ಕಿ).
[ದುಃಖ + ಶಮನ]

ದುಃಖಸಮುದಯ (ನಾ). ವ್ಯಥೆಯ ಉತ್ಪತ್ತಿ; ದುಃಖ ತಲೆದೋರುವಿಕೆ : ಇದು ದುಃಖಸಮುದಯ ಎಂಬ ಆರ್ಯಸತ್ಯ. ಕಾಮತೃಷ್ಣೆ, ಭವತೃಷ್ಣೆ, ವಿಭವತೃಷ್ಣೆ ಎಂಬ ಮೂರು ಬಗೆಯ ತೃಷ್ಣೆಗಳಿಂದ ದುಃಖ ತಲೆಯೆತ್ತುತ್ತದೆ (ಭಾರದ. ೧೯೭). [ದುಃಖ + ಸಮುದಯ]

ದುಃಖಸಾಧನ (ನಾ). ವ್ಯಥೆಗೆ ಕಾರಣ ; ಯಾತನೆಗೆ ಕಾರಣವಾದುದು : ಇವುಗಳೆಲ್ಲಾ ದುಃಖ ಮೂಲವಾಗಿಯೂ ದುಃಖಮಿಶ್ರವಾಗಿಯೂ ದುಃಖ ಸಾಧನವಾಗಿಯೂ ಇರುವುದರಿಂದ ವಿವೇಕಿಗಳಿಗೆ ದುಃಖಮಯ (ಹಿಂದಸಾ. ೦೧೬). [ದುಃಖ + ಸಾಧನ]

ದುಃಖಹೇತು (ನಾ) ಸಂಕಟಕ್ಕೆ ಕಾರಣವಾದುದು ; ಯಾತನೆಗೆ ನಿಮಿತ್ತವಾದುದು : ಆವುದು ಸುಖಮೆಂದೆಳಸುವನಾ ವಸ್ತುವೆ ದುಃಖಹೇತು (ಮಲ್ಲಿಪು. ೯-೬೨) ; ಅಜ್ಞಾನವೇ ದುಃಖಹೇತುವಾದ ಸಂಸಾರದ ಬೀಜ (ಭಾರದ. ೦೨೨). [ದುಃಖ + ಹೇತು$_2$]

ದುಃಖಾಂಜಲಿ (ನಾ). (ಆಲಂ) (ಶೋಕದಿಂದ ಸುರಿಸುವ) ಕಣ್ಣೀರಿನ ತರ್ಪಣ : ರಾಜಮಾತೆಯವರ ಈ ಅನಿರೀಕ್ಷಿತ ಮರಣಕ್ಕೆ ದುಃಖಾಂಜಲಿಯನ್ನು ಅರ್ಪಿಸಿ . . . ತಬ್ಬಲಿಗಳಂತೆ ಗೋಳಾಡಿ ಹೋದರು (ಶಾಂತಲಾ. ೧೮೦). [ದುಃಖ + ಅಂಜಲಿ]

ದುಃಖಾಂತ (ಗು). ೧. ವೇದನೆಯಲ್ಲಿ ಕೊನೆಗೊಳ್ಳುವ ; ವ್ಯಥೆಯಿಂದ ಮುಗಿಯುವ. 'ದುಃಖಾಂತನಾಟಕ' ಪರಾ. (ನಾ). ೨. ವೇದನೆಯ ಕೊನೆಗೊಳ್ಳುವಿಕೆ ; ಸಂಕಟದ ಮುಗಿವು : ದುಃಖಾಂತವೇ ಪರಮ ಪುರುಷಾರ್ಥ, ದುಃಖಾಂತ ಎಂದರೆ ಪಾರಮೈಶ್ವರ್ಯಪ್ರಾಪ್ತಿ (ಭಾತತ್ತ್ವ. ೬೨೫). ೩. ಶೋಕಪೂರ್ಣವಾದ ಮುಕ್ತಾಯ ; ದುರಂತದಿಂದ ಕೊನೆಗೊಳ್ಳುವಿಕೆ : ಈ ದುಃಖಾಂತದ ಸಂಬಂಧವಾಗಿ ಗ್ರಂಥಕರ್ತನು ಒಂದು ಆಶಂಕೆಯನ್ನು ಎತ್ತಿ[ಮೊದಲ ಮುದ್ರಣದಲ್ಲಿ] ಹೀಗೆ ಸಮಾಧಾನ ಹೇಳಿದ್ದಾನೆ (ಬಂಕಿಮ. ೦೬೭). ೪. ದುಃಖದಲ್ಲಿ ಮುಗಿಯುವ ಕಥಾನಕ; ಟ್ರಾಜಿಡಿ ; ದುರಂತಕಥೆ : ಇಂದು ರುದ್ರನಾಟಕವೆಂದರೆ ಅದು ದುರಂತವೋ, ದುಃಖಾಂತವೋ ಆಗಿರಲೇಬೇಕೆಂದು ನಮ್ಮ ಅಭಿಪ್ರಾಯವಾಗಿದೆ (ಅರಿಕಾ. ೦೬೪). [ದುಃಖ + ಅಂತ$_2$]

ದುಃಖಾಂತನಾಟಕ (ನಾ). ವೇದನೆಯಲ್ಲಿ ಕೊನೆಗೊಳ್ಳುವ ನಾಟಕ : ದುಃಖಾಂತನಾಟಕಗಳು ನಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿಲ್ಲ (ರೂಢಿ).
[ದುಃಖಾಂತ + ನಾಟಕ]

ದುಃಖಾಕುಲ, ದುಃಖಾಕುಳ (ನಾ). ವ್ಯಥೆಯಿಂದ ಕೂಡಿದವನು ; ಸಂಕಟದಿಂದ ಕೊರಗುವವನು: ಇತ್ತಲಿರ್ವರುಂ ದುಃಖಾಕುಲರ್ ವೈಕುಂಠನೊಳೆ ಇಂತೀ ಪರಿಯಂ ನಿರ್ಧರಿಪುದೆಂದು ಗಳ್ಕನೆ ವೈಕುಂಠಕೆಯ್ತರಲ್ (ಅದ್ಭುತ. ೧೩-೪) ; ಆದರೆ ಅದು ಸಹ ಅಸಾಧ್ಯವೆಂದು ತೋರಿದಾಗ, ಆವನು ದುಃಖಾಕುಲನಾದನು (ಪುನರು. ೨೯೦). **ದುಃಖಾಕುಳ** : ಅದು ವಾಯುವೇಗದಿಂ ಬಂದರಸನ ಚರಣದೊಳು ಬಿದ್ದು ದುಃಖಾಕುಳನಾಗುತ್ತೆ (ನಂಬಿರ. ೬-೧೫೦). [ದುಃಖ + ಆಕುಲ]

ದುಃಖಾಕುಳ 'ದುಃಖಾಕುಲ' ನೋ.

ದುಃಖಾಧಿಕೆ (ನಾ). ಅಧಿಕವಾದ ಸಂಕಟ ; ಬಹಳ ಕಷ್ಟ : ದುರ್ಗಂಧೆ ದುರ್ವರ್ಣೆ . . . ಪಾಪಕ್ಕೆ ಪಕ್ಕಾಗಿ ದುಃಖಾಧಿಕೆಯಿಂ ಸಂಸಾರಕೂಪಾರದೊಳನವರತಂ ನೀಡುಮೋಲಾಡುತಿರ್ದಳ್ (ಸುಕುಮಾ. ೫-೨೧).
[P ಇದು 'ದುಃಖಾಸಿಕೆ'ಯೆಂಬುದರ ಅಪಲಿಖಿತವಿರಬಹುದು]

ದುಃಖಾನ್ವಿತ (ಗು). ೧. ಯಾತನೆಯಿಂದ ಕೂಡಿದ ; ನೋವಿನಿಂದ ಕೂಡಿದ. (ನಾ). ೨. ಯಾತನೆಯಿಂದ ಕೂಡಿದವನು; ನೋವಿನಿಂದ ಕೂಡಿದವನು; ದುಃಖಿ : ಅರಿನೀಚರ್ಕ್ಷದೊಳೊಂದಿ ನಿಂದೊಡೆ ದರಿದ್ರಂ ಬಂದು ಕೂಡಿರೆ ದುಃಖಾನ್ವಿತಂ (ಜಾತತಿ. ೧೫-೯). [ದುಃಖ + ಅನ್ವಿತ]

ದುಃಖಾರ್ತ (ನಾ). ಶೋಕದಿಂದ ಕೂಡಿದವನಂ; ವೇದನೆಯನ್ನನಂ ಭವಿಸಂತ್ತಿರುವವನಂ: ಇರೆ ಧಾತ್ರೀತನಯಂ . . . ಕುಂಭೋದಯದೊಳ್ ತೊಟಲ್ವನಧನಂ ದುಃಖಾರ್ತನುಗ್ರಂ ಶಠಂ (ಜಾತತಿ. ೧೭-೨೦); ಪ್ರಾಣಿಗಳ್ದುಃಖಾರ್ತರಾಗಿ ಬಂದು ಬೇಡಿದೊಡೆ ತನಗುಳ್ಳ ವಸ್ತುವಂ ಕುಡದೆ ಕೆಡೆನೋಡುವವನಥಿಕನೆ (ಜೈಮಿಭಾ. ೨೪. ೨೧).

[ದುಃಖ + ಆರ್ತ$_3$]

ದುಃಖಾರ್ತೆ (ನಾ). = ದುಃಖಿತೆ: ಆ ನಾರಿ ದುಃಖಾರ್ತೆಯಾಗಲಂತಃಪುರದ ಮಿಾನಾಕ್ಷಿಯರ್ಕೂಡೆ ರೋದಿಸಲ್ವೆರ್ಚಿತು ವಿಷಾದರವಮರಮನೆಯೊಳು (ಜೈಮಿಭಾ. ೨೩-೩೦). [ದುಃಖ + ಆರ್ತೆ]

ದುಃಖಿ (ಗು). ೧. ವ್ಯಥೆಯಿಂದ ಕೂಡಿದ; ಸಂಕಟಪಡುವ. (ನಾ). ೨. ಬಾಧೆಯನ್ನು ಅನುಭವಿಸುವವನಂ; ನೊಂದವನಂ: ಕ್ಷಿತಿಜನೊಳೊಂದಿದ ಗುರುವಿಂ ನೇತಾರಂ ಮಿತ್ರಪುತ್ರನಿಂ ದುಃಖಿ . . . ಭೃಗುಸುತನಿಂ ಪರದಾರಶೀಲನೆನಿಕುಂ ಮನುಜಂ (ಜಾತತಿ. ೧೫-೩); ಜೀವನುಂ ಮೃತದುಃಖಿ ಅಮೃತಂ ದೇವನಾ ಜೀವನುಮಶುದ್ಧನು ದೇವನತಿ ಶುದ್ಧನು (ಬಸಪು. ೫೦-೨೯); ಇಳೆಯೊಳೆನ್ನಂದದಲಿ ಬೇಱೆನ್ನೊಳರೆ ದುಃಖಿಗಳು (ತೊರರಾ. ೬-೪೫-೪); ದೇವ ಮಾಡುವುದಿರಲಿ, ನಾವು ಮಾಡುವ ಹಿಂಸೆ, ಅದೆ ನರಕಹಿಂಸೆ! ದುಃಖಿಗಳ, ಪಾಪಿಗಳ ನಾವು ಧಿಕ್ಕರಿಸುವೆವು (ಇಂಗೀತ. ೬೫-೦೮); ದುಃಖಿಗೆ ನೆರಂ ದುಃಖಿ (ಶ್ರೀರಾಮಾ. ೨೭೭-೩೭೪).

[ಸಂ. ದುಃಖಿನ್]

ದುಃಖಿತ (ಗು). ೧. ಕೊರಗುವ; ಸಂಕಟಪಡುವ; ನೊಂದ. (ನಾ). ೨. = ದುಃಖಿ ೨: ತಾವು ಪರದುಃಖ ದುಃಖಿತರೆಂದು ತಿಳಿದೇ ತಮ್ಮಲ್ಲಿಗೆ ಬಂದಿರುವೆನು (ಬೆನ್ನಬೇ. ೬೬). [ಸಂ.]

ದುಃಖಿತೆ (ನಾ). ವ್ಯಥೆಯನ್ನು ಹೊಂದಿರುವವಳು; ಸಂಕಟದಲ್ಲಿರುವಾಕೆ: ನವಿರ್ಗಳ್ ಕವಲುಂ ಕಡುಗೆಂಪುಂ ಪಲವುವಪ್ಪ ಮುಸುಡುಱುವುಮಾಗೆ ದುಃಖಿತೆಯಕ್ಕುಂ (ಲೋಕೋಪ. ೧೧-೫೯). [ಸಂ. ದುಃಖಿತಾ]

ದುಃಖಿನಿ (ನಾ). = ದುಃಖಿತೆ: ನಾನು ಅತ್ಯಂತ ದುಃಖಿನಿ (ಬೆನ್ನಬೇ. ೬೬).

[ಸಂ. ದುಃಖಿನೀ]

ದುಃಖಿಸು (ಕ್ರಿ). ವ್ಯಥೆಪಡು; ಸಂಕಟಗೊಳ್ಳು; ಯಾತನೆ ಹೊಂದು: ಎಯ್ದದ ದುರ್ಗತಿಗಳನಿರದೆಯ್ದಿ ಕರಂ ಸೇದೆವಟ್ಟು ದುಃಖಿಸಿ (ಸಮಪ. ೩-೫೮); ದೆಸೆದೆಸೆಗೆ ಹೇಸಿಕೆಯು ನಾತವಧಿಕ ಭಯಂಕರವು ಪಸರಿಸಲು . . . ಅಕಟಕಟಾ ಎನುತ ದುಃಖಿಸುತ ಮೂಗುಗಳಂ ಹಿಡಿದುಕೊಳುತುಗುಳುತಗಲ್ದಿರಲು (ಬಸಪು. ೪೬-೫೯); ತ್ರಿವಿಧ ತಾಪದಲಾನು ಬಳಲಿಯೆ ತೊಳಲಿ ದುಃಖಿಪೆ (ಗಗತಾ ೨-೨೬). [ದುಃಖ + – ಇಸು$_3$]

ದುಃಖೋತ್ತರಣ (ನಾ). ಯಾತನೆಯಿಂದ ಪಾರುಗಾಣಿಸುವವನು; ದುಃಖನಿವಾರಣೆ ಮಾಡುವವನಂ: ದೀನಾರ್ತಿದುಃಖೋತ್ತರಣ ನೀ ದೀನಾರ್ತದುಃಖಿತೆಯಾನು ಜಗವಱಿಯೆ (ಕುಮ್ಯಾಸ. ೦೪-೧೨೫).

[ದುಃಖ + ಉತ್ತರಣ]

ದುಃಖೋಪಚಯ (ನಾ). ಅತಿಶಯವಾದ ಸಂಕಟ: ಈ ವೈಭವಫಲವ ಪುತ್ರರಿಗೆ ಬಹು ದುಃಖೋಪಚಯವೆಂದು ಅವನಿಪತಿ ವೈರಾಗ್ಯದಲಿ ರಾಜ್ಯವನು ಬಿಸುಟು . . . ಹೊಱವಂಟ (ಕುಮ್ಯಾಸ. ೨-೩೭).

[ದುಃಖ + ಉಪಚಯ]

ದುಃಖೋಪಶಮನ (ನಾ). = ದುಃಖಶಮನ ೧: ಶೋಕಾಕ್ರಾಂತರಾದರಂ ನಾರಾಯಣಂ ಸಂತೈಸಿ ಕೊಂದರ್ ಕೊಲೆ ಸಾವರೆಂಬುದು ಜಗದ್ವ್ಯಾಪಾರ ಮಿಾಶ್ವರನಿಚ್ಛೆಯಿಂದೆ ನೆಗಟ್ಗುವೆಂದು ದುಃಖೋಪಶಮನಂ ಮಾಡಿದೊಡೆ (ಪಂಪಭಾ. ೧೪-೦೦ ವ); ಜ್ಞಾನವೇ ದುಃಖೋಪಶಮನಕ್ಕೂ ಬಂಧನಿವಾರಣಕ್ಕೂ ಕಾರಣ (ಭಾರದ. ೦೨೨). [ದುಃಖ + ಉಪಶಮನ]

ದುಃಖೋಪಾತ್ತ (ನಾ). ಯಾತನೆಯನ್ನು ಉಂಟುಮಾಡುವುದು; ಸಂಕಟವನ್ನು ತರುವಂತಹುದು: ಸುಖಮಿದು ದುಃಖೋಪಾತ್ತಮಿದೆಂದಱಿಪುಗುಮಾ ಪರಮಕವಿಪ್ರಧಾನರಾ ಕಾವ್ಯಂಗಳ್ (ಕವಿರಾ. ೦-೦೮).

[ದುಃಖ + ಉಪಾತ್ತ]

ದುಃಚಿಹ್ನೆ (ನಾ). ಕೆಟ್ಟ ಶಕುನ; ದುಷ್ಟ ಲಕ್ಷಣ. [ಸಂ.]

ದುಃಪಕ್ವ (ಗು). ಸರಿಯಾಗಿ ಅಡುಗೆಯಾಗದೆ ಇರುವ,–ಬೇಯದಿರುವ. 'ದುಃಪಕ್ವಾನ್ನ' ಪರಾ. [ಸಂ.]

ದುಃಪಕ್ವಾನ್ನ (ನಾ). ೧. ಸರಿಯಾಗಿ ಬೇಯದೆ ಇರುವ ಅನ್ನ. ೨. [ಜೈನ] ಐದು ಭೋಗೋಪಭೋಗ ಅತಿಚಾರಗಳಲ್ಲಿ ಒಂದು; ಬೇಯದ ಅಥವಾ ಸೀದ ಆಹಾರ ತಿನ್ನುವುದು: ಕ್ರಮದಿಂ ಸಚಿತ್ತ ಸಂಬಂಧಮಂತೆ ಸಮ್ಮಿಶ್ರಮಭಿಷವಂ ದುಃಪಕ್ವಾನ್ನಂಗಳತಿಕ್ರಮಮಾ ಭೋಗೋಪಭೋಗಪರಿಮಿತ ಗತಿಯೊಳ್ (ಸುಕುಮಾ. ೬-೨೪).

[ದುಃಪಕ್ವ + ಅನ್ನ$_3$]

ದುಃಪ್ರಣಿಧಾನ (ನಾ). ಕೆಟ್ಟ ಆಚರಣೆ; ದುರ್ವರ್ತನೆ: ವ್ಯಂತರಾದಿಗಳುಂ ಮುನ್ನಮತ್ಯುಗ್ರ ತಪೋಧನರ್ಗೆ ಅಗ್ರಪೂಜೆಯಂ ಮಾಟ್ಟರೆಂಬುದು ಪುಸಿಯಲ್ಲದೊಡೆ ಈಗಳೆಮ್ಮಂದಿಗರ್ಗೆ ಏಕೆ ಮಾಡರೆಂಬ ದುಃಪ್ರಣಿಧಾನವಿರ ಹಿತಚಿತ್ತನೆನಿಪ ಮುನಿಪತಿಗೆ ಸತ್ಕಾರ ಪುರಸ್ಕಾರ ಪರೀಕ್ಷಹ ಜಯವಂಕ್ಕುಂ (ತತ್ತ್ವಪ್ರ. ೩೩೭). [ಸಂ.]

ದುಃಪ್ರತೀತಿ (ನಾ). ≡ ದುಷ್ಪ್ರತೀತಿ ೨: ಎರಡು ಪದಂಗಳ ನಡುವೆ ಬೇಱೊಂದು ದುಃಪ್ರತೀತಿ [ಪಾಠಾಂ. ದುಷ್ಪ್ರತೀತಿ] ಪುಟ್ಟುವೊಡೆ ಸಂಧಿಯಂ ಮಾಡಲಾಗದು (ಶಮದ. ೬೨ ವೃತ್ತಿ). [ಸಂ.]

ದುಃಪ್ರಾಪಂಚಿಕ (ಗು). ಕೆಟ್ಟ ಇಹಲೋಕಕ್ಕೆ ಸಂಬಂಧಿಸಿದ: ಮಂಗಳೋದಯಲಿಂಗ ಕರತಳಸಂಗತಸ್ಥಿತಿಯಂ ತಿಳಿಹಿಯಾ ಸಂಗ ದುಃಪ್ರಾಪಂಚಿಕಾಶಾ ಬಂಧವಂ ಪಱಿದು (ಬಸಪು. ೪೯-೩೩). [ಸಂ.]

ದುಃಶೀಲ (ಗು). ≡ ದುಶ್ಶೀಲ ೧: ಸಾಲವಂ ಕೊಳ್ಳನು ಕೊಡನು ದುಃಶೀಲ [ಪಾಠಾಂ. ದುಶ್ಶೀಲ] ಭವಿಗಳ ಕೈಯಲೆನುತಂ (ಬಸಪು. ೬೦-೦೭). [ಸಂ.]

ದುಃಶ್ರಾವ್ಯ (ಗು). ≡ ದುಶ್ಶ್ರಾವ್ಯ: ದುಃಶ್ರಾವ್ಯ [ಪಾಠಾಂ. ನಿಸ್ಸಾರ] . . . ಕಾಲಹೀನವೆಂಬ ಹದಿನೈದು ಸ್ವರದೂಷಣಂಗಳಂ ತೊಱದು (ವಿವೇಕ. ೨೩೬). [ಸಂ.]

ದುಃಶ್ರುತಿ (ನಾ). ಕೆಟ್ಟವಿಷಯಂಗಳನ್ನು ಕೇಳುವುದು,–ತಿಳಿಯುವುದು: ದುಃಶ್ರುತಿ–ಮನಸ್ಸು ಕಲುಷಿತವಾಗುವಂತಹ ಗ್ರಂಥಗಳನ್ನು ಓದುವುದನ್ನೂ ಓದಿಸುವುದನ್ನೂ ಮಾಡಬಾರದು (ಜೈನಪ. ೪೬೯). 'ದುಶ್ಶ್ರುತಿ' ಪರಾ.

[ಸಂ.]

ದುಃಸಂಗ (ನಾ). ≡ ದುಸ್ಸಂಗ. [ಸಂ.]

ದುಃಸಂತತಿ (ನಾ). ≡ ದುಸ್ಸಂತತಿ. [ಸಂ.]

ದುಃಸಂಧಿ (ನಾ). ≡ ದುಸ್ಸಂಧಿ. [ಸಂ.]

ದುಃಸಹ (ನಾ). ≡ ದುಸ್ಸಹ ೨: ಶಿವಮಾರನ ಆಯುಷ್ಯವು ದುಃಸಹವಾದ ವಿಪತ್ತುಗಳಲ್ಲಿಯೇ ಕಳೆದು ಹೋಯಿತು (ಕರ್ಣಾಅ. ೦೬೬). [ಸಂ.]

ದುಃಸಾಧ್ಯ (ನಾ). ≡ ದುಸ್ಸಾಧ್ಯ: ದುಃಸಾಧ್ಯ ಸಂಭಾವ್ಯವೆಂಬ ಸೊಲ್ಲಿನ ಗುಲ್ಲು ಗುಡುಗಾಡುತಿದೆ (ಉಯ್ಯಾಲೆ. ೨೭-೦). [ಸಂ.]

ದುಃಸ್ಥಿತಿ (ನಾ). ≡ ದುಸ್ಥಿತಿ: ಬಸವ ಶರಣನೆ ದುಃಸ್ಥಿತಿ [ಪಾಠಾಂ. ದುಸ್ಥಿತಿ] ಗಳತ್ತತ್ತಲೋಡುವುವು (ಬಸಪು. ೦-೨೬); ಸತ್ಪುರುಷಾಗ್ರಣಿಯೊಬ್ಬನು ಉತ್ತಮಸ್ಥಿತಿಯಿಂದ ದುಃಸ್ಥಿತಿಗೆ ಗುರಿಯಾಗುವ ದೃಶ್ಯವು ರುದ್ರವಾಗಲಾರದು (ಅರಿಕಾ. ೦೭೦); ಹೃದಯತಾಪದಿ ದೀನಮನನಾಗಿ, ದುಃಸ್ಥಿತಿಯನಾಂತಾ ನೃಪೇಂದ್ರನಂ ಕಾಣುತಾ ಕೇಕಯಕುಲೀನೆಯಾಕುಲೆಯಾದಳೆದೆಗರಗಿ (ಶ್ರೀರಾಮಾ. ೭೦-೪೭೦). [ಸಂ.]

ದುಃಸ್ಥಿತಿಪ್ರೇರಕ (ನಾ). ದುರವಸ್ಥೆಗೆ ಪ್ರೇರಿಸುವವನು; ಚಾಡಿಕೋರ: "ದುಃಸ್ಥಿತಿ [ಪಾಠಾಂ. ದುಸ್ಥಿತಿ] ಪ್ರೇರಕಂ ಚಹಡಂ" (ಮಂಗರಾ. ೭೨-೭೩).

[ದುಃಸ್ಥಿತಿ + ಪ್ರೇರಕ]

ದುಃಸ್ಪರ್ಶ (ನಾ). =ದುಸ್ಪರ್ಶ ೨: "ದುಃಸ್ಪರ್ಶ [ಪಾಠಾಂ. ದುಸ್ಪರ್ಶ] ಮೆನೆ ತುಜುಚಿಯಕ್ಕುಂ" (ಮಂಗರಾ. ೪೪-೪೪). [ಸಂ.]

ದುಃಸ್ಪರ್ಶೆ (ನಾ). =ದುಸ್ಪರ್ಶೆ. [ಸಂ. ದುಃಸ್ಪರ್ಶಾ]

ದುಃಸ್ಮೃತಿ (ನಾ). ಕೆಟ್ಟ ನೆನವು: ಮಳ್ಕಸಗಿದಾ ದುಃಸ್ಮೃತಿಯಂ ನಿಧಿಗೆ ಬೆಂದಿರುಹಿ ... ರಾಜ್ಯಭಾರವ್ರತದಿ ನಿಂದನಯ್ ಭರತನನಿಶಂ ಶ್ರೀರಾಮ ಸಂಕ್ಷೇಮ ಚಿಂತನಾಪ್ರಾರ್ಥನೆಗೆ ತೆತ್ತು ತನ್ನಾತ್ಮಮಂ (ಶ್ರೀ ರಾ ಮಾ ೦೭೫-೭೩೪). [ಸಂ.]

ದುಃಸ್ವಪ್ನ (ನಾ). = ದಂಸ್ವಪ್ನ : ಕ್ರೂರ ದುಃಸ್ವಪ್ನ ಜೇಡನ ಪೀಡನೆಗೆ ಸಿಲ್ಕಿ ನಡಂನಡುಗುತೊಡ್ಡಾಡಿದತ್ತು ವಂ ಂ ಥ ರೆ ಯೊ ಡ ಲ್. ಬಲಿಗೆ ಬಿಳ್ದೊಂದು ಪುಳುವಂತೆ (ಶ್ರೀರಾಮಾ. ೫೯-೦೪೬). [ಸಂ.]

ದುಃಸ್ವಪ್ನದರ್ಶನ (ನಾ). ಕೆಟ್ಟ ಕನಸನ್ನು ಕಾಣುವುದು,–ನೋಡುವುದಂ: ಬಂದಯೋಧ್ಯಾನಗರಮಂ ಪೊಕ್ಕು ದುಃಸ್ವಪ್ನ[ಪಾಠಾಂ. ದುಸ್ಸ್ವಪ್ನ]ದರ್ಶನ ಕರ್ಮಣಾರ್ಥಮಾಗಿ . . . ಶಾಂತಿಕ್ರಿಯೆಗಳಂ ನೆಗಟ್ಟು (ಆದಿಪು. ೦೫-೯೫ ವ).

[ದುಃಸ್ವಪ್ನ + ದರ್ಶನ]

ದುಃಸ್ವಪ್ನಶಾಂತಿ (ನಾ). ಕೆಟ್ಟ ಕನಸನ್ನು ಕಂಡಿದ್ದಕ್ಕಾಗಿ ನಡೆಸುವ ಶಾಂತಿ: ಮರುದಿನ ಬೆಳಗ್ಗೆ ತನ್ನ ತಾಯ ಬಳಿಗೆ ಹೋಗಿ ರಾಣಿಯ ದುರ್ವರ್ತನೆಯನ್ನು ಒಂದು ಕನಸಿನ ನೆವದಿಂದ ಸೂಚಿಸಲು, ಅವಳು ಅದರ ತಾತ್ಪರ್ಯವನ್ನು ಅರಿತುಕೊಳ್ಳದೆ, ದುಃಸ್ವಪ್ನಶಾಂತಿಗಾಗಿ ಮಾರಿಗೆ ಬಲಿ ಕೊಡಬೇಕೆಂದು ಹಠ ಹಿಡಿಯುವಳು (ಕಾವ್ಯಸ. ೬೩). [ದುಃಸ್ವಪ್ನ + ಶಾಂತಿ]

ದುಃಸ್ವರ (ನಾ). =ದುಸ್ವರ ೨: ಸುಭಗ ದುರ್ಭಗ ಸುಸ್ವರ ದುಃಸ್ವರ ಆದೇಯ . . . ತೀರ್ಥಕರನಾಮಮೆಂದಿಂತಲ್ಲಿ ಗತಿನಾಮಂ ಕರ್ಮಂ ಚತುರ್ವಿಧಮಕ್ಕುಂ (ಗೊಮ್ಮಸಾ. ೩-೬) : ಸ್ಥಾವರ ಸೂಕ್ಷ್ಮ . . . ದುಃಸ್ವರ ಅನಾಧೇಯ ಅಯಶಸ್ಕೀರ್ತಿ ನಾಮಕರ್ಮಮೆಂದಿಂತು ನಾಮಕರ್ಮದುತ್ತರಪ್ರಕೃತಿಗಳು ತೊಂಭತ್ತೆಮೂರುಂ ನೂರ ಮೂರುಂ ಮೇಣಪ್ಪುವು (ಗೊಮ್ಮಸಾ. ೪-೨); ಮನೋಜ್ಞ ಸ್ವರನಿರ್ವರ್ತನಂ ಭವತಿ ದುಃಸ್ವರನಾಮ (ಗೊಮ್ಮಸಾ. ೭-೬). [ಸಂ.]

ದುಕಾನ 'ದಂಕಾನು' ನೋ.

ದುಕಾನು, ದಂಕಾನ (ನಾ). ಅಂಗಡಿ; ವ್ಯಾಪಾರಸ್ಥಳ: ಅಲ್ಲಿ . . . ದುಕಾನು ನಡೆಯುತ್ತದೆ (ಮುಂಬವ್ಯಾ. ೩೦): ಓಗಿತ್ತು ಮಾರಿ, ಬೈಸಿಕಲ್ಲು ಏರಿ ಗ್ಯಾರೇಜು, ಸರಾಯಿ ದುಕಾನು ಎಲ್ಲಾನೂ ಸುತ್ತಿಕೊಂಡು ಬಂತು (ಬಿಂಗಲು ೦೫೭). **ದುಕಾನ**: ಚಹಾ – ಕಾಫಿ ಫರಾಳ ದುಕಾನದ ಪಕ್ಕಗಳ ಕೆಳಗೆ ನಿಂತು ಹನಿಗಳಿಂದ ಪಾರಾದರೂ ಒಳಗಿನ ಹೊಗೆ ಅವರ ಕಣ್ಣೊಳಗಿಂದ ನೀರು ತರಿಸಿತು (ಮುಗಿಮ. ೪); ದುಕಾನಗಳು ಹೊಸದಾಗಿ ಮಾಡಿದ್ದರಿಂದ ಅಲ್ಲಿಯ ಅಡತಿ ಖರ್ಚು ಕೆಗೆದುಕೊಳ್ಳುವ ಸಂಬಂಧವಾಗಿ . . . ಈ ಪುಸ್ತಕದ ಕಡೆಯಲ್ಲಿ ಬೇರೆಯಾಗಿ ದಾಖಲ ಮಾಡಿರುತ್ತೇವೆ (ಮುಂಬವ್ಯಾ. ೫ ಪ್ರಸ್ತಾವನೆ). [←ಪಾರ. ಹಿಂ. ಮರಾ. ದುಕಾನ್]

ದುಕಾನುದಾರ (ನಾ). ಅಂಗಡಿಯವ; ಅಂಗಡಿಕಾರ : (ಕ).

[ದುಕಾನು + – ದಾರ್]

ದುಕಾರು (ನಾ). ಎರಡು ಮಳೆ; ಹಿಂಗಾರಂ ಹಾಗು ಮುಂಗಾರು: "ದುಕಾರು = ಹಿಂಗಾರು ಮುಂಗಾರು ಮಳೆ" (ಜಾನಪೋ. ೬).

[ದು + ಕಾರು$_2$ (<ಕಾರ್$_1$)]

ದುಕೂಲ (ನಾ). ೧. ರೇಷ್ಮೆ ಬಟ್ಟೆ; ಪಟ್ಟೆವಸ್ತ್ರ : "ದುಕೂಲಂ ಕ್ಷೌಮಂ ಈ ೨ ದು (ಗು)ಕೂಲಂ" (ಹಲಾಯು. ೯೦-೪೯೫) : ತನ್ಮಹೀವಿಲಾಸಿನಿಯ ಮೇಲ್ಕೊಂಡ ದುಕೂಲಮುಮನರ್ಹತ್ಪರಮೇಶ್ವರನ ವಿಶದಯಶಃಪುಂಜ ಮನುನಂಕರಿಸಿ . . . ದಕ್ಷಿಣೋತ್ತರ ಶ್ರೇಣಿಗಳ್ಗೆ ರಾಜಧಾನಿಗಳಾಗಿರ್ದ . . . ಪೊಬಲ್ಗಳನೊಳಕೊಂಡು (ಆದಿಪು. ೦-೬೨ ವ) ; ದುಕೂಲದೊಂದು ಮಡಿವಾಸಿವ ಮಾಟ್ಕಿವೊಲಾಯ್ತ್ರ (ಪಂಪಭಾ. ೩-೦೭) ; ತತ್ಸುತಂ ಬಳೆದು ಬಾಗದ ಬೀರದ ಪೆರ್ಮೆಯಿಂ ದಿಶಾಭಿತ್ತಿಯನೆಂಟನೆಯ್ದೆ ತೆರೆಸುತ್ತಿದನಾತ್ಮಯಶೋದುಕೂಲದಿಂ (ಪಂಂಪಾ. ೨-೫೭) : ದುಕೂಲವರಾನುಲೇಪನವ ವರಿಹರಿಸಬೇಡೊಲವಿನಲಿ ಪತಿಕರಿಸು (ಕುವಾ.ಗ. ೫-೩೯). ೨. (ಉತ್ತಮವಾದ) ವಸ್ತ್ರ.–ಉಡುಪು: ತಾವರೆಯ ನೂಲ ದುಕೂಲಮನುಟ್ಟುಪರಾಗದ ತಿಲಕಮನಿಕ್ಕಿ (ನಂಬಿರ. ೦೦-೬೨) ; ಮಸುಳಿಸಿದ್ದ ದುಕೂಲ ರದನದೊಳೆಸವ ಹಾವಸೆ ... ಉದಯಾಸ್ತಮಯಕಾಲದಲಿ ಎಸೆವ ನಿದ್ರಾಂಗನೆಯೊಳಿಂದಿರೆ ಬಿಸಜಲೋಚನನಾದೊಡೆಯು ವರ್ಜಿಸುವಳವರನು ಭಾಗ್ಯಸಿರಿ (ಕುವಾ.ಉ. ೩-೫೭) : ಅವಳು ಉಟ್ಟ ದುಕೂಲ ಸಹ ಜಾರಿ ಮೈಯ ಅಂಗಗಳು ಕಾಣಿಸುತ್ತಿದ್ದರೂ ಅವಳಿಗದರ ವರಿವೆಯಿಲ್ಲ (ಕುಸುಸಂ. ೨೫೭). [ಸಂ.]

ದುಕೂಲಚೇಲ (ನಾ). ರೇಷ್ಮೆಯಂ ವಸ್ತ್ರ,–ಬಟ್ಟೆ : ಇದು ಮೇಲ್ಕೊಂಡ ದುಕೂಲಚೇಲಮೆನೆ ತದ್ಭೂದುಧ್ಯಮಾಂತೊಪ್ಪಪಿರ್ಪುದು ನೀಳಾಚಳಚೂಳಿ ಕಾವರಸರಃಸಂಜಾತೆಯಂ (ಪುಷ್ಪಪು. ೨-೭). [ದುಕೂಲ + ಚೇಲ$_1$]

ದುಕೂಲವಸನ (ನಾ). ರೇಷ್ಮೆಯಂ ವಸ್ತ್ರ,– ಬಟ್ಟೆ : ದುಕೂಲವಸನಂ ಫೇನೋದ್ಗಮಂ ಮಲ್ಲಿಕಾ ಸ್ಮಿತದಾಮಂ ಶರೆಮಾಲೆಯಾಗಿ ವಿಮಳ ಕ್ಷೀರಾರ್ಣವಶ್ರೀಯನಾ ಶತಪತ್ರಾನನೆ ಪೋಲ್ತು ಬೆಳ್ವಸದನಂಗೊಂಡೇಂ ಮನಂಗೊಂಡಳೋ (ಪುಷ್ಪಪು. ೯-೯೪). [ದುಕೂಲ + ವಸನ]

ದುಕೂಲವಸ್ತ್ರ (ನಾ). ರೇಷ್ಮೆಯ ಬಟ್ಟೆ: ದುಕೂಲವಸ್ತ್ರದ ಗುಣ – ಇದು ಸಣ್ಣ ಕೆಲಸದ ವಸ್ತ್ರವಾಗಿಯೂ, ಮಹಾಲಕ್ಷ್ಮಿಗೆ ಪ್ರೀತಿಕರವಾಗಿಯೂ . . . ಸ್ತ್ರೀಯರುಗಳಿಗೆ ವಶ್ಯಕರವಾಗಿಯೂ ಇರುವುದು. ಇದು ದುಕೂಲ ವಸ್ತ್ರದ ಗುಣ (ಸಕಪ್ರ. ೩೪). [ದುಕೂಲ + ವಸ್ತ್ರ]

ದುಕೂಲವಿತಾನ (ನಾ). ರೇಷ್ಮೆಬಟ್ಟೆಯಂ ಮೇಲ್ಕಟ್ಟು ; ಪಟ್ಟೆವಸ್ತ್ರದ ಮೇಲ್ಚಪ್ಪರ: ಅದು ಪೊಸ ಪೊನ್ನ ಘಂಟೆಯ ದುಕೂಲವಿತಾನದ ಮೌಕ್ತಿಕ ಪ್ರಲಂಬದ . . . ರಮ್ಯಜಾಳವಾರ್ಗದ ವಿಳಸತ್ಕವಾಟದವಿಚಿತ್ರವಿಭೂತಿಗೆ ಜನ್ಮಮಂದಿರಂ (ಪುಷ್ಪಪು. ೨-೯೩). [ದುಕೂಲ + ವಿತಾನ]

ದುಕೂಲಾಂಬರ (ನಾ). ರೇಷ್ಮೆಯಂ ಬಟ್ಟೆ; ಪಟ್ಟೆ ವಸ್ತ್ರ: ಪೊಸ ಮುಕ್ಕಿನ ತಂಡಿಗೆ ಪೊದಟ್ಟಿಸೆಯೆ ದುಕೂಲಾಂಬರಂ ನಿಜಾಂಗದೊಳಂ ಸಂದೆಸೆದಿರೆ (ಪಂಪಭಾ. ೨-೬೮) : ಮಳರಹಿತ ದುಕೂಲಾಂಬರವಿಳಸಿತ ನಿಡಿಯೆಳ್ ಸಗ್ಗೆರರುಚಿ ಘಟಮಂ ಚಕ್ಕಳಮಂ ಪಿಡಿದಿರ್ಪಳ್ (ಪಾಶತಿ. ೦೯-೦೫).

[ದುಕೂಲ + ಅಂಬರ]

ದುಕೂಲಾಂಬರೆ (ನಾ). ರೇಷ್ಮೆಯ ವಸ್ತ್ರವನ್ನು ಧರಿಸಿದವಳು : ಕೇವಲ ಧವಳಾಭರಣೆಯಂ ದುಕೂಲಾಂಬರೆಯಂ ಕೆ ಲದೊಳ್ ನಿಲೆಯುಂ ಜ್ಯೋತ್ಸ್ನಾವಿಲಾಸದೊಳ್ ಬಗೆದಿನಿಲ್ಲ ನಲ್ಲಳನಿನಿಸಂ (ಕವಿಕಾ. ೩-೯೩).

[ಸಂ. ದುಕೂಲಾಂಬರಾ (ದುಕೂಲ + ಅಂಬರ + –)]

ದುಕ್ಕ (ನಾ). ವ್ಯಥೆ; ಯಾತನೆ: "ದುಕ್ಕ (ದುಗಾಡ) – ದುಃಖ" (ತದ್ಭವಕೋ. ೨೦); ತನುವನಿಳಿಗೀಡಾಗಿ ಮತ್ತಳ್ದು ಬಿಳ್ದು ಹೊರಳುತ್ತ ದುಕ್ಕದ ಕಡಲೊಳೀಸಾಡುವಂತಿರ್ದಳು (ಧಾವಜಿಂ. ೯-೩೬) ; ಮಕ್ಕಳ ಪಡೆಯದ ಮಡದಿಯ ಸಂಸಾರ ದುಕ್ಕದ ಮಡುವಿನಂತಿರ್ದ ಹೊಕ್ಕುಳು ಗುಣ್ಪು ಗೆಟ್ಟುದು ಪೊಡಲೊಳು ಶಿಶು ತೆಕ್ಕನೆ ತೀವಿ ಜೀವಿಸಲು (ಪೋಹತ. ೦೭-೭); ಮಕ್ಕಳಿಲ್ಲವು ಎಂದಂ ಅಕ್ಕಮಲ್ಲಮ್ಮನು ದುಕ್ಕವ ಬಸವರಸಗಱುಪಲು ಕಾಶಿಯ ಮುಕ್ಕಣ್ಣನೊಲಿದ (ಸರ್ವಜ್ಞ. ೫) ; ಮಕ್ಕಳಿದ್ದರೇನಕ್ಕ ದುಕ್ಕ ಕಳದಾವೇನ ? (ಕನ್ನಡಾ. ೮೦) ; ರೊಕ್ಕಕ್ಕಿ ಕಡಿಮೆಯಾದರೆ ದುಕ್ಕಕ್ಕೂ ಕಡಿಮೆಯೇ (ಗಾಡ). [<ಪ್ರಾ. ದುಕ್ಕ./ಸಂ. ದುಃಖ]

ದುಕ್ಕಂಡ (ನಾ). ಎರಡು ಹೋಳುಗಳನ್ನು ಕೂಡಿಸಿದುದು : ಜೋಡಿ: ಅಯ್ಯಂ ಬಬುವಬಾಯಿತ್ತ ನಲ್ವೊಡವುಗಳೊಳ್ . . . ದುಕ್ಕಂಡದ ಬಂಡುಗಂಕಣಂ ಮಾಳವಿಗಾ ಜಕ್ಕಸರಂ ನಿನ್ನರಸಿಗೆ (ರಾಮಾಶ್ವ. ೩೮-೦೭). [<ಪ್ರಾ. ದುಃಖಂಡ./ಸಂ. ದ್ವಿಖಂಡ]

ದುಕ್ಕಡಿ 'ದುಕ್ಕಿಡಿ' ನೋ.

ದುಕ್ಕಡಿಸು (ಕ್ರಿ). ಸಂಕಟವನ್ನು ನೆನಸಿಕೊಂಡು ದುಃಖಿಪಡು; ಬಿಕ್ಕಳಿಸು: ರತ್ನ . . . ಕೈಗಳ ಮಧ್ಯೆ ತಲೆಯನ್ನಿಟ್ಟು ಅಳಲಾರಂಭಿಸಿದಳು. ದುಕ್ಕಡಿಸಿ ಕೊಂಡು ಅತ್ತಳು (ಅವತಂ. ೦೬೬). [ದುಕ್ಕ + ಅಡಿಸು$_0$ (<ಅಡಸು)]

ದುಕ್ಕಪಡು (ಕ್ರಿ). ವ್ಯಥೆಪಡು; ದುಃಖಿಸು: ನಿನ್ನಾಳ್ದನೆನ್ನಯ ತವಗೆಡಿಸಿದ ಕಾರಣದಿಂದೆ ಕಿಡಿ ಸುರಿವಕ್ಷಿಯಿಂದುಜುಹಿದೆ ನೀ ದುಕ್ಕಪಡಬೇಡವೆಂದು ಪೇಳಿದನು (ಪೋಷತ. ೮-೩೯). [ದುಕ್ಕ + ಪಡು$_1$]

ದುಕ್ಕವೆರಸು (ಕ್ರಿ). ದುಃಖದಿಂದ ಕೂಡು ; ದುಃಖಿಸು ; ವ್ಯಥೆಪಡು : ಅಕ್ಕರು ಬಲೆಗೆ ಸಿಕ್ಕಿದ ಸತಿಗೋಸುಗ ದುಕ್ಕವೆರಸಿ ಮುಖಬಾಡಿ ವಿಕ್ಕ ವಮಾತಿನ್ನೇಕೆ ಹರಣದ ಹಂಗಿಲ್ಲ ದುಕ್ಕವೆರಸಿ ಕವೋತಕನು (ಕಪೋಷ. ೦೫-೫೬). [ದುಕ್ಕ + ಬೆರಸು$_1$]

ದುಕ್ಕಿ (ನಾ).=ದುಃಖಿ ೨ : "ದುಃಖೀ–ದುಕ್ಕಿ" (ಕಾವಕ್ಕ.೨೮೯); ನೀಚೋಕ್ತಿಯಂ ದನಿಯನು ಕೇಳಿ ತಲೆಗುತ್ತಿ ಲೋಚನ ತಪ್ತವಾರಿಯನು ಭೂಚಕ್ರದೊಳು ಹರಿಸುವ ದುಃಕ್ಕಿಯ ಕಂಡು (ಪೋಷತ. ೦೦-೦೪). [<ಸಂ. ದುಃಖಿನ್]

ದುಕ್ಕಿತ (ನಾ) ನೊಂದವನು ; ದುಃಖಿತ : ರಾಮ ಸಿಕ್ಕದೆ ಪೋಪನೆನುತ ಮಾತಾಪಿತರಶಿ ದುಕ್ಕಿತರಾಗಿರುತಿರಲು (ಅಬ್ಬಲೂ.೨-೭೪). [<ಸಂ.ದುಃಖಿತ]

ದುಕ್ಕಿತೆ (ನಾ).=ದುಃಖಿತೆ : ಏಕಾಂತರಾವನ ಚಿತ್ತದೊಳಗೆ ನಿಂದು . . . ಮುಕ್ಕಣ್ಣ ಮೂರ್ಧಯ ಮಾಡಿಸುತಿರಲಾಗ ದುಕ್ಕಿತೆಯಾದೊ ಪದ್ಮಮ್ಮ (ಅಬ್ಬಲೂ. ೨-೫೯). [< ಸಂ. ದುಃಖಿತಾ]

ದುಕ್ಕಿಸು (ಕ್ರಿ).=ದುಃಖಿಸು : "ಖಿದ್ಯತೇ = ದುಕ್ಕಿಸಿದಪಂ" (ಕಾವಕ್ಕ. ೨೦೦); ತಕ್ಷವಿಲೋಮ ಸೌಖ್ಯವ ಕಂಡು ಯತಿಗಳು ಭಕ್ಷ್ಯವ ತೊಟ್ಟಿದು ದುಕ್ಕಿಪರು (ಪೋಷತ. ೦೮-೩೦); ಮನದಲ್ಲಿ ತಾಂ ದುಕ್ಕಿಸುತರರೆ ಅಕ್ಕಟ ಕಣ್ಣಾ ನೀರ್ಮುಕ್ಕುಳಿಸುತಲಿನ್ನ ದಿಕ್ಕಿಲ್ಲದವಳಂತೆ ದಿಟ್ಟಿಸಿದುದನು ನಾನೆಂತು ಮರೆಯುವೆನು (ಕಾಕುಂತ. ೮೫ ಆಡಿಟ).

ದುಕ್ಕದುಕ್ಕಿಸು(ದ್ವಿರುಕ್ತಿ): ಜಾನಕಿ ದುಕ್ಕದುಕ್ಕಿಸಿ ಅತ್ತಳು (ಮುತ್ತ್ರ.೨೮೪ ೪೮). [ದುಕ್ಕ + – ಇಸು$_3$]

ದುಕ್ಕುಡಿ, ದುಕ್ಕಿಡಿ (ನಾ). ೧. ಕಡಿವಾಣ: ತುರಗಕೆ ದುಕ್ಕುಡಿಯಂನಿಕ್ಕಿದರು ತಿರುಹಿದರೆರಡು ವಾಘೆಯಲಿ (ಕುಪಾ.ಆ. ೧೮-೭). ೨. ಲಗಾಮು (?) : ಬರಿಗಡಗ ಕೀಳ್ಕಂಬಿ ದುಕ್ಕುಡಿ [ಪಾಠಾಂ. ದುಕ್ಕಡಿ, ದಿಕ್ಕಡಿ] . . . ತುರಗ ವದನದಲೊಪ್ಪಿರಲು (ಕುವಾ.೦೧. ೪-೪೮). **ದುಕ್ಕಡಿ** : ೨. ದುಕ್ಕಡಿ ಕಬ್ಬಿಗಳಿಕ್ಕಿ ಕಡಿವಾಣ ಸಿಕ್ಕಿಸಿ ಮರುತವ ಸೆಳದೂ (ದೀಪಾಂಪು. ೫-೨೬೩). [?]

ದುಕ್ಕುಳಿಸು (ಕ್ರಿ). ಬಿಕ್ಕಳಿಸು : ದುಕ್ಕುಳಿಸುತಳುತಮವರಜೆ ಚಕ್ಕನೆ ದಾಯಾದ್ಯರೆಸಗಿದಂದವನುಳಿಯದೆ ಕಕ್ಕಸವೆನಿಸೆಲ್ ವೇಳಲ್ ದಕ್ಕಡಿಗರಿ ದಕ್ಕದಾರೆ ತಾವೆನುತಮವಂ (ಹಾಲಾಸ್ಥ. ೬.೬-೩೦). [< ದುಕ್ಕಡಿಸು ?]

ದುಪಾಪತು (ನಾ). ಹಿಂಸಾಕೃತ್ಯ ; ಅತ್ಯಾಚಾರ ; ಹಿಂಸೆ ; ಕೋಟಲೆ : ಸನ್ ೧೮೮೨ರ ಅಖೇರವರೆಗೆ ಮುಗಿಯುವ ಮೊಂಬತ್ತು ವರ್ಷಗಳಲ್ಲಿ ೨೧೭ ಖೂನಗಳು . . . ೨೨೧ ಭಾರೀ ದುಪಾಪತುಗಳು, ೭೨೭ ದರೋಡೆ, ಕಳವು ... ಆದವು(ಕಧಾಗ. ೩೮೨). [←ಮರಾ. ದುಪಾಪತ್]

ದುಗ, ದುಗೆ, ದೂಗ (ನಾ). ೧. ಎರಡರ ಜೊತೆ; ಯಗ್ಮ : ಪ್ರತ್ಯಯಾಂತಕ್ಕೆ – ದ್ವಿಕ – ದುಗ ; ತ್ರಿಕ – ತಿಗ (ಶಮಾದ. ೨೯೦ ಪ್ರಯೋ); ಸಂಭುದೇವನ ಮನೆಗಂ ಪಡುವಣ ನಟ್ಟ ಕಲುನಿಡುವಾಗಿಲ ಇಪ್ಪತ್ತೊಂದಜು ದುಗವೊಂಬತ್ತುಕ್ಕೆ ಮನೆಯನೂ (ಎಳ. III, ತಿರುಮ. ೨೭-೩೦; 1290). ೨. ಲೆತ್ತದ ಆಟದಲ್ಲಿ ಎರಡರ ಗರ : ಬಿಡು ತಿಗದುಗ ಪಂಚಿಯನೊಡ್ಡದಸಿದ ಚಾರಿಯನೆ ಪೊಯ್ದು ಗುಣಸಾರೈದುಗ್ಗದಿಂ ತ್ರಿಗುಣವುದೆನಿಪ್ಪ ನುಡಿ ನೆಗಟಲ್ ಲೆತ್ತವಾಡಿದರ್ ದಂಪತಿಗಳ್ (ಅಂಡ್ಯಟ.೦೦-೦೫) ; ದುಗನ ಹಾಯಿಳು ತನಗೆ ಹಾಯ್ಕುತ್ತಿಗನವೆಂಬಬ್ಬರದ...ಧಾಳಾಧೂಳಿ ಮಸಗಿತು (ಕುವಾ.ಸ.೦೩-೫೦); ದುಗನು ಪಂಚಕ ದಾರ . . . ಬೇಡಿದದಲ್ಲಿ ಬೀಳ್ವುದು ವಿಗಡ ಪುಷ್ಕರ ನೃಪನ ಗೆಲಿದನು ಹಲಗೆಯೊಂದರಲಿ(ನಳಚ. ೪-೨೯) ; ದುಗ ನಿನ್ನದ] ಬಾರ ನನ್ನದು (ಸೌಂದಶಾ. ೪-೫೪); ಆದರವರಿಗೆ ಬೀಳಬೇಕಾದ್ದುದು ಒಂದು ದುಗ (ಜೀವಮೂ. ೦೩). 'ಇರ್ದಂಗೆ' ಪರಾ. **ದುಗೆ** : ೨. 'ಇದ್ದುಗೆ' ಪರಾ. **ದೂಗ** : ೨. ದುಗಂ, ದೂಗಂ ; ತಿಗಂ, ತೀಗಂ (ಶಬ್ದಾಸು.೩೭೮ ಪ್ರಯೋ).

ದುಗದ ಗದ್ಯಾಣ = ಎರಡುಂ ಗದ್ಯಾಣ (?) : ಆ ಪೆರುಮಾಳಿ ದೇವದನ್ನಾಯಕರ ಕೈಯಲು ಮೊದಲು [ದು] ಗದ ಗದ್ಯಾಣ ಎರಡ ಕೊಣ್ಡರಾಗಿ . . . ಬಾಲಶೀಕ್ಷೆ ಉಪಾಧ್ಯರ ಜೀವಿತಕ್ಕೆ ವರಪಂಪ್ರತಿ ತಂವು ತಂವು ಮಕ್ಕಳು ಮಕ್ಕಳು ತಪ್ಪದೆ ಎಂದಂದಿಂಗಂ ಕೊಡುತ್ತ ಬಹರು (ಎಳ. III; ತಿರುಮ.೨೭-೪೦ ; 1290). **ದುಗ ಬೀಳು** = (ಪಗಡೆಯಾಟದಲ್ಲಿ) ಎರಡರ ಗರ ಬೀಳು : ಎಂಟು ಭಾರಿಗಾಂ ದುಗ ಬಿದ್ದು ತಾರಿಹೇಂ . . . ದೂಡ, ಗಾರಿಕೆಯಲಿ (ಪರಟು. ೪-೫೦) : ಮರುಗಿನ್ನು ಫಲವೇನು ದುಗ ಬಿರ್ದ ಬಳಿಕೆಂದು ಹೆಲುಬಿದಂ ಜಮದಗ್ನಿಯು (ಪರಟು. ೨೫-೫).

[<ಪ್ರಾ. ದುಗ./ಸಂ. ದ್ವಿಕ]

ದುಗದೆ 'ದಂಗ್ಡೆ' ನೋ.

ದುಗರ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಅಯನಯು ನಾಡಾಳಿ ದುಗರಂ ಇಯೂರಾಳಿ (ಎಳ. VIII, ಸೊರಬ. ೩೮೦-೧ ; ಸು. 1015). [?]

ದುಗವಾತು (ನಾ). ಚಮತ್ಕಾರದ ಮಾತು ; ಶ್ಲೇಷಾರ್ಥದ ನುಡಿ ; ಹದಿರಂನುಡಿ : ಬಿಗಿವಾತು ಮೆಲ್ವಾತು ನಗವಾತು ನಲ್ವಾತು ದುಗವಾತು ದುರುಸುವಾತುಗಳ ಸೊಗಸುವಾತರೆವಾತು ಸೊಗವಾತುಗಳಿಂದ ಸೊಗಸ ಕವಿಗೆ ಸೂಸುವುದು (ಜಿಕವಿ. ೬-೫೬ ಸಾಂಗತ್ಯ). [ದುಗ + ಮಾತು$_1$]

ದುಗಾರಗ (?). (?) : ಸೆಲಬಿಳ್ಳಿ ಬಿಳ್ಳಿ ಲಳ್ಳಿ ದ×ಸಿಗರ ಸಹ್ಯ ದುಗಾರಗ ಗುಟಿ×ಳ್ಚಾ (ಎಳ. XVI, ತಿರಾ. ೦೨೩-೪೧ ; 788). [?]

ದುಗಿಚೇರಕ್ಕ (ನಾ). ಒಬ್ಬಾತನ ಹೆಸರು : ಸೇನೆಯಂ ತಿಲಮನಿಹುಯೆ ದುಗಿಚೇರಕ್ಕನಬ್ಬೆ ಸತ್ಯನ್ (ಎಳ. X, ಚಂತಾಮ. ೦೨೪-೪ ; ಸು. 890).

[ದುಗಿಚೇರ$_0$ + ಅಕ್ಕ$_1$]

ದುಗಿದುಗಿ ' ದುಗುದುಗಿ ' ನೋ.

ದುಗುಡ (ನಾ). ೧. ದುಃಖ ; ಉಮ್ಮಳ : "ಉಮ್ಮಳಮೆಂದೊಡೆ ದುಗುಡ" (ಧಾರವಿ. ೦೧-೩೮) ; ದುಗುಡವಾಯ್ತು ರಥಾಂಗಮಿಥುನಕೆ ನೆಗೆವಳಿಕುಳದ ಮೊರಹು ನಿಂದಿತು (ಬಸಪು.೦೧-೪೭); ಮುನಿಗಳಜನ್ಯವನಂದನನ ದುರ್ಭರದ ದುಗುಡದ ದಂದುಗವನವಹರಿಸಿ ಬಿಜಯಂಗೈದರಾಶ್ರಮಕೆ (ತೊಕರಾ. ೧-೪-೦೩); ಕೊಡನ ಕುವರನಿಂತು ಪೇಳ್ವುದುಂ ರಾಮಂಗೆ ದುಗುಡವಿರ್ಮಡಿಯಾದುದು (ರಾಮಾಶ್ವ. ೦೩-೦೮); ನಡೆವೆನೇ ಎನ್ನಡೆದ ದಾರಿಯೆಲ್ಲದಱಿನ್ ಬಲ್ ದುಗುಡ ದಾರಿಯನ್ (ಅಂತಿಗೊ. ೩೩-೧೦೩೪) ; ನಗುವಾತ್ಮ ಪರಿಮಳವ ಪಸರಿಸುವ ಕುಸುಮ ದುಗುಡವಾತ್ಮವ ಕಡೆದು ಸತ್ತ್ವವೆತ್ತುವ ಮಂತು ಬಗೆದೆರಡನುಂ ಭುಜಿಸು (ಮುಂಕುಳ. ೪೩೪); ಒಂದೆಡೆಗೆ ದುಗುಡದ ಹೊರೆ. ಇನ್ನೊಂದೆಡೆಗೆ ಯೋಚನೆಯು ಕಸಿವಿಸಿ (ನಿರೀಕ್ಷ. ೧೫೯) ೨. ಚಿಂತೆ ; ಯೋಚನೆ : "ದುಗುಡವೆನಲ್ ಚಿಂತೆಯುಂ" (ಧಾರವಿ. ೦೮); ನಿರ್ಣಯವನಱಿಯದ ಮನವೇ ದುಗುಡವನಾಹಾರಂಗೊಂಡೆಯಲ್ಲ (ಅವತಂ.. ೪೫-೦೧) : ನಿದ್ದೆಗೆಯ್ ತಂದೆ ಇನ್ನಾವ ದುಗುಡಂ ಬೇಡ

(ಕಡ್ಡರ. ದೇ. ೧೩೨-೭) ; ಕುಮುದಿನಿ ತಲೆವಾಗಿ ದುಗುಡಮಂ ತಳೆದಿರ್ದಳ್ (ದಶಕು. ೪-೧೩೫); ಬಾಲನಿವನೆನ್ನದಿರು ದುಗುಡವ ತಾಳಲಾಗದು ಬೊಪ್ಪ (ಕುಪ್ಯಾದ್ರೋ. ೪-೪) ; ಲಲನೆಗೇತಕೆ ದುಗುಡವಾರುಮ್ಮಳಿಕೆಯನು ಮಾಡಿದರು (ಪ್ರಭುಲೀ. ೫-೬೭) ; ಆದರೆ ನನ್ನ ಮನಸ್ಸಿನ ದುಗುಡವೇನೂ ಶಾಂತವಾದಂತಾಗುವುದಿಲ್ಲ (ಶ್ರೀರಾಯ. ೨೬೨). ೩. ಆತಂಕ ; ಭಯ ; ಭೀತಿ : ಮದನಂಗೆ ಚಿಂತೆ ಮಾಯೆಗೆ ದುಗುಡ . . . ಅಜ್ಞಾನಕ್ಕೆ ತಲ್ಲಣಂ ತಲೆದೋಱಲು (ಸಿದ್ಧರಾ. ೧-೪೭) ; ಹಡಪ ಬಾಹಿಯ ಚಮರ ಧಾರಿಗರ ದೊರೆಗಳುಳಿದರು ಬೆದಱ ರಥದಲಿ ಕರಗಳಲಿ ವಾರುವದಿನಿಳೆ ಗುಪ್ಪರಿಸಿದರು ಹರಹಿನಲಿ ಹಾಯ್ದರು ಹೊತ್ತ ದುಗುಡದಲಿ (ಕುಪ್ಯಾಗ. ೦-೦೪). ೪. ಆಯಾಸ; ಬಳಲಿಕೆ: ಭೂಪತಿಯ ದುಗುಡವನು ತೊಳೆದರು ರಾಗರಸ ಲಹರಿಯಿಂದನಾಮಿಕಸತಿಯರು (ಹಡಕಾ. ೭-೬); ಮಳೆಯಿರಲಿ, ಚಳಿಯಿರಲಿ, ಗಾಳಿಯಿರಲಿ, ಮೈಯಲ್ಲಿ ದುಗುಡವಿರಲಿ—ಏನಾದರೂ ಈ ಕಾರ್ಯಕ್ರಮಕ್ಕೆ ವಿಘ್ನ ಬಾರದು (ಗಂಗಾಸಾ. ೦) ; ನಳಿನಿಯ ದುಗುಡ ಕಾಫಿ ಕುಡಿದ ಬಳಿಕವೂ ಕಡಿಮೆಯಾಗಿರಲಿಲ್ಲ (ನಡದಾ. II, ೯೪೯).

ದುಗುಡಮೋಱಿಗ=ಅಪ್ರಸನ್ನತೆಯಿಂದ ಕೂಡಿದ ಮುಖವುಳ್ಳವನು; ದುರ್ಮುಖ: ಸುಗುಣವಿದ್ಯವ ಕಲ್ತು ಸುಮುಖಗೆ ತೋಱಲು ಹಗಲು ಕನ್ನಡಿಯ ನೋಳ್ಪಂತೆ ದುಗುಡಮೋಱಿಗರಿಗೆ ತೋಱಲು ರಾತ್ರಿಯೊಳಗೆ ಮುಕುರವ ನೋಡಿದಂತೆ (ಭರಣ. ೧೨-೯೯).

[< ಪ್ರಾ. ದುಗ್ಧಡ= ಕಷ್ಟಸಾಧ್ಯವಾದ./ಸಂ. ದುರ್ಘಟ]

ದುಗುಡಭಾರ (ನಾ). ವ್ಯಥೆಯ ಹೊರೆ ; ಕಳವಳದ ಭಾರ : ಭೀಷ್ಮನ ಬೀಳುಕೊಂಡುತ್ಸವದ ಹರುಷದಲೊಮ್ಮೆ ಗಂಗಾಭವಗೆ ತಪ್ಪಿದ ದುಗುಡ ಭಾರದಲೊಮ್ಮೆ ಚಿಂತಿಸುತ . . . ಶಿಬಿರವನು ಹೊಕ್ಕರು (ಕುಪ್ಯಾಭೀ. ೧೦-೪೩) ; ಅಗಿವ ಚಿಂತೆಯೊಳರಸ ಕದನದ ದುಗುಡಭಾರದಲಿರಲು ... ನಸುನಗುತೆದ್ದನಭಿಮನ್ಯು (ಕುಪ್ಯಾದ್ರೋ. ೪-೩೪) ; ಏತಕೀ ಬದುಕೆಂಬ ತೆಱನಲಿ ರೀತಿ ತಪ್ಪಿ ದಶಾಸ್ಯನಿದ್ದನು ದುಗುಡಭಾರದಲಿ (ಕಾಶಿರಾ.೧೯-೨).

[ದುಗುಡ + ಭಾರ]

ದುಗುಡಶೃಂಗಾರ (ನಾ). ದುಃಖಸೂಚಕವಾದ ಉಡಿಗೆ ತೊಡಿಗೆ,—ವೇಷಭೂಷಣ : ಹಾರವ ಹಱಿದಿಕ್ಕುತ ಕಸ್ತೂರಿಬೊಟ್ಟುರದ ಗಂಧವನು ನೀರಿನಿಂದ ತೊಳೆದು ಮೈಲಿಗೆಯುಟ್ಟು ದುಗುಡಶೃಂಗಾರವನನುಕರಿಸಿದಳು (ನಿಜಸಾಂ.೩-೧೪೫). [ದುಗುಡ + ಶೃಂಗಾರ]

ದುಗುಡಸಿಂಗರ (ನಾ). = ದುಗುಡಶೃಂಗಾರ : ತೆಗೆದರು ವಸ್ತ್ರಭೂಷಣವ . . . ಮೃಗನಾಭಿಯ ನಾದಿ ಪೂಸಿದು ಪಣೆಯಲಿ ದುಗುಡಸಿಂಗರ ಮೆಱೆವಂತೆ (ಮೋಹತ. ೨೮-೫) ; ಅಗಣಿತ ಬಲವಿಲ್ಲ ವಾದ್ಯರಂಜನೆಯಿಲ್ಲ ಸೊಗಸಿನಲಂಕಾರವಿಲ್ಲ ದುಗುಡಸಿಂಗರದಿಂದ ಬಂದರಯೋಧ್ಯಾನಗರಿಯ ಹೊಕ್ಕರಾ ನೃಪರು (ಭರಣ. ೭೯-೦೨) ; ಕನಕರಾಜನು ಕಾಂತಿರಾಜ ಮುಂತಾದ ಮೈದುನರೆಲ್ಲ ದುಗುಡಸಿಂಗರದಿ ವನಿತೆಯರಂದರಮನೆ ಯೊಳವೊಗಲು ಭಾವನ ಸಭೆಗೆಯ್ದಿದರ್ತಾವು (ಭರಣ. ೭೯-೫೭).

[ದುಗುಡ + ಸಿಂಗರ]

ದುಗುಡಿಸು (ಕ್ರಿ). ದುಃಖಿಸು ; ಚಿಂತಿಸು : "ಬುಂಧಯತಿ – ದುಗುಡಿಸಿದ ಪುದು" (ಕಾಶಕ್ಯ. ೨೬೫). [ದುಗುಡ + – ಇಸು$_3$]

ದುಗುಣ (ಗು). ೧. ಎರಡರಷ್ಟಾದ ; ಇಮ್ಮಡಿಯಾದ. (ನಾ). ೨. ಎರಡು ಪಟ್ಟು ; ಇಮ್ಮಡಿ ; ದುಪ್ಪಟ್ಟು : ಅರುಂಧತಿಗೆ ತೊಣೆ . . . ಸೀತೆಗೆ ದುಗುಣಂ ವಿಚಾರಿಸಲ್ಕನಕಬ್ಬೆ (ಎಕ. VIII, ಸಾಗರ. ೦೦೩-೩೫ ; 1039) ; ಪೂರ್ವಪದಂ ತದ್ಭವಮಾದುದರ್ಕೆ – ಗ್ರಾಮರಸ–ಗಾವರಸ . . . ದ್ವಿಗುಣ–ದುಗುಣ (ಶಮದ. ೨೮೦ ಪ್ರಯೋ) ; ಪಂಕಜ ಮಿತ್ರನುಂ ಧನುಗೆ ಬರ್ಪಮವಾಸೆಯೊಳಿ(ಳೆ)ಂ ನಿಮಿತ್ತದಿಂ ಕುಂಕುಮ ಶಂಖ ವಿದ್ರುಮ ಸುಮೌಕ್ತಿಕಮಂ ಪಿಡಿದಾಱುತಿಂಗಳೊಳ್ ಭೋಂಕೆನೆ ಮಾಱು ಕೊಳ್ಗೆ ದು(ದ್ವಿ)ಗುಣರ್ದ್ಧಿ[ಪಾಠಾಂ. ದ್ವಿಗುಣವೃದ್ಧಿ]ಯನೀಗುಂ (ಜಟ್ಟಿಮ. ೬-೨೫) ; ಹೊಗಳಲನುಪಮ ಸೈನ್ಯವಿಂತೀ ದುಗುಣ [ಪಾಠಾಂ. ದ್ವಿಗುಣ]ವಂಧಾಸುರನ ಸೇನೆಗೆ ತ್ರಿಗುಣವಿದು ರಾವಣನ ಮೋಹರಕೆ (ಕುಪ್ಯಾವಿ. ೬-೬೦). ೩. ಎರಡು ಬಾರಿ ; ಎರಡು ಸಲ : ಅಂತಿದಿರುಂ ಬಱಿಯುಂ ಪಾಸುಂ ಪೊಕ್ಕುಂ ದುಗುಣಮುಂ ತಿಗುಣಮುಂ ಅಡ್ಡಮುಂ ತಿಗಟಮುಂ ಪರಿದು (ಗದಾಯು. ೬-೨೮ ಪ); ತೇನ ತೇನಂ ತಿವಿದು ದಾನೊ ಳೀಡಾಡುವ ದುಗುಣ ತಿಗುಣಂ ತಿಱಿದು ದೆಸೆವಲಿಗೆಯ್ವ . . . ಮದಗಜಂಗಳುರಿಪತ್ತಿದಟ್ಟಗೆಯೊಟ್ಟಿಲಂತಿರ್ದುವು (ಅನಂಪು. ೧೪-೭೫). ೪. ಲೆತ್ತದಾಟದಲ್ಲಿ ಎರಡರ ಗರ ; ದುಗ : ಕೊಂದೆನೆಂದೋ ಎನ್ನ ಸಾರಿಯನಿಂದು ದುಗುಣವನಿಕ್ಕಿ ಗೆಲಿದವೆನೆಂದೊ ನಿಃಕಾರಣದ ಹಾಸ್ಯವ ದಾವುದು . . . ಎನಲೊಲವಿಂದ ನೆತ್ತವನುಡುಗಿ ಭೂಪತಿ ಮತ್ತೆ ನಗುತೆಂದ (ಬಸಪು. ೪೩-೦೫) ; ದುಗುಣಕಿಕ್ಕಿದನರಸನಾಚೆಗೆ ತೆಗೆದನವ ಮೂಱಿಂದು ನಾಲ್ಕಕ್ಕುಗಿದನವನಿಪನೈದ ಕಳೆದನು ಬಹಳವನು ಶಕುನಿ (ಕುಪ್ಯಾಸ. ೦೪-೪).

[ದು + ಗುಣ]

ದುಗುಣಿ (ನಾ). ಎರಡು ಪಟ್ಟು ; ಇಮ್ಮಡಿ.

ದುಗುಣೀದಕ್ಷಿಣೆ = ಎರಡುಪಟ್ಟು ಸಂಭಾವನೆ; ಇಮ್ಮಡಿ ದಕ್ಷಿಣೆ : ಯಾಕೆ ಭಟ್ಟರೇ ! ದುಗುಣೀ ದಕ್ಷಿಣೆ ದೊರೆಯಿತೇ ? (ಸಾಹಿವಿ. ೫೨).

[< ಪ್ರಾ. ದುಗುಣಿಅ./ಸಂ. ದ್ವಿಗುಣಿತ]

ದುಗುಣಿಜುಲ್ಮಾನೆ (ನಾ). ಎರಡರಷ್ಟು ದಂಡ ; ಎರಡು ಪಟ್ಟು ಜುಲ್ಮಾನೆ : "ದ್ವಿಪಾದ್ಯಃ. ದ್ವಿಗುಣೋ ದಂಡಃ – ಎರಡರಷ್ಟು ದಂಡ ತೆಗೆದುಕೊಳ್ಳುವುದಕ್ಕೆ ಹೆಸರು. ದುಗುಣಿ ಜುಲ್ಮಾನೆ" (ಸಿದ್ಧಾಂತಿ. ೨೦೯).

[ದುಗುಣಿ + ಜುಲ್ಮಾನೆ (< ಜುರ್ಮಾನೆ)]

ದುಗುಣಿಸು (ಕ್ರಿ). ೧. ಎರಡು ಪಟ್ಟು ಮಾಡು. ೨. (ಆಲಂ) ಚೆನ್ನಾಗಿ ಎಣಿಕೆಮಾಡು,–ಪರಿಶೀಲಿಸು : ಬಲ್ಲ ಜ್ಞಾನಿಗಳು ಮನದಲ್ಲಿ ದುಗುಣಿಸಿ ನೋಡಿ . . . ಎಲ್ಲಿ ನೋಡಲು ವಿಶ್ವಮೂರ್ತಿ ತಾ ಪೊಳೆವ (ತೀರ್ಥಮು. ೩೮-೫). [ದುಗುಣ + – ಇಸು$_3$]

ದುಗುದುಗಿ, ದುಗಿದುಗಿ (ನಾ). ೧. ಸಂಕಟ ; ತಳಮಳ : ಗದುಗಿನ ದುಗುದುಗಿಯ ಕಲ್ಪನೆ ಎಳ್ಳಷ್ಟೂ ಇಲ್ಲದ ಇವರು ಏನು ಆರಾಮವಾಗಿ ಇದ್ದಾರಲ್ಲ (ಪೈನಿ. ೩೨೮). ೨. ಹೆದರಿಕೆ ; ಭೀತಿ : ಎಲ್ಲಿ ಸಿಟ್ಟಿಗೆ ಬರ್ತಾನೊ, ರಂಬಾಟ ಸುರುವು ಆಗ್ತದೊ ಅಂತ ದುಗುದುಗಿ ! (ಪುರುಷ. ೬೯). 'ಡುಗಡುಗಿ' ಪರಾ. ದುಗಿದುಗಿ : ೧. ಈ ೪೦ ವರ್ಷಗಳಲ್ಲಿಯ ಮೊದಲಿನ ೭ ವರ್ಷಗಳು ಮಾತ್ರ ದುಗಿದುಗಿಯಲ್ಲಿ ಕಳೆದು ಹೋದುವು (ಇಂಗ್ಲಂಡ. ೨೫೪).

[← ಹಿಂ. ದುಗದುಗೀ ; ಮರಾ. ದುಗದುಗೀ, ಧುಗಧುಗೀ]

ದುಗುಧವಾರ್ಧಿ (ನಾ). = ದುಗ್ಧವಾರಿಧಿ : ದೇವಾಸುರರು ಮಥಿಸಲು ದುಗುಧವಾರ್ಧಿಯಲಾಳುವಾ ಬಲುನಗವನಾಂತನನಂತಮಹಿಮನಂ ಕೂರ್ಮ ರೂಪದಲಿ (ನಿಭಾಗ. ೨-೩-೨). [< ಸಂ. ದುಗ್ಧವಾರ್ಧಿ]

ದುಗುಪಯಣ (ನಾ). ಪಯಣದ ಮೇಲೆ ಪಯಣ : ಪಿಲ್ಲಿ ಕಾಲೋಳೆ ಚಿಲ್ಲೀದ ನೆಗ್ಯೋಳೇ ಎಲ್ಲಿಗ್ಹೊರಟವ್ವಾ ದುಗುಪಯಣಾ – ಬಂಡ್ಹೊಳೆ ರಾಜಾಬೀದೀಲಿ ಐಭೋಗಾ (ಹುಟ್ಟಹ. ೫೭). [ದುಗು + ಪಯಣ$_1$]

ದುಗುಬಿನ್ನಾಣಿತ್ತಿ (ನಾ). (?) : ಕಂಬಳಿಂಗುಳ ತೆಱನೂ ದುಗುಬಿನಾಣಿತ್ತಿ ಆ ತೆಱಿಂಗೆ (ಸೌಇಎ. ೦೯೩೨, ಉಡುಪಿ. ೩೦೮-೦೮ ; 1293). [?]

ದುಗುಲ$_1$, ದುಗುಳ (ನಾ). ೧. ರೇಷ್ಮೆಬಟ್ಟೆ ; ಪಟ್ಟೆವಸ್ತ್ರ : "ದುಕೂಲಮ ದುಗುಲಂ" (ಚತುನಿ. ೧೩) ; ಕರೆವೆರಸಿದ ಪೊಸದುಗುಲದ ತೆರಳ್ಕೆವೆತ್ತುಡೆ . . . ಕಟ್ಟಿದ ಪೊಂಜುರಿಗೆಯೊಳಂ ಜನಮನೇಂ ಮನಂಗೊಳಿಸಿದುದೋ

(ಆದಿಪು. ೪-೩೬); ಪಚ್ಚೆಯ ಹಾರದ ತೋರಣಂಗಳಂ ದುಗುಲದ ಗುಡಿಗಳಂ ಕಟ್ಟಿ[ಸಿ] (ಪಂಪಭಾ.೩-೪೦ ವ); ಬಟಿಕ್ಕೆ ಮಚ್ಚುಗೊಟ್ಟಂ ಕೊಟ್ಟೊಳ್ದುಡುಗೆಗಳನುಟ್ಟ ದುಗುಲಮನೆಡೆಯಱಿದಾ ಮುನಿನಿವೇದಕಂಗೆ ನೃಪೇಂದ್ರಂ (ಶಾಂತಿಪು. ೦-೮೩); ದುಗುಲದ ಗುಡಿಗಳ ಬೆಂಬಿಡಿದು ಗಾಳಿ ತಣ್ಪಿಡಿದು ತೀಡೆ (ಪಂಠಾಮಾ. ೧೨-೨೮); ದುಗುಲದ ಪಲ್ಲವದುಡೆನೂಲ ಗಂಟೆಗಳ ಪುದಿವನಾಂತು ಬಾಲ್ಯಶ್ರೀಕೇಳಿಗೃಹಾಗ್ರತೋರಣದ ಶಾಖೆಗಳೆನಿಸಿದುವ ಮಳಕೋಮಳೋರುಗಳವಳಾ (ವರ್ಧಪು. ೯-೨೧); ಹೆಚ್ಚು ನೀರೆಱಿದಿಟ್ಟು ತೊಟ್ಟಿಲೊಳೊಚ್ಚೆಱಗ ದುಗುಲದಲಿ ಹೊಕ್ಕುಳ ಮುಚ್ಚೆ (ಪ್ರಭುಲೀ.೩-೨೬); ಪಟ್ಟು ಪಟ್ಟಾವಳಿ ದುಗುಲದ ಮೇಲ್ಕಟ್ಟು ... ಕಟ್ಟಾಣಿ ಮುತ್ತಿನ ಕುಚ್ಚುಗಳಿಂದ ದಿಟ್ಟಿಗೆಸೆಯಿತು ಚಪ್ಪರವು (ಜೀವಂಸಾಂ. ೯-೩೫) ೨. ಪಟ್ಟೆಯ ಉಡಿಗೆ; ರೇಷ್ಮೆಯ ಉಡುಪು: ಸುಲಿಪಲ್ ಮಿಂಚಿನ ಗೊಂಚಲುಟ್ಟ ದುಗುಲಂ ಗಂಗಾನದಿಃ ಫೇನಂ ... ಎಂಬೊಂದು ಪಂಬಲ ಬಂಬಲ್ಗೆ[ಡೆ]ಯಾಗೆ ಬೆಳ್ಪಸದನಂ ಕಣ್ಗೊಪ್ಪಿತು (ಪಂಪಭಾ. ೦-೧೩೭); ಸೊಗಯಿಪ ದುಗುಲದ ಸೆಱಗಂ ಮೊಗಕ್ಕೆ ತೆಗೆದಾಗಳಿರದೆ ಗೋಟಿಟ್ಟಟ್ಟಳ್ (ಕಾದಂಪೂ. ೯೫೮); ಅಂತು ಬಂದು ಮೊಗಸಾಲೆಯೊಳ್ ಮೆಯ್ಯಿಕ್ಕಿ ಮೊಗಸುತ್ತಿನ ದುಗುಲದ ಬಿನ್ನಪದ ಸೆಱಗನಧರಪಲ್ಲವಕ್ಕೆ ತೆಗೆದು (ಪಂಠಾಮಾ. ೨-೨ ವ); ಮೆಱೆವ ಚಿತ್ರಿಗ ನಾನಾ ಬಗೆ ದುಗುಲವ ವಿರಚಿಸುತಿಹ ಸೇಲಿಗರ ... ಚಿಪ್ಪಿಗಗೇರಿಯಿಹುವು (ಕಂನವಿ. ೬-೫೫). ೩. ವಸ್ತ್ರ; ಬಟ್ಟೆ: "ಹುಟ್ಟಿಗೆ, ದುಗುಲಂ, ಪಟ್ಟಣಿಗೆ, ಉಳ್ತುಡಿಗೆ-ಳ ವಸನಕ್ಕೆ ಪೆಸರ್" (ಕಶಸಾ. ೬೩-೩೯೨); ಕರ್ಪೂರ ಪಲ್ಲವರಸದಿನಧಿವಾಸಿಸಿದ ತಾವರೆಯ ನೂಲ ದುಗುಲಂಗಳುಂ ... ತಳಿರೆಲೆಗಳೊಳಂ ಪೊಸವೂಗಳೆಸಟ್ಗಳೊಳಂ ಸಮೆದ ಬಿಜ್ಜಣಿಗೆಗಳುಮಂ ಪೆಱವಂ ಪಲತೆಱದ ಶಿಶಿರೋಪಚಾರಂಗಳಂ ಮಾಟ್ಟ ಪರಿಹನಂ (ಕಾದಂಉ. ೨೦೬). ದುಗುಳ: ೧. ದೂಪಿಸಿದ ಬಿಳಿದುಗುಳನುಟ್ಟನುಲೇಪನಂಗಳ ಹೂಸಿ . . . ಇದಿರಾಯ್ತು ನೃಪಕಟಕ (ಕುಪ್ಯಾಗ. ೧-೨೬).

[<ಪ್ರಾ. ದುಗುಲ್ಲ./ಸಂ. ದುಗೂಲ]

ದುಗುಲ2 (ನಾ). ವರಹದ ಅಥವಾ ಪಗೋಡದ ಹದಿನಾರನೆಯ ಒಂದು ಭಾಗ: (ಕಿಸಂಗ್ಲಾ. ೦೬೭). [?]

ದುಗುಲನಿವಾಳಿ (ನಾ). ಉಟ್ಟ ಸೀರೆಯ ಸೆರಗಿನಿಂದ ಇಳಿತೆಗೆಯುವುದು. -ನಿವಾಳಿಸುವುದು: ಮೊಗವೆಲ್ಲ ನಗೆ ತನುವೆಲ್ಲ ಪುಳಕ ಕಣ್ಣೊಳೊಗುವ ಬಾಷ್ಪಗಳಿಂದ ಸಾರಿ ದುಗುಲನಿವಾಳಿಯಿಟ್ಟತ್ತೆಯ ಪಜ್ಜೆಗೆ ಬಗೆ ಮೆಚ್ಚಿ ನೊಸಲಿಟ್ಟರವರು (ಭರಜ. ೪೬-೭೯). [ದುಗುಲ1 + ನಿವಾಳಿ1]

ದುಗುಲವಾಸು (ನಾ). ೧. ರೇಷ್ಮೆಯ ತಲ್ಪ.-ಹಾಸಿಗೆ. ೨. ರೇಷ್ಮೆ ಬಟ್ಟೆಯನ್ನು ಹೊದಿಸಿದ ಹಸೆಮಣೆ.-ಪೀಠ: ನವರತ್ನಖಚಿತ ಮಂಟಪದೊಳು ರಾಜಿಸುವವಿರಳ ದುಗುಲವಾಸಿನಲಿ ತವಕದೆ ಕೈದುಗಳಿಂ ಬಿಟ್ಟು ದುರ್ಗಾಸ್ತವವ ಜಪಿಸಿದನೇವೇಳ್ವೆ (ಕಂನವಿ. ೨೨-೨೫).

[ದುಗುಲ1 + ಪಾಸು2]

ದುಗುಳ 'ದುಗುಲ1' ನೋ.

ದುಗೂಲ (ನಾ). ೧. ರೇಷ್ಮೆ ವಸ್ತ್ರ: ಮಿಂಚುವೆತ್ತ ಸುಲಿಪಲ್ಗಳವಟ್ಟ ದುಗೂಲವೊಪ್ಪೆ ಬೆಳ್ವಸದನಮಂತದೇನೆಸೆದುದೋ ಪರಿಪೂರ್ಣ ಸುಧಾಂಶುವಕ್ತ್ರೆಯಾ (ಸುಕುಮಾ. ೯-೧೧೪). ೨. ನುಣುಪಾದ ವಸ್ತ್ರ. ೩. ಉತ್ತವಂವಾದ ಬಟ್ಟೆ; ನಯವಾದ ವಸ್ತ್ರ. [ಸಂ.]

ದುಗೆ 'ದುಗ' ನೋ.

ದುಗ್ಗ1 (ನಾ). ಕೋಟೆ; ದುರ್ಗ: ದುರ್ಗ - ಡುಗ್ಗ (ಶಬ್ದಾನು. ೧೫೩ ಪ್ರಯೋ): ಭಾಗಿಸಿಯುಗ್ಗಡದ ಘನವರ್ಗಮೂಲವನಱಿದೊಡೀ ಭವದಾ ಹಗ್ಗ ಹಱಿದೇಱುವನೆ ಮುಕ್ತಿಯ ದುಗ್ಗವನು (ಪ್ರಹ್ಲಾಚ. ೭-೧೯).

[<ಪ್ರಾ. ದುಗ್ಗ./ಸಂ. ದುರ್ಗ]

ದುಗ್ಗ2 (ನಾ). ಒಬ್ಬಾತನ ಹೆಸರು: ಸ್ವಸ್ತಿಶ್ರೀಮತು ಕೊಙ್ಗುಣಿ ಮಾಧವಶ್ಚೈವ ... ದುಗ್ಗಶ್ಚ ಶಿವಮಾರಸ್ತಥೈವಚ ಕೊಂಗುಣಿ ಪೃಥುವೀರಾಜ್ಯಂಕೆಯ (ಮೈಆರಿ. ೧೯೩೦, ೩೬-೩; ಸು. 800). [<ಸಂ. ದುರ್ಗಾ]

ದುಗ್ಗಣಿಸು (ಕ್ರಿ). ಎರಡು ಪಟ್ಟಾಗುವಂತೆ ಮಾಡು; ಇಮ್ಮಡಿಸು: ಏನಾದರೂ ಇತ್ಯರ್ಥಕ್ಕೆ ಬರಬೇಕೆಂದು ಯತ್ನ ದುಗ್ಗಣಿಸುತ್ತಾರೆ (ಕಲನೆ. ೧೦೯). [<ದ್ವಿಗುಣಿಸು]

ದುಗ್ಗತಿಗವುಂಡಿ (ನಾ). ಒಬ್ಬಾಕೆಯ ಹೆಸರು: ದುಗ್ಗತಿಗವುಣ್ಡಿಯ ಮಗಂ ನಾಗತಿ ಸಾಲತ್ತಿಯ [ತು]ಱುಗೊಳ ಸತ್ತಂ (ಸೌಇಇ. XX, ೧೪-೩; 878).

[ದುಗ್ಗತಿ? + ಗವುಂಡಿ (<ಗಾವುಂಡಿ)]

ದುಗ್ಗಪ (ನಾ). ಒಬ್ಬಾತನ ಹೆಸರು: ಸ್ವಸ್ತಿ ಅಯ್ಯಪದೇವ ಪ್ರಿಥುವೀರಾ × × × ನೊಳಲ್ಸತ್ತ ಮಾಡಿಸಿದಂ ದುಗ್ಗಪ (ಎಕ. IX, ಹೊಸಕೋ ೧೪-೪; ಸು. 900 ?). [ದುಗ್ಗ2 + ಅಪ (<ಅಪ್ಪ1)]

ದುಗ್ಗಬ್ಬೆ (ನಾ). ಒಬ್ಬಾಕೆಯ ಹೆಸರು: ಶ್ರೀ ಸಂಗಮಙ್ಗದ ಮೆಮ್ಮಗಳ್ ಮೆಲ ಕೆರಿ ಒಡಯ ದುಗ್ಗಬ್ಬೆ ತುಮ್ಬು ಮಾಡಿಸಿದಾಳ್ (ಎಕ. X (8), ಮುಳಬಾ. ೩೦೮-೦; 9 ನೆಯ ಶತ). [ದುಗ್ಗ2 + ಅಬ್ಬೆ1]

ದುಗ್ಗಮಯ್ಯ (ನಾ). ಒಬ್ಬಾತನ ಹೆಸರು: ದುಗ್ಗಮಯ್ಯನ ಮಗ ಪೋಚಯ್ಯ ಬೆಸಗೆಯ್ದ (ಎಕ. IV, ಹುಣಸೂ. ೬೪-೦೨; 976).

[ದುಗ್ಗ2 + <ಅಮ್ಮ1 + ಅಯ್ಯ1]

ದುಗ್ಗಮಾರ (ನಾ). ಒಬ್ಬಾತನ ಹೆಸರು: ಭಿವೊಮ್ಮ ಕೂರಾಳಿಗದ ಆಳರೊಳೆ ಕೊಣಮಿರು ಗಙ್ಗ ದುರದುಲ್ ದುಗ್ಗಮಾರರ ಪಡೆ ಒಟ್ಟ ಎಱಿದು ಬಿಟ್ಟ (ಎಕ. IX, ದೇವನ. ೬೭-೪; ಸು. 780); ಸ್ವಸ್ತಿಶ್ರೀಮನ್ ವಿಣ್ಣುಗೋವರಸರ್ × × ದುಗ್ಗಮಾರರ್ ಸೇನೆ ಮಗ × × × ನಾಲ್ವದಿನ್ವರ್ ಕಸಪ್ರ × × × ಪೊನ್ತೊಱೆ ಬಿಟ್ಟದು (ಎಕ. X, ಚಿಂತಾಮ. ೧೨೬(b)-೨; ಸು. 800); ಆ ಮನಿಯನಾಡು ಮೂವತ್ತುಂ ದುಗ್ಗಮಾರಂ × × × ನಾಳುತ್ತಿರೆ (ಎಕ. X, ಮುಳಬಾ. ೨೪೮-೩; ಸು. 860 ?). [ದುಗ್ಗ2 + ಮಾರ]

ದುಗ್ಗಮಾರ ಎಱೆಯಪ್ಪ, ದುಗ್ಗಮಾರೆಱೆಅಪ್ಪ (ನಾ). ಒಬ್ಬಾತನ ಹೆಸರು. P ಗಂಗ ಶ್ರೀ ಪುರುಷನ ಮಗನ ಹೆಸರು: ದುಗ್ಗಮಾರ ಎಱೆಯಪ್ಪೊನ್ಕೊವಳಾಲನಾಡುಮೂನೂಱುಂ ಗಙ್ಗಱು ಸಾಸಿರಮುಮಾಳುತ್ತಿರೆ (ಎಕ. X, ಮುಳಬಾ. ೨೫೫-೪; ಸು. 750); **ದುಗ್ಗಮಾರೆಱೆ ಅಪ್ಪ**: ದುಗ್ಗಮಾರೆಱೆಅಪ್ಪೋ ಕುವಳಾಲನಾಡು ಮೂನೂಱುಂಗಂಗಱು ಸಾಸಿರಮುಮಾಳೆ (ಎಕ. X, ಮುಳಬಾ. ೮೦-೫೪; 767); ಶ್ರೀ ಪೆರ್ಮ್ಮನಡಿಗಳ್ ನವರಾಜ್ಯಂಗೆಯ ದುಗ್ಗಮಾರೆಱೆ ಅಪ್ಪೊಮ್ಮಿಗೆ ಎಟ್ಟರೆ ಮುನಿದು (ಎಕ. XI, ಚಳ್ಳಕೆ. ೮-೦; ಸು. 810 ?).

[ದುಗ್ಗಮಾರ + ಎಱೆಯಪ್ಪ2]

ದುಗ್ಗಮಾರೆಱೆಅಪ್ಪ 'ದುಗ್ಗಮಾರಎಱೆಯಪ್ಪ' ನೋ

ದುಗ್ಗಯ್ಯ (ನಾ). ಒಬ್ಬಾತನ ಹೆಸರು: ಕೊತ್ತಮಙ್ಗಲದ ದುಗ್ಗಯ್ಯ ಬರೆದ . . . ಆದಿಯಮ್ಮ ಕಲ್ಲ ನಿಱಿಸಿದ (ಎಕ. V, ಚನ್ನರಾ. ೨೬೨-೨೬; 971); ಪಡುವಣ ಸಿನ್ದು ಪಸಲಂ ಎಡಕೊಳಗೇರಿಯ ದುಗ್ಗಯ್ಯಂ ನಾರಾಯಣಸ್ವಾಮಿಗೆ ಬಿಟ್ಟಂ (ಎಕ. III (R), ನಂಜನ. ೨೪೯-೧೦; ಸು. 10 ನೆಯ ಶತ). [ದುಗ್ಗ2 + ಅಯ್ಯ1]

ದುಗ್ಗಶರ್ಮ (ನಾ). ಒಬ್ಬಾತನ ಹೆಸರು: ಭಾರದ್ವಾಜ ಗೋತ್ರ ದುಗ್ಗಶರ್ಮ್ಮಣ ಎಕ್ಕಂಶಃ (ಇಆ. VII, ೧೮೮-೪೦; 668). [ದುಗ್ಗ2 + ಶರ್ಮ]

ದುಗ್ಗಾಣಿ (ನಾ). ೧. ಎರಡು ಕಾಣಿ; ಕಡಮೆ ಬೆಲೆಯ ಒಂದು ತಾಮ್ರದ ನಾಣ್ಯ: ಸುಟ್ಟ ಬಾಳೆಯ ಕಾಯನರೆದ ಸಂಪಳಗೆ ಸರಿಗಟ್ಟಿ . . . ಕಲಸಿ ದುಗ್ಗಾಣಿಯಂದದಿ ಮಾಡಿ ತುಪ್ಪದೊಳಗೆ ಅಟ್ಟುಕೊಂಡು

(ಸೂಪಶಾ. ೪-೭೭); ಕೇಣಿಯನಿತ್ತು ತನ್ನೊಡಲನೊಪ್ಪಿಸಿ ನಾಡ ವಿಟರ್ಗೆ ವೊಂದ ದುಗ್ಗಾಣಿಗೆ ಲಕ್ಕಜೀವದಭಿಮಾನವನಂಗಡಿಯಲ್ಲಿ ಕಳ್ಳ ಕಿಳ್ಕಾಣಿಪು ಮುದ್ರೆಯಂತಿಹ ಪರಕ್ಕುರಿ ಸಲ್ಲದ ವೇಸಿಗರ್ಥಮಂ ಪ್ರಾಣಮನಿಕ್ಕಿಯಕ್ಕಟ ವೃಥಾ ಕೆಡುವಂ ಕೆಡುಕಂ (ನೀತಿಸಾ. ೭೯); ಹೊರಗೆ ನೋಡಿದರೆ ದುಗ್ಗಾಣಿಗೆ ಸಲ್ಲನೆಂದು ಪರರಿಂದೆಣಿಸಿಕೊಂಡು ನಗಬೇಕು ಪ್ರೀತಿಯಿಂದ (ಆಗಡಾ. ೧೩೦); ಮನವೊಲಿದು ಕೊಟ್ಟ ದುಗ್ಗಾಣಿಯೇ ಸ್ತುತ್ಯಂ (ಕಎಪು. ೧೬-೧೪). ೨. ಹಣ; ದುಡ್ಡು: ದುಗ್ಗಾಣಿ ಬಲು ಕೆಟ್ಟದಣ್ಣ (ಪುರಂದ. ೪-೧೦೨-೬). ೩. ಕಡಮೆ ಬೆಲೆಯದು: ನೀನು ದುಗ್ಗಾಣಿ ಕಿಮ್ಮತ್ತಿನ ವಳು! ನೀನು ಹೀಗೆ, ನೀನು ಹಾಗೆ ಎಂಬುದಾಗಿ ಒಬ್ಬರನ್ನೊಬ್ಬರು ಉದ್ಧಾರಮಾಡಹತ್ತಿದರು (ಕುಂಬಳ. ೪); ನಮ್ಮಂಥ ದುಡ್ಡು, ದುಗ್ಗಾಣಿಯ ಜನರೆದುರಿಗೆ ಹಾಡುವಳೇ (ಕನ್ನಾಳು. ೬೮); ದುಗ್ಗಾಣಿಯ ಮುಂಡೇ ಹತ್ತಿರ ದುಡ್ಡಿನ ದೋಸೆಗೆ ಹೋದ (ಗಾಡಿ). [ದು + ಕಾಣಿ1]

ದುಗ್ಗಿ1 (ನಾ). ದೋಣಿ; ನಾವೆ: "ಜೋಗಂ ಪರೀತಂ ನಿಮಂಜರಂ ದುಗ್ಗಿಯೋಡಂ ದೋಣಿಯಂದೆನಲ್ ನಾವೆಯಕ್ಕುಂ" (ಮಂಗಣಾ. ೧೨೦-೪); ಎಡೆಯಾಡುತಿಹ ದೋಣಿ ದುಗ್ಗಿ ಕಪ್ಪಲು ದೊಡ್ಡ ಹಡಗುಗಳಿರವ ನೋಡಿದನು (ಧರಚ. ೨೩-೯೬).

ದುಗ್ಗಿ2 'ದುರ್ಗಿ1' ನೋ.

ದುಗ್ಗಿ3 (ನಾ). (?): ಚಿಪ್ಪಿನ ಕಟ್ಟಲು ಅರಹಟದ ಬಂಮಿಸೆಟ್ಟಿಯಂ ಬಡಗಲು ಗದ್ದೆ ಕಂಮವಱುನೂಱು ದುಗ್ಗಿ ಮೇಗೆಯ್ಯ ಮೂಱು ಮತ್ತರು ... ೨ ಮನೆ ಬಡ ವಾಗಿಲು ಮುಸ್ನನ್ನದೇವರ್ಗ್ಗೆ (ಸಿಇಇ. IX-1, ೨೯೦-೨೯; 11 ನೆಯ ಶತ). [?]

ದುಗ್ಗು1 (ನಾ). ಒಂದಂ ಬಗೆಯ ಸಸ್ಯ: ಹಿಡಿಹಿಡಿಕೆ ದುಗ್ಗು, ದುಗ್ಗುಗಣಿಕೆ ... ವುಡಿ ಮಾಡಿ ಇಂಗು, ಸೈಂಧವ ... ಸಹ ಎಜ್ಜಿದು, ಬಿಸಿನೀರ ಕೊಳ್ಳಿ ಅಂಡಜದ ಕಾಟ ಮಾಣ್ಗುಂ (ವಿವೈವಿ. ೧೪೬). [?]

ದುಗ್ಗು2 (ನಾ). ಕತ್ತರಿಸಿದ ಮೇವು: "ದುಗ್ಗು = ಕೊರೆದ ಮೇವು" (ಜಾನಕೋ. ೬). [?]

ದುಗ್ಗುನಿ (ನಾ). ಒಂದು ಸ್ಥಳದ ಹೆಸರು: ದುಗ್ಗುನ್ಯ ವಿಸ್ವಕರ್ಮಾರ್ಯ್ಯ ... ದತ್ತಮು ಕೊಟ್ಟರ್ (ಮೈಆರಿ. ೧೯೩೩, ೩೮-೧೨; 791 ?). [?]

ದುಗ್ಗೆ 'ದುರ್ಗಿ1' ನೋ.

ದುಗ್ಧ (ಗು). ೧. (ಹಾಲನ್ನು) ಕರೆದ; ಹಿಂಡಿದ. (ನಾ). ೨. ಹಾಲು; ಕ್ಷೀರ: "ಕ್ಷೀರಂ ದುಗ್ಧಂ ಪಾಲ್" (ಪಸ್ತು.ಕೋ. ೪೨-೦); ಅದು ಕಾರಣದಿಂ ಆಧಾರ ದೋಷದಿಂ ದುಗ್ಧಕ್ಕೆ ರಸವಿಪರ್ಯ್ಯಯಮಪ್ಪವೊಲ್ (ತತ್ತ್ವಪ್ರ. ೭೨); ಕರವೆ ಮುನಿ ದುಗ್ಧದಧ್ಯಾದಿ ರಸಂಗಳನೆಯ್ದೆ ತೊಱಿದು (ಕಂದ್ರಪು. ೧೦-೧೧); ಪುಳಿ ಮುಟ್ಟಿದ ದುಗ್ಧದಂತೆ ನೀರ್ ಮುಟ್ಟಿದ ಜೇನೆಯ್ಕಂತೆ (ಯಶೋಕ. ೨-೫೯); ಏಕೆ ಸಂತಸಮನೊಡರ್ಚಿಯೆನ್ನ ಮನದಂಚಿಗೆ ಪೇಟ್ ದರಹಾಸದುಗ್ಧದಿಂ (ಪುಪ್ರಪು. ೩-೬೯); ಕುಡಿ ಮೊದಲೊಳೀ ದುಗ್ಧಮಂ ತರುವಾಯ ತಿನಲೀವೆನೀ ಹೊಚ್ಚಹೊಸ ಹಣ್ಣಳಂ (ತ್ರಿಪುರಾಮಾ. ೦೫೬-೧೦೭). ೩. ಕೆಲವು ವಂರಗಳಲ್ಲಿ ಒಸರುವ ರಸ.—ದ್ರವ. 'ದುಗ್ಧತರು' ಪರಾ. [ಸಂ.]

ದುಗ್ಧಕಂಠ (ನಾ). (ಹಾಲು ಕುಡಿಯುವ) ಹಸುಳೆ; ಮಗು; ಬಾಲಕ: ಕೆಮ್ಮನೆ ಭಯರಸಮಂ ತಾಳ್ದುವೈ ಲಕ್ಷ್ಮಣಂ ಸಂಗರದೊಳ್ ಪೌಲಸ್ತ್ಯನಂ ಗೆಲ್ದಪನೆ ರಣರಸೋತ್ಕಂಠನಂ ದುಗ್ಧಕಂಠಂ (ಪಂರಾಮಾ. ೧೨-೬೫).

[ದುಗ್ಧ + ಕಂಠ]

ದುಗ್ಧಜಳಭೇದನ (ನಾ). ೧. ಹಾಲು ಯಾವುದು ಮತ್ತು ನೀರು ಯಾವುದಂ ಎಂದಂ ಬೇರ್ಪಡಿಸಿ ಅರಿಯಂವುದು: ಕವಿರಾಜಹಂಸನಱಿ ಪಂತೆವೊಲೇನಱಿಯಲ್ಕೆ ಯೋಗ್ಯನೇ ಚತುರಕವಿಪ್ರತಾನರಚಿತಾದ್ಯಕೃತಿ ಪ್ರಕರ್ಷೈಕ ಪಾತ್ರಸಂಸ್ಥಿತಗುಣದೋಷ ದುಗ್ಧಜಳಭೇದನಮಂ ಕವಿನಾವು ಧಾರಕಂ (ಕಂದ್ರಪು. ೦-೩೮). ೨. (ಆಲಂ) ಉತ್ತಮ ಮತ್ತು ಅಧಮ ವಾದುದನ್ನು ಬೇರ್ಪಡಿಸಿ ಅರಿಯಂವುದು.

[ದುಗ್ಧ + ಜಳ3 (= ಜಲ) + ಭೇದನ]

ದುಗ್ಧತಪಃಫಲೆ (ನಾ). ತಪಸ್ಸಿನ ಸಂಪೂರ್ಣ ಫಲವನ್ನು ಪಡೆದವಳು: ದಗ್ಧಕಾಮೆ ಓ ದುಗ್ಧತಪಃಫಲೆ ಶುದ್ಧೆ ನಿರ್ಮುಕ್ತೆ (ಅಹಕ್ಕೆ. ೦೦೦).

[ಸಂ. ದುಗ್ಧತಪಃಫಲಾ]

ದುಗ್ಧತರು (ನಾ). ಆಲ, ಅತ್ತಿ, ಅಶ್ವತ್ಥ, ಗೋಣಿ ಮತ್ತು ಇಪ್ಪೆಯೆಂಬ ಹಾಲ್ಮರಗಳು: "ಔದುಂಬರಂ ದುಗ್ಧತರುವೆನಲತ್ತಿ" (ಮಂಗಣಾ. ೩೫-೦೩).

[ದುಗ್ಧ + ತರು3]

ದುಗ್ಧದ್ರುಮ (ನಾ). = ದುಗ್ಧತರು: ಅರವಿಂದಪ್ರಿಯನಿಂದೆ ಕೆಟ್ಟು ಶಶಿಯಿಂ ಸ್ನಿಗ್ಧಂ ಸದುಗ್ಧದ್ರುಮಂ ಧರಣೀನಂದನನಿಂ ಸಕಂಟಕ ಕಟುತ್ವಂ ಸೌಮ್ಯನಿಂ ನಿಷ್ಫಲಂ ಗುರುವಿಂದಂ ಸಫಲಂ ಭೃಗುಪ್ರಭವನಿಂ ಪುಷ್ಪಾನ್ವಿತಂ ಸೌರಿಯಿಂ ಪರಃಪಂ ತತ್ಪರುವಿಂಗೆ ಪೂರ್ವಗದಿತ ಸ್ಥಾನಸ್ಥರಾದಂದವರ್ (ಜಾತಕ. ೩-೧೧). [ದುಗ್ಧ + ದ್ರುಮ]

ದುಗ್ಧಧಾರೆ (ನಾ). ಹಾಲನ್ನು ಸುರಿಯುವುದು; ಹಾಲಿನ ಪ್ರವಾಹ: ಆ ದುಗ್ಧಧಾರೆ ಕರವಿಂಬಾದುದು ಜಿನಮಸ್ತಕಾಗ್ರದೊಳ್ (ಆದಿಪು. ೭-೪೬); ಮೇಣ್ ತತ್ಕಾಂತೆ ಲಂಬಂಗುಡಲ್ ಪದಪಿಂದಟ್ಟಿದ ಹಾರೆಯಪ್ಪಿ ಸುಭಗಂಗೀ ಸ್ವಾಮಿಗೆಂಬಂತಿರೊಪ್ಪಿದುದಿಂದ್ರಚ್ಯುತ ದುಗ್ಧಧಾರೆ ಸವನ ಪ್ರಾರಂಭಸಂರಂಭದೊಳ್ (ಪುಪ್ರಪು. ೦೦-೫). [ದುಗ್ಧ + ಧಾರೆ]

ದುಗ್ಧಪಥ (ನಾ). (ಅಸಂಖ್ಯಾತ ನಕ್ಷತ್ರಗಳು ಬಹು ಒತ್ತಾಗಿರುವುದರಿಂದ) ಆಕಾಶದಲ್ಲಿ ಹಾಲು ಚೆಲ್ಲಿದಂತೆ ಸಂತ್ತುವರಿದಂ ಕಾಣುವ ತೇಜಃಪುಂಜ; ಕ್ಷೀರಪಥ: ಇವುಗಳಲ್ಲಿ ಕೆಲವು ಬಹುತಾರೆಗಳು, ಇನ್ನು ಕೆಲವು ಅವಳಿ (Twin) ಸೂರ್ಯರು, ಕೆಲವು ಹೊಗೆಯ ರಾಶಿಯಂತೆ ಕಾಣುವ ದುಗ್ಧಪಥ(Milky Way)ಗಳು (ಪಾಲಪ್ರ. I, ೪೪೩).

[ದುಗ್ಧ + ಪಥ]

ದುಗ್ಧಪಾನ (ನಾ). ಹಾಲನ್ನು ಕುಡಿಯುವುದು: ಕಳಿದ ತರಣಿಯ ಕಿರಣದಲಿ ನಿರ್ಮಲಿನ ಜಲದಲಿ ದುಗ್ಧಪಾನಗಳಲಿ ... ಆಯುಷ್ಮಾಭಿವೃದ್ಧಿಯ ಬೆಳವಿಗೆಗಳಹವು (ಕುವಾ.ಉ. ೩-೩೩). [ದುಗ್ಧ + ಪಾನ3]

ದುಗ್ಧಪಾಷಾಣ (ನಾ). ಬಿಳಿಯ ಬಣ್ಣದ ಕಲ್ಲು; ಹಾಲುಗಲ್ಲು; ಅವ್ಯಕ್ತ ಶಿಲೆ: "ಗೋಮೇಧಸ್ಸನ್ನಿಭಃ – ದುಗ್ಧಪಾಷಾಣ" (ಓಷಧಿ. ೫೦); "ವಜ್ರಾಭಃ–ದುಗ್ಧಪಾಷಾಣ" (ಓಷಧಿ. ೦೪೬). [ಸಂ.]

ದುಗ್ಧಫೇನ (ನಾ). ೧. ಹಾಲಿನ ನೊರೆ. ೨. ಹಾಲಿನ ಕೆನೆ. ೩. ಒಂದು ಬಗೆಯ ಸಸ್ಯ: "ಗೋಜಾಪರ್ಣೀ – ದುಗ್ಧಫೇನ" (ಓಷಧಿ. ೫೦).

[ಸಂ.]

ದುಗ್ಧಫೇನಿ (ನಾ). =ದುಗ್ಧಫೇನ ೩: "ಲೂತಾನೀ–ದುಗ್ಧಫೇನಿ" (ಓಷಧಿ. ೦೪೩); "ವ್ರಣಕೇತುಃ–ದುಗ್ಧಫೇನಿ" (ಓಷಧಿ. ೦೪೯).

[ಸಂ. ದುಗ್ಧಫೇನೀ]

ದುಗ್ಧಲವ (ನಾ). ಹಾಲಿನ ಹನಿ, – ತೊಟ್ಟು: ಉರದೊಳ್ ಹಾರಂಗಳ ನೊಳ್ಗುರುಳ್ಗಳೊಳ್ ಚಿನ್ನಪೂಗಳಂ ಪೋಲ್ತು ಮನೋಹರಮಾದುದವುರ ಕಾಂತೆಯರುರದೊಳ್ ಕುರುಳೊಳ್ ತಗುಳ್ದ ದುಗ್ಧಲವಂಗಳ್ (ಆದಿಪು. ೭-೯೨). [ದುಗ್ಧ + ಲವ]

ದುಗ್ಧವಾರಿಧಿ (ನಾ). ಹಾಲಿನ ಕಡಲು; ಕ್ಷೀರಸಮುದ್ರ: ಜಳಶಯನ ನವತರಿಸುವುದಂ ತಿಳಿದಲ್ಲಿಂ ಮುನ್ನ ದುಗ್ಧ ವಾರಿಧಿತಳ್ಪಚ್ಯುತದಿಂದವ ತರಿಸಿತ್ತಾ ನಿಳಯದೊಳಿನೆ ಧವಳತಲ್ಪಮೆಸೆದುದನಲ್ಪಂ (ಜಗವಿ. ೩-೭೪).

[ದುಗ್ಧ + ವಾರಿಧಿ]

ದುಗ್ಧವಾರ್ಧಿ (ನಾ). = ದುಗ್ಧವಾರಿಧಿ : ಅದಂ ಸುತ್ತಿ ದುಗ್ಧವಾರ್ಧಿಗೆಣೆ ಯಾದಗಟ್ಟು ಸೊಗಯಿಸಿರ್ಕುಮಚ್ಛಾಂಬುವಿಂ (ಶಾಂತಿಪು. ೯-೧೪೫) ; ಸುತ್ತಿ ತಳ್ತ ಸುದತೀಜನೇಕ್ಷಣೋದಾತ್ತಕಾಂತಿ ನವದುಗ್ಧವಾರ್ಧಿಯಂತೆತ್ತಮುರ್ವೆ . . . ಬರ್ಪಳೊಪ್ಪಿದಳ್ (ರಾಜಶೇ. ೮-೫೭). [ದುಗ್ಧ + ವಾರ್ಧಿ]

ದುಗ್ಧಸಾಗರ (ನಾ). = ದುಗ್ಧವಾರಿಧಿ : ಪರಮ ಜಿನಾಭಿಷೇಕವಿಧಿ ತೀರದು ಕೂಪಜಲಂಗಳಿಂ . . . ಸರಿಜ್ಜಲದಿನಿಲ್ಲಿಗೆವೇಟ್ಟುದಗಾಧ ದುಗ್ಧಸಾಗರ ಜಲಮೆಂದು ನಾಕಪತಿ ಪೇಟ್ (ಅಜಿಪು. ೮-೪೫) ; ಹರಿಯ ಕಾರುಣ್ಯ ಸಂಜೀವನಂ ಪಾಂಡವರ್ಗಿರಲದೇಗೆಯ್ವುದಾವಿತ್ತ. ಮಣಿ ದುಗ್ಧಸಾಗರಕಜ ಕ್ಷೀರಮಂ ಬೆರಸಿದುಪಕಾರಮಹುದು (ಚೈಮಿಛಾ. ೨೪-೩೮).

[ದುಗ್ಧ + ಸಾಗರ$_3$]

ದುಗ್ಧಸಿಂಧು (ನಾ).=ದುಗ್ಧವಾರಿಧಿ : ನಿನ್ನಣುಗಗಂದನಂ ಕೈಬಿಡದಿರಯ್ಯೋ ಕೃಪಾದುಗ್ಧಸಿಂಧುವೇಯೆಂದೊಱಲುತೆ (ಪದ್ಮಶಾ. ೭-೩೨) ; ಬರಿ ಮುಗ್ಧ ಹಾಸ, ಕಣ್ದೆರೆಯೆ ದುಗ್ಧಸಿಂಧು ! ಸಂಜೆಗಿರಣ ನೆಯ್ದಿರುವ ಕಾವಿ ಆ ಮೇಘಲಿಂಗಕೆಂದು (ನೆಲಮು. ೩೪-೧೯). [ದುಗ್ಧ + ಸಿಂಧು]

ದುಗ್ಧಾಂಬುಧಿ (ನಾ). = ದುಗ್ಧವಾರಿಧಿ: ಆತನ ತಮ್ಮಂ ಸಂದ ವಿಭು ಪುನ್ನಮಯ್ಯನಿದಂ ದುಗ್ಧಾಂಬುಧಿಯನೆಯ್ದೆ ಪರಿಯಿಸಿ ನೆಗಟ್ಟಂ (ಶಾಂತಿಪು. ೧೫-೬೨); ತೀರ್ದುದು ದುಗ್ಧಾಂಬುಧಿ ಮೇರು ಪೀಠಮೆನೆ ಮಿಂದು ಚಿಣ್ಣಂ (ಅನಂಪು. ೫-೯೯) ; ದುಗ್ಧಾಂಬುಧಿಯೊಳ್ ಜನಿಸುವ ಮುಗ್ಧೇಂದು ಕಳಾವಿಳಾಸದಂತೆ . . . ಮೆಱೆದಳೆಸೆವ ನಿದ್ರಾಭರದಿಂ (ದಶಕು. ೮-೨೯೦); ಆನಂದದುಗ್ಧಾಂಬುಧಿಯೊಳೆ ಮುಳುಗುತ್ತೇಳ್ದವೊಲ್ ಕಂಪಮುಂ ಜುಮ್ಮನೆ ರೋಮಾಂಚಂಗಳುಂ ಸಂಜನಿಸೆ (ರಾಜಶೇ. ೩-೧೧೩).

[ದುಗ್ಧ + ಅಂಬುಧಿ]

ದುಗ್ಧಾಂಬುರಾಶಿ (ನಾ).=ದುಗ್ಧವಾರಿಧಿ : ಸುರಜಲದುಗಳ್ ದುಗ್ಧಾಂಬು ರಾಶಿಯೊಳ್ ಪೀಱಿ ಬಂದ ನೀರ್ಗಳನೆತ್ತಂ ಸುರಿದುವು ಜಿನಾರ್ಭಕಾಚಲಶಿರ ದೊಳ್ ಜಲದುಗಳಂತು ನಗದೊಳ್ ಸುರಿಗುಂ (ಆದಿಪು. ೭-೮೯).

[ದುಗ್ಧ + ಅಂಬುರಾಶಿ]

ದುಗ್ಧಾಂಭೋರಾಶಿ (ನಾ). = ದುಗ್ಧವಾರಿಧಿ : ಭಾಸುರಕೈಲಾಸನಗಕ್ಕೆ ಸಂದ ದುಗ್ಧಾಂಭೋರಾಶಿ ಶುಂಭತ್‌ಸುಧಾಕರಬಿಂಬಕ್ಕೆಣೆಯಾದ ಸುಂದರತೆ ಯಿಂದಂ (ಸುಕುಮಾ. ೧೨-೬೮). [ದುಗ್ಧ + ಅಂಭೋರಾಶಿ]

ದುಗ್ಧಾಬ್ಧಿ (ನಾ). = ದುಗ್ಧವಾರಿಧಿ : ಪಸರಿಸಿ ದುಗ್ಧಾಬ್ಧಿಜಳ ಪ್ರಸರ ಮನೊಡವೇಱಿ ಬಂದು ಕಱೆವುವು ಮೇಘಪ್ರಸರಂಗಳಲ್ಲಿಯೆನೆ ರಸ ಮೊಸರ್ವುವು ಪುಂಡ್ರೇಕ್ಷುವಾಟಕೋಟಿಗಳದಱೊಳ್ (ಆದಿಪು. ೦-೫೯) ; ದುಗ್ಧಾಬ್ಧಿಯೊಳ್ ನೂತ್ನ ರತ್ನಾಂಕುರವಾ ಗೋತ್ರಾದ್ರಿಯೊಳ್ ಸಿಂಗದ ಸಿಸು ಬಳೆವೊಂದಂದದಿಂ . . . ಬಳೆದಂ ಭಾರತೀಭಾಳನೇತ್ರಂ (ಚಂದ್ರಪು. ೩-೧೦೩) ; ಜಲಧಿಯೊಳು ದುಗ್ಧಾಬ್ಧಿ ತೀರ್ಥಾವಳಿಗಳೊಳು ಸುರನದಿ (ಶು ವ್ಯಾ ಉ. ೪-೧೨೦) ; ಭುವನ ಸಂಭ್ರಮದೊಡನೆ ತಾಯೆರ್ದೆಗೆ ಪಾಲುರ್ಕಿಬರಲೊಂದಿರುಳ್, ಕನಸಿನೊಳ್, ದುಗ್ಧಾಬ್ಧಿಯುಂ ಕಂಡು ನಲಿದಳ್ ದೇವಿ ಕೌಸಲ್ಯೆ (ಶ್ರೀರಾಮಾ. ೧೫-೪೦೬). [ದುಗ್ಧ + ಅಬ್ಧಿ]

ದುಗ್ಧಾಭಿಷೇಕ (ನಾ). ಹಾಲಿನ ಅಭಿಷೇಕ ; ಹಾಲನ್ನು ತಲೆಯ ಮೇಲೆ ಎರೆಯುವುದು : ಬರಿಸಿದಂ ನೆನದು ಸುರಧೇನುವಂ ವಾಲ್ಮೀಕಿ . . . ದುಗ್ಧಾಭಿಷೇಕಮಂ ಮಾಡಿಸಿದನಾ ರಾಘವೇಶ್ವರಂಗೆ (ಚೈಮಿಛಾ. ೨೦-೫೨).

[ದುಗ್ಧ + ಅಭಿಷೇಕ]

ದುಗ್ಧಾರ್ಣವ (ನಾ).=ದುಗ್ಧವಾರಿಧಿ: ದುಗ್ಧಾರ್ಣವ ಫೇನಪಾಂಡುರತೆಯಂ ಕಯ್ಕೊಂಡು ಬೆಳ್ದಿಂಗಳಂತಿರೆ ತೋಱಿತ್ತೆಸೆವುತ್ತರೀಯವಸನಂ ರಾಜೇಂದ್ರ ಚಂದ್ರಾಂಕನಾ (ಕಾದಂಪು. ೨೮) ; ಮಿಸುಗುವ ತಾರಕಾದ್ರಿರುಚಿಯಿಂ ದುಗ್ಧಾರ್ಣ್ಣವ ಫೇನರೋಚಿಯಿಂ ... ಮಿಗಿಲಾಗಿ ಪರ್ವ್ವಿ ರಂಜಿಸುವುದು ಕೀರ್ತಿ ಧಾತ್ರಿಯೊಳಗುಜ್ವಳದಿಂ ದಯಸಿಂಹಭೂಪನಾ (ಎಕ. V, ಮಂಜರಾ. ೧೮-೩೧ ; 1095) ; ಲವಣಾರ್ಣವಮಂ ದುಗ್ಧಾರ್ಣವದೊಳ್ದೆರೆ ಮಾಲೆ ಮುಸುಕಿದುತಿರೆ (ಜಗವಿ. ೪-೬೦). [ದುಗ್ಧ + ಅರ್ಣವ]

ದುಗ್ಧಿ (ನಾ). ಒಂದು ಬಗೆಯ ಸಸ್ಯ; ಹಾಲುತೊಟ್ಟಿನ ಗಿಡ: "ಜೀವ್ಯಾ-ಹಾಲೆ, ಗೋರಕ್ಷ, ದುಗ್ಧಿ, ಅಣಿಲೆ" (ಓಷಧಿ. ೬೨). [ಸಂ. ದುಗ್ಧೀ]

ದುಗ್ಧಿಕ (ನಾ). ಒಂದು ಬಗೆಯ ಸಸ್ಯ ; ಹಾಲುತೊಟ್ಟಿನ ಗಿಡ : ಕಡಹಾಲೆ ಬಳ್ಳಿ, ದುಗ್ಧಿಕ (ಮೃಜಿಗಿ. ೫೨-೦೦೫೦); ಮಾಧೀಫಲ, ದುಗ್ಧಿಕ, ಮೇಕೆಕೊಂಬು ಬಳ್ಳಿ (ಮೃಜಿಗಿ. ೫೯-೦೦೭೮). [ಸಂ. ದುಗ್ಧಿಕಾ]

ದುಗ್ಧಿಕೆ (ನಾ). ೧. ಒಂದು ಬಗೆಯ ಸಸ್ಯ ; ಹಾಲುತೊಟ್ಟಿನ ಗಿಡ : "ಕ್ಷೀರಿಕಾ, ದುಗ್ಧಿಕಾ ಈ ೨ ಅಕ್ಕಿ ಹೊಡೆ" (ನಾಚಿರಾ. ೦೦೯-೭). ೨. ಒಂದು ಬಗೆಯ ಬಳ್ಳಿ ; ಸೋರೆಬಳ್ಳಿ : "ತುಂಬೀ, ಅಲಾಬೂಃ, ದುಗ್ಧಿಕಾ-ಈ ೩ ಸೋರೆ" (ಹಲಾಯು. ೩೫-೫೬); "ಆ ತುಂಬಿ ದುಗ್ಧಿಕೆಯಲಾಬುವೆನೆ ಸೋರೆಯೆನಿಕುಂ" (ಮಂಗರಾ. ೪೪-೪೬) ೩. ಸಾವೆ, ರಾಗಿ, ಜೋಳ ಮೊದಲಾದ ಧಾನ್ಯಗಳ ಇನ್ನೂ ಬಲಿಯದ ಕಾಳು; ಹಾಲುಗಾಳು ; ಬೆಳಸೆ : "ಬೆಳುವಸೆ ದುಗ್ಧಿಕಾಖ್ಯಮಕ್ಕುಂ" (ಮಂಗರಾ. ೧೦೦-೬).

[ಸಂ. ದುಗ್ಧಿಕಾ]

ದುಗ್ಧೆ, ದುಗದೆ (ನಾ). ೧. ಅನುಮಾನ ; ಶಂಕೆ ; ಸಂಶಯ : ಮನ ದಕ್ಕರರಿದು ಮಾರ್ಕಂಡೇಯ ದಶರಥನ ತನಯರ ಮಹಾನಾಟಕವ ವಿವರಿಸಿದನೆಮತನುಜ ಭೀಮಾರ್ಜುನ ಯಮಳರ ದ್ರುಪದಾತ್ಮಜೆಯ ದುಗ್ಧೆಯಡುಗುವ ತೆರದೊಳು (ಲಕ್ಷ್ಮಧಾ. ೩-೩೦-೫). ೨. ಹಿಂಜರಿಯು ವಿಕೆ ; ಹಿಂದೆಗೆಯುವುದು. ೩.ದ್ವೇಷ ; ಹಗೆತನ. ದುಗದೆ : ೪. ಅಸೂಯೆ. ಹೊಟ್ಟೆಕಿಚ್ಚು : (+). 'ದುಬ್ಧಿ' ಪರಾ.

[←ಮರಾ. ದುಗ್ಧಾ]

ದುಗ್ಧೋದಧಿ (ನಾ).=ದುಗ್ಧವಾರಿಧಿ: ಅನವದ್ಯ ಜಿನಾಗಮವಿದ್ಯನಿದ್ದ ದುಗ್ಧೋದಧಿ ಧೌತಕೀರ್ತಿವಿಶದಂ ಭರತಾವನಿರಾಜಪೂಜಿತಂ (ಶಾಂತಿಪು. ೧-೨೯) : ಆ ದಿಗಂತಮೆಲ್ಲಮಂ ದುಗ್ಧೋದಧಿಧವಳದೀರ್ಘಂಗಳಪ್ಪ ಪಾಂಗಾವಲೋಕನದಿಂ ತೇಂಕಾಡಿಸುತ್ತುಂ (ಕಾದಂಉ. ೨೦೦) ; ಮೂಲೋಕ ದರ್ಪಣವಾಗಿ ದುಗ್ಧೋದಧಿಯೊಳೆಸೆವುದು ಶ್ರೀಗಧೀಶನ ನಗರ (ಕುವ್ಯಾಅ. ೭-೫೨). [ದುಗ್ಧ + ಉದಧಿ]

ದುಗ್ಧೋದಧಿತಲ್ಪ (ನಾ). ಹಾಲಿನ ಸಮುದ್ರವನ್ನೇ ಹಾಸಿಗೆಯಾಗಿ ಹೊಂದಿರುವವನು ; ವಿಷ್ಣು : ಲಕ್ಷ್ಮಿ ನಿಜವಲ್ಲಭೆ ಜಾಹ್ನವಿ ತನ್ನ ಪಾದಪದ್ಮೋದಕ . . . ಎಂದೆನಿಪ್ಪ ದುಗ್ಧೋದಧಿತಲ್ಪನಂ ನರನ ಭಿಷ್ಟುತಿಗೆಯ್ವುದು ಧಾರ್ಷ್ಟ್ಯಮಲ್ಲವೇ (ಜಗವಿ. ೧-೨೦).

[ದುಗ್ಧೋದಧಿ + ತಲ್ಪ]

ದುಗ್ಮೊನೆಲ್ಮಲ್ಲಿ (ನಾ). ಒಂದು ಸ್ಥಳದ ಹೆಸರು (?) : ಇಗ್ಗಇಲ್ಲೂರು ದುಗ್ಮೊನೆಲ್ಮಗಲ್ಲಿಗಟಜ್ಜವಾಗಿಲು ಸಱಮು ಎಟ್ಕುಣ್ಡೆ ಪರವೂರು ಕೂಡಲೆ ಇನಿತುಮಂ ಪೊಲಮೇರೆ ಸಹಿತಮಿತ್ತನ್ (ಎಕ. IX, ಬೆಂಗಳೂ. ೮೩-೯ ; ಸು. 890). [?]

ದುಚ್ಚೌಕ (ನಾ). ನೆತ್ತದಾಟದಲ್ಲಿ ನಾಲ್ಕರ ಎರಡು ಗರ: ಪದಮಂ ಮೋಕ್ಷ ಚತುಷ್ಟಯಮಂ ಬಯಸದೆ ದುಚ್ಚೌಕವನಾಡುವ ತನಿಸೊಕದೊದವಂ ಮುದಮನೆರಳ್ಕಯ್ಯಂದಿತ್ತಿದ್ದುಗವಾಡುವನು (ಉದ್ಯದೇ. ೨೫-೧೩).

[ದು + ಚೌಕ$_2$]

ದುಜಾವ, ದೂಜಾವ (ನಾ). ಎರಡು ಜಾವ,-ಯಾಮ : "ದುಜಾವ (ದೂಜಾವ)-ದ್ವಿಯಾಮ" (ತದ್ಯಕೋ. ೨೦) ; ದೂಜಾವಂ, ದುಜಾವಂ, ದ್ವಿಯಾಮಂ (ಶಬ್ದಾನು. ೩೭೭ ಪ್ರಯೋ). ದೂಜಾವ : ಮೇಲಿನ 'ಶಬ್ದಾನು' ಪ್ರಯೋಗವನ್ನು ನೋಡಿ. [ದು + ಜಾವ$_1$]

ದುಟದುಟನೆ (ಅ). ದುಟದುಟ ಎಂಬ ಶಬ್ದದೊಡನೆ: ಖಾತಿಯಿಂ ದುಟದುಟನೆ ಉರುಳೆ ತಲೆಯಂ ಹೊಡೆದ ಕೊಡಲಿಯಿಂ (ಇಱಿರ. ದೇ. ೧೦೮-೦೭); ತಲೆ ದುಟದುಟನೆ ಉ[ಪಾಠಾಂ. ತೊಟ್ಟನುಡಿದು]ರುಳೆ ಪೊಯ್ದನಾ ತಂದೆಯಂ (ಹಂಡೇರ. ದೇ. ೨೫೦-೦೯).

[ದುಟದುಟ$_0$ + – ಅನೆ$_1$]

ದುಟ್ಟ (ಗು). ೧. ಕೆಟ್ಟ; ದುಷ್ಟ: ಸಾಮಂತರ ಗಣ್ಡಂ . . . ಜಗದಾಳು ದುಟ್ಟಸಾವಂತರ ನಿಟೆಲ್ವ ಮುಱಿವಂ (ಎಳ. XI, ದಾವಣ. ೧೦೫-೭; 1148 ?): ದುಟ್ಟ ದೈತ್ಯರು ಬಂದು ಕವಿದರು ರಣರಂಗದಿಟ್ಟ ಕುಮಾರನ ಮೇಲೆ (ಮೋಹತ. ೩೪-೨೨); ದುಟ್ಟ ರಕ್ಕಸಂ ರಾವಣಂ . . . ಪರ್ಣಶಾಲೆಯಿಂ ಸೀತೆಯಂ ಕಳ್ದು ಲಂಕೆಯತ್ತಲ್ ಕೊಂಡುಯ್ದಂ (ಅದ್ಭುತ. ೩೪-೧೯). (ನಾ). ೨. ನೀಚ; ಕೆಟ್ಟವನು: "ದುಟ್ಟನೆಂದು ದುಷ್ಟಂ" (ಶಕಸಾ. ೨೭-೫೬೩); "ದುಟ್ಟಂ ತಾಂ ದುಷ್ಟನಕ್ಕು" (ಶವಿಶಂ. ೨೨೮); ದುಟ್ಟನೀ ತೆಱದಿಂದೆ ಎಕ್ಕಲನಾಗಿರಲು ಕಂಡು (ಸಾನಂಚ. ೮-೨೧); ಆ ಷಕಾರಕ್ಕೆ ಟತ್ವಂ—ಅಂಗುಷ್ಠ-ಉಂಗುಟ್ಟ, ಉಂಗುಟ . . . ದುಷ್ಟ-ದುಟ್ಟ (ಶಮದ. ೨೮೩ ಪ್ರಯೋ); ಕಟ್ಟುಗ್ರವೆಂಬುದತಿತಪವ ತೆರಳುವರೊಳಂ ಗಟ್ಟಿಸೆಂಬುದು ರಜಕರೊಳು ಧೌತವಸನವಂ ಕಟ್ಟೆಂಬುದುಂ ಧಾನ್ಯರಸದೊಳಲ್ಲದೆ ಬೇರೆ ದುಟ್ಟರಿಲ್ಲಾ ನಾಡೊಳು (ಪ್ರಭುಪು. ೩-೧೦).

ದುಟ್ಟರ ಗಂಡ = ದುಷ್ಟರನ್ನು ಸದೆಬಡಿಯುವವನು; ಒಂದು ಬಿರುದು: ದುಟ್ಟರ ಗಣ್ಡಂ ನನ್ನಿಯ ಗಂಗಂ ಜಯದುತ್ತರಂಗಂ . . . ಗಂಗವೆರ್ಮ್ಮಾಡಿದೇವರ್ಗ್ಗಜ್ಞವಾಡಿ ತೊಂಭತ್ತಱುಸಾಸಿರಮಂ ಬಾಯ್ಕೇಳಿಸಿ (ಎಳ. VII, ಶಿವಮೊ. ೧೦-೨೦; 1085 ?); ದುಟ್ಟರ ಗಣ್ಡ ಭುಜಬಳ ಗಂಗವೆರ್ಮ್ಮಾಡಿ ದೇವರು . . . ರಾಜ್ಯಂಗೈಯ್ಯುತ್ತುಮಿರೆ (ಎಳ. VII, ಶಿವಮೊ. ೫೧-೧೦; 1108 ?); ಸೌಚ ಗಾಂಗೇಯ ಮಂಡಲಂಗಾವ ದುಟ್ಟರ ಗಂಡನಾಳಿಂಮುನ್ನಿಱಿವನಯ್ಯನ ಸಿಂಗನಾಮಾಡಿ ಸಮಸ್ತ ಪ್ರಸಸ್ತಿ ಸಹಿತಂ (ಸೌಇಇ. IX-I, ೨೩೦-೯; 1134). [<ಸಂ. ದುಷ್ಟ]

ದುಟ್ಟಗುದುರೆ (ನಾ). ಅಗಡು ಕುದುರೆ; ಪಳಗದ ಕುದುರೆ; ಕೆಟ್ಟ ಕುದುರೆ: ಅದು ಮಗುವಿನ ಮರಣಕ್ಕೆ ಕಾರಣವಾಗುವಂತಹ ದುಟ್ಟ ಗುದುರೆಯಲ್ಲ (ಸವತಿ. ೨೪೯). [ದುಟ್ಟ + ಕುದುರೆ]

ದುಟ್ಟಗೊರವ (ನಾ). ದುಷ್ಟನಾದ ಯತಿ: ಈಗಳ್ ಸಿವನೆಂಬ ದುಟ್ಟ ಗೊರವಂ . . . ನಿಮ್ಮಡಿಗಳುಮಂ ಮಱೆದು ಲೆಕ್ಕಿಸದೆ ಮೇಲೆ ಬಿಟ್ಟ ಪಾವುಂ ನೇವಾಳವಾಗೆ ಮೈಯ್ಯಱಿಯದಿರ್ಪಂ (ಕಬ್ಬಿಳಾ. ೦೯೫).

[ದುಟ್ಟ + ಗೊರವ]

ದುಟ್ಟತನ (ನಾ). ಕೆಟ್ಟತನ; ನೀಚತನ: ಮನಸಿನ ದುಟ್ಟ[ಪಾಠಾಂ. ದುಷ್ಟ] ತನವನು ಬಿಡಿಸುತ . . . ಬ್ರಹ್ಮದ ಬಟ್ಟೆಯನು ಹಿಡಿದವರೆ ನೆಱೆ ತತ್ವಾಧಿಕಾರಿಗಳು (ಅದ್ಭುತ. ೧-೨೨); ಅಂತಹ ದುಟ್ಟತನ ಅವರಲ್ಲಿ ಕಾಣದು ಒಡೆಯ (ಸವತಿ. ೧೬೩). [ದುಟ್ಟ + – ತನ]

ದುಟ್ಟತಳಕ್ಕ (?) (ನಾ). (?): ಕಟ್ಟಾಯದ ಕಣಿ . . . ನನ್ನಿಯ ತವರೂರ್ ನೆಟ್ಟನೆನಿಸಿದ ಜಸಂ ನೇರ್ವಟ್ಟಿರೆ ನಿಟ್ಟಾಯುವಕ್ಕೆ ದುಟ್ಟತಳಕ್ಕಂ [ಪಾಠಾಂ. ತಳಕ್ಕುಂ. ತುಳುಕ್ಕುಂ] (ಶಾಪ್ಯಾವ. ೨೨೯). [?]

ದುಟ್ಟಬಿದಿ (ನಾ). ಕೆಟ್ಟ ದೈವ; ದುಷ್ಟ ವಿಧಿ: ಎಲೆ ದುಟ್ಟಬಿದಿ, ನಿಸದಮಿಂ ಜಲಜೋದರನಾಣೆ ಪೆಣ್ಗಳಂ ಸೃಷ್ಟಿಸದಿರ್ (ಸುಗುಗಂ. ೬೮-೦೭). 'ದುಟ್ಟವಿಧಿ' ಪರಾ. [ದುಟ್ಟ + ಬಿದಿ]

ದುಟ್ಟಮದ್ದು (ನಾ). (ಇತರರಿಗೆ ಕೆಡುಕನ್ನುಂಟುಮಾಡಲು) ಆಹಾರದಲ್ಲಿ ಸೇರಿಸಿ ಹಾಕುವ ವಿಷ; ಇಕ್ಕುಮದ್ದು; ಕೆಯ್ಮಸಕ: ನಾವು ಹೇಳುತ್ತಿದ್ದೇವೆ, ಕುವರನನ್ನು ಯಾರೋ ದುಟ್ಟಮದ್ದಿಗೆ ಈಡುಮಾಡಿರುವರೆಂದು (ಸವತಿ. ೨೩೭). [ದುಟ್ಟ + ಮದ್ದು$_1$ (<ಮರ್ದು)]

ದುಟ್ಟಮಾಯೆ (ನಾ). (ಈ ಲೋಕ ಸತ್ಯವೆಂಬ) ಕೆಡುಕನ್ನುಂಟುಮಾಡುವ ಭ್ರಾಂತಿ,–ಮಾಯೆ,–ಮಿಥ್ಯೆ: ದುಟ್ಟಮಾಯೆಯ ಸಿಟ್ಟು ಗುಟ್ಟಿನವೊಟ್ಟಲಂ ನೆಱೆ ಸುಟ್ಟು . . . ವಿರಾಜಿಪ ದಿಟ್ಟ ಬಸವಯ್ಯಾ (ಪ್ರಭುಪು. ೧-೨೦). [ದುಟ್ಟ + ಮಾಯೆ]

ದುಟ್ಟವಿಧಿ (ನಾ). =ದುಟ್ಟಬಿದಿ: ದುಟ್ಟವಿಧಿ, ನಮ್ಮ ಮುದ ನಿನಗೆ ಬೇಡವೇಕೆ! ಹೆರರ ನಲಿವಿಗೆ ನಲಿವ ಸಿರಿ ಬಾರದೇಕೆ? (ನಡದಾ. I, ೪೬೦).

[ದುಟ್ಟ + ವಿಧಿ]

ದುಟ್ಟೆ (ನಾ). ನೀಚ ಸ್ತ್ರೀ; ಕೆಟ್ಟವಳು; ದುಷ್ಟೆ: ದುಟ್ಟೆಯರಾದ ಪಾಣ್ಟೆಯರ ಗೊಂದಣಿ ಸಂದಣಿಸಿರ್ದುದು (ವೀರವಿ. ೬-೩೦).

[<ಸಂ. ದುಷ್ಟಾ]

ದುಡ (ನಾ). ಮಣ್ಣಿನ ಪಾತ್ರೆ; ಗುಡಾಣ: ನಿಮ್ಮನ್ನಿರೋ ಕಾಳುಕಡ್ಡಿ, ಹುರುಳಿ, ಹುಚ್ಚೆಳ್ಳು ಏನಾರಾ ನಿಮ್ಮ ದುಡದಲ್ಲಿರೋದ ಕೊಟ್ಟು ಕಳ್ಸಿ (ಹುಟ್ಟಹ. ೦೩೭) [←ಮರಾ. ದುಡ]

ದುಡಕಿ (ನಾ). ಎತ್ತು, ಕುದುರೆ ಮೊದಲಾದವುಗಳ ವೇಗವಾದ ನಡಿಗೆ,–ಚುರುಕಾದ ಓಟ: ರೇಚಿತ – ಕುದುರೆ ದುಡಕಿಯ ನಡಿಗೆ (ಗಂಗಾಮ. ೨೭೪). [←ಮರಾ. ದುಡಕೀ]

ದುಡದುಡನೆ 'ದುಡುದುಡನೆ' ನೋ.

ದುಡನ (ನಾ). ಮಾಂಸ (?): ಶ್ರೀಮಾದಿಗ ಹೋಚನ ಶ್ರೀಕರನ ಕೊಡಗಿಯ ಗದ್ದೆಕೊಳಗಕ್ಕೆ ಅಳಿಹಿದವನು ಹೆಣಬಾ ಅಕ್ಕಿಯನು ನಾಯ ದುಡನವನು ತಿಂದವರು (ಮೈಆರಿ. ೧೯೩೨, ೫೦-೮; 18 ನೆಯ ಶತ). [?]

ದುಡಿ$_1$ (ಕ್ರಿ). ೧. ಕಷ್ಟಪಟ್ಟು ಕೆಲಸಮಾಡು; ಶ್ರವಿಸು; ಹೆಣಗು: ಹಾಸಿ ದುಡಿದರೆ ತನಗುಂಟು ತನ್ನ ಪ್ರಮಥರಿಗುಂಟು (ಬಸವ. ೩೨೪); ಅತಿಲಜ್ಜೆ ಗೆಟ್ಟನ್ಯರಾಳಾಗಿ ದುಡಿದು ದಾವತಿಗೊಂಡು ಧನವನಾರ್ಜಿಸಿ ಹರಿಶ್ಚಂದ್ರ ಭೂಪತಿ . . . ಸುತನ ಕರೆಯೆಂದಡೇನೆಂಬೆಂ (ಹಡಕಾ. ೧೨-೨೯); ಬಿಡುವಮ್ ಈ ಬಾಳ್ ಅದೇಕೆಂಬ ಚರ್ಚೆಯ; ನಾವು ದುಡಿವಮ್ ಅದು ಪೆಂಪುಗೊಳೆ (ಮಂಕುಳ. ೮೦೯); ದುಡಿಯೋ ಎತ್ತು ಮಡಿದು ಬಿತ್ತು (ಗಾದೆ). ೨. (ದುಡಿತದಿಂದ) ಸಂಪಾದಿಸು; ಗಳಿಸು: ಮೀರಸಾಬರಿಗೆ ಹಣವೂ ವಿಶೇಷವಾಗಿ ದುಡಿದು ಕೊಟು ಯಿವರಲ್ಲಿ ಪ್ರಮುಖರಾಗಿ (ಹೈದರ. ೧೦೯); ಅಮ್ಮನೆನಗೆ ಕೊಟ್ಟುದಲ್ಲ, ಗಂಡನಿದಂ ಕೊಂಡನಲ್ಲ, ಅಕಟ ನಾನೆ ದುಡಿದೆನಲ್ಲ ಮೆಯ್ಯ ಮುರಿತದಿಂ? (ಗೀವಿಂ. ೭೬-೪೦); ಇಷ್ಟು ದಿನಗಳೂ ದುಡಿದು ನಿನ್ನನ್ನು ಸಾಕಿ ಸಲಹಲು ನಾನು ಬೇಕಾಗಿದ್ದಿತು. ಈಗ ಸುಖ ಅನುಭವಿಸಲು ಅವಳು (ಸುಂದರಿ. ೮೫).

ದುಡಿದುಡಿ (ದ್ವಿರುಕ್ತಿ): ನುಡಿದು ಬೇಸತ್ತಾಗ ದುಡಿದುಡಿದು ಸತ್ತಾಗ ಜನಕ ಹಿಗ್ಗಿನ ಹಾಡು ನೀಡಾಂವ (ಸಖೀಗೀ. ೪೭-೧). [ದೇ. ॥ ತುಳು. ದುಡಿ]

ದುಡಿ$_2$ 'ತುಡಿ' ನೋ.

ದುಡಿ$_3$ (ನಾ). ಒಂದು ಬಗೆಯ ಚರ್ಮವಾದ್ಯ: ಕರಿಯನೂ ಒಳಗಿದ್ದ ತನ್ನ 'ದುಡಿ'ಯನ್ನು ಹೊರಗೆ ತಂದಿದ್ದ (ರಕ್ತರೂ. ೩೪); ಹಿಡಿದ ದುಡಿ, ಎತ್ತಿದ ಕೈ, ತುಂಬಿದ ಆವೇಶ! ಎಲ್ಲವೂ ಇದ್ದಕ್ಕಿದ್ದಂತೆಯೇ ಇವೆ, ಆದರೆ 'ಚೋಮ'ನಿಲ್ಲ! (ಚೋಮದು. ೧೧೦); ದಕ್ಷಿಣಕನ್ನಡಜಿಲ್ಲೆಯ ಕೊರಗರು ದುಡಿಯ ನಾದಕ್ಕೆ ಕುಣಿಯುವ ನೃತ್ಯಗಳು ವಿಶಿಷ್ಟವಾಗಿವೆ (ಆಭಾನ್ಯ. ೦೦೦); ದುಡಿ ಎಂಬ ಚರ್ಮವಾದ್ಯವನ್ನು ಬಡಿಯುತ್ತ, ಹಾಡುತ್ತ, ಕುಣಿಯುವುದು ಕೊಡಗರ ವಾಡಿಕೆ (ಜಾನಗೀ. ೮೯).

[ದೇ. ॥ ತಮಿ. ತುಟಿ; ಮಲ. ತುಡಿ; ತುಳು. ದುಡಿ]

ದುಡಿಕೆ (ನಾ). ೧. ದುಡಿಯುವಿಕೆ; ಪರಿಶ್ರಮ. ೨. ಸಂಪಾದನೆ; ಗಳಿಕೆ: "ದುಡಿಕೆ = ಕೂಲಿ; ಕೆಲಸ; ಪಗಾರ" (ಜಾನಕೋ. ೬).

[ದುಡಿ$_1$ + – ಕೆ]

ದುಡಿಗೆ (ನಾ). ಒಂದು ಬಗೆಯ ಸಸ್ಯ : ದುಡಿಗೆಯ ಕಾಯಿ ಎರದ ಹಣ್ಣು ಕುರುಟಿಗೆ ಹಣ್ಣು . . . ಎಲ್ಲಾ ಕಂದಮೂಲ ಕದಿರ ಶಾಕ ಪುಷ್ಪ ಫಲಾದಿಗಳಂ (ಶಾಸ್ತ್ರಟೀ. ೫೫-೪). [?]

ದುಡಿತ$_1$ (ನಾ). ೧. ದುಡಿಯುವಿಕೆ ; ಕೆಲಸ ; ಕಾರ್ಯ : ಈ ದುಡಿತದ ಪರಿಣಾಮದಿಂದಲೋ ಎಂಬಂತೆ ಅವರ ಮೂರನೆಯ ಹೆರಿಗೆ ತೊಂದರೆಯಿಂದಲೇ ಆಯಿತು (ಹಬ್ಬಿಲ. ೨೯) ; ಆ ಸಂಶೋಧನಾ ಮಂದಿರವು . . . ಭಾರತೀಯ ವಿಜ್ಞಾನ ಸಂಶೋಧನೆಗಳ ದುಡಿತದ ಹೆಗ್ಗುರುತಾಗಿಯೂ ಇತ್ತು (ಸಸ್ಯಳ. ೧೩೦) ; ದುಡಿತದಲ್ಲಿ ವಾಸುದೇವ ಭಟ್ಟರಿಗೆ ಸರಿಸಾಟಿಯಾಗಿದ್ದಳು (ಭ್ರಾಂತಿಸು. ೧) ; ದುಡಿತವು ದುಡ್ಡಿನ ತಾಯಿ (ಗಾಡೆ). ೨. ಸಂಪಾದನೆ ; ಗಳಿಕೆ ; ಉತ್ಪನ್ನ : ದುಡಿತ ಹೋಯಿತು ಮಗೆಯ ಮಳೆವೋಲ್ (ಕಎಪು. ೧೯-೨೨) ; ಹಿರಿಯರಿಂದ ಬಂದ ಸಂಪತ್ತಿಗೆ . . . ತಂತಮ್ಮ ದುಡಿತವನ್ನೂ ಕೂಡಿಸಿ ಅದನ್ನು ಓರಂತೆ ಹಿಗ್ಗಿಸುತ ಬರಬೇಕು (ಮೂರುಉ. ೭ ಎರಡು ಮಾತು) : ಯಾರ ಹಂಗೂ ಇಲ್ಲದೆ ತನ್ನ ದುಡಿತದಿಂದ ಹಾಯಾಗಿ ಬಾಳುತ್ತಿದ್ದಳು (ಮಹ್ಮಿಮ. ೬). [ದುಡಿ$_1$ + – ತ$_2$]

ದುಡಿತ$_2$ 'ತಂಡಿತ' ನೋ.

ದುಡಿತಗಾರ (ನಾ). ದಂಡಿಯುವವನು; ಶ್ರವಂದ ಕೆಲಸ ಮಾಡುವವನು (ಪ್ರಾಚೀನ ಸ್ಪಾರ್ಟಾ ರಾಜ್ಯದಲ್ಲಿ ಸ್ವತಂತ್ರಪ್ರಜೆಗೂ ಗುಲಾಮನಿಗೂ ಮಧ್ಯದರ್ಜೆಯಲ್ಲಿದ್ದ) ಒಂದು ತರಗತಿಯ ಸ್ವತಂತ್ರನಲ್ಲದ ಉಳುಮೆಯ ಜೀತಗಾರ ; ಸ್ವತಂತ್ರನಲ್ಲದ ದುಡಿತಗಾರ (Helot. ಇಂಳನಿ).

[ದುಡಿತ + – ಗಾರ (< – ಕಾಱ)]

ದುಡಿಮೆ (ನಾ). ೧. ದುಡಿತ ; ಕಾಯಕ : "ತಂಕಃ–ದುಡಿಮೆ" (ಕಾಶಳ್ಳ. ೮) ; ದುಡಿಮೆಯ ಉತ್ಸಾಹ ಮತ್ತೆ ಮನಸ್ಸಿನಲ್ಲಿ ಮೂಡುವುದು (ಪಾತ್ಸಲ್ಯ. ೨೮) ; ದೇವರು ಒಂದು ಹೊತ್ತಿನ ಅನ್ನಕ್ಕೆ ದುಡಿಮೆ ಕೊಟ್ಟರೂ ನನಗೆ ತೃಪ್ತಿ (ಪದ್ಮಸ. ೨೫೯) ; ವಿದ್ಯಾರ್ಥಿಗಳ ವ್ಯಕ್ತಿತ್ವವು ವೃದ್ಧಿಯಾಗುವುದಕ್ಕೆ ದುಡಿಮೆಯೇ ಅತ್ಯಾವಶ್ಯಕ (ಕ್ರಿಯಾಶಿ. ೫೮). ೨. ಗಳಿಸುವುದು ; ಸಂಪಾದಿಸುವುದು. ೩. ಗಳಿಕೆ; ಸಂಪಾದನೆ: ನಾನು ಭಿಕಾರಿ, ದುಡಿಮೆಯಿಲ್ಲದ ಭಿಕಾರಿ . . . ಗಂಗಾಧರ ಕಿರುಚುತ್ತಲೆ ಇದ್ದ (ಮುಂಗಾಮು. ೩೦)

[ದುಡಿ$_1$ + – ಮೆ$_1$]

ದುಡಿಮೆಗಾರ (ನಾ). ದಂಡಿತಗಾರ ; ದಂಡಿಯುವವನು : ನಾನೂ ದುಡಿಮೆಗಾರನಾಗಬೇಕು (ಬೆಳುಮ. ೮).

[ದುಡಿಮೆ + – ಗಾರ (< – ಕಾಱ)]

ದುಡಿಮೆಟ್ಟು (ಕ್ರಿ). ದಂಡಿಯನ್ನು ಬಾರಿಸು : ಅವನಿಗೆ ಸಾವೂ ಒಂದೇ, ಹುಟ್ಟೂ ಒಂದೇ ; ಹಗಲೂ ಒಂದೇ, ರಾತ್ರಿಯೂ ಒಂದೇ. ಕುಡಿಯುವುದು ; ದುಡಿಮೆಟ್ಟುವುದು (ಜೋಮದು. ೬). [ದುಡಿ$_3$ + ಮೆಟ್ಟು$_1$]

ದುಡಿಸೀರೆ (ನಾ). ಒಂದು ಬಗೆಯ ಸೀರೆ : ದಡಿಸೀರೆ ದುಡಿಸೀರೆ ಪೊಸ ಸೀರೆಗಳನುಟ್ಟು (ಸಿದ್ಧಕಾ. ೮-೧೨). [ದುಡಿ ? + ಸೀರೆ$_2$]

ದುಡಿಸು (ಕ್ರಿ). ಕೆಲಸ ಮಾಡಿಸು ; ದಂಡಿಯುವಂತೆ ಮಾಡು : ಬಹು ಸಂಖ್ಯೆಯ ಜನರು ಬಡವರಾಗಿ, ಅತ್ಯಂತ ಬಡವರಾಗಿ ಇರಬೇಕಾಗುತ್ತದೆ. ಮತ್ತು ಅಲ್ಪಸಂಖ್ಯೆಯ ಜನರು ಅವರಿಂದ ದುಡಿಸಿ ಹಣವಂತರಾಗುವ ಅವಸರವಿರುತ್ತದೆ (ಪ್ರಕಾಶ. ೭೨).

ದುಡಿಸಿಕೊಳ್ಳು = ೧. ತನಗಾಗಿ ಇನ್ನೊಬ್ಬರಿಂದ ಕೆಲಸ ಮಾಡಿಸಿಕೊಳ್ಳು. ೨. (ಪದಗಳನ್ನು) ಹೆಚ್ಚು ಅರ್ಥವತ್ತಾಗುವಂತೆ ಬಳಸು : ಅರ್ಧಸತ್ಯಗಳನ್ನು, ವಿಕೃತದೃಷ್ಟಿಕೋಣಗಳನ್ನು, ನಿರುತ್ತರವಾದಿತ್ವವನ್ನೂ 'ಪೋಕ್ತ'ತನವನ್ನು ಅವರು ಚೆನ್ನಾಗಿ ದುಡಿಸಿಕೊಂಡಿದ್ದಾರೆ (ಗಾಳಿಪ. XI, ಮುನ್ನುಡಿ). [ದುಡಿ$_1$ + – ಇಸು$_3$]

ದುಡುಂ (ನಾ). ಒಂದು ಅನುಕರಣ ಶಬ್ದ: ಹುಡುಗ ದುಡುಮ್ಮೆಂದು ನೀರೊಳಗೆ ಧುಮುಕಿದ (ರೂಢಿ).

ದುಡುಂ ಪ್ರವೇಶ=ಮುಂದಾಲೋಚನೆಯಿಲ್ಲದೆ ಕೆಲಸದಲ್ಲಿ ಪ್ರವೇಶ ಮಾಡುವುದು ; ವಿಚಾರಮಾಡದೆ ಕೆಲಸವನ್ನು ಕೈಗೊಳ್ಳುವುದು ; ದುಡುಕುತನ : (ಕಿ).

ದುಡುಂಬಿಱಿ 'ದುಡುಮ್ಮಿಱಿ' ನೋ.

ದುಡುಕ (ನಾ). ವಿಚಾರ ಮಾಡದೆ ಮುನ್ನುಗ್ಗುವವನು ; ದುಡುಕುವ ಸ್ವಭಾವದವನು: ಭೀಮನೆಂಬವ ದುಡುಕನೀ ಸುತ್ರಾಮಸುತ ಸೈರಣೆಯ ಮನದವನು (ಕುವ್ಯಾಅ. ಓರಿಇ. ೪-೬೦). [ದುಡುಕು$_2$ + – ಅ$_7$]

ದುಡುಕಿ (ನಾ). ೧. ದುಡುಕು ಸ್ವಭಾವದ ವ್ಯಕ್ತಿ : ಶೂರನೂ, ರಾಮಭಕ್ತನೂ ಸ್ವಲ್ಪ ದುಡುಕಿಯೂ ಆದ ಲಕ್ಷ್ಮಣನ ಪಾತ್ರವು . . . ಸರ್ವರ ಹೃದಯಕ್ಕೂ ಪ್ರಿಯವಾಗಿದೆ (ಭಾರದ. ೯೦). ೨. ಉದ್ಧಟ ವ್ಯಕ್ತಿ.

[ದುಡುಕು$_2$ + – ಇ$_3$]

ದುಡುಕು$_1$ (ಕ್ರಿ). ೧. ಮುಂದಾಲೋಚನೆಯಿಲ್ಲದೆ ಕೆಲಸಮಾಡು ; ಆತುರದಿಂದ ವರ್ತಿಸು ; ವಿಚಾರಮಾಡದೆ ಮುನ್ನುಗ್ಗು : ಮುಕ್ತಿಯ ವಂಚಿಸೆ ಮುಕ್ತಿಯ ಹುಡುಕಿದೆ ತತ್ತ್ವವಿಚಾರದ ಗಲಭೆಗೆ ದುಡುಕಿದೆ (ಪಾಂಚಜ. ೫೯-೧೩); ಚಿರುತನದ ಪಥಿಕ ನಾನು ಹೊರಟೆ ತಿರುಳ ಹುಡುಕುತ ನೆರಳಿನಂತೆ ಹುರುಳಿನಲ್ಲಿ ಕರಗಿದರೂ ದುಡುಕುತ (ಅರಳು. ೪೪-೨೦) ; ಜೀವನದಲ್ಲಿ ಅವರು ಎಲ್ಲೂ ದುಡುಕಿರಲಿಲ್ಲ (ಮಹಾತ್ಮಾ. ೨೦); ದುಡುಕಿದರೆ ಆಕೆಯು ಆತ್ಮಹತ್ಯವನ್ನಾದರೂ ಮಾಡಿಕೊಳ್ಳಬಹುದು (ರಾವಿಜ. ೪೦). ೨. "ಹುಂಬತನ ಮಾಡು" (ಜಾನಕೋ. ೬). ೩. ಉದ್ಧಟತನದಿಂದ ವರ್ತಿಸು ; ದುಷ್ಟತನದಿಂದ ವರ್ತಿಸು : (ಕಿ). 'ತಂಡುಂಕು$_1$' ಪರಾ.

[ದೇ. ॥ ತುಳು. ತೆಲು. ದುಡುಕು]

ದುಡುಕು$_2$ (ನಾ). ೧. ಆಲೋಚನೆ ಮಾಡದೆ ಮುನ್ನುಗ್ಗುವುದು : ಈ ಪರಿಯೊಳ್ ದುಡುಕಿನಿಂ ಪೋದೊಡೆ ಅವಶ್ಯಮಾಗಿ ಪಶ್ಚಾತ್ಸಾಪಮಪ್ಪುದು (ಮಿತ್ರಗೋ. ೮೫) ; ತುಂಗಳಮಾಸ್ತರರ ದುಡುಕಿಗೆ ನಾವೊಂದು ಪಾಠ ಕಲಿಸಿದುತಾಗುವುದು (ರಂಗರೋ. ೨೫) ; ತಿಮ್ಮಾವಧಾನಿ, ಇದೇನೀ ದುಡುಕು ? (ತುಂಗಭ. ೧೮) ; ಮಡಕೆ ಮಾರುವವನಿಗೆ ದುಡುಕಿನ ಗವುಜಿಯಾಕೆ? (ಗಾಡೆ). ೨. ಆತುರ ; ಅವಸರ : ಬಾಲಗೆ ದೊರಕಿತು ಪುಣ್ಯೋದಯದಿ ಸಾಲಿಗ್ರಾಮಶಿಲೆಯು ಕೈಯ ದುಡುಕಿಲಿ ತೆಕ್ಕೊಂಡನು ಹರುಷದಿ ಲಕ್ಷ್ಮಿನಾರಾಯಣ ಮೂರುತಿಯ (ಚಂದ್ರಹಾ. ೧-೩೩) ; ಖಡಕೀಲೆ ಉಡಿಯಕ್ಕಿ ಹಾಕಿದರವ್ವಾ ಒಳ್ಳೆ ದುಡುಕಿಲೆ ಮುಂದಕೆ ನೂಕಿದರವ್ವಾ (ಶರೀಫ. ೨೧-೫) : ದುಡುಕು ಇದ್ದವಗೆ ಬಡಿತ ತಪ್ಪದು (ಗಾಡೆ). ೩. ಉದ್ಧಟತನ : ಗುಡ್ಡ ಬೆರಳೊಳೆತ್ತಿ ದೊಡ್ಡಿಗೋವ್ಗಳ ಕಾಯ್ದು . . . ದುಡುಕು ಮಾಡಿ ಹಾಲುಮಡಕೆಗಳ ಒಡೆದು ಹಡಗನೇಱಿ ಬಂದು ಉಡುಪಿಲಿ ಇದ್ದನೆ (ಪುರಂದ. ೨-೩೨-೪).

ದುಡುಕಿನಾಳ್= ದುಡುಕುವ ಸ್ವಭಾವದವನು; ವಿಚಾರ ಮಾಡದೆ ಕೆಲಸಕ್ಕೆ ಕೈಹಾಕುವವನು : ಈಗಡಿನ ಕೇಡುಗಳ ಕುಱಿತಾರಯಲ್, ದುಡುಕಿನಾಳ್, ನೀನ್, ತಕ್ಕ ಕಾಲದಲೆ ತಟ್ಗಿ ನಡೆದುಕೊಳ್ (ಬದ್ಧಪ್ರ. ೫೩-೧೧೫೫). [<ದುಡುಕು$_1$]

ದುಡುಕುತನ (ನಾ). ಆಲೋಚನೆ ಮಾಡದೆ ಮುನ್ನುಗ್ಗುವುದು : ನಿನ್ನ ಪವಿತ್ರಪ್ರಾಣವನ್ನು ಅಗ್ನಿದೇವನಿಗೆ ದುಡುಕುತನದಿಂದ ಅರ್ಪಿಸದಿರು (ಹಿಂಕಿರು. ೭೩).

ದುಂದುಡುಕುತನ (ದ್ವಿರುಕ್ತಿ) : ಲಕ್ಷ್ಮಿ ಅಂತಹವಳಲ್ಲ. ಆಕೆಗೆ ದುಂದುಡುಕುತನವು ಇಲ್ಲ. ಆಕೆಯ ಸ್ವಭಾವವತಿಶಾಂತವು(ಲಕ್ಷ್ಮೀಪ್ರ. ೪೮).

[ದುಡುಕು$_2$ + – ತನ]

ದುಡುಕುದೋರು (ಕ್ರಿ). ಅವಸರ ಪಡು ; ಆತುರಪಡು : ನಡತೆ ನುಡಿತೆ ಗಳಿಂದ ಪಿರಿದಹ ದುಡುಕುದೋರಲು ಪುತ್ರಮೋಹವು ಪಡೆದರಿಗೆ ಪರ್ಯಾಯಮೆಸೆವುದೆ (ಗಗತಾ. ೦೦-೭).

[ದುಡುಕು2 + ತೋರು (<ತೋಱು)]

ದುಡುಕುಪ್ರವೃತ್ತಿ (ನಾ). ದುಡುಕಿನಿಂದ ನಡೆದುಕೊಳ್ಳುವಿಕೆ ; ದುಡುಕು ಪ್ರವೃತ್ತಿ ಅವರಲ್ಲಿ ಇರಲಿಲ್ಲ (ಮಹಾತ್ಮಾ. ೧೩).

[ದುಡುಕು2 + ಪ್ರವೃತ್ತಿ]

ದುಡುಕುಬುದ್ಧಿ (ನಾ). ತಕ್ಕಷ್ಟು ಆಲೋಚನೆ ಮಾಡದೆ ಮುನ್ನುಗ್ಗುವ ಸ್ವಭಾವ : (ಕಿ). [ದುಡುಕು2 + ಬುದ್ಧಿ]

ದುಡುಕುಹೆಮ್ಮೆ (ನಾ). ದುಡುಕುತನದಿಂದ ಉಂಟಾದ ಗರ್ವ: ದೊರೆಗಳ ದೊರೆ ಚಕ್ರಿಯೆನಿಸಿ ದರ್ಯವುಷನು ಮೆರೆದನು : ಈಗಳದನು ದುಡುಕು ಹೆಮ್ಮೆ ದೂಳ್ಗೊದೆದುದೊ ಅರಿಯನು (ಪಾರಸಿ. ೯-೦೮೭).

[ದುಡುಕು2 + ಹೆಮ್ಮೆ (<ಪೇರ್ಮೆ)]

ದುಡುಕೆಸಗು (ಕ್ರಿ). ಅಲೋಚಿಸದೆ ಕಾರ್ಯಮಾಡು ; ಅವಸರಪಡು : ಬೆಲೆವೆಣ್ಗಳ ಪೆರ್ಗಡೆ ನೀಂ ಕಲೆಯಱಿತುರವಣಿಸಿ ಬಿರುದು ಬೊಜಗರ ಬಿಂಕಂ ತೊಲಗೆ ದುಡುಕೆಸಗಿ ಕೆಕ್ಕೆಲಗೆಲೆವಂದಮನಿಂದು ಸವಿಯಲೆಂ ದೇಟ್ರಂದೆಂ (ಚಿಕವಿ. ೬-೨೭೬). [ದುಡುಕು2 + ಎಸಗು1]

ದುಡುಗುಟ್ಟು (ಕ್ರಿ). ಬಡಿದುಕೊಳ್ಳು ; ನಡುಗು ; ಸ್ಪಂದಿಸು : ಒಡನೆ ಕೈಮುಗಿದು ಪೆಣ್ಣುಗಳೆಲ್ಲ ಪೋದರು ದುಡುಗುಟ್ಟುವೆದೆಯ ಬಲ್ವಿಡಿದು (ಭರಚ. ೪೮-೦೦೪). 'ದಡಗುಟ್ಟು1' ಪರಾ.

[<ದುಡುದುಡು + ಕುಟ್ಟು1]

ದುಡುದುಡನೆ, ದುಡದುಡನೆ (ಅ). ದುಡುದುಡು ಎಂಬ ಶಬ್ದದೊಡನೆ: ದುಡುದುಡನೋಡಿ ಬರುತಿರ್ಪ ಬೇಡನಾಕಾರಮಂ ನೋಡಿದಂ ರೂಢೀಶನು (ಹಚಕಾ. ೬-೦೮) ; ದುಡುದುಡನೆಯ್ತಂದು [ಪಾಠಾಂ. ದಡದಡನೆಯ್ತಂದು] ದುಂಡಿಯರಾ ಚೆಲ್ವರೊಡೆಯನ ಚೆಲ್ವ ನೋಡಿದರು (ಭರಚ. ೨೧-೭೪). **ದುಡದುಡನೆ** : ಮಡದಿಯ ತಾನೆತ್ತಿಕೊಂಡು ದುಡದುಡನಡಿಯಿಟ್ಟು ಶಕುನಿ ಮಂಚದ ಮೇಲೆ ಮಡಗಿಕೊಂಡನು ರಾಜಮೋಹಿ (ಭರಚ. ೪೨-೦೫೧). 'ದಡದಡನೆ' ಪರಾ. [ದುಡುದುಡು + – ಅನೆ1]

ದುಡುದುಡಿಕೆ (ನಾ). ಬಳಲಿಕೆ ; ಆಯಾಸ : ತಾಯ್ ನೊಂದು ಬಳಲುತ್ತ ತಾಯ ದೇಹಕ್ಕಲ್ಲಿ ದುಡುದುಡಿ[ಪಾಠಾಂ. ಡು]ಕೆಯಾಗುತಿರೆ ಬಾಯಳಿವುತೆ ನ್ನಸುಗೆ ಸಂದೇಹವಾಗುತಿರೆ ಇಂತು ನಾನಾ ವಿಧದ ಕಂಟಕಮುಮಂ ಕಳೆದು (ಪಿಂಡೋರ. ಹ. ೫೦೧-೧೭). [?]

ದುಡುದುಡು (ನಾ). ಒಂದು ಅನುಕರಣ ಶಬ್ದ : ಹಿಡಿಹಿಡಿಹಿಡಿಯೆಂದು ಪುರಂದರವಿಠಲನ ದುಡುದುಡು ದುಡುದುಡನೇ ಓಡುತ . . . ಮೆಲ್ಲನೆ ಪಿಡಿಯಲು ಬಿಡಿ ಬಿಡಿ ಬಿಡಿ ದಮ್ಮಯ್ಯ ಎನ್ನುತ (ಪುರಂದ. ೨-೭೨-೩) ; ಬಸ್ಸಿನ ಬುಡದಿಂದೆದ್ದು ಬಂದು ಸಿದ್ದಣ್ಣ ದುಡುದುಡು ಹೊರಟ (ಬೆಂಗಬ. ೧೦೪).

ದುಡುಮ, ದುಬ್ಬ (ನಾ). ೧. ದಷ್ಟಪುಷ್ಟವಾಗಿರುವವನು ; ದಾಂಡಿಗ : ಈ ದುಡುಮ ಕೆಲಸಮಾಡುವುದರಲ್ಲಿ ತುಂಬಾ ಮೈಗಳ್ಳ (ರೂಢಿ). ದುಬ್ಬ: ೧ : (ಕಿ). ೨. ಮಂಕ ; ಮೂಢ : ಆ ದುಬ್ಬನಿಗೆಲ್ಲಿ ಕಂಡೀತು ಬಿಡ್ರೋ (ಬೆಳುಮ. ೮). 'ಡುಮ್ಮ' ಪರಾ.

[ದುಡುಮು2 (<ದುಮ್ಮು1) + – ಅ6]

ದುಡುಮಿ, ದಡಮಿ, ದುಬ್ಬಿ1 (ನಾ). ೧. ದಷ್ಟಪುಷ್ಟವಾಗಿರುವವಳು ; ದಢೂತಿ ಹೆಂಗಸು : ದುಡುಮಿಯಾದ ಅವಳ ನಡಗೆಯೂ ನಿಧಾನ (ರೂಢಿ). ೨. (?) : ಒಡೆಯ ಕೈಲಾಸಪುರಕ ಕೈವಲ್ಯವಾದಂತ ದುಡುಮಿ ಕಲ್ಯಾಣಿ ಬಾರ ಒರಳಕ್ಕಿ ಪಾಡುನು (ಲೋಕಗೀ. ೨೧). ದಡಮಿ: ೧. ಏಳು ವರ್ಷದ ಅವಳ ಮಗಳು . . . ಕೆಂಗೂದಲ ದಡಮಿಯ ಸೆರಗು ಹಿಡಿದುಕೊಂಡು ನಿಂತಿದ್ದಳು (ಪುನರು. ೧೪೩). ದುಬ್ಬಿ1 : (ಕಿ). [ದುಡುಮ + – ಇ3]

ದುಡುಮು1 (ಕ್ರಿ). ಸಶಬ್ದವಾಗಿ ಬೀಳು ; ರಭಸದಿಂದ ಧುಮುಕು : ಮೇಲಕೆ ಪುಟನೆಗೆವ ದುಡುಮ್ಮಿಗಾವೊಲೊಯ್ವ ಅಗುಳ್ವ ತೇಲುವ ನೀರಾಟ ವೆಸೆದರಾ ಬಗಸೆಗಂಗಳ ಭಾವೆಯರು (ಶ್ರೀಪಾಲ. ೩-೫೩) ; ಬೀಳು ವೇಳುವ ಕೈದುಗಳನೀಡಾಡುವ ತೇಲುವ ಸುಳಿಯೊಳು ಸುಳಿವ ಆಳುವ ದುಡುಮುವ ಯಾಸುವ ಭಟರ ಹೇರಾಳದಿ ನದಿ ಹೂಳಿದುದು (ನಾಗಕು. ೧೫-೬೦). 'ದುಡುಮ್ಮಿಱಿ' ಪರಾ. [<ದುಡುಂ]

ದುಡುಮು2 'ದುಮ್ಮು1' ನೋ.

ದುಡುಮ್ಮನೆ (ಅ). ೧. ದುಡುಂ ಎಂಬ ಶಬ್ದದೊಡನೆ : ಅವಳು ದುಡುಮ್ಮನೆ ನೀರಿಗೆ ಬಿದ್ದುಬಿಟ್ಟಳು (ರೂಢಿ). ೨. ಇದ್ದಕ್ಕಿದ್ದಂತೆ ; ಕೂಡಲೆ ; ತಕ್ಷಣ : ಎದುರಾಳಿಗಳನ್ನು ವಿರೋಧಿಸಿ ದುಡುಮ್ಮನೆ ಪರಾಜಯಗೊಳಿಸುವ ಒಂದು ನೂತನ ಚಾಕಚಕ್ಯವಿಧೆ ಅವರಲ್ಲಿ (ರಾಜಪ. ೮೧).

[ದುಡುಂ + – ಅನೆ1]

ದುಡುಮ್ಮಿಱಿ, ದುಡುಂಬಿಱಿ (ಕ್ರಿ). (ನೀರಿನಲ್ಲಿ) ಧುಮುಕಿ ಅಥವಾ ಕೈಯಿಂದ ಹೊಡೆದು ಶಬ್ದಮಾಡು : ಒಳಪೊಕ್ಕು ದುಡುಮ್ಮಿಱಿದಾಡ ಲೀಸಲಗ್ಗಲಿಸಿದಲಂಪಿನಿಂ ಬಗೆದುದಂದು ಜನಂ ಘನಚಂದ್ರಿಕಾಂಬುವಂ (ಅಜಿಪು. ೬-೪೫) ; ಹಂಸೆಗಳ ಕ್ರೇಂಕಾರವೇ ಕಹಳೆಗಳ್ಕುಳಿರ್ವ ನೀರೊಳ್ದು ಡುಮ್ಮಿಱಿವ ಮೀನ್ಗಳ ರವಂ ತಂಬಟಂ (ಚೇರಮ. ೭-೨೦) ; ನಲಿದು ದುಡುಮ್ಮಿಱಿವುತ ತೇಂಕಾಡುತ ನಲಿದಾಡುತ (ಪಂಪ್ರಸಾಂ. ೦೭-೨೦೫). **ದುಡುಂಬಿಱಿ** : ಅಲ್ಲಿಯೋಲಾಡಿಸಲವನಾನಂದದಿಂದೀಸಿ ದುಡುಂಬಿಱಿದು ಕುಡಿದು ನೋಡಿ (ಪುಣ್ಯಾಸ್ರ. ೯-೩೭ ವ). [ದುಡುಂ + ಇಱಿ1]

ದುಡುಮ್ಮು (ನಾ). ಒಂದು ಅನುಕರಣ ಶಬ್ದ : ದೊಗಹು ಧೊಕ್ಕು ದುಡುಮ್ಮು . . . ಗರಿಗರಿಲೆಂಬ ನಿಷ್ಠುರರವಂ ಮಿಗೆ ತಳ್ತಿಱಿದತ್ತು ಯುದ್ಧದೊಳ್ (ಗಿರಿಕ. ೬-೬೮).

ದುಡುಹು (ನಾ). ಒಂದು ಅನುಕರಣ ಶಬ್ದ : ದು[ಪಾಠಾಂ. ಧು]ಡುಹೆಂಬ ಧುಮ್ಮೆಂಬ ಘೋರೆಂಬ ಭೋರೆಂಬ ಕೂರಸಿಗಳುರವಣೆಯ ದನಿಯಡಸುತಂ ಪುಟ್ಟೆ (ಇಹರ. ದೇ. ೪೨-೨) ; ಹೊಡದನಾ ಕೊಡಲಿಯಿಂ ತಲೆ ಮುಂಡ ವೆರಡಲ್ಲಿ ದುಡುಹು ದುಮ್ಮೆಂದು ಬಿದ್ದವು (ವೀಶೈಪು. ೩-೧೩-೩೮).

ದುಡ್ಡಸ್ತ (ನಾ). ಹಣವುಳ್ಳವನು ; ಐಶ್ವರ್ಯವಂತ : ಅವನೊಬ್ಬ ಭಾರಿ ದುಡ್ಡಸ್ತ (ರೂಢಿ). [ದುಡ್ಡು1 + – ಸ್ತ]

ದುಡ್ಡಸ್ಥ (ನಾ). = ದುಡ್ಡಸ್ತ: ದುಡ್ಡಸ್ಥರಿಗೇ ಈಗಿನ ಕಾಲದಲ್ಲಿ ಮರ್ಯಾದೆ (ರೂಢಿ). [ದುಡ್ಡು1 + – ಸ್ಥ]

ದುಡ್ಡು1 (ನಾ). ೧. ಒಂದು ತಾಮ್ರದ ನಾಣ್ಯ: ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ ಒಪ್ಪದಲಿ ಕ್ರಯಮಾಡಿ ಕೊಡಿಸುವ (ಪುರಂದ. ೦-೧೦೯-೨) ; ಪಿಂದೆ ರಘುರಾಮಂಗೆ ಕಾಡ ಕಪಿಗಳು ಕೂಡಿಯೊಂದು ದುಡ್ಡಾದರುಂ ಸಂಬಳವು ಮಿಲ್ಲದೇ ಬಂದು ಸೇರಿದ ತೆರದಿ (ಅರ್ಜಾವಿ. ೨೭-೦೮). ೨. ಮೂರು ಕಾಸು ; ಕಾಲಾಣೆ ; ಒಂದು ಬಿಲ್ಲೆ(ಉಕ) : ಮಧುಮತಿಯ ಕಿಸೆಯ ಲ್ಲೊಂದು ದುಡ್ಡು ಇತ್ತು (ಹೂಬಿಸಿ. ೩) : ಪಂಡಿತರಿಗೆ ನಾಲ್ಕು ದುಡ್ಡ ಕೊಡಲಿಕ್ಕೆ ಇಷ್ಟೇಕೆ ಜೀನತನ?(ಅಶೋಕ. ೪). ೩. ನಾಲ್ಕು ಕಾಸು: ಎಲೇ ಎಡ್ಡ ಪ್ರಾಣಿಗಳಿರಾ ಅಡ್ಡದಾಸೆಗೆ ದುಡ್ಡಿನ ಲಾಭವ ಕಳೆವರೇ (ಅಖಂಡೇ. ೬೩-೧೭) ; ನಾಲ್ಕು ಕಾಸು ಒಂದು ದುಡ್ಡು, ಮೂರು ದುಡ್ಡು ಒಂದ ಆಣೆ, ಹದಿನಾರಾಣೆ ಒಂದು ರೂಪಾಯಿ–ಇದು ಹಿಂದಿನ ಕೋಷ್ಟಕ (ರೂಢಿ). ೪. ಹಣ ; ರೊಕ್ಕ : ದುಡ್ಡು ಕೂಡಿಟ್ಟು ಬಳಿದು ಹೋಗುವಾಗ ಬಳಲಿ, ಬಳಲಿ ಅಳಮಾರಿಗೆ ಬಂದೆ (ಪುರಂದ. ೨-೫೨-೧) ; ಅಳತೆ ತೂಗುವಿಕೆಯಲ್ಲಿ ನೀ ಸತ್ಯವಂತನುಮೆನಿಸಿಕೊಂಡೊಳ್ಳೆಮಾತಿಂದ ಮಾರು ದುಡ್ಡೋಗದಂತೆ

(ಅರ್ಜಾವಿ. ೩೦-೩೫); ಬ್ಯಾರಿಗಳಿಗೆ ಎರಡಾಣೆ ದುಡ್ಡೆಣಿಸಿ ಹೊರಟರು (ಮುಂಗಾಮು. ೧); ಬ್ಯಾಂಕಿನಲ್ಲಿ ದುಡ್ಡಿಟ್ಟವರೆಲ್ಲರೂ ದುಡ್ಡಿದ್ದವರೇ (ಚುಕ್ಕುಕು. ೭೧); ದುಡ್ಡಿದ್ದವನೇ ದೊಡ್ಡಪ್ಪ (ಗಾದೆ). ೫. ಒಂದಂ ದುಡ್ಡಿನ ತೂಕ: ಅನ್ನಶುದ್ಧಿಗೆ ತುಪ್ಪ ದಿ ೧ಕ್ಕೆ ದುಡ್ಡು ತೂಕದಲ್ಲು ಸೇ ೧೫ಕ್ಕೆ ಕ್ರಯ (ಎಕ. VI, ಶೃಂಗೇರಿ. ೦೧-ಪುಟ ೩೭೨; 1652).

ದುಡ್ಡಿನ ಚೀಲ = ಹಣದ ಚೀಲ; ಥೈಲಿ; ಹಮ್ಮಿಣಿ: ತಿಂಗಳ ಕೊನೆಯಾದ್ದರಿಂದ ದುಡ್ಡಿನ ಚೀಲ ಖಾಲಿಯಾಗಿಬಿಟ್ಟಿದೆ (ರೂಢಿ). ದುಡ್ಡಿನ ಡಬ್ಬಿ = ಹಣವಿಡುವ ಡಬ್ಬ: ಅಜ್ಜಿಯ ದುಡ್ಡಿನ ಡಬ್ಬಿಯಲ್ಲಿ ಬರೀ ಚಿಲ್ಲರೆ ಕಾಸೇ ತುಂಬಿದೆ (ರೂಢಿ). ದುಡ್ಡುಕಾಸು = ಹಣ; ಧನ: ದುಡ್ಡು ಕಾಸನು ಕೂಡಿಹಾಕಲು ಹೋಗಿ ಹಡಗ ಸೇರಿಕೊಂಡ (ಇಂಗೀತ. ೫೨-೭). ದುಡ್ಡುತಿನ್ನು = ಇನ್ನೊಬ್ಬರ ಹಣವನ್ನು ನೀತಿಗೆ ವಿರುದ್ಧವಾಗಿ ಬಳಸಿಕೊಳ್ಳು.-ದುರುಪಯೋಗ ಪಡಿಸಿಕೊಳ್ಳು,- ಅಪಹರಿಸು: ಹುಲ್ಲು ತರುವಾಗ ಆಳುಮನುಷ್ಯ ದುಡ್ಡುತಿನ್ನುತ್ತಿದ್ದ. ಹೀಗಾಗಿ ಆ ಕೆಲಸ ನನಗೆ ಒಪ್ಪಿಸಲಾಯಿತು (ಸ್ಮೃತಿಚಿ. ೯೦). ದುಡ್ಡುದುಗ್ಗಾಣಿ = ದುಡ್ಡುಕಾಸು: ಅವನು ಬಹಳ ಕಷ್ಟಪಟ್ಟು ಒಂದಿಷ್ಟು ದುಡ್ಡುದುಗ್ಗಾಣಿ ಸೇರಿಸಿಟ್ಟಿದ್ದಾನೆ (ರೂಢಿ). ದುಡ್ಡು ನುಂಗು = ದುಡ್ಡುತಿನ್ನು: ಬೇರೊಬ್ಬರ ದುಡ್ಡು ನುಂಗುವಂತಹ ಹೀನಕಾರ್ಯ ಮತ್ತೊಂದಿಲ್ಲ (ರೂಢಿ). ದುಡ್ಡು ಹೊಡೆ = ದುಡ್ಡುತಿನ್ನು: ಈ ವ್ಯವಹಾರದಲ್ಲಿ ದಳ್ಳಾಳಿ ಸಾಕಷ್ಟು ದುಡ್ಡು ಹೊಡೆದಿದ್ದಾನೆ (ರೂಢಿ).

[ದೇ.॥ ತಮಿ. ಮಲ. ತುಟ್ಟು; ತುಳು. ತೆಲು. ದುಡ್ಡು; ಕೊಡ. ದುಡ್ಡಿ]

ದುಡ್ಡು₂ 'ದೊಡ್ಡು' ನೋ.

ದುಢುಂ (ನಾ). ಒಂದು ಅನುಕರಣ ಶಬ್ದ. 'ದಂಢುಮ್ಮಿಱಿ' ಪರಾ.

ದುಢುಂದಾಳಿ (ನಾ). ಇದ್ದಕ್ಕಿದ್ದಂತೆ ಮಾಡುವ ಆಕ್ರಮಣ,-ಮಂತ್ತಿಗೆ: ಶ್ರೀಮನ್ತ ನಂಜರಾಜಯ್ಯನ ದುಢುಂದಾಳಿಯ ಕೊಳ್ಳೆಯಲ್ಲಿ ನಿರ್ಮೂಲವಾಗಿ ಹೋಗುವರು (ಮಂತ್ರಶ. ೪೭-೭). [ದುಢುಂ+ದಾಳಿ(<ದಾಟಿ)]

ದುಢುಂಬಿಱಿ 'ದುಢುಮ್ಮಿಱಿ' ನೋ.

ದುಢುಮಿಱಿ 'ದಂಢಂಮ್ಮಿಱಿ' ನೋ.

ದುಢುಮ್ಮನೆ (ಅ). ದಂಢಂಂ ಎಂಬ ಶಬ್ದದೊಡನೆ: ಅನುಕರಣಕ್ಕೆ-ಖಣಿಲ್ಲನೆ . . . ದುಢುಮ್ಮನೆ[ಪಾಠಾಂ. ದುಢುಮ್ಮೆನೆ, ಧಟಮ್ಮನೆ] (ಶಮದ. ೧೪ ಪ್ರಯೋ); ಅನುಕರಣಾವ್ಯಯಗಳು - ಗಟಗಟ . . . ಖಟಿಲನೆ, ದುಢುಮ್ಮನೆ, ಇತ್ಯಾದಿ (ಕೈಪಿಡಿ. ೫೨). [ದುಢುಂ + - ೯ ನೆ₁]

ದುಢುಮ್ಮಿಱಿ, ದಂಢಂಂಬಿಱಿ, ದುಢುಮಿಱಿ (ಕ್ರಿ).=ದುಡುಮ್ಮಿಱಿ: ಅಂತು ತನ್ನೊರೆಗಳ್ವೆರಸು ದುಢುಮ್ಮಿಱಿದೋಲಾಡುವಲ್ಲಿ (ಶಾಂತಿಪು.೮-೨೮ವ). ದುಢುಂಬಿಱಿ: ವಿಕಲ್ಪಬಿಂದುಗೆ-ಕದಂಪು, ಕದಪು . . . ದುಢುಂಬಿಱಿದಂ. ದುಢುಮಿಱಿದಂ (ಶಮದ. ೩೬ ಪ್ರಯೋ). ದುಢುಮಿಱಿ: ಮೇಲಿನ ಶಮದ. ಪ್ರಯೋಗವನ್ನು ನೋಡಿ. [ದುಢುಂ + ಇಱಿ₁]

ದುಣಕಲು (ನಾ). (ಉಕ). ಕೊಟ್ಟಿಗೆಯಲ್ಲಿ ದನಗಳಿಗೆ ಹುಲ್ಲು ಹಾಕುವ ಜಾಗ: ಗೊಂತಂ. [?]

ದುಣ್ಣ (ನಾ). ೧. ದಪ್ಪವಾಗಿರುವುದು; ದಪ್ಪಪುಷ್ಪವಾಗಿರುವುದು. ೨. ದಪ್ಪವಾಗಿರುವವನು: "ಮೀವತಿ = ದಪ್ಪವಾದಪಂ; ಮೀವಃ = ದುಣ್ಣಂ" (ಕಾಶಕ್ಯ. ೫೨). (ಗು). ೩. ಸ್ಥೂಲವಾದ; ದಪ್ಪವಾದ: ಅದಕ್ಕೇನು ಧಾಡಿ? ದಿಂಡೆ ದುಣ್ಣ ದಾಂಡಿಗ ನಾಯಿ (ಮಲೆಮ. ೭೨೫).

[ದೇ.॥ ತುಳು. ದುಣ್ಣ, ದುನ್ನ]

ದುಣ್ಣರ (ನಾ). ೧. ಕೆಟ್ಟವನು. ೨. ಯಮ: ದುಣ್ಣರನು ಬಂದೆನ್ನ ಸುಣ್ಣ ಗುದಿಯೊಳಗದ್ದಿ ಬಿಣ್ಣಿತ್ತುವೆಟ್ಟಗಳ ಪೊಱಿಸಿದವನು (ಪ್ರಭುಪು. ೩-೧೦೦).

[<ಸಂ. ದುರ್ನರ]

ದುತಯ, ದೂತಯಂ (ನಾ). ಎರಡರ ಜೊತೆ,—ಜೋಡಿ: ದೂತಯಂ, ದುತಯಂ, ದ್ವಿತಯಂ (ಶಬ್ದಾನು. ೩೭೭ ಪ್ರಯೋ). ದೂತಯ: ಮೇಲಿನ ಪ್ರಯೋಗವನ್ನು ನೋಡಿ. [<ಸಂ. ದ್ವಿತಯ]

ದುತಾರ್ (ನಾ). ಎರಡು ತಂತಿಗಳುಳ್ಳ ಒಂದು ಬಗೆಯ ವಾದ್ಯ: ಆ ತಂಬೂರಿಯ ಝಂಕಾರಕ್ಕೆ ಅನುವಾದಿಯಾಗಿ ಒಂದು ದುತಾರ್ ಬಾಜಿಸುತ್ತಿತ್ತು (ನಗೆಹೊ. ೬೨). [←ಹಿಂ. ದುತಾರಾ]

ದುತೀಯ, ದೂತೀಯ(ನಾ). ಎರಡನೆಯದು; ದ್ವಿತೀಯ: ದೂತೀಯಂ, ದುತೀಯಂ, ದ್ವಿತೀಯಂ (ಶಬ್ದಾನು. ೩೭೭ ಪ್ರಯೋ). ದೂತೀಯ: ಮೇಲಿನ ಪ್ರಯೋಗವನ್ನು ನೋಡಿ. [<ಸಂ. ದ್ವಿತೀಯ]

ದುತೂಂಬುರ್ (ನಾ). ಒಂದು ಊರಿನ ಹೆಸರು: ಅಸ್ಯ ಗ್ರಾಮಸ್ಯ ಪೂರ್ವ್ವದಿಕ್ಸೀಮಾನಿ ದುತೂಂಬುರ್ಪ್ಪಳ್ಳಂ ದಕ್ಷಿಣತಃ ಪರದಗೆಱೆಪಳ್ಳಂ ಪಶ್ಚಿಮತಮ್ಮಮುನ್ತೆಗುಂಡಿಪಳ್ಳಂ (ಮೈಅರಿ. ೧೯೪೪, ೧೫-೪೦; ಸು. 725).

[?]

ದುತ್ತಂಡಿಕೆ (ನಾ). ದೌರ್ಜನ್ಯ: ದುತ್ತಂಡಿಕೆಯೊಳು ತನಗಿದಿರಾದ ಮನ್ನೆಯರ ತೊತ್ತಳುದುಳಿದು ನಿರ್ವಂಶಮಂ ಮಾಡುವೆನೆನುತ್ತ ಕೋಪಾರೂಢನಾಗಿ (ಸಮ್ಯಕಾ. ೨-೯). 'ಉದ್ದಂಡಿಕೆ' ಪರಾ.

[ದುತ್ತಂಡ₀ (P ← ಪ್ರಾ. ದುತ್ತುಂಡ) + - ಇಕೆ]

ದುತ್ತಾರಿ (ನಾ). ೧. ಕಸೂತಿ ಕೆಲಸ ಮಾಡಿದ ಮಸ್ಲಿನ್ ಬಟ್ಟೆ: (ಕ). ೨. ತೆಳ್ಳನೆಯ ಹತ್ತಿಬಟ್ಟೆಯಿಂದ ಮಾಡಿದ ಒಂದು ಬಗೆಯ ಉಡುಪು: ಕುಪ್ಪಸ ಚಲ್ಲಣವೊಪ್ಪುವ ಪೈಠಣೆ ಸುಪ್ಪತ್ತಿಗೆ ದುತ್ತಾರಿ[ಪಾಠಾಂ. ಗಾಸಿ]ಗಳನು . . . ಹೊಲಿವುತ ಚಿಪ್ಪಿಗರಿರ್ದರೊಂದೆಸೆಯ (ಅಬ್ಬಲೂ. ೩-೯೦). [ದೇ.॥ ತಮಿ. ತುತ್ತಾರಿ]

ದುತ್ತುರ 'ದುತ್ತೂರ' ನೋ.

ದುತ್ತೂರ, ದುತ್ತುರ, ಧುತ್ತೂರ (ನಾ). ಮದ್ಗುಗುಣಿಕೆ; ಉಮ್ಮತ್ತಿ: "ದುತ್ತೂರಂ ಕಾಂಚನಮುನ್ಮತ್ತಂ" (ವಸ್ತುಕೋ. ೩೯-೩೬); ದುತ್ತೂರರಸಂ ಲವಣಮೆಂಬಿವಂ ನೆಲದಾಟೊಳ್ ಚಾರಿಸಿ ಪೂಸುಗೆ (ಲೋಕೋಪ. ೯-೦೦೦); ದು[ಪಾಠಾಂ. ದ]ತ್ತೂರ ಬಿತ್ತಿನಲ್ಲಿ ಕಲ್ಪತರು ಹುಟ್ಟಿ ಕಲ್ಪತರುವಿನ ಅಗ್ರದಲ್ಲಿ ಇಟ್ಟಿಯ ಹಣ್ಣಾಯಿತ್ತು (ಅಱಿಮಾ. ೧೫೬-೫೯೯); ದುತ್ತೂರದ ಹೂವಿನಂತೆಸೆವ ಹೆಗ್ಗಾಳೆಯ ಮೊಗವಿನಂತೆಯಾವಗಂ ಸರ್ವಮುಮನೊಳಕೊಂಡು ಶುಭ್ರವರ್ನಾವಿರಳ ತನ್ನ ತಾನೇ ವಿವೇಕಿಸಿ ನೋಡಿ (ವೀಶ್ವಪು. ೮-೨೦-೦೬). ದುತ್ತುರ: ದುತ್ತುರವ ಸವಿದುದೋ ತಲೆ ಪಿತ್ತಂ ಹಿಡಿದುದೋ ಮನಕ್ಕೆ ಹಲವು ದೆಸೆಯಂ ಸುತ್ತುತಿದೆ (ಶಂಕಕಂ. ೦೦). ಧುತ್ತೂರ: ಕನಕಾಭಿಧಾನ ಸಾಮ್ಯದೆ ಜನಿಯಿಪುದುನ್ಮತ್ತವೃತ್ತಿಯಂ ಧುತ್ತೂರಂ ಕನಕಮೆತಾಂ ತತ್‌ಕ್ಷಣದೊಳ್ ಜನಿಯಿಪುದಚ್ಚರಿಯೆ ಜನದ ಮನದೊಳ್ ಮದಮಂ (ಚಂದ್ರಪು. ೧೦-೧೨೧). 'ದತ್ತೂರ' ಪರಾ.

[<ಸಂ. ಧುಸ್ತೂರ, ಧುಸ್ತುರ]

ದುದುಗೆಱೆ (ನಾ). ಒಂದು ಊರಿನ ಹೆಸರು: ನೊಟಮ್ಮನೊಳ್ ಕಾದಿ ರಾಚೆಯಗಙ್ಗ ಸತ್ತೊಡೆ ಪೆರ್ಮ್ಮಡಿಯು ಎಱೆಯಪ್ಪನು ವಿಟ್ಟು ಇಗ್ಗಲಿನುಂ ದುದುಗೆಱೆಯುಮಂ ಕಲ್ನಾಡುವಡೆದ ಸ್ತಿತಿ ಯಾವುದೆನ್ದೊಡೆ (ಎಕ. III, ನಂಜನ. ೧೩೯-೩; ಸು. 10 ನೆಯ ಶತ). [? + ಕೆಱೆ]

ದುದ್ದಿಕೆ (ನಾ). ಒಂದು ಬಗೆಯ ಸಸ್ಯ: ಉಪ್ಪಿನ ರಸಗಾಯಿ ದುದ್ದಿಕೆ ಸೋರೆಯ ಕಾಯಿ . . . ಮೊದಲಾಗಿ ಆಗಮದೊಳು ನಿಷಿದ್ಧಮಪ್ಪೆಲ್ಲಾ ಕಂದಮೂಲ ಕರೀರೆ ಶಾಖಾಶಾಕಪುಷ್ಪಫಲಾದಿಗಳಂ ಕೊಳ್ಳದುದು (ಪಸಾರ. ೩೧೬); ಬೆಣ್ಣೆ ಕಳವಿಗೆ ಕಾಯಿ ಕರಜಿಗೆಯ ಹಣ್ಣು ದುದ್ದಿಕೆಯ ಕಾಯಿಗಳು (ದ್ವಾದಶಾ. ೧೫೫-೨೫೯). 'ದುಗ್ಧಿಕ' ಪರಾ.

[< ದುಗ್ಧಿಕೆ]

ದುದ್ದು1, ದಂದ್ದೆ (ನಾ). ಸೌತೇಕಾಯಿ, ಕುಂಬಳಕಾಯಿ ಮೊದಲಾದವುಗಳ ಒಳಗಿರುವ (ಬೀಜವಲ್ಲಿಲ್ಲ) ಮೆದುವಾದ ಭಾಗ,–ತಿರುಳು : ಕುಂಬಳಕಾಯ . . . ಬೀಜಮುಂ ಮತ್ತಮದಱ ದುದ್ದುಮಂ ಚೆನ್ನಾಗಿ ತೆಗೆದು ಹಾಕಿ . . . ಕರಿಬೇವುಮಂ ಹಾಕಿ ಮುಗುಳ್ಳದನಾಗುವಂತಡುವುದು (ಸೂಪಶಾ. ೩-೧೮); ಬೂದಿಗುಂಬಳದಕಾಯ ನಡುವೆ ಕತ್ತರಿಸಿ ಒಳಗಣ ಬಿತ್ತು, ದುದ್ದುಗಳ ತೆಗೆದು ಹಾಕಿ ಬೆಲ್ಲವ ಪುಡಿಮಾಡಿ . . . . . ಕೊಡಲು ಹುಚ್ಚುಪಿತ್ತ, ಹುಚ್ಚು ದಾಹ ಸದ್ಯಃ ಮನವಹುದು (ಪ್ರಸಾ. I. ೬೬) ; ಕುಂಬಳದ ಹಣ್ಣಿನ ತೊಕ್ಕು ಒಳಗಣ ದುದ್ದು ಬಿತ್ತಣಗಳ ಸಹ ತೆಗೆದು . . . ಹುರಿದು ಚೂರ್ಣವ ಮಾಡಿ(ಸಳವ್ಯ. ೩೫೫). **ದುದ್ದೆ** : ನಿಂಬಿಹಣ್ಣಿನ ಬೀಜ ದುದ್ದೆ ಸಹ ತೆಗೆದು ಶುಂಠಿ, ಹಿಪ್ಪಲಿ ಸಹ ಇವನ್ನೆಲ್ಲ ಅರೆದು . . . ತೆಗೆದುಕೊಳ್ಳಲು ವಿರೇಕವಹುದು (ಸಳವ್ಯ. ೩೦೩). [ದೇ.ಪ್ರ ತವಾ. ತುತಿಯ, ತುತ್ತುರು = ತಾವರೆಯ ಬೀಜಕೋಶ; ತೆಲು. ದುದ್ಯ = ತಾವರೆಯ ಬೀಜಕೋಶ]

ದುದ್ದು2 'ದದ್ದು2' ನೋ.

ದುದ್ದೆ 'ದುದ್ದು1' ನೋ.

ದುದ್ದೀಗ್ರಾಮ (ನಾ). ಒಂದು ಹಳ್ಳಿಯ ಹೆಸರು. P ಈಗಿನ ಕೊಲ್ಲಾಪುರದ ಬಳಿಯ ದೂದಗಾವ : ಪೂರ್ವತಃ ದುದ್ದೀಗ್ರಾಮೋನಾಮ ಗ್ರಾಮಃ (ಇಆ. XVI, ೨೪-೬೫ : 1009). [ದುದ್ದೀ0 + ಗ್ರಾಮ]

ದುದ್ದುಮ (ನಾ). ಹಸಿರು ಈರುಳ್ಳಿ ; "ಉಳ್ಳೀಗಡ್ಡೆ" (ಗಂಗಾಮ. ೧೬೮). [ಸಂ.]

ದುಧಿರ (ಗು). ಭಯಂಕರವಾದ ; ಘೋರವಾದ : ಮದನನಂ ಕಾಲನಂ ಶ್ರೀಪುರಮಂ ತಿಂದುಗಿದು ದುಧಿರ ಭಿಕ್ಷುಕನ ಶುಕ್ರಾಕ್ಷಿಯಸ್ಥಾಚಲದ ತುದಿಯೊಳ್ (ಏಕೋಪು. ೪-೪೬). [< ಸಂ. ದುಧ್ರ]

ದುನಿಯಾ (ನಾ). ಜಗತ್ತು ; ಪ್ರಪಂಚ ; ಲೋಕ : ತಮ್ಮ ಕೀರ್ತಿ ಈ ದುನಿಯಾ ಮೇಲೆ ಬಹಳ ದೊಡ್ಡದಾಗುವ ಹಾಗೆ . . . ಸಾಹೇಬರವರಿಗೆ ತಿಳಿಯ ಹೇಳಿ ಇದ್ದೇವೆ (ರಾಚೇಂದ್ರ. ೦೮೩). [←ಅರ. ಪಾರ. ಹಿಂ. ಮರಾ. ದುನಿಯಾ]

ದುಪ್ (ನಾ). ಒಂದು ಅನುಕರಣ ಶಬ್ದ. 'ದುಪ್ಪನೆ' ಪರಾ.

ದುಪಟ 'ದುಪ್ಪಟಿ' ನೋ.

ದುಪಟಿ 'ದುಪ್ಪಟಿ' ನೋ.

ದುಪಿಕೆ (ನಾ). ವರ್ಷದಲ್ಲಿ ಸಿಗುವ ಎರಡು ಬೆಳೆ : ಇದು ಫಲವತ್ತಾದ ದುಪಿಕೆಭೂಮಿ (ಕೂಳಿ). [←ಮರಾ. ದುಪಿಕೀ]

ದುಪುದುಪು (ನಾ). ಒಂದು ಅನುಕರಣ ಶಬ್ದ : ಅಡಕಿದ್ದ ಮೂಟೆಗಳೆಲ್ಲ ದುಪುದುಪು ಎಂದು ಕೆಳಕ್ಕೆ ಬಿದ್ದುವು (ಕೂಳಿ).

ದುಪ್ಪಟ 'ದುಪ್ಪಟಿ' ನೋ.

ದುಪ್ಪಟಿ, ದುಪಟ, ದುಪಟಿ, ದುಪ್ಪಟ, ದುಪ್ಪಟಿ, ದುಪ್ಪಟ್ಟ, ದುಬಟಿ, ದುವಟ, ದುವ್ವಟ, ದುವ್ವಟ್ಟ, ದೂಪಟ, ದೂವಟ, ದೂವಟಿ, ದೂವಾಟ (ನಾ). ೧. ಹೊದೆಯಲು ಅಥವಾ ಹಾಸಲು ಉಪಯೋಗಿಸುವ ಸಾಮಾನ್ಯವಾಗಿ ಎರಡು ಪದರಗಳನ್ನುಳ್ಳ ಬಟ್ಟೆ, – ವಸ್ತ್ರ ; ಚಾದರ ; ಹಚ್ಚಡ : "ದ್ವಿಪಟೀ = ದುಪ್ಪಟೀ" (ಕಾಶಕ್ಕ. ೩೭೯) : ಒಮ್ಮೆ ಒಬ್ಬ ಗೃಹಸ್ಥಳು ಮಹಮ್ಮದನಿಗೆ ಒಂದು ದುಪ್ಪಟಿಯನ್ನು ತಂದು ಕೊಟ್ಟಳಂತೆ (ಪ್ರಗಂಬ. ೫೮) : ನಾನು ಹೊದ್ದಿದ್ದ ಹಚ್ಚಡ ದುಪ್ಪಟಿ ಆಯಿತು (ಕಥಾಮಂ. IV, ೮೩) ; ಮಾಡೋನು ಕಂಬಳಿಯವನು ದೂರೋದು ದುಪ್ಪಟಿಯವನನ್ನು (ಗಾಡಿ). ೨. ಹೊದೆದುಕೊಳ್ಳುವವಸ್ತ್ರ; ಉತ್ತರೀಯ ; ವಲ್ಲಿ : "ವಲ್ಲೀ = ಬಳ್ಳಿಯುಂ, ದುಪ್ಪಟಿಯುಂ" (ಕಾಶಕ್ಕ. ೦೦೩) ; ದುಪ್ಪಟಿಗಳನ್ನೆಲ್ಲ ಸುತಗೆ ತರಿಸಿಕೊಟ್ಟನು (ಧರಚ. ೪೬-೦೩೩) ; ನಳರಾಜನು . . . ನವರತ್ನಾಭರಣವಂ ತೊಟ್ಟು ಅಪರಂಜಿ ಸರಿಗೆ ದುಪ್ಪಟಿಯಂ ಹೊದ್ದು (ಜುನಳ. ೬೭) ; ತಾನು ಹೊದ್ದಿದ್ದ ದುಪ್ಪಟಿಯನ್ನು ತೆಗೆದು ತಲೆಗೆ ಸುತ್ತಿಕೊಂಡುದಾಯಿತು (ನವನೀ. ೫೧). ೩. ಉಡುವ ಬಟ್ಟೆ, – ವಸ್ತ್ರ : ಅಸುಗೆದಳಿರ ದುಪ್ಪಟಿಯಂ ಪಾಡಲಿ ದುಟ್ಟು ಪುಳಿಂದ ಪುರಂಧ್ರಿಯರೊಪ್ಪವಡೆದರಲ್ಲಿ (ಜಯಣ್ಣ. ೧೫-೩೮). **ದುಪಟ** : ೨. ಜೋಡಿಯ ಮೇಲೆ ಕವ್ಮತ್ತು ಆಗತಕ್ಕ ಕವಡಾ ಜೀನಸುಗಳು. ೧. ಧೋತ್ರ ಜೋಡು . . . . ೨. ದುಪಟ ಮುಂತಾವವುಗಳು (ಮುಂಬವ್ಯಾ. ೦೪೦) : ಮೊದಲು ಮೂರು ವರುಷ ವರುಷಕ್ಕೆ ಹತ್ತು ರೂಪಾಯಿ, ಊಟ, ಬಟ್ಟೆ – ಅಂದರೆ ಒಂದು ದುಪಟ, ಒಂದು ದಟ್ಟಿ (ಕಸ್ತಳ. ೩೭). **ದುಪಟಿ** : ೧. ಹಗಲಿನ ಸಭೆಯೇನೋ ಚದರಿದೆ ; ಆದರೂ ಅಲ್ಲಿ ಅದರ ಬಳಿಯ ದುಪಟಿ ಹಾಸಿದೆ (ನಿಬಂಧ. II, ೨೦೭). ೨. ಚಂದ್ರಕಾಂತಿಯ ದುಪಟಿಯನ್ನು ಚಂದದಿಂದಲಿ ಪೊದ್ದನು (ಗೋಪಾಡು. ೬-೨೯). **ದುಪ್ಪಟ** : ೧. "ಹಚ್ಚಡಂ ದುಪ್ಪಟಾಖ್ಯಂ" (ಪುಂಗಣಾ. ೦೦೦-೨೮). ೨. ಲಾಲಿತ ಚಿಟಾವುಗೆ ಮೆಟ್ಟ ಮೃದುವೆತ್ತ ಸಾಲಿಯ ದುಪ್ಪಟವಾಳ್ದು ಸೋಲಿಸಿ ತೊಲಗಿ ಪೋದವನ ನಿಟ್ಟಿಸುವ ಸಲ್ಲೀಲೆಯಿಂದದ್ದಳಾ ಕುವರಿ (ಪೋಚಕ. ೨೮-೬) : ಕಟ್ಟಾಣಿ ಮುತ್ತು ತೆತ್ತಿಸಿದುಡಿಗೆಯೊಳಗವಟ್ಟು ಮೆಜಿದ ದುಪ್ಪಟದೆ ಸೃಷ್ಟಿಗೆ ನರರೂಪ ನರಸಿಂಹನ ಪೋಲ್ವಡಪ್ಪ ಮೆಜಿದ ನರಸೇಂದ್ರ (ಕಂನವಿ. ೨೪-೬೨) ; ಬಿಣ್ಣಾ ಚಕ್ರವರ್ತಿಯವರು ಕೊಟ್ಟ ಅಪೂರ್ವವಾದ ರೇಷ್ಮೆ ದುಪ್ಪಟ ಅದನ್ನು ಕೊಡುತ್ತೇನೆ (ಆರ್ಯಳ. ೫). **ದುಪ್ಪಟಿ** : ೧. ಮಲಗಿದ್ದ ರಾಗಪ್ಪ, ತಾನು ಹೊದೆದಿದ್ದ ದುಪ್ಪಟಿಯನ್ನು ಎಳೆದುಕೊಂಡೇ ಓಡಿ ಬಂದ (ವಂಶವೃ. ೧೦೫). **ದುಪ್ಪಟ್ಟ** : ೧. ಸಂದೂಕದ ಬೀಗದ ಕೈ, ಹಾಸಿಗೆಯ ಮೇಲಣ ದುಪ್ಪಟ್ಟ, ವೀಳೆಯದ ಸುಣ್ಣ, ಗ್ಲಾಸಿನ ನೀರು (ಐಂಕಿಮ. ೯೯). ೨. ರಾಮರಾಯನು ಎದ್ದು ಅಂಗರೇಕೆ ರುಮಾಲುಗಳನ್ನು ಧರಿಸಿಕೊಂಡು, ದುಪ್ಪಟ್ಟಾವನ್ನು ಹೊದ್ದುಕೊಂಡು . . . ಹೊರಟನು (ಶ್ರೀರಾಪು. ೦೭೮). **ದುಬಟಿ** : ೧. ಮಗು ದುಬಟಿಯನ್ನು ಹೊದ್ದುಕೊಂಡು ಮಲಗಿತ್ತು (ಕೂಳಿ). ೨. ಚಿನ್ನದ ದುಬಟಿಯನ್ನು ಹೊದ್ದು ತೆರೆಯಿಂದ ಹೊರಟು (ಸೌಪರಿ. ೪-೩೦). **ದುವಟ** : ೨. ಪಟಪಲ್ಲವ ಧಾತ್ರ ಚಮರ ಝಲ್ಲರಿಗಳ್ದುವಟ[ಪಾಠಾಂ. ಗಳ್ದುವ್ವಟ್ಟೆ] ಜಗಜಗಿಪ ಜೋಡುಗಳು ಘಟಘಟಧ್ವನಿಯಂದೆ ಬಿಸಿಯ ಕೆಂಗಿಡಿಗಳು ಪುಟನೆಗೆದುವು ನಭಸ್ಥಳಕೆ (ಪೋಚಕ. ೪೦-೩೮); ಸೂಧನವಿಲಾಸನಂ ಪುಷ್ಪದಿಂ ರಚಿತಂ ತಾ ದುವಟಮಂ ಪೊದಿಸುತ (ಅಂಗಪು. ೨೯-೨೭). **ದುವ್ವಟಿ** : ೧. ಹಾಸುಮಂಚದ ಮೇಲೆ ಲೇಸಪ್ಪ ದುವ್ವಟವ [ಪಾಠಾಂ. ದುಪ್ಪಟವ] ಹಾಸಿ ಕರಚರಣಗಳನೊತ್ತಿ ನಿಮಿಷಕ್ಕೆ ಮೋಸ ಮಾಡುವರು ಯತಿಗಳ (ಗುಕುಶೋ. ೧-೯೫) ; ಮಾಸಲಿಂ ತೊಳೆಯೆ ಮಡಿಯಾದ ದುವ್ವಟದಂತೆ . . . ನೆಲ ಹೇಸುವಂದದ ನಡೆಯನುಳಿದು ಸಚ್ಚರಿತಮಂ ತಳೆದು ಮಯನೊಪ್ಪಿರ್ದನು (ಸಮ್ಮಳಾ. ೧೦-೫೦). ೨. ಬಿಳಿಯ ಪಟ್ಟೆಯನುಟ್ಟು ದುವ್ವಟದ ಹಚ್ಚಡವನಳವಡಿಸಿ ಸಾಲಂಗಿಯಂ ತೊಟ್ಟು . . . ಸೌಂದರಂ ವನಕೆ ಪೋಪಮಟ್ಟನು (ಸೌಂದಪು. ೦೦-೧೧) ; ಆನಂದರಸ ದೇವಗಿರಿ ಕೊಂದಿ ಬಳಿದಿನದೇನವಣ್ಣೆಪ ದುವ್ವಟ [ಪಾಠಾಂ. ಪಾಟ]ಗಳ (ಅಮುಷಾಂ. ೪-೦೭). ೩. ಉರ ತುಂಬಿ ಮೆಜಿಪ ಕಂಚುಕ ಕಾಲ ಕುಪ್ಪಸ ಮಿಱುಪ ದುವ್ವಟದ[ಪಾಠಾಂ. ದುವ್ವಪದ] ನಿಱಿಗಳ . . . ಚಿಲ್ವ ತುರುಕನಾರಿಯರೊಪ್ಪಿದರು (ಕಂನವಿ. ೫೦-೮೩). **ದುವ್ವಟ್ಟ** : ೨. ನಾರಿಯಂಗಗಂಧರಸವನಾಂತ ದುವ್ವಟ್ಟ[ಪಾಠಾಂ. ಟ]ಮದಲ್ಲದೆ ತಾಳದ . . . ನೆಲ್ಲನೊಪ್ಪಿದಂ (ಹೂಡಜಂ. ೩-೧೦೩). **ದೂಪಟ** : ೪. ರೇಷ್ಮೆಯ ಬಟ್ಟೆ ; ಪಟ್ಟೆವಸ್ತ್ರ : ಪದೆದು ದೂಪಟದ ಅವಕೆಗಳ ನಲವಿನಿಂ ತೊಟ್ಟು (ಆರಾಕ. ೬-೨). **ದೂವಟ** : ೨. ಹೊದೆದ ದೂವಟವ ನಿವಾಳಿಯಿಟ್ಟೊಡನೊಂದ ಹೊದವುತ ನೃಪ ತನ ತಾಯ ಇದಿರಲ್ಲಿ

ಸಾಷ್ಟಾಂಗವೆಱಗಲು (ಭರಕ. ೪೬-೪೫) ; ಚಾರುತರೆ ಪಂಚಾಮೃತಂಗಳಿಂ ದಭಿಷೇಕಗೈದು ದೂವಟವ ಪೊದಿಸಿ (ಸಿದ್ಧೇಶು. ೯-೬೦) ; ರಂಭೆ ಶ್ವೇತಂಗೆ ನಿಜರಮಣೀಯಮಾಗಿ ಪನ್ನೀರೊಳಂ ಮಜ್ಜನಂಬೊಗಿಸಿ ದೂವಟವ ಪೊದಿಸಿ (ಪ್ರಭುಪು. ೩-೯೦). ೪. ಎಳೆವೆಣ್ಣುಡಲ್ ನಿಱಿಯ ಪಿಡಿದ ದೂವಟವೊ ಪೇಳೆನಲು ಬೆಳ್ಮುಗಿಲೆಸೆದವು (ಕೇರಮ. ೪-೩) ; ಶುಭ್ರ ದೂವಟವ ಸ್ಮರಬಾಣಗಱಿಯಂತೆ ನಿಱಿವಿಡಿದುಡಿಸಿದರ್ ದರಹಾಸಮುಖಿಗೆ (ಮೋಹತ. ೨೩-೧೩) ; ನಡುವ ಬಳಸಿ ಬಂದ ದೂವಟದೊಲ್ಲಿ ತನ್ನೆಡದ ತೋಳೊಳು ಸುತ್ತಿ ನಿಮಿರೆ . . . ನಡೆತಂದನಾ ಮೋಡಿಕಾಱ (ಭರಕ. ೨೯-೧೪) ; ನಲ್ಲಳಂಗಗಂಧಂ ಬಗೆಗೊಂಡ ದೂವಟಮನಲ್ಲದೆ ತಾಳದ . . . ಕಾಂತ ನೊಪ್ಪಿದಂ (ರಾಜಶೇ. ೧೧-೩೦). **ದೂವಟೆ** : ೪. ದೂವಟೆಯುಡೆ ಸುತ್ತಿ ಚಾವಡಿಯೊಳಹೊಕ್ಕು ಭೂವರನೆಡೆಗೆಯ್ದುವಾಗ (ಭರಕ. ೫೭-೧೩). **ದೂವಾಟ** : ೨. ವೀರೇಶ ನೀಂ ಸೌಂದರ್ಯ ದೂವಾಟಮಂ ತೊಳೆದು ಪೊದಿಸು (ಪ್ರಭುಪು. ೬-೬೦).

[ದೇ.॥ ತಮಿ. ತುಪ್ಪಟ್ಟಿ, ತುಪ್ಪಟ್ಟಾ; ಮಲ. ತುಪ್ಪಟ್ಟಿ, ತುಪ್ಪಟ್ಟಾವು; ತುಳು. ದುಪ್ಪಟಿ, ದುಪ್ಪಟೆ; ತೆಲು. ದುಪ್ಪಟಿ, ದುಪಟ, ದುಪ್ಪಟ./ ಮರಾ. ದುಪಟಾ, ದುಪಟ್ಟಾ ; ಹಿಂ. ದುಪಟಾ, ದುಪಟೀ, ದುಪಟ್ಟಾ, ದುಪಟ್ಟೀ]

ದುಪ್ಪಟೆ 'ದುಪ್ಪಟಿ' ನೋ.

ದುಪ್ಪಟ್ಟ 'ದುಪ್ಪಟಿ' ನೋ.

ದುಪ್ಪಟ್ಟು (ನಾ). ಎರಡರಷ್ಟು ; ಇಮ್ಮಡಿ : ಮಧ್ಯಾಹ್ನ ಕೆಲಸಕ್ಕೆ ಹೋದಾಗ ಕತ್ತೆಗಳು ಮುಂಜಾವಿನಕಿಂತ ದುಪ್ಪಟ್ಟಾಗಿದ್ದವು (ಮುಂದಿಮ. ೧೭೦) ; ಯಾವ ಅಂಚೆಚೀಟಿಯೂ ಇಲ್ಲದ ಪತ್ರಗಳ ಮೇಲೆ ಇಲಾಖೆಯವರು ದುಪ್ಪಟ್ಟು ದಂಡ ವಸೂಲಿ ಮಾಡುತ್ತಾರೆ (ಕವಿಕೋ. I, ೬೫) ; ಇಂದಿಗೆ ಹಣ ಉಳಿಸಿಕೊಂಡು ನಾಳಿಗೆ ದುಪ್ಪಟ್ಟು ಕಳೆಯುವುದು ಎಂಥ ವ್ಯವಹಾರಜ್ಞಾನ ? (ಸುಳಿವು. ೪೦) : ಈ ಅಂಗಡಿಯ ಮೇಲೆ ನಾ ಸುರಿಸಿದ ಬೆವರಿನ ಅರ್ಧದಷ್ಟನ್ನು ನನ್ನ ಮಗ್ಗದ ಮೇಲೆ ಸುರಿಸಿದ್ದರೆ ಇದರ ದುಪ್ಪಟ್ಟು ಗಳಿಸುತ್ತಿದ್ದೆ (ಮೂರುದಾ. ೭೦) ; ದುಪ್ಪಟ್ಟಿದ್ದ ರಕಮು ಅರ್ಧಕ್ಕಿಳಿಸುವದೂ ಬಡ್ಡೀದರ ಕಡಿಮೆ ಮಾಡುವುದೂ ಇವೆಲ್ಲ . . . ಉಳಿತಾಯವೇ ಎಂದನು (ರಾಸಹು. ೫೮). [ದು + ಪಟ್ಟು$_2$]

ದುಪ್ಪಡಿ (ನಾ). (?) : ನಿಯತ ದ್ವಿತ್ವಕ್ಕೆ–ಪಪ್ಪುಕಂ . . . ಟಿಪ್ಪರಂ, ದುಪ್ಪಡಿ (ಶಮದ. ೩೬ ಪ್ರಯೋ). [?]

ದುಪ್ಪನೆ (ಅ). 'ದುಪ್' ಎಂಬ ಶಬ್ದದೊಡನೆ : (ಕಿ).

[ದುಪ್ + – ಅನೆ$_1$]

ದುಪ್ಪಳ, ದುಬ್ಬುಳಿ, ದೊಬ್ಬುಳಿ (ನಾ). ೧. ಮನೆಯ ಒಂದು ಭಾಗ: ಪಾದರಿಯ ಪಟ್ಟಸಾಲೆಯೊಳಂ ಬಂದ ಮಾವಿನ ಬಳ್ಳಿವಾಡದೊಳಂ ತಳಿತ ಪಚ್ಚಕರ್ಪೂರಬಾಳೆಯ ಸುಳಿಗಳಿಂದೊಪ್ಪುವ ದುಪ್ಪಳಗಳಿಂದಂ . . . ಗುಜ್ಜುಮಾವಿನ ಸಜ್ಜೆವನೆಗಳಿಂ ಚೆಲ್ವಾಗಿರೆ (ನಾಗಳು. ೩೦-೫೫ ವ). **ದುಬ್ಬುಳಿ** : ೨. ಮೇಲಿನ ಪಂಹಡಿ,–ಉಪ್ಪರಿಗೆ ; "ಸಿರಿಯ ಕರುಮಾಡ ವೈಭವದಿಂದ ಕೂಡಿದ ಉಪ್ಪರಿಗೆ" (ಪ್ರಭಣ್ಣ) ; ಕನಕಮಯಮಾಟಾ ಕೂಟಂಗಳಿಂದೇಳೆಂಟಾದಿಯಾದಿ ದ್ವಾದಶ ಷೋಡಶ ನೆಲೆಯ ದುಬ್ಬುಳಿ ಗಳಿಜ್ಜಾ [ಚ್ಚಾ] ಲಿನಲಿ ವಿಭ್ರಾಜಮಾನದ ಜಿನಭವನಂಗಳೆಸೆದಿರ್ಪುವು (ಆದಿಪ. ೫-೭). **ದೊಬ್ಬುಳಿ** : ೨. "ದೊಬ್ಬುಳಿ [ಪಾಠಾಂ. ದುಬ್ಬುಳಿ] ಸಿರಿಯ ಕರುಮಾಡ" (ಕಬ್ಬಿಕ್ಕ. ೧೨). [?]

ದುಪ್ಪಿ, ದುಪ್ಪೆ (ನಾ). ೧. ಒಂದು ಬಗೆಯ ಜಿಂಕೆ : ಎಕ್ಕಲನ ಪೊಕ್ಕಿರಿದು ದುಪ್ಪಿ ಸಾರಂಗಕುಂ ಕುಕ್ಕುರಗಳಂ ಬಿಡುತೆ (ಪರಶು. ೨೦-೩೩). **ದುಪ್ಪೆ** : ೨. ಕವಲೊಡೆದಿರುವ ಕೊಂಬುಗಳನ್ನುಳ್ಳ, ಚುಕ್ಕೆಗಳುಳ್ಳ ಜಿಂಕೆ ; ಸಾರಂಗ : ಕರುಳ್ಗಳ ವಗೆಯುತ ನಾಯ್ಗಳ ಬಿಗಿಯುತ ದುಪ್ಪೆಯು ಜಗಿಯುತ ಶಬರರು ವಗರಿಸಿ ಕಾಡಿನ ಮೃಗಗಳನೆಲ್ಲವನು (ಹಮಚ. ೧೮). 'ಚುಕ್ಕೆದುಪ್ಪಿ' ಪರಾ.

[ದೇ.॥ ತೆಲು. ದುಪ್ಪಿ ; ಕೊಲಾ. ಡುಪ್ಪಿ ; ಗೊಂಡಿ. ಡುಪ್ಪಲ್]

ದುಪ್ಪು$_1$ 'ದುಂಪು' ನೋ.

ದುಪ್ಪು$_2$ (ನಾ). (?) : ಒಪ್ಪೀಸಿದೇನು ನಿನಗೆ ದುಪ್ಪೀನ ಶೀಕ್ಷಕೆ ಎನುತಾಲಿಯಿಂದುಮತಿಗೆ ಜನಪಾನು ಪೇಳುತಾಗ (ಹಮಚ. ೧೯೯). [?]

ದುಪ್ಪೆ 'ದುಪ್ಪಿ' ನೋ.

ದುಪ್ಪೆಗೆಣಸು (ನಾ). ಒಂದು ಬಗೆಯ ಗಡ್ಡೆ,–ಗೆಣಸು : ದುಪ್ಪೆಗೆಣಸು, ಹೆಬ್ಬು (ಮೃಜಿಗಿ. ೩೦-೫೯೩). [ದುಪ್ಪೆ? + ಗೆಣಸು (<ಗೆಟಸು)]

ದುಪ್ರತಿ (ನಾ). ಮೊದಲಿನ ಪ್ರತಿಯಂತೆಯೇ ಸಿದ್ಧಪಡಿಸಿದ ಇನ್ನೊಂದು ಪ್ರತಿ ; ನಕಲು ; ಪ್ರತಿರೂಪ: (ಒಂದು ಪತ್ರದ ಅಥವಾ ದಸ್ತೈವಜಿನ) ದುಪ್ರತಿ, ನಕಲು (ಅಸಲಿನಂತೆಯೇ ಕಾನೂನಿನ ಅಂಗೀಕಾರವುಳ್ಳದ್ದು) (Duplicate, ಇಂಕನಿ). [ದು + ಪ್ರತಿ]

ದುಫಸಲ್ (ನಾ). ಒಂದು ಜಮೀನಿನಲ್ಲಿ ವರ್ಷಕ್ಕೆ ಎರಡು ಬೆಳೆ ತೆಗೆಯುವುದು : (ರೈಸ್‌ಗೆ. II, ೫೪೭). [ದು + ಫಸಲ್]

ದುಬಟಿ 'ದುಪ್ಪಟಿ' ನೋ.

ದುಬದುಬ (ನಾ). ಒಂದು ಅನುಕರಣ ಶಬ್ದ : (ಕಿ).

ದುಬಾರಿ (ಗು). ೧. ಎರಡರಷ್ಟು; ಇಮ್ಮಡಿ; ಎರಡು ಪಟ್ಟು. 'ದುಬಾರಿ ಕೆಲಸ' ಪರಾ. ೨. ಅತಿಯಾದ ; ಹೆಚ್ಚಾದ ; ಅಧಿಕವಾದ : ದುಬಾರಿ ಬಡ್ಡಿ ಹಾಕುವುದರಲ್ಲಿಯೂ ನಿಸ್ಸೀಮರು (ಪ್ರವಾಇ. II, ೩೩೨); ಅತ್ತ ಕಡೆ ಬರುತ್ತಿದ್ದ ದುಬಾರಿ ಬಡ್ಡಿಗಾರರನ್ನು ಕಂಡ ಕೂಡಲೇ ಜನ ಓಡಿ ಹೋದದ್ದರ ಕಾರಣವನ್ನು ತಿಳಿದುಕೊಂಡನು (ನಗೆಹೊ. ೯೯). 'ದುಬಾರಿ ಬೆಲೆ' ಪರಾ. (ನಾ). ೩. ಹೆಚ್ಚು ಬೆಲೆಯುಳ್ಳದು ; ತುಟ್ಟಿ : ಅರ್ಜಿ ಹಾಕಿಕೊಂಡರೆ ಎಲ್ಲವೂ ಸರಿಹೋಗುತ್ತದಂತೆ. ಆದರೆ ಅದು ದುಬಾರಿಯ ಕೆಲಸವಂತೆ (ಪುನರು. ೧೯೪) ; ಅನುಭವಶಾಲೆಯ ಶುಲ್ಕ ದುಬಾರಿಯದಲ್ಲಿ ರಿಯಾಯಿತಿಯಿಲ್ಲ (ಇಂಜಾಪ. ೧೦೮-೨೯). ೪. (ಆಲಂ) ಅಪಾಯಕಾರಿಯಾದ ವ್ಯಕ್ತಿ (?) : ದುರಾತ್ಮಚಾರಿಯಂ ದುಬಾರಿಯಂ ದೃಷ್ಟಪಾಂಡ್ಯರಾಜನುತ್ಕನಿಷ್ಠಕರ್ಮದಲ್ಲಿ ತಾಂ ಸ್ಪಷ್ಟಮಾಗಲಿಟ್ಟು ಕಾಯ್ದ ನಷ್ಟಱಿಂದೆ ಪೆರ್ಚದೇ (ಹಾಲಾಸ್ಯ. ೩-೩-೪೧).

[←ಪಾರ. ದುಬಾರಾ, ದೋಬಾರಾ ; ಮರಾ. ದುಬಾರ್, ದುಬಾರಾ, ದುಬಾರೀ ; ಹಿಂ. ದುಬಾರಾ, ದೋಬಾರಾ./ತುಳು. ದುಬಾರಿ]

ದುಬಾರಿಕೆಲಸ (ನಾ). ೧. ಎರಡು ಪಟ್ಟು ಕೆಲಸ; ಎರಡರಷ್ಟು ಕಾರ್ಯ: ಹೊಲಕ್ಕೆ ಮಡಿಕೆಯ ಹೊಡಿಯುವುದೇತಕ್ಕೆ ದುಬಾರಿಕೆಲಸವೆಂದು ಮೈಗಳ್ಳತನದಿಂದ . . . ಅಷ್ಟಕ್ಕೆ ಸಂತುಷ್ಟರಾಗುತ್ತಾರೆ (ಕೃಷಿಪ್ರ. ೫೦). ೨. ಬಹಳ ಖರ್ಚು ಉಂಟಾಗುವ ಕೆಲಸ : ಈಗಿನ ಕಾಲದಲ್ಲಿ ಮನೆ ಕಟ್ಟಿಸುವುದು ಬಹಳ ದುಬಾರಿಕೆಲಸ (ರೂಢಿ). ೩. (ಆಲಂ) ಅಪಾಯಕಾರಿಯಾದ ಕೆಲಸ ; ಹೆಚ್ಚು ತೊಂದರೆಯುಂಳ್ಳ ಕೆಲಸ : ನೀವೇನೂ ಶಾಶ್ವತವಾಗಿ ಮುಖಂಡರಾಗಿ ಉಳಿಯುವುದಕ್ಕಾಗುವುದಿಲ್ಲ. ಆದ್ದರಿಂದ ದುಬಾರಿ ಕೆಲಸಕ್ಕೆ ಕೈಹಾಕಬೇಡಿ (ಪಂಚಪಂ. ೧೭೮). [ದುಬಾರಿ + ಕೆಲಸ]

ದುಬಾರಿಖರ್ಚು (ನಾ). ಬಹಳ ಹೆಚ್ಚಾದ ವ್ಯಯ,–ವೆಚ್ಚ : ಬೆಲೆ ಏರಿಕೆಯ ಈ ಕಾಲದಲ್ಲಿ ದುಬಾರಿಖರ್ಚನ್ನು ಮಾಡಬಾರದು (ರೂಢಿ).

[ದುಬಾರಿ + ಖರ್ಚು (<ಕರ್ಚು$_4$)]

ದುಬಾರಿಬೆಲೆ (ನಾ). ಹೆಚ್ಚಾದ ಕಿಮ್ಮತ್ತು ; ಬಹಳವಾದ ಕ್ರಯ : ಇಂದಿನ ರೇಷನ್ ಮತ್ತು ಸಾಮಾನು ದುಬಾರಿಬೆಲೆ ಕಾಲದಲ್ಲೂ . . . ದೋಸೆಗಳನ್ನು ಆರುಕಾಸಿಗೊಂದರಂತೆ ಮಾರುವ ಏರ್ಪಾಡು ಮಾಡಿದ್ದೇನೆ

(ನಾಡಿಗೇ. ೨೪೬) : ಆರುತಿಂಗಳು ಹೇಗೋ ಕಾಲ ಹಾಕಿ, ಇನ್ನಾರುತಿಂಗಳು ದುಬಾರಿಬೆಲೆ ಕೊಟ್ಟು ಸಾಮಾನುಗಳನ್ನು ಕೊಂಡು ಸಂಸಾರ ಸಾಗಿಸಬೇಕು (ನನ್ಮೈರು. ೩೦೬). [ದುಬಾರಿ + ಬೆಲೆ]

ದುಬಾರಿವೆಚ್ಚ (ನಾ). = ದುಬಾರಿ ಖರ್ಚು : ದುಬಾರಿವೆಚ್ಚದ ಯಜ್ಞ ಯಾಗಾದಿಗಳ ನೆರವಿಲ್ಲದೆಯೇ ವ್ಯಕ್ತಿಯು . . . ವರತತ್ವವನ್ನು ಕುರಿತು ಧ್ಯಾನಮಾಡಿ ಸಾಮೀಪ್ಯವನ್ನು ಸಾಧಿಸಬಹುದು (ತತ್ತ್ವಪ್ರಾ. ೦೫೪). [ದುಬಾರಿ + ವೆಚ್ಚ]

ದುಬಾರಿಸು (ಕ್ರಿ). (?): ಸುಬಾಹುನಯನಾಂತರಂ ಹನುವಿನುತ್ಕ ಸನ್ನಾಸಿಕಂ ದು[ಪಾತಾಂ. ದೂ]ಬಾರಿಸದ ಸತ್ಕುಚಾಂತರಮಿವೈದು ದೀರ್ಘಂ ವಲಂ (ಹಾಲಾಸ್ಯ. ೧-೧೨-೩೬). [? + – ಇಸು]

ದುಬಾಷಿ 'ದುಭಾಷಿ' ನೋ

ದುಬಾಸಿ 'ದುಭಾಷಿ' ನೋ.

ದುಬುದುಬು (ನಾ). ಒಂದಂ ಅನುಕರಣ ಶಬ್ದ : ಇದ್ದಕ್ಕಿದ್ದಂತೆ ದುಬುದುಬು ಎಂದು ಮಳೆ ಬೀಳಲು ಆರಂಭವಾಯಿತು (ಕೂಡಿ).

ದುಬ್ಬಿ (ನಾ). ೧. ಸಂಶಯ ; ಹೊಯ್ದಾಟ : ದುಬ್ಬಿಮೂಲಗಳಡಗಿ ದಧ್ಯಾತ್ಮ ಸ್ವಾರಸ್ಯಲಬ್ಧಮಂ ತಿಳಿದಿರ್ಪ ಯೋಗಾಢ್ಯರಿಂಗೆಯುಪಲಬ್ಧಿಯಿಂದುಣಬಡಿಸಿ ಸೌಖ್ಯದಿಂದನಿಬರಂ ಪೊಂಗಿಸಿದನಿಂಗಡಲೊಲು (ಪರಕು. ೧೬-೦೦). 'ದುಗ್ಗೆ' ಪರಾ. ೨. ನಿರಾಶೆ ; ಚಿಂತೆ ; ದುಃಖ. 'ದುಬ್ಬಿಗೊಳ್ಳು' ಪರಾ. ೩. ಹೊಟ್ಟೆಕಿಚ್ಚು ; ಅಸೂಯೆ. 'ದುಬ್ಬಿಪಡು' ಪರಾ. [←ಹಿಂ. ದುಬಧಾ, ದುಬಿಧಾ, ದುಬಿಧಿ./ಸಂ. ದ್ವಿವಿಧ]

ದುಬ್ಬಿಗೊಳ್ಳು (ಕ್ರಿ). ಹತಾಶನಾಗು ; ವ್ಯಥೆಪಡು ; ಬೇಗುದಿಗೊಳ್ಳು : ತನ್ನ ಸಂದಿಗ್ಧಪರಿಸ್ಥಿತಿಗಾಗಿ ತೀರ ದುಬ್ಬಿಗೊಂಡಂತೆ 'ಅಲ್ಲಾ' ಎಂದು ನಿಟ್ಟುಸಿರಿಡುತ್ತಾ . . . ಕೈ ಚಾಚಿದ (ನಪ್ಪರ. ೪೯).

[ದುಬ್ಬಿ + ಕೊಳ್ಳು$_1$ (<ಕೊಳ್$_1$)]

ದುಬ್ಬಿಪಡು (ಕ್ರಿ). ಹೊಟ್ಟೆಕಿಚ್ಚು ಪಡು ; ಕರುಬು ; ಮತ್ಸರಿಸು : ಕಮಲಮ್ಮ ಅವರ ಜೀವನ ನೋಡಿ ಗಂಭೀರಮುಖ ಮಾಡಿಕೊಂಡು ನಿಲ್ಲುತ್ತಿದ್ದಳು . . . ಲಕ್ಷ್ಮಾದೇವಿ ಮಾತ್ರ ಒಳಗೇ ದುಬ್ಬಿಪಡುತ್ತಿದ್ದಳು (ತಾಯಿಳ. ೩೭). [ದುಬ್ಬಿ + ಪಡು$_1$]

ದುಬ್ಬು 'ದುಂಡುಮು' ನೋ.

ದುಬ್ಬುಗಾಣಿಸು (ಕ್ರಿ). ಪ್ರಕಟಪಡಿಸು ; ವ್ಯಕ್ತಗೊಳಿಸು : ಒಬ್ಬಳ ಮೇಲೆ ತನಗೆ ಸೋಲವಿದ್ದರು ದು್ಬುಗಾಣಿಸನದ ನುಡಿದು ಒಬ್ಬ ಪುರುಷನೊಬ್ಬ ಸತಿಯೊಳಿಪ್ಪಂತಿಹನುಬ್ಬಸವಿಲ್ಲದೆಲ್ಲರೊಳು (ಕಕಚ. ೫-೯೭). [<ತುಬ್ಬು$_3$ + ಕಾಣಿಸು]

ದುಬ್ಬು$_1$ 'ದುಂಡುಮಿ' ನೋ.

ದುಬ್ಬು$_2$ (ನಾ). ದೊಡ್ಡಪಾತ್ರೆ ; ಕೊಪ್ಪರಿಗೆ : ಸರ್ಬನಾಶಕನೆಂಬನೊಬ್ಬನು ದುಬ್ಬಿಯಲಿ ಜನಿಸಿದನು ಕೌರವನು (ಸಂಧಪ. ೧೫-೬೮). [ದುಬ್ಬು (<ದುಮ್ಮು$_1$) + – ಇ$_3$]

ದುಬ್ಬು 'ದುವ್ವು$_1$' ನೋ.

ದುಬ್ಬುಳಿ 'ದಂಪ್ಪಳ' ನೋ.

ದುಬ್ಬುಳುಕ (ನಾ). (?) : ಸರಕಾರಕ್ಕೆ ರುಜು ಇಲ್ಲದೆ ರೈತನಾಗಬಾರದು ಅದೇತೆಂದೊಡೆ ಇಷ್ಟುಳ್ಳಾತನೇ ಪಾಟ್ಯಾ ರೈತ ಇಲ್ಲದಾತ ದುಬ್ಬುಳುಕ ಎಂದಸಯ್ಯಾ ನಿಮ್ಮ ಶರಣ (ವಚಸಂ. ೭೦-೭೧). [?]

ದುಬ್ಬೆಸನ (ನಾ). ಕೆಟ್ಟಚಾಳಿ ; ದುಷ್ಟವ್ಯಸನ : ಹುಸಿವ ಕನಲ್ವ ಬಯ್ವ . . . ಬೇಸಱಿಂಗೊಂದಿದೆವೆಂಬ ಕೂಡೆ ದುಬ್ಬೆಸನದೊಳಿಕ್ಕಿ ದೇವರನವಂತವೆ ತಿಂಬ ತಪಸ್ವಿಯಲ್ಲಿ ಹೋಲಿಸುವುದೆ . . . ಹರಿಸಕ್ತಿದೇವನನ್ (ಕಇ. IV, ೧-೯೦ ; 1204). [<ಸಂ. ದುರ್ವ್ಯಸನ]

ದುಭಾಷಿ, ದುಬಾಷಿ, ದುಬಾಸಿ (ನಾ). ೧. ಭಾಷಾಂತರ ಮಾಡಿ ಹೇಳುವ ವ್ಯಕ್ತಿ.– ತಿಳಿಸುವ ವ್ಯಕ್ತಿ : ಅವರಿಗೆ ದುಭಾಷಿಯು ಕೆಲಸ ಮಾಡುವ ಮೊದಲನೆಯ ಪ್ರಸಂಗ ಇಲ್ಲಿಯೇ ಬಂದಿತು (ಕಪವೀ. ೩೦೬). **ದುಬಾಷಿ** : ೧. ನೆಕ್ಲುದೋವ್ ದುಬಾಷಿಯಾದನು (ಪುನಕು. ೫೬೮) ; ಅಂಥಾ ಭಾರೀ ದುಬಾಷಿಗಳು ಯಾರಾದರೂ ಸಿಕ್ಕಿದರೆ . . . ನಾನೂರು ವರಹ ಸಂಬಳವನ್ನು ಕೊಟ್ಟು ಅವರನ್ನು ಇರಿಸಿಕೊಳ್ಳೋಣವು (ಪುಸುಗ. ೪೫) ; ಸಂದರ್ಭದಲ್ಲಿ ನೀವು ನಮ್ಮ ದುಬಾಷಿಗಳಾಗಿದ್ದರೆ ಚೆನ್ನಾಗಿರುತ್ತಿತ್ತು (ಕ್ಕಕ್ಕಳೂ. ೨೦೪). **ದುಬಾಸಿ**: ೧. "ದುಬಾಸಿ–ದ್ವಿಭಾಷಿ" (ಕದ್ಯಕೋ. ೬೦); "ಅರ್ಥ ವಿವರಣೆ ಮಾಡುವವನು ; ವಾಖ್ಯಾಕಾರ. ಬೇರೆ ಬೇರೆ ಭಾಷೆಗಳನ್ನಾಡುವವರ ಮಾತನ್ನು ಒಬ್ಬರಿಂದೊಬ್ಬರಿಗೆ ಬಾಯಿಮಾತಿನಲ್ಲಿ ಭಾಷಾಂತರ ಮಾಡಿ ಹೇಳುವವನು ; ದುಬಾಸಿ" (Interpreter. ಇಂಳಿನಿ). ೨. ಎರಡು ಭಾಷೆಗಳನ್ನು ಬಲ್ಲ ವ್ಯಕ್ತಿ : ಯಿಲಿ ಕಾವಳು ದುಬಾಸಿಮಗನ ವಂಶಸ್ಥರದೂ (ಎಕ. XIV, ಶ್ರೀರಂಗ. ೧೪೭-೨೦ : 1863). [←ಹಿಂ. ಮರಾ. ದುಭಾಷೀ./ಸಂ. ದ್ವಿಭಾಷಿನ್]

ದುಮಗುಟ್ಟು 'ದುಪಂಗುಟ್ಟು' ನೋ.

ದುಮಜಿ, ಧುಮ್ಮುಚಿ (ನಾ). ಕುದುರೆಯಂ ಜೀನಿನ ಹಗ್ಗ,–ಬಾರು : ೧ ಸಿಂಹದ ತಲೆ ೧೮ ದುಮಜಿ ಗುಬ್ಬಿ ೨ ಯಿದರ ಕೆಳಗಣ ಪಟ್ಟಿ (ಎಕ. XIV, ನಂಜನ. ೨೯೩-ಪುಟ ೦೪೩ : 1847). **ಧುಮ್ಮುಚಿ** : ಅವನ ಘೋಟಕಂಗಳ್ಗಿಂದುಂ ಧುಮ್ಮುಚಿಯನಿತ್ಕಗಿಸಿ ಪರಿಯಮ್ಮಾಡಿಸಿ ತದ್ಮಕೀಲಿಯಂ ಮಾಣಿಸಿದಂ (ಕಳನ್ಯ. ೯-೩೩). [← ಪಾರ. ದುಮ್ನಾ ; ಹಿಂ. ಮರಾ. ದುಮಚೀ]

ದುಮದುಮಿಸು 'ದುಮುದುಮಿಸು' ನೋ.

ದುಮಾನ$_1$ 'ದುಮ್ಮಾನ' ನೋ.

ದುಮಾನ$_2$ (ನಾ). ಒಂದು ಬಗೆಯ ಡೇರೆ: ಹಲವು ಬಣ್ಣದ ಮುಗಿಲಾಗಸದಿಂದೇತಕಿಳಿದುವೀ ಧರೆಗೆಂದನಿಸಿ ತಳಿತುವು ದೂಸು ದುಮಾನ ಗೂಡಾರವಾ ಬಲದೊಳು ತಿಂಥಿಣಿಯಾಗಿ (ನಾಗಳು. ೦೫-೦೦೮) ; ಮಹಾಶೂರರಂ ಕಡಿದವರಾನೆ ಕುದುರೆ ಬೊಕ್ಕಸ ದೂಸು ದುಮಾನ ಬಿರುದು ಮುಂತಾದವಂ ಕೊಂಡು (ಸಳವ್ಯ. ೩ ಪ್ರಸ್ತಾವನೆ). 'ದುಮ್ಮಳ್ಳ' ಪರಾ. [?]

ದುಮಾಲಿ (ನಾ). ೧. ಸರ್ಕಾರ ಮತ್ತು ಖಾಸಗಿ ವ್ಯಕ್ತಿ ಈ ಇಬ್ಬರ ಆಳ್ವಿಕೆಗೆ ಒಳಪಟ್ಟ ಗ್ರಾಮ ಅಥವಾ ಜಮೀನು : ದುಮಾಲೀ ಭೂಮಿಗಳ ಪರಭಾರೆ ಜವಾಖರ್ಚು ಬಿಟ್ಟು ಆ ವರ್ಷದ ವೊಟ್ಟು ಆದಾಯ ೩೫೯೬೧೫ ರೂಪಾಯಿ (ಕಛಾಗೆ. ೩೯೦). ೨. ಖಾಸಗೀ ಒಡೆತನಕ್ಕೆ ಸೇರಿದಂದಂ ಇನಾಂಗ್ರಾಮ : ಆರದಲ್ಲಿ ೧೨೦೪ ಗ್ರಾಮಗಳಿದ್ದವು ; ಅವುಗಳಲ್ಲಿ ಸರಕಾರೀ ೧೦೨೩, ದುಮಾಲಿ ೨೦೧ (ಕಛಾಗೆ. ೩೬೯). [← ಮರಾ. ದುಮಾಲಾ ; ಪಾರ. ದುಬಾಲ್]

ದುಮಿಕ್ಕು 'ದುಮ್ಮಿಕ್ಕು' ನೋ.

ದುಮು (ನಾ). (ಕೋಪ, ಅಸಂತುಷ್ಟಿಯನ್ನು ಸೂಚಿಸುವ) ಒಂದು ಅನುಕರಣ ಶಬ್ದ. 'ದುಮುಗುಟ್ಟು' ಪರಾ.

ದುಮುದುಮು (ದ್ವಿರುಕ್ತಿ) : "ದುಮುದುಮು = ಉರಿಯುವುದು, ರೇಗುವುದು" (ಜಾನಕೋ. ೬) : ಹಗಲೆಲ್ಲ ದುಮುದುಮು ಉರೀತಿರತಾನ (ರಂಗರೊ. ೩೩).

ದುಮುಕ, ದೂಮುಕ (ನಾ). ಎರಡು ಮುಂಖಗಳಿಂದ ಕೂಡಿದುದು : ದೂಮುಕಂ, ದುಮುಕಂ, ದ್ವಿಮುಖಿಂ (ಶ ಕಾ ನು. ೩೭೭ ಪ್ರಯೋ). **ದೂಮುಕ**: ವೇಂಲಿನ ಪ್ರಯೋಗವನ್ನು ನೋಡಿ. [<ಸಂ.ದ್ವಿಮುಖ]

ದುಮುಕದುಂಡಿ (ನಾ). (?) : ಕಸಮಾರಿಗೇಕೆ ದುಮುಕದುಂಡಿ ? (ಗಾಡ) [?]

ದುಮುಕು 'ದುಮ್ಮಿಕ್ಕು' ನೋ.

ದುಮುಗುಟ್ಟು, ದುಮುಗುಟ್ಟು (ಕ್ರಿ). ೧. ಊದಿಕೊಳ್ಳು ; ದದ್ದರಿಸು ; ಉಬ್ಬು : ಜ್ವರದಿಂದ ಅವಳ ಮುಖ ದುಮುಗುಟ್ಟುತ್ತಿದೆ (ರೂಢಿ). ೨. ಸಿಡುಗುಟ್ಟು; ಅಸಂತುಷ್ಟಿ ತೋರು; ಮುಖಗಂಟಿಕ್ಕು; ಸಿಂಡರಿಸು: ಬೆಳಗಿನಿಂದ ಹುಬ್ಬುಗಂಟಿಕ್ಕಿ ದುಮುಗುಟ್ಟುತ್ತಲೆ ಇದ್ದಳು (ನಡಿಜಾ. II. ೯೪೨) ; ಬೆಳಗಿನ ಮೋಡಗಳು, ಕೋಪ ಬಂದ ಮನುಷ್ಯ ಮಾತನಾಡಲಾಗದೆ ಹೋದರೆ ಹೇಗೆ ದುಮುಗುಟ್ಟುತ್ತ ದುಪ್ ಎಂದುಕೊಂಡಿರುತ್ತಾನೋ ಹಾಗಿದ್ದುವು (ನಿಬಂಧ. II, ೧೮೩) ; ಯಾವಾಗಲೂ ದುಮುಗುಟ್ಟುತ್ತ ಇರುವುದೇಕೆ ? (ಸ್ವಾಮಿಸ್ಕೇ. ೫೭). **ದುಮಗುಟ್ಟು** : ೨. "ದುಮಗುಟ್ಟು = ಸಿಟ್ಟಾಗು ; ಉರಿ" (ಜಾನಕೋ. ೬). [ದುಮು + ಕುಟ್ಟು$_1$]

ದುಮುದುಮನೆ (ಅ). ದುಮುದುಮು ಎಂಬ ಶಬ್ದದೊಡನೆ : ಅಲ್ಲಿಯ ವರೆಗೆ ಅವನ ಹೃದಯದಲ್ಲಿ ಹೊರಗಂಡಿ ಕಾಣದೆ ಮಡುಗೊಂಡಿದ್ದ ಪ್ರೇಮ ಪ್ರವಾಹ ದ್ವಾರ ತೆರೆದಂತಾಗಿ ದುಮುದುಮನೆ ಹರಿಯಲಾರಂಭಿಸಿತು (ಪುನರು. ೪೯೮). [<ದುಮು + – ಅನೆ$_1$]

ದುಮುದುಮಿಸು, ದುಂದುಮಿಸು, ದುಮದುಮಿಸು (ಕ್ರಿ). ೧.=ದುಮುಗುಟ್ಟು ೨ : ಕೋಪವೇ ದುಮುದುಮಿಸುತ್ತಿರುವ ಮೊಗದವರು . . . ನೆರೆದರು (ಬಿದುರ. ೧೩೮). ೨. ಆವರಿಸು ; ಇಡುಗು ; ತುಂಬು : ಜಯ ಘೋಷವು ರಾಜಾಂಗಣದಲ್ಲಿ ನೆರೆದ ಸಂದಣಿಯಿಂದೆದ್ದು ಮೂರು ಬಾರಿ ಬಾಂದಳವನ್ನು ದುಮುದುಮಿಸಿತು (ವೀರಬಂ. ೬೩) ; ಗದ್ದಲದಿಂದ ದುಮುದುಮಿಸಿದ ಪಡಸಾಲೆ ಬರಿದಾಯಿತು (ಗಂಮಾಯಿ. ೮೭). **ದುಂದುಮಿಸು** : ೨. ಇಷ್ಟಾಗುವಲ್ಲಿ ಮೇಲಿನ ಧರ್ಮಶಾಲೆಯ ಪರಿಸರದಿಂದೆದ್ದ ಗುಲ್ಲು ಬಾಂದಳವನ್ನು ದುಂದುಮಿಸಿತು (ವೀರಬಂ. ೫೧). **ದುಮದುಮಿಸು** : ೩. ಪ್ರತಿಧ್ವನಿಸು ; ಅನುರಣನವಾಗು : ನನ್ನ ಕಿವಿಯಲ್ಲಿ ಹಾಗೆ ದುಮದುಮಿಸುವಂತಿದೆ ಆ ಭಜನೆ (ಸ್ಮೃತಿಚಿ. ೪೫೭). [<ದುಮು + – ಇಸು$_3$]

ದುಮ್ಮಜಲು (ನಾ). ಎರಡಂತಸ್ತಿನ ಕಟ್ಟಡ : ಹೂಂ. ದುಮ್ಮಜಲಾಗೇದ. ತೆಳಗ ಮೋಟಾರಖಾನಿ, ಮ್ಯಾಲೆ ಸರ್ವಿಸ ಕಂಪನಿಯ ಆಫೀಸು (ದಾಸಹು. ೯).

[ದು + ಮಜಲು./ಮರಾ. ದುಮಜಲಾ, ದುಮಜಲೀ]

ದುಮ್ಮತಿ 'ದುರುಮತಿ' ನೋ.

ದುಮ್ಮನ 'ದುಮ್ಮಾನ' ನೋ.

ದುಮ್ಮರಾಸ್ಮೆ 'ದುಂಪರಾಸ್ಮೆ' ನೋ.

ದುಮ್ಮಸ (ನಾ). ಒಂದು ಬಗೆಯ ಸಿಹಿಯ ತಿನಿಸು : ಆಕಳ ಹಾಲಾಗ ದುಮ್ಮಸ ಮಾಡ ಪರಡಿ ಸವತೀ ಬೀಜ ಪಾಯಸ ಮಾಡ (ಮಲ್ಲಿಗೆ. ೮೩).

[?]

ದುಮ್ಮಸಾಲೆ 'ದುಮ್ಮಿಸಾಲು' ನೋ.

ದುಮ್ಮಳ$_1$ (ನಾ). ಕಳವಳ ; ಚಿಂತೆ ; ದುಗುಡ: ಕರ್ಮವ ಮಾಡುವಲ್ಲಿ ಆ ಕರ್ಮದ ವರ್ಮವನಱಿಯಬೇಕು ಆ ವರ್ಮದ ವರ್ಮವನಱಿವಲ್ಲಿ ಉಮ್ಮಳ ದುಮ್ಮಳವೆಂಬ ಸುಖಸುಮ್ಮಾನವೆಂಬ ಉಭಯವಡಗಿದಲ್ಲಿ ಪ್ರಾಣಲಿಂಗ ಸಂಬಂಧ (ಮೋಳಿಮಾ. ೭೫-೦೪) ; ಒಡನೆ ದುಮ್ಮಳ ತವಿಸುವಂತೆ . . . ಲಲನೆ ಪರವೆಗೆ ಸೌಂದರಾಧಿಪನ ತಂದಿತ್ತು ಸಲಹೈಯ್ಯ (ಸೌಂದಪು. ೮-೬೯). [<ಉಮ್ಮಳ]

ದುಮ್ಮಳ$_2$ (ನಾ). ಒಂದು ಬಗೆಯ ಡೇರೆ : ಗುಡಿ ದುಮ್ಮಳ ಚಂಪೆಯ ಗೂಡಾರಂ ಗಡಣಿಸೆ ತರತರದಿಂ ಬಿಡೆ ಕೆಲಕೆಲವೆಡೆಯೊಳು ಚೀನ ಮಹಾ ಚೀನದ ದೇವಾಂಗದ ತಾವಿಗಳಾ (ಕುಮುರಾ. ೦೬-೨೫) ; ಗುಡಿ ಗೂಡಾರಂ ಚೆಲ್ವಂಗಡಿ ಚೌರಿಗೆ ಚಂಪೆ ತಿವುರಿ ದುಮ್ಮಳಮಿವಱೊಂದಡಸಿದ ಪಸುರಿಂ ಕಪ್ಪಿಂ ಕಡುಗೆಂಪಿಂ ಮೆಱೆದುದವನ ಪೊಱವೀಡು ಕರಂ (ಬಾಧಪು. ೦೦-೧೯). 'ದುಮಾನ$_2$' ಪರಾ. [?]

ದುಮ್ಮಾನ, ದುಮಾನ$_1$, ದುಮ್ಮನ (ನಾ). ೧. ಮನಸ್ಸಿನ ಉಮ್ಮಳ ; ಚಿತ್ತಕ್ಷೋಭೆ: ಏನುವಂ ಕಾಣದೋರಂತೆ ಮಱವಟ್ಟು ದುಮ್ಮಾನವೊಡಲಂ ತೀವಿ ತುಳುಕಾಡುತಿರಲು ರಿಪುಭೂನಾಥಶರಧಿವಡಬಾನಲಂ ಮಱೆದು ಚಿಂತಾಚಿತ್ರನಿರುತಿರ್ದನು (ಹಜಕಾ. ೬-೫೮) ; ದುಮ್ಮಾನಂ ತೀರ್ದೊಡೆನಗೆ ರಿಪುಜಯೋಪಾಯಮಾವುದು (ದಶಕು. ೨-೬೫ ವ) ; ಕೆತ್ತ ದುಮ್ಮಾನದಲಿ ದ್ರೌಪದಿಯುತ್ತಮೆಯಲಾ ದೃಢಪತಿವ್ರತೆಗೆತ್ತಣದು ಪರಿಭವವಿದೆಂದಸುರಾರಿ ಚಿಂತಿಸಿದ (ಕುಪ್ಯಾಸ. ಓರಿಇ. ೧೫-೧೩೪) ; ಆಗ ಬಿಜ್ಜಳಂ ದುಮ್ಮಾನದಿಂ ಕುಳ್ಳಿರೆನಲು (ಜಿಬಪು. ೭-೨೫) ; ಕಾತರಿಸಿ ಕಳೆಗುಂದಿ ದುಮ್ಮಾನದಿಂ ಪೊಕ್ಕ ನಂತಃಪುರಕೆ ಪುತ್ತವುಗುವಹಿಪನಂತೆ (ಜೈಮಿಭಾ. ೦೮-೪೭) ; ಆದರೆ ದುಮ್ಮಾನಕ್ಕೆ ಒಳಗಾಗಿದ್ದ ವ್ಯಕ್ತಿಯು ಹುಡುಗಾಟಕೆಯ ಇಲ್ಲವೆ ಬಡಿವಾರದ ಮೇಳಕ್ಕೆ ಅರ್ಹತೆ ಪಡೆದಿರಲಿಲ್ಲ (ಹೇಮಂತ. ೭೮). ೨. ದುಃಖ ; ದುಗುಡ ; ಅಳಲು ; ಚಿಂತೆ : "ಬೇವಸಂ, ದುಮ್ಮಾನಂ, ಉಮ್ಮಳಂ – ಈ ೩ ಚಿಂತೆ" (ಕಶಸಾ. ೧೨-೨೨೭); ಕತ್ತಲೆಯಲ್ಲಿ ಗತಿಯ ಕಾಣದೆ ದುಮ್ಮಾನ ನೆಲೆಗೊಂಡಿತ್ತು ಸುಮ್ಮಾನ ಹೋಯಿತ್ತು (ಅಪಚಂ. ೪೦-೪೭೦) ; ಕಂದ ನುಡಿ ದುಮ್ಮಾನ ಬೇಡೆನ್ನಾಣೆನುತ ಸಂತೈಸಿದನು ಮಗನ (ಕುಪ್ಯಾಸ. ೧೬-೧೬) ; ಕಳೆಗುಂದಿದೆ ವದನ ದುಮ್ಮಾನವಾರಿಂದಾಯ್ತು (ತೊರರಾ. ೬-೨೬-೬೪) ; ಮನಮನಗಳಿಗೆ ದುಮ್ಮಾನವಡಸಿತು (ಸವತಿ. ೨೦೧) ; 'ಈ ಪ್ರಾಸಾದದಲ್ಲಿ ನನಗೆ ಪುಣ್ಯಭಾಗದ ಲಭ್ಯವಿಲ್ಲ' ಎಂದು ದುಮ್ಮಾನ ಹೊಂದಿ ಒಂದು ಕಡೆ ಅಳುತ್ತಾ ನಿಂತಳು (ಹತ್ತುಮ. ೫೩). ೩. ಕಷ್ಟ ; ಹಿಂಸೆ ; ತೊಂದರೆ ; ಕೆಡುಕು : ಭೂನಾಥ ಬೆಟ್ಟದ ಚಾಮೇಂದ್ರ ಬಹು ದುಮ್ಮಾನವಿತ್ತನು ರಿಪುಗಳಿಗೆ (ಕಂನವಿ. ೩-೮೧); ಒಡಲಿನಬ್ಬರವೇನು? ಆತುಮದ ನಾಣ್ಚೇನು? ಪೊಡವಿಗಿದೆ ದುಮ್ಮಾನ (ಮಂಕುಕ. ೧೯೧); ಬಿಲದೊಡತಿ ನಾನಿಂತು ಅಳಿಯೆ, ಬಲು ದುಮ್ಮಾನ ಕುಲಕೆ ಬಹುದನುಮಾನ ಬೇಡ, ತಿಳಿಯಮ್ಮಾ ! (ಕಎಪು. ೩೩-೩). ೪. ಅವಮಾನ; ಅಪಮಾನ : ಅಖಿಳ ಧರಣೀಪಾಲಕರ ದುಮ್ಮಾನವನು ಪಾಂಚಾಲದೇಶವ ಕಳೆದು ಹೊಕ್ಕರು ತಮ್ಮ ನಗರಿಗಳ (ಕುಪ್ಯಾಅ. ೦೬-೧) ; ಮುದಿ ತುಂಬುರಂಗೆ ಸಮ್ಮಾನಮಪ್ಪೆಡೆಯೊಳೆನಗೆ ದುಮ್ಮಾನಮಾದುದು ಗಡ ! (ಅದ್ಭುತ. ೨೦-೯); ನೆಲಗಟ್ಟನ್ನು ನೀರೆಂದು ಭ್ರಮಿಸಿ ತಾನು ಉಟ್ಟಿದ್ದ ಬಟ್ಟೆಯನ್ನು ಮುದುರಿಕೊಂಡನು. ಅದು ನೀರಲ್ಲವೆಂದು ತಿಳಿದಾಗ ದುಮ್ಮಾನದಿಂದ ಮುಖ ತೋರಿಸದೆ ಮುಂದೆ ಹೋದನು (ಪಚಧಾ. ೮೬). ೫. ಅಸಮಾಧಾನ ; ಅಸಂತುಷ್ಟಿ : ಒಮ್ಮೆ ನಿನ್ನೊಳಗೆ ಪತಿಯ ಬಗೆ ದುಮ್ಮಾನವಾಗೆ ... ಸುಮ್ಮನಿಹುದು ಗುಣವಮ್ಮ (ಶಾಕುಂತ. ೫೬ ಅಡಿಪದ್ಯ). **ದುಮಾನ$_1$** : ೨. ಸುಮಾನ ಹೋಗಿ ದುಮಾನವಾಯಿತು ಮತ್ತೆ ಜನಪತಿಗೆ (ಪ್ರಭುಲೀ. ೦೦-೨೨). **ದುಮ್ಮನ** : ೨. "ದುಮ್ಮನ – ದುರ್ಮನಸ್ = ವ್ಯಥೆ" (ತದ್ಭಕೋ. ೨೦) ; ಕಿಱಿದನುರಾಗಮಂ ಕಿಱಿದು ದುಮ್ಮನಮಂ ... ಸೆಱೆವಿಡಿದೆನ್ನ ವಲ್ಲಭೆಯ ಮುದ್ದುಮೊಗಂ ವ್ಯಭಿಚಾರ ವಿಶ್ರಮಂ ಮೆಱೆದವುದೋ ದಿನಾಗಮದ ರಾತ್ರಿವಿರಾಮದ ಪದ್ಮದಂದದಿಂ (ಅರ್ಧನೇ. ೧-೦೧೧) ; ವಿಜಯವಿಠ್ಠಲ ಮಹಮೂರುತಿ ಘಮ್ಮನದಿಂದಲಿ ಬಂದು ದುಮ್ಮನವ ಕಳೆವ (ವಿಸಾಸು. ೩೩-೨).

[<ಪ್ರಾ. ದುಮ್ಮಣ./ಸಂ. ದುರ್ಮನಸ್]

ದುಮ್ಮಾನಗೊಳು (ಕ್ರಿ). ಚಿಂತಿಸು ; ಬೇಗುದಿಗೊಳ್ಳು : ತನ್ನ ಮನದಲ್ಲಿ ದಕ್ಷ ದುಮ್ಮಾನಗೊಳುತ ಮಿಗೆಯನ್ನಪಾನಾದಿ ಭೋಗಗಳ ಕೊಳ್ಳದೆ ಮಗಳ ಮನ್ನಿಸುತ್ತಿತ್ತುದಕೆ ಫಲವಲಾ (ಜತುಪು. ೩-೮-೧೮).

[ದುಮ್ಮಾನ + ಕೊಳು (<ಕೊಳ್$_1$)]

ದುಮ್ಮಾನತತಿ (ನಾ). ದುಗುಡದ ಸಮೂಹ : ಒಡನೆ ಸುರರಿಗೆ ಹತ್ತಿತೈ ದುಮ್ಮಾನತತಿ ನರನಾಥ ಕೇಳೆಂದ (ಅಂಬಿಕಾ. ೭-೪೯).

[ದುಮ್ಮಾನ + ತತಿ$_2$]

ದುಮ್ಮಾನಮನ (ನಾ). ಚಿಂತೆಯಿಂದ ಕೂಡಿದ ಮನಸ್ಸುಳ್ಳವನಂ; ಯೋಚನೆಯಿಂದ ತುಂಬಿದವನು : ದೇವಿಯರಿರವು ತನ್ನಯ ಕಂಗಳಿಗೆ ಗೋಚರಿಸುವುದು ದುರ್ಲಭವೆನುತ ದುಮ್ಮಾನಮನನಾದ (ತೊರರಾ. ೫-೩-೫). [ದುಮ್ಮಾನ + ಮನ$_1$]

ದುಮ್ಮಾನವಡು (ಕ್ರಿ). ವ್ಯಥೆಪಡು; ದುಃಖಹೊಂದು: ಬೊಮ್ಮನೇ ಸಂಸೃತಿಯ ಕಟ್ಟಿಕೊಂಡುತ್ಸಹಿಸೆ . . . ಜನ್ಮ ಸಾಕೆನುವುದೇಂ ? ದುಮ್ಮಾನವಡುವುದೇಂ (ಮಂಕುಳ. ೨೭೨). [ದುಮ್ಮಾನ + ಪಡು$_1$]

ದುಮ್ಮಾನಿಸು (ಕ್ರಿ). ಕಳವಳದಿಂದ ಕೂಡಿರು : ದೂರದಲಿ ದುಮ್ಮಾನಿಸಿದ ವದನಾರವಿಂದವ ಕಂಡು . . . ಶೌರಿಗಾಯ್ತವಮಾನವಿದೆಲೇ ಮಾರಿ ಗುತ್ಸವವೆನುತ ಬಂದನು ಮಾರುತನ ಮಗನು (ಕುಪ್ಯಾಉ. ೦೦-೨).

[ದುಮ್ಮಾನ + – ಇಸು$_3$]

ದುಮ್ಮಿ, ದಿಮ್ಮಿ$_2$ (ನಾ). ೧. ಒಂದು ಬಗೆಯ ಚರ್ಮವಾದ್ಯ. ೨.=ದುಮ್ಮಿಸಾಲು : ನೀರಾಜನಪದಂಗಳಂ ದುಮ್ಮಿಯ ಪದಂಗಳಂ ಪಾಡುತೊಸೆದು (ಆರಾಜ. ೧-೨೫) ; ದುಮ್ಮಿಸಾಲು ಕಾಮನಿಂಗೆ ದುಮ್ಮಿ ತಜ್ಜನಕನಿಂಗೆ ನೆಮ್ಮಿ ಭಜಿಸಿ ನಿಜವನರಿತು ಕಾಮಹರನನು (ಕವಿಚ. III, ೮೦ ; ಕಾಮವಿಡಂಬನ). **ದಿಮ್ಮಿ$_2$** : ೧. ಕಲಾವಿದರು ದಿಮ್ಮಿಯನ್ನು ಕೈಯಲ್ಲಿ ಹಿಡಿದು ಕುಣಿತಕ್ಕೆ ಸಿದ್ಧರಾಗುತ್ತಿದ್ದಾರೆ (ರೂಢಿ). 'ದುಂದುಮೆ' ಪರಾ. [<ದುಂ./ತುಳು. ದಿಮ್ಮ]

ದುಮ್ಮಿಕ್ಕು, ದುಮಿಕ್ಕು, ದುಮುಕು, ಧುಮುಕು, ಧುಮ್ಮಿಕ್ಕು (ಕ್ರಿ). ೧. ಕೆಳಗೆ ಹಾರು,-ನೆಗೆ ; ಎರಗು : ಕೂಪನಿರೀಕ್ಷಣಂಗೆಯ್ದಲ್ಲಿ ಸಿಸುವಂ ಕಂಡು ವಾತ್ಸಲ್ಯದಿಂ ನೆಲೆಗೊಡದ ವಿಷಮಯಮಪ್ಪ ಭಾವಿಯಂ ದು[ಪಾಠಾಂ. ಧು]ಮ್ಮಿಕ್ಕೆ (ಜೀವಸಂ. ಪರಿ. ೦-೨೩೬) ; ಕೆಱೆಗಳಲ್ಲಿ ದು[ಪಾಠಾಂ. ಧು]ಮ್ಮಿಕ್ಕಿ ಮುಳುಗುತ ಸಱಿಗಳಂ ತಾವಡರುತಂ ಪಿರಿದೊಱಲುತಳುತಂ . . . ಅಖಿಳ ಜೈನರು ಹೊರಳುತಿರಲು (ಬಸಪು. ೫೨-೧೫) ; ಹಕ್ಕಿಗಳರಸ ಜೀಮೂತವಾಹನಗೆ ದುಮ್ಮಿಕ್ಕಿದೊಲೆಱಗಿ ರಕ್ಕಸನ ಸಿಕ್ಕಿಸಿ ತಲೆಮುಱಿವಂತೊದ್ದು ನೆಲದೊಳಗಿಕ್ಕಿದ (ಮೋಹತ. ೧೨-೯೪); ಇಳೆಯ ಮೇಗಣ್ಗೆ ದುಮ್ಮಿಕ್ಕಿ . . . ದಕ್ಷನಂ ತುಡುಕಿ ಕಡುಪಿಂ ಕೆಡಪಿ ಗೋಣ್ಗೊಱೆದ ವೀರಭದ್ರಂ (ನಂದಿಮಾ. ೦-೮) ; ತಲೆಗೆದರಿ . . . ತಿಲಪಿಷ್ಟಮಂ ಮೆಲುತ ತೈಲಪಾನದಿ ತಾಪ ನಿಲದೆಂದು ದು[ಪಾಠಾಂ. ಧು]ಮ್ಮಿಕ್ಕಿದಂ ಗೋಮಯಹ್ರದಕ್ಕೆಂದು ಕಂದಿದಾನನದಿ ಪಿತನು (ಪಂಕಾರಾ. ೨-೨೪-೩೨). ೨. ಹೊರಸೂಸು ; ಹೊರಹೊಮ್ಮು ; ಪ್ರಕಟಪಡು : ಕಂಡಳವಳೀ ರಾಜಚಂದ್ರಮನ ದೂರದಲಿ ದು[ಪಾಠಾಂ. ಧು]ಮ್ಮಿಕ್ಕಿದುದು ದೃಢವೈರ ದರುಶನಮಾತ್ರದಲಿ (ತೊರರಾ. ೩-೪-೭) ; ದುಂದುಭಿನಿನಾದವಾದಂತೆ ಪಂತನ ವಾಗ್ಝರಿ ದುಮ್ಮಿಕ್ಕಿತು (ದಾನಚಿಂ. ೦೩). **ದುಮಿಕ್ಕು** : ೧. ಮಗಿಲನೆತ್ತಿ ದು[ಪಾಠಾಂ. ಧು]ಮಿಕ್ಕಿ ಪೆರ್ಗದಹುಗಳನೊಡೆಬಡಿ (ಬಸಪು. ೫೭-೩೭). **ದುಮುಕು** : ೧. "ಎಸೆವುದುಂ ದುಮುಕೆನಲ್ ಲಂಘನಕೆ" (ಕಶರ. ೧೨೫) ; ಧರ್ಮಸ್ರಾವಕೇಂದ್ರನು ಮುಂದೆ ಬಸದಿಯನೇಱಿ ದು[ಪಾಠಾಂ. ಧು]ಮುಕಿದನು (ಬಸಪು. ೫೨-೦೭) ; ಪ್ರಾಣಸ್ಪಂದನವು ನಿಂತುಬಿಟ್ಟರೂ ಸಾವು ದುಮುಕ ಸಲ್ಲ ಉಸಿರು ಹಿಂಗಿಯೂ . . . ಆತ ಬದುಕಬಲ್ಲ (ಅರಳು. ೨೦೯-೦೫) ; ದುಮುಕಿದರೆ ದುಃಖ ಹೋದೀತೆ ? (ಗಾಡ). ೩. ಧಾವಿಸು ; ನುಗ್ಗು ; ಮುನ್ನುಗ್ಗು : ಅವುಗಳನ್ನು ನೋಡಿ ಮನಸ್ಸು ಚಕಿತವಾಗಿ ಸಂಶೋಧನೆಗೆ ದುಮುಕುವುದು (ಕನ್ನಜಾ. ೦೩೦). ೪. ದುಡುಕು ; ವಿಚಾರವಲ್ಲದೆ ಪ್ರವೇಶಿಸು : ಯಾವ ಕೆಲಸವೇ ಆಗಲಿ, ಹಿರಿಯರ ಸಲಹೆಯನ್ನು ಕೇಳದೆ ಒಂದೇ ಸಲ ದುಮುಕಬಾರದು (ರೂಢಿ). **ಧುಮುಕು** : ೧. ಮಡುವ ಧುಮುಕಿ ಕಾಳಿಂಗನ ಪಿಡಿದು ಹೆಡೆಯ ಮೇಲೆ ಕುಣಿದಾಡುತ್ತಿರೆ (ಪುರಂದ. ೧-೯೬-೪) ; ಅವನು ಪೌಳಿಯಿಂದ ಧುಮುಕಿ ಹುಡುಗಿಯರ ಹಿಂದೆ ಓಡಿದನು (ಮಲೆನಾ. ೧೯೯). ೩. ಹೆಜ್ಜೆಯಿಟ್ಟಲ್ಲೆಲ್ಲ ಜೋಲಿ ಹಿಡಿದಿದೆ ಮಣ್ಣು ಧುಮುಕುತಿದೆ ನೀರು (ನೆಲಮು. ೩೦-೩) ; ಅದು ತಕ್ಷಣವೇ ಬೊಗಳುವುದನ್ನು ನಿಲ್ಲಿಸಿ ತಿಂಡಿಗಾಗಿ ಧುಮುಕುತ್ತಿತ್ತು (ಶಾಲಮ. ೦೯೮). ೪. ಹಲವು ಮಕ್ಕಳು ಪ್ರಶ್ನೆಯನ್ನೂ ಸಮಸ್ಯೆಯನ್ನೂ ಅರ್ಥಮಾಡಿಕೊಳ್ಳದೆಯೇ ಇತ್ಯರ್ಥಪಡಿಸಲು ಧುಮುಕುವರು (ಶಿಕ್ಷದ. ೫೪೫). **ಧುಮ್ಮಿಕ್ಕು** : ೧. ಜೀವವಂ ತ್ಯಜಿಸುವೆನೆನುತ್ತಂ ಬಾವಿಯೊಳು ಧುಮ್ಮಿಕ್ಕಿ ಬಿದ್ದಂತಾತನಂ ಹಿಡಿದು (ಬಸಪು. ೦೩-೯); ರಥದಿಂ ಪೊಡವಿಯೊಳು ಧು[ಪಾಠಾಂ. ದು]ಮ್ಮಿಕ್ಕಿದನು (ಕುಪ್ಯಾಭೀ. ೬-೩೫); ಧುಮ್ಮಿಕ್ಕಿದನು ಧರೆಗೆ (ತೊರರಾ. ೩-೨-೨೨); ಕಲ್ಲಱೆಗಳ ಮೇಲೆ ಧುಮ್ಮಿಕ್ಕಿ ನೃತ್ಯವನಾಡುವಂತೆ (ಮೋಹತ. ೧೯-೬೪) : ಪುಗುವೆನಂಗುಷ್ಠಮಾತ್ರದಿ ಕೇಳು ಘೋರತರ ಮೊಗವನೆಂದೆನುತ ಧುಮ್ಮಿಕ್ಕಿ ವದನವ ಪೊಕ್ಕು (ಪಂಕರಾ. ೫-೦-೫೦) ; ದಿನವನಿತೆ ಧುಮ್ಮಿಕ್ಕಿ ಪಶ್ಚಿಮ ಸಮುದ್ರಕ್ಕೆ, ಚಿಮ್ಮಿದುವು ರತ್ನಾಳಿ ತಳದಿಂ ನಭೋಂಗಣಕೆ (ಶ್ರೀರಾಮಾ. ೨೬೦-೮೭೬) ; ಆವ ಸಾಗರಕೆಲ್ಲಿ ಹೋಗಿ ಸೇರುವುದೊ! ಆವ ಕಡೆ ಧುಮ್ಮಿಕ್ಕುತೆಲ್ಲಿ ಸುಳಿಯುವುದೊ! (ವಿಸೀಗೀ. ೯-೦೬). ೪. ಏಕಾಏಕಿ ಧುಮ್ಮಿಕ್ಕಬಾರದು, ಸಾವಧಾನವಾಗಿ ಮೆಲ್ಲಮೆಲ್ಲನೆ ಕಾರ್ಯವನ್ನೆಸಗಬೇಕು (ಕುರುಕಾ. ೧೨೯).

[ದೇ.ಕಿ ತುಳು. ದುಮುಕು; ತೆಲು. ದುಮುಕು, ದುಮುಕ್ಕು]

ದುಮ್ಮಿಸಲೆ 'ದುಮ್ಮಿಸಾಲು' ನೋ.

ದುಮ್ಮಿಸಾಲು, ದಿಮಿಸಾಲೆ, ದಿಮ್ಮಿಸಾಲು, ದುಮ್ಮಸಾಲೆ, ದುಮ್ಮಿಸಲೆ, ದುಮ್ಮಿಸಾಲೆ (ನಾ). ವಾದ್ಯದ ಸಂಗತಿಯೊಡನೆ ಹಾಡುವ ಒಂದು ಬಗೆಯ ಹಾಡು : ದುಮ್ಮಿಸಾಲು ಕಾಮನಿಂಗೆ ದುಮ್ಮಿ ತಜ್ಜನಕನಿಂಗೆ ನೆಮ್ಮಿ ಭಜಿಸಿ ನಿಜವನರಿತು ಕಾಮಹರನನು (ಕವಿಚ. III, ೮೦; ಕಾಮವಿಡಂಬನ). **ದಿಮಿಸಾಲೆ** : ಇಲ್ಲಿನ ಮೂಲನಿವಾಸಿಗಳ ಒಂದು ಬಳಗದವರು ಮನೆಮನೆಗೆ ಬರುತ್ತಾರೆ. ಅವರು ಸ್ವಂತ ಬೇಸಾಯಗಾರರಲ್ಲ. ಅವರಲ್ಲಿ ಒಬ್ಬಾತ . . . 'ದಿಮಿಸಾಲೆ' ಎಂಬ ಪಲ್ಲವಿಯುಳ್ಳ ಒಂದು ಹಾಡನ್ನು ಹಾಡುತ್ತಾನೆ. ಸಾಲೆ, ಶ್ಯಾಲಿ ಅಕ್ಕಿಯ ಹೆಸರಾದುದರಿಂದ ಪೂರ್ವದ ಕೃಷಿಯ ಸಂಸ್ಕಾರಕ್ಕೆ ಸಂಬಂಧಿಸಿದುದು ಎಂದು ಊಹಿಸಬಹುದು (ಜಾನಗೀ. ೮೪); ಕುಂದಾಪುರದ ಕಡೆ ಹಾಡುವ ದಿಮಿಸಾಲೆ ಹಾಡಿನ ಕೊನೆಗೆ 'ಕಾಮನ ಭೀಮನಾ ಹೋಳಿಯ ಹೆಬ್ಬ' ಎಂಬ ಸೊಲ್ಲು ಬರುತ್ತದೆ (ಜಾನಗೀ. ೮೫). **ದಿಮ್ಮಿಸಾಲು** : ದಿಮ್ಮಿಸಾಲೆನ್ನಿ ಚಿಕ್ಕ ತಮ್ಮಗಳಿರಾ (ವಾದಿಕೀ. ೬೦ ಪಲ್ಲವಿ). **ದುಮ್ಮಸಾಲೆ** : ನಲಿದು ಮುಡುವಿಕ್ಕಿ ಗುಮ್ಮಡಿ ಗೆಲವಂ ಪೆರ್ಗರಡಿಯಂತೆ ಕುಪ್ಪಿಕ್ಕಿ ಕರಂ ಕೆಲವಂ ಕಣ್ಣಪ್ಪಂ ಮುಂದಲೆ ದುಱುಬಿಂ ದುಮ್ಮಸಾಲೆಯೆನುತಂ ಕೆಲವಂ ಪಿರಿದುಂ ಕೊಂಬು ಕೊಳಲ್ ಮೌವರಿಗಳ ನುಣ್ಣರಮನಾಸ್ಯದೊಳ್ ತೋಱುತ್ತ (ತ್ರಿಪುವಿ. ೨೭-೦೩೭). **ದುಮ್ಮಿಸಲೆ** : ಮುಂದೆ ತುಱುಬಂ ಕಟ್ಟಿ ದುಮ್ಮಿ [ಪಾಠಾಂ. ದುಂಬಿ] ಸಲೆಯಾಡುತಂ ಛಂದಛಂದದ ಬೇಡರಾಟಮಂ ತೋಱುತಂ (ಕಡ್ಡರ. ದೇ. ೧೩೯-೯). **ದುಮ್ಮಿಸಾಲೆ** : "ದುಂದುಮಿ ; ಹೋಳಿಯ ಹಾಡು ; ಕಾಲಜ್ಞಾನ ಪಲ್ಲವಿ" (ಜಾನಕೋ. ೬). P 'ದಿಮ್ಮಸಾಲೆ' ಎಂದು ಕೊನೆಯಾಗುವ ಹಾಡುಗಳನ್ನು ಹಾಡುವವನಿಗೂ ಈ ಹೆಸರು ಉಪಯೋಗವಾಗುತ್ತದೆ. ಶ್ರೀರಂಗಪಟ್ಟಣದ ಕಡೆಯಲ್ಲಿ 'ಬಿಸಿಲು ಮಾರಮ್ಮ'ನ ಗಂಡ ಎಂಬ ಅರ್ಥದಲ್ಲಿ ಇದನ್ನು ಬಳಸುತ್ತಾರೆ.

[ದುಮ್ಮಿ + ಸಾಲು$_3$ (<ಸಾಲ್$_2$)]

ದುಮ್ಮಿಸಾಲೆ 'ದುಮ್ಮಿಸಾಲು' ನೋ.

ದುಮ್ಮಿಸು (ಕ್ರಿ). ಬಿಗಿದುಕೊಂಡಿರು; ಸಿಂಡರಿಸು; ಅಸಮಾಧಾನವನ್ನು ಸೂಚಿಸು : ಮಾತಾಡದೆ ಮುಖ ದುಮ್ಮಿಸಿಕೊಂಡಿದ್ದರೆ ಯಾಕೆ ಮಾತಾಡ್ತೀವಿ ಹೇಳಿ (ನಿಂದನೆ. ೨೭). [ದುಮ್ಮು$_1$ + – ಇಸು$_3$]

ದುಮ್ಮು₁, ಡುಬ್ಬ, ಡುಬ್ಬು, ಡುಮ್ಮಿ, ಡುಮ್ಮು, ದುಡುಮ್ಮು₂, ದುಬ್ಬು (ನಾ). ೧. ದಪ್ಪನಾಗಿರುವುದು ; ಬೊಜ್ಜುಬೊಜ್ಜಾಗಿ ಬೆಳೆದುದು : ಹೊಟ್ಟೆಗೆ ಹಾಕುತ್ತಿದ್ದುದು ಗಂಜಿ ನೀರಾದರೂ ಆ ಮರಿ ದುಮ್ಮುದುಮ್ಮಾಗಿ ಬೆಳೆಯಿತು (ಮಲೆಮ. ೭). ೨. ಹೊಟ್ಟೆ : ದುಮ್ಮಿನಿಂದ ಹಮ್ಮು ಕಳಕೊಂಡ (ಗಾಡೆ). **ಡುಬ್ಬ** : ೩. ಮೇಲಕ್ಕೆ ಉಬ್ಬಿಕೊಂಡಿರುವುದು ; ಉಬ್ಬಿದುದು : ಅಂಗಿಯ ಮೇಲೆ ಎದ್ದು ನಿಂತಿದ್ದ ಡುಬ್ಬದ ಮೇಲೆ ಕೈ ಆಡಿದ (ಏಳಜೀ. ೮೯). ೪. ಒಂಟೆ, ಗೂಳಿ ಮೊದಲಾದುವುಗಳ ಬೆನ್ನಿನ ಮೇಲಿರುವ ಉಬ್ಬು, ಮೇಲಕ್ಕೆದ್ದಿರುವ ದುಂಡನೆಯ ಭಾಗ : ಮಿರಜಿಯ ಒಂಟೆಯ ಡುಬ್ಬದಂತಹ ಮಹಾ ವೀಥಿಯಲ್ಲಿ ಟ್ರಕ್ಕು ಏರಿ ಇಳಿದಾಗ ಜೋಕಾಲಿಯ ಜೀಕು ಕೊಡುತ್ತಿತ್ತು (ದೀಪಹ. II, ೩೯೪) ; ಯಾವ ಡುಬ್ಬ (ಹಿಣಿಲು) ವೃಷಭದ ಕಾಂತಿಯನ್ನು ವೃದ್ಧಿಗೊಳಿಸುವುದೊ ಆ ಡುಬ್ಬವು ಆಕಳಿಗಿಲ್ಲ (ಕಮಕ. ೭೩). ೫. ಬೆನ್ನು ; ಶರೀರದ ಹಿಂಬದಿ : ನೀನು ನನ್ನ ಡುಬ್ಬವನ್ನು ಹಿಡಿದುಕೊಂಡು ಬಾ, ನಾನು ನಿನ್ನನ್ನು ಆಚೇ ದಂಡೆಗೆ ಸುರಕ್ಷಿತವಾಗಿ ಒಯ್ಯುವೆನು (ಅಂಬಿಕೆ. ೧೦೯) ; ಗುರುಗಳು ಹೊರಗೆ ಹೋಗುವುದೊಂದೇ ತಡ . . . ಇಳಿಜಾರು ಮೇಜು, ವಿದ್ಯಾರ್ಥಿಗಳ ಡುಬ್ಬ ಮುಂತಾದುವುಗಳ ಮೇಲೆ ಸಪ್ಪಳ ಹೊರಡುತ್ತಿತ್ತು (ರಕ್ತಧ್ವ. ೦೨೬). **ಡುಬ್ಬು** : (ಕಿ). **ಡುಮ್ಮಿ** : (ಗು). ೬. ದಪ್ಪವಾದ ; ಉಬ್ಬಿದ : ಏನು ಮಾಟ ಶಿವ ಡುಮ್ಮಿ ಡುಮ್ಮಿ ಹೊಟ್ಟೆ (ಪಲಾನ. ೬೦-೬). **ಡುಮ್ಮು** : ೧. ನೋಡುವುದಕ್ಕೆ ಡುಮ್ಮು ಡುಮ್ಮಾಗಿದ್ದರೂ ಶಕ್ತಿ ಮಾತ್ರ ಸ್ವಲ್ಪವೂ ಇಲ್ಲ (ರೂಢಿ). **ದುಡುಮ್ಮು₂** : ೧. 'ದುಡುಮ' ಪರಾ. **ದುಬ್ಬು** : ೧. 'ದುಬ್ಬ' ಪರಾ.

ದುಮ್ಮು₂ 'ದುಂಪು' ನೋ.

ದುಮ್ಮೆಸಗು (ಕ್ರಿ). ದೂಳೆಬ್ಬಿಸು ; ನಾಶಮಾಡು : ಮಕುಟವ ಚಿಮ್ಮಿದವು ಮುಮ್ಮಖದಿ ಕವಚವ ನೆಮ್ಮಿದವು ದುಮ್ಮೆಸಗಿ ಮಹಿಷಾಸುರನ ಶರಜಾಲ (ಅಂಬಿಕಾ. ೨೩-೨೩). [ದುಮ್ಮು₂ (<ದುಂಪು) + ಎಸಗು₁]

ದುಮ್ಮೇಳು (ಕ್ರಿ). ರಭಸದಿಂದ ಏಳು ; ಒಮ್ಮೆಲೆ ಮುನ್ನುಗ್ಗು : ಇಕ್ಕಿರ್ದ ಚೀಲಗಳ್ದುಮ್ಮೆದ್ದು ಫಲಗಳಂ ಮುಕ್ಕಲದ ನಾರಿಗುಸರಲ್ಬೇಕು ಭೂಪ ನಿನ್ಮಕ್ಕಳಿಗೆ ಬಹಳ ಬಲವಿದ್ದೇನು ದೈವಬಲವಿಲ್ಲ (ತುರಂಗ. ೫೪-೩೮) ; ಧಾಳಿಯಿಟ್ಟುದು ಸೇನೆ ಕರಿಘಟೆ ತುರಂಗಚಯ ಹೊಳಿದವು ಕಡುಹಿನೋಳ್ದು ಮ್ಮೆದ್ದು ನೂಕೆ (ತುರಂಗ. ೬೩-೨೦). [ದುಂ + ಏಳು₁ (<ಏಟ್₁)]

ದುಯಂ 'ದುಯ್ಯಂ' ನೋ.

ದುಯಂತರಾಘಂಟೆ (ನಾ). ಎರಡನೆಯ ಮೆಟ್ಟಲಿನ ಘಂಟೆ : ರಥದ ಅಲಂಕಾರಕ್ಕೆ . . . ಆವಲುತರಾಘಂಟೆಗಳೂ × × × ೫೨ ದುಯಂತರಾ ಘಂಟೆಗಳೂ × × × ೧೩೪ ಸಿಯಂತರಾಘಂಟೆಗಳೂ (ಎಕ. XIV, ಸಂಜನ. ೨೯೨--ಪುಟ. ೧೪೨ ; 1847).

[ದುಯಂ (<ದುಯ್ಯಂ) + <ತರ₃ + ಘಂಟೆ]

ದುಯನೃತ್ಯ (ನಾ). [ನಾಟ್ಯ] ದ್ರುತಗತಿಯ ಒಂದು ಬಗೆಯ ನೃತ್ಯ : ಮೇಘಕುಮಾರರಾಜನ ಆಸ್ಥಾನದಲ್ಲಿ ದುಯನೃತ್ಯ, ವಿಲಂಬಿತನೃತ್ಯ, ಆರ್ಭಟನೃತ್ಯ, ವಿಭವನೃತ್ಯ ಮುಂತಾದ ನಾಟ್ಯಗಳು ಅಭಿನಯಿಸಲ್ಪಡುತ್ತಿದ್ದುವೆಂದು ಉಕ್ತವಾಗಿದೆ (ಭಾರದ. ೫೫೦).

[ದುಯ್ಯ₀ (P ← ವ್ರಾ. ದುಅ) + ನೃತ್ಯ]

ದುಯ್ಯಂ, ದುಯಂ, ದೂಯಂ (ಗು). ೧. ಎರಡನೆಯ ಗಣನೆಯ,–ದರ್ಜೆಯ : ಅವ್ವಲು ದುಯ್ಯಂ ಶೀಯ್ಯಂ ಭೂಮಿಗೆ ಕೃಷ್ಣರಾಜ ಖಂಡಗ ಭೂಮಿಗೆ ಯಿಷ್ಟು ಖಂಡಗ ದವಸಾ ಯೆಂಬದಾಗಿ ಡವಲು ಕಟ್ಟಿ (ಮಹಾವಂ. II, ೭೦) ; ಜೂನಿಯರ್ (Junior)ಎಂದರೆ ದುಯ್ಯಂ ಕಮಿಷನರೆಂದೂ ಹೀಗೆ ಇಬ್ಬರು ಕಮಿಷನರನ್ನು . . . ನೇಮಿಸಿದರು (ಮಹಾವಂ. II, ೯೮). **ದುಯಂ** : ೧. 'ದುಯಂಪ್ರತಿ' ಪರಾ. ೨. ಕೈ ಕೆಳಗಿನ ; ಅಧೀನ : ಆ ಕಾಲದಲ್ಲಿ ರಾಯಚೂರಿನಲ್ಲಿ ದುಯಂ ತಾಲ್ಲೂಕು ದಾರ(Assistant Commissioner)ನಾಗಿದ್ದ ಮುಸಲ್ಮಾನ ಅಧಿಕಾರಿ ೩. ಯೊಬ್ಬನು . . . ದರ್ಶನಕ್ಕೆ ಬಂದನು (ಕಥವಿ. II, ೩೮೦). (ನಾ). (ಅಂತಸ್ತು ಅಥವಾ ಯೋಗ್ಯತೆಯಲ್ಲಿ) ಎರಡನೆಯ ದರ್ಜೆ (ಕಿ). : **ದೂಯಂ** : ೪. ಎರಡನೆಯದು : ಅವ್ವಲ್, ದೂಯಂ, ಸೀಯಂ, ಚಾರಂ ನಾಲ್ಕನು ಹೇಳುವರಂತೆಲೋ ಸೀಯಂ ನಂಬರು ದೂಯಂ ಮಾಡುವ ಸಬೂಬ್ ಜವಾಬ್ ನೋಡೆಲೋ (ನಾಪದ. ೧೪೦).

[←ಪಾರ. ದುಯುಮ್ ; ಮರಾ. ದುಯ್ಯಮ್, ದುಯಮ್]

ದುಯ್ಯಂಖಿಸ್ತು (ನಾ). ಎರಡನೆಯ ಕಂತು : ಬದಸ್ತೂರು ದುಯ್ಯಂಖಿಸ್ತು ಮಾರ್ಗಶಿರ ಲಾಗಾಯ್ತು . . . ಐವಜು ಕಾರ್ತಿಕ ವಾರದ ಭತ್ತ ಕಾಡಾರಂಭ ಮಹಾಸೂಲು ಆಗುತ್ತಾ ಇದೆ (ಮಹಾವಂ. II, ೬೭).

[ದುಯ್ಯಂ + ಖಿಸ್ತು (<ಕಿಸ್ತು)]

ದುಯ್ಯಂಪ್ರತಿ (ನಾ). ಎರಡನೆಯ ಪ್ರತಿ ; ನಕಲು : ಆ ಬಗ್ಗೆ ಇನ್‌ಸ್ಪೆಕ್ಟರು ಹಿಂದೆ ಕಳಿಸಿದ್ದ ದಾಖಲೆಗಳು ಕಛೇರಿಯಲ್ಲಿ ದೊರೆಯದ್ದರಿಂದ ದುಯ್ಯಂ ಪ್ರತಿಗಳನ್ನು ಮಾಡಿ ಕಳಿಸಬೇಕೆಂದೂ ಆಜ್ಞೆಮಾಡಿದ್ದರು (ರಂಗಕ. ೧೬೫).

[ದುಯ್ಯಂ + ಪ್ರತಿ]

ದುಯ್ಯಂಬಾರ್‌ಕಛೇರಿ (ನಾ). ಅಠಾರಾ ಕಛೇರಿಯ ಹದಿನೆಂಟು ಇಲಾಖೆಗಳಲ್ಲಿ ಒಂದು : ತಾಲ್ಲೂಕುಗಳೂ ಮತ್ತು ಈ ಗಡಿಗಳ ಒಟ್ಟು ವಿಚಾರಣೆ ಮಾಡುವುದಕ್ಕೋಸ್ಕರ . . . ೬. ಫೌಜುದಾರಿ (ತುಕಡಿ)ಗಳೂ ಸ್ಥಾಪಿತವಾದುವು. ಅದರ ವಿವರ :—ಕಛೇರಿಗಳು—೧. ದಿವಾನ್ ಕಛೇರಿ . . . ೧೪. ದುಯ್ಯಂಬಾರ್ ಕಛೇರಿ, ೧೫. ಜಿನಶಿ ಕಛೇರಿ (ಮಹಾವಂ. II, ೩೯) 'ಅಠಾರಾಕಛೇರಿ' ಪರಾ.

[ದುಯ್ಯಂಬಾರ್? + ಕಛೇರಿ (<ಕಚೇರಿ)]

ದುರ್–(ಉಪ). ಕೆಟ್ಟದ್ದನ್ನು ಸೂಚಿಸುವ ಸಂಸ್ಕೃತದ ಒಂದು ಉಪಸರ್ಗ ; P ಸಂಸ್ಕೃತ ಶಬ್ದದ ಸಾದೃಶ್ಯದ ಮೇಲೆ ರೂಪಿತವಾದ ಕನ್ನಡ ಶಬ್ದಗಳಿಗೆ ಈ ಉಪಸರ್ಗವನ್ನು ಬಳಸಲಾಗುತ್ತದೆ. 'ದುರ್ನಡತೆ', 'ದುರ್ನಡೆ' ಪರಾ. [<ಸಂ. ದುಸ್]

ದುರ, ದುಱ, ಧುರ₁ (ನಾ). ಯುದ್ಧ ; ಕಾಳಗ : ದುರದುಳ್ ದುಗ್ಗಮಾರರ ಪಡೆ ಒಟ್ಟ ಎಱಿದು ಬಿಟ್ಟ (ಎಕ. IX, ದೇವನ. ೬೩-೩೪ ; 780) ; ದುರದೊಳ್ ಕಾಯ್ದು ಕಡಂಗಿ ಪೊಂಗಿ ಮಲೆದೋರಂತಿಱ್ದನೆಯ್ತಂದ (ಎಇ. XVIII, ೧೭೩-೫ ; 985) ; ಅವದಿರ ದುರದ ಸಿಂಹಧ್ಯಾನದಬ್ಬರ ಮೆರೆಯ ಲೀಕ್ಷಿಸಿ ನುಡಿದನಸುರಾರಾತಿಯಿದಿರಿನಲಿ (ಕೋಗಯ. ೧೦-೩೬). △ **ದುಱ** : ಅನೇಕಬಲಸಮೇತನಾಗಿ ಯಿದಿರಾಗಿ ನಡದು ಕಾದಿದಲ್ಲಿ[ದಳದ ತ]ನಗೆ ಅಟ್ಟಗಳು ಭಟ್ಟಗಳಾಗ ಖಂಡ ತುಂಡಗಳಂ ಮಾಡಿ ವೀರಮಂ ದುಱದಲ್ಲಿ ತಂನ ದಳವಿನ × × ರಿದ (ಕಇ. I, ೬೩-೧೫ ; 1481). **ಧುರ₁** : "ಸಮಿತಿ ಸಂಗ್ರಾಮಂ ರಣಂ . . . ಧುರಂ ವಿಗ್ರಹಂ . . . ಸಂಖ್ಯಮೆಂದೆನಲು ಕಾಳೆಗಕೆ ನಾಮಮಕ್ಕುಂ" (ಮಂಗರಾ. ೮೫-೨೮) ; ಧುರದೊಳ್ ನಿಮ್ಮಡಿಯುಂ ಗೆಲಲಱಿಯರುಮಾ ಪಾಂಡುಸುತರಂ (ಪಂಪಭಾ. ೧೨-೫೫) ; ಧುರದೊಳ್ಗೋನುಗ ಭೂಪನಿಂನ ನಿಸಿತಾಸ್ತ್ರಾಘಾತದಿಂ ಸತ್ತ ಭೂಪರ ಪೆಂಡಿರ್ ಬಿಸುಸುಯ್ಯೆ (ಎಕ. VIII, ಸಾಗರ. ೧೦೯-೩೪ ; 1042) ; ಧುರದೊಳ್ ಮಯನಾತನುಮಂ ವಿರಥಂ ಮಾಟ್ಟುದುಂ (ಪಂರಾಮಾ. ೧೪-೧೩೮) ; ನೀನೇ ಧುರವ ಜಯಿಸಿದೆನೆನ್ನು (ಕುವ್ಯಾವಿ. ೯-೩). [<ಸಂ. ಉದರ./ತೆಲು. ದುರ ; P ಸಂ. ಧುರ್ ಎಂಬುದರಿ ದಲೂ ಇದರ ನಿಷ್ಪತ್ತಿಯನ್ನು ಹೇಳಬಹುದು]

ದುರಂಗಿ (ಗು). ೧. ಎರಡು ಬಣ್ಣಗಳನ್ನು ಉಳ್ಳ : ಕಂಬಿ ಕಂಬಿಯೊಳು ಬಂದಿಳುಹಿದ್ದ ಕೋಟಿ ಕಾಕಂಬಿಯ ರಸವನೆಱೆದನು ಬಿಂಬಕೆ ಹೊಳೆವ

ದುರಂಗಿಯ ಪೈರಣೆಯಿಂಬುಗೊಂಡಂತಿದ್ದುದಾಗ (ಭರಚ. ೧೬-೭೭); ಮೆಱೆವ ದುರಂಗಿ ಪಟ್ಟೆಯ ಗದ್ದುಗೆಯೊಳು ರಸಿಕೆ ಕುಳಿತ ಭಾವಮಿಹುದು (ಜ್ಞಾನಚ. ೧೮-೧೪೫). ೨. ಎರಡು ಪಕ್ಕಗಳಲ್ಲೂ ಬೇರೆ ಬೇರೆ ಬಣ್ಣವನ್ನು ಹೊಂದಿದ. [←ಪಾರ. ಹಿಂ. ಮರಾ. ದುರಂಗೀ]

ದುರಂಜಿ (ನಾ). ೧. ಒಂದು ಬಗೆಯ ಹಣ್ಣು; ಸೀತಾಫಲ: ಸೀತಾಫಲ, ಅಮೃತಫಲ, ದುರಂಜೀಹಣ್ಣು (ಮೃಷಿಗಿ. ೭-೧೨೩). ೨. ಮುಳ್ಳು ರಾಮಫಲ: (ಕ). 'ತುರಂಜಿ' ಪರಾ. [?]

ದುರಂತ (ಗು). ೧. ಕೊನೆಯಿಲ್ಲದ; ಎಂದಿಗೂ ಮುಗಿಯದ: ಘೋರ ದುರ್ಗತಿಯಂ ಪೊಕ್ಕು ದುರಂತದುಃಖಮನುಣಲ್ಬೇಡ (ಆದಿಪು. ೩-೫೬); ಮೋಕ್ಷದ ಬಟ್ಟೆಗಟ್ಟಿ ಬಿಡದಾಱಡಿಗೊಳ್ವ ದುರಂತದುಷ್ಟಕರ್ಮಕ್ಷುಭಿತೋಗ್ರತಸ್ಕರರ ದುಷ್ಟರ . . . ಕ್ಷತಿ ಮಾಡಲಾರ್ಪ ತಪದೊಳ್ಪಿನ ತೆಳ್ಪಿನ ಸಾಧುವರ್ಗಮಿಗಕ್ಷಯಸೌಖ್ಯಮಂ (ಜೀವಸಂ. ೧-೫); ಬಹು ದುಸ್ಸಹ ಕಠಿಣತರ ಕ್ರೂರ ಭಯಂಕರ ದುರಂತ . . . ತೀವ್ರವೇದನಾರೂಪಂಗಳಾಗಿ ಶಿವದ್ರೋಹಿಗಳಿಗೆ ನಿಷ್ಕಾರುಣ್ಯದಿಂ ಮಾಳ್ಪ ಶಿಕ್ಷಾಲೇಶಮೆಂದೆನಿಸಿ (ವಿವೇಕ. ೧೯೪). ೨. ದುಃಖದಲ್ಲಿ ಕೊನೆಗೊಳ್ಳುವ; ದುಃಖಾಂತವಾದ: ಪದ್ಮಾವತಿಯ ದುರಂತವಿವಾಹಕ್ಕೆ ಕೇಶವನ ಮೋಹವೂ ಅದೇ ವೇಳೆಗೆ ಸ್ವಾಮಿಗಳ ಆಗಮನವೂ ಕಾರಣವಾಗುತ್ತದೆ (ಸಮಜೀ. ೩೩ ಪೀಠಿಕೆ). 'ದುರಂತನಾಟಕ' ಪರಾ. (ನಾ). ೩. ಕೊನೆಯಿಲ್ಲದುದು: ಭೀಮನ ನರನಕುಲಸಹದೇವ ಸಾತ್ಯಕಿ ಧರಣಿಪನ ದ್ರೌಪದಿಯ ಚಿಂತೆ ದುರಂತವಾಯ್ತೆಂದ (ಕುಪ್ಯಾಕ. ೨೭-೨೭). ೪. ದುಃಖಪೂರ್ಣವಾದ ಮುಕ್ತಾಯ; ದುಃಖದಲ್ಲಿ ಕೊನೆಗೊಳ್ಳುವಿಕೆ; ದುಃಖಾಂತ: ಆತ್ಮಯಾತ್ರೆಯ ಮಹಾಜ್ಯೋತಿರ್ಮಹದ್ದರ್ಶನಂ ಲಭಿಸಿದಾತಂಗದೇಂ ಗುರುತರಾನಂದಕರ ಗುಹ್ಯಮಾಗುವುದೇನೊ ದೇಹಯಾತ್ರೆಯ ದುರಂತಂ? (ಶ್ರೀರಾಮಾ. ೧೧೯-೨೦೪). ೫. ದುರ್ಘಟನೆ; ಅಪಘಾತ: ಒಗ್ಗಟ್ಟಿನಿಂದ . . . ಸಮಾಜದಲ್ಲಿ ಅಂದಂದು ಒದಗುತ್ತಿರುವ ದುರಂತಗಳೂ ನಿಂತಾವು (ಶಿಕ್ಷದ. ೨೬); ಅವರ ಆರ್ಥಿಕ ಪರಿಸ್ಥಿತಿಯ ದುರಂತವನ್ನು ಯಾರು ವಿಚಾರಿಸಬೇಕು? (ಹಬ್ಬಿಬ. ೧೪೯); ಈ ಕಾವ್ಯದಲ್ಲಿ ಕಿತ್ತೂರ ದುರಂತವೂ ಬರುವುದಿಲ್ಲ (ಕನ್ನಜಾ. ೯೪). [ಸಂ.]

ದುರಂತಃಕರಣ (ನಾ). ಕೆಟ್ಟ ಮನಸ್ಸಿನವನು: ದುರುಳರೆನ್ನವದಿರು ದುರಂತಃಕರಣರಾವ್ (ಕುಪ್ಯಾಸ. ೧೫-೪೯). [ಸಂ.]

ದುರಂತಕತೆ (ನಾ). ದುಃಖದಲ್ಲಿ ಮುಗಿಯುವ ಕತೆ; ದುರಂತದಲ್ಲಿ ಕೊನೆಗೊಳ್ಳುವ ಕತೆ: ಜೀವಕಳೆ ಧರಿಸಿ ತಂತಾನೆ ಹೆಣೆದು ನಿಲ್ಲುತ್ತದೆ- ಆ ಇಡಿಯ ದುರಂತಕತೆ ನನ್ನ ಕಣ್ಣ ಮುಂದೆ (ಆಬೋಲೀ. ೧೩).

[ದುರಂತ + ಕತೆ]

ದುರಂತಕಥೆ (ನಾ). = ದುರಂತಕತೆ: ಮೂಲತಃ ಉರ್ವಶೀ-ಪುರೂರವರ ಪ್ರಣಯಕಥೆ ದುರಂತಕಥೆ (ಕಾವ್ಯಸ. ೧೯). [ದುರಂತ + ಕಥೆ]

ದುರಂತಘಟನೆ (ನಾ). ದಾರುಣವಾದ ಸಂಗತಿ; ಸಂಕಟಕರವಾದ ಘಟನೆ; ದುಃಖಪ್ರಸಂಗ: ಅಂಥ ರುದ್ರಪ್ರಸಂಗದಲ್ಲಿಯೇ ಇನ್ನೊಂದು ದುರಂತಘಟನೆಯೂ ಸಂಭವಿಸುತ್ತದೆ (ಧರ್ಮಸಾ. ೧೪೦).

[ದುರಂತ + ಘಟನೆ]

ದುರಂತಚಿಂತೆ (ನಾ). ಕೊನೆಯಿಲ್ಲದ ಚಿಂತೆ: ಸಾಕು ಮಗನೆ ದುರಂತಚಿಂತೆಯಿದೇಕೆ . . . ಪಾಲಿಸು ಸಕಲಭೂತಳವ (ಕುಪಾ ಅ. ೨೧-೩೩); ಕೆಟ್ಟಕೇಡದನೇನ ಹೇಳುವೆನಾ ಜಯದ್ರಥನ ಬೆಟ್ಟದಿಂದುರುಳುವೆನೊ ಹಾಸಱಿಗಟ್ಟ ಹೊಗುವೆನೂ ಮಾಡುವನೆನುತ ಅಡಿಯಿಟ್ಟನಂತಃಕಲುಷಚಿತ್ತ ದುರಂತಚಿಂತೆಯಲಿ (ಕುಪ್ಯಾಅ. ೨೨-೪೨).

[ದುರಂತ + ಚಿಂತೆ]

ದುರಂತಚಿತ್ರ (ನಾ). ೧. ದುರಂತಪೂರ್ಣವಾದ ಘಟನೆಯ ದೃಶ್ಯ: ಪಂಡಿತ ಜವಹರಲಾಲರು ಪಂಜಾಬಿಗೆ ಹೋಗಿದ್ದವರು ಬಂದು ನಮ್ಮ ಪಾರ್ಟಿ ಮೀಟಿಂಗ್‌ನಲ್ಲಿ ಅಲ್ಲಿನ ದುರಂತಚಿತ್ರವನ್ನು ವಿವರಿಸಿದರು (ದಿಲ್ಲಿಪ. ೫೦). ೨. ದುಃಖಪೂರ್ಣವಾದ ಘಟನೆಯ ಚಿತ್ರಣ,- ನಿರೂಪಣೆ. [ದುರಂತ + ಚಿತ್ರ]

ದುರಂತನಾಟಕ (ನಾ). ದುಃಖದಲ್ಲಿ ಮುಕ್ತಾಯವಾಗುವ ನಾಟಕ; ಶೋಕದಲ್ಲಿ ಕೊನೆಗೊಳ್ಳುವ ನಾಟಕ; ರುದ್ರನಾಟಕ: ಪಾಶ್ಚಾತ್ಯರಿಗೆ ದುರಂತನಾಟಕವು ಕೇವಲ ಕಲೆಯ ಬೆಡಗಲ್ಲ. ೧ದು ಆತ್ಮಸಂಸ್ಕಾರದ ಸಾಧನ, ಜೀವನ ಸಾರದ ಸಾಕ್ಷಾತ್ಕರಣ (ಕಾವ್ಯಸ. ೦).

[ದುರಂತ + ನಾಟಕ]

ದುರಂತಪರಾಕ್ರಮ (ನಾ). ಕೊನೆಗಾಣಿಸಲು ಅಸಾಧ್ಯವಾದ ಶೌರ್ಯವುಳ್ಳವನು; ಸೋಲಿಸಲು ಅಸಾಧ್ಯವಾದ ಪರಾಕ್ರಮವುಳ್ಳವನು; ಮಹಾಶಕ್ತಿಶಾಲಿ: ಸೈನ್ಯ ಮಹೋದಧಿಯ ಮಧ್ಯದಲಿ ಮೆಱೆವವನಾ ದುರಂತಪರಾಕ್ರಮನು ಗಂಗಾಕುಮಾರಕನು (ಕುಪ್ಯಾಭೀ. ೩-೭).

[ದುರಂತ + ಪರಾಕ್ರಮ]

ದುರಂತರ (ನಾ). ಕಡಿಮೆಯಾದ ಅಂತರವುಳ್ಳದು; ನಡುವೆ ಕಡಿಮೆ ಜಾಗವುಳ್ಳದು; ದಟ್ಟವಾದುದು: ಅರಸನ ವರೂಥಮಂ ತುರಗಂಗಳ್ ತರುಗಳಿಂ ದುರಂತರಮಪ್ಪರಣ್ಯಮಾರ್ಗದೊಳ್ ತಮ್ಮಿಚ್ಛೆಯಿಂ ಕೊಂಡೋಡಿ ಪೋಗೆ (ದಶಕು. ೨-೩೬ ವ). [ಸಂ.]

ದುರಂತಸಾಹಿತ್ಯ (ನಾ). ದುಃಖಾಂತದ ವಸ್ತುವನ್ನುಳ್ಳ ವಾಙ್ಮಯ: ದುರಂತಸಾಹಿತ್ಯವು . . . ಕನ್ನಡದಲ್ಲಿ ಹನ್ನೊಂದನೆಯ ಶತಮಾನದ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿದ್ದಿತೆನ್ನುವುದು ತುಂಬಾ ಅಭಿಮಾನದ ಸಂಗತಿ (ಸಾಹಿಸ. ೧೦೭). [ದುರಂತ + ಸಾಹಿತ್ಯ]

ದುರಂತೋದ್ವೇಗ (ನಾ). ಕೊನೆಯಿಲ್ಲದ ತಳಮಳ,- ಆತಂಕ: ತಶ್ಚಿತೃದ್ವಂದ್ವದ ಮನಕೆ ಸಮಾಕಾರಸಂಪದ್ವರಾಲಾಭದುರಂತೋದ್ವೇಗಮಂ ನೀಡಿದನತಿತರ ನಿರ್ಬಂಧದಿಂ ಪದ್ಮಸದ್ಮಂ (ಚಂದ್ರಪು. ೫-೯೭).

[ದುರಂತ + ಉದ್ವೇಗ]

ದುರಕ್ಷರ (ನಾ). (ಆಲಂ) ಕೆಟ್ಟ ಹಣೆಯ ಬರಹ: ಸರಸಿರುಹಸಂಭವಕೃತ ದುರ[ಪಾಠಾಂ. ರಾ] ಕ್ಷರವಿನಿಯತ ನಿರಾಸಕಮಹಾನಿರುಪಮಿತ ಮಹಿಮಾಢ್ಯನಂ ಪ್ರೌಢನನಮೌಢ್ಯನನು . . . ಕೊಂಡಾಡಿ (ಬಸಪು. ೪೬-೭೦).

[ಸಂ.]

ದುರಗಲಿ, ಧುರಗಲಿ (ನಾ). ಕಾಳಗದಲ್ಲಿ ಶೂರನಾದವನು; ರಣಧೀರ: ದುರಗಲಿ ಕಂಸನುದ್ಧತಸಾಹಸವ ಕೇಳಿ ಹರಿವ ಹಾವುರಿವ ಕಿಚ್ಚುಗಳ ಭರದಿಂದಡಗುವುವು (ನೇಮಿಸಂ. ೧೪-೮); ದುರಗಲಿಯೆಯೆನ್ನ ಪ್ರೀತಿಯ ಸಲಿಸು ನೀನೆಂದು ವಿರಹದಿಂದೂರ್ವಶಿಯು ನುಡಿಯೆ (ಪ್ರಭುಪು. ೫-೮೭); ದುರಗಲಿ ಕಂಠೀರವ ನರಸೇಂದ್ರಭೂವರನೊಪ್ಪಿದನು ಸೊಬಗಿಂದ (ಕಂಸವಿ. ೮-೪೬). ಧುರಗಲಿ: ಎತ್ತಾನುಮಿ[ರ್ದುಮಿಱಿವಂ]ದೋಡಿಱಿವ ಧುರಗಲಿಗಳುಮಂ . . . ನೋಡಿ [ವಿಸ್ಮಯಂಬಟ್ಟು] (ಗದಾಯು. ೯-೩೪ ವ); ಧುರಗಲಿ ಚೋಳನ ಪಟ್ಟದ ಕರಿವರನಾ ನೀಲಗಿರಿಯ ನಿರ್ಝರಜಲದಂತಿರೆ ಗಂಡಯುಗಳದಿಂದಂ ಪರಿವ ಮದಾಂಬುಗಳಿನೆಸೆದುದದನೇವೊಗಳ್ವೆಂ (ತ್ರಿಪುವಿ. ೨೨-೧೬); ಗರ್ಜನಕ್ಕಿಳೆ ನಡುಗೆ ಮಹಾಹವಮನೆಸಗಿದರ್ ಧುರಗಲಿ [ಪಾಠಾಂ. ದುರಗಲಿ, ಧುರಕಲಿ]ಗಳ್ (ಶಬಶಂ. ೪-೭೭). [ದುರ + ಕಲಿ$_2$]

ದುರಗಲಿತನ (ನಾ). ಯುದ್ಧದಲ್ಲಿ ತೋರುವ ಪರಾಕ್ರಮ,-ಶೌರ್ಯ: ಆತನ ದಳಪತಿ ಮನ್ನೆಯರುಗಳ ದುರಗಲಿತನವ ಪೇಳಿದನು (ಕಂಸವಿ. ೧೧-೭೨); ಆತನ ಸೈನಿಕರು ದುರಗಲಿತನದಿಂದ ಹೋರಾಡಿ . . . ತುರುಕರ ಸೈನ್ಯವನ್ನು ತರಿದು ತೂರಿದರು (ಕವೀರ ೧೦೪). [ದುರಗಲಿ + -ತನ]

ದುರಗುಟ್ಟು 'ದುರುಗುಟ್ಟು' ನೋ.

ದುರಗೆ (ನಾ). ಒಂದು ಬಗೆಯ ಸಸ್ಯ : (ಮೃಷಿಗಿ. ೭೭-೧೫೫೩). [?]

ದುರಘ (ನಾ). ಮಹಾ ಪಾಪ,-ಪಾತಕ; ದುಷ್ಕರ್ಮ: ಜಾನಕಿ ಮೂರ್ಛಿತೆಯಾಗೆ ದಶಾನನನನುಕಂಪೆ ಪುಟ್ಟಿ ಕರುಣಿಸಿ ತನ್ನಂ ತಾನೆ ಪಬ್ಬಿದುಬ್ಬಿದು ಕರ್ಮಾಧೀನ ಸಮುತ್ಪನ್ನದುರಘದುಷ್ಕರಿಣತಿಯಂ (ಪಂಂಪಾಮಾ. ೧೪-೧೧೦) ; ದುರಘವಿಷವೃಕ್ಷವಮೂಲೋತ್ಕರಮಂ ಕೀಲ್ವಂತೆ ಕಿಟ್ಟಂ . . . ಕುಟಿಳ ಕುಂತಳಕುಳಮಂ (ಪೇಮಿಪು. ೦೩-೩೬). [ಸಂ.]

ದುರತ್ಯಯ (ಗು). ೧. ಅಧೀನಮಾಡಿಕೊಳ್ಳಲು ಕಷ್ಟವಾದ ; ಅಜೇಯವಾದ (ನಾ). ೨. ಅಧೀನಮಾಡಿಕೊಳ್ಳಲು ಕಷ್ಟವಾದುದು; ಅಜೇಯವಾದಂದು : ಗೋಪಿಯರೀಕ್ಷಿಸೆ ಕೃಷ್ಣನಾರ್ದು ತಳಶಬ್ದ ದುರತ್ಯಯನಸುರವೃಷಂಗಭಮುಖತೆಯನೆಯ್ದಿದಂ (ಜಗವಿ. ೫-೩೭) ; ಈ ಪಥವು ಕ್ಷುರಧಾರೆಯಂತೆ ನಿಶಿತವೆಂದೂ ದುರತ್ಯಯ ಎಂದರೆ ಅಡಿಯಿಡುವದು ತುಂಬ ಕಷ್ಟಕರವೆಂದೂ ವರ್ಣಿಸಲ್ಪಟ್ಟಿದೆ (ಮಾಹಾಪ್ರ. ೭೯).

[ಸಂ.]

ದುರದುರ ೧ 'ದುರು' ಪರಾ.

ದುರದುರ ೨ (ನಾ). ಮುಚ್ಚುವಂರೆ: ಈ ಬಂಧುಗಳಿಬ್ಬರೂ ಇಂದಿನ ಕಾಲದ ಹುಡುಗರು. ಯಾವ ಮಾತುಗಳೂ ಅವರ ಬಾಯ ಲ್ಲಿ ಬರುವಾಗ ದುರದುರ ವಿಲ್ಲ, ಬಾಧೆ ಸಂಕೋಚ ಇಲ್ಲ (ಇಪ್ಪಳ. ೨೪೨).

[←ಹಿಂ. ದುರಾದುರೀ]

ದುರದುರನೆ 'ದುರುದುರನೆ' ನೋ.

ದುರದೃಷ್ಟ (ನಾ). ಕೆಟ್ಟ ಅದೃಷ್ಟ ; ದುರ್ದೈವ ; ದೌರ್ಭಾಗ್ಯ : ನನ್ನ ಹುಟ್ಟನ್ನು ಹಿಡಿದಂಟದ ದುರದೃಷ್ಟಕ್ಕೆ ನೊಂದೆನಲ್ಲದೆ ನಿಮಗಲ್ಲ (ವೀರಲಂ. ೯೪); ಬರುವಾಗ ದುರದೃಷ್ಟ ಬೇಗನೆ ಬರುವುದು ಧಾವಿಸಿ ಕುದುರೆಯನೇರಿ ಬೀಳ್ಕೊಂಡು ಹೋಹಾಗ ಮೆಲ್ಲನೆ ಹೋಹುದು ಹೋಹಂದು ಅದು ಪಾದಚಾರಿ (ಇಂದಿಪ್ರ. ೧೭೨-೪೭). [ಸಂ.]

ದುರದೃಷ್ಟಶಾಲಿ (ನಾ). ಹೀನ ಅದೃಷ್ಟವುಳ್ಳವನಂ ; ಭಾಗ್ಯಹೀನ : ಕೆಲವರು ಮಾತ್ರ ತನ್ನಂತಹ ದುರದೃಷ್ಟಶಾಲಿಗಳು (ಬಳಜೀ. ೧೭೪).

[ಸಂ. ದುರದೃಷ್ಟಶಾಲಿನ್]

ದುರಧ್ವ (ನಾ). ೧. ಕೆಟ್ಟದಾರಿ:"ವ್ಯಧ್ವಃ, ದುರಧ್ವಃ, ವಿಪಥಃ, ಕದಧ್ವಾನ್, ಕಾಪಥಃ ಸ ಕೆಟ್ಟದಾರೀ; ಸೀಳುಹಾದಿ" (ಸಿದ್ಧಾಂತಿ. ೮೬). ೨. ಅಸಭ್ಯವಾದ ಮಾರ್ಗ ; ಗಾಂಭೀರ್ಯವಿಲ್ಲದ ರೀತಿ. [ಸಂ.]

ದುರನ್ನ (ನಾ). ದೋಷಪೂರ್ಣವಾದ ಆಹಾರ: ಸಲೆ ನಿಜವೃತ್ತಿಯನುಳಿದು ದುರನ್ನವ ನಲಿದುಂಡು ಹೊಟ್ಟೆಯ ಹೊರೆಯುತಲಿ (ಪುರಂದ. ೫-೦೪೫-೨); ದುರನ್ನವೆಂದರೆ ಅನ್ನದ ಅಥವಾ ಪದಾರ್ಥದ ದೋಷದಿಂದಲೇ ತಿನ್ನಬಾರದಾದುದು. ಗಿಣ್ಣುಹಾಲು, ಫಲಕ್ಕೆ ಬಂದ ಹಸುವಿನ, ಎಮ್ಮೆಯ ಹಾಲು . . . ಇತ್ಯಾದಿಗಳು (ಅಹಿರ್ಬು. ೫೦೮). [ಸಂ.]

ದುರಪದ, ಧ್ರುಪದ(ನಾ). ನರ್ತನಕ್ಕೆ ಹೊಂದಿಕೊಳ್ಳುವ ಒಂದು ಬಗೆಯ ಹಾಡು : ಅಡಿಗಡಿಗೆ ದುರಪದವನೊಯ್ಯನೆ ನುಡಿಸು ಲಿಂಗಾದೇವಿ ಕೊಳಲಂ ನುಡಿಸು ಚಂಗಳೆ ತಾಳಧರಿ ನೀನಾಗು ಭೋಗಾಯಿ (ಬಸಪು. ೦೩-೪೩). ಧ್ರುಪದ : ಆದರ ನೀಳವಾದ ಜೋಲುಬಾಲ ಧ್ರುಪದಗಾನದ ಆಲಾಪದಂತೆ ... ವಿಲಾಸವಮಾಡುವುದು (ಗಾಳಿಪ. ೮). 'ದ್ರುಪದ' ಪರಾ.

[<ಸಂ. ಧ್ರುವಪದ./ತೆಲು. ದುರುಪದ = ತ್ವರಿತಗತಿಯಿಂದ ಮಾಡುವ ಪಾದವಿನ್ಯಾಸ]

ದುರಭರ (ಗು). ಸಹಿಸಲು ಕಷ್ಟವಾದ ; ತಾಳಲಾಗದ ; ಅತಿಶಯವಾದ : ದುರ[ಪಾಠಾಂ. ರು]ಭರದ ಜವ್ವನದಲ್ಲಿ ತೋರಣದೆ(ದ)ಲೆಯಂತೆ ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ ಅಳಿಕವೃದ್ಧಿಯಾಗಿದ್ದಳಲ್ಲಾ (ಸರ್ವಜ್ಞ. ೬೮-೩೭೦) ; ಭೂತ ಶರೀರದೊಳು ಬಿದ್ದು ಬೆಂಬೀಳುವನಲ್ಲ ದುರಭರದ[ಪಾಠಾಂ. ದುರಾಭವದ, ದುರುಬರದ, ಧುರಾಭರದ] ಕಾಮಕತ್ತಲೆಯ ಕಳದುಳದ ಕಲಿ ಪಿರಿದಪ್ಪ ಪಾಯೆಯು ಗೆಲಿದ ನಿರೋಧವಿಲ್ಲದೆ (ಶಿವಗೀ. ೨೭-೦೦೪). [<ಸಂ. ದುರ್ಭರ]

ದುರಭಿಪ್ರಾಯ (ನಾ). ೧. ಕೆಟ್ಟ ಉದ್ದೇಶ; ದಂಷ್ಟ ಆಶಯ,-ಭಾವನೆ: ಆದರಿಂದ ಮಹಾಪ್ರಭುಗಳ ಬಗ್ಗೆ ಯಾವ ಬಗೆಯ ದುರಭಿಪ್ರಾಯವೂ ಮೂಡಲಾರದು (ನಗಹೂ. ೩೩೮). ೨. ದುಷ್ಟಬುದ್ಧಿಯುಳ್ಳವನು ; ಕೆಟ್ಟವ್ಯಕ್ತಿ : ದುರಭಿಪ್ರಾಯನೆ ಖೇಚರಾನ್ವಯದ ಶುದ್ಧಾಚಾರಮಂ ಬಿಟ್ಟು . . . ಪರದಾರಪ್ರಿಯನಾದ ಪಾತಕನೆ (ಪಂಂಪಾಮಾ. ೧೪-೯೫). [ಸಂ.]

ದುರಭಿಮತ (ನಾ). ೧. = ದುರಭಿಪ್ರಾಯಂ. ೨. ಕೆಟ್ಟ ಅಭಿಪ್ರಾಯಂ ಉಳ್ಳವನು ; ನೀಚ ಮನಸ್ಸುಳ್ಳವನು : ದುರಭಿಮತದುಮ್ಮೊರ್ವರೆನ್ನ ಕುಮಾರರಭಿಧಾನ (ಕುಪ್ಯಾಸ. ೦೫-೪೯). [ಸಂ.]

ದುರಭಿಮಾನ (ನಾ). ಕೆಟ್ಟ ಅಹಂಕಾರ ; ಒಣಹೆಮ್ಮೆ : ದುರಭಿಮಾನಮಂ ಕೈಕೊಂಡಿರಲ್ ಪಸಿದು ಸಾವಾದಪುದು (ಪಂಚತಂ. ೩೬೯-೧); ಗನ್ನಗತಕಂಗಳ ನೆಲೆಗಳಾ ದುರಭಿಮಾನೋನ್ನತಂಗಳು ವಾರಸತಿಗಳ ಮನಸುಗಳು (ಬಸಪು. ೪೦-೬೬) ; ಎಷ್ಟೋ ಜನರು ದುರಭಿಮಾನದಿಂದ . . . ಎರಡನೆಯವರ ಅಪರಾಧಗಳನ್ನು ಕ್ಷಮಿಸುವುದಿಲ್ಲ (ಮುಂಬಯಿ. ೪-೬೫). [ಸಂ.]

ದುರಭಿಮಾನಿ (ನಾ). ಒಣಹೆಮ್ಮೆಯಿಂದ ಕೂಡಿದವನು: "ಎದಗ್ಗಂಮನ್ಯನವಂ ದುರಭಿಮಾನಿ ಮತ್ತಂ ಕ್ಷೀಬಂ" (ವಸ್ತುಕೋ. ೧೦೦-೦೪).

[ಸಂ. ದುರಭಿಮಾನಿನ್]

ದುರಭಿಸಂಧಿ (ನಾ). ಕೆಟ್ಟ ಅಭಿಪ್ರಾಯ,-ಉದ್ದೇಶ ; ದುರುದ್ದೇಶ : ಕ್ರೋಧಮೂರ್ಛಿತನಾಗುತಾರೋಪಣಂಗೆಯ್ವ ನೀಂ ಭ್ರಾತೃವತ್ಸಲ ಭರತನಿಗೆ ದುರಭಿಸಂಧಿಯಂ (ಶ್ರೀರಾಮಾ. ೧೫೯-೦೪೭); ಯುಧಿಷ್ಠಿರನು ದುರ್ಯೋಧನನ ದುರಭಿಸಂಧಿಯನ್ನು ತಿಳಿದಿದ್ದರೂ ... ಆ ಮನೆಯಲ್ಲಿ ಇಳಿದು ಜೋಕೆಯಿಂದಿದ್ದನು (ಭಾಷ್ಕಪ. ೭೪) : ತನ್ನನ್ನೆ ರಾಜನಾಗಿರೆಂದು ಬೇಡಿಕೊಳ್ಳುತಿರುವಂಥ ಜನರ, ದುರಭಿಸಂಧಿ ಅರ್ಥವಾಗುತ್ತದೆ (ಸುವರ್ಣ. ೧೭೮) ; ಅವನ ಹೃದಯದ ನಿಗೂಢ ದುರಭಿಸಂಧಿ, ಅಷ್ಟು ಶೀಘ್ರವಾಗಿ ಕೈಗೂಡುತ್ತದೆ ಎಂದು ಅವನು ಭಾವಿಸಿರಲಿಲ್ಲ (ಮಲಮ. ೬೫೫) [ಸಂ.]

ದುರಭಿಹಿತ (ನಾ). ಇಷ್ಟವಾಗದ ಹೇಳಿಕೆ ; ಹಿತವನ್ನುಂಟುಮಾಡದ ನುಡಿ : ದೂತನ ದುರಭಿಹಿತಂಗಳಂ ಭೂಪಾಲನೇಳಿಲಂಗೇಳ್ದು ಮಂದಸ್ಮಿತ ಮುಖಸರೋಜಂ ಯುವರಾಜನಂ ನಿರೀಕ್ಷಿಪುದುಂ (ಕಂದ್ರಪು. ೯-೦೦೬ ವ).

[ಸಂ.]

ದುರಭ್ಯಾಸ (ನಾ). ಕೆಟ್ಟ ಚಟ, -ಅಭ್ಯಾಸ : ಶ್ವೇತವರ್ಣೀಯರು ನಮ್ಮ ಮೇಲೆ ಅಪಪ್ರಚಾರ ಮಾಡುವ ದುರಭ್ಯಾಸ ಇಟ್ಟುಕೊಂಡಿದ್ದಾರೆ (ನಾಡಿಗೇ. ೦೭೩) ; ತರಕಾರಿ ಇಂತಹುದೆ ಎಂದು ಹೇಳುವುದು ಕಷ್ಟವಾಗುವ ಮಟ್ಟಿಗೆ ಬಣ್ಣ, ವಾಸನೆಗಳನ್ನು ರೂಪಾಂತರ ಮಾಡುತ್ತಿರುವ ದುರಭ್ಯಾಸ ಹೋಗಬೇಕು (ತರಕ. ೬೦). [ಸಂ.]

ದುರಭ್ಯಾಸಿ (ನಾ). ಕೆಟ್ಟಚಟವುಳ್ಳವನು ; ದುಷ್ಟಚಾಳಿಯುಳ್ಳವನು : ವಿದ್ಯಾರ್ಥಿಗಳೆಲ್ಲ . . . ಸಿಗರೇಟು ಸೇದುವ ದುರಭ್ಯಾಸಿಗಳಾಗಿದ್ದಾರೆ (ಕಂಗರೂ. ೦೨೩). [ಸಂ. ದುರಭ್ಯಾಸಿನ್]

ದುರವಗಾಹ (ಗು). ೧. ಅಳೆಯಲು ಅಸಾಧ್ಯವಾದ ; ಆಳವನ್ನು ಅಳೆಯಲಾಗದ. (ನಾ). ೨. ತಿಳಿಯಲು ಕಷ್ಟವಾದುದು ; ಕಷ್ಟ ಗ್ರಾಹ್ಯವಾದುದು: ಇಷ್ಟ ಬಂದಂತೆ ಪದಕಲ್ಪನೆಗಳನ್ನು ಮಾಡಿಕೊಳ್ಳುತ್ತಾ ಬರಲು ಅವು ಇತರ ಮಾಂಡಲಿಕರಿಗೆ ದುರವಗಾಹಗಳಾದಂತೆ (ಕಸಾಪ. I, ೫೯-೦೯೦೯). [ಸಂ.]

ದುರವಗಾಹ್ಯ (ನಾ). ತಿಳಿಯಂಲಂ ಕಷ್ಟವಾದಂದು; ವ್ಯಾಪ್ತವಾದ ಅರ್ಥವುಳ್ಳುದು: ಸೌಂದರ್ಯ, ಸೌಂದರ್ಯಾನುಭವ ಎನ್ನುವುದು ತುಂಬ ದುರವಗಾಹ್ಯ (Abstract) ವಾದ ಸಂಗತಿ (ಸಾಂದರ್ಶ. ೧ ಪೂಡಲ ಮಾತು). [ಸಂ.]

ದುರವಸ್ಥೆ (ನಾ). ೧. ದುಸ್ಥಿತಿ; ಸಹ್ಯವಲ್ಲದ ಸಂದರ್ಭ; ಹೀನಸ್ಥಿತಿ: ಮೊದಲೇ ಕೋತಿಯು ಹೆಂಡಮಂ ಹುಳಿತುದಂ ತಾನೀಂಟರೆಲ್ ಬಾಲದಾತುದಿಯಂ ತಾಗಿಸೆ ಬೇಳು ಮೇಣ್ ಪಿಡಿದಿರಲ್ ದುಷ್ಟಗ್ರಹಂ ಮತ್ತದಂ ಒದಗಿರ್ಪಾ ದುರವಸ್ಥೆಯಂ ವಿವರಿಸಲ್ಕೆಂತಪ್ಪುದೈ (ನೀತಾಕಾ. ೭೫-೪೨); ತಾನು ಶಾನುಭೋಗರ ಮಗನಾಗಿಯೂ ಈ ದುರವಸ್ಥೆ ಬಂದದ್ದು ವಿಚಿತ್ರವೆಂದವನಿಗೆ ಅನ್ನಿಸಹಕ್ತಿತ್ತು (ರಂಗರೋ. ೧೮೨); ಒಡನೆ ಆತನ . . . ತಂಗಿಯ ಹಾಸಿನ ಬಳಿಗೆ ಹೋಗಿ ಆಕೆಯ ದುರವಸ್ಥೆಯನ್ನು ಕಂಡನು (ಕಾಖೂರ. ೧೫ ಕಥಾಸಾರ). ೨. ಅವ್ಯವಸ್ಥೆ: ಚೆಲ್ಲಾಪಿಲ್ಲಿಯಾಗುವಿಕೆ. [ಸಂ. ದುರವಸ್ಥಾ]

ದುರವಾಪ (ನಾ). ಹೊಂದಲು ಅಶಕ್ಯವಾದಂದು; ಪಡೆಯಲು ಅಸಾಧ್ಯವಾದುದು: ಹರಿಣಧರನೊಳ್ ವಿಷಂ ಮಲಯರುಹದೊಳನಲಾರ್ಜಿ ನಿನ್ನ ವದನೋದರದೊಳ್ ಪರುಷತರವಚನಮಪ್ಪುದು ದುರವಾಪಂ (ಕವಿರಾ. ೩-೭೯). [ಸಂ.]

ದುರವಾರ್ತೆ (ನಾ). ಕೆಟ್ಟವರ ಸಂದ್ದಿ; ದುರ್ಜನರ ಸಹವಾಸ: ಶ್ರೀವಿಜಯವಿಠ್ಠಲ ಎನಗೆ ಸಜ್ಜನಸಂಗಯಿತ್ತು ದುರವಾರ್ತೆ ಬಿಡಿಸೊ (ಹೋಳ್ಕರೀ. ೫೦-೩). [<ಸಂ. ದುರ್ವಾರ್ತಾ]

ದುರಸು 'ದಿರಸು' ನೋ.

ದುರಸ್ತಿ 'ದಂರಸ್ತಿ' ನೋ.

ದುರಸ್ತಿಪಡಿಸು (ಕ್ರಿ). ೧. ಸರಿಮಾಡಿಸಂ; ರಿಪೇರಿಮಡಾಡಿಸು: ಮನೆಯ ಕೆಳಧಾಗದ ನಾಲ್ಕು ಸಂಸಾರಗಳನ್ನೂ ಬಿಡಿಸಿ ದುರಸ್ತಿಪಡಿಸಿ, ತಾವೆಲ್ಲಾ ಅಲ್ಲಿಯೇ ವಾಸವಾಗಬೇಕು (ರಂಗವ. ೩೪). ೨. ಸರಿಮಾಡು; ರಿಪೇರಿಮಾಡಂ: ಅವಳೂ ರಸ್ತೆ ದುರಸ್ತಿಪಡಿಸುವವರ ತಂಡಕ್ಕೆ ಸೇರಿದವರು (ರಕ್ಕರೂ. ೬೦). [ದುರಸ್ತಿ (<ದುರಸ್ತು) + ಪಡಿಸು]

ದುರಸ್ತು, ದುರಸ್ತಿ, ದುರಂಸ್ತಿ, ದುರುಸ್ತು (ಗಂ). ೧. ಸರಿಯಾಗಿರುವ; ಒಳ್ಳೆಯ ಸ್ಥಿತಿಯಲ್ಲಿರುವ. (ನಾ). ೨. ಸರಿಪಡಿಸುವಿಕೆ; ಸಂಧಾರಣೆ; ರಿಪೇರಿ; ಜೀರ್ಣೋದ್ಧಾರ: ಈಶ್ವರ ಸಂ ಪುಷ್ಯ ಬ ೬ ಲ್ಲು ಬಾಗಲು ಕೋಟೆ ಸಹಾ ದುರಸ್ತು (ಎಳ. XVI, ಮದ್ಯಗಿ. ೧೩೪-೪; ?); ಅವರ ಸಂತತ ಪ್ರಯತ್ನದಿಂದಲೇ ಊರಿನ ದೊಡ್ಡಕೆರೆ ದುರಸ್ತಾಗಿ, ಜನರು ಭತ್ತದ ಮುಖ ನೋಡುವಂತೆ ಆಯಿತು (ಊರುಳ. ೭೩); ಮೇಗ್ಗಳ್ಳಿ ಹತ್ತಿರ ಹಳೇ ಹೆದ್ದಾರಿ ಇನ್ನೂ ದುರಸ್ತಾಗಿರಲಿಲ್ಲ (ಮಾಲಮ. ೧೭೬); ಈ ಬೆತ್ತಲೆ ಶರೀರದ ಮನೆಗೆ ಆಗಬೇಕಾದ ದುರಸ್ತು ಬಹು ಕಡಮೆ (ಪ್ರವಾಣ. I, ೬೬). **ದುರಸ್ತಿ**: ೨. ಮೋಟರ ದುರಸ್ತಿ ಎಲ್ಲಿಗೆ ಬಂತು ನೋಡಿ ಬರತೀನಿ (ಎತ್ತಿಕೈ. ೫೯). **ದುರುಸ್ತಿ**: ೨. ಮನೆಯ ದುರುಸ್ತಿ ನಡೆಯುತ್ತಿತ್ತು (ನಾಟಕಿ. ೬). **ದುರುಸ್ತು**: ೨. ಈ ಎಲ್ಲ ನರಗಳು ಜೀರ್ಣವಾಗುವುದರಿಂದ, ಅವುಗಳ ದುರುಸ್ತಿಗೆ ರಕ್ತವು ಆಹಾರವನ್ನು ಕೊಂಡೊಯ್ದು ಒಪ್ಪಿಸಬೇಕಾಗುವುದು (ಜಾಲಶಾ. I, ೩೪೮).

ದುರಸ್ತು ಮಾಡಿಸು, ದುರಸ್ತಿ ಮಾಡಿಸು, ದುರುಸ್ತಿ ಮಾಡಿಸು = ಸರಿಪಡಿಸಂ; ಜೀರ್ಣೋದ್ಧಾರ ಮಾಡಿಸಂ: ಮಾರ್ಗವನ್ನು . . . ದಂಡು ಸಾಗಿ ಬರುವ ಹಾಗೆ, ದುರಸ್ತು ಮಾಡಿಸಬೇಕು (ರಾಜೇಂದ್ರ. ೬೬); ಅಗಳಿ ಮುರಿದಿರಬೇಕೆಂದೂ ಎಷ್ಟು ನೆನಪು ಕೊಟ್ಟರೂ ಶಿವನು ಅದನ್ನು ದುರಸ್ತಿ ಮಾಡಿಸಿರಲಿಕ್ಕಿಲ್ಲ (ಪ್ರಹಾರ. ೪); ತಮ್ಮ ಹಳೆಯ ಮನೆಯನ್ನು ದುರಸ್ತಿ ಮಾಡಿಸಿದ್ದಾಗಿತ್ತು (ದಂಬಣಾ. ೩೬); ನಾನು ಇದನ್ನು ದುರಸ್ತಿಮಾಡಿಸಲಿಕ್ಕೆ ಕೊಡತೀನಿ (ರಕ್ಕಧೃ. ೫೨).

ದುರಸ್ತು ಮಾಡು, ದುರಸ್ತಿ ಮಾಡು, ದುರುಸ್ತು ಮಾಡು=ಸುಧಾರಣೆ ಮಾಡು; ಕೆಟ್ಟುಹೋದುದನ್ನು ತಿದ್ದಿ ಸರಿಪಡಿಸು: ಹಳೆಯ ಪುಸ್ತಕಗಳನ್ನು ದುರಸ್ತು ಮಾಡುವಾಗ ಅಂಚುಗಳನ್ನು ಕತ್ತರಿಸಬೇಕಾಗುವುದು (ಕುದ್ರಕ. ೭೭); ಪೌರಸಭೆಯು ವಿಶಾಲರಸ್ತೆಗಳನ್ನು ದುರಸ್ತು ಮಾಡುತ್ತ . . . ನಗರ ರಕ್ಷಣೆಗಾಗಿ ಪೋಲೀಸ್ ಸ್ಟೇಷನ್ನುಗಳನ್ನು ಏರ್ಪಡಿಸಿದ್ದಿತು (ಧಾರರ. ೧೧); ಏಳೆಂಟು ಸೈಕಲುಗಳು ಒಳಗಿದ್ದುವು. ಒಂದೆರಡನ್ನು ಹುಡುಗರು . . . ದುರಸ್ತಿ ಮಾಡುತ್ತಿದ್ದರು (ನಿಸುತ. ೧); "ನೇರ್ಪಡಿಸು, ದುರುಸ್ತುಮಾಡು, ರಿಪೇರಿಮಾಡು" (Repair. ಪತ್ರಿನಿ. ೬೯); ನಿದ್ರೆಯಲ್ಲಿ ರಕ್ತವು, ಸವೆದ ಅವಯವಗಳನ್ನೆಲ್ಲ ಅವುಗಳಿಗೆ ಬೇಕಾಗುವ ಪದಾರ್ಥಗಳನ್ನು ಪೂರೈಸಿ ದುರುಸ್ತುಮಾಡುತ್ತದೆ (ಮುಂಬಯಿ. ೫-೦೭೩).

[←ಪಾರ. ಹಿಂ. ಮಾರಾ. ದುರುಸ್ತ್, ದುರುಸ್ತೀ]

ದುರಹಂಕಾರ (ನಾ). ಕೆಟ್ಟ ಗರ್ವ; ಅನುಚಿತವಾದ ಜಂಬ: ಸಂತತಾಘ ಸಹಾಯಿಗನನಶ್ರಾಂತ ದುರಹಂಕಾರಯುತನನಂತನಿರ್ವಕ್ರಾವರಾಧಿಯನಧಿಕ ಕೋಪಿಯನು . . . ಸಲಹು ಮದಗರ್ವವಂ ಹರಿಸಿ (ಬಸಪು. ೨೨-೫೦); ದುರಹಂಕಾರವಿತ್ತು, ಕರಿಯವ್ವನ ವಾಣಿಯಲ್ಲಿ (ಬಶಾ. ೧೫೯). [ಸಂ.]

ದುರಹಂಕಾರಿ (ಗು). ೧. ಅತಿಯಾದ ಹೆಮ್ಮೆಯಿಂದ ಕೂಡಿದ; ಅನುಚಿತವಾದ ದಂಬವುಳ್ಳ: ನನ್ನ ದುರಹಂಕಾರಿ ಮನಸ್ಸಿಗೆ . . . ಉನ್ಮತ್ತ ಗ್ಲಾನಿಯಂತೆ ಆಗಿದ್ದಿತು (ಹೇದುಂತ. ೨೬೯). (ನಾ). ೨. ಬಹಳ ಸೊಕ್ಕಿನ ವ್ಯಕ್ತಿ; ಅತಿ ಹೆಮ್ಮೆಯಿಂದ ಕೂಡಿದ ವ್ಯಕ್ತಿ: ಅವನೊಬ್ಬ ದುರಹಂಕಾರಿ (ರೂಢಿ). [ಸಂ. ದುರಹಂಕಾರಿನ್]

ದುರಹಂಕೃತ (ನಾ). ಬಹಳ ಸೊಕ್ಕಿನವನು; ಅತಿ ಹೆಮ್ಮೆಯ ವ್ಯಕ್ತಿ: ದೃಢಭಕ್ತಿನಿಷ್ಠಾಹೀನನಂ ದುರಹಂಕೃತನನಭಿಮಾನಶೂನ್ಯನಂ . . . ಅಪರಾಧದಶಶತನ ಎನ್ನನೇನಂ ಮಾಡಿಕೊಂಟೆನೊ (ಬಸಪು. ೬೦-೩೬). [ಸಂ.]

ದುರಾಕೃತ (ನಾ). ದುಷ್ಕರ್ಮ; ಪಾಪ: ಲತೆಗಳ್ ಪುಷ್ಪ ಫಲಂಗಳಂ ತಳೆವುದಂ ಮಾಣ್ದೆರ್ಪುವೋ ಮದ್ದುರಾಕೃತದಿಂದೆಂದು ತೊಳಲ್ವುದೆನ್ನಯ ಮನಂ ನಿರ್ಣೈಸದೇಸೊಂದುಮಂ (ಶಾಕುಂತ. ೩೩-೧೦೯). [ಸಂ.]

ದುರಾಕ್ರಮಣ (ನಾ). ನ್ಯಾಯವಲ್ಲದ ಮುಖ್ತಿಗೆ; ಅನ್ಯಾಯದಿಂದ ಮೇಲೆ ಬಿದ್ದ ದಾಳಿ ಮಾಡುವುದು: ಶತ್ರುದಾಳಿ; ದುರಾಕ್ರಮಣ; ಅತಿಕ್ರಮಣ (Inroad. ಇಂಗ್ಲಿ). [ಸಂ.]

ದುರಾಗತ (ನಾ). ೧. ಕೆಟ್ಟ ಉದ್ದೇಶ; ಹೀನವಾದ ಅಪೇಕ್ಷೆ: ಪ್ರೀತಿಯಿಂ ಮನೆಗೆ ಕರೆದೊಯ್ದೆಲ್ಲರಂ ತೋಷಗೊಳಿಸಲೆಂದನುನಯದಿ ಪೇಳ್ದೆನಲ್ಲದೆ ದುರಾಗತಮುಲ್ಲ ಪೇಳ್ದಪೆಂ ಕೇಳು ಸೊಲ್ಲ (ಪಂಕಾರಾ. ೨-೩೪-೧೨). ೨. ಕೆಡಂಕಂ; ಕೆಟ್ಟ ಕೆಲಸ; ಪಾಪ; ಹೀನಕಾರ್ಯ: ಆತ್ಮಹತ್ಯವನ್ನು ಮಾಡಿಕೊಂಡರೆ . . . ಪರದಲ್ಲಿ ನರಕಪ್ರಾಪ್ತವಾಗುವುದು ಖಂಡಿತವೆಂದು ತಿಳಿ; ದುರಾಗತಕ್ಕೆ ಪ್ರವೇಶಿಸಬೇಡ (ನೀತಿಚಿಂ. XIII, ೬); ದುರದೃಷ್ಟಕ್ಕೆ ದುಷ್ಟರೂ ಇದ್ದಾರೆ. ದುರಾಗತವನ್ನೂ ಮಾಡುತ್ತಾರೆ, ಧರ್ಮವಚನವನ್ನೂ ದುರುಪಯೋಗಪಡಿಸುತ್ತಾರೆ (ಆರ್ಯಧ. ೧೭೪). ೩. ಅನ್ಯಾಯವಾಗಿ ಕಿತ್ತುಕೊಳ್ಳುವುದೂ; ಅಪಹರಣ. [ಸಂ.]

ದುರಾಗ್ರಹ (ನಾ). ೧. ಮೊಂಡುತನದಿಂದ ಹಿಡಿದ ಪಟ್ಟನ್ನು ಬಿಡದಿರುವುದು; ಅಭಿಪ್ರಾಯವನ್ನು ಬದಲಾಯಿಸದಿರುವುದು; ಮೂರ್ಖಿತನದಿಂದ ಕೂಡಿದ ಹಟ; ಹಠಮಾರಿತನ: ಇಂದಿವರ ದುರಾಗ್ರಹವು ನಿಂತು ಮನ್ನಿಸಿ ಕಳೆವೆಂ (ಅವಂಪು. ೬-೩೩); ನಿನಗಿನ್ನೀ ದುರಾಗ್ರಹ ಬೇಡ ನಿನಗಳಿವಾದೊಡೀ ಕುರುವಂಶವಳಿವುದು (ಕುವ್ಯಾಅ. ೨೧-೩೩); ಪೂರೀಚ ಮನದಲಿ ಪುಸಣಿಗೊಳುತಿರ್ದನು ಕಣಾ ರಾಕ್ಷಸಕುಲಾಧೀಶ್ವರನ ದುಶ್ಚರಿತದ ದುರಾಗ್ರಹಕೆ (ತೊಕರಾ. ೫-೮-೧); "ನಾನು" ಎಂಬುದೊಂದು ಜ್ಞೇಯ

ವಸ್ತು . . . ಎಂದು ಕೆಲವರ ಆಗ್ರಹ. ಇದು ದುರಾಗ್ರಹ (ಜೀವಾತ್ಮ. ೮); ಅಗ್ರಹಾರಕ್ಕೆ ಹೋದರೂ ದುರಾಗ್ರಹ ಬಿಡಲಿಲ್ಲ (ಗಾದೆ). ೨. ಹಠವಾದಿ; ಮೊಂಡ: ಆಗ್ರಹದಿಂ ಬಾರಿಪುದು ದುರಾಗ್ರಹನನಕಾರ್ಯಮಾರ್ಗಯುಕ್ತನಂ . . . ಸಚಿವಂ ನೃಪನಂ (ಪಂಚತಂ ೧೦೬-೩). ೩. ಅತಿಯಾದ ಕೋಪ: ಅವಳೇನೋ ಮಾತನಾಡಬೇಕೆಂದು ಪ್ರಯತ್ನಿಸುತ್ತಿರುವಷ್ಟರಲ್ಲಿ ಆ ಮಾತುಗಳಿಗೆ ಕಿವಿಗೊಡದೆ ದುರಾಗ್ರಹಾವೇಶದಿಂದ . . . ಕೊಂದು ಹಾಕಿದನು (ಕವಿಕ. ೫೩). [ಸಂ.]

ದುರಾಗ್ರಹಿ (ನಾ). ಕೆಟ್ಟ ಹಠವುಳ್ಳವನು; ಛಲವಾದಿ; ಇನ್ನೊಬ್ಬರ ಅಭಿಪ್ರಾಯವನ್ನು ಒಪ್ಪದ ವ್ಯಕ್ತಿ; ಶತಮೊಂಡ: ಆ ದುರಾಗ್ರಹಿ ಲೋಕಜನಪರಿವಾದಪದನಿರ್ಭೀತನಕ್ಷವಿನೋದಕರ್ದಮಮಗ್ನನೊಡ್ಡಿದನಾ ಧನಂಜಯನ (ಕುಮಾಸ. ೧೪-೧೮); ಆ ದುರಾಗ್ರಹಿಯಿಳಿದನಸುರಾಂತಕನ ಜಠರದಲಿ (ಕುಮಾಅ. ೧೪-೨೮); ಆ ದುರಾಗ್ರಹಿ ಧಾಳಿಯಿಟ್ಟನು ಧೂರ್ಜಟಿಯ ಗಿರಿಗೆ (ತೊರಣ. ೧-೮-೩೧). [ಸಂ. ದುರಾಗ್ರಹಿನ್]

ದುರಾಚರಣ (ನಾ). ೧. ಕೆಟ ನಡವಳಿಕೆ; ದಂಷ್ಟತನದ ವ್ಯವಹಾರ: ಕೆಲಕಾಲಕ್ಕಾತನ ದುರಾಚರಣಕ್ಕಾಂ ಕೊಕ್ಕರಿಸುತ್ತಿರೆ (ಶಾಂತಿಪು. ೬-೬೨). ೨. ಕೆಟ್ಟ ನಡವಳಿಕೆಯುಳ್ಳವನು; ದುಷ್ಟ: ಕುಂಭಕಾರಕಟಕಮೆಂಬುದು ಪೊಟಲುಂಟಲ್ಲಿ ಚಂಡಕೌಶಿಕನೆಂಬೊಂ ಪಾರ್ವಂ ದುರಾಚರಣಂ ಆತನ ಭಾರ್ಯೆ ಸೋಮಶ್ರೀಯೆಂಬೊಳ್ (ಶಾಂತಿಪು. ೬-೨೫ ಪ). [ಸಂ.]

ದುರಾಚರಣೆ (ನಾ). = ದುರಾಚರಣ ೧. [ಸಂ. ದುರಾಚರಣ]

ದುರಾಚಾರ (ನಾ). ೧. ಕೆಟ್ಟ ನಡವಳಿಕೆ; ಕೆಟ್ಟಚಾಳಿ: ದುರ್ವರ್ತನೆ; ದುರಾಚಾರದಲ್ಲಿ ನಡೆವರು ಕನ್ನಡಿ ಎನಗೆ (ವಚನಸಂ. ೬೦೨-೬); ಎಲ್ಲಿಯದು ಬಂದುದು ದುರಾಚಾರವೆಂದೆನುತೆ (ಕಡ್ಡಾರ. ಪೇ. ೧೩೩-೨೩); ಯಮವೆಂದರೆ ಬಿಡತಕ್ಕದ್ದು; ಅದು ಹಿಂಸೆ ಅಸತ್ಯ ಸ್ತೇಯ ದುರಾಚಾರ ಪರಿಗ್ರಹ ಎಂದು ಐದು ಪ್ರಕಾರ (ಹಿಂದಸಾ. ೧೦೫): ಅರಬ್ಬಿಯವರಲ್ಲಿ ಅನೇಕ ದುರಾಚಾರಗಳಿದ್ದವು (ಪ್ರಮಹ. ೧೦೯); ಮಾಡೋದು ದುರಾಚಾರ ಮನೇ ಮುಂದೆ ವೃಂದಾವನ (ಗಾದೆ). ೨. ಕೆಟ್ಟ ನಡತೆಯವನು: ದುರಾಚಾರಿ: "ದುರಾಚಾರನಂ ಶಿಶ್ನಿದಾನನೆಂಬುದು" (ಹಲಾಯು. ೬೭-೨೫೦). [ಸಂ.]

ದುರಾಚಾರಿ (ಗು). ೧. ಕೆಟ್ಟ ನಡತೆಯ; ನೀತಿಗೆಟ್ಟ; ವಿಷಯ ಲಂಪಟನಾದ. (ನಾ). ೨. ಕೆಟ್ಟ ನಡತೆಯವನು; ನೀತಿಗೆಟ್ಟವನು: ಕ್ರೂರಾತ್ಮಂ ವಂಚಕನವಿಚಾರಿ ದುರಾಚಾರಿ ಬಗೆಯದುಯ್ದುಪನೆನ್ನಂ (ಪಂಡಾಮಾ. ೬-೧೧೩); ದುರ್ವ್ಯಸನಿ ದುರಾಚಾರಿಯೆಂದೆನಿಸದಿರಯ್ಯಾ ಎನ್ನ ಲಿಂಗವ್ಯಸನಿ ಜಂಗಮಪ್ರೇಮಿಯೆಂದೆನಿಸಯ್ಯಾ (ಬಸವ. ೫೬೨); ದುರಾಚಾರಿಯು ಲೋಕದಲ್ಲಿ ನಿಂದಿತನೆನಿಸುತ್ತಾನೆ (ಭಾರದ. ೫೩). ೩. ಕೆಟ್ಟ ನಡವಳಿಕೆಯುಳ್ಳದು: ಕೃತಘ್ನನುಂ ದುರಾಚಾರಿಯುಮಪ್ಪದು ಮರಳಿ ನಾಯೆ ಅಕ್ಕುಂ (ಪಂಚತಂ. ೨೬೨-೨೧ ಅಡಿಟಿ). [ಸಂ. ದುರಾಚಾರಿನ್]

ದುರಾಚಾರಿಣಿ (ನಾ). = ದುರಾಚಾರೆ: ದುರಾಚಾರಿಣಿಯಾದ ನನ್ನನ್ನು ಕಂಡು ದೇವರಿಗೆ ಸಿಟ್ಟು ಬಂದಿತು (ಭಾಹಬ್ಬ. ೧೭೯).
[ಸಂ. ದುರಾಚಾರಿಣೀ]

ದುರಾಚಾರೆ (ನಾ). ಕೆಟ್ಟ ನಡವಳಿಕೆಯುಳ್ಳವಳು: ವಿಷಯವಿಷವಲ್ಲಿಯಂ ಪೆರ್ಚಿಸುವ ಜಳಧಾರೆ ಸಾಧುತ್ವಮಂ ಕೆಡಿಸಿ ನಡಸುವ ದುರಾಚಾರೆ (ಕಾದಂಪೂ. ೩೫೩); ಎಲೆ ದುರಾಚಾರೆಯೆಹ ಮೂರ್ಖೆಯಹ ಪಂಡಿತಸ್ತ್ರೀಯಹ ಸೂಚೀಮುಖಿ (ಪಂಚತಂ. ೨೪೨-೧೯). [ಸಂ.ದುರಾಚಾರಾ]

ದುರಾಜ್ಞೆ (ನಾ). ಕೆಟ್ಟ ಆಜ್ಞೆ; ಅವಿವೇಕದ ಅಪ್ಪಣೆ: ಒಂದು ಹುಲಿಯು . . . ಪ್ರಭುವಿನ ದುರಾಜ್ಞೆಯನ್ನು ನಡೆಯಿಸಿದ ತಪ್ಪುಗೋಸುಗ ತಕ್ಕ ಶಿಕ್ಷೆಯನ್ನು ಮಾಡಿ ಹೋಯಿತು (ಕವಿಕ. ೮). [ಸಂ. ದುರಾಜ್ಞಾ]

ದುರಾಢ್ಯ (ನಾ). ಬಡವ; ದರಿದ್ರ. 'ಧನಾಢ್ಯ' ಪರಾ. [ಸಂ.]

ದುರಾತ್ಮ (ನಾ). ನೀಚ ವ್ಯಕ್ತಿ; ದುರುಳ; ದುಷ್ಟ: ದುರಾತ್ಮಾ ಎನ್ನನೊದೆದ ನಿನ್ನ ಕಾಲ್ಗಳಂ ಜನ್ಮಾಂತರದೊಳಂ ನಾಯುಂ ನರಿಯುಮಾಗಿಯಪ್ಪೊಡಂ ಕೊಂದು ಮಕ್ಕಳ್ವೆರಸು ತಿಂಬೆಂ (ವಡ್ಡಾರಾ. ೮-೧೯); ಪರಚಕ್ರಮೆ ಕಯ್ಗೆವರಲ್ ಕರೆಚಕ್ರಂ ಪೂಣ್ದು ಪೋದ ಬೇಗದೊಳೆ ಪರಂಪರೆಪೋದ ನಾತನಿನ್ನೆಂದಿರದಾನಂದಿತ ವಿಶಾಖನುಂದಿ ದುರಾತ್ಮಂ (ಶಾಂತಿಪು. ೬-೫೬); ಇಷ್ಟವಂಚಕನೇ ದುರಾತ್ಮನೆ ಕಷ್ಟನೇ ಕಾರ್ಪಣ್ಯಭಾವನೆ ಕಪಟಮಾನಸನೆ (ಬಸಪು. ೪೫-೨೦); ದೊರೆಗಳೊಲಿದೀವ ಕಜ್ಜಂ ಸಮೀಪದ ದುರಾತ್ಮರಿಂ ಕಿಡದೆ ಮಾಣ್ದಪುದೆ (ಶ್ರೀಮಿಥಾ. ೨೩-೨೫). [ಸಂ. ದುರಾತ್ಮನ್]

ದುರಾತ್ಮಕ (ನಾ). ಕೆಟ್ಟ ಮನಸ್ಸುಳ್ಳವನು; ದುರುಳ; ದುಷ್ಟ: ದುರಾತ್ಮಕರೆನ್ನನೆಳದೊಯ್ದು ಬೀಳಿಸುವರಗ್ನಿಯಲಿ (ಕುಮಾವಿ. ೩-೯೯); ಈ ದುರಾತ್ಮಕನ ಶಿರವನರಿವೆನು (ಕುಮಾಳ. ೨೫-೩೬). [ಸಂ.]

ದುರಾತ್ಮಿಕೆ (ನಾ). ಕೆಟ್ಟ ಮನಸ್ಸಿನವಳು; ದುಷ್ಟೆ: ಎಲೆ ಎಲೆ ದೋಷದೂಷಿತೆ ದುರಾತ್ಮಿಕೆ . . . ಎನುತ್ತಲೆದುಲಿದಾಕೆಯಂ ನಿಳಯದಿಂ ಪೊಱಗಿಕ್ಕಿ ನಿರೀಕ್ಷಿಪಾಗಳ್ (ವೃಷವಿ. ೯-೩೭). [ಸಂ. ದುರಾತ್ಮಿಕಾ]

ದುರಾತ್ಮೆ (ನಾ). = ದುರಾತ್ಮಿಕೆ: ದುರ್ವ್ಯಸನೆ ದುರಾತ್ಮೆಯಪ್ಪ ವಧು ಸಜ್ಜನಮೇ (ಮದತಿ. ೯೮-೭). [ಸಂ. ದುರಾತ್ಮಾ]

ದುರಾದೃಷ್ಟ (ನಾ). ದುರದೃಷ್ಟ; ಹೀನ ಅದೃಷ್ಟ: ಅದು ನಮ್ಮ ದುರಾದೃಷ್ಟ (ದೇವಹೊ. ೨೦೦). [<ಸಂ. ದುರದೃಷ್ಟ]

ದುರಾಧರ್ಷ (ಗು). ತಡೆಯಲು ಅಸಾಧ್ಯವಾದ; ಅಡಗಿಸಲು ಕಷ್ಟವಾದ: ಉದ್ಧತದುರಾಧರ್ಷ ಹರ್ಷೋನ್ನತದೊಳಳಿನೀಲವೇಣಿ ಮುಂತಪ್ಪ ಕಜ್ಜವನೊಪ್ಪಮೆನಲುಸುರ್ದಳೇವೇಳ್ವೆನು (ಪಂಚಾರಾ. ೨-೮-೮). [ಸಂ.]

ದುರಾಪ (ಗು). ೧. ಜಯಿಸಲು ಕಷ್ಟವಾದ; ಗೆಲ್ಲಲು ಸಾಧ್ಯವಾಗದ. ೨. ಬಳಿ ಸಾರಲು ಕಷ್ಟವಾದ. (ನಾ). ೩. ಪಡೆಯಲು ಕಷ್ಟಕರವಾದುದು; ಹೊಂದಲು ಅಸಾಧ್ಯವಾದುದು: ಪಗೆವಂಗಂ ಕೆಳೆಯಂಗ ಮಾರ್ದ್ರಮತಿಯಂ ತ್ವನ್ಮೂರ್ತಿ ತೀರ್ಥೇಶ ಮಾಡುಗುಮಾಳೋಚಿಸೆ ನಿನ್ನ ತತ್ವಮ[ವಿ]ಸಂವಾದಂ ದುರಾಪಂ ಗುಣಾಬ್ಧಿಗಭೀರಂ ಭವದೀಯಮೆಂದು . . . ಬಂದಿಸಿದನಾ ಪಾಪೇಭಕಂಠೀರವಂ (ಶಾಂತಿಪು. ೮-೧೫೮). [ಸಂ.]

ದುರಾಪಾಸ್ತ (ನಾ). ೧. ಪರಿಹರಿಸಲು ಅಶಕ್ಯವಾದುದು. ೨. ಅಸಾಧ್ಯವಾದುದು: ಉದರಂಭರಣವೆ ದುರಾಪಾಸ್ತವಾಗಿರಲು ಯಂತ್ರಗಳನ್ನು ಕೊಳ್ಳಲಿಕ್ಕೆ ದ್ರವ್ಯವೆಲ್ಲಿ? (ಜ್ಯೋತಿಷ್ಯ. ೨೦); ಸಾವಿರಾರು ರೂಪಾಯಿ ವೆಚ್ಚದ ಈ ಪರಿಹಾರಕಾರ್ಯವು ಖಾಸಗಿ ಜನರಿಗೆ ದುರಾಪಾಸ್ತವಾದದ್ದು (ಕರವೀ. ೧೦೩); ಸೇಕ್ಸಪೀಯರನ ವಾಣಿಗೆ ಚಲನೆಯನ್ನು ಕೊಟ್ಟಂಥ ಶಕ್ತಿಯನ್ನು ಸದ್ಯದ ಮಾನವ ಮನಸ್ಸು ದೊರಕಿಸುವುದೆಂದರೆ ದುರಾಪಾಸ್ತವಾದುದಾಗಿದೆ (ಪ್ರಬಂಧ. ೧೩೦); ಈ ರೀತಿ ಇವುಗಳ ತಳಕು ಬೀಳುವುದು ದುರಾಪಾಸ್ತವು. ತಳಕು ಬಿದ್ದ ಕ್ಷಣವೆ ಮುಕ್ತಿಯ ಕ್ಷಣ ಎನ್ನಬಹುದು (ಯಾತ್ರಿಕ. ೬೭). [ಸಂ.]

ದುರಾಭಿಮಾನ (ನಾ). = ದುರಭಿಮಾನ: ಅರ್ಜುನನು ನಿಜಸೂನು ಮಡಿಯ ದುರಾಭಿಮಾನನೆಂದನು (ಕುಮಾಕ್ರೌ. ೮-೫೮). [< ಸಂ. ದುರಭಿಮಾನ]

ದುರಾರಾಧ್ಯ (ಗು). ೧ ಒಲಿಸಲು ಸುಲಭವಲ್ಲದ; ಸಂತೋಷಪಡಿಸಲು ಕಷ್ಟವಾದ: ಈ ದುರಾರಾಧ್ಯ ದೇವತೆಯನ್ನು ಒಲಿಸಿಕೊಳ್ಳುವ ವಿನ್ಯಾಸದಲ್ಲಿ ಈ ಮಗನು ಬಹುಶಃ ಮುಂದಿನ ಜೀವನದ ಮೊದಲ ಪಾಠಗಳನ್ನು ಮೈಗೂಡಿಸಿಕೊಂಡಾನೊ ಏನೊ (ನಾಳೆಜ. ೧೦). (ನಾ). ೨. ಒಲಿಸಲು ಅಸಾಧ್ಯನಾದ ವ್ಯಕ್ತಿ. [ಸಂ.]

ದುರಾರಾಧ್ಯೆ (ನಾ). ಮೆಚ್ಚಿಸಲು ಅಸಾಧ್ಯವಾದವಳು; ಸುಲಭವಾಗಿ ಒಲಿಯದವಳು: ತಾಮಸಿ ದುರಾರಾಧ್ಯೆಯಪಯಶಮದೇಂ ನೆನೆದೆ ಮನದಿ ಕುಲಗೇಡಿತನವ (ಪಂಚಾರಾ. ೨-೬-೪೫). [ಸಂ. ದುರಾರಾಧ್ಯಾ]

ದುರಾರೋಹ (ನಾ). ಹತ್ತಲು ಕಷ್ಟವಾದುದು,-ಅಸಾಧ್ಯವಾದುದು : ಆ ಮರನಂ . . . ದುರಾರೋಹಮುಮಾದೊಡಂ ಬಗೆಯದೆ ಬಳಸಿದ ಬಳ್ಳಿವಿಡಿದಡರ್ದೇಱಿ (ಕಾದಂಪೂ. ೧೭೭). [ಸಂ.]

ದುರಾಲಂಭ (ನಾ). ಒಂದು ಬಗೆಯ ಸಸ್ಯ : "ತೊರೆಯಿಂಗುಳಂ ದುರಾಲಂಭ [ಪಾಠಾಂ. ಬ]ಮೆನಿಸಿಕ್ಕು" (ಮಂಗರಾ. ೩೬-೧೬). [ಸಂ. ದುರಾಲಂಭಾ]

ದುರಾಲಭ$_1$ (ನಾ). = ದುರಾಲಭೆ : ಭದ್ರಮುಸ್ತೆ, ದುರಾಲಭ . . . ಇವುಗಳ ಕಷಾಯವಿಕ್ಕಿ ಸೇವಿಸೆ ಪಿತ್ತಜ್ವರ ಪರಿಹಾರವಾಗುವುದು (ಸಕವೈ. ೭೯). [ಸಂ. ದುರಾಲಭಾ]

ದುರಾಲಭ$_2$ (ಗು). ೧. ಹಿಡಿದುಕೊಳ್ಳಲು ಕಷ್ಟವಾದ ; ನಿರ್ವಹಿಸಲು ಅಶಕ್ಯವಾದ. ೨. ಮುಟ್ಟಲು ಯೋಗ್ಯವಲ್ಲದ. ೩. ಪಡೆಯಲು ಕಷ್ಟವಾದ. [ಸಂ.]

ದುರಾಲಭೆ (ನಾ). ಒಂದು ಬಗೆಯ ಸಸ್ಯ ; ತೀಟಕಸಂಧಿ ; ತುರುಂಚೆ : "ಕಪಿಕಚ್ಛು ದುರಾಲಭೆ ತುಱುಚೆ" (ವಸ್ತುಕೋ. ೩೬-೨೧) ; ಜಳದಂ ಶುಂಠಿ ದುರಾಲಭೆ ಗುಳೂಚಿಯೆಂಬಿನಿತುಮಂ ಕಷಾಯಂಗೊಂಡಾಗಳೆ ಕುಡಿಯೆ ವಾತದೋಷಂ ಸಲೆ ವಿಷಮಜ್ವರಂ ದಿನತ್ರಯಕ್ಕುಪಶಮಿಕುಂ (ಲೋಕೋಪ. ೯-೧೬). [ಸಂ. ದುರಾಲಭಾ]

ದುರಾಲಾಪ (ನಾ). ೧. ಕೆಟ್ಟಮಾತು ; ನಿಂದೆ; ಬಯ್ಗುಳು; ದೂಷಣೆ: ಪಾಪಕರ್ಮವೆ ಧರ್ಮ ಉಲಿವ ಪ್ರಲಾಪನೆಯೆ ಜಪವಾಡುವ ದುರಾಲಾಪವೇ ಮಂತ್ರವು ನಿನಗೆ (ಬಸಪು. ೪೧-೯). ೨. ಶಪಿಸುವುದು ; ಶಾಪ. [ಸಂ.]

ದುರಾಲೋಕನ (ಗು). ಕಣ್ಣು ಕುಕ್ಕುವ ; ಕಣ್ಣು ಕೋರೈಸುವ : ಸನತ್ಕುಮಾರಮಾಹೇಂದ್ರಪತಿಗಳಿಂದ್ರಾಯುಧೋಪಮಾನಪರಾರ್ಧ್ಯಮಣಿ ಮಯೂಖಮಾಳಿಕಾದುರಾಲೋಕನನಕ್ಷತ್ರಮಾಳಾಕಳಾಪಕಕ್ಷಂಗಳಪ್ಪ ಪಕ್ಷಗಜಂಗಳ ನೇಱಿ . . . ಚಾಮರಂಗಳನಿಕ್ಕೆಯುಂ (ಶಾಂತಿಪು. ೧೦-೧೩ ವ). [ಸಂ.]

ದುರಾಲೋಚನೆ (ನಾ). ಕೆಟ್ಟ ಯೋಚನೆ ; ದುಷ್ಟ ವಿಚಾರ : ದುರಾಲೋಚನೆಯಲ್ಲ, ದೂರಾಲೋಚನೆ! (ನಟಸಾ. ೨೫೨) ; ನೀವು ದುರಾಲೋಚನೆಗಳನ್ನು ಮಾಡುತ್ತಿದ್ದೀರಿ (ವಚಭಾ. ೧೦೩). [ಸಂ. ದುರಾಲೋಚನ]

ದುರಾಲೋಚಿಸು (ಕ್ರಿ). ಕೆಟ್ಟ ಯೋಚನೆ ಮಾಡು ; ದುಷ್ಟ ವಿಚಾರ ಮಾಡು : ಆದರೆ ರೈತನು ದುರಾಲೋಚಿಸಿ ನಾನು ಇವರಿಗೆ ಈ ಗುಟ್ಟು ಹೇಳಿಬಿಟ್ಟರೆ ಇವರೇ ತಿಂದು ಹಾಕಿಬಿಡುತ್ತಾರೆ . . . ಎಂದುಕೊಂಡು (ಪಂಚಾಮೃ. ೭೯). [ದುರಾಲೋಚನೆ + – ಇಸು$_3$]

ದುರಾಶೆ (ನಾ). ಕೆಟ್ಟ ಅಪೇಕ್ಷೆ ; ದುಷ್ಟ ಬಯಕೆ; ಅತಿಯಾಸೆ: ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ ದುರಾಶೆಯಿಂದ ಬಂದುದು ಅನರ್ಪಿತ (ವಚಸಂ. ೨೬೨-೬೨) ; ದುರಾಶೆ[ಪಾಠಾಂ. ಸೆ]ಯಂ ಪೊತ್ತು . . . ಅಭವನಂ ಪೊಗಳದಳಿವರನೇನನೆಣಿಸುವೆನು (ಬಸಪು. ೧-೩೬) ; ಇದು ಕೌರವರಿಗೆ ಅಂತ್ಯಕಾಲ . . . ದುರಾಶೆ ಬೆಳೆಯುತ್ತಿದೆ (ವಚಭಾ. ೯೬). [ಸಂ. ದುರಾಶಾ]

ದುರಾಶೆಗಾರ (ನಾ). ಕೆಟ್ಟ ಆಸೆಯನ್ನುಳ್ಳವನು : (ಕಿ). [ದುರಾಶೆ + – ಕಾರ$_1$ (<– ಕಾಱ)]

ದುರಾಸದ (ಗು). ೧. ಜಯಿಸಲು ಅಶಕ್ಯವಾದ; ಗೆಲ್ಲಲು ಕಷ್ಟವಾದ (ನಾ). ೨. ಜಯಿಸಲು ಅಸಾಧ್ಯನಾದವನು ; ಸೋಲಿಸಲು ಆಗದವನು ;ಅಜೇಯ: ತುರಗಾಕೃತಿ ಕೃಷ್ಣಾಜಿನಪರೀವೃತಂ . . . ದುರಾಸದು ಸಿಂಹಮಧ್ಯದ್ರೇಕ್ಕಾಣಂ (ಜಾತತಿ. ೧೯-೧೪) ; ತಾಳವನದೊಳತಿದುರಾಸದನಾದ ಖರಾಕಾರನಾದ ಧೇನುಕಾಸುರನನ್ನು ಲೀಲೆಯಿಂದ ಮರ್ದಿಸಿ (ಕಗವಿ. ೭೭; ವಿಷ್ಣುಪು). [ಸಂ.]

ದುರಾಸೆ (ನಾ). ಕೆಟ್ಟ ಬಯಕೆ ; ದುಷ್ಟ ಆಸೆ ; ಅತಿಯಾಸೆ : ದುರಾಸೆ ಮುಂದುಗೊಂಡು . . . ಪರರೊಡವೆಯ ಅಪಹರಿಸುವ ಸೆಟ್ಟಿ ಮುಂತಾದ ಸಮಸ್ತ ಕಳ್ಳರ ಮಕ್ಕಳ ಕಾಡಿ ಬೇಡಿ (ಮಡಿಮಾ. ೪೭-೬೪) ; ಮಕ್ಕಳು ಜಿಪುಣರಾಗಬಹುದು ; ದುರಾಸೆಗೂ ತುತ್ತಾಗಬಹುದು (ಶಿಕ್ಷದ. ೭೫). [<ಸಂ. ದುರಾಶಾ]

ದುರಾಹರ (ನಾ). ಕೆಟ್ಟ ಆಹಾರ ; ನಿಷಿದ್ಧವಾದ ಆಹಾರ : ಸದಾಚಾರವ ಬಿಟ್ಟು ಹೀನರೊಡನಾಡಿ ದುರಾಹರಗೊಂಡಿರುತ್ತನಾಚಾರಕೆ ಸಂದು ಶೂದ್ರಕನೆನಿಪ್ಪ ಪೆಸರ್ ನೆಲೆಗೊಂಡು ವೀರರೊಳ್ ಸೇರನೆ (ಕಜಿಕಂ. ೭). [<ಸಂ. ದುರಾಹಾರ]

ದುರಾಹವರಂಗ (ನಾ). ಕಾಳಗ ಮಾಡಲು ಕಷ್ಟವಾದ ಯುದ್ಧರಂಗ ; ಹೋರಾಡಲು ಅಸಾಧ್ಯವಾದ ಕಾಳಗದ ಕಣ : ಅರಿಗೆ ದುರಾಹವರಂಗಾಂತರದೊಳಭೀತಂ ನಿಜಾರಿಸಮಿತಿಗಳಿಂದಂ ನೆರೆದ ಜಯಂಗೊಂಡಾಗಡೆ ಸುರಾಂಗನಾಸುರತವಿಷಯಸುಖಮಂ ಕೊಟ್ಟಂ (ಕವಿರಾ. ೩-೧೫೯). [ಸಂ.]

ದುರಿಂದ್ರಿಯಸುಖ (ನಾ). ಪಂಚೇಂದ್ರಿಯಂಗಳಿಂದ ಉಂಟಾಗುವ ಕೀಳಾದ ಸೌಖ್ಯ : ದುರಿಂದ್ರಿಯಸುಖಕೆ ಕೊಕ್ಕರಿಕೆ ವುಟ್ಟೆ ನಿರ್ವೇಗದಿಂ ನಿರಿಂದ್ರಿಯಸುಖಕ್ಕೆ ನಾಡೆ ಮನವಿಟ್ಟು (ಸುಕುಮಾ. ೧೦-೩೧). [ಸಂ.]

ದುರಿಚ್ಛೆ (ನಾ). ಕೆಟ್ಟ ಬಯಕೆ,-ಅಪೇಕ್ಷೆ : ತನ್ನ ಸಂಗಡ ಎರಡನೇ ವ್ಯಕ್ತಿಯನ್ನು ಪಾಪಪಂಕದಲ್ಲಿ ಎಳೆಯುವ ದುರಿಚ್ಛೆಯು ಉತ್ಪನ್ನವಾದ ಕೂಡಲೇ ಮಾತ್ರ ಅವಶ್ಯವಾಗಿ ಅಪಘಾತ ಮಾಡಿಕೊಳ್ಳಬೇಕು (ಬ್ರಹ್ಮಜೀ. ೯೪). [ಸಂ. ದುರಿಚ್ಛಾ]

ದುರಿತ (ನಾ). ೧. ಪಾಪ ; ಪಾತಕ : "ದುರಿತದೊಳು ದುಃಖದೊಳು ಮತ್ತೆ ಭವಮಾಲೆಯೊಳಘಾಖ್ಯಮಕ್ಕುಂ" (ಮಂಗರಾ. ೧೫೦-೫೧) ; ದುರಿತಘನತಿಮಿರದಶಶತಕಿರಣಮತಿಪ್ರೀತಿಕರಣಮಖಿಳವಿನೇಯೋದ್ಧರಣಂ (ಆದಿಪು. ೧೪-೩೮) ; ಭವಬಂಧನ ದುರಿತಂಗಳ ಗೆಲುವೊಡೆ ಓಂ ನಮಃಶಿವಾಯ ಶರಣೆಂದೊಡೆ ಸಾಲದೆ (ಬಸವ. ೭೯) ; ಪರೆವುದು ದುರಿತತಮಿಸ್ರಂ . . . ಯಶೋಧರಚರಿತಕಥಾಶ್ರವಣಮೆಂಬ ಚಂದ್ರೋದಯದೊಳ್ (ಯಶೋಧ. ೧-೨೬); ಅಗಡು ಮಾಡಿದ ನಿಮ್ಮ ಮಕ್ಕಳ ವಿಗಡತನಕಂಜಿದರೊ ದುರಿತದ ಸೊಗಡಿಗಂಜಿದರೊ ಪೃಥಾಸುತರೆಂದಳಿಂದುಮುಖಿ (ಕುಮ್ಯಾಸ. ೧೫-೪೭) ; ಬಿರುದ ಗಳಿಸಲಿಕೆಸಪ, ಹೆಸರ ಪಸರಿಸಲೆಸಪ ದುರಿತಗಳ್ಗೆಣೆಯುಂಟೆ (ಮಂಕುಕ. ೬೫೭). ೨. ಕೇಡು ; ಅಪಾಯ : ಶುಭಗ್ರಹಂ ಸಕಲ ದುರಿತಮಂ ಪರಿಹರಿಕುಂ (ಜಾತತಿ. ೭-೧೪) : ಕಂಸ ನಿನ್ನ ಜಾಮಾತೃಗಳೆಂದೊಡಾವ ದುರಿತಂಗಳುಮೆಮ್ಮೊಳೆ ಪೊರ್ದಲಂಜುಗುಂ (ಜಗವಿ. ೬-೬೦); ನಿನ್ನಡಿಸೋಂಕಿನೊಳಖಿಲದುರಿತಗಳ ಸನ್ನಾಹವ ಸದೆದಟ್ಟಿ . . . ಏಳ್ಗೆ ವೆತ್ತಿಹೆನು (ಹದಿಬ. ೧-೩೬). ೩. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ : ದುರಿತ . . . ವಾರಣಮಾರಯೆಯೆಂಟಕ್ಕೆ ನಾಮಮಿದು (ವ್ಯವಹಾ. ೯-೮) ; ಮದಹಸ್ತಿ ದುರಿತ ವಸು ಫಣಿ ನಾಗಂ . . . ಯೆಂಟರ ಪೆಸರು (ಭಾಸ್ಕರ. ೭೪-೩) : P ಎಂಟು ಎಂಬ ಈ ಸಂಕೇತಾರ್ಥದ ವಿವರಣೆಗಳಲ್ಲಿ ಸ್ಪಷ್ಟತೆ ಕಂಡಂಬರುವುದಿಲ್ಲ. [ಸಂ.]

ದುರಿತಕಾರಿ (ನಾ). ಪಾಪಮಾಡುವವನು ; ಪಾತಕಿ : ಕರವಾಳಕದಿರದಿಹ ದುರಿತಕಾರಿಯ ಹೃದಯ ಕರುಣೆಯಿಂ ಕರಗಿತೊ (ಮಂಕುಕ. ೨೯೬). [ಸಂ. ದುರಿತಕಾರಿನ್]

ದುರಿತಕ್ಷಮಿತ (ನಾ). ಪಾಪವನ್ನು ಕ್ಷಮಿಸುವವನು : ಮಂಗಳಚರಿತ ದುರಿತಕ್ಷಮಿತ ರಾಘವ ವಿಶ್ವಪೂಜಿತ . . . ರಕ್ಷಿಸು ನಮ್ಮನನವರತ (ಹರಿಸಾ. ೪). [<ಸಂ. ದುರಿತಕ್ಷಮಿತೃ]

ದುರಿತಘರಟ್ಟ (ನಾ). ಪಾಪವನ್ನು ಪುಡಿಮಾಡುವವನು,-ನಾಶಮಾಡುವವನು ; ಪಾಪನಾಶಕ : ಭಕ್ತರ ಮನಂಗಳ ಘಟ್ಟಿಯಂ ನೋಡಲ್ಕೆ ದುರಿತಘರಟ್ಟನುಂ ತಾಂ ಬಂದು ಬೇಡಿದನು (ಬಸಪು. ೨೩-೨೪).

[ದುರಿತ + ಘರಟ್ಟ]

ದುರಿತದಲ್ಲಣ (ನಾ). ಪಾತಕವನ್ನು ನಾಶಗೊಳಿಸುವವನು: ದುರಿತದಲ್ಲಣ ದುಷ್ಟಮರ್ದನ ಪರಮಸುಖದಿಂದತ್ತಲಿರೆ (ಶಾಶಿಪು. ೩೮-೧).

[ದುರಿತ + ತಲ್ಲಣ (<ತಲ್ಲಟ)]

ದುರಿತದೂರ (ನಾ). ಪಾತಕಕ್ಕೆ ಹೊರತಾದವನು ; ಪಾಪವಿಲ್ಲದವನು : ಜಯ ಜಿನೇಂದ್ರ ನತಸುರೇಂದ್ರ ದುರಿತದೂರ ದಳಿತಮಾರ (ಅಜಿಪು. ೭-೧೩ ಪ). [ದುರಿತ + ದೂರ]

ದುರಿತಬಂಧನ (ನಾ). ಪಾಪದ ಬಂಧನ,-ಸಂಬಂಧ : ದೇವಪೂಜೆಯ ಮಾಟ ದುರಿತಬಂಧನದೋಟ . . . ಜಂಗಮಾರ್ಚನೆಯ ಮಾಟ ಕೂಡಲ ಸಂಗನ ಕೂಟ (ಬಸವ. ೧೭೭). [ದುರಿತ + ಬಂಧನ]

ದುರಿತಭಾಜನ (ನಾ). ಪಾಪಕ್ಕೆ ಆಶ್ರಯನಾದವನು ; ಪಾಪಿ : ನರಕಕರ್ಮವ ಮಾಡಿ ಇಹದೊಳು ದುರಿತಭಾಜನನಾಗಿ ಕಡೆಯಲಿ ಪರಕೆ ಬಾಹಿರನಾಗಿ ನಾನಾಯೋನಿಯೊಳು ಸುಳಿದು ಹೊರಳುವನುವನು ಕೃಷ್ಣ ದೇವನು ಕರುಣಿಸದನೇ (ಕುಮಾಧೀ. ೩-೨೯). [ದುರಿತ + ಭಾಜನ]

ದುರಿತಯುತ (ಗಂ). ೧. ಪಾಪದಿಂದ ಕೂಡಿದ. (ನಾ). ೨. ಪಾಪದಿಂದ ಕೂಡಿದವನು ; ಪಾತಕಿ : ದುರಿತಯುತನಾಗಿ ಗಮ್ಮನೆ ನರಕಕ್ಕಿಟ್ಟಿಯಲ್ಕೆ ಬಗೆವ ಜೀವಾಳಿಗಮುರ್ವರೆಯೊಳ್ ಕುತತ್ತ್ವರುಚಿ ತಾಂ ದೊರೆಕೊಳ್ಗುಂ (ಧರ್ಮಾಮೃ. ೧೦-೯೧). [ದುರಿತ + ಯುತ]

ದುರಿತವರ್ತಿ (ನಾ). ಪಾಪದಲ್ಲಿ ಸುತ್ತುವಂತಹುದು,-ತೊಳಲುವುದು : ಚತುರಶೀತಿಲಕ್ಷಪ್ರಮಾಣ ಯೋನಿಮುಖಂಗಳೊಳಾವರ್ತನ ಪರಿವರ್ತನದಿಂ ದುರಿತವರ್ತಿಯಾಗಿ ನಮೆವ ಸಂಸಾರಿ ಜೀವಕ್ಕೆ (ಸುಕುಮಾ. ೩-೩೨ ಪ).

[ಸಂ. ದುರಿತವರ್ತಿನ್]

ದುರಿತವಶ (ನಾ). ಪಾಪದ ಪ್ರಭಾವ: ದುರಿತವಶದಿಂದೆ ತಿಱ್ಱನೆ ತಿರಿಯದೆ ಸುಖನಿಳಯಮಪ್ಪ ಮುಕ್ತಿಶ್ರೀಯೊಳ್ ನೆರೆದಿರ್ಪೆನೆಂಬ ಭವ್ಯಂ (ಧರ್ಮಾಮೃ. ೦-೭೭). [ದುರಿತ + ವಶ]

ದುರಿತವಿಜಯ (ನಾ). ಪಾಪವನ್ನು ಗೆಲ್ಲುವಿಕೆ : ದಿವಿಜನಿಕಾಯದ ಜಯಜಯರವದಿಂದಂ ದುರಿತವಿಜಯಮಂ ತಮಗೆ ಮಹೋತ್ಸವದಿನಱಿ ಪುತ್ತುಮಿದಿರ್ಗೊಳ್ವಪೊಲೆಸೆದುದು ಸಮವಸರಣ ದುಂದುಭಿನಿನದಂ (ಆದಿಪು. ೧೪-೧೩೬). [ದುರಿತ + ವಿಜಯ]

ದುರಿತವಿನಾಶ (ನಾ). ಪಾಪದ ನಿವಾರಣೆ ; ಪಾಪನಾಶ : ಈ ಶರೀರದೊಳ್ ಘಾತ್ಯಘಾತಿ ದುರಿತವಿನಾಶಮುಮನಂತಚತುಷ್ಟಯಮುಂ ಕೇವಲಲಬ್ಧಿಲಾಭಮುಮಪ್ಪುದನಱಿದು (ಶಾಂತಿಪು.೧೦-೦೨೧ ಪ).

[ದುರಿತ + ವಿನಾಶ]

ದುರಿತವಿಪಾಕ (ನಾ). ಪಾಪದ ಫಲ; ದುಃಖ ; ನೋವು: "ದುರಿತವಿಪಾಕಂ ಯಾತನೆ ಗುರುವೇದನೆ ದುಃಖಮೂರ್ತಿ ಪೀಡೆಯಸಾತಂ" (ವಸ್ತುಕೋ. ೨೦-೦೧). [ದುರಿತ + ವಿಪಾಕ]

ದುರಿತವ್ರಜ (ನಾ). ಪಾಪದ ಸಮೂಹ ; ಪಾತಕದ ರಾಶಿ,-ಗುಂಪು: ದುರಿತವ್ರಜಮೊರ್ವೆಯೆ ಬೆದಱಿ ಕೆದಱಿ ಕಿಡುಗುಮೆಂಬೋಘಂ (ಶಿಶಾಲಿ. ೪-೪). [ದುರಿತ + ವ್ರಜ]

ದುರಿತವ್ರಾತ (ನಾ). = ದುರಿತವ್ರಜ : ದುರಿತವ್ರಾತಲತಾಕೃಪಾಣಿ ವಿಸರದ್ದುರ್ಬೋಧರೋಧಸ್ವಿನೀತರಣದ್ರೋಣಿ(ಚಂದ್ರಪು.೦-೦೩); ದುರಿತವ್ರಾತದ ಮಾತು ಸಲ್ಲದಿರವೇಟತ್ತತ್ತ ಭವ್ಯರ್ಕಳಂ ಬರವೇಟ್ಟಿಚ್ಚರಮಿತ್ತಲಿತ್ತ ಲೆನುತುಂಕೈಸನ್ನೆಗೆಯ್ವಂತಿರೆ (ಅನಂಪು. ೧೦-೨೩). [ದುರಿತ + ವ್ರಾತ]

ದುರಿತಸಂಕುಳ (ನಾ).=ದುರಿತವ್ರಜ : ಶ್ರೀವಿಭೂತಿಯುನೊಲಿದು ಧರಿಸಿರೆ ಭವವನು ಪಱುವುದು ದುರಿತಸಂಕುಳವನೊರಸುವುದು (ಪುಹಾದೀ. ಬ. ೯೩-೨೦೯). [ದುರಿತ + ಸಂಕುಳ (= ಸಂಕುಲ)]

ದುರಿತಸಂಹರಣ (ನಾ). ಪಾಪವನ್ನು ಪರಿಹಾರಮಾಡುವುದು,-ನಾಶಮಾಡುವುದು : ಇದು ಸದಾಯುಃಕೀರ್ತಿವರ್ಧನ . . . ಪದುಮನಾಭನ ಚರಿತ ಪಾವನ ದುರಿತಸಂಹರಣ (ಶಾಶಿಪು. ೪೪-೩೮).

[ದುರಿತ + ಸಂಹರಣ]

ದುರಿತಹರ (ಗು). ೧. ಪಾಪವನ್ನು ನಿವಾರಣೆ ಮಾಡುವ; ಪಾತಕವನ್ನು ಪರಿಹರಿಸುವ : ಇದು ಪುಣ್ಯಕ್ಷೇತ್ರಮಿಾ ಇರ್ದುದೆ ದುರಿತಹರಕ್ಷೇತ್ರಮಿಾ ಮೆಯ್ಯೊಳೀ ತೋರ್ಪುದೆ ಸಿದ್ಧಕ್ಷೇತ್ರಮೆಂದಾದರದಿನಿವರ್ಗೆ ತೋರ್ಪಂತುಟಾಗಿರ್ದುದು (ಸುಕುಮಾ. ೪-೪೬). (ನಾ). ೨. ಪಾಪವನ್ನು ಕಳೆಯುವುದು,-ಪರಿಹರಿಸುವುದು : ನಿಜತತ್ತ್ವಂ ದುರಿತಹರಂ ನಿಜತತ್ತ್ವಮೆ ತಪ್ಪದಪ್ಪುದಾರ್ಯಾಪಟ್ಟಂ (ಪಸಾರ. ೪೩೬). ೩. ಪಾಪವನ್ನು ನಿವಾರಣೆ ಮಾಡುವವನು,-ಪರಿಹರಿಸುವವನು. ೪. ಶಿವ : ವರದ ಶಂಕರ ಭಕ್ತ ಶಂಕರ ದುರಿತಹರ ನಿಖಿಳೈಕರಕ್ಷಣ . . . ಮಮ ರಕ್ಷ (ಬಸಪು. ೨-೧೭). ೫. ಜಿನ: "ದುರಿತಹರನಕ್ಷಯಂ ವೀತರಾಗನರ್ಹಂ ಜಿನೇಶ್ವರಂ ತೀರ್ಥಕರಂ" (ವಸ್ತುಕೋ. ೨-೭) [ಸಂ.]

ದುರಿತಹರಣ (ನಾ). ೧. = ದುರಿತ ವಿನಾಶ : ಆ ಜಿನಪುರಾಣಮುಮ ನಮರೀಜನ ಮೃದುಮಧುರನಿನದಗೀತಮುಮಂ ರಾರಾಜಿತಮಂ ತ್ರಿಜಗಜ್ಜನಪೂಜಿತಮಂ ಪೇಱ್ದೆ ದುರಿತಹರಣಮುಮರಿದೇ (ಶಾಂತಿಪು. ೧-೦೩). ೨. ಪಾಪವನ್ನು ನಾಶಮಾಡುವವನು : ಬಗೆದಂದಮಪ್ಪ ತನು ಬಗೆವುಗೆಯುಂ ಬಗೆದುದಮಪ್ಪಕೆಯ್ತಂ ಚಿತ್ತಂಬುಗೆಯುಂ ಪ[ಪು]ಪ್ಪದ ದೇವರ್ ತೆಗೆದರ್ ಕಿಱುಕಿಱುದೆ ದುರಿತಹರಣನ ಬಗೆಯಂ (ಶಾಂತಿಪು. ೧೦-೦೮). [ಸಂ.]

ದುರಿತಾತ್ಮಕ (ನಾ). ಪಾಪದಿಂದ ಕೂಡಿದವನು ; ಪಾತಕಿ ; ಪಾಪಿಷ್ಠ : ವಿಕಳ ಕುರುನೃಪರೊಳಗೆ ದುರಿತಾತ್ಮಕರ ಕಾಣೆನು ನಿನ್ನ ಸರಿಹೋಲಿಕೆಗೆ (ಕುಮಾಕ. ೧೭-೩). [ಸಂ.]

ದುರಿತಾರಿ (ನಾ). ಪಾಪಕ್ಕೆ ಶತ್ರು,-ಹಗೆ : ಬಾಹೂರಬೊಮ್ಮಯನೆಂಬ ಭಕ್ತನು . . . ವಿಕಾರದೂರನು ಸಾರಭಕ್ತಶರೀರಿ ದುರಿತಾರಿ (ಬಸಪು. ೨೨-೨೩). [ದುರಿತ + ಅರಿ$_6$]

ದುರಿತಾಸಹಿಷ್ಣು (ನಾ). ಪಾಪವನ್ನು ಸಹಿಸದಿರುವವನು: ದುರಿತಾಸಹಿಷ್ಣು ಸುತಪಶ್ಚರಿಷ್ಣು . . . ಗುಣಗಣಾಲಂಕರಿಷ್ಣುವೆನೆ ನೆಗೞ್ದನುದಯಚಂದ್ರಮುನೀಂದ್ರಂ (ಚಂದ್ರಪು. ೧-೨೮). [ದುರಿತ + ಅಸಹಿಷ್ಣು]

ದುರಿದೂಬಲು (ನಾ). (?) : ಪೊಳಗೆರೆ ಕೂಹೆಯ ಕಾಲ ಹಾಕಿಕೊಂಡು ಪಡುವಲಾಗಿ ತಿರಿಗಿದ್ದು ಬಡಗಲಾಗಿ ತಿರಿಗಿ ಪಡುವಲಾಗಿ ತಿರುಗಿ ಬಡಗಲಾಗಿ ತಿರುಗಿದ ದುರಿದೂಬಲಾಗಿ ಕರಿಯ ಕಲ್ಲ ಮೇಲೆ ಹಾದು (ಎಕ.III, ತಿರುಮ. ೬೨-೨೦೨ ; 1622). [P ಇದು 'ಉರಿದೂಬಲಾಗಿ' ಎಂಬುದರ ಅಪಲಿಖಿತ ವಿರಬಹುದೇ ?]

ದುರಿಯಶ 'ದುರುಯಶ' ನೋ.

ದುರಿಸೆ (ನಾ). ಒಂದು ಬಗೆಯ ಹಕ್ಕಿ (?): ದುರಿಸೆ ಗಿಳಿ ಪರ್ದು ಮರವಂ ಮರಕುಟಿಗಂ ಪೞಲೆ ಬುಱುಗಿ ಹಸುಬುಂ ಪುಣಿವುಲ್. (ಸೂಕ್ತಿಸು. ೩-೧೪೬).

[?]

ದುರೀಷಣೆ (ನಾ). ೧. ಶಪಿಸುವುದು ; ಶಾಪ. ೨. ಕೆಟ್ಟ ಕಣ್ಣು.

[ಸಂ. ದುರೀಷಣಾ]

ದುರು$_1$ (ನಾ). ಕಣ್ಣಿನಿಂದ ವ್ಯಕ್ತವಾಗುವ ಸಿಟ್ಟನ್ನು ಸೂಚಿಸುವ ಒಂದು ಅನುಕರಣ ಶಬ್ದ. 'ದುರುಗುಟ್ಟು' ಪರಾ.

ದುರುದುರು, ದುರದುರ₁ (ದ್ವಿರುಕ್ತಿ) : ಇವತ್ತು ದುರುದುರು ಉರಕೋತಾ ಮಾರಿ ಗಂಟ ಹಾಕಿಕೊಂಡ ಹೊರಟರು (ಗಂಗಾಸಾ. ೮೪) ; ಕೋಪಗೊಂಡ ಅವನು ತಲೆಯನ್ನೆತ್ತಿ ಹೆಕ್ಕಿಯನ್ನು ದುರುದುರು ನೋಡುತ್ತಲೇ . . . ಪಕ್ಕಿ ಬೆದು ಬಿತ್ತು (ನೀಗಟ್ಟು. ೩೦) ; ವೈದ್ಯನು ಮತ್ತೆ ಮೇಲೆದ್ದು, ತಲೆಯಲ್ಲಾಡಿಸಿ . . . ದುರುದುರು ದಿಟ್ಟಯ ನೀಲಿಗಣ್ಣುಗಳನ್ನು ಮುಚ್ಚಿದನು (ಪುನರು. ೪೪೮) ; ಈ ಮಾತನ್ನು ಕೇಳಿದ ಕೆಲ ಜನರು ಆ ಜ್ಞಾನಿಯ ದುರದುರ ನೋಡಿದರು (ಕವಿಸೋ. ೭-೫).

ದುರು₂ (ನಾ). ದಟ್ಟವಾದುದಂ ; ಅತಿಶಯವಾದುದು ; ಹೆಚ್ಚಳ. 'ದುರುದುಂಡಗೆ', 'ದುರುದುಂಬಿ₂' ಪರಾ. [<ತುಱುಗು₂]

ದುರುಕ್ತ (ಗು). ೧. ತಪ್ಪಾಗಿ ಹೇಳಿದ ; ಯೋಗ್ಯವಲ್ಲದ ರೀತಿಯಲ್ಲಿ ಹೇಳಿದ. ೨. ಕಠಿಣವಾಗಿ ಆಡಿದ ; ಬಿರುಸಾಗಿ ಹೇಳಿದ. (ನಾ). ೩. ಅಯೋಗ್ಯವಾದ ಮಾತು; ಅನುಚಿತವಾದ ನುಡಿ ; ಕೆಟ್ಟ ಮಾತು: ಸ್ಥಿರಮರ್ಷಶೂನ್ಯಮೆಂಬುದು ದುರುಕ್ತವಿದನಿಂತು ಪೇಳ್ದೊಡಲ್ಲಂ ಪೀನಂ ಮರುಳಂ ಮದಿರಾಪರವಶಶರೀರನುಂ ಪೇಟ್ಗುಮಱಿವನಾವಂ ಪೇಟ್ಗುಂ (ಕವಿಗಾ. ೧-೭೯); ದುರುಕ್ತಮತ್ಯಂತ ದೋಷಮಕ್ಕುಂ ಕೃತಿಯೊಳ್ (ಶಾಕಾವ. ೪೮೨) ; ನೀಂ ನುಡಿವೈ ದುರುಕ್ತಮಂ (ಪಾರ್ಶ್ವಪು. ೨-೦೫). ೪. ಕಠಿಣವಾದ ನುಡಿ ; ಬಿರುಸಾದ ಮಾತು. ೫. ನಿಂದಾಸ್ಪದವಾದುದು. [ಸಂ.]

ದುರುಕ್ತಿ (ನಾ). ೧. ಕೆಡುನುಡಿ ; ಕೆಟ್ಟ ಮಾತು : ಅಂತಾ ದುರಾತ್ಮನ ದುರುಕ್ತಿಗೆ ಜನಕಸುತೆ ಕಡುಮುಳಿದು (ಪಂರಾಮಾ. ೯-೦೬೦ ಪ) ; ಬೇಗೆ ಯೊಳಗಣ ವಿಡುಬಿಗಳ ತೆಱದಿ ವ್ಯಕ್ತ ಉರಿದೇ ಹೋಹಿರಲ್ಲದೆ ಶಕ್ತಿಯುಂಟೇ ನಿಲಲು ನಿಮ್ಮ ದುರುಕ್ತಿಗಳು ಬೇಡಿನ್ನು ಕೆಡುವಿರಿ (ಬಸಪು. ೫೬-೫೪). ೨. ತಿರಸ್ಕಾರದ ಮಾತು ; ನಿಂದೆ ; ತೆಗಳಿಕೆ ; ಬಯ್ಗುಳು : ಎನ್ನ ಮುಂತನಂ ತೊಲಗಿ ಪೋಗೆಂದ ದಶಮುಖನ ದುರುಕ್ತಿಗೆ ವಿಭೀಷಣಂ ಕೋಪಾಗ್ರಹಾವೇಶಮನಪ್ಪುಕೆಯ್ದು (ಪಂರಾಮಾ. ೦೪-೦೬ ಪ). ೩. ಪರುಷವಾದ ನುಡಿ ; ಕಟಕಿ ; ಕಠಿಣವಾದ ಮಾತು : ದನುಜಂ ದುರ್ಗಿಪ್ಪು . . . ಉಗ್ರದುರುಕ್ತಿಯಂ ನೆನೆದಿದೇನಾಶ್ಚರ್ಯಮೆಂದು (ಜಗವಿ. ೩-೦೮) ; ವಿರೋಧಿಯ ಶರಹತಿಗೆ ಬೆಂಡಾಗನಿವನ ದುರುಕ್ತಿಶರಹತಿಗೆ ಅರಸ ಬಳಲಿದನು (ಶುಷ್ಕಾಳಿ. ೧೨-೩೦) ; ಕಟಕಿಯದೇಂ ಪುಳಿಂದ ಬಿಡು ನಿಸ್ಸ ದುರುಕ್ತಿಯಂ (ತಿರಪಂ. ೪-೩೩). [ಸಂ.]

ದುರುಗಮುರುಗಿ, ದುರಂಗುಮಂರುಗಿ (ನಾ). ದುರ್ಗಾದೇವತೆಯ ಅಥವಾ ಮಾರಮ್ಮನ ಉಪಾಸಕರಲ್ಲಿ ಒಂದಂ ಬಗೆ ; ℙ ಇವರು ದಪ್ಪವಾಗಿರುವ ಹಿಡಿಯುಳ್ಳ ಮಂತ್ರ ಸಣ್ಣ ತುದಿಯುಳ್ಳ ಒಂದು ಬಗೆಯಂ ಚಾವಟಿಯಿಂದ ತಮ್ಮ ತೋಳುಗಳನ್ನು ಸುತ್ತುವಂತೆ ದೇಹಕ್ಕೆ ಹೊಡೆದುಕೊಳ್ಳುತ್ತಾರೆ : ನನ್ನ ಜೀವದ ಬೆನ್ನೇರಿ ಬಂತು ಸೊಳ್ಳೆಗಳ ದಂಡು . . . ಅಲ್ಲೊಮ್ಮೆ ಇಲ್ಲೊಮ್ಮೆ ಕೈ ಮೈ ಬಡಿದು ಕೊಳ್ಳುವುದಕ್ಕಿಂತ ಹಚ್ಚಡವನ್ನೇ ಹಗ್ಗ ಮಾಡಿ ದುರುಗಮುರುಗಿಯ ಹಾಗೆ ಪ್ರಯೋಗಿಸಲಿ (ಸಡಾ. III, ೨೦೬೭). **ದುರುಗುಮುರುಗಿ** : ಹಾವಾಡಿಗರು, ಗೊಂದಲಿಗರು, ಡೊಂಬರು, ದುರುಗುಮುರುಗಿಗಳು, ಮಸಣದ ಹಲಗೆ ಕುಟ್ಟುವರು, ಎಲ್ಲರೂ ಸಂದಣಿಸಿ ಒಂದಾಗಿ ಇರುವವರ ತಾಳ್ಮೆಯ ಪರೀಕ್ಷೆಯನು ಮಾಡುವರೋ ? (ಅರಳು. ೩೫೪-೦೦).

[<ದುರ್ಗಿ₁ + <ಮುರಿಗೆ ?]

ದುರುಗಿ 'ದರ್ಗಿ₁' ನೋ.

ದುರುಗುಟ್ಟು, ದುರಗಂಟ್ಟು (ಕ್ರಿ). ನಟ್ಟ ಕಣ್ಣಿನಿಂದ ನೋಡು ; ಕಿಕ್ಕರಿಸು : ದಿಟ್ಟಿಸಿ ನೋಡು : ಅವನು ತನ್ನ ಹೆಂಡತಿಯನ್ನೇ ನೆಟ್ಟನೋಟದಿಂದ ದುರುಗುಟ್ಟಿಕೊಂಡು ನೋಡುತ್ತಿದ್ದನು (ಪುನರು. ೧೪೧) ; ರಾಯರು ಸುಮ್ಮನೆ ದುರುಗಂಟ್ಟಿಕೊಂಡು ಸ್ವಲ್ಪ ಹೊತ್ತು ಆಕಾಶವನ್ನು ನೋಡಿದರು (ಡಾಯಳ. ೯೭) : ದುರುಗುಟ್ಟುವ ಕಣ್ಣುಗಳಿಂದ ತಂದೆಯನ್ನೇ ನೋಡುತ್ತಾ, ಬಿದ್ದಿದ್ದ ತಂಗಿಯನ್ನು ಉಪಚರಿಸಲು ಆರಂಭಿಸಿದ (ಪಾತ್ಕಳ್ಳ. ೨೪೪) ; ತಗುಣೆಯದು ಹಾಗಲ್ಲ. ಇದರ ಸಂಸ್ಪರ್ಶವಾಯಿತೆಂದರೆ ಚರ್ಮಕ್ಕೆ ಕಾದ ಸೂಜಿ ಚುಚ್ಚಿದಂತಾಗುತ್ತದೆ . . . ದೇಹದ ಆ ಭಾಗದಲ್ಲೂ ಅದರ ಸುತ್ತಮುತ್ತಲೂ ದುರುಗುಟ್ಟುವ ಕೆಂಪುಬಣ್ಣ ಹೊಮ್ಮಿ . . . ಊದಿಕೊಳ್ಳುತ್ತದೆ (ನಂಟರು. ೪೫). **ದುರಗುಟ್ಟು** : ಒಳ್ಳೊಳ್ಳೆ ಉಡುಪನ್ನು ಉಡುವ ಯುವತಿಯರನ್ನು ನೀನೇಕೆ ದುರಗುಟ್ಟಿ ನೋಡುವುದು ? (ಸವನೀ. ೩) ; ಜರಗುಟ್ಟುವ ದುರಗುಟ್ಟುವ ಕತ್ತಲೋ ಕತ್ತಲೇ (ಅರಳು. ೩೭-೩). [ದುರು₁ + ಕುಟ್ಟು₂]

ದುರುಗುಮುರುಗಿ 'ದುರಂಗಮುರಂಗಿ' ನೋ.

ದುರುಡಿ (ನಾ). ಬಿದಿರಿನಿಂದ ತಯಾರಿಸಿದ ಬುಟ್ಟಿ : ಬೀಗುತೊಳ್ಯಾಕೆಂತ ಬಡಗಿಮನಿಯ ಕೊಟ್ಟಿ ಬಾನದ ದುರುಡಿ ಬಗಲಾಗ ಅವರಣ್ಣಾ ನೀಡಾಕಿಲ್ಲೆಂದು ಕಸಗೊಂಡ (ಲೋಳಗೀ. ೩೩) ; ರೊಟ್ಟಿ ದುರುಡಿಯನ್ನು ನೆಲಕ್ಕೆ ಅಪ್ಪಳಿಸಿ ನುಡಿದಳು ರತ್ನ (ನಿಸರ್ಗ. ೪೫); ಹಂದರದೊಳಗಿಂದ ಹೋಳಿಗೆಯ ದುರುಡಿಯನ್ನು ತಕ್ಕೊಂಡು ಹೋಗುತ್ತ ಹೆಂಗಸರಿಗೆ ಚಂದ್ರವ್ವ ಹೇಳಿದಳು (ಅಕೋಳ. ೭). [?./ಮರಾ. ದುರಡೀ]

ದುರುದುಂಡಗೆ (ಅ). ಪೂರ್ತಿ ಬೆತ್ತಲೆಯಾಗಿ : ಥೂ! ನೀ ಬೆತ್ತಲೆ ಮಲಗ್ತೀಯೇನೆ . . . ದುರುದುಂಡಗೆ ? (ಮುಕಮ. ೭೭೦).

[ದುರು₂ + ದುಂಡಗೆ₂]

ದುರುದುಂಡಿ 'ದುಂಬುದುಂಡಿ' ನೋ.

ದುರುದುಂಬಿ₁ 'ದುಂಬುದುಂಬಿ' ನೋ.

ದುರುದುಂಬಿ₂ 'ದುರುದುಂಬಿ₂' ನೋ.

ದುರುದುಂಬಿಗ 'ದುಂಬುದುಂಬಿಗ' ನೋ.

ದುರುದುಂಬಿತನ 'ದುಂಬುದುಂಬಿತನ' ನೋ.

ದುರುದುಂಬಿಯಾಟ (ನಾ). ತಂಟಾಟ : ಅಂಬಿಗಾಲಿಡುವ ದುರುದುಂಬಿಯಾಟದಾನಂದದೊಳ್ನಿಜವಾತೆ ನೋಡಿ ನಲಿಯಲು (ಜಿನಮು. ೪-೨).

[ದುರುದುಂಬಿ₁ (<ದುಬುದುಂಬ) + ಆಟ]

ದುರುದುಂಬಿ₂ (ನಾ). ಮೈತುಂಬಿಕೊಂಡಿರುವವಳು ; ಸುಂದರಿ ; ನವಯೌವನೆ : ರಥದಿಂದಾ ಕುಂಭಿನಿಗೆಯಿಳಿದರ್ಜುನಗೆ ದುರುದುಂಬಿಯರು ಆರತಿಯ ಬೆಳಗಿದ ಸಂಭ್ರಮವನೇವೇಳ್ವೆನು (ಜಿನಪಾ. ೪೬-೧೭).

[ದುರು₂ + ತುಂಬು₂ + – ಎ₂]

ದುರುದುಂಬಿ₂, ದುರುದುಂಬಿ₂ (ನಾ). ಕೆಟ್ಟ ತುಂಬಿ; ದಂಪ್ಪ ಭ್ರಮರ: ಕರುವಾಡದಲಿ ದುರುದುಂಬಿಯಂದದೊಳಾಡುತೆಸದರು ವುರದ ಕಾಂತೆಯರು (ಜಿನಪಾ. ೪೬-೦೦) : ರಮಣನೈದಲು ಹೊಚ್ಚಿ ಪಡಿಗಳಿಗವುರಿಸಿದ ಜತು ಮುದ್ರೆಯೊಲು ಆಕ್ರಮಿಸಿದವು ದುರುದುಂಬಿ ಸಲೆ ಪದ್ಮಾಳಗಳಿಗೆಲ್ಲ (ಜಿಪಾಪು. ೭೦೪-೪). **ದುರುದುಂಬಿ₂** : ಈ ದುರುದುಂಬಿಯಿಂದ ಬಾಧೆಪಡುವ ನನ್ನನ್ನು ರಕ್ಷಿಸಿ (ಶಾಳುಂತ. ೦೧-೧೫).

[<ದುರ್ + ದುಂಬಿ₁ (<ತುಂಬಿ₁)]

ದುರುದುರನೆ, ದುರದಂರನೆ (ಅ). ಕೋಪ ಹೊಮ್ಮುವ ಕಣ್ಣಿನ ನೋಟದಿಂದ ಕೂಡಿ ; ಕ್ರೋಧ ಸೂಸುವ ದೃಷ್ಟಿಯೊಡನೆ : ತನಗಲ್ಲದರ ಕಾಕು ಮಾಡುವರ್ನೋಡುವರ್ದುರುದುರನೆ ಸತಿಯರನಳ(ಪತಿಲ. ೩-೬೮);ಕೈಕೆಯು ಜನಪನನು ದುರುದುರನೆ ನೆಟ್ಟಿಸಿ ಕೆರಳಿಯುಸಿರಿದಳು (ಕಾಮಾಸಂ. ೨-೨-೨೫). **ದುರದುರನೆ** : ಕುಮಾರಿಯು ಅವನನ್ನು ದುರದುರನೆ ನೋಡುತ್ತಿರುವಳು (ಅರ್ಜುಳ. ೭೬) ; ಅವನನ್ನು ದುರದುರನೆ ನೋಡುತ್ತ . . . ಮುಂದೆ ಸಾಗಿದರು (ಕಳ್ಳರೂ. ೧೬). [<ದುರು₁ + – ಅನೆ₁]

ದುರುದುರಿಸು₁ 'ದುಜುದುಜಿಸು' ನೋ.

ದರುದುರಿಸು₂ (ಕ್ರಿ). ದುರುಗುಟ್ಟಿ ನೋಡಂ ; **ಚೆನ್ನಾಗಿ ದಿಟ್ಟಿಸಿ ನೋಡಂ** : ನನ್ನವಳ ಸೂಜಿಗೆಲಸದ ಹಸುವ ದುರುದುರಿಸಿ ಸಹಜದಲಿ ಹುಲಿಯೆಂತ ಹೇಳಬಹುದು ಅವಳ ಹಾಡನು ಕೇಳಿ ಹಿಟ್ಲರನ ಪಡೆಯೆಚ್ಚರೇ ತಪ್ಪ ಬೀಳಬಹುದು (ಪಠಾನ. ೪೦-೦).

[<ದುರು₁ + – ಇಸು₅]

ದುರುದ್ದೇಶ (ನಾ). **ಕೆಟ್ಟ ಗುರಿ,–ಹಂಚಿಕೆ ; ಹೀನ ಬಯಕೆ** : ಪ್ರಾಣಾಪಹರಣದ ದುರುದ್ದೇಶದಿಂದ ಅವಳು ಪ್ರೇರಿತಳಾಗಿದ್ದಳೆಂಬುದಕ್ಕೆ ಸಾಕಷ್ಟು ರುಜುವಾತಿಲ್ಲ (ಪುನರು. ೩೦೪). [ಸಂ.]

ದುರುಧುರಾಯೋಗ (ನಾ). [ಜ್ಯೋತಿ] ಜನನಕಾಲದಲ್ಲಿ ಸೂರ್ಯನ ಹೊರತಂ ಇತರ ಎಲ್ಲಾ ಗ್ರಹಗಳೂ ಚಂದ್ರನಿಗೆ ದ್ವಿತೀಯ ಮತ್ತು ದ್ವಾದಶಸ್ಥಾನದಲ್ಲಿರಂವುದರಿಂದ ಉಂಟಾಗಂವ ಒಂದು ಯೋಗ : ಇನವರ್ಜ್ಯಂ ಕ್ಷಿತಿಜಾದಿಗಳ್ ಹಿಮಮಯೂಖಿಂಗಂತ್ಯದೊಳ್ ಕೂಡಿದಂ ದನಫಾಯೋಗವುದಕ್ಕುಂ ... ಅನಂತರಂ ದುರುಧುರಾಯೋಗಂ (ಜಾತಕ. ೧೪-೧).. [ಸಂ.]

ದುರುಪಯೋಗ (ನಾ). ೧. ತಪ್ಪು ಉದ್ದೇಶಕ್ಕೆ ಬಳಸುವುದಂ ; ಕೆಟ್ಟ ಉದ್ದೇಶಕ್ಕೆ ಉಪಯೋಗಿಸುವುದು : ಭಾಷೆ ಕಲಿತ ಮಾನವವ್ಯಕ್ತಿ ಬರಿಯ ಮಾತಿನ ದುರುಪಯೋಗದಿಂದಲೇ ಇನ್ನೊಬ್ಬರ ಮನಸ್ಸನ್ನು ಎಷ್ಟೊಂದು ಕೆಡಿಸಬಲ್ಲದು ? (ಮೂಕಜ್ಜಿ. ೧೩೯) ; ಅಧಿಕಾರದ ದುರುಪಯೋಗ . . . ಜನರ ದುಃಖದಾರಿದ್ರ್ಯಗಳನ್ನು ಕುರಿತು ಅವರು ಮಾತಾಡುತ್ತಿದ್ದರು (ಪುನರು. ೩೮೨). ೨. (ಮತ್ತೊಬ್ಬರ ಹಣವನ್ನು) ಸ್ವಂತಕ್ಕೆ ಉಪಯೋಗಿಸುವುದಂ : ಹಿಂಗ ಸಾರ್ವಜನಿಕ ಹಣದ ದುರುಪಯೋಗ ಮಾಡಿಕೊಂಡ (ಅಪನಾ. ೩). [ಸಂ.]

ದುರುಬುದ್ಧಿ (ನಾ). ಕೆಟ್ಟ ಬುದ್ಧಿ ; ದುಷ್ಟತನ: ದುರುಬುದ್ಧಿಗಳನೆಲ್ಲ ಬಿಡಿಸೊ ನಿನ್ನ ಕರುಣಕವಚವೆನ್ನ ಹರಣಕ್ಕೆ ತೊಡಿಸೊ (ಪುರಂದ. ೧-೯-೧).

[<ಸಂ. ದುರ್ಬುದ್ಧಿ]

ದುರುಮತಿ, ದಂಮ್ಮತಿ (ನಾ). ಕೆಟ್ಟ ಬುದ್ಧಿ ; ಕುಮತಿ: ಪರವಾದರದಲಿ ಕರುಣ ಎನ್ನ ಮೇಲೆ ಹರಹಿ ದುರುಮತಿಯ ಪರಿಹರಿಸುವುದು (ವಿರಾಕ್ಷ. ೬೬ ಅನುಪಲ್ಲವಿ). **ದುಮ್ಮತಿ : "ದುಮ್ಮತಿ– ದುರ್ಮತಿ"** (ತದ್ಭವಕೋ. ೨೦).

[<ಸಂ. ದುರ್ಮತಿ]

ದುರುಮದ (ನಾ). ಕೆಟ್ಟ ಗರ್ವ,–ಸೊಕ್ಕು: ಕಣ್ಣಲ್ಲಿ ಕಂಡ ಸರುವೆ ವಿಷಯಗಳಿಗೆ ಹರಿಯುತೆ ದುರುಮದದೆ ಸೊಕ್ಕಿ . . . ಬಂದೆ ಕೆಡುವೆನಯ್ಯ (ಕೈವ ೦-೦೬-೩). [<ಸಂ. ದುರ್ಮದ]

ದುರುಯಶ, ದಂರಿಯಂಶ (ನಾ). **ಅಪಕೀರ್ತಿ ; ದುಷ್ಕೀರ್ತಿ ; ಕೆಟ್ಟ ಹೆಸರು**: ಮುಱಿದುದಿದು ಗಂಧರ್ವಬಲ ... ಬಱಿಯು ದುರುಯಶವುಳಿದು ದರಸಂಗೆ (ಕುವಾ೩ಆ. ೦೪-೪೨). **ದುರಿಯಶ** : ಲಜ್ಜೆಗೆ ನೆಲೆಯ ಮಾಡಿದ ಹೂಡಿದೈ ದುರಿಯಶವನೆನಗೆಂದ (ಕುವಾ೩ಭೀ. ೬-೩೯).

[<ಸಂ. ದುರ್ಯಶಸ್]

ದುರುವಚನ (ನಾ). ಕೆಟ್ಟ ಮಾತಂ; **ಹೊಲಸು ನುಡಿ**: ಮದಿರಾಪಾನಮದ ವಿಹ್ವಲರು ದುರುವಚನಂ[ಪಾಠಾಂ. ದುರ್ವಚನಂ]ಗಳಲಿ ತಮ್ಮೊಳಗೆ ಬೈದಾಡಿದರು (ನಿಘಾಗ. ೩-೨-೪೮). [<ಸಂ. ದುರ್ವಚನ]

ದುರುವೆ 'ದೂವೆ' ನೋ.

ದುರುಸು₁, ತುರುಸು, ದುಜುಸು (ನಾ). ೧. ರಭಸ; ವೇಗ; ತೀವ್ರತೆ: (ಶ್ಯಾಂಡರ್). ೨. "ಕೆಲಸದ ಭಾರವನ್ನು ಚುರುಕಾಗಿ ನೀಗಿಸುವುದು" (ಜಾನಕೋ. ೭). ೩. **ಪೈಪೋಟಿ ; ಸ್ಪರ್ಧೆ**. 'ದಂರುಸುವಾತು' ಪರಾ. **ತುರುಸು** : ೧. ಒಮ್ಮೊಮ್ಮೆ ಈ ಹರಟೆ ಒಳ್ಳೆ ತುರುಸಿನದಾಗಿರುತ್ತಿತ್ತು (ಸ್ವರ್ಗಕಾ. ೭) ; ಇದರ ಗುಣ ದೋಷಗಳನ್ನು ಕುರಿತು ಪಂಡಿತವಲಯದಲ್ಲಿ ತುರುಸಿನ ಚರ್ಚೆ ಇಂದಿಗೂ ಮುಂದುವರೆದಿದೆ (ಗ್ರಂಥಾಲಿ. ೫೯) ; ಹೆಣ್ಣಿನ ಸ್ಥಾನಮಾನಗಳನ್ನು ಕುರಿತು ಮೂವರಲ್ಲಿಯೂ ಒಳ್ಳೆ ತುರುಸಿನ ಚರ್ಚೆಯಾಗಿತ್ತು (ಕಮನೀ. ೭). ೩. ಅವಳಿಗಾಗಿ ಯಾರು ಯಾರಲ್ಲಿ ತುರುಸು ಬಿದ್ದಿದೆಯೋ (ಅಕೋಳೆ. ೧೩೩) ; ವ್ಯಾಪಾರಸ್ಥರು ತಮ್ಮ ತಮ್ಮೊಳಗಿನ ತುರುಸನ್ನು ತಡೆಯಲು . . . ಗುತ್ತಿಗೆಗಳನ್ನು ಮಾಡಿಕೊಳ್ಳುತ್ತಾರೆ (ತಳ್ಳಡಿ. ೧೧೭). △ **ದುಜುಸು** : ೪. ಬಿಗಿ; ದೃಢತೆ: ಆಲಿಸಿ ಚಿಕದೇವಕ್ಷತ್ರಿಪಾಲನ ರಾಯಸದ ದುಜುಸನಹಿತಮಹೀಪರ್ ಸೋಲದೆ ತಮ್ಮಯ ರಾಣೆಯ ರೋಲೆಗಳಂ ಕಳುಪಿ ಬಲಿತರೆಂದಿನ ತೆಜದೊಳ್ (ಅಪ್ಪತಿ. ೭೯-೮೯).

[ದೇ.ಪ ತಮಿ. ತುರುಚು; ತೆಲು. ದುರುಸು]

ದುರುಸು₂ (ನಾ). (ಕರಾ). ಒಂದಂ ಬಗೆಯ ಸಿಡಿಮದ್ದು

[←ತುಳು. ದುರುಸು, ದುರ್ಸು]

ದುರುಸುವಾತು (ನಾ). **ಪೈಪೋಟಿಯ ಮಾತು ; ಸ್ಪರ್ಧೆಯ ನುಡಿ** ನಗೆವಾತು ನಲ್ವಾತು ದುಗವಾತು ದುರುಸುವಾತುಗಳ ಸೊಗಸುವಾತರೆವಾತು ಸೊಗವಾತುಗಳಿಂದ ಸೊಗಸ ಕಿವಿಗೆ ಸೂಸುವುದು (ಚಿಳವಿ. ೬-೫೬ ಸಾಂಗತ್ಯ).

[ದುರುಸು₁ + ಮಾತು₁]

ದುರುಸ್ತಿ 'ದಂರಸ್ತಿ' ನೋ.

ದುರುಸ್ತ್ತ 'ದುರಸ್ತ್ತ' ನೋ.

ದುರುಹಿಕೆ (ನಾ). ಮೋಸ ; ದ್ರೋಹ. 'ಸ್ವಾಮಿದುರಂಹಿಕೆ' ಪರಾ.

[<ದ್ರೋಹ + – ಇಕೆ]

ದುರುಳ (ಗಂ). ೧. ದುಷ್ಟವಾದ ; ಕ್ರೂರವಾದ : ಗಿರಿಯ ಶಿಖರವನೇಱಿ ಕೆಡವೆನೊ ದುರುಳ ಮದಕರಿಗಾಂತು ಮಡಿವೆನೊ (ಜ ಸ ಪು. ೬೦-೫೮); ದುರುಳ ಹಿರಣ್ಯಕನ ಸೀಳ್ದೆ (ಪುರಂದ. ೪-೧೬೦-೦೯). ೨. ತೀಕ್ಷ್ಣವಾದ ; ಉಗ್ರವಾದ. 'ದಂರುಳಗರಳ' ಪರಾ. (ನಾ). ೩. ದುಷ್ಟ ; **ಕೆಟ್ಟವನು** : ದುರುಳರು ದೌಷ್ಟ್ಯದಿ ಮರುಳರು ಮೌಢ್ಯದಿ ನಯಗೆಡೆ, ಹದ್ದಿನೊಳಿಡಲಾಯ್ತು (ಅಹಲ್ಯ. ೩೦-೭). ೪. ಮೋಸಗಾರ; ಧೂರ್ತ ; ಕಪಟಿ: "ದುರುಳರೆನಲ್ಕೂರ್ತರೆಂಬರು" (ಚತುನಿ. ೪೪); ದುರುಳರನೊಕ್ಕಲಿಕ್ಕೆ ಪುಚ್ಚಿವೊಕ್ಕರ ರಕ್ಷಿಸಿ . . . ಶಾಸನಂಗಳಂ ಬರಿಸಿ ಬುಧರ್ಗೆ ಬಿತ್ತರಿಸಿದಂ ಜಸಮಂ ಯುವರಾಜಚಂದ್ರಮಂ (ಕಾದಂಪೂ. ೬೦೩) ; ನೆರವಿಗಳೆಲೇ ಎಂಡಗೊರವ ಹೋಹರೆ ಕಂಡು ಅಕ್ಕುವಳೆ ಪತಿಹಿತವ ನಿನಗೆಲೆ ಮರುಳ್ತರಳ ಚಿಕ್ಕನೆ ದು[ಪಾಠಾಂ. ಮು]ರುಳ ನಿನ್ನ ವಶವಲ್ಲವೆಲೆ ಮರುಳ (ಇಷಕ. ದೇ. ೪೪-೧೦); ದುರುಳರಾಡುವ ಹೊಳ್ಳುನುಡಿಗಳು ಗರುವರಭಿಮತವಲ್ಲ(ಕುವಾ೩ಉ. ೩-೧೭); ದುರುಳರಿಬ್ಬರಿಗಿತ್ತರತಿನಿಷ್ಠುರದ ಶಾಪವನು (ತೊರಕಾ. ೧-೪-೧೪); ವರಕೃತಿಯುಕ್ತಿಯನಱಿಯದ ದುರುಳಂಗಂ ಜಱಿದು ಮೆಚ್ಚಿವುದುಚಿತಂ ನಿಚಿತಂ (ಹವಿಸ್ಮಾಕ. ೧-೧೭). ೫. (ಆಲಂ) **ಹೋರಾಟಗಾರ** : ಕರೆಕರೆದು ಮೂದಲಿಸಿ ಕಡುಹಿನ ದುರುಳರುಬ್ಬಿನ ಮೇಲೆ ಹೊಕ್ಕಬ್ಬರಿಸಿ ಹೋಯಿದರು (ಕುವಾ೩ಭೀ. ೪-೩೮). [ದೇ.ಪ ತುಳು. ದುರುಳ./ಮಾರಾ. ದುರಳ]

ದುರುಳಗರಳ (ನಾ). **ತೀಕ್ಷ್ಣವಾದ ವಿಷ** : ತಾಯಿಯುಳ್ಳಡೆ ದುರುಳಗರಳವನೇಕೆ ಸುತನಂ ಕುಡಿಯಲೀಸುವಳು (ಬಸಪು. ೧೩-೮).

[ದುರುಳ + ಗರಳ (= ಗರಲ)]

ದುರುಳತನ (ನಾ). ೧. ದುಷ್ಟತನ ; ನೀಚತನ : ಆರುಪನೊಲ್ಲೆನೆಂದು ಅರಣ್ಯಕ್ಕೆ ಹೋಹುದು ಕಾರ್ಯವಲ್ಲ ದುರುಳ [ಪಾಠಾಂ.ಳು]ತನ (ಸಮಾವ. ೧೪-೩೨) ; ದುರುಳತನದಲಿ ಜೈನರಲ್ಲರು ನೆರೆದು ನಮ್ಮೂರೊಳು ಮಹೇಶನ ಗೊರವನಿರ್ದಹನೊರ್ಬನಂ ತಗುಳ್ವಂದವೆಂದೆನುತ (ಬಸಪು. ೫೦-೫೪) ; ದುರುಳತನವಿದು ಬೇಡ ಖುಲ್ಲರ ನೆರವಿಯೊಳಗಾಡಿದೊಡೆ ತಪ್ಪದು ನರಕ (ಕುವಾ೩ಉ. ೪-೫೦) ; ತಮ್ಮ ಕೇಳೀ ದು[ಪಾಠಾಂ. ಮು]ರುಳತನ ಬೇಡ

(ತೊರರಾ. ೨-೩-೩೦). ೨. ಮೋಸಗಾರಿಕೆ ; ವಂಚಕತನ : ನಿನ್ನ ಮಕ್ಕಳ ದುರುಳತನಕಂಜುವನೆ ಮುರರಿಪುಯೆಂದನಾ ವಿದುರ (ಕುಮ್ಯಾಉ. ೯-೫೨) ; ದರ್ವೀಕರಾರಿವಾಹನನೆ ಪಿತನಾಗಿಯುಂ ಕರ್ವುವಿಲ್ಲಂ ಕಪರ್ದಿಯ ಕಣ್ಗಳಿಂದುರಿದುದಿಲ್ಲವೇ ದುರುಳತನದಿ (ಸಮ್ಯಕ್ಕಾ. ೧೦-೪) ; ಇತ್ತ ತನ್ನ ಮನೆಗೆ ಮರಳಿದ ಊರ್ವಶಿ ಚಿತ್ರಸೇನನನ್ನು ಕರಸಿ ಪಾರ್ಥ ಮಾಡಿದ ದುರುಳತನವನ್ನು ವಿವರಿಸಿ ದೂರಿದಳು (ಧಾಮಚಿ. ೦೨೭). ೩. ಕೆಡಂಕು ; ಕೇಡು : ಅರಸ ಮೃತಸಂಜೀವಿನಿಯ ಬಲುಹಿರಲು ಬಹಳವ್ಯಾಧಿ ಮಾಡುವ ದುರುಳತನ ತಾನೇನು (ಕುಮ್ಯಾದ್ರೋ. ೧೦-೪೪). ೪. ತುಂಟಾಟ: ದುರುಳ ತನವುಳ್ಳ ಈ ಬಾಲಕನಲ್ಲಿ ನನ್ನ ಮನಸ್ಸು ಆಸೆಪಡುವುದು (ಶಾಕುಂತ. ೧೦೫-೦೪). [ದುರುಳ + – ತನ]

ದುರುಳತ್ವ (ನಾ). ಹೋರಾಟಮಾಡುವಿಕೆ; ಸೆಣಸಾಟ. 'ರಣದುರುಳತ್ವ' ಪರಾ. [ದುರುಳ + – ತ್ವ]

ದುರುಳು (ನಾ). ಕೆಡುಕು : ದುರುಳ ನುಡಿದನ ನಾಲಗೆಯ ನಿಡುಸೆರೆಯ ಬಿಡಿಸುವೆ (ಕುಮ್ಯಾಕ. ೦೨-೩೦) ; ಇದಾವ ಕುಚೋದ್ಯಕ್ಕೆ ದುರುಳಿಗೆ ಹೋದೆಯೆ, ಪುನಃ ? (ಬೆಟ್ಟಅ. ೦೪-೧೯). [ದುರುಳ + – ಉ$_4$]

ದುರುಳುತನ (ನಾ). ದುಷ್ಟತನ ; ನೀಚತನ : ಕೆರಳಿದರೆ ಕಾಳಹ ದು ಭೀಮನ ದುರುಳು [ಪಾಠಾಂ. ದುರುಳು, ದುರುಳ]ತನವೀ ಕೌರವೇಂದ್ರನ ಹುರುಳು [ಪಾಠಾಂ. ಡು] ಹುರಿಯೇಱುವುದು ಮತವಲ್ಲೆಂದನಂಧನೃಪ (ಕುಮ್ಯಾಅ. ೧೭-೨೨) ; ಯಾರಾದರೂ ಸೈನಿಕರು ದುರುಳುತನದಿಂದ ಅಗ್ರ ಹಾರದ ನಿವಾಸಿಗಳ ಮೇಲೆ ಕೈಮಾಡಿದರೆ ... ಶಿರಚ್ಛೇದ ಮಾಡಿಸುತ್ತಿದ್ದನು (ಶ್ರೀರಾಯ. ೩೧೯). [ದುರುಳು + – ತನ]

ದುರುಳೆ (ನಾ). ಕೆಟ್ಟ ಹೆಂಗಸು ; ಕೆಡುಕಿ ; ದುಷ್ಟೆ : ದುರುಳೆಯರು ಕಷ್ಟೆಯರು ವಂಚಕಿಯರು ಜಗಳಗಂಟಿಯರು (ಬಸಪು. ೪೦-೫೩) ; ದುರುಳೆ ಭವಾನಿಯ ಬಿರುದೆಂದು ಕವಡೆಯ ಸರ ಕಂಠದಲಿ ಕಟ್ಟಿ (ಪುರಂದ. ೪-೫೦-೬). [ದುರುಳ + – ಎ$_2$]

ದುರೂಪೆ (ನಾ). ಕುರೂಪಿ ; ಅಂದಗೇಡಿಯಾದವಳು : ನೀಳನೆಂಬ ಮಾದೆಗಂಗಂ ಕೇಶಿಯೆಂಬ ಮಾದೆಗಿಗಂ ಮಗಳ್ ದುರೂಪೆ ದುರ್ವರ್ಣೆ ದುರ್ಗಂಧೆ . . . ಪೊಲತಿಯಾಗಿ ಪುಟ್ಟಿ (ಪಡ್ಮಾರಾ. ೯-೬). [ಸಂ. ದುರೂಪಾ]

ದುರೂಹ (ಗು). ೧. ಕಲ್ಪಿಸಲು ಕಷ್ಟವಾದ,–ಕ್ಲಿಷ್ಟವಾದ ; ಗಹನ ವಾದ : ಪ್ರಪಂಚದ ಅನೇಕ ದುರೂಹಸಮಸ್ಯೆಗಳನ್ನು ವಿಚಾರಮಾಡಲು ಪ್ರಯತ್ನಿಸುತ್ತಿದ್ದೆ (ನಿಬಂಧ. II, ೫೧). ೨. ಕಲ್ಪಕತೆಯಿಲ್ಲದ ; ಕಲ್ಪನಾ ಸೌಂದರ್ಯವಿಲ್ಲದ : ಈ ಎರಡು ಕವಿತೆಗಳಲ್ಲಿ ಯಾವ ಗುಣವೂ ಇಲ್ಲ ; ಇವು ನೀರಸ, ದುರೂಹ ಮತ್ತು ಬಾಲಕಸುಲಭವಾದ, ಅಸಾರವಾದ, ಮಾತುಗಳಿಂದ ತುಂಬಿವೆ (ಬಂಕಿಮ. ೩೩). (ನಾ). ೩. ಕ್ಲಿಷ್ಟವಾದುದು : ಒಂದು ಮಾತ್ರ ಉಪಾಯವುಂಟು. ಅದು ಅತ್ಯಂತ ದುರೂಹ (ಇಪ್ಪಕ. ೧೫೭). [ಸಂ.]

ದುರೂಹತೆ (ನಾ). ಜಟಿಲತೆ ; ಕ್ಲಿಷ್ಟತೆ : ಅವನು ಎಷ್ಟು ಸುಲಭವಾದ ಸಾಧನವನ್ನು ಅವಲಂಬಿಸುವುದಕ್ಕೆ ಹೋಗುತ್ತಾನೋ ಅಷ್ಟೂ ಅಷ್ಟು ದುರೂಹತೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾನೆ (ನಿಬಂಧ. II, ೪೨೪). [ಸಂ. ದುರೂಹತಾ]

ದುರೂಹೆ (ನಾ). ಸರಿಯಲ್ಲದ ಅನುಮಾನ ; ಕುತರ್ಕ ; ತಪ್ಪಾಗಿ ಊಹಿಸುವುದು : ಈ ನಾಣ್ಯಗಳನ್ನು ನಾನೇಕೆ ಉಳಿಸಿಕೊಂಡೆ ಎಂಬುದು ನನ್ನ ಮಿತ್ರರಿಗೊಂದು ಸಮಸ್ಯೆಯಾಗಿದೆ ಯಾರಿಗೂ ದಾಟಿಸಲಾರದೆ ಹೀಗೆ ಉಳಿಸಿರಬೇಕೆಂಬ ದುರೂಹೆಯನ್ನು ಅವರು ಮಾಡಿಕೊಂಡಿರಬೇಕು (ಗಾಳಿಪ. ೦೫೧). [ಸಂ. ದುರೂಹ]

ದುರೂಹ್ಯ (ಗು). ಕಲ್ಪನೆಗೆ ಅಸಾಧ್ಯವಾದ ; ಭಾವಿಸಲಾಗದ : "ಗಣಿಸ ಲಾಗದಷ್ಟು (ಅತಿದೊಡ್ಡದಾದ) ಅಗಣ್ಯ ; ಮೊದಲೇ ಗಣಿಸಲು, ಎಣಿಸಲು, ಸಾಧ್ಯವಾಗದ ; ದುರೂಹ್ಯ" (Incalculable. ಇಂಕನಿ). [ಸಂ.]

ದುರೇಷಣೆ (ನಾ). ೧. ಶಾಪ ; ಶಪಿಸುವುದು. ೨. ಕೆಟ್ಟ ಕಣ್ಣು. [ಸಂ. ದುರೇಷಣಾ]

ದುರೋದರ (ನಾ). ೧. ಜೂಜು ; ದ್ಯೂತ : ಆ ದುರೋದರವ್ಯತಿಕರ ದೊಳ್ಪರಾಭವಿಸಿ ಕೃಷ್ಣೆಯನುಯ್ದಪರಾಧಿಯೆಲ್ಲಿದಂ ಕೃತಕಸಭಾಪ್ರವೇಶ ಕರನೆಲ್ಲಿದನೋ ಸುಯೋಧನಂ (ಗದಾಯು. ೬-೩೯). ೨. ಜೂಜಿನ ಪಣ ; ಬಾಜಿ : "ದ್ಯೂತಕರಂ ದ್ಯೂತಪಣಂ ದ್ಯೂತಮೆನಿಪ್ಪುವು ದುರೋದರೋಪಾ ಖ್ಯಾನಂ" (ವಸ್ತುಕೋ. ೧೩೨-೮೮). ೩. ಜೂಜುಗಾರ. [ಸಂ.]

ದುರೋದರಕ್ರೀಡೆ (ನಾ). ಜೂಜಾಟ : ದುರೋದರಕ್ರೀಡಾರಾಗಿಣಿಯರುಂ ಚಿತ್ರಕರ್ಮಚತುರೆಯರುಂ ಸುಭಾಷಿತಪಠನಪರಿಣತೆಯರುಮೆನಿಸಿದ ಕನ್ನಿಕೆಯ ರೊಡನೆ ... ಬಿಜಯಂಗೆಯ್ದಂ (ಕಾದಂಉ. ೭೫). [ದುರೋದರ + ಕ್ರೀಡೆ]

ದುರೌಷಧ (ನಾ). ಕೆಟ್ಟ ಔಷಧ ; ದುಷ್ಪರಿಣಾಮವನ್ನುಂಟುಮಾಡುವ ವಂದ್ದು : ಪತಿ ಬಸದಕ್ಕುಮಿನ್ತು ತಮಗೆಂದು ದುರೌಷಧಮಂ ಪ್ರಯೋಗಿಪ ಕ್ರಿತಕೆಯರ್ (ಸೌಇಇ. XX, ೨೪೮-೪೫ ; 1228). [ಸಂ.]

ದುರ್ಗ (ಗು). ೧. ಸೇರಲು ಅಸಾಧ್ಯವಾದ ; ಪ್ರವೇಶಿಸಲು ಅಶಕ್ಯ ವಾದ; ದುರ್ಗಮವಾದ. (ನಾ). ೨. ಪ್ರವೇಶಿಸಲು ಅಶಕ್ಯವಾದುದು; ದುರ್ಗಮವಾದುದು : ಕಾಲಿಡುವಡಿದು ದುರ್ಗವೆನುತಾ ಸಾಲ ಬಿಟ್ಟನು (ಕುಮ್ಯಾಕ. ೧೧-೨೪). ೩. ಏಳಂ ರಾಜ್ಯಾಂಗಗಳಲ್ಲಿ ಒಂದು ; ಕೋಟೆ : ದುರ್ಗಂಗಳಂ ಪಾಟ್ಗೊಳಿಸುತಮಟವೀವ್ರಾತಮಂ ಚೂರ್ಣಿಸುತ್ತಂ . . . ಆತ್ಮೀಯ ಸೈನ್ಯೋತ್ಕರದಿಂದಂ ರಾಜವರ್ಗಂ ಬೆರಸಿರೆ ಪೊಱಮಟ್ಟಂ ಮಹೀ ಭೃನ್ಮಹೇಂದ್ರಂ (ಕಾದಂಪೂ. ೬೦೨) ; ಇಂತಷ್ಟವಿಧಮಪ್ಪ ದುರ್ಗಂಗಳೊಳಂ ನಮ್ಮಾಶ್ರಯಿಸಿದ ದುರ್ಗಕ್ಕೆ ದುರ್ಗಗುಣಮಿಲ್ಲ (ಪಂಚತಂ. ೨೧೬-೪) ; ಜನಪಂ ತನ್ನ ಭುಜಪ್ರತಾಪದಿಂ . . . ಭಂಡಾರದಿಂ ದುರ್ಗದಿಂ ಘನ ಸಪ್ತಾಂಗವಿಳಾಸಮಂ ಪಡೆದು (ದಶಕು. ೧-೪೯) ; ದುರ್ಗದಿಂದ ತಪ್ಪಿಸಿ ಕೊಂಡು ಹೋಗುವ ಆಲೋಚನೆಗಳೆಲ್ಲವೂ ನಡೆದಿವೆಯೆ ? (ರಾವಿಜ. ೨೦) ; ದುರ್ಗದಲ್ಲಿರುವವನಿಗೆ ಮಾರ್ಗದ ಗೊಡವೆ ಯಾಕೆ ? (ಗಾದೆ). 'ದುರ್ಗ ಪಂಚಕ', 'ಸಪ್ತಾಂಗ' ಪರಾ. ೪. (ನಡೆದಾಡಲು ಅಸಾಧ್ಯವಾದ) ಅಡವಿ,–ಕಾಡು : "ದುರ್ಗಂ ದುರ್ಗಮ ವಿಪಿನಂ" (ವಸ್ತುಕೋ. ೧೨೫-೪೨); "ಕಾನನಂ ದುರ್ಗಮೆಂದೆನೆ ಸತ್ರಮೆಂದೆನಲಡವಿಗಭಿಧಾನಮಕ್ಕು" (ಮಂಗರಾ. ೪೫-೪೯). ೫. ಪಟ್ಟಣ ; ನಗರ : "ದುರ್ಗಮೆನೆ ನಗರಮೆನೆ ಪಟ್ಟಣಂ" (ಮಂಗರಾ. ೫೬-೩). ೬. ಬೆಟ್ಟ ; ಗುಡ್ಡ. 'ದುರ್ಗಾಗ್ರ' ಪರಾ. ೭. ಕನ್ನಡದ ಒಬ್ಬ ಕವಿ ; ದುರ್ಗಸಿಂಹ : ವಸುಧೆಯೊಳಗೆ ಸತ್ಪುರುಷನೆನಿಸಿ ಮೆಱೆವಂ ದುರ್ಗಂ (ಪಂಚತಂ. ೩೧೧-೮). [ಸಂ.]

ದುರ್ಗಂಧ (ಗು). ೧. ಕೆಟ್ಟ ವಾಸನೆಯುಳ್ಳ ; ದುರ್ವಾಸನೆಯನ್ನು ಹೊಂದಿದ. (ನಾ). ೨. ಕೆಟ್ಟವಾಸನೆ ; ದುರ್ನಾತ ; ದುರ್ವಾಸನೆ : ಮುನೀಂದ್ರನಾಕೆಯೊಡಲೀ ದುರ್ಗಂಧವೋಪಂತೆ ಯೋಜನಗಂಧಿತ್ವ ಮನಿತ್ತು (ಪಂಪಭಾ. ೦-೬೯) ; ಸುಗಂಧ ದುರ್ಗಂಧವ ಕಳೆದು ಧೂಪಾರತಿಯ ಮಾಡುವೆನಯ್ಯಾ (ಅಂಬಿವ. ೪೦೩-೧೦೫) ; ನೆತ್ತರು ಸತ್ತ ತೊಗಲ ನರಂಗಳತಿ ದುರ್ಗಂಧವಾಗಳು ನಾರ್ವ ಬಾತೊಡಲ . . . ಹೇಸಿಕೆಯು ನಾತವಧಿಕ ಭಯಂಕರವು (ಬಸಪು. ೪೬-೫೮) ; ಕೊಱೆದ ಕದಪುಗಳ ವ್ರಣದ ದುರ್ಗಂಧದ ಮಹಾಭೀಷಣದ ರಕ್ಕಸಿ ಬಂದಳಾ ರಾವಣನ ರಚಿತ ಸಭಾಂತರಾಳಕೆ (ತೊರರಾ. ೩-೭-೧೨). ೩. ಕೆಟ್ಟವಾಸನೆ ಬರುವ ವಸ್ತು. ೪. ಈರುಳ್ಳಿ. ೫. ಮಾವಿನ ಮರ. ೬. ಒಂದು ಬಗೆಯ ಸಸ್ಯ : "ಪೂತಿಕಂದ–ಇಂಗುಳ, ವಾಕುಚಿ, ದುರ್ಗಂಧ" (ಓಷಧಿ. ೧೦೦). [ಸಂ.]

ದುರ್ಗಂಧವಾಸ (ನಾ). ಒಂದು ನರಕದ ಹೆಸರು : ಮತ್ತಂ ತುಷಾಗ್ನಿ ಕ್ರಿಮಿಸಂಘ ಅಮೇಧ್ಯಪ್ರತಿಷ್ಠೆ ಮೂತ್ರಕೂಪ ದುರ್ಗಂಧವಾಸಗಳೆಂಬೈದು ಮಂತ್ರಿನರಕಗಳ (ವಿವೇಕ. ೧೯೩). [ದುರ್ಗಂಧ + ವಾಸ್ಯ]

ದುರ್ಗಂಧೆ (ನಾ). (ದೇಹದಲ್ಲಿ) ಕೆಟ್ಟವಾಸನೆಯುಳ್ಳವಳು.-ದುರ್ವಾಸನೆಯುಳ್ಳವಳು : ದುರೂಪೆ ದುರ್ವರ್ಣೆ ದುರ್ಗಂಧೆ . . . ಪೊಲತಿಯಾಗಿ ಪುಟ್ಟಿ (ವಡ್ಡಾರಾ. ೯-೬) ; ದುರ್ಗಂಧೆ ದುರ್ವರ್ಣೆ ಜಾತ್ಯಂಧಕಿ . . . ಎನಿಸಿದ ಪಾಪಕ್ಕೆ ಪಕ್ಕಾಗಿ (ಸುಕುಮಾ. ೫-೨೦). [ಸಂ. ದುರ್ಗಂಧಾ]

ದುರ್ಗಗುಣ (ನಾ). ಕೋಟೆಗೆ ಇರಬೇಕಾದ ಲಕ್ಷಣ ; ದುರ್ಗಕ್ಕಿರಬೇಕಾದ ಗುಣ ; P ಅಂತರ್ದ್ವೀಪ, ಮಹಾಸ್ಥಳ (ಜಲದುರ್ಗದ ಭೇದ), ಗುಹ್ಯ, ಪ್ರಸ್ತರ (ಗಿರಿದುರ್ಗದ ಭೇದ), ಉದಕಸ್ತಂಭ, ವೈರಿಣಿ (ಸ್ಥಳದುರ್ಗದ ಭೇದ), ಕರ್ದಮೋದಕ, ಸ್ತಂಭನಗಹನ (ವನದುರ್ಗದ ಭೇದ) ಇವು ದುರ್ಗಕ್ಕಿರಬೇಕಾದ ಎಂಟು ಬಗೆಯ ಲಕ್ಷಣಗಳು : ಇಂತಷ್ಟವಿಧಮಪ್ಪ ದುರ್ಗಂಗಳೊಳಂ ನಮ್ಮಾಶ್ರಯಿಸಿದ ದುರ್ಗಕ್ಕೆ ದುರ್ಗಗುಣಮಿಲ್ಲ (ಪಂಚತಂ. ೨೧೬-೪). ' ದುರ್ಗಪಂಚಕ ' ಪರಾ. [ದುರ್ಗ + ಗುಣ]

ದುರ್ಗತ (ಗು). ೧. ಬಡತನದ ; ದಾರಿದ್ರ್ಯವುಳ್ಳ. ೨. ಭಾಗ್ಯಹೀನವಾದ ; ಹೀನ ಅದೃಷ್ಟವುಳ್ಳ. ೩. ವ್ಯಥೆಗೊಂಡ ; ದುಃಖಗೊಂಡ ; ದುಃಖಪೂರಿತವಾದ. ೪. ಕಷ್ಟದಲ್ಲಿ ಸಿಲುಕಿದ ; ತೊಂದರೆಗೀಡಾದ. (ನಾ). ೫. ಬಡವ ; ದರಿದ್ರ : "ಕ್ಷುದ್ರಃ, ದರಿದ್ರಃ, ಅಕಿಂಚನಃ, ದುರ್ವಿಧಃ, ದುಸ್ಥಃ, ದುರ್ಗತಃ-ಈ ೬ ಬಡವಂ" (ಹಲಾಯು. ೫೭-೧೯೩). ೬. ದುಸ್ಥಿತಿಯಲ್ಲಿರುವವನು. [ಸಂ.]

ದುರ್ಗತಿ (ನಾ). ೧. ಕೆಟ್ಟ ಅವಸ್ಥೆ ; ದುರ್ದೆಶೆ ; ಕಷ್ಟ : ಪಾಪದಿಂದಿನಿತು ನಿಕೃಷ್ಟ ದುರ್ಗತಿಗಳೊಳ್ ಬಲವಂದುದನೀಗಳಾಗಿಯುಂ ನೆನೆದು ನಿರಾಕುಳಂ ಬಗೆದು ಭಾವಿಸು ನಿನ್ನ ಭವಾಂತರಂಗಳಂ (ಸುಕುಮಾ. ೫-೨೯) ; ಬ್ರಹ್ಮಹತ್ಯ ಭ್ರೂಣಹತ್ಯ ವೈತರಣಿ ದುರ್ಗತಿ ಪಂಚಮಹಾಪಾತಕದಿಂದಧಿಕನೋಡಾ ಅಳುಪಿ ಭವಿಯೊಡನುಂಡರೆ ಭಕ್ತನಲ್ಲಾ (ಬಸವ. ೬೭೦). ೨. ದಾರಿದ್ರ್ಯ ; ಬಡತನ. 'ದುರ್ಗತಿಕ' ಪರಾ. ೩. ದುರದೃಷ್ಟ ; ದೌರ್ಭಾಗ್ಯ. ೪. ನರಕ : "ನಿರಯಂ ಶ್ವಭ್ರಂ ದುರ್ಗತಿ ನರಕಂ" (ವಸ್ತುಕೋ. ೨೦-೧೦) ; "ಓತು ದುರ್ಗತಿ ನಿರಯಮೆನೆ ನರಕಮಕ್ಕುಂ" (ಮಂಗರಾ. ೧೧೬-೧) ; ಆಸೆ ಮೋಹವು ದುರ್ಗತಿಗಳ ನಿವಾಸವೆಂಬುದನಱಿಯಲಾ (ಬಸಪು. ೪೦-೪೭); ನಿರಪರಾಧಿಯನ್ನು ದೂರಿದರೆ ತನ್ನ ಶ್ರೇಯಸ್ಸು ಹಾಳಾಗುವುದಲ್ಲದೆ ದುರ್ಗತಿ ಬರುತ್ತದೆ ! (ವಚಭಾ. ೭೯). [ಸಂ.]

ದುರ್ಗತಿಕ (ನಾ). ಬಡವ ; ದರಿದ್ರ : "ಅಧನಂ ದುರ್ಗತಿಕಂ ದುರ್ವಿಧನೆಂದಱಿಗಿಲ್ಲದಂ ದರಿದ್ರಂ ನಿಸ್ವಂ" (ವಸ್ತುಕೋ. ೬೩-೬೬). [ಸಂ.]

ದುರ್ಗತಿವಡೆ (ಕ್ರಿ). ೧. ದುರ್ದೆಶೆಯನ್ನು ಪಡೆ. ೨. ನರಕವನ್ನು ಪಡೆ : ಪುರುಷನೊಳು ಶಿವಭಕ್ತಿಯಿಲ್ಲದೆ ತರುಣಿ ಶಿವಭಕ್ತಿಯೊಳಿರುತ ತತ್‌ಪುರುಷನಂ ಮೀಱಿದ ತರುಣಿ ದುರ್ಗತಿವಡೆಯಳೆಂದು (ಬಸಪು. ೫೨-೨೪).

[ದುರ್ಗತಿ + ಪಡೆ$_1$]

ದುರ್ಗತಿವೋಗು (ಕ್ರಿ). ೧. ಅನಿಷ್ಟಕ್ಕೆ ಗುರಿಯಾಗು ; ದುರ್ಗತಿಗೆ ಈಡಾಗು : ಎಲೆ ಗಾಂಪ ಸಮಸ್ತ ನಂಟರಂ ಮಡದಿಯನಿಷ್ಟರಂ ಕಿಡಿಸಿ ದುರ್ಗತಿವೋಗದೆ ಬರ್ಪುದೆಂದು ನಿಗ್ಗೆಡಿತನದಿಂ ಸಬಾಂಧವಜನಂ ತೆಗೆದಪ್ಪಿದರಾ ಮುನೀಂದ್ರನಂ (ಧರ್ಮಾಮೃ. ೮-೮೮). ೨. ನರಕವನ್ನು ಸೇರು. [ದುರ್ಗತಿ + ಪೋಗು$_1$]

ದುರ್ಗನ್ಕೆಱೆ (ನಾ). ಒಂದು ಕೆರೆಯ ಹೆಸರು: ಪ್ರಥಮಮ್ ದುರ್ಗ್ಗನ್‌ಕೆಱೆ ಮೂಡೈ ಕಡೆಗೋಡೆ ಎ ಸಂಗವೋಯರಾ ಕೆಱೆ (ಮೈಅರಿ. ೧೯೧೪, ೧೨-೧೬ ; 819). [<ದುರ್ಗ + ಕೆಱೆ]

ದುರ್ಗಪಂಚಕ (ನಾ). ಐದು ಬಗೆಯ ದುರ್ಗಗಳು,-ಆಕ್ರಮಿಸಲು ಕಷ್ಟಸಾಧ್ಯವಾದ ಸ್ಥಳಗಳು ; ಜಲದುರ್ಗ, ಗಿರಿದುರ್ಗ, ವನದುರ್ಗ, ಸ್ಥಳದುರ್ಗ ಮತ್ತು ಈರಿಣದುರ್ಗ ಎಂಬ ಐದು ದುರ್ಗಗಳು : ಅವಯವದಿಂದಱಿಗುಂ ಪಂಚವಿಧಾಹಿತವರ್ಗದುರ್ಗಪಂಚಕಮುಂ ಶಾತ್ರವ ಮಂತ್ರಪಂಚಕಮನೊಪ್ಪುವ ತತ್ಪ್ರಭುಮಂತ್ರಶಕ್ತಿಗಳ್ ತೀವ್ರಂಗಳ್ (ಶಾಂತಿಪು. ೨-೪೭) ; ಪೃಥ್ವೀಪಾಲ ಭೂಪಾಲಂ . . . ಷಡ್ಬಲಬಲಿಷ್ಠನುಂ ದುರ್ಗಪಂಚಕ ಸಮಗ್ರನುಂ . . . ಆಗಿರ್ಪಂ (ಹಂದ್ರಪು. ೯-೧೧೭ ವ). 'ದುರ್ಗಗುಣ' ಪರಾ. P ದುರ್ಗಗಳು ಎಷ್ಟು ಬಗೆಯವು ಎಂಬುದರ ಬಗ್ಗೆ ನಿರ್ದಿಷ್ಟವಾದ ಸಂಖ್ಯೆಯಿಲ್ಲ. ಉಪಲಬ್ಧವಾದ ವಿವರಗಳು ಈ ರೀತಿಯಿವೆ. "ದುರ್ಗ-೪ : ಜಲದುರ್ಗ (ಜಾಲಕಂ), ಗಿರಿ "ದುರ್ಗ (ಪಾರ್ವತಂ), ಸ್ಥಳದುರ್ಗ (ಧಾನ್ವನಂ), ವನದುರ್ಗ (ವನಜಂ) (ಪಂಚತಂ. ೧೬೯ ಶ್ಲೋ). ದುರ್ಗ-೫ : ಉದಕ, ಪರ್ವತ, ವೃಕ್ಷ, ಈರಿಣ, ಧನ್ವ (ಬೃಹಸ್ಪತಿ-ಭಾಗ-೪-೧೮-೩೦ ವ್ಯಾ). ದುರ್ಗ-೬: ಧನ್ವದುರ್ಗ, ಮಹೀ-, ಗಿರಿ-, ಮನುಷ್ಯ-, ಮೃದ್-, ವನ-(ಮಹಾಭಾ. ರಾಜಧರ್ಮ-ಶಕದ್ರು. VI, ೧೮೬; ಆಪ್ಟೆ). ದುರ್ಗ-೭ : (ಅ). ಜಲದುರ್ಗ, ವನ-, ಗಿರಿ-, ಕೃತಕಾವನೀ-, ಸಾಲ-, ಸೇನಾ-, ಮಂತ್ರ- (ವಿಚಿಂ. ೨೪೪). (ಆ). ಗಿರಿ, ವನ, ಜಲ, ರಥ, ದೇವ, ಪಂಕ, ಮಿಶ್ರ (ಭಾರಸಂ. ೨೮೪). ದುರ್ಗ-೮: ಅಂತರ್ದ್ವೀಪ, ಮಹಾಸ್ಥಳ-ಈಯೆರಡು ಜಲದುರ್ಗ ಭೇದ ; ಗುಹ್ಯಾಖ್ಯ, ಪ್ರಸ್ತರ-ಈ ಯೆರಡು ಗಿರಿದುರ್ಗಭೇದ ; ಉದಕಸ್ತಂಭ, ವೈರಿಣಿ-ಈಯೆರಡು ಸ್ಥಲ ದುರ್ಗಭೇದ; ಕರ್ದಮೋದಕ, ಸ್ತಂಭನಗಹನ-ಈ ಯೆರಡು ವನದುರ್ಗಭೇದ (ಪಂಚತಂ. ಪು. ೨೧೫)". (ಶ್ರೀವತ್ಸ. ೨೦೨). [ದುರ್ಗ + ಪಂಚಕ]

ದುರ್ಗಪ್ರಾಕಾರ (ನಾ). = ದುರ್ಗಪ್ರಾಚೀರ : ದುರ್ಗಪ್ರಾಕಾರದ ಗೋಡೆಯನ್ನು ಸೇರಿ . . . ಮೂರ್ಭಿತನಾಗಿ ಬೀಳುತ್ತಿರುವನು (ಸುಗುಗಂ. ೧೨೦-೬).

[ದುರ್ಗ + ಪ್ರಾಕಾರ]

ದುರ್ಗಪ್ರಾಚೀರ (ನಾ). ಕೋಟೆಯ ಗೋಡೆ,-ಪ್ರಾಕಾರ,-ಪೌಳಿ : ದುರ್ಗಪ್ರಾಚೀರದ ಈ ದಿಕ್ಕಿನಲ್ಲಿಯೂ ದೌರ್ಲ್ಯ ಕಂಡುಬರಲಿಲ್ಲ (ಇಪ್ಪಕ. ೩೬೯). [ದುರ್ಗ + ಪ್ರಾಚೀರ]

ದುರ್ಗಭೂಮಿ (ನಾ). ದುರ್ಗವಿರುವ ಪ್ರದೇಶ ; ಕೋಟೆಯ ಜಾಗ : ಮೂಱುಕೋಟಿ ಗೋಮಂಡಳಂಗಳಿಂದಮಿಪ್ಪತ್ತೆಣ್ಪಾಸಿರ ದುರ್ಗಭೂಮಿಗಳಿಂದಂ ನೂಱು ಕುಕ್ಷಿನಿವಾಸಂಗಳಿಂದಂ (ಶಾಂತಿಪು. ೧೧-೮೪ ವ).

[ದುರ್ಗ + ಭೂಮಿ]

ದುರ್ಗಮ (ಗು). ೧. ಸಂಚರಿಸಲು ಅಶಕ್ಯವಾದ,-ಕಷ್ಟವಾದ ; ಪ್ರವೇಶಿಸಲಾಗದ ; ಹಾದು ಹೋಗಲಾರದ : ಆಗಳಾ ಪರ್ವತಮನೇಱಿ ದುರ್ಗ ದುರ್ಗಮಮಾರ್ಗಮಂ ನೋಟ್ಪೆನೆಂದು ಬಗೆದು (ಹಂದ್ರಪು. ೫-೬೮ ವ) ; ಸುಗ್ರೀವನಿಹನೈ, ಗುಹಾವಾಸಿ ತಾನಾಗಿ . . . ದುರ್ಗಮ ಋಶ್ಯಮೂಕದಲಿ (ಶ್ರೀರಾಮಾ. ೨೬೭-೩೭೩). ೨. ತಿಳಿಯಲು ಅಶಕ್ಯವಾದ,-ಅಸಾಧ್ಯವಾದ. ೩. ಹೊಂದಲಾಗದ; ಪಡೆಯಲಾಗದ. ೪. ಗೆಲ್ಲಲು ಅಸಾಧ್ಯವಾದ : ದುರ್ಗಮವೈರಿಜಯಕ್ಕಿದು ಮಾರ್ಗಂ ನಿಜಮೆಂದು ಮಾನಸಾರನೃಪಾಲಂ . . . ಅರಣ್ಯ ದೊಳಿರ್ದಂ (ದಶಕು. ೧-೬೫). (ನಾ). ೫. ಸಂಚರಿಸಲು ಅಶಕ್ಯವಾದುದು : ದುರ್ಗಮಮಪ್ಪಾ ಪಥದೊಳ್ ನಿರ್ಗಹನದಿನಂದು ಪೋಗಿ ಕಂಡು (ನೇಮಿಪು. ೪-೧೦೦). ೬. ಕಷ್ಟವಾದುದು ; ಅಸಾಧ್ಯವಾದುದು : ಮಹಾಭೋಗಂ ಪೊಕ್ಕಂ ಪುರಮನದೇ ಗಹನಮೊ ಪವನಜಂಗೆ ದುರ್ಗಮಮುಂಟೇ (ಪಂಚಾಮಾ. ೧೧-೭೬). [ಸಂ.]

ದುರ್ಗರತ (ನಾ). ಅರಣ್ಯದಲ್ಲಿರುವವನು : ಇರೆ ಧಾತ್ರೀತನಯಂ ದಿನೇಶ ಗೃಹದೊಳ್ ಸ್ವಲ್ಪಾಂಗನಾಸೂನು ದುರ್ಗರತಂ ಕ್ಲೇಶಸಹಿಷ್ಣು ನಿಸ್ವನೆನಿಕ್ಕುಂ (ಜಾತತಿ. ೧೭-೨೦). [ದುರ್ಗ + ರತ]

ದುರ್ಗಸಂಚರ (ನಾ). ೧. ಸಂಚರಿಸಲು ಕಷ್ಟವಾದುದು ; ಇಕ್ಕಟ್ಟಾದ ದಾರಿ. ೨. ನದಿ, ಕಂದಕ, ಬೆಟ್ಟ, ಕೋಟೆ ಮೊದಲಾದುವನ್ನು ದಾಟಲು ಮಾಡಿರುವ ಕಟ್ಟೆ, ಸೇತುವೆ ಮುಂತಾದುವು; ಹಾಯ್ಗಡ: "ಸಂಕ್ರಮಃ, ದುರ್ಗಸಂಚರಃ-೨ ಹೊಳೆ, ಕಂದಕ, ಬೆಟ್ಟ ಮುಂತಾದ ದುರ್ಗಗಳನ್ನು ಸುಲಭವಾಗಿ ದಾಟುವ ಕಟ್ಟೆ, ಸೇತುವೇ ಮುಂತಾದ ಗಮನ ಸಾಧನದ ಪೆಸರು" (ಸಿದ್ಧಾಂತಿ. ೩೬೪). [ದುರ್ಗ + ಸಂಚರ]

ದುರ್ಗಸೌರಣೆ (ನಾ). ಕೋಟೆಯನ್ನು ಸಜ್ಜುಮಾಡುವುದು,-ಸಿದ್ಧಗೊಳಿಸುವುದು : ದಳವಾಡ ಸಹಿತ ಬೈಚಪ್ಪ ದುರ್ಗವ ಹೊಕ್ಕು . . . ನೋಡಿ ದುರ್ಗಸೌರಣೆಯನಂದಲಸದೆ ಮಿಗೆ ಮಾಡಿಸಿದನು (ಕುರಾಸಾಂ. ೩೭-೫೦). [ದುರ್ಗ + ಸೌರಣೆ (<ಸಂವರಣೆ)]

ದುರ್ಗಾಗ್ರ (ನಾ). ಬೆಟ್ಟದ ತುದಿ,-ಶಿಖರ : ಕೋಕಸಸ್ ಬಟಿಯಾ ದುರ್ಗಾಗ್ರದ ಮೇಲ್ ನಿನ್ನಟಿಪಾಡಿಗೆ ನರಲ್ವರವರುಂ (ಬದ್ಧಪ್ರ. ೨೩-೪೮೦). [ದುರ್ಗ + ಅಗ್ರ$_1$]

ದುರ್ಗಾಶ್ರಯವಿಗ್ರಹ (ನಾ). ೧. ಕೋಟೆಯ ಆಶ್ರಯದಿಂದ ಯುದ್ಧ ಮಾಡುವವನು. ೨. ಪಾರ್ವತಿಗೆ ಆಶ್ರಯವಾದ ದೇಹವುಳ್ಳವನು. ೧, ೨ : ಅಧಿಗತಸ್ವಾಮಿ ಸಂಪತ್ಪ್ರಮೋದಿತನಾಗಿಯುಂ ದುರ್ಗಾಶ್ರಯ ವಿಗ್ರಹನಲ್ಲದ ವಿಭೂತಿಭೂಷಿತನುಂ . . . ಸಮವರ್ತಿಯಾಗಿಯುಂ ಕೃತಾಂತನಲ್ಲದ ಧರ್ಮರಾಜನುಂ . . . ಎನಿಸಿ ದೇವತಾಸ್ವರೂಪನಾದಂ (ಪುಷ್ಪಪು. ೩-೨೧ ಪ).

[ಸಂ. (ದುರ್ಗ + ಆಶ್ರಯ + ವಿಗ್ರಹ; ದುರ್ಗಾ + ಆಶ್ರಯ + ವಿಗ್ರಹ)]

ದುರ್ಗಾಷ್ಟಮಿ (ನಾ). ಆಶ್ವಯುಜಮಾಸದ ಶುಕ್ಲಪಕ್ಷದ ಎಂಟನೆಯ ದಿನ ; P ನವರಾತ್ರಿಯಲ್ಲಿ ನಡೆಯುವ ವಿಶೇಷವಾದ ದುರ್ಗಾ ಪೂಜೆಯ ದಿನ ಮತ್ತು ಉತ್ಸವ : ಓಬಲ, ನಾಳೆ ದುರ್ಗಾಷ್ಟಮಿ (ಸುಗುಗಂ. ೭೮-೧) ; ಎಂಟನೆಯ ದಿವಸ ದುರ್ಗಾಷ್ಟಮಿ (ಭಾಹಬೃ. ೧೩೨).

[ಸಂ. ದುರ್ಗಾಷ್ಟಮೀ]

ದುರ್ಗಾಸ್ತವ (ನಾ). ಕಾಳಿಕಾದೇವಿಯ ಸ್ತೋತ್ರ,-ಸ್ತುತಿ: ದುರ್ಗಾಸ್ತವವ ಜಪಿಸಿದ ವರಘೃತೋದನನವರುಧಿರಮಾಂಸೋಪಹಾರಂಗಳಲಿ ಪೂಜಿಸಿದ (ಕುಷ್ಠಾದ್ರೋ. ೯-೭). [ಸಂ.]

ದುರ್ಗಿ$_1$, ದುಗ್ಗಿ$_2$, ದುಗ್ಗೆ, ದುರುಗಿ (ನಾ). ೧. ಪಾರ್ವತಿಯ ಹೆಸರುಗಳಲ್ಲಿ ಒಂದು ; ದುರ್ಗಾದೇವತೆ : "ಗಿರಿಜೆ ರುದ್ರಾಣಿ . . . ದುರ್ಗಿ ಚಾಮುಂಡಿ ಶರ್ವಾಣಿ ಶಿವೆಯುಮೆಯೆನಲು ಗೌರಿಯಕ್ಕುಂ" (ಮಂಗರಾ. ೪-೧೨) ; ಭಗವತಿಯುಂ ಚಂಡಿಯುಂ ದುರ್ಗಿಯುಂ . . . ಎನಿಸುಗೆ ಪೂಜಿಕ್ಕೆ ಮಾಂಸಾದಿ ನಾನಾಬಲಿಯಿಂ ದೇವರ್ ನರರ್ ತ್ವಚ್ಚರಣ ಕಮಲಮಂ ಶ್ರೀಜಯಶ್ರೀನಿಮಿತ್ತಂ (ಜಗವಿ. ೨-೫೮) ; ಮಾನಸಾರ ನೃಪಾಲಂ ದುರ್ಗಿಯನುಪಾಸ್ತಿಗೆಯ್ಯುತ್ತ . . . ಅರಣ್ಯದೊಳಿರ್ದಂ (ದಶಕು. ೧-೭೫) ; ರಕ್ತಬೀಜಾಸುರನಂ ಭಕ್ಷಿಸುವುದಕ್ಕೆ ಬಾಯ್ದೆಱೆದಿರ್ದಾ ವರದುರ್ಗಿಯ ಪಲ್ಗಳವೊಲ್ ಪಿರಿದುಪ್ಪರಗೋಂಟೆದೆನೆಗಳೊಪ್ಪಿದವು (ಹಮ್ಮೀರ. ೧-೬೧). ೨. ಜನಸಾಮಾನ್ಯರು ಗ್ರಾಮದೇವತೆಯೆಂದು ಪೂಜಿಸುವ ಒಂದು ಕ್ಷುದ್ರದೇವತೆ : ದುರ್ಗಿ ಮಾರಿಯು ಚಂಡಿಯಗ್ಗದ ಶಕ್ತಿಗಳು ಸದ್ಗುಣ ಸತ್ಯ ಮುಸುಕಿಹರ ಮುಟ್ಟವು (ಸರ್ವಜ್ಞ. ೯೦). **ದುಗ್ಗಿ$_2$** : ೧. ಅಗ್ಗಿಗಣ್ ಚೆಲ್ವ ನೊಸಲೊಳಗೆ ಥಳಥಳಿಸುತಿರೆ ದುಗ್ಗಿಗರೆ ಮೆಯ್ಯನೊಲವಿಂ ನಲಿವುತ್ತಿತ್ತಂ (ಜೀರಮ. ೭-೯೯). **ದುಗ್ಗೆ** : ೧. "ದುಗ್ಗೆ (ದುಗ್ಗಿ)-ದುರ್ಗಾ" (ತದ್ಭಕೋ. ೨೦). **ದುರುಗಿ**: ೧. 'ರಣದುರುಗಿ' ಪರಾ.

ದುರ್ಗವ್ವ, ದುರಗವ್ವ = ದುರ್ಗಾದೇವಿ : ದುರ್ಗವ್ವನ ಗುಡಿಯಲ್ಲಿ ಕೇರಿಯವರೆಲ್ಲ ಸೇರಿ ಭಜನೆ ಮಾಡಿದ ತರುವಾಯ . . . ಮಾದನ ಮೈಯಲ್ಲಿ ದೇವಿಯ ಸಂಚಾರವಾಯಿತು (ನೀನಮು. ೬೦) ; "ದುರಗವ್ವ = ದುರ್ಗಾದೇವತೆ ; ತಂಬೆಳಗಮ್ಮ, ಗ್ರಾಮದೇವತೆ" (ಜಾನಕೋ. ೭). ದುರ್ಗಿಬೇನೆ, ದುರ್ಗವ್ವನ ಬೇನೆ=ಕಾಲರಾ ರೋಗ: (ಕ).

[<ಸಂ. ದುರ್ಗಾ]

ದುರ್ಗಿ$_2$ (ನಾ). ಒಂದು ಬಗೆಯ ಚಿನ್ನದ ನಾಣ್ಯ : ಇತರ ಬಂಗಾರದ ನಾಣ್ಯಗಳು ವಿಶೇಷವಾಗಿದ್ದವು. ಯಾವವೆಂದರೆ :-೧ ಗಬರು . . . ೧ ದುರ್ಗಿ, ೧ ಇಕ್ಕೇರಿ (ಚಿತ್ರಪಾ. ೧೦೪) ; ಮಲಾಪಹಾರಿಯ ದಕ್ಷಿಣದಲ್ಲಿ. ೧೮ ಪ್ರಕಾರದ ವರಹಗಳು ಅಥವಾ ಹೊನ್ನುಗಳು ನಡಿಯುತ್ತಿದ್ದವು. ಅವುಗಳ ವಿವರ-೧ ಗಜಪತಿ . . . ೬ ದುರ್ಗಿ, ೭ ಜಮಶೇರೀ (ಕಭಾಗ. ೨೮೦).

ದುರ್ಗೀವರಹ = ದುರ್ಗಿ$_2$: ಎರಡು ಲಕ್ಷದ ನಾಲ್ವತ್ತೆಂಟು ಸಹಸ್ರದ ಮುನ್ನೂರ ಅರುವತ್ತುನಾಲ್ಕು ದುರ್ಗೀವರಹಗಳ ಲೆಕ್ಕವು ಮಹಾಸ್ವಾಮಿಯವರಿಗೆ ಅಳವುಗೊಟ್ಟು ನಿರ್ಧಾರಿತವಾಗಿದೆ (ವಿಗಡ. ೧೮-೧೩). [<ದುರ್ಗ]

ದುರ್ಗುಣ (ನಾ). ಕೆಟ್ಟ ಗುಣ : ದುಷ್ಟ ಸ್ವಭಾವ : ದೇವ ಎನ್ನೊಳ್ಳ ದುರ್ಗುಣಂಗಳು ಸಾವಿರವೊಳವು ಮನ್ನಿಸು (ಬಸಪು. ೩೮-೨೬); ದುರ್ಗುಣಂಗಳ ನಾನು ಮಱೆಮಾಡಿಕೊಂಡು ಶರಣನೆಂದು ವಚನಂಗಳ ಹಾಡಿದರೆ ತಿಂಗಳ ಬೆಳಕಿನ ಸಿರಿಯಂ ಕಂಡು ನಾಯಿ ಹರುಷಂಗೊಂಡು ಬಳ್ಳಿಟ್ಟು ಬೊಗುಳಿದಂತಾಯಿತು (ಘನವ. ೩೬-೨೮) ; ಕೇವಲ ಅಡಿಯ ಕೆಳಗೆ ಇರುವುದರಿಂದಲೆ ಮೆಟ್ಟಿಗೆ ಈ ಮರ್ಯಾದೆ ಬಂದಿತೆ ? ಹಾಗೆನಿಸುವುದಿಲ್ಲ. ಅದಕ್ಕೊಂದು ದುರ್ಗುಣವಿದೆ (ದೇಕನ್ಯೆ. ೧೪೬) ; ಅಜ್ಞಾನವೇ ದುರ್ಗುಣ (ಮುಂಬಯಿ. ೪-೧೮೨). [ಸಂ.]

ದುರ್ಗುಣವತಿ (ನಾ). ಕೆಟ್ಟಗುಣವುಳ್ಳವಳು ; ದುಷ್ಟೆ : ನಾನು ಕ್ರೂರ ಸ್ವಭಾವದವಳೆಂದೂ ದುರ್ಗುಣವತಿಯೆಂದೂ . . . ನಿನ್ನ ಹೆಂಡತಿಯು ಪ್ರಪಂಚವನ್ನೆಲ್ಲಾ ಸಾರುತ್ತಿರುವಳು (ಲಕ್ಷ್ಮೀಪ್ರ. ೧೨೭).

[ಸಂ. ದುರ್ಗುಣವತೀ]

ದುರ್ಗುಣಿ (ನಾ). ದುಷ್ಟಗುಣವುಳ್ಳ ವ್ಯಕ್ತಿ; ಕೆಟ್ಟ ಗುಣವನ್ನು ಹೊಂದಿದ ವ್ಯಕ್ತಿ : ದುರ್ಗುಣಿ ದುರಾಚಾರಿಯಯ್ಯ ನಾನು (ಅಪಂಡೇ. ೯೬-೧೪).

[ಸಂ. ದುರ್ಗುಣಿನ್]

ದುರ್ಗೆ (ನಾ). ಪಾರ್ವತಿಯ ಹೆಸರುಗಳಲ್ಲಿ ಒಂದು ; ದುರ್ಗಾದೇವತೆ: "ಉಮೆ ಪಾರ್ವತಿ ಕಾತ್ಯಾಯನಿ ಹಿಮವತ್ಸುತೆ ಚಂಡಿ ದುರ್ಗೆ . . . ಕಾಳಿಯೆಂಬಿವಂಬಿಕೆಯ ಪೆಸರ್" (ವಸ್ತುಕೋ. ೩-೧೬) ; ನಿಂದಳಗಣಿತ ನಾಮರೂಪಗಳಿಂದ ಭಕುತರಿಗಿಷ್ಟಸಿದ್ಧಿಯನಂದೊಲಿದು ಕರುಣಿಸುತ ದುರ್ಗೆ ದುರಂತಗುಣದುರ್ಗೆ. (ನಿಭಾಗ. ೧೦-೪-೨೬). ೨. ಒಂದು ಮಂತ್ರದ ಹೆಸರು : ಸಪ್ತಮಾತೃಕಾ ದುರ್ಗಾ ಕಾಳೀ ಬಗಳಾ ಬಾಲಾ ಲಲಿತಾ ಶೂಲಿನ್ಯಾದಿ ಮಹಾಮಂತ್ರಂಗಳಂ . . . ತಿಳಿದಿರಲಕ್ಕುಂ (ವಿವೇಕ. ೮೧).

[ಸಂ. ದುರ್ಗಾ]

ದುರ್ಗೇಶ್ವರ (ನಾ). ಕೋಟೆಯ ಅಧಿಪತಿ,-ಒಡೆಯ : ರಾಜ್ಯದ ಕ್ಷೇಮಾಭ್ಯುದಯಗಳನ್ನು ಬೆಸಗೊಳ್ಳುವಂತೆ ನಮ್ಮ ದುರ್ಗೇಶ್ವರನು ಆಣತಿ ಮಾಡಿದ್ದಾನೆ (ಸುಗುಗಂ. ೧೬-೪). [ದುರ್ಗ + ಈಶ್ವರ]

ದುರ್ಗ್ರಹ (ಗು). ೧. ಹಿಡಿಯಲು ಕಷ್ಟವಾದ: ಅತುಳೋತ್ತಾಲ ತಿಮಿಂಗಿಳ ಪ್ರಬಳಪಕ್ಷೋದ್ಧೂತವಾತಪ್ರಕಂಪಿತ ಕುತ್ಕೀಲ ಸಮಗ್ರದುರ್ಗ್ರಹಘನ ಗ್ರಾಸಗ್ರಹವ್ಯಗ್ರವಿಸ್ತೃತ ವಕ್ತ್ರೋದರಭಾಗ ಭೂರಿ ಕಮಠ ಪ್ರಕ್ಷುಬ್ಧಕಲ್ಲೋಲ ಕಲ್ಪಿತಕೋಲಾಹಲಕಲ್ಪಕಾಲರಭಸ ಪ್ರಸ್ಪರ್ಧಿಯಂ ವಾರ್ಧಿಯಂ (ಕಾವ್ಯಸಾ. ೭೫). ೨. ತಿಳಿಯಲು ಕಷ್ಟವಾದ. ೩. ಹೊಂದಲು ಅಶಕ್ಯವಾದ.

(ನಾ). ೪. ಕೆಟ್ಟ ಗ್ರಹ ; ಕ್ರೂರಗ್ರಹ : ಇದರ ಜೊತೆಗೆ, ನನ್ನ ದುರ್ಗ್ರಹವು . . . ಎತ್ತಿ ಕಟ್ಟಿದೆ (ನಿಬಂಧ. II, ೫). [ಸಂ.]

ದುರ್ಘಟ (ಗು). ೧. ಸೇರಿಸಲು ಅಶಕ್ಯವಾದ. ೨. ಕ್ರೂರವಾದ; ಕಠೋರವಾದ : ಆ ಘಟದೊಳಗೆ ಕೈದುಡುಕಿ ಪಟುದುರ್ಘಟ ಗರಳ ಧರನಂ ಪಿಡಿಪಿಡಿದು ತೆಗೆವ ಸಮಯದಲಿ (ಬಸಪು. ೫೦-೬೧). (ನಾ). ೩. ಸೇರಿಸಲು ಅಶಕ್ಯವಾದಂದು ; ಹೊಂದಿಸಲು ಕಷ್ಟವಾದಂದು : ದುರ್ಘಟವೆನಿಪ ಮೋಹರದ ಬಲುಸಂಘಟನೆಯನು ತೋಱುವೆನು ಚಿಂತಿಸ ಬೇಡ ನೀನೆಂದ (ಕುಪ್ಯಾದ್ರೋ. ೮-೬೫). ೪. ಸಂಚರಿಸಲು ಕಷ್ಟ ವಾದಂದು : ಅಟವಿಯ ಮಹಾಘೋರಗಹ್ವರಂ ಮುಂದೆ ದುರ್ಘಟಮಾಗೆ ನಡನಡುಗಿ ಭೀತಿಯಿಂ ಸೀತೆ ಸಂಕಟದಿಂದೆ ರಾಮನಾಮಂಗಳಂ ಜಪಿಸುತ (ಜೈಮಿಭಾ. ೧೯-೧೦) ; ಈ ದುರ್ಘಟಮಾದ ಕಾರಡವಿಯೊಳ್ ಋಷಿಗಳ ಪುಣ್ಯಾಶ್ರಮಮುಂಟೆ ! (ರಾಮಾಶ್ವ. ೩೪-೪) ; ಅದನ್ನು ಪ್ರವೇಶಿಸುವದು ಅತ್ಯಂತ ದುರ್ಘಟವಾಗಿತ್ತು (ತುಳಸೀ. ೨೬೫). ೫. ಕಷ್ಟಕರವಾದಂದು ; ಕಠಿಣವಾದುದು : ನುಡಿವನತಿದುರ್ಘಟದ ಭಾಷೆಯನೊಡನೆ ತದ್ಭಾಷೆಯ ಕೊಱತೆ ನೆಱೆಯಿಸುವನೀಗಳ್ಕೆ (ಬಸಪು. ೩೬-೧೩). ೬. ಮಾಡಲು ಅಸಾಧ್ಯ ವಾದಂದು ; ಸಾಧಿಸಲು ಕಷ್ಟವಾದಂದು,-ಅಶಕ್ಯವಾದುದು : ಆರಯೆ ದುರ್ಘಟವೆನ್ನ ಮನೋರಥವೆಂದಲಸಗಮನೆ ಮನದೊಳ್ ಪಿರಿದುಂ ದೂಱಿಸಲ್ (ಚಂದ್ರಪು. ೩-೬೬) ; ತಾಂ ಕೊಂಡ ಬೆಲೆ ಪಲ್ಲಟಿಸಿ ಮರಳಿದ ಛಂದದಲಿ ದುರ್ಘಟವೆನಿಪ ಗುರುಭಕ್ತಿಯಿಂತಹದು (ಬಸಪು. ೩೯-೧೮) ; ಎಂಥ ದುರ್ಘಟವಾದರೂ ಮನ್ಮಥನ ಕೈಯಲ್ಲಿ ಆಗದ ಕಾರ್ಯವಿಲ್ಲ (ವಚಕಾ. ೨೯). ೭. ಕ್ರೂರವಾದಂದು : ನಮ್ಮ ಬನದಲಿ ದಾನವರ ದುರ್ಘಟದ ದುರ್ನಯವಲ್ಲಲಾಯೆನುತ ಆ ನರೇಂದ್ರ . . . ಬೆಸಗೊಂಡ ನವರುಗಳ (ಕುಪ್ಯಾಅ. ೨೨-೨೩). [ಸಂ.]

ದುರ್ಘಟನೆ (ನಾ). ೧. ಕೆಟ್ಟ ಪ್ರಸಂಗ ; ಕೆಟ್ಟ ಸನ್ನಿವೇಶ : ಒಂದು ದೊಡ್ಡ ದುರ್ಘಟನೆಯೇ ಆಗಿಹೋಯಿತು (ಭಾರತಿ. ೭೭); ಓದಿನ ದಿನದೊಳು ನಡೆದ ದುರ್ಘಟನೆಯ ಬಣ್ಣಿಪೆ (ಇಂಜಾಪ. ೩೦-೩೭). ೨. ಅನಾಹುತ ; ವಿಪತ್ತು : ನೀನು ಮಲಗುತ್ತಲೆ ನಿದ್ದೆ ಮಾಡಿಬಿಡುತ್ತಿ. ಆಗ ನಿನಗೊಂದು ದುರ್ಘಟನೆ ಅಥವಾ ಆಪ್ತರ ಮರಣ ಇತ್ಯಾದಿಗಳೇನಾದರೂ ಕೇಳಿ ಬಂದರೆ ಆಗ ನಿನ್ನ ಅವಸ್ಥೆಯೇನು ? (ಜೀವಾತ್ಮ. ೧೩೮). [ಸಂ. ದುರ್ಘಟನಾ]

ದುರ್ಜನ (ಗು). ೧. ಕೆಟ್ಟ ; ಅಧಮ ; ನೀಚ. 'ದುರ್ಜನಸಂಗ' ಪರಾ. (ನಾ). ೨. ಕೆಟ್ಟ ಮನುಷ್ಯ; ನೀಚ ; ದುರುಳ : "ಖಳನುಗ್ರಂ ಪಾಪಿ ದುಷ್ಪಾತ್ಮಕ (ನವನೆ) ಶಠಂ ದುರ್ಜನಂ ತಾನನಾರ್ಯಂ" (ವಸ್ತುಕೋ. ೧೦೦-೧೧) ; ಮೇದಿನಿಯಂ ಕೆಯ್ಯೊಳ್ ಪದನಾದುದು ಜಿನದೀಕ್ಷೆಗೆನಗೆ ಮಗನೇ ಎನೆ ನಿಮ್ಮಾದುದನಪ್ಪೆಂ ದುರ್ಜನನಾದುದನಪ್ಪಂತು ಕಲ್ತೆನೇ ಜಿನಮತಮಂ (ಶಾಂತಿಪು. ೭-೫೮) ; ದುರ್ಜನರ ಸಂಗ ಬೇಡವಯ್ಯಾ (ಬಸವ. ೧೦೯) ; ಪುಟ್ಟಿಸಿದ[ನದೇ]ಕೆಯೊ ಬಿದಿ ನಿಟ್ಟುರದಿಂ ಲೋಕದೊಳಗೆ ದುರ್ಜನನಂ (ಪುಷ್ಪಪು. ೧-೫೧); ಗುಣಮಂ ಕಂಡೊಡೆ ದುರ್ಜನಂ ಬಗೆವನಲ್ಲಂ ದೋಷಮಂ ಕಂಡ ಸದ್ಗುಣಿವೊಲ್ (ಸೂಕ್ತಿಸು. ೧-೬೩) ; ಮುಂದೆ ದುರ್ಜನ ಮಿತ್ರನಾದುದಱಿಂದ ಸಜ್ಜನರೊಡನೆ ಹಗೆ ಲೇಸೆಂದು ದಿಲ್ಲಾ (ಬಸಪು. ೫೯-೫೧). ೩. ನಿಂದಕ : ಮುನಿದೊಡೆ ರಾಗದಿಂದೊಸೆ ದೊಡಂ ಕಡುಪೊಲ್ಲದಱಿಂದಮಂಜಿ ದುರ್ಜನಪರಮೇಶ್ವರರ್ಗಱಿದ್ದು ಕೈಮುಗಿವೆಂ ಬಲಗೊಂಡು ಭಕ್ತಿಯಿಂ (ಧರ್ಮಾಮೃ. ೧-೫೦). 'ದುರ್ಜನಿಸಂ' ಪರಾ. [ಸಂ.]

ದುರ್ಜನತೆ (ನಾ). ಕೆಟ್ಟತನ ; ದೌರ್ಜನ್ಯ ; ಹೀನವಾದ ನಡವಳಿಕೆ : ದುರ್ಜನತೆಯಿಂದೆ ಪಡೆದು ದುರ್ಜನನಂ ಕಮಲಗರ್ಭಂ (ಸೂಕ್ತಿಸು. ೧-೪೦). [ಸಂ. ದುರ್ಜನತಾ]

ದುರ್ಜನಸಂಗ (ನಾ). ಕೆಟ್ಟ ಸಹವಾಸ,-ಒಡನಾಟ: ದುಗ್ಗಾಣಿ ಎಂಬುದು ದುರ್ಜನಸಂಗ (ಪುರಂದ. ೪-೧೧೨ ಪಲ್ಲವಿ). [ದುರ್ಜನ + ಸಂಗ$_2$]

ದುರ್ಜನಿಕ್ಕೆ (ನಾ). = ದುರ್ಜನತೆ : ಕೈಯೆತ್ತಿ ದುರ್ಜನಿಕ್ಕೆಗೆ ಪೊಯ್ಯದೆ ದುರ್ಜನರೊಳಮ್ಮ ಕೂಡಿರವೇಡ (ಧರ್ಮಾಮೃ. ೨-೧೨). [ದುರ್ಜನ + – ಇಕ್ಕೆ$_2$ (< – ಇಕೆ)]

ದುರ್ಜನಿಸು (ಕ್ರಿ). ಕೆಟ್ಟವನೆಂದು ಹೇಳು ; ನಿಂದಿಸು ; ದೂಷಿಸು : ಪಂಚೇಂದ್ರಿಯಮನತಿನಿಗ್ರಹಂ ಮಾಡಿದಾ ಮುನಿಗಳೀ ಕಾಲಕ್ಕಪೂರ್ವ ಮಂತವರ ದುರ್ಜನಿಸಿದೊಡೆ ಜನ್ಮಜನ್ಮಾಂತರಕೆ ದೋಷ ಸಂಜನಿಸದೇ ಬಿಡದು (ಸಮ್ಯಕೌ. ೧೧-೫೨). [ದುರ್ಜನ + – ಇಸು$_3$]

ದುರ್ಜಯ (ಗು). ೧. ಗೆಲ್ಲಲಾಗದ ; ಅಜೇಯ ; ಅಜಿಂಕ್ಯ. (ನಾ). ೨. ಅಜೇಯವಾದಂದು: ಅರ್ಜುನ ಶರವಿದ್ಯೆ ವಿವರಿಸೆ ದುರ್ಜಯವಲಾ ಗರುವತನದಲಿ ಗರ್ಜಿಸಿದೊಡೇನಹುದು (ಕುಪ್ಯಾವಿ. ೦-೪೨). ೩. ಅಜೇಯ ನಾದವನು : ಬಂದನೀತಂ ಪೆಱನಲ್ಲಂ ದುರ್ಜಯಂ ಕೌರವಕುಳನಳಿನೀ ಕುಂಜರಂ ಭೀಮಸೇನಂ (ಪಂಪಭಾ. ೦೩-೭೭) ; ಧುರದೊಳ್ ದುರ್ಜಯ ನಾರ್ಗಮೆನ್ನನುಜಂ (ಪಂರಾಮಾ. ೯-೯೮) ; ದುರ್ಜಯನಿವಂ ನಿನಗೆ ಸಾಧ್ಯ ನಲ್ಲೆಂದು ಹರಿ ಗರ್ಜಿಸಿದನಾ ಪಾರ್ಥನಂ (ಜೈಮಿಭಾ. ೦೩-೩೦); ಕಾಲನೇಮಿಗೆ ಮಕ್ಕಳಾಗಿಯೂ ದುರ್ಜಯರಾಗಿಯೂ ಇರುವ ರಾಕ್ಷಸರುಂಟಪ್ಪೆ (ಣಕುಂತ. ೯೭-೧೩). ೪. ಧೃತರಾಷ್ಟ್ರನ ಮಕ್ಕಳಲ್ಲಿ ಒಬ್ಬ. [ಸಂ.]

ದುರ್ಜಾತ (ಗು). ೧. ಕೆಟ್ಟ ಮುಹೂರ್ತದಲ್ಲಿ ಹುಟ್ಟಿದ. ೨. ದುಃಖ ಭರಿತ; ಗೋಳಿನ; ಸಂಕಟಕ್ಕೀಡಾದ. ೩. ಕೆಟ್ಟ; ದುಷ್ಟತನದ. (ನಾ). ೪. ನೀಚ ; ಅಸಭ್ಯ : ಓತು ತನ್ನಯ ಪೊರೆಯೊಳಿಹ ಕಾಮಾತುರಾಂಧನ ನಧಿಕಪಾಪಸಮೇತನಂ ದುರ್ಜಾತನಂ ತತ್‌ಶ್ವೇತನಂ ನೋಡಿ ಆ ತರುಣಿ . . . ಚಿಂತಾಜಾತಚೇತಸೆಯಾಗೆ (ಬಸಪು. ೪೦-೪). [ಸಂ.]

ದುರ್ಜೇಯ (ಗು). ೧. ಜಯಿಸಲು ಕಷ್ಟವಾದ ; ಗೆಲ್ಲಲಾಗದ. (ನಾ). ೨. ಜಯಿಸಲು ಕಷ್ಟವಾದಂದು: ಅತ್ಯಂತ ದುರ್ಜೇಯವಾದ ವಜ್ರಾವರ್ತ, ಸಾಗರಾವರ್ತ ಎಂಬ ಎರಡು ಬಿಲ್ಲುಗಳಲ್ಲೊಂದನ್ನು ರಾಮನು ಎತ್ತಿ ಮುರಿಯಬಲ್ಲನಾದರೆ, ರಾಮನಿಗೆ ಸೀತೆಯನ್ನು ಕೊಡಬಹುದು (ಸಾಹಿಸ. ೮೮). [ಸಂ.]

ದುರ್ಜ್ಞೇಯ (ಗು). ೧. ತಿಳಿಯಲು ಅಶಕ್ಯವಾದ; ಗ್ರಹಿಸಲು ಕಷ್ಟವಾದ: ಆ ಪ್ರಯತ್ನಮಿಂತಾದುದಯ್ ದುರ್ವಾರ ದುರ್ಜ್ಞೇಯ ದುರ್ವಿಧಿಯ ಲೀಲೆಯಿಂ (ಶ್ರೀರಾಮಾ. ೧೦೯-೨೪೬). (ನಾ). ೨. ತಿಳಿಯಲಶಕ್ಯ ವಾದಂದು ; ಗ್ರಹಿಸಲು ಕಷ್ಟವಾದಂದು : ಪರಮೇಶನ ಗಟಿಗೆ ಗಟಿಗೆಯ ಪೊಸತೆನಿಪ್ಪ ಲೀಲೆ ಎಮ್ಮನ್ನರ್ಗೆ ದುರ್ಜ್ಞೇಯಂ ಅಂತಿರೆಯುಂ ಬಲ್ಲಂತೊರೆವೆಂ ಕೇಳ್ (ರಾಮಾಶ್ವ. ೧೦೯-೨೨). ೩. ತಿಳಿಯಲು ಅಶಕ್ಯ ವಾದ ವ್ಯಕ್ತಿ : ಕಾದಂಬಿನಿಯು ದಿನದಿನಕ್ಕೆ ದುರ್ಜ್ಞೇಯಳಾಗುತ್ತ ಹೊರಟಂತೆ, ಯೋಗಮಾಯೆ ಅವಳ ಮೇಲೆ ಅಷ್ಟಷ್ಟು ಕುಪಿತಳಾಗ ಹತ್ತಿದಳು (ಇಪ್ಪಳ. ೨೩). [ಸಂ.]

ದುರ್ಣಯ (ನಾ). ೧. ದುರ್ನೀತಿ ; ಕೆಟ್ಟ ನೀತಿ : ನಯಮಂ ನಂಬು ವೊಡೆನ್ನ ಪೇಟ್ವ ಸತಿಯಂ ಕೈಕೊಂಡನಂತಲ್ಲ ದುರ್ಣಯಮಂ ನಚ್ಚುವೊಡೆನ್ನ ನುಗ್ರರಣದೊಳ್ ಮೇಣ್ ಮಿಾಱಿ ಮಾರ್ಕೊಂಡಂ (ಪಂಪಭಾ. ೦-೭೭). ೨. ಕೇಡು ; ಕೆಡುಕು: ನಿನ್ನ ದುರಾಗ್ರಹದಿಂದೇನಾನುಮೊಂದು ದುರ್ಣಯ ಮಾಗದಿರದು (ಪಂಚತಂ. ೩೩-೫). ೩. [ಜೈನ] ದೋಷಯುಕ್ತವಾದ ವಾದ ; ವಸ್ತುವಿನ ಏಕದೇಶವನ್ನು ಮಾತ್ರ ಗ್ರಹಿಸುವಿಕೆ : ಪ್ರಮಾಣ ನಯಗಳ ಮೂಲಕ ವ್ಯವಹಾರವನ್ನೂ ವಾದವನ್ನೂ ಮಾಡಬೇಕೆಂದು ಉಪದೇಶ. ಘಟೋಸ್ತ್ಯೇವ ಎಂದು ಹೇಳಬಾರದು, ದುರ್ಣಯವಾಗುತ್ತದೆ (ಹಿಂದಸಾ. ೭೬). 'ದುರ್ನಯ' ಪರಾ. [ಸಂ.]

ದುರ್ದಮ (ಗಂ). ನಿಯಂತ್ರಿಸಲು ಅಶಕ್ಯವಾದ; ಹತೋಟಿಗೆ ತರಲು ಕಷ್ಟವಾದ: ನಿಷ್ಕಿಂ ದೋರ್ಬಳಂ ಶತ್ರುದುರ್ದಮಚಾತುರ್ಬಳ ನಾಶಮಂ ಪಡೆಯೆ ಚಾರಿತ್ರಂ ನಯಂ ಶೌರ್ಯಮಾದಮೆ ತನ್ನೊಳ್ ದಳವೇಱ್ದತ್ತೆನಿಸಿದಂ ಶಕ್ತಿತ್ರಯಾಧೀಶ್ವರಂ (ಕಂದ್ರಪು. ೨-೯) : ದುರ್ದಮ ನಿಯಂತೃ ವಿಧಿ ತಾಂ ತಂದೊಡ್ಡಿದೀ ಮಹತ್‌ಕ್ಲೇಶಮಂ ಬುದ್ಧಿಯಿಂ ಪರಿಹರಿಸೆ ಯತ್ನಗ್ಗೆ (ಶ್ರೀರಾಮಾ. ೧೦೭-೧೩೪). [ಸಂ.]

ದುರ್ದಮತೆ (ನಾ). ನಿಗ್ರಹಿಸಲಾಗದಿರುವಿಕೆ: ಜಯಿಸಲಾಗದಿರುವಿಕೆ: ಬಯ್ತುಟ್ಟ ವಿಶೋಧಿ ದುರ್ದಮತೆಯಿಂ ಮೋಹಾಧಿರಾಜಂಗನಾದರನಾದಂ ದೊರೆಯಲ್ಲರೆಂದು ಮುಳಿದರ್ಕೋವಕ್ಕಳಧ್ವಂಸಿಯಾ (ಶಾಂತಿಪು. ೪-೧೦೬) : ಪಿಂತೆ ನಾವೆನಿತೊ ಸೂಳ್ ಕಂಡಿರ್ವೆವಾತನ ಚಂಡವಿಕ್ರಮದ ದುರ್ದಮತೆಯಂ (ಶ್ರೀರಾಮಾ. ೫೯೬-೩೨೦). [ಸಂ. ದುರ್ದಮತಾ]

ದುರ್ದಮನೀಯ (ಗಂ). ನಿಗ್ರಹಿಸಲು ಅಶಕ್ಯವಾದ; ಅಧೀನಗೊಳಿಸಲು ಅಸಾಧ್ಯವಾದ: ಅವನಿಗೆ ಅವಳಲ್ಲಿ ದುರ್ದಮನೀಯವಾದ ಪ್ರಣಯ ಉಂಟಾಯಿತು (ಬಂಕಮು. ೦೩೨). [ಸಂ.]

ದುರ್ದಮ್ಯ (ಗಂ). ೧. = ದುರ್ದಮನೀಯ: ಗಣಪತಿರಾಯರಿಗೂ ಕೃಷ್ಣರಾಯರಿಗೂ ಇದೊಂದು ದೈವದ ದುರ್ದಮ್ಯ ದುರ್ಘಟನೆಯೆಂದು ಬಲವಾಗಿ ಎನಿಸಿದ್ದಿತು (ಸಮುಜೀ. ೧೧೪೧): ಪರಿವಾರದಾ ಸಂಸಾರಭಾರಬಂಧನವಿಹುದೆ ದುರ್ದಮ್ಯ. ನಿಸ್ಸೀಮ . . . ಕವಿ ವೈನತೇಯನ ಮಹಾಪಕ್ಷ ವಿಸ್ಫಾಲನೆಗೆ ? (ಶ್ರೀರಾಮಾ. ೧೩೬-೩೪). (ನಾ). ೨. ಅಧೀನಗೊಳಿಸಲು ಅಸಾಧ್ಯವಾದಂದು: ಶಿಷ್ಟಾಚಾರವನ್ನು ಪಾಲಿಸುವ ಹಂಬಲವು ಅವನಲ್ಲಿ ದುರ್ದಮ್ಯವಾಗಿತ್ತು (ಸಮುಜೀ. ೭೯೬). [ಸಂ.]

ದುರ್ದರ್ಶ (ಗು). ೧. ನೋಡಲಂ ಅಸಹ್ಯವಾದ; ಜುಗುಪ್ಸೆಯನ್ನುಂಟು ಮಾಡಂವ: ವೃಷಭನ ಅನಿಮಿತ್ತರೋಷಾವೇಶ ವಿಷಮತೆಗಮೂ ಜರಾ ದುರ್ಬಲ ಬಲೀವರ್ದ ದುರ್ದರ್ಶಮರಣಾಯಾಸ ಪರಿಣತಿಗಂ ವಿಸ್ಮಯಂ ಬಟ್ಟು (ಕಂದ್ರಪು. ೨-೨೯ ವ) : ಆಯ್ಕೋ ಈ ದುರ್ದರ್ಶ ಸಂಕಟಾಕೃತಿಯೇಕೆ ? (ಶ್ರೀರಾಮಾ. ೧೬೪-೬೪೦). (ನಾ). ೨. ಕಾಣಲಂ ಕಷ್ಟವಾದಂದುಂ; ಅಸಹ್ಯವಾದಂದುಂ: ಅಂತರಂಗವನೆಲ್ಲ ಬಿಚ್ಚಿ ತೋರಿಪನಾರು . . . ಗಂತಿಗಳು ಗಂಟುಗಳು ವಮಡಿವುಮಡಿವುಗಳಲ್ಲಿ ಸ್ವಂತಕೇ ದುರ್ದರ್ಶ (ಪುಂಳುಳ. ೧೯೪). ೩. ನೋಡಲಂ ಆಗದಂದುಂ; ಕಣ್ಣಾ ಕೋರ್ಪೆಸುವಂತಹುದುಂ : ನಿಷ್ಕುರಗರಳರಸಾರ್ದ್ರಸ್ಫುರಜಿಹ್ವದರ್ವೀಕರದುರ್ದರ್ಶಂ . . . ಮನಕ್ಕದ್ಭುತರಸದೊದವಂ ತಂದುದಂದೊಂದಗೇಂದ್ರಂ (ಕಂದ್ರಪು. ೩-೩೬). ೪. ಘೋರವಾದ ಆಕೃತಿಯಂಳ್ಳ ವ್ಯಕ್ತಿ: ಇನ್ನುಮಿವರಲ್ಲದೆ ಮಹಾಬ್ರಹ್ಮರಾಕ್ಷಸರ್ಮುನ್ನಿನ ಯುಗಂಗಳವರಿರ್ದಪರ್ಪರಿಯರ್ಸರ್ಮುನ್ನತ ವಟದ್ರುಮನಿವಾಸಿಗಳನೇಕವುರುಷಾದಕರ್ದುರ್ದರ್ಶರು (ಜೈಮಿಭಾ.೦೭-೩೯).

[ಸಂ.]

ದುರ್ದಶೆ (ನಾ). ಕೆಟ್ಟ ಸ್ಥಿತಿ; ದುರವಸ್ಥೆ; ದುರ್ದೈವ: ಭರತಖಂಡದ ಸಾಮಾಜಿಕ ಸ್ಥಿತಿ ಬಹಳ ದುರ್ದಶೆ ಹೊಂದಿತು (ಪುಕ್ಕಾಕ. ೧೧೪ ಟೀಠಿಳಿ) : ಬೀರನಿಗೆ ಮಾತ್ರ ದುರ್ದಶೆ ಹಿಡಿದಿತ್ತು (ಮುಂಗಾಮು. ೬೧) : ಸ್ವಾತಂತ್ರ್ಯ ದೊರೆಯುವುದಕ್ಕೆ ಮುಂಚೆ ನಮ್ಮ ದೇಶದ ದುರ್ದಶೆಯನ್ನು ಕುರಿತು ವಿವಿಲವಾಗಿ ಹುಟ್ಟಿದ ಕವನಗಳನ್ನು ತೆಗೆದುಕೊಳ್ಳಿ (ಕಾವ್ಯಳು. ೧೧).

[ಸಂ. ದುರ್ದಶಾ]

ದುರ್ದಾಂತ (ಗಂ). ೧. ಅಡಗಿಸಲಾಗದ; ಪಳಗಿಸಲಾಗದ; ಹಠಮಾರಿಯಾದ: ಈ ದೊಡ್ಡ ದುರ್ದಾಂತ ಪ್ರಾಣಿಪಿಂಡ ಸೊಂಡಲೆತ್ತಿಕೊಂಡು ಘೀಡಿಡುತ್ತ ಬರುವುದನ್ನು ನೋಡಿಯೂ (ಏಲಂಧ. II. ೨೧೯). (ನಾ). ೨. ಅಡಗಿಸಲಾಗದಂದುಂ : ಈ ಅನ್ಯಾಯದ ಸೇಡು ತೀರಿಸಿಕೊಳ್ಳಬೇಕೆಂಬ ದುರ್ದಾಂತವಾದ ರೊಚ್ಚು ಅಸಹಾಯವಾಗಿ . . . ನನ್ನ ಎದೆಯ ಒಳಗಿನ ಯಾವುದೋ ಒಂದು ಪಾರ್ಶ್ವದಲ್ಲಿ ಭುಸುಗುಟ್ಟುತ್ತ ಕುಳಿತ್ತಿತ್ತೆಂದು ಕಾಣುತ್ತದೆ (ಗಾಳಿಹ. ೭೪). ೩. ಸೊಕ್ಕಿನವನು; ದಂರಹುಂಕಾರದ ವ್ಯಕ್ತಿ: ಈ ದುರ್ದಾಂತನಾದ ವೈದ್ಯನು ನನಗಿತಲೂ ಉಚ್ಚ ತರಗತಿಯ ಪಿಶಾಚನಾಗಿರಬೇಕು (ಪನ್ನಶೀ. ೨೩) ; ಅವರು ತೋರಿಸಿದ ಕಳಂಕರಹಿತವಾದ ವೀರತ್ವವನ್ನು ದುರ್ದಾಂತರಾದ ಪಶುವನರಾಗಲಿ ಜೀಪುಗಳಾದ ಮೊಗಲರಾಗಲಿ ತೋರಿಸಲಾರದೆ ಹೋದರು (ಅರ್ಜುಕೀ. ೩೪) ; ಹರಲಾಲನು ತುಂಬ ದುರ್ದಾಂತ ; ತಂದೆಗೆ ಅವಿಧೇಯ (ಬಂಕಮು. ೭೫). [ಸಂ.]

ದುರ್ದಾನ (ನಾ). ೧. ಸ್ವೀಕರಿಸಲು ಯೋಗ್ಯವಲ್ಲದ ದಾನ; ಶವರಣ ಮುಂತಾದ ಅಶುಭಸಮಯಗಳಲ್ಲಿ ತೆಗೆದುಕೊಳ್ಳುವ ತಿಲ, ಎಣ್ಣೆ, ಹತ್ತಿ, ಕುಂಬಳ, ಕಬ್ಬಿಣ, ಎಮ್ಮೆ ಇತ್ಯಾದಿ ದಾನ. "ತಿಲ, ತೈಲಘಟ, ಕಾರ್ಪಾಸ, ಲೋಹದಂಡ, ಕೂಷ್ಮಾಂಡ" (ಶ್ರೀವಕ್ಷ. ೨೦೩); ಹೀನತ್ವದಿಂದ ತುಚ್ಛರ ಕೈಲಿ ಹಿಡಿದ ದುರ್ದಾನದ ಪಾವಂಗಳು ಭಾನುಬಿಂಬವ ಕಂಡ ಹಿಮದಂತೆ ತೊಲಗುವ ಆನಂದವ್ರತಕೆ ಸರಿಯೆನ್ನಬಹುದೆ (ಪು ರಂ ರ. ೫-೧೪೭-೧); ಒಂದು ಕ್ಷಣ ತೀಕ್ಷ್ಣವಾಗಿ ನೋಡಿ ದುರ್ದಾನ ತೆಗೆದುಕೊಂಡವರಂತೆ ಆಚೆಗೆ ಹೊರಟುಹೋದರು (ಕೀಲುಗೊಂ. ೨೦೮) ; ದುರ್ದಾನ ಹಿಡಿದ ಬ್ರಾಹ್ಮಣನಂತೆ ನಿಂತಲ್ಲಿಂದ ಕಂಬಿಕೀಳುತ್ತಾನೆ (ನಾಡಿಗೀ. ೬೫) : ಶ್ಯಾಮಲೆಯು ದುರ್ದಾನ ಹಿಡಿದವಳಂತೆ ಬಂದು ನನಗೆ ನಮಸ್ಕಾರ ಮಾಡಿ (ಚಿತ್ರಕೂ. ೧೦೬). ೨. ಇಷ್ಟವಿಲ್ಲದೆ ಕೊಟ್ಟ ಕೊಡುಗೆ: ನೀನೊಪ್ಪಿ ಕೇಳಿದೊಡಾಂ ಕೇಳ್ದೆನಯ್, ನಿನ್ನ ಗೋಳಿಡುವುದಂ ಕಂಡು ಕೊಳ್ಳಿಂದೆನಾ ದುರ್ದಾನಮಂ (ಶ್ರೀರಾಮಾ. ೭೩-೩೩೦). [ಸಂ.]

ದುರ್ದಾಹ (ನಾ). ಅನಗತ್ಯವಾದುದನ್ನು ಪಡೆಯಂಬೇಕೆಂಬಾಸೆ; ಅತಿಯಾಸೆ: ಕೆಲವರು ಕೊನೆ ಮೊದಲೇ ಇಲ್ಲದ ದುರ್ದಾಹಕ್ಕೊಳಗಾಗಿ ಅತಿಯಾಗಿ ಸಂಗ್ರಹವನ್ನು ಮಾಡುತ್ತಾ ಹೋದರೆ . . . ಹೀನರು ದುರದೃಷ್ಟದವರೂ ಆದ ಜೀವಿಗಳ ಜೀವಿಕೆಯನ್ನು ಅಪಹರಿಸಿಕೊಂಡಂತಾಗುವುದು (ಅರ್ಜುಧ. ೮೫). [ಸಂ.]

ದುರ್ದಿನ (ನಾ). ೧. ಕೆಟ್ಟ ದಿನ; ಕಷ್ಟದ ದಿವಸ: ಬಾಳಿದವು ಬಹು ಕಾಲ ಇಲ್ಲಿ, ಹೊಳಿವ ಸಿರಿದಿನಗಳಲಿ, ದುರ್ದಿನಗಳಲ್ಲಿ (ಇಂಗೀತ. ೯೬-೬) ; ದೇಶಕ್ಕೇ ಎಂತಹ ದುರ್ದಿನವಿದು (ಶಾಂತಕಾ. ೩೦೨). ೨. ಮೋಡ ಮುಂಚ್ಚಿಕೊಂಡಿರುವುದರಿಂದ ಸೂರ್ಯನಂ ಕಾಣದ ದಿವಸ; ಮೋಡದಿಂದ ಮುಚ್ಚಿದ ದಿನ; ಮಳೆಗಾಲದ ದಿನ: "ಓರಂತೆ ಮುಚ್ಚಿ ಮುಸುಕಿದ ಧಾರಾಧರಮಾದ ದುರ್ದಿನಂ ಘನತಿಮಿರಂ" (ವಸು ಕೂ ೯. ೧೦-೬೧) ; ಮತ್ಕೋಕಿಲೋಲ್ಲಾಸಿತಶೀಕರೋದ್ಗಾಮದುರ್ದಿನ ವನ ಮನೆಯೆಂದವಂದು (ಪಂಪಭಾ. ೩-೧೦ ವ) ; ಕೋಗಿಲೆಗಳೆಡವಿಡದುಗುರ ಮೊನೆಯೊಳಳ್ಳಿಲಿಯೆ ಸುರಿವ ಸಹಕಾರಫಲರಸದ ಸೋನೆಗಳಿಂ ದುರ್ದಿನಂ ಮಸಗಿದಂತೆಯುಂ (ಕಾದಂಪೂ. ೦೦೦೦) ; ದುರ್ದಿನಮಡಂಗೆ ಸುದಿನಂ ಪೊರ್ದಲ್ಕಕುಬಂಬರಾವನೀತಳವೆಲ್ಲಂ ತಾಳ್ದುದೊ ವಿಮಲತೆಯುಂ (ಅಧ್ಯಟ ೦೦-೪) ; ದುರ್ದಿನಂ ದ್ರವರೂಪಿಯಾಗಿ ಕರಕರೆಯ ಕರೆದುದನಿಶಂ ದೂರಮಾದುದು ದಿನಪದರ್ಶನಂ (ಶ್ರೀರಾಮಾ. ೩೮೨-೫೦). ೩. ಮೋಡ; ಮೋಘ: "ದುರ್ದಿನವಧ್ವತಿವಿರವೆನೆ ಮೋಡಮೆಂದೆನಿಸಿಕ್ಕುಂ" (ಮುಂಗರಾ. ೧೩-೪). ೪. ಮಳೆ; ವರ್ಷ: ಇಂದುಬಿಂಬವಿಗಳದಮೃತಬಿಂದು ದುರ್ದಿನಾರ್ದ್ರಚಂದನಾನ್ವಿತಮುಂ (ಪಂಪಭಾ. ೪-೧೬ ವ) ; ರೂಪಿನ ವಿಲಾಸದ ಚಿಲ್ವಿನ ವೈಶ್ಯರಾಜಗೇಹಾಂಗಣಮೊಪ್ಪುಗುಂ ಕರಿಮದೋತ್ಕಟಕರ್ದಮ ದುರ್ದಿನಾಂಗಣಂ (ಸುಳುಮಾ. ೧೦-೩೪). ೫. ಕಗ್ಗತ್ತಲೆ; ಅಂಧಕಾರ: ಅನವರತಗಳನ್ಮದದುರ್ದಿನಾನನಂ ವರ್ಷಜಳಸಮನ್ವಿತಮಂಭೋದನಿನಾದಂ ಭದ್ರಮನಂ ಮನೋಜವಂ ಚತುರಶೀತಿಲಕ್ಷಪ್ರಮಿತಂ (ಆದಿಪು. ೧೧-೫೯).

[ಸಂ.]

ದುರ್ದೀಪ್ತ (ನಾ). ಒಂದು ನರಕದ ಹೆಸರು: ಮಂತ್ರಿನರಕಂಗಳಿಂ ಕ್ರೂರಮಾಗಿ ದುರ್ದೀಪ್ತವೆಂಬರಸುನರಕವಿಹುದು (ವಿಪೇಕ. ೧೯೪). [ಸಂ.]

ದುರ್ದುಂಡಿ 'ದಂಱುದಂಂಡಿ' ನೋ.

ದುರ್ದೆಶೆ 'ದುರ್ದೆಸೆ' ನೋ.

ದುರ್ದೆಸೆ, ದುರ್ದೆಶೆ (ನಾ). = ದುರ್ದಶೆ: ನಿನ್ನದು ಇಷ್ಟು ದುರ್ದೆಸೆ ಆಗಿರುವದು ಎಂಬ ಆಭಾಸವನ್ನು ಕೂಡ ಸ್ವಲ್ಪವೂ ಪ್ರಕಟಪಡಿಸಿರಲಿಲ್ಲ (ಇಷ್ಟಕ. ೨೭೦). **ದುರ್ದೆಶೆ**: ರಾಮನಿಂದ ಇಂಥ ದುರ್ದೆಶೆಯು ಪ್ರಾಪ್ತವಾಯಿತಲ್ಲವೆ (ಕಗವಿ. ೧೦೯ ಉಕಾಚ): ಜೀವನದ ದುರ್ದೆಶೆಯು ಅಲ್ಲಿ ತಾಂಡವವಾಡುತ್ತಿತ್ತು (ಮಣ್ಣಿಮ. ೦೫೦). [< ಸಂ. ದುರ್ದಶಾ]

ದುರ್ದೇವತೆ (ನಾ). ಕೆಟ್ಟ ದೈವ; ಕ್ಷುದ್ರದೇವತೆ: ಅಮಳಕಮಲವನ್ನು ಕೆಂಗಣಿಗಲೆಯ ಹೂಗಳೊಡನೆ ಬೆರಸಿ ದುರ್ದೇವತೆಗಳಿಗೆ ಪೂಜೆ ಮಾಡಿದೆ ನೀನು! (ಬೆಟ್ಟಅ. ೦೩-೦೯). [ಸಂ. ದುರ್ದೇವತಾ]

ದುರ್ದೈನ್ಯ (ನಾ). ಕನಿಕರ ತೋರಿಸಲು ಅರ್ಹವಾದ ಹೀನ ಪರಿಸ್ಥಿತಿ; ಅತಿದೀನವಾದ ಅವಸ್ಥೆ: ಜಯಂತನ ದುರ್ದೈನ್ಯದ ರೂಪವನ್ನು ನೋಡಿ ಕಪಿಲಾ ಮರಮರ ಮರುಗಿದಳು (ಜಯಂತ. ೨೫೫). [ಸಂ.]

ದುರ್ದೈವ (ನಾ). ದುರದೃಷ್ಟ; ದೌರ್ಭಾಗ್ಯ; ದುರ್ವಿಧಿ: ದುರ್ದೈವದಿಂದೊಮ್ಮೆ ದುಸ್ತರಕೂಪಕೆ ಸಿಂಹವು ಬಿದ್ದರು ಭರದೆ ಮದಗಜಕುಂಭ ವಿದಾರಣಕಾರ್ಯಕೆ ಮನವಿಡುವುದನು ಮಾಣುವುದೆ (ಇಂಜಾಪ. ೭೨-೪೮); ನಮ್ಮ ದುರ್ದೈವಕ್ಕೆ ನಮಗೆ ಯಾರೂ ಇಲ್ಲದೆ ಹೋದರಲ್ಲ (ಶಾಂತಲಾ. ೩೪೮): ಶಕುಂತಲೆಯ ದುರ್ದೈವದ ಪರಮಾವಧಿಯನ್ನು ಕಾಣಲು ನಾವು ಐದನೆಯ ಅಂಕಕ್ಕೆ ಹೋಗಬೇಕು (ಧರ್ಮಸಾ. ೭೦). [ಸಂ.]

ದುರ್ದೈವಿ (ನಾ). ಅದೃಷ್ಟಹೀನ ವ್ಯಕ್ತಿ; ಭಾಗ್ಯಹೀನ ವ್ಯಕ್ತಿ: ಒಬ್ಬ ದುರ್ದೈವಿಯಾದ ತರುಣನು ಅಮರಪುರದ ರಾಜಧಾನಿಯ ಸಮೀಪಕ್ಕೆ ಪೂರ್ವದಿಕ್ಕಿನಿಂದ ಬಂದನು (ಮಂಜುಕ. ೩); ದುರ್ದೈವಿಯಾದ ನನ್ನನ್ನು ಹಾಗೆಯೇ ಮುಕ್ತಳಾಗಲು ಬಿಡದೆ ತಾವು ಬಂದು ಜೀವದಾನ ಮಾಡಿದಿರಿ (ಕಮಕು. ೧೧೦). [ಸಂ. ದುರ್ದೈವಿನ್]

ದುರ್ದೋಷ (ನಾ). ತೀವ್ರವಾದ ಪಾಪ, ಪಾತಕ: ದುರ್ದೋಷ ಕಾನನಾನಲರೂಪಸುಕ್ಷೀರ ವಾರ್ಧಿನಿಷಂಗ . . . ಮಹೇಶ ಸಲಹು (ಸಪಮೋ. ೮-೧). [ಸಂ.]

ದುರ್ಧರ (ಗು). ೧. ಹೊರಲು ಅಶಕ್ಯವಾದ; ಅನುಭವಿಸಲು ಕಷ್ಟವಾದ; ಭರಿಸಲಾಗದ. ೨. ನಿರ್ವಹಿಸಲು ಕಷ್ಟವಾದ; ಸಾಧಿಸಲು ಅಶಕ್ಯವಾದ; ಪೂರೈಸಲು ಅಸಾಧ್ಯವಾದ: ಸ್ಫುರದಾಶಾಜ್ವಳನಂ ದುರ್ಧರಸುತಪಸ್ತೀರ್ಥವಾರಿಪರಿಷೇಕದಿನೆಂತಿರೆ ಕಿಡುಗುಂ ಭೋಗಾಜ್ಯೋತ್ಕರಪಾತದಿನೆಂತುಮಂತದೇಂ ಮಟ್ಟುಗುಮೇ (ಚಂದ್ರಪು. ೨-೪೩); ಅರಸಿ ಕೀರ್ತಿಸುತಡಿಗಡಿಗೆ ತನ್ನರಸನೊಡನಿಂತೆಂದಳತಿದುರ್ಧರತಪಃಪರಿಪೂರ್ತಿಯಾಗಲು ಸಲಿಸಿ ಭಕ್ತಿಯಲಿ (ಬಸಪು. ೪೪-೪೨). ೩. ಹತೋಟಿಗೆ ತರಲು ಆಗದ; ಅಂಕೆಯಲ್ಲಿಡಲು ಅಸಾಧ್ಯವಾದ. ೪. ಜರುಗಲು ಕಠಿಣವಾದ; ಕಾರ್ಯಸಾಧ್ಯವಲ್ಲದ; ಸಂಭವಿಸಲು ಕಷ್ಟವಾದ. ೫. ಸ್ವೀಕರಿಸಲು ಯೋಗ್ಯವಲ್ಲದ: ಸಂವೇಗವ್ಯುತ್ಪನ್ನೆಯಂ ದುರ್ಧರ ಕುಮತ ನಗೋದ್ಭಿನ್ನೆಯಂ . . . ನಾಗಶ್ರೀ ಕನ್ನೆಯಂ (ಸುಕುಮಾ. ೭-೪೮). ೬. ಉಗ್ರವಾದ; ದಾರುಣವಾದ: ನಿರುಪಮಾಸ್ತ್ರಪ್ರೌಢಿಯನು ದುರ್ಧರಶಿಳೀಮುಖಸರ್ಗಬಂಧಸ್ಫುರಣವನು ಹಿಂದೀಸುದಿನ ಕಾಣೆನು ರಣಾಗ್ರದಲಿ (ಕುಮ್ಯಾಶ. ೨-೪೮). ೭. ಅಪಾಯಕಾರಿಯಾದ: ಚಂಡರುಚಿಯೆಂಬೊಂ ದೈತ್ಯನತ್ಯಂತದುರ್ಧರ ಜನ್ಮಾಂತರವೈರದಾರುಣವ [ಮ]ನಂ . . . ಕಂಡಂ ಶನಿ ಕಾಣ್ಬವೊಲ್ ಕುವರನಂ (ಚಂದ್ರಪು. ೫-೪). ೮. ಎದುರಿಸಲಾಗದ; ಪ್ರತಿಭಟಿಸಲು ಕಷ್ಟವಾದ: ದುರ್ಧರವಿಕ್ರಮನುರುತರದೋರ್ದಂಡಸಹಾಯನಿರ್ಪುದೆಂದುಮಜೇಯಂ . . . ಸಿಂಗಂ (ಪಂಚತಂ. ೮೭-೦೯); ಅದಟನತಿಪ್ರಚಂಡಬಲನೆನ್ನದೆ ದುರ್ಧರದೋಸ್ಸಹಾಯದಿಂ ಕದನಧುರೀಣಂ . . . ಜವನಂತೆ ನಿಂದಂ (ಪಂರಾಮಾ. ೮-೨೩); ದುರ್ಧರಸಮರಜಯಪ್ರೌಢಿತಾರೂಢದೋಶ್ಶೌರ್ಯದೆ ಶೂರಾರಾತಿಸಂದೋಹಮನೆಱಗಿಸಿ ನಿತ್ಯೋದಯಮಾನಹೃತ್ಸಮ್ಮದನಿರ್ದಂ ಸೌಖ್ಯಸೀಮಂ (ಚಂದ್ರಪು. ೫-೧೩೯). (ನಾ). ೯. ಉಗ್ರವಾದಂದು; ದಾರುಣವಾದುದು: ಹರಿಯ ಕೈಯಲು ಹೋಗದಿಹ ದುರ್ಧರದ ಕುಷ್ಟವನಂತಪಹರಿಸಿ ಪೊರೆಯನೇ ದಂಡಿಯನುಮೇಶನು (ಬಸಪು. ೫೪-೭೦). ೧೦. ಪೀಡೆ; ಹಿಂಸೆ: ಮಾರಿಯ ಮೂರಿಯಾಟದೆಡೆಯೆಂಬಾಗಳೆಂತು ಜೀವಿಪರಕಟಮನೆಯವರ ದುರ್ಧರದೊಳವನಿಪನ ಸತಿ ಪುತ್ರರು (ಹಡಕಾ. ೦೨-೨). ೧೧. ಪ್ರತಿಭಟಿಸಲು ಆಗದವನು; ಪರಾಕ್ರಮಿಂ: ಬಿರುದಿನದಟನಂ ಗೇನೂಳಾಬರ್ಮ್ಮನಂ ದುರ್ದ್ಧರನಂ ಕೊನ್ದಂಗಧರ್ಮಮತಿಭುಜವಿಜಯಶ್ರೀಕನೋ ಲೋಕಭೂಪಂ (ಕಇಅ. ೯-೩-೨೯೪; 1062); ಇಸೆ ಪೊಯ್ಯೆ ತಳ್ತಿಱಿಯೆ ತಳ್ತೇಸಾಡಿದಂ . . . ಧನುರ್ಧರಧುರೀಣಂ ದುರ್ಧರಂ ಲಕ್ಷ್ಮಣಂ (ಪಂರಾಮಾ. ೧೪-೧೬೭); ಹದಿನಾಱುಸಾವಿರ ವರಮಹಾರಥರೊಗ್ಗಿನಲಿ ದುರ್ಧರ ಸುಶರ್ಮನು ಧಾಳಿಯಿಟ್ಟನು ತೆಂಕದೆಸೆಗಾಗಿ (ಕುಮ್ಯಾವಿ. ೪-೩೫). [ಸಂ.]

ದುರ್ಧರುಷ (ಗು). ೧. ಎದುರಿಸಲಾಗದ; ಪ್ರತಿಭಟಿಸಲಾಗದ: ಮುರಮಥನ ಕೆಲ್ಲೈಸಿ ನೋಡಿದನುರುಭಯಂಕರಚಕ್ರವನು ದುರ್ಧರುಷ ಧಾರಾಲೂಯಮಾನ ನಿಶಾತಚಕ್ರವನು (ಕುಮ್ಯಾಭೀ. ೬-೩೦). ೨. ಭಯಾನಕವಾದ; ಭಯಂಕರವಾದ: ಈ ಮಹಾ ದುರ್ಧರುಷ ದೈತ್ಯಸ್ತೋಮವಳಿದುದು ಕಂಸ ಕೇಳುದ್ದಾಮ ಬಾಲಕ್ರೀಡಯಿಂದವೆ ಕೊಂದರವರೆಂದ (ನಿಭಾಗ. ೦೦-೩೧-೧೨). [< ಸಂ. ದುರ್ಧರ್ಷ]

ದುರ್ಧರ್ಷ (ಗು). ೧. ಎದುರಿಸಲಾಗದ; ಆಕ್ರಮಣ ಮಾಡಲು ಕಷ್ಟವಾದ; ಪ್ರತಿಭಟಿಸಲಾಗದ. ೨. ಭಯಂಕರವಾದ; ಘೋರವಾದ: ತಮ್ಮ ಅಮಿತ ಪರಾಕ್ರಮವನ್ನು ಕೇಳಿ ರಾಜಪುತಾನ ಮಹಾರಾಷ್ಟ್ರ ದೇಶಗಳಲ್ಲಿರುವ ದುರ್ಧರ್ಷ ಹಿಂದೂರಾಕ್ಷಸರು ಭಯದಿಂದಲೂ ವಿಷಾದದಿಂದಲೂ ಮೃತಪ್ರಾಯರಾಗಿದ್ದಾರೆ (ಕೋಹಿನೂ. ೩೫). ೩. ಉದ್ಧತ; ಸೊಕ್ಕಿನಿಂದ ಕೂಡಿದ. ೪. ಅಪಾಯಕಾರಿಯಾದ. ೫. ತಡೆಯಲಾಗದ; ಸಹಿಸಲಸಾಧ್ಯವಾದ. (ನಾ). ೬. ಎದುರಿಸಲು ಅಸಾಧ್ಯನಾದವನು: ದುರ್ಧರ್ಷನೇ . . . ಆಶೀರ್ವಾದ ಮಾಡು ಎಂದು ಬೇಡಿದನು (ಭೀಷ್ಮಚ. ೧೬೯). [ಸಂ.]

ದುರ್ನಡತೆ (ನಾ). ಕೆಟ್ಟ ವ್ಯವಹಾರ, ನಡವಳಿಕೆ; ದುರ್ವರ್ತನೆ: ಇಂಥ ದುರ್ನಡತೆಯನ್ನು ಮನಸ್ಸಿನಲ್ಲಿ ಇರಿಸಲಾಗದು ಎಂದು ಆತನಿಗೂ ಹೇಳಿ (ಬತ್ತೀಪು. ೫೦); ಅನಂತ ದುರ್ನಡತೆಗಳಿಂದ ನಡೆಯುತ್ತ . . . ಕೆಲವು ಅದ್ವೈತಿಗಳು ಅನಾಚಾರಿಗಳಾಗಿ ವರ್ತಿಸುವರು (ಕೃಷಿಪ್ರ. ೨೬೭); ನಿಮ್ಮ ದುರ್ನಡತೆ ಅಸಹನೀಯವಾಗುತ್ತಿದೆ (ನಟಸಾ. ೭೩೫). [ದುರ್ + ನಡತೆ]

ದುರ್ನಡೆ (ನಾ). = ದುರ್ನಡತೆ: ಅವನಿಗೆ ಯಾತಕೀ ದುರ್ನಡೆಯು ಬೇಡೆನಲ್ (ಕದಂಪು. ೦೫-೩೫). [ದುರ್ + ನಡೆ]

ದುರ್ನಯ (ನಾ). ೧. ಕೆಟ್ಟ ನಡತೆ; ದುರಾಚಾರ: ಋಷಜನಂಗಳಿಗೇನ ಪಾಯವೊ ನಮ್ಮ ಬನದಲಿ ದಾನವರ ದುರ್ಘಟದ ದುರ್ನಯವಲ್ಲಲಾ (ಕುಮ್ಯಾಅ. ೨೨-೨೩); ಭಯಭಕ್ತಿಸ್ಪೃಹೆವೆತ್ತು ನೋಳ್ಪ ನಯನಂ ರೋಷಾರುಣಾವೇಶ ದುರ್ನ[ಪಾರಾಂ. ರ್ಣ]ಯಕಿಂಬಾಯ್ತು ಪದಾಬ್ಜಪೂಜನಕೆ ಪಕ್ಕಾಗಿರ್ದ ಕೆಯ್ ಕೆಯ್ದುವಂ ರಯದಿಂ ತಾಳ್ದಿದಿರಾಂತುದು (ಶಬಶಂ. ೪-೧೩೩). ೨. ಅಶುಭಸೂಚನೆ; ಅಪಶಕುನ; ದುರ್ನಿಮಿತ್ತ:

ವುಟ್ಟಿದುದಾ ಸತಿಗೆ ದಕ್ಷಿಣಾಕ್ಷಿಸ್ಪಂದಂ . . . ಆಗಳಾ ದುರ್ನಯಕೆ ಸೀತೆ ಭಯಸ್ಥೆಯಾಗಿ (ಪಂರಾಮಾ. ೧೫-೬೫ ಪ); ಅನೇಕ ವೈಹಾಯಸೋತ್ಪಾತಂಗಳಾಗೆ ಕಂಡು ಜಯಮನೆವಗರಿಗೆ ಪರಿದುಂ ಭಯಮಂ ಪೇಟ್ಟಿವುವಿವೆಂದು ನಡದಂ . . . ದುರ್ನಯಮೆ ಸುನಯಮೆನಿಸುಗುಮೆ. ವಲಂ (ಕಂದ್ರಪು. ೬-೦೬). ೫. ಅನೀತಿ : ಅಲರ್ವೋದ ಲತೆಗಂದ ವಿರಹಿವೊಲಾದುದು ದುರ್ನಯದ ಕಾಣ್ಕೆಗೆನ್ನಯ ಚಿತ್ತಂ (ಯುಕೋಕ. ೩-೧೦). ೪. ಕುಮಂತ್ರ; ದುಷ್ಟಮತ : ನೆಱವಂ ತಾಳ್ದಿದವಾಸ್ತ ದುರ್ನಯ ತವೋಬಂಧಂ ಶ್ರುತಸ್ಕಂಧವಾದಱಿವಿಂದಂ ಗಣನಾಯಕರ್ಸಮಱಿ ಭವ್ಯಶ್ರೇಣಿಗವ್ಯಾಜದಿಂದಱಿಯಲ್ನಾಲ್ಕನುಯೋಗವಾದುದು (ಆದಿಪು. ೦-೩೯). ೫. ದೋಷ್ಪ ಕೃತ್ಯ,–ಕಾರ್ಯ : ಪೊಯ್ದಂ . . . ಕೋಪದಿನೈದುಂ ದುರ್ನಯಕೈದೆಯನುರುಗದಾದಂಡದಿಂ ಭೀಮಸೇನಂ (ಗದಾಯು. ೪-೦೯). 'ದುರ್ಣಯ' ಪರಾ. [ಸಂ.]

ದುರ್ನಯವರ್ತಿ (ನಾ). ಕೆಟ್ಟ ನಡತೆಯುಳ್ಳವನು ; ದುರಾಚಾರಿ : ಅಯಶೋಮೂರ್ತಿಗಳಕಿ ದುರ್ನಯವರ್ತಿಗಳನೂನ ಸಪ್ತವ್ಯಸನಾಶ್ರಯರ್ (ಸುಳುಮಾ. ೨-೨೨). [ಸಂ. ದುರ್ನಯವರ್ತಿನ್]

ದುರ್ನಯೋಕ್ತಿ (ನಾ). ಅನೀತಿಯ ಮಾತು : ಸ್ವಯಮೆರ್ದವುಗೆ ಕವಿವುಗೆ ದುರ್ನಯೋಕ್ತಿ ಕೊಲೆಗೆಯ್ದೆ ತನ್ನ ಬಗೆಯುಂ ತತ್ಕಾಂತೆಯೊಳಳುಪಿ ನೆರೆ ದೊಡೇಂ ಕಯ್ಪೆಯುಣ್ಬರಂ ರಸಮೆ ಬಾರಿಕುಂ ಕೆಮ್ಮನಿರಿಂ (ಶಾಂತಿಪು. ೬-೬೬). [ದುರ್ನಯ + ಉಕ್ತಿ]

ದುರ್ನರ (ನಾ). ಕೆಟ್ಟ ವ್ಯಕ್ತಿ : ಪರಮಗುರುಪದಮಂ ಪಿಡಿದು ದುರ್ನರರ ಕಾಲ್ಗಳಿಗೆಱಗುವಂಗತಿನರಕವಲ್ಲಾ ಪೂರ್ವಭವಸಂಸ್ಕಾರರಹಿತಂಗೆ (ಐಸಪು. ೩-೪೬) : ಧರ್ಮವಂ ದುರ್ನರರು ತಪ್ಪುವರಲ್ಲದೇ ಶಂಕರನ ಭಕ್ತರು ತಪ್ಪುವರೆ (ಐಸಪು. ೨೮-೩೪). [ಸಂ.]

ದುರ್ನಾತ (ನಾ). ಕೆಟ್ಟ ವಾಸನೆ ; ದುರ್ಗಂಧ : ಅದರ ದುರ್ನಾತ ಅಸಾಧ್ಯವಾಗಿ, ಪಾತ್ರೆ ದೆಳಗುತ್ತಿರುವವರ ಮೇಲೆಯೂ ಸ್ನಾನಮಾಡುವವರ ಮೇಲೆಯೂ ಬರುತ್ತದೆ (ಚಿಕ್ಕಳ. ೦೧) : ನನಗೆ ಮಾತ್ರ ಆ ದುರ್ನಾತವನ್ನು ಸಹಿಸಲಾಗುತ್ತಿರಲಿಲ್ಲ (ಪಾತರ. ೬೨). [ದುರ್ + ನಾತ]

ದುರ್ನಾಮ (ನಾ). ೧. ಕೆಟ್ಟ ಹೆಸರು ; ಅಪಕೀರ್ತಿ ; ಅಪಖ್ಯಾತಿ : ಪರಿಚಿತರಾದವರೇ ಆಡಿಕೊಳ್ಳುತ್ತಾರೆಂದು ಅಪರಿಚಿತರಾದವರು ಕೂಡ ನಂಬಿಕೊಂಡು ದುರ್ನಾಮವನ್ನು ಎಲ್ಲೆಲ್ಲಿಯೂ ಬಿತ್ತರಿಸುವರು (ಚಿಸ್ನಟೀ. ೩೦). ೨. ದೊಡ್ಡ ಜಾತಿಯ ಜಿಗಣೆ : "ದುರ್ನಾಮಾ, ದೀರ್ಘ ಕೋಶಿಕಾ–೨ ಅನೆಗಳ ರಕ್ತವನ್ನು ಹೀರಲುಳ್ಳ ದೊಡ್ಡ ಜಿಗಣೆ ವೆಸರುಗಳು. ಅಂದರೆ ಹೆಜ್ಜಿಗಣೆ" (ಸಿದ್ಧಾಂತಿ. ೮೪). ೩. ವಂಶಾವ್ಯಾಧಿ.

[ಸಂ. ದುರ್ನಾಮನ್]

ದುರ್ನಾಮಕ (ಗು). ೧. ಕೆಟ್ಟ ಹೆಸರನ್ನು ಹೊಂದಿದ. (ನಾ). ೨. ವಂಶಾವ್ಯಾಧಿ. [ಸಂ.]

ದುರ್ನಾಲಗೆ, ದಂರ್ನಾಲಿಗೆ (ನಾ). ಕೆಟ್ಟ ಮಾತನಾಡುವ ನಾಲಿಗೆ : ದುರ್ನಾಲಗೆಯಿಂದ ಹೊರಡುವುದೆಲ್ಲಾ ಬರಿಯ ಕೆಟ್ಟ ಮಾತುಗಳೇ (ಕೂಡಿ). **ದುರ್ನಾಲಿಗೆ** : ಅವರ ದುರ್ನಾಲಿಗೆಗೆ ಹೆದರಿ ಸುಮ್ಮನಾಗಬೇಕು (ಕೂಡಿ). [ದುರ್ + ನಾಲಗೆ]

ದುರ್ನಾಲಿಗೆ 'ದಂರ್ನಾಲಗೆ' ನೋ.

ದುರ್ನಿಮಿತ್ತ (ನಾ). ೧. ಅನಿಷ್ಟದ ಸೂಚನೆ ; ಕೆಡುಕಿನ ಸೂಚನೆ ; ಅಪಶಕುನ : ಭಯಮಂ ಚಿತ್ತಕೊದವಿಸಿ ಬಲಗಣ್ ಕೆತ್ತಲ್ ಮೊದಲಿ ಕೈತು ದುರ್ನಿಮಿತ್ತಸೂಚಕಮಾಗಳ್ (ಕಾದಂಪೂ. ೮೮೮) ; ಮೇಲೆ ನೆಗಳುವ ದುರ್ನಿಮಿತ್ತವನಾಲಿಸಿದರು (ಕುವಾಸ. ೦೩-೦) ; ನೋಡು ಲಕ್ಷ್ಮಣ ದುರ್ನಿಮಿತ್ತಂಗಳಂ ಪಥದೊಳು ಡಿಳ್ಳಮಾದವುದೀಗಳನ್ನ ಮನಂ (ಕೃಮಿಭಾ. ೦೯-೭) ; ಇಂತೆಡವಿಡದೆ ತಲೆದೋಱುವ ದುರ್ನಿಮಿತ್ತಂಗಳ್ಗೆ ರಾಜಂ ಪರಿದುಂ ಕೊರಗಿ . . . ಬನದೊಳ್ ಚರಿಸುತಿರೆ (ರಾಮಾಶ್ವ. ೬೬-೦೧). ೨. ಸಲ್ಲದ ನೆಪ ; ಸುಳ್ಳು ಸಬೂಬು. [ಸಂ.]

ದುರ್ನಿರೀಕ್ಷಣ (ನಾ). ನೋಡಲು ಕಷ್ಟವಾದುದಂ ; ಕಣ್ಣು ಕೋರೈಸುವುದಂ : ಅಂತರದೊಳಿತಿ ದುರ್ನಿರೀಕ್ಷಣದಿಂ ತಿರುಗುವ ಪುರತ್ರಯವನು . . . ಸುಟ್ಟಸರಾ (ಐಸಪು. ೫೪-೫೪) : ದುರ್ನಿರೀಕ್ಷಣಮಾದುದರಸ ಕೇಳದನೆನಗೆ ವರ್ಣಿಸುವೊಡರಿದು ಕೂರಂಬುಗಳ್ಗಂಬರದೊಳಿಂಬಿಲ್ಲ ಮೆಂಬೊಲಾಯ್ತು (ಕೃಮಿಭಾ. ೬-೬೦) : ಮಿಂಚಿನ ಪೊಗರ್ನಭೋಮಂಡಲ ವನಂಡಲೆಯಲಾಕ್ಷಣಂ ದುರ್ನಿರೀಕ್ಷಣಮಾಗರ್ (ಕೃಮಿಭಾ. ೦೨-೦೯). [ಸಂ.]

ದುರ್ನಿರೀಕ್ಷ್ಯ (ಗು). ೧. ನೋಡಲಂ ಕಷ್ಟವಾದ; ಕಣ್ಣು ಕೋರೈಸುವ: ಸಂಧ್ಯಾರಾಗಸನ್ನಿಕಾಶದುರ್ನಿರೀಕ್ಷ್ಯ ಕಟಾಕ್ಷವಿಕ್ಷೇಪಲಕ್ಷಿತನುಂ (ಗದಾಯು. ೬-೫೬ ಪ). (ನಾ). ೨. ನೋಡಲು ಕಷ್ಟವಾದುದಂ; ಕಣ್ಣು ಕೋರೈಸುವಂತಹುದಂ : ಇದು ಪಗೆವರುಳ್ಳುದಂ ತೋಱುದಪ್ಪುದು ನಿನಗರಿನ್ಯವರ್ಗಳಿಲ್ಲದೊಡಿಂತಿರ್ಪುದೆ ದುರ್ನಿರೀಕ್ಷ್ಯಮಿನಱುಬುದಂತೆ ಪಜ್ಜಳಿಸಿ ಬಾಗಿಲೊಳ್ ಪುರವರದಾ (ಆದಿಪು. ೦೪-೦೩). [ಸಂ.]

ದುರ್ನಿವಾರ (ನಾ). ದಮನ ಮಾಡಲು ಆಗದುದಂ ; ಹತ್ತಿಕ್ಕಲಂ ಕಷ್ಟವಾದುದು; ನಿವಾರಿಸಲಾಗದುದು: ಆಗಲಾ ದುರ್ನಿವಾರವಾದ ಈಟಿಯು ತನ್ನ ಮಗನ ಮೇಲೆ ಬಂದ ಮಾತ್ರವೇ (ಪುರಂದಾ. ೬-೦೦೦) ; ಹೆರವರ ಕೈಯಲ್ಲಿಯ ವಸ್ತುವಸ್ತು ಪಡೆದುಕೊಂಡು ಪರೀಕ್ಷಿಸುವ ಇಚ್ಛೆ– ಇವರಿಗೆ ದುರ್ನಿವಾರವಾಗುತ್ತದೆ (ಗಾಳಿ. ೩೨); "ಮತ್ತ" ಎನ್ನುವಾಗ "ಮತ್ತರಂತೆ ಅಸಮಂಜಸಕಾರಿಗಳು, ದುರ್ನಿವಾರಗಳು" ಎಂದು ಮುಂತಾಗಿ ವ್ಯಂಗ್ಯಾರ್ಥ ಪರಂಪರೆ (ಧೃಷ್ಟಾಕೋ. ೫೭). [ಸಂ.]

ದುರ್ನಿವಾರ್ಯ (ನಾ). = ದುರ್ನಿವಾರ : ಅತಿಮಾನುಷವಾದ ದುರ್ನಿವಾರ್ಯವಾದ ದುರ್ವಾಸಶಾಪವೆಂಬ ಬಾಹ್ಯಯಂತ್ರಸಾಧನದಿಂದ ಕವಿ ತನ್ನ ಕೆಲಸ ಮಾಡಿಸಿಕೊಳ್ಳಬೇಕಾಯಿತು (ಸಂಸಾಬ. ೦೩೨). [ಸಂ.]

ದುರ್ನಿಶೆ (ನಾ). ೧. ಕೆಟ್ಟ ರಾತ್ರಿ ; ಕಷ್ಟಕರವಾದ ರಾತ್ರಿ. ೨. ಮಳೆ ಸುರಿಯೆಂಬ ರಾತ್ರಿ : ಮಳೆ ಮೊದಲಿವಂತೆ ಜೋರಾಗಿ ಸುರಿಯದಿದ್ದರೂ ನಿಂತು ನಿಂತು ಸುರಿಯುತ್ತಾ ರಾತ್ರಿಯನ್ನು ದುರ್ನಿಶೆಯನ್ನಾಗಿ ಮಾಡಿತ್ತು (ಪುಕಮ. ೯೯೩). [ಸಂ. ದುರ್ನಿಶಾ]

ದುರ್ನೀತ (ಗು). ೧. ಕೆಟ್ಟ ನಡತೆಯುಳ್ಳ ; ದುರ್ವರ್ತನೆಯುಳ್ಳ. ೨. ಅಶಿಕ್ಷಿತವಾದ. (ನಾ). ೩. ದುರಾಚಾರ; ಕೆಟ್ಟವಡತೆ; ದುರ್ವರ್ತನೆ. ೪. ಕೆಟ್ಟ ನಡತೆಯುಳ್ಳವನಂ ; ಅನ್ಯಾಯದ ನಡವಳಿಕೆಯುಳ್ಳವನಂ: ಜಾತರೂಪವ ತೊಟ್ಟು ಭೂತೇಶನಾಗಿ ದುರ್ನೀತನ ಗೆಲಬೇಕೆಂದು ಆತುರದಿಂದ ಕೌತುಕವಹ ಬಲವನು ಜಾತರೂಪನು ಕೂಡಿಸಿದನು (ತ್ರಿಪುಶಾಂ. ೦೦-೦೦೬) ; ಕಡುದುರುಳರು ಧೂರ್ತರಂ ಬಗ್ಗಡೆಯರಂ ದುರ್ನೀತರಂ ನಾಗ್ಗೆಡಿಕರಂ . . . ವ್ಯಾಕುಳರನತಿಕೃವೆವೆತ್ತು ಕಾಯ್ (ಐಸಪು. ೩೮-೭೦).

[ಸಂ.]

ದುರ್ನೀತಿ (ನಾ). ೧. ಕೆಟ್ಟ ವಡತೆ ; ದುರಾಚಾರ : ದುರ್ನೀತಿಯ ಹಕ್ಕೆ ಹಾಸ್ಯದ ಹೊಲಂ ಮರುಳಾಟದ ಮಂದಿರಂ . . . ನೋಡಲೆಸದತ್ತು ಸದಾಗಣಿಕಾಪ್ರತೋಳಿ ತಾಂ (ಹಮ್ಮೀ. ೨-೯೨) ; ದುರ್ಬುದ್ಧಿ ದುರ್ನೀತಿಯುಳ್ಳವನಯ್ಯ ನಾನು (ಅಜಾಂಡೇ. ೯೬-೦೪) : ಮಲೆತು ದುರ್ನೀತಿಯಲಿ ನಿನ್ನ ರಾಜರು ಕೆಟ್ಟು, ಹಿಡಿದು ಸಂಕಲೆಯಟ್ಟು ಜಗ್ಗಿಸಲು ಬರಲು (ಇಂಗೀತ. ೨೮-೦೩). ೨. ಅನೀತಿ; ಅನ್ಯಾಯ: ಅವನಾಳ್ದ ಭುವನದೊಳಗೆ . . . ದುರ್ನೀತಿ ದುಸ್ಸಂಗ ದುಸ್ಥಿತಿ ದುರಾಚಾರವಿಲ್ಲ (ಹಡಕಾ. ೨-೦೦) : ದುರ್ನೀತಿಯಲಿ ವಧಿಸುವರೆ ನೀನೀ ಬ್ರಾಹ್ಮಣೋತ್ತಮನ (ಐಸಪು. ೩೩-೪೩).

[ಸಂ.]

ದುರ್ನೆವ (ನಾ). ಸುಳ್ಳು ಸಬೂಬು; ಸಲ್ಲದ ನೆವ: (ಕಿ).
[ದುರ್ + ನೆವ]

ದುರ್ನೋಟ (ನಾ). ಕೆಟ್ಟ ದೃಷ್ಟಿ,–ನೋಟ. [ದುರ್ + ನೋಟ]

ದುರ್ಬಲ (ಗು). ೧. ಬಲಹೀನವಾದ; ಚೈತನ್ಯವಿಲ್ಲದ; ತ್ರಾಣವಿಲ್ಲದ. (ನಾ). ೨. ಬಲಹೀನನಾದವನು; ಶಕ್ತಿಯಿಲ್ಲದವನು: ತನ್ನ ಮೈಯೊಳ್ ಬಲನೆನಿಪ್ಪರಸು . . . ಮಹಾವೀರಸೈನ್ಯಂ ನಿಜಪ್ರಿಯಂ ಕೂಡಿ ಸಪ್ತಾಂಗಸಂಪನ್ನನೆನಿಸುವ ರಾಜನಕ್ಕುಮಿನಿತಿಲ್ಲದಿಹ ರಾಜ ದುರ್ಬಲ ನೆನಿಕ್ಕುಂ (ಮಂಗರಾ. ೮೦-೧೦). ೩. ಬಲಹೀನವಾದಂದು: ಒಂದು ಪ್ರಾಣಿಯಿಂದ ಮತ್ತೊಂದು ಪ್ರಾಣಿಗೆ ಜೀವನ. ದುರ್ಬಲವು ಸಬಲಕ್ಕೆ ಆಹಾರ (ವಚಧಾ. ೩೨೯). [ಸಂ.]

ದುರ್ಬಲಗೊಳ್ (ಕ್ರಿ). ಶಕ್ತಿಹೀನವಾಗು; ಸತ್ವವಿಲ್ಲದಂತಾಗು. 'ದುರ್ಬಲಗೊಳಿಸು' ಪರಾ. [ದುರ್ಬಲ + ಕೊಳ್$_1$]

ದುರ್ಬಲಗೊಳಿಸು (ಕ್ರಿ). ಶಕ್ತಿಹೀನವಾಗುವಂತೆ ಮಾಡು; ಶಿಥಿಲಗೊಳಿಸು: ಆಮ್ಲಗಳು ಹತ್ತಿಯ ಬಟ್ಟೆಗಳನ್ನು ದುರ್ಬಲಗೊಳಿಸುವುದು (ಗೃಹವಿ. ೬೨). [ದುರ್ಬಲಗೊಳ್ + – ಇಸು$_3$]

ದುರ್ಬಲತೆ (ನಾ). ಶಕ್ತಿಹೀನತೆ; ದೌರ್ಬಲ್ಯ: 'ಡಿ' ಜೀವಾತಿನ ಕೊರತೆಯಿರುವ ಮಕ್ಕಳು . . . ಯಾವಾಗಲೂ ಸಂಕಟ, ನರಗಳ ದುರ್ಬಲತೆ, ಅತಿನಿದ್ರೆಗಳಿಗೊಳಗಾಗುತ್ತಾರೆ (ಆಡುಸೌ. ೬೫). [ಸಂ. ದುರ್ಬಲತಾ]

ದುರ್ಬಲಿ (ನಾ). ಶಕ್ತಿಹೀನನಾದವನು; ದುರ್ಬಲನಾದವನು: ಸೋತ ದುರ್ಬಲಿಗೆ ಸಲ್ಲುವುದು ನಮ್ಮನುಕಂಪೆ ನೀತಿ ನಿಂದೆಯೊಳಿರದು (ಮಂಕುಕ. ೨೮೦). [ಸಂ. ದುರ್ಬಲಿನ್]

ದುರ್ಬಹ (ನಾ). ಹೊರಲು ಕಷ್ಟವಾದಂದು; ಬಹಳ ಭಾರವಾದಂದು: ವರ ಕೂರ್ಮಂಗವಹೀಶ್ವರಂಗವಖಿಳಾಶಾದಂತಿಗಂ ದುರ್ಬ್ಬಹಂ ಪಿರಿದು ಭೂಭಾರಮೆಂದು ತನ್ನ ಭುಜದೊಳ್ . . . ತಾಳ್ದಿದನ್ (ಎಕ. VI, ಕಡೂರು. ೧೨೯-೧೮; 1218). [<ಸಂ. ದುರ್ವಹ]

ದುರ್ಬಾಯಿ (ನಾ). ಕೆಟ್ಟ ಮಾತನಾಡುವ ಬಾಯಿ.
[ದುರ್ + ಬಾಯಿ$_1$ (<ಬಾಯ್)]

ದುರ್ಬಿಣಿ 'ದುರ್ಬೀನು' ನೋ.

ದುರ್ಬಿನೀತ (ನಾ). ಒಬ್ಬಾತನ ಹೆಸರು: ನೊಟಿಪಯ್ಯನ ಮಗಂ ಅಬ್ಬಯ್ಯನ ಬೆಸದಲ್ ದುರ್ಬ್ಬಿನೀತನ ಮುನ್ತೆ . . . ಕಾದಿ ಸತ್ತು ಸ್ವರ್ಗ್ಗದಲಿಟ್ಟಂ (ಎಕ. XII, ಮದ್ದಗಿ, ೨೬-೧೪; ಸು. 950).
[<ಸಂ. ದುರ್ವಿನೀತ]

ದುರ್ಬೀಜ (ನಾ). ೧. ಕೆಟ್ಟ ಬೀಜ. ೨. ವ್ಯಭಿಚಾರಕ್ಕೆ ಹಂಟ್ಟಿದವನು.
[ಸಂ.]

ದುರ್ಬೀನಿ 'ದುರ್ಬೀನು' ನೋ.

ದುರ್ಬೀನು, ದುರ್ಬಿಣಿ, ದುರ್ಬೀನಿ (ನಾ). ದೂರದ ವಸ್ತುಗಳು ಹತ್ತಿರದಲ್ಲಿದ್ದಂತೆ ಮತ್ತು ಹೆಚ್ಚು ಗಾತ್ರವಾಗಿ ಕಾಣುವಂತೆ ಮಾಡುವ ಒಂದು ಬಗೆಯ ಸಲಕರಣೆ; ದೂರದರ್ಶಕಯಂತ್ರ: ಗ್ಯಾಲಿಲಿಯೊನು . . . ದುರ್ಬೀನು ಎಂಬ ಯಂತ್ರವನ್ನು ರಚಿಸಿ, ಅದರಿಂದ ಆಕಾಶದೊಳಗಿನ ಗ್ರಹ ನಕ್ಷತ್ರಗಳನ್ನು ನೋಡಹತ್ತಿದನು (ಮುಂಬಯಿ. ೫-೨೨೪); ಹೈದರನು ದುರ್ಬೀನು ಹಾಕಿ ನೋಡಿ . . . ಮಲ್ಲಾಪುರದ ಬಳಿ ಡೇರೆ ಹಾಕಿಸಿಕೊಂಡು ನಿಂತನು (ಚಿತ್ರಪಾ. ೮೨); ಎಲ, ಎನಗಿಡುತಿಹೆ ದುರ್ಬೀನ ಎನ್ನ ನುಡಿಸೆ ನಿನಗಿಲ್ಲ ಸಮಾನ (ಗಣೇಶ. ೬-೧೪೩). ದುರ್ಬಿಣಿ: ಆ ದೋಣಿಯನ್ನು ಪರೀಕ್ಷಿಸುವುದಕ್ಕೋಸ್ಕರ ಅವನು ದುರ್ಬಿಣಿ ಹಚ್ಚಿ ನೋಡಲಾಗಿ (ಮುಂಬಯಿ. ೬-೧೫೨); ಬೆಟ್ಟ ಗುಡ್ಡಗಳು ಇದ್ದಲ್ಲಿ ಅಂತಹ ಪ್ರದೇಶವನ್ನು ಅಳೆಯುವಾಗ ... ಧಿಅಡೋಲೈಟ್ ಎಂಬ ದುರ್ಬಿಣಿ ಇವುಗಳನ್ನು ಉಪಯೋಗಿಸಬೇಕಾಗುವುದು (ಭೂಮಿಅ. ೧೩); ತುಳಸಿ ತನ್ನ ಹೃದಯದ–ಕಣ್ಣಿನ ದುರ್ಬಿಣಿ ಹಿಡಿದು . . . ನಿಂತಿದ್ದಾಳೆ (ದೀಪಹ. II, ೩೯೯). ದುರ್ಬೀನಿ: ನೀನು ಎಂದಾದರೂ ದುರ್ಬೀನಿಯನ್ನು ನೋಡಿದ್ದೀಯಾ (ಮುಂಬಯಿ. ೫-೧೪೫).
[←ಮರಾ. ದುರಬೀನ, ದುರಬೀಣ, ದುರ್ಬಿಣ, ದುರ್ಬೀಣ, ದುರ್ಬೀನ; ಹಿಂ. ದುರಬೀನ್, ದೂರಬೀನ್; ಪಾರ. ದೂರ್ಬೀನ್]

ದುರ್ಬುತನ (ನಾ). ಮೂರ್ಖತನ; ಮೌಢ್ಯ; ಅಜ್ಞಾನ (?): ಕೌರವಾಧೀಶ ಮುಂದಱಿಯದೇ ದುರ್ಬುತನದಿಂದ ಕೆಟ್ಟು ಹೋದಂದಮಾಯ್ತಲ್ಲಾ ಎನುತ್ತ ಬಿಸುಸುಯ್ದು ಬಳಿಕಿಂತು ಬಿನ್ನಪಗೆಯ್ದನು (ಸಮ್ಯಕೌ. ೮-೨೩).
[ದುರ್ಬು? + – ತನ]

ದುರ್ಬುದ್ಧಿ (ನಾ). ೧. ಕೆಟ್ಟ ಬುದ್ಧಿ; ದುಷ್ಟಮನಸ್ಸು: ಬಿಡು ದುರ್ಬುದ್ಧಿಯನು (ವಿಷ್ಣುಪು. ೦-೫-೪೩); ದುರ್ಬುದ್ಧಿಯಂ ನಿನಗದಾರ್ ಪೇಳ್ದರೀ ಕುಲಕೆ ಹಾಲಾಹಲವನೆರೆವ ಮತಿಯಂ (ಶ್ರೀರಾಮಾ. ೭೧-೦). ೨. ಮೂರ್ಖತನ; ಅವಿವೇಕ: ಮೋಹಧನಮಂ ಮುಂದಿಟ್ಟು ದಲ್ ತೃಷ್ಣೆ ಲಂಪಟೆ ಬೆನ್ನಿಂ ಬಿಡದೊಲ್ಲೆಮೊಲ್ಲೆಮೆನೆಯುಂ ದೂದಟ್ಟಿ ದುರ್ಬುದ್ಧಿಯಂ (ಶಾಂತಿಪು. ೭-೬೭); ನೀವು ಬೆಸಸಿದ ಪರಿಯೊಳೆಮ್ಮ ಮನಂಗಳೊಳಗಾವರಿಸಿದತಿ ದುರ್ಬುದ್ಧಿ ಫಲವಿಲ್ಲ (ಬಸಪು. ೩೪-೧೦). ೩. ಕೆಟ್ಟ ಹಂಚಿಕೆ,– ಉಪಾಯ: ಹರಿಶ್ಚಂದ್ರರಾಯನುನ್ನತಿಯನಳಿವಾರ್ಪುಳ್ಳದೊಂದು ದುರ್ಬುದ್ಧಿಯಂ ನೆನೆದನು (ಹಚಕಾ. ೩-೦೦). ೪. ಕೆಟ್ಟ ಬುದ್ಧಿಯುಳ್ಳವನು: ಆಲಸ್ಯಂ ದುರ್ಬುದ್ಧಿ ಕುಶೀಲಂ . . . ಎನಿಪ್ಪವನೆ ನೀಲಲೇಶ್ಯೆಯ ಜೀವಂ (ಪಸಾರ. ೪೦೪).

ದುರ್ಬುದ್ಧಿಯಾಗು = ಅವಿವೇಕಿಯಾಗು: ಒಬ್ಬರಿಗೂ ಹುಟ್ಟದೆ ಅಯೋನಿಯಲ್ಲಿ ಬಂದು ದುರ್ಬುದ್ಧಿಯಾದವಳನೇನೆಂಬೆನಣ್ಣಾ (ವಚಸಂ. ೫೭೫-೧). [ಸಂ.]

ದುರ್ಬುಧ (ಗು). ೧. ಮೂರ್ಖತನದ; ದಡ್ಡತನದ. ೨. ಕೆಟ್ಟಬುದ್ಧಿಯಿಂದ ಕೂಡಿದ. (ನಾ). ೩. ಮೂರ್ಖ; ದಡ್ಡ: ದುರ್ಬುಧರಿಗೆಯಾಪ್ತ ದಾಲೋಚನೆಯ ಪೇಳ್ವನೆ ಮೂರ್ಖನು (ನವಪೋ. ೧೨-೨೯). ೪. ತಪ್ಪು ಹುಡುಕುವವನು; ದೋಷಾನ್ವೇಷಕ; ಛಿದ್ರಾನ್ವೇಷಿ; ಕುಕವಿ: ಪರಿಕಿಪೊಡವಿಚಾರಿ ಸಿತೇತರಗತಿಯಾದಂ ಪ್ರಭಂಜನಪ್ರಿಯನತಿನಿಷ್ಠುರ ಜಿಹ್ವನುಷರ್ಬುಧನಂತಿರೆ ದುರ್ಬುಧನಾರೊಳೊಂದಿ ಪಡೆಯಂ ನೋವಂ (ಚಂದ್ರಪು. ೧-೪೨). [ಸಂ.]

ದುರ್ಬೆಸನಿ (ನಾ). ಕೆಟ್ಟ ಬಯಕೆಯುಳ್ಳವನು; ಲಂಪಟ: ಒಸಗೆಗ ಮುತ್ಸಾಹಕ್ಕಂ ಸಸಿಯುದಯಂ ರಂಜಿಪಂತೆ ಕಳ್ಳಂಗಂ ದುರ್ಬೆಸನಿಗಮಾತೆಱದಿಂ ರಂಜಿಸಲಕ್ಕುಮೆ (ಧರ್ಮಾಮ್ಯ. ೪-೨೯). [ದುರ್ + ಬೆಸನಿ]

ದುರ್ಬೋಧ (ನಾ). ೧. = ದುರ್ಬೋಧನೆ. ೨. ಕೆಟ್ಟ ಉಪದೇಶವನ್ನು ಮಾಡುವವನು: ದುರ್ಬೋಧರಂ ಕೂಡಿಕೊಂಡು ಸುತ್ತ ಸುಳಿದು (ಪಿಂಡೋರ. ಹ. ೫೦೨-೨೪). [ಸಂ.]

ದುರ್ಬೋಧಕ (ನಾ). ೧. ಅನೀತಿಯನ್ನು ಬೋಧಿಸುವವನು; ಚುಚ್ಚಿ ಕೊಡುವವನು: ಇದಿರುಗಾಣದೆ ಕೊಲೆಗೆ ನಿರ್ಬಂಧದಲಿ ಬೆಸಸುವ ಕೃಷ್ಣನಕಟಾ ಮದಮುಖನೊ ದುರ್ಬೋಧಕನೊ ವಂಚಕನೊ (ಕುಪ್ಯಾಭೀ. ೩-೨೮). ೨. ದಡ್ಡ; ಅವಿವೇಕಿ: ಏನುವನಱಿಯದ ಕಾಕು ದುರ್ಬೋಧಕಂ ಕವಿಯೆನಿಸೆ ಕುಂದೇ ಮಹಾಕವಿಗೆ (ಹಚಕಾ. ೧-೨೪). [ಸಂ.]

ದುರ್ಬೋಧನೆ (ನಾ). ವಂಚನೆ ಮಾಡಬೇಕೆಂದು ತಿಳಿಸುವಿಕೆ; ಕೆಟ್ಟ ಉಪದೇಶ; ದುಷ್ಟ ಸಲಹೆ: ಪರಿಪರಿಯ ಕುಹಕಮಂ ಪಣಿದು ದುರ್ಬೋಧನೆಯನೆರೆದಳೇಕಾಂತದೊಳ್ (ವೆಂಕಾರಾ. ೨-೫-೦).
[ಸಂ. ದುರ್ಬೋಧನ]

ದುರ್ಬೋಧೆ (ನಾ). = ದುರ್ಬೋಧನೆ: ದುರ್ಬೋಧೆಯಂ ಬೇಱ್ ಪುಟ್ಟಿಸುಗುಂ (ಮಲ್ಲಿಪು. ೦-೨೬); ನಿಗಮವಿರಹಿತಶೂನ್ಯದುರ್ಬೋಧೆಗಳಿಗೊಲಿದು . . . . ಭಸಿತವಂ ಪೂಸಲೊಲ್ಲದ ಪಾಪಚಿತ್ತರಿರಾ (ಬಸಪು. ೫೦-೪೮); ದುರ್ಬೋಧೆಗಳ ನಾನಾಚಂದದಲಿ ಬೋಧಿಸಿ . . . ಸುಯೋಧನಂಗಾನಂದವೆನಿಸಿ ಕಳಿಂಗಲೋಕವ ಕೊಂದನೈ (ಕುಪ್ಯಾಅ. ೮-೫೪); ದುರ್ಬೋಧೆಗೊಳಗಾಗಿ ನೀಂ ಕುಲಗೇಡಿಯಾಗದಿರ್ (ಶ್ರೀರಾಮಾ. ೭೦-೧೦).

[ಸಂ. ದುರ್ಬೋಧ]

ದುರ್ಬೋಧ್ಯ (ನಾ). ತಿಳಿಯಲು ಅಸಾಧ್ಯನಾದವನಂ; ಅರಿಯಲು ದುಸಾಧ್ಯನಾದವನಂ: ಮೊದಮೊದಲಿಗೆ ಶಶಿಭೂಷಣನಾದರೂ ಅದೇ ಬಗೆಯಾಗಿ ದುರ್ಬೋಧ್ಯನಾಗಿದ್ದನು (ಇಪ್ಪಳ. ೮೬). [ಸಂ.]

ದುರ್ಭಂಗ (ನಾ). ಅಧಿಕವಾದ ಕೇಡಂ: ಗರ್ಭಗಳ ಸೀಳ್ದವರ ಕೊಬ್ಬುಗಳ ಕೊರಕೊರದು ದುರ್ಭಂಗವನು ಮಾಳ್ಪೆ ಹಬ್ಬಗಳ ನಾನು (ಕರಿಕ. ೫೦-೦).

[ಸಂ.]

ದುರ್ಭಗ (ಗು). ೧. ಅದೃಷ್ಟಹೀನವಾದ; ದುರದೃಷ್ಟದ. ೨. ಕುರೂಪಿಯಾದ; ಅವಲಕ್ಷಣದ. (ನಾ). ೩. ದುರದೃಷ್ಟ; ದುರ್ದೈವ: ದಾರಿದ್ರ್ಯದುರ್ಭಗಾಪಗತಿತಾಪತ್ರಯಾದ್ಯೋರುಭೀತಿಗಳಂ ಕೆಡಿಸಿ (ಪದ್ಮರಾ. ೦೦-೮೬). ೪. ಸಹಿಸಲು ಆಗದಂದು; ತಾಳಲು ಕಷ್ಟವಾದಂದು; ಅಹಿತವಾದಂದು: ಹೇಮಂತಮಿಷ್ಟಋತು ತಾನೈಸೆ . . . ಸುಭಗನಗ್ನಿ ದುರ್ಭಗಮೈಸೆ ನೆಳಲ್ ನೀರ್‌ಗಳೆರಡುಂ (ಶ್ರೀರಾಮಾ. ೨೦೧-೦೯೮). ೫. ದುರದೃಷ್ಟಶಾಲಿ: ನಗುವರಱಿಯದ ದುರ್ಭಗರು ಯೋಗಿಗಳ ಕುಲದೇವತೆಯ ನಿಜಲೀಲೆಗಳ ವೀಕ್ಷಿಸೆ (ನಿಭಾಗ. ೩-೫-೦೦). ೬. [ಜೈನ] ಎಪ್ಪತ್ತೆರಡು ಬಗೆಯ ನಾಮಪ್ರಕೃತಿಗಳಲ್ಲಿ ಒಂದು; P "ಈ ಕರ್ಮೋದಯದಿಂದ ಒಬ್ಬನಲ್ಲಿ ರೂಪ ಲಾವಣ್ಯವಿದ್ದರೂ ಇತರರ ಮನಸ್ಸಿನಲ್ಲಿ ಆತನ ವಿಷಯವಾಗಿ ಅಪ್ರೀತಿ ಉಂಟಾಗುತ್ತದೆ" (ಆದಿಪು. ಕೋಶ): ಸುಭಗದುರ್ಭಗಪ್ರತ್ಯೇಕಶರೀರಾಯಶಸ್ಕೀರ್ತ್ಯನಾದೇಯನಿರ್ಮಾಣಪರ್ಯಾಪ್ತಿನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿ ಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೦೬-೪೯ ವ); ಅಸ್ಥಿರ ಶುಭ ಸುಭಗದುರ್ಭಗ ಸುಸ್ವರ . . . ತೀರ್ಥಕರನಾಮಮೆಂದಿಂತಲ್ಲಿ ಗತಿನಾಮಕರ್ಮಂ ಚತುರ್ವಿಧಮಕ್ಕುಂ (ಗೊಮ್ಮಸಾ. ೩-೭). 'ನಾಮಕರ್ಮಪ್ರಕೃತಿ' ಪರಾ. [ಸಂ.]

ದುರ್ಭಗತ್ವ (ನಾ). ದುರದೃಷ್ಟ; ದುರ್ದೈವ; ದಾರಿದ್ರ್ಯ: ಸಮವಾಯಂ ಮನುಜತ್ವಮಾದೊಡಮಘವ್ಯಾಪಾರದಿಂ . . . ಅಲ್ಪಾಯುಷ್ಯಮುಂ ದುರ್ಭಗತ್ವಮುಮಾತಂಕಕಳಂಕಮುಂ ಸಮನಿಕುಂ ಸಂಸಾರಿಗವ್ಯಾಕುಲಂ (ಸುಳುಮಾ. ೫-೩೫). [ಸಂ.]

ದುರ್ಭಗನಾಮಕರ್ಮ (ನಾ). = ದುರ್ಭಗ ೬: ದುರ್ಭಗನಾಮಕರ್ಮ: ರೂಪಾದಿ ಗುಣಗಳು ಚೆನ್ನಾಗಿ ಇದ್ದರೂ ಕೂಡ ಅನ್ಯರಿಂದ ಪ್ರೀತಿಸಲ್ಪಡದಂತೆ ಆಗುವ ಅರ್ಥಾತ್ ದ್ರೋಹಕ್ಕೆ ಕಾರಣವಾಗುವ ದೇಹನಿರ್ಮಿತಿಯು ಈ ಕರ್ಮಪ್ರಕೃತಿಯಿಂದ ಉಂಟಾಗುವುದು (ಜೈನಪ. ೩೭೬).

[ದುರ್ಭಗ + ನಾಮಕರ್ಮ]

ದುರ್ಭಗವನಿತೆ (ನಾ). = ದುರ್ಭಗೆ ೧: ಅನುಭವಿಸುವ ಜನಮಂ ನೆಟ್ಟನೆ ಪಡೆಯದೆ ಬಱಿದೆ ಕಿಡುವ ವಿವಿಧ ಫಲಂಗಳ್ ನೆನೆಯಿಸಿದುವಲ್ಲಿ ದುರ್ಭಗವನಿತೆಯ ರಮಣೀಯರೂಪಯೌವನದೊದವಂ (ಪುಷ್ಪಪು. ೫-೮೮).

[ದುರ್ಭಗ + ವನಿತೆ]

ದುರ್ಭಗೆ (ನಾ). ೧. ಪತಿಗೆ ಇಷ್ಟವಿಲ್ಲದವಳು; ಗಂಡನಿಗೆ ಬೇಡವಾದವಳು: ದುಶ್ಚರಿತೆ ದುರ್ಭಗೆ ದುರ್ಮತಿ ದುಷ್ಟೆ . . . ದುರಾತ್ಮೆಯಪ್ಪ ವಧು ಸಜ್ಜನಮೇ (ಮದಕಿ. ೮-೭). ೨. ಅದೃಷ್ಟಹೀನಳಾದ ಹೆಂಗಸು; ಭಾಗ್ಯಹೀನೆ: ರೋಮಶಮಲ್ಪತರಂ ಭಗಮಾದೊಡಾಕೆ ದುರ್ಭಗೆಯಕ್ಕುಂ (ಲೋಕೋಪ. ೧೧-೫೩). ೩. ಸಿಡುಕಿ; ಕೋಪಿಷ್ಠೆ; ಮುಂಗೋಪಿ. ೪. ಗಂಡನನ್ನು ಕಳೆದುಕೊಂಡವಳು; ವಿಧವೆ. [ಸಂ. ದುರ್ಭಗಾ]

ದುರ್ಭಯ (ನಾ). ಕಳ್ಳರಿಂದ ಅಥವಾ ದುಷ್ಟಮೃಗಗಳಿಂದ ಉಂಟಾಗುವ ಹೆದರಿಕೆ,-ಭೀತಿ: ಕೆಡಿಸಿದೆಯಲಾ ತಮ್ಮ ದುರ್ಭಯ [ಪಾಠಾಂ. ದುರ್ಧರ, ದುರ್ಭರ] ದಡವಿಯಲಿ ಭಯಭರಿತವನಿತೆಯ ಬಿಡುವರೇಯಕಟಕಟ (ಶೊರರಾ. ೩-೦೦-೬). [ಸಂ.]

ದುರ್ಭರ (ಗು). ೧. ತಾಳಲಾಗದ; ತ್ರಾಸದಾಯಕವಾದ: ಚಟುಲ ದುರ್ಭರ [ಪಾಠಾಂ. ವ] ಭೂರಿಕರ್ಮೋತ್ಕಟಘಟವಹಿತ್ರವನಳವಡಿಸಿ ಪಟುಭವಾಂಬುಧಿಯೊಳು ತಿರುಗಿಸುವ ವೈಶ್ಯನುಂ ತಾನೆ (ಬಸಪು. ೨೦-೨೬); ಹರವೀರ್ಯವಹ್ನಿಮುಖದಿಂದ ಹರಿಮುಖ್ಯರುಂ ಧರಿಸಿ ದುರ್ಭರಪುರುಷ ಗರ್ಭಬಾಧೆಯನು ಶಂಕರನಿರೂಪಂಬಡೆದು ಸರವಣದೊಳುದ್ಗಾರಿಸಲ್ ಕಂದನುದಯವಾಗೆ (ಗುರುಜಾ. ೪-೩೨); ದೇವದೇವರೆ ನೋಡೆ ಹಿಂಜರಿವಂಥ ಚೆಲುವಿನ ಓಜದೊಳ್ – ಬಲ್‌ತಪದ ದುರ್ಭರ ತೇಜದೊಳ್ (ಅಹಲ್ಯೆ. ೧೦೭-೧೦). ೨. ತುಂಬಲು ಕಷ್ಟವಾದ; ಭರ್ತಿಮಾಡಲು ಅಸಾಧ್ಯವಾದ. ೩. ಸಲಹಲು ಅಶಕ್ಯವಾದ; ಸಂರಕ್ಷಣೆ ಮಾಡಲು ಕಷ್ಟವಾದ. (ನಾ). ೪. ಹೊರಲಾಗದುದು; ಅತಿ ಭಾರವಾದುದು: ಇಂದು ದುರ್ಭರವೆನಿಸಿದರ್ಭಕನಿಂದೆ ಧರಿಸಲ್ಪಟ್ಟ ಗರ್ಭವು ಮಂದಕಕ್ಕಟಿ ಗರ್ಭವಾಯಿತು (ಬಸಪು. ೩-೧೬).

ದುರ್ಭರವಾಗು = ತ್ರಾಸದಾಯಕವಾಗು: ಬಾಗಿಲಿಗೆ ಬೀಗ ಜಡಿದು ನಾನು ಏಕಾಕಿಯಾದಾಗ ನನ್ನ ಮನೋಯಾತನೆ ದುರ್ಭರವಾಯಿತು (ಪುನರು. ೩೮೯). [ಸಂ.]

ದುರ್ಭವ (ನಾ). ಕೆಟ್ಟ ಜನ್ಮ; ನೀಚವಾದ ಹುಟ್ಟು: ದುರ್ಭವ ಕ್ಷಯಕರ ನಗರ್ಭಾವಿರ್ಭವಂ ನಿರ್ಭಿನ್ನಭಾವಂ ನಿರ್ಭರಾಶಾಪಾಶಮೋಚನ ಕರ್ಮ ಕರ್ಮಠನು (ಬಸಪು. ೫೩-೩); ಶ್ರೀ ಗುರುವೆಯೆನ್ನ ದುರ್ಭವದ ಭೀತಿಯನೆಲ್ಲ ನೀಗಿ ನಿಜಸುಖದ ಸಾಮ್ರಾಜ್ಯಪದವಿಯನಿತ್ತೆ (ನವಮೋ. ೦-೫).

[ಸಂ.]

ದುರ್ಭಾಗ್ಯ (ನಾ). ದುರ್ದೈವ; ದುರದೃಷ್ಟ: ದುರ್ಭಾಗ್ಯವಶತಃ, ಅವಳು ಸರ್ವಾಂಗಸುಂದರಿಯಾಗಿರಲಿಲ್ಲವಾಗಿ ನಾವು ತಟಸ್ಥರಾದೆವು (ಕಪಾಳುಂ. ೪೩). [ಸಂ.]

ದುರ್ಭಾವ (ನಾ). ಕೆಟ್ಟ ಆಲೋಚನೆ; ದುಷ್ಟ ಯೋಚನೆ: ಅದನೆಂತು ಬಣ್ಣಿಪೆಂ ದುರ್ಭಾವ ವಿಸರಮಂ (ಪಿಂಡೋರ. ಹ. ೫೦೫-೦೦); ಭೂವರಂ ಭವಿಯೊಡನೆ ಸುಬ್ರತಶೈವನಂ ಸರಿಮಾಡುವುದು ದುರ್ಭಾವವೆನ್ನದೆ ಮದಿಸಿ ಕೊಲಲೆಂದವನ ಹೆಣನೊಡನೆ ಧರಣಿಪಾಲಕನಾಗ ಕಳುಹಿದಡೆ (ಬಸಪು. ೫೩-೪೫); ಮಾನಸದೊಳವಳು ಚಿಂತಿಸುತಿರಲ್ಕದ ಕಂಡು ದಾನವನ ದುರ್ಭಾವಕಂ ಮುನಿದು ಪೋಪಂತೆ ಭಾನು ಪಶ್ಚಿಮದಿಯಸ್ತಮಿಸಲು (ನವಮೋ. ೯-೨೦); ಕಸ ಕಡ್ಡಿ ಅಡ್ಡಿ ಬಂದೊಳಚರಂಡಿಯ ನೀರು ಮೇಲಕೆ ಉಕ್ಕುವವೋಲೆ ಹಳೆಯ ದುರ್ಭಾವಗಳೊತ್ತಡದೊಳು ನೂರು ಕೊಳೆ ಕಾಂತೆ ಬಂದಿವೆ ಮೇಲೆ (ಇಂಬಾಪ. ೦೮೩-೪). [ಸಂ.]

ದುರ್ಭಾವಚಾರಿ (ನಾ). ಕೆಟ್ಟ ಭಾವದಿಂದ ಕೂಡಿದವನು; ದುಷ್ಟತನದ ನಡವಳಿಕೆಯುಳ್ಳವನು: ವೈಕುಂಠನಂ ಕಂಡು ಬೊಮ್ಮನಂತಾಗಳಾಲೋಕಿಸುತ್ತುಗ್ರದಿಂ ನುಡಿದನತಿಶಯದಹಂಕಾರಿ ದುರ್ಭಾವಚಾರಿ (ವೀಕೈಪು. ೬-೦-೧೨). [ಸಂ. ದುರ್ಭಾವಚಾರಿನ್]

ದುರ್ಭಾವತ್ರಯ (ನಾ). [ವೀಶೈ] ಭಾವತ್ರಯಕ್ಕೆ ವಿರುದ್ಧವಾದ ಜ್ಞಾನವಿಕೃತಿ, ವರ್ತನವಿಕೃತಿ ಮತ್ತು ಮೋಹನವಿಕೃತಿಗಳೆಂಬ ಮೂರು ದುರ್ಭಾವಗಳು: ಭಾವತ್ರಯಂಗಳ ಬಣ್ಣಗೆಡಿಸಿ ದುರ್ಭಾವ

ತ್ರಯಂಗಳ ದೂರ ಮಾಡಿ ಮನತ್ರಯಂಗಳ ಮರ್ದನ ಮಾಡಿ (ಅಖಂಡೇ. ೧೯೪-೦೪); ಜ್ಞಾನವಿಕೃತಿಭಾವ, ವರ್ತನವಿಕೃತಿಭಾವ, ಮೋಹನವಿಕೃತಿಭಾವ ಇಂತಿವು ದುರ್ಭಾವತ್ರಯಂಗಳು (ವಚಶಾ. II, ೧೨೯).

[ದುರ್ಭಾವ + ತ್ರಯ]

ದುರ್ಭಾವನೆ (ನಾ). ಕೆಟ್ಟ ಆಲೋಚನೆ; ದುಷ್ಟ ಭಾವನೆ: ಪಾಱೇಟ್ ದುರ್ಭಾವನೆ ಲಕ್ಷ್ಮೀವಲ್ಲಭಂ ಪೊಲ್ಲದು ತಡೆದೊಡದಕ್ಕಿನ್ನೆಗಂ ಕೆಮ್ಮಗಿರ್ದಂ ದನವದ್ಯೋದ್ಯೋಗನಾಗಳ್ ಪಿಡಿದು ದೃಢರಥಂಗೆಂದನಾ ರಾಜರಾಜಂ (ಶಾಂತಿಪು. ೯-೧೦೩). [ಸಂ. ದುರ್ಭಾವನಾ]

ದುರ್ಭಾಷಣ (ನಾ). = ದುರ್ಭಾಷೆ: ಇಂತೆಂದ ದೂತನ ದುರ್ಭಾಷಣಮಂ ಕೇಳ್ದು (ಬಾಧಪು. ೦೩-೦೯ ವ); ಮೇಘವತಿಯ ದುರ್ಭಾಷಣಗಳನ್ನು ಸುಮ್ಮನೇ ಸಹನ ಮಾಡಿಕೊಳ್ಳುತ್ತಿದ್ದಳು (ಮಂಜುಳ. ೧೨೯). [ಸಂ.]

ದುರ್ಭಾಷೆ (ನಾ). ಕೆಟ್ಟ ಮಾತು; ಕಠಿಣವಾದ ನುಡಿ; ದೂಷಣೆ: ನುಡಿದಹನು ದುರ್ಭಾಷೆಗಳನಡಿಗಡಿಗೆ ಶಿವನಿಂದೆಯನುಸುರ್ವ ಬಗ್ಗಡೆಯನಂ ಕೊಲಲಹುದು (ಬಸಪು. ೫೭-೨೯). [ಸಂ. ದುರ್ಭಾಷಾ]

ದುರ್ಭಿಕ್ಷ (ನಾ). ೧. ಬರ; ಕ್ಷಾಮ: ವೈರಾಗ್ಯ ಅಗ್ನಿ . . . ದುರ್ಭಿಕ್ಷ ಅತಿವೃಷ್ಟಿ ಅನಾವೃಷ್ಟಿಗಳೆಂಬೆಂಟುಂ ಪೀಡನಮೆಂಬುದಕ್ಕುಂ (ಪಂಚತಂ. ೮೦-೯); ದುರ್ಭಿಕ್ಷದೊಳು ಚಾರಿತ್ರಕ್ಕೆ ಶಿಥಿಲತ್ವಮಾದೊಡೆ (ಪಸಾರ. ೪೦೪); ದುರ್ಭಿಕ್ಷದಲಿ ಸಲಹಿದನ ಜಲದೊಳಾಳ್ದನನೆತ್ತಿದನ ... ಮಱೆದವನಿಳಿವನೈ ಕುಲಕೋಟಿಸಹಿತ ಮಹಾಂಧನರಕದಲಿ (ಕುಮ್ಯಾಉ. ೩-೪೨); ವರವುಂಟರಸ ಕೇಳ್ ದುರ್ಭಿಕ್ಷ ಡಾಮರ ಬಾಧೆ ಖೇದಗಳು ಇರದವೊಲು ತನ್ಮನಿಪನಿರ್ದೂರ್ವರೆಯೊಳು (ತೊರರಾ. ೧-೫-೨೪); ದೇಶದಲ್ಲಿ ಕ್ಷೋಭೆ ದುರ್ಭಿಕ್ಷಗಳುಂಟಾಗಿ, ಪ್ರಜೆಗಳೂ ಧರ್ಮಬಾಹಿರರಾಗುತ್ತಾರೆ (ಶಾಂತಲಾ. ೨೦೦). ೨. ಕೊರತೆ; ಅಭಾವ: ದುರ್ಭಿಕ್ಷದಲ್ಲಿ ಅಧಿಕಮಾಸ (ಗಾದೆ).

ದುರ್ಭಿಕ್ಷ ಬೀಳು=ಬರಗಾಲವಾಗು; ಕ್ಷಾಮವುಂಟಾಗು: ದೇಶದೊಳಗೆ ದುರ್ಭಿಕ್ಷ ಬಿದ್ದು ಕಾಳು ಬಹಳ ತುಟ್ಟಿಯಾದವು (ಮುಂಬಯಿ. ೪-೭೫).

[ಸಂ.]

ದುರ್ಭೇದ (ಗು). ೧. ವಿಭಾಗಿಸಲು ಕಷ್ಟವಾದ; ಬೇರೆ ಮಾಡಲು ಕಷ್ಟವಾದ. (ನಾ). ೨. ಭೇದಿಸಲಾಗದುದು; ಒಡೆಯಲಾಗದುದು: ಕಾದಲೆನ್ನಳವಲ್ಲ ಬಲ ದುರ್ಭೇದವಿದು (ಕುಮ್ಯಾಬ್ರೋ. ೪-೩೨). ೩. ತಿಳಿಯಲು ಕಷ್ಟವಾದುದು: ಆದುದೇ ನೆಲೆ ಕುರುಪತಿಗೆ ದುರ್ಭೇದವಿದು ಮೆಚ್ಚುಂಟು ನಿಮಗೆನಲಾ ದುರಾತ್ಮಕರಱುಹಿದರು (ಕುಮ್ಯಾಗ. ೪-೫೦). ೪. ಭೇದೋಪಾಯ; ದುಷ್ಟ ಉಪಾಯ; ಕುತಂತ್ರ: ಮೇದಿನೀಶಂ ಸಮಯಿಗಳ ದುರ್ಭೇದದಿಂ ತಾನಾಗಳತಿಕುಪಿತೋದಿತಾನನನಾಗುತಂ ಬಾಚಯ್ಯಗಿಂತೆಂದ (ಬಸಪು. ೫೩-೭೫). [ಸಂ.]

ದುರ್ಭೇದ್ಯ (ಗು). ಒಡೆಯಲು ಕಷ್ಟವಾದ; ದೃಢವಾದ: ವೃಂದಾವನ ತಟದೊಳ್ ಗೋವೃಂದಾವನವಾಂಛೆಯಿಂದೆ ಮನೆಗಟ್ಟಿದನಾ ನಂದಂ ಕೃತಗೋಪಜನಾನಂದಂ ದುರ್ಭೇದ್ಯಕಟಕರುಚಿ ರುಜಿಪಿನಂ (ಜಗವಿ. ೩-೬೬).

[ಸಂ.]

ದುರ್ಭೋಜನ (ನಾ). ಸಾತ್ವಿಕವಲ್ಲದ ಆಹಾರದ ಭೋಜನ,-ಊಟ: ದುರ್ಭೋಜನ ಮಾಡಿದವರ ದೌರ್ಮನಸ್ಯದಂತೆ ಏನೋ ದುಗುಡ ಎಲ್ಲೆಲ್ಲೂ ದುಮದುಮಗುಟ್ಟುತ್ತಿದೆ (ಮಹಾಣ. ೨೯೫). [ಸಂ.]

ದುರ್ಮಂತ್ರ (ನಾ). ೧. ಕೆಟ್ಟ ಸಲಹೆ,-ಉಪದೇಶ: ಸಾಂಗವಹುದೇ ಕಡೆಗೆ ದುರ್ಮಂತ್ರಗಳೆನುತೈಸಱಲಿ ಸರ್ವಜನಗಳಚ್ಚರಿವಟ್ಟು ನೋಡಲು (ಬಸಪು. ೫೦-೪೦); ಯತಿ ಕೆಡುಗು ದುಸ್ಸಂಗದಲಿ ಭೂಪತಿ ಕೆಡುಗು ದುರ್ಮಂತ್ರದಲಿ [ಪಾಠಾಂ. ತ್ರಿಯಲಿ] (ಕುಮ್ಯಾಉ. ೩-೧೦೯). ೨. ಅನಿಷ್ಟಕಾರಕವಾದ ಮಂತ್ರ; ಕೆಡುಕನ್ನುಂಟುಮಾಡುವ ಮಂತ್ರ: ಆಱನೆಯ ಮಂತ್ರಮೆಂಬುದು ಪಂಚವಿಧಮಕ್ಕುಮವಱೊಳ್ . . . ಉಱಿದವೆಲ್ಲಂ ಪ್ರಾಣಿ ಮಾರಣಹೇತುಗಳ್ ದುರ್ಮಂತ್ರಂಗಳೆಂದಱಿಗೆ (ಜಾವುಂಪು. ೨೨೦). ೩. ದುಷ್ಟ ಯುಕ್ತಿ,-ಉಪಾಯ: ಹೊಲತಿಯರಾಗಿ ಕೆಲಸಾರಿ ನಿಂದು ಬೆಸನಾವುದೆನಲು ಜನಪತಿ ಹರಿಶ್ಚಂದ್ರ ಬಂದು ನಮ್ಮಯ ತಪೋವನದೊಳ್ಳೆದನೆ ಹೋಗಿ ಸರ್ವಬುದ್ಧಿಗಳೊಳಾತನ ಮರುಳುಮಾಡುತಿರಿ ಹೋಗಿಯೆಂದಟ್ಟಿದಂ ದುರ್ಮಂತ್ರ ಬಲವಂತನು (ಹಡಕಾ. ೭-೨). [ಸಂ.]

ದುರ್ಮಂತ್ರಿ (ನಾ). ೧. ಕೆಟ್ಟ ಸಚಿವ; ದುಷ್ಟನಾದ ಮಂತ್ರಿ: ದುರ್ಮಷಣನೆಂಬ ದುರ್ಮಂತ್ರಿ ನೀನಿರೆ ಕನ್ಯಾರತ್ನಂ ಪೆಱರ ಕೈಗೆ ಪೊಗಲು ತಕ್ಕುದಲ್ಲೆನೆ (ಜಾವುಂಪು. ೫೬); ನಿನ್ನಂತಪ್ಪ ದುರ್ಮಂತ್ರಿಯ ಕಾರಣದಿಂ ಪಿಂಗಳಕಂಗೆ ಧರ್ಮಹಾನಿಯುಂ . . . ಪ್ರಾಣಹಾನಿಯುಮಾಗಲಿರ್ದುದು (ಪಂಚತಂ. ೧೬೮-೧); ಯತಿ ಕೆಡುಗು ದುಸ್ಸಂಗದಲಿ ಭೂಪತಿ ಕೆಡುಗು ದುರ್ಮಂತ್ರಿಯಲಿ [ಪಾಠಾಂ. ತ್ರದಲಿ] (ಕುಮ್ಯಾಉ. ೩-೧೦೯). ೨. ಚುಚ್ಚಿ ಕೊಡುವವನು; ದುಷ್ಟಬೋಧನೆ ಮಾಡುವವನು: ಉರಗನಲಿ ನದಿಯಲಿ ಸಖಿಯರಾತುರಿಯದಲಿ ದುರ್ಮಂತ್ರಿಯಲಿ ದುಶ್ಚರಿತನಲಿ ವಿಶ್ವಾಸಿಸೆಯಲೇ ಭೂಪ ಕೇಳೆಂದ (ಕುಮ್ಯಾಸ. ೧-೫೯).

[ಸಂ. ದುರ್ಮಂತ್ರಿನ್]

ದುರ್ಮತ (ಗು). ೧. ಕೆಟ್ಟ ಅಭಿಪ್ರಾಯದ; ದುಷ್ಟತನದ. (ನಾ). ೨. ಅಯೋಗ್ಯವಾದ ಮತ,-ತತ್ವ; ದುಷ್ಟಸಿದ್ಧಾಂತ: ನಿಗುರುವ ದ್ವೈತಕ್ರಿಯಾಮಾಯೆಗಳ ದುರ್ಮತದಿಂದ ಸದ್ವಿದ್ಯೆಗೆ ಪರಶಿವನ ಭಜನೆಯಿಲ್ಲದನಾಮಿಕರುಗಳಿರಾ (ಬಸಪು. ೫೦-೪೮); ದುರ್ಮತಾಂಬುಜಮತ್ತ ವಾರಣ ಕಿನ್ನರೇಶಾ . . . ಎಂದು ಪಲುಂಬಿ ಪಳಯಿಸಿ (ಪ್ರಷವಿ. ೨೪-೦೩).

[ಸಂ.]

ದುರ್ಮತಿ (ಗು). ೧. ಕೆಟ್ಟ ಬುದ್ಧಿಯ; ದುಷ್ಟಬುದ್ಧಿಯನ್ನುಳ್ಳ. ೨. ಮೂರ್ಖತನದ; ಅಜ್ಞಾನದ; ದಡ್ಡತನವನ್ನುಳ್ಳ. (ನಾ). ೩. ಕೆಟ್ಟ ಬುದ್ಧಿ: ಬಗೆಯೊಳ್ ತನಗಹಿತಮನಾರ್ ಬಗೆದೊಡಮಾಗಳೆ ಕೃತಾಸ್ತ್ರನವರಿದಿರೊಳ್ ತೊಟ್ಟಗೆ ನಿಂದು ಕೆಡಿಸುಗುಂ ಪ್ರಜೆ ಬಗೆ ಕಿಡೆ ದುರ್ಮತಿಯಿ[ಯ]ನಿಂತು ಪಿರಿಯರುಮೊಳರೆ (ಶಾಂತಿಪು. ೫-೦೨೩); ದುರ್ಮತಿಯಿಂ ದುರ್ಜನದೊಳ್ ದುರಾಚರಿತರೊಳ್ ನಿರ್ಧರ್ಮರೊಳ್ ಕೂಡಿ ಸನ್ಮತಮಂ ಬಿಟ್ಟು (ಧರ್ಮಾಮ್ಯ. ೦೩-೦೫೫); ಕರ್ಮತಾರಕ ಕಾಣೊ ನಿಶ್ಚಯವೀ ಮಾತು ದುರ್ಮತಿಯನು ಬಿಟ್ಟು ಮರ್ಮವನಱಿತರೆ (ಪುರಂದ. ೪-೧೯೮ ಅನುಪಲ್ಲವಿ). ೪. ಕೆಟ್ಟ ಬುದ್ಧಿಯುಳ್ಳ ವ್ಯಕ್ತಿ; ದುಷ್ಟವ್ಯಕ್ತಿ: ದುರ್ಭಗೆ ದುರ್ಮತಿ . . . ದುರಾತ್ಮೆಯಪ್ಪ ವಧು ಸಜ್ಜನಮೇ (ಮದತಿ. ೮-೭); ದುರ್ಮತಿ ಧಾತ್ರನಿಂ ನಿನಗೆ ದುಸ್ಥಿತಿ ಸಾರ್ದುದು (ಪಂರಾಮಾ. ೧೪-೧೯೫); ಥಳಥಳಿಪ ಪದಾರ್ಥವನೇಂ ಗಳ ಕಾಣ್ಬನೆ ದೋಷದೃಷ್ಟಿ ದುರ್ಮತಿ ಗಡದೇಂ ತಿಳಿವನೆ ಗುಣಸಂತತಿಯಂ (ಪುಷ್ಪಪು. ೧-೪೭); ಕಾಯಿರೇ ಸರ್ವಾಪರಾಧಿಗಳ ಪಿಸುಣರಂ ದುರ್ಮತಿಗಳಂ ಸೈರಿಸಿ ಸುಕೃತರಂ ಮಾಡಿ ಎಮ್ಮುವನಸಮಮಹಿಮೋದ್ಧಾರಸೂರಸುಧೀಜನಾಧಾರ (ಬಸಪು. ೩೨-೬೨); ದುರ್ಲಭನಾರು ದುಸ್ಸಹನಾರು ದುರ್ಮತಿ ಯಾರು ಧರ್ಮಜ ತಿಳಿಯ ಹೇಳೆಂದ (ಕುಮ್ಯಾಅ. ೦೩-೫೭). ೫. ಮೂರ್ಖತನ; ಅವಿವೇಕ. ೬. ಮೂರ್ಖತನವುಳ್ಳವನು; ಅವಿವೇಕಿ: ಜರೆ ಯೌವನ ಕ್ಕಮಭಿಘಾತಮೆನುತ್ತಿರೆ ಕಂಡು ಕೇಳ್ದುಂ ಗಡ ಪರಿವರ್ತಿಸರಾತ್ಮಹಿತದೊಳತಿ ದುರ್ಮತಿಗಳ್ (ಚಂದ್ರಪು. ೨-೩೭); ಕರ್ಮಕಿಂಕರರಾದ ಕಾಮ್ಯಫಲಾಭಿಲಾಷರಿಗೆ ಬ್ರಹ್ಮವಿದ್ಯಾಭ್ಯಾಸದಲಿ ಮನ ನೆಮ್ಮದದಱಿಂದಾತ್ಮಸುಖವದು ದುರ್ಮತಿಗಳಿಗೆ ದೂರವಾಗಿಹುದಱಿಸಿ ನೋಡಿದರೆ (ಅಮೃತ. ೧-೪೪). ೭. ಧೃತರಾಷ್ಟ್ರನ ಮಕ್ಕಳಲ್ಲಿ ಒಬ್ಬ; ದುರ್ಯೋಧನನ ತಮ್ಮ: ದುರ್ಯೋಧನನಂ ಮುಂತಿಟ್ಟು ಯುಯುತ್ಸು ದುಶ್ಶಾಸನ . . . ದುರ್ಮತಿ

. . . ಮೊದಲಾಗಿ ನೂರ್ವರುಂ ಬಂದು (ಪಂಪಭಾ. ೨-೭೦ ವ). ೮. ಅರುವತ್ತು ಸಂವತ್ಸರಗಳಲ್ಲಿ ಐವತ್ತನೆಯಂದು : ಮಾರಲಿ ಪೆಮ್ಮಣ್ಣನವರು ದುರ್ಮ್ಮತಿಸಂವತ್ಸರದ ವೈಶಾಖ ಬಹುಳ ಪಂಚಮಿ ಆದಿತ್ಯ ಮಗ ಮಾದಿಗವುಡಂಗೆ ಧರ್ಮ್ಮ ಸಲುವಂತಾಗಿ ಕೊಟ್ಟ ಕೊಡಗೆ (ಎಕ. III, ಮಳಿಪ. ೧೦೭-೫ ; 1321) ; ಮತ್ತಮಾ ವರುಷವೇ ಪ್ರಭವ ವಿಭವ . . . ದುರ್ಮತಿ ದುಂದುಭಿ ರುಧಿರೋದ್ಗಾರಿ ರಕ್ತಾಕ್ಷಿ ಕ್ರೋಧನ ಅಕ್ಷಯವೆಂದಱವತ್ತು ತೆಱನಾಗಿಹುದು (ವಿವೇಕ. ೩೨೦). [ಸಂ.]

ದುರ್ಮದ (ಗು). ೧. ಅಮಲೇರಿದ ; ಉನ್ಮತ್ತವಾದ ; ಮದಿಸಿದ. (ನಾ). ೨. ದುರಹಂಕಾರ ; ಕೆಟ್ಟ ಹೆಮ್ಮೆ,-ಹಮ್ಮು : ಅದಱೊಳ್ ಸಾಮ್ರಾಜ್ಯಸೌಖ್ಯೋಲ್ಲಸಿತಹೃದಯನಿರ್ಪಂ ಧರಾಧೀಶ್ವರಂ ದುರ್ಮದ ಭೂಭೃತ್ಪಾತಿಖಡ್ಗಾಶನಿವಿಳಸನಮೇಘಾಗಮಂ (ಹಂದ್ರಪು. ೧-೧೫೨) ; ಬಾಧಿಸುವ ಹೃಷೀಕಸಂಚಯವನಳ್ಕಿಸಿ ದುರ್ಮದಮೆಂಟನಿಕ್ಕಿ ಬಂಧಿಸಿ . . . ಭಕ್ತಿಯೊಳಾಂ ಪಿಡಿವೆಂ ಮೃಡಾಂಘ್ರಿಯಂ (ಶಬಶಂ. ೨-೯೦) ; ದುರ್ಜನದ ದುರ್ಮದವ ಮುರಿಯಿರೇಳಿ (ವಿಸೀಗೀ. ೪೨-೧೬) ; ಅವನ ದುರ್ಮದ ಯಾವ ನಯಕ್ಕೂ ಬಗ್ಗದಿರಲು ಕೃಷ್ಣನು . . . ಶಾಪವನ್ನು ಕೊಟ್ಟ ಕಥೆ ಈ ನಾಟಕದ ಕಥಾವಸ್ತು (ಆಗ್ರಹ. V ಮುನ್ನುಡಿ). ೩. ಉನ್ಮತ್ತನಾದವನು ; ಮದಿಸಿದವನು ; ದುರಹಂಕಾರಿ. ವಿದ್ವಿಷದಿಭರದನಸ್ತಂಭಲೀಲಾಸಮುತ್ಪಾಟನಕಾಂಕ್ಷಾದುರ್ಮದಂ ದುರ್ಜಯರಿಪುನೃಪಶೌರ್ಯೋನ್ನಮನ್ಮಸ್ತಕಾವರ್ಜನವಾಂಛಾದುರ್ಧರಂ (ಆದಿಪು. ೧೪-೦೯) ; × × × ಧರೆಗೆ ವಕ್ತ್ರಂ ವಚಶ್ರೀಯಂ ಬಣ್ಡಾರದ ಸದ್ಮಂ ತಂನ × × × ಬೆನಲು ದುರ್ಮ್ಮದರೊಳು ಕಾಳೇಯ ದಣ್ಡಾಧಿಪಂ (ಸೌಇಇ. XX, ೧೦೭-೨೫ ; 1138). ೪. ಧೃತರಾಷ್ಟ್ರನ ಮಕ್ಕಳಲ್ಲಿ ಒಬ್ಬ ; ದುರ್ಯೋಧನನ ತಮ್ಮ : ಈತ ದುರ್ಯೋಧನ ಮಹೀಶ್ವರನು . . . ಈತ ದುರ್ಮದನೀತ ಚಿತ್ರಕನೀತಗಳು ಕುರುವಂಶದಲಿ ವಿಖ್ಯಾತರು (ಕುಮ್ಯಾಅ. ೧೩-೫೧). [ಸಂ.]

ದುರ್ಮನ (ನಾ). ೧. ಕ್ಷೋಭೆಗೊಂಡ ಮನಸ್ಸು ; ಮನಸ್ತಾಪ : ಮನಸಿಜ ಕೇಳಣ್ಣ ನಿನಗೆನಗಿಂದು ದುರ್ಮನದಿಂದ ಜಗಳವಪ್ಪುದಕೆ ಘನವೇನು ಹೇಳು (ಭರಶ. ೫೧-೭೦). ೨. ಕೆಟ್ಟ ಉದ್ದೇಶ ; ದುಷ್ಟ ಬುದ್ಧಿ ; ದುರುದ್ದೇಶ : ದುರ್ಮನದಿ ನೀವ್ ಬಾಳ್ವುದಲ್ಲದೆ ನಿರ್ಮಲರ ಮನ ಕಲಕಿ ದೋಷಕೆ ವರ್ಮಿಗರು ನೀವಾದಿರಿ (ಬಿಜ್ಜಪು. ೧೦೬-೭೦). ೩. ಕೆಟ್ಟ ಮನಸ್ಸನ್ನುಳ್ಳವನು ; ದುಷ್ಟ : ಹಿಡಿದು ಸತ್ಯಾಹಿಂಸೆಯಸ್ತ್ರಗಳ ದುರ್ಮನರ ಕೆಡೆದ ಕದನಕಪಾಲಿ (ಅಮತಂ. ೩೯-೧೩). ೪. ಖಿನ್ನವಾದುದು ; ದುಃಖಗೊಂಡಿರುವುದು : ತಿನುತುಂ ನಿಸ್ಸಾರಮಪ್ಪ ಕೊಳೆವುಲ್ಲಂ ದುರ್ಮನನಾಗಿ ಕೆದಱೆ ಬಾಲಮನನವರತಂ ಕಿಳಿಱೆ ಪತಿಗೆ ಜಯಮಂ ಮಾಟ್ಕುಂ (ಅಶ್ವಶಾ. ೪-೫೫). [ಸಂ. ದುರ್ಮನಸ್]

ದುರ್ಮನೀಷಿ (ನಾ). ತಿಳಿಗೇಡಿ ; ಬುದ್ಧಿಗೇಡಿ : ಕಾಪುರುಷ ಪೆಂಡತಿಯ ಪ್ರೇಮವಂ ಗಳಿಸುವರೆ ಸದ್ಗುಣಾರಾಮನಾ ರಾಮನಟ್ಟಿದ ದುರ್ಮನೀಷಿ ಬದುಕಿದನೆಂತು ಚಿರಕಾಲಮೆಂದು ಜನರು ಸೀಮೆಯೊಳಗಾಡದುಳಿದವರೆ (ಪಂಕಾರಾ. ೨-೬-೪೫). [ಸಂ. ದುರ್ಮನೀಷಿನ್]

ದುರ್ಮರಣ (ನಾ). ಅಸ್ವಾಭಾವಿಕವಾದ ಸಾವು ; ಹಿಂಸೆಗೊಳಗಾದ ಅವಸಾನ : ಈ ಪಾಪಕರ್ಮನಪ್ಪ ದುಷ್ಪುತ್ರನಿಂ ನಿನಗಿಂತಪ್ಪ ದುರ್ಮರಣಂ ಸಮನಿಸಿದುದು (ಪಂದತಂ. ೧೭೮-೧) ; ದುರ್ಮರಣವಟ್ಟ ಶೂದ್ರನನು ಸಂಸ್ಕರಿಸುವವರಾವಲ್ಲ (ಹಡಕಾ. ೧೨-೨೦) ; ತರುಣಿ ನೀ ಹೆಸರಿಸಿದವಿವು ದುರ್ಮರಣಸಾಧನವಮಲದರ್ಭಾಸ್ತರಣವಿದು ಪಾವನವಲಾ (ಕುಮ್ಯಾಅ. ೨೧-೦೯) ; ಎಲೆ ಮಗಳೆ ನಿನ್ನಯ ದೂಸರಿಂದೆಮಗೆ ನೆಲಸಿತ್ತು ದುರ್ಮರಣ (ಕರ್ನಾಕ. ೭೧). [ಸಂ.]

ದುರ್ಮರ್ಷಣ (ಗು). ೧. ಸಹಿಸಿಕೊಳ್ಳಲು ಅಶಕ್ಯವಾದ,-ಅಸಾಧ್ಯವಾದ; ಹತೋಟಿಯಲ್ಲಿಡಲಾಗದ; ಅಂಕೆಯಲ್ಲಿಡಲು ಅಸಾಧ್ಯವಾದ. (ನಾ). ೨. ಹತೋಟಿಯಲ್ಲಿಡಲಾಗದವನು. ೩. ಧೃತರಾಷ್ಟ್ರನ ಮಕ್ಕಳಲ್ಲಿ ಒಬ್ಬ ; ದುರ್ಯೋಧನನ ತಮ್ಮ : ಕುರುನರೇಂದ್ರ ದುರ್ಮರ್ಷಣನೇಂ ನುಡಿಯಿಸುವನೊ ದುಷ್ಕರ್ಣಂ ನುಡಿಯಿಸುವನೊ ನೀನುಮಸಿರದಿರ್ಪುದೆ ಮಗನೇ (ಗದಾಯು. ೩-೮೧). [ಸಂ.]

ದುರ್ಮಲ (ಗು). ೧. ಅಶುದ್ಧವಾದ ; ಹೊಲಸಾದ : ಕೇರಿ ಕೇರಿಯೊಳಿರುವ ದುರ್ಮಲವಾರಿಯೊಳು ಶುಚಿಗೈಸಿ (ಬಿಜ್ಜಪು. ೧೦೩-೯೯). (ನಾ). ೨. ಕೊಳಕು ; ಹೊಲಸು : ಏಕ ಪರಮಾನಂದಮೂರ್ತಿಗನೇಕ ದುರ್ಮಲ ದುಷ್ಟ ದುಷ್ಕರ್ಮಾಕೃತಿಗಳವರೇಂ ಸಮಾನವೆ ಆಗಮೋಕ್ತಿಯಲಿ (ಬಸಪು. ೫೪-೨೦) ; ತೇಲಿದನವನ್ ದುರ್ಮಲದ ಜಲಧಿಯಲಿ (ಶ್ರೀರಾಮಾ. ೧೦೪-೧೧೩) ; ನಿನ್ನ ಸೌಂದರ್ಯದ ಮಲೆಯಲ್ಲಿರುವ ವಿಷಯಾಸಕ್ತಿಯ ದುರ್ಮಲವನ್ನು ಬದಿಗಿರಿಸಿ . . . ಸೌಂದರ್ಯವನ್ನು ಉಪಾಸಿಸುವ ಮಹಾಶಕ್ತಿಯನ್ನು ಶ್ರೀ ಗುರುವು ನನಗೆ ಅನುಗ್ರಹಿಸಿದ್ದಾನೆ (ಚಿತಸ. ೮೧). ೩. [ವೀಶೈ] ಮಲತ್ರಯವುಳ್ಳವನು : ನಿರ್ಮಲಂ ನೀಂ ದುರ್ಮಲಂ ನಾಂ . . . ನೀಂ ಪಶುಪ ನಾಂ ಪಶುವು (ಬಸಪು. ೨೨-೬೦). [ಸಂ.]

ದುರ್ಮಲತ್ರಯ (ನಾ). [ವೀಶೈ] ಆಣವ, ಮಾಯಾ ಮತ್ತು ಕಾರ್ಮಿಕವೆಂಬ ಮೂರು ವಿಧವಾದ ಮಲಗಳು : ಧಾರುಣಿಯೊಳಗೆ ದುರ್ಮಲತ್ರಯದೂರರಾಗಿರುತಿಪ್ಪ ನಿರ್ಮಳಸಾರದೇಹಂ ನಿಜವಲಾ (ಬಸಪು. ೫೭-೮೪). [ದುರ್ಮಲ + ತ್ರಯ]

ದುರ್ಮಲಿನ (ಗು). ತೀರ ಅಶುದ್ಧವಾದ ; ಕೊಳಕಾದ : ಸಹಜಭಕ್ತರ್ಗೆ ಒಲವಿನೆತ್ತುವ ಕೈಗಳಂ ದುರ್ಮಲಿನ ಕರ್ಮಚರ ದ್ವಿಜಾತರ್ಗಲಸದೆತ್ತುವದಧಮಜಾತರ್ಗಧಮಜಾತವಲಾ (ಬಸಪು. ೩-೪೭). [ಸಂ.]

ದುರ್ಮಲ್ಲಿಕೆ (ನಾ). [ಕಾವ್ಯಮೀ] ಹದಿನೆಂಟು ಬಗೆಯ ಉಪರೂಪಕಗಳಲ್ಲೊಂದು ; P ಇದರಲ್ಲಿ ನಾಲ್ಕು ಅಂಕಗಳು. ಕೈಶಿಕೀ ಭಾರತೀ ವೃತ್ತಿಗಳು ; ಗರ್ಭಸಂಧಿಯಿಲ್ಲ ; ಕಥೆಯಲ್ಲಿ ಬರುವ ಜನರು ನಾಗರಿಕರು; ಹೀನನಾಯಕ; ಮೊದಲನೆಯ ಅಂಕದಲ್ಲಿ ವಿಟಕ್ರೀಡೆ; ಇದು ಆರು ಗಳಿಗೆಯಾಗುತ್ತದೆ ; ಮೂರನೆಯ ಅಂಕದಲ್ಲಿ ಪೀಠಮರ್ದನವಿಲಾಸ; ಇದು ಹನ್ನೆರಡು ಗಳಿಗೆಯಾಗುತ್ತದೆ. ನಾಲ್ಕನೆಯದರಲ್ಲಿ ನಾಗರಿಕನ ಕ್ರೀಡೆ, ಇದು ಇಪ್ಪತ್ತು ಗಳಿಗೆಯಾಗುತ್ತದೆ" (ಸಂನಾಟ ೩೫) : ೧. ನಾಟಿಕಾ. ೨. ತ್ರೋಟಕ. ೩. ಗೋಷ್ಠೀ. ೪. ಸಟ್ಟಕ. ೫. ನಾಟ್ಯರಾಸಕ. ೬. ಪ್ರಸ್ಥಾನ. ೭. ಉಲ್ಲಾಪ್ಯ. ೮. ಕಾವ್ಯ. ೯. ಪ್ರೇಂಖಣ. ೧೦. ರಾಸಕ. ೧೧. ಸಂಲಾಪಕ. ೧೨. ಶ್ರೀಗದಿತ. ೧೩. ಶಿಲ್ಪಕ. ೧೪. ವಿಲಾಸಿಕಾ. ೧೫. ದುರ್ಮಲ್ಲಿಕಾ. ೧೬. ಪ್ರಕರಣೀ. ೧೭. ಹಲ್ಲೀಶ. ೧೮. ಭಾಣಿಕಾ – ಎಂದು ಉಪರೂಪಕಗಳು ಹದಿನೆಂಟು ವಿಧ (ಸಂನಾಟ. ೩೨). [ಸಂ. ದುರ್ಮಲ್ಲಿಕಾ]

ದುರ್ಮಾಂಸ (ನಾ). ದೇಹದಲ್ಲಿ ಅಸ್ವಾಭಾವಿಕವಾಗಿ ಬೆಳೆಯುವ ಕೆಟ್ಟ ಮಾಂಸ : ದುರ್ಮಾಂಸದೋಷವೊ ನೀಲಿಗಣ್ಣೋ ಮಾಱವೆಯೊ ಕಣ್ಕುಟಿಲವೋ ಅರಿಯೋ (ಬಸಪು. ೧೮-೬೬). [ಸಂ.]

ದುರ್ಮಾಯ (ನಾ). ಒಂದು ಸ್ಥಳದ ಹೆಸರು : ದುರ್ಮ್ಮಾಯಗ್ರಾಮೇ ಗೃಹವಸ್ತುನಾಸಾರ್ದ್ಧಂ ಷಣ್ಣಿವರ್ತ್ತನೀ ಆಸನ್ದಿವಿಷಯೇ ಕಣ್ಣಾಗ್ರಾಮೇ ಚತುರ್ತ್ಥವರ್ತ್ತನೀ (ಮೈಆರಿ. ೧೯೪೩, ೧-೪ ; ಸು. 500). 'ದುರ್ಮೆ' ಪರಾ. [?]

ದುರ್ಮಾರಿ (ನಾ). ಕೆಟ್ಟ ದೇವತೆ ; ದುಷ್ಟಳಾದ ಮಾರಿ : ದೇಶವೆಲ್ಲ ಯುದ್ಧದ ದುರ್ಮಾರಿಯ ನಾಟ್ಯರಂಗವಾಗಿತ್ತು (ಘಾಟೀಮು. ೪೦).

[ದುರ್ + ಮಾರಿ₂]

ದುರ್ಮಾರ್ಗ (ನಾ). ೧. ಸುಗಮವಲ್ಲದ ದಾರಿ ; ಕಠಿಣವಾದ ಹಾದಿ : ಹರಿಯ ಸೇವಕರ ಬರವಂ ಕಾಣುತಾ ವಿಂಧ್ಯಗಿರಿಯ ದುರ್ಮಾರ್ಗಮುಂ ಸನ್ಮಾರ್ಗಮಾಯ್ತು (ಕೃಷ್ಣಮಿಥಾ. ೧೦-೯). ೨. ತಪ್ಪುಮಾರ್ಗ; ಸರಿಯಲ್ಲದ ರೀತಿ : ಧರೆಯೊಳಿದು ದುರ್ಮಾರ್ಗವೆನಿಸದು ಹರನಿಮಿತ್ತವಿದೆಂಬ ಭಾವನೆಯಿರಲಧರ್ಮೋಧರ್ಮ ತಾನೆಂದುದು ಶಿವನ ವಾಕ್ಯ (ಬಸವಪು. ೩೦-೩೪) : ದುರ್ಮಾರ್ಗಂಗಳಲಿ ವರ್ತಿಸುವುದೆಲ್ಲಂ ಮಂಗಳಾಂಚಿತರತ್ನವಿರೆ ಗಾಜಂ ಧರಿಸುವಂತೆ (ಬಸವಪು. ೭೦-೪೪). ೩. ಕೆಟ್ಟವನು ; ದುಷ್ಟಮಾರ್ಗದಲ್ಲಿ ನಡೆಯುವವನು : ದುರ್ಮಾರ್ಗನಾದ ವನಬೀರಸಿಂಗನು . . . ಕೊಲ್ಲುವುದಕ್ಕೆ ಬರುತಿದಾನೆ (ನೀತಿಜಂ. XV, ೫) ; ಆ ದುರ್ಮಾರ್ಗನ ಆಡಳಿತಕ್ಕೆ ಸಿಕ್ಕಿ . . . ಪ್ರಜೆಗಳೂ ಧರ್ಮಬಾಹಿರರಾಗುತ್ತಾರೆ (ಶಾಂತಲಾ. ೨೦೦).

[ಸಂ.]

ದುರ್ಮಾರ್ಗಿ (ನಾ). ಕೆಟ್ಟ ಮಾರ್ಗ ಹಿಡಿದವನು ; ದಂರಾಚಾರಿ ; ದಂಷ್ಟ : ದುರ್ಮಾರ್ಗಿಗಳ ಕೂಲಿಗಡಿಕರಾ ವಿನಯದಿಂ ತನ್ನೆಡೆಯೊಳೊಲಿದಿರಿಸಿಕೊಂಡು (ವೀರಕೃಪು. ೨-೬-೩೮) ; ಅಳಿಯ ದುರ್ಮಾರ್ಗಿಯಾಗಿ ನಿಮ್ಮ ಮಂಗಳನ್ನು ನೀವೇ ಇಟ್ಟುಕೊಳ್ಳಿ – ಎಂದು ಮನೆಯಲ್ಲಿ ದೂಡಿಬಿಟ್ಟು ಹೋಗುತ್ತಾನೋ – ಎಂಬ ಭಯಗಳೂ ಸಂಕಟಗಳೂ ಆಕೆಯನ್ನು ಕಾಡಿದುವು (ಮುಹಾಗ. ೩೭೦). [ಸಂ. ದುರ್ಮಾರ್ಗಿನ್]

ದುರ್ಮಿಲ, ದಂರ್ಮಿಳ (ನಾ). ೧. ದೊರೆಯಲು ಕಷ್ಟಸಾಧ್ಯವಾದುದು; ದುರ್ಲಭ : ಬೋರಾನೆಂಬ ದುರ್ಮಿಲವಾದ ಅಧಾತುರೂಪ ಮೂಲ ತತ್ವದಿಂದ ಟಂಕಣಕಾರ (ಬಿಳಿಗಾರ) ಹುಟ್ಟುತ್ತದೆ (ಮಾಂಬಯಿ. ೬-೦೫) ; ಕವಿತ್ವ ಹಾಗೂ ಚಿತ್ರಕಲೆಯ ಸಂಯೋಗವು ಬಹಳೇ ದುರ್ಮಿಲ (ಪ್ರಬಂಧ. ೦೦೨). **ದುರ್ಮಿಳ** : ೧. ಇಂಥ ದುರ್ಮಿಳವಾದ ರಾಜಕನ್ಯೆಯನ್ನು ಎರಡನೆಯವರ ಮನಸಿಗೆ ವ್ಯಥೆಯನ್ನುಂಟುಮಾಡುವುದಕ್ಕಾಗಿಯೇ ಬ್ರಹ್ಮನು ನಿರ್ಮಿಸಿರಬಹುದೆಂದು ಕಾಣುತ್ತದೆ (ಮುಂಜುಳ. ೦೬). (ಗು). ೨. ದುರ್ಲಭವಾದ ; ಅಪರೂಪವಾದ : ಎಂಥ ಮಹಾವೈದ್ಯನ ಬಹು ಬೆಲೆಯ ದುರ್ಮಿಳತೈಲಕ್ಕೂ ಇವರ ರೋಗ ಹಿಮ್ಮೆಟ್ಟಲು ಹಿಂತೆಗೆಯುತ್ತದೆ (ಇಪ್ಪಳ. ೩೬೨) ; ಇದಕ್ಕೂ ಪೂರ್ವದಲ್ಲಿ ಇಂಥ ದುರ್ಮಿಳ ವಸ್ತುಗಳನ್ನು ನಾನೆಲ್ಲಿಯೂ ಕಂಡಿರಲಿಲ್ಲ (ಳಳ್ಳಾ. ೩೦).

[ಸಂ./ಹಿಂ. ದುರ್ಮಿಲ ; ಮರಾ. ದುರ್ಮಿಲ, ದುರ್ಮಿಳ]

ದುರ್ಮಿಳ 'ದುರ್ಮಿಲ' ನೋ.

ದುರ್ಮುಖ (ಗು). ೧. ಅಸಹ್ಯವಾದ ಮುಖವುಳ್ಳ. ೨. ಕೆಟ್ಟ ಮಾತನಾಡುವ; ನಿಂದಿಸುವ ; ತೆಗಳುವ. (ನಾ). ೩. ಅಪ್ರಿಯವಾಗಿ ಮಾತನಾಡುವವನು ; ದುರ್ಭಾಷೆಯನ್ನಾಡುವವನು ; ನಿಂದಕ : "ದೋಷಗ್ರಾಹಿ ಪುರೋಭಾಗಿ ದುರ್ಮುಖಂ ಮುಖರಂ ವಿದುಃ" (ವಸ್ತುಕೋ. ೧೦೦-೧೭); "ಕೆಡೆನುಡಿವವಂ ದುರ್ಮುಖಂ ಮುಖರನೆನಿಸಿಕ್ಕುಂ" (ಕುಂಗರಾ. ೭೦-೨೦) ; ದುಸ್ಸಹ ದುರ್ಮುಖ ದುರ್ವಿದಗ್ಧ ದುರ್ಜನನೆನಿಸಿರ್ದ ದುಷ್ಕೃತಿಗೆ ಭಕ್ತಿಯೊಳಿತ್ತುವೆನಗ್ರಪೂಜೆಯಂ (ಸೂಕ್ತಿಸು. ೦-೩೯). ೪. ಘೋರವಾದ ವಂಯಿವುಳ್ಳುದು ; ಅಸಹ್ಯವಾದ ಮುಖವುಳ್ಳುದು : ದಿವಸಾಂಧಂಗವಲಕ್ಷಣಂಗೆ . . . ಅತಿದುರ್ಮುಖಂಗೆ . . . ಈವುದೆ ಖಗೋದ್ಯಚ್ಚಕ್ರವರ್ತಿತ್ವಮಂ (ಪಂಚತಂ. ೨೨೬-೭). ೫, ೪ : ಕಾಳೋಗ್ರೋರಗನಂತೆ ದಾರುಣಮುಖರ್ ದುಷ್ಟರ್ ಖಳರ್ ದುರ್ಮುಖರ್ . . . ಏನಂ ಮಾಬ್ಬರೇಗೆಯ್ಯರೋ (?) (ಸುಳುಮಾ. ೦-೪೭). ೫. (ಬೋಧನೆಗೆ) ಗವಂನ ಕೊಡದವನು ; (ಉಪದೇಶಕ್ಕೆ) ಸಂವಂಖಿನಲ್ಲದವನು : ನಿಮ್ಮಿ ಕುವಾರರಪ್ಪೊಡೆ ಯೌವನಮದೋನ್ಮತ್ತರುಂ ದುರ್ಮುಖರುಂ ಚಂಚಳಚಿತ್ತರುಮಾಗಿರ್ದಪರ್ (ಪಂಚತಂ. ೦೬-೯). ೬. ಧೃತರಾಷ್ಟ್ರನ ವಂಕ್ಯಳಲ್ಲಿ ಒಬ್ಬ ; ದುರ್ಯೋಧನನ ತಮ್ಮ : ದುರ್ಯೋಧನನಂ ಮುಂತಿಟ್ಟು . . . ದುರ್ಮುಖ ದುಷ್ಕರ್ಣ . . . ಮೊದಲಾಗಿ ನೂರ್ವರುಂ ಬಂದು (ಪಂಪಭಾ. ೨-೭೦ ವ). ೭. ಅರವತ್ತು ಸಂವತ್ಸರಗಳಲ್ಲಿ ಇಪ್ಪತ್ತೊಂಬತ್ತನೆಯದು.

[ಸಂ.]

ದುರ್ಮುಖಿ (ನಾ). ೧. ಕೆಟ್ಟ ವಂಯಿವುಳ್ಳವಳು ; ಕುರೂಪಿ. ೨. ಕಠಿಣವಾಗಿ ಮಾತನಾಡುವವಳು ; ನಿಂದಕಿ. ೩. = ದುರ್ಮುಖಿ ೭ : ಮತ್ತಮಾ ವರುಷವೇ ಪ್ರಭವ ವಿಭವ . . . ಮನ್ಮಥ ದುರ್ಮುಖಿ . . . ಕ್ರೋಧನ ಅಕ್ಷಯವೆಂದಱವತ್ತು ತೆಱನಾಗಿಹುದು (ವಿವೇಕ. ೩೫೧); ಪ್ರಾರಂಭವಾಗಿದೆ ದುರ್ಮುಖಿಯ ನಿರುತ್ಸಾಹದ ಕಾಲುಹಾದಿ (ಶಿಶಾಲ. ೪೩-೩); Pಸಂಸ್ಕೃತದಲ್ಲಿ; ಸಂವತ್ಸರವೆಂಬ ಅರ್ಥದಲ್ಲಿ 'ದಂವರ್ಮುಖಿ' ಎಂಬ ರೂಪವಿಲ್ಲ. ಆದರೆ ವ್ಯವಹಾರದಲ್ಲಿ ಈ ಅರ್ಥದಲ್ಲಿ 'ದುರ್ಮುಖಿ' ಎಂದೇ ಇದೆ. ೨, ೩: ಮನೆ ಸಲಿ ಹೇವಿಳಂಬಿ ಸಹಕಾರಿ ವಿಕಾರಿ . . . ನಿಜವಲ್ಲಭೆ ದುರ್ಮುಖಿಯೆಂದೊಡೆ ಪೆಂಪಿನ ವಿಭವಂ ಪ್ಲವಂಗದವೊಲಾದುದು ವಂನ್ಮಥ ಚಿತ್ರಭಾನುವಿಂ (ಸೂಕ್ತಿಸು. ೮-೪೩೬).

[ಸಂ. ದುರ್ಮುಖೀ]

ದುರ್ಮುದ್ರೆ (ನಾ). ಕೆಟ್ಟ ಚಿಹ್ನೆ,–ಮುದ್ರೆ; ಅಪಲಕ್ಷಣವಾದ ಲಾಂಛನ: ಚರ್ಮದುರ್ಮುದ್ರೆಗಳನೇ ಶಿವಧರ್ಮವರ್ಮಜ್ಞರ್ಗೆ ಧರಿಸುವುದುಚಿತವೇ ಹೇಳು (ಬಸವಪು. ೩-೪೮). [ಸಂ. ದುರ್ಮುದ್ರಾ]

ದುರ್ಮುಹೂರ್ತ (ನಾ). ಕೆಟ್ಟ ಘಳಿಗೆ ; ಅಶುಭ ಸಮಯ ; ಪ್ರಶಸ್ತವಲ್ಲದ ಕಾಲ: ಮಂಥರೆಯ ಕೈತವಕೆ ತುತ್ತಾದರೆಲ್ಲರುಂ . . . ನೀನಿಲ್ಲದಾ ದುರ್ಮುಹೂರ್ತದಲಿ ! (ಶ್ರೀರಾಮಾ. ೧೦೬-೧೨೮); ಆ ದುರ್ಮುಹೂರ್ತ ಹತ್ತಿರವಾಗ್ತಿರೋದು (ವೀರಯೋ. ೪). [ಸಂ.]

ದುರ್ಮೂತ್ರಗರ್ತ (ನಾ). ಒಂದು ನರಕದ ಹೆಸರು : ಪರ್ವತಯುಗಳ ಘಟ್ಟನ ಪರ್ವತಕ್ಷುರಧಾರೆ ದುರ್ಮೂತ್ರಗರ್ತ ವಿಷ್ಪಾಗರ್ತ ಚಿತ್ರಹಿಂಸೆಯಂಬೈದು ಮಂತ್ರಿನರಕಂಗಳು . . . ಇಹುದು (ವಿವೇಕ. ೧೬೧).

[ಸಂ.]

ದುರ್ಮೆ (ನಾ). ಒಂದು ಸ್ಥಳದ ಹೆಸರು : ಸೆಂಬನೂರ ನಾಗಣ್ಣ ಪರಿಯಾಯ್ಕಂಗಳುಂ ದುರ್ಮೆಯ ನಾಗದೇವಭಟ್ಟಾರರುಂ . . . ಸಾಕ್ಷಿ (ಎಕ. XI, ಚಿತ್ರದು. ೬೪-೩೦ : ೧೧೮). 'ದುರ್ಮಾಯ' ಪರಾ. [?]

ದುರ್ಮೇಧ (ನಾ). ಮಂದಬುದ್ಧಿಯುಳ್ಳವನು ; ದಡ್ಡ ; ಪೂರ್ಖ : ಸಾಧಿಸುವಡರಿದಾತ್ಮತತ್ವವಿಬೋಧಂ . . . ದುರ್ಮೇಧರಿಗೆ ದುಷ್ಪರಿಗೆ (ನಿಘಾಗ. ೩-೦೪-೪೦) ; ಸಾರಿಪುತ್ರ ಮೌದ್ಗಲ್ಯಾಯನರನ್ನು ಕಂಡ ಕೂಡಲೇ ದುರ್ಮೇಧನಾದ ದೇವದತ್ತನು ಅವರು ಕೂಡ ಬುದ್ಧನ ಸಂಘವನ್ನು ತ್ಯಜಿಸಿ ತನ್ನ ಹಿಂದೆ ಬಂದರೆಂದೇ ಭ್ರಮಿಸಿದನು (ಹತ್ತುಪ. ೯೮).

[ಸಂ. ದುರ್ಮೇಧಸ್]

ದುರ್ಮೇಧೆ (ನಾ). ಅವಿವೇಕಿಯಾದವಳು: ಅಮಿತವೈಭವದ ದುರ್ಮೇಧೆ ಸಿರಿಯಡಸೆ ಪರರನೆಂತು ಅರಿದಪಳೆ (ಪಂಕಾರಾ. ೨-೯-೭).

[ದುರ್ಮೇಧ + – ಏ]

ದುರ್ಮೋಹ (ನಾ). ೧. ಕೆಡುಕನ್ನುಂಟುಮಾಡುವ ಮಾಯೆ,– ಅಜ್ಞಾನ; ಮೂರ್ಖತನ : ಸರ್ವೋತ್ತಮಸರ್ವಸಾಧುಗಳೋರಂತೆ ಕಟಲ್ಬುಗೆಮ್ಮ ಮನದಿಂ ದುರ್ಮೋಹಸಂದೋಹಮಂ (ಆದಿಪು. ೧-೫) ; ಕಿಡಿಸಿ ದುರ್ಮೋಹಮಾಂ ಪೋಗಿ ಧರ್ಮಪ್ರಿಯರೆಂಬಾಚಾರ್ಯರಂ ಬಂದಿಸಿ ಗಳಿತಮದಂ ದೀಕ್ಷೆಗೊಂಡೆಯ್ದಿ . . . ಅಘಮಂ ಗೆಲ್ದು ನಿರ್ಮೋಹನಾದಂ (ಶಾಂತಿಪು. ೯-೦೪) ; ದುರ್ಮೋಹದಿಂ ಸಜ್ಜನೋಪಾಲಂಭಾವಿಳನಾಗಿ ನಿಲ್ಲದೊಡಲಂ ನಂಬಲ್ಮನಂದರ್ವುದೇ (ಪುಲ್ಲಿಪು. ೯-೬೦) ; ದುರ್ಮೋಹ ಮಹಾತಿಮಿರಗತರ್ . . . ನರಕಗತಿಯಂ ಪಡೆವರ್ (ಶಾಂತೀಶ. ೯-೮೦).

೨. ಎಚ್ಚರ ತಪ್ಪುವಿಕೆ ; ಮೂರ್ಛೆ. ೩. ಅತಿಯಾಗಿ ಮರುಳಾಗುವುದು,-ಮಾರು ಹೋಗುವುದು : ಎನಗೀ ದುರ್ಮೋಹದುದ್ಯೋಗ ಮಿಂತೇನಾನೊಂದನೊಡರ್ಚಿತಿಂತಿದು (ಕಾದಂಪೂ. ೬೨೪). ೪. ಅವಸರ ; ಆತುರ. "ಮೂರ್ಛೆಯೊಳ್ ಮೋಹದಲ್ಲಿ ಮುಸುಕಿದಜ್ಞಾನದೊಳ್ ದುರ್ಮೋಹಮೆಂದೆನಿಕು" (ಮಂಗರಾ. ೧೪೮-೨೪) ; "ಮೋಹಮೂರ್ಛಾವೇಗಂ ಕಡುಮೂರ್ಖಮಜ್ಞತೆಗಳುಂ ದುರ್ಮೋಹಮಕ್ಕುಂ" (ನಾನಾರ. ೧೫೭). [ಸಂ.]

ದುರ್ಮೋಹಿ (ನಾ). ೧. ಕೆಟ್ಟದ್ದಕ್ಕೆ ಮರುಳಾಗುವವನು ; ದುರಾಶೆಯುಳ್ಳವನು : ದುರ್ಮೋಹಿ ವಿಶ್ವಾಮಿತ್ರ ಪಾಪಿ ಇನ್ನಾದೊಡಂ ಸತಿಯ ಕೊಲೆಯಂ ನಿಲಿಸಲು ಹೋಹುದೇನೆಂದೋವಿ ಬೇಡಿಕೊಳ್ಳುತುಂ (ಹಚಕಾ. ೧೩-೧೩). ೨. ವಿಷಯಲಂಪಟ : ದುರ್ಬುದ್ಧಿಯಾದ ಒಬ್ಬ ದುರ್ಮೋಹಿಯಿಂದ ಇನ್ನೂ ಅರಳದ ಮೊಗ್ಗಿನಂತಿದ್ದ ಎರಡು ಜೀವ ಬಾಡಿ ಹೋಯಿತಲ್ಲ! (ಕಲ್ಲಿಕಾ. ೧೨೨). [ಸಂ. ದುರ್ಮೋಹಿನ್]

ದುರ್ಯಶ (ನಾ). ಅಪಯಶಸ್ಸು; ಅಪಕೀರ್ತಿ: ಕೆಟ್ಟ ಹೆಸರು: ಶುಭಚರಿತ ತದೀಯಾನೂನ ವಂಶಾಧಿಪತ್ಯಪ್ರಭವನೆಯದಱಿಂದೀ ದುರ್ಯಶಕ್ಕೆಂತು ನೋಂತೈ (ಶಾಂತಿಪು. ೩-೭೬) : ದೊರೆಯಾದುದು ದುರ್ಯಶದೊಳ್ ಪೊರೆಯದ ಚರಿತಂ ಪುರಾಣಪುರುಷಚರಿತದೊಳ್ (ಗದಾಯು. ೧-೧೬) : ಕಾಮವ್ಯಾಮೋಹದಿನಾಶಾಮುಖಮಂ ಪುದಿಯೆ ದುರ್ಯಶಃಪಟಹರವಂ (ಪಂರಾಮಾ. ೧೪-೧೦೬) : ಕುಲದೊಳೊಬ್ಬನು ಜನಿಸಿ ವಂಶವನಳಿದನಕಟ ಕಟೆಂಬ ದುರ್ಯಶವುಳಿವುದಲ್ಲದೆ ಲೇಸಗಾಣೆನು (ಕುಮ್ಯಾವಿ. ೨-೩೨).

[ಸಂ. ದುರ್ಯಶಸ್]

ದುರ್ಯಶಸ್ಸು (ನಾ). = ದುರ್ಯಶ : ಧರ್ಮನಂದನಂ ದುರ್ಯೋಧನನ ದುರ್ಯಶಸ್ಸಿಗೆ ತಲೆವಾಗಿ (ಗದಾಯು. ೬-೪೦ ವ). [ಸಂ. ದುರ್ಯಶಸ್]

ದುರ್ಯೋಗ (ನಾ). ೧. ಕೆಟ್ಟ ಸನ್ನಿವೇಶ ; ಅಶುಭಸಮಯ : ಇಂಥ ಘೋರತರ ದುರ್ಯೋಗದ ಆ ಸಮರಾತ್ರಿಯಲ್ಲಿ ಒಬ್ಬ ಹದಿನೈದು ಹದಿನಾರು ವರ್ಷ ವಯಸ್ಸಿನ ಕುಮಾರಿಕೆಯು . . . ಓಡುತ್ತೋಡುತ್ತ ಸಾಗಿದ್ದಳು (ಅಂಬಿಕೆ. ೩). ೨. [ಜ್ಯೋತಿ] ಜಾತಕನಿಗೆ ಕಷ್ಟವನ್ನುಂಟು ಮಾಡುವ ತಿಥಿ, ವಾರ, ನಕ್ಷತ್ರ, ಗ್ರಹಾದಿಗಳ ಸೇರುವಿಕೆ,-ಕೆಟ್ಟ ತಿಥಿ ವಾರಾದಿಗಳ ಮಿಲನ : ಈ ಮಗು ದುರ್ಯೋಗದಲ್ಲಿ ಹುಟ್ಟಿದೆ, ಶಾಂತಿ ಮಾಡಿಸಿ (ರೂಢಿ). [ಸಂ.]

ದುರ್ಯೋಧನ (ನಾ). ೧. ಯುದ್ಧದಲ್ಲಿ ಎದುರಿಸಲಾಗದವನು ; ಅಜೇಯನಾದವನು. ೨. ಕೌರವರಲ್ಲಿ ಹಿರಿಯವನು ; ಧೃತರಾಷ್ಟ್ರನ ಹಿರಿಯ ಮಗ : ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ . . . ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ (ಪಂಪಭಾ. ೧೪-೬೪); ದೆಸೆದೇವತೆಗಳ್ಗೆ ಜಪಾಪ್ರಸೂನಮಂ ರಕ್ತಬಲಿಯುಮಂ ತಾಮೆ ಕುಡುವಂತೆಸೆದಿರ್ದರೊ ಕಡೆಗಣ್ಣೊಳ್ ಪಸರಿಸೆ ಕಡುಗೆಂಪು ಭೀಮದುರ್ಯೋಧನರಾ (ಗದಾಯು. ೮-೩) ; ಭೀಮದುರ್ಯೋಧನರ ಸೆಣಸಿನ ತಾಮಸಿಕೆ ಹೆಚ್ಚಿದುದು (ಕುಮ್ಯಾಅ. ೬ ಸೂಚನೆ). 'ಸುಯೋಧನ' ಪರಾ. ೧, ೨: ಕಿಱಿಯಂದಂದಿತ್ತ ದುರ್ಯೋಧನನೆನಿಸಿದ ವಿಕ್ರಾಂತಮೇನಾದುದು (ಪಂಪಭಾ. ೧೩-೭೭) ; ಜಳದೊಳ್ಮೀನಿರ್ಪವೊಲ್ನೀಂ ಕೊಳದೊಳೆ ಮುಟುಗಿರ್ದಕ್ಕಟಾ ಕೋಡ ಸೇಡಿಂಗೊಳಗಾದೈ ನಿನ್ನ ದುರ್ಯೋಧನವೆಸರ್ಗಿದು ಲಜ್ಜಾಕರಂ (ಗದಾಯು. ೭-೧೩). [ಸಂ.]

ದುರ್ಲಂಘ್ಯ (ಗು). ೧. ದಾಟಲು ಅಶಕ್ಯವಾದ,-ಅಸಾಧ್ಯವಾದ : ಅಭ್ರಂಕಷಶಿಖರಿಶಿಖರದುರ್ಲಂಘ್ಯಮಪ್ಪ ಗಿರಿದುರ್ಗದ ಪೆಂಪುಮಂ . . . ಒಳಕೊಂಡು (ಆದಿಪು. ೧೩-೫೬ ವ). (ನಾ). ೨. ದಾಟಲು ಅಸಾಧ್ಯವಾದುದು : ಲಂಕೆಯಂ ಸುತ್ತಿದೆ ಮಹಾಶರಧಿ ; ದುರ್ಲಂಘ್ಯ ಮಾರ್ಗೆಯುಂ (ಶ್ರೀರಾಮಾ. ೩೨೫-೧೬೦). ೩. ಒಂದು ಊರಿನ ಹೆಸರು ; ನಳಕೂಬರನ ರಾಜಧಾನಿ : ನಿನಗಮೆನಗಂ ದುರ್ಲಂಘ್ಯಪುರದೊಳ್ ಕೂಟಮಪ್ಪಂತು ಮಾಡೆನೆ (ಪಂರಾಮಾ. ೧೦-೧೯೨ ವ). [ಸಂ.]

ದುರ್ಲಕ್ಷ (ನಾ). ಅಲಕ್ಷ್ಯ ; ಗಮನಕೊಡದಿರುವಿಕೆ ; ಕಡೆಗಣಿಸುವುದು: ಬುದ್ಧಿಮಂದರು ಯಾವ ಭಾಷೆಯೇನು ಎಂಬ ದುರ್ಲಕ್ಷದಲ್ಲಿರುತ್ತಾರೆ (ವಿಜಾಮಂ. ೧೮). [ಸಂ.]

ದುರ್ಲಕ್ಷಣ (ಗು). ೧. ಕೆಟ್ಟ ಚಿಹ್ನೆಯನ್ನುಳ್ಳ. (ನಾ). ೨. ಕೆಟ್ಟ ಚಿಹ್ನೆ,-ಲಾಂಛನ. ೩. ಕೆಟ್ಟ ನಡತೆ ; ದುಷ್ಟ ನಡವಳಿಕೆ. ೪. [ಕಾವ್ಯಮೀ] ಹದಿನೆಂಟು ಬಗೆಯ ಕಾವ್ಯದೋಷಗಳಲ್ಲಿ ಒಂದು ; ಅಗತ್ಯವಾದ ಗುಣಗಳಿಲ್ಲದಿರುವುದು,-ಲಕ್ಷಣವಿಲ್ಲದಿರುವಿಕೆ ; P ಅಸದರ್ಥ, ವಿಪರೀತಕಲ್ಪನೆ, ಅಭವ್ಯ, ದುಷ್ಕರ, ಗ್ರಾಮ್ಯ, ನೀರಸ, ಅಪ್ರೌಢತೆ, ಅಪ್ರತೀತಿವಚನ, ದುಸ್ಸಂಧಿ, ವಿಶ್ಲೇಷ, ನಷ್ಟ ಸಮಾಸ, ನಯನಾಶ, ರೀತಿವಿಫಲ, ದುರ್ಲಕ್ಷಣ, ಹಾಸ್ಯವಾಕ್, ವಿಷಮ, ಅಸೌಮ್ಯ ಮತ್ತು ಅನೋಜೆ ಎಂಬುವು ಕಾವ್ಯದಲ್ಲಿ ಅಷ್ಟಾದಶ ದೋಷ: ಅಸದರ್ಥಂ . . . ದುರ್ಲಕ್ಷಣಂ ಹಾಸ್ಯವಾಗ್ವಿಷಮಾಸೌಮ್ಯ ಮನೋಜೆಯೆಂಬಿವಿನಿತುಂ ದೋಷಂಗಳಷ್ಟಾದಶಂ (ಛಂದೋಂಬು. ೧-೪೬ ಅಡಿಪದ್ಯ). ೫. [ಕಾವ್ಯಮೀ] ದೋಷಪೂರ್ಣವಾದ ಕಾವ್ಯ : ಅಷ್ಟಾದಶಸ್ಥಳವಿವರ್ಣನಂ ಕೇಳಿಸಿ[ದಿ]ನಿತುಳ್ಳ ಕೃತಿ ನವ್ಯಕಾವ್ಯಮೆನಿಕ್ಕ ವಿಲ್ಲದಿರೆ ದುರ್ಲಕ್ಷಣಂ (ಮಂಗರಾ. ೧೦೬-೧೭). [ಸಂ.]

ದುರ್ಲಕ್ಷಿಸು (ಕ್ರಿ). ಕಡೆಗಣಿಸು ; ಅಲಕ್ಷ್ಯಮಾಡು ; ಲೆಕ್ಕಿಸದಿರು : ದೇಹವನ್ನು ದುರ್ಲಕ್ಷಿಸಿದರೆ ಅಭ್ಯಾಸ ಹಾಳಾಗುತ್ತದೆ (ರಂಗರೋ. ೧೯೫).

[ದುರ್ಲಕ್ಷ + – ಇಸು$_3$]

ದುರ್ಲಕ್ಷ್ಯ (ಗು). ೧. ನೋಡಲು ಕಷ್ಟವಾದ; ಕಾಣಲಾಗದ: ಸರ್ವಾಂಗೀಣ ಮೌಕ್ತಿಕಾಭರಣಕಿರಣಾಕೀರ್ಣ ಸುವರ್ಣದುರ್ಲಕ್ಷ್ಯ [ಪಾಶಾಂ. ಕ್ಷ] ಹರಿಚಂದನಾಂಗರಾಗೆಯುಂ . . . ಆಗಿ (ಆದಿಪು. ೭-೨೬ ವ). (ನಾ). ೨. ಉದಾಸೀನತೆ ; ಅಲಕ್ಷ್ಯ. ೩. ಕೆಟ್ಟ ಗುರಿ,-ಉದ್ದೇಶ. [ಸಂ.]

ದುರ್ಲಭ (ಗು). ೧. ಹೊಂದಲು ಅಶಕ್ಯವಾದ ; ಪಡೆಯಲು ಅಸಾಧ್ಯವಾದ. ೨. ವಿರಳವಾದ ; ಅಪರೂಪವಾದ ; ಅಪೂರ್ವವಾದ : ಆ ಮಹಿಪಂ ಪೊಱಮಟ್ಟನಂತೆ ಸತ್ಪುರುಷರದೇಕೆ ಬಂಜೆವಡಿಪರ್ ಗಡ ದುರ್ಲಭಕಾಲಲಬ್ಧಿಯಂ (ಚಂದ್ರಪು. ೨-೫೬). ೩. ಉತ್ತಮವಾದ ; ಶ್ರೇಷ್ಠವಾದ ; ಪ್ರಶಸ್ತವಾದ. (ನಾ). ೪. ಕಷ್ಟವಾದುದು ; ಕಠಿಣವಾದುದು: ಸೊಲ್ಲಲಭಿಮಾನಂ ಗೃಹಿತಮನನಲ್ಲದಾ ತತ್ವವನಱಿಯಲಿದು ದುರ್ಲಭವು (ಬಸಪು. ೨೯-೧೩) ; ಕಟು ಬಲುಮೆಯ ಮೇಲೆ ವಿಷಯವನ್ನು ಅವರ ಮೇಲೆ ಹೇರಿದಂತಾಗಿ ಅವರಿಗೆ ಜಿಗುಪ್ಸೆ ಹುಟ್ಟುತ್ತದೆ. ಕಲಿವು ದುರ್ಲಭವಾಗುತ್ತದೆ (ಶಿಕ್ಷದ. ೨೧೪). ೫. ಅಪರೂಪವಾದುದು ; ವಿರಳವಾದುದು : ಭೋಂಕನೆ ಪೇಟ್ವ ಜೋಯಿಸಮದಾರ್ಗಂ ಮರ್ತ್ಯರೊಳ್ ದುರ್ಲಭಂ (ಸುಕುಮಾ. ೩-೨೦) ; ತರುಣತ್ವದುರ್ಲಭಂಗಳ್ ಪರಿಣತಿಸುಖದಂಗಳೆನಿಪ ಸತ್ಕ್ರಿಯೆಗಳನಾ ಧರಣೀಶಸುತಂ ಪಲಿತಾಂಕುರಮಿಲ್ಲದ ವೃದ್ಧನಂದದಿಂದಾಚರಿಪಂ (ಚಂದ್ರಪು ೨-೨೦) ; ಸುಖ ಸಂಲಭ, ಅದರ ಹದ ದುರ್ಲಭವು ಎನುವ ರೀತಿಯು ರಮ್ಯ (ಉಯ್ಯಾಲೆ. ೨೩-೯). ೬. ಅಪರೂಪನಾದವನು ; ಸಾಮಾನ್ಯವಾಗಿ ಲಭಿಸದಿರುವವನು : ಅಲ್ಲಮಪ್ರಭುವೆಂಬ ಸಂಯಮಿವಲ್ಲಭಂ ಲೋಕಪ್ರಪಂಚಕೆ ದುರ್ಲಭಂ (ಬಸಪು. ೮-೧) ; ದುರ್ಲಭನಾರು ದುಸ್ಸಹನಾರು ದುರ್ಮತಿಯಾರು ಧರ್ಮಜ ತಿಳಿಯ ಹೇಳೆಂದ (ಕುಮ್ಯಾಅ. ೦೩-೫೭) : ದುರ್ಲಭನೀಶನಂತವನನೆಂತುಂ ಕಾಣ್ಬೆನೆಂದಿರ್ಪೆ ನೀಂ ಗಡ (ಶಬಶಂ. ೨-೮೫). [ಸಂ.]

ದುರ್ಲಲಿತ (ಗು). ಸರಳವಲ್ಲದ : ಏಕೆ ಬಿಸಗೊಳ್ಳಬಲೆ ಸುತರವಿವೇಕ ವಿಷಮಗ್ರಹವಿಕಾರವ್ಯಾಕರಣದುರ್ಲಲಿತದುಷ್ಕೃತವೀ ಪ್ರಳಾಪವಿದು (ಕುಪ್ಪಾಸ. ೧೬-೧೨). [ಸಂ.]

ದುರ್ಲವ (ನಾ). ಒಂದು ಬಗೆಯ ಸಸ್ಯ : ಬಳ್ಳಿದುರುಬ, ದುರ್ಲವ (ಹುಣಿಗಿ. ೪-೬೯). [?]

ದುರ್ಲಿಖಿತ (ನಾ). ಕೆಟ್ಟ ಬರಹ; ಕಷ್ಟವನ್ನು ಸೂಚಿಸುವ ಲಿಪಿ: ಹಣೆಯಂ ದುರ್ಲಿಖಿತವನಾಕ್ಷಣಕೊರಸಿ (ಗುರುಚೋ. ೨-೨೫೮) ; ಎನ್ನ ಹಣೆಯ ದುರ್ಲಿಖಿತವ ತೊಡೆದು ಶಿವಮಂತ್ರವ ಸಂಬಂಧಿಸಿದ ಶ್ರೀಗುರುವಿಂಗೆ ನಮೋ ನಮಃ ಎಂಬೆನಯ್ಯ (ಅಖಂಡೇ. ೧೪-೫). [ಸಂ.]

ದುರ್ಲಿಪಿ (ನಾ). = ದುರ್ಲಿಖಿತ : ನಳನಸಂಭವಲಿಖಿತ ದುರ್ಲಿಪಿಗಳನೊರಸಿ ಶಿವತೀರ್ಥಕಳಶಾಮಳಜಲವನೆಱೆದಮಳ ಶಿವಸಂಸ್ಮರಿಯಂ ಮಾಡಿ (ಬಸಪು. ೪೬-೮೨). [ಸಂ.]

ದುರ್ವಚನ (ನಾ). ಕೆಟ್ಟ ಮಾತು ; ಬಯ್ಗುಳು; ನಿಂದೆ: ದುರ್ವಚನಮಂ ನುಡಿಯದತಿಥಿಗಳ ಕೆಡೆನುಡಿಯದುರ್ವಧನಮಂ ಕೂಡಿ ಗೋರಕ್ಷಣಂ ಮಾಳ್ಪುದುರ್ವರೆಯೊಳಿದು ಕೀರ್ತಿ ವೈಶ್ಯಂಗೆ (ಜೈಮಿಭಾ. ೩-೫೦) ; ಕಡೆಗೆ ಕೈ ಹಿಡಿದಿರುವ ಮಡದಿಯು ದುಡುಕಿ ದುರ್ವಚನಗಳ ನುಡಿವಳು (ನೀಸಾರಾ. ೨೯-೧೬೮). [ಸಂ.]

ದುರ್ವರ್ಣ (ಗು). ೧. ಕೆಟ್ಟ ಬಣ್ಣವುಳ್ಳ. ೨. ಕೆಟ್ಟ ಅಥವಾ ಕೀಳು ಜಾತಿಯ. (ನಾ). ೩. ಕೆಟ್ಟ ಬಣ್ಣ : ನಿಸಿತಖಡ್ಗದ ಮೈಯ ರಕ್ತವ ದಟಿಸಿಳು ಸಂಗಮಿಸೆ ಜಲಂ ದುರ್ವರ್ಣವಾಗೆ . . . ಸ್ನಾನವಾನಂ ಮಾಡಲನುವಲ್ಲೆನಲು (ಸೋಮಾಚ. ೩-೬೩). ೪. ಬೆಳ್ಳಿ : "ದುರ್ವರ್ಣಂ, ರಜತಂ, ರೂಪ್ಯಂ, ಖರ್ಜೂರಂ, ಶ್ವೇತಂ – ೫ ಬೆಳ್ಳಿಯ ಹೆಸರುಗಳು" (ನಿಘಂ೩. ೩೦೪). [ಸಂ.]

ದುರ್ವರ್ಣೆ (ನಾ). ಕೆಟ್ಟ ಬಣ್ಣದ ದೇಹವುಳ್ಳವಳು ; ಕುರೂಪಿ ; ಕಾಂತಿ ಹೀನೆ : ದುರೂಪೆ ದುರ್ವರ್ಣೆ ದುರ್ಗಂಧೆ ದುಸ್ಸ್ವರೆ ಪುಟ್ಟುಂಗುರುಡಿ ಪೊಲತಿಯಾಗಿ ಪುಟ್ಟ (ಪಡ್ಡಾರಾ. ೯-೬) ; ದುರ್ಗಂಧೆ ದುರ್ವರ್ಣೆ ಜಾತ್ಯಂಧಕಿ . . . ಎನಿಸಿದ ಪಾಪಕ್ಕೆ ಪಕ್ಕಾಗಿ ದುಃಖಾಧಿಕೆಯಿಂ ಸಂಸಾರಕೂಪಾರದೊಳನವರತಂ ನೀಡುವೋಲಾಡುತಿರ್ದಳ್ (ಸುಳುಮಾ. ೩-೫೦).

[ಸಂ. ದುರ್ವರ್ಣಾ]

ದುರ್ವರ್ತನೆ (ನಾ). ಕೆಟ್ಟ ನಡವಳಿಕೆ ; ಭ್ರಷ್ಟಾಚರಣೆ ; ದುರಾಚಾರ : ಮೇಲಂ ಕೀಳುಗಳ ಭಾವನೆ ಅವರ ಈ ದುರ್ವರ್ತನೆಯ ತಳಹದಿಯಾಗಿತ್ತು (ರಂಗಕೋ. ೬೩) : ತನ್ನ ತಾಯಿ ಬಳಿಗೆ ಹೋಗಿ ರಾಣಿಯ ದುರ್ವರ್ತನೆಯನ್ನು ಒಂದು ಕನಸಿನ ನೆವದಿಂದ ಸೂಚಿಸಲು (ಕಾವ್ಯಶ. ೬೨); ಚಿತ್ತವಿಕೃತಿ ಅವರಾಧ ಅಥವಾ ದುರ್ವರ್ತನೆ ಅಥವಾ ಕಾನೂನುವಿರುದ್ಧ ವರ್ತನೆ (ಕಾಫಾನ. ೧೯೨). [ಸಂ. ದುರ್ವರ್ತನ]

ದುರ್ವಲ (ನಾ). ಶಕ್ತಿಹೀನನಾದವನು ; ದುರ್ಬಲ : ಕಲಿತನ ಬಲವಂಳ್ಕ ನಿಗಲ್ಲದೆ ಕೈದು ಫಲಿಸದು ದುರ್ವಲಗೆಂದು ಕಲಿಸಿದರಾಚಾರ್ಯರಾ ಕುವರಗೆ ಖಡ್ಗಕಲಸಾಧನೆಯನೆಲ್ಲವನು (ಕುರಾಸಾಂ. ೮-೮೬). [<ಸಂ. ದುರ್ಬಲ]

ದುರ್ವಹ (ಗು). ೧. ಹೊರಲಾಗದ; ಬಹಳ ಭಾರವಾದ; ಭರಿಸಲಾಗದ: ಧರಣೀಧರವಂ ತ್ವದೀಯದೋಃಪರಿಘದಿನಾಂತು ಪಿಂಗಿಪುದು ನಂದನ ದುರ್ವಹಭಾರಖೇದಮಂ (ಪಂದ್ರಪು. ೨-೩೩). ೨. ತಡೆಯಲಾಗದ ; ಸಹಿಸಲಾಗದ : ಸುಹುತಂ ಕೌರವ್ಯಕೃತ್ಯಹವ್ಯದಿಂದೆನ್ನ ಕೋಪಹವ್ಯವಹಂ ದುರ್ವಹದುರ್ಯೋಧನ ದೇಹಪ್ರಹರಣಲೋಹಿತದಿನಾದುದವಭೃಥಸವನು (ಗದಾಯು. ೯-೪೭). ೩. ಕೆಟ್ಟ ಪ್ರವಾಹದಿಂದ ಕೂಡಿರುವ; ನಾಶಕರವಾದ ಪೂರದಿಂದ ಕೂಡಿರುವ : ಆ ನದಿಯ ಲಹರಿಗೆ ಮೂಡಣಂ ಪಡುವಣಂದೆರಡು ದುರ್ವಹ ನದಿ ಕೂಡಿರ್ದುವೆ (ಧರಣಿ. ೩೩-೭೫). (ನಾ). ೪. ಹೊರಲಾಗದುದು : ಲಲನೆಯರ್ಗಂಗರಾಗಮದು ದುರ್ವಹಮಂಶುಕಭಾರವಂಗಸಂಚಲತೆಗೆ ಕಾರಣಂ (ಕಾದಂಪು. ೧೦೦೩). ೫. ನಿರ್ವಹಿಸಲು ಕಷ್ಟವಾದುದು : ದುರ್ವಹಮಪ್ಪ ರಾಜ್ಯಭರದಿಂ ನೆಜ್ಜಿ ಪಿಂಗಿಸಿ ಮತ್ತಮೆವ್ಮನಾ ನಿರ್ವೃತಿಸೌಖ್ಯಮಂ ಪಡೆವ ಮಾರ್ಗ ಮನೆಯ್ದಿಸಿ . . . ಪುತ್ರ ನೀಂ ಮುದದೆ ಮಾಡು ಮದೀಯ ಮನಃ ಪ್ರಮೋದಮಂ (ಶಾಂತೀಶ್ವ. ೪-೧೭೪); ಈರ್ವರೊಳಗಾವನಾದೊಡಂ ವಾದ ಮುಖದಿಂ ಸೋಲ್ತಪಂ . . . ಒರ್ವಂಗೆ ಶಿಷ್ಯನಾಗದೆ ಪೋಗಬಾರದೀ ದುರ್ವಹದ ಭಾಷೆಯಂ ಬರೆಯಿಸುಭಯಾನುಮತಪೂರ್ವಕದಿನೆನೆ (ಪಡ್ಕಥಾ. ೧೦-೩). [ಸಂ.]

ದುರ್ವಾಕ್ಯ (ನಾ). ಕೆಟ್ಟ ಮಾತು ;ಬಯ್ಗುಳು ; ನಿಂದೆ : ಕರ್ತೃ ಭೃತ್ಯಸವಾಸಕ್ಕೆ ಏದಿದಲ್ಲಿ . . . ಆತನಲ್ಲಿ ದುರ್ವಾಕ್ಯ ದುಶ್ಚರಿತ್ರ ಪರಿಹಾಸಕಗಳಂ ಬೀಜದೆ (ವಡಸಂ. ೧೯೧-೩೪) ; ದುರ್ಬುದ್ಧಿ ದುರ್ವಾಕ್ಯ ಮಱಿದೆ ಸಾಧು ಸಜ್ಜನರ ಸಂಗ ನಿನ್ನಿಂದ ಬೆರೆದೆ (ಪುರಂದ. ೪-೧೬೦-೧೫). [ಸಂ.]

ದುರ್ವಾದ (ನಾ). ೧. ಅಸಮಂಜಸವಾದ ಮಾತು ; ಸರಿಯಲ್ಲದ ವಾದ ; ಕುತರ್ಕ ; ವಿತಂಡವಾದ : ದುರ್ವಾದದಿಂದಿನ್ನೆಗಂ ಭೇದಂ ಬಟ್ಟಿರ್ದೆಗೆಟ್ಟು ಕೆಟ್ಟೆನಿನಿತುಂ ಕಾಲಂಗಳೇಂ ಕರ್ಮಮೋ (ಸುಳುಮಾ. ೩-೪೩); ಇಂತಹ ಸ್ಥಿತಿಯಲ್ಲಿ ನಮಗೆ ಜ್ಞಾನವಿಲ್ಲದಿದ್ದ ಮಾತ್ರಕ್ಕೆ ವಸ್ತುವೂ ಇಲ್ಲವೆಂಬ ದುರ್ವಾದವೇಕೆ? (ಜೀವಾತ್ಮ. ೧೫೮). ೨. ಅಪವಾದ: ಕೆಲವು ದುರಾತ್ಮರು ಸ್ವೇಚ್ಛಾಚಾರಕುತುಕರಾಗಿ ದುರ್ವಾದಗಳನ್ನೂ ಗ್ರಂಥಗಳನ್ನೂ ಹರಡುತ್ತಿರುವರು (ಹಿಂದಸಾ. ೩೮೭). [ಸಂ.]

ದುರ್ವಾದಿ (ನಾ). ಸಲ್ಲದ ತರ್ಕ ಮಾಡುವವನು ; ಅಯೋಗ್ಯವಾದ ಪೂರ್ವಪಕ್ಷವನ್ನು ಹೂಡುವವನು: ದುರ್ವಾದಿಯು ವಾದದೊಳ್ ಗೆಲಿದೆ (ಅಮಶ. ೫೨) ; ದುರ್ವಾದಿಗಳನ್ನೊಪ್ಪಿಸುವ ದೃಷ್ಟಿಯಿಂದ ಹೇಳಿದ್ದೇನೆ (ಧೃಷ್ಟಾಕೋ. ೫೦). [ಸಂ. ದುರ್ವಾದಿನ್]

ದುರ್ವಾಪಣ (ನಾ). ಎಳೆಗಳನ್ನು ಬಿಡಿಸಲಾಗದಂತೆ ನೆಯ್ದಿರುವುದು : ಚೆನ್ನಾಗಿ ಬಿಡಿಸದಂತೆ ಒಡಗೂಡುವಿಕೆ.–ಕೂಡಿಕೊಳ್ಳುವಿಕೆ (?) : ಫಣರತ್ನಜ್ಯೋತಿಯಿಂ ಕಾಳಿಯನನಱಿಸಿ ಕಂಡೆಯ್ದಿ ಗೋಪಾಳಚೂಡಾಮಣಿ ಜೀವಂಬೆತ್ತ ಗಾರುತ್ಮತಮಣಿಯವೊಲಂಗಪ್ರಭಾಪಾಲೆ ದುರ್ವಾಪಣಮಂ ಕಾಳಿಂದಿಯೊಳ್ ಪುಟ್ಟಿಸಿ (ಅರ್ಧನೇ. ೯-೪೮). [<ಸಂ. ದುರ್ವಾಪನ]

ದುರ್ವಾರ (ಗು). ೧. ತಡೆಯಲು ಅಶಕ್ಯವಾದ ; ಸಹಿಸಲಾಗದ ; ದುರ್ಧರವಾದ : ವನವಾಸದೊಳ್ಪೆನೆಂದು ದುರ್ವಾರವರಾಕ್ರಮಂ ತಳರೆ (ಪಂಪಭಾ. ೧-೧೦೪) ; ಆ ಜಯಂತ ವಿಜಯರ್ಕಳಿರ್ವರುಂ ದುರ್ವಾರ ತಪೋಭಾರನಿರ್ವಾಣದಿಂ ತದಚ್ಯುತಕಲ್ಪದೊಳ್ ಸಾವಮಾನಿಕದೇವರಾಗಿ ಪುಟ್ಟಿ (ಕಾಂತಿಪು. ೪-೫೫ ವ) ; ಚಂಡಾಲರ ಕೆಯ್ಯೊಳ್ ಬೀಟ್ಟ ತೊಲ್ ಪಂಜರದ ಪಡಿಕೆಯೊಳ್ ನಿಲ್ದ ದುರ್ವಾರದುಃಖೋತ್ಕರವೆಲ್ಲಂ ನೋಡಲೆನ್ನಿಂದ್ರಿಯನಿವಹದ ದೋಷಂ (ಕಾದಂಪು. ೭೫೩). ೨. ನಿವಾರಿಸಲು ಕಷ್ಟವಾದ ; ನಿವಾರಣೆ ಮಾಡಲಾಗದ : ವಿಜಯವನ್ನರಾರೆನ್ನೀ ದುರ್ವಾರಭುಜಬಲಮಂ (ಪಂಡಾಮಾ. ೯-೧೯೩) ; ಆ ಪ್ರಯತ್ನಮಿಂಕಾದುದಯ್ ದುರ್ವಾರ ದುರ್ಜ್ಞೇಯ ದುರ್ವಿಧಿಯ ಲೀಲೆಯಿಂ (ಶ್ರೀಕಾಮಾ. ೧೦೯-೩೪೭). ೩. ದಾಟಲಾಗದ : ದುರ್ವಾರ ಸಂಸಾರವಿಚ್ಛೇದೋಪಾಯ ನಿಯುಕ್ತಸೂಕ್ತಿ ವೃಷಮಾರ್ಗಾಗ್ರೇಸರಂ . . . ದಯೆಗೆಯ್ವನಕ್ಕೆಮಗೆ ಮುಕ್ತಿಶ್ರೀಸುಪಾವಾಪ್ತಿಯಂ (ಆದಿಪು. ೧-೧) ; ವಸುದೇವಂ ಮುಂದುಗೆಟ್ಟಲ್ಲಿ ಕಮ್ಮರಿವಾಯ್ದಂತಿರೆ ಪೊಕ್ಕಡಂಗೆ ತನಗಾ ತೀವಿರ್ದ ಕಾಳಿಂದಿ ಚೆಚ್ಚರ ಮಾಗಳ್ ನೆಲೆಯಾಗೆ ದಾಂಟಿ ನಡೆದಂ . . . ಇದೇಂ ಚಿತ್ರಮೋ (ಜಗವಿ. ೩-೧೦). ೪. ಅತಿಶಯವಾದ ; ಪ್ರಚಂಡವಾದ : ಮದವದ್ವೈರಿನರೇಂದ್ರಮಂಡಳಿಕ ಸೇನಾಭಂಜನಂ ವೀರನೀರದದುರ್ವಾರಸಮಿರಣಂ

(ಎಕ. VII, ಶಿಕಾರಿ. ೧೩೬-೨೩ ; 1068) ; (ಸುಕುಮಾ. ಪರಿ. ೧-೦೮ ನೋ) ; ಉಗ್ರ ಕಾಲೋರಗಾವಲಿ ಭೂತಾವಲಿ ರೌದ್ರಸತ್ವನಿವಹಂ ಲೋಕಾದ್ಭುತಂ ನಾಡೆ ನೋಡಲಗುರ್ವಾದುದು ತದ್ವಿಭೀಷಣಕೃತಂ ದುರ್ವಾರ ವೈಕುರ್ವಣಂ (ಪಂರಾಮಾ. ೧೧-೬೭) ; ದುರ್ವ್ವಾರಾರಿ ಧರಾಧರೇಂದ್ರಕುಳಿಶಂ ಶ್ರೀವಿಷ್ಣು ಭೂಪಾಳಂ (ಎಕ. VI, ಚಿಕ್ಕಮ. ೧೦೪-೧೫ ; 1202). (ನಾ). ೫. ಅತಿಶಯಂ ವಾದುದು ; ಅಧಿಕವಾದಂದು : ದುರ್ವಾರಂ ವಿಪುಳಾಂಧಕಾರಮನಯಾ ಧಾರಂ ಮಹಾಘೋರಮಂತುರ್ವೀವ್ಯೋಮದಿಶಾಂಬುಧಿಪ್ರಕರ ನಾನಾ ವಸ್ತುವಿಸ್ತಾರಮಂ ಪರ್ವುತ್ತಳ್ಕಿಸುತುರ್ವಿಯಾ ಜಗಮುಮಂ ಕೃಷ್ಣತ್ವದಿಂ ಕೂಡೆ (ಪಾರ್ಶ್ವಪು. ೧೦-೦೬). [ಸಂ.]

ದುರ್ವಾರ್ತೆ (ನಾ). ಕೆಟ್ಟ ಸುದ್ದಿ,-ವರ್ತಮಾನ: ಪೇಳ್ವೆನಿದೊ ದುರ್ವಾರ್ತೆಯಂ (ಶ್ರೀರಾಮಾ. ೬೦-೧೯೯) ; ದುರ್ವಾರ್ತೆಯನ್ನು ತಂದ ಮಂದಭಾಗ್ಯ ನಾನು (ಗುರುಚಿ. ೧೦೧). [ಸಂ. ದುರ್ವಾರ್ತಾ]

ದುರ್ವಾಸ (ನಾ). ೧. ದುರ್ವಾಸನೆ ; ನಾತ. ೨. (ಆಲಂ) ಸುಳಿವು ; ಸೂಚನೆ : ಇವರ ಗಳಿಕೆಯ ದುರ್ವಾಸ ನನಗೆ ಬರಹತ್ತಿತು. ಇವರಿಗೆ ಹಣ ಎಲ್ಲಿಂದ ಬರುವದೆಂದೇ ನನಗೆ ಗೂಢವಾಗಿತ್ತು (ರಕ್ತಧ್ವ. ೨೯೩). [ಸಂ.]

ದುರ್ವಾಸನೆ (ನಾ). ೧. ಕೆಟ್ಟವಾಸನೆ ; ನಾತ : ವಿದ್ಯುಚ್ಛಕ್ತಿಯ ಒಲೆಯ ಅನುಕೂಲತೆಗಳು : ದುರ್ವಾಸನೆ ಕೊಡುವುದಿಲ್ಲ. ಬೂದಿ ಅಥವಾ ಹೊಗೆ ಉಂಟಾಗುವುದಿಲ್ಲ (ಅಡುಸಾ. ೧೮). ೨. ಹಿಂದಿನ ಜನ್ಮಗಳ ಕೆಟ್ಟ ಸಂಸ್ಕಾರ. ೩. ಕೆಟ್ಟ ಆಸೆ ; ಕೀಳು ಆಕಾಂಕ್ಷೆ : ನೆನೆವುತ್ತಿದೆ ಮನ ದುರ್ವಾಸನೆಗೆ (ವಚಸಂ. ೬೩೬-೧೦೦) ; ತತ್ತ್ವಜ್ಞಾನಚಿಂತೆಯ ಘನತೆ ದೊರಕುವದೆಂತು ಮಾಯಾಜನಿತ ದುರ್ವಾಸನೆಯಲೊಂದಿಹ ಮರುಳು ಮಾನವಗೆ (ಅಮೃತ. ೧-೩೩). [ಸಂ. ದುರ್ವಾಸನಾ]

ದುರ್ವಿಕಾರ (ಗು). ೧. ಕೆಟ್ಟ ಭಾವನೆಯ ; ಕೀಳು ಆಲೋಚನೆಯ : ಸ್ವಪ್ನಾವಸ್ಥೆಯಲ್ಲಿ ಬ್ರಹ್ಮಾಂಡದೊಳಗುಳ್ಳ ಕಡೆ ಮೊದಲಿಲ್ಲದ ದುರ್ವಿಕಾರ ಸ್ವಪ್ನದಲ್ಲಿ ಹರಿದಾಡುವ ಜೀವಂಗೆ ಪ್ರಾಣಲಿಂಗದ ಪೂಜೆ ಎಲ್ಲಿಯದೋ (ಘನವ. ೩೫-೨೮). (ನಾ). ೨. ಕೆಟ್ಟ ಭಾವನೆ ; ಕೀಳು ಆಲೋಚನೆ : ದುರ್ವಿಕಾರಂ ಮನವನೆತ್ತಿಕ್ಕೆ ಪರಿಪರಿದು ದುರ್ಬೋಧರಂ ಕೂಡಿಕೊಂಡು ಸುತ್ತಂ ಸುಳಿದು (ಪಿಂಡೋರ. ಹ. ೫೦೨-೨೩). [ಸಂ.]

ದುರ್ವಿಜ್ಞಾನಶಕ್ತಿ (ನಾ). ಕೆಡುಕನ್ನುಂಟುಮಾಡುವ ವಿಶೇಷ ಜ್ಞಾನ,-ಅಧಿಕವಾದ ತಿಳಿವಳಿಕೆ : ಕುಳ್ತನಾ ದೈತ್ಯದುರ್ಮಂತ್ರತಾಂತ್ರಿಕವರೇಣ್ಯಂ ದುರ್ವಿಜ್ಞಾನಶಕ್ತಿಯಾಹ್ವಾನದೀಕ್ಷಿತನಾಗಿ (ಶ್ರೀರಾಮಾ. ೭೧೬-೧೯೩) [ಸಂ.]

ದುರ್ವಿಟ (ನಾ). ಅತಿ ಕೀಳಾದ ಕಾಮುಕ : ತನ್ನುವಂ ಹೊಂದಿದ ಸುಖಂಗಳಂ . . . ಶಿವಂಗೀವ ಹದನನಱಿದೊಡೆ ಸಾಕು ಶ್ರುತಿವಾಕ್ಯದಲಿ ದುರ್ವಿಟನಲ್ಲ ಶಮೆ ದಮೆ ಹೃದಯದಿಂದಲಿ ಉತ್ತಮ ವಿದ್ವಾಂಸರಱಿತಿರಲು (ಬಸಪು. ೪೦-೧೦). [ಸಂ.]

ದುರ್ವಿದ (ನಾ). ಮೂರ್ಖ; ತಿಳಿಗೇಡಿ: ನೀಳಾದಿ ಪಾಪಾಣಸಂಕುಲದೊಳ್ ದುರ್ವಿದರಂತು ಪೋಲಿಸುವೆನೇ ರೂಪಂ ಯಶೋಭದ್ರೆಯಾ (ಸುಕುಮಾ. ೯-೯೪). [ಸಂ.]

ದುರ್ವಿದಗ್ಧ (ಗು). ೧. ತಿಳಿಗೇಡಿಯಾದ ; ಚಾತುರ್ಯವಿಲ್ಲದ ; ಪರಿಣತಿಯಿಲ್ಲದ; ಅವಿವೇಕಿಯಾದ : ನಿನ್ನಂತಪ್ಪ ಪುರುಷನಂ ದೊರೆ ಕೊಳಿಸಿ ಕಳಿಂಚು ಮಾಡಿ ಕಳೆದ ದುರ್ವಿದಗ್ಧ ವಿಧಾತ್ರಂಗೆ ಮುನಿವೆನಾಂ (ಅರ್ಧನೇ. ೩-೨೮ ಪ); ನುತಿಪೆಂ . . . ತತಗರ್ವೋದ್ಧತ ದುರ್ವಿದಗ್ಧ ಜನತಾಹೃದ್ಭೀಮನಂ ಭೀಮನಂ (ರಾಜಶೇ. ೧-೧೮); ದುರ್ವಿದಗ್ಧ ಮೂಢನಿಗೆ ಇದು ಅತ್ಯಂತ ಕಠಿಣ ಕೆಲಸವೇ (ಇಪ್ಪಳ. ೨೬೯). (ನಾ). ೨. ಅವಿವೇಕಿಯಾದಂದು: ಇಂತಪ್ಪವಸ್ಥೆಯಿಂದಿವಳಿಂತಿರೆಯುಂ ದುರ್ವಿದಗ್ಧವೆನ್ನ ಮನಂ ಮತ್ತೆಂತುಂ ನಂಬಿದುದಿಲ್ಲ (ಕಾದಂಉ. ೨೪೨). ೩. ಅವಿವೇಕಿ; ಮೂರ್ಖ ; ತಿಳಿಗೇಡಿ : ಯಕ್ಷೋ ಯಾದೃಶಸ್ತಾದೃಶೋ ಬಲಿಯೆಂ ಬುಕ್ತಿಗೆ ದುರ್ವಿದಗ್ಧರೆ ವಲಂ ನೋಂತರ್ ಪೆಱರ್ ನೋಂತರೇ (ಲೀಲಾವ. ೧-೪೦) ; (ಸೂಕ್ತಿಸು. ೧-೪೯ ನೋ) ; ಜಾಣುವೆಗಳಿಂದೋದಿ ಕಲಿತಿಹ ವಾಣಿ ಚತುರತಯಿಂದ ಗರ್ವವ ಕೇಣಿವಿಡಿದಿಹ ದುರ್ವಿದಗ್ಧರಿಗುಸುರಲರಿದ ಪರೇ (ಗಗತಾ. ೧೨-೮೪); ಈ ದುರ್ವಿದಗ್ಧರಿಗೆ, ಅವಿನೀತರಿಗೆ ಏನು ಗೊತ್ತು? (ರಾಮಾನೆ. ೮೩) ; ಅವರನ್ನು ಉದ್ರೇಕಗೊಳಿಸುವ ಯುವಯುವತಿಯರೂ ದುರ್ವಿದಗ್ಧ ದುರ್ವಿನೀತರೂ ಪಿಶುನ ಪುರೋಭಾಗಿಗಳೂ ಇದ್ದಾರೆ (ಆರ್ಯಧ. ೧೨೪). ೪. ದುರಹಂಕಾರಿ ; ಗರ್ವದಿಂದ ಕೂಡಿರುವವನು : ವಾಸವ ದುರ್ದಂತರೆಂಬರನೇಕ ಕ್ಷುದ್ರ ವಿದ್ಯಾಗರ್ವದುರ್ವಿದಗ್ಧರುಮಳೀಕ ವಿಚಕ್ಷಣರುಮಪ್ಪುದಱಿಂದಮದನನುಮಾನದಿಂದಮಱಿದು (ಆದಿಪು. ೩-೮೭ ಪ) ; ಜ್ಞಾನಿಗಳನೊಡಬಡಿಸಬಹುದಜ್ಞಾನಿಗಳನಹುದೆನಿಸಬಹುದು ಜ್ಞಾನಲವವನು ಕೂಡಿಕೊಂಡಿಹ ದುರ್ವಿದಗ್ಧರನು ಏನ ತಿಳುಹಲು ಬಹುದು (ಕುಪ್ಯಾಉ. ೪-೨೪). [ಸಂ.]

ದುರ್ವಿದಗ್ಧೆ (ನಾ). ಅವಿವೇಕಿಯಾದವಳು. [ಸಂ. ದುರ್ವಿದಗ್ಧಾ]

ದುರ್ವಿಧ (ಗು). ೧. ಕೆಟ್ಟ ನಡತೆಯುಳ್ಳ ; ನೀಚವಾದ. ೨. ಬಡತನದ; ದರಿದ್ರನಾದ. (ನಾ). ೩. ದರಿದ್ರ ; ಬಡವ : "ಅಧನಂ ದುರ್ಗತಿಕಂ ದುರ್ವಿಧನೆಂದಱಿಗಿಲ್ಲದಂ ದರಿದ್ರಂ ನಿಸ್ವಂ" (ವಸ್ತುಕೋ. ೬೩-೬೬). ೪. ದಡ್ಡ ; ತಿಳಿಗೇಡಿ. [ಸಂ.]

ದುರ್ವಿಧಿ (ನಾ). ದುರದೃಷ್ಟ ; ದುಷ್ಟ ವಿಧಿ : ಮೋಸವೋ? ದುರ್ವಿಧಿಯ ಚೆಲ್ಲಾಟವೋ (ಸುಗುಗಂ. ೮೫-೭) ; ಬಂತಾಕೆಗೆ ಹರೆಯದವರ,- ದುರ್ವಿಧಿ ಎಳೆಯರೆದೆಗೆ ಮಾಡುವ ಮಾಟ (ನಲ್ಮೆ. ೧೦-೨) ; ನಿನ್ನ ಉದ್ಧತಭಾಷಣವು ನನಗೆ ದುರ್ವಿಧಿಯು ನಿನ್ನಿಂದ ಕೂಗಿಸಿದ ಅಳಲಿನ ಕೂಗಿನಂತಿದೆ (ಘಾಟೀಮು. ೪೦). [ಸಂ.]

ದುರ್ವಿನಿಯೋಗ (ನಾ). ಕೆಟ್ಟ ರೀತಿಯಲ್ಲಿ ವ್ಯಯಮಾಡುವುದು ; ಸಲ್ಲದ ರೀತಿಯಲ್ಲಿ ವಿನಿಯೋಗ ಮಾಡುವುದು : ಇದನ್ನು ಆದಷ್ಟು ರಹಸ್ಯವಾಗಿಡಿ. ದುರ್ವಿನಿಯೋಗ ಮಾಡುವ ಅನಧಿಕಾರಿಗೆ ಹೇಳಬೇಡಿ (ಮಹಾಣ. ೯೪). [ಸಂ.]

ದುರ್ವಿನೀತ (ಗು). ೧. ಒರಟು ರೀತಿಯ. ೨. ದುಷ್ಟತನದ. ೩. ಹಠಮಾರಿತನದ ; ಮೊಂಡುತನದ. (ನಾ). ೪. ಅವಿಧೇಯ ; ವಿನಯವಿಲ್ಲದವನು ; ಉದ್ಧಟ : ಅವರನ್ನು ಉದ್ರೇಕಗೊಳಿಸುವ ಯುವಯುವತಿಯರೂ ದುರ್ವಿದಗ್ಧ ದುರ್ವಿನೀತರೂ ಪಿಶುನ ಪುರೋಗಾಮಿಗಳೂ ಇದ್ದಾರೆ (ಆರ್ಯಧ. ೧೬೪). ೫. ಪಳಗಿಸದ ಕುದುರೆ. ೬. ಗಂಗವಂಶದ ಒಬ್ಬ ಅರಸನ ಹೆಸರು : ದುರ್ವ್ವಿನೀತ ಅರಸರಾ ದಣ್ಡನಾಯಕನು . . . ಮಹಾಜನಕ್ಕೆ ಧರ್ಮ್ಮನಿಮಿತ್ತ ಕೊಟ್ಟ ಸ್ಥಿತಿಯ ಕ್ರಮ (ಎಕ. XVI, ತುಮಕೂ. ೮೦-೮ ; 903). ೭. ಕನ್ನಡದ ಒಬ್ಬ ಕವಿಯ ಹೆಸರು : ವಿಮಳೋದಯ ನಾಗಾರ್ಜುನ ಸಮೇತ ಜಯಬಂಧು ದುರ್ವಿನೀತಾದಿಗಳೀ ಕ್ರಮದೊಳ್ ನೆಗಟ್ಟಿ ಗದ್ಯಾಶ್ರಮದ ಗುರುತಾಪ್ರತೀತಿಯಂ ಕೆಯ್ಕೊಂಡರ್ (ಕವಿರಾ. ೧-೨೯). [ಸಂ.]

ದುರ್ವಿನೀತತೆ (ನಾ). ಅವಿಧೇಯನಾಗಿರುವಿಕೆ : ಉರ್ವಿಪತಿ ನೇಮಿಸಿದ ಡಾಗದು ಸರ್ವಥಾ ತನಗೆಂದನನುವಿನ ದುರ್ವಿನೀತತೆಯನು ನಿರೀಕ್ಷಿಸಿ ಪೂರುವಿಂಗೆಂದ (ನಿಧಾಗ. ೯-೨೦-೪೨). [ಸಂ. ದುರ್ವಿನೀತತಾ]

ದುರ್ವಿನೀತೆ (ನಾ). ವಿನಯವಿಲ್ಲದವಳು ; ಅವಿಧೇಯಳಾದವಳು : ದುರ್ವಿನೀತೆ ವಿನಯಂಗೆಟ್ಟೆಯೆಂದಾಚಾರಮೆ ತನ್ನಂ ಜಡಿವಂತೆಯುಂ . . . ನಿನಗೆ ತರಳತೆಯಿದೆತ್ತಣಿಂ ಬಂದುದೆಂದು ಧೈರ್ಯಮೆ ಧಿಕ್ಕರಿಸುವಂತೆಯುಂ ಅತಿಲಜ್ಜಿತೆಯಾಗಿ ತನ್ನೊಳಿಂತೆಂದಳ್ (ಕಾದಂಉ. ೭೫).

[ಸಂ. ದುರ್ವಿನೀತಾ]

ದುರ್ವಿಪತ್ತಿ (ನಾ). ಘೋರವಾದ ವಿಪತ್ತು,-ಅಪಾಯಂ : ದುರ್ವಿಪತ್ತಿಗಂ ದಾರಿಯನಿತ್ತು (ಆಮಶ. ೩೬). [ಸಂ.]

ದುರ್ವಿಪಾಕ (ನಾ). ೧. ಕೆಟ್ಟ ಫಲಿತಾಂಶ ; ಹದಗೆಡುವುದಂ : ಪುದಿದ ಶಿಥಿಲಪರಿಣಾಮದೊಳೊದವಿದ ದುರಿತಾನುಗತಮದನುಭಾಗಮೆನಿಪ್ಪುದು ಶರ್ಕರಾದಿಕಿಂಪಾಕದುರ್ವಿಪಾಕ ಪ್ರಭಾವಶಕ್ತಿಪ್ರತಿಮಂ (ಸುಳುಮಾ. ೮-೩೦). ೨. ಪೂರ್ವಕರ್ಮಗಳ ದುಷ್ಟ ಪರಿಣಾಮಂ. 'ದೈವದುರ್ವಿಪಾಕ' ಪರಾ. [ಸಂ.]

ದುರ್ವಿಮೋಹ (ನಾ). ಕೆಟ್ಟ ಆಸೆ ; ದುಷ್ಟ ಇಚ್ಛೆ : ಹುಟ್ಟದ ಯೋನಿ ಮೆಟ್ಟದ ನೆಲಂ ನೆಱೆ ಕೊಳ್ಳದ ಕಾಲಮೊಮ್ಮೆಯುಂ ಮುಟ್ಟದ ಭಾವ ಮೊಂದದ ಭವಂ ಪೆಱತಿಲ್ಲೆನೆ ದುರ್ವಿಮೋಹದಿಂ ತಿಟ್ಟನೆ ಬಂಕೆ ನೀ ತಿಳಿಯದೆ (ಶಾಸ್ತ್ರಸಾರ. ೬) ; (ಪ್ರಾಣ್ಯಾವ್ಯಮಾಲಿಕೆ. ೧೨೫೪ ನೋ). [ಸಂ.]

ದುರ್ವಿಲಸಿತ (ನಾ). ಕೆಟ್ಟ ಕೆಲಸ ; ದುಷ್ಟ ಕಾರ್ಯ ; ದುಷ್ಕರ್ಮ : ದಶವದನ ಮನೋಭಂಗಮನೊಳಕೊಂಡೇಕೆ ಜಪಂಗೆಯ್ದಪೆ ನೆನೆಯ ನಿನ್ನ ದುರ್ವಿಲಸಿತಮಂ (ಪಂಠಾಮಾ. ೧೪-೯೬). [ಸಂ.]

ದುರ್ವಿಷಯ (ನಾ). ೧. ಕೆಟ್ಟ ವಿಚಾರ ; ದುಷ್ಟ ಸಂಗತಿ : ಮನದೊಳೆ ನಿನ್ನ ಚಿಂತನೆಯನಲ್ಲದೆ ... ಕಾಯದಲ್ಲಿ ನಿನ್ನನಘಪದಾಬ್ಜಸೇವನೆಯನಲ್ಲದೆ ನಚ್ಚಿರೆವಾಗಳುಂ ಕೃಪಾವನನಿಧಿ ಮಿಕ್ಕ ದುರ್ವಿಷಯಮಂ ತಿಳಿದಿರ್ದಪೆ ನೀನಿದೆಲ್ಲಮಂ (ಶಬಶಂ. ೨-೧೧೦). ೨. ಹೀನವಾದ ಇಂದ್ರಿಯಸುಖ,-ವಿಷಯಂ : ದೇಹದಿಚ್ಛೆಗೆ ಹರಿದು ಕೆಮ್ಮನೆ ಕೆಡಬೇಡ ದುರ್ವಿಷಯವ ಬಿಡು ಬೇಗ ಗುರುಪದವ ನಂಬು (ಗಣಭಾ. ೫೮-೦); ಅತಿಕಾಂಕ್ಷೆಯಿಂದ ದುರ್ವಿಷಯ ಬಲಿದು ... ನೀ ಕೆಡಬೇಡ ಮನುಜ (ಪುರಂದ. ೧-೨೬-೨) ; ದುರ್ವಿಷಯ ವಶನಾಗಿ ಪ್ರತಿಭೆ ಪೋಗಿ ಅಂಬುಜಾಂಬಕಿ ಕೈಕೆಗಾಳಾದನೆನ್ನುತ ವಿಡಂಬನಂ ಗೆಯ್ಯದುಳಿದಪರೆ (ವೆಂಕಾರಾ. ೨-೬-೪೩). [ಸಂ.]

ದುರ್ವಿಳಸನ (ನಾ). ದುರ್ವಿಲಸಿತ ; ಕೆಟ್ಟ ಕೆಲಸ ; ದುಷ್ಟಕಾರ್ಯ ; ನೀಚಕೆಲಸ : ಅವಧರಿಸದೆ ನಿನ್ನೊಳ್ ಪಿರಿದವಿನಯಮಂ ನೆಗೞ್ದ ದೋಷಮಂ ತಪದೊಳ್ ನೀಗುವೆನಸದಾಗ್ರಹಮಂ ಬಿಸುಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ (ಆದಿಪು. ೧೪-೧೩೦) ; ಗರ್ವಿತ ನೃಪಾಲ ಕಾಧಮ ದುರ್ವಿಳಸನಜನಿತ ಭೂರಿಭಾರದೊಳೆನಸುಂ ನಿರ್ವಿಣ್ಣೆಯಾಗಿ ಭೂವಧು ಗೀರ್ವಾಣಾವೃತವಿರಿಂಚಿಸಭೆಯಂ ಪೊಕ್ಕಳ್ (ಜಗವಿ. ೧-೨೭).

[ಸಂ. ದುರ್ವಿಲಸನ]

ದುರ್ವೀರ್ಯ (ನಾ). ದುಷ್ಟತನವುಳ್ಳವನ ವೀರ್ಯ ; ಕೇಡಿಗನ ಶುಕ್ಲ,-ರೇತಸ್ಸು : ದುರ್ವೀರ್ಯವಾದುದರಿಂದ ಅದು ದುಷ್ಟನಾಗಿ ಲೋಕಕಂಟಕ ವಾಗುವುದು (ಮಹಾಡ. ೧೪೮). [ಸಂ.]

ದುರ್ವೃತ್ತ (ಗಂ). ೧. ಕೆಡುಕನ್ನಂಟುಮಾಡುವ ; ದುಷ್ಟತನದ ; ಕೆಟ್ಟ ನಡತೆಯುಳ್ಳ : ಎತ್ತ ನೋಡುವಡತ್ತ ಬಲ ದುರ್ವೃತ್ತ ಸುಭಟರ ಬಲ ಶರೌಘದ ಕತ್ತಲೆಗೆ ಹದನೇನೆನುತ ದೈತ್ಯಾರಿ ಚಿಂತಿಸಿದ (ಕುಪ್ಯಾದ್ರೋ. ೧೦-೬೦). (ನಾ). ೨. ದುರಾಚಾರ ; ಕೆಟ್ಟ ನಡವಳಿಕೆ ; ದುಷ್ಕರ್ಮ : ಕುಳಪಾಳನಮೆಂಬುದು ಕುಲಧರ್ಮಮುಮಂ ಪಿರಿದುಂ ಪ್ರಯತ್ನದಿಂ ಪ್ರತಿಪಾಲಿಸುವುದುಂ ಅಲ್ಲದಂದು ಕುಲಂ ದುಃಕುಲ ದುರ್ವೃತ್ತ ದೂಷಿತ ಮಕ್ಕುಂ (ಜಾವುಂಪು. ೨೨೦) ; ಶಾಸ್ತ್ರಕಾರರ ದೃಷ್ಟಿಯಲ್ಲಿ ಸ್ತೇಯವು . . . ಆತ್ಮೋದ್ಧಾರಕ್ಕೂ, ಸ್ವಶ್ರೇಯಸ್ಸಿಗೂ ಹಾನಿಕರವಾದ ದುರ್ವೃತ್ತವು (ಆರ್ಯಧ. ೨೯). ೩. ಅವಿನೀತ ; ದುರಾಚಾರಿ ; ಕೆಟ್ಟ ನಡವಳಿಕೆ ಯುಳ್ಳವನು : "ಅನಾಚಾರಿ ದುರ್ವೃತ್ತನುದಾಸೀನನಕ್ಕು" (ಮಂಗರಾ. ೭೫-೭) ; ಉತ್ತಮರುಗಳ ನಿಂದಿಸುತ ದುರ್ವೃತ್ತನಾಗಿ . . . ಜಗಕ್ಕೆ ಜಡಾತ್ಮರಾಗಿಹ ವೇದಬಾಹ್ಯರ ಮೃತ್ಯುದೇವತೆ ಮುಱಿದು ಮೋದದೆ ಬಿಡುವಳೇಯೆಂದ (ಕುಪ್ಯಾಉ. ೪-೧೦೦). [ಸಂ.]

ದುರ್ವೃತ್ತತನ (ನಾ). ಕೆಟ್ಟ ನಡತೆ ; ದುರಾಚಾರ : ರಘುಪತಿಯ ಒತ್ತ ಬರದಾಹವಕೆ ತನುವನು ತೆತ್ತು ನಿಲುವವರಾರು ನೆಱೆ ದುರ್ವೃತ್ತತನವಿದು ನಮ್ಮದೆಂದಂತರಿಸಿದನು ಹನುಮ (ತೊರರಾ. ೫-೨-೪೯).

[ದುರ್ವೃತ್ತ + – ತನ]

ದುರ್ವೃತ್ತಿ (ನಾ). ೧. ದುರಾಚಾರ ; ಕೆಟ್ಟ ನಡವಳಿಕೆ : ಮುನ್ನ ಹುಟ್ಟಿ ದುದು ಮೊದಲಿದುವೆ ಕಡೆ ಮುಂಗೆಟ್ಟು ದುರ್ವೃತ್ತಿಯಲಿ ಪುಣ್ಯದ ಬಟ್ಟೆ ಯೆಂತಹದೆಂದಱಿಯೆ (ಬಸಪು. ೪೦-೮) ; ದುರ್ವೃತ್ತಿಗಳು ಮೇರೆ ಮೀರುತ್ತ ನಡೆದುವು (ಚಿತೆಸ. ೧೦೭). ೨. ಕೆಟ್ಟ ಪರಿಸ್ಥಿತಿ ; ದುಸ್ಥಿತಿ. ೩. ದುರಾ ಚಾರಿ ; ಕೆಟ್ಟ ನಡತೆಯುಳ್ಳವನು : ಕಠಿಣಾತ್ಮರಂ ದುರ್ವೃತ್ತಿಗಳನಘ ನಿಳಯರಂ . . . ವ್ಯಾಕುಳರನತಿಕೃಪೆವೆತ್ತು ಕಾಯ್ಕಾಯೆಮ್ಮುವಂ ನೀ (ಬಸಪು. ೩೮-೭೧). [ಸಂ.]

ದುರ್ವೇಶ (ನಾ). ಒಳಗೆ ಹೋಗಲು ಆಗದಂದು ; ಪ್ರವೇಶಿಸಲು ಅಸಾಧ್ಯವಾದುದಂ: ಸಮುತ್ಕಂಟಕವಿಟಪಿಲತಾವೀರುದತ್ಯಂತವೃತ್ಯುತ್ಕರ ದುರ್ವೇಶಂ ಮನಕ್ಕದ್ಭುತರಸದೊದವಂ ತಂದುದಂದೊಂದಗೇಂದ್ರಂ (ಚಂದ್ರಪು. ೫-೬೬). [ಸಂ.]

ದುರ್ವ್ಯಯ (ನಾ). ವೃಥಾ ಖರ್ಚು ; ಅಪವ್ಯಯ. [ಸಂ.]

ದುರ್ವ್ಯವಸಾಯ (ನಾ). ಕೆಟ್ಟ ಕೆಲಸ ; ದುಷ್ಟ ವ್ಯವಹಾರ : ದುಷ್ಟ ಬುದ್ಧಿಯು ತನ್ನ ದುರ್ವ್ಯವಸಾಯವು ವ್ಯರ್ಥವಾಗಿ ಹೋಯಿತೆಂದರಿತು . . . ನುಡಿದನು (ಕವಿಕೆ. ೧೯). [ಸಂ.]

ದುರ್ವ್ಯವಸ್ಥೆ (ನಾ). ಕೆಟ್ಟ ವ್ಯವಸ್ಥೆ ; ಸರಿಯಾದ ಸ್ಥಿತಿ ಇಲ್ಲ ದಿರುವಿಕೆ : ಕುಕಲ್ಪಿತವಾದ ಆರ್ಥಿಕ ದುರ್ವ್ಯವಸ್ಥೆಯಿಂದ ನಿರ್ಮಿಸಲ್ಪಟ್ಟ ಒಂದು ಚಕ್ರಬಿಮ್ಮನ ಕೋಟೆ ಇಂದು ನಾವು ಬಾಳುತ್ತಿರುವ ಸಮಾಜ (ದಾಸಕೂ. ೩೩). [ಸಂ. ದುರ್ವ್ಯವಸ್ಥಾ]

ದುರ್ವ್ಯಸನ (ನಾ). ಕೆಟ್ಟ ಗೀಳು ; ದುಶ್ಚಟ ; ಇಂದ್ರಿಯಭೋಗದಲ್ಲಿ ಅತ್ಯಾಸಕ್ತಿ : ಪುಸಿಬಸನಮೆಂದು ಕೆಲಬರ್ ಕುಸಿವರ್ ನಾಲಗೆಯನಿಕ್ಕು ಟೊಳ್ ಪರವಧುದುರ್ವ್ಯಸನಂ ನಿನಗೆಂದಮರ್ದಪ್ಪಿಸುವರ್ ಕೆಂಪೆಸೆಯೆ ಕಾಯ್ದಯಃಪುತ್ರಿಕೆಯಂ (ಆದಿಪು. ೫-೮೭) ; ತನ್ನ ಗಂಡನಪ್ಪ ಕ್ರಕಚನಂ ಬರಿಸಿ ನೀನಿಂತಪ್ಪ ದುರ್ವ್ಯಸನಮಂ ಕಲ್ತೆಯೆಂದು ಬಾರಿಸಿ ಮತ್ತಮಿಂತೆಂ ದಳ್ (ಪಂಚತಂ. ೨೭೮-೦); ಸದ್ಗತಿ ಕೆಡುಗು ದುಶ್ಚರಿತದಲಿ ನಿಜಸತಿ ಕೆಡುಗು ದುರ್ವ್ಯಸನದಲಿ (ಕುಪ್ಯಾಉ. ೩-೦೧೯) ; ಐಸಿರಿಯನೆಲ್ಲಮಂ ದುರ್ವ್ಯಸನ ದೊಳ್ ಕಳೆದು ಕಡುದರಿದ್ರತೆವೆತ್ತು . . . ಹಸಿವಿಂದೆ ನಿದ್ರಿಪಗೆ ಬೀಳ್ವುದು ಕನಸು (ಶ್ರೀರಾಮಾ. ೬೪-೨೭೦). [ಸಂ.]

ದುರ್ವ್ಯಸನಲಂಪಟ (ನಾ). ದುಶ್ಚಟಗಳುಳ್ಳವನು ; ವಿಷಯಾಸಕ್ತ : ದುರ್ವ್ಯಸನಲಂಪಟರಿಗಾಚಾರಿಯರು ಖಳರಿಗೆ ನಿಮ್ಮೊಳುಪದೇಶ . . . ಗುಣವಿಹೀನರು ಶಲ್ಯ ನೀವೆಂದ (ಕುಪ್ಯಾಕೆ. ೯-೨೨).

[ದುರ್ವ್ಯಸನ + ಲಂಪಟ]

ದುರ್ವ್ಯಸನಿ (ಗಂ). ೧. ಕೆಟ್ಟ ಚಟವುಳ್ಳ ; ದುರಭ್ಯಾಸದ. (ನಾ). ೨. ಕೆಟ್ಟ ಚಟವುಳ್ಳವನು ; ಕೆಟ್ಟ ವ್ಯಸನಗಳಲ್ಲಿ ನಿರತನಾದವನು : ಪುಸಿಯ ಪರಾಂಗನಾರತದ ಮದ್ಯದ ಮಾಂಸದ ಮೆಯ್ಗೊಱಲ್ದ ದುರ್ವ್ಯ ಸನಿಯ ಮಾಡಿದೋದೆ ನಿಮಗಾಗಮಮಾಗಿರಸತ್ಯವಾದಮಂ ಪೊಸಯಿಸಿ . . . ಕಸಕಳಿಯಂತು ನಾಲಗೆ ಪೊರಳ್ವುದು (ಆದಿಪು. ೨-೧೧) ; ರಸನೇಚ್ಛೆ ಯೊಳಾಡುವ ದುರ್ವ್ಯಸನಿಗಳುಂ ತಮಗೆ ಧರ್ಮಮುಂಟೆಂದೆಂಬರ್ (ಜಿನಾಲೆ. ೨೮-೨೮) ; ಅನುಜಾತನಂ ವಿನೀತನನಱಿಯಟ್ಟಿ ದುರ್ವ್ಯಸನಿಯೆಂ ಕಟಿದೆಂ (ಪಂಠಾಮಾ. ೧೪-೧೧೭) ; ದುರ್ವ್ಯಸನಿ ದುರಾಚಾರಿಯೆಂದೆನಿಸದಿರಯ್ಯಾ ಎನ್ನ (ಬಸವ. ೨೬೨) ; ದಾಯಗರು ದುರ್ವ್ಯಸನಿಗಳು ದುಸ್ಸಹವು ನಿಮ್ಮಭ್ಯುದಯವಹಿತರಿಗೆ (ಕುಪ್ಯಾಸ. ೧೧-೧೮). [ಸಂ. ದುರ್ವ್ಯಸನಿನ್]

ದುರ್ವ್ಯಸನಿಗ (ನಾ). ಕೆಟ್ಟ ಗೀಳಂಳ್ಳವನಂ: ದುರ್ವ್ಯಸನಿಗರು ದುಷ್ಟರ ನೆರವನಾಶ್ರಯಿಸುವರು (ಬಿಜ್ಜಪು. ೭೦-೩೩). [ದುರ್ವ್ಯಸನ + – ಇಗ]

ದುರ್ವ್ಯಸನೆ (ನಾ). ಕೆಟ್ಟ ಚಟವುಳ್ಳವಳು; ದುರಾಚಾರವುಳ್ಳವಳಂ; ದುರಭ್ಯಾಸದಿಂದ ಕೂಡಿದವಳು: ದುರ್ಮತಿ . . . ದುರ್ವ್ಯಸನೆ ದುರಾತ್ಮೆಯಪ್ಪ ವಧು ಸಜ್ಜನಮೇ (ಮದತಿ. ೮-೭); ಚಪಳೆಯರು ದುರ್ವ್ಯಸನೆಯರು ಜನಮೋಹಪಾಶೆಯರು . . . ಕಳ್ಳೆಯರು ಚಿಳ್ಳೆಯರು (ಬಸಪು. ೪೦-೩೪). [ಸಂ. ದುರ್ವ್ಯಸನಾ]

ದುರ್ವ್ಯಾಪಾರ (ನಾ). ದುರಾಚಾರ; ದುಷ್ಟ ವ್ಯವಹಾರ; ಕೆಟ್ಟ ನಡವಳಿಕೆ: ವೇದವೇದಾಂತಾದಿಕಥನಾಪಾದಿತೋಪರಿತತ್ವ ನಿಶ್ಚಯವಾದಿ ಘನಸಂಸಾರ ದುರ್ವ್ಯಾಪಾರ ಸಂಹಾರಿ (ಬಸಪು. ೧೯-೨). [ಸಂ.]

ದುರ್ವ್ಯಾಪಾರಿ (ನಾ). ಕೆಟ್ಟ ಕೆಲಸದಲ್ಲಿ ಮಗ್ನನಾದವನು; ದುಷ್ಟ ವ್ಯವಹಾರದಲ್ಲಿ ತೊಡಗಿದವನಂ: (ಕಿ). [ಸಂ. ದುರ್ವ್ಯಾಪಾರಿನ್]

ದುರ್ವ್ಯಾಪಾರಿಸು (ಕ್ರಿ). ಕೆಟ್ಟ ನಡತೆಗೆ ಬೀಳು; ದುರಾಚಾರದಲ್ಲಿ ವ್ಯವಹರಿಸು; ಕೆಟ್ಟ ಕೆಲಸ ಮಾಡು: ಜನನೀಜನಕರಾಜ್ಞೆಯನು ಮೀಱದೆ ಕುಲಾಚಾರದಲಿ ನಡೆದಾಱುವರ್ಗವನೊಂದಿ ದುರ್ವ್ಯಾಪಾರಿಸದೆ ನಡೆದವನು ತಾ ಸತ್ಪುರುಷನವನಿಯಲಿ (ಜೀವಂಚ. ೫-೭೭).

[ದುರ್ವ್ಯಾಪಾರ + – ಇಸ್ಯು]

ದುರ್ವ್ಯಾಮೋಹ (ನಾ). ಕೆಟ್ಟ ವಿಷಯಂದಲ್ಲಿ ಒಲವು; ದುಷ್ಟ ಕಾರ್ಯದಲ್ಲಿ ಆಸಕ್ತಿ. [ಸಂ.]

ದುರ್ವ್ಯಾಲ, ದುರ್ವ್ಯಾಳ (ನಾ). ಕೆಟ್ಟ ಹಾವು: ದುಮ್ಮಾನದಿಂ ತಮ ತಮಗೆ ನಿಖಿಳಸರ್ಪಾಳಿ ಚಿಂತಿಸೆ ಬಳಿಕ ಧೃತರಾಷ್ಟ್ರನೆಂಬ ದುರ್ವ್ಯಾಲ [ಪಾಠಾಂ. ಳ]ಪತಿ ನುಡಿದನು (ಜೈಮಿಭಾ. ೨೪-೨೦). **ದುರ್ವ್ಯಾಳ**: ವೋಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ದುರ್ವ್ಯಾಳ 'ದುರ್ವ್ಯಾಲ' ನೋ.

ದುರ್ವ್ರಣ (ನಾ). ಕೆಟ್ಟ ಹುಣ್ಣು; ಹುಳಿತ ಹಂಣ್ಣು: ಕೊಳಕು ನಾಱುವ ದುರ್ವ್ರಣಂಗಳು ತೊಳಲುವರಿವರ್ಗಕೆ ತವರ್ಮನೆ (ಬಸಪು. ೪೦-೬೯); ಮದ್ದನು ಗಿಡಿವ ಜೇವಣಿಗೆಯೊಳು ಸಪ್ರಾಣಿಸುವ ದುರ್ವ್ರಣವ ತೊಡೆದು ಕಟ್ಟುವ ಹಸ್ತಿವೈದ್ಯರ ಗಡಣವುಭಯದೊಳೆಸೆವವು (ಕುಮಾಭೀ. ೫-೪೦); ಬುಡಬುಡಿಸುವೇಱಿನಲಿ ದುರ್ವ್ರಣದೊಡನೆ ಸೂಸುವ ಬಸೆಯ ನಾಱುವ ಮೊಡೆವೆಣನ ಮಿಗೆ ಬೀಗಿ ಬಿದ್ದಿರ್ದಿಭಘಟಾವಳಿಯ . . . ಕಂಡು (ತೊರರಾ. ೩-೮-೪); ದುರ್ವ್ರಣಕ್ಕೆ . . . ಸೆಕ್ಕೆ, ನವುಲಾಡಿಸೆಕ್ಕೆ . . . ಗಿದ್ದನದೊಳಗೆ ಕಾಸಿ ಕದಡಿ ಕುಡಿಗೆಯೊಳು ಇಕ್ಕಿಕೊಂಬುದು. ಕಜ್ಜಿಗೆ ತೊಡೆದು ಹಾಕುವುದು (ವಿವೃವಿ. ೦೭೫). [ಸಂ.]

ದುರ್ವ್ರಯ (ನಾ). = ದುರ್ವ್ಯಯಂ: (ಕಿ). [<ಸಂ. ದುರ್ವ್ಯಯ]

ದುರ್ಹೃದ (ನಾ). ಕೆಟ್ಟ ಹೃದಯವನ್ನುಳ್ಳವನಂ; ಹಗೆ; "ಶತ್ರು" (ಗಂಗಾಮ. ೦೬೮). [ಸಂ. ದುರ್ಹೃದ್]

ದುಲಿ (ನಾ). ೧. ಹೆಣ್ಣು ಆಮೆ. ೨. ಸಣ್ಣ ಆಮೆ. [ಸಂ.]

ದುಲ್ಲಟೆ (ನಾ). ಭಿಕ್ಷಾಪಾತ್ರೆ (?): ತನ್ನ ಕೆಲದೊಳಿರ್ದ ತಿರಿದುಂಬ ದುಲ್ಲಟೆಯಂ ಕೊಂಡು ಗಜಮನಜಮನಿಡುವಂತೆ ಭಯಮಿಲ್ಲದಿಡುವುದುಂ ಕರಿ ನರಿಯಂತೆ ಕೀಟಿಟ್ಟಾಱಟ ಭಯದಿಂದಿದಿರಾಗಿ ಬರಲಣ್ಮದೆ ಮಗುಟ್ಟು ತನ್ನ ನೆಲೆಗೆ ಪೋಯಿತು (ಧರ್ಮಾಮೃ. ೦೩-೭೭). [?]

ದುಲ್ಲಹ (ಗು). ಪಡೆಯಲಂ ಅಸಾಧ್ಯವಾದ; ಅಸಾಮಾನ್ಯವಾದ: ಕಂಸಂ ಪಂದಿಗೆಱಗಿದ ನಾಯಂ ಹೆಕ್ಕಳಿಸುವಂತೆ ತೊಡೆಯನಪ್ಪಳಿಸಿ ದುಲ್ಲಹ ಮಲ್ಲರೊಳಘಟಶೂರಚಾಣೂರವಿಕ್ರಮದಿಂ ಸಮಕರ್ತರಿಯನೆನ್ನಯ್ಯಂ ಕೊಂಡನೆಂದು ಪಡಿಗೆಯಿಸಲು (ಅರ್ಧನೇ. ೮-೦೦೬ ವ).

[<ಪ್ರಾ. ದುಲ್ಲಹ./ಸಂ. ದುರ್ಲಭ]

ದುವಂಗುಲ (ನಾ). ಎರಡು ಅಂಗುಲ: ಚೌವಂಗುಲ ದುವಂಗುಲಕೊಡೆ ಮುರಿವ ಪಟ್ಟಸಕೆ ಚಾಚುವ ಝುಡಿತೆಗೊದಗುವ ಭಟರು ಹೆಣಗಿದರರಸ ಕೇಳೆಂದ (ಕುಮಾಸ. ೨-೯೭). [ದು + ಅಂಗುಲ]

ದುವಟ 'ದುಪ್ಪಟಿ' ನೋ.

ದುವಟ್ಟಿಗೆ, ದೂವಟ್ಟಿಗೆ, ದೂವಡಿಗೆ (ನಾ). ಎರಡು ಮಡಿಕೆಯ ಬಟ್ಟೆ: "ದುವಟ್ಟಿಗೆ (ದೂವಟ್ಟಿಗೆ) – ದ್ವಿಪಟ್ಟಿಕಾ" (ತದ್ಭಕೋ. ೨೦); ದುಗೆ – ದ್ವಿಗುಣ – ದುಗುಣ; ದ್ವಿಪಟ್ಟಿಕಾ – ದುವಟ್ಟಿಗೆ, ದೂವಟ್ಟಿಗೆ (ಶಮದ. ೨೯೦ ಪ್ರಯೋ). **ದೂವಟ್ಟಿಗೆ**: ಪದದಾದಿಯ ದೀರ್ಘಕ್ಕೆ – ಅಮರ – ಆವರೆ . . . ದ್ವಿಪಟ್ಟಿಕಾ–ದೂವಟ್ಟಿಗೆ (ಶಮದ. ೨೬೬ ಪ್ರಯೋ). **ದೂವಡಿಗೆ**: ಸೀತ ವಾತಗಳ ನಿವಾರಿಸಲೆಂದು ಮಾಡಿದ ಹೊದಿಕೆಯಲ್ಲಿ ನಿಶಾರಯೆನಿಸುಗು. ದೂವಡಿಗೆ (ನಾಜಿರಾ. ೧೨೪).

[<ಸಂ. ದ್ವಿಪಟ್ಟಿಕಾ]

ದುವಯಿ (ನಾ). [ಛಂದ] ಎರಡಂ ಪಾದಗಳುಳ್ಳ ಒಂದಂ ಛಂದಸ್ಸಿನ ಹೆಸರು; ದ್ವಿಪದಿ: ಕಂದಕ್ಕಾರ್ಯೆಗೆ . . . ದುವಯಿಗೆ [ಪಾಠಾಂ. ದುವಡಿಗೆ] ಮಾತ್ರಾವೃಂದಮುಮಂ ಗಣವಿವರಣೆಯಂದಮುಮಂ ತಿಳಿಯೆ ಪೇಟ್ಟೆಂ (ಛಂದೋಂಬು. ೪-೨೨೭); ಮೊದಲೊಳೆ ಮಾತ್ರೆಗಳಾಱಪ್ಪುದು ಪದ ವೆರಡಱೊಳಮಂತೆ ಕಂದದ ಗಣಮೆಯ್ದುದಯಿಸಿ ಗುರುವೆರಸಿರ್ಕಂತ್ಯದಿ ನಿರ್ಪತ್ತೆಂಟು ಮಾತ್ರೆ ದುವಯಿಗೆ ನಿಯಮಂ (ಛಂದೋಂಬು. ೪-೨೩೫).

[<ಪ್ರಾ.ದುವಈ./ಸಂ. ದ್ವಿಪದೀ]

ದುವಲ (ನಾ). ಒಂದಂ ತೂಕ,–ಅಳತೆ; ಎರಡಂ ಪಲ: ಧರಣ ಬೇಳೆ ಖಂಡಗದ ಹದಿನೈದು ಕೊಳಗದವೊಬ್ಬಳಕ್ಕಂ ಗದ್ಯಾಣ ಏಳು ಚೌಲ ದುವಲ ಬೆಲ್ಲ ಸಾವಿರದೆಂಬತ್ತಕ್ಕಂ ಗದ್ಯಾಣ ಹತ್ತು (ಎಕ. XI, ಮೊಳಕಾ. ೩೦-೦೨; 1386). [ದು + ಪಲ್ಯ]

ದುವಲಿ (ನಾ). (?): × ಪಬಾಳೆದವರು ಬಂದು ಅವರ ಬಾಗೆರತಿ ತಾಕೆ ಬಂದು ಗಂಡುಮೊಗ ಅದಂ ಪರಿಹರಿಶಿ ಕರೆವು ಆ ಹೆಂಣುಮಗುವು ಅರಡೆಂಟು ಬಳಿಯಿಸಮಬದ ಕೇಳಿ ಬಾಗಿರತಿ ಗಂಡುಮಗುವಾಗೊಲ ಹೊಟೆ ಆಕೆಗು ಹೆಂಣುಮಗ ದುವಲಿ ಕೊಟರಿ ತಂದುಮಂ ಕೊಂಡರು (ಎಕ. XVI. ಗುಬ್ಬಿ. ೨೦-೨೦; ?). [?]

ದುವಲಿನಾಯಕ (ನಾ). ಒಬ್ಬಾತನ ಹೆಸರು: × ತಂಡಿಯ ಮಹಾಜನಕ್ಕೆ ಧರ್ಮ್ಮನಿಮಿತ್ತ ಕೊಟ್ಟ ಸ್ಥಿತಿಯ ಕ್ರಮ ಆವುದೆನ್ದಡೆ ಅರಸರಾ ದುವಲಿ ನಾಯಕನಾಳ್ವನ್ ದುದ್ದಅ ಅರಸರಾಳ್ವ ಬನ್ದಾರ್ನ್ನಾಯಕರ್ಗ್ಗೆ ಸೊಲ್ಲಗೆ ಕೀಟಾಳ್ಗೆ ಕೂಟುವುಣ × × × ಯ ಕುಡುವೊರ್ (ಎಕ. XVI, ತುಮಕೂ. ೮೦-೦೦; 903). [ದುವಲಿ? + ನಾಯಕ]

ದುವಾಡ (ನಾ). ಒಂದಂ ಬಗೆಯ ದೇಶೀನೃತ್ಯ: ಬಲು ದುವಾಡಕ್ಕೆ ಮನವಿಟ್ಟು ಗುಂಡಾಲ ಮೊದಲಾದವಂ ತೋಱಿ ನರ್ತಿಸಿದಳಾ ಬಾಲೆ (ಸೌಂದಪು. ೮-೧೦); ಪಲವಂದದ ದುವಾಡಮುಂ . . . ಲೇಸುವಡೆಯೆ ತಾಂಡವಮನಾಡುತಿರ್ದಳೀಶ್ವರನ ಸಮ್ಮುಖದೊಳು (ರೇವಡ. ೩೨-೪೮).

[<ಸಂ. ಧ್ವಾಡ]

ದುವಾಡಿಸು 'ದುವ್ವಾಳಿಸು' ನೋ.

ದುವಾಳ್ (ನಾ). (?): ಮಾಯೆಯ ಮನೆಯ ದುವಾಳಿಂದೆ ನಿರ್ಮಾಯ ನಿತ್ಯೋಜ್ಜ್ವಳ ನಿಸ್ತೈಗುಣ್ಯ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರಕ್ಷಾಶ. ೩೪); "ಪ್ರಾಬಲ್ಯ" (ರಕ್ಷಾಶ. ಕೋಶ). [?]

ದುವೆಟ್ಟಗೆ (ನಾ). ಒಂದಂ ಪ್ರದೇಶದ ಹೆಸರು (?): ಪೆರಿಯ ಆಲ × × × ವಾರಿ ಮರಳ್ಪುಣುಸ ಪೆರಿ × × × ತೊಱೆಯು ಆಲರೆ ಮೇರ ದುವೆಟ್ಟಗೆ ನಿಱುಕಲ್ಲು ಕೊವಳ್ಳದಾ ಪೆರಿಯ ಎಲವು ಅಲ್ಲಿಂ ಕೂಡಿತ್ತು (ಎಕ. II, ೩೫-೬; ಸು. 800). [?]

ದುವ್ವಟ 'ದಂಪ್ಪಟಿ' ನೋ.

ದುವ್ವಟಗಾಸೆ (ನಾ). ೧. ರೇಷ್ಮೆಬಟ್ಟೆಯ ಕಚ್ಚೆ : ರಂಜಿಸುವ ದಿವ್ಯಾಂಗಸುಂದರದ ಹೊಸ ದುವ್ವಟಗಾಸೆಯ ಮಲೆಯಾಳದ ಶಶಿಮುಖಿಯರು ರಾಜಿಸಿದರು (ಕಂನವಿ. ೫೧-೮)ಷ. ೨. ಪಂಡಿಕೆಯಿಂದ ಕೂಡಿರುವ ಕಚ್ಚೆ. [ದುವ್ವಟ (<ದುವ್ವಟು) + ಕಾಸೆ]

ದುವ್ವಟ್ಟ 'ದುಪ್ಪಟಿ' ನೋ.

ದುವ್ವಳಿ 'ದುವ್ವಾಳಿ' ನೋ.

ದುವ್ವಳಿಸು 'ದುವ್ವಾಳಿಸಂ' ನೋ.

ದುವ್ವಾಳಿ, ದಂವ್ವಳಿ, ದೂವಾಳಿ (ನಾ). ೧. ತೀವ್ರಗತಿ ; ವೇಗವಾದ ನಡೆ : ಓಟ : ಸಾಲು ಗೋವಳಿಗಟ್ಟಿಗೆಯ ಕುಂತಾಳಿಗಳ ತೂಗಾಟ ಮಿಗೆ ದುವ್ವಾಳಿಗಳ ದೆಬ್ಬಾಳ ಗಜರಥತುರಗಸೇನೆಯಲಿ (ಕುವಾ.ಕ್ರೌ. ೦೩-೩೭) ; ಅಂಗವಣೆ ಮನದಲ್ಲಿ ಪದದಲಿ ಮುಂಗುಡಿಯ ದುವ್ವಾಳಿ ಕಯ್ಯಲಿ ಸಿಂಗದಾಯತ ಸವೆಯದೆರಡೊಡ್ಡಿನಲಿ ಸುಭಟರಿಗೆ (ಕುವಾ.ಕ್ರೌ. ೦೬-೩) ; ನಭಚುಪ್ಪರಿಸಲ್ಕೆ ನಿಲ್ಲದಲ್ಲಾಡಿತು ಪದಿನಾಲ್ಕು ಲೋಕ ಕೋಡಿ ಬಿದ್ದುವು ಸಪ್ತಶರಧಿ ದುವ್ವಾಳಿಯ ಮಾಡಿದ ಗರುಡ ವೇಗದಲಿ (ಹೋಹತ. ೪೫-೭). ೨. ದಾಳಿ ; ಮಿತ್ತಿಗೆ ; ಆಕ್ರಮಣ : ಕೆಲ ಕಡೆಯ ಕೆಳದಿಯರ ಕಂಗಳ ಹೊಳಹು ದುವ್ವಾಳಿಯಲಿ ಸುಮತಿಸ್ಪಲಿತ ಕೆಂಧೂಳಿಯಲಿ ಮಾಸಿತು ಮನದ ಮಡಿವರ್ಗ (ಕುವಾ.ಆ. ೦೩-೪೬); ದಳಪತಿಯ ದುವ್ವಾಳಿ ಪಾಂಡವ ಬಲವ ಕೆದಱಿತು ಕಲ್ಪವೇಘದ ಹೊಲಿಗೆ ಹಱಿದವೊಲಾಯ್ತು ಮಾದ್ರೇಶ್ವರನ ಶರಜಾಲ (ಕುವಾ.ಕ. ೨-೩೭) ; ರಕ್ಕಸರು ನೂಕಿದರು ಹಯಗಳ ದಕ್ಕಡೆಯ ದುವ್ವಾ[ಪಾಣಾಂ. ದೂವಾ]ಳಿಯಲಿ ಕೈಯಿಕ್ಕಿದುದು ಕಾಲಾಳು ಖಳಖಳಯೆನಲು ಕೈದುಗಳ (ತೂರಾ. ೫-೬-೦೩) ; ಹೊಗೆಯ ಹೊರಳಿಯ ಧಳ್ಳುರಿಯ ಹೆಚ್ಚುಗೆಯ ದುವ್ವಾಳಿಯಲಿ ಮೃಗಜಾಲಗಳ ಮುಸುಕಿಕೊಳುತ್ತ ಬಂದುದು ಘೋರದವದಹನ (ತಿಮ್ಮಕ್ರ. ೪-೩೨). ೩. ಕುದುರೆಯಂ ಗತಿಯಲ್ಲಿ ಒಂದಂ ಬಗೆ: ಬವರಿಯ ಬಿಡೆಯ ದುವ್ವಾಳಿಗಳ ಸೂಟಿಯ ಸರಳ ಸೋಹಿನಲಿ ಕಡುಗಲಿಗಳೇಱಾಟದಲಿ ಮಿಗೆ ಝಡಿ ಪವಾಡ ದೃಢಾಯತಿಕೆಗಿದು ಪಡಿಯ ನಳ ರೇಪಂತರೆಂದುದು ರಾವುತಿಕೆಗಳಲಿ (ಕುವಾ.ಆ. ೭-೨). ೪. ಪ್ರಸರಣ ; ವ್ಯಾಪಿಸುವಿಕೆ : ಮುಗುದೆಯರಂ ಮನುಮಥನ ಮೊನೆಯಾಳುಗಳು ಮುಸುಕಿತು ಪಾಣಿನಿಯ ದಂಡಿಗೆಯ ಮೈಕಾಂತಿಗಳ ದುವ್ವಾಳಿ[ಪಾಣಾಂ. ದುವಾಳಿ]ಗಳ ಲಹರಿಯಲಿ (ಕುವಾ.ಆ. ೮-೭). ೫. ತೂಗಾಟ ; ಓಲಾಟ. 'ದುವ್ವಾಳಿಸು' ಪರಾ. **ದುವ್ವಳಿ.** 'ದುವ್ವಳಿಸು' ಪರಾ. **ದೂವಾಳಿ** : ೧. ಹೊಳಹು ದೂವಾಳಿಯಲಿ ಪಾರ್ಥನ ಕೆಲಕೆ ಬಿಟ್ಟನು ರಥವ ನಿಲು ನಿಲ್ಲೆಲವೋ ಹೋಗದಿರೆನುತ ಬೆಂಬತ್ತಿದಮ ಕಲಿಕರ್ಣ (ಕುವಾ.ಕ. ೦೪-೩೫) ; ಚಂಚಲಾಕ್ಷಿಯರ ಥಳಥಳಿಪ ಕಡಗಣ್ಣಾ ಕುಡಿಮಿಂಚವರಡರ್ದ ತೇಜಿಗಳ ದೂವಾಳಿಯಂ ಮುಂಚಿದುವು (ಜೈಮಿಭಾ. ೦೬-೭). [ದೇ.ಷ ತೆಲು. ದುವ್ವಾಳಿ, ದುವಾಳಿ, ದುವಾಳಿ]

ದುವ್ವಾಳಿಗ (ನಾ). ಆಕ್ರಮಣ ಮಾಡುವವನಂ ; ದಾಳಿಕಾರ : ಝಡಿವ ಬೊಬ್ಬೆಯ ಜಾನುಜಂಘೆಯ ದೃಢಗತಿಯ ದುವ್ವಾಳಿಗರು ಬಂದಡಸಿ ಮುತ್ತಿದರಿಂದ್ರಪ್ರಸ್ಥನ ಪುರವನಗಲದಲಿ (ತೂರಾ. ೪-೪-೩).

[ದುವ್ವಾಳಿ + – ಗ್ಯ]

ದುವ್ವಾಳಿಸು, ದುವಾಡಿಸಂ, ದುವ್ವಳಿಸಂ. ದೂವಾಳಿಸು (ಕ್ರಿ). ೧. ವೇಗವಾಗಿ ಓಡಿಸು ; ಮುನ್ನುಗ್ಗಿಸು : ಸೌರಾಷ್ಟ್ರವರಸನೈತಂದ ಸುದ್ದಿಯನಾದಿಮಯ್ಯಂಗೆ ಬೇಗದಿಂ ಮುಂದೆ ಪರಿದಱುವುವಂತೆರಳೆಯಂ ದುವ್ವಾಳಿ[ಪಾಣಾಂ. ದೂವಾಳಿ]ಸುತೆ ಚಂದ್ರಮಂ ಬಂದನು (ಸೋಪುಪ. ೪-೩೬); ವಾಘೆಯ ಕೊಂಡು ರಥವನು ಮುಂದೆ ದುವ್ವಾಳಿಸಿದನು (ಕುವಾ.ಆ. ೨೨-೨೮) ; ಹೊಳೆಪ ಕುದುರೆಯ ಹಿಂಡಿನೊಳು ತಾನಂದು ಕತ್ತಳೆನ ದುವ್ವಾಳಿಸಿ ಬಂದು ಕಲಹರಿದೇಶದ ರಾಯ ಕೈಮುಗಿದೊಯ್ಯನೊಲೆದೊಂದು ದೆಸೆಯೊಳು ನಿಂದ (ಭರಪ. ೨೨-೨೫) ; ಬಿಸಿಲುಗುದುರೆಯೇಱಿ ಬೇಸಗೆ ರಾಜನಂದೆಸಗಿ ದುವ್ವಾಳಿಸಲಾಗ ವಿಸುಗುಂಪ ಖರೂಧಳಿಯೆಂಬೊಲು ಸುಳಿಗಾಳಿ ಪಸರಿಸಿತಾ ಕಾಲದೊಳಗೆ (ಕಂನವಿ. ೯-೦೨) ; ಬಿಜ್ಜಳನ ಮೇಳದೊಳು ತೇಜಿ ದುವ್ವಾಳಿಸಲ್ಕೊಡನೆಯ್ದೆ ಕನಕದಂಡದ ಚಾಮರ ಬೀಳೆ . . . ನೃಪ ಕಂಡು (ಗುರುಚಾ. ೬-೨೦) ; ಅರೆಲಕ್ಷ ದಳಗಳಂ ರಥವ ದುವ್ವಾಳಿಸುತ ಪರಿತಂದನು (ತುರಂಗ. ೭೩-೩೨). ೨. ರಭಸದಿಂದ ಮುನ್ನುಗ್ಗು ; ವೇಗವಾಗಿ ಹೋಗಂ; ಧಾವಿಸು: ಬಳಸಿ ದುವ್ವಾಳಿಸುವ ತುರಗಕುಲಮಂ ಪೋಳ್ದು ನೆರೆದ ರಥನಿಕರಮಂ ನುಚ್ಚುನೂಱಂ ಮಾಡಿ (ವೀರಕ. ಹ. ೪೪-೨) ; ಕಾಯಸೌಖ್ಯಕೆ ಕಾಮಸುಖದ ವಿಡಾಯ ತತುವಕೆ ವೇಡಗೊಂಡು ನವಾಯಿಯಲಿ ದುರ್ಗತಿಗೆ ದುವ್ವಾಳಿಸುವನಲ್ಲೆಂದ (ಕುವಾ.ಆ. ೮-೩೦) ; ಪಗೆಯ ಏಳಿಸುವೆನದಟರಂ ಸೀಳಿಸುವೆನಂಗವಂ ಬೇಳಿಸುವೆನಗ್ನಿಯೊಳ್ ತಾಳಿ ಸುರರೆಂದು ದುವ್ವಾಳಿಸುತೆ ವಂದಿರವದೋಳಿ ಸುತ್ತಲ್ ಮುಸುಕೆ ತೂಳದಿಂ ಹರಿ ನಡೆದನು (ಚಬಪು. ೭೦-೫೫). ೩. ಆಕ್ರಮಣಮಾಡಂ : ಕಾಲಕೇಯರ ನಗರಿಯಲಿ ದುವ್ವಾಳಿಸಿತಲೇ ಮೃತ್ಯು (ಕುವಾ.ಆ. ೦೨-೫೫); ಲಸತ್ಪಾರ್ಷ್ಣಿಯವನು ದು[ಪಾಣಾಂ. ಧು]ವ್ವಾಳಿಸಿದರೊರಸಿದರು ಪತ್ತೀಶಾಲೆಯನು (ನಿಘಾಗ. ೪-೨-೨೦). ೪. ಹೋಗಲಾಡಿಸು ; ನಿವಾರಿಸು : ಎಳನಗೆಗಳಲಿ ವೇದಪಾಠರ ಕಲಕಿಮಿಗೆ ವೇದಾಂತನಿಷ್ಠರ ಹೊಳಸಿ ದುವ್ವಾಳಿಸುವೆವೆಮಗಿದಿರಾರು ಲೋಕದಲಿ (ಕುವಾ.ಆ. ೦೬-೦೪); ದೆಸೆದೆಸೆಯ ದುರಿತವನು ದುವ್ವಾಳಿಸುವ ವೀಣಾರವದ . . . ಅಸಮವೈಷ್ಣವಮಾರ್ಗಮಾನವ್ಯಸನಿಗಳ ದೇವನನು ಕಾಣುತ (ನಿಘಾಗ. ೪-೩-೦೦). ೫. ಹೋಗು ; ನಿವಾರಣೆಯಾಗಂ ; ದೂರದಲಿ ದಂವ್ವಾಳಿಸಿದ ಭೀತಿಯಲಿ ಕಪಿ ಮೈಯಿಕ್ಕುತೈತಂದ (ತೂರಾ. ೪-೭-೦). ೬. ಕುದುರೆಯಂನ್ನು ಒಂದಂ ವಿಶಿಷ್ಟರೀತಿಯಂಲ್ಲಿ ನಡೆಸು : ಇರ್ವರುಂ ವಾರುಪಂಗಳನೇಱಿ ರಾವುತತನದ ಬಿನ್ನಣಮಂ ಮೆಱೆಯಲ್ಕಡೆಯಿವುದುಂ . . . ದುವ್ವಾಳಿವುದುಂ ತಱುಬುವುದುಂ ಎಂಬಿವು ಮೊದಲಾದ ಗತಿಭೇದಂಗಳಿಂದಿನಿಸುಂ ಪೊಟ್ಟುಗಳೆಯುತ್ಪರ್ಪಿನಂ (ಚಕಪಂ. ೦೪-೦). ೭. ತಂಬಿಕೊಳ್ಳು; ವ್ಯಾಪಿಸು: ಬೆಸಸಿದನು ಚಕ್ರವನು ... ದೆಸೆದೆಸೆಗೆ ದುವ್ವಾಳಿಸುವ ಬೆಳಗೆಸೆಯೆ ಬಂದು ಸುನೀತಕಂಠದ ಬೆಸುಗೆ ಬಿಡಲೆಬಗಿದುದು ಹಾಯ್ದುದು ತಲೆ ನಭಸ್ಥಳಕೆ (ಕುವಾಸ. ೦೦-೭೭) ; ಹೊಡೆವ ನಿರ್ಝರ ದುಂದುಭಿಧ್ವನಿ ಘಾಡುಘುಡಿಪ ಬರಸಿಡಿಲ ಗರ್ಜನೆ ನುಡಿವ ಬಿರುಸಿನ ಕಹಳೆ ದುವ್ವಾಳಿಪ ಮಹಾಹವಕೆ (ದೀವೀಮು. ೨-೭೨). ೮. ತೂಗಾಡಿಸು ; ಬೀಸು : ಪತಾಕಾವಳಿಯ ಸೂಳಱಿದು ಮುಸಗಿ ದುವ್ವಾಳಿಸುವ ಗೋವಳಗಟ್ಟಿಗೆಯ ಗೊಂದಣಂಗೂಡಿ ಗಗನಂ ಕವಿದಂತೆ . . . ತೆಕ್ಕನೆ ತೀವಿದ ಪದಾತಿಬಲದೊಳಂ (ಗಿರಿಕ. ೬-೫೫ ವ) ; ಹಿಗ್ಗಿದವ್ಯಾಯುಧಿಷ್ಕಿರನೃಪತಿ ಭೀಮ ಕೈನೆಗ್ಗಿದಂ ಗದೆಯ ದುವ್ವಾಳಿಸುತ (ತುರಂಗ. ೭೫-೦೪). **ದುವಾಡಿಸು** : ೧. ನಾನು ತೇಜಿಯ ದುವಾಡಿಸಿದ ಮೇಲ್ಮಾಳಿಗೆಯೊಳು ಊರ್ವಶಿಯೊ . . . ಮಂಜುಘೋಷೆಯೋ ಪಾರ್ವತೀಶನೆ ಬಲ್ಲನವಳ ಕಂಡೆನ್ನ ಜೀವನ ಕಾವನೆಸುಗೆಯೊಳಗಂ ನೋವುತಿರ್ದಪೆನು (ಪ್ರಭುಪು. ೪-೩೬). **ದುವ್ವಳಿಸು** : ೧. ರಥಮಂ ದುವ್ವಳಿಸುತಲೇ ಬಳಿಕಂ (ಕರ್ಣಾಕಾ. ೩೪). ೨. ಮೈಸೂರ ಬಲವು ಸಾಗಿ ಭೂರಿ ದುಮ್ಮಿಟ್ಟು ದುವ್ವಳಿಸಿ (ಸೌಂದಕಾ. ೭-೩೮). **ದೂವಾಳಿಸು** : ೧. ತೂಳಿಸಿದರಾನೆಯಂ ಜೋದರುರವಣಿಸಿ ದೂವಾಳಿಸಿದರುಬ್ಬೆದ್ದು ರಾವುತರ್ತೇಜಿಯಂ (ಜೈ ವಿ ಭಾ. ೨೫-೭). ೨. ತೀವಿದ ಶಸ್ತ್ರಾಸ್ತ್ರದ ದೊಣೆಗಳ ಹಳವಿಗೆಗಳ ದೂವಾಳಿಪ ತುರಗದ ಪಕ್ಕರಿಕೆಯ . . . ಜೇತ್ಯೈಕೆಯೆಂಡೈಸೆ ಬಸವಳಿಯೆ (ವೀರಕ. ೨-೩೦) ; ಪವನವೇಗವ ಕೀಳ್ವಡಿಸಿ ದೂವಾಳಿಪ ಜವಗಾತಿಯ ಬೆನ್ನೊಳಿರ್ದು ಕುವರ

ಕಂಗೆಟ್ಟು ಬಿದ್ದವೆನೆಂದು ತಕ್ಕೆಗೊಂಡು (ಮೋಹತ. ೩೦-೨೭) ; ಅಯೋಧ್ಯಾಪುರಿಗೆ ದೂವಾಳಿಸಿದನಮಲಮಣಿಪುಷ್ಪಕದ ಮೇಲೆ ಭರತನಂ ಪಾಲಿಸಲ್ಕೆ (ಜೈಮಿಭಾ. ೧೮-೮). ೬. ಸೂಕಳಾಶ್ವಂಗಳಂ . . . ಕಡಂಗಿ ನಡೆಯಿಪ ಪೊಳಯಿಪ ದೂವಾಳಿಪ . . . ಘೋಳಾಯಿಲರ್ ನೆರೆದು (ರಾಜಶೇ. ೬-೦೦ ವ). ೯. ಅಟ್ಟು ; ಓಡಿಸು : ಎತ್ತ ದೂವಾಳಿಸುವಡಾಲಿಗಳತ್ತ ಲಾನೆಯ ಥಟ್ಟು (ಕುಪ್ಯಾವಿ. ೩-೧೦). [ದುವ್ವಾಳಿ + – ಸು$_1$]

ದುವ್ವೆ 'ದೂವ್ವೆ$_1$' ನೋ.

ದುವ್ವೋಜ (ನಾ). ಒಬ್ಬಾತನ ಹೆಸರಂ : ಮಾತಿಳ ಚಾವೋಜಂ ಎಡವ ಗೇತೋಜಂ ಅಯ್ಯಾವೊಳೆ ಗೇತೋಜಂ ಬನದ ದೇವಿಯ ದಾಸಿ ದು[ವ್ವೋ]ಜಂ (ಸೌಇಇ. XI-1, ೫೭-೨೭ ; 1019).

[ದುವ್ವ ? + ಓಜ$_1$ (<ಒವಝು)]

ದುಶ್ಚಟ (ನಾ). ಕೆಟ್ಟ ಗೀಳು; ಕೆಟ್ಟ ಚಾಳಿ; ದಂರಭ್ಯಾಸ: ಹಗಲುಗನಸು ಕಾಣುವ ಈ ದುಶ್ಚಟ ನನಗೆ ಹತ್ತಿದ್ದು ಸೋದರತ್ತೆಯ ಮನೆಗೆ ಹೋದ ಮೇಲೆ (ಮೂರುದಾ. ೨೪೨); ಹುಡುಗರಲ್ಲಿರುವ ದುಶ್ಚಟಗಳನ್ನು ಕಂಡೂ ಕಾಣದ ಹಾಗಿರುವ ನಿಮ್ಮ ಶಿಕ್ಷಣಕ್ಕೇನೆನ್ನಬೇಕು (ರಂಗರೋ. ೧೨೫) : ತನ್ನ ದೃಢವಾದ ದುಶ್ಚಟಗಳಿಂದ ಬಿಡುಗಡೆ ಮಾಡಿಕೊಳ್ಳುವುದು ಸಾಧಕನಿಗೆ ಒಂದು ಪ್ರಚಂಡವಾದ ಕೆಲಸವಾಗುವುದು (ಪರಪ. ೨೬೫); ಈ ದುಶ್ಚಟವನ್ನು ತಪ್ಪಿಸಿಕೊಳ್ಳಲು ಪ್ರಯತ್ನಮಾಡಬೇಕು (ಮನೋನಂ. ೯೩).

[P ಇದು ಸಂಸ್ಕೃತದಲ್ಲಿರುವ 'ದುಶ್ಚರಿತ', 'ದುಶ್ಚರಿತ್ರ' ಮುಂತಾದ ಶಬ್ದಗಳ ಸಾದೃಶ್ಯದಿಂದ ಕನ್ನಡದಲ್ಲಿ ಮಾಡಿಕೊಂಡಿರುವ ರೂಪ]

ದುಶ್ಚರ (ಗು). ೧. ಆಚರಿಸಲು ಕಷ್ಟವಾದ,– ಕಠಿಣವಾದ,– ಘೋರವಾದ : ಯಮಧರಗುರುಗಳ ಪಾದಮೂಲದೊಳ್ ದುಶ್ಚರತಪಶ್ಚರಣಪರಾಯಣಂ ಜೀವಿತಾಂತ್ಯದೊಳ್ ಸಮಾಹಿತಚಿತ್ತನಾಗಿ ಪಡೆದಂ ಬ್ರಹ್ಮೇಂದ್ರತೆಯಂ (ಆದಿಪು. ೫-೯೬ ವ) ; ಸಹಸ್ರಾಯುಧಂ ಜಿನೇಶ್ವರ ರೂಪಮಂ ತಾಳ್ದಿ ದುಶ್ಚರತಪಶ್ಚರಣಪರಿಣತನಿಹಿತವಿಹಾರನಾಗಿ . . . ನೆಗಟುತ್ತಿರೆ (ಶಾಂತಿಪು. ೯-೨೯ ವ). (ನಾ). ೨. [ಜೈನ] ಸತ್ಪ್ರಣೀತ, ಸಮಾನ, ನಿರೂಪವಾನ, ನಿರನ್ವೇಷ, ದುಶ್ಚರ, ಪ್ರರೂಢ, ಅಹಿಂಸಾಸ್ರ ಮತ್ತು ಫಳವಂತವೆಂಬ ಎಂಟಂ ಬಗೆಯಂ ಧರ್ಮಗಳಲ್ಲಿ ಒಂದು; ಆಚರಿಸಲಂ ಕಷ್ಟವಾದ ಧರ್ಮ: ದುಶ್ಚರಮೆಂಬುದು ಬಾಲವೃದ್ಧರೋಗಾರ್ತರೇಂ ಕಾಪುರುಷರಿನೊಂದುದಿವಸಮಪ್ಪೊಡಂ ನೆಗಟಲಶಕ್ಯಮಪ್ಪ ಧರ್ಮಂ (ಜಾಪುಂಪು. ೭). [ಸಂ.]

ದುಶ್ಚರಿತ (ಗಂ). ಕೆಟ್ಟ ನಡತೆಯ ; ದಂಷ್ಟ ನಡವಳಿಕೆಯುಳ್ಳ. (ನಾ). ೨. ಕೆಟ್ಟ ನಡತೆ ; ದಂಷ್ಟತನ : ಅಕ್ಕ . . . ನಿನಗಾನುಕ್ಕಿ ಮನವಿಟ್ಟೆನ್ನ ದುಶ್ಚರಿತಕ್ಕೆ ವಿಧಿಯುಂಟೆ (ಬಸಪು. ೪೫-೯). ೩. ಕೆಟ್ಟ ಕಾರ್ಯ; ಪಾಪದ ಕೆಲಸ ; ದಂಷ್ಕರ್ಮ : "ದುರಿತಂ . . . ದುಶ್ಚರಿತಂ . . . ಅಶುಭಂ ನಾರಕಂ ಮಳಂ ದುಷ್ಕರ್ಮಂ" (ವಸ್ತುಕೋ. ೨೦-೦೨); ಭವಬದ್ಧವೈರದಿಂ ಕಾದು ವಿದೇಹಿಯ ಗರ್ಭಮಂ ನಿಶಾಚರನಿರ್ದಂ ವಿವಿಧೋಪಸರ್ಗಮಂ ಪಡೆಯವೆ ಮುಳಿಸಂ ಪಡೆವ ಮುಳಿವ ದುಶ್ಚರಿತಂಗಳ್ (ಪಂರಾಮಾ. ೪-೯); ಮತಿ ಕೆಡುಗು ಮಧುಪಾನದಲಿ ಸದ್ಗತಿ ಕೆಡುಗು ದುಶ್ಚರಿತದಲಿ (ಕುಪ್ಯಾಉ. ೩-೦೦೯) ; ಮಾರೀಚ ಮನದಲಿ ಘಸಣಿಗೊಳುತಿರ್ದನು ಕಣಾ ರಾಕ್ಷಸ ಕುಲಾಧೀಶ್ವರನ ದುಶ್ಚರಿತದ ದುರಾಗ್ರಹಕೆ (ತೊರರಾ. ೩-೮-೦). ೪. ಕೆಟ್ಟ ನಡತೆಯುಳ್ಳವನು ; ದಂರಾಚಾರಿ : ಅಕುಲೀನಪ್ರಾಪ್ತರೊಳ್ ದುಶ್ಚರಿತರೆನಿಪ ಮಾತಂಗರೊಳ್ ಪುಟ್ಟಿ . . . ದುಃಖಾಧಿಕೆಯಿಂ [ಯಿಾ] ಸಂಸಾರ ಕೂಪಾರದೊಳನವರತಂ ನೀಡುಮೋಲಾಡುತಿರ್ದಳ್ (ಸುಕುಮಾ. ೫-೨೧) : ತರುಣಿಯಲಿ ಹಗೆಗಳಲಿ . . . ದುರ್ಮಂತ್ರಿಯಲಿ ದುಶ್ಚರಿತನಲಿ ವಿಶ್ವಾಸಿಸೆಯಲೇ ಭೂಪ ಕೇಳೆಂದ (ಕುಪ್ಯಾಸ. ೧-೫೯). [ಸಂ.]

ದುಶ್ಚರಿತೆ (ನಾ). ಕೆಟ್ಟ ನಡವಳಿಕೆಯುಳ್ಳವಳು : ದುಶ್ಚರಿತೆ ದುರ್ಭಗೆ . . . ದುರಾತ್ಮೆಯಪ್ಪ ವಧು ಸಜ್ಜನಮೇ (ಮದತಿ. ೮-೭).

[ಸಂ. ದುಶ್ಚರಿತಾ]

ದುಶ್ಚರಿತ್ರ (ನಾ). ೧. ಕೆಟ್ಟ ನಡವಳಿಕೆ,– ನಡತೆ ; ಕೆಟ್ಟ ವ್ಯವಹಾರ : ಪುರುಳಿಲ್ಲದಂಗೆ ಜೈನಂ ದೊರೆಕೊಂಡುಂ ದುಶ್ಚರಿತ್ರಮಂ ಬಿಡದು (ಸಮಪ. ೪-೩೯) ; ಪುರುದೇವಂ ಮೊದಲಾಗಿರೆ ದೊರೆವೆತ್ತಿಕ್ಷ್ವಾಕುವಂಶದವನೀಶರೊಳಾಂಬರಮಿಲ್ಲ ದುಶ್ಚರಿತ್ರಂ ದೊರೆಕೊಂಡಂದೆನ್ನ ಪೌರುಷಂ ದೊರೆಗಿಡದೇ (ಪಂರಾಮಾ. ೦೫-೭೦) ; ಆತ ಕೊಟ್ಟುದ ತಾ ಮುಟ್ಟದೆ ಆತನಲ್ಲಿ ದುರ್ವಾಕ್ಯ ದುಶ್ಚರಿತ್ರ ಪರಿಹಾಸಕಂಗಳಂ ಬೀಜದೆ (ವಜಸಂ. ೦೯೧-೩೪) ; ಆಮೇಲೆ ದುಶ್ಚರಿತ್ರ ಕಡಿಮೆಯಾಗುತ್ತದೆ : ಲೋಭವಿರುವುದಿಲ್ಲ (ಬಂಕಿಮ. ೬೭). ೨. ಕೆಟ್ಟ ನಡತೆಯ ವ್ಯಕ್ತಿ : ಮೃಣಾಳಿನಿಯಂ ದುಶ್ಚರಿತ್ರಳೆಂದು ಕೇಳಿ ಅವನಿಗೆ ದುಃಖವೂ ಕೋಪವೂ ಉಂಟಾದುವು (ಬಂಕಿಮ. ೧೮೦).

[ಸಂ.]

ದುಶ್ಚರಿತ್ರೆ (ನಾ). ಕೆಟ್ಟ ನಡತೆಯುಳ್ಳವಳು ; ದಂಷ್ಟೆ : ರೋಹಿಣಿಯು ಮೊದಲು ದುಶ್ಚರಿತ್ರೆ, ಲೋಭಿ (ಬಂಕಿಮ. ೬೭). [ಸಂ. ದುಶ್ಚರಿತ್ರಾ]

ದುಶ್ಚರ್ಮ (ಗು). ೧. ಚರ್ಮರೋಗದಿಂದ ಕೂಡಿದ,–ಪೀಡೆಗೊಂಡ; ಕುಷ್ಠರೋಗವುಳ್ಳ. (ನಾ). ೨. ಕುಷ್ಠರೋಗ : ಗಣಜಿಲೆಯ ಬೇರು . . . ಅಮರದವಳ್ಳಿ ಎಂಬಿವಂ ಗೋಮೂತ್ರದಲ್ಲಿ ಕಾಯಿಸಿದುದಂ ಗುಗ್ಗುಳ ಬೆರಸಿ ಕುಡಿಯಲು ದುಶ್ಚರ್ಮ . . . ಉದರಶೋಷೆ, ಶ್ಲೇಷ್ಮಾದಿಗಳೆಲ್ಲವೂ ಮಾಣುವುವು (ವಿವೈವಿ. ೦೯). ೩. ಶಿಶ್ನದ ಮುಂಭಾಗದಲ್ಲಿ ಚರ್ಮದ ಮೇಲುಪದರವಿಲ್ಲದವನು. [ಸಂ. ದುಶ್ಚರ್ಮನ್]

ದುಶ್ಚಾರಿತ್ರ (ನಾ). = ದುಶ್ಚರಿತ್ರ ೧ : ಆನೆನ್ನ ಪಿಂದಣ ದುಶ್ಚಾರಿತ್ರಮಂ ನೆನೆನೆನೆದು ವಿಷಣ್ಣೆಯಾಗಿರಲ್ (ಪುಣ್ಯಾಸ್ರ. ೧೦-೦೭ ವ). [ಸಂ.]

ದುಶ್ಚಿಂತೆ (ನಾ). ಕೆಟ್ಟ ಯೋಚನೆ ; ದುಷ್ಟ ಆಲೋಚನೆ : ಕೊನೆಗೆ ತನ್ನ ಮನಸ್ಸಿನ ದುಶ್ಚಿಂತೆಯನ್ನೂ ಈ ಎಲ್ಲ ಅಪ್ರೀತಿಕರ ಆಲೋಚನೆಯನ್ನೂ ದೂರ ತಳ್ಳುವುದಕ್ಕೋಸ್ಕರ ಭೂಪತಿಯು ಟೇಬಲ್ಲಿನಿಂದ ಒಂದು ಪುಸ್ತಕ ಎತ್ತಿಕೊಂಡು ಅಂದನು (ಇಪ್ಪಕ. ೨೬೦). [ಸಂ. ದುಶ್ಚಿಂತಾ]

ದುಶ್ಚಿಕ್ಯ (ನಾ). [ಜ್ಯೋತಿ] ಲಗ್ನದಿಂದ ಮೂರನೆಯ ರಾಶಿ : ದುಶ್ಚಿಕ್ಯ ಸಂಜ್ಞಂ ತೃತೀಯವೆ ದಲ್ . . . ಛಿದ್ರಮದು ಲಗ್ನಕಷ್ಟಮಸ್ಥಾನಕಂ (ಜಾತತಿ. ೧-೩೫). [ಸಂ.]

ದುಶ್ಚಿತ್ತ (ನಾ). ೧. ಕೆಟ್ಟ ಭಾವನೆ,–ಅಭಿಪ್ರಾಯ : ಚಿತ್ತದಲ್ಲಿ ಖಯ ಖೋಡಿ ಬೇಡೆಲೆ ಸತ್ಯಶೀಲನೆ ನಿಮ್ಮೆಡೆಗೆ ದುಶ್ಚಿತ್ತವೆಮಗಿಲ್ಲ (ಕೋಗಯ. ೨೭-೮೩). ೨. ಕೊರಗು ; ದುಃಖ. ೩. ದುಃಖಿಸುವವನು ; ದುಃಖಿ: ಹೆತ್ತ ತಾಯ್ ಗಾಂಧಾರಿಸತಿ ನಾವಿತ್ತಡಿಗಳಕಟಕಟ ನೀ ದುಶ್ಚಿತ್ತನಾಗದಿರೆಂದು ನುಡಿದನು ನೃಪತಿ ಕೌರವಗೆ (ಕುಪ್ಯಾಅ. ೨೦-೧). [ಸಂ.]

ದುಶ್ಚೇತ (ನಾ). = ದುಶ್ಚಿತ್ತ ೩ : ಒಱಲುತಂ ಸಂಘಾತಿಗಳು ಹೋದರೆ ಅಕಟ ದುಶ್ಚೇತನಾದೆನೆನುತ್ತಿರಲು (ಬಸಪು. ೫೭-೧೦).

[ಸಂ. ದುಸ್ಚೇತಸ್]

ದುಶ್ಚೇಷ್ಟಿತ (ನಾ). ಕೆಟ್ಟ ಕೆಲಸ ; ಅಯೋಗ್ಯವಾದ ಕಾರ್ಯ ; ತಪ್ಪು: 'ಮತ್ತೆ ಹೀಗೆಯೆ ಮಾಡಲಾಗದು' ಎಂಬ ಗದ್ಗದನುಡಿಯಲಿ ಅವನ ದುಶ್ಚೇಷ್ಟಿತವ ಸೂಚಿಸಿ . . . ಕಾಂತನ ಹೊಡೆವಳಳುವಾ ಕಾಂತೆಯಂ (ಧ್ವನ್ಯಾಲೋ. ೮೬). [ಸಂ.]

ದುಶ್ಚೇಷ್ಟೆ (ನಾ). ೧. ತುಂಟತನ ; ಕೀಟಲೆ: (ಕಿ). ೨. ನಾಶಕಾರಕವಾದ ಕೆಲಸ: ಹಲಧರನ ಮಸಕವನು ಪಾಂಡವಬಲದ ದುಶ್ಚೇಷ್ಟೆಯನು . . . ಬಲಿಮಥನನೀಕ್ಷಿಸುತ . . . ಅಳುಕದಿದಿರಲಿ ನಿಂದು ಹಿಡಿದನು ಬಲನ ಬಲಗಯ್ಯ (ಕುಪ್ಯಾಗ. ೮-೨೮). [ಸಂ. ದುಶ್ಚೇಷ್ಟಾ]

ದುಶ್ಚ್ಯವನ (ಗು). ೧. ಕದಲಿಸಲುಂ ಕಷ್ಟವಾದ ; ದೃಢವಾದ. (ನಾ). ೨. ಇಂದ್ರ: "ಪುರುಹೂತನಿಂದ್ರುಂ ... ದುಶ್ಚ್ಯವನಂ ... ಸುತ್ರಾಮನಕ್ಕುಂ" (ಪುಂಗಣಾ. ೧೫-೧) ; ಸುರೆಯಿಂ ಸೊರ್ಕಿಂ . . . ಮುಗ್ಧ ದೋಷಾಕರನಿಂ ವಕ್ರತ್ವಮುಂ ದುಶ್ಚ್ಯವನನ ಹಯದಿಂ ವೇಗಮುಂ ತಾಳ್ದಿ ನೀರಾಕರದಿಂದೇಟ್ರಿಂದಳಂತಾ ಸಿರಿ ಸಹಭವರಂ ಪೋಲ್ವುದೇಂ ಚೋದ್ಯಮಾಯ್ತು (ಕಾದಂಪೂ. ೫೪೬) ; ತಲೆ ಬೆಳೆದು ಪರ್ವತಾಕಾಶವನೇಱಿದ ಮುಗಿಲ ನೀರ ಸೇದೆಯಂ ವಿಗೆ ದುಶ್ಚ್ಯವನಂ ಬಿಡಿಸುವ ಘನಶಸ್ತ್ರವಣಂ ಪೊಳೆವಂತೆ ವಿಂಚು ವಿಂಚಿತ್ರಾಗಳ್ (ಪುಲ್ಲಣಾ. ೦೦-೧೪೦). [ಸಂ.]

ದುಶ್ಶಕುನ (ನಾ). ಅವಂಗಳಕರವಾದ ಸೂಚನೆ: ಅಪಶಕುನ : ಕಂಡಯ್ಯೆ ದಶಕಂಠ ತಾನದು ಖಂಡಿತದ ದುಶ್ಶಕುನಫಲವಿದನುಂಡು ತೀಗುವ ಬೇಗ ನಡೆ (ತೊರಣಾ. ೩-೮-೨) ; ಪಂಚವಟಿ ಧರೆಯೆಲ್ಲಮಂ ಪರ್ವಿರಲ್ಕದರೆ ದುಶ್ಶಕುನ ಸೂಚಿತ ಬೃಹಚ್ಛಾಯೆ (ಶ್ರೀರಾಮಾ. ೨೩೦-೬೧). [ಸಂ.]

ದುಶ್ಶಠನೆ (ನಾ). ಅಧಿಕವಾದ ದೌರ್ಜನ್ಯ : ರಾವಣಂ . . . ಬಳಿಕೆದ್ದು ಕೂಲಮಂ ಸಾರಿ ದುಶ್ಶಠನೆಯಿಂದಬ್ಬರಿಸುತರುಪಿದಂ ಮುಳಿದು ಶಂಕ ಸಾರಣಗೆ (ಪರಶು. ೦೨-೨೮). [<ಸಂ. ದುಶ್ಶಠನ]

ದುಶ್ಶಾಲು (ನಾ). ಎರಡಂ ಶಾಲು ; ಜೋಡಿ ಶಾಲು : ೧೦೦ ವರಹಗಳ ಸಂಬಳವನ್ನು ತೆಗೆದುಕೊಳ್ಳುತ್ತಾ, ದುಶ್ಶಾಲು ಸಹಾ ಇನಾಮಾಗಿ ಸಕಲ ಕಾರ್ಯಗಳಿಗೂ ಇವರೇ ಓಡಾಡುತಿದ್ದರು (ಜಾಮವಂ. ೨೩೦).

[ಮರಾ. ದುಶಾಲ್, ದುಶಾಲಾ ; ಹಿಂ. ದುಶಾಲಾ]

ದುಶ್ಶಾಸನ (ಗಂ). ೧. ಪಳಗಿಸಲಾಗದ; ಅಂಕೆಯಲ್ಲಿಡಲಾಗದ. (ನಾ). ೨. ಧೃತರಾಷ್ಟ್ರನ ಎರಡನೆಯ ಮಂಗನ ಹೆಸರು ; ದಂರ್ಯೋಧನನ ತವ್ಮ: ಕಾಡಿವೆಂ ದುಶ್ಶಾಸನೋರಸ್ಥಳಮನಗಲೆ ಪೋಟ್ಟಾರ್ದು ಕೆನ್ನೆತ್ತರಂ ಪೊಕ್ಕುಡಿವೆಂ ಪಿಂಗಾಕ್ಷನೂರುದ್ವಯಮನುರುಗದಾಘಾತದಿಂ (ಪಂಪಭಾ. ೬-೧೩) ; ದುಶ್ಶಾಸನೋರಸ್ಥಳ [ಕ್ಷರದಸ್ರಾಂ] ಬುವನಾರ್ದು ಪೀರ್ದ ಮುಳಿಸಿಂಗಂ ಮೂಱಿಗೊಳ್ (ಗದಾಯು. ೯-೦೬) : ದುಶ್ಶಾಸನನು ಜಗದೂಳಿಗದ ದುಃಖದುಂಬಿ ಕುರುಪತಿ ಮೇಲೆ ನೇಮಿಸಲುಚಿತಗೈವನೆ (ಕುವ್ಮಾಸ. ೦೪-೬೦). [ಸಂ.]

ದುಶ್ಶೀಲ (ಗು). ೧. ಕೆಟ್ಟ ನಡತೆಯುಂಳ್ಳ ; ದಂಷ್ಟ ಸ್ವಭಾವದ : ಪಾಲೊಳ್ಪೀಯ ಪಂಡಿ ಕಲಕಿದಂದದಲಿ ದುಶ್ಶೀಲವಂತ್ರದಿ ಸೈಂಧವಾಧಿಪನ ವೃತ್ತಿಯ ಹೃದಾಲಯವ ವಿಕಳಗೊಳಿಸಲ್ಕೆ . . . ಯತ್ನಮಂ ಯೋಚಿಸುತ (ವಂಣಾರಾ. ೨-೫-೮). (ನಾ). ೨. ಕೆಟ್ಟ ನಡವಳಿಕೆ: ಆಡಳಿತ ಕಳ್ಳತನ ವಾಡಿದರೆ . . . ದುಶ್ಶೀಲವನ್ನು ಪ್ರಸಾರಮಾಡಿದರೆ, ಕ್ಷೇತ್ರ ಬೇರೆಯೆಂದು ಧರ್ಮ ಸುಮ್ಮನಿರಬೇಕೆ ? (ಸಂ.ಕ. VIII, ೩೦) ; ಬಾಲ ವಿಲ್ಲದ ನರರು ಸೃಷ್ಟಿಯನ್ನಾಳುವರು . . . ಬಾಲದುದಿ ಸುಟ್ಟ ಕಪಿ ಹನುಮ ಗುಡಿದೇವನ್ಯೆ ! ಬಾಲವೇ ದುಶ್ಶೀಲ ! ನರಿಕುಲಕೆ ಕಾಲ (ಕಖಪು. ೪೩-೯). ೩. ಕೆಟ್ಟ ನಡವಳಿಕೆಯುಂಳ್ಳವನಂ ; ದಂರಾಚಾರಿ : ದುಶ್ಶೀಲರ ಎನಗೊಮ್ಮೆ ತೋಱಿದಿರು (ಪಡಸಂ. ೩೫೪-೧೧೦) ; ಮಹಾದುಸ್ಸಹನ ದುಶ್ಶೀಲನ . . . ಕೈವಿಡಿದತ್ತಬೇಕೆಲೆ ದೇವ ನೀನೆಂದ (ತೊರಣಾ. ೪-೪-೫೭). [ಸಂ.]

ದುಶ್ಶೀಲವಂತ (ನಾ). ಕೆಟ್ಟ ಗುಣವುಳ್ಳವನಂ ; ದುಷ್ಟಸ್ವಭಾವದವನಂ : ಒಬ್ಬರನೊಬ್ಬರು ಹಳಿದಾಡುವ ದುಶ್ಶೀಲ[ಪಾಣಾಂ. ದುಃಶೀಲ]ವಂತರ ಮೆಚ್ಚುವನೆ ನಮ್ಮ ಅಖಂಡೇಶ್ವರ (ಅಖಂಡೇ. ೨೯೩-೬೨).

[ಸಂ. ದುಶ್ಶೀಲವತ್]

ದುಶ್ಶೀಲೆ (ನಾ). ಒಳ್ಳೆಯಂ ನಡವಳಿಕೆಯಿಲ್ಲದವಳಂ ; ಕಂಲಟಿ : ಪುರುಳಳಿದ ಮೆಯ್ಯಾದೊಡಂ ಬೇಳೆ ಬೆಲೆಯಿತ್ತೊಡವನಂ ಕಾವನೆಂಬ ದುಶ್ಶೀಲೆಯರು ಕಣ್ಗೆಸೆದರು (ಪಡಕಾ. ೪-೪೪). [ಸಂ. ದುಶ್ಶೀಲಾ]

ದುಶ್ಶ್ರವ (ನಾ). ಕೇಳಲು ಕಷ್ಟವಾದುದಂ ; ಕರ್ಣಕಠೋರವಾದುದಂ: ಮತ್ತೆಯುಂ ಕೇಳಿಸಲ್ಕನುಗೆಯ್ದುಪ್ಪೆನಿದೊಂದು ದುಶ್ಶ್ರವಮುಮುಂ ರಾಜಾಧಿರಾಜಾತ್ಮಜಾ (ಕಾದಂಉ. ೫೪೩). [ಸಂ.]

ದುಶ್ಶ್ರಾವ (ನಾ). = ದುಶ್ಶ್ರವ : ಶರಭಗ್ರಸ್ತೋತ್ಥ ಕಂಠೀರವ ಕಟು ರಟನೋತ್ಥ ಪ್ರತಿಧ್ವಾನವದ್ಗಹ್ವರ ದುಶ್ಶ್ರಾವಶ್ರವಂ (ಕಂದ್ರಪು. ೫-೬೬). [ಸಂ.]

ದುಶ್ಶ್ರಾವ್ಯ (ಗಂ). ಕೇಳಲು ಕಷ್ಟವಾದ ; ಕರ್ಣಕಠೋರವಾದ : "ದುಶ್ಶ್ರಾವ್ಯ; ಅಪಸ್ವನ; ಅಪಸ್ವರ; ಅಸಂಬದ್ಧ ; ಅಸಂಗತ" (Absonant. ಇಂಳಿ). [ಸಂ.]

ದುಶ್ಶ್ರುತಿ (ನಾ). ಕೆಟ್ಟ ಮಾತಂ ; ಅಪಕೀರ್ತಿ ; ದಂಷ್ಕೀರ್ತಿ : ಕೃತ ಮಱಿಯದನೆಂಬೀ ದುಶ್ಶ್ರುತಿ ಪರಿಗುಮಸತ್ಕದೋಷಮಕ್ಕುಂ ಮುಳಿಗುಂ ಪ್ರತಿಪನ್ನಿಕೆಗಿಡೆ ದಶರಥಸುತನಾ ವಿಭು ಮುಳಿದವಂಗೆ ಜವನುಂ ಮುಳಿಗುಂ (ಪಂರಾವಣ. ೦೦-೪೬). [ಸಂ.]

ದುಶ್ಶ್ವಾಪದ (ನಾ). ದಂಷ್ಟ ಪ್ರಾಣಿ ; ಕ್ರೂರಮೃಗ : ನಾನಾಗುಲ್ಮ ಲತಾಂಛ್ರಪಪ್ರಕರದಿಂ ತೀವಿರ್ದ ದುಶ್ಶ್ವಾಪದಧ್ವನಾಭೀಳಮನೇನುಮುಂ ಬಗೆಯದೆ . . . ಭೂನಾಥಂ ನಡೆದಂ (ಪಳಚಂ. ೫೦೩). [ಸಂ.]

ದುಷಮ (ನಾ). [ಜೈನ] ಅವಸರ್ಪಿಣೀಕಾಲದ ಒಂದಂ ವಿಭಾಗ : ಕೆಟ್ಟ ಕಾಲ ; ಬರಿಯ ದುಃಖವೇ ತುಂಬಿರುವ ಕಾಲ : ಒಂದರೊಳಗಾರಾರು ಕಾಲವು ಸಂದು ಸುಷಸುಷ ಸುಷಮಸಂಷದುಷದಿಂದ ದುಷಸುಷ ದುಷಮವಂತಿದುಷಮೆಂಬ ಕಾಲಗಳು (ಬಿಚ್ಕಪು. ೮-೩೨); ಈಗ ನಡೆಯುತ್ತಿರುವುದು ಅವಸರ್ಪಿಣಿ ಕಾಲ. ಇದನ್ನು ಈ ಕೆಳಗೆ ಕಂಡಂತೆ ಆರು ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. (೧) ಅತಿಸುಖವುಳ್ಳದು ... (೫) ದುಃಖವುಳ್ಳದು (ದುಷಮ) (ಕಾರಿ. ೦೭೦) : P ಜೈನಧರ್ಮದ ಪ್ರಕಾರ ಕಾಲವನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದಾರೆ. ೧. ಉತ್ಸರ್ಪಿಣೀಕಾಲ. ೨. ಅವಸರ್ಪಿಣೀ ಕಾಲ. ಉತ್ಸರ್ಪಿಣಿ ಎಂದರೆ ಮನುಷ್ಯ ಮತ್ತು ತಿರ್ಯಗ್ಜಂತುಗಳ ದೇಹಪ್ರಮಾಣ, ಶರೀರಬಲ, ಆಯಸ್ಸು, ಸುಖ ಇತ್ಯಾದಿಗಳು ಕ್ರಮವಾಗಿ ಏರುವ ಕಾಲ. ಅವಸರ್ಪಿಣಿ ಎಂದರೆ ಅವು ಕ್ರಮವಾಗಿ ಕುಗ್ಗುವ ಕಾಲ. ಉತ್ಸರ್ಪಿಣೀಕಾಲದಲ್ಲಿ ಈ ಕೆಳಗೆ ಸೂಚಿಸಿದ ಹೆಸರಿನ ಭಾಗಗಳು ಕ್ರಮವಾಗಿ ಮೂಡಿ ಬರುವುವು. ಅದರಲ್ಲಿ ೬ ವಿಭಾಗಗಳಿವೆ. ೧. ದುಷ್ಷಮ ದುಷ್ಷಮ. ಅತಿ ದುಃಖವುಳ್ಳದು. ೨. ದುಷ್ಷಮ, ದುಃಖವುಳ್ಳದು. ೩. ದುಷ್ಷಮ ಸುಷಮ, ಹೆಚ್ಚು ದುಃಖ ಮತ್ತು ಕಡಿಮೆ ಸುಖವುಳ್ಳದು. ೪. ಸುಷಮ ದುಷ್ಷಮ, ಹೆಚ್ಚು ಸುಖ ಮತ್ತು ಕಡಿಮೆ ದುಃಖವುಳ್ಳದು. ೫. ಸುಷಮ, ಸುಖವುಳ್ಳದು. ೬. ಸುಷಮ ಸುಷಮ, ಅತಿ ಸುಖವುಳ್ಳದು. ಅವಸರ್ಪಿಣೀಕಾಲದಲ್ಲಿ ಈ ಕೆಳಗೆ ಸೂಚಿಸಿದ ಹೆಸರಿನ ಭಾಗಗಳು ಕ್ರಮವಾಗಿ ಮೂಡಿ ಬರುವುವು. ಅದರಲ್ಲಿ ೬ ವಿಭಾಗಗಳಿವೆ.

೧. ಸುಷಮ ಸುಷಮ, ಅತಿಸುಖವುಳ್ಳದು. ೨. ಸುಷಮ, ಸುಖವುಳ್ಳದು. ೩. ಸುಷಮ ದುಷ್ಷಮ, ಹೆಚ್ಚು ಸುಖ ಮತ್ತು ಕಡಿಮೆ ದುಃಖವುಳ್ಳದು. ೪. ದುಷ್ಷಮ ಸುಷಮ, ಹೆಚ್ಚು ದುಃಖ ಮತ್ತು ಕಡಿಮೆ ಸುಖವುಳ್ಳದು. ೫. ದುಷ್ಷಮ, ದುಃಖವುಳ್ಳದು. ೬. ದುಷ್ಷಮ ದುಷ್ಷಮ, ಅತಿದುಃಖವುಳ್ಳದು.

[<ಸಂ. ದುಷ್ಷಮ]

ದುಷಮದುಷಮ (ನಾ). [ಜೈನ] ಅವಸರ್ಪಿಣೀಕಾಲದ ಒಂದು ವಿಭಾಗ ; ಅತಿ ಹೆಚ್ಚು ದುಃಖವುಳ್ಳ ಕಾಲ : ಈಗ ನಡೆಯುತ್ತಿರುವುದು ಅವಸರ್ಪಿಣಿ ಕಾಲ. ಇದನ್ನು ಈ ಕೆಳಗೆ ಕಂಡಂತೆ ಆರು ವಿಭಾಗಗಳನ್ನಾಗಿ

ವಿಂಗಡಿಸಲಾಗಿದೆ :— (೧) ಅತಿಸುಖವುಳ್ಳುದು . . . (೬) ಅತಿ ದುಃಖ ವುಳ್ಳುದು (ದುಷಮದುಷಮ) (ಭಾರದ. ೧೭೧). 'ದುಷಮಂ' ಪರಾ.

[ದುಷಮ + ದುಷಮ]

ದುಷಮಸುಷಮ (ನಾ). [ಜೈನ] ಅವಸರ್ಪಿಣೀಕಾಲದ ಒಂದು ವಿಭಾಗ ; ಹೆಚ್ಚು ದುಃಖ ಮತ್ತು ಸ್ವಲ್ಪ ಸುಖ ಕೂಡಿರುವ ಕಾಲ : ಈಗ ನಡೆಯುತ್ತಿರುವುದು ಅವಸರ್ಪಿಣಿ ಕಾಲ. ಇದನ್ನು ಈ ಕೆಳಗೆ ಕಂಡಂತೆ ಆರು ವಿಭಾಗಗಳಾಗಿ ವಿಂಗಡಿಸಲಾಗಿದೆ :—(೧) ಅತಿಸುಖವುಳ್ಳುದು . . . (೪) ದುಃಖ – ಸುಖವುಳ್ಳುದು (ದುಷಮಸುಷಮ) (ಭಾರದ. ೧೭೧). 'ದುಷಮ' ಪರಾ. [ದುಷಮ + ಸುಷಮ]

ದುಷಸುಷ (ನಾ). = ದುಷಮಸುಷಮಂ : ಒಂದರೊಳಗಾರಾರು ಕಾಲವು ಸಂದು . . . ಸುಷಮಸುಷದುಷದಿಂದ ದುಷಸುಷ ದುಷಮಮತಿದುಷ ವೆಂಬ ಕಾಲಗಳು (ಬಿಜ್ಜಳ. ೯-೩೨). 'ದುಷಮಂ' ಪರಾ.

[<ದುಷಮಸುಷಮ]

ದುಷ್ಕಂಟಕ (ನಾ). ಪರಿಹರಿಸಲು ಕಷ್ಟವಾದ ಅಡ್ಡಿ ; ನಿವಾರಿಸಲಾಗದ ಆಪತ್ತು : ಪುಷ್ಕರ ಗದಾಶಂಖಚಕ್ರಶೋಭಿತ ಕರಚತುಷ್ಕದಿಂ . . . ರಾಮಣೀಯಕ ವಪುಷ್ಕಾಂತಿಯಿಂದೆಸೆವ ನಿನ್ನ ರೂಪೆರ್ದೆಯೊಳಿರೆ ದುಷ್ಕಂಟಕದ ಭೀತಿಯೆನಗದೇಕೆಲೆ ದೇವ (ಕೃಷ್ಣಾಭಿ. ೧೩-೩೬). [ಸಂ.]

ದುಷ್ಕರ (ಗು). ೧. ಮಾಡಲು ಕಠಿಣವಾದ, – ಕಷ್ಟಕರವಾದ, – ಕಷ್ಟ ಸಾಧ್ಯವಾದ : ದೇವವ್ರತನ ದುಷ್ಕರ ಪ್ರತಿಜ್ಞೆಯನ್ನು ಹೊಗಳುತ್ತ . . . ಎಲ್ಲರೂ ಆವನನ್ನು ಭೀಷ್ಮನೆಂದು ಕರೆಯಲಾರಂಭಿಸಿದರು (ಭೀಷ್ಮಚ. ೮). ೨. ದುಷ್ಟತನದ ; ಕೆಟ್ಟ ; ಹಿಂಸೆ ಕೊಡುವ ; ತ್ರಾಸ ದಾಯಕವಾದ : ಜನ್ಮದುಷ್ಕರ ರೋಗಾಳಿಯೊಳೊಂದಿ ನೊಂದುವನಿಶಂ ದ್ಯೂತಾದಿಯಿಂ ಕೆಟ್ಟ ಭೂವರರಂ ಬಣ್ಣಿಪರೇಕೆ ಮೂಢಕವಿಗಳ್ (ಹಮ್ಮೀರ. ೦-೨೬). (ನಾ). ೩. ಕಷ್ಟ ; ಸಂಲಭವಲ್ಲದುದು ; ದುರ್ಘಟ ವಾದುದು: ಅಂತು ದುರ್ಯಶಃಪದಮುಂ ದುಷ್ಕರಮುಂ ದುಸ್ಸಾಧ್ಯಮುಂ ದುರ್ಘಟಮುಮೆನಿಪೆಡೆಯೊಳರ್ದೆಗೆಟ್ಟದೊಂದವಜ್ಞೆಯಿಂದೆಸಗಿದಪಂ ವಿಷ ಮಾಸ್ತ್ರಂ (ಶಾದಂಪು. ೮೫೭) ; ಅಸಮಾಸದೊಳಂದೊರೆವೆತ್ತ ಸಮಾಸದೊಳಂ ಣಕಾರದಿಂ ಪರದೊಳ್ ಸಂದಿಸಿದ ನಕಾರಂ ಣತ್ವಂ ಪ್ರಸಿದ್ಧಮುಚ್ಚರಿ ಸುವರ್ಗೆ ದುಷ್ಕರಮದುವುಂ (ಶಮದ. ೦೫೮) ; ನಾಟಕದ ನಿಯಮಗಳನ್ನೂ ಮಾನದಂಡಗಳನ್ನೂ ಕಂಡುಹಿಡಿದು, ಸೂತ್ರೀಕರಿಸುವುದು ಸುಲಭ; ಆದರೆ ಕಾದಂಬರಿಯ ವಿಷಯದಲ್ಲಿ ಆ ಕಾರ್ಯ ಬಹು ದುಷ್ಕರ (ಸಾಹಿತ್ಯ. ೧೨೧). ೪. ಕೆಡುಕು ; ದುಷ್ಟತನ : ಘನದುರಿತಾತ್ಮನಪ್ಪಶನಿಘೋಷನ ದುಷ್ಕರ ದೊಂದು ಸೊಂಕಿನಿಂ ಜನಿಸಿದ ಪಾಪಮುಂ ಪಟಿಯುಮಿಂತೆರಡುಂ ತಪ ದಿಂದಮಲ್ಲದಿನ್ನೆನಗೆ ಸಮಂತು ಪಿಂಗದು (ಶಾಂತೀಶ್ವ. ೬-೧೩೦). ೫. ಯಂದ್ಧದಲ್ಲಿ ಒಂದು ವರಸೆ (?) : ಒಳಗಂ ದಕ್ಷಿಣ ಸುಕರ ದುಷ್ಕರಮಂ ಪೊಱಗಣ ಸುಕರದುಷ್ಕರ ಭೇದಮಂ ಒಳಗೆ ವಾಮದ ವಿಷಮಮನಲ್ಲಿಯ ವಿಷಮದುಷ್ಕರಮನಿನ್ನದಱ ಪೊಱಗಗ್ಗಳಿಕೆಯೆನಿಪತಿ ವಿಷಮಮನದಱತಿವಿಷಮ ದುಷ್ಕರಮೆಂಬ ದುಷ್ಕರಮಂ ಎಳೆಯೊಳೊ ರ್ವ್ವನೆ ಚಾರಿಸಲ್ ಬಲ್ಲಂ ನಾಲ್ಕುಪ್ರಕರಣಮುಮನಿನ್ದ್ರರಾಜಂ (ಎಳ. II, ೦೩೩-೮೨ ; ೩೩೭). ೬. [ಕಾವ್ಯವಿಾ] ಹದಿನೆಂಟಂ ಬಗೆಯ ಕಾವ್ಯ ದೋಷಗಳಲ್ಲಿ ಒಂದು ; ತಿಳಿಯಲು ಕಷ್ಟವಾಗಿರುವಿಕೆ : ಪರಿ ಗೀತಾರ್ಥಂ ಪೂರ್ವಾಪರದೊಳ್ ಬಗೆವಾಗಳೆಂದುಮೊಂದಱೊಳೊಂದುಂ ದೊರೆಕೊಂಡೊಂದದೊಡದು ದುಷ್ಕರಮೆ ವಿರುದ್ಧಾರ್ಥಮೆಂಬುದಾದಂ ದೋಷಂ (ಕವಿರಾ. ೧-೮೦) : ಅಸದರ್ಥಂ . . . ಅಭವ್ಯಂ ದುಷ್ಕರಂ . . . ಇನಿತುಂ ದೋಷಂಗಳಷ್ಟಾದಶಂ (ಛಂದೋಂಬು. ೧-೪೬ ಅಡಿಟಿ). 'ದುರ್ಲಕ್ಷಣ' ಪರಾ. ೭. = ದುಷ್ಕರಕಾವ್ಯ : ಬವಕಾರಂಗಳ್ ಪಹವರ್ಣವೆರಡುಮವಿಭೇದದಿಂದೆ ಸಲ್ಗುಂ ಸಂಯೋಗವಿಶಿಷ್ಟಮುಂ ಸ್ವರೂಪಮುಮವಿಕಲ್ಪದೊಳೊಂದಿ ನೆಗಟ್ಗುಮವು ದುಷ್ಕರದೊಳ್ (ಶಾಬ್ದಾವ. ೩೫೦). [ಸಂ.]

ದುಷ್ಕರಕಾವ್ಯ (ನಾ). ೧. [ಕಾವ್ಯವಿಾ] ಕಠಿಣವಾದ ಕಾವ್ಯ ; ರಚಿಸು ವುದಕ್ಕೆ ಅಥವಾ ಅರ್ಥೈಸುವುದಕ್ಕೆ ಕಷ್ಟಕರವಾದ ಕಾವ್ಯ : [ಗೋಮೂತ್ರಿಕಂ] ಸಯಮಕಂ ಪ್ರೇಮದಿಂ ಗೋಪಿತಕ್ರಿಯಂ ಶ್ರೀಮದರ್ಧ ಭ್ರಮಂ ಚಕ್ರನಾಮಂ ಮುರಜಬಂಧಕಂ ಇವು ದುಷ್ಕರಕಾವ್ಯಂಗಳ್ (ಕವಿರಾ. ೨-೧೧೩). ೨. ಚಿತ್ರಕಾವ್ಯ ; ವ್ಯಂಗ್ಯಾರ್ಥರಹಿತವಾದ ಕಾವ್ಯ ರಚನೆ : ಕಾವ್ಯದ ಎಲ್ಲಾ ಅಂಶಗಳಲ್ಲಿಯೂ ಕಂಡುಬರುವ 'ಧ್ವನಿ'ಯನ್ನು ಆನಂದವರ್ಧನನು ಬಿಡಿಸಿ, ತೋರಿಸಿ, ಅದರ ಪ್ರಾಧಾನ್ಯದ ಮೇಲೆ ಕಾವ್ಯದ ಯೋಗ್ಯತೆಯು ಹೆಚ್ಚು ಕಡಮೆಯಾಗುವುದೆಂದು ಹೇಳಿದನು : ಅದೇ ಪ್ರಧಾನವಾಗಿರುವುದು ಉತ್ತಮಕಾವ್ಯ, ಅಪ್ರಧಾನವಾಗಿರುವುದು ಮಧ್ಯಮ ಕಾವ್ಯ, ಇಲ್ಲದೆಯೇ ಇರುವುದು – 'ದುಷ್ಕರ' ಕಾವ್ಯಗಳು – ಅಧಮಕಾವ್ಯ (ಧ್ವನ್ಯಾಲೋ. X ಮುನ್ನುಡಿ). [ದುಷ್ಕರ + ಕಾವ್ಯ]

ದುಷ್ಕರ್ಮ (ನಾ). ೧. ಕೆಟ್ಟ ಕೆಲಸ ; ಪಾಪಕಾರ್ಯ ; ಪಾತಕ : "ದುರಿತಂ ಪಾಪಮಧರ್ಮಸ್ವರೂಪಂ . . . ಅಶುಭಂ ನಾರಕಂ ಮಳಂ ದುಷ್ಕರ್ಮಂ" (ವಸ್ತುಕೋ. ೨೦-೧೨) ; ಸಂಭಿನ್ನಮಹಾಮತಿಗಳ್ . . . ದುಃಖಾಂಭೋಧಿಯ ಕಡೆಗಾಣದೆ ಜೃಂಭಿತದುಷ್ಕರ್ಮದಿಂದೆ ನಮೆಂದಪ ರಿನ್ನುಂ (ಆದಿಪು. ೫-೭೬) ; ಎನ್ನ ದುಷ್ಕರ್ಮವಶದಿಂದಾದ ಕರ್ಮ ವೆಂದಿನ್ನೆಗಂ ಬಗೆದೆನಾನಿಂದುತನಕಂ (ಹಡಕಾ. ೧೩-೧೮) ; ಭವಭವದೊಳ್ ಕಟ್ಟಿದನೇಕವಿಧದ ದುಷ್ಕರ್ಮಮಂ ಕಟಲ್ಬಲ್ ಪುಣ್ಯಾಸ್ರವದೊಳ್ ನೆರೆ ಯಲ್ ಭವ್ಯರ್ಗಿವೆ ದಿವಸಂ (ಪುಷ್ಪಪು. ೩-೧೨೪) ; ತೊಟ್ಟನೆ ಪಶುಗಳಂ ಕೊಲುವ ಮೆಲುವ ಕುಮನದ ಪಶುಕರ್ಮಿಗಳ ದುಷ್ಕರ್ಮಂ [ಪಾಕಾಂ. ದುಃಕರ್ಮಂ]ಗಳೊಳಗಿರಲು (ಬಸವು. ೬೦-೪೦) ; ಪೂರ್ವ ದುಷ್ಕರ್ಮವು ಒಟ್ಟೈಸಿ ಮೂಡಿದೆ ಅಲ್ಲದೊಡಾವುದೀ ಪೆಟ್ಟು (ಇಂಪಾಪ. ೪೫-೧೧). ೨. ಕಷ್ಟದ ಕೆಲಸ ; ತ್ರಾಸದಾಯಕವಾದ ಕಾರ್ಯ. ೩. ಕೀಳು ಜಾತಿಯವನು ; ಚಂಡಾಲ : "ನಿಷಾದಂ ಜನಂಗಮನು ದುಷ್ಕರ್ಮನೆನೆ ಹೊಲೆಯನಾ ಚಂಡಾಲನೆಂದೆನಲು ಡೋಹಂಗೆ ನಾಮಮಕ್ಕುಂ" (ಮಂಗರಾ. ೦೧೨-೬). [ಸಂ. ದುಷ್ಕರ್ಮನ್]

ದುಷ್ಕರ್ಮಿ (ಗು). ೧. ಪಾಪದಿಂದ ಕೂಡಿದ ; ದುಷ್ಟತನದ. (ನಾ). ೨. ಪಾಪಕರ್ಮವನ್ನು ಮಾಡುವವನು ; ದುಷ್ಟ : ನೀಕರ್ಮಿ ನೀಂ ದುಷ್ಕರ್ಮಿ ನಾಂ ನೀಂ ಪಶುವನಾಂ ಪಶುವು (ಬಸವು. ೨೨-೬೦) ; ನಿಮ್ಮ ನಿಂದಿಸುವವರುಗಳು ದುಷ್ಕರ್ಮಿಗಳು (ಕುಮಾಪ. ೬-೧೦೯) ; ಪಾತಕಿಯಾದರೇನು . . . ನೀತಿಯ ಬಿಟ್ಟು ದುಷ್ಕರ್ಮಿಯಾದರೇನು (ಪುರಂದ. ೧-೧೪೩-೨). [ಸಂ. ದುಷ್ಕರ್ಮಿನ್]

ದುಷ್ಕವಿ (ನಾ). ಕೆಟ್ಟ ಕವಿ ; ಕುಕವಿ : ಗರ್ವದಿಂ ಬೆಱೆತು ಬಿಱ್ಱನೆ ಬೀಗಿ ಸರಸ್ವತೀಶಿರೋವ್ಯಥೆಯನದೇಕೆ ಮಾಡುವರೊ ದುಷ್ಕವಿಗಳ್ಕೆಲರೀ ಧರಿತ್ರಿಯೊಳ್ (ಶೃಂಗಾರ. ೧-೭). [ಸಂ.]

ದುಷ್ಕವಿತೆ (ನಾ). ಕೆಟ್ಟಕವಿತೆ,: ಓದಿದೊಡೆ ಕಲ್ಲಮಾಲೆಯನಾದಂ ಕರ್ಬೊನ್ನ ಕಡಲೆ ವಾದಿಸೆ ರಸಮಂ ಸೋದಿಸೆಯುರ್ಕಿನ ಪುಡಿಯೆನಿಪಾ ದುಷ್ಕವಿತೆಗಳ ನೆಣಿಸಲೇಕೀ ಕೃತಿಯೊಳ್ (ಗಿರಿಕ. ೧-೨೨). [ಸಂ. ದುಷ್ಕವಿತಾ]

ದುಷ್ಕಾಮ (ನಾ). ಕೆಟ್ಟ ಬಯಕೆ; ಕೀಳು ಆಸೆ; ತುಚ್ಛವಾದ ಭೋಗಾಭಿ ಲಾಷೆ: ಆಡುವ ದುರಾಲಾಪವೇ ಮಂತ್ರವು ನಿನಗೆ ದುಷ್ಕಾಮವೇ ನೇಮ (ಬಸವು. ೪೦-೯); ಅಂತೇ ಅಮೃತಮತಿ ಎರಡು ಶಕ್ತಿಗಳ ಸುಂಟರಗಾಳಿಯಲ್ಲಿ ಸಿಕ್ಕಿದ ತರಗೆಲೆಯಾದಳು. ಆಮೇಲೆ ಅವಳ ದುಷ್ಕಾಮವೇ ಅವಳ ತರ್ಕವಾಯಿತು (ಕಸಾಚ. ೨೦೩). [ಸಂ.]

ದುಷ್ಕಾಮಿ (ನಾ). ದುರಾಸೆಯುಳ್ಳವನು; ದುಷ್ಟ ಅಪೇಕ್ಷೆಯುಳ್ಳವನು: ಹುಟ್ಟಿರುವುದು ನೀ . . . ನೆಟ್ಟನೆ ಕೆಲಸವ ಗೈವುದು ನೀ; ಅಷ್ಟಿರೆ ದುಷ್ಕಾಮಿಗೆ ಕೇಡಾಳಿಗೆ ಇಷ್ಟೇತಕೆ ನೀ ಬೆದರುವುದು (ಕಎಪು. ೪೯-೪). [ಸಂ. ದುಷ್ಕಾಮಿನ್]

ದುಷ್ಕಾಲ, ದುಷ್ಕಾಳ (ನಾ). (ಪಾಪ, ಕ್ಷಾಮ, ರೋಗರುಜಿನ ಮುಂತಾದವುಗಳಿಂದ ಉಂಟಾದ) ಕೆಟ್ಟ ಕಾಲ; ಕಷ್ಟದ ಕಾಲ: ಅಂತಹ ದುಷ್ಕಾಲ ಬಂದರೆ ಆಗ ನನ್ನನ್ನು ನಾನು ರಕ್ಷಿಸಿಕೊಳ್ಳುವೆನು (ಮಹಾಪ. ೧೭); ಹಣಮಾಡುವ ದಾರಿ ತಿಳಿದವರಿಗೆ, ಈ ಇಂಥ ದುಷ್ಕಾಲದಲ್ಲೂ ಪೆಟ್ರೊಮೆಕ್ಸ್ ಉರಿಸುವುದಕ್ಕೆ ಸಾಧ್ಯವಿದೆ (ಜಾರುದಾ. ೧೭೩). **ದುಷ್ಕಾಳ**: ಈ ಸಾರೆ ದುಷ್ಕಾಳದ ಸುದ್ದಿ ತಿಳಿಸಿ ತಿರುಗಿ ಬರಬೇಕು (ಅನ್ನ. ೭೪); ದುಷ್ಕಾಳಪೀಡಿತರಾಗಿ ಹೊಟ್ಟೆ ಹೊರೆದುಕೊಳ್ಳಲು ಗುಳೆ ಎತ್ತಿ ಬಂದ ದುರ್ದೈವಿಗಳು (ಮಣ್ಣಿಮ. ೧೬೩). [ಸಂ.]

ದುಷ್ಕಾಳ 'ದುಷ್ಕಾಲ' ನೋ.

ದುಷ್ಕೀರ್ತಿ (ನಾ). ಅಪಯಶಸ್ಸು; ಅಪಕೀರ್ತಿ: ಬಂದ ದಕ್ಷಿಣೆ ಮೃಷ್ಟ ಭೋಜನದಿಂದ ತುಷ್ಟರು ನಾವು ನಮಗಿದಱಿಂದ ಬಹ ದುಷ್ಕೀರ್ತಿ ಬರಲೆಂದುದು ಬುಧವ್ರಾತ (ಕುಮ್ಯಾಅ. ೦೩-೩); ಬಳಸುತಿದೆ ದುಷ್ಕೀರ್ತಿ ಕೀರ್ತಿಯನೆಲೆ ರಘುಕ್ಷಿತಿನಾಥ ಬಿಡಿಸೈ (ತೊರರಾ. ೩-೦೦-೨). [ಸಂ.]

ದುಷ್ಕುಲ (ನಾ). ಕೆಟ್ಟ ವಂಶ; ಹೀನವಾದ ಕುಲ: ಶಾಪದಿಂದಾದ ದುಷ್ಕುಲಂ ಸತ್ಕುಲಜ ಭೂಪ ನಿನ್ನಯ ಸಂಗದಿಂ ಶುದ್ಧವಪ್ಪುದೆಂಬಾ ಪೇಕ್ಷೆಯಿಂ ಬಂದೆವು (ಹಡಕಾ. ೭-೨೨). [ಸಂ.]

ದುಷ್ಕುಲೀನ (ನಾ). ಹೀನಕುಲದಲ್ಲಿ ಹುಟ್ಟಿದವನು: ವ್ಯಾಧರುಂ ದುಷ್ಕುಲೀನರುಮರಸುಗಳಾಗಿ . . . ಅನ್ಯಾಯದೊಳು ಪ್ರವರ್ತಿಸುವರು (ಬಾವುಂಪು. ೫೩). [ಸಂ.]

ದುಷ್ಕೃತ (ನಾ). ೧. ಕೆಟ್ಟ ಕೆಲಸ; ಪಾಪ; ಪಾತಕ; ನೀಚಕಾರ್ಯ: ನಾನಾಯೋನಿಗಳೊಳ್ ಸುಱಿದೇನಾನುಂ ದುಷ್ಕೃತಂ ಸಡಿಲ್ದೊಡೆ ಪಡೆದುಂ ಮಾನುಷ್ಯಮನತಿದಾರುಣಮಾನಸಶಾರೀರದುಃಖಪೀಡಿತನಕ್ಕುಂ (ಆದಿಪು. ೯-೪೮); ಕವಿಕುಳಸೇವ್ಯಮಾನ ಕವಿತಾಕಳಹಂಸೆಗೆ ಕೇಳಿಲೀಲೆ ಸಂಭವಿಪೊಡ ನಾಮಲಂ ಜಿನಕಥಾರಸಮಾನಸದಲ್ಲಿ ಕೂಡೆ ಸಂಭವಿಕುಮದಲ್ಲದಂತೆ ದೊರೆಕೊಳ್ಗುಮೆ ದುಷ್ಕೃತಸೈರಿಭಪ್ರಜಾವಿವರಮೆನಿಪ್ಪ ರಾಜವಿಟಚೋರ ಕಥೋಲ್ಬಣಪಲ್ವಲಂಗಳೊಳ್ (ಚಂದ್ರಪು. ೦-೫೦); ಒಂದು ದುಷ್ಕೃತ ಕಾರ್ಯ ಕಾರಣದಿಂದವಿಂತಹ ಶಾಪವಾಯಿತು (ಬಸಪು. ೩೪-೦೮); ದುಷ್ಕೃತವನೆಸಗುವರು ಫಲದಲಿ ಕಕ್ಕುಲಿಸುವರು (ಕುಮ್ಯಾಉ. ೪-೯೬). ೨. ಪಾಪಿ; ಪಾತಕಿ: ದುಷ್ಕೃತನಾ ಖಚರೇಂದ್ರಂ ನಿಷ್ಕೃಪೆಯಿಂ ಬಿಸುಟು ಪೋಗೆಯುಂ ವೇಣುವಂ (ಶಾಂತೀಶ್ವ. ೯-೦೭); ಕಪಟನಂ ದುಷ್ಕೃತನನನ್ನುತನನಿನ್ನು ಸೈರಿಸಿ ತಪ್ಪುಗಳನೆನ್ನ ಅತಿಕರುಣದಲಿ ನೋಡಿ . . . ಸಮುದ್ಧರಿಸು (ಬಸಪು. ೨೩-೪೦). [ಸಂ.]

ದುಷ್ಕೃತಕಾರಿ (ನಾ). ಪಾಪಿ; ಪಾತಕಿ: ನಾರಿ ನರಕಕೆ ದಾರಿ . . . ಮೋಹನಕಾರಿ ದುಷ್ಕೃತಕಾರಿ (ಕೌಶಿರಾ. ೨೩-೨೮). [ಸಂ. ದುಷ್ಕೃತಕಾರಿನ್]

ದುಷ್ಕೃತಘರಟ್ಟ (ನಾ). ಪಾಪವನ್ನು ನಾಶಮಾಡುವವನು; ಕೆಡುಕುಗಳನ್ನು ಹೋಗಲಾಡಿಸುವವನು: ದಿಟ್ಟಿಗುತ್ತಮದ ವಸ್ತ್ರಂಗಳಂ ದುಷ್ಕೃತಘರಟ್ಟಂಗೆ ಭಕ್ತಿಯಿಂದರ್ಪಿಸಲ್ಬೇಕು (ವೀಶ್ವಪು. ೭-೦೦-೫). [ದುಷ್ಕೃತ + ಘರಟ್ಟ]

ದುಷ್ಕೃತಿ (ನಾ). ೧. ಕೆಟ್ಟ ಕೆಲಸ; ದುಷ್ಕೃತ್ಯ: ದುಷ್ಕೃತಿಯ ಕುಹಕದಿಂ ಬೈದು ಭಂಗಿಸಿ ಜಱದನಾತ್ಮಜನನರ್ಜುನಂ (ಚೈಮಿಭಾ. ೦೭-೫೫). ೨. ದುಷ್ಟ; ನೀಚ: ದುರ್ಜನನೆನಿಸಿರ್ದ ದುಷ್ಕೃತಿಗೆ ಭಕ್ತಿಯೊಳೆತ್ತುವೆನಗ್ರಪೂಜೆಯಂ (ಸೂಕ್ತಿಸು. ೦-೨೮). [ಸಂ.]

ದುಷ್ಕೃತ್ಯ (ನಾ). ಕೆಟ್ಟ ಕೆಲಸ; ಪಾಪಕಾರ್ಯ: "ಕಾಟ್ಗಿಯ್ತುಮೆನೆ ದುಷ್ಕೃತ್ಯ" (ಶಬ್ದಮಂ. ೫೩); ಜ್ಞಾನವುಪದೇಶದಲಿ ದೊರೆತಿರೆ ಮಾನವನು ದುಷ್ಕೃತ್ಯವೆಸಗುವ ನೋಡಿ (ನೀಸಾರಾ. ೨೩-೦೩೨); ತನ್ನಿಂದ ಯಾವುದೋ ದುಷ್ಕೃತ್ಯವನ್ನು ಮಾಡಿಸಲು ಅವನು ಒಲೆನಿನ್ ತನಗೆ ಹೀಗೆ ಲಂಚ ಕೊಟ್ಟಿರಬೇಕು ಎಂದು ಯೋಚಿಸಿದನು (ಮಲೆನಾ. ೦೨೬). [ಸಂ.]

ದುಷ್ಕ್ರಮ (ಗು). ೧. ಕ್ರಮಬದ್ಧವಲ್ಲದ; ಅಕ್ರಮವಾದ. (ನಾ). ೨. ನಡೆದು ಸೇರಲಾಗದುದು; ನಡಗೆಯಿಂದ ಬಳಿಸಾರಲಾಗದುದು: ನುಡಿವರೆ ಕಾಣೆನಾಪ್ತರನು ನೋಡುವರುತ್ತಮಪೆಣ್ಗಳಿಲ್ಲ ನಿನ್ನಡಿಗಳ ಕಂಡು ಸೈರಿಪಡೆ ನೀನಿಹ ಊರತಿಮೂರ ದುಷ್ಕ್ರಮಂ (ಮಲ್ಲಿಕಾ. ೧೫-೦೯೦). ೩. [ಕಾವ್ಯಮೀ] ಅರ್ಥದೋಷಗಳಲ್ಲಿ ಒಂದು; ಕ್ರಮಕ್ಕೆ ವಿರೋಧವಾದುದು: ದುಷ್ಕ್ರಮ - ಲೋಕಶಾಸ್ತ್ರಾದಿಗಳಿಗೆ ವಿರುದ್ಧವಾದ ಕ್ರಮದಲ್ಲಿ ಹೇಳಿರುವುದು (ಕೈಪಿಡಿ. ೨೨೯). [ಸಂ.]

ದುಷ್ಖಲ (ನಾ). ಮಹಾದುಷ್ಟ: ಪಾವಾಡಿಗನುರೆ ನಾಗಸರವನ್ನೂದೆ ಚಿಂತೆಯ ತಿರಸ್ಕರಿಸಿ ಪೆಡೆಯೆತ್ತಿ ನಲಿದು ಕೇಳ್ವಂತೆ ದುಷ್ಖಲಸಮೂಹಂ ಪಿಂತೆ ಗಳಹುತ್ತಿರಲ್ಕಾ ಖುಲ್ಲರೆಂಬ ಫಣಿಮಂತಣಂ ಶ್ರುತಿಪುಟಕ್ಕೆ ಕಾವ್ಯ ನಾಗಸರದಂತಪ್ಪುದಾಗಿ ತಲೆವೆಡೆಯೆತ್ತಿ ಕೇಳ್ವರೀ ಕೃತಿಯ ವಚನಾಮೃತವನು (ಏಕೋಪು. ೧-೪೦). [ಸಂ.]

ದುಷ್ಟ (ಗು). ೧. ಕೆಟ್ಟ ಗುಣವುಳ್ಳ; ಕೆಟ್ಟ ಸ್ವಭಾವವುಳ್ಳ; ಕೆಡುಕು ಮಾಡುವ: ಭಾಲಾಂಬಕಾ ದುಷ್ಟಕಾಲಾರಿ ಖಡ್ಗಾದಿ ಶೂಲಾಯುಧ ತ್ರಿಪುರಕೋಲಾಹಲ (ವೀಶ್ವಪು. ೯-೦೩-೧); ದುಷ್ಟರಾಜನ ಮಾತನವನ ರಾಜ್ಯದೊಳಿರುವಷ್ಟು ದಿವಸ ಕೇಳ್ವರಂತೆ (ಭರಪ. ೪-೯೭) ೨. ಕೆಟ್ಟು ಹೋದ; ಹಾಳಾದ; ಭ್ರಷ್ಟವಾದ; ಕಲುಷಿತವಾದ. ೩. ದೋಷಯುಕ್ತವಾದ; ದೋಷಿಯಾದ. (ನಾ). ೪. ಕೆಟ್ಟವನು; ನೀಚ; ಅಧಮ: "ದುಟ್ಟಂ ತಾಂ ದುಷ್ಟನಕ್ಕು" (ಕವಿಕಂ. ೨೨೮); ದುಷ್ಟರನೊಳ ಕೊಂಡು ಕೆಟ್ಟರ ಕಥೆಗಳಂ ಪೇಟ್ವೆಂ (ಪಂಚತಂ. ೦೨೨-೧೨); ಇಂತಪ್ಪ ದುಷ್ಟರೆಮ್ಮೂರೊಳಗೆ ತಾನಿಲ್ಲ (ನಂಬಿರ. ೭-೨೫); ದುಷ್ಟ ದುಱುದುಂಬಿ ನಂಜುಂಡರಾಜ . . . ಮಲೆತಿರ್ದನಾಗ (ಕಂನವಿ. ೦೮-೨೦); ದುಷ್ಟರಲಿ ಶಿಷ್ಟರಲಿ . . . ಸಿದ್ಧಿ ಹೊಂದುತಲಿರಲು ನಿನ್ನಮೃತನೀತಿ ಶ್ರದ್ಧೆಯಿಹ ಧೃತಿಗಿಹುದೆ ಹೇಳ್ ಅಶಿವಭೀತಿ? (ಅನಿಕೇ. ೫೭-೯). ೫. ಪಾಪ; ಅಪರಾಧ: ಹುಟ್ಟು ಹೊಂದುಗಳಿಲ್ಲ ಕಷ್ಟ ದುಷ್ಟಗಳಿಲ್ಲ ಮುಟ್ಟಿದ ಹಗೆ ಕೆಳೆಯಿಲ್ಲ (ಶ್ರೀಪಾಲ. ೧೪-೮೩). ೬. ದೋಷ; ಕಳಂಕ. ೭. ದೋಷಯುಕ್ತವಾದ ಮರಕತದ ಜಾತಿಯಲ್ಲಿ ಒಂದು ಬಗೆ; ಕಣಿಗಿಲೆಯ ಎಲೆಯ ಬಣ್ಣದ ಮರಕತ: ದೋಷಲೇಶಾನ್ವಿತಂ ದುಷ್ಟಂ ದೋಷಮೂರ್ಧಿತಂ ದೋ [ಷಲೇಶಂ] ಮಂದದೋಷಮೆಂದಿಂತೀ ಪಂಚವಿಧಮಾದ ಸದೋಷ ಜಾತಿ ಮರಕತಮಂ ಪೇಳ್ವೆನೆಂತೆನೆ ... ನಾಡೆ ಪಡ್ಡಳಿಯಚ್ಚಪತ್ರದ ಕಾಂತಿಯಾದುದೆ ದುಷ್ಟಂ (ಹಾಲಾಸ್ಯ. ೨-೦-೮೯ ವ). ೮. ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮಾತ್ಸರ್ಯಗಳೆಂಬ ಅರಿಷಡ್ವರ್ಗ. ೯. (ಉತ್ತಮಲೋಹದ ಜೊತೆಗೆ ಬೆರೆತಿರುವ) ಕೀಳು ಲೋಹ; ಅವಲೋಹ. ೧೦. ಹಾವು; ಸರ್ಪ. ೧೧. ಕುದುರೆ; ಅಶ್ವ. ೧೨. ಮದವೇರಿದ ಆನೆಯ ಗಂಡಸ್ಥಲದಿಂದ ಸುರಿಯುವ ದ್ರವ; ಮದೋದಕ: "ಅವಲೋಹ ವಾಜಿ ದುರ್ಜನ ಷಡುವರ್ಗ ಸರ್ಪ ಗಜದಾನಗಳಿಂತಿವು ದುಷ್ಟಶಬ್ದ" (ನಾನಾರ. ೫೨). ೧೩. [ಕಾವ್ಯಮೀ] ಎಂಟು ಬಗೆಯ ವಾಕ್ಯದೋಷಗಳಲ್ಲಿ ಒಂದು; ವ್ಯಾಕರಣದೋಷಗಳಿಂದ ಕೂಡಿರುವುದು: ಖಂಡಿತ, ವ್ಯಸ್ತಸಂಬಂಧ, ಅಸಮ್ಮತ, ಅಪಕ್ರಮ, ಅಪಭಂದಸ್ಸು, ಯತಿಭ್ರಷ್ಟ, ದುಷ್ಟ, ಅಸತ್ಕ್ರಿಯೆಯೆಂಬೆಂಟು ವಾಕ್ಯದೋಷಮಿಲ್ಲದೆ (ವಿವೇಕ. ೧೮೦).

ದುಷ್ಪಮನ್ನೆಯ ಪ್ರಳಯಕಾಳ=ಕೆಟ್ಟಪನಾದ ಸಾವಂತನಿಗೆ ಪ್ರಳಯ ಕಾಲದ ಯಮನಂತಿರುವವನು; ಒಂದು ಬಿರುದಂ: ಅಸಹಾಯ ಸಿಂಹಂ ತಗಟ್ಟಿದ್ದ ಬಡಿವಂ ದುಷ್ಪ ಮನ್ನೆ ಯ ಪ್ರಳ ಯ ಕಾ ಳಂ ಶ್ರೀಮತ್ಕೈರ್ಗ್ಗಡೆ ಮಾದಿ[ವ]ಯ್ಯಂ (ಸಾಹಿತ್ಯ. XX, ೪೪-೬; 1034). ದುಷ್ಪರಂಕುಸ=ದುಷ್ಪರಿಗೆ ಅಂಕುಶದಂತಿರುವವನು; ಒಂದು ಬಿರುದು: ರಿಪುಮಂಡಳಿಕಕುಮರೆಗಳಗಂಣ್ಣಗತ್ತರಿ . . . ದುಷ್ಪರಂಕುಸ ಶ್ರೀಮತ್ರಿಭುವನ ಮಲ್ಲದೇವಂ (ಕಇಶಿ. ೧೦೪-೦೪-೧೬; 1080). ದುಷ್ಪರ್ಗೆ ಧೂರ್ತ=ಕೆಟ್ಟವರ ಪಾಲಿಗೆ ಧೂರ್ತನಂತಿರುವವನಂ; ಒಂದಂ ಬಿರುದು ಕಲಿಯುಗಪಾರ್ತ್ಥ ದುಷ್ಪರ್ಗ್ಗೆ ಧೂರ್ತ್ತ ಸಂಗ್ರಾಮರಾಮ (ಎಕ. II, ೦೪೩-೫೫; 1131). ದುಷ್ಪ ಶಿರಃಕತ್ತರಿ=ದುಷ್ಪರ ಶಿರಕ್ಕೆ ಕತ್ತರಿಯಂತಿರುವವನು; ಒಂದಂ ಬಿರುದು: ಅರಿಘಟಾಕೇಸರಿ ದುಷ್ಪಶಿರಃಕ[ತ್ತ]ರಿ . . . ಸಮಸ್ತಪ್ರಶಸ್ತಿಸಹಿತ ಶ್ರೀಮನುಮಹಾಪ್ರಧಾನ ಕಡಿತವರ್ಗ್ಗಡೆ . . . ಮಧುವರಸರು (ಕಇಶಿ. ೦೪-೪-೧೩೦ : 1093). [ಸಂ.]

ದುಷ್ಪಕರ್ಮ (ನಾ). ಕೆಟ್ಟ ಕೆಲಸ; ಹೀನಕೃತ್ಯ: ಭೂಪ್ಪಜನ್ಮದಲ್ಲಿ ಬಂದು ದುಷ್ಪಕರ್ಮಂಗಳನೆ ಮಾಡಿ (ಪುರಂದ. ೪-೦೨-೭). [ದುಷ್ಪ + ಕರ್ಮ]

ದುಷ್ಪಗೋಷ್ಠಿ (ನಾ). ಕೆಟ್ಟ ಜನರ ಸಹವಾಸ. [ದುಷ್ಪ + ಗೋಷ್ಠಿ]

ದುಷ್ಪಗ್ರಹ (ನಾ). ಕೆಡುಕನ್ನುಂಟುಮಾಡುವ ಗ್ರಹ; ಅನಿಷ್ಟವನ್ನುಂಟು ಮಾಡುವ ಗ್ರಹ: ಎಲವೊ ದುಷ್ಪಗ್ರಹದ ಬಾಧೆಯ ನಿಲಿಸಲಱಿಯರೆ ಮಂತ್ರವಾದಿಗಳು (ಕುಮಾರ್ಕ್ರೋ. ೦೩-೦೦). [ದುಷ್ಪ + ಗ್ರಹ]

ದುಷ್ಪಚತುಷ್ಪಯ (ನಾ). ೧. ನಾಲ್ವರಂ ಕೆಡುಕರ ಗುಂಪು. ೨. ಕೌರವರ ಪಕ್ಷದಲ್ಲಿ ಸದಾ ಕೆಡುಕನ್ನು ಆಲೋಚಿಸುತ್ತಿದ್ದ ನಾಲ್ಕು ಜನರ ಗುಂಪು; ದುರ್ಯೋಧನ, ಕರ್ಣ, ದುಶ್ಶಾಸನ ಮತ್ತು ಶಕುನಿ. ೩. (ವಿಶೇಷವಾಗಿ) ದುರ್ಯೋಧನನ ರಾಜ್ಯಭಾರದಲ್ಲಿ ಅವನಿಗೆ ತಿಳಿವಳಿಕೆ ನೀಡುತ್ತಿದ್ದ ನಾಲ್ಕು ಜನರು; ದುಶ್ಶಾಸನ, ಕರ್ಣ, ಶಕುನಿ ಮತ್ತು ಸೈಂಧವ: ದುಶ್ಶಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಪಚತುಷ್ಪಯದೊಳ್ ಮಂತಣಮಿರ್ದು . . . ಇನ್ನಾವ ಮಾಟ್ಕೆಯೊಳ್ ಪಗೆಯಂ ಕೆಯ್ಗೆ ಮಾಡುವಂ ಪೇಟ್ಪೆಮೆನೆ (ಪಂಪಭಾ. ೬-೬೬ ವ).

[ದುಷ್ಪ + ಚತುಷ್ಪಯ]

ದುಷ್ಪಜನ (ನಾ). ಕೆಟ್ಟ ಜನ; ಕೆಡುಕನ್ನುಂಟು ಮಾಡುವ ಮಂದಿ: ದುಷ್ಪಜನರು ಈ ಸೃಷ್ಟಿಯೊಳಿದ್ದರೆ ಶಿಷ್ಪಜನರಿಗೆಲ್ಲ ಕೀರ್ತಿಗಳು (ಪುರಂದ. ೪-೦೨೩-೨) ; ದುಷ್ಪಜನರು ಇಲ್ಲದ ಸಲ್ಲದ ಕಾರಣಗಳನ್ನು ಕಲ್ಪಿಸಿ ಹರಟ ಬಹುದು (ಶಾಂತಲಾ. ೨೩೦). [ದುಷ್ಪ + ಜನ]

ದುಷ್ಪತನ (ನಾ). ೧. ಕೆಟ್ಟತನ; ನೀಚತನ: ಸೌಂದರಸೆಟ್ಟಿಯುಂ ಸೋಮಶರ್ಮನುಮೇಗೆಯ್ದುಂ ದುಷ್ಪತನಮಂ ನಿವಾರಿಸಲಾಜದೆ (ಧರ್ಮಾಮೃ. ೨-೦೬೧) ; ಶಿಸ್ತನ್ನು ಉಲ್ಲಂಘಿಸಿದವನು ಆ ನೀತಿ ನಿಯಮಗಳನ್ನು ಮುರಿಯುತ್ತಾನೆ. ಅದು ದುಷ್ಪತನ (ಶಿಷ್ಟಿದ. ೩೦೩). ೨. ತುಂಟತನ: ದುಷ್ಪತನ ಮಾಡಬೇಡವಯ್ಯಾ ಎನ್ನೆ ಕಷ್ಪವೇನೆನುತಲಿ ಮುದ್ದಿಟ್ಟು ಓಡಿದ (ಪುರಂದ. ೩-೪೯-೦). [ದುಷ್ಪ + – ತನ]

ದುಷ್ಪತೆ (ನಾ). ಕೆಟ್ಟತನ: ಖಲನೆನಿತು ಪಟಿಯನಾದೊಡಮಿಲೇಶ್ವರಂಗಟಿವನೊಡರಿಕುಂ ದುಷ್ಪತೆಯಿಂ (ಪಂಡತಂ. ೦೦೬-೩೦); ಸೃಷ್ಟಿಸಮಯದೊಳಿದರ್ಕೆದು ಟೀಪ್ಪತಮೆಂದಖಿಳಜಾತಿಯೊಳ್ ಕಲ್ಪಿಸೆ ನೀಂ ದುಷ್ಪತೆ ನಿಸರ್ಗಮಾಯ್ತೆನೆ ದುಷ್ಪವಿಷೋರಗನೆ ನಿನ್ನ ಮಾಡಿದ ಮಾಟಂ (ಜಗವಿ. ೪-೦೦೨). [ಸಂ. ದುಷ್ಪತಾ]

ದುಷ್ಪನಿಗ್ರಹ (ನಾ). ೧. ನೀಚರನ್ನು ಶಿಕ್ಷಿಸುವುದು; ಕೆಟ್ಟವರನ್ನು ದಂಡಿಸುವುದು: ದುಷ್ಪನಿಗ್ರಹ ಶಿಷ್ಪಪ್ರತಿಪಾಲನದಿಂ . . . ರಾಜ್ಯವೃತ್ತಿಯನನಾಲಸ್ಯದಿಂ ಪಾಲಿಸಿದಂದು ಯಶೋಲಾಭಮುಂ . . . ಅಕ್ಕುಂ (ಪಾವುಂಪು. ೨೦೯) ; ದುಷ್ಪನಿಗ್ರಹ ಶಿಷ್ಪಪ್ರತಿಪಾಲನಾರ್ಥಮೆನ್ನವತಾರಂ (ಜಗವಿ. ೪-೮೨) ; ಕುಮಾರನಾರಸಿಂಗದಣ್ಣಾಯಕರು ಹೆಱು ಹೆಱು ಮೂನೂಱುಮಂ ದುಷ್ಪನಿಗ್ರಹ ಶಿಷ್ಪಪ್ರತಿಪಾಳನಂಗಯ್ದು (ಎಳ. XII, ಗುಬ್ಬಿ. ೧೧-೩೫ ; 1226) ; ವಿಹಿತಂ ಕ್ಷತ್ರಿಯನಂದನಂಗೆ ದಿಟಮೆಂತುಂ ನೀತಿಯೊಳ್ ದುಷ್ಪನಿಗ್ರಹ ಶಿಷ್ಪಪ್ರತಿಪಾಲನಂಗಳ್ (ಪುಷ್ಪಪು. ೫-೫). ೨. ಕೆಟ್ಟವರನ್ನು ದಂಡಿಸುವವನಂ; ದುಷ್ಪರನ್ನು ಶಿಕ್ಷಿಸುವವನು; ನೀಚರನ್ನು ನಿಗ್ರಹಿಸುವವನು: ದುಷ್ಪನಿಗ್ರಹ ಶಿಷ್ಪಪರಿಪಾಲಕ ನಮ್ಮ ಕೂಡಲಸಂಗಮದೇವ (ಬಸವ. ೫೪೪) ; ಶಿವಂ ಸರ್ವಥಾ ದುಷ್ಪನಿಗ್ರಹ ಶಿಷ್ಪಪಾಲಕಂ ನೀಂ ತಿಳಿದುಕೊಳ್ಕೆಂದನು (ಕಿಬಪು. ೪೭-೩೭).

[ದುಷ್ಪ + ನಿಗ್ರಹ]

ದುಷ್ಪ ಪರಿವಾರ (ನಾ). ಕೆಟ್ಟ ಜನರ ಸಮೂಹ; ದುಷ್ಪತನದಿಂದ ಕೂಡಿದ ಪರಿಜನ: ದುಷ್ಪಪರಿವಾರವೇಷ್ಟಿತನಪ್ಪರಸಂ ನಮಗೇನಂ ಬಗೆವನೆಂಬುದನೆಂತಱಿವೆವು (ಪಂಡತಂ. ೩೬-೩). [ದುಷ್ಪ + ಪರಿವಾರ]

ದುಷ್ಪಪಾಠ (ನಾ). (ಗ್ರಂಥಸಂಪಾದನೆಯಲ್ಲಿ) ನ್ಯಾಯಂವಾಗಿರಬೇಕಾದ ಪಾಠಕ್ಕೆ ಬದಲಾಗಿ ಇರುವ ತಪ್ಪಾದ ಪಾಠ, – ಕೆಟ್ಟಪಾಠ ೧. ಅತ್ಯುತ್ಕೃಷ್ಟವಾದ ಪಾಠಯೋಜನೆ . . . ೪. ಯಾವ ದೃಷ್ಟಿಯಿಂದಲೂ ಸಮರ್ಥಕವಾಗಿಲ್ಲದ ಅಸಹನೀಯವಾದ ಒಂದು ಪಾಠಯೋಜನೆ (Intolerable). ಇವುಗಳಲ್ಲಿ ಮೊದಲನೆಯದನ್ನು ಕವಿಪಾಠವೆಂದೇ ಸ್ವೀಕರಿಸಬಹುದು; ಕೊನೆಯದು ತುಂಬ ಹದಗೆಟ್ಟಿರುವ ದುಷ್ಪಪಾಠವೆಂದು ತಿಳಿಯಬೇಕು (ಕಸ್ನಸಂ. ೦೬೨). 'ಅಪಪಾಠ' ಪರಾ.

[ದುಷ್ಪ + ಪಾಠ]

ದುಷ್ಪಪೀಡೆ (ನಾ). ಕೆಟ್ಟ ಜನರಿಂದಾಗುವ ಬಾಧೆ,–ಉಪದ್ರವ: ಉಪಶಮಿಸುಗೆ ಸಕಲೋರ್ವಿಯೊಳುಪದ್ರವಂ ಡಿಂಬಮನಯಂಮುವಲಿಂಗಂ ಮಿಕ್ಕುವಸರ್ಗಮರಿಷ್ಟಂ ದುಷ್ಪಪೀಡೆ ಡಾಮರಮಜನ್ಮಮಿತಿವ್ರಕರಂ (ವಸು.ಕೋ. ೯೬-೦). [ದುಷ್ಪ + ಪೀಡೆ]

ದುಷ್ಪಬುದ್ಧಿ (ನಾ). ೧. ನೀಚ ಗುಣ; ಕೆಟ್ಟ ಬುದ್ಧಿ. ೨. ಚಂದ್ರಹಾಸನ ಕಥೆಯಲ್ಲಿ ಬರುವ ಒಬ್ಬ ಮಂತ್ರಿಯ ಹೆಸರು: ದುಷ್ಪಬುದ್ಧಿಯೆಂಬ ಕುಂತಳೇಂದ್ರನ ಮಂತ್ರಿ ತನ್ನ ಮನೆಯೊಳ್ವಿಪ್ರಸಂತರ್ಪಣಂಗೈಯ್ದ್ (ಕೃಮಿಭಾ. ೨೮-೨೩). [ದುಷ್ಪ + ಬುದ್ಧಿ]

ದುಷ್ಪಭಾವನೆ (ನಾ). ಕೆಟ್ಟ ಭಾವನೆ,–ಆಶಯ; ಕೆಡುಕಿನಿಂದ ಕೂಡಿದ ಆಲೋಚನೆ: ನನ್ನ ದುಷ್ಪಭಾವನೆಗಳನ್ನು ಕರಗಿಸಲು ನಿಮ್ಮ ಕಳ್ಕೀರಸವೇ ಬೇಕಾಗಿತ್ತು (ಕಂಬಹು. ೩೨). [ದುಷ್ಪ + ಭಾವನೆ]

ದುಷ್ಪಮನ (ನಾ). ೧. ಕೆಟ್ಟ ಮನಸ್ಸು. ೨. ಕೆಟ್ಟ ಮನಸ್ಸುಳ್ಳವನು: ಅಮಲಯದುವಂಶನಿರೆ ದುಷ್ಪ ವಂ ನ ಮಹಾವಂಶನೆಂದೂ ನೀನೇತಱಿನಗ್ಗವೊ ಕಲ್ಪವೃಕ್ಷವಿರೆ ಕಳ್ಳಿ ಮಹಾವೃಕ್ಷಂ ಗಡನಿತಱಿಂದದು ಪಿರಿದೇ (ಜಗವಿ. ೧೬-೩೮). [ದುಷ್ಪ + ಮನ[1]]

ದುಷ್ಪಮರ್ದನ (ನಾ). ಕೆಟ್ಟವರನ್ನು ನಾಶಮಾಡುವವನು: ದುರಿತದಲ್ಲಣ ದುಷ್ಪಮರ್ದನ ವರಮಸುಖದಿಂದತ್ತಲಿರೆ (ಕಾತಿಕಾ. ೩೮-೦).

[ದುಷ್ಪ + ಮರ್ದನ]

ದುಷ್ಪಮೃಗ (ನಾ). ಕಾಡುಪ್ರಾಣಿ; ಕ್ರೂರ ಮೃಗ: ದುಷ್ಪಮೃಗ ನಿರಾಕರಣೋಪಾಯಮನಱಿಪಿದಾತನಿಂ ಬಱಿಯಂ ಸೀಮಂಕರನೆಂಬೊನಯ್ದನೆಯ ಕುಲಧರಂ . . . ಕಮಳಪ್ರಮಾಣಾಯುಷ್ಯನುಮಾಗಿ (ಪಾವುಂಪು. ೦೦); ದುಷ್ಪಮೃಗಸಮಿತಿ ನೋಡಲವಪ್ಪಂಭಿಸಿ ಮೆಚ್ಚರೀರವಮಾಂಸಾಶನದಿಂ ತುಷ್ಟಿಯನೆಯ್ದುವುದು (ನಳಪಂ. ೫೪೮) ; ನನ್ನಂ ವ್ಯಾಘ್ರ ಮೊದಲಾದ ದುಷ್ಪಮೃಗಗಳು ಅವೇಕ್ಷಿಸುತ್ತಲಿವೆಯಾದ ಕಾರಣ (ಜಗವಿ. ೧೦೯ ಉಠಾಕ).

[ದುಷ್ಪ + ಮೃಗ]

ದುಷ್ಟವಚನ (ನಾ). ಕೆಟ್ಟಮಾತು ; ಕೆಡುನುಡಿ : ಮತ್ತಂ . . . ಹಲಂಬರೊಂದಾಗಿ ಗಳಬಳಿಸುವ ಪಾರಿಪ್ಲವಮುಮಸಂಯಮಮುಂ ದುಷ್ಟವಚನಮುಮೆಂದಿವಂ ಭೋಜನಕಾಲದೊಳು ವರ್ಜಿಸುವುದು (ಪಸಾರ. ೩೦೯). [ದುಷ್ಟ + ವಚನ]

ದುಷ್ಟವನಿತೆ (ನಾ). ಕೆಟ್ಟ ಹೆಂಗಸು ; ದುಷ್ಟಳಾದ ಸ್ತ್ರೀ ; ಕುಲಟೆ : ಹಲಸಿಯ ತಾಮ್ರಶಾಸನದಲ್ಲಿ ಶಾಂತಿವರವರ್ಮನು ದುಷ್ಟವನಿತೆಯಂತೆ ಶತ್ರುಗೃಹದಲ್ಲಿ ಅಡಗಿದ್ದ ರಾಜ್ಯಲಕ್ಷ್ಮಿಯನ್ನು ಸೆಳೆದು ತಂದನೆಂದು ಬರೆದಿದೆ (ಕರ್ಣಾಅ. ೨೪). [ದುಷ್ಟ + ವನಿತೆ]

ದುಷ್ಟವಾಸನೆ (ನಾ). ಕೆಟ್ಟ ಬಯಕೆ ; ದುಷ್ಟ ಆಸೆ : ಆ ದುಷ್ಟವಾಸನೆಗಳಿಂದಲೆ ಪ್ರೇರಿತರಾಗಿ ಇಂದು ಅವರು ನೆಲ್ಲುಹಳ್ಳಿಗೆ ಬಂದಿದ್ದರು (ಕಾನೂರು. ೪೩೦). [ದುಷ್ಟ + ವಾಸನೆ]

ದುಷ್ಟವಿಧಿ (ನಾ). ಕೆಟ್ಟ ವಿಧಿ ; ದುರ್ವಿಧಿ : ದುಷ್ಟವಿಧಿಯು ನರಕವನ್ನು ಮನುಷ್ಯಾಕಾರದಲ್ಲಿ ಸೃಷ್ಟಿಸಿ, ಅದಕ್ಕೆ ಹೆಣ್ಣು ಎಂದು ಹೆಸರಿಟ್ಟನೋ ! (ಸುಗುಗಂ. ೭೦-೦೪). [ದುಷ್ಟ + ವಿಧಿ]

ದುಷ್ಟವ್ರಣ (ನಾ). ಕೆಟ್ಟ ಹುಣ್ಣು ; ದುರ್ವ್ರಣ : ಏಲಕ್ಕಿ, ಚಿತ್ರಮೂಲ, ಗರುಗ, ಎಕ್ಕ, ಕೊಡಸಿಗೆಯ ತಿಗಡು, ಇವುಗಳ ಕಷಾಯದೊಳು . . . ಎಣ್ಣೆಯನ್ನರೆದು ತೈಲವನಟ್ಟು ಪೂಸಿದರೆ . . . ತೊನ್ನು ಮುಂತಾದ ದುಷ್ಟವ್ರಣಗಳು, ಕರಕು, ಇವೆಲ್ಲವನ್ನೂ ಕೆಡಿಸುಗುಂ (ವಿವೈವಿ. ೦೫೯) ; ಪಂಚವಿಂಶತಿಗುಗ್ಗುಳಚೂರ್ಣಂ . . . ತೆಗೆದುಕೊಳ್ಳಲು ಕಾಸ, ಶ್ವಾಸ . . . ಜ್ವರ, ದುಷ್ಟವ್ರಣ, ಕುಷ್ಠ, ಎಂಬತ್ತು ವಿಧ ವಾತಗಳೂ ಸಹ ಮಾಣುವುವು (ಸಕವೈ. ೪೩೭). [ದುಷ್ಟ + ವ್ರಣ]

ದುಷ್ಟಶಿಕ್ಷ (ನಾ). ಕೆಟ್ಟವರನ್ನು ದಂಡಿಸುವವನು, – ಶಿಕ್ಷಿಸುವವನು : ದುಷ್ಟಶಿಕ್ಷನ ಸುಜನರಕ್ಷಕನ ರಾಯರಾಮನ . . . ತೊರವೆಯ ರಾಯನನು ಕರೆಕರೆದು ಮೊಱೆಯಿಡುತಿರ್ದಳಾ ಸೀತೆ (ತೊರರಾ. ೩-೯-೪೩).

[ಸಂ.]

ದುಷ್ಟಶಿಕ್ಷಕ (ನಾ). = ದುಷ್ಟಶಿಕ್ಷ : ದುಷ್ಟಶಿಕ್ಷಕನಾದ ನೀನು ತಾನೇ ಇದನ್ನು ಅಟ್ಟುವುದಕ್ಕೆ ಸಮರ್ಥನು (ಶಾಕುಂತ. ೯೦-೦೯). [ದುಷ್ಟ + ಶಿಕ್ಷಕ]

ದುಷ್ಟಶಿಕ್ಷಣ (ನಾ). ಕೆಟ್ಟವರನ್ನು ಶಿಕ್ಷಿಸುವುದು : ದುಷ್ಟಶಿಕ್ಷಣ ದೀಕ್ಷಿತರ ರಾಮಲಕ್ಷ್ಮಣರ ಕೋದಂಡಠಂಕಾರಮಂತ್ರಚಿಚ್ಛಕ್ತಿಯ ಶರಾಘಾತಕಳಿದನ್ ಸುಬಾಹು (ಶ್ರೀರಾಮಾ. ೩೫-೦೮೯) ; ನಾವು . . . ದುಷ್ಟಶಿಕ್ಷಣ, ಶಿಷ್ಟರಕ್ಷಣೆಯ ವ್ರತ ತೊಟ್ಟವರು (ರಾಜ್ಯೋದ. ೦೩೮). [ದುಷ್ಟ + ಶಿಕ್ಷಣ]

ದುಷ್ಟಶಿಕ್ಷೆ (ನಾ). = ದುಷ್ಟಶಿಕ್ಷಣ : ರಾಜ್ಯವಾಳುವವರಿಗೆ ದುಷ್ಟಶಿಕ್ಷೆ, ಶಿಷ್ಟರಕ್ಷೆ ಇವೆರಡೂ ಗುಣಗಳಾಗಿರಬೇಕು (ರೂಢಿ). [ದುಷ್ಟ + ಶಿಕ್ಷೆ]

ದುಷ್ಟಸಂಗತಿ (ನಾ). ಕೆಟ್ಟ ಸಹವಾಸ : ದಾನಮಿತ್ರನು ರಾಜ್ಯವ ಬಿಟ್ಟು ದುಷ್ಟಸಂಗತಿಯಲ್ಲಿರಬಾರದೆಂದು ವನಕ್ಕೆ ಪೋದವನಾಗಲು (ಅರ್ಕಮಾ. ೯೩).

[ದುಷ್ಟ + ಸಂಗತಿ]

ದುಷ್ಟಾತ್ಮ (ನಾ). ದುರ್ಜನ ; ಕೆಡುಕ : ದುಷ್ಟಾತ್ಮರಂ . . . ಕೆಟ್ಟ ಭೂವರರಂ ಬಣ್ಣಿಪರೇಕೆ ಮೂಢಕವಿಗಳ್ (ಹಮ್ಮೀರ. ೦-೨೬).

[ಸಂ. ದುಷ್ಟಾತ್ಮನ್]

ದುಷ್ಟಾತ್ಮಕ (ನಾ). ಕೆಟ್ಟ ಸ್ವಭಾವದವನು ; ನೀಚ : "ಖಳನುಗ್ರಂ ಪಾಪಿ ದುಷ್ಟಾತ್ಮಕ(ನವನೆ) ಶಠಂ ದುರ್ಜನಂ ತಾನನಾರ್ಯಂ" (ವಸ್ತುಕೋ. ೦೦೦-೦೦). [ಸಂ.]

ದುಷ್ಟಾನುಕೂಲ (ನಾ). ಕೆಟ್ಟಕೆಲಸ ಮಾಡುವವನಿಗೆ ಸಹಾಯವನ್ನೊದಗಿಸುವವನು : ದುಷ್ಕಾರ್ಯದಲ್ಲಿ ಅಥವಾ ದುಷ್ಕಾರ್ಯ ಮಾಡುವವನಿಗೆ ನೆರವಾಗು, ಒತ್ತಾಸೆ ಕೊಡು ಅಥವಾ ಒಪ್ಪಿಗೆ ಕೊಡು ; ದುಷ್ಟಾನುಕೂಲನಾಗು (Abet. ಇಂಕನಿ). [ದುಷ್ಟ + ಅನುಕೂಲ]

ದುಷ್ಟಾನುಮಾನ (ನಾ). [ನ್ಯಾಯ] ಸುಳ್ಳನ್ನು ನಿಜದಂತೆ ಹೇಳುವ ರೀತಿ ; ಅಸತ್ಯವನ್ನು ಸತ್ಯದಂತೆ ನಿರೂಪಿಸುವುದು ; P ಸರಿಯಾದ ಹೇತು ಮೊದಲಾದುವನ್ನು ಹೇಳದೆ, ಅತಿವ್ಯಾಪ್ತಿ, ಅವ್ಯಾಪ್ತಿ ಮೊದಲಾದ ದೋಷಗಳಿಂದ ಕೂಡಿ ಮಾಡುವ ಅನುಮಾನ ಪ್ರಮಾಣ ; ಸಲ್ಲದ ಹೇತುವಿನಿಂದ ಸಾಧ್ಯವನ್ನು ಸಾಧಿಸಲು ಹೊರಡುವುದು : ನಾವು ಕಾಲಿಬನ್, ರಾವಣಾದಿಗಳನ್ನು ಅಂಗೀಕರಿಸುತ್ತೇವೆ. ಅವರಂತಿರುವ ವ್ಯಕ್ತಿಗಳಿರುವುದು ಸಾಧ್ಯವೇ ಎಂದು ಕೂಡ ಯೋಚಿಸುವುದಿಲ್ಲ. ಏಕೆಂದರೆ ಕವಿಯು ಉಪಯೋಗಿಸಿರುವ ದುಷ್ಟಾನುಮಾನದ ಕೌಶಲದಿಂದ ಅವರು "ಸಾಧ್ಯ" ವಾಗಿ ತೋರುತ್ತಾರೆ (ಅರಿಕಾ. ೦೨೯) ; ಸುಳ್ಳುಸಂಗತಿಗಳನ್ನು ಸೂಕ್ತರೀತಿಯಲ್ಲಿ ಹೇಳುವ ಕೌಶಲವನ್ನು ಬೇರೆ ಎಲ್ಲರಿಗಿಂತಲೂ ಹೆಚ್ಚಾಗಿ ಹೋಮರನು ನಮಗೆ ಕಲಿಸಿದ್ದಾನೆ. ಎಂದರೆ ದುಷ್ಟಾನುಮಾನದ (Paralogism) ಪ್ರಯೋಗವನ್ನು ಎಂದು ನನ್ನ ಅರ್ಥ (ಅರಿಕಾ. ೦೩೫). [ದುಷ್ಟ + ಅನುಮಾನ]

ದುಷ್ಟಾನ್ನ (ನಾ). ೧. ಕೆಟ್ಟವನು ಕೊಟ್ಟ ಆಹಾರ : ಇದೆಲ್ಲಾ ದುಷ್ಟಾನ್ನ ; ಆದ್ದರಿಂದ ತಿನ್ನಲು ಯೋಗ್ಯವಲ್ಲ (ವಚಭಾ. ೨೫೦). ೨. ದೋಷಪೂರ್ಣವಾದ ಆಹಾರ ; ಅಯೋಗ್ಯವಾದ ಆಹಾರ. [ದುಷ್ಟ + ಅನ್ನ]

ದುಷ್ಟಾಭಿರುಚಿ (ನಾ). ಹೀನವಾದುದರಲ್ಲಿ ಸ್ವಾರಸ್ಯವನ್ನು ಕಾಣುವುದು ; ಕೀಳಾದುದರಲ್ಲಿ ಆಸಕ್ತಿ ; ಉತ್ತಮವಾದ ಮಟ್ಟವನ್ನು ಮುಟ್ಟಿರದ ಅಭಿರುಚಿ : ಸಾಹಿತ್ಯವಿಮರ್ಶೆಯಲ್ಲಿನ ದೋಷವೊಂದು ಪರಿಮಿತಾಭಿರುಚಿಯಿಂದಾಗಲೀ ಅಥವಾ ದುಷ್ಟಾಭಿರುಚಿಯಿಂದಾಗಲೀ ಒದಗಬಹುದು . . . ನವ್ಯಕಾವ್ಯಪ್ರೇಮಿಗಳು ಪ್ರಚಲಿತ ನವ್ಯಕಾವ್ಯಗಳಲ್ಲಿಯೇ ಉತ್ತಮಗುಣದವುಗಳ ಬದಲು ಹೀನಗುಣದವನ್ನು ಮೆಚ್ಚಿದರೆ ಅಲ್ಲಿನ ದೋಷ ದುಷ್ಟಾಭಿರುಚಿಯದು (ಅರಿಕಾ. ೪೭) ;

[ದುಷ್ಟ + ಅಭಿರುಚಿ]

ದುಷ್ಟಾರ್ದನ (ನಾ). = ದುಷ್ಟಮರ್ದನ : ಶಿಷ್ಟಾಪಾಲ ದುಷ್ಟಾರ್ದನಂ . . . ಜಯತು ನಿತ್ಯಾನಂದಮೌನೀಂದ್ರ ಹೃದ್ಧಾಮಂ (ಹಮ್ಮೀರ. ೦-೧).

[ಸಂ.]

ದುಷ್ಟಾಲೋಚನೆ (ನಾ). ಕೆಟ್ಟ ಆಲೋಚನೆ, – ವಿಚಾರ : ಅವನ ಮನಸ್ಸು ದುಷ್ಟಾಲೋಚನೆಗಳ ನರಕವಾಗಿತ್ತು (ಪುನರು. ೩೮೩).

[ದುಷ್ಟ + ಆಲೋಚನೆ]

ದುಷ್ಟಾಶ್ವ (ನಾ). ತುಂಟ ಕುದುರೆ ; ಪಳಗದ ಅಶ್ವ ; ಅಗಡು ಕುದುರೆ : "ಸೂಕಳಾಹ್ವಯಂ ದುಷ್ಟಾಶ್ವಂ" (ವಸ್ತುಕೋ. ೮೬-೨೫) ; ಜಯಲಕ್ಷ್ಮೀಕಾನ್ತಂ ದುಷ್ಟಾಶ್ವಚಯಕಿದಾನೆನ್ತನರೇವನ್ತಂ ವಿದ್ವಿಟ್‌ನ್ರಿಪತಿಕ್ರಿತಾನ್ತಂ ಸುಖದಿನ್ದವಿಂಟ್ಟು ಜಯಕೇಶಿನ್ರಿಪಂ (ಸೌಇಇ. XX, ೪೭-೨೬ ; 1074).

[ದುಷ್ಟ + ಅಶ್ವ]

ದುಷ್ಟು (ನಾ). ದುಷ್ಟತನ : ನೀನತಿಧೂರ್ತನೆ ದುಷ್ಟಿಂದೇನಾನುಮನೆನ್ನ ಮುಂದೆ ಮುನಿಪುಂಗವನಂ ಹೀನವಚನಂಗಳಿಂದಭಿಮಾನಂಗಿಡೆ ನುಡಿದೆಯಾದೊಡೆ (ಧರ್ಮಾಮೃ. ೯-೧೩೪).

ದುಷ್ಟ ಮಾಡು = ಕೆಟ್ಟ ಕೆಲಸವನ್ನು ಮಾಡು ; ದುಷ್ಟತನವನ್ನು ತೋರು : ದುಷ್ಟ ದುಶ್ಶಾಸನನು ತನ್ನ ನಾಚಿಕೆಯ ಕೊಳ್ವನೆಂದು ದುಷ್ಟ ಮಾಡುವನು ಎಂದು ಬಳಲಿ ದ್ರೌಪದಿ . . . ಸಭೆಗೆ ನಡೆದಳು (ಜಗೀತೆ. ೪೩). [ದುಷ್ಟ + – ಉ]

ದುಷ್ಟೆ (ನಾ). ೧. = ದುಷ್ಟವನಿತೆ : ದುರ್ಮತಿ ದುಷ್ಟೆ . . . ದುರಾತ್ಮೆಯಪ್ಪ ವಧು ಸಜ್ಜನಮೇ (ಮದತಿ. ೮-೭) ; ಅವಳಂತಹ ದುಷ್ಟೆ ಇರಲಾರಳು ಎಂದೇ ಅನಿಸಿತು (ಕುಡಿಕೂ. ೨೫೩). ೨. ಸೂಳೆ ; ವೇಶ್ಯೆ.

[ಸಂ. ದುಷ್ಟಾ]

ದುಷ್ಕೋರಗ (ನಾ). ಕೆಟ್ಟ ಹಾವು ; ಕ್ರೂರ ಸರ್ಪ : ದುಷ್ಕೋರಗನಂ ತಗುಳ್ದೆಂ ಶಿಷ್ಟಜನಂ ಸೇವಿಪಂತು ಮಾಡುವೆನಿದನುತ್ಕೃಷ್ಟಮೆನೆ ದುಷ್ಟ ನಿಗ್ರಹ ಶಿಷ್ಟಪ್ರತಿಪಾಲನಾರ್ಥವೆಂಬ್ಮವತಾರಂ (ಜಗವಿ. ೩-೮೩).

[ದುಷ್ಟ + ಉರಗ]

ದುಷ್ಕೃ (ಗು). ೧. ಕಷ್ಟದ ದೆಸೆಯಲ್ಲಿರುವ ; ಕೆಟ್ಟ ಸ್ಥಿತಿಯಲ್ಲಿರುವ. ೨. ಕೆಟ್ಟ ; ದುಷ್ಟತನದ. ೩. ತಪ್ಪಾದ ; ಸರಿಯಲ್ಲದ. 'ಸುಷ್ಕೃ' ಪರಾ. [ಸಂ.]

ದುಷ್ಪಕ್ವ (ನಾ). ಸರಿಯಾಗಿ ಬೆಂದಿಲ್ಲದಿರುವುದು : ಅಪಕ್ವಂ ಅತಿಪಕ್ವಂ ದುಷ್ಪಕ್ವ . . . ಎಂದಿವು ದ್ರವ್ಯವಿಶೇಷಂಗಳು (ಪಸಾರ. ೩೧೫). [ಸಂ.]

ದುಷ್ಪತ್ರ (ನಾ). ಒಂದು ಬಗೆಯ ಪರಿವಂಳದ ಸಸ್ಯ ; ಕರಿಯ ಕಟೋರ : "ರಾಕ್ಷಸೀ, ಚಂಡಾ, ಧನಹರೀ, ಕ್ಷೀಮಃ, ದುಷ್ಪತಃ, ಗಣ ಹಾಸಕಃ – ೬ ಕರೀಕಟೋರ" (ಸಿದ್ಧಾಂತ. ೧೪೦). [ಸಂ.]

ದುಷ್ಪರಿಣತಿ (ನಾ). ಕೆಟ್ಟ ಫಲ,–ಪರಿಣಾಮ : ಜಾನಕಿ ಮೂರ್ಧತೆಯಾಗೆ ದಶಾನನನನುಕಂಪೆ ಪುಟ್ಟಿ ಕರಂಣಿಸಿ ತನ್ನಂ ತಾನೆ ಪಟಿದುಬಿದು ಕರ್ಮಾ ಧೀನಸಮುತ್ಪನ್ನದುರಘದುಷ್ಪರಿಣತಿಯಂ (ಪಂರಾಮಾ. ೦೪-೦೦೦). [ಸಂ.]

ದುಷ್ಪರಿಣಾಮ (ನಾ). ೧. ಕಷ್ಟ ; ತೊಂದರೆ. ೨. ಕೆಟ್ಟ ಪ್ರಭಾವ : 'ಎ' ಜೀವಾತು ಸಾಕಷ್ಟು ಪ್ರಮಾಣದಲ್ಲಿ ಇಲ್ಲವಾದರೆ ಚರ್ಮ ಮತ್ತು ಕಣ್ಣುಗಳ ಮೇಲೆ ದುಷ್ಪರಿಣಾಮಂಗಳಾಗಬಹುದು (ಆಡುಸಾ. ೬೦) ; ಮಕ್ಕಳ ಎಳೆಯ ವಯಸ್ಸಿನಲ್ಲಿ ಅಂಥ ಚರಿತ್ರೆಯಂ ಬೋಧನೆಯಿಂದ ಮುಂದಿನ ಜನಾಂಗದ ಮೇಲೆ ಆಗುವ ದುಷ್ಪರಿಣಾಮ ಅಷ್ಟಿಷ್ಟಲ್ಲ (ಶಿಕ್ಷದ. ೩೬೭). ೩. ಕೆಟ್ಟ ಫಲ,–ಫಲಿತಾಂಶ. ೪. ಕೆಟ್ಟ ಆಲೋಚನೆ : ಪೆಜ ತೇನುಮಂ ಬಗೆಯದೆ ನಳಕೂಬರನೊಳ್ ಕೂಡಿ ಸುಖಮಿರೆಂದಾಕೆಯ ದುಷ್ಪರಿಣಾಮಂಮಂ ಪತ್ತುವಿಡಿಸಿ (ಪಂರಾಮಾ. ೦೦–೦೫ ವ). [ಸಂ.]

ದುಷ್ಪುತ್ರ (ನಾ). ಕೆಟ್ಟ ವಂಗ; ದುಷ್ಟನಾದ ಮಗ: ಈ ಪಾಪಕರ್ಮನಪ್ಪ ದುಷ್ಪುತ್ರನಿಂ ನಿನಗಿಂತಪ್ಪ ದುರ್ಮರಣಂ ಸಮನಿಸಿದುದು (ಪಂಚತಂ. ೦೭೪-೧). [ಸಂ.]

ದುಷ್ಪ್ರತಿಕಾರ (ಗು). ಎದಂರಿಸಲಂ ಅಸಾಧ್ಯವಾದ: ಆರು ನಿಲಿಸುವರಕಟ ದುಷ್ಪತಿಕಾರ ಶರವಿದು (ಕುವಾಶ. ೨೫-೨೫). [ಸಂ.]

ದುಷ್ಪ್ರತೀತಿ (ನಾ). ೧. ಕೆಟ್ಟ ಹೆಸರು ; ಅಪಯಶಸ್ಸು ; ಅಪಕೀರ್ತಿ. ೨. ಕೆಟ್ಟ ಅಥವಾ ಅಶ್ಲೀಲವಾದ ಅರ್ಥ : ಎರಡು ಪದಂಗಳ ನಡುವೆ ಬೇಱೊಂದು ದುಷ್ಪತೀತಿ ಪುಟ್ಟುವೊಡೆ ಸಂಧಿಯಂ ಮಾಡಲಾಗದು (ಶಮದ. ೬೨ ವೃತ್ತಿ). [ಸಂ.]

ದುಷ್ಪ್ರಭಾವ (ನಾ). ಕೆಟ್ಟ ಪ್ರೇರಣೆ ; ದುಷ್ಪವರ್ಚಸ್ಸು : ದುಷ್ಪಭಾವ ನಿರುದ್ಯೋಗಗಳಿಂದ ಮೊದಲೇ ದಾರಿ ತಪ್ಪಿದ ವ್ಯಕ್ತಿಯನ್ನು ಜೈಲಿಗೆ ನೂಕುವುದರಲ್ಲೇನು ಅರ್ಥವಿದೆ ? (ಪುನರು. ೪೨೯) ; ಗ್ರೀಕರ ಅಪೂರ್ಣ ಜ್ಞಾನದ ಮತಕ್ಕೆ ಸಂಕುಚಿತ ಮನೋವೃತ್ತಿಯ ದುಷ್ಪಭಾವ ನಿಜವಾದ ತತ್ವಜ್ಞಾನದ ಮುನ್ನಡೆಗೆ ತಡೆಯಾಯಿತು (ಹುಳ್ಳಾರ. ೬ ಟೀಕೆ). [ಸಂ.]

ದುಷ್ಪ್ರವೃತ್ತಿ (ನಾ). ಕೆಟ್ಟ ಸ್ವಭಾವ; ನೀಚ ನಡವಳಿಕೆ : ಹೀಗೆ ಸತ್ಪವೃತ್ತಿ ಮತ್ತು ದುಷ್ಪವೃತ್ತಿಗಳ ಸಂಘರ್ಷದ ಮಧ್ಯೆ ಮಹಾಭಾರತದಲ್ಲಿ ಇನ್ನೊಂದು ಭಾಗವತತತ್ವವನ್ನವಲಂಬಿಸಿದ ಭಾವನಾಪರಂಪರೆಯೂ ಬೆಳೆದು ಬಂದಿದೆ (ಭಾರದ. ೯೪) ; ಅಂದಿನ ಕಾಲಮಾನಕ್ಕನುಸರಿಸಿ, ಸುತ್ತಣ ಸನ್ನಿವೇಶದ ಆಘಾತದಿಂದ ಮನಸ್ಸು ದುಷ್ಪವೃತ್ತಿಗಿಳಿದರೆ ? (ಚಿತಶ. ೭೦). [ಸಂ.]

ದುಷ್ಪ್ರವೇಶ್ಯ (ನಾ). ಒಳಗೆ ಹೋಗಲು ಅಶಕ್ಯವಾದುದು ; ಪ್ರವೇಶಿಸಲು ಕಷ್ಟವಾದುದು : ಉದಗ್ರತರುಗಹನದುಷ್ಪವೇಶ{ಶ್ಯ}ಮಪ್ಪ ವನದುರ್ಗದುನ್ನತಿಯಂಮನೊಳಕೊಂಡು (ಆದಿಪು. ೦೩-೫೭ ವ) ; ಆದರೆ ಅಂತಃಪುರ ಇನ್ನು ದುಷ್ಪವೇಶ್ಯವಾಗಿಯೇ ಇತ್ತು (ಸಗಹೊ. ೨೨೮).

ದುಷ್ಪ್ರಶ್ನೆ (ನಾ). ಅಸಂಬದ್ಧವಾದ ಪ್ರಶ್ನೆ: ಎಲ್ಲಿಯದು ದುಷ್ಪಶ್ನೆ ವಜಂ ಮಾತೆಲ್ಲಿಯದು (ಕುವಾಸ. ೦೪-೬೫). [ಸಂ. ದುಷ್ಪಶ್ನ]

ದುಷ್ಪ್ರಾಪ (ಗು). ಹೊಂದಲು ಅಶಕ್ಯವಾದ,–ಕಷ್ಟಸಾಧ್ಯವಾದ : ತಳ್ಳು ಕಾದಿದನಾದಂ . . . ಪದ್ಮರಾಜನರಿದುಷ್ಪ್ರಾಪವ್ರತಾಪೋದಯಂ (ಪದ್ಮರಾ. ೩-೦೪). [ಸಂ.]

ದುಷ್ಪ್ರಾಪ್ಯ (ನಾ). ಪಡೆಯಲು ಅಸಾಧ್ಯವಾದುದಂದಂ ; ಹೊಂದಲು ಅಶಕ್ಯವಾದುದಂದಂ : ಹೃದಯದೊಳಗಿದ್ದೇನು ಫಲ ದುರ್ಹೃದಯರಿಗೆ ದುಷ್ಪ್ರಾಪ್ಯವಲ್ಲಾ ಪದವಿದವಳಾತ್ಮರಿಗೆ ತೋರ್ಪುದು ವಿಶ್ವವಯವಾಗಿ (ನಿಧಾಗ. ೩-೫-೪೩). [ಸಂ.]

ದುಷ್ಪ್ರಾರಬ್ಧ (ನಾ). ಕೆಟ್ಟ ಹಣೆಯ ಬರಹ; ದಂರದೃಷ್ಟ ; ದಂರ್ದೈವ : ಮಱೆದೆನಾಗಳ ವಿಗಡವಿಧಿಯೆಚ್ಚಱಿಸಿದರೆ ಹರಿಭಕ್ತಿಮುಖದಲಿ ಮುಱಿದುದೆ ಮ್ಯಯ ಪೂರ್ವದುಷ್ಪ್ರಾರಬ್ಧ ಕರ್ಮಫಲ (ಕುವಾಸ. ೦೩-೬೫). [ಸಂ.]

ದುಷ್ಪ್ರೇಕ್ಷ (ಗು). ೧. ನೋಡಲು ಕಷ್ಟವಾದ ; ಕಣ್ಣು ಕೋರೈಸುವ. (ನಾ). ೨. ನೋಡಲಂ ಭಯಂಕರನಾದವನು: ಯಮ ಸಮಕಕ್ಷನೆನಿಪ ದುಷ್ಪ್ರೇಕ್ಷನುಂ ರಿಪುಘಟಾವಿಘಟನಮ್ಯಗೇಂದ್ರಂ . . . ಪ್ರಿಯ ವಿಗ್ರಹನುಂ ಮೊದಲಾಗೆ ಸಿಂಹರಥವಂನೇಱಿ ಸಂಗರಾಂಗಣಕ್ಕೆ ನಡೆದರ್ (ಪಂರಾಮಾ. ೦೩-೩೯ ವ). [ಸಂ.]

ದುಷ್ಪ್ರೇರಣೆ (ನಾ). ಕೆಟ್ಟ ಪ್ರೇರಣೆ,–ಉತ್ತೇಜನ: ಸಂಚಿತ ಪೂರ್ವಕರ್ಮ ದುಷ್ಪ್ರೇರಣೆ ನೇರಿತಂ ನಡೆಯಲೀಗುಮೆ (ಪಂರಾಮಾ. ೦೦-೦೭೬).

[ಸಂ. ದುಷ್ಪ್ರೇರಣಾ]

ದುಷ್ಫಲ (ನಾ). ಕೆಟ್ಟ ಫಲ,–ಫಲಿತಾಂಶ ; ದಂಪ್ಪರಿಣಾಮಂ. [ಸಂ.]

ದುಷ್ಮನ್, ದಂಷ್ಮಾನ್, ದುಷ್ಮಾನ, ದಂಸಂಮಾನ, ದುಸ್ಮಾನ (ನಾ). ಹಗೆ ; ವೈರಿ; ಶತ್ರು: ದುಷ್ಮನ್ ಸತ್ರ ; ಮಹಾರಾಜ ನಮ್ಮ ವೈರಿಯಾದ ಔರಂಗಜೇಬ ಬಾದಶಹ ಮಡಿದ (ಹಂಸಾ. ೦೭೭). **ದುಷ್ಮಾನ್ :** ಕಂಪನಿ ಸರಕಾರದ ಜಯಪ್ರದದ ಲಷ್ಮರಂ ದೊಡ್ಡ ದುಷ್ಮಾನ್ ಟೀಪುಸುಲ್ತಾನರ ಸಂಗಡ ಲಡಾಯ ಮಾಡುವ ಬಗ್ಗೆ ಇದೇ ಕೊಡಗಿನ ಸೀಮೆಯ ಮಾರ್ಗವಾಗಿ ಬರುತ್ತಾ ಇದೆ (ಕಾಚೇಂದ್ರ. ೬೮) : ಬನ್ನೂರೇನು, ದುಷ್ಮಾನ್ ಪಾಳ್ಯಪಟ್ಟೇ ? (ಕಲಸಾ. ೩೦೦). **ದುಷ್ಮಾನ :** ಫುಟ್ಟ ಇಳಿದು ಹೋಗುವ ಮಾರ್ಗಗಳ ಕಟ್ಟಿ, ದುಷ್ಮಾನನ ಲಷ್ಮರಿನ ಸಂಗಡ ಲಡಾಯ ಮಾಡುವ ಬಗ್ಗೆ ದಾರಿ ನೋಡುತ್ತ ಇದ್ದಲ್ಲಿ (ಕಾಚೇಂದ್ರ. ೪೦) ; ಎರಡು ಜನ ದುಷ್ಮಾನರು ಬಂದಲ್ಲಿ, ಪಹರೆದವರು ಆಟಕಾಯಿಸಂವಾಗ್ಗೆ, ದುಷ್ಮಾನರು ಪಹರೆದವರ ಮೇಲೆ ಗುಂಡು ಹಾರಿಸಿದಲ್ಲಿ, ಒಂದು ಗುಂಡು ಹಾರಿ . . . ಗೋಡೆಗೆ ಬಡೀತು (ಕಾಚೇಂದ್ರ. ೨೭೭); ನಾನಂ ಹಿಂದೆ ಹೇಳಿದ್ದನ್ನು ಈಗ ನನಗೇ ತಿರುಗಿ ಒಪ್ಪಿಸುತ್ತೀಯಾ ದುಷ್ಮಾನ ? (ಮೂಕುದಾ. ೪೯). **ದುಸುಮಾನ :** ಮಗನಿಗೆ ಪತ್ರ ಬರೆದಾನಪ್ಪ ತಂದೆ ದುಸುಮಾನಾ (ನಾಪದ. ೩೯) ; ಬಸವನೇರಿ ಮೇಲೆ ಬಸುಮವ ಹುಯಿಕೊಂಡು ಸಸಿಮಾವಿ ನೊಳಗೆ ಬರುವೋರು ನಂಜಪ್ಪಗೆ ದುಸುಮಾನರೆಲ್ಲ ಅರುಗಾಗಿ (ನಾಪದ. ೦೦೨). **ದುಸ್ಮಾನ :** ಅಶ್ವಪತಿ ಗಜಪತಿಯು ವಿಶ್ವನುತ ಹಂಪೆಯಲಿ ದುಸ್ಮಾನರೊಡನೆ ಹೊಡೆದಾಡೆ (ಸರ್ವಜ್ಞ. ೦೦೭೩) ; ಹಸುವುಗಳನೊಯ್ದು ಮುದುಕಾಗ ಕೊಟ್ಟಾರ ದುಸ್ಮಾನರವರು ತವರವರು (ಗರತಿ. ೭೫).

[←ಪಾರ. ಹಿಂ. ದುಶ್ಮನ್ ; ಮರಾ. ದುಶಮನ್, ದುಶ್ಮನ್, ದುಸ್ಮನ್, ದುಸ್ಮಾನ್]

ದುಷ್ಮಾನ್ 'ದಂಷ್ಮನ್' ನೋ.

ದುಷ್ಮಾನ 'ದಂಷ್ಮನ್' ನೋ.

ದುಷ್ಟಮ (ಗು). ೧. ವಿಷಮ ; ವ್ಯತ್ಯಾಸ ಹೊಂದುವ. ೨. ಸರಿಯಲ್ಲದ; ತಪ್ಪಾದ. ೩. ಕೆಟ್ಟದಾದ ; ನೀಚವಾದ. 'ದಂಷ್ಟಮಂಗತಿ'

ಪರಾ. (ನಾ). ೪. = ದುಷಮ : ಉತ್ಸರ್ಪಿಣಿಯವಸರ್ಪಿಣಿ ನಾಮಮಂ ಪಡೆದುದದೊಂದು ಪತ್ತುಕೋಟಿಕೋಟಿಸಾಗರೋಪಮ ಸಂಖ್ಯೆಯಂ ತಾಳ್ದಿ ಸುಷಮಸುಷಮಂ ಸುಷಮಂ ಸುಷಮ ದುಷ್ಷಮಂ ದುಷ್ಷಮ ಸುಷಮಂ ದುಷ್ಷಮಮತಿದುಷ್ಷಮಮೆಂದೊಂದೊಂದು ಷಡ್ಭೇದ ಭಿನ್ನಮಾದುದಲ್ಲಿ (ಆದಿಪು. ೬-೪೮ ಪ) ; ಅನುಸಂಧಾನಂಗಿಡದೈದನೆಯದು ದುಷ್ಷಮಮೆನಿಪ್ಪ ಕಾಲಂ ಬಳಿಕಾಱನೆಯದತಿದುಷ್ಷಮಂ(ಪಂರಾಮಾ. ೦-೫೭). 'ಸುಷಮ' ಪರಾ. [ಸಂ.]

ದುಷ್ಷಮಕಾಲ (ನಾ). = ದುಷಮ : ಮುಸುಱಿದ ಮುಗಿಲ್ಗಳಿಂದಣಮೆಸೆಯದೆ ನಿಂದರ್ಕಬಿಂಬಮುಂ ಕಂಡುದಱಿಂದೆಸೆಯದು ದುಷ್ಷಮಕಾಲದೊಳಸದೃಶ ಕೈವಲ್ಯಬೋಧದಿನಕರಬಿಂಬಂ (ಆದಿಪು. ೧೫-೩೦).

[ದುಷ್ಷಮ + ಕಾಲ]

ದುಷ್ಷಮಗತಿ (ನಾ). ಕೆಟ್ಟ ಸ್ಥಿತಿ ; ದುರ್ಗತಿ : ನಮ್ಮ ಸಮಾಜದ ದುಷ್ಷಮಗತಿ 'ಅತಿ ಸರ್ವತ್ರ ವರ್ಜಯೇತ್' ಎಂಬ ನಾಣ್ಣುಡಿಯನ್ನು ಮರೆತು ನಾವೆಲ್ಲರೂ ಅತಿ ಮತೀಯರಾದ್ದರಿಂದ ಎಂದು ಹೇಳಬಹುದಲ್ಲವೇ ? (ಕಒಸಾ. XXIII ಪೀಠಿಕೆ). [ದುಷ್ಷಮ + ಗತಿ]

ದುಷ್ಷಮಸುಷಮ (ನಾ). = ದುಷಮಸುಷಮ : ಉತ್ಸರ್ಪಿಣಿಯವಸರ್ಪಿಣಿ ನಾಮಮಂ ಪಡೆದುದದೊಂದು ಪತ್ತುಕೋಟಿಕೋಟಿಸಾಗರೋಪಮ ಸಂಖ್ಯೆಯಂ ತಾಳ್ದಿ ಸುಷಮಸುಷಮಂ . . . ದುಷ್ಷಮಸುಷಮಂ ದುಷ್ಷಮಮತಿದುಷ್ಷಮಮೆಂದೊಂದು ಷಡ್ಭೇದ ಭಿನ್ನಮಾದುದು (ಆದಿಪು. ೬-೪೮ ಪ) ; ಕೋಟಿ ಕೋಟಿಸಾಗರೋಪಮ ಸ್ಥಿತಿಯಪ್ಪ ದುಷ್ಷಮಸುಷಮವೆಂಬ ನಾಲ್ಕನೆಯ ಕಾಲದೊಳ್ (ಜಾಪುಂಪು. ೪೦೨) ; ಎರಡನೆಯ ಸುಷಮ ಕಾಲದ ಪೊರೆಯೊಳ್ ಮೂಱನೆಯ ಸುಷಮದುಷ್ಷಮಕಾಲಂ ಚರಿಯಿಸುಗುಂ ನಾಲ್ಕನೆಯದು ಪರಿವಿಡಿಯಿಂದಪ್ಪುದಲ್ತೆ ದುಷ್ಷಮಸುಷಮಂ (ಪಂರಾಮಾ. ೦-೫೭). 'ದುಷಮ' ಪರಾ. [ದುಷ್ಷಮ + ಸುಷಮ]

ದುಷ್ಷಮೆ (ನಾ). = ದುಷಮ : ಅವಱೊಳವಸರ್ಪಿಣಿಯಕಾಲಂ ಸುಷಮ ಸುಷಮೆಯುಂ . . . ದುಷ್ಷಮೆಯುಮತಿದುಷ್ಷಮೆಯುಮೆಂದು ಷಡ್ವಿಧಮಕ್ಕುಂ (ಆಜಿಪು. ೩-೧೬). [ಸಂ. ದುಷ್ಷಮ]

ದುಸರ$_1$ (ನಾ). ಎರಡು ಬಾಣ : "ದುಸರ-ದ್ವಿಶರ" (ತದ್ಭಕೋ. ೨೦) ; ದ್ವಿಶರ-ದುಸರ ; ದ್ವಿಹಸ್ತ-ದೂಹತ, ದೂಹತ್ತ (ಶಮದ. ೨೯೦ ಪ್ರಯೋ). [<ಸಂ. ದ್ವಿಶರ]

ದುಸರ$_2$ (ನಾ). ೧. ಎರಡೆಳೆಯ ಹಾರ ; ಜೋಡೆಳೆ ಸರ : ಮುಕುಟಂ ಕೇಯೂರಂ ಕರ್ಣಕುಂಡಲಂ ಕೊಪ್ಪು ಸರಿಗೆ ದುಸರಂ ಮಣಿಮುದ್ರಿಕೆ ತ್ರಿಸರಮೆಂಬ ಭೂಷಾನಿಕರಮನಾ ಭೂಷಣಾಂಗತೆರು ಕುಡುತಿರ್ಕುಂ (ಆದಿಪು. ೫-೩೩) ; ಮನೋಹರಪುಷ್ಪಗಳ ಎಕ್ಕಸರ ದುಸರ ಪಲಸರ ದಂಡೆ ಬಾಸಿಗ ವಿವಿಧಮಾಲಾಬನ್ಧಗಳು (ಬೆಟ್ಟಅ. ೮೨-೧೦). ೨. ಎರಡನೆಯ ಎಳೆ ; ಇನ್ನೊಂದು ಹಾರ : ದುಸರಮದಾಗೆ ಭಾರತಿಗೆ ಹಾರ ಮನೋಯರಮಾಗೆ ಕೋದವೋಲೆಸವಿನಮಕ್ಕರಂ ಕರಯುಗಂಗಳೊಳಂ ಬರೆವಂ (ಎಕ. V, ಚನ್ನರಾ. ೨೦೩-೩೦ ; 1223) ; ಅತ್ಮೇಶ್ವರನಿಕ್ಕಿದಂ ಕುಚದೊಳೊಂದು ಹಾರಮಂ ಕಾದಲಳ್ ನಡುಗುತ್ತೆಕ್ಕಸರಕ್ಕೆ ತಾಂ ದುಸರಮಂ ಬಾಷ್ಪಾಂಬುವಿಂದಿಕ್ಕಿದಳ್ (ಅನಂಪು. ೮-೯). [ದು + ಸರ್ಕ]

ದುಸರಾ$_3$ (ಗು). ಎರಡನೆಯ ; ಅನ್ಯ ; ಮರು : ಹರಾಜಿನಲ್ಲಿ ಪಡೆದುಕ್ಕೊಂಡವನು ಹರಾಜು ಹಣ ಕೊಡದೆ ತಪ್ಪಿದಲ್ಲಿ ಆ ಸ್ವತ್ತುಗಳನ್ನು ಪುನಃ ದುಸರಾ ಹರಾಜು ಮಾಡಿ ಹರಾಜಿನಲ್ಲಿ ಕಡಮೆ ಬಂದ ನಷ್ಟಮೊಬಲಗನ್ನು . . . ಕೊಡಲು ಬದ್ಧನಾಗಿರುವನು (ಗ್ರಾಮಾಕ. ೭೭).

[←ಹಿಂ. ದುಸರಾ, ದೂಸರಾ ; ಮರಾ. ದುಸರಾ]

ದುಸರಿ (ನಾ). (ಪೊದೆಯಾಗಿರುವ) ಒಂದು ಬಗೆಯ ಬಳ್ಳಿ : (ಕಿ).

ದುಸರಿ ಬಳ್ಳಿ = ದುಸರಿ : ಧಗಡಿಬಳ್ಳಿ, ದುಸರಿ ಬಳ್ಳಿ, ಆಡಂಬುಬಳ್ಳಿ, ಯಡಾನಿಬಳ್ಳಿ, ಕಾಗೆಮಾರಿ (ಮೈಜಿಗಿ. ೨೩-೪೨೪).

[ದೇ.॥ ತೆಲು. ದೂಸರಿ = ಒಂದು ಬಗೆಯ ಹುಲ್ಲು]

ದುಸಿ (ನಾ). (?) : ಗುಣ್ಡಕನ್ದರ್ಪ ಪರಬಳಸರ್ಪ್ಪ ಪಗೆಯಂ ಬೆಂಕೊಳ್ವ ದುಸಿಗಟ್ಕೆ ವೇಸುವಂ ಮಾಕ್ಕೋಲ ಭೈ[ರ]ವಂ (ಎಕ. VI, ಚಿಕ್ಕಮ. ೭೬-೧೫ ; ಸು. 1060 ?).

[P ಇದು 'ಪುಸಿ' ಎಂಬುದರ ಅಪಲಿಖಿತವಿರಬಹುದು]

ದುಸುಮಾನ 'ದುಷ್ಮನ್' ನೋ.

ದುಸುಮಾನಗಿತ್ತಿ (ನಾ). ಹಗೆಯಾದವಳು : ಶತ್ರುವಾದವಳು : ಹಸುಗೂಸನೊಯ್ದು ಮುದುಕಾಗೆ ಕೊಟ್ಟಾರೆ ದುಸುಮಾನಗಿತ್ತಿ ಹಡೆದಮ್ಮ (ಹಳ್ಳಿಯ. ೧೨೪). [ದುಸುಮಾನ (<ದುಷ್ಮನ್) + – ಗಿತ್ತಿ]

ದುಸುಮುಖ (ನಾ). (?) : ಹಸುರುಮುಂಡಾಸದವನೇ ದುಸುಮುಖ ಸರಜಪ್ಪನಾಯ್ಕ ಹೆಸರನೀ ರೀತಿ ಪಡೆದಲ್ಲೋ ಲೋಕದ ಮೇಲೆ (ನಾಪದ. ೧೫೦). [?]

ದುಸುಮುಸಿ 'ಧುಸುಮುಸು' ನೋ.

ದುಸುಮುಸು 'ಧುಸುಮುಸು' ನೋ.

ದುಸ್ತಮ (ನಾ). ೧. ಕಗ್ಗತ್ತಲೆ ; ದಟ್ಟವಾದ ಅಂಧಕಾರ : ಚಕ್ರಸಹಾಯನಾಕ್ರಮಿಸಿದಂ ಭೂಚಕ್ರಮಂ ಪಾದದಿಂ ರಸೆಗಾಗಳ್ ಬಲಿ ದುಸ್ತಮಂ ತಳರ್ವಿನಂ (ಪುಷ್ಪಪು. ೮-೨೩). ೨. ಅತಿಯಾದ ಅಜ್ಞಾನ. [ಸಂ.]

ದುಸ್ತರ (ಗು). ೧. ದಾಟಲಾಗದ ; ಹಾದು ಹೋಗಲಾಗದ : ಚಾರಿತ್ರ ಸಂಶುದ್ಧರೀ ದುಸ್ತರ ಸಂಸಾರಾಬ್ಧಿಯಿಂದಂ ಪೊಱಮಡಿಸುಗೆ ಸದ್ಧರ್ಮರಾ ಚಾರ್ಯರೆಂದುಂ (ಸುಕುಮಾ. ೧-೩). ೨. ನಿವಾರಿಸಲಾಗದ ; ಪರಿಹರಿಸಲಾಗದ : ಎಲೆ ತಾಯೆಯಾ ದುಸ್ತರ ಮಹಾಪಾತಕವನೆಂತುತ್ತರಿಸುವೆನು ಮುಂದೆ (ಬಸಪು. ೪೫-೨೫). ೩. ಗೆಲ್ಲಲಾಗದ ; ಅಜೇಯ ; ನಿಗ್ರಹಿಸಲಾಗದ ; ಮೀರಿಸಲಾಗದ. (ನಾ). ೪. ದಾಟಲಾಗದುದು ; ಹಾದು ಹೋಗಲಾಗದುದು : ನೋಟ್ಪೊಡಿಂತಿದು ದುಸ್ತರಂ ನರಕಂ (ರಾಮಾಶ್ವ. ೧೦೬-೨೦) ; ಅದರ ನಿಜವಾದ ಅಂತರವು ಗುಣಿಸಿ ನೋಡಿದ ಹೊರತು ವ್ಯಕ್ತವಾಗದು ; ಅದು ನಮ್ಮ ಭಾಗಕ್ಕೆ ದುಸ್ತರವಾದೊಂದು ಮಹಾಬಿಲ (ಜ್ಯೋತಿರ್ವಿ. ೨೫೬). ೫. ಅನುಭವಿಸಲಾಗದುದು ; ಸಹಿಸಲಸಾಧ್ಯವಾದುದು ; ಅಸಹನೀಯವಾದುದು : ಪಿತೃವಿಯೋಗಮೇಂ ದುಸ್ತರವೋ (ಚಂದ್ರಪು. ೨-೬೦). ೬. ಅಸಾಧ್ಯವಾದುದು ; ಕಷ್ಟವಾದುದು : ಅವನ ತಾಯಿನಾಡಿನಲ್ಲಿ ಶುಭ್ರವಾದ ಆಕಾಶವನ್ನು ನೋಡುವುದೇ ದುಸ್ತರವಾಗಿತ್ತು (ಶಿಲ್ಪಸಾ. ೧೦೯) ; ಮಧ್ಯಾಹ್ನದ ಊಟವಾದ ಕೂಡಲೇ ಅಲ್ಲಿರುವುದು ಕೂಡ ಅವನಿಗೆ ದುಸ್ತರವಾಯಿತು (ಮುಗಿಮ. ೦೯) ; ಅನುವಾದಭಾಗ ಶಾಸ್ತ್ರಪರಿಚಯವಿಲ್ಲದವರಿಗೆ ಸಮಗ್ರಾರ್ಥವನ್ನು ಮಾಡಿ ಕೊಡುವುದು ದುಸ್ತರ (ಧ್ವನ್ಯಾಲೋ. XIII ಅರಿಕೆ) ; ಸಂಸಾರಪರಿತ್ಯಾಗ ಮಾಡಿ, ಕಾಡನ್ನು ಸೇರಿದ ಯೋಗಿಗಿಂತ ಸಂಸಾರದಲ್ಲಿದ್ದು ವಿರಕ್ತರಾಗುವುದು ಹೆಚ್ಚು ದುಸ್ತರ (ಧರ್ಮಸಾ. ೧೩೮). [ಸಂ.]

ದುಸ್ತರತೆ (ನಾ). ದಾಟಲಾಗದುದು ; ಮೀರಲಾಗದುದು : ಇದು ಯಥಾರ್ಥದ ವಾಕ್ಯವದು ತಪ್ಪದು ವಿಚಾರಿಸಲುಳಿದವರಿಗಾದುದು ಮಹಾದುಸ್ತರತೆ (ಪ್ರಭುಲೀ. ೨-೩೯) ; ಶರಧಿಯೊಲು ದುಸ್ತರತೆಯಲಿ ದುರ್ಧರು ಷತೆಯಲಗ್ನಿಯೊಲು ವಿಕ್ರಮಸಿರಿಯಲಾ ಸಿಂಹದಪೊಲು (ನಿಭಾಗ. ೧-೮-೧೦).

[ಸಂ. ದುಸ್ತರತಾ]

ದುಸ್ತರಾವಸ್ಥೆ (ನಾ). ಸರಿಸಮನಾಗಿರದ ಸ್ಥಿತಿ ; ಕಠಿಣವಾದ ಅವಸ್ಥೆ : ಇಂತಪ್ಪ ದುಸ್ತರಾವಸ್ಥೆಯೊಳ್ ಕಾದುವುದು ಕಜ್ಜಮಲ್ಲ (ಪಂಚತಂ. ೨೦೭-೧). [ದುಸ್ತರ + ಅವಸ್ಥೆ]

ದುಸ್ತರ್ಕ (ನಾ). ಸರಿಯಲ್ಲದ ವಾದ ; ಕುತರ್ಕ : ವಾದಿಗಳ ದುಸ್ತರ್ಕ ನಸಿದುದು (ಕುಮ್ಯಾಸ. ೯-೩೩) ; ಶಾಸ್ತ್ರಕ್ಕೆ ಪ್ರತಿಕೂಲವಾಗಿರುವ ತರ್ಕ ದುಸ್ತರ್ಕ (ಹಿಂದಸಾ. ೧೦೫). [ಸಂ.]

ದುಸ್ತರ್ಕ್ಯ (ಗು). ಊಹಿಸಲು ಸಾಧ್ಯವಿಲ್ಲದ ; ಅತರ್ಕ್ಯ : ನಿನ್ನಿಂದ ಲೇಸನಾರ್ಜಿಪೆನೆನ್ನುವಾಸೆಯಿಂದಿರೆ ಬಂದುದೀ ಸಮಯದೊಳಗತುಳ ದುಸ್ತರ್ಕ್ಯ ವಿಘ್ನಮನ್ನೇನೆಂಬೆ ಕೃತಕೃತ್ಯಮಂ (ವೆಂಕಾರಾ. ೨-೯-೩). [ಸಂ.]

ದುಸ್ತಾಪಚತ್ವ (ನಾ). ಒಂದು ಬಗೆಯ ಸಸ್ಯ : ದುಸ್ತಾಪಚತ್ವ, ಕರ್ಕಾಟ ಶೃಂಗಿ (ಮೃಜಿಗಿ. ೬೨-೧೨೫೬). [?]

ದುಸ್ತಾಮಸ (ನಾ). ಅಧಿಕವಾದ ಅಜ್ಞಾನ,-ಅವಿವೇಕ : ಕ್ಷಾತ್ರ ದುಸ್ತಾಮಸಮಡಸಿದವಂಗಕ್ಕುಮೇ ಸದ್ವಿವೇಕಂ (ಶಬಶಂ. ೪-೫೫) ; ದುಸ್ತಾಮಸದ ದುಸ್ಸಂಗ, ದುಸ್ಸಂಧಾನದ ಸಹಗಮನ, ನಿರ್ಗತಿಕನ ನಿರ್ಗಮನ ! (ನವ್ಯಕಾ. ೩೫). [ಸಂ.]

ದುಸ್ತಾರ (ಗು). ೧. ಹಾದು ಹೋಗಲಾರದ; ದುಸ್ತರವಾದ : ಅಲ್ಲಿಂದ ಪೊರಮಟ್ಟು ದುಸ್ತಾರಮಾದ ಕಾನನವ ಪೊಕ್ಕು ಪೋಗುತಿರಲು (ನವಮೋ. ೭-೪೭). ೨. ನಿವಾರಿಸಲಾಗದ ; ಸೈರಿಸಲಾಗದ : ಕರವಾರಿಜದಿ ಸುರಿವ ರಕ್ತವನೊರಸಿಕೊಂಡು ದುಸ್ತಾರಕೋಪದಿಮ್ಮಾರನೆಡಕರದ ಚಾಪಮಂ ಖಂಡಿಸಲು (ನವಮೋ. ೧೨-೭೯). [ಸಂ.]

ದುಸ್ತು (ನಾ). ಉಡುಪು; ಉಡುಗೆ: ಅಂಗಡಿಯಲ್ಲಿ ದುಸ್ತುಗಳ ಹೊಲಿವುತ [ಪಾಠಾಂ. ಯೊಳು ಕುಳಿತು ಮಾರುತಲಿಹ] ಚಿಪ್ಪಿಗರಿರ್ದರೊಂದೆಸೆಯ (ಅಬ್ಬಲೂ. ೩-೯೦) ; ಮೋಸಕರವಾಗಿ ಸರಕಾರದ ದುಸ್ತನ್ನು ಧರಿಸಿದರೆ ೩ ತಿಂಗಳ ಬರೀ ಖೈದು ಅಥವಾ ೧೦೦೦ ರೂಪಾಯಿ ಜುರ್ಮಾನೆ (ಗ್ರಾಮಾಕ. ೧೮೧) ; ಒಳ್ಳೆಯ ದುಸ್ತಿನಲ್ಲಿ ಭುಜಂಗನು ಪ್ರವೇಶಿಸುವನು (ದೇಶಧು. ೪೯); ಬೇಡೇಕರರು ದುಸ್ತು ಮಾಡಿಕೊಂಡು ಅವರನ್ನು ಸಂಧಿಸುವಾಗಲೇ ಹೊತ್ತಾಗಿತ್ತು (ಜಾರುದಾ. ೧೯೯). 'ದಿರಸು' ಪರಾ.

[←ಮರಾ. ದುಸ್ತ್./ತುಳು. ತೆಲು. ದುಸ್ತು]

ದುಸ್ತ್ರೀ (ನಾ). ಕೆಟ್ಟ ಹೆಂಗಸು ; ದುಷ್ಟೆ: ಪತಿಯುತೆಯರಲ್ಲದಾ ಪಟ್ಟಣದೊಳಿಲ್ಲ ದುಸ್ತ್ರೀಯರೆಲೆ ಕಂಬುಕಂಠೀ (ನವಮೋ. ೨-೫೩). [ಸಂ.]

ದುಸ್ಥಿತಿ (ನಾ). ಹೀನಸ್ಥಿತಿ ; ದುರವಸ್ಥೆ : ಅವನಾಳ್ವ ಭುವನದೊಳಗನೃತ . . . ದುರ್ನೀತಿ ದುಸ್ಸಂಗ ದುಸ್ಥಿತಿ ದುರಾಚಾರವಿಲ್ಲ (ಹಚಕಾ. ೨-೧೦) ; ಎಲೆ ಯುಧಿಷ್ಠಿರನೃಪಕುಮಾರ ಪ್ರಳಯದಾಪತ್ತಾಯ್ತೆ . . . ದುಸ್ಥಿತಿಯಾಯ್ತೆ ನಕುಲಂಗೆ (ಕುಮ್ಯಾದ್ರೋ. ೭-೨೨). [ಸಂ.]

ದುಸ್ಥಿತೆ (ಗು). ಕೆಟ್ಟಸ್ಥಿತಿಯಲ್ಲಿರುವ ; ದರಿದ್ರವಾದ : ದುಸ್ಥಿತೆ ಲೋಕ ಕಲ್ಪತರುವೆಂಬುದು . . . ಸಮಸ್ತಮಹೀಜನಮಿಂದ್ರರಾಜನಂ (ಎಕ. II, ೦೩೩-೩೭ ; 982).

[P ಇದು 'ದುಸ್ಥಿತ' ಎಂಬುದರ ಅಪಲಿಖಿತವಿರಬಹುದು]

ದುಸ್ಥೆ (ನಾ). ದುಷ್ಟತನದಿಂದ ವರ್ತಿಸುವವಳು ; ನೀಚ ಹೆಂಗಸು : ದುರ್ಮತಿ ದುಷ್ಟೆ ದುಸ್ಥೆ ದುರ್ವ್ಯಸನೆ ದುರಾತ್ಮೆಯಪ್ಪ ವಧು ಸಜ್ಜನಮೇ (ಮದತಿ. ೮-೭). [ಸಂ. ದುಸ್ಥಾ]

ದುಸ್ಪರ್ಶ (ನಾ). ೧. ಮುಟ್ಟಲಾಗದುದು. ೨. ತೀಟಕಸಂಧಿ ; ತುರುಚೆ : "ದುಸ್ಪರ್ಶ [ಪಾಠಾಂ. ದುಃಸ್ಪರ್ಶ] ಮೆನೆ ತುಱುಚೆಯಕ್ಕುಂ" (ಮಂಗರಾ. ೪೪-೪೪) ; "ದುಸ್ಪರ್ಶಃ – ಬಳ್ಳಿದುಱುಚೆ" (ಓಷಧಿ. ೭೭). ೩. ಹೆಗ್ಗುಳ್ಳ.

[ಸಂ.]

ದುಸ್ಪರ್ಶೆ (ನಾ). ಮುಳ್ಳುಬದನೆ ; ಹೆಗ್ಗುಳ್ಳ : "ನಿದಿಗ್ಧಿಕಾ, ಸ್ಪೃಶೀ, ವ್ಯಾಘ್ರ, ಬೃಹತೀ . . . ದುಸ್ಪರ್ಶಾ ರಾಷ್ಟ್ರಿಕಾ–೧೦ ಹೆಗ್ಗುಳ್ಳದ ಹೆಸರುಗಳು. ಮುಳ್ಳುಳ್ಳ ಚಿರುಗುಳ್ಳ" (ಸಿದ್ಧಾಂತಿ. ೦೩೩).

[ಸಂ. ದುಸ್ಪರ್ಶ]

ದುಸ್ಮಾನ 'ದುಷ್ಮನ್' ನೋ.

ದುಸ್ವಪ್ನ (ನಾ). ಕೆಟ್ಟ ಕನಸು: ಮತ್ತೊಂದು ದಿವಸಂ ನಿಶಾವಸಾನ ಸಮಯದೊಳು ದುಸ್ವಪ್ನಂಗಳಂ ಕಂಡು (ಜಾವುಂಪು. ೫೨) ; ದುಸ್ವಪ್ನದಿಂ ಮರಣ ಸೂಚನೆ (ವಿವೇಕ. ೨೦೪). [ಸಂ.]

ದುಸ್ವರ (ನಾ). ೧. ಕೆಟ್ಟ ಸ್ವರ ; ಅಪಸ್ವರ. 'ದುಸ್ವರಗೈ' ಪರಾ. ೨. [ಜೈನ] ಎಪ್ಪತ್ತೆರಡು ಬಗೆಯ ನಾಮಕರ್ಮಪ್ರಕೃತಿಗಳಲ್ಲಿ ಒಂದು ; ದುಷ್ಟಸ್ವರ ಹೊರಡಲು ಕಾರಣವಾದ ಕರ್ಮ : ಸುಸ್ವರ ದುಸ್ವರ ಸುಭಗ ದುರ್ಭಗ . . . ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿ ಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೪ ವ). [ಸಂ.]

ದುಸ್ವರಗೈ (ಕ್ರಿ). ಕೆಟ್ಟ ಸ್ವರವನ್ನುಂಟು ಮಾಡು ; ಅಹಿತವಾದ ಧ್ವನಿಯನ್ನು ಹೊರಡಿಸು : ತಮ್ಮೊಳು ತಾವು ಮಥಿಸುವೊಲು ಮಿಸುಪ ದುಸ್ವರಗೈವ ಶುಕ ವಾಯಸ ಗರುಡ ಮೊದಲಾದ ಪಕ್ಕಿಗಳೆಸೆದಿಹವು ಬನಬನದ ತಾಣದಲಿ (ಕೋಗಯ. ೧೪-೧೦). [ದುಸ್ವರ + ಗೈ (<ಕೆಯ್$_1$)]

ದುಸ್ಸಂಗ (ನಾ). ೧. ಕೆಟ್ಟ ಸಹವಾಸ ; ಸರಿಯಲ್ಲದ ಜೊತೆ : ಸತತಂ . . . ಸದ್ಧರ್ಮಗುಣಂಗಳಸ್ತ್ರತತಿಗಳ್ ನಿಸ್ತ್ರಿಂಶಧಾನುಷ್ಕಸಂಗತಿಯಿಂದಂ ಪರಮರ್ಮಭೇದಿಗಳಿನಲ್ ತೀಕ್ಷ್ಣಂಗಳುಂ ಮಾಂಸಲೋಹಿತವಕ್ತ್ರಂಗಳು ಮಾದುವೆನ್ನರುಮನೇಂ ದುಸ್ಸಂಗಮೇಗೆಯ್ಯದೋ (ಪಂರಾಮಾ. ೧೩-೫೦) ; ಲಿಂಗವಂತನ ಸನ್ನಿಧಿಯಿಂದ ಹಿಂದಣ ದುಸ್ಸಂಗ ಕೆಡುವುದು (ಬಸವ. ೧೫೦); ಅವನಾಳ್ವ ಭುವನದೊಳಗನೃತ . . . ದುರ್ನೀತಿ ದುಸ್ಸಂಗ ದುಸ್ಥಿತಿ ದುರಾಚಾರವಿಲ್ಲ (ಹಚಕಾ. ೨-೧೦) ; ಯತಿ ಕೆಡುಗು ದುಸ್ಸಂಗದಲಿ ಭೂಪತಿ ಕೆಡುಗು ದುರ್ಮಂತ್ರದಲಿ (ಕುಮ್ಯಾಉ. ೩-೧೧೯) ; ಭಾವ ಭಾವ ಏಕಾರ್ಥವಾಗದವರ ಸಂಗವದೇತರ ಸಂಗ ದುಸ್ಸಂಗವಲ್ಲದೆ (ಅಖಂಡೇ. ೦೨೯-೯೪). ೨. ಕೆಟ್ಟ ಮನಸ್ಸು ; ದುಷ್ಟ ಪ್ರವೃತ್ತಿ : (ಕಿ). [ಸಂ.]

ದುಸ್ಸಂಗಿ (ನಾ). ಕೆಟ್ಟ ಸಹವಾಸದಲ್ಲಿರುವವನು : ದುಸ್ಸಂಗಿಗಳ ಸಂಗದೋಷಕ್ಕೆ ಈಡು ಮುಕ್ತಿಯ ಕೇಡು (ಅಖಂಡೇ. ೦೨೯-೯೪).

[ಸಂ. ದುಸ್ಸಂಗಿನ್]

ದುಸ್ಸಂತತಿ (ನಾ). ೧. ಕೆಟ್ಟ ಸಂತತಿ ; ದುಷ್ಟ ಸಂತತಿ. ೨. ಹಾದರಕ್ಕೆ ಹುಟ್ಟಿದುದು. [ಸಂ.]

ದುಸ್ಸಂಧಾನ (ನಾ). ೧. ಒಟ್ಟಿಗೆ ಸೇರಲು ಕಷ್ಟವಾದುದು ; ಕೂಡಲು ಅಸಾಧ್ಯವಾದುದು. ೨. ಕೆಟ್ಟ ಸಂಧಾನ,-ಸಂಚು. ೩. ಹಾದರ.

[ಸಂ.]

ದುಸ್ಸಂಧಿ (ನಾ). [ವ್ಯಾಕ] ಒಂದು ಬಗೆಯ ಸಂಧಿದೋಷ ; ಅಪಾರ್ಥವನ್ನು ಕೊಡುವ ಅಥವಾ ಶ್ರುತಿಕಷ್ಟವಾದ ಸಂಧಿ: ಅಸದರ್ಥಂ . . . ಅಪ್ರೌಢತೆಯಪ್ರತೀತಿವಚನಂ ದುಸ್ಸಂಧಿ ವಿಶ್ಲೇಷನಷ್ಟಸಮಾಸಂ . . . ಇನಿತುಂ ದೋಷಂಗಳಷ್ಟಾದಶಂ (ಛಂದೋಂಬು. ೦-೪೬ ಆಡಿಟಿ); ದುಸ್ಸಂಧಿಯ ನಿಬದ್ಧಂ ವಿರುದ್ಧಾರ್ಥ ನೀರಸಂ ಶೈಥಿಲ್ಯವರ್ಣಂ ಕಾರಕವಿರಹಿತಂ ಕ್ರಿಯಾಳಂಕಾರಹೀನವೆನಿಪ್ಪ ಪೊಳ್ಳಂ ತೂಱಿ ಕಳೆದಿಂತು . . . ರಚಿಸುವೆಂ ಕೃತಿಯ (ಬಸಪು. ೫-೧೮). 'ದುರ್ಲಕ್ಷಣ' ಪರಾ. [ಸಂ.]

ದುಸ್ಸರ (ನಾ). ಖಡ್ಗಯುದ್ಧದಲ್ಲಿ ಒಂದು ವರಸೆ : ನುತಚೌಪಟಂ . . . ಪಂಚಾಯಿತಮೆನಿಪ್ಪಯಿದು ನಿಱಿಗೆಗಾಯತ ಮಂಡಿ ದುವಾಡವೆಕ್ಕಸರ ವಿಸರವುಲ್ಲಾಸ ದುಸ್ಸರ . . . ಸಿಂಹಾನಕ ಚಟಿಯೆಂಬ ಚತುರ ಠಾಣದ ತರಹರದೊಳು ಹಲಗೆಯ ಮಗ್ಗುಲೊಳು ಖಡ್ಗವಂ ಜಡಿದರು (ಸೋಮಜ. ೫-೧೪). [?]

ದುಸ್ಸರಣೆ (ನಾ). ಕಠಿಣವಾದ ಮಾರ್ಗ : ದರಿಗಳೊಳು ದುಸ್ಸರಣೆಯೊಳು ಡೊಂಗರಗಳೊಳು . . . ಅಗಲಕೆ ಹರಿದು ಹೋರಟಿಗುಟ್ಟಿದನು ಹೊಮ್ಮಱಿಯ ಬೆನ್ನಿನಲಿ (ತೊರರಾ. ೩-೮-೫೭). [ಸಂ.]

ದುಸ್ಸಹ (ಗು). ೧. ಸಹಿಸಲುಂ ಕಷ್ಟವಾದ; ತಾಳಲಾರದ; ಸೈರಿಸಲಾಗದ: ತನ್ನ ಪಿರಿಯ ಮಗನಂ ಕರೆದು ತನ್ನ : ದುಸ್ಸಹಾವಸ್ಥಾತರಮನಱಿಪಿ (ಆದಿಪು. ೨-೦೪ ವ); ಅತಿ ದುಸ್ಸಹವಾರ್ತಾವಿಪಲತೆಯಂ ನಾಂಟಸಲಿದಲ್ತೆ ಕಂಸಶೋತ್ಪಕ್ಷಿತಿಖಿನನಪವಿಶಲಾಕಾತತಿಯೆನೆ ದಶನಾಂತು ನಿಮಿರೆ ವಮನಿಯಿಂತೆಂದಂ (ಜಗವಿ. ೨-೪೩); ಇತ್ತ ಹೆತ್ತ ತಾಯಿ ದುಸ್ಸಹೆ ಸಮಾಜಾರವನ್ನು ಕೇಳಿ ಪ್ರಾಣಬಿಟ್ಟರು (ಶಾಂತಲಾ. ೧೭೦). (ನಾ). ೨. ಸಹಿಸಲಾಗದಂದಂ; ತಾಳಲಾಗದಂದಂ: ಆ ಕಾಮಬಾಣಾಗ್ನಿಯಿಂ ಸರ್ವಮುಖಿಕ್ಷ್ವೇಡಾಗ್ನಿಯೇಂ ದುಸ್ಸಹಮೆ (ಜಗವಿ. ೩-೪೫); ದುಸ್ಸಹವು ನಿಮ್ಮಭ್ಯುದಯವಹಿತರಿಗೆ (ಕುಪ್ಯಾಸ. ೧೧-೦೮); ತೆರಳಲ್ಕಿಪ್ಪರ್ ದೇಶಾಂತರ ಕಬಲಾಜನದ ಚಿಂತೆ ದುಸ್ಸಹಮಲ್ತೇ (ಶಾಳಿಂತ. ೪೮-೪); ಅವಮಾನವನ್ನು ಸಹಿಸಲು ಯುವಕರಿಗೆ ದುಸ್ಸಹ (ಕಿಷ್ಕಿಂ. ೧೦೩). ೩. ಸಹಿಸಿಕೊಳ್ಳಲು ಆಗದವನು: ದುರ್ಲಭನಾರು ದುಸ್ಸಹನಾರು ದುರ್ಮತಿ ಯಾರು ಧರ್ಮಜ ತಿಳಿಯಹೇಳೆಂದ (ಕುಪ್ಯಾಂ. ೦೩-೩೬); ಮಹಾದುಸ್ಸಹನ ದುಶ್ಶೀಲನ ದುರಾಚಾರನ . . . ಕೈವಿಡಿದೆತ್ತಬೇಕೆಲೆ ದೇವ (ತೊಡರಾ. ೪-೪-೩೬); ದುಸ್ಸಹರಜೇಯರಪ್ರತಿಸಮರಥರ್ವಾಹಸಿಗಳಿರ್ವರುಂ ಗ ಗ ನ ಗ ಮ ನ ದ ವೀರರು (ಹ್ಮಮಿಭಾ. ೨೨-೩೦). [ಸಂ.]

ದುಸ್ಸಹವಾಸ (ನಾ). ಕೆಟ್ಟ ಸಹವಾಸ ; ದುಸ್ಸಂಗ : ದುಸ್ಸಹವಾಸವು ದುರ್ಗತಿಯನ್ನು ಕೊಡುವದಾಗುವದು (ಅಳಗಮಾ. ೬೯). [ಸಂ.]

ದುಸ್ಸಾಹಸ (ನಾ). ಅಸಾಮಾನ್ಯವಾದ ಸಾಹಸ ; ಅತ್ಯಂತ ಸಾಹಸ : ಹುದುಗಿದಗ್ಗದ ಸತ್ವ ದುಸ್ಸಹಸದ ನಿರೂಢಿಯ ಸೋಸಮಯ [ಪಾಣಾಂ. ದುತ್ಸಾಹದ ನಿರೂಢಶ್ವಾಸದಲಿ]ಗದುಗದಿತ ಕಂಠದ . . . ಗುರುವಾಯಳಿದ ಭೀಮನ ಕಂಡನಾ ಭೂಪ (ಕುಪ್ಯಾಂ. ೦೩-೩೮). [<ಸಂ. ದುಸ್ಸಾಹಸ]

ದುಸ್ಸಾಧ್ಯ (ನಾ). ಕಾರ್ಯಂಗೊಳಿಸಲು ಅಸಾಧ್ಯವಾದಂದಂ.–ಕಷ್ಟಸಾಧ್ಯವಾದುದು : ವಿದ್ಯಾವಂತರು . . . ಉತ್ತಮಮಟ್ಟದ ಜೀವನ ನಡೆಸಬೇಕೆಂದು ಹಾರೈಸುವುದು ಸಹಜವಾದ್ದು. ಆದರೆ ಅನೇಕರಿಗೆ ಅದು ದುಸ್ಸಾಧ್ಯವೆನಿಸಬಹುದು (ಕಿಷ್ಕಿಂ. ೬೬೮). [ಸಂ.]

ದುಸ್ಸಾಹಸಿಕ (ನಾ). ಗಂಡಾಂತರವನ್ನು ಎದುರಿಸಿಂವ ಅತಿಯಾದ ಸಾಹಸ : ತನ್ನ ಪ್ರಾಧಾನ್ಯವನ್ನು ರಕ್ಷಿಸಿಕೊಳ್ಳುವುದಕ್ಕೋಸ್ಕರ ದುಸ್ಸಾಹಸಿಕವಾದೊಂದು ಸಂಕಲ್ಪವನ್ನು ಮಾಡಿದಳು (ಕಪಾಕುಂ. ೬೫). [ಸಂ.]

ದುಸ್ಸ್ಥಲ, ದುಸ್ಸ್ಥಳ (ನಾ). ೧. ಕೆಟ್ಟ ಸ್ಥಳ ; ಅನುಂಕೂಲವಲ್ಲದ ಜಾಗ. **ದುಸ್ಸ್ಥಳ** : ೨. ಇಕ್ಕಟ್ಟಾದ ಮಾರ್ಗ.–ಸ್ಥಳ : ದುಸ್ಸ್ಥಳಮುದಯಾಚಳ ಧಾತುಸ್ಥಳಿಯಂ. ವೇಗಮಡರ್ವ ದಿನನಾಥರಥಪ್ರಸ್ಥಾನಪಾಂಸುವೆನಿಸಿ ದಿಶಾಸ್ಥಗಿತಂ ರಂಜಿಸಿತ್ತು ಸಂಧ್ಯಾರಾಗಂ (ಪುಣ್ಣಿಪು. ೭-೦೦೫).

[ಸಂ.]

ದುಸ್ಸ್ಥಳ 'ದುಸ್ಸ್ಥಲ' ನೋ.

ದುಸ್ಸ್ವಪ್ನ (ನಾ). = ದುಸ್ವಪ್ನ : ದುಸ್ಸ್ವಪ್ನಕೆ ಬೆಚ್ಚುತಲೆಚ್ಚತ್ತಂತೆ ನಾವೆದ್ದೆವು ನಲ್ಕಿಳಿವಿಗೆ (ಅಹಲ್ಯೆ: ೧೦೩-೧೦). [ಸಂ.]

ದುಸ್ಸ್ವಭಾವ (ನಾ). ಕೆಟ್ಟ ಸ್ವಭಾವ ; ದುಷ್ಟ ಗುಣ. [ಸಂ.]

ದುಸ್ಸ್ವರ (ನಾ). = ದುಸ್ವರ ೧ : ಕಾಗೆ ಬಂದು ಪಾಯ್ದುಂ ದುಸ್ಸ್ವರದಿಂ ಕರೆವುದುಂ (ಪಂಚತಂ. ೨೨೪-೦೧). [ಸಂ.]

ದುಸ್ಸ್ವರೆ (ನಾ). ಕೆಟ್ಟ ಧ್ವನಿಯುಳ್ಳವಳು : ದುರ್ಗಂಧೆ ದುಸ್ಸ್ವರೆ ವುಟ್ಟುಂ ಗುರುದಿ ಫೂಲತಿಯಾಗಿ ವುಟ್ಟಿ (ವಡ್ಡಾರಾ. ೯-೩). [ಸಂ. ದುಸ್ಸ್ವರಾ]

ದುಹತ್ತ, ದೂಹತ್ತ (ನಾ). ಎರಡು ಕೈ : "ದುಹತ್ತ (ದೂಹತ್ತ) – ದ್ವಿಹಸ್ತ = ಹಸ್ತಯುಗ್ಮ" (ಕರ್ಕಾಕೋ. ೫೦); ದುಗೆ – ದ್ವಿಗುಣ – ದುಗುಣ . . . ದ್ವಿಹಸ್ತ – ದುಹತ್ತ; ದೂಹತ್ತ (ಕಮುದ. ೨೯೦ ಪ್ರಯೋ). **ದೂಹತ್ತ** : ವೇಲಿನ ಪ್ರಯೋಗಗಳನ್ನು ನೋಡಿ. [ದು + ಹತ್ತ]

ದುಹಾರ (ನಾ). (?) : ಕಂಗಳೋರೆಯ ಧಾಳಿಸುವ ಹಾಸಂಗಿಗಳ ಬಿಗುಹಿನ ದುಹಾರದ ಭಂಗಿಗಳ ಬಲುವಿಟರ ಕರಣದ ಸಾರಿಗಳ ಸೆರೆಯ ಮುಂಗುಡಿಯ ನಿಜನಾರಿಯರ ಕವಿವಂಗವಣಿಗಳ ಜೂಜುಗಾತಿಯರಂಗನೆಯು ದಂಡಿಗೆಯು ಬಳಿವಿಡಿದರು ವಿದಗ್ಧೆಯರು (ಕುಪ್ಯಾಅ. ೧೩-೪೨) ; ಕೆಲಬಲನ ಭಿತ್ತಿಯ ಕಂಬ ಕಂಬದ ನಡುವೆ ಭಿತ್ತಿಗಳು ಹೊಳಹನೇ ಕಂಡೆನು ವಿವೇಕದ ಕಳವು ಚಿತ್ರದ ಸೆಱೆ ದುಹಾರದೊಳಿ [ಪಾಣಾಂ. ೪೫] ಳಿದವಕ್ಷಿಗಳಿಂತು ಸೋತೆನು (ಕುಪ್ಯಾಸ. ೧೨-೩೬) ; ದುಗನೆ ಹಾಯಿಕು ತನಗೆ ಹಾಯ್ಕಿತ್ತಿಗನವೆಂಬಬ್ಬರದ ಹಾಸಂಗಿಗಳ ಬೊಬ್ಬೆಯ ಸಾರಿಗಳ ಮಣಿಖಿಟಿಲನಿಸ್ವನವ ಉಗಿವ ಸೆರೆಗಳ ಬಳಿ ದುಹಾರದ ಬಿಗುಹುಗಳ ಬೀದಿಗಳ ತಳಸಾರಿಗಳ ಧಾಳಾಧೂಳಿ ಮಸಗಿತು (ಕುಪ್ಯಾಸ. ೧೩-೩೦) ; ನಿಮ್ಮಣ್ಣನಾಡಿ ದುಹಾರದಲಿ ಸೆಱೆ ಯೋದನಾತನ ಹರಿಬವೇ ನಿಮಗೆ (ಕುಪ್ಯಾಳ. ೩೦-೧೩). [?]

ದುಹಿ (ನಾ). ದ್ವೇಷ ; ವಿರೋಧ : ದುಹೀ ಮಾಡುವವ ಅಹೀ ಹಾಗೆ (ಗಾದ) : ದುಹೀ ಮಾಡುವವ ಅಹಿಗಿಂತ ಕಡೆ (ಗಾದ).

[←ಮರಾ. ದುಹೀ, ದುಷ]

ದುಹಿತಾರ 'ದುಹಿತೆ' ನೋ.

ದುಹಿತೃ (ನಾ). ೧. ಮಗಳು ; ಪುತ್ರಿ : "ಪೆಣ್ ದುಹಿತೃ ನಂದನೆ ಪುತ್ರಿ ತನೂಜೆ ಸೂತಿ ತಾನೆನಿಕುಂ" (ಪಸ್ತು.ಕೋ. ೫೪-೧೭) ; ಅಹಹ ನರ್ತಕಿಯಲು ಗಂಧರ್ವನಾಯಕನ ದುಹಿತೃವಲ್ಲಾ ನಿನ್ನ ಮಾತೆ (ಹ್ಮಮಿಭಾ. ೧೭-೫೫). ಅಂತರಿಕ್ಷದಲ್ಲಿ ಆದಿತ್ಯನು ತನ್ನ ದುಹಿತೃವಾದ (ಪುತ್ರಿ) ಪೃಥ್ವಿಯ ಗರ್ಭರೂಪವಾದ ಉದಕವನ್ನು ಧರಿಸಿದ್ದಾನೆ (ಋಕ್ಕಾರ. ೫೭೬). ೨. ಹಾಲು ಕರೆಯುವವಳು ; ಗೌಳಿಗಿತ್ತಿ : (ಕ). [ಸಂ.]

ದುಹಿತೆ, ದುಹಿತಾರ (ನಾ). ಮಗಳು ; ಪುತ್ರಿ : "ದುಹಿತೆ – ದುಹಿತೃ = ಮಗಳು" (ತಿದೃಕೋ. ೫೦) : ಆದಿಶಿವಭಕ್ತಂಗೆ ಮದುವೆಯನಾದರದಿ ನಾ ಮಾಳ್ಪೆನಲ್ಲದೆ ಈ ದುಹಿತೆಯಂ ಭವಿಗೆ ಕೊಡೆನು (ಬಸಪು. ೪-೮೬) ; ದುಹಿತೆಯಳ ಹರಿರಾಯನರಮನೆಗೆ ವಿಜಯದಿಂ ಕಳುಹಲ್ಕೆ ತೆರಳಿ ಬಂದಂ (ಗುರುಚಾ. ೩-೦೦). **ದುಹಿತಾರ** : ಆರಾದೇಶಕ್ಕೆ –ಸವಿತಾರ, ಕರ್ತಾರ ... ದುಹಿತಾರ (ಕಮುದ. ೮೫ ಪ್ರಯೋ). [<ಸಂ. ದುಹಿತೃ]

ದುಹಿಸು (ಕ್ರಿ). (ಹಾಲಿನಂತೆ) ಕರೆ ; ಸುರಿಸು ; ನೀಡು : ಸ್ವನದೆ ಸರ ಸಾಮ್ಯತವ ಕರೆಯುವ ಜನರ ಕಾಮನೆಯನ್ನು ದುಹಿಸುವ ಮುನಿಯ ಹೋಮದ ಧೇನುವನಂ ತನ್ನೆದುರಿನಲಿ ಕಂಡ (ಕಭುವಂ. ೨-೭೧).

[ದುಹ್ಯ (P < ಸಂ. ದುಹ್) + – ಇಸ್ಯ].

ದುಹೇರ, ದುಹೇರಿ (ಗು). ೧. ಇಮ್ಮಡಿ ; ದ್ವಿಗುಣಿತ (ಕ). **ದುಹೇರಿ** : ೨. ಪ್ರತಿ ; ಸಮಾನವಾದ ಗುಣವುಳ್ಳ : ಸ್ವಾತಂತ್ರ್ಯಚಳುವಳಿಯ ಕಾಲದಲ್ಲಿ ದುಹೇರಿ ಕಾರುಭಾರು ನಡೆಯುತ್ತಿತ್ತು (ಕೂಡಿ).

[←ಮರಾ. ದುಹೇರಾ, ದುಹೇರೀ, ದುಹಿರೀ]

ದುಹೇರಿ 'ದುಹೇರ' ನೋ.

ದುಳಿರವಟ (ನಾ). ಒಂದು ಬಗೆಯ ತೆರಿಗೆ : ಯಾಗ್ರಾಮದ ಚತುಸ್ಸೀಮೆಗೆ ಸಲುವ ನಂಜೆ ಪುಂಜೆ . . . ಕುಳವಡೆ ಸಾರಡೆ ದುಳಿರವಟ ಕಟಳೆವಟ ಏರಿ ಎಮಾನ ಬೆಲೆ ಸಂತೆ ಉಂಟಾದ ಹಲ ಉಪಾಧಿಗಳೊಂ ಸಹ ಸೇರ್ಸಿ ಕೊಟ್ಟೆವಾಗಿ (ಸೌಇಇ. IX-11, ೪೭೩-೮ ; 1470). [?]

△ **ದುಱಿ** 'ದುರ್ಱ' ನೋ.

ದುಱಿದುಱಿಸು 'ದುಱುದುಱಿಸು' ನೋ.

ದುಱಿ, ಜುಱಿ (ಕ್ರಿ). ಹೊರಚೆಲ್ಲುಂ; ಹೊರಸೂಸು : ಇಱಿದ ನೆಲಂಗಳಾಂ ತವರ ನೆತ್ತರನಕ್ಕೈಸಲಾಱ್ದೀಗಳುಂ ದುಱಿತೊರೆಯುತ್ತವಿರ್ದ್ದವುವು ತೀಂಬ ಕಟಿಂಗಳನೆಂಟುವಾನೆಗಳುಂ ತಱಿತಱಿನಪ್ಪಿನಂ ಜಯದ ಲಚ್ಚಣಗಂಬ ದೊಳುರ್ದ್ದಿಕೊಳುವುವು (ಎಕ. V, ಬೇಲೂರು. ೦೭೦-೦೫ ; ಸು. 1160).

ಜುಱಿ: ಮುರಾರಿ ಮು[ಂ] ಖರನಂ ಸಱ್ಜನೆ ಸೀಟ್ದಾಱದ ಮುನಿಸಿಂದೊಗೆ ದಾಱಿ ಪರಪೆ ಧಾತು ನಿರ್ಝರದಂತಶ್ರು[ಜ]ಳವೊಱಿತು ಜುಱಿಯುತ್ತು ಮಿರ್ಪ ಧಾತ್ರಿಯಪ್ಪುದುಂ (ಅರ್ಧನೇ. ೮-೨೨ ಪ) ; ತಱಿದ ಕುಱಿಗಳ ಹಂದಿಯಡಗಿನ ಜುಱಿತ ರಕುತದ ಮೊಲನ ಖಂಡದ . . . ಹಱದೆಱಕೆಗಳ ಕಂಡಬಲೆ ಹೊಗಳಿದಳಡಬಳದ ವಂನೆಯ (ಕುಪ್ಯಾವಿ. ೩-೩೭). 'ತೊರೆ$_2$', 'ಸುರಿ$_1$' ಪರಾ.

ದುಱಿದುಂಬಿ 'ದುಱುದುಂಬಿ' ನೋ.

ದುಱು– (ಉಪ). ಕೆಟ್ಟದ್ದನ್ನು ಸೂಚಿಸುವ ಒಂದು ಉಪಸರ್ಗ. 'ದುಱುದುಂಡಿ', 'ದುಱುದುಂಬಿ' ಪರಾ. [<ದುರ್–]

ದುಱುದುಂಡಿ, ದುರುದುಂಡಿ, ದುರ್ದುಂಡಿ (ನಾ). ೧. ಕೆಟ್ಟ ವ್ಯಕ್ತಿ ; ಕೆಡುಕು ಮಾಡುವವಳು ; ದುಷ್ಟೆ : ಪಂಚಪೃಥ್ವಿಯ ಮಧ್ಯದಲ್ಲಿ ಒಂದು ಉಡುವರದ ಗಿಡ ಹುಟ್ಟಿತ್ತು ಆ ಗಿಡುವನೊಡದು ಒಬ್ಬ ದುಱುದುಂಡಿ ಹುಟ್ಟಿದಳು (ಕೋಲಶಾಂ. ೨೨-೮) ; ತನುಮಧ್ಯದಲ್ಲಿ ಅಜ್ಞಾನಸ್ವರೂಪಿಣಿಯಾದ ಮಾಯೆಯೆಂಬ ದುರ್ವಿಕಾರಿ ಹುಟ್ಟಿ ಆ ತನುಮಧ್ಯದಲ್ಲಿ ಇರುತ್ತಿಹಳೆಂಬುದೀಗ . . . ದುಱುದುಂಡಿ ಹುಟ್ಟಿದಳು ಎಂಬ ಶಬ್ದಕ್ಕರ್ಥ (ಕೋಲಶಾಂ. ೨೨-೮ ಟೀಕು). **ದುರುದುಂಡಿ :** ೧. ಅನಿತರೊಳು ದುರುದುಂಡಿಯೈತಂದು ಪೂಜೆಗೈದಾ ಮಹಾಕಾಳಿಯಂ (ಪಂಕಾರಾ. ೬-೪೮-೪೮). **ದುರ್ದುಂಡಿ :** ೨. ಬಜಾರಿ ; ಗಂಡುಬೀರಿ : ಈ ದುರ್ದುಂಡಿಯನ್ನು ಮದುವೆಯಾಗಲಾರೆ (ಸೀತಾರ. ೧೦) ; ಒಮ್ಮೊಮ್ಮೆ ಆಕೆಯನ್ನು ದುರ್ದುಂಡಿ ಎಂತಲೂ ಕರೆಯುತ್ತಿದ್ದರು (ನನ್ನೂರು. ೮). [ದುಱು + ದುಂಡಿ$_1$]

ದುಱುದುಂಬ (ನಾ). ಕೆಟ್ಟವನು; ನೀಚ : ದುಱುದುಂಬ ಪೊಡವಿಯಮರರ ಬಸಿಱೊಳೊಗೆದು ಸುಗತಿಯ ಸೊಂಪುವಡೆಯದತ್ಯಂತ ಪಾತಕಿಯಾದೆ (ಕೊಟ್ಟೂಬ. ೪-೦೩೨). [<ದುಱುದುಂಬಿ]

ದುಱುದುಂಬಿ, ದುರುದುಂಬಿ$_1$, ದುಱಿದುಂಬಿ (ನಾ). ೧. ಕೆಟ್ಟ ಗುಣವುಳ್ಳ ವ್ಯಕ್ತಿ ; ನೀಚ ವ್ಯಕ್ತಿ : ನಾಡ ದುಱುದುಂಬಿಯರೆಂದುದನೆಂದ ವಂದಿರೊಳ್ ನೆಱೆದೊಡಗೂಡಿ ಕಳ್ಗುಡಿವ ಡಂಬಗಿದೊತ್ತಿರನಾರಂ ಬಾರಿ ಪರ್ (ಪಸಾರ. ೪೬೬) ; ಪರಿಣತರ ನುಡಿಗಳನು ಕಿವಿಯೋಕರಿಸಿದವು ದುಱುದುಂಬಿಗಳ ಬಾಹಿರರ ನುಡಿಗಳನಡಿಗಡಿಗೆ ಕುಡಿದು ತೇಗಿದವು (ಕುಪ್ಯಾಸ. ೧೦-೩) ; ಪಿರಿಯಪಟ್ಟಣದ ರಾಜ್ಯವಾಳುವ ದುಷ್ಟ ದುಱುದುಂಬಿ ನಂಜುಂಡರಾಜ . . . ಮಲೆತಿರ್ದನಾಗ (ಕಂನವಿ. ೧೮-೨೦) ; ಮುಂಬಗಲ ನೆಳಲವೋಲ್ ದುಱುದುಂಬಿಗಳೊಳ್ ಮಾಳ್ಪ ಮೈತ್ರಿ ಕುಂದುಗುಂ (ನೀತಿಮಂ. I, ೨೨೯). ೨. ತುಂಟತನವುಳ್ಳುದು : ನಿನ್ನಯ ಸುಟಿಗುರುಳಲ್ಲವಿವೆನ್ನಯ ದುಱಿಯೆಂದು ಬಂದು ತಲೆವಿಡಿದವೊಲಾ ಚೆನ್ನೆಯ ತಲೆವಿಡಿದಿರ್ದುದು ತಾಂ ನಱಂಗಂಪಿಗೆ ತುಂಬಿ ದುಱುದುಂಬಿ ಕರಂ (ಪಂದ್ರಪು. ೭-೦೦೨). ೩. ತುಂಟ : ಮಱಿಯೊಳು ಬಂದು ಮಕ್ಕಳ ಗರ್ದುಗವ ಹಾಲುಪಱಿಯೆಂದು ಬಾಚಿ ಹಿಡಿಯಲು ಹೆಱನೂಂಕಿ ಬಳಿಕ ಕೈಯಿಂದ ಸುಲಿವನಾವ ದುಱುದುಂಬಿಯಾ ಬಾಲವಿಷ್ಣು (ನೇಮಿಸಂ. ೧೫-೧೦೮). (ಗು). ೪. ಕೆಟ್ಟಗುಣವುಳ್ಳ ; ಭಂಡತನದ : ಕೆಲಬರ್ದುಱುದುಂಬಿ ಮುಂಡೆಯರ್ಮನೆಯೊಳಗುಳ್ಳುದಂ ತವಿಸಿ ಗಂಡರನೇಂ ಕುಱಿಮಾಡಿ ತಿಂದಪರ್ (ಸಮ್ಮಪ. ೯-೧೦೩) ; ಸಂದುಗೊಂದಿನೊಳಡಂಗಿರ್ದು ಬಟಿವೋಕರ ಕೊಲ್ವ ಕಳ್ವ ದುಱುದುಂಬಿ ಕೊಲೆಗಂಗೆ (ರಾಮಾಶ್ವ. ೭೪-೨). **ದುರುದುಂಬಿ$_1$:** ೧. ಶಿಶುಪಾಲನು ಮಹಾ ದುರುದುಂಬಿ (ರಾಜಸೂ. ೧೧). ೪. ಈ ದುರುದುಂಬಿ ತುಂಬಿಯು ಪೂಜ್ಯಳಾದ ಈಕೆಯ ಮುಖಕ್ಕೆ ಎರಗುವುದು (ಶಾಕುಂತ. ೯೦-೧೭). **ದುಱಿದುಂಬಿ :** ೫. ದುರಭಿಮಾನದ ; ಹೆಮ್ಮೆಯ : ತೆಱಪಿಲ್ಲದಿರೆ ಮುನ್ನಿನೊಂದು ದುಱಿದುಂಬಿ ಲಿಪಿಯನುಜ್ಜಿಸಿ ಬರೆಸಿದೆನು (ಭರಣ. ೫೪-೪೩). [ದುಱು + ತುಂಬು$_2$ + – ಇ$_3$]

ದುಱುದುಂಬಿಗ, ದುರುದುಂಬಿಗ (ನಾ). ದುಷ್ಟ ; ನೀಚ ; ಕೆಟ್ಟವನು ; ಪುಂಡ : ನೋಟಕರು ನಿರ್ಭಯರು ಕೊನಬಿಗಳಾಟವಿಕ ದುಱುದುಂಬಿಗರು [ಪಾಠಾಂ. ಗಳು] . . . ಖಳರು ಕೂಡಿತು ಕೋಟಿಸಂಖೆಯಲಿ (ತೊರರಾ. ೫-೫-೧೫) ; ಡಂಬಕನು ಡೌಳಿಯ ವೃಥಾ ದುಱುದುಂಬಿಗಂ . . . ಎಂದಿರದೆ ಬಂದೆ ನಂದಿ ನೆಱೆ ಪಕ್ಕಾದಿರಕ್ಕಟ ದುಃಖದುರಿಗೆಂದ (ಮದೇಪು. ೩-೨೬). **ದುರುದುಂಬಿಗ :** ಪೆರರ ಪಡಿಮಾತನಾಡುವ ದುರುದುಂಬಿಗನೆಕ್ಕಸಿಕ್ಕನಂ (ನೀತಿಸಾ. ೮೫೬). [ದುಱುದುಂಬಿ + – ಗ$_2$]

ದುಱುದುಂಬಿತನ, ದುರುದುಂಬಿತನ (ನಾ). ೧. ಕೆಟ್ಟ ನಡವಳಿಕೆ ; ದುಷ್ಟತನ ; ನೀಚತನ : ತಾನಿಲ್ಲದುದ ನೆವವನಿಕ್ಕಿ ದುಱುದುಂಬಿತನದಿ ನಿವನಂ ಕೊಲಿಸಿ (ಸಮ್ಮಕೌ. ೨-೯೫) ; ರಾಮನ ಕೊಱಚಾಟದಿಂ ಕೊಲಿಸುವುದು ದುಱುದುಂಬಿತನವಲ್ಲವಿದು ರಾಜಕಾರ್ಯದ ಹೊಱಿಗೆಯಲ್ಲೆಂದು ಪೇಳಿದನು (ಕುರುಸಾಂ. ೩೫-೩೦) ; ಆತನೊಳ್ ನೆಲೆಗೊಂಡ ದೈವದೊಲವುಮಂ, ಪಾರ್ವರ ಪರಕೆಗಳುಮನಱಿಯದೆ ದುಱುದುಂಬಿತನದಿಂ ಕೆಣಕುಜಗಳಂ ತೆಗೆವುದುಂ (ಜಿಕವಂ. ೧೩-೭). ೨. ತುಂಟತನ : ಮಿಸುವ ಕರವೀರದ ಕಡುಗೊರ್ಬಿದ ಬಿರಿಮುಗುಳ್ಗಳಂ ಮುಸುಂಕಿ ಮುತ್ತಿ ಮುಸುರಲೆಂದು ಮುಂಕೊಂಡು ಝೇಂಕರಿಸುತ್ತ ದುಱುದುಂಬಿತನದಿಂ ಬಂದು ಮಱಿದುಂಬಿಗೆ ಚಂಪಕಕೋರಕ ಭ್ರಾಂತಿಗೊಟ್ಟು ತೊಟ್ಟನೆ ಮಗುಳ್ಚಿಯುಂ (ರಾಜಶೇ. ೧೨-೩೯ ಪ). ೩. ಅವಿವೇಕ ; ದಂಡುಕುತನ : ದುರುಳ ನೀ ದುಱುದುಂಬಿತನದಲಿ ನಿನ್ನ ಹೊಗಳಿದೊಡೆ ಗರುವ ಮಾನ್ಯರು ಮೆಚ್ಚುವರೆ (ಕುಪ್ಯಾವಿ. ೭-೦೮) ; ದುಱುದುಂಬಿತನದಿ ಧುರಮಂ ಮಾಳ್ಪೆನೆಂದೂರ ಪೊಱಮಟ್ಟು ತನ್ನ ಸೇನೆಯನು ಪರಬಲಕೆ ಕುಯ್ಗುಱಿ ಮಾಡಿ ನಾಡು ಬೀಡಂ ಕೆಡಿಸಿಕೊಂಡನಲ್ಲಾ ನಮ್ಮ ನೃಪತಿ (ಸಮ್ಮಕೌ. ೮-೫೪) ; ಇಱಿದು ಮೆಱಿದು ಪೊಕ್ಕು ಪೊಱಮಡಬಲ್ಲ ಅಱಿಕೆಯಧಟರಿರ್ದಂತೆ ದುಱುದುಂಬಿತನದೊಳಂತಿದನೆಣಿಸುವರೇ ಕಿಱುವರೆಯದೊಳೆಲೆ ಮಗನೇ (ನೇಮಿಸಂ. ೨೮-೩೦). **ದುರುದುಂಬಿತನ :** ೧. ಬರಿದೆ ದುರುದುಂಬಿತನದ ಮಾನಿನಿಯವಳ್ ಕುಲನಾಶಿನಿ (ರುಕ್ಮಾಂಗ. ೬-೫೭) ; ಅವರು ಮಕ್ಕಳ ದುರುದುಂಬಿತನಕ್ಕೆ ಎಡೆಕೊಟ್ಟು ಕುಟುಂಬವಿನಾಶಕ್ಕೆ ಕಾರಣರಾಗುತ್ತಾರೆ (ಕಸಾಣ. ೨೫೬); ದುರುದುಂಬಿತನ, ಕಾಮತೃಷ್ಣೆ, ಹಿಡಿಹೊನ್ನಾಶೆ ಈ ಗೋಡೆಗಳಾಚೆ ಮಾನವ ದೃಷ್ಟಿಯು ಇನ್ನೂ ಹರಿದಿಲ್ಲ (ರೂಪುಮ. ೧೮) ; ಜೈಲುಗಳಲ್ಲಿ ತಾಂಡವವಾಡುತ್ತಿದ್ದ ಘೋರದುಷ್ಕರ್ಮವನ್ನೂ ದುಷ್ಕರ್ಮಪ್ರವರ್ತಕರ ದುರುದುಂಬಿತನವನ್ನೂ ಅವನು ಕಣ್ಣಾರೆ ಕಂಡಿದ್ದನು (ಪುನರು. ೫೯೦). ೪. ಮದ; ಸೊಕ್ಕು ; ಅಹಂಕಾರ : ರಾಮನನ್ನು ಬಗ್ಗು ಬಡಿಯುತ್ತೇನೆಂಬ ದುರುದುಂಬಿತನದಿಂದ ರುದ್ರ ಕರ್ನಾಟಕ ರಾಜ್ಯದ ಮೇಲೆ ಧಾಳಿ ನಡೆಸಿದನು (ನಂಜುಂಡ. ೪೪) ; ಆದರೆ, ನಾನೀಗ ದುರುದುಂಬಿತನದ ಗಂಗನನ್ನು ಹದಗೊಳಿಸಲಾಗಿ ಅವನೆ ರಾಜ್ಯದೊಳಗೇ ನುಗ್ಗುತ್ತೇನೆ (ವೀರಬಂ. ೬೫).

[ದುಱುದುಂಬಿ + – ತನ]

ದುಱುದುಂಬಿನಿ (ನಾ). ದುಷ್ಟೆ ; ಕೆಟ್ಟವಳು : ಕೇಡಿಯೊ ಕುಂಟಣಿಯೊ ಕುಬ್ಜೆಯೊ ನಾಡೆ ದುರ್ಗಂಧಿನಿಯೊ ದುಱುದುಂಬಿನಿಯೊ ದುರ್ಜನಿಯೊ (ಮದೇಪು. ೬-೨೦). [< ದುಱುದುಂಬಿ]

ದುಱುದುಱನೆ (ಅ). ವೇಗವಾಗಿ ; ದುರುದುರು ಎಂಬ ಶಬ್ದದೊಡನೆ: ಇಱಿದೆಚ್ಚು ಕಡಿವಲ್ಲಿ ಹೊಡವಲ್ಲಿ ಸೀಳ್ವಲ್ಲಿ ದುಱುದುಱನೆ ನೆತ್ತರುಗೆ (ವೀಕೃಪು. ೨-೧೧-೮). 'ದುರುದುರನೆ' ಪರಾ.

[ದುಱುದುಱು + – ಅನೆ$_1$]

ದುಱುದುಱಿಸು, ಜುಱುಜುಱಿಸು, ದುರುದುರಿಸು$_1$, ದುಱದುಱಿಸು (ಕ್ರಿ). (ನೊರೆ ಸಹಿತವಾಗಿ) ಧಾರೆಯಾಗಿ ಸುರಿ ; ಒಂದೇ ಸಮನೆ ಸ್ರವಿಸು ; ಬಳಬಳನೆ ಸುರಿ : ಕೋಣನ ಮುಱಿದಲೆಯ ಮಿಸಲಿನ

ರಕುತದ ದುಱುದುಱಿಪ ದಂಡೆಯಲಿ ಕಲಸಿದ ಕೂಳ ಮುದ್ದೆಗಳ (ಕುಪ್ಯಾಕ. ೮-೮); ದುಱುದುಱಿಪ ನೆತ್ತರ ನಿಹಾರದ ಮೈಯ ಸಡಲಿದ ಕೈಯ ಬಿಲುಸರಳ ಅರಸನನು ಕಂಡಳಲಿದರು (ಕುಪ್ಯಾಕ. ೧೧-೫೫); ದ ಱುದುಱಿಪ ತಲೆ ವಿದುಳ ಹಱುಗರುಳ ನೆಣವಸೆಯ ಮೂಳೆಯ ಮುಱುಕುಗಳ ಕಡಿಖಂಡಮಯವಾಯ್ತಖಿಳಚತುರಂಗ (ಕುಪ್ಯಾದ್ರೋ.೧೮ ೩೩); ಮುಱಿದ ಮೂಳೆಗಳಿಂ ಸುಭಟರ ದುಱುದುಱಿಸುವ ಗಾಯಗಳಿಂದಾ ರಣ ದುಱಿದುದು ಭೀಕರವಡೆದು (ಕುರಾಸಾಂ. ೧೨-೮೦). ಜುಱುಜುಱಿಸು: ಆ ಕುಮಾರ ಶರಾಭಿವರುಷದಲಿ ಜುಱುಜುಱಿಪ ಕರುಳಗಳ ಖಂಡದ ಹಱಿದೊಗಲ ತೊಡೆ ತೋಳ್ಗಳಲಿ ಹೆದ್ದೊಱಿಗಳಾದವು (ನಿಭಾಗ. ೧೦-೮೬-೮); ಜುಱುಜುಱಿಪ ಕೀವು ನೆತ್ತರ್ಗೆಱಗುತೆ ಝುಮ್ಮೆಂದು ಮೊರೆವ ನೊಳವಿಗೆ (ವೃಷವಿ. ೩೮-೧೩೪). ದುರುದುರಿಸು$_1$: ಗುರುಗುರಿಸುವ ಜೀವದೊಡಲೊಳು ದುರುದುರಿಸುತಿಹ ರಕುತಮಯದಿಂ ಮೆರದುದೈ ರಣಭೂಮಿ (ವೀರಮ. ೩-೧೪); ದುಱದುಱಿಸು: ದುಱದುಱಿಪ ರಕುತದ ಕಾಲುವೆಯೊಳುಱಿ ತೇಲಿದುವು ಹಯರಾವ್ತರಟ್ಟೆಗಳು (ಮೃಗಾಕಾ. ೪-೪೯); ದುಱದುಱಿಪ ನೆತ್ತರಿನ ಕೋಡಿಯಿರದೊತ್ತರಿಸಿ ಸುತ್ತುವರಿಯೆ . . . ಬೆಂಬತ್ತಿದರ್ ದಾನವರನೆತ್ತಿದಾಯುಧಗಳಿಂದೆ (ಜಿಲಪು. ೪೪-೪೦).

[ದುಱ ದುಱು + – ಇಸು$_3$]

ದುಱುದುಱು (ನಾ). (ದ್ರವಪದಾರ್ಥಗಳು ಸುರಿಯುವುದನ್ನು ಸೂಚಿಸುವ) ಒಂದು ಅನುಕರಣ ಶಬ್ದ: ದುಱುದುಱ್ಱೆಂದು ನೆತ್ತರುಱಿ ಶಾಕಿನಿಗಳಲ್ಲಿ ಬಾಯ್ಗಳನೊಡ್ಡಿ ಬಿಸಿನೆತ್ತರ ಜುಱ್ಱೆಂದು ಪೀರಿಯಾನಂದಿಸುತ ನಲಿದು ಘಱಘಱ್ಱೆಂದು ತೇಗಿದವು (ಜೀರಮ. ೪-೧೫); ದುಱುದುಱ್ಱೆಂದು ನೆತ್ತರುಗೆ ಕುಕಿಲಿರಿದು ಭೂತಂಗಳೆಯ್ದೆ ಬಾಯೊಡ್ಡಿ ನಲಿದು . . . ಘಱ್ಱೆಂದು ತೇಗಿ ಪರಸಿದವು ಶಿವದೂತರಂ (ವೀಕೃಪು. ೨-೭-೪೮).

ದುಱುದುಱುದಿನ್ 'ತುಱುತುಱುತಿನ್' ನೋ.

△ **ದುಱುಸು** 'ದುರಂಸು$_1$' ನೋ.

ದೂ 'ದು' ನೋ.

ದೂಂಟಿಕ್ಕು, ದೂಟಿಕ್ಕು (ಕ್ರಿ). ೧. ಮೇಲಕ್ಕೆ ನೆಗೆ; ಜಿಗಿ: ಭರದಿಂ ಬಂದೆನ್ನ ಮೇಗಾಲ್ಗಳನಮಳಡಿಯಿಂ ಮೆಟ್ಟಿ ದೂಂಟಿಕ್ಕಿ . . . ತಾಮಾಧರಮಂ ತತ್ಕಾಂತೆ ಪೆಂಪಿಂ ಮಗುಟ್ಟು ಮಗುಟ್ಟವಳ್ ಚುಂಬನಂ ಗೆಯ್ದಳಾಗಳ್ (ದಶಕು. ೧೦-೯೬); ಮರಳಿ ಕುಂಟುತ್ತೆ ದೂಂಟಿಕ್ಕಿ ನಡೆಯುತ್ತೊಮ್ಮೆ ಕರದೊಳಗೆ ಲೇಖ್ಯಮಂ ಪಿಡಿದೆತ್ತಿಕೊಂಡು (ಅರಾಜ. ೬-೧೭). ದೂಟಿಕ್ಕು: ೧. ಉರದೊಳ್ ಪೆರ್ಮೊಲೆ ನಿಂದು ಮಿಳ್ಳಿಸೆ ಭುಜಾಮೂಲಂಗಳ ಸ್ಥಾನದೊಳ್ ಬೆರಸಲ್ ಪೆರ್ದೊಡೆ ನೀಳ್ದು ಕೂಡೆ ನಿಮಿರಲ್ ದೂಟಿಕ್ಕೆ ತಾಂ ನೀಳ್ಕಿ ಸೌಂದರಿಯೊರ್ವಳ್ ಕಡುನೀಡಿ ಮೇಲೆ ನಳಿತೋಳಂ ಚಂಚಳಂಬೆತ್ತ ನುಣ್ಬೆರಳಿಂ ಪೂದಿಱಿವುತ್ತವಿರ್ದಳೊಲವಿಂ ದೊಂದುಚ್ಚಶಾಖಾಗ್ರದೊಳ್ (ಬಾಧಪು. ೧೪-೮೫). ೨. ತಳ್ಳು; ದೂಡು; ಸರಿಸು: ತರಳತನದಲಿ ತಾನು ಮಾಡಿದ ದುರುಳತೆಯ ದೂಟಿಕ್ಕಿ ನಿಮ್ಮಯ ಹಿರಿಯತನವನು ಮೆಱೆವುದು (ತೊರರಾ. ೬-೨೪-೩೭); ನಿನ್ನ ನಂದನಂ ದುರುಳತನದಿಂ ನಿಮ್ಮ ದೂಟಿಕ್ಕಿ ಹಿರಿಯರಂ ಕುರುಡನಂ ನಂಬಿ ಕುರುಡಂಅಡವಿಯಂ ಪೊಕ್ಕವೊಲಾದ (ತುರಂಗ. ೭೦-೭); ಗುರು ಭೀಷ್ಮ ವಿದುರಾದಿಗಳ್ನುಡಿಯ ದೂಟಿಕ್ಕಿ ದುರುಳರ ಕುಯುಕ್ತಿಗಂ ಮೈಗೊಟ್ಟು ಕೆಟ್ಟು ಪೊರದೆಗೆದು ಪೋಪಾಗಳೀಗಾರುಂಟು (ತುರಂಗ. ೭೩-೫೪); ನಮ್ಮ ಪಾಂಡವರೆಂಬ ಪ್ರೀತಿಯ ಸೊಮ್ಮ ನಾವು ಸುರಿದರೆ ಕೌರವ ಕರ್ಮಿಗುಚಿತವ ನೆನವನೆಂದೇ ಹೊರೆಗೆ ದೂಟಿಕ್ಕಿ ನಮ್ಮ ಪ್ರೀತಿಗೆ ಮುನಿದರರಿಯದೆ ಹೆಮ್ಮೆಯಿಂದವರೊಡನೆ ನೆರವಿಗಧರ್ಮವಿಡಿದೈತಂದ ಕೌರವನೆಲ್ಲಿ ತೋರೆಂದ (ಕೃಷ್ಣಾಕ. ೨೯-೯೦). [ದೂಂಟು$_1$ + ಇಕ್ಕು]

ದೂಂಟಿಸು, ದೂಟಿಸು, ದೂಡಿಸು (ಕ್ರಿ). ೧. ಹಾರುವಂತೆ ಮಾಡು; ಜಿಗಿಸು; ಚಿಮ್ಮಿಸು: ಎಂಟು ಶಿರವನೀವೆನೆಂಟೊಡಲಾತಂಗೆಂದಂಟಿ ಮಾನಸದಿ ಮಂತ್ರವನೂ ದೂಂಟಿಸುತವೆ ತನ್ನ ಕಂಠವರಿಯಲು ಶ್ರೀ ಕಂಠ ಹೋ ಪುರೆ ಸಾಕು ನಿಲ್ಲು ಎನುತ (ಭೈರವೇ. ೧-೨೬೮). ದೂಟಿಸು: ೧. ಉಚ್ಚದಿರು ದೋರ್ವಳತಟಾಕದ ಮುಚ್ಚುದೂಂಬನು ನಮ್ಮ ಮುಂದೆನು ತೆಚ್ಚು ಗಗನಕೆ ದೂಟಿಸಿದ[ಪಾಠಾಂ. ದನು] ದೂಷಣನ ಮಸ್ತಕವ (ತೊರರಾ. ೩-೬-೧೮). ೨. ನಾಶಮಾಡು; ಇಲ್ಲವಾಗಿಸು: ಭಕ್ತಜನ ಹೃದಯಾಂಧ ಕಾರಮಂ ದೂಟಿಸಲು ಬಲದ ಕೈಯೊಳಗೆ ಚಕ್ರಾದಿತ್ಯನಂ ಧರಿಸಿ ರಾಜಿಸುತಿಹೆ (ಅರ್ಜಾವಿ. ೧-೮೫); ತಾಟಕಿಯಾಟಮಂ ಕಣೆಯೊಂದರಿಂದ ದೂಟಿಸಿದನು ರಾಮ (ಸಂರಾಣಂ. ೧೭). ದೂಡಿಸು: ೩. ಮುಂದಕ್ಕೆ ಬರು; ಚಾಚು: ದೂಡಿಪ ಬೆಳಗಾಯಿ ಬೊಗರಿಮೊಲೆಯ ಚೆಲ್ವ ಗಾಡಿಕಾತಿಯರೈದಿದರು (ಕಂಸವಿ. ೯-೮೦); ಓಡಿತು ತಮದೊಡ್ಡು ಪಾಡಿದೊ ಕೋಗಿಲೆ ದೂಡಿಸಿ ಅಂಬುಜವರಳ್ದೊ (ಪೂಜ್ಯಚ. ೭).

ದೂಡಿಸಿಕೊಳ್ಳು = ನೂಕಿಸಿಕೊಳ್ಳು; ಹೊರಗೆ ಹಾಕಿಸಿಕೊಳ್ಳು: ದೂಡಿಸಿಕೊಂಡ ಮನುಷ್ಯ ಹೇಡಿಗಿಂತ ಕಡೆ (ಗಾದೆ); ದೂಡಿಸಿಕೊಂಡವನಿಗೆ ನಾಡಿನ ಗೊಡವೆ ಯಾಕೆ? (ಗಾದೆ). [ದೂಂಟು$_1$ + – ಇಸು$_3$]

ದೂಂಟು$_1$, ದೂಟು$_1$, ದೂಡು (ಕ್ರಿ). ೧. ಒಂದೇ ಕಾಲಿನಿಂದ ನಡೆ; ಒಂಟಿಕಾಲಿನಲ್ಲಿ ನಡೆ; ಕುಂಟಿನಡೆ; ಕುಂಟು: "ದೂಂಟು – ಏಕಪಾದ ಗತೌ" (ಶಮಧಾ); ನಿತ್ಯಬಿಂದುಗೆ–ಬೆಡಂಗು, ಕಡಂಗು . . . ದಾಂಟು, ದೂಂಟು (ಶಮದ. ೩೬ ಪ್ರಯೋ); ದಾಂಟು, ದೂಂಟು (ಶಪ್ಯಾಸು. ೮೦ ಪ್ರಯೋ) ೨. ಹಾರಾಡು; ಗಾಳಿಯಲ್ಲಿ ತೇಲಾಡು, – ಸುತ್ತಾಡು: ನವಸಹಕಾರನೊಳ್ ನೆರೆದ ಮಲ್ಲಿಗೆ ನಲ್ಲಳ ತಾರಹಾರದಂತೆವೊಲಿರೆ ಮೊಲ್ಲೆ ಮೊಗ್ಗರಿಸೆ ಕಂಪನಲಂಪಿನೊಳೀಂಟಿ ದೂಂಟುವಾಡುವ ಮುಱಿದುಂಬಿ ಮಾಲೆ ತಳಿರೊಳ್ ತಡವಾಯ್ದೆರ್ದೆ ಝುಂಕೃತಂ ತುಳುಂಕುವ ನೆವದಿಂದೆ ಜೇವೊಡೆದು ನೋಡಿದನಂಗಜನಿಕ್ಷುಚಾಪಮಂ (ಅನಂಪು. ೭-೯). ದೂಟು$_1$: ೩. ಹಾರು; ಚಿಮ್ಮು: ದೂಟ ಬಿದ್ದವು ಸೀಸಕವು ಶತಕೋಟಿ ಘಾಯದ ಘಟನೆಯೊಳು ಶತಕೋಟಿ ಘಾಯಕೆ ಸಿಡಿದ ಹೇಮಾಚಳದ ತುದಿಯಂತೆ (ಕುಪ್ಯಾಗ. ೭-೧೨). ೪. ಹಾರಿಸು; ಚಿಮ್ಮಿಸು: ದೂಟೆ ಮಸ್ತಕವಭ್ರ ಕಿಟ್ಟುದು ಕೂಟದಲಿ (ತೊರರಾ. ೩-೬-೧೯). ೫. ನೂಕು; ದಬ್ಬು; ತಳ್ಳು. ೬. ನಿವಾರಿಸು; ದೂರಮಾಡು: ಪದಧೂಳಿಯಲಿ ದೂಟಿದನಹಲ್ಯಾ ಸತಿಯ ದುಷ್ಕೃತವ (ತೊರರಾ. ೦-೨-೨೦); ದೂಡಿದಳು ಲಜ್ಜೆಯನು ಮೂರ್ಛೆಯ ಧಾಟಿಯಲಿ ಧೃತಿಗೆಟ್ಟಳು . . . ತರಳಾಕ್ಷಿ (ನಿಭಾಗ. ೧೦-೫೮-೨೪). ೭. ಅಲುಗಾಡು; ಕಂಪಿಸು; ತೂಗಾಡು; ಏರುಪೇರಾಗು: ಕೋಟಿಸಂಖ್ಯೆಯ ಬಲವ ಮಿಕ್ಕಿನ ಕೋಟಿಸಂಖ್ಯೆಯ ಯೂಥಪರು ಧರೆ ದೂಟಲಂಬುಧಿ ಮೀಟಲು . . . ತೋಱಿಸಿದರೀ ಪರಿಪಾಟಿಯಲಿ . . . ಗಣನೆಯಿಲ್ಲದ ರಾಮಸೈನಿಕವ (ತೊರರಾ. ೪-೭-೨೫). ದೂಡು: ೫. ತೊಟ್ಟಗೆ ವಿಭು ಸಾಯೆ ಪೊಯ್ದು ಕಿವಿಯಂ ಪಿಂಡಿ ದೂಡಲೊಡರ್ಚಿ ಬಂದನೇ (ಸುಕುಮಾ. ೨-೬೩); ದಶಕಂಠ . . . ದೂಡಿಬಿಟ್ಟನು ತಮ್ಮ ವಿಭೀಷಣನ (ಕೌಶಿರಾ. ೧೪ ಪಲ್ಲವಿ); ಚೇದಿಭೂಪತಿ ದಂತವಕ್ತ್ರರು ವಿಪ್ರ ಶಾಪದಲಿ ಆದರೀ ಪರಿ ವಿಷ್ಣುಪದದಿಂ ದೂಡಿದುದು ನಿಜಕರ್ಮಗತಿ (ನಿಭಾಗ. ೭-೦-೨೫); ಈ ಸಣ್ಣ ಮಗುವ ದೂಡುವರಲ್ಲೆ ಯುದ್ಧಕ್ಕೆ (ಅಭಿಕಾ. ೮); ಬಳಿಕಿತ್ತ ಮಲ್ಲಮ್ಮನಂ ದೂಡಿ ತಾವುಣ್ಣಲೆಳಸುತೊಳಪೊಕ್ಕು ನೋಡಲ್ ಬೋನ ಕಜ್ಜಾಯ ಉಳಿಯದೆಲ್ಲವಡಂಗಿ ಪೋಗಿತ್ತು (ಮಲ್ಲಚ. ೭-೨); ಬೆಳಕು ಕತ್ತಲೆಯ ಎರಡು ಗೋಲಗಳು ಒಂದನೊಂದು ದೂಡೆ (ಅರಳು. ೨೨೮-೨೦); ಎರಡು ಗಂಟೆ ಕಾಲ ನಿದ್ದೆಮಾಡದೆ ಅತ್ತಿತ್ತ ಹೊರಳಿ ಸಮಯ ದೂಡಿದರು (ಕಾವೇರಿ. ೧೭೦); ಕಂಡವರ ಮಕ್ಕಳನ್ನು ಬಾವೀಲಿ

ದೂಡಿ, ಆಳಾ ನೋಡಿದ ಹಾಗೆ (ಗಾದೆ). ೬. ಸಖಿ, ಮುನ್ನಿನ ಸಖ್ಯವು ಸಾರ್ಥಕವೆ ಸುಖಕಾಲದಿ ಸಖಿಯರ ದೂಡುವರೆ (ವಿಸೀಗೀ. ೭೮-೪). ೮. (ಹಳ್ಳಿ, ಜಾತಿ ಮುಂತಾದುವುಗಳಿಂದ) ಹೊರಗೆ ಹಾಕು,-ಬಹಿಷ್ಕರಿಸು : "ದೂಡು-ಹೊರಗೆ ಹಾಕು" (ಜಾನಕೋ. ೭).

[ದೇ.॥ ತಮಿ. ತೂಣ್ಬು ; ತುಳು. ದೂಡು ; ಕೊಡ. ದುಡ್, ದುಡಿ ; ತೆಲು. ದೂಂಟು]

ದೂಂಟು$_2$, ದೂಟು$_2$ (ನಾ). ಹೆಜ್ಜೆ ; ಅಡಿ (?): ಎಡೆಯೊಳ್ ದೂಂಟಿಂದೆ ದೂಂಟಿಂಗೆ ಪೆರ್ವಱಿಯಂ ಪೊಯ್ಸಿ ಕೆಲಕ್ಕೆ ನಾಣ್ಟೆ ತಲೆಗುತ್ತಿರ್ಪಾಕೆಯೇಂ ಜೋಡೆಯೇ (ಪಂಪಭಾ. ೪-೮೨). ದೂಟು$_2$: ದೂಟಿಂದೆ ದೂಟಿಂಗೆ ಮರವಟ್ಟುವಾ ಮುದುಕಿ ತೊಟ್ಟ ನೋಂಪಿಯ ಬಲ್ಮೆಯೂರೆಗೋಲಂ ನೆಮ್ಮಿ ಸಂಚಲಿಸಿದಳೊ ರಾಮನಂ ಕರೆದೊರಲಿ, ಕರೆದು ಕೂಗಿ (ಶ್ರೀರಾಮಾ. ೧೨೨-೨೯೪); P ಇದು 'ದಾಂಟಿಂದೆ ದಾಂಟಿಂಗೆ' ಎಂಬುದರ ಅಪಲಿಖಿತವಿರಬಹುದೆ ? [<ದೂಂಟು$_1$]

ದೂಂಡು (ನಾ). ಮನಸ್ಸಿನ ಅನಿರ್ಧಾರ (?) : ಮನಮೊಸೆದಿತ್ತು ದೂಣ್ಡಿರದೆ ಭೂಮಿಯನಿತ್ತು (ಬೊಂಕಣಾ. ೧೯೪೫, ಬಂಕಾಪುರ. ೧೧-೩೩; ?).

[<ದೂಂಟು$_1$?]

ದೂಕೀಲ (ನಾ). ಒಂದು ಬಗೆಯ ಆಭರಣ (?) : ಮಣಿಹಾರ ಕಾಣ್ಕೆಯನಿಟ್ಟುಯಿಟ್ಟು ದೂಕೀಲ ನೀವಾರಿಗಳನಿಟ್ಟನಾಗಮನೆಲೆಯನರಿದು ಕೈಗೋಣ್ಗಳೆತ್ತಿ ಸಾರಿದರು (ಜಿನಮು. ೩-೫). [?]

ದೂಕು, ದೂಗು (ಕ್ರಿ). ದೂಡು ; ದಬ್ಬು ; ತಳ್ಳು : ಸಾವಿತ್ರಿ ಎರಡು ತಿಂಗಳ ಕಾಲ ಕುಮುದಮ್ಮ ಠಂಗಮ್ಮ ಇವರನ್ನು ಆಶ್ರಯಿಸಿ ಬಾಳು ದೂಕಬೇಕಾಯಿತು (ತಾಯಿಕ. ೧೫೦). ದೂಗು : ತನ್ನ ತಾನೆ ದುಂಬಾಲ ಬಿದ್ದ ಕವಿನೆರಳ ದೂಗು ನೂಗು (ಅರಳು. ೩೫೫-೧೦). 'ನೂಂಕು$_1$' ಪರಾ.

[ದೇ. ॥ ತೆಲು. ದೂಂಕು = ಹಾರು, ನೆಗೆ]

ದೂಗ 'ದುಗ' ನೋ.

ದೂಗರುವ (ನಾ). ಇಮ್ಮಡಿ ಪರಾಕ್ರಮವುಳ್ಳವನು (?) : ಪರಿಪರಿಯ ಶಸ್ತ್ರಾಸ್ತ್ರ ಕೌಶಲಗಳ ದೂಗರುವ ತೋರಿದಂ (ತುರಂಗ. ೧೧-೩೮).

[ದೂ (<ದು) + ಗರುವ$_1$]

ದೂಗಿಸು (ಕ್ರಿ). ದಬ್ಬು ; ತಳ್ಳು ; ನಂಗ್ಗಿಸು : ಮಧ್ಯಮರು ಪುಢಾರಿತನದ ಯಜ್ಞದಲ್ಲಿ ಯಾರನ್ನೋ ದೂಗಿಸಿ ಕಪಟಸಾಕ್ಷಿತ್ವದ ತಾಟಸ್ಥ್ಯದಿಂದ ಅವರು ಮೈಮರೆಸಿಕೊಳ್ಳುವುದು . . . ವಾಡಿಕೆಯದೇ ಆಗಿದೆ (ಪಂಚಪಂ. ೬ ಮುನ್ನುಡಿ). 'ನೂಂಕಿಸು' ಪರಾ. [ದೂಗು (<ದೂಕು) + – ಇಸು$_3$]

ದೂಗು 'ದೂಕು' ನೋ.

ದೂಜಾವ 'ದುಜಾವ' ನೋ.

ದೂಟಾಡು (ಕ್ರಿ). ಅಲುಗಾಡು ; ಅಲ್ಲಾಡು. 'ದೂಟಾಡಿಸು' ಪರಾ.

[ದೂಟು$_1$ (<ದೂಂಟು$_1$) + ಆಡು$_1$]

ದೂಟಾಡಿಸು (ಕ್ರಿ). ೧. "ಹಾರಾಡಿಸು ; ಚಿಮ್ಮಾಡು" (ಪ್ರಭಣ್ಣ). ೨. ಅಲುಗಾಡಿಸು ; ಅಲ್ಲಾಡಿಸು ; ತೂಗಾಡಿಸು : ಮೇರುಶೈಲಮಂ ದೂಟಾಡಿಸಿತು ರಾಶಿ ತಾರಾಗ್ರಹಂಗಳಂ ತಾಟಾಡಿಸಿತು ಹನುಮನಬ್ಬರಣೆ (ಜೈಮಿಭಾ. ೦೩-೪೩) ; ಮರುತನೆಡೆಯಾಟವೇಂ ಗಿರಿವರನ ದೂಟಾಡಿಸಲು ಬಲ್ಲುದೆ (ದಿಲೀಪ. ೨-೩೩) ; ಬುಡ ದೂಟಾಡಿಸಿ, ತಲೆ ತಾಟಾಡಿಸಿ, ಗುಡಿಸಿಲ ಮಾಡನು ಹುಲುಹುಲುಮಾಡಿಸಿ ಬಂತೈ! ಬಂತೈ(ಕಎಪು. ೨೮-೫).

[ದೂಟಾಡು + – ಇಸು$_3$]

ದೂಟಿಕ್ಕು 'ದೂಂಟಿಕ್ಕು' ನೋ.

ದೂಟಿಸು 'ದೂಂಟಿಸು' ನೋ.

ದೂಟು$_1$ 'ದೂಂಟು$_1$' ನೋ.

ದೂಟು$_2$ 'ದೂಂಟು$_2$' ನೋ.

ದೂಡಿಸು 'ದೂಂಟಿಸು' ನೋ.

ದೂಡು 'ದೂಂಟು$_1$' ನೋ.

ದೂಡುಗಾಡಿ (ನಾ). ತಳ್ಳುಬಂಡಿ; ತಳ್ಳುಗಾಡಿ: "ಮಕ್ಕಳನ್ನು ಕುಳ್ಳಿರಿಸಿ ದೂಡುತ್ತಾ ಒಯ್ಯುವ ಗಾಡಿ" (ಕಸ್ತೂಕೋ. ೪೯೪).

[ದೂಡು (<ದೂಂಟು$_1$) + ಗಾಡಿ$_3$]

ದೂತ (ನಾ). ೧. ಸುದ್ದಿ ಅಥವಾ ಸಂದೇಶವನ್ನು ಒಯ್ಯುವವನು ; ಓಲೆಕಾರ : "ಲೇಖವಾಹಂ ದೂತಂ" (ವಸ್ತುಕೋ. ೬೦-೫೮) ; "ದೂತನೆನೆ ಪೋಗಿ ಪೇಳುವನೆನಿಕ್ಕು" (ಮಂಗರಾ. ೭೩-೨೪); ದೂತಂ ದಷ್ಟನ ವಾರ್ತೆಯಂ ನುಡಿದು ಮೇಗಂ ನೋಟ್ಪೊಡಿಲ್ಲೆಂಗೆ ತದ್ದೂತಂ ನಿಶ್ಚಯ ಕಾರ್ಯಮಂ ನುಡಿಯುತುಂ ತನ್ನೆಂಗಮಂ ಮುಟ್ಟಿದಂತಾ ತಾಣಂ ಘಣಿ ದಷ್ಟಮೆಂಗೆ (ಲೋಕೋಪ. ೧೦-೬) ; ಉಳಿದ ಚತುರಾಂಬುಧಿವೃತಾ ಭೂತಳದ ಭೂಪಾಲರಿಗೆ ದೂತರ ಕಳುಹಿದನು (ತೊರರಾ. ೧-೭-೧೦). ೨. ರಾಯಭಾರಿ ; ನಿಯೋಗಿ: ಇನಿತೊಂದು ನುಡಿದ ಬಲ್ಮೆಯೆ ನಿನಗಿಲ್ಲ ದೊಡೇಕೆ ನಿನ್ನನಾಳ್ದಂ ನಿನ್ನಂ ಮನವೊಲ್ದು ನಚ್ಚಿಯಟ್ಟದನನಾಕುಳಂ ದೂತನಿಂತು ನುಡಿಯಲ್ವೇಟ್ಕುಂ (ಆದಿಪು. ೧೪-೬೫) ; ಎಟ್ಟೋಗು ದೂತನಪ್ಪನ ಬೆಟ್ಟನ ನುಡಿಗೇಳ್ದು ಮುಳಿಯಲಾಗದು (ಪಂಪಭಾ. ೯-೫೮) ; ದೂತನನಟ್ಟುವುದೆಂತುಂ ನೀತಿಯೆ (ಪಂರಾಮಾ. ೧೧-೨೪) ; ದೂತಂಗೋಲಗದೊಳ್ ಪೆರ್ಮಾತಂ ಮಗನಿಂದೆ ನುಡಿಯಿಪೆಡೆಯಲ್ತಿದು (ಚಂದ್ರಪು. ೧೦-೧೦೧); ದೂತಂ ಸಂಗರಮಂ ನಿರೂಪಿಸೆ (ಪಾರ್ಶ್ವಪು. ೨-೯೦); ಎರಡಕ್ಕಂ ಸಲ್ವಂತಿರೆ ನರನಾಥಂಗುಸಿರ್ಗೆ ಸಂಧಿವಿಗ್ರಹಿನುಡಿಯಂ ಸರಿಯಪ್ಪುದನೆರಡಕ್ಕಂ ಪರಿಣತಮತಿ ದೂತನಿಂತು ನುಡಿಯಲೆವೇಟ್ಕುಂ (ಸೂಕ್ತಿಸು. ೧೬-೮೩); ಬಂದ ದೂತನ ಕೊಲುವನರಸೇ . . . ತಾನೊಂದು ಹುಲುಗಪಿ ವೀರನನು ಬೇಹಿಂಗೆ ಕಳುಹುವರೇ (ಕೌಶಿರಾ. ೧೧-೫೩). ೩. ಸಂಧಾನ ಮಾಡುವವನು ; ಮಧ್ಯಸ್ಥ. ೪. ಸೇವಕ ; ಆಳು : ಮನೋಜ ವಸಂತರಾ ಖಳನ ಬೆಸನ ಮಾಡುವ ದೂತರೀ ರವಿ ಶಶಿಗಳೊಪ್ಪುವ ದೀವಟಿಗರು (ತೊರರಾ. ೧-೮-೬೩) ; ನಿನ್ನ ಬಳಿ ಒಬ್ಬ ಸಿಪಾಯಿ ದೂತ ಇರುವನಲ್ಲವೇ ? (ಮಲೆನಾ. ೬೪). [ಸಂ.]

ದೂತಕಾರ್ಯ (ನಾ). ರಾಯಭಾರಿಯ ಕೆಲಸ : ಮುರಾಂತಕನಂತಪ್ಪವಂ ಯುಧಿಷ್ಠಿರಂ ದೂತಕಾರ್ಯಕ್ಕಟ್ಟಿದಂ (ಪಂಚತಂ. ೨೩೮-೮).

[ದೂತ + ಕಾರ್ಯ]

ದೂತಕಿ (ನಾ). ಸೇವಕಿ : ಇತ್ತ ಪುತ್ರೋದಯದ ಶುಭವಾರ್ತೆಯಾ ಬಂದೋರ್ವ ದೂತಕಿಯು ಶ್ರೀಕೃಷ್ಣರಾಯಂಗೆ ಪೊಂದಿಸುತ ನಿಂದು ಸೂಚಿಸೆ (ನವಪೋ. ೧೦-೨೨) ; ಶ್ರೀವೃಷಾದೇವಿಯರುಯಿದನರಿದು ತಳಿತ ಭೂಜದ ನೆಳಲೊಳಂ ನಿಂತು ದೂತಕಿಯರಂ ಕಳುಹೆ (ನವಪೋ. ೨೪-೩೯).

[<ಸಂ. ದೂತಿಕಾ]

ದೂತಟ್ಟು 'ದೂದಟ್ಟು' ನೋ.

ದೂತತನ (ನಾ). = ದೂತತ್ವ : (ಕ). [ದೂತ + – ತನ]

ದೂತತ್ವ (ನಾ). ರಾಯಭಾರ ಮಾಡುವಿಕೆ ; ದೂತ್ಯ : ಸಾಂಗವಾದುದು ನರಪತಿಯ ದೂತತ್ವವಿನ್ನೀಶ್ವರನು ಪಾಡಲ್ಲೆನಗೆನುತ ಹಿಗ್ಗಿದನು ಹರುಷದಲಿ (ತೊರರಾ. ೫-೩-೨೭); ಮೆಲ್ಲಗೆ ಕಿವಿಯಲ್ಲಿ 'ನಿನ್ನ ತಂಗಿಯನ್ನು ಬರುವಂತೆ ಹೇಳು' ಎಂದನು. ದೂತತ್ವವು ಸಿದ್ಧಿಸಿತು (ಮರಪು. ೨೬೮).

[ಸಂ.]

ದೂತಮುಖ್ಯ (ನಾ). ರಾಯಭಾರಿಗಳಲ್ಲಿ ಶ್ರೇಷ್ಠನಾದವನು,-ಪ್ರಮುಖನಾದವನು : ಚತುರವಚನರಚನಾಪ್ರಪಂಚಕಂಚುಕಿತ ರೋಮಾಂಚಚುಂಚು ಸಭಾಜನಶರೀರನುಮಪ್ಪ ದೂತಮುಖ್ಯನನಟ್ಟಿ (ಶಾಂತಿಪು. ೨-೫೦ ಪ) ;

ನೀತಿನಿರತನುಮಾಕಾರವಂತನುಂ ವಚನಚತುರನುಮಪ್ಪುದ್ಧವನೆಂಬ ದೂತ ಮುಖ್ಯನನಟ್ಟಿದೊಡೆ (ಚಂದ್ರಪು. ೬-೦೪. ಪ); ದೃಷ್ಟಂ ವರವಕ್ರೋಕ್ತಿ ವಿಶಿಷ್ಟಂ ನಿಶ್ಶಂಕನನ್ವಿತಂ ನಯನಿಪುಣಂ ಸ್ಪಷ್ಟ ಪರಚಿತ್ತವೃತ್ತಿಸ್ಪಷ್ಟಾರ್ಥನೆನಿಪ್ಪ ದೂತನುಮುಖ್ಯನನಾಗಳ್ ಕರೆದು (ಪಾರ್ಶ್ವಪು. ೨-೫೦).

[ದೂತ + ಮುಖ್ಯ]

ದೂತಯ 'ದುತಯಂ' ನೋ.

ದೂತಲಕ್ಷಣ (ನಾ). ರಾಯಭಾರಿಯು ಹೊಂದಿರಬೇಕಾದ ಲಕ್ಷಣ,-ವಿಶಿಷ್ಟ ಗುಣ : (ಕ). 'ದೂತಾಂಗ' ಪರಾ. [ದೂತ + ಲಕ್ಷಣ]

ದೂತವಚನ (ನಾ).ರಾಯಭಾರಿಯ ಮಾತು; ದೂತನ ನಂಡಿ: ಬಾಹುಬಲಿ ಕುಮಾರಂ ದೂತವಚನಾಕರ್ಣನೋದೀರ್ಣ ಕ್ರೋಧೋದ್ಗಚ್ಛದಚ್ಛೇದ ಜಳ ಸ್ವೇದಧಾರಾಸಾರಭೀಕರಾಲೋಹಿತ ಕಪೋಳತಳವಮುಂ ... ಭೀಷಣಾರುಣ ಗಂಡಸ್ಥಳವುಮಷ್ಟ ಗಂಧಸಿಂಧುರೇಂದ್ರಪವನನುಕರಿಸಿ (ಆದಿಪು.೦೪-೬೩ ಪ). [ದೂತ + ವಚನ]

ದೂತಸಂಪ್ರೇಷಣ (ನಾ). ವಾರ್ತಾವಾಹಕನನ್ನು ಕಳಂಹಿಸುವುದಂ ; ದೂತನನ್ನು ಕಳಂಹಿಸುವುದಂ : ಆಕೆ ನಿನಗನುರಕ್ತೆ ವಿರಕ್ತೆಯೆಂಬುದಂ ದೂತಸಂಪ್ರೇಷಣದಿನಱಿದನುರಕ್ತೆ ಯಪ್ಪೊಡೇನಾನುಮೊಂದು ಪಾಯದಿಂ ತಪ್ಪದು ವಿರಕ್ತೆಯಂಪ್ಪೊಡಾಕೆಯಂ ಬಲ್ಲಾಳ್ಕನದಿಂ ತಪ್ಪುದುಮೆನೆ (ಶಾಪುಂಪು. ೩೧೩). [ಸಂ.]

ದೂತಾಂಗ (ನಾ). [ಕಾವ್ಯಮೀ] ದೂತಲಕ್ಷಣವನ್ನು ತಿಳಿಸಂವ ಭಾಗ; ರಾಯಭಾರಿಯಂ ಹೊಂದಿರಬೇಕಾದ ಲಕ್ಷಣಗಳ ವಿವರಣೆ ; ಅಷ್ಟಾದಶ ವರ್ಣನೆಗಳಲ್ಲಿ ಒಂದು : ಸ್ಮಶಾನದೇಯಸ್ವರೂಪಂ ಪರನೃಪ ವಸುಧಾಂತಾಕುಳಕ್ಷ್ಮಂ ಸವ್ಯಪ್ಪಾಂತರವಾಕ್ಯಂ ಸಾವಂಭೇದಾದ್ಯತಿಶಯ ವಿದನಗ್ರಾವ್ಯಮೀಷಂ ಸಭಾಭ್ಯಂತರ ನಿಶ್ಶಂಕಂ ಪರಾಶೇಂಗಿತವಿದನೆನಿವಂ ದೂತನೆಂದಿಂತು ಧಾತ್ರೀಶ್ವರ ಕಾರ್ಯೋದ್ಯೋಗಿಗಳ್ ಬಿತ್ತರಿಪ ಕವಿಗಳಂ ಪ್ರಾತ ದೂತಾಂಗವಱಕ್ಕುಂ (ಸೂಕ್ತಿಸು. ೧೬-೧); ರಾಯಭಾರಿಗಳ ಕಾರ್ಯಗಳನ್ನು ಕುರಿತ ವಿವರಣೆ ; ರಾಯಭಾರಿಯಲ್ಲಿರಬೇಕಾದ ಸ್ಥಿರತೆ, ಔದಾರ್ಯ, ಶತ್ರುರಾಷ್ಟ್ರದ ಒಳಗಿನ ತೊಂದರೆಗಳನ್ನು ತಿಳಿಯಂವಿಕೆ ದೃಷ್ಟಾಂತಸಹಿತವಾಗಿ ಭಾಷಣ ಮಾಡುವ ಚಾತುರ್ಯ, ಚತುರೋಪಾಯಗಳ ಆಳವಾದ ಜ್ಞಾನ, ಹಾಗೂರಿಕವಾದ ವೇಷಭೂಷಣ, ಮಂಹಾಸಭೆಗಳ ನಡುವೆ ನಿರ್ಭಂಚಲವಾದ ಅಭಿಪ್ರಾಯಂವನ್ನು ಹೊಂದಿರಂವಿಕೆ, ಇತರ ರಾಜರ ಅಂತರಂಗದ ಉದ್ದೇಶಗ್ರಹಣಶಕ್ತಿ, ಸಹಜಪ್ರಜ್ಞೆ, ಅನೇಕ ಭಾಷೆಗಳ ಜ್ಞಾನ, ದಕ್ಷತೆ, ನೋಟದಿಂದಲೇ ಇತರರನ್ನು ಗೆಲ್ಲಬಲ್ಲ ಶಕ್ತಿ, ಕೋಪ ರಾಹಿತ್ಯ ಮುಂತಾದುಂಪೆಲ್ಲ ಇದ್ದರೆ ಅಂತಹವನನ್ನು ನಿಜವಾದ ದೂತನೆಂದು ಕರೆಯಂತ್ತಾರೆ. ಕಾವ್ಯಗಳಲ್ಲಿ ಬರಬೇಕಾದ ಹದಿನೆಂಟು ವರ್ಣನೆಗಳಲ್ಲಿ ಇವುಗಳನ್ನು ಕುರಿತ ವರ್ಣನೆಯೂ ಒಂದಂ. ಅದನ್ನು ದೂತಾಂಗವೆಂದು ಕರೆಯುತ್ತಾರೆ. [ದೂತ + ಅಂಗ]

ದೂತಾವಾಸ (ನಾ). ರಾಯಭಾರಿಯಂ ವಾಸಸ್ಥಾನ ; ನಿಯೋಗಿಯ ಮನೆ : ಮಾಸ್ಕೋದಲ್ಲಿರುವ ಅಮೆರಿಕ ದೂತಾವಾಸದ ಮುಂಗಡೆ ಪ್ರತಿ ಪ್ರದರ್ಶನ (ಪ್ರಜಾಂಳ. ೧೧-೨-೬೩ ; ೫-೬). [ದೂತ + ಆವಾಸ]

ದೂತಿ (ನಾ). ೧. ಸೇವಕಿ ; ಗೌಡಿತಿ. ೨. [ಕಾವ್ಯಮೀ] ಶೃಂಗಾರ ಸನ್ನಿವೇಶಗಳ ನಿರೂಪಣೆಯಲ್ಲಿ ಕವಿಗಳಂ ಹೇಳುವ ನಾಲ್ಕು ಬಗೆಯ ಪರಿಚಾರಿಕೆಯರಲ್ಲಿ ಒಂದು ಬಗೆ ; (ಅಂತರಂಗದ ವಿಷಯಂಗಳನ್ನು ಹೇಳಬಹುದಾದ) ಸಖಿ ಗೆಳತಿ : "ಸಂಚಾರಿಯೆನೆ ದೂತಿಯಕ್ಕುಂ" (ಮುಂಗಶಾ. ೯೦-೫) ; ನವವಲ್ಲಭಗಳಂತೆ ಸರಾಗಂಗಳಾದ ಹೂತೀವಚನಂಗಳ್ ಕಾಂತಾಜನಕ್ಕೆ ಕರ್ಣಪೂರಂಗಳಾಗೆಯುಂ (ಕಾದಂಪೂ. ೫೧೬) ; ದೂತೀ ಪ್ರೇಷಣಕೃತ ಸಂಕೇತಾದಿಗಳೊಂದುಮಿಲ್ಲ (ಶೀಲಾವ. ೧೦-೩೮) ; ಬಳಿಕ ಅಭಿಸಾರಿಕೆ ಚತುರಿಕೆ ಸಹಸಂಚಾರಿಕೆ ದೂತಿಯಂರೆಂಬ ಚತುರ್ವಿಧ ಸಖಿಯರಿಂ (ವಿವೇಕ. ೩೩೯) ; ಯಾವುವು ಕಳೆದರು ಬರಲಿಲ್ಲವಾತನು ದೂತಿಯ ಹೋಗೋಣ ಏಳು (ಇಂಡಾಪ. ೧೬೭-೩೩). ೩. ಸಮಾಚಾರವನ್ನು ತಲುಪಿಸುವ ಹೆಂಗಸು : "ದೂತೀ, ಸಂಚಾರಿಕಾ – ಈ ೨ ದೂದವಿ" (ಹಲಾಮು. ೮೧-೩೨). ೪. ತಲೆಹಿಡುಕಿ ; ಕುಂಟಿಣಿ: ನೆರೆಯ ಮಂದುಕ ಕನ್ನೆದೊತ್ತು . . . ಕುಂಟಿಯೆಂಬ ಪೆಣ್ಗಳರಸಿ ಕೇಳು ದೂತಿಯರ್ಕಳಪ್ಪುದೇ ದಿಟಂ (ಜಸಕ. ೦೩-೨). [ಸಂ. ದೂತೀ]

ದೂತಿಕೆ (ನಾ). ದೂತಿ; ದೂದವಿ: "ದೂತೀ, ಸಂಚಾರಿಕಾ-೨ ದೂತಿಕೆಯ ಹೆಸರುಗಳು" (ನಿಘಂಶಿ. ೧೭೩). [ಸಂ. ದೂತಿಕಾ]

ದೂತೀಜಲ್ಪ (ನಾ). ದೂತಿಯ ನಂಡಿ : ಕವಿವುಗೆ ನುಡಿದೊಡಂಗೊಂಡು ಪೋವುದುಂ ದಕ್ಷಿಣನವಳ ದೂತೀಜಲ್ಪಂ [ಪಾಣಂ. ದೂತಿಕಾಕಲ್ಪಂ] ವಿಸೃಷ್ಟಾರ್ಥಮಾದುದೆಂದುಮಲ್ಲಿಂ ತಳರ್ದು ರಾಜಭವನಾಭಿಮುಖನಾಗಿ (ಚಂದ್ರಪು. ೯-೯೦ ಪ). [ಸಂ.]

ದೂತೀಯ 'ದುತೀಯ' ನೋ.

ದೂತು 'ದೂದು' ನೋ.

ದೂತ್ಯಕೃತ (ನಾ). [ಕಾಮಶಾ] ರತಿಕ್ರೀಡೆಯ ಒಂದು ಧ್ವನಿ : ಸೀತ್ಯತಂ ಹೊಂತ್ಯತಂ . . . ದೂ[ಪಾಣಾಂ. ಹೂ]ತ್ಯತಂ ಶ್ವಸಿತಮುರುರಾತ್ಯತಂ ಎನಿಪೀ ಚಮತ್ಯತಿಯಾನಱಿದು ರವಿಸುವನೆ ಚದುರಂ (ಜಸಕ. ೯-೫೦). [ಸಂ.]

ದೂತ್ಯ (ನಾ). ೧. ರಾಯಭಾರಿಯ ಉದ್ಯೋಗ,-ಸ್ಥಾನ; ನಿಯೋಗಿಯ ಅಧಿಕಾರ. ೨. ದೂತನ ಕೆಲಸ ; ರಾಯಭಾರ : "ದೂತ್ಯಂ,(ದೌತ್ಯಂ) ತದ್ಭಾವಕರ್ಮಣೋಃ, ದೂತಭಾವಕ್ಕೂ ದೂತಕೃತ್ಯಕ್ಕೂ ಹೆಸರು. ದೂತನಾಗುವಿಕೆ, ದೂತನು ಮಾಡತಕ್ಕ ಕೆಲಸ, ಇವುಗಳು"(ನಿಘಂಶಿ. ೨೩೯). ೩. ಸುದ್ದಿ ; ವರ್ತಮಾನ; ಸಮಾಚಾರ. 'ದೌತ್ಯ' ಪರಾ. [ಸಂ.]

ದೂದ (ನಾ). ಸಂದ್ದಿಯನ್ನು ಒಯ್ಯುವವನಂ ; ವಾರ್ತಾವಾಹಕ ; ದೂತ : ಇನಮುನಟ್ಟಿದ ದೂದರ ಸೀಯನಪ್ಪ ಮಾತಿನ ರಸದೊಳ್ ಕೊನರ್ವುದು ತಳರ್ವುದು . . . ನಲ್ಮೆಯೆಂಬ ನಂದನವನಮೋಪರೊಳ್ (ಪಂಪಭಾ. ೪-೦೦೩) ; ತೆಂಗಾಳಿಯೆಂಬ ದೂದನಂ ಕರೆದು . . . ನಮ್ಮ ಪೆಱಿಯಂ ತಡೆಯದೆ ಬಿಡಿಸಿಕೊಂಡು ಬಾಯೆಂದೊಡೆ (ಕಬ್ಬಿಕಾ. ೧೩೦).

[<ಸಂ. ದೂತ]

ದೂದಗ, ದೂದವ (ನಾ). ದೂತ ; ಕುಂಟಿಣಿಗ : ಬೋಳ್ಪಿಸಿ ತೆತ್ತು ಕಾವನ ಕೇಳಿಯೊಳನುವೆತ್ತು ಪೊರೆವ ಪುರುಳಿಗನಂ ತಾಂ ಮೇಳ್ಪೆಸುವ ದೂದ[ಪಾಣಾಂ. ದು]ಗನಿಂ ಸೂಳೆಗಮುಪರಬ್ಬೆಯರ್ಗಮಪ್ಪುದು ಪಬ್ಬಂ (ಚಳವಿ. ೬-೧೧೬). **ದೂದವ** : "ಸೂಬ್ಗರೆವನೆನಲ್ಕೆ ದೂದವಂ [ಪಾಣಾಂ. ದೂದಂ]" (ಕಚುನಿ. ಕ. I, ೪೩); ಓತು ಮಾತಡಕಲೊಂದಿದ ದೂದವರಿಲ್ಲ ನೆಟ್ಟವಪ್ಪುದಱಿನದಿಂತರಣ್ಯರುದಿತಂ ವಲವೆನ್ನೊಲವಿಂದುವಕ್ಕಿಯಾ (ಪಂಪಭಾ. ೪-೭೯); ತಪ್ಪುದು ಮಾ[ತು] ದೂದವರ ಕೆಯ್ಯೊಳಿ ಕಾಲ್ವಿಡಿದಟ್ಟ ಕಣ್ಣ ನೀರ್ ತಪ್ಪುವು (ಪಂಪಭಾ. ೪-೯೯). [<ಸಂ. ದೂತಕ]

ದೂದಟ್ಟು, ದೂತಟ್ಟು (ಕ್ರಿ). ೧. ಸಮಾಚಾರವನ್ನು ಕಳುಹಿಸು ; ಸಂದ್ದಿಯನ್ನು ತಿಳಿಸು : ಸುವಸ್ತುವಾಹನವ ಸಡಗರದಿ ತೆಗೆಕೊಂಡು . . . ಮೇಳೈಕೂಟದ ಕಡೆವೊಳಲ ಹೊಕ್ಕಿರ್ದು ದೂದಟ್ಟಿದನು ಪುರವರ್ಗೆ (ಶಾಳ್ಕಥಾ. ೩೭-೫೦). ೨. ರಾಯಭಾರವನ್ನು ಮಾಡಲು ಕಳುಹಿಸು : ಆ ನಾರದನನೆ ದಿವಿಜಾರಾಜಂಗೆ ದೂದಟ್ಟಿ (ಜಗವಿ. ೦೩-೬೨ ಪ) ; ಬಹು ಶಾಖದಶೋಕಾನೋಕಹಮೆಸೆದುದು ಮುನಿಯ ಪೆಱಿಗೆ ನೆಲಾಗೆ ಮಾನಸ್ಮೃಹೆಯಿಂದಪ್ಪಮಹಾಪ್ರಾತಿಹಾರ್ಯತರನೆರೆಯಲೆಂದು ದೂದಟ್ಟಿದ

ವೊಲ್ (ಅನಂಪು. ೨-೪೬); ಪುದುವಾಟ್ಟರೊಳ್ ಪಗೆಯಂ ದೂದಟ್ಟಿಯುಂ, ತಾಂ ಪಿಡಿದಿರ್ಪರೊಳ್ ಕಾವನಂ ಕಾವಲ್ಮಾಡಿಯುಂ ನೋಟಮಾಟಂಗಳ್ಗೆ ತೋಱದನಲ್ತೆ ! (ರಾಮಾಶ್ವ. ೪೫-೮). ೩. ಕಂಂಟಣಿಯ ಕೆಲಸಕ್ಕೆ ಕಳುಹಿಸು : ಮೋಹಧನಮಂ ಮುಂದಿಟ್ಟು ದಲ್ ತೃಷ್ಣೆ ಲಂಪಟೆ ಬೆನ್ನಿಂ ಬಿಡದೊಲ್ಲೆ ಮೊಲ್ಲೆಮೆನೆಯುಂ ದೂದಟ್ಟಿ ದುರ್ಬುದ್ಧಿಯಂ. (ಶಾಂತಿಪು. ೭-೬೭) : ನೃಪಂ ಬೆಂಬಿಟ್ಟುಂ ದೂದಟ್ಟಿಯುಂ ಬಾರಂ (ಶಮದ. ೨೩೮ ಪ್ರಯೋ) : ವೇದಾಗಮವನೊರೆದ ವಾಮದೇವನನೆ ಬೆಲೆವೆಣ್ಣೆಡೆಗೆ ದೂದಟ್ಟಿ ತನ್ನ ಭಕ್ತಿಯ ಬಲ್ಮೆಯ ಭೂಮಿಯೊಳ್ಪ್ರಕಟಿಸಿದ ಕಡುನೀಱಂ (ಸೌಂದಪು. ೨-೩೫); ನಂಬಿ ದೂದಟ್ಟಿ ಕಾಳ್ಗೆಲಸಂಗೈಸಿದನಯ್ಯೊ ದೇಸಿಗನಿವಂ ತಾಯುಳ್ಳೊಡಿಂತಪ್ಪನೇ (ಪ್ರಸವಿ. ೪-೧೦೬). ದೂತಟ್ಟು : ೨. ಮಱುಜೂಜಂ ಕುಡುವೇಟ್ಟುದಾಂ ರವಣಮಂ ಬೇಟ್ಟಂತುಟಂ ತಂದೆ ನೆಂದಱಿಪಲ್ಕೊರ್ವ ಕಠೋರವಾಕ್ಯಮುಖನಂ ದೂತಟ್ಟೆ (ಸಳಕಂ. ೭೫೪).

[ದೂದು + ಅಟ್ಟು$_2$]

ದೂದಪೇಡಾ (ನಾ). ಹಾಲಿನಿಂದ ತಯಾರಿಸಿದ ಒಂದು ಬಗೆಯ ಸಿಹಿತಿಂಡಿ: ಪರೀಕ್ಷೆಯಲ್ಲಿ ಮೊದಲನೇ ದರ್ಜೆಯಲ್ಲಿ ತೇರ್ಗಡೆಯಾದುದರಿಂದ ಅವಳು ತನ್ನ ಗೆಳತಿಯರಿಗೆಲ್ಲಾ ದೂದಪೇಡಾ ಹಂಚಿದಳು (ರೂಢಿ).

[←ಮರಾ. ದೂಧ್‌ಪೇಢಾ]

ದೂದಫೇಣಿ (ನಾ). ಹಾಲಿನಲ್ಲಿ ಬೇಯಿಸಿ ತಯಾರಿಸಿದ ಒಂದು ಬಗೆಯ ಸಿಹಿತಿಂಡಿ,–ಫೇಣಿ : (ಸ್ಯಾಂಡರ್). [←ಹಿಂ. ದೂಧ್‌ಫೇನೀ]

ದೂದವ 'ದೂದಗ' ನೋ.

ದೂದವಿ (ನಾ). ೧. ದೂತಿ ; ಸಮಾಚಾರವನ್ನು ತಿಳಿಸುವವಳಂ,–ತಲುಪಿಸುವವಳಂ: ಪಿಂದಾಂ ಬಂದಪೆನೆಂಬಿದಂ ನರರ್ಗೆ ನೀಂ ಪೇಟಿಂದು ಮೂರ್ಖಾಂತಕಂ ನಿಂದ್ಯಾಂಗಂ ಜರೆಯೆಂಬ ದೂದವಿಯುಮಂ ಮುಂದಟ್ಟಿ (ಬಾಧಪು. ೫-೩೫). ೨. ತಲೆಹಿಡಂಕಿ ; ಕಂಂಟಣಿ : "ಸಂಚಾರಿಕೆ ತಾಂ ದೂದವಿಯಭಿಸಾರಿಕೆ ಸಂಕೇತನಕ್ಕೆ ಪೋಪವಳಕ್ಕುಂ" (ವಸ್ತುಕೋ. ೫೩-೭); ಒರ್ವಳ್ ತನ್ನ ನಲ್ಲನಲ್ಲಿಗೆ ದೂದುವೋಗಿ ಬಂದ ದೂದವಿಗೇಗೆಯ್ವ ತೆಱನುಮನಱಿಯದೆ ಪದೆದು ಪಡೆಮಾತಂ ಬೆಸಗೊ[ಳ್ವುದಂ] ಕಂಡು (ಪಂಪಭಾ. ೪-೧೦೦ ಪ) ; ಬರ ಪಾರದೆ ದೂದವಿಯರ ಹರಿಸದೆ . . . ಮನವೊಲ್ದಾಗಳ್ನೆರೆಯಲ್ದೊರೆಕೊಳ್ವ ರತಮೆ ಸಂಕಲ್ಪರತಂ (ಕಾದಂಉ. ೩೦೮) ; ಅನ್ನೆಗಂ ನೆರೆಮನೆಯ ನಾವಿದನ ಪೆಂಡತಿಯಪ್ಪ ದೂದವಿ ಪಾದರಿಗನಂ ಸಂಕೇತಸ್ಥಾನದೊಳಿರಿಸಿ ಪರಿತಂದು (ಪಂಚತಂ. ೭೫-೨) ; ಅವರ ದೂದವಿಯರ ಲಲ್ಲೆವೆರಸಿದ ಮೆಲ್ನುಡಿಯೆ ಕರ್ಣಪೂರಮಾಗೆಯುಂ (ಮಲ್ಲಿಪು. ೩-೪೨ ಪ) ; ಅವನ ಕಾದಲಳ ದೂದವಿ ಬಂದು ಪೊಡೆಮಟ್ಟು ಪೊರ್ದಿ ಕುಳ್ಳಿರ್ದು (ಚಂದ್ರಪು. ೮-೮೨ ಪ) ; ಮುದುಗರಡಿಯ ಮಱು-ದೊವಲಂದದೆ ಕರಿಯಂ . . . ಎಂದೊಡೆ ದೂದವಿಗವಳಿತೆಂದಳ್ (ಯಶೋಚ. ೨-೪೦); ಪಾರದೆ ಬರ್ಪ ದೂದವಿಯರಂ ತವಕಂ ತವೆ ಮಿಕ್ಕು ನೀವಿಯೊಳ್ ಚಾರುಕಳಾಪಮಂ ನಿಲಿಸುತುಂ ದೆಸೆಯಂ ನಡೆ ನೋಡುತುಂ . . . ಜಾರೆಯರೆಯ್ದುತಿರ್ದರುಪಕಾಂತರನಂದು ಮಹಾಂಧಕಾರದೊಳ್ (ಕುಸುಮಾ. ೪-೩೫) ; ಉನ್ನತಪ್ರೌಢನಂಗನೆಗೆ ವಿತ್ತಂಗುಡದೆ ಚೆನ್ನನುಡಿ ಗೂಟಂಗಳಿಂದೆ ಕಾಲಂ ಕಳೆವುದನ್ನೋಡಿ ಕಾಯ್ದು ದೂದವಿ . . . ಇಂತೆಂದಳು (ಭಾವಜಿಂ. ೬-೨೪) ; ಬಯಸಿದ ನರರೊಳವರ ತಂದು ನೆರೆಯಿಸುವರು ದೂದವಿಯರು (ಕುರಾಸಾಂ. ೨೯-೦೦೦).

[ದೂದವ (<ದೂದಗ) + – ಇ$_2$]

ದೂದವಿಗೆಲಸ (ನಾ). ದೂತಿಯ ಕಾರ್ಯ ; ಕಂಂಟಣಿಯ ಕೆಲಸ : ಶಿವಶಂಭುಶಂಕರನ ದೂದವಿಗೆಲಸಕೆ ತೆರೆಳಿಚಿದ ದುಷ್ಕರ್ಮಿ (ಸೌಂದಪು. ೦೬-೨೮). [ದೂದವಿ + ಕೆಲಸ]

ದೂದಿ$_1$ (ನಾ). ೧. (ಶುದ್ಧಿಮಾಡಿದ) ಹತ್ತಿ ; ಅರಳೆ : "ದೂದಿ–ತೂಲೀ =ಹತ್ತಿ" (ತದ್ಭಕೋ. ೨೦). ೨. (ಬೆಂಕಿಯನ್ನು ಹೊತ್ತಿಸಲು ಉಪಯೋಗಿಸುವ) ಬೂರಗದ ಹತ್ತಿ ಮತ್ತು ಅದರ ಮರ "ದೂದಿ= ತೀವ್ರವಾಗಿ ಬೆಂಕಿ ಹತ್ತುವದೊಂದು ಪದಾರ್ಥ" (ಗಂಗಾಮ. ೩೫೬) ; "ದೂದಿ–ಕಿಡಿ ಹಿಡಿಯುವ ಹಿಂಜರ ; ಅರಳೆ" (ಜಾನಕೋ. ೭) ; ಕೆಂಡದೊಡಿಗೆಗೆಳಸುವ ದೂದಿಯೊಟ್ಟಿಲಂತೆ (ವೀಶ್ವಪು. ೩-೨-೧೦).

[ದೇ.ಕ ತೆಲು. ದೂದಿ]

ದೂದಿ$_2$ (ನಾ). ಸಮಾಚಾರವನ್ನು ತಿಳಿಸುವವಳಂ ; ದೂದವಿ ; ದೂತಿ : ತಕಾರಕ್ಕೆ ದಕಾರಂ–ಕೈತವ–ಕೈದವ . . . ದೂತಿ–ದೂದಿ (ಶಮದ ೨೫೫. ಪ್ರಯೋ) ; ದೂತಿ, ದೂದಿ ; ಕೈತವ, ಕೈದವ (ಶಬ್ದಾನು. ೦೮೩ ಪ್ರಯೋ).

[<ಸಂ. ದೂತೀ]

ದೂದಿಬೋಯ (ನಾ). ಒಬ್ಬಾತನ ಹೆಸರು: ದೂದಿಬೋಯಸ್ಯ ಕೌಣ್ಡಲ್ಯ ಗೋತ್ರ ಗಬೋತಶರ್ಮ್ಮಣ ಏಕಂಶಃ (ಇಅ. VII, ೧೮೮-೩೭ ; 668).

[ದೂದಿ? + ಬೋಯ]

ದೂದು, ದೂತಂ (ನಾ). ೧. ಸಮಾಚಾರ ; ಸುದ್ದಿ. 'ದೂದುವೋಗು' ಪರಾ. ೨. ರಾಯಭಾರ ; ನಿಯೋಗ : "ದೂದು . . . ದೌತ್ಯ" (ತದ್ಭಕೋ. ೨೦). 'ದೂದೈದು' ಪರಾ. ದೂತು: ೨. ಏನೇನು ವಿಸ್ಮಯವ ನಾಂಗೈದೆ ನಿಷ್ಠುರವ ನೀನಾಡ ಸಲ್ಲದಾದಿಯಲಿ ನಿಮ್ಮಯ್ಯಗೆ ನಿಧಾನದಿಂ ದೂತಿತ್ತೆ ಬಂದೆಯೆನಲೊಪ್ಪಿ ಪಿತವಾಕ್ಯವೆ ವಿವಾಹವೆನುತ (ಲಕ್ಷ್ಮಭಾ. ೧-೨೦-೪೪). [ದೂದ + – ಉ$_4$]

ದೂದುಗಾರ 'ದೂದುಗಾಱ' ನೋ.

ದೂದುಗಾಱ, ದೂದುಗಾರ (ನಾ). ಸುದ್ದಿಯನ್ನು ಒಯ್ಯುವವನಂ ; ದೂತ : ಆ ನುಡಿಗೊಪ್ಪಿ ದೂದುಗಾಱನಲ್ಲಿಂ ತಳರ್ದು ... ಮೆಲ್ಲಮೆಲ್ಲನೆ ತವಸಿಯ ಪೊರೆಗೈತಂದಂ (ರಾಮಾಶ್ವ. ೫೭-೨೬). ದೂದುಗಾರ : ರಾಯಸಮಂ ಬರೆದೊರ್ವ ಪಟುಭಟನ ಕರದೊಳಿಟ್ಟು ಕಳಿಪಲೊಡಮಾ ದೂದುಗಾರಂ . . . ಬಂದಾಸ್ಥಾನಮಂ ಪೊಕ್ಕು (ಚಂದ್ರಪ್ಪು. ೫-೦೦).

[ದೂದು + – ಕಾಱ]

ದೂದುನಡೆ (ಕ್ರಿ). ರಾಯಭಾರಕ್ಕಾಗಿ ಹೋಗು; ದೂತಕಾರ್ಯಕ್ಕೆಂದು ಹೋಗು : ಅಂದು ಪಾಂಡವರ ಪಾಳೆಯದಿಂ ಕುರುನಗರಿಗೆ ದೂದುನಡೆದ ಬಟಲ್ಕೆಗಳೆಯಲೆಂದು ಒಯ್ಯನೊತ್ತುವ ಸಿರಿಪೊಡವಿಯರ ಮೆಲ್ಗೈ ಸೋಂಕಿಗೆ ನವಿರುಣ್ಮುವ ಕಿಱುದೊಡೆಗಳಂ (ಚಿಳವಂ. ೩೪-೮).

[ದೂದು + ನಡೆ$_1$]

ದೂದುಪೋಗು 'ದೂದುವೋಗು' ನೋ.

ದೂದುವೋಗು, ದೂದುಪೋಗು (ಕ್ರಿ). ವರ್ತಮಾನ ಕೊಡಲು ಹೋಗು; ಸುದ್ದಿ ತಿಳಿಸಲು ಹೋಗು : ತನ್ನ ನಲ್ಲನಲ್ಲಿಗೆ ದೂದುವೋಗಿ ಬಂದ ದೂದವಿಗೇಗೆಯ್ವ ತೆಱನುಮನಱಿಯದೆ ಪದೆದು ಪಡೆಮಾತಂ ಬೆಸಗೊ[ಳ್ವುದಂ] ಕಂಡು (ಪಂಪಭಾ. ೪-೧೦೦ ಪ). ದೂದುಪೋಗು : ಬೇಟದ ಸೂಡಿಂ ಬಾಡಿ ಬಸಂಗೆಟ್ಟುದನಿಂದು ನಿಂದು ಕಾಂತೆಗಱಿಪಿ ಬಱಿಯಟ್ಟುವೆವನಿತೊಂದು ಪೊಟ್ಟು ಸೈತಿರ್ಪುದೆಂದು ಸಂತಯಿಸಿ ದೂದು ಪೋಪವೆನೆ ಮುಯ್ಯೀರಡಿಗಳೋಡೆ (ರಾಮಾಶ್ವ. ೨೨-೧೩).

[ದೂದು + ಪೋಗು$_1$]

ದೂದೈದು (ಕ್ರಿ). ರಾಯಭಾರ ಮಾಡಲು ಹೋಗು,–ಪ್ರಯಾಣ ಮಾಡು : ಅಂತಪ್ಪುದುಮಾಗಳುರ್ಕಿನ ಸೊರ್ಕಾಳ್ತನದಿಂ ನೀಳ್ದಂಗದಂ ಗದನಂದಿನ ರಾವಣನೆಡೆಗೆಂತಂತು ಕಡುಸಡಗರದಿಂ ದೂದೈದಿವಂದು ಸಮುಚಿತಾಸನದೊಳ್ ಕುಳ್ಳಿರ್ಪುದುಂ (ರಾಮಾಶ್ವ. ೦೪೨-೬).

[ದೂದು + ಐದು$_1$ (<ಎಯ್ದು)]

ದೂನ (ಗು.) ೧. ಸಂತಾಪ ಹೊಂದಿದ; ನೋವಾದ; ಪೀಡೆಗೊಳಗಾದ: ಆ ಲೇಖವಾಹಕರ್ . . . ಆ ವೃತ್ತಾಂತಮಂ ತ್ವರಿತಗತಿಬನ್ನವಿಸಿದವ್ವನೆನಃತ್ತಂ ವಿಷಣ್ಣದೂನವದನರಾಗಿರ್ವುದುಂ (ಕಾದಂಬಾ. ೬೫೯). ೨. ಬಳಲಿದ; ಆಯಾಸಗೊಂಡ. 'ದೂನಿಸು' ಪರಾ. ಪಿ. ಸುಟ್ಟ; ಕಾಯಿಸಿದ; ತಪ್ತ. [ಸಂ.]

ದೂನಿಕೆ (ನಾ). ಒಂದು ಬಗೆಯ ಆಭರಣ (?): ಪಟ್ಟಸರವು ದೂನಿಕೆಗಳ ಬಿನ್ನದ ದಾರಿ ಕಟ್ಟಾಣಿ ಪೊನ್ನ ದಾರಿಗಳ (ದೇವಾಂಪು. ೫-೧೦೬). [?]

ದೂನಿಸು (ಕ್ರಿ). ೧. ದುಃಖಿಸು; ಶೋಕಪಡು; ಸಂತಾಪ ಹೊಂದಿಂ: ದೂನಿಸಿ ಜಾನಿಸಿ ನಿಟ್ಟಿಸುತಿರ್ದಂ ತಾನದು ಕಾರಣದಿಂ ನಸುನಗೆ ಮಿಗೆಯೊಗೆದುದೆನಗೆಯೆನಲು (ಉದ್ಭರ. ೩-೬೨); ಸುತರು ಸುಮ್ಮಾನದೊಳಯ್ತರುತಿರಲು ದೂನಿಸುತಿದ್ದಿರಿ ನೀವಮಗಿದಱ ಸಂಧಾನಗಾಣ್ಮ ಸದಾಡಿರೆಂದ (ಧರಣಿ. ೪೭-೪೩); ದೂನಿಸುತಿರೆ ನಿಮ್ಮ ಸಗೆಸಲೇಕಾಗಿ ಹಾಸ್ಯಾನುವಾದದಿ ನಗಿಸಿದನೌ ಅನುದರದಿ ಶೋಕವಿಲ್ಲದೆ ತಾಳ್ದಿನೌ ಏನಹುದಿನ್ನಳಿದರೆ (ಧರಣಿ. ೭೧-೧೦೪). ೨. ಬಳಲು; ಆಯಾಸ ಹೊಂದು: ಬೆಚ್ಚುತ್ತ ಬೆದಱುತ್ತ ದೂನಿಸುತ . . . ಓಡಿದನೆಂ (ಸೌಂದಪು. ೧೬-೪೩). [ದೂನ + – ಇಸು$_3$]

ದೂಪ (ನಾ). ೧. ಸುಟ್ಟಾಗ ಸುವಾಸನೆಯನ್ನು ಬೀರುವ (ಹಾಲು ಪುಡ್ಡಿ, ಸಾಂಬ್ರಾಣಿ ಮುಂತಾದ) ಪರಿಮಳಪದಾರ್ಥ: (ಕ). ೨. ಸಾಂಬ್ರಾಣಿ ಮೊದಲಾದ ಸುವಾಸನೆಯ ಪದಾರ್ಥಗಳಿಂದ ಹೊರಡುವ ಹೊಗೆ: ಧಕಾರಕ್ಕೆ ದಕಾರಂ–ಔಷಧ–ಔಸದ . . . ಧೂಪ–ದೂಪ (ಕವಿದ. ೨೫೫ ಪ್ರಯೋ). ಪಿ. ಒಂದು ಬಗೆಯ ಪರಿಮಳ; ಧೂಪದ ಮರ: ಕೆಲವು ಕಡೆಗಳಲ್ಲಿ ತೇಗ, ನಂದಿ, ಹೆಬ್ಬಲಸು, ಬಲಿಗೆ, ದೂಪ, ಜಂಭಿ . . . ಮುಂತಾದ ಗಗನಚುಂಬಿತ ವೃಕ್ಷಗಳಿದ್ದರೆ ಕೆಲವು ಕಡೆಗಳಲ್ಲಿ ಗರಗಿ, ಬಿದಿರು . . . ಮುಂತಾದ ಗಿಡ ಬಳ್ಳಿ ಪೊದೆಗಳಿದ್ದವು (ಕಂಜಪಂ. ೨).

ದೂಪದ ಕಡ್ಡಿ=ಧೂಪಕ್ಕಾಗಿ ಸುಗಂಧವಸ್ತುಗಳಿಂದ ತಯಾರಿಸಿದ ಕಡ್ಡಿ; ಊದುಕಡ್ಡಿ: (ಕ). ದೂಪ ಹಾಕು = ೧. ಸುಗಂಧದ್ರವ್ಯಗಳಿಂದ ಹೊಗೆ ಹಾಕು; ಧೂಪ ಹಾಕು: ದೂಪ ಹಾಕಿದರೆ ಪಾಪ ಹೋದೀತೆ? (ಗಾಡ). ೨. (ಆಲಂ) ಕೆರಳಿಸು; ಉದ್ರೇಕವನ್ನುಂಟುಮಾಡು: ಅಣ್ಣ ತಮ್ಮಂದಿರಲ್ಲಿ ಜಗಳ ತರಲು ಮಾವನು ಕಿರಿಯವನಿಗೆ ಆಗಿಂದಾಗ ದೂಪ ಹಾಕುತ್ತಲಿದ್ದಾನೆ (ಕೂಡಿ). [<ಸಂ. ಧೂಪ]

ದೂಪಟ 'ದುಪ್ಪಟಿ' ನೋ.

ದೂಪಾರತಿ (ನಾ). ೧. ಧೂಪದಿಂದ ಮಾಡುವ ಆರತಿ: ಅರ್ಚಕರು ದೇವರಿಗೆ ದೂಪಾರತಿಯನ್ನು ಮಾಡುತ್ತಿದ್ದಾರೆ (ಕೂಡಿ). ೨. ಸುಗಂಧ ವಸ್ತುಗಳಿಂದ ಆರತಿ ಎತ್ತುವುದಕ್ಕೆ ಉಪಯೋಗಿಸುವ ಸಾಧನ: ಧೂಪಾರತಿಯನ್ನು ಮಾಡುವ ಪಾತ್ರೆ,– ಉಪಕರಣ: ಸ್ವಸ್ತಿಶ್ರೀ ನಗರೇಶ್ವರದೇವರಿಗೆ . . . ಸೊಣ್ಣಪ್ಪನು ಕೊಟ್ಟ ಉಪಕರಣ ಹರಿಯಾಣ ಅಡ್ಡಣಿಗೆ ಗಂಪಿನವಾರತಿ ದೂಪಾರತಿ ಬಟ್ಟಲು ಶಂಕು (ಎಕ. IX, ಕೆಂಗಳೂ. ೧೦-೧೦ : ಸು. 1400); ದೂಪಾರತಿಯು ಘಂಟೆಯುಮನುಯ್ನೂರನಾ ಪದ್ಮವಡನೆಯರು ತಂದಿಡರು [ಲು] ವಲವಿನಿಂ ತಾ ಪಿಡಿದು (ಪಪಪೂ. ೫೧-೨೭). 'ಧೂಪಾರತಿ' ಪರಾ. [ದೂಪ + ಆರತಿ$_1$]

ದೂಪಿಸು$_1$, ಧೂಪಿಸು$_1$ (ಕ್ರಿ). ೧. ಬಾಯಾರು; ನೀರಡಿಸು: ಯಯಾತಿ ಬೇಂಟೆಯ ನೆವದಿ ಸೇನೆಸಹಿತಾರಣ್ಯದೊಳ್ ಬಳಲಿ ದೂಪಿಸಿ ಕೊಳದಿ ನೀರನೀಂಟಿ (ಲಕ್ಷ್ಮಣ. ೦೫-೮): ಎಪನದೊಳು ಮೃಗಹರಣಕೇಳಿಗಂ ನಡತೆಂದು ಸಂಚರಿಸಿ ದೂಪಿಸಿದರು (ತುರಂಗ. ೦೬-೦೯). ೨. ಸಂತಾಪ ಹೊಂದು; ಸಂಕಟಪಡು: ಹಸಿವು ತೃಷೆ ಬಳಲಿಕೆಗಳಲಿ ದೂ[ಪಾಠಾಂ.ಧೂ]ಪಿಸುತ ಬಂದಳು ಮಾಯೆ ತಾನಲ್ಲಮನನಜಸುತಲಿ (ಪ್ರಭುಲಿ. ೬-೪೪); ಶರತಾಪದಿಂ ದೂಪಿಸುತ ಕೇಳಿದಳ್ (ಜಿನಪು. ೪೧-೦೪). ಪಿ. ಮೂರ್ಛೆ ಹೊಂದು: ಶೋಕಪ್ರಳಾಪದಿಂ ನರನಳಲುತಿರಲತ್ತ ಕರ್ಣಸುತನಟ್ಟಿ ಬಂದಪ್ಪಳಿಸಲು ದೂ[ಪಾಠಾಂ. ಧೂ]ಪಿಸಿ ಧರೆಗೆ ಬಿದ್ದು (ಜೈಮಿಭಾ. ೨೩-೩೦).

ಧೂಪಿಸು$_2$: ೧. ನಡೆದು ಪಡೆ ಧೂಪಿಸಿತು ಬಿಜದಿ ಕುಡಿಯೆ ನೀರನು ಕಾಣದಸವಳಿದು (ಕಾಶಿಕಾ. ೯-೩೪); ಶರಹತಿಯಲುಜಿ ನೊಂದು ಧೂಪಿಸಿ ತರಹರಿಸುವಶ್ವಾಳಿ (ಕುವ್ಯಾಳ. ೨೩-೨೯); ಮನುಮಥನ ಶರಹತಿಗೆ ಧೂಪಿಸುತ ಮೈಮಱೆದರು (ನಿಧಾಗ. ೧೦-೮೦-೩೯).

[←ತೆಲು. ದೂಪಿಂಚು]

ದೂಪಿಸು$_3$ (ಕ್ರಿ). (ಸುಗಂಧ ದ್ರವ್ಯಗಳಿಂದ ಹೊಗೆ ಹಾಕಿ) ಪರಿಮಳಿಸುವಂತೆ ಮಾಡು,–ಸುವಾಸನೆ ಬೀರುವಂತೆ ಮಾಡು: ದೂಪಿಸಿದ ಬಿಳಿ ದುಗುಲನುಟ್ಟನುಲೇಪನಂಗಳ ಹೂಸಿ . . . ಇದಿರಾಯ್ತು ನೃಪಕಟಕ (ಕುವ್ಯಾಗ. ೦-೩೬). [ದೂಪ + – ಇಸು$_3$]

ದೂಪೆ 'ದೂವೆ$_1$' ನೋ.

ದೂಬರದಿಂಡಿ (ನಾ). ದುಂದುವೆಚ್ಚ ಮಾಡುವವಳು; "ದುಂದುಗಾರತಿ" (ಪಾನಕೋ. ೭). [ದೇ.ತ ತಮಿ. ತೊಪ್ಪರತನ್ಪೈ; ತೆಲು. ದೂಬಜಿದಿಂಡಿ]

ದೂಮರ 'ತೂಪರು' ನೋ.

ದೂಮುಕ 'ದಂಪುಂಕ' ನೋ.

ದೂಮುಧಾಮು (ನಾ). ಹಾಳುಮಾಡುವಿಕೆ; ಪೋಲುಮಾಡುವಿಕೆ: (ಸ್ಕಾಂದ). 'ಧಾಮಧೂಮು' ಪರಾ.

[←ಮರಾ. ಹಿಂ. ಧೂಮಧಾಮ್]

ದೂಯಂ 'ದುಯ್ಯಂ' ನೋ.

ದೂರ್ 'ದೂಱು$_1$' ನೋ.

ದೂರ (ಗು). ೧. ಸಮೀಪವಲ್ಲದ; ಹತ್ತಿರವಲ್ಲದ. ೨. ದೀರ್ಘವಾದ; ನಿಡಿದಾದ: ಅಂತು ದೂರಾಯುಸ್ಸಾಗರಪಾರಗನಾಗಲೊಡಂ (ಪಂದ್ರಪು. ೯-೫೬ ಪ). (ನಾ). ಪಿ. (ಕಾಲ, ಸ್ಥಳ ಮುಂತಾದುವುಗಳಲ್ಲಿ) ಹತ್ತಿರವಲ್ಲದುದಂ; ಸಮೀಪವಲ್ಲದುದು: "ಗೆಂಟು ವಿಪ್ರಕೃಷ್ಟಂ ದೂರಂ" (ವಸ್ತುಕೋ. ೦೦೯-೬೮); ತಂದೆ ಕಟ್ಟಿದಬಲ ಬೇಗೆಯೊಳಂ ದೂರದೆ ಬರ್ದದೊಂದು ಕಡುಸೇದೆಯೊಳಂ ಬಂದೆನ್ನಂ ಪರವಶತೆಯೊಳೊಂದಿಸಿ ದತ್ತಾಗಳಾ ವಿಪಾಸೋದ್ರೇಕಂ (ಕಾದಂಪೂ. ೦೭೯); ಅಯ್ಯ ದೂರದಲ್ಲಿರ್ದಹೆಯೆಂದು ಬಾಯಾಱಿ ಬಳಲುತ್ತಿದ್ದೆನಯ್ಯ ನಾನು (ಮಾಹಾದೇ. ಬ. ೩೮-೪೧); ದೂರದೊಳೆ ನೋಡಿ ಕಂಡು ಪುರೂರವನಿದಪೂರ್ವಮೃಗಮೆನುತ್ಸಿಸಲಂಬಂ ನಾರಿಯೊಳಿಟ್ಟಂ (ವರ್ಧಪು. ೧೦-೩೧); ದೂರದಿಂ ಪರ್ವತಂ ರಮ್ಯಂ (ಎಕ. VI, ತರೀಕೆ. ೪೫-೬೪; 1196); ತೇರನೆಚ್ಚನು ಕುದುರೆಕಾಱರ ದೂರದಲಿ ಖಂಡಿಸಿದನು (ಕುವ್ಯಾಳ. ೨೦-೨೨); ಇರುಳು ಕತ್ತಲೆಯ ಗವಿ; ಮನೆ ದೂರ; ಕನಿಕರಿಸಿ, ಕೈಹಿಡಿದು ನಡೆಸೆನ್ನನು (ಇಂಗೀತ. ೯೭-೩); ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ (ಗಾಡ). ೪. ಸೇರದಂದು; ಹೊರತಾದುದು; ಎರವಾದುದಂ: ತನ್ನ ತಾನಱಿದೆನೆಂಬಹಂಕಾರವುಳ್ಳರೆ ನಿಮ್ಮವರಿಗೆ ದೂರ (ಬಸವ. ೬೫೯); ಈ ಗುಣ ಸಂಗನಬಸವಣ್ಣಂಗೆ ದೂರ (ಸರ್ವಜ್ಞ. ೦೫೦-೬೦೯). ೫. ಎರಡು ಸ್ಥಳಗಳ ನಡುವಿನ ಅಂತರ: ಮುಕ್ಕಳ ಮೇಲೆ ಗಮನವಿದ್ದುದರಿಂದ ಕುಂತಿಗೆ ದೂರವೇ ಕಾಣಲಿಲ್ಲ (ವಚಭಾ. ೦೫).

ದೂರದೂರ (ದ್ವಿರಂಕ್ತಿ): ದೂರದೂರೋಪವಿಷ್ಟಮೂಕವಮುಖಕಾಷ್ಟವಾವಂನಕರಾತವರ್ಷಧರಕಂಚುಕಿಪ್ರಪಂಚಿಯಮಾಗಿರ್ದಿನೆಗಂ (ಪಂದ್ರಪು. ೩-೫೦ ವ): ನಿಮ್ಮ ನಿರ್ಮಳರೂಪಮಂ ಕಂಡವರುಗಳ ಬಹು ವಾವಸಂಕುಳವಳಿದುಹೋಗವೆ ದೂರದೂರದರಿ (ಬಸಪು. ೪೬-೬೩); ದೂರ

ದೂರದಿಂದ ಜನರು ಬರುತ್ತಾರೆ (ಮುಂಬಯಿ. ೪-೧೪೨). **ದೂರಣ** = ೧. ಸಮೀಪವಲ್ಲದ ; ದೂರದ : ದೂರಣ ದೇಶದಿಂ ಬಂದವನೀಶಕು ಮಾರರು ನೆರೆದು ನೋಡುತಿದೆ ಮಾರನ ಮದದಾನೆ ನೋಡೇಳು (ಕುಂತಿಸಾಂ. ೫೧-೩೦); ನೋಡೆಂದು ಸಖಿಜನರು ಕರವೆತ್ತಿ ದೂರಣಿಂ ತೋರೆ ವೀಕ್ಷಿಸಲು (ಪಭಮೋ. ೭-೯). ೨. ಬಹುಕಾಲದಿಂದ ನಡೆದು ಬಂದ ; ಬಹಳ ದೀರ್ಘವಾದ : ಚಿರಕಾಲದಿಂ ದೂರಣ ಸ್ನೇಹವಿಮಗೆಂದು ತರಣಿ ತಾಮರೆಯೆಡೆಗೆಯ್ದಿ ಹರುಷದೊಳೊಪ್ಪಿತೆಂದೆನೆ ಚಕ್ರವರನಾ ಕರಕಮಲ ದೊಳೊಪ್ಪಿದುದು (ಶ್ರೀಪಾಂಡ. ೦೨-೮೩); P ಇದಂ ಅತ್ತಣ, ಇತ್ತಣ, ಪಡಂವಣ, ನಡುವಣ ಎಂಬ ಕನ್ನಡ ಶಬ್ದಗಳ ಸಾದೃಶ್ಯದ ಮೇಲೆ ಮೂಡಿಕೊಂಡ ರೂಪವಿರಬಹುದಂ. **ದೂರದ ನಂಟ, ದೂರದ ನೆಂಟ** = ಹತ್ತಿರದ ಬಂಧುವಲ್ಲದವನು ; ದೂರದ ನೆಂಟಸ್ತಿಕೆಯುಳ್ಳವನು : ದೂರದ ನಂಟರಂ ಕಂಡರಂತೆ ಸಂಶಯಮಾಗದೆ (ಧರ್ಮಾಕ್ಷ. ೯-೦೯೩) ; ನಾವು ನಿನ್ನ ಮನೆಯಲ್ಲಿ ಯಾರೂ ದೂರದ ನಂಟ . . . ಅಂತ ತಗ್ಗಿ ನಡೆಯೋದು ನನ್ನಿಂದಾಗೋದಿಲ್ಲವಲ್ಲ ! (ಸಂ.ಶ. IX, ೬೬). **ದೂರದ ಬಳಗ.** = ಹತ್ತಿರವಲ್ಲದ ಸಂಬಂಧ,–ನೆಂಟಸ್ತಿಕೆ : ಅಲ್ಲಿರೋದು ದೂರದ ಬಳಗ ಅವರು ಹೋಗು ಅಂದಾಗ ಹೊರಟುಬರ್ತೀನಿ (ಬಸಚಂ. ೦೯೦). **ದೂರದ ಸಂಬಂಧ** = ದೂರದ ಬಳಗ: ಓಬಯ್ಯ ಯಾವುದೋ ಭೂಗತ ವಾಗಿದ್ದ ದೂರದ ಸಂಬಂಧವೊಂದನ್ನು ಸಂಶೋಧನೆಯಿಂದ ಕಂಡುಹಿಡಿದು ಅವಳನ್ನು 'ತಂಗಿ' ಎಂದು ಕರೆಯತೊಡಗಿದ್ದನು (ಕಾನೂಹು. ೦೩೦). **ದೂರ ಪಡಿಸು** = ಪರಿಹರಿಸಂ; ಇಲ್ಲವಾಗಿಸು : ಇದನ್ನೆಲ್ಲಾ ದೂರಪಡಿಸುವುದರಲ್ಲಿ ಕಾವೇರಿ ಸಾಯುವುದು ಮೇಲು (ಕಾವೇರಿ. ೩೦೩). **ದೂರಪಾರ, ದೂರ ದಾರ** = ಹತ್ತಿರವಲ್ಲದುದಂ ; ದೂರ : ನಾವು ನೋಡಿಕೊಂಡು ಬರುವ ದೂರವಾರ ಏನಿಲ್ಲ (ಸ್ವಪ್ನಹೂ. ೩೮) ; ಮಗಳನ್ನು ದೂರಬಾರ ಕೊಟ್ಟರೆ ಹೋಗಿಬರುವುದು ಕಷ್ಟವಾಗುತ್ತೆ (ಕೂಡಿ). **ದೂರವಾಗು, ದೂರವಾಗು, ದೂರಾಗು** = ೧. ಹತ್ತಿರದಲ್ಲಿರದಿರು ; ಹೆಚ್ಚು ಅಂತರ ಹೊಂದು ; ತೊಲಗು: ಸಾಮಂತಸಂದೋಹವವಸರಭೀತಿಯಿಂ ತೊಲಗಿ ಪೋಗೆಯುಂ ನಿಜನಿಯತಪ್ರದೇಶದಿಂ ಪ್ರತೀಹಾರರತಿದೂರವಾಗೆಯುಂ (ಮಲ್ಲಿಪು. ೪-೭೪ ಪ); ತನುವುಟ್ಟ ಮನವುಟ್ಟದೆ ದೂರವಾದರಯ್ಯಾ ಬೆಲೆವೆಣ್ಣಿನಂತೆ (ಪಡಸಂ. ೩೧೭-೯೦) ; ಸದ್ಯಕ್ಕಂಗೆ ಜನನ ಮರಣಂಗಳು ದೂರವಾಗಿರ್ಪುವಯ್ಯಾ (ಅಖಂಡೇ. ೧೬೦-೩೩) ; ಸಾತ್ವಿಕಸದುಭಕ್ತಿಯಃನಱಿಯಃದವರ ಸಂಗದಿಂದ ಕೈಲಾಸಕ್ಕೆ ದೂರಾಗಿಪ್ಪರು (ಸವಜಾವ. ೨-೭) ; ಈ ಕರ್ನಾಟಕ ಭಾಗವು ಸಹ್ಯಾದ್ರಿಯಿಂದ ಪೂರ್ವಕ್ಕೆ ಹೆಚ್ಚುಹೆಚ್ಚು ದೂರಾಗುತ್ತ ಹೋಗುತ್ತದೆ (ಕಥಾಗೆ. ೪). ೨. ಆಗಲು ; ಎರವಾಗು; ಸಂಬಂಧವನ್ನು ಕಳೆದುಕೊಳ್ಳು : ಎಲ್ಲ ತೆಱದಿಂ ನಿಮಗೆ ದೂರವಪ್ಪೆಂ ದೇವ (ಬಸರ. ೧-೭೪) ; ಇಂದಿರೇಶನ ಅರ್ಚಿಸದಱಿಂದ ಬಹು ನೊಂದು ದೂರಾದೆ ಸದ್ಗತಿಯಿಂದ (ಪುರಂದ. ೧-೦೭೭-೬). ೩. ನಿವಾರಣೆಯಾಗು : ನಾನು ಪತ್ರಿಕೆಯನ್ನು ಉತ್ತಮವಾಗಿ ನಡೆಸಿಕೊಂಡು ಹೋದರೆ ಆರ್ಥಿಕ ಕೊರತೆ ತಾನೇ ದೂರಾಗುವದು (ಅಪನಾ. ೨೬). **ದೂರವಿರಿಸು** = ಹತ್ತಿರ ಬರದಂತೆ ಮಾಡು ; ಅಂತರವಿರುವಂತೆ ಮಾಡು : ಸಾಲವೆಂಬುದು ಭಯಂಕರಪಿಶಾಚಿ. ಅದನ್ನು ಆದಷ್ಟು ದೂರವಿರಿಸಬೇಕು (ಅಡುಸಾ. ೦೩೪). **ದೂರ ಸರಿ** = ಹತ್ತಿರದಲ್ಲಿರದಿರಂ ; ಅಂತರವನ್ನು ಹೆಚ್ಚಿಸಂ : ಬುದ್ಧಿಯ ಸೆಣಸಾಟ ಮೇಲುಗೈ ಆಗಿ ವಾಸ್ತವಿತ ನಿಲುವಿನಿಂದ ದೂರ ಸರಿಯುವರು (ದ್ರಾವಿವಿ. ೭೮). **ದೂರ ಸಾರು** = ದೂರಸರಿ : ಕೈಕಟ್ಟಿ ಲಕ್ಷಿಸದೆ ದೂರ ಸಾರಿದೆಯಾ ? ಕೈಕೊಟ್ಟು ಬರಹೇಳಿ ಸಾಸವಾಡಿದೆಯಾ ? (ಕವಪು. ೩೭-೬). **ದೂರಾದ್ದೂರ** = ಸಮೀಪವಲ್ಲದುದು; ಹೆಚ್ಚು ಅಂತರವಿರುವುದು : ದೂರಾದ್ದೂರದ ನೆಲನಾವುದುಯಿದು (ಬಡ್ಡಹ್ಮ. ೩೦-೬೪೮). [ಸಂ.]

ದೂರಂಬೋಗು, ದೂರಪೋಗು, ದೂರಹೋಗು (ಕ್ರಿ). ಸಮೀಪದಲ್ಲಿರದಿರು ; ತೊಲಗು : "ಕಟಿದಂ = ಸತ್ತಂ ; ದೂರಂಬೋದಂ ; ಕಯ್ಮಾಱಿದಂ" (ಕಮಿದ. ಪರಿ. ೦). **ದೂರಪೋಗು** : "ತೂಱಲ್ – ದೂರ ಪೋದುದು" (ಕಶುನಿ.ಕೃ. I, ೭೭). **ದೂರಹೋಗು**: ದೂರಹೋದವರಿಂದು ಬರುವರೆ, ಎಂದು ಬರುವ ನಿರೀಕ್ಷೆಯು ? (ನಲಮು. ೦೧-೮) ; ಅವಳು ದೂರಹೋದುದು ಒಳ್ಳೆಯದಾಯಿತು (ಹೂಹಜ್ಞು. ೦೯೩).

[ದೂರ + ಪೋಗು$_1$]

ದೂರಮಾಡು, ದೂರಮಾಡು (ಕ್ರಿ). ೧. ದೂರಹೋಗುವಂತೆ ಮಾಡು ; ಹತ್ತಿರವಿರದಂತೆ ಮಾಡು ; ತ್ಯಜಿಸು : ಪೂರ್ವಾರ್ಜಿತ ಪ್ರಾಪ್ತಿಯಿಂ ದಾರಿದ್ರ್ಯಂ ಧನಮೆಂಬೆರಳ್ಸಮನಿಕುಂ ಮತ್ತೇಕೆ ಧೀರತ್ವಮಂ ದೂರಮಾಡಿ ಮನಂ ಸದಾ ಕುದಿವುದೋ (ಕಶ್ಮಾಶ. ೪೭). **ದೂರಮಾಡು**: ೨. ಇಲ್ಲದಂತೆ ಮಾಡು ; ನಿವಾರಿಸು ; ಕಳೆ : ಪರಿಹರಿಸಂ : ನನ್ನ ಕಷ್ಟವನ್ನು ದೂರಮಾಡುವುದಕ್ಕಾಗಿ (ಮುಂಬಯಿ. ೪-೦೦೭) ; ಆದ ತಪ್ಪು ತಿಳಿವಳಿಕೆಯನ್ನು ದೂರಮಾಡಿ ಸರಿಯಾದ ವಿಚಾರಸರಣಿಯೊಂದಕ್ಕೆ ಎರಡೂ ಪಕ್ಷಗಳು ಬರಬಹುದು (ಅಪನಾ. ೦೩೨). [ದೂರ + ಮಾಡು$_1$]

ದೂರಗ (ಗು). ೧. ಸಮೀಪವಲ್ಲದ ; ಹತ್ತಿರವಲ್ಲದ. (ನಾ). ೨. ದೂರ ಹೋಗುವಂಥದು. [ಸಂ.]

ದೂರಗತ (ಗು). ದೂರ ಹೊರಟುಹೋದ : ಕೃಷ್ಣವರ್ಣದ ಅವಳ ಮಾಲುಗಣ್ಣುಗಳು ಕ್ಷಣ ಮಾತ್ರ ಅವನ ಮುಖದಲ್ಲಿ ನಾಟಿದ್ದು, ಅನಂತರ ದೂರಗತವಾದುವು (ಪುನರು. ೩೩೩). [ಸಂ.]

ದೂರಗತೆ (ನಾ). ಸಮೀಪವರ್ತಿಯಲ್ಲದವಳಂ ; ಹತ್ತಿರವಿಲ್ಲದವಳಂ: ಇನ್ನು ಮೇಲೆ ನಿನಗೆ ನಾನು ದೂರಗತೆಯಾಗುವೆನಲ್ಲವೆ ? (ಪಾಳುಂತ. ೪೪-೦೯). [ಸಂ. ದೂರಗತಾ]

ದೂರಗಾಮಿ (ನಾ). ೧. ದೂರ ಹೋಗುವವನು : ಊರಿನಿಂದ ದೂರ ಗಾಮಿಯಾಗುವ ನನಗೆ ಈ ವ್ಯವಹಾರವೆಲ್ಲ ಏಕೆ? (ಕೂಡಿ). ೨. ದೂರ ಹೋಗುವುದು,–ಚಲಿಸುವುದು : ಮನುಷ್ಯನ ಕಣ್ಣೂ ಕವಿಯೂ ಸಮಾನವಾದ ದೂರಗಾಮಿಯಾಗಿದ್ದರೆ ಮನುಷ್ಯನ ದುಃಖಪ್ರವಾಹವು ಹೆಚ್ಚುತ್ತಿದ್ದಿತೋ, ಕಡಿಮೆಯಾಗುತ್ತಿದ್ದಿತೋ ಅದನ್ನಾರು ಹೇಳಬಲ್ಲರು ? (ಕಪಾಳು. ೦೨೨). ೩. ಬಾಣ ; ಶರ. [ಸಂ. ದೂರಗಾಮಿನ್]

ದೂರಗೆಯ್ಯು 'ದೂರಗೈ' ನೋ.

ದೂರಗೈ, ದೂರಗೆಯ್ಯು (ಕ್ರಿ). ೧. ಬಿಡಂ ; ತ್ಯಜಿಸಂ : ಕೆಟ್ಟ ಅಭ್ಯಾಸಗಳನ್ನು ದೂರಗೈಯದಿದ್ದರೆ ಬಾಳು ಸಂತೋಷವಾಗಿರುವುದಿಲ್ಲ (ಕೂಡಿ). ೨. ಪರಿಹರಿಸಂ; ಕಳೆ; ನಿವಾರಿಸು: ಸಜ್ಜನಸಂಗವು ತೋರಿ ಸುಗತಿಯನು ದೂರಗೈವುದು ಕುಮತಿಯನು (ಇಂಡಾಪ. ೭೪-೬೦). **ದೂರಗೆಯ್ಯು** : ೧. ಸಣ್ಣವುಟ್ಟ ಮಾತಿಗೆ ಸ್ನೇಹಿತರನ್ನು ದೂರಗೆಯ್ಯುವುದು ಸರಿಯಲ್ಲ (ಕೂಡಿ). [ದೂರ + ಗೈ (<ಕೆಯ್$_1$)]

ದೂರಘ್ರಾಣ (ನಾ). [ಜೈನ] ಹದಿನೆಂಟು ಬಗೆಯ ಬುದ್ಧಿಭಂದ್ರಿಗಳಲ್ಲಿ ಒಂದು : ಆವುದೊಂದು ದೂರದಿಂ ಬಂದ ಗಂಧವನಿಂತುಟೆಂದಱಿವುದು ದೂರಘ್ರಾಣಮೆಂಬುದು (ಪಸಾಠ. ೩೮೬). [ದೂರ + ಘ್ರಾಣ]

ದೂರತೋಪಾಸ್ತ (ನಾ). ದುಸ್ತರವಾದುದು ; ಅಸಾಧ್ಯವಾದುದಂ : ನೀವು ಕನ್ಯಕುಬ್ಜದ ಸಾರ್ವಭೌಮನನ್ನು ಪರಾಭವಗೊಳಿಸಿದ ಹೊರತು, ಆ ದೇಶಗಳು ನಿಮ್ಮ ಮಾಂಡಲಿಕತ್ವವನ್ನು ವಹಿಸುವುದು ದೂರತೋಪಾಸ್ತವಿರುವದು (ಈಶಸಂ. ೦೪) ; ಇನ್ನು ಉಪಾಯಾಂತರಗಳಿಂದ ಹಿಡಿಯುವದಂತೂ ದೂರತೋಪಾಸ್ತವೇ ಸರಿ (ಕಳ್ಳಕಾ. ೪೭) ; P 'ದೂರತಃ+ ಉಪಾಸ್ತ' ಎಂದು ಬಿಡಿಸಬಹುದಾದ ಸಂಸ್ಕೃತಶಬ್ದಕ್ಕೆ 'ದೂರದಿಂದಲೇ ತಳ್ಳಲಾದುದಂ' ಎಂಬ ಅರ್ಥವಿದೆ. [?]

ದೂರದರ್ಶಕ (ಗು). ೧. ದೂರದಲ್ಲಿರುವುದನ್ನು ತೋರಿಸುವ,-ಕಾಣುವಂತೆ ಮಾಡುವ. 'ದೂರದರ್ಶಕಯಂತ್ರ' ಪರಾ. (ನಾ). ೨. ದೂರದ ವಸ್ತುಗಳು ಹತ್ತಿರದಲ್ಲಿದ್ದಂತೆಯೂ, ಹೆಚ್ಚು ಗಾತ್ರದಲ್ಲಿಯೂ ಕಾಣುವಂತೆ ಮಾಡುವ ಸಲಕರಣೆ,-ಯಂತ್ರ; ದುರ್ಬೀನು : ದೂರದರ್ಶಕ; ದುರ್ಬೀನು (Telescope. ಪತ್ರಿ. ೮೨) : ದೂರದರ್ಶಕವನ್ನು ಅಂತರಿಕ್ಷಕ್ಕೆ ತಿರುಗಿಸಿದುದರಿಂದ ಅದುವರೆಗೂ ಕೇವಲ ಕಲ್ಪನಾವಿಲಾಸದಿಂದ ಸೃಷ್ಟಿಸಲ್ಪಟ್ಟಿದ್ದ ಹಲವಾರು . . . ಕಟ್ಟುಕಥೆಗಳೂ ಆಧಾರರಹಿತವಾದುವು (ಶುಕ್ಲಾ.ರ. ೧೮ ಟೀಕೆ) ; ದೂರದರ್ಶಕದ (Telescope) ಮೂಲಕ ಶನಿಗ್ರಹದ ಬಳೆಗಳನ್ನು ಕೆಲವು ಪಂಡಿತರಿಗೆ ತೋರಿಸಿದಾಗ ಅವರಲ್ಲೊಬ್ಬರು, "ಹೀಗೆ ಬಳೆಗಳು ಕಾಣುವುದು ದೃಷ್ಟಿ ದೋಷವೋ, ಈ ದೂರದರ್ಶಕದ ಗಾಜಿನ ದೋಷವೋ?" ಎಂದು ಕೇಳಿದರು (ಧಾತವಿ. ೨೦). [ದೂರ + ದರ್ಶಕ]

ದೂರದರ್ಶಕಯಂತ್ರ (ನಾ). = ದೂರದರ್ಶಕ ೨ : ದೂರದರ್ಶಕಯಂತ್ರ ದಕ್ಷಿಯೊಳ್ ಕಣ್ಣಿಟ್ಟು. ಗಗನವಿಜ್ಞಾನಿ ತಾಂ ರಾತ್ರಿಯಾಕಾಶದಲಿ ಕಾಣ್ಬೊಂದು ತಾರಾಗರ್ಭದಂತೆ (ಶ್ರೀರಾಪಟಾ. ೦೦-೩೭); ಗೆಲೀಲಿಯೊ ತನ್ನ ಪ್ರಖ್ಯಾತವಾದ ದೂರದರ್ಶಕಯಂತ್ರ ಅಥವಾ ದುರ್ಬೀನನ್ನು (Telescope) ತಯಾರಿಸಿದನು (ಗಣಿಕ. ೦೦೩) ; ಆಕಾಶವನ್ನು ನೋಡುವುದಕ್ಕೆ ಒಂದು ಸರಳವಾದ ದೂರದರ್ಶಕ (Telescope) ಯಂತ್ರವನ್ನು ತಯಾರಿಸಿದ (ಆಕಾಶ. ೫). [ದೂರದರ್ಶಕ + ಯಂತ್ರ]

ದೂರದರ್ಶನ (ನಾ). ೧. ದೂರದಿಂದ ನೋಡುವಿಕೆ ; ದೂರದಿಂದ ಕಾಣುವುದು. ೨. ತಡೆಗಳಿಂದ ಅಥವಾ ಹೆಚ್ಚು ಅಂತರದಿಂದ ಮರೆಯಾಗಿರುವ ವಸ್ತುಗಳನ್ನು ಅಥವಾ ದೇಶಾಂತರಗಳಲ್ಲಿ ನಡೆಯುವ ಸಂಗತಿಗಳನ್ನು ನಿಸ್ತಂತು ತರಂಗಗಳ ಅಥವಾ ಇತರ ವೈಜ್ಞಾನಿಕ ಸಾಧನೆಗಳ ಸಹಾಯದಿಂದ ನೋಡುವುದು ; ಟೆಲಿವಿಷನ್ನು ದೂರ(ವಸ್ತು)ದರ್ಶನ; ಪರೋಕ್ಷವೀಕ್ಷಣ (Television. ಇಂಗ್ಲಿ). ೩. ಮುಂದಾಲೋಚನೆ ; ದೀರ್ಘದೃಷ್ಟಿ. ೪. ಪಂಡಿತ ; ವಿದ್ವಾಂಸ. ೫. ಹದ್ದು. ೬. [ಜೈನ] ಹದಿನೆಂಟು ಬಗೆಯ ಬುದ್ಧಿಋದ್ಧಿಗಳಲ್ಲಿ ಒಂದು : ಅಯ್ದುವರ್ಣಂಗಳೊಳಾವುದೊಂದು ದೂರದಿಂ ಬಂದ ವರ್ಣಮನಿಂತುಟೆಂದಱಿವುದು ದೂರದರ್ಶನಮೆಂಬುದು (ಹಸಾರ. ೩೮೬). 'ಬುದ್ಧಿಋದ್ಧಿ' ಪರಾ. [ದೂರ + ದರ್ಶನ]

ದೂರದರ್ಶಿ (ಗು). ೧. ದೂರದೃಷ್ಟಿಯುಳ್ಳ ; ಮುಂದಾಲೋಚನೆಯನ್ನು ಮಾಡುವ; ವಿವೇಕವುಳ್ಳ. (ನಾ). ೨. ದೂರದರ್ಶಕಯಂತ್ರ: ದೂರದರ್ಶಿಯು (Telescope) ಹಾಲೆಂಡಿನಲ್ಲಿ ೧೬೪೫ರಲ್ಲಿ ತಯಾರಾಯಿತು (ಶಿಲ್ಪಾ. ೦೩೭) ; ನಮ್ಮ ದೃಷ್ಟಿಯ ಶಕ್ತಿಯನ್ನು ದೂರದರ್ಶಿಗಳು ಇನ್ನೂ ಹೆಚ್ಚಿಸಿವೆ (ಪಾಂಶಾಸ್ತ್ರ. I, ೩). ೩. ದೂರಾಲೋಚನೆಯುಳ್ಳವನು ; ವಿವೇಕಿ ; ಪಂಡಿತ : "ದೂರದರ್ಶಿ, ದೀರ್ಘದರ್ಶೀ – ಈ ೨ ದೂರವಾದ ಹಿಂದುಮುಂದು ಯೋಚನೆಯುಳ್ಳವನ ಹೆಸರು" (ಸಿದ್ಧಾಂತಿ. ೨೦೩).

[ಸಂ. ದೂರದರ್ಶಿನ್]

ದೂರದರ್ಶಿತ್ವ (ನಾ). ದೂರದೃಷ್ಟಿ ; ಮುಂದಾಲೋಚನೆ ; ವಿವೇಕ : ಬಹುಶ್ರುತನ ಮಂತ್ರನಿಶ್ಚಯಮುಮಂ ದೂರದರ್ಶಿತ್ವಮುಮಂ ಪ್ರತಿಭಾಗುಣಮುಮಂ . . . ಸಚಿವಸಮೂಹಂ ಮೆಚ್ಚಿ (ಶಾಂತಿಪು. ೨-೭೦ ವ) ; ಸರ್. ಎಂ. ವಿಶ್ವೇಶ್ವರಯ್ಯನವರ ದೂರದರ್ಶಿತ್ವದಿಂದಲೂ . . . ದೇಶವು ಹೊಸರೂಪವನ್ನೇ ತಾಳಿತು (ಪ್ರಬಾಸ್ಮೃ. ೨೦). [ಸಂ.]

ದೂರದರ್ಶಿನಿ (ನಾ). ೧. ಮುಂದಾಲೋಚನೆ ಮಾಡುವವಳು ; ವಿವೇಕಿ : ಆಗ ದೂರದರ್ಶಿನಿಯಾದ ನಿದಾನಬುದ್ಧಿಯು ಹಿರಿಯ ಹೆಂಗುಸು ಎಂದರೆ ಏನುತಯೇ (ದೂರಸ. ೦೫೫). ೨. ದೂರದರ್ಶಕಯಂತ್ರ : ದೂರದರ್ಶಿನಿಯ ನೋಟಕ್ಕೆ ಎಲ್ಲ ಜ್ಯೋತಿರ್ಮೇಘಗಳೂ ಬಹು ಸುಂದರ (ನಕ್ಷತ್ರ. ೫) ; ದೂರದರ್ಶಿನಿಯಿಂದ ನೋಡುವನಾ ಅನಂತದ ಆಂಚನು (ಶಿಶಾಂ. ೩೬-೦೩). [ಸಂ. ದೂರದರ್ಶಿನೀ]

ದೂರದೃಷ್ಟಿ (ನಾ). ೧. ದೂರದ ನೋಟ. ೨. = ದೂರದರ್ಶಿತ್ವ : ಸಾವಕಾನುಗಳನ್ನು ಕೊಂಡುಕೊಳ್ಳುವಾಗ ನೀವು ಕೊಡುವ ಬೆಲೆಗೆ ಸರಿಯಾದ ಪ್ರತಿಫಲ ಸಿಗಬೇಕೆಂದರೆ ಕೊಂಡುಕೊಳ್ಳುವವನಲ್ಲಿ ದೂರದೃಷ್ಟಿಯಿರಬೇಕು (ಅಡುಸೌ. ೦೩೪). ೩. ಅರುವತ್ತು ನಾಲ್ಕು ವಿದ್ಯೆಗಳಲ್ಲಿ ಒಂದು ; ಮುಂದಾಗುವುದನ್ನು ತಿಳಿಯುವುದು : ಅಕ್ಷರ ಲೆಕ್ಕ . . . ದೂರದೃಷ್ಟಿ ದೂರಶ್ರವಣ . . . ಮಂತ್ರ ತಂತ್ರಸಿದ್ಧಿ ಇವೆಲ್ಲವ ಕಲಿತಡೇನೋ (ವಚನ. ೦೩-೪೨); P ಪರಂಪರಾಗತವಾದ ಅರುವತ್ತು ನಾಲ್ಕು ವಿದ್ಯೆಗಳಲ್ಲಿ ಇದರ ಉಲ್ಲೇಖವಿಲ್ಲ. ೪. ದೃಷ್ಟಿಯ ದೋಷಗಳಲ್ಲಿ ಒಂದು; ದೂರದ ವಸ್ತುಗಳು ಮಾತ್ರ ಸ್ಪುಟವಾಗಿ ಕಾಣುವ ಕಣ್ಣಿನ ಕುಂದು: ದೂರದೃಷ್ಟಿಯುಳ್ಳ ಕಣ್ಣು ಅದೇ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬೇಕಾಗಿದ್ದರೆ ಹೆಚ್ಚು ತ್ರಾಸಪಡಬೇಕು (ನಿಮ್ಮಧ್ಯ. ೬೪). 'ಚಾಳೀಸು' ಪರಾ. [ದೂರ + ದೃಷ್ಟಿ]

ದೂರದೆಸೆ (ನಾ). (ಒಂದು ಪ್ರದೇಶದಿಂದ) ಅಂತರ ಅಧಿಕವಾಗಿರುವ ಪ್ರದೇಶ,-ಸ್ಥಳ : ಕದಡುಬಗೆ ತಿಳಿಯಾಗಿ, ದೂರದೆಸೆ ಬಳಿಯಾಗಿ, . . . ನುಡಿದಳವಳಂದು (ಹೊಂಗಳು. ೦೨-೨೨). [ದೂರ + ದೆಸೆ]

ದೂರದೇಶ (ನಾ). ಬಹಳ ಅಂತರವಿರುವ ನಾಡು,-ಸೀಮೆ : ದೂರ ದೇಶದೊಳಿರ್ದ ಬರೆದೆ (ಧರ್ಮಾಮೃ. ೦೩-೪೦). [ದೂರ + ದೇಶ]

ದೂರನಿರ್ದೇಶನ (ನಾ). ಅಧಿಕವಾದ ಅಂತರದಲ್ಲಿದ್ದೂ ಯಂತ್ರಗಳ ಕಾರ್ಯವನ್ನು ಮಾರ್ಗದರ್ಶನ ಮಾಡಬಲ್ಲ ಶಕ್ತಿ,-ತಿಳಿವು : ಬಿಲ್ಲು ಬಾಣಗಳಿಂದ ಯುದ್ಧ ಮಾಡುತ್ತಿದ್ದ ಕಾಲಕ್ಕೂ ಅಣುಬಾಂಬುಗಳನ್ನು ದೂರನಿರ್ದೇಶನದಿಂದ ಹಾರಿಸುವ ಈಗಿನ ಕಾಲಕ್ಕೂ ಇರುವ ವ್ಯತ್ಯಾಸವೇ ಅನ್ನಿ (ಮನೋನಂ. ೦೩೪). [ದೂರ + ನಿರ್ದೇಶನ]

ದೂರಪಥ (ನಾ). ಬಹಳ ಅಂತರವುಳ್ಳ ಮಾರ್ಗದ ಸ್ಥಳ ; ಹತ್ತಿರವಲ್ಲದ ಜಾಗ : ದೂರಪಥಕ್ಕೆ ಪೋಪೆನೆನುತುಂ ಪ್ರಿಯಳಲ್ಲಿಗೆ ಬಂದು ಕೇಳಲ್ (ಪುಷ್ಪಕಾ. ೦೩-೨೦೩). [ದೂರ + ಪಥ]

ದೂರಪಾತಂ (ಅ). ದೂರದಿಂದ ಗುರಿಯಿಟ್ಟು : ಒರ್ವನನೆ ಲಕ್ಷ್ಯಂಮಾಡಿ ಶರಾಸಾರದಿಂ ದೂರಪಾತವಿಸುವುದುಂ (ಶಾಂತಿಪು. ೪-೭ ವ). [ಸಂ.]

ದೂರಪೋಗು 'ದೂರಂಬೋಗಂ' ನೋ.

ದೂರಪ್ರತಿ (ನಾ). (ಕಾಲ ಕಳೆದ ಕಾರಣದಿಂದ ಅಥವಾ ಅನೇಕ ಸಲ ಪ್ರತಿಮಾಡಿದ ಪರಿಣಾಮವಾಗಿ) ಬಹಳ ವ್ಯತ್ಯಾಸಹೊಂದಿದ ನಕಲು,-ಪ್ರತಿ : ಹಸ್ತಪ್ರತಿಸಂಗ್ರಹಗಳಲ್ಲಿ ನಮಗೆ ಇಂದು ಕಾಣಸಿಗುತ್ತಿರುವ ಪ್ರತಿಗಳು, ಸ್ವಹಸ್ತಪ್ರತಿಗಳಿಂದ ಇಲ್ಲವೆ ಅವುಗಳ ಸದೃಪ್ರತಿ (Immediate Copy) ಅಥವಾ ದೂರಪ್ರತಿ(Distant Copy)ಗಳಿಂದ ಎಂಥ ಪರಿಸ್ಥಿತಿಯಲ್ಲಿ ಸಕಲುಗೊಂಡವು ಎಂಬುದನ್ನು ನಾವು ಕೇವಲ ಊಹಿಸಬೇಕಷ್ಟೆ ! (ಧಾರಪ. ೨೮). [ದೂರ + ಪ್ರತಿ]

ದೂರಪ್ರಾಚ್ಯ (ಗು). ೧. ತೀರ ಪೂರ್ವದಲ್ಲಿರುವ : ದೂರಪ್ರಾಚ್ಯ ದೇಶಗಳಿಗೆ ಹೋಗಿ ಇದೇ ತರಹದ ಸಂಶೋಧನೆ ಮಾಡಿ ಆ ವಿವರಗಳನ್ನೂ ತಮ್ಮ ಪುಸ್ತಕಕ್ಕೆ ಸೇರಿಸುವುದಾಗಿ ಹೇಳಿದರು (ಮಾರ್ಗದ. ೦೫೫). (ನಾ). ೨. ಜಪಾನ್ ಮೊದಲಾದ ತೀರ ಪೂರ್ವದ ದೇಶ. [ದೂರ+ಪ್ರಾಚ್ಯ]

ದೂರಪ್ರಿಯಃ (ನಾ). ದಕ್ಕದ ಪ್ರಿಯೆ ; ದೊರಕದ ನಲ್ಲ : ನೀರೇಜನಿಯೆನಿತಲರ್ದೇಂ ಸಾರದೆ ಪೋದಂ ದಿನೇಶನಂತೆನಗಂ ನೀಂ ದೂರಪ್ರಿಯನಾದೈ ಸಂಸಾರಂ ವ್ಯರ್ಥಮಾದುದೆಂದು ಬೆಚ್ಚನೆ ಸುಯ್ದುಳ್ (ಅರ್ಧನೇ. ೩-೨೬). [ದೂರ + ಪ್ರಿಯ]

ದೂರಫಲ (ನಾ). ೧. ಬಹಳ ಕಾಲದ ಬಳಿಕ ಆಗುವ ಪರಿಣಾಮ; ತುಂಬ ತಡವಾಗಿ ಬಂದೊದಗುವ ಫಲ: ಇವು ದೂರಫಲಂಗಳ್ ಸ್ವಪ್ನವಿಶೇಷಂಗಳ್ (ಆದಿಪು. ೧೩-೪೪). ೨. ಹೆಚ್ಚು ಅಂತರವಿರುವ ಸಂತತಿ, -ಸಂತಾನ: ತಮ್ಮನು ಅಣ್ಣನಿಂದ ಹದಿನೈದು ವರ್ಷಗಳಷ್ಟು ಅಂತರದಲ್ಲಿ ಹುಟ್ಟಿದ ದೂರಫಲವಾಗಿದ್ದನು (ರೂಢಿ). [ದೂರ+ಫಲ$_1$]

ದೂರಭವ್ಯ (ನಾ). [ಜೈನ] ಸಮ್ಯಕ್ತ್ವಕ್ಕೆ ಇನ್ನೂ ದೂರವಾಗಿರುವವನು; ಸಿದ್ಧಿಯನ್ನು ಸಾಧಿಸದಿರುವವನು: ಆತನತ್ಯುನ್ನತಬೋಧನೀಂ ಬೆಸಸಭವ್ಯನೋ ಭವ್ಯನೋ ದೂರಭವ್ಯನೋ (ಆದಿಪು. ೨-೩೪); ಎಮ್ಮರಸಂಗಾನೆನಿತು ಧರ್ಮಶ್ರವಣಂಗೆಯ್ದೊಡಂ ಭೋಗಂಗಳ್ಗೆ ವಿಮುಖನಾಗಂ ಆತನಭವ್ಯನೊ ಭವ್ಯನೊ ದೂರಭವ್ಯನೊ ನಿಮ್ಮಡಿಗಳೆ ತಿಳಿಯೆ ಬೆಸಸಿಂ (ಜಾಪುಂಪು. ೧೩); ವಾಯುಭೂತಿಚರನಪ್ಪಾ ಜೀವನೀಗಳಭವ್ಯನೋ ಭವ್ಯನೊ ಮತ್ತಂ ದೂರಭವ್ಯನೋ ಬೆಸಸಿಮಿದಂ (ಸುಳುಮಾ. ೫-೨೨); ಕಣ್ಬೇನೆ ಮಾಣ್ದಂದು ಕಾಣ್ಬಕ್ಷಿರೋಗಿಯಂತೆ ದೂರಭವ್ಯಂ ಕರ್ಮೋಪಶಮಮಾದಾಗಳಱಿಗುಂ (ಪಸಾರ. II, ೪೫೨). 'ಭವ್ಯ' ಪರಾ.

[ದೂರ + ಭವ್ಯ]

ದೂರಮಾಡಿಸು (ಕ್ರಿ). ದೂರವಾಗುವಂತೆ ಮಾಡುಂ; ನಿವಾರಿಸು; ಪರಿಹರಿಸುಂ: ನೆರೆಯವರ ಕಷ್ಟಗಳನ್ನು ದೂರಮಾಡಿಸಿದನು (ಮುಂಲಯಿ. ೫-೨೦೬). [ದೂರಮಾಡು (<ದೂರಂಮಾಡು) + -ಇಸು$_3$]

ದೂರಮಾಡು 'ದೂರಂಮಾಡು' ನೋ.

ದೂರಮಾಪಕ (ನಾ). ಒಂದು ಪ್ರದೇಶ ಅಥವಾ ವಸ್ತುವಿನೊಂದಿಗೆ ಇರುವ ಅಂತರವನ್ನು ಅಳೆಯುವ ಯಂತ್ರಸಾಧನ: ದೂರದಲ್ಲಿರುವ ಯಂತ್ರಸಲಕರಣೆಯ ಅಳತೆ ಸಂಖ್ಯೆಗಳನ್ನು ವಿದ್ಯುತ್ತ್ವವಾಹದ ಸಹಾಯದಿಂದ ದಾಖಲಿಡುವ ಸಲಕರಣೆ; (ಮೋಜಣಿ, ಫಿರಂಗಿ ಅಭ್ಯಾಸ, ಮೊ.ಗಳಲ್ಲಿ) ದೂರಗಳನ್ನು ಗೊತ್ತುಮಾಡಲು ಉಪಯೋಗಿಸುವ ಸಲಕರಣೆ; ದೂರಮಾಪಕ (Telemeter. ಇಂಕನಿ). [ದೂರ + ಮಾಪಕ]

ದೂರಮುದ್ರಕ (ನಾ). ಯಾಂತ್ರಿಕ ನಿರ್ದೇಶನದಿಂದ ಹತ್ತಿರವಿರದ ಪ್ರದೇಶಕ್ಕೆ ಕಳುಹಿಸಿದ ವರ್ತಮಾನ, ಸೂಚನೆ, ನಿರೂಪಣೆ ಮುಂತಾದುವನ್ನು ಮುದ್ರಿಸುವ ಸಾಧನ: "ದೂರಮುದ್ರಕ; ಟೆಲಿಪ್ರಿಂಟರ್" (Tele-Printer. ಪತ್ರಿನಿ. ೮೨). [ದೂರ + ಮುದ್ರಕ]

ದೂರಮುದ್ರಣ (ನಾ). = ದೂರಮುದ್ರಕ: (Tele-Type. ಪತ್ರಿನಿ. ೮೨).

[ದೂರ + ಮುದ್ರಣ]

ದೂರಲೇಖ (ನಾ). ವಿದ್ಯುಚ್ಛಕ್ತಿಯ ಸಹಾಯದಿಂದ ವರ್ತಮಾನಗಳನ್ನು ಸಂಕೇತಗಳ ಮೂಲಕ ಹತ್ತಿರದಲ್ಲಿರುವವರಿಗೆ ತಿಳಿಸುವ ಯಾಂತ್ರಿಕ ಸಾಧನ: ಸಮಾಚಾರ ಕಳುಹಿಸಲು ಉಪಯೋಗಿಸುವ ದೂರಲೇಖದ (ಟೆಲಿಗ್ರಾಫ್)ಭಾಗ (Communicator. ಇಂಕನಿ).

[ದೂರ + ಲೇಖ]

ದೂರವಂದೆ (ನಾ). ತುಂಬ ಪುಕ್ಕಲ; ತೀರ ಅಂಜುಕುಳಿಯಾದ ವ್ಯಕ್ತಿ; ಮಹಾಭೀತ: ಶ್ರುತವಿಲ್ಲದ ಲಿಂಗಿಯಂತೆ ಮೂರ್ಖನಾಗದೆ ದೂರವಂದೆಯಂತೆ ತಲ್ಲಣಿಸದೆ . . . [ಧರ್ಮದೊಳ್] ನಿಶ್ಶಂಕನುಮಪ್ಪುದು (ಧರ್ಮಾಮೃ. ೪-೪೬). [ದೂರ + ಪಂದೆ]

ದೂರವಾಣಿ (ನಾ). ವಿದ್ಯುಚ್ಛಕ್ತಿಯ ಮೂಲಕ ಧ್ವನಿಯನ್ನು, ಮುಖ್ಯವಾಗಿ ಮಾತುಗಳನ್ನು ಸಾಗಿಸುವ ಸಲಕರಣೆ; ಟೆಲಿಫೋನು: ಮೊದಲು ದೂರವಾಣಿಯ ಮುಂದೆ ಕುಳಿತು ವಿಮಾನಕ್ಷೇತ್ರದ ಅಧಿಕಾರಿಯನ್ನು ವಿಚಾರಿಸಿದೆ (ನಂಟರು. ೧೦೩); ಟಪಾಲು ಮತ್ತು ತಂತಿ, ದೂರವಾಣಿ ನಿಸ್ತಂತುವಾರ್ತೆ ಮತ್ತು ಪ್ರಸಾರಣ ಮತ್ತು ಇತರ ಅದೇ ರೂಪದ ಸಮಾಚಾರ ಸಾಧನ (ಭಾಧಾನ. ೨೪೦). [ದೂರ + ವಾಣಿ$_1$]

ದೂರವಾರ್ತಾವ್ಯವಸ್ಥೆ (ನಾ). ದೂರದೂರದ ಪ್ರದೇಶಗಳಿಗೆ (ದೂರಲೇಖ, ದೂರವಾಣಿ ಮುಂತಾದುವುಗಳ ಮೂಲಕ) ಸಮಾಚಾರಗಳನ್ನು ತಲುಪಿಸಲು ಮಾಡಿರುವ ವ್ಯವಸ್ಥೆ: ಇಂತಹ ಸಂಕ್ಷೋಭಗಳಿಂದ ಟೆಲಿಗ್ರಾಫ್, ಟೆಲಿಫೋನ್, ರೇಡಿಯೋ ಮುಂತಾದ ದೂರವಾರ್ತಾವ್ಯವಸ್ಥೆಗಳಿಗೆಲ್ಲಾ ಅಡಚಣೆಯುಂಟಾಗುವುದು (ಭಾತವಿ. ೩೨೨).

[ಸಂ. ದೂರವಾರ್ತಾವ್ಯವಸ್ಥಾ]

ದೂರವೀಕ್ಷಣ (ನಾ). ೧. ದೂರದಲ್ಲಿರುವ ವಸ್ತುಗಳನ್ನು ನೋಡುವುದು. 'ದೂರವೀಕ್ಷಣಯಂತ್ರ' ಪರಾ. ೨. ಕಣ್ಣಿಗೆ ಕಾಣದ ವಿಷಯಗಳನ್ನು ಪ್ರತ್ಯಕ್ಷವಾಗಿ ಕಂಡಂತೆ ಮನಸ್ಸಿನಲ್ಲಿ ಗ್ರಹಿಸುವುದು; ಅತೀಂದ್ರಿಯ ದೃಷ್ಟಿ: ಅವಧಿಜ್ಞಾನ ಆಧುನಿಕ ಮನಶ್ಶಾಸ್ತ್ರದಲ್ಲಿ ದೂರವೀಕ್ಷಣ (Clairvoyance) ವೆಂದು ಕರೆದಿರುವ ಶಕ್ತಿಯನ್ನು ಹೋಲುತ್ತದೆ. ದೂರದಲ್ಲಿ ನಡೆದಿರುವ ಅಥವಾ ಗತಕಾಲದಲ್ಲಿ ನಡೆದಿರುವ ಸಂದರ್ಭಗಳನ್ನು ಕುಳಿತ ಕಡೆಯಿಂದಲೇ, ಕಣ್ಣಿನ ಸಹಾಯವಿಲ್ಲದೆಯೇ ಒಂದು ದೃಶ್ಯದಂತೆ ನೋಡುವುದು-ದೂರವೀಕ್ಷಣಶಕ್ತಿಯಿಂದ ಸಾಧ್ಯ (ತತ್ವಪ್ರಾ. ೧೨೮).

[ದೂರ + ವೀಕ್ಷಣ]

ದೂರವೀಕ್ಷಣಯಂತ್ರ (ನಾ). ದೂರದರ್ಶಕಯಂತ್ರ: ಇದು ದೂರವೀಕ್ಷಣಯಂತ್ರೆ (Telescope) ಇರಬಹುದೇ ಎಂಬ ಸಂಶಯ ಬರುತ್ತದೆ (ಮ್ಯಾವಾಸ್ತು. ೧೦೯). [ದೂರವೀಕ್ಷಣ + ಯಂತ್ರ]

ದೂರವುಳಿ (ಕ್ರಿ). ಹತ್ತಿರದಲ್ಲಿರದಿರು; ದೂರವಿರು: ಸಂಬಂಧಿಕರು ಅವರ ನಡವಳಿಕೆಯನ್ನು ನೋಡಿ ದೂರವುಳಿದರು (ರೂಢಿ).

[ದೂರ + ಉಳಿ$_1$ (<ಉಟ್ಟಿ$_1$)]

ದೂರಶ್ರವಣ (ನಾ). ೧. ಅರುವತ್ತುನಾಲ್ಕು ವಿದ್ಯೆಗಳಲ್ಲಿ ಒಂದು; ಹೆಚ್ಚು ಅಂತರದಲ್ಲಿಯ ಧ್ವನಿಯನ್ನು ಕೇಳುವುದು: ಅಕ್ಷರ ಲೆಕ್ಕ . . . ದೂರದೃಷ್ಟಿ ದೂರಶ್ರವಣ . . . ಮಂತ್ರ ತಂತ್ರಸಿದ್ಧಿ ಇವೆಲ್ಲವ ಕಲಿತಡೇನೋ (ಪಚಸಂ. ೧೩-೪೨). P ಪರಂಪರಾಗತವಾದ ಅರುವತ್ತುನಾಲ್ಕು ವಿದ್ಯೆಗಳಲ್ಲಿ ಇದರ ಉಲ್ಲೇಖವಿಲ್ಲ. ೨. = ದೂರಶ್ರವಣತ್ವ: ರಾಜಸದ ದಶಸಿದ್ಧಿಯಿದ್ದಿಹವು . . . ಕೇಳನೂರ್ಮಿಯು ಒಂದು ಮತ್ತೆಯು ಕೇಳು ದೂರಶ್ರವಣ ಎರಡದು (ಜ್ಞಾನಸಿಂ. ೨೦-೫೩). ೩. [ಜೈನ] ಹದಿನೆಂಟು ಬಗೆಯ ಬುದ್ಧಿಋದ್ಧಿಗಳಲ್ಲಿ ಒಂದು: ದೂರದಿಂ ಬಂದ ಶಬ್ದಮನಿಂತು ಟಿಂದಱಿವುದು ದೂರಶ್ರವಣಮೆಂಬುದು (ಪಸಾರ. ೩೮೬). 'ಬುದ್ಧಿಋದ್ಧಿ' ಪರಾ. [ದೂರ + ಶ್ರವಣ$_2$]

ದೂರಶ್ರವಣತ್ವ (ನಾ). [ಯೋಗ] ರಾಜಸಯೋಗದ ಹತ್ತು ಬಗೆಯ ಸಿದ್ಧಿಗಳಲ್ಲಿ ಒಂದು; ಇರುವ ಕಡೆಯಿಂದಲೇ ದೂರದ ಧ್ವನಿಯನ್ನು ಕೇಳಬಲ್ಲ ಶಕ್ತಿ: ಅನೂರ್ಮಿಮತ್ವ, ದೂರಶ್ರವಣತ್ವ, ದೂರದರ್ಶಿತ್ವ, ಕಾಮರೂಪತ್ವ, ಪರಕಾಯಪ್ರವೇಶಿತ್ವ, ಸ್ವಚ್ಛಂದಮೃತ್ಯುತ್ವ, ದೇವತೆಗಳ ಮತ್ತು ದೇವಕನ್ಯೆಯರ ಸಹಕ್ರೀಡೆಯನ್ನು ನೋಡುವಿಕೆ, ಯಥಾಸಂಕಲ್ಪಸಿದ್ಧಿ, ಅಪ್ರತಿಹತವಾದ ಆಜ್ಞಾಶಕ್ತಿ (ಶ್ರೀವತ್ಸ. ೪೮೯). 'ದಶಸಿದ್ಧಿ' ಪರಾ. [ಸಂ.]

ದೂರಸಂಪರ್ಕ (ನಾ). ದೂರದಲ್ಲಿರುವವರೊಡನೆ ಸಂಭಾಷಿಸಲು ಸಹಾಯ ಮಾಡುವ ಸಾಧನ: (Tele-Communication. ಪತ್ರಿನಿ. ೮೧).

[ದೂರ + ಸಂಪರ್ಕ]

ದೂರಸ್ತ (ನಾ). ೧. ಹತ್ತಿರಕ್ಕೆ ಬರದವನು; ದೂರವೇ ಉಳಿಯುವವನು. ೨. (ಆಲಂ) ಎರವಾದವನು; ದೂರವಾದವನು: ಇವರಲ್ಲಿ ನಾವು ಯಾರಾದರೂ ಕಾಣಿಕೆ ತೆಗದುಕೊಂಡರೆ ನಮ್ಮ ಸ್ರೀಸ್ಥಲದ ಸೂರ್ಯ ಸಿಂಹಾಸನಕೆ ದೂರಸ್ತರು (ಎಳ. VI, ಚಿಕ್ಕಮ. ೧೧೦-೨೩; 1702).

[<ಸಂ. ದೂರಸ್ಥ]

ದೂರಸ್ಥ (ಗು). ೧. ಹೆಚ್ಚು ಅಂತರದಲ್ಲಿರುವ ; ಹತ್ತಿರವಲ್ಲದ. (ನಾ). ೨. ಹೆಚ್ಚು ಅಂತರದಲ್ಲಿರುವುದು ; ಸಮೀಪವಲ್ಲದುದು : ಜನತತ್ತ್ವಂ ಸ್ಮರತತ್ತ್ವಮೆಂಬಿವೆರಡುಂ ದೂರಸ್ಥಂ (ಶಾಂತಿಪು. ೦-೦೬). ೩. (ಯಾವುದಾದರೊಂದು ಸ್ಥಿತಿಯನ್ನು) ಮೀರಿದವನು,–ಅತೀತನಾದವನು : ಅಷ್ಟವಿಧಾರ್ಚನೆಯ ಮಾಡಿ ಬಲಿಸುವೆನೆ ಅಯ್ಯ ನೀನು ಬಹಿರಂಗ ವ್ಯವಹಾರ ದೂರಸ್ಥನು (ಮಹಾದೇ. ಬ. ೧೩-೧೦). [ಸಂ.]

ದೂರಸ್ಪರ್ಶನ (ನಾ). [ಜೈನ] ಹದಿನೆಂಟು ಬಗೆಯ ಬುದ್ಧಿಋದ್ಧಿಗಳಲ್ಲಿ ಒಂದು; ದೂರದಿಂದಲೇ ಸ್ಪರ್ಶಜ್ಞಾನವನ್ನು ಪಡೆಯುವುದು : ಎಂಟು ಸ್ಪರ್ಶಂಗಳೊಳಾವುದೊಂದು ದೂರದಿಂ ಬಂದ ಸ್ಪರ್ಶನ ಮನಿಂತುಟೆಂದಱಿವುದು ದೂರಸ್ಪರ್ಶನಮೆಂಬುದು (ಪಸಾರ. ೩೮೬). 'ಬುದ್ಧಿಋದ್ಧಿ' ಪರಾ. [ದೂರ + ಸ್ಪರ್ಶನ]

ದೂರಹೋಗು 'ದೂರಂಬೋಗು' ನೋ.

ದೂರಾನ್ವಯ (ನಾ). ೧. ಹತ್ತಿರವಲ್ಲದ ಸಂಬಂಧ : ವೈಜ್ಞಾನಿಕ ಪ್ರಭಾವದ ದೂರಾನ್ವಯ ಅಲ್ಲಿದೆ ಎಂದು ಒಪ್ಪಿಕೊಳ್ಳಬಹುದು (ಸುವರ್ಣ. ೨೦೮). ೨. [ವ್ಯಾಕ] ಕಾವ್ಯದಲ್ಲಿ ಶಬ್ದಗಳು ಹತ್ತಿರವಿರದೆ ಇರುವುದರಿಂದ ಅರ್ಥವನ್ನು ಸ್ಪಷ್ಟಗೊಳಿಸಲಾಗದಿರುವಿಕೆ; ದೂರದ ಶಬ್ದವನ್ನು ಅನ್ವಯಕ್ಕಾಗಿ ಹತ್ತಿರಕ್ಕೆ ತರುವುದು ; ☞ ಇದು ಒಂದು ದೋಷ. ನೇಯದ ದೋಷ ಎಂದು ಕರೆಯುತ್ತಾರೆ.

[ದೂರ + ಅನ್ವಯ]

ದೂರಾನ್ವಿತ (ನಾ). ಹತ್ತಿರದ ಸಂಬಂಧವಿಲ್ಲದುದು ; ಹೊಂದಿಕೆಯಾಗದುದು : ವಿರುದ್ಧರಸದ ವಿಭಾವಾದಿಗಳನ್ನು ವರ್ಣಿಸುವುದು ದೂರಾನ್ವಿತವಾದ ವಸ್ತುವಾವುದೋ ಒಂದನ್ನು ಬೆಳೆಸುವುದು . . . ಇವೆಲ್ಲವೂ ರಸದ ವಿರೋಧಕ್ಕೆ ಕಾರಣಗಳಾಗುತ್ತವೆ (ಧ್ವನ್ಯಾಲೋ. ೦೬೩).

[ದೂರ + ಅನ್ವಿತ]

ದೂರಾರಿಷ್ಟ (ನಾ). ಮುಂದೆ ಉಂಟಾಗುವ ಅಶುಭ,–ಕೇಡು : ಅಂತು ಭರತೇಶ್ವರಂ . . . ಒಂದುದಿವಸಂ ತ್ರಿಯಾಮಾವಿರಾಮದೊಳ್ ಆಶ್ಚರ್ಯಭೂತಂಗಳುಂ ದೂರಾರಿ[ಪಾಠಾಂ. ನಿ]ಷ್ಟಫಲಸೂಚಕಂಗಳುಮಪ್ಪ ಸ್ವಪ್ನಂಗಳಂ ಕಂಡು (ಆದಿಪು. ೧೫-೨೦ ವ). [ದೂರ + ಅರಿಷ್ಟ]

ದೂರಾರ್ಥ (ನಾ). ೧. ಹತ್ತಿರವಿರದ ವಸ್ತು, – ಪದಾರ್ಥ : (ಕೆ). ೨. [ಕಾವ್ಯಮೀ] ಪದಗಳಿಂದ ಸಹಜವಾಗಿ ಹೊರಡದ ಅರ್ಥ; ಊಹಿಸಲು ಕಷ್ಟವಾಗುವ ಅರ್ಥ. [ದೂರ + ಅರ್ಥ]

ದೂರಾಲೋಚನೆ (ನಾ). ಮುಂದಿನದನ್ನು ಯೋಚಿಸಬಲ್ಲ ಶಕ್ತಿ,–ವಿವೇಕ ; ಮುಂದಾಲೋಚನೆ : ಈ ಪ್ರಕಾರವಾಗಿ ದೂರಾಲೋಚನೆಯಿಂದ, ಪರಿಣಾಮ ಪರಿಜ್ಞಾನವನ್ನು ಅರಿತು . . . ಸದಾ ವಾಕ್ಕಿಗೆ ಸಂಸ್ಕಾರವನ್ನು ಮಾಡಿಕೊಳ್ಳುತ್ತಿರಬೇಕು (ಅರ್ಯಧ. ೫೫).

[ದೂರ + ಆಲೋಚನೆ]

ದೂರಾಸ್ವಾದ (ನಾ). [ಜೈನ] ಹದಿನೆಂಟು ಬಗೆಯ ಬುದ್ಧಿಋದ್ಧಿಗಳಲ್ಲಿ ಒಂದು : ಪಂಚರಸಂಗಳೊಳಾವುದೊಂದು ದೂರದಿಂ ಬಂದ ರಸಮನಿಂತುಟೆಂದಱಿವುದು ದೂರಾಸ್ವಾದಮೆಂಬುದು (ಪಸಾರ. ೩೮೬). 'ಬುದ್ಧಿಋದ್ಧಿ' ಪರಾ. [ದೂರ + ಆಸ್ವಾದ]

ದೂರಾಸ್ವಾದನ (ನಾ). = ದೂರಾಸ್ವಾದ : ಪಂಚರಸಂಗಳೊಳೊಂದೊಂದು ರಸಂ ದೂರದಿಂ ಬಂದುದು ಇಂತುಂಟೆದಱಿವುದು ದೂರಾಸ್ವಾದನಮೆಂದಱಿವುದು (ಜ್ಞಾನಾ. ೧೩-೩). 'ಬುದ್ಧಿಋದ್ಧಿ' ಪರಾ. [ದೂರ + ಆಸ್ವಾದನ]

ದೂರಾಳಿ (ನಾ). ನಿಂದಿಸುವ ಸ್ವಭಾವದ ವ್ಯಕ್ತಿ ; ಹೀಯಾಳಿಸುವುದೇ ಸ್ವಭಾವವಾದ ವ್ಯಕ್ತಿ : ಕನ್ನಡದ ದೂರಾಳಿಗಳನ್ನು ಎರಡು ಪಂಗಡ ಮಾಡಬಹುದು (ಕನ್ನಸು. I, ೧೫೦). [ದೂರು$_2$ (<ದೂಱು$_2$)+–ಆಳಿ$_3$]

ದೂರಿ$_1$ (ನಾ). ಬಂಡಿಯ ಎರಡು ಚಕ್ರಗಳನ್ನೂ ಕೂಡಿಸುವ ಸಾಧನ ; ಅಚ್ಚುಮರ : ರಥಕ್ಕೆ ಸೇರಿಸತಕ್ಕ ದೂರಿ ಮೊದಲಾದ ಸಾಮಗ್ರಿಗಳನ್ನೂ (ಕೃಷ್ಣಾಉ. ೨೪೪) ; ಗಾಡಿಯ ಎರಡು ಚಕ್ರಗಳನ್ನೂ ಮಧ್ಯದ ದೂರಿಯೊಂದಿಗೆ ಹೊತ್ತುಕೊಂಡು ಹೋಗಿ . . . ನದಿಯ ತೀರದ ಮರಳಿನಲ್ಲಿ ಹೂಳಿದವರುಂಟು (ಪಶ್ಚ. ೪. ೩೬).

[←ಹಿಂ. ಮರಾ. ಧುರೀ, ಧುರಾ./ಪ್ರಾ. ಧುರೀ./ಸಂ. ಧುರ್]

ದೂರಿ$_2$ (ನಾ). ಎಳೆಯ ಮಕ್ಕಳನ್ನು ಆಡಿಸುವಾಗ ಉಪಯೋಗಿಸುವ ಒಂದು ಪದ ದೂರಿ ದೂರಿ ದುಗ್ಗಲಮ್ಮ (ಕೂಡಿ). [?]

ದೂರಿತ (ನಾ). ದೂರ ಉಳಿಯುವವನು : ದೂರದೊಳರ್ಚೆಯೇಕೆನಲ್ ದೂರಿತರಲ್ತೆ ಪುಷ್ಪವತಿಯಾದಳ ಕಂಡರೆ ನೀತಿಮಾರ್ಗದರ್ (ಮಲ್ಲಿಕಾ. ೪-೬೮೮). [ಸಂ.]

ದೂರಿಸು$_1$ 'ದೂಱಿಸು' ನೋ.

ದೂರಿಸು$_2$, ದೂರೈಸು (ಕ್ರಿ). ನಿವಾರಿಸು ; ಪರಿಹರಿಸು : ದೂರಿಸದೆ ನೆನೆದು ಕೂಳಂ ನೀರುಮನಜ್ಞಾನದಿಂಡಮಿರುಳುಂ ಪಗಲುಂ ಸಾರತರ ಪರಮಸೌಖ್ಯಸುಧಾರಸಭರಿತಾತ್ಮತತ್ತ್ವಮಂ ನೆನೆ ಮನದೊಳ್ (ಉಸಾರ. ೪೪-೨೭೦) ; (ಪಸಾರ. ೩೭೦ ನೋ) ; ತಾಂ ವರಸತಿಯ ಸಂಭೋಗದೊಳಮಲಾತ್ಮಸಂವರೆಪೂರ್ವಕಮಾಗಿ ಪುಂವೇದನೀಯ ಕರ್ಮವನು ದೂರಿಸಿದನದೇಂ ವೀತರಾಗನೊ ಭೋಗಿ (ಧರಚ. ೧೦-೧೨೫) ; ಅರ ಮೇಲೆಸುಗೆ ದೇವರಿಗೆ ಹೆಂಗಳ ಮೇಲೊ ದೂರಿಸುವಾಳ್ಗಳ ಮೇಲೊ (ಧರಚ. ೫೦-೨೫). **ದೂರೈಸು** : ನನ್ನಯ ಚಿಂತೆಯನ್ನು ದೂರೈಸಲಿಚ್ಛಿಸಿ ಕಾಂತೆ ಪ್ರಾಣಿಗಳಲ್ಲಿ ಸ್ಥಿರವಾಗಿರಿಸಿ ಪ್ರೇಮದಲಿ ಅಂತವನ್ನೈದಿದರು ನನ್ನಯ ಸ್ವಾಂತರಂಗಕೆ ಸುಖವು ತೋರದು (ರಘುವಂ. ೮೪-೬೦).

[ದೂರ + – ಇಸು$_3$]

ದೂರೀಕರಿಸು (ಕ್ರಿ). ತ್ಯಜಿಸು ; ಬಿಟ್ಟುಬಿಡು : ಆರಿವನೊತ್ತಿಗನೇಕೆಂದು ನೀನೆನ್ನ ದೂರೀಕರಿಸಬೇಡಮ್ಮ (ಕುರಾಸಾಂ. ೦-೨೪) : ದೇವರನ್ನು ದೂರೀಕರಿಸಿ ಮಿಲ್ಲಿಯವರನ್ನು ದೇವರೆಂದು ತಿಳಿದುಕೊಂಡಂತೆ ಕಾಣುವದು (ಅಮಗಾಂ. ೪) ; ಜಾತಿ ಅಥವಾ ವರ್ಗಭೇದ ಭಾವನೆಗಳನ್ನು ದೂರೀಕರಿಸಿ ಬಡವರೂ ಶ್ರೀಮಂತರೂ, ಹಿರಿಯರೂ ಕಿರಿಯರೂ ಒಂದಾಗಿ ಸೇರುತ್ತಾರೆ (ಭಾರತಾ. ೪೭) ; ಅವನನ್ನು ದೂರೀಕರಿಸಲು ಆಗ ಅವರಿಗೆ ಇನ್ನೊಂದು ಕಾರಣವೂ ಉದ್ಭವವಾಯಿತು (ನಿಸುತ. ೪೮) ; ಹೊಸಗನ್ನಡಕ್ಕೆ ಸೇರುವುದಿಲ್ಲವೆಂದು ದೂರೀಕರಿಸಬೇಕಾದ ಯಾವ ಪ್ರಯೋಗವೂ ಈ ಪದ್ಯಪಂಕ್ತಿಗಳಲ್ಲಿಲ್ಲ (ಸಮಾಲೋ. ೦೫). [ದೂರೀಕರಣಂ + – ಇಸು$_3$]

ದೂರೀಕೃತ (ಗು). ೧. ನಿವಾರಿಸಿದ ; ದೂರಗೊಳಿಸಿದ : ☞ ತಾರಪತಿ ವತ್ಕೀರ್ತಿವಿಹಾರಾ . . . ಪ್ರಭಯಾನಿಜತನುಪೂರಾ ಪೂರಾಶ್ರಿತಹೃತ್ಕ್ಲೇಶ ವಿದೂರಾ ದೂರೀಕೃತಬಲವಿಸ್ತಾರಾ (ಕವಿರಾ. ೩-೨೩೫) ; ಅತಿವಿಶದ ಮಣಿಪ್ರದೀಪಕೋದ್ಯೋತದೂರೀಕೃತತಮಸ್ತಮಂದೊಳನೇಕರತ್ನರಚಿತ ಪ್ರತಿಪಾದುಕವಿನ್ಯಸ್ತಕಾಂಚನಮಂಚೋಪಶೋಭಿತದೊಳ್ . . . ಆ ದಂಪತಿಗಳ್ . . . ನಿದ್ರಾರಸವಶಗತರಾದರ್ (ಆದಿಪು. ೫-೨೨ ವ) ; ದೂರೀಕೃತಾರಿಷಡ್ವರ್ಗನುಂ . . . ನಮೀಕೃತಸಾಮಂತವರ್ಗನುಮಾಗಿ (ಚಂದ್ರಪು. ೪-೨೮ ವ) ; ದೂರೀಕೃತಾಘಂ ಮಹಿತಜೀವನ್ಮುಕ್ತಮಾನಸನು (ಬಸಪು. ೨೯-೨). ೨. ಬೇರ್ಪಡಿಸಿದ ; ಪ್ರತ್ಯೇಕಪಡಿಸಿದ. [ಸಂ.]

ದೂರೀಭೂತ (ನಾ). ಪ್ರತ್ಯೇಕವಾದುದು ; ಬೇರೆಯಾದುದು : ವ್ಯಂಗ್ಯಾರ್ಥವು ವಾಚ್ಯಾರ್ಥದೊಡನೆ ಕೂಡಿಯೇ ಅನುಭವಕ್ಕೆ ಬರುತ್ತದೆ. ಆದುದರಿಂದಲೇ . . . ವ್ಯಂಗ್ಯಪರಾಮರ್ಶಕಾಲದಲ್ಲಿ ವಾಚ್ಯಬುದ್ಧಿಯು ದೂರೀಭೂತವಾಗುವುದಿಲ್ಲ (ಧ್ವನ್ಯಾಲೋ. ೨೫). [ಸಂ.]

ದೂರು$_1$ 'ದೂಱು$_1$' ನೋ.

ದೂರು₂ 'ತೂರು₂' ನೋ.

ದೂರು₃ 'ದೂಱು₂' ನೋ.

ದೂರು₄ (ನಾ). ಹತ್ತಿರವಲ್ಲದುದು; ದೂರ: ದೂರಿಂದ ಕಾಣಿಸುವ ಗ್ರಾಮಗಳು ಸುಟ್ಟಂತೆ ತೋರುತ್ತವೆ (ಕಥಾಗೆ. ೬); ಆಗ್ಗೆ ದೂರಿನಿಂದ ಪೈಜಣ, ರುಳಿ, ಗೆಜ್ಜೆ ಸಪ್ಪಳವಾಯಿತು (ವಿಜಯ. ೧೪೯); ಮಾದರ ಚಿನ್ನಪ್ಪ ದೂರಿನಲ್ಲಿ ಕೂಗಿಕೊಂಡನು (ಹಬ್ಬಿಬ. ೪). [<ಸಂ. ದೂರ]

ದೂರುಗ 'ದೂಱುಗ' ನೋ.

ದೂರೈಸು 'ದೂರಿಸು₂' ನೋ.

ದೂರೋತ್ಸಾರಿತ (ಗು). ಬಹು ಅಂತರದಲ್ಲಿ ಬಿಟ್ಟ; ದೂರದಲ್ಲಿ ನಿಲ್ಲಿಸಿದ: ಓರ್ವಂ ರಾಜಕುಮಾರಂ ದೂರೋತ್ಸಾರಿತವಾಹನಂ ಸಸಂಭ್ರಮೋಪಗತಪರಿಚಾರಕಸ್ಕಂಧವಿನ್ಯಸ್ತವಾಮಹಸ್ತನಾಗಿ (ಆದಿಪು. ೩-೯೦ ಪ); ಸಪ್ತಾನೀಕಸಮೇತರಾಗಿ ಗಗನತಳಮನಲಂಕರಿಸಿ ಬಂದು ದೂರೋತ್ಸಾರಿತವಾಹನರಾಗಿ ಸೂರ್ಯಮಿತ್ರಜಿನೇಂದ್ರನಂ ತ್ರಿಃಪ್ರದಕ್ಷಿಣಂ ಗೆಯ್ದು (ಸುಕುಮಾ. ೮-೬೬ ಪ); ದೂರೋತ್ಸಾರಿತ ವಿಚಿತ್ರಾತಪತ್ರ ವಿವಿಧ ವಾಹನಂ ಬಸದಿಯಂ ಬಲಗೊಂಡು . . . ಬಂದು (ಪಂಠಾಮಾ. ೭-೬೯ ಪ).

[ದೂರ + ಉತ್ಸಾರಿತ]

ದೂರ್ತ (ಗು). ೧. ಮೋಸದ; ವಂಚನೆಯ. (ನಾ). ೨. ಮೋಸಗಾರ; ವಂಚಕ: ದೂರ್ತರ್ ಮಾರ್ತಾಂಡನಂ ಕಂಡ ಮಂಜಿನಂತೆ ಪರಿಯೆ (ಧರ್ಮಾಮೃ. ೨-೬೯). 'ದೂರ್ತವಡೆ' ಪರಾ. ೩. ಕಾಮುಕ; "ವಿಟ" (ನಾಚಿರಾ. ೬). [<ಸಂ. ಧೂರ್ತ]

ದೂರ್ತವಡೆ (ನಾ). ಮೋಸಗಾರರ ಗುಂಪು; ವಂಚಕರ ಸಮೂಹ: ಸರ್ವಸ್ವಾಪಹರಣಂ ಮಾಡಿ ತನ್ನೊಡನಿರ್ದ ಕಸವಿಂಗಂ ಕಳುಚಿಂಗಂ ಡಸಿಕಿಂಗಂ ದೂರ್ತವಡೆಗಮತಿಚಪಳರ್ಗಂ . . . ಕುಡುವನುರ್ಕಿ ಕುಮಾರಂ (ಧರ್ಮಾಮೃ. ೨-೭೦). [ದೂರ್ತ + ಪಡೆ₂]

ದೂರ್ತು (ನಾ). ೧. ಮೋಸ ಮಾಡಿಯೂ ನಾಚಿಕೆ ಪಡದಿರುವುದು,– ಸಂಕೋಚಪಡದಿರುವುದು. ೨. ವಂಚಕತನ; ದುಷ್ಟತೆ; ಮೋಸ ಗಾರಿಕೆ: ದೂರುಂ ದೂರ್ತುಂ [ಪಾಠಾಂ. ರ್ಕುಂ] ದುಷ್ಟುಂ ನೂಱುಂಟು (ಮದತಿ. ೧೦-೫); ಉಣ್ಬರ ಬಾಯೊಳ್ ತಿಣ್ಣನೆ ಕಿರ್ಚಂ ಪುಡಿಯುಂ ಮಣ್ಣಂ ಪೊಯ್ದುಂತು ಮಾಡಿದೈ ದೂರ್ತಿಂದಂ (ಧರ್ಮಾಮೃ. ೯-೧೩೬); ಕೊಲೆ ಗೆಯ್ದುವ ದೂರ್ತುಗಳಂ ಪಲವನವರ್ ಚಲದೆ ಮಾಡಿ ನೆಲನಂ ಬಿಸುಟೀ ಕುಲಪತಿಗೆ ಮಲೆದು (ನೇಮಿಪು. ೧೦-೪೭); ದ್ವಿಗುಣಮಾಗದೆ ಮಾಣ್ಬುದೆ ನಿನ್ನ ಧೂ[ದೂ]ರ್ತು (ದಶಕು. ೧೦-೧೦೪). ೩. ವಿಟವೃತ್ತಿ; ಕಾಮುಕತೆ; ಲಂಪಟತೆ: ಅವಳೆಂದಳಿಂತಿನಿತು ಧೂ[ದೂ]ರ್ತಿ ನೊಳಿಂತಿರುತೇನೊ ನಾಣ್ಚೆಯೊ ಎನೆ (ನೇಮಿಪು. ೩-೦೪೮).

[ದೂರ್ತ + – ಉ₄]

ದೂರ್ತೆ (ನಾ). ವಂಚಕಿ; ಕಪಟಿ; ಮೋಸಗಾರ್ತಿ: (ಕಿ).

[ದೂರ್ತ + – ಎ₂]

ದೂರ್ವ (ನಾ). ಗರಿಕೆ: ಅನುರೂಪಂ ಸ್ಫಟಿಕಾಬ್ಜದೊಳ್ ದಧಿ ಸುವರ್ಣ ಕ್ರೌಂಚದೊಳ್ ರೋಚನಂ ಘನಹಾರೀತಕಹುಸಿಯೊಳ್ ಹರಿತ ದೂರ್ವಂ . . . ಮಾಣಿಕ್ಯಭಾಜನದೊಳ್ ಕುಂಕುಮಪಂಕಮೇಂ ಮೆಱೆದುವೋ ಮಾಂಗಲ್ಯಸಾಕಲ್ಯಮಂ (ಪಂಠಾಮಾ. ೫-೦೨೫). [ಸಂ. ದೂರ್ವಾ]

ದೂರ್ವಾಂಕುರ (ನಾ). ಗರಿಕೆಯ ಚಿಗುರು; ಎಳೆಗರಿಕೆ: ಆ ದೂರ್ವಾಂಕುರ ವರ್ಣದೊಳಾದವೊಡಂಬಟ್ಟ ಕನಕಕವಚಂ . . . ಕ[ಣ್ಗಾದ]ಮೆ ಬರೆ ಬಂದು ಮುಂದೆ ನಿಂದಂ ಹರಿಗಂ (ಪಂಪಭಾ. ೨-೬೪); ಉಜ್ಜ್ವಲದಂತಂ ಪರಿವೃತ್ತ ಮೌಕ್ತಿಕಸಮಂ . . . ತನುರೋಮರಾಜಿ ವಿಲಸದ್ದೂರ್ವಾಂ ಕುರಾಭಂ ಮನಂಗೊಳೆ ಚಂಚನ್ನಿಜಪಂಚವರ್ಣೆ ಪಡೆಗುಂ ಚಿತ್ರಾಂಗನಾ ಶಂಕೆಯಂ (ಅಜಿಪು. ೨-೪೪); ರುಚಿರಮರಕತಶ್ಯಾಮ ದೂರ್ವಾಂಕುರಗ್ರಾಸ ದೊಳಂ ಅತಿಸ್ವಚ್ಛಸ್ವಾದು ಸಲಿಲಪಾನದೊಳಂ ಮೆಲ್ಲಮೆಲ್ಲನೆ ಮೆಲ್ಕಾಡಿ (ಪಂಚತಂ. ೨೪-೧೨); ಮೆಱೆವ ದೂರ್ವಾಂಕುರದ ಮಾಲೆಯಿಂದರಿದಾದ ಮೌಕ್ತಿಕದ ಮಾಲೆ . . . ಸ್ತಂಭದಿಂದೆಸೆವುದು (ಚತುಪು. ೬-೧-೫೭). [ಸಂ.]

ದೂರ್ವಾಂಚಿತ (ನಾ). ಗರಿಕೆಯಿಂದ ತುಂಬಿ ಅಲಂಕಾರ ಮಾಡಿದುದು: ಪಂಚರತ್ನ ಸಮಸ್ತೌಷಧಿ ಗರ್ಭಮಕ್ಷತಯುತಂ ದೂರ್ವಾಂಚಿತಂ ಸರ್ವ ಧಾನ್ಯಸಮುತ್ತಂಭಿತಪೂರ್ಣಕುಂಭಮೆಸೆದತ್ತಾ ವೇದಿಕಾಮಧ್ಯದೊಳ್ (ಪಂರಾಮಾ. ೫-೧೨೪). [ಸಂ.]

ದೂರ್ವಾಕಿಸಲಯ (ನಾ). = ದೂರ್ವಾಂಕುರ: ಅಷ್ಟರಲ್ಲಿ ನಾನೂ ಶಕುಂತಳೆ ಗೋಸ್ಕರ ಗೋರೋಚನ, ತೀರ್ಥಮೃತ್ತಿಕೆ, ದೂರ್ವಾಕಿಸಲಯಗಳ ಮಂಗಳಾನುಲೇಪಗಳನ್ನು ಮಾಡುವೆನು (ಶಾಕುಂತ. ೪೯-೨೧). [ಸಂ.]

ದೂರ್ವಾಪ್ರವಾಲ (ನಾ). = ದೂರ್ವಾಂಕುರ: ಅಪೂರ್ವ ದೂರ್ವಾ ಪ್ರವಾಲಾಲಂಕೃತ ಕರ್ಣಪೂರನುಂ . . . ಪುಣ್ಯಾಶೀರ್ವಚನ ನಿರ್ಘೋಷ ದತ್ತಕರ್ಣನುಂ ಆಗಿರ್ದು (ಆದಿಪು. ೧೦-೦೦ ಪ). [ಸಂ.]

ದೂರ್ವಾಸಕ್ತಿ (ನಾ). ಗರಿಕೆಯಲ್ಲಿ ಆಸಕ್ತಿ; ಹುಲ್ಲನ್ನು ತಿನ್ನುವ ಆಸೆ: ಘನ ದೂರ್ವಾಸಕ್ತಿಯಂ ಗಾರುಡಮಣಿರುಚಿಯೊಳ್ ದಾವವಿಭ್ರಾಂತಿಯಂ ಕಾಂಚನಭಿತ್ತಿವ್ರಾತದೊಳ್ . . . ವಾನೇಚರಸ್ತ್ರೀಭ್ರಮಮನತುಳ ನೀಳಾಶ್ಮಪಾಂಚಾಳಿಕಾದರ್ಶನದೊಳ್ ತಾಳುತ್ತುಮೆತ್ತಂ ಸುಬಿವುದು ಮಹೀಭೃದ್ಗೇಹದೇಣೀಸಮೂಹಂ (ಚಂದ್ರಪು. ೦-೧೪೭). [ಸಂ.]

ದೂರ್ವಿಜ ? (ನಾ). ಬ್ರಹ್ಮ (?): ಮೂವರೆನ್ನ ಸುತರಾಗಿಯೆನೆ ಶಶಿಧರಂ ಯಜ್ಞಕರ ದೂರ್ವಿಜಂ ದೂರ್ವಾಸವೆಸರಾದವೊಲಂ ಬಸವತೃಣಕೆ ಪೆಸರಿಟ್ಟವನ ಚರಣಾಂಬುಜಕ್ಕೆ ಶರಣು (ಲಶಿಪಂ. ೩೩-೩೩). [?]

ದೂರ್ವೆ (ನಾ). ಒಂದು ಬಗೆಯ ಹುಲ್ಲು; ಗರಿಕೆ: "ಹರಿತಾಲೀ, ದೂರ್ವಾ– ಇವೆರಡುಂ ಕಱುಂಕೆ" (ಹಲಾಯು. ೩೨-೩೮); "ದೂರ್ವೆ ಹರಿತಾಳಿಯೆನೆ ಕಱುಕೆಯೆನಿಸಿಕ್ಕು" (ಮಂಗರಾ. ೩೩-೭); ಏಳಿಸೆ ಪುರ್ವು ದೂರ್ವೆಯನು ರೋರುಹಮುಜ್ಜ್ವಲಕುಂಭಶೋಭೆಯಂ ಪಾಳಿಸೆ (ಚಂದ್ರಪು. ೦೦-೫); ಆ ಕ್ಷಣ ದೂರ್ವೆ ದಧಿಗಳನು ತರಿಸಿದನು (ಕೌಶಿರಾ. ೩-೩೦); ದೂರ್ವೆಯ ದಳವ ಮೇಯ ಬಂದ ಮೊಲನ ಉರ್ವಿಯಂ ಕರಡಿ ತೊಡರಿಕೊಂಡಿಪ್ಪುದಯ್ಯ (ಸಿದ್ಧೇಪ. ೧೯೫-೫೯೪); ದೂರ್ವೆಯಿಂ ಕಡೆಗಾದ ವಸ್ತುಗಳುರ್ವಿ ಯೊಳಗಿಲ್ಲೆಂಬರೆಲ್ಲರು . . . ದೂರ್ವೆಯಿಂ ಕಡೆ ಬೇಡಿ ಬಾಳುವ ಮನುಜನು (ಶಂಕದಾ. ೭-೨೦). [ಸಂ. ದೂರ್ವಾ]

ದೂಲ, ಧೂಲ (ನಾ). ಉದ್ದವೂ ದಪ್ಪವೂ ಆದ ಮರದ ತೊಲೆ,– ಮರಮುಟ್ಟು: ನೀಲಮಯ ಬೋದಿಗೆ ಪಚ್ಚೆಯ ಚೆಲ್ವ ದೂಲಗಳ್ . . . ಮೃಗನಾಭಿಯ ಸುತ್ತುಭಿತ್ತಿ ಬಾವನ್ನದಿನರ್ಥಿಯಿಂದೆ ಮೆಱೆಗುಂ ಧರಣೀಶನ ಮಂತಣಾಗೃಹಂ (ಮಲ್ಲಿಕಾ. ೫-೫); ನಾರಾಯಣಶಾಸ್ತ್ರಿಗಳು ಮನೆಯ ಒಂದುಂಕಣವನ್ನು ಕೀಳಿಸಿ ಹೊಸದಾಗಿ ಕಟ್ಟಬೇಕೆಂದು ಒಂದಷ್ಟು ತೊಲೆ ದೂಲ ತರಿಸಿಹಾಕಿಕೊಂಡಿದ್ದರು (ನಾಲ್ಕುಕ. ೯); ಆನೆಗಳ ಎಳೆತಕ್ಕೆ ಶಕಟದ ಮರದ ದೂಲಗಳು ಕಿತ್ತುಬಂದುವು (ಶಾಂತಲಾ. ೨೪೬); ಅಲ್ಲಿ ಹಿಂದಿನ ದಿನದಂತೆ ದೊಡ್ಡ ದೊಡ್ಡ ದೂಲದಂತಿದ್ದ ಕಟ್ಟಿಗೆಯ ರಾಶಿಯಲ್ಲಿ ಬೆಂಕಿಯು ಉರಿಯುತ್ತಿತ್ತು (ಕಪಾಕುಂ. ೨೫); ಅಂತರಿಕ್ಷಕ್ಕೆ ದೂಲವಿಲ್ಲ (ಭಾತತ್ತ್ವ. ೨೩). **ಧೂಲ:** ನಾರಾಚ ಸಲಾಕಿ ಕೊಂಡಿ ಸಹ ೧ ಮರದ ರಥದ ಗಾಲಿಚಕ್ರಗಳು ಧೂಲ ೨ ಸಹ . . . ಯಿ ಸಾಮಾನು ಲೆಕ್ಕ ಬರ ಬರದಿರುವ ತಾಂಬ್ರದ ತಗಡು (ಎಕ. XIV, ನಂಜನ. ೨೯೪, ಪುಟ ೧೪೪; 1852). 'ತೊಲೆ₂' ಪರಾ. [?./ತಮಿ. ತೂಲ; ತೆಲು. ದೂಲ]

ದೂವಟ 'ದುಪ್ಪಟಿ' ನೋ.

ದೂವಟಿ 'ದುಪ್ಪಟಿ' ನೋ.

ದೂವಟ್ಟಿಗೆ 'ದುವಟ್ಟಿಗೆ' ನೋ.

ದೂವಡಿಗೆ 'ದುವಟ್ಟಿಗೆ' ನೋ.

ದೂವಾಟ 'ದುಪ್ಪಟ' ನೋ.

ದೂವಾರಿ (ನಾ). ಹೊರುವವನು: ಹೊಂದಂಡಿಗೆಯ ದೂವಾರಿಗಳು ವೆಂಠಣಿಸದರು (ಕುಮಾರಪ್ರೋ. ೮-೩೫). [<ಸಂ. ಧೌರೇಯ]

ದೂವಾಳಿ 'ದುವ್ವಾಳಿ' ನೋ.

ದೂವಾಳಿಸು 'ದುವ್ವಾಳಿಸು' ನೋ.

ದೂವೆ$_1$, ದುವ್ವೆ, ದೂಪೆ, ದೂಹೆ (ನಾ). ೧. ಹೊಗೆ; ಧೂಮ: ಬಟ್ಟೆಯ ದೂಳಿದೂವೆ ಮೊದಲಾದುದು (ಕಾದಂಪು. ೧೯೭); ಧೂಮ-ದೂವೆ (ಶಬ್ದಾನು. ೧೭೦ ಪ್ರಯೋ). ತಳಿರ್ಗಳೆ ದಳ್ಳುರಿಯಲರಿಂ ಬೆಳೆದಲರ್ವುಡಿ ದೂವೆ [ಪಾಠಾಂ. ದೂನೆ, ಧೂಮ]. ಮಂತ್ರಘೋಷಂ ಪಿಕಸಂಕುಳರವಮೆನೆ ಚೂತಂ ಕಣ್ಗೊಳಿಪುದು ಹೋಮಾಗ್ನಿಯಂತೆ ಕಾಮಾಧ್ವರಿಯಾ (ಕಬಸಂ. ೨-೪೮). ೨. ಆವಗೆ: ದೂವೆಯೊಳ್ ಪೊಕ್ಕ ಪಾವಿನಂತೆ ಬೆದಬೆದ ಬೆಂದು (ಲೀಲಾವ. ೦೦-೭೦ ವ); ಪೊಗೆಯಡಂಗಿಗವಿದ ದೂವೆಯಂತಿರೆ ಬರುಂಟದೊಡೆ ಬಸಿಯನುಗುಟ್ಟ ಕಪ್ಪುರದ ನುಣ್ಮಳಲ ಜಗಲಿಯುಂ (ಪರ್ಧಪು. ೩-೭೩ ವ); ದೂವೆ [ಪಾಠಾಂ. ದಾವಿ]ಯೊಳ್ ಪೊಕ್ಕುರಗಿಯಂತೆ ಬೆದಬೆದನೆ ಬೆಂದು (ಚಿಬಪು. ೦೯-೪೩). ೩. ಹೆಣವನ್ನು ಸುಡುವ ಜಾಗ; ಚಿತೆ: ಪಂದಲೆಯೋಳಿದೋರಣದ ಸೀಯದರಂ ಪೊಸದೂವೆ ದೂಪ ತೂಗುಂದಲೆ ಬಾಟ್ವಿಣಂ. ಪೊದರೆ ಬಳ್ಳುವ ಸಮ್ಮನ ಸೂಲಂ (ಶಾಪ್ರಪ. ೩೬); ಪರೇತವನದೊಳಗೆ ಪೊಸದೂವೆಯ ಕೆಲದೊಳ್ ಕಳೆದೊಟ್ಟಿದ ತೊಡವುಗಳುಮಂ ಮರದ ಕೊಂಬಿನೊಳ್ ಬರೆದು ಕಟ್ಟಿದ ಕಪ್ಪಡಮುಮಿರ್ದಪ್ಪುದೆಂದು ಪಿತೃವನಪಾಳಕಂ . . . ಬಿನ್ನವಿಸಿ (ಅರ್ಧನೇ. ೩-೪೦ ವ); ಭೂನುತಕುಮಾರನಂ ದಹಿಸಿ ದೂವೆಯ ಕೆಲದೊಳೇ ನರಕಿ ವನಿತೆಯನನಾಮಿಕನ ಕಯ್ಯೊಳನುಮಾನವಿಲ್ಲದೆ ಕೊಲಿಸಿ (ಹಡಶಾ. ೦೩-೯); ತ್ವರಿತದೆ ಪುಟ್ಟಿ ಬಿರ್ರೆನುತಮಾ ಕ್ಷಣದಿಂ ಮೊಗೆದೆತ್ತಿ ದೂವೆಯಂತಿರೆ ಕಡುಗಾಯ್ದ ಭೂರಜಮಂ . . . ಅಂಬರಮನೆ ಚುಂಬಿಸುತ್ತಿರದೆ ಸುಟ್ಟುರೆಗಳ್ ನೆಗೆದತ್ತುವೆತ್ತಲುಂ (ಕುಸುಮಾ. ೮-೧೨೩); ಅಸಿಯ ಗಸಣಿಯುಂ ದೂವೆಯ ಬೇವಸಮುಂ . . . ಕನಸಿನೊಳಂ ಇಲ್ಲೆನಿಸಿ (ಎಳ. XI, ಮೂಳಿಕಾ. ೨೦-೪೦; 1278 ?). **ದುವ್ವೆ**: ೪. ಬೆಂಕಿ; ಅಗ್ನಿ; ಕೆಂಡ: ಕುಂದೆ ನದೀಜಲಂ ಪರಿಯೆ ನಾಲ್ದೆಸೆಯೊಳ್ ಮೃಗತೃಷ್ಣೆ . . . ದುವ್ವೆ ವೊಲಾಗೆ ಧೂಳಿ ಕಾಮಂ ದಯೆಗೆಟ್ಟು ಕಾಮುಕರನರ್ದಿಸಿ ನೋಡಲುದಗ್ರ ತೇಜದಿಂ ಬಂದುದು ಚೈತ್ರಮಾಸಂ (ನಳಚಂ. ೩೬). **ದೂಪೆ**: ೩. ಉರಿಯುಮ್ಮಲ ದೂಪೆಯ ಸತ್ತರ ಕರುಳ್ಗಳನೆವರ ತಲೆಯ ತೋರಣದಿಂದಂ ಕರವ ಸುರದಿರ್ಪಾಲ[ದ]ಮರದಿಂ ಭರದಿಂದ ಮಾಟ್ಟ ಬ[ಳ್ಳಿ]ನ ಸರದಿಂ . . . ಅಗುರ್ವಾಗಿರೆ (ಬಂಚರಿ. ೨-೧೧). ೫. ಸಮಾಧಿ: ಇನ್ನೊಮ್ಮೆ ಮೂರರೊಳ್ ದೂವೆಯಿಂದಳಲಾಯ್ತು ಹನ್ನೊಂದರೊಳ್ ನೆರವಿಯಿಂ ಬಳಗವೆರೆದು ಚೆನ್ನೆಯಂ ಪೆಸರೆತ್ತಿ ತಣಿದುಂಡು ಮರೆಯಾಯ್ತು (ಕಾಲೂರ. ೦೮೫-೪೨೦); **ದೂಹೆ**: ೩. 'ದೂಹೆಗಾಡು' ಪರಾ.

ದೂವೆ ಮಾಡು = ಸಮಾಧಿಮಾಡಂ: ನೆನ್ನೆ ಸತ್ತವನನ್ನು ಈಗ ದೂವೆ ಮಾಡಿ ಬಂದರು (ರೂಢಿ). [<ಸಂ. ಧೂಮ./ತುಳು. ದೂವೆ]

ದೂವೆ$_2$, ದೂರುವೆ (ನಾ). ಹಂಲ್ಲು; ಗರಿಕೆ: ಹಟ್ಟಿ = ದೂವೆಯೊಳ್ ತ್ಟಲಂ ಪುಟ್ಟ ಕ್ರಿಯೆ (ಶಮದ. ಪರಿ. ೧); ಕೆಸಱೊಳಾಗದ ಬಸಱೊಳ್ ಪುಟ್ಟದಾಣಿಮುತ್ತುಗಳಂ ಬಿಗಿದು ದೂವೆಯ ಕಂಸಱಿಂ ಪುದಿದು . . . ತಾವರೆಯ ಕೋಶದಂತಿರೆಸೆವ ಜೋಳದ ಪಾಟಿಯಂ (ರಾಮಾಶ್ವ. ೦೦೦-೨೫). 'ದೂವೆದೊಟ್ಟು' ಪರಾ. **ದುರುವೆ**: ಮೊಸರು ಅಕ್ಷತೆ ಕಲಸಿಯೆಸಳು ದುರುವೆ ಮುಡಿಸಿ (ಕಜಾಗೀ. ೦೨೫). [<ಸಂ. ದೂರ್ವಾ]

ದೂವೆಕಿಚ್ಚು 'ದೂವೆಗಿಚ್ಚು' ನೋ.

ದೂವೆಗಿಚ್ಚು, ದೂವೆಕಿಚ್ಚು, ದೂವೆಗಿರ್ಚು (ನಾ). ೧. ಬಹಳ ಶಾಖವನ್ನು ಹೊಮ್ಮಿಸುವ ಬೆಂಕಿ; ನಿಗಿನಿಗಿಯಾದ ಬೆಂಕಿ: ಕೆಂಡದ ಮಟ್ಟಿ ಕೊಂಡಪ್ಪುದಜಾಂಡದಿನಿಳೆ ದೂವೆಗಿಚ್ಚನುಗುಟ್ಟಪ್ಪುದು (ಪುಷ್ಪಪು. ೮-೭೫). **ದೂವೆಕಿಚ್ಚು**: ೨. ಆವಗೆಯ ಬೆಂಕಿ: ಪುಲ್ಲ ಕಿಚ್ಚನಂತೆ ಪುಂವೇದಂ ದೂವೆಕಿಚ್ಚನಂತೆ ಸ್ತ್ರೀವೇದಂ ಇಟ್ಟಿಗೆಯ ಕಿಚ್ಚನಂತೆ [ನ] ಪುಂಸಕವೇದಂ (ಶಾಸ್ತ್ರಬೇ. ೦೧೯-೫). △ **ದೂವೆಗಿರ್ಚು**: ೨. ಅಂತೊರ್ವರನೊರ್ವರ್ ಕರಗಸದಿಂ ಸೀಳ್ವ ದೂವೆಗಿರ್ಚಿ[ಪಾಠಾಂ. ಗಿಚ್ಚಿ]ನೊಳ್ ಪೂಟ್ಟ ತತ್ತಱದಱಿವ ಪಲ ತೆಱದ ದಂಡನೆಗಳುಂ (ಪರ್ಧಪು. ೧೧-೪೭ ವ).

[ದೂವೆ$_1$ + ಕಿಚ್ಚು]

△ **ದೂವೆಗಿರ್ಚು** 'ದೂವೆಗಿಚ್ಚು' ನೋ.

ದೂವೆದೊಟ್ಟು (ನಾ). (ಆಲಂ) ಕೀಳಾದ ದಾಸಿ; ಹಂಲುದಾಸಿ: ಸಿರಿವೆಣ್ಣಂ ದೂವೆದೊಟ್ಟಂಗಣೆಯೆನೆ ಬಗೆದಂ ಮತ್ತಮಾ ವಿಶ್ವವಿಶ್ವಂಭರೆಯಂ ಮೃತ್ಪಿಂಡಮಾತ್ರಾಕೃತಿಯೆನೆ ಬಗೆದಂ (ಚಂದ್ರಪು. ೧೦-೦೨೮).

[ದೂವೆ$_2$ + ತೊಟ್ಟು]

ದೂವೆಯಿಡು (ಕ್ರಿ). ಹೊಗೆಯಾಡು; ಹೊಗೆಯೇಳು: ಮೆಟ್ಟದೊಡೆ ದೂವೆಯಿಡುವುದು . . . ಮುಟ್ಟದೊಡೆ ಹೊತ್ತಿ ಹೊಗೆವುದು ಕಟ್ಟಿಗ್ರಂ ವಿರಹತಾಪವಂಗಜಕೋಪಂ (ನಳಚಂ. ೦೬೬) [ದೂವೆ$_1$ + ಇಡು$_1$]

ದೂವ್ವಾಡ (ನಾ). ಖಡ್ಗಯುದ್ಧದ ಒಂದು ವರಸೆ: ನುತಚೌಪಟಂ . . . ಪಂಚಾಯುತಮೆನಿಪ್ಪಯಿದು ನಿಱೊಗೆಗಾಯತ ಮಂಡಿ ದೂವ್ವಾಡ [ಪಾಠಾಂ. ದುವಾಡ, ದೂವಾಡ]ವೆಕ್ಕಸರೆ . . . ಚಟಿಯೆಂಬ ಚತುರ ಠಾಣದ ತರಹರದೊಳು ಹಲಗೆಯ ಮಗ್ಗುಲೊಳು ಖಡ್ಗವಂ ಜಡಿದರು (ಸೋಮಚಿ. ೫-೦೪). [?]

ದೂಷಕ (ಗಂ). ೧. ಬಯ್ಯುವ; ನಿಂದಿಸುವ; ತೆಗಳುವ: ದೀಟಿಸಲು ಶಿವಭಕ್ತಿಸತ್ಕೃಭಿ ಪಾವಸಂಕುಳವಳಿಯೆ ದೂಷಕ ತಾವಸರು ತಾವೈಸಱಿಂ ಸಾಷ್ಟಾಂಗದಿಂ ನಮಿಸಿ (ಬಸಪು. ೪೪-೩೪). ೨. ಕೆಟ್ಟದ್ದನ್ನು ಮಾಡುವ; ಕೆಡುಕನ್ನುಂಟುಮಾಡುವ; ದುಷ್ಟತನದ. ೩. ಹಾಳುಮಾಡುವ; ಅಪಮಾನಗೊಳಿಸುವ; ಭ್ರಷ್ಟಗೊಳಿಸುವ. (ನಾ). ೪. ನಿಂದಿಸುವವನು; ದೋಷಾರೋಪಣೆ ಮಾಡುವವನು; ತೆಗಳುವವನು; ನಿಂದಕ: ಜಂಗಮಪ್ರಸಾದ ದೂಷಕರ ಭಂಜಿಸುತ ಯಮನಧಿಕನಾರಕ ಪುಂಜದಲಿ ಕೆಡಹುವನು(ಬಸಪು. ೩೬-೨೨); ದೂಷಕಸಂಕುಳಶರನಿಧಿಶೋಷಣ ಕಳಶೆತ್ತಿಯಾಂಡಭಕ್ತರಿಂಗತಿಸಂತೋಷದಿ ಗಣವದವಿತ್ಕಹಿಭೂಷ ಶಿವಂ (ಕ್ರಿಪುವಿ. ೪೬-೧೨). ೫. ದಂಷ್ಟ; ನೀಚ: ದೂಷಕನವನೊಬ್ಬ ದೇಶವ ಕೊಟ್ಟರೆ ಆಸೆಮಾಡಿಯವನ ಹೊರೆಯಲಿರಬೇಡ (ಬಸವ. ೦೩೬); ದಾಸೋಹವನಱಿಯದ ದೂಷಕನು ನಾನಯ್ಯ (ಉರಿವ. ೩೪-೪೨). ೬. ಹಾಳುಮಾಡುವವನು; ನಾಶಮಾಡುವವನು: ಪಾತಕನು ಪತಿತನು . . . ದೂಷಕನು ದುರ್ಜನನಪ್ರಯೋಜಕನು ನೀತಿಹೀನನು (ಕುಮಾಉ ೪-೪೧).

[ಸಂ.]

ದೂಷಣ (ನಾ). ೧. ನಿಂದೆ; ತೆಗಳಿಕೆ; ಖಂಡಿಸುವುದು: ಪಟ್ಟ-ವಸ್ತ್ರ ವಿಶೇಷಂ; ದೂಷಣಂ; ನಾಯ ಸೋವುವುದು; ಲೋಹದ ಘಟ್ಟಿ (ಕಮದ. ಪರಿ. ೧). ೨. ಅವಮಾನ; ಅವಮರ್ಯಾದೆ: ನಿಮ್ಮ ಮಗ ಕುಲಭೂಷಣನಲಾ ಧರ್ಮಸುತನಾತನಲಿ ಹುರುಡಿಸುವ ರೋಷವುಂಟೇ ತನಗೆ ನಿಮಗಿದು ದೂಷಣವೆ ತಾನಲ್ಲ(ಕುಮಾಅ. ೨೦-೩೬); ಅನುಜನಂಗನೆಗಳುಟಿ ವೈರವ ಕೊನರಿಸಿದೆಯಾತನಲಿ ತಾನಿದು ನಿನಗೆ ದೂಷಣವಲ್ಲವೇ (ತೊರಕಾ. ೪-೪-೧೦); ಶಿವಶಿವಾ ದೂಷಣಕೆ ಬೆದಱಿ ಮಾಡಿದಿರಿ ಕೈತವ ಚಾರವಿದ್ಯೆಗಳ (ಚೈತ್ರಮಿಥಾ. ೨-೬೦). ೩. ಕೆಡಿಸುವುದು; ದುರುಪಯೋಗ

ಪಡಿಸಂವುದಂ : ಅದು ಸಾಧನ ದೂಷಣ ಪ್ರಯೋಗಾನ್ಯಥಾನುಪತ್ತಿಯಿಂ ಬಹಿರರ್ಥಸಿದ್ಧಿಯಕ್ಕುಂ (ಪಂಪಪು. ೨-೧೦ ಪ). ೪. ನಿಂದಕ ; ಖಂಡಿಸುವವನು : ಶಿವಗುಣದೂಷಣಾಹಿತಕಾರ ಜಂಗಮತೋಷಣಾಚಾರ . . . ಬಸವಕುಮಾರ ಮಾಂ ತ್ರಾಹಿ (ಬಸಪು. ೨೦-೩೮). ೫. ದೋಷ ; ತಪ್ಪು : ವರಯತಿಗೆ ಭಂಗಮಂ ತಾರದೆ ನಿಷಾನ್ವಯಕ್ರಿಯೆಗಳ್ಗೆ ದೂಷಣಂ ಬಾರದೆ . . . ಕಾವ್ಯಪ್ರಬಂಧಮುಂ ಶಾರದೆಯ ಕರುಣದಿಂ ಪೇಳ್ದೆ (ಜ್ಞಮಿಛಾ. ೦-೬) : ಇದು ಭೂಷಣವೋ ದೂಷಣವೋ ಈ ಬನದಿಗೆ ಕುಹಕವೆ ತೋಷಣವೋ (ಗಚಂಶ. ೪-೧೩). ೬. ಪಾತಕ ; ಪಾಪ. ೭. ರಾಮನಿಂದ ಹತನಾದ ಒಬ್ಬ ರಾಕ್ಷಸನ ಹೆಸರು : ಎಚ್ಚು ಗಗನಕೆ ದೂಟಿಸಿದ ದೂಷಣನ ಮಸ್ತಕವ (ತೊರಾ. ೩-೬-೧೪). [ಸಂ.]

ದೂಷಣಿಕ (ಗಂ). ಹೀಯಾಳಿಸುವ ; ನಿಂದಿಸಂವ : ದೋಷರಾ ಕಥೆಯಲ್ಲ ದೂಷಣಿಕಕಥೆಯಲ್ಲ ಭಾಸುರೋಜ್ವಲ ಜಗದೀಶನ ಕೃತಿಯು (ಆದಿಪ. ೨-೫).

[ಸಂ.]

ದೂಷಣೆ (ನಾ). ೧. ನಿಂದಿಸಂವುದು ; ತೆಗಳಿಕೆ : ಪರರ ದೂಷಣೆಯಿಂದ ಇಂಥಾ ಅವಸ್ಥೆಯು ನಿನಗೆ ಬಂದ ಹಾಗೆ ಕಾಣುತಿದೆ (ನೀತಿಚಿಂ. VI, ೦೯) ; ದೋಷ ಮಾಡಿದವನಿಗೆ ದೂಷಣೆ ತಪ್ಪದು (ಗಾಣ). ೨. ಅಪವಾದ ; ದೋಷಾರೋಪಣೆ : ನಮ್ಮ ಲುಕಸಾನಿ ಮಾಡಿದಿರಿ ಅಂತ ನಮಗೆ ದೂಷಣೆ ಕೊಡುತ್ತಾರೆ (ಮುಂಭಾ. ೩೦ ಪ್ರಸ್ತಾವನೆ). [ಸಂ. ದೂಷಣ]

ದೂಷಿ 'ದೂಸಿ' ನೋ.

ದೂಷಿಕೆ (ನಾ). ಕಣ್ಣಿನೊಳಗಿರುವ ಕೊಳೆ ; ಪಿಸಂರಂ ; ಗೀಜು.

[ಸಂ. ದೂಷಿಕಾ]

ದೂಷಿತ (ಗು). ೧. ನಿಂದೆಗೊಳಗಾದ. ೨. ಹಾಳಾದ ; ಭಗ್ನವಾದ. ೩. ಕೆಟ್ಟುಹೋದ ; ಭ್ರಷ್ಟವಾದ. (ನಾ). ೪. ದೋಷವುಳ್ಳದು ; ದೋಷಯುಕ್ತವಾದಂದಂ : ಕಪೋಲಕ್ಕೆ ಉಪಮಾನ ಕೊಡುವುದಾದರೆ . . . ಅದಕ್ಕಿಂತ ಎಮ್ಮೋ ಹೀನವಾದ, ಕಲಂಕದಿಂದ ದೂಷಿತವಾದ ಚಂದ್ರಬಿಂಬವನ್ನು ಹೇಳಿದರೆ ಸರಿಯೆ ? (ಧ್ವನ್ಯಾಲೋ. ೦೦೯ ಅಡಿಟಿ). ೫. ಪಾಪ ; ಪಾತಕ : "ಕಿಲ್ಬಿಷಂ. . . . ದೂಷಿತಮಘಮೆನಲ್ . . . ಪಾಪಮಕ್ಕುಂ" (ಪುಂಗರಾ ೦೧೬-೨). [ಸಂ.]

ದೂಷಿತಾನ್ನ (ನಾ). ಬೇರೊಂದಂ ವಸ್ತುವಿನ ಸಂಪರ್ಕದಿಂದ ಕೆಟ್ಟುಹೋದ ಆಹಾರ ; ಮಲಿನವಾದ ಆಹಾರ : ದೂಷಿತಾನ್ನವೆಂದರೆ ಶುದ್ಧವಾದ ಆಹಾರಕ್ಕೆ ಶುದ್ಧವಾದ ಮತ್ತೊಂದು ವಸ್ತುಸಂಪರ್ಕವಾಗಲೀ ಅಶುದ್ಧವಾದುದರ ಸಂಪರ್ಕವಾಗಲೀ ಆಗುವುದು. ಹಾಲಿಗೆ ಹುಳಿ, ಪಾಯಸಕ್ಕೆ ಉಪ್ಪು ಬೆರೆದರೆ, ಹುಳಿ ಉಪ್ಪು ಎರಡೂ ತಿನ್ನುವ ಪದಾರ್ಥವೇ ಆದರೂ ಹಾಲೂ ಪಾಯಸವೂ ದೂಷಿತವಾಗುವುವು (ಆರ್ಯಭ. ೨೧೮).

[ದೂಷಿತ + ಅನ್ನ]

ದೂಷಿತೆ (ನಾ). ೧. ದೂರಂ ಹೊತ್ತವಳಂ ; ಅಪವಾದವನ್ನು ಹೊಂದಿದವಳು : ಅಪವಾದಂ ಪೊರ್ದಿದಿಂ ಬಟಿಯಂ ದೂಷಿತೆಯಾದೀ ಮಡದಿಯಂ ಬಿಟ್ಟಲ್ಲದ ಪಾಣಂ (ಣಾಪಾಶ್ವ. ೨೩-೧೧). ೨. ಪಾಪ ಮಾಡಿದವಳಂ ; ಪಾಪಿಷ್ಠೆ. 'ದೋಷದೂಷಿತೆ' ಪರಾ. [ಸಂ. ದೂಷಿತಾ]

ದೂಷಿಪು (ಕ್ರಿ). ೧. ನಿಂದಿಸು ; ತೆಗಳು : ಮಹಾಪುರುಷರು ನಿರ್ವಹಿಸಂವ ಮೂಲೋತ್ತರ ಗುಣಂಗಳಂ ಶಬ್ದಲಹೀನರುಮಲ್ಪಸತ್ವರುಂ ನಿರ್ವಹಿಸಲಾಜದೆ ಗುರುಕುಳವುಂ ದೂಷಿಸುವರು (ಶಾವುಂಪು. ೫೩) ; ಹಾರಂ ಕಣ್ಣಿನಿಯಿಂದಾದತ್ತುಬಿದ ಭೂಷೆಯಂ ದೂಷಿವೊಲ್ (ಚಂದ್ರಪು. ೫-೦೨೮) ; ದೂಷಿಸಿದಡಾ ವೀರಭದ್ರನು ಪೂಷನೆಂಬನ ಹಲ್ಲನುದುರ್ಚನೆ (ಬಸಪು. ೫೪-೫೨) : ಈ ತೆಱದಿಂ ದುರ್ಜನರಂ ದೂಷಿಸಿ ನೀತಿನಿಪುಣರೆನಿಸುವ ಸಜ್ಜನರಂ ಪ್ರೀತಿ ಮಿಗಿಲು ತುತಿಯಿಸಿ (ಜಯಾಕಾ. ೦-೨೩). ೨. ವಂಚಿಸಂ ; ಅನ್ಯಾಯಂ ಮಾಡಂ : ಭರತ ಬಂದವ ಬಂದ ಹದನೇನಱಿಯಬಾರದು ಜೀಯ . . . ಧರೆಯ ದೂಷಿಸಿ ಕೊಂಡುದಲ್ಲದೆ ಧುರಕೆ ಬಹುದಿದು ಗುಣವೆಯೆಂದುಬ್ಬರದ ರೋಷಾವೇಶದಲಿ ಸೌಮಿತ್ರಿ ಗರ್ಜಿಸಿದ (ತೊರಾ. ೨-೬-೨೦). [ದೂಷಣ + – ಇಸು]

ದೂಷ್ಯ (ಗು). ೧. ಕೆಡುವ ; ಕೆಟ್ಟುಹೋಗಬಹುದಾದ. ೨. ದೂಷಣೆಗೆ ಅರ್ಹವಾದ ; ಖಂಡನೆಗೆ ಯೋಗ್ಯವಾದ ; ನಿಂದ್ಯ : ಸಮುಚಿತಕೃತಿ ದೋಷದೂಷ್ಯಮಾರ್ಗಕ್ರಮಪರಿಭಾವಿತಚಿತ್ತವೃತ್ತಿಯವ್ಪೊಂಗಮಿನ ಕವಿತಾಗುಣೋದಯಶ್ರೀ ಸಮನಿಸುಗುಂ ಸತತಾಭಿಯೋಗದಿಂದಂ (ಶಾವ್ಯಾವ. ೪೯೬). ೩. ಕೆಟ್ಟ ; ದುಷ್ಟತನದ. (ನಾ). ೪. ನಿಂದೆ ; ತೆಗಳಿಕೆ : ಜನರೆ ಪರಿವರಿ ದೂಷ್ಯ ಭೂಷ್ಯವ ನೆನೆವೆನೇ ತಮ್ಮಡಿಯ ಸಂಭಾವನದ ಬಲುಹಿರಲಾವ ಭಯಮೇಕೆಂದು ಕೈಮುಗಿದ (ಗಗಕಾ. ೦೭-೬೪). ೫. ನಿಂದ್ಯವಾದಂದಂ ; ತೆಗಳಿಕೆಗೆ ತಕ್ಕುದು : ನಿರುಪಮಗಂಧರ್ವಗತಿಸ್ವರಾದಿಕ ಕಳಾಗುಣಂ ಚತುಃಷಷ್ಟಿವಿಧಂ ದೊರೆಕೊಳ್ಳದುದೆಲ್ಲಿ ಕಳಾವಿರುದ್ಧದೋಷಂ ವಿಶಿಷ್ಟಜನತಾದೂಷ್ಯಂ (ಕವಿಕಾ. ೦-೦೦೬) ; ಧುರದೊಳ್ಪಱಿಮಱಿಯಾಡುವ ತೆಱದಿಂದುಱದಿಱಿದನೆಂಬ ನಿಯಮಂ ದೂಷ್ಯಂ (ಕಮದ. ೦೯ ಸ್ಪಯೋ) : ಲೌಕಿಕಕ್ಕಿದು ದೂಷ್ಯವೆಂದವರುಗಳನೊಡಬಡಿಸಿ (ತೊರಾ. ೦-೩-೬). ೬. ಬಟ್ಟೆ ; ವಸ್ತ್ರ. ೭. ಹತ್ತಿ. ೮. ಗುಡಾರ ; ಡೇರೆ : "ದೂಷ್ಯಂ, ಸ್ಥೂಳಂ . . . ಕೇಳಿಕಾ–ಈ ೫ ಗುಡಿ" (ಹಶಾಯು. ೭೪-೨೯೭); "ಚಿತ್ರಕೂಟ . . . ದೂಷ್ಯಮೆನೆ ಗುಡಿಯಕ್ಕು" (ಮಂಗರಾ. ೩೫-೨೭). ೯, ೮ : ನಡೆದು ಬಟ್ಟೆಯಂ ಕ್ರೋಶದ್ವಿತಯ ಮಾತ್ರದೊಳ್ ಪ್ರಸಿದ್ಧ ದೂಷ್ಯಮಾಗಿಯುವಂ ದೂಷ್ಯಮುಂ ... ವಿಶಾಲವರಿಧಿಯಾಗಿಯುಂ ಅವಿಶಾಲವರಿಧಿಯೆನಿಸಿ ಗೃಹಮಹತ್ತರಂ ಮುನ್ನಮೆ ಸವೆದುದಂ ಪ್ರಸ್ಥಾನಶಿಬಿರಮಂ ಪೊಕ್ಕ (ಚಂದ್ರಪು. ೧೦-೦೭ ಪ). [ಸಂ.]

ದೂಸ$_1$ (ನಾ). ಕಾಡುಬಿತ್ತ ; ನೀವಾರ : "ದೂಸಂ ತೃಣಧಾನ್ಯ(ವುಂ) ಮಟವೀಸಂಭವಮದೆ ಗವೇಧುಕಂ ನೀವಾರಂ" (ಧಸ್ತುಕೋ. ೯೩-೦೯).

[←ತೆಲು. ದೂಸ]

ದೂಸ$_2$, **ದೂಸು** (ನಾ). ೧. ಬಟ್ಟೆ ; ಅರಿವೆ : "ದೂಸ (ಸು) – ದೂಷ್ಯ = ವಸ್ತ್ರಭೇದ" (ಶಬ್ದಕೋ. ೨೦). 'ದೂಸಿಗ' ಪರಾ. ೨. ಗುಡಾರ ; ಡೇರೆ : ವುದಿಯೆ ಕವಿಲ್ತ ಕೇಸರದ ದೂಸಮಶೋಕೆಯ ವೀಣೆಯಂ ಪ್ರಿಯಾಳದ ಗಂಡಿ . . . ಒಪ್ಪಿ ತೋಱಿದುವು ಮನೋಜರಾಜಶಿಬಿರಂಗಳಿವೆಂಬಿನಗಂ ವನಾಳಿಗಳ್ (ಚಂದ್ರಪು. ೭-೬೨) ; ದೇಶಾಧಿಪರ ಬೆಳ್ಗೊಡೆಗಳು ವಕ್ಷತ್ರ ರಾತ್ರಿಯಂತೆಸೆಯೆ ಮಧ್ಯದಲಿ ಕೇಶವರಾಯನ ದೂಸ ರೋಹಿಣಿಯ ಪ್ರಾಣೇಶನೆಂಬಂತೆ ರಂಜಿಸಿತು (ಮೋಹಕ. ೫೭-೬೮) ; ಹಳದಿ ಬಿಳಿಯ ಮುಂತಾದ ಪಟ್ಟಗಳಿಂದ ಚಲುವೆತ್ತ ದೂಸವನು ಬಿಗಿಸಿ (ಜಿನಕಾ. ೭-೫೮). **ದೂಸು** : ೨. ಕಟ್ಟಕಡೆಗಳೊಳು ಜಯವಿಜಯಂರ ದೂಸು ಕಟ್ಟಾಯತ ದೊಳೆತ್ತಿದುವು (ಣಾಗಳು. ೦೫-೦೦೫) : ಧೂರೆ ಮುಂದರ ತನ್ನ ದೂಸ ತೊರೆಯೊತ್ತಿಲಿ ಹುಯಿಸೆ ದೊರೆದೊರೆಗಳ ದೂಸು ಇರದೆ ಸುತ್ತಲು ಹೊಯಿದವಾಗ ಪಡುವ ದಿಕ್ಕಿಲಿ ದಳವಾಯಿಯಕಂಪನ ಕಡು ದೊಡ್ಡ ದೂಸು ತಾನೆತ್ತುಬಿದದಾ ದೂಸ ಬಳಸಿ ಗುರಿಕಾಱರ ಗಡಣ ಗಾಮ್ಮತಿಗಳೆದ್ದಾವು (ಜ್ಞಾವಚ. ೦೨-೪೭) ; ಬಟ್ಟ ಬೀಡಿನ ನಡುವೆ ಗಗನವ ಮುಟ್ಟಲೆಸೆದಿಹ ದೂಸಿನೊಳು ವಲವಿಟ್ಟು ಕುಳಿತಿಹನು (ಜಿನಧಾ. ೪೭-೩೧) ; ದೂಸಿಗತಿಸಂತೋಷದಲಿ ಪ್ರಾಣೇಶನನು ಕರವಿಡಿದು ಗುಣವಾರಾಶಿ ನಡೆತಂದಮಲತರ ಸಿಂಹಾಸನದ ಮೇಲೆ . . . ಕುಳಿತಳು (ಜಿನಧಾ. ೪೯-೦೦) : ಇಂತು ಮರಾಟರೊಳ್ ಪ್ರಸಿದ್ಧರಾಗಿರ್ದ . . . ಮಹಾಶೂರರಂ ಕಡಿದವರಾನೆ ಕುದುರೆ ಬೊಕ್ಕಸ ದೂಸು ದುಮಾನ ಬಿರುದು ಮುಂತಾದವಂ ಕೊಂಡು (ಸಕವ್ಯ. ೩ ಪ್ರಸ್ತಾವನೆ). [<ಪ್ರಾ. ದೂಸ./ಸಂ. ದೂಷ್ಯ]

ದೂಸಕ (ನಾ). ೧. ನಿಂದಿಸುವವನು ; ತೆಗಳುವವನು ; ದೂಷಕ : ದೂಸಕರ ದೂಱುಗೇಳ್ದುಂ ಸಾಸಿಗನೆನ್ನಳವನಱಿದುಮಱಿಯದೆ ಪಿರಿದುಂ ದೋಸಿಗನಾದೊಡೆ ಕೊಲ್ಗುಂ ಪೇಸುವನಲ್ಲಂ ಸಮುದ್ರವಿಜಯನಜೇಯಂ (ಅರ್ಧನೇ. ೫-೧೩) ; ಇನ್ನುಣಲಿ ತಾವು ಮಾಡಿತನೆಂದು ಭರವಸದೊಳಾ ದೂಸಕರು ತಮ್ಮ ನಿಳಯಕ್ಕೆ ತಿರುಗಿದರು (ಸೌಂದಪು. ೧೨-೭೦); ದೋಷಿ ಯಲ್ಲದನೆನ್ನನು ದೋಷಿಯೆಂಬಾ ದೂಸಕರಾ ದೂಱುಗೇಳಿ . . . ಸೆಱೆವನೆ ಯೊಳಿಕ್ಕಿದಿರಿ (ನೇಮಿಸಂ. ೮-೧೧೪) ; ಬಿಟ್ಟು ರಸವನುಱೆ ಕಸವ ಪಿಡಿವ ಧಾರೆವಟ್ಟಲ ಪೋಲ್ವ ದೂಸಕರು ಮಿಟ್ಟನೆ ಮಿಡುಕದಾಲಿಸಿದೊಡೀ ಕೃತಿ ಝುಮ್ಮುದಟ್ಟದೆ ಕಲ್ಲೆರ್ದೆಗವರ (ನಾಗಳು. ೧-೭೧). ೨. ತೆಗಳಿಕೆ ; ನಿಂದೆ: ಒಡೆಯನೆ ಬಂದ ಸೌಜನ್ಯವ ಮೆಱೆವುದು ಬಿಡುವುದು ವಾಸಿ ದೂಸಕವ (ವರ್ಧಕ. ೬-೬೩). [<ಸಂ. ದೂಷಕ]

ದೂಸಗ (ನಾ). = ದೂಸಿಗ : "ವಸ್ತ್ರಕ್ರೀತನೊಳು ದೂಸಗನುಮಕ್ಕು" (ಶಕರ. ೫೧) ; ಬಿಳಿದುಪ್ಪಟ ರಾವಣಮೆಚ್ಚು ಗಜಾವಳಿ ಮಂಡೋದರಿ ಮೆಚ್ಚಿನ ಸೀರೆಯ ಮಳಿಗೆಗಳಂ ಬಳ್ವಳನೆ ಬಳಸಿದುದು ದೂಸಗರಾಸುರ ದಿಂದೋಸರಿಸೆ (ಶುಮುರಾ. ೧೪-೩೮). [ದೂಸ್ಯ + – ಗ್ಯ]

ದೂಸಣ, ದೂಸಣೆ (ನಾ). ನಿಂದೆ ; ತೆಗಳಿಕೆ ; ದೂಷಣೆ : ದೂಷಣ, ದೂಸಣ; ಅನಿಮಿಷ, ಅನಿಮಿಸ (ಶಬ್ದಾನು. ೧೩೮ ಪ್ರಯೋ). **ದೂಸಣೆ** : ಷಕಾರಕ್ಕೆ–ಅಮಿಷ–ಅಮಿಸ . . . ದೂಷಣ–ದೂಸಣೆ (ಶಮದ. ೨೫೩ ಪ್ರಯೋ). [<ಸಂ. ದೂಷಣ]

ದೂಸಣೆ 'ದೂಸಣ' ನೋ.

ದೂಸರ್ 'ದೂಸಱು' ನೋ.

ದೂಸರ (ನಾ). ೧. ಬೂದುಬಣ್ಣ ; ಕಂದುಬಣ್ಣ ; ಮಾಸಲುಬಣ್ಣ ; ನಸುಬಿಳಿದು : "ದೂಸರ–ಧೂಸರ = ಬೂದುಬಣ್ಣ" (ತದ್ಭಕೋ. ೨೦) ; ನವಸುರಭಿಕುಸುಮ ಪಾದಪಪ್ರಸೂನಮಂಜರೀರಜಃಪ್ರಸರದೂಸರೋಪ ಕಂಠದೊಳ್ (ವರ್ಧಮಾ. ೫-೬೨ ವ) ; ಧಕಾರಕ್ಕೆ ದಕಾರಂ–ಔಷಧ–ಔಸದ . . . ಧೂಸರ–ದೂಸರ (ಶಮದ. ೨೫೫ ಪ್ರಯೋ). ೨. ಮಲಿನತೆ ; ಕೊಳಕು ; ಮಾಲಿನ್ಯ : ಕುಂದಣದ ಪುತ್ಥಳಿಯ ದೂಸರ ಕೆಡಲೆಂದು ಪುಳಿ ದೊಳೆವಂದದಿಂದವೆ ಕೋಮಲೆಯರು ಜಳಕವ ಮಾಡಿಸಲೆಸಗಿದರು(ಶ್ರೀಪಾಲ. ೨-೪೯) ; ಜಗದೊಳಗೆ ದೂಸರವು ಪರಿಕಿಸಿ ನಗೆನಗೆಯೊಳೆಮಗೈದಿ ಕುಂದಿತು ಜಗಳದಲಿ ಭುಜಶೌರ್ಯ ಪ್ರಾಣಕ್ಕೊದಗಿತುಪಹತಿಯು (ಅಂಬಿಕಾ. ೪೪-೧೦).

ದೂಸರಮಂಗೆಯ್ = ಮಲಿನಗೊಳಿಸು : ಪೂಸರಲನ ಜಸಮಂ ದೂಸರಮಂಗೆಯ್ದನ . . . ನುತಿಸಿದನವನಭವನ (ಉದ್ಭದೇ. ೭-೧೯). **ದೂಸರಮಾಗು** = ಬೂದುಬಣ್ಣದಿಂದ ಕೂಡು : ಆಗಳ್ ದೂಸರ ಮಾದುದು ಗಗನಂ (ಲೀಲಾವ. ೬-೦೦೬); ತುಂಬಿಗಳಚ್ಚವೂಗಳಿಂ ದೂಸರ ಮಾದ ಚೊಲ್ಲೆಯದ ಕಂಪಿನೊಳೋಕಂಳಿಯಾಡೆ ಸಿಂಗರಂ ದೇಸೆಯೊಳೊಂದಿ ತೋಱು ತಳರ್ದಂ ನನೆಯಂಬನದೊಂದು ಚೆಲ್ವಿನಿಂ (ಕಬ್ಬಿಕಾ. ೯೦) ; ಆ ಪೊಳ್ತಿಗೆ ವಾಸರ ದೂಸರಮಾಯ್ತು (ಉದ್ಭದೇ. ೩-೭೩).

[<ಸಂ. ಧೂಸರ]

ದೂಸರಂದಾಳ್ (ಕ್ರಿ). ಮಂಕಾಗು ; ಬಣ್ಣಗೆಡು: ಪುದಿದು.ಕಂದಿನೊಳೊಂದಿ ಚಂದಂಗೆಡುತ್ತೆ ಮುಗಿವುದು ಮಾಸಿ ದೂಸರಂದಾಳ್ದು ಮುನ್ನಾಡೆ ನಾಣ್ಚದೆ ಕೊಱತೆವಡೆದಮರ್ದುಗಯ್ಯನಂ ಪೊಂದಾವರೆಯನಮಳಮಣಿಮುಕುರಮಂ ಪದಪಿನಿಂದೇಳಿಪ್ಪ ಟಾಳಿಪ್ಪ ಜಾಳಿಪೊಂದದಟಿನಿಂದೇಳಿಸಿತು ಸುದತಿಯಾ ಮಿಱುಮಿನುಪ ವದನ (ಉದ್ಭದೇ. ೨-೫೫). [ದೂಸರ + ತಾಳ್$_1$]

ದೂಸರಿಗ (ನಾ). ಕಾರಣನಾದವನು ; ನಿಮಿತ್ತನಾದವನು : "ಹಯನ್, ಹಯಾನಃ . . . ಹೇತ್ರಾ ಈ ೬ ದೂಸರಿಗಂ" (ಕಾಶಕ್ಯ. ೨೦೭).

[ದೂಸರ್ (<ದೂಸಱು) + – ಇಗ]

ದೂಸರು 'ದೂಸಱು' ನೋ.

ದೂಸಱು, ದೂಸರ್, ದೂಸರು (ನಾ). ೧. ಕಾರಣ; ನಿಮಿತ್ತ ; ನೆಪ; ನೆವ : "ದೂಸಱೆಂದು ತನ್ನ ದೆಸೆ" (ಶಕಸಾ. ೨೮-೬೦೨) ; ಧೂಳೀಧೂಸರ ವರರತ್ನಾಳಿಗಳಂ ಕಂಡ ದೂಸಱಿಂದಂ ಧರಣೀಪಾಳಕಮುನಿಪರ್ ಪಂಚಮಕಾಳದೊಳಣಮಾಗರಲ್ತೆ ಋದ್ಧಿಪ್ರಾಪ್ತರ್ (ಆದಿಪು. ೦೫-೩೮) ; ಎನ್ನಯ ದೂಸಱಿನೆನ್ನ ಕರ್ಮದಿಂ ಪಗೆವರಿನಕ್ಕಟಾ ನಿಮಗಮಿಾಯಿರ ವಾದುದೆ ಕುಂಭಸಂಭವಾ (ಪಂಪಭಾ. ೧೩-೫೬); ಲೋಕಾನುಗ್ರಹಂಗೆಯ್ವ ದೂಸಱಿನಾಂ ಬಂದುದಯಂಗೆಯುತ್ತಮಿರಲ್ (ಕಾದಂಉ. ೬೧೦) ; ಪೊಡೆವಡೆ ಪರಸದೆ . . . ಮುಂದೆ ನಿಂದರಂ ಕಾಣದೆ ತಕ್ಕೆಡೆಯೊಳ್ ಕಡೆಗಣಿಸುವ ನೃಪವಿಡಂಬಮಿವು ಲಕ್ಷ್ಮಿ ನಿನ್ನ ದೂಸಱಿನಲ್ತೇ (ಗದಾಯು. ೯-೮) ; ಜಾನಕಿಯ ದೂಸಱಿಂ ಲಂಕಾನಾಥಂ ದಾಶರಥಿಯ ಕೈಯೊಳ್ ಮಡಿಗುಂ (ಪಂರಾಮಾ. ೩-೨೩); ಭಕ್ತನಂ ಭವಿಯೆಂದ ದೂಸಱಿಂದಪ್ಪುದಿದು (ಮದೇರ. ೧-೧೨೭) ; ಎನಗೆ ನಿಮ್ಮಯ ದೂಸಱಿಂದಾಯ್ತಿನಿತು ಸಭೆಯಲಿ ಮಾನಹಾನಿ (ಕುಮ್ಯಾಉ. ೧೧-೬) ; ನಂದಿಸು ನಂದಿಸು ನಿನ್ನಯ ಕರುಣದ ನಂದನನಾಸಱ ಬೇಸಱ ದೂಸಱನೀಸರ ಮೇಲುಱದೆ (ಉದ್ಭದೇ. ೩-೨೮) ; ೨. ಅಪವಾದ; ನಿಂದೆ; ತೆಗಳಿಕೆ: ಹುಲುಮನುಜ ರಜಕನಾಡಿದ ದೂಸಱಂ ನೆನೆದು ಕುಲಪತ್ನಿಯಂ ಬಿಡುವ ಹದನಾವುದಕಟ (ಕೃಮಿಭಾ. ೧೮-೫೩). ೩. ದಿಕ್ಕು ; ದೆಸೆ : "ದೆಸೆಯೆಂದೆನ್ನಲ್ ದೂಸಱದು" (ಕವಿಕಂ. ೨೩೩) ; ಆ ಸಮಯದಿ ಮೂಡ ಪಡುವಣ ಖಂಡದ ದೂಸಱಿಂದಿಬ್ಬರೆಯ್ತಂದು ಆ ಸೀಮೆ ವಶವಾದುವೆಂದು ತಂದೋಲೆಯ ಭೂಸುದತೀಶಗಿಕ್ಕಿದರು (ಭರಕ. ೩೬-೬೪). ೪. ಸ್ಥಿತಿ ; ಇರುವಿಕೆ : ದೂಸಱದೆತ್ತಣಿನಾಯ್ತು (ರಾಮಾಶ್ವ. ೨೦-೧೩). **ದೂಸರ್** : ೧. "ಕಾರಣಂ = ದೂಸರ್" (ಕಾಶಕ್ಯ. ೨೪೦) ; ಚೆನ್ನಲ್ತದೆಂದು ಕೆಲರೈದಿದರ್ ಬಿದ್ದಿನರ್ ಬಿನ್ನನೆಯ ದೂಸರ್ಗಳೊಂದೊಂದ ನುಡಿದು (ಕಾಲೂರ. ೧೮೦-೪೦೬). **ದೂಸರು** : ೧. ತರುಣೀ ನಿನ್ನಯ ದೂಸರಿನುರುಪುವ ಮದನಾಗ್ನಿಕೀಲದಿಂ ಸೀದುರೆ ಸೀಕರಿವೋದ ವರುಣನೆನ್ನಂ ಕರುಣದೆ ನೀಂ ವರಿಸಿ ತಂಪಿಸೆಂದೊರೆಯೆಂದಂ (ದಮಸ್ವ. ೩-೧೬೭) ; ಬೀಳೇಳುಗಳಿಗನುವೊ ಗೆಯ್ಮೆಯೋ ದೂಸರೇಂ (ಕಾಲೂರ. ೫೮-೯೪). [ದೇ.ಕ ತೆಲು. ದೂಸರಿ]

ದೂಸಿ, ದೂಷಿ (ನಾ). [ನಾಟ್ಯ] ನರ್ತನದ ಒಂದು ಭಂಗಿ: ದೂಸಿಯುಂ ವಿಷಮದೂಷಿಯುಮೆನಿಸುವಡಹುಗಳನು . . . ತುಳಿಲೆನಿಪ್ಪವು ಲೇಸು ವಡೆಯೆ ತಾಂಡವಮನಾಡುತಿರ್ದಳು (ರೇವಣ. ೩-೪೮). **ದೂಷಿ**: ಲಾಗನು ಲಾಗು ಬೀಸುಗಾಲು ದೂಷಿ ವಿಷಮದೂಷಿ . . . ಮೊದಲಾದವಗಡ ದಡವುಗಳನಳವಡಿಸಿ (ವಿರೂಪಾ. ೮೭ ವ). [<ಸಂ. ಧೂಸೀ]

ದೂಸಿಗ (ನಾ). ಬಟ್ಟೆಯ ವ್ಯಾಪಾರಿ; ಜವಳಿ ವ್ಯಾಪಾರಿ: "ದೂಸಿಗನೆನಲ್ ಸೀರೆವರದಂಗೆ ನಾಮಂ" (ಕಬ್ಬಿಕ್ಯ. ೩೪); ಬಚ್ಚರ ದೂಸಿಗರ ನಿಯೋಗಿಗಳ ಅಗ್ಗಯಿಲೆಯರಪ್ಪ ಸೂಳೆಯರ ಸಾಮಂತರ ಕಸವರಂಗಳೆಲ್ಲಮಂ ಕಳ್ದು (ವಡ್ಡಾರಾ. ೧೨೩-೪) ; ದೇವಕಾರ್ಯ್ಯಮಂ ದೂಸಿಗ ಕೇತಿಸೆಟ್ಟಿ ಬಿನ್ನವಿಸೆ (ಕಇ. I, ೦೭-೨೭ ; 1055) ; ದೂಸಿಗರಂಗಡಿಯಂ ಪೊಕ್ಕು . . . ವಸ್ತ್ರ ನಿಕರಮನೋಸರಿಸದೆ ಸೂಱೆಗೊಂಡು (ಧರ್ಮಾಮೃ. ೨-೩೩) ; ಒಪ್ಪಿದರಲ್ಲಿ ದೂಸಿಗರ್ದೇಸಿವೆತ್ತು (ಪದ್ಮರಾ. ೮-೭೬) ; ಚಿನ್ನವರದರ್ ದೂಸಿಗರ್ ಮುತ್ತುಮಾಣಿಕದ ಪರದರ್ ವಣಿಗ್ವರರ್ . . . ಜೂಜುಗಾಱರ್ ಮುಖ್ಯರೊದಗಿ ಬರುತಿರ್ದರೇಂ ವಣ್ಣಿಸುವೆನು (ಜಿಬಪು. ೪೭-೪೦).

ದೂಸಿಗವರದ = ಬಟ್ಟೆಯ ವ್ಯಾಪಾರಿ; ಜವಳಿವರ್ತಕ: ಮಿಸುನಿ ಗಚ್ಚಿನ ಬಣ್ಣಸೀರೆಯ ದೂಸಿಗವರದರ ಮಱಿಗೆಯಿಂ . . . ಕಮ್ಮಾಱರ ಮುಂಗುಡಿಯಿಂ ಪುರಂ ಕಣ್ಗಂಬಾದುದು (ರಾಮಾಶ್ವ. ೦೦೩-೦೫).

[ದೂಸ್ಯ + – ಇಗ]

ದೂಸಿಗವಸರ (ನಾ). ಜವಳಿ ವ್ಯಾಪಾರಿಗಳ ಅಂಗಡಿ ; ಜವಳಿ ಅಂಗಡಿ; ಬಟ್ಟೆ ಅಂಗಡಿ : "ದೂಸಿಗವಸರವೆನಿವ್ವುದೇ ಸೀರೆಯ ಪಸರವು" (ಪಡುನಿ. ೬೨) ; ತೊಳಗಿದುವು . . . ಪಟ್ಟಾವಳಿಯ ದುಕೂಲದ ಚೀನದ ತಳಿರ್ವಟ್ಟೆಯ ವಲಿಯವಲಿಯ ದೂಸಿಗವಸರಂ (ಲೀಲಾವ. ೬-೦೯) ; ದಿವ್ಯಾಂಬರಂಗಳಿಂದೆಸವುವಲ್ಲಿ ದೂಸಿಗವಸರಂ (ಜಗವಿ. ೯-೦೧೧); ಪವಣಿಸಿ ಷಡ್ವರ್ಗಂಗಳನವನುದ್ಭವಿಸಿದ ವಿರಂಚಿಗಚ್ಚರಿಯಂ ಬೀಱುವ ಬಹುವರ್ಣಂಗಳ ವಸ್ತ್ರ ವಿತಾನವೆನಿವ್ವುದೊಪ್ಪಿ ದೂಸಿಗವಸರಂ (ಋಸುಮಾ. ೩-೧೦೭); ತೀವಿರ್ವಶ್ಯಾವಳಿಯ ಗಜಾವಳಿಯ ನರಾವಳಿಗಳ ವಿಕ್ರಯದಿಂದಂ ಭಾವಿಸೆ ದೂಸಿಗವಸರಂ ಮೂವರ್ ರಾಯರನೆ ಮಾಱುಮಂತೆಸೆದಿರ್ಕುಂ (ಗಿಕಳ. ೩-೯೪). [ದೂಸಿಗ + ಪಸರ]

ದೂಸಿಗವ್ಯವಹಾರಿ (ನಾ). ಬಟ್ಟೆಯ ವ್ಯಾಪಾರಿ : ಎರಡು ಸ್ಥಳದ ದೂಸಿಗ ವ್ಯವಹಾರಿಗಳಲುಂ ನಾನಾದೇಶಿ ದೂಸಿಗವ್ಯವಹಾರಿಗಳಲುಂ ಪೊಂಗೆ ಕಾಣೆ ಎರಡು (ಎಕ. VII, ಶಿಶಾಕಿ. ೦೧೮-೫೯ ; 1150).

[ದೂಸಿಗ + ವ್ಯವಹಾರಿ]

ದೂಸಿಸು (ಕ್ರಿ). ದೋಷವನ್ನುಂಟುಮಾಡು ; ಕೆಡುಕನ್ನುಂಟುಮಾಡು : ಒಂದೆ ಬೆರಲಿನಿತನಿತೆ ನೀಳ್ದೊಂದಳವಿಗಳೂರ್ದ್ವರೇಖೆ ಕೋರ್ಪೊಡಂ ಮಱಿಗಂತೊಂದು ವರಿಸದೊಳ್ ಮುಖರೋಗಂ ದೂಸಿಸೆ ಮರಣಮಕ್ಕುಂ (ಅಕ್ಕಶಾ. ೩-೪). [<ದೂಷಿಸು]

ದೂಸು 'ದೂಸ್$_1$' ನೋ.

ದೂಸೆಯಕ್ಕಿ (ನಾ). ಅರ್ಧ ಕುಟ್ಟಿದ ಕೊಟ್ಟಣದ ಅಕ್ಕಿ ; ಹೊಟ್ಟಿರುವ ಅಕ್ಕಿ : ಉಂಛಷಡ್ಭಾಗ ಪ್ರದಾನೇನ = ಧತ್ತಮಂ ಮಿದಿವಲ್ಲಿ ಪಿಡಿಯಕ್ಕಿಯ [ಶಾಕಾಂ. ಸಿಡಿಯಕ್ಕಿಯ]ನಾಯ್ದುಕೊಳ್ವಲ್ಲಿನಿತು ಭಿಕ್ಷೆಯಾಜನೆಯ ಭಾಗಮಂ ಅಥವಾ ದೂಸೆಯಕ್ಕಿಯಾಜನೆಯ ಭಾಗಮಂ (ಪ್ರದಾನೇನ) ಕುಡುವುದಱಿಂದಂ (ನೀತಿವಾ. ೬--೩೬). [ದೂಸೆ$_0$ + ಅಕ್ಕಿ$_1$]

ದೂಹತಿ 'ದೂಹಿತ್ರಿ' ನೋ.

ದೂಹತ್ರ 'ದೌಹಿತ್ರ' ನೋ.

ದೂಹಿತ್ರಿ, ದೂಹತಿ (ನಾ). ಒಂದು ಬಗೆಯ ಉದ್ದವಾದ ಕತ್ತಿ : ರಾಹುತರು ನಿಲ್ಲದೆ ದೂಹಿತ್ರಿಯ ಕೊಂಡಾಡುತ್ತಿರ್ಪರುಮೆಯ್ದಿ ಮುಳಿದು ಮೂವಳಸಲ್ಕುಱ್ಪಿಸದೆ ನಸುನಗುತಂ ನೋಡಿದನಂದು ಲಕ್ಷ್ಮಣಂ ಬಲವ (ಋಮುಶಾ. ೮-೫೩) ; ಇಳಿದು ಗಜವನು ಕೈದುಗಳ ನೆಲಕಿಳುಹಿ ಜೋಧರು ವಾರುವದಿನಿಳಿಗಿಳಿದು ರಾವ್ತರು ಹಾಯ್ಕಿದರು ದೂಹಿತ್ರಿ ಲೌಡಿಗಳ (ಋಪ್ಯಾಅ. ೧೯-೫೩) ; ತೆತ್ತಿಸಿದವಂಬುರವಡೆಸಿ ದೂಹಿತ್ರಿ ಹೊಳೆದವು ಸಮರದಲಿ (ಋಪ್ಯಾಗ. ೩-೦೭) ; ಬರೆಬರೆ ದೂರದಲಿ ದೂಹಿತ್ರಿಯಲಿ ಕಡಿವಡೆದ ಸೀತೆಯ ಕಂಡನಜಸೂನು (ತೊಕರಾ. ೬-೪೦-೪೨). **ದೂಹತಿ** : ೧. ಅವನ ಮಂತ್ರಿಗಳು ಮತವಿದಲ್ಲೆಂದಡ್ಡವಿಸಿ ದೂಹತಿಯ ಹಸ್ತವ ಹಿಡಿದು ರಣನಿಷ್ಕೃತಿಗೆ ರಂಜಕವಾವುದಿನಿತುಱೂಳೆಂದರವರಂದು (ತೊಕರಾ. ೬-೪೩-೪೩). ೨. "ಎರಡು ಅಲಗುಳ್ಳ ಖಡ್ಗ " (ಪ್ರಥಾ.).

[<ಸಂ. ದ್ವಿಹಸ್ತೀ]

ದೂಹಸ್ತಿ (ನಾ). = ದೂಹಿತ್ರಿ : ಪದದಾದಿಯ ದೀರ್ಘಕ್ಕೆ – ಅಮರ – ಆವರೆ . . . ದ್ವಿಹಸ್ತಿ – ದೂಹಸ್ತಿ ; ನವಮಿ – ನಾಮಿ (ಕಸುದ. ೨೬೭ ಪ್ರಯೋ). [ಇದು 'ದೂಹಿತ್ರಿ' ಎಂಬುದರ ಅಪಲಿಖಿತವಿರಬಹುದು]

ದೂಹೆ 'ದೂವೆ$_1$' ನೋ.

ದೂಹೆಗಾಡು (ನಾ). ಶ್ಮಶಾನ ; ಸುಡಂಗಾಡು : ಕನ್ನವಿಕ್ಕಿದವರನು . . . ಕಡಿಯೆಂದು ಕಳುಹಿದರೆ ಚೆನ್ನಾಗಿ ಮೆಱಿಸುತ್ತ ತಂದವರ ದೂಹೆಗಾಡಿನೊಳು ತಲೆಗಳ ಹೂಡೆಯಲು (ಸಿಂಗಿರಾ. ೨೭-೦೦).

[ದೂಹೆ (<ದೂವೆ$_1$) + ಕಾಡು$_3$]

ದೂಳ್ 'ದೂಳಿ' ನೋ.

ದೂಳ (ನಾ . ಒಂದು ಬಗೆಯ ಮರ : ದೂಳ, ದೇವದಾರಿ, (ಪಬ್ಬ).– ಕಾನಡಾಜಿಲ್ಲೆಯ ಅತ್ಯುನ್ನತವೃಕ್ಷಗಳಲ್ಲಿ ಪೊಂದು ... ಕಟ್ಟಿಗೆ ಯಾವತ್ತು ತೆಲಸಕ್ಕೆ ಬರುವುದು (ಕಥಾಗೆ. ೪೩). [?]

ದೂಳಕ್ಕರ (ನಾ). ಬರೆಯುವುದನ್ನು ಕಲಿಯುವಾಗ ಮರಳಿನ ಮೇಲೆ ಬರೆಯುವ ಅಕ್ಷರ: ದೂಳಕ್ಕರ ಗಜತುರಗದೇಱಾಟವ ಬಾಲಕೇಳಿಗಳಾದಿಯಾಗಿ ಮೇಳದೊಳಿಹ ಪ್ರಾಣಸಖ ಪ್ರಹಸಿತನೊಳು ವೇಱಿದ ತನ್ನ ದುಸ್ಥಿತಿಯಂ (ಅಂಜಕ. ೫-೪೭); ಕನಕದಾಸನ ಮಡನೆ ಹರಿ ಮುನ್ನ ವೇಳಿಸಿದ ನಾನು ದೂಳಕ್ಕರಮನರಿಯೆನೆನ್ನಿಂದ ವೇಳಿಸುವ ಹರಿಹರರ ಮಹಿಮೆಯನು ಯಾರ್ಬಲ್ಲರಭವಾ (ಸವಚೋ. ೦-೯). [ದೂಳು (<ದೂಳಿ) + ಅಕ್ಕರ$_3$]

ದೂಳಕ್ಷರ (ನಾ). = ದೂಳಕ್ಕರ : (ಕ). [ದೂಳು (<ದೂಳಿ) +ಅಕ್ಷರ]

ದೂಳಾಟ, ಧೂಳಾಟ (ನಾ). ಮಣ್ಣಿನಲ್ಲಿ ಆಡುವ ಆಟ ; ಧೂಳಿನಲ್ಲಿ ಆಡುವುದು ; ಮಣ್ಣಾಟ : ಕೊಳನ ಹೊಂದರೆಯೆತ್ತಿ ಮಿಂದೇಳೆಲೆಯ ವಾಳೆಯ ಕರ್ವುರದ ದೂ[ಪಾಠಾಂ. ದೂ]ಳಾಟಗಳನಾಡಿ . . . ನಂದನ ದೊಳಗೆ ಸುಳಿದಾಡುವುದು ಬಾಲಕನಂದದೊಂದೆಲರು (ಸಾಳ್ಕಥಾ. ೨-೩) ; ಓರಗೆಮಕ್ಕಳೊಡನೆ ದೂಳಾಟ ಮೊದಲಾದ ಲೀಲೆಗಳ ಪರಿವಿಡಿಯಿಂದೆಸೆವ ಕುಮಾರರ್ಗೆ ಮುನಿಪತಿ ಚೌಲಕರ್ಮಂಗಳಂ ಮಾಡಿಸಿ (ಚ್ಕಮಿಥಾ. ೦೪-೩೦). **ಧೂಳಾಟ** : ಭೀಷ್ಮನ ತೋಳೆ ತೊಟ್ಟಿಲಿನೊಳಗೆ ಬೆಳೆದವು ಸಲಹಿದನು ಧೂಳಾಟ ವೊದಲಾಗಿ (ಋಪ್ಯಾಭೀ. ೭-೩೮); ಸೊಕ್ಕಿದ ರದನಿಗಳ ಧೂಳಾಟ ವೊಪ್ಪಿದವವರ ಯುದ್ಧದಲಿ (ಸಾಳ್ಕಥಾ. ೩೨-೭೦) ; ತೊದಲುನುಡಿಗಳಂಬೆ ಗಾಲು ದಟ್ಟಿಡಿ ಮುದವೊದವಿದ ಧೂಳಾಟದಿಂದ ಪದುಳದೆ ಬಾಲಲೀಲೆಯ ತೋಱಿ ಸಕಲರ್ಗೆ ಚದುರಕುಮಾರರೊಪ್ಪಿದರು (ಕಂನವಿ. ೪-೮೦) ; ಇಬ್ಬರೂ ಬಾಲ್ಯದಲ್ಲಿ ಒಟ್ಟಿಗೆ ಧೂಳಾಟವಾಡಿದ ಜೊತೆಗಾರರು (ಕಾಪ್ಯಸ. ೬೫). [ದೂಳು (<ದೂಳಿ) + ಆಟ]

ದೂಳಿ, ದೂಳ್, ದೂಳು, ಧೂಳ್, ಧೂಳು (ನಾ). ೧. ಮಣ್ಣಿನ ಹುಡಿ ; ಪಾಂಸು ; ರಜ : "ದೂಳಿ – ರಜಸ್, ಪಾಂಸು" (ಪಾಚಕಾ. ೫) : ಬಟ್ಟೆಯ ದೂಳಿ ದೂವೆ ಮೊದಲಾದುದು (ಕಾದಂಪು. ೦೪೭) ; ದೂಳಿಯ ಪಚ್ಚೆಯಂತೆ . . . ಬೂದಿಯ ಬೊಟ್ಟನಂತೆ ಮಾಗೆಯ ಪೊತ್ತಿನಂತೆ ತೋಱಿ ಪಾಱುವಾಯುಷ್ಮಮಂ (ಧರ್ಮಾಮೃ. ೯-೨೩ ಅಡಿಟಿ) ; ದೂಳಿಯೊಳಿಬ್ಬಲ್ಲ ಮೇಲುಂದಿನ ದುಗುಲದ ಸೆಱಗಿನೊಳಂ (ವರ್ಧಪು. ೯-೬೦ ವ) ; ಒತ್ತರಿಸಿ ಫಲುಗುಣನ ಸೂನುವಂ ಭಾನುವಂ ಮುಸಿ,ದುದು ಚಾತುರಂಗಾಳಿಯುಂ ದೂ[ಪಾಠಾಂ. ಧೂ]ಳಿಯುಂ . . . ಘೋರತರ ಸಂಗರದೊಳು (ಚ್ಕಮಿಥಾ. ೨೨-೩೬) ; ದೂಳಿಯಿಂದ ಮಾಳಿಗೆ ಆದೀತೇ ? (ಗಾಡ). ೨. ಪುಡಿ ; ಚೂರ್ಣ ; ಹಿಟ್ಟು : ಮನೋಭಾಸುರಮಪ್ಪ ಕಪ್ಪುರದ ದೂ[ಪಾಠಾಂ. ಧೂ]ಳಿಯನಲ್ಲದೆ ದೂ[ಪಾಠಾಂ. ಧೂ]ಳಿಯಂ ನಿಜಾವಾಸದೊಳೆಂತುಟಿಂದಱಿಯನಿಂತುಟು ವುಣ್ಮವುಗಣ್ಮಾತನಾ (ಋಳುಮಾ. ೦೦-೧೦೭). ೩. ಹೂವಿನಲ್ಲಿರುವ ಪುಡಿ; ಪರಾಗ : ಸೊಂದಿಗೋಡಗಂಗಳ ಕಾಲಾಟದಿನಲ್ಲೊಕ್ಕಲಿನುದಿರ್ದ ದೂಳಿಗಳನಮರ್ಚಿಯುಂ (ಕಲ್ಯಾಶಾ. ೩೩ ವ); ತಿಳಿಗೊಳಂಗಳೊಳಲರ್ದ ಪೊಚ್ಚ ಪೊಂದಾವರೆಗಳ ದೂ[ಪಾಠಾಂ. ಧೂ]ಳಿ ತನಿಗಂಪನುಂಡು ಮಿಂಡೆದ್ದ ಭೃಂಗಾಳಿಗಳ ಬಳಗಂ ವರಿಯಲು (ಚ್ಕಮಿಥಾ. ೩-೪). **ದೂಳ್** : ೧. ಮಸಗಿದುರಿ ಪೊಗೆ ಸಿಡಿಲ್ಮಿಂಚು ಕತ್ತಲೆ ಗಾಳಿ ಮುಗಿಲೊಡ್ಡು ದೂಳ್ಗಳಿಂದ ದೆಸೆಗೆಡಿಸುತ . . . ಮಸಗಿದು (ಚ್ಕಮಿಥಾ. ೦೩-೩೭) ; ಲಕ್ಷ್ಮಣಂ . . . ಎಂದುಮಗಲ ದಣ್ಣನ ಕಡೆಗೆ ದೂಳ್ಯಾಯದೊಪ್ಪಿ ಪೊರಳ್ವ ಸೀತೆಯ ಕಡೆಗೆ ತೂಗುಯ್ಯಲೆಪೊಲಾದನು (ಚ್ಕಮಿಥಾ. ೧೪-೩೪) ; ದೊರೆಗಳ ದೊರೆ ಚಕ್ರಿಯೆನಿಸಿ ದರ್ಪವುವನು ಮೆರೆದನು : ಈಗಳದನು ದುಡುಂಕುಹೆಮ್ಮೆ

ದೂಳ್ಗೊದೆದುದೊ ಅರಿಯೆನು (ಪಾರಸಿ. ೯-೧೮೭). **ದೂಳು:** ೧. ಶರ್ಕರೆಯ ಬುದ್ಧಿಯಲಿ ದೂಳನು ತಿಂಬಬುಧರಂತೆ ದುಃಖದಳಿವನು ಪಡೆಯದೇ ಸುಖಸೌಖ್ಯವಿಲ್ಲದೆ ಬಳಲುವುದು ತಾವತ್ಯಧಿಕಬುದ್ಧಿಯಲಿ (ನಿಧಾಗ. ೦೧-೫-೪); ಗಾಳಿಯಿಂದ ದೂಳು ಹಾರಿದರೆ ಕೋಳೀ ಹೊಟ್ಟೆ ತುಂಬೀತೆ? (ಗಾದೆ); ದೂಳಲ್ಲಿ ಬಿದ್ದವ ಮೂಳನಿಂದ ಕಡೆ (ಗಾದೆ). ೩. "ಪರಾಗ, ಸುಮನೋರಜ = ಹೂವಿನ ದೂಳು" (ನಾಚಿರಾ. ೫); "ಪರಾಗಃ, ಸುಮನೋರಜಃ -೨ ಹೂವ್ವಿನೊಳಗಿರುವ ದೂ[ಪಾಠಾಂ. ಧೂ]ಳು, ಪೂದೂಳಿ, ಅಲರ ಪುಡಿ" (ಸಿದ್ಧಾಂತಿ. ೧೦೦). **ಧೂಳ್:** ೧. ಅಱುನೀರ್ವಳ್ಳಂ ನೆಟಲ್ಗುಂದಿದ ತರುನಿಚಯಂ ಧೂಳಡರ್ದುರ್ಬಿ ನಿಚ್ಚಂ ಪಱಿಗೆಟ್ಟಿರ್ಪಾಸೆ ...ಸರ್ವೋರ್ವಿಯೊಳ್ ಕೂಡೆ ನೋಡಲ್ ಬಱನಾಗಲ್ (ದಶಕು. ೩-೧೨). **ಧೂಳು:** ೧. ಸೃಷ್ಟಿಯಲಿ ಅಣುವಿನಣುವಿನ ಮೈಯ ಧೂಳಿನಲೊಂದು ಕಣ ನೀನು (ಕಗದ್ಯ. ೧೪೦); ಎರಡೂ ಕೈಗಳನ್ನು ಬಡಿದು ಧೂಳನ್ನು ಜಾಡಿಸಿ (ಕಮ್ಮಟ. ೨). ೨. "ಹುಡಿ = ಧೂಳು" (ಶಾಶಕ್ಯ. ೩೭).

ದೂಳ ಅಡರಿಸು = (ಉಕ) ತರಾಟೆಗೆ ತೆಗೆದುಕೊಳ್ಳು: ನಾನು ಚೆನ್ನಾಗಿ ದೂಳ ಅಡರಿಸಿದೆ. ಕೊನೆಗೆ ನನ್ನ ಸೂಚನೆ ಮಾನ್ಯವಾಯಿತು (ಪ್ರೇಮಾಶ್ರ. ೨೬೭). ಧೂಳಸಂಜೆ = ಸಾಯಂಕಾಲದ ಮಂಬ್ಬುಗತ್ತಲೆ: ಭೂತ ಪಿಶಾಚಿಗಳು . . . ಅಡ್ಡಾಡುವ ಕಾಲವೆಂದರೆ ಧೂಳ ಸಂಜೆ ಅಥವಾ ದೊಡ್ಡ ನಸುಕು (ಕನ್ನಜಾ. ೨೦). ಧೂಳಾಗು = ೧. ಹೊಲಸಾಗು; ಕೊಳೆಯಾಗು: ಮಣ್ಣಿನಲ್ಲಿ ಕೆಲಸಮಾಡಿ ಆತನ ಬಟ್ಟೆಯೆಲ್ಲಾ ಧೂಳಾಗಿದೆ (ರೂಢಿ). ೨. ಮಣ್ಣುಪಾಲಾಗು; ನಾಶವಾಗು; ಹಾಳಾಗು: ದ್ರೋಹಿಗಳು ಧೂಳಾಯ್ತು ಬಳಿಕಿನೊಳೀ ಹದನು ಬಂದಿದೆ ಜಗತ್ರಯ ರೂಹು ಗೆಡುತಿದೆ (ಕುಪ್ಯಾಕ. ೭-೪೫). ದೂಳು ಧುಮಸ = ಮಣ್ಣು, ಕಸ ಇತ್ಯಾದಿ: ಇದು ಧೂಳುಧುಮಸವೆನ್ನದೆ ಅಂಗಳ ನಡುವೆ ಮಣ್ಣಲ್ಲಿ ಕುಳಿತು ಕುಟ್ಟುವುದು (ಕನ್ನಜಾ, ೩೭). [<ಸಂ. ಧೂಲಿ]

ದೂಳಿಕಡವ 'ದೂಳಿಗಡವ' ನೋ.

ದೂಳಿಗಡವ, ದೂಳಿಕಡವ, ಧೂಳಿಕಡವ, ಧೂಳಿಗಡವ (ನಾ). ಒಂದು ಬಗೆಯ ಸಸ್ಯ: "ರೇಣುಕದಂಬಕಃ - ದೂಳಿಗಡವ" (ಓಷಧಿ. ೧೪೦). **ದೂಳಿಕಡವ:** "ಮಕರಂದವಾಸಃ - ದೂಳಿಕಡವ, ಕರ್ಕಟಕ, ಹಿಪ್ಪಲಿ, ಉತ್ತರಣೆ" (ಓಷಧಿ. ೧೨೩). **ಧೂಳಿಕಡವ:** "ಬಲಭದ್ರಸಂಜ್ಞಕಃ - ಧೂಳಿಕಡವ" (ಓಷಧಿ. ೦೦೭). **ಧೂಳಿಗಡವ:** "ಕ್ರಮುಕಪ್ರಸೂನಃ - ಧೂಳಿಗಡವ" (ಓಷಧಿ. ೨೮). [ದೂಳಿ + ಕಡವ$_1$ (<ಕಡಂಬ)]

ದೂಳಿಗಟ್ಟಲೆ (ನಾ). ಧೂಳಿನಿಂದ ಉಂಟಾದ ಮಂಬ್ಬು, - ಕತ್ತಲೆ: ಆಗಳಾಗಸಕ್ಕೆ ನೆಗೆದು ಪರ್ವಿದ ದೂಳಿಗಟ್ಟಲೆಯೊಳ್ . . . ಕಾದಿ (ಕಬ್ಬಿಕಾ. ೨೬೬). [ದೂಳಿ + ಕಟ್ಟಲೆ]

ದೂಳಿಗೋಂಟೆ, ದೂಳಿಗೋಟೆ, ದೂಳ್ಗೋಂಟೆ, ಧೂಳ್ಗೋಂಟೆ (ನಾ). ೧. ನಾಶಕ್ಕೆ ಒಳಗಾದ ಕೋಟೆ, - ದುರ್ಗ: ಚಲಂ ನೆಲೆಗಿಡೆ, ಬಲಂ ಬಯಲ್ವುಗೆ, ಕೊಂಚೆಗೋಂಟೆ ದೂಳಿಗೋಂಟೆಯಪ್ಪುದುಂ (ರಾಮಾಶ್ವ. ೯೭-೨೦). **ದೂಳಿಗೋಟೆ:** ೨. ವಶಪಡಿಸಿಕೊಂಡ ಕೋಟೆ; ಅಧೀನಕ್ಕೊಳಗಾದ ದುರ್ಗ: ಇಕ್ಕೇರಿಯ ಭೂಪ . . . ಪೊಕ್ಕ ಮಲೆಯ ನಾಕ್ಷಣ ದೂಳಿಗೋಟೆಯ ಗಕ್ಕನೆ ಕೊಂಡರೇವೇಳ್ವೆ (ಕಂನವಿ. ೧೧-೫). **ದೂಳ್ಗೋಂಟೆ. ಧೂಳ್ಗೋಂಟೆ:**

ದೂಳಿಗೋಂಟೆಯ ಕೊಳ್, ದೂಳಿಗೋಟೆಯ ಕೊಳ್, ದೂಳಿಗೋಟೆಯಂ ಕೊಳ್, ದೂಳ್ಗೋಂಟೆಯಂ ಕೊಳ್, ಧೂಳ್ಗೋಟೆಯಂ ಕೊಳ್ = ಕೋಟೆಯನ್ನು ನಿರ್ನಾವಂ ಮಾಡು; ದುರ್ಗವನ್ನು ಧೂಳು ಧೂಳಾಗುವಂತೆ ಮಾಡು: ಇಕ್ಕಿ ನಿಚ್ಚಣಿಗೆಯಂ ದೂಳಿಗೋಂಟೆಯ ಕೊಳ್ಳಬೇಕೆಂಬ ಪಡಿಯಱರ ಕಲಕಲಂ ಕರಮೊಪ್ಪಿತು (ಸಮ್ಯಕೌ. ೮-೩೦); ಸುಯೋಧನಾದಿಗಳೂರನುರವಣಿಸಿ ದೂ[ಪಾಠಾಂ. ಧೂ]ಳಿಗೋಟೆಯ ಕೊಂಡಿವರು ರಾಜಾಲಯಕೆ ಬರೆ (ಕುಪ್ಯಾಆ. ೭-೬೪); ಉರವಣಿಸಿ ದೂ[ಪಾಠಾಂ. ಧೂ]ಳಿಗೋಟೆಯಂ ಕೊಂಡ ರಘುವೀರನಂದು (ಜೈಮಿಭಾ. ೦೮-೭); ತ್ರಿಪುರಮಂ ಪರಿದೈದಿ ಮುತ್ತಿ ದೂಳ್ಗೋಂಟೆಯಂ ಕೊಂಬುದೆನೆ ಹರುಷದಿಂ ತಂತಮ್ಮ ಚಾತುರ್ಬಲಂವೆರಸಿ ನಡೆದರತಿಸಂಭ್ರಮದೊಳು (ಜಿಬಪು. ೪೨-೨೩); ಧೂಳ್ಗೋಂಟೆಯಂ ಕೊಂಡು ನೆಲಸರಿತಮಂ ಮಾಡುತಿರಲು (ಜಿಬಪು. ೪೮-೮). 'ಧೂಳೀಗೋಂಟೆ' ಪರಾ.

[ದೂಳಿ + ಕೋಂಟೆ]

ದೂಳಿಗೋಟೆ 'ದೂಳಿಗೋಂಟೆ' ನೋ.

ದೂಳಿಚಿತ್ರ (ನಾ). ಬಣ್ಣಬಣ್ಣದ ಪುಡಿಗಳಿಂದ ರಚಿಸಿದ ಚಿತ್ರ, - ರಂಗವಲ್ಲಿ: ಮಳಯಜದ ಮೊಲೆಯ ಕುಂಕುಮದಳಕದ ಕತ್ತುರಿಯ ಬಣ್ಣವಣ್ಣಿಗೆ ಕೊಳದೊಳ್ತಳರ್ದಿರೆ ಜಳರುಹಮುಖಿಯರ್ ಜಳಕೇಳಿಯ ನೆವದಿ ದೂಳಿಚಿತ್ರಂ ಬರೆದರ್ (ಯಶೋಚ. ೪-೮). 'ಧೂಳೀಚಿತ್ರ' ಪರಾ.

[ದೂಳಿ + ಚಿತ್ರ]

ದೂಳಿಡು (ಕ್ರಿ). ದೂಳನ್ನು ಎಬ್ಬಿಸು, - ಹರಡು, - ಎರಚು: ಜಡಿವ ಕಲ್ಗುಂಡು ದೂಳಿಡುವ ಬಿಱುಗಾಳಿ ಕಂಗೆಡಿಪ ಕತ್ತಲೆ (ಜೈಮಿಭಾ. ೪-೨೩); ಊರ್ಧ್ವಮುಖಮಾಗಿ ಸೂಸುವ ರಜದ ಸೋನೆಯೆನೆ ದೂಳಿಡೆ . . . ಗುಹೆ ದೋಣಿ ಮೊರಡಿ ಪಳ್ಳ ಕೊಳ್ಳ ಜನ ಸರಿ ಜಲುಗು ಗಹನ ಗಹ್ವರದ ವಿಂಧ್ಯಾದ್ರಿಯಂ ಫಲಗುಣನ ಸೇನೆ ತುಳಿದಸಿಯರೆದುದು (ಜೈಮಿಭಾ. ೧೦-೮); ಪಡಲಿಡು, ಪೊಡಮಡು . . . ದೂಳಿಡು, ಮಾಳಿಡು (ಶಬ್ದಾನು. ೪೮೮ ಪ್ರಯೋ). [ದೂಳು (<ದೂಳಿ) + ಇಡು$_1$]

ದೂಳಿತ (ನಾ). ಭಸ್ಮ; ವಿಭೂತಿ: ಆ ಮಹಾತ್ಮರು . . . ತಿಮ್ಮಣ್ಣ ನಾಯಕನಿಗೆ ದೆಸೆಗಟ್ಟಿನ ದೂಳಿತ, ಸಿದ್ಧಮೂಲಿಕೆ, ಕೈಅಂಬು ಇವುಗಳನ್ನು ಕೊಟ್ಟು . . . ಹೊರಟುಹೋದರಂತೆ (ಚಿತ್ರಪಾ. ೭).

[<ಸಂ. ಧೂಲಿತ]

ದೂಳಿದರ್ಶನ (ನಾ). ಮೊದಲಸಲದ ನೋಟ, - ದರ್ಶನ: ದೊಡ್ಡ ದರಬಾರು ಮಾಡಿ ದೂಳಿದರ್ಶನದಲ್ಲೇ ಅಂದರೆ ಮೊದಲನೇ ಸರ್ತಿ ಕಾಣುವುದರಲ್ಲೇ ಮಂತ್ರಿಬುದ್ಧಿಯನ್ನರಿಯಬೇಕು (ಕಥಾಮಂ. IV, ೩೨); P ಪ್ರಯಾಣದಲ್ಲಿ ಮೈಮೇಲೆ ಬಿದ್ದ ಧೂಳುಸಹಿತವಾಗಿ ಎಂದರೆ ಬಂದ ಕೂಡಲೆ ಮಾಡುವ ದೇವರ ಅಥವಾ ಹಿರಿಯರ ದರ್ಶನ.

[ದೂಳಿ + ದರ್ಶನ]

ದೂಳಿಸು (ಕ್ರಿ). ೧. ಹುಡಿ ಹರಡು, - ವ್ಯಾಪಿಸು: ಚಾರುತರಮುಖವೆರಡರಮಳಾಗಾರಮಂಟಪವಳಯದಲಿ ಕರ್ಪೂರ ದೂ[ಪಾಠಾಂ. ಧೂ]ಳಿಸಿತು (ತೊರರಾ. ೧-೭-೧೩). ೨. ಲೇಪಿಸು; ಪೂಸು: ಪಳಿಮಂಜಳೆಣ್ಣೆಯಂ ದೊಡ್ಡಂಗೆ ದೂಳಿಸಿದರೆಳೆವೆಣ್ಗಳೊಸಗೆಯಿಂ (ಕಾಲೂರ. ೧೪೭-೩೨೧). [ದೂಳಿ + - ಇಸು$_3$]

ದೂಳಿಸೆಜ್ಜರ (ನಾ). ಧೂಳಾಟವಾಡುವ ಜಾಗ; ಕ್ರೀಡಾಸ್ಥಾನ: ಪದೆಪಿಂ ಮೇಳಿಸೆ ದೂ[ಪಾಠಾಂ. ಧೂ]ಳಿಸೆಜ್ಜರವಿದೆಂದಾಶಾಗಜಂ ಭೀತಿಯೊಂದಿದು ನೂಱೊಂದೆನಿಸಿರ್ದ ಕೇತುವೆರಸೀಗಳ್ ರಾಹು ಮೇಲೆತ್ತಿ ಬಂದುದೆನುತ್ತುಂ ರವಿಮಂಡಳಂ ನಡುಗೆ . . . ಪರ್ಬಿತ್ತುರ್ಬಿ ಸೇನಾರಜಂ (ಮಲ್ಲಿಪು. ೮-೦೪೩); ಆ ಸಮಯದೊಳ್ ದೂಳಿಸೆಜ್ಜರಕ್ಕುಜ್ಜುಗಿಸಿ ಕಾಡಾನೆಗಳ ಕೋಡ ಮೊನೆಯಿನೀಡಿಱುವ ಗಿರಿಯ ದರಿಯ ಗೈರಿಕಪರಾಗಮಂ ಸಂಧ್ಯಾರಾಗ ಮಿಷದಿನಾಗಸಕ್ಕೆ ಪಸರಿಸಿಯುಂ (ಚಂದ್ರಪು. ೮-೪ ವ); ಕಪ್ಪುರದೊಪ್ಪುವ ಜಗಲಿ ದೂ[ಪಾಠಾಂ. ಧೂ]ಳಿಸೆಜ್ಜರಮೆನಿಸೆ (ಪಾರ್ಶ್ವಪು. ೯-೩೦ ವ). 'ಧೂಳಿಸೆಜ್ಜರ' ಪರಾ. [ದೂಳಿ + ಸೆಜ್ಜರ (<ಸೆಜ್ಜಾರ)]

ದೂಳು 'ದೂಳಿ' ನೋ.

ದೂಳುಗೆದಱು (ಕ್ರಿ). ೧. ಪುಡಿಪುಡಿಯಾಗಿ ಬೀಳು; ಧೂಳಾಗಿ ಹೋಗು: ಸೊಗಸಿನ ಗೋಪುರಂಗಳು ಕಾಲುಗುರದಾಗಿನಲಿ ಸಿಡಿಲೊಡೆದದ್ರಿಯಂದದಲಿ ದೂಳು[ಪಾಠಾಂ. ದೂಳಿ, ಧೂಳಿ]ಗೆದಱಿದವು (ತೊರರಾ. ೬-೦೦-೨೬). ೨. ಧೂಳು ತುಂಬಿರು: ಆಲಿ ಮರಳಿದ ಮುಸುಡ ಮುಸುಕಿನ ದೂಳುಗೆದಱಿದ ತಲೆಯ ತೇರಿನ ಮೇಲೆ ತಂದಿಳುಹಿದನು (ತೊರರಾ. ೬-೪೫-೦೦). [ದೂಳು (<ದೂಳಿ) + ಕೆದಱು$_1$ (<ಕೆದಱ್$_1$)]

ದೂಳುಪಾವಡ (ನಾ). [ವೀಶೈ] ಸೆಜ್ಜೆಯಲ್ಲಿ ಈಶ್ವರಲಿಂಗದ ಮೇಲೆ ಧೂಳು ಬೀಳದಂತೆ ಮುಚ್ಚುವ ಬಟ್ಟೆ, -ವಸ್ತ್ರ: ದೂಳುಪಾವಡ ಕಂಠಪಾವಡ ಸರ್ವಾಂಗಪಾವಡ ಇಂತೀ ತ್ರಿವಿಧಶೀಲ ನಡೆಸುವಲ್ಲಿ ದೂಳು ಪಾವಡವಾದಲ್ಲಿ ಆತ ನೀರನು ಹಾಯಬಹುದು (ಬಲೀಶ್ವ. ೫೪): ಕಂಠ ಪಾವಡ ಧೂಳ [ದೂಳು] ಪಾವಡ ಸರ್ವಾಂಗಪಾವಡ ಉಂಟೆಂಬ ಮಹಾ ಪಾತಕರಿಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ (ಚನ್ನವ. ಕ. ೨೨೪-೪೯೭). ಧೂಳ ಪಾವಡದವರು = ಲಿಂಗಾಯತ ಜಾತಿಯಲ್ಲಿ ಒಂದು ಪಂಗಡ: ಲಿಂಗಾಯತರಲ್ಲಿ ಒಟ್ಟಿಗೆ ೩೧ ಒಳಭೇದಗಳು. ಧೂಳಪಾವಡದವರು, ಶೀಲವಂತರು . . . ಇವರೇ ಮೇಲಾದ ಲಿಂಗಾಯತರು (ಕಥಾಗೆ. ೯೧).

[ದೂಳು (<ದೂಳಿ) + ಪಾವಡ$_1$]

ದೂಳುವಡೆ (ಕ್ರಿ). ಪುಡಿಯಾಗು; ಧೂಳಾಗು: "ಗುಂಡಿತ, ರೂಪಿತ = ದೂಳುವಡೆದುದು" (ನಾಜಿರಾ. ೫). [ದೂಳು (<ದೂಳಿ) + ಪಡೆ$_1$]

ದೂಳೆಯ (ನಾ). ಕೈಗೆ ತೊಡುವ ಮುತ್ತಿನ ಆಭರಣ: ಹೇಮಶೃಂಖಳೆ ಮಣಿಮಾಳೆ ದೂಳೆ[ಪಾಠಾಂ. ವೆ]ಯದ ಕಂಕಣಮಿಟ್ಟ . . . ಕೀರ್ತಿಪತಾಕೆ ತನ್ನೊಳೊಳ್ಪಳವಡೆ ಬಂದನಂದು ಗಜಭಟ್ಟನೆನಿಪ್ಪಂ (ಲೀಲಾವ. ೯-೫೫).

[೯ ಇದು 'ಜೂಳೆಯ' ಎಂಬುದರ ಅಪಲಿಖಿತವಿರಬಹುದೆ ?]

ದೂಳ್ಗೋಂಟೆ 'ದೂಳಿಗೋಂಟೆ' ನೋ.

ದೂಳ್ವಡಿಸು (ಕ್ರಿ). ಧೂಳಾಗುವಂತೆ ಮಾಡು; ಧೂಳು ಏಳುವಂತೆ ಮಾಡು; ಪುಡಿಪುಡಿ ಮಾಡು: ನಡೆದತ್ತಾ ರಾಜರಾಜೇಂದ್ರನ ಬಲಮದು . . . ವಲ್ಗದಶ್ವೋತ್ಕರಖುರಹತಿಯಿಂ ಬೆಟ್ಟುವೆಟ್ಟೆಲ್ಲಮಂ ದೂಳ್ವಡಿಸುತ್ತುಂ (ಶಾಂತೀಶ್ವ. ೦೫-೦೦೭). [ದೂಳ್ (<ದೂಳಿ) + ಪಡಿಸು]

ದೂಱ್ 'ದೂಱ್$_2$' ನೋ.

ದೂಱಿಡು (ಕ್ರಿ). ೧. ಅಪವಾದ ಹೊರಿಸು; ತಪ್ಪು ಹೊರಿಸು: ಪಱಿವನ್ಯಾಯವ ನೋಡದನ್ಯರೊಳೆ ದೂಱಿಟ್ಟೆಲ್ಲರಂ ಬಾಧಿಪಾ ತಳವಾಱಂ ಬೆಳವಾಱನೈ (ಸೋಮೇಶ. ೬೬). ೨. ವರದಿ ಮಾಡು; ಹೇಳು: ದೊರೆಯಲ್ಲಿಗೈದಿದನೊಬ್ಬ ದೂಱಿಡಲು (ಕೌಶಿರಾ. ೩೨-೨೭).

[ದೂಱ್$_2$ + ಇಡು$_1$]

ದೂಱಿಸು, ದೂರಿಸು$_1$ (ಕ್ರಿ). ೧. ನಿಂದಿಸು; ತೆಗಳು; ಟೀಕಿಸು: ಸರಸತಿಯಂ ಮನೋಮುದದೆ ತಾಳ್ದಿದನೆನ್ನನವಜ್ಞೆಗೆಯ್ದನಾನಿರೆನವಳಿರ್ಕ್ಕೆ ಚಿಃ ಸವತಿಯೊಳ್ಪುದುವಾಳ್ವುದು ಕಷ್ಟಮೆಂದು ನಿಷ್ಠುರವಚನಂಗಳಂ ನುಡಿದು ದಿಕ್ಕರಿಯಂ ಪರಿದೇಱಿ ಕೀರ್ತ್ತಿ ತಾಂ ಪುರುಡಿಸಿ ದೂಱಿಪಳ್ ವರತಪೋನಿಧಿಯಂ ನಯಸೇನಸೂರಿಯಂ (ಎಇ. XVI, ೬೦-೩೦ ; 1081) ; (ಶಾಪಮಂ. ೦೪೫ ನೋ); ದೂಱಿಸದಿರಬೇಕು ದೂಱಿಗಳುಕಬೇಕು (ಕುರಾಸಾಂ. ೨೪-೨೦). ೨. ಚಿಂತಿಸು; ಕಳವಳಪಡು; ವ್ಯಥೆಪಡು; ದುಃಖಿಸು: "ದೂಱಿಪುದೆಂದು ಚಿಂತಿಪುದು" (ಕಶಸಾ. ೦೨-೨೨೮) ; ಆಕೆಯ ದೂಱಿಸಿ ಸುಯ್ದು ಸುಯ್ಯೊಳಚ್ಚಳಿಸಿದುದಾ ಸರೋಜದಳನೇತ್ರೆಯ ನಲ್ಮೆಯೊಳತ್ತ ಕಣ್ಣ ನೀರ್ಗಳ ಪೊನಲಿಂದೆ ಕರ್ಚಿ ಕಳೆದುತಿರೆ ಪೋದುದು ಕೋಪಮೋಪನಾ (ಆದಿಪು. ೦೨-೦೩) ; ನಿಮ್ಮನೆ ನೆನೆದು ದೂಱಿಪಂ ರಘುವೀರಂ (ಪಂರಾಮಾ. ೦೦-೬೪) ; ನೀರದವಿಟಂಗೆ ವಿದ್ಯುನ್ನಾರಿಯ ವಿರಹಂ ಪೊಣರ್ಚೆ ಬಡವಾಗಿ ಕರಂ ದೂಱಿಸಿ ಬೆಳರ್ತ ತೆಱದಿಂ ಶಾರದಜಳಧರದ ತುಱುಗಲೊಗೆದುವು ನಭದೊಳ್ (ಲೀಲಾವ. ೫-೨೪) ; ಕಱುವಂ ದೂಱಿಸಿ ಮೆಲ್ಕನೊಕ್ಕು ತುಱುವಂ ತಾಯ್ಗಾಡಿನೊಳ್ಬಿಟ್ಟು ಮುಂದುಱುವಾಯ್ತುರ್ಪೆಳಗಂದಿಗಳ್ (ಲೀಲಾವ. ೫-೯೬) ; ಮನದೊಳ್ ಪಿರಿದುಂ ದೂಱಿಸಲದೇಕೆ ಬಿದಿ ಕೈವಾರಿಸಿದೊಡೆ ತೀರದಿರ್ಪುದಾವುದುಮುಂಟೇ (ಕಂದ್ರಪು. ೩-೬೭); ಮರುಳು ಮಗನೇನಾದನೋ ಎನುತ್ತ ಬಳವಳಿದು ದೂಱಿಸುತ್ತಿದಿರಾಗಿ ಬರುತ ಮಕ್ಕಳ ನಡುವೆ ಬಪ್ಪ ಸಿದ್ಧೇಶ್ವರನನತಿದೂರದೊಳು ಕಂಡು (ಸಿದ್ಧರಾ. ೨-೦೮) ; ಬಸಂತಂ ತಳಿರ್ವನೆಯೊಳ್ ನಲ್ಲನಂ ನೆನೆದು ದೂಱಿಸುತಿರ್ಪಿಚ್ಚೆ ಗಾರ್ತಿಗಾ ತೆಱನೆಲ್ಲಮಂ ಬಿನ್ನಪಂಗೆಯ್ದು (ಕಬ್ಬಿಕಾ. ೩೨೧);ದೂರದೊಳಿರ್ದ ಕಾಮಿನಿಯನಾಸೆವಡುತ್ತತಿತಾಪದೇಳ್ಗೆಯಿಂ ದೂಱಿಸಿ ಸುಯ್ಯಲೇಕೆ ವಿರಹ ವ್ಯಥೆಯಿಂದಂ (ನಳಪಂ. ೬೨) ; ಮೊದಲೆಳೆಯರ್ಕಳಿಲ್ಲದುಱ್ ದೂಱಿಸಿ ಮದ್ಗುರುವಿತ್ತ ಮಂತ್ರದಿಂ ಪದಪಿನೊಳೀತನಂ ಪಡೆದು . . . ಯೌವನೋದಯವಿಳಾಸಮನೀಕ್ಷಿಪ ಕಾಲಕಿಂತು ಬಂದುದೆ ಮೃತಿಯೆಂದು ಚಿಂತಿಸದಿರ್ (ರಾಜಶೇ. ೦೪-೩೯). ೩. ಚಿಂತೆಗೆ ಒಳಗುಮಾಡು; ವ್ಯಥೆಗೆ ಒಳಪಡಿಸು: ಸ್ವೈರದಿನಾಂ ಪೋಗುತ್ತಿರೆ ತಾರಾಪಥದೊಳ್ ಪಳಂಚಿದುದು ಕಿವಿಯಂ ಹಾಹಾರವಮುರಿಯೆಣ್ಣೆಯವೋಲ್ ದೂಱಿಸೆ ಬಗೆಬಗೆಯೊಳೊಗೆಯೆ ಕಾರುಣ್ಯರಸಂ (ಪಂರಾಮಾ. ೦೦-೫೭); ತನ್ನ ತಾನೇ ದೂಱಿಸಿ ದೊಡಾನೇನ ಮಾಡುವೆನೆಂದನಲ್ಲಮನು (ಪ್ರಭುಲೀ. ೭-೫೦). ದೂರಿಸು$_1$: ೧. ಮನಮಂ ದುರ್ವ್ಯಸನಕ್ಕೆ ತಂದು . . . ಲೋಕದಪವಾದಕ್ಕಾವಗಂ ಬನ್ದು ದುರ್ಮ್ಮನದಿಂ ದೂರಿಸುತಿರ್ಪ್ಪ ತಾಪಸ ನಿಕೃಷ್ಟರ್ಜ್ಞಾನಶಕ್ತಿ ಬ್ರತೀಂದ್ರನನೇಮ್ಪೋಲ್ವರೆ (ಸೌಇಇ. XI-II, ೦೫೨-೩೩ ; 1103).

[ದೂಱ್$_2$ + -ಇಸು$_3$]

ದೂಱು$_1$, ದೂರ್, ದೂರು$_1$ (ಕ್ರಿ). ೧. ನಿಂದಿಸು; ತೆಗಳು; ಬಯ್ಯು; ಟೀಕಿಸು: ಇತ್ತ ಸರ್ವದಯಿತೆ ಗರ್ಭಮಂ ತಾಳೆ ಸಾಗರದತ್ತಂ ಕಂಡು ದುಶ್ಚರಿತೆಯೆಂದು ದೂಱ್ (ಜಾಪುಂಪು. ೮೦); ಪೆಱರವಗುಣಮಂ ಕಂಡೊಡೆಯಱ್ಯಟ್ಟಿ ತಗುಳ್ದು ದೂಱವೇಡ (ಧರ್ಮಾಮ್ಯ. ೫-೦೦೨) ; ಲಿಂಗವಾರೋಗಣೆಯ ಮಾಡಿದನೆಂಬರು ತಾವುಂಡು ನಿಮ್ಮ ದೂಱುವರು (ಅವಚಂ. ೩೭-೧೬೨) ; ಕಸವಮಂತ್ರಿಗಳು . . . ದೂಱಿದರು ಬಸವಣದಂಡನಾಯಕನ (ಐಸಪು. ೧೦-೪) ; ದೂಱುವವರಾವಲ್ಲವೆಂದನು ಭಾನುಸುತನಗುತ (ಕುವ್ಯಾಕ. ೦-೨೪); ಸರಸರಿಸಿ ಬಳಿಕಾ ಮುನೀಂದ್ರರು ಸರಸಿಜಾಕ್ಷನ ಸಂದರುಶನಕೆ ಬರಲು ಬಳಿಯಲಿ ಬಂದು ದೂಱಿದರವರು ಮುನಿವರರ (ತೊರರಾ. ೦-೮-೦೯) ; ಸಾರಿ ದೂಱಿ ಹೇಳುತೇನೆ ಕೆಟ್ಟಿ ಕಂಡ್ಯ ಬಡ್ಡಿ ಮನವೆ (ಕನಕ. ೩೨ ಪಲ್ಲವಿ). ೨. ಚಾಡಿಹೇಳು: "ದೂಱು-ಪೈಶುನ್ಯೇ (ದೂಱು ಹೇಳು)" (ಶಮಧಾ); ಮಂದರೋದ್ಧರ ಧರಣಿಪಾಲಕನೆಂದು ನಿಂದಿಹ ತಾಗಿ ಧರಣಿಯನಿಂದು ಕದ್ದರೆ ಕಮಲಸಂಭವ ದೂಱುವನು ಹರಿಗೆ (ಸುಭಪ. ೭-೨೮); ಮೆಲ್ಲಮೆಲ್ಲನೆ ಬೆಮರುಣ್ಮೆ ಜಾಣ್ಮೆಯೊಳವಂ ಮಱಸುತ್ತಿರೆ ದೂಱಿದತ್ತು ಕಂಪನಕೃತಕಂಕಣಸ್ವನಮುಮಾಸ್ಯವಿಕಾಸಮುಮಾತ್ಮರಾಗಮಂ (ರಾಜಶೇ. ೮-೭೪). ೩. ಅಪವಾದ ಹೊರಿಸು; ಅನ್ಯಾಯವಾದ ಆರೋಪಣೆಯನ್ನು ಮಾಡು: ನೆರೆಯಳ್ ತಾನೀಯಳೆಮ್ಮಂ ಸವತಿತನಕೆ ಶೀತಾಂಶುವಂ ರೋಹಿಣೀಸೌಂದರಿಯೆಂದೆಟ್ಟಿಂದು ದೂಱಲ್ಕೆಱಗಿದಮಳತಾರಾಳಿಯೋ (ಕುಸುಮಾ. ೦೩-೭೬) ; ದನುಜನೊಯ್ದಾಸತಿಯ ರಾಘವ ಮನದ ಮೋಹದಿ ಕೂಡಿಕೊಂಡನುಯೆನುತ ಲೋಕವು ದೂಱುಗೆಂದಾನಿನಿತು ಕಾಡಿದೆನು (ಕೌಶಿರಾ. ೪೩-೫೨). ೪. ಮೊರೆಹೊಗು; ತೋಡಿಕೊಂಡು ಸಹಾಯವನ್ನು ಕೋರು: ಎನಗಾದದೊಂದು ಪರಿಭವಮನಾರ್ಗೆ ದೂಱಿದಪೆನಾರ್ಗೆ ಪೇಟ್ದಪೆಂ (ಕಾದಂಕಾ. ೨೯೮) ; ಕೂರ್ಪವರಿಂ ಪೇಟ್ವುದು ಬುದ್ಧಿಯನೆಂದು ದೂಱುತಿರ್ಪರ್ ಪೆಂಡಿರ್ (ಸಮಪ. ೫-೯೮). ೫. ಸುದ್ದಿಮುಟ್ಟಿಸು; ಹೇಳು; ನಿವೇದಿಸು;

ಅರಿಕೆಮಾಡು: ಬಂದನಾ ಗುರು ಮತ್ತೆ ಗಂಗೆಯ ಮಿಂದು ಬಳಿಕಲ್ಲೊಬ್ಬ ಸೂತಜಗೆಂದನೆಲವೋ ನೀನು ಹಸ್ತಿನಪುರಕೆ ದೂಱುವುದು ಇಂದು ಭಾರದ್ವಾಜನನು ತಾನೊಂದು ನೆಗಳೈತಂದು ನುಂಗಿತದೆಂದು (ಸಂಭಪ. ೧೮-೨೩); ಗಂಡಗೆ ದೂಱಬೇಕೆನುತಡಱಿದಳು ಸೋಪಾನಪಂಕ್ತಿಗಳ (ತೊರರಾ. ೩-೮-೨೬). ೬. ಅಪಶಕುನ ನುಡಿ: ದೂಱಿತು ಬಲದ ಭಾಗದೆ ಪಲ್ಲಿ ಮುಂಗಟ್ಟಿ ಪಾಱಿತು ವಾಸುಗಿವಕ್ಕಿ (ಮೋಹತ. ೬-೨೫). ದೂರ್: ೧. ಲಿಂಗ ಚಂದಯರೆಲ್ಲ ಮಾಚಯ್ಯರಲ್ಲಿ ದೂರ್ದರು ಶರಣು ಶರಣಾರ್ಥಿ (ಮಡಿಭ. ೦೬). ೨. ಗುರುವಿನೆಡೆಗೈದಿ ನೀಂ ದೂರ್ದುದೇಂ (ವೆಂಕಾರಾ. ೫-೨೦-೨೯). ದೂರು₁: ೧. ಅವನನ್ನು ದೂರುವ ಹಾಗಿಲ್ಲ (ಕಾವ್ಯಸ. ೮೦); ನಾನೇನೂ ಅವನನ್ನು ದೂರಲಿಲ್ಲ (ಶಾಲಿಮ. ೧೯೦); ಬಲಾತ್ಕರಿಸಿ ನಿನ್ನನ್ನು ತಂದೆನೆಂದು ದೂರುತ್ತಾರೆ (ಬೌಲತ್. ೩೦೦). ೨. ಈ ರೂಹಿನಿಂದಮಾನಿರ್ದಡೆಯು ರಕ್ಕಸರು ದೂರದಿರರಸುರಪತಿ ಕೇಳ್ದರೆ ಕುತೂಹಲಂ ತೋರುತೆನ್ನಂ ಪಿಡಿವರು (ವೆಂಕಾರಾ. ೫-೨-೦೦): ಪೊಂದೊಡಿಗೆಯಂ ತೋರಲೆಂದು . . . ಕಾಮಗೆ ದೂರಲೆಂದು ಕಾಮುಕಿಯರೈತಂದು ಬೀದಿಯ ನಡುವೆ ನಿಂದು ಬೆರಗಾಗಿರ್ದರು (ತುರಂಗ. ೬-೨೩). ೪. ಕಾಡ ಕಾಪಿನವರ್ಗೆ ದೂರಿದೊಡೆ ಬಾಳ್ಪೆಯೇಂ (ಕಾಲೂರ. ೪೯-೭೨).

ದೂಱಿಕೊಳ್ಳು = ನಿಂದಿಸು; ಅವಹೇಳನ ಮಾಡು; ಬಯ್ಯು: ಕೊಟ್ಟಡೆ ಕೊಂಡಾಡಿ ಕೊಡದಿರ್ದರೆ ದೂಱಿಕೊಂಡು ಹೋ ಹಾತ ಜಂಗಮವಲ್ಲ (ಅವಚಂ. ೨೨೩-೦೦೦೯).

[ದೇ.॥ ತಮಿ. ತೂಱು, ತೂಱ್ಱು; ಮಲ. ತೂಱು; ತುಳು. ದೂರು; ತೆಲು. ದೂಱು]

ದೂಱು₂, ದೂರು₃, ದೂಱ್ (ನಾ). ೧. ನಿಂದೆ; ತೆಗಳಿಕೆ; ಟೀಕೆ: ದೂಱಿದು ತಮ್ಮಯ ಚಿತ್ತಕ್ಕೇಱಿದ ದಿವಸದೊಳೆ ಪೊಲ್ಲಕೆಯ್ದೆಂ (ಅರ್ಧನೇ. ೫-೪೪); ಪ್ರಿಯಾನನಮನೀಕ್ಷಿಸಲುದ್ಯತೆಯಾಗಿ ತಾನೆ ಲಜ್ಜಿಸಿ ತಲೆವಾಗಿ ಕಂಡು ಮಣಿಕುಟ್ಟಿಮದೊಳ್ ನೆಱೆ ನೋಡಿ ಮತ್ತೆ ಮಾನಸದೊಳ ಗಿಟ್ಟೊಡಂ ನವಸುಖಾನುಭವಕ್ಕರೆಮುಚ್ಚಿ ಕಣ್ಗಳಂ ಪಸರಿಪ ಹೋಮ ಧೂಮತತಿಗೆಂದು ಶಶಿಪ್ರಭೆ ದೂಱನೇಱಿಪಳ್ (ಚಂದ್ರಪು. ೬-೭೬); ಬಸವನ ದೂಱಿಗೊಳಗ ದೆನೆಯೆನುತ ತಲೆದೋಱವತ್ತಲೆ ಸರಿವುತಿರೆ (ಬಸಪು. ೯-೩೦): ಅನ್ಯಥಾ ದೂಱು ಪುಟ್ಟಿತು (ಶಬ್ದಾನು. ೮೨ ವ್ಯಾಖ್ಯಾ). ೨. ಕೆಟ್ಟ ಹೆಸರು; ಅಪವಾದ: "ಗಾರಣಂ–ದೂಱು" (ಶಮದ. ಪರಿ. ೨); ಅವರನಾ ಮಾಚ್ಕೆಯೊಳೆ ನಡೆಯಲೀಯದೆ ಮಾಡಿ ಕಿಡಿಸಿದೊಡೆ ನಿನಗೆ ಪಿರಿದುಂ ದೂಱಕ್ಕುಂ (ಆದಿಪು. ೦೫-೨೫ ವ); ಕಾಮಾಂಧಂ ಕೀಚಕನಾಟಿಸಿ ಗಂಧರ್ವರಿನಱಿದನೆನಗೆ ದೂಱಪ್ಪಿನೆಗಂ (ಪಂಪಭಾ. ೮-೭೯); ಪರಪುರುಷಾ ಕುಳಕೆಯಿನನ್ವಯಕ್ಕೆ ದೂಱಂ ತಂದಳ್ (ಶಾಂತಿಪು. ೩-೮೩); ಸುರಭಿ ಪ್ರಾಲೇಯಂತೋಯಂಗಳಂ ಯುವಪಾಂಥರ್ಗೆಱೆವಲ್ಲಿ ತಮ್ಮ ಲಲಿತಾಂ ಗೋಪಾಂಗಶೃಂಗಾರಗೌರವಮಂ ಬೀಱುವರೆಂಬ ದೂಱನೆಸಗುತ್ತಿರ್ಪರ್ ಪ್ರಪಾಕಾಂತೆಯರ್ (ಪುಷ್ಪಪು. ೨-೨೨); ದೂಱು ಮಱವೊಳ್ನುಡಿ ವಂಚನೆಯೆಂಬುಪಾಯಮಂ ಪಾಱಿಸಿ ಧರ್ಮಮಂ ನಿಱಿಸಿ ಪಾಲಿಸವೇಟ್ಟುದು ದೇಶಮಂ ನೃಪಂ (ಸೂಕ್ತಿಸು. ೦೬-೮): ತನ್ನಿಂದ ತೋಱಿತು ದೂಱು ದುರ್ಭಯ ಸಂದಿಸದಲೇ ತಾಯನೆನುತಳವಳಿದನಾ ಹನುಮ (ತೊರರಾ. ೫-೮-೮೭). ೩. ಮೊರೆ; ಇತರರಲ್ಲಿ ತೋಡಿಕೊಳ್ಳುವಿಕೆ; ಅಹವಾಲು; ರಕ್ಷಣೆಗಾಗಿ ಮಾಡಿಕೊಳ್ಳುವ ಬೇಡಿಕೆ: ದೇವರಿಗೆ ದೂಱೈದಲೆಂ ದೊಱಲಿದಳು ಲಲಿತಾಂಗಿ (ಕುಮ್ಯಾಸ. ೦೫-೨೮): ಅಖಿಳ ಸುರಾಳಿಗಳ ದೂಱಿನಲಿ ಲಕ್ಷ್ಮೀಲೋಲ ನಿನ್ನುದರದಲಿ ಜನಿಸುವನು (ತೊರರಾ. ೦-೫-೭). ೪. ಸುದ್ದಿ; ಸಮಾಚಾರ; ವರದಿ. 'ದೂಱಂಗಾಱ' ಪರಾ. ೫. ನಿರೂಪ; ಅಪ್ಪಣೆ; ಸೂಚನೆ: ಬೇಱೆ ಬೇಱವನೀಶರಿಗೆ ಪಡಿಹಾಱವನಂ ಕಳುಹಿದರು ಕೃಷ್ಣನ ದೂಱು ಬರಲಳವಡಿಸಿದರು ಸಂಗ್ರಾಮಸಾಧನವ (ಕುಮ್ಯಾಉ. ೦೧-೧೦). ೬. ಚಿಂತೆ; ವ್ಯಸನ; ಕಾಳಜಿ: ಬೇಱೆ ಮತವೇನೆಮಗೆ ಲೋಕದ ದೂಱು ನಿಮ್ಮದು [ಪಾಠಾಂ. ಬೇಱೆ ಮತವೆಮಗೇನು ಬೊಪ್ಪನ ಚಾರಿ ನಿಮ್ಮದು] ನೀವು ಬೊಪ್ಪನ ನೂಱುಮಡಿಯೆಮಗೊಳ್ಳಿದರು ಬೇಱಿನ್ನು ಹಿತರುಂಟೆ (ಕುಮ್ಯಾಆ. ೮-೭೫); ಬಱಿದೆ ಕಾಡದಿರೇಳು ಮನದಲಿ ಮಱೆದೆವಾಗಳೆ ಕೌರವನು ಮುಂದಱಿಯದವಗಡಿಸಿದನು ಹೋಗಲಿ ನಿಮ್ಮ ದೂಱೇಕೆ (ಕುಮ್ಯಾಉ. ೧೦-೮). ೭. ವೇದನೆ; ಬಾಧೆ: ಆಡಾಗಿ ಸಾಯರೆ ದೂಱಿಂಗೆಡೆಯಾಗಿ ಬೇಯರೆ ಪರಸ್ತ್ರೀಗಾಸೆಗೆಯ್ದಿರ್ಪವರ್ (ಧರ್ಮಾಮ್ಯ. ೦೩-೦೩೨): ಮೊದಲೆನ್ನ ಹಸಿವಿನ ದೂಱ ನೀ ದಿಟ ನಿಲಿಸಬಲ್ಲೊಡೆ ಮಾಱುಮಾತುಗಳೇನು ಕಾರಣ (ಪ್ರಭುಲೀ. ೨೩-೧೨). ದೂರು₃: ೩. ಪುರಂದರನ ಸಮೀಪವನ್ನೈದಿ ದೂರುಗಳ ಪೇಳಿಕೊಳಲೋಸುಗ ಅಮರಾವತೀಪುರಲಕ್ಷ್ಮಿಯೆ ಬರುವಳೊ ಎಂಬಂತೆ (ಸೌಗಂಧಿ. ೪೮೦-೨೦); ಕಷ್ಟದಲ್ಲಿರುವವರ ದೂರನ್ನು ನ್ಯಾಯವಾಗಿ ವಕಾಲತ್ತು ವಹಿಸಿ ನ್ಯಾಯಾಲಯದಲ್ಲಿ ವಾದಿಸುವ ನ್ಯಾಯವಾದಿಗಳಿಗೇ ವಕೀಲರು ಎಂದು ಹೆಸರು (ಪ್ರತಾಪ. ೯೨); ವಿವಾದದಲ್ಲಿ ಅಥವಾ ದೂರಿನಲ್ಲಿ ನ್ಯಾಯನಿರ್ಣಯ ಮಾಡುವುದಕ್ಕೆ . . . ಅವಕಾಶವನ್ನು ಕಲ್ಪಿಸಬಹುದು (ಭಾಧಾನ. ೧೪೮): ದೂರು ನನ್ನ ಹತ್ತಿರವೂ ಬಂತು (ರೂಪಸಂ. ೦೩); ದೊರೆಯ ತನಕ ದೂರು, ಹೊಳೆಯ ತನಕ ಓಟ (ಗಾದೆ). ೮. ಚಾಡಿ: ಇತರರ ಮೇಲೆ ದೂರನ್ನು ಹೇಳುವುದೇ ಅವನ ಸ್ವಭಾವ (ರೂಢಿ). ದೂಱ್: ೨. ದನುಜಾರಾತಿ ಸ್ಯಮಂತರತ್ನವ ನೃಪಂ ಗೀಯಲ್ಕೆ ದೂಱ್ ಪೋದುದೇ (ಸೋಮೇಶ. ೮೩). ೯. (?): ಪೊಡವಿಪತಿ ಗೊರೆವೆನೆನೆ ಬೇಟ್ಟಡೆಯದುವದೆಕರಿಸಿ ಕಬ್ಬಿಗರ್ದೂಱೆನೆಯುಂ ಹಡುವಸು ಮಱೆಸೆಟ್ಟಿಸುಗಮ್ಮುಡಿಯೊಳಮಾರ್ಗೆಂದು ನುಡಿವ ಪಟಗನ್ನಡಮಂ (ಕವಿರಾ. ೦-೪೯).

ದೂರು ಹೇಳಿಕೊಳ್ಳು = ಮೊರೆಯಿಡು: ಬಿನ್ನವಿಸಿಕೊಳ್ಳು: ಮಲ್ಲವ್ವನು ಆ ಊರ ದೊರೆಯ ಬಳಿಗೆ ಹೋಗಿ ದೂರು ಹೇಳಿಕೊಂಡಳು (ನೀತಿಚಿಂ. IX, ೩೦). ದೂರು ಹೇಳು=೧. (ತನಗಾದ ತೊಂದರೆಯನ್ನು ಕುರಿತು) ಬಿನ್ನವಿಸು; ಮೊರೆಯಿಡು: ಮೃಗಗಳ ಬಾಧೆಗೆ ಸೈರಿಸಲಾರದೆ ಬಂದು ಧೊರೆಯಾದ ಸುಚರಿತ್ರರಾಯನಿಗೆ ದೂರು ಹೇಳಲಾಗಿ (ಸೌಗಂಧಿ. ೨೪-೪). ೨. ಚಾಡಿ ಹೇಳು: ಅಪಾದನೆಮಾಡು: ತಂಬಟೆ ಹೋಗಿ ಭೇರಿಗೆ ದೂರು ಹೇಳಿದ ಹಾಗೆ (ಗಾದೆ). ದೂರು ಹೊರಿಸು = ನಿಷ್ಕಾರಣವಾಗಿ ಆರೋಪಿಸು: ನನ್ನ ತಂಗಿಯ ಮೇಲೆ ದೂರು ಹೊರಿಸುವುದು ನನ್ನ ವೃತ್ತಿಯೆ? (ವಾತ್ಸಲ್ಯ. ೦೦೮). ದೂಱು ತರು, ದೂರು ತರು = ೧. ಅಪವಾದ ಬರುವಂತೆ ಮಾಡು; ಕೆಟ್ಟ ಹೆಸರು ತರು: ಹೆತ್ತಮನೆಗೆ ದೂರುತರ ಬೇಡವೆಂದು ಹೆಣ್ಣುಮಕ್ಕಳಿಗೆ ಬುದ್ಧಿವಾದ ಹೇಳುವುದು ಸಂಪ್ರದಾಯ (ರೂಢಿ). ೨. ಚಾಡಿ ಹೇಳು: ಕುಂದು ನಿಂದೆ ಬಂದರೆ ದೂಱು ತಂದು ಕೊಡುವರು ಲಕ್ಷ್ಮೀರಮಣ (ಪುರಂದ. ೪-೯-೨). ದೂಱು ಮಾಡು, ದೂರು ಮಾಡು = ಅಪವಾದವನ್ನು ಹೊರಿಸು; ಆರೋಪಣೆ ಮಾಡು: ದೂಱುಮಾಡುವರೇನೆ ರಂಗಯ್ಯನ ದೂಱುಮಾಡುವರೇನೆ (ಪುರಂದ. ೦-೯೪ ಪಲ್ಲವಿ); ಬ್ರಹ್ಮಾನಂದನೂ ಅವಳು ರೋಹಿಣಿಯನ್ನು ಊರು ತುಂಬ ದೂರುಮಾಡಿರುವುದಾಗಿ ಬರೆದನು (ಬಂಕಿಮ. ೭೦). ದೂಱು ಮುಟ್ಟು = ಅಪವಾದ ಬರು; ಆರೋಪಕ್ಕೆ ಗುರಿಯಾಗು: ಮೊಱೆಯಿಟ್ಟೆ ಕಾಯದಿರೆ ದೂಱು ಮುಟ್ಟುವುದು ಶ್ರೀ ಲಕ್ಷ್ಮೀರಮಣ (ಪುರಂದ. ೪-೯-೦). ದೂಱು ಹೊಱು, ದೂರು ಹೊರು = ೧. ನಿಂದೆ ಬರು; ತೆಗಳಿಕೆ ಅಂಟಿಕೊಳ್ಳು: ಕೆಡೆದು ದನುಜರು ಕೇಣವಿಲ್ಲದೆ ತೊಡಗಿದಾಹವದೊಳಗೆ ಕೊಂದವ ಕೊಡನ ಮಗನೋ ದೂಱು

ಹೊತ್ತುದು ಬಱಿದೆ ಹಗೆಗಳಿಗೆ (ಕುವ್ಯಾದ್ರೋ. ೧೩-೩೩). ೨. ಅಪವಾದಕ್ಕೆ ಈಡಾಗು; ಆರೋಪಕ್ಕೆ ಪಕ್ಕಾಗು: ದೂರು ಹೊರೋಕಿಂತ ಮಾರಿ ಹೊರೋದುತ್ತಮ (ಗಾಜಿ).

[<ದೂಱು$_1$./ತಮಿ. ತೂಱು ; ಮಲ. ತುಳು. ದೂರು ; ಕೊಡ. ದೂರೀ ; ತೆಲು. ದೂಱು]

ದೂಱುಕಾಱ 'ದೂಱ ಗಾಱ' ನೋ.

ದೂಱುಗ, ದೂರುಗ (ನಾ). ೧. ವರ್ತಮಾನ ಒಯ್ಯುವವನು ; ವರದಿ ಒಪ್ಪಿಸುವವನು ; ದೂತ ; ಸೇವಕ : ಪರಾತ್ಪರವಸ್ತು ನಸುನಗುತ ತೋಱಿದನು ಬಳಿಕುಮೆಗೆ ರಾಮನ ದೂಱುಗರ ನೋಡಿವರನೆನೆ ಹೊರೆಯೇಱಿ ಹೊಂಪುಳಿಯೋದಳುಮೆ ಮಹಿಮೆಗೆ ಮಧುದ್ವಿಷನ (ತೊರರಾ. ೪-೯-೩೨). **ದೂರುಗ** : ೨. ಅಪವಾದ ಹೊರಿಸುವವನು ; ಆರೋಪ ಮಾಡುವವನು : ಅದು ಇಲ್ಲದಿದ್ದರೆ ವ್ಯಕ್ತಿಯಲ್ಲಿ ಉಡಾಳತನ ಬೇರೂರಿದೆ ಎಂದು ದೂರುಗರಿಗೆ ಅವಕಾಶ ಸಿಕ್ಕಂತಾಗುವುದು (ಗೋಯಾತ್ರೆ. ೩೩).

[ದೂಱು$_2$ + – ಗ$_2$]

ದೂಱುಗಣ್ (ನಾ). ದೈನ್ಯವನ್ನು ಸೂಚಿಸುವ ಕಣ್ಣು ; ಮೊರೆಯಿಡುವ ಕಣ್ಣು : ಜಾಱಿದುಬ್ಬಿನ ಹೊತ್ತ ದುಗುಡದ ಮೋಱಿಗಳ ಮೋನದ ನಿಹಾರದ ದೂಱುಗಂಗಳ ದೇವನಿಕರವ ಕಂಡು ಕರುಣದಲಿ . . . ಶಿವ ತೋಱಿ ನುಡಿದನು ಪಾಶುಪತ್ಯದ ಸಾರಸಂಗತಿಯ (ಕುವ್ಯಾಕ. ೬-೨೫).

[ದೂಱು$_2$ + ಕಣ್]

ದೂಱುಗಾಱ, ದೂಱುಕಾಱ (ನಾ). ೧. ಸಮಾಚಾರವನ್ನು ತಿಳಿಸುವವನು ; ದೂತ : ಜವನ ದೂಱು[ಪಾಠಾಂ. ದೂದು]ಗಾಱರ ಜಂಗುಳಿ ...ಕೊಡಲಿಯ ಕೂರ್ವಾಳ ಪರುಟವಣೆಯ ಸಡಗರದ ದಬವುಬದಿಂ ಬಂದು ಮುತ್ತಿ ಮುತ್ತಿ ಅಱಗುಲಿ ಜೀವಾತ್ಮನಂ ಸೆಱಿವಿಡಿದತ್ತು (ರಾಮಾಶ್ವ. ೭೯-೨೦). **ದೂಱುಕಾಱ**: ೨. ಮೊರೆಯಿಡುವವನು : ನಗರ ಮೂಱಱ ದೂಱುಕಾಱರ ದುಗುಡವನು ಪರಿಹರಿಸಿ ಕರುಣಾಳುಗಳರಸ ಶಿವ ಸಂತ ವಿಟ್ಟನು ಸುರಕದಂಬಕವ (ಕುವ್ಯಾಕ. ೮ ಸೂಚನೆ) ; ಕೇಳಿದನು ಕಡು ದೂಱುಕಾಱರ ನಾಲಿಗೆಯ ರಚಿತೋಕ್ತಿಯನು ಕರುಣಾಳುಗಳ ಬಲ್ಲಹನು ನಿದ್ರಾಯೋಗಮುದ್ರೆಯಲಿ (ತೊರರಾ. ೧-೮-೫೪).

[ದೂಱು$_2$ + – ಕಾಱ]

ದೂಱುಗೇಳ್ (ಕ್ರಿ). ನಿಂದೆಯನ್ನು ಕೇಳು ; ನಿಂದೆಗೆ ಕಿವಿಗೊಡು : ದೂಸಕರ ದೂಱುಗೇಳ್ದುಂ ಕೊಲ್ಗುಂ ಪೇಸುವನಲ್ಲಂ ಸಮುದ್ರವಿಜಯಂ (ಅರ್ಧನೇ. ೫-೦೪). [ದೂಱು$_2$ + ಕೇಳ್]

ದೃಕ್ಕು (ನಾ). ೧. ಕಣ್ಣು ; ನೇತ್ರ : "ದೃಕ್ಕೆಂಬುದಂ ಕಣ್ಣೆನಲ್ಕಕ್ಕು" (ಕಬ್ಬಿಕ್ಕೆ. ೬೨) ; ವಿಭವಕ್ಕೆ ಬಾಹ್ಯದಲ್ಲಿ ಮುಟ್ಟಿ ನೋಡಿಹೆನೆಂದಡೆ ಚಿತ್ತ ಶುದ್ಧನಲ್ಲದ ಕಾರಣ ದೃಕ್ಕಿಂಗೆ ತೋಱಿ ಸರ್ವಾಂಗದಲ್ಲಿ ಲಕ್ಷ್ಯವಾಗದೆಂಬುದಕ್ಕೆ ಸೂಚನೆ (ಮೋಳಿಮಾ. ೯೮-೩೮೬) ; ಲಿಂಗದೃಷ್ಟಿ ಪರಿಪೂರ್ಣವಾದಲ್ಲಿ ದೃಕ್ಕಿಂಗೆ ತೋಱುವುದೆಲ್ಲವೂ ಲಿಂಗಮಯವಾಗಿ (ಮದೇವ. ೨೮೭-೬೭) : ಭಾವದ ದೃಕ್ಕಿನಿಂದ ನವಲಿಂಗಂಗಳ ನೋಡಿ ಪೂಜಿಸಿ (ಅಖಂಡೇ. ೨೩೧-೮೩). ೨. [ಗಣಿತ] ಎರಡು ಎಂಬ ಸಂಖ್ಯೆಯ ಸಂಕೇತ. [ಸಂ. ದೃಶ್]

ದೃಕ್ಕುಬೊಂಬೆ (ನಾ). ಕಣ್ಣಿನ ಪಾಪೆ ; ಕಣ್ಣುಗೊಂಬೆ : ಇಂತೀ ಉಭಯ ಬಿನ್ನವಾದಲ್ಲಿ ಎನ್ನ ಮಱವೆಯೇ ನಿನ್ನ ಕೇಡು ನಿನ್ನ ಮಲ ಎನ್ನ ಕೇಡು ಅದು ದೃಕ್ಕುಬೊಂಬೆಯಂತೆ ನಿಶ್ಚಯವಾದಲ್ಲಿ ನೀನೇ ನಿಃಕಳಂಕ ಮಲ್ಲಿಕಾರ್ಜುನಾ (ಮೋಳಿಮಾ. ೩೬-೦೪೯). [ದೃಕ್ಕು + ಬೊಂಬೆ]

ದೃಕ್ಕುಸ್ಥಿತಿ (ನಾ). [ಯೋಗ] ರಾಜಯೋಗದ ಹದಿನೈದು ಬಗೆಯ ಯೋಗಾಂಗಗಳಾದ ಯಮ, ನಿಯಮ, ತ್ಯಾಗ, ಮೌನ, ದೇಶ, ಕಾಲ, ಆಸನ, ಮೂಲಾಬಂಧ, ದೇಹಸಾಮ್ಯ, ದೃಕ್ಕುಸ್ಥಿತಿ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣೆ, ಧ್ಯಾನ ಮತ್ತು ಸಮಾಧಿ ಎಂಬವುಗಳಲ್ಲಿ ಹತ್ತನೆಯದು : ದೃಕ್ಕು ದೃಶ್ಯವು ನಶ್ಯ ಮೂರನು ದೃಷ್ಟಿಸಿಯೆ ನೋಡ್ವಾವವಸ್ತುವು ದೃಷ್ಟದಿಂ ಅದು ತಾನೆಯೆಂದೇ ಅದುವೆ ತಾನಾಗಿ ದೃಷ್ಟಿಸಿಯೆ ತಾ ನೋಡುತಿಹುದೇ ಶಿಷ್ಟ ದೃಕ್ಕುಸ್ಥಿತಿಯಿದೆಂದು ಯಥೇಷ್ಟದಿಂ ಯೋಗಿಗಳು ಹೊಗಳ್ವರು ದೃಕ್ಕುಸ್ಥಿತಿಯೆಂದು (ಜ್ಞಾನಸಿಂ. ೦೭-೨೮). [ದೃಕ್ಕು + ಸ್ಥಿತಿ]

ದೃಕ್ಕೋಣ (ನಾ). ನೋಡುವ ರೀತಿ ; ದೃಷ್ಟಿಕೋನ : ಕೇವಲ ಕರ್ಮಠ ಭಾವದಿಂದ, ಪಾಪ ಪುಣ್ಯಗಳ ದೃಕ್ಕೋಣದಿಂದ ನೋಡಿದರೂ ಅರ್ಜುನನು ಯಾರಿಗಾಗಿ ಎಂದರೆ ಯಾವ ಶತ್ರುಗಳಿಗಾಗಿ ಅಳಬಾರದೋ ಅಂಥವರಿಗಾಗಿ ಅಳುತ್ತಿದ್ದಾನೆ (ಭಾರದ. ೧೦೩). [ಸಂ.

ದೃಕ್ಕ್ರಿಯಾತ್ಮಕ (ನಾ). [ಯೋಗ] ದರ್ಶನ ಮತ್ತು ಕರ್ಮ ಇವೆರಡನ್ನೂ ಕೂಡಿಕೊಂಡಿರುವುದು ಜ್ಞಾನಯೋಗಿಯಾದವನು ಕರ್ಮಯೋಗಿಯೂ ಆಗಬೇಕು ; ಏಕೆಂಬರೆ ಯೋಗ ದೃಕ್ಕ್ರಿಯಾತ್ಮಕವಾದದ್ದು (ಭಾರದ. ೦೦೫). [ಸಂ.]

ದೃಕ್ಪ್ರುತಿ (ನಾ). ಕಣ್ಣೇ ಕಿವಿಯಾಗಿರುವ ಪ್ರಾಣಿ ; ಹಾವು ; ಸರ್ಪ : "ವಿಷಧರಃ, ದಂದಶೂಕಃ . . . ದೃಕ್ಪ್ರುತಿಃ, ಭುಜಂಗಮಃ – ಈ ೨೫ ಪಾವಿನ ಪೆಸರ್" (ಹಲಾಯು. ೦೦೫-೦೮). [ಸಂ.]

ದೃಕ್ಪಥ (ನಾ). = ದೃಗುಪಥ : ಭರತಗೆ ರಾಜ್ಯಸಿರಿಯನಿತ್ತಾದೊಡಂ ತಪ್ಪದಿಂದೆನ್ನ ದೃಕ್ಪಥವನಗಲದೆ ಸುಖದೊಳಿಪ್ಪುದುಚಿತವು (ವಂಕಾರಾ. ೨-೯-೩೨). [ಸಂ.]

ದೃಕ್ಪರಿಧಿ (ನಾ). ನೋಟದ ಮೇರೆ ; ದೃಷ್ಟಿಯ ಎಲ್ಲೆ : ಎತ್ತಣಿನೊ ದೃಕ್ಪರಿಧಿಯಾಚೆಯಿಂದಲನಂತಸತ್ತ್ವ ತೆರೆತೆರೆಯಾಗಿ ಬೀಸಿ ಗೂಢದಲಿ ಬಿತ್ತರಿಸುತಿಹುದು ಹೊಸಹೊಸತನವನೆಡೆಬಿಡದೆ (ಮಂಕುಳ. ೯೨). [ಸಂ.]

ದೃಕ್ಪ್ರಭೆ (ನಾ). ಕಣ್ಣಿನ ಕಾಂತಿ,-ಪ್ರಕಾಶ; ನೇತ್ರದ ಹೊಳಪು : ದಿಕ್ಚಕ್ರ ಮನಚ್ಚಜೊನ್ನಮೆಳಸಿತ್ತೆಂಬನ್ನೆಗಂ ತುಂಬೆ ದೃಕ್ಪ್ರಭೆ . . . ಬಂದಳ್ ಕುಡುತುಂ ಶಶಿಪ್ರಭೆ ಜನಾಕ್ಷೀಂದೀವರಾನಂದಮಂ (ಚಂದ್ರಪು. ೬-೬೯).

[ಸಂ. ದೃಕ್ಪ್ರಭಾ]

ದೃಕ್ಸಹಸ್ರ (ನಾ). ಸಾವಿರ ಕಣ್ಣುಗಳು : ದೇವಗಣಿಕಾತತಿಯಾತನ ಗೀತಮಂ ನಿಜಾನಂದದೆ ಪಾಡೆ ಕೇಳಲೆರಡುಂ ಕಿವಿಯೆಯ್ದದೆ ತನ್ನ ದೃಕ್ಸಹಸ್ರಂ ದಿಟದಿಂದೆ ಕರ್ಣಚಯಮಾಗದೆ ನಿಷ್ಫಲಮಾದುದೆಂದು ಸಂಕ್ರಂದನನೆಯ್ದೆ ಕಣ್ಗೆ ಕಿಸುಗಣ್ಣುವನಾತ್ಮಸಭಾಂತರಾಳದೊಳ್ (ಚಂದ್ರಪು. ೦೦-೮೭).

[ಸಂ.]

ದೃಕ್ಸಿದ್ಧಾಂತ (ನಾ). [ಜ್ಯೋತಿ] (ಆಧುನಿಕ ಯಂತ್ರ ಸಹಾಯದಿಂದ) ಗ್ರಹಗಳ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಕಂಡುಕೊಂಡು ನಿರ್ಣಯಿಸುವ ಖಗೋಳ ವಿಜ್ಞಾನ; ಜ್ಯೋತಿರ್ವಿಜ್ಞಾನ. 'ದೃಗ್ಗಣಿತ' ಪರಾ [ಸಂ.]

ದೃಕ್ಸೌಮ್ಯ (ಗು). ಕಣ್ಣಿಗೆ ಹಿತವನ್ನುಂಟುಮಾಡುವ ; ನೇತ್ರಾನಂದಕರವಾದ : ಸ್ರಕ್ಸುಭಗೋರಸ್ಸ್ಥಳನಂ ದೃಕ್ಸೌಮ್ಯಶರೀರನಂ ಸವೇಣುಸ್ವನನಂ ವಾಕ್ಸಾರನನಾ ಬಳವಿಷ್ವಕ್ಸೇನರ್ ಗೋಪಬಂಧುಗೆತ್ತರ್ ಖಳನಂ (ಜಗವಿ. ೪-೫೦). [ಸಂ.]

ದೃಗಂತ (ನಾ). ಕಣ್ಣಿನ ಕೊನೆ ; ಅಪಾಂಗ ; ಕಟಾಕ್ಷ : ತನ್ನ ದೃಗಂತದಿಂದೀ ಕ್ಷಿಸುತ ಪ್ರಿಯೆ ಪೋಗೆ ಬಂದುದೀ ಬೇಗೆ (ಶಾಕುಂತ. ೦೮ ಅಡಿಪದ್ಯ).

[ಸಂ.]

ದೃಗಂತರ (ನಾ). ಕಣ್ಣಿನ ಒಳಗು,-ಒಳಭಾಗ : ಚರಣಾಲಕ್ತಕಲಾಂಛನಂ ನಿಟಿಲದೊಳ್ . . . ತಾಂಬೂಲರಾಗಂ ದೃಗಂತರದೊಳ್ ಪುಷ್ಪರಜಃ ಪ್ರಲೇಪಮುರದೊಳ್ ತಳ್ಪೊಯ್ಯೆ (ಕಾವ್ಯಸಾ. ೬೫೫). [ಸಂ.]

ದೃಗಂಬು (ನಾ). ಕಣ್ಣೀರು ; ಕಂಬನಿ ; ಅಶ್ರು : ವೃಗನಯನೆಯ ಮನದ ಖೇದವುಂ ಪಚ್ಚುಗೊಳಲ್ ಬಗೆದಂತಾಕುಳಚಿತ್ತಂ ದೃಗಂಬುವಂ ತೊಡದು ಮೆಲ್ಲನಂದಿಂತೆಂದಂ (ಚಂದ್ರಪು. ೩-೫೩). [ಸಂ.]

ದೃಗು (ನಾ). ೧. = ದೃಕ್ಕು ೧ : ಮೊಗಸದಾದವು ನೋಡಲುಮರರೆ ದೃಗುಗಳಸುರರ ಸುಪ್ರತಾಪದ ಸೆಗಳಿಕೆಯ ಶಿಖಿಯುಬ್ಬರದ ಸಂತಾಪಲಹರಿಯಲಿ (ತೊರಣಾ. ೬-೫೦-೫೨). ೨. = ದೃಕ್ಕು ೨ : ನಯನ . . . ದೃಗುಯಮಳ ಲೋಚನ ದಂಪತಿ ಇಂತಿನಿತುಂ ೨ಕ್ಕೆ ಹೆಸರು (ಪ್ರಭಾ. ೧೧-೦೩). [<ಸಂ. ದೃಶ್]

ದೃಗುಜಲ (ನಾ). = ದೃಗಂಬು : ಅಂದು ಭಂಗಿಸುವಲ್ಲಿ ದೃಗುಜಲಬಿಂದು ಮೊಂದುಂ ಹೊಱಿವಡದು . . . ಇದದೇನು ನಿಮಿತ್ತಂ ಸಲಿಲಂ ನಿನ್ನ ನಯನದಲಿ (ಬಸಪು. ೦೮-೫೩) : ಕೊರಳ ಸೆರೆ ಹಿಗ್ಗಿದವು ದೃಗುಜಲ ಉರವಣಿಸಿ ಕಡುನೊಂದನಕಟಾ ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ (ಕುವಾ೫ಉ. ೦೦-೦೧) : ಮಗನ ಮರಣದಲಿಂತು ಜೀವವ ಬಗೆವಳಕಟ ಸುಭದ್ರೆಯಿನುತವೆ ದೃಗುಜಲವ ಬೆರಳಿಂದ ಮಿಡಿದರು ಗೌರಿದೇವಿಯರು(ಕುವಾ೫ಪ್ರ.೬-೯೪); ದೃಗುಜಲಗಳೊಱತೆಗಳ ತೋಳ್ವೆಗೆಯವಿಗ ತೋತ್ಸವದ ಸಮರದ ನಗಮಹೀರುಹ ಮುಕ್ಕಹಸ್ತರ ನೋಡುತೈ ತರಲು (ತೊರಣಾ. ೬-೪೧-೪೩). [ದೃಗು + ಜಲ]

ದೃಗುದೀಧಿತಿ (ನಾ). ಕಣ್ಣಿನ ಕಾಂತಿ : ಶತದಳಾಯತಲೋಲ ದೃಗುದೀಧಿತಿಗಳಲ್ಲಿಯೆ ಸಿಕ್ಕೆ ಕಾಲಿಡಲಱಿಯದೋರಂತೆ ರತಿಪನೆಸವ ನಿಶಾತಪಾರ್ಗಣ ಹತಿಗೆ ಗುಱಿಯಾದೆನು (ಬಸಪು. ೪೦-೭). [ದೃಗು + ದೀಧಿತಿ]

ದೃಗುಪಥ (ನಾ). ದೃಷ್ಟಿಯ ಹರಹು ; ಕಣ್ಣಳತೆ ; ನೋಟ : ನೆಗಹಿ ಬೀಸುವ ಚೌರಿಗಳ ಸನ್ನೆಗೆ ಚತುರ್ಬಲವೆಲ್ಲ ದ್ರೋಣನ ದೃಗುಪಥಕೆ ತೋಱದರು ತಂತಮ್ಮಾಳು ಕದುರೆಗಳ (ಕುವಾ೫ಪ್ರ. ೯-೦೭).

[ದೃಗು + ಪಥ]

ದೃಗುಮಧ್ಯ (ನಾ). ಕಣ್ಣಿನ ಗುಡ್ಡೆ ; ಕಣ್ಣಾಲಿ : ನಗ ಮರುತಂ ಋಕ್ಷ ಮುಕ್ಕಾಫಲಂಗಳ್ ದೃಗುಮಧ್ಯಂ . . . ಶುಭ್ರಾದಿಗಳ್ ತಾರಶಬ್ದಂ (ನಾನಾರ. ೪೦). [ದೃಗು + ಮಧ್ಯ]

ದೃಗುಯುಗ (ನಾ). ಎರಡು ಕಣ್ಣುಗಳಂ : ಬಿಚ್ಚಿದ ಕೇಶಪಾಶದ ಮುಗಿದ ಸರಸಿಜದಂತೆ ದೃಗುಯುಗದೊರೆತ ಕಂಬನಿಯ ಒಗುವವಾಂಗದ . . . ಬಿಗಿದ ದಾಳಿಂಬವನು ಹೋಲುವ ಬಾಯ ಬಿಡುತಿರಲು (ಕಾತಿಣಾ. ೦೦-೫೪); ನಗೆವೊಗದ ವಿಂಚುಗಳ ದೃಗುಯುಗದ ಕಾಂತಿಗಳ . . . ವಿಗಡಯರ್ನೆರೆದು ಕಾಳೆಗಕೆ ಮುಂಕೊಳುತಿರ್ದರು (ಕೃಮಿಭಾ. ೦೬-೪).

[ದೃಗು + ಯುಗ]

ದೃಗುಯುಗಳ (ನಾ). = ದೃಗುಯುಗ : ದೃಗುಯುಗಳ ಜಲಬಿಂದುಗಳಿಗಾ ಜಲಬಿಂದು ಸಾರಿವಂತೆ ಒಗುವ ಖಂಡಿತಹಾರ ಮುಕ್ತಾಳಿಗಳು ಮೆಱಿದವು (ಕುವಾಸ. ೦೪-೭೦) ; ಯುಗದ ಪರಿಯವಸಾನದುದಯದಲಗಧರನು ಲೀಲೆಯಲಿ ಮನುವಿನ ದೃಗುಯುಗಳ ಗೋಚರಕೆ ಸುಳಿದನು ಮತ್ಸ್ಯರೂಪದಲಿ (ನಿಘಾಗ. ೨-೩-೨) : ಬಿಗಿದ ಪದ್ಮಾಸನ ನಾಸಿಕಾಗ್ರದ ದೃಗುಯುಗಳ ಸಂಚಲಿಸದ ಚಿತ್ತ ಬಗೆದೋಱುತಿಹ ರಾಮನಾಮವ ಜಾನಿಪ ಜಗದಱಿಯನ ಕಾವ ಕಂಡ (ವೀಹಚ. ೭-೩೪).

[ದೃಗು + ಯುಗಳ (= ಯುಗಲ)]

ದೃಗುವಿಹೀನ (ನಾ). ಕಣ್ಣುಗಳಿಲ್ಲದವನು ; ಕುರುಡ : ದೃಗುವಿಹೀನರ ಬಾಳಿಕೆಯ ಸುಡಲೆನುತ ತನ್ನೊಳು ಹಿರಿದು ಚಿಂತಿಸಿದ (ಕುವಾಭೀ. ೧-೫೪); ದೃಗುವಿಹೀನನು ಕತ್ತಲೆಯ ಮೊಗೆವೊಗೆದು ಕಡೆಗಾಣದಪೊಲರಿಸಂಯುಗಕೆ ಸರಣಿಯ ಕಾಣದುಸುರಿಡುತಿರ್ದನಸುರೇಂದ್ರ (ತೊರಣಾ. ೬-೪೦-೩).

[ದೃಗು + ವಿಹೀನ]

ದೃಗುಶಿಖಿ (ನಾ). ಕಣ್ಣಿನ ಬೆಂಕಿ ; ನೇತ್ರಾಗ್ನಿ : ದೃಗುಶಿಖಿ ಕಿಡಿಗಳೊಗೆ ಭುಗಿಭುಗಿಲು ಧಿಟಧಿಟಲೆನುತ ವಿಗೆ ನೆಗೆಯೆ (ಬಸಪು. ೦೭-೦೯) ; ಸಗರಸುತ ಚರಿತವನು ಕಪಿಲನ ದೃಗುಶಿಖಿವಿಯಲುರಿದುದನು ಬಳಿಕವರಿಗೆ ಭಗೀರಥ ನಿಳುಹಿದವರನದೀಕಥಾಂತರವ . . . ಮುನಿವ ವರ್ಣಿಸಿದ (ಕುವಾಅ. ೯-೦೩). [ದೃಗು + ಶಿಖಿ]

ದೃಗುಸನ್ನೆ (ನಾ). ಕಣ್ಣಿನಿಂದ ಮಾಡುವ ಸೂಚನೆ.–ಸಂಕೇತ; ಕಣ್ಣುಸನ್ನೆ : ಇಂಚರದವರಿಯರೊಡನಾಡುವ ನೇತ್ರಲಾಂಛನಗುಱಿ ಮೇಳವೆಣ್ಣು ಸಂಚಲದೃಗುಸನ್ನೆಯ ಮಾಡಿದುದದಿ ಮಿಂಚಡರಿತು ನಭಸ್ಥಲದಿ (ವೀಹಚ. ೪-೩೩). [ದೃಗು + ಸನ್ನೆ]

ದೃಗ್ಗಣಿತ (ನಾ). [ಜ್ಯೋತಿ] ಗ್ರಹ, ನಕ್ಷತ್ರ ಮುಂತಾದುವುಗಳನ್ನು ಪ್ರತ್ಯಕ್ಷವಾಗಿ ಪರಿಶೀಲಿಸಿ ತಯಾರಿಸಿದ ಲೆಕ್ಕ ; ಜ್ಯೋತಿರ್ಗಣಿತ. 'ದೃಕ್ಸಿದ್ಧಾಂತ' ಪರಾ. [ಸಂ.]

ದೃಗ್ಗೋಚರ (ನಾ). ಕಣ್ಣಿಗೆ ಕಾಣಿಸುವಂಥದಂ ; ದೃಷ್ಟಿಗೆ ಗೋಚರವಾಗುವಂಥದು : ಕಣಾದನ ವೈಶೇಷಿಕದರ್ಶನ ಅಣುಗಳ ಸಂಯೋಗ ವಿಯೋಗವಿಶೇಷವೇ ದೃಗ್ಗೋಚರವಾಗುತ್ತಿರುವ ಜಗತ್ತೆಂದಿತು (ಧಾರವ. ೧೫೨) ; ಸೂಕ್ಷ್ಮವಾಗಿ ಅವಲೋಕಿಸಿದಾಗ ನಮ್ಮೆದುರು ಮೂರೇ ಮೂರು ಜೀವನ ತತ್ತ್ವಗಳು ದೃಗ್ಗೋಚರವಾಗುತ್ತವೆ (ಧರ್ಮಸಾ. ೩). [ಸಂ.]

ದೃಗ್ದೀಪ್ತಿ (ನಾ). = ದೃಕ್ಪ್ರಭೆ : ಮುಗಿಲೊಡ್ಡಂ ಕುಡುಮಿಂಚನಬ್ದರವಮುಂ ಶಕ್ರಾಸ್ತ್ರಮುಂ ತಂದಲಂ ನಗಭದ್ಗೋವಕಳಾಪಮುಂ ಕಚಭರಂ ದೃಗ್ದೀಪ್ತಿ ಕಾಂಚೀರವಂ ಸೊಗಯಿಪ್ಪಾಭರಣಾಂಶು ದೇಹರುಚಿ ಕಿಂಬಾಯ್ ಪೋಲೆ (ಪುಪ್ಪಪು. ೦೪-೪೭). [ಸಂ.]

ದೃಗ್ಯುಗ (ನಾ). = ದೃಗುಯುಗ : ಹರಿಯಿತನೇ ದೃಗ್ಯುಗಕೆ ಗೋಚರನಾದನು (ಕುವಾಅ. ೦೪-೩೦). [ಸಂ.]

ದೃಗ್ಯುಗಳ (ನಾ). =ದೃಗುಯುಗ: ನಗುವಂತಿರ್ದಪ್ಪುದಿಂತೀ ವದನಮುರುಳಿ ಗೊಂಡಿರ್ಪುದೀ ಕೇಶವಿಗಾ ದೃಗ್ಯುಗಳಂ ಕನ್ನೆಯ್ದಿಲಂತಿರ್ದಪ್ಪುದು (ಈಡಂಉ. ೬೩) ; ಕೇಳಿಯವರೆ ಸಂವಾದವ ತಿದ್ದಲು ಕಾಳೆ ನಿರ್ವಾಣದಾಕೃತಿಯ ತಾಳೆ ಬಂದಿದಿರಾಗಿ ನಿಲಲಚ್ಯುತ ನೋಡಿ ಹೂಳಿದ ದೃಗ್ಯುಗಳವನು (ವೀಹಚ. ೩೮-೩೪). 'ದೃಗುಯುಗಳ' ಪರಾ. [ಸಂ. ದೃಗ್ಯುಗಲ]

ದೃಙ್ಮೂಲ (ನಾ). ಕಣ್ಣಿನ ಕೂನಿಕೆ ; ಕಣ್ಣಿನ ತುದಿ : ದೃಙ್ಮೂಲದೊಳೆ ಮುದಶ್ರುವೊಗೆಯೆ ಕರಯುಗ್ಮಂಗಳ ಮುಗಿದು (ಉಕ್ಷದೇ. ೩-೭೦). [ಸಂ.'

ದೃಢ (ಗು). ೧. ಭದ್ರವಾದ ; ಮಜಬೂತಾದ ; ಬಿಗಿಯಾದ ; ಗಾಢವಾದ. ೨. ಬಲವಾದ ಶಕ್ತಿಯುಳ್ಳ ; ಬಲಿಷ್ಠ. 'ದೃಢಾಯ್ಲ] ಪರಾ. ೩. ಸ್ಥಿರವಾದ ; ಅಚಲವಾದ: "ಸ್ಥಿರ, ಸ್ಥಾಯಿ, ದೃಢ, ನಿತ್ಯ" (Constant. ಪಾಠಿನಿ. ೨೦). ೪. ಕಠಿನವಾದ; ಗಟ್ಟಿಯಾದ. ೫. ನಿಶ್ಚಯವಾದ ; ದಿಟವಾದ ; ಸ್ಥಿರಪಡಿಸಿದ : ಹಿಂದಿರುಗಿ ಬರಬೇಕಾಗಿದ್ದ ಹೊತ್ತು ಬಹಳ ಮೀರಿಹೋದುದರಿಂದ ಅವರ ಅನುಮಾನವು ದೃಢವಿದ್ಯಾಂತವಾಯಿತು (ಕಪಾಳಿಂ. ೬). ೬. ಉತ್ಕಟವಾದ; ತೀವ್ರವಾದ. ೭. ಅಧಿಕವಾದ ; ಹೆಚ್ಚಾದ. (ನಾ). ೮. ಗಟ್ಟಿಯಾದುದು ; ಬಲವಾದುದು ; ಬಿಗಿಯಾದುದು : ಗೋಪಿ ದಾವಿನ್ನಡುವಂ ತೊಡರ್ಚಿ ದೃಢವಾಗಲುಲೂಖಲದಲ್ಲಿ ಕಟ್ಟಿ (ಜಗವಿ. ೩-೩೬). ೯. ಸ್ಥಿರತೆ ; ಅಚಲವಾಗಿರುವಿಕೆ : ಎನಿಸು ಕಾಲ ನಿಮ್ಮ ಪೂಜಿಸಿ ವಿವೆನಯ್ಯಾ ಮನದಲ್ಲಿ ದೃಢವಿಲ್ಲದನ್ನೆಕ್ಕ (ಬಸವ. ೯೪) ; ಕಡೆಗೆ ಮಾಡದ ಭಕ್ತಿ ದೃಢವಿಲ್ಲದಾಳುತನ ಮೃಡನೊಲಿಯ ಹೇಳಿದರೆ ಎಂತೊಲಿವನಯ್ಯ (ಮಹಾದೇ. ಬ. ೪೫-೧೦೫) ; ಅಮೃತದಲಿ ಬಟುಹಿನಲಿ . . . ದೃಢದಲ್ಲಿ ಮೇಣ್ ವೃತ್ತನಾಮಮೆನಿಕು (ಪುಂಗರಾ. ೧೫೪-೬೫); ಕರ್ಣನ ದೃಢವ ಕಂಡನು ಮನದೊಳುತ್ಸಾಹಿಸಿದನು (ಕುವಾಉ. ೦೦-೨೦). ೧೦. ದಟ್ಟವಾಗಿರುವಿಕೆ ; ಸಾಂದ್ರತೆ : "ನಿಬಿಡಂ,

ನಿಬಿರೀಸಂ, ದೃಢಂ, ಗಾಢಂ–ಈ ೪ ತೆಱಪಿಲ್ಲದುದು" (ಹಲಾಯು. ೦೧೯-೩೩). ೧೧. ನಿರ್ಧಾರ; ನಿಶ್ಚಯ: ತಾ ನುಡಿದ ನುಡಿಯನು ಸಲಿಸುವುದು ನೆಱ[3] ದೃಢವೆ ದೃಢವೆಂದಿತ್ತನಱಿಯದೆ ಸತಿಗೆ ನಂಬುಗೆಯ (ತೊರರಾ. ೨-೨-೬); ಪಾಂಡಿತ್ಯವೆನುವುದು ಅನುಮಾನಕಿನ್ನೊಂದು ಹೆಸರೆಂದು ದೃಢವಾಯಿತೆನಗೆ (ಇಂಜಾಪ. ೨೩೭-೭೨). ೧೨. ಕಠಿನತೆ; ಕಾಠಿನ್ಯ; "ಖರಃ, ಕಠೋರಃ, ಕಠಿನಃ . . . ದೃಢಃ–ಈ ೬ ಬೆಟ್ಟದು" (ಹಲಾಯು. ೫೭-೦೮೭). ೧೩. ಸತ್ಯವಾದುದು; ದಿಟವಾದುದು: ನಡೆಯೊಳೆಚ್ಚ ಱವ ಬಿಡದಿರು ಪರವಶದಿ ದೃಢವನಗಲದಿರು (ಸರ್ವಜ್ಞ. ೩೦೦). [ಸಂ.]

ದೃಢಕಾಯ (ನಾ). ೧. ಬಲಿಷ್ಠವಾದದೇಹ; ಗಟ್ಟಿಮುಟ್ಟಾದ ಶರೀರ: ಆದರೆ ಎಲ್ಲಕ್ಕಿಂತ ಮಿಗಿಲಾಗಿ ಮುಕ್ತತಾಪತ್ರಯದ ಅರೋಗದೃಢಕಾಯ ಸಂಪನ್ನತೆಯ ಆತ್ಮಸಂತೋಷ (ಪುನರು. ೨೨೦). ೨. ಗಟ್ಟಿಮುಟ್ಟಾದ ದೇಹವುಳ್ಳವನು; ಬಲಿಷ್ಠ: ದೃಢಕಾಯರಾದ ಯುವಕರು ಶಾಲೆಗಳಿಂದ ಹೊರಬರಬೇಕು (ಶಿಕ್ಷದ. ೩೮೩); ಬಲಿಷ್ಠನೂ ಅರೋಗದೃಢಕಾಯನೂ ಎಂಬುದು ಆತನ ಚಲನೆಯ ವೈಖರಿಯಿಂದ ತಿಳಿದುಬರುತ್ತಿತ್ತು (ಕಾನೂರು. ೧). [ದೃಢ + ಕಾಯ]

ದೃಢಗಲಿ (ನಾ). ಅತಿಶಯವಾದ ಪರಾಕ್ರಮವುಳ್ಳವನು; ಮಹಾ ಪರಾಕ್ರಮಿ: ದೃಢಗಲಿ ಖಳನುರಸ್ತಲದೆ ಕಠಾರಿಯ ಬುಡಮುಟ್ಟ ಚಾಚಿ ಬೊಬ್ಬಿಱಿದ (ಮೋಹತ. ೧೨-೬೭); ದೃಢಗಲಿಯಹುದೆಂದು ಮಗನ ಮಸ್ತಕವ ಮೆಯ್ದಡಹಿ ತಕ್ಕೆಯೊಳಿಟ್ಟುಕೊಂಡು (ಮೋಹತ. ೧೩-೫೦).

[ದೃಢ + ಕಲಿ$_2$]

ದೃಢಗುಣ (ನಾ). ಅಚಲವಾದ ಗುಣ; ಸ್ಥಿರವಾದ ಗುಣ: ಅತಿ ಸೂಕ್ಷ್ಮ ತತ್ತ್ವಮಂ ಕಾಣ್ಬತನುವನೊಟ್ಟಯಿಸಿ ಕಟ್ಟುವೀ ದರ್ಶನಶುದ್ಧತೆಗಂ ದೃಢಗುಣಸುಸಮರ್ಥತೆಗಂ ಸಲೆ ದೇವಚಂದ್ರಯತಿಪತಿ ನೋಂತಂ (ಚಂದ್ರಪ್ರ. ೧-೩೩). [ದೃಢ + ಗುಣ]

ದೃಢಗೊಳ್ಳು (ಕ್ರಿ). ಸ್ಥಿರವಾಗು; ಅಚಲವಾಗು; ಭದ್ರವಾಗು

[ದೃಢ + ಕೊಳ್ಳು$_1$ (<ಕೊಳ್$_1$)]

ದೃಢಚರ್ಯ (ನಾ). ೧. ಬಿಡದೆ ಆಚರಿಸುವುದು; ಸ್ಥಿರವಾಗಿ ಆಚರಿಸುವುದು. ೨. [ಜೈನ] ಜೈನಮತದ ಧರ್ಮಗ್ರಂಥಗಳನ್ನು ವ್ಯಾಸಂಗ ಮಾಡಿ ಜ್ಞಾನಾಭಿವೃದ್ಧಿಗೆ ಸಹಾಯಕವಾದ ಇತರ ಗ್ರಂಥಗಳನ್ನು ವ್ಯಾಸಂಗ ಮಾಡುವುದು: ಮತ್ತಮವತಾರವೃತ್ತಿಲೋಭಗ್ರಹಣಪೂಜಾ ರಾಧ್ಯ ಪುಣ್ಯಯಜ್ಞ ದೃಢಚರ್ಯೋಪಯೋಗತ್ವಮಂಬೆಂಟುಂಬೆರಸು (ಆದಿಪು. ೦೫-೧೬ ವ); ದೃಢಚರ್ಯಮುಂ ಉಪಯೋಗಿತ್ವಮೆಂಬೆಂಟು ಗರ್ಭಾನ್ವಿತಕ್ರಿಯೆಯೊಳು (ಚಾವುಂಪು. ೨೩೦); ಅಂಥಾ ಪುಣ್ಯಯಜ್ಞವನ್ನುಳ್ಳವನು ಜೈನಾಗಮಶಾಸ್ತ್ರಂಗಳಂ ಓದಿ ಪೂರೈಸಿ ಅನ್ಯಮತ ಗ್ರಂಥಾರ್ಥಗಳಂ ಸಹ ತಿಳಿದುಕೊಳ್ಳುವುದೇ ದೃಢಚರ್ಯವೆಂಬ ೭ನೇ ಕರ್ಮವು (ಪುರುಷ. ೨೦೭). 'ದೀಕ್ಷಾನ್ವಯಕ್ರಿಯೆ' ಪರಾ.

[ದೃಢ + ಚರ್ಯ]

ದೃಢಚಿತ್ತ (ನಾ). ೧. ಚಂಚಲವಾಗದ ಮನಸ್ಸು; ಗಟ್ಟಿಮನಸ್ಸು; ಅಚಲವಾದ ಚಿತ್ತ. 'ದೃಢಚಿತ್ತವಿಡಿ' ಪರಾ. ೨. ಗಟ್ಟಿಮನಸ್ಸುಳ್ಳವನು; ಚಂಚಲನಲ್ಲದವನು: "ಶಂಸಿತನಾ ಸುನಿಶ್ಚಿತಂ ದೃಢಚಿತ್ತನೆಂದೆ ನಿಕ್ಕುಂ" (ಮುಂಗರಾ. ೭೫-೫); ದೃಢಚಿತ್ತಂ ಗುಣನಿಳಯಂ ಕಡುಗಲಿ . . . ಭವ್ಯವನಜವನಕಳಹಂಸಂ (ಧರ್ಮಾಮೃ. ೭-೦೩). [ದೃಢ + ಚಿತ್ತ]

ದೃಢಚಿತ್ತವಿಡಿ (ಕ್ರಿ). ದೃಢಮನಸ್ಸಿನಿಂದ ಕೂಡಿರು; ಸ್ಥಿರವಾಗಿರು: ದೃಢಚಿತ್ತವಿಡಿದು ಭೋಗಿಭೂಷಣ ಕೋಪವ ತಾಳಿ ಕಿಡಿಕಿಡಿಯೋಗಿ ಕೆಂಗಿಡಿಗಣ್ಣ ತೆಱೆದ (ಮೋಹತ. ೭-೩೮). [ದೃಢಚಿತ್ತ + ಪಿಡಿ$_1$]

ದೃಢತೆ (ನಾ). ಸ್ಥಿರತೆ; ನಿಶ್ಚಲತೆ. [ಸಂ. ದೃಢತಾ]

ದೃಢತ್ವ (ನಾ). ಚಂಚಲವಾಗದಿರುವಿಕೆ; ಸ್ಥಿರವಾಗಿರುವಿಕೆ: "ಗಲ್ಬ-ಅಧಾರ್ಪ್ಪ್ಯೇ, ದೃಢತ್ವದೊಳ್" (ಕಾಶಕ್ಯ. ೧೦೬). [ಸಂ.]

ದೃಢನಿರ್ಧಾರ (ನಾ). ಅಚಲವಾದ ನಿರ್ಣಯ; ಸ್ಥಿರವಾದ ನಿರ್ಧಾರ: ಆ ಬಗ್ಗೆ ಅವನ ಮನಸ್ಸಿನಲ್ಲಿ ದೃಢನಿರ್ಧಾರ ಬಲಿತಿರಲಿಲ್ಲ (ಪುನರು. ೪೩೬).

[ದೃಢ + ನಿರ್ಧಾರ]

ದೃಢನಿಶ್ಚಯ (ನಾ). = ದೃಢನಿರ್ಧಾರ: ಸುಲಭವಾಗಿ ಸಡಿಲದ ದೃಢ ನಿಶ್ಚಯ ಅವನ ಹುಟ್ಟುಗುಣವಾಗಿತ್ತು (ಪುನರು. ೩೩೨).

[ದೃಢ + ನಿಶ್ಚಯ]

ದೃಢಪಡಿಸು (ಕ್ರಿ). ನಿಶ್ಚಿತಗೊಳಿಸು; ಖಚಿತಪಡಿಸು; ಬಲಪಡಿಸು: ಅನಂತಕವಿಯ ಗ್ರಂಥದ ಮೇರೆಗೆ . . . ಕೂಷ್ಮಾಂಡಿಯೇ ಮುಖ್ಯ ಪ್ರೇರಕಳೆಂಬುದನ್ನು ದೃಢಪಡಿಸುತ್ತದೆ (ಸಮಾಲೋ. ೨೬೦).

[ದೃಢಪಡು + – ಇಸು$_3$]

ದೃಢಪಡು (ಕ್ರಿ). ನಿಶ್ಚಿತವಾಗು; ಸ್ಥಿರವಾಗು. 'ದೃಢಪಡಿಸು' ಪರಾ.

[ದೃಢ + ಪಡು$_1$]

ದೃಢಪತಿವ್ರತೆ (ನಾ). ಗಂಡನನ್ನು ಕುರಿತ ವಿಶ್ವಾಸ ಮತ್ತು ಭಕ್ತಿಗಳಲ್ಲಿ ಸ್ಥಿರವಾದ ನಡವಳಿಕೆಯುಳ್ಳವಳು; ಮಹಾಪತಿವ್ರತೆ: ಇಂದು ಜಯವಧು ದೃಢಪತಿವ್ರತೆಯೆಂದು ಬಗೆದೈ ಭೂಪ ಹುಸಿ ಹೋಗೆಂದು ಗುರುಸುತ ನಗುತ ಹೋದನು ತನ್ನ ಮೋಹರಕೆ (ಕುಮಾಕ. ೨೪-೨೨).

[ದೃಢ + ಪತಿವ್ರತೆ]

ದೃಢಪ್ರತ್ಯಯ (ನಾ). ಸ್ಥಿರವಾದ ವಿಶ್ವಾಸ,–ನಂಬುಗೆ; ದೃಢನಿಶ್ಚಯ.

[ದೃಢ + ಪ್ರತ್ಯಯ]

ದೃಢಬುದ್ಧಿ (ನಾ). ಅಚಲವಾದ ಬುದ್ಧಿ; ಗಟ್ಟಿಮನಸ್ಸು: ದೃಢಬುದ್ಧಿಯಿಲ್ಲದವ ಕಡುಮೂರ್ಖ (ಗಾದೆ). [ದೃಢ + ಬುದ್ಧಿ]

ದೃಢಬ್ರತ (ನಾ). = ದೃಢವ್ರತ: (೬). [ದೃಢ + ಬ್ರತ]

ದೃಢಬ್ರತೆ (ನಾ). ಸ್ಥಿರವಾದ ಪ್ರತಿಜ್ಞೆಯನ್ನುಳ್ಳವಳು; ಸ್ಥಿರಸಂಕಲ್ಪದಿಂದ ಕೂಡಿರುವವಳು: ಈಯಯ್ದುಮಣುಬ್ರತಮಂ ಕೈಕೊಂಡು ದೃಢಬ್ರತೆಯಾಗು ಸುವ್ರತೆಯಾಗು ಮಗಳೆ (ವಡ್ಡಾರಾ. ೨೨-೨೦).

[<ಸಂ. ದೃಢವ್ರತಾ]

ದೃಢಭಕ್ತ (ನಾ). ನಿಶ್ಚಲವಾದ ಭಕ್ತಿಯನ್ನು ಉಳ್ಳವನು: ನಡೆದದ್ದೆಲ್ಲವು ಲಕ್ಷ ಪ್ರದಕ್ಷಿಣೆ ನುಡಿದದ್ದೆಲ್ಲವು ಗಾಯತ್ರಿಮಂತ್ರಗಳು . . . ದೃಢ ಭಕ್ತರೇನು ಮಾಡಿದರದೇ ಮರಿಯಾದೆ (ಪುರಂದ. ೩-೦೦೬-೨).

[ದೃಢ + ಭಕ್ತ]

ದೃಢಭಕ್ತಿ (ನಾ). ನಿಶ್ಚಲವಾದ ಭಕ್ತಿ: ದೃಢಭಕ್ತಿ ನಿನ್ನಲಿ ಬೇಡಿ ನಾನಡಿ ಗೆಱಗುವೆನಯ್ಯ ಅನುದಿನ ಪಾಡಿ (ಪುರಂದ. ೦-೯-೨). [ದೃಢ + ಭಕ್ತಿ]

ದೃಢಮನಸ್ಸು (ನಾ). = ದೃಢಬುದ್ಧಿ: ದೃಢಮನಸ್ಸು ಮಾಡಿಕೊಂಡು ಕೆಲವು ಕಾಲ ಮನಃಕ್ಲೇಶವನ್ನು ಸಹಿಸಿಕೊಳ್ಳಬೇಕು (ಸಾವಿತ್ರಿ. ೩).

[ದೃಢ + ಮನಸ್ಸು]

ದೃಢಮುಷ್ಟಿ (ನಾ). ೧. ಬಲವಾದ ಹಿಡಿ; ಶಕ್ತಿಯುತವಾದ ಮುಷ್ಟಿ: ಒತ್ತಿ ದೃಢಮುಷ್ಟಿಯಲಿ ಶಿವಿದರು ಸತ್ವವುಳ್ಳವರೆರಡು ಬದಿಯನು (ಕಾಶಿರಾ. ೨೪-೬). ೨. ಅಚಲವಾದ ನಿರ್ಧಾರ; ಹಿಡಿದ ಪಟ್ಟು ಬಿಡದಿರುವಿಕೆ: ದೃಢಮುಷ್ಟಿಯರಸನ್, ಆರ್ಗಮೊಳಗಲ್ಲದೋನ್ ಸ್ವರ್ಗದಲ್ಲಾಳ್ದಪನ್ (ಲಕ್ಷ್ಮಪ್ರ. ೦೮-೩೭೮). ೩. ಕತ್ತಿ; ಖಡ್ಗ. ೪. ಜಿಪುಣ; ಲೋಭಿ; ಜೀನ. 'ಕಪಿಮುಷ್ಟಿ' ಪರಾ. [ದೃಢ + ಮುಷ್ಟಿ$_2$]

ದೃಢಮೂಲ (ನಾ). ಬಲವಾಗಿ ಬೇರೂರಿದುದು; ಸ್ಥಿರವಾಗಿರುವುದು: ಭವಾನೀಚರಣನ ಮನದಲ್ಲಿ ಒಂದು ವಿಧದ ಭರವಸೆ ದೃಢಮೂಲವಾಗಿ ಹೋಯಿತು (ಇಪ್ಪತ್ತ. ೩೫೮). [ದೃಢ + ಮೂಲ]

ದೃಢಮೈತ್ರಿ (ನಾ). ಗಾಢವಾದ ಸ್ನೇಹ: "ಗಾಢಸ್ನೇಹ, ದೃಢಮೈತ್ರಿ" (Fast Friendship. ಪತ್ರಿನಿ. ೩೭). [ದೃಢ + ಮೈತ್ರಿ]

ದೃಢವಾಕ್ಯ (ನಾ). ೧. ಅಚಲವಾದ ಮಾತು,-ನುಡಿ; ಗಟ್ಟಿಮಾತು: ಚಂಡನೊಳುದ್ದಂಡ ದಂಡಕ್ರಮಂ ಯೋಗ್ಯಮೆಂದು ದೃಢವಾಕ್ಯಮಂ ನುಡಿದು (ಹಮ್ಮೀರ. ೩-೨೨ ಪ). ೨. ನಿರ್ಧಾರವಾದ ಮಾತುಳ್ಳವನು. [ದೃಢ + ವಾಕ್ಯ]

ದೃಢವಾಣಿ (ನಾ). ಸ್ಪಷ್ಟವಾದ ಧ್ವನಿ: ತ್ರಿಜಟೆ ಧೈರ್ಯಮಂ ಕರೆವ ದೃಢವಾಣಿಯಿಂ . . . ಒರೆದಳಿಂತು (ಶ್ರೀರಾಮಾ. ೪೯೬-೨೭೫). [ದೃಢ + ವಾಣಿ$_1$]

ದೃಢವಿಡಿ (ಕ್ರಿ). ಬಲವಾದ ಆಧಾರವೆಂದು ನಂಬು; ಗಟ್ಟಿ ಮನಸ್ಸು ಮಾಡು: ಪುಡುಕುತ್ತ ಪೋಗು ದೊರಕುವನೆನಲು ನಂಬಿ ನಾಂ ದೃಢವಿಡಿದುಮಾರಣ್ಯದೊಳು ತೊಳಲಿ ಬಳಲಿದೆನು (ನವಮೋ. ೯-೩೭). [ದೃಢ + ಪಿಡಿ$_1$]

ದೃಢವ್ರತ (ನಾ). ೧. ಕಟ್ಟುನಿಟ್ಟಾಗಿ ಧಾರ್ಮಿಕ ವಿಧಿಗಳನ್ನು ಪಾಲಿಸುವಿಕೆ; ನಿಯಮಪಾಲನೆ: ನಾಭಿನಂದನನಂದನನವರ ದೃಢವ್ರತಕ್ಕೆ ಮೆಚ್ಚಿ . . . ಪವಿತ್ರಗಾತ್ರರ್ ಮಾಡಿ (ಆದಿಪು. ೧೫-೦೦ ಪ); ಉಪ್ಪು ಬಿಟ್ಟು ಸಪ್ಪೆಯನುಂಡರೆ ಅದು ಮನದ ಹೇಸಿಕೆಯಲ್ಲದೆ ದೃಢವ್ರತವಲ್ಲ (ಮಡಿಮಾ. ೧೮-೨೩). ೨. ದೃಢವಾದ ಪ್ರತಿಜ್ಞೆಯನ್ನು ಹೊಂದಿರುವವನು; ಸ್ಥಿರಸಂಕಲ್ಪವುಳ್ಳವನು: "ಸಂಶಿತಃ, ಸುನಿಶ್ಚಿತಃ – ಈ ೨ ದೃಢವ್ರತಂ" (ಹಲಾಯು. ೬೭-೨೪೮); ಈ ಪರಿ ಗದಗದಿಸಬಹುದೇ ದೃಢವ್ರತ ಸದಮಳದ ಸತ್ಪುರುಷರೆಂದಳು ಕೌಸಲಾದೇವಿ (ತೊರರಾ. ೨-೫-೭); ಆ ಬಾಣವು . . . ನನ್ನನ್ನು ಪುನಃ ಬಿಡು ಎಂದು ಕೇಳಿಕೊಂಡಿತು . . . ಆದರೂ ದೃಢವ್ರತನಾದ ಕರ್ಣನು ಇದನ್ನು ತಿರಸ್ಕರಿಸಿದನು (ನೀತಿಚಿಂ. XIV, ೨೮). [ದೃಢ + ವ್ರತ]

ದೃಢಸಂಕಲ್ಪ (ನಾ). ಮಾಡಿದ ನಿಶ್ಚಯವನ್ನು ವ್ಯತ್ಯಾಸಮಾಡದಿರುವಿಕೆ; ಸ್ಥಿರವಾದ ಸಂಕಲ್ಪ: ಬಂಧುಭಾವನೆಯನ್ನು ಎಲ್ಲರಲ್ಲೂ ವೃದ್ಧಿಗೊಳಿಸುವುದಕ್ಕಾಗಿಯೂ ದೃಢಸಂಕಲ್ಪಮಾಡಿದವರಾಗಿ . . . ಆತ್ಮಾರ್ಪಿತ ಮಾಡಿಕೊಂಡಿದ್ದೇವೆ (ಭಾಧಾನ. ೦); ಅವನು ನೀತಿಯ ದೃಢಸಂಕಲ್ಪವುಳ್ಳವನಾಗಿ ಶಕ್ತನಾಗಿ ಸುಖಿಯಾಗಿ ಹಿಂದಿರುಗುತ್ತಿದ್ದನು (ಪುಲಿನಾ. ೧೨೮). [ದೃಢ + ಸಂಕಲ್ಪ]

ದೃಢಸಂಧಿ (ನಾ). (ಬಿಡಿಸಲಾರದಂತೆ) ಗಟ್ಟಿಯಾಗಿ ಸೇರಿಕೊಂಡಿರುವುದು: "ದೃಢಸಂಧಿಃ, ಸಂಹತಃ – ದೃಢವಾದ ಕೀಲು ಉಳ್ಳದ್ದು . . . ಗಟ್ಟಿಯಾಗಿ ಬೆಸಿಗೆಗೊಂಡಿರುವುದು" (ಸಿದ್ಧಾಂತಿ. ೩೪೩). [ದೃಢ + ಸಂಧಿ]

ದೃಢಾಂಗ (ನಾ). ಬಲವಾದ ದೇಹವುಳ್ಳವನು; ಬಲಿಷ್ಠ: ದೃಢಾಂಗರಾದ ಬೋಯಿಗಳನ್ನು . . . ಬೇಗ ಬರುವಂತೆ ಹೇಳಿದ್ದರು (ಶಾಂತಲಾ. ೩೭೨). [ದೃಢ + ಅಂಗ$_2$]

ದೃಢಾನುರಾಗ (ನಾ). ೧. ಸ್ಥಿರವಾದ ಪ್ರೀತಿ. ೨. ಸ್ಥಿರವಾದ ಪ್ರೀತಿಯುಳ್ಳವನು: "ನೀಲೀರಾಗಂ ದೃಢಾನುರಾಗಂ" (ವಸ್ತುಕೋ. ೬೪-೭೬). [ದೃಢ + ಅನುರಾಗ]

ದೃಢಾಯ (ನಾ). ಸ್ಥಿರವಾದ ರೀತಿ,-ಕ್ರಮ,-ಸ್ಥಿತಿ: ದ್ವಾಪರದಲಿ ದೃಢಾಯದಲಿ ತಾ ಧರ್ಮವೆರಡಡಿ ಬೀಯವಾದುದು ನಿಂದುದೆನಿಸಿತು ನಿನ್ನ ದೆಸೆಯಿಂದ (ಕುಮ್ಯಾಅ. ೧೪-೩೭). [ದೃಢ + ಆಯ$_1$]

ದೃಢಾಯತಿಕೆ (ನಾ). ಅಚಲವಾದ ನಿರ್ಧಾರ; ಸ್ಥಿರವಾದ ನಿಶ್ಚಯ: ಕಡುಗಲಿಗಳೇಱಾಟದಲಿ ಮಿಗೆ ಝುಡಿ ಪವಾಡ ದೃಢಾಯತಿಕೆಗಿದು ಪಡಿಯನಳರೇವಂತರೆಂದುದು ರಾವುತಿಕೆಗಳಲಿ (ಕುಮ್ಯಾಅ. ೭-೨). [ದೃಢ + ಆಯತಿಕೆ (<ಆಯತಿಕ್ಕೆ)]

ದೃಢಾಯ್ಲ (ನಾ). ಅಚಲಶಕ್ತಿಯುಳ್ಳವನು; ದೃಢತೆಯುಳ್ಳವನು; ಗಟ್ಟಿಗ: ದೃಢಾಯ್ಲರಪ್ಪಳಿಸಿದರು ಪದಘಟ್ಟಣೆಗೆ ನೆಲ ಕುಸಿಯೆ (ಕುಮ್ಯಾಸ. ೨-೦೦೮). [ದೃಢ + – ಆಯ್ಲ (< – ಆಯಿಲ$_2$)]

ದೃಢೀಕರಣ (ನಾ). ನಿಶ್ಚಿತಪಡಿಸುವಿಕೆ; ಖಾತ್ರಿಮಾಡುವುದು: ಉಪಾಹಾರ ರಕ್ಕಸ ದೃಢೀಕರಣ ವರ್ಧನಗಳೊಳ್ ಬಲಿಯು (ಶಬ್ದಮಂ. ೦೦೯). [ಸಂ.]

ದೃಢೀಕರಿಸು (ಕ್ರಿ). = ದೃಢಪಡಿಸು: ಭಾರತ, ರಾಮಾಯಣವೆಂಬೆರಡೇ ವ್ಯಾಸ ವಾಲ್ಮೀಕಿಗಳಿಂ ಪ್ರಣೀತಮಾದ ಇತಿಹಾಸಂಗಳವಱಲ್ಲಿ . . . ವೈದಿಕ ಧರ್ಮಾದಿಗಳಂ ದೃಢೀಕರಿಸುತ್ತಿರ್ಕುಂ (ವಿವೇಕ. ೮); ಈ ಅನುಮಾನವನ್ನು ದೃಢೀಕರಿಸುವ ವಿಷಯಗಳಿವೆಯೇ ಎಂದು ನೇರ ಪ್ರಶ್ನೆಗಳನ್ನು ಕೇಳಿದೆ (ಮನೋನಂ. ೯೩). [ದೃಢೀಕರಣ + – ಇಸು$_3$]

ದೃಢೀಕೃತ (ಗು). ಬಲಪಡಿಸಿದ; ಗಟ್ಟಿಮಾಡಿದ; ಸ್ಥಿರಗೊಳಿಸಿದ: ದೂರೀಕೃತಾರಿಷಡ್ವರ್ಗನುಂ ಸಮೀಕೃತತ್ರಿವರ್ಗನುಂ ದೃಢೀಕೃತತಳವರ್ಗನುಂ ನಮೀಕೃತಸಾಮಂತವರ್ಗನುಮಾಗಿ (ಚಂದ್ರಪು. ೪-೨೮ ಪ). [ಸಂ.]

ದೃತಿ (ನಾ). ೧. ದ್ರವಪದಾರ್ಥಗಳನ್ನು ಇಡುವ ತೊಗಲಿನ ಚೀಲ. ೨. ಗಾಳಿಯನ್ನು ತುಂಬುವ ಚರ್ಮದ ಚೀಲ; ತಿದಿ: "ದೃತಿ ಚರ್ಮ ಸೇವನಮೆನಲ್ಕೆ ತಿದಿಯಕ್ಕು" (ಪುಂಗರಾ. ೧೩೩ ೩೦). ೩. ಮೀನು. ೪. ಗಂಗೆದೊಗಲು. ೫. ಚರ್ಮ. [ಸಂ.]

ದೃಪ್ತ (ಗು). ೧. ಸೊಕ್ಕಿನ; ಗರ್ವದ: ಅನಂತವೀರ್ಯನ ದೃಪ್ತೋದಾತ್ತ ಕರ್ಣಕಟುಕವಚೋನಿಚಯನಿಶಿತಾಸ್ತ್ರಂಗಳ್ ನೆಱನನುಚೆ (ಶಾಂತಿಪು. ೪-೫೨ ಪ); ದೃಪ್ತಮನಸಿಜನನಜನಿಪದೀಪ್ತಮಹಾಘೋರತಪ್ತತಪಮೆಸೆಯೆ ಶಮವ್ಯಾಪ್ತಂ ಪ್ರತಿಮಾಯೋಗದೆ ಸಪ್ತದಿನಂಬರೆಗಮಿರೆ ಮುನೀಶ್ವರತಿಳಕಂ (ಪಾರ್ಶ್ವಪು. ೧೫-೪೮); ಸತ್ತುದು ನಾಯಿ ಕೇಡಿಗನು ಗೋದೆಯ ತಡಿಯೊಳು ಹೊದೆಯೊಳಗಿರುವೊಂದು ದೃಪ್ತಕೇಸರಿ ಕೊಂದುದದನು (ಗಾಥಾಸ. ೨-೭೫). (ನಾ). ೨. ಹೆಮ್ಮೆ ಪಡುವವನು; ಗರ್ವಿಷ್ಠ: ದ್ವಿಷನ್ನೃಪರನೇಕಾಕ್ಷೌಹಿಣೀಸೇನೆಯಂ ನೆಱೆವಂ ದೋರ್ಬಲ ದೃಪ್ತನಪ್ರತಿಹತಂ ರಾಮಾನುಜಂ ಲಕ್ಷ್ಮಣಂ (ಪಂರಾಮಾ. ೯-೦೮೩). ೩. [ವಿಶಿಷ್ಟಾ] ಕರ್ಮಫಲವನ್ನು ಅನುಭವಿಸಲು ಸಿದ್ಧನಾಗಿರುವವನು: ಪರಮೇಕಾಂತಿಗಳು ದೃಪ್ತರೆಂದೂ ಆರ್ತರೆಂದೂ ಎರಡು ವಿಧ. ಪ್ರಾರಬ್ಧ ಕರ್ಮವನ್ನು ಅವಶ್ಯಕವಾಗಿ ಅನುಭವಿಸಬೇಕೆಂದು ತಿಳಿದು ದೇಹಾವಸಾನವನ್ನು ನಿರೀಕ್ಷಿಸುವವರು ದೃಪ್ತರು. ಸಂಸಾರಸ್ಥಿತಿಯು ಬಹಳ ದುಸ್ಸಹವೆಂದು ತಿಳಿದು ಉತ್ತರಕ್ಷಣದಲ್ಲಿಯೇ ಮೋಕ್ಷವಾಗಲಿ ಎಂದು ಅಪೇಕ್ಷಿಸುವವರು ಆರ್ತರು (ಭಾತತ್ತ್ವ. ೭೭೦). ೪. [ನಾಟ್ಯ] ಮೂವತ್ತಾರು ಬಗೆಯ ದೃಷ್ಟಿಚಲನಗಳಲ್ಲಿ ಒಂದು; ೫ ಉಪಾಂಗಗಳಲ್ಲಿ ಕಣ್ಣಿನ ೩೬ ದೃಷ್ಟಿಚಲನೆಗಳು ಮುಖ್ಯವಾದುವುಗಳು. ಮೊದಲನೆಯ ೮ ಚಲನೆಗಳು ರಸಯುಕ್ತ ನೋಟಗಳು: ೧. ಕಾಂತ, ೨. ಭಯಾನಕ, ೩. ಹಾಸ್ಯ, ೪. ಕರುಣ, ೫. ಅದ್ಭುತ, ೬. ರೌದ್ರ, ೭. ವೀರ, ೮. ಬೀಭತ್ಸ. ಮತ್ತೆ ಬರುವ ೮ ಚಲನೆಗಳು ಸ್ಥಾಯಿ ಭಾವ ನೋಟಗಳು: ೧. ಸ್ನಿಗ್ಧ, ೨. ಹೃಷ್ಟ, ೩. ದೀನ, ೪. ಕ್ರುದ್ಧ, ೫. ದೃಪ್ತ, ೬. ಭಯಾನ್ವಿತ, ೭. ಜುಗುಪ್ಸಿತ, ೮. ವಿಸ್ಮಿತ. ಉಳಿದ ೨೦ ನೋಟಗಳು ವ್ಯಭಿಚಾರಿ ಭಾವಯುಕ್ತವಾದುವುಗಳು: ೧. ಶೂನ್ಯ, ೨. ಮಲಿನ, ೩. ಶ್ರಾಂತ, ೪. ಲಜ್ಜಿತ, ೫. ಗ್ಲಾನ, ೬. ಶಂಕಿತ, ೭. ವಿಷಣ್ಣ, ೮. ಮುಕುಳ, ೯. ಕುಂಚಿತ, ೧೦. ಅಭಿತಪ್ತ, ೧೧. ಜಿಹ್ಮೆ, ೧೨. ಲಲಿತ, ೧೩. ವಿತರ್ಕಿತ, ೧೪. ಅರ್ಧಮುಕುಳ, ೧೫. ವಿಭ್ರಾಂತ, ೧೬. ವಿಪ್ಲುತ, ೧೭. ಆಕೇಕರ. ೧೮. ವಿಕೋಶ,

೧೯. ತ್ರಸ್ತ, ೨೦. ಮದಿರ. ಕಣ್ಣು ಆಲಿಗಳ ೮ ಚಲನೆಗಳಿವೆ. ಅವು ಯಾವುವೆಂದರೆ–೧. ಸಮ, ೨. ಸಾಚಿ, ೩. ಅನುವೃತ್ತ, ೪. ಆಲೋಕಿತ, ೫. ವಿಲೋಕಿತ, ೬. ಪ್ರವಿಲೋಕಿತ, ೭. ಉಲ್ಲೋಕಿತ, ೮. ಅವಲೋಕಿತ: "ದೃಪ್ತ – ಕಣ್ಣನ್ನು ಅರಳಿಸಿ, ಗರ್ವ ಮತ್ತು ಸಂತೋಷಗಳಿಂದ ಕೂಡಿ ಸ್ಥಿರದೃಷ್ಟಿಯಿಂದ ನೋಡಲ್ಪಟ್ಟುದು" (ಲಾಸ್ಯರಂ. ೩೬೮ ಗದ್ಯಾನುವಾದ). 'ದೃಪ್ತದೃಷ್ಟಿ' ಪರಾ. [ಸಂ.]

ದೃಪ್ತದೃಷ್ಟಿ (ನಾ). = ದೃಪ್ತ ೪ : ಸಂಚಲಮಿಲ್ಲದೆ ಕಣ್ಮಲರ್ದುಂ ಚಲ್ಲದೆ ಗರ್ವಭಾವದಿಂದಂ ಬಿಱಿಗಿಂದಂ ಚಂದದೊಳು[ಱ್]ವೆತ್ತುಂ ಮಿಂಚುವ ಕಣ್ ಮೂಡೆ ದೃಪ್ತದೃಷ್ಟಿಯೆನಿಕ್ಕುಂ (ಲಾಸ್ಯರಂ. ೩-೩೪).

[ದೃಪ್ತ + ದೃಷ್ಟಿ]

ದೃಪ್ತದ್ಬಳ (ನಾ). ೧. ದರ್ಪವುಳ್ಳ ಸೈನ್ಯ. ೨. ದರ್ಪದಿಂದ ಕೂಡಿದ ಸೈನ್ಯವುಳ್ಳವನು: ದಿಸೆಯುಂ ಖಡ್ಗಾಂಶುಜಾಲಂ ಬೆಳಗೆ . . . ದಿಗ್ವೇ ತಂಡಮುಂ ಡಿಂಡಿಮರುತಿ ಚಕಿತಂ ಮಾಡೆ ದೃಪ್ತದ್ಬಳಂ ಮಾಮಸಕಂ ಗೊಂಡತ್ತಿ ಬಂದಂ ಬಗೆಯದೆ ವೃಥಿವೀಪಾಲನುಗ್ರಾಜಲೋಲಂ (ಹಂಪ್ರಪು. ೦೦-೫೮). [ಸಂ. ದೃಪ್ತದ್ಬಲ]

ದೃಬ್ಧ (ಗು). ೧. ಕಟ್ಟಿದ; ಪೋಣಿಸಿದ; ಜೋಡಿಸಿದ: "ಗ್ರಥಿತಂ, ಗ್ರಂಥಿತಂ, ದೃಬ್ಧಂ– ೨ ಕಟ್ಟಲ್ಪಟ್ಟ ಅಥವಾ ಪೋಣಿಸಲ್ಪಟ್ಟ ಪುಷ್ಪಮಾಲಾದಿಗಳ ಹೆಸರುಗಳು" (ಸಿಡ್ಕಾಂಶಿ. ೩೪೬). ೨. ಹೆದರಿದ; ಭಯಗೊಂಡ. [ಸಂ.]

ದೃಶ್ಯ (ಗು). ೧. ಕಣ್ಣಿಗೆ ಕಾಣುವ; ದೃಷ್ಟಿಗೆ ಗೋಚರವಾಗುವ. ೨. ನೋಡಬಹುದಾದ; ನೋಡಲು ಯೋಗ್ಯವಾದ. ೩. ಸುಂದರವಾದ; ರಮಣೀಯವಾದ; ಮನೋಹರವಾದ. (ನಾ). ೪. ಕಣ್ಣಿಗೆ ಕಾಣುವಂತಹುದು; ಗೋಚರವಾಗುವುದು; ಜನಜೀವನದಲ್ಲಿ ಕಾಣುವ ಯಾವುದಾದರೊಂದು ಘಟನೆ: ದೃಶ್ಯ ಜಡಸಂಧಾನವನಿಸುವ ನಶ್ವರದ ಮನ ನೇತ್ರ ವಾಗಾದಿಸ್ವಚೇಷ್ಟಾದುರ್ಬಲಗಳಿಂತಾವನೊಬ್ಬನನು ಆಶ್ರಯಿಸಿ (ಅಮೃತ. ೩-೭೬): ಜೀವಾತ್ಮನಿಗೆ ಹಿಂದೆ ಹೇಳಿದ ಬುದ್ಧಿಯನ್ನು ನೋಡುತ್ತಿರುವ ಸ್ವಭಾವ ಎಂದರೆ ಸಾಕ್ಷಿತ್ವವು ಇರುವುದರಿಂದ ಇವನು ದ್ರಷ್ಟಾ, ಇತರ ವಸ್ತುಗಳು ದೃಶ್ಯ (ಹಿಂದೂ. ೫೯). ೫. ಕಾಣ್ಕೆ; ನೋಟ: ವಿಕ್ರಮಾದಿತ್ಯನ ತಲಮಂಚಿಶಾಸನದ ಕಾಲವು ಅವನ ಆಳಿಕೆಯ ೬ನೆಯ ವರ್ಷದಲ್ಲಿ ಬಂದ ಶ್ರಾವಣಮಾಸದ ಸೂರ್ಯಗ್ರಹಣವು ಕ್ರಿ. ಶ. ೬೬೦, ಜುಲೈ ೧೩ ಸೋಮವಾರದಂದು ಬಾದಾಮಿಯಲ್ಲಿ ದೃಶ್ಯವಿತ್ತು (ಕರ್ಣಾಅ. ೭೨). ೬. ನೋಡಲು ತಕ್ಕುದು; ನೋಟಕ್ಕೆ ಯೋಗ್ಯವಾದುದು: ಅದಂ ಕಂಡವನಿವಾಳನಿವಳುಮಾ ಜಳಮುಂ ದೃಶ್ಯಮಲ್ಲದೆ ಪರಿಸ್ಪೃಶ್ಯಮಲ್ಲೆಂದಲ್ಲಿಂ ತಳರ್ದು ನಡೆಯೆ (ಶೀಶಾವ. ೬-೪೩ ಪ). ೭. [ಕಾವ್ಯಮಿಮಾ] ಅಭಿನಯದ ಸಹಾಯದಿಂದ ಪ್ರದರ್ಶನವಾಗಬಹುದಾದ ಕಾವ್ಯ; ದೃಶ್ಯಕಾವ್ಯ; ನಾಟಕ; ರೂಪಕ: ದೃಶ್ಯ ಶ್ರವ್ಯ ದೃಢಮಾತ್ರಾದಿಪ್ರಯೋಗಂಗಳೊಳಂ ನಾನಾವಿಧ ವಾದ್ಯಂಗಳೊಳಂ ಅಂಗಿಕಾಭಿನಯಂಗಳೊಳಮೆಸೆಯೆ . . . ರಂಗಂಬೊಕ್ಕು (ಆದಿಪು. ೬-೦೦೪ ಪ): ದೃಶ್ಯಕ್ಕೆ 'ಅಭಿನೇಯ' ವೆಂದೂ ಹೆಸರು. ನಾಟಕಾದಿ ರೂಪಕಗಳು 'ದೃಶ್ಯ' ವೆನಿಸುತ್ತವೆ (ಕೃಬಡಿ. ೦೪೦). ೮. ನೋಟಕ್ಕೆ ಆನಂದವನ್ನುಂಟುಮಾಡುವ ರಂಗದ ಏರ್ಪಾಡು,– ರಂಗಸಜ್ಜಿಕೆ: ಪ್ರತಿಯೊಂದು ರುದ್ರನಾಟಕದಲ್ಲಿಯೂ ಅರಿಸ್ಫಾಟಲನು ಆರು ಅಂಗಗಳನ್ನು ನಿರ್ದೇಶಿಸುತ್ತಾನೆ. ಅವು ದೃಶ್ಯ (Spectacle), ಗೀತ (Song), ವಸ್ತು (Plot) (ಅರಿಕಾ. ೨೮). ೯. ನಾಟಕದ ಒಂದು ಸನ್ನಿವೇಶ, – ಘಟನೆ; ಅಂಕದ ಒಂದು ಭಾಗ: ಈ ಗ್ರೀಕ್ ಪ್ರಹಸನದ ದೃಶ್ಯ ತುಳುವದೇಶದ ಸಮುದ್ರತೀರದ್ದೇ ಇರಬೇಕೆಂದೂ . . . ವಿದ್ವಾಂಸರು ಊಹಿಸಿದ್ದಾರೆ (ಡ್ರಾವಿವಿ. ೭೮). ೧೦. ಘಟನೆ ನಡೆಯುವ ಸ್ಥಳ: ಬಳಿಕ ದೃಶ್ಯವು ದಂಡಕಾರಣ್ಯಕ್ಕೆ ವರ್ಗವಾಗಿ. ಅಲ್ಲಿಯ ಋಷಿಗಳ ಶಾಂತಜೀವನದ ಪ್ರಕರಣವು ತೆರೆಯುತ್ತದೆ(ಭಾರದ. ೮೮). [ಸಂ.]

ದೃಶ್ಯಕಲಾಕೃತಿ (ನಾ). ನೋಟದ ಮೂಲಕ ಸಂತೋಷವನ್ನುಂಟುಮಾಡುವ ಚಿತ್ರ, ಶಿಲ್ಪ ಮುಂತಾದ ಕಲಾವಿದನ ನಿರ್ಮಾಣ: ಕ್ಲೈವ್‌ಬೆಲ್ . . . ದೃಶ್ಯಕಲಾಕೃತಿ (Visual art) ಗಳಲ್ಲಿ ಇರುವ ಈ ಗುಣವನ್ನು 'ಸಿಗ್ನಿಫಿಕೆಂಟ್ ಫಾರಂ' ಎಂದು ಕರೆಯುತ್ತಾನೆ (ಸೌಂದಸ. ೭೫).

[ದೃಶ್ಯ + ಕಲಾಕೃತಿ]

ದೃಶ್ಯಕಾವ್ಯ (ನಾ). [ಕಾವ್ಯಮಿಮಾ] ಅಭಿನಯದ ಸಹಾಯದಿಂದ ಪ್ರದರ್ಶಿಸಬಹುದಾದ ಕಾವ್ಯ; ರೂಪಕ; ನಾಟಕ: ಸಂಸ್ಕೃತದಲ್ಲಿ ದೃಶ್ಯ ಕಾವ್ಯಕ್ಕೆ 'ರೂಪಕ' ಎಂಬುದು ಸಾಮಾನ್ಯವಾದ ಹೆಸರು(ಭಾರಮಿಾ. ೬ ಅಡಿಟಿ).

[ದೃಶ್ಯ + ಕಾವ್ಯ]

ದೃಶ್ಯತೆ (ನಾ). ಪ್ರದರ್ಶನಕ್ಕೆ ಯೋಗ್ಯವಾಗಿರುವಿಕೆ ಪ್ರದರ್ಶನ ಸಾಧ್ಯತೆ: ನಾಟಕದ ಈ ದೃಶ್ಯತೆ ಹಾಗು ಶ್ರಾವ್ಯತೆಗಳಲ್ಲಿ ಒಂದು ಪ್ರಕಾರದ ವಿರೋಧವು ನಿರ್ಮಾಣವಾದುದು ಕಂಡುಬರುತ್ತದೆ (ಪ್ರಬಂಧ. ೩೭).

[ಸಂ. ದೃಶ್ಯತಾ]

ದೃಶ್ಯತೆವಡೆ (ಕ್ರಿ). ಕಾಣುವಂತಾಗು; ವ್ಯಕ್ತವಾಗು: ಟೆಂಬಾವುಡೆಯುಡಿವಸನವು ತೊಯ್ದು ನಿತಂಬವು ದೃಶ್ಯತೆವಡೆದು...ಮೆಱಿಯೆ ಪೀತಾಂಬರವೋಡಿ ಹಿಗ್ಗಿದನು (ಪೋಹಕ. ೦೪-೫೦). [ದೃಶ್ಯತೆ + ಪಡೆ$_1$]

ದೃಶ್ಯಾದ್ಭುತ (ನಾ). ನೋಡಲು ಅದ್ಭುತವಾದುದು; ನೋಟಕ್ಕೆ ಆಶ್ಚರ್ಯವನ್ನುಂಟುಮಾಡುವುದು: ದಿಟಂ ರಾಕ್ಷಸವ್ಯಾಯಾಮರಂಗ ವಿರವೇಳ್ಕುಮಿಾ ದೃಶ್ಯಾದ್ಭುತಂ! (ಶ್ರೀರಾಮಾ. ೪೫೫-೩೬೯).

[ದೃಶ್ಯ + ಅದ್ಭುತ]

ದೃಶ್ಯಾಧಾರ (ನಾ). ಪತ್ರದಲ್ಲಿ ತೋರಿಸಿರುವ, ಆದರೆ ಸ್ವಾಧೀನಕ್ಕೆ ಒಪ್ಪಿಸದಿರುವ ಒತ್ತೆ; ತೋರ್ಪೊತ್ತೆ: (ಪ್ರಾಗಿಚಿ. IV, ೭೬೮).

[ದೃಶ್ಯ + ಆಧಾರ]

ದೃಶ್ಯಾನುವಿದ್ಧ (ನಾ). [ಯೋಗ] ದೃಶ್ಯಾನುವಿದ್ಧ, ಶಬ್ದಾನುವಿದ್ಧ, ನಿಃಸಂಕಲ್ಪ, ನಿರ್ವಿಕಲ್ಪ, ನಿವೃತ್ತಿಕ, ನಿರ್ವಾಸನ ಎಂಬ ಆರು ಬಗೆಯ ಸಮಾಧಿಗಳಲ್ಲಿ ಒಂದು: ದೃಶ್ಯದಿಂದ ಕೂಡಿದ ಸವಿಕಲ್ಪ ಸಮಾಧಿ: ಘಟಾದಿ ವಿಷಯ ಜಾತದೊಳ್ ಅವುದಾನೊಂದನಾದರೂ ಕುಱಿತು ಅದಱ ನಾಮ ರೂಪುಗಳೆಂಬ ಮಾಯಾಂಶಗಳೆರಡನೂ ಮಱಿತು ಅಸ್ತಿ ಭಾತಿ ಪ್ರಿಯಮೆಂಬ ಸಚ್ಚಿದಾನಂದ ಬ್ರಹ್ಮಾಂಶತ್ರಯವನನುಸಂಧಾನಂಗೈವುದೇ ಬಾಹ್ಯದ ದೃಶ್ಯಾನುವಿದ್ಧವೆಂಬ ಸವಿಕಲ್ಪಕಸಮಾಧಿಯೆನಿಸುವುದು (ವಿವೇ. ೫೭); ಧ್ಯಾನಿಸಲು ಸವಿಕಲ್ಪಕವೆ ದೃಶ್ಯಾನುವಿದ್ಧವದೇ ಮಗುಳೆ ಶಬ್ದಾನುವಿದ್ಧವಿವೆರಡು ಬಾಹ್ಯಾಭ್ಯಂತರಗಳಿಂದ (ಅಮೃತ. ೬-೫೫); "ದೃಶ್ಯದಿಂದ ಕೂಡಿದ್ದು" (ಅಮೃತ. ೪ಡಿಟಿ); ಒಳಗೆ ಕರಣಂಗಳನು ಕುಱುಹಿಟ್ಟಳವಡಲು ದೃಶ್ಯತ್ವದಿಂ ತಾ ತಿಳಿಯುತವನೊಂದೊಂದ ನಿದಿರಿಟ್ಟಱಿದು ತಾನದಕೆ ತಳೆದು ಸಾಕ್ಷಿತ್ವವನು ಬೇಱುಗುಳ್ವುದೇ ದೃಶ್ಯಾನುವಿದ್ಧವು ಬಳಕೆಯು ಸಮಾಧಿಯು (ಅಮೃತ. ೬-೫೬); ಆವನಿದಕೇಳುವನು ಕಾಣುವನಾವನಾಸ್ವಾದಿಸುವ ಗಂಧವನಾಘ್ರಾಣಿಸುವ ಶೀತೋಷ್ಣಗಳನ ಱಿಹಿಸುವ ಆ ವಿಭುವೆ ತಾನೆನ್ನುತರ್ದಿ ತಾನೀ ವಿಷಯಗಳ ಕುಱಿತು ಕುಱುಹನು ಭಾವಿಸಲು ದೃಶ್ಯಾನುವಿದ್ಧವು (ಅಮೃತ. ೬-೫೭); ಮನಕೆ ವಚನಕೆ ಕಣ್ಗಗೋಚರನೆನಿಸುವಾತ್ಮನನಾವ ಪರಿಯಲಿ ನೆನೆಯ ಬಹುದೆಂದೆನಲು ಕೇಳು ತಟಸ್ಥಲಕ್ಷಣವ ಅನುವಿನಿಂ ಶಾಖಾಗ್ರದಲಿ ಚಂದ್ರನನು ಸಾಧಿಸುವಂತೆ ಕರಣಗಳನಿತುವನು ಕುಱುಹಿಟ್ಟಱಿಯೆ ದೃಶ್ಯಾನುವಿದ್ಧವದು (ಅಮೃತ. ೬-೫೮). 'ನಿರ್ವಿಕಲ್ಪ ಸಮಾಧಿ', 'ಸವಿಕಲ್ಪಸಮಾಧಿ' ಪರಾ. [ದೃಶ್ಯ + ಅನುವಿದ್ಧ]

ದೃಶ್ಯಾವಳಿ (ನಾ). (ನಾಟಕ, ಕಥೆ ಮುಂತಾದುವುಗಳ) ದೃಶ್ಯಗಳ ಸಾಲು. – ಮಾಲೆ : ಅನಂತರ ಕಥೆಯ ದೃಶ್ಯಾವಳಿಯಲ್ಲಿ ಇನ್ನೊಂದು ಹೊಸದಾದ ವಿಸ್ತಾರವಾದ ದೃಶ್ಯವು ತೆರೆಯುತ್ತದೆ (ಭಾಕರ. ೪೪).

[ದೃಶ್ಯ + ಆವಳಿ$_1$ (=ಆವಲಿ)]

ದೃಶ್ಯೋಪಮಾನ (ನಾ). (ಚಿತ್ರಕಲೆಯಲ್ಲಿ) ಒಂದು ಗೊತ್ತಾದ ಸ್ಥಾನದಿಂದ ಒಂದು ಘನವಸ್ತುವನ್ನು ನೋಡಿದರೆ ಹೇಗೆ ಅದು ಕಾಣುವುದೋ, ಅದೇ ಪರಸ್ಪರ ಸಂಬಂಧವುಳ್ಳ ಸ್ಥಾನ, ಪ್ರಮಾಣ ಇತ್ಯಾದಿಗಳಲ್ಲಿ ಕಾಣುವಂತೆ, ಆ ವಸ್ತುವನ್ನು ಸಮಂತಲದ ಮೇಲೆ ನಿರೂಪಿಸುವುದು; ಯಥಾರೋಪಣ : ಉತ್ತಮರೀತಿಯಲ್ಲಿ ವರ್ಣ ಪ್ರಭಾವ (Colour Effects) ಛಾಯಾತೇಜ, ದೃಶ್ಯೋಪಮಾನ (Perspective) ಇವೆಲ್ಲವುಗಳ ಬಲದಿಂದ ಕಣ್ಣಿಗೆ ಸೊಗಸಾಗುವಂತೆ ಮಾಡಿದರೆ . . . ಅದೇ ಕಲೆಯೆಂದು ತಿಳಿಯುತ್ತಿರುವೆವು (ಭಾಚಿತ್ರ. ೧೩).

[ದೃಶ್ಯ + ಉಪಮಾನ]

ದೃಷದ (ನಾ). ಕಲ್ಲು; ಶಿಲೆ : ಶಮ್ಯಲೂಖಲಿಲಂಗಳು ದೃಷಜ[ದ] ಕೃಷ್ಣಾಜಿನ ಜುಹು ಸ್ರುವೆ ದರ್ವಿಯುತ ಕುಂಭಯೆಸೆಯಲು (ಕಾಶಿಕಾ. ೦-೫೯). [ಸಂ. ದೃಷದ್]

ದೃಷದವದಾರಿಣಿ (ನಾ). ಕಲ್ಲು ಕಡೆಯುವ ಉಳಿ; ಕಲ್ಲುಂಳಿ; ಟಂಕ : "ದೃಷದವಧರಣಿ [ದಾರಿಣಿ] ಪೆಸಗೊರ್ವ್ವ ದಂತದಕ್ಕುಂ ಟಾಂಕಂ" (ವಸ್ತುಕೋ. ೫೦-೫೬). [ಸಂ. ದೃಷದವದಾರಿಣೀ]

ದೃಷದಾಶನ (ನಾ). ಕಲ್ಲು ಹರಳು ತಿನ್ನುವ ಪಕ್ಷಿ; ಪಾರಿವಾಳ : "ದೃಷದಾಶನಂ ಪಾರಿವಮೆನಿಕ್ಕುಂ" (ಮಂಗರಾ. ೫೨-೮). [ಸಂ.]

ದೃಷ್ಟ (ಗು). ೧. ನೋಡಿದ; ಈಕ್ಷಿಸಿದ; ಕಂಡ. ೨. ಗಮನಿಸಿದ; ಲಕ್ಷ್ಯಕೊಟ್ಟ. ೩. ತಿಳಿದಂಕೊಂಡ; ಗ್ರಹಿಸಿದ. ೪. ನಿಶ್ಚಯಿಸಿದ; ನಿರ್ಧಾರ ಮಾಡಿದ. ೫. ಅನುಭವಿಸಿದ. (ನಾ). ೬. ನೋಟ; ದರ್ಶನ: ಸಾಕಾರರೂಪನೆ ತಾಳಿ ಬಿಜ್ಜಳಗೆ ಬೇಕಾದ ದೃಷ್ಟವನು ತೋಱಿದ ಗುರುವೆ (ಶಿವಗೀ. ೬೬-೩೦೭). ೭. ಕಣ್ಣಿಗೆ ಕಾಣಿಸಿಕೊಳ್ಳುವುದು; ಗೋಚರವಾಗುವುದು : ಬಯಲು ವೊಳಗಿ ಮಳೆ ಸೃಜಿಸಿ ಆ ಬಯಲು ಆ ಮಳೆಯ ನೊಡಗೂಡಿ ದೃಷ್ಟವಪ್ಪ ವಾರಿಕಲ್ಲಾಗಿ ತೋಱಿದಂತೆ ನಿನ್ನ ನೆನಹೆ ನಿನಗೆ ಶಕ್ತಿಯಾಯಿತ್ತಲ್ಲಾ (ವಡಸಂ. ೨೫-೬೬); ದೃಷ್ಟಿಯ ದೃಷ್ಟದಿಂದ ಮೋಹದ ಲವಲವಿಕೆ (ವಡಸಂ. ೫೦೬-೬೮). ೮. ಕಾಣಬಹುದಾದುದು : ಮುಂಳು ಕೌರವ ಜಂಗಮ ಸ್ಥಾವರದ ದೇಹಕೆ ನೆಳಲಹುದು ದಿನಕರನ ದೇಹಕೆ ನೆಳಲು ಶ್ರುತವೋ ದೃಷ್ಟವೋ ನಿನಗೆ (ಕುಪ್ಪಾಕ್ರೋ. ೦೫-೫೪) ; ಇದನ್ನು ದೃಷ್ಟವೆಂದೂ ಶ್ರುತವೆಂದೂ ಉಪಾಸನೆ ಮಾಡಬೇಕು (ಬೃಹ್ಮಭಾ. I, ೫೦೫). ೯. ಪ್ರತ್ಯಕ್ಷ; ಸಾಕ್ಷಾತ್ಕಾರ : ನಿಮ್ಮ ನಂಬಿದ ಮತ್ತೊಂದನಱಿಯೆ ನಿತ್ಯಸ್ವತಂತ್ರನು ನೀನೆ ದೃಷ್ಟ ಲಿಂಗ ಜಂಗಮ ಒಂದೆ ಎಂದಿಪ್ಪೆನು ಪರಮ ಪ್ರಭುವೆ (ಬಸವ. ೬೩೦) ; ಸಾಕಾರ ನಷ್ಟ ನಿರಾಕಾರ ದೃಷ್ಟವೆಂಬುದು ಭಾವದ ಬಳಲಿಕೆ (ಅವಚಂ. ೫೧೦-೯೫೦) ; ನಿಷ್ಠೆಯಿಲ್ಲದ ಪೂಜೆ ಎಷ್ಟು ಕಾಲ ಮಾಡಿದರು ನಷ್ಟವಲ್ಲದೆ ದೃಷ್ಟವುಂಟೆ (ಶಿವಗೀ. ೧೬೦-೬೦೦ ವ). ೧೦. ಗುರುತು; ಕುರುಹು : ಲಿಂಗಕ್ಕೆ ಮಜ್ಜನವ ಮಾಡುವಲ್ಲಿ ಮುಂಡೆಯ ಕುಱುಹನಱಿಯೆ . . . ಇನ್ನಾರಿಗೆ ಹೇಳುವೆ ಕೊಟ್ಟ ಗುರು ದೃಷ್ಟವ ಹೇಳಿದುದಿಲ್ಲ (ಮೋಳಿಮಾ. ೦೬೫-೬೦೫). ೧೧. ಉದಾಹರಣೆ; ನಿದರ್ಶನ; ದೃಷ್ಟಾಂತ : ಇಂತಪ್ಪ ಇಷ್ಟಲಿಂಗವ ದೃಷ್ಟದಲ್ಲಿ ಹಿಡಿದುದಕೆ ಇದೇ ದೃಷ್ಟ (ಮೋಳಿಮಾ. ೬೦-೫೫೦) ; ಎಮ್ಮ ವಚನವೆ ವ್ಯುದಃತರಯೋಗವೇ ಪರಿಯಂಕಶೂಲವಿದಕ್ಕೆ ದೃಷ್ಟವಲಾ (ಬಸಪು. ೫೯-೧) ; ಒರ್ವರಿಗೆ ಹುಟ್ಟಿ ಮತ್ತೊರ್ವರ ಅಪ್ಪ ಎಂಬ ನಾಣ್ನುಡಿಯ ದೃಷ್ಟ ಎನಗಾಯಿತ್ತಯ್ಯ ಗುರುವೆ (ಘನವ. ೬-೪) ; ನಿಷ್ಠೆಯಿಂದಿರುವಂಥ ಸತಿಯು ಭ್ರಷ್ಟಳಾಗುವುದಿಲ್ಲವಿದನು ನೀನರಿತಿರು ದೃಷ್ಟವು ದಮಯಂತಿಕಥೆಯು (ಇಂಚಾಪ. ೧೦೦-೬೮). ೧೨. ಸಾಕ್ಷಿ; ಪುರಾವೆ. 'ವಾಗ್ದೃಷ್ಟ' ಪರಾ. ೧೩. ಒರೆಗಲ್ಲು : 'ದೃಷ್ಟವೆನೆ ಮಚ್ಚಮಕ್ಕುಂ" (ಮುಂಗರಾ. ೧೦೫-೦೪). ೧೪. [ವೀಶೈ] ದರ್ಶನದಿಂದ ಸಾಧ್ಯಮಾಡಿಕೊಂಡ ಅಲೌಕಿಕ ಭಾವ, – ವಸ್ತು, – ಪರಬ್ರಹ್ಮ. 'ದೃಷ್ಟಪೂಜೆ' ಪರಾ. [ಸಂ.]

ದೃಷ್ಟನಷ್ಟ (ನಾ). ಕಣ್ಣಿಗೆ ಕಾಣಿಸಿ ಮಾಯವಾಗುವುದು; ದೃಷ್ಟಿಗೆ ಗೋಚರವಾಗಿ ಅದೃಶ್ಯವಾಗುವುದು; ನಶ್ವರವಾದುದು : ತನ್ನ ಕಲ್ಪಿತದ ಉತ್ಪತ್ತಿಯನಱಿಯದೆ ಸತ್ಪಿಹನೆಂಬ ಭ್ರಾಂತಿಯಿಂದ ನಿಜವಸ್ತುವ ಮುಟ್ಟದೆ ಹೋಯಿತ್ತೆಂಬುದಕ್ಕೆ ಸೂಚನೆ ನೀಕಳಂಕ ಮಲ್ಲಿಕಾರ್ಜುನ ಲಿಂಗವು ದೃಷ್ಟನಷ್ಟ ಭಾವಿಯಾದ ಕಾರಣ (ಮೋಳಿಮಾ. ೦೬೮-೬೭೦) ; ಮನೆ ಮಠ . . . ಮೊದಲಾದ ಸಕಲವಸ್ತುಗಳು ನೋಡುತ್ತಿರುವಾಗಲೇ ನಾಶವಾಗಿ, ವಸ್ತುಗಳು ಇದ್ದದ್ದಕ್ಕೂ ಇಲ್ಲದಿದ್ದಕ್ಕೂ ವ್ಯತ್ಯಾಸವಿಲ್ಲದೆ ಪಾಯಾಪ್ರಾಯವಾಗಿರುವುದೆಂದು ಲೋಕಾನುಭವದಲ್ಲಿದೆ. ಇದಕ್ಕೆ ದೃಷ್ಟನಷ್ಟವೆಂದು ಹೆಸರು. ಎಂದರೆ ಕಣ್ಣಿಗೆ ಕಾಣಿಸಿ ಮಾಯವಾಗುವುದೆಂದು ಅರ್ಥವು (ಹಿಂದಸಾ. ೪೪). [ದೃಷ್ಟ + ನಷ್ಟ]

ದೃಷ್ಟಪೂಜೆ (ನಾ). [ವೀಶೈ] ಕಾಣುವ ಪರವಸ್ತುವಿಗೆ ಮಾಡುವ ಪೂಜೆ : ಇಂತಿದು ಇಷ್ಟಲಿಂಗದ ದೃಷ್ಟಪೂಜೆ, ದೃಷ್ಟಯೋಗ (ಮೋಳಿಮಾ. ೦೦೬ ಪ್ರಸಾ.ವನ). [ದೃಷ್ಟ + ಪೂಜೆ]

ದೃಷ್ಟಾಂತ (ನಾ). ೧. ಪ್ರತ್ಯಕ್ಷವಾಗಿ ಕಂಡುದು : ಶಾಸ್ತ್ರವ್ಯವಹಾರದಲ್ಲಿ ಅಂತ ಪದಕ್ಕೆ ಕೊನೆಯೆಂದರ್ಥದ ಮೇಲೆ ನಿರ್ಣಯವೆಂದರ್ಥ ಪುಸಿದ್ಧ. ದೃಷ್ಟಾಂತ, ಸಿದ್ಧಾಂತ, ವೇದಾಂತ ಈ ಮೂರು ಪದಗಳಲ್ಲಿ ದೃಷ್ಟಾಂತ ಪದವು ನೋಡಿ ಬಂದ ನಿರ್ಣಯವೆಂದರ್ಥದಲ್ಲಿರುವುದು (ಹಿಂದಸಾ. ೦೬೦). ೨. ಉದಾಹರಣೆ; ನಿದರ್ಶನ : ಎಂತಾನುಂ ಪಲವುಂ ದೃಷ್ಟಾಂತಮನೆನಿತಾನುಮುಪಮೆಯಂ ತದ್ವಿವಿಜರ್ ಮುಂ ತೋಱಿ ತೋಱಿ ಚಿತ್ತಭ್ರಾಂತಿಯುಮಂ . . . ಪಿಂಗಿಸಿದರ್ (ಪಂರಾಮಾ. ೦೬-೫೬) ; ಕೃಷ್ಣನ ಜಯಮನೀಗಳಱಿಯಿರೆ ಕಡುಕೆಯ್ದಾ ಕೇಶಿ ಧೇನುಕರ್ಕಳನೇಕಾಂಗದೆ ಗೆಲ್ದುದಲ್ಲವೇ ದೃಷ್ಟಾಂತಂ (ಜಗವಿ. ೫-೮೯) ; ಆವ ಮಾರ್ಗದೊಳಾದಡಾತನ ನಾವು ಕೆಡಿಸಿದಡಲ್ಲದಾಗದು ಭಾವಿಸಲು ದೃಷ್ಟಾಂತವಿಮಾಗಳೆ ದೃಷ್ಟವಹುದು (ಬಸಪು. ೫೦-೫೬) ; ವಿಮಸಲಿನ ಮಾನಿನಿಯರಲಿ ಮನದಾಸೆ ಮನುಜರ ಮುಱಿವುದಕೆ ನಾನೈಸಲೇ ದೃಷ್ಟಾಂತವೆಂದನು ನಹುಷ (ಕುವ್ಯಾಅ. ೧೩-೬೬); ಪದವಿ ತಪ್ಪಿದ ಮೇಲೆ ನಂಟರಿಷ್ಟರೆ ನಮಗೆ ಕಟ್ಟಿಟ್ಟ ಹಗೆ ಕಾಣ ಕೊನೆಗೆ ದೃಷ್ಟಾಂತವನು ಕೇಳು ಕೆರೆ ಬತ್ತಿ ಬರಿದಾಗೆ ಆಪ್ತನೆ ವೈರಿ ತಾವರೆಗೆ (ಇಂದಾಪ. ೯೨-೫೦). ೩. ಸ್ವಪ್ನವಾದ ಗುರುತು, – ಚಿಹ್ನೆ : ಶ್ರೀದಶಾರಿ ಧೂಮಕೇತುವನುದರದೊಳೀ ದೇವಿ ತಳೆದುದರ್ಕದೆ ದೃಷ್ಟಾಂತದ ಧೂಮ ಲೇಖೆಯನೆ ಕರ್ವೊದವಿದ ರೋಮಾಳಿ ರಂಜಿಸುಂ ದೇವಕಿಯಾ (ಜಗವಿ. ೨-೯೧). ೪. ಸಾಯುವುದು; ಮರಣ. ೫. [ಕಾವ್ಯವಿಮಾ]=ದೃಷ್ಟಾಂತಾಲಂಕಾರ : ಎಂತಂಟುಮುನ್ನಂ ಪೇೞ್ದರ್ಥಾಂತರಮಂತುಟನೆ ಬಲ್ಮಿಕೆ ತೋಱುವುದದು ದೃಷ್ಟಾಂತಂ (ಕಾವ್ಯಾಕ. ೭೦೪). ೬. [ನ್ಯಾಯ] ಹದಿನಾರು ಪದಾರ್ಥಗಳಲ್ಲಿ ಒಂದು : ಗೌತಮೋಕ್ತನ್ಯಾಯವು ಪ್ರಮಾಣ ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯ ವಾದ ಜಲ್ಪ ವಿತಂಡಾ ಹೇತ್ವಾಭಾಸ ಛಲ ಜಾತಿ ನಿಗ್ರಹಸ್ಥಾನಂಗಳೆಂಬ ಹೋಡಶ ಪದಾರ್ಥಂಗಳಂ ನಿರೂಪಿಸುತ್ತ (ವಿವೇಕ. ೦೦) ; ನ್ಯಾಯದರ್ಶನದಲ್ಲಿ ಪ್ರಮಾಣ, ಪ್ರಮೇಯ ಸಂಶಯ ಪ್ರಯೋಜನ ದೃಷ್ಟಾಂತ ಸಿದ್ಧಾಂತ ಅವಯವ ತರ್ಕ ನಿರ್ಣಯ ವಾದ ಜಲ್ಪ ವಿತಂಡಾ ಹೇತ್ವಾಭಾಸ ಛಲ ಜಾತಿ ನಿಗ್ರಹಸ್ಥಾನ ಎಂದು ಹದಿನಾರು ಪದಾರ್ಥಗಳನ್ನು ನಿರೂಪಿಸುವರು (ಹಿಂದಸಾ. ೦೦೩). 'ಪದಾರ್ಥ' ಪರಾ; P 'ಕಾರ್ಯ'

ವೆನಿಸುವುದಕ್ಕೆಲ್ಲ ಒಬ್ಬ ಕರ್ತೃ ಇದ್ದೇ ತೀರಬೇಕು, ಗಡಿಗೆ ಎಂಬ ಕಾರ್ಯಕ್ಕೆ ಕರ್ತೃವಾಗಿ ಕುಂಬಾರನೊಬ್ಬನು ಇರುವಂತೆ. ಹಾಗೆಯೇ ಪ್ರಪಂಚವೂ ಒಂದಂ ಕಾರ್ಯ. ಆದ್ದರಿಂದ ಅದಕ್ಕೂ ಒಬ್ಬ ಕರ್ತೃ ಇದ್ದಾನೆ. ಅವನೇ ಈಶ್ವರ. ನ್ಯಾಯ ಪ್ರಯೋಗದಲ್ಲಿ ಹೀಗೆ ಉದಾಹರಣೆಗಳನ್ನು ನೀಡುವುದೇ ದೃಷ್ಟಾಂತ. ೭. (ಉಕ್ತ) ಸ್ಪಷ್ಟದಲ್ಲಿ ಕಾಣುವ ಸೂಚನೆ : ನಮಗಾದರೂ ಎಲ್ಲಿ ತಿಳಿದಿತ್ತು ? ಹಳೇ ಕಾಲ ಆಗಿದ್ದರ ದೃಷ್ಟಾಂತ ಆಗೇದ ಅಂತ ಬಂದು ಹೇಳಬೇಕು, ಅಂಥಾ ಚಮತ್ಕಾರ ಆಗೇದ (ಹೂಸಂಶಾ. ೨೩). [ಸಂ.]

ದೃಷ್ಟಾಂತಕಥೆ (ನಾ). ನೀತಿಬೋಧನೆಗಾಗಿ ಅಥವಾ ಅಭಿಪ್ರಾಯ ನಿರೂಪಣೆಗಾಗಿ ನಿರೂಪಿಸುವ ಕಥೆ : ಮಕ್ಕಳ ಮನಸ್ಸಿಗೆ ಹಿಡಿಯುವಂತೆ ದೃಷ್ಟಾಂತಕಥೆಗಳನ್ನು ಹೇಳುವುದರಿಂದ ಎಷ್ಟೋ ಗಹನವಾದ ವಿಷಯಗಳನ್ನು ಸುಲಭವಾಗಿ ಗ್ರಹಿಸುತ್ತಾರೆ (ರೂಢಿ).

[ದೃಷ್ಟಾಂತ + ಕಥೆ]

ದೃಷ್ಟಾಂತಾಲಂಕಾರ, ದೃಷ್ಟಾಂತಾಳಂಕಾರ (ನಾ). [ಕಾವ್ಯಮೀಮಾ] ಅರ್ಥಾಲಂಕಾರದ ಒಂದಂ ಭೇದ : ಎರಡುಂ ವಾಕ್ಯಂಗಳ್ಗೇಱಾಗಿ ಯೊಂದರ್ಕೊಂದು ಸಾದೃಶ್ಯದಿಂ ಪ್ರತಿಬಿಂಬದಂತೆ ತೋಱಿಯದು ದೃಷ್ಟಾಂತಾಲಂಕಾರಂ (ಅಪ್ರತಿ. ೬೦) : ಎರಡು ಬೇರೆ ಬೇರೆ ವಾಕ್ಯಗಳು ಪರಸ್ಪರ ಅರ್ಥಸಾದೃಶ್ಯದಿಂದ, ಒಂದರ ಪ್ರತಿಬಿಂಬ ಮತ್ತೊಂದು ಎಂದು ತೋರುವುದಿದ್ದರೆ, ಅದು ದೃಷ್ಟಾಂತಾಲಂಕಾರ. ಲಕ್ಷ್ಮೀ–ನಿಂದಿಸುವರ್ ದುರ್ಜನರೆಂಬೊಂದು ಭಯಂಬೆತ್ತು ಸುಕವಿ ರಚಿಸನೆ ಕೃತಿಯಂ ಮುಂದೇಹರಭಯದಿಂದರವಿಂದಸಖಂ ನಿಜಮಯೂಖಮಂ ಪಸರಿಸನೇ (ಕೃಬಿ. ೨೬೩). **ದೃಷ್ಟಾಂತಾಳಂಕಾರ :** ಇಂತುದಿತ ಭೇದಮಂ ದೃಷ್ಟಾಂತಾಳಂಕಾರಮಾರ್ಗಮಂ ಕನ್ನಡದೊಳ್ ಸಂತತಗುಣಮಂ ಕೈಕೊಳ್ವಂತಾಗಿರೆ ಬಗೆದು ವೇಟ್ಗಿ ಪರಮಕವೀಶರ್ (ಕವಿರಾ. ೩-೧೫೩).

[ದೃಷ್ಟಾಂತ + ಅಲಂಕಾರ]

ದೃಷ್ಟಾಂತಾಳಂಕಾರ 'ದೃಷ್ಟಾಂತಾಲಂಕಾರ' ನೋ.

ದೃಷ್ಟಾದೃಷ್ಟ (ಗು). ೧. ಕಣ್ಣಿಗೆ ಕಾಣಿಸುವ ಮತ್ತು ಕಾಣಿಸದಿರುವ. ೨. ಈಗಿರುವ ಹಾಗೂ ಮುಂದಿನ ಜೀವನದ ಬಗ್ಗೆ ಸಂಬಂಧಪಟ್ಟ : ದೃಷ್ಟಾದೃಷ್ಟಗುಣವಿಸ್ಪಷ್ಟ ಬಸವೇಶ (ಬಸಪು. ೪೮-೩೩). ೩. ತಿಳಿದ ಮತ್ತು ತಿಳಿಯದಿರುವ : ಪಂಚವಿಧ ಭೂತಭೌತಿಕ ವಸ್ತುಗಳಿಗೂ ಪುರುಷನೆಂಬ ಆತ್ಮನಿಗೂ ದೃಗ್ದೃಶ್ಯ ಸಂಬಂಧವು ಸಾಕ್ಷಾತ್ತಾಗಿ ಸಹಜವಾಗಿ ಇದ್ದರೆ . . . ದೃಷ್ಟಾದೃಷ್ಟ ವ್ಯವಸ್ಥೆಯು ಇರಲಾರದು ಎಂದರೆ, ಪುರುಷನಿಗೆ ಒಂದು ಕಾಲದಲ್ಲಿ ಒಂದು ವಸ್ತುವು ತಿಳಿಯಿತು ಅಥವಾ ತಿಳಿಯಲಿಲ್ಲ ಎಂಬ ವ್ಯವಸ್ಥೆಯು (ಹಿಂದುಶಾ. ೩೭). (ನಾ). ೪. ಕಂಡು ಕಾಣದಿರುವ ವಸ್ತು ಅಥವಾ ವೃತ್ತಿ : ಶರಣ ದೃಷ್ಟಾದೃಷ್ಟ ಕಾಣಯ್ಯಾ ಮುಟ್ಟದೆ ಮುಟ್ಟುವ ಕಾಣಯ್ಯಾ (ಕನ್ನಪ. ೪. ೫೪೨-೦೫೭) : ಈ ಪ್ರಮಾಣಂಗಳೋರಂತೆ ಮೆಱಿವ ದೃಷ್ಟಾದೃಷ್ಟದುಭಯಾ ವಿಷಯಮುಮಾಗೆ ಶಬ್ದ ಪ್ರಮಾಣೋರುತರವೆಂತೆಂದು ಬೆಸಗೊಂಬಡಂ (ವೀಶಿಪು. ೫-೦೦-೩೦). [ಸಂ.]

ದೃಷ್ಟಾದೃಷ್ಟಿ (ನಾ). ನೋಟಗಳು ಪರಸ್ಪರ ಸೇರುವಿಕೆ, – ದರ್ಶನ : ಅವ್ವನೊಡನೆ ದೃಷ್ಟಾದೃಷ್ಟಿಯಾಗುತ್ತಲೆ ಅವಳು ಬೆಂದುಟಗಳಲ್ಲಿ ಬೆಳ್ನಗೆಯನ್ನು ಅರಳಿಸಿ ಆನಂದದ ನಿರ್ಝರಿಯನ್ನು ಹರಿಸಿದಳು (ಎರಸೆ.೧೭). [←ಮರಾ. ದೃಷ್ಟಾದೃಷ್ಟ]

ದೃಷ್ಟಾದೃಷ್ಟಿಯೋಗ (ನಾ). = ದೃಷ್ಟಾದೃಷ್ಟಿ : ಚೆಲುವಕ್ಕೆ ನಲಿವಕ್ಕೆ ಬಲವು ಒಲವುಗಳಕ್ಕೆ ಶುಭಮಕ್ಕೆ ನಮ್ಮ ದೃಷ್ಟಾದೃಷ್ಟಿಯೋಗಕ್ಕೆ (ಹೃದಸ. ೫೬-೦೨). [ದೃಷ್ಟಾದೃಷ್ಟಿ + ಯೋಗ]

ದೃಷ್ಟಾದೇವಿಕಂದಲು (ನಾ). ಗೌರಿಯೆಂದಂ ಪೂಜೆ ಸಲ್ಲಿಸಂವ ಒಂದು ಬಗೆಯ ಪೂಜಾ ಪಾತ್ರೆ ; ಅಮ್ಮನ ಕಂದಲಂ : ಹಳೆಯ ಸಂಪ್ರದಾಯದ ಅವರ ಮನೆಯಲ್ಲಿ ಇಂದಿಗೂ ಗೌರಿಯ ಪೆಟ್ಟಿಗೆಯ ಬಳಿ ದೃಷ್ಟಾದೇವಿ ಕಂದಲು ಇಟ್ಟು ಪೂಜಿಸುತ್ತಾರೆ (ರೂಢಿ).

[ದೃಷ್ಟಾದೇವಿ? + ಕಂದಲು (<ಕಂದಲ್೧)]

ದೃಷ್ಟಾನುಭಾವ (ನಾ). ಪ್ರತ್ಯಕ್ಷವಾದ ಅನುಭಾವ : ಗಿಡು ಗಿಡುವಿಗೆ ಕಿಱುಹಲ್ಲದೆ ಗಂಧ ಗಂಧ ಕೂಡಿ ದ್ವಂದ್ವವಾಗಿ ಬೆರದಲ್ಲಿ ಕದಂಬಗಂಧವಲ್ಲದ ಒಂದಱ ಗಂಧವೆಂದು ಸಂದಿಸಿ ತೆಗೆಯಲಿಲ್ಲ. ಅವರು ನಿಂದ ನಿಂದ ಸ್ಥಲಕ್ಕೆ ಸಂಬಂಧವಾಗಿಪ್ಪರು. ಇದು ದೃಷ್ಟಾನುಭಾವಸಿದ್ಧಿ (ಮದೇವ. ೨೮೩-೬೦).

[ದೃಷ್ಟ + ಅನುಭಾವ]

ದೃಷ್ಟಾನುಮಾನ (ನಾ). "ಪ್ರತ್ಯಕ್ಷಕ್ಕೆ ಅರ್ಹರಾದ ವಸ್ತುವಿನ ಜ್ಞಾನವನ್ನು ಹುಟ್ಟಿಸುವ ಅನುಮಾನವು ದೃಷ್ಟಾನುಮಾನ. ಉದಾ :– ಧೂಮಾನುಮಾನವು ಪ್ರತ್ಯಕ್ಷಕ್ಕೆ ಯೋಗ್ಯವಾದ ಅಗ್ನಿಯ ಜ್ಞಾನವನ್ನು ಹುಟ್ಟಿಸುವುದು" (ಭಾತರ್ಕ. ೪೪೩). [ದೃಷ್ಟ + ಅನುಮಾನ]

ದೃಷ್ಟಾರ್ಥಾಪತ್ತಿ (ನಾ). [ತತ್ತ್ವಶಾ] ವಿಮಾಮಾಂಸಕರೇ ಮೊದಲಾದ ದಾರ್ಶನಿಕರು ಅಂಗೀಕರಿಸಿರುವ ಅರ್ಥಾಪತ್ತಿ ಎಂಬ ಪ್ರಮಾಣದಲ್ಲಿ ಒಂದು ವಿಧ ; ಇದು ಕಣ್ಣಾರೆ ಕಂಡ ಅಂಶದಲ್ಲಿ ಪ್ರವರ್ತಿಸುವ ಅರ್ಥಾಪತ್ತಿ : P ವಿಮಾಮಾಂಸಕರು ವೇದಾಂತಿಗಳೇ ಮೊದಲಾದವರು ಪ್ರತ್ಯಕ್ಷ, ಅನುಮಾನ, ಉಪಮಾನ, ಆಗಮ, ಅರ್ಥಾಪತ್ತಿ, ಅನುಪಲಬ್ಧಿ ಎಂಬ ಆರು ಪ್ರಮಾಣಗಳನ್ನು ಅಂಗೀಕರಿಸಿದ್ದಾರೆ. ಒಂದು ಅಂಶದಿಂದ ಮತ್ತೊಂದು ಅಂಶವನ್ನು ಕಲ್ಪಿಸುವುದು ಅಂದರೆ ಉಪಪಾದ್ಯ (ಕಾರ್ಯ) ವಾದ ಅಂಶದಿಂದ ಉಪಪಾದ (ಕಾರಣ)ವನ್ನು ಕಲ್ಪಿಸುವುದು ಅರ್ಥಾಪತ್ತಿಪ್ರಮಾಣ. ನೈಯಾಯಿಕರು ಈ ಪ್ರಮಾಣವನ್ನು ಪ್ರತ್ಯೇಕವಾಗಿ ಒಪ್ಪದೆ ಅನುಮಾನ ಪ್ರಮಾಣದಲ್ಲಿ ಸೇರಿಸುತ್ತಾರೆ. ಇದರಲ್ಲಿ ದೃಷ್ಟಾರ್ಥಾಪತ್ತಿ, ಶ್ರುತಾರ್ಥಾಪತ್ತಿ ಎಂದು ಎರಡು ಬಗೆ : ಪಗಲುಣ್ಣದ ದೇವದತ್ತನ ದೇಹದ ಪೀನತ್ವವಂ ಕಂಡು ದೃಷ್ಟವಾದ ಪೀನತ್ವದಿಂ ತತ್ಕಾರಣವಾದ ರಾತ್ರಿಭೋಜನವಂ ಕಲ್ಪಿಸುವದೇ ದೃಷ್ಟಾರ್ಥಾಪತ್ತಿಯಕ್ಕುಂ (ವಿವೇಕ. ೧೯) ; ಅರ್ಥಾಪತ್ತಿಯು ದೃಷ್ಟಾರ್ಥಾಪತ್ತಿ ಮತ್ತು ಶ್ರುತಾರ್ಥಾಪತ್ತಿ ಎಂದು ಎರಡು ವಿಧ (ಭಾತರ್ಕ. ೬೦೩).

[ದೃಷ್ಟ + ಅರ್ಥಾಪತ್ತಿ]

ದೃಷ್ಟಿ (ನಾ). ೧. ನೋಡುವುದು ; ಈಕ್ಷಿಸುವುದು ; ಅವಲೋಕನ. ೨. ಕಣ್ಣಿನ ನೋಟ : "ನಿಭಾಳನಂ . . . ದರ್ಶನಂ, ದೃಷ್ಟಿಃ, ದ್ಯೋತನಂ– ಈ ೮ ನೋಟಂ" (ಹಶಾಪು. ೯೩-೪೦೩) : ಮುಖದ ಕಾಮಕಾರ್ಪಣ್ಯ ಮುಮಂ ದೃಷ್ಟಿಯ ದೈನ್ಯಮುಮನಱಿದು . . . ತುಂಬುರನಿಂತೆಂದಂ (ಸಂಭಿರ. ೪-೦೩) : ದೃಷ್ಟಿ ನಿನ್ನ ಪಾದದಲ್ಲಿ ನೆಡೋ ಹಾಗೆ . . . ಎನ್ನ ಗುಟ್ಟು ಅಭಿಮಾನಗಳ ಕಾಯೊ ನೀನು (ಪುರಂದ. ೧೩೬ ಪದ್ಧವಿ) : ಐತರೇಯೋಪನಿಷತ್ತಿನಲ್ಲಿ ಸಂಜ್ಞಾನ (ಚೇತನಭಾವ) . . . ದೃಷ್ಟಿ, ಧೃತಿ . . . ವಶ ಈ ಹದಿನಾರು ಮನಸ್ಸಿನ ವಿಕಾರಗಳೆಂದಿರುವವು (ಅಮೃತ. ೬-೩೬ ಟೀಕು). ೩. ಕಣ್ಣು ; ನೇತ್ರ : "ದೃಕ್, ದೃಷ್ಟಿಃ . . . ಈಕ್ಷಣಂ, ಅಕ್ಷಿ – ಈ ೯ ಕಣ್" (ಹಲಾಯು. ೪೬-೩೬) ; "ಚಕ್ಷುನೇತ್ರಂ ನಯನ ಮಂಬಕಂ ದೃಗ್ದೃಷ್ಟಿ . . . ಕಣ್ಗಳೆನಿಸಿಕ್ಕುಂ" (ಮಂಗರಾ. ೧೩-೨) ; ರವಿ ಲೋಕತ್ರಯಕೆಲ್ಲ ದೃಷ್ಟಿ (ಸೋಮೇಶ. ೪೬) : ಪಾಂಡವರು ಕೆಲರಲ್ಲಿ ಹರಿಯನು ನೋಡುವರು ನಿಜದೃಷ್ಟಿ ದಣಿಯಲು (ಕಾಶಿರಾ. ೪೪-೦೩). ೪. ಆಲೋಚನೆ ; ವಿಚಾರ : "ದೃಷ್ಟಿವಿಳೋಚನ ವಿಚಾರ ದರ್ಶನ ವಚನಂ" (ವಸು.ಶಿಂ. ೦೩೦-೬೨). ೫. ಅರಿವು ; ಜ್ಞಾನ ; ವಿವೇಕ :

ಜಡ ಮರ್ತ್ಯರಿಗೆ ನಿಶ್ಚಯವುಂಟೆ ದೃಷ್ಟಿವಿನಷ್ಟಮಾತ್ರರಿಗೆ (ನಿಭಾಗ. ೩-೦-೩). ೬. ಅಭಿಪ್ರಾಯ; ಧೋರಣೆ: ನಾನು ಆ ದೃಷ್ಟಿಯಿಂದ ಮಾತನಾಡಲಿಲ್ಲ (ಠೂಥಿ). 'ದೃಷ್ಟಿಕೋನ' ಪರಾ. ೭. [ಜೈನ] ಸಮ್ಯಗ್ದರ್ಶನ. 'ದೃಷ್ಟಿಮೋಹ', 'ದೃಷ್ಟಿವಿಭವ' ಪರಾ. ೮. [ನಾಟ್ಯ] ಕಣ್ಣಿನ ಚಲನೆಯಲ್ಲಿ ಒಂದು ಬಗೆ: ಧತ್ತೀಸದೃಷ್ಟಿ ಚೌಷಟ್ಟಿ ಹಸ್ತಂಗಳಂ ಬಿತ್ತರಿಸುವುದು ಕೋವೆನಿಕ್ಕು (ಪುಂಗಂಗಾ. ೨೩-೪). ೯. [ಜ್ಯೋತಿ] ಗ್ರಹಗಳು ತಾವಿರುವ ರಾಶಿಯಿಂದ ಇತರ ರಾಶಿಗಳನ್ನೂ ಅಲ್ಲಿರುವ ಗ್ರಹಗಳನ್ನೂ ನೋಡುವುದು: ನವಗ್ರಹಗಳಲ್ಲಿ ದೃಷ್ಟಿಯು ವಾಮದಕ್ಷಿಣ ಸಂಮುಖಗಳೆಂಬ ಭೇದದಿಂದ ಮೂರು ಬಗೆಯೆಂದು ತಿಳಿಯತಕ್ಕದ್ದು (ಅರ್ಕಮಾ. ೩೯).

ದೃಷ್ಟಿಇಡು = ಕಣ್ಣಿಡು; ಗವನಿಸು; ನಿಗಾ ವಹಿಸು: ಕೆಲವರು ಆಳುಗಳ ಕೆಲಸದ ಮೇಲೆ ದೃಷ್ಟಿಇಡುತ್ತಾರೆ (ಮುಂಬಯಿ. ೫-೩೧೩). ದೃಷ್ಟಿ ಕೊಡು = ಗವನಿಸು; ಕಾಳಜಿ ವಹಿಸು: ಸಂಬಳದ ಮೇಲೆ ದೃಷ್ಟಿ ಕೊಡದೆ (ಮುಂಬಯಿ. ೫-೩೧೩). ದೃಷ್ಟಿಗೆ ಬೀಳು = ಕಣ್ಣಿಗೆ ಬೀಳು; ಗೋಚರವಾಗು; ಕಾಣು: ದೈವಯೋಗದಿಂದ ಅಲ್ಲೇ ಸಮೀಪದಲ್ಲಿ ಒಂದು ಮರದ ಟೊಂಗೆಯು . . . ಅವನ ದೃಷ್ಟಿಗೆ ಬಿತ್ತು (ಮುಂಬಯಿ. ೪-೩೮); ನಾನು ಆಂಗಳದಲ್ಲಿ ದೃಷ್ಟಿಗೆ ಬೀಳುತ್ತಲೇ . . . ನನ್ನ ಚಿಕ್ಕ ತಮ್ಮ ಜಯಜಯಕಾರ ಮಾಡುತ್ತ ಓಡಿ ಬಂದು ನನ್ನ ಮೈ ಅಡರಿದ (ಶ್ಯಾಮಶಾ. ೧೩೫). ದೃಷ್ಟಿಚುಕ್ಕೆ = ದೃಷ್ಟಿಯ ಬಟ್ಟು: ದೃಷ್ಟಿಚುಕ್ಕೆಯು ದೊಂದನಲ್ಲ ಚೆಂದಂಗಳ್ಗವಿಟ್ಟಹನು ಪರಮೇಷ್ಠಿ. ಶಶಿಗೆ ಮಶಿಯವೊಲು (ಪುಂಕುಳ. ೪೪೭). ದೃಷ್ಟಿ ತಗಲು =ಕಣ್ಣೆಂಜಲಾಗು; ಕೆಟ್ಟಕಣ್ಣು ತಗಲು: ಮಗುವಿಗೆ ದೃಷ್ಟಿ ತಗಲುವಂತೆ ಅಲಂಕಾರ ಮಾಡಿದ್ದರು (ಠೂಥಿ). ದೃಷ್ಟಿ ತಪ್ಪಿಸು = ಕಣ್ಣಿಗೆ ಬೀಳದಂತಿರು; ಮರೆಯಾಗಿರು: ಈಚೀ ಗೆ ಅವನು ದೃಷ್ಟಿ ತಪ್ಪಿಸಿ ಓಡಾಡಲು ವ್ಯಾಪಾರಂಭಿಸಿದ್ದಾನೆ (ಠೂಥಿ). ದೃಷ್ಟಿ ತಾಗು = ದೃಷ್ಟಿ ತಗಲು: ದೃಷ್ಟಿ ತಾಗಿತೆ ನಮ್ಮ ಕೃಷ್ಣರಾಯಗೆ (ಪುರಂದ. ೩-೧೭೨ ಪಠ್ಯವಿ): ದೃಷ್ಟಿ ತಾಗಿತ ನಿನಗೆ ರಂಗಯ್ಯ (ಪುಕೀರ್ತ. ೩-೦೦-೦). ದೃಷ್ಟಿ ತೆಗೆ=ಇಳಿ ತೆಗೆ; ದೃಷ್ಟಿದೋಷವನ್ನು ಪರಿಹರಿಸು: ಕಾಮಾಕ್ಷಿಗೂ ಗಿರಿಜಳ ಪ್ರೇತ ಏನೋ ಕೀಟಲೆ ಮಾಡಿರಬೇಕು. ಇರು, ದೃಷ್ಟಿತೆಗೆಯುತ್ತೇನೆ ಎನ್ನುತ್ತ ವೆಂಕಮ್ಮ ಒಳನಡೆದರು (ಪರ್ವತ. ೮೩). ದೃಷ್ಟಿ ನಿವಾಳಿಸು = ದೃಷ್ಟಿ ತೆಗೆ: ಶ್ಯಾಮರಾಯ ಬಂದು ವಾಡೆಯ ಬಾಗಿಲಲ್ಲಿಳಿದಾಗ ರಾಧಾಕಕ್ಕಿ ಮಗನಿಗೆ ದೃಷ್ಟಿ ನಿವಾಳಿಸಿ ಒಗೆದರು (ದೀಪಹ. I, ೩೩). ದೃಷ್ಟಿ ಬಡಿ = ದೃಷ್ಟಿ ತಗಲು: ಮಾದುಮಕ್ಕಳು ದೃಷ್ಟಿ ಬಡಿಯುವಂತಿದ್ದರು (ಠೂಥಿ). ದೃಷ್ಟಿ ಬೀಳು = ದೃಷ್ಟಿ ತಗಲು: ಕೆಟ್ಟವರ ದೃಷ್ಟಿ ಬೀಳದಿರಲಿ ಎಂದೇ ವನಜ ಮುಂಡಾಗ್ರತೆ ವಹಿಸಿದ್ದಳು (ದೀವಹಿಂ. ೦೦೭); ಮಗುವಿಗೆ ದೃಷ್ಟಿ ಬಿದ್ದಿರಬೇಕು. ನೆನ್ನೆಯಿಂದ ಒಂದೇ ಸಮನೆ ರಚ್ಚೆ ಹಿಡಿದಿದೆ (ಠೂಥಿ). ದೃಷ್ಟಿ ಮುರಿ = ದೃಷ್ಟಿ ತೆಗೆ: ತೊಟ್ಟಿಲೊಳಗಿನ ಕಂದ ತೋಳು ಬೀಸುವ ಚಂದ ರಟ್ಟ ನೊಂದಾವು ಎಲೆ ಕಂದ ನಿಮ್ಮವ್ವ ದೃಷ್ಟಿ ಮುರಿಲಾಕ ತಿಳಿಯಾಳು (ಹಳ್ಳಿಯ. ೭೪). ದೃಷ್ಟಿಯ ಬಟ್ಟು, ದೃಷ್ಟಿಯಬೊಟ್ಟು = ಕಣ್ಣೆಂಜಲಾಗದಂತೆ (ಹಣೆ, ಗಲ್ಲಗಳ ಮೇಲೆ ಇಡುವ ಕಪ್ಪು ಬೊಟ್ಟು: ಕೌರವೇಂದ್ರನ ವರೂಹ ಭಸ್ಮವ ಮಾಡಿ ದೃಷ್ಟಿಯ ಬಟ್ಟ ನೊಸಲಲ್ಲಿ ಇರಿಸುವೆನು (ಜಿನಭಾ. ೬೪-೪೩): ಮಗುವಿಗೆ ಕಣ್ಣೆಂಜಲು ತಾಕದಂತೆ ದೃಷ್ಟಿಯ ಬೊಟ್ಟನ್ನಿಟ್ಟಿದ್ದರು (ಠೂಥಿ). ದೃಷ್ಟಿಯಾಗು = ಕೆಟ್ಟ ಕಣ್ಣು ತಗುಲು; ಕಣ್ಣೆಂಜಲಾಗು; ದೃಷ್ಟಿ ತಾಗು; ದೃಷ್ಟಿಯಾಯ್ತೊಲೆಲೆ ಉಪ್ಪಾರತಿಯನೆತ್ತು (ಬಸರ. ೬-೦೩೩); ಯಾರಾಗಾದರೂ ದೃಷ್ಟಿಯಾದರೆ. ನನ್ನ ಅಜ್ಜಿ . . . ತುಸು ಬೂದಿಯನ್ನು ತಂದು, ಮಂತ್ರವನ್ನು ಹೇಳುತ್ತ ಅದನ್ನು ತಿಕ್ಕುತ್ತಿದ್ದಳು (ಶ್ಯಾಮಶಾ. ೦೩೫). ದೃಷ್ಟಿಯಾರೆ = ಕಣ್ಣು ತುಂಬುವಂತೆ; ತೃಪ್ತಿಯಾಗುವಂತೆ; ಕಣ್ಣಾರೆ: ಕಟ್ಟದಿರಿನಲ್ಲಿ ಶಿವಭಕ್ತನ ಕಂಡು ದೃಷ್ಟಿ[ಯಾ]ರೆ ಶರಣೆಂದೊಡೆ . . . ಪಾಪ ಬಿಟ್ಟು ಹಿಂಗುವುದು ನೋಡಾ (ಬಸವ. ೦೪೦); ಹೊತ್ತಾಜೆ ಎದ್ದು ಶಿವಲಿಂಗ ದೇವನ ದೃಷ್ಟಿ[ಯಾ]ರೆ ನೋಡದವನ ಸಂಸಾರವೇನವನ (ಬಸವ. ೦೫೭). ದೃಷ್ಟಿಯೆತ್ತು = ದೃಷ್ಟಿತೆಗೆ: ಆರತಿಗೆ ಬಂದಿದ್ದವರು ಹೊರಟ ನಂತರ ಮಗುವಿಗೆ ದೃಷ್ಟಿಯೆತ್ತಿದರು (ಠೂಥಿ). ದೃಷ್ಟಿ ಹರಿಸು = ನೋಡು; ಈಕ್ಷಿಸು: ಬೀದಿಯಲ್ಲಿ ನಡೆದು ಬರುತ್ತಿದ್ದ ವ್ಯಕ್ತಿಯ ಕಡೆಗೆ ಕುತೂಹಲದಿಂದ ದೃಷ್ಟಿ ಹರಿಸಿದರು (ಪುನಕು. ೩೭೬). [ಸಂ.]

ದೃಷ್ಟಿಕೋಣ (ನಾ). ೧. = ದೃಷ್ಟಿಕೋನ ೧: ವಿವಿಧ ದೃಷ್ಟಿಕೋಣದಿಂದ ನೋಡಬಯಸಿ ಬಂದ ಜನರಿಗೆ ತೃಪ್ತಿ – ಸಮಾಧಾನಗಳನ್ನು ತಂದು ಕೊಡಲು ಸಾಧನವಾದ ದೇವಾಲಯವು . . . ಆಧ್ಯಾತ್ಮಿಕಮಾರ್ಗಾನ್ವೇಷಣೆಮಾಡಲು ಪ್ರೇರಿಸುವಂತಾಯಿತು (ಧಾರಿದ. ೧೧). ೨. = ದೃಷ್ಟಿಕೋನ ೨: ಅನೇಕ ಮಂದಿ ಆಚಾರ್ಯರು ತಮ್ಮ ತಮ್ಮ ದೃಷ್ಟಿಕೋಣಗಳಿಂದ ಭಾಷ್ಯಗಳನ್ನು ಬರೆದಿದ್ದಾರೆ (ಧಾರಿದ. ೪೭). [ದೃಷ್ಟಿ + ಕೋಣ್ಯ]

ದೃಷ್ಟಿಕೋನ (ನಾ). ೧. ನೋಡುವ ರೀತಿ; ನೋಟದ ನಿಟ್ಟು: ಆದರೂ ನೋಡುವ ದೃಷ್ಟಿಕೋನ ಹೊಸದಾಗಿದೆ (ಕನಾಗಳ. ೪೪೩); ಕವಿಯೊಬ್ಬ ನನ್ನು ಕುರಿತು, ಅವನ ಸಮಗ್ರಕೃತಿಗಳನ್ನು ತೆಗೆದುಕೊಂಡು ನಾನಾ ದೃಷ್ಟಿಕೋನಗಳಿಂದ ಅವುಗಳನ್ನು ವೀಕ್ಷಿಸಿ (ಬಂಕಿಮ. ೦೦ ಮುನ್ನುಡಿ). ೨. ವಿಚಾರದ ಸರಣಿ; ಧೋರಣೆ; ಆಲೋಚನೆಯ ಮಾರ್ಗ: ನಮ್ಮ ಶಿಕ್ಷಣಸಂಸ್ಥೆಗಳು ಮೂರು ಮುಖ್ಯವಾದ ದಿಕ್ಪಥಗಳಲ್ಲಿ ತಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕು (ಶಿಕ್ಷದ. ೦೮).

[ದೃಷ್ಟಿ + ಕೋನ (<ಕೋಣ್)]

ದೃಷ್ಟಿಗೋಚರ (ನಾ). ೧. ಕಣ್ಣಿಗೆ ಕಾಣುವಂಥದು; ಗೋಚರವಾಗುವಂಥದು: ಸೊಡ್ಡಳದೇವನೆಲ್ಲರ ದೃಷ್ಟಿಗೋಚರದಾಗಲಲ್ಲಿಗೆ ಬಹನು (ಬಸಪು. ೩೩-೦೫). ೨. ನೋಟದ ಪಥ,–ಹರವು.

[ದೃಷ್ಟಿ + ಗೋಚರ]

ದೃಷ್ಟಿಗ್ರಾಹ್ಯ (ನಾ). ಕಂಡು ತಿಳಿಯಬೇಕಾದುದು; ಕಣ್ಣಿನ ಮೂಲಕ ತಿಳಿಯುವುದು: ಧ್ಯಾನದರ್ಶಿತ ದೇವತೆಗಳ ಈ ವರ್ಣನೆಯೇ ಮುಂದಿನ ಶಿಲ್ಪಕಲಾಚಾರ್ಯರ ಪರಿಭಾವನೆಯ ವಸ್ತುಗಳಾಗಿ, ಭಾರತೀಯ ದೇವ ದೇವತಾವಿಗ್ರಹಗಳ ಮಾದರಿಗಳೂ ಆದುವೆನ್ನುವದು ಗಮನಾರ್ಹವಾದ ಸಂಗತಿ. ಈ ಎಲ್ಲ ವೈವಿಧ್ಯಮಯವಾದ ರೂಪಗಳೆಲ್ಲವೂ ದೃಷ್ಟಿಗ್ರಾಹ್ಯವೇ ಹೊರತು ಮುಟ್ಟಿಗ್ರಾಹ್ಯವೆಲ್ಲ (ಸಾಂಶಿ. ೯೯). [ದೃಷ್ಟಿ + ಗ್ರಾಹ್ಯ]

ದೃಷ್ಟಿದಾನ (ನಾ). ಕುರುಡನಿಗೆ ನೋಡುವ ಶಕ್ತಿಯನ್ನುಂಟುಮಾಡುವುದು; ಅಂಧತ್ವವನ್ನು ತಪ್ಪಿಸುವುದು: ಡಾಕ್ಟರ್ ಮೋದಿಯವರು ನಾಡಿನಲ್ಲೆಲ್ಲಾ ಸುತ್ತಾಡಿ ಅನೇಕ ಕುರುಡರಿಗೆ ದೃಷ್ಟಿದಾನ ಮಾಡಿದ್ದಾರೆ (ಠೂಥಿ). [ದೃಷ್ಟಿ + ದಾನ]

ದೃಷ್ಟಿದೋಷ (ನಾ). ೧. ನೋಟದಲ್ಲಿರುವ ದೌರ್ಬಲ್ಯ, – ನ್ಯೂನತೆ; ಕಣ್ಣಿನ ಐಬು: ನೀವು ತುಂಬಾ ಇಳಿದು ಹೋಗಿದ್ದೀರಿ . . . ಹಾಗೇನಿಲ್ಲ. ಅದು ನಿಮ್ಮ ದೃಷ್ಟಿದೋಷವಿರಬೇಕು (ಕುಸುಸಂ. ೨೧೦); ನಮ್ಮ ಕಣ್ಣಿಗೆ ಅಧಿಕಕಾಂತಿಯ ನಕ್ಷತ್ರಗಳು ಕ್ಷೀಣಕಾಂತಿಯವುಗಳಿಗಿಂತ ದೊಡ್ಡದಾಗಿ ಕಾಣುವುದಕ್ಕೆ ಕಣ್ಣಿನ ದೃಷ್ಟಿದೋಷವೇ ಕಾರಣ (ನಕ್ಷತ್ರ. ೫): ಮೆಳ್ಳಗಣ್ಣು ಮಾಡುವುದು . . . ಪದೇ ಪದೇ ಕಣ್ಣುಜ್ಜುವುದು, ಕಾರಣವಿಲ್ಲದೆ ರೇಗುವುದು ಮುಂತಾದ ಚಿಹ್ನೆಗಳು ದೃಷ್ಟಿದೋಷವಿದ್ದಲ್ಲಿ ಕಾಣಿಸಿಕೊಳ್ಳುವುದು (ನಿಮ್ಮರೃ. ೩೩). ೨. ಕಣ್ಣಿನ ಸರಿನಿಂದ ಆಗುವ ಕೆಡುಕು; ಕಣ್ಣೆಂಜಲು: "ಕಣ್ಣೆಂಜಲನೆ ದೃಷ್ಟಿದೋಷವು" (ತಲ್ಲಮಂ. ೬೪).

[ದೃಷ್ಟಿ + ದೋಷ]

ದೃಷ್ಟಿದ್ರವಣ (ನಾ). [ಕಾವಂಶಾ] ನೋಟ ಮಾತ್ರದಿಂದಲೇ ರೇತಸ್ಸು ಸ್ಖಲನವಾಗುವುದು ; ನೋಟದಿಂದ ಉಂಟಾಗುವ ಶುಕ್ಲದ್ರವಣ : ಪೋಗರಾಜದೆಯನಿಮಿಷತೆವಡದಿರಲ್ಕವಳ ನಾಗಭೂಷಣ ನಿಟ್ಟಿಸಲ್ ನೋಟನೋಟವೊಂದಾಗೆ ದೃಷ್ಟಿದ್ರವಣವಾಗಿ ಕುಳ್ಳಿರ್ದು ತಲೆವಾಗಿ ಲಜ್ಜಿತೆಯಾದಳು (ಛಕ್ಕಾಚ. ೩-೩೬). [ದೃಷ್ಟಿ + ದ್ರವಣ]

ದೃಷ್ಟಿದ್ರಾವಣ (ನಾ). ಕಣ್ಣು ಸೋರುವಿಕೆ ; ಸೋರುಗಣ್ಣಿನ ರೋಗ : ದೃಷ್ಟಿದ್ರಾವಣಕ್ಕೆ : –ಬಿದುರಿಲೆ, ಹೊನ್ನೆ, ಕೆಂಪಿನ ಅಗಸೆಯ ಹೂ, ನಾಂಗುಲಿಕೆ, ಪಾದರಸ ಇವನ್ನು ಕೂಡಿ ಮರ್ದಿಸಿ ತಿಲಕವಿಡಲು ದೃಷ್ಟಿ ದ್ರಾವಣ ಮಾಣ್ಗುಂ (ವಿಕ್ಕವಿ. ೩೧೦). [ದೃಷ್ಟಿ + ದ್ರಾವಣ]

ದೃಷ್ಟಿಪಟಲ (ನಾ). ಕಣ್ಣುಗುಡ್ಡೆಯ ಹಿಂಭಾಗದಲ್ಲಿರುವ, ಬೆಳಕಿನ ಸಹಾಯದಿಂದ ಬಿಂಬಗಳನ್ನು ಗುರುತಿಸುವ ಪೊರೆ : ಕಾಶಬಿಂದುವಿನ ಹಿಂಬದಿಯಲ್ಲಿ ಗಾಜಿನಂತಿರುವ ಲೆನ್ಸ್ ಇರುತ್ತದೆ . . . ಈ ಲೆನ್ಸ್‌ನ ಹಿಂದುಗಡೆಯಲ್ಲಿ ದೃಷ್ಟಿಪಟಲ ಇರುತ್ತದೆ (ನಿಜ್ಮಾದ್ಯ. ೦೦೩).

[ದೃಷ್ಟಿ + ಪಟಲ್ಕ]

ದೃಷ್ಟಿಪಥ (ನಾ). ಕಣ್ಣಿಗೆ ಕಾಣುವಷ್ಟು ಪ್ರದೇಶ ; ಕಣ್ಣಿನ ದೃಷ್ಟಿ ಹೋಗುವಷ್ಟು ದೂರ : ಎಷ್ಟು ಹೊತ್ತು ಕಾದು ನೋಡಿದರೂ ಅವನು ಬರುವುದು ದೃಷ್ಟಿಪಥಕ್ಕೆ ಬೀಳಲೇ ಇಲ್ಲ (ರೂಢಿ). [ದೃಷ್ಟಿ + ಪಥ]

ದೃಷ್ಟಿಪಾಟವ (ನಾ). ನೋಟದ ಶಕ್ತಿ,–ಪರಿಪಾಟಿ ; ಕಣ್ಣಿನ ಚೈತನ್ಯ : ದೃಷ್ಟಿಪಾಟವ ಕುಗ್ಗಿದಾಗ ವೈದ್ಯರ ಸಲಹೆಯನ್ನು ಪಡೆಯುವುದು ಒಳ್ಳೆಯದು (ರೂಢಿ). [ದೃಷ್ಟಿ + ಪಾಟವ]

ದೃಷ್ಟಿಪಾತ (ನಾ). ನೋಡುವಿಕೆ ; ನೋಟ : ನಿನ್ನ ಲೀಲಾಲಸದ್ದೃಷ್ಟಿ ಪಾತವೆರ್ದೆಯೊಳ್ ನೆಲಸಿರ್ದುವು (ಆದಿಪು. ೩-೨೩) ; ಅನಂತರಮಾಬದ್ಧ ಮಂಡಲಾಸೀನನಾಗಿರ್ದು ಸಚಿವಮುಖಿವಂನತಿಪ್ರಸನ್ನದೃಷ್ಟಿಪಾತದಿನಭಿ ಮುಖಂ ಮಾಡಿ (ಹಂದ್ರಪು. ೯-೦೦೪ ವ) ; ಪರಮಪುರುಷನ ದೃಷ್ಟಿಪಾತದಿ ನಿರದೆ ಸಂಚಿತಸಕಲ ದುಷ್ಕೃತ ಹರದುದಿಸಿದಳು ಶಿಲೆಯ ಮಧ್ಯದೊಳಬಲೆ ಗೌತಮನ (ತೊರಣಾ. ೦-೦೨-೦೯) ; ಪೈದಿಗಳ ನೂರಾರು ದೃಷ್ಟಿಗಳು ತನ್ನಲ್ಲಿಯೇ ನಾಟಿದ್ದಂತೆ ಅವನಿಗೆ ಭಾಸವಾಗುತ್ತಿತ್ತು. ಆ ದೃಷ್ಟಿಪಾತವನ್ನು ನೋಡಿದರೆ ಎರಡು ಕಡೆಯಿಂದಲೂ ತಾನು ಹೊಡೆತಕ್ಕೆ ಸಿಕ್ಕಿದಂತೆ ಅವನಿಗೆ ಅನುಭವವಾಗುತ್ತಿತ್ತು (ಪುನರು. ೨೩೫). [ದೃಷ್ಟಿ + ಪಾತ1]

ದೃಷ್ಟಿಪುಷ್ಪ (ನಾ). ಕಣ್ಣುಗುಡ್ಡೆಯ ಮೇಲೆ ಉಂಟಾಗುವ ಬೆಳ್ಳನೆಯ ಮಚ್ಚೆ ; ಕಣ್ಣಿನಲ್ಲಿ ಬೆಳೆಯುವ ಹೂವು : ದೃಷ್ಟಿಪುಷ್ಪ, ದ್ವಿತೀಯ ಪ್ರಕಾರ :–ಟಂಕಣವನ್ನು ಗಂಧಕದೊಳಗೆ ತೇದು ಹೂವಿನ ಮೇಲೆ ಚಿಮ್ಮಿ ಹೂವನ್ನು ಕಟ್ಟಾಗಿ ಕಟ್ಟಿ . . . ೧ ಘಳಿಗೆ ಪಚಿಸುವುದು (ವಿಕ್ಕವಿ. ೦೬೨).

[ದೃಷ್ಟಿ + ಪುಷ್ಪ]

ದೃಷ್ಟಿಭರ್ತ್ಸನೆ (ನಾ). ಕಣ್ಣಿನಿಂದ ಸೂಚಿಸುವ ತಿರಸ್ಕಾರ,–ಹೀಯಾಳಿಕೆ, –ನಿಂದೆ : ದೇವಿ ... ನೋಡಿದರ್ ನೀರವಮಸುರನಂ, ದೃಷ್ಟಿಭರ್ತ್ಸನೆಗಳ್ಕಿ ಸೆಡೆತುದೆನಲಳಿಯಾಸೆ ತಾಂ ರಕ್ಕಸಗೆ ! (ಶ್ರೀರಾಮಾ. ೩೩೪-೩೬).

[ದೃಷ್ಟಿ + ಭರ್ತ್ಸನೆ]

ದೃಷ್ಟಿಭೇದ (ನಾ). ೧. ಆಲೋಚನೆಯಲ್ಲಿರುವ ಭೇದ : ವಿಚಾರದಲ್ಲಿರುವ ವ್ಯತ್ಯಾಸ : ಕೆಲವು ವಿಲಾಯಿತಿ ವಿದ್ವಾಂಸರು ಬಹುಶ್ರುತರಾದರೂ ಅವರಿಗೆ ಭಾರತೀಯ ಲಲಿತಕಲೆಗಳ ಪೂರ್ಣರೂಪ ಕಂಡುಬಂದಿಲ್ಲ. ಇದಕ್ಕೆ ದೃಷ್ಟಿಭೇದವೇ ಕಾರಣವೆನ್ನಬಹುದು (ಕಾಕಥ. ೦೭೭). ೨. [ನಾಟ್ಯ] ಕಣ್ಣಾಲಿಯನ್ನು ತಿರುಗಿಸುವ ರೀತಿ,–ಕ್ರಮ; Pಇದು ಮೂರುವತ್ತಾರು ಬಗೆ. ಪ್ರಮುಖವಾಗಿ ಇದನ್ನು ಮೂರು ವಿಭಾಗ ಮಾಡಬಹುದು ೧. ಸರಸದೃಷ್ಟಿ. ೨. ಸ್ಥಾಯಿದೃಷ್ಟಿ. ೩. ಸಂಚಾರಿದೃಷ್ಟಿ. ಸರಸ ದೃಷ್ಟಿಯಲ್ಲಿ ಎಂಟು ಭೇದಗಳಿವೆ. ೧. ಕಾಂತ (ನೋಡುವ ವಸ್ತುವನ್ನು ಹೀರುವಂತೆ ಕಣ್ಣನ್ನು ಅರಳಿಸಿ ಅನುರಾಗ ಹೆಚ್ಚುವಂತೆ ಹುಬ್ಬನ್ನು ಚಲಿಸಿ ಕಡೆಗಣ್ಣಿನಿಂದ ನೋಡುವುದು). ೨. ಹಾಸ್ಯ (ಕರೀಗುಡ್ಡೆಯನ್ನು ಸ್ವಲ್ಪ ಒಳಕ್ಕೆ ಮಾಡಿ ವಿಚಿತ್ರವಾಗಿ ಸುತ್ತಿಸಿ ಮೆಲ್ಲನೆ ಸುಮಾರಾಗಿ ಮತ್ತು ಜಾಗ್ರತೆಯಾಗಿ ಕಣ್ಣನ್ನು ವಿಟುಕಿಸುವುದು). ೩. ಕರುಣ (ಕಲಕಿದ ವನಸ್ಸಿನಿಂದ ಕಣ್ಣೀರು ತುಂಬಿಸಿ ರೆಪ್ಪೆ ಬಡಿಯುತ್ತ ವಂಗಿನ ತಂದಿಯನ್ನು ನೋಡುವುದು). ೪. ರೌದ್ರ (ಹುಬ್ಬನ್ನು ಗಂಟಿಕ್ಕಿ, ಕಣ್ಣನ್ನು ಕೆಂಪಗೆ ಮಾಡಿ ರೆಪ್ಪೆ ಬಡಿಯದೆ ನಟ್ಟ ದೃಷ್ಟಿಯಲ್ಲಿ ಆತುರದಿಂದ ನೋಡುವುದು). ೫. ವೀರ (ಪ್ರಜ್ವಲಿಸುವ ಕಡೆಗಣ್ಣ ನಟ್ಟ ಸಮಾರ್ಧ ದೃಷ್ಟಿಯಲ್ಲಿ ಗಾಂಭೀರ್ಯದಿಂದ ನೋಡುವುದು). ೬. ಭಯ (ರೆಪ್ಪೆಯನ್ನಗಲಿಸಿ ಮೇಲಕ್ಕೆತ್ತಿ ಹೆದರಿಕೆಯಿಂದ ಆಲಿಯನ್ನು ಹೆಚ್ಚಾಗಿ ತಿರುಗಿಸುವುದು). ೭. ಬೀಭತ್ಸ (ಆಲಿಯನ್ನೂ ರೆಪ್ಪೆಯನ್ನೂ ಚಲಿಸಿ ರೆಪ್ಪೆಯನ್ನು ಅರ್ಧ ಮುಚ್ಚಿ ಕಡೆಗಣ್ಣಿನಿಂದ ನೋಡುವುದು). ೮. ಅದ್ಭುತ (ರೆಪ್ಪೆಯನ್ನು ಸ್ವಲ್ಪ ಮುಚ್ಚಿ ಪ್ರಸನ್ನತೆಯಿಂದ ಕೂಡಿ ಬಿಳೀಗುಡ್ಡೆ ಮಾತ್ರ ಕಾಣುವಂತೆ ಕರೀ ಗುಡ್ಡೆಯನ್ನು ಒಂದು ಕಡೆಗೆ ತರುವುದು). ಸ್ಥಾಯಿದೃಷ್ಟಿಯಲ್ಲಿ ಎಂಟು ಭೇದಗಳಿವೆ. ೧. ಸ್ನಿಗ್ಧ (ಹೆಚ್ಚು ಬಯಕೆಯನ್ನು ಸೂಚಿಸುತ್ತ ಹುಬ್ಬನ್ನು ನೆಟ್ಟಗೆ ಮಾಡಿ ಪ್ರಸನ್ನತೆ, ಮಾಧುರ್ಯ ಇವುಗಳಿಂದ ಕೂಡಿ ಕಡೆಗಣ್ಣಿನ ನೋಡುವುದು). ೨. ಹೃಷ್ಟ (ಗಡ್ಡವನ್ನರಳಿಸಿ ರೆಪ್ಪೆಯನ್ನು ಸ್ವಲ್ಪ ಮುಚ್ಚಿ ತೃಪ್ತಿಯನ್ನುಹೊಂದಿ ಹಸನ್ಮುಖವಾಗಿ ಕೋಮಲ ದೃಷ್ಟಿಯಿಂದ ನೋಡುವುದು). ೩. ದೀನ (ಕಣ್ಣೀರಿನಿಂದ ಕೂಡಿ ಕಣ್ಣನ್ನು ಅರ್ಧ ಮುಚ್ಚಿ ನಿಧಾನವಾಗಿ ದೃಷ್ಟಿಯನ್ನು ಚಲಿಸುವುದು). ೪. ಕ್ರುದ್ಧ (ಸ್ಥಿರವಾಗಿ ರೆಪ್ಪೆಯನ್ನು ಉಬ್ಬಿಸಿ ಹುಬ್ಬನ್ನು ಗಂಟಿಕ್ಕಿ ಕರೀಗುಡ್ಡೆಯನ್ನು ಸ್ವಲ್ಪ ಚಲಿಸುತ್ತ ಬಿರುಸಾಗಿ ನೋಡುವುದು). ೫. ದೃಪ್ತ (ಕಣ್ಣನ್ನು ಅರಳಿಸಿ, ಗರ್ವ ಮತ್ತು ಸಂತೋಷಗಳಿಂದ ಕೂಡಿ ಸ್ಥಿರ ದೃಷ್ಟಿಯಿಂದ ನೋಡುವುದು). ೬. ಭಯ (ಸಡಗರದಿಂದ ಕೂಡಿ ಹೆದರುತ್ತ ಕಣ್ಣನ್ನು ಪುನಃ ಪುನಃ ಮುಚ್ಚಿ ತೆರೆದು ಆಲಿಗಳು ಕೆಳಕ್ಕೆ ಬೀಳುವುವೋ ಎನ್ನುವಂತೆ ದೃಷ್ಟಿಯನ್ನು ಚಲಿಸುವುದು). ೭. ಜುಗುಪ್ಸಿತ (ರೆಪ್ಪೆಗಳನ್ನು ಸಂಕುಚಿಸಿ ಕರೀಗುಡ್ಡೆಗಳನ್ನು ಒಳಕ್ಕೆ ಮಾಡಿ ಸುಳ್ಳುನೋಟದಿಂದ ಕಂಡೂ ಕಾಣದಂತೆ ಬೇಸರದಿಂದ ನೋಡುವುದು). ೮. ವಿಸ್ಮಿತ (ಪ್ರೀತಿಯಿಂದ ಕೂಡಿ ಕಣ್ಣನ್ನು ತೆರೆದು ರೆಪ್ಪೆ ಬಡಿಯದೆ ಮೇಲ್ನೋಟದಿಂದ ದೃಷ್ಟಿಸಿ ನೋಡುವುದು). ಸಂಚಾರಿದೃಷ್ಟಿಯಲ್ಲಿ ಇಪ್ಪತ್ತು ಭೇದಗಳಿವೆ. ೧. ಶೂನ್ಯ (ಚಲಿಸದೆ, ನೋಡುವ ಪದಾರ್ಥದ ಅರಿವಿಲ್ಲದಂತೆ ಮಬ್ಬಾದ ಸಮ ದೃಷ್ಟಿಯಿಂದ ನೋಡುವುದು). ೨. ಮಲಿನ (ದೃಷ್ಟಿಸಿ ನೋಡಿ ರೆಪ್ಪೆಗಳನ್ನು ಅರ್ಧ ಮುಚ್ಚಿ ಪುನಃ ರೆಪ್ಪೆಯ ರೋಮಗಳನ್ನು ಅದಿರಿಸುತ್ತ ಕಡೆಗಣ್ಣನ್ನು ಕೆಂಪಗೆ (ಮಬ್ಬು) ಮಾಡಿ ನೋಡುವುದು). ೩. ಶ್ರಾಂತ (ದೃಷ್ಟಿಯನ್ನು ಬಹಳ ದೂರ ಪ್ರಸರಿಸದೆ ಸ್ವಲ್ಪ ಮೇಲು ದೃಷ್ಟಿ ಮಾಡಿ ರೆಪ್ಪೆಯ ರೋಮಗಳನ್ನು ಸೇರಿಸಿ ಕರೀಗುಡ್ಡೆ ಬೀಳುವುದೋ ಎನ್ನುವಂತೆ ಕಡೆಗಣ್ಣಿನಿಂದ ನೋಡುವುದು). ೪. ಲಜ್ಜಿತ (ರೆಪ್ಪೆಗಳನ್ನು ಮೇಲಕ್ಕೂ ಕೆಳಕ್ಕೂ ಚಲಿಸುತ್ತಾ ಕೆಳಗೆ ನೋಡುವುದು). ೫. ಶಂಕಿತ (ಚಂಚಲ ಮತ್ತು ಸ್ಥಿರದೃಷ್ಟಿಗಳಿಂದ ಪಕ್ಕವನ್ನು ಮತ್ತೆ ಮತ್ತೆ ನೋಡಿ ಜಾಗ್ರತೆ ತಿರುಗುವುದು). ೬. ಮುಕುಳ (ಆಲಿಗಳನ್ನು ಚಲಿಸದೆ ರೆಪ್ಪೆಗಳನ್ನು ಮುಚ್ಚುವುದು). ೭. ಅರ್ಧ ಮುಕುಳ (ರೆಪ್ಪೆಗಳನ್ನು ಅರ್ಧ ಮುಚ್ಚಿ ಆಲಿಗಳನ್ನು ಮೆಲ್ಲಗೆ ತಿರುಗಿಸುವುದು). ೮. ಗ್ಲಾನ (ಕರೀಗುಡ್ಡೆಗಳನ್ನು ಒಳಕ್ಕೆ ಮಾಡಿ

ಆಲಸ್ಯದಿಂದ ಕೂಡಿ ನಿಧಾನವಾಗಿ ತಿರುಗಿಸುವುದು). ೯. ಜಿಹ್ಮೆ (ಆಲಿಗಳು ಕೆಳಕ್ಕೆ ಬೀಳುವುವೋ ಎನ್ನುವಂತೆ ಅರೆಗಣ್ಣಿನಿಂದ ಪಕ್ಕವನ್ನು ನೋಡುವುದು). ೧೦. ಕುಂಚಿತ (ಆಲಿಗಳನ್ನು ಒಳಕ್ಕೆ ಮಾಡಿ ರೆಪ್ಪೆಗಳನ್ನು ಸ್ವಲ್ಪ ಮುಚ್ಚಿ ನೋಡುವುದು). ೧೧. ವಿತರ್ಕಿತ (ರೆಪ್ಪೆಗಳನ್ನೂ ಮತ್ತು ಆಲಿಗಳನ್ನೂ ಜಾಗ್ರತೆ ತಿರುಗಿಸುವುದು). ೧೨. ಅಭಿತಪ್ತ (ರೆಪ್ಪೆಗಳನ್ನು ಚಲಿಸುತ್ತ ವೇಃನೆ ನೋಡುವುದು). ೧೩. ವಿಷಣ್ಣ (ರೆಪ್ಪೆಗಳನ್ನು ಬಡಿಯುತ್ತ ಅರಳಿಸಿ ಆಲಿಗಳನ್ನು ಚಲಿಸದೆ ನೋಡುವುದು). ೧೪. ಲಲಿತ (ಮುಗುಳ್ನಗೆಯಿಂದ ಕೂಡಿ ಅನುರಾಗ ಹೆಚ್ಚುವಂತೆ ಹುಬ್ಬು ಹಾರಿಸುತ್ತ ಕಡೆಗಣ್ಣಿನಿಂದ ನೆಲವನ್ನು ನೋಡುವುದು). ೧೫. ಆಕೇಕರ (ಇನ್ನೊಂದನ್ನು ನೋಡುವಾಗ ರೆಪ್ಪೆಯನ್ನು ಅರ್ಧ ಮುಚ್ಚಿ ಕಡೆಗಣ್ಣಿನಿಂದ ಆಲಿಗಳನ್ನು ಪುನಃ ಪುನಃ ಚಲಿಸುವುದು). ೧೬. ವಿಕೋಶ (ರೆಪ್ಪೆಗಳನ್ನರಳಿಸಿ ಬಡಿಯದೆ ಆಲಿಗಳನ್ನು ತಿರುಗಿಸುವುದು). ೧೭. ವಿಭ್ರಾಂತ (ಕಣ್ಣುಗುಡ್ಡೆಯನ್ನು ಅರಳಿಸಿ ಚಂಚಲ ದೃಷ್ಟಿಯಿಂದ ನೋಡುವುದು). ೧೮. ವಿಪ್ಲುತ (ರೆಪ್ಪೆಗಳನ್ನು ಅದಿರಿಸುತ್ತ ಚಂಚಲದೃಷ್ಟಿಯಿಂದ ಅರೆಗಣ್ಣಲ್ಲಿ ನೋಡುವುದು). ೧೯. ತ್ರಸ್ತ (ಕಣ್ಣನ್ನರಳಿಸಿ ಹೆದರಿದಂತೆ ರೆಪ್ಪೆಗಳನ್ನು ಸುತ್ತಿಸುವುದು). ೨೦. ಮದಿರೆ: ಇದು ಮೂರು ಬಗೆ. ಅ. ತರುಣ (ಕಣ್ಣನ್ನರಳಿಸಿ ಕಡೆಗಣ್ಣಿನಿಂದ ಕಂಡೂ ಕಾಣದಂತೆ ಆಲಿಯನ್ನು ಸುತ್ತಿಸುತ್ತ ನೋಡುವುದು). ಆ. ಮಧ್ಯಮ (ರೆಪ್ಪೆಗಳನ್ನು ಸ್ವಲ್ಪ ಬಗ್ಗಿಸಿ ಗಾಬರಿಯಿಂದ ನೋಡಿ ತಾರೆಯನ್ನು ಸುತ್ತಿಸಿ ಕಣ್ಣುಗುಡ್ಡೆಯ ಮಧ್ಯದಲ್ಲಿ ನಿಲ್ಲಿಸುವುದು). ಇ. ತೀವ್ರ ಹೊರಕ್ಕೆ ಕಾಣದಂತೆ ಆಲಿಗಳನ್ನು ಸ್ವಲ್ಪ ಒಳಕ್ಕೆ ಮಾಡಿ ಕೆಳಗಡೆ ನೋಡಿ ರೆಪ್ಪೆಗಳನ್ನು ಬಡಿಯದೇ ಇರುವುದು ಅಥವಾ ರೆಪ್ಪೆಗಳನ್ನು ಬಡಿಯುತ್ತಲೇ ಇರುವುದು: ಉರುವಿಪ್ಲುತಮುಂ ತ್ರಸ್ತಂ ಸರಸಿಜ ಮುಖಿ ಮದಿರೆಯೆಂದು ತೋರ್ಪಿಪ್ಪತ್ತುಂ ಪರಿ ಸಂಚಾರಿಗಳುಂ ಕೇಳ್ ತರುಣೀ ಮೇಣ್ ದೃಷ್ಟಿಭೇದ ಮೂವತ್ತಾಱುಂ (ಲಾಸ್ಯರಂ. ೩-೮); ವಿಲಸಿತ ಕರಭೇದ ದೃಷ್ಟಿಭೇದವು ನೆಱೆಯೊಲವುದೋಱುವ ಶಿರಭೇದ . . . ಚಾರಿಯ ಭೇದದಲಿ ಭಾವಗಳ ತೋಱಿದರು (ಕಂನವಿ. ೮-೬೨).

[ದೃಷ್ಟಿ + ಭೇದ]

ದೃಷ್ಟಿಮಾಂದ್ಯ (ನಾ). ಕಣ್ಣಿನ ಶಕ್ತಿ ಕುಗ್ಗುವಿಕೆ; ಒಂದು ಬಗೆಯ ಕಣ್ಣುರೋಗ: "ಕಣನಂ, ಕಣನೀಯಂ ಈ ೨ ದೃಷ್ಟಿಮಾಂದ್ಯಂ" (ಕಾಶಕ್ಕ. ೨೭೫); ವಯಸ್ಕರಲ್ಲಿ ಬರುವ ಕಣ್ಣೊಳಗಿನ ಅಂತರದ್ರವದ ಒತ್ತಡದ ಹೆಚ್ಚಿನಲ್ಲಿ (Glaucoma) ದೃಷ್ಟಿಮಾಂದ್ಯವು ಮೊದಲಿನ ಚಿಹ್ನೆ (ನಿಮ್ಮದ್ಯ. ೮೨); (ಕಣ್ಣಿನ ಮುಖ್ಯ ನರಕ್ಕೆ ಬೇನೆಯುಂಟಾದುದರಿಂದ) ದೃಷ್ಟಿಮಾಂದ್ಯ, ದೃಷ್ಟಿನಾಶ (Amaurosis. ಇಂಕನಿ).

[ದೃಷ್ಟಿ + ಮಾಂದ್ಯ]

ದೃಷ್ಟಿಮಾಪಕ (ನಾ). "ಕಣ್ಣಿನ ಕಿರಣವಕ್ರೀಕರಣಶಕ್ತಿಯನ್ನೂ ದೃಷ್ಟಿ ಪರಿ ಮಿತಿಯನ್ನೂ ಪರೀಕ್ಷಿಸುವ ಸಲಕರಣೆ; ಕಣ್ಣಿನ ಸ್ಪಷ್ಟ ದೃಷ್ಟಿಯ ದೂರವನ್ನಾಗಲೀ ಅಥವಾ ಅದರ ಹೊಂದಿಕೊಳ್ಳುವ ಪರಿಮಿತಿಯನ್ನಾಗಲೀ ಅಳೆಯುವ ಸಲಕರಣೆ: ದೃಷ್ಟಿಮಾಪಕ" (Optometer. ಇಂಕನಿ). [ದೃಷ್ಟಿ + ಮಾಪಕ]

ದೃಷ್ಟಿಮೋಹ (ನಾ). [ಜೈನ] ಸಮ್ಯಗ್ದರ್ಶನವನ್ನು ನಷ್ಟಗೊಳಿಸುವ ಕರ್ಮ: ಘನ ಮಿಥ್ಯಾತ್ವ ದವಾನಳಪಿನದ್ಧಜೀವಕ್ಕೆ ದೃಷ್ಟಿಮೋಹಪ್ರವಿನಾಶನಮಿಲ್ಲದಂದು ಪುಟ್ಟದು ಮನದೊಳ್ ಸ್ವರ್ಮೋಕ್ಷಸಾಧನಂ ಸಮ್ಯಕ್ತ್ವಂ (ಆದಿಪು. ೫-೫೨); "ಸಮ್ಯಗ್ದರ್ಶನಕ್ಕೆ ದೃಷ್ಟಿಯೆನ್ನುತ್ತಾರೆ. ಅದನ್ನು ಮೋಹಿತಗೊಳಿಸುವ ಅಥವಾ ನಷ್ಟಪಡಿಸುವ ಕರ್ಮಗಳು ದೃಷ್ಟಿಮೋಹಗಳು' (ಆದಿಪು. ಅನುಬಂಧ. ೨); ಪರಮಾತ್ಮಂ ಪರಮಾಗಮಂ ಪರಮ ಚಾತುರ್ವರ್ಣ್ಯಮಾರ್ಹಂತ್ಯಮುದ್ಧುರಸದ್ಧರ್ಮಮಿವಂ ತಿರಸ್ಕರಿಸೆ ಸಾರ್ಗುದೃಷ್ಟಿಮೋಹಾಸ್ರವಂ (ಸುಕುಮಾ. ೮-೧೯). [ದೃಷ್ಟಿ + ಮೋಹ]

ದೃಷ್ಟಿಯುದ್ಧ (ನಾ). ರೆಪ್ಪೆ ಬಡಿಯದೆ ಪರಸ್ಪರರ ಕಣ್ಣುಗಳನ್ನು ರೋಷದಿಂದ ನೋಡುವಿಕೆ; ಒಬ್ಬರನ್ನೊಬ್ಬರು ಗುರಿಯಿಟ್ಟು ನೋಡುವುದು; P ದ್ವಂದ್ವಯುದ್ಧದಲ್ಲಿ ವ್ಯಕ್ತಿಯ ಸತ್ವವನ್ನು ಪರೀಕ್ಷಿಸುವ ಬಗೆಗಳಲ್ಲಿ ಒಂದು: ಒಬ್ಬರನ್ನೊಬ್ಬರು ದುರುಗುಟ್ಟಿ ನೋಡುವಾಗ ರೆಪ್ಪೆಬಡಿದವರು ಸೋತರೆಂದು ತೀರ್ಮಾನವಾಗುತ್ತಿತ್ತು. ಭರತರಾಜಂ ಸೋಲ್ತಂ ಅಂತು ಬಾಹುಬಲಿಯ ತೇಜಃಪುಂಜಮೆ ಕಣ್ಣೊಳುಳ್ಳುವಂತೆ ಸೈರಿಸದೆಮೆಯಿಕ್ಕೆ ದೃಷ್ಟಿಯುದ್ಧದೊಳ್ ಸೋಲೆ (ಆದಿಪು. ೧೪-೦೦೫ ಪ); ಬಾಹುಬಲಿ ಭರತನಂ ದೃಷ್ಟಿಯುದ್ಧ ಜಲಯುದ್ಧದೊಳ್ ಗೆಲ್ದು (ಜಾವುಂಪು. ೪೪)

[ದೃಷ್ಟಿ + ಯುದ್ಧ]

ದೃಷ್ಟಿಯುದ್ಧಂಗೆಯ್ (ಕ್ರಿ). ರೆಪ್ಪೆ ಬಡಿಯದೆ ಪರಸ್ಪರ ರೋಷದಿಂದ ನೋಡು; ಕಣ್ಣಿನ ನೋಟದಿಂದಲೇ ಕಾದು: ಭೀಕರ ಬದ್ಧಭ್ರಕುಟಿ ಘಟಿತರದ್ಭುತರಟ್ಟಾಸುರರಧಿಕ ಕೋಪಪಾಟಳ ಪರುಷೇಕ್ಷಣರೆನಿಸಿ ದೃಷ್ಟಿಯುದ್ಧಂಗೆಯ್ದರ್ (ಗದಾಯು. ೮-೨). [ದೃಷ್ಟಿಯುದ್ಧ + ಕೆಯ್$_1$]

ದೃಷ್ಟಿರೋಷ (ನಾ). ಕಣ್ಣಿನಲ್ಲಿ ವ್ಯಕ್ತವಾಗುವ ಕೋಪ; ನೋಟದಲ್ಲಿ ಕಂಡ ಬರುವ ಸಿಟ್ಟು: ಅವನ ದೃಷ್ಟಿದೋಷಕ್ಕೆ ಅಳುಕಿ ಮಾತನಾಡಲಂಜಿದ್ದ ಕಿಂಕರರ ಮೇಲೆ ರೇಗಿ (ಚಂದ್ರಸ. ೦೦೫). [ದೃಷ್ಟಿ + ರೋಷ]

ದೃಷ್ಟಿವಲಯ (ನಾ). ನೋಟದ ಪಥ,-ಹರಹು: ಆ ಪರಮರೂಪ ನಮ್ಮ ದೃಷ್ಟಿವಲಯಕ್ಕೆ ಮೀರಿದುದು (ಸೌಂದಸ. ೦೦೦). [ದೃಷ್ಟಿ+ವಲಯ]

ದೃಷ್ಟಿವಾದ (ನಾ). [ಜೈನ] ಜೈನಾಗಮಗಳ ಹನ್ನೆರಡು ಅಂಗಗಳಲ್ಲಿ ಒಂದು: ಆಚಾರ, ಸೂತ್ರಕೃತ . . . ಪ್ರಶ್ನವ್ಯಾಕರಣ, ವಿಪಾಕಸೂತ್ರ, ದೃಷ್ಟಿವಾದ ಎಂಬುವು ಹನ್ನೆರಡು ಅಂಗಗಳು (ಭಾತತ್ತ್ವ. ೨೨೮). 'ದ್ವಾದಶಾಂಗ' ಪರಾ. [ದೃಷ್ಟಿ + ವಾದ$_3$]

ದೃಷ್ಟಿವಾರಿ (ನಾ). (?): ರಂಗಮಂಟಪದೊಳು ಕುಳ್ಳಿರ್ದ ದೃಷ್ಟಿವಾರಿಯ ದೃಢಚಿತ್ತಂಗೆ ಕರ್ಣದ್ವಯದ ಕಮನೀಯಂಗೆ . . . ಬಸವಣ್ಣಂ ಮೈಯಿಕ್ಕಿ ಕುಳ್ಳಿರ್ದು (ಬಸರ. ೪-೬೯). "ತನಗೂ ದೇವರಿಗೂ ನಡುವೆ ಬಂದವರನ್ನು ಕತ್ತರಿಸುತ್ತೇನೆಂಬ ಪ್ರತಿಜ್ಞೆ" (ಬಸರ. ಕೋಶ). 'ದಿಟ್ಟಿವಾರಿ' ಪರಾ. [ದೃಷ್ಟಿ + ವಾರಿ$_2$?]

ದೃಷ್ಟಿವಾಳ (ನಾ). ೧. ದೃಷ್ಟಿಯ ಸೂಕ್ಷ್ಮತೆಯುಳ್ಳವನು: ಸೂಕ್ಷ್ಮ ನೋಟವುಳ್ಳವನು; ಗುರಿಕಾರ: ತೋಱಿದ ಭೇದವ ತೋಱಿದಂತೆ ಕಂಡಾತನಲ್ಲದೆ ದೃಷ್ಟಿವಾಳ ತಾನಲ್ಲ (ಅವಚಂ. ೧೪೦-೬೪೪); ಬೆಲೆಯ ತಪ್ಪದೆ ಪೇಟ್ವ ದೃಷ್ಟಿವಾಳರೊಳ್ ಪೆಸರ್ವಡೆದಿರ್ಪ ರತ್ನದ ಪರೀಕ್ಷಕರಿರ್ದರನಂತಗಾಡಿಯಿಂ (ಪುಲ್ಲಕಾ. ೪-೬೩೪). ೨. ಗುರಿಯಿಡುವುದರಲ್ಲಿ ಪರಿಣತಿ; ಸ್ಪಷ್ಟವಾದ ಗುರಿ ಹೊಂದಿರುವುದು; ಗುರಿಕಾರತನ: ಆವ ವಹಿಲದೊಳಂಬ ತೊಡಚುವನು . . . ಅದಾವ ನಿರುತದಲೊಡ್ಡುವನು ಕೊರಳಿಂಗೆ ಕೋಲುಗಳ ಆವ ದೃಢತೆಯೊ ದೃಷ್ಟಿ [ಪಾಠಾಂ. ಮುಷ್ಟಿ] ವಾಳವಿದಾವ ಗರುಡಿಶ್ರಮವೆನುತ ದಿವಿಜಾವಳಿಗಳುಲಿಯಲು ವಿಭಾಡಿಸಿದನು ರಿಪುವ್ರಜವ (ಕುಮ್ಯಾದ್ರೋ. ೫-೬); ಕಡುಮನದ ಕೋಪಗಳ ಬಲಿದಿಟ್ಟೆಡೆಯ ಮುಷ್ಟಿಯ ದೃಷ್ಟಿವಾಳದ [ಪಾಠಾಂ. ಟ್ಟಿಡಿಯ ದೃಷ್ಟಿಯ ಮುಷ್ಟಿವಾಳದ]ಸಡಿಪಡದ ಸೌರುಭರೆಚ್ಚಾಡಿದರು ಸರಿಸದಲಿ (ತೊರರಾ. ೬-೨೮-೨೪); ಅಸಮಸಮ ಪಯಪಾಡಿನಲಿ ಬಾರಿಸಿದ ಮುಷ್ಟಿಯ ದೃಷ್ಟಿವಾಳದ ಕೊಸರಿಕೆಯ ಕೋಪದಲಿ ಕೈಕೊಂಡನು ಮಹಾಹವಕೆ (ತೊರರಾ. ೬-೩೩-೦೩). [ದೃಷ್ಟಿ + – ವಾಳ$_1$]

ದೃಷ್ಟಿವಾಳತನ (ನಾ). ಸ್ಪಷ್ಟವಾದ ಜ್ಞಾನವನ್ನು ಹೊಂದಿರುವಿಕೆ : ವಿವೇಕ ; ವಿವೇಚನೆ : ಜಾತ್ಯಂಧರ್ಯ ನೀವು ನಿಮಗೆಲ್ಲಿಯದು ದೃಷ್ಟಿವಾಳತನವು (ವೀಪ್ರಪು. ೪-೪-೪೦). [ದೃಷ್ಟಿವಾಳ + – ತನ]

ದೃಷ್ಟಿವಾಳಿಕೆ (ನಾ). =ದೃಷ್ಟಿವಾಳತನ : ರತ್ನಪಾಷಾಣದ ತೇಜಕಾಂತಿ ಎಲ್ಲಾ ಪಾಷಾಣಗಳಿಗಿಲ್ಲದಂತೆ ಅಂತಪ್ಪ ರತ್ನಪಾಷಾಣದ ಜಾತಿಕಲೆಗಳ ನಱಿವ ದೃಷ್ಟಿವಾಳಿಕೆಯೂ ಒಬ್ಬಂಗಲ್ಲದೆ ಎಲ್ಲರಿಗೆಯೂ ಇಲ್ಲದಂತೆ (ವಡಸಂ. ೫೩೦-೭ ಟೀಳು) [ದೃಷ್ಟಿವಾಳ + – ಇಕೆ]

ದೃಷ್ಟಿವಿಕ್ಷೇಪ (ನಾ). ೧. ನೋಟವನ್ನು ಬೀರುವುದು. ೨. ಓರೆ ನೋಟ ; ಕಂಡಿನೋಟ. [ದೃಷ್ಟಿ + ವಿಕ್ಷೇಪ]

ದೃಷ್ಟಿವಿಭವ (ನಾ). [ಜೈನ] ಸಮ್ಯಗ್ದರ್ಶನದ ಪ್ರಭಾವ.–ಮಹಿಮೆ : ಭವಾಬ್ಧಿತಟಂ ಸವಿಾಪಮಾಗಿರೆ ದೊರೆಕೊಂಡ ದೃಷ್ಟಿವಿಭವಂ ಕಳಿಗುಂ ಖಳಕರ್ಮಬಂಧಮಂ (ಆದಿಪು. ೫-೫೩). [ದೃಷ್ಟಿ + ವಿಭವ]

ದೃಷ್ಟಿವಿಷ (ಗು). ೧. ಕಣ್ಣಿನಲ್ಲಿ ವಿಷವನ್ನು ಹೊಂದಿರುವ. 'ದೃಷ್ಟಿವಿಷಭಂಜಂಗ' ಪರಾ. (ನಾ). ೨. ನೋಟದಿಂದಾಗುವ ಕೆಡುಕು; ಕಣ್ಣಿಂಜಲು. ೩. ಕಣ್ಣಿನಿಂದ ಹೊರಡುವ ವಿಷ ; ವಿಷವಂಯವಾದ ನೋಟ: ನಾಗನಾಜಂ ಕಡುಮುನಿದು ... ತನ್ನ ದೃಷ್ಟಿವಿಷದಿಂದಱುವತ್ತು ಸಾಸಿರ್ವರುಮನೊರ್ಮೊದಲೆ ಭಸ್ಮಮಪ್ಪಂತು ಮಾಡಿ ಪೋದಂ (ಜೀವಸಂ. ೨೦-೩೭೪). ೪. ಒಂದಂ ಬಗೆಯ ಹಾವು ; ಶಂಖಪಾಲ : ಎರಡು ಪದಂಗಳಪಭ್ರಂಶಕ್ಕೆ—ದೃಷ್ಟಿವಿಷ–ದಿಟ್ಟಿಬಿಸ, ದಿಟ್ಟಿವಿಸೆ (ಕಪುದ. ೨೮೯ ಪ್ರಯೋ). [ದೃಷ್ಟಿ + ವಿಷ]

ದೃಷ್ಟಿವಿಷತ್ವ (ನಾ). [ಜೈನ] ಆರು ಬಗೆಯ ರಸಋಂದ್ಧಿಗಳಲ್ಲಿ ಒಂದು ; ನೋಟವನ್ನು ಬೀರಿ ಸಾವನ್ನು ತರುವ ಸಿದ್ಧಿ : ಆವನೋರ್ವನಂ ಮುನಿದು ನೋಟ್ಟನ್ನೋಡಿದಾಗಳೆ ಸಾವುದು ದೃಷ್ಟಿವಿಷತ್ವಮೆಂಬುದು (ಪಸಾರ. ೪೯೦). [ಸಂ.]

ದೃಷ್ಟಿವಿಷಭುಜಂಗ (ನಾ). ನೋಟದಿಂದಲೇ ಕೊಲ್ಲುವ ಶಕ್ತಿಯುಳ್ಳ ಹಾವು : ಮಣಿಕೇತು ದೃಷ್ಟಿವಿಷಭುಜಂಗನಾಗಿ ಕೃತಕದೊಳವರಂ ಭಸ್ಮಂ ಮಾಡಿದೊಡೆ (ಜೀವಸಂ. ೨೦-೨೩ ಅಡಿಪಾಠ). [ದೃಷ್ಟಿವಿಷ + ಭುಜಂಗ]

ದೃಷ್ಟಿವಿಷಭುಜಂಗಮ (ನಾ). = ದೃಷ್ಟಿವಿಷಭುಜಂಗ : ನಿಮ್ಮ ಬಲ್ಲಂದ ದೊಳು ಕಾಪಂ ಮಾಡಿಮೆಂದೊಡರ್ಬಂದು ಕೈಲಾಸದ ಬಳಸಿಯು ವಳಗಂ ಮಾಡಿವರಂ ಮಣಿಕೇತು ದೃಷ್ಟಿವಿಷಭುಜಂಗಮನಾಗಿಸಿ . . . ಅವರಂ ಭಸ್ಮಂ ಮಾಡಿದೊಡೆ (ಪಾವುಂಪು. ೯೨). [ದೃಷ್ಟಿವಿಷ + ಭುಜಂಗಮ]

ದೃಷ್ಟಿವಿಷಾಹಿ (ನಾ).=ದೃಷ್ಟಿವಿಷಭುಜಂಗ: ಇವೆ ದೃಷ್ಟಿ [ಪಾಣಾಂ. ದುಷ್ಟ] ವಿಷಾಹಿಗಳೀ ಕವಿತರ್ಪವ ಜವನ ಬೆಸದಿನೆನೆ ನಿಮಿಷಕ್ಕೇಂ ತವೆ ಪೀರ್ದುವೊ ಖಚರಪ್ರಾಣವಾಯುವಂ ಕೃಷ್ಣನೆಚ್ಚ ನಾರಾಚಂಗಳ್ (ಪಂರಾಮಾ. ೯-೬೫). [ದೃಷ್ಟಿವಿಷ + ಆಹಿ]

ದೃಷ್ಟಿವೈಶಾಲ್ಯ (ನಾ). (ಆಲಂ) ವಿಷಯಂಗಳನ್ನು ಕುರಿತ ನೋಟದಲ್ಲಿಯ ವ್ಯಾಪಕತೆ ; ಅರ್ಥಮಾಡಿಕೊಳ್ಳುವುದರಲ್ಲಿರುವ ಔದಾರ್ಯ ; ಪರಿಶೀಲಿಸುವುದರಲ್ಲಿ ಸರ್ವತೋವಂಖಿತೆ : ದೃಷ್ಟಿವೈಶಾಲ್ಯವ ಗಳಿಸು (ಇಂಜಾಪ. ೮೦-೮೯) ; ವಸ್ತುವಿನ ಗುಣಾವಗುಣಗಳ ಪರೀಕ್ಷೆಯಲ್ಲಿ ದೃಷ್ಟಿ ವೈಶಾಲ ಅಗತ್ಯ (ಕೂಡಿ). [ದೃಷ್ಟಿ + ವೈಶಾಲ್ಯ]

ದೃಷ್ಟಿವ್ಯಪೇತ (ನಾ). ಕಣ್ಣಿಲ್ಲದವನು ; ಕುರುಂಡ : "ಅಂಧಂ ದೃಷ್ಟಿವ್ಯಪೇತನುಂ ತಾನುಕ್ಕುಂ" (ವಸ್ತು.ಕೋ. ೦೪೪-೯೯). [ದೃಷ್ಟಿ + ವ್ಯಪೇತ]

ದೃಷ್ಟಿಶಾಸ್ತ್ರ (ನಾ). "ದೃಷ್ಟಿಹೇತುವಾದ ಬೆಳಕಿನ ನಿಯಮಗಳನ್ನು ಕುರಿತ ಶಾಸ್ತ್ರ" (Optic. ಇಂಳಿನಿ) ; ಬೆಳಕು ಸಂಚರಿಸುವ ರೀತಿ, ಗಾಜು ಗಳಲ್ಲಿ ವಕ್ರವಾಗುವ ಕ್ರಮ . . . ತಿಳಿಸುವ ಶಾಸ್ತ್ರವನ್ನು ದೃಷ್ಟಿಶಾಸ್ತ್ರ ವೆಂದು ನಾನು ಕರೆದಿರುವೆನು (ವಿಜ್ಞಾಳ. ೨೪ ಅಡಿಟಿ). [ದೃಷ್ಟಿ + ಶಾಸ್ತ್ರ]

ದೃಷ್ಟಿಶೂನ್ಯ (ನಾ). ಕಣ್ಣಿಲ್ಲದವಳು ; ಕುರುಂಡಿ : ಕಪಾಲಕುಂಡಲೆಯು ದೃಷ್ಟಿಶೂನ್ಯೆಯಾದವಳಂತೆ ಮಾತಿಲ್ಲದೆ ಕಾಪಾಲಿಕನ ಹಿಂದೆ ಹೋದಳು (ಕಪಾಳುಂ. ೧೩೭). [ಸಂ. ದೃಷ್ಟಿಶೂನ್ಯಾ]

ದೃಷ್ಟಿಸಾಕಲ್ಯ (ನಾ). ವಿಚಾರದ ಸರ್ವತೋಮುಖಿತೆ; ಸಮಗ್ರದೃಷ್ಟಿ; ವಿಚಾರದ ಬಹುಮುಂಖಿತೆ : ಅವರು ವಿಶ್ವಭಾರತಿಯನ್ನು ಸ್ಥಾಪಿಸಿದ್ದು ಈ ದೃಷ್ಟಿಸಾಕಲ್ಯವೂ ಈ ಸಂಪನ್ನತೆಯೂ ಬೆಳೆಯಲೆಂದೇ (ವಿಐಂಧ.I, XIV ಮುನ್ನುಡಿ). [ದೃಷ್ಟಿ + ಸಾಕಲ್ಯ]

ದೃಷ್ಟಿಸು (ಕ್ರಿ). ೧. ನೋಡು ; ನಿರೀಕ್ಷಿಸು : ದೃಷ್ಟಿಸನು ಮಾತಾಡ ಅವರ ನು ಡಿ ಯಂ ಕೇ ಳ ಲೊ ಲ್ಲ ನು (ಬಸಪು. ೬೦-೦೪) ; ಸೃಷ್ಟಿ ಯೆಲ್ಲವನು ಮನಮುಟ್ಟುವದು ನಿಮಿಷದಲಿ ನೆಟ್ಟು ಭಾವಜೀವವಿಪ್ಪ ಮೂಱೊಂದೆಂದು ದೃಷ್ಟಿಪನೆ ಶ್ರೇಷ್ಠ (ಸರ್ವಜ್ಞ. ೦೬೦) ; ರಾಯನಂ ದೂರದಿಂ ದೃಷ್ಟಿಸಿ (ಸೌಗಂಧಿ. ೩೨೦-೦೩). ೨. ದಿಟ್ಟಿಸು ; ಎವೆಯಿಕ್ಕದಂತೆ ನೋಡು; ದುರುಗುಟ್ಟು : ಶಂಕರದಾಸಿ ಕಟ್ಟಾಸುರದಿ ದೃಷ್ಟಿಸಲು . . . ಸ್ಥೂಲವನಮಾಲಿಪ್ಪತುಮೆ ನೆಱಿ ಹೋಳಿದಿಬ್ಬಗಿಯಾಗಿ ನೆಲದಲಿ ಧೂಳಿಪಟವಾಯ್ತು (ಬಸಪು. ೫೩-೭೦). ೩. ಗಮನಿಸು; ಲಕ್ಷ್ಯ ಕೊಡು: ಸೂರಪ್ಪನವರ ಆ ದಿನದ ವರ್ತನೆಯನ್ನು ಅಪ್ಪಾಜಯು ದೃಷ್ಟಿಸಲಿಲ್ಲ (ಕಂಗಾಳ್ಳ. ೪೩). [ದೃಷ್ಟಿ + – ಸು$_1$]

ದೃಷ್ಟಿಸೃಷ್ಟಿವಾದ (ನಾ). [ಅದ್ವೈತ] ಮಾಯಾವಾದದಲ್ಲಿ ಒಂದಂವಿಧ: ನಾವು ನೋಡಿದರೆ ಮಾತ್ರ ಆಗಲೆ ಜಗತ್ತಿನ ಸೃಷ್ಟಿಯಾಗುವದೆಂದೂ ನೋಡದೆ ಇದ್ದರೆ ಜಗತ್ತೇ ಇಲ್ಲವೆಂದೂ ಕೆಲವರು ಹೇಳುವರು. ಇದಕ್ಕೆ ದೃಷ್ಟಿಸೃಷ್ಟಿ ವಾದವೆಂದು ಹೆಸರು (ಅಮೃತ. ೩-೪೩ ಟೀಳು). 'ಮಾಯಾವಾದ' ಪರಾ. [ದೃಷ್ಟಿ + ಸೃಷ್ಟಿ + ವಾದ $_3$]

ದೃಷ್ಟ್ಯವಿಷ (ನಾ). [ಜೈನ] ಎಂಟು ಬಗೆಯ ಔಷಧ ಋದ್ಧಿಗಳಲ್ಲಿ ಒಂದಂ : ದೃಷ್ಟಿಯಿಂದಾಗುವ ವಿಷವನ್ನು ಪರಿಹರಿಸುವ ಶಕ್ತಿ : ಆರ್ಕಲಂಬರ ನೋಟದಿಂದಮೆ ವಿಷಂ ನಿರ್ವಿಷಮಕ್ಕುಮದು ದೃಷ್ಟ್ಯವಿಷ ಮೆಂಬುದು (ಪಸಾರ. ೪೯೦). [ಸಂ.]

ದೆಂಗು (ಕ್ರಿ). ಹಡು ; ಕೇಯುು ; ಸಂಭೋಗಿಸು. [ದೇ.ಪ ತೆಲು. ದೆಂಗು]

ದೆಂಜಿ (ನಾ). (ಕರಾ) ನೀರಿರುವ ಬಳಿ ವಾಸಿಸುವ ಒಂದು ಬಗೆಯ ಚಿಕ್ಕ ಪ್ರಾಣಿ ; ನಳ್ಳಿ ; ಏಡಿಕಾಯಿ : ತೋಡಿನ ಇಬ್ಬದಿಗಳಲ್ಲಿ ಮಣ್ಣು ಕೊರೆದು ಅಡಗಿದ ದೆಂಜಿಗಳನ್ನು ಹಿಡಿಯುವುದೂ ಇದೆ (ಕಾಳಿ. ೯೯). [←ತುಳು. ದೆಂಜಿ, ಡೆಂಜಿ]

ದೆಪ್ಪಾಣ 'ದೆಪ್ಪಾಳ' ನೋ.

ದೆಪ್ಪಾದೆಪ್ಪಿ (ನಾ). ೧. ಇಬ್ಬರು ಪರಸ್ಪರ ಹುರುಡಿನಿಂದ ಮಾಡುವ ಯುದ್ಧ; ಸ್ಪರ್ಧೆಯ ಕಾಳಗ : ದ್ವಂದ್ವಯುದ್ಧ : ಮುರಾರಿಯೊಳು ದೆಪ್ಪಾದೆಪ್ಪಿಯೊಳು ಕಾದಿ ತಳ್ಕಿಱಿದು ಗೆಲ್ದು ತುರುಗದಳಮಂ ತಂದ ಪಗೆಮಚ್ಚೆಗಂಡ (ಸೌಇಇ. IX-1, ೩೪೩-೩೨; 1226) ; ಹೆಲ್ಲಾಹೆಲ್ಲಿ ದಾಟಾ ದಾಟಿ, ದೆಪ್ಪಾದೆಪ್ಪಿ . . . ಮಲ್ಲಾಮಲ್ಲಿ–ಇವು ತತ್ಸಮಂಗಳ್ (ಕಪುದ. ೧೮೫ ಪ್ರಯೋ): ಬಲನ ವಜ್ರನ ಕಾಲನೇಮಿಯ ಜಲರುಹಾಕ್ಷನ ರಾವಣನ ರಘುಕುಲನ ದೆಪ್ಪಾದೆಪ್ಪಿ ಜೋಡಿಸಿತಾತನೀತನಲಿ (ಕುಪ್ಯಾಳ. ೨೦-೨೨) ; ಬಿಡದೆ ದೆಪ್ಪಾದೆಪ್ಪಿಯಲಿ ಧೃತಿಗೆಡದೆ ದಾಳಾಧೂಳಿಯಲಿ ಬಲುಗಡಿಯ ಖಾಡಾಖಾಡಿಯಲಿ ಕಾದಿದರು ಕಡುಹಿನಲಿ (ತೊರಾ. ೬-೪೬-೫೬). ೨. ರಭಸ : ತೀಕ್ಷ್ಣತೆ ; ಜೋರು : ತಾಗಿ ತಳ್ಕಿಱಿದು ರಕ್ಕಸವಡೆಯೊಳ್ ವಿಕ್ಕು ವಿಾಱುವ ದೇವರ್ಕಳ ದೆಪ್ಪಾದೆಪ್ಪಿಯ ಕಾಳೆಗಮಂ ಕಂಡು ಕಡುಮುಳಿದು (ಗಿರಿಕ. ೬-೭೪ ಪ) ; ಕಳಕಳದ ಬಹುವಿಧದ ವಾದ್ಯದ ದಳದ ದೆಪ್ಪಾದೆಪ್ಪಿಯಲಿ ಕಲಿಕರ್ಣ ನಡತಂದ (ಕುಪ್ಯಾಳ. ೦೦-೪೯). [←ಮರಾ. देपादेपी]

ದೆಖ್ಖಾಯ 'ದೆಖ್ಖಾಯಿ' ನೋ.

ದೆಖ್ಖಾಯಿ, ದೆಖ್ಖಾಯಂ (ನಾ). ಅತಿಶಯ; ವೇಗ; ರಭಸ: ನೆಟ್ಟನೈದುವ ಹಿಳುಕುಗಳ ತಱೆದೊಟ್ಟದನು ದೆಖ್ಖಾಯಿ [ಪಾಠಾಂ. ಯೆ]ಯಲಿ ಗಱೆ ಗಟ್ಟಿತೀತನ ಖಾತಿ ಮೆಱೆದುದು ಕೇಣವಿಲ್ಲೆನಿಸಿ (ಕುಪ್ಯಾದ್ರೋ. ೦೮-೨೮). **ದೆಖ್ಖಾಯ**: ತವತವಗೆ ದೆಖ್ಖಾಯ ಮಿಗೆಯುತ್ಸವದಲುಱುಬಿದರವನಿ ಪಾಲನ ಗವಿಯ ಘಾಡಿಕೆ ಜೋಡಿಸಿತು ಗೀರ್ವಾಣರಾಲಿಗಳ (ಕುಪ್ಯಾಕ. ೦೫-೦೬). 'ದಿಖಾವು' ಪರಾ; P ಮರಾಠಿ ಭಾಷೆಯಲ್ಲಿ ಭಾವನಾಮಗಳನ್ನು ಮಾಡುವುದಕ್ಕೆ '-ಈ' ಎಂಬ ಪ್ರತ್ಯಯವನ್ನು ಹತ್ತಿಸಲಾಗುತ್ತದೆ 'ನವಾಈ', ನವಾಯಿಾ ಎಂಬ ಪದದಲ್ಲಿರುವಂತೆ. ಇದರ ಸಾದೃಶ್ಯದ ಮೇಲೆ ಕುಮಾರವ್ಯಾಸನು ಗರುವಾಯಿ, ದೆಖ್ಖಾಯಿ, ವಿಡಾಯಿ ಮುಂತಾದ ಶಬ್ದಗಳನ್ನು ಸೃಷ್ಟಿಸಿಕೊಂಡಿರಬಹುದು. [?]

ದೆಖ್ಖಾಯ್ಲ (ನಾ). ರಭಸದಿಂದ ಕೂಡಿರುವವನು; ಜೋರಿನಿಂದ ಕೂಡಿಕೊಂಡಿರುವವನು. 'ದೆಖ್ಖಾಯ್ಲತನ' ಪರಾ.

[ದೆಖ್ಖಾಯಿ + – ಆಯ್ಲ (< – ಆಯಿಲ್ಲ)]

ದೆಖ್ಖಾಯ್ಲತನ (ನಾ). ತೀವ್ರತೆ; ಜೋರು: ಉಗ್ರವಾಗಿರುವಿಕೆ: ರಭಸ: ಅರಸ ಕೇಳ್ಯೆ ಕರ್ಣಭೀಮರ ಧರಧುರದ ದೆಖ್ಖಾಯ್ಲತನ ಗಬ್ಬರಿಸಿತಾಹವಗರ್ವಿತರ ಗಾಢಾಯ್ಲ ಚೇತನವ (ಕುಪ್ಯಾಕ. ೦೪-೩).

[ದೆಖ್ಖಾಯ್ಲ + – ತನ]

ದೆಖ್ಖಾಳ, ದೆಖ್ಖಾಣ (ನಾ). ೧. ಹೆಚ್ಚಳ; ಸಮೃದ್ಧಿ; ಅತಿಶಯ; ಆಧಿಕ್ಯ: ಆ ಸುದೇಷ್ಣಾದೇವಿಯರ ನಿಡುಕೇಶವನು ಹಿಕ್ಕುವಳು ಮುದದಲಿ ಪೋಸೆಮಲ್ಲಿಗೆಯರೆಳ ದೆಖ್ಖಾಳವನು ಮುಡಿಸುವಳು (ಕುಪ್ಯಾವಿ. ೬೦ಇ. ೨-೩): ದಳಪತಿ ಕುರುಬಲದ ದೆಖ್ಖಾಳವನು ನೋಡಿದನು ತೂಗಾಡಿದನು ಮಣಿಶಿರವ (ಕುಪ್ಯಾಶ. ೨-೩); ತುಂಬುರರ ನಾರದರ ದಿವಿಜನಿತಂಬಿನಿಯರ ಸುಗೀತ ರಚನಾಡಂಬರದ ದೆಖ್ಖಾಳ ಮಿಗೆ ರಂಜಿಸಿತು ಗಗನದಲಿ (ತೊರರಾ. ೬-೫೩-೪೮); ನೀನು ಮದನವ್ರತನಾಗಿ ರತಿರಾಗಿಣಿಯರತ್ತ ಬಿರ್ದುಗೊಂಡಾಡುವ ನಸೆಯ ದಾಹದ ದೆಖ್ಖಾಳವು . . . ವಿದೂಷಕಲೀಲೆಯಾಗಿದೆ! (ಪುಂತ್ರಕ. ೦-೮). ೨. ವಿಲಾಸ; ವೈಭವ; ಸಂಭ್ರಮ; ಉತ್ಸಾಹ: ಕಲಿತುರಗದೆಖ್ಖಾಳಕೇಳೀವಿಳಾಸನುಂ . . . ಉದ್ಭಟಕ್ಷಿತೀಂದ್ರ ಚಂದ್ರಮಂ ಪೇರೋಲಂಗಗೊಟ್ಟೆಸೆದಿರ್ದಂ (ಉದ್ಭಟ. ೨-೬ ಪ); ನೀವು ನೋಟಕರೆಮಗೆ ರಣ ದೆಖ್ಖಾಳವೆಂದನು ಕರ್ಣ ಗುರುಸುತಗೆ (ಕುಪ್ಯಾಕ. ೦೦-೨೦); ಕಡಿತಲೆಯ ಸುರಗಿಯ ಕೊಂತದ ಸೂಳದ ಬಲ್ಗಣೆಯ ಮೂಡಿಗೆಯ ಭಟರ ದೆಖ್ಖಾಳಂ ನೇರಮಾಗೆ (ರಾಮಾಶ್ವ. ೫೦-೭). ೩. ತೀಕ್ಷ್ಣತೆ; ಉಗ್ರತೆ: ರಭಸ: ತಗ್ಗಿತು ರಥದ ಲಗ್ಗೆಯ ಧರಧುರದ ದೆಖ್ಖಾಳ (ಕುಪ್ಯಾಭೀ. ೮-೦೯); ತ್ರೈಭುವನ ಕಂಪಿಸುತಿರ್ದುದೈ ರಣದವಕಿಗರ ದಕ್ಕಡದ ದೆಖ್ಖಾಳದ ಮಹಾಹವಕೆ (ತೊರರಾ. ೪-೩-೦೨). ೪. ರಮಣೀಯತೆ; ಮನೋಹರತೆ: ಮತ್ತಮಾರಭಟಿಯೊಳ್ ದೆಖ್ಖಾಳಂ ಮಿಕ್ಕು ಸಾತ್ವತಿಯೊಳ್ ಪಜ್ಜಳಂಬೆತ್ತು ಭಾರತಿಯೊಳ್ ಕಾಂತಿ ಕೆಯ್ಗಣ್ಮೆ . . . ಕುಳ್ಳಿರ್ಪ ಗಮಕಿಗಳ ತಂಡದೊಳಂ (ಗಿರಿಕ. ೨-೦೦೫ ಪ). **ದೆಖ್ಖಾಣ**: ೧. "ದೆಖ್ಖಾಣ [ಪಾಠಾಂ. ಳ] ಮೆನಲ್ ಹೆಚ್ಚುಗೆ" (ಧಾರನಿ. ೨೫); ವರ್ಗದ್ವಿತೀಯಾಕ್ಷರಂಗಳ್ಗೆ – ವಖ್ಖಾಣಂ, ದೆಖ್ಖಾಣಂ (ದೆಖ್ಖಾಳಂ) (ಶಮದ. ೧೫).

[←ಮರಾ. ದೇಖಣಾ, ದೇಖಣಾಊ = ಅಂದವಾದ]

ದೆಖ್ಖಾಳಂಗುಡು (ಕ್ರಿ). ವಿಲಾಸವನ್ನುಂಟುಮಾಡು; ವೈಭವವನ್ನುಂಟುಮಾಡು: ನಡುವಣ ರಂಗಮಂಟಪದೊಳ್ನರ್ತನಂಗುಡುವ ತಾಳದ ಗತಿಗುಡುವ ಮದ್ದಳೆಯ ಲಹಣಿಗುಡುವ ಆವುಜದ ದೆಖ್ಖಾಳಂಗುಡುವ ಕರಡೆಯ ಸವಿಗುಡುವ ವೀಣೆಯ ನಯಂಗೊಡುವ ಕಿನ್ನರಿಯ ಲಲ್ಲೆಗೊಡುವ ಕೌಸಳದ ಹಲ್ಲಣೆಗುಡುವ ವಾಸದ ಲಲ್ಲೆಗುಡುವ ಜೀವಣಿಗೆಯರ ಸಂಗೀತದ ಸಂದಣಿಯೊಳ್ (ಮಲುರ.ಹ. ೧೬೯-೧೦).

[ದೆಖ್ಖಾಳ + ಕುಡು$_1$ (<ಕೊಡು$_1$)]

ದೆಖ್ಖಾಳತನ (ನಾ). ತೀಕ್ಷ್ಣತೆ; ಉಗ್ರತೆ: ಶಲ್ಯನ ಧರಧುರದ ದೆಖ್ಖಾಳತನವನು ಕಂಡು ಖಾತಿಯಲಿ ಸರಳು ಹದಿನೈದಱಲಿ ಶಲ್ಯನ ಬರಿಯ ಕೆತ್ತಿದನು (ಕುಪ್ಯಾದ್ರೋ. ೫-೩೨). [ದೆಖ್ಖಾಳ + – ತನ]

ದೆಖ್ಖಾಳಭೂಮಿ (ನಾ). ವಿಲಾಸಸ್ಥಾನ; ಕ್ರೀಡಾಸ್ಥಳ; ಆಟದ ಬಯಲು: ವರವಸಂತನ ಬೀಡೊ ಮನ್ಮಥಧರಣಿಪನ ದೆಖ್ಖಾಳ ಭೂಮಿಯೊ . . . ಎನೆ ನೆಱೆ ಮೆಱೆದುದಾ ಭೂಮಿ (ತೊರರಾ. ೦-೬-೯).

[ದೆಖ್ಖಾಳ + ಭೂಮಿ]

ದೆಖ್ಖಾಳಿಸು (ಕ್ರಿ). ಹೆಚ್ಚಾಗು; ಅತಿಶಯವಾಗು: ಬೀಳಿದರಂದು ಹೋಮವ ಮಂತ್ರರವ ದೆಖ್ಖಾಳಿಸೆ ಪಾರ್ವರು ಮದದಿಂದ (ಸೊಬಸೋ. ೩-೪). [ದೆಖ್ಖಾಳ + – ಇಸು$_3$]

ದೆಗ್ಗೆರಳೆ (ನಾ). ಹೇರೀಳೆ ಜಾತಿಗೆ ಸೇರಿದ ಒಂದು ಬಗೆಯ ಮರ ಮತ್ತು ಅದರ ಹಣ್ಣು. 'ದೊಡ್ಡೀಳೆ' ಪರಾ.

[? + ಹೆರಳೆ (<ಪೇರೀಳೆ)]

ದೆಬ್ಬೆ$_1$ 'ದಬ್ಬೆ$_1$' ನೋ.

ದೆಬ್ಬೆ$_2$, ಡೆಬ್ಬೆ$_2$ (ನಾ). ಏಟು; ಹೊಡೆತ; ಪೆಟ್ಟು: "ಹೊಡೆತ, ಏಟು, ಗುದ್ದು, ದೆಬ್ಬೆ, ಪೆಟ್ಟು" (Blow. ಇಂಕನಿ); ಅವಳು ಚೀರಿದಷ್ಟೂ ಹೆಚ್ಚಾಗಿಯೇ ದೆಬ್ಬೆಗಳು ಬೀಳತೊಡಗಿದವು (ಕಾನೂರು. ೯೨); ತಿರಿತಿರಿಗಿ ಗೋಕರ್ಣಕ್ಕೆ ಹೋಗಿ ತುರುಕನಿಂದ ದೆಬ್ಬೆ ತಿಂದ (ಗಾದ). **ಡೆಬ್ಬೆ$_2$**: (ಕ). 'ದಬ್ಬೆ$_1$' ಪರಾ. [ದೇ.ಕ ತಮಿ. ತಪ್ಪೈ, ತೆಪ್ಪಲ್; ತೆಲು. ದೆಬ್ಬ]

ದೆಯಿಗಾವೆ (ನಾ). ಒಂದು ಗ್ರಾಮದ ಹೆಸರು; P ಈಗಿನ ನಾಂದೇಡ್ ಜಿಲ್ಲೆಯ ದೇಗಾಂವ್ ಎಂಬ ಗ್ರಾಮ: ಕಲಿಚೋರರಸ ಕಳಶಾರೋಹಣಮಂ ಮಾಡಿಸಿ ಕೊಟ್ಟ ಗಾವುಂಡಗಾವೆ ೧ ದೆಯಿಗಾವೆಯಲು ಘಳೆಯ ಮತ್ತರು ೪೦ (ನಾಂದೇಡ್. ೦೦-೩ : 1088).

[<ದೇವ + ಗಾವೆ (<ಗಾಮ)]

ದೆಯ್ವ, ದಯ್ವ, ದೆವ್ವ (ನಾ). ೧. ದೇವತೆ; ದೇವರು: ದೆಯ್ವಂ ಬಂದಂತೆ ರಹಸ್ಯಂಗಳಂ ಮಡದಿ ಪೇಟ್ಗುಂ (ಮದತಿ. ೦೦-೯೭); ಮತ್ತಿನ ದೆಯ್ವಂ [ಪಾಠಾಂ. ದೈವಂ]ಗಳ್ಗೆ ಕೊಟ್ಟರ್ಚನೆಯನೆ ಖಳರುಂ ದುಷ್ಟರುಂ ಕಷ್ಟರುಂ ದುರ್ಜನರುಂ ಸೇವಿಪ್ಪರ್ (ಸಮಪ. ೧-೦೨೧). ೨. ಭಾಗ್ಯ; ಅದೃಷ್ಟ: ಮಗನೆ ನಿನಗಪ್ಪೊಡೆ ದೆಯ್ವಂ ಪ್ರತಿಕೂಲವೆಂತುಂ ಕಾದಿ ಗೆಲಲಾರ್ಪೆಯಲ್ಲೆ (ಪಂಪಭಾ. ೦೩-೬೫ ಪ). ೩. ಕಣ್ಣಿಗೆ ಕಾಣದಿದ್ದರೂ ಮನುಷ್ಯರಿಗೆ ಕೆಡುಕು ಮಾಡುತ್ತವೆ ಎಂದು ನಂಬಲಾದ ಭೂತ, ಪ್ರೇತ, ಪಿಶಾಚಿ ಮುಂತಾದುವು: ಕೋಗಳಿಯ ಬರ್ದ್ದಿನ ವೃತ್ತಿಯ ಮಾನ್ಯಕಾಱರುಂ ತೊಲಗಿಸುವ ಧರ್ಮಮಂ ಮಱೆದು ದೆಯ್ವಕೆ ಕಾಳು ಕುಱಿಯಿಕ್ಕಿದವರ್ಪ್ಪೊಲೆಯರವರ್ಗ್ಗೆ ವೃತ್ತಿಯಣಮಾಗದು (ಸೌಇಇ. IX-1, ೦೦೭-೩೬ : 1055). **ದಯ್ವ**: ೨. ಅವರವರ ದಯ್ವದಂದಮನವರವರಾಗಮದೊಳವರ ಕಥೆಗಳೊಳಂ ನೋಡುವಡವೆ ದೂಷಿಸಿದವುವು (ಸಮಪ. ೮-೨೦೭). **ದೆವ್ವ**: ೩. ದೈವ-ದೆವ್ವ (ಶಪ್ತಾನು. ೧೬೦ ವ್ಯಾಖ್ಯಾ); ದೇವರೊ ದೆವ್ವವೊ ದಿಂಡರೊ ಲಂಡರೊ ಬಂಡರೊಯೆಂದೆನುತ (ಹಾಲಾಸ್ಯ. ೩-೧೦-೧೨); ನಾವು ದೆವ್ವಗಳನ್ನು ಕಂಡಿಲ್ಲ ಎಂದ ಮಾತ್ರಕ್ಕೇ ಅವುಗಳ ಅಸ್ತಿತ್ವವನ್ನು ಅಲ್ಲಗಳೆಯುವುದು ತರ್ಕಬದ್ಧವಾದ ಮಾತಲ್ಲ (ನಡದಾ. III, ೨೦೬೦); ದೇವ ದೈವಗಳಂತೆ ದೆವ್ವವೂ ನಮ್ಮ ಹಳ್ಳಿಗರನ್ನು ಹಿಡಿದಿದೆ (ಕನ್ನಜಾ. ೦೯); ತುಂಗ . . . ತೆಂಗಿನ ಮರದಷ್ಟು ಎತ್ತರದ ದೆವ್ವವನ್ನು

ಕಂಡು ಹೆದರಿಕೊಂಡ ವಿಚಾರ ಅವಳೇ ಹೇಳುತ್ತಾಳೆ (ಪದ್ಮಸ. ೨೭). ೪. (ಆಲಂ) ಕೆಡುಕು ಮಾಡುವ ವ್ಯಕ್ತಿ : ತನ್ನ ರಾಜಕೀಯ ಪ್ರಭಾವದಿಂದ ಈ ವ್ಯಕ್ತಿ ಊರಿಗೆ ದೆವ್ವವಾಗಿದ್ದಾನೆ (ರೂಢಿ). ೫. ಬೃಹದಾಕಾರವಾದುದು.

ದೆಯ್ವದವನು = ಭೂತ, ಪಿಶಾಚಿ ಮುಂತಾದುವನ್ನು ಬಿಡಿಸುವನೆಂದು ನಂಬಲಾಗಿರುವವನು : ಮಲೆನಾಡಿನ ಕೆಲವು ಕಡೆಗಳಲ್ಲಿ ದೆಯ್ವದವನ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ (ರೂಢಿ). ದೆಯ್ವದವರು = (ಉಕ) ಊರಿನಲ್ಲಿ ಗಣ್ಯರೆನಿಸಿಕೊಂಡವರು; ಹಿರಿಯರು; ಮಾನ್ಯರು: ದೆಯ್ವದವರು ಹೇಳಿದಂತೆ ಕೇಳಿದರೆ ಗ್ರಾಮಕ್ಕೆ ಅನುಕೂಲ (ರೂಢಿ). ದೆವ್ವದ ಕಾಟ=ದೆವ್ವದ ಚೇಷ್ಟೆ : ಹಳ್ಳಿಯ ಹೆಣ್ಣುಮಕ್ಕಳಿಗಂತೂ ದೆವ್ವದ ಕಾಟ ಇದ್ದೇ ಇರುತ್ತದೆ (ಕನ್ನಜಾ. ೦೯); ರಂಗರಾಯರ ಮನೆಗೆ ನಿತ್ಯವೂ ರಾತ್ರಿ ಕಲ್ಲು ಎಸೆಯುವುದು ಯಾವುದೋ ದೆವ್ವದ ಕಾಟವೆಂದೇ ಅವನು ಮನಸ್ಸಿನಲ್ಲಿ ನಿರ್ಧರಿಸಿ ಬಿಟ್ಟಿದ್ದನು (ಸಂನ್ಯಾಳ. ೮೦). ದೆವ್ವದ ಕುಣಿತ = ಒಂದು ಬಗೆಯ ಜಾನಪದ ನೃತ್ಯ : ಸುಗ್ಗಿಯ ಕುಣಿತ, ದೆವ್ವದ ಕುಣಿತ . . . ಕೊಡಗರ ಕುಣಿತ-ಹೀಗೆ ಎಷ್ಟೋ ಬಗೆಯ ನೃತ್ಯಗಳು ಕರ್ಣಾಟಕದಲ್ಲಿಯೇ ಇವೆ (ಹುಕ್ಕುಮ. ೩೦೦). ದೆವ್ವದ ಚೇಷ್ಟೆ = ಪಿಶಾಚಿಯ ಉಪಟಳ ; ಭೂತದ ಬಾಧೆ : ಆ ಮನೆಯಲ್ಲಿ ವಿಪರೀತ ದೆವ್ವದ ಚೇಷ್ಟೆಗಳಿಂದಾಗಿ ಇಟ್ಟ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿಬಿಡುತ್ತವೆ ಎಂದು ಹೇಳುತ್ತಾರೆ (ರೂಢಿ). ದೆವ್ವದ ಮನೆ= ೧. ಪಿಶಾಚಿಯು ವಾಸಮಾಡುವುದೆಂದು ನಂಬಲಾದ ಮನೆ : ನಾನು ಬಾಡಿಗೆಗೆ ಹಿಡಿದ ಮನೆಯು ದೆವ್ವದ ಮನೆಯಂತೆ (ಜನಜೀ. ೬೦) ; ಆ ಮೂಲೆಮನೆಗೆ 'ದೆವ್ವದ ಮನೆ'ಯೆಂದು ಆ ಬೀದಿಯವರೇ ಹೆಸರಿಟ್ಟು ಯಾರೂ ವಾಸಕ್ಕೆ ಬಾರದಂತೆ ಮಾಡುತ್ತಿದ್ದಾರೆ (ರೂಢಿ). ೨. ಪಾತ್ರಿಯು ಮೈಮೇಲೆಭೂತವನ್ನು ಆವಾಹನೆ ಮಾಡಿಕೊಂಡು ಭವಿಷ್ಯವನ್ನು ಹೇಳುವ ಸ್ಥಳ; ಪಾತ್ರಿಯು ಗಣ ಬರಿಸಿಕೊಳ್ಳುವ ಮನೆ : ಸರೋವರದ ದಕ್ಷಿಣಕ್ಕಿರುವ ಕಿರುದಾರಿಯಲ್ಲಿ ಇಂದಿಗೂ ಎರಡು ಹಳೆಯ ಕಾಲದ ಹುಲ್ಲಿನ ಚಾವಣಿಯ ದೆವ್ವದ ಮನೆಗಳಿವೆ (ಪದ್ಮಸ. ೨೬); ಅಂದು ಜನಸಂದಣಿ ದೆವ್ವದ ಮನೆಯಲ್ಲಿ ಸೇರಿತ್ತು. ನಮ್ಮೂರ ಜನಕ್ಕೆ ದೆವ್ವದ ಮನೆಯಲ್ಲಿ ತುಂಬಾ ವಿಶ್ವಾಸ (ದಕ್ಷಿಸ. ೯೫). ದೆವ್ವದುಡಿತ = ಮನುಷ್ಯನಿಗೆ ಅಸಾಧ್ಯವಾದ ಕೆಲಸ ; ಪಿಶಾಚಿಯು ಮಾತ್ರ ಮಾಡಬಹುದಾದಂಥ ಅತ್ಯಂತಶ್ರಮದ ಕೆಲಸ: ದೊಡ್ಡ ಸಾಹೇಬನು ಅವನಿಗೆ ದೆವ್ವದುಡಿತ ಕೊಡತೊಡಗಿದನು (ಇಪ್ಪಳ. ೩೦೦). ದೆವ್ವ ಬಡಿ = ೧. ದೆವ್ವ ಹಿಡಿ: ದೆವ್ವ ಬಡಿದರೆ ಬಿಡಿಸುವ ಬಂಟರೂ ಇದ್ದಾರೆ ಹಳ್ಳಿಗಳಲ್ಲಿ (ಕನ್ನಜಾ. ೦೯). ೨. ಆವೇಶ ಬರು ; ಉದ್ರೇಕವುಂಟಾಗು : ತುಳಸಿಗೆ ದೆವ್ವಬಡಿದಿತ್ತು (ಜಮೀನ್ದಾ. ೦೩). ದೆವ್ವ ಹಿಡಿ = ಭೂತ, ಪಿಶಾಚಿ ಮೆಟ್ಟಿಕೊಳ್ಳು : ಇದೇನಯ್ಯ ನಾಣಿ, ಹೀಗೆ ದೆವ್ವಹಿಡಿದವನಂತೆ ನಿಂತುಬಿಟ್ಟಿದ್ದೀಯ ? (ರಾಮನಿ. ೦೦೭).

[<ಪ್ರಾ. ದಇವ, ದೇವ್ವ./ಸಂ. ದೈವ]

ದೆಯ್ವದ ಮಂಟೂರ್ (ನಾ). ಒಂದು ಊರಿನ ಹೆಸರು ; P ಈಗಿನ ಬಿಜಾಪುರ ಜಿಲ್ಲೆಯ ಬೀಳಗಿ ತಾಲ್ಲೂಕಿನ ಮಂಟೂರು: ಯಮನಿಯಮಸ್ವಾಧ್ಯಾಯಜಪಹೋಮಾನುಷ್ಠಾನುಪರಾ × ಣರಪ್ಪ ದೆಯ್ವದಮಂಟೂರೂರೊಡೆಯ ಮಧುಸೂದನಯ್ಯ ಪ್ರ × ಖಮಮಹಾಜನಂ (ಸೌಇಂ. XI-1, ೭೪-೦೬ ; 1041). [? + ಊರ್]

ದೆಯ್ವಬಲ (ನಾ). ಅದೃಷ್ಟದ ಬಲ,-ಶಕ್ತಿ : ಕಾಯ್ವಬಲುಱ್ ಜತುಗೃಹದೊಳಗಯ್ವರುಮಂ ಮಂತ್ರಬಲದೆ ಸುಟ್ಟೊಡಮವರಂ ದೆಯ್ವಬಲಮೊಂದೆ ಕಾದುದು ದೆಯ್ವಮನಾರಯ್ಯ ಮಿಱ್ ಬಾಟಲ್ ನೆಱ್ವರ್ (ಪಂಪಭಾ. ೪-೩). [ದೆಯ್ವ + ಬಲ$_2$]

ದೆವಸ (ನಾ). ೧. ಒಂದು ಹಗಲು ಮತ್ತು ಒಂದು ರಾತ್ರಿಯುಳ್ಳ ಕಾಲ ; ಇಪ್ಪತ್ತುನಾಲ್ಕು ಗಂಟೆಗಳ ಕಾಲ ; ದಿನ : "ದೆವಸಮೊಂದು ದಿವಸಂ" (ಕಶಸಾ. ೧೩-೨೪೬) ; ಕೂಟೂ ತೊಱದು ಮೂವತ್ತು ಗಾವುದ × × × ದೆವಸದೊಳಯ್ದಿ ಅರಸನಂ ಜಾಮಿಸಿ (ಸೌಇಇ. XI-1, ೦೦-೦೮; 365) : ಜಯದ್ರಥಂ ಸಿಗ್ಗಾಗಿ ಕೈಲಾಸದೊಳೀಶ್ವರಂಗೆ ತಪಂಗೆಯ್ದು ಮೆಚ್ಚಿಸಿ ಪಾಂಡವರನೊಂದು ದೆವಸದನುವರದೊಳ್ ಗೆಲ್ವನಕ್ಕೆಂದು ಬರಂಬಡೆದು ಪೋದಂ (ಪಂಪಭಾ. ೬-೩೨ ವ) ; ತಾನೆ ಗಡ ಬರ್ಪನೆನಿಸುವೊಡಾ ನರನಯ್ದಾಱು ದೆವಸಮಂ ಬಟ್ಟಪನೇ (ಕಾವ್ಯಾವ. ೦೫೪) : ಅಱವತ್ತುಳಿಗೆಗೊಂದು ದೆವಸಂ (ವ್ಯವಹಾ. ಅನುಬಂಧ. I, ೩೦) ; ರೋಗದಿಂ ಪತ್ತೆಂಟು ದೆವಸಕಸುವೊಱೆಯಾಗಿ ಬೇಗದಿಂ ರಜತಗಿರಿಗೈದಿದಂ ಸುಖಿಯಾಗಿ (ಬಸರ. ೫-೦೪೯) ; ಸೌಂದರಗಣಾಧೀಶನಿರುತಲೊಂದಾನೊಂದು ದೆವಸದೊಳು . . . ಎನ್ನ ಪಾಲಿಸುವುದೆಂದು ಬಿನ್ನಹಮಾಡಿದ (ಸೌಂದಪು. ೬-೨೫). ೨. ಬಾಳುವೆ ; ಜೀವಮಾನ ; ಆಯುಷ್ಯ : ಎನ್ನ ದೆವಸಮುಂ ಜವ್ವನಮುಮುಮಡವಿಯೊಳಗೆ ಪೂತ ಪೂವಿನಂತೆ ಕಿಡಲೀಯದಾತನನೆನ್ನಂ ಪಾಣಿಗ್ರಹಣಂಗೆಯ್ವಂತು ಮಾಡು (ಪಂಪಭಾ. ೦-೭೬ ವ).

ದೆವಸಲುಂ = ನಿತ್ಯವೂ : ದೇಸಿಗ ಪ್ರವಾಸಿಗರಾಹಾರಸತ್ರಕ್ಕೆ ದೆವಸಲುಂ ಬ್ರಾಹ್ಮಣರುಣ್ಬಂತಾಗಿ (ಎಕ. VII, ಶಿಕಾರಿ. ೦೬-೨೦; 1085). [<ಸಂ. ದಿವಸ]

ದೆವಸವಳ (ನಾ). ಪ್ರತಿದಿನದ ಸೇವೆ ; ಪ್ರತಿನಿತ್ಯವೂ ವರ್ತನೆಯಾಗಿ ಮಾಡಬೇಕಾದ ಕಾರ್ಯ : ದೆವಸವಳ ಸ್ಥಳದಲೆರಡೆರಡು ಕಟ್ಟು ಹೂವನಿಕ್ಕಿ (ಸಾಂದೇಡ್. ೩೨-೨೫ ; 1139) ; ತೋಂಟದ ಕೆಯಿ ಮಡಿಯ ಮೇರೆ ಹೂಗಿಡುವ ದಾತಾರನಿಟ್ಟ ದೆವಸವಳ ಬಾಸಿಗ ದಂಡೆ ಹೂ ಏಕಾದಸಿಯ ದೆವಸ ತೋಂಟದ ಹೂವೆಲ್ಲವಂ ಪೂಜೆಯ ಕಟ್ಟಿ . . . ಏಕಾದಸಿಯಲು ತ[ಂ]ದು ಕುಡುವ ದೆವಸವಳವೆರಡು ಕಟ್ಟು ಹೂವನಿಕ್ಕಿ ೨೮೦ ಗಿಡು (ಸಾಂದೇಡ್. ೩೨-೦೯ ; 1138) ; ದಂಡಿನೊಕ್ಕಲುಂ ತಳದೊಕ್ಕಲುಂ ದೆವಸವಳವೇಂಗಾಣದಲ್ಲಿ ಸೊಳಸವೆರಡು (ಎಇ. XX, ೦೨-೪೮ ; 1167), 'ದೇವಸಬಳ', 'ಸಬಳಗದ್ಯಾಣ' ಪರಾ.

[ದೆವಸ + – ವಳ (< – ವಾಳ$_1$)]

ದೆವೆಟ್ (ನಾ). ಒಬ್ಬಾತನ ಹೆಸರು : ಸಿರದ ದೆವೆಟ್‌ಯರ ಮಗ ದಾವಣಗವುದದ ಮಹಾಜನಕೆ ಕೊಟ್ಟದು ಶಾಲೆ (ಎಕ. VII, ಶಿಕಾರಿ. ೪೫-೩೩ ; ಸು. 890). [?]

ದೆವ್ವ 'ದೆಯ್ವ' ನೋ.

ದೆವ್ವಂಗುಣಿ (ಕ್ರಿ). ಪಿಶಾಚಿಯಂತೆ ವಿಚಿತ್ರವಾಗಿ ನೆಗೆದಾಡು,-ಹಾರಾಡು,-ಕುಣಿ : ನರಳುಗಳ್, ವೀರಾಟ್ಟಹಾಸಗಳ್, ಕಟುವಿಕಟ ಚೀತ್ಕಾರಗಳ್ ಪ್ರಳಯಶಂಕೆಯನೊಡರ್ಚುತ್ತೆ ದೆವ್ವಂಗುಣಿದುವಲ್ಲಿ ! (ಶ್ರೀರಾಮಾ. ೩೩೦-೪). [ದೆವ್ವ (<ದೆಯ್ವ) + ಕುಣಿ$_1$]

ದೆವ್ವದುಂಬೆ (ನಾ). ಕೇಸರಿಬಣ್ಣದ ದೊಡ್ಡ ಹೂವುಗಳನ್ನು ಬಿಡುವ ಒಂದು ಬಗೆಯ ಕಾಡು ಗಿಡ : (ಕೆ). 'ದೇವದುಂಬೆ' ಪರಾ.

[ದೆವ್ವ (<ದೆಯ್ವ) + ತುಂಬೆ$_2$]

ದೆವ್ವಬಾಳೆ, ದೇವಬಾಳೆ (ನಾ). (ಉಕ) ಒಂದು ಬಗೆಯ ಸಸ್ಯ ; ಕತ್ತಾಳೆ. ದೇವಬಾಳೆ : ಸಣಬು, ದೇವಬಾಳೆ ಅಥವಾ ಹುಚ್ಚ ಕೇದಗಿನಾರು (ಮುಂಬಖ್ಯಾ. ೦೯). [ದೆವ್ವ (<ದೆಯ್ವ)+ಬಾಳೆ$_1$ (<ಬಾಟ್)]

ದೆವ್ವಬಿಡಿಸು (ಕ್ರಿ). ೧. (ನಂಬಿಕೆಯಲ್ಲಿರುವಂತೆ ಮಂತ್ರ, ತಂತ್ರ ಮೊದಲಾದ ಸಾಧನಗಳಿಂದ ವ್ಯಕ್ತಿಗೆ ಹಿಡಿದಿರುವ) ಪಿಶಾಚಿಯನ್ನು ಬಿಟ್ಟುಹೋಗುವಂತೆ ಮಾಡು : ನಮ್ಮೂರ ಜೋಗಿ ದೆವ್ವಬಿಡಿಸುತ್ತಾನೆ (ರೂಢಿ). ೨. (ಆಲಂ) ಚೆನ್ನಾಗಿ ಥಳಿಸು,-ಬಡಿ,-ಹೊಡೆ : ಅವನಿಗೆ ಇವತ್ತು ದೆವ್ವಬಿಡಿಸುತ್ತೇನೆ (ರೂಢಿ). [ದೆವ್ವ (<ದೆಯ್ವ) + ಬಿಡಿಸು]

ದೆವ್ವಹತ್ತಿ (ನಾ). ಒಂದಂ ಬಗೆಯಂ ದೊಡ್ಡಹತ್ತಿ,- ಕಾಡುಹತ್ತಿ : (ಮೈಜಿಗಿ. ೧-೨). [ದೆವ್ವ (<ದೆಯ್ವ) + ಹತ್ತಿ (<ಪಟ್ಟಿ)]

ದೆಶೆ₁ 'ದಸೆ' ನೋ.

ದೆಶೆ₂ 'ದೆಸೆ₂' ನೋ.

ದೆಶೆಗೇಡಿ (ನಾ). ಅದೃಷ್ಟಹೀನ ; ದುರದೃಷ್ಟಶಾಲಿ : ಈ ದೆಶೆಗೇಡಿ ಚಾರುದತ್ತನನ್ನು ಶೂಲಕ್ಕೆ ಹಾಕುವ ವೇಳೆಯಲ್ಲೆ (ಮುಂಬಯಿ. ೬-೨೧೫); ಇದ್ದ ಆಸ್ತಿಯನ್ನೆಲ್ಲ ಕಳೆದುಕೊಂಡು ಅವನು ಈಗ ದೆಶೆಗೇಡಿಯಂತೆ ಊರೂರು ಅಲೆಯುತ್ತಿದ್ದಾನೆ (ರೂಢಿ). [ದೆಶೆ₁ (<ದಸೆ) + ಕೇಡಿ₁]

ದೆಶೆಯಾನೆ 'ದೆಸೆಯಾನೆ' ನೋ.

ದೆಸೆ₁ 'ದಸೆ' ನೋ.

ದೆಸೆ₂, ದಿಸೆ, ದೆಶೆ₂ (ನಾ). ೧. ದಿಕ್ಕು : "ಹರಿದಾಶಾದಿಕ್ಕಕುಪ್ಪಾಷ್ಟಗಳೆನೆ ದೆಸೆಗಳ್" (ವಸ್ತುಕೋ. ೯-೫೦) ; "ಗೊಂಟುಂ ದೆಸೆಯುಂ ಕನ್ನಡದೆ ದಿಕ್ಕುವೆಸರಹುದು" (ಕಂನವಿ. ೩೯) ; ದಕ್ಷಿಣಾದೆಸೆಗಲ್ಲಂ ತೊಱೆಎ ಅನ್ತೆ ಬನ್ದು . . . ತುಟ್ಟಿಲ್ಗಾಲೊಳ್ಕೂಡಿತ್ತು (ಮೃಆರಿ. ೧೯೩೬, ೫೩-೨೬ ; ಸು. 550); ದೆಸೆಗಳ್ವಿಶಾಲವಾದುವು . . . ಶರದಾಗಮದೊಳ್ (ಕವಿರಾ. ೨-೫೯) : ಕಾಲಮೇಘಸಮೂಹಂ ದೆಸೆಯೆಲ್ಲಮಂ ಕವಿದುದೋ ಗಂಧೇಭಚರ್ಮಂಗಳಂ ಪಸರಂಗೆಯ್ದನೊ ಶಂಭುವೆಂಬ ಬಗೆಯಿಂ . . . ಕವಿದತ್ತುದ್ದಾಮಭೀಮಂ ತಮಂ (ಪಂಪಭಾ. ೪-೪೯) ; ತನ್ಮಧ್ಯದೊಳಿರ್ಪುದು ರುಚಿವನ್ನೇರುನಗೇಂದ್ರಮದಱ ಮೂಡಣ ದೆಸೆಯೊಳ್ (ಶಾಂತಿಪು. ೧-೫೭) ; ಇಕಾರಕ್ಕೆ ಎತ್ವಂ-ಇಳಾ-ಎಳೆ ; ದಿವಸ-ದೆವಸ ; ದಿಶಾ-ದೆಸೆ (ಶಮದ. ೨೭೦ ಪ್ರಯೋ) ; ಧರೆಗೆ ವನನಿಧಿ ಜನಕೆ ದೆಸೆಯೈಶ್ವರಿಯಕಿಂದ್ರನು . . . ವಿದ್ಯದಲಖಿಳಕಳೆಗಳ ಪರಿಣತತ್ವವದ ವಧಿಯಾ ನೃಪಗೆ (ಜೀವಂಚ. ೨-೪೫) ; ದೆಸೆಗಳ ಹೊಲಿಗೆ ಹಱಿಯದೆ ಮಾಣವೆನೆ ಹೊಕ್ಕವು ರಥಾನೀಕ (ಕುಪ್ಯಾದ್ರೋ. ೧೨-೮) ; ದೆಸೆಗೆ ಬಿಟ್ಟಾರಾಯರ ಬಾಟ್ದಲೆವಿಡಿದುಂ ಜಯಕಾಂತೆಗೆ ತೊಟ್ಟಿರಂ ಮಾಡುತುಂ . . . ಕಪ್ಪ ಕಾಣ್ಕೆಗಳನೆಱೆದು ತರ್ಪೆಂ (ರಾಮಾಶ್ವ. ೪೯-೧೭). ೨. ಎಡೆ ; ಸ್ಥಳ: ಜಾಗ: ತಮ್ಮಯ್ವರುಂ ಪಾಂಚಾಳಿವೆರಸು ಪೋದ ದೆಸೆಯನಾರುಮಱಿಯದಂತು ದ್ವೈತವನದುಂ ಪೊಱಮುಟ್ಟು (ಪಂಪಭಾ. ೮-೫೦ ಪ) ; ಮಲಿನರನೆ ಪೊರ್ದುವಯ್ ನಿರ್ಮಲರತ್ತಲ್ ಪೊರ್ದಲೊಲ್ಲೆ ನೀಂ ಕನ್ನಡಿಯೊಳ್ ಜಲಮಿರ್ಪ ದೆಸೆಯೊಳಿರ್ದಾ ಕಿಲುಂಬುಗೊಂಡಿರ್ದ ದೆಸೆಯೊಳಿರ್ದುದೆ ಪೇಟ್ಗುಂ (ಗದಾಯು. ೯-೧೦) ; ಒಂದು ದೆಸೆಯಲಿ ರಾಯನಿಪ್ಪತ್ತೊಂದು ಸಾವಿರೆ ರಥಸಹಿತುಘೇಯೆಂದು ಬಿಟ್ಟನು ಭೀಮಸೇನನ ರಥದ ಸಮ್ಮುಖಕೆ (ಕುಪ್ಯಾಕ. ೧೫-೧೯). ೩. ಮಗ್ಗುಲು ; ಬಳಿ ; ಹತ್ತಿರ : ವಿದ್ಯಾಧರಿಯರ್ಕಳ್ ಬರ್ಪಂತೆ ಬಂದು ಬಾಗಿಲ್ಮಾಡದ ಪೊಱಗಣ ದೆಸೆಯೊಳ್ ತಂತಮ್ಮ ವಾಹನಂಗಳಿಂದಿಟಿದು ಪೊಕ್ಕು ಬಸದಿಯಂ (ಪಡ್ಮಾರಾ. ೮೦-೧೪); ಅಪ್ರತಿರಥಂ ರಥಮನೇಱಿ ಮನಃಪವನವೇಗದಿಂ ದ್ವಾರಾವತಿಯನೆಯ್ದಿ . . . ಮಧುಮಥನನೆತ್ತಲಣ್ಮದೆ ಕಾಲ ದೆಸೆಯೊಳುಸಿರದೆ ಕುಳ್ಳಿರೆ (ಪಂಪಭಾ. ೯-೧೦ ಪ) ; ರವಿ ಶಿಖಿ ಪವನಂ ವ್ಯೋಮಗಣಂ ಪುಗಲಾಗದು ಸಾಮಾನ್ಯಂ ಕಾವ್ಯಗೀತವೆರಡಱ ದೆಸೆಗಂ (ಧಂದೋಂಬು. ೧-೪೪ ಅಡಿಟಿ) ; ತನ್ನಯ ಕಾಲ ದೆಸೆಯಲಿ ಕೆಡದ ಕೌರವಸುತರು ನೂರ್ವರಲಿ ಬಾಲಕನು ಬಳಲಿದನು (ಕುಪ್ಯಾದ್ರೋ. ೬-೬೧). ೪. ಕಾರಣ ; ನಿಮಿತ್ತ : "ದೆಸೆಯೆಂದೆನ್ನಲ್ ದೂಸಱದು" (ಕವಿಕಂ. ೨೩೩) ; ಸೀತಾದೇವಿಯನಾವನಾನು ಮೊರ್ವಂ ಮಾಯಾವಿ ಕಳ್ದುಯ್ದಾ ಕಾನನದೊಳಿರ್ದಪನಾ ದೆಸೆಗಗ್ರಜಂ ವ್ಯಗ್ರನಾಗಿರ್ದಪಂ (ಪಂರಾಮಾ. ೯-೧೩೬ ಪ); ಎನ್ನಯ ದೆಸೆಯ ಭಯ ಬೇಡ (ಕುಪ್ಯಾದ್ರೋ. ೧-೨೭) ; ಅತಿಭಯಂಕರ ದಾನವರ ದೆಸೆಗೆ ದೆಸೆಗೆಟ್ಟು ಭೀತಿಯಿಂದಿರದೆ ಧನದಂ ಬಿನದವಂ ಬಿಟ್ಟನು (ಜಿಬಪು. ೪೦-೨೯). ೫. ಪಂಗಡ; ಪಕ್ಷ : ಎಸಲು ಭೀಮನ ಬಾಣವನು ಖಂಡಿಸಿದ ಮೂಱಂಬಿನಲಿ ರವಿಸುತ ನಸಮಸಾಹಸಿಯೆಚ್ಚಡೆಚ್ಚನು ಭೀಮ ಮಱುಗಣೆಯ ನಿಶಿತಶರವನು ಹತ್ತು ಶರದಲಿ ಕುಸುರಿದಱಿದನು ಕರ್ಣನಿಬ್ಬರ ದೆಸೆಗೆ ದೇವಾನೀಕ ಮೆಚ್ಚಿತು (ಕುಪ್ಯಾದ್ರೋ. ೧೩-೨೪) ; ತಾಯತಂದೆಯ ದೆಸೆ ಗಂಡನ ದೆಸೆಯೆಂಬೀ ಯೆರಡಿರವಿನೊಳೆಸೆವ ಕಾಯಬಾಂಧವರ ಕಣ್ಣೆರಡೆಂದು ಕಾಂಬುದು (ಹದಿಬ. ೪-೩೦) ; ಶಾನುಭೋಗನ ಸಂಬಳ ಸಂತೋ ಎಂದು ಕೇಳಬೇಡ ಹೆಂಡತಿ ದೆಸೆಯವರು ಉಂಡರೋ ಎಂದು ಕೇಳಬೇಡ (ಗಾದೆ). ೬. ರೀತಿ; ಕ್ರಮ; ಬಗೆ : ಸರ್ವ್ವನಮಶ್ಯಂ ಕೊಟ್ಟ ಮತ್ತರ್ ನೂಱು ಅದಱ ಸೀಮೆಯ ದೆಸೆಯೆನ್ತೆನ್ದೊಡೆ(ಂ) ತೆಂಕಣಭಾಗಂ ಕಟ್ಟಿಲೆವಾಡದ ಪೊಲಂ (ಸೌಇಇ. XI-i, ೪೮-೧೨ ; 1002) ; ಈಯೊಟ್ಟೆಯಂ . . . ಕೊಲ್ವ ದೆಸೆಯಂ ವೇಟ್ಟೊಡೆ (ಪಂಚತಂ. ೧೪೨-೭). ೭. ಗೊಡವೆ; ಸಹವಾಸ ; ಸಂಬಂಧ; ಸಂಪರ್ಕ ; ಗೋಜು : ದೋಷಂಗಳಿಂತು ಮಿಗೆ ಸಂಶ್ಲೇಷದೊಳಾದಂದು ಸಕಲವಿದ್ವತ್ಸಭೆಯೊಳ್ ದೂಷಿಸುಗುಂ ಕೃತಿವಧುವಂ ಭಾಷಾವಿದರದಱ ದೆಸೆಯನುಟಿಗೀ ತೆಱದಿಂ [ಪಾಠಾಂ. ತೆಱನನುಟಿಗೀ ದೆಸೆಯಿಂ] (ಕವಿರಾ. ೧-೯೯) ; ನಿಲಲಾಱದು ನೀರ ದೆಸೆಯನುಟಿದಸುವಿನಿಸುಂ (ಧರ್ಮಾಮೃ. ೧-೧೬೧); ಪಿಸುಣರಹ ದುರ್ಜನರ ಕುಱಿಗಳ ದೆಸೆಗೆ ಹೋಹರೆ ಸಜ್ಜನರ್ಕಳು (ಬಸಪು. ೨೮-೩೮). ೮. ವಿಚಾರ ; ವಿಷಯ : ಪ್ರಿಯಸಖವಾರ್ತೆಯಂ ತಿಳಿಯೆ ಬಿನ್ನವಿಸನ್ನೆಗಮಿರ್ಕೆ ಪತ್ರಲೇಖೆಯ ದೆಸೆ (ಕಾದಂಉ. ೫೩೬). ದಿಸೆ : ೧. ಮೂಡ ದಿಸೆಯೊಳ್ ಮೂಡ (ಎಇ. VII, ೨೦೧-೧೦ ; 865). ೯. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ : "ಅಷ್ಟ, ವಸು, ದಂತಿ, ದುರಿತ, ಕರ್ಮ, ದಿಸೆ . . . ದಿಗ್ದಂತಿ ಇಂತಿನಿತುಂ ರಕ್ಕೆ ಪೆಸರು" (ವ್ಯವಹಾ. ೧೦-೩೦). ದೆಶೆ₂ : ೧. ಸುಲೋಚನೆಯುಂ ಸ್ವಯಂಬರಕ್ಕಗ್ರಣಿಯಕ್ಕುಮೆಂದೊಡದನಕಂಪನನೊಡಂಬಟ್ಟೆಲ್ಲಾ ದೆಶೆಗಳೊಳು ಭೂಚರ ಖೇಚರ ಕುಮಾರರ್ಕಳ್ಗೆ ಬಟಿಯನಟ್ಟಿರ್ಪನ್ನೆಗಂ (ಜಾವುಂಪು. ೫೬).

ದೆಸೆದೆಸೆ (ದ್ವಿರುಕ್ತಿ) : ಅಂತು ಕುರುಬಲದ ಕರಿಘಟೆಗಳಂ ನುಂಗುವಂತೆ ದೆಸೆದೆಸೆಗೆ ಮಿಳಿರ್ದು ಮಿಳ್ಳಿಸಿದ ಸಿಂಗದ ಪಟವಿಗೆಯುಂ(ಪಂಪಭಾ.೧೦-೯೭ ಪ); ಉರದಡಕಿಲ್ವುಣ್ಣಂ ಕರ್ದುಕಿರದಧರದ ಪುಣ್ಗೆವಾಯ್ದ ಮಿಾಂಗಗಿದು ತಳೋದರಿ ದರಿಯನೆಯ್ದುವಿನಮಾ ಸರೋವರಂ ಕದಡೆ ಬೆರ್ಚಿ ದೆಸೆದೆಸೆವರಿದಳ್ (ಶಾಂತಿಪು. ೮-೪೪) ; ದೆಸೆದೆಸೆಗೋಡಿದನ್ಯಕರಿ ದಿಕ್ಕರಿಯಾದುದ ರಾತಿಭೂಭುಜಪ್ರಸರಮೆ ದಿಕ್ಪತಿಪ್ರಸರಮಾದುದು (ಗದಾಯು. ೧-೫೩) ; ಕಯ್ಯ ಹುಲ್ಲಂ ನೆಗಪಿ ದೆಸದೆಸೆಗೆ ಸಿವದಿಡುತೆ (ತಿರುರ. ದೇ. ೦೪-೧೩) ; ಜಲವನರಿಭಟ ಸುಳಿದು ತುಳಿದನು ಹಿಳಿದು ಹಿಂಡಿದನು ಕೆಲರು ಕಂಪಿಸೆ ಕೆಲರು ಕಂಗೆಡೆ ಕೆಲರು ದೆಸೆದೆಸೆಗೋಡೆ (ಕೌಶಿರಾ. ೩-೧೭). ದೆಸೆಬಾಯಿಬಿಡು = (ಉಕ) ಗಾಬರಿಯಿಂದ ಏದುಸಿರು ಬಿಡು : ದರಿಯಪ್ಪನೇ ರುಮಾಲು ತೆಗೆದುಕೊಂಡು, ದೆಸೆಬಾಯಿಬಿಡುತ್ತ ಓಡಿ ಗೌಡರಿಗೆ ಮುಟ್ಟಿಸಿದ (ಗ್ರಾಮಾಯ. ೩೨); ಭಟ್ಟ ದೆಸೆಬಾಯಿಬಿಡುತ್ತ ಓಡಿ ಬಂದ (ಮೇದಿಮ. ೬) ; ಹೇಳತದ ತಡಿಯಲಾ ಆಷ್ಟ್ಯಾಕ ದೆಸೆಬಾಯಿಬಿಡತೀದಿ (ಆಮನಿ. ೪೩). ದೆಸೆಯವರು = (ನಾಲ್ಕು) ದಿಕ್ಕುಗಳಿಗೆ ಸಂಬಂಧಪಟ್ಟವರು ; ದಿಕ್ಪಾಲಕರಂ : ದೆಸೆಯವರು ಮೂಲೆಗಳವರು ಮನ್ನಿಸುವರೇ (ಕುಪ್ಯಾಅ. ೧೧-೨೬). ದೆಸೆಯಿಂ, ದೆಸೆಯಿಂದ, ದೆಸೆಯಿಂದಂ, ದೆಸೆಯಿಂದೆ, ದೆಸೆಯೊಳ್ = ಪಂಚಮೀವಿಭಕ್ತಿಯಂ ಅತ್ತಣಿಂ ಎಂಬ ಪ್ರತ್ಯಯದ ಅರ್ಥದಲ್ಲಿ ಉಪಯೋಗಿಸುವ ಪ್ರತ್ಯಯ; P ಪಂಚಮೀವಿಭಕ್ತಿಯ ಪ್ರತ್ಯಯವಾದ; 'ಅತ್ತಣಿಂ' ಎಂಬ ರೀತಿಯಲ್ಲಿ ಅವುಗಳಿಗೆ ಬದಲಾಗಿ ವಿಕಲ್ಪವಾಗಿ ದೆಸೆಯಿಂ, ದೆಸೆಯಿಂದ, ದೆಸೆಯಿಂದಂ, ದೆಸೆಯಿಂದೆ ಎಂದು ಉಪಯೋಗವಾಗುತ್ತವೆ : ಪರರ ದೆಸೆಯಿಂ ತನ್ನ ಮರ್ಮಸ್ಥಾನಂಗಳನತ್ಯಂತ ಸೂಕ್ಷ್ಮಮಾದೊಡಂ ಮಱಸುವಂ (ಪಂಚತಂ. ೦೦೪-೧೨); ಇವರ ದೆಸೆಯಿಂದ

ರಸ ಗಂಧ ರೂಪು ಶಬ್ದ ಸ್ಪರ್ಶನ ಜನಿಸಿತ್ತು (ಅದವ. ೨೮-೮೦) : ಕಶ್ಯಪ ಮುನಿಯ ದೆಸೆಯಿಂದಾದುದೀ ಮೇದಿನಿಯ ವಿಸ್ತರವೆಂದು ಮುನಿ ನುಡಿದನು (ತೊರರಾ. ೧-೩-೧೨) ; ನಿನಗಿನಿವಿರಿದು ಭಯಾವೇಶಮಾರ ದೆಸೆಯಿಂದಮಾದುದು (ಶಾಂತಿಪು. ೬-೬೨ ವ) ; ಎಂದುಮಿವರ ದೆಸೆಯಿಂದಂ ನಿಮಗೊಂದುಂ ಭಯಮಿಲ್ಲಂ (ಜಾವುಂಪು. ೧೩) : ಏಳ್ನೂಱು ಭೂತಮಿಶನ ಪುರಕ್ಕೈದಲುಳಿದೊಂದು ಭೂತಂ ಬಂದವಂ ಕಾಣದಳುತಿರೆ ಭೋಜನದಱ ದೆಸೆಯಿಂದೆ ಮಗುಳಾ ಗುರುವಿನಸ್ಥಿಗಳ ಪೊಗೆಯೊಳಗೆ ಚಂದದಿಂದಖಿಳಜನ ವೆರಸಿ . . . ಶಿವಪುರಕ್ಕೈದಿದಂ (ಚಿಬಪು. ೫೫-೪೬); ತನ್ನಾಳ್ದನ ದೆಸೆಯೊಳ್ ಭೀತನುಮಪಮಾನಿತನುಮಾಗಿರ್ದಂ (ಪಂಚತಂ. ೨೪೬-೧೯) ; ಬಸವನಿರವಂ ದ್ವಾರಪಾಲರ ದೆಸೆಯೊಳಱಿದು . . . ಗಮನಿಸಲು (ಬಸಪು. ೩೫-೪೨).

[<ಸಂ. ದಿಶಾ]

ದೆಸೆ₃ (ನಾ). ಒಂದು ಬಗೆಯ ತೆರಿಗೆ (?) : ಈ ಧರ್ಮ್ಮದ ಸ್ಥಳದಲ್ಲಿ ಬಳ್ಳಾಳರಿಗೆ ಅನಾಯ ಸನಾಯ ಸಲ್ಲದು ಇಲ್ಲ ಆ ಸ್ಥಳ(ಗ)ದಲು ಇದ್ದ ಪೊಕ್ಕಲಿಗೆ ಬಿಟ್ಟಿ ಬಿರಾಡ ಸಲ್ಲದು ಕಾಣಿಕೆ ದೆಸೆ ಅಪ್ಪಣೆ ಪಡೆದಲ್ಲಿಯೆತ್ತು ಸಲ್ಲದು (ಎಇ. XX, ೯೪-೫೪ ; 1556). [?]

ದೆಸೆಗಟ್ಟು (ನಾ). ದಿಗ್ಬಂಧನ : ಆ ಮಹಾತ್ಮರು . . . ತಿಮ್ಮಣ್ಣ ನಾಯಕನಿಗೆ ದೆಸೆಗಟ್ಟಿನ ದೂಳಿತ, ಸಿದ್ಧಮೂಲಿಕೆ, ಕೈಅಂಬು ಇವುಗಳನ್ನು ಕೊಟ್ಟು . . . ಬುದ್ಧಿ ಹೇಳಿ ಹೊರಟು ಹೋದರಂತೆ (ಚಿತ್ರಪಾ. ೭) ; "ದೆಸೆಗಟ್ಟಿನ ಧೂಳಿತ = ಸಣ್ಣಗಿರುವ ಮಣ್ಣಿನ ಹುಡಿಗೆ ಧೂಳು ಎಂದು ಹೆಸರು . . . ರೂಢಿಯಲ್ಲಿ ದೇವರ ಪಾದದಲ್ಲಿರುವ ಧೂಳು ಅಥವಾ ವಿಭೂತಿಗೆ ಈ ಹೆಸರು ಬಂದಿದೆ, ಇದಕ್ಕೆ ಪಾದರೇಣು ವೆಂದು ಸಹ ವಾಡಿಕೆ ಇದೆ" (ಚಿತ್ರಪಾ.ಅನುಬಂ. ೨).

[ದೆಸೆ₂ + ಕಟ್ಟು₂./ತೆಲು. ದೆಸೆಕಟ್ಟು = ಕಳ್ಳತನಮಾಡುವಾಗ ಬಳಸುವ ಒಂದು ಬಗೆಯ ಸಾಧನ]

ದೆಸೆಗಡೆ (ನಾ). ೧.ದಿಕ್ಕಿನ ತುದಿ ; ದಿಗಂತ : ಮೆಟ್ಟಿದುದುರಗಪುರವನಳಕೆ ಯನಱಿಯಟ್ಟಿದುದು ದೆಸೆಗಡೆಗೆ ಮುಟ್ಟಲೀಯದೆ ಮೇಲಕೆ ನೂಕಿದುದು ಸುರಪಟ್ಟಣವನು ಚೆಲ್ವಿನಿಂದ (ಕುರಾಸಾಂ. ೦೭-೭). ೨. ಮೂಲೆ ; ಕೊನೆ: ಬಿಡದಿರೆ ಪರಮಪಾತಕಿಯನಿವಳ ದೆಸೆಗಡೆಗಿರದಿಟ್ಟು ಪೋಗುವೆನು (ಕುರಾಸಾಂ. ೩೨-೧೨೦). [ದೆಸೆ₂ + ಕಡೆ₂]

ದೆಸೆಗಾಣ್ (ಕ್ರಿ). ದಿಕ್ಕನ್ನು ಕಾಣು; ದಿಕ್ಕು ತೋಚು; ಮುಂದುಗಾಣು: ಉರಿಕೊಳೆ ದೆಸೆಗಾಣದೆ ದೆಸೆವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂ ಬೆರಸೊಳಱಿ ನೆಗೆದುದಾ ವನಕರಿಶರಭಕಿಶೋರಕಂಠಗರ್ಜನೆ ಬನದೊಳ್ (ಪಂಪಭಾ. ೫-೯೦) ; ಅದನಾಂ ಕೇಳ್ದೆರ್ದೆಗೆಟ್ಟು . . . ಕಣ್ಣೀರ ಪೂರದ ಗುರ್ವಿಂ ದೆಸೆಗಾಣದಂದೆಡವುತಂ ತಾಗುತ್ತಂ (ಕಾದಂಪೂ. ೯೦) : ಬೆಳಗೆ ತಿಗ್ಮಕರಂ ದೆಸೆಗಾಣದಿರ್ಪ ಕೌಶಿಕನಯನಂಗಳಂ . . . ಏಕೆಯೊ ಮಾಡಿದ ನಬ್ಜವಿಷ್ಟರಂ (ಪಂರಾಮಾ. ೧-೩೦) ; ಅಗರುವ ಧೂಪಧೂಮದೊದವಿಂ ದೆಸೆಗಾಣದೆ(ವರ್ಧಪು. ೧-೬೬). [ದೆಸೆ₂ + ಕಾಣ್]

ದೆಸೆಗಾರ (ನಾ). ಅದೃಷ್ಟಶಾಲಿ ; ಪುಣ್ಯವಂತ ; ಭಾಗ್ಯಶಾಲಿ : ಅಡಕೆ ಬೆಳೆದವರು ಒಳ್ಳೆ ದೆಸೆಗಾರರಾಗಿ ಬದುಕಿ ಹೋದರು (ರೂಢಿ).

[ದೆಸೆ₁ (<ದಸೆ) + – ಗಾರ (< – ಕಾಱ)]

ದೆಸೆಗಿಡಿಸು 'ದೆಸೆಗೆಡಿಸು' ನೋ.

ದೆಸೆಗಿಡು 'ದೆಸೆಗೆಡು' ನೋ.

ದೆಸೆಗೂಡು (ಕ್ರಿ). ಗುಂಪನ್ನು ಸೇರು : ಶಿವಶಿವ ವಲಿಮುಖರ ದೆಸೆಗೂಡೆ ದಳಪತಿ ನೀಲ ಹರಿತಂದ (ಕೌಶಿರಾ. ೨೦-೪೧). [ದೆಸೆ₂ + ಕೂಡು₁]

ದೆಸೆಗೆಡಿಸು, ದೆಸೆಗಿಡಿಸು (ಕ್ರಿ). ೧. ದಿಕ್ಕು ತೋರದಂತೆ ಮಾಡು ; ಮುಂದುಗಾಣದಂತೆ ಮಾಡು ; ದಿಗ್ಭ್ರಮೆಯುಂಟುಮಾಡು : ಅಱಿವುಗೆಡಿಸುತ್ತುಮೆಲ್ಲಾ ತೆಱದಿಂ ದೆಸೆಗೆಡಿಸದಿರದು ವಿಷಯಸಮೂಹ ಕ್ಕೆಱಗಿ ಬಿಡದಂತೆ ಪತ್ತುವ ಮಱುಕಂ ದಿಙ್ಮೋಹದಂದದಿಂ ಮಾನಿಸರಂ (ಕಾದಂಪೂ. ೫೩೮) ; ಮಸುಳುವನು ತೋಱುವನು ತೊಡೆವನು ದೆಸೆಗೆಡಿಸು ವನು ಬಳಿಕ ಮುಳಿಸಿನೊಳಾ ಮಹಾರಥರ (ಕುವ್ಯಾಕ. ೧೧-೩೭) ; ಎಸಲ ಲರ್ಗಣೆಗಳವಳ . . . ಕರಣಗಳ ದೆಸೆಗೆಡಿಸಿದವೆನಲವಳ ವಿರಹದೊಂ ದೆಸಕವನೇನ ಪೇಳುವೆನು (ಕುರಾಸಾಂ. ೩೨-೮೯). **ದೆಸೆಗಿಡಿಸು:** ೧. ಒಸೆದು ಯಶೋದ್ಭ × × × ದೇವನಿದಿರಾಂತವರಂ ದೆಸೆಗಿಡಿಸಿ ವೀರಭೋಜ್ಯಾ ವಸುಂಧರಾ × × × (ಎಕ VIII (S), ಸೊರಬ. ೫೮೬-೨೦ ; 1201). ೨. ಓಡಿಸು; ನಿವಾರಿಸು ; ನಾಶಪಡಿಸು ; ನೆಲ್ಲಿ . . . ಅಸಿತದಯಃ ಕಾಂತದ ಮದಮಂ ದೆಸೆಗಿಡಿಸುಗುಮೆಂದೊಡಿಲ್ಲಿ ಸಂದೆಯಮುಂಟೇ (ಐಮದ. ೨-೬೯). [ದೆಸೆ₂ + ಕೆಡಿಸು₁]

ದೆಸೆಗೆಡು, ದೆಸೆಗಿಡು (ಕ್ರಿ). ೧. ದಿಕ್ಕು ತೋಚದಿರು ; ಮುಂದುಗಾಣ ದಿರು ; ದಿಗ್ಭ್ರಾಂತಿಗೊಳ್ಳು : ದೆಸೆಯಂ ಪೊತ್ತ ಮದೇಭರಾಜಿ ದೆಸೆ ಗೆಟ್ಟೋಡಲ್ತಗುಳ್ದತ್ತು (ಪಂಪಭಾ. ೯-೯೪) ; ದೆಸೆಗೆಟ್ಟುದ್ಭಾಷ್ಪದಿಂದಂ . . . ಅಧೋಮುಖಿಯೆನಿವ ಮಹಾಶ್ವೇತೆಯಂ ಕಂಡನಾಗಳ್ (ಕಾದಂಕಾ. ೫೪೨); ಭಯರಸದಿಂ ದೆಸೆಗೆಟ್ಟರ್ ಕಂಡದೃಷ್ಟಪೂರ್ವಮನಾರ್ಯರ್ (ಪಂರಾಮಾ. ೧-೭೧); ಕಾಗೆಯಂ ಕಂಡ ಕೋಗಿಲೆಯಂತೆ ಮಾಲೆಗಾಱರ್ಬೆರ್ಚಿ ದೆಸೆಗೆಟ್ಟು ಪರಿಯೆ (ಧರ್ಮಾಮ್ಯ. ೨-೨೩); ಬಿಸಿಲು ಮಳೆ ಬಿಱುಗಾಳಿಯೊಳು ಬಲು ದೆಸೆಗೆಟ್ಟೆ ತಿರುಗಿ ದೇಶದೇಶದೊಳು (ಪುರಂದ. ೧-೧೭೭-೨). ೨. ಹಾಳಾಗು ; ನಾಶವಾಗು ; ನಿನ್ನ ಮೊಗಮುಂ ತಲೆಯುಂ ಬಾತು ಪೋದಪುದು ಕಿಚ್ಚಲ್ಲ ಮಿಂಚುಂಬುಟು ನೀನಿದನೂದಿ ದೆಸೆಗೆಡವೇಡ (ಪಂಚತಂ. ೨೪೨-೭) ; ರಾಯನರನೆಲೆ ದೆಸೆಗೆಡಲು ಮೊಳಗಿದನು ಪಾರ್ಥ ಕುಮಾರನಳವಿಯಲಿ (ಕುವ್ಯಾದ್ರೋ. ೫-೧೫) ; ಬಸವನೆಂದರೆ ಪಾಪ ದೆಸೆ ಗೆಟ್ಟು ಹೋಗುವುದು (ಸರ್ವವ. ೨೯೪). **ದೆಸೆಗಿಡು :** ೨. ನೀಂ ಸ್ತ್ರೀರೂಪ ದೊಳ್ ತೊಡರ್ದು ದೆಸೆಗಿಡಲ್ವೇಡ (ಜಾವುಂಪು. ೪೦) ; ಕಲಿಕಾಲದೇಳ್ಗೆಯಂ ದೆಸೆಗಿಡೆ ತೂಳ್ದಿ ತಾಳ್ದಿ . . . ಸಿಙ್ಗವಿಷ್ಟರಮನೇಱಿದನಾ ಜಯಸಿಙ್ಗ ವಲ್ಲಭಂ (ಎಕ. VII, ಶಿಕಾರಿ. ೧೨೫-೧೫; 1019); ಸುಖಮುಮಂ ಆಯುಷ್ಯ ಮುಮಂ ಮಂತ್ರ [ತಂತ್ರವೈದ್ಯಂಗಳಿಂ] ಪಡೆವೆನೆಂದು ದೆಸೆಗಿಡಲ್ವೇಡ (ಧರ್ಮಾಮ. ೪-೫೦).

ದೆಸೆಗೆಟ್ಟವ=ದಿಕ್ಕುಗೆಟ್ಟವನು: "ನಷ್ಟಃ, ಗೃಹೀತದಿಕ್, ಕಾಂದಿಶೀಕಃ, ಭಯದ್ದ್ರುತಃ – ಈ ೪ ದೆಸೆಗೆಟ್ಟವಂ" (ಹಲಾಯು. ೬೯-೩೨೫).

[ದೆಸೆ₂ + ಕೆಡು₁]

ದೆಸೆಗೇಡಿ (ನಾ). ದಿಕ್ಕಿಲ್ಲದವನು ; ಆಶ್ರಯವಿಲ್ಲದವನು ; ನಿರಾಶ್ರಿತ : ಏತಕ್ಕೆ ಬಿಟ್ಟುಹೋದನು ನಿನ್ನನು ಮಾತೆ ಏತಕ್ಕೆ ಅವನತಿಗಳೆದ ಏತಕ್ಕೆ ನಾ ದೆಸೆಗೇಡಿಯಾದೆನು ಎಂದು ಮಾತೆಯನವ ಬೆಸಗೊಂಡ (ನಿಜಸಾಂ. ೪೨-೮); ನಾನೇ ದೆಸೆಗೇಡಿಯಾದ ಅಹಮ್ಮದನು (ಮುಂಬಯಿ. ೫-೦೨೨) ; ಹೊಟ್ಟೆಯ ಮಗನು ದೆಸೆಗೇಡಿಯಾದದ್ದರ ಅರಿವು ನಿಮಗೆ ಇಲ್ಲವೇ ಇಲ್ಲವೋ? (ತುಳಸೀ. ೧೦೬). [ದೆಸೆ₂ + ಕೇಡಿ₁]

ದೆಸೆದಪ್ಪು (ಕ್ರಿ). ದಿಕ್ಕುತಪ್ಪು; ಆಶ್ರಯವಿಲ್ಲದಂತಾಗು: ಪ್ರಮುಖರಪ್ಪ ನಾಯಕರ ಪೆಂಡಿರುಂ ತಮ್ಮ ಗಂಡರಂ ಕೊಳಗುಳದೊಳಱಸಿ ಕಾಣದೆ ಬಾಯಱಿದು ಪಳಯಿಸುತ್ತುಂ ಯೂಧಪತಿ ಕೆಡೆಯೆ ದೆಸೆದಪ್ಪಿದ ವನಕರಿ ಕರೇಣುಗಳುಮನಡರ್ಪಿಲ್ಲದೆ ಕಲ್ಪವೃಕ್ಷಮುಡಿದು ಕೆಡೆಯೆ ಬಂಬಲ ಬಾಡಿದ ವನಲತೆಗಳುಮುಂ ಪೋಲ್ತು (ಪಂಪಭಾ. ೧೪-೪ ವ). [ದೆಸೆ₂ + ತಪ್ಪು₁]

ದೆಸೆದಿರಿ (ಕ್ರಿ). ದಿಕ್ಕುದಿಕ್ಕುಗಳಲ್ಲಿ ಅಲ್ಲೆ–ತಿರುಗು : ಜನ್ನಗುದುರೆಯಂ ಕಾಣದಿರೆ . . . ದೆಸೆದಿರಿಯುತುಮಿರ್ಕೆಲನೊಳಱಸುತುಂ (ರಾಮಾಶ್ವ. ೧೧೦-೭). [ದೆಸೆ₂ + ತಿರಿ₁]

ದೆಸೆದೀವು (ಕ್ರಿ). ದಿಕ್ಕುಗಳನ್ನು ತುಂಬು, – ವ್ಯಾಪಿಸು : ದೆಸೆದೀವಿತ್ತು ಘೋರಾಂಧಕಾರಂ (ರಾಜಶೇ. ೧೧-೧೯). [ದೆಸೆ$_2$ + ತೀವು]

ದೆಸೆದೇವತೆ (ನಾ). ದಿಕ್ಕಿನ ದೇವತೆ : ಸಿಡಿಲೊಳೆ ತಳ್ತು ಪೂರ್ವ ಸಿಡಿಲಂತಿರೆ ಬಾಳೊಳ್ ಬಾಳ್ ಪಳಂಚಿ ಮಾರ್ಕಿಡಿವಿಡೆ ನೋಡಲಂಜಿ ದೆಸೆದೇವತೆಗಳ್ ಪೆಱಪಿಂಗೆ (ಪಂಪಭಾ. ೧೦-೪೨) ; ದೆಸೆದೇವತೆಗಳ್ಗೆ ಜಪಾಪ್ರಸೂನಮುಂ ರಕ್ತ ಬಲಿಯುಮುಂ ತಾಮೆ ಕುಡುವಂತೆಸೆದಿರ್ದರೊ ಕಡೆಗಣ್ಣೊಳ್ ಪಸರಿಸೆ ಕಡುಗೆಂಪು ಭೀಮದುರ್ಯೋಧನರಾ (ಗದಾಯು. ೮-೩) ; ದೆಸೆದೇವತೆಯ ಕುಸುಂಬೆಯ ಕುಸುಮಂಗಳಿಂಡೆಯಾಡುವಂತಿರೆ (ಅರ್ಧನೇ. ೭-೩೨).

[ದೆಸೆ$_2$ + ದೇವತೆ]

ದೆಸೆಪಟದುಳಿ (ಕ್ರಿ). ದಿಕ್ಕಾಪಾಲಾಗಿ ಹೋಗುವಂತೆ ಮಾಡು ; ಧೂಳೆಬ್ಬಿಸು ; ನಾಶಮಾಡು : ಸಂಗರಜಯದ ಮಡುವಿನಲಿ ಸಲೆ ಸೊಗಸಿ ತನಿಸೊಕ್ಕಿ ದೆಸೆಪಟದುಳಿದು ಸೌಭದ್ರೇಯಭೃಂಗನ ಬಲುದನಿಯ ಭರವಂಜಿಸಿತು ಜಯಯುವತಿವಿರಹಿಗಳ (ಕುಪ್ಪಾದ್ರೋ. ೬-೩೦).

[ದೆಸೆ$_2$ + ಪಟ$_2$ + ತುಳಿ$_1$ (<ತುಟಿ$_1$)]

ದೆಸೆಬಿದ್ದಂ, ದೆಸೆವಿದ್ದಂ (ಅ). ೧. ಹೆಚ್ಚಾಗಿ ; ಅತಿಶಯವಾಗಿ : ಚಿತ್ತಜ ನಾಜ್ಞೆ ಮುತ್ತ ದೆಸೆಬಿದ್ದಂ ಬೆರ್ಚಿ ಲಜ್ಜಾರಸಂ ಮನದಿಂ ಸೂಸಿದುದು (ಮಲ್ಲಿಪು. ೫-೭) ; ದೆಸೆಬಿದ್ದಂ ಕುಣಿವಂಗನಾಜನದ ಕಾಂಚೀಘಂಟಿಕಾಘೋಷ ವೊಂದೆಸೆಯೊಳ್ . . . ಘೂರ್ಣಿಸೆ ಪೂರ್ಣಮಾಯ್ತು ಜಿನಜನ್ಮೋತ್ಸಾಹ ಕೋಳಾಹಳಂ (ಮಲ್ಲಿಪು. ೧೨-೧೨) ; ಪುಸಿವಡೆ ಪೋಲಲ್ಪುಸಿವುದು ಪುಸಿಯಲ್ಕಱಿಯದೊಡೆ ಮಾಣ್ಬುದಂತಿರದೆ ಕರಂ ದೆಸೆಬಿದ್ದಂ ಪುಸಿವಡೆ ಬಾರಿಸ ಬಪ್ಪುದೆ ಪುಸಿಯ ಬಸನಮಾಗಿಪ್ಪವರಂ (ಸಮಪ. ೧೦-೧೨) ; ಪಸರಿಸೆ ಪೂವಲಿಗಳ್ ಬಾಜಿಸೆ ಬದ್ದವಣಂಗಳೊಡನೆ ಮಿಳ್ಪಿಸೆ ಗುಡಿಗಳ್ ದೆಸೆಬಿದ್ದವಾಡೆ ತರುಣಿಯರೊಸಗೆಯ ಮೇಲೊಸಗೆಯಾದುದು (ಪಂರಾಮಾ. ೩-೦೩೪) ; ಬದ್ದವಣಂ ಬಾಜಿಸೆ ದೆಸೆಬಿದ್ದಂ ಕುಣಿದಾಡೆ ಗಣಕೆಯರ್ . . . ಪರಿದತ್ತು ಹರ್ಷರಸಮಾ ಪುರದೊಳ್ (ಪಂರಾಮಾ. ೪-೨೮). ೨. ಗುರಿಯೇ ಇಲ್ಲದಂತೆ ; ದಿಕ್ಕಾಪಾಲಾಗಿ ; ಎಲ್ಲ ಕಡೆಗೂ : ಪ್ರಮಥರಂಗೋಪಾಂಗಸಂಧನ್ನಸಾಯಕಪತ್ರಂಗಳೆಱಂಕಿಯಾಗೆ ದೆಸೆಬಿದ್ದಂ ಪಾಱಿದರ್ ಬೇಗದಿಂ (ಜಗವಿ. ೦೮-೦೨) ; ನೀಂ ದೆಸೆಬಿದ್ದಂ ಮರೆಯಂತೆ ಪಾಯ್ತುಂದೆಯುಪ್ಪುದಱಿಂ ಮರೆಯಾಗೆಂದು ಶಾಪಮಂ ಕುಡೆ (ಕೊಲ್ಹಾಶಾ. ೦೫-೨೬ ; 1186.) ಎತ್ತಿಸಿ ತೋರ್ಪೆಂ ರಿವುಬಳಮಂ ದೆಸೆಬಿದ್ದಂ ತೂಳ್ದಿ ಜಯವತಾಕವನೀಗಳ್ (ಕಂದ್ರಪು. ೦೦-೮೦). **ದೆಸೆವಿದ್ದಂ** : ೧. ದೆಸೆವಿದ್ದಂ ಸುರತೂರ್ಯಮುಣ್ಮೆ ಬರಲಂತಾಯ್ತಾ ಪ್ರತಿಧ್ವಾನಂ (ನೇಮಿಪು. ೮-೦೨೬).

[<ಸಂ. ದಿಶಾವಿದ್ಧ ?]

ದೆಸೆಮಿಣಿ 'ದೆಸೆಮಿಳಿ' ನೋ.

ದೆಸೆಮಿಳಿ, ದೆಸೆಮಿಣಿ (ನಾ). (ತೇರು ಮುಂತಾದ ಯಾವುದಾದರೂ ವಸ್ತುವಿನ) ಎರಡು ಮಗ್ಗುಲುಗಳಿಗೆ ಕಟ್ಟಿ ಎಳೆಯುವ ಹಗ್ಗ : ದಬ್ಬುಕ ಪಾಳಾಸ ದೆಸೆಮಿಳಿ ಚೆಲ್ಲಹ ಕಬ್ಬಿ ತಾಪಣೆ ಮೇಲಕ್ಕೆ ಉಬ್ಬಲೀಯದ ಕಬ್ಬುನದ ಗುಂಡು ಪಾಡಿಗಳಬ್ಬರಮಿರೆ ಸುಮ್ಮನಿಹುದು (ಕುರುಶಾಂ. ೯-೩೭). **ದೆಸೆಮಿಣಿ** : ಹಿಡಿದರಾಗಳ್ ತೇರ ಮಿಣಿಯಂತೆ ಕಟಕದ ಕಡೆಮಟ್ಟ ನಿಡುಸರಪಣಿಯ ಎಡಬಲಕಲ್ಲಲ್ಲಿ ಕವಲಾಗಿ ಸರಪಣಿ ನಡೆದುವು ದೆಸೆಮಿಣಿ ಯಂತೆ (ಧರಕ. ೪೯-೦೦೯). [ದೆಸೆ$_2$ + ಮಿಳಿ$_2$]

ದೆಸೆಮುಟ್ಟು$_1$ (ಕ್ರಿ). ದಿಕ್ಕಿನ ಗಡಿಯನ್ನೂ ಸೇರು ; ದಿಗಂತವನ್ನು ತಲಪು ; ಬಹುದೂರ ವ್ಯಾಪಿಸು : ಮುಟ್ಟೆಂಬುದರ್ಕೆ – ದೆಸೆಮುಟ್ಟೆ, ವಾರ್ಧಿ ಮುಟ್ಟೆ, ಅಂತಮುಟ್ಟೆ (ಶಮುದ. ೨೪೮ ಪ್ರಯೋ) ; ಡೌಡೆಯ ಮಾವುರಿಯ ಭೇರಿಯ ಭೂರಿನಿನಾದಂ ದೆಸೆಮುಟ್ಟೆ ಪಳಂಚಲೆಯೆ (ರಾಮಾಶ್ವ. ೫೦-೨).

[ದೆಸೆ$_2$ + ಮುಟ್ಟು$_1$]

ದೆಸೆಮುಟ್ಟು$_2$ (ನಾ). ದಿಕ್ಕನ್ನು ಮುಟ್ಟಿದುದು ; ದಿಗಂತವಿಶ್ರಾಂತ ವಾದುದು : ರಾವಣಂ ಮುಂತಪ್ಪ ದೆಸೆಮುಟ್ಟಿನ ಜಸದ ದೈತ್ಯರಂ ಱಿಪ್ಪಿ ಸೊಪ್ಪಿ ಸೋವಿದ ಶ್ರೀರಾಮಂ ಬೇಳ್ವ ಜನ್ನದ ಹಸುವಂ ಕಳ್ದುಯ್ದುಂ ಬಾಟ್ವೆನೆಂದು ಬಗೆವ ನೀನಾವೊಂ ? (ರಾಮಾಶ್ವ. ೧೧೨-೨೦).

[ದೆಸೆ$_2$ + ಮುಟ್ಟು$_2$]

ದೆಸೆಮೂಲೆ (ನಾ). ದಿಕ್ಕುಗಳು ಸೇರಿರುವ ಸ್ಥಳ ; ದಿಕ್ಕಿನ ಗೊಂಟು : ದೆಸೆಮೂಲೆಗಳ್ ಪಳಂಚಿ ಮಾರ್ದನಿಗುಡುವಂತು . . . ಬೊಬ್ಬಿಱಿದಂ ಕಲಿಯಣಾವಂ (ರಾಮಾಶ್ವ. ೧೩೧-೨೮). [ದೆಸೆ$_2$ + ಮೂಲೆ]

ದೆಸೆಯಾಣ್ಮ (ನಾ). ದಿಕ್ಕಿನ ಅಧಿಪತಿ ; ದಿಕ್ಪಾಲಕ : ಅಲರಂಬನಯ್ಯ ಬಿದಿಯಮರ್ದುಂಬರೆಱಿಯ ದೆಸೆಯಾಣ್ಮರೆಲರ್ವಟ್ಟೆಗರು . . . ಅಱು ವೊಗನೊಡನೆ ಕಱಿಗೊರಲನೊಪ್ಪರ್ದನು (ಭಾವಚಿಂ. ೯-೪೭) ; ದೆಸೆ ಯಾಣ್ಮರ ಪುರವಿದಕೆಣೆಯಲ್ಲೆಂದು ನಸುನಗೆ ಪುರಲಕ್ಷ್ಮಿಯವಳ ದಶನಪಂಕ್ತಿ ಗಳ ಚೆಲ್ವನೆ ಕೋಟೆಯಾ ತೆನೆಯೆಸೆದುವು (ಕಂನವಿ. ೬-೫) ; ದೆಸೆಯಾಣ್ಮರುಂ ಸಂತಸಂಗೊಂಡು ಮುಂತೆ ಆ ಪಿರಿಯ ರಕ್ಕಸನ ಕಡೆಯಂ ಕಾಯುತಿರ್ದರ್ (ಅದ್ಭುತ. ೪೭-೦೬). [ದೆಸೆ$_2$ + ಆಣ್ಮ (<ಅಳ್ಳ)]

ದೆಸೆಯಾನೆ, ದೆಶೆಯಾನೆ (ನಾ). ಎಂಟುದಿಕ್ಕುಗಳಲ್ಲಿಯೂ ಭೂಮಿ ಯನ್ನು ಹೊತ್ತಿರುವುದೆಂದು ನಂಬಲಾದ ಐರಾವತವೇ ಮೊದಲಾದ ಆನೆ ; ದಿಗ್ಗಜ : ದೆಸೆಯಾನೆಗಳಾನನದೊಳ್ ಪಸರಿಸಿ ದುಗ್ಧೋದ ಬಿಂದು . . . ಬೆಳ್ಪಸದನದಂತಿರ್ದುವಜಿತ ಸವನೋತ್ಸವ ದೊಳ್ (ಅಜಿಪು. ೪-೫೯) ; ಎಣ್ದೆಸೆಯೊಳಿರ್ದ ದೆಸೆಯಾನೆಗಳಂ ಜಳಕೇಳಿಗೆ ಕರೆವಂತಿರೆ (ಮಲ್ಲಿಪು. ೨-೫೦) ; ಉಲಿದೆಂಟುಂ ದೆಸೆಯಾನೆಯಂ ಪಿಡಿದು ಕೋಡಂ ಕಿಟ್ಟು ತಾರೆಂಬುದೇಂ . . . ಬೀರವೇ (ಕಬ್ಬಿಗಾ. ೨೪೦) ; ದೆಸೆಯಾನೆಗಳುಱಿ ಬೆರ್ಚಿ ಕಡಲು ತೆರೆಮಸಗಿ ಮೇರೆಯ ಮಿಱಿ ಪೆರ್ಚಿ ಎಸೆದುದು ಜಯದುಂದುಭಿನಾದ (ಕುರುಶಾಂ. ೦೦-೭೫). **ದೆಶೆಯಾನೆ.**

ದೆಶೆಯಾನೆಗಳ್=ಒಂದು ಬಿರುದು : ಮಹಾಮಂಡಲೇಶ್ವರನಯೋಧ್ಯ ಸಿಂಹಾಸನಂ [ಕೆಂ]ಬುಕುನ್ದೂಪ್ಪುರವರೇಶ್ವರಂ ದೆಶೆಯಾನೆಗಳ್ಗನಳಂಪುರ ಭುಜಂಗರಿಪು ಪಕ್ಷ[ಕ್ಷ]ಯಕಾರಣಂ (ಕಇಶ. ೪೦-೫೮-೧೦ ; 1087).

[ದೆಸೆ$_2$ + ಆನೆ$_1$]

ದೆಸೆವಂತ (ನಾ). = ದೆಸೆಗಾರ : ದೆಸೆವಂತರಾಗಿ ಬದುಕ್ಕಾವ್ರೆ ರಾಯರು (ಜಗಿತ. ೮೦). [ದೆಸೆ$_1$ (<ದಸೆ) + – ವಂತ]

ದೆಸೆವಡೆ (ಕ್ರಿ). ಅದೃಷ್ಟವನ್ನು ಹೊಂದು ; ಭಾಗ್ಯವನ್ನು ಪಡೆ ; ಭಾಗ್ಯ ಶಾಲಿಯಾಗಿರು : ದೆಸೆವಡೆದು ಕೆಲವುದಿನ ಬಸವನಿದ್ದಂತಿರ್ದು . . . ಬಸವ ರಸೆಯಲ್ಲಿ ಬದ್ದಳಿದುದೆಂಬ ಬಿಱನುಡಿಗೇಳಿ (ಗುರುಚಾ. ೧೦-೮೫).

[ದೆಸೆ$_1$ (<ದಸೆ) + ಪಡೆ$_1$]

ದೆಸೆವರಿ (ಕ್ರಿ). ದಿಕ್ಕುದಿಕ್ಕಿಗೆ ಓಡು ; ಗುರಿಯಿಲ್ಲದೆ ಚಲಿಸು ; ಸಿಕ್ಕಿದ ಕಡೆಗೆ ಹೋಗು : ಉರಿ ಕೊಳೆ ದೆಸೆಗಾಣದೆ ದೆಸೆವರಿವರಿದು ಕುಜಂಗಳಂ ಪಡಲ್ವಡಿಸಿ ಭಯಂಬೆರಸೊಳಱಿ ನೆಗೆದುದಾ ವನಕರಿಶರಭಕಿಶೋರ ಕಂಠಗರ್ಜನೆ ಬನದೊಳ್ (ಪಂಪಭಾ. ೫-೯೧). [ದೆಸೆ$_2$ + ಪರಿ$_2$]

ದೆಸೆವಲಿ (ನಾ). ೧. (ಶಾಂತಿಕರ್ಮ ಮೊದಲಾದ ಸಂದರ್ಭಗಳಲ್ಲಿ) ದಿಗ್ದೇವತೆಗಳನ್ನು ತೃಪ್ತಿಪಡಿಸುವುದಕ್ಕಾಗಿ ಕೊಡುವ, ಅನ್ನಾಹಾರಾದಿ ವಸ್ತು ; ದಿಗ್ಬಲಿ. ೨. (ಆಲಂ) ದೇಹವನ್ನು ತುಂಡರಿಸಿ ದಿಕ್ಕಾ ಪಾಲಾಗಿ ಬಿಸಾಡುವಿಕೆ ; ಬಲಿಕೊಡುವಿಕೆ : ಪಿಡಿಬಣ್ಣ[ಂ]ಗೊಣ್ಡು ದೆಸೆವಲಿಗೆಱಪೊಟ್ಟು (ಸೌಇಇ. XI-1, ೦೧-೨೦ ; 965) ; ಪೂರ್ವಪದಂ ತದ್ಭವಮಾದುದರ್ಕೆ – ಗ್ರಾಮರಸ–ಗಾವರಸ . . . ದಿಶಾಬಲಿ – ದೆಸೆವಲಿ (ಶಮುದ. ೨೮೯ ಪ್ರಯೋ). 'ದೆಸೆವಲಿಗೊಡು' ಪರಾ. [ದೆಸೆ$_2$ + ಬಲಿ$_2$]

ದೆಸೆವಲಿಗುಡು 'ದೆಸೆವಲಿಗೊಡು' ನೋ.

ದೆಸೆವಲಿಗೆಯ್ (ಕ್ರಿ). ದಿಕ್ಕುಗಳಿಗೆ ಬಲಿಯಂನ್ನಾಗಿ ಮಾಡು; ಕತ್ತರಿಸಿ ದಿಕ್ಕಾಪಾಲಾಗಿ ಎಸೆ: ಉಜದಿದಿರ್ಚಿದೊಡಾನಱಿವೆಂ ನಿನ್ನನಿಲ್ಲಿ ದೆಸೆವಲಿಗೆಯ್ಯಲ್ (ಪಂಪಭಾ. ೬-೫೭); ಕೆಲರಂ ದೆಸೆವಲಿಗೆಯ್ದಂ ಕೆಲರಂ ಭುಜಬಲದಿನಱಿದು ಶಿಲೆಯೊಳ್ಪೊಯ್ದಂ (ಗದಾಯು. ೩-೧೦); ಅನ್ಯಕಾಂತೆ ಗಾಟಿಸಿದ ದುರಾತ್ಮನಂ ರಣದೊಳಣ್ಮಿದನಪ್ಪೊಡವೋಘಬಾಣದಿಂ ದೆಸೆವಲಿಗೆಯ್ವಂ (ಪಂರಾಮಾ. ೦೦-೫); ನಾಳೆ ನಿನ್ನಂ ದೆಸೆವಲಿಗೆಯ್ದಲ್ಲದೆ ಮಾಣೆಂ (ಧರ್ಮಾಮ್ಯ. ೩-೦೦೦ ಅಡಿಪಾತ); ಏಱುಂ ತೆಱದ ತಾಳವಟ್ಟದ ಪೊಯ್ಲೊಳಂ ನಾಲ್ವತ್ತುನಾಲ್ಕು ಗಾತ್ರಾಪರಪಾತದೊಳಂ ದೆಸೆವಲಿಗೆಯ್ದು . . . ಮಹಾವನಮಂ ವನಕೇಳಿಗಜಂ ಪೊಕ್ಕುದಂ ಕೇಳ್ದು (ಚಂದ್ರಪು. ೯-೦೦೧ ವ). [ದೆಸೆವಲಿ + ಕೆಯ್$_1$]

ದೆಸೆವಲಿಗೊಡು, ದೆಸೆವಲಿಗುಡು (ಕ್ರಿ). = ದೆಸೆವಲಿಗೆಯ್: ಈಕೆ . . . ರಕ್ಕಸರ ಬಳಗಮಂ ಸದೆದು ದೆಸೆವಲಿಗೊಟ್ಟು ನಿಮ್ಮಂ ಪೊರೆದ ಶ್ರೀರಘುರಾಮನ ಪಟ್ಟದ ರಾಣಿ (ರಾಮಾಶ್ವ. ೩೯-೩). **ದೆಸೆವಲಿಗುಡು:** ಅಂತು ಭಯಬಲದ ಚಾತುರ್ದಂತಂ ಪೇಸೇಱಿ ಕಾದಿ ದೆಸೆವಲಿಗುಡಲ್ (ಪಂರಾಮಾ. ೧೩-೯೬); ಬಿಸಸನದೊಳ್ ದಶಮುಖನಂ ದೆಸೆವಲಿಗುಡಲೆಂದು ಭರತ ಶತ್ರುಘ್ನರ್ . . . ಸನ್ನಾಹಭೇರಿಯಂ ಪೊಯಿಸುವುದುಂ (ಪಂರಾಮಾ. ೧೪-೬೨). [ದೆಸೆವಲಿ + ಕೊಡು$_1$]

ದೆಸೆವಳ (ನಾ). ದಿಕ್ಕುಗಳ ಮೇಲೆ ಅಧಿಕಾರವುಳ್ಳವನಂ: ದಿಕ್ಪಾಲ: ಆಗಳ್ ಸೌಮಿತ್ರಿ ಡೋಲಾಯಮಾನಮಾನಸನಾಗಿ ದೇವಿಯರಂ ಬಲವಂದು ಕೈಮುಗಿದು ದೆಸೆವಳರ್ಗೆ . . . ಕೇಳಿಸಿ (ರಾಮಾಶ್ವ. ೩೯-೨).

[ದೆಸೆ$_2$ + – ವಳ (< – ವಾಳ$_1$)]

ದೆಸೆವಾನ (ನಾ). ಅದೃಷ್ಟಶಾಲಿ; ಭಾಗ್ಯವಂತ: ಬಹಳ ದೆಸೆವಾನ ಆಗುತ್ತಾನಂತ ಅಣ್ಣ ಹೇಳೇ ಹೇಳುತ್ತಾನೆ (ದಾಕೂಟ. ೧೦೦).

[<ಸಂ. ದಶಾವತ್]

ದೆಸೆವಿದ್ದಂ 'ದೆಸೆಬಿದ್ದಂ' ನೋ.

ದೆಸೆವೆಟ್ಟು (ನಾ). ದಿಕ್ಕಿನ ಕೊನೆಯ ಬೆಟ್ಟ: ತೆಱಪುಗುಡದೆ ಸೂಱ್ಕೈಸುವ ನಿಸ್ಸಾಳದ ಬಲ್ಸರಕೆ ದೆಸೆವೆಟ್ಟುಗಳ್ ನಿಬ್ಬರಂ ಬಿರಿಯೆಯುಂ (ಕಬ್ಬಿಕಾ. ೨೮೮). [ದೆಸೆ$_2$ + ಬೆಟ್ಟು$_2$]

ದೆಸೆಹೊದ್ದು (ಕ್ರಿ). ಸಾನ್ನಿಧ್ಯವನ್ನು ಹೊಂದಂ; ಹತ್ತಿರದಲ್ಲಿರು: ಬಿಸರುಹಕುಸುಮಜನ ಕಪಾಲವ ಹಿಡಿದಾತನ ಕೈಯಲ್ಲಿ ಗಸಣಗೊಳಗಾದರು ಆತ್ಮನ ರಸಿಕವನಱಿಯದೆ ಈ ಹುಸಿಕರ ನೋಡಿ ದೆಸೆಹೊದ್ದಿಹೆನೆಂದರೆ [ಪಾಠಾಂ. ಹೊದ್ದೆನೆಂದೆ] ಪಶುಪತಿ ದೂರ (ಮೋಳಿಮಾ. ೫೯-೨೪೩).

[ದೆಸೆ$_2$ + ಹೊದ್ದು$_1$ (<ಪೊರ್ದು$_1$)]

ದೇಂಟು, ದೇಟು (ನಾ). ೧. ಮರ, ಗಿಡ ಮುಂತಾದುವುಗಳ ತಾಳು,– ಕಾಂಡ: ಕಲಂಬ = ೧. ಬಾಣ. ೨. ದೇಂಟು (ಗಂಗಾಮ. ೭೪). ೨. ತೊಟ್ಟು; ವೃಂತ; ದಂಟು; ತುಂಬು: ಅದರ ಎಲೆಗಳು . . . ದೇಂಟಿನ ಬುಡದಿಂದ ತುದಿಯ ತನಕ ಎರಡೆರಡರಂತೆ ಸಾಲುಗೊಂಡಿರುತ್ತವೆ (ಮುಂಬಯಿ. ೪-೫೪). **ದೇಟು:** ೨. ವೃಂತ = ಕಾವು, ದೇಟು, ತುಂಬು, (ಗಂಗಾಮ. ೨೯೫); ಗೀತೆ ಕಲ್ಪತರುವಿನ ಒಂದು ಮೊಳಿಕೆಯೆಂದರೆ, ಜ್ಞಾನ, ಕರ್ಮಗಳು ಅದರ ಎರಡು ಎಲೆಗಳು, ಅದಕ್ಕೆ ಭಕ್ತಿಯೇ ದೇಟು (ಧರ್ಮಸಾ. ೧೦೮); ಎಲ್ಲಾ ಒಂದೇ ದೇಟಿನ ಮಾವುಗಳು ನಾವು ದೇವನ ದೇಟಿನ ಕಾಯಿಗಳು (ನನಲ್ಲಿ. ೧೩೨-೬); ಸರಳವಾಗಿ ಒಂದು ಹೂವಿನ ದೇಟಿನಂತೆ ಪ್ರಮಿಲೆಯು ಬೆಳೆದಿದ್ದಳು (ಸಮಜೀ. ೮೬೨): ಅಲ್ಲಿ ದೇಟಿಗೆ ಅಂಟಿಕೊಂಡು ತೆಪ್ಪಗಿನ ಕಳ್ಳನಂತೆ ನುಸುಳುತ್ತಿರುವ ಆ ಹಸಿರು ಕೇಟವನ್ನು ಕಂಡಿರಾ? (ಗಾಳಿಪ. ೦೦೭).

[ದೇ.?ಕ ./ ಮರಾ. ದೇಂಟ್, ದೇಟ್]

ದೇಕಗಾವುಂಡ (ನಾ). ಒಬ್ಬಾತನ ಹೆಸರು: ತನ್ನ ತಮ್ಮಂ ದೇಕಗಾವುಣ್ಡಂ ಮಾಡಿಸಿದ ಶಿವಾಲಯ (ಎಕ. VII, ಶಿಕಾರಿ. ೨೦-೦೨; 1082).

[ದೇಕ$_0$ + ಗಾವುಂಡ (<ಗಾಮುಂಡ)]

ದೇಕಬ್ಬೆ (ನಾ). ಒಬ್ಬಾಕೆಯ ಹೆಸರು: ಪೊನ್ನಬ್ಬೆಗಂ ರವಿಗಂಗಂ ಪುಟ್ಟಿದ ದೇಕಬ್ಬೆಯರಂ . . . ಏಚಂಗೀಯೆ (ಎಕ. IV, ಹೆಗ್ಗಡ. ೧೮-೧೭; 1057).

[ದೇಕ$_0$ + ಅಬ್ಬೆ$_1$]

ದೇಕಾರ (ನಾ). ದಾನವಾಗಿ ದೊರೆತುದು: ಆಚಾರ್ಯರೇ ದಕ್ಷಿಣೆ, ದೇಕಾರಗಳು ಕೂಡಿ ತಲೆಗೆ ಎಷ್ಟೆಷ್ಟು ಸಿಕ್ಕಿತು? (ನಲದ. ೫೩).

[←ಮರಾ. ದೇಕಾರ್]

ದೇಕು, ಡೀಕು, ಡೇಕು, ತೀಕು, ದೇಗು, ದೋಕು (ಕ್ರಿ). ೧. ತಗ್ಗಿ ಮುಂದುವರಿ; ಕುಳಿತುಕೊಂಡು ಜರುಗು,–ಸರಿ: ಗುಡಿಯೊಳಕ್ಕೆ ದೇಕಿಕೊಂಡು ಬರಬಹುದಾಗಿತ್ತು (ಗಲಿಪ್ರ. ೧೩). ೨. ಕಷ್ಟಪಡು; ಏಗು; ಹೆಣಗು: ಮ್ಯಾಲೀನ ಓಣೀಯ ಮೂಗ ಸಂಪಗಿ ಹೆಣ್ಣ ದೇಕೂದ ಬಂತ ನಿನಗಾಗಿ (ಕನ್ನಜಾ. ೧೦೮); ನಾನು ಹೊರಗೆ ದುಡೀತಾ ಇದೇನೆ, ನೀನು ಒಳಗೆ ದೇಕುತಾ ಇದೀಯೆ (ಬೆಳುಮ. ೪೧). ೩. (ಗೋಲಿಯಾಟದಲ್ಲಿ ಸೋತವನು) ಕೈಯ ಗಿಣ್ಣಿನಿಂದ ಗೋಲಿಯನ್ನು ಮುಂದಕ್ಕೆ ನೂಕು,– ತಳ್ಳು: ಗೋಲಿಯಾಟ ಆಡಿ ಸೋತೂ ಕೂಡ ದೇಕದೆ ಹೋಗುವ ಭಂಡರೂ ಇದ್ದಾರೆ (ರೂಢಿ). **ಡೀಕು:** ೨. ಬರಿಯ ಒಂದು ವಿಷಯದಲ್ಲಿ ಸ್ವಲ್ಪ ಗುಣ ಕಡಿಮೆ ಬಿದ್ದು ನಪಾಸಾಗಬೇಕು; ಅದಕ್ಕಾಗಿ ಮತ್ತೆ ಆರು ತಿಂಗಳಾದರೂ ಡೀಕುವುದೆ? (ಭೂಮಿತಾ. ೦೦). ೩. ವೆಂಕಟೇಶನನ್ನು ಸೋಲಿಸಿ ಡೀಕಲಿಕ್ಕೆ ಹಚ್ಚಿದ್ದಾಗ್ಗೆ ಅವನ ಕೈತೊಗಲೆಲ್ಲ ಸುಲಿದು ಬಿಡುತ್ತಿತ್ತು (ಫಲಸಂ. ೨೬). **ಡೇಕು:** ೨. ಅವರೆಲ್ಲ ಗಾಣದೆತ್ತಿನಂತೆ ಬೆಳಗಿನಿಂದ ಸಂಜೆಯವರೆಗೆ 'ಡೇಕು'ತ್ತಿರುವಾಗ ತಾನು ಹಾಯಾಗಿ ಕೈಚಲ್ಲಿ ಕುಳಿತುಕೊಂಡಿರಬೇಕೆ? (ಕರಿಹಾ. ೨೪). **ತೀಕು:** ೩. ಗೋಲಿಯಾಟದಲ್ಲಿ ಸೋತು, ತೀಕಿ ಮುಂಗೈಯನ್ನೆಲ್ಲಾ ಗಾಯ ಮಾಡಿಕೊಂಡಿದ್ದನು (ರೂಢಿ). **ದೇಗು:** ೧. ಸರಸ್ವತಿ ಬಹಳ ಪ್ರಯಾಸದಿಂದಲೇ ದೇಗಿಕೊಂಡು ಬಂದು ಅವನನ್ನು ಸಮೀಪಿಸಿದಳು (ಹೇಮಕೂ. ೪೬). **ದೋಕು:** ೩. ದೋಕು ಬಾಮ್ಮ ಆನಂದು . . . ದೋಕೋಕ್ಕೆ ಹೆದರುತ್ತೇನೇನೋ? (ನಡದಾ. I, ೫೨೨). ೪. ಹುಲ್ಲನ್ನು ಕೆತ್ತು. 'ಏಗು$_1$', 'ದೋಕರಿ' ಪರಾ.

[ದೇ.ಕ ತುಳು. ದೋಗು; ತೆಲು. ದೇಂಕು, ಡೇಂಕು]

ದೇಕ್ಷಿ (ನಾ). ಅಡುಗೆಗೆ ಉಪಯೋಗಿಸುವ ಒಂದು ಬಗೆಯ ದೊಡ್ಡ ಪಾತ್ರೆ: ಹಿಡಿಪಾತ್ರೆಗಳು, ತಟ್ಟೆಗಳು, ಡಬ್ಬಗಳು, ಡಬರಿಗಳು, ದೇಕ್ಷಿಗಳು, ಹಾಲಿನ ಪಾತ್ರೆಗಳು ಮೊದಲಾದುವನ್ನು ಅಲ್ಯುಮಿನಿಯಂನಿಂದ ಮಾಡಲಾಗುತ್ತದೆ (ಗೃಹವಿ. ೦೭೬).

[←ಪಾರ. ಹಿಂ. ದೇಗಚೇ, ದೇಗಚಾ; ಮರಾ. ದೇಖಚಾ, ದೇಗಚಾ]

ದೇಖಣೆ (ನಾ). ಪ್ರದರ್ಶನ: ಅದರಲ್ಲಿ ಸಾಕಷ್ಟನ್ನು ಮಾರಿಯೂ ಮಾರುತ್ತಾರೆ. ಆದರೆ ದೇಖಣೆಗೆ ಇರಿಸುವುದಿಲ್ಲ (ಸ್ವಪ್ನಹೊ. ೪೬).

[←ಮರಾ. ದೇಖಣೇ = ನೋಡು]

ದೇಖರಖಿ 'ದೇಖರೇಖಿ' ನೋ.

ದೇಖರೇಖಿ, ದೇಖರಖಿ (ನಾ). ಮೇಲ್ವಿಚಾರಣೆ; ಉಸ್ತುವಾರಿ; ನೋಡಿಕೊಳ್ಳುವುದು; ರಕ್ಷಣೆ: ಗ್ಯಾಂಗ ಮುಖ್ಯರು ತಮ್ಮ ಗ್ಯಾಂಗಿನ ದೇಖರೇಖಿ ಮಾಡುತ್ತ ಓಡಾಡಹತ್ತಿದರು (ಅನ್ನ. ೨೦೩); ನಿನ್ನ 'ದೇಖರೇಖಿಯಿದ್ದರೆ ಸಾಕು' ಎಂದು ಗಣಪೂನನ್ನು ಕಳಿಸಿದರು (ಮೂರುದಾ. ೭೦); ಅವರ ಹುಣಸೀಗಿಡದ ಹೊಲದಾಗ . . . ಅಷ್ಟು ದೇಖರೇಖಿ ಮಾಡಬೇಕಾಗೇದ (ತಿಡುಗು. ೪೦). **ದೇಖರಖಿ:** ಅದೆಲ್ಲದರ ದೇಖರಖಿ ರಾಜಪ್ಪನ ಕಡೆಗಿತ್ತು (ದೀಪಹ. II, ೮). [←ಹಿಂ. ಮರಾ. ದೇಖರೇಖ್]

ದೇಖಾವಳಿ (ನಾ). = ದೇಖರೇಖಿ : ಆಸ್ತಿಪಾಸ್ತಿಯ ದೇಖಾವಳಿ (ಆರೈಕೆ) ನಡೆಯದಿರುವುದನ್ನು ಕಂಡು ಪದ್ಮನಾಭಭಟ್ಟರಿಗೆ ಬಲು ದುಗುಡವಾಯಿತು (ಭ್ರಾಂತಿಸು. ೮೭). [←ಹಿಂ. ದೇಖಾಭಾಲಿ, ದೇಖಭಾಲ್]

ದೇಖಾವೆ (ನಾ). ನೋಡತಕ್ಕುದು ; ದೃಶ್ಯ ; (ನಾಟಕ, ಸಿನಿಮಾ ಮೊದಲಾದ) ಪ್ರದರ್ಶನ : ನಿಮ್ಮ ದೇಖಾವೆಯೇ ಅಲ್ಲಿಯ ದೊಡ್ಡ ಆಕರ್ಷಣೆ (ಕೈಲಾಸ. ೪೦) ; ಲಂಡನಿನಲ್ಲಿ ಆದಿತ್ಯವಾರ ಸಿನೆಮಾ ದೇಖಾವೆಗಳೂ ಇರುವುದಿಲ್ಲ (ಅಪೂಪ. ೪೧) ; ಒಂದೂವರೆ ತಾಸಿನ ಈ ದೇಖಾವೆಯಲ್ಲಿ ಅರುವತ್ತು ಎಪ್ಪತ್ತು ಮಂದಿ ನಟರು ಬಂದು ಯುಗಾಂತರ ಭಾರತದ ಒಂದು ದೃಶ್ಯವನ್ನು ತೋರಿಸಿದರು (ಹುಮುಖ. ೨೦೯).

[←ಹಿಂ. ದೇಖಾವ್ ; ಮರಾ. ದೇಖಾವಾ]

ದೇಖೀಲು (ಅ). ಎಲ್ಲಾ ಸೇರಿ ; ಒಟ್ಟಿನಲ್ಲಿ ; ಕೂಡಿ : ಬಿಡಾರದಲ್ಲಂತೂ ಆಳುಕಾಳು ದೇಖೀಲು ಇಪ್ಪತ್ತು ಜನಗಳ ಮೇಲೆ ಭೋಜನಕ್ಕೆ ಸೇರುತ್ತಿದ್ದರು (ಕಲನೆ. ೨೩೨). [←ಮರಾ. ದೇಖೀಲ್]

ದೇಗು 'ದೇಕು' ನೋ.

ದೇಗುಲ, ದೇವಳ$_1$. ದೇವುಲ (ನಾ). ೧. ಗುಡಿ ; ದೇವಸ್ಥಾನ ; ದೇವಾಲಯ : "ದೇಗುಲಂಗಳನೆ ಆಯತ(ನ)ವೆಂಬುದು" (ಹಲಾಯು. ೪೯-೦೩೪) ; ಗಾಮುಣ್ಡಸ್ವಾಮಿಗಳ ಮಗನ್ನಾಗಮ್ಮಯ್ಯ ಕಲ್ಲ ದೇಗುಲ ಮಮ್ಮಾಡಿಸಿದಡೆ ಸಲಿಸಲೆನ್ದು ಕೊಟ್ಟ ಮಣ್ಣು ಒರ್ಕ್ಕಣ್ಡಾಗ (ಎಕ. III, ಮಂಡ್ಯ. ೧೩-೯ ; 896) ; ನಿಜರಾಜರಾಜಧಾನಿ ಮೆಟುವಿಡುವಿನೊಳಿನ್ದ್ರ ವಿಮಾನಸಮಾನಮಪ್ಪ [ದೇಗು]ಲಮಂ ಮಾಡಿ (ಸೌಇಇ. XI-I, ೨೨-೯ ; 897) ; ಗೋವರಣ್ಣ ಬರೆ ಪಾಯಿಸಿ ಘೋಟಯಿಲರ್ ತಗುಳ್ದು ತತ್ತಱ ತಱಿದಿಕ್ಕಿ ದೇಗುಲಕೆ ಪೆರ್ಮರನಂ ಕಡಿಮತೆ ಮಾಡಿದರ್ (ಪಂಪಭಾ. ೮-೯೩ ವ) ; ಸಾವಾಗ ದೇಹವ ದೇಗುಲಕ್ಕೊಯ್ಯೆಂಬ ದೇವರಿಗೆ ಹೆಣ ಬಿಟ್ಟ ಹೇಳಿತ್ತೆ (ಬಸವ. ೨೨೨) ; ವಸುಧೆಯೊಳು ಪೊಡಮಡಲು ದೇಗುಲಂ ಬಿರ್ದ ನುಡಿ ಪಸರಿಸುವ ನಾಡಗಾದೆಯ ತೆಱದಿ ನಿಮ್ಮ ಸೇವಿಸ ಬಂದು ನಮಗಾಯ್ತು ನರಕವು (ಸಿದ್ಧರಾ. ೦-೨೭) ; ಒಳಗಿದ್ದ ದೇವನ ಕಾಣದೆ ಹೊರಗೆ ದೇಗುಲವ ಪೂಜಿಸುವೆಗ್ಗನಂತೆ (ಭರಜ. ೨-೫೫). ೨. ಹಾಳು ಬಿದ್ದ ಜಾಗ ; ಪಾಳುಮನೆ : ಬಡವಾದಿರರಸ ಕಾಲೊಳ್ ನಡೆದಪಿರೊಡ ನಾರುಮಿಲ್ಲ ಕಡಲೆಗಳೇಂ ನಿಮ್ಮುಡಿಯೊಳಗೆ ಪಡುವ ದೇಗುಲದೆಡೆ ಯಾವುದು ಕುಡದ ನಿಮಗಮಿಯಾಯಡಱಾಯ್ತೆ (ಶಮದ. ೦೦೨ ಪ್ರಯೋ). **ದೇವಳ$_1$** : ೧. ನನ್ನ ಜೀವನಾವಸ್ಥೆಯ ವಿಚಾರದಲ್ಲಿಯೂ ಹೀಗೇನೆ ! ದೇವಳದ ಪೂಜೆಭಟ್ಟನಾಗಿದ್ದೆನೆಂದು, ಹರಿಕತೆಯ ಹರಿದಾಸನಾಗಿದ್ದೆನೆಂದು ಏನೆಲ್ಲ ಹೇಳುತ್ತಿದ್ದಾರೆ (ರೂಪಸಂ. ೨೯) ; ಸ್ಥಾನಿಕರಿಗೆ ಅನಾದಿಯಲ್ಲಿ ದೇವಳದ ಅರ್ಚಕತನವಿತ್ತು (ತುಳುನಾ. ೧೦೬). **ದೇವುಲ**: ೧. ಬ(ಂ)ಮ್ಮಯ ನಾಯಕ × × × ಯಂ ದೇವುಲದ ತನ್ನ ಪೂಜೆ ವ್ರಿತ್ತಿಯೊ × × × (ಸೌಇಇ. XI-II, ೦೯೭-೭ ; 1121).

[<ಸಂ. ದೇವಕುಲ./ಪ್ರಾ. ದೇಉಲ./ಮರಾ. ದೇಉಳ, ದೇವಳ]

ದೇಗುಲಕಾಱ (ನಾ). ೧. ದೇವರ ಪೂಜೆ ಮಾಡುವ ಅರ್ಚಕ. ೨. ದೇವಸ್ಥಾನದ ಪಾರುಪತ್ತೆಗಾರ,- ರಕ್ಷಕ : ಆ ದೇಗುಲಕಾಱ ರಱಿಯದಂದದಿನೆಯ್ದಿಯಾ ದೇವಿಯ ಬೆಂಗಡೆಯೊಳು ಭೇದಿಸದಂದದೊಳ ಡಗಿರ್ದು (ಪ್ರಭಂಜ. ೪-೫೦). [ದೇಗುಲ + – ಕಾಱ]

ದೇಗುಲದೋಂಟ (ನಾ). ಹೂವು, ತುಳಸಿ, ಬಿಲ್ವ ಮೊದಲಾದುವನ್ನು ಬೆಳೆಸುವ, ದೇವಸ್ಥಾನಕ್ಕೆ ಸೇರಿದ ಉದ್ಯಾನ : ದೇಗುಲದೋಣ್ಟಂ ಪ × × ವೆ ನೂಱು ಬತ್ತದ ಮಣ್ಣು ಯಾಱುಪಸುವಂ ಪೂದೇವರ್ಗ್ಗ ಮಾಪಳ್ಳೆ ಗೊಣ್ಡದೇವಗಂ ನನ್ದಾವೆಳಕಿಱ್ಗೆ ಕೊಟ್ಟಂ (ಎಕ. IV, ಗುಂಡ್ಲುಪೇ. ೯೩-೨೫ ; 1049). [ದೇಗುಲ + ತೋಂಟ]

ದೇಗುಲವಱ^3 (ನಾ). ದೇವಾಲಯಗಳಲ್ಲಿ ಬಾರಿಸುವ ತಮಟೆ, ನಗಾರಿ ಮುಂತಾದ ಚರ್ಮವಾದ್ಯ : ಸನ್ನೆಯ ಘಂಟಾರವ ದೇಗುಲವಱ^3 ರನ್ನಘಟದ ನಿರ್ಮಲಾಂಬು (ಶ್ರೀಪಾಲ. ೧೦-೫೪) ; ದೇಗುಲವಱ^{3}ಯ ಧ್ವನಿಗಳುಱ^3 ಪೆರ್ಚದುವು (ಚಿಬಪು. ೫-೨೦) ; ಮೊಳಗಿದುವಲ್ಲಲ್ಲಿ ದೇಗುಲ ವಱ^{3}ಗಳು (ಕಂನವಿ. ೯-೦೬೭). [ದೇಗುಲ + ವಱ$^3_1$]

ದೇಗುಲಿಗ (ನಾ). ದೇವಸ್ಥಾನದ ಸೇವಕ,-ಪರಿಚಾರಕ : ಆಚರಣಕ್ಕೆ – ದೇಗುಲಿಗಂ, ಅಕ್ಕರಿಗಂ, ಚಂದಸಿಗಂ (ಶಮದ. ೦೯೭ ಪ್ರಯೋ).

[ದೇಗುಲ + – ಇಗ./ಪ್ರಾ. ದೇಉಲಿಅ]

ದೇಚಯ್ಯ (ನಾ). ಒಬ್ಬಾತನ ಹೆಸರು : ಶ್ರೀ ದೇಚಯ್ಯ (ಎಕ. II, ೪೭೦-೦ ; 1050). [ದೇಚ$_0$ + ಅಯ್ಯ$_1$]

ದೇಟಿ (ನಾ). ಒಂದು ಬಗೆಯ ವೀಳೆಯದೆಲೆಯ ಬಳ್ಳಿ ; ಕಾಡು ವೀಳೆಯದೆಲೆಯ ಬಳ್ಳಿ : ಕಾನಡಾ ಜಿಲ್ಲೆಯಲ್ಲಿ ದೇಟೀಯೆಲೆಯ ಬಳ್ಳಿಗಳು ಅಡವಿಯಲ್ಲಿ ತಮಗೆ ತಾವೇ ಬೆಳೆದು ಕೊಳೆತು ಕೆಡುತ್ತಿರುತ್ತವೆ (ಕಥಾಗೆ. ೨೭೭). [←ಮರಾ. ದೇಂಟೀ, ದೇಂಠೀ]

ದೇಟು 'ದೇಂಟು' ನೋ.

ದೇಡ (ನಾ). ನೇಕಾರ; ನೆಯ್ಗೆಯವನು: ಬಡಗಿ ೧ ಕಂಮಾಱ ೧ ಸಂಮ ಗಾಱ ೧ ಅಸಗ ೧ ದೇಡ ಮಗ್ಗ × × ಪ್ಪಿನಿತೆ ಗಾವಲಿ ೨ . . . ಧಾರಾಪೂರ್ವ್ವಕಂ ಮಾಡಿಕೊಟ್ಟರು (ಸೌಇಇ. XX, ೧೭೮-೪೭ ; 1192) ಬಡಗಿ ಕಂಮ್ಮಾಱ ಅಕ್ಕಸಾಲೆ ಅಸಗ ಸಂಮ್ಮಗಾಱ ದೇಡ ಹೊಲೆಯರ ಕೂಡೆವೊಳಗಾಗಿ ಪುರದ ಬೀರವಣವಂ ಬಿಟ್ಟರು (ಸೌಇಇ. XX, ೨೯೯-೮ ; 12ನೆಯ ಶತ); ಅಸಗ ಸಂಮ್ಮಗಾಱ ದೇಡ ಹೊಲೆಯರ ಕೂಂಟೆ (ಬೊಂಕಶಾ. ೦೯೩೭, ಸಿಂದಗಿ. ೩೯-೭ ; ?). [<ಜೇಡ]

ದೇಡಸೀರೆ (ನಾ). ಒಂದು ಬಗೆಯ ಸೀರೆ : ಸೀರೆಗೆ ಪಾಗ ೧ ಮೊಟ್ಟೆಯ ಸೀರೆಗೆ ಪೊಂಗೆ ಪಣ ೧ ದೇಡಸೀರೆಗೆ ಪೊಂಗೆ ಪಣ ೧ (ನಾಂದೇಡ್. ೩-೨೨ ; 1047). [ದೇಡ + ಸೀರೆ$_2$]

ದೇಣಾಲೇಣ (ನಾ). ಹಣಕಾಸುಗಳನ್ನು ಬಡ್ಡಿಗೆ ಕೊಡುವುದು ಮತ್ತು ತೆಗೆದುಕೊಳ್ಳುವುದ : ಲೇವಾದೇವಿ ವ್ಯವಹಾರ : (ಕಿ).

[←ಹಿಂ. ದೇನಲೇನಾ ; ಮರಾ. ದೇನ್‌ಲೇನ್]

ದೇಣಿಗೆ (ನಾ). ೧. ಕೊಡುಗೆ; ದಾನ; ದತ್ತಿ: ನಮ್ಮ ಭೌತಿಕ ನಾಗರಿಕತೆಯ ಇಂದಿನ ಉನ್ನತದೆಸೆ ಕೇವಲ ವಿಜ್ಞಾನದ ದೇಣಿಗೆಯಾಗಿದೆ (ನಿರಶಾ. ೦) ; ನಿನ್ನಿಂದ ಯಾವುದಾದರೂಂದು ದೇಣಿಗೆಯನ್ನು ದೊರಕಿಸುವದಕ್ಕಾಗಿ ಯಾಗಲಿ . . . ಛತ್ರಸಾಲನು ನಿನ್ನ ದರ್ಬಾರಕ್ಕೆ ಬಂದಿರುವುದಿಲ್ಲ (ಧಾರ್ಮಿತೇ. ೨೪೭) ; ಮನುಷ್ಯರು ಎಷ್ಟು ಕೊಟ್ಟರೂ ಸಾಲದು. ದೇವರ ದೇಣಿಗೆ ಮಾತ್ರ ಅಖಂಡವಾಗಿರುತ್ತದೆ (ಸ್ಮೃತಿಚಿ. ೧೦). ೨. ಅನುಗ್ರಹ ; ವರ: ಜಗತ್ತಿನಲ್ಲಿ ಕಲೆಯಷ್ಟು ಪವಿತ್ರವಾದದ್ದು ಬೇರೆ ಯಾವುದೂ ಇಲ್ಲ. ಇಂಥ ಪೂಜನೀಯ ದೇಣಿಗೆಯನ್ನು ಪಡೆದವರು ನಿಜಕ್ಕೂ ಧನ್ಯರು (ಗಂಗಾವ. ೦೩೯). [←ಮರಾ. ದೇಣಗೀ, ದೇನಗೀ]

ದೇಣೆ (ನಾ). ೧. ಸಾಲ ; ಋಣ : ಶಿವಿಲ್‌ಕೋರ್ಟಿನವರು ದೇಣೆಗಾರನ ದೇಣೆಗೋಸ್ಕರ ಹಕ್ಕು ಬಾಧ್ಯತೆಯನ್ನು ಹರಾಜು ಮಾಡಿದರೆ (ಗ್ರಾಮಾಕ. ೭೯). ೨. ಕೊಡಬೇಕಾದ ಹಣ : ಬೊಂಬಾಯಿಯವರೆಷ್ಟೋ ಮಂದಿ ಕಾಗದ ಬರೆಯುತ್ತಿದ್ದಾರೆ, ಮೂರುಸಾವಿರ ದೇಣೆ ಕೊಡುತ್ತಾರೆಂದು ಬರೆದಿದ್ದಾರೆ (ಸನ್ಯಾಸಿ. ೮೬). [←ಮರಾ. ದೇಣೇ]

ದೇಣೇದಾರ (ನಾ). ಸಾಲವನ್ನು ತೆಗೆದುಕೊಂಡಿರುವವನು; ಸಾಲವನ್ನು ಹಿಂದಿರುಗಿಸಬೇಕಾಗಿರುವವನು: ಕೋರ್ಟಿನ ಡಿಕ್ರಿಯ ಅಮಲ್ಜಾರಿಯಲ್ಲಿ ಜಡ್ಜ್‌ಮೆಂಟ್ ದೇಣೇದಾರನು ದಸ್ತಗಿರಿ ಮಾಡಲ್ಪಡಲೂ ಕೂಡದು (ಗ್ರಾಮಾಕ. ೩೪). [ದೇಣೆ + – ದಾರ್$_4$]

ದೇನಗವಳೆ (ನಾ). ಒಂದಂ ಬಗೆಯ ಉತ್ತಮ ಜಾತಿಯಂ ಬತ್ತ: ಮಾಧವೇಶ್ವರ ದೇವರ ದೇವತಾಪೂಜೆಗೆ . . . ನೈವೇದ್ಯಕ್ಕೆ ದೇನಗವಳೆ ನೆಲ್ಲು ಬಳ್ಳ ೨ (ಸೌಇಇ. XV, ೨೪೧-೬೮; 1174).

[ದೇನ್ಯ + ಕವಳ್ಳೆ (<ಕಟವೆ)]

ದೇಯ್ಯ$_1$ (ನಾ). ಶರೀರ; ದೇಹ: ಭಂಮನಾಯಗ ರಾಮನು ಹುಲಿಯ ಕಾದು ದೇಯ ಬಿಟ್ಟು ವಳಿಕಾ ಸ್ವಸ್ತನಾದನು (ಎಕ. VI, ತರೀಕೆ. ೧೬-೬; 1193 ?); ದೇಯದ ನೀಲದುಂಗುರದ ಕಾಂತಿಗಳಿಂ ಕರಿದಾಗಿ ಶೋಭೆಯುಂ ಬೀಯದ ಪಾಣಿಶೋಣಮಣಿಕಂಕಣ ಸತ್ಕಿರಣಂಗಳಿಂದೆ ಕೆಂಪಾಯತವಾಗಿ ತೋಱಿದೊಡೆ ಮಾನಸದೊಳ್ ಪುದಿಯಲ್ಕೆ ಕೌತುಕಂ ಮಾಯದ ಮದ್ಯ ಮೆಂದಬಳೆ ಪಿಂದೆ ನೋಡಿದಳೊಂದು ಜಾವಮುಂ (ಬಾಧಪು. ೦೦-೦೩೪).

[<ಸಂ. ದೇಹ]

ದೇಯ್ಯ$_2$ (ಗು). ೧. ಕೊಡಬೇಕಾದ; ದಾನ ಮಾಡಬೇಕಾದ. ೨. ಕೊಡುವ; ದಾನಮಾಡುವ: ಸ್ವಸ್ಯ-ದೇಯದ್ರವ್ಯದ. ಅತಿಸರ್ಗಃ-ಕೊಡುವುದು (ತತ್ತ್ವಪ್ರ. ೨೮೫). (ನಾ). ೩. ದಾನಕೊಡಬೇಕಾದ ಪದಾರ್ಥ.-ವಸ್ತು: ದಾನಲಕ್ಷಣಮಪ್ಪಡೆ ದಾತೃವೆಂದುಂ ದೇಯವೆಂದುಂ ಪಾತ್ರಮೆಂದುಂ ತ್ರಿವಿಧಮಕ್ಕುಂ (ಜಾವುಂಪು. ೨೨೬); ಇದೇ ದೇಯಂ ಮತ್ತದೇಯಂ ಬಗೆವೊಡಿದು ದಲೆಂಬೀ ವಿಚಾರಕ್ಕಣಂ ಸಲ್ಲದೆ . . . ಕೊಟ್ಟು ದಾರಿದ್ರ್ಯದ ಮಾತಿಲ್ಲೆಲ್ಲಿಯುಂ ಬಾಟ್ತಿಗಮಖಿಳಧರಾಚಕ್ರದೊಳ್ ತಾನೆನಿಪ್ಪಗ್ಗದ ಮಾತಂ ಮಾಡಿದಂ (ಚಂದ್ರಪು. ೬-೦೦೩). ೪. ದಾನವಾಗಿ ಕೊಟ್ಟುದು: ಪುರವರ್ಗ್ಗದ ಪನ್ನೆರಡು ಮನೆಯ ನೇಸಣಮುಮಂ ನೊನ್ದುಗಾಣಮುಮಂ ಬಿಟ್ಟರಿನ್ತೀ ದೇ[ಯ]ಮಂ ಮೇಲಾಳ್ಕೆಯರಸಿಂಗೆ (ಕಇ. V, ೬-೧೪; 1032 ?). 'ಆದೇಯ' ಪರಾ. [ಸಂ.]

ದೇಯಾರ್ಥಿ (ನಾ). ದಾನವನ್ನು ಬೇಡುವವನು; ಯಾಚಕ; ಭಿಕ್ಷುಕ: ರಾಯನಂ ಕಾಣಲಾಗದೆ ಮಂತ್ರಿಯೆಡೆ ಸಾರ್ವ ದೇಯಾರ್ಥಿಪೂಲು ನೀನು (ಮಂಕುಕ. ೦೪೪). [ದೇಯ್ಯ$_2$ + ಅರ್ಥಿ$_2$]

ದೇಯಿ (ನಾ). (ಕರಾ) ಹೆಣ್ಣುದೆವ್ವಗಳಲ್ಲಿ ಒಂದಂ: 'ದೈಯ್ಯೊಂ' (ಗಳು) = ದೈವ (ಗಳು) ಎನ್ನುತ್ತಾರೆ. ಅವುಗಳಲ್ಲಿ ಗಂಡುಭೂತಗಳೂ : . . . ಇವೆ. ಹೆಣ್ಣುಭೂತಗಳೂ (ಉದಾ :-ಉಳ್ಳಾಳ್ದಿ, ಜುಮಾದಿ, ಕಲ್ಲುರ್ಡಿ, ದೇಯಿ, ಬೈದ್ಯೆದಿ ಇತ್ಯಾದಿ) ಇವೆ (ತುಳುನಾ. ೨೫೦).

[←ತುಳು. ದೇಯಿ./ಪ್ರಾ. ದೇಈ./ಸಂ. ದೇವೀ]

ದೇಯಿಂಗೆಱ^3 (ನಾ). ಒಂದಂ ಸ್ಥಳದ ಹೆಸರು: ಇನ್ತೀ ದಣ್ಡದೊಳಂ . . . ಪುಟ್ಟಿದ ದ್ರವ್ಯಮುವಂ ಕಳೆಮದ್ದಳೆಯ ಪಣಮುಂ ದೇಯಿಂಗೆಱ^{3}ಗೆ (ಎಇ. XX, ೬-೪೦; 1012). [ದೇಯಿ + ಕೆಱ^3]

ದೇಯಿಮಯ್ಯ (ನಾ). ಒಬ್ಬಾತನ ಹೆಸರು: ದಾತಾರಂ ದೇಯಿಮಯ್ಯ ಸೆಟ್ಟಿಯರ × ಗಂ ಮುಟ್ಟಿಂ ನಲ್ಲಯ್ಯನುಂ . . . ತಿಱ್ದು ಪೇಳೆ (ಸೌಇಇ. XX, ೧೯-೬೯; 1015). [ದೇಯಿ + ಅಮ (<ಅಮ್ಮ$_1$) + ಅಯ್ಯ$_1$]

ದೇವ (ಗು). ೧. ದೇವಲೋಕಕ್ಕೆ ಸೇರಿದ. 'ದೇವನದಿ' ಪರಾ. ೨. ಪ್ರಕಾಶಿಸುವ. (ನಾ). ೩. ದೇವಲೋಕದಲ್ಲಿ ವಾಸಿಸುವವನು; ಸ್ವರ್ಗಲೋಕವಾಸಿ; ದೇವತೆ; ದಿವಿಜ: "ದಿವಮೆಂದಿಂತಿದು ತಾ ನಮರ್ತ್ಯಭವನಂ ತದುದ್ಭವ [ರ್ಕಳ್] ದಿವೌಕಸರ್ ದೇವರ್ಕಳ್ . . . ತ್ರಿದಶರ್" (ವಸ್ತುಕೋ. ೬-೩೦); "ಆದಿತ್ಯಃ, ತ್ರಿದಶಃ, ಸುರಃ . . . ದೈವತಂ-ಈ ೨೧ ದೇವರ್ಕಳ ಪೆಸರ್" (ಹಲಾಯು. ೨-೪); ದೇವರ ಪಱ^{3}ಗಳ ರವದೊಳ್ ದೇವರ ಸುರಿವರಲ ಸರಿಯ ಬೆಳ್ಸರಿಯೊಳ್ ತದ್ದೇವವಿಮಾನಾವಳಿಯೊಳ್ ತೀವಿದುದೊರ್ಮೊದಲೆ ಗಗನದಿಂ ಧರೆ ಮಧ್ಯಂ (ಪಂಪಭಾ. ೧-೧೪೭); ಜೀವಾತ್ಮರುಗಳಿಗೆ ಅವರವರ ಕರ್ಮಾಧೀನ ವಾಗಿ ಬರುವ ದೇಹವನ್ನು ದೇವ ಮನುಷ್ಯ ತಿರ್ಯಕ್ ಸ್ಥಾವರವೆಂದು . . . ವಿಭಾಗಮಾಡಿರುತ್ತಾರೆ (ಹಿಂದಸಾ. ೧೪). ೪. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದವನು; ಪರಮಾತ್ಮ; ಭಗವಂತ; ಪರಬ್ರಹ್ಮ: ಜೀವನುಮಶುದ್ಧನು ದೇವನತಿಶುದ್ಧನು (ಬಸಪು. ೫೧-೨೯); ದೇವ ಬಂದ ನಮ್ಮ ಸ್ವಾಮಿ ಬಂದನೋ (ಪುರಂದ. ೧-೪೮ ಪಲ್ಲವಿ); ದೇವ ನಾರೆಂದೆನಲು ಬುದ್ಧಿಯ ಭಾವದಲಿ ಭಾವವನಱಿವ ಸದ್ಭಾವರೂಪನು ಸಾಕ್ಷಿಯಾತನೆ ದೇವನೆನಿಸುವನು (ಅಮೃತ. ೩-೧೪೭); ಆ ದೇವ ಈ ದೇವ ಮಾದೇವನೆನವೇಡ ಆ ದೇವರೆ ದೇವ ಭುವನದ ಪ್ರಾಣಿಗಳಿಗಾದವನೆ ದೇವ (ಸರ್ವಜ್ಞ. ೧೯೦); ಇಬ್ಬನಿಯಲಿ ಸುಖಿಸುವ ಹೃದಯವೆ ದೇವಗೆ ಗುಡಿ (ಅನಿಕೇ. ೩೪-೩). ೫. ಬ್ರಹ್ಮ: "ಸರಸಿರುಹಭವಂ ಬ್ರಹ್ಮಂ ಹಿರಣ್ಯಗರ್ಭಂ ವಿಧಾತೃ ದೇವನಜಂ . . . ಚತುರಾಸ್ಯಂ" (ವಸ್ತುಕೋ. ೩-೦೦). ೬. ಗುರು, ದೊರೆ ಮುಂತಾದ ಹಿರಿಯರನ್ನು ಕುರಿತು ಸಂಬೋಧಿಸು ವಾಗ ಬಳಸುವ ಗೌರವಸೂಚಕವಾದ ಮಾತು: ದೇವ ಬಿನ್ನಪ ಮಿಂದು ಖಾಂಡವಮಂ ಕೃಶಾನು ತಗುಳ್ದು ನಾನಾವಿಧಂ ಸುಡೆ . . . ದೇವರೆಂದಱಿದಿರ್ದಂ (ಪಂಪಭಾ. ೫-೯೪); ದೇವ ಪೆಱತಾವುದವ್ಯಕ್ತಾವಯವ ದೊಳಂ ಕುಮಾರನುನ್ನತಿಕೆಯನುದ್ಭಾವಿಸುತಿರ್ದಪ್ಪು[ದಂ ಪರಿ]ಭಾವಿಸು ನೀಂ ಚಕ್ರವರ್ತಿಚಿಹ್ನೋತ್ಕರಮಂ (ಶಾದಂಪೂ. ೪೦೯); ದೇವ ನಿಮಗಪ್ಪ ಪಿಶಿತಮನಾವೆಡೆಯೊಳಮಱಸಿ ಪಡೆದೆವಿಲ್ಲ (ಪಂಚತಂ. ೦೪೪-೨೧); ದೇವ ಕನಸಿದು ಕರಂ ದೋಷಾವಹಂ (ಯಶೋಚ. ೩-೦೩). ೭. ಪೂಜ್ಯ, ಮಹನೀಯ ಎಂಬರ್ಥದಲ್ಲಿ ಹೆಸರಿನ ಕೊನೆಯಲ್ಲಿ ಸೇರಿಸುವ ಮಾತು: "ಪಾಡಃ, ದೇವಃ, ಭಟ್ಟಾರಕಃ - ಈ ಮೂಱುಂ ಪೆಸರ ಕಡೆಯೊಳ್ ಪೂಜಾವ[ಚ]ನಂ" (ಹಲಾಯು. ೨೫-೧೫೪); "ಪೆಸರ್ ಕಡೆಯಾಗುನುಡಿ ದೇವಮಕ್ಕು" (ಮಂಗರಾ. ೨೭-೭). ೮. ವಿಹರಿಸುವವನು; ಕ್ರೀಡಿಸು ವವನು: ದೇವ ಎಂದರೆ ಕ್ರೀಡಾಮಯ ಎಂದು ಮತ್ತೊಂದು ಅರ್ಥ (ಧಾತತ್ತ್ವ. ೪೮೭). ೯. ದಡ್ಡ; ಹೆಡ್ಡ. ೧೦. ಮಗು; ಶಿಶು. ೧೧. [ಛಂದ] ಒಂದಂ ಅಕ್ಷರಗಣದ ಹೆಸರು; ನಗಣ (ಲಲಲ): ನಗಣ . . . (ನಾಕ, ಇಂದ್ರನಿಲಯ, ದೇವ, ಇಂದ್ರ) (ಛಂದೋಂಬು. ಕಿ. ೦೨). ೧೨. [ಜೈನ] ಲೋಕಾಂತಿಕ ದೇವತೆ: ದೇವರೊಳಂ ಗುರುಗಳೊಳ ಮಾಗಮದೊಳಂ ನಂಬುಗೆಯುಂ ನಲ್ಮೆಯುಂ ಭಕ್ತಿಯುಮನೂನಮಾಗೆ (ಸುಕುಮಾ. ೩-೪೬ ವ).

ದೇವಾಂದೇವ = ದೇವರ ದೇವ; ದೇವಾಧಿದೇವ; ಪರಮೇಶ್ವರ: ಕಿಟ್ಗಾಣೇಶ್ವರದಾ ದೇವರು ಪರವರಿಯೆ ಭತ್ತಮುಂ ಕವಿಲೆಯ ಪಾಲುಂ ಎಟ್ಟುಂ × × × ದೇವಾನ್ದೇವನ ಪರಿಜನಮಲ್ಲಾಡೆ ಪೆಱನೊರ್ವನಾರು ಮುಂಣ್ಡೊಮೆಣ್ಡುಕಂ ಇನ್ತುಣ್ಣೋರುಂ ಉಣಿಯ ಕೊಡುವೋನುಂ . . . ಪೂತಿ ಎನ್ವ ನರಗಕ್ಕೆ ಸಲ್ಗೆ (ಎಕ. VI, ಕೊಪ್ಪ. ೩೭-೪; ಸು. 675 ?).

[ಸಂ.]

ದೇವಂಗೆಯ್$_1$ (ಕ್ರಿ). ದೇವತ್ವವನ್ನು ಆರೋಪಿಸು: ದೇವಂಗೆಯ್ವುದು ಕಲ್ಲ ಮಣ್ಣ ಪರಿಜಂ ಚಿಹ್ನಂಗಳಂ ಶೂನ್ಯಮಂ (ಸಂಸಪ. ೩-೨).

[ದೇವ + ಕೆಯ್$_1$]

ದೇವಂಗೆಯ್$_2$ (ನಾ). ದೇವರಿಗೆ ಸೇರಿದ ಸಾಗುವಳಿ ಜಮೀನು: ತೆಂಕ ದೇವಂಗೆಯ್ಯ ಮೇರೆ (ಎಇ. VII, ೨೦೦-೦೦; 886).

[ದೇವ + ಕೆಯ್$_4$]

ದೇವಂಗೇರಿ (ನಾ). ಒಂದು ಸ್ಥಳದ ಹೆಸರು: ಶ್ರೀವುರದಾ ಬಡಗಣ ಪಡುವಣ ಕೋಣುಳ್ಳನ್ದೇವಂಗೇರಿ ಮದಮನೆ ಒಂದಂ (ಎಕ. IV, ನಾಗಮಂ. ೮೫-೬೯; 776). [ದೇವ + ಕೇರಿ]

ದೇವಋಣ (ನಾ). ದೇವ, ಋಷಿ ಮತ್ತು ಪಿತೃ ಎಂಬ ಋಣತ್ರಯ ದಲ್ಲಿ ಮೊದಲನೆಯದು; ದೇವತೆಗಳು ತನಗೆ ಮಾಡಿರುವ ಉಪ

ಕಾರಕ್ಕಾಗಿ ಮನುಷ್ಯನು ಮಾಡಬೇಕಾದ ಕೃತಜ್ಞತೆಯ ಕಾರ್ಯ: ಪಿತೃಋಣ, ಗುರುಋಣ, ದೇವಋಣ ಇತ್ಯಾದಿ ಎಲ್ಲ ಋಣದ ಭಾರವನ್ನು ನಿಮ್ಮೊಬ್ಬರ ತಲೆಯ ಮೇಲೆ ಹೊರಿಸಬೇಕಾಗುತ್ತದೆ (ಹೊಸಕ್ಷಿ. ೨೫೨).

[ದೇವ + ಋಣ]

ದೇವಋಷಿ (ನಾ). = ದೇವರ್ಷಿ ೧ : ವರಸಮಯದ ದೇವಋಷಿ ಸಮೂಹಕ್ಕಂ ಪೆಂಡಿರು ಮಕ್ಕಳುಮೊಳರಾಯ್ತಾಪ್ಪರಿಕ್ಕೆ ಮುನಿಗಳ್ಗೆ ಸಲ್ಲ ಜಿನಶಾಸನದೊಳ್ (ಸಮಪ. ೮-೨೦೬) ; ದೇವವೃಂದವು ಬೆರಸಿ ನಾನಾದೇವ ಋಷಿಯರು ಕೂಡಿ ಭೂಮಿಾದೇವಿಯನು ಸಂತೈಸಿ (ಸಂಭಪ. ೬-೬೨).

[ದೇವ + ಋಷಿ]

ದೇವಕಂಟಕ (ನಾ). ದೇವತೆಗಳಿಗೆ ಮುಳ್ಳಿನಂತಿರುವವನು ; ದೇವತೆಗಳನ್ನು ಕಾಡುವವನು ; ರಾಕ್ಷಸ: ದೇವ ಮಗನಳಲಿಂದ ಕಾದಲು ದೇವಕಂಟಕ ಬಂದ ಮೇಲಿನ್ನಾವುದುಚಿತವು ನೀವೆ ಬಲ್ಲಿರಿ ಕಾಳಗದ ಪರಿಯ (ಕೌಶಿರಾ. ೩೬-೨೩). [ದೇವ + ಕಂಟಕ]

ದೇವಕಣಗಿಲೆ 'ದೇವಗಣಗಿಲು' ನೋ.

ದೇವಕಣಿಶ (ನಾ). ಒಂದು ಬಗೆಯ ಸಸ್ಯ ; ಪಚ್ಚೆತೆನೆ : "ದೇವಕಣಿಶಂ ಪಚ್ಚೆಯಕ್ಕು" (ಮಂಗರಾ. ೪೦-೩೦). [ಸಂ.]

ದೇವಕನ್ನಿಕೆ (ನಾ). ದೇವತಾಸ್ತ್ರೀ; ದೇವಕನ್ಯೆ: ಗವುಡನು ಸೋಮ ××× ತುಱುವ ಮರಳ್ಚಿಯರವಿ × × × ನು ದೇವಕಂನಿಕೆಯರು (ಎಕ. XVI, ಚಿಕ್ಕನಾ. ೧೦೦-೨ ; 1301). [ದೇವ + ಕನ್ನಿಕೆ$_1$]

ದೇವಕನ್ಯೆ (ನಾ).=ದೇವಕನ್ನಿಕೆ: ದೇವಕನ್ಯೆಯ ಸಾಕ್ಷಾತ್ಕಾರಕ್ಕಾಗಿ ಹಂಬಲಿಸಿ ಹತಾಶನಾದ ರಾಜಪುತ್ರನ ಕಥೆಯೊಂದಿದೆ (ದೇಕನ್ಯೆ. ೦). [ದೇವ+ಕನ್ಯೆ]

ದೇವಕಾಂಚನ (ನಾ). ಒಂದು ಬಗೆಯ ಮರ ; ಕೆಂಪು ಕಂಚಿವಾಳ.

[ಸಂ.]

ದೇವಕಾಂತೆ (ನಾ). = ದೇವಕನ್ನಿಕೆ : ಚಂದ್ರಮಂಡಲಂಗಳನೆಳಮಿಂಚು ತಾಳ್ದಿದವೊಲಡ್ಡಣದೊಡ್ಡಣಮೆಡ್ಡಮಾಗೆ ಕಾವಳವಿಗೆ ಖಟ್ಗಧಾರಿಣಿಯ ರಾದರನಿಂದೆಗೆ ದೇವಕಾಂತೆಯರ್ (ಅನಂಪು. ೪-೮೦).

[ದೇವ + ಕಾಂತೆ]

ದೇವಕಾರ್ಯ (ನಾ). ೧. ದೇವರ ಅನುಗ್ರಹವನ್ನು ಬಯಸಿ ಮಾಡುವ ವ್ರತೋಪವಾಸಗಳು ಮುಂತಾದ ಕಾರ್ಯ: ದೇವಕಾರ್ಯಕೆ ನೆರೆದು ನೆರೆಯೂರಿಂಗೆ ಪೋಪಂತೆ (ಬಸಪು. ೪೪-೭೨) ; ಮೊಸರುಹೆಡಿಗೆ ಶಿರದಲಿ ದೇವಕಾರ್ಯ ಮಿಾಸಲು (ಪುರಂದ. ೨-೨೦೪-೨); ಆತನಿಗೆ ಹಿಂದೂ ರಾಜ್ಯದ ಪುನರುದ್ಧಾರಕಾರ್ಯ, ದೇಶೋದ್ಧಾರಕಾರ್ಯ, ದೇವಕಾರ್ಯ ವಾಗಿತ್ತು (ಬಂಕಿಮ. ೧೮೫). ೨. ಕೆಲವು ಪಂಗಡಗಳಲ್ಲಿ ಮದುವೆಗೆ ಮುಂಚೆ ಮಾಡುವ ಕುಲದೇವತೆಯ ಪೂಜೆ: ಈಗ ದನಿಗಳಿಗೆ ಅವಕಾಶ ವಿಲ್ಲ, ದೇವಕಾರ್ಯ ನಡೆದಿದೆ (ಜಮೀನ್ಮಾ. ೧೦). ೩. ಸಂಪ್ರದಾಯ ನಿಷ್ಠರ ಮನೆಗಳಲ್ಲಿ ವರ್ಷಂಪ್ರತಿ ಒಂದು ವಿಶಿಷ್ಟವಾದ ತಿಥಿಯಲ್ಲಿ ಆಯಾ ಮನೆದೇವತೆಯ ಪ್ರೀತ್ಯರ್ಥವಾಗಿ ನೆರವೇರಿಸುವ ಒಂದು ಪವಿತ್ರಕಾರ್ಯ. [ದೇವ + ಕಾರ್ಯ]

ದೇವಕುಜ (ನಾ). ದೇವಲೋಕದ ಮರ ; ಕಲ್ಪವೃಕ್ಷ : ಇದು ದಲ್ ಚಂದ್ರಮನಲ್ತು . . . ತತ್ಕಂಠವಿಲಂಬಿ ದೇವಕುಜಪುಷ್ಪಸ್ರಗ್ರಜೋ ವಿಭ್ರಮಂ (ರಾಜಶೇ. ೧೩-೪೪). [ದೇವ + ಕುಜ]

ದೇವಕುರು (ನಾ). [ಜೈನ] ವಿದೇಹಕ್ಷೇತ್ರದಲ್ಲಿ ಮೇರುಪರ್ವತಕ್ಕೆ ದಕ್ಷಿಣದಲ್ಲಿರುವ ಒಂದು ಭೋಗಭೂಮಿ: ಕರುಮಾಡದೇಟನೆಯ ನೆಲೆಯೊಳಿರ್ದಲ್ಲಿ ಸಿಡಿಲ್ ಪೊಡೆಯೆ ಸತ್ತು ದೇವಕುರುವಿನೊಳ್ ಪುಟ್ಟಿದಂ (ಪಂರಾಮಾ. ೦೬-೪೨ ಪ) ; ಪುರಂ ವಿರಾಜಿಪುದು ದೇವಕುರುಪ್ರತಿಮಾನ ಮೆಂಬಿನಂ (ಚಂದ್ರಪು. ೧೦-೬೨). [ದೇವ + ಕುರು$_3$]

ದೇವಕುಲ, ದೇವಕುಳ (ನಾ). ೧. ದೇವಾಲಯ ; ದೇವಸ್ಥಾನ : ಕುಲ ನಗಂಗಳೆನಿಪ ದೇವಕುಲದ ಭೋಗದಿಂ ಸರಾಗಮಾದ ರಾಗದಿಂ (ಪಂಪಭಾ. ೦-೫೮ ರಗಳೆ) : ಅಮರಾಪಗಾಪಯಃಪೂರಮನಾಂತ ಹೈಮನಗದಂತಿರೆ ದೇವಕುಲಂಗಳೊಪ್ಪುಗುಂ (ಕಾದಂಪೂ. ೨೯೬) ; ಕೈತೊಳೆದು ದೇವಕುಲ ಕೈತಂದು ವಿಘ್ನಶಾಂತಿಯ ಬೇಳ್ದು (ಪಾರಸಿ. ೧೦-೨೧೮). ೨. ದೇವತೆಗಳ ಗುಂಪು,-ಸಮೂಹ : "ದೇವಕುಲಕೆ ಬಿಜ್ಜೋದರರುಮಚ್ಚರರುಮಕ್ಕು" (ಕಬ್ಬಿಕ್ಕೆ. ೧೦). ೧, ೨ : ಧನದನಿವಾಸದಿಂ ಮಣಿಮಯೋಜ್ವಳದೇವ ಕುಲಂಗಳಿಂದೆ . . . ಪೌದನಪುರಮೊಪ್ಪುತಿರ್ಪುದಮರಾವತಿಯಂತೆ (ಪಾರ್ಶ್ವಪು. ೧-೧೧೨). **ದೇವಕುಳ** : ೧. ದೇವಕುಳಂಗಳಿಂ [ವ] × ವಧೂ ಕುಳಹರ್ಮ್ಮ್ಯಶತಂಗಳಿಂ ಮಹೀದೇವಗೃಹಂಗಳಿಂ ಧನಪತಿಪ್ರಭವೈಶ್ಯ ಕದಂಬಗೇಹದಿಂ (ಎಇ. XX, ೧೧೬-೨೯ ; 1167); ತಾರಕಪ್ರತತಿಗಳಾರಯ ಲ್ಪಡೆವ ದೇವಕುಳಂಗಳ . . . ತಟಾಕಚಯಂಗಳ ಪೆರ್ಮೆಯಿಂದ ಮೂರ್ಜಿತಮೆನಿಪಗ್ರಹಾರಮವು ವಿಷ್ಣುನೃಪಾಳಕನಿತ್ತ ದತ್ತಿಗಳ್ (ಎಕ. VI, ತರೀಕೆ. ೪೫-೨೯ ; 1196). [ದೇವ + ಕುಲ]

ದೇವಕುವರ, ದೇವಕೊಮಾರ (ನಾ). ೧. ದೇವರ ಮಗ ; ಏಸುಕ್ರಿಸ್ತ : ದಿವಕಿಂದು ದೇವಕುವರಂ ಮರಳಿ ಬಹನೆಂಬ ಗೆಲುವಿಂದ ದೇವದೂತರೆ ಬಾರಿಸುವರೊ ಮಂಗಲವಾದ್ಯವೆನಲು (ಗೊಲ್ಲೊಥಾ. ೦-೭). **ದೇವ ಕೊಮಾರ** : ೨. ಒಬ್ಬಾತನ ಹೆಸರು : ಶ್ರೀವರಮತಿಸಾಗರಪಣ್ಡಿತ ಭಟಾರರ ಬೆಸದೊಳಣ್ಣಯ್ಯನುಂ ದೇವಕೊಮಾರನುಂ ಧೋರನುಮಿಟ್ಟು (ಎಕ. III, ಶ್ರೀರಂಗ. ೧೪೮-೧೦ ; 904 ?). [ದೇವ + ಕುವರ$_2$]

ದೇವಕುಸುಮ (ನಾ). ಲವಂಗ : "ಲವಿ ಲವಂಗಂ ದೇವಕುಸುಮಮೆನೆ" (ಮಂಗರಾ. ೪೩-೪೦) ; "ಲವಂಗಂ, ದೇವಕುಸುಮಂ, ಶ್ರೀಸಂಜ್ಞಂ-೩ ಲವಂಗದ ಹುವ್ವು, ಲವಂಗ" (ಸಿದ್ಧಾಂತಿ. ೧೭೯). [ದೇವ + ಕುಸುಮ]

ದೇವಕುಳ 'ದೇವಕುಲ' ನೋ.

ದೇವಕೂಟ (ನಾ). ೧. ದೇವಾಲಯ. ೨. ದೇವಸ್ಥಾನದ ಭೋಜನ ಶಾಲೆ. ೩. ದೇವಸ್ಥಾನದ ಭೋಜನಶಾಲೆಯ ಮೇಲ್ವಿಚಾರಣೆ : ಅಧಿಕಾರವುಳ್ಳ ಸಂಸ್ಥೆಗಳು :—ಊರು (ಊರವರು), ನಾಡು . . . ಸರ್ವಾತಿಥ್ಯಕುಟುಂಬ, ದೇವಕೂಟ, ಕ್ರಮಕಾರಿಯ (ತುಳುನಾ. ೨೭೦).

[ದೇವ + ಕೂಟ$_1$]

ದೇವಕೃಚ್ಛ್ರ (ನಾ). ಒಂದು ಬಗೆಯ ಪ್ರಾಯಶ್ಚಿತ್ತ ; ಹೆಚ್ಚಾದ ಕಾಯ ಕ್ಲೇಶದಿಂದ ನಿರ್ವಹಿಸಬೇಕಾದ ಒಂದು ಬಗೆಯ ತಪಸ್ಸು : ದೋಷಪರಿಹಾರಾರ್ಥಮಾಗಿ ಶರೀರಬಾಧಾತ್ಮಕತ್ವದಿಂ ಮಹತ್ಕಷ್ಟ ಸಾಧ್ಯಂಗಳಾದ ತಪ್ತಕೃಚ್ಛ್ರ ದೇವಕೃಚ್ಛ್ರ ಯಾವಕೃಛ್ರ ಮುಂತಾದುವುಗಳಿಂ ಪಕ್ಷ ಮಾಸಾದಿಕಂಗಳಲ್ಲಿ ಅನ್ನಮಂ ಪೆರ್ಚಿಸಿ ತಗ್ಗಿಸಿಕೊಂಬುದು (ವಿಚೇಕೆ. ೧೩೯). [ಸಂ.]

ದೇವಕೃತ (ನಾ). ೧. ದೇವರಿಂದ ಆದುದು ; ಮನುಷ್ಯಶಕ್ತಿಗೆ ಅಸಾಧ್ಯವಾಗಿದ್ದು ಕೇವಲ ಅದೃಷ್ಟದಿಂದ ಒದಗಿಬರುವುದು. ೨. [ಜೈನ] ಮೂವತ್ತು ನಾಲ್ಕು ಅತಿಶಯಗಳಲ್ಲಿ ಒಂದು ; P ಜೈನರ ಪ್ರಕಾರ ೩೪ ಅತಿಶಯಗಳಿವೆ. ಇವು ತೀರ್ಥಂಕರನಿಗೆ ಉಂಟಾಗುವ ಅತಿಶಯಗಳು. ಇವುಗಳನ್ನು ಸ್ವಾಭಾವಿಕ ಅತಿಶಯಗಳು, ಕರ್ಮಕ್ಷಯಜ ಅತಿಶಯಗಳು ಮತ್ತು ದೇವಕೃತ ಅತಿಶಯಗಳೆಂದು ಮೂರು ವಿಭಾಗ ಮಾಡಿದ್ದಾರೆ. ಸ್ವಾಭಾವಿಕ ಅತಿಶಯಗಳು-ಸ್ವೇದರಹಿತತ್ವ, ನಿರ್ಮಲಶರೀರ, ಹಾಲಿನಂತೆ ಬಿಳಿಯ ರಕ್ತ, ವಜ್ರವೃಷಭನಾರಾಚಸಂಹನನ, ಸಮಚತುರಸ್ರ ಶರೀರಸಂಸ್ಥಾನ, ಅನುಪಮರೂಪ, ಅತ್ಯಧಿಕಸುಗಂಧತ್ವ, ೧೦೦೮ ಬಗೆಯ ಉತ್ತಮ ಲಕ್ಷಣಗಳನ್ನು ಹೊಂದಿರುವಿಕೆ, ಅತ್ಯಧಿಕ

ವಾದ ಬಲ ಮತ್ತು ಹಿತಮಿತವಾದ ಭಾಷಣ ಎಂಬ ಹತ್ತು ವಿಧಗಳು. ಕರ್ಮಕ್ಷಯಜ ಅತಿಶಯಗಳು-ತನ್ನ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿ ನೂರುಯೋಜನಗಳವರೆಗೆ ಸುಭಿಕ್ಷತೆ, ಆಕಾಶಗಮನ. ಹಿಂಸೆಯ ಅಭಾವ, ಭೋಜನದ ಅಭಾವ, ಉಪಸರ್ಗಗಳ ಅಭಾವ, ನಾಲ್ಕೂ ಕಡೆಗೆ ಮುಖವಾಗಿರುವ ಸ್ಥಿತಿ, ನಳಲು ಬೀಳದಿರುವಿಕೆ, ಎವೆ ಬಡಿಯದಿರುವಿಕೆ (ನಿರ್ನಿಮೇಷ ದೃಷ್ಟಿ), ಸಮಸ್ತವಿದ್ಯೆಗಳಲ್ಲಿ ಪ್ರಭುತ್ವ, ನಖ ಹಾಗು ರೋಮಗಳು ಸಮಾನವಾಗಿರುವಿಕೆ ಮತ್ತು ಹದಿನೆಂಟು ಭಾಷೆಗಳಲ್ಲಿಯೂ ಏಳುನೂರು ಕ್ಷುದ್ರಭಾಷೆಗಳಲ್ಲಿಯೂ (ಏಕಕಾಲಕ್ಕೆ) ಹೊರಡುವ ದಿವ್ಯಧ್ವನಿ ಎಂಬ ಹನ್ನೊಂದು ವಿಧಗಳು. ದೇವಕೃತ ಅತಿಶಯಗಳು-ತೀರ್ಥಕರ ಮಹಿಮೆಯಿಂದ ಯೋಜನಗಳ ವರೆಗಿನ ವನಗಳಲ್ಲಿ ಎಲೆ, ಹೂ, ಹಣ್ಣುಗಳು ತುಂಬುವುದು, ಮುಳ್ಳು,ದೂಳು ಹೊರಟುಹೋಗಿ ಸುಖವಾದ ಗಾಳಿ ಬೀಸುವುದು, ಜೀವಗಳು ಪರಸ್ಪರ ವೈರಭಾವವನ್ನು ತ್ಯಜಿಸುವುದು, ಭೂಮಿ ಕನ್ನಡಿಯಂತೆ ಸ್ವಚ್ಛವೂ ರತ್ನಮಯವೂ ಆಗುವುದು, ಸೌಧರ್ಮೇಂದ್ರನ ಆಜ್ಞೆಯಿಂದ ಸುಗಂಧಜಲದ ವೃಷ್ಟಿ, ದೇವವಿಕ್ರಿಯೆಯಿಂದ ಸಸ್ಯಫಲಸಮೃದ್ಧಿ. ಎಲ್ಲ ಜೀವಗೆಳಿಗೂ ನಿತ್ಯ ಆನಂದ, ಶೀತಲವಾದ ಗಾಳಿ ಬೀಸುವಿಕೆ, ಬಾವಿ, ಕೆರೆ, ನದಿಗಳಲ್ಲಿ ನಿರ್ಮಲವಾದ ನೀರು ತುಂಬುವಿಕೆ, ಆಕಾಶ ನಿರ್ಮಲವಾಗುವಿಕೆ, ಎಲ್ಲ ಜೀವಗಳೂ ರೋಗರಹಿತರಾಗಿರುವಿಕೆ, ನಾಲ್ಕು ದಿವ್ಯ ಧರ್ಮಚಕ್ರಗಳ ದರ್ಶನ ಮತ್ತು ತೀರ್ಥಕರನ ನಾಲ್ಕೂ ಮಗ್ಗುಲುಗಳಿಗೆ ಸಕಲ ಪೂಜಾದ್ರವ್ಯಗಳುಂಟಾಗುವಿಕೆ ಎಂಬ ಹದಿಮೂರು ವಿಧಗಳು: ಸ್ವಾಭಾವಿಕ ಕರ್ಮಕ್ಷಯಜ ದೇವಕೃತಂಗಳೆಂಬ ಮೂವತ್ತುನಾಲ್ಕು ಮತಿಶಯಂಗಳೊಳೊಂದುಗುಂದದಿರೆಯುಂ (ಶಾಂತಿಪು. ೧೨-೦೪ ಪ); ದೇವಕೃತಂಗಳುಮಂ ಸ್ವಾಭಾವಿಕಮುಮನಜಿತ ನೀನೆ ತಾಳ್ದಿದೆ (ಅಜಿಪು. ೮-೦೨). [ದೇವ + ಕೃತ]

ದೇವಕೊಮಾರ 'ದೇವಕುವರ' ನೋ.

ದೇವಕ್ರಿಯೆ (ನಾ). [ಸಂಗೀತ] ಒಂದು ರಾಗದ ಹೆಸರು: ದೇವಕ್ರಿಯೆ ತ್ರಿಣೇತ್ರಕ್ರಿಯೆ ಭೂತಾಳಕ್ರಿಯೆಯೆಂಬ ಮೂಱುಂ ಕೋಲಾಹಲರಾಗಕ್ಕು ಪಾಂಗಗಳು (ವಿವೇಕ. ೨೩೪). [ಸಂ. ದೇವಕ್ರಿಯಾ]

ದೇವಖಾತ (ನಾ). ೧. ನೈಸರ್ಗಿಕವಾಗಿ ಉಂಟಾದ ಜಲಾಶಯ; ಅಕೃತ್ರಿಮವಾದ ಸರೋವರ ಮೊದಲಾದ ಜಲಾಧಾರ: "ದೇವಖಾತಮಕ್ಕುಮಖಾತಂ" (ವಸ್ತುಕೋ. ೨೪-೫); "ಅಖಾತಮಾ ದೇವಖಾತಮೆನಲ್ಕೆ" (ಮಂಗರಾ. ೦೨೩-೦೪); ತಾನಾಗಿ ನಿರ್ಮಿತವಾದ ಪುಷ್ಕರಿಣಿ ಮುಂತಾದವು ದೇವಖಾತವು (ಅರ್ಯಧ. ೦೭೬). ೨. ಕುರುಕ್ಷೇತ್ರದಲ್ಲಿದ್ದ ಒಂದು ಜಲಾಶಯದ ಹೆಸರು: ನಡುವಗಲಿಟಿವಿನಂ ಕಾದಿ ಬಟಲ್ದು ಕುದುರೆಗಳಂ ನೀರೊಳಿಕ್ಕಲೆಂದು ದೇವಖಾತಮೆಂಬ ಮಡುವಿಂಗೆ ಬರ್ಪುದುಂ (ಪಂಪಧಾ. ೧೧-೦೩೬ ಪ). [ದೇವ + ಖಾತ₂]

ದೇವಗಂಗೆ (ನಾ). ದೇವಲೋಕದ ನದಿ: ಸುಜ್ಞಾನ ನಿರ್ಮಲ ದೇವಗಂಗೆಯಲಿ ಇಳಿದು ಸ್ನಾನಂಗೈದು (ಗಗತಾ. ೧೬-೧೯). [ದೇವ + ಗಂಗೆ₂]

ದೇವಗಂಟೆ (ನಾ). ಒಂದು ಬಗೆಯ ಔಷಧಿಸಸ್ಯ: ಹೊಟ್ಟೆ ನುಲಿಯುವುದಕ್ಕೆ:-ದೇವಗಂಟೆಯ ರಸದಲ್ಲಿ ಉಳ್ಳಿ, ಮಣಸು ಅರೆದು ಆ ದೇವಗಂಟೆಯ ರಸದಲ್ಲಿ ಕದಡಿ ಮೂಱುದಿನ ಕೊಳ್ಳಲು ಹೊಟ್ಟೆ ಕಚ್ಚುವುದು ಮಾಣ್ಗುಂ (ವಿಪೈವಿ. ೭೬); ನಾಲ್ಕುವರಹ ತೂಕ ದೇವಗಂಟೆ ಸೊಪ್ಪನೂ . . . ಒಂದು ಮಾನ ಹಸುವಿನ ತುಪ್ಪದಲ್ಲಿ ಹಾಕಿ ಕಾಸಿ ಹದದಲ್ಲಿ ತೆಗೆದು ನಸಿಕದಲ್ಲಿ ನಸ್ಯಮಂ ಮಾಡಿಸಲು ಅರೆದಲೆಬೇನೆ ಮಾಣುವುದು (ವೈದ್ಯಸಾ II, ೦೩೯). [<ಸಂ. ದೇವಘಂಟಾ]

ದೇವಗಣ (ನಾ). ೧. ದೇವತೆಗಳ ಗುಂಪು,-ಸಮೂಹ: ರುದ್ರನ ಹಾವುಗೆ ಉರಿಯಿತ್ತು ದೇವಗಣಂಗಳು ನಿವಾತವಾದರು (ಬಸವ. ೯೩೦); ಭಯಮಂ ದೇವಗಣಕ್ಕೆ ಮಾಡಿ . . . ಅಂದಿನ ಕಾಲನೇವಿಯೆ ಕಂಸಾಸುರನಾಗಿ ಪುಟ್ಟಿದುದನಾಂ ಬಲ್ಲೆಂ (ಜಗವಿ. ೧-೬೮); ಮಾಲೆಗೊಂಡೆಯ್ತಪ್ಪ ದೇವಗಣ ತತಿಯೊಳಗೆ ಶಾಂತಾರ್ಕಕೋಟಿಪ್ರಭಾಪುಂಜದಿಂ ಬೆಳಗೆ ಮುಂತೆ ಶಿವ ಮೂರ್ತಿ (ನಂಬಿರ. ೭-೧೨೨); ಭಾಸ್ವರಭಕ್ತಿಯಿಂದೆಱಗೆ ದೇವಗಣಂ (ಪುಷ್ಪಪು. ೧೦-೦೯). ೨. [ಜ್ಯೋತಿ] ನಕ್ಷತ್ರಗಳ ಮೂರು ಗಣಗಳಲ್ಲಿ ಒಂದು; ದೇವವರ್ಗಕ್ಕೆ ಸೇರಿದುವೆಂದು ಭಾವಿಸಲಾದ ನಕ್ಷತ್ರಗಳ ಗುಂಪು: P ೧. ಅಶ್ವಿನಿ, ಮೃಗಶಿರೆ, ಪುನರ್ವಸು, ಪುಷ್ಯ, ಹಸ್ತ, ಸ್ವಾತಿ, ಅನೂರಾಧೆ, ಶ್ರವಣ ಮತ್ತು ರೇವತಿ-ಇವು ಒಂಬತ್ತು ಸೇರಿ ದೇವಗಣ. ೨. ಭರಣಿ, ರೋಹಿಣಿ, ಆರ್ದ್ರೆ, ಪುಬ್ಬೆ, ಉತ್ತರೆ, ಪೂರ್ವಾಷಾಢ, ಉತ್ತರಾಷಾಢ, ಪೂರ್ವಾಭಾದ್ರೆ, ಉತ್ತರಾಭಾದ್ರೆ-ಈ ಒಂಬತ್ತೂ ಸೇರಿ ಮನುಷ್ಯಗಣ. ೩. ಕೃತ್ತಿಕೆ, ಆಶ್ಲೇಷೆ, ಮಖೆ, ಚಿತ್ತೆ, ವಿಶಾಖೆ, ಜ್ಯೇಷ್ಠ, ಮೂಲ, ಧನಿಷ್ಠೆ, ಶತಭಿಷೆ-ಇವು ಒಂಬತ್ತು ಸೇರಿ ರಾಕ್ಷಸಗಣ. ಒಬ್ಬ ಕನ್ಯೆಗೆ ಮತ್ತು ಒಬ್ಬ ವರನಿಗೆ ಮದುವೆ ಮಾಡಬಹುದೆ ಎಂಬ ವಿಷಯವನ್ನು ಪರಿಶೀಲಿಸಲು ಜ್ಯೋತಿಷ್ಯಶಾಸ್ತ್ರದಲ್ಲಿ ಹನ್ನೆರಡುಕೂಟಗಳನ್ನು ಹೇಳಿದ್ದಾರೆ. ಅವುಗಳಲ್ಲಿ ಗಣಕೂಟವೆಂಬುದೂ ಒಂದು. ಅದರಲ್ಲಿ ಕನ್ಯೆಯ ಮತ್ತು ವರನ ನಕ್ಷತ್ರಗಳು ಒಂದೇ ಗಣಕ್ಕೆ ಸೇರಿದ್ದರೆ ಪ್ರಶಸ್ತ. ದೇವಗಣ ಮನುಷ್ಯಗಣವಾದರೆ ಮಧ್ಯಮ. ದೇವಗಣ ರಾಕ್ಷಸಗಣವಾದರೆ ಅಧಮ. ಮನುಷ್ಯಗಣ ರಾಕ್ಷಸಗಣವಾದರೆ ನಿಷಿದ್ಧ: ದೆವ್ವ ಭೂತಗಳು . . . ದೇವಗಣದವರಿಗೆ ಕಾಣಿಸುವುದಿಲ್ಲ (ಸಡಿದಾ. III, ೨೦೬೦); ಗಂಡಿನ ನಕ್ಷತ್ರ ದೇವಗಣ. ಹೆಣ್ಣಿನದು ಮನುಷ್ಯಗಣ, ಚೆನ್ನಾಗಿ ಕೂಡಿದೆ (ರೂಢಿ). ೩. [ಛಂದ] ಕರ್ತೃವಿಗೂ ಅವನ ಒಡೆಯನಿಗೂ ಶುಭವನ್ನುಂಟುಮಾಡುವ ಒಂದು ಬಗೆಯ ಗಣ: ಭಾಸ್ವದ್ದೇವಗಣಂಗಳೆಂದಱಿಪಿದೆಂ ಪಂಕೇಜಪತ್ರೇಕ್ಷಣೇ (ಛಂದೋಂಬು. ೦-೪೩); ತಾಳಮಾನಸರಿಸವನಱಿಯೆ ಒಜೆ ಬಜಾವಣಿಯ ಲೆಕ್ಕವನಱಿಯೆ ಅಮೃತಗಣ ದೇವಗಣವನಱಿಯೆ (ಬಸವ. ೪೯೪); ಭಾವಿಸೆ ಪದಪದ್ಯಂಗಳೊಳಾವಾವಂ ಗಣಮನಿಕ್ಕಲವುಮಿವುಮೆನ್ನದೆ ದೇವಗಣಮಿಟ್ಟು ಮುಂದಕ್ಕಾವ ಗಣಂ ಬಂದಡುತ್ತಮಂ (ಕವಿಜಿ. ೦-೩೭); P 'ನಗಣ'ಕ್ಕೆ ಅಧಿದೇವತೆಗಳು ದೇವತೆಗಳು. ಆದ್ದರಿಂದ ಕೆಲವರು 'ನಗಣ'ವನ್ನೂ ಕೆಲವರು 'ಮಗಣ'ವನ್ನೂ ದೇವಗಣವೆಂದು ಹೇಳುತ್ತಾರೆ. ಅಮೃತಗಣ ಎಂಬ ಪದದ ವಿಚಾರ ಪಿಂಗಳಾಚಾರ್ಯನ ಛಂದಶ್ಶಾಸ್ತ್ರದಲ್ಲಿಲ್ಲ. ದೇವಗಣವು ಆಯುರ್ವೃದ್ಧಿ ಮಾಡುವುದೆಂದೂ ರಾಕ್ಷಸಗಣವು ಕೆಡುಕನ್ನುಂಟುಮಾಡುವುದೆಂದೂ ನಂಬಿಕೆಯಿದೆ. [ದೇವ + ಗಣ]

ದೇವಗಣಿಕೆ₁ (ನಾ). ಒಂದು ಬಗೆಯ ಗಿಡ: "ಅಂಬಾಲಾ-ದೇವಗಣಿಕೆ" (ಕಾಶಕ್ಯ. ೩೦). [ದೇವ + ಗಣಿಕೆ₂]

ದೇವಗಣಿಕೆ₂ (ನಾ). ರಂಭೆ, ಊರ್ವಶಿ, ತಿಲೋತ್ತಮೆ, ಚಿತ್ರಲೇಖೆ, ಮಂಜುಘೋಷೆ, ಮೇನಕೆ, ಸುಕೇಶಿ ಮತ್ತು ಘೃತಾಚಿ ಎಂಬ ಅಪ್ಸರಸ್ತ್ರೀಯರಲ್ಲಿ ಒಬ್ಬಳು: ಭೀಷ್ಮನ್ ವಿಟ್ಟಂತೆ ನೆಲ ಮುಟ್ಟದೆ ಬಿಟ್ಟೋನಾನ್ ದೇವಗಣಿಕೆಯರಾರ್ಗ್ಗವಿಬ್ಬಿಡಿದು ಬನ್ದಿದಿರ್ಗ್ಗೊಣ್ಡುಯೆ ವೀರಲೋಕಕೆ ಸನ್ದೋನ್ (ಎಕ. VIII, ಸೂರಬ. ೧೦-೯; ಸು. 800); ದೇವಗಣಿಕೆಯರನೆ ಪೋಲ್ವಯ್ನೂರ್ವರರಸಿಯರ್ಕಳಿಂದಂ (ವಡ್ಡಾರಾ. ೮೦-೬); ರಂಭೆ ಊರ್ವಶಿ ತಿಲೋತ್ತಮೆ ಚಿತ್ರಲೇಖೆ ಮಂಜುಘೋಷೆ ಮೇನಕೆ ಸುಕೇಶಿ ಘೃತಾಚಿ ಮೊದಲಾದ ದೇವಗಣಿಕೆಯರುಂ (ವಿವೇಕ. ೨೨೮). [ದೇವ + ಗಣಿಕೆ₃]

ದೇವಗಣಗಿಲು, ದೇವಕಣಗಿಲೆ (ನಾ). ಸುತ್ತಲೂ ಬಿಳಿ, ಒಳಗೆ ನಸುಹಳದಿ ಬಣ್ಣದ ದಪ್ಪರೇಕುಗಳಿಂದ ಕೂಡಿದ ಹೂವುಗಳನ್ನು ಬಿಡುವ ಒಂದು ಬಗೆಯ ಮರ ಮತ್ತು ಆದರ ಹೂವು: ಹಳ್ಳಿಗಳಲ್ಲಿ ಸಾಮಾನ್ಯವಾಗಿ ದೇವಾಲಯದ ಹತ್ತಿರವೇ ದೇವಗಣಗಿಲು ಮರಗಳಿರುತ್ತವೆ (ಕೂಡಿ). **ದೇವಕಣಗಿಲೆ** : ದೇವಕಣಗಿಲೆಯ ಮರದ ತುಂಬ ತುಂಬಿದ ಎಲೆಯ ಮಧ್ಯ ಕೊಂಬೆಕೊಂಬೆಯಲ್ಲಿ ಬೆಳ್ಳನೆ ಹೂತಿದ್ದಿತು (ಸಂ.ಕ. VII, ೪೧). [ದೇವ + ಗಣಗಿಲು (<ಕಣಗಿಲೆ$_1$)]

ದೇವಗತಿ (ನಾ). ೧. ದೇವತೆಯಾಗುವಿಕೆ; ದೇವತ್ವವನ್ನು ಪಡೆಯುವಿಕೆ; ಜೀವನಿಗೆ ಉಂಟಾಗಂವ ದೇವ, ಮಾನವ, ತಿರ್ಯಕ್ ಮತ್ತು ನಾರಕ ಎಂಬ ನಾಲ್ಕು ಗತಿಗಳಲ್ಲಿ ಮೊದಲನೆಯದು : ನಿಜದ್ವಿಚರಮ ಸಮಯದೊಳ್ ಅನ್ಯತರ ವೇದನೀಯ ದೇವಗತಿ ತತ್ಪಯೋಗ್ಯಾನು ಪೂರ್ವ ಶರೀರಬಂಧನ ಸಂಘಾತ . . . ನೀಚೈರ್ಗೋತ್ರಗಳೆಂಬ ದ್ವಿಸಪ್ತತಿ ಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೦೬-೪೯ ವ) ; ಮುನ್ನಿನ ತಿರ್ಯಗ್ಗತಿ ಬಂಧಂ ನೆರಪಿದ ದೇವಗತಿ ವಿನಿಷ್ಫಲಮಾದತ್ತು (ಪಾರ್ಶ್ವಪು. ೬-೩೭) ; ಎಲ್ಲ ಪರಿಣಾಮಗಳಿಂದಲೂ ಯಾವ ಗತಿಯಲ್ಲಿ ಸುಖವುಂಟಾಗುವುದೋ ಅದೇ ದೇವಗತಿಯು (ಪ್ರವಸಾ. ೩೯೩). ೨. ದೇವತೆಗಳಿಗೆ ದಿಕ್ಕಾಗಿರುವವನು ; ಶಿವ : ದೇವಗತಿ ದೇವಮತಿ ದೇವದುರ್ಲಭನೆಂಬ ಕರೆವ ಬಿರುದಿನ ಕಹಳೆಗಳ ಮಹಾರವದೊಳಗೆ ಧರೆ ನಡುಗೆ (ನಂಬಿರ. ೬-೦೦೬). [ದೇವ + ಗತಿ]

ದೇವಗತಿವಡೆ (ಕ್ರ). ದೇವತ್ವವನ್ನು ಹೊಂದು ; ದೇವತೆಯಾಗು : ನಿಜಸ್ವಾಮಿಯಪ್ಪ ಶಂಭುವಿನ ಕೈಯೊಳ್ ಕನ್ಯಾನಿಮಿತ್ತಂ ಸತ್ತು ದೇವಗತಿವಡೆದಲ್ಲಿಂ ಬಂದು (ಹಂಪಾಮಾ. ೦೬-೩೮ ವ) ; ದೇವಗತಿವಡೆದು ಬಂದೀ ಭೂವಿಶ್ರುತರಾದಿರಿಂತಿದಂ ಮಱೆದಿರೆ ಪೇಟ್ ದೇವಿ (ನೇಮಿಪು. ೦೪-೫೭).

[ದೇವಗತಿ + ಪಡೆ$_1$]

ದೇವಗರಿಗೆ (ನಾ). ಒಂದು ಬಗೆಯ ವನಸ್ಪತಿ: ದೇವಗರಿಗೆ, ಹಿರೇಕಣಗಲು . . . ಕಾಡುಜೇರಕ (ಪ್ರಾಣಿಗಿ. ೩೮-೭೫೯). [?]

ದೇವಗಾಂಧಾರ (ನಾ). [ಸಂಗೀತ] ಒಂದು ರಾಗದ ಹೆಸರು: ಆ ರಂಭಾದಿ ವೇಶೆಯರು ದೇವಗಾಂಧಾರರಾಗದಿಂ ದೇವತಾಸಾರ್ವಭೌಮನಾದ ಇಂದ್ರನಂ ಸ್ತುತಿಸಿ (ಸಾಗಂಧಿ. ೫೦೩-೨). [ಸಂ.]

ದೇವಗಾಂಧಾರಿ (ನಾ). [ಸಂಗೀತ] ಒಂದು ರಾಗದ ಹೆಸರು : ಸಮಸ್ತ ರಾಗಂಗಳೊಳಗೆ ರಾಮಕ್ರಿಯೆ . . . ದೇವಗಾಂಧಾರಿ ... ಮಧ್ಯವಾವತಿಯೆಂಬ ಮೂವತ್ತಾಱುರಾಗಂಗಳೇ ಮುಖ್ಯವಾಗಿ ಬಳಕೆಯಿಂದಧುನಾತನರಲ್ಲಿ ಪ್ರಸಿದ್ಧಗೊಂಡಿರ್ಪವು (ವಿವೇಳ. ೨೩೪); ದೇವಗಾಂಧಾರಿ . . . ಸೌರಾಷ್ಟ್ರವೆಂಬ ಪಾವನರಾಗದೊಳರುಹನನೊಲ್ದು ಸಂಜೀವನವೆನಿಸಿ ಹಾಡಿದರು (ಭರತ. ೫-೭೬) ; ದೇವಗಾಂಧಾರಿ ರ್ಸನೇ ಮೇಳಕರ್ತ ಧೀರ ಶಂಕರಾಭರಣದಲ್ಲಿ ಜನ್ಯ (ಸಂಗೀಕಂ. ೦೪೯). [ಸಂ. ದೇವಗಾಂಧಾರೀ]

ದೇವಗಾಣ (ನಾ). ದೇವಸ್ಥಾನಕ್ಕೆ ಸಂಬಂಧಪಟ್ಟ ಎಣ್ಣೆಯ ಗಾಣ : ಧಾರಾಪೂರ್ವಕಂ ಮಾಡಿಬಟ್ಟಾಯವೆಂತೆಂದಡೆ . . . ದೇವಗಾಣ ದೊಕ್ಕಲಲ್ಲಿ ದೆವಸವಳವೆಂಣೆ ಸೊಳಸವೊಂದು (ಎತ. XX, ೦೨-೪೯; 1167).

[ದೇವ + ಗಾಣ$_1$]

ದೇವಗಾತ್ರ (ನಾ). ದೇವತೆಗಳ ಶರೀರದಂತೆ ಶರೀರವುಳ್ಳವನು ; ಸುಂದರವಾದ ದೇಹವುಳ್ಳವನು : ಸಜ್ಜೆಯೆಡೆ ನಟ್ಟು ನಿಂತವಧರಿಸಿದಳ್ ದೇವಗಾತ್ರನಂ (ಶ್ರೀರಾಮಾ. ೨೭೬-೨೭೮). [ದೇವ + ಗಾತ್ರ]

ದೇವಗುಪ್ತ (ನಾ). [ಸಂಗೀತ] ಒಂದು ರಾಗದ ಹೆಸರು : ಸೈಂಧವಿ ವಂಚವು ಪಾಡವ ದೇವಗುಪ್ತ . . . ಎಂಬೆಂಟು ರಾಗಂಗಳುಂ ಷಟ್ಪ್ರಕಾರ ಜಾತೀಯಂಗಳು (ವಿವೇಳ. ೨೩೩). [ಸಂ.]

ದೇವಗುರು (ನಾ). ದೇವತೆಗಳ ಗುರು ; ಬೃಹಸ್ಪತಿ : ದೇವಗುರು ಬೆಸಸೆ ಜನಕ ಭವಾವಳಿಯಂ ಕೇಳ್ದು ವಿನಯವಿನವಿತನಾದೊಂ (ಶಾಂತಿಪು. ೭-೬೫); ಖಳನೆಡೆಗೆ ಮೆಲ್ಲನೆ ದೇವಗುರು ಬಿಡದಂಜುತ್ತೈತಂದ (ತೂರಹ. ೬-೪೬-೪೦); ದೇವಗುರುದರ್ಶನದಿಂದಲೇ ಶಾಂತಿಯನ್ನು ಪಡೆದ ಆತನ ಮನಸ್ಸು . . . ನಿರ್ಮಲವಾಗಿತ್ತು (ಮಹಾಪು. ೦೦೦). [ದೇವ + ಗುರು$_3$]

ದೇವಗೃಹ (ನಾ). ದೇವಾಲಯ; ದೇವಸ್ಥಾನ : ಇದು ರಮ್ಯವೆನಿಸಿದಲ್ಲಿಪ್ಪುದು ದಯ್ವಂ ದೇವಗೃಹದೊಳಿಪ್ಪುದು ಮೇಣನ್ನದೆ ಪೊಗೆವುತಪ್ಪೊಲೆಯೊಳಗಿಪ್ಪುದು ದೈವಮೆನಲ್ಕೆ ಸಲ್ಲದಱಿವುಳ್ಳಾತಂ (ಸಮಾಪ. ೪-೦೪೫).

[ದೇವ + ಗೃಹ]

ದೇವಗೃಹೋದ್ಧರಣ (ನಾ). ದೇವಾಲಯದ ಜೀರ್ಣೋದ್ಧಾರ ; ಹಳೆಯದಾಗಿ ಬಿದ್ದುಹೋಗುವಂತಿರುವ ದೇವಸ್ಥಾನಗಳ ದುರಸ್ತು, – ರಿಪೇರಿ : ಶ್ರೀಮದಾಹವಮಲ್ಲದೇವ ಪಾದಪದ್ಮೋಪಜೀವಿಯಪ್ಪ ವೆರ್ಗ್ಗಡೆ ಜೋಗವಯ್ಯಂ ತದೀಯ ದೇವಗೃಹೋದ್ಧರಣ ಮುಮಂ . . . ಮಾಡಿ (ಕತಿಆ. ೬೪-೨-೨೬ ; 1056).

[ದೇವಗೃಹ + ಉದ್ಧರಣ]

ದೇವಗೇಹ (ನಾ). ಗುಡಿ ; ದೇವಸ್ಥಾನ ; ದೇವಾಲಯ : "ಉಪನಂದನ ಕೈತವ ದೇವಗೇಹ ಕೇದಾರಮೆನಿಕ್ಕು" (ನಾನಾರ. ೪೯).

[ದೇವ + ಗೇಹ]

ದೇವಗೊಳಗ (ನಾ). ಬೆಳೆದ ಧಾನ್ಯದಲ್ಲಿ ಮೊಟ್ಟಮೊದಲು ದೇವರಿಗೆ ಮಿಸಲಾಗಿ ಕೊಳಗದಲ್ಲಿ ಅಳೆಯುವ ಧಾನ್ಯ : ಕೊಟ್ಟಾರದ ಕರಣಂ ದೇವರ್ಗ್ಗೆ ಪೂಜಿಸುವ ಪಣ ೫ . . . ದೇವಗೊಳಗಂ ಧರ್ಮ್ಮಗೊಳಗಂ ವೊನ್ದು (ಸಾಇಇ. IX-1, ೦೦೬-೦೮ ; 1050) ; ಕೆಱೆಯ ಕೊರಲು ದೇವಗೊಳಗಂ ಧರ್ಮಗೊಳಗವೆರಡು (ಎಳ. XI, ಕಳ್ಳಿ. ೫೦-೨೫ ; 1087) ; ಶ್ರೀಮೂಲಸ್ಥಾನದೇವರ ಗೋಸಗೆಯುಪಹಾರಕ್ಕೆ ಕುಲಕೆ ವೊಕ್ಕುಳಾಭತ್ತ ದೇವಗೊಳಗವಾಗಿ ಕೊಟ್ಟರು (ಎಳ. VIII, ಸೊರಬ. ೪೪೬-೯ ; 1288). [ದೇವ + ಕೊಳಗ$_1$]

ದೇವಗ್ರಹ (ನಾ). ಸೂರ್ಯ, ಚಂದ್ರ ಮೊದಲಾದ ಗ್ರಹಗಳಿಂದುಂಟಾಗುವುದೆಂದು ನಂಬಲಾದ ಪೀಡೆ : ನಾನಾಶಸ್ತ್ರಧಾರಣೆ ಮಾಡುವುದರಿಂದ . . . ದೇವಗ್ರಹ, ಗಂಧರ್ವಗ್ರಹ, ಯಕ್ಷಗ್ರಹ ಮುಂತಾದ ದುಷ್ಟಗ್ರಹಂಗಳನ್ನೂ ಶತ್ರುಗಳಿಂದುಂಟಾಗುವ ಹಾನಿಯನ್ನೂ ಕಿಡಿಸುವುದು (ಸಳವ್ರ. ೫೬). [ದೇವ + ಗ್ರಹ]

ದೇವಚಾಪ (ನಾ). ಮಳೆಬಿಲ್ಲು ; ಕಾಮನ ಬಿಲ್ಲು ; ಇಂದ್ರಚಾಪ : ಕಡೆಯೊಳ್ ತಗುಳ್ದ ರತ್ನದ ಬಿಡಂಗುವೆತ್ತೆಸೆವ ದೀಪ್ತಿವಲಯದ ಚೆಲ್ವಂ ಪಡೆದು ಸಲೆ ದೇವಚಾಪದ ನಡುವಣ ಲಲಿತಾರ್ಧಚಂದ್ರನಿರ್ಪಂತಿರ್ಕುಂ (ಆದಿಪು. ೭-೭೫) : ದೇವಾನತಂಗಳ್ ವೊಟಗೆ ಪಲವುಮಾ ಕಾಲದೊಳ್ ದೇವಚಾಪಂ ಜ್ಯೋತಿರ್ಲೋಕಾಧಿವಾಲಾಭರಣಕಿರಣದಿಂದುರ್ವಿಯಂ ಪರ್ವೆ ಬಂದರ್ (ಶಾಂತಿಪು. ೯-೦೫೦). [ದೇವ + ಚಾಪ]

ದೇವಚಿಕಿತ್ಸಕ (ನಾ). ೧. ದೇವತೆಗಳ ವೈದ್ಯ ; ಧನ್ವಂತರಿ. ೨. ಅಶ್ವಿನೀದೇವತೆಗಳು : "ದೇವಚಿಕಿತ್ಸಕರಶ್ವಿನಿದೇವರ್" (ಪಸ್ತು.ಕೋ. ೦೦-೫೫); "ನಾಸತ್ಯೌ, ಅಶ್ವಿನೌ, ದಸ್ರೌ, ದೇವಚಿಕಿತ್ಸಕೌ–ಈ ೪ ದೇವರ ವೈದ್ಯರ್" (ಹಲಾಯು. ೦೫-೬೪). [ದೇವ + ಚಿಕಿತ್ಸಕ]

ದೇವಚೆನ್ನೆಲ್ಲಕೊಳ (ನಾ). ಒಂದು ಜಲಾಶಯದ ಹೆಸರು : ದಾಸನೂರಕ್ಕೂಟಸಂಧಿಯಲ್ ಉನ್ನತಭೂಮಿಯ ದೇವಚೆನ್ನೆಲ್ಲಕೊಳಮ್ (ಪ್ರಾಇರಿ. ೦೯೫೫, ೦೦೫-೪೮ ; 634). [? + ಕೊಳ್ಳ]

ದೇವಚ್ಛಂದ (ನಾ). ೧. ಒಂದಂ ಬಗೆಯಂ ಮುತ್ತಿನ ಸರ; ಎಂಭತ್ತೊಂದು ಎಳೆಗಳಂಳ್ಕೆ ಹಾರ : ವಿಜಯಚ್ಛಂದಹಾರ ದೇವಚ್ಛಂದಾರ್ಧಹಾರ . . .

ಮಾಣವಕಂಗಳೆಂಬ ಪನ್ನೊಂದು ನಾನಾರತ್ನಸುವರ್ಣಪದಕವಿರಚನಾದಿ ಭೇದದಿಂ (ಆದಿಪು. ೯-೫೪ ವ). ೨. ನೂರು ಎಳೆಗಳುಳ್ಳ ಮುತ್ತಿನ ಸರ: "ದೇವಚ್ಛಂದಂ ಯಷ್ಟಿಶತಾವಚ್ಛಿನ್ನಂ" (ವಸ್ತುಕೋ. ೭೫-೩) : "ನೂಱು ಸರದ ಮುತ್ತು ದೇವಚ್ಛಂದ ಎಂಬುದು" (ಹಲಾಯು. ೯೨-೪೦೮) ; "ನೂಱು ಸರ ಮುತ್ತು ದೇವ[ಪಾಶಾಂ. ಹ]ಚ್ಛಂದಮಕ್ಕುಂ" (ಪುಂಗರಾ. ೧೦೦-೨೪); P ಈ ಹಾರದಲ್ಲಿರತಕ್ಕ ಎಳೆಗಳ ಸಂಖ್ಯೆಯ ಬಗ್ಗೆ ವಿವಿಧಾಭಿಪ್ರಾಯಗಳಿವೆ. [ಸಂ.]

ದೇವಜಗ್ಧಕ (ನಾ). ಒಂದು ಬಗೆಯ ಸುಗಂಧದ ಹುಲ್ಲಂ ; ಕಾಚಿ ಹುಲ್ಲು : "ಕತ್ತೃಣಂ, ಪೌರಂ, ಸೌಗಂಧಿಕಂ, ಧ್ಯಾಮಂ, ದೇವಜಗ್ಧಕಂ, ರೌಹಿಷಂ-೬ ಕಾಚೀಹುಲ್ಲು, ಕಾಚೀಕಡ್ಡಿ, ಹಂಚೀಕಡ್ಡಿ, ಬರಗುಕಡ್ಡಿ ಇವುಗಳೆಲ್ಲಕ್ಕೂ ಪೆಸರುಗಳು" (ಸಿದ್ಧಾಂತಿ. ೧೫೧). [ಸಂ.]

ದೇವಜನಿತ (ನಾ). ದೇವರಿಂದ ಉಂಟಾದುದಂ ; ಪರಮಾತ್ಮನಿಂದಾದುದು : ಲೋಕದಲ್ಲಿ ಪಾಪ, ಅನ್ಯಾಯ, ನೀಚತನಗಳೂ ದೇವಜನಿತವೆಂದು ತಿಳಿಯಬೇಕೆ ? (ಸಮಜೀ. ೩೦೬). [ದೇವ + ಜನಿತ]

ದೇವಜಾತಿ (ನಾ). ದೇವತೆಗಳ ಕುಲ,-ಪಂಗಡ : "ಯಕ್ಷಃ . . . ಪೈಶಾಚ, ದೇವಯೋನಿಃ-ಇಂತಿವೆಲ್ಲಂ ದೇವಜಾತಿಯೆಂಬುದು" (ಹಲಾಯು. ೧೫-೮೭).
[ದೇವ + ಜಾತಿ]

ದೇವಜ್ಯೇಷ್ಠ (ನಾ). ದೇವತೆಗಳಲ್ಲಿ ಹಿರಿಯವನು ; ಬ್ರಹ್ಮ : ದೇವಜ್ಯೇಷ್ಠನ ಬೆಸದಿಂ ರೈವತಕಂ ತಂದು ತನ್ನ ಮಗಳಂ ಕುಡಲ್ . . . ಬಲದೇವಂ ವೈವಾಹೋತ್ಸವದೆ ನೆರೆದು ಸುಖದಿಂದಿರ್ದಂ (ಜಗವಿ. ೧೦-೨).
[ದೇವ + ಜ್ಯೇಷ್ಠ]

ದೇವಟ್ಟ (ನಾ). ದೇವರ ಸ್ವತ್ತು, - ಆಸ್ತಿ : ಈ ದೇಗುಲವ ಮಡಿಸಿ ತೆರಗಾಲಂ ದೇವಟ್ಟ ಬಿಟ್ಟಳ್ (ಮೈಅರಿ. ೧೯೩೦, ೧೪-೧೦; ಸು. 882).
[<ಸಂ. ದೇವಾರ್ಥ]

ದೇವಡಿ$_1$ (ನಾ). ೧. ದೇವರ ಸೇವೆ ಮಾಡುವವನು ; ದೇವಾಲಯದ ಪೂಜಾರಿ,-ಅರ್ಚಕ : ಧರ್ಮಸ್ಥಳದ ಅಮ್ರುತಪಡಿಗೆ ದೇವಡಿಗಳಿಗೆ ಬಿಟ್ಟ ಬಾಳಿಗೆ ಅರ್ಥ್ಥ ಅರುವಾರ ಸಲ್ಲ (ಸೌಇಇ. IX-II, ೪೭೦-೭೦ ; 1482). ೨. ಒಬ್ಬಾತನ ಹೆಸರು : ವಳಿಗ್ಗಾಮೆಯರ ದಾಸಡಿಯುಂ ಅಮಲಿಯರೆ ದೇವಡಿಯು (ಎಕ. VII, ಶಿಕಾರಿ. ೧೫೪-೭ ; ಸು. 685) ; ಬಾಣಗುನ್ದೂರಾ ದೇವಡಿಗಳುಂ ಕುನ್ದಡಿಗಳುಂ ಅಂಬ್ಬಲ್ಮಡಿಯ ಪೆರಮಸರುಂ ಆಳಗೆಮಿಯರುಂ . . . ಇ ಪೊಲನಂ ನಡೆಯಿಸಿದೋರ್ (ಎಕ. XVI, ಗುಬ್ಬಿ. ೭೫-೫೭ ; 733). [ದೇವ + ಅಡಿ$_1$]

ದೇವಡಿ$_2$ (ನಾ). ೧. ಮುಖಮಂಟಪ ; ಕೈಸಾಲೆ ; ಮೊಗಸಾಲೆ : ಶ್ರೀಪ್ರಸಂನಕೇಶವದೇವರ ಪೂಜಾರಿಗಂ ದೇವರ ದೇವಡಿಗಳಂ ಕಟ್ಟಲು ಸದ್ಭಕ್ತಿಯಿಂ ಕೊಟ್ಟರು (ಸೌಇಇ. XV, ೫೪೫-೧೦ ; 1165) ; ಪಟ್ಟಣಕ್ಕೆ ಬಂದು ಕರ್ತರ ಅರಶಿನವರ ದೇವಡೀ ಬಳಿಯಿಂದ ಬಹದರರ ಬಳಿಗೆ ಬಂದು (ಹೈದರ. ೧೦೦). ೨. ಮನೆಯ ಮುಂದೆ ಇರುವ ಕಟ್ಟೆ ; ಜಗಲಿ : ಪಶುಗಳ ಮುಂದೆ ನಡೆಯುಂದು ಘರ್ಜಿಸುತ ನಿಂದಿಹರು ದೇವಡಿಯೊಳು (ಕೃಷ್ಣವಿ. ೨-೧೦) ; ಪ್ರಘಣ - ಬಾಗಿಲ ಹೊರಗಿನ ದೇವಡಿ (ಗಂಗಾಮ. ೨೦೯) ; ಇನ್ಸ್‌ಪೆಕ್ಟರರು ಅಚ್ಚಕರೀಬಣ್ಣದ ಡ್ರೆಸ್ಸಿನಿಂದ ಸಜ್ಜಾಗಿ ದೇವಡಿಯ ಮೇಲೆ ಬಂದು ನಿಂತುಕೊಂಡಿದ್ದರು (ಕಳ್ಳಕಾ. ೨೪). ೩. ಮನೆಯ ಬಾಗಿಲಿನಲ್ಲಿ ಅಳವಡಿಸಿರುವ ಬಾಗಿಲುವಾಡದ ಕೆಳಮರ ; ಹೊಸ್ತಿಲು : (ಕಿ).
[<ಸಂ. ದೇಹಲೀ./ಹಿಂ. ದೇಹರೀ ; ಮರಾ. ದೇವಡೀ, ದೇವಢೀ. ದೇಹುಡೀ; ಗುಜ. ದೇವ್ರೀ; ಬಂಗಾಳಿ. ದೆಉರಿ, ದೆಹುರಿ ; ಒರಿಯಾ. ದೆಹುರಿ]

ದೇವಡಿಗ (ನಾ). ದೇವಾಲಯದಲ್ಲಿ ದೇವರ ಪೂಜೆ ಮಾಡಿ ಜೀವಿಸುವವನು ; ಪೂಜಾರಿ ; ಅರ್ಚಕ : ಅರಸಗವು × × ಮಕಲಸಮಭಟ್ಟನು ದೇವಡಿಗಗೆ ಕೊಟ್ಟಂ (ಎಕ. XIV, ಶ್ರೀರಂಗ. ೩೪-೧೫ ; 1127) ; ಅಡಿಗ ಪ್ರತ್ಯಯಕ್ಕೆ-ದೇವಡಿಗಂ, ಪಾವಡಿಗಂ, ಪೂವಡಿಗಂ (ಶಮದ. ೨೦೩ ಪ್ರಯೋ); ಹಾವಡಿಗನು ದೇವಡಿಗನೊಳಗೆ ಅಡಗಲು ಹಾವೆತ್ತ ಹೋದವೋ ದೇವಾ (ಸಿದ್ಧೇವ. ೧೨೮-೩೮೨) ; ದೇವಡಿಗನು ದೇವಗೊಂದು ಪೂವನರ್ಪಿಸಲದು ದೇವಡಿಗನ ಹುಗೊ ದೇವನ ಮಹಿಮೆಯೊ ಸ್ವಾಮಿ (ಭರಜ. ೫೩-೮೪) ; ದೇವರ ಪೂಜಿಸುವಂ ದೇವಡಿಗಂ (ಶಿಲ್ಪಾನು. ೪೦೩ ವ್ಯಾಖ್ಯಾ) ; ದೇವಸ್ಥಾನದ ಸೇವಕರು . . . ಅಂಬಲವಾಸಿ, ಬರಿಯ, ದೇವಡಿಗ, ದೇವಾಳಿ (ತುಳುನಾ. ೧೭೨). [ದೇವ + - ಅಡಿಗ$_2$]

ದೇವಡಿತಿ, ದೇವೆಡಿತ್ತಿ (ನಾ). ೧. ದೇವತಾಸ್ತ್ರೀ ; ಅಪ್ಸರೆ : ಸಗ್ಗಂಗಳೊಳಿರ್ಪ ದೇವಡಿತಿ ತೊಟ್ಟಿರೊಳಟ್ಟಿಯನಾಗಲೀವೆನೇ (ಪಂಪಭಾ. ೧೦-೪೫). ೨. ದೇವದಾಸಿ : ಪನ್ನೆರಡುಂ ಗಟ್ಟಿ ನೀರ್ಮಣ್ಣುಮಂ ಪದಿಂಬರ್ ದೇವಡಿತಿಯರ್ಗ್ಗಂ ತಮಗಂ ಮನೆಗಂ . . . ಧಾರೆಯನೆಱೆದು ಬಿಟ್ಟು ಕೊಟ್ಟರ್ (ಎಕ. IV, ಚಾಮರಾ. ೧೮-೮ ; ಸು. 1000 ?). ದೇವೆಡಿತ್ತಿ : ೨. ಇನ್ತುಣ್ಣೋರುಂ ಉಣಿಯ ಕೊಡುವೋನುಂ ದೇವೆಡಿತ್ತಿಯೆರಿನ್ದುಂ ಸಾಎರಿನ್ದುಂ ಅಭರಮೆತ್ತಿ ಆಯತಿಎ ಕೊಳ್ವೋರುಂ . . . ನರಗಕ್ಕೆ ಸಲ್ಗೆ (ಎಕ. VI, ಕೊಪ್ಪ. ೩೭-೫ ; ಸು. 675?).
[ದೇವಡಿ$_1$ + - ಇತಿ$_1$ (< - ಇತ್ತಿ) /ತಮಿ. ತೇವಟಿ]

ದೇವಣ 'ದೇವಣ್ಣ' ನೋ.

ದೇವಣ್ಣ, ದೇವಣ (ನಾ). ಒಬ್ಬಾತನ ಹೆಸರು : ಕರಣಿಕ ದೇವಣ್ಣಗಳ ಬರಹ (ಎಕ. XI, ಚಿತ್ರದು. ೩-೩೫ ; 1356). 'ದೇವಣ್ಣಯ್ಯ' ಪರಾ. ದೇವಣ : ದೇವಣ ಕ್ರಮಯಿತ ಭಟ್ಟಪೌತ್ರಾಯ (ಇಅ. XVI, ೨೪-೬೩ ; 1009). [ದೇವ + ಅಣ್ಣ$_1$]

ದೇವಣ್ಣಯ್ಯ (ನಾ). ಒಬ್ಬಾತನ ಹೆಸರು : ವಿಶಿಷ್ಟಜನಾಶ್ರಯನಪ್ಪ ಶ್ರೀಮದ್ದೇವಣ್ಣಯ್ಯ[ಂ] (ಇಅ. XII, ೨೦೯-೧೮; 814); ಶ್ರೀಮದ್ದೇವಣ್ಣಯ್ಯಂ ಬೆಳ್ವೊಲ ಮೂನೂಱುಮನಾಳುತ್ತಂ (ಎಇ. VII, ೨೦೬-೧೮ ; 866).
[ದೇವಣ್ಣ + ಅಯ್ಯ$_1$]

ದೇವತನ (ನಾ). ದೇವತ್ವವನ್ನು ಹೊಂದಿರುವಿಕೆ : ದೇವನೆಂದೇ ನೀವು ಬಗೆವಿರಿ ದೇವತನ ನಮ್ಮಲ್ಲಿ ಲವವಿಲ್ಲ (ಕುವ್ಯಾಉ. ೦-೪೩) ; ದೇವತನಮಂ ಬಿಟ್ಟು ನರನಾದವಂಗೆ ಬಳಿಕಾವ ಗೌರವಮಿಹುದು (ಜೈಮಿಭಾ. ೬-೫೪) ; ಬ್ರಾಹ್ಮಣರಿಗೆ ದೇವತನ ಏತರಿಂದ ? . . . ಬ್ರಾಹ್ಮಣರಿಗೆ ದೇವತನ ಅಧ್ಯಯನದಿಂದ (ವಚಭಾ. ೧೮೦). [ದೇವ + - ತನ]

ದೇವತನು (ನಾ). ದೇವತೆಗಳಿಗೆ ಇರುವಂಥ ಶರೀರ : ದೇವತನುವೆರಸಿರೆಂತಂತಾ ವೈಶಂಪಾಯನಂ ಸುಖನಿಶ್ಚಯದಿಂ ಜೀವಿಸುತಿರ್ದವಂ (ಕಾದಂಉ. ೪೩೮). [ದೇವ + ತನು]

ದೇವತರು (ನಾ). ೧. ದೇವಲೋಕದ ಮರ : ಮಂದಾರ, ಪಾರಿಜಾತ, ಸಂತಾನ, ಕಲ್ಪವೃಕ್ಷ ಮತ್ತು ಹರಿಚಂದನ ಎಂಬ ಐದು ವೃಕ್ಷಗಳಲ್ಲಿ ಒಂದು : "ಮಂದಾರಃ, ಪಾರಿಜಾತಕಃ, ಸಂತಾನಃ, ಕಲ್ಪವೃಕ್ಷಃ, ಹರಿಚಂದನಂ . . . ೫ ಈದೇವತರವಃ - ದೇವತಾಕಲ್ಪವೃಕ್ಷಗಳ ಹೆಸರುಗಳು" (ಸಿದ್ಧಾಂತಿ. ೨೨) ; ದೇವತರುವಿನ ಕುಸುಮವಮ್ಮಾ ನಾನು ಭಾವಜನಪಿತಗೆ ಕೊಂಡು ಬಂದಿದ್ದೆನಮ್ಮಾ (ಶ್ರೀಕೃಪಾ. ೬). ೨. ಅರಳಿಯ ಮರ ; ಅಶ್ವತ್ಥ. [ದೇವ + ತರು$_2$]

ದೇವತಾಂಶಕೆ (ನಾ). = ದೇವತಾಧಿಷ್ಠಿತೆ : ರತಿಗೆಣೆಯೆನಿಸಿದ ಗುಣಸಂತತಿಯುಳ್ಳಾಕೆ ದೇವತಾಂಶಕೆಯಂತಾ ಸತಿಯಂ ಕೊಂಡಾಡುಗೆ ತತ್ಪತಿಗಂ ಧರ್ಮಾರ್ಥಕಾಮಭೋಗಂ ನೆಗಟ್ಗುಂ(ಪುದತಿ. ೮-೨). [ಸಂ. ದೇವತಾಂಶಕಾ]

ದೇವತಾಡ (ನಾ). = ದೇವದಾಳಿ: "ದೇವತಾಡಃ, . . . ದೇವತಾಳೇ ವೃಕ್ಷದ ಹೆಸರುಗಳು" (ಸಿದ್ಧಾಂತಿ. ೧೫೭). [ಸಂ.]

ದೇವತಾಣ (ನಾ). ದೇವಸ್ಥಾನ; ದೇವಾಲಯ: ಕೀಣವಿಲ್ಲದೆ ಬೀದಿ ಬೀದಿಯೊಳಗೆ ದೇವತಾಣ ನೋಟಕರ ಸಂದೋಹ ಮಾಣದೆ ಮಣ ಸೊಡರ್ವೆಳಗಿನೊಳ್ ಕೃಷ್ಣ ದಿವಾಣದೊಳಿದ್ದನೋಲಗದಿ (ಮೋಹತ. ೧೯-೮). [ದೇವ + ತಾಣ./ಸಂ.ದೇವಸ್ಥಾನ]

ದೇವತಾತತ್ವ (ನಾ). ಜಗತ್ತಿನ ನದಿ, ಕಾಡು ಮೊದಲಾದ ಪ್ರತಿಯೊಂದು ಪ್ರಕೃತಿಸ್ವರೂಪಕ್ಕೂ ಒಬ್ಬೊಬ್ಬ ಅಧಿದೇವತೆಯುಂಟು ಎಂಬ ಸಿದ್ಧಾಂತ: ವೈದಿಕತತ್ವದಲ್ಲಿ ದೇವತಾತತ್ವ, ಈಶ್ವರತತ್ವ, ಆತ್ಮತತ್ವ ಎಂದು ಮೂರು ವಿಭಾಗಗಳಿವೆ (ಬಂಕಿಮ. ೪೦೯). [ಸಂ.]

ದೇವತಾತ್ಮ (ನಾ). ದೇವತಾಸ್ವರೂಪ: ದೇವತಾತ್ಮನಾದ, ನೀನು ನಮ್ಮ ಯಜ್ಞದಲ್ಲಿ ಸತ್ಫಲಗಳನ್ನು ಹಂಚುವವನಾಗು (ಋಕ್ಸಾರ. ೧೬). [ಸಂ. ದೇವತಾತ್ಮನ್]

ದೇವತಾಧಿಷ್ಠಿತೆ (ನಾ). ದೇವಾಂಶದಿಂದ ಕೂಡಿಕೊಂಡಿರುವವಳು; ದೇವಾಂಶಸಂಭೂತಳು: ಲಕ್ಷ್ಮೀವತಿಯೆಲವೊ ದೇವತಾಧಿಷ್ಠಿತೆಯಲ್ಲದ ಕೇವಳಮನುಷ್ಯಾಜ್ಞನೆಯೇ (ಎಳ. II, ೧೫೮-೫೨ : 1121). [ಸಂ. ದೇವತಾಧಿಷ್ಠಿತಾ]

ದೇವತಾನಿಷ್ಠ (ನಾ). ದೇವರಲ್ಲಿ ನಿಷ್ಠೆಯುಳ್ಳವನು; ಭಕ್ತ: ಪರಪಂ ಜನಪದಾಂಭೋಜಾತದೊಳ್ ಧೃಂಗಮಾಲಾಪರಿಕರಮೆನೆ ಕಣ್ಗಳ್ . . . ಶುದ್ಧಚೈತನ್ಯರೂಪಂಗಿರಲೆಡೆಯೆನೆ ಚಿತ್ತಂ ದೇವತಾನಿಷ್ಠನಾದಂ (ಅಜಂಪು. ೪-೬೫). [ಸಂ.]

ದೇವತಾಪ್ರಸ್ತ (ನಾ). ಮದುವೆಗೆ ಮೊದಲು ಕುಲದೇವತೆಯ ತೃಪ್ತಿಗಾಗಿ ಮಾಡುವ ಭೋಜನ ಸಮಾರಂಭ; ದೇವರೂಟ: ಸುವಾಸಿನಿಯರೊಲವಿನಿಂ ಕಂಭಮನುಯರ್ಚಿಸಿ ದೇವತಾಪ್ರಸ್ತವಾ ಲೇಸಿನಿಂ ತೀರ್ಚಿ (ಸವಮೋ. ೦೩-೫೪). [<ಸಂ. ದೇವತಾಪ್ರಸ್ಥ ?]

ದೇವತಾಭಾವ (ನಾ). ತಾನು ದೇವರೆಂಬ ಭಾವನೆ,– ತಿಳಿವಳಿಕೆ: ಸುಪ್ರೀತನಾದ ಯಜ್ಞೇಶ್ವರ ಪೂಜಾರ್ಹನಾದ ದೇವತಾಭಾವವನ್ನು ಬಿಟ್ಟು, ಮಿತ್ರಭಾವವನ್ನು ಧರಿಸಿದ (ಚಿತಂದಾ. ೪). [ಸಂ.]

ದೇವತಾಮನುಷ್ಯ (ನಾ). ದೇವತೆಯ ಸ್ವಭಾವದ ವ್ಯಕ್ತಿ; ದೈವಿಕ ಗುಣವುಳ್ಳವನು: ದೊಡ್ಡರಾಯರು ಇನ್ನೂ ಇಪ್ಪತ್ತುವರ್ಷ ಬದುಕುತ್ತಾರೆ. ಅವರು ದೇವತಾಮನುಷ್ಯ (ವಾತ್ಸ್ಯ. ೫) : ಅವಳು ದೇವತಾಮನುಷ್ಯಳು. ಎಲ್ಲರ ಪರಾಂಬರಿಕೆ ಮಾಡುತ್ತಾಳೆ (ಶ್ಯಮುತಾ. ೪೦). 'ದೇವಮಾನವ' ಪರಾ. [ಸಂ.]

ದೇವತಾಮೂಢ (ನಾ). [ಜೈನ] ಲೋಕಮೂಢ, ದೇವತಾಮೂಢ ಮತ್ತು ಪಾಷಂಡಿ ಎಂಬ ಮೂಢತ್ರಯಗಳಲ್ಲಿ ಒಂದು; ಗಿಡ, ಮರ, ಕಲ್ಲು ಮುಂತಾದುವನ್ನೂ ಅಹಮಿಂದ್ರ, ಪ್ರತೀಂದ್ರ, ಕ್ಷೇತ್ರಪಾಲ ಮೊದಲಾದ ದೇವತೆಗಳನ್ನೂ ಪೂಜಿಸುವುದು: ಜಿನನಲ್ಲದಾವ್ಪರಂ ಪಿಡಿದು ನಮೆವುದುಂ ಕಿಚ್ಚು ಕವಿಲೆ ಮರನಾಯುಧಮೆಂಬಿನಿತಕ್ಕಂ ಪೊಡವಡುವುದುಮನೇಕವಿವು ಬಗೆಯೆ ದೇವತಾಮೂಢಂಗಳ್ (ಸಮಶ. ೯-೩): ಅಹಮಿಂದ್ರ ಪ್ರತೀಂದ್ರ ಲೋಕಪಾಲಾದ್ಯನೇಕ ಸ್ವರ್ಗಜಾಮರ ನಿಕಾಯಮಂ ನಿರ್ದೋಷದೇವರೆಂದಾರಾಧನೆಯಂ ಮಾಟ್ಟುದು ದೇವತಾಮೂಢವೆಂಬುದು (ಪಸಾಠ. ೪೬). [ಸಂ.]

ದೇವತಾಯಾತ್ರೆ (ನಾ). ದೇವರ ರಥೋತ್ಸವ; ಜಾತ್ರೆ: ತಿರುವೆಂಗಳ ನಾಥನ ಧ್ವಜದ ಸೇವೆ ದೇವತಾಯಾತ್ರೆಯನೂ ವ್ರತಿವರುಷವೂ ನಡಸುವ ಧರ್ಮ (ಎಳ. XVI, ಪಾವುಗ. ೦೦೨-೫ : 1641). [ಸಂ. ದೇವತಾಯಾತ್ರಾ]

ದೇವತಾರತಿ (ನಾ). ದೇವರುಗಳ ವಿಷಯದಲ್ಲಿರುವ ಪ್ರೀತಿ,–ಭಕ್ತಿ: ದೇವತಾರತಿಯು ಭಾವವಾಗಿ ಉಳಿದುದು ಸಾಮಾಜಿಕಕಾರಣಕ್ಕಾಗಿ (ಸಾಹಿವಿ. ೫೯). [ಸಂ.]

ದೇವತಾರೂಪ (ನಾ). ೧. ದೇವತೆಯ ಆಕಾರ,– ಸ್ವರೂಪ. ೨. ದೇವರಂ: ಈ ಹತಕಲ್ಮಷಂಗೆ ಮಾತಾಪಿತೃಭಾವಮೆಂದು ನಿಮಗಾದುದು ನೀವೆಮಗಂದು ದೇವತಾರೂಪಂ (ಶಾಂತಿಪು. ೦೯-೭೫). [ಸಂ.]

ದೇವತಾರ್ಚನೆ (ನಾ). ದೇವರ ಪೂಜೆ: ನಾವು ಬಲದಲು ನಮ್ಮ ಎಡದಲು ನೀವು ಕುಳ್ಳಿರ್ದತಿ ವಿಶೇಷದ ದೇವತಾರ್ಚನೆಯಂ ಸಲಿಸಿ (ಬಸಪು. ೫೪-೩೮); ಮಧ್ವರಾಯರ ದೇವತಾರ್ಚನೆಯ . . . ಮೂಲರಘುಪತಿ ಒಂದು ಮುದ್ದು ಜಾನಕಿ ಒಂದು (ಪುರಂದ. ೫-೧೦೬ ಪಲ್ಲವಿ). [ಸಂ. ದೇವತಾರ್ಚನಾ]

ದೇವತಾರ್ಪಣ (ನಾ). ದೇವರಿಗೆ ಸಮರ್ಪಿಸುವುದು. 'ದೇವತಾರ್ಪಣಗೈ' ಪರಾ. [ಸಂ.]

ದೇವತಾರ್ಪಣಗೈ (ಕ್ರಿ). ದೇವರಿಗೆ ಒಪ್ಪಿಸು: ಸುಜನೆಯರು . . . ನಿತ್ಯವಿಧಿಭಜನೆಯೆಲ್ಲವ ತೀರ್ಚಿಸಲು ಪರಿವರಿ ಪಾಕದ್ರವ್ಯಮಂ ಗಡಣಿಸಿಡಲು ನೋಡುತ್ತೆ ದೇವತಾರ್ಪಣಗೈದು ಸವಿರುಚಿಯು ಮಾಡಿ ಸವಿಸವಿದುಂಡು ತೇಗಿ (ಸವಮೋ. ೧೭-೦೮). [ದೇವತಾರ್ಪಣ+ಕೈ$_1$ (<ಕೆಯ್$_1$)]

ದೇವತಾಲ, ದೇವತಾಳ (ನಾ). = ದೇವದಾಳಿ: "ದೇವತಾಲ, ಜೀಮೂತ" (ನಾಚಿಂಗ. ೪). **ದೇವತಾಳ**: "ವೇಣೀ, ಗರಾಗರೀ, ದೇವತಾಳಃ, ಜೀಮೂತಃ – ೪ ದೇವತಾಳೇವೃಕ್ಷದ ಹೆಸರುಗಳು" (ಸಿದ್ಧಾಂತಿ. ೧೫೭): "ದೇವತಾಳ – ದೇವತಾಳೆ" (ಓಷಧಿ. ೭೯). [ಸಂ.]

ದೇವತಾಲಯ (ನಾ). ದೇವಾಲಯ; ಗುಡಿ: ಮಂಡಳಮಂ ನಿಜಮಂ ದ್ವಿಜಮಂಡಲಿಗಂ ದೇವತಾಲಯಕ್ಕಂ ಕೊಟ್ಟಂ ಖಂಡಯವೆತ್ತಳೆಯಂ ಪರಮಂಡಳಮಂ ವೀರವಿಷ್ಣುವರ್ಧನನಾಳ್ದಂ (ಎಳ. VI, ಕಡೂರು. ೦೩೯-೩೦ : 1173). [ಸಂ.]

ದೇವತಾವರಣ (ನಾ). ಜಪ, ಪೂಜೆ ಮೊದಲಾದ ಸಂದರ್ಭಗಳಲ್ಲಿ ಆರಾಧ್ಯದೇವತೆಯನ್ನು ಮಂತ್ರಪೂರ್ವಕವಾಗಿ ಆವಾಹನೆ ಮಾಡುವುದು; ಆರಾಧ್ಯದೇವತೆಯ ನಾಮಗ್ರಹಣಪೂರ್ವಕವಾಗಿ ಸಂಕಲ್ಪ ಮಾಡುವುದು: ಋಷಿಚಂದಮುಖ್ಯಾದಿ ದೇವತಾವರಣದಿಂ . . . ಪರಿಶುದ್ಧಿಯೊಡೆದು (ಪವಮೋ. ೩-೩೬). [ಸಂ.]

ದೇವತಾಸಾನ್ನಿಧ್ಯ (ನಾ). ೧. ದೇವತಾಮೂರ್ತಿಯು ಬಳಿಯಿರುವುದು; ದೇವರ ಸಾಮೀಪ್ಯ. ೨. ಶಾಸ್ತ್ರೋಕ್ತವಾದ ಕ್ರಮದಿಂದ ಪ್ರತಿಷ್ಠೆ ಮಾಡಿದ ಪ್ರತಿಮೆಗಳಲ್ಲಿ ದೇವರು ನೆಲಸುವುದು; ಆವಾಹನೆ ಮಾಡಿದ ಸ್ಥಳದಲ್ಲಿ ದೇವರು ಇರುವುದು: ಶಿಲಾ, ಮೃತ್, ದಾರು, ರತ್ನ, ಲೋಹಾದಿ ಮೂರ್ತಿಗಳಲ್ಲಿ ಯಾವ ಪರಿಮಿತಿಯಲ್ಲಿ, ಎಷ್ಟು ಕಾಲ ಆಯಾಯ ದೇವತಾಸಾನ್ನಿಧ್ಯವು ನೆಲೆಗೊಳ್ಳುವುದೆಂಬುದೂ . . . ಆಗಮ ಶಾಸ್ತ್ರದಲ್ಲಿ ಉದಾಹೃತವಾಗಿವೆ (ಧಾರಿ. ೮೦). [ಸಂ.]

ದೇವತಾಸಿದ್ಧಾಂತ (ನಾ). ದೇವತೆಗಳನ್ನು ಕುರಿತ ಸಿದ್ಧಾಂತ: ಹೋಮರನ ದೇವತಾಸಿದ್ಧಾಂತ (Theology)ವನ್ನು ಅನೈತಿಕವಾದ.ದೆಂದು ಖಂಡಿಸುವುದರಿಂದ ತೃಪ್ತರಾಗದೆ . . . ಅವನ ಮೇಲೆ ದೋಷಗಳ ಪರ್ವತವನ್ನೇ ಹೇರಲು ಅವರು ಶ್ರಮಿಸಿದರು (ಅರಿಕಾ. ೦೩೭ ಅಡಿಟಿ). 'ದೇವತಾತತ್ವ' ಪರಾ. [ಸಂ.]

ದೇವತಾಸ್ಥಳ (ನಾ). (ಪ್ರಾಚೀನವಾದ) ದೇವಸ್ಥಾನಗಳು ಇರುವ ಸ್ಥಳ: ಆ ನಿಯಮ ನಿಬಂಧನೆಗಳಂತೆ ನಿರ್ಮಿತವಾದ ದೇವತಾಸ್ಥಳಗಳು ಕ್ಷೇತ್ರಗಳೆಂದು ವಿಖ್ಯಾತಿ ಹೊಂದಿ . . . ಪ್ರಕಾಶಿಸುತ್ತವೆ (ಧಾರಿ. ೮೦). [ಸಂ. ದೇವತಾಸ್ಥಲ]

ದೇವತಾಸ್ಥಾನ (ನಾ). ದೇವತೆಗಳ ಪ್ರತಿಮೆಗಳನ್ನು ಪೂಜಿಸುವ ಸ್ಥಳ; ದೇವಾಲಯ; ದೇವಸ್ಥಾನ: ದೇವತಾಸ್ಥಾನದಲಿ ವಿಪ್ರಸಭಾವಳಯದಲಿ . . . ಉಪಹತಿಯ ಮಾಡುವುದಾವ ಗಾಣ ಗರುವರಿಗೆ (ಕುವ್ಯಾಉ. ೩-೦೨೮). [ಸಂ.]

ದೇವತಾಳ 'ದೇವತಾಲ' ನೋ.

ದೇವತೂರ್ಯ (ನಾ). ದೇವತೆಗಳಂ ನುಡಿಸುವ ವಾದ್ಯ; ದೇವಲೋಕದ ವಾದ್ಯ: ಬೆಳ್ಗೊಡೆ ಸೊಗಯಿಪ ಭಾಮಂಡಳಂ ದೇವ ತೂರ್ಯೋದಿತನಾದಂ . . . ವಿಶ್ರುತಮಾಗಿರ್ಕುಂ ಸುರೇಂದ್ರೋಪಕೃತ ವೆನಿಸಿ ನಿಮ್ಮೊಳ್ (ಕುಕುಮಾ. ೪-೩೦). [ದೇವ + ತೂರ್ಯ]

ದೇವತೆ (ನಾ). ಸ್ವರ್ಗನಿವಾಸಿಯೆಂದಂ ಭಾವಿಸಲಾದ, ಅತಿಮಾನುಷ ಶಕ್ತಿಯುಳ್ಳ ಜೀವ; ದಿವಿಜ: ದೇವತೆ ನಿಂದಿದಂ ನುಡಿದಳಕ್ಕ ನೆಗಟ್ಟಿಯು ಪುಷ್ಯರಾರ್ಧದೊಳ್ (ಶಾಂತಿಪು. ೪-೧೩) : ಕ್ಷೇತುಮಂ ದಯವಾಡಿನು ತಲುದ್ದಾಮ ಶಿವಭಾವದಿ ಶರಣುವೊಗಲಾ ಮಹಿಮನಾ ದೇವತೆಗಳಂ ಕಾಯ್ದು ಸಲಹುತ್ತ (ಬಸಪು. ೨೩-೦೬): P ಈ ಶಬ್ದ ಪುಂ, ಸ್ತ್ರೀ, ನಪುಂಸಕ ಈ ಮೂರು ಲಿಂಗಗಳಲ್ಲೂ ಉಪಯೋಗವಾಗುತ್ತದೆ. [ಸಂ. ದೇವತಾ]

ದೇವತೋಪದ್ರವ (ನಾ). ದೇವತೆಯಿಂದಂಟಾದ ಕೇಡು.–ಅನಿಷ್ಟ: ಎಗತಜೀವಿತರಾಗಿರ್ದ ಮೂವರನುಜರುಮಂ ಕಂಡಿದು ಮನುಜರಿಂದಾದು ಪದ್ರವಮಲ್ಲವೇನಾನುಮೊಂದು ದೇವತೋಪದ್ರವಮಾಗಲೆವೇಟ್ಟುಮೆಂದು (ಹಂಪಕಥಾ. ೮-೪೦ ವ). [ಸಂ.]

ದೇವತೋದ್ಯಾನವನ (ನಾ). ದೇವಾಲಯಕ್ಕೆ ಸೇರಿದ ತೋಟ: ಕಲ್ಕೆಱೆಯುತ್ತರದಿಶಾಭಾಗದ ದೇವತೋದ್ಯಾನವನಮಧ್ಯಸ್ಥಿತ ಸರೋವರದ ಪಶ್ಚಿಮತಟದಲ್ಪಾರ್ಜಾಭಿಮುಖಮಾಗಿಟ್ಟು ಶಿವಾಲಯಂ ಪ್ರದಕ್ಷಿಣಂ ಬಂದು (ಶಾಇಇ. XX, ೪೪-೪೮ : ಸು. 1076). [ಸಂ.]

ದೇವತೋಪಾಸನೆ (ನಾ). ದೇವರನ್ನು ಒಲಿಸಿಕೊಳ್ಳುವುದಕ್ಕಾಗಿ ಮಾಡುವ ಜಪ, ಪೂಜೆ ಮೊದಲಾದುವು: ಆಗಮೋಕ್ತ ವಿಧಾನಗಳು ಹೊರತು ಬೇರೆ ಮಾರ್ಗಗಳು ಕಲಿಯುಗದಲ್ಲಿ ದೇವತೋಪಾಸನೆಗೆ ಪ್ರಶಸ್ತಗಳಲ್ಲ (ಧಾರಪ. ೬೮). [ಸಂ. ದೇವತೋಪಾಸನಾ]

ದೇವತೋಪಾಸ್ತಿ (ನಾ). = ದೇವತೋಪಾಸನೆ: ಆ ದೇವತೋಪಾಸ್ತಿಯಾತನೇ ಯೋಗಿಯೆನಲು (ವೀಕೃಪು ೫-೧೭ ಸೂಕತಿ). [ಸಂ.]

ದೇವತ್ತಿ (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು: ತರುವಾಟಗಳಿಂದೆಸೆವ ನಂದನಾದ್ಯಾರಾಮಂಗಳೊಳು . . . ಪನ್ನೇಱಿಳೆ ದೇವತ್ತಿ . . . ಸಾರ್ವರ್ತುಕವಾದ ಫಲಂಗಳುಳ್ಳ ತರುನಿಕರಂಗಳುಂ (ವಿವೇಕ. ೩೦೦). [ದೇವ + ಅತ್ತಿ]

ದೇವತ್ರಯ (ನಾ). ಬ್ರಹ್ಮ, ವಿಷ್ಣು, ಮಹೇಶ್ವರ ಎಂಬ ಹೆಸರಿನಿಂದ ಪ್ರಸಿದ್ಧರಾದ ಮೂರು ದೇವತೆಗಳು; ತ್ರಿಮೂರ್ತಿ: ದೇವತ್ರಯಾದ್ಯನಪ್ಪಾ ದೇವಜ್ಯೇಷ್ಠಂ ಸ್ವನಾಭಕಮಳಭವಂ ಮಾದೇವಂ ದ್ವಿತೀಯನೆನಿಪೀ ದೇವಂ ಶ್ರೀವಾಸುದೇವ ನರ್ಘ್ಯನಮೋಘಂ (ಜಗವಿ. ೧೬-೩೬): ದೇವತ್ರಯದೊಳ್ ಪರಿಯನದಾವಂ ಶಶಿಮೌಳಿಯೆಂಬ ತೆಱದಿಂದತುಳಾಜ್ಞಾವಿಭವದಿಂದೆ ಪರಿಯಂ ಭೂವಿನುತಂ ಚಿಕ್ಕರಾಜನೂರ್ಜಿತತೇಜಂ (ಕುಸುಮಾ. ೧-೦೩): ರುದ್ರ ವಿಷ್ಣು ಬ್ರಹ್ಮರೆಂಬ ದೇವತ್ರಯದೊಳು ಪ್ರೇರಿಪಾ ತ್ರಿಗುಣಕ್ಕತೀತ ವಹ ಶಿವತತ್ವಕಾರಣದೊಳು (ವೀಕೃಪು. ೦-೦-೩೨).

[ದೇವ + ತ್ರಯ]

ದೇವತ್ರಿತಯ (ನಾ). = ದೇವತ್ರಯ: ತನಗೆ ದೇವತ್ರಿತಯವಲ್ಲದೆ ದನುಜ ದಿವಿಜಾದಿ ತ್ರಿಲೋಕದ ಜನವಿದಿರೆ ವೆಚ್ಚಿಸಿತು ಮಗುವಿನ ದಿಟ್ಟತನವೆಂದ (ಕುವ್ಯಾಳ. ೨೦-೩೦). [ದೇವ + ತ್ರಿತಯ]

ದೇವತ್ವ (ನಾ). ೧. ದೇವತನ; ದೇವತಾಸ್ವರೂಪ: ಆ ಪುಣ್ಯದಿಂ ಭೋಗಭೂತಳದೊಳ್ ಪುಟ್ಟಿ ಕಷಾಯಮಿಲ್ಲದುದಱಿಂ ದೇವತ್ವಮಂ ಪೆತ್ತೆಂ (ಶಾಂತಿಪು. ೬-೩೦); ಕೆಲರಾ ಸಭೆಯೊಳಿರ್ದು ಕುಣಿದುಂ ದೇವತ್ವಕ್ಕಾಟವರ್ (ಜನಾಪು. ೧೫-೦೫) ; ದೇವತ್ವವಿಹ ನರಂ ಪ್ರತಿಮೆ ತಾಂ ಚಿಂತೆಯಂ ವಿಮಾರಿಹ ನಿರಾಕೃತಿಗೆ! (ಅಗ್ನಿಂಹ. ೫೫-೨). ೨. ದೇವತೆಯ ಪ್ರಭಾವ,–ಶಕ್ತಿ,–ಮಹಿಮೆ: ನಾದಪ್ರಿಯ ನಂದಿಯನೇಱಿಕೊಂಡು ಅತೀತನ ಮೇಲೆ ಆನಂದಸಿಂಹಾಸನವಿಕ್ಕಿ ಕುಳ್ಳಿತ್ತು ಕೂಡಲಸಂಗವುದೇವರ ದೇವತ್ವ ಕೆಟ್ಟಿತ್ತು (ಬಸವ. ೯೩೦) ; ಆ ದೇವರಲ್ಲಿ ದೇವತ್ವ ಏನಾದರೂ ಇದ್ದ ಪಕ್ಷದಲ್ಲಿ ... ನನ್ನ ಅದೃಷ್ಟ ಪರೀಕ್ಷೆಮಾಡುವ ತಯಾರಾಗಿದ್ದೇನೆ (ವೀಕಥೋ. ೫೫). [ಸಂ.]

ದೇವದತ್ತ (ಗು). ೧. ದೇವರು ಕೊಟ್ಟ; ಅದೃಷ್ಟದಿಂದ ಉಂಟಾದ: ನಿನಗೆ ನಗದುಹಣವಿರದಿದ್ದರೂ ದೇವದತ್ತವಾದ ಮೋಹನರೂಪ ಇದೆ (ಹೇದುಂತ. ೧೦೫). (ನಾ). ೨. ಅರ್ಜುನನ ಶಂಖದ ಹೆಸರು: ಇದ ನಿಂದ್ರನಟ್ಟಿದಂ ನಿನಗಿದಱ ಪೆಸರ್ ದೇವದತ್ತವೆಂಬುದು ನಿನಗಭ್ಯುದಯಕರಂ ಶಂಖಂ (ಪಂಪಕಥಾ. ೬-೪) ; ದೇವದತ್ತದ ಧರಧುರದ ದೆಖ್ಖಾಳ ವಿದೆ ಗಾಂಡಿವದ ಬೊಬ್ಬೆಯಿದೆ (ಕುವ್ಯಾವಿ. ೬-೪) : ಈ ಸವ್ಯಸಾಚಿತ್ವಮಿಾ ದೇವದತ್ತಶಂಖಂ ತನಗೆದೇಕೆ ನಿನ್ನಂ ಜಯಿಸದೆ (ಜೈಮಿಕಾ. ೧೩-೮) : ಅರ್ಜುನನ ದೇವದತ್ತವೆಂಬ ಶಂಖವೂ ಬಂದದ್ದು ಈ ಮಯನಿಂದಲೇಯೆ (ವಡಕಥಾ. ೭೫). ೩. ಶರೀರದಲ್ಲಿರುವ ಒಂದಂ ಬಗೆಯ ವಾಯು ವಿಶೇಷ; ಆಕಳಿಕೆ, ಓಕರಿಕೆ ಮಂತ್ತು ಹೊಟ್ಟೆತೊಳಸಂ ಮೊದಲಾದುವನ್ನು ಉಂಟುಮಾಡುವ ವಾಯು: ಓಕರಿಕೆಯು ಮಾಡುವುದೊಂದು ದೇವದತ್ತವಾಯು (ಜನ್ನವ. ೪.೧೦೦-೬೮); ಮತ್ತಮಾ ಉಪವಾಯುಗಳೊಳು ನಾಗವಾಯುವಿನಿಂ ಸೀನು ಕಿವುಮ್ಮು ದೇವದತ್ತವಾಯುವಿನಿಂ ನಗೆನುಡಿ (ವಿವೇಕ. ೪೪): ವಿಜೃಂಭಣರೂಪಕ್ರಿಯೆಯಂ ಮಾಡುವದರಿಂದ ದೇವದತ್ತ ಸಂಜ್ಞೆಯನ್ನೂ . . . ಪಡೆದುಕೊಂಡಿರುವುದು (ಮುಮುಳ್ಳು. ೩). ೪. ಅನಿರ್ದಿಷ್ಟ ವ್ಯಕ್ತಿಯನ್ನು ಸೂಚಿಸುವಾಗ ಬಳಸುವ ಶಬ್ದ: ದೇವದತ್ತನ ಘಟದ ಮಾಟ್ಕಿ, ದೇವದತ್ತನ ಇರವು (ಕಕ್ಕಾನು. ೨೨೬ ಪ್ರಹೋ). [ಸಂ.]

ದೇವದತ್ತಿ (ನಾ). ದೇವಸ್ಥಾನ ಮೊದಲಾದ ಧರ್ಮಸಂಸ್ಥೆಗಾಗಿ ಕೊಡುವ ದಾನ,–ಉಂಬಳಿ. [ದೇವ + ದತ್ತಿ]

ದೇವದಲ್ಲಣ (ನಾ). (ತನ್ನ ಪರಾಕ್ರಮದಿಂದ) ದೇವತೆಗಳಿಗೆ ಆತಂಕವನ್ನುಂಟುಮಾಡುವವನು: ದೇವದಲ್ಲಣರಿನಿಪ ದೈತ್ಯರಿಗೋವಿ ಸುರೆಯನದೆಱೆದು ಸೊಕ್ಕಿಸಿ (ಸಂಧಪ. ೮-೪೦) ; ಕಪಿಗಳ ಕೆಣಕಿ ಚತುರಾಹವದ ಕೋವಿದ ದೇವದಲ್ಲಣನು ಅಣುವ ಮೊದಲಾದವರ ತೃಣವೆಂದೆಣಿಸಿ (ಕಾತಿಕಾ. ೩೬-೦೬) ; ರಾವಣಗೆ ಹುಟ್ಟಿಹನುಯೆಂಬರು ದೇವದಲ್ಲಣ ನಿಂದಕೀಯನು (ಮೂಲಂಹಾ. ೦-೦). [ದೇವ + ತಲ್ಲಣ (<ತಲ್ಲಟ)]

ದೇವದಾನ (ನಾ). ದೇವಾಲಯಕ್ಕೆ ಕೊಡುವ ದಾನ,–ದತ್ತಿ,–ಉಂಬಳಿ: ಕೂಲಿಗೊಳ್ಳಂ ನೋಡ ದೇವದಾನದ ಕೆಯ್ಗೆ ಕೂಲಿಗೊಳ್ವಂ ನೋಡ ವಿಕ್ಕ ಭವಿಗಳ ಕೆಯ್ಗೆ (ಆರಿರ. ದೀ. ೧೭೪-೦೫) ; ದೇವದಾನದ ಗದ್ದೆ ಬೆದ್ದಲು ಸಹಿತ . . . ಕೊಳ್ಳಿವೆಂದು ಬಿಟ್ಟು (ಎಕ. II, ೪೪೭-೬೨ : ಸು. 1296). [ದೇವ + ದಾನ]

ದೇವದಾಯ (ನಾ). = ದೇವದಾನ: ನಮ್ಮಯ ವೃತ್ತಿ ದೇವದಾಯಕೆ ಸಂದುದೆಂಬರೆವ್ಮಭಿಧಾನ ಭಾವಿಸಿ ವಿಶ್ವೇಶ್ವರರೆಂದು (ತ್ರಿಭುತಿ. ೧೦-೦೧): ದೇವದಾಯಂಗೊಟ್ಟು ಅಱಿಂಗೆಯ್ದು (ಚಕವಿಂ. ೪೪-೦೪): ಗುಮ್ಮಟನಾಥ ಸ್ವಾಮಿಯವರ ದೇವದಾಯಗಳನ್ನೂ . . . ಜೀರ್ಣೋದ್ಧಾರ ಮಾಡಿ (ಬಿಟ್ಟಅ. ೪೦-೦೩). 'ದೇವದೇಯ' ಪರಾ. [ದೇವ + ದಾಯ]

ದೇವದಾರಿ (ನಾ). ಒಂದು ಬಗೆಯ ತರಕಾರಿ ಗಿಡ : ದೇವದಾರಿ, ಗಂಧಗಿರಿ, ಗ್ಯಾದಾರಿ, ಚೆಂಬುಳುಕಾಯಿ (ಮೃಷಿಗಿ. ೩೫-೬೮೩) ; ಸೋಮವಾರ ಪ್ರತಿಯೊಬ್ಬರೂ . . . ದೇವದಾರೀಪಲ್ಲೆ, ಅಕ್ಕರಿಕಿಪಲ್ಲೆ, ಚಿಗುರು ಮುಂತಾದುವನ್ನೇ ತಿನ್ನತಕ್ಕದ್ದೆಂದು ತಾವು ಫರ್ಮಾನು ಹೊರಡಿಸಿಲ್ಲವೆ ಪಲ್ಲೆಪ್ರೇಮಿ ? (ಹನ್ನೊಂದ. ೬೮). [?]

ದೇವದಾರು (ನಾ). ಒಂದು ಬಗೆಯ ಮರ : "ಶಕ್ರಪಾದಪಃ, ಪಾರಿಭದ್ರಕಃ, ಭದ್ರದಾರು, ದ್ರುಕಿಲಿಮಂ, ಪೀತದಾರು, ದಾರು, ಪೂತಿಕಾಷ್ಠಂ–ಈ ೭ ದೇವದಾರು" (ನಾಚಿರಾ. ೧೦೮); "ಚೊಪ್ಪಟೆಯೆನಲ್ ದೇವದಾರು ವಕ್ಕುಂ" (ಮಂಗರಾ. ೩೬-೧೬) ; ವನ್ಯಮಹೀರುಹಮಾದ ಕಲ್ಪನಂದನತರು ದೇವದಾರುಕುಜಮಾದ ನಮೇರುಕುಜಂ . . . ಚರದ್ವನಗಜಮಾದ ದಿವ್ಯಗಜಮೆಂಬುದನಾ ನೆಲನುಂಟುಮಾಡುಗುಂ (ಶಾಂತಿಪು. ೯-೧೩೪) ; ಬೆಲ್ಲವತ್ತವು ದೇವದಾರು ಕಕ್ಕೆಯ ಕೊಱಡು . . . ಶಿವನಗರ್ಪಿಸುವಲ್ಲಿ (ಜಿತುಪು. ೬-೪-೩೭) ; ಮುಂದೆ ಕಾಣುವ ದೇವದಾರುವನಂದದಿಂ ಧೂರ್ಜಟಿಯು ತನ್ನಯ ಕಂದನಂತೆಯೆ ಮನ್ನಿಸಿದನು (ರಘುವಂ. ೧೮-೩೬); ನಮ್ಮ ವಸತಿಯ ಕೆಳಗಡೆ ಒಂದು ಕಣಿವೆಯಲ್ಲಿ ವಿಶಾಲವಾದ ದೇವದಾರು ವನವಿತ್ತು (ನಿಬಂಧ. II, ೭೧).

ದೇವದಾರು ಧೂಪ, ದೇವದಾರುವಿನ ಧೂಪ = ದೇವದಾರುಮರದ ರಸದಿಂದ ಉಂಟಾಗುವ ಸುಗಂಧ ಪದಾರ್ಥ : "ಚಂಡಗಂಧಃ–ದೇವದಾರುಧೂಪ" (ಓಷಧಿ. ೫೫) ; "ವಾಯಸಃ, ಶ್ರೀವಾಸಃ ... ಸರಳದ್ರವಃ–ಈ ೫ ದೇವದಾರುವಿನ ಧೂಪ" (ನಾಚಿರಾ. ೧೩೪). [ಸಂ]

ದೇವದಾವರೆ (ನಾ). ಒಂದು ಬಗೆಯ ಗಿಡ ಮತ್ತು ಅದರ ಹೂವು : ದೇವದಾವರೆ, ಬೆಟ್ಟದಾವರೆ ಮೊದಲಾಗಿ ಭೂಧರದೊಳಗೆ ಒಪ್ಪಿಹವು (ಮಾದೇಸಾಂ. ೧-೫೩). [ದೇವ + ತಾವರೆ (<ತಾಮರೆ)]

ದೇವದಾಸಿ (ನಾ). ೧. ದೇವರ ಸೇವೆಗಾಗಿ ತನ್ನ ಜೀವಮಾನವನ್ನು ಮುಡುಪಾಗಿಟ್ಟು ದೇವಾಲಯದಲ್ಲಿ ಸೇವೆ ಸಲ್ಲಿಸುವ ಅವಿವಾಹಿತ ಮಹಿಳೆ. ೨. ದೇವಸ್ಥಾನದ ನರ್ತಕಿ : ಕಲುಕುಟಿಗ ಕಾಳೋಜ ದೇವದಾಸಿಗಳಿಗೆ ಬಿಟ್ಟ ಬೆದ್ದಲೆ (ಎಕ. VII, ಶಿವಮೊ. ೯೭-೫೫ ; 1113). ೩. ನರ್ತನ ಮಾಡುವ ವೃತ್ತಿಯ ವೇಶ್ಯೆ: ಅವರ ಮದುವೆಯ ನಿಮಿತ್ತ ನಾಚಿಗಾಗಿ ಗೋವೆಯಿಂದ . ದೇವದಾಸಿಯರನ್ನು ಕರೆಯಿಸಲಾಗಿತ್ತು (ಸಮಜೀ. ೯೫೫) ; ನಾಲ್ಕು ಜನರ ಮುಂದೆ ಬಾಯಿ ತೆಗೆಯಲು ತಾನೇನ. ದೇವದಾಸಿಯಲ್ಲವೆಂದು ಶಾಂತಾ ಜಾರಿಕೊಂಡಳು (ರಂಗರೋ. ೧೧೧).

[ದೇವ + ದಾಸಿ]

ದೇವದಾಸಿಪದ್ಧತಿ (ನಾ). ಅವಿವಾಹಿತ ಮಹಿಳೆಯು ದೇವರ ಸೇವೆಗಾಗಿ ತನ್ನ ಜೀವಮಾನವನ್ನು ಮುಡುಪಾಗಿಡುವ ಪದ್ಧತಿ,–ಸಂಪ್ರದಾಯ: ಒಮ್ಮೆ ದೇವದಾಸಿಪದ್ಧತಿಯು ಪ್ರಬಲವಾಗಿದ್ದಿತು (ಕಶಾಅ. ೨೦೨) ; ಈಗಲೂ ಕೆಲವು ಕಡೆಗಳಲ್ಲಿ ದೇವದಾಸಿಪದ್ಧತಿ ರೂಢಿಯಲ್ಲಿದೆ (ರೂಢಿ).

[ದೇವದಾಸಿ + ಪದ್ಧತಿ]

ದೇವದಾಸಿಸಂಪ್ರದಾಯ (ನಾ). = ದೇವದಾಸಿಪದ್ಧತಿ : ಕರ್ಣಾಟಕದಲ್ಲಿ ದೇವದಾಸಿಸಂಪ್ರದಾಯವು . . . ಇತ್ತೀಚೆಗೆ ಕಡಮೆಯಾಗುತ್ತಿದೆ (ಕಶಾಅ. ೧೮೫). [ದೇವದಾಸಿ + ಸಂಪ್ರದಾಯ]

ದೇವದಾಳಿ (ನಾ). ಒಂದು ಬಗೆಯ ಗಿಡ ; ದೇವತಾಳ : "ವೇಣೀ, ಗರಾಗರೀ, ದೇವತಾಳಃ, ಜೀಮೂತಃ–ಈ ೪ ದೇವದಾಳಿ" (ನಾಚಿರಾ. ೧೦೮) ; "ಆ ದೇವದಾಳಿ ತಾಡಕಮಕ್ಕು" (ಮಂಗರಾ. ೪೦-೩೧) ; ದೇವದಾಳಿಬೇರು . . . ಪದ್ಮಕ, ಶ್ರೀಗಂಧ ಇವಿಷ್ಟನೂ ಪ್ರತ್ಯೇಕ ನಾಲ್ಕು ವರಹ ತೂಕವ ಸೇವಿಸಲು . . . ಬಿಕ್ಕುಳುನುಡಿ, ನೆನಹು ಇವೆಲ್ಲವೂ ಪರಿಹರವಹವು (ವೈದ್ಯಸಾ. II, ೫೩). [ಸಂ. ದೇವದಾಲೀ]

ದೇವದುಂದುಭಿ (ನಾ). ೧. ಸ್ವರ್ಗದಲ್ಲಿರುವ ನಗಾರಿ ; ದೇವಲೋಕದ ಭೇರಿ ; ೨ ದೇವತೆಗಳು ಮಾನವರ ಹಿರಿಮೆಯನ್ನು ಕುರಿತು ತಮ್ಮ ಸಂತೋಷವನ್ನು ವ್ಯಕ್ತಪಡಿಸಲು ಬಾರಿಸುವರೆಂದು ಭಾವಿಸಲಾದ ಒಂದು ಬಗೆಯ ಚರ್ಮವಾದ್ಯ: ದಿಗ್ಭಿತ್ತಿಯೊಳ್ ದೇವದುಂದುಭಿನಾದಂ . . . ಒಪ್ಪುತಿರೆ ಬಂದಂ ಲೋಕನಾಥಂ (ಶಾಂತಿಪು. ೧-೮೧) ; ಮೇಘಸ್ವನದಿ ದೇವದುಂದುಭಿಯೊಳಂ ಮೃಡನಣುಗ ವೀರಭದ್ರಂ ನಡೆದಂ (ಲಶಿಚಿಂ. ೧೮-೨೫) ; ದೇವದುಂದುಭಿ ಮೊಳಗುತ್ತಿರೆ ಹರಿ ವಿಧಿ ಬಹುಮುನಿಗಣವರರುಂ ಜಯ ಜೀಯಯೆಂದು ಕೀರ್ತಿಸುತಿರೆ (ಹಮ್ಮೀರ. ೨-೧೨) ; ಮೊಳಗಿದುವು ದೇವದುಂದುಭಿಗಳ್ (ಜೈಮಿಭಾ. ೩೧-೭೪); ೨. ಒಂದು ಬಗೆಯ ಸಸ್ಯ;ಕೆಂಪು ತುಳಸಿ: "ಪಾಲಗಃ–ದೇವದುಂದುಭಿ ಹುಲ್ಲು" (ನಾಚಿರಾ. ೧೧೨); "ಛತ್ರಂ, ಅತಿಛತ್ರಂ, ಪಾಲಘ್ನಃ–ಈ ೩ ದೇವದುಂದುಭಿಯ ಹುಲ್ಲು" (ಓಷಧಿ. ೯೪). [ಸಂ.]

ದೇವದುಂಬೆ (ನಾ). ಒಂದು ಬಗೆಯ ತುಂಬೆಗಿಡ ಮತ್ತು ಅದರ ಹೂವು : ಅದಿದೆನ್ನದೆ ಲಾಂಗಲಿ ದೇವದುಂಬೆ ಸುರದಾಳಿಯೆಂಬಿವಂ ಕಟಿಯಿಂದಂ ಪೂಸಿದೊಡೆ . . . ಊತಿಯಂ ಮಟ್ಗಿಸುಗುಂ (ಲೋಕೋಪ. ೯-೧೬೧). 'ದೆವ್ವದುಂಬೆ' ಪರಾ. [ದೇವ + ತುಂಬೆ]

ದೇವದುರ್ಲಭ (ನಾ). ದೇವತೆಗಳಿಗೂ ಸುಲಭವಾಗಿ ಒಲಿಯದವನು : ದೇವಗತಿ ದೇವಮತಿ ದೇವದುರ್ಲಭನೆಂಬ ಕರೆವ ಬಿರುದಿನ ಕಹಳೆಗಳ ಮಹಾರವದೊಳಗೆ ಧರೆ ನಡುಗೆ (ನಂಬಿರ. ೭-೧೧೮).

[ದೇವ + ದುರ್ಲಭ]

ದೇವದೂತ (ನಾ). ದೇವರ ಆಳು ; ದೇವಲೋಕದ ದೂತ : ದೇವಕುವರಂ ಮರಳಿ ಬಹನೆಂಬ ಗೆಲುವಿಂದ ದೇವದೂತರೆ ಬಾರಿಸುವರೊ ಮಂಗಲವಾದ್ಯವೆನಲು ಮುಂಬಕ್ಕಿಗಳ ಮೇಳವಂ ಮೊಳಗಾಡೆ (ಗೊಲ್ಮೊಥಾ. ೧-೮). [ದೇವ + ದೂತ]

ದೇವದೇಯ (ನಾ). ದೇವರಿಗೆ ಕೊಡಬೇಕಾದುದು ; ದೇವಸ್ಥಾನಕ್ಕೆ ಸಲ್ಲತಕ್ಕುದು : ಆಸ್ಥಾನಕವಿಯಾದ ರವಿಕೀರ್ತಿ ಜೈನೇಂದ್ರಗೃಹವನ್ನು ಕಟ್ಟಿಸಿ ಕೆಲ ಗ್ರಾಮಗಳನ್ನು ದೇವದೇಯವಾಗಿ ಕೊಟ್ಟನು (ಕರ್ಣಾಅ. ೬೬). 'ದೇವದಾಯ' ಪರಾ. [ದೇವ + ದೇಯ]

ದೇವದೇವ (ನಾ). ದೇವತೆಗಳಿಗೆ ಒಡೆಯನಾದವನು; ದೇವಾಧಿದೇವ: ಕರೆದಡೆ ಬೆಸನೇನೆಂಬ . . . ದೈನ್ಯಕ್ಕೆಲವೊ ತನುವನಾನೊಡ್ಡುವಂತಾದಿ ದೇವಂ ಪುರುದೇವಂ ದೇವದೇವಂ ಕುಡೆ ಪಡೆದ ನೆಲಕ್ಕಾರೊಳಂ ಪಂಥ ಮುಂಟೆ (ಆದಿಪು. ೧೪-೭೭) ; ದೇವದೇವಂ ಸಂತಸದೊಳಿಂತೆಂದನು (ಬಸಪು. ೦-೬೦) ; ಪೊಕ್ಕುಳಲ್ಲಿ ಅಜನ ಪಡೆದ ದೇವದೇವನು ಚಿಕ್ಕ ಉಂಗುಷ್ಠದಲ್ಲಿ ಗಂಗೆಯ ಪಡೆದನು (ಪುರಂದ. ೨-೮೨-೩) ; ಭುಜಗಧರನಂ . . . ದೇವದೇವನಂ ಭಜಿಸಿದಳಗಜೆ ಬನದೊಳು (ಜೈಮಿಭಾ. ೧೫-೨೩) ; ದೇವದೇವನ ಆಜ್ಞೆಗಾಗಿ ಕಾಯುತ್ತ . . . ಮಲಗಿಕೊಂಡಿದ್ದಾನೆ (ಬೆಳುಮ. ೫೨). [ದೇವ + ದೇವ]

ದೇವದೌವಾರಿಕ (ನಾ). ದೇವಲೋಕದ ದ್ವಾರಪಾಲಕ : ದೇವದೌವಾರಿಕ ಕಳಕಳಕ್ವಣಿತಪ್ರತ್ಯುತ್ತರೋಚ್ಚಳಿತ ಕೇಳೀವನಮಾಲಾಕಲಕಂಠವಿಲಾಪೆಯುಂ (ಅನಂಪು. ೪-೯೪ ವ). [ದೇವ + ದೌವಾರಿಕ]

ದೇವದ್ವಿರದ (ನಾ). ದೇವಲೋಕದ ಆನೆ; ಐರಾವತ: ಶ್ವೇತಾಂಭೋಜಾತ ದೇವದ್ವಿರದ ಸುರನದೀದುಗ್ಧಃವಾರಾಸಿಚಂದ್ರದ್ಯೋತಪ್ರಸ್ಪರ್ದ್ಧಿ ಭಾಭಾ ಸುರವಿಶದಯಶಂ (ಎಕ. IV, ನಾಗಮಂ. ೭೦-೧೦; 1178).

[ದೇವ + ದ್ವಿರದ]

ದೇವಧುನಿ (ನಾ). = ದೇವನದಿ : ದೇವಧುನಿಯುಬ್ಬರಂ ಸೆಳದೊಯ್ಯೆ ಕಾಡುನಾಡಂ ಬಂಡೆಗಳ ಬಿಡದೆ ? (ಹೆಬೈರ. ೨೦-೧೦೮). [ದೇವ+ಧುನಿ$_1$]

ದೇವಧೂಪ (ನಾ). ಒಂದು ಬಗೆಯ ಸುಗಂಧದ್ರವ್ಯ ; ಗುಗ್ಗುಳ : "ಮಹಾಕ್ಷಃ–ಗುಗ್ಗುಳ, ದೇವಧೂಪ" (ಓಷಧಿ. ೧೦೮).
[ದೇವ + ಧೂಪ]

ದೇವಧೂಪತೈಲ (ನಾ). [ವೈದ್ಯಶಾ] ಒಂದು ಬಗೆಯ ತೈಲ : ದೇವಧೂಪತೈಲ–ಔಡಲಸೊಪ್ಪಿನ ರಸ, ಉಮ್ಮತ್ತಿಸೊಪ್ಪಿನ ರಸ . . . ಎಣ್ಣೆಯನಟ್ಟು ಚಿಕ್ಕಣಪಾಕದಲ್ಲಿಳುಹಿ ಆ ಎಣ್ಣೆಯನ್ನು ಸರ್ವಾಂಗಕ್ಕೆ ಲೇಪಿಸಲು ಸಕಲಜ್ವರಂ ತೀರ್ಗುಂ (ಸಕವೈ. ೧೧೬). [ದೇವಧೂಪ + ತೈಲ$_1$]

ದೇವನ (ನಾ). ೧. ಹೋಗುವಿಕೆ ; ಗಮನ. ೨. ಹುರುಡು ; ಸ್ಪರ್ಧೆ. ೩. ವ್ಯವಹಾರ ; ಉದ್ಯೋಗ ; ಕಸುಬು. ೪. ಪಗಡೆಯ ಕಾಯಿ. ೫. ಆಟ ; ಕ್ರೀಡೆ. ೬. ಪಗಡೆಯ ಆಟ. ೭. ಜೂಜಾಟ ; ಪಂದ್ಯ : ಪಣನಂ ಕುರುಪತಿ ಕುಡಲಾ ಜನಪತಿಗಳ್ ದೇವನಕ್ಕೆ ಕುಳ್ಳಿರ್ದರ್ (ಪಾಲಭಾ. ೭-೬೨). ೮. ದುಃಖ ; ಶೋಕ. [ಸಂ.]

ದೇವನಗ (ನಾ). ದೇವತೆಗಳ ಬೆಟ್ಟ ; ಮೇರುಪರ್ವತ : ದೇವನಗಾಗ್ರದಿಂದಭಿಷೇಕೋತ್ಸವದಿಂದಿಳಿತಂದು ಬೇಗದಿಂ ತೀವಿ ನಿಜಾಳವಾಳಕುಳಮಂ ತಣಿವಿತ್ತ ಸುಧಾಬಿಜ್ಜೀವನಂ (ಕಂರ್ತಪು. ೧೫-೬೭). [ಸಂ.]

ದೇವನಗರಿ (ನಾ). ೧. ದೇವತೆಗಳ ಪಟ್ಟಣ; ಅಮರಾವತಿ. ೨. ಕನ್ನಡ ಕವಿ ಲಕ್ಷ್ಮೀಶನ ಜನ್ಮಸ್ಥಳವಾದ ದೇವನೂರು : ರಸಾತಿಶಯಮೆನೆ ಪಾಡುವರ್ದೇವನಗರೀನಿಕೇತನ ಶ್ರೀಪತಿಯ ಚಾರಿತ್ರಮಪ್ಪ ರಾಮಾಯಣ ವನನುದಿನದೊಳು (ಚೈಮಿಭಾ. ೦೯-೫೫). [ದೇವ + ನಗರಿ]

ದೇವನಗರೀಶ (ನಾ). ೧. ಅಮರಾವತಿಯ ಒಡೆಯ, – ರಾಜ ; ದೇವೇಂದ್ರ. ೨. ದೇವನೂರಿನಲ್ಲಿ ನೆಲಸಿದ ದೇವರಾದ ಶ್ರೀಕೃಷ್ಣ : ತಾನೆ ಸಲ್ಲಲಿತ ಹರಿಗಳಂ ಪಿಡಿದು ಕಟ್ಟಿದನಿಳಾವಲ್ಲಭರ ಮುಂದೆ ಕಾರುಣ್ಯದಿಂ, ದೇವನಗರೀಶ ಲಕ್ಷ್ಮೀಕಾಂತನು (ಚೈಮಿಭಾ. ೩೨-೫೭). [ಸಂ.]

ದೇವನದಿ (ನಾ). ದೇವಲೋಕದಿಂದ ಇಳಿದು ಬಂದ ನದಿ ; ಗಂಗಾನದಿ: "ತ್ರಿದಶಧುನಿ ವಿಷ್ಣುಪದಿ ಗಂಗೆ ಜಾಹ್ನವಿ ದೇವನದಿಯೆನಿಕು" (ಮಂಗರಾ. ೦೨೨-೦೦) ; ದೇವನದಿ ಚಂದ್ರುನನಲಾಕ್ಷಿ . . . ಒಪ್ಪಲ್ ಪಾವನ ಶಿವಾಪತಿ ನಿಜಾಕೃತಿಯೊಳಿರ್ದರಂ (ತ್ರಿಪುವಿ. ೫೭-೦೪). [ದೇವ + ನದಿ]

ದೇವನಹುಳಿ (ನಾ). ಒಂದು ಬಗೆಯ ವನಸ್ಪತಿ : ಕಣ್ಮುಟಗಲ್, ದೇವನಹುಳಿ, ಮಕ್ಕಿ, ಹರಲಂಗುಪ್ಪ, ರೇವಲ್‌ಚಿನ್ನಿ, ಅರಿಸಿನಗುರ್ಗಿ (ಪ್ರಾಣಿಗಿ. ೩೮-೭೫೭). [?]

ದೇವನಾಗರಿಲಿಪಿ (ನಾ). ಒಂದು ಬಗೆಯ ಲಿಪಿ ; P ಸಾಮಾನ್ಯವಾಗಿ ಸಂಸ್ಕೃತ ಮತ್ತು ಕೆಲವು ಇಂಡೋ-ಆರ್ಯನ್ ಭಾಷೆಗಳನ್ನು ಬರೆಯಲು ಉಪಯೋಗಿಸುವ ಲಿಪಿ : ಸಂಘದ ರಾಜಭಾಷೆಯು ದೇವನಾಗರಿ ಲಿಪಿಯಲ್ಲಿ ಹಿಂದಿ ಆಗಿರತಕ್ಕುದು (ಭಾಧಾನ. ೨೦೧).
[ಸಂ. ದೇವನಾಗರೀಲಿಪಿ]

ದೇವನಾದೋತ್ತರ (ನಾ). [ಸಂಗೀತ] ಒಂದು ರಾಗದ ಹೆಸರು : ನೀಲೋತ್ಪಲಿನಿ . . . ದೇವನಾದೋತ್ತರ . . . ವಸಂತಬಂಗಾಳ ಮೆಂಬಿಪ್ಪತ್ತೆರಡು ರಾಗಂಗಳುಂ ಕ್ರಿಯಾಂಗದಿಂದ ಪುಟ್ಟಿದವು (ವಿವೇಕ. ೨೩೪).
[ಸಂ.]

ದೇವನಾಲ, ದೇವನಾಳ (ನಾ). ಒಂದು ಬಗೆಯ ಹುಲ್ಲು ; ಲಾಳದ ಕಡ್ಡಿ : (ಕಿ). **ದೇವನಾಳ** : "ನಡಃ, ಧಮನಃ, ಪೋಟಗಳಃ – ಈ ೩ ದೇವನಾಳ" (ನಾಚಿಕಾ. ೧೦೨) ; ನಡ್ವತ್, ನಡ್ವಲ = ದೇವನಾಳಂ ಪಿರಿದಾಗಿರ್ಪ ಭೂವಿಂ (ನಾಚಿಕಾ. ೫). [ದೇವ + ನಾಲ$_1$]

ದೇವನಾಳ 'ದೇವನಾಲ' ನೋ.

ದೇವನಿಕಾಯ (ನಾ). ದೇವತೆಗಳ ಸಮೂಹ,–ಗುಂಪು : ದೇವನಿಕಾಯ ಸಮೇತಂ ದೇವೇಂದ್ರಂ ತ್ರಿಭುವನೇಶಜನ್ಮೋತ್ಸವಮಂ ಭಾವಿಸಿ ಶಕ್ರನೆ ಮಾಡಿದೊಡಾ ವಿ[ನು]ತವಿಳಾಸದಳವನೇನಂ ಪೇಳ್ವೆಂ (ಬಂಹರಿ. ೯-೧೨೦) ; ದೇವನಿಕಾಯಕಿರೀಟಕನದ್ರತ್ನಾವಳಿ ಸಂಜನಿತಾಂಶುವಜಸ್ರಂ ತೀವಿ ವಿರಾಜಿಪ ದೇವಿಯ ಪಾದಕ್ಕಾ ವಸುಧಾಪತಿ ಪಾದ್ಯಮನಿತ್ತಂ (ಉದ್ಭಟ. ೩-೧೦೪). [ದೇವ + ನಿಕಾಯ]

ದೇವನೂರು (ನಾ). ೧. ಒಂದು ಊರಿನ ಹೆಸರು: ಕಾರೆನಾಡ ದೇವನೂರ ನುಳಗ್ಗೆ ಯರಕುಳದ ಮಧಿಗವುಡನ ಶುಪುತ್ರ ರಾಮುಧೇವನು . . . ಮೆಚ್ಚುಗೊಟ್ಟ ಭೂಮಿ (ಎಕ. VII, ಶಿಕಾರಿ. ೫೨-೧೦ ; 3577 ಕೃಶಾ). ೨. = ದೇವಪುರ ೨ : ಲಕ್ಷ್ಮೀಶಕವಿ . . . ಅರಸೀಕೆರೆ ತಾಲ್ಲೂಕು ಬಾಣಾವರದ ಹೋಬಳಿಗೆ ಸೇರಿದ ದೇವನೂರು ಎಂಬ ಗ್ರಾಮದಲ್ಲಿ ಶ್ಯಾನುಭೋಗ (ಚೈಮಿಭಾ. III ಮುನ್ನುಡಿ). [<ದೇವ + ಊರು$_3$ (<ಊರ್)]

ದೇವಪಟಹ (ನಾ). ದೇವಲೋಕದ ಒಂದು ಬಗೆಯ ವಾದ್ಯ ವಿಶೇಷ ; ತಮಟೆಯಂಥ ಒಂದು ವಾದ್ಯ : ದೇವಪಟಹಂಗಳುಲಿಯಲ್ . . . ಅಮರಪುಷ್ಪಕಮೂ ಗೌರೀವರನಾಜ್ಞೆಯೊಳಾಗಳ್ ಭೂವಳಯಕ್ಕಿರದೆ ಬಂದಂ ದತಿಸಂಭ್ರಮದಿಂ (ತ್ರಿಪುವಿ. ೨೫-೫೯). [ದೇವ + ಪಟಹ]

ದೇವಪತಿ (ನಾ). ದೇವತೆಗಳ ಅರಸಂ ; ದೇವೇಂದ್ರ : ದೇವಪತಿ ಪೇಳ್ದ ಧನದಂ ರೈವೃಷ್ಟಿಯನೆಸಗೆ ಮಾಡೆ ಪದ್ಮಾದಿಸರೋದೇವಿಯರುಂ ರುಚಕಾಚಳದೇವಿಯರುಂ ತಾಯ್ಗೆ ಗರ್ಭಸಂಶೋಧನಮಂ (ಪಾರ್ಶ್ವಪು. ೧೫-೫೩). [ದೇವ + ಪತಿ$_2$]

ದೇವಪತ್ರ (ನಾ). ಒಂದು ಬಗೆಯ ಗಿಡ ; ಮಂಚಿಪತ್ರೆ : "ದೇವಪತ್ರಂ ಪಂಚಪತ್ರೆ ಗಾಂಧಾರಿಯದು" (ಮಂಗರಾ. ೪೦-೩೦). [ದೇವ + ಪತ್ರ]

ದೇವಪಥ (ನಾ). ದೇವತೆಗಳ ಮಾರ್ಗ ; ಆಕಾಶ : ನಿರಂತರಾಟ್ಟಾಲಕ ಪ್ರತೋಲೀಂದ್ರಕೋಶ ದೇವಪಥ ಸನಾಥಂಗಳುಂ ಗಂಡಶೈಲಾಭೀಲಶಿಲಾ ಯಂತ್ರಭಯಂಕರಂಗಳುಂ . . . ಅಪ್ಪ ದುರ್ಗಂಗಳೊಳ್ (ಆದಿಪು. ೧೩-೫೭ ಪ).
[ದೇವ + ಪಥ]

ದೇವಪುತ್ರಕ (ನಾ). ದೇವಸ್ಥಾನದ ಮೇಲ್ವಿಚಾರಕ ; ದೇವರ ಅಂಗಭೋಗಕ್ಕೆ ಕಾಮಿಸಿಟ್ಟಯ ಗಾಣವಂ ಸರ್ಬ್ಬಾಬಾಧಾಪರಿಹಾರ ಶ್ರೀಮಾನ್ಯವಾಗಿ ಆಚಂದ್ರಾರ್ಕ್ಕತಾರಂಬರಂ ದೇವಪುತ್ರಕರು ಸಲಿಸುವರು (ಸಾಇಇ. XX, ೧೩೦-೦೦ ; 1137). [ಸಂ.?]

ದೇವಪುರ (ನಾ). ೧. ದೇವತೆಗಳ ಊರು ; ಅಮರಾವತಿ. ೨. ಲಕ್ಷ್ಮೀಶ ಕವಿಯ ಜನ್ಮಸ್ಥಳ ; ದೇವನೂರು : ದೇವಪುರ ಲಕ್ಷ್ಮೀರಮಣನಾಸ್ಯ ಚಂದ್ರನಾನಂದಮಂ ನಮಗೀಯಲಿ (ಚೈಮಿಭಾ. ೧-೦). [ದೇವ + ಪುರ$_2$]

ದೇವಪೂಜೆ (ನಾ). ದೇವರಿಗೆ ಮಾಡುವ ಅರ್ಚನೆ : ದೇವತಾರ್ಚನೆ : "ಇಷ್ಟಂ, ಇಷ್ಟಿಃ . . . ಯಾಜ್ಯಂ—ಈ ೧೦ ದೇವಪೂಜೆ" (ಕಾಶಕೃ. ೦೬೦) ; ಯಜ್ಞಶಬ್ದಂ ದಾನದೊಳಂ ದೇವಪೂಜೆಯೊಳಂ ಪ್ರವರ್ತಿಸುಗುಂ (ಜಾವಂಪು. ೨೦೩) ; ದೇವಪೂಜೆಯ ಮಾಟ ದುರಿತಬಂಧನದೋಟ ಶಂಭು ನಿಮ್ಮಯ ನೋಟ ಹಿಂಗದ ಕಣ್ಬೇಟ (ಬಸವ. ೧೭೭) ; ದೇವಪೂಜೆಯೆಂದುಂ ಗುರೂಪಾಸ್ತಿಯೆಂದುಂ ಸ್ವಾಧ್ಯಾಯಮೆಂದುಂ ಸಂಯಮಮೆಂದುಂ ತಪಮೆಂದುಂ ದಾನಮೆಂದುಂ ಗೃಹಸ್ಥಂಗೆ ಆಱುತೆಱದಿಂ ಧರ್ಮಸಂಗ್ರಹಮಕ್ಕುಂ (ಪುಣ್ಯಾಸ್ರ. ೦-೩೫ ಪ) ; ದೇವಪೂಜೆಯ ಮಾಡಿ ದಿವ್ಯಾನ್ನಪಾನವ ಸೇವಿಸಿದರು ಲೀಲೆಯಿಂದ (ಭರಟ. ೨೩-೯೦) ; ದೇವಪೂಜೆಯಲ್ಲಿ ಆಸಕ್ತಿಯುಳ್ಳವಳೂ . . . ಸುಖಕರಳೂ ಆಗಿರು (ಹುಶ್ಶಾರ. ೩೦೧).
[ದೇವ + ಪೂಜೆ$_2$]

ದೇವಪೂವು (ನಾ). ಒಂದು ಸ್ಥಳದ ಹೆಸರು : ಮರಯ್ಯಸೆಟ್ಟಿಯ ಪೆಣ್ಡತಿ ಗುಣ್ಡಬ್ಬೆ ಮೂಲಸ್ಥಾನದೇವಗ್ಗೆ ದೇಗುಲವಂ ಮಾಡಿಸಿ ದೇವಗ್ಗೆ ದೇವಪೂವಿನ ಮುದನೆವಯ್ಯ ತೆಱೆಪಟ್ಟಪಾಳಿಯ ಪೊನ್ನರ ಕೊಟ್ಟು ಮಣ್ಣರ ಕೊಣ್ಡು ಬಿಡಿಸಿದಡೆ (ಮೈಅರಿ. ೧೯೪೬, ೨೮-೨೦ : 1032). [?]

ದೇವಪ್ರಿಯ (ನಾ). ದೇವತೆಗಳ ಪ್ರೀತಿಗೆ ಪಾತ್ರನಾಗುವವನು: ದೇವಪ್ರಿಯನಾದವನು ಕಠಿಣಕಷ್ಟಾಶ್ರಯನದಾವನು ಧರ್ಮಸುತ ಹೇಳೆಂದನಾ ಖಚರ (ಕುಪ್ಯಾಅ. ೨೩-೪೦). [ದೇವ + ಪ್ರಿಯ]

ದೇವಬಾಭೂಳ (ನಾ). ಒಂದು ಬಗೆಯ ಸಸ್ಯ; ದೊಡ್ಡ ದೊಡ್ಡ ಮುಳ್ಳುಗಳುಳ್ಳ ಒಂದು ಬಗೆಯ ಗಿಡ; ಗೊಬ್ಬುಳಿ; ಮುಳ್ಳು ಜಾಲಿ: ಜಾಲಿ, ಡೊಣ್ಣೆಮುಳ್ಳಿನ ದೇವಬಾಭೂಳಸಣ್ಣಗಿಡವು ಬೇಲಿಯ ಕೆಲಸಕ್ಕೂ ಗೂಟಗಳನ್ನು ಕೆತ್ತಲಿಕ್ಕೂ ಬರುತ್ತದೆ (ಕಥಾಗೆ. ೪೮).

[←ಮರಾ. ದೇವಬಾಭೂಳ]

ದೇವಬಾಳೆ 'ದೆವ್ವಬಾಳೆ' ನೋ.

ದೇವಬ್ರಾಹ್ಮಣ (ನಾ). ಯಾತ್ರೆ, ಮದುವೆ, ಮುಂಜಿ ಮೊದಲಾದ ಶುಭಕಾರ್ಯಗಳ ಮೊದಲು ದೇವತಾಪೂಜೆಯ ನಂತರ ಮಾಡುವ ಬ್ರಾಹ್ಮಣ ಸಂತರ್ಪಣೆ: ದೇವಬ್ರಾಹ್ಮಣವಾದ ಮೇಲೆ ಅತ್ಯಾಬಾಯಿ ಮತ್ತು ಜತೆಗೆ ಬಂದವರು ತಿರುಗಿ ಹೋದರು (ಸ್ಮೃತಿಚಿ. ೨೪೨).

[ದೇವ + ಬ್ರಾಹ್ಮಣ]

ದೇವಭಕ್ತ (ನಾ). ದೇವರಲ್ಲಿ ಭಕ್ತಿಯಿಟ್ಟಿರುವವನು: ದೇವಭಕ್ತರಿಲ್ಲದೂರು ಸಿನೆ ಹಾಳು (ಬಸವ. ೮೭). [ದೇವ + ಭಕ್ತ]

ದೇವಭಕ್ತಿ (ನಾ). ದೇವರ ಮೇಲಿನ ಪ್ರೀತಿ: ಎಂತೆಂಬ ದೇವಭಕ್ತಿಯ ದೆಂತೆಂಬಧಿಗಮದ ತೇಜಮೆಂತೆಂಬ ವಿನೋದಾಂತರಮೆನೆ ದೇವನನೆ ನಿರಂತರ ಮಮರಾಧಿರಾಜನಾರಾಧಿಸುವಂ (ಅಜಿಪು. ೫-೮೪). [ದೇವ + ಭಕ್ತಿ]

ದೇವಭಾಗ (ನಾ). ದೇವಸ್ಥಾನಕ್ಕೆ ಕೊಟ್ಟ ಉಂಬಳಿ,-ದಾನ: ಈ ದೇವಭಾಗಮುವ × × × ನೆಗಳ್ದವರವರದೇ [ಧರ್ಮ್ಮ] (ಸೌಇಇ. XX, ೨೩-೩೦; 1029). [ದೇವ + ಭಾಗ]

ದೇವಭಾಷೆ (ನಾ). ೧. ದೇವತೆಗಳಾಡುವ ಭಾಷೆ: ಆಕಾಶ ಪುಸ್ತಕದ ಅತ್ಯನಿರ್ವಚನೀಯದೇವಭಾಷಾದೃಶ್ಯಕಾವ್ಯಗಳ್! (ಅಗ್ನಿಹಂ. ೬೨-೦೦೭). ೨. ಸಂಸ್ಕೃತ ಭಾಷೆ: ಸಂಸ್ಕೃತವನ್ನು ದೇವಭಾಷೆಯೆಂದೂ ಕರೆಯುತ್ತಾರೆ (ರೂಢಿ). [ಸಂ.]

ದೇವಭೂಮಿ (ನಾ). ದೇವತೆಗಳ ನೆಲೆ; ಸ್ವರ್ಗ; ಭೋಗಭೂಮಿ: ಈ ದೇವಭೂಮಿಯು ಮನುಷ್ಯರಿಗೆ ಗೋಚರವಾಗತಕ್ಕುದಲ್ಲವಲ್ಲಾ (ಶಾಕುಂತ. ೦೦೬-೨೪). [ದೇವ + ಭೂಮಿ]

ದೇವಭೂಯ (ನಾ). ದೇವತ್ವ; ದೇವಭಾವ; ದೇವರೊಂದಿಗೆ ಸೇರುವುದು; ಸಾಯುಜ್ಯ; ಮುಕ್ತಿ: "ದೇವಭೂಯಮದು ದೇವತ್ವಂ" (ವಸ್ತುಕೋ. ೫೯-೪೬); "ದೇವಭೂಯಂ, ದೇವತ್ವಂ, ದೇವಸಾಯುಜ್ಯಂ-೩ ದೇವಸ್ವರೂಪವಾಗುವಿಕೆ" (ಸಿದ್ಧಾಂತಿ. ೨೩೨). [ಸಂ.]

ದೇವಭೂಷಣ (ನಾ). ದೇವರಿಗೆ ಅಲಂಕಾರಯೋಗ್ಯವಾದುದು: ಇರಲಾರು ಮೂಲೆ . . . ಕಾಕಪಾದಗಳುಮಿರದಿರಲು ದೇವಭೂಷಣ ಮಪ್ಪುದಾ ವಜ್ರಮೆಂದಗಸ್ತ್ಯಂ ಪೇಳ್ದನು (ರತ್ನಶಾ. ೪-೧೪).

[ದೇವ + ಭೂಷಣ]

ದೇವಭೇಷಜ (ನಾ). ದೇವತೆಗಳ ವೈದ್ಯ: ದೇವಭೇಷಜರಾದ ಅಶ್ವಿನೀ ದೇವತೆಗಳನ್ನೇ ಕುರಿತು ಪ್ರಾರ್ಥಿಸಿ (ಬೆತಂಬಾ. ೧೬). [ದೇವ + ಭೇಷಜ]

ದೇವಭೋಗ (ನಾ). ದೇವಸ್ಥಾನದ ಖರ್ಚು ವೆಚ್ಚಗಳಿಗಾಗಿ ಕೊಡುವ ಜಮೀನು; ದೇವರಿಗಾಗಿ ಕೊಡುವ ಭೂಮಿ,-ಗ್ರಾಮ: 'ತಿರುವಯ್ಯನು ಆನೆಊರೊಳ್ಕೊಟ್ಟ ದೇವಭೋಗ ಕಣ್ಡುಗ ಗಟ್ಟಿಯು (ಎಕ. X, ಚಿಂತಾಮ. ೪೯-೦೦; 951); ಮಾಚರಸರ ಮಗಂ ಪುದಿಯಣ್ಣ ಗಂಗೇಶ್ವರಕ್ಕೆ ಬಿಟ್ಟ ದೇವಭೋಗದಿ ಗಟ್ಟಿ ಮೂಗಣ್ಡುಗಂ (ಎಕ. X, ಶ್ರೀನಿವಾ. ೧೭-೦೬; ಸು. 1015); ಚಕ್ರವರ್ತಿಯ ದಯೆಯಿಂ ದೇವಭೋಗಂ ಗುಡಿಗೆಱೆಯ ನಾಳುತ್ತಮಿರೆ (ಸೌಇಇ. XX, ೪೬-೨೦; 1072). [ದೇವ + ಭೋಗ]

ದೇವಭೋಳೆ (ಗು). ಮೋಸವನ್ನರಿಯದ; ನಿಷ್ಕಪಟಿಯಾದ; ಮುಗ್ಧ: ನಿಮ್ಮಂಥ ದೇವಭೋಳೇ ಜನರಿಗೆ ಹೀಂಗ ಆಗಬಾರದಾಗಿತ್ತು (ಗಂಗಾಸಾ. ೪); ಪಂಡಿತರು ದೇವಭೋಳೆ ಮನುಷ್ಯರು (ಸಮಜೀ. ೩೨೬); ಅತ್ಯಂತ ಸರಳ ದೇವಭೋಳೆ ಮತ್ತು ಪ್ರೇಮಳಸ್ವಭಾವದ ಒಬ್ಬ ಕ್ರಿಸ್ತೀಯಮಹಿಳೆ ಇರುತ್ತಿದ್ದಳು (ಸ್ಮೃತಿಚಿ. ೨೪೫). [←ಮರಾ. ದೇವಭೋಳಾ]

ದೇವಮಂದಿರ (ನಾ). ದೇವಾಲಯ; ಗುಡಿ: ದೇವಮಂದಿರದಲ್ಲಿ ಆರತಿಯ ಘಂಟಾರವ ಏಳುವದುಂಟು (ಇಪ್ಪಕ. ೩೫೨); ಇಂದಿಗೂ ಆ ದೇವಮಂದಿರ ಒಳಕೋಟೆಯ ಕೊಂಬಿನಂತಿದೆ (ಬೆಳುಮ. ೫೩). [ದೇವ + ಮಂದಿರ]

ದೇವಮಣಿ (ನಾ). ೧. ಸಮುದ್ರಮಥನಕಾಲದಲ್ಲಿ ಕ್ಷೀರಸಮುದ್ರದಿಂದ ಹುಟ್ಟಿದುದೆಂದು ನಂಬಲಾದ ರತ್ನ; ಕೌಸ್ತುಭ: ದೇವಮಣಿಗೂಡಿ ಜಳಧಿಯೊಳಾ ವಿಬುಧವರಾಶ್ವಮೊಗೆದಗಲ್ದಿರ್ಪುದವಾ ದೇವಮಣಿಗೂಡಿ ರಾಜಿಸುವೀ ವಿಪುಳತರಾಶ್ವಯುಗಕದೇಂ ಪಾಸಟಿಯೇ (ರಾಜಶೇ. ೦೨-೦೦೫). ೨. ಬೇಡಿದುದನ್ನು ಕೊಡುವುದೆಂದು ನಂಬಲಾದ ಸ್ವರ್ಗಲೋಕದ ಮಣಿ; ಚಿಂತಾಮಣಿ: ಸುರರಿಗೀತನು ಕಲ್ಪತರು ಭೂಸುರರಿಗೀತನು ದೇವಮಣಿ (ತೊರರಾ. ೬-೮-೫೦). ೩. ಕುದುರೆಯ ಕೊರಳಲ್ಲಿರುವ ಶುಭ ಸೂಚಕವಾದ ಸುಳಿ: "ನಡುಗೊರಲ ಸುಟಿ ದೇವಮಣಿ" (ಮಂಗರಾ. ೮೩-೨೦); ಕೊರಲೊಳ್ ಕಣ್ಗೆಸೆದೊಪ್ಪೆ ದೇವಮಣಿ ಮೇಣ್ ರೋಚಮಾನಂ ಪೊದಟ್ಟಿರೆ ಪೂರ್ವಾಂಗದ ದೋಷಮಂ . . . ಪಿಂಗುಗುಂ (ಲೋಕೋಪ. ೧೧-೮೪); ಮಾರುತಂಗತಿ ವೇಗ ಪಂಚಕಲ್ಯಾಣವಿದೆ ದೇವಮಣಿದೊರೆ ಸುಳಿಗಳಿವೆಯಾ ಸುಲಕ್ಷಣವನಱಿವರಾರು (ಭಾವಜಿಂ. ೭-೧೬).

[ದೇವ + ಮಣ್ಣಿ]

ದೇವಮತಿ (ನಾ). ದೇವತೆಗಳಿಗೆ ಬುದ್ಧಿಯನ್ನು ಕೊಡುವವನು: ದೇವಗತಿ ದೇವಮತಿ ದೇವದುರ್ಲಭನೆಂದು ಕರೆವ ಬಿರುದಿನ ಕಹಳೆಗಳ ಮಹಾರವದೊಳಗೆ ಧರೆ ನಡುಗೆ (ನಂಬಿರ. ೭-೦೧೮). [ದೇವ + ಮತಿ]

ದೇವಮನೋಹರಿ (ನಾ). [ಸಂಗೀತ] ಒಂದು ರಾಗದ ಹೆಸರು: ದೇವಮನೋಹರಿ – ೩೩ನೇ ಮೇಳಕರ್ತ ಖರಹರಪ್ರಿಯದಲ್ಲಿ ಜನ್ಯ (ಸಂಗೀಪಂ. ೧೪೧). [ಸಂ. ದೇವಮನೋಹರೀ]

ದೇವಮನ್ಯ (ನಾ). = ದೇವಮಾನ್ಯ ೧: ಆ ಪನ್ನಿರ್ಮ್ಮತ್ತರ್ಕ್ಕೆಯ್ಗಂ ನಾಲ್ಕುಗೆಯ್ದು [ದೇವ]ಮನ್ಯ[ಗ್ಗಾ]ಗಿ ಬಾಟ್ಟುದು (ಸೌಇಇ. XI-1, ೩೪-೧೩; 925). [<ಸಂ. ದೇವಮಾನ್ಯ]

ದೇವಮಾತೃಕ (ನಾ). ಮಳೆಯ ನೀರಿನಿಂದಲೇ ಬೆಳೆಯನ್ನು ಬೆಳೆಯುವ ಭೂಮಿ: "ಆವುದು ಬೆಳೆಗುಂ ವೃಷ್ಟಿಯಿನಾ ವಿಷಯಂ ದೇವಮಾತೃಕಂ ಸತತಂ" (ವಸ್ತುಕೋ. ೨೬-೩); "ಮಟಿಯ ನೀರಿಂ ಬೆಳೆವ ಮಹಿ ದೇವಮಾತೃಕಂ" (ಮಂಗರಾ. ೨೯-೪); ದೇವ [ಪಾಠಾಂ. ದೆಯ್ವ]ಮಾತೃಕವೆನಿಪ್ಪ ಪೊಲಂ ನವಗಂಧಶಾಳಿಯಂ ಬೆಳೆವುದು (ಪಂಪಭಾ. ೧-೫೪); ಶಾಳಿವನಂ . . . ಸಿತೇಕ್ಷುರಸಪ್ರವಾಹಮಾತೃಕವೆನೆ ಸಂತತಂ ಬೆಳೆಯೆ ಪೆರ್ಬೆಳಸಿಂ ಪುಸಿಯಾಯ್ತು ದೇವಮಾತೃಕವೆಸರೆನ್ನದಾ ನೆಲದ ಕೆಯ್ವೊಲನಂ ಪೆಱತೇ ನೆಂಬುದೋ (ಮಲ್ಲಿಪು. ೨-೧೬); ನದೀಮಾತೃಕಮುಂ ದೇವಮಾತೃಕಮುಮೆಂಬ ಭೇದಮಂ ಬೇರ್ಪಡಿಸಿ (ಪುಷ್ಪಪು. ೨-೦೪ ವ); ದೇವಮಾತೃಕ ನದೀಮಾತೃಕಗಳ ಬಗೆಗೊಳದಾ ನಾಡೊಳು (ತ್ರಿಭುತಿ. ೨-೧೪). [ಸಂ.]

ದೇವಮಾತೃಕೆ (ನಾ). =ದೇವಮಾತೃಕ: ದೇವಮಾತೃಕೆ ನದೀಮಾತೃಕೆಯಾದ ನಾನಾವಿಧ ಬೆಳೆಯ ಭೂಮಿಗಳು . . . ಧಾನ್ಯಸಂದೋಹಕಾವಾಸ ಮಾಗಿರುತಿಹುದು (ನಾಗಕು. ೨-೧೮). [ಸಂ. ದೇವಮಾತೃಕ]

ದೇವಮಾತೆ (ನಾ). ದೇವತೆಗಳ ತಾಯಿ; ಅದಿತಿ: ಮಿತ್ರಾ ವರುಣರನ್ನು . . . ಸತ್ಯಸ್ವರೂಪಳೂ ದೇವಮಾತೆಯೂ ಆದ ಅದಿತಿಯು . . . ಹಡೆದಳು (ಪುಕ್ವಾರ. ೦೩೧). [ದೇವ + ಮಾತೆ]

ದೇವಮಾದಳ (ನಾ). ಒಂದು ಬಗೆಯ ಮರ ಮತ್ತು ಅದರ ಹಣ್ಣು; ದೊಡ್ಡಮಾದಳ : (ಕ). [ದೇವ + ಮಾದಳ]

ದೇವಮಾನ (ನಾ). ೧. ಒಂದು ಅಳತೆಯ ಪ್ರಮಾಣ : ಅನ್ತಿಲ್ಲಿಯ ಸಮಸ್ತ ಅಂಗಡಿಯ ಆವಟದಲು ಹೇಱಿಗೆ ಭತ್ತ ದೇವಮಾನ ೨ ಹೆಜ್ಜುಂಕ ಹೇಱಿಂಗೆ ಭತ್ತ ಬಳ್ಳ ೧ (ನಾಂದೇಡ್. ೩-೨೨ ವ ; 1047) ; ಊರಲ್ಲಿ ಹರದರು ಮಾಱುಗೊಂಡ ಭತ್ತಕ್ಕೆ ಪೊಂಗೆ [ಹಾ]ಗವೊನ್ದುಮಂ ಹೇಱಿನಲ್ಲಿ ದೇವಮಾನವು ಧರ್ಮ್ಮವಿಚಾರದಲ್ಲಿ ಮುದ್ರಾಪಣವುಂ ಇನ್ತೀ ಧರ್ಮ್ಮವಂ ಪ್ರತಿಪಾಳಿಸುವರ ಧರ್ಮ್ಮ (ಕಇಅ. ೪೭-೪-೨೪ ; ಸು. 1152). ೨. ದೇವತೆಗಳ ಲೆಕ್ಕದಲ್ಲಿ ಕಾಲ ಅಥವಾ ಸ್ಥಳದ ಅಳತೆ.

[ದೇವ + ಮಾನ]

ದೇವಮಾನವ (ನಾ). ದೇವತೆಯ ಸ್ವಭಾವದವನು : ಶ್ರೀರಾಮಕೃಷ್ಣ ಪರಮಹಂಸರನ್ನು ಈ ಯುಗದ ದೇವಮಾನವರೆಂದು ಕರೆಯಬಹುದು (ರೂಢಿ). [ದೇವ + ಮಾನವ]

ದೇವಮಾನ್ಯ (ನಾ). ೧. ದೇವತೆಗಳ ಗೌರವಕ್ಕೆ ಪಾತ್ರನಾದವನು ; ಮಹಾತ್ಮ : ಸಾಮಾನ್ಯನಂ ದೇವಮಾನ್ಯಂಗೆತ್ತುದಜ್ಜಿ, ನಿನ್ನಳ್ಕರೂಹೆ ! (ಶ್ರೀರಾಮಾ. ೨೬೨-೨೫೨). ೨. ದೇವತೆಗಳು ಕೊಟ್ಟ ಕೊಡುಗೆ : ಇನ್ ನಿನ್ನ ದಿನಬಾಟ್ವೆ ಪುಟುಗಳ್ಗೆ ಕಳ್ದುಗುಡು ಪೋಗು ದೇವಮಾನ್ಯಂಗಳನ್ (ಬದ್ಯಪ್ರ. ೬-೧೦೩). ೩. ದೇವಾಲಯಗಳಿಗೆ ದಾನವಾಗಿ ಕೊಟ್ಟ ಜಮೀನು ; ಉಂಬಳಿ : ಇಂತೊಪ್ಪುವ ಕುಮಾರನುದಯೋತ್ಸವದಿಂ ದೇವಮಾನ್ಯಾದಿಗಳಂ ಕೊಟ್ಟು ನಾಮಕರಣಂಗೆಯ್ದು (ಹಮ್ಮೀರ. ೨-೨೫ ವ).

[ದೇವ + ಮಾನ್ಯ]

ದೇವಮಾರ್ಗ (ನಾ). ದೇವತೆಗಳು ಸಂಚರಿಸುವ ದಾರಿ ; ಆಕಾಶ.

[ದೇವ + ಮಾರ್ಗ]

ದೇವಮುಖ (ನಾ). ದೇವತೆಗಳಿಗೆ ಬಾಯಿಯಂತಿರುವವನು ; ಅಗ್ನಿ : ಸುರರ ಬಿನ್ನಹವನವಧರಿಸುತಂ ಗೌರೀಶ ಪರಮಸುಖದಾನಂದದಮೃತರಸ ವೀರ್ಯಮಂ ಧರಿಸುವಡೆ ಸಾಮರ್ಥ್ಯ ಹವಿಗಲ್ಲದಿಲ್ಲೆಂದು ದೇವಮುಖ ನಾನನದೊಳು ಕರುಣಿಸುತ (ಲಶಿಜಿಂ. ೧೬-೨೦). [ದೇವ + ಮುಖ]

ದೇವಮುನಿ (ನಾ). ದೇವತೆಗಳ ಋಷಿ ; ನಾರದ : ಆಗಳಾ ಭೋಜರಾಜಂ ದೇವಮುನಿ ನುಡಿದ ನುಡಿಯಂ ಭಾವಿಸಿ (ಜಗವಿ. ೩-೫೭) ; ಇಳಿದು ಧರಣಿಗೆ ಸುಳಿದು ನೀತಿಸ್ಖಲಿತಜಡರನು ತಿದ್ದಿ ತಿಳುಹುವ ಸುಲಭತನದಲಿ ದೇವ ಮುನಿ ನಿನಗಾರು ಸರಿಯೆಂದ (ಕುಮ್ಯಾಸ. ೧-೮೪). [ದೇವ + ಮುನಿ]

ದೇವಮುಳ್ಳು (ನಾ). ಒಂದು ಬಗೆಯ ವನಸ್ಪತಿ : ಮೂತ್ರಕಲ್ಲಿಗೆ ಗುಳಿಗೆಯ ಮಾಡುವ ಕ್ರಮ :–ಕೆಂಪಿನ ಅಂಕೋಲಬೇರು, ಹುಳಿಸೊಪ್ಪು, ಗೇರು, ದೇವಮುಳ್ಳು, ಬಿಳಿಕಣಿಕೆಬೇರು . . . ಅಂಬಿಲದಲ್ಲಿ ಅರೆದು ಮೂತ್ರ ಕಲ್ಲಿಗೆ ಗುರುಗುಂಜಿಯ ಪ್ರಮಾಣಕ್ಕೆ ಕೊಡುವುದು (ವಿವೈವಿ. ೧೨೪).

[ದೇವ + ಮುಳ್ಳು (<ಮುಳ್)]

ದೇವಮೂಢತ್ವ (ನಾ).=ದೇವತಾಮೂಢ : ಕೇವಲಜ್ಞಾನದರ್ಶನಸುಖ ವೀರ್ಯದಿ ನಿಜಶುದ್ಧಗುಣಂಗಳಪ್ಪ . . . ನಿಜಶುದ್ಧಾತ್ಮನಂ ದೇವ ನೆಂಬುದು ಅಂತಪ್ಪ ನಿಜಶುದ್ಧಾತ್ಮದೇವನನಱಿದು ನಂಬದುದೆ ದೇವ ಮೂಢತ್ವಮೆಂಬುದು (ಪಸಾರ. ೪೬೧). [ಸಂ.]

ದೇವಯಜನ (ನಾ). ಯಜ್ಞವೇದಿಕೆ : ಸರಯೂನದಿಯ ತೀರದಲ್ಲಿ ಭವ್ಯವಾದ ದೇವಯಜನವೊಂದು ಸಿದ್ಧವಾಗಿದೆ (ಮಹಾಣ. ೧೦೨) ; ಯಾಗಶಾಲೆಗೆ ದೇವಯಜನವೆಂದು ಹೆಸರು (ಮಹಾಣ. ೧೦೨ ಅಡಿಟಿ). [ಸಂ.]

ದೇವಯಜ್ಞ (ನಾ). ದೇವತೆಗಳ ಪ್ರೀತ್ಯರ್ಥವಾಗಿ ಗೃಹಸ್ಥನು ಪ್ರತಿ ದಿನವೂ ಮಾಡಬೇಕಾದ ಪಂಚಯಜ್ಞಗಳಲ್ಲಿ ಒಂದು ; ಅಗ್ನಿಯಲ್ಲಿ ಹೋಮ ಮಾಡಬೇಕಾದ ಔಪಾಸನ ಮೊದಲಾದ ಕರ್ಮ : ಬಳಿಕ ದೇವಯಜ್ಞ ಪಿತೃಯಜ್ಞ ಮನುಷ್ಯಯಜ್ಞ ಭೂತಯಜ್ಞ ಬ್ರಹ್ಮಯಜ್ಞಾದಿಗಳಂ ಮಾಳ್ಪಾತನಾಗಿ (ವಿವೇಕ. ೧೩೪) ; ದೇವಯಜ್ಞ ಮತ್ತು ಬ್ರಹ್ಮಯಜ್ಞ ಎಂಬ ದೈನಂದಿನದ ಕರ್ತವ್ಯನಿರ್ವಹಣದಿಂದ ಗೃಹಸ್ಥನು ಲೋಕಸಂಗ್ರಹ ನಿರತನಾಗಿರಬೇಕು (ಹುಳ್ಳಾರ. ೯೦ ಪೀಠಿಕೆ). 'ಪಂಚಯಜ್ಞ' ಪರಾ.

[ದೇವ + ಯಜ್ಞ]

ದೇವಯಾನ (ನಾ). ೧. ದೇವತೆಗಳು ಸಂಚರಿಸುವ ವಾಹನ,–ವಿಮಾನ ಮೊದಲಾದುವು. ೨. ಹೆಣವನ್ನು ಹೊರಲು ಕಟ್ಟುವ ಸಾಧನ ; ಚಟ್ಟ : ಒಳಗೆ ಬುದವರು ತಾವು ತಂದಿದ್ದ ದೇವಯಾನವನ್ನು ಕೆಳಗಿಟ್ಟು . . . ಗೋಣಿಯನ್ನು ಮಂಚದಿಂದೆತ್ತಿ ಅದರ ಮೇಲಿಟ್ಟರು (ರಾಜಾಮ. ೧೪೫). ೩. [ವೇದಾಂತ] ಪರಲೋಕದ ದಾರಿ ; ಬ್ರಹ್ಮಲೋಕದ ಮಾರ್ಗ : ದೇವತೋಪಾಸಕರ ದೇವಯಾನ (ಇದಕ್ಕೆ ಶುಕ್ಲಮಾರ್ಗವೆಂದೂ ಅರ್ಚಿರಾದಿಮಾರ್ಗವೆಂದೂ ಹೆಸರು) (ಅಮೃತ. ೬-೨೨ ಅಡಿಟಿ) ; ರಾಜನು ಆತನನ್ನು ದೇವಯಾನ, ಪಿತೃಯಾನ ಮಾರ್ಗಗಳ (ಮರಣಾನಂತರ ಆತ್ಮನ ಗತಿಗಳು) ಸಾಧನಗಳೇನೆಂಬುದನ್ನು ಬಲ್ಲೆಯಾ ? ಎಂದು ಕೇಳಿದನು (ಭಾರದ. ೪೦) ; ಮುಕ್ತಿಸಾಧಕನಿಗೆ ಇರುವ ಪರಲೋಕಮಾರ್ಗವು ಎರಡು. ೧. ದೇವಯಾನ. ೨. ಪಿತೃಯಾನ. 'ದೇವಯಾನ' ದಿಂದ ಪ್ರಯಾಣಮಾಡುವವನು ಮತ್ತೆ ಭೂಮಿಯಲ್ಲಿ ಹುಟ್ಟುವುದಿಲ್ಲ. ಬ್ರಹ್ಮಲೋಕವನ್ನು ಸೇರಿ ಅಲ್ಲಿ ಜ್ಞಾನಮಹಿಮೆಯಿಂದ ಮುಕ್ತಿಯನ್ನು ಪಡೆಯುತ್ತಾನೆ. ಇದು ಕ್ರಮಮುಕ್ತಿಮಾರ್ಗ. 'ಪಿತೃಯಾನ'ದಿಂದ ಪ್ರಯಾಣ ಮಾಡುವವನು ತನ್ನ ಪುಣ್ಯವು ಮುಗಿದ ಮೇಲೆ ಮತ್ತೆ ಭೂಮಿಯಲ್ಲಿ ಹುಟ್ಟಬೇಕಾಗುತ್ತದೆ. ಜ್ಞಾನಿಗಳು ದೇವಯಾನದಿಂದಲೂ ಕರ್ಮಿಗಳು ಪಿತೃಯಾನದಿಂದಲೂ ಮುಕ್ತಿಗೆ ಹೋಗುತ್ತಾರೆ. [ದೇವ + ಯಾನ]

ದೇವಯು (ನಾ). ದೇವರಲ್ಲಿ ಭಕ್ತಿಯುಳ್ಳವನು ; ದೈವಭಕ್ತ : ದೇವಯಜನದಲ್ಲಿ ಈ ಕೊನೆಯಿಂದ ಆ ಕೊನೆಯವರೆಗೆ ಇದ್ದವರೆಲ್ಲರೂ ದೇವಯುಗಳಾಗಿ ಶ್ರದ್ಧಾಭಕ್ತಿನಮ್ರರಾಗಿ ಕಾದಿದ್ದಾರೆ (ಮಹಾಣ. ೧೦೪) ; ದೇವಯು–ದೇವತೆಗಳು ಬೇಕು ಎನ್ನುವ ಶ್ರದ್ಧಾವಂತರು (ಮಹಾಣ. ೧೦೪ ಅಡಿಟಿ). [ಸಂ.]

ದೇವಯುಗ (ನಾ). ಮನುಷ್ಯರ ನಾಲ್ಕುಯುಗಗಳ ಕಾಲ ; ಮನುಷ್ಯ ಲೋಕದ ೩೬೦ ವರ್ಷಗಳಿಗೆ ದೇವಲೋಕದ ಒಂದು ವರ್ಷವಾಗುತ್ತದೆ. ಇಂಥ ದೇವವರ್ಷಗಳು ೪೮೦೦ ಆದರೆ ಕೃತಯುಗ, ೩೬೦೦ ಆದರೆ ತ್ರೇತಾಯುಗ, ೨೪೦೦ ಆದರೆ ದ್ವಾಪರಯುಗ ಮತ್ತು ೧೨೦೦ ಆದರೆ ಕಲಿಯುಗ. ಒಟ್ಟು ೧೨೦೦೦ ವರ್ಷಗಳಾದರೆ ಒಂದು ದೇವಯುಗ ಅಥವಾ ಮನುಷ್ಯರ ಚತುರ್ಯುಗಗಳಾಗುತ್ತವೆ : ೭೧ ದೇವಯುಗಕ್ಕೆ ಮನ್ವಂತರ (ಸಿದ್ಧಾಂತಿ. ೩೯). [ದೇವ + ಯುಗ]

ದೇವಯೋನಿ (ನಾ). ೧. ದೇವಜಾತಿಗೆ ಸೇರಿದವನು ; ದೇವತೆ ; ಗಂಧರ್ವ, ಕಿನ್ನರ ಮುಂತಾದವರು : "ಖೇಚರ ಕಿನ್ನರ ಯಕ್ಷ ಪಿಶಾಚರ್ ಗಂಧರ್ವರಪ್ಸರಃ ಪ್ರಕರಂ ದೋಷಾಚರರೆಂದದ್ಭುತಗುಣಗೋಚರರ ವರೆಯ್ದೆ ದೇವಯೋನಿಗಳೆನಿಪರ್" (ವಸ್ತುಕೋ. ೧೦-೫೪) ; "ಕಿನ್ನರರು ಗಂಧರ್ವರಪ್ಸರರು . . . ದೇವಯೋನಿಗಳೆನಿಕ್ಕುಂ" (ಮಂಗರಾ. ೧೭-೧೭). ೨. ಅಗ್ನಿಯನ್ನು ಉತ್ಪಾದಿಸುವ ಮರದ ಸಾಧನ ; ಅರಣಿ.

[ದೇವ + ಯೋನಿ]

ದೇವಯ್ಯ (ನಾ). ಒಬ್ಬಾತನ ಹೆಸರು : ದಣ್ಡನಾ[ಯ]ಕ ದೇವಯ್ಯಂ ಊರನಾಳೆ (ಸೌಇಇ. XX, ೧೫-೧೨ ; 904) ; ಮೊಳಿಯನೂರ ದೇವಯ್ಯನುಂ . . . ಧರ್ಮ್ಮರಾಸಿ ಭಟಾರರ ಕಾಲಂ ಕರ್ಚ್ಚಿ ಕೊಟ್ಟ ಸ್ಥಿತಿ (ಎಕ. XI, ಚಿತ್ರದು. ೭೬-೨೦ ; 937). [ದೇವ + ಅಯ್ಯ]

ದೇವರ್, ದೇವರು (ನಾ). ೧. ಪರಮಾತ್ಮ ; ಭಗವಂತ : ನಮ್ಮ ದೇವರ್ ಬಂದು ಕಾಯದಿರೆ, ಅವನ ಕಯ್ ತಡೆಯದಿರೆ . . . ಅದುವೆ ನಾಮ್ ನಾಯ್‌ಪಾಲ್ ಶವಂಗಳ್ ! (ಅಶ್ವತ್ಥಾ. ೪೨-೩). ೨. ರಾಜ, ಗುರು, ಹಿರಿಯ ಮುಂತಾದವರನ್ನು ಕುರಿತು ಗೌರವದಿಂದ ಹೇಳುವ ಮಾತು (ತಾವು ಎಂಬಂತೆ) : ದೇವರ ಬಾಹುಬಳಮಜೇಯಮುಮಸಹಾಯ ಮುಮಪ್ಪುದಾದೊಡಂ . . . ದೇವರ್ ನೆಗಟಲಾಗದೇನಂ ನೆಗಟ್ಟೊಡಂ ಕುರುಪಿತಾಮಹನೊಳಾಳೋಚಿಸಿ ನೆಗಟ್ಟುದು (ಪಂಪಭಾ. ೦೩-೩೦೫); ದೇವರೆ ಭಾಜನಂ ವಿದಿತ ರತ್ನಚಯಕ್ಕೆ ದಲೆಂದು ತನ್ನ ಸದ್ಭಾವದಿನೆನ್ನನಾಳ್ದನ ಮಗಳ್ ಪದಪಿಂದಮೆ ತಂದಳ್ (ಕಾದಂಪೂ. ೩೭) : ಅದು ಕಾರಣದಿನಾಕೆ ದಶಮಾವಸ್ಥೆಗೆ ಪಕ್ಕಾಗದನ್ನೆಗಮಿದಕ್ಕೆ ತಕ್ಕುದಂ ದೇವರ್ ಸಮಕಟ್ಟುವುದು (ಚಂದ್ರಪು. ೩-೧೩೬ ಪ). ದೇವರು : ೧. ತಾವೆ ದೇವರೆಂಬ ಅಸುರರ ಕಾನನವ ತಱಿದೊಟ್ಟುವ . . . ವ್ಯಾಸರಾಯರಿರಲು (ಪುರಂದ. ೪-೨-೨); ದೇವರಿಗೆ ಸೇರದ ದೇಶವಿಲ್ಲ, ದೇವರಿಗೆ ತಿಳಿಯದ ಭಾಷೆಯಿಲ್ಲ (ಚಿಕಂಗಾ. ೨೭೪) ; ದೇವರು ಕೊಟ್ಟರೂ ಪೂದಾರಿ ಕೊಡ (ಗಾಪ). ೨. ಹೊತ್ತಿ ಹೊಗೆಪ ಪರಾಕ್ರಮಾಗ್ನಿಯ ತುತ್ತು ಪದ್ಮವ್ಯೂಹ ದೇವರು ಚಿತ್ತಯಿಸುವುದು ಹೊತ್ತುಗಳೆಯದೆ ಎನ್ನ ಕಳುಹೆಂದ (ಕುಪ್ಪಾಟ್ರೋ. ೩-೪೩) ; ಸಿಟ್ಟು ಮಾಡಬೇಡಿ ದೇವರು (ದೇವಹೆಂ. ೦೯೩). ೩. ದೇವತಾವಿಗ್ರಹ : ದೇವರಿಲ್ಲದ ಗುಡಿಯು ಪಾಳು ಬಿದ್ದಂಗಡಿಯು (ಕನಕ. ೩೦-೧) ; ದೇವರಿಲ್ಲದ ಗುಡಿಯಂತೆ ಅದರಲ್ಲಿ ಮಧುವಿರಲಿಲ್ಲ (ಎಳೆಕ. ೩೯).

ದೇವರ ಅನುಗ್ರಹ = ದೇವರಿಂದುಂಟಾಗುವ ದಯೆ, – ಕರುಣೆ : ದೇವರ ಅನುಗ್ರಹದಿಂದ ಯಾವ ತೊಂದರೆಯೂ ಆಗುವುದಿಲ್ಲ (ಪದ್ಮಸ.೦೨); ನಿಮ್ಮ ಪಾಲಿಗೆ ದೇವರ ಅನುಗ್ರಹವಿದೆ (ದೇವಹೆಂ. ೦೮೩). ದೇವರ ಆಣೆ, ದೇವರಾಣೆ = ಭಗವಂತನ ಹೆಸರಿನಲ್ಲಿ ಮಾಡುವ ಪ್ರಮಾಣ : ನೂರು ದೇವರ ಆಣೆ . . . ನಾನು ಯಾವ ತಪ್ಪನ್ನು ಮಾಡಿಲ್ಲ (ಪದ್ಮಸ. ೩೭) : ಅಡಿಗಡಿಗೆ ದೇವರಾಣೆ ಅಡಿಗಡಿಗೆ ಭಕ್ತರಾಣೆ ... ಎಂಬ ವಚನವೇ ಹೊಲ್ಲ (ಬಸವ. ೦೭೭) ; ದೇವರಾಣೆಗೂ ಇದು ನಟನೆಯಲ್ಲ (ಮುತ್ತೈದೆ. ೩೩). ದೇವರ ಒಕ್ಕಲು = ಒಂದು ದೇವತೆಯನ್ನು ತಮ್ಮ ಮನೆದೇವತೆಯನ್ನಾಗಿ ಪೂಜಿಸುವ ಮನೆತನ,–ವಂಶ : ಲಗ್ನ ಮೊದಲಾದ ಮಂಗಲ ಕಾರ್ಯಗಳಲ್ಲಿ ಈ ದೇವರ ಒಕ್ಕಲುಳ್ಳವರು ಗುಗ್ಗಳ ಹೊತ್ತಿಸಿ ನಂದಿಯ ಆಡುತ್ತಾರೆ (ಕನ್ನಜಾ. ೮). ದೇವರ ಒಡವೆ = ದೇವತಾಮೂರ್ತಿಗೆ ತೊಡಿಸುವ ಆಭರಣ : ಕೋಟಿಐತಾಳರು ಅಲಂಕರಿಸಿದ್ದ ದೇವರ ಒಡವೆಗಳನ್ನು ಉಗ್ರಾಣದ ಪೆಟ್ಟಿಗೆಯ ಒಳಸೇರಿಸಿ . . . ಮನೆಗೆ ಬಂದರು (ದೇವಹೆಂ. ೧೧). ದೇವರಂಗಡಿ = ದೇವಾಲಯಕ್ಕೆ ಸೇರಿದ ಅಂಗಡಿ : ಮತ್ತವಂಗಡಿಯರೆಯಂಗಡಿ ದೇವರಂಗಡಿ ಮಾನ್ಯದಂಗಡಿಯೆಂನದುಡಿ ಸುರಿಯಂ ಕೊಂಡು (ಕಇ. II, ೨೧-೨೩ ; 1147). ದೇವರ ಕಂಡಿ = ದೇವರನ್ನಿಡುವ ಮಾಡ,–ಗೂಡು : ದೇವರ ಕಂಡಿಯಲ್ಲಿ ಪ್ರಸಾದ ಇದೆ (ದೇವಹೆಂ. ೧೩). ದೇವರ ಕರೆ ಬರು = ಸಾವು ಬರು ; ಅವಸಾನಕಾಲವುಂಟಾಗು : ದೇವರ ಕರೆ ಬಂದದ್ದರಿಂದ ಅವಳು ಹೋದಳು (ಶ್ಯಾಮತಾ. ೨೮೮). ದೇವರ ಕಲ್ಲು = ದೇವರ ಆಕಾರಗಳನ್ನು ಕೆತ್ತಿರುವ ಕಲ್ಲು ; ದೇವರೆಂದು ಭಾವಿಸಿರುವ ಕಲ್ಲು: ಅಲ್ಲಲ್ಲಿ ಸಣ್ಣ ಸಣ್ಣ ದೇವರ ಕಲ್ಲುಗಳಿವೆ (ರಕ್ಷರೂ. ೬೦). ದೇವರ ಕಿರೀಟ = ದೇವರಿಗೆ ತೊಡಿಸಿರುವ ಕಿರೀಟ : ಯಾವುದೋ ಮತ್ತೇರಿದ ದೇವರ ಕಿರೀಟದಿಂದ ಉದುರಿದ ರತ್ನ (ಮನೆಜ.೬೮); ಮಂಗಳಾರತಿಯ ಬೆಳಕಿನಲ್ಲಿ ದೇವರ ಕಿರೀಟವು ಥಳಥಳನೆ ಹೊಳೆಯುತ್ತಿತ್ತು (ರೂಢಿ). ದೇವರ ಕೃಪೆ = ದೇವರ ಅನುಗ್ರಹ : ಅಮ್ಮಾ, ದೇವರ ಕೃಪೆ ಯಾವಾಗಲೂ ಇರುತ್ತದಲ್ಲವೇ ? (ಶ್ಯಾಮತಾ. ೨೨೬) ; ದೇವರ ಕೃಪೆ ಇದ್ದರೆ ಎಲ್ಲಾ ಕೆಲಸ ಹೂವಿನ ಸರ ಎತ್ತಿದ ಹಾಗೆ ಆಗುತ್ತೆ (ರೂಢಿ).

ದೇವರ ಕೊಳಗ=ದೇವಗೊಳಗ : (ಎಸಮ್ಮ. XV, ೩೩). ದೇವರ ಕೋಣೆ= ಮನೆಯಲ್ಲಿ ದೇವರನ್ನಿಡುವ ಕೊಠಡಿ ; ಪೂಜಾಗೃಹ : ಆಬೋಲೀನ ಮೆಲ್ಲನೆ ಎದ್ದು ಕೈಕಾಲು ತೊಳೆದು ದೇವರ ಕೋಣೆ ಹೊಕ್ಕು . . . ಪ್ರಾರ್ಥಿಸಹತ್ತಿದಳು (ಆಬೋಲೀ. ೧೮) ; ತಾಯಿ ದೇವರ ಕೋಣೆಗೆ ಹೋಗಿ ದೇವರ ಮೊರೆ ಹೊಕ್ಕಳು (ಶ್ಯಾಮತಾ. ೧೩). ದೇವರ ಗಂಟು = ದೇವರಿಗಾಗಿ ಸಂಗ್ರಹಿಸಿ, ಮೀಸಲಾಗಿಟ್ಟ ಹಣ : ದೇವರ ಗಂಟನ್ನು ಬಿಚ್ಚಿ ಹಣ ತೆಗೆದುಕೊಂಡು ಬಂಗಾರದ ಅಣಸುಗಳನ್ನು ಮಾಡಿಸಿತ್ತು (ಬೆಳುಮ. ೦೭೮). ದೇವರ ಗಂಡ = ದೇವರಿಗೆ ಒಡೆಯನಾದವನು ; ದೇವಾಧಿದೇವ : ದೇವಾದಿದೇವ ದೇವರ ಗಂಡ ದೇವರಾದಿತ್ಯ . . . ಎಂಬ ಧ್ವನಿ ತೀವಿದ ಮೃದಂಗಭೇರೀರವಂಬೆರಸಿ ಹುಟ್ಟಿತ್ತು ಗಗನಾಂಗಣದೊಳು (ಸೋಮಚ. ೪-೨೮). ಎಲ್ಲಾ ದೇವರ ಗಂಡ . . . ಶಿವಬಿಲ್ಲ ಮುಱಿದ ಪ್ರಚಂಡ (ಪುರಂದ. ೧-೬೬-೯). ದೇವರ ಗುಡಿ = ದೇವಾಲಯ; ದೇವಸ್ಥಾನ : ದೇವರ ಗುಡಿ ಮಠ ಮನೆಯೆಲ್ಲ ಮಣ್ಣು ಆವಾಗ ಅಡುವ ಮಡಕೆಯು ತಾ ಮಣ್ಣು (ಪುರಂದ. ೨-೮೦-೨) ; ಬಸವಣ್ಣ ದೇವರ ಗುಡಿಗೆ ಕರೆತರುತ್ತಿದ್ದರೆ ಅದನ್ನು ಬೆನ್ನಟ್ಟಿಕೊಂಡು ಬಂದರು ಜನ (ಬೆಳುಮ. ೧೮೧). ದೇವರ ಗುಡ್ಡಿ = ಕಳಸಪೂಜೆ ಮಾಡುವ ಸೇವೆಗಾಗಿ ಅವಿವಾಹಿತಳಾಗಿಯೇ ಉಳಿಯುವ ಹೆಂಗಸು : (ಎಸಮ್ಮ. II, ೭). ದೇವರ ಗೂಳಿ= ದೇವರ ಹೆಸರಿನಲ್ಲಿ ಬಿಟ್ಟಿರುವ ಹೋರಿ ; ಬಸವ : ದೇವರ ಹೆಸರಿನಲ್ಲಿ ಗೂಳಿಯೊಂದನ್ನು ಬಿಡುವ ಸಂಪ್ರದಾಯವು ಹಿಂದೆಯೂ ಇದ್ದಿತು, ಈಗಲೂ ಇದೆ. ಆ ಗೂಳಿಯನ್ನು 'ದೇವರ ಗೂಳಿ', 'ದೇವರ ಎತ್ತು' ಎಂದು ಕರೆಯುವುದುಂಟು (ಕಶಾಅ. ೦೯೯). ದೇವರ ಘಟಿಗೆಯ ಮಾಣಿ = ದೇವಾಲಯಗಳಲ್ಲಿ ದೇವರ ಅಭಿಷೇಕಕ್ಕೆ ನೀರನ್ನು ತರುವ ಹುಡುಗ : ದೇವರ ಘಟಿಗೆಯ ಮಾಣಿಗಳು ನಾಲ್ವರ್ಗ್ಗಂ ಮತ್ತರು ೫೦ (ಕಇಅ. ೯-೩-೩೦೬ : 1076). ದೇವರ ಚೌಕಿ = ದೇವರನ್ನು ಇಡುವ ನಾಲ್ಕು ಕಾಲಿನ ಪೀಠ ; ಮಂದಾಸನ : ಅಲ್ಲೇ ಶಾಲೆ. ಅದರ ಒಂದು ಮೂಲೆಯಲ್ಲೇ ಮಾವನವರು ದೇವರ ಚೌಕಿಯನ್ನಿಟ್ಟಿದ್ದರು (ಸ್ಮೃತಿಜಿ. ೩೩). ದೇವರ ತೀರ್ಥ = ದೇವರಿಗೆ ಅಭಿಷೇಕ ಮಾಡಿದ ಪವಿತ್ರಜಲ : ಕೆಲವು ಸಂಪ್ರದಾಯಸ್ಥರು ದಿನವೂ ದೇವರ ಪೂಜೆ ಮಾಡಿ ಮೊದಲು ದೇವರ ತೀರ್ಥವನ್ನು ಸ್ವೀಕರಿಸಿದ ನಂತರವೇ ಬೇರೆ ಆಹಾರವನ್ನು ತೆಗೆದುಕೊಳ್ಳುತ್ತಾರೆ (ರೂಢಿ). ದೇವರ ತೇರು = ದೇವರನ್ನು ಕೂರಿಸಿ ಮೆರವಣಿಗೆ ಮಾಡುವ ರಥ ಹಾಗೂ ಅಂದು ಆಚರಿಸುವ ಉತ್ಸವ : ದೇವರ ತೇರನ್ನು ನೋಡಲು ಹಳ್ಳಿಗೆ ಹಳ್ಳಿಯೇ ಸೇರಿದೆ (ರೂಢಿ). ದೇವರ ದಯ = ದೇವರ ಅನುಗ್ರಹ : ಇಷ್ಟರವರೆಗೆ ದೇವರ ದಯದಿಂದ ಏನೂ ಆಗಿಲ್ಲ (ದೇವಹೆಂ. ೧೯೮) ; ನಾವು ದೇವರ ದಯದಿಂದ ಅನುಕೂಲವಾಗಿದೀವಿ (ದೂಬೆಟ್ಟ. ೮೩). ದೇವರ ದರ್ಶನ = ದೇವರನ್ನು ನೋಡುವುದು : ದೇವರ ದರ್ಶನವಾಗಬೇಕಿದ್ದರೆ ಹೇಳಿ. ಬಾಗಿಲು ತೆರೆಯುತ್ತೇನೆ (ದೇವಹೆಂ. ೦೯೬); ತುಸು ಹೊತ್ತು ಕುಳಿತು ದೇವರ ದರ್ಶನ ಮಾಡಿಕೊಂಡು ಹಿಂತಿರುಗುತ್ತಿದ್ದಳು (ಶ್ಯಾಮತಾ. ೯೬). ದೇವರ ದೀಪ=ದೇವರ ಮುಂದೆ ಹಚ್ಚಿಡುವ ಸೊಡರು : ದೇವರ ದೀಪವೆಂದ ಮಾತ್ರಕ್ಕೆ ಅದರ ಬುಡಕ್ಕೆ ಕತ್ತಲೆ ಇರುವುದು ಸುಳ್ಳಲ್ಲವಷ್ಟೆ (ಮುತ್ತೈದೆ. ೮೭) ; ದೇವರ ದೀಪಕ್ಕೆ ಇನ್ನೆರಡು ಸವಟು ಎಣ್ಣೆ ಹಾಕಿ . . . ಕುಳಿತಳು (ನಿರಾಧ. ೩೮). ದೇವರ ನಾಮ = ಪುರಂದರದಾಸರೇ ಮೊದಲಾದವರು ಬರೆದಿರುವ ಭಕ್ತಿ ಪ್ರಧಾನವಾದ ಹಾಡು,–ಕೀರ್ತನೆ: ದೇವಿಕಾಮಾತೆಯು . . . ದೇವರ ನಾಮಗಳನ್ನೂ ಕೀರ್ತನೆಗಳನ್ನೂ ಹಾಡಬೇಕೆಂದು ವೈಷ್ಣವಿಯನ್ನು ಪ್ರಾರ್ಥನೆ ಮಾಡುತ್ತಿದ್ದಳು (ಶ್ರೀರಾಯ. ೧೦೩). ದೇವರ ನಿರ್ಮಾಲ್ಯ = ದೇವರಿಗೆ ಪೂಜೆ ಮಾಡಿದ ನಂತರ, ಮರುದಿನ ಪೂಜಿಸುವ ಮುಂಚೆ

ತೆಗೆದ ಬಾಡಿದ ಹೂವು : ದೇವಾಲಯದಲ್ಲಿ ಈ ದಿವಸ ದೇವರ ನಿರ್ಮಾಲ್ಯವೇ ನಾಲ್ಕು ಮಂಕರಿಯಷ್ಟಿತ್ತು (ರೂಢಿ). ದೇವರ ನೈವೇದ್ಯ = ದೇವರಿಗೆ ಅರ್ಪಿಸಲು ಮಾಡಿದ ಅಡುಗೆ, ತಿಂಡಿ, ತಿನಿಸು ಮುಂತಾದುವು: ತಂದೆಯವರು ನಮ್ಮನ್ನು ಕರೆದು ದೇವರ ನೈವೇದ್ಯವನ್ನು ನಮಗೆ ಕೊಟ್ಟರು (ಶ್ಯಾಮತಾ. ೦೫೬) ; ಪುರೋಹಿತರ ಮನೆಯಲ್ಲಿ ದೇವರ ನೈವೇದ್ಯವಾದ ಬಳಿಕವೇ ಮನೆಯಲ್ಲಿ ಎಲ್ಲರಿಗೂ ಊಟ (ರೂಢಿ). ದೇವರ ಪಾದ = ವಿಷ್ಣುವಿನ ಪಾದ ; ದೇವರೆಂದು ಪೂಜಿಸುವ ವಿಷ್ಣು ಪಾದದ ಆಕೃತಿ ಅವರು ಯಾತ್ರೆ ಮಾಡಿದಾಗ ಪ್ರಯಾಗದಿಂದ ನಾಲ್ಕು ಜೊತೆ ದೇವರ ಪಾದಗಳನ್ನು ತಂದರು (ರೂಢಿ). ದೇವರ ಪಾದ ಸೇರು = ಮರಣ ಹೊಂದು ; ಸಾಯು : ಬಹಳ ಚಿಕ್ಕ ವಯಸ್ಸಿನಲ್ಲಿಯೇ ಆಕೆ ದೇವರ ಪಾದ ಸೇರಿಬಿಟ್ಟಳು (ರೂಢಿ). ದೇವರ ಪೀಠ = ದೇವರನ್ನು ಕೂಡಿಸುವ ಆಸನ,-ಗದ್ದುಗೆ : ದೇವರ ಪೀಠದಿಂದ ಧ್ವಜಕಟ್ಟೆಯ ತನಕ ಸಾಲಾಗಿ ಇಟ್ಟ ತೊಳೆದ ಹೊಳೆಯುವ ಹರಿವಾಣದಲ್ಲಿ ತುಂಬಿದ ಅರಳು ಪಂಚಕಜ್ಜಾಯದ ನೈವೇದ್ಯ (ದೇವಹೆಂ. ೧). ದೇವರ ಪೂಜೆ = ದೇವರಿಗೆ ಮಾಡುವ ಅರ್ಚನೆ,-ಆರಾಧನೆ : ಧೂಪಾರತಿಯ ನೋಡುವ ಬನ್ನಿ ನಮ್ಮ ಗೋಪಾಲಕೃಷ್ಣದೇವರ ಪೂಜೆಯ (ಪುರಂದ. ೪-೪ ಪಲ್ಲವಿ) ; ಗಂಗೆ ದೇವರ ಪೂಜೆಗಾಗಿ ಹೂಗಳನ್ನು ಕೊಯ್ಯುತ್ತಾಳೆ (ಕಪಪು. II, ೧೫) ; ತಂದೆಯವರು ದೇವರ ಪೂಜೆ ಮಾಡಿದರು (ಶ್ಯಾಮತಾ. ೦೫೬). ದೇವರು ಪೆಟ್ಟಿಗೆ = ದೇವರನ್ನಿಡುವ ಸಂಪುಟ : ದೇವರ ಪೆಟ್ಟಿಗೆ ತೆಗೆದು ಶಾಲ ಗ್ರಾಮ ಸಾವಿರ ನುಂಗುವನೆ (ಪುರಂದ. ೨-೯೩-೧). ದೇವರ ಪ್ರದಕ್ಷಿಣೆ = ದೇವರಿಗೆ ಭಕ್ತಿಯ ಸೂಚಕವಾಗಿ ಬಲಗಡೆಯಿಂದ ಸುತ್ತುಹಾಕುವುದು : ದೇವಸ್ಥಾನವನ್ನು ಪ್ರವೇಶಿಸುವುದಕ್ಕೆ ಮುಂಚೆ ಪ್ರಾಕಾರದಲ್ಲಿ ದೇವರ ಪ್ರದಕ್ಷಿಣೆ ಮಾಡಬೇಕು (ರೂಢಿ). ದೇವರ ಪ್ರಸಾದ = ದೇವರಿಗೆ ಅರ್ಪಿಸಿ ತೆಗೆದುಕೊಂಡ ನೈವೇದ್ಯ ಮುಂತಾದುವು : ಎಷ್ಟು ಸಿಹಿ ! ದೇವರ ಪ್ರಸಾದವನ್ನು ಬಿಟ್ಟರೆ ಇನ್ನಿಲ್ಲ ! (ಕಾನೂರು. ೫೦೦). ದೇವರ ಪ್ರಾರ್ಥನೆ = ದೇವತಾಸ್ತುತಿ : ಜಾನಕಿ ದೇವರ ಪ್ರಾರ್ಥನೆ ಮಾಡುವಾಗ ಗಂಡನ ಮನೋಭಾವವನ್ನು ಮನಸ್ಸಿನಲ್ಲಿಟ್ಟುಕೊಂಡೇ ಮಾಡತೊಡಗಿದಳು (ಮುತ್ತೈದೆ. ೦೨೧). ದೇವರಭಿಷೇಕ = ದೇವರಿಗೆ ಮಾಡಿಸುವ ಮಂಗಳ ಸ್ನಾನ ; ಮಂಗಳಕರವಾದ ನೀರು, ಹಾಲು ಮುಂತಾದ ದ್ರವವನ್ನು ದೇವರಿಗೆ ಎರೆಯುವುದು : ದೇವರಭಿಷೇಕದ ನೀರನ್ನೇ ತೀರ್ಥ ಎಂದು ಕರೆಯುತ್ತಾರೆ (ರೂಢಿ). ದೇವರ ಮಂಟಪ = ದೇವರ ಚೌಕಿ : ದೇವರ ಮಂಟಪದ ಮುಂದೆ ಶೇಷಪ್ಪಮಾಸ್ತರರು ಕೈ ಜೋಡಿಸಿಕೊಂಡು ನಿಂತಿದ್ದರು (ಮುತ್ತೈದೆ. ೨೬೦) ; ಚಿನ್ನ, ಆಭರಣ, ದೇವರ ಮಂಟಪದ ಬೆಳ್ಳಿ . . . ಅವರ ಸಂಪತ್ತನ್ನು ಸಾರುತ್ತಿದ್ದುವು (ಕರುಕ. ೧೭೦). ದೇವರ ಮಕ್ಕಳು = ಬೆಸ್ತರು : ಯಾ ಗ್ರಾಮಕ್ಕೆ ದೇವರ ಮಕ್ಕಳು ಕುಳಗಾರರಾಗಿ (ಮೈಆರಿ. ೧೯೨೯, ೧೮-೨೭ ; 1402). ದೇವರ ಮನೆ = ದೇವರ ಕೋಣೆ : ದೇವರ ಮನೆಯಲ್ಲಿ ಗಂಟೆಯ ಗಣಗಣ ಸಪ್ಪಳವಾಯಿತು(ಮುತ್ತೈದೆ. ೨೬೦); ಕೈತಾನ . . . ದೇವರ ಮನೆಯಲ್ಲಿದ್ದ ಆಬೋಲೀನಳನ್ನು ಸಮೀಪಿಸಿದ (ಆಬೋಲೀ. ೨೧). ದೇವರ ಮರ = ೧. ದೇವಲೋಕದ ಮರ ; ಕಲ್ಪವೃಕ್ಷವೇ ಮೊದಲಾದುವು : "ಮಂದಾರಃ, ಪಾರಿಜಾತಕಃ, ಹರಿಚಂದನಃ, ಕಲ್ಪವೃಕ್ಷಃ, ಸಂತಾನಃ-ಈ ೫ ದೇವರ ಮರಂಗಳ್" (ಹಲಾಯು. ೨೨-೦೩೫). ೨. ಯಾವುದಾದರೊಂದು ದೇವರ ಹೆಸರಿನಲ್ಲಿ ಮೀಸಲಾಗಿಟ್ಟಿರುವ ಫಲವೃಕ್ಷ. ದೇವರ ಮಾಡ = ದೇವರ ಕಂಡಿ : ದೇವರ ಮಾಡದಲ್ಲಿ ಗಂಗಾ ಜಲವಿದೆ (ಮುತ್ತೈದೆ. ೪೯). ದೇವರ ಮಾಡು, ದೇವರು ಮಾಡು = ೧. ದೇವರ ಅನುಗ್ರಹ ಸಂಪಾದನೆಗಾಗಿ ಹಬ್ಬ, ಪೂಜೆ ಮೊದಲಾದ ಉತ್ಸವಗಳನ್ನು ನೆರವೇರಿಸು ; ದೇವರ ಸೇವೆಯನ್ನು ಮಾಡು : ಮದಕರಿನಾಯಕನಿಗೆ ಮಕ್ಕಳಿಲ್ಲದ ಕಾರಣ . . . ಉಚ್ಚಂಗಮ್ಮ ದೇವರ ಇದೆರೆತ್ತಿ ಸಕಲರೂ ದರ್ಶನ ಕಟ್ಟಿಕೊಂಡು ಬೇವನ್ನುಟ್ಟು ದೇವರ ಮಾಡಿದರು (ಚಿತ್ರಜಾ. ೨೫). ೨. ದೇವತಾವಿಗ್ರಹಗಳನ್ನು ಮಾಡು,-ಕೆತ್ತು : ಮಣ್ಣಿನ ದೇವರು ಮಾಡಿ ಹುಡುಗರೇ ಹೊತ್ತುಕೊಂಡು ಕುಣಿಯುವುದು (ಸುವಸಂ. ೨೯). ದೇವರ ಮೂರ್ತಿ = ದೇವತಾವಿಗ್ರಹ : ದೇವರ ಮೂರ್ತಿಯ ಮುಂದೆ ಮೊಣಕಾಲೂರಿ ಪ್ರಾರ್ಥಿಸುತ್ತಿದ್ದ ಆಬೋಲೀನಳಿಗೆ . . . ಹೆಜ್ಜೆಯ ಸದ್ದು ತನ್ನ ತಂದೆಯದೆಂದು ಗುರುತಿಸಲು ಹೊತ್ತು ಹಿಡಿಯಲಿಲ್ಲ (ಆಬೋಲೀ. ೨೧). ದೇವರ ಮೇಲೆ ಭಾರ ಹಾಕು = ಸಂಪೂರ್ಣ ಜವಾಬ್ದಾರಿಯನ್ನು ದೇವರ ಮೇಲೆ ಹೊರಿಸು : ದೇವರ ಮೇಲೆ ಭಾರ ಹಾಕಿ ಹೊರಡುವುದು. ಬೇರೆ ಮಾರ್ಗವಿಲ್ಲ (ದೇವಹೆಂ. ೨೦೦) ; ಊರಿನಲ್ಲಿ ಇದ್ದವರು . . . ದೇವರ ಮೇಲೆ ಭಾರ ಹಾಕಿ ಧೈರ್ಯದಿಂದ ನಿಂತರು (ಊರುಕ. ೩೬) ದೇವರ ರಥೋತ್ಸವ = ದೇವರನ್ನು ತೇರಿನಲ್ಲಿ ಕೂರಿಸಿ ಮೆರವಣಿಗೆ ಮಾಡುವ ಉತ್ಸವ : ಈ ದೇವರ ರಥೋತ್ಸವದಲ್ಲಿ ಜನರು ಕಿಚ್ಚು ಹಾಯುವರು (ಕನ್ನಜಾ. ೧೦). ದೇವರಲಂಕಾರ = ಹಬ್ಬ ಹರಿದಿನಗಳಲ್ಲಿ ದೇವತಾಮೂರ್ತಿಗೆ ಮಾಡುವ ವಿಶೇಷ ರೀತಿಯ ಉಡುಗೆ ತೊಡುಗೆಗಳ ಸಿಂಗಾರ : ಈ ದಿನ ದೇವಸ್ಥಾನದಲ್ಲಿ ದೇವರ ಲಂಕಾರ ಮನೋಹರವಾಗಿದ್ದಿತು (ರೂಢಿ). ದೇವರ ಲೋಕ = ದೇವಲೋಕ ; ಸ್ವರ್ಗ : ಎಮಗೆ ದೇವರ ಲೋಕಮೇ ಲೋಕಮೆಮ್ಮೊಡನೆ ಬಪ್ಪುದೆಂದನುಜ್ಞೆಯಂ ದಯೆಗೆಯ್ಯಲ್ವೇಟ್ಕುಮೆಂದಿತೆಂದರ್ (ಪಾರಪು. ೧೬-೪೦ ಪ). ದೇವರ ವ್ರತ = ದೇವರನ್ನು ಕುರಿತು ಮಾಡುವ ನೇಮ,-ನೋಂಪಿ : ಜಾನಕಿ . . . ದೇವರ ವ್ರತವನ್ನು ಆರಂಭಿಸಬೇಕೆಂದು ನಿಶ್ಚಯಿಸಿದಳು (ಮುತ್ತೈದೆ. ೮೭). ದೇವರ ಸಂಕಲ್ಪ = ದೇವರ ಉದ್ದೇಶ; ದೈವೇಚ್ಛೆ : ನಿಮ್ಮ ಹುಡುಗನಿಗೆ ನಮ್ಮ ಮೋನಕ್ಕನನ್ನು ತಂದುಕೊಳ್ಳುವ ಆಸೆಯಿದೆ-ದೇವರ ಸಂಕಲ್ಪ, ಬ್ರಹ್ಮಬರಹ (ಮಾಮನೆ. ೦೬). ದೇವರ ಸಂತರ್ಪಣೆ = ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳಿಗೆ ಮುಂಚಿತವಾಗಿ ಮಾಡುವ ಕುಲದೇವರ ಪೂಜೆ ಹಾಗೂ ಭೋಜನ ಸಮಾರಂಭ : ಮಗನ ಮದುವೆಗೆ ದೇವರ ಸಂತರ್ಪಣೆಯ ದಿನವೇ ನೆಂಟರೆಲ್ಲ ಬಂದುಬಿಟ್ಟರು (ರೂಢಿ). ದೇವರ ಸಮಾರಾಧನೆ = ದೇವರ ಸಂತರ್ಪಣೆ : ದೇವರ ಸಮಾರಾಧನೆಯ ದಿನ ಇಷ್ಟಮಿತ್ರರೆಲ್ಲ ಬಂದಿದ್ದರು (ರೂಢಿ). ದೇವರ ಸಾನ್ನಿಧ್ಯ = ದೇವರ ಬಳಿ,-ಸಾಮೀಪ್ಯ : ಆ ಒಂದು ದಿನ ವಿಧಿನಿಯಮಕ್ಕೆ ಶರಣುಬಂದು ದೇವರ ಸಾನ್ನಿಧ್ಯದಲ್ಲಿ ಗಿರಿಜಳಿರುವುದು ಅವಳಿಗೆ ಬೇಕಿತ್ತು (ದೇವಹೆಂ. ೯೫). ದೇವರ ಸೇವೆ = ದೇವರ ಪೂಜೆ : ದೇವರ ಸೇವೆಯಲ್ಲಿ ಲೋಪವಾಗಬಾರದು (ದೇವಹೆಂ. ೨೦೮). ದೇವರ ಹಣ = ದೇವರ ಗಂಟು : ದೇವರ ಹಣದಿಂದ ನಿಮಗೆ ಸಾಲವಾಗಿ ಕೊಟ್ಟಿದ್ದೇನೆ (ದೇವೀಜಾ. ೧೨೫). ದೇವರ ಹೆಂಡತಿ = ವೇಶ್ಯೆ ; ದೇವದಾಸಿ : ನೀನೂ ಕೂಡಾ ದೇವರ ಹೆಂಡತಿಯಾಗಿ . . . ಮೈ ಮನಸ್ಸನ್ನು ಚೊಕ್ಕಟವಾಗಿಡುವುದಕ್ಕೆ ಎಷ್ಟು ಶ್ರಮಿಸಿದ್ದಿ ಎಂಬುದು ನನಗೆ ಗೊತ್ತು (ದೇವಹೆಂ. ೮೫). ದೇವರ ಹೊನ್ನು = ದೇವರ ಮೂರ್ತಿಯಿರುವ ಚಿನ್ನದ ತಾಳಿ : ಭೂವಲ್ಲಭೆಯ ಕೊರಲ ದೇವರ ಹೊನ್ನ ಭಾವವ ಪಡೆದುದಾ ನಗರಿ (ಶ್ರೀಪಾಲ. ೧-೬೮). ದೇವರ ಹೊಲ = ಗ್ರಾಮಗಳಲ್ಲಿ ದೇವರಿಗಾಗಿ ಬಿಟ್ಟಿರುವ ಹೊಲ, - ಜಮೀನು : ಸಾಮಾನ್ಯವಾಗಿ ಎಲ್ಲ ಊರುಗಳಲ್ಲಿಯೂ ದೇವರ ಹೊಲವನ್ನು ಜನ ಬಿಟ್ಟಿಯಾಗಿ ಉಳುತ್ತಾರೆ, ಬಿಟ್ಟಿಯಾಗಿ ಬೆಳೆ ಕೊಯ್ಯುತ್ತಾರೆ (ರೂಢಿ). ದೇವರಿಗೆ ನಡೆದುಕೊಳ್ಳು=ದೇವರ ಹರಕೆ, ಪೂಜೆ ಮುಂತಾದುವುಗಳನ್ನು ಸಲ್ಲಿಸು : ಹಳ್ಳಿಯಲ್ಲಿ ಜೋಯಿಸರು ಹೇಳುವಂತೆ ನಮ್ಮ ಹಳ್ಳಿಗರು ಈ ದೇವರಿಗೆ ನಡೆದುಕೊಳ್ಳುತ್ತಾರೆ (ಕನ್ನಜಾ. ೧೦). ದೇವರಿಚ್ಛೆ=

ದೇವರ ಸಂಕಲ್ಪ : ದೇವರಿಚ್ಛೆ ಇರುವವರೆಗೆ ಈ ಯಂತ್ರವು ನಡೆಯ ತಕ್ಕದ್ದೇ (ಶ್ಯಾಮಕಾ. ೨೮೨) ; ಮನುಷ್ಯಪ್ರಯತ್ನವೆಲ್ಲಾ ಮಾಡಿದ್ದಾಯ್ತು. ಇನ್ನು ದೇವರಿಚ್ಛೆಯಿದ್ದ ಹಾಗಾಗಲಿ (ರೂಢಿ). ದೇವರುಂಬಳಿ = ದೇವರ ಹೊಲ : ಮಹಾಜನಂ ಪ್ರಭುಗಳುಂಬಳಿಯುಮಂ ದೇವರುಂಬಳಿಯುಮ ಸರ್ವ್ವಬಾಧಾಪರಿಹಾರಮಾಗಿ ಕಾದೂಡುವರು (ನಾಂದೇಡ್. ೩-೨೨ ವ ; 1047). ದೇವರು ದಿಂಡರು=ದೇವರಂ ಮತ್ತು (ದೇವರಂತೆ ಸಾಮರ್ಥ್ಯ ವಿರುವ) ದೇವರ ಪರಿವಾರದವರು, – ಪರಿವಾರದೇವತೆಗಳಂ : ಅವನಿಗೆ ದೇವರು ದಿಂಡರು, ಧರ್ಮಕರ್ಮ, ಮತಗಿತ ಯಾವುದರಲ್ಲೂ ನಂಬಿಕೇನೇ ಇಲ್ಲಾಂತಾನೋ ? (ವೀರಯೋ. ೧೮) ; ದೇವರು ದಿಂಡರಿಗೆ ನಡಕೊಂಡದ್ದಾಯಿತು. ಏನೂ ಉಪಯೋಗವಾಗಲಿಲ್ಲ (ಜೊಸಕ್ಷಿ. ೧೮೪). ದೇವರುತ್ಸವ = ದೇವರಿಗೆ ಮಾಡುವ ಪೂಜೆ, ಹಬ್ಬ ಮುಂತಾದ ದಿವಸ ಗಳಲ್ಲಿ ನಡೆಯುವ ಮೆರವಣಿಗೆ : ಸಂಜೆಗೆ ದೇವರುತ್ಸವ (ರೂಢಿ). ದೇವರು ಮೈಮೇಲೆ ಬರು = ಆವೇಶವುಂಟಾಗು : ಪೂಜೆಯಾದ ಮೇಲೆ ಪೂಜಾರಿಗೆ ದೇವರು ಮೈ ಮೇಲೆ ಬಂತು (ರೂಢಿ). ದೇವರೂಟ = ದೇವರ ಸಂತರ್ಪಣೆ : ದೇವರೂಟದ ದಿನವೇ ತುಂಬಾ ನೆಂಟರು ಬಂದು ಸಂಭ್ರಮ ಅತಿಶಯವಾಗಿತ್ತು (ರೂಢಿ). ದೇವರೂಳಿಗ = ದೇವಸ್ಥಾನದ ಕೆಲಸ : ದೇವರೂಳಿಗದ ದೀವಟಿಗೆಯ ದಾಸಿಮನಿಗೆ . . . ದೇವಾದಾಯದ ಒಂದು ಪಾಲು ಸಂದಾಯವಾಗಬೇಕು (ಸವತಿ. ೧೬೬). ದೇವರೇ ಗತಿ=ಮನುಷ್ಯನು ತನ್ನ ಅಸಹಾಯಕತೆಯನ್ನು ಸೂಚಿಸಲು ಹೇಳುವ ಮಾತು : ಗಂಟಲು ಸರಿಯಿಲ್ಲದೇನೇ ಇಷ್ಟೊಂದು ಹೊತ್ತು ಆರಚುವಾಗ ಸರಿಯಿದ್ದರೆ ದೇವರೇ ಗತಿ (ಗೌರಶ. ೪೯).

[P 'ದೇವ' ಎನ್ನುವ ಪದದ ಬಹುವಚನರೂಪವು ಕನ್ನಡದಲ್ಲಿ ವಿಶೇಷವಾಗಿ ಏಕವಚನದ ಅರ್ಥದಲ್ಲಿ ಪ್ರಯೋಗವಾಗುತ್ತದೆ]

ದೇವರ (ನಾ). ೧. ಗಂಡನ ಒಡಹುಟ್ಟಿದವನು ; ಪತಿಯ ಸಹೋದರ; ಮೈದುನ ; P ಗಂಡನ ತಮ್ಮನಿಗೆ ಮಾತ್ರ ಇದು ವಿಶೇಷವಾಗಿ ಬಳಕೆಯಾಗುತ್ತದೆ : "ದೇವರು . . . ಗಂಡನಿಗೆ ಒಡಹುಟ್ಟಿದ ಗಂಡುಸರ ಹೆಸರು. ಮೈದಂದರು, ಭಾವಂದರು" (ಸಿದ್ಧಾಂತಿ. ೧೫೩) ; ಕೇಳಿದೈ ಎಲೆ ದೇವರನೆ ದೇವೇಶನಿರವೆಂತೆಂದಳಬುಜಾಕ್ಷಿ (ವೆಂಕಾರಾ. ೩-೧೧-೩೯) ; ದೇವರಾ ನೋಡು ನೀನಾರ್ಯಪುತ್ರಂ ಕ್ಷೇಮದಿಂದಿರ್ದಪನೆ (ಶೇಷರಾ. ೩-೭೩) ; ದೇವರನಾಡಿದ ಪರುಷತರವಾಕ್ಯಮಾರ್ಗಣಂ ಕರ್ಣಕೋಟರಮಂ ನಾಂಟೆ (ರಾಮಾಶ್ವ. ೩೫-೬). ೨. ಹೆಂಡತಿಯ ಸಹೋದರ ; ಭಾವ ಮೈದ ; ಶ್ಯಾಲಕ : "ಸತಿಯ ಸಹಜಾತನಕ್ಕುಂ ಪ್ರ[ತೀ]ತಿಯಿಂ ಶ್ಯಾಲನಾಮನುಂ ದೇವರನುಂ" (ವಸ್ತುಕೋ. ೫೫-೨೦); ಇಂದೆಮ್ಮ ದೇವರನೇಂ ಕ್ಷೇಮದೊಳಿರ್ದನೇ (ಅನಂಪು. ೨-೫೭) ; ಆ ತಪೋಧನನಾವ ನೆಂಬಭಿಶಂಕೆಯೇಕೆ ಜಗತ್ತ್ರಯಖ್ಯಾತನರ್ಜುನನಿಂದ್ರಸೂನು ಮುಕುಂದ ದೇವರನುಗ್ರಶೌರ್ಯಾತುಳಂ (ಶಬಶಂ. ೨-೧೦೫). [ಸಂ.]

ದೇವರಕೆಱೆ (ನಾ). ಒಂದು ಸ್ಥಳದ ಹೆಸರು : ದೇಗುಲಕೆ ಸಲ್ವುದು ದೇವರಕೆಱೆಯಾ ಮೂಡಣ ಕಡೆಗೋಡಿನಲಿ ಪೆಗ್ಗಟ್ಟಿ ಖಣ್ಡುಗ ಸಲ್ವುದು (ಎಳ. IX, ಮಾಗಡಿ. ೭೫-೦೯; 966). [<ದೇವ + ಕೆಱೆ]

ದೇವರಥ (ನಾ). ೧. ದೇವತಾಪ್ರತಿಮೆಗಳನ್ನು ಕೂರಿಸಿ ಮೆರವಣಿಗೆ ಯಲ್ಲಿ ಉತ್ಸವ ಮಾಡುವ ರಥ : "ದೇವಾರ್ಥಮಪ್ಪುದಕ್ಕುಂ ದೇವರಥಂ" (ವಸ್ತುಕೋ. ೮೬-೩೭). ೨. ದೇವತೆಗಳ ಯಾನ ; ಪುಷ್ಪಕ.

[ದೇವ + ರಥ]

ದೇವರದಾಸಯ್ಯ (ನಾ). ಒಬ್ಬಾತನ ಹೆಸರು : ದೇವರದಾಸಯ್ಯನ ಅಬ್ಬಿಗಳ್ . . . ಚಾಮಕಬ್ಬೆಗಳ ನಿಸಿಧಿಗೆ (ಎಳ. XV, ಹೊಳೆನ. ೬೭-೫ ; ಸು. 950). [<ದೇವ + ದಾಸಯ್ಯ]

ದೇವರಮ್ಯ (ನಾ). [ಛಂದ] ಒಂದು ವೃತ್ತದ ಹೆಸರು ; ಅಕ್ಷರ ಛಂದಸ್ಸಿನಲ್ಲಿ ಪ್ರತಿಯೊಂದು ಪಾದದಲ್ಲಿ ನಾಲ್ಕಕ್ಷರಗಳಿರುವ ಒಂದು ವೃತ್ತ ; ರಗಣ ಮತ್ತು ಒಂದು ಗುರು ಇರುವ ವೃತ್ತ : ಪಾವಕಾಗ್ರಂ ಭಾವನೀಯಂ ದೇವದೇವಂ ದೇವರಮ್ಯಂ (ಛಂದೋಂಬು. ೨-೬೩). [ಸಂ.]

ದೇವರಾಜ (ನಾ). ದೇವತೆಗಳ ರಾಜ ; ಇಂದ್ರ : ವಾಸವಸ್ತ್ರೀಯರ ಮುಖಾಬ್ಜಾಸವಸಂಬಂಧಿಗಳಪ್ಪ ಶೇಷಾಕ್ಷತಂಗಳನೀಶ್ವರನ[ಂ] ಗೆಲ್ದ ಗೆಲ್ಲಕ್ಕೆ ಸೇಸೆಗೊಳ್ವಂತೆ ಸೇಸೆಗೊಳುತ್ತುಂ ದೇವರಾಜನೊಡನೆ ದೇವಾಪ್ಸರೋ ನಿಚಯನಿಚಿತಮಪ್ಪ ದೇವವಿಮಾನಮಂ ಪೊಕ್ಕಾಗಳ್ (ಪಂಪಭಾ. ೮-೨೭ ವ) ; ಬಗೆಯಲ್ ಬಾರದ ದೇವರಾಜಬಲಮಂ ಭೋರೆಂದು ಪೋ ಪೋ . . . ನೀನೆಂಬ ದಂದುಗದಿಂ ದೇವರ ದಂಡಧಾರರೆರಡುಂ ಪಕ್ಷಂ ಗಳೊಳ್ ಸಾರೆ (ಶಾಂತಿಪು. ೧೦-೨೪) ; ದೇವರಾಜ, ಈ ವಸಿಷ್ಠಶೋಕವು ಕೊನೆಗಾಣಬೇಕು (ಮಹಾಡ. ೧೨೫). [ದೇವ + ರಾಜ]

ದೇವರಾಜ್ಯ (ನಾ). ಇಂದ್ರನ ರಾಜ್ಯ ; ಸ್ವರ್ಗ : ದೇವರಾಜ್ಯಸಲ್ಲೀಲೆಯೊಳಾ ನೃಪೋತ್ತಮರನೆಯ್ದಿಪನೋವದೆ ಕುಂತಳೇಶ್ವರ (ಎಳ. VII, ಶಿಕಾರಿ. ೧೦೦-೦೪ ; 1129). [ದೇವ + ರಾಜ್ಯ]

ದೇವರಾಯಉತ್ತ (ನಾ). ಒಂದು ಬಗೆಯ ತೆರಿಗೆ : ಮನೆತೆರಿಗೆ, ಹುಲ್ಲ ಹಣ, ದೇವರಾಯಉತ್ತ (ಸವೆದ ನಾಣ್ಯ ತೆತ್ತಾಗ ಕಡಮೆ ಬಿದ್ದಿತೆಂಬು ದನ್ನು ತುಂಬಲು ಹಾಕಿದ ಹೆಚ್ಚಿನ ತೆರಿಗೆ) (ನಮ್ಮನು. ೨೪೩). 'ದೇವ ರಾಯಂವಟ್ಟ' ಪರಾ.

[ದೇವರಾಯ್ಯ$_0$ + ಉತ್ತ$_3$; P ಇಲ್ಲಿ 'ಉತ್ತ' ಎಂಬುದು 'ವೃತ್ತಿ'ಯಿಂದ ಬಂದಿರಬಹುದು]

ದೇವರಾಯವಟ್ಟ (ನಾ). ಒಂದು ಬಗೆಯ ತೆರಿಗೆ : ಕುಱಿದೆಱಿಗೆ ಜಾತಿ ಗೂಟ ದೇವರಾಯವಟ್ಟ ಹೆಚ್ಚುಬೇಡಿಗೆ ಗ್ರಾಮಾದಾಯ ಚರಾದಾಯ (ಎಳ. XIV, ಮೈಸೂರು. ೧೧೫-೪೦೩ ; 1674) ; (೧) ಮನೆದೆರಿಗೆ, (೨) ಹುಲ್ಲುಹಣ, (೩) ದೇವರಾಯವಟ್ಟ, (೪) ಏರಸುಂಕ, (೫) ಸಮಯಾ ಚಾರ, (೬) ದನಕರು ಮಾರಿದ್ದಕ್ಕೆ ಸುಂಕ, (೭) ಕುರಿದೆರಿಗೆ, (೮) ಗುಳುವಿನ ಪೊಮ್ಮು, (೯) ಅಂಗಡಿವಸರ, (೧೦) ಕೂಟಾಚಾರ, (೧೧) ಉಬ್ಬೆಕಾಣಿಕೆ, (೧೨) ಅಂಗಡಿ ಪಟ್ಟಡಿ, (೧೩) ಗಿಡಕಾವಲು, (೧೪) ಜಾತಿಮಣಿಯ, (೧೫) ಮಗ್ಗದ ಕಂದಾಯ, (೧೬) ಪಾಶವಾರ, (೧೭) ಮದುವೆದೆರಿಗೆ, (೧೮) ಉಪ್ಪಿನ ಮೋಳೆ, (೧೯) ಕೌದಿಯ ತೆರಿಗೆ, – ಈ ಮೇರೆಗೆ ಹತ್ತೊಂಬತ್ತು ಬಾಬುಗಳನ್ನು ರೈತರಿಗೆ ನಿಶ್ಕರ್ಷೆ ಮಾಡಿಸಿ (ಮಹಾವಂ. I, ೧೨೪). [ದೇವರಾಯ್ಯ$_0$ + ವಟ್ಟ$_2$]

ದೇವರಾಯಿ (ನಾ). (ದೇವರಾಯನು ಚಲಾವಣೆಗೆ ತಂದ) ಒಂದು ಬಗೆಯ ಚಿನ್ನದ ನಾಣ್ಯ : ಇದಲ್ಲದೆ ಇನ್ನೂ ಇತರ ಬಂಗಾರದ ನಾಣ್ಯ ಗಳು ವಿಶೇಷವಾಗಿದ್ದವು, ಯಾವವೆಂದರೆ ಗಬರು . . . ದೇವರಾಯಿ, ರಾಮರಾಯಿ (ಚಿತ್ರಪಾ. ೧೦೪) ; P ಚಿತ್ರದುರ್ಗದಲ್ಲಿ ಅನೇಕ ರೀತಿಯ ಬಂಗಾರದ ನಾಣ್ಯಗಳು ಸಿಕ್ಕಿದುವೆಂದು 'ಚಿತ್ರಪಾ. ೧೦೪' ರಲ್ಲಿ ಹೇಳಿದೆ. ಅವುಗಳ ಪಟ್ಟಿ ಹೀಗಿದೆ : ಗಬರು, ಪ್ರಿಯಕಾವೇರಿ, ಮೊಹರು, ಪ್ರಳಯಗಲುರ, ಪುತಲಿ, ಪಾಪನಾಯಕಿಹೊನ್ನು, ಶಿವರಾಯಿಹೊನ್ನು, ಆದವಾನಿಹೊನ್ನು, ಬಾದಷಾಹಿಹೊನ್ನು, ತಾಡಪತ್ರೆಹೊನ್ನು, ಸಣ್ಣಗಿರಿ, ಹಿಂದೆಹೊನ್ನು, ಅಚ್ಯುತರಾಯಿ, ನಿಷಾನಿಖಲು, ದೇವರಾಯಿ, ಕಲ್ಲುಕುಂಟೆ, ರಾಮರಾಯಿ, ದುರ್ಗಿ, ಜಾತಮಾಹಿಸ್, ಇಕ್ಕೇರಿ, ಧಾರವಾಡಿ. [ದೇವರಾಯ್ಯ$_0$+–ಇ$_3$]

ದೇವರಾಸಿ (ನಾ). ಒಬ್ಬಾತನ ಹೆಸರು : ಸ್ವಯಂಭುದೇವರ ಸ್ಥಾನಾಧಿಪ ರಪ್ಪ ದೇವರಾಸಿಜೀಯ್ಯರ್ ಸಿಷ್ಯಂ ವಾಮದೇವ (ಸೌಇಇ. XX, ೨೪-೨೩; 1034). [?]

ದೇವರು 'ದೇವರ್' ನೋ.

ದೇವರುಷಿ (ನಾ). = ದೇವರ್ಷಿ ೧ : ದೇವರುಷಿಗಳು . . . ಪೂಜಿಸಲು ಬೇಕೀ ಮಹಾಗಣಪತಿಯನು (ಗಗತಾ. ೫-೧೦). [ದೇವ + ರುಷಿ]

ದೇವರೊಘ (ನಾ). ಒಂದು ಬಗೆಯ ತೆರಿಗೆ (?) : ಉಪ್ಪಿನ ಪೇಱಿಂಗೆ ಸುಂಕ ದೇವರೊಘಂ ಮಾನವೊನ್ದು ಖಂಡಸ್ಫುಟಿತ ಜೀರ್ನ್ನೋದ್ಧರಣ ಗನ್ದ ಧುಪ ದೀಪ ನಿವೇದ್ಯಕೆನ್ದು (ಕಇಅ. ೬೯-೨-೫೦ ; 1056). [?]

ದೇವರ್ಷಿ (ನಾ). ೧. ದೇವಜಾತಿಯಲ್ಲಿ ಹುಟ್ಟಿದ ಋಷಿ. ೨. ಬ್ರಹ್ಮನ ಪುತ್ರನಾದ ಋಷಿ ; ನಾರದ : ದೇವರ್ಷಿಯೆ ! ಗೀತದೊಳುಂ, ಆಹಾರ ದೊಳುಂ . . . ನಾಣ್ಟಿಕೆಯಾಗದೆಂಬರದು ಕಾರಣದಿನೀ ಬಿಜ್ಜಿಗೆ ಲಜ್ಜೆ ಸಲ್ಲದೈ (ಅದ್ಭುತ. ೨೪-೨೧). P ಋಷಿಗಳಲ್ಲಿ ರಾಜರ್ಷಿ, ಬ್ರಹ್ಮರ್ಷಿ, ದೇವರ್ಷಿ ಎಂಬ ಮೂರು ವರ್ಗಗಳಿವೆ. ೧. ಕ್ಷತ್ರಿಯಜಾತಿಯಲ್ಲಿ ಹುಟ್ಟಿ ರಾಜನಾಗಿದ್ದು, ತಪಸ್ಸುಮಾಡಿ ಋಷಿಧರ್ಮದಲ್ಲಿರುವವನು ರಾಜರ್ಷಿ. (ಜನಕ, ದಿಲೀಪ ಮೊದಲಾದವರು). ೨. ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ ಬ್ರಹ್ಮವನ್ನು ಅರಿತವನು ಬ್ರಹ್ಮರ್ಷಿ. (ವಾಮ ದೇವ, ಪರಾಶರ ಮೊದಲಾದವರು). ಬ್ರಹ್ಮವನ್ನು ಅರಿತವನು ಯಾವ ಜಾತಿಗೆ ಸೇರಿದ್ದರೂ ಬ್ರಹ್ಮರ್ಷಿಯಾಗುತ್ತಾನೆ–ವಿಶ್ವಾಮಿತ್ರನ ಹಾಗೆ. ೩. ದೇವಜಾತಿಗೆ ಸೇರಿದ ತಪಸ್ವಿಯು ದೇವರ್ಷಿಯೆನಿಸಿ ಕೊಳ್ಳುವನು. (ಅತ್ರಿ, ಮರೀಚಿ, ಭರದ್ವಾಜ, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ, ಪ್ರಚೇತ, ನಾರದ ಮೊದಲಾದವರು).

[ದೇವ + ಋಷಿ]

ದೇವಲ (ನಾ).೧. ದೇವರ ಪೂಜೆಯ ಆದಾಯದಿಂದ ಜೀವಿಸುವವನು; ದೇವಸ್ಥಾನದಲ್ಲಿ ಕೆಲಸ ಮಾಡುವವನು. ೨. ದೇವರ ವಿಗ್ರಹಗಳನ್ನು ಮಾಡಿ ಜೀವಿಸುವವನು ; ವಿಗ್ರಹಶಿಲ್ಪಿ : ಈ ದೇವಲ ಶಬ್ದಕ್ಕೆ 'ವಿಗ್ರಹ ಗಳನ್ನು ರಚಿಸಿ ಜೀವಿಸುವವ' ಎಂಬರ್ಥವು ವ್ಯುತ್ಪತ್ತಿಯಿಂದ ಬರುತ್ತದೆ (ಭಾರದ. ೫೧೦). ೩. ಧರ್ಮಶಾಸ್ತ್ರವೊಂದನ್ನು ಬರೆದಿರುವ ಒಬ್ಬ ಮಹರ್ಷಿ : ಭೂನುತ ದೇವಲಮುನಿ ಬರಿಸಲ್ಕತಿಮುದದಿಂ ಬಂದೆಂ (ಉದ್ಕಟ. ೩-೫೨) : ಸುಮೇಘಪರ್ವತದಲ್ಲಿ ಅತ್ರಿ . . . ದೇವಲ ದಧೀಚಿ ದೂರ್ವಾಸ ದತ್ತಾತ್ರೇಯ ಜಮದಗ್ನಿ ಜೈಮಿನಿ ಜಹ್ನು ಜಾಬಾಲಿ ರೋಮಜ ಮತಂಗ ಪತಂಜಲಿ ಪರಾಶರ ಪುಲಸ್ತ್ಯ ಶತಾನಂದ ಸಾನಂದ ಶ್ವೇತಕೇತು ಉಪಮನ್ಯು ಮೊದಲಾದ ಅಷ್ಟಾಶೀತಿಸಹಸ್ರ ಋಷಿಗಳಿಗನಂತಾಶ್ರಯಂಗಳುಂ (ವಿವೇಕ. ೨೦೬). [ಸಂ.]

ದೇವಲಕ (ನಾ). = ದೇವಲ ೧ : ಹಲಗೆಕಾಱರನಾಪ್ತರು ದೇವಲಕರಂ ಪೂವಡಿಗರಂ ಬಾಗಿಲವರಂ ಸುಯಿಧಾನರಂ ಹಲವಾಳುಗಳನಾಯ್ದು (ಬಸಪು. ೧೬-೧೩) ; ಆವನಸ್ನಾನದಲಿಯೋದುವ ದೇವಲಕರನು ಮುಟ್ಟಿ ಯೋದುವ . . . ಬ್ರಹ್ಮಘಾತಕರ ನೋಡುತಲುವಧ್ಯಯನ ಹೇಳುವ ಮೂಢಗಹುದತ್ಯಧಿಕ ನರಕದ ಗೂಡು (ಸಂಭಪ. ೪-೧೬) ; ಯಾವ ಬ್ರಾಹ್ಮಣನು ಹಣವನ್ನು ಸ್ವೀಕರಿಸಿ ದೇವರ ಪೂಜೆಯನ್ನು ಮಾಡುವನೋ ಅವನು ದೇವಲಕನೆಂದೆನಿಸಿಕೊಂಡು ಸಕಲಕಾರ್ಯಗಳಲ್ಲಿ ಬಹಿಷ್ಕರಿಸಲ್ಪಡು ತ್ತಾನೆ (ತುಳುನಾ. ೨೩೩). [ಸಂ.]

ದೇವಲಬ್ಬೆ (ನಾ). ಒಬ್ಬಾಕೆಯ ಹೆಸರು : ಆ ವಿಭುಗೆ ದೇವಲಬ್ಬೆ ಗುಣಾ ವಳಿಯಿಂ (ಬೊಂಕಶಾ. ೧೯೩೪, ಹಾವೇರಿ. ೬೧-೨೧ ; ?).

[ದೇವಲ? + ಅಬ್ಬೆ$_1$]

ದೇವಲಿಪಿ (ನಾ). ಒಂದು ಬಗೆಯ ಲಿಪಿ ; ವಿಷಯವನ್ನು ರಹಸ್ಯವಾಗಿ ಡಲು ಬಳಸುತ್ತಿದ್ದ ಒಂದು ಬಗೆಯ ಗೂಢಲಿಪಿ : ದೇವಲಿಪಿಯಲಿ ಬಂದ ಲೇಖೆಯೊಳಾವ ಸಂಖ್ಯೆಯವಿತ್ತೊವದಱಿಂ ಭಾವಿಸಲು ನೂರ್ಮಡಿ ಯೆನಿಸಿ ಧನರಾಶಿಯಾಗಿರಲು (ಬಸಪು. ೫-೬೦) ; ಶೈಲಲಿಪಿ ದೇವಲಿಪಿ ನಂದಿಲಿಪಿ . . . ಯಾ ಅಗಣಿತಲಿಪಿಗಳ ನೋಡಲರಿಯದೆ ಬಿಜ್ಜಳರಾಯನ ಸಭೆಯೊಳು ಕಳಕಳಗೊಳುತಿರ್ದರು ವಿದ್ವಾಂಸರುಗಳೆಲ್ಲಾ (ಭಾಸ್ಕರ. ೭೭-೬).

[ದೇವ + ಲಿಪಿ]

ದೇವಲೋಕ (ನಾ). ದೇವತೆಗಳು ವಾಸಿಸುವ ಲೋಕ ; ಸ್ವರ್ಗ : "ಸ್ವರ್, ಸ್ವರ್ಗಃ . . . ಊರ್ಧ್ವಲೋಕಃ (ಚ)–ಈ ೧೧ ದೇವಲೋಕದ ಪೆಸರ್" (ಹಲಾಯು. ೨-೩) : ನನ್ದಿಸೇನಪ್ರವರಮುನಿವರನ್ದೇವಲೋಕಕ್ಕೆ ಸನ್ದಾನ್ (ಎಕ. II, ೮೯-೪ ; ಸು. 700) : ಗೋವರ್ಧನಭಟ್ಟಾರರ್ ಸಮಾಧಿಮರಣದಿಂದು ರತ್ನತ್ರಯಮಂ ಸಾಧಿಸಿ ಮುಡಿಪಿ ದೇವಲೋಕಕ್ಕೆ ವೋದರ್ (ವಡ್ಡಾರಾ. ೭೪-೨೯); ಅಂತು ದೇವಲೋಕದೊಳ್ ತನ್ನ ಮಾತೆ ಮಾತಾಗಿರ್ದ ಪರಾಕ್ರಮಧವಳನ ಪರಾಕ್ರಮಕ್ಕಂ ಗಂಡಗಾಡಿಗಂ ರಂಭೆ ಸೋಲ್ತು (ಪಂಪಭಾ. ೮-೨೮ ಪ) : ಭುವರ್ಲೋಕದ ಸ್ಥಾವರಕ್ಕೆ ಸತ್ಯ ಲೋಕದ ಅಗ್ಗವಣಿಯಲ್ಲಿ ಮಜ್ಜನಕ್ಕೆಱೆದು ದೇವಲೋಕದ ಪುಷ್ಪದಲ್ಲಿ ಪೂಜೆಯ ಮಾಡಿದಡೆ (ಅವಚಂ. ೪೬-೧೯೭) ; ದೇವಲೋಕ ಮರ್ತ್ಯಲೋಕ ವೆಂಬುದು ಬೇಱೆ ಮತ್ತುಂಟೆ (ಬಸವ. ೧೩೯) ; ದೇವಲೋಕಶ್ರೀಯನನು ಭವಿಸುತ್ತಮಿರೆ ನಿಜಾಯುರಬ್ಧಿದ್ವಯಮರ್ಧವತ್ಸರಾವಶೇಷಮಾಗಲೊಡಂ (ಚಂದ್ರಪು. ೪-೭೮ ಪ) : ನಾಯಿ ಬೊಗಳಿದರೆ ದೇವಲೋಕ ಹಾಳೇ ? (ಗಾದೆ). [ದೇವ + ಲೋಕ]

ದೇವಲ್ಯ 'ದೇವಾಲ್ಯ' ನೋ.

ದೇವವಂದ್ಯ (ನಾ). ದೇವತೆಗಳ ಗೌರವಕ್ಕೆ ಪಾತ್ರನಾದವನು : ಪರಮ ಶ್ರೀಪತಿ ದೇವವಂದ್ಯನಮಿತಕ್ಷೇಮಂಕರಂ (ಶಾಂತಿಪು. ೮-೧೦೭).

[ದೇವ + ವಂದ್ಯ]

ದೇವವಧು (ನಾ). ಅಪ್ಸರಸ್ತ್ರೀ : ದೇವವಧೂಸಮೀಪದೊಳೆ ಸಂಯಮ ಮೊಪ್ಪೆ . . . ತಪಮಿರ್ದಪರಲ್ಲಿ ತಾಮಿವರ್ (ಶಾಕುಂತ. ೧೦೩-೧೭೫).

[ದೇವ + ವಧು]

ದೇವವರಿಯ (ನಾ). ಒಬ್ಬಾತನ ಹೆಸರು: ಹೊಲೆಯರ ಕಣವೊಂಗೆ ಕೊಟ್ಟ ಮಣ್ಣ ಖ ೧ ಹೊರೆಯಾಲ ದೇವವರಿಯರು ಗಪೊಶಧರಿ ಬೆಸ × × × (ಎಕ. IV, ಗುಂಡ್ಲುಪೇ. ೯೦-೧೪ : 976). [?]

ದೇವವರ್ಧಕಿ (ನಾ). ದೇವತೆಗಳ ಬಡಗಿ ; ವಿಶ್ವಕರ್ಮ : "ದೇವವರ್ಧಕಿ ತ್ವಷ್ಟೃವೆನೆ ವಿಶ್ವಕರ್ಮಂ" (ಮಂಗರಾ. ೭-೨೩). [ದೇವ + ವರ್ಧಕಿ]

ದೇವವಲ್ಲಭ (ನಾ). ೧. ದೇವತೆಗಳ ಒಡೆಯ,–ಸ್ವಾಮಿ : ದೇವಸಂತಾನ ಗುರು ದೇವವಲ್ಲಭನೆಂದು . . . ದೇವದುರ್ಲಭನೆಂದು ಕರೆವ ಬಿರುದಿನ ಕಹಳೆಗಳ ಮಹಾರವದೊಳಗೆ ಧರೆ ನಡುಗೆ (ನಂಬಿರ. ೭-೧೧೭).೨. ಒಂದು ಬಗೆಯ ಮರ : (ಕಿ). [ದೇವ + ವಲ್ಲಭ]

ದೇವವಸ್ತ್ರ (ನಾ). ರೇಷ್ಮೆ ವಸ್ತ್ರ,–ಬಟ್ಟೆ : ದೇವವಸ್ತ್ರವನುಟ್ಟು ಭಸ್ಮಾಂಗಾ ವಿಭೂಷಣರಾಂಕಿತಾ ವೀರಾವತಾರರು ವೀರಭದ್ರಾದಿ ಪ್ರಮಥವರರ ಭಾವ ವಲಿ ನೆನೆದು (ಬಸಪು. ೬೧-೨೨). [ದೇವ + ವಸ್ತ್ರ]

ದೇವವಾಣಿ (ನಾ). ೧. ದೇವರ ಮಾತು,–ವಾಣಿ : ದೇವವಾಣಿಗಳೆಲ್ಲ ದಿಟವಾಗೆ – (ಎಂದು ದಿಟವಾಗವವು ?) ನಾವೀಗ ಕಂಡುದೇ ಪೇಳದೇ ಮುಂದೆಯೂ ಆಗುವುದ ? (ಪಾರಸಿ. ೩೦-೬೮೮) ; ಸೆಟ್ಟರ ಅನುಭವವಾಣಿ . . . ಭಗವದ್ಗೀತೆಯ ದೇವವಾಣಿಯೊಂದಿಗೆ ತುಲನೆ ಮಾಡಲು ಹಚ್ಚಿತು (ಜನಜೀ. ೫). ೨. ಸಂಸ್ಕೃತ ಭಾಷೆ ; ಸಂಸ್ಕೃತವನ್ನು ದೇವವಾಣಿ ಎಂದು ಕರೆಯುತ್ತಾರೆ (ರೂಢಿ). [ದೇವ + ವಾಣಿ$_1$]

ದೇವವಾನಸ (ನಾ). ದೇವತೆಯಂತೆ ಒಳ್ಳೆಯ ಗುಣಗಳಿಂದ ಕೂಡಿರು ವವನು ; ದೇವತಾಮನುಷ್ಯ : ಮಕಾರಕ್ಕೆ ವತ್ವಂ—ದೇವಮಾನುಷ – ದೇವವಾನಸ; ಯಮಳಮರ್ದಳ – ಜವಳಿವದ್ದಳೆ (ಶಮದ. ೨೯೨ ಪ್ರಯೋ).

[<ಸಂ. ದೇವಮಾನುಷ]

ದೇವವಾರಣ (ನಾ). ದೇವತೆಗಳ ಆನೆ; ಐರಾವತ; ಸುರಭಿದೇವತೆಯೆಂಬ ಕಾಪಿನೆ ಮಾಣ್ದುದೇಚುವುದೆಂದದೆಂದಿರದೆ ಮಾಣ್ದುದು ದೇವವಾರಣಂ (ಪಂಪಭಾ. ೧-೨೯). [ದೇವ + ವಾರಣ]

ದೇವವಿಟ (ನಾ). ದೇವಲೋಕದಲ್ಲಿರುವ ಕಾಮುಕ : ದೇವವಿಟರ್ಗೆ ಕಣ್ಮಾಯವಂ ಬಿಡಿಸಿ (ನಂಬಿಕ. ೧೨-೪೦); ಸಕಲ ಸುರಶ್ರೇಷ್ಠರುಗಳಲ್ಲಿ ಕೊನಬುಗಳಾದ ಮಕರಧ್ವಜ ನಳಕೂಬರ ಜಯಂತ ಅನಿರುದ್ಧ ಕೂಚಿಮಾರ ಪಾಂಚಾಲ ಪಲ್ಲವ ಪ್ರವೀಣಾದಿ ದೇವವಿಟರುಂ (ವಿವೇಕ. ೨೨೮).

[ದೇವ + ವಿಟ]

ದೇವವಿನೂತ (ನಾ). ದೇವತೆಗಳ ಪ್ರಶಂಸೆಗೆ ಪಾತ್ರನಾದವನು; ದೇವಗುರು; ಬೃಹಸ್ಪತಿ : ದಿವಸಕರ ಚಂದ್ರಯುತ ಭಾರ್ಗವನಂ ಜನ್ಮಾವಸರದೊಳೀಕ್ಷಿಸುವೊಡೆ ದೇವವಿನೂತಂ (ಜಾತಕ. ೬-೨೯).

[ದೇವ + ವಿನೂತ]

ದೇವವೀಧಿ (ನಾ). ದೇವತೆಗಳ ಸಮೂಹ,-ಗುಂಪು: ದೇವವೀಧಿ ದೇವುರೆ ಸುರರಾಜರಾಜ ಧಿರುರೇ ಎನೆ . . . ಭಲರೇ ಕವರ್ದಿಯೆನೆ ನಂದಿಯ ನೇಱಿದನೆಮ್ಮ ಶಂಕರಂ (ಗಿರಿಕ. ೧೦-೭೯). [ದೇವ + ವೀಧಿ (<ಬೀದಿ)]

ದೇವವೀರ್ಯ (ನಾ). ದೇವತೆಗಳ ಸಾಮರ್ಥ್ಯ,-ಪ್ರಭಾವ,-ಮಹಿಮೆ : ಸೂರ್ಯನೊಳು . . . ವೈರಾಗ್ಯದೊಳು ದೇವವೀರ್ಯದೊಳು ಮುಕ್ತಿಯೊಳು ಶ್ರೀಯೊಳು ಮಹಾತ್ಮ್ಯೆಯೊಳು ಭರ್ಗನೊಳು ಭಗಮೆನಿಕ್ಕುಂ (ಮಂಗರಾ. ೧೫೦-೫೧). [ದೇವ + ವೀರ್ಯ]

ದೇವವೆಸ (ನಾ). ದೇವರ ಕಾರ್ಯ,-ಸೇವೆ : ಸೊಱಡಿಯ ಹೊನ್ನೆಯ ಮಗ ಬೀರಯ್ಯ ದೇವವೆಸ ಕಾಯಾವಾಚಿಕಂ ಸರತ್ಕಿಪ್ರಮಾಣ ನಿಮಿತ್ತಮಾಗಿ ಅಗ್ನಿಪ್ರವೇಶಂಗೆಯ್ದು ಶಿವಲೋಕಪ್ರಾಪ್ತನಾದ (ಕ್ಯುಆರಿ. ೧೯೪೨, ೬೭-೫ ; 1133). [ದೇವ + ಬೆಸ $_1$]

ದೇವವ್ರತ (ನಾ). ೧. ಬ್ರಹ್ಮಚರ್ಯವ್ರತ : ಆ (ಅ)ಬ್ರಹ್ಮಂ ದಶವಿಧದಿಂ ತೀಬ್ರಂ ನೆಲಸಿದೊಡೆ ಸೋಲ್ಕು ಸೈರಿಸದೆ ಚತುರ್ಥಬ್ರತಮಂ ಪೊರ್ದಿದೊಡೆನ್ನೀ ಬ್ರಹ್ಮಂ ಕಿಡಿಸಲಘಚಯಂ ಸೋರ್ತರ್ಕುಂ ಅಂತು ಪತ್ತುಂ ತೆಱದ ಬ್ರಹ್ಮದಿಂ ತುತ್ತತುದಿಯೊಳಾಪತ್ತುವಡಿಸುವ ಕರ್ಮಂಗಳ್ ಪತ್ತುಗುಂ ಅವಱಿಂ ಜೀವಂ ದುಃಖಾಗ್ನಿಯೊಳ್ ಪೊತ್ತುಗುಮವು ಬಸನಮ ಅಂತಪ್ಪ ಬ್ರಹ್ಮಂ ದಶವಿಧಮಾವುವೆಂದೊಡೆ ಇಂದ್ರಿಯವರ್ಧನಮಪ್ಪಾಹಾರಮನುಣ್ಬುದುಂ ತಂಬುಲಮಂ ತಿಂಬುದುಂ ವಸ್ತ್ರಕಂಬಳಂಗಳಂ ಪೊದೆವುದುಂ ಮೃದುಶಯ್ಯೆಯೊಳೊಱಗುವುದುಂ ತನ್ನ ದಂತ ನಖ ತನುಮಲಾದಿಗಳಂ ಪಿಂಗಿಸುವುದುಂ ಆಗಳುಂ ಸ್ತ್ರೀಪ್ರಸಂಗದೊಳಿರ್ಪುದುಂ ಸುಗಂಧದ್ರವ್ಯಂಗಳಂ ಪೂಸುವುದುಂ ಸುಗಂಧಪುಷ್ಪಂಗಳಂ ವಾಸಿಸುವುದುಂ ಗೀತವಾದ್ಯಂಗಳಂ ಕೇಳ್ವುದುಂ ನೃತ್ಯನಾಟಕಂಗಳಂ ನೋಟ್ಬುದುಂ ಎಂದಿಂತು ದಶವಿಧಮಕ್ಕುಂ ಅಂತು ಬ್ರಹ್ಮಚರ್ಯಮೆಂಬುದು ದೇವವ್ರತಂ ಅವ ವ್ರತಕ್ಕ ಮುತ್ಕೃಷ್ಟಂ (ಜೀವಸಂ. ೧೫೯-೫). ೨. ಬ್ರಹ್ಮಚರ್ಯವ್ರತವನ್ನು ಪಾಲಿಸುವವನು. ೩. ಗಂಗಾದೇವಿಯ ಮಗ; ಭೀಷ್ಮ : ದೇವವ್ರತನೆನಿಸಿ ನೆಗೞ್ದ ಯಶವಂ ಬೆರಸಿ . . . ಈ ಭೀಷ್ಮರಂತು ನುಡಿದರುವೊಳರೇ (ಪಂಪಭಾ. ೬-೪೨). ೪. [ಜೈನ] ಶ್ರೇಷ್ಠವಾದ ವ್ರತ.

[ದೇವ + ವ್ರತ]

ದೇವಶಿಖಾಮಣಿ (ನಾ). ದೇವತೆಗಳ ತಲೆಮಣಿಯಂತಿರುವವನು; ದೇವಶ್ರೇಷ್ಠ : ಶಿವಾಲಯಕ್ಕೆ ಬಂದು ದೇವ ದೇವ ದೇವಶಿಖಾಮಣಿ . . . ಕರುಣಿಸು ಎಂದು (ನಂಬಿಕ. ೫-೭೪). [ದೇವ + ಶಿಖಾಮಣಿ]

ದೇವಸಂಘಾತ (ನಾ). ದೇವತೆಗಳ ಸಮೂಹ,-ಗುಂಪು : ದೇವದುಂದುಭಿಯ ರವಮುಮಂ ಯಶೋಭದ್ರೆ ನೋಡಿ ದೇವಸಂಘಾತಮಂ ಕಂಡು ಮಗನ ಸಾವನಱಿದು (ವಡ್ಡಾರಾ. ೨೯-೨೩). [ದೇವ+ಸಂಘಾತ]

ದೇವಸಂತಾನ (ನಾ). = ದೇವಸಂಘಾತ : ದೇವಸಂತಾನಗುರು . . . ದೇವದುರ್ಲಭನೆಂದು ಕರೆವ ಬಿರುದಿನ ಕಹಳೆಗಳ ಮಹಾರವದೊಳಗೆ ಧರೆ ನಡುಗೆ (ನಂಬಿಕ. ೬-೧೧೭). [ದೇವ + ಸಂತಾನ]

ದೇವಸಂಪ್ರದಾಯ(ನಾ). [ಚಿತ್ರಶಾ]ಭಾರತೀಯ ಚಿತ್ರಕಲೆಯ ಮೂರು ಸಂಪ್ರದಾಯಗಳಲ್ಲಿ ಒಂದು : ತಾರಾನಾಥ ಆಗ್ಗೆ ದೇವ, ಯಕ್ಷ ಮತ್ತು ನಾಗ ಎಂದು ಮೂರು ಸಂಪ್ರದಾಯಗಳಿದ್ದವೆಂದು ಹೇಳುತ್ತಾನೆ. ದೇವ ಸಂಪ್ರದಾಯವು ಕ್ರಿಸ್ತಪೂರ್ವ ಆರನೇ ಶತಮಾನದ ತನಕ ಮಗಧರಾಜ್ಯದಲ್ಲೂ ಯಕ್ಷಸಂಪ್ರದಾಯ ಮೂರನೇ ಶತಮಾನದಲ್ಲಿ ಅಶೋಕನ ಕಾಲದಲ್ಲೂ ನಾಗಸಂಪ್ರದಾಯವು ಅನಂತರ ಕ್ರಿಸ್ತಶಕ ಮೂರನೇ ಶತಮಾನದಿಂದ ನಾಗಾರ್ಜುನನ ಕಾಲದಲ್ಲೂ ರೂಢಿಯಲ್ಲಿತ್ತೆಂದೂ ಆತ ಹೇಳಿದ್ದಾನೆ (ಭಾರದ. ೫೨೩). [ದೇವ + ಸಂಪ್ರದಾಯ]

ದೇವಸತ್ರ (ನಾ). ದೇವತೆಗಳ ಪ್ರೀತಿಗಾಗಿ ಮಾಡುವ ಯಾಗ : ಸುಖ ದುಃಖಗಳ ಮೋಡಗಳು ಯಾವವಾದರೂ ಇದ್ದಲ್ಲಿ ಅವು ದೇವಸತ್ರಕ್ಕೆ ಅಡ್ಡ ಬರುವ ರಾಕ್ಷಸೀಛಾಯೆಯಂತೆ ತಮ್ಮ ತಾತ್ಕಾಲಿಕ ವಿರೋಧದಿಂದ ಸತ್ರದ ಮಹತ್ವವನ್ನೇ ಬೆಳಸಿ ಕಣ್ಮರೆಯಾಗುವುವು (ಪ್ರಬಂಧ. ೧೪).

[ದೇವ + ಸತ್ರ]

ದೇವಸತ್ವ (ನಾ). ೧. ದೇವತೆಯ ಮನಸ್ಸು,-ಚಿತ್ತ. ೨. [ಕಾವ್ಯಶಾ] ಸ್ತ್ರೀಯರ-ಹನ್ನೆರಡು ಬಗೆಯ ಸ್ವಭಾವಗಳಲ್ಲಿ ಒಂದು; ದೇವತೆಗಳ ಮನಸ್ಸಿನಂತೆ ಉತ್ತಮವಾಗಿರುವ ಮನಸ್ಸು : ಪರಿಮಳಾಂಗದ ಮನೋಹರ ವದನದ . . . ಭಾಸುರಗುಣದವಳೆ ದೇವಸತ್ವದವಳು (ಜನವ. ೫-೨೬) ; ದೇವಸತ್ವ ಯಕ್ಷಸತ್ವ ಗಂಧರ್ವಸತ್ವ ನರಸತ್ವ ನಾಗಸತ್ವ ಕಾಕಸತ್ವ ವಾನರಸತ್ವ ಮುನಿಸತ್ವ ಪಿಶಾಚಸತ್ವ ರಾಕ್ಷಸಸತ್ವ ಕಿನ್ನರಸತ್ವ ಖರಸತ್ವವೆಂಬ ದ್ವಾದಶಸತ್ವದ ಸತಿಯರಿಂ (ವಿವೇಕ. ೨೪೫). 'ದ್ವಾದಶ ಸತ್ವ' ಪರಾ. [ದೇವ + ಸತ್ವ $_2$]

ದೇವಸದೃಶ (ನಾ). ದೇವತೆಗಳಿಗೆ ಸಮಾನನಾದ ವ್ಯಕ್ತಿ; ದೇವತೆಯಂತಿರುವ ವ್ಯಕ್ತಿ : ದೇವಸದೃಶನಾದ ನಿನ್ನನ್ನು ನೋಡಿದ ಮೇಲೆ ನನಗೆ ಇನ್ನ ಮೇಲೆ ಮನಸ್ಸಾಗಿದೆ (ವಡಭಾ. ೩೭). [ದೇವ + ಸದೃಶ]

ದೇವಸನ್ನಿಧಿ (ನಾ). ದೇವತೆಗಳ ಸಾಮೀಪ್ಯ : ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ . . . ಅಲ್ಲೆ ಕೊಡವರ ಬೀಡಲಾ ! (ಕಪಪು. ೬-೧೫೨) ; ದೊಡ್ಡಪ್ಪನವರತ್ತ ಓಗೊಟ್ಟರಾ ಕರೆಗೆ ನಡೆದರು ದೇವಸನ್ನಿಧಿಗೆ (ಇಂದಾಪ. ೨೯-೫೪). [ದೇವ + ಸನ್ನಿಧಿ]

ದೇವಸಪರ್ಯೆ (ನಾ). ದೇವರ ಪೂಜೆ : ಮೃಷ್ಟಾನ್ನದಾನಿತ್ತಂ ದೇವಸಪರ್ಯ್ಯೆ ಮಂತ್ರಮುಖಿಂ ಸಂಪೂರ್ಣ್ಣಮಾ ಸೋಮಯಾಜಿತ್ವಂ ತತ್ವಗಮೆನ್ದು ಬಣ್ಣಿಸೆ ಜನಂ (ಸೌಇಇ. XI-1, ೪೫-೪೪ ; 980).

[ದೇವ + ಸಪರ್ಯೆ]

ದೇವಸಬಳ, ದೇವಸವಳ (ನಾ). ಒಂದು ಬಗೆಯ ನಾಣ್ಯ (?) : ನಿತ್ಯದಾನಕ್ಕೆ ದೇವಸಬಳದ ಪದಿನೆಂಟುಕೋಟಿಪೊನ್ನುಮನಿತ್ತು (ಪಂಪಭಾ. ೨-೮೪ ಪ); "ದೇವತೆಗಳಲ್ಲಿರುವ ಒಂದು ತೂಕ, ಅಥವಾ ಅಳತೆ(?)" (ಪಂಪದೀ. ೧೬) ; ದೇವಸಬಳದ ಪದಿನೆಂಟುಕೋಟಿಪೊನ್ನುಮಂ ತರಿಸಿ ಕೊಟ್ಟು (ಪಂಪಭಾ. ೧೨-೫೨ ಪ). ದೇವಸವಳ : ದುರ್ಯೋಧನನಟ್ಟಿದ ದೇವಸವಳದ ಪದಿನೆಂಟುಕೋಟಿಪೊನ್ನುಮನೊಟ್ಟಿ ಬೆಟ್ಟಾಗೆ ಪುಂಜಿಸಿ (ಪಂಪಭಾ. ೯-೭೦ ಪ). 'ದೆವಸವಳ', 'ಸಬಳಗದ್ಯಾಣ' ಪರಾ : P ಇದು ಪ್ರತಿನಿತ್ಯವೂ ನಡೆಯಬೇಕಾದ ಯಾವುದೋ ದಾನ, ಪೂಜೆ, ಬಾಗಿನ ಇತ್ಯಾದಿ ಉದಾರಕಾರ್ಯಕ್ಕೆ ಸಂಬಂಧಿಸಿ ವರ್ತನೆಯಾಗಿ ಬರುತ್ತಿದ್ದವರಿಗೆ ಕೊಡುಗೆಯಾಗಿ ಕೊಡುತ್ತಿದ್ದ ದಾನವಿರಬೇಕು. [<ದೆವಸವಳ ?]

ದೇವಸಭೆ (ನಾ). ೧. ಇಂದ್ರನ ಆಸ್ಥಾನ : "ಸುಧರ್ಮಾ, ದೇವಸಭಾ–೨ ದೇವತೆಗಳ ಸಭೆಯು ಹೆಸರುಗಳು" (ಸಿದ್ಧಾಂತಿ. ೩೨) ; ದೇವಸಭೆಯೊಳಗೆ ನಾನು ನುಡಿದು ಭಾಷೆಯನಿತ್ತೆ (ಹಚಚಾ. ೧೪-೧೪). ೨. ದೇವತೆಗಳ ಸಮೂಹ : ಅಂತು ಓರಿದುಮೊಸಗೆಯಂ ಮಾಡಿ ದೇವಸಭೆಯುಂ ಬ್ರಹ್ಮ ಸಭೆಯುಮೊಡನಿರ್ದು (ಪಂಪಭಾ. ೧-೦೪೬ ವ). [ದೇವ + ಸಭೆ]

ದೇವಸಮಿತಿ (ನಾ). ದೇವತೆಗಳ ಗುಂಪು,–ಸಮೂಹ : ದೇವಸಮಿತಿಯ ವಿಳಾಸಮಂ ನೆಱೆಯೆ ಪೊಗಲಾವೊ ನೆಱೆವೊ (ಶಾಂತಿಪು. ೧೦-೩). [ದೇವ + ಸಮಿತಿ]

ದೇವಸವಳ 'ದೇವಸಬಳ' ನೋ.

ದೇವಸಾಕ್ಷಾತ್ಕಾರ (ನಾ). ದೇವರನ್ನು ಪ್ರತ್ಯಕ್ಷವಾಗಿ ನೋಡುವುದು ; ದೇವರನ್ನು ಎದುರಿಗೆ ನೋಡಂವುದಂ: ಜ್ಞಾನೇಶ್ವರ ಮತ್ತು ಕಬೀರರು ತಮ್ಮ ಭಕ್ತಿಮಾರ್ಗೋಧರ್ಮವನ್ನು ಜಗತ್ತಿನ ಜನರಿಗೆ ದೇವಸಾಕ್ಷಾತ್ಕಾರವನ್ನು ಬೋಧಿಸಲು ವಿಸರಾಗಿಟ್ಟರು (ಧರ್ಮಸಾ. ೧೫೧). [ದೇವ + ಸಾಕ್ಷಾತ್ಕಾರ]

ದೇವಸಾತ್ಮ (ನಾ). ದೇವರಿಗೆ ಸೇರಿದುದು : "ದೇವಸಾತ್ಮಂ ದೈವೀಯಂ" (ಪಸು.ಕೋ. ೧೧೦-೬೧). [ಸಂ.]

ದೇವಸಾನ್ನಿಧ್ಯ (ನಾ). ದೇವತೆಯ ಸಾಮೀಪ್ಯ ; ದೇವರ ಬಳಿ ಇರುವುದು: ನಿರ್ಮಲ ವಾತಾವರಣದ ದೇವಸಾನ್ನಿಧ್ಯವನ್ನು ಬಿಟ್ಟು ತನ್ನ ಅಜ್ಜ–ತಾಯಂದಿರು ಧಾರವಾಡಕ್ಕೆ ಏಕೆ ಹೋದರು (ಗಂಗಾಸಾ. ೧೩). [ದೇವ + ಸಾನ್ನಿಧ್ಯ]

ದೇವಸಾಯುಜ್ಯ (ನಾ). ಭಕ್ತನು ತಾನು ಉಪಾಸನೆ ಮಾಡುವ ದೇವತೆಯಲ್ಲಿ ಐಕ್ಯವಾಗುವುದು; P ತೈತ್ತಿರೀಯೋಪನಿಷತ್ತಿನ ೧೦ ನೆಯ ಪ್ರಪಾಠಕದ ೧೪ನೆಯ ಅನುವಾಕದಲ್ಲಿ ಉಪಾಸನೆಯಿಂದ ೧. ಸಮಾನಲೋಕತೆ, (ಇಷ್ಟದೇವತೆಯೊಂದಿಗೆ ಒಂದೇ ಲೋಕದಲ್ಲಿ ವಾಸಿಸುವುದು), ೨. ಸಾರ್ಷ್ಟಿ (ಇಷ್ಟದೇವತೆಗೆ ಸರಿಸಮಾನವಾದ ಐಶ್ವರ್ಯವನ್ನು ಎಂದರೆ ಅಣಿಮಾದಿ ಸಿದ್ಧಿಗಳನ್ನು ಪಡೆಯುವುದು), ೩. ಸಾಯುಂಜ್ಯ (ಇಷ್ಟದೇವತೆಯ ಸಹಭಾವ ಅಥವಾ ತಾದಾತ್ಮ್ಯವನ್ನು ಪಡೆಯುವುದು) ಎಂಬ ಮೂರು ಬಗೆಯ ಸಿದ್ಧಿಗಳನ್ನು ಹೇಳಿದೆ. ಪಂತ್ರೆ ಕೆಲವು ಗ್ರಂಥಗಳಲ್ಲಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಂಜ್ಯ ಎಂಬ ನಾಲ್ಕು ಬಗೆಯ ಮುಕ್ತಿಗಳು ನಿರೂಪಿತವಾಗಿವೆ. ಭಾಗವತದ ೩–೨೯–೧೨ರಲ್ಲಿ ೧. ಸಾಲೋಕ್ಯ (ಭಗವಂತನ ಲೋಕದಲ್ಲಿರುವುದಂ), ೨. ಸಾರ್ಷ್ಟಿ (ದೇವರಿಗೆ ಸರಿಸಮಾನವಾದ ಐಶ್ವರ್ಯ ಹೊಂದಿರಂವುದು), ೩. ಸಾಮೀಪ್ಯ (ದೇವರ ಹತ್ತಿರದಲ್ಲಿರುವುದು), ೪. ಸಾರೂಪ್ಯ (ದೇವರಿಗೆ ಸಮಾನವಾದ ರೂಪ ಧರಿಸುವುದು), ೫. ಏಕತ್ವ (ಇಷ್ಟದೇವತೆಯಲ್ಲಿ ಐಕ್ಯವಾಗುವುದು) ಎಂಬ ಐದು ಬಗೆಯ ಮುಕ್ತಿಯಂ ಅಂತಸ್ತುಗಳನ್ನು ಹೇಳಿದೆ. ಅದ್ವೈತದ ಸಿದ್ಧಾಂತದಂತೆ ಇವೆಲ್ಲ ಉಪಾಸನೆಯಿಂದ ಸಿದ್ಧಿಸುವ ಗೌಣಮುಕ್ತಿಗಳು. ಪರಮಮುಕ್ತಿಯು ಶುದ್ಧಬ್ರಹ್ಮ ಭಾವ–ಇದು ತತ್ವಜ್ಞಾನದಿಂದ ಮಾತ್ರ ಲಭಿಸುತ್ತದೆ. ಮುಕ್ತಿಯ ಈ ಸಂಖ್ಯೆಗಳ ಬಗೆಗೆ ಮಂತ್ರ ವಿವರಣೆಯ ಬಗೆಗೆ ಬೇರೆ ಬೇರೆ ಅಭಿಪ್ರಾಯಗಳಿವೆ. [ದೇವ + ಸಾಯುಜ್ಯ]

ದೇವಸಾಲೆ (ನಾ). (?): ತಸ್ಯ ಸೀಮಾನ್ತರಂ ಕೊಳ್ತಿನಿಲೊಱಿವ ವೇರಿಪ್ಪೆವಾಣ್ಡಕ್ಕ್ಯ ತುಟ್ಟಿದಲಂ ದೇವಸಾಲೆಯುಂ ಕೆಬ್ಬಱಿವ . . . ನನ್ತಾಕ ಕೊಳ್ತಾಲೆಯುಳ್ ಕುದಿತ್ತು (ಎಕ. XVI, ಗುಬ್ಬಿ. ೬೫–೫೦.: 733). [?]

ದೇವಸಾವರ್ಣಿಕ (ನಾ). ಈಗ ನಡೆಯುತ್ತಿರುವ ಶ್ವೇತವರಾಹಕಲ್ಪದಲ್ಲಿ ಹದಿಮೂರನೆಯ ಮನು,–ವನ್ವಂತರಪ್ರವರ್ತಕ : ಸ್ವಾಯಂಭುವ ಸ್ವಾರೋಚಿಷ ಉತ್ತಮ ತಾಮಸ ರೈವತ ಚಾಕ್ಷುಷ ವೈವಸ್ವತ ಸೂರ್ಯ ಸಾವರ್ಣಿಕ ದಕ್ಷಸಾವರ್ಣಿಕ ಬ್ರಹ್ಮಸಾವರ್ಣಿಕ ಧರ್ಮಸಾವರ್ಣಿಕ ರುದ್ರ ಸಾವರ್ಣಿಕ ರೌಚ್ಯ ಇಂದ್ರಸಾವರ್ಣಿಕರೆಂಬ ಹದಿನಾಲ್ಕು ಮನುಗಳೊಳಗೆ . . . ರೌಚ್ಯನೇ ದೇವಸಾವರ್ಣಿಕನೆಂದು ಪುರಾಣಭೇದಂಗಳಿಂ ನಾಮಾಂತರಮುಂಟಾಗಿ (ವಿವೇಕ. ೩೦೬). 'ಮನುರ್', 'ಮನ್ವಂತರ' ಪರಾ. P ಪ್ರತಿಯೊಂದಂ ಕಲ್ಪದಲ್ಲಿಯೂ ಹದಿನಾಲ್ಕುಮಂದಿ ಮನುಗಳಿರಂತ್ತಾರೆ. ೧. ಸ್ವಾಯಂಭುವ, ೨. ಸ್ವಾರೋಚಿಷ, ೩. ಉತ್ತಮ, ೪. ತಾಮಸ, ೫. ರೈವತ, ೬. ಚಾಕ್ಷುಷ (ಇವರು ಆಗಿಹೋದವರು). ೭. ವೈವಸ್ವತ (ಈಗಿನ ಮನು). ೮. ಸಾವರ್ಣ, ೯. ದಕ್ಷಸಾವರ್ಣ, ೧೦. ಬ್ರಹ್ಮಸಾವರ್ಣ, ೧೧. ಧರ್ಮಸಾವರ್ಣ, ೧೨. ರುದ್ರ ಸಾವರ್ಣ, ೧೩. ದೇವಸಾವರ್ಣ, ೧೪. ಇಂದ್ರಸಾವರ್ಣ (ಇವರಂ ವಂಂದೆ ಬರುವ ಮನುಗಳು). [ಸಂ.]

ದೇವಸಾಸವೆ, ದೇವಸಾಸಿವೆ(ನಾ). ಒಂದಂ ಬಗೆಯ ಗಿಡ: "ರಕ್ತಮೂಲಕಃ-ದೇವಸಾಸವೆ" (ಲಿಪಿ. ೧೩೬). **ದೇವಸಾಸಿವೆ** : "ಅಕ್ಷಃ –ತಾಡಿಕವಡೆ, ಬಿಂಡುಗ, ದೇವಸಾಸಿವೆ" (ಲಿಪಿ. ೧) ; "ನಿರ್ಜರಾದಿ ಸರ್ಷಪ–ದೇವ ಸಾಸಿವೆ" (ಲಿಪಿ. ೪೪). [ದೇವ + ಸಾಸವೆ]

ದೇವಸಾಸಿವೆ 'ದೇವಸಾಸವೆ' ನೋ.

ದೇವಸಾಳಿ (ನಾ). ನೆಯ್ಗೆಯವರಲ್ಲಿ ಒಂದು ಪಂಗಡ: ನೇಕಾರರು . . . ೨ನೇ ವರ್ಗದಲ್ಲಿ ದೇವಸಾಳಿಗಳು, ಇಲ್ಲವೆ ದೇವಾಂಗರುಯೆಂಬ ಜಾತಿಯೊಂದೇ ಉಂಟು (ಕಭಾಗ. ೧೫೯). [ದೇವ + ಸಾಳಿ (<ಸೇಲೆ)]

ದೇವಸಿಂಗರ (ನಾ). ದೇವತೆಗಳು ಅಲಂಕಾರ ಮಾಡಿಕೊಳ್ಳುವಂಥ ಶ್ರೇಷ್ಠವಾದ ಅಲಂಕಾರ,–ಲೋಕೋತ್ತರವಾದ ಶೃಂಗಾರ : ದೇವ ಸಿಂಗರಗೂಡಿ ಸಿಂಹಪೀಠದೊಳಿರ್ದ ಭಾವನ ಕಂಡ ದೂರದೊಳು (ಪಚಚ: ೪೯-೧೩). [ದೇವ + ಸಿಂಗರ]

ದೇವಸಿದ್ಧಿ (ನಾ). ದೇವಾನುಗ್ರಹದಿಂದ ಉಂಟಾಗುವ ಕಾರ್ಯಜಯಂ: ದೇವಸಿದ್ಧಿ ಮಾನುಷಸಿದ್ಧಿ ಎಂಬೆರಡುಂ ಸಿದ್ಧಿಯುಮಂ . . . ಸೌಧರ್ಮ ಕಲ್ಪೇಶ್ವರಂ ಪ್ರತ್ಯಕ್ಷಂ ಮಾಡಿದಾಗಳ್ (ಅಜಿಪು. ೫-೩೦ ವ). [ದೇವ + ಸಿದ್ಧಿ]

ದೇವಸುತ(ನಾ).=ದೇವಕುವರ ೧ : ನೀ ದೇವಸುತನಾಗಿದ್ದರೀ ಸಿಲುಬೆಯಿಂದಿಳಿದು ಬಾರ ನೋಡುವ : (ಗೊಕ್ಕೊ.ಪಾ. ೧೩-೩೦೬). [ದೇವ + ಸುತ]

ದೇವಸುರಭಿ (ನಾ). ದೇವತೆಗಳ ಹಸುಂ ; ಕಾಮಧೇನು : ಸ್ತೋತ್ರವೇ ಅನುಗ್ರಹವನ್ನು ಕರೆಯುವ ದೇವಸುರಭಿಯಲ್ಲವೆ ? (ಪತಂದಾ. ೪). [ದೇವ + ಸುರಭಿ]

ದೇವಸುಪಿ (ನಾ). ಹೃದಯದಲ್ಲಿರುವ ಐದು ರಂಧ್ರಗಳು : ಹೃದಯಕ್ಕೆ ಐದು ರಂಧ್ರಗಳಿವೆ. ಸ್ವರ್ಗದ್ವಾರಗಳಾಗಿರುವ ಅವುಗಳನ್ನು ಪ್ರಾಣವೇ ಮುಂತಾದ ದೇವತೆಗಳು ಕಾದುಕೊಂಡಿರುವುದರಿಂದ ಅವು ದೇವಸುಪಿಗಳು (ಬ್ರಹ್ಮಧಾ. ೩೦೯ ಅಡಿಟಿ); P ಛಾಂದೋಗ್ಯೋಪನಿಷತ್ತಿನ ಮೂರನೆಯ ಅಧ್ಯಾಯದ ಹದಿಮೂರನೆಯ ಖಂಡದಲ್ಲಿ ಹೃದಯಾಕಾಶರೂಪವಾದ ಬ್ರಹ್ಮದ ಉಪಾಸನೆಯನ್ನು ಹೇಳಿದ ಮೇಲೆ ಅದಂ ಪರಿಪೂರ್ಣವೆನಿಂವುದಕ್ಕಾಗಿ ತದಂಗವಾಗಿ ಪಂಚದೇವಸುಪಿಗಳ ಉಪಾಸನೆಯು ಹೇಳಲ್ಪಟ್ಟಿದೆ. ಸ್ವರ್ಗಲೋಕದ ಭವನವಾದ ಹೃದಯಕ್ಕೆ ಐದು ರಂಧ್ರಗಳಿವೆ. ಸುಪಿಯೆಂದರೆ ರಂಧ್ರ ಅಥವಾ ದ್ವಾರ. ದೇವತೆಗಳಾದ ಪ್ರಾಣಾದಿಗಳು ಇಲ್ಲಿ ಕಾವಲಿರುವುದರಿಂದ ಇವಕ್ಕೆ ದೇವಸುಪಿಗಳೆಂಬ ಹೆಸರು ಬಂದಿದೆ. ಪೂರ್ವದಿಕ್ಕಿನ ಸುಪಿಗೆ ಪ್ರಾಣ ಅಥವಾ ಆದಿತ್ಯನೆಂದೂ ದಕ್ಷಿಣದ ಸುಪಿಗೆ ವ್ಯಾನ ಅಥವಾ

ಚಂದ್ರಮಸನೆಂದೂ ಪಶ್ಚಿಮದ ಸುಷಿಗೆ ಅಪಾನ ಅಥವಾ ಅಗ್ನಿಯೆಂದೂ ಉತ್ತರದ ಸುಷಿಗೆ ಸಮಾನ ಅಥವಾ ಪರ್ಜನ್ಯವೆಂದೂ ಮೇಲುಗಡೆಯ ಸುಷಿಗೆ ಉದಾನ ಅಥವಾ ವಾಯುವೆಂದೂ ಹೆಸರು. ಈ ಐವರು ಬ್ರಹ್ಮಪುರುಷರೆಂದೂ ಸ್ವರ್ಗಲೋಕದ ದ್ವಾರಪಾಲಕರೆಂದೂ ಹೆಸರು ಪಡೆದಿದ್ದಾರೆ. ಇವರ ಉಪಾಸನೆಯಿಂದ ಮಾನವನು ಸ್ವರ್ಗಲೋಕವನ್ನು ಪಡೆಯುತ್ತಾನೆ. ಸುಷಿಗಳಿಗೂ ಸುಷಿಪಾಲಕರಾದ ದೇವತೆಗಳಿಗೂ ಶ್ರುತಿಯು ಅಭೇದವನ್ನು ಕಲ್ಪಿಸಿದೆ. [ದೇವ + ಸುಷಿ]

ದೇವಸೇನೆ (ನಾ). ದೇವತೆಗಳ ದಂಡು,–ಸೇನೆ : ದೇವಸೇನೆ ನಡೆದತ್ತೋರಂತೆ ನೂಲ್ವೊಯ್ದವೊಲ್ (ಅನಂಪು. ೫-೪೪). [ದೇವ + ಸೇನೆ]

ದೇವಸೌಖ್ಯ (ನಾ). ದೇವತೆಗಳು ಅನುಭವಿಸುವ ಸುಖ,–ಭೋಗ : ದಿವ್ಯಭೋಗ : ಲೋಕೋತ್ತರವಾದ ಸುಖ : ದೇವಸೌಖ್ಯಮಂ ಸೇವಿಸಿಯುಂ ಕಷಾಯವೊಗೆಯುತ್ತಿರೆ ಪೋದ ಪರಾರ್ಥ್ಯವಸ್ತ್ರದುತಾ ವಿಭುಗಾದುದಂದು ವಿಶದಂ ಬಹಿರಂಗಮುಮಂತರಂಗಮುಂ (ಶಾಂತಿಪು. ೪-೩೫). [ದೇವ + ಸೌಖ್ಯ]

ದೇವಸ್ತುತಿ (ನಾ). ದೇವರನ್ನು ಕುರಿತ ಹೊಗಳಿಕೆ : ದೇವರ ಮಹಾತ್ಮೆಯ ವಿವರಣೆ ; ದೇವರ ಪ್ರಾರ್ಥನೆ : ದೇವಸ್ತುತಿ ಲೋಕಕ್ಕ ಖಿಳಾವನಿಯೊಳ್ಳಲವು ಭೇದಂ (ಸಮಪ. ೮-೮೯). [ದೇವ + ಸ್ತುತಿ]

ದೇವಸ್ತುತ್ಯ (ನಾ). ದೇವರ ಗೌರವಕ್ಕೆ ಪಾತ್ರನಾದವನು : ದೇವಸ್ತುತ್ಯ ನನರುಹದ್ದೇವನನರ್ಚಿಸುತಮಿರ್ಪ ಭವ್ಯನವಶ್ಯಂ ಭಾವಿಪಡೆ ಮರ್ತ್ಯನಲ್ಲಂ ದೇವಸ್ತುತ್ಯನೆ ದಲಲ್ಲಿ ಸಂದೆಯಮುಂಟೇ (ಸಮಪ. ೧-೯೩).

[ದೇವ + ಸ್ತುತ್ಯ]

ದೇವಸ್ತ್ರೀ (ನಾ). ೧. ದೇವಜಾತಿಯಲ್ಲಿ ಹುಟ್ಟಿದ ಹೆಂಗಸು ; ದೇವತಾಸ್ತ್ರೀ : ದೇವಸ್ತ್ರೀಚಿಕುರಪರಿವೃತವಾದೆ ಪದ್ಮಾವತಿ ವರದೆಯೆಮಗಕ್ಕೆ (ಲೀಲಾವ. ೧೦-೩). ೨. ರಂಭೆ, ಊರ್ವಶಿ ಮೊದಲಾದ ಅಪ್ಸರೆಯರಲ್ಲಿ ಒಬ್ಬಳು. 'ದೇವಗಣಿಕೆ$_2$' ಪರಾ. [ದೇವ + ಸ್ತ್ರೀ]

ದೇವಸ್ಥಾನ (ನಾ). ೧. ದೇವತಾವಿಗ್ರಹಗಳನ್ನು ಪ್ರತಿಷ್ಠಿಸಿ ಪೂಜೆ ಮಾಡಲು ಕಟ್ಟಿರುವ ಕಟ್ಟಡ ; ಗರ್ಭಗುಡಿ. ೨. ದೇವಾಲಯ ; ಗುಡಿ : ಹರಶಂಕರೇಶ್ವರಸ್ವಾಮಿಯವರ ದೇವಸ್ಥಾನದ ಪೌಳಿಯಲಿ (ಎಕ. XII, ತಿಪಟೂ. ೬೩-೩ ; 1748) ; ಒಂದು ಸಿಂಹವು . . . ದೇವಸ್ಥಾನದ ಬಳಿಯಲ್ಲಿ ನೀಮಿಯ ಬಯಲಿನ ದನ ಕುರಿಗಳನ್ನು ರಾತ್ರಿ ನಾಶಮಾಡುತ್ತಿದೆ (ಮಣಿಸ. ೮೮) ; ಮೂರ್ತಿಯ ಉಪಾಸನೆಗಾಗಿ ಸಲಕ್ಷಣವಾಗಿ ವಾಸ್ತುಶಾಸ್ತ್ರ ಸಮ್ಮತವಾಗಿ ರಚಿತವಾದ ; ಪ್ರಾಸಾದವೇ ದೇವಸ್ಥಾನವೆಂದು ಕರೆಯಲ್ಪಟ್ಟಿತು (ಭಾರದ. ೮೧) ; ನೀವು ನಿಮ್ಮ ಪ್ರದಕ್ಷಿಣೆ ಮಾಡಿಕೊಳ್ಳುತ್ತಾ ದೇವಸ್ಥಾನವನ್ನೂ ಪ್ರದಕ್ಷಿಣೆ ಮಾಡಬೇಕು (ನಕ್ಷತ್ರ. ೬೧).

ದೇವಸ್ಥಾನದ ಚಾವಡಿ = ದೇವಸ್ಥಾನಗಳ ಮೇಲ್ವಿಚಾರಣೆಗಾಗಿ ಏರ್ಪಾಡು ಮಾಡಿದ್ದ ಕಚೇರಿ,–ಕಾರ್ಯಾಲಯ : ದೇವಸ್ಥಾನದ ಚಾವಡಿ – ಇದರಲ್ಲಿ ಸಕಲದೇವಾಲಯಗಳ ಆದಾಯ, ವ್ಯಯಗಳನ್ನೂ, ಅಲ್ಲಿ ನಡೆಯತಕ್ಕ ಆಯಕಟ್ಟುಗಳನ್ನೂ ನೋಡುವಂತೆ ನಿಬಂಧನೆ ಮಾಡಿದರು (ಮಹಾವಂ. I, ೧೫೦) ; ಚಿಕ್ಕದೇವರಾಜಒಡೆಯರವರು . . . ೧೮ ಕಚೇರಿ ಎಂಬದಾಗಿ ನಿಬಂಧನೆಮಾಡಿದರು. ಯಾವವೆಂದರೆ (೧) ನಿರೂಪದ ಚಾವಡಿ . . . (೧೬) ದೇವಸ್ಥಾನದ ಚಾವಡಿ (ಹಾಮವಂ. ೧೪೬).

[ದೇವ + ಸ್ಥಾನ]

ದೇವಸ್ನಾನ (ನಾ). ದೇವರಿಗೆ ಮಾಡುವ ಅಭಿಷೇಕ : ವಾನರಸಂಹತಿ ದೇವಸ್ನಾನಂ ಮಾಡುವ ಗ್ಗೆ(ರ್ಗೆ) ಗದ್ದುಗೆಯ ನೀರಂ ಸನ್ಮಾನದೆ ತಂದೀವುವೆನಲ್ಕೆ (ಎಇ. XVI, ೩-೧೦ ; 980 ?). [ದೇವ + ಸ್ನಾನ]

ದೇವಸ್ವ (ನಾ). ದೇವರ ಸ್ವತ್ತು ; ದೇವಾಲಯಕ್ಕೆ ಸೇರಿದ ಆಸ್ತಿ : ಅನುದಿನಂ ದೇವಸ್ವಮಂ ತಿನ್ದು ದುರ್ಜನರೊಳಾಣದೆ ಸಂದು ಲೋಕದವವಾದಕ್ಕಾವಗಂ ಬನ್ದು ದುರ್ಮ್ಮನದಿಂ ದೂರಿಸುತಿರ್ಪ್ಪ ತಾಪಸನಿಕೃಷ್ಟ ಜ್ಞಾನಶಕ್ತಿಬ್ರತೀಂದ್ರನನೇಮ್ಮೋಲ್ವರೆ (ಸೌಇಇ. XI-ii, ೧೫೨-೩೩ ; 1108) ; ದೇವಸ್ವಮಿದೆನ್ನದೆ . . . ತಿಂದಂ ವ್ಯಸನಾವಸಥಂ ಗುಣದ ಕೇಡನೆಂತುಂ ನೋಡಂ (ನೇಮಿಪು. ೩-೮೬) ; ಆ ದೇವರಿಂಗೆ ನಡವ ಅಂಗರಂಗ ನೈವೇದ್ಯ ಮುಂತಾದ ಧರ್ಮಂಗಳಿಗೆ ಬಿಡು ದೇವಸ್ವವಾಗಿ ಕ್ಷೇತ್ರಂಗಳ ಬಿ[ಟ್ಟು] (ಕಇ. III-i, ೭-೧೩ ; 1527) ; ಇದರಲ್ಲಿ . . . ಕೆಲ ಭೂಮಿಗಳು ಶ್ರೀಮಹಾದೇವರ ದೇವಸ್ವಗಳೆಂದು ಬರೆದಿದೆ (ಕರ್ಣಾಅ. ೬೬).

[ಸಂ.]

ದೇವಸ್ವನಿಧಿ (ನಾ). ದೇವಾಲಯದ ಖರ್ಚುವೆಚ್ಚಗಳಿಗಾಗಿ ಏರ್ಪಡಿಸಿರುವ ಇಡುಗಂಟು,–ಪುದುವಟ್ಟು : ದೇವಸ್ವನಿಧಿಗೆ ಪ್ರತಿವರ್ಷ ಸಲ್ಲಿಸಬೇಕಾದ ಐವತ್ತೊಂದುಲಕ್ಷ ರೂಪಾಯಿಗಳ ಮೊಬಲಗು (ಭಾಧಾನ. ೧೩೨).

[ದೇವಸ್ವ + ನಿಧಿ]

ದೇವಸ್ವರೂಪಿಣಿ (ನಾ). ದೇವತಾಸ್ವಭಾವವುಳ್ಳವಳು ; ದೇವತೆಯಂತೆ ಉದಾತ್ತಗುಣಗಳಿಂದ ಕೂಡಿರುವವಳು : ನೀನು ಹೋಗಿ ಅವರನ್ನೂ ಅವರ ತಾಯಿಯನ್ನೂ ದೇವಸ್ವರೂಪಿಣಿಯಾದ ಕೃಷ್ಣೆಯನ್ನೂ ಕರೆದುಕೊಂಡು ಬಾ (ವಚಭಾ. ೬೬). [ಸಂ. ದೇವಸ್ವರೂಪಿಣೀ]

ದೇವಳ$_1$ 'ದೇಗುಲ' ನೋ.

ದೇವಳ$_2$ (ನಾ). (?): ಎಲೆ ಧರ್ಮನಾಥ ನೀನುಜ್ಜ್ವಳಬೋಧತ್ರಯಮನಾಂತೊಡಂ ಮಗನೆಂಬಗ್ಗಳಮಂ ದೇವಳದೊಳೊಂದಿ ನಲವಿಂದಂ ರಾಜನೀತಿಯಂ ನಿನಗುಸಿರ್ವೆಂ (ಬಾಧಪು. ೧೩-೧೩೬). [?]

ದೇವಳಿ, ದೇವಾಳಿ (ನಾ). ದೇವಸ್ಥಾನದ ಪರಿಚಾರಕರಲ್ಲಿ ಒಂದು ಪಂಗಡ : ಕಾಳೇಕುಣಬಿಗಳಲ್ಲಿ ದೇವಳೀಕುಲದ ಮುತ್ತೈದೆಯು ಮದಿಮಗಳ ಕೊರಳಲ್ಲಿ ಮಂಗಳಸೂತ್ರ ಕಟ್ಟುವಳು (ಕಭಾಗೆ. ೧೩೦) ; ದೇವಳಿಗಳು–ಇವರೂ ಕಾನಡಾಜಿಲ್ಲೆಯವರೇ . . . ಗುಡಿಗಳ ಪರಿಚಾರಕರೊಳಗೆ ಸೇರಿದ ಹೆಂಗಸರ ಸಂತತಿಯವರು ಇವರೆಂದು ತೋರುತ್ತದೆ (ಕಭಾಗೆ. ೧೯೧). **ದೇವಾಳಿ** : ದೇವಸ್ಥಾನದ ಸೇವಕರು . . . ದೇವಡಿಗ, ದೇವಾಳಿ, ಮಾಲಿ (ತುಳುನಾ. ೧೬೨).

[ದೇವಳ$_1$ (<ದೇಗುಲ) + – ಇ$_3$./ಸಂ. ದೇವಲ]

ದೇವಳಿಗೆ 'ದೇವಾಳ್ಗೆ' ನೋ.

ದೇವಳೂರ್ (ನಾ). ಒಂದು ಊರಿನ ಹೆಸರು : ಸ್ವಸ್ತಿಶ್ರೀಮತ್ತುಗಳನ ಎಡವರಿಯ ಕಾಳೆಗ ದೇವಳೂರ ಮೇಲಾವೇಗ ಉತ್ತವಳ್ಳಂಗಾ × × × (ಎಕ. III, ಮೈಸೂರು. ೪೫-೨ ; ಸು. 990 ?). [? + ಊರ್]

ದೇವಾಂಗ (ನಾ). ೧. ದೇವರ ಅವಯವ. ೨. ಶ್ರೇಷ್ಠವಾದ ಒಂದು ಬಗೆಯ ಬಟ್ಟೆ ; ರೇಷ್ಮೆಬಟ್ಟೆ : "ದೇವಾಂಗಮೆಂದು ಪಟಭೇದಮಕ್ಕುಂ" (ಮಂಗರಾ. ೧೦೦-೨೮) ; ಪಟಿ ಚಿತ್ರಾವಟಿ ಜೋಗಂ ಪಟಿಯಂ ದೇವಾಂಗಮೆಂಬ ವಸನಂಗಳನೇಂ ಘಟಿಯಿಸುವವೊ (ಆದಿಪು. ೫-೩೪) ; ಬೊಂಗದ ನಾರಂಗದ ದೇವಾಂಗದ ಪಲತೆಱದ ಸಕಲವಟ್ಟೆಗಳಂ . . . ಪಾಸಿ (ಸುಳುಮಾ. ೧೦-೯೦) ; ದೇವಕಿ ಕಡುಗಂದಿಯಪ್ಪುದಱಿಂ ತೊರೆದೆಚ್ಚು ಪಾಯ್ವ ಮೊಲೆವಾಲಿಂ ಮಗನಂ ಮಜ್ಜನಂಬುಗಿಸಿ . . . ದೇವಾಂಗಮನುಡಿಸಿ (ಅರ್ಧನೇ. ೮-೨೧ ವ) ; ಬಿಜ್ಜಳನ ಭಂಡಾರದ ಚಿನಿ ಮಹಾಚಿನಿ ದೇವಾಂಗ ಲತಾವಳಿ . . . ಮೊದಲಾದ ಪಟ್ಟಾವಳಿಯ ದಿಂಡುಗಳಂ ತರಿಸಿ (ಬಸರ. ೮-೧೧) ; ಉತ್ತಮದ ದೇವಾಂಗವಸ್ತ್ರವನು ಧರಿಸುವಡೆ ಮುತ್ತು ಮಾಣಿಕವ ತೊಡುವರೆ ಮಾಡುವುದು ನಿತ್ಯದಾನವನು (ಸರ್ವಜ್ಞ. ೬೩೪). ೧, ೨ : ದೇವಾಂಗಸ್ಪರ್ಶೋಚಿತ ದೇವಾಂಗಾಮೂಲ್ಯವಸನದಿಂ

ಧಾದಿಸಿದೈ (ಪರ್ಪು. ೧೪-೩): ದೇವಾಂಗಾಮೃತಕಣಮಂ ದೇವಾಂಗದಿನೊತ್ತಿ ಶಚಿ ವಿಭೂಷಿಸಿದಳ್ (ಪಾರ್ಶ್ವಪು. ೧೪-೧೦೦) ; ದೇವಾಂಗದಿಂದೆ ತೊಡೆದಳ್ ದೇವಾಂಗನೆ ರಶ್ಮಮುಕುರಮಂ ತೊಡವೊಲಾ ದೇವಾಂಗವನೊಲ್ದಿಜಗುವ ದೇವಾಂಗವಿಭೂಷಣಾಂಶು ಮಾರ್ಪೊಳಿವಿನೆಗಂ (ಅನಂಪು. ೫-೪೦). ೩. ಪರಮೇಶ್ವರನ ದೇಹದಿಂದ ಹುಟ್ಟಿದ ಒಬ್ಬ ಅವತಾರಪುರುಷ ; ನೆಯ್ಗೆಯ ಕಲೆಯನ್ನು ಪ್ರಚಾರಕ್ಕೆ ತಂದವನು : (೪). ೪. ನೆಯ್ಗೆಯವರಲ್ಲಿ ಒಂದು ಒಳಪಂಗಡ : "ಡಾಡ, ನೇಕಾರ, ಹಟಗಾರ, ದೇವಾಂಗ" (ತಂತುಹು. ೮೪) ; ಕೊಂಕಣರಲ್ಲಿ ನಾಯ್ಕನೆಂದೂ ದೇವಾಂಗರಲ್ಲಿ ಜಟ್ಟಿ ಎಂದೂ . . . ಇತ್ಯಾದಿ ಕೌಟುಂಬಿಕ ಹೆಸರುಗಳಿವೆ (ಕುಳುನಾ. ೦೮೪).

ದೇವಾಂಗದ ಬೆಕ್ಕು = ಒಂದು ಬಗೆಯ ಬೆಕ್ಕು : "ಪೂತಿಕೃಶ-ದೇವಾಂಗದ ಬೆಕ್ಕು" (ಓಷಧಿ. ೧೮೩). [ದೇವ + ಅಂಗ]

ದೇವಾಂಗನೆ (ನಾ). ದೇವಲೋಕದ ಹೆಣ್ಣು ; ದೇವತಾಸ್ತ್ರೀ ; ಅಪ್ಸರೆ : ದೇವಾಂಗನೆಯರ್ ಪಾಡುವರಾವನ ಜಸಮಂ (ಆದಿಪು. ೦೩-೭೭) ; ಕುಲ ಶಿಖರಿಶೇಖರಿಯರುಮಪ್ಪ ದೇವಾಂ [ಙನಾಂ. ೮೬ಖಾಂ]ಗನೆಯರುಮಂ ಗಲೋದರವರಿಶೋಧನಪ್ರಮುಖ ನಿಖಿಲನಿಯೋಗಭೋಗಕ್ಕೆ ಬೆಸಸುದಂ (ಅನಂಪು. ೪-೮೯ ಪ); ದೇವಾಂಗನೆಯರಿಂತು ಪೊಗಟ್ಟುಂ ತೆಗಳ್ದುಂ ಬಯ್ದುಂ ಭಂಗಿಸಿಯುಂ ನುಡಿಸಿದೊಡಂ . . . ಕದಲದ ರಾಯನ ಕಟ್ಟಾಯಸದ ತಪದ ಬಲ್ಮೆಯುಂ ಕಂಡು ದೂರದೆ ಕೈಮುಗಿದು ಬೆಂಗೊಟ್ಟರ್ (ಧಾಮಾಶ್ಮ. ೬೨-೩). [ದೇವ + ಅಂಗನೆ]

ದೇವಾಂಗವಸನ (ನಾ). ರೇಷ್ಮೆವಸ್ತ್ರ : ಕಾಂಚನಮಂಚೋಪಶೋಭಿತ ದೇವಾಂಗವಸನಪ್ರಚ್ಛದಾಚ್ಛಾದಿತ ಶಯ್ಯಾತಳದೊಳ್ . . . ಪಟ್ಟಿರ್ದ ಗರ್ಭೇಶ್ವರಿಯಲ್ಲಿಗೆ ದೂತನನಟ್ಟಿ (ಶಾಂತಿಪು. ೯-೮೩ ಪ).

[ದೇವಾಂಗ + ವಸನ]

ದೇವಾಂಗವಸ್ತ್ರ (ನಾ). =ದೇವಾಂಗವಸನ : ಇಂದ್ರಾಣಿ ಭಗವದಂಗಸಂಗತ ಜಳಕಣಂಗಳಂ ದೇವಾಂಗವಸ್ತ್ರಂಗಳಿಂಗೊತ್ತಿ ಕಳೆದು (ಆದಿಪು. ೭-೦೦೩ ಪ); ದಿವಿಜಪತಿ ಪೊಳೆವ ದೇವಾಂಗವಸ್ತ್ರಮಂ ಭುವನಪತಿಯನುಡಿಸಿ (ಶಾಂತಿಪು. ೧೧-೩೩) ; ದೇವಾಂಗವಸ್ತ್ರಮಂ ಸೆಳೆಮಂಚಂ ಕವ್ಗುಡೆ ಧವಳಚ್ಛತ್ರಮುಂ ವಿಮೊಪ್ಪೆ ಪಾಸಂ ಸಮಂತು ಪಾಸುವುದು (ಪುರಪ್ರ. ೦೦-೨೨).

[ದೇವಾಂಗ + ವಸ್ತ್ರ]

ದೇವಾಂಬರ (ನಾ). ೧. ದೇವತೆಗಳು ಧರಿಸುವ ಬಟ್ಟೆ. ೨. ಅವಮೊಲ್ಕವಾದ ಬಟ್ಟೆ ; ಬೆಲೆಬಾಳುವ ಹಾಗೂ ಪ್ರಶಸ್ತವಾದ ಬಟ್ಟೆ : ಧನಕನಕ ದೇವಾಂಬರಾದಿಮುಕ್ತಾಭರಣಕರ್ಪೂರವೀಟಿಕಾದಿಗಳನಿತ್ತು ಓವಿ ಸಿಂಹಳ ಮುಖ್ಯರಂ ತಮ್ಮತಮ್ಮ ದೇಶಾವಳಿಗೆ ಬೀಳ್ಕೊಡಲು (ಧಾವಕಂ. ೫-೬೧).

[ದೆವ + ಅಂಬರ]

ದೇವಾಗಮ (ನಾ). ದೇವತೆಗಳ ಆಗಮನ : ನಡೆ ನೋಡಲೊಡಂ ದೇವಾಗಮವಮಂ ಪರಿದೊಂದು ದಂದುಗದ ಸಂದಣಿಯಿಂದಮೆ . . . ನೋವೆನೆಗಾದುದು (ಆದಿಪು. ೩-೩೩). [ದೇವ + ಆಗಮ]

ದೇವಾಗಮನ (ನಾ). = ದೇವಾಗಮಂ : ಆ ವನಿತೆ . . . ಸೌಧೋಪರಿಮ ತಳದೊಳ್ ನಿಂದು ದೇವಾಗಮನವಮಂ ನೋಡಲೊಡಂ (ಆದಿಪು. ೩-೩೨ ಪ).

[ದೇವ + ಆಗಮನ]

ದೇವಾಗಾರ (ನಾ). ೧. ದೇವತೆಗಳ ವಾಸಸ್ಥಾನ; ಸ್ವರ್ಗ : ದೇವಾಗಾರ ದೊಳುರ್ವಿಯೊಳ್ ಗಗನದೊಳ್ ವಲ್ಮೀಕದೊಳ್ ನಾಕವಕ್ಕು (ನಾನಾರ. ೬). ೨. ದೇವಸ್ಥಾನ ; ದೇವಾಲಯ : ನೀರ ಪೆಟ್ಟಿ . . . ದೇವಾಗಾರಂ ಬೌಮಟಮೆಸೆದಿರ್ಪಾರವೆಯಂಬಿಡೆಗಳುಚಿತವೋಸಜೆಗೇಟಲ್ (ಕೋಕೋಪ. ೧೨-೩೩) ; ಅವಿರಳವಾದ್ಯಸಮೇತಂ ಧವಳಪ್ರಾಸಾದ ಸಾರ ದೇವಾಗಾರಂ (ಜಗವಿ. ೨-೨೩); ಎಟ್ತಂದು ದೇವಾಗಾರಮಂ ಪೊಕ್ಕು (ಅರ್ಕಪು. ೧೦-೦೩೮ ಪ) ; ಕೆಜಿಯಂ ಕಟ್ಟಿಸು ಭಾವಿಯಂ ಸವಸು ದೇವಾಗಾರಮಂ ಮಾಡಿಸಜ್ಜೆಜಿಯೊಳ್ಸಿಲ್ಕಿದನಾಥರಂ ಬಿಡಿಸು (ಸೌಇಇ. IV, ೨೬೭-೪೪ : 1380). [ದೇವ + ಆಗಾರ]

ದೇವಾಡೇವ (ನಾ). ೧. ದೇವಸ್ಥಾನದಲ್ಲಿ ಪೂಜೆ ಮಾಡಿ ಜೀವಿಸುವವನು ; ದೇವಸ್ಥಾನದ ಅರ್ಚಕ ; "ಪೂಜಾರಿ" (ಅಮರ. ೬೯೪). ೨. ದೇವಸ್ಥಾನದ ಕೆಲಸಗಾರ,-ಸೇವಕ.

[ದೇವ + ಅಜೀವ]

ದೇವಾತಿ (ನಾ). ಒಬ್ಬಾತನ ಹೆಸರು : ಶಂಪುರುಷನ ಮಗ ದೇವಾತಿ ವಡಿಸಲಿಸಿ ಉಣ್ಣೊನ್ (ಎಳ್. VIII, ಸೊರಬ. ೮೫-೯ ; 970). [?]

ದೇವಾತ್ಮಜಾತ (ನಾ). ಏಸುಕ್ರಿಸ್ತ : ತನಗೆ ತಾನೆಣೆಯ ದೇವಾತ್ಮಜಾತನ ನೋಡ ! (ಗೂಡಿತ್ಮಥಾ. ೪-೯೫). [ದೇವ + ಆತ್ಮಜಾತ]

ದೇವಾದಾಯ (ನಾ). ದೇವಸ್ಥಾನಕ್ಕೆ ದಾನಮಾಡಿದ ಭೂಮಿ,-ಜಮಾನು ; ದೇವಮಾನ್ಯ : ಆ ಗ್ರಾಮದ ಕಾಡಾರಂಬ ನೀರಾರಂಬ ಗೊಪ್ಪಲ ಪೊಂಮೆಸಂಕ ದೇವಾದಾಯ ಬ್ರಂಹಾದಾಯ ನಟ್ಟ ಕಲ್ಲು ಬಿಟ್ಟ ಬಸವ ಮೊದಲಾದುವುಗಳನ್ನು ಈ ಮಠಕೆ ಅವ್ಯತಪಡಿ ದೀಪಾರಾಧನೆ ಕಾರ್ಯಂಗಳಿಗಾಗಿ ಕೊಡವದು (ಎಳ್. IV (೩), ಕಾಮರಾ. ೨೯೨-೩೯ : 1345) ; ನೆರೆಯೂರ ಬೀರಗವುಂಡನೇ . . . ದೇವಾದಾಯ ಮಾಡಿದ ಸಂದರ್ಭದಲ್ಲಿ (ಸವತಿ. ೦೬೬). [ದೇವ + ಆದಾಯ]

ದೇವಾಧಿದೇವ (ನಾ). ೧. ದೇವರಂಗಳಿಗೂ ದೇವನಾಗಿರುವವನು ; ದೇವತೆಗಳಿಗೂ ನಿಯಾಮಕನಾಗಿರುವವನು; ಪರಮಾತ್ಮ. ೨. ಶಿವ. ೩. ವಿಷ್ಣು. ೪. ಇಂದ್ರ. ೫. ಅರ್ಹಂತ ; ಜಿನ : ದೇವಾಧಿದೇವನಪ್ಪನ ಕೇವಳಬೋಧೋದಯಂ ಪ್ರಸಿದ್ಧೋದಯಮಂ ದೇವನಿಕಾಯಸಮೇತಂ ದೇವೇಂದ್ರಂ ಮಾಡೆ ನೆಜಿಯೆ ಪೊಗಟ್ಟನುವೊಳನೇ (ಬಂಹರಿ. ೦೩-೩೧). [ಸಂ.]

ದೇವಾಧಿಪ (ನಾ). ದೇವತೆಗಳ ಒಡೆಯ,- ರಾಜ ; ದೇವೇಂದ್ರ. 'ದೇವಾಧಿಪಪುರ' ಪರಾ. [ದೇವ + ಅಧಿಪ]

ದೇವಾಧಿಪಪುರ (ನಾ). ೧. ಇಂದ್ರನ ಪಟ್ಟಣ ; ಅಮರಾವತಿ ; ಸ್ವರ್ಗ. ೨. [ಛಂದ] ಮೂರು ಲಘುಗಳಿರುವ ಅಕ್ಷರ ಗಣ; ನಗಣ (ಲುಲ): ಭೂಮಿ ದ್ವಾಲೇಂದು ದೇವಾಧಿಪಪುರಗಣಮುಂ ಮುಂತೆ ತೋಯ ತ್ರಯಂಗಳ್ ತಾಮೆತ್ತಂ ಬಂದು ಚಿಲ್ವಾಗಿರೆ ... ಸ್ಫುರ್ಗರಾನಾಮವೃತ್ತಂ (ಛಂದೋಂಬು. ೨-೦೪೧). [ದೇವಾಧಿಪ+ಪುರ]

ದೇವಾಧೀಶ (ನಾ). ೧. ದೇವತೆಗಳ ರಾಜ ; ದೇವೇಂದ್ರ. ೨. ವಿಷ್ಣು : ದೇವ ದೇವಾಧೀಶ ಸರ್ವಗುಣಾವಲಂಬನ . . . ನರನಾಟಕದ ಮಾಯಾ ಶ್ರೀವರನೆ ಚಿತ್ರೈಸು (ತೆಱರಾ. ೬-೫೩-೬೯). ೩. ಅರ್ಹಂತ : ಜಿನ: ದೇವಾಧೀಶನನೊರ್ವ ವರ್ಣಿಸೆ ಮನೋವಾಕ್ಕಾಯಸಂಶುದ್ಧಿಯಿಂ ದೇವೇಂದ್ರತ್ವವೆ ಸಾರ್ವುದು (ಅನಂಪು. ೧-೬೧). [ದೇವ + ಅಧೀಶ]

ದೇವಾನಕ (ನಾ). ದೇವತೆಗಳ ಭೇರಿ,- ದುಂದುಭಿ : ದೇವಾನಕಂಗಳ್ ಮೊಗೆ (ಶಾಂತಿಪು. ೯-೦೩೧) ; ದೇವಾನಕರವವೊದವೆ ನೃಪಾವಾಸದೊಳೊಗೆದುದಿಂತು ಪಂಚಾಶ್ಚರ್ಯಂ (ಪುಪ್ಪಿಪು. ೧೪-೧೧) ; ವಿಸ್ತರ ದೇವಾನಕವುಣ್ಮೆ ದಿಬ್ಯಗತಿವೆತ್ತಂ ಧಾತ್ರಿ ಭಾವ್ವೆಂಬಿನಂ (ಸೌಇಇ. XX, ೪೪೭-೩೯ ; 1228). [ದೇವ + ಆನಕ]

ದೇವಾನಾಂಪ್ರಿಯ (ನಾ). ೧. ದೇವತೆಗಳಿಗೆ ಪ್ರಿಯನಾದವನು ; P ಇದು ಅಶೋಕಚಕ್ರವರ್ತಿಗಿದ್ದ ಒಂದು ಬಿರುದು. ೨. ಏನೂ ತಿಳಿಯದವನು ; ದಡ್ಡ ; ಮೂರ್ಖ : ದೇವಂಗೆ ವಿಷಯುಮಲ್ಲದೆ ದೇವಾನಾಂಪ್ರಿಯರ್ಗೆ ವಿಷಯುಮೇ ಸತ್ಯಾವ್ಯಂ (ಪುಪೋಕ. ೦-೬);

ದೇವಾನಾಂಪ್ರಿಯನೆ ವಲಂ ದೇವಗತಿಪ್ರೀತನಪ್ಪವಂ ತದ್ಗತಿಯಂ ದೇವಗತಿಯೆಂದೆ ಬಯಸರ್ ಭಾವಿಸೆ ಭವ್ಯರ್ಕಳಲ್ಲಿ (ಪಾರ್ಶ್ವಪು. ೭-೧೫). ೩. (ಯಜ್ಞಕ್ಕೆ ಆಹುತಿಯಾಗಿ ಕೊಡುವ) ಹೋತ. [ಸಂ.]

ದೇವಾನೀಕ (ನಾ). ದೇವತೆಗಳ ಗುಂಪು,– ಸಮೂಹ : ಇಬ್ಬರ ದೆಸೆಗೆ ದೇವಾನೀಕ ಮೆಚ್ಚಿತು (ಕುಪ್ಯಾದ್ರೋ. ೧೩-೨೪). [ದೇವ + ಅನೀಕ]

ದೇವಾನ್ನ (ನಾ). ದೇವತೆಗಳಿಗೆ ಯೋಗ್ಯವಾದ ಆಹಾರ; ಉತ್ತಮವಾದ ಆಹಾರ; ದಿವ್ಯಾನ್ನ: ಮಡದಿಯೆನ್ನಗಲೊಳಗೆ ಸಕಲ ದೇವಾನ್ನವ ಒಡೆಯರಿಂದಲೂ ಮಿಗಿಲಾಗಿಕ್ಕಲು ತೆಗೆದಿರಿಸಿದೆನು (ಬಸವ. ೪೩೯); ನೀನು ಪ್ರೀತಿಯಿಂ ಸಕಲ ದೇವಾನ್ನಮಂ ಸಲಿಸೆ ನಿನ್ನಯ ನೆನಹಿನಿಂ ಜನಿಸಿದ ಭೂತಜೀವರ್ಗೆ ಸಂತೃಪ್ತಿಯಹುದೆಲೆ ಮಹಾಪೂತ ವಿಖ್ಯಾತ (ಪ್ರಭುಪು. ೪-೫೫). [ದೇವ + ಅನ್ನ$_3$]

ದೇವಾಪಗೆ (ನಾ). ದೇವತೆಗಳ ನದಿ; ಗಂಗಾನದಿ: ತಡೆಗುಮೆ ದೇವಾಪಗೆ ತಡೆಯದೆಡೆಯೊಳಂಭೋಧಿವರಂ (ಶಾಂತಿಪು. ೫-೧೪೬); ಹರಿನೀಳ ಶಿಳಾ ಸೋಪಾನಂ ನಿಮಿರ್ದುವು ದೇವಾಪಗೆಯಂ ಬಳಸಿ ಪರಿವ ಯಮುನಾನದಿ ವೋಲ್ (ಮಲ್ಲಿಪು. ೧೨-೬೭). [ದೇವ + ಆಪಗೆ]

ದೇವಾಯತನ (ನಾ). ದೇವಸ್ಥಾನ; ದೇವಾಲಯ : ಆ ರಮಣೀಯ ದೇವಾಯತನನೂತ್ನಸ್ತಂಭವಂ ನೆಮ್ಮಿ ನಿಂದಿರ್ದು (ಕಾದಂಪು. ೬೮೬); ಶ್ರೀರಾಜಾಧಿತ್ಯೇಶ್ವರದೇವರಂ ಪ್ರತಿಷ್ಠೆಗೈಯ್ದು ಮಹೋತ್ತುಂಗ ದೇವಾಯತನಮಂ ಮಾಡಿಸಿ (ಕಇಅ. ೨೨-೭-೨೮; 1083).

[ದೇವ + ಆಯತನ]

ದೇವಾರ, ದೇಹರ, ದೇಹಾರ$_1$ (ನಾ). ೧. ದೇವಾಲಯ; ದೇವಸ್ಥಾನ: ದೇವಾರಕ್ಕೆ ಜಕ್ಕಿಲಿಯೊಳ್ ನಾಲ್ಕು ಮತ್ತಲ್ಕೆಯ್ಯಂ ಕೊಟ್ಟಳ್ (ಎಕ. VII, ಶಿಕಾರಿ. ೨೧೯-೧೮; 918); ಈ ಕಲ್ಲ ಬಸದಿಯುಮೊನ್ದು ದೇವಾರಮುಮಂ ಮಾಡಿಸಿದಳ್ (ಎಕ. VIII, ನಗರ. ೪೫-೭; 950); ಆಗಾರಕ್ಕೆ– ಕ್ಷೀರಾಗಾರ–ಕೀರಾರ, ಕೀಲಾರ . . . ದೇವಾಗಾರ–ದೇವಾರ (ಶಮದ. ೨೯೫ ಪ್ರಯೋ); ಬಾಲಕನ ಕಣ್ಗೊಂದು ಬೆಲೆವಣಿಗಟ್ಟಿನ ದೇವಾರಂ ತೋಱೆವರ್ಪುದುಂ (ರಾಮಾಶ್ವ. ೭೬-೨೬). **ದೇಹರ**: ೧. ಎಮ್ಮವ್ವೆಯುಂ ದೇಹರದ ಜಗಲಿಯೊಳೊಱತೆಯಂ ತಾನಗಿವುತಿದ್ದಹಳು (ಬಸಪು. ೪೭-೨೬). **ದೇಹಾರ$_1$** : ೧. ಊರಿಂಗೀಶಾನ್ಯದ ಪಳ್ಳದ ಬಡಗಣತಡಿಯ ಪಿರಿಯ ದೇಹಾರದ ಕೆಯಿ ತೆಂಕಣಸೀಮೆ (ಸೌಇಇ. XI-i, ೬೫-೫೦; 1020); ಮಱುದಿವಸಂ ದೇಹಾರಕ್ಕೆ ದೇವರಂ ಕಾಣಲೆಂದು ಬಂದು (ಧರ್ಮಾಮೃ. ೩-೨೩೫); ನವ್ಯದಿವ್ಯೋಪಕರಣಪ್ರವ್ಯಕ್ತಸಮವಸೃತಿವ್ಯವಹಾರಮಂ ದೇಹಾರಮಂ ಪೊಕ್ಕು (ಪಾರ್ಶ್ವಪು. ೩-೨೯ ವ). ೨. ದೇವಾರ್ಚನೆಗಾಗಿ ಸಿದ್ಧಪಡಿಸಿದ ಗುಡಾರ: ಮಜ್ಜನದ ದೇಹಾರದ ರೆಂಟೆಯ ಕೊಂಟೆಯದ ಕೂರವದ . . . ವಿಳಾಸನಿವಾಸಂಗಳಿಂದಂ (ಶಾಂತಿಪು. ೧೦-೧೪೭ ವ); ಕಾಡೊಡೆಯಂಗವನೀಪತಿ ಬೇಡಿದುದಂ ಕೊಟ್ಟು ಹರಿಣಪೋತಕಯುಗಮಂ ನೀಡಿಲ್ಲದೆ ಕೊಂಡೊಯ್ದಂ . . . ಅಂತು ಕೊಂಡುಪೋಗಿ ತನ್ನ ದೇಹಾರದ ಮನೆಯೊಳ್ ಕಟ್ಟುವುದುಂ (ಪುಣ್ಯಾಸ್ರ. ೨-೧೬ ವ); ಮದುವೆಯುತ್ಸವಕೆಂದು ಕಟಕದ ನಡುವೆಯೊಡ್ಡಿದುದೊಂದು ಹೊಸ ಜಿನವಾಸ ಅದಕೆ ನೃಪರ ಮನೆ ದೇಹಾರಗಳು ನೆಲಸಿದುವವಸರಕೆ ತಕ್ಕಂತೆ (ಭರಜ. ೪೦-೮).

ದೇಹಾರದ ಸಮಯ = ದೇವಸ್ಥಾನದ (ಧರ್ಮದರ್ಶಿಗಳ) ಸಭೆ : ದಂಡನಾಯಕ ಕೇಶಿಮಯ್ಯಂಗಳು . . . ದಂಡನಾಯಕ ಉದಯಿಮಯ್ಯಂಗಳು ಇನ್ತಿನಿಬರುಂ ಧರ್ಮ್ಮಕ್ಕೆ ಸಹಾಯಕರಾಗಿ ಹೊಯ್ಸಳ ದೇವನ ದೇಹಾರದ ಸಮಯದಲಿರ್ದು (ಮೈಆರಿ. ೧೯೩೭, ೩೪-೧೭; 1142).

[<ಸಂ. ದೇವಾಗಾರ./ಪ್ರಾ.ದೇಹರಯ; P ಇದನ್ನು ಸಂ. 'ದೇವಗೃಹ'ದಿಂದಲೂ ನಿಷ್ಪನ್ನ ಮಾಡಬಹುದು]

ದೇವಾರಂಗೆಯ್, ದೇಹಾರಂಗೆಯ್$_1$ (ಕ್ರಿ). ದೇವಾಲಯವನ್ನು ಕಟ್ಟು; ನಿರ್ಮಿಸು (?) : ಇದು ವಿದ್ಯಾದಾನಂ ದೇವಾರಂಗೆಯ್ವ ಬ್ರತಿಗಳುಣ್ಬುನ್ (ಎಕ. III, ನಂಜನ. ೧೫೫-೧; ಸು. 970 ?). **ದೇಹಾರಂಗೆಯ್$_1$** : ಬಸವಸೆಟ್ಟಿ ತನ್ನ ದೇಹಾರಂಗೆಯ್ವ ಚೋವವುವಂ ಧಾರಾಪೂರ್ವ್ವಕಂ ಭೂಮಿಯಂ ಬಿಟ್ಟಂ ಚೋವವುವಂ ಬರೆಯಿಸಿದಂ (ಎಕ. IV, ಹೆಗ್ಗಡ. ೧೬-೨೨; 1021). [ದೇವಾರ + ಕೆಯ್$_1$]

ದೇವಾರಣ್ಯ (ನಾ). [ಜೈನ] ಮೇರುಪರ್ವತದ ಕೆಳಗಿರುವ ಭದ್ರಸಾಲವೆಂಬ ವನ : ದೇವಾರಣ್ಯಂ ದೇವರ ದೇವನ ಮನಕಿಂಬನೀಯೆ ತನ್ನಂದನದೊಳ್ (ಶಾಂತಿಪು. ೮-೧೨೨). [ದೇವ + ಅರಣ್ಯ]

ದೇವಾರಾತಿ(ನಾ). ೧. ದೇವತೆಗಳ ಶತ್ರು; ರಾಕ್ಷಸ; ದೈತ್ಯ. ೨. ರಾವಣ: ಏಳು ದೇವಾರಾತಿಯಿಂದಿನ ಕಾಳಗದ ಪರಿ ಹೊಸತು (ಕೌಶಿರಾ. ೩೨-೨೯).

[ದೇವ + ಅರಾತಿ]

ದೇವಾರಿ (ನಾ). = ದೇವಾರಾತಿ೧ : ಮಡದೀ/ನೀಂ ಪಡೆವಾ ಸುತಂ . . . ತವಿಕುಮಿ ದೇವಾರಿಯಂ (ಜಗವಿ. ೨-೮೫). [ದೇವ + ಅರಿ$_6$]

ದೇವಾರ್ಚನ (ನಾ). ದೇವರ ಪೂಜೆ; ದೇವತಾರಾಧನೆ : ಮೂಱು ಪೊಟ್ತಿನ ದೇವಾರ್ಚನಮುಂ ಷಟ್ಕರ್ಮಮುಮುಳ್ಳನವದ್ಯಂ ಶ್ರಾವಕರ್ಕಳೊಳ್ ಸಾಮಯಿಕಂ (ಅನಂಪು. ೩-೬೧). [ದೇವ + ಅರ್ಚನ]

ದೇವಾರ್ಚನೆ (ನಾ).=ದೇವಾರ್ಚನ : ದೇವಾರ್ಚನೆ ದಾನಂ ಸಂಧ್ಯಾವಂದನೆ ಜಪವೆನಿಪ್ಪುವಂ ಮಾಟ್ಟೌ ವಿಪ್ರಾವಳಿಗೆ ದರ್ಭೆಯಿಲ್ಲದೊಡಾ ವನಫಲಮಲ್ಲಿ ಮಸುರರುಂ ಗಡ ಕೊಳ್ವರ್ (ಸಮಪ. ೧೨-೪೬); ಮರುಳ ದೇವಾರ್ಚನೆಯೊ ಕನಸಿನ ಸಿರಿಯೊ ಶಿಶುವಿನ ಕೈಯ ರತ್ನವೊ ... ಹರನನೀ ಚರ್ಮಾಕ್ಷಿಯಲಿ ಗೋಚರಿಸೆ ಬೇಡಿದುದಂಬು ಮರ್ತ್ಯದೊಳಿರವು ಮರುಳು ಭಾಪೆನ್ನ ಪುಣ್ಯವೆನುತ್ತ ಬಿಸುಸುಯ್ದ (ಕುವ್ಯಾಅ. ೭-೨); ದೇವಾರ್ಚನೆಗಳ ಘಂಟಾರಾವಂ . . . ಚೆಲ್ವಿಂದಂ ಕಾವೇರೀಪಟ್ಟಣಂ ಕರಂ ಸೊಗಯಿಸುಗುಂ (ತ್ರಿಪುವಿ. ೧೧-೪). [ದೇವ + ಅರ್ಚನೆ]

ದೇವಾರ್ಚನೆಗೆಯ್ (ಕ್ರಿ). ದೇವರ ಪೂಜೆಯನ್ನು ಮಾಡು; ದೇವತಾರಾಧನೆಯನ್ನು ನೆರವೇರಿಸು : ದೇವಾರ್ಚನೆಗೆಯ್ದಲ್ಲಿಂ ಪಾವುಗೆಯಂ ಮೆಟ್ಟಿ ನಡೆದು ಮನೆದೆಯ್ವಕ್ಕಂ ಗೋವಾಜಿಗಜಾಶಸ್ತ್ರಂ [ಶಸ್ತ್ರಕೆ] ಗಾವಿಲ ರತಿಯಿಂದೆ ತಾಮು ಪೊಡೆವಡುತಿಪ್ಪರ್ (ಸಮಪ. ೯-೮೪).

[ದೇವಾರ್ಚನೆ + ಕೆಯ್$_1$]

ದೇವಾರ್ಚಿತ (ನಾ). ದೇವತೆಗಳಿಂದ ಪೂಜಿತನಾದವನಂ; ದೇವಗುರಂ; ಬೃಹಸ್ಪತಿ : ಇಂದುಪ್ರಿಯನಂಡನಂ ದ್ವಿತಯದೊಳ್ ದೇವಾರ್ಚಿತಂ ನಾಲ್ಕಱೊಳ್ ... ಇರಲ್ ಗೋವೃಂದಕತ್ಯುತ್ತಮಂ (ಅಟ್ಟಮ. ೮-೧೮೫).

[ದೇವ + ಅರ್ಚಿತ]

ದೇವಾರ್ಭಕ (ನಾ). [ಜೈನ] ಅರ್ಹಂತನಾಗುವ ಶಿಶು: ಮಣಿಮಂಡಪದ ನಡುವಣರ್ಚಿಸಿದ ಸಿಂಹಾಸನದೊಳ್ ಪೂರ್ವಾಭಿಮುಖನಾಗಿ ದೇವಾರ್ಭಕನನಿರಿಸುವುದುಂ (ಮಲ್ಲಿಪು. ೧೨-೧೧೨). [ದೇವ + ಅರ್ಭಕ]

ದೇವಾಲಯ (ನಾ). ದೇವಸ್ಥಾನ; ದೇಗುಲ; ಗುಡಿ : "ದೇವಾಲಯ ಮಾಯತನಂ" (ವಸ್ತುಕೋ. ೪೭-೧೩); ಎಲ್ಲೆಲ್ಲಿ ದೇವಾಲಯಂಗಳುಂಟಾದಲ್ಲಿ ಅಲ್ಲಲ್ಲಿ ನಿಚ್ಚಂ ಸಹಸ್ರಪೊನ್ಗಳನಲ್ಲಿ ಕೊಡುತೆ ಬಂದಪೆವು (ನಂಬಿರ. ೭-೧೬೧); ಯಾವ ಗುಡಿ ಮಿಗಿಲು ಈ ಭುವನದೇವಾಲಯಕೆ ? (ಪಕ್ಷಿಕಾ. ೨೮-೨೫).

[ದೇವ + ಆಲಯ]

ದೇವಾಲಿಕೆ (ನಾ). (?): ನುಡಿದುದೆ ದೇವಾಲಿಕೆ ತನ್ನಡವಲಿ ಮನುಮಾರ್ಗ್ಗವಾರ್ಪು ಸುರಕುಜದ ಬನಂ ಯೆಡೆಗೊಣ್ಡ ರೂಪು ಕಾಮನ ಹಿಡಿದ ಲರ್ಗಣೆಯೆನಿಪ ದಾವದಣ್ಡಾಧಿಪನುಂ (ಎಕ. V, ಚನ್ನರಾ. ೧೮೬-೩೦; 1143). [?]

ದೇವಾಲೆಯ 'ದೇವಾಲ್ಯ' ನೋ.

ದೇವಾಲ್ಯ, ದೇವಲ್ಯ, ದೇವಾಲೆಯ (ನಾ). ದೇವಸ್ಥಾನ; ದೇವಾಲಯಂ; ಗುಡಿ: ಮೂಲಸ್ಥಾನ ನಂದಿಕೇಶ್ವರದೇವರ ದೇವಾಲ್ಯ(ಲಯ)ಮಂ ಜೀರ್ಣೋದ್ಧಾರಂ ಮಾಡಿ (ಇಅ. V, ೦೬-೨೭; 1019); ಸಯಂಬುದೇವರಿಗೆರದು ಬಟ್ಟಾರ ದೇವಾಲ್ಯವಂ ಮಾಡಿಸಿದಂ (ಎಕ. XIV, ಶ್ರೀರಂಗ. ೩೪-೭; 1126); ಹಸುಳೆಯಾಗಿಯು ನಾನು ಕೆಱೆ ಬಾವಿ ದೇವಾಲ್ಯ ವಿರಚಿಸಿ ಭವಕೆ ಬಂದು ಫಲವನುಂಡು ನರಕಕೆ ಬೀಳುವನ ಕರುಣಕರದಿಂದೆತ್ತಿ ನಿನ್ನ ಹೊರೆಯೊಳಗಿರಿಸಿದೆ ಯೋಗಿನಾಥ (ಸಿದ್ಧರಾ. XXIV, ಪೀಠಿಕೆ); ಗಂಗೇಶ್ವರದೇವರ ದೇವಾಲ್ಯಮಂ ಮಾಡಿಸಿ (ಎಕ. VII, ಶಿವಮೊ. ೫-೪೯; 1218); ಆರಾಮವಗ್ರಾರ ಧರ್ಮತಟಾಕಗಳ ಚಾರುತರದ ದೇವಾಲ್ಯ ಧಾರಿಣಿಯೊಳಗೆ ಕಂಠೀರವೇಶ್ವರನಿಂದ ಪೂರೈಸಿ ಮೆಱೆದುವರ್ತಿಯಲಿ (ಕಂನವಿ. ೩೬-೩೭). **ದೇವಲ್ಯ**: ಆವಾವ ದಿಕ್ಕಿನಲಿ ಪಟ್ಟೆಯ ಮೇಲ್ಕಟ್ಟು . . . ನವರತ್ನದ ಕುಚ್ಚಿಂದ ದೇವಲ್ಯವೆಸೆದುದು (ಕಂನವಿ. ೭-೮೮). **ದೇವಾಲೆಯ**: ಇನ್ನೀ ಸ್ತಾನಮಾನ್ಯಮಂ ಶ್ರೀಮೂಲಸ್ತಾನಷ್ಟಯಂಭು ಕಲಿದೇವರ್ಗ್ಗಂ ಗವಱೇಶ್ವರದೇವರ್ಗ್ಗಂ ದೇವಾಲೆಯಮಂ ಮಾಡಿಸಿ (ಎಕ. XI, ದಾವಣ. ೧೫೫-೩೯; 1124).

[<ಸಂ.ದೇವಾಲಯ./ತುಳು. ದೇವಲ್ಯ]

ದೇವಾವನಿಜಾತ (ನಾ). ದೇವಲೋಕದ ವಂರ; ಕಲ್ಪವೃಕ್ಷ: ಆ ವನನಂದನಮಧ್ಯದ ದೇವಾವನಿಜಾತಮಿಾತನೆಂಬವೊಲಿತ್ತಂ . . . ರಾಜಶೇಖರಕ್ಷಿತಿಪಾಲಂ (ರಾಜಶೇ. ೦೦-೧೦೯). [ದೇವ + ಅವನಿಜಾತ]

ದೇವಾಶ್ವ (ನಾ). ಇಂದ್ರನ ಕುದುರೆ; ಉಚ್ಚೈಶ್ರವಸ್ಸು: "ಉಚ್ಚೈಶ್ರವಾಃ, ದೇವಾಶ್ವಃ – ಈ ೨ ಇಂದ್ರನ ಕುದಿರೆ" (ಹಲಾಯು. ೧೦-೬೦).

[ದೇವ + ಅಶ್ವ]

ದೇವಾಸ (ನಾ).=ದೇವಸ್ವ (?): ವುಂಬಳಿ ದೇವಾಸ ಖಂಡಿಕೆ ದಂಡಿಗೆ ವುಡುಗೊಱೆ ಮತ್ತೆ ಏನುಳ್ಳದಕ್ಕೆವೂ ಸೆಲವಾಗಿ ಅಇವತ್ತು ಹೊನ್ನನುಳಿದು (ಎಕ. VI, ಶೃಂಗೇರಿ. ೧-೦೭; 1346); ಶ್ರೀಮದಶೇಷಮಹಾಜನಂಗಳು ತಮ್ಮ ಹಳಿ ಕೆಂಪಿಡಿಯನು ದೇವಾಸ ಹೊರತಾಗಿ ಬಿದಿರೆನಾಯ್ಕನ ಮಗಳು ಕಾಚಮನಾಯ್ಕಿತಿ ತಮ್ಮ ಹರಿವಾಣಕ್ಕೆ ಕೊಟ್ಟದು (ಎಕ. VII, ಶಿವಮೊ. ೪೭-೫; 1688). [<ಸಂ.ದೇವಸ್ವ ?]

ದೇವಾಸಾಲೆ (ನಾ). (?): ನಲ್ಲ ದೇವಾಸಾಲೆ ಹುಲ್ಲೆಗೊಂಬತ್ತು ಮುಖ ಬೆಳ್ಳಿಲಿಗೆ ನಾಲ್ಕು ತನಿಗೋಡು ಮೂಡಿದ್ದನಿಲ್ಲಿಯೇ ಕಂಡೆ (ಸರ್ವಜ್ಞ. ೨೦೬೯).

[?]

ದೇವಾಸುರ (ನಾ). ೧. ದೇವತೆ ಮತ್ತು ರಾಕ್ಷಸ. 'ದೇವಾಸುರ ಯುದ್ಧ' ಪರಾ. ೨. (ಆಲಂ) ದೇವತೆಗಳಿಗೂ ರಾಕ್ಷಸರಿಗೂ ನಡೆದ ಯುದ್ಧ: ದೇವಾಸುರದೊಳಮಿಂದಿನ ನೋವಂ ನೊಂದಱಿಯೆಂ (ಪಂಪಭಾ. ೧೧-೨೦). ೩. (ಆಲಂ) ಒಳ್ಳೆಯತನಕ್ಕೂ ಕೆಟ್ಟತನಕ್ಕೂ ಉಂಟಾದ ಘರ್ಷಣೆ: ಅಂದು ಮೊದಲಾದುದೇ ದೇವಾಸುರಂ! (ಹೊಂಗಳು. ೩೭-೨೪) ೪. (?): ಸಿರಿವಚ್ಚನುಂ ಶ್ರೀಪುರುಷನುಂ ದೇವಾಸುರರಾ ಶಿವಮಾರನುಂ . . . ಎನೆಬರು ಎಱಿದು ಸತ್ತೊರ್ (ಮೈಆರಿ. ೧೯೪೪, ೬-೧; ಸು. 808). [ದೇವ + ಅಸುರ]

ದೇವಾಸುರಯುದ್ಧ (ನಾ). ದೇವತೆಗಳಿಗೂ ರಾಕ್ಷಸರಿಗೂ ನಡೆದ ಯುದ್ಧ,–ಕದನ: ಮುನ್ನಂ ಕೃತಯುಗದೊಳ್ ಸೋಮನ ವರುಣನ ರಾಜಸೂಯದ ಕಡೆಯೊಳ್ ದೇವಾಸುರಯುದ್ಧಂ ನೆಗೞೆ (ಪಂಪಭಾ. ೬-೨೪ ಪ); ದೇವಾಸುರಯುದ್ಧಕ್ಕೆ ಕರಗಂಬೊತ್ತಳೆಂಬಂತನವರತಬಾಷ್ಪ ವಾರಿಧಾರಾಪೂರಪರಿವಾರಿತಪಲ್ಲವನೇತ್ರೆಯುಂ . . . ಎನಿಸಿದ ಪಾಂಚಾಲ ರಾಜತನೂಜೆ (ಗದಾಯು. ೧-೫೫ ಪ). [ದೇವಾಸುರ + ಯುದ್ಧ]

ದೇವಾಳಿ 'ದೇವಳಿ' ನೋ.

ದೇವಾಳೆ (ನಾ). ಒಂದು ಬಗೆಯ ಬಾಳೆಯ ಗಿಡ ಮತ್ತು ಅದರ ಹಣ್ಣು: ರಸವಾಳೆ ಪುಟವಾಳೆ ರಾಜವಾಳೆ ಸಕ್ಕರೆಯೆಸೆವಾ ದೇವಾಳೆ ... ಮೆಱೆದುವರ್ತಿಯಲಿ (ಕಂನವಿ. ೫-೮೭). [<ದೇವ+ಬಾಳೆ, (<ಬಾಱೆ)]

ದೇವಾಳ್ಗೆ, ದೇವಳಿಗೆ (ನಾ). ಒಂದು ಪ್ರದೇಶದ ಹೆಸರು: ದೇವಾಳ್ಗೆ ವಿಷಯೇ ಕಿಱುಮುಂಡ ನೀರಿಣಾಂ ನಕರಸ್ಯ ದಶಮೋಭಾಗಃ (ಮೈಆರಿ. ೧೯೩೦, ೩-೧೯; ಸು. 500). **ದೇವಳಿಗೆ**: ಶ್ರೀಮತ್ ಪೆರ್ಮ್ಮನಡಿಗಳ್ ರಾಜ್ಯಂಗೆಯ್ಯುತ್ತಿರೆ ಕಲಿಗಂಗ ದೇವಳಿಗೆಟ್ಟತ್ತುವನಾಳುತ್ತುಮಿರೆ (ಎಕ. VI, ಚಿಕ್ಕಮ. ೪೨-೭; 959). [?]

△ **ದೇವಾಟ್ಟನ** (ನಾ). = ದೇವಾರ್ಚನ: ದೇವಾಟ್ಟನ ಒಡೆಯೊರ್ವಿ ನದಿಯುಕೆ ನದಿಯುಂ ಪಡೆದತ್ತುದು (ಇಅ. XIV, ೨೩-೫೦; ೨ನೆಯ ಶತ).

[<ಸಂ. ದೇವಾರ್ಚನ]

ದೇವಿ (ನಾ). ೧. ಹೆಣ್ಣುದೇವತೆ; ದೇವತಾಸ್ತ್ರೀ: ನುಡಿಯೊಂದು ಮಾಟವೊಂದೆನಿಸಿದ ಮಾನವಂಗೆನಗೆ ದೇವಿ ಹಸಾದಮನೇಕೆ ಮಾಡಿದಳ್ (ಕಾದಂಬಾ. ೨೬೦); ದೇವಿವೆಸರೆಸೆವ ಲಕುಮಾದೇವಿಗಮಾ ವಿಷ್ಣುವರ್ದ್ಧನಂಗಂ ತನಯಂ (ಎಕ. VI, ತರೀಕೆ. ೪೫-೩೦; 1196). ೨. ಗೌರಿ; ಪಾರ್ವತಿ; ದುರ್ಗೆ: ಸುಮಾನದಿಂ ಗಮನಿಸುತ ಶಿವನೊಡನೆಂದಳಾ ದೇವಿ (ಬಸಪು. ೫೦-೨); ದೇವಿಯರು ಗುಹ ಗಣಪಮುಖ್ಯಗಣಾವಳಿಗೆ ಪೊಡಮಟ್ಟನು (ಕುವ್ಯಾಅ. ೬-೧೦೦). ೩. ಪಟ್ಟಾಭಿಷಿಕ್ತಳಾದ ರಾಣಿ; ಪಟ್ಟದ ರಾಣಿ: "ದೇವೀ . . . ಪಟ್ಟಾಭಿಷಿಕ್ತಳಾದ ರಾಣಿಯ ಹೆಸರು" (ಸಿದ್ಧಾಂತಿ. ೩೬); ದೇವಿಯರೊಳೊರ್ಬರೊರ್ಬರ್ ದೇವಿಯ ಪರಿವಾರರಪ್ಸರೋಗಣಮುಂ . . . ಎನಗೆ ಪೊಗೞಲಳುಂಬಂ (ಆದಿಪು. ೬-೧೫); ಏನೇನಭಿಮತಮಂ ಪೇೞ್ ನೀನಾಸ್ವಾದಿಸಿದೆ ದೇವಿಯರಮನೆಯೊಳ್ (ಕಾದಂಪೂ. ೮೫); ದೇವಿಯರ ಪರಕೆಯಿಂದೆನಗಾವುದಱೊಳ್ ಕೊಱತೆಯಿಲ್ಲ (ಯಶೋಚ. ೩-೯); ದೇವಿಯ ಬಗೆಯನಲರ್ಚಲ್ ದೇವರವೋಲ್ ಬಲ್ಲರಾರೊ (ಪುಷ್ಪಪು. ೩-೭೪); ದೇವಿ ಎವೆಗಳನಿಡದೆ ನೋಡುತ್ತಾ ವಿಯತ್ತಳದಲ್ಲಿ ಓಹಿಲದೇವನಂ ತಾನಱಸಿ ಕಾಣದೆ (ಬಸಪು. ೪೪-೪೦); ಎಲೆ ದೇವಿ, ಇದೆ ಕೊಳ್ ಈ ಕದಳೀಗೃಹಕ್ಕಾ ಕಡೆಯೊಳೆ ಕಣ್ಗೊಳಿಪುದು (ಮಿತ್ರಗೋ. ೩೪); ದೇವಿ ಬರುವಳು; ಆಕೆ ಬಹಳ ಮಾನಗರ್ವಿತೆ (ಶಾಕುಂತ. ೯೨-೦೩). ೪. ಸಿಡುಬುರೋಗ: ಹಳ್ಳಿಯಲ್ಲಿ ಅನೇಕ ಮಕ್ಕಳಿಗೆ ದೇವಿ ಎದ್ದಿದೆ (ರೂಢಿ). ೫. ಹೆಗ್ಗುರುಟಿಕೆ ಗಿಡ: "ಮೂರ್ವಾ, ದೇವೀ . . . ಪೀಲುಪರ್ಣೀ–೧೦ ಹೆಗ್ಗುರುಟಿಕೆಯ ಹೆಸರುಗಳು. ಕುರುಟಿಕೇಬೀಜ ಪ್ರಸಿದ್ಧ" (ಸಿದ್ಧಾಂತಿ. ೧೩೧). ೬. ಒಂದು ಬಗೆಯ ಸುವಾಸನೆಯುಳ್ಳ ಬೇರಿನ ಗಿಡ; ಸಂಕೇಬೇರು: "ಮರುನ್ಮಾಲಾ . . . ದೇವೀ, ಲತಾ, ಲಘುಃ, ಸಮುದ್ರಾಂತಾ, ವಧೂಃ, ಕೋಟಿವರ್ಷಾ, ಲಂಕಾಸಿಕಾ – ೧೦ ಸ್ಪೃಕ್ಕಯೆಂಬ ಗ್ರಂಧ್ಯದ್ರವ್ಯ, ಸಂಕೇ ಬೇರು" (ಸಿದ್ಧಾಂತಿ. ೦೪೩).

[ಸಂ. ದೇವೀ]

ದೇವಿಗ (ನಾ). ದೇವತಾವಿಗ್ರಹಗಳನ್ನು ಮಾಡುವವನು; ವಿಗ್ರಹ ಶಿಲ್ಪಿ: ದೇವರಂ ಮಾಡುವಂ ದೇವುಳಿಗಂ, ದೇವಿಗಂ (ಶಬ್ದಾನು. ೪೧೦ ಪ್ರಯೋ). [ದೇವ + – ಇಗ]

ದೇವಿಗೆಱೆ (ನಾ). ಒಂದು ಕೆರೆಯ ಹೆಸರು: ನಾಗವರ್ಮ್ಮನ್ ಕಟ್ಟಿಸಿದ ದೇವಿಗೆಱೆಗಂ ಪಿರಿಯಕೆಱೆಗಂ ಬಿತ್ತುವಟ್ಟವಂ ಕೊಟ್ಟರು (ಎಕ. III, ನಂಜನ. ೦೯೩-೮; 968). [ದೇವಿ + ಕೆಱೆ]

ದೇವಿತನ (ನಾ). ಪಟ್ಟದ ರಾಣಿಯ ಪದವಿ,–ಸ್ಥಾನ: ಬುದ್ಧದಾಸಿಗೆ ದೇವಿತನಂಗೊಟ್ಟನಿಂತು ಕಷ್ಟನುಮೊಳನೇ (ಧರ್ಮಾಮ್ಯ. ೮-೨೦೯).

[ದೇವಿ + –ತನ]

ದೇವಿದೆಱೆ³ (ನಾ). ಒಂದು ಬಗೆಯಂ ತೆರಿಗೆ : ಬಸದಿಯ ವ್ಯತ್ತಿಯೆಲ್ಲವಕ್ಕಂ ದೇವಿದೆಱೆ³ ಆಡೆಗಚ್ಚುರ್ಪು ಕಾಣಕೆ . . . ಸಲ್ಗೆ (ಎಕ. VIII, ನಗರ. ೩೬-೧೫೪ ; 1077). [ದೇವಿ? + ತೆಱೆ³]

ದೇವಿಯಬ್ಬೆ (ನಾ). ಒಬ್ಬಾಕೆಯ ಹೆಸರು : ಬನ್ದುದತ್ತನು ಸೆಟ್ಟಿತ್ತಿ ದೇವಿಯಬ್ಬೆಯಂ ನಿಱಿಸಿ (ಎಕ.VI, ಮೂಡಗೆ. ೧೯-೯ ; ಸು. 1025) ; ಶ್ರೀಮತ್ ಪ್ರಭಾಚನ್ದ್ರಸಿದ್ಧಾನ್ತದ ಭಟ್ಟಾರರ ಸಿಶ್ಯನ್ತಿಯರಪ್ಪ ದೇವಿಯಬ್ಬೆ ಕನ್ತಿಯರ ನಿಸಿಧಿಗೆ ಅಯ್ದು ದಿವಸನ್ಗೊ೪ × ಸ್ವರ್ಗ್ಗಸ್ಥರಾದರ್ (ಎಕ. XV, ಹೊಳೆನ. ೬೩-೧೦ ; 950). [ದೇವಿ + ಅಬ್ಬೆ₁]

ದೇವಿಲಿ (ನಾ). ದೇವರು ಇಲ್ಲವೆಂದಂ ಭಾವಿಸುವವನು ; ನಾಸ್ತಿಕ ; ನಿರೀಶ್ವರವಾದಿ : ಸಾವಿಗೆ ಹೆದರುವ ಹಳಹೇಡಿಯೇ ? ನಾ ಬೇಯುವೆ ನಿನಗಾಗಿ ಗಾವಿಲಕೆಲ್ಲರು ದೇವಿಲಿಯಾಗರೆ ಭಕ್ತನ 'ಬಲಿ'ಗಾಗಿ (ನನಬ್ಲ. ೩೦-೧೫). [ದೇವ + – ಇಲಿ₃]

ದೇವಿಹಾಕಿಸು (ಕ್ರಿ). ಸಿಡುಬು ಚುಚ್ಚಿಸು ; ಡಾಕುಹಾಕಿಸು ; ವ್ಯೆಲಿ ಚುಚ್ಚಿಸು : ಮೂರುತಿಂಗಳೊಳಗೆ ಮಕ್ಕಳಿಗೆ ದೇವಿಹಾಕಿಸುವುದರಿಂದ ಈ ರೋಗ ಬರುವುದಿಲ್ಲ (ಗೃಹವಿ. ೦೫೦). [ದೇವಿಹಾಕು + – ಇಸು₅]

ದೇವಿಹಾಕು (ಕ್ರಿ). ಸಿಡುಂಬುರೋಗವನ್ನು ತಡೆಯುವುದಕ್ಕಾಗಿ ಸಿಡುಬಂ ರಸಿಕೆಯನ್ನು ರಕ್ತಕ್ಕೆ ಸೇರಿಸು ; ಸಿಡುಬುಂಹಾಕು ; ಡಾಕು ಹಾಕು : ಸಿಡುಬು ಬರದ ಹಾಗೆ ದೇವಿಹಾಕುವುದು ಚೀನೀಯರಿಗೆ ೧೧ನೆಯ ಶತಮಾನದಲ್ಲಿ ತಿಳಿದಿತ್ತಂತೆ (ಶಿಲ್ಪಾ. ೯೯). [ದೇವಿ + ಹಾಕು (<ಪಾಯ್ಕು₁)]

ದೇವೀಮತ (ನಾ). [ಶೈವ] ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಗಳಲ್ಲಿ ಒಂದು : ಸ್ಥಿರಸಂಹಿತೆ ಸ್ಥಾಣುಸಂಹಿತೆ ಮಹಂತಸಂಹಿತೆ ನಂದಿಸಂಹಿತ ನಂದಿಕೇಶ್ವರಸಂಹಿತೆ ಏಕಪಾದವೃರಾಣ ಶಂಕರಾಗಣ ನೀಲ ಭದ್ರತಂತ್ರ ಶಿವಭದ್ರಾಗಮ ಕಲಾಭೇದಾಗಮ ಶ್ರೀಮುಖಾಗಮ ಶಿವಶಾಸನಾಗಮ ಶಿವರೇಖಾಗಮ ದೇವೀಮತವೆಂದು ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಂಗಳು (ವಿವೇಕ. ೭೦). 'ಚಂದ್ರಜ್ಞಾನಾಗಮಂ' ಪರಾ. [ಸಂ.]

ದೇವುರೆ (ನಾ). ಹರ್ಷವನ್ನು ಸೂಚಿಸುವ ಒಂದಂ ನುಡಿ : ದೇವ ವೀಧಿ ದೇವುರೆ ಸುರರಾಜರಾಜ ಧಿರುರೇ ಎಸೆ (ಗಿರಿಕ. ೦೦-೭೯).

ದೇವುಲ 'ದೇಗುಲ' ನೋ.

ದೇವುಲಾಳು (ನಾ). ದೇಗುಲದ ಆಳು (?) : ಆ ವಿಹಿಲಾಳು ಭೋಜ ದೇವುಲಾಳು [ಪಾಠಾಂ. ದೇವುರಾಳು, ದಬಲ್ಲಾಳು] ಅನು ಸೂಳೆ ನಮ್ಮ ಕ್ಕನೂ ಸೂಳೆ (ಬಸವ. ೩೨೭). "ದೇವಭಕ್ತ" (ಬಸವ. ಕೋಶ).

[ದೇವುಲ (<ದೇಗುಲ) + ಆಳು₃ (<ಆಳ್₃)]

ದೇವುಳಿಗ (ನಾ). ೧. = ದೇವಡಿಗ ೧: ಉಳಿಗ ಪ್ರತ್ಯಯಕ್ಕೆ – ದೇವುಳಿಗಂ ಮಣ್ಣುಳಿಗಂ (ಶಮಾದ. ೨೦೦ ಪ್ರಯೋ). ೨. = ದೇವಿಗ : ದೇವರಂ, ಮಾಡುವಂ, ದೇವುಳಿಗಂ, ದೇವಿಗಂ (ಶಕ್ಕಾಸು. ೧೦೦ ಪ್ರಯೋ).

[ದೇವ + – ಉಳಿಗ₃]

ದೇವುಳಿಗಿತಿ (ನಾ). ದೇವುಳಿಗನ ಹೆಂಡತಿ : ಉಳಿಗ—ದೇವುಳಿಗಿತಿ, ವಾಕುಳಿಗಿತಿ, ಕಯ್ದುಳಿಗಿತಿ (ಶಕ್ಕಾಸು. ೧೯೩ ಪ್ರಯೋ) ; ಬ್ರಾಹ್ಮಣಿತಿ . . . ದೇವುಳಿಗಿತಿ, ಇತ್ಯಾದಿ (ಹೊನ್ನಗ. ೯೬).

[ದೇವುಳಿಗ + – ಇತಿ₁ (< – ಇತ್ತಿ)]

ದೇವೆದಿತ್ತಿ 'ದೇವದಿತಿ' ನೋ.

ದೇವೆಱೆಯ (ನಾ). ಒಬ್ಬಾತನ ಹೆಸರು : ಬಸನ್ತಕುಮರ ಯೆಡೆವೊಬಲ ನಾಡ ಸಲೆವುಗೆಯ ಕೊಟ್ಟ ಶಾಸನಮ ಪಡೆದುಂ ಶಾನ್ತವನ ಮಗ ದೇವೆಱೆಯಗೆ ನಪ್ಪಪ್ಪಗೊನ್ನು ಕೊಟ್ಟನ್ (ಎಕ. VIII, ಸೊರಬ. ೩೭೧-೨೫ ; 892). [ದೇವ + ಎಱೆಯ]

ದೇವೇನ್ದ್ರ (ನಾ). ದೇವತೆಗಳ ಒಡೆಯಂ ; ಸ್ವರ್ಗಲೋಕದ ಅಧಿಪತಿ : ಶ್ರೀದೇವೇನ್ದ್ರಮುನೀನ್ದ್ರವಂದಿತಗುಣವ್ರಾತಂ ದಯಗೆಯ್ವನಕ್ಕೆಮಗೆ ಮುಕ್ತಿಶ್ರೀಸುಖಾವಾಪ್ತಿಯಂ (ಆದಿಪು. ೧-೧) ; ದೇವೇನ್ದ್ರನುಮಾಗಳ್ ದೇಶಾವಧಿಯಿಂ . . . ಅತ್ಮೀಯಭಾವಮನಱಿದಂ ವ್ಯತೀ[ತ]ಭವ ಸಂತತಿಯಂ (ಶಾಂತಿಪು. ೫-೭) ; ಅತ್ರಲ್ ದೇವೇನ್ದ್ರಂ ಮತ್ರಿತ್ರಲ್ ಭುಜ ಗೇನ್ದ್ರಂ (ಶಮಾದ. ೧೧೯ ಪ್ರಯೋ) ; ದೇವೇನ್ದ್ರನು ದೇವತೆಗಳ ಸಹಾಯವನ್ನು ಪಡೆದು ತಾನೇ ಐರಾವತದ ಮೇಲೆ ವಜ್ರಧಾರಿಯಾಗಿ ಕುಳಿತು ಹೋರಾಡಿದರೂ ಪ್ರಯೋಜನವಾಗಲಿಲ್ಲ (ವಡಥಾ. ೭೪).

[ದೇವ + ಇನ್ದ್ರ]

ದೇವೇನ್ದ್ರಚಾಪ (ನಾ). ಇನ್ದ್ರನ ಧನುಸ್ಸು ; ಕಾಮನ ಬಿಲ್ಲು ; ಮಳೆ ಬಿಲ್ಲು : ದೇವೇನ್ದ್ರಚಾಪಂ ದಲಿಂಬಿನೆಗಂ ಬಾಹುಬಲೀಶನೇಱಿಸಿದಂ . . . ಚಾಪಮಂ (ಆದಿಪು. ೧೪-೯೯). [ದೇವೇನ್ದ್ರ + ಚಾಪ]

ದೇವೇನ್ದ್ರತಮ್ಮಡಿ (ನಾ). ಒಬ್ಬಾತನ ಹೆಸರು : ಪೊಟ್ಮವಿನೀತೀಶ್ವರಕ್ಕಂ ಸರ್ವ್ವಪರಿಹಾರಂ ಕೊಟ್ಪರ್ಮ್ಮಣ್ಣಂ ಮನೆಯುಂ ತೋಟ್ಪಕ್ಕಂ ದೇವೇನ್ದ್ರ ತಮ್ಮಡಿಗಳಾ ಮುದ್ದೆಗಣರಾ ಗೋಷ್ಠಿಧರ್ಮ್ಮಂ (ಎಕ. IV, ಚಾಮರಾ. ೬೩-೫ ; ಸು. 750). [ದೇವೇನ್ದ್ರ + ತಮ್ಮಡಿ₁]

ದೇವೇನ್ದ್ರತ್ವ (ನಾ). ದೇವೇನ್ದ್ರನ ಅಧಿಕಾರ,–ಪದವಿ : ದೇವಾಧೀಶನ ನೊರ್ಮೆ ವರ್ಣಿಸೆ ಮನೋವಾಕ್ಕಾಯಸಂಶುದ್ಧಿಯಿಂ ದೇವೇನ್ದ್ರತ್ವವೆ ಸಾರ್ವುದು (ಅನಂಪು. ೦-೭೦); ತಾರಕನಿಂದ ಭಂಗಬಟ್ಟ ದೇವೇನ್ದ್ರತ್ವ ವೇಕೆಮಗೆ (ಬಸಪು. ೦೮-೨೨). [ಸಂ.]

ದೇವೇನ್ದ್ರಪಟ್ಟ (ನಾ). ದೇವೇನ್ದ್ರನ ಅಧಿಕಾರ ; ಸ್ವರ್ಗಲೋಕದ ಅರಸುತನ ; ದೇವತೆಗಳ ರಾಜನಾಗುವಿಕೆ ; ಇನ್ದ್ರಪದವಿ : ಆ ನಿಜಫಲಪ್ರಾಪ್ತಿಯಲಿಯುಸುಮಾನವಿಲ್ಲದೆ ಫಲಿಸಿ ನಿನ್ನಾಧೀನವಾಯಿತ್ತೀಗಳೀ ದೇವೇನ್ದ್ರಪಟ್ಟವಿದು (ಬಸಪು. ೪೦-೦೦). [ದೇವೇನ್ದ್ರ + ಪಟ್ಟ₃]

ದೇವೇಜ (ನಾ). ದೇವರನ್ನು ಪೂಜಿಸುವವನು ; ದೇವತಾರ್ಚನೆ ಮಾಡುವವನಂ : ಸುವಾಜ್, ಸುವಾಚಂ. ಏವಂ ಗುಣಭಾಜಂ, ಅಶ್ವ ಯುಜಂ, ಋತ್ವಿಜಂ, ದೇವೇಜಂ . . . ಪ್ರಷ್ಠವಾಹಂ (ಶಕ್ಕಾಸು. ೧೪೯ ಪ್ರಯೋ). [ಸಂ. ದೇವೇಜ್]

ದೇವೇಶ (ನಾ). ೧. = ದೇವೇಂದ್ರ : ದೇವೇಶಮುಖ್ಯದಿಗೀಶರುಂ . . . ನೆರೆದೋಲಯಿಸುತಿರಲು (ಬಸಪು. ೩೪-೨೪). ೨. ಶಿವ ; ಪರಮೇಶ್ವರ : ಇಱಂತು ನಿನಗೆ ಮನದೊಳ್ ತಱಿಸಲವುಂಟಪ್ಪೊಡೆಲವೊ ದೇವೇಶನನೇಂ ಸೆಱಿವಿಡಿದೆ ತೊಲಗು ದೇವನ ಮಱಿಯಂ ಬಱಿಕಱಿಯಲಕ್ಕುಮೆನಗಂ ನಿನಗಂ (ಕಂಪಥಾ. ೦೦-೦೨೦); ದೇವೇಶ ನಿಮ್ಮ ವದರಾಜೀವದ ಭಾವನೆಯ ವೆರ್ಮೆಯೆಂತುಟೊ (ಶಲಶಂ. ೨-೬೬). [ದೇವ + ಈಶ]

ದೇವೇಶೋತ್ತರ (ನಾ). [ಶೈವ] ಸಿದ್ಧಾಗಮದ ನಾಲ್ಕು ಭೇದಗಳಲ್ಲಿ ಒಂದು : ಸಾರೋತ್ತರ ದೇವೇಶೋತ್ತರ [ಪಾಠಾಂ. ಶೋಕ್ತ] ಶಾಲಭೇದ ಶಶಿಮಂಡಲವೆಂದು ಸಿದ್ಧಾಗಮದ ನಾಲ್ಕು ಭೇದಂಗಳು (ವಿವೇಕ. ೭೧).

[ದೇವೇಶ + ಉತ್ತರ]

ದೇವೇಶ್ವರತ್ವ (ನಾ). = ದೇವೇಂದ್ರತ್ವ : ಅರ್ಜುನನು "ದೇವರಾಜ ! ನನಗೆ ದಿವ್ಯಲೋಕಗಳಾಗಲಿ, ದೇವತ್ವವಾಗಲಿ, ದೇವೇಶ್ವರತ್ವವಾಗಲಿ ಬೇಕಾಗಿಲ್ಲ" ಎಂದನು (ವಡಥಾ. ೧೫೪). [ಸಂ.]

ದೇವೋತ್ತಮ (ನಾ). ದೇವತೆಗಳಲ್ಲಿ ಶ್ರೇಷ್ಠನಾದವನು : ಕಮಲಭವ ಸುರವಂದ್ಯ ಗಿರಿಜಾರಮಣ ಭಕ್ತಕುಟುಂಬ ದೇವೋತ್ತಮ ತ್ರಿಯಂಬಕ ಪುಷ್ಟಿವರ್ಧನ ಕರುಣಿಸುವುದೆಂದ (ಕುಪಾಶ. ೬-೪೪) : ದೇವೋತ್ತಮ ನಪ್ಪೇಶ್ವರನಾವಾಸಮೆನಿಪ್ಪ ಚೀರಮಂಡಳದೊಳ್ (ತ್ರಿಪುವಿ. ೩-೦).

[ದೇವ + ಉತ್ತಮ]

ದೇವೋತ್ತರಕುರು (ನಾ). [ಜೈನ] ವಿದೇಹಕ್ಷೇತ್ರದಲ್ಲಿ ಮೇರುಪರ್ವತಕ್ಕೆ ದಕ್ಷಿಣದಲ್ಲಿ ಮತ್ತು ನಿಷಧಕ್ಕೆ ಉತ್ತರದಲ್ಲಿ ಇರುವ ಒಂದು ಭೋಗ ಭೂಮಿ : ದೇವೋತ್ತರಕುರುಗಳೆ ನಾನಾವಿಧಕಲ್ಪಾಂಘ್ರಿಪಂಗಳಿಂದಂ ಪತಿಯಂ ತೀವಿ ಬಳಸಿರ್ದುವೆನೆ (ಆದಿಪು. ೦೦-೩೩). 'ದೇವಕುರು' ಪರಾ. [ದೇವ + ಉತ್ತರಕುರು]

ದೇವೋತ್ಸವ (ನಾ). ದೇವಾಲಯ ಮೊದಲಾದ ಕಡೆಗಳಲ್ಲಿ ನಡೆಯುವ ದೇವರ ಉತ್ಸವ : ಸುಂದರಾಗಮಕಲಿತ ದೇವೋತ್ಸವಂಗಳನು ಸರಸ ಸಜ್ಜನಗೋಷ್ಠಿಸಲ್ಲಾಪಗಳನು ... ನೆನೆದಿಂತು ಸಂಹೃಷ್ಟನಾದೆನೈ (ಮಲೆದೇ. ೫೬-೭). [ದೇವ + ಉತ್ಸವ]

ದೇವೋನ್ಮಾದ (ನಾ). ದೇವಭಕ್ತಿಯಿಂದ ಉಂಟಾಗುವ ಪರವಶತೆ : ಕೊನೆಕೊನೆಗೆ ಶರೀಫರು ದೇವೋನ್ಮಾದದ ಪೂರ್ಣ ನಿಬ್ಬೆರಗಿನಲ್ಲಿರುತ್ತಿದ್ದರು (ಶರೀಫ. ೬೦ ಕವಿಕಾವ್ಯ ಪರಿಚಯ). [ದೇವ + ಉನ್ಮಾದ]

ದೇವೋಪಘಾತ (ನಾ). ದೇವತೆಗಳಿಂದ ಉಂಟಾಗುವ ತೊಂದರೆ.-ಬಾಧೆ : ದೇವೋಪಘಾತಮಂ ಶೌರ್ಯಾವಷ್ಟಂಭದಿನದೆಂತು ಗೆಲ್ದೆಯೊ (ಶಾಂತಿಪು. ೮-೬೯). [ದೇವ + ಉಪಘಾತ]

ದೇವ್ಯಾಗಮ (ನಾ). [ಶೈವ] ಶೈವಾಗಮಗಳಲ್ಲಿ ಒಂದು ; ಶಕ್ತಿಯ ಉಪಾಸನೆ : ಶೈವಾಗಮದಲ್ಲಿ ಅನುಷ್ಠಾನಭೇದದಿಂದ (ಉಪಾಸನಾಭೇದದಿಂದ) 'ಶೈವಾಗಮ, ದೇವ್ಯಾಗಮ ಅಥವಾ ಶಾಕ್ತಾಗಮ, ವಾತುಳಾಗಮ ಅಥವಾ ತಾಂತ್ರಿಕಾಗಮ' ಮತ್ತು 'ವೀರಶೈವಾಗಮ' ಎಂದು ನಾಲ್ಕು ಒಳಭೇದಗಳಿವೆ (ಭಾರದ. ೭೪). [ಸಂ. (ದೇವೀ + ಆಗಮ)]

ದೇಶ (ನಾ). ೧. ಜಾಗ; ಸ್ಥಳ; ಪ್ರದೇಶ: ಸುತ್ತಲುಂ ಗಿಳಿಗಳ ಹಿಂಡುಗಳ್ ನೆರೆದು ಕೂಡಿಯುಮಲ್ಲಿ ಸಹಸ್ರಮುಂ ನಿರಾಕುಳಮನುರಾಗದಿಂ ಪಲವುದೇಶದೊಳಿರ್ಪುವು ಬಂದು (ಕಾದಂಪೂ. ೧೩೬). ೨. ಆಡಳಿತ ಸಪ್ತಾಂಗಗಳಲ್ಲಿ ಒಂದು ; ನಾಡು ; ಸೀಮೆ ; ಜನಪದ : "ಎಸೆವ ನೀವೃಜ್ಜನಪದಂ ದೇಶಮೆನೆ ನಾಡ ಪೆಸರಕ್ಕು" (ಮಂಗರಾ. ೫೬-೨) ; ನಿನ್ನಯ ದೇಶಮೆತ್ತಣದು (ಕಾದಂಪೂ. ೯೦) ; ಅಳಕಾವಿಷಯಮೆಂಬ ದೇಶದೊಳೊಪ್ಪುಗುಂ ನಗರಿ ಕೋಸಳೆಯೆಂದು (ಚಂದ್ರಪು. ೪-೮೦) ; ಹೇಳಿರೈ ನಿಮಗಾವ ದೇಶ ವಿಶಾಲಗೋತ್ರವದಾವುದೆನುತ (ಕುಪ್ಯಾಸ. ೨-೬೩); ಕೋಶ ಬಲ ತಳತಂತ್ರ ಹೆಚ್ಚಿದ ದೇಶ ದುರ್ಗವಮಾತ್ಯ ಮಿತ್ರ ಮಹೀಶಜನ ವೆಂಬುದು ಕಣಾ ಸಪ್ತಾಂಗ ಸನ್ನಾಹ (ಕುಪ್ಯಾಉ. ೯-೩) ; ದೇಶವೆಮ್ಮದು ಹೇಳುವೊಡೆ ಪರದೇಶ ಬಿರಿದಿನ ಬಿಂಕಕಾಱರ ವಾಸಿಗರನಲ್ಲೆನಿಸುವಲ್ಲಮನೆಂಬ ಪೆಸರೆನಗೆ (ಪ್ರಭುಲೀ. ೫-೦೩). ೩. ಎರಡು ವಸ್ತುಗಳ ಮಧ್ಯದ ಅಂತರ,-ಅವಕಾಶ : ಈ ಬೃಹದಂತರಗಳನ್ನು . . . ಊಹಿಸುವುದಕ್ಕೆ ದೇಶವನ್ನು ಎಂದರೆ ಅಂತರವನ್ನು ಕಾಲಮಾನದಿಂದ ಅಳೆಯಬೇಕು (ಜ್ಯೋತಿರ್ವಿ. ೨೭೯) ; ಕಾಲವು ನಾನು, ದೇಶವು ನಾನು, ನಿರ್ಗುಣ ನಾನು (ಪಾಂಚಜ. ೧೭-೧೮) ; ಇದು ದೇಶದ (Space) ಮಾತಾಯಿತು. ಇನ್ನು 'ಕಾಲ'ದ ಮಾತು (ನಿಬಂಧ. I, ೨೫೬). ೪. ಭಾಗ ; ವಿಭಾಗ ; ಪಕ್ಕ : 'ಏಕದೇಶ', 'ದೇಶಘಾತಿ' ಪರಾ.

ದೇಶದ ಪೇಟೆ = ಹದಿನೆಂಟು ಪಣದವರು ಅಥವಾ ಬಲಗೈ ಜಾತಿ ಎಂಬ ವ್ಯಾಪಾರಸ್ಥರಾದ ಜನರು ವಾಸಿಸುವ ಪಟ್ಟಣದ ಭಾಗ,-ಪೇಟೆ : (ಕಿ). [ಸಂ.]

ದೇಶಕುಲಕರಣಿ (ನಾ).= ದೇಶಪಾಂಡೆ ೨ : ಅದಕ್ಕೆ ಮುಖ್ಯ ಗಣಿಕನಾದವ ದೇಶಪಾಂಡೆ, ದೇಶಕುಲಕರಣಿ. ಇವನು ಗ್ರಾಮದ ಲೆಕ್ಕಪತ್ರಗಳನ್ನು ಇಟ್ಟು ಬರವಣಿಗೆ ಕೆಲಸ ಮಾಡತಕ್ಕವನು. ಇವನಿಗೆ ದೇಶಕುಲಕರಣಿ ಎಂತಲೂ ಹೆಸರು (ಪಾಳಗಾ. ೧೦). [←ಮರಾ. ದೇಶಕುಳಕರಣೀ]

ದೇಶಗತಿ 'ದೇಸಗತಿ' ನೋ.

ದೇಶಗಾಹು (ನಾ). ದೇಶದ ರಕ್ಷಣೆ,-ಪಾಲನೆ : ಬ್ರಾಹ್ಮರ ಜನವ ಸುಲಿವುತ ದೇಶಗಾಹಿನ ಮನ್ನೆಯಾದಿಗಳ ಅನಿತುವನು ಸಂಹರಿಸಿ (ಸಂಭಪ. ೨೬-೪೯). [ದೇಶ + ಕಾಹು$_1$ (<ಕಾಪು)]

ದೇಶಗೌಳ (ನಾ). [ಸಂಗೀತ] ಗೌಳ ರಾಗದ ಉಪಾಂಗರಾಗಗಳಲ್ಲಿ ಒಂದು : ಕರ್ಣಾಟಗೌಳ ದೇಶಗೌಳ . . . ದ್ರಾವಿಡಗೌಳವೆಂಬೇಳುಂ ಉಪಾಂಗಗೌಳರಾಗಂಗಳು (ವಿಪೇಳ. ೨೩೪). [ದೇಶ + ಗೌಳ$_1$]

ದೇಶಘಾತಿ (ನಾ). [ಜೈನ] ಜೀವನ ಗುಣಗಳಲ್ಲಿ ಕೆಲವು ಭಾಗಗಳನ್ನು ನಾಶಮಾಡುವ ಕರ್ಮಪ್ರಕೃತಿ ; P ಘಾತಿಕರ್ಮಪ್ರಕೃತಿಗಳು ೪೭. ಅವುಗಳಲ್ಲಿ ೨೬ ದೇಶಘಾತಿ ಮತ್ತು ೨೧ ಸರ್ವಘಾತಿ. ನಾಲ್ಕು ಜ್ಞಾನಾವರಣ, ಮೂರು ದರ್ಶನಾವರಣ, ಹದಿನಾಲ್ಕು ಮೋಹನೀಯ ಮತ್ತು ಐದು ಅಂತರಾಯದಾನಾಂತರಾಯಾದಿಗಳು ಸೇರಿ ಇಪ್ಪತ್ತಾರು ದೇಶಘಾತಿಗಳಾಗುತ್ತವೆ : ಅನಂತಭಾಗಹಾರದಿಂದಂ ಭಾಗಿಸಿದೊಡೆ ಬಹುಭಾಗಂ ದೇಶಘಾತಿಗಳ್ಗಕ್ಕುಮೇಕಭಾಗಂ ಸರ್ವಂ ಘಾತಿಸಂಬಂಧದಿ ದ್ರವ್ಯಮಿನಿತಕ್ಕುಮಿ ದ್ರವ್ಯಮಂ ಷೋಡಶಕಷಾಯಂಗಳುಂ ಸರ್ವಘಾತಿಗಳಪ್ಪುದಱಿಂದಂ ಪದಿನೇಳಕ್ಕುಂ (ಗೊಮ್ಮಸಾ. ೩-೧). 'ಸರ್ವಘಾತಿ' ಪರಾ. [ದೇಶ + ಘಾತಿ$_1$]

ದೇಶತ್ಯಾಗ (ನಾ). ಸ್ವದೇಶವನ್ನು ತ್ಯಜಿಸುವುದು,-ತೊರೆಯುವುದು : ಭಕ್ತರ ಮನವ ಶಿವನು ನೋಡಲಿಕ್ಕೆ ಕಂಟಕವನೊಡ್ಡುವನು . . . ದೇಶತ್ಯಾಗವ ಮಾಡಿಸುವನು ಅಲ್ಲಿ ಮಹಾವ್ಯಾಧಿಗಳ ತೋಱಿಸುವನು (ಪಡಸಂ. ೩೩೬-೪೦): ನಿನ್ನ ದೇಶತ್ಯಾಗದ ದೆಸೆಯೊಳ್ ಪಲಕಾಲಂ ಸತ್ತನೊಳನೆಂಬ ಸುದ್ದಿಯಂ ಕೇಳ್ದೆಮಿಲ್ಲ (ಬಂಹರಿ. ೪-೦೬ ಪ). [ದೇಶ + ತ್ಯಾಗ]

ದೇಶದ್ರೋಹ (ನಾ). ದೇಶಕ್ಕೆ ಕೆಡುಕನ್ನುಂಟುಮಾಡುವುದು ; ರಾಷ್ಟ್ರಘಾತಕತನ : ಅಂದು ದರಬಾರಿನಲ್ಲಿ ಯಾವುದು ನ್ಯಾಯವೆಂದು ನನಗೆ ತೋರಿತೋ, ಯಾವುದು ರಾಜಧರ್ಮವೆಂದು ಹೊಳೆಯಿತೋ-ಇಂದು ಅದು ಪಾಪವೆಂದೂ, ದೇಶದ್ರೋಹವೆಂದೂ ನನಗೇ ತೋರುತ್ತಿದೆ (ವೌಲತ್. ೧೩೪). [ದೇಶ + ದ್ರೋಹ]

ದೇಶದ್ರೋಹಿ (ನಾ). ದೇಶಕ್ಕೆ ಕೆಡುಕನ್ನುಂಟುಮಾಡುವವನು ; ರಾಷ್ಟ್ರಘಾತಕ : ಅವನು ಐಗುಪ್ತದೇಶದಿಂದ ಓಡಿಬಂದವನು; ಗತಿಯಿಲ್ಲದವನು, ದೇಶದ್ರೋಹಿ ಎಂದರು (ಮಡಿಸ. ೪೬) ; ಇತ್ತಲಾ ಬಾದಷಹನು ಕಿಡಿಕಿಡಿಯಾಗಿ, ರಾಜದ್ರೋಹಿಯೂ ದೇಶದ್ರೋಹಿಯೂ ಆದ . . . ಅವನನ್ನು ಶೂಲಕ್ಕೇರಿಸುವೆನೆಂದು ಕೆರಳಿದ್ದ (ಕಲಾಧ. ೮೪). [ಸಂ. ದೇಶದ್ರೋಹಿನ್]

ದೇಶಧರ್ಮ (ನಾ). ಒಂದು ದೇಶದಲ್ಲಿ ಹಿಂದಿನಿಂದಲೂ ನಡೆದು ಕೊಂಡು ಬಂದಿರುವ ನಡೆನುಡಿ ಮತ್ತು ಆಚಾರ ವ್ಯವಹಾರ ; ಒಂದು ದೇಶದಲ್ಲಿ ಪರಂಪರಾಗತವಾಗಿ ಬಂದಿರುವ ನಡವಳಿಕೆ : ಕಾಲಧರ್ಮ, ದೇಶಧರ್ಮ ಇತ್ಯಾದಿಗಳಲ್ಲಿ ಕಾಲ ದೇಶಗಳಿಗುಚಿತವಾದ ನಡೆನುಡಿಗಳೆಂದರ್ಥವು (ಆರ್ಯಧ. ೧೧). [ದೇಶ + ಧರ್ಮ]

ದೇಶನ (ನಾ). ಉಪದೇಶ ; ಬೋಧನೆ : ಗುರು, ಈ ದೇಶನವನ್ನು ಮುಗಿಸಿ . . . ಜಾತಕವನ್ನು ಗುರುತಿಸಿದನು (ಬುದ್ಧಪ. ೦೬). [ಸಂ.]

ದೇಶನಾಡು (ನಾ). = ದೇಶ ೨.

ದೇಶನಾಡಿನವರು = ದೇಶದ ಮುಖಂಡರು; ಗ್ರಾಮಾದಿಗಳಲ್ಲಿ ನಡೆಯುವ ವ್ಯಾಜ್ಯ, ವ್ಯವಹಾರಗಳನ್ನು ವಿಚಾರಿಸಿ ನ್ಯಾಯನಿರ್ಣಯ ಮಾಡುವ, ಬೇರೆ ಬೇರೆ ಕಡೆಯಿಂದ ಬಂದು ಸೇರುವ ಪಂಚಾಯಿತಿಯವರು : ಮಲ್ಲಿಗೆಹೂವನ್ನು ಹಜಾಮರು ಮುಡಿಯಕೂಡದುಯೆನ್ದು ಈ ಮಡಿವಾಳ ಸೆಟಿಗಳೂ ದೇಶನಾಡಿನವರ ಕೂಡ ಹೇಳುವಲಿ (ಎಳ. IX, ಕಾನಕಾ. ೯೦-೧೬ ; 1700). [ದೇಶ + ನಾಡು]

ದೇಶನಾಲಬ್ಧಿ (ನಾ). [ಜೈನ] ಕ್ಷಯೋಪಶಮ, ವಿಶೋಧಿ, ದೇಶನಾ. ಪ್ರಾಯೋಗ್ಯ, ಕರಣ ಎಂಬ ಪಂಚಲಬ್ಧಿಗಳಲ್ಲಿ ಮೊದಲನೆಯದು : ಆರು ದ್ರವ್ಯಗಳು, ನವಪದಾರ್ಥಗಳು ಇವುಗಳ ಬಗ್ಗೆ ಉಪದೇಶ ಸುವಂಥ ಆಚಾರ್ಯರು ದೊರಕಿ, ಅವರ ಉಪದೇಶವನ್ನು ಕೇಳಲು ಸಿಗುವುದು ಮತ್ತು ಅವರಂ ಉಪದೇಶಿಸಿದ ಧರ್ಮತತ್ತ್ವವನ್ನು ತಿಳಿದುಕೊಂಡು, ಧರಿಸುವ ಶಕ್ತಿ ಇರುವುದಂ : ಷಡ್ದ್ರವ್ಯ ಪಂಚಾಸ್ತಿಕಾಯ ಸಪ್ತತತ್ತ್ವ ನವಪದಾರ್ಥೋಪದೇಶಕ ಜೈನಾಚಾರ್ಯ ಪ್ರಭೃತಿ ಲಾಭಮುಂ ದೇಶಿತ ಪದಾರ್ಥಾವಧಾರಣ ಲಾಭಮುಂ ಮೇಣ್ ದೇಶನಾಲಬ್ಧಿಯಕ್ಕುಂ (ತತ್ತ್ವಸಾ. ೮೦). 'ಪಂಚಲಬ್ಧಿ' ಪರಾ. [ಸಂ.]

ದೇಶನಿವೇಶೋಪದೇಶ (ನಾ). [ಜೈನ] ಜೈನ ಪುರಾಣದಲ್ಲಿರಬೇಕಾದ ಎಂಟು ಅಂಗಗಳಲ್ಲಿ ಒಂದಂ ; ದೇಶದ ವಿನ್ಯಾಸ, ವಿಸ್ತೀರ್ಣ, ರೀತಿ, ರಚನೆ ಮೊದಲಾದುವುಗಳನ್ನು ತಿಳಿಸುವುದಂ: ಆ ಪುರಾಣಕ್ಕಂ ಲೋಕಾಕಾರಕಥನಮುಂ ದೇಶನಿವೇಶೋಪದೇಶಮುಂ ನಗರಸಂಪತ್ಸರಿವರ್ಣನ ವಂಗಂ ರಾಜ್ಯರಾಮಣೀಯಕಾಖ್ಯಾನಮುಂ ತೀರ್ಥಮಹಿಮಾಸಮರ್ಥನಮುಂ ಚತುರ್ಗತಿಸ್ವರೂಪನಿರೂಪಣಮುಂ ತಪೋದಾನವ್ಯಾವರ್ಣನಮುಂ ತತ್ಫಲ ಪ್ರಾಪ್ತಿಪ್ರಕಟನಮುಮೆಂದಿಂತವಯವಂಗಳಿಂಟಕ್ಕುಂ (ಆದಿಪು. ೦-೪೨ ವ). 'ಪುರಾಣ' ಪರಾ. ☞ 'ಆದಿಪು' ವಂತೂ, 'ಚಾವುಂಪು' ಗಳಲ್ಲಿ, ಪುರಾಣದಲ್ಲಿರಬೇಕಾದ ಅಂಗಗಳು ಎಂಟು ಎಂದು ಹೇಳಿದೆ. ಆದರೆ 'ಅನಂಪು. ೧-೬೬'ರಲ್ಲಿ, ಮನುಮಾರ್ಗೋಕ್ತವಾದ ಅಂಗಗಳು ಐದಂ, ಮತ್ತು ಕವಿಪ್ರೋಕ್ತವಾದ ಅಂಗಗಳು ಎಂಟುಂ (೫+೩) ಎಂದು ಹೇಳಿದೆ. [ದೇಶ + ನಿವೇಶ + ಉಪದೇಶ]

ದೇಶಪದ್ಧತಿ (ನಾ). ದೇಶದ ಆಚಾರ,–ಸಂಪ್ರದಾಯ : ಅವನ ತಂದೆಯು ದೇಶಪದ್ಧತಿಯಂತೆ ಅವನನ್ನು . . . ಗೋಪಾಲಕರಲ್ಲಿಗೆ ಕಳುಹಿಸಿಕೊಟ್ಟನು (ಕುಡಿಸ. ೭೪) : ಅವರು ಯಾವ ಸಂದರ್ಭದಲ್ಲೂ ತಮ್ಮ ದೇಶಪದ್ಧತಿಯನ್ನು ಬಿಟ್ಟು ನಡೆಯುವುದಿಲ್ಲ (ಕೂಡಿ).

[ದೇಶ + ಪದ್ಧತಿ]

ದೇಶಪರತ್ವ (ನಾ). ಬೇರೆ ಬೇರೆ ಪ್ರದೇಶಗಳಿಗೆ ಸಂಬಂಧಪಟ್ಟಿರುವಿಕೆ : ಮಾಂತಿಸದ ಗುಣಗಳು ದೇಶಪರತ್ವದಿಂದ ಬೇರೆಬೇರೆಯಾಗುತ್ತವೆ (ಕುಂಬಳ. ೫-೦೪). [ಸಂ.]

ದೇಶಪರಿಚ್ಛೇದ (ನಾ). "ಒಂದಂ ದೇಶದಲ್ಲುಂಟು ಮತ್ತೊಂದು ದೇಶದಲ್ಲಿಲ್ಲವೆಂದೆನಿಸಿಕೊಂಬುದೇ ದೇಶಪರಿಚ್ಛೇದಮೆನಿಸುವುದು" (ವಿವೇಕ.೩೬) : ಕೆಲವೆಡೆಯಿದ್ದು ಕೆಲವೆಡೆಯಿಲ್ಲದಿರುವಿಕೆಯು ದೇಶಪರಿಚ್ಛೇದ (ಧಾರಣ. ೩೫೩). [ದೇಶ + ಪರಿಚ್ಛೇದ]

ದೇಶಪರ್ಯಟನ (ನಾ). = ದೇಶಾಟನ: ದೇಶಪರ್ಯಟನವೆಂದರೆ ಅವರಿಗೆ ತುಂಬ ಖುಷಿ (ಕೂಡಿ). [ದೇಶ + ಪರ್ಯಟನ]

ದೇಶಪರ್ಯಟನೆ (ನಾ). = ದೇಶಾಟನ : ದೇಶಪರ್ಯಟನೆಯಿಂದ ಜ್ಞಾನಾರ್ಜನೆಯಾಗುತ್ತದೆ (ಕೂಡಿ). [ದೇಶ + ಪರ್ಯಟನೆ]

ದೇಶಪಾಂಡೆ (ನಾ). ೧. ಒಂದಂ ಜಿಲ್ಲೆಯ ಕಂದಾಯದ ವಂಪ್ಯಾಧಿಕಾರಿ ; ಮಹಾಲ್ಕರಿ : ದಿವಾನಸಹೇಬಾ ದೇಶಮುಕಿ ದೇಶಪಾಂಡೇರೂ . . . ಹಂನೆರಡು ಆಯಗಾರರು (ಎಳ. XII, ಶಿಕಾ. ೮೭-೩ ; ?). ೨. ವತನದಾರನಾಗಿದ್ದುಕೊಂಡು ಗ್ರಾಮದ ಲೆಕ್ಕಪತ್ರಗಳನ್ನು ಬರೆಯುವವನು ; ಶಾನಂಭೋಗ ; ಕರಣಿಕ ; ಕುಲಕರಣಿ : ಶ್ಯಾನುಭೋಗ ಅಥವಾ ಮೆನನ್ ಎಂಬುದನ್ನು ಬೊಂಬೈಪ್ರಾಂತ್ಯದಲ್ಲಿ ದೇಶಾಯಿ, ದೇಶಪಾಂಡೆಯಂತಲೂ ಗ್ರಾಮದ ಅಕೌಂಟೆಂಟಿನ ಹೆಸರುಂಟು (ಗ್ರಾಮೂಕ. ೧) : ೬ದಕ್ಕೆ ಮುಖ್ಯಗಣಕನಾದವ ದೇಶಪಾಂಡೆ, ದೇಶಕುಲಕರಣಿ (ಪಾಳಗಾ. ೦೧). [←ಮರಾ. ದೇಶಪಾಂಡೇ]

ದೇಶಪಾಂಡೆತನ (ನಾ). ದೇಶಪಾಂಡೆಯ ಉದ್ಯೋಗ,– ಅಧಿಕಾರ : ವೆಂಕಟಾದ್ರಿಯಜಮಾನರಿಗೆ ಹುರಳಿಪಾಲಿದ ದೇಶಪಾಂಡೆತನವನ್ನು ಕೊಟ್ಟಿವಾಗಿ (ಮೈಆರಿ. ೧೯೨೯, ೬೪-೦೪ : 1538). [ದೇಶಪಾಂಡೆ + – ತನ]

ದೇಶಪ್ರೇಮ (ನಾ). ತನ್ನ ದೇಶದ ಮೇಲೆ ಇರುವ ಮಮತೆ,–ಅಭಿಮಾನ: ಸೋದರ ಸೋದರಿಯರೆ, ಮೇಲೇಳಿ . . . ದೇಶಪ್ರೇಮಾವೇಶವ ತಾಳಿ (ಕೋಗಿಲೆ. ೩೩-೭); ಅವನ ಅಚಲನಿರ್ಧಾರವನ್ನು, ಅನುಪಮದೇಶ ಪ್ರೇಮವನ್ನು ಕಂಡು ಅವನ ಬಗೆಗೆ ನನಗಿದ್ದ ಆದರವಿನ್ನೂ ಹೆಚ್ಚಿದೆ (ಆಗಸ್ಟ್. ೬೩). [ದೇಶ + ಪ್ರೇಮ]

ದೇಶಬಂಧ (ನಾ). [ಯೋಗ] ಯೋಗದ ಅಷ್ಟಾಂಗಗಳಲ್ಲಿ ಒಂದಂ ; ಧಾರಣೆ; ☞ ನಾಭಿ ಚಕ್ರ, ನಾಸಿಕಾಗ್ರ, ಜಿಹ್ವಾಗ್ರ ಇವೇ ಮೊದಲಾದ ಸ್ಥಾನಗಳಲ್ಲಿ ಮನಸ್ಸನ್ನು ಬೇರೆ ಕಡೆ ಚಲಿಸದಂತೆ ನಿಲ್ಲಿಸುವುದಂ : ಧಾರಣೆಯೆಂದರೆ ಶುಭವಾದ ಆಶ್ರಯವಾದ ನಾಭಿಚಕ್ರ, ಹೃದಯ, ಜಿಹ್ವಾಗ್ರ, ನಾಸಾಗ್ರ, ಶಿರಸ್ಸು ಮೊದಲಾದ ಶರೀರದವಯವದಲ್ಲಿ ಅಥವಾ ಹೊರಗಿನ ಶುಭವಾದ ಮಂಗಳಕರವಾದ ವಸ್ತುವಿನಲ್ಲಿ ಚಿತ್ತವನ್ನು ಸ್ಥಿರವಾಗಿ ನಿಲ್ಲಿಸುವ ಅಭ್ಯಾಸಮಾಡುವುದು. ಇದೇ ದೇಶಬಂಧವು (ಹಿಂದಸಾ. ೧೦೬). 'ಅಷ್ಟಾಂಗಯೋಗ' ಪರಾ. [ದೇಶ + ಬಂಧ]

ದೇಶಬಾಂಧವ (ನಾ). ಒಂದೇ ದೇಶದಲ್ಲಿ ಜನಿಸಿರುವುದರಿಂದ ಪರಸ್ಪರ ಸಂಬಂಧ ಹೊಂದಿದವನು : ದೇಶಬಾಂಧವರ ಬಗ್ಗೆ–ದೀನ ದಲಿತರ ಬಗ್ಗೆ ಎದೆಯಲ್ಲಿದ್ದ ತಳಮಳವನ್ನೆಲ್ಲ ಹೊರಚೆಲ್ಲುವಂತಿದ್ದ ದೃಷ್ಟಿ (ಆಗಸ್ಟ್. ೫).

[ದೇಶ + ಬಾಂಧವ]

ದೇಶಭಕ್ತ (ನಾ). ತನ್ನ ದೇಶದ ಬಗ್ಗೆ ಭಕ್ತಿಯನ್ನು ಹೊಂದಿರುವವನು,–ಗೌರವವನ್ನು ಹೊಂದಿರುವವನಂ : ದೇಶಭಕ್ತರ ಉಪದೇಶಗಳನ್ನು ಕೇಳಿ ರೌದ್ರಾವೇಶವನ್ನು ತಾಳತೊಡಗಿದ (ಮಾಪು. ೪೬೪) ; ಸ್ವಾತಂತ್ರ್ಯದ ಹೋರಾಟದಲ್ಲಿ ಅನೇಕ ಜನ ದೇಶಭಕ್ತರು ಅಸು ನೀಗಿದರು (ಕೂಡಿ).

[ದೇಶ + ಭಕ್ತ]

ದೇಶಭಕ್ತಿ (ನಾ). = ದೇಶಪ್ರೇಮ :- ಇವನೂ ದೇಶಭಕ್ತಿಯ ಕಾವಿನಿಂದ ಅಲ್ಲಿಗೆ ಹೋಗತೊಡಗಿದ (ಮಾಪು. ೪೬೪) ; ದೇಶಭಕ್ತಿಯನ್ನು ಹೊಂದಿದ್ದ ಅನೇಕ ಮಹನೀಯರು ನಮ್ಮ ನಾಡಿಗಾಗಿ ದುಡಿದರು (ಕೂಡಿ).

[ದೇಶ + ಭಕ್ತಿ]

ದೇಶಭಾಷೆ (ನಾ). ಒಂದಂ ಪ್ರದೇಶದಲ್ಲಿ ಹಿಂದಿನ ಕಾಲದಿಂದಲೂ ಬಳಕೆಯಲ್ಲಿರುವ ಮಾತು : ನಾಡುನುಡಿ : ಈ ಕೆಲವು ವಿಷಯಗಳು ವಿಶೇಷವಾದ ಪ್ರಾಮುಖ್ಯತೆಯನ್ನು ಹೊಂದಿ, ಗಮನಾರ್ಹವಾಗಿ ನೊಳಂಬರ ಮೂಲವನ್ನು ಮತ್ತು ದೇಶಭಾಷೆಯನ್ನು ನಿರ್ಧರಿಸಲು ಸಹಾಯಕವಾಗುತ್ತದೆ (ನೊಳಂಬ. ೭೯) : ಶ್ರೀಬಂಕಿಂದಾಬು ಅವರ ಅನೇಕ ಗ್ರಂಥಗಳು ... ಯೂರೋಪ್ ಖಂಡದ ದೇಶಭಾಷೆಗಳಿಗೂ ಭಾಷಾಂತರ ಮಾಡಲ್ಪಟ್ಟಿವೆ (ಕಪಾಳಂ. ವಿಜ್ಞಾಪನಾ). [ದೇಶ + ಭಾಷೆ]

ದೇಶಭ್ರಷ್ಟ (ನಾ). ತನ್ನ ಮಾತೃಭೂಮಿಯಿಂದ ಹೊರದೂಡಲ್ಪಟ್ಟವನು ; ತನ್ನ ದೇಶದಲ್ಲಿ ಕಾರಣಾಂತರದಿಂದ ನೆಲೆಯಿಲ್ಲದವನಾಗಿ ಪರದೇಶಕ್ಕೆ ಹೋಗಿರುವವನಂ: ಗಡೀಪಾರಾದವನು : ತಪ್ಪು ಮಾಡಿ, ಊರಲ್ಲಿದ್ದರೆ ಸಿಕ್ಕಿಬೀಳುತ್ತೇನೆ ಎಂದು ಹೆದರಿ, ದೇಶಭ್ರಷ್ಟನಾಗಿದ್ದಾನೆ (ಕಬುಳ. ೦೭೨) : ನೀನು ತಪ್ಪುಕಾಣಿಕೆಯನ್ನು ಕೊಡುವುದಕ್ಕಾಗಲಿ ಅಥವಾ ದೇಶಭ್ರಷ್ಟನಾಗುವುದಕ್ಕಾಗಲಿ ಒಪ್ಪದಿದ್ದ ಮೇಲೆ . . . ಬೇರೆ ಮಾರ್ಗವೇ ಇರಲಿಲ್ಲ (ಸೋಕ್ರಹು. ೪೩). [ದೇಶ + ಭ್ರಷ್ಟ]

ದೇಶಭ್ರಷ್ಟತ್ವ (ನಾ). ದೇಶಭ್ರಷ್ಟನಾಗುವಿಕೆ ; ಗಡೀಪಾರಾಗುವಿಕೆ.

[ಸಂ.]

ದೇಶಮುಕಿ 'ದೇಶಮುಖ' ನೋ.

ದೇಶಮುಖ, ದೇಶಮುಕಿ (ನಾ). (ಹಿಂದೆ ಮರಾಟರ ಕಾಲದಲ್ಲಿ) ಪರಗಣವೆಂದು ಕರೆಯಲಾಗುತ್ತಿದ್ದ ದೇಶವಿಭಾಗದ ಅಧಿಕಾರಿ; ಪ್ರಾಂತಾಧಿಕಾರಿ: ಮೇಲಾಗಿ ಕೇತವರಾಯರೂ ಎಲ್ಲ ವಿಷಯಗಳಲ್ಲಿ 'ದೇಶಮುಖ'ರಂತೆ ನಡೆದರು (ಶಮಚೀ. ೪೨೫); ರಾಜಾನುಗ್ರಹ ಪಡೆದು ದೊಡ್ಡ ದೇಶಮುಖನೆಂದೆನಿಸಿಕೊಂಬ ಆಶೆಯೂ ಬಹಳ (ಕಥವಿ. II, ೨೫೭); ಒಂದೂ ಪ್ರಾಂತದ ಆಡಳಿತವೆಲ್ಲವೂ ದೇಶಾಧಿಕಾರಿಯಾದ ದೇಶಮುಖ . . . ದೇಶಪಾಂಡೆ, ದೇಸಾಯಿ . . . ಎಂಬೀ ಅಧಿಕಾರಿಗಳ ಅಧೀನವಾಗಿದ್ದವು (ಕಶ್ರಶಿ. ೦೩೬). **ದೇಶಮುಕಿ**: ಮಲಸಿ × ಗೌಡಗೆ ದಿವಾನ ಸಹೇಬಾ ದೇಶಮುಕಿ ದೇಶಪಾಂಡೇರೂ ಕನಗೊಡ × ಗೌಡ ಶಾನಬೋಗರು (ಎಳ. XII, ಶಿಶಾ. ೮೭-೩ ; ?).

[← ಮರಾ. ದೇಶಮೂಖ್./ಸಂ. ದೇಶಮುಖ]

ದೇಶರೂಪ (ನಾ). ಸನ್ನಿವೇಶಕ್ಕೆ ಅನುಸಾರವಾಗಿರುವುದಂ: ಔಚಿತ್ಯ: ಹೊಂದಾಣಿಕೆ: "ಅಭ್ಯೇಷಃ, ನ್ಯಾಯಃ, ಕಲ್ಪಃ, ದೇಶರೂಪಂ. ಸಮಂಜಸಂ – ತನಗೆ ಉಚಿತವಾದ ಧರ್ಮಗಳನ್ನು ತಪ್ಪದೇ ತಕ್ಕ ಹಾಗೆ ನಡೆದುಕೊಳ್ಳುವಿಕೆ" (ಸಿದ್ಧಾಂತಿ. ೨೦೮). [ದೇಶ + ರೂಪ]

ದೇಶವಾಚಕ (ನಾ). ದೇಶವನ್ನು ತಿಳಿಸುವ ಶಬ್ದ: ಪ್ರದೇಶವನ್ನು ತಿಳಿಸುವ ಶಬ್ದ: ಆ ಪದಗಳು ಭಾಷಾವಾಚಕ ಪದಗಳಾಗಿರದೆ ದೇಶವಾಚಕಗಳಾಗಿರಬಹುದು (ಡ್ಯಾವಿ. ೯೧). [ದೇಶ + ವಾಚಕ]

ದೇಶವಿರತ (ನಾ). [ಜೈನ] ದೇಶವಿರತಿವ್ರತವನ್ನು ಹೊಂದಿದವನು: ಪರಮಾಗಮದೊಳ್ ಸಾಗಾರರ ನೆಲೆ ಪನ್ನೊಂದು ಪನ್ನೆರಡ್ಪದನಗಾರರ ನೆಗಟ್ಟ ಗುಣಸ್ಥಾನಂ ಪರಿಪಿಪೊಡೇಟಲ್ತೆ ದೇಶವಿರತನಿನವಜೊಳ್ (ಅನಂಪು. ೩-೫೭); ದೇಶವಿರತ–ಯಾವ ಜೀವವು ಜಿನೇಂದ್ರದೇವನಲ್ಲಿ ಅದ್ವಿತೀಯಶ್ರದ್ಧೆಯನ್ನಿಟ್ಟು ತ್ರಸಹಿಂಸೆಯಿಂದ ವಿರತ ವಂತ್ತು ಅದೇ ಸಮಯದಲ್ಲಿ ಸ್ಥಾವರಹಿಂಸೆಯಿಂದ ಅವಿರತವಾಗುವುದೋ ಆ ಜೀವಕ್ಕೆ ವಿರತಾವಿರತವೆಂದು ಹೇಳುವರು (ಶ್ರಾವಕಾ. ಪರಿ. II, ೬೦೭).

[ದೇಶ + ವಿರತ]

ದೇಶವಿರತಿ (ನಾ). [ಜೈನ] ಶ್ರಾವಕರಂ ಧರಿಸಿರುವ ದಿಗ್ವಿರತಿ, ದೇಶವಿರತಿ ಮತ್ತು ಅನರ್ಥದಂಡವಿರತಿ ಎಂಬ ಮೂರು ಬಗೆಯ ಗುಣವ್ರತಗಳಲ್ಲಿ ಒಂದು; ಜೀವ ಪರ್ಯಂತವೂ ನಿಗದಿಯಾದ ದಿನ, ತಿಂಗಳು, ವರ್ಷ ಮುಂತಾದ ಕಾಲಪ್ರಮಾಣಗಳಲ್ಲಿ, ನಿರ್ದಿಷ್ಟವಾದ ಊರು, ನದಿ, ತಟಾಕ ಮೊದಲಾದ ಪ್ರದೇಶಗಳಿಂದ ಹೊರಗೆ ಸಂಚರಿಸುವುದಿಲ್ಲವೆಂಬ ವ್ರತ: ಇನ್ನೆರಡನೆಯ ದೇಶವಿರತಿಯೆಂತೆನೆ ಯಾವಜ್ಜೀವಂ ತೊಱೆದುದಱೊಳಗೆಯಂ ಘಟಿಕೆ ಮುಹೂರ್ತ ದಿನರಾತ್ರಿ ಪಕ್ಷಮಾಸ ಋತುಚತುರ್ಮಾಸ ಅಯನಸಂವತ್ಸರಾದಿಕಾಲ ಪ್ರಮಾಣದಿಂ ಕೆಮ್ಮನೆ ಮೂಱಿಡವಿ ನದೀತಟಾಕ ಇವೇ ಮೊದಲಾದ ಪ್ರದೇಶಾದಿಗಳಿಂದ ಕ್ರಮಲ್ಪೋಗೆನೆಂದು ಪ್ರಮಾಣಿಸುವುದೆರಡನೆಯ ಗುಣವ್ರತಮಕ್ಕುಂ (ಪಸಾರ. ೩೧೧). [ದೇಶ + ವಿರತಿ]

ದೇಶವ್ಯಾಪ್ತಿ (ನಾ). ಆಕಾಶ ಮೊದಲಾದ ಸ್ಥಳಗಳಲ್ಲಿ ಹರಡಿಕೊಳ್ಳುವಿಕೆ: ದೇಶವ್ಯಾಪ್ತಿಯಿಂದ ಅಣು ಮಹತ್ ಮಹತ್ತರ ಮೊದಲಾದ ವ್ಯವಹಾರಗಳು ಕೂಡುವುವು. ದೇಶವ್ಯಾಪ್ತಿಯಂದರೆ ಪರಮಾಣು ಎಷ್ಟು ಆಕಾಶಪ್ರದೇಶವನ್ನು ಆವರಿಸುತ್ತದೆಯೋ ದ್ವ್ಯಣುಕವು ಅದಕ್ಕಿಂತಲೂ ಅಧಿಕಪ್ರದೇಶವನ್ನು ಆವರಿಸುತ್ತದೆ (ಹಿಂದೂ. ೩೧). [ದೇಶ + ವ್ಯಾಪ್ತಿ]

ದೇಶವ್ರತ (ನಾ). =ದೇಶವಿರತಿ: ದೇಶವ್ರತ–ದಿಗ್ವ್ರತದಲ್ಲಿ ಗೊತ್ತುಮಾಡಿದ ಮೇರೆಗಳಲ್ಲಿಯೂ ಈಚೆಗೆ ಸಮಾಪದ ನದೀಪರ್ವತಗಳ ಆಚೆಗೆ ಆವರಣವೂ ಹೋಗುವುದಿಲ್ಲವೆಂದು ನಿಶ್ಚಯಿಸುವುದು ದೇಶವ್ರತವು (ಕ್ರಿನಧ. ೬೯). 'ಗುಣವ್ರತ', 'ಶೀಲವ್ರತ' ಪರಾ. [ದೇಶ + ವ್ರತ]

ದೇಶವ್ರತಿ (ನಾ). =ದೇಶವಿರತ: ದೇಶವ್ರತಿಗಳಂ ಪೇಟ್ಟಿನೆಂತೆನೆ ದರ್ಶನಿಕನುಂ ವ್ರತಿಕನುಂ . . . ಉದ್ದಿಷ್ಟವಿರತನುಮೆಂದು ದೇಶವ್ರತಿಗುಣಸ್ಥಾನದ ವರ್ಪನ್ನೊಂದು ವಿಕಲ್ಪಮಪ್ಪ ವರ್ತಂತಮ್ಮ ಗುಣಂಗಳತ್ತಣಂ ಪೂರ್ವಗುಣಂಗಳ್ಗಿರಸು ಕ್ರಮದಿಂ ಪೆರ್ಚಿದರ್ (ಪಸಾರ. ೩೯೪). [ದೇಶ + ವ್ರತಿ]

ದೇಶವ್ಯಾಪ್ತ (ನಾ). ದೇಶಗಳ ಸಮೂಹ: ಧರ್ಮಜನಿದ್ದ ದೇಶವ್ಯಾಪ್ತದೊಳು ಬಱನಿಲ್ಲ ಸವೆಯವು ಬೆಳೆದ ಬೆಳಸುಗಳು (ಕುವ್ಯಾವಿ. ೪-೧೨).

[ದೇಶ + ವ್ಯಾಪ್ತ]

ದೇಶಶಾಖೆ (ನಾ). ಒಂದು ದೇಶದ ಬೇರೆ ಬೇರೆ ವಿಭಾಗ; ಜಿಲ್ಲೆ. 'ದೇಸಾಕೆ' ಪರಾ. [ದೇಶ + ಶಾಖೆ]

ದೇಶಸಂಚಾರ (ನಾ). ದೇಶದಲ್ಲೆಲ್ಲ ತಿರುಗುವಿಕೆ: ನಾಡಿನಲ್ಲೆಲ್ಲ ಸಂಚರಿಸುವಿಕೆ; ದೇಶಪರ್ಯಟನೆ: ಆ ಸ್ವಾಮಿಗಳು ದೇಶಸಂಚಾರ ಮಾಡುತ್ತಾ ಜನರಿಗೆ ತತ್ತ್ವಬೋಧೆ ಮಾಡುತ್ತಿದ್ದರು (ಕೂಲಿ). [ದೇಶ + ಸಂಚಾರ]

ದೇಶಸಂಯತ (ನಾ). [ಜೈನ] ಐದು ಅಣುವ್ರತ, ಮೂರು ಗುಣವ್ರತ ಮತ್ತು ನಾಲ್ಕು ಶಿಕ್ಷಾವ್ರತ—ಈ ಹನ್ನೆರಡು ವ್ರತಗಳನ್ನು ಪಾಲಿಸುವ ಶ್ರಾವಕ: ಏಕದೇಶನಿರ್ವೃತಿ ಲಕ್ಷಣಾಣುವ್ರತ ಗುಣಶಿಕ್ಷಾವ್ರತಸ್ವರೂಪ ಮೇಕಾದಶನಿಲಯಮುವಪ್ಪ ದೇಶಚಾರಿತ್ರದೊಳು ವರ್ತಿಸುವ ಶ್ರಾವಕ ನೈದನೆಯ ಗುಣಸ್ಥಾನವರ್ತಿ ದೇಶಸಂಯತನಕ್ಕುಂ (ಶ್ರಾವಕಾ. ೬೯-೩).

[ದೇಶ + ಸಂಯತ]

ದೇಶಸಂಯಮ (ನಾ). [ಜೈನ] ಅಸಂಯಮ, ದೇಶಸಂಯಮಂ, ಸಾಮಾಯಿಕ, ಛೇದೋಪಸ್ಥಾಪನ, ಪರಿಹಾರವಿಶುದ್ಧಿ, ಸೂಕ್ಷ್ಮಸಾಂಪರಾಯಂ, ಯಥಾಖ್ಯಾತಶುದ್ಧಿಸಂಯಮ ಎಂಬ ಏಳು ಬಗೆಯ ಸಂಯಮಂಗಳಲ್ಲಿ ಒಂದು: ಹನ್ನೆರಡು ಬಗೆಯ ವ್ರತಗಳನ್ನು ಪಾಲಿಸುವ ಶ್ರಾವಕನ ಚಾರಿತ್ರ: ಸಾಮಾಯಿಕಚ್ಛೇದೋಪಸ್ಥಾಪನಾಪರಿಹಾರ ವಿಶುದ್ಧಿಸೂಕ್ಷ್ಮಸಾಂಪರಾಯಯಥಾಖ್ಯಾತಚಾರಿತ್ರದೇಶಸಂಯಮ ಅಸಂಯಮವಿಕಲ್ಪದಿಂ ಸಂಯಮಂ ಸಪ್ತವಿಧಂ (ತತ್ತ್ವಪ್ರ. ೧೭): ಸಮ್ಯಕ್ ಮಿಥ್ಯಾತ್ವ ಗುಣಸ್ಥಾನದಲ್ಲಿರುವ ಜೀವವು ಸಕಲಸಂಯಮ ಇಲ್ಲವೆ ದೇಶ ಸಂಯಮವನ್ನು ಗ್ರಹಣಮಾಡುವುದಿಲ್ಲ (ಶ್ರಾವಕಾ. ಪರಿ. II, ೬೦೭).

[ದೇಶ + ಸಂಯಮ]

ದೇಶಸಾತ್ಮ್ಯ (ನಾ). [ವೈದ್ಯಶಾ] ಮೂರು ಬಗೆಯ ಸಾತ್ಮ್ಯಗಳಲ್ಲಿ ಒಂದು; ವಾಸಮಾಡುವ ಪ್ರದೇಶಕ್ಕೆ ಹೊಂದಿಕೊಳ್ಳುವುದು,–ಒಗ್ಗಿಕೊಳ್ಳುವುದು: ವಿರುದ್ಧಪಾನಾಹಾರಂಗಳು ವಿರುದ್ಧಪ್ರಕೃತಿಯುಳ್ಳವನಾಗಿದ್ದರೂ ದೇಹಕ್ಕೆ ಒಡಂಬಟ್ಟು ಬಂದರೆ ಅದೇ ಸಾತ್ಮ್ಯವೆನಿಸಿಕೊಂಬುದು. ಆ ಸಾತ್ಮ್ಯವೆಂತೆಂದೊಡೆ: . . . ದೇಶಸಾತ್ಮ್ಯ, ದೇಹಸಾತ್ಮ್ಯ, ವ್ಯಾಧಿಸಾತ್ಮ್ಯವೆಂದು ಆ ಸಾತ್ಮ್ಯ ಮೂಱು ತೆಱನಾಗಿಹುದು (ವೈದ್ಯಸಾ. I, ೦೨). 'ದೇಹಸಾತ್ಮ್ಯ' ಪರಾ. [ದೇಶ + ಸಾತ್ಮ್ಯ]

ದೇಶಸೇವೆ (ನಾ). ಹುಟ್ಟಿದ ದೇಶಕ್ಕಾಗಿ ಮಾಡುವ ಸೇವೆ,–ಕಾರ್ಯ; ನಾಡ ಸೇವೆ: ಅವರು . . . ಜೀವಿತದ ಕೊನೆಯ ನಿಮಿಷದವರೆಗೂ ದೇಶಸೇವೆ ಮಾಡಿದರು (ಕಶಪು. ೫-೬೫); ಗೃಹಸ್ಥರಿಗೆ ದೇಶಸೇವೆ ಮಾಡುವ ಅಧಿಕಾರವಿಲ್ಲವೇ? (ಧಾರತಿ. ೬೩). [ದೇಶ + ಸೇವೆ]

ದೇಶಸ್ಥ (ಗು). ೧. ದೇಶದಲ್ಲಿರುವ; ದೇಶದಲ್ಲಿ ವಾಸಿಸುವ. (ನಾ). ೨. ಒಂದು ದೇಶದಲ್ಲಿ ವಾಸಿಸುವ ವ್ಯಕ್ತಿ. ೩. ಬ್ರಾಹ್ಮಣರಲ್ಲಿ ಒಂದು ಪಂಗಡ; ಮಹಾರಾಷ್ಟ್ರದ ಕಡೆಯಿಂದ ಕರ್ನಾಟಕಕ್ಕೆ ವಲಸೆ ಬಂದು, ಸ್ಮಾರ್ತ ಮತ್ತು ಮಾಧ್ವ ಸಂಪ್ರದಾಯ, ಆಚಾರಗಳನ್ನು ಹೊಂದಿಸಿಕೊಂಡಿರುವ ಬ್ರಾಹ್ಮಣವರ್ಗ: ದೇಶಸ್ಥ ಬ್ರಾಹ್ಮಣರು: ಇವರನ್ನು ನಮ್ಮ ಜಿಲ್ಲೆಯಲ್ಲಿ 'ತೋಟಿಗ' ರೆಂದು ಕರೆಯುವುದೂ ಉಂಟು (ಶುಳುನಾ. ೦೫೭).

[ಸಂ.]

ದೇಶಾಂತರ (ನಾ). ಬೇರೆದೇಶ; ಪರದೇಶ; ವಿದೇಶ: ಧರಣಿ ನುಂಗುವ ಳಿಬ್ಬರನು ಸಂಗರವ ಜಯಿಸದ ನೃಪನ ದೇಶಾಂತರವ ಚರಿಸದ ಪಂಡಿತನ (ಕುಪ್ಯಾಲಾ. ೩-೨೨); ಹರನುರಿಗಣ್ಣೊಳೆನ್ನಾಳ್ದ ದೇಹವ ಬಿಟ್ಟ ವಿರಹದೆ ದೇಶಾಂತರವ ಭರವಶದೊಳು ಸಿಕ್ಕಿದೆ ನಾನು ಮುಂದಕೆ ಸ್ಮರನೆ ಶರಣನೆಂದ ಳವಳು (ಪೋಹತ. ೦೦-೨೧); ನಾನು ಸರಕಾರದ ಕೆಲಸದ ನಿಮಿತ್ತವಾಗಿ ದೇಶಾಂತರದಲ್ಲಿರುವಾಗ ನಿಮ್ಮ ತಾಯಿಯೇ ನನ್ನ ಮಕ್ಕಳನ್ನು ಜೋಕೆ ಮಾಡಿದಳು (ಮುಂಬಯಿ. ೪-೧೯೬); ಈಗ ತಂದೆಯ ತೊಡೆಯನ್ನು ಬಿಟ್ಟು . . . ದೇಶಾಂತರದಲ್ಲಿ ನಾನೆಂತು ಜೀವವನ್ನು ಧರಿಸುವೆನು (ಶಾಕುಂತ. ೫೭-೧೨); ದೇಶಾಂತರ ಹೋದರೆ ದೈವ ಬಿಟ್ಟೀತೆ? (ಗಾದೆ).

[ಸಂ.]

ದೇಶಾಂತರಂಗೆಯ್(ಕ್ರಿ). ಪರದೆ ಶಕ್ಕೆ ಹೋಗು; ವಿದೇಶಕ್ಕೆ ಹೋಗು: ಅಬಲೆ ನೀನೆಂತು ದೇಶಾಂತರಂಗೆಯ್ವೆಯಕಟಾ (ನವಮೋ. ೮-೬೯).

[ದೇಶಾಂತರ + ಕೆಯ್$_1$]

ದೇಶಾಂತರವಾಸ (ನಾ). ಪರದೇಶದಲ್ಲಿ ವಾಸಮಾಡುವುದು; ಸ್ವದೇಶ ಭ್ರಷ್ಟನಾಗಿರುವುದು: ಈ ಯೂರೋಪ್‌ಖಂಡದವರಲ್ಲಿ ಅನೇಕರು ದೇಶಾಂತರವಾಸ ಮಾಡಿಕೊಂಡು ಗಣಿಗಳಲ್ಲಿ ಕೆಲಸ ಮಾಡಬೇಕೆಂಬ ಶಿಕ್ಷೆಗೆ ಒಳಗಾದವರು (ಭೂಗೋಳ. ೧೦೮). [ದೇಶಾಂತರ + ವಾಸ$_2$]

ದೇಶಾಂತರವಾಸಿ (ನಾ). ಪರದೇಶದಲ್ಲಿ ವಾಸಮಾಡುವವನು; ವಿದೇಶ ವಾಸಿ: ಯೌವನಪರಿಪೂರ್ಣದೊಳ್ ದೇಶಾಂತರವಾಸಿಗಳಪ್ಪರಸು ಗಳಾಕೆಯಂ ಬೇಡಿಯಟ್ಟೆ (ಜಾವುಂಪು. ೨೮೨). [ಸಂ. ದೇಶಾಂತರವಾಸಿನ್]

ದೇಶಾಂತರಿ (ನಾ). ೧. ಪರದೇಶದಿಂದ ಬಂದಿರುವವನು; ಬೇರೆ ದೇಶಕ್ಕೆ ಸೇರಿದವನು; ವಿದೇಶಿ: ಆ ಕಾಲದೊಳ್ ನೀಂ ದೇಶಾಂತರಿಯಾಗಿಯುಂ ನೀಂ ಬದ್ಧಮಿಥ್ಯಾದೃಷ್ಟಿಪ್ರೀತಿಂಕರನೆಂಬ ಪೆಸರನಾಂತು ಬಂದಾ ಪೂಜೆಯಂ ಕಂಡು . . . ಪೇರಡವಿಯೊಳು ಯಕ್ಷನಾಗಿ ಪುಟ್ಟಿ (ಪುಷ್ಯಾಸ್ರ ೧-೪೬ ಪ). ೨. ವಿರಕ್ತ; ಚರಜಂಗಮ; ಸ್ಥಳದಿಂದ ಸ್ಥಳಕ್ಕೆ ಚಲಿಸುವ ಜಂಗಮ: ದೇಶಾಂತರಿ ದೇಶಾಂತರಿ ಎಂದು ನುಡಿವ ಹುಸಿಭ್ರಷ್ಟರ ನೇನೆಂಬೆನಯ್ಯಾ (ಪಡಸಂ. ೧೯೪-೪೪). [ಸಂ. ದೇಶಾಂತರಿನ್]

ದೇಶಾಂತರಿಗ (ನಾ). = ದೇಶಾಂತರಿ ೧: ಆ ಗೃಹಸ್ಥನ ಪೆಂಡತಿ ಮುಖ ದೊಳ್ ಸೆಱಂಗನಿಕ್ಕಿಕೊಂಡು ಮಗಂಗೆ ಮೊಲೆಯೂಡುವುದಂ ಕಂಡು ದೇಶಾಂತರಿಗರಿದೇನೆಂದು ಬೆಸಗೊಂಡೊಡೆ (ಪಂಚತಂ. ೨೨೯-೩).

[ದೇಶಾಂತರ + -ಇಗ]

ದೇಶಾಕಿ (ನಾ). [ಸಂಗೀತ] ಒಂದು ರಾಗದ ಹೆಸರು; ದೇಶಾಕ್ಷಿ: ದೇಶಾಕಿ [ಪಾಕಾಂ. ಖಿ] (ದೇಶಿ ?) ಯಲ್ಲದ ರಾಗ ಉಪ್ಪಿಲ್ಲದ ಊಟ ಸಪ್ಪೆ ಕಾಣಿರೋ ಅಯ್ಯಾ ಮಿಕ್ಕಿನ ರಾಗ ಶಿವನಲ್ಲದ ದೈವ ಫಲವಿಲ್ಲ ಕಾಣಿರೋ ಅಯ್ಯಾ ಮಿಕ್ಕಿನ ತುಂಬುರ ನಾರದರು ಶಿವನ ಕೇಳಿಸುವ ರಾಗ ಮಹಾಲಿಂಗ ಗಜೇಶ್ವರನ ನಚ್ಚಿನ ರಾಗ (ಸರ್ವವ. ೭೪-೪೧೦). [<ಸಂ. ದೇಶಾಕ್ಷೀ]

ದೇಶಾಕೆ 'ದೇಸಾಕೆ' ನೋ.

ದೇಶಾಕ್ಷಿ (ನಾ). [ಸಂಗೀತ] ಒಂದು ರಾಗದ ಹೆಸರು: ಪಾಡಿ ವಸಂತ ಸಂಕೀರ್ಣ ದೇಶಾಕ್ಷಿಯುಗೂಡಿದ ಸಾಳಂಗಗಳೆಂಬ ಗಾಡಿಕಾತಿಯರು ಗಾನವನಾಲಾಪವ ಮಾಡಿದರಂದಮರರು ಸೋಲೆ (ಸೊಬಸೋ. ೨೪-೩೫); ಬಳಿಕ ಸಮಸ್ತರಾಗಂಗಳೊಳಗೆ . . . ದೇಶಾಕ್ಷಿ . . . ಮಧ್ಯಮಾವತಿ ಯೆಂಬ ಮೂವತ್ತಾಱು ರಾಗಂಗಳೇ ಮುಖ್ಯಮಾಗಿ ಬಳಿಕೆಯಿಂದಧುನಾ ತನರಲ್ಲಿ ಪ್ರಸಿದ್ಧಿಗೊಂಡಿರ್ಪುವು (ವಿವೇಕ. ೨೩೪); ರಾಗ ದೇಶಾಕ್ಷಿ, ನಾದ ನಾಮಕ್ರಿಯೆ (ಪ್ರಸಕೀ. ೮). [ಸಂ. ದೇಶಾಕ್ಷೀ]

ದೇಶಾಖ್ಯಾನ (ನಾ). = ದೇಶನಿವೇಶೋಪದೇಶ: ದೇಶಾಖ್ಯಾನಮೆಂಬುದು ವಿಷಯವ್ಯಾವರ್ಣನಂ (ಜಾವುಂಪು. ೧೨). [ದೇಶ + ಆಖ್ಯಾನ]

ದೇಶಾಚಾರ (ನಾ). ಒಂದು ದೇಶದಲ್ಲಿ ಮೊದಲಿನಿಂದ ನಡೆದು ಬಂದಿ ರುವ ಪದ್ಧತಿ, - ಸಂಪ್ರದಾಯ: ಬ್ರಹ್ಮಚಾರಿ ಯತಿ ದೀಕ್ಷಿತರಿಗೆ ಸೂತಕಾದಿ ಹೊಲೆಗಳಿಲ್ಲವೆಂಬುದು ಮೊದಲಾದಾಚಾರ ಭೇದಮಿರ್ಪುದಱಿಂ ದೇಶಾಚಾರ . . . ಸಂಪ್ರದಾಯವೆಂಬುದು ಮೊದಲಾದವುಗಳಂ ತಿಳಿದು (ವಿವೇಕ. ೧೮೬); ಇಂತು ತಮ್ಮನ್ನರೆನ್ನನ್ನರಿಗೆ ಯಾವುದೇ ಭೂಷಣವ ತೊಡಿಸಿದರೆ ಅದು ನಮಗೆ ನೀಡಿದಂತೆಯೆ. ಇಂತು ನಮ್ಮ ದೇಶಾಚಾರ (ನವರಾ. V, ೨೬); ಇದರೊಳಗಿನ ಆತ್ಮವೀರದ ಕತೆ ದೇಶಾಚಾರ, ಕಾಲಾಚಾರಗಳನ್ನು ಮೀರಿ ಸಾರ್ವಕಾಲಿಕವಾದ ಸಾರ್ವದೇಶಿಕವಾದ ಗುಣವನ್ನು ಹೊಂದಿ ಗುರುತ್ವವನ್ನು ಪಡೆದಿದೆ (ವೀರಯೋ. VI ಮುನ್ನುಡಿ).

[ದೇಶ + ಆಚಾರ]

ದೇಶಾಟಣ (ನಾ). = ದೇಶಾಟನ: ದೇಶಾಟಣ ಮಾಡುವುದು ಸಮುದ್ರದ ಮೇಲೆ ನಾವೆಯಲ್ಲಿ ಸಂಚರಿಸುವುದು ಸಹಾ ದೇಹಕ್ಕೆ ಒಳ್ಳೆಯದು ಎಂದು ಅಭಿಪ್ರಾಯ ಪಡುತ್ತಾರೆ (ಪೇಟಮಾ. ೩೨). [<ಸಂ. ದೇಶಾಟನ]

ದೇಶಾಟನ (ನಾ). ದೇಶಸಂಚಾರ. 'ದೇಶಾಟನಂಗೆಯ್' ಪರಾ. [ಸಂ.]

ದೇಶಾಟನಂಗೆಯ್ (ಕ್ರಿ). ದೇಶಸಂಚಾರ ಮಾಡು: ದೇಶಾಟನಂಗೆಯ್ವು ತಾನಂದದಿಂ ಮೂರುಸಾಸಿರಂ ವೀರಮಾಹೇಶ್ವರರ್ವೆರಸಿ ಶಿವಯೋಗಿವರನಿರೆ ಲೀಲೆಯಿಂ (ಕುಮಾಪು. ೨-೫೦). [ದೇಶಾಟನ + ಕೆಯ್$_1$]

ದೇಶಾಟನೆ (ನಾ). = ದೇಶಾಟನ: ದೇಶಾಟನೆಯಿಂದ ಲೋಕವ್ಯವಹಾರ ಜ್ಞಾನ ವೃದ್ಧಿಯಾಗುತ್ತದೆ (ರೂಢಿ). [ಸಂ. ದೇಶಾಟನ]

ದೇಶಾದಿ (ನಾ). [ಸಂಗೀತ] ಒಂದು ಬಗೆಯ ತಾಳ: ಆದಿ, ದೇಶಾದಿ . . . ಝಂಪೆತಾಳಗಳಲ್ಲಿ ಬಹಳ ಹಾಡುಗಳನ್ನು ರಚಿಸಿದ್ದಾರೆ (ಸಂಗೀತ. ೨೯). [ದೇಶ + ಆದಿ$_2$]

ದೇಶಾಧಿನಾಥ (ನಾ). ದೇಶಕ್ಕೆ ಒಡೆಯ; ರಾಜ: ಕೇಳಿರೈ ದೇಶಾಧಿ ನಾಥರು ವೀರ ಪರಿವಾರ ನಾಳೆ ಮೊದಲಾಗರ್ಜುನನ ನಾವ್ ಕಾಳೆಗಕೆ ಬರಲೀಯೆವು (ಕುಪ್ಯಾದ್ರೋ. ೨-೫). [ದೇಶ + ಅಧಿನಾಥ]

ದೇಶಾಧಿಪ (ನಾ). = ದೇಶಾಧೀಶ: ದೇಶಾಧಿಪ ಕೃಷ್ಣರಾಯಂಗೆ ಖಳರಿಂದ ಮೋಸವ ಬರಗುಡೆನೆಂದು ಶೇಷ ಮಂಡಳಿಸಿದಂದದಿ ವಜ್ರದಾಳ್ವೇರಿ ಲೇಸಾದುದು (ಪೋಹತ. ೩-೮); ದೇಶಾಧಿಪರ ಬೆಳ್ಗೊಡೆಗಳು ನಕ್ಷತ್ರ ರಾಶಿಯಂತೆಸೆಯೆ ಮಧ್ಯದಲಿ ಕೇಶವರಾಯನ ದೂಸ ರೋಹಿಣಿಯ ಪ್ರಾಣೇಶನೆಂಬಂತೆ ರಂಜಿಸಿತು (ಪೋಹತ. ೩೬-೬೮). [ದೇಶ + ಅಧಿಪ]

ದೇಶಾಧಿಪತಿ (ನಾ). = ದೇಶಾಧೀಶ: ದೇಶಾಧಿಪತಿ ಹರಿಶ್ಚಂದ್ರರಾಯನ ಸತ್ಯವಾಸವನ ಸಭೆಯೊಳಗೆ ನೆಗಳ್ದ ಪ್ರಸಂಗದಿಂ ಕೌಶಿಕ ವಸಿಷ್ಠಮುನಿಗಳಿಗೆ ಘನತರದ ಸಂವಾದಮಂ ಮಾಡಿ ತಂದು (ಹಡಕಾ. ೧ ಸೂಚನೆ); ದೇಶಾಧಿ ಪತಿಯ ಗರ್ಭದಿ ಬಂದು ನಿನಗೀಗ ಹಾಸುವ ವಸ್ತ್ರಗಳಿಲ್ಲ (ಚಂದ್ರಹಾ. ೧-೨೪).

[ದೇಶ + ಅಧಿಪತಿ]

ದೇಶಾಧೀಶ (ನಾ). ದೇಶಕ್ಕೆ ಒಡೆಯ; ರಾಜ: ದೇಶಾಧೀಶ ತನೂಭವರ್ ಸೆಡೆವುದುಂ ಸಾಕೇತಸಿಂಹಾಸನಾಧೀಶಂ ಕಂಡು (ಪಂರಾಮಾ. ೫-೮೩).

[ದೇಶ + ಅಧೀಶ]

ದೇಶಾಭಿ (ನಾ). [ಸಂಗೀತ] ಒಂದು ರಾಗದ ಹೆಸರು: ಮಾಳವಿ ಮಲಹರಿ ದೇಶಾಭಿ ಗುರ್ಜರಿ ಚಾಳಿ ದೇಶಿ ಧನ್ಯಾಸಿ (ತರ್ಕಳಾ. ೭-೫೫).

[?./ಸಂ. ದೇಶಾಭೀರೀ]

ದೇಶಾಭಿಮಾನ (ನಾ). ತನ್ನ ದೇಶದ ಮೇಲಿನ ಮಮತೆ; ಮಾತೃ ಭೂಮಿಯ ಮೇಲಿನ ಗೌರವ; ದೇಶಪ್ರೇಮ: ದೇಶಾಭಿಮಾನವೇ ಮತವಾಗಲೆಂದು ದೇಶಸೇವೆಯೆ ನಿರತವ್ರತವಾಗಲೆಂದು (ಕಎಪು. ೧೭-೧೦); ರಾಷ್ಟ್ರೀಯ ಸ್ವಾರ್ಥ ಮತ್ತು ಹೆಮ್ಮೆಗಳು 'ದೇಶಾಭಿಮಾನ'ವೆಂಬ ಸದ್ಗುಣವೆನಿಸಿಕೊಳ್ಳುವುವು (ಜಗಸಂ. ೩೮). [ದೇಶ + ಅಭಿಮಾನ]

ದೇಶಾಭಿಮಾನಿ (ನಾ). ದೇಶಾಭಿಮಾನವುಳ್ಳವನು; ದೇಶಭಕ್ತ : ದೇಶಾಭಿಮಾನಿಯಾದ ಮನುಷ್ಯನು ಇವುಗಳಲ್ಲಿ ಯಾವುದನ್ನೂ ಧಿಕ್ಕರಿಸುವ ಹಾಗಿಲ್ಲ (ಭಾಗ್ಯಶಿ. ೩೦) ; ಈಗ ನಮ್ಮ ರಾಷ್ಟ್ರಕ್ಕೆ ದೇಶಾಭಿಮಾನಿಗಳಾದ ನಾಯಕರ ಅವಶ್ಯಕತೆಯಿದೆ (ರೂಢಿ). [ಸಂ. ದೇಶಾಭಿಮಾನಿನ್]

ದೇಶಾಯಿ 'ದೇಸಾಯಿ' ನೋ.

ದೇಶಾಯಿಕೆ (ನಾ). ೧. ದೇಸಾಯಿತನ ; ದೇಸಾಯಿಯ ಅಧಿಕಾರ. ೨. ದೇಸಾಯಿಯ ಅಧಿಕಾರಕ್ಕೆ ಒಳಪಟ್ಟ ಗ್ರಾಮಾದಿಗಳು : ನಂಮ ದೇಶಾಯಿಕೆಯ × × × ಗೆ ಸಲುವ (ಬೊಂಕಶಾ. ೧೯೩೫, ರಾಣಿಬೆನ್ನೂರು. ೧೬-೪೦ ; 1597). [ದೇಶಾಯಿ (<ದೇಸಾಯಿ) + – ಇಕೆ]

ದೇಶಾವಕಾಶಿಕವ್ರತ (ನಾ). [ಜೈನ] ಶ್ರಾವಕರು ಆಚರಿಸುವ ಒಂದು ವ್ರತ ; P ಆನಯನ (ಮರ್ಯಾದಿತ ಕ್ಷೇತ್ರದ ಹೊರಗೆ ಬೇಡುವುದು), ಪ್ರೇಷ್ಯಪ್ರಯೋಗ (ಮರ್ಯಾದಿತ ಕ್ಷೇತ್ರದ ಹೊರಗೆ ಕಳುಹಿಸುವುದು), ಶಬ್ದಾನುಪಾತ (ಮರ್ಯಾದಿತ ಕ್ಷೇತ್ರದ ಹೊರಗಿನವರೊಂದಿಗೆ ಮಾತನಾಡುವುದು), ರೂಪಾನುಪಾತ (ಮರ್ಯಾದಿತ ಕ್ಷೇತ್ರದ ಹೊರಗಿನವರಿಗೆ ಅಭಿಪ್ರಾಯಗಳನ್ನು ತಿಳಿಸುವುದು) ಮತ್ತು ಪುದ್ಗಲಕ್ಷೇಪ (ಮರ್ಯಾದಿತ ಕ್ಷೇತ್ರದ ಹೊರಗಿನವರಿಗೆ ಪತ್ರ ಮೊದಲಾದ ಪದಾರ್ಥಗಳ ಮೂಲಕ ತಿಳಿಸುವುದು)—ಈ ಐದು ಅತಿಚಾರಗಳನ್ನು ಬಿಡುವುದು : ಆವುದೊಂದು ವ್ರತದಲ್ಲಿ ದಿಗ್ವಿರತಿಯಿಂದವು ಹವಣಿಸಲ್ಪಟ್ಟ ದೇಶವಿಭಾಗದಲ್ಲಿ ಹವಣಿಸಲ್ಪಟ್ಟ ಕಾಲವನುಳ್ಳಯಿರವು ಅಹುದು . . . ಆ ವ್ರತವನ್ನು ದೇಶಾವಕಾಶಿಕವ್ರತವೆಂದು ಹೇಳುವರು (ಸಾಗಾಧ. ೫೫). [ದೇಶಾವಕಾಶಿಕ + ವ್ರತ]

ದೇಶಾವಧಿ (ನಾ). [ಜೈನ] ದೇಶಾವಧಿ, ಪರಮಾವಧಿ ಮತ್ತು ಸರ್ವಾವಧಿ ಎಂಬ ಮೂರು ಬಗೆಯ ಅವಧಿಜ್ಞಾನಗಳಲ್ಲಿ ಒಂದು ; ಕ್ಷೇತ್ರ, ಕಾಲ, ಭಾವಗಳಿಗೆ ಸಂಬಂಧಿಸಿದಂತೆ ಸೀಮಿತವಾದ ಪದಾರ್ಥಗಳ ಜ್ಞಾನ ; P ಜೈನರ ಪ್ರಕಾರ ಇರುವ ಮತಿ, ಶ್ರುತ, ಅವಧಿ, ಮನಃಪರ್ಯಯ ಮತ್ತು ಕೇವಲ ಎಂಬ ಐದು ಬಗೆಯ ಜ್ಞಾನಗಳಲ್ಲಿ ಅವಧಿಜ್ಞಾನವು ಮೂರನೆಯದು : ದೇವೇಂದ್ರನು ಮಾಗಳ್ ದೇಶಾವಧಿಯಿಂ . . . ಅಱಿದಂ ವ್ಯತೀ[ತ]ಭವಸಂತತಿಯಾ (ಶಾಂತಿಪು. ೫-೭) ; ದೇಶಾವಧಿ ಪರಮಾವಧಿ ಸರ್ವಾವಧಿಗಳೆನಿಪ್ಪುವುಚಿತ ನಾಮಯುತಂಗಳ್ (ಚಂದ್ರಪು. ೧೪-೫೫) ; ಅವಧಿಜ್ಞಾನಂ ದೇಶಾವಧಿ ಪರಮಾವಧಿ ಸರ್ವಾವಧಿಯೆಂದು ತ್ರಿವಿಧಂ (ಪಸಾರ. ೫೭೯). [ದೇಶ+ಅವಧಿ]

ದೇಶಾವಧಿಜ್ಞಾನಿ (ನಾ). [ಜೈನ] ದೇಶಾವಧಿಜ್ಞಾನವನ್ನು ಪಡೆದಿರುವವನು : ಸ್ತುತಿಯಿಸಿ ದೇಶಾವಧಿಜ್ಞಾನಿಯಪ್ಪ ಸೂರ್ಯಮಿತ್ರಮುನಿನಾಥ ನತಿವಿಶುದ್ಧಪರಿಣಾಮದಿಂ ಸರ್ವಾವಧಿಜ್ಞಾನಲೋಚನನಾಗಿ ನಿರ್ವಾಣೋರ್ವರಾಂತರ್ಭಾಗದಿಂ ಪೊಱಮಟ್ಟು (ಸುಕುಮಾ. ೪-೫೪ ಪ). [ಸಂ. ದೇಶಾವಧಿಜ್ಞಾನಿನ್]

ದೇಶಾವರ, ದೇಶಾವರಿ, ದೇಶಾವಾರ (ನಾ). ೧. ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳಿಗೂ ದೇವರ ಉತ್ಸವ, ವ್ರತ ಮುಂತಾದ ಮತೀಯ ಕಾರ್ಯಗಳಿಗೂ ಊರೂರು, ಮನೆಮನೆ ಅಲೆದು (ಬ್ರಾಹ್ಮಣರು) ಧನರೂಪವಾಗಿ ಮತ್ತು ವಸ್ತುರೂಪವಾಗಿ ಸಹಾಯ ಪಡೆಯುವುದು : ಏಕನಾದವನ್ನು ಹಿಡಿದು ಕನಕಪುರಂದರರ ಕೀರ್ತನೆಗಳನ್ನು ಹಾಡಿಕೊಂಡು ದೇಶಾವರಕ್ಕೆ ಹೋಗುತ್ತಿದ್ದ (ಮಧುನ. ೬೪) ; ಪೂರ್ಣಯ್ಯನವರು 'ಏದು ರೂಪಾಯಿ, ಮಂಡ್ಯದ ಧಾವಳಿ' ಯನ್ನು ದೇಶಾವರದ ದಾಸರಿಗೆ ಸಂಭಾವನೆ ಕೊಟ್ಟರೆ ಸಾಕೆಂದು ಯೋಚಿಸಿದ್ದರು ! (ಜಗದಾ. ೧೬೯) ; ಮನೆಮನೆಗೆ ಅಲೆದು ದೇಶಾವರ ನಡೆಸಿ, ಸಂಭಾವನೆ ಬೇಡಿ ... ಜೀವನಯಾಪನೆಮಾಡುತ್ತಿದ್ದನು (ಮಲೆಮ. ೨೦೯). ೨. ಮನೆಮನೆಗೆ ಹೋಗಿ ಪಡೆಯುವ ಧನಸಹಾಯ. 'ದೇಶಾವರ ಬೇಡು' ಪರಾ. ೩. ವಿದೇಶ ; ಪರದೇಶ : (ಕಿ). ೪. ಪರದೇಶದಿಂದ ಬಂದ ವಸ್ತು ; ಆವುದು ಮಾಡಿಕೊಂಡ ಸರಕು : (ಕಿ). **ದೇಶಾವರಿ** : ೧. ಅವರು ಸುತ್ತಲಿನ ಹಳ್ಳಿಗಳಲ್ಲಿ ತಿರುಗಾಡಿ ಕಾಳುಕಡಿಗಳ ದೇಶಾವರಿಯನ್ನು ಮಾಡಬೇಕಾಗಿ ಬರುತ್ತಿತ್ತು (ಹಬ್ಬಿಬ. ೯೭) ; ದೇಶಾವರಿಗೆ ಬಂದ ಬ್ರಾಹ್ಮಣರ ನಡೆನುಡಿಯನ್ನು ಸ್ವಲ್ಪ ಕಂಡುಹಿಡಿಯಿರಿ (ಮುಂಗಾಪು. ೦೧೬). **ದೇಶಾವಾರ** : ೧. ಒಂದು ಧಡೆಯ ಭಂಗಾರವನ್ನೂ ಮಾರಿ ಜೀವಿಸಿ ವಕೀಲನೊಬ್ಬನ ಬಳಿ ದೇಶಾವಾರಕ್ಕೆ ಹೋದರಂತೆ (ಕಥವಿ. II, ೪೧೯). ೫. ಒಂದು ಬಗೆಯ ಹಸನುಮಾಡಿದ ಅಡಕೆ ; P ಬಹುಶಃ ಪರದೇಶಕ್ಕೆ ಕಳುಹಿಸಲು ಸಿದ್ಧವಾಗುವ ಅಡಕೆ ಇರಬಹುದು : ಹಸಿಯ ಅಡಿಕೆಗಳಲ್ಲಿ ಮಧ್ಯ ಎಳಕು ಮತ್ತು ಬಹಳ ಎಳಕಾದ ಅಡಿಕೆಗಳನ್ನು ಸಣ್ಣಾಗಿ ಕೊರೆದು ಚೂರು ಮಾಡಿ ಕುದಿಸುತ್ತಾರೆ. ಅದರಲ್ಲಿ ಚತುರ್ಭಾಗ ಕೊರಪ, ಲವಂಗಚೂರು, ಮೋಡಿ, ಅಣ್ಣಾವಾರ, ದೇಶಾವಾರ ಎಂದು ಬೇರೆ ಬೇರೆ ರಾಶಿಗಳನ್ನು ಮಾಡುತ್ತಾರೆ (ಕೃಷಿಪ್ರ. ೧೫೨).

ದೇಶಾವರದ ನಗು = ದೇಶಾವರಿನಗೆ : 'ನಾನು ದೇಶಾವರದ ನಗು ಬೀರಿ "ಏನಿಲ್ಲ ಏನಿಲ್ಲ ಬಿಡಿರಿ" ಎಂದೆ (ನಾಪೋಲೀ. ೪೫). ದೇಶಾವರದ ನಗೆ, ದೇಶಾವಾರದ ನಗೆ = ದೇಶಾವರಿನಗೆ : ಮುಖದ ಮೇಲೆ ದೇಶಾವರದ ನಗೆಯನ್ನು ಮೂಡಿಸುತ್ತಾ ಎದ್ದು ನಿಂತೆ (ಮನೋನಂ. ೬೮) ; ಗುರು ರಾಜರಾಯರು ಕೂಡ ದೇಶಾವರದ ನಗೆ ಬೀರುತ್ತ (ಮರಳಿ. ೨೫) ; ದೇಶಾವಾರದ ನಗೆ ಬೀರಿ ಅಲ್ಲಿಂದ ನುಸುಳುತ್ತಿದ್ದ (ಊರುಕ. ೧೨೦). ದೇಶಾವಾರದ ಜೀರಿಗೆ = ಒಂದು ಬಗೆಯ ಜೀರಿಗೆ : ಶ್ರೀತೊಳಸಿ, ಹೊಮ್ಮುಗಳು . . . ಪುತ್ರಜೀವಿ, ದೇಶಾವಾರದ ಜೀರಿಗೆ ಇವಿಷ್ಟನ್ನೂ ಅರೆದು ಕೊಡಲು ದಾಹಜ್ವರ, ಮೈನೋವು, ತಲೆಭಾರವಾಗಿರುವುದು ಸಹ ನಿಲ್ಲುವುವು (ಸಕವೈ. ೬೮) ; ಶುಂಠಿ ಕರ್ಕಾಟಕಶೃಂಗಿ ಅಳಲೆಕಾಯಿ ಜೀರಿಗೆ ದೇಶಾವಾರದ ಜೀರಿಗೆ ಮುಡಿವಾಳಾ ಲವಂಗಾ ಇವಂ ಸಮಾನಂಗೊಂಡು ಸಣ್ಣನಾಗಿ ಚೂರ್ಣಿಸಿ (ದ್ರಾಕ್ಷಾಚೂ. ೬-೮).

[←ಮರಾ. ದೇಶಾವರ್]

ದೇಶಾವರಬೇಡು, ದೇಶಾವರಿಬೇಡು (ಕ್ರಿ). ಊರೂರು ಸುತ್ತಿ ಸಹಾಯವನ್ನು ಬೇಡು : ತೆಲುಗುಬ್ರಾಹ್ಮಣರು . . . ಮದ್ರಾಸ್ ಇಲಾಖೆಯಿಂದ ದೇಶಾವರಬೇಡುವುದಕ್ಕೆ ಇಲ್ಲಿಗೆ ಬರುವರು (ಕಥಾಗೆ. ೮೩). **ದೇಶಾವರಿಬೇಡು** : ಯಾಚಕನು ನನಗೂ ದೇಶಾವರಿಬೇಡುವನೆಂಬ ಭಯದಿಂದ ಬಿಟ್ಟನಂತೆ (ಸಾಲಂಸಾ. ೫೦). [ದೇಶಾವರ + ಬೇಡು$_1$]

ದೇಶಾವರಿ 'ದೇಶಾವರ' ನೋ.

ದೇಶಾವರಿನಗು (ಕ್ರಿ). (ಧನಸಹಾಯವನ್ನು ಬೇಡಲು ಹೋದಾಗ) ಕೃತ್ರಿಮವಾಗಿ ನಗೆಯನ್ನು ತೋರ್ಪಡಿಸು ; ನಗಲು ಕಾರಣವಿಲ್ಲದಿದ್ದರೂ ಸುಮ್ಮನೆ ಹಲ್ಲುಕಿರಿ ; ಕೃತ್ರಿಮಹಾಸವನ್ನು ತೋರ್ಪಡಿಸು : ಬಾಬೂ ಅಪರಾಧಿಯ ದೇಶಾವರಿನಕ್ಕನು (ರಕ್ತಧ್ವ. ೨೮೬). [ದೇಶಾವರಿ (<ದೇಶಾವರ) + ನಗು$_1$]

ದೇಶಾವರಿನಗೆ (ನಾ). ಹುಸಿನಗೆ ; ಕೃತ್ರಿಮವಾದ ನಗು ; ಇಷ್ಟವಿಲ್ಲದಿದ್ದರೂ ತೋರಿಕೆಗಾಗಿ ನಗುವಿಕೆ : ದೇಶಾವರಿನಗೆ ಬೀರುತ್ತ ಪೋಲೀಸರು ಹೊರಡಲು ಅಣಿಯಾದರು (ಹಳ್ಳಿಹಾ. ೬) ; ನಾನು ದೇಶಾವರಿನಗೆ ಹೊರಡಿಸಿದೆ (ವೈದ್ಯವಿ. ೪೩) ; ದೇಶಾವರಿನಗೆ ನಕ್ಕು ಕಲ್ಲನ ಮುಖದ ಕಡೆ ನೋಡಹತ್ತಿದ ಪಂಡಿತ (ಅಕೋಕ. ೫) ; ಸುಬ್ಬಣ್ಣಾಚಾರ್ಯರು ದೇಶಾವರೀ ನಗೆಯನ್ನು ನಕ್ಕರು (ಸಮಜೀ. ೪೪) ; ಸಾಹೇಬರು . . . ದೇಶಾವರೀನಗೆಯನ್ನು ನಕ್ಕು (ದೀಪಹ. II, ೧೨೦).

[ದೇಶಾವರಿ (<ದೇಶಾವರ) + ನಗೆ]

ದೇಶಾವರಿಬೇಡು 'ದೇಶಾವರಬೇಡು' ನೋ.

ದೇಶಾವರಿಭಾಷೆ (ನಾ). ೧. ಧನಸಹಾಯ ಬೇಡುವಾಗ ಹೇಳುವ. ಕನಿಕರವುಂಟಾಗುವಂತೆ ಮಾಡುವ ಮಾತು; ದೈನ್ಯವನ್ನು ತೋರ್ಪಡಿಸುವ ಮಾತು. ೨. ಕಾರ್ಯಸಾಧನೆಗಾಗಿ ಆಡುವ ಅತಿವಿನಯದಿಂದ ಕೂಡಿರುವ ಮಾತು; ಕೃತ್ರಿಮವಿನಯದಿಂದ ಕೂಡಿರುವ ಮೃದುನುಡಿ: ಈಗಾಗಲೇ ನಾವು ದೇಶಾವರೀಭಾಷೆಯಲ್ಲಿ ಪಾರಂಗತರಾಗಿದ್ದೆವು (ದೀಪಹ. II, ೧೦).

[ದೇಶಾವರಿ (<ದೇಶಾವರ) + ಭಾಷೆ]

ದೇಶಾವಾರ 'ದೇಶಾವರ' ನೋ.

ದೇಶಿ$_1$ (ನಾ). ೧. ದೇಶಕ್ಕೆ ಸಂಬಂಧಪಟ್ಟುದು. ೨. ತಾಯಿನಾಡಿನಲ್ಲೇ ತಯಾರಾದುದು; ಸ್ವದೇಶದಲ್ಲಿಯೇ ಉತ್ಪಾದಿಸಲ್ಪಟ್ಟುದು; ಸ್ವದೇಶಿ: ಆ ಜೀನಸಗಳ ಖರೀದಿಯು ನಮ್ಮ ಆಸಾಮಿಗಳು ನಮಗೆ ಬರಿಯುತ್ತಾರೆ. ಆದರೆ ವಿಲಾಯತೀ ಬೇಕೋ ಅಥವಾ ದೇಶಿ ಬೇಕೋ ಇದರ ಬಗ್ಗೆ ಖುಲಾಸೆಯನ್ನು ಮಾಡುವದಿಲ್ಲ (ಮುಂಬಪ್ಪಾ. ೧೦೧).

ದೇಶೀಮೆಟ್ಟು = ನಮ್ಮ ದೆಶದ ವಸ್ತುಗಳಿಂದ, ನಮ್ಮ ದೇಶದಲ್ಲೇ ತಯಾರು ಮಾಡಿದ ಎಕ್ಕಡ,-ಚಪ್ಪಲಿ,-ಪಾದರಕ್ಷೆ; ನಾಟಿಜೋಡು: ತಲೆಯ ಮೇಲೆ ಉರುಟಾಗಿ ಕಟ್ಟಿದ ಪಗಡಿ, ಕಾಲಲ್ಲಿ ದೇಶೀಮೆಟ್ಟುಗಳು (ಪ್ರಕಾಶ. ೮). [<ಸಂ. ದೇಶೀಯ]

ದೇಶಿ$_2$ (ನಾ). ೧. ಆಯಾ ದೇಶದಲ್ಲಿ ಮಾತ್ರ ವ್ಯವಹಾರದಲ್ಲಿರುವ ಉಡುಪು, ಆಲಂಕಾರ, ಆಚಾರ ಮೊದಲಾದುವುಗಳ ವಿಶಿಷ್ಟ ರೀತಿ,-ಬಗೆ. 'ದೇಶಿಪರಿ' ಪರಾ. ೨. ಒಂದು ದೇಶದ ಅಥವಾ ದೇಶ ವಿಭಾಗದ ಆಡುನುಡಿ; ವ್ಯಾವಹಾರಿಕ ಭಾಷೆ; ಮಾರ್ಗವಲ್ಲದ ನಾಡುನುಡಿ: ದೋಸಮಿನಿತೆಂದು ಬಗೆದುದ್ಭಾಸಿಸಿ ತಱಿಸಂದು ಕನ್ನಡಂಗಳೊಳೆಂದುಂ ವಾಸುಗಿಯುಮಱಿಯಲಾಱದೆ ಬೇಸಱುಗುಂ ದೇಶಿ ಬೇಱಿವೇಱಪ್ಪುದಱಿಂ (ಕವಿರಾ. ೧-೪೬); ನವರಸಮುಣ್ಮೆ ಮಾತು ಪೊಸತಾಗಿರೆ ದೇಶಿಯೆ ದೇಸೆವೆತ್ತುದೆಂಬವೊಲಿರೆ . . . ಒಡರ್ಚಿದೆನೀ ಪ್ರಬಂಧಮಂ (ಛಂದೋಂಬು. ೧-೧೧); ಕವಿಗಳ್ . . . ದೇಶಿಯೊಳುದ್ಭವಮಪ್ಪ ವರ್ಣದಿಂ ಪಂಚವಿಧಂ ತಾನೆಂದು ತಿಳಿಪುವರ್ ಶುದ್ಧಗೆಯಂ (ಶಮದ. ೩೧); ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ದೇಶಿಗಳನು ಬಳಸಿಕೊಂಡಂತೆ ಗೋಚರವಾಗುತ್ತದೆ (ಕನ್ನಜಾ. ೨೦೭). ೩. [ಸಂಗೀತ] ಒಂದು ರಾಗದ ಹೆಸರು: ದೇಶಿ ಗುಜ್ಜರಿಗಳಿಂದೀಶ ನಿಮ್ಮಂ ಹಾಡಿ ದೇಶಾಕ್ಷಿ ಗೌಳದೆ ಮಹೇಶ ನಿಮ್ಮಂ ಹಾಡಿ (ಲಿಂಗಾರ. ಹ. ೫೩೦-೫); ಸಾಳಂಗ ನಾಟಿ ಭೈರವಿ ದೇಶಿ ಗುಜ್ಜರಿ ಮಾಳವಿಯಾಹೇರಿ ಕಾಂಬೋಧಿ ಗೌಳ ವರಾಳಿ ವಸಂತ ಭೈರವಿ[ಯರಿ]ದೊಳವನವನೊಲ್ದು ಪಾಡಿದ (ತ್ರಿಭುತಿ. ೬-೩೦); ನಾಟಿ ದೇಶಿ ಗುಜ್ಜರಿಯಾ . . . ಗೌಳಮನಾ ವೀಣೆಯಲ್ಲಿ ಮುನಿ ಬಾಜಿಸಿದಂ (ವೀರವಿ. ೬-೫೯). ೪. [ನಾಟ್ಯ] ಒಂದು ಬಗೆಯ ನೃತ್ಯ: ಚೆಲ್ವಡರೆ ದೇಶಿಯ ನಾಡುತಿರ್ಪಳು (ರೇವಣ. ೩೨-೪೯); ಗೋಪಾಂಗ ಪ್ರತ್ಯಂಗ ಭ್ರಮರಿ ಭಾವನೆ ಮಂಡಲಂಗಳಿಂ ಶುದ್ಧ ದೇಶಿಗಳೊಳಳವಡಿಸಿ . . . ನರ್ತಿಸುವ ನೃತ್ಯದಬಲಾಜನಂ ಕಣ್ಗೆಸೆದುದು (ಜಿಬಪು. ೨-೯); ಭಾವಾಶ್ರಯವಾದ 'ನೃತ್ಯ'ಕ್ಕೆ ಮಾರ್ಗವೆಂದೂ ತಾಲಲಯಾಶ್ರಯವಾದ 'ನೃತ್ತ'ಕ್ಕೆ ದೇಶಿ (ದೇಸಿ)ಯೆಂದೂ ಹೆಸರಿರುವಂತೆ ದಶರೂಪಕದಿಂದ ತಿಳಿಯಬರುತ್ತದೆ (ಕೈಪಿಡಿ. ೨೨೩). [ಸಂ. ದೇಶೀ]

ದೇಶಿಕ (ನಾ). ೧. ಯಾವುದಾದರೊಂದು ವಿಷಯದಲ್ಲಿ ದಾರಿ ತೋರಿಸುವವನು; ಮಾರ್ಗದರ್ಶಿ: ಪಂಡಿತಪ್ರಿಯ ಶಾಂತಿಪೌಷ್ಟಿಕಕರ್ಮದೇಶಿಕನ [ಪಾಕಾಂ. ದೀಧಿತನ] . . . ಪೌರೋಹಿತನ ಮಾಡುವುದರಸ ಕೇಳೆಂದ (ಕುಪ್ಯಾಉ. ೩-೮೬). ೨. ತತ್ತ್ವೋಪದೇಶ ಮಾಡುವವನು; ಪರಲೋಕಸಾಧನೆಗೆ ಬೇಕಾದ ಧರ್ಮವನ್ನು ಬೋಧಿಸುವವನು; ಆಚಾರ್ಯ; ಗುರು: ದೇಶಿಕರಿಂ ಪೂರ್ವಭವಕ್ಲೇಶಂಗಳನಱಿದು (ಪಂರಾಮಾ. ೧೦-೧೨೦); ಕೆಲವಿತ್ತಡಿಯ ಕಡೆ ನೋಡದಲೆ ದೇಶಿಕನಡಿಯ ನೋಡುತಲಿ (ಗಗತಾ. ೨-೩೩); ತನ್ನ ಶಿಷ್ಯರಿಗೆ ಜ್ಞಾನೋಪದೇಶವನ್ನು ಮಾಡಿ ಆ ಜ್ಞಾನಬಲದಿಂದ ಮೋಕ್ಷವನ್ನು ಕೊಡುವವನು ಯಾವನೋ ಆತನೇ ದೇಶಿಕನೆಂದು ಹೇಳಿಸಿಕೊಳ್ಳುವನು (ಅಷ್ಟಾವಿ. ೧). ೩. ದಾರಿಗ; ಪ್ರಯಾಣಿಕ. ೪. ದಿಕ್ಕಿಲ್ಲದವನು; ಅನಾಥ; ಪರದೇಶಿ: ರುದ್ರನ ಪಾಶವ ಹೊತ್ತು . . . ಭವಪಾಶದಲ್ಲಿ ತಿರುಗುವ ದೇಶಿಕರ ಕಂಡು ನಾಚಿದೆ (ಮೋಳಿಮಾ. ೧೦೩-೪೧೧); ಯಾರಿಲ್ಲದಾ ದೇಶಿಕನ ತೆರದಿ ರಕ್ಕಸನ ಕೈಸಿಕ್ಕಿ ಯತಿಘಾಸಿಗೊಂಡೆದೆಯೊಡೆದು ಜೀವಿಪನೆ (ನವಮೋ. ೨೯-೪೭); ಅವನು ತನ್ನ ಚಿಕ್ಕವಯಸ್ಸಿನಲ್ಲಿಯೆ ತಾಯಿ-ತಂದೆಗಳನ್ನು ಕಳೆದುಕೊಂಡು ದೇಶಿಕನಾಗಿ ತನ್ನ ಕಕ್ಕನ ಮನೆಯಲ್ಲಿಯೆ ಬೆಳೆದ (ಬಹಿಷ್ಯಾ. ೨); ದೇಶಿಕನಾಗಿ ಮನ್ಮಥನು ಪತ್ನಿಯೊಡನೆ ಹೊರಹೊರಟನು (ಕರ್ನಾಕ. ೨೬೧). 'ದೇಸಿಗ' ಪರಾ. [ಸಂ.]

ದೇಶಿಕಾತಿ 'ದೇಸಿಗಾತಿ' ನೋ.

ದೇಶಿಕೋತ್ತಮ (ನಾ). ಗುರುಗಳಲ್ಲಿ ಶ್ರೇಷ್ಠನಾದವನು; ಶ್ರೇಷ್ಠನಾದ ಆಚಾರ್ಯ: ಅನಘನಪ್ಪಾ ಮಾದಿರಾಜನ ಮನದ ಬಲುಹಂ ನೋಡಿದವೆ ನಾನೆನುತ ಸದ್ಗುಣಿ ಮಲ್ಲಿಕಾರ್ಜುನ ದೇಶಿಕೋತ್ತಮನು (ಬಸಪು. ೧೯-೮೫); ಬೇಡವೀ ನುಡಿ ದೇಶಿಕೋತ್ತಮ ಮತ್ತೊಂದನಾಡಬಾರದೆ ಬೇಗದೊಳೆಮ್ಮ ಕೂಡೆ (ತ್ರಿಭುತಿ. ೧೯-೧೬); ತಿಳಿವಂತೆ ಪೇಳುವ ದೇಶಿಕೋತ್ತಮನಂಘ್ರಿನಳಿನಂಗಳಿಗೆ ನತಿಗೈದು (ಹದಿಬ. ೮-೩೩). [ದೇಶಿಕ + ಉತ್ತಮ]

ದೇಶಿಗ 'ದೇಸಿಗ' ನೋ.

ದೇಶಿಗಣ (ನಾ). = ದೇಸಿಗಗಣ: ಸ್ವಸ್ತಿ ಶ್ರೀಮೂಲಸಂಘ ದೇಶಿಗಣ ಪುಸ್ತಕಗಚ್ಛ ಕುಂಡಕುಂದಾನ್ವಯದ . . . ತತ್ಕಾಲಧರ್ಮ್ಮಪ್ರವರ್ತ್ತಕರಾದ ಧರ್ಮ್ಮಾಚಾರ್ಯ್ಯರ ಬಿರುದಾವಲಿ ಎಂತೆಂದೊಡೆ (ಎಕ. I (R), ೧೯-೩; 1544). [ದೇಶಿ$_1$ + ಗಣ]

ದೇಶಿಗಿತಿ 'ದೇಸಿಗಿತಿ' ನೋ.

ದೇಶಿಗಿತ್ತಿ 'ದೇಸಿಗಿತಿ' ನೋ.

ದೇಶಿನಿ (ನಾ). ತೋರುಬೆರಳು; ಹೆಬ್ಬೆಟ್ಟಿನ ಪಕ್ಕದ ಬೆರಳು; ತರ್ಜನಿ: ಆನಿಹೆನು ಕುಡಿ ಶಿಶುವೆ ಬೆರಳನೆನುತ್ತ ಕರುಣಾರಸದಲಿಂದ್ರನು ಕೊಟ್ಟನಾ ದೇಶಿನಿಯನರ್ಭಕಗೆ (ನಿಭಾಗ. ೯-೬-೨೫). [ಸಂ. ದೇಶಿನೀ]

ದೇಶಿಪರಿ (ನಾ). = ದೇಸಿಪರಿ: ಅಂದವೇಱಿದ ಗಡ್ಡ ದರ್ಭೆಗಳಿಂದ ನೆಱೆಯುಡಿಗೆಗಳ ನಾಟಕದಿಂದ ಮಟ್ಟಿಯ ಧಟ್ಟು ನೊಸಲಲಿ ದೇಶಿಪರಿ ಮೆಱೆಯೆ (ಕುಪ್ಯಾಆ. ೧೦-೨). [ದೇಶಿ$_2$ + ಪರಿ$_3$]

ದೇಶೀಯ (ಗು). ೧. ದೇಶಕ್ಕೆ ಸಂಬಂಧಪಟ್ಟ; ನಾಡಿಗೆ ಸಂಬಂಧಿಸಿದ: ಆ ಪರಿಚಿತ ಸನ್ಯಾಸಿಯು ಬೆಂಕಿಯ ಬೆಳಕಿನಲ್ಲಿ ಅದೇ ದೇಶೀಯ ಕಾಗದದಲ್ಲಿ ಇದ್ದ ಲೇಖನವನ್ನು ತೆರೆದಿಟ್ಟು . . . ಲೆಕ್ಕ ಬಿಡಿಸುತ್ತಿದ್ದನು (ಇಪ್ಪಕ. ೩೪೦). (ನಾ). ೨. ನಾಡಿನಲ್ಲಿಯೇ ಹುಟ್ಟಿ ಬೆಳೆದು ಬಂದುದು; ದೇಶಕ್ಕೆ ಸಂಬಂಧಪಟ್ಟುದು: ಹೀಗೆ ದೇಶೀಯವಾದ . . . ಛಂದೋರೂಪಗಳನ್ನು ಹೊಸರೀತಿಯಲ್ಲಿ ಪ್ರಯೋಗಿಸಿ ಈ ಕವಿತೆಗಳನ್ನು ಕಟ್ಟಿದ್ದೇನೆ (ಇಂಜಾಪ. ೩ ಆರಿಕೆ). ೩. ಒಂದು ದೇಶದ ಸಂಸ್ಕೃತಿ, ನಡವಳಿಕೆ, ದೇಶಭಾಷೆಯ ಪದ, ಅಕ್ಷರ ಮೊದಲಾದುವು: ಇವು ವರ್ಣಾವೃತ್ತಿಗೆ ಸಲ್ವುವು . . . ದೇಶೀಯವೆನಿಪುವಾ ಹ್ರಸ್ವಮೆನಿಸಿದಾ ಎ ಒ ಸಹಿತಂ (ಶಮದ. ೧೯); ತದ್ಭವದ ಬೆಸುಗೆಯಂ ದೇಶೀಯಕಮರ್ದ ಸೊಂಪಂ ತೊಳಪ ತತ್ಸಮದ ಬಿನ್ನಣವನುಸುರೆಂದು ಕೋವಿದರ್ ಬೆಸಸಲ್ (ಕಬ್ಬಿಕ್ಕೆ. ೩); ತಱಿಸಂದನಂತನಾಮಂಗಳೊಳ್ ದೇಶೀಯ ಪಲವು ತೆಱಂ

(ಶಬ್ದಮಂ. ೧೩೦). ೪. [ಜೈನ] ಮುನಿಗಳ ಒಂದು ಗುಂಪು,–ಪರಂಪರೆ,–ಗಣ : ಗಣಗಳು : ದೇವ, ಸೇನ, ಬಲಾತ್ಕಾರ, ಬಳಗಾಱ (ಇದು ಬಲಾತ್ಕಾರವಿರಬಹುದೆ ?) ದೇಶೀಯ, ದ್ರಮಿಳ . . . ಕಾರೆಯ, ಆಜಿ (ಕಶಾಅ. ೮೬). [ಸಂ.]

ದೇಶೀಯಪದ (ನಾ). ಪರಭಾಷೆಯಿಂದ ಬಾರದ, ಹಾಗೂ ಪರಭಾಷಾಪದಗಳಿಂದ ಜನ್ಯವಲ್ಲದ ಪದ ; ದೇಶ್ಯಪದ : ಬೇಟ್ಟರ ಕಯ್ವೊಕ್ಕ ನಿಧಿಯೆನಿಪಪಭ್ರಂಶಕ್ಕಂ ದೇಶೀಯಪದಕಮುಂಟು ಸಮಾಸಂ (ಶಮದ. ೨೯೯).

[ದೇಶೀಯ + ಪದ್ಯ]

ದೇಶೀಯಾಕ್ಷರ (ನಾ). ಅಚ್ಚಗನ್ನಡ ಭಾಷೆಯ ಅಕ್ಷರ ; ಬೇರೆ ಭಾಷೆಯಿಂದ ಬಂದು ಸೇರದ ಅಕ್ಷರ : ಆ ಎ ಒ ಸಹಿತಂ = ಆ ಎ ಒ ಎಂಬಿವು ಸಹಿತವಾಗಿ, ದೇಶೀಯಂ = ದೇಶೀಯಾಕ್ಷರಂಗಳ್, ಎನಿಪುವು = ಎನಿಸುವುವು (ಶಮದ. ೧೯ ಟೀಕು). [ದೇಶೀಯ + ಅಕ್ಷರ]

ದೇಶೋದ್ಧಾರ (ನಾ). ಹೀನಸ್ಥಿತಿಯಲ್ಲಿರುವ ದೇಶವನ್ನು ಮೇಲಕ್ಕೆತ್ತುವುದು ; ದೇಶದ ಜನರ ಕಷ್ಟಗಳನ್ನು ಪರಿಹರಿಸಿ ನೆಮ್ಮದಿಯನ್ನುಂಟು ಮಾಡುವುದು ; ದೇಶಕ್ಕೆ ಒದಗಿರುವ ಆಪತ್ತನ್ನು ಪರಿಹರಿಸುವುದು; ದೇಶದ ರಕ್ಷಣೆ,–ಅಭಿವೃದ್ಧಿ : ಆತನಿಗೆ ಹಿಂದೂರಾಜ್ಯದ ಪುನರುದ್ಧಾರಕಾರ್ಯ, ದೇಶೋದ್ಧಾರಕಾರ್ಯ, 'ದೇವಕಾರ್ಯ'ವಾಗಿತ್ತು (ಬಂಕಿಮ. ೦೮೫); ನಾನು ದೇಶೋದ್ಧಾರೆ ಮಾಡುವ ಭಾರ ವ್ಹಹಿಸಿಲ್ಲ. (ಭಾರತಿ. ೧೩೦) : ಆಗ ಸದಾಶಿವರಾಯರ ಮನೆಯೇ ದೇಶೋದ್ಧಾರದ ಚಟುವಟಿಕೆಗಳಿಗೆ ಕೇಂದ್ರಸ್ಥಳವಾಯಿತು (ಕಪಪು. ೫-೬೪). [ದೇಶ + ಉದ್ಧಾರ]

ದೇಶ್ಯ (ಗು). ೧. ದೇಶದಲ್ಲಿ ಹುಟ್ಟಿದ ; ದೇಶದಲ್ಲಿ ವಾಸಿಸುವ ; ದೇಶದಲ್ಲಿರುವ. (ವಾ). ೨. ಯಾವುದಾದರೊಂದು ಭಾಷೆಯ ಮೂಲಪದ : ಸಂಸ್ಕೃತದಿಂದ ಬಂದಿರುವ ಶಬ್ದಗಳನ್ನು ಈ ಭಾಷೆಗಳು ಪರಕೀಯ ಶಬ್ದಗಳೆಂದು ಎಣಿಸಿವೆ. ತಮ್ಮದೇ ಆದ ಶಬ್ದಗಳನ್ನು "ದೇಶ್ಯ" ಎಂದು ಕರೆಯುತ್ತವೆ (ನಮ್ಮನು. ೧೯) ; ಒಂದು ಭಾಷೆಯನ್ನಾಡುವ ಜನರಲ್ಲಿಯೇ ಹುಟ್ಟಿ ಬೆಳೆದ ಶಬ್ದಗಳಿಗೆ "ದೇಶ್ಯ" ಎಂದು ಹೆಸರು (ಕೈಪಿಡಿ. ೧೪). ೩. [ವ್ಯಾಕ] ಅಚ್ಚಗನ್ನಡ ಶಬ್ದ : ಅಚ್ಚಗನ್ನಡದಲ್ಲಿ ಮಾತ್ರವೆ ಪ್ರಯೋಗಿಸಲ್ಪಡುವುದು ದೇಶ್ಯವು (ಹೊನುಗ. ೩೪) ; ನಿಮ್ಮ ಪದರಚನೆಯು ಅವರವುಗಳಿಗಿಂತ ಹೆಚ್ಚು ದೇಶ್ಯ (ಕಾಲೂರ. ೯ ಮುನ್ನುಡಿ). ೪. [ಸಂಗೀತ] (?): ಘನ, ನಯ ಮತ್ತು ದೇಶ್ಯಗಳನ್ನು ಹಾಡುವುದರಲ್ಲಿ ಅವರು ಚೆನ್ನಾಗಿ ನುರಿತವರು (ಸಂಗೀತ. ೪೫). 'ದೇಶೀಯ' ಪರಾ. [ಸಂ.]

ದೇಶ್ಯಕಾಂಭೋಜಿ (ನಾ). [ಸಂಗೀತ] ಒಂದು ಮಿಶ್ರರಾಗದ ಹೆಸರು : ಗುಮ್ಮಕಾಂಭೋಜಿ ತೆನಗುಕಾಂಭೋಜಿ ದೇಶ್ಯಕಾಂಭೋಜಿಯೆಂಬ ಮೂಱೇ ಕಾಂಭೋಜೀಮಿಶ್ರಂಗಳು (ವಿವೇಕ. ೨೩೫).

[ದೇಶ್ಯ + ಕಾಂಭೋಜಿ (<ಕಾಂಬೋದಿ)]

ದೇಶ್ಯಕಾಪಿ (ನಾ). [ಸಂಗೀತ] ಒಂದು ಮಿಶ್ರರಾಗದ ಹೆಸರು : ಈ ಭಾಷಾಂಗ ಕಾಪಿರಾಗಕ್ಕೆ ಹಿಂದೂಸ್ಥಾನಿಕಾಪಿ, ದೇಶ್ಯಕಾಪಿ ಮತ್ತು ಮಿಶ್ರಕಾಪಿ ಎಂಬ ಹೆಸರುಗಳೂ ಪ್ರಚಾರದಲ್ಲಿವೆ (ಸಂಗೀತ. ೫೦).

[ದೇಶ್ಯ + ಕಾಪಿ$_1$]

ದೇಶ್ಯವರ್ಣ (ನಾ). = ದೇಶೀಯಾಕ್ಷರ : ದೇಶ್ಯವರ್ಣವೆಂದರೆ ಸಂಸ್ಕೃತದಲ್ಲಿರದೆ ಕೇವಲ ಕನ್ನಡದಲ್ಲಿ ಮಾತ್ರ ಇದ್ದುವು (ಭಾಷಾಶಾ. ೦೦೫).

[ದೇಶ್ಯ + ವರ್ಣ]

ದೇಶ್ಯಶಬ್ದ (ನಾ).=ದೇಶೀಯಪದ : ಅಚ್ಚಗನ್ನಡದಲ್ಲಿ ದೇಶ್ಯಶಬ್ದಗಳೂ ತದ್ಭವಗಳೂ ಸೇರುತ್ತವೆ (ಕೈಪಿಡಿ. ೬) : ಹೀಗೆ ಸಾಮಾನ್ಯವಾಗಿ ಯಾವ ಭಾಷೆಯನ್ನು ತೆಗೆದುಕೊಂಡರೂ ಅದರಲ್ಲಿ ದೇಶ್ಯಶಬ್ದಗಳೂ ಅನ್ಯದೇಶ್ಯಶಬ್ದಗಳೂ ಸೇರಿರುತ್ತವೆ (ಕೈಪಿಡಿ. ೧೪). [ದೇಶ್ಯ + ಶಬ್ದ]

ದೇಸ (ನಾ). ದೇಶ ; ನಾಡು ; ಜನಪದ : ಸ್ವಸ್ತಿ ಶ್ರೀಗಙ್ಗಿಯುಂ ಕಡಾರಮುಂ ಪೂರ್ವ್ವದೇಸಮುಂ ಕೊಣ್ಡ ಉಡಯಾರ್ ಶ್ರೀರಾಜೇನ್ದ್ರ ಚೋಳ ದೇವರ್ಗ್ಗೆ (ಎಕ. X, ಕೋಲಾರ. ೧೪-೧ ; 1035) : ಸುಕ್ಷೇ[ತ್ರ] ದಿಂದಾರ್ಯ್ಯಾಖಂಡಮದೊಪ್ಪಿ ತೋರ್ಪ್ಪುದದಱೊಳ್ಸತ್ತೌಳವಾ ದೇಸಮುಂ (ಕಇ. I, ೪೧-೪ ; 1417) ; ಉಱ್ ನಾಲ್ಕುದೆಸೆಯ ದೇಸಗಳ ಬಿರುದಿನ ಗಣಿಕೆಯರ್ಪುರವರನಾರಿಯರಿರದೆ ಸಿಂಗರಿಸಿಯೈದಿದರು (ಕಂನವಿ. ೩೧-೬೪). [<ಸಂ. ದೇಶ]

ದೇಸಗತಿ, ದೇಶಗತಿ, ದೇಸಗತ್ತಿ (ನಾ). ೧. ದೇಸಾಯಿಯ ಅಧಿಕಾರ,–ಹುದ್ದೆ ; ದೇಸಾಯಿಯ ಆಳ್ವಿಕೆ, – ಆಡಳಿತ ; ದೇಸಾಯಿತನ : ಈ ಹಾಳು ದೇಸಗತಿ ಇರದೇ ಹೋಗಿ ಮೈತುಂಬ ದುಡಿತ ಇದ್ದಿದ್ದರೆ, ಇಂತಹದು ಸಾಧ್ಯವಿತ್ತೆ ? (ಕಾಗಕ. ೫೩) ; ಊರಿನ ದೇಸಗತಿಯನ್ನು ಕಳೆದುಕೊಂಡು ಬಹಳ ದಿನಗಳಾಗಿರಲಿಲ್ಲ (ಬೆಳಭಾ. ೩); ಅದರ ಮರಿವರುಷ ಅಂದರ, ನಮ್ಮ ಈ ಊರಿನ ದೇಸಗತಿ ಹಾಳಾಗಿ ಹೋತಂತರಿ ! (ಜನಜೀ. ೮೫) ; ಕಿತ್ತೂರು . . . ದೊಡ್ಡ ದೇಸಗತಿಯ ನೆಲೆಯಾಗಿದ್ದಿತು (ಕಮಿಂಚಿ. ೭೧). ೨. ದೇಸಾಯಿಯ ಅಧಿಕಾರಕ್ಕೆ ಒಳಪಟ್ಟ ನಾಡು : ಇದು ನಮ್ಮ ಆಸ್ತಿಯಲ್ಲ. ಇದನ್ನು ದೇಸಗತಿ, ಜಾಗೀರು ಎನ್ನುವುದು ಬರೀ ಭ್ರಮೆ (ಪ್ರೇಮಾಶ್ರ. ೧೯೦). **ದೇಶಗತಿ** : ೨. ಇವರ ತಂದೆಯವರು ಕುರಿವೆಟ್ಟ ದೇಶಗತಿಯ ಕಾರಭಾರಿಗಳು (ಜಯಂತ. ೫೯). **ದೇಸಗತ್ತಿ**: ೧. ಒಕ್ಕಲಿಗರೂ ಶಿಕ್ಷಕರೂ ಬರಬರುತ್ತ ಇಂಥ ವೈಭವಗಳಿಗೆ ಮನಸೋತದ್ದರಿಂದ ದೇಸಗತ್ತಿಯವರ ದರ್ಪವು ಊರಲ್ಲಿ ದಿನದಿನಕ್ಕೆ ಹೆಚ್ಚತೊಡಗಿತು (ಸಮಜೀ. ೧) ; ಮಲಸರ್ಜನು ೧೭೮೨ನೇ ಇಸವಿಯಲ್ಲಿ ದೇಸಗತ್ತಿಯ ಪಟ್ಟವೇರಿದನು (ಮುಂಬಯಿ. ೪-೨೦೨).

[← ಮರಾ. ದೇಸಕತ್]

ದೇಸಗತ್ತಿ 'ದೇಸಗತಿ' ನೋ.

ದೇಸಾಕೆ, ದೇಶಾಕೆ (ನಾ). ದೇಶದ ಭಾಗ; ದೇಶಕ್ಕೆ ಸೇರಿದುದು; ದೇಶಿ: "ದೇಸಾಕೆ–ದೇಶಶಾಖಾ=ದೇಶಭಾಗ" (ತದ್ಯಕೋ. ೩೦) ; ಪೂರ್ವಪದಾಂತ್ಯಲೋಪಕ್ಕೆ–ದೇವಕುಲ–ದೇಗುಲ ; ದೇಶಶಾಖಾ–ದೇಸಾಕೆ (ಶಮದ. ೨೯೪ ಪ್ರಯೋ). **ದೇಶಾಕೆ** : ದೇಶಾಕೆ, ದೇಶಶಾಖಾ (ಶಬ್ದಾನು. ೩೭೮ ವ್ಯಾಖ್ಯಾ).

[<ಸಂ. ದೇಶಶಾಖಾ]

ದೇಸಾಯಣಿ (ನಾ). ದೇಸಾಯಿಯ ಅಧಿಕಾರವುಳ್ಳವಳು ; ದೇಸಾಯಿಣಿ: ಇದೇ ಕಾಲಕ್ಕೆ ಇವನ ಸೇನೆಯ ಒಂದುಭಾಗವನ್ನು ಬೆಳವಡಿಯ ದೇಸಾಯಣಿಯಾದ ಮಲ್ಲಬಾಯಿಯು ತಡೆದಳು (ಹಿಂದುಇ. ೩೨೦).

[<ದೇಸಾಯಿ]

ದೇಸಾಯಿ, ದೇಶಾಯಿ (ನಾ). ೧. (ಮರಾಟರ ಆಳ್ವಿಕೆಯಲ್ಲಿ) ಪ್ರಾಂತಾಧಿಕಾರಿ ; ಕುಲಕ್ರಮವಾಗಿ ಬಂದ ದೇಶಭಾಗದ ಆಡಳಿತಗಾರ; ನಾಡೊಡೆಯ : ಕಿತ್ತೂರ ದೇಸಾಯಿಯಾದ ಮಲಸರ್ಜನು ಸನ್ ೧೭೮೨ನೇ ಇಸವಿಯಲ್ಲಿ ದೇಸಗತ್ತಿಯ ಪಟ್ಟವೇರಿದನು (ಮುಂಬಯಿ. ೪-೨೦೨). **ದೇಶಾಯಿ**: ೧. "ನಾಯಃ = ಕುಕ್ಕುರನುಂ, ಮಲಯಾಳನುಂ, ದೇಶಾಯಿಯುಂ" (ಕಾಶಕ್ಕ. ೧೫೮) ; ವರ ಮಳೆಯ ಮಲ್ಲೇಶನುರುಶಿಷ್ಯ ತೊರೆಸಾಲ ಪರಗಣೆಯ ಕೋಲಾರಪುರಕೆ ದೇಶಾ[ಪಾಠಾಂ. ಸಾ] ಯಿ (ಪ್ರೌಢರಾ. ೦-೨೫) ; ಸೀಮೆ ದೇಶಾಯಿ ದೇಶಕರ್ಣಿ (ಎಇ. ೧೯೫೦, ಹಾನಗಲ್. ೧೨೬-೬ ; 1735) ; ಅಂಥಾ ದೇಶಕ್ಕೆ ಮುಖಂಡನಾದವನು ದೇಶಾಯಿ ಅಥವಾ ದೇಶಮುಖ (ಪಾಳಗಾ. ೧೧). ೨. ಶಾನುಭೋಗ : ಶ್ಯಾನುಭೋಗ ಅಥವಾ ಮೆನನ್ ಎಂಬುದನ್ನು ಬೊಂಬೈಪ್ರಾಂತ್ಯದಲ್ಲಿ ದೇಶಾಯಿ, ದೇಶಪಾಂಡೆಯಂತಲೂ ಗ್ರಾಮದ ಅಕೌಂಟೆಂಟನ ಹೆಸರುಂಟು (ಗ್ರಾಮಾಕ. ೧).

[←ಮರಾ. ದೇಸಾಯ್, ದೇಸಾಈ]

ದೇಸಾಯಿಗೌಡ (ನಾ). ೧. ಮೊರಸು ಒಕ್ಕಲು ಜನಾಂಗದ ಮುಖಂಡ,–ನ್ಯಾಯತೀರ್ಮಾನ ಮೊದಲಾದುವುಗಳಲ್ಲಿ ಪರಮಾಧಿಕಾರವುಳ್ಳವನು,–ಭೂಮಿಂಗೌಡ : (ಎಸಮ್ಯ. XV, ೨೬). ೨. ಕಂದಾಯ ಮತ್ತು ನ್ಯಾಯನಿರ್ಣಯಗಳ ಎರಡೂ ಅಧಿಕಾರಗಳನ್ನುಳ್ಳ ಸ್ಥಳೀಯ ಅಧಿಕಾರಿ. [ದೇಸಾಯಿ + ಗೌಡ$_1$ (<ಗಾಮುಂಡ)]

ದೇಸಾಯಿತಿ (ನಾ). ದೇಸಾಯಿಯ ಹೆಂಡತಿ,–ಪತ್ನಿ : ದೇಸಾಯಿತಿಯು ಬಸಿರಿದ್ದದ್ದು ನಿಜ ಎಂದಾಯಿತು (ನಿರಾಧ. ೦೦೦) ; ದೇಸಾಯಿತಿ ಹತ್ತನೆ ತಿಂಗಳಲ್ಲಿ ಹಡೆದಳು (ನಿರಾಧ. ೦೦೨).

[ದೇಸಾಯಿ + – ತಿ$_1$ (< – ಇತ್ತಿ)]

ದೇಸಾಳ (ನಾ). ದೇಶಕ್ಕೆ ಸಂಬಂಧಪಟ್ಟುದು ; ದೇಶೀಯವಾದುದು (?) : ಉಟ್ಟ ಹೊಸ ದೇಸಾಳದುಡುಗೆ ರಂಜಿಸುತಮಿರೆ (ಇಹರ. ದೇ. ೩೨-೧೯) ; ಕೈಸಾಳಂ ಸನ್ನೆಯೊಳೊತ್ತುತ್ತಿರೆ ದೇಸಾಳಂ ನುಡಿಯೊಳೆ ಬೆಳೆವುತ್ತಿರೆ (ಭೃಂಗೀರ. ಹ. ೪೬೭-೧೪) ; ಅಗ್ಗಳದ ದೇಸಾಳ ನುಡಿಗಡಣ (ರೇವಣ. ೧೨೭-೩೩).

[←ಮರಾ. ದೇಸಾಳ್, ದೇಸೋಳೀ, ದೇಶವಳೂ ; ಹಿಂ. ದೇಸವಾಲ್]

ದೇಸಿ, ದೇಸೆ (ನಾ). ೧. ಒಂದುದೇಶದಲ್ಲಿ ಮಾತನಾಡುವ ಭಾಷೆ ; ದೇಶ್ಯಭಾಷೆ : ದೊರೆಕೊಂಡಿರೆ ಸೊಗಯಿಸುಗುಂ ಪುರಾಣಕಾವ್ಯ ಪ್ರಯೋಗದೊಳ್ ತತ್ಕಾಲಂ ವಿರ(ಸು) ಕರಮವು ದೇಸಿಗೆ ಜರಧ್ವಧೂ ವಿಷಯಸುರತರಸರಸಿಕತೆವೋಲ್ (ಕವಿರಾ. ೧-೫೦) ; ಹಳ್ಳಿಯ ಆಡುವ ಭಾಷೆಯ ಜೊತೆಗೆ ಹೋಲಿಸಿ ನೋಡಿದೆನತ್ತ ಶಿವಮೊಗ್ಗೆಯ ದೇಸಿಯ ನುಡಿಯನು ಕೊನೆಗೆ (ಇಂಡಾಪ. ೩೩-೫೦). ೨. ಪರಭಾಷೆಯ ಅನುಕರಣ ವಿಲ್ಲದೆ ಅಚ್ಚಗನ್ನಡ ಶಬ್ದಗಳನ್ನು ಮನೋಹರವಾಗಿ ಬಳಸುವ ಶುದ್ಧಗನ್ನಡದ ಶೈಲಿ : ಪೂರ್ವಾಚಾರ್ಯರ್ ದೇಸಿಯನೆ ನಿಱಿಸಿ ಖಂಡ ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ (ಕವಿರಾ. ೧-೭೫) ; ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊಪ್ಪುಗು ಮೆಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಲ್ದು ತುಂಬಿಗಳಿನೆ ತುಂಬಿ ಕೋಗಿಲೆಯ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್ (ಪಂಪಭಾ. ೦-೮) ; ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂದಸದೃಶಮಪ್ಪಪೂರ್ವರಸವೆಂದ್ದೆ . . . ನೆಲಸಿರ್ಕೆ ಧಾರಿಣಿ ಮನಂಗೊಳೆ ಮತ್ಕೃತಿಯೊಳ್ (ಧರ್ಮಾಮ್ಯ. ೦-೩೯) ; ಮಾರ್ಗವು ತನ್ನ ಸ್ವಾರಸ್ಯವನ್ನು ಕಳೆದುಕೊಂಡಾಗ . . . 'ದೇಸಿ'ಯು ತಲೆಯೆತ್ತುತ್ತದೆ (ನವ್ಯಕಾ. ೪೦). ೩. ಅಚ್ಚಗನ್ನಡ ಶಬ್ದ,–ಪದ : ಕನ್ನಡಕೆಂತಪ್ಪುವು ಶಬ್ದಮೆಂಬ ವಿದ್ವಜ್ಜನರಾ ಚಿಂತೆ ಪರಿಹರಿಪ ಮಾಟ್ಕೆಯೊಳಂತುಸುರ್ವೆಂ ದೇಸಿ ತದ್ಭವಂ ತತ್ಸಮಮಂ (ಪತುನಿ. ೨). ೪. ಒಂದು ದೇಶದಲ್ಲಿ ಪರಂಪರಾಗತವಾಗಿ ಬಂದಿರುವ ಸಂಸ್ಕೃತಿ, ಆಚಾರ, ವ್ಯವಹಾರ ಮೊದಲಾದುವು : ಯೆಹೂದ್ಯದೊಳಿರುವ ದೇಸಿ ಪರದೇಸಿಯ ತನುಮನಧನಂಗಳಂ ಸೂರೆಗೊಂಡು (ಗೊಲ್ಲೂಥಾ. ೨-೪೮). ೫. ಸ್ವಾಭಾವಿಕವಾದ ಚೆಲುವು,–ಸೊಬಗು ; ಸಹಜವಾದ ಸೌಂದರ್ಯ : ಮಿಳಿರ್ವ ಕುರುಳ್ಗಳೊಳ್ ತೊಡರ್ದು ದೇಸಿ[ಪಾಠಾಂ. ಸೆ]ಯನಾವಗಮಿಾವ ಚೆನ್ನ ಪೂಗಳನವನೊಯ್ಯ ನೋಸರಿಸುತುಂ . . . ಬರ್ಪ ಮಾದ್ರಿಯುಂ . . . ಪಾಂಡುರಾಜಂ ಕಂಡು (ಪಂಪಭಾ. ೨-೧೭);ಗಾಡಿಗೆ ಪಾಡಾದ ಪಸದನಕ್ಕಂ ತೇಜಕ್ಕೋಜಾದ ಕಾಂತಿಗಂ ಬೆಡಂಗಿಗೆ ಪಾಂಗಾದ ದೇಸಿಗಂ . . . ಪೊಗಟ್ದು (ಶಾಂತಿಪು. ೩-೫೩ ವ) ; ಚರಣಂ ನವಕೇಸರದೊಂದು ದೇಸಿಯಂ ಪ್ರಕಟಿಸೆ (ಕಾದಂಉ. ೬೧) ; ನೆಲೆಮಾಡದ ಪೊಸದೇಸಿಯ ನೆಲೆಮಾಡದ ಕಲ್ಪಪದನಮೆಯ್ದದಣಂ ಕೀಟ್ ನೆಲೆಯಾದುದು (ಪಂರಾಮಾ. ೧-೧೨೬) ; ಕೂಸುಗಳಂ ಮುದ್ದಾಡಿಸಿ ದೇಸಿಯ ಮಾತುಗಳನಾಡಿಸಿ ಪೆರ್ಚಿಸಿ (ಧರ್ಮಾಮ್ಯ. ೫-೯೦) ; ದೇಸಿಯ ರಾಜವಟ್ಟದ ಸವಿನುಡಿಗಳನು ಸೃಷ್ಟೀಶ್ವರಗೆ ಬಿನ್ನೈಸುತ ಮಂತ್ರಿಗಳಿಟ್ಟಣಿಸಿಹರು (ಕಂನವಿ. ೮-೩೭). ೬. ಗತ್ತು ; ಠೀವಿ ; ವಿಜೃಂಭಣೆ : ತಳಿರ ತೊಂಗಲ್ ಕೆಂಜೆಡೆಯ ಬಿಂಕಮಂ ಬೀಱೆ ಪೊಳೆವ ಕೆಂಗಾಯ್ ನೊಸಲ ಕಣ್ಣ ದೇಸಿಯ ಸೂಸೆ . . . ಶಿವಚಿಹ್ನವಾಂತಂತೆ ನೇಱಿಲ್ವರಂ ಚೆಲ್ವಾದುದು (ಪದ್ಮರಾ. ೮-೩೧) ; ಅಗ್ಗದ ಸಗ್ಗದ ಜೋಸೆಯರೊಂದು ನೆರವಿಯೊಳ್ ದೇಸಿಯಿಂ ಬೆರೆದಾಗಳುಂ ಬಿನದಿಸುತ್ತೆ (ರಾಮಾಶ್ವ. ೧೩೭-೧೮). ೭. ಅಲಂಕರಣ ; ಶೃಂಗಾರ : ಆವ ಪರಿಯ ದೇಸಿಯಾಣ್ಮಗೆ ಬಗೆವರ್ಪುದಾ ವಿಧಗಳನಾರೈದು ಭಾವಿಸಿ ತಿಳಿದುಟ್ಟು ತೊಟ್ಟು ಬಣ್ಣಿಗೆಯಿಂದ ಭಾವವ ಬಂದಿಗೊಳುವುದು (ಹದಿಬ. ೩-೧೭). ೮. ಬಗೆ ; ರೀತಿ ; ಕ್ರಮ ; ಸಂಪ್ರದಾಯ : ಧಂದಮಿದಾವುದೆಂದೊಡಿಱಿವರ್ ಪದಬಂಧದೊಳೀ ಪ್ರಯೋಗಮೆಂತೆಂದೊಡೆ ಬಯ್ವರಾವ ಕವಿಮಾರ್ಗಮಿದೆಂದೊಡೆ ಪೊಯ್ವರರ್ಥಮೇನೆಂದೊಡೆ ತೊಂಡುಭಂಡುಗೆಡೆದುಟ್ಟುದನಿಕ್ಕುವರಾವ ನೀತಿ ಪೇಟಿಂದೊಡೆ ಕೊಲ್ವರೀಗಳಿನ ದೇಸಿಗೆ ಬಿಟ್ಟ ಮಹಾಕವೀಶ್ವರರ್ (ಸೂಕ್ತಿಸು. ೧-೩೫) ; ಮೊಗಮೊಂದು ತೋಳೆರಡಱಿಂ ಸ್ಫುರಿಸುತೀ ಪರಿಯಿಂದೆ ವಿಟಜಂಗಮಾ ಕೃತಿಯನಾಂತು ಪೊಸದೇಸಿ ರಚಿಸೆ (ಪದ್ಮರಾ. ೫-೪೨) ; ಬಲಿದು ಮಕುಟಾವಳಿಯ ಶೋಣಿತಪಳಿಯ ರಕ್ಕಸ ದೇಸಿ[ಪಾಠಾಂ. ಶಿ]ಯಲಿ ಬಿಗಿದೆಳೆವ ಹಾಹೆಯನೋಜೆಗೊಳಿಸಿಕ್ಕಲಿಸಿ ಪದಯುಗವ (ತೊರರಾ. ೧-೧೫-೧೯). ೯. "ನೇರ್ಪು, ತಕ್ಕುಮೆ, ಔಚಿತ್ಯ" (ಗಿಳಿವಿಂ. ೧೩೭ ಟಿಪ್ಪಣಿ) : ತಕ್ಕಳಿಯದೆ ನಿಲ್ಗು ಕಬ್ಬಿಗನ ಮಾತು ವಿಮರ್ಶಕನಿತ್ತ ದೇಸಿಯಿಂ (ಗಿಳಿವಿಂ. ೦೦೧-೮). ೧೦. (ಹಿಂದಿನ ಕಾಲದಲ್ಲಿದ್ದ) ವರ್ತಕರ ಒಂದು ಪಂಗಡ,–ಮಂಡಲಿ : ಅಗ್ರಹಾರು ತುಂಬುಳದಲು ತಂಬುಲಿಗರುಂ ದೇಸಿಯುಂ ಬಿಟ್ಟ ಧರ್ಮ್ಮಂ (ಸೌಇಇ. IX-1, ೨೩೯-೧೭ ; 1142) ; ಬಾವಿಯನಗಳಿಸಿ ತತ್ಸಮಿಾಪದಲು ಸಮಸ್ತದೇಸಿಯನುಮತದಿಂ ದೇಸೀಶ್ವರದೇವರ ಪ್ರತಿಷ್ಠೆಯಂ ಮಾ[ಡಿ] (ಸೌಇಇ. IX-1, ೨೬೮-೪೬ ; 1162). 'ಪಾನಾದೇಸಿ' ಪರಾ. ೧೧. (ಆಲಂ) ತೋರಿಕೆ ; ಭೂಷಣ ; ಚಂದ : ಒಸೆದವರಿವರೆನ್ನದೆ ಸಂತೊಸಮಪ್ಪಿನಮಿತ್ತು ಪಡೆದನೀ ವಸುಮತಿಯೊಳ್ ವಸುಧೈಕಬಂಧು ಪೆಂಬೀ ಪೆಸರಂ ರೇಚರಸನಾಂತು ದೇಸಿಯಿನಾಯ್ತೆ (ಎಕ. V, ಅರಸೀ. ೭೭-೨೯ ; 1220). ೧೨. [ನಾಟ್ಯ] ಒಂದು ಬಗೆಯ ದೇಶೀಯ ನೃತ್ಯ : ತೋರವಲ್ಲಿಗೆಯ ತುಱುಂಬು ರಾಹು ತವೆ ನುಂಗಿದ ಚಂದ್ರನನೊಯ್ಯನೊಯ್ಯನಂದುಗುಟ್ಟವೊಲೊಪ್ಪಿರಲ್ ಬಲದೊಳುರ್ವಸಿ ದೇಸಿಗೆ ದೇಸಿಯಾಡಿದಳ್ (ಪಂಪಭಾ. ೭-೮೭) ; ಬುಧಸನ್ನುತ ದೇಶಾದ್ಯ ವಿವಿಧನೃತ್ಯಂ ದೇಸಿಯೆನಿಸಿ ವೆಱೆವುದು ಜಗದೊಳ್ (ಲಾಸ್ಯರಂ. ೧-೨೧) ; ಭಾವಾಶ್ರಯವಾದ 'ನೃತ್ಯ'ಕ್ಕೆ ಮಾರ್ಗವೆಂದೂ ತಾಲಲಯಾಶ್ರಯವಾದ 'ನೃತ್ತ'ಕ್ಕೆ ದೇಶಿ (ದೇಸಿ)ಯೆಂದೂ ಹೆಸರಿರುವಂತೆ ದಶರೂಪಕದಿಂದ ತಿಳಿಯಬರುತ್ತದೆ(ಕೈಪಿಡಿ. ೨೨೩). **ದೇಸೆ :** ೨. ಆದಿಪುರಾಣವಸ್ತುಕೃತಿಯಂ ಪೇಟ್ದಂ ಬೆಡಂಗಪ್ಪ ಮಾರ್ಗದೊಳಂ ದೇಸೆಯೊಳಂ ಪೊದಟ್ದಿಸೆವಿನಂ ಸಂಸಾರಸಾರೋದಯಂ (ಆದಿಪು. ೧೬-೭೮) ; ನೆಗಟ್ದ ರಸಂ ಮನಂಗೊಳಿಸೆ ಮಾರ್ಗಪೊಡಂಬಡೆ ದೇಸೆ ಕಬ್ಬಮಂ ಬಗೆಗೊಳಲಿಂತು ಪೇಟ್ದುದು (ಗದಾಯು. ೧-೩೬) ; ಪೊಸತೆನಿಸಿ ದೇಸೆಯಿಂ ನವರಸವೆಸೆಯಲ್ಕೊಳ್ಳುವೆತ್ತ ಮಾರ್ಗದಿನಿಳೆಗೇನೆಸೆದುವೊ ಸುಕವಿಗಳೆನೆ ನೆಗಟ್ದಸಗನ ಮನಸಿಜನ ಚಂದ್ರಭಟ್ಟನ ನುಡಿಗಳ್ (ಪಂಚತಂ. ೫-೯) ; ನಾಗವರ್ಮನ ನೆನಹು ಹೊನ್ನನ ದೇಸೆ [ಪಾಠಾಂ. ಸಿ] ವಿಜಯನ ಭಾವ ... ಅನುಕರಿಸಲೀ ಕಾವ್ಯದೊಳಗೆ (ಜೀವಂಪ. ೧-೩೦). ೫. "ದೇಸೆಯು ಗಾಡಿಯು ಸೊಬಗಹುದು" (ಕವಿಶಂ. ೨೦೨) ; ಒದವಿದ ನೂಲ ತೊಂಗಲುಲಿ ದೇಸೆಯನಾಂತು ವಿಳಾಸದಿಂದಿಱುಂಕಿದ ನಿಱಿ ಗಂಡರಳ್ಳೆರ್ದೆಗಳಂ ತುಱಿ

ವೋಜೆಯನುಂಟುಮಾಡುವಂದದೆ ನಿಡುಗಣ್ಗಳೊಳ್ನಡೆ (ಪಂಪಭಾ. ೪-೩೫) ; ಚಂದ್ರಬಲಮಂ . . . ತದಾನನಚಂದ್ರಂ ಕುಡೆ ದೇಸೆ ಪೊಚ್ಚಪೊಸತಾಯ್ತು (ಗದಾಯು. ೧-೬) ; ಆಗಳಂತವುರದಂಗನೆಯರ್ನಡೆತಂದು ಬಾಹುವಲ್ಲರಿ ಕುಡೆ ದೇಸೆಯಂ ತ್ರಿಭುವನಪ್ರಭುಗಿಕ್ಕಿದರೊಲ್ದು ಸೇಸೆಯಂ (ಜಗವಿ. ೧೫-೬೯) ; ನಮ್ಮಯ ಮಾತಿಂಗಿಂಬುಗೊಟ್ಟೊಡೆ . . . ಕೃತಾರ್ಥರೆ ನಾವಿದು ನಮ್ಮ ದೇಸೆಯೊಳ್ ಗಡಣಿಸೆ ನಾಡೆ ಕೌತುಕಮೆನುತ್ತುಮವಳ್ ತಳರ್ದಳ್ ಪ್ರಮೋದದಿಂ (ಕುಸುಮಾ. ೧೩-೧೦); ದೇಸೆಯನಾಂತ ಕನ್ನಡಿತಿಯರ್ ಕವಡೊಂದಿದ ಚೆಂದದಾಂಧ್ರಿಯರ್(ಚಿಕವಿ. ೫-೧೬೫). ೬. ಕನಕಾಂಬುಜ ಪಾದಪೀಠದೊಳ್ ನಿಸದಮೆ ನೀಡಿ ಕಾಲನಿಡೆ ರಾಜಕುಮಾರನದೊಂದು ದೇಸೆಯಿಂ (ಶಾಂತಿಪು. ೮-೪); ದಿಟ್ಟಿಗೆ ನಯಂಬಡೆದ ಪೊಚ್ಚಪೊಸ ದೇಸೆಯಿಂ (ಅಚಿಪು. ೪-೭ ರಗಳೆ); ಪೊಸತಿದೆಂದು ನಿರೀಕ್ಷಿಸಲೊಂದು ದೇಸೆಯಂ ಪೆತ್ತು (ಜಗವಿ. ೨-೨೯). ೭. ಲಲಿತೋನ್ನತಮಣಿಮಯಕೂಟದಂದಮದು ಪಲವುಂ ದೇಸೆಯ ಮಾಟದಂದಂ (ಆದಿಪು. ೪-೩೦ ರಗಳೆ). ೧೧. ಸಾಸಿರತೋಳ್ಗಳುಳ್ಳೆನಗೆ ಕಾಳೆಗಮಿಲ್ಲಿನಿತೊಂದು ತೋಳ್ಗಳಂ ದೇಸೆಗೆ ಪೊತ್ತೆನಲ್ಲದಿಱಿವಂತಿರೆ ಪೊತ್ತೆನೆ ಪೇಟಿಂ (ಜಗವಿ. ೧೭-೮೫) ; ಯದುರಾಜನ ಮನ್ತ್ರಿಗೀಗಳಿಂತಚ್ಯುತದೇವನೆಂಬ ಪೆಸರಾದುದಿದಲ್ಲದೆ ದೇಸೆಗಾದುದೇ (ಎಕ. V, ಬೇಲೂರು. ೧೭೫-೨೦ ; 1136); ಗುರುಶಬ್ದಂ ವಾಚ್ಯವಾಯ್ತಲ್ಲದೆ ವರಮುನಿಚಂದ್ರಂಗಿದೇಂ ದೇಸೆಗಾಯ್ತೆ (ಸೌಇಇ. XX, ೨೪೮-೯ ; 1228). ೧೨. ತುಱುಗಿ ತುರಂಗಮಂ ಪೊಳೆದು ಮೆಟ್ಟುವ ದೇಸೆಯನಾಡಿ ತೋರ್ಪವೋಲ್ ತುಱುಗಿ ಕಪೋಲರಂಗತಟದೊಳ್ ಕುಣಿಯಲ್ ಮಣಿಕುಂಡಳದ್ವಯಂ (ಪುಷ್ಪಪು. ೩-೬೪). ೧೩. [ಸಂಗೀತ] (?): ಬಹುಲಾಯಿ ದೇಸೆ ಪೆಲ್ಲಣೆ ಕಳೆಯೆಂಬಿವಂ ಮೆಱೆದು ಬಾಜಿಸಿದಂ ಮುರವೈರಿ ವಾಸಮಂ (ಜಗವಿ. ೫-೩) ; ವಾದ್ಯವಿದ್ಯಾಧರನಪ್ಪ ವಿದ್ಯಾಧರಮಾರ್ದಂಗಿಕಂ ಮೃದಂಗಸಂಗತೋತ್ಸಂಗವಾಗಿ . . . ರಿಪುವಣೆ ಸಹರಣೆ ತುಡುಕು ದಕಿದು ವತ್ಕಿರಿ ಜತಿ ಜೋಕೆಯೆಂಬ ದೇಸೆಯ ಶಬ್ದಂಗಳೆಸೆಯೆ ಬಾಜಿಸುತ್ತಿರೆಯಂ (ಶಾಂತೀಶ್ವ. ೧೬-೬೭ ವ).

ದೇಸಿಯಂಕಕಾಱ=ಒಂದಂ ಬಿರುದು : ವೂರ ಹಳಿಯರು ತಂಮಡಿಹರದಾಡೆ ಮಂಚಿ ಬೋವ ಮಡೆಯ ಬೋವ ಅಪ್ಪಹರುಯ ಮಲ್ಲಿಗಗೆಱೆ ಹೊರಗಾಗಿ ಕೊಟ್ಟರು ಎಣಿಸು ಮಗ ದೇಸಿಯಂಕಕಾಱಯಿಸಾಸ×ಗಲ್ಲ ಬರದ ಸೇನಬೋ ಗೋವಯ್ಯ (ಎಕ. XIV, ಮಳವ. ೧೪೨-೨೮ ; ಸು. 1251).

[<ಪ್ರಾ. ದೇಸೀ./ಸಂ. ದೇಶೀ./ತೆಲು. ದೇಸಿ]

ದೇಸಿಕಾರ್ತಿ 'ದೇಸಿಗಾರ್ತಿ' ನೋ.

ದೇಸಿಕಾರ್ತಿತನ (ನಾ). ಚೆಲುವು ; ಸೊಬಗು ; ಬೆಡಗು : ದೇಸಿಕಾರ್ತಿತನಮಂ ನೆಱೆ ಬೀಱಾತದೊರ್ವಳೊಪ್ಪಿದಳ್ (ತ್ರಿಪುವಿ. ೨೪-೧೫೭).

[ದೇಸಿಕಾರ್ತಿ (<ದೇಸಿಗಾರ್ತಿ) + – ತನ]

ದೇಸಿಕಾಱ 'ದೇಸಿಗಾಱ' ನೋ.

ದೇಸಿಗ, ದೇಶಿಗ (ಗು). ೧. ಪರದೇಶಿತನದ; ನಿರ್ಗತಿಕತನದ: ಪರದೇಶಕ್ಕೆ ದೇಸಿಗಮಾರ್ಗದಿಂ ಪೋಗಿ ಸೇದೆಗಿಡಲ್ವೇಡ (ಸುಕುಮಾ. ೨-೩೭ ವ). (ನಾ). ೨. ಪರಸ್ಥಳದವನು ; ಬೇರೆ ಕಡೆಯಿಂದ ಬಂದವನು ; ಯಾತ್ರಿಕ : ಪಱೆಕಾಱರ್ಗ್ಗಂ ಪಾತ್ರಕ್ಕಂ ದೇಸಿಗ ಧಾತ್ರಭೋಜನಕ್ಕಮೆಂದು ಸಮಕಟ್ಟೆ . . . ಸರ್ವ್ವನಮಸ್ಯಮಾಗೆ ಕುಡೆ (ಸೌಇಇ. IX-1, ೮೦-೧೬ ; 1018) ; ಅಮಾವಾಸ್ಯೆ ಸೋಮವಾರದಂದು ದೇಸಿಗ ಪ್ರವಾಸಿಗರ ಆಹಾರದಾನಕ್ಕೆ ಬಿಟ್ಟ ಸತ್ತಂ (ಎಕ. VII, ಶಿಕಾರಿ. ೧೪-೧೪ ; 1089). ೩. ದಿಕ್ಕಿಲ್ಲದವನು; ಗತಿಗೆಟ್ಟವನು ; ಪರದೇಶಿ ; ನಿರ್ಗತಿಕ : ಪೊಟಲೆಲ್ಲಮಂ ತೊಟಲ್ದು ಬಸಿಱಂ ಪೊರೆವೊಂ ದೇಸಿಗಂ (ವಡ್ಡಾರಾ. ೪೬-೮) ; ಎನ್ನೀ ಶ್ರೀಪತ್ನೀ ಶತೆಯಂ ಬಗೆಯದೆ ಯತ್ನಪರರ್ ದೇಸಿಗಂಗೆ ಕೂಸಂ ಕೊಟ್ಟರ್ (ಶಾಂತಿಪು. ೫-೪೩) ; ಧವಳಮಂಗಳಗೇಯದಿನೊಪ್ಪಿ ಬರ್ಪ ಕೌರವಧವಳಂಗೆ ದೇಸಿಗನೆ ಬರ್ಪವೊಲೊರ್ವನೆ ಬರ್ಪುದಾದುದೇ (ಗದಾಯು. ೫-೪೧) ; ಆರುಮಿಲ್ಲದ ದೇಸಿಗರಂತೆ ಕಾಡಂ ಪೊಕ್ಕು (ಧರ್ಮಾಮೃ. ೮-೮೦); ಮಗನರಸಿ ಮಂತ್ರಿಸಹಿತವನಿವಂ ಹಿಂದೆ ದೇಸಿಗನಂತೆ ಕೌಶಿಕನ ಕಾಹಿನೊಳು ಬರೆ (ಹಚಕಾ. ೮-೭೨) ; ಒರ್ಕುಡಿತೆ ನೀರ್ಗೆ ಪಱಿಪಟ್ಟೆರ್ಕೆಯ ಪಣ್ಣೆಲೆಯ ಮುಱಿಗೆ ದೇಸಿಗರಂ ದೇವರ್ಕಳ್ಗೊಡೆಯರ್ ಮಾಟ್ಟರೆ (ಶಪುದ. ೨೪ ಪ್ರಯೋ); ಏಳಿರೈ ಸಾಕೇಳಿ ಮಕ್ಕಳಿರೇಳಿರೈ ದೇಸಿಗರು ನಾವೆ ಭೂಪಾಲಕರು ನೀವು (ಕುಪ್ಯಾಗ. ೧೧-೫೪); ಈ ಕ್ಷೋಣಿಸುತೆ ಗಂಗೆಯಂ ಕಳೆದು ಕಾಡೊಳ್ಮಹಾ ಕ್ಷೀಣೆಯಾಗಿ ದೇಸಿಗರಂತೆ ದೆಸೆದೆಸೆಯನೀಕ್ಷಿಸುತೆ ಮಱುಗುತಳುತಿರ್ದುದಂ ಕಂಡೆನು (ಕೈಮಿಭಾ. ೧೮-೪೦). ೪. ಋಷಿ; ಮುನಿ; ತಪಸ್ವಿ: ಕರುಣಾರಾಸಿ ಪವಡಿಸಿರಲ್ಕೆ ಕಂಡಾ ದೇಸಿಗನು ದಂಡಪ್ರಣಾಮ ಮಾಡುತ್ತೈತಂದ (ನಿಭಾಗ. ೯-೪-೨೩)– ದೇಸಿಗರಾಣ್ಮ ! ಬೆಳರ್ಮೆಯ್ಯನಾಂತ ಪಕ್ಕಿದೇರನಂತುಂ ನಾಲ್ಗೈಪೊತ್ತ ಬಾಂಬೊಚ್ಚದಲೆಯನಂತುಂ ಒರ್ತಲೆಯ ಪೊಂಬಸಿಱನಂತುಂ ನಿನ್ನಂ ಕಾಣ್ಬೆಂ (ರಾಮಾಶ್ವ. ೭೫-೨೮). ೫. ಶಿವ ; ಪರಮೇಶ್ವರ: "ಎಣ್ಮಯ್ಯಂ . . . ದೇಸಿಗಂ . . . ಐಮೊಗಂ – ಈ ೩೩ ಈಶ್ವರಂಗೆ ಪೆಸರ್" (ಕಶಸಾ. ೧-೧) ; "ಗೊಂದೆವಟಯಿಗೆಯ ದೇಸಿಗನೆಂದುಂ . . . ಪೇಟ್ವರ್ ಸ್ಮರಹರಂಗೆ ನಾಮವಿದೆನುತುಂ" (ಕವಿಕಂ. ೧೭) ; "ದೇಸಿಗ ನೀಶ್ವರಂ" (ಕಶರ. ೫೧). **ದೇಶಿಗ:** ೩. ನೆನೆದನು ಮಱೆದಿರದೆ ತಾ ನಾಮಸುಧೆಯನು ಹರಿಹರಿಯೆ ಗೋವಿಂದ ದೇಶಿಗರೊಡೆಯ ನೀನೆನುತ (ಸಂಭಪ. ೮-೪೪) ; ದೇಶಿಗನಾದನೆಂದತ್ತರಿರ್ವರು ದುಗುಡದಲಿ (ಮೋಹತ. ೩೪-೩೩). ೬. ದೇಶದ ಪ್ರಜೆ,-ಜನ ; ದೇಶದವನು : ದೇಶಿಗನು ತನ್ನೂರನುಳಿದು ವಿದೇಶದಲಿ ತೊಳಲುತ್ತ ತನ್ನಯ ದೇಶವನು ನೆನೆದೆಲ್ಲವನು ಬಿಸುಟೈದುವಂದದಲಿ (ನಿಭಾಗ. ೪-೧೫-೩೭). ೭. ಆಚಾರ್ಯ ; ಗುರು : ಎಲವೊ ದೇಶಿಗ ಕಂಕಭಟ್ಟನೆ ಹಲವು ಧರ್ಮವ ಬಲ್ಲೆ ಗಡ ನೃಪತಿಲಕ ಗಱುಹುವುದೇನು ಸನ್ಯಾಸಿಗಳಿಗುಚಿತವಿದು ತಿಳಿಯೆ ದೇಶಿಗರಿಂಗೆ ದೇಶಿಗರೊಲವು ಸಮನಿಸಬೇಕು ಸಭೆಯಲಿ ಬಲವಿಹೀನರಿಗಾಪ್ತರಿಲ್ಲೆಂದಬಲೆಯೊಱಲಿದಳು (ಕುಪ್ಯಾವಿ. ೩-೧೯). [<ಸಂ. ದೇಶಿಕ]

ದೇಸಿಗಗಣ (ನಾ). [ಜೈನ] ಜೈನಮುನಿಗಳ ಒಂದು ಪಂಗಡ ; ಪರಂಪರಾಗತವಾದ ಜೈನ ವಿರಕ್ತರ ಒಂದು ಗುಂಪು: ದೇಸಿಗಗಣದ ಮಹೇಂದ್ರ ಪಂಡಿತರ್ (ಸೌಇಇ. XI-1, ೩೮-೧೦; 950); ಜಿನಶಾಸನಮಂ ಮೊದಲಿನ್ದಿಂತಳವಟ್ಟ ದೇಸಿಗಗಣ ಶ್ರೀಕೊಣ್ಡಕುನ್ದಾನ್ವಯಾಸ್ಪದಮಾಚಾರ್ಯರ್ (ಕಇಅ. ೭೨-೮-೬ ; 1008) ; ದೇಸಿಗಗಣದ ಪುಸ್ತಕಗಚ್ಛದ ಬೋಧವಿಭವದ ಕುಕ್ಕುಟಾಸನ ಮಲಧಾರಿದೇವರ ಶಿಷ್ಯರೆನಿಪ ಪೆಂಪಿಂಗಾದಂ (ಎಕ. II, ೭೩-೩೦; 1118). [ದೇಸಿಗ + ಗಣ]

ದೇಸಿಗಣ (ನಾ). = ದೇಸಿಗಗಣ : ಶ್ರೀಮೂಲಸಂಘ ದೇಸಿಗಣ ಪುಸ್ತಕಗಚ್ಛದ × × × ಕೊಂಡಕುಂದಾನ್ವಯರಾರ್ಯ್ಯ ಶುಬೇನ್ದು ಕಂದ ವಿ[ಜಯ]ಕೀರ್ತಿದೇವರ ಪ್ರಿಯಶಿಷ್ಯರಪ್ಪ ಬಾಹುಬಲಿದೇವರು (ಎಕ. I (R), ೭೫-೨ ; 1390). [ದೇಸಿ + ಗಣ]

ದೇಸಿಗತನ (ನಾ). ದಿಕ್ಕಿಲ್ಲದಿರುವಿಕೆ : ನಿರ್ಗತಿಕತೆ : ನಿನ್ನಾಸೆಯೊಳಾಂ ನಿನಗೆ ಸಕಲ ರಾಜ್ಯಶ್ರೀಯಂ ಲೇಸಾಗಿ ಮಾಡದಿರ್ದೊಡೆ ದೇಸಿಗತನದಿಂದೆ ನಮೆವುದೊಂದನೆ ಬಗೆವೌ (ಧರ್ಮಾಮೃ. ೩-೯೯) ; ಉಸಿರ್ದಳು ವರರತಿ ದೇಸಿಗತನದ ಸುದ್ದಿಯನು (ಮೋಹತ. ೧೦-೨೦). [ದೇಸಿಗ + – ತನ]

ದೇಸಿಗಾತಿ, ದೇಶಿಕಾತಿ (ನಾ). = ದೇಸಿಗಾರ್ತಿ: ದೇಸಿಗಾತಿಯರನೆಸುಗೆಯಲ್ಲಿ ಕರ ನೊಂದು ಬೇಸತ್ತು ಹೆದೆಯನಿಳುಹದೆ ಸಾಸಿಗ ಕಾಮನಿಟ್ಟಿಕ್ಷುಚಾಪದ ವೊಲು ಮಿಸೆ ಠಂಜಿಪುದು ಕೇಶವನ (ವರ್ಧಪ. ೪-೧೦). **ದೇಶಿಕಾತಿ:** ಸೂಸಕಂಗಳ ಮುರಿದ ಮುತ್ತಿನ ದೇಶಿಕಾತಿಯರಾನನೇಂದುಗಳಾ ಸುಧಾಕರವೆನಲು ಗೆಲಿದುದು ಸಭೆ ನಭಸ್ಥಳವ (ಕುಪ್ಯಾಸ. ೧೩-೩೦). [ದೇಸಿ + – ಕಾತ್ಯಿ]

ದೇಸಿಗಾರ್ತಿ, ದೇಸಿಕಾರ್ತಿ, ದೇಸೆಕಾರ್ತಿ, ದೇಸೆಗಾರ್ತಿ (ನಾ). ಚೆಲುವೆ; ಸುಂದರಿ; ವಿಲಾಸವತಿ: ಮುನ್ನ ಬರ್ಪುದಕ್ಕೈವಡಿ ಬಣ್ಣವೇಱಿ ಕಳೆ ಧೂಸರಮಾದುದು ದೇಸಿಗಾರ್ತಿಯಾ (ವಿರೂಪಾ. ೯೦). **ದೇಸಿಕಾರ್ತಿ**: ಮಿಸುಗುವ ದೋರೆವಲ್ ಕರಮೆ ಮಾಸರ್ಕಮಾದುದು ದೇಸಿಕಾ [ಪಾಠಾಂ.ಸೆಗಾ]ರ್ತಿಯೊಳ್ (ಚಂದ್ರಪು. ೮-೫೧); (ರಸರ. ೩-೧೩೭ ನೋ;) ಮತ್ತಮೊರ್ವ ದೇಸಿಕಾರ್ತಿ ದೇಸಿಗೆ ತಕ್ಕ ವೇಷವಳವಟ್ಟರೆ . . . ನೋಟಕರ ದಿಟ್ಟಿಗೆ ಮಧುರಮಾಗೆ ಮೆಚ್ಚನಚ್ಚೊತ್ತಿರ್ದಳ್ (ವಿರೂಪಾ. ೯೦). **ದೇಸೆಕಾರ್ತಿ**: ಲಲಿತಾಂಗನಂ ಮನಂಗೊಳಿಸುವರಿಚ್ಚಿಕಾರ್ತನದ ಲಲ್ಲೆಯ ಸಗ್ಗದ ದೇಸೆ[ಪಾಠಾಂ. ಗಾಡಿ]ಕಾರ್ತಿಯರ್ (ಆದಿಪು. ೨-೭೧); ಪರಿಣತಿ ರಂಜಿಸುತ್ತುಮಿರೆ ನರ್ತಿಸಿದರ್ ಪೊಸ ದೇಸೆಕಾರ್ತಿಯರ್ (ಅಜಿಪು. ೫-೩೧); ಈಸು ಲಾವಣ್ಯವನುಳ್ಳ ಸರ್ವಾಂಗವಿಲಾಸದ ಪೊಸದೇಸೆ [ಪಾಠಾಂ. ಶಿ]ಕಾರ್ತಿ ಆಸೆ ಮಾಡಿದಳು ನಿನ್ನನು (ಕುರಾಸಾಂ. ೨೫-೯೦). **ದೇಸೆಗಾರ್ತಿ**: ಮೇಲಿನ 'ಚಂದ್ರಪು' ಪ್ರಯೋಗದ ಪಾಠಾಂತರವನ್ನು ನೋಡಿ. [ದೇಸಿಗಾಱ + – ತಿ$_1$ (< – ಇತ್ತಿ)]

ದೇಸಿಗಾಱ, ದೇಸಿಕಾಱ, ದೇಸೆಕಾಱ, ದೇಸೆಗಾಱ (ನಾ). ೧. ಚೆಲುವ; ಸುಂದರ. ೨. ತನ್ನ ಕುಶಲಕಲೆಯಿಂದ ಸೌಂದರ್ಯವನ್ನುಂಟು ಮಾಡುವವನು; ಕಲಾವಿದ: ಶಿಲ್ಪದ ದೇಸಿಗಾಱರ ಕೈಮೆಗಳು ಲೇಸೈಸಲೇ (ಕುಮ್ಯಾಸ. ೧೩-೨೪). **ದೇಸಿಕಾಱ**: ೧. ಉಸಿರಿನಿಯನೆ . . . ರಸಿಕ ಚೂಡಾಮಣಿ ಪೊಸದೇಸಿ [ಪಾಠಾಂ. ಸೆ] ಕಾಱನೆ ರಸಪೂರ ಜಾತಿ ಸತ್ಕಥೆಯ (ವರ್ಧಚ. ೭-೨). **ದೇಸೆಕಾಱ**: ೧. ಕಲಿಗಳಾದಿತ್ಯಂ ದೆಸೆಕಾಱರಡೆಗಣ್ಡರೊ [ಳ್ಪ]ಳಿವಂ ಪಿಸುಣಿಂಗೆ ಮುಳಿವಂ ವಾದ್ಯವಿದ್ಯಾಧರಂ . . . ಸಮಸ್ತ ಪ್ರಶಸ್ತಿಸಹಿತಂ ಶ್ರೀಮನ್ಮಹಾಸಾಮನ್ತನೆಱೆಯಮ್ಮನಿರಲ್ (ಸೌಇಇ. XI-1, ೭೪-೧೧; 1041); ಗಣ್ಡಮಣ್ಡಳಿಕಗಣ್ಡ ತಳಪ್ರಹಾರಿ ದೆಸೆಕಾಱರ ದೇವ ಮೂಱುರಾಯರಾಸ್ಥಾನಕಲಿ ಬಿರುದರ ಗಂಡ ಶ್ರೀ[ಮ]ನ್ಮಹಾ ಮಣ್ಡಳೇಶ್ವರಂ ಕಾರ್ತ್ತವೀರ್ಯ್ಯದೇವರಸರು (ಕಇ. V, ೨೧-೪೩; 1125); ದೇಸೆಕಾಱನಂ ನಿಶ್ಚಿಂತನಂ ಸಿದ್ಧರಾಮಯ್ಯನಂ ದೂರದಿಂ ಕಂಡಳು (ಸಿದ್ಧರಾ. ೬-೧); **ದೇಸೆಗಾಱ** ೧: 'ದೇಸೆಗಾರ್ತಿ' ಪರಾ.

[ದೇಸಿ + – ಕಾಱ]

ದೇಸಿಗಾಱಿಕೆ (ನಾ). ಬೆಡಗು; ಠೀವಿ; ಗತ್ತು: ಕಾಸೆವೆರಸಿ ಕಳದಲಿ ನಿಂದದೊಂದು ವಿಲಾಸಕೆ ರಂಗದೊಳ್ನಿಂದ ದೇಸಿಗಾಱಿಕೆಯ ಸುಪಾತ್ರ ಮೋಹಿಸುವಂತೆ ಪೂಸರ ನಿಂದ ಮೋಹಿಸುತ (ಭರಚ. ೫೦-೩೪).

[ದೇಸಿಗಾಱ + – ಇಕೆ]

ದೇಸಿಗಿತಿ, ದೇಶಿಗಿತಿ, ದೇಶಿಗಿತ್ತಿ (ನಾ). ಅನಾಥೆಯಾದ ಹೆಂಗಸು; ದಿಕ್ಕಿಲ್ಲದ ಮಹಿಳೆ: ಸೆಱೆಸಿಕ್ಕಿಂ ಪಿಡಿತಂದ ದೇಸಿಗಿತಿಯಂ ಭೋಗೋಪ ಭೋಗಂಗಳಂ ಮಱೆದುಂ ಕಾಣದನಾಥೆಯಂ ನುಡಿವವೊಲ್ನಿನ್ನೊಂದು ಸಂಪತ್ತಿಯಿಂ ಜಱಚುತ್ತಿರ್ದವೆ (ಅನಂಪು. ೧೧-೯೦); ಸ್ವರಲೋಪಕ್ಕೆ– ಘಟ್ಟವಳ್ತಿ . . . ದೇಸಿಗಿತಿ (ಶಮದ. ೨೦೯ ಪ್ರಯೋ); ಆಸೆಗೊಡುವವರಿಲ್ಲವಕಟಾ ದೇಸಿ[ಪಾಠಾಂ. ಶ, ಶಿ]ಗಿತಿ ತಾನಾವೆನೇ ನೆಱೆ ದೋಷವಿಲ್ಲವೆ ನಿಮಗೆ ಕಂದನ ಕೊಂದವರು . . . ಎಂದಬಲೆ ಮೊಱೆಯಿಟ್ಟಳು ಭಟಾವಳಿಗೆ (ತೊರರಾ. ೬-೪೫-೨೪); ದೇಸಿಗಿತಿಯನು ಕಂಡು ಮಾಯಾಪಾಶಕಿದು ಘನವಲ್ಲೆನುತ ಬೆಸಗೊಂಡನಾ ಸತಿಯ (ನಿಭಾಗ. ೮-೧೩-೨೬). **ದೇಶಿಗಿತಿ**: ಮೇಲಿನ 'ತೊರರಾ' ಪ್ರಯೋಗದ ಪಾಠಾಂತರವನ್ನು ನೋಡಿ. **ದೇಶಿಗಿತ್ತಿ**: ದೇಶಿಗಿತ್ತಿಯರನು ಕೊಲಲೊಂದು ಸಿಂಗ ಬಂದಾಸೆವಟ್ಟದೆ ನೋಡಿಮನಲು (ಅಂಜಚ. ೧೦-೨೮); ದೇಶಿಗಿತ್ತಿಯ ನುಡಿವಂತೆ . . . ಎನ್ನ ಘಾಸೆ ಮಾಡುವರೆನಿಸಿತಾಗ (ಅನಂಚ. ೧೮-೧೧೩).

[ದೇಸಿಗ + – ಇತಿ$_1$ (< – ಇತ್ತಿ)]

ದೇಸಿಪರಿ (ನಾ). ದೇಸಿಯ ರೀತಿ, ಸೊಬಗು: ಹೊಳೆಹೊಳೆವ ಕೆಂಜೆಡೆಯ ನಹಿಪತಿಯಳುಕೆ ಬಿಗಿದನು ದಂತಿಚರ್ಮವ ನೆಲಕೆ ಮುಂಜೆಱಗೆಳೆಯಲುಟ್ಟನು ದೇಸಿಪರಿ ಮೆಱೆಯೆ (ಕುಮ್ಯಾಕ. ೭-೧೧). [ದೇಸಿ + ಪರಿ$_3$]

ದೇಸಿಯಗಣ (ನಾ). = ದೇಸಿಗಗಣ: ಶ್ರೀಮೂಲಸಂಗ ದೇಸಿಯಗಣ ಪುಸ್ತಕಘಛ ಕೊಂಡಕುಂದಾನ್ವಯ ಇಂಗುಳೇಸ್ವರದ ಬಳಿಯ . . . ಪ್ರಭಾಚಂದ್ರದೇವರ ನಿಸಿಧಿ (ಎಕ. I (R), ೮೯-೧; 1044); ಸ್ವಸ್ತಿಶ್ರೀ ಮೂಲಸಂಘ ದೇಸಿಯಗಣ ಪುಸ್ತಕಗಚ್ಛ ಕೊಂಡಕುಂದಾನ್ವಯದ ತಾತಂಗಿಯ ಶ್ರೀಮಾಘಣಂದಿ ಭಟ್ಟಾರಕ ದೇ × × ಶಾಂತಿನಾಥದೇವರ ಪ್ರತಿಷ್ಠೆಯ ಮಾಡಿದರು (ಎಕ. I (R), ೪-೧; ಸು. 12ನೆಯ ಶತ).

[<ದೇಸೀಯ + ಗಣ]

ದೇಸಿವಡೆ, ದೇಸೆವಡೆ (ಕ್ರಿ). ೧. ಚೆಲುವನ್ನು ಹೊಂದು; ಸೌಂದರ್ಯವನ್ನು ಹೊಂದು; ಶೋಭಿಸು; ಬೆಡಗನ್ನು ಪಡೆ: ಕಡುಚೆಲ್ವಿಂ ರತಿಗೆಗ್ಗಂ ಪಡೆದು ವಿಲಾಸಕ್ಕೆ ದೇಸಿವಡೆದವನಿಪನೊಳ್ ಪಡೆದು ಪಿರಿಯರಸಿ ತನಮು (ಪಂರಾಮಾ. ೨-೬೨); ಕೆಂಜೆಡೆಗಳ ಗೊಂಚಲ್ಗಳಿಂ ದೇಸಿವಡೆದುಟ್ಟ ವ್ಯಾಘ್ರಚರ್ಮಾಂಚಲದೊಳ್ಳೆದೆ . . . ಸಾಲೋಕ್ಯಸಾಮೀಪ್ಯದವರೆಸೆದಿರ್ದರು (ಜಿಬಪು. ೨-೨೫); ತರುಣಹರಿಣಗಣಕ್ಕೆ ಸರಸೇಕ್ಷಣದ ಸವಿನೋಟ ಮನುಪದೇಶಿಪಂತೆ ದೇಸಿ[ಪಾಠಾಂ. ದೆಸೆ]ವಡೆದು (ರಾಜಶೇ. ೧-೧೩೫ ಪ). **ದೇಸೆವಡೆ**: ೧. ದೇಸೆವಡೆದತ್ತು ರತ್ನಶಿಳಾಸೋಪಾನದಿಂ . . . ಕಾಸಾರು (ಜಗವಿ. ೧೦-೬೨); ನುಣ್ಬೆಳಗನುಗುಳ್ವ ಪದತಳದ ಸೌಂದರಿಯದಿಂ ದೇಸೆವಡೆದ ಹದಿನಾಱಱ ಹರೆಯದ ಹರಂ ಕರುಣಿಸಿ ನಡೆತಂದು (ಬಸರ. ೧೨-೧೦೦). ೨. ಹಿರಿಮೆಯನ್ನು ಹೊಂದು; ದೊಡ್ಡಸ್ತಿಕೆಯನ್ನು ಪಡೆ: ದೇವಾ ನಿಮ್ಮ ಪೂಜಿಸಿ ದಾಸನ ಕುಲ ದೇಸೆ [ಪಾಠಾಂ. ಸಿ] ವಡೆಯಿತ್ತು (ಬಸವ. ೬೦೬).

[ದೇಸಿ + ಪಡೆ$_1$]

ದೇಸಿವೆಱು, ದೇಸೆವೆಱು (ಕ್ರಿ). ಚೆಲುವನ್ನು ಪಡೆ; ಶೋಭೆಯನ್ನು ಹೊಂದು; ಶೋಭಿಸು: ರಸ ಭಾವಂ ಗಮಕಂ ಕಾಣಿಸೆ ನಾಣ್ಣುಡಿ ದೇಸಿವೆತ್ತ ಪೊಸನುಡಿ ಮಾರ್ಗಂ . . . ಇನಿತಱೊಳೆಸೆಯದ ಕೃತಿ ಕೃತಿಯೆ (ಧರ್ಮಾಮೃ. ೧-೪೦); ಅಂಬರವಿತಾನದಿಂ ನರರ ಬರಿಸುತೊಪ್ಪಿದರಲ್ಲಿ ದೂಸಿಗರ್ದೇಸಿವೆತ್ತು (ಪದ್ಮರಾ. ೮-೭೬); ಕಿಱುಗಿವಿ ದೇಸಿವೆತ್ತಸಿಮೊಗಂ . . . ಸೂಕ್ಷ್ಮರೋಮದಿಂ ಮೆಱೆದುವು ಸಂಗರಾಂಗಣದೊಳಪ್ರತಿವೀರನ ವಾಜಿರಾಜಿಗಳ್ (ಅಪ್ರತಿ. ೧೩೩-೭); ಮುರಿದೆಳವಿಸೆ . . . ಎಡಗಾಲ ತೊಡರ್ವಿರಾಜಿಸುತ್ತಿರೆ ಪೊಸದೇಸಿವೆತ್ತೆಸೆದುದಲ್ಲಿ ನರೇಂದ್ರಕುಮಾರಸಂಕುಳಂ (ರಾಜಶೇ. ೧೨-೪೫). **ದೇಸೆವೆಱು**: ನವರಸಮುಣ್ಮೆ ಮಾತು ಪೊಸತಾಗಿರೆ ದೇಶಿಯೆ ದೇಸೆವೆತ್ತುದೆಂಬವೊಲಿರೆ . . . ಒಡರ್ಚಿದೆನೀ ಪ್ರಬಂಧಮು (ಛಂದೋಂಬು. ೧-೧೧); ಬಾಸೆ ದೇಸೆವೆತ್ತುದು ವಳಿರೇಖೆ ಮಸುಳ್ದು ತೋಱೆದುವು (ಸುಕುಮಾ. ೧೦-೧೯); ದೇಸೆವೆತ್ತುವು ಕಮಳಭವಂಗಿಕ್ಕು ವಮಳ ಚಮರರುಹಂಗಳ್ (ಜಗವಿ. ೧-೩೮). [ದೇಸಿ + ಪೆಱು$_1$]

ದೇಸಿಸೆಟ್ಟಿ (ನಾ). ವರ್ತಕರ ಒಂದು ಪಂಗಡ: ಸಾಸನಿಸೆಟ್ಟಿ, ದೇಸಿಸೆಟ್ಟಿ ಮುಮರಿದಂಡಂ ರಪ ಮುಖ್ಯವಾಗಿ ಆ ಮಹಾಜನಂಗಳ ಸಂನಿಧಾನದಲು (ಕಕುಲ. ೪-೧೯; ?). [ದೇಸಿ + ಸೆಟ್ಟಿ]

ದೇಸೀಯ (ನಾ). ದೇಶಕ್ಕೆ ಸಂಬಂಧಿಸಿದುದು; ದೇಶ್ಯ: "ಕಾಕೆಂದೆನೆ ದೇಸೀಯಂ" (ಕವಿಕಂ. ೨೪೭). [< ಸಂ. ದೇಶೀಯ]

ದೇಸುಕೈ (ನಾ). ಒಂದು ಉದ್ದಳತೆ (?): ಹೂವಿನ ಹಡಂಗಿಲೆಯ ಚಲ್ಲಿಯ ಕೇರಿಯಲ್ಲಿ ವರಮಾಳಿಗೆಮನೆ ಸರ್ವ್ವವಂ ದೇಸುಕೈ ಏಳುವೂರೊಡೆಗೆಱೆಯ ಕೆಳಗಣ ತೋಂಟಾ (ಸೌಇಇ. IX-1, ೨೫೪-೬೭; 1148). [?]

ದೇಸೆ 'ದೇಸಿ' ನೋ.

ದೇಸೆಕಾರ್ತಿ 'ದೇಸಿಗಾರ್ತಿ' ನೋ.

ದೇಸೆಗಾರ್ತಿ 'ದೇಸಿಗಾರ್ತಿ' ನೋ.

ದೇಸೆಗಾಱ 'ದೇಸಿಗಾಱ' ನೋ.

ದೇಸೆಯಱಿ (ಕ್ರಿ).ಬೆಡಗನ್ನು ತಿಳಿ; ಅಂದವನ್ನು ತಿಳಿ: ಭಾಸಿಪ ಬಹುರತ್ನವಿಭೂಷಣದಿಂ ದೇಸೆಯಱಿದು ಸಿಂಗರಿಸಿದ ಬಳಿಕ (ಜಯಭಾ. ೫-೨೪). [ದೇಸೆ (<ದೇಸಿ) + ಅಱಿ]

ದೇಸೆವಡೆ 'ದೇಸಿವಡೆ' ನೋ.

ದೇಸೆವೆಱು 'ದೇಸಿವೆಱು' ನೋ.

ದೇಹ (ನಾ). ಮೈ; ಶರೀರ; ಅಂಗ: "ಕಾಯಂ ಸಂಹನನಂ ದೇಹಂ ವಪುಯೆಂದಿನಿತುಂ ಭಾವಿಸುವೊಡಂಗವರ್ಯಾಯಂಗಳ್" (ಪಸು.ಕೋ. ೬೬-೧) : ದೇಹಕ್ಕಶುಚಿತ್ವಂ . . . ಅಶುದ್ಧಾಹಾರವ್ಯದ್ಧವಧುಕೀಟಾಹತಮತಿದುಸ್ತರಾಮಯಂ ಧಾತುಮಯಂ (ಪಂಡಿಪು. ೧೪-೬೯); ಎಡದ ಕೈಯಲಿ ನಿಗಳವನಿಕ್ಕಿ ಬಲದ ಕೈಯ ಕಡಿದುಕೊಂಡರೆ ನೋಯದಿಪ್ಪುದೆ ಪ್ರಾಣವೊಂದಾಗಿ ದೇಹ ಬೇಱಿಲ್ಲ (ಬಸವ. ೪೦೩); ದೇಹಕ್ಕನುಗುಣವಾಗಿರ ಬಾಹುಕನೆಂಬಧವನಾಮಮುಂ ತಳೆದಂ (ನಳಕಂ. ೬೪೬) : ದೇಹ ತಾನಭಿಮನ್ಯುವೋ ದಿಟ ದೇಹಿ ತಾನಭಿಮನ್ಯುವೋ ಜಡದೇಹ ತಾನಭಿಮನ್ಯುವಲ್ಲದು ಕೆಟ್ಪರೇನಾಯ್ತು (ಕುವಾ.ಕ್ರೋ. ೬-೩೭) : ದೇಹವೆಂತೆನೆ–ದೇಹವು ಕೃಶ, ಸ್ಥೂಲ, ಮಧ್ಯಮವೆಂದು ಮೂರು ತೆರನಾಗಿರುವುದು (ಸಳವ. ೧೯).

ದೇಹ ಮಾರು = ಪರಪುರುಷನಿಗೆ ಶರೀರವನ್ನು ಒಪ್ಪಿಸು; ಅನೈತಿಕ ಸಂಬಂಧವನ್ನು ಬೆಳೆಸು; ವೇಶ್ಯಾವೃತ್ತಿಯನ್ನು ನಡೆಸು: ಶೀಲ ಚೆಲುವೆಯಿರಬಹುದು. ಗುಣವತಿಯಿರಬಹುದು. ಆದರೆ ಅವಳ ತಾಯಿ ನಾಲ್ಕು ಜನಕ್ಕೆ ದೇಹಮಾರಿದಳೆಂದರೆ ಗೌರವಮನೆತನದ ಹುಡುಗ ಒಪ್ಪುತ್ತಾನೆಯೇ ? (ಹೂಹಾ.ಪ್ರ. ೬೯). [ಸಂ.]

ದೇಹಗುಣ (ನಾ). ಶರೀರದ ಗುಣ; ಶರೀರಧರ್ಮ: ದೇಹಗುಣಗಳಳದು ಲಿಂಗದೇಹಿಯಾದ ಶರಣನು ಬಾಹಿರಂಗದ ಬಳಕೆ ಮಾಯಾ ಮೋಹವನ್ನು ಜಱಿದನು (ಅವಚಂ. ೨೯೧-೦೩೦೩). [ದೇಹ + ಗುಣ]

ದೇಹಜ (ಗು). ೧. ದೇಹದಲ್ಲಿ ಹುಟ್ಟಿದ; ಶರೀರದಲ್ಲಿ ಉಂಟಾದ. (ನಾ). ೨. ಅಂಗಜ; ಕಾಮ; ಮನ್ಮಥ: ದೇಹಜ ತನಗೆ ಮಾರ್ಮಲೆವ ತಾಪಸರೆಂಬ ವಿಹಂಗಮಗಳ ತಲೆಯನು (ಹ್ಯಾನಚ. ೩-೧೨). [ಸಂ.]

ದೇಹರುಹಾಡಿ (ನಾ). ಹಳ್ಳಿಯ ಮನೆಗಳ ಎಂತ್ತು ಜಾನುವಾರುಗಳ ಗಣತಿ: (ಕಸಂಗ್ಲಾ. ೧೪೬). [←ಮರಾ. ದೇಹರುಹಾಡಾ, ದೇಹೇರುಹಾಡಾ]

ದೇಹತೆ (ನಾ). ದೇಹದ ಭಾವ,–ಧರ್ಮ; ದೇಹತನ; ದೇಹತ್ವ: ಭಕ್ತಿಯುಕ್ತಿಯನಧಿಕಭಯಮುಂ ಭಕ್ತದೇಹಿಕ ದೇಹತೆಯಮುಂ [ಪಾಣಾಂ. ದೇವತನಂವಂ] ವ್ಯಕ್ತಮಾಗಲು ನಂಬಿಯಣ್ಣಂಗಱುಹಬೇಕೆಂದು (ಬಸಪು. ೩೬-೩೪). [ಸಂ. ದೇಹತಾ]

ದೇಹತ್ಯಾಗ (ನಾ). ದೇಹವನ್ನು ಬಿಡುವುದು; ಸಾವು; ಮರಣ: ದೇಹಗತ ಆತ್ಮಕ್ಕೆ ಜೀರ್ಣದೇಹತ್ಯಾಗವೂ ನವ್ಯದೇಹಲಾಭವೂ ಸಹಜ (ಛಾಶಪ. ೧೧೪). [ದೇಹ + ತ್ಯಾಗ]

ದೇಹತ್ರಯ (ನಾ). [ವೇದಾಂತ] ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ಶರೀರಗಳು: ℙ ೧. ಸ್ಥೂಲಶರೀರ: ಪಂಚಭೂತಗಳಿಂದ ಆಗಿರುವ ಶರೀರ. ೨. ಸೂಕ್ಷ್ಮ ಶರೀರ : ಸ್ಥೂಲಶರೀರದ ಒಳಗಡೆ ಪಂಚಪ್ರಾಣಗಳೂ ದಶೇಂದ್ರಿಯಂಗಳೂ ಮನಸ್ಸೂ ಬುದ್ಧಿಯೂ ಪಂಚತನ್ಮಾತ್ರಗಳೂ ಕೂಡಿರುವ ಶರೀರ. ಇದಕ್ಕೆ ಲಿಂಗಶರೀರವೆಂದೂ ಹೆಸರು. ಇದು ಮರಣಾವಸ್ಥೆಯಲ್ಲಿ ಸ್ಥೂಲಶರೀರವನ್ನು ಬಿಟ್ಟು ಹೋಗಿ ಪುಣ್ಯಪಾಪಫಲಗಳನ್ನು ಅನುಭವಿಸಲು ಬೇರೊಂದು ಸ್ಥೂಲಶರೀರವನ್ನು ಸೇರಿಕೊಳ್ಳುತ್ತದೆ. ಇದಂ ಮೋಕ್ಷವಾಗುವರೆಗೂ ಇರುತ್ತದೆ. ೩. ಕಾರಣಶರೀರ: ಇದಂ ನಿದ್ರೆಯಲ್ಲಿ ಜೀವನಿಗೆ ಆಶ್ರಯಂವಾಗಿರುವ ಅವ್ಯಕ್ತ ಎಂಬ ಹೆಸರುಳ್ಳ ಅನಾದಿಯಾದ ಮಾಯೆ. ಇದಂ ಸುಷುಪ್ತಿಯಿಂದ ಅಭವ್ಯಕ್ತವಾಗುತ್ತದೆ. ನಿದ್ರಾವಸ್ಥೆಯಲ್ಲಿ ಬುದ್ಧಿಯಂ ವ್ಯಾಪಾರವೆಲ್ಲ ಈ ಮಾಯೆಯಲ್ಲಿ ಅಡಗಿರುತ್ತದೆ. ಜೀವನು ನಿದ್ರೆಯಲ್ಲಿ ಅಲ್ಲಿದ್ದುಕೊಂಡು ಸುಖವನ್ನು ಅನುಭವಿಸುತ್ತಾನೆ. ಇದು ಅದ್ವೈತದ ಪ್ರಕ್ರಿಯೆ : ಗುರುವು ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ದೇಹತ್ರಯಗಳಲ್ಲಿರುವ ಆಣವ, ಮಾಯಾ, ಕಾರ್ಮಿಕಗಳೆಂಬ ಮಲತ್ರಯಗಳನ್ನು . . . ಸುಟ್ಟು (ಅಷ್ಟಾವಿ. ೧) : ದೇಹತ್ರಯದ ಸೃತಿಯು ತಪ್ಪಿ ದೇವಾ ನೀನೆ ಗತಿಯು ಎಂದು (ಶರೀಶ. ೦೭-೧). [ದೇಹ + ತ್ರಯ]

ದೇಹದಂಡಣೆ (ನಾ). = ದೇಹದಂಡನೆ : ದೇಹದಂಡಣೆಯೇಕೆ ಆಯಾಸ ಗೊಳಲೇಕೆ ಮಾಸೂರಿ ಶಿವನ ನಿಜಸುಖದೊಳೊಡವೆರೆದ ಕಾಯವೆ ಶಿವನ ನಿಜರೂಪ (ಗುರುಚೋ. ೩-೮೮). [ದೇಹ + ದಂಡಣ]

ದೇಹದಂಡನೆ (ನಾ). ತಪಸ್ಸು, ವ್ರತ, ಉಪವಾಸ, ವ್ಯಾಯಾಮ ಮುಂತಾದ ಕಾರಣಗಳಿಂದಾಗಿ ಶರೀರಕ್ಕೆ ಮಾಡಿಕೊಳ್ಳುವ ಕ್ಲೇಶ,–ಶಿಕ್ಷೆ ; ಕಾಯಕ್ಲೇಶ : "ತಪಃ–ದೇಹದಂಡನೆ" (ಕಾಶಕ್ಕ. ೩೮). [ದೇಹ + ದಂಡನೆ]

ದೇಹದಾರ್ಢ್ಯ (ನಾ). ದೇಹದ ಶಕ್ತಿ ; ಶರೀರದ ಬಲ : ದೇಹದಾರ್ಢ್ಯವೂ ಸಾಕಷ್ಟಿದ್ದಿತು (ಬಿಂಗಬ. ೧೯೪). [ದೇಹ + ದಾರ್ಢ್ಯ]

ದೇಹದೀಪ್ತಿ (ನಾ). ಶರೀರದ ಕಾಂತಿ,–ಶೋಭೆ : ಹಾರ ಮುರೀಚಿಯುಂ ಮರಕತಚ್ಛವಿಯುಂ ಗೆಲೆ ದೇಹದೀಪ್ತಿ . . . ಬಲಾಚ್ಯುತರದೇನೆಸೆದಿರ್ದರೂ ರಾಮಲಕ್ಷ್ಮಣರ್ (ಪಂರಾಮಾ. ೩-೦೩೯). [ದೇಹ + ದೀಪ್ತಿ]

ದೇಹಧರ್ಮ (ನಾ). ೧. ದೇಹದ ಸ್ವಭಾವ,–ಪ್ರಕೃತಿ. ೨. ಶರೀರದಲ್ಲಿ ತನ್ನಷ್ಟಕ್ಕೆ ನಡೆಯಂತ್ರಿರುವ ಶ್ವಾಸೋಚ್ಛ್ವಾಸಾದಿ ಕಾರ್ಯ ; ಶರೀರ ವ್ಯಾಪಾರ : ದೇಹಧರ್ಮ ತನ್ನ ಆದಂತೆ ಆಗಲಿ ಕೂಡಲಸಂಗನ ಪೂಜಿಸಿದಲ್ಲದೆ ನಿಲಲಾಱೆನು (ಬಸವ. ೪೯೩) ; ದೇಹಧರ್ಮವೆಂದರೆ ದೇಹದಲ್ಲಿ ತಾನಾಗಿ ನಡೆಯುತ್ತಿರುವ ಪ್ರಾಕೃತಿಕ ಕಾರ್ಯಗಳು (ಆರ್ಯಧ. ೧೧). [ದೇಹ + ಧರ್ಮ]

ದೇಹಧಾರಣ (ನಾ). ಶರೀರವನ್ನು ಧರಿಸುವುದು ; ಬದುಕಿರುವುದು : ಜೀವನು ತನ್ನ ಕರ್ಮಾನುಸಾರವಾಗಿ ದೇಹಧಾರಣ ಮಾಡುತ್ತಾನೆ (ಕೂಧಿ). [ದೇಹ + ಧಾರಣ]

ದೇಹಧಾರಿ (ಗು). ೧. ದೇಹವನ್ನು ಹೊಂದಿರುವ; ಶರೀರವನ್ನು ಪಡೆದಿರುವ. (ನಾ). ೨. ದೇಹವನ್ನು ಹೊಂದಿರುವ ಜೀವ ; ಬದುಕಿರುವ ವ್ಯಕ್ತಿ. 'ಚರಮದೇಹಧಾರಿ' ಪರಾ. [ಸಂ. ದೇಹಧಾರಿನ್]

ದೇಹನಿಸ್ಪೃಹ (ನಾ). ಶರೀರಾಭಿಮಾನವನ್ನು ತೊರೆದವನು : ವಿರಕ್ತ : ಸುಸಮಾಧಿಯೋಗದಲ್ಲಿದು ನಿಜವನು ದೇಹನಿಸ್ಪೃಹನಾಗು ನೀನೆಂದ (ಕುವಾ.ಕ್ರೋ. ೧೯-೩೪). [ದೇಹ + ನಿಸ್ಪೃಹ]

ದೇಹನ್ಯಾಸ (ನಾ). ಜಪ, ಪಾರಾಯಣ ಮೊದಲಾದ ಕಾಲದಲ್ಲಿ ವಿಧ್ಯುಕ್ತವಾದ ರೀತಿಯಲ್ಲಿ ಹೃದಯವೇ ಮೊದಲಾದ ದೇಹಭಾಗಗಳನ್ನು ಮುಟ್ಟಿಕೊಳ್ಳುವುದು : ನಿರುತ ಸತ್ಕಾರಣಯಾಮವ ತೀರ್ದಿ ಕರ ದೇಹನ್ಯಾಸಂಗಳಂ ಪೂರಿಸಿ (ನವವೋ. ೩-೩೫). 'ಅಂಗನ್ಯಾಸ', 'ಕರನ್ಯಾಸ' ಪರಾ. [ದೇಹ + ನ್ಯಾಸ]

ದೇಹಪುಷ್ಟಿ (ನಾ). ಶರೀರವು ಪುಷ್ಟವಾಗುವುದು,–ದೃಢವಾಗುವುದು : ರಸ, ಗಂಧಕ . . . ಕಿರುಮೂಲಕ. ಇವ ಚೂರ್ಣಮಾಡಿ ಕೊಳ್ಳುವುದು. ದೀಪನ ಹುಟ್ಟುವುದು, ದೇಹಪುಷ್ಟಿಯಹುದು (ಎವೈವಿ. ೧೭೦). [ದೇಹ + ಪುಷ್ಟಿ]

ದೇಹಪ್ರಕೃತಿ (ನಾ). ಶರೀರದ ಸ್ವಭಾವ ; ನೈಜವಾದ ಮೈಗುಣ : ದೇಹಪ್ರಕೃತಿಯ (Constitutional) ರೋಗಲಕ್ಷಣಗಳು (Symptoms) ಉಗ್ರವಾಗುತ್ತವೆ (ಕಲಿರೋ. ೧೭) ; ನನ್ನ ದೇಹಪ್ರಕೃತಿಗೆ ಅದು ಒಗ್ಗುವುದಿಲ್ಲ (ಪದ್ಮಸ. ೨೫೫). [ದೇಹ + ಪ್ರಕೃತಿ]

ದೇಹಬಾಧೆ (ನಾ). ೧. ಶರೀರಕ್ಕೆ ಒದಗುವ ತೊಂದರೆ. ೨. ಮಲಮೂತ್ರ ವಿಸರ್ಜನೆ : ಕತ್ತಲೆಯಲ್ಲಿ ಕಾಣದಾದನು. ದೇಹಬಾಧೆಗೆ ಅವಸರವಾಗಿರಬೇಕು (ಮಲೆಮ. ೮೫೪). [ದೇಹ + ಬಾಧೆ]

ದೇಹಬಿಡು (ಕ್ರಿ). (ಜೀವಾತ್ಮನು) ಶರೀರವನ್ನು ತ್ಯಜಿಸು ; ಸಾಯು ; ಮರಣಹೊಂದು: ನನಗೆ ದೇಹಬಿಡಲು ಅಪ್ಪಣೆ ಕೊಡು ; ನೀನು ಅನುಜ್ಞೆ ಕೊಟ್ಟರೆ ನನಗೆ ಸದ್ಗತಿ ಲಭಿಸುತ್ತದೆ (ಪಡಥಾ. ೩೫೮).

[ದೇಹ + ಬಿಡು$_1$]

ದೇಹಭಾನ (ನಾ). ಮೈಮೇಲಿನ ಎಚ್ಚರ,–ಪರಿವೆ,–ಪ್ರಜ್ಞೆ: ಮಾತುಂಗಾ ದೇಹಭಾನವಿಲ್ಲದೆ ಎದೆಯನ್ನು ಗಟ್ಟಿಯಾಗಿ ಗುದ್ದಿಕೊಂಡಳು (ವಾಸನಾ. ೧೨೧); ದೇಹಭಾನವನ್ನು ಮರೆತು ಸುಶೀಲೆಯ ಜೀವ ಅಲೆಯುತ್ತಿತ್ತು (ಸಮಜೀ. ೬೨೩). [ದೇಹ + ಭಾನ]

ದೇಹಭಾನಗೊಳ್ಳು (ಕ್ರಿ). ಮೈಮೇಲಿನ ಪ್ರಜ್ಞೆಯನ್ನು ಪಡೆ; ಮೂರ್ಛೆ ತಿಳಿ : ತಾಯಿಯ ದರ್ಶನವಾಗುತ್ತಲೆ ಹಂಸೆ ದೇಹಭಾನಗೊಂಡು ತಾಮಮನೆಗೆ ಬಂದೆನೆಂದು ತಿಳಿದುಕೊಂಡಳು (ಹಂಸಾ. ೮).

[ದೇಹಭಾನ + ಕೊಳ್ಳು$_1$ (<ಕೊಳ್^{1})]

ದೇಹಭಾವ (ನಾ). ಶರೀರದ ಸ್ವಭಾವ ; ಶರೀರಧರ್ಮ : ದೇಹಭಾವವಳಿದಲ್ಲದೆ ಜೀವಭಾವವಳಿಯದು ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು (ಅವಚಂ. ೨೭೩-೧೨೫೭). [ದೇಹ + ಭಾವ$_2$]

ದೇಹಮಬ್ಬು (ನಾ). ಮೈಮೇಲೆ ಕಪ್ಪುಬಣ್ಣ ಹರಡುವ ಒಂದು ಬಗೆಯ ಚರ್ಮರೋಗ : ದೇಹಮಬ್ಬುವರ್ಧನಕ್ಕೆ :–ಶುಂಠಿ ಪಲ ೧ ತಾಳೇಬೆಲ್ಲ ಪಲ ೩, ಸಮುದ್ರಪಾಳಬೀಜ ಪಲ ೧, ಈ ಮೂಱನ್ನೂ ಮರ್ದಿಸಿ ಎಲಚಿಹಣ್ಣಿನ ಪ್ರಮಾಣ ಗುಳಿಗೆಯ ಕೊಡಲು ಕರ ಉಫಿ ಮಾಸಿ ಸಾಯಂಕಾಲದಲ್ಲಿ ಗುಣ (ವಿವೈವಿ. ೧೧೭).

[ದೇಹ + ಮಬ್ಬು (<ಮರ್ವು)]

ದೇಹಮುಕ್ತ (ನಾ). ದೇಹದಿಂದ ಬಿಡುಗಡೆ ಹೊಂದಿದವನು ; ಸತ್ತು ಹೋದವನು ; ಮೃತ : ಎರೆಯಂಗರು ದೇಹಮುಕ್ತರಾದರು (ಶಾಂತಲಾ. ೧೮). [ದೇಹ + ಮುಕ್ತ]

ದೇಹಮೋಹ (ನಾ). ಶರೀರದ ಮೇಲಿನ ಮಮತೆ ; ಬದುಕಬೇಕೆಂಬ ಇಚ್ಛೆ : ತಂದೆಯಳಿದಾ ಹೊತ್ತು ಹಗೆಯನು ಕೊಂದು ಸಾಯದೆ ದೇಹಮೋಹಕೆ ನಿಂದು ನೀ ನಿಶ್ಶಂಕನಾದೈ ವೈರಿಶರಹತಿಗೆ (ಕುವ್ಯಾಕ. ೩-೨೮).

[ದೇಹ + ಮೋಹ]

ದೇಹಯಾತ್ರೆ (ನಾ). ದೇಹವನ್ನು ಪೋಷಿಸಿಕೊಂಡು ಹೋಗುವಿಕೆ ; ಜೀವನವನ್ನು ಸಾಗಿಸುವಿಕೆ : ಪೋಲೀಸಿನವರಿಗೆ ಗೂಢಚಾರನಾಗಿದ್ದುಕೊಂಡು ದೇಹಯಾತ್ರೆಯನ್ನು ನೆರವೇರಿಸಿಕೊಳ್ಳುತ್ತಿರುವ ಆ ಹರೇರಾಮನೇ ? (ಪಿಶಾಪ. ೧೫). [ದೇಹ + ಯಾತ್ರೆ]

ದೇಹರ 'ದೇವಾರ' ನೋ.

ದೇಹರುಚಿ (ನಾ). = ದೇಹದೀಪ್ತಿ : ಕನಕಚ್ಛಾಯೆಯಿನಾಳ್ದ ದೇಹರುಚಿ ಚೆಲ್ವಂ ಬೀಱ^3 (ಪುಷ್ಪಪು. ೧-೧೦). [ದೇಹ + ರುಚಿ]

ದೇಹಲಬ್ಧಾಂಗುಲ, ದೇಹಲಬ್ಧಾಂಗುಳ (ನಾ). [ಶಿಲ್ಪಶಾ] ದೇವತಾಪ್ರತಿಮೆಗಳನ್ನು ಕಡೆಯುವಾಗ ದೇಹದ ಪ್ರಮಾಣವನ್ನು ನಿರ್ಣಯಿಸುವ ಒಂದು ಅಳತೆ : ಮಾನಾಂಗುಲ, ಮಾತ್ರಾಂಗುಲ, ದೇಹಲಬ್ಧಾಂಗುಲವೆಂಬ ಅಳತೆಗಳಿಂದ ಪಂಚತಾಲ, ನವತಾಲಾದಿ ವಿವೇಚನೆಯಿಂದ ಮೂರ್ತಿಗಳನ್ನು ರಚಿಸುವ ವಿಧಾನಗಳನ್ನೂ...ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರಗಳು ತಿಳಿಸುತ್ತವೆ (ಧಾರದ. ೮೦). **ದೇಹಲಬ್ಧಾಂಗುಳ :** ಪ್ರತಿಮೆಯ . . . ಒಂದೊಂದವಯವಕ್ಕಿಷ್ಟು ಭಾಗವೆಂದು ವಿಭಾಗಿಸುವದೇ ದೇಹಲಬ್ಧಾಂಗುಳಮಕ್ಕುಂ (ವಿವೇಕ. ೩೦೦).

[ದೇಹ + ಲಬ್ಧ + ಅಂಗುಲ]

ದೇಹಲಬ್ಧಾಂಗುಳ 'ದೇಹಲಬ್ಧಾಂಗುಲ' ನೋ.

ದೇಹಲಿ, ದೇಹಳಿ (ನಾ). ೧. ಹೊಸತಿಲು ; ಹೊಸ್ತಿಲು. ೨. ಬಾಗಿಲ ಮುಂದಿನ ಜಗಲಿ : (ಕಿ). **ದೇಹಳಿ :** ೧. "ದೇಹಳಿಯದೊಗೆದ ಹೊಸತಿಲೆ ನಿಕ್ಕುಂ" (ಮಂಗರಾ. ೫೯-೧೨) ; "ನೆಱ^3 ದೇಹಳಿಯೆ ಪೊಸಂತಿಲ್" (ಕಬ್ಬಿಕ್ಕೆ. ೪೬) ; "ಹೊಸ್ತಿಲೊಳು ದೇಹಳಿಯೆನಿಕ್ಕು" (ಕಶರ. ೫೨); ಏಳು ಶರಧಿಪಟ್ಟೋರೆ ದಶದಿಕ್ಕು ದೇಹಳಿ ನೆರೆದ ಜನವೇ ಚಿತ್ರದಿರವಜಾಂಡವೆ ಚೆಂಡು ಸುರತರು ನಿಂಬಭೂಜವಾಗಲದೇ ವಿರತಿ (ಕೈವಲ್ಯ. ೨-೨೦-೧) ; ಪಕ್ಕಂಗಳಂ ನೋಡಿ ಗೇ [ದೇ] ಹಳಿಯಂ ಸಾರ್ದರದರ್ಕೆ ಮೇಲೆ ನಸು ಬೆರ್ಚುತ್ತಂಗಳಂಬೊಕ್ಕರ್ (ಚಕವಿ. ೬-೧೧೯); ಶ್ರೀದ್ವಾರದ ದೇಹಳಿಯನ್ನು ದಾಂಟಿಸಿ ನಿಲಿಸಿ (ಬೆಟ್ಟಅ. ೩೭-೨) ; ರಾಣಿಯ ತೊಟ್ಟಿಯ ದೇಹಳಿಗಳ ಪಡಿಯರತಿಯರು ಮಾಚಿಕಬ್ಬೆಗೆ ದಾರಿ ಮಾಡಿಕೊಟ್ಟರು (ಸವತಿ. ೯೨).

[ಸಂ.]

ದೇಹಲೀದೀಪನ್ಯಾಯ (ನಾ). ಒಂದು ಬಗೆಯ ಲೋಕನ್ಯಾಯ ; P ಹೊಸ್ತಿಲಿನ ಮೇಲೆ ದೀಪವನ್ನಿಟ್ಟರೆ, ಹೊಸ್ತಿಲಿನ ಎರಡು ಕಡೆಗೂ ಬೆಳಕು ಹಬ್ಬುತ್ತದೆ. ಹೀಗೆ ಒಂದು ಕಾರ್ಯದಿಂದ ಬೇಕಾದ ಎರಡು ಫಲಗಳು ಲಭಿಸಿದಂತಾಗುತ್ತದೆ. ಇದನ್ನು 'ದೇಹಲೀದೀಪನ್ಯಾಯ'ವೆಂದು ವ್ಯವಹರಿಸುತ್ತಾರೆ. ದೀಪಕಾಲಂಕಾರದಲ್ಲಿ–ಉಪಮಾನವಾಕ್ಯದಲ್ಲಾಗಲಿ, ಉಪಮೇಯವಾಕ್ಯದಲ್ಲಾಗಲಿ ಒಂದು ಕಡೆ ಸಾಮಾನ್ಯಧರ್ಮವನ್ನು ತಿಳಿಸುವ ಪದವನ್ನು ಬಳಸಿದರೆ ಅದು ಎರಡು ವಾಕ್ಯಗಳಿಗೂ ಅನ್ವಯಿಸುತ್ತದೆ–ಎಂಬ ಸಂದರ್ಭದಲ್ಲಿ ಅಲಂಕಾರಿಕರು ಈ ನ್ಯಾಯವನ್ನು ಉದಾಹರಿಸಿದ್ದಾರೆ. [ಸಂ.]

ದೇಹಲೇಪ (ನಾ). ಮೈಗೆ ಬಳಿಯುವುದು : ಸಹದೇವೀಸೊಪ್ಪಿನ ರಸ . . . ಕಾಯಿಸಿ, ಹದದಲ್ಲಿಳುಹಿ, ದೇಹಲೇಪವಂ ಮಾಡಲು ಶೀತಜ್ವರ, ಗರ್ಭಿಣಿಜ್ವರ ಸಹ ಮಾಣ್ಗುಂ (ಸಕವೈ. ೭೧). [ದೇಹ + ಲೇಪ]

ದೇಹವಂಚಕ (ನಾ). ಕೆಲಸಮಾಡಲು ಹಿಂದೆಗೆಯುವವನು ; ಮೈಗಳ್ಳ; ಸೋಮಾರಿ : ಆದಿಜಂಗಮಭಕ್ತಿ ತತ್ಪ್ರಾಸಾದಭೋಗಂ ದೇಹವಂಚಕನಾದವಂಗಳವಡದು (ಬಸಪು. ೩೯-೧೯). [ದೇಹ + ವಂಚಕ]

ದೇಹವಾಸನೆ (ನಾ). ೧. ದೇಹಧರ್ಮ ; ದೇಹದ ಇಚ್ಛೆ ; ಶರೀರದ ಕಡೆಗಿರುವ ಅಭಿಮಾನ: ಅಂತು ಭೇದವಳಿದು ತಾನೆಲ್ಲಾ ಲಿಂಗವೆಯಾಗಿಪ್ಪ ಸದ್ಭಕ್ತಂಗೆ . . . ದೇಹವಿಡಿದಿರ್ದು ದೇಹವಾಸನೆಯಿಲ್ಲ (ವಚಸಂ. ೫೨೮-೩ ಟೀಕೆ). ೨. ಹಿಂದಿನ ಜನ್ಮದ ಸಂಸ್ಕಾರ; ಹಿಂದಿನ ಜನ್ಮದಲ್ಲಿ ಪಡೆದಿದ್ದ ದೇಹದ ಮೇಲಿನ ಅಭಿಮಾನ ಮೊದಲಾದ ಭಾವಗಳು ಈಗಿನ ದೇಹಕ್ಕೂ ಅನುಸರಿಸಿ ಬರುವಿಕೆ : ಶಾಸ್ತ್ರಾವಾಸನೆಯು ಲೋಕಗಳ ವಾಸನೆ ದೇಹವಾಸನೆಯು ವಾಸನೆಗಳಿವು ಮೂರು (ಜ್ಞಾನಸಿಂ. ೩೪-೧೧).

[ದೇಹ + ವಾಸನೆ]

ದೇಹವಿಡಿ (ಕ್ರಿ). ಶರೀರವನ್ನು ಹೊಂದು ; ದೇಹಧಾರಣೆ ಮಾಡು : ಸದ್ಭಕ್ತಂಗೆ . . . ದೇಹವಿಡಿದಿರ್ದು ದೇಹವಾಸನೆಯಿಲ್ಲ (ವಚಸಂ. ೫೨೮-೩ ಟೀಕೆ). [ದೇಹ + ಪಿಡಿ$_1$]

ದೇಹವಿಡು (ಕ್ರಿ). ಶರೀರವನ್ನು ಬಿಡು,–ತ್ಯಜಿಸು ; ಮರಣ ಹೊಂದು: ಗುರುಜಯಂತಿ ದಿನ, ದೇಹವಿಟ್ಟ ಗೆಳೆಯ ಚೆನ್ನಮಲ್ಲಪ್ಪ ಗಲಗಲಿ (ಹೃದಸ. ೫ ಅರ್ಪಣ). [ದೇಹ + ಇಡು$_1$]

ದೇಹಶುದ್ಧಿ (ನಾ). ಶರೀರವನ್ನು ನಿರ್ಮಲಗೊಳಿಸುವಿಕೆ; ಸ್ನಾನ ಮಾಡುವಿಕೆ: ದೇಹಶುದ್ಧಿಯನ್ನು ತಳೆದು ಯೋಗಾಭ್ಯಾಸವನ್ನು ಮಾಡಿ ಶಿವೈಕ್ಯವನ್ನು ಪಡೆಯುವ ವಿವರಣೆಗಳು "ಯೋಗಪಾದ"ದಲ್ಲಿ ಉಕ್ತವಾಗಿವೆ (ಭಾರದ. ೭೩). [ದೇಹ + ಶುದ್ಧಿ]

ದೇಹಶೇಷ (ನಾ). ಹೆಣವನ್ನು ಸುಟ್ಟ ಬಳಿಕ ಉಳಿಯುವ ಬೂದಿ ಮುಂತಾದುವು: ಇವು ಅವರ ದೇಹಶೇಷಗಳು; ಇವನ್ನೂ ಈ ಮಕ್ಕಳನ್ನೂ ನಿಮ್ಮ ವಶಕ್ಕೆ ತೆಗೆದುಕೊಂಡು ಮೃತರಿಗೆ ನಡೆಸಬೇಕಾದ ಉತ್ತರಕ್ರಿಯೆಗಳನ್ನು ನಡೆಸಿ! ಎಂದು ಹೇಳಿ, ಕೌರವರಿಗೆ ಒಪ್ಪಿಸಿ ಹೊರಟನು (ಪದಭಾ. ೧೫).
[ದೇಹ + ಶೇಷ]

ದೇಹಶೋಧನೆ (ನಾ). ಭೇದಿ; ವಿರೇಚನ: ೧೦ ನಿಂಬೆಯ ಹಣ್ಣು ಹಿಂಡಿ ಅಟ್ಟು ಇಳುಹಿಕೊಂಡು ದೇಹಶೋಧನೆಯಂ ಮಾಡಿಸಿ . . . ಸೇವಿಸುತ್ತ ಬರಲು ಶ್ವಾಸ . . . ದಾಹ ಮುಂತಾಗಿ ಪರಿಹಾರಮಕ್ಕುಂ (ಸಳವೈ. ೨೩೪).
[ದೇಹ + ಶೋಧನೆ]

ದೇಹಸಂಬಂಧ (ನಾ). ಶಾರೀರಕವಾದ ಸಂಬಂಧ; ದೈಹಿಕವಾದ ಸಂಪರ್ಕ: ಈಗ ಸುಬ್ಬುವಿಗೂ ಅವಳಿಗೂ ದೇಹಸಂಬಂಧ ಇಲ್ಲ. ಪರಸ್ಪರ ಗೌರವ ಮಾತ್ರ ಇದೆ (ಭೀಮಕಾ. ೨೨೯). [ದೇಹ + ಸಂಬಂಧ]

ದೇಹಸಂಬಂಧಿ (ನಾ). ಶರೀರಕ್ಕೆ ಸಂಬಂಧಿಸಿದವನು; ಜೀವ: ದೇಹಸಂಬಂಧಿಯಾದವನನ್ನು ಜನರು ಅರಿಯಬಲ್ಲರು, ದೇಹಾತಿರಿಕ್ತನನ್ನು ಜನರು ಅರಿಯಲಾರರು (ಪುಕ್ಕಾರ. ೨೮೧). [ಸಂ. ದೇಹಸಂಬಂಧಿನ್]

ದೇಹಸಾತ್ಮ್ಯ (ನಾ). [ವೈದ್ಯಶಾ] ಮೂರು ಬಗೆಯ ಸಾತ್ಮ್ಯಗಳಲ್ಲಿ ಒಂದು; ವಿರುದ್ಧವಾದ ಆಹಾರ ಪಾನೀಯಗಳಾದರೂ ದೇಹಕ್ಕೆ ಒಗ್ಗುವಿಕೆ: ದೇಶಸಾತ್ಮ್ಯ, ದೇಹಸಾತ್ಮ್ಯ, ವ್ಯಾಧಿಸಾತ್ಮ್ಯವೆಂದು ಆ ಸಾತ್ಮ್ಯ ಮೂಱುತೆಱನಾಗಿಹುದು (ವೈದ್ಯಸಾ. I, ೧೨). 'ದೇಶಸಾತ್ಮ್ಯ' ಪರಾ. [ದೇಹ + ಸಾತ್ಮ್ಯ]

ದೇಹಸಾಮ್ಯ (ನಾ). [ಯೋಗ] ರಾಜಯೋಗದ ಹದಿನೈದು ಅಂಗಗಳಲ್ಲಿ ಒಂದು; ಆಹಾರ, ಪಾನೀಯ, ನಿದ್ರೆ ಮುಂತಾದುವುಗಳನ್ನು ಪರಿಮಿತಗೊಳಿಸಿ ದೇಹವನ್ನು ದಂಡಿಸಿ, ಒಣಗಿದ ಕಟ್ಟಿಗೆಯಂತೆ ಮಾಡಿ ತನ್ನ ಹತೋಟಿಯಲ್ಲಿಟ್ಟುಕೊಳ್ಳುವುದು: ಯುಕ್ತಹಾರಂಗಳನು ಮಾಡಿಯೆ ಯುಕ್ತನಿದ್ರೆಗಳನ್ನು ಮಾಡಿಯೆ ಯುಕ್ತವುದಕವು ಯುಕ್ತವ್ಯವಹರ ಯುಕ್ತಗಳು ಮಾಡಿ ಯುಕ್ತದಿಂ ದೇಹವನೆ ದಂಡಿಸಿ ಯುಕ್ತದಿಂ ತನ್ನಾಜ್ಞೆಯೊಳಗೆಯು ಯುಕ್ತ ಶುಷ್ಕಾಷ್ಠದಂತಿರಲದು ದೇಹಸಾಮ್ಯ (ಜ್ಞಾನಸಿಂ. ೧೭-೨೦). [ಸಂ.]

ದೇಹಸುಖ (ನಾ). ಶರೀರದ ಸುಖ: ದೇಹಸುಖಹೇತುಗಳುಮಂ ದೇಹಮುಮಂ ತನ್ನವೆಂದು ಪಂಬಲಿಸದೆ ನಿರ್ಮೋಹದಿನಿರೆ ಯತಿಪತಿಗವ್ಯಾಹತ ಮಳವಟ್ಟುದುತ್ತಮಾಕಿಂಚನ್ಯಂ (ಮಲ್ಲಿಪು. ೧೧-೪೮); ದೇಹಸುಖದೂರಂ ಜರಾತನ್ಮಹಾದ್ರವ್ಯನಂ ದೇಹಾಂತರಪ್ರಾಪ್ತಿಯನ್ಮಹಾಧೀರಸ್ತು ತತ್ರ ಮುಹ್ಯತಿ ನ ಸುಲಸನ್ಮೋಹಿಯಪ್ಪ ಭಗವದ್ವಾಕ್ಯಮುಂಟಪ್ಪ ಕಾರಣಂ (ವೀಶೈಪು. ೫-೫-೧೪). [ದೇಹ + ಸುಖ]

ದೇಹಸುರ್ಕು (ನಾ). ಮೈಮೇಲಿನ ಸುಕ್ಕು,- ಚರ್ಮದ ತೆರೆ: "ದೇಹಸುರ್ಕು ತೆರೆಯು" (ಶಬ್ದಮಂ. ೧೦೬). [ದೇಹ + ಸುರ್ಕು$_2$]

ದೇಹಸ್ಥಿತಿ (ನಾ). ದೇಹದ ಇರುವಿಕೆ; ಶರೀರಾರೋಗ್ಯ; ಶರೀರದ ಪ್ರಕೃತಿ: ಚತುರ್ವಿಧ ದೇವರ್ಕಳ್ಗೆಲ್ಲಾ ಕಾಲಂ ಕಬಳಾಹಾರಮಿಲ್ಲದೆಯುಂ ಶರೀರಸ್ಥಿತಿಯುಂಟೆಂದು ಕಾಣಲ್ಬಪ್ಪುದಱಿಂ ಮೇಣ್ಗರ್ಭಾರ್ಭಕದೊಳು ಕಬಳಾಹಾರಮಿಲ್ಲದೆಯುಂ ಶರೀರಸ್ಥಿತಿ ಕಾಣಲ್ಬಪ್ಪುದಱಿಂ ದೇಹಸ್ಥಿತಿಗೆ ಕಬಳಾಹಾರಮೆ ನಿಯಮಮಲ್ತು (ಪಸಾರ. ೫೦೪): ಈಗೀಗ ನನ್ನ ದೇಹಸ್ಥಿತಿಯೇ ಚೆನ್ನಾಗಿಲ್ಲ (ರೂಢಿ). [ದೇಹ + ಸ್ಥಿತಿ]

ದೇಹಳಿ 'ದೇಹಲಿ' ನೋ.

ದೇಹಾಂತ (ನಾ). ದೇಹದ ಕೊನೆ,-ನಾಶ; ಮರಣ; ಸಾವು: ಸಂತವಿಡಿರೇ ಮಗನ ನಿಜದೇಹಾಂತಕೃತ ಸಂಕಲ್ಪ ಗಡ ನೃಪನಂತರಂಗವ ಕರೆಸಿಯೆಂದಳಲಿದಳು ಗಾಂಧಾರಿ (ಕುಪ್ಯಾಅ. ೨೧-೩೨). [ದೇಹ+ಅಂತ್$_2$]

ದೇಹಾಂತರ (ನಾ). ಬೇರೆಯ ಶರೀರ: ವರುಷತನಕ ನಪುಂಸಕದ ಲಾಚರಿಸಬಲ್ಲೆನೆ ಸಾಕು ದೇಹಾಂತರವನಂಗೀಕರಿಸುವೆನಲಾ ತನ್ನ ಸುಡಲೆಂದ (ಕುಪ್ಯಾಅ. ೮-೪೫); ದೇಹಸುಖದೂರಂ ಜರಾತನ್ಮಹಾದ್ರವ್ಯನಂ ದೇಹಾಂತರಪ್ರಾಪ್ತಿಯನ್ಮಹಾಧೀರಸ್ತು ತತ್ರಮುಹ್ಯತಿ ನ ಸುಲಸನ್ಮೋಹಿಯಪ್ಪ ಭಗವದ್ವಾಕ್ಯಮುಂಟಪ್ಪ ಕಾರಣಂ (ವೀಶೈಪು. ೫-೫-೧೪).
[ಸಂ.]

ದೇಹಾಂತಶಿಕ್ಷೆ (ನಾ). ಗಲ್ಲು; ಮರಣದಂಡನೆ: ಕಾನೂನು ಕೊಲೆಗಡುಕರಿಗೆ ದೇಹಾಂತಶಿಕ್ಷೆಯನ್ನು ವಿಧಿಸುತ್ತದೆ (ರೂಢಿ).
[ದೇಹಾಂತ + ಶಿಕ್ಷೆ]

ದೇಹಾಂಶು (ನಾ). ಶರೀರದ ಕಾಂತಿ,-ಹೊಳಪು,-ಪ್ರಭೆ: ಉದ್ಯೋತಿಸಿದಂ ಹಿಮಾಂಶುರುಚಿಯಿಂ ದೇಹಾಂಶುವಿಂ ಭೂಭುಜಂ (ಪುಷ್ಪಪು. ೧೩-೨೪).
[ದೇಹ + ಅಂಶು]

ದೇಹಾತಿರಿಕ್ತ (ಗು). ೧. ದೇಹದಿಂದ ಬೇರೆಯಾದ,-ಭಿನ್ನವಾದ. (ನಾ). ೨. ದೇಹದಲ್ಲಿದ್ದುಕೊಂಡು ದೇಹದಿಂದ ಬೇರೆಯಾಗಿರುವವನು; ಜೀವಾತ್ಮ: ದೇಹಸಂಬಂಧಿಯಾದವನನ್ನು ಜನರು ಅರಿಯಬಲ್ಲರು, ದೇಹಾತಿರಿಕ್ತನನ್ನು ಜನರು ಅರಿಯಲಾರರು (ಪುಕ್ಕಾರ. ೨೮೧).
[ದೇಹ + ಅತಿರಿಕ್ತ]

ದೇಹಾತುರ (ನಾ). ದೇಹದ ಮೇಲಿನ ಪ್ರಬಲವಾದ ಆಸೆ; ದೇಹವನ್ನು ಪೋಷಿಸಿಕೊಳ್ಳಬೇಕೆಂಬ ಹೆಬ್ಬಯಕೆ: ತನ್ನ ದೇಹಾತುರದಲಡವಿಯೊಳನ್ಯರನು ಸಂಹರಿಸುತಿರೆ (ಹರಿಸಾ. ೪೨). [ದೇಹ + ಆತುರ]

ದೇಹಾಭಿಲಾಷೆ (ನಾ). ಶರೀರದ ಮೇಲಿನ ಆಸೆ; ಬದುಕಬೇಕೆಂಬ ಆಸೆ: ಅರಸುಕುಲದಲಿ ಹುಟ್ಟಿ ಸಾಪತ್ನರುಗಳಿರೆ ದೇಹಾಭಿಲಾಷೆಯಲುರಗನಂತೊಳಗಿಹುದು ಧರ್ಮವೆ (ಕುಪ್ಯಾಉ. ೩-೨೨).
[ದೇಹ + ಅಭಿಲಾಷೆ]

ದೇಹಾಯಾಸ (ನಾ). ಶರೀರಶ್ರಮ; ದೇಹಾಲಸ್ಯ: ಮಹಾರಾಜರು ದೇಹಾಯಾಸದಿಂದ ಮಲಗುತ್ತಾರೆ. (ಸಂಸಕ. ೧೦೬). [ದೇಹ + ಆಯಾಸ]

ದೇಹಾರ್$_1$ 'ದೇವಾರ' ನೋ.

ದೇಹಾರ್$_2$ (ನಾ). ದೇವರ ವಿಗ್ರಹ; ದೇವತಾಮೂರ್ತಿ,-ಪ್ರತಿಮೆ: ತನ್ನ ದೇಹಾರವ ತನ್ನ ಕಣ್ಣುಗಳಿಂದ ನನ್ನಿಯಾಗಿಯೆ ಕಾಣ್ಬನ್ನೆವರ ತನ್ನ ದೇಹವು ಮೊದಲಾದ ವಸ್ತುಗಳನು ತನ್ನದಲ್ಲೆಂದುಳಿದಳು (ಅಂಜಪ. ೯-೨೬೪); ತನ್ನ ದೇಹಾರವ ಕಾಣುತಲಾ ಲಕ್ಷ್ಮಿ ತನ್ನ ಕಣ್ಣುಗಳು ಬಂದಂತೆ ಉನ್ನತಹರ್ಷವನೈದಿದಳದನಿನ್ನು ವರ್ಣಿಸಲೆನ್ನಳವಲ್ಲ (ಅಂಜಪ. ೯-೨೭೦); ಕರಿಕರಿಗೊಂಡು ಬಾಜಿಪ ವಾದ್ಯರಭಸದೊಳುರುಜಯಜಯರಭಸದೊಳು ಕುಱುಕುಱುಮೆಟ್ಟಲಾನೆಯ ಮೇಲೆ ಬಂದನು ಮೆಱೆವ ದೇಹಾರದಂದದೊಳು (ಭರಪ. ೨೧-೯೩); ಬಸದಿಗಳ್ನವರತ್ನಮಯ ಹೇಮಮಯವಲ್ಲಿ ಎಸೆವ ದೇಹಾರಗಳ್ತಾವು ಮಿಸುನಿರನ್ನದೊಳು ಸಿದ್ಧಾಸನದಲ್ಲಿ ರಾಜಿಸಿದುವು (ಭರಪ. ೬೨-೩೦).

ದೇಹಾರದ ಮಂದಿರ = ದೇವರ ಪ್ರತಿಮೆಯಿರುವ ಮಂದಿರ; ದೇಗುಲ; ದೇವಾಲಯ: ಒಂದುದಿನದೊಳಾಕೆಯ ದೇಹಾರದ ಮಂದಿರವನು ಹೊಕ್ಕು ಕಪಟದಿಂದ ಜನೇಂದ್ರಬಿಂಬವನೊಯಿದು ನಿಜವಾಸದೊಂದು ತಾಣದೊಳಿರಿಸಿದಳು (ಅಂಜಪ. ೯-೨೪೮).
[<ಸಂ. ದೇವಾಕಾರ]

ದೇಹಾರ$_3$ (ನಾ). ೧. ದೇವರಿಗೆ ಸಮರ್ಪಿಸುವ ಆಹಾರ; ಎಡೆ; ನೈವೇದ್ಯ: ಮನ ಮುಟ್ಟದ ಮಜ್ಜನ ತನು ಮುಟ್ಟದ ದೇಹಾರ ಭಾವ ತಾಗದ ಪೂಜೆ ವಿವೇಕ ತಾಗದ ನೋಟ ವಾಯು ತಾಗದ ಠಾವ ತೋಱೈ (ಅವಚಂ. ೧೯೫-೮೮೨); ಕಸವ ಬೋಹರಿಸಿ ದೇಹಾರಕ್ಕೆಡೆಮಾಡಿ ಕಸನಿರಲು ದೇಹಾರ ಶುಚಿಗೆ ಸೊಪಿತನಲ್ಲ ಪರದೈವವುಳ್ಳವಂಗೆ ಗುರುಲಿಂಗವಿಲ್ಲ (ಸಮಾವ. ೨೨-೮೪). ೨. ಊಟ; ಭೋಜನ; ಆರೋಗಣೆ: ಉಡಲುಂ ತುಡಲುಂ ಕೊಟ್ಟುಂ ಪಿಡಿ ತೀವಿದ ಪೊನ್ನನಿತ್ತುವನ್ಯರೊಳನ್ಯರ್ಪಡೆಯರ್ದೇಹಾರಮನುಡ ತುಡಲಿತ್ತುಂ ಕುಡುವರರ್ಥಿಯಿಂದಂ ಜೈನರ್ (ಸಮಪ. ೭-೩೧); ಶಿಷ್ಯನಂ ಮುನ್ನಂ ಸಚ್ಚಾರಿತ್ರಂ ಮಾಡದೆ ದೇಹಾರಮನೀಯಲ್ಕೆ ಮಱುಗುತಿಪ್ಪರ್ಗೊರವರ್ (ಸಮಪ. ೧೪-೨೦); ಆರೋಗಿಸುವೆಡೆಯೊಳ್ ದೇಹಾರದೊಳ್ . . . ನೃಪನಾರೈದೆಚ್ಚಿತ್ತು ನಡೆಗೆ (ನೀತಿಸಾ. ೩೫೭). ೩. ಪೂಜೆ: ನೋಡುವರುಳ್ಳರೆ ಮಾಡುವೆ ದೇಹಾರವ . . . ಲಿಂಗವ ತೋಱಿ ಉದರವ ಹೊರೆವ ಭಂಗಗಾಱ ನಾನು (ಬಸವ. ೩೦೬); ದೇಹಾರವ ಮಾಡಿ ಲಿಂಗಾರ್ಪಿತವ ಮಾಡದೆ ಆಹಾರವ ಕೊಂಡರೆ ಕೋಳಿ ಹುಳುವನಾಯ್ದು ತಿಂದಂತೆ (ದೇದಾವ. ೫೧-೦೦೨); ಹೃದಯಕಮಲ ಮಧ್ಯದಲ್ಲಿಪ್ಪ ದೇವನ ದೇಹಾರವ ಮಾಡಲರಿದು ದೇಹಿ ನಿರ್ದೇಹಿಯಾಗದನ್ನಕ್ಕರ ದೇಹಾರವೆಲ್ಲಿಯದೊ ಅನಂತಮುಖದಲ್ಲಿ ದೇಹಾರವ ಮಾಡಲು ದೇವನಲ್ಲಿಲ್ಲ ನೋಡಾ (ಚನ್ನವ. ಕ. ೪೪೫-೯೪೩). [<ಸಂ. ದೇವಾಹಾರ]

ದೇಹಾರಂಗೆಯ್$_1$ 'ದೇವಾರಂಗೆಯ್' ನೋ.

ದೇಹಾರಂಗೆಯ್$_2$ (ಕ್ರಿ). ದೇವತಾಮೂರ್ತಿಯನ್ನುಮಾಡು, ಕಂಡರಿಸು: ಶ್ರೀಶಿಲೆಲೇಪ್ಯಕಾಂಸ್ಯರಜತಾಷ್ಟಾಪಾದರತ್ನಂಗಳಿಂ ದೇಹಾರಂಗೆಯಲಂಗ ಸೌಂದರಬಲಂ (ರತ್ನಾಕ. ೪೪). [ದೇಹಾರ$_2$ + ಕೆಯ್$_1$]

ದೇಹಾರಗೃಹ (ನಾ). ದೇವತಾಮೂರ್ತಿ ಇರುವ ಗೃಹ; ದೇವಾಲಯ: ಒಳಗಣ ಪೂಜಾರಚನಾವಿಳಸನಮಂ ಪೊಱಗೆ ತೋಱಿಸುತ್ತಂ ಮೆಱೆಗುಂ ಪಳಿಕಿನ ಶಿಲೆಯಿಂ ಮಾಡಿದ ಥಳಥಳಿಪ ವಿಶಾಳ ಚಾರು ದೇಹಾರಗೃಹಂ (ಬಾಧಪು. ೧-೧೬೩). [ದೇಹಾರ$_2$ + ಗೃಹ]

ದೇಹಾರಾಗಾರ (ನಾ). ದೇಹಾರಗೃಹ; ದೇವಾಲಯ: ಅಂತು ಬಂದಂ ದೇಹಾರಾಗಾರಮಂ ಪೊಕ್ಕು ವೀತರಾಗಶ್ರೀಚರಣಸಮಾರಾಧನಂಗೆಯ್ದು ಬಱಿಯಮಾರೋಗಣೆಯಂ ಮಾಡಿ (ಬಾಧಪು. ೬-೧೧೫ ಪ).
[ದೇಹಾರ$_2$ + ಆಗಾರ]

ದೇಹಾರಿ (ನಾ). ದೇವಸ್ಥಾನದ ಅರ್ಚಕ,-ಪೂಜಾರಿ: ದೇವರಂ ಪೂಜಿಸುವ ದೇಹಾರಿಗಳಿರ್ವ್ವರ್ಗಂ ಮತ್ತ ೪೮ (ಕಇಆ. ೯-೩-೩೨೨; 1062).
[ದೇಹಾರ$_1$ (< ದೇವಾರ) + – ಇ$_3$]

ದೇಹಾರೈಕೆ (ನಾ). ದೇಹದ ಪೋಷಣೆ: ಅಭ್ಯಂಜನಾದಿ ದೇಹಾರೈಕೆಗಳಂ ಬಿಟ್ಟು (ಶುಕಸ. ೧೭). [ದೇಹ + ಆರೈಕೆ (<ಆರಯ್ಕೆ)]

ದೇಹಾಲಸ್ಯ (ನಾ). ಶರೀರದಲ್ಲಿ ಉಂಟಾಗುವ ಬಳಲಿಕೆ,-ಅನಾರೋಗ್ಯ,-ಅಸ್ವಸ್ಥತೆ: ರಾಜನ ದೇಹಾಲಸ್ಯವನ್ನು ಕುರಿತು ವರ್ತಮಾನ ಕೊಟ್ಟರು (ಪೇಟಮಾ. ೨೧). [ದೇಹ + ಆಲಸ್ಯ]

ದೇಹಾವಗಾಹನ (ನಾ). [ಜೈನ] ಜೀವಸಮಾಸದ ಹದಿನಾಲ್ಕು ಭಾಗಗಳಲ್ಲಿ ಒಂದಂ; ಶರೀರದ ಆಕಾರ,-ಪ್ರಮಾಣ: ಜೀವಸಮಾಸದಲ್ಲಿ ಸಾಮಾನ್ಯವಾಗಿ ಹದಿನಾಲ್ಕುಭಾಗಗಳಾದರೂ ಉತ್ತರಭೇದಗಳು ಐವತ್ತೇಳಾಗುತ್ತವೆ. ಅವುಗಳಲ್ಲಿ (೧) ಸ್ಥಾನ . . . (೩) ದೇಹಾವಗಾಹನ (ಶರೀರದ ಆಕಾರ) (ಜೈನಪ. ೩೦೧). [ದೇಹ + ಅವಗಾಹನ]

ದೇಹಾವಸಾನ (ನಾ). ಸಾವು; ಮರಣ: ಜೀವಭಾವದ ಭ್ರಮೆಯಳಿದು ದೇಹಾವಸಾನದಲಿ ಕೇವಲಾದ್ವಯಪದ ಒದಗುವದು (ಗಗತಾ. ೨-೦೦).
[ದೇಹ + ಅವಸಾನ]

ದೇಹಿ$_1$ (ನಾ). ೧. ದೇಹವುಳ್ಳುದು; ಪ್ರಾಣಿ, ಮನುಷ್ಯ ಇತ್ಯಾದಿ: ಕೈಕೊಳ್ವಡಾತ್ಮಸುಖಮನೆ ಕೈಕೊಳ್ವುದು ದೇಹಿ (ಶಾಂತಿಪು. ೦೧-೮೭); ಸಕಲ ದೇಹಿಗೆ ನೀನೆ ಶರಣ್ ಜಿನೇಶ್ವರಾ (ಪಂರಾಮಾ. ೫-೮); ನೀಂ ನಿಃಶಂಕತೆಯಿನಿನಿತು ದೇಹಿಗಳಂ ಕೊಂದಪೆ (ಯಶೋಚ. ೪-೭೦). ೨. ದೇಹದೊಳಗೆ ನೆಲಸಿರುವವನು; ಜೀವಾತ್ಮ: ದೇಹ ತಾನಭಿಮನ್ಯುವೋದಿಟ ದೇಹಿ ತಾನಭಿಮನ್ಯುವೋ (ಕುಪ್ಯಾದ್ರೋ. ೭-೨೭); ದೇಹಿದೇಹೀಯೆಂಬುದಾತ್ಮರೊಳ್ ಬೆರೆತಿಹುದು (ಉದ್ಭದೇ. ೨-೧೫). [ಸಂ. ದೇಹಿನ್]

ದೇಹಿ$_2$ (ಅ). ೧. "ಕೊಡಂ" ಎಂಬರ್ಥದ ಒಂದು ಶಬ್ದ: "ಭವತಿ ಭಿಕ್ಷಾಂ ದೇಹಿ" ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪರ್ಮೆಯ ಸಪ್ತಾಕ್ಷರೀಮಂತ್ರಂ (ರಾಮಾಶ್ವ. ೧೧೮-೧೯); ವ್ರಾತ್ಯನೆಡೆಗೆ ದೇಹಿ ಎಂದು ಬಂದೆ (ಗಣೇಶ. ೩-೫೦). ೨. (ಆಲಂ) ದೇಹಿ ಎಂದು ಬೇಡುವವನು; ಯಾಚಕ: ದೇಹಿ ನೀನು ವ್ಯಾಪಾರಿಗಳು ನಮ್ಮವರು ಬೇಡು ಕೂಡಲಸಂಗಮದೇವಾ ಎಮ್ಮವರ ಕೈಯಲು (ಬಸವ. ೪೪೩); P ತ್ರಾಹಿ, ದೇಹಿ, ಪಾಹಿ, ಮುಂತಾದ ಸಂಸ್ಕೃತದ ಕೆಲವು ಕ್ರಿಯಾಪದಗಳನ್ನು ಅವ್ಯಯಂಗಳೆಂದು ಪರಿಗಣಿಸಿ, ಮುಖ್ಯ ಉಲ್ಲೇಖಗಳಾಗಿ ಕೊಟ್ಟಿದೆ. ಇಲ್ಲಿ 'ದೇಹಿ' ಎಂಬುದು ವಿಶೇಷವಾಗಿ ನಾಮಪದದ ಅರ್ಥದಲ್ಲೂ ಉಪಯೋಗವಾಗಿದೆ. [ಸಂ.]

ದೇಹುತ (ನಾ). ದೇವರಿಗೆ ಅರ್ಪಿಸಿದುದು (?): ಅಲ್ಲಿಯ ಗೌಂಡದೇವರ ದೇಹುತನಾಗಿ ಮಾಡಿದ ಭೂಮಿಯಱಿದು ಹತಕ್ಕೊಂದು ಮತ್ತರೋಪಾದಿಯಿಂ ಮೂನಿಗರಮಾಗಿ ಮಾನ್ಯದಿಂ ಮಾಡಿಕೊಂಡುಂಬರು (ಸೌಇಇ. IX-i, ೨೫೪-೪೭; 1148). [< ಸಂ. ದೇವಹುತ ?]

ದೇಹೋಚ್ಛ್ರಿತಿ (ನಾ). ದೇಹದ ಎತ್ತರ: ಅಮರನ ದೇಹೋಚ್ಛ್ರಿತಿ ಮೂಱು ಮೊಱಂ (ಸುಕುಮಾ. ೯-೩೩). [ದೇಹ + ಉಚ್ಛ್ರಿತಿ]

ದೇಹೋತ್ಥಾನ (ನಾ). [ಯೋಗ] ಪ್ರಾಣಾಯಾಮಸಿದ್ಧಿಗಳಲ್ಲಿ ಒಂದಂ; ಆಕಾಶದಲ್ಲಿ ನಿರಾಧಾರವಾಗಿ ನಿಂತಿರುವುದು; ಶ್ವಾಸನಿರೋಧದಿಂದ ದೇಹವು ಹಗುರವಾಗಿ ಮೇಲಕ್ಕೇರುವುದು: ಸ್ವೇದ ಕಂಪನ ದೇಹೋತ್ಥಾನವೆಂಬ ಕ್ರಮದಿಂ ಕನಿಷ್ಠಮಧ್ಯಮೋತ್ತಮ ಪ್ರಾಣಾಯಾಮಸಿದ್ಧಿಸೂಚನಂಗಳಂ (ವಿವೇಕ. ೧೫೦). [ದೇಹ + ಉತ್ಥಾನ]

ದೇಹೋದ್ಭವ (ನಾ). ೧. ಶರೀರದಲ್ಲಿ ಹುಟ್ಟಿದುದು. ೨. ಮಗ; ತನುಜ: ರವಿ . . . ಕುಂಭದೊಳ್ ಕೂಡೆ ದೇಹೋ[ಪಾಠಾಂ. ಧರ್ಮೋ]ದ್ಭವ ಭಾಗ್ಯೋತ್ಸೃಷ್ಟನಸ್ವಂ (ಜಾತತಿ. ೧೭-೦೭). [ದೇಹ + ಉದ್ಭವ]

ದೇಹೋಪಚಾರ (ನಾ). ಶರೀರಕ್ಕೆ ಮಾಡುವ ಸೇವೆ,-ಶುಶ್ರೂಷೆ: ಅತ್ತೆಗೆ ದೇಹೋಪಚಾರ ಮಾಡುತ್ತ ಮಾವನಿಗೆ ದೇವತಾಪೂಜಾದಿಗಳಲ್ಲಿ ಸಹಾಯವಾಗಿದ್ದಳು (ವಚಭಾ. ೧೬೮). [ದೇಹ + ಉಪಚಾರ]

ದೈತ (ನಾ). ೧. ಪ್ರೀತಿಪಾತ್ರ; ಕಾಂತ; ಗಂಡ; ಪತಿ: ಆತಂ ನಿನ್ನಯ ಮೋಹದ ದೈತಂ ವಿಭು ನಾಗದತ್ತನಂಗಜವಿಕಳೋಪೇತಂ ಬೆನ್ನೊಳು ಬರುತಿರ್ಪಾತಂ ತಾನೆನಲು ಪರದಿ ವಿಸ್ಮಯಬಟ್ಟಳ್ (ಪುಷ್ಯಾಸ್ರ. ೧-೫೫). ೨. ಒಡೆಯ; ಅಧಿಪತಿ: "ನಾಯಕಂ ನಾಥನಿಂದ್ರಂ ಕಾಂತನೀಶ್ವರಂ ಪ್ರೀಯನಧಿಪಂ ದೈ[ವಾಠಾಂ. ದಯಿ]ತನೀಶಂ . . . ಎನಲೊಡೆಯಂಗೆ ನಾಮಮಕ್ಕುಂ" (ಮಂಗರಾ. ೬೭-೬). 'ದೈತೇಂದ್ರ' ಪರಾ.
[<ಸಂ. ದಯಿತ]

ದೈತೆ (ನಾ). ೧. ಪ್ರೀತಿಪಾತ್ರಳಾದ ಮಹಿಳೆ; ನಲ್ಲೆ; ಪ್ರಾಣಕಾಂತೆ; ಮಡದಿ; ಪತ್ನಿ: ದೈತೆ ನೋಡೆನುತಿಳಿದು ರಾಘವ ಸೇತುವನು ಧನುವಿನಲಿ ಖಂಡಿಸೆ (ಕೌಶಿರಾ. ೪೪-೧೭). ೨. ಹೆಣ್ಣು; ಯುವತಿ; ಸ್ತ್ರೀ: ದೈತೆಯಂ ತಂದೊರ್ಬಳಂ ಮದುವೆಯಂ ಮಾಡಿ ಸೈತಿಕ್ಕಿ ಬಿಡಬಾರದಂತೆ ನೇಹಂಗೂಡಿ (ಪಿಂಡೋರ. ಹ. ೫೩೨-೧೯). [ದೈತ + – ಎ$_2$]

ದೈತೇಂದ್ರ (ನಾ). ಒಡೆಯರ ಒಡೆಯ : ದ್ವೈತೀಯಕ ಜನಪಂಗದ್ವೈತಂಗಜತಂಗೆ ಭುವನದಯಿತಂಗಾಗಳ್ ದೈತೇಂದ್ರರೆಲ್ಲಮಱಿದರಾತತ ಪುಣ್ಯಂಗೆ ಜಗದೊಳಿಱಗದರೊಳರೆ (ಆಚಪು. ೫-೭).

[ಗಿ ಇಲ್ಲಿ ಸಂಸ್ಕೃತದ 'ದಯಿತೇಂದ್ರ' ಎಂಬುದನ್ನು ವ್ಯಾಸಕ್ಕಾಗಿ ಕವಿ ಅರಿಸಮಾಸ ಮಾಡಿಕೊಂಡಂತೆ ತೋರುತ್ತದೆ]

ದೈತೇಯ (ನಾ). ೧. ದಿತಿಯ ಮಗ ; ಅಸುರ ; ರಾಕ್ಷಸ : "ದನುಜರ್ ದೈತೇಯರ್ ದಿತಿತನೂಭವರ್ ಪೂರ್ವದೇವರಸುರರ್" (ವಸ್ತು.ಕೋ. ೬-೩೨) ; "ಅಸುರಃ, ದಾನವಃ, ದೈತ್ಯಃ, ದೈತೇಯಃ . . . ಪಾತಾಲ ನಿಲಯಃ (ಸ್ಯುಃ)ತಾಃ – ಈ ೮ ಅಸುರರ ಪೆಸರ್" (ಹಲಾಯು. ೨-೫) ; ಬಲಿದರ್ಪಹರಂ ಜಿತಾರಿ ದೈತೇಯನನಂತಭೋಗನಿಲಯಂ (ಗದಾಯು. ೦-೦). ೨. ಲೋಕಪಾಲಕರಲ್ಲಿ ಒಬ್ಬ ; ನಿರ್ಋತಿ : ತೊಡವೆಂ ಶಕ್ರನ ನಾಮವುಂ ತುಡುಕೆ ನೀರೊಳ್ ಮೆಟ್ಟುವೆಂ ವಹ್ನಿಯಂ ಪೊಡೆವೆಂ ಕಾಲನನಿಕ್ಕಿ ಡೊಕ್ಕರಿಸುವೆಂ ದೈತೇಯನಂ (ಜಗವಿ. ೩-೨೦). [ಸಂ.]

ದೈತೇಯೆ (ನಾ). ರಾಕ್ಷಸಿ ; ಅಸುರಸ್ತ್ರೀ : ಪಟಮೆತಾಯ್ ಎನ್ನವಳ್, ದೈತೇಯೆ ತೀವಿಸಳ್ (ಬಧ್ಭಕ್ತ. ೪೭-೧೦೦೦). [ದೈತೇಯ + – ಎ]

ದೈತ್ಯ (ಗು). ಅತ್ಯಧಿಕವಾದ ; ಅತಿಶಯವಾದ : ತಾಯೂರ್ಗೆ ಧಾವಿಸಿದನ್ಯೆ ದೇವಾಸುರರ ವಿಸ್ತಾರ್ವ, ದೈತ್ಯಬಲಶಾಲಿ, ಆ ವಾಲಿ ! (ಶ್ರೀರಾಮಾ. ೪೧೧-೩೭೪). (ನಾ). ೨. ರಾಕ್ಷಸ ; ಅಸುರ : "ಸುರದ್ವಿಷರೆನೆ ದೈತ್ಯರ್ ಶುಕ್ರಶಿಷ್ಯರಾರ್ಗಮದೃಶ್ಯರ್" (ವಸ್ತು.ಕೋ. ೬-೩೩) ; ಕೃತಯುಗದಿಂದಾ ದವರ್ ತ್ರೇತೆಯೊಳ್ ಪುಟ್ಟಿದವರ್ ಮತ್ತೀಗಳೀ ದ್ವಾಪರದೊಳಿಗೆದವರ್ ದೈತ್ಯರಿರ್ದಪ್ಪರ್ (ಜಗವಿ. ೧-೭೬) ; ದೈತ್ಯರಂ ಕನಸೊಳ್ ಕಾಣಲು ಬಾರದೈ (ಸೋಮೇಶ. ೭೦) ; ಸಾಕು ದೈತ್ಯಸ ಕೆಡಹು . . . ತಡವು ಮಾಡದಿರು (ಕುವ್ಯಾದ್ರೋ. ೧೭-೩೩) ; ದೈತ್ಯರ ಕುಲವ ಸವೆಯಲು ವಿಷ್ಣು ಕ್ಷತ್ರಿಯವಧೆಗೆ ಭಾರ್ಗವನು (ಗಗಚಾ. ೧೭-೩೭). ೩. (ಆಲಂ) ದಡಿಗ ; ಟೊಣಪ. ೪. ಬಹಳ ದುಷ್ಟ ; ಜನರಿಗೆ ಹಿಂಸೆಯನ್ನು ಕೊಡುವವನು. ೫. ಬಹಳ ಶಕ್ತಿವಂತ ; ಅಮಾನುಷ ಪರಾಕ್ರಮಿ. [ಸಂ.]

ದೈತ್ಯಕುಠಾರ (ನಾ). ರಾಕ್ಷಸರಿಗೆ ಕೊಡಲಿಯಂತೆ ಇರುವವನು ; ರಾಕ್ಷಸರನ್ನು ನಾಶಪಡಿಸುವವನು ; ಕೃಷ್ಣ : ವೀರ ದೈತ್ಯಕುಠಾರ ಗಳಿತ ವಿಕಾರ ಗೋಪೀಜಾರ . . . ಮುರಹರ ಸಲಹಬೇಕೆಂದ (ಕುವ್ಯಾಭೀ. ೩-೭೭). [ದೈತ್ಯ + ಕುಠಾರ]

ದೈತ್ಯಗುರು (ನಾ). ೧. ರಾಕ್ಷಸರ ಗುರು, – ಪುರೋಹಿತ ; ಶುಕ್ರಾಚಾರ್ಯ. ೨. ನವಗ್ರಹಗಳಲ್ಲಿ ಆರನೆಯವನು ; ಶುಕ್ರಗ್ರಹ : "ಉಶನಾಃ, ಶುಕ್ರಃ, ಕಾವ್ಯಃ, ದೈತ್ಯಗುರುಃ, ಭಾರ್ಗವಃ, ಕವಿಃ, ಧಿಷ್ಣ್ಯಃ – – ಈ ೭ ಶುಕ್ರನ ಪೆಸರ್" (ಹಲಾಯು. ೯-೪೩) ; ಧರಣೀಜಂ ಪದಿನೈದು . . . ದೈತ್ಯಗುರುವಿಪ್ಪತ್ತೊಂದು ಸಂವತ್ಸರಂ ವರಮೋಚ್ಚಾಂಶದೊಳೊಂದಿ ನಿಂದೊಡದು ಪಿಂಡಾಯುಷ್ಯಮಕ್ಕುಂ ಧ್ರುವಂ (ಜಾತಕ. ೪-೧೦). [ದೈತ್ಯ + ಗುರು]

ದೈತ್ಯಜೀವ (ನಾ). ೧. ರಾಕ್ಷಸರ ಪ್ರಾಣ. ೨. ರಾಕ್ಷಸರ ರೂಪವಾದ ಚೈತನ್ಯ : ದೈತ್ಯರಿಗೆ ಸುಖವಾದರೂ ದೇವಾವೇಶದಿಂದಲೇ ಹೊರತು ದೈತ್ಯಜೀವರಿಗಿಲ್ಲ (ಹಸಾಸಾ. ೬-೧ ತಾತ್ಪರ್ಯ). [ದೈತ್ಯ + ಜೀವ]

ದೈತ್ಯಧ್ವಂಸಿ (ನಾ). ರಾಕ್ಷಸರನ್ನು ನಾಶಪಡಿಸುವವನು ; ದೈತ್ಯಾರಿ ; ವಿಷ್ಣು. [ಸಂ. ದೈತ್ಯಧ್ವಂಸಿನ್]

ದೈತ್ಯನಿಕಾಯ (ನಾ). ರಾಕ್ಷಸರ ಸಮೂಹ. – ಗುಂಪು : ದಾಯವಿದು ತಮಗೆಂದು ದೈತ್ಯನಿಕಾಯ ಬಂದು ರಸಾತಳಕೆ ಕುರುರಾಯನನು ಕೊಂಡೊಯ್ದು ತಿಳುಹಿದರವರು ಸಾಮದಲಿ (ಕುವ್ಯಾಅ. ೩೦-೬೩).

[ದೈತ್ಯ + ನಿಕಾಯ]

ದೈತ್ಯಮರ್ದನ (ನಾ). = ದೈತ್ಯಧ್ವಂಸಿ : ದನುಜರ ಕಯ್ಯೊಳಿರ್ದಮರ್ದನಾವಗವಿಸಾಟ್ಕೊಳಲೆಂದು ದೈತ್ಯಮರ್ದನನೆನಿಸಿರ್ದವಂ ಕವಟದಿಂದೆ ವಿರಾಸಿನಿಯಾದ ವೇಷಮಂ ನೆನೆಯಿಸಿದವ್ಪುದೀ ವಸಿಯ ಬಣ್ಣಮಿವಳ್ಗಿನೆ (ಕಾದಂಪೂ. ೩೮). [ದೈತ್ಯ + ಮರ್ದನ]

ದೈತ್ಯಮಹತ್ತರ (ನಾ). ೧. ರಾಕ್ಷಸರಿಗೆ ಮಂತ್ರಿಯಾದವನಂ ; ಶುಕ್ರಾಚಾರ್ಯ. ೨. ಶುಕ್ರಗ್ರಹ : ನಿಲೆ ದೈತ್ಯಮಹತ್ತರನನಿಮಿಷದೊಳ್ ಸಮಸ್ತ ಧರಣೀಶನಕ್ಕುಮಕುಲೋದ್ಭವನುಂ (ಜಾತಕ. ೦೨-೦೩).

[ದೈತ + ಮಹತ್ತರ]

ದೈತ್ಯರಿಪು (ನಾ). ರಾಕ್ಷಸರ ಶತ್ರು ; ಅಸುರರ ವೈರಿ ; ದೈತ್ಯಾರಿ ; ಕೃಷ್ಣ : ಮಱುದಿವಸ ವೈಹಾಳಿಯನು ಹೊಱವಂಟರನಿಬರು ದೈತ್ಯರಿಪು ಸಹಿತ (ಕುವ್ಯಾಅ. ೧೧-೦೪). [ದೈತ್ಯ + ರಿಪು]

ದೈತ್ಯವೈರಿ (ನಾ). = ದೈತ್ಯರಿಪು : ಧರಿಸಿಕೊಂಡಿಹ ದೈತ್ಯವೈರಿ ವಿರಿಂಚಿ ಮುಖ್ಯಾದಿತ್ಯಕಾಪಾಲಾಸ್ಥಿಮಾಲಾವಳಿಗಳೇ ಸಾಕ್ಷಿ (ಬಸಪು. ೫೪-೫೯).

[ದೈತ್ಯ + ವೈರಿ]

ದೈತ್ಯಾಂತಕ (ನಾ). = ದೈತ್ಯರಿಪು : ದೈತ್ಯಾಂತಕನಾಮದಿಂದೆಸವ ಲಕ್ಷ್ಮೀವಲ್ಲಭಂಗೆತ್ತಿದಾ ಗಗನಬೃತ್ರದ ಹೇಮದಂಡಮನಿಸಲ್ ಸಾಲ್ದತ್ತು ಹೇಮಾಚಲಂ (ಜಗವಿ. ೦-೨೩) ; ಮೇಲು ಪೋಗಿನ ಸಿದ್ಧಿ ದೈತ್ಯಾಂತಕನ ಬಂದ್ಧಿಯಲಿ . . . ಎನುತೈತಂದನಾ ವಾರ್ತೆ (ಕುವ್ಯಾಅ. ೪-೩೪).

[ದೈತ್ಯ + ಅಂತಕ]

ದೈತ್ಯಾಮಾತ್ಯ (ನಾ). ೧ ರಾಕ್ಷಸರ ಮಂತ್ರಿ ; ಶುಕ್ರಾಚಾರ್ಯ. ೨. ಶುಕ್ರಗ್ರಹ : ತೂಲಿಯೊಳ್ ದೈತ್ಯಾಮಾತ್ಯಂ ನಿಲೆ . . . ಪುಟ್ಟಿದ ಮನುಜನವನಿಪಾಲಕನಕ್ಕುಂ (ಜಾತಕ. ೦೪-೦೬). [ದೈತ್ಯ + ಅಮಾತ್ಯ]

ದೈತ್ಯಾರಾತಿ (ನಾ). = ದೈತ್ಯರಿಪು: ದೈತ್ಯಾರಾತಿಗೆಱಗಿಯನಂತಶಯನಖ್ಯಾತಿ ವಿಭವವನೀಕ್ಷಿಸುತ ಹರುಷದಲಿ ನಡೆತಂದ (ಕುವ್ಯಾಅ. ೧೯ ೧೭).

[ದೈತ್ಯ + ಅರಾತಿ]

ದೈತ್ಯಾರಿ (ನಾ). = ದೈತ್ಯರಿಪು : ಒಲ್ದೀಕ್ಷಿಸಿದಂ ನಿಜಾಗ್ರಭವನಂ ದೈತ್ಯಾರಿ (ಜಗವಿ. ೪-೩೮). [ದೈತ್ಯ + ಅರಿ]

ದೈತ್ಯೆ (ನಾ). ೧. ರಕ್ಕಸಿ ; ರಾಕ್ಷಸಿ. ೨. ಒಂದು ಬಗೆಯ ಸುಗಂಧ ದ್ರವ್ಯ ; ಮಂರೆ: "ತಾಲಪರ್ಣೀ, ದೈತ್ಯಾ, ಗಂಧಕುಟೀ, ಮುರಾ, ಗಂಧಿನೀ–ತಿ ಮುರೆಯೆಂಬುವ ಗ್ರಂಥಿಕ ಜಿನಸು" (ಸಿದ್ಧಾಂತಿ. ೦೫೬).

[ಸಂ. ದೈತ್ಯಾ]

ದೈತ್ಯೇಂದ್ರ (ನಾ). ರಾಕ್ಷಸರ ರಾಜ ; ಪ್ರಬಲನಾದ ರಾಕ್ಷಸ : ಚತುರಾಸ್ಯೇಂದ್ರಾದಿದೇವಶ್ ನಡೆದು ಜಲಧಿತಲ್ಪಂಗೆ ದೈತ್ಯೇಂದ್ರರು ದ್ವೈತ್ಯತೆಯಂ ಪುಯ್ಕುಲ್ಲೆ ಕಂಸಪ್ರಭೃತಿದಿಕಿಜರಂ ಕೊಲ್ವೆನಾನೆಂದು ಪೂರ್ಣಚ್ಯುತದೇವಂ ದೇವಕೀಗರ್ಭದೊಳುದಯಿಸಲೆಂದಿರ್ದಂ (ಜಗವಿ. ೨-೪೪) ; ನಿನ್ನ ಪಾಡಿನ ದುರುಳರೇ ದೈತ್ಯೇಂದ್ರರೀತನ ಕೆಣಕಿದವರು (ಕುವ್ಯಾಸ. ೯-೫೯) : ಭ್ರಾಂತಿಗದ್ದಿದ ಮತಿವಿಕಾರದಾ ದೈತ್ಯೇಂದ್ರನಂ ತಂದನರಮನೆಗೆ . . . ಅತಿಪೇದದಲಿ (ಶ್ರೀರಾಮಾ. ೪೧೧-೭).

[ದೈತ್ಯ + ಇಂದ್ರ]

ದೈತ್ಯೇಂದ್ರಗುರು (ನಾ). ೧. ರಾಕ್ಷಸರಾಜನ ಪುರೋಹಿತ, – ಆಚಾರ್ಯ ; ಶುಕ್ರಾಚಾರ್ಯ. ೨. ಶುಕ್ರಗ್ರಹ : ದೈತ್ಯೇಂದ್ರಗುರು ಎಂದೆ ವಾಗ್ಮಿ ಸುರೇಂದ್ರಾರ್ಚಿತನಿಂದೆ ಗೀತವಿದನಕ್ಕುಂ (ಜಾತಕ. ೦೫-೪).

[ದೈತ್ಯೇಂದ್ರ + ಗುರು]

ದೈನಂದಿನ (ಗು). ಪ್ರತಿದಿನದ ; ಪ್ರತಿದಿನದಲ್ಲೂ ಉಂಟಾಗುವ ; ಪ್ರತಿದಿನವೂ ಜರುಗುವ ; ದೈನಿಕ : ದೈನಂದಿನ ಸಾಮಾನ್ಯದ ನೀರಸವನೆ ಉಜ್ವಲಿಸಿದೆ ಅತೀಂದ್ರಿಯ ಆವೇಶದಲಿ ! (ಅನಿಕೇ. ೪೫-೨೦) : ಪುರಂದರ,

ತ್ಯಾಗರಾಜ, ಸದಾರುಗರ ಕೃತಿಗಳನ್ನು ಕೇಳಿದಾಗ . . . ನಮ್ಮ ಮನಸ್ಸು ದೈನಂದಿನ ರಾಗದ್ವೇಷಗಳನ್ನು ಮರೆತು ಪ್ರಶಾಂತಸ್ಥಿತಿಯನ್ನು ಮುಟ್ಟುತ್ತದೆ (ಭಾರದ. ೩೮೦) ; ದೈನಂದಿನ ಜೀವನಕ್ಕೆ ಸಂಬಂಧಿಸಿದ ಕೆಲಸಗಳು ಮೊದಲಿಗಿಂತ ಈಗ ಸುಲಭವಾಗಿ ನಡೆಯುತ್ತಿವೆ (ಜೀವಾತ್ಮ. I ಮುಸ್ಸುಡಿ); ದೈನಂದಿನ ವರ್ತಮಾನಗಳನ್ನು ಪತ್ರಿಕೆಗಳಲ್ಲಿ ನೋಡಬೇಕು (ರೂಢಿ).

[ಸಂ.]

ದೈನಂದಿನಪತ್ರಿಕೆ (ನಾ). ಪ್ರತಿನಿತ್ಯವೂ ಹೊರಡುವ ಸಮಾಚಾರಪತ್ರಿಕೆ; ವೃತ್ತಪತ್ರಿಕೆ ; ದಿನಪತ್ರಿಕೆ : ಆ ದಿನದ ದೈನಂದಿನಪತ್ರಿಕೆಯಲ್ಲಿ ಸಿಡಿಮದ್ದಿನ ವಿಷಯವು ದೊಡ್ಡದೊಡ್ಡ ಅಕ್ಷರಗಳಲ್ಲಿ ಮುದ್ರಿಸಲ್ಪಟ್ಟು ಎಲ್ಲೆಲ್ಲಿಯೂ ಮಾರಾಟವಾಗುತಿದ್ದಿತು (ಪಿಶಾಪ. ೯೬). [ದೈನಂದಿನ+ಪತ್ರಿಕೆ]

ದೈನಾಸ (ನಾ). ೧. ಅನುಕಂಪ ಬರುವಂತೆ ಬೇಡಿಕೊಳ್ಳುವಿಕೆ ; ಕನಿಕರವುಂಟಾಗುವಂತೆ ಕೇಳಿಕೊಳ್ಳುವಿಕೆ. ೨. ದೈನ್ಯಭಾವ ; ದೀನತೆ : ಅದೆಷ್ಟೋ ದೈನಾಸದಿಂದ ಕಲ್ಪಿಸಿ ಹೇಳಿದ ಯಾವ ಸೇವಕರ ಮಾತಿನಲ್ಲಿಯೂ ಅವಳಿಗೆ ವಿಶ್ವಾಸ ಉಂಟಾಗಲಿಲ್ಲ (ಮಹಾಪೂ. ೫೦) : ಹೇಳು ಕಮಲವೆ ಮೇಲೆ ಮುಖವಾಡಿ ದೈನಾಸದಿಂದೇನು ನೋಡುತಿರುವೆ ? (ನವಲ್ಲ. ೩೪-೪).

[<ಸಂ. ದೈನ್ಯ]

ದೈನಾಸಪಡು 'ದೈನಾಸಬಡು' ನೋ.

ದೈನಾಸಬಡು, ದೈನಾಸಪಡು (ಕ್ರಿ). ದೀನತನವನ್ನು ಹೊಂದು ; ಕನಿಕರವುಂಟಾಗುವಂತೆ ವರ್ತಿಸು ; ಮೊರೆಯಿಡು : ಈ ಸಮ್ಮಿಲನದ ಸುದ್ದಿಯನ್ನು ಇನ್ನಾರಿಗೂ ಹೇಳಬಾರದೆಂದು ದೈನಾಸಬಡುತ ಬಿನ್ನವಿಸಿಕೊಂಡಳು (ಮೊಪಾಸಾ. ೫೦) ; ವೈದ್ಯರನಾರೆ ಕರಕೊಂಡು ಬರ್ರಿ . . . ಹೆಂಡತಿ ದೈನಾಸಬಟ್ಟು ಹೇಳಿಕೊಂಡಳು (ನಿರಾಧ. ೧೧೩) ; ಅಚಾರ್ಯರು ದೈನಾಸಬಟ್ಟರು (ಸಮಜೀ. ೩೫). **ದೈನಾಸಪಡು** : ಮನಸಿಲ್ಲದವಗ ದೈನಾಸಪಡೂದು ಯಾಕ ಬಿಡ (ಮಡ್ಡುಹೆ. ೧೬೨). [ದೈನಾಸ + ಪಡು$_1$]

ದೈನಿಕ (ಗು). ೧. ದಿನದಲ್ಲಿ ಉಂಟಾಗುವ : "ಒಂದು ದಿನದ ; ಒಂದು ದಿನ ಹಿಡಿಯುವ ; ದೈನಿಕ" (Diurnal. ಇಂಳನಿ) ; ನಿನ್ನ ದೈನಿಕ ಕಾರ್ಯಕ್ರಮವೇನು ? (ರೂಢಿ). (ನಾ). ೨. ಪ್ರತಿನಿತ್ಯವೂ ಹೊರಡುವ ಸಮಾಚಾರ ಪತ್ರಿಕೆ ; ದಿನಪತ್ರಿಕೆ : ಮುಂಬಯಿಯ ವಿಖ್ಯಾತ ದೈನಿಕಗಳನ್ನೋದುವ ಎಲ್ಲ ವಿದ್ಯಾವಂತರಿಗೂ ಅದು ಗೊತ್ತಿದೆ (ಒಂಟಿದ. ೩).

[ಸಂ.]

ದೈನ್ಯ (ನಾ). ೧. (ಬಡತನ, ಅಪರಾಧ ಮೊದಲಾದ ಕಾರಣದಿಂದ ಉಂಟಾಗುವ) ಕರುಣಾಜನಕವಾದ ಸ್ಥಿತಿ; ದೀನತನ: "ದೈನ್ಯದಲಿ ಯಜ್ಞೋತ್ತಾರದಲಿ ಕೋಪದಲಿ ಮನ್ಯುವೆಂದೆಂಬುದು" (ಮಂಗರಾ. ೧೪೫-೨೮) ; "ದೈನ್ಯದಿ ಯಜ್ಞದಂತ್ಯದೊಳು . . . ಮನ್ಯುವೆನಿಕ್ಕುಂ" (ನಾನಾರ. ೩೬) ; ಮುಖದ ಕಾಮಕಾರ್ಪಣ್ಯಮುಮಂ ದೃಷ್ಟಿಯ ದೈನ್ಯಮುಮನಱಿದು ಏನಾನುಮೊಂದು ನೆವಂಬಡೆದೆದ್ದು (ನಂಬಿರ. ೪-೧೨); ತನ್ನ ಮಾಡಿದ ತಪ್ಪು ತನ್ನಂ ನೋಯಿಸೆ ತಾನೆ ತಿಳಿಪಲೆಂದು ನುಡಿದಂ ದೈನ್ಯದ ಮಾತಂ (ಅನಂಪು. ೮-೯) ; ಮುನಿದಿನಿಯನ ಕಡುಮೊನೆವಾತಿಗೆ ನೊಂದು ಕನಲದೆ ಗಾಱುವಡೆಯದೆ ತನುಮನಗಳ ತನ್ನ ಬಸಗೈದು ದೈನ್ಯವ ಕೊನರಿಸಿ ತಂಪುಗೊಳಿಪುದು (ಹದಿಬ. ೩-೨೩) ; ನಾರಾಯಣನು ದೈನ್ಯದಿಂದ ಬೇಡಿಕೊಂಡನು (ಳಂಬಹು. ೧೩೪) ; ದೈನ್ಯದಿಂದ ಬೇಡೋಕಿಂತ ದೈವಾಧೀನವಾಗೋದುತ್ತಮ (ಗಾದೆ). ೨. ದೀನಭಾವದಿಂದ ಕೂಡಿರುವವನು ; ಹೇಡಿ ; ಅಶಕ್ತ : ಪ್ರಿಯವ ನುಡಿದರೆ ದೈನ್ಯನೆಂಬರು ನಯದಿ ಬರಲ ಸಮರ್ಥನೆಂಬರು (ಕೌಶಿರಾ. ೧೫-೪೯). ೩. ವಂಚನೆಗೆ ಒಳಗಾದವನು : "ವಿಕೃತಂ ವಿಪ್ರಲಬ್ಧನೆನೆ ಸಲೆ ದೈನ್ಯನಕ್ಕು" (ಮಂಗರಾ. ೭೨-೨೦). ೪. [ಕಾವ್ಯಮೀ] ರಸಕ್ಕೆ ಪರಿಪೋಷಕಗಳಾದ ಮೂವತ್ತುಮೂರು ವ್ಯಭಿಚಾರಿಭಾವ ಅಥವಾ ಸಂಚಾರಿಭಾವಗಳಲ್ಲಿ ಒಂದು ; ದುರವಸ್ಥೆಯೊದಗುವುದು ಮೊದಲಾದ ಕಾರಣಗಳಿಂದ ಉಂಟಾಗುವ ಒಂದು ಬಗೆಯ ನಿರುತ್ಸಾಹ ಮನೋಭಾವ,-ಕುಗ್ಗಿದ ಮನಸ್ಸು ; P ಇದು ಪೆಚ್ಚುಮುಖ, ಕ್ಷೀಣಸ್ವರ ಮೊದಲಾದುವುಗಳಿಂದ ಅಭಿನಯಗೊಳ್ಳುತ್ತದೆ : ಮತಿ ನಿರ್ವೇದ . . . ಅಮರ್ಷ ದೈನ್ಯೋತ್ಸುಕ . . . ಮೃತಿಗಳಿವಿಂತೆಯ್ದೆ ಸಂಚಾರಿಭಾವಂ (ಕಾವ್ಯಾವ. ೭೯೫) ; ಮನದ ಪರಿತಾಪದಿಂದಂ ಜನಿಯಿಸುಗುಂ ದೈನ್ಯಭಾವಮೆಂದದನಱಿಮಂಡನಶೂನ್ಯರೂಪಮಳಿನಾನನ ವಿಕೃತಾಕಾರಕರಣಮಪ್ಪ ಕ್ರಮದಿಂ (ಶೃಂಗಾರ. ೨-೨೬) ; ಆದಂ ಹೃತ್ತಪದೌರ್ಗತ್ಯಾದಿಯೆ ದೈನ್ಯಕೆ ವಿಭಾವಮಂತಾ ಮುಸುಕಿಂಬಾದ ಮೃಜಾತ್ಯಾಗಂ ಮೆಯ್ಗಾದುನ್ನತಭಾರ ದೈನ್ಯವಾಗನುಭಾವಂ (ರಸರ. ೧೧೮ ಸೂತ್ರ) ; ದುರ್ಗತಿಯಿಂದ ಜನಿಸುವುದು ದೈನ್ಯ (ಭಾರಮೀ. ೩೪೭).

ದೈನ್ಯವಾಚಾಯುತ = ದೀನಭಾವದಿಂದ ಮಾತನಾಡುವವನು ; ರಕ್ಷಣೆಗಾಗಿ ಬೇಡಿಕೊಳ್ಳುವವನು : ಚಾಪಚ್ಯುತರನಪಗತವಾಹನರ ಪರಿಮುಕ್ತಕೇಶಿಗಳ ಗತಿವಿಹೀನರ ದೈನ್ಯವಾಚಾಯುತರ ತರುವಲ್ಮೀಕ ಜಲಸಂಗತರನಿಱಿವುದು ಧರ್ಮವೇ (ಕುಪ್ಯಾಕ. ೨೬-೩೨). [ಸಂ.]

ದೈನ್ಯಂಗವಿ (ಕ್ರಿ). ದೀನತೆಯನ್ನು ಹೊಂದು ; ದೈನ್ಯಭಾವದಿಂದಿರು : ದೈನ್ಯಂಗವಿದು ಪೊಗಳುತ ಸಭಯಮಾನಸರಾಗಿ ವಂದಿಸುವ ಅವನಿಸುರರಿಗೆ ಅಭಯವಂ ಕೊಟ್ಟು (ಬಸರ. ೫೭-೫೦). [ದೈನ್ಯ + ಕವಿ$_1$]

ದೈನ್ಯಂದೋಱು (ಕ್ರಿ). ದೀನತನವನ್ನು ತೋರಿಸು: ಆ ತಪೋಧನರೊಳೊರ್ವಂ ಪ್ರಗಲ್ಭತಾಪಸಂ ಕಿಂಕರತೆಯನಾಳ್ದು ಕರಾಂಬುಜಂಗಳಂ ಮುಗಿದು ದೈನ್ಯಂದೋಱಿ ನಿಂದು (ಶಬಶಂ. ೨-೨೫ಪ). [ದೈನ್ಯ + ತೋಱು]

ದೈನ್ಯಂಬಡು, ದೈನ್ಯವಡು (ಕ್ರಿ). ೧. ದೀನತನವನ್ನು ಅನುಭವಿಸು : ತಾನು ಕೀಳೆಂಬ ಭಾವನೆಯನ್ನು ಹೊಂದು : ಘನದೈನ್ಯಂಬಡುವರ್ ಗುರುತ್ವಗೆಡುವರ್ ಗ್ರಾಸಕ್ಕೆ ಕುಗ್ರಾಮವಾಗೆ (ಸೋಮೇಶ. ೪೮); ನಾಡೆ ದೈನ್ಯಂಬಟ್ಟಭಯಮಂ ಬೇಡಿ . . . ಭಕ್ತರ ಕರುಣವಡೆವೆನು (ಬಸಪು. ೨೬-೬೭). ೨. ದೈನ್ಯದಿಂದ ಬೇಡಿಕೊಳ್ಳು,-ಪ್ರಾರ್ಥಿಸು : ಮಾರಸನ್ನಿಭನ ಪುಡುಕಿ ಕರತಾರೆಂದುಯೆನಗೆ ದೈನ್ಯಂಬಡಲು (ನವಮೋ. ೨೬-೪೫). **ದೈನ್ಯವಡು** : ೨. ಕೇಳು ರಘುಪತಿ ಬಿನ್ನಹವನೀ ಖೂಳ ಕೈಮುಗಿದೆನಲು ಬಗೆವನೆ ಧಾಳಿಮಾಡುವೆ ವರುಣಲೋಕವ ಹಾಳುಮಾಡುವೆನು ಗೋಳಿಡಲು ನಾ ಕಟ್ಟಿ ತಹೆ ನೀ ಕಾಳುಮೂಳನ ಬೇಡಲೇತಕ್ಕೇಳು ರಾಘವ ದೈನ್ಯವಡದಿರುಯೆಂದ ಸುಗ್ರೀವ (ಕೌಶಿರಾ. ೧೫-೪೦).

ದೈನ್ಯಂಬಟ್ಟವ = ಮೋಸಕ್ಕೆ ಸಿಕ್ಕಿ ವ್ಯಥೆಯನ್ನು ಅನುಭವಿಸುತ್ತಿರುವವನು : "ವಿಕೃತಃ, ವಿಪ್ರಲಬ್ಧಃ-ಈ ೨ ದೈನ್ಯಂಬಟ್ಟವಂ" (ಹಲಾಯು. ೬೩-೨೨೮). [ದೈನ್ಯ + ಪಡು$_1$]

ದೈನ್ಯಗೂಡು (ಕ್ರಿ). ದೀನತನವನ್ನು ಹೊಂದಿರು ; ಅತ್ಯಂತ ನಮ್ರತೆಯನ್ನು ಪಡೆ : ಒಂದಾನೊಂದುದಿನಮುಮಾದೇವಿಯು . . . ಆ ರಾಜಶೇಖರನ ಎಡದೊಡೆಯೊಳ್ಳುಳಿತು ವಿಜ್ಞಾಪನಂಗೆಯ್ವಲ್ಲಿ ಮಹಾಭಕ್ತಿಯಿಂದ ಅತ್ಯಂತ ದೈನ್ಯಗೂಡಿ (ಸಕಪ್ಯ. ೬ ಪೀಠಿಕಾಪ್ರಕರಣ).

[ದೈನ್ಯ + ಕೂಡು$_1$]

ದೈನ್ಯದೃಷ್ಟಿ (ನಾ). ದೀನತನವನ್ನು ವ್ಯಕ್ತಪಡಿಸುವ ನೋಟ : ಪಿಡಿದಿರ್ದ ಶಿವನ ಮೆಲ್ಲಡಿಯಂ ಬಿಟ್ಟು ದೈನ್ಯ ದೃಷ್ಟಿಯಿಂ ಶಿವನ ಮೊಗಮಂ ನೋಡುತ್ತಿರಲ್ (ನಂಬಿರ.೧೬-೯೦); ಪೊಸಜೆಡೆಯೊಳ್ ತೊಡುಕಿ ನೊಸಲೊಳ್ ನಡೆಪಾಡಿ . . . ಕರಂಗಳೊಳ್ ವಿರಾಜಿಸಿ ಪದದಲ್ಲಿ ಬಿಳ್ದುವು ಭವಾನಿಯ ದೂನಿಯ ದೈನ್ಯದೃಷ್ಟಿಗಳ್ (ಗಿರಿಕ. ೫-೮೬).

[ದೈನ್ಯ + ದೃಷ್ಟಿ]

ದೈನ್ಯಭಾವ (ನಾ). ೧. ದೀನತನ ; ದೈನ್ಯ. ೨. ದುಃಖ ; ವ್ಯಥೆ : ಮುಂದೆ ನಿಂದಿರ್ದ ಮೇದಿನೀದೇವಿಯ ದೈನ್ಯಭಾವಮಂ ವಿರಿಂಚಿ ಕಾರುಣ್ಯಚಿತ್ತದಿಂ ನೋಡಿ (ಜಗವಿ. ೧-೨೭ ಪ) ; ತರಣಿಕುಲತಿಲಕನೊಯ್ಯನೆ ದೈನ್ಯಭಾವದಿಂ . . . ಸೌಮಿತ್ರಿಗಿಂತೆಂದನು (ಕೃಮಿಭಾ. ೧೮-೫೭).

[ದೈನ್ಯ + ಭಾವ$_2$]

ದೈನ್ಯವಚನ (ನಾ). ೧. ದೀನತನದಿಂದ ಕೂಡಿದ ಮಾತು. ೨. ದುಃಖವನ್ನು ತೋಡಿಕೊಳ್ಳುವ ವಾಕ್ಯ ; ಮೊರೆ : ವ್ಯಾಳಕುಳಾಂಗನಾಜನದ ದೈನ್ಯವಚನವರಂಪರೆಗೇಳ್ದು (ಜಗವಿ. ೩-೦೧೩ ಪ); ಓವಿ ಓ ಎನದಿರ್ದೊಡೆಂತೆಲೆ ದೇವ . . . ಸಂಗಮದೇವ ಎನುತತಿ ದೈನ್ಯವಚನದಲಿ (ಬಸಪು. ೨೨-೫೩). [ದೈನ್ಯ + ವಚನ]

ದೈನ್ಯವಡು 'ದೈನ್ಯಂಬಡು' ನೋ.

ದೈನ್ಯವದನ (ನಾ). ೧. ದೀನತನವನ್ನು ತೋರಿಸುವ ಮುಖ. ೨. ದೀನತನವನ್ನು ತೋರ್ಪಡಿಸುವ ಮುಖವುಳ್ಳವನು ; ದೀನ : ಕೈಯಂ ಮುಗಿದು . . . ದೈನ್ಯವದನನುಂ ಕಾರ್ಪಣ್ಯ ಕಾಯನುಮಾಗಿ (ಬಸರ. ೬-೪೪). [ದೈನ್ಯ + ವದನ]

ದೈನ್ಯವೃತ್ತಿ (ನಾ). ೧. ಬಹಳ ದೀನತನದಿಂದ ಕೂಡಿದ ಜೀವನ ; ಹೀನವಾದ ಬದುಕು : ಕೊಳನ ಬಿಡು ಕಾದೇಳು ಹಿಂದಣ ಹಳಿವ ತೊಳೆ . . . ಭೂವಳಯಮಾನ್ಯನು ದೈನ್ಯವೃತ್ತಿಯ ಬಳಸುವರೆ ಸುಡು ಮರುಳೆ ಕುರುಪತಿ ಕೈದುಗೊಳ್ಳೆಂದ (ಕುಮ್ಯಾಗ. ೫-೨೩). ೨. ದೀನಭಾವ ; ದೀನತನ ; ದೈನ್ಯ : ಅರಸ ದಶರಥನಾ ವಿಭಾಂಡುಕ ವರ ಕುಮಾರನ ಚರಣದಲಿ ತನ್ನರಸಿಯರು ಸಹ ದೈನ್ಯವೃತ್ತಿಯ ಭಕ್ತಿಭಾವದಲಿ . . . ಮೈಯಿಕ್ಕಿದನು (ತೊರರಾ. ೦-೬-೦೫). ೩. ಹೀನವಾದ ವ್ಯವಹಾರವುಳ್ಳುದು : ಗನ್ನಗತಕಂಗಳ ನೆಲೆಗಳಾಪನ್ನಿಧಿಗಳತಿಮೋಹ ಮಾಯಾಸನ್ನ ವರ್ತಿಗಳಸ್ಥಿರಂಗಳು ದೈನ್ಯವೃತ್ತಿಗಳು . . . ವಾರಸತಿಯರ ಮನಸುಗಳು (ಬಸಪು. ೪೦-೬೬). [ದೈನ್ಯ + ವೃತ್ತಿ$_2$]

ದೈರ್ಘ್ಯ (ನಾ). ೧. ಉದ್ದ ; ನೀಳ ; ಆಯಾಮ : "ಸು (ವ್ಯ)ಕ್ತಂ ದೈರ್ಘ್ಯನಾಮಮಱಿಗಾಯಾಮಂ" (ವಸ್ತುಕೋ. ೧೦೩-೦೫) ; ಅರಿರೌದ್ರಂ ಕರದೈರ್ಘ್ಯಮುಲ್ಲಸದಹೀನಾಲಂಕೃತಂ . . . ರಕ್ಷಿಕ್ಕೆ ಭೂಚಕ್ರಮಂ (ಜಗವಿ. ೦-೫) ; ಹಣೆಯಿಂಡ ಬಾಲದವರೆಗೆ ನೀಳವಾಗಿ ಮಾಡಿದ ಅಳತೆಯು ದೈರ್ಘ್ಯವೆನಿಸಿಕೊಳ್ಳುವುದು (ಸೌಗಂಧಿ. ೨೬೭-೯) ; ಇದು ಚರಮಪಾಳಿ ದೈರ್ಘ್ಯದಿಂ ಗುಣಿಯಿಸಿ ವಿಶೇಷಾಧಿಕಮಾಗಿ ಮಾಡುತ್ತಿರಲು (ಕ್ಷಪಣ. ೫೨-೨೨). ೨. ಎತ್ತರ. ೩. ವಿಶಾಲತೆ ; ಹರಹು : "ದೈರ್ಘ್ಯಂ, ಆಯಾಮಃ, ಆರೋಹಃ-೩ ಉದ್ದವಾಗಿರುವ ತಿರ್ಯಕ್ಪರಿಮಾಣ, ನೀಳವಾಗಿರುವಿಕೆ" (ಸಿದ್ಧಾಂತಿ. ೨೦೩). [ಸಂ.]

ದೈವ (ಗು). ೧. ದೇವರಿಗೆ ಸಂಬಂಧಪಟ್ಟ ; ದೇವರಿಗೆ ಸೇರಿದ. (ನಾ). ೨. ದೇವತೆ ; ದೇವರು ; ಭಗವಂತ : ಪದಿನಾಲ್ಕುಂ ರತ್ನಕ್ಕಂ ಮೊದಲೆನಗೀ ಚಕ್ರರತ್ನಮಿದಱಿಂ ಮೇಲಾವುದು ದೈವಮೆನಗಿದಯೋಧ್ಯೆಯನಿದು ಪುಗದೆ ತಱುಂಬಿ ನಿಂದ ಕಾರಣಮೇನೋ (ಆದಿಪು. ೧೪-೭) ; ಮಡಕೆ ದೈವ ಮೊಱ ದೈವ ... ದೈವ ದೈವವೆಂದು ಕಾಲಿಡಲಿಂಬಿಲ್ಲಾ ದೈವ ನೊಬ್ಬನೆ ಕೂಡಲಸಂಗಮದೇವ (ಬಸವ. ೫೬೩) ; ಎನ್ನ ಕರುಣಾಸಿಂಧುವೇ ನೀವೆನ್ನತಿ ಪ್ರಿಯಬಂಧುವೇ ನೀವೆನ್ನ ಸತ್ಕುಲದೈವವೇ ಮನೆದೈವವೇ ಅಕಟ (ಬಸಪು. ೩೬-೩) ; ದೈವದಾಧೀನದಲಿ ಜಗವಾ ದೈವ ಮಂತ್ರಾಧೀನ (ಕುಮ್ಯಾಉ. ೪-೫೦) ; ದೈವವು ಮಂತ್ರವು ತೀರ್ಥವು ವೈದ್ಯವು . . . ಲೋಗರಿಗಿವು ದಿಟಸಿದ್ಧಿಯನೀವುವು (ಇಂಡಾಪ. ೭೬-೬೬). ೩. ಕ್ಷುದ್ರದೇವತೆ ; ಪರಿಮಿತವಾದ ಪ್ರಭಾವವುಳ್ಳ ದೇವತೆ : ಲೋಗರ ಬೇಡಿಕೊಂಡುಂಬ ದೈವಂಗಳು ತಾವೇನ ಕೊಡುವುವು (ಬಸವ. ೫೫೫). ೪. ಅಧಿಕಾರಿ ; ಒಡೆಯ ; ಪ್ರಭು : ಜಗದೊಳು ಭೋಗಮೋಕ್ಷಂಗಳಿಗೆ ಶಿವನೇ ದೈವವಹುದು (ಬಸಪು. ೪೯-೧೨). ೫. ಜನ್ಮಾಂತರದಲ್ಲಿ ಮಾಡಿದ ಪುಣ್ಯಫಲ ; ಅದೃಷ್ಟ ; ಭಾಗ್ಯ ; ಸುಕೃತ : ದೈವವಿದಿರ್ಚಿ ಬಂದುದು ಜಗಜ್ಜಯಮಂ ತಳೆ ದೇವ (ಕಾದಂಪೂ. ೪೨೬) ; ಪುರುಷಂ ದೈವವೆ ಶರಣೆಂದಿರಲಾಗದು ತನಗೆ ತಾನೆ ಮಾಡದು ದೈವಂ (ಪಂಚತಂ. ೧೯೦-೨೦) ; ತನ್ನ ಚಿಂತೆಯದೊಂದು ದೈವದ ಗನ್ನಗತಕವದೆರಡು ಭಾವದ ಬನ್ನಣೆಯ ಬಗೆ ಮೂಱು ದೈವಧ ಭಿನ್ನಮುಖ ನಾಲ್ಕು (ಕುಮ್ಯಾಉ. ೩-೫) ; ದೈವ ಅಂದರೆ ಅದೃಷ್ಟ ಅಥವಾ ಕರ್ತಾ ಜೀವ (ಹಸಾರ. ೩-೧೦ ವಿಶೇಷಾರ್ಥ). ಕಾರ್ಯಸಾಧನೆಯಾಗಲು ಯತ್ನ ಮಾಡದಿದ್ದರೆ ನಮಗೆ ದೈವವು ಎಂತು ಸಹಾಯ ಮಾಡೀತು ? (ಸಾವಿತ್ರಿ. ೩) ; ಕಣ್ಣು ಕೊಂಡುಹೋದ ದೈವ ಮತೀಕೊಟ್ಟಿತು (ಗಾದೆ) ; ತಾನೊಂದೆಣಿಸಿದರೆ ದೈವವೊಂದೆಣಿಸಿತು (ಗಾದೆ). ೬. ದೆವ್ವ ; ಪಿಶಾಚಿ ; ಭೂತ : ಅರಸನ ಅಂಕಯಿಲ್ಲ ದೈವದ ಕಾಟವಿಲ್ಲ (ಗಾದೆ). ೭. (ಉಕ) ಸಮಾಜ ; ಕುಲದ ಹಿರಿಯರು : ಅವಳ 'ದೈವ'ದ ಗಂಡಸರು ತಮ್ಮ ವೃತ್ತಿಯನ್ನು ಕೈಕೊಳ್ಳಲು ಹೊಲ, ಕಾಡುಗಳಿಗೆ ಹೋಗಿದ್ದರೆ ಹೆಂಗಸರು ತಿರುಪೆಗೆ ಹೋಗಿ ಅದೆಷ್ಟೋ ಸಮಯ ಕಳೆದುಹೋಗಿದೆ (ಬನಸಿ. ೪೯). ೮. ಆಸ್ತಿ ; ಐಶ್ವರ್ಯ.

ದೈವ ತೆರೆ=ಅದೃಷ್ಟವುಂಟಾಗು : ದೈವ ತೆರೆದರೆ ಬಡವ ಬಲ್ಲಿದನಾನು (ರೂಢಿ). ದೈವದ ಕಲ್ಲು = ಕ್ಷುದ್ರದೇವತೆಗಳನ್ನು ಪೂಜಿಸುವವರು ದೇವತಾಪ್ರತಿನಿಧಿಯೆಂದು ಪೂಜಿಸುವ ಕಲ್ಲು,-ಪ್ರತಿಮೆ : ಅವರು ಒಂದುದಿನ ಗ್ರಾಮದ ದೈವದ ಕಲ್ಲನ್ನು ತಂದು, ತಮ್ಮ ಬಚ್ಚಲಮನೆಯಲ್ಲಿ ಹಾಸಿದರು (ಹುಚ್ಚುಮ. ೩೩). ದೈವದ ಕೊಡಿ = ದೇವರ ಬಾವುಟ: ಅದಕ್ಕೆ ವರುಷ ವರುಷ ದೈವದ'ಕೊಡಿ' ಕಟ್ಟಿಸುತಿದ್ದರು. ಆ ಬಳಿಕ ಅದನ್ನಾರಾದರೂ ಕದ್ದು ತಿಂದರೆ ಅವರು ದೈವದ ಕೋಪಕ್ಕೆ ತುತ್ತಾಗುವರೆಂದು ನಂಬಿಕೆ (ರಕ್ತರೂ. ೨). ದೈವದಚ್ಚು = "ದೇವರ ವಿಗ್ರಹಾದಿಗಳು ಬರೆದಿರುವ ಯಂತ್ರ" (ಪದ್ಯಸಾ. II, ೮೨೨ ಟೀಕು) : ಪರಕೆಯ ದೈವದಚ್ಚುಗಳನಚ್ಚರಿಯಾಗಿರೆ ಕಟ್ಟುವರ್ ಕೆಲರ್ ಕೊರಲೊಳ್ (ಪದ್ಯಸಾ. II, ೮೨೨; ಧರ್ಮಪ). ದೈವರ್= ಅದೃಷ್ಟಶಾಲಿಗಳು ; ಭಾಗ್ಯವಂತರು : ಕೈವಾರದೆ ಕೈಮತದಿಂ ಕೈವಾರದಿ ಗೆಲ್ದೆ ಲಜ್ಜಿತೆಯನೆಂತೆನೆ ಕೇಳ್ ದೈವರ್ಕೂಡಿದೊಡೆತ್ತಂ ದೈವಂ ಮರುಳಾದುದೆಂಬುದಂ ಕೇಳ್ದಱಿಯಾ (ಮದತಿ. ೧೦-೪೩). ದೈವುಳ್ಳತನ = ಶ್ರೀಮಂತಿಕೆ ; ಐಶ್ವರ್ಯ : ಸಂಸಾರದಲ್ಲಿ ನಮಗೆ ದೈವುಳ್ಳತನವಾಗಲಿ ಬಡತನವಾಗಲಿ ಬರುವದು (ಮುಂಬಯಿ. ೪-೧೯೦). ದೈವುಳ್ಳವ = ಐಶ್ವರ್ಯವಂತ ; ಧನಿಕ ; ಸಾಹುಕಾರ : ಅವನು ಬಡವನೇ ಆಗಲಿ, ದೈವುಳ್ಳವನೇ ಆಗಲಿ, ಈ ತರದ ಕೆಲವು ಸಣ್ಣ ದೊಡ್ಡ ಸಂಧಿಗಳು ಬಂದೇಬರುತ್ತವೆ (ಚರಿಸಂ. ೧೯೯) ; ದೈವುಳ್ಳವರಿಗೆ ದಯವೇ ಇಲ್ಲ ! ತಿತ್ತಿರಿ ತುಂಬಿದೆ ಕೂಳಿನ ಕೋಟೆ! (ಗರಿ. ೫೯-೧೧) ; ದೈವುಳ್ಳವರ ಮಗನೆಂಬ ಗರ್ವವಿದ್ದಿಲ್ಲ (ನಿರಾಭ. ೭೭). [ಸಂ.]

ದೈವಂಬೊಱಿಸು (ಕ್ರಿ). ಅದೃಷ್ಟವನ್ನೇ ನಂಬು ; ಅದೃಷ್ಟದ ಮೇಲೆ ಭಾರಹಾಕು : "ಯದ್ಭವಿಷ್ಯಃ, ದೈವಪರಃ-ಈ ೨ ದೈವಂಬೊರಿ[ಱಿ]ಸಿರ್ಪವಂ" (ಹಲಾಯು. ೬೨-೨೨೨). [ದೈವ + ಪೊಱಿಸು]

ದೈವಕಾರ್ತಿ (ನಾ). ಮಾಟ, ಮಂತ್ರ, ತಂತ್ರಗಳನ್ನು ಮಾಡುವ ಹೆಂಗಸು ; ಮಂತ್ರಗಾರ್ತಿ : ಆ ದೈವಕಾರ್ತಿ ಬಂದು ಮಾಯಾದೇವತೆಗಳನೀ ಪರಿಯಿಂದೊಲಿದಾರಾಧಿಸಿದಳು (ಕುರಾಸಾಂ. ೨೫-೦೧೭).

[ದೈವಕಾಱ + - ತಿ$_1$ (< -ಇತ್ತಿ)]

ದೈವಕಾಱ (ನಾ). ಮಾಟ, ಮಂತ್ರ, ತಂತ್ರಗಳನ್ನು ಮಾಡುವವನು ; ಮಂತ್ರಗಾರ ; ಮಾಟಗಾರ. 'ದೈವಕಾರ್ತಿ' ಪರಾ.

[ದೈವ + - ಕಾಱ]

ದೈವಕೃತ (ಗು). ೧. ಅದೃಷ್ಟದಿಂದ ಮಾಡಿದ,–ಉಂಟಾದ: ನೀವು ಸೇನಾಪತ್ಯವನು ಸಂಭಾವಿಸಿರೆ ಸಾಕೆನ್ನು ವಿಗಿಲಾ ದೈವಕೃತ ಪೌರುಷವ ನಾಳಿನೊಳಱಿಯಬಹ್ಮುದೆಂದ (ಕುವ್ಯಾಶ. ೧-೧೮). ೨. ಅದೃಷ್ಟ; ದೈವ.

[ದೈವ + ಕೃತ]

ದೈವಕೃತಿ (ನಾ). ದೇವತೆಗಳು ಮೆಚ್ಚುವಂತಹ ಕಾರ್ಯ: ನೀವು ಮೊದಲಲಿ ಬೆಸಸಿದಿರಿ ಮಾಯಾವಿಗಳ ಮಾಯೆಯಲಿ ಗೆಲುವುದು ದೈವಕೃತಿಯಿದು ರಾಜವಂತ್ರದ ಸಾರತರವೆಂದು (ಕುವ್ಯಾಗ. ೬-೪೪).

[ದೈವ + ಕೃತಿ]

ದೈವಗತಿ (ನಾ). ಅದೃಷ್ಟದ ಘಟನೆ; ಅದೃಷ್ಟದ ಪರಿಣಾಮ; ದೈವೇಚ್ಛೆ: ದೈವಗತಿಗಾರಳಲಿ ಮಾಡುವುದೇನೆನುತ ನುಡಿಸಿದನು ಕುರುವತಿಯ (ಕುಪ್ಪಾಗ. ೬-೨).

[ದೈವ + ಗತಿ]

ದೈವಗೇಡಿ (ನಾ). ಅದೃಷ್ಟಹೀನ; ದಂರ್ದೈವಿ; ದುರದೃಷ್ಟವಂತ: ಇದಕ್ಕೆ ದೈವಗೇಡಿಯಾದ ನಾನು ಇನ್ನೇನು ಮಾಡಲಿ (ಉಂಗಾಚ. ೩೦-೩೮ ವ); ಈ ದೈವಗೇಡಿಗಳಿಗೆ ದೇವರನ್ನು ಬಿಟ್ಟು ಯಾರೂ ಕಾಯೋರಿಲ್ಲ (ಪ್ರಭಾಶ್ರ. ೪೭).

[ದೈವ + ಕೇಡು + – ಿ]

ದೈವಘಟನೆ (ನಾ). =ದೈವಗತಿ: ಈಸು ಪೌರುಷ ದೈವಘಟನೆಯೊಳೀಸು ಪರಿಯಂತಾಯ್ತು (ಕುವ್ಯಾಸ. ೧೦-೬); ಆ ಮಹಾಗಿರಿದುರ್ಗವಿದು ತಾ ವ್ಯೋಮಕೇಶನು ಗೆಲಿದ ದುರ್ಗದ ಕೈಮೆಗಿವ್ಮಡಿಸಾಧ್ಯವಾದುದು ದೈವ ಘಟನೆಯಲಿ (ತೂರಶಾ. ೫೪-೧೪).

[ದೈವ + ಘಟನೆ]

ದೈವಚಿಂತಾಸಕ್ತ (ನಾ). ಭಗವಂತನ ಧ್ಯಾನದಲ್ಲಿ ನಿರತವಾದುದು: ದೈವಚಿಂತಾಸಕ್ತವಾದನ್ನ ಹೃದಯದೊಳು ಹೊಮ್ಮಲಂತಃಶರ್ಮಲಹರಿ ಲಹರೀ (ಪುಶಿದೀ. ೪೪-೧೦).

[ಸಂ.]

ದೈವಜ್ಞ (ನಾ). ಗ್ರಹಗತಿಯನ್ನು ತಿಳಿದು ಜನರಿಗೆ ಮುಂದೆ ನಡೆಯುವ ಶಂಭಾಶಂಭ ಫಲಗಳನ್ನು ತಿಳಿಸುವವನು; ಭವಿಷ್ಯಜ್ಞ; ಜ್ಯೋಯಿಸ: "ಕಾರ್ತಾಂತಿಕಂ . . . ದೈವಜ್ಞನಾದಿಶಿಗಣಕಂ ತಾನಕ್ಕುಂ" (ವಸ್ತು ಕೋ. ೬೧-೩೦); ಮಕ್ಕಳನಾರ್ಗೆ ಕುಡುವಮೆಂದು ದೈವಜ್ಞನಂ ಬೆಸಗೊಂಡೊಡೆ (ಪಡ್ಮಾರಾ. ೬೧-೩೧; ದೈವಜ್ಞವದನತಿಲಕಂ ... ಜಾತಕತಿಲಕಂ ತ್ರೈಲೋಕ್ಯ ತಿಲಕಮಿದು ಕೇವಲಮೇ (ಜಾತಕ. ೩೪-೩೮); ಚಂಡ ದೈವಜ್ಞನನಧಿಕ ಗುಣಮಂಡನನ ಬಹುಶಾಸ್ತ್ರಪಠಣನ ಪಂಡಿತನ ಪೌರೋಹಿತನ ಮಾಡುವುದು (ಕುಪ್ಪಾಉ. ೩-೬೬).

[ಸಂ.]

ದೈವಜ್ಞೆ (ನಾ). ಜ್ಯೋತಿಷ್ಯವನ್ನು ತಿಳಿದಿರುವವಳು.

[ಸಂ. ದೈವಜ್ಞಾ]

ದೈವತ (ಗು). ೧. ದೇವರಿಗೆ ಸಂಬಂಧಿಸಿದ,– ಸೇರಿದ. (ನಾ). ೨. ದೇವತೆ; ದೇವರಂ: "ಆದಿತ್ಯಃ . . . ಅಮೃತಾಶನಃ, ಅನಿಮಿಷಃ, ದೇವಃ (ತಥಾ) ದೈವತಂ–ಈ ೨೧ ದೇವರ್ಕಳ ಪೆಸರ್" (ಹಲಾಯು. ೨-೪); ಬಂದೆವು ಇಕೊ ಹಿಮವರ್ವತ! . . . ನಿಂತಿದೆ ಅಕೊ ಶಿವದೈವತ! (ಕ್ರೌಂಪ. ೨೧-೧೧); ಪಂತರ ಮನೆಯ ದೇವರನ್ನು ತನ್ನ ದೈವತವನ್ನಾಗಿ ಮಾಡಿಕೊಂಡಳು (ದೀಪಹ. II, ೧೭೮); ಕಲೋಪಾಸಕನಿಗೆ ಈ ಎರಡೂ ಮೂಲಭೂತ ದೈವತಗಳು ಕೊನೆಗೆ ಒಂದಾಗಿಯೇ ಕಾಣಿಸಿಕೊಳ್ಳುತ್ತವೆ (ಸಪ್ಕಾ. ೭೦).

[ಸಂ.]

ದೈವದತ್ತ (ನಾ). ದೇವರಿಂದ ಕೊಡಲ್ಪಟ್ಟುದಂ; ದೈವಿಕವಾಗಿ ಬಂದಂದಂ; ಶ್ರೇಷ್ಠವಾದುದಂ: ನೋಡು ನಿನ್ನ ಕಲೆ ದೈವದತ್ತವಾದದ್ದು (ಹುತಗೀ. ೧೩೦).

[ದೈವ +ದತ್ತ]

ದೈವದುರ್ವಿಪಾಕ (ನಾ). ವಿಧಿಯಂ ದಂಷ್ಟಪರಿಣಾಮಂ; ದಂರ್ದೈವ: ದೈವದುರ್ವಿಪಾಕದಿಂದ ಆ ಶ್ರೀಮಂತ ದರಿದ್ರನಾಗಿಬಿಟ್ಟ (ರೂಢಿ).

[ದೈವ + ದುರ್ವಿಪಾಕ]

ದೈವದೂರ (ನಾ). ಭಾಗ್ಯದಿಂದ ದೂರವಾದವನಂ; ಅದೃಷ್ಟಹೀನ; ದಂರ್ದೈವಿ: ದೈವದೂರರು ಧರ್ಮಹೀನರು ನೆಯ್ವ ನೆಯ್ಗೆಗಳನುತ ಮಿಗಿಬಿಸುಸುಯ್ದು ತಿರ್ದರು ಕರ್ಣಕೃಪಗುರುನಂದನಾದಿಗಳು (ಕುವ್ಯಾದ್ರೋ. ೧೪-೪೬); ದೈವದೂರರಿಗೆಂತು ಸೇರುವುದುಚಿತ ಬೋಧೆಗಳು (ಕಾಶಿರಾ. ೨೩-೦೫); ಭವಣಿಗೆಗೆ ನೆಜಿ ಬರಿಸಿ ಕೊಲುವನಲಾ ಕೃತಾಂತನು ದೈವ ದೂರರನು (ನಿಘಾಗ. ೨-೧-೪).

[ದೈವ + ದೂರ]

ದೈವದ್ರೋಹ (ನಾ). ದೇವರುಗಳ ಬಗೆಗೆ ಮಾಡುವ ಅಪಚಾರ: ದೇವಾಲಯ ಮೊದಲಾದುವುಗಳ ಸ್ವತ್ತನ್ನು ಅಪಹರಿಸುವುದೇ ಮೊದಲಾದ ದುಷ್ಕೃತ್ಯ: ಗೌರುವಿರೋಧ ಮಹೀಬುಧರ ಮತ್ಸರವು ದೈವದ್ರೋಹ ... ವೆಂಬಿವನರವಿಸದಂಗೈಸೆ ಭೂವನ ಸಿರಿಗೆ ಮೊಳೆಯದೆ ಕೇಡು (ಕುವ್ಯಾಉ. ೩-೬೯); ಆವ ವಿಪ್ರದ್ರೋಹವೋ ತನಗಾವ ದೈವ ದ್ರೋಹವೋ ಶಿವ ಆವ ವೃಣ್ಯವನಳಿಸಿದನೊ (ಕಾಶಿರಾ. ೩೦-೪೩); ಬಗೆವೊಡಿವು ಮುನ್ನ ಮಾಡಿರ್ದ ದೈವದ್ರೋಹದಘದಿಂದೆ ಬನದ ಪೊಱ ವಳಯದೊಳ್ಪಹುಕಂಟಕಿಗಳಾಗಿ ಬಂದು ಸಂಭವಿಸಿರಲ್ ತಳಿತ ಹೊಂಗೇ ದಗೆಗಳು (ಕೃಮಿಭಾ. ೩-೩೩).

[ದೈವ + ದ್ರೋಹ]

ದೈವದ್ರೋಹಿ (ನಾ). ದೇವರಿಗೆ ದ್ರೋಹವನ್ನು ಮಾಡುವವನು,– ಅಪಚಾರ ಮಾಡುವವನು: ದೈವದ್ರೋಹಿಗೆತ್ರಣ ಲೇಸು ಬಹುದೆಂದ (ಕುವ್ಯಾದ್ರೋ. ೧೦-೧೪); ದೈವದ್ರೋಹಿಗಳು ನಮಗೆ ಆರಿವಿಜಯವೆಲ್ಲಿಯದು ನೀವ್ ಮನಬಿಡದಿರೈ ನಿಮ್ಮನ್ವಯವ ಸಂಹರಿಸಿದಿರಿ ಸಾಕೆಂದು ಸಂಜಯ ತೂಗಿದನು ಶಿರವ (ಕುವ್ಯಾಳ. ೧-೦೩); ಏಳು ದೈಹದ್ರೋಹಿ ಭೂದಿವಿಜಾಳಿ ನಿಂದಕ ನಿಂದಿರಸುರರ ಕಾಲಕರ್ಮದ ಮೃತ್ಯು ಬಂದಿದೆ ನೋಡು ಕಣ್ದೆಱೆದು (ತೂರಶಾ. ೬-೪೩-೩೦).

[ಸಂ. ದೈವದ್ರೋಹಿನ್]

ದೈವಪರ (ನಾ). ೧. ದೇವರಲ್ಲಿ ಒಲವುಳ್ಳವನು; ದೈವಭಕ್ತ: ಅವನು ಒಳ್ಳೆಯ ಸಾತ್ವಿಕ ಮತ್ತು ದೈವಪರ (ರೂಢಿ). ೨. ಕೇವಲ ಅದೃಷ್ಟವನ್ನೇ ನಂಬಿಕೊಂಡಿರುವವನಂ; ಪುರುಷಪ್ರಯತ್ನವನ್ನು ಮಾಡದಿರುವವನು: ಜ್ಞಾತಿಬಹಿಷ್ಕೃತಂ ವ್ಯಸನಿ ದೈವಪರಂ ಶಿಶು ದೀರ್ಘರೋಷಿ . . . ಎನಿಪ ನರಪನೊಳಿಂದುಂ ವಿಜಿಗೀಷುಗಳಪ್ಪ ಮಹೀಭುಜರೆಂದುಂ ಸಂಧಿವಾಡರ್ (ಪಂಕತಂ. ೪೩೦-೬).

[ಸಂ.]

ದೈವಪುರುಷ (ನಾ). ದೇವಾಂಶದಿಂದ ಹುಟ್ಟಿದವನು; ದೇವಾಂಶ ಸಂಭೂತ; ಮಹಾತ್ಮ: ಮುನಿವನ ಬರಿಸಲೆನ್ನಳವಹುದೆ ಕರಳಿದಡುರುಹಿ ಕಳೆಯನೆ ದೈವಪುರುಷರು ಸುಲಭರೇ (ಕಾಶಿರಾ. ೧-೪೧).

[ದೈವ + ಪುರುಷ]

ದೈವಪ್ರೇರಣೆ (ನಾ). ಅಂತಃಪ್ರೇರಣೆ; ತಾನಾಗಿಯೇ ಉಂಟಾಗುವ ಅಂತರಂಗ ಪ್ರವೃತ್ತಿ: ಹೊಮ್ಮಗವೆತ್ತ ವಾನರರ ಸೇರುಪಡಿ ತಾನೆತ್ತ ದೈವಪ್ರೇರಣೆಯದೈ ಸಲ್ಲದಿದು ನಾವಾರು ಮಾಡುವುದಲ್ಲ (ತೂರಶಾ. ೬-೫೧-೮೪).

[ದೈವ + ಪ್ರೇರಣೆ]

ದೈವಬಲ, ದೈವಬಳ (ನಾ). ಅದೃಷ್ಟದ ಶಕ್ತಿ,–ಪ್ರಭಾವ,–ಮಹಿಮೆ: ಕುರುವತಿಗಿಲ್ಲ ದೈವಬಲಮಾಜಿಗೆ ಮೇಲ್ಮಲಿಗೆಯ್ವರಾಗಳುಂ ಗುರು ಗುರು ವೃತ್ರ ಸಿಂಧುಸುತರಾಳ್ದನುಮೆನ್ನನೆ ನಚ್ಚಿ ವೆರ್ಚಿ ಮುಂ ವೊರೆದನಿದಿರ್ಚಿ ಕಾದುವರುಮೆನ್ನಯ ಸೋದರರೆಂತು ನೋಡಿ ಕೊಕ್ಕರಿಸದೆ ಕೊಲ್ವೆನೆನ್ನೊಡಲನಾಂ ತವಿವೆಂ ರಣರಂಗಭೂಮಿಯೊಳ್ (ಪಂಪಭಾ. ೯-೭೦); ಆಗಳ ವಗತವಿಷಾದರುಮುಪಗತಪ್ರಮೋದರುಮಾದಂತಃ ವು ರಾ ವ ರೋ ಧ ಜನಂಗಳೆಲ್ಲಂ ತನ್ನ ಮೇಗಿಲ್ಲದ ಬಲ್ಲಾಳ್ತನಮುಮಂ ದೈವಬಲಮುಮಂ ಮೆಚ್ಚಿದು (ಶಾಂತಿಪು. ೯-೩೪ ವ): ದೈವಪೌರುಷದೊಳಗೆ ಶಿವ ಶಿವ ದೈವಬಲವೇ ಬಲವಲಾ (ಕುವ್ಯಾದ್ರೋ. ೨೪-೪೬). ದೈವಬಳಃ ಪಾಂಡವರ್ ಬಳಸಂಪನ್ನರುದಗ್ರದೈವಬಳಸಂಪನ್ನರ್ (ಪಂಪಭಾ. ೧೦-೩).

[ದೈವ + ಬಲ್ಯ]

ದೈವಬಳ 'ದೈವಬಲ' ನೋ.

ದೈವಭಕ್ತಿ (ನಾ). ದೇವರ ಮೇಲಿನ ಅತಿಶಯವಾದ ಪ್ರೀತಿ: ತಾಯದಿರು ಇಂತ ದೃಢಮನ ದೈವಭಕ್ತಿ ಧೃತಿ ಸತ್ಯಚರಿತವ ಮೆರೆಯಬೇಕು (ನವರಾ. II, ೩೩); ಅವರು ಬಾಳುವುದು ದೈವಭಕ್ತಿಪೂರಕವಾಗಿ ಸಾಯುವುದು ದೈವಭಕ್ತಿಪೂರಕವಾಗಿ (ಭಾರದ. ೩೨೬). [ದೈವ + ಭಕ್ತಿ]

ದೈವಮಾಯೆ (ನಾ). ವಿಧಿಯ ಲೀಲೆ,-ವಿಲಾಸ: ದೇವಿಯಾರೆಂದಱಿಯೆಲಾ ನೀನಾವನೆಂಬುದ ಮಱೆದೆ ಶಿವ ಶಿವ ದೈವಮಾಯೆಗೆ ಸಂದೊಡುಳಿದವರಳವೆ (ಕೌಶಿರಾ. ೪೩-೩೯). [ದೈವ + ಮಾಯೆ]

ದೈವಯಂತ್ರ (ನಾ). ದೇವರ ಹತೋಟಿ,- ನಿಯಂತ್ರಣ; ದೇವರ ಪ್ರಭುತ್ವ,-ಆಜ್ಞೆ: ಮಂತ್ರಿ ಮತ್ಸರದಿಂದೆ ಮುಂದೆ ತಪ್ಪುವ ದೈವಯಂತ್ರಭೇದವನಱಿಯದಿಂದುಹಾಸನ ಮೇಲೆ ತಂತ್ರಮಂಪಣ್ಣಿಕೊಲಿಸುವೆನೆಂದು ಕಳುಹಿದಂ ಕುಂತಳೇಂದ್ರನ ನಗರಿಗೆ (ಜೈಮಿಭಾ. ೨೯ ಸೂಚನೆ). [ದೈವ + ಯಂತ್ರ]

ದೈವಯಜ್ಞ (ನಾ). ದೇವರ ಪ್ರೀತ್ಯರ್ಥವಾಗಿ ಮಾಡುವ ಯಾಗ: ಬ್ರಹ್ಮಯಜ್ಞ ಪಿತೃಯಜ್ಞ ದೇವಯಜ್ಞ ಭೂತಯಜ್ಞ ಮನುಷ್ಯಯಜ್ಞ- ಈ ಐದು ಮಹಾಯಜ್ಞಗಳು (ಅರ್ಯಧ. ೧೮೭). [ದೈವ + ಯಜ್ಞ]

ದೈವಯೋಗ (ನಾ). ಅದೃಷ್ಟದ ಘಟನೆ,-ಸಂಬಂಧ; ಜನ್ಮಾಂತರದ ಪುಣ್ಯಪಾಪಕರ್ಮಗಳ ಫಲವಾಗಿ ಘಟಿಸುವ ಸಂಬಂಧ: ಅರಸ ಕೇಳೈ ದೈವಯೋಗವ ಪರಿಹರಿಸಲಾರಳವು (ಕುಪ್ಯಾಗ. ೪-೪೨); ದೈವಯೋಗದಿಂದ ನೀನು ತಪ್ಪಿಸಿಕೊಂಡು ಬಂದೆ (ಶಾಕುಂತ. ೯೨-೧೦); ಈ ವಿಂತ್ರನು ದೈವಯೋಗದಿಂದಲೇ ಪ್ರಾಪ್ತನಾದನು (ಮಂಜುಕ. ೨); ದೈವಯೋಗದಿಂದ . . . ಅಲ್ಲೀ ಸಮೀಪದಲ್ಲಿ ಒಂದು ಮರದ ಟೊಂಗೆಯು . . . ಅವನ ದೃಷ್ಟಿಗೆ ಬಿತ್ತು (ಮುಂಬಯಿ. ೪-೩೮). [ದೈವ + ಯೋಗ]

ದೈವರೂಪು (ನಾ). ದೇವರ ಸ್ವರೂಪ; ದೇವತಾಸ್ವರೂಪ: ತನ್ನ ನೆನಹಿನವೋಲು ಕಾರ್ಯವು ಚೆನ್ನಹಡೆ ಲೋಕಕ್ಕೆ ತಾ ಬೇರಿನ್ನು ದೈವವದೇಕೆ ತಾನೇ ದೈವರೂಪೆಂದ (ಕುಪ್ಯಾಉ. ೩-೩). [ದೈವ + ರೂಪು]

ದೈವರೇಷೆ (ನಾ). ಅದೃಷ್ಟದ ಗೆರೆ,-ಬರಹ; ಹಣೆಬರಹ; ಭಾಗ್ಯರೇಖೆ: ಒಡಲ ನೂಲಿನಿಂದ ನೇಯುವಂತೆ ಜೇಡ ಜಾಲಾ ತನ್ನ ದೈವರೇಷೆ ಬರೆಯುವಂತೆ ತಾನೆ ಭಾಲಾ (ನಾದಲೀ. ೮೪-೧೦); ಪ್ರತಿಯೊಂದು ಶಬ್ದಕ್ಕೂ ಅದರದರ ದೈವರೇಷೆಯನ್ನು ಕೊರೆಯಿಸುವ ಒಂದು ಜನ್ಮಕುಂಡಲಿ ಸಿದ್ಧವೇ ಆಗಿದೆ (ಭಾಷಾಶಾ. ೧೩೮). [ದೈವ + ರೇಷೆ]

ದೈವರ್ದ್ಧಿ (ನಾ). ಅದೃಷ್ಟದ ಸಮೃದ್ಧಿ,-ಹೆಚ್ಚಳ,-ಅತಿಶಯ: ದೇವರೊಳ್ ಕೆಲರ್ಗೆ ಜಾತಿಸ್ಮರಣಂ ಕೆಲರ್ಗೆ ಧರ್ಮಶ್ರದಣಂ ಕೆಲರ್ಗೆ ಜನಮಹಿಮಾದರ್ಶನಂ ಕೆಲರ್ಗೆ ದೈ[ವಾಕಾಂ. ದೇ] ವರ್ದ್ಧಿದರ್ಶನಂ ಇಂತು ಸಹಸ್ರಾರಕಲ್ಪಂಬರಂ ಅಕ್ಕುಂ (ತತ್ವಪ್ರ. ೧೩). [ದೈವ + ಋದ್ಧಿ]

ದೈವವಂತ (ನಾ). ಭಾಗ್ಯವಂತ; ಧನಿಕ: ಯಾರಾದರೂ ದೈವವಂತರ ಕನ್ಯೆಯನ್ನು ಆರಿಸಿ ತಂದರೆ ಸಿಗುವ ಅಲ್ಪಸ್ವಲ್ಪ ವರದಕ್ಷಿಣೆಗೆ ಒಡೆಯನು ನಾನಲ್ಲದೆ ಇನ್ನಾರು? (ಬೆಟ್ಟಹೊ. ೪೭). [ಸಂ. ದೈವವತ್]

ದೈವವಶ (ನಾ). ಅದೃಷ್ಟ; ಭಾಗ್ಯ: ದೈವವಶದಿಂದ ವಿವಾಹ ಸಂಭ್ರಮಗಳೆಲ್ಲ ಮುಗಿದ ಮೇಲೆ ಅದು ವೆಂಕಟರಾಮನ ಗಮನಕ್ಕೆ ಬಂದಿತು (ಗೋಪುರ. ೧೬೨). [ದೈವ + ವಶ]

ದೈವವಶಾತ್ (ಅ). ಭಾಗ್ಯವಿಶೇಷದಿಂದ; ಸುಯೋಗದಿಂದ; ಅದೃಷ್ಟವಶಾತ್: ಅವರು ದೈವವಶಾತ್ ಇಂದು ಅಪಘಾತದಿಂದ ಪಾರಾದರು (ರೂಢಿ). [ಸಂ.]

ದೈವವಾಣಿ (ನಾ). ದೇವರು ಕೊಟ್ಟ ತಿಳುವಳಿಕೆ; ದೇವರ ಆದೇಶ; ಅಂತರ್ವಾಣಿ: ಆ ದೈವವಾಣಿಯು ಬೇಡವೆಂದುದನ್ನು ಆತನು ಮಾಡುತ್ತಿರಲಿಲ್ಲವಂತೆ (ಸೋಕ್ರಮ. ೨೦). [ದೈವ + ವಾಣಿ$_1$]

ದೈವವಿಡಂಬನೆ (ನಾ). ಅದೃಷ್ಟದ ದುರ್ವಿಲಾಸ; ದೈವದ ಮೋಸ: ತನ್ನಂತಹ ನತದೃಷ್ಟನ ಮುಂದೆ ಲೋಲಾನಂತಹ ಲಾವಣ್ಯವತಿಯು . . . ಯಾಚಿಸುವುದು ದೈವವಿಡಂಬನೆಯೆಂದುಕೊಂಡನು (ಜಯಂತ. ೧೬೨). [ದೈವ + ವಿಡಂಬನೆ]

ದೈವವಿದ (ನಾ). = ದೈವಜ್ಞ: ದೈವವಿದನಂಗನೆಯೊಳ್ ಕೆಳೆಗೊಳ್ವವಂ . . . ಕುಳೀರಸಂಭವಂ (ಜಾತತಿ. ೧೭-೪). [ಸಂ. ದೈವವಿದ್]

ದೈವವಿದ್ವಿಷ್ಟ (ನಾ). ದೇವರಿಗೆ ವಿರೋಧಿಯಾದವನು; ದೇವರ ಶತ್ರು: ಅವನಿಂದೆಯುಂ ದೈವವಿದ್ವಿಷ್ಟರಾರುಂಟು (ಮೂರುನಾ. ೧೩೫-೮೭೪). [ದೈವ + ವಿದ್ವಿಷ್ಟ]

ದೈವವಿಮುಖ (ನಾ). ಪ್ರತಿಕೂಲವಾದ ಅದೃಷ್ಟವುಳ್ಳವನು: ದುರ್ದೈವಿ; ದುರದೃಷ್ಟವಂತ: ದೈವವಿಮುಖಗೆ ತಂದೆತಾಯ್ಗಳೆ ಮೃತ್ಯುಮಾರಿಗಳು (ಕೌಶಿರಾ. ೩೬-೬೦). [ದೈವ + ವಿಮುಖ]

ದೈವವಿಸೂತ್ರ (ನಾ). ಬ್ರಹ್ಮಸಂಕಲ್ಪ; ವಿಧಿ ನಿಯಮ; ಪೂರ್ವಜನ್ಮದ ಕರ್ಮಾನುಸಾರವಾಗಿ ಇದು ಹೀಗೆಯೇ ಆಗಬೇಕೆಂಬ ನಿಯಮ; ಭವಿತವ್ಯತೆ: ದೈವವಿಸೂತ್ರಮಂ ಪುರುಷಕಾರಂ ಮೀಱಲೇನಕ್ಕುಮೇ (ಜಗವಿ. ೩-೧೯). [ದೈವ + ವಿಸೂತ್ರ]

ದೈವವಿಹೀನ (ನಾ). ಅದೃಷ್ಟಹೀನ; ದೌರ್ಭಾಗ್ಯವಂತ: ಏಸು ಬಲವೆನಿತೈಶ್ವರಿಯವಿದ್ದೇಸು ಭಟರೆನಿತಗ್ಗಳೆಯರಿದ್ದೇಸಱಲಿ ಫಲವೇನು ದೈವವಿಹೀನರಿವರೆಂದ (ಕುಪ್ಯಾಗ. ೩-೪); ಭಾವಿಸಿದಿರೇ ಜಾಂಬವರೆ ಸದ್ಭಾವದಲಿ ನೀವುತ್ತರಾಯಿಗಳಾವು ದೈವವಿಹೀನರಾದೆವು (ತೊರರಾ. ೬-೩೧-೩೧). [ದೈವ + ವಿಹೀನ]

ದೈವವ್ಯವಸಿತ (ನಾ). ದೈವ ಸಂಕಲ್ಪ; ದೈವೇಚ್ಛೆ: ಇನ್ನು ದೈವವ್ಯವಸಿತದೆ ಫಲಿಸುವುದಲಾ ಕೌರವನ ಸಿರಿ ಪಣ್ಯಾಂಗನಾವಿಭ್ರಮವ ವರಿಸಿತಲಾ (ಕುಪ್ಯಾಗ. ೪-೬೦). [ದೈವ + ವ್ಯವಸಿತ]

ದೈವಶಾಲಿ (ನಾ). ಅದೃಷ್ಟವಂತ; ಭಾಗ್ಯವಂತ; ಧನ್ಯ. [ಸಂ. ದೈವಶಾಲಿನ್]

ದೈವಶಿಕ್ಷೆ (ನಾ). ದೇವರು ಕೊಡುವ ಶಿಕ್ಷೆ; ದೇವರಿಂದುಂಟಾಗುವ ತೊಂದರೆ,-ಕ್ಲೇಶ. [ದೈವ + ಶಿಕ್ಷೆ]

ದೈವಶಿಲ್ಪಿ (ನಾ). ದೇವತೆಗಳ ಬಡಗಿ; ಸ್ವರ್ಗಲೋಕದ ಶಿಲ್ಪಿ: ಎರಡನೆಯದಾಗಿ "ತ್ವಷ್ಟಾ" ಎಂಬ ದೈವಶಿಲ್ಪಿಯ ಹೆಸರು ಋಗ್ವೇದದಲ್ಲಿಯೇ ಉಕ್ತವಾಗಿದೆ (ಭಾರದ. ೩೦೯). [ದೈವ + ಶಿಲ್ಪಿ$_1$]

ದೈವಸಂಕಲ್ಪ (ನಾ). = ದೈವವಿಸೂತ್ರ: ನಾನು ಆ ದಿನ ಮನೆಯಲ್ಲಿರಲಿಲ್ಲ, ಅವನಿಗೂ ಇದು ಯಾರ ಮನೆ ಎಂಬುದೂ ತಿಳಿದಿರಲಿಕ್ಕಿಲ್ಲ. ಎಂತಹ ದೈವಸಂಕಲ್ಪ! (ಕರುಕ. ೨೩೯). [ದೈವ + ಸಂಕಲ್ಪ]

ದೈವಸನ್ನಿಧಿ (ನಾ). ದೇವರ ಸಾನ್ನಿಧ್ಯ: ದೇವರ ಸಮೀಪದಲ್ಲಿ ಇರುವಿಕೆ: ಸಾಕ್ರಟೀಸನ ಸ್ನೇಹಿತನೊಬ್ಬನು ಡೆಲ್ಫಿ ಎಂಬ ಪ್ರಸಿದ್ಧಕ್ಷೇತ್ರಕ್ಕೆ ಹೋಗಿ, ಅಲ್ಲಿಯ ದೈವಸನ್ನಿಧಿಯಲ್ಲಿ . . . ಕೇಳಲಾಗಿ, "ಇಲ್ಲ" ಎಂದು ಆ ದೇವತೆಯು ಉತ್ತರಕೊಡಿಸಿತಂತೆ (ಸೋಕ್ರಮ. ೨೦). [ದೈವ + ಸನ್ನಿಧಿ]

ದೈವಸಹಾಯ (ನಾ). ದೇವರ ಕೃಪೆ,-ಕರುಣೆ: ದೈವಸಹಾಯವಿದ್ದರೆ ಯಾವ ಕಾರ್ಯವೂ ಸುಲಭವಾಗಿ ನಡೆಯುತ್ತದೆ (ರೂಢಿ). [ದೈವ + ಸಹಾಯ]

ದೈವಸಾಕ್ಷಾತ್ಕಾರ (ನಾ). ದೇವರನ್ನು ಕಣ್ಣಾರೆ ನೋಡುವಿಕೆ; ದೇವರ ಪ್ರತ್ಯಕ್ಷ ದರ್ಶನ: ತಾನು ಪಡೆದ ಅನುಭವವು ದೈವಸಾಕ್ಷಾತ್ಕಾರವೆಂದೂ, ಆದೇ ಪರಮಸತ್ಯವೆಂದೂ ಅವನು ಬಗೆಯುತ್ತಾನೆ (ದೂರಸ. ೨೩೧). [ದೈವ + ಸಾಕ್ಷಾತ್ಕಾರ]

ದೈವಸಾಧನೆ (ನಾ). ದೇವತ್ವವನ್ನು ಪಡೆಯಲು ಮಾಡುವ ಸಾಧನೆ; ಆಧ್ಯಾತ್ಮ ಸಾಧನೆ: ಆದಿಯನ್ನು ತಿಳಿಯಲು ಆಶಿಸುವ ಇಂತಹ ಕುತೂಹಲ ಮನೋಭಾವ ತಾನೇ, ಮನುತ್ಯನನ್ನು ದೈವಸಾಧನೆಗೆ ಎಳೆದಿರುವುದು (ನಿಜಲಿಂ. ೫೫). [ದೈವ + ಸಾಧನೆ]

ದೈವಸೂತ್ರ (ನಾ). = ದೈವವಿಸೂತ್ರ: ಅರಸ ಕೇಳುವವಾಸಗಳು ಜಾಗರ ಗಳಮಲ ಬ್ರಹ್ಮಚರಿಯದ ನಿರತಿಶಯ ಸುವ್ರತವು ದೊರಕಿತು ದೈವ ಸೂತ್ರದಲಿ [ಪಾಣಾಂ. ಗತಿಯಿಂದ] (ತೊರಣಾ. ೬-೪೫-೮). [ದೈವ+ಸೂತ್ರ]

ದೈವಸೃಷ್ಟಿ (ನಾ). ದೇವರಂ ಉತ್ಪತ್ತಿಮಾಡಿದಂದು; ದೇವರು ನಿರ್ಮಿಸಿದಂದು; ಜಗತ್ಸೃ: ದೈವಾನುಗ್ರಹದಿಂದ ಅರಳಿದ ಪ್ರತಿಭಾಪುಷ್ಪ ಮಾರ್ಗಮಧ್ಯದಲ್ಲಿ ಅದಷ್ಟು ದೈವಸೃಷ್ಟಿಯ ಸೇವೆಮಾಡಿ, ಕೊನೆಗೆ ದಿವ್ಯ ಪಾದಗಳಲ್ಲಿ ಲೀನವಾಗಬೇಕು (ಹಂಸಗೀ. ೦೩೦). [ದೈವ + ಸೃಷ್ಟಿ]

ದೈವಹೀನ (ನಾ). = ದೈವವಿಹೀನ: ದೈವಹೀನನವಿನೀತ ಸೈನ್ಯನನ್ಯಾಯಿ ಯೆನಿಪ ನರಪನೊಳೆಂದುಂ ವಿಜಿಗೀಷುಗಳಪ್ಪ ಮಹೀಭುಜರೆಂದುಂ ಸಂಧಿ ಮಾಡರ್ (ಪಂಕತಂ. ೨೫೧-೦೩): ದೈವಬಲವವರಲ್ಲಿ ನೀವೇ ದೈವಹೀನರು (ಕುವಾಭೀ. ೧-೨೩); ತಪವನು ನಾನು ಮಾಡಿದೆ ದೈವಹೀನಗೆ ವಿಫಲ ವಾಯ್ತೆಂದು (ಶಾಶಿರಾ. ೨೩-೨೫). [ದೈವ + ಹೀನ]

ದೈವಹೊಡಕ (ನಾ). ದೆವ್ವಬಡಿದಿರುವವನು; ಪಿಶಾಚಗ್ರಸ್ತ; ಭೂತಾವೇಶವಾದವನು: ದೈವಹೊಡಕ ಮದ್ಯವ ಪಾನಮಾಡಿದಂತೆ ಮೊದಲೆ ಮನ್ಮಥವಿಕಾರವುಂಟಾದ ನನ್ನ ಮನಸ್ಸು . . . ಕದಡಿತು (ವಡಕಾ. ೨೪). [ದೈವಹೊಡೆ + – ಕ್]

ದೈವಹೊಡೆ (ಕ್ರಿ). ಪಿಶಾಚಗ್ರಸ್ತವಾಗು; ಭೂತಾವೇಶವುಂಟಾಗು; ದೆವ್ವಬಡಿ: ದೈವಹೊಡೆದಂದದಲಿ ಬೆಚಿತು ಸಭಾವಲಯದಲಿ ಗರ್ವ ವಿಭ್ರಮಭಾವಭೂಷಿತನಾಗಿ ವೈಹಾಯಸವನೀಕ್ಷಿಸುತ ಹಾವಿನಂದದೊಳಿರದೆ ಹಾಸ್ಯರಸಾವಲಂಬನನಾಗದೆಯು ಸುಖಜೀವಿಯಾಗಿಹುದು ಶ್ರಮವು (ಕುವಾಅ. ೯-೩೭). [ದೈವ + ಹೊಡೆ$_1$ (<ಪೊಡೆ$_1$)]

ದೈವಾಧೀನ (ನಾ). ದೇವರಿಗೆ ವಶವರ್ತಿಯಾಗಿರಂವುದಂ; ಅದೃಷ್ಟದ ವಶದಲ್ಲಿರುವುದು: ಎಲೆ ಮರುಳೆ ರಾಧೇಯ ಫಡ ಮನವಿಳುಹದಿರು ತಪ್ಪೇನು ಸೋಲವು ಗೆಲವು ದೈವಾಧೀಸ ನಿನ್ನಾಳ್ತನಕೆ ಕುಂದೇನು . . . ನೀ ಮನವಳುಕದಿರು ಹಿಡಿ ಧನುವನನುವಾಗೆಂದನಾ ಶಲ್ಯ (ಕುವಾಕ. ೧೩-೨೦): ಏನೆ ಮಾಡಿದರೇನು ದೈವಾಧೀನವೆಲ್ಲವು (ಶಾಶಿರಾ. ೨೩-೨೫): ದೈವಾಧೀನದಿ ಬಂದಿದನಾವಂಗಸದಳಮೆನಿವ್ವುದಂ ನಿರವಿಸಿ ನೀಂ ಪಾವನರಂ ಮಾಳ್ಪುದು ನುತದೇವ ಮಹಾದೇವ ಶಂಭುವೆಮ್ಮನೆನುತ್ತಂ (ಜಾಶಾಸ್ಯ. ೨-೯-೨೮); ಹುಟ್ಟು, ಸಾವು ದೈವಾಧೀನ. ಹುಟ್ಟಿದವನು ಸಾಯಲೇಬೇಕು ಎಂಬ ಮನೋಭಾವವವರದು (ಧರ್ಮಾಸಾ. ೧೪೦).

ದೈವಾಧೀನನಾಗು = ಸಾಯು; ಮರಣಹೊಂದು: ಇವೊತ್ತಿಗೆ ಹದಿನೇಳು ದಿವಸದ ಹಿಂದೆ ಆತನು ದೈವಾಧೀನನಾದನು (ವಡಕಾ. ೧೫); ಕಡೆಗೊಮ್ಮೆ ಹೃದಯವಿಕಾರದಿಂದ ದೈವಾಧೀನನಾದನು (ಸಸ್ಕಳ. ೪೭); ನಂಜುಂಡಯ್ಯನವರು ದೈವಾಧೀನರಾಗಲು ನಾನು ಮಾಡಿದ್ದ ಅನುವಾದ ವನ್ನು . . . ಪ್ರಕಟಿಸಲು ನನಗೆ ಸಾಧ್ಯವಾಗದೇ ಹೋಯಿತು (ಹೊಗಚರಿ. ೪, ಬೆಂಕಳ). ದೈವಾಧೀನವಾಗು = ದೈವಾಧೀನನಾಗು: ಮದ್ದಗಿರಿಯಲ್ಲಿ ಯಿವರ ಚಿಕ್ಕಪ್ಪ ಗುಲಾಮ ಹೈದರಸಾಬರು ದೈವಾಧೀನವಾದ್ದರಿಂದ (ಹೈದರ. ೩೦): ದೈನ್ಯದಿಂದ ಬೇಡೋಕಿಂತ ದೈವಾಧೀನವಾಗೋದು ಉತ್ತಮ (ಗಾಡಿ). [ದೈವ + ಅಧೀನ]

ದೈವಾನ (ನಾ). ಅದೃಷ್ಟಶಾಲಿ; ಭಾಗ್ಯವಂತ: ದತ್ತಗೇಡಿಗೆ ಕೊಟ್ಟವರಿ ಲ್ಲಂತ ದೈವಾನರದು ಕಸಗೊಂಡವರಿಲ್ಲಂತ (ಅಲ್ಕವಿ. ೦೦೬).

[<ಸಂ. ದೈವವತ್]

ದೈವಾನುಕೂಲ (ನಾ). = ದೈವಸಹಾಯ: ಅನಲನಲ್ಪವದಾದಡೇನದುವ ನಿಲನಿಂದ ಪ್ರಕಾಶಿಸುತಲಿಹುದನವರತಲಾ ನೀತಿಯಲಿ ದೈವಾನು ಕೂಲವದು ಘನವೆನಿಸಿಯೈದುತ್ರಿಹುದುವ ರ್ಧನವಸತ್ಕರ್ಮಾಚರಣದಲಿ ಮನುಜರೊಳಗಿದನಱಿದು ನಡೆವವ ಜಾಣನಹನೆಂದ (ತಿಮ್ಮಕ. ೨-೨೪); ಅನುದಿನ ಕರ್ಮಶುದ್ಧಿಯು ಕಾರ್ಯವಿದ್ದಾಗ ಅರಿದಿನವ ದೈವಾನು ಕೂಲವದಿರದೆ ಕೆಡುವುದು ತಿಳಿದದನು ಎಂಗೆ ನರನು ವ್ಯಥುತರ ಪುಣ್ಯ ಕರ್ಮವ ಮಾಡಬೇಕೆಂದ (ತಿಮ್ಮಕ. ೨-೨೫). [ಸಂ.]

ದೈವಾನುಕೂಲತೆ (ನಾ). = ದೈವಸಹಾಯ: ಏನಮಾಡಿದಡೇನು ಸದ್ಧರ್ಮಾನುಭಾವರಿಗೈಸಲೇ ದೈವಾನುಕೂಲತೆ (ತೀರಕಾ. ೬-೨೦-೪೦).

[ಸಂ. ದೈವಾನುಕೂಲತಾ]

ದೈವಾನುಕೂಲ್ಯ (ನಾ). = ದೈವಸಹಾಯ: ಏನನಾಡಿದಡೇನು ಫಲ ದೈವಾನುಕೂಲ್ಯದ ಕುಣಿಕೆ ಬೇಱಿಹುದಾ ವರೇಂದ್ರನ ಸಾರಿ ಸೋತುದು ನಿಮಿಷಮಾತ್ರದಲಿ (ಕುವಾಸ. ೦೩-೫೬). [ದೈವ + ಅನುಕೂಲ್ಯ]

ದೈವಾನುಗ್ರಹ (ನಾ). ದೇವರ ಕೃಪೆ, – ದಯೆ: ದೈವಾನುಗ್ರಹದಿಂದ ಅರಳಿದ ಪ್ರತಿಭಾಪುಷ್ಪ, ದೈವಾನುಗ್ರಹಕಾತರನಾಗಿ, ಮಾರ್ಗಮಧ್ಯದಲ್ಲಿ ಅದಷ್ಟು ದೈವಸೃಷ್ಟಿಯ ಸೇವೆ ಮಾಡಿ, ಕೊನೆಗೆ ದಿವ್ಯಪಾದಗಳಲ್ಲಿ ಲೀನ ವಾಗಬೇಕು (ಹಂಸಗೀ: ೦೩೦): ದೈವಾನುಗ್ರಹದಿಂದ ಮಳೆ ಬಂದು ಕೆರೆಗೆ ನೀರು ಬಂದಿದೆ (ಕೂಡಿ). [ದೈವ + ಅನುಗ್ರಹ]

ದೈವಾಪರ (ನಾ). ದೇವರನ್ನು ಅಪರ(ಪರಕೀಯನಲ್ಲದವನೆಂದು ನಂಬಿ) ದವನಂ:ದೈವಭಕ್ತ: ದೇವರ ಪಕ್ಷಪಾತಿ: ಅನುಪಮಚರಿತ ದೈವಾಪರನು ಪುಣ್ಯನಿಧಿ . . . ಎಂದಿಳೆ ಹೊಗಳುತಿರಲದುವೆ ಕೇಳ್ದೆ ಸ್ವರ್ಗ (ಕುವಾಅ. ೪-೪೦). [ದೈವ + ಅಪರ]

ದೈವಾಯತ್ತ (ನಾ). ದೇವರ ಅಧೀನದಲ್ಲಿರುವುದು; ಅದೃಷ್ಟದ ಕೈಯಲ್ಲಿರುವುದಂ; ಮನುಷ್ಯರ ಕೈಯಲ್ಲಿ ಇಲ್ಲದಿರುವುದು; ದೈವಾಯತ್ತ: ನಿನಗೆ ಮುನಿದಡೆ ನೋಯಿಸುವಡಳವಲ್ಲ ಫಡ ದೈವಾಯತಕೆ ನೀನೇಕೆ ಬೆಜಿತಿಹೆಯೆಂದನಾ ಭೂಪ (ಕುವಾಗ. ೬-೦೮).

[<ಸಂ. ದೈವಾಯತ್ತ]

ದೈವಾಯತ್ತ (ನಾ). = ದೈವಾಯತ: ಸಮರಜಯಂ ದೈವಾಯತ್ತಮದಱಿನಾ ಪುರುಷಕಾರಮೆವಗಾಯ್ತಾಗಳ್ (ಗದಾಯು. ೬-೪೬): ಫಲವು ದೈವಾಯತ್ತ ನಾವು ಮಾಡುವುದೇನು (ಧರ್ಮಾಕೋ. ೦೦೬).

[ದೈವ + ಆಯತ್ತ]

ದೈವಿಕ (ಗು). ೧. ದೇವತೆಗಳಿಗೆ ಸಂಬಂಧಿಸಿದ; ದೇವತೆಗಳಿಂದ ಉಂಟಾದ,–ಒದಗಿದ: ಮಾನುಷ ಪ್ರಮಾಣವು ದೊರೆಯದಿದ್ದ ಪಕ್ಷದಲ್ಲಿ ದೈವಿಕ ಪ್ರಮಾಣವನ್ನು ಪಡೆಯುತ್ತಿದ್ದರು (ಕಾರದ. ೫೬): ಅಲ್ಲಿನ ಶಿಕ್ಷಣ ದೈವಿಕಭಾವನೆ ಮೂಡಿಸುತ್ತಿದ್ದರೂ ಮುತಸಹಿಷ್ಣುತೆಯನ್ನು ಬೋಧಿಸು ವಂತಿರಲಿಲ್ಲ (ಶಿಕ್ಷದ. ೬೩): ಈ ದೈವಿಕ ಪ್ರೇರಣೆಯು ತನಗೆ ಬಾಲ್ಯದಿಂದಲೂ ಲಭ್ಯವಾಗಿತ್ತೆಂದು ಆತನೇ ಹೇಳಿದ್ದಾನೆ (ಸೋಕ್ಕಮು. ೨೦). ೨. ಅದೃಷ್ಟ ದಿಂದ ಒದಗಿದ; ಅಕಸ್ಮಾತ್ತಾಗಿ ಉಂಟಾದ: ಏನೋ ದೈವಿಕಘಟನೆ ಯಿಂದ ಅವರ ಭೇಟಿಯೊದಗಿತು (ಕೂಡಿ). (ನಾ). ೩. ಅತಿಮಾನುಷ ವಾದುದೆಂ: ಅರಸ ಚಿತ್ರೈಸೇಳು ತಾಳಿವ ಸರಿಸದಲಿ ದೈವಿಕದ ಮರ ನಿವನುರಗನಂದದ ದೈತ್ಯಮುನಿ ಧರಿಸಿಹನು ವಿತಳದಲಿ (ತೊರಣಾ. ೪-೨-೪೫). ೪. ದುರ್ದೈವ; ದುರದೃಷ್ಟ: ಪಲವುಂ ಭವಂಗಳೊಳ್ ನೆರಪಿದೆನ್ನಯ ಪಾಪಮೊ ಮೀಱಿಗೆಟ್ಟ ಕೋಟಿಲಿಗಳನುಣ್ಮೆನೆಂಬಬಲ ಸೈರಣೆಯೋ ಕಡುಪುಂ ತಗುಳ್ದು. ನಟ್ಟಲಿವಸವಾಸ್ಯವಕ್ಯತೆಯೊ ದೈವಿಕಮೋ ನಿನಗೇನನೆಂಬೆ ನೆಗ್ಗಲಿಸಿಯೆ ನಿಂದುದೆಂತುಮಸು ಪೋಗದೆ ಕಲ್ಲೆರ್ದೆಯಿಂ ಮಹೀಪತೀ (ಕಾರಂಪೂ. ೯೩೦). [ಸಂ.]

ದೈವಿಕಶರ (ನಾ). = ದೈವಿಕಾಸ್ತ್ರ : ಉರಿವುದುದೇ ತೇರು ಕರ್ಣನ ಗುರು ನದೀನಂದನನ ದೈವಿಕಶರಹತಿಯೊಳಿಮ್ಮಿದ ನಿಂದುದು ಪಾರ್ಥ (ಕುವ್ಯಾಗ. ೯-೩೦). [ದೈವಿಕ + ಶರ]

ದೈವಿಕಾಸ್ತ್ರ (ನಾ). ದೇವರಿಂದ ಕೊಡಲ್ಪಟ್ಟ ಅಸ್ತ್ರ ; ದಿವ್ಯಾಸ್ತ್ರ ; ಮಂತ್ರಾಸ್ತ್ರ : ನಾವಿಳಿದ ಬಳಿಕೀ ರಥದೊಳಿರಲಾವ ಹದನೋ ನಿನಗೆ ಕಂಡ್ಯೆ ದೈವಿಕಾಸ್ತ್ರದ ಮಹಿಮೆಗಳನು (ಕುವ್ಯಾಗ. ೯-೩೨).

[ದೈವಿಕ + ಅಸ್ತ್ರ]

ದೈವೀಕೃಪೆ (ನಾ). ದೇವರ ದಯೆ,– ಕರುಣೆ: ದೈವೀಕೃಪೆಯು ಮಂತ್ರದಂಡ ತನ್ನಾವುದೋ ಕಾರ್ಯಕ್ಕಾಗಿ ಅರಸಿದ ಹೂವು ಜನತೆಗೆ ನೀಡುವ ತನ್ನ ಪರಿಮಳಕ್ಕೆ ಸುಂಕ ಕೇಳುತ್ತದೆಯೇ ?(ಹಂಸಗೀ. ೧೩೦).

[ಸಂ. ದೈವೀಕೃಪಾ]

ದೈವೀಪ್ರವೃತ್ತಿ (ನಾ). ದೇವತೆಗಳ ಸಂಬಂಧವಾದ ವ್ಯವಹಾರ,– ಆಚಾರ ; ಸಾತ್ವಿಕ ಕಾರ್ಯಾಚರಣೆ,–ಪ್ರವರ್ತನೆ : ಅವನಲ್ಲಿದ್ದ ವಾಶವೀಶಕ್ತಿ . . . ಆ ದಿನ ಬೆಳಗ್ಗೆ ಸುಳುಹುದೋರಿದ್ದ ದೈವೀಪ್ರವೃತ್ತಿಯನ್ನು ಮೆಟ್ಟಿ ತುಳಿದು ಭೂಗತವಾಡಿತು (ಪುನರು. ೭೩). [ಸಂ.]

ದೈವೀವಿರುದ್ಧ (ಗು). ದೈವಿಕ ಪ್ರವೃತ್ತಿಗೆ ವಿರೋಧವಾದ ; ಸಾತ್ವಿಕ ಕಾರ್ಯಾಚರಣೆಗೆ ಪ್ರತಿಬಂಧಕವಾದ ; ಒಳ್ಳೆಯ ಗುಣಗಳಿಗೆ ಬಾಧಕವಾದ : ದೈವೀವಿರುದ್ಧಂ ತಮಃಪ್ರವೃತ್ತಿಯಂ ನಿಗ್ರಹಿಸಿ (ಶ್ರೀರಾಮಾ. ೪೪೫-೪). [<ಸಂ. ದೈವವಿರುದ್ಧ]

ದೈವೀಶಕ್ತಿ (ನಾ). ದೇವತೆಗಳ ಸಂಬಂಧವಾದ ಬಲ : ದೈವಪ್ರಭಾವ,– ಮಹಿಮೆ ; ದೇವತೆಗಳ ಸಾವರ್ಥ್ಯ : ಆಗಮವು ದೈವೀಶಕ್ತಿಯ ವಿಲಾಸವನ್ನು ಜಗತ್ತಿಗೆ ಅರಿವು ಮಾಡಿಕೊಡಲು ದೇವಸ್ಥಾನದ ನಿರ್ಮಾಣವನ್ನು ಸಾಧ್ಯವಾಗಿಟ್ಟುಕೊಂಡಿದೆ (ಧಾರವಿ. ೯೧). 'ದೈವೀಪ್ರವೃತ್ತಿ' ಪರಾ.

[ಸಂ.]

ದೈವೀಸಂಪತ್ತು (ನಾ). ದೇವತೆಗಳಿಗೆ ಸಂಬಂಧಿಸಿದ ಗುಣಗಳ ಸಮೃದ್ಧಿ ; ಅಹಿಂಸೆ, ಸತ್ಯ, ಶಾಂತಿ, ತ್ಯಾಗ ಮೊದಲಾದ ಒಳ್ಳೆಯ ಗುಣಗಳು ; ಶೀಲವಂತನಾಗಿ ನಡೆದುಕೊಳ್ಳುವ ಸ್ವಭಾವ ; ಸದ್ಗುಣಗಳನ್ನು ಪ್ರಕಟಿಸುವ ಸ್ವಭಾವ : ಅಹಿಂಸಾ, ಸತ್ಯ . . . ಇತ್ಯಾದಿ ಗುಣಗಳನ್ನು ಫೋಷಿಸಿದ ಆತ್ಮ ದೈವೀಸಂಪದ್ಯುಕ್ತವಾಗಿ ಜಗತ್ಕಲ್ಯಾಣಸಾಧಕವಾಗುತ್ತದೆ (ಪುಣ್ಯಾಕ. ೩೪ ಟೀಕೆ). 'ಆಸುರೀಸಂಪತ್ತು' ಪರಾ.

[ಸಂ. ದೈವೀಸಂಪದ್]

ದೈವೀಸ್ಫೂರ್ತಿ (ನಾ). ದೈವಿಕವಾದ ಸ್ಫುರಣೆ ; ಸಮಯೋಚಿತವಾದ ಸಂಗತಿಯು ತಟ್ಟನೆ ಹೊಳೆಯುವುದು : ಕಾವ್ಯ ಎಂಬುದು ಸೃಷ್ಟಿ, ಅದರಲ್ಲಿ ಆಡುವ ಉಸಿರು ದೈವೀಸ್ಫೂರ್ತಿ– ಎಂದು ಅಮರ ನಂಬಿಕೆ (ಸಾಂದಸ. ೦೦೩). 'ದೈವೀಪ್ರವೃತ್ತಿ' ಪರಾ. [ಸಂ.]

ದೈವೇಚ್ಛೆ (ನಾ). ಪೂರ್ವಜನ್ಮದ ಕರ್ಮಾನುಸಾರವಾಗಿ ಇದು ಹೀಗೆಯೇ ಆಗಬೇಕೆಂಬ ನಿಯಮ ; ವಿಧಿನಿಯಮ ; ಬ್ರಹ್ಮಸಂಕಲ್ಪ ; ಭವಿತವ್ಯತೆ: ಎಮ್ಮ ಸಾವುಮುಂಪುಂ ದೈವೇಚ್ಛೆಯಾಯ್ತಾಗದೇ (ಪಂಪಭಾ. ೩-೮೪) ; ನನ್ನದು ಹೀಗೆ ಕೊನೆಗಾಣಬೇಕೆಂದು ದೈವೇಚ್ಛೆ ಇತ್ತು. ಅದಕ್ಕೆ ನೀನು ನಿಮಿತ್ತವಾಗಿ ಒದಗಿ ಬಂದೆ (ಹಂಸಗೀ. ೩೦೩). [ದೈವ + ಇಚ್ಛೆ]

ದೈವೋದಯ (ನಾ). ಒಳ್ಳೆಯ ಅದೃಷ್ಟದ ಆರಂಭ ; ಭಾಗ್ಯೋದಯ : ಅವಳ ದೈವೋದಯವದೈಸಲೆ ಸವಡಿಸೀರೆಯು ಸುತ್ತು ಸಡಿಲದು (ಕುವ್ಯಾಸ. ೦೬-೫) [ದೈವ + ಉದಯ]

ದೈವೋಪಹತ (ಗು). ದುರದೃಷ್ಟಕ್ಕೆ ಈಡಾದ ; ದುರ್ದೈವಕ್ಕೆ ಒಳಗಾದ: ಐಸಲೇ ದೈವೋಪಹತ ಮನದಾಸಜ್ಞಾರಿಂದದಗುವುದು (ಕುವ್ಯಾಅ. ೩೦-೪೭).

[ದೈವ + ಉಪಹತ]

ದೈಶಿಕ (ಗು). ೧. ದೇಶಕ್ಕೆ ಸಂಬಂಧಪಟ್ಟ : ದಹಿಕ ದೈಶಿಕ ಕಾಲಿಕತ್ರಯ ಗಹನ ಕರ್ಮಗಳುಂಟು (ಹಶಾರ. ೯-೪). (ನಾ). ೨. ಆಯಾ ದೇಶದಲ್ಲಿ ಆಚರಿಸಬೇಕಾದ ಕರ್ಮ : ಮನುಷ್ಯರು ಮಾಡಬೇಕಾದ ಕರ್ಮಗಳು ಮೂರು ಪ್ರಕಾರ, ದೈಹಿಕ, ದೈಶಿಕ, ಕಾಲಿಕ . . . ದೈಶಿಕ ದೇಶಸಂಬಂಧವಾದುದು (ಹಶಾರ. ೯-೪ ತಾತ್ಪರ್ಯ). [ಸಂ.]

ದೈಹಿಕ (ಗು). ದೇಹಕ್ಕೆ ಸಂಬಂಧಪಟ್ಟ ; ಶರೀರಕ್ಕೆ ಸಂಬಂಧಿಸಿದ : ಜನಾಂಗದ ದೈಹಿಕ ಯೋಗ್ಯತೆ, ಮಾನಸಿಕ ಶಕ್ತಿ... ಇದೇ ಹೆಣ್ಣುಮಕ್ಕಳ ಆರೋಗ್ಯ ಮತ್ತು ಸುಖಸಂತೋಷಗಳನ್ನು ಹೊಂದಿಕೊಂಡಿದೆ (ಆಡುಸಾ. ೩೦) ; ಮೂಢನಂಬಿಕೆಯಾದರೂ ದೃಢವಾದುದಾದರೆ, ಮನಸ್ಸಿಗೆ ಧೈರ್ಯವನ್ನು ತುಂಬಿ ದೈಹಿಕ ಪವಾಡಗಳನ್ನು ನಡಸಬಹುದು (ಮಾನೋಸಂ. ೦೪೬) ; ಮನುಷ್ಯರು ಮಾಡಬೇಕಾದ ಕರ್ಮಗಳು ಮೂರು ಪ್ರಕಾರ: ದೈಹಿಕ, ದೈಶಿಕ, ಕಾಲಿಕ.–ದೈಹಿಕವೆಂದರೆ ದೇಹದಿಂದ ಮಾಡುವ ಸೇವೆಗಳು – ನಮಸ್ಕಾರಾದಿಗಳು (ಹುಣ್ಣಾಕ. ೯-೬ ತಾತ್ಪರ್ಯ). [ಸಂ.]

ದೈಹಿಕಮಲ (ನಾ). ಶರೀರದಲ್ಲಿ ಉತ್ಪತ್ತಿಯಾಗುವ ಹನ್ನೆರಡು ಬಗೆಯ ಅಶುಚಿದ್ರವ್ಯ,–ಕೊಳೆ.–ಹೊಲಸು : ಗುಗ್ಗೆ ಜಿಬುರು ಕಣ್ಣೀರು ಸಿಂಬಳ ಶ್ಲೇಷ್ಮ ಬೆವರು ಕನುಗು ಜಲ ಮಲ ರಕ್ತ ರೇತಸ್ಸು ಮಜ್ಜೆ ಈ ಹನ್ನೆರಡೂ ದೈಹಿಕಮಲಗಳು (ಆಡುಗಧ. ೦೦೦). [ದೈಹಿಕ + ಮಲ್ಕ]

ದೈಹಿಕಯಾತನೆ (ನಾ). ಶರೀರಕ್ಕೆ ಉಂಟಾಗುವ ಹಿಂಸೆ,–ಬಾಧೆ : ದೈಹಿಕ ಯಾತನೆಯಾಗಿ ಪರಿಣಮಿಸಿದ ನೈತಿಕ ಜುಗುಪ್ಸೆ . . . ಭಯಂಕರವಾಗಿ ಅವನ ಮನಸ್ಸನ್ನಾಕ್ರಮಿಸಿತು (ಪುನರು. ೩೩೬). [ದೈಹಿಕ + ಯಾತನೆ]

ದೈಹಿಕವಿಕ್ರಮ (ನಾ). ಶಾರೀರಕವಾದ ಸಾಹಸ,–ಶ್ರಮ : ಹೀಗೆ ದೈಹಿಕ ವಿಕ್ರಮವೇ ಕ್ರಮವೆಂದು ಕೊರೆದುಕೊಂಡನು (ಜಯಂತ. ೨೭೯).

[ದೈಹಿಕ + ವಿಕ್ರಮ]

ದೈಹಿಕಶಿಕ್ಷಣ (ನಾ). ದೇಹಶಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಕೊಡುವ ವ್ಯಾಯಾಮ ಶಿಕ್ಷಣ ; ಅಂಗಸಾಧನೆಯಂನ್ನು ಕಲಿಸಂವುದು : ದೈಹಿಕಶಿಕ್ಷಣವು ಪ್ರೌಢವಿದ್ಯಾಭ್ಯಾಸದ ಒಂದು ಅವಿಭಾಜ್ಯ ಭಾಗವಾಗಿದೆ (ಕೂಡಿ). [ದೈಹಿಕ + ಶಿಕ್ಷಣ]

ದೈಹಿಕಸುಖ (ನಾ). ಶರೀರದಿಂದ ಅನುಭವಿಸುವ ಸುಖ ; ಕಾಮಸುಖ ; ಕಾಮೋಪಭೋಗ : ಹಸಿವಾದಾಗ ರುಚಿರುಚಿಯಾದ ಭೋಜನ, ಕೋಪ ಬಂದಾಗ ಅಬ್ಬರ, ದೈಹಿಕಸುಖ ಬಯಸಿದಾಗ ಹೆಂಡತಿ ಸಾಯುತ್ತಾ ಬಿದ್ದಿದ್ದರೂ ಅವಳನ್ನು ತಮ್ಮ ಬಯಕೆಗೆ ಬಲಿಕೊಡುವುದು ಅವರಿಗೆ ಸಾಮಾನ್ಯವಾಗಿಹೋಗಿತ್ತು (ಕೀಲುಗೊ. ೦೦೩) : ಹಿಡೊಮ್ಬೆ ದೈಹಿಕ ಸುಖಕ್ಕೆ ಕನ್ನವನ್ನು ಬಳಸಿಕೊಂಡಂತೆ ಮತ್ತೆ ಆಧ್ಯಾತ್ಮಿಕ ಕಲ್ಯಾಣಕ್ಕೆ ಬಳಸಲವಕಾಶ ಕೊಡುವುದಿಲ್ಲವೆಂದೂ . . . ಅವಳು ಯೋಚಿಸಿದಳು (ಪುನರು. ೩೩೩). [ದೈಹಿಕ + ಸುಖ]

ದೊಂಗರ 'ಡೊಂಗಜಿ' ನೋ.

ದೊಂಟೆ (ನಾ). ಪ್ರಾಣಿಗಳ ಕೊರಳಿಗೆ ಕಟ್ಟುವ ಮರದ ತಂಡು ; ಗುದಿ : ಕೊರಳ ದೊಂಟೆ ಟಣ್ ಟಣ್ ಎಳೆ ಚಿಮ್ಮುತ ಬಿಸಿಲೊಳು ಮಲಗಿಹ ಹೊಮ್ಮಿದ ಹಸುರಲಿ ಕುಣಿಯುವ ಕರುಗಳ ಕೂಡುವೆನು (ಕದಕ. ೩-೦೪) ; ಕೊಟ್ಟಿಗೆಯಲ್ಲಿಯೂ ಗೊರಸಿನ ಸದ್ದು, ಕೊಂಬಿನ ಸದ್ದು, ದೊಂಟೆಯ ಸದ್ದು . . . ಕೇಳಿಸತೊಡಗಿತು (ಮುಕಿಮ. ೪೦).

[ದೇ.ತ ತಮಿ. ತೊಣ್ಬು ; ಮಲ. ತೊಣ್ಣು]

ದೊಂಡಿ (ನಾ). ಒಂದಂ ಬಗೆಯ ವಿಾನಂ : ಗಜಿ ಮಜಿವ ಕಾಗೆಂಡೆಯ್ದು ಯ್ಯರೆಗ ದೊಂಡಿ ಕೆಂಗಱಿ . . . ಎಂಬ ಪರಿಪರಿಯ ವಿಾನ್ಗಳಂ ಗುದಿಗೆಯ್ದರ (ಹಕಣಾ. ೩-೪೩).

[ದೇ.ತ ತಮಿ. ತೊಣ್ಬೈ ; ತೆಲು. ದೊಂಡು, ದಂಟಾವ]

ದೊಂಡೆ$_1$, ಜೊಂಡು$_3$, ಜೊಂಡೆ, ತೊಂಡೆ$_4$ (ನಾ). ೧. ಸಿಕ್ಕು ಸಿಕ್ಕಾಗಿರುವುದು ; ತೊಡರಿಕೊಂಡಿರುವುದು ; ಹೆಣೆದುಕೊಂಡಿರುವುದು : ನಾನಾಮೃಗಾನೀಕದ ಕರ್ಗಂಡಂಗಳಂ ದೊಂಡೆಗಳನಡಸಿ ನುಂಗುತ್ತುಂ (ಶಾಂತೀಶ್ವ. ೩-೬) ; ಪಾರ್ಥನ ಕರುಳ ದೊಂಡೆಯ ಕೂಳ ಮುದ್ದೆಯ ಬಡಿಸಿ ದೈತ್ಯರಿಗೆ . . . ದಣಿಸಿದಡರಸು ಕೌರವನೆನ್ನ ಸಾಕಿತಕೆಂದು ಫಲವೆಂದ (ಕುಪ್ಯಾಕ. ೮-೪೨); ಮೊಱೆವುತಿರ್ದವು ರಣಸಮುದ್ರದ ತೆರೆಯ ಬಲುರವದಂತೆ ನೆಣನುಬ್ಬರದ ನೆತ್ತರಿನಸ್ಥಿಪಾಂಸದ ಮಿದುಳ ದೊಂಡೆಗಳ . . . ನಡು ಹಱಿದ ಕಪಿಗಳ ಖಳಕದಂಬದ ಸರಿಬೆರಕೆಯಲಿ (ತೊರರಾ. ೬-೩೬-೪೨). ೨. ಅಜಿಗಿಜಿಯಾದುದು ; ಜಿಗುಟಾದುದು : ಕಣೆವೋದ ಕಾಲ್ ಸಿಡಿದ ಖಂಡದ ದೊಂಡೆಯ ರಾಶಿ ಪೊಕ್ಕವರ್ಗಡಿಯಿಡಲಿಲ್ಲೆನಲ್ (ಮಹಾನೇ. ೧೨-೧೨). **ಜೊಂಡು$_3$** : ೧. ಬಿಡುಮಿದುಳ ಜೊಂಡಿನಿಂ ನಡುತೊಡೆಯ ತುಂಡಿನಿಂ ಪೊಡೆಗೆಡೆದು ಬೀಳ್ದರಿಂ ನೆತ್ತರಿನೊಳಾಳ್ದರಿಂ ರಣಧರಣಿ ಕಣ್ಗೆಸೆದುದು (ಜಿಬಪು. ೩೮-೩೯). **ಜೊಂಡೆ** : ೧. ನರಳ್ವ ವೀರರ ಮಿದುಳ ಜೋಱಿನ ಜೊಂಡೆ ಜೋಡಣೆಯ . . . ಭಟರಟ್ಟೆಗಳಲೆಸೆದುದು ಕೂಡೆ ರಣಭೂಮಿ (ಕುಪ್ಯಾಕ. ೦೫-೩೩) ; ಕರುಳ ರಕುತದ ಜೊಂಡೆಯಲಿ ಜರಿದೆಲುಗಳಲಿ ಜವನುಂಡು ಕಾಱಿದ ನೆಲನವೊಲು ರಣಭೂಮಿ ರಂಜಿಸಿತು (ತೊರರಾ. ೩-೬-೦೬). **ತೊಂಡೆ$_4$** : ೧. 'ತೊಂಡೆಗರುಳು' ಪರಾ.

ದೊಂಡೆ$_2$ 'ತೊಂಡೆ$_3$' ನೋ.

ದೊಂಡೆಕರುಳ್ 'ದೊಂಡೆಗರುಳ್' ನೋ.

ದೊಂಡೆಗರುಳ್, ತೊಂಡೆಗರುಳು, ದೊಂಡೆಕರುಳ್, ದೊಂಡೆಗರುಳು (ನಾ). ಕುಚ್ಚುಕುಚ್ಚಾಗಿ ಹೆಣೆದುಕೊಂಡಿರುವ ಕರುಳು ; ಮಾಲೆಗರುಳು : ಮುನಿಸಂ ಮಾಡಿದರಾತಿನಾಥರಡಗಂ ಸುಪ್ಪಲ್ಗೆ ಕೆನ್ನೆತ್ತರಂ ಕೆನೆಗೊಂಡಾಱಿದ ಪಾಲ್ಗೆ ದೊಂಡೆಗರುಳಂ ಕರ್ಬಿಂಗೆ ಲೆಕ್ಕ[ಕ್ಕೆ ತಂ]ದಿನಿಸುಂ ಮಾಣದೆ ಪೀರ್ದು ಪೀರ್ದು ನೊಣೆದು (ಪಂಪಭಾ.೧೨-೦೬೦); ದೊಂಡೆಗರುಳುಂ ತೊರಳೆಯುಂ ಮುತ್ತೆ ಬಾಡುತಂ ವುಂಡಗುಳು ನೀರ್ಸುರಿಯೆ ನಡನಡುಗಿ ಕೋಡುತಂ (ಪಿಂಡೋರ. ೧-೭) ; ಕಂಡು ಪವನಜ ತುಡುಕಿ ಮಿಗೆ ಮುಂಕೊಂಡು ನೆಲಕ್ಕಪ್ಪಳಿಸೆ ಮೆಲ್ಲನೆ ದೊಂಡೆಗರುಳುಱಿ ಸೂಸೆ ಚೆಲ್ಲಿತು ರಾಜಸಭೆಯೊಳಗೆ (ಕುಪ್ಯಾವಿ. ೬೮ಕ. ೪-೬೨) ; ವೀರ ದುರ್ಮುಖನ ದೊಂಡೆಗರುಳಗಲಿದವು ಪನಸನ ತುಂಡುಗಳು ತೂಱಿದವು ಮರುಳ್ಗಳ ತಂಡದಲಿ ತಱಿದೊಟ್ಟಿದನು ಮಿಕ್ಕಾದ ಯೂಥಪರ (ತೊರರಾ. ೬-೦೭-೨೨) ; ದೊಂಡೆಗರುಳ್ಗಳನುಗಿದು ಸೌಬಲನ ನಾಸಿಕದ ಬಿಸಿನೆತ್ತರಂ ಸುರಿಯಿಸಿ (ಘೋರಾಸು. ೩೫-೨೩). **ತೊಂಡೆಗರುಳು** : ಮುಂಡದ ಹಲಗೆ ಹೆಣದ ಎಲುವಿನ ಕತ್ತಿ ತೊಂಡೆಗರುಳು ಬಿರುಹಗ್ಗ ಖಂಡದ ಹಿಡಿಗಲ್ಲು ನರದ ಚಬುಕುಗಳ ಗಂಡುಭೂತಗಳೆದ್ದವಾಗ (ಹರಿಸಾಂ. ೩-೫೬) ; ತೊಂಡೆಗರುಳನು ದಂಡೆಯನು ಮಾಡಿಸುವೆಯುವಳಿಗೆ (ಕರಿಕ. ೬೩-೩). **ದೊಂಡೆಕರುಳ್** : ಪೆರ್ಬುಲಿ ಪಾಯೆ ಕಂಠಗತಜೀವಿತರಾದವರೆಕ್ಕಲಂ ಕನಲ್ದುರ್ಬಿ ಪಿಸುಬ್ದ ದೊಂಡೆ ಕ[ಪಾಠಾಂ. ಗ]ರುಳಂ ತಳೆದಿರ್ಪವರ್ . . . ಸರ್ಬ ಮೃಗಂಗಳಂ ಕೆಡಪಿ ಬರ್ಪವರೊಪ್ಪಿದರ್ (ದಶಕು. ೫-೪೦). **ದೊಂಡೆಗರುಳು** : ದೊಂಡೆಗರುಳಿನ ಪಾಯ ಜೋಲಿನ ಕುಂಡಲಿತಕರಜಂಘೆಗಳ ಬಿಡುಮಂಡೆಗೆದಱಿದ ಖಳನ ಕಂಡುದು ಭೂಸುರವ್ರಾತ (ಕುಪ್ಯಾಅ. ೧-೩೩) ; ದೊಂಡೆಗರುಳಿನ ರಾಸಿಗಳ ತೊಡೆಯಿಂದ ಮುರಿದಿಹ ಕಾಲ್ಗಳಿಂ ರಣವಂದು ಭೀಕರಿಸಿದುದು (ದೇವೀಮ. ೩-೨೫). [ದೊಂಡೆ$_1$ + ಕರುಳ್]

ದೊಂಡೆಗರುಳು 'ದೊಂಡೆಗರುಳ್' ನೋ.

ದೊಂಡೆಗೆಸಱು (ನಾ). ಮಂದವಾದ ಕೆಸರು ; ಅಜಿಗಿಜಿಯಾದ ಕೆಸರು : ರಕುತದ ದೊಂಡೆಗೆಸಱಿನೊಳದ್ದುದಗಣಿತ ರಥಗಜಾಶ್ವಚಯ (ಕುಪ್ಯಾಕ. ೭-೩೦). [ದೊಂಡೆ$_1$ + ಕೆಸಱು (<ಕೆಸಱ್)]

ದೊಂಡೆದೊಂಗುವೊಂಗು ? (ಕ್ರಿ). (?) : ಕೆದಱಿದ ಕುಂತಳಂ ಕುಸಿದು ಕೊರ್ಬಿದ ಪೆರ್ಮೊಲೆ ದೊಂಡೆದೊಂ[ಪಾಠಾಂ. ವೊಂ]ಗುವೊಂಗಿದ ತುಟಿ ತಳ್ಪಿನಿಂ ಮುಱಿದ ಮೆಯ್ನವಿರೋಪನ ತಳ್ತ ತೋಳ್ಗಳೊತ್ತಿದ ಬಱಿಮೆಯ್ಯ ಕೂರುಗುರ ಬಾಸುಱಿ ಭೂಷಣಮಾಗಳುಂ ರತಾಂತದೊಳ್ (ಲೀಲಾವ. ೦೩-೩೫). [?]

ದೊಂಡೆನರವು(ನಾ). ಮುದ್ದೆಗಟ್ಟಿದ ನರ; ಹೆಣೆದುಕೊಂಡ ನರ: ತೊಗಲ ಕೊಯ್ಲಿನ ಮುಱಿದ ಮೂಳೆಗಳ ದೊಂ[ಪಾಠಾಂ. ಜೊಂ]ಡೆನರವಿನ ಜುಱಿತ ಮಿದುಳಿನ . . . ಕಾಲಾಂತಕನ ಹೆಬ್ಬೆಳಸು ಹುಲುಸಾಯ್ತು (ಕುಪ್ಯಾಭೀ. ೯-೦೩). [ದೊಂಡೆ$_1$ + ನರವು]

ದೊಂದಡಿ 'ದೊಂದುಳಿ' ನೋ.

ದೊಂದಣ 'ದೊಂದುಳಿ' ನೋ.

ದೊಂದಣೆ 'ದೊಂದುಳಿ' ನೋ.

ದೊಂದಿ 'ದೊಂದೆ' ನೋ.

ದೊಂದಿಬೆಳಕು 'ದೊಂದಿವೆಳಗು' ನೋ.

ದೊಂದಿಮೀಸೆ (ನಾ). ಗುಂಜುಗುಂಜಾಗಿರುವ ಮೀಸೆ ; ಕೆದರುಮೀಸೆ : ದೊಂದಿಮೀಸೆಯ ಆ ವ್ಯಕ್ತಿ ಉದ್ದವಾಗಿ ದಡೂತಿಯಾಗಿದ್ದನು (ಪುನರು.೨೫). [ದೊಂದಿ (<ದೊಂದೆ) + ಮೀಸೆ]

ದೊಂದಿವೆಳಗು, ದೊಂದಿಬೆಳಕು (ನಾ). ಪಂಜಿನ ಬೆಳಕು: ದೊಂದಿವೆಳಗಂ ಸಮರ್ಪಿಸಿ ನಿಶೀಥಿನಿಯ ವಶಕೆ, ದಾಂಟಿದರಗಂ ಇರ್ವರ್ . . . ಕಪಿಧ್ವಜರ್ ! (ಶ್ರೀರಾಮಾ. ೬೦೦-೦೨). **ದೊಂದಿಬೆಳಕು** : ಒಮ್ಮೆ ದೊಂದಿ ಬೆಳಕಿನಲ್ಲಿ ಎರೆಡು ಮೈಲಿ ಕಾಡು ಸುತ್ತಿ ದಿಕ್ಕುತಪ್ಪಿ ನಿಂತ ಹಸುವನ್ನು ಹುಡುಕಿ (ಬಾಳಿಪ್ಯ. ೦೪). [ದೊಂದಿ (< ದೊಂದೆ) + ಬೆಳಗು$_2$]

ದೊಂದುಳಿ, ದೊಂದಡಿ, ದೊಂದಣ, ದೊಂದಣೆ (ನಾ). ೧. ಗುಂಪು ; ಸಮೂಹ; ಜಂಗುಳಿ: "ಬಂಬಲ್ . . . ದೊಂದುಳಿ . . . ಗೊಂದಣೆ (ಉಂದಲ್)–ಈ ೪೦ ಸಮೂಹಂ" (ಕಶಸಾ. ೦೦-೨೨೨); "ಜಂಗುಳಿ ತೆರಳ್ಕೆ ದೊಂದುಳಿ ನೆರವಿ ಥಟ್ಟು . . . ಸಂದಣಿ ಜಾಳಿಗೆಯುಮೆನೆ ಶ್ರೇಣಿಕಾಖ್ಯಂ" (ಕಬ್ಬಿಕ್ಕೆ. ೧೬); "ಸಮೂಹಾರ್ಥದೊಳ್ ದೊಂದುಳಿಯೆನಿಕ್ಕು" (ಕಶರ. ೫೨); ಸುರರ ಸಂದಣಿಯ ಕಿನ್ನರರ ದೊಂದುಳಿ[ಪಾಠಾಂ. ಗೊಂದಣಿ, ಜಂಗುಳಿ]ಯ ಖೇಚರರ ಗುಂಪಿನ ಪನ್ನಗರ ಪಂಕ್ತಿಯಿಂ . . . ಹರನ ಸಭೆ ಸುಖದ ಸೊಗಸಿನ ಜೊಮ್ಮುವಿಡಿದು ಮೆಱೆದಿರಲು (ಸಿದ್ಧರಾ. ೦-೨೩) ; ಸಿಡಿಲ ದೊಂದುಳಿಯಂತೆ . . . ಜಗವ ಸುಡುವ ಪೆರ್ಗಿಚ್ಚಿನಂತಿಹ ಕೋಪ ಶಿಖಿ ಮುಖದೊಳಡರೆ (ಲಕ್ಷ್ಮಧಾ. ೩-೪೦). ೨. ಗುಂಪಿನಲ್ಲಿ ಉಂಟಾಗುವ ಸಂತೋಷ,– ಮುದ : "ನೆರವಿ ಮುದಗಳೊಳು ದೊಂದುಳಿ" (ಶಬ್ದಮಂ. ೧೦೪) ; "ದೊಂದುಳಿ ಮುದಂ" (ಸಂಜೀವ. ೨೫) ; "ದೊಂದುಳಿಯೆನಲ್ ಸಂತೋಷಮಕ್ಕು" (ಕಶರ. ೫೨) ; ಮರಿಯ ತಿಂದಾಮೇಲೆ ಎಳಸವುತೆಯಂ ಮೆದ್ದು ಮೊರೆದು ದೊಂದುಳಿಯನ್ನು ಸಾರುತ್ತಲಿಹುದು (ಕಾಲೂರ.೫೩-೮೦); ಎಲ್ಲಿ ದೊಂದುಳಿಗಳಿವು ಪಗಲಿರುಳ ತೊಡಕೆಲ್ಲಿ (ಕಾಲೂರ. ೬೮-೦೦೮). **ದೊಂದಡಿ** : ೧. ಸಂದಣಿಯ ಕಳಕಳದ ಮಂದಿಯ ದೊಂದಡಿ [ಪಾಠಾಂ. ಗೊಂದಣಿ, ದೊಂದಣಿ]ಯನೊಲ್ಲದೆ ಕೆಲಬರೆರವಿಂದವದನೆಯರುಪ್ಪರಿಗೆ ಗಳನೇಱಿ ನೋಡುವರು (ಬಸಪು. ೫-೩೮). **ದೊಂದಣ** : ೧. ಅಂದಣದ ಸಂದಣಿಯ ದೊಂ[ಪಾಠಾಂ. ಗೊಂ]ದಣ ಮಂದಿಯಿಬ್ಬಗಿಯಾಗಿ . . . ಮುಂದೆ ತೊಲಗದೆ ಬಪ್ಪವರ ಮುಡುಹಿಂದಣೆದು ಹೊಯ್ವತ್ತ ಕೈದುಗಳಿಂದ ಚಿಮ್ಮುತ ಬಂದು ಹೊಕ್ಕರು ರಾಜಮಂದಿರವ (ಬಸಪು. ೬೦-೨೮) ; ಲಲನಾಶಿರೋಮಣಿಯ ಮುಖತುಹಿನಕಿರಣನಂ ನಲವಿಂದ ಬಯಸಿ ನಡೆತಂದ ತಾರಾಗಣದ ಚೆಲುವ ದೊಂ[ಪಾಠಾಂ. ಗೊಂ]ದಣಗಳಿತ್ತರದಿ ನಿಂದಿರ್ಪವೋಯೆನೆ (ಪಂಕಾರಾ. ೦-೨೦-೫೦). **ದೊಂದಣೆ** : ೧. ದೊಂದಣೆ

ಯೊತ್ತಿನೊಳೊತ್ತರಿಸಿದ ಬಿಲ್ಗಾಱರ್ (ವೀರೇಡ. ೨-೩೩); ಉತ್ಕಟದ ದೊಂದಣಿಗಲಸಿ ಬಂದೈ ಸಿರಿಗಿರಿಯೊಳಿರದೆ (ಬಸಪು. ೦೮-೯); ಭೂತ ವೇತಾಳರಿಂ ಕಾಳರಿಂ ಕಡುಭಯಂಕರವಾಗೆ ಸಂದಣಿಯ ದೊಂದಣಿಯ ವರ್ಣಿಸುವನಾರಿಳೆಯೊಳು (ಲಕ್ಷ್ಮಭಾ. ೩-೩೪); ಸಂತತಂ ಶುಕಕೋಕಿಲ ಧ್ವನಿಯ ದೊಂದಣಿಯ ನಾದದ ವಿನೋದದಿಂದ (ಶುಕ್ಮಾಂಗ. ೨-೨೫); ಸಂಸಾರವನ್ನು ಅಲ್ಲಿ ದುರ್ಜನರ ದೊಂದಣಿಯಿಂದಾಚೆ ಹೂಡಿಬಿಡೋಣ (ಜನನಾ. ೪೪). 'ತೊಂತುಳಿ' ಹೋ. [←ತೆಲು. ದೊಂದಡಿ, ದಂದಡಿ]

ದೊಂದುಳಿಸು (ಕ್ರಿ). ೧. ಗುಂಪುಗೂಡು. ೨. ಗುಂಪಿನಲ್ಲಿ ವಿನೋದ ಪಡು,– ಸಂತಸಪಡು : ಅಳಿಗುರುಳ್ಗಳ ಮುಂದೆ ತೊಳಪ ನಾಸಿಕದಿ ಮಂಡಳಿಪ ಮೌಕ್ತಿಕ ಧಾಳಗೊಳಲಲಂಕಾರ ವೆಗ್ಗಳಿಸಿ ದೊಂದುಳಿಸಿ ಯೊರ್ಗುಳಿಸಿ ವನದೊಳ್ ಬಳಸಿ ಸುಳಿದಾಡಿದರ್ ಸತಿಯರು (ಲಕ್ಷ್ಮಭಾ. ೧೫-೩೭). [ದೊಂದುಳಿ + – ಇಸು$_3$]

ದೊಂದೆ, ದೊಂದಿ (ನಾ). ೧. ಕಟ್ಟು; ಕಂತೆ; ರಾಶಿ : ಹೊತ್ತಿಸಿದ ಹುಲ್ಲ ದೊಂದೆಗಳ ಕೇಸುರಿಗಳಿಂ ಸುತ್ತುವರಿದೆಸುವ ಶರಸಂತತಿಯ ಸಮಿತಿಯಿಂದೆ . . . ಆ ನಗರಿ ದಾರುಣತರಂ ಬಡೆದುದು (ಸಮ್ಮಕೌ. ೮-೩೯); ಸುಡುವ ಸುಣ್ಣಕಲ್ಲು ಉರಿವ ಪುಲ್ಗಳ ದೊಂದೆ ಸುರಿವ ಕೆಂಡ ತಱಿ ಕರಮೆಸೆದುದು ದುರ್ಗದೊಳಗೆ (ಕುರಾಸಾಂ. ೩೭-೫೫); ಹುರಿದ ಮಳಲು ಹುಲ್ಲ ದೊಂದೆಗಳಿಂ ಭೀಕರಮಾಯ್ತು ಕೋಟೆ (ಪಂಪ್ರಸಾಂ. ೮-೦೦); ಬಲ್ಮೊನೆಗಲ್ಕೃಶಾನುವೊಳ್ ಬೆರಸಿದ ಪುಲ್ಲ ದೊಂದೆ ಪೆಟಲುಪ್ಪಿನ ಪೆರ್ದಿದಿ ಮರ್ದಿವೆಂಬಿವಂ ಸುರಿದು . . . ಅರಿಭಟರಿಂತು ಕಾದುತಿರೆ ಮುತ್ತಿದರಳ್ಕದೆ ತನ್ಮಹಾಭಟರ್ (ರಾಜಶೇ. ೬-೦೦೬). **ದೊಂದಿ** : ೨. ಕೋಲಿಗೆ ಬಟ್ಟೆಯ ಚೂರುಗಳನ್ನು ಸುತ್ತಿ ಎಣ್ಣೆಯನ್ನು ಸುರಿದು ಹೊತ್ತಿಸಿದ ಪಂಜು,–ಹಿಲಾಲು,–ದೀವಟಿಗೆ: ವೀರಭದ್ರನ ಮುಂಗಡೆಗೆ ಉರಿಯುತ್ತಿರುವ ದೊಂದಿಯನ್ನು ಹಿಡಿದೊಬ್ಬ ನಿಂತ (ಬಡ್ಡಮಾ. ೯೫); ಮೂಢಗ್ರಾಮ್ಯರಾರಾದರೂ ದೂರದಿಂದ ನೋಡಿದ್ದರೆ ಅದನ್ನು ಕೊಳ್ಳಿದೆವ್ವವೆಂದು ತಿಳಿಯುತ್ತಿದ್ದರು; ತಿಳಿದವರು 'ದೊಂದಿ' ಎಂದು ಹೇಳುತ್ತಿದ್ದರು (ಕಾನೂರು. ೦೦೩); ರಾತ್ರೆಯ ಅರ್ಚನೆ ಮುಗಿಯುತ್ತಿದ್ದಂತೆ ಹತ್ತಿಸಿದ ದೊಂದಿಗಳು ಮಂಕಾಗಿ ಜಾತ್ರೆಯ ಗಲಿಬಿಲಿ ಕಡಿಮೆಯಾಗುತ್ತದೆ (ಸಂಸ್ಕಾರ. ೦೪೨); ದೊಂದಿಗಳನ್ನು ಹೊತ್ತಿಸಿ ದೇವಸ್ಥಾನದ ನವರಂಗಮಂಟಪದ ಮೇಲಿನಂಕಣದ ಶಿಲ್ಪಗಳನ್ನು ನನಗೆ ತೋರಿಸುತ್ತಾನೆ (ಈಚಕೆ. ೪೪). [ದೇ.॥ ತುಳು. ದೊಂದಿ]

ದೊಂಬ, ಡೊಂಬ$_1$, ದೊಮ್ಮರ (ನಾ). ಗಳೆಯ ಮೇಲೆ ಲಾಗ ಹಾಕಿ ಕಸರತ್ತುಗಳನ್ನು ತೋರಿಸುತ್ತಾ ಜೀವನವನ್ನು ನಡೆಸುವವನು; ಕೊಲ್ಲಟಿಗ : ಕೌಶಂಬೀಪುರದೊಳ್ ಬಹುಕರ್ಮಿಯೆಂಬ ದೊಂಬನ ಮನೆಯೊಳ್ ಸ್ತ್ರೀವೇದದಿಂ ಬೆಳ್ಗತ್ತೆಯಾಗಿ ಪುಟ್ಟಿ (ಸುಕುಮಾ. ೫-೦೨ ಪ); ಮೇಲೆ ಮರದ ರೆಂಬೆಯೊಂದಕ್ಕೆ ಮತ್ತು ಕೆಳಗೆ ನೆಲಕ್ಕೆ ಬಿಗಿದಿದ್ದ ದಪ್ಪನೆಯ ಮಿಣಿಯ ಇಳಿಜಾರಿನಲ್ಲೊಬ್ಬ ದೊಂಬ ಜರ್ರನೆ ಜಾರಿಬಿಟ್ಟು ನಿಂತು, ಸಲಾಮು ಮಾಡಿದ (ಸಂಸ್ಕಾರ. ೦೩೩); ದೊಂಬರ ಮಗುವಿಗೆ ತಂತಿಯೂ ನೆಲ (ಶಿಲಾಲ. ೬೪-೦); ದೊಂಬನ ಸಾವು ಗಣೆಯ ಮೇಲೆ, ಬಿಲ್ಲವರ ಸಾವು ಮರದ ಮೇಲೆ (ಗಾದೆ); ಅಗಸನ ಕತ್ತೆ ದೊಂಬನಿಗೆ ತ್ಯಾಗ (ಗಾದೆ). **ಡೊಂಬ$_1$** : "ಕೊಲ್ಲಟಿಗನೆನೆ ಡೊಂಬನು" (ಶಬ್ದಮಂ. ೬೦); "ಡೊಂಬನ ಪೆಸರ್ ತವೆ ಕೊಲ್ಲಟಿಗನಕ್ಕುಂ" (ಕಬ್ಬಿಕ್ಕೆ. ೩೭); "ಡೊಂಬವೆಸರಿಂ ಪೇಟಿಲ್ಕದು ಸಲ್ಗು ಕೊಲ್ಲಟಿಗನೆಂದೆನುತುಂ" (ಕವಿಕಂ. ೦೬೨); ಕೋಳಿಯಂತೆ ಕೂಗಿ ಡೊಂಬರಂತೆ ಕೂಡಿ ಆಡಿ ಬಾಗಿ ಹಿಂಗದಿದ್ದಡೆ ಕೊಂಡಾಡುವ ಈ ಲಾಗ ನೋಡಿಕೊಳ್ಳಿ (ಐಲೇಶ್ಯ. ೪೩೪-೩೫); ಪಂದೆಯ ಮಾತಿನಂತೆ ಡೊಂಬರ ತೋಟಿಯಂತೆ (ಧರ್ಮಾಮ್ಯ. ೮-೯೪); ಶುಕನೋದಿಂಗುಱಿ ಚೆಲ್ವೆ ಕಾಕರವ ರಂಭಾನೃತ್ಯಕಂ ಡೊಂಬರೇ (ಸೋಮೇಶ. ೩); ಅಗಣಿತರಹ ಡೊಂಬರುಗಳು ಬಗೆಬಗೆಯಾಟವ ತೋಱಿಯಾಸ್ಥಾನವ ಮಿಗೆ ಮೆಚ್ಚಿಸಿದರು (ಕಂನವಿ. ೨೦-೯೭); ಕಣ್ಣು ಕುಂಬಳ ಹೋಳು ಹೊಟ್ಟೆ ಡೊಂಬರ ಡೋಳು ಕೈಕಾಲು ಬಿದಿರಿನ ಕೋಲು (ಇಂಜಾಪ. ೦೦೦-೪೧). **ದೊಮ್ಮರ$_1$** : ತೆಲುಗು (Telugu):– ದೇವಾಂಗ, ಸಾಲೆ . . . ಬೋಗಂ, ದೊಮ್ಮರ, ಇತರರು (ತುಳುನಾ. ೦೭೫).

ಡೊಂಬರ ಕೋಡಗ = ೧. ಕೊಲ್ಲಟಿಗರು ತಮ್ಮ ಆಟಕ್ಕಾಗಿ ಪಳಗಿಸಿ ಉಪಯೋಗಿಸುವ ಕಪಿ. ೨. ಮತ್ತೊಬ್ಬನ ಪ್ರೇರಣೆಯಂತೆ ಕಾರ್ಯವನ್ನೆಸಗುವವನು; ಕಲಿಸಿದಂತೆ ಕಾರ್ಯದಲ್ಲಿ ಪ್ರವರ್ತಿಸುವವನು: ದುರ್ಯೋಧನಂ . . . ಡೊಂಬರ ಕೋಡಗದಂತೆ ಆಡಿಗೆಲ್ದಾಗಳ್ (ಪಂಪಭಾ. ೬-೭೩ ಪ). **ಡೊಂಬರಲಾಗ, ಡೊಂಬ ಲಾಗ** = ೧. ಡೊಂಬರವನು ಹಾಕುವ ಲಾಗ; ದೊಂಬರು ಗಣೆ ಹತ್ತಿ ತಲೆ ಕೆಳಗು ಮಾಡಿ ಹಾರುವುದು; ತಿಪ್ಪರಲಾಗ: "ಅಂತರಪಲ್ಟಿ; ಡೊಂಬರ ಲಾಗ" (Somersault. ಇಂಕನಿ); ಡಂಭಕ ಭಕ್ತಿಗೆ ಮೆಚ್ಚಿ ಕೊಡನು ಕೃಷ್ಣ ಡೊಂಬಲಾಗವ ಹಾಕಿ ಡೊಂಡೊಂಡೆ ಹೊರಳಿದರಿಲ್ಲ, (ಪುರಂದ. ೫-೦೩೮ ಅನುಪಲ್ಲವಿ). ೨. ವಿಶ್ವಪ್ರಯತ್ನ ಮಾಡುವುದು: ಡೊಂಬರ ಲಾಗ ಹಾಕಿದರೂ ಬೇರೆಯವರು ಈ ಕೆಲಸಮಾಡಲು ಸಾಧ್ಯವಿಲ್ಲ (ಕೂಡಿ). **ಡೊಂಬರ ಹುಳ** = ಡೊಂಬರಲಾಗದಂತೆ ಲಾಗಹಾಕಿಸಲು ಮಕ್ಕಳು ಆಟಕ್ಕಾಗಿ ಉಪಯೋಗಿಸುವ ಒಂದು ಬಗೆಯ ಹುಳು; ಭೋರಂಗಿ ಹುಳು: (ಕಿ). **ದೊಂಬರ ಕುಣಿತ** = ಕಲೆಗಾರಿಕೆಯಿಲ್ಲದೆ ಕುಣಿಯುವ ಕುಣಿತ; ಕುಮಾರರಾಮನಿಗೆ ಸಂಬಂಧಿಸಿದ ಹಾಡುಗಳನ್ನು ಹಾಡಿಕೊಂಡು ದೊಂಬರು ಆಚರಿಸುವ ಹಬ್ಬಗಳ ಸಂದರ್ಭದಲ್ಲಿ ದೊಂಬರ ಹೆಂಗಸರು ಮಾಡುವ ಒಂದು ಬಗೆಯ ಜಾನಪದ ನೃತ್ಯ: ದೊಂಬರ ಕುಣಿತ ಇದ್ದಲ್ಲಿ ಜನ ಸೇರಿರುತ್ತಾರೆ (ಕೂಡಿ). **ದೊಂಬರಗಿತ್ತಿ** = ದೊಂಬರ ಸ್ತ್ರೀ; ದೊಂಬಿತಿ : (ಕಿ). **ದೊಂಬರ ಪೋರಿ** = ೧. ದೊಂಬರವಳು; ದೊಂಬರ ಹುಡುಗಿ : ಆ ದೊಂಬರ ಪೋರಿ ಊರೂರು ಸುತ್ತಿ ಜೀವನ ನಡೆಸುತ್ತಾಳೆ (ಕೂಡಿ). ೨. ಬಸವಿ; ಸೂಳೆ: (ಕಿ). **ದೊಂಬರಾಟ, ಡೊಂಬರಾಟ** = ೧. ದೊಂಬರು ಆಡುವ ಗಣೆಯ ಆಟ,–ಕಸರತ್ತು : ಪೂರ್ವಕಾಲದಲ್ಲಿ ಇಲ್ಲಿಗೆ ಸುತ್ತುಮುತ್ತಲಿನ ಏಳೂರು ಶಿಡಿತೇರುಗಳು ಬಾದು ದೊಡ್ಡ ಜಾತ್ರೆಯಾಗಿ ಕುಸ್ತಿ ದೊಂಬರಾಟ ಎಲ್ಲಾ ಆಗುತ್ತಿದ್ದುವಂತೆ (ಹುಟ್ಟಿಹ. ೪); ದೊಂಬರಾಟ ಮುಂತಾದ ಹಲವಾರು ಮನರಂಜನೆಯ ಕಾರ್ಯಕ್ರಮಗಳು ಪದ್ಧತಿಯಂತೆ ನಡೆದುವು (ಸವತಿ. ೯೮); ದೊಂಬರಾಟದವರು ರಂಗಸ್ಥಳದ ಮೇಲಕ್ಕೆ ಓಡುತ್ತಾಬಂದರು (ಶಾಲಮ. ೦೨೧); ಅರಸನಿದ್ದನು ಡೊಂಬರಾಟಕೆ ಸೆರೆಯ ಸಿಕ್ಕಿದ ಮನದಲಿ (ಕಎಪು. ೩೭-೦); ಸಾಲೆಯಲ್ಲಿ ಅದೇನೋ ನಡೆದಿದೆಯೆಂತಲ್ಲ—ಹಗರಣವೋ ಡೊಂಬರಾಟವೋ (ಮೂರುದಾ. ೩೦). ೨. ವಿಶೇಷಪ್ರಯತ್ನ; ಮಹತ್ವವನ್ನು ತೋರಿಸಿಕೊಳ್ಳುವುದು; ಆಟೋಪ: ಯಮನಿಯಮಗಳ ಡೊಂಬರಾಟದಿಂದ ಫಲವೇನು (ವಿಜಾಮಂ. ೪೯); ಕವಿಯ ಕಲ್ಪನಾಶಕ್ತಿ ಎತ್ತರಕ್ಕೆ ಹೋದರೂ ಡೊಂಬರಾಟಕ್ಕಾಗಿ ಎಂದು ತೋರಬಹುದು (ಕಸಾಪ. ೫೧). ೩. ಹಸಿವು: ಕಣ್ಣಿರುವಷ್ಟು ನೋಟ, ಕಾಲು ಸೋಲುವ ತನಕ ಓಟ, ಹೊಟ್ಟೆಯಲ್ಲಿ ಡೊಂಬರಾಟ (ನೆಲಮು. ೬೫-೨). **ದೊಂಬರು ಗಣೆ** = ಕೊಲ್ಲಟಿಗರು ಆಟದಲ್ಲಿ ಉಪಯೋಗಿಸುವ ಗಣೆ,–ಬಿದಿರಿನ ಕೋಲು : ಯೆಲ್ಲಕ್ಕನು ಭಾರಿ ದೊಂಬರುಗಣೆ ಮೇಲೆಯಿಂದ ಬಿದದ ಕಾರಣ (ಮೈಅರಿ. ೦೯೩೮, ೯೮-೪; ಸು. 17 ನೆಯ ಶತ).

[ದೇ.॥ ತಮಿ. ತೊಮ್ಪ; ಮಲ. ದೋಮ್ಬರ್, ಡೋಮ್ಬರ್; ತುಳು. ದೊಂಬೆ, ದೊಮ್ಮರೆ, ಡೊಂಬೆ, ಡೊಂಬಾರೆ; ತೆಲು. ದೊಮ್ಮರ./ಸಂ. ಡೋಂಬ, ಡೋಮ]

ದೊಂಬಬ್ಬೆ (ನಾ). ಒಬ್ಬಾಕೆಯ ಹೆಸರು: ತ್ರೈಲೋಕವೊಬಲಂ ದೊಮ್ಬಬ್ಬೆ ಆಳುತ್ತಿರೆ ಅಲ್ಲಿ ಕೊಟ್ಟದು ಆಱುಗಣ್ಣುಗ ಮಣ್ಣು (ಎಳ. XII, ಶಿರಾ. ೨೪-೪೩ ; ಸು. ೩೦೦). [ದೊಂಬಂ + ಅಬ್ಬೆ$_1$]

ದೊಂಬಿ, ಡೊಂಬಿ$_1$, ಡೊಂಬು$_1$, ಡೊಂಬೆ$_1$, ದೊಂಬೆ (ನಾ). ೧. ಗುಂಪು ; ಸಮೂಹ : ಕುಸುಮಸೌರಭಕೆ ಊಟೆವರಿವ ತುಂಬಿಗಳ ದೊಂಬಿ (ಪೋಹತ. ೩-೨೫); ದ್ವಾದಶಾರ್ಕಬಿಂಬ ಪೂರ್ವೋದಧಿಯದನುಚ್ಚಳಿಸಿ ಕತ್ತಲೆಯ ದೊಂಬಿಯಂ ತುಳಿವುತುದಯಾಚಲಾಗ್ರವ ನಿಲ್ಕಲಂಬುಜೋದರ . . . ಸಂಗಮಸ್ಥಾನಕೈತಂದನೊಲಿದು (ವಂಕಾರಾ. ೨-೦೮-೧). ೨. ಗದ್ದಲ; ಗೊಂದಲ. ೩. ದಂಗೆ ; ವಿರೋಧದ ಚಳುವಳಿ ; ಜಗಳ ; ಕದನ ; ಕಾಳಗ : ದೊಡ್ಡ ದೊಂಬಿ ಉಂಟಾಗುವಂತಿತ್ತು (ವ್ಯಾಸಜಿ. ೮೦); ದೊಂಬಿಗೆ ಹೋದವನು ಶರೀರದ ಹಂಬಲು ಬಿಟ್ಟರೆ ಲೇಸು (ಗಾದೆ). **ಡೊಂಬಿ$_1$** : ೧. ನೆರೆನೆರೆದು ಮೊರೆವ ಮಱಿದುಂಬಿಗಳ ಡೊಂ[ಪಾಕಾಂ. ದೊಂ]ಬಿ (ಜೈಮಿಭಾ. ೨೯-೪೬); ತನಿಗಂಪನುಂಡುಂಡು ಪೆಠಸಾರಲಮ್ಮದಿಹ ತುಂಬಿಗಳ ಡೊಂಬಿಗಳ ನೆರವಿ ಕಾಣುತಲಿ (ವಂಕಾರಾ. ೧-೩-೫೭). ೩. 'ಡೊಂಬಿಗ$_1$' ಪರಾ. **ಡೊಂಬು$_1$** : ೧. ಸರಸಿಜದ ನಿಜಗಂಧದಲಿ ತನುಪರಿಮಳವ ತಕ್ಕೈಸಿ ವನದಲಿ ತರಳೆಯರು ತುಂಬಿದರು ಮಱಿದುಂಬಿಗಳ ಡೊಂಬಿನಲಿ (ಕುಪ್ಪಾಅ. ೧೮-೩); ಅಂಬುನಿಧಿ ಬಡಬಡವರಿಗೆ ತೆಗೆದಂಬಿಗೊಡಲೊಡ್ಡುವುದೆ ಕಪಿಗಳ ಡೊಂಬಿಗೀವುದೆ ಬೆನ್ನ ಬೆಟ್ಟಕೆ ಕಥೆಯ ಮಾತಲ್ಲ (ತೊರರಾ. ೬-೩೪-೦೯). **ಡೊಂಬೆ$_1$** : ೨. ಆ ಖರ್ಪರನ ಕೂಡಲ ಜೋಗಿಗಳು ಡೊಂಬೆಯಂ ಮಾಡಿ ರಾಮಯ್ಯನ ಶಿಷ್ಯರ ನೋಯಿಸಲು (ಭೈರಸೂ. ೩೨೬). **ದೊಂಬೆ** : ೩. ನಿಶ್ಚಯವಾಗಿ ಈ ದೊಂಬೆಯಿಂದ ಸರಕಾರಕ್ಕೆ ಒಳಗೊಳಗೆ ಬಹಳ ಆನಂದವಾಗಿರಲಿಕ್ಕೆಬೇಕು (ಕುರಿಹಿಂ. ೦೪೦). 'ತೊಂಬೆ$_1$' ಪರಾ.

ದೊಂಬಿ ಎಬ್ಬಿಸು = ದಂಗೆಯೇಳುವಂತೆ ಮಾಡು : ನಿನಗೇನು ಹಳ್ಳಿಯಲ್ಲಿ ದೊಂಬಿ ಎಬ್ಬಿಸಬೇಕೆಂಬ ಉದ್ದೇಶವೊ ? (ಯೋಧಪು. ೮೮). ದೊಂಬಿ ಏಳು = ವಿರುದ್ಧವಾಗಿ ನಿಲ್ಲು ; ದಂಗೆ ಏಳು : ಅವನ ಮನಸ್ಸು ದೊಂಬಿ ಏಳಲು ಯತ್ನಿಸುತ್ತಿತ್ತು (ಬೆತಂಬಾ. ೦೧೫). ದೊಂಬಿಮಾಡು, ಡೊಂಬಿ ಮಾಡು, ಡೊಂಬು ಮಾಡು=ದಂಗೆ ಏಳು: ದೊಂಬಿಮಾಡಿ ಜನರು ಅವರ ಜಾಲದಲ್ಲಿ ಬಿದ್ದಂತೆ ಆಯಿತು (ಯಕ್ಷಪ್ರ. ೫೬) ; ಜನರು ತಮ್ಮ ಕರ್ತವ್ಯಗಳನ್ನೇ ಮರೆತು ಪಂಗಡಗಳನ್ನು ಕಟ್ಟಿಕೊಂಡು ದೊಂಬಿ ಮಾಡಲುಪಕ್ರಮಿಸಿದರು (ಪೈಗಂಬ. ೩) ; ಹಿಮಕರಹಾಸವನು ಸೆಳೆದು ಡೊಂಬಿ ಮಾಡುವ ವಾಲಿತನುಜನ ಸಂಬರಿಸಿ (ತೊರರಾ. ೬-೪೮-೨೭) ; ಹಾಳಿಸಿತು ರಥ ಜಡಿವ ಕೌರವನಾಳ ಝೋಂಪಿಸಿ ಡೊಂಬು ಮಾಡುವ ಜಾಳ ಝೂಡಿಸಿ ಬೈದು ಹೊಕ್ಕನು ಮತ್ತೆ ಗುರುಸೂನು (ಕುಪ್ಪಾಳ. ೦೪-೨೯). ದೊಂಬಿಯ ಜಗಳ = ದೊಂಬಿಜಗಳ : ಬರಿದೆ ದೊಂಬಿಯ ಜಗಳವನು ನರಹರಿಯೆ ನೀ ಮಾಡಿದೊಡೆಯೊಪ್ಪೆನು (ಅರ್ಜಾವಿ. ೦೦-೦೬). ದೊಂಬಿ ಹಚ್ಚು = ದೊಂಬಿ ಮಾಡು : ಶತ್ರುಗಳನ್ನು ಎಡೆಬಿಡದೆ ನೆಲಕ್ಕಪ್ಪಳಿಸಿದರೆಂದು ಕೂಗುತ ದೊಂಬಿ ಹಚ್ಚಿದರು (ಕೋಹಿನೂ. ೦೪).

[ದೇ.॥ ತುಳು. ದೊಂಬಿ, ಡೊಂಬಿ, ಡೊಂಬೆ; ತೆಲು. ದೊಮ್ಮಿ]

ದೊಂಬಿಗ, ಡೊಂಬಿಗ$_1$ (ನಾ). ೧. ಗೊಂದಲವನ್ನುಂಟುಮಾಡುವವನು; ಗದ್ದಲ ಮಾಡುವವನು : (ಕಿ). **ಡೊಂಬಿಗ$_1$** : ೨. ಕಾಳಗ ಮಾಡುವವನು ; ಮೇಲೆಬೀಳುವವನು : ಅಂಬರಕೆ ಜಡಿದಿಟ್ಟನೌಕುವ ಡೊಂಬಿಗರ ದವಡಿಗರ ದಕ್ಕಡ ರಕ್ಕಸರ ಹನುಮ (ತೊರರಾ. ೩-೪-೨೨).

[ದೊಂಬಿ + – ಗ$_2$]

ದೊಂಬಿಗಾರ, ಡೊಂಬಿಗಾರ (ನಾ). ೧. ಗದ್ದಲ ಮಾಡುವವನು ; ಗಲಾಟೆ ಮಾಡುವವನು : ಬೀದಿಯ ದೊಂಬಿಗಾರರೂ ವಿದ್ಯಾನಿಲಯಗಳನ್ನು ಹೊಕ್ಕು ಅಲ್ಲಿಯೂ ಮರ್ಕಟಚೇಷ್ಟೆ ನಡಿಸುವಂತೆ (ವಿಜಾಮಂ. ೦೧೨). **ಡೊಂಬಿಗಾರ** : ೨. ದಂಗೆಎಬ್ಬಿಸುವವನು : ಡೊಂಬಿಗಾರ ನಿವನಂ ಮರಳಿ ಹಿಡಿವುದೆನೆ ಸಾಧ್ಯವೇನಿನ್ನು (ಗೊಲ್ಕೊಥಾ. ೭-೦೭೦).

[ದೊಂಬಿ + – ಕಾರ$_1$ (< – ಕಾಱ)]

ದೊಂಬಿಗೂಡು (ಕ್ರಿ). ಗುಂಪು ಸೇರು ; ಸಂದಣಿಗೂಡು : ಈ ಗುಂಬ ದಂಬಟೆಯವರ್ ದೊಂಬಿಗೂಡಿ ಪಾಡುವ ಬಣ್ಣವಾಡಂ ಕೇಳುತ್ತೆ (ಚಿಕವಿ. ೬-೧೩೪ ಪ). [ದೊಂಬಿ + ಕೂಡು$_1$]

ದೊಂಬಿಜಗಳ (ನಾ). ಬೀದಿಯಲ್ಲಿ ನಡೆಯುವ ಜಗಳ ; ಬೀದಿಜಗಳ ; ಹಾದಿಜಗಳ : ಹೆಚ್ಚು ಗುಡಿಸಿಲುಗಳಿರುವಲ್ಲಿ ದೊಂಬಿಜಗಳ ಸರ್ವೇ ಸಾಮಾನ್ಯವಾಗಿರುತ್ತದೆ (ರೂಢಿ). [ದೊಂಬಿ + ಜಗಳ (<ಜಗಟ)]

ದೊಂಬಿತಿ, ಡೊಂಬತಿ, ಡೊಂಬಿತಿ$_1$ (ನಾ). ದೊಂಬರ ಹೆಂಗಸು ; ಕೊಲ್ಲಟಿಗಿತ್ತಿ: ತನ್ನ ಗುರು ದೊಂಬಿತಿಯ ಕೂಡುಣುತ್ತಿರಲ್ (ಪಾಸೋಪು. ೧೩-೪). **ಡೊಂಬತಿ** : ಇದು ವಿಷದ ಮರನೆಂದು ಮುಳ್ಳ ಕಟ್ಟಿರಲು ಅದನಱಿದು ಒಬ್ಬ ಡೊಂಬತಿ . . . ರಾಯನ ತೋಟದ ವಿಷದ ಹಣ್ಣ ಮೆದ್ದು (ಭೈರಸೂ. ೧೭೨) ; ಸಂತೆಯಂಗಡಿ ಸೂಳೆ ಮುಂತೊಲಿವ ಡೊಂಬತಿಯ . . . ಹೋದವನ ಸಂತಾನ ಕೆಡುಗು (ಸರ್ವಜ್ಞ. ೧೯೪೭) ; ಬಲ್ಲಂತೆ ನಾನು ನಾಡಾಡಿ ಡೊಂಬತಿಯಾಗಿ ಗಣಿಮಿಣಿಗಳನ್ನೇರಿ ಕುಣಿಯ ಬಹುದು (ಸಖೀಗೀ. ೫೯-೭). **ಡೊಂಬಿತಿ$_1$**: ಅಮಿತವೈಭವದೊಳು ಬರುತ್ತ ಗುರು ಡೊಂಬಿತಿಯ ಮಮತೆಯಿಂ ಪೋದನೆನೆ (ವೀಶೈಪು. ೭-೪-೦೭).

[ದೊಂಬ + – ಇತಿ$_1$ (< – ಇತ್ತಿ)]

ದೊಂಬಿದಾಸ (ನಾ). ಊರೂರು ಸಂಚರಿಸುತ್ತಾ ಐತಿಹಾಸಿಕ, ಪೌರಾಣಿಕ ಕಥೆಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾ, ಬಯಲಿನಲ್ಲಿ ರಾತ್ರಿಯ ಹೊತ್ತು ನಾಟಕ ಆಡುವ ವೃತ್ತಿಯವನು ; P ಇವರಿಗೆ 'ಹೆಣ್ಣುವೇಷ' ದವರು ಎಂತಲೂ ಕರೆಯುತ್ತಾರೆ : ದೊಂಬಿಯಾಗಿ ಆಟ ಆಡುತ್ತಿದ್ದುದರಿಂದ ಯಕ್ಷಗಾನವನ್ನು ನನ್ನೂರಿನಲ್ಲಿ ದೊಂಬೀಆಟವೆಂದು, ದೊಂಬೀಆಟ ಆಡುವ ಜನರಿಗೆ ದೊಂಬೀದಾಸರೆಂದೂ ಕರೆಯುತ್ತಾರೆ (ನನ್ನೂರು. ೩೦೩) ; ದೊಂಬೀದಾಸರ ಆಟಗಳಲ್ಲಿ ಇದು ಇನ್ನೂ ನಿಂತಿರುವುದನ್ನು ನಾವು ಬಲ್ಲೆವು (ಸಾಹಿಜೀ. ೧೭) ; ದೊಂಬಿದಾಸನ ನಿಲುವಂಗಿ ಹಾಕಿದಂಥ ನಾರದ ಬರುತ್ತಿರಲಿಲ್ಲ (ಯಕ್ಷಬ. ೧೦೮) ;

[ದೊಂಬಿ + ದಾಸ]

ದೊಂಬಿದುಳುಕು (ನಾ). ಬಹಳವಾದ ತುಳುಕು ; ಕಲ್ಲೋಲ ಧುಮ್ಮಿಕ್ಕಿದನು ಸರಸಿಯಲಿ ದೊಂಬಿದುಳುಕಿನೊಳದನು ಕಾಣದೆ ಶಂಬರಾಂತಕನಿಟ್ಟ ಮೂಡಿಗೆಯಂಬೆನಲು ಪೊರಮಟ್ಟ ದಿವ್ಯಾಂಗನೆಯ ರೂಪಿನಲಿ (ಆನಂರಾ. ೪-೧-೦೩). [ದೊಂಬಿ + ತುಳುಕು$_2$ (<ತುಳುಂಕು$_2$)]

ದೊಂಬಿಯುದ್ಧ (ನಾ). ಗುಂಪುಗುಂಪಾಗಿ ಮಾಡುವ ಯುದ್ಧ ; ಅನೇಕ ಜನರು ಆಕ್ರಮಣ ಮಾಡಿ ಮಾಡುವ ಯುದ್ಧ : ಕೌರವಬಲದೊಡನೆ ಯುದ್ಧಕ್ಕೆ ಮುಹೂರ್ತ ಮಾತ್ರವು ದೊಂಬಿಯುದ್ಧವನ್ನು ಮಾಡಿ (ಕೈವಾಅ. ೩೫೯). [ದೊಂಬಿ + ಯುದ್ಧ]

ದೊಂಬಿಸಾಕ್ಷಿ (ನಾ). ಗೊಂದಲವನ್ನುಂಟುಮಾಡುವ ಹೇಳಿಕೆ,–ಸಾಕ್ಷಿ : (ಕಿ). [ದೊಂಬಿ + ಸಾಕ್ಷಿ]

ದೊಂಬಿಸ್ವಾಧ್ಯಾಯ (ನಾ). ೧. ಗುಂಪಿನಲ್ಲಿ ವೇದವನ್ನು ಅಧ್ಯಯನ ಮಾಡುವಿಕೆ. ೨. ಜಾತ್ರೆ ಮುಂತಾದ ಕಡೆ, ಗಲಾಟೆಯ ನಡುವೆ, ಗೊಂದಲದಲ್ಲಿ ನಡೆಯುವ ಅತ್ಯಾಚಾರ : (ಕಿ).

[ದೊಂಬಿ + ಸ್ವಾಧ್ಯಾಯ]

ದೊಂಬೆ 'ದೊಂಬಿ' ನೋ.

ದೊಕ್ಕನೆ (ಅ). ೧. ದೊಕ್ಕೆಂದು ಶಬ್ದವಾಗುವ ಹಾಗೆ: ಒಂದೆ ಸರಲಿಂದವು ವನೆರ್ದೆಯಂ ದೊಕ್ಕನೆ ತಿಣ್ಣಮೆಚ್ಚು ಕೊಲಲೊಲ್ಲನೆ ಸಂಕ್ರಂದನನಂದನ

ತನಯಂ (ಪಂಪಭಾ. ೦೧-೯೬); ಇಕ್ಕೆಯೊಳಱಿಸಿ ಕಾಣದೆ ಪಕ್ಕೆಯಂಬುರಕಕ್ಕಱು ಮಿಗೆ ಪಾಱಿ ನೆಲಕೆ ದೊಕ್ಕನೆ ಕೆಡೆದು ಪ್ರಳಯಪಿಸಿತದಱಿಂದು ದುಃಖ ವಂನದನೇನೆಂಬೆ (ಅಂಜಕ. ೭-೦೬೬). ೨. ಕೂಡಲೆ; ಬೇಗನೆ; ತಕ್ಷಣ: ಎಕ್ಕೆಯ ಕೋರಕಮಂ . . . ಅರೆದು ಕದಡೀಂಟಲೊಡಂ ದೊಕ್ಕನೆ ವಮಾಣ್ಮಂ ವೇಕುಳಿಯುಕ್ಕಿದ ಶುನಕನ ವಿಷಂ (ಜಮದ. ೧೩-೩೭); ಪಕ್ಕ ವಿಲ್ಲದ ಪಕ್ಕಿಯಂದದಿ ನನ್ನನಂ ದೊಕ್ಕನೆ ಮಾಡಿದೆ ಮಗನೆ ದಿಕ್ಕಾವುದು ವೇಳನಗಿನ್ನು ನಂದನ ಅಕ್ಕಟ ತಾಯಂನು ತೊಱಿದ್ದೆ (ಕವಿಕ. II, ೪೪. ಕಾಮನ ಕಥ); ದಿಕ್ಕುದಿಕ್ಕುಗಳಂದ ಬಂದೊಂದು ಮರದಲಿ ಪಕ್ಷಿ ಕುಳಿತು ರಾತ್ರಿಯಲಿ ಅರ್ಕನುದಯವಾಗೆ ತಮತಮ್ಮ ದಿಕ್ಕಿಗೆ ದೊಕ್ಕನೆ ಪೋವಂತೆ ಕಾಣ (ದ್ರೌದಭಾ. ೦-೩೬); ರುಗುಮಿಣಿ ದೊಕ್ಕನಾಕೆಯ ಕರಸಿ ನೋಡಿ ದಳಕ್ಕಱಿಂದ (ಸಾಳ್ವಭಾ. ೩೦-೩೩); ದೊಕ್ಕಸ ಭಂಡಾರ ದೇಶ ರಾಣಿಯ ವಾಸ ವಿಕ್ಕ ಕುಮಾರವರ್ಗವನು ದೊಕ್ಕನೆ ಬಿಟ್ಟುಹೋದನು (ಅನಂಪ-೩-೨೦೭). [ದೊಕ್ಕು + – ಅನೆ$_1$]

ದೊಕ್ಕರಿ 'ಡೊಕ್ಕರ್ಯ' ನೋ.

ದೊಕ್ಕರಿಗೊಳ್ 'ಡೊಕ್ಕರಂಗೊಳ್' ನೋ.

ದೊಕ್ಕರಿಸು 'ಡೊಕ್ಕರಿಸು' ನೋ.

ದೊಕ್ಕು (ನಾ). ಒಂದಂ ಅನುಕರಣ ಶಬ್ದ: ದೊ[ಪಾಣಾಂ. ಧೊ]ಕ್ಕು ಧಡ ಸಬುದಗಳಲಿಳೆ ಗುವಿಕ್ಕೆ ಕೂರುಮನಱಿಚೆ . . . ಧೈರ್ಯಬಲ ರೊದಗಿದರು ಸರಿಸದಲಿ (ತ ೨ರಹಾ. ೪-೪-೩೭).

ದೊಕ್ಕೆ 'ಡೊಕ್ಕೆ' ನೋ.

ದೊಕ್ಕೆನ್ (ಕ್ರಿ). ದೊಕ್ಕೆಂದಂ ಶಬ್ದವುಂಟಾಗು: ಉರ್ಕಂಬುಗಳೆಱಗಿ ರೋಮರೋಮಕ್ಕೆ ನೆಲಿಲ್ ನೆಕ್ಕು ಚಳಿಲ್ ಚಕ್ಕು ದೊಗಲ್ ದೊಕ್ಕೆನೆ ನಾಂಟದುವರಾತಿಭಟರವಯವವಮಂ (ಜಗವಿ. ೭-೪೦); ಹಾಳಾಹಳಸಮಾನ ತೀವ್ರಾನುಭಾಗದ ದುರಿತಧಾರದಿಂ ಬೀಟ್ಟಂತೆ ದೊಕ್ಕೆನೆ [ಪಾಣಾಂ. ದೊಕ್ಕನೆ] ಬಿಟ್ಟು (ಪಾರ್ಪು. ೦೦-೦೫ ಪ); ಕರಘಾತದಲಿ ದಡ ದೊಕ್ಕೆನಲು ಕೆಡಹಿದನು ಕೇಳೀ ಸೌಧಸಂಕುಳವ (ತೊರಹಾ. ೫-೪-೦೫).

[ದೊಕ್ಕು + ಎನ್$_1$]

ದೊಗರು 'ಡೊಂಗಟಿ' ನೋ.

ದೊಗಲ್ (ನಾ). ಒಂದಂ ಅನುಕರಣ ಶಬ್ದ: ಉರ್ಕಂಬುಗಳೆಱಗಿ ರೋಮ ರೋಮಕ್ಕೆ ನೆಲಿಲ್ ನೆಕ್ಕು ಚಳಿಲ್ ಚಕ್ಕು ದೊಗಲ್ ದೊಕ್ಕೆನೆ ನಾಂಟದು ವರಾತಿಭಟರವಯವಮಂ (ಜಗವಿ. ೭-೪೦).

ದೊಗಲೆ 'ದಗಲೆ$_3$' ನೋ.

ದೊಗಹು (ನಾ). ಒಂದು ಅನುಕರಣ ಶಬ್ದ: ಘಳಿಲೆಂಬ ಘಕ್ಕೆಂಬ ದೊಗಹೆಂಬ ದೊಕ್ಕೆಂಬ . . . ಕೂರಸಿಗಳುರವಣೆಯ ದನಿಯಡಸುತಂ ಪುಟ್ಟಿ (ಇಹರ. ದೀ. ೪೧-೩೨); ಖಣಿಲ್ಬಟಲ್ದೊಗಹು . . . ಗರಿಗರಿಲೆಂಬ ನಿಷ್ಠುರರವಂ ವಿಗೆ ತಬ್ಬುಳಿದತ್ತು ಯುದ್ಧದೊಳ್ (ಗಿರಿಕ. ೬-೬೮).

ದೊಗಳೆ 'ದಗಲೆ$_3$' ನೋ.

ದೊಗೆ$_1$ (ಕ್ರಿ). ಉಗುಂರಿನಿಂದ ಗೆಬರು; ಕವರು: ವಂಣ್ಣನ್ನು ದೊಗೆದು ಅಲ್ಲಿ ಬಚ್ಚಿಟ್ಟಿದ್ದ ಗೋಲಿಯನ್ನುಹುಡುಕತೊಡಗಿದ (ಟೂಪಿ). [?]

ದೊಗೆ$_2$ (ನಾ). ಕೆತ್ತಿದ ಪ್ರದೇಶ; ಹಳ್ಳ ಮಾಡಿರಂವ ಜಾಗ (?): ಕಲ್ಲ ಮೇಗಣ ದೊಗೆಯಲುಂ ಜಿಯಕೇತನಿರ್ವ್ಪತ್ತು ವು[ಳ]ಕಯ್ಯ ಕೆಲಸಂ ಗೆಯ್ದು (ಸಾಇಇ. XI-1, ೮೫-೪೦ : 1040). [<ದೊಗೆ$_1$]

ದೊಗ್ಗ (ನಾ). ೧. ಹಂಳಿಯಾದುದಂ: ಕಳ್ಳಂ ಕುಡಿದರಂತೆ ಸೊರ್ಕಿ ದೊಗ್ಗಳೆಯಂತುರ್ಬಿ [ಪಾಣಾಂ. ಕಾಯ್ದ ಪಾಲಂತುರ್ಕಿ] [ಬಳಿವ ಮೊಲೆ ಯಂತೆ ಕೊರ್ವಿ] ಎಳವೆಱಿಯಂತೆ ವಕ್ರನಾಗಿ (ಕರ್ಣಾಮ್ಯ. ೨-೦೦೫). ೨. ಹುಳಿನಂಚ್ಚು; ತರಿಯಿಂದ ಮಾಡಿದ ಗಟ್ಟಿಯಾದ ಅಂಬಲಿ: ಅಗ್ಗಸುಗ್ಗಿಗಳುಂಟು ದೊಗ್ಗ[ಪಾಣಾಂ. ಡೊಗ್ಗೆ]ಮಜ್ಜಿಗೆಯುಂಟು ಹೆಗ್ಗಳದ ಕಾಯಿಂ ಮೆಲಲುಂಟು (ಸರ್ವಜ್ಞ. ೦೬೦೯). [?]

ದೊಗ್ಗಳೆ, ದಗ್ಗಳಿ, ದಗ್ಗಿ (ನಾ). ಒಂದು ಬಗೆಯ ಸಸ್ಯ: ಹುಲಿಗಿಲ್ ದೊಗ್ಗಳೆ[ಪಾಣಾಂ. ಡೊಗ್ಗಗೆ, ದೊಗ್ಗಗೆ]ಯ ಹಜುಹೆಯೆಂಬವಱಿಲೆಯುಂ ಕಟುಯೊಳುಱಿ ಕಾಸಿ ಕಟ್ಟಿಲ್ ತೊಲಗುಗುಮೊದಱಿಸುವ ಮುಳ್ಳ ವಿಷವೆನಿತನಿತುಂ (ಜಮದ. ೨-೩೦೦). **ದಗ್ಗಳಿ**: ಸೊಪ್ಪುಗಳು: ಅಗಸೆ . . . ಹರಿವೆ, ಬಿಲಕಿ, ದಗ್ಗಳಿ, ಕೆಸವೆ, ದೊಡ್ಡಬಸಲಿ (ನಮ್ಮನು. ೨೩೭). **ದಗ್ಗಿ**: ದಗ್ಗಿಸೊಪ್ಪು, ಬಿಲಕೀರೇಸೊಪ್ಪು (ಪ್ಯಾಪಿಗಿ. ೭-೪೬).

[ದೇ.ಶ ತುಳು. ದೊಗ್ಗುಲಿ, ದೊಗ್ಗೊಲಿ; ತೆಲು. ದೊಗ್ಗಲಿ, ದಗ್ಗಲಿ]

ದೊಗ್ಗಾಲು 'ಡೊಗ್ಗಾಲು' ನೋ.

ದೊಗ್ಗಾಲೂರು 'ಡೊಗ್ಗಾಲೂರು' ನೋ.

ದೊಟ್ಟಿ (ನಾ). (ಕರಾ) ಬಾವಿಯಿಂದ ನೀರನ್ನು ಮೇಲಕ್ಕೆ ಎತ್ತುವ ಸಾಧನ; ಏತ: ನೀರಿನ ಆಳು ಲಕ್ಕು ದೊಟ್ಟಿಯ ನೀರು ಸೇದಲು ಬಂದಾಗ ರಾಮನಾಥ ಹಾಗೂ ಅವನ ತಂದೆ ಇಬ್ಬರೂ ಹತ್ತಲಲ್ಲಿದ್ದರು (ಮೂರುನಾ. ೩೯): ಇಪ್ಪ ವರ್ಷ ದೊಟ್ಟಿಯಿಂದ ಅವರು ನೀರನ್ನು ಮೊಗೆಯುತ್ತಿದ್ದರು (ಮುರಮ. ೫೪). [←ತುಳು. ದೊಟ್ಟಿ]

ದೊಠಾರ (ನಾ). ೧. ಶೂರ; ಪರಾಕ್ರಮಿ; ಕಲಿ: ಆರಿವನು ಕಲಿ ಪಾರ್ಥನೇ ತ್ರಿಪುರಾರಿ ಹಿಡಿವಂಬಾಯಿತೆಂಬ ದೊಠಾರನೇ ದೈತ್ಯಾರಿ ಸಾರಥಿಯೆಂಬ ಗರ್ವಿತನೆ (ಕುವ್ಯಾದ್ರೋ. ೪-೪೨); ಮೇಳವದ ಪರಿ ಲೇಸ್ಯ ಕರ್ಣನ ಸೋಲದಲಿ ಸೀವರಿಸಿದರೆ ಭೂಪಾಲನಾಣೆ ದೊಠಾರರಹಿರೆನು ತೆಚ್ಚನಾ ಪಾರ್ಥ (ಕುವ್ಯಾಳ. ೫೪-೪೦). ೨. ನಿಂದೆ; ಮೂದಲೆ; ಚುಚ್ಚುಮಾತಾಡುವಿಕೆ; ಬಯ್ಗುಳು. 'ತುಂಟಾರ', 'ದೊಠಾರತನ', 'ದೊಠಾರಿಸು' ಪರಾ. [?]

ದೊಠಾರತನ (ನಾ). ೧. ಶೌರ್ಯ; ಸಾಹಸ; ಪರಾಕ್ರಮಂ: ಆಳುತನದ ದೊಠಾರತನ ಸರಿಯಾಳಿನಲಿ ಸೆಣಸಾದೊಡೊಳ್ಳಿತು ಮೇಳವೇ ಗುರುದೈವ ದಲಿ (ಕುವ್ಯಾದ್ರೋ. ೦-೩೬); ಆರ ತೇಜದಲೊಲಿಸಿದೆನು ಮದನಾರಿಯನು ಮಱಿಗಾಳಗದ ದೊ[ಪಾಣಾಂ ಕು]ಠಾರತನದಲಿ ಮೆಚ್ಚಿ ಕೊಟ್ಟನಲ್ಲೆ ನಿಜಾಸ್ತ್ರವನು (ನಿಧಾಗ. ೧-೦೦-೪೩). ೨. ನಿಂದಿಸುವಿಕೆ; ಮೂದಲಿಸುವಿಕೆ; ಬಯ್ಕುವಿಕೆ: ನಾಡ ಮಾತನು ಕಲಿತು ನವ್ಮೊಡನಾಡುತಿಹರೆ ದೊಠಾರತನದಲಿ ಮರುಳುತನದಿಂದೆ (ಪ್ರಭುಲೀ. ೦೩-೮೨).

[ದೊಠಾರ + – ತನ]

ದೊಠಾರಿಸು (ಕ್ರಿ). ೧. ಪರಾಕ್ರಮವನ್ನು ತೋರಿಸು: ಶೌರ್ಯ ತಾಳಂ; ಸಾಹಸಮಾಡಂ: ಆಳಿವನ ಘಾಟವೆ ದೊಠಾರಿಸಿ ಸೋಲಿಸುವ ದೇನರಿದೆ (ಕುವ್ಯಾಳ. ೫೬-೫೩). ೨. ಮೂದಲಿಸಂ; ನಿಂದಿಸಿ ಘಾತಾಡು: ಪೋಡಿ ಮಾಡದಿರಲೆ ಕಿರೀಟಿ ವಿಭಾಡಿಸುವುದರಿದೇ ದೊಠಾರಿಸಿಯಾಡುವುದು ದೊರೆಗುಚಿತವೇ (ಕುವ್ಯಾಭೀ. ೯-೫೬); ಘಡ ದೊಠಾರಿಸಿ ಮಡಿದ ಜಿಹ್ವೆಯ ಹೆಡತಲೆಯಲುಗಿವೆನು ಕಣಾ (ಕುವ್ಯಾದ್ರೋ.೦೬-೩೪); ಇವನ ದೊಠಾರಿಸುವ ನಾಲಗೆಯ ಕೊಯ್ಲಿಗೆ ಶಸ್ತ್ರವಿವೆಯೆನುತ(ಕುವ್ಯಾಳ. ೪-೦೦).

[ದೊಠಾರ + – ಇಸು$_5$]

ದೊಡಹಳತ 'ದೊಡ್ಡಹಾಳಿತ' ನೋ.

ದೊಡ್ಡ (ಗು). ೧. ಗಾತ್ರದಲ್ಲಿ ಹಿರಿದಾದ; ದಪ್ಪವಾದ; ಸ್ಥೂಲವಾದ: ಅವಳ ತಂದೆ ಒಂದು ಕಡೆ ಕುಳಿತು ದೊಡ್ಡ ಒಂದು ಡೋಲನ್ನು ಬಡಿಯುತ್ತಿದ್ದನು (ಸಂಸ್ಕೃ. IV, ೩೩). 'ದೊಡ್ಡನೇಜಿಲ್' ಪರಾ. ೨. ವಯಸ್ಸಿನಿಂದ ಹಿರಿಯರಾದ; ಹಿರಿಯ; ಜ್ಯೇಷ್ಠ. 'ದೊಡ್ಡಕ್ಕ', 'ದೊಡ್ಡಣ್ಣ' ಪರಾ. ೩. ಮುಖ್ಯವಾದ; ಪ್ರಧಾನವಾದ. 'ದೊಡ್ಡಗಿಡ್ಡಂಗಿ', 'ದೊಡ್ಡಬೀದಿ' ಪರಾ. ೪. ಉದಾರವಾದ; ಉದಾತ್ತವಾದ;

ಧಾರಾಳ. 'ದೊಡ್ಡಮನಸ್ಸು' ಪರಾ. ೫. ಒಳ್ಳೆಯ ತಳಿಯ : ಉತ್ತಮವಾದ. 'ದೊಡ್ಡದನ' ಪರಾ. ೬. ವಿಸ್ತಾರವಾದ ; ವಿಶಾಲವಾದ : ಅಗಲವಾದ : ಅವನದು ತುಂಬಾ ದೊಡ್ಡಮುಖ (ಕೂಡಿ). 'ದೊಡ್ಡಮನೆ' ಪರಾ. ೭. ಎತ್ತರವಾದ ; ಬೆಳೆದ. 'ದೊಡ್ಡಮರ' ಪರಾ. ೮. ಉಬ್ಬಿದ ; ಚಾಚಿದ. 'ದೊಡ್ಡಹೊಟ್ಟೆ' ಪರಾ. ೯. ಶಕ್ತಿಯುತವಾದ; ಬಲವಾದ. ೧೦. ಉದ್ದವಾದ ; ನೀಳವಾದ. 'ದೊಡ್ಡಿತು' ಪರಾ. ೧೧. ಅತಿಯಾವ ; ಆಡಂಬರದ : ವೈಭವದಿಂದ ಕೂಡಿದ : ಆಗಾಗ ಅವರ ಮನೆಯಲ್ಲಿ ದೊಡ್ಡ ಮೇಜವಾನಿಗಳು ನಡೆಯುತ್ತಲೇ ಇರುತ್ತವೆ (ಕೂಡಿ). ೧೨. ಭರ್ತಿಯಾದ; ತುಂಬಿದ : ಇಂದು ಮಳೆ ಬಂದಿರುವ ಕಾರಣ ದೊಡ್ಡ ಹೊಳೆ ಆರಂಭವಾಗಿರುವುದರಿಂದ ನದಿಯನ್ನು ದಾಟಿ ಬರಲು ಯಾರೂ ಸಾಹಸ ಮಾಡುವುದಿಲ್ಲ (ಕೂಡಿ). ೧೩. ಗಟ್ಟಿಯಾದ ; ಜೋರಾದ. 'ದೊಡ್ಡದನಿ' ಪರಾ. ೧೪. ಗಾಢವಾದ ; ಅಂತ್ಯವಿಲ್ಲದ. 'ದೊಡ್ಡನಿದ್ದೆ' ಪರಾ. ೧೫. ವೇಗದಿಂದ ಕೂಡಿದ ; ವೇಗವಾದ. 'ದೊಡ್ಡನಡೆ' ಪರಾ. ೧೬. ಸಿರಿ ತುಂಬಿದ ; ಐಶ್ವರ್ಯವುಳ್ಳ. 'ದೊಡ್ಡೊಕ್ಕಲು' ಪರಾ. ೧೭. ಹೆಚ್ಚಿನದಾದ ; ಮಹತ್ತಾದ. 'ದೊಡ್ಡಸುದ್ದಿ' ಪರಾ. ೧೮. ತಿಳಿದ ; ತಿಳಿವಳಿಕೆ ಹೊಂದಿದ. 'ದೊಡ್ಡಮಾತು' ಪರಾ.

ದೊಡ್ಡದೊಡ್ಡ (ದ್ವಿರುಕ್ತಿ) : ಗಂಡಶೈಲಾಃ . . . ಬೆಟ್ಟದಿಂದ ಕೆಳಕ್ಕೆ ಉರುಳಿಕೊಂಡು ಜಾರಿದ ದೊಡ್ಡದೊಡ್ಡ ಕಲ್ಲುಗುಂಡುಗಳು (ಸಿದ್ಧಾಂತಿ. ೧೦೬) ; ದೊಡ್ಡ ದೊಡ್ಡ ಕಣ್ಣುಗಳನ್ನು ಮೆಡ್ಡರಿಸಿಕೊಂಡು . . . ಬಸ್ಸು ಗಾಡಿಗೆ ಎದುರಾಗಿ ಬರುತ್ತಿದ್ದರೆ ಎತ್ತುಗಳಿಗೆ ಬೆಟ್ಟದಾಕಾರದ ಭೂತವೇ ಬಂದಂತೆ ಕಂಡು... ಪರಾರಿಯಾಗುತ್ತಿದ್ದುವು (ನನ್ನೂರು. ೩೯). **ದೊಡ್ಡಂಕಂ ಬಡಿವ, ದೊಡ್ಡಂಕ ಬಡಿವ** = ಮಹಾಯುದ್ಧಗಳಲ್ಲಿ ಹೋರಾಡುವವನು ; ಅತಿಶಯವಾಗಿ ಹೋರಾಡುವವನು ; ಒಂದು ಬಿರುದು: ತೂಗಿ ತುತ್ತಿಡುವ ಬಿರುದರ ಪೆಣ್ದಿರ ಗಣ್ದಂ . . . ದೊಡ್ಡಂಕಂ ಬಡಿವ ಗೀತ ಪ್ರಗೀತಂ ಗೇಯವಿನೋದನ್ ನಿಜಕುಳೋತ್ತುಂಗ ಶ್ರೀಮದೆಱೆಯಂಗದೇವ ಸ್ಥಿರಂ ಜೀಯಾತ್ (ಮೃಚ್ಛ. ೧೪೯, ೩೭-೩೦ : 1098) ; ದೊಡ್ಡಂಕ ಬಡಿವ ಜಗವನಣ್ದಲೆವ ಸಿತಗರ ಗಣ್ದ ಸಾಮಸ್ತ ಬಿಟ್ಟದೇವರು (ಎಕ. XVI, ಕೃನಾ. ೯೮-೦೩ : 1169) ; ದೊಡ್ಡಂಕ ಬಡಿವ ನೆಂಬ ಬಿರುದಂ ಚಾಲುಕ್ಯಚಕ್ರವರ್ತಿಯಾಹವ[ಮ]ಲ್ಲನ ಕಯ್ಯಲು ಪಡೆದು (ಎಕ. XVI, ಚಳ್ಳಕೆ. ೬-೩ : 1242). **ದೊಡ್ಡಕುದುರೆ ಚೇಷ್ಟೆ**=ಹಣದ ಸಾಮರ್ಥ್ಯವಿದ್ದವರು ಮಾಡುವ ವ್ಯವಹಾರವನ್ನು ಹಣವಿಲ್ಲದವರು ಅನುಕರಿಸುವ ನಡವಳಿ : ಅವರದೆಲ್ಲ ದೊಡ್ಡಕುದುರೆ ಚೇಷ್ಟೆ. ನಾವು ಅವರಿಗೆ ಈಡೇನೂ ಅಲ್ಲ (ಪುಣ್ಯಾಗ. ೨). **ದೊಡ್ಡದಾಗು** = ೧. ಗಾತ್ರದಲ್ಲಿ ಹಿರಿದಾಗು ; ದಪ್ಪವಾಗು : ಬೆಲೂನಿನಲ್ಲಿ ಗಾಳಿ ತುಂಬುತ್ತಾ ತುಂಬುತ್ತಾ ಅದು ದೊಡ್ಡದಾಗುತ್ತಾ ಬಂತು (ಕೂಡಿ). ೨. ವಿಶಾಲವಾಗು ; ವಿಸ್ತಾರವಾಗು: ಜನರಲ್ ವಾರ್ಡಿನಲ್ಲಿ ಪ್ರಪಂಚ ದೊಡ್ಡದಾಗಿತ್ತು (ತೀಲುಗೊಂ. ೧೪೨). ೩. ನೀಳವಾಗು ; ಉದ್ದವಾಗು : ಈ ದಿನದ ನನ್ನ ಭಾಷಣ ಸ್ವಲ್ಪ ದೊಡ್ಡದಾಗಬಹುದು (ಕೂಡಿ). ೪. ದೊಡ್ಡವಳಾಗು ; ಮೈನೆರೆ: ಆರೇಳು ತಿಂಗಳುಗಳಾದವು. ಹೆಣ್ಣು ದೊಡ್ಡದಾಯಿತು (ಪುಟ್ಟಹ. ೧೬).

ದೊಡ್ಡದು = ೧. ಹಿರಿದಾದುದು ; ಹೆಚ್ಚಿನದು : ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯ ದೊಡ್ಡದೋ (ಪುರಂದ. ೨-೩೧ ಪಲ್ಲವಿ) : ಕ್ಷಮೆಯು ದೊಡ್ಡದೇ ಹೊರತಾಗಿ ಪಾಪಕೃತ್ಯದಿಂದುಂಟಾಗುವ ಭೋಗವು ದೊಡ್ಡದಲ್ಲ (ಕೃಪಾಲು. ೩೪) ; ನಿನ್ನನ್ನು ಕಣ್ಣಿಗೆ ಒತ್ತಿಕೊಳ್ಳಬೇಕೆಂಬ ಆಶಯವಾಗುವುದು. ನೀನು ಎಷ್ಟು ದೊಡ್ಡವಳು ! ನಿನ್ನ ಹೃದಯ ಎಷ್ಟು ದೊಡ್ಡದು , ಶಾಂತಲೆ! (ಶಾಂತಲಾ. ೪೧೨). ೨. ವಿಶಾಲವಾದುದು : ಕುಪ್ಪತ್ತೂರಿನ ದೇವಾಲಯವು ಬಹಳ ಹಳೆಯದು ಮತ್ತು ದೊಡ್ಡದು (ಮೃಚ್ಛಾಸ್ತು. ೦೨೦). ೩. ಅಪೂರ್ವವಾದುದು ; ಮಹತ್ತಾದುದು : ಮಾನವಜನ್ಮ ದೊಡ್ಡದು ಇದ ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ (ಪುರಂದ. ೧-೧೪-೦). ೪. ಅಶಕ್ಯವಾದುದು ; ಅಸಾಧ್ಯವಾದುದು : ಇದೇನು ದೊಡ್ಡದೆಂದು ಕೈಯನ್ನು ತೊಗುತ್ತಾ ಪಾಲದಲ್ಲಿ ನಡೆದನು (ಕಾಲೂಕ. ೧೦ ಕಥಾಸಾರ). **ದೊಡ್ಡದು ಮಾಡು** = ಅಲ್ಪವನ್ನು ಅತಿಯಾಗಿ ಭಾವಿಸು : ಇಷ್ಟು ಸಣ್ಣದಾದ ವಿಷಯವನ್ನು ದೊಡ್ಡದು ಮಾಡಬಾರದು (ಆಳಿ. ೩೪) ; ತನ್ನ ಹೆಂಡತಿಗಾದ ಒಂದು ಸಣ್ಣ ಅವಚಾರವನ್ನು ದೊಡ್ಡದು ಮಾಡಿ ಹಿರಿಯ ಮಗ ಮನೆ ಬಿಟ್ಟು ಬೇರೆ ಸಂಸಾರ ಹೂಡಿದ್ದಾನೆ (ಕೂಡಿ). **ದೊಡ್ಡವ, ದೊಡ್ಡವನು** = ೧. ವಯಸ್ಕ ; ಹಿರಿಯ : ಎಡ್ಡವುಂ ಮಬ್ಬಿನೊಳ್ ದೊಡ್ಡನುಂ ನೋಡಿದಂ ದೊಡ್ಡವಂ ಕಿರಿದಾಗಿ ಬಯಕೆಯೊಳಗಿಳಿದಂ (ಕಾಂಡಕ. ೪೦-೫೧) : ಹೌದು ಮಗು, ನೀನೀಗ ತುಂಬ ದೊಡ್ಡವ (ಮುರಮು. ೩೭೬) ; ವೆಂಕಟಕಾವಿ ನನಗಿಂತ ಸುಮಾರು ಹತ್ತು ವರುಷ ದೊಡ್ಡವನು (ಸಂಸ್ಕೃಳ. IV, ೩೦) : ಮಗು ದೊಡ್ಡವನಾಗುತ್ತಾನೆ, ಓದಿ ವಿದ್ಯಾವಂತನಾಗುತ್ತಾನೆ (ತೀಲುಗೊಂ. ೭೦). ೨. ಶ್ರೀಮಂತ ; ಸಾಹುಕಾರ : ದೊಡ್ಡವನುಂಡರೆ ಮದ್ದು ಬಡವನುಂಡರೆ ಹೇಸಿಗೆ (ಗಾಡ) ; ದೊಡ್ಡವನ ಮಾತು ಸವಿ, ಬಡವನ ಊಟ ಸವಿ (ಗಾಡ). ೩. ಶ್ರೇಷ್ಠನಾದವನು. **ದೊಡ್ಡವರು, ದೊಡ್ಡರ್** (ಬಹುವ) = ೧. ಹಿರಿಯರು : ಹೆದ್ದರೆಂಬುವರೇನೋ ಲಂಗೋಟಿ ಜನರನ್ನು ದೊಡ್ಡವರೆಂದು ವಂದಿಸುವರು ಯತಿಗಳ (ಪುರಂದ. ೪-೫೯-೩) : ಗೊಡ್ಡು ನಾಮ ತೀಡಿಕೊಂಡು ಅಡ್ಡಾದಿಡ್ಡಿ ಮುದ್ರೆಗಳ ಬಡಿದುಕೊಂಡಿನ್ನು ದೊಡ್ಡ ದೊಡ್ಡ ಮಾತುಗಳಾಡಿ ದೊಡ್ಡವರೆಂದ್ದೇಳಿಕೊಂಬ ಬಡ್ಡೀ ಧಗಡೀಮಕ್ಕಳಿಗಿನ್ನು ವೈಷ್ಣವ ಸಲ್ಲುವುದೆ (ಪುರಂದ. ೪-೧೧೧-೧) : ತಮ್ಮ ಚಾತುರ್ಯವನ್ನು ದೊಡ್ಡವರಿಗೆ ತೋರಿಸಬೇಕೆಂದು ಹುಡುಗರು ಸದಾ ಅಭಿಲಾಷಿಸುವರು (ರಾವಿಜ. ೩೩) : ದೊಡ್ಡವರದೆಲ್ಲವು ದೊಡ್ಡದೆಂಬುವ ಮಾತು ಸುಳ್ಳಲ್ಲ ! (ಉಷ್ಕಾಕಿ. ೬೫-೦). ೨. ಸಾಹುಕಾರರು ; ಶ್ರೀಮಂತರು : ಗುರುಕಾರರಿಗೆ ಮೈಸೂರಿನಲ್ಲಿ ದೊಡ್ಡವರುಗಳ ಮನೆವಾರ್ತೆಗಳ ಮತ್ತು ಚಾಕರರುಗಳ ನೆಂಟಸ್ತನ ಮತ್ತು ಗೆಳೆತನ ಬಹಳ ಉಂಟಂತೆ (ಕಂಸೆ. ೩೨೦) : ದೊಡ್ಡವರ ಮನೆ ನೋಟ ಚಂದ, ಬಡವರ ಮನೆ ಊಟ ಚೆಂದ (ಗಾಡ) : ದೊಡ್ಡವರ ಕೈ ಗಿಡ್ಡ (ಗಾಡ). ೩. ಮೇಲೆನಿಸಿಕೊಂಡವರು ; ಮಹಾವ್ಯಕ್ತಿಗಳು ; ಹೆಚ್ಚಿನವರು : ಜಾಗೃತಿಯು ಘನ,–ಕೃತಿಯು ಘನವು,–ವಿಸ್ಫೃತಿಯು ಘನ ! ದೊಡ್ಡವರು ! (ಉಷ್ಕಾಕಿ. ೬೫-೧೬) : ಅಂತು ಪೊಱಮಡುವರಾತಿಕಾಲಾನಲನಂ ಕಂಡು ಕಡ್ಡುವಂದ ದೊಡ್ಡರೆಲ್ಲಂ ಮುಸುಱಿ (ಪಂಪಭಾ. ೩-೭೦ ವ) ; "ವೃದ್ಧರು" (ಪಂಪದೀ. ೦೧೬). **ದೊಡ್ಡವಳಾಗು** = ೧. ವಯಸ್ಕಳಾಗು : ನೀನು ಚಿಕ್ಕವಳು . . . ದೊಡ್ಡವಳಾದ ಮೇಲೆ ನಿನಗೆ ಎಲ್ಲಾ ಅರ್ಥವಾಗುತ್ತೆ (ತೀಲುಗೊಂ. ೧೨). ೨. ಪ್ರಥಮ ಋತುಮತಿಯಾಗು ; ಪುಷ್ಪವತಿಯಾಗು ; ಮೈನೆರೆ : ಈ ಅನಾಥ ಬಾಲಿಕೆಯ ವಿವಾಹದ ಭಾರವೂ ಗುರುಚರಣರ ಮೇಲೆಯೇ ಬಿದ್ದಿದೆ. ದೊಡ್ಡವಳಾಗಿ ಬಿಟ್ಟದ್ದಾಳೆ (ಪರಿಣೀ. ೩೯) : ಅಬ್ಬಬ್ಬಾ ಅಂದ್ರೆ ಇನ್ನೆರಡು ವರ್ಷಗಳಲ್ಲಿ ದೊಡ್ಡವಳಾಗುತ್ತಾಳೆ (ತೀಲುಗೊಂ. ೩೦). : **ದೊಡ್ಡವಳು**=೧. ಹಿರಿಯಳು: ಹಾಗಾದರೆ ನೀನು ದೊಡ್ಡವಳಲ್ಲಾ, ನಿನಗೇಕೆ ಮಕ್ಕಳಾಗೋದಿಲ್ಲ ? (ತೀಲುಗೊಂ. ೦೦). ೨. ಶ್ರೇಷ್ಠಳಾದವಳು : ನೀನು ಎಷ್ಟು ದೊಡ್ಡವಳು ! ನಿನ್ನ ಹೃದಯ ಎಷ್ಟು ದೊಡ್ಡದು, ಶಾಂತಲೆ ! (ಶಾಂತಲಾ. ೪೧೨). ೩. ಎತ್ತರವಾಗಿರುವವಳು: ಇಬ್ಬರನ್ನೂ ಅಕ್ಕಪಕ್ಕದಲ್ಲಿ ನಿಲ್ಲಿಸಿ ನೋಡಿದರೆ ದೊಡ್ಡವಳು ಯಾರು ಎಂದು ತಿಳಿಯುತ್ತದೆ (ಕೂಡಿ). **ದೊಡ್ಡ ಹಾಳುಗೆಯ ದೇವರು**=ಪ್ರಸಿದ್ಧವಾಗಿದ್ದ ಒಂದು ದೇವತೆಯನ್ನು ಕುರಿತ

ವಿವರಣೆಯನ್ನು ಕೊಡುವ ಪದ : ಸಯಂಭುದೇವರ ಗುಡಿಯ ದೊಡ್ಡ ಹಾಉಗೆಯ ದೇವರ ಕೃಪೆಯಿಂದ ದನಗೂರ ದೊರೆ . . . ಸುಬರಾಜ್ಯಂಗೆ ಯ್ಯುತ್ತಿರಲು (ಎಳ. III, ಪುಳವ. ೮೨-೩ : 1603). ದೊಡ್ಡಾಳು = ೧. ಎತ್ತರವಾದ ಆಳು : ಅವ್ವಜಯು ಅಮ್ಮ ದೊಡ್ಡಾಳಲ್ಲವಾದ್ದರಿಂದ ಅವರಿಗೆ ಸರಿಯಾಗಿತ್ತು (ಕಂಗಾಳ್ಳ. ೩೫). ೨. ಬಲವಾದ ಆಳು : ಗಾರೆಕೆಲಸಕ್ಕೆ ನಾಲ್ಕು ಜನ ದೊಡ್ಡಾಳುಗಳು ಅವಶ್ಯಕ (ಕೂಥ). ದೊಡ್ಡಿಹ= ೧. ದಪ್ಪವಾದ ; ಸ್ಥೂಲವಾದ : ಗಂಡಶ್ಯಲಂಗಳ್ – ಬಟ್ಟದತ್ತಣಂದ ಉರುಳ್ದ ದೊಡ್ಡಿಹ ಕಲ್ಲುಗಳು (ನಾಚಿಠಾ. ೫) ; ಮಹೋಕ್ಷ–ದೊಡ್ಡಿಹ ಎತ್ತು (ನಾಚಿಠಾ. ೫). ೨. ಹಿರಿದಾದ ; ಹೆಚ್ಚಿನ ; ಶ್ರೇಷ್ಠ : ಒಡ್ಡಿದ ಮೋಹರಗಳನೊಡೆ ಹಾಯ್ಸುವೆ ದೊಡ್ಡಿಹ ರಾವುತರುಗಳ ಒಡ್ಡಮುಱಿವೆ (ಕುರಾಸಾಂ. ೦೫-೧೬); ಒಡ್ಡಿದ ಶೂಲವ ಹಾಯ್ದು ಮೈಲಾರದ ದೊಡ್ಡಿಹ [ಪಾಠಾಂ.ಯ] ದೇವರಿಂದವನ ಅಡ್ಡಾಕಿಲ್ಲದೆ ತರಿಸಿ ನಿನ್ನಯ ಕಾಲಿಗಡ್ಡಗೆಡಹುವೆನಾಜದಿರು (ಕುರಾಸಾಂ. ೩೪-೩೭). ¶ ಇದಲ್ಲದೆ ಅನೇಕ ನಾಮವಾಚಕಗಳೊಡನೆ ಕೂಡಿ ಸಂದರ್ಭಕ್ಕನುಸಾರವಾಗಿ ಈ ಶಬ್ದ ಹೆಚ್ಚು ವ್ಯಾಪ್ತವಾದ ಅರ್ಥವನ್ನು ಪಡೆಯುತ್ತದೆ. ಉದಾಹರಣೆಗೆ– ದೊಡ್ಡ ಅಂಗಡಿ, ದೊಡ್ಡ ಊರು, ದೊಡ್ಡಕೆರೆ, ದೊಡ್ಡ ಕೆಲಸ, ದೊಡ್ಡ ಜಾತ್ರೆ, ದೊಡ್ಡ ತಪ್ಪು, ದೊಡ್ಡಧಿಕಾರಿ, ದೊಡ್ಡನದಿ, ದೊಡ್ಡ ಪುಸ್ತಕ ಭಂಡಾರ, ದೊಡ್ಡ ವಸ್ತುಪ್ರದರ್ಶನ, ದೊಡ್ಡ ಸೈನ್ಯ, ದೊಡ್ಡಹಳ್ಳಿ, ದೊಡ್ಡಹೊಟ್ಟೆ ವಯಂತಾದುವು.

[ದೇ.ಪ ತಮಿ. ತೊಟ್ಟ; ತುಳು. ದೊಡ್ಡ, ದೊಡ್ಡು; ತೆಲು. ದೊಡ್ಡ; ಕೊಡ. ದೊಡ್; ಕೊಲಾ. ದೊಡಾಂದ್]

ದೊಡ್ಡ ಅಂಚಿಹುಲ್ಲು 'ದೊಡ್ಡ ಹಂಚಿಹಂಲ್ಲಂ' ನೋ.

ದೊಡ್ಡ ಅಂಟುಪುರಲೆಹುಲ್ಲು (ನಾ). ಒಂದು ಬಗೆಯ ದೊಡ್ಡದಾದ ಅಂಟುಪುರಲೆ ಹುಲ್ಲು : ದೊಡ್ಡಅಂಟುಪುರಲೆಹುಲ್ಲು, ಕರೀಅಟ್ಟೆಹುಲ್ಲು (ಪ್ರಾಣಿಗಿ. ೬೯-೦೪೩೦). [ದೊಡ್ಡ + ಅಂಟುಪುರಲೆ + ಹುಲ್ಲು (<ಪುಲ್)]

ದೊಡ್ಡ ಏಲಕ್ಕಿ 'ದೊಡ್ಡೇಲಕ್ಕಿ' ನೋ.

ದೊಡ್ಡಕಡಗ (ನಾ). ಒಂದು ಬಗೆಯ ದೊಡ್ಡ ತೇಗದ ಮರ : ಹೆತ್ತೇಗ, ಎಟ್ಟೆಗ, ಎತ್ತಾಗ, ಅರ್ಜನತೇಗ, ದೊಡ್ಡಕಡಗ, ಹೆಡ್ಡ (ಪ್ರಾಣಿಗಿ. ೩-೪೦). [ದೊಡ್ಡ + ಕಡಗ$_{೩}$]

ದೊಡ್ಡಕಡವ (ನಾ). ಒಂದಂ ಬಗೆಯ ದೊಡ್ಡ ಕದಂಬವೃಕ್ಷ : "ಮಹಾ ಕದಂಬಃ–ದೊಡ್ಡಕಡವ, ರಾಶ್ಮಿ" (ಓಷಧಿ. ೩೩). [ದೊಡ್ಡ + ಕಡವ$_{೧}$ (<ಕಡಂಬ)]

ದೊಡ್ಡಕರುಳು (ನಾ). ಜಠರದ ಕೊನೆಯಿಂದ ಗುದದ್ವಾರದವರೆಗಿನ ಅನ್ನನಾಳದ ಭಾಗ : ಸಣ್ಣಕರುಳಿನಲ್ಲಿ ಸಹ ಅರಗದ ಹಾಗೂ ಶರೀರಕ್ಕೆ ಬೇಡವಾದ ಅನ್ನದ ಭಾಗವು, ದೊಡ್ಡಕರುಳಿನಲ್ಲಿ ಬಂದು ಸೇರುತ್ತದೆ (ಗೋಗ್ರಾಸ. ೪೩) ; ಕೆಲವು ಕೀಟಗಳಲ್ಲಿ . . . ಹೊಡ್ಡಕರುಳು (ಕೊಲೊನ್) ಗುದನಾಳದ ಚೀಲ (Rectal sac) ಮತ್ತು ಗುದಗಳಂತೆ ವಿಭಾಗಿಸಬಹುದು (ಕೀಟಶಿ. ೩೮). 'ಸಣ್ಣಕರುಳು' ಪರಾ.

[ದೊಡ್ಡ + ಕರುಳು (<ಕರುಳ್)]

ದೊಡ್ಡಕಹಿಮೆಣಸು (ನಾ). ಒಂದು ಬಗೆಯ ಸಸ್ಯ ; ಕಂಕೊಳ : "ಕಂಕೊಲ–ಕಂಕೊಳ, ದೊಡ್ಡಕಹಿಮೆಣಸು" (ಓಷಧಿ. ೨೨). [ದೊಡ್ಡ + ಕಹಿಮೆಣಸು$_{೧}$]

ದೊಡ್ಡಕಳವಿ (ನಾ). ದಪ್ಪವಾದ ಹಣ್ಣುಗಳನ್ನು ಬಿಡುವ ಕಳವಿ ಗಿಡ.– ಕಮರಿಕೆಗಿಡ : "ಮಹಾಶ್ವೇತ–ದೊಡ್ಡಕಳವಿ, ಬಳಿಯ ಬಳ್ಳಿ, ಸುಂಡೆ, ಕೆಂಜೆಡೆ" (ಓಷಧಿ. ೦೬೬) ; "ಶಿರಿವತ್ರಃ–ದೊಡ್ಡಕಳವಿ" (ಓಷಧಿ. ೦೬೬). [ದೊಡ್ಡ + ಕಳವಿ (<ಕಳವೆ$_{೧}$)]

ದೊಡ್ಡಕಳವಿಗೆ (ನಾ). ಮುಳ್ಳಗಸೆಯಂಲ್ಲಿ ಒಂದಂ ಬಗೆ : "ಗಿರಿಕರ್ಣಿ–ದೊಡ್ಡಕಳವಿಗೆ" (ಓಷಧಿ. ೪೮). [ದೊಡ್ಡ + ಕಳವಿಗೆ$_{೩}$]

ದೊಡ್ಡಕಳ್ಳಂಗಡಲೆ (ನಾ). ದೊಡ್ಡದಾದ ಕಳ್ಳಂಗಡಲೆ ಜಾತಿಗೆ ಸೇರಿದ ಒಂದಂ ಬಗೆಯ ಸಸ್ಯ ; ದೊಡ್ಡದಾದ ಏಲಾವಾಲುಂಕ : "ವರ್ಷಪುತ್ರಿ–ದೊಡ್ಡಕಳ್ಳಂಗಡಲೆ" (ಓಷಧಿ. ೦೪೬). [ದೊಡ್ಡ + ಕಳ್ಳಂಗಡಲೆ]

ದೊಡ್ಡಕಾಗೆ (ನಾ). ಒಂದಂ ಬಗೆಯಂ ಕಾಗೆ ; ಮಂಡಕಾಗೆ : "ಆರಣ್ಯ ವಾಯಸಃ–ದೊಡ್ಡಕಾಗೆ" (ಓಷಧಿ. ೯); "ಕಾಕೋಲ–ಚವ್ಯ, ದೊಡ್ಡಕಾಗೆ, ನೀರುಳ್ಳಿ" (ಓಷಧಿ. ೩೯). [ದೊಡ್ಡ + ಕಾಗೆ]

ದೊಡ್ಡಕಾವಲಿ (ನಾ). ಒಂದು ಬಗೆಯ ಸಸ್ಯ : ಕರಂಡಹಣ್ಣಿನ ಗಿಡ, ಕಬಳಿಗಿಡ, ಕಳಾಗಿಡ, ದೊಡ್ಡಕಾವಲಿ, ಹೆಜ್ಜಾರಿಗೆ (ಪ್ರಾಣಿಗಿ. ೦೮-೩೨). [ದೊಡ್ಡ + ಕಾವಲಿ$_{೦}$]

ದೊಡ್ಡಕಿತ್ತೀಳೆ (ನಾ). ಈಳೆ ಜಾತಿಗೆ ಸೇರಿದ ಒಂದು ಬಗೆಯ ದೊಡ್ಡ ಮರ ಮತ್ತು ಅದರ ಹಣ್ಣು : "ದ್ವಿಪದಃ–ದೊಡ್ಡಕ(ತ್ತಳೆ)ಕ್ತೀಟಿ[ಳಿ]" (ಓಷಧಿ. ೭೭) : "ದ್ವಿಪಖರ್ಜೂರೀ–ದೊಡ್ಡಕಿತ್ತೀಟಿ[ಳಿ]" (ಓಷಧಿ. ೭೭) : "ಬೃಹತ್ಫಾರಾವತಂ–ದೊಡ್ಡ ಕಿತ್ತೀಟಿ[ಳಿ]" (ಓಷಧಿ. ೦೦೯). [ದೊಡ್ಡ + ಕಿತ್ತೀಳೆ]

ದೊಡ್ಡಕುಶೆ (ನಾ). ಒಂದು ಬಗೆಯ ದೊಡ್ಡದಾದ ಹಂಲ್ಲು : "ಶಮೀ–ಬನ್ನಿ, ದೊಡ್ಡಕುಶೆ" (ಓಷಧಿ. ೦೫೯). [ದೊಡ್ಡ + ಕುಶ$_{೧}$]

ದೊಡ್ಡಕೂವೆ (ನಾ). ಗೆಣಸಿನಲ್ಲಿ ಒಂದು ಬಗೆ : ದೊಡ್ಡಕೂವೆ, ಕೆಂಪು ಕೂವೆ (ಪ್ರಾಣಿಗಿ. ೩೭-೫೦೦). [ದೊಡ್ಡ + ಕೂವೆ$_{೧}$]

ದೊಡ್ಡಕ್ಕ (ನಾ). ಅಕ್ಕಂದಿರಲ್ಲಿ ಹಿರಿಯಳಾದವಳು ; ಹಿರಿಯ ಅಕ್ಕ ; ಜ್ಯೇಷ್ಠ ಸೋದರಿ : ದೊಡ್ಡಕ್ಕನನ್ನು ಕಕ್ಕಿ ಗದರಿಸಿದಳೆಂದು ಮಕ್ಕಳೆಲ್ಲಾ ನಗತೊಡಗುವಾಗ ಯಶೋದೆಯು ಮೊಗದಲ್ಲೂ ಮೂಡುತ್ತಿದ್ದುದು ನಗುವೆ (ಪಾತ್ಸಂ. ೧೧) : ದೊಡ್ಡಕ್ಕನ ಚಾಳಿ ಮನೆಮಂದಿಗೆಲ್ಲಾ (ಗಾಡಿ). [ದೊಡ್ಡ + ಅಕ್ಕ$_{೧}$]

ದೊಡ್ಡಕ್ಕಿಹುಲ್ಲು (ನಾ). ಹೊಲದಲ್ಲಿ ತಾನಾಗಿ ಬೆಳೆಯುವ ದೊಡ್ಡದಾದ ಒಂದಂ ಬಗೆಯ ಹುಲ್ಲು : ದೊಡ್ಡಕ್ಕಿಹುಲ್ಲು, ಮಣ್ಣಕ್ಕಿಹುಲ್ಲು (ಪ್ರಾಣಿಗಿ. ೩೦-೩೪೪). [ದೊಡ್ಡ + ಅಕ್ಕಿಹುಲ್ಲು]

ದೊಡ್ಡಕ್ಷರ (ನಾ). (ಇಂಗ್ಲಿಷ್ ಭಾಷೆಯಲ್ಲಿ) ವಾಕ್ಯದ ಅಥವಾ ಹೆಸರಿನ ಮೊದಲನೆಯ ಅಕ್ಷರ ; ಆದಿಯ ಅಕ್ಷರ : ಪ್ರತಿ ಫಾಂಟನಲ್ಲಿಯೂ ದೊಡ್ಡಕ್ಷರಗಳು (Capitals) ಚಿಕ್ಕಅಕ್ಷರಗಳು . . . ಸಂಯುಕ್ತಾಕ್ಷರಗಳೂ ಇರುತ್ತವೆ (ಮುದ್ರಣ. ೦೪). [ದೊಡ್ಡ + ಅಕ್ಷರ]

ದೊಡ್ಡಖಚೋರ (ನಾ). ಒಂದಂ ಬಗೆಯ ದೊಡ್ಡದಾದ ಖಚೋರ : ಅಗಿಲು, ಸಣ್ಣಖಚೋರ, ದೊಡ್ಡಖಚೋರ . . . ಇವಿಷ್ಟನ್ನು ಪ್ರತ್ಯೇಕ ಎರಡು ವರಹ ತೂಕಗಳಿನು ಸೂಕ್ಷ್ಮವಾಗಿ ಟೂರ್ಣಿಸಿ ಪಾಕ . . . ನಸ್ಯಂಗಳ ಮಾಡಿಸಲು ನೇತ್ರರೋಗ, ಶಿರೋರೋಗಂಗಳು ಶಮನವಹವು (ಪ್ರಧಸಾ. II, ೦೩೫). [ದೊಡ್ಡ + ಖಚೋರ]

ದೊಡ್ಡಖರ್ಜೂರ (ನಾ). ಒಂದು ಬಗೆಯ ದೊಡ್ಡದಾದ ಖರ್ಜೂರದ ಮರ ಮತ್ತು ಅದರ ಹಣ್ಣು : "ರಾಜಪಿಂಡಾ–ದೊಡ್ಡಖರ್ಜೂರ" (ಓಷಧಿ. ೦೩೭) : "ರಾಜಜ್ಮೇಷ್ಮಾ–ಬಾಟಿ, ದೊಡ್ಡಖರ್ಜೂರ" (ಓಷಧಿ. ೦೩೭). [ದೊಡ್ಡ + ಖರ್ಜೂರ]

ದೊಡ್ಡಗಟ್ಟು (ನಾ). ದೊಡ್ಡದಾದ ಆಣಿಕಟ್ಟು : ಬ್ರಹ್ಮೇಶ್ವರದೇವಗ್ಗೆರ್ ಬ್ರಹ್ಮವೇದಿಜೀಯರಂ ಕಾಲಂ ಕರ್ಚ್ಚಿಯೂರಿಂ ಪಡುವ ದೊಡ್ಡಗಟ್ಟನ ಕೆಳಗೆ ಬಿಟ್ಟ ಗಟ್ಟಿ ಮ ತ್ತ ರೊ ಂ ದು (ಎಳ. XI, ದಾವಣ. ೦೩೭-೩೦ : 1037). [ದೊಡ್ಡ + ಕಟ್ಟು$_{೩}$]

ದೊಡ್ಡಗರಿಕೆಹುಲ್ಲು (ನಾ). ಒಂದು ಬಗೆಯ ಗರಿಕೆಹುಲ್ಲು : (ಕ್ಯು.ಕಿಗಿ. ೬೪-೬೬೪). [ದೊಡ್ಡ + ಗರಿಕೆ (<ಕಱುಂಕ್) + ಹುಲ್ಲು (<ವುಲ್)]

ದೊಡ್ಡಗಾದಾರಿ (ನಾ). ಒಂದಂ ಬಗೆಯ ಸಸ್ಯ ; ದೊಡ್ಡಮಾಚಿಪತ್ರೆ : (ಕ). [ದೊಡ್ಡ + ಗಾದಾರಿ]

ದೊಡ್ಡಗಿಡ್ಡಂಗಿ (ನಾ). ಮುಖ್ಯವಾದ ಕುರಾಗ್ಗಹ : ನಿಮ್ಮನ್ನೆಲ್ಲಿ ದೊಡ್ಡ ಗಿಡ್ಡಂಗಿಯ ಗುಪ್ತಗೃಹದಲ್ಲಿ ಉಳ್ಳ ಆ ಹಲಕೆಲವು ಮುಟ್ಟುಗಳ ಶಸ್ತ್ರಗಳ ಯನ್ತ್ರಗಳ ಕಡಿಕರ ಸಾಹಾಯ್ಯದಿಂದ (ಕಟ್ಟಿಅ. ೩೨-೩). [ದೊಡ್ಡ + ಗಿಡ್ಡಂಗಿ$_2$]

ದೊಡ್ಡಗುಣ (ನಾ). ಉದಾರವಾದ ಗುಣ : ದೊಡ್ಡಗುಣವನೊಂದ ನೇನೆಂಬೆ ಪತಿಯ ಮೈಯೊಡ್ಡಿನೊಳುಣ ಕುಳಿತಾಗ ಅಡ್ಡಣಿಗೆಯನೊಲ್ಲರ ವಕೀನು ಲೋಕದ ಹೆಡ್ಡ ಹೆಂಗಳೆ ಹೇಳುವಾಗ (ಧರಣಿ. ೪-೫೯) : ಕೆಟ್ಟದ್ದನ್ನು ಸರಿಪಡಿಸಿಕೊಳ್ಳುವದೇ ದೊಡ್ಡಗುಣ (ಧಮಶಾ. ೩೩೯). [ದೊಡ್ಡ + ಗುಣ]

ದೊಡ್ಡಗುಲಗಂಜಿ (ನಾ). ದೊಡ್ಡದಾದ ಒಂದಂ ಬಗೆಯ ಸಸ್ಯ ಮತ್ತು ಅರ್ಧ ಕೆಂಪಾಗಿಯೂ ಅರ್ಧ ಕಪ್ಪಾಗಿಯೂ ಇರುವ ಅದರ ಬೀಜ ; ಅನೆಗುಲಗಂಜಿ : ಮುಂಜಕ್ರಿ, ವಂಜಡಿ, ಮುಂಜಟ್ರಿ, ದೊಡ್ಡಗುಲಗಂಜಿ, ಅನೆಗುಲಗಂಜಿ (ಪ್ಯು.ಕಿಗಿ. ೩-೩೮). [ದೊಡ್ಡ + ಗುಲಗಂಜಿ (<ಗುರುಗುಂಜಿ)]

ದೊಡ್ಡಗೆಣಸು (ನಾ). ಗೆಣಸಿನಲ್ಲಿ ಒಂದು ಬಗೆ : "ಪರಾವಶಃ–ದೊಡ್ಡ ಗೆಣಸು" (ಲಷಧಿ. ೯೨). [ದೊಡ್ಡ + ಗೆಣಸು (<ಗೆಟಸು)]

ದೊಡ್ಡಗೋಣಿ (ನಾ). ದೊಡ್ಡದಾದ ಒಂದಂ ಬಗೆಯ ಗೋಣಿವರ : (ಕ್ಯು.ಕಿಗಿ. ೬೪-೧೨೩). [ದೊಡ್ಡ + ಗೋಣಿ$_1$ (<ಗೋಳಿ)]

ದೊಡ್ಡಗೋರ (ನಾ). ಒಂದಂ ಬಗೆಯ ಸೊಪ್ಪು : ಸೊಪ್ಪುಗಳು : ಅಗಸೆ . . . ತುಂಬೆ, ಬಿಟಗಿನೆ, ಪರಪಾಟಕ, ದೊಡ್ಡಗೋರೆ, ಹುಳಿಬಚ್ಚಲಿ (ನಮ್ಮನು. ೩೩೭). [ದೊಡ್ಡ + ಗೋರ]

ದೊಡ್ಡಗೋರಂಟಿ 'ದೊಡ್ಡಗೋರಂಟ್ಟಿ' ನೋ.

ದೊಡ್ಡಗೋರಂಟಿ ದೊಡ್ಡಗೋರಂಟಿ, ದೊಡ್ಡಗೋರಟೆ (ನಾ). ಕೆಂಪುಹೂವುಗಳನ್ನು ಬಿಡುವ ಕುರವಕಗಿಡದಲ್ಲಿ ಒಂದು ಬಗೆ ; ಹೆಗ್ಗೋರಂಟಿ : "ಅಮ್ಲಾನಃ, ಮಹಾಸಹಾ–ವಿ ದೊಡ್ಡಗೋರಂಟಿ" (ನಿಘಾಂಶಿ. ೧೫೯). **ದೊಡ್ಡಗೋಂಟಿ** : "ಕುರವಕಃ, ಶೋಣಕಃ, ತಕ್ಷ ಕೆಂಪುಹುವ್ವುಗಳುಳ್ಳ ದೊಡ್ಡಗೋರಂಟಿ, ಹೆಗ್ಗೋರಂಟಿ" (ನಿಘಾಂಶಿ. ೧೦೩). **ದೊಡ್ಡಗೋರಟೆ** : "ಮಹಾಸಹಾ–ಸೇವಂತಿಗೆ, ಕಾಡುದ್ದು, ದೊಡ್ಡ ಗೋರಟೆ, ಕಾಡಹೂರುಳಿ" (ಲಷಧಿ. ೧೧೮). [ದೊಡ್ಡ + ಗೋರಂಟಿ]

ದೊಡ್ಡಗೋರಟೆ 'ದೊಡ್ಡಗೋರಂಟಿ' ನೋ.

ದೊಡ್ಡಚಂಚು (ನಾ). ಒಂದು ಬಗೆಯ ದೊಡ್ಡದಾದ ಹರಳು ಗಿಡ : "ಬೃಹತ್ಪಂಚುಃ–ದೊಡ್ಡಚಂಚು" (ಲಷಧಿ. ೧೦೯). [ದೊಡ್ಡ + ಚಂಚು$_2$]

ದೊಡ್ಡಚಿರಾಯತ (ನಾ). ಒಂದು ಬಗೆಯ ಮೂಲಿಕೆ ; ನೀಲಿ ಹೂವು ಗಳನ್ನು ಬಿಡುವ ಚಿರಾಯತ ಎಂಬ ಸಸ್ಯದಲ್ಲಿ ಒಂದು ವಿಧ : (ಕ್ಯು.ಕಿಗಿ. ೬೬-೭೦೦). [ದೊಡ್ಡ + ಚಿರಾಯತ (<ಕಿರಿಯಾತು)]

ದೊಡ್ಡಚಿಲ್ಲ (ನಾ). ದೊಡ್ಡದಾದ ಒಂದು ಬಗೆಯ ಚಿಲ್ಲದ ಗಿಡ : "ಕಾಲಮಂಜಿಷ್ಠೆ–ಕೋಳಿಕುಟುಮ, ಕರಿಯ ತಿಗಡೆ, ದೊಡ್ಡ ಚಿಲ್ಲ, ಮೆಣಸು" (ಲಷಧಿ. ೨೮). [ದೊಡ್ಡ + ಚಿಲ್ಲ$_1$]

ದೊಡ್ಡಚುಂಚು (ನಾ). ಒಂದು ಬಗೆಯ ವನಸ್ಪತಿ : "ಮಹಾಚುಂಚು–ದೊಡ್ಡಚುಂಚು" (ಲಷಧಿ. ೧೧೭). [ದೊಡ್ಡ + ಚುಂಚು$_1$]

ದೊಡ್ಡಜಡ (ನಾ). ಕಾಲರಾಬೇನೆ : ಊರಿನಲ್ಲಿ ದೊಡ್ಡಜಡ ಬಂದಂದಿನಿಂದ ಜನಗಳು ನರಳುವುದು ನೋಡಲು ಸಾಧ್ಯವಿಲ್ಲ (ಕೂಥಿ). [ದೊಡ್ಡ+ಜಡ]

ದೊಡ್ಡಜಾಜಿಕಾಯಿ (ನಾ). ಒಂದು ಬಗೆಯ ಕಾಯಿ : ದೊಡ್ಡಜಾಜಿ ಕಾಯಿ, ಕನಾಗಿ (ಕ್ಯು.ಕಿಗಿ. ೩೭-೧೧೧೫). [ದೊಡ್ಡ + ಜಾಜಿಕಾಯಿ (<ಜಾದಿಕಾಯ್)]

ದೊಡ್ಡಜೀರಗೆ (ನಾ). ಜೀರಗೆಯಲ್ಲಿ ಒಂದು ಬಗೆ : "ತವನಃ–ದೊಡ್ಡ ಜೀರಗೆ, ಬಿಡಲ" (ಲಷಧಿ. ೭೫). [ದೊಡ್ಡ + ಜೀರಗೆ]

ದೊಡ್ಡಜೀರಿಗೆ (ನಾ). = ದೊಡ್ಡಜೀರಗೆ : ದೊಡ್ಡ ಸೋಂಪು, ದೊಡ್ಡ ಜೀರಿಗೆ (ಕ್ಯು.ಕಿಗಿ. ೩೮-೭೪೭). [ದೊಡ್ಡ + ಜೀರಿಗೆ]

ದೊಡ್ಡಜೀವ (ನಾ). ಮುಖ್ಯವಾದ ಜೀವ,–ಪ್ರಾಣ ; P ಹೆಣ್ಣು ಬಸುರಿಯಾಗಿದ್ದಾಗ ಅವಳನ್ನು ದೊಡ್ಡಜೀವ, ದೊಡ್ಡಪ್ರಾಣ ಎಂದಂ ಕರೆಯುವುದುಂಟು : ಅವನೆದೆಗೆ ಕವಿಯೊಡ್ಡಿ . . . "ದೊಡ್ಡ ಜೀವವೇ ಹಾರಿಹೋಗಿದೆ" ಎಂದವನು ಗೊಣಗುಟ್ಟಿದನು (ಪುನರು. ೪೩೩) : ಗರ್ಭದಲ್ಲಿದ್ದ ಪಿಂಡವು ತಿರುಗಿ ಸ್ಥಳಪಲ್ಲಟವಾಗಿದ್ದುದರಿಂದ ಅದನ್ನು ಕತ್ತರಿಸಿ ಹೊರತೆಗೆಯದಿದ್ದರೆ ದೊಡ್ಡಜೀವಕ್ಕೆ ಅಪಾಯವೆಂದು ಮಾತ ನಾಡಿಕೊಂಡರು ಆಸ್ಪತ್ರೆಯಲ್ಲಿ (ಪಿಂಗಲ. ೦೯೭) : ಸತತವಾದ ಗಮನವನ್ನು ಕೊಟ್ಟು ಆ ವೈದ್ಯರು ದೊಡ್ಡಜೀವ ಸಣ್ಣಜೀವಗಳೆರಡನ್ನೂ ಉಳಿಸಿದರು (ಕೂಥಿ). [ದೊಡ್ಡ + ಜೀವ]

ದೊಡ್ಡಜೋಳ (ನಾ). ಮುಸುಕಿನ ಜೋಳ : (ಕ). [ದೊಡ್ಡ + ಜೋಳ]

ದೊಡ್ಡಜ್ವರ (ನಾ). ಕಾಲರಾಬೇನೆ : ಊರೂರಿಗೆ ದೊಡ್ಡಜ್ವರ ಬಂದು ಬಿಟ್ಟಿದೆ (ಕೂಥಿ). [ದೊಡ್ಡ + ಜ್ವರ]

ದೊಡ್ಡಣ (ಗು). ದೊಡ್ಡದಾದಂಥ ; ಗಾತ್ರವಾದ : ಕುಣಿಹಲ್ಲ ಪುರುಷ ನಂತೆ ಮಾತು ದೊಡ್ಡಣ ಕಾಲು ಕೆಂಪಾಗಿದ್ದ ಕೇಶ (ಸಾಮುಂ. ೨೯-೩). [<ದೊಡ್ಡ]

ದೊಡ್ಡಣ್ಣ (ನಾ). ಅಣ್ಣಂದಿರಲ್ಲಿ ಹಿರಿಯನಾದವನು ; ಮೊದಲನೆಯ ಅಣ್ಣ : ಏನು ಲೀಲೆಯೊಳು ಚಿಕ್ಕಣ್ಣನಿಹನು ತನ್ನ ಎಂಬನೋಚನೆಯು ರಿಂತಿಹರು ತಾನು ದೊಡ್ಡಣ್ಣನಂತುಪವಾಸಗೈವನೊ ಮಾನಿನಿ ಹೇಳಿಂದಳಾಗ (ಧರಕ. ೦೯-೫೩) ; ನಮ್ಮ ದೊಡ್ಡಣ್ಣನಿಂದ ಕಾಗದ ಬಂದು ಬಹಳ ದಿನವಾಯಿತು (ಕೂಥಿ). [ದೊಡ್ಡ + ಅಣ್ಣ$_1$]

ದೊಡ್ಡತಂಗಡಿ (ನಾ). ಒಂದು ಬಗೆಯ ದೊಡ್ಡದಾದ ತಂಗಡಿ ಸಸ್ಯ : ದೊಡ್ಡತಂಗಡಿ, ಸೀವೆ.ಅಗಸೆ (ಕ್ಯು.ಕಿಗಿ. ೦೮-೩೨೮). [ದೊಡ್ಡ + ತಂಗಡಿ]

ದೊಡ್ಡತಂದೆ (ನಾ). ೧. ತಂದೆಯ ಅಣ್ಣ : ದೊಡ್ಡಪ್ಪ. ೨. ತಾಯಿಯ ಅಕ್ಕನ ಗಂಡ : (ಕ). [ದೊಡ್ಡ + ತಂದೆ]

ದೊಡ್ಡತಗಚೆ (ನಾ). ಒಂದು ಬಗೆಯ ಸಸ್ಯ ; ತಗಚೆಯಲ್ಲಿ ಒಂದು ವಿಧ : ಕೋಲ್ತಗಸಿ, ದೊಡ್ಡತಗಚೆ, ಆನೆಸೊಗಚೆ (ಕ್ಯು.ಕಿಗಿ. ೦೯-೩೩೬). [ದೊಡ್ಡ + ತಗಚೆ]

ದೊಡ್ಡತನ (ನಾ). ೧. ಹಿರಿಯತನ ; ಘನತೆ ; ಮರ್ಯಾದೆ : ದೊಡ್ಡ ತನವೆನಗಿಲ್ಲ ಅಂಜುವೆನಂಜುವೆ ನಿಮ್ಮ ಪ್ರಮಥರಿಗೆ (ಬಸವ. ೪೧೩) ; ದೊಡ್ಡತನವ ನೀಗಿ ಗಡ್ಡದ ತಾಪಸನಡ್ಡಬಿದ್ದಿರೆ ಗೋಪಿಯರು ಗಡ್ಡವ ಪಿಡಿದು ತೊಗುತ ಗೋಪರೊಳು ವೇಳ್ವರಡ್ಡಬಿದ್ದೆದ್ದು ನಗುವರು (ಅಂಬಿಕ. ೨-೭೭) : ಅಡ್ಡಮೋಪಿಯನಿಕ್ಕಿ ನಗುವಳು ನೋಡುವಳೊಡ್ಡೊಡ್ಡಿ ನುದಿದೇಡಿಸುವಳು ದೊಡ್ಡತನವೆ ಭಾವ ನಿನಗಿದೆಂಬಳು ರಾಯ ಸಡ್ಡೆ ಮಾಡದೆ ಕೇಳುತಿಹನು (ಧರಶ. ೯-೦೦೪). ೨. ಗುಣಾತಿಶಯ ; ಒಳ್ಳೆಯ ಗುಣ : ತಂದೆಯ ಸಹಾನುಭೂತಿಯ ಸಮ್ಮತಿಯಿಂದಾಗಿ ಹೈಮವತಿಯ ಮನಸು ಗೋವರ್ಧನನ ದೊಡ್ಡತನದಲ್ಲಿ ಅನುರಕ್ತವಾಯಿತು (ಎರಸ. ೪೦). 'ಸಣ್ಣತನ' ಪರಾ. [ದೊಡ್ಡ + – ತನ]

ದೊಡ್ಡತಾಯಿ (ನಾ). ೧. ತಾಯಿಯ ಅಕ್ಕ ; ದೊಡ್ಡಮ್ಮ . ೨. ತಂದೆಯ ಅಣ್ಣನ ಹೆಂಡತಿ ; ದೊಡ್ಡಪ್ಪನ ಹೆಂಡತಿ : ದೊಡ್ಡತಾಯಿ ತೀರಿಕೊಂಡ ಬಗೆಗೆ ಹೆಚ್ಚಿನದು ತನಗೇನೂ ತಿಳಿದಿರಲಿಲ್ಲ (ಪಾತ್ಕಲ್ಕಿ. ೦೦) ; ಆ ವಂಗುವಿ ಗಾದರೂ . . . ತಾಯಿಯೊಡನೆ ಇರಲು ಮನಸ್ಸಾಗದೆ ನಿತ್ಯವೂ ಬಯಲು, ಬೆಂಗರೆ, ಅರಾಲುಗಳೆಂದು ಮನೆಯ ಹೊರಗೇನೆ ದಿನ ಕಳೆಯುತ್ತಿದ್ದ ದೊಡ್ಡತಾಯಿಯನ್ನು ಹಿಂಬಾಲಿಸುವ ಮನಸ್ಸಾಯಿತು (ಮರಮ. ೧೪೨).

[ದೊಡ್ಡ + ತಾಯಿ (<ತಾಯ್)]

ದೊಡ್ಡತಿಪ್ಪಲಿ 'ದೊಡ್ಡಹಿಪ್ಪಲಿ' ನೋ.

ದೊಡ್ಡತುಂಬೆ (ನಾ). ಒಂದು ಬಗೆಯ ದೊಡ್ಡದಾದ ತುಂಬೆ ಗಿಡ ಮತ್ತು ಅದರ ಹೂವು: ಹಸುರುತುಂಬೆ, ದೊಡ್ಡತುಂಬೆ (ಪ್ರಾಕಿಗಿ. ೫೦-೦೦೨). [ದೊಡ್ಡ + ತುಂಬೆ]

ದೊಡ್ಡತೊಪ್ಪೆಮರ (ನಾ). ಒಂದು ಬಗೆಯ ಮರ : ದೊಡ್ಡತೊಪ್ಪೆಮರ, ...ದಲ್ಲಿಮರ, ಬಟ್ಟಗ (ಪ್ರಾಕಿಗಿ. ೪೫-೪೧೫). [ದೊಡ್ಡ+ತೊಪ್ಪೆ$_0$+ಮರ$_1$]

ದೊಡ್ಡದಗರೆ (ನಾ). ಒಂದಂ ಬಗೆಯ ತಗರೆ ಸಸ್ಯ : (ಪ್ರಾಕಿಗಿ. ೦೮-೫೫೫).

[ದೊಡ್ಡ + ತಗರೆ]

ದೊಡ್ಡದತ್ತೆಲೆ (ನಾ). ಒಂದಂ ಬಗೆಯ ಎಳ್ಳಗಸೆ ಸಸ್ಯ : ದೊಡ್ಡದತ್ತೆಲೆ, ಉಮೆ (ಪ್ರಾಕಿಗಿ. ೬೫-೦೫೦೪). [ದೊಡ್ಡ + ದತ್ತೆಲೆ]

ದೊಡ್ಡದನ (ನಾ). ಒಳ್ಳೆಯ ತಳಿಯ ಪಶು ; ಉತ್ತಮಜಾತಿಯ ದನ : ಹೆಚ್ಚು ದನಗಳನ್ನು ಇಟ್ಟುಕೊಳ್ಳುವ ಬದಲು ಎರಡು ದೊಡ್ಡದನಗಳನ್ನು ಇಟ್ಟುಕೊಂಡರೆ ಸಾಕು (ಕೂಡಿ). [ದೊಡ್ಡ + ದನ]

ದೊಡ್ಡದನಿ (ನಾ). ಗಟ್ಟಿಯಾದ ಧ್ವನಿ; ಜೋರಾದ ಧ್ವನಿ : ಕೆಲಹೊತ್ತಿನ ಮೇಲೆ ಭಟ್ಟರು ತಮ್ಮ ದೊಡ್ಡದನಿಯಲ್ಲಿ, "ವಾದ್ಯಾ ಬಾರಿಸಿರೋ" ಎಂದರು (ಅಪೋರ. ೫೩).

ದೊಡ್ಡದನಿ ತೆಗೆ = ಎತ್ತರದ ಧ್ವನಿಯಲ್ಲಿ ಮಾತನಾಡು ; ಜೋರು ಮಾಡು : ನಾಗಮ್ಮನ ಅಳು ಅಳತೆ ಮೀರಿತು . . . ಅಳುತ್ತ "ನಾನು ನನ್ನ ಮಾವನವರ ಊರಿಗೇ ಹೋಗ್ತೀನಿ" ಎಂದು ದೊಡ್ಡದನಿ ತೆಗೆದಳು (ದಾಸಕೂ. ೯೬) : ಅವನು ದೊಡ್ಡದನಿ ತೆಗೆಯದೆ ಮಾತನಾಡುವುತೆಯೇ ಇಲ್ಲ (ಕೂಡಿ). [ದೊಡ್ಡ + ದನಿ$_1$]

ದೊಡ್ಡದರ್ಭೆ (ನಾ). ಒಂದು ಬಗೆಯ ಹುಲ್ಲಂ : "ಬಹುಮೂಲಃ – ದೊಡ್ಡದರ್ಭೆ, ಮಗ್ಗೆ" (ಓಷಧಿ. ೦೦೬). [ದೊಡ್ಡ + ದರ್ಭೆ]

ದೊಡ್ಡನಡೆ (ನಾ). ವೇಗದಿಂದ ಕೂಡಿದ ನಡಿಗೆ ; ವೇಗವಾದ ನಡಿಗೆ : ಎತ್ತುಗಳನ್ನು ದೊಡ್ಡನಡೆಯಲ್ಲಿ ಬಿಡು (ಕೂಡಿ). [ದೊಡ್ಡ + ನಡೆ$_3$]

ದೊಡ್ಡನಸುಕು (ನಾ). ಇನ್ನೂ ಕತ್ತಲು ಇರುವ ಜಾವ ; ಬೆಳಗು ಬರಲು ಇನ್ನೂ ಸಾಕಷ್ಟು ಸಮಯವಿರುವ ಪ್ರಭಾತಕಾಲ : ದೊಡ್ಡನಸುಕಿನಲ್ಲಿ ಎದ್ದು ಸೋನಾಮಣಿಯು . . . ಬಾಗಿಲಿಗೆ ಬಂದು ಸದ್ದಿಲ್ಲದೆ ನಿಂತಳು (ಇಕ್ಷಳ. ೦೫೦) : ಅವು ಅಡ್ಡಾಡುವ ಕಾಲವೆಂದರೆ ಭೂಳಸಂಜೆ ಅಥವಾ ದೊಡ್ಡನಸುಕು (ಳನ್ನಕಾ. ೫೦). [ದೊಡ್ಡ + ನಸುಕು]

ದೊಡ್ಡನಾತದಗಿಡ (ನಾ). ಒಂದು ಬಗೆಯ ಸಸ್ಯ : ಅರಿದ್ರಿ, ದೊಡ್ಡನಾತದ ಗಿಡ, ಇಬನ್ನೆ, ರುಚಿಕತ್ರಿ (ಪ್ರಾಕಿಗಿ. ೦೫-೨೮೩).

[ದೊಡ್ಡ + ನಾತ + ಗಿಡ (<ಗಿಡು)]

ದೊಡ್ಡನಾಯಿ (ನಾ). ೧. ಎತ್ತರವಾಗಿ ಬೆಳೆದಿರುವ ನಾಯಿ, –ಶುನಕ: ದೊಡ್ಡತಲೆ ಯಮನ ದೂತರು ಗಡ್ಡದ ದೂತರು ಓಡಿ ಬಂದರು ದೊಡ್ಡ ನಾಯಿಗಳ ಟೊಂಕಕೆ ಬಿಗಿದು ಚಿಕ್ಕನಾಯಿಗಳ ಎಡಕೈಯಲಿ ಕೊಂಡು (ಪುರಂದ. ೫-೧೬೬-೫). ೨. ಹೆಬ್ಬುಲಿ : "ಶಾರ್ದೂಲಃ, ದ್ವೀಪೀ, ವ್ಯಾಘ್ರಃ– ೩ ದೊಡ್ಡಹುಲಿ, ಹೆಬ್ಬುರಹುಲಿ, ದೊಡ್ಡನಾಯಿ" (ನಿಘಂಶಿ. ೦೫೩).

[ದೊಡ್ಡ + ನಾಯಿ (<ನಾಯ್)]

ದೊಡ್ಡನಾಳಲು (ನಾ). ಒಂದು ಬಗೆಯ ದೊಡ್ಡದಾದ ಹುಲ್ಲುಗಿಡ : ದೊಡ್ಡದಾದ ಜೊಂಡುಗಿಡ : "ದೇವನಾಳಃ – ದೊಡ್ಡನಾಳ(ಣ)ಲು" (ಓಷಧಿ. ೭೯). [ದೊಡ್ಡ + ನಾಳಲು (< ನಾನಲ್)]

ದೊಡ್ಡನಿಂಬೆ (ನಾ). ಒಂದಂ ಬಗೆಯ ದೊಡ್ಡದಾದ ನಿಂಬೆಯ ಗಿಡ ಮತ್ತು ಅದರ ಹಣ್ಣು ; ಗಜನಿಂಬೆ : "ಜಂಬೀರ = ದೊಡ್ಡನಿಂಬೆ" (ಅಕಾನಿ. ೧೧-೩). [ದೊಡ್ಡ + ನಿಂಬೆ]

ದೊಡ್ಡನಿದ್ದೆ (ನಾ). ೧. ಗಾಢವಾದ ನಿದ್ರೆ ; ೨. ಸಾವು ; ಮರಣ : "ದೊಡ್ಡನಿದ್ದೆ –ಗಾಢನಿದ್ರೆ, ಸಾವು" (ಆನಕೋ. ೬). [ದೊಡ್ಡ + ನಿದ್ದೆ]

ದೊಡ್ಡನಿದ್ರೆ (ನಾ). = ದೊಡ್ಡನಿದ್ದೆ : (೪). [ದೊಡ್ಡ + ನಿದ್ರೆ]

ದೊಡ್ಡನೀರಂಜಿ (ನಾ). ಒಂದು ಬಗೆಯ ಸಸ್ಯ ; ನೀರಂಜಿಯಲ್ಲಿ ಒಂದಂ ವಿಧ : ದೊಡ್ಡನೆಗ್ಗಿಲು, ದೊಡ್ಡನೀರಂಜಿ, ಆನೆನೆಗ್ಗಿಲು (ಪ್ರಾಕಿಗಿ. ೬೦-೧೨೦೬). [ದೊಡ್ಡ + ನೀರಂಜಿ (<ನೀರುವಂಜಿ)]

ದೊಡ್ಡನೀಲಿ (ನಾ). ಒಂದು ಬಗೆಯ ದೊಡ್ಡದಾದ ನೀಲಿಗಿಡ : "ರಾಜನೀಲಿಕಾ – ದೊಡ್ಡನೀಲಿ" (ಓಷಧಿ. ೦೩೮) ; ಕೊಮ್ಮೆಬೇರು, ದೊಡ್ಡ ನೀಲಿ, ಅಣಬೆ ಇವಿಷ್ಟನ್ನು . . . ಕಲ್ಲೊಳಿಟ್ಟು ಅರೆದು ಹಸುವಿನ ಮಜ್ಜಿಗೆ ಯಲ್ಲಿ ಕುಡಿಯ ಕೊಡಿಸಲು . . . ವಿಷ ಪರಿಹರವಹುದು (ವೈದ್ಯಸಾ. II, ೨೦೬). [ದೊಡ್ಡ + ನೀಲಿ]

ದೊಡ್ಡನೂಲು (ನಾ). ದಪ್ಪವಾದ, ಒರಟು ನೂಲು: ಸ್ಕೂಲ, ಶಾಟಕ – ದೊಡ್ಡನೂಲ ಸೀರೆ (ನಾಚಿಕಾ. ೬). [ದೊಡ್ಡ + ನೂಲು$_3$ (<ನೂಲ್$_3$)]

ದೊಡ್ಡನೆಕ್ಕರೆ (ನಾ). ನೇರಳೆ ಬಣ್ಣದ ಹೂವುಗಳನ್ನು ಬಿಡುವ ನೆಕ್ಕರೆ ಎಂಬ ಗುಲ್ಮಜಾತಿಯಲ್ಲಿ ಒಂದು ವಿಧ : (ಪ್ರಾಕಿಗಿ. ೫೩-೦೦೯).

[ದೊಡ್ಡ + ನೆಕ್ಕರೆ]

ದೊಡ್ಡನೆಗ್ಗಿಲು (ನಾ). ಒಂದು ಬಗೆಯ ಸಸ್ಯ ; ನೆಗ್ಗಿಲಿನಲ್ಲಿ ಒಂದಂ ವಿಧ : ದೊಡ್ಡನೆಗ್ಗಿಲು, ದೊಡ್ಡನೀರಂಜಿ, ಆನೆನೆಗ್ಗಿಲು (ಪ್ರಾಕಿಗಿ. ೬೦-೧೨೦೬). [ದೊಡ್ಡ + ನೆಗ್ಗಿಲು (<ನೆಗ್ಗಿಲ್)]

ದೊಡ್ಡನೆಲದಾವರೆ (ನಾ). ಒಂದಂ ಬಗೆಯ ಹೂವಿನ ಗಿಡ ; ನೆಲದಾವರೆಯಲ್ಲಿ ಒಂದು ವಿಧ : "ಶುದ್ಧ ಮೂಲಂ – ದೊಡ್ಡನೆಲದಾವರೆ" (ಓಷಧಿ. ೦೬೮). [ದೊಡ್ಡ + ನೆಲದಾವರೆ$_1$]

ದೊಡ್ಡನೆಲ್ಲಿ (ನಾ). ನೆಲ್ಲಿಯಲ್ಲಿ ಒಂದು ವಿಧ : ಬೆಟ್ಟದ ನೆಲ್ಲಿಕಾಯಿ . . . ದೊಡ್ಡನೆಲ್ಲಿ, ಬೆಟ್ಟನೆಲ್ಲಿ (ಪ್ರಾಕಿಗಿ. ೩೪-೬೪೯). [ದೊಡ್ಡ + ನೆಲ್ಲಿ$_1$]

ದೊಡ್ಡನೇಱಿಲ್, ದೊಡ್ಡನೇಱಿಲು (ನಾ). ಗಾತ್ರದಲ್ಲಿ ಹಿರಿದಾದ ನೇರಿಳೆಹಣ್ಣಿನ ಮರ ಮತ್ತು ಅದರ ಹಣ್ಣು : "ಮಹಾಫಲ – ಬೆಲ್ಲವತ್ತ, ಹಲಸು, ದೊಡ್ಡನೇಱಿಲ್" (ಓಷಧಿ. ೦೦೪). ದೊಡ್ಡನೇಱಿಲು : "ಕೋಕಿಲೇಷ್ಟಾ – ದೊಡ್ಡನೇಱಿಲು" (ಓಷಧಿ. ೪೧). [ದೊಡ್ಡ + ನೇಱಿಲ್]

ದೊಡ್ಡನೇಱಿಲು 'ದೊಡ್ಡನೇಱಿಲ್' ನೋ.

ದೊಡ್ಡಪಟಿಕ (ನಾ). ಸ್ಫಟಿಕದ ಗಿಡದಲ್ಲಿ ಒಂದಂ ಬಗೆ ಮತ್ತು ಅದರ ಹೂವು : ದೊಡ್ಡಪಟಿಕ, ನಾಗಮಲ್ಲಿಗೆ (ಪ್ರಾಕಿಗಿ. ೬೬-೦೪೫೫).

[ದೊಡ್ಡ + ಪಟಿಕ$_0$]

ದೊಡ್ಡಪಡಪತ್ರೆ (ನಾ). ಒಂದು ಬಗೆಯ ಮೂಲಿಕೆ : ದೊಡ್ಡಪಡಪತ್ರೆ ಚೂರ್ಣ ವರಾಹ ತೂಕ ಗುಳಿಗೆ ಮಾಡಿ ಕೊಡಲು ಹಾವುಗಳ ನಾನಾ ವಿಷ, ನಾನಾ ವ್ಯಾಧಿಗಳಿಗೂ ವಿಷ ಹರ (ವಿಕ್ಕವಿ. ೦೦೪). [ದೊಡ್ಡ+ಪಡಪತ್ರೆ$_0$]

ದೊಡ್ಡಪತ್ರೆ, ದೊಡ್ಡಿಪತ್ರೆ (ನಾ). ಅಡುಗೆಗೂ ಔಷಧಿಗೂ ಉಪಯೋಗಿಸುವ, ದೊಡ್ಡ ದೊಡ್ಡ ದಪ್ಪ ಎಲೆಗಳನ್ನುಳ್ಳ ಒಂದು ಬಗೆಯ ಗಿಡ ಮತ್ತು ಅದರ ಎಲೆ : "ಧಿತ್ಯಕೋಶಾತಕೀ–ದೊಡ್ಡಪತ್ರೆ (ಬೋಟರ ?)" (ಓಷಧಿ. ೫೯). ದೊಡ್ಡಿಪತ್ರೆ : "ಅಜಪಾದಃ – ಎಲೆಗಳ್ಳಿ, ದೊಡ್ಡಿಪತ್ರೆ" (ಓಷಧಿ. ೬). [ದೊಡ್ಡ + ಪತ್ರೆ]

ದೊಡ್ಡಪರೀಕ್ಷೆ (ನಾ). ಮುಂದಿನ ತರಗತಿಗೆ ತೇರ್ಗಡೆ ಮಾಡಲಂ ಮಾಡುವ ಪರೀಕ್ಷೆ ; ವಿದ್ಯಾ ಇಲಾಖೆಯವರಂ ನಡೆಸುವ ಸರ್ವಶಾಲಾ ಪರೀಕ್ಷೆ : ದೊಡ್ಡಪರೀಕ್ಷೆಯೊಳೆನ್ನ ದುರ್ದೈವಕೆ ವಿಜಯವು ಅರಬರೆಯಾಗೆ (ಇಂಡಾಪ. ೧೯-೬೦). 'ಸಣ್ಣಪರೀಕ್ಷೆ' ಪರಾ. [ದೊಡ್ಡ + ಪರೀಕ್ಷೆ]

ದೊಡ್ಡಪುಂಡರೀಕ (ನಾ). ದೊಡ್ಡದಾದ ಬಿಳಿ ತಾವರೆಯ ಬಳ್ಳಿ ಮತ್ತು ಅದರ ಹೂವು : "ಪುಂಡರೀಯಕಂ – ದೊಡ್ಡಪುಂಡರೀಕಂ" (ಓಷಧಿ. ೧೦೦). [ದೊಡ್ಡ + ಪುಂಡರೀಕ]

ದೊಡ್ಡಪುರಲೇಹುಲ್ಲು (ನಾ). ಒಂದಂ ಬಗೆಯ ಹುಲ್ಲು : ದೊಡ್ಡಪುರಲೇ ಹುಲ್ಲು, ಸಣ್ಣಊಗು ಹುಲ್ಲು (ಪ್ಯುಕಿಗಿ. ೩೪-೬೬೦).

[ದೊಡ್ಡ + ಪುರಲೆ$_{೨}$ (<ಪುರುಲೆ$_{೨}$) + ಹುಲ್ಲು (<ವುಲ್)]

ದೊಡ್ಡಪ್ಪ (ನಾ). ೧. ತಂದೆಯ ಅಣ್ಣ ; ದೊಡ್ಡತಂದೆ : "ಪಿತೃವ್ಯಃ. ಪಿತುರ್ಭ್ರಾತಾ – ತಂದೆಗೆ ವಡಹುಟ್ಟಿದವನ ಪೆಸರು. ಚಿಕ್ಕಪ್ಪ, ದೊಡ್ಡಪ್ಪ" (ಸಿದ್ಧಾಂತಿ. ೦೭೫); ಇಲ್ಲ ದೊಡ್ಡಪ್ಪ, ಇಲ್ಲಿಯೇ ಮಲಗುತ್ತೀನೆ (ಪಾತ್ಕಂ. ೦) : ವೈದಿಕಲೌಕಿಕೋಭಯವಿದ್ಯಾನಿಪುಣರು ನನ್ನ ಆ ದೊಡ್ಡಪ್ಪನವರು (ಇಂಡಾಪ. ೧೫-೬೦). ೨. ಗೌರವವುಳ್ಳ ವ್ಯಕ್ತಿ ; ಮನ್ನಣೆಯನ್ನು ಹೊಂದಿರುವವನು : ದುಡ್ಡು ದೊಡ್ಡಪ್ಪಾದು ಗಂಡರಾಗಲು ಬಹುದೆ ದುಡಿದುಂಡರು ಗಂಡರಿರದೇಕ (ಕನ್ನಕಾ. ೪೧೬); ದುಡ್ಡಿದ್ದವನೇ ದೊಡ್ಡಪ್ಪ (ಗಾದೆ). [ದೊಡ್ಡ + ಅಪ್ಪ$_{1}$]

ದೊಡ್ಡಬರ (ನಾ). (ಹಿಂದೆ ೧೮೭೫–೭೬ರ ಧಾತು ವಂತ್ಸರ ಸಂವತ್ಸರಗಳಲ್ಲಿ ಇಡೀ ರಾಷ್ಟ್ರವನ್ನೇ ತಲ್ಲಣಗೊಳಿಸಿದ) ಒಂದು ದೊಡ್ಡ ಕ್ಷಾಮ ; ಭಯಂಕರವಾದ ಬರ : ಆಚಾರ್ಯರು . . . ಮೂರು ವರ್ಷದ ಬರ ಅಥವಾ ದೊಡ್ಡಬರ, ಜೋಳದ ಬರಗಳನ್ನು ಕಂಡಿದ್ದರು (ನನ್ನೂರು.೦೯೨) : ಮೊದಲೇ ಬಡತನ, ಅದರಲ್ಲಿ ದೊಡ್ಡಬರ (ಕನ್ನಕಾ. ೨೦). [ದೊಡ್ಡ + ಬರ$_{1}$ (<ಬಜ)]

ದೊಡ್ಡಬಸಲೆ, ದೊಡ್ಡಬಸಳೆ (ನಾ). (ಅಡುಗೆಗೆ ಉಪಯೋಗಿಸಂವ) ಒಂದಂ ಬಗೆಯ ಬಳ್ಳಿ ವಂತ್ತು ಅದರ ಸೊಪ್ಪು : ಸೊಪ್ಪುಗಳು : ಅಗಸೆ . . . ದಗ್ಗಳಿ, ಕೆಸವೆ, ದೊಡ್ಡಬಸಲೆ, ಬಿಲವರಗ (ನಮ್ಮನು. ೫೩೭). **ದೊಡ್ಡಬಸಳೆ** : ದೊಡ್ಡಬಸಳೆ ಬಳ್ಳಿ ತಾರಸಿಯ ಮೇಲಕ್ಕೂ ಹಬ್ಬಿಕೊಂಡು ಹೋಗಿದೆ (ಕೂಥಿ). [ದೊಡ್ಡ + ಬಸಲೆ]

ದೊಡ್ಡಬಸಳೆ 'ದೊಡ್ಡಬಸಲೆ' ನೋ.

ದೊಡ್ಡಬಿಂದಿಗೆಗಿಡ (ನಾ). ಒಂದಂ ಬಗೆಯ ಹೂವಿನ ಗಿಡ : (ಪ್ಯುಕಿಗಿ. ೫-೬೭). [ದೊಡ್ಡ + ಬಿಂದಿಗೆ + ಗಿಡ (<ಗಿಡು)]

ದೊಡ್ಡಬೀದಿ (ನಾ). ಮುಖ್ಯವಾದ ಬೀದಿ ; ಪ್ರಧಾನ ರಸ್ತೆ : ದೇವರ ಉತ್ಸವದ ಕಾರಣ ಆ ದೊಡ್ಡಬೀದಿಯಲ್ಲಿ ಬಹುಜನರು ಸೇರಿದ್ದಾರೆ (ಕೂಥಿ). [ದೊಡ್ಡ + ಬೀದಿ]

ದೊಡ್ಡಬೆಂಡೆ (ನಾ). ಒಂದಂ ಬಗೆಯ ದೊಡ್ಡದಾದ ಕಾಯಿಗಳನ್ನು ಬಿಡುವ ಬೆಂಡೆ ಗಿಡ ಮತ್ತು ಅದರ ಕಾಯಿ : ದೊಡ್ಡಬೆಂಡೆ, ಕಾಡುಕುಪ್ಪಿ (ಪ್ಯುಕಿಗಿ. ೭೭-೦೫೭೦). [ದೊಡ್ಡ + ಬೆಂಡೆ]

ದೊಡ್ಡಬೆಟ್ಟ (ನಾ). ಎತ್ತರವಾದ ಬೆಟ್ಟ : "ಶ್ರೀಕೂಟಃ . . . ವಂಂರು ಶಿಖರಗಳುಳ್ಳ ಬಹಳ ಪ್ರಸಿದ್ಧವಾದ ದೊಡ್ಡಬೆಟ್ಟ" (ಸಿದ್ಧಾಂತಿ. ೯೪) : ಅಂಬುಧಿಯೊಳ್ ಮಗನ ಮಲಗಿಸಿ ಮೇಲೆ ದೊಡ್ಡಬೆಟ್ಟವನ್ನು ಇಟ್ಟು ಬನ್ನಿರೋ (ಪುರಂದ. ೪-೭-೩) : ಕನ್ನಡ ಶಾಸನಗಳಲ್ಲಿ ಚಿಕ್ಕ ಬೆಟ್ಟವನ್ನು ಕಟ್ಟುವ್ವ ಎಂದೂ ದೊಡ್ಡಬೆಟ್ಟವನ್ನು 'ವೆರ್ಗಬ್ಬುವ್ವ' ಎಂದೂ ಕರೆದಿದೆ (ಕಶಾಅ ೭೮). ಶ್ರವಣಬೆಳಗೊಳದಲ್ಲಿರಂವ ಚಂದ್ರಗಿರಿಗೂ ಊಟಿಯ ಬಳಿಯಿರುವ ನೀಲಗಿರಿಯ ಶಿಖರಕ್ಕೂ ದೊಡ್ಡಬೆಟ್ಟವೆಂಬ ಹೆಸರಂ ಬಂದಿದೆ. [ದೊಡ್ಡ + ಬೆಟ್ಟ (<ಬೆಟ್ಟು$_{೨}$)]

ದೊಡ್ಡಬೆಲ್ಲಗೆಣಸು (ನಾ). ಒಂದಂ ಬಗೆಯ ಸಿಹಿಗೆಣಸು : "ತಾಂಬೂಲ ಪತ್ರಿಕಾ – ದೊಡ್ಡಬೆಲ್ಲಗೆಣಸು" (ಓಷಧಿ. ೬೮).

[ದೊಡ್ಡ + ಬೆಲ್ಲ + ಗೆಣಸು (<ಗೆಬಸು)]

ದೊಡ್ಡಬೆಳ್ಳಿಹಣ (ನಾ). ಒಂದಂ ಬಗೆಯ ಬೆಳ್ಳಿ ನಾಣ್ಯ : (ಕ).

[ದೊಡ್ಡ + ಬೆಳ್ಳಿ + ಹಣ]

ದೊಡ್ಡಬೇನೆ (ನಾ). ಕ್ಷಯ ಮೊದಲಾದ ಭಯಾನಕ ವಾದ ರೋಗ ; ದೊಡ್ಡ ರೋಗ : ಜಗಳದ ಕಾವಿನಲ್ಲಿ ಆಕೆ ನಿನಗೆ ದೊಡ್ಡ ಬೇನೆ ಬರ, ಎಂದು ನಟಿಕೆ ಮುರಿದಳು (ಕೂಥಿ). [ದೊಡ್ಡ + ಬೇನೆ]

ದೊಡ್ಡಬೇವು (ನಾ). ಒಂದು ಬಗೆಯ ಬೇವಿನ ಮರ : "ರಕ್ತಃ – ದೊಡ್ಡ ಬೇವು, ತಾರೆ, ಕಡುಸಿಗೆ" (ಓಷಧಿ. ೧೫೭) : "ಏನಿಂಬಃ–ದೊಡ್ಡಬೇವು" (ಓಷಧಿ. ೧೫೫). [ದೊಡ್ಡ + ಬೇವು]

ದೊಡ್ಡಬೊಂಬೆಯಾಟ (ನಾ). ಬೊಂಬೆಯಾಟದಲ್ಲಿ ಒಂದು ಪ್ರಕಾರ. ದೊಡ್ಡಬೊಂಬೆಯಾಟದವರು = ದೊಡ್ಡ ಬೊಂಬೆಯಾಟವನ್ನು ಆಡಿಸುವವರಂ : (ಎಸಪ್ರ. XXII, ೩). [ದೊಡ್ಡ + ಬೊಂಬೆಯಾಟ]

ದೊಡ್ಡಮದ್ದು (ನಾ). ಅಶ್ವಗಂಧದ ಬೇರು ; ಹಿರೇಪಂದ್ದು : (ಕ).

[ದೊಡ್ಡ + ಮದ್ದು$_{1}$ (<ಮರ್ದು)]

ದೊಡ್ಡಮನಸ್ಸು (ನಾ). ಉದಾರಬುದ್ಧಿ ; ವಿಶಾಲಹೃದಯ : ಗಿರಿಜ ಬದುಕಿದ್ದಾಗ "ದೋಸೆ ತಿನ್ನು" ಎಂದು ದೊಡ್ಡಮನಸ್ಸು ತೋರಿಸಿರಲಿಲ್ಲ (ಪದ್ಮಕ. ೬೨) : ನೀವು ಅಂತಹ ದೊಡ್ಡಮನಸ್ಸಿನವರೆಂಬುದನ್ನು ಮಂದಿ ಬಲ್ಲುದು ಮಹಾರಾಣಿ (ಸಚತಿ. ೧೩). ದೊಡ್ಡಮನಸ್ಸು ಮಾಡು=ಉದಾರಬುದ್ಧಿಯನ್ನು ತೋರು; ಕರುಣೆ ತೋರು : ತಾವು ದೊಡ್ಡಮನಸ್ಸು ಮಾಡಬೇಕು (ಒಡಳ. ೯೦) : ಈಗ ಕುಂತಿಯು ದೊಡ್ಡಮನಸ್ಸು ಮಾಡಿದರೆ ನನಗೂ ಮಕ್ಕಳಾದಾವು (ವಚಭಾ. ೧೩). [ದೊಡ್ಡ + ಮನಸ್ಸು]

ದೊಡ್ಡಮನುಷ್ಯ (ನಾ). ೧. ಗೌರವಯುತ ಮನುಷ್ಯ : ನನ್ನ ಸಬ್ ಡಿವಿಜನ್ ಆಫೀಸರು ದಳವಾಯಿ ಮನೆತನದ ಚಿಕ್ಕದೇವರಾಜೇಅರಸರೆಂಬ ದೊಡ್ಡಮನುಷ್ಯರು (ಕಿಂಸಿ. ೩೧೬) : ಊರಿಗೆ ದೊಡ್ಡಮನುಷ್ಯ ಅನ್ನಿಸಿ ಕೊಳ್ಳೋಕೆ ನಾನು, ಬಂದೋರ ಚಾಕರಿ ಮಾಡೋಕೆ ನೀವಾ ? (ತಂದತೋ.೩೬). ೨. ಶ್ರೀಮಂತ : "ದೊಡ್ಡಮನುಷ್ಯ. ದೊಡ್ಡಸ್ತಿಕೆಗಾರ" (Aristocrat. ಪಾರಿನಿ. ೬). [ದೊಡ್ಡ + ಮನುಷ್ಯ]

ದೊಡ್ಡಮನೆ (ನಾ). ೧. ವಿಶಾಲವಾದ ಮನೆ : ಸಾಹುಕಾರನು ಆ ದೊಡ್ಡ ಮನೆಯಲ್ಲಿ ಬೀದಿಯ ಕಡೆಯ ಒಂದು ಕೊಠಡಿಯನ್ನು ಸುಬ್ಬಣ್ಣನವರಿಗೆ ತೋರಿಸಿ, ನೀವು ಬೇಕಾದರೆ ಇಲ್ಲಿಯೇ ಇರಿ. ಎಂದು ಹೇಳಿದನು (ಸಣ್ಣಕ. ೩, ೫೪) ; ಒಂದು ಕಾಲಕ್ಕೆ ಅದು ಬಹಳ ದೊಡ್ಡಮನೆ ಆಗಿದ್ದಿರಬೇಕು (ತಂದತೋ. ೩೦). ೨. (ಆಲಂ) ಕಾರಾಗೃಹ ; ಸೆರೆಮನೆ : (ಕ).

[ದೊಡ್ಡ + ಮನೆ]

ದೊಡ್ಡಮಬ್ಬು (ನಾ). ಬೆಳಗಿನ ಜಾವಕ್ಕೂ ಮುಂಚಿನ ಸಮಯ ; ಬೆಳಗಾಗುವುದಕ್ಕಿಂತ ತುಂಬಾ ಮುಂಚಿನ ಸಮಯ : ಚನ್ನ ದೊಡ್ಡ ಮಬ್ಬಿಗೇ ಊರು ಬಿಟ್ಟು ಮೂರಾಳುದ್ದ ಹೊತ್ತಿಗೆ ಬೆಟ್ಟ ಸೇರಿದ (ನನ್ನೂರು. ೨೦೯). 'ನುಸುಮಂಬರ್ಷ' ಪರಾ.

[ದೊಡ್ಡ + ಮಬ್ಬು (<ಮರ್ವು)]

ದೊಡ್ಡಮರ (ನಾ). ೧. ದೊಡ್ಡದಾದ ಮರ ; ಎತ್ತರವಾದ ವೃಕ್ಷ. ೨. ಹಿರೇಮರ ; ಹೆಮ್ಮರ : "ಮಂಡೂಕವರ್ಣಃ, ವತ್ಸೋರ್ಣಃ, ನಟಃ, ಕಟ್ಟುಂಗಃ . . . ೧೨ ಹೆಮ್ಮರದ ಹೆಸರುಗಳು. ದೊಡ್ಡಮರ, ಹೆಗ್ಗೂಗಟೇ ಮರ" (ಸಿದ್ಧಾಂತಿ. ೧೦೯) : ದೊಡ್ಡಮರ, ಹೆಮ್ಮರ, ಹಿರೇಮರ (ಪ್ಯುಕಿಗಿ. ೪-೫೮). [ದೊಡ್ಡ + ಮರ$_{1}$]

ದೊಡ್ಡಮಳೆ (ನಾ). ಜೋರಾಗಿ ಸುರಿಯುವ ಮಳೆ ; ಬಿರಂಮಳೆ : ದೊಡ್ಡಮಳೆ ಬೆಳ್ಳಿಬಿಸಿಲುಗಳಿರದ ಮುಕ್ಕುಳಿಸಲೆಡ್ಡಮೆನೆ ಬಾನೊಡಲ್ ಬರಿದಾಗುತಿತ್ತು (ಕಾಂಬರ. ೩೭-೯೩); ಮಳೆಗಾಲದಲ್ಲೆಲ್ಲ ಕೂಡಿ ನಾಲ್ಕಾರು ದೊಡ್ಡಮಳೆಗಳು ಬಿದ್ದರೆ ಬಹು ಸುದೈವ (ಮುಂಬಯಿ. ೫-೧೯೪).

[ದೊಡ್ಡ + ಮಳೆ (<ಮಟೆ)]

ದೊಡ್ಡಮಾತು (ನಾ). ಅತಿ ಉಚಿತವಾದ ಮಾತು ; ಎಲ್ಲರೂ ಒಪ್ಪ ಬಹುದಾದ ಮಾತು ; ತಿಳಿವಳಿಕೆಯಿಂದ ಕೂಡಿದ ಮಾತು : ದೊಡ್ಡ ಮಾತೇನು, ಗಿಡ್ಡಮಾತೇನು ? (ಪೀಠಿಮಾ. ೨೯) ; ಇಂತಹ ಕೆಲಸ ಮಾಡುವುದಕ್ಕೆ ನಿನಗೆ ನಾಚಿಕೆಯಿಲ್ಲವಂತೆ . . . ಮತ್ತೆ ಮರ್ಯಾದಿ ಬಗ್ಗೆ ದೊಡ್ಡಮಾತು ಹೇಳುತ್ತೀರಿ (ದೇವಹಂ. ೧೭೩) ; ನಮಗೇಕವ್ವ ಅಷ್ಟು ದೊಡ್ಡಮಾತು (ಕತ್ತಕ. ೩೯). [ದೊಡ್ಡ + ಮಾತು$_1$]

ದೊಡ್ಡಮಾರವಾಳಿ (ನಾ). ಒಂದು ಬಗೆಯ ಒಣಹುಲ್ಲು : (ಕೃ).

[ದೊಡ್ಡ + ಮಾರವಾಳಿ (<ಮಾರುಳಿ)]

ದೊಡ್ಡಮಾರ್ಗ (ನಾ). ಆನೆ, ಕುದುರೆಗಳ ಸವಾರಿಯಿಂದ ಕಿರಂದೊಡೆಯಲ್ಲುಂಟಾಗುವ ಜಡ್ಡು,–ದಡ್ಡು : "ದೊಡ್ಡಮಾರ್ಗಂ = ಆನೆ ಕುದುರೆಗಳೊಳಾದ ಕಿಱುದೊಡೆಯ ಜಿಡ್ಡು, (ಜಡ್ಡು, ದಡ್ಡು)" (ಕವಾದ. ಪರಿ. ೩); "ದೊಡ್ಡಮಾರ್ಗಮೆಂದಾನೆ ಕುದುರೆಗಳ ಕಿಱುದೊಡೆಯೊಳಿರದಾದ ದಡ್ಡಕ್ಕು" (ಕಬ್ಬಿಕೈ. ೯೧) ; ಆರೂಢಸರ್ವಜ್ಞನ ದೊಡ್ಡ [ಪಾಣಂ. ಡ್ಡಿ]ಮಾರ್ಗಂಗಳಿಳ ವಾಟಿಯ ದಿಂಡಿನೊಳ್ ಸಾಣೆಗಟ್ಟಿದಂತಾದುವು (ಪಂಪಭಾ. ೨-೩೯ ವ) ; ಮದಗಜದ ಪೊರಜು ಪೊಯ್ದೇಟ್ವ ದೊಡ್ಡಮಾರ್ಗದ ಕಿಣಂಗಳಂ ಕಿಗ್ಗಣ್ಣೊಳ್ ಪದನತನ್ಯವರೀಕ್ಷಿಸೆ (ಅನಂಪು. ೩-೯). [ದೊಡ್ಡ+ಮಾರ್ಗ]

ದೊಡ್ಡಮಾವು (ನಾ). ಒಂದು ಬಗೆಯ ಗಿಡ : "ಶರಾಟಿಕಾ – ದೊಡ್ಡ ಮಾವು" (ಓಷಧಿ. ೧೭೦). [ದೊಡ್ಡ + ಮಾವು]

ದೊಡ್ಡಮೆಕ್ಕೆಗಿಡ (ನಾ). ಒಂದು ಬಗೆಯ ಬಳ್ಳಿ ; ಹಾಲ್ಮೆಕ್ಕೆ ಬಳ್ಳಿ : (ಕೃ).

[ದೊಡ್ಡ + ಮೆಕ್ಕೆ + ಗಿಡ (<ಗಿಡು)]

ದೊಡ್ಡಮೆಣಸಿನಕಾಯಿ (ನಾ). = ದೊಣ್ಣೆಮೆಣಸಿನಕಾಯಿ : (ಮೃಜಿಗಿ. ೧೭-೩೧೩). [ದೊಡ್ಡ + ಮೆಣಸಿನಕಾಯಿ]

ದೊಡ್ಡಮೇದೆ (ನಾ). ಒಂದು ಬಗೆಯ ಮೂಲಿಕೆ : "ವೃಷ್ಯಾರ್ಹಃ – ದೊಡ್ಡಮೇದೆ" (ಓಷಧಿ. ೦೫೭). [ದೊಡ್ಡ + ಮೇದೆ]

ದೊಡ್ಡಮ್ಮ (ನಾ). ೧. = ದೊಡ್ಡತಾಯಿ ೧ : ಚಿಕ್ಕಮ್ಮಗಾ ರಾಯ ಕೈರಾಗು ಗೊಟ್ಟೊಳಹೊಕ್ಕು ದೊಡ್ಡಮ್ಮನ ಕಂಡ (ಧರಕ. ೩೨-೧೪೦) ; ಕಾಳೂರಿನಲ್ಲಿ ಗಿರಿಜಳ ದೊಡ್ಡಮ್ಮನ ಮನೆಯಿದೆ (ದೇವಹಂ. ೯೭). ೨. = ದೊಡ್ಡತಾಯಿ ೨ : ನಿದ್ದೆ ಚೆನ್ನಾಗಿ ಬಂತು ದೊಡ್ಡಮ್ಮ (ಪಾತ್ಕಲ್ಕ. ೧೭). ೩. ಕೆಡುಕನ್ನುಂಟುಮಾಡುವವೆಂದು ನಂಬಲಾದ ಒಬ್ಬ ಹೆಣ್ಣು ದೇವತೆಯ ಹೆಸರು : ಮಾರುದ್ದ ಮಂಡೇ ಧಂಸೊ ದೊಡ್ಡಮ್ಮಾ ನಿನ್ನ ಮಾಯಾ ಒಬ್ಬರಿಗೂ ತಿಳಿಯಾದೋ (ಹುಬ್ಬಹ. ೪೩) ; ಕೋಣಗಳನ್ನು ಕಡಿದ ರಕ್ತ ಚಿಕ್ಕಮ್ಮನ ಗುಡಿಯಿಂದ ದೊಡ್ಡಮ್ಮನ ಗುಡಿಯ ತನಕ ಹರಿದು ಹೋಗುತ್ತಿತ್ತು (ಸನಾಸ್ಮಕು. ೩೦). ೪. ಸಿಡಂಬು : ಮಗೂಗೆ ದೊಡ್ಡಮ್ಮ ಆಗಿರುವುದರಿಂದ ಮೈಲಿಗೆ ಆಗಗೊಡಬಾರದು (ಕೂಡಿ). ೫. ದನಗಳಿಗೆ ಬರುವ ಕಾಲರಾ ಜಾತಿಯ ರೋಗ ; ದೊಡ್ಡರೋಗ : (ಎಸಮ್ಮ. XV, ೩೭). [ದೊಡ್ಡ + ಅಮ್ಮ$_2$]

ದೊಡ್ಡಯ್ಯ (ನಾ). = ದೊಡ್ಡಪ್ಪ : (ಕೃ). [ದೊಡ್ಡ + ಅಯ್ಯ$_1$]

ದೊಡ್ಡರತ್ನಗಂಧಿ (ನಾ). ಕೆಂಪು ಮತ್ತು ಹಳದಿ ಹೂವುಗಳನ್ನು ಬಿಡುವ ಒಂದು ಬಗೆಯ ಮರ ಮತ್ತು ಅದರ ಹೂವು : ಗುಲ್ಮೊಹೋರ್ ಮರ: ಸೀಮಸಂಕೇಶ್ವರ, ದೊಡ್ಡರತ್ನಗಂಧಿ, ಕೆಂಪುತುರಾಯಿ, ಗುಲ್ಮಹರ್ ಮರ, ಕತ್ತೀಕಾಯಿ (ಮೃಜಿಗಿ. ೨೯-೩೬೪). [ದೊಡ್ಡ + ರತ್ನಗಂಧಿ]

ದೊಡ್ಡರಾಗಿ (ನಾ). ಒಂದು ಬಗೆಯ ರಾಗಿ; ಆರು ತಿಂಗಳಲ್ಲಿ ಕೊಯ್ಲಿಗೆ ಬರುವ ರಾಗಿ : ಹೊಲಗಳಲ್ಲಿ ಗಿಡ್ಡರಾಗಿಯು ಬಂದು, ದೊಡ್ಡರಾಗಿಯ ನಾಟಿಯನ್ನು ಹಾಕಿದರು (ಹುಬ್ಬಹ. ೬೨). [ದೊಡ್ಡ + ರಾಗಿ$_1$]

ದೊಡ್ಡರಾಜಾನ್ನ (ನಾ). ಗಾತ್ರದಲ್ಲಿ ಹಿರಿದಾದ ಒಂದು ಬಗೆಯ ಭತ್ತ,–ನೆಲ್ಲು : "ಗಂಧಾಡ್ಯ–ಶಾಲಿ, ದೊಡ್ಡರಾಜಾನ್ನ" (ಓಷಧಿ. ೪೭).

[ದೊಡ್ಡ + ರಾಜಾನ್ನ]

ದೊಡ್ಡರಿಸಿನ (ನಾ). ಅರಿಸಿನದಲ್ಲಿ ಒಂದಂ ಬಗೆ: "ಪೀತದ್ರುಃ, ಕಾರೀಯಿಕಃ ... ಪರ್ಜನೀ–೭ ಮರದರಿಸಿನ, ಕಸ್ತೂರಿಅರಿಸಿನವೆಂದು ಕೆಲವರನ್ನುವರು ದೊಡ್ಡರಿಸಿನ, ಕಾಡುಅರಿಸಿನ" (ಸಿಂಧ್ಯಂತಿ. ೧೪೫). [ದೊಡ್ಡ + ಅರಿಸಿನ]

ದೊಡ್ಡರೋಗ (ನಾ). ೧. ಭಯಂಕರವಾದ ರೋಗ ; ಸಾವು ತರುವ ರೋಗ; ಕ್ಷಯ ಮೊದಲಾದ ಭಯಾನಕವಾದ ರೋಗ : ನಿಂಗೆ ದೊಡ್ಡರೋಗ ಬರ (ಹುಬ್ಬಹ. ೧೪೯). ೨. ದನಗಳಿಗೆ ಬರುವ ಕಾಲರಾ ಜಾತಿಯ ರೋಗ ; ದೊಡ್ಡಮ್ಮ : (ಎಸಮ್ಮ. XV, ೩೭).

[ದೊಡ್ಡ + ರೋಗ]

ದೊಡ್ಡವನಮುಗುಳಿ (ನಾ). ಒಂದು ಬಗೆಯ ದೊಡ್ಡದಾದ ಕಾಡುಮರ: (ಮೃಜಿಗಿ. ೭೦-೧೪೬). [ದೊಡ್ಡ + ವನಮುಗುಳಿ$_0$]

ದೊಡ್ಡವರಹ (ನಾ). ಒಂದು ಬಗೆಯ ನಾಣ್ಯ : ಶಾಸನಗಳಲ್ಲಿ ಬರುವ ನಾಣ್ಯಗಳೂ, ಅಳತೆಗಳೂ:– ಗದ್ಯಾಣ. . . . ವರಹ, ದೊಡ್ಡವರಹ, ಮಂಗಳೂರು ಗದ್ಯಾಣ (ತುಳುನಾ. ೩೭೦). [ದೊಡ್ಡ + ವರಹ]

ದೊಡ್ಡವೊಸಿ (ನಾ). ಪುಷ್ಯ ಮಳೆ: (ಎಸಮ್ಮ. XV, ೩೦). 'ಚಿಕ್ಕವೊಸಿ' ಪರಾ. [ದೊಡ್ಡ + ಪೂಸಿ$_3$ (<ಪುಸ್ಯ$_1$)]

ದೊಡ್ಡವ್ವ (ನಾ). = ದೊಡ್ಡತಾಯಿ : (ಕೃ). 'ಚಿಕ್ಕವ್ವ' ಪರಾ.

[ದೊಡ್ಡ + ಅವ್ವ$_1$ (<ಅವ್ವೆ)]

ದೊಡ್ಡಶಣಬು 'ದೊಡ್ಡಸಣಬು' ನೋ.

ದೊಡ್ಡಶರ (ನಾ). ಒಂದು ಬಗೆಯ ಹುಲ್ಲು : "ಮಹಾಶರಂ–ದೊಡ್ಡಶರ" (ಓಷಧಿ. ೧೦೭). [ದೊಡ್ಡ + ಶರ]

ದೊಡ್ಡಸಂಪಿಗೆ (ನಾ). ಒಂದು ಬಗೆಯ ಸಂಪಿಗೆ ಮರ ಮತ್ತು ಅದರ ಹೂವು : (ಮೃಜಿಗಿ. ೩೩-೧೦೭೫). [ದೊಡ್ಡ + ಸಂಪಿಗೆ (<ಸಂಪಗೆ)]

ದೊಡ್ಡಸಣಬು, ದೊಡ್ಡಶಣಬು (ನಾ). ಒಂದು ಬಗೆಯ ಗಿಡ : "ಮಹಾಶ್ವೇತಪರ್ಣೀ–ದೊಡ್ಡ ಸಣಬು" (ಓಷಧಿ. ೦೫೨). **ದೊಡ್ಡಶಣಬು**: "ಮಹಾಶಣಪುಷ್ಪಿಕಾ – ದೊಡ್ಡಶಣಬು" (ಓಷಧಿ. ೧೫೩).

[ದೊಡ್ಡ + ಸಣಬು (<ಸಣಂಬು)]

ದೊಡ್ಡಸರ್ಲೆಹಕ್ಕಿ (ನಾ). ಒಂದಂ ಬಗೆಯ ಪಕ್ಷಿ. ೧. ಸಿರಿಗಿರಿ. ೨. ತಾಡಿಗ್ಕ. ೩. ಸಲಿಕಿಬಾಯಿ ಹಕ್ಕಿ : (ಕೃ).

[ದೊಡ್ಡ + ಸರ್ಲೆ (<ಸರಲೆ) + ಹಕ್ಕಿ$_1$ (<ಪಕ್ಕಿ$_1$)]

ದೊಡ್ಡಸಾಮೆ (ನಾ). ಸಾಮೆಧಾನ್ಯದಲ್ಲಿ ಒಂದು ವಿಧ ; ಹೆಜ್ಜಾವೆ ; ದೊಡ್ಡ ಜಾತಿಯಂ ಸಾಮೆ ಅಕ್ಕಿ : (ಎಸಮ್ಮ. I, ೩೧).

[ದೊಡ್ಡ + ಸಾಮೆ$_1$ (<ಸಾವೆ$_1$)]

ದೊಡ್ಡಸಾಸುವೆ (ನಾ). ಸಾಸವೆಯಲ್ಲಿ ಒಂದಂ ವಿಧ : (ಕೃ).

[ದೊಡ್ಡ + ಸಾಸುವೆ (<ಸಾಸವೆ)]

ದೊಡ್ಡಸಿವನ್ನಿ (ನಾ). ಒಂದು ಬಗೆಯ ದೊಡ್ಡದಾದ ಸಿವನ್ನಿ ಮರ : "ಮಹಾಕುಮುದ–ದೊಡ್ಡ ಸಿವನ್ನಿ" (ಓಷಧಿ. ೧೫೨).

[ದೊಡ್ಡ + ಸಿವನ್ನಿ (<ಸೀವನ್ನಿ)]

ದೊಡ್ಡಸಿಹಿಗೆಣಸು (ನಾ). ಸಿಹಿಗೆಣಸಿನಲ್ಲಿ ಒಂದಂ ಬಗೆ : "ಮಹಾನೀಲಾ ಕರಿಯ ಗಿರಿಕರ್ಣ, ಹಿರಿಯ ನೇಱಿಲ್, ದೊಡ್ಡಸಿಹಿಗೆಣಸು" (ಓಷಧಿ. ೦೧೭).

[ದೊಡ್ಡ + ಸಿಹಿಗೆಣಸು (<ಸೀಗಣಸು)]

ದೊಡ್ಡಸುದ್ದಿ (ನಾ). ವಿಶೇಷವಾದ ಸುದ್ದಿ ; ಮಹತ್ವದ ಸಮಾಚಾರ : ಶಾನುಭೋಗರ ಮಗಳಿಗೆ ಮದುವೆ ನಿಶ್ಚಯವಾದದ್ದು ಊರಿಗೆಲ್ಲ ದೊಡ್ಡ ಸುದ್ದಿಯಾಯಿತು (ರೂಢಿ). [ದೊಡ್ಡ + ಸುದ್ದಿ]

ದೊಡ್ಡಸುರುಟಿ (ನಾ). ಒಂದು ಬಗೆಯ ಸಸ್ಯ : ದೊಡ್ಡಸೊಳ್ತಿ, ದೊಡ್ಡ ಸುರುಟಿ (ಮೈಜಿಗಿ. ೦೦-೧೭೧). [ದೊಡ್ಡ + ಸುರುಟಿ$_0$]

ದೊಡ್ಡಸೇವಗೆ (ನಾ). ಒಂದು ಬಗೆಯ ಸೇವಿಗೆ ; ದಪ್ಪನಾದ ಸೇವಿಗೆ : ಪರಡಿ ಗೌವಲೆಯಪ್ಪೆ ಮಣಿ ಸಣ್ಣ ಗೋಧೂಮ ಸರವಳಿಗೆ ದೊಡ್ಡಸೇವಗೆ ಕಡುಬುವುಂಡಲಿಗೆ ಬೆರಲ ಸೇವಗೆಯಾದಿಯಾಗಿಯಡವಾದ ಕಜ್ಜಾಯಗಳ ತೆಗೆದುಕೊಂಡು (ಸೂಪಶಾ. ೩-೭). [ದೊಡ್ಡ + ಸೇವಗೆ (<ಸೇವಿಗೆ)]

ದೊಡ್ಡಸೊಳ್ತಿ (ನಾ). ಒಂದು ಬಗೆಯ ಸಸ್ಯ : ದೊಡ್ಡಸೊಳ್ತಿ, ದೊಡ್ಡ ಸುರುಟಿ (ಮೈಜಿಗಿ. ೦೦-೧೭೧). [ದೊಡ್ಡ + ಸೊಳ್ತಿ$_0$]

ದೊಡ್ಡಸೋಂಪು (ನಾ). ಒಂದು ಬಗೆಯ ದೊಡ್ಡದಾದ ಸಾಂಬಾರದ ಕಾಳು : ದೊಡ್ಡ ಸೋಂಪು, ದೊಡ್ಡಜೀರಿಗೆ (ಮೈಜಿಗಿ. ೩೮-೭೪೬).
[ದೊಡ್ಡ + ಸೋಂಪು]

ದೊಡ್ಡಸೋರೆ (ನಾ). ಒಂದು ಬಗೆಯ ಸೋರೆ ಬಳ್ಳಿ ಮತ್ತು ಅದರ ಕಾಯಿ : ಕಾಯಿಗಳು :-ಅಗಸೆ . . . ದೊಡ್ಡಕುಂಬಳ, ದೊಡ್ಡಸೋರೆ (ನಮ್ಮನು. ೨೩೭). [ದೊಡ್ಡ + ಸೋರೆ$_1$]

ದೊಡ್ಡಸೌತೆ (ನಾ). ಒಂದು ಬಗೆಯ ತರಕಾರಿ ಬಳ್ಳಿ ; ಸೌತೆಗಿಡೆದಲ್ಲಿ ಒಂದು ಬಗೆ ಮತ್ತು ಅದರ ಕಾಯಿ : "ನಾಗಮಾತಾ – ಮಣಿಸಿಲೆ, ತುಳಸಿ, ದೊಡ್ಡಸೌತೆ" (ಓಷಧಿ. ೮೬). [ದೊಡ್ಡ + ಸೌತೆ (<ಸವುಂತೆ)]

ದೊಡ್ಡಸ್ತ (ನಾ). ದೊಡ್ಡತನವುಳ್ಳವನು ; ಹಿರಿಮೆಯುಳ್ಳವನು. 'ದೊಡ್ಡಸ್ತನ', 'ದೊಡ್ಡಸ್ತಿಕೆ' ಪರಾ. [ದೊಡ್ಡ + – ಸ್ತ]

ದೊಡ್ಡಸ್ತನ, ದೊಡ್ಡಿಸ್ತನ (ನಾ). ದೊಡ್ಡತನ ; ಗೌರವ ; ಮರ್ಯಾದೆ; ಹಿರಿಮೆ : "ದೊಡ್ಡಸ್ತನ-ದೊಡ್ಡಸ್ತಿಕೆ" (ಜಾನಕೋ. ೭). **ದೊಡ್ಡಿಸ್ತನ** : ತಮ್ಮ ಅಣ್ಣನ ದೊಡ್ಡಿಸ್ತನವನ್ನು ಕೊಚ್ಚಿಕೊಳ್ಳುತ್ತಾ ಇದ್ದಳು (ಪ್ರತಿಬಿಂ. ೪೭); ನಿಮ್ಮ ಮರ್ಯಾದೆಯ ದೊಡ್ಡಿಸ್ತನವಾದರೂ ಏನು ? (ರಂಗರೋ. ೭೯).
[ದೊಡ್ಡಸ್ತ + – ತನ]

ದೊಡ್ಡಸ್ತಿಕೆ (ನಾ). ೧. ಹಿರಿಮೆ ; ಹೆಚ್ಚುಗಾರಿಕೆ ; ಘನತೆ ; ಗೌರವ ; ಮರ್ಯಾದೆ : ಮನುಷ್ಯನ ಹಿರಿಮೆ ದೊಡ್ಡಸ್ತಿಕೆಗಳು ತಾಯಿ ತಂದೆಗಳನ್ನೇ ಹೆಚ್ಚಾಗಿ ಅವಲಂಬಿಸಿರುತ್ತವೆ (ಶ್ಯಾಮತಾ. ೧); ಮಾಡಬಾರದು ಎಂದು ಯಾವಾಗ ದೊಡ್ಡವರು ಹೇಳುತ್ತಾರೋ ಹಾಗೆ ಮಾಡದಿರುವುದೂ ಒಂದು ದೊಡ್ಡಸ್ತಿಕೆ! (ಕಂಬಹು. ೭೨) ; ಇದರಿಂದ ನನ್ನ ಅವನ ದೊಡ್ಡಸ್ತಿಕೆ ಮತ್ತೂ ಬೆಳೆಯಿತು (ಶಾಲೆಮ. ೨೨೧) : ಒಂದು ಬಾನಿ ಹೆಂಡಕ್ಕೆ ಎರಡು ಬಾನಿ ನೀರು ಬೆರಸಿ ಸಂಪಾದನೆ ಮಾಡಿದಾರೆ ಈ ದೊಡ್ಡಸ್ತಿಕೇನ (ಮರಳಿ. ೬೩). ೨. ಠೀವಿ ; ಜರ್ಬು : "ಠೀವಿ = ದೊಡ್ಡಸ್ತಿಕೆ" (ಗಂಗಾಮ. ೧೪೪) ; ದೊಡ್ಡಸ್ತಿಕೆಯ ಆಶೀರ್ವಾದಗಳಿಂದ ಸಂದೇಶವನ್ನು ಮಾತ್ರ ಕಳಿಸಬೇಕು (ಹುಚ್ಚುಹು. ೧೦೨). [ದೊಡ್ಡಸ್ತ + – ಇಕೆ]

ದೊಡ್ಡಸ್ತು (ನಾ). ಹಿರಿಮೆ ; ಘನತೆ : ದೊಡ್ಡಸ್ತಿನಿಂದೊಡನೆ ಸುಪ್ರಧಾನಿ ವರೇಣ್ಯ ಗಡ್ಡಮಂ ಗಂಟಿಕ್ಕಿ (ಪರಶು. ೯-೨೦). [ದೊಡ್ಡಸ್ತ + – ಉ$_4$]

ದೊಡ್ಡಹಂಚೀಹುಲ್ಲು, ದೊಡ್ಡಅಂಚಿಹುಲ್ಲು (ನಾ). ಒಂದು ಬಗೆಯ ಹುಲ್ಲು : ದೊಡ್ಡಹಂಚೀಹುಲ್ಲು . . . ಕರೀಸಣ್ಣ ಹಂಚೀ ಹುಲ್ಲು (ಮೈಜಿಗಿ. ೯-೧೪೭). **ದೊಡ್ಡಅಂಚಿಹುಲ್ಲು** : ಬೆಟ್ಟಂಚಿ ಹುಲ್ಲು, ಭೀಮನ ಹಂಚಿ, ದೊಡ್ಡಅಂಚಿಹುಲ್ಲು, ಗುಂಡುಮುಂಚಿ ಹುಲ್ಲು, ಗಂಟುಕಾಚಿ (ಮೈಜಿಗಿ. ೭೪-೦೩೦೯). [ದೊಡ್ಡ + ಹಂಚಿಹುಲ್ಲು]

ದೊಡ್ಡಹತ್ತಿ (ನಾ). ಹತ್ತಿಯ ಗಿಡದಲ್ಲಿ ಒಂದು ಬಗೆ : (ಮೈಜಿಗಿ. ೪೦-೭೯೨). [ದೊಡ್ಡ + ಹತ್ತಿ$_1$ (<ಪಟ್ಟಿ)]

ದೊಡ್ಡಹನಿಚೆ (ನಾ). ಒಂದು ಬಗೆಯ ಗಿಡ : (ಮೈಜಿಗಿ. ೧೫-೨೭೫).
[ದೊಡ್ಡ + ಹನಿಚೆ]

ದೊಡ್ಡಹರಳು (ನಾ). ದೊಡ್ಡ ಗಾತ್ರದ ಹರಳು ಮತ್ತು ಅದರ ಗಿಡ: ದೊಡ್ಡಹರಳು, ಬೆಟ್ಟಹರಳು, ತುರುಕುಹರಳು, ಮರಹರಳು, ಕಾಡುಹರಳು (ಮೈಜಿಗಿ. ೪೭-೯೪೩). 'ಚೆಟ್ಟುಹರಳು' ಪರಾ.
[ದೊಡ್ಡ + ಹರಳು (<ಪರಲ್)]

ದೊಡ್ಡಹಲ್ಲಿ (ನಾ). ಒಂದು ಬಗೆಯ ಹೂವಿನ ಗಿಡ : "ಕಂಛವಿಪುಷ್ಪ-ದೊಡ್ಡಹಲ್ಲಿ" (ಓಷಧಿ. ೩೬). [ದೊಡ್ಡ + ಹಲ್ಲಿ$_0$]

ದೊಡ್ಡಹಾಲುಗುಂಬಳ (ನಾ). ಒಂದು ಬಗೆಯ ಕುಂಬಳ ಬಳ್ಳಿ ಮತ್ತು ಅದರ ಕಾಯಿ : "ನಾಡ್ಯಲಾಬೂಃ – ದೊಡ್ಡಹಾಲುಗುಂಬಳ" (ಓಷಧಿ. ೮೫). [ದೊಡ್ಡ + ಹಾಲುಗುಂಬಳ (<ಪಾಲ್ಗುಂಬಳ)]

ದೊಡ್ಡಹಾಲ್ಮೆಕ್ಕೆ (ನಾ). ದೊಡ್ಡದಾದ ಹಾಲುಮೆಕ್ಕೆ ಗಿಡದಲ್ಲಿ ಒಂದು ಬಗೆ : ದೊಡ್ಡಹಾಲ್ಮೆಕ್ಕೆ, ಹಾವುಮಕ್ಕಿಕಾಯಿ, ಇಂದ್ರಾವರುಣಿ (ಮೈಜಿಗಿ. ೨೨-೪೦೦). [ದೊಡ್ಡ + ಹಾಲ್ಮೆಕ್ಕೆ]

ದೊಡ್ಡಹಾಳಿತ, ದೊಡಹಳತ (ನಾ). ಒಂದು ದೊಡ್ಡ ಅಳತೆಯ ಪ್ರಮಾಣ : ದೊಡ್ಡಹಾಳಿತದ ಮಣವಿನ ತೂಕಕ್ಕೆ ಇದೇ ೪೪-೪೬ ಸೇರು ಎಂತಲೂ ನಿಬಂಧನೆ ಮಾಡಿದರು (ಜಾಮವಂ. ೧೧೯). **ದೊಡಹಳತ** : ಹೊನ್ನವರದ ಲಿಂಗಸೆಟರ ಮಗ ಸಿದಲಿಂಗಸೆಟಿ ಯಡವುರ ಸಿದಲಿಂಗೇಸ್ವರ ಸೋಮಿ ಪದಕೆ ಮಲರ ಸೆ ೩ ನ ಕಳಸ ಯಾ ನಗದ ತೂಕ ದೊಡಹಳತ ನ ೨ ತಿಮೂರು ಸೇರು (ಎಕ. XVI, ಕುಡಗ. ೭೮-೨ ; ?).
[ದೊಡ್ಡ + ಹಾಳಿತ (<ಪಾಳತ)]

ದೊಡ್ಡಹಿಂಗಿನಬಳ್ಳಿ (ನಾ). ಒಂದು ಬಗೆಯ ಬಳ್ಳಿ : (ಮೈಜಿಗಿ. ೩೮-೭೪೭).
[ದೊಡ್ಡ + ಹಿಂಗು$_3$ + ಬಳ್ಳಿ]

ದೊಡ್ಡಹಿಂಡಿಗಿಡ (ನಾ). ಒಂದು ಬಗೆಯ ಸಸ್ಯ : (ಮೈಜಿಗಿ. ೩-೫೦).
[ದೊಡ್ಡ + ಹಿಂಡಿ$_2$ (<ಪುಂಡಿ$_1$) + ಗಿಡ (<ಗಿಡು)]

ದೊಡ್ಡಹಿಟ್ಟಳಿಕ (ನಾ). ಒಂದು ಬಗೆಯ ಸಸ್ಯ : "ಮಹಾಪೂಲ-ದೊಡ್ಡಹಿಟ್ಟಳಿಕ" (ಓಷಧಿ. ೧೧೮). [ದೊಡ್ಡ + ಹಿಟ್ಟಳಿಕ]

ದೊಡ್ಡಹಿಪ್ಪಲಿ, ದೊಡ್ಡತಿಪ್ಪಲಿ (ನಾ). ಒಂದು ಬಗೆಯ ಹಿಪ್ಪಲಿ ಗಿಡ ಮತ್ತು ಅದರ ಕಾಳು ; ಬಾಲಮೆಣಸು : "ಕಪಿವಲ್ಲಿ-ದೊಡ್ಡಹಿಪ್ಪಲಿ" (ಗಂಗಾಮ. ೭೦) ; ಗಜಹಿಪ್ಪಲಿ, ದೊಡ್ಡಹಿಪ್ಪಲಿ (ಮೈಜಿಗಿ. ೬೮-೧೩೯೮) ; ಜೀನಸುಗಳು-೧ ಅಕ್ಕಲಖಾರ . . . ೬೭ ದೊಡ್ಡಹಿಪ್ಪಲಿ (ಮುಂಬವ್ಯಾ. ೦೨೫). **ದೊಡ್ಡತಿಪ್ಪಲಿ** : (ಮೈಜಿಗಿ. ೬೬-೦೩೪೨). [ದೊಡ್ಡ + ಹಿಪ್ಪಲಿ]

ದೊಡ್ಡಹೀರೆ (ನಾ). ಹೀರೆಬಳ್ಳಿಯಲ್ಲಿ ಒಂದು ವಿಧ ಮತ್ತು ಅದರ ಕಾಯಿ : "ಕೋಂತಿ-ದೊಡ್ಡಹೀರೆ" (ಓಷಧಿ. ೪೧)
[ದೊಡ್ಡ + ಹೀರೆ$_1$ (<ಪೀರೆ)]

ದೊಡ್ಡಹುಳಕ (ನಾ). ನೀಳವಾದ ಕೊಕ್ಕಿನ, ವಕ್ರವಾಗಿ ಹಾರುವ ಒಂದು ಬಗೆಯ ಬೇಟೆಯ ಹಕ್ಕಿ ; ತೇವದ ಮರಳುಪ್ರದೇಶಗಳಲ್ಲಿ ಸೇರಿಕೊಳ್ಳುವ ಒಂದು ಬಗೆಯ ಹಕ್ಕಿ ; ಉಲ್ಲಂಗಿ : (+).
[ದೊಡ್ಡ + ಹುಳಕ]

ದೊಡ್ಡಹುಳಿ (ನಾ). ಒಂದು ಬಗೆಯ ನಿಂಬೆಯ ಗಿಡ ಮತ್ತು ಅದರ ಕಾಯಿ : ಕಾಡುನಿಂಬೆ, ದೊಡ್ಡಹುಳಿ (ಮೈಜಿಗಿ. ೧೦-೧೭೩).
[ದೊಡ್ಡ + ಹುಳಿ$_3$ (<ಪುಳಿ$_2$)]

ದೊಡ್ಡಹೆಂಡತಿ (ನಾ). ಮೊದಲನೆಯ ಹೆಂಡತಿ ; ಹಿರಿಯ ಹೆಂಡತಿ : "ಕೃತಸಾಪತ್ನಿಕಾ, ಅಧ್ಯೂಢಾ, ಅಧಿವಿನ್ನಾ-೩ ದೊಡ್ಡಹೆಂಡತಿ, ಹಿರೇ ಹೆಂಡತಿ ಹೆಸರುಗಳು" (ಸಿದ್ಧಾಂತಿ. ೧೪೭).
[ದೊಡ್ಡ + ಹೆಂಡತಿ (<ಪೆಂಡತಿ)]

ದೊಡ್ಡಹೆಮ್ಮರ (ನಾ). ಹೆಮ್ಮರದಲ್ಲಿ ಒಂದು ಬಗೆ "ಭೂತಸಾರಃ–ದೊಡ್ಡಹೆಮ್ಮರ" (ಓಷಧಿ. ೧೦೨).
[ದೊಡ್ಡ + ಹೆಮ್ಮರ (<ಪೇರ್ಮರ)]

ದೊಡ್ಡಹೊಂಗೆ (ನಾ). ಒಂದು ಬಗೆಯ ಹೊಂಗೆ: "ಕಳಾರಾಮಃ–ದೊಡ್ಡಹೊಂಗೆ" (ಓಷಧಿ. ೨೪). [ದೊಡ್ಡ + ಹೊಂಗೆ]

ದೊಡ್ಡಹೊಟ್ಟೆ (ನಾ). ದೊಡ್ಡದಾದ ಉಬ್ಬಿದ ಹೊಟ್ಟೆ, – ಉದರ; ಡೊಳ್ಳುಹೊಟ್ಟೆ: ಮನದೊಳಿದ್ದುದನೆಹಗೆ ಹೇಳಿದೆಯೆನುತ ಪಡೆದಾ ದೊಡ್ಡಹೊಟ್ಟೆಯನೆನುತ ಬಡನುಡಿಯಂ ನುಡಿವರೇ (ಬಸಪು. ೫೯–೧೪): ದೊಡ್ಡಹೊಟ್ಟೆಯಿದ್ದವ ಹೆಡ್ಡನೋ (ಗಾಡ).

ದೊಡ್ಡಹೊಟ್ಟೆಯವ = ದೊಡ್ಡಹೊಟ್ಟೆಯನ್ನು ಉಳ್ಳವನಂ; ಗಣೇಶ: "ಪೆರ್ಬೊಡೆಯ, ಪೆರ್ವೊಡೆಯ–ದೊಡ್ಡಹೊಟ್ಟೆಯವ, ಗಣೇಶ" (ಗಂಗಾಮ. ೨೦೫). [ದೊಡ್ಡ + ಹೊಟ್ಟೆ$_1$ (<ಪೊಟ್ಟೆ)]

ದೊಡ್ಡಹೊನ್ನೆ (ನಾ). ಒಂದು ಬಗೆಯ ದೊಡ್ಡದಾದ ಹೊನ್ನೆಮರ: "ಅವಸಾಯನಿ–ದೊಡ್ಡಹೊನ್ನೆ" (ಓಷಧಿ. ೮).
[ದೊಡ್ಡ + ಹೊನ್ನೆ (<ಪೊನ್ನೆ)]

ದೊಡ್ಡಹೊಲೆಗಾರ (ನಾ). ಒಂದು ಬಗೆಯ ಸಸ್ಯ: ದೊಡ್ಡಹೊಲೆಗಾರ, ಬೆಟ್ಟಹೊಲೆಗಾರ (ಮೃಜಿಗಿ. ೪೪–೮೬೮). [ದೊಡ್ಡ + ಹೊಲೆಗಾರ$_0$]

ದೊಡ್ಡಾಟ (ನಾ). ಬಯಲಾಟದ ಒಂದು ಪ್ರಕಾರ; ಮೇಳ: ಮೊನ್ನೆ ಒಂದು ದೊಡ್ಡಾಟವೂ ಆಯ್ತು, ಸತ್ಯಹರಿಶ್ಚಂದ್ರ ಅಂತ (ತುಂಗಭ. ೧೪).
[ದೊಡ್ಡ + ಆಟ]

ದೊಡ್ಡಾಣೆ (ನಾ). ಎಂಟನೆಯ ಒಂದು ($\frac{೧}{೮}$) ರೂಪಾಯಿಯ ಬೆಲೆಯಿದ್ದ ಒಂದು ಹಳೆಯ ಬೆಳ್ಳಿಯ ನಾಣ್ಯ: ಒಂದೆರಡು ದಿವಸಗಳ ಮೇಲೆ ಊದಿದ ಸ್ಥಳಗಳಲ್ಲೆಲ್ಲಾ ದೊಡ್ಡಾಣೆಯಷ್ಟು ಅಗಲ ನೀಲಿಬಣ್ಣದ ಗುಳ್ಳೆಗಳೇಳುತ್ತವೆ (ಗ್ರಾಮಾಕ. ೧೩೦). [ದೊಡ್ಡ + ಆಣ್ಯೆ]

ದೊಡ್ಡಾನೆ (ನಾ). ಗುಂಪಿನಲ್ಲಿಯೇ ಹಿರಿದಾದ ಆನೆ; ಗುಂಪಿನ ಒಡೆಯನಾದ ಆನೆ; ಸಲಗ: "ಯೂಥನಾಥಃ, ಯೂಥಪಃ–೨ ಆನೆಗಳ ಹಿಂಡಿನಲ್ಲಿ ಮುಖ್ಯವಾದ ಗಜದ ಪೆಸರುಗಳು; ಸಲಗ, ದೊಡ್ಡಾನೆ" (ಸಿದ್ಧಾಂತಿ. ೨೧೦). [ದೊಡ್ಡ + ಆನೆ$_1$]

ದೊಡ್ಡಿ$_1$ 'ತೊಟ್ಟಿ$_1$' ನೋ.

ದೊಡ್ಡಿ$_2$ (ನಾ). ಸೂಳೆ; ವೇಶ್ಯೆ. 'ದೊಡ್ಡಿತನ' ಪರಾ. [<ತೊಟ್ಟಿ$_3$]

ದೊಡ್ಡಿ$_3$ (ನಾ). ಒಂದು ಬಗೆಯ ಮೂಲಿಕೆ: ಋಷಭಕ, ದೊಡ್ಡಿ, ಹಾಲದೊಡ್ಡಿ . . . ಪ್ರಾತಃಕಾಲದಲ್ಲಿ ಗಳ ತೂಕವಂ ಸೇವಿಸುವುದು (ಸಕವೈ. ೨೧೮). 'ತೊಟ್ಟಿ$_4$' ಪರಾ. [?]

ದೊಡ್ಡಿಗೂಡು (ಕ್ರಿ). ದೊಡ್ಡಿಯಲ್ಲಿ ಕೂಡಿಹಾಕು: ಆ ಮಂದೆಯನ್ನು ಅರಮನೆಯ ಅಯ್ದನೆಯ–ಎಂದರೆ, ತಳಾತಳದ ಹೆಸರ–ನೆಲವಾಳಿಗೆಯಲ್ಲಿ ದೊಡ್ಡಿಗೂಡಿರು (ಬೆಟ್ಟಅ. ೧೪೩–೭).
[ದೊಡ್ಡಿ$_1$ (<ತೊಟ್ಟಿ$_1$) + ಕೂಡು$_1$]

ದೊಡ್ಡಿಗೊಳ್ (ಕ್ರಿ). ಗುಂಪುಗೂಡು; ಗುಂಪಾಗು: ತೆನೆಯ ಸಂದಿಗಳೊಳ್ ಸಂದಣಿಸಿ ನೇಲ್ವ ವೀರಭಟ ಕುಣಪಂಗಳಿಂ ಪೆಣೆದ ಪೆರ್ಮಟ್ಟೆಯಂ ಕಱವ ವಿಳಯಜಳಧರದೊಡ್ಡಿನಂತೆ ದೊಡ್ಡಿಗೊಂಡಿರ್ದುದು (ಅನಂಪು. ೧೦–೮೪ ವ). [ದೊಡ್ಡಿ$_1$ (<ತೊಟ್ಟಿ$_1$) + ಕೊಳ್$_1$]

ದೊಡ್ಡಿತನ (ನಾ). ೧. ಸೂಳೆತನ; ಸೂಳೆಗಾರಿಕೆ: ನಾನು ವೇಶ್ಯೆ! ನಾನು ಸೂಳೆ! ಎಂದು ಕಂಡಕಂಡವರೊಡನೆ ಸಾರಿಕೊಳ್ಳುವುದಿದೊಂದು ದೊಡ್ಡತನವೇನು . . . ಅಲ್ಲ ದೊಡ್ಡಿತನ (ಮಂತ್ರಶ. ೨೬–೨೨). ೨. ಮೋಸ; ವಂಚನೆ: ಸಲೆ ನಂಬಿದರೊಳೆರಡೆಂಟನೆಣಿಸುವರು ಕೈವಿಡಿದು ದೊಡ್ಡಿತನ ಮಾಡಿದನ ಲೆಕ್ಕಿಸದಿಹರು (ನಿಬಶ. ೮೪). [ದೊಡ್ಡಿ$_2$ + – ತನ]

ದೊಡ್ಡಿತು, ದೊಡ್ಡಿತ್ತು (ನಾ). ೧. ಗಾತ್ರದಲ್ಲಿ ಹಿರಿದಾದುದು; ದಪ್ಪವಾದುದು; ಸ್ಥೂಲವಾದುದು: "ದೊಡ್ಡಿತನಲ್ಕೆ ಮಹಾರ್ಥಶಬ್ದದೊಳ್" (ಕರ್ಣಾನಿ. ೧೮): ಅಸಿದು ಬೆಳೆಯದೆ ಕೊಬ್ಬಿ ದೊಡ್ಡಿತಹ [ಪಾಠಾಂ. ಗೊಡ್ಡಿಡದ] ತೆನೆಗಳೊಳು (ಸಿದ್ಧರಾ. ೨–೨೯); ಕಲ್ಲನತಿ ದೊಡ್ಡಿತಂ ಪಿಡಿದು ತೊಱೆಯಿಳಿಯೆ ಚಿತ್ತೋಲ್ಲಾಸದಿಂದೆತ್ತಿ ಹಾಯ್ಕಲ್ (ಪಾಸೋಪು. ೪–೧೦೭). ೨. ಅಗಾಧವಾದುದು; ಗಹನವಾದುದು; ಮುಖ್ಯವಾದುದು: ದೇವ ಚಿತ್ತೈಸೈ ಸಲೆ ನಿಜಸೇವಕರು ನಾವಿರಲು ದೊಡ್ಡಿತದಾವುದು (ತೂರರಾ. ೪–೯–೧೦); ಅದೇನು ದೊಡ್ಡಿತು ಮಾಂಧಾತ ಸುತ್ಯಾಗವ ಬೇಡ ಬಂದವಗೆ ರಾಗದಿಂದೊಡಲ ಧಿಕ್ಕನೆ ಸೀಳ್ದು ದಕ್ಷಿಣಭಾಗವ ಕೊಟ್ಟುದನಱಿಯಾ (ಮೋಹತ. ೫–೫೪). ೩. ಎತ್ತರವಾದುದು; ದೊಡ್ಡಿತಾದ ಎಲವದ ಮರದ ಮೇಲೆ ಅನೇಕ ಗಿಣಿಗಳಿರುವುವು (ಪಚಕಾ. ೩). ೪. ಉದ್ದವಾದುದು; ನೀಳವಾದುದು: ಮಹಾಬಾಹೋ ಎಲೈ ದೊಡ್ಡಿತಾದ ತೋಳುಗಳುಳ್ಳಂಥಾ ಹೀಗೆ ಸಂಬೋಧನೆ ಮಾಡಿದ್ದರಿಂದ (ಉತ್ತಪೀ. ೨–೩). ೫. ಗಟ್ಟಿಯಾದುದು; ಜೋರಾದುದು: ಐದು ತಿಂಗಳ ಕೂಸಂ ಸಂಸಿನಿಯೆಂಬ ದೇವತೆ ಪಿಡಿದೊಡಾ ಕೂಸು . . . ಆಕಾಶಮಂ ನೋಡುಗುಂ ದೊಡ್ಡಿತಪ್ಪ ಧ್ವನಿಯಿಂದಳುಗುಂ (ಬಾಲಜಿ. ೧೨೫–೧೭); ಒಡ್ಡಿದ ಭೈರವ ಬಲರಾಮನ ಪೆಟ್ಟು ದೊಡ್ಡಿತೆನುತ್ತೆ ನಿಷ್ಠುರದಿ ಒಡ್ಡಿಯ ನುಡಿದು (ಮೋಹತ. ೩೯–೧೩); ಕೇಳಿ ಕಿಡಿಕಿಡಿವೋಗಿ ಬಾಯ್ ದೊಡ್ಡಿತೆಂದೆನ್ನನೂಳುವೆಯ (ಚಬಪು. ೪೭–೨೯). ೬. ಹೆಚ್ಚಿನದು; ಮಿಗಿಲಾದುದು; ಮಹತ್ತಾದುದು: ಕೊಡುವರ್ಗುವುದು ದೊಡ್ಡಿತ್ತೆ (ಸೋಮೇಶ. ೮೪); ಪರಮೊಮ್ಮದನುಭವವೊಂದುಳ್ಳರವನಿಗೆ ದೊರಕದ ದೊಡ್ಡಿತೊಂದುಂಟೆ (ಭರಣ. ೫–೮೩); ತುಪ್ಪ ಸಕ್ಕರೆ ಪಾಲ ಸವಿವ ಮನುಜರ ತಂದೊಪ್ಪಿಸುವುದು ದೊಡ್ಡಿತಲ್ಲ (ಕಂನವಿ. ೧೦–೪); ಎನ್ನೀ ಕೀರ್ತಿಯೆ ದೊಡ್ಡಿತೆಂಬ ತೆರದಿಂ . . . ಕೀರ್ತಿಯ ನಾಂತು ಕಂಗೊಳಿಸಿದರ್ (ಮೃಸೂಮ. ೬–೩೩೩). ೭. ಅಮೂಲ್ಯವಾದುದು; ಶ್ರೇಷ್ಠವಾದುದು: ವ್ಯರ್ಥವಾದುದು ಮದ್ವಚನ ಸೃಷ್ಟಿಸುವ ಸಮರ್ಥ ಪೇರ್ಗಾವನೈಶ್ವರ್ಯ ಕರ್ತಳೀತನ ರಾಣಿ ನಿಖಿಳಮೈಭೋಗವು ವ್ಯರ್ಥ ದ್ವಾರಕಿ ದೊಡ್ಡಿತಹುದೆ (ಮೋಹತ. ೨೯–೨೭). ೮. ಹೆಚ್ಚಳ; ಹಿರಿಮೆ; ಘನತೆ: ನಾವಿವಗೆ ಮನವೊಡ್ಡಿಬಿಡದೆ ಸುಖಿಯಿಸುವ ದೊಡ್ಡಿತೆಂದಿಂಗಹುದೊ ಎಂದು ಕೆಲಬರು ಗುಡ್ಡಣಿಕೆಯನೆಣಿಸುವರು (ನೇಮಿಸಂ. ೮–೩೭). ೯. ದೊಡ್ಡವಸ್ತು; ಹಿರಿಯವಸ್ತು: ಪೇತೆ ನೀನೇನು ದೊಡ್ಡಿತು ನನ್ನ ಸರಲ ಮುಯ್ಯಾತುಕೊಂಬೊಡೆ ರುದ್ರಗರಿದು ಮಾತುಗಾಱಿಕೆ ಬೇಡ ಹಿಡಿಯೆಂದು ಭಾಳದೆ ತೂತೇಳಲೆಚ್ಚು ಬೊಬ್ಬಿಱಿದ (ಮೋಹತ. ೧೩–೫೯). **ದೊಡ್ಡಿತ್ತು**: ೧. ಆ ಗ್ರಾಮಕ್ಕ ಮೊಂದು ಎಳಗನಂ ಕಳಿಪಿ ಯಥೇಷ್ಟ ಗ್ರಾಸವನಿಕ್ಕುವುದು ಬಡವಾದಡೆಯು ದೊಡ್ಡಿತ್ತಾ [ಪಾಠಾಂ. ಡ್ಡನಾ] ದಡೆಯು ತಪ್ಪು ಸಮಾನಮಾಗಿರಿಸದಿರ್ದೊಡೆ ನಿಮ್ಮ ಗ್ರಾಮಮಂ ಕೆಡಿಸುವೆಂ (ಪುಜ್ಯಾಸ್ತ್ರ. ೩–೨೭ ವ); ಅದಱಲ್ಲಿ ದೊಡ್ಡಿತ್ತಾದ ತಗರು ಹುಟ್ಟಿ ಮಲವುತ್ತ ಬರಲು (ಭೈರಸೂ. ೧೦೨); ಮೆಯ್ಯು ನುಣುಪಾಗಿ ಬಟುವಾಗಿ ದೊಡ್ಡಿತ್ತಾಗಿ ತನ್ನ ಮೆಯ್ಯಿಗೆ ತಕ್ಕ ಚೆಂದವಾದ ರೂಪು ಕಾಣಿಸುವುದು (ಅಶ್ವಪೀ. ೨೨–೧೦). ೨. ಸುವ್ರತದ ಫಲದಿನುರಗ ನರ ನಾಕಮೆಂಬ ನೆಲಕೊಡೆಯರಾಗುವರ್ ಕೈವಲ್ಯಕಾಂತೆಯೊಳಗಲಸದೇ ಕೂಡುವರಿದೇನು ದೊಡ್ಡಿತ್ತೆನಲ್ (ಸಮ್ಯಕೌ. ೮–೭). ೬. ಎಲ್ಲರಿಗೂ ಪ್ರಾಣದಾಸೆ ದೊಡ್ಡಿತ್ತಾಗಿರುವುದರಿಂದಲೂ . . . ಬದುಕಿರುವುದು ಕಾರ್ಯವೆಂದು ನಿಶ್ಚೈಸಿ (ಪಚಕಾ. ೪೦). ೭. ಗ್ರಹನಿಚಯಾ ಆದಿತ್ಯಾದಿ ನವಗ್ರಹಂಗಳೂ ಉರುತತ್ವ ಶಿವಾದಿ ಪೃಥುವ್ಯಾಂತಮಾದ ದೊಡ್ಡಿತ್ತಾದ ಮೂವತ್ತಾಱು ತತ್ವಂಗಳು ಶ್ರೀಗುರುವಿನ ಪಾದದ ಜಂಘೆಯಲ್ಲಿಹವು (ಆತ್ಮತ್ರಿ. ೫ ಟೀಕು); ಓಂಕಾರಪು ಶಿವಾತ್ಮ ಹಕಾರವು ಉರು ಪಂಚ ಪ್ರಣವ

ದೊಡ್ಡಿತ್ತಾದವೈದು ಪ್ರಣವಂಗಳು (ಆತ್ಮತ್ರಿ. ೯೧ ಟೀಕು). ೧೦. ಅಗಲವಾದುದು ; ವಿಶಾಲವಾದುದು : ಸಿಂಹಕಟಿತಟಮನಿಳಿಸುವ ರಿಪುಕುರಂಗ ಕಂಠೀರವನ ಕಟಿತಟಮೊಲ್ದು ನೋಡುವ ಗಾಡಿಕಾರ್ತಿಯರ ಕಣ್ಗೆ ಕಾಮ [ನ]ಡ್ಡಣದಂತೆ ದೊಡ್ಡಿತ್ತಾಗಿ ಮೀಱುವುದ್ವೃತ್ತತೆಯ [ನೀಟ್ದು] ಕೊಂಡಂತುದ್ವೃತ್ತಂಗಳಾದುವು (ಪಂಪಭಾ. ೨-೩೯ ವ) ; ಹುತ್ತಿನವೋಲ್ ಕೆಟಗು. ದೊಡ್ಡಿತ್ತಾಗಿ ಮೇಗಸಿದಪ್ಪ ಶರೀರರೂಪ (ತತ್ತ್ವಪ್ರ. ೨೯೬). (ಗು). ೧೧. ಹಿರಿದಾದ ; ದೊಡ್ಡದಾದ : ತುಕಾರ ದುಕಾರಂಗಳೆ ಕಡೆಯಾಗಿ ಪಲವು ಗುಣವಚನಂಗಳೊಳವು ; ಅವಱೊಳ್ ತುಕಾರಾಂತಕ್ಕೆ ವಿಕಲ್ಪದಿಂ ದ್ವಿತ್ವಮುಂಟು . . . ಅಗಲಿತ್ತು, ದೊಡ್ಡಿತ್ತು, ಬಲ್ಲಿತ್ತು ಎಂಬಂತೆ ನೋಡಿಕೊಳ್ವುದು (ಶಮದ. ೭೭ ಪ್ರಯೋ).

ದೊಡ್ಡಿದ = ೧. ಹಿರಿಯ ; ಪೂಜ್ಯ : ಭೀಮನ ಮಱೆಯಂ ಬಂದು ಪುಗೆ ಕೊಂದು ಕುಡೆ ನೀನಂದಿಂಬಱಿಕಹಹ ದೇವ ದೊಡ್ಡಿದನಾದಯ್ (ಗದಾಯು. ೬-೪೯) ; ನಿನ್ನನತ್ಯಾದರದಿಂ ದೇವನೆ ದಿಂಡನೆಯೆಂದೊಡೆ ದೇವಂ ನೀನೆಂತದೆಂತು ದೊಡ್ಡಿದನಪ್ಪೈ (ಧರ್ಮಾಮೃ. ೯-೦೦೬). ೨. ಶೂರ ; ಪರಾಕ್ರಮಿ : ನಿಮ್ಮ ಕಣ್ಣಿಗೆ ನರನು ದೊಡ್ಡಿದನುಳಿದ [ಪಾಠಾಂ. ದೊಡ್ಡಿತು ಉಳಿದ] ವೀರರ ಕಣ್ಗೆ ತುಸು ಮಾತ್ರ (ಕುಮ್ಮಾವಿ. ೭-೦೦) ; ಏನವನು ದೊಡ್ಡಿದನು ಶರಸಂಧಾನಸಮಯಿಗಳಾವು ನಮಗಾ ವಾನರಮಿತ್ರತ್ವವೆಂಬುದು ಲೋಕಹಾಸ್ಯವಲೆ (ತೊರರಾ. ೪-೬-೦೪). ದೊಡ್ಡಿದುವು (ಬಹುವ) = ಗಾತ್ರದಲ್ಲಿ ಹಿರಿದಾಗಿರುವಂಥವು : ನಡೆ ನೋಟ್ಪೊಡಮಂತುಮಿಂತು ಮೂಱಸಿಯವು ಮೂಱು ದೊಡ್ಡಿದುವು ಮೂಱೆಡೆ ತೆಳ್ಳಿದುವಂಬುಜಾಕ್ಷಿಯಾ (ಪಂಪಭಾ. ೪-೭೨) ; ಅತಿರಥನಾತಂ ಗಡ . . . ತದ್ರಥದ ಗಾಲಿಗಳ್ದೊಡ್ಡಿದುವೇ (ಗದಾಯು. ೩-೫೫). ದೊಡ್ಡಿಯ = ಬಲವುಳ್ಳ ; ಶಕ್ತಿಯ : ಇವಂ ದೊಡ್ಡಿಯಾಳ್ಕುದುರೆಯಂ ತೋಱಿ ಮೀಱಿ ಕಾಡಿದಡೆ ಎನ್ನ ಸತ್ತ ಸಾವುಂ ಕೆಟ್ಟ ಕೇಡುಂ ನಂಬಿಯುಮಂ ನರಸಿಂಗಮೊನೆಯರುಮಂ ತಾಗುವುದು (ನಂಬಿರ. ೬-೦೦೨).

[<ದೊಡ್ಡ]

ದೊಡ್ಡಿತೆ (ನಾ). = ದೊಡ್ಡತನ ೧ : ಅವಳ ದೊಡ್ಡಿತೆಯು ಸಹನಶೀಲತೆಯಲ್ಲಿಯಷ್ಟೇ ಮುಗಿಯುವುದಿಲ್ಲ (ಗೊತ್ತುಗು. ೦೩೯) ; ಖಾನನಿಗೆ ತಾವು ಕಂಡ ಆ ದೊರೆಯ ದೊಡ್ಡಿತೆಯನ್ನು ಬಿನ್ನವಿಸುವರು (ಕರ್ಣಾಜ. ೦೪೧) ; ಜ್ಞಾನ ಮತ್ತು ಧೈರ್ಯ–ಇವೇ ದೊಡ್ಡಿತೆಯ ಹಾಗೂ ಹಿರಿಮೆಯ ಅಡಿಗಲ್ಲು (ದಾಬುತ್ತಿ. ೦೪). [<ದೊಡ್ಡಿತು]

ದೊಡ್ಡಿತ್ತು 'ದೊಡ್ಡಿತು' ನೋ.

ದೊಡ್ಡಿದಾರ (ನಾ). ದೊಡ್ಡಿಯನ್ನು ನೋಡಿಕೊಳ್ಳಲೆಂದು ನಿಯುಕ್ತನಾದ ಅಧಿಕಾರಿ : ಡಿಸ್ಟ್ರಿಕ್ಟ್‌ಮ್ಯಾಜಿಸ್ಟ್ರೇಟರವರು ಪ್ರತಿಯೊಂದು ದೊಡ್ಡಿಗೂ ದೊಡ್ಡಿದಾರರುಗಳನ್ನು ಸಹಾ ನೇಮಿಸುವರು (ಗ್ರಾಮಾಕ. ೦೦೩). [ದೊಡ್ಡಿ₁ (<ತೊಟ್ಟಿ₁) + – ದಾರ₄]

ದೊಡ್ಡಿಪತ್ರೆ 'ದೊಡ್ಡಪತ್ರೆ' ನೋ.

ದೊಡ್ಡಿಪ್ಪೆ (ನಾ). ಒಂದು ಬಗೆಯ ಮರ : ಇಪ್ಪೆಯಲ್ಲಿ ಒಂದು ವಿಧ : ಇಪ್ಪೆ, ದೊಡ್ಡಿಪ್ಪೆ, ಹಿಪ್ಪೆ, ಹಾಲಿಪ್ಪೆ (ಮೈಜಿಗಿ. ೦೨-೨೦೪).

[ದೊಡ್ಡ + ಇಪ್ಪೆ₁ (<ಇರ್ಪೆ)]

ದೊಡ್ಡಿಮರ (ನಾ). ಒಂದು ಬಗೆಯ ಮರ,–ವೃಕ್ಷ : ದೊಡ್ಡತೊಪ್ಪೆ ಮರ, ದೊಡ್ಡಿಮರ, ಬಿಂದಾರಿಮರ, ದಲ್ಲಿಮರ, ಬಟ್ಟಗ(ಮೈಜಿಗಿ. ೪೫-೮೮೫).

[ದೊಡ್ಡಿ₃ + ಮರ₁]

ದೊಡ್ಡಿಮೆ (ನಾ). ಮರ್ಯಾದೆ ; ಘನತೆ ; ದೊಡ್ಡಸ್ತಿಕೆ : ವ್ಯಾಪಾರೋದ್ಯೋಗಗಳಲ್ಲಿ ವ್ಯಕ್ತಿಸ್ವಾತಂತ್ರ್ಯವಿದೆ . . . ಒಕ್ಕಲತನದಲ್ಲಿ ದುಡಿತಕ್ಕೆ ತಕ್ಕ ದೊಡ್ಡಿಮೆ ಇದೆ (ರಕ್ತಧ್ವ. ೦೦೨). [<ದೊಡ್ಡಿತು + – ಮೆ₁]

ದೊಡ್ಡಿಲಿ (ನಾ). ದೊಡ್ಡ ಇಲಿ ; ಹೆಗ್ಗಣ : "ಮೂಷೀ–ದೊಡ್ಡಿಲಿ" (ಓಷಧಿ. ೦೩೭) ; ಸಣ್ಣಿಲಿ, ದೊಡ್ಡಿಲಿ, ಮೂಗಿಲಿ . . . ಹುಡುಗಿಲಿ, ಎಲ್ಲಾ ಬಂದುವು ಓಡೋಡಿ, ಜೋಗಿಯು ಬಾರಿಸೆ ಕಿಂದರಿಯ (ಬೊಜೋಗಿ. ೦೦-೨೫೭). [ದೊಡ್ಡ + ಇಲಿ₁]

ದೊಡ್ಡಿಲೆ, ದೊಡ್ಲಿ (ನಾ). ಒಂದು ಬಗೆಯ ಕಾಡುನಿಂಬೆಯ ಗಿಡ ಮತ್ತು ಅದರ ಕಾಯಿ : ಮಾದಲ ನಿಂಬೆ ದೊಡ್ಡಿಲೆ ಕಂಚಿ ಕಿತ್ತೀಳೆ ಸ್ವಾದು ಖರ್ಜೂರ ದ್ರಾಕ್ಷೆಗಳು (ಮೋಡತ. ೨೪-೫೨); "ದದ್ದಿಲೆಹಣ್ಣು" (ಪ್ರಭ್ಯೂ). ದೊಡ್ಲಿ : (ಕಿ). [←ತುಳು. ದೊಡ್ಡಲೆ, ದೊಡ್ಲೆ]

ದೊಡ್ಡಿವೆಸರ್ (ನಾ). ದೊಡ್ಡಹೆಸರು ; ಕೀರ್ತಿ : ವಾರಿಜನಾಭಂ ಹರಿಯೆಂಬ ದೊಡ್ಡಿ [ಪಾಠಾಂ. ದ್ದೆ]ವೆಸರಂ ಪೊತ್ತಿರ್ದ ನೀಂ ಮಂತ್ರಿಯಾಗೆ (ಪಂಪಭಾ. ೯-೪೭) ; ಬಲದ ಕೆಲದೊಳು ಮಿಱುಮಿಱುಮಿಱುಗಿ ತನ್ನ ಪಡೆದೊಂಗಂ ತನ್ನ ವೆಸರಿಂದಮೆ ದೊಡ್ಡಿವೆಸರಾಗಿ ನೆಗಟ್ವೆ ಚಕ್ರಮಂ ನೋಡೆ (ಶಾಂತಿಪು. ೪-೪೮ ವ). [<ದೊಡ್ಡಿತು + ವೆಸರ್]

ದೊಡ್ಡಿಸು (ಕ್ರಿ). ವಿವರವಾಗಿ ಹೇಳು ; ವಿವರಿಸು : ಗಂಗಾದೇವಿಗಾ ಗೋವಿಂದನೀ ರೀತಿಯಲಿ ದೊಡ್ಡಿಸಿಯಂದು ತನ್ಮಾನಸದ ಬಹುದುಃಖವನು ಬಿಡಿಸಿದನು (ತಿಮ್ಮಆ. ೦೦-೪೬). [ದೊಡ್ಡಿತು + – ಇಸು₃]

ದೊಡ್ಡಿಸ್ತನ 'ದೊಡ್ಡಸ್ತನ' ನೋ.

ದೊಡ್ಡೀಚಲು (ನಾ). ಒಂದು ಬಗೆಯ ಈಚಲುಮರ ಮತ್ತು ಅದರ ಹಣ್ಣು : "ಪಿಂಡಖರ್ಜೂರಃ–ದೊಡ್ಡೀಚಲು" (ಓಷಧಿ. ೯೮).

[ದೊಡ್ಡ + ಈಚಲು₁ (<ಈಂಚಿಲ್)]

ದೊಡ್ಡೀಳೆ (ನಾ). ಈಳೆಯ ಜಾತಿಗೆ ಸೇರಿದ ಒಂದು ಬಗೆಯ ಮರ ಮತ್ತು ಅದರ ಹಣ್ಣು : ತೆಂಗಡಕೆ ಪಲಸುಗಳ್ ನಾರಂಗಂ ಕಿತ್ತೀಳೆ ನಿಂಬೆ ದೊಡ್ಡೀಳೆ[ಳೆ]ಗಳಿಂ ಸಂಗಳಿಸಿದ ಸವಿನಿಂಬೆಗಳಿಂಗಿತದಿಂ ಬೆಳೆದ ರಾಯಗಿತ್ತೀಳೆ[ಳೆ]ಗಳುಂ (ಹಾಲಾಸ್ಯ. ೦-೦೪-೦೦). [ದೊಡ್ಡ + ಈಳೆ]

ದೊಡ್ಡು, ದುಡ್ಡು₂, ದೊಡ್ಡೆ₁ (ನಾ). ಕಾಡುಕೋಣ; ಕಾಸರ : ಅಡ್ಡವಿಸಿ ಸೋಹಿದರು ಕೋಣನ ದೊಡ್ಡುಗಳ ದಂತಿಗಳ ಮರೆಗಳ ಒಡ್ಡೊಡೆಯದವೊಲಾ ಸುಮಿತ್ರಾಸುತನ ಸರಿಸದಲಿ (ತೊರರಾ. ೩-೩-೧೨) ; ಕಾಡುಕೋಣಗಳಿಗೆ 'ದೊಡ್ಡು' ಎಂದು ಹೆಸರು (ಕಾನೂರು. ೫೮) ; ಕಡ ಮತ್ತು ಸಾರಗದ ಹಿಂಡುಗಳೂ ದೊಡ್ಡುಗಳ ಮಂದೆಗಳೂ . . . ಅಲ್ಲಲ್ಲಿ ಅವಿಶ್ರಾಂತವಾಗಿ ಸುತ್ತಾಡುತ್ತಿದ್ದವು (ಪಂಜಪಂ. ೨). ದುಡ್ಡು₂ : ಗುಡ್ಡಗಳ ವೆಂಬಂತೆ ರಥನಿವಹ ಕಾರ್ಮುಗಿಲಿನೊಡ್ಡಿನಂತಿಭರಾಜಿ ಹಯನಿಕರ ಕಡಲಂತೆ ದುಡ್ಡಿನಂತತಿಪುಷ್ಟಿ ಕಾಲ್ಬಲಂ ಕೂಡಿತಿದಕಾವ ನಾಡೀಡೆಂಬೊಲು (ಪರಶು ೯-೨೦) ; ಕೋಣಕ್ಕೆ "ದುಡ್ಡು" ಎಂದು ನಮ್ಮವರು ಕರೆಯುತ್ತಾರೆ (ಬಾಲಪ್ರ. III, ೦೭೦೯). ದೊಡ್ಡೆ₁ : ಹುಲಿಯಾಗಲಿ ಕರಡಿಯಾಗಲಿ ದೊಡ್ಡೆಯಾಗಲಿ ಉರಿಯುವ ಬೆಂಕಿಗೆ ಅಂಜಿ ಅದರ ಬಳಿ ಸಾರುವುದಿಲ್ಲ (ಮಲೆಮ. ೨೪೯).

ದೊಡ್ಡಿನ ಮೃಗ= ಕೋಣದ ಜಾತಿಗೆ ಸೇರಿದ ಪ್ರಾಣಿ: ಪರಿಹರಿಕುಂ ದೊಡ್ಡಿನ ಮೃಗ [ಪಾಠಾಂ. ದೊಡ್ಡಿಮೃಗ] ದುರುವಿಷಮಂ ನಸ್ಯಲೇಪ ನಾಂಜನದಿಂದಂ (ಖಮದ. ೦೩-೬೯). ದೊಡ್ಡಿನ ಹೋರಿ =ಹೋರಿ ಕೋಣ: ಉಡು ನವಿಲಾವೆ ಬೆಕ್ಕು ನರಿ ಲಾವುಗೆ ದೊಡ್ಡಿನ ಹೋರಿ ಹೇರಣೆಲ್ . . . ಕೊಂಡುಗುಱಿ ಕೂರಗೆಯೆಂಬಿವನೈದೆ . . . ಪೊತ್ತು ಬೇಡವಡೆ ಬಂದುದು (ಸೂಕ್ತಿಸು. ೩-೦೬೮). [ತೆ.ಕ.ಕ ತುಳು. ದೊಡ್ಡು]

ದೊಡ್ಡೆ₁ 'ದೊಡ್ಡು' ನೋ.

ದೊಡ್ಡೆ₂ (ನಾ). ದಪ್ಪವಾಗಿರುವವಳು; ಸ್ಥೂಲವಾಗಿರುವವಳು : ಕಡು ನಿಡಿಯಳ್ ಕರಮೆ ಗುಜ್ಜೆ ಮೇಣ್ ಕರಮಸಿಯಳ್ ಕಡು ದೊಡ್ಡೆಯೆ ನಿಪ್ಪೊಡಂ ನೋಟ್ಪೊಡೆ ಪುರುಷಾಕಾರೆಯಪ್ಪೊಡಂ ಕಪ್ಪೆಯವಳ್ (ಲೋಕೋಪ. ೦೦-೬೦). [ದೊಡ್ಡ + – ಎ₂]

ದೊಡ್ಡಲಚಿ (ನಾ). ಒಂದು ಬಗೆಯ ಎಲಚಿಮರ ಮಂತ್ರ, ಅದರ ಹಣ್ಣು : "ರಾಜವಲ್ಲಭಃ–ಹಣ್ಣಿನ ಹಾಲೆ, ದೊಡ್ಡಲಚಿ" (ಓಷಧಿ. ೦೩೪). [ದೊಡ್ಡ + ಎಲಚಿ]

ದೊಡ್ಡೆಲೆಭೋಗಿ (ನಾ). ಒಂದು ಬಗೆಯ ಮರ ; ಉನ್ನಿಮರ : ಹೈಗ, ಉನ್ನಿಮರ, ಕಲ್‌ಬೋವು, ದೊಡ್ಡೆಲೆಭೋಗಿ (ಪ್ರಾಣಿಗಿ. ೪೪–೪೭).

[ದೊಡ್ಡ + ಎಲೆ$_1$ + ಭೋಗಿ]

ದೊಡ್ಡೇಲಕ್ಕಿ, ದೊಡ್ಡಏಲಕ್ಕಿ (ನಾ). ಒಂದು ಬಗೆಯ ಏಲಕ್ಕಿ ಗಿಡ ಮಂತ್ರ, ಅದರ ಕಾಯಿ : "ದಿವ್ಯಗಂಧಾ–ದೊಡ್ಡೇಲಕ್ಕಿ" (ಓಷಧಿ. ೭೩). **ದೊಡ್ಡ ಏಲಕ್ಕಿ** : "ಪೃಥ್ವೀಕಾ–ಜೇರಗೆ, ದೊಡ್ಡಏಲಕ್ಕಿ, ಹಿಂಗುವತ್ರ, ಹರೇಣುಕ" (ಓಷಧಿ. ೦೦೨). [ದೊಡ್ಡ + ಏಲಕ್ಕಿ]

ದೊಡ್ಡೊಕ್ಕಲು (ನಾ). ಹಿರಿಯ ಒಕ್ಕಲು ; ಮುಖ್ಯವಾದ ಒಕ್ಕಲು ; ಶ್ರೀಮಂತ ಒಕ್ಕಲು : ಊರಿಗೆಲ್ಲಾ ಅವರದೇ ದೊಡ್ಡೊಕ್ಕಲು (ಕೂಡಿ).

[ದೊಡ್ಡ + ಒಕ್ಕಲು$_3$ (<ಒಕ್ಕಲ್$_3$)]

ದೊಡ್ಲಿ 'ದೊಡ್ಡಿಲೆ' ನೋ.

ದೊಣ್$_1$, ದೊಣೆ, ಡೊಣೆ$_3$, ಡೋಣ್$_1$, ಧೊಣೆ, ದೋಣ್$_3$, ಧೊಣೆ (ನಾ). ೧. ಬೆಟ್ಟದ ಮೇಲಿರುವ ಸ್ವಾಭಾವಿಕವಾದ ಹೊಂಡ.–ಕೊಳ: ಮುಗಿಲ ನೀರಂ ನಂಬಿ ದೊಣೆಯ ನೀರಂ ತುಳುಂಕುವ ಕೋಡಗಮುಮಂ (ಧರ್ಮಾಮೃ. ೮–೩೧) : ಕಾಯ್ದುಕ್ಕುವ ದೊಣೆಯುದಕ ದೊಳಿಡೆ ಚಂಚು ಬೆಂದು (ಕುಸುಮಾ. ೮–೦೨೮); ಎಲ್ಲರೂ ದೊಣೆಯೊಂದರಲ್ಲಿ ಸ್ನಾನಮಾಡಿ ಮಧ್ಯಾಹ್ನಸಮಯಕ್ಕೆ ಊರಿಗೆ ಹಿಂತಿರುಗಿದರು (ಶಾಂತರಾ. ೩೭೮) ; ಇಲ್ಲಿ ಎಲ್ಲೋ ಒಂದು ದೊಣೆ ಇದ್ದಹಂಗಿತ್ತಪ್ಪಾ (ಪುಟಿಮ. ೩೫೪) ; ದೊಣೆಗೆ ಹೋದರೂ ಹೊಣೆ ತಪ್ಪದು (ಗಾಡಿ). ೨. (ಕಟ್ಟಿಸಿದ ಅಥವಾ ನಿರ್ಮಿಸಿದ) ಕೊಳ,– ಕಲ್ಯಾಣಿ : ಆನಂದಸಂವತ್ಸರದಲ್ಲಿ ಕಟ್ಟಿಸಿದ ದೊಣೆಯು (ಎಕ. II, ೦೬೨-೦; 1104 ?); ಹೊಸ್ತಾಗಿ ಹಂವೆಯ ದೊಣೆಯ ತೋಡ್ಸಿ, ಬರಸಿದ ಶಾಸನ (ಸೌಇಇ. IX-1- ೩೫೯-೦೨ ; 1340). ೩. ಹಳ್ಳ ; ತಗ್ಗು : "ದ್ರೋಣಿಃ, ಶೈಲಸಂಧಿಃ . . . ಈ ೨ ದೊಣೆಯ ಹೆಸರು" (ಪಾಚಿಠಾ. ೦೦೪) ; ದನಕಟ್ಟುವ ಕೊಟ್ಟಿಗೆಯಲ್ಲಿ ದೊಡ್ಡ ದೊಡ್ಡ ದೊಣೆಗಳು ಬಿದ್ದಿವೆ (ಕೂಡಿ). **ಜೊಣೆ** : ೧. ಕೆರೆ ತೊರೆ ಮಡು ಜೊಣೆ ಪರಿವಾ ನಿರ್ಝರ (ಪಚಕ. ೫೯೦). **ಡೊಣ್$_3$** : ೧. ಮುಗಿಲ ನೀರಂ ನಚ್ಚಿ ಡೊಣೆಯ ನೀರಂ ತುಳುಂಕಿದ ಕೋಡಗದಂದಂ ನಿನಗಕ್ಕುಂ (ಪಂಕಶಂ. ೬೫-೮) ; ನಾವೀ ಪ್ರದೇಶದೊಳು ಕೆಱಿಯಾಗಿ ತೊಱಿಯಾಗಿ ಡೊಣೆಯಾಗಿ ವಾಪಿಕೂಪಂಗಳಾಗಿ ಈಶನಭಿಷವದಗ್ರಜಲಕೆ ಸಂದಿಪ್ಪೆವು (ಸಿದ್ಧಕಾ. ೪–೫೩); ನೀರಡಸಿ ಬಬಲ್ದು ಬಂದು ಬೆಟ್ಟದ ಡೊಣೆಗಳೊಳ್ ಮುನ್ನ ಪೊಕ್ಕಿರ್ದ ಕಳ್ಳಂ ಬಳೆದು ತಿಳಿದಿರ್ದೊಡದಂ ಕುಡಿದು ಸೊರ್ಕಿ (ಜೀವಸಂ. ೧೪೪–೦೯); ಬಂಚಿ ಡೊಣೆ ದೀರ್ಘಕೆ ಕರ್ಮಡು ವಳ್ಳ ಕೊಳ್ಳ ನೀರೊಱಿವ ಕೊಳಂ (ಅಬ್ಬಿಪು. ೦.೪೬) ; ದಿವಿಜ ಧಾರುಣೀರುಹಂಗಳ ನೆಲೆಯೊ ಕಡವರದಿರವೊ ಶೋಧನದ ಡೊ[ಪಾಠಾಂ. ದೊ]ಣೆಯೊ (ದಸಪು. ೦-೩೯). ೨. ಬಡಗಣ ಧಾಗೆಯ ವಡುವಣ ಭಾಗದಲು ಕಟ್ಟಿಸಿದ ಡೊಣೆ (ಎಕ. XII, ಕುಮುಳೂ. ೩೯-೮ ; 1387) ; ಕನ್ನರಿದೇವನ ಮಲಪಗಳು ಕಟ್ಟಿಸಿದ ಲಖಿಮಣ್ಣಗಳ ಬಾಗಿಲು ಡೊಣೆ ಸೋಪಾನಕೆ (ಎಕ. X, ಪಾಗೇಹ. ೩೩-೮; 1406). ೩. "ಡೊಣೆ–ತಗ್ಗು" (ಜಾನಪೋ. ೬೩) ; "ದಿಟ್ಟಗಳ ನಡುವಣ ಆಳವಾದ ಗುಂಡು ಪೊಳ್ಳು" (Punch-bowl. ಇಂಳಿನಿ). **ದೋಣಿ$_1$** : ೧. ಕಾಮ ಧೇನುವಿನ ನಡುವೆಯೊಂದು ಕೋಣ ಕಟ್ಟಿಯಿದ್ದಿತ್ತು, ಕೋಣನ ಗವಲು ತಾಗಿ ಕಾಮಧೇನು ಕೆಡುತ್ತದೆ. ಕೋಣನ ದೋಣಿ [ಪಾಠಾಂ. ದೊಣೆ]ಗೆ ತಳ್ಳಿ ಕಾಮಧೇನುವ ಕಾಣದಂತೆ ಮಾಡು (ಕೋಲಶಾಂ. ೮೨–೩೨) : ಕೆಱಿ ಬಾವಿ ಬಗರಗೆ ಡೊಣೆ ಡೋಣಿ [ಪಾಠಾಂ. ಣಿ] ದೀರ್ಘಕೆಯೊಜತೆ ಕಾಲುವೆ ಬೆಂಚೆ ವಳ್ಳ ಮೆಱಿದಿರುತಿಹವು (ಕುರಾಶಾಂ. ೪–೭೭) ; ಸುರಕುಜದ ತೋವು ಸುರಧೇನುವಿನ ಹಿಂಡು ಸಿದ್ಧರಸ ಶೀವಿರ್ದ ಡೋಣಿಗಳವ್ಯತದ ತಟಾಕಗಳು (ನಂದಿಮಾ. ೦೧-೧೦). ೨. ನಾಲ್ಕನೆಯ ವಿಟ್ಪಪಯ್ಕಂಗಳ ಪ × × × ನಿನಲು ಡೋಣಿಯಿಂ ಬಡಗಲು ಶಿವಾರಾಜನ ವೃತ್ತಿಯ ಮತ್ತರು ೪ (ಕೂಡ್ಕಾಶಾ. ೮–೭೪ ; 1147). ೩. ಎರಡು ಕೂರಿಗೆಯ ಡೋಣಿಯ ಹೊಲವೊಂದು ಮಾತ್ರ ಉಳಿದಿದ್ದಿತು (ವಿಸರ್ಗ. ೨೮೩), 'ಡೋಣಿವಟ್ಟೆ' ಪರಾ. **ಧೋಣಿ**: ೧. "ಧುಣಾ=ಧೋಣಿ" (ಕಾಶಕ್ಕ. ೩೫). **ದೋಣ್$_3$** : ೧. ದೋಣಿಯ ತಿಳಿನೀರ ಕುಡಿದು (ಪುಷಾವಿ. ೭–೩೮); ಬೆಟ್ಟದ ಮೇಲಿನ ದೋಣಿಗಳಲ್ಲಿ ನೀರು ಬಹಳ ಗಲೀಜಾಗುವುದೆಂದು ತಿಳಿದಿದ್ದರಿಂದ ಹೀಗೆಮಾಡಬೇಕಾಯಿತು (ಹೊಗಾಳ್ಕ. ೩೪೮). ೩. 'ದೋಣಿವೋಗು' ಪರಾ. ೪. ತಗ್ಗಿನ ನೆಲ ; ಹಳ್ಳವಾಗಿರುವ ಹೊಲ,– ಗದ್ದೆ : ಸರ್ವನಮಸ್ಯ ಮಾಡಿ ಬಟ್ಟ ಮತ್ತರು ೧೦೦ ದೋಣಿಯಿಂ [ತಂ]ಕ ದೇ × × × ತೋಟ ಮತ್ತ ೨೭ (ಸೌಇಇ. XX, ೨೩-೨೨; 1029); ಕೇತಯ್ಕಂ ಬಿಟ್ಟ ದೋಣಿಯ ನೆಲ ಮತ್ತ[ರು ನಾ]ಲ್ವತ್ತು (ಸೌಇಇ. XI-1, ೮೩-೩೦ ; 1069) ; ಶ್ರೀಸೋಮೇಶ್ವರದೇವರ್ಗ್ಗೆ ತಮ್ಮ ಪ್ರಭುತ್ವದ ದೋಣಿಯಿಂ ತಂಕ ಒಡ್ಡವಾಡಿಗೆಯ ಬಟ್ಟಿಯಿಂ ವಡುವ ಬನ್ದುಚಿನ್ತಾಮಣಿಯ ಈರ್ಪತ್ತೆಂಟು ಗೇಣ ಕೋಲಲು ತಮ್ಮಂ[ಶ]ಕ್ಕೆ ಬಂದ ಮತ್ತರಯ್ವತ್ತೇಳು (ಸೌಇಇ. XX, ೬೯-೪೪; 1107); × × × ಪೇಸ್ವರ ದೇವರ ೩ ದೋಣಿ × ಬೆಂಣ್ಕೆ × × × ದೇವ[ರು] ನದಿಯೊಱ[ವ]ಯ ಮಲ್ಲಿಕಾರ್ಜುನ [ದೇವ]ರು ಗುಂಡಿಯ ಹಳ್ಳಿಯ ರಾವಂನಾಥದೇವ (ಸೌಇಇ. XI-1, ೩೦-೩೩ ; ಸು. 12ನೆಯ ಶತ). **ಧೋಣಿ** : ೫. ಬಾವಿ : ಸಾನ್ತರಸ . . . ಬಟರಿಜ್ಜಿ ಕೊಟಾರ್ ಧೋಣಿಗೂಡಲಾ ನರಡಿ ಇಬ್ಬು ಕೊಟಾರ್ (ಎಕ. VI, ಕೊಪ್ಪ. ೩೯-೪ ; ಸು. 700 ?).

ದೋಣಿಗೆರೆ = ಹೊಲ, ಗದ್ದೆಗಳನ್ನು ಉಳುವಾಗ ನೇಗಿಲಿನಿಂದ ಮಾಡುವ ಹಳ್ಳದ ಗೆರೆ ; ಸೀತೆಸಾಲು; ಉಕ್ಕೆಗೆರೆ.–**ಸಾಲು** : ದೋಣಿಗೆರೆಗಳಿಗೆ ಸರಿಯಾಗಿ ಪೈರನ್ನು ನಾಟಿ ಮಾಡುತ್ತಾ ಹೋಗುತ್ತಾರೆ (ಕೂಡಿ). **ದೋಣಿಸಾಲು** = **ದೋಣಿಗೆರೆ** : ಉಳುವಾಗ ದೋಣಿಸಾಲುಗಳು ಒಂದೇ ಸಮನಾಗಿ ಮೂಡುತ್ತಾ ಹೋಗುತ್ತವೆ (ಕೂಡಿ).

[ದೇ.ಪ ತೆಲು. ದೊನ./ಸಂ. ದ್ರೋಣೀ]

ದೊಣ್$_3$ 'ತೊಣ್$_3$' ನೋ.

ದೊಣೆನಾಯಕ, ಡೊಣೆನಾಯಕ (ನಾ). ಕೆರೆ, ಕುಂಟೆಯಂ ಕಾವಲುಗಾರ; ದೊಣೆಯನ್ನು ಕಾಯ್ದುಕೊಂಡಿರತಕ್ಕವನಂ ; ದೊಣೆಯ ರಕ್ಷಕ : ಹೊಳೇ ನೀರು ಕುಡಿಯಕ್ಕೆ ದೋಣೇನಾಯಕನ ಅಪ್ಪಣೆ ದೇಕಿಲ್ಲ (ಹೊಗಾಳ್ಕ. ೩೩೩). **ಡೊಣೆನಾಯಕ** : ಹರಿಯೋ ನೀರಿಗೆ ಡೊಣೆನಾಯಕನ ಅಪ್ಪಣೆಯೇನು (ಹುಬ್ಬಿಹ. ೦೨೩) ; ಹೊಳೆಯ ನೀರಿಗೆ ಡೊಣೆನಾಯಕನ ಅಪ್ಪಣೆಯೇ ? (ಗಾಡಿ). [ದೊಣೆ$_1$ + ನಾಯಕ]

ದೊಣೆವೋಗು, ಡೊಣೆವೋಗು, ಡೋಣಿವೋಗು, ದೋಣಿಯೋಗು, ದೋಣಿವೋಗು (ಕ್ರಿ). ಡೊಗರು ಬೀಳು ; ತಗ್ಗು ಬೀಳು ; ಹಳ್ಳವಾಗು : ಪಿಸುಟ್ಟ ಕಿಟ್ಟಿಪ್ಪಿಡೆಯುಂ ಕಣೆವೋದ ಕಣಕಾಲುಂ ದೊಣೆ [ಪಾಠಾಂ. ಡೊಣೆ, ದೋಣಿ]ವೋದ ಮೇಗಾಲುಂ ವಜ್ರಿದು ಪಾಯ್ವ ವಂದಲೆಗಳುಂ (ಪಂರಾಮಾ. ೦೩-೪೪ ಪ). **ದೊಣೆವೋಗು** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. **ದೋಣಿವೋಗು** : ಕುಮತಿ ಸಿದ್ಧಾಂಜನದಿನೊಡೆದೊಂದು ಕಣ್ಗಳಿಂ ತಜ್ರಿದುಕೊಳೆ ದೋಣಿವೋಗಿರ್ದ ವೆರ್ಬುಣ್ಗಳಿಂ (ಕಾದಂಬಾ. ೩೭೦ ೩೫೪). **ದೋಣಿಯೋಗು** : ೧೦ತು ಚಕ್ರಹಕಿಯಿಂ ದೋಣಿಯೋದ [ಪಾಠಾಂ. ವೋದ] ರ ಣ ಕ್ಷೋ ಣಿ ಯಂ . . . ರಥಿಗಳಟ್ಟಿಗಳೆಂಬ ಬೆಟ್ಟುಗಳಿಂ ಪುಟ್ಟು ಸಮತಳಂ ಮಾಡಿ

(ಪಾರ್ಶ್ವಪು. ೩-೧೨೧ ಪ). **ದೋಣಿವೋಗು :** ಒಡೆದಿರ್ಬಗಿಯಾಗಿ ಪೋಟ್ಟು ನೀರೇಱಿದ ನಾಳಿಪುಣ್ಣೊಡೆದು ಸೌಳೆನೆ ಸೀಳ್ದುದು ದೋಣಿವೋಪಿನಂ [ಪಾಠಾಂ. ದೋಳಿಪೋಪಿನಂ] (ಸುಕುಮಾ. ೭-೦೬) ; ತನು ದೋಣಿವೋದುವು ನೆತ್ತರ್ ಕೊಡನೆತ್ತಿ ಸುರಿವವೊಲ್ ಸುರಿದು (ನೇಮಿಪು. ೧೧-೧೭೫).

[ದೊಣೆ1 + ಪೋಗು1]

ದೊಣ್ಣೆ1, ಡೊಣ್ಣೆ1 (ನಾ). ೧. ದಪ್ಪವಾದ ಕೋಲು ; ದಂಡ ; ಲಗುಡ : ಕೈಯಲ್ಲಿ ದೊಣ್ಣೆ [ಪಾಠಾಂ. ದಾಣಿ] ಮನದಲ್ಲಿ ಕ್ರೋಧ ವಚನದಲ್ಲಿ ಕಿಂಕಿಲ ಲಿಂಗದ ವಾರ್ತೆ ನಿನಗೇಕೆ (ಅವಚಂ. ೨೭೫-೦೨೬೩) ; ಮಂದರ ಗಿರಿಯನೆತ್ತುವಡೆ ನುಗ್ಗೆಯ ದೊಣ್ಣೆಯಿಂದ ಮೀಂಟಿದಡೇಳುವುದೆ (ಮೋಹತ. ೨೯-೩೪) ; ನೂತನ ಕತ್ತಿ ಕಠಾರಿ ದೊಣ್ಣೆಯ ಸಾಧಕೋತ್ತಮ ರಾಜಕುವರರು (ಕಂನವಿ. ೬-೦೮) ; ನಾನೆಷ್ಟು ಮುದುಕನಾದೊಡುಮೆನಗೆ ಬ್ರಹ್ಮಾಂಡತಾನದೊಳಗೆಲ್ಲೆಲ್ಲಿಯುಂ ತಿರುಗುವದು ತಪ್ಪದೇನಂ ಮಾಡಲು ಶಕ್ತಿ ಕುಂದಿರ್ಪುದೆಂದೂರಿಕೊಂಡಿರ್ಪ ದೊಣ್ಣೆಯೆಂದು (ಅರ್ಜಾವಿ. ೧-೮೮) ; ಈ ಡಕಾಯಿತರ ಕಥೆಗೆ ಸೂಕ್ತವಾಗಿರುವಂತೆ ಇದರಲ್ಲಿ "ಆ ಕಾಲದ ಪೀನಲ್ ಕೋಡಾಗಿದ್ದ" ದೊಣ್ಣೆಯ ಸ್ತೋತ್ರ ಬರುತ್ತದೆ (ಬಂಕಿಮ. ೨೯೮) ; ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ (ಗಾದೆ) ; ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ಥಿ (ಗಾದೆ). (ಗು). ೨. ದಪ್ಪವಾದ ; ದೊಡ್ಡದಾದ. 'ದೊಣ್ಣೆಮುಳ್ಳು' ಪರಾ. **ಡೊಣ್ಣೆ1 :** ೧. ಗಿಡುಗನ ಉಡು ನುಂಗಿ ಹೊಡೆವವನ ದಡಿ ನುಂಗಿತ್ತು . . . ಗಿಡುಗನ ಉಡುವ ಹೊಡೆವವನ ಡೊಣ್ಣೆಯ ಬಾಯಿಲ್ಲದ ಇಱುಹೆ ನುಂಗಿತ್ತ ಕಂಡೆ (ಅಱಿಮಾ. ೧೪೭-೦೬೦) ; ಡೊಣ್ಣೆಯೊಳು ಚಚ್ಚಿ ಕೆಲವು ಮಿಗಗಳ ಕೊಂದರು (ನೇಮಿಸಂ. ೨-೫೦) ; ಅಣ್ಣತಮ್ಮಂದಿರಿನ್ನು ಜಗದೊಳಿದ್ದವರೆಲ್ಲ ಡೊ[ಪಾಠಾಂ. ದೊ]ಣ್ಣೆಯೊಳ್ಬಡಿದಾಡದಿಹರೆ (ಭರಜ. ೪೮-೫೮) ; ಡೊಣ್ಣೆಗಳನ್ನು ಹಿಡುಕೊಂಡು ಬಂದು ಆ ಮೃಗವನ್ನು . . . ಕೊಂದುಬಿಟ್ಟರು (ಮುಂಬಯಿ. ೪-೪೨). ೨. 'ಡೊಣ್ಣೆಮುಳ್ಳು' ಪರಾ. ೩. ಟೊಣಪ : (ಕಿ)

ದೊಣ್ಣೆ ಭಾಗವತ = ಸೋಮಾರಿ ; ಲವಲವಿಕೆಯಿಲ್ಲದವನು ; ಕೂತ ಕಡೆಯೇ ಕೂತಿರುವವನು : ಹೊತ್ತಿಗೆ ಮುಂಚೆ ಏಳದೆ ದೊಣ್ಣೆ ಭಾಗವತನಂತೆ ಬಿದ್ದು ಕೊಂಡಿರುತ್ತಾನೆ (ರೂಢಿ).

[ದೇ.॥ ತುಳು. ದೊಣೆಲ್, ಡೊಣ್ಣೆ ; ಕೊಡ. ದೊಣ್ಣೆ ; ಕೊಲಾ. ದೊಣ್]

ದೊಣ್ಣೆ2 'ತೊಂಡೆ2' ನೋ.

ದೊಣ್ಣೆಕಾಟ 'ತೊಂಡೆಕೇತ' ನೋ.

ದೊಣ್ಣೆಗ, ಡೊಣಗ, ಡೊಣ್ಣೆಗ (ನಾ). ೧. ಟೊಣಪ ; ದಡಿಗ : ಶಿವಕಥಾಮೃತರಸವ ದೊ[ಪಾಠಾಂ. ಡೊ]ಣ್ಣೆಗರ್ ಕಪಟಾಂಧನರರಱಿವರೇ ಪರಮಸತ್ಕವಿಗಳಱಿವಂದದಿ (ರಾಘಜ. ೦-೧೯). **ಡೊಣಗ :** ೧. ಈ ಡೊಣಗಕ್ಷತ್ರಿಯಾಧಮನು ಅವರೆಲ್ಲರನ್ನು ಮೂರ್ಖರಲ್ಲಿ ಎಣಿಸಿ, ನಮ್ಮನ್ನು ಶಿಕ್ಷಿಸಬಂದಿರುವನಲ್ಲ (ಛಾಮೃತ. ೨೦೯). ೨. ಪುರುಷನ ಜನನೇಂದ್ರಿಯಂ : ರಣದೊಳು ಜಯವಧೂಟಿಯ ಮುಂದೆ ನಿನ್ನಯ ಡೊಣಗನ ಬಿಟ್ಟುಕೊಂಡಿರಲು ಅಣಕವಾಡುವರಪ್ಸರಗಣಿಕೆಯರೆಲೆ ರಣಭಂಡ ಹೋಗೆಂದು ನುಡಿದ (ಮೋಹತ. ೩೯-೪). **ಡೊಣ್ಣೆಗ :** ೧. ಮೇಲಿನ 'ದೊಣ್ಣೆಗ' ಉಲ್ಲೇಖಕ್ಕೆ ಕೊಟ್ಟಿರುವ ಪ್ರಯೋಗದ ಪಾಠಾಂತರವನ್ನು ನೋಡಿ. [ದೊಣ್ಣೆ1 + – ಗ2]

ದೊಣ್ಣೆಮುಳ್ಳು, ಡೊಣ್ಣೆಮುಳ್ಳು (ನಾ). ದಪ್ಪವಾದ ಮುಳ್ಳು ; ದೊಡ್ಡ ಮುಳ್ಳು : (ಕಿ). **ಡೊಣ್ಣೆಮುಳ್ಳು :** ಎಣ್ಣೆ ಬಲು ಕಾಸಿ ಕಣ್ಣೊಳಗೆ ಸುರಿದಂತೆ ಡೊಣ್ಣೆಮುಳ್ಳುಗಳು ನಟ್ಟಂತೆ (ಕನ್ನಜಾ. ೨೩೯).

[ದೊಣ್ಣೆ1 + ಮುಳ್ಳು (<ಮುಳ್)]

ದೊಣ್ಣೆಮೂಗು, ಡೊಣ್ಣೆಮೂಗು (ನಾ). ದಪ್ಪವಾದ ಮೂಗು : ಅವಳದು ದೊಣ್ಣೆಮೂಗು, ಲಕ್ಷಣವಾಗಿಲ್ಲ (ರೂಢಿ). **ಡೊಣ್ಣೆಮೂಗು :** ಗುಳ್ಳಗಣ್ಣು ಮತ್ತು ಡೊಣ್ಣೆಮೂಗು ಇರುವವಳೇನು ? (ಮೋಹಿನೀ. ೨೮).

[ದೊಣ್ಣೆ1 + ಮೂಗು1]

ದೊಣ್ಣೆಮೆಣಸಿನಕಾಯಿ, ಡೊಣ್ಣೆಮೆಣಸಿನಕಾಯಿ (ನಾ). ಹೆಚ್ಚು ಖಾರವಿಲ್ಲದಿರುವ, ದಪ್ಪವಾಗಿಯೂ ದುಂಡಗೂ ಇರುವ ಒಂದು ಬಗೆಯ ಮೆಣಸಿನಕಾಯಿ ; ದಪ್ಪಮೆಣಸಿನಕಾಯಿ ; P ರುಚಿಯಾಗಿರುವುದರಿಂದ ಹೆಚ್ಚಾಗಿ ಇದನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ : ದೊಣ್ಣೆಮೆಣಸಿನಕಾಯಿಯ ಬೋಂಡ ಬಹಳ ರುಚಿಯಾಗಿರುತ್ತದೆ (ರೂಢಿ). **ಡೊಣ್ಣೆಮೆಣಸಿನಕಾಯಿ :** ಮೆಣಸಿನಕಾಯಿ ಡೊಣ್ಣೆಮೆಣಸಿನಕಾಯಿ ಶಾವಿ ಹುಣಸೀಯಕಾಯಿ ಹುಳಿಪಲ್ಯೆ ದಾಸೋಹಕೆ ಹಣ್ಣುಗಳ ತಂದಿಹರು ತರತರದ (ಸಿದ್ಧಪು. ೧೭-೪೮) ; ನಾನೇನು ನಿಮ್ಮ ಕೈತೋಟದಲ್ಲಿ ಬೆಳೆದ ಬದನೆಕಾಯಿಯೇ, ಚಳ್ಳವರಿಯೇ, ಡೊಣ್ಣೆಮೆಣಸಿನಕಾಯಿಯೇ (ಇಪ್ಪಕ. ೨೦೫). [ದೊಣ್ಣೆ1 + ಮೆಣಸಿನಕಾಯಿ]

ದೊದಿಪಂದಿಗಲಿ (ನಾ). ಒಬ್ಬಾತನ ಹೆಸರು : ಪಟ್ಟಬ್ಬಟ್ಟಿದ ಮೂರನೇ ವರಿಷದನ್ನು ದಾವರಬ್ಬದ ದೊದಿಪನ್ದಿಗಲಿಯು ಕೆಲ್ಲೂರುಂ ಕಬೂರು ಮೊಳನಿಕೆ ಕರ್ವೂರ . . . ತುಱುವನಿಕ್ಕಿಸಿ ಮಗುಟ್ಟು ಬರುತಿಟ್ಟೊಡೆ (ಎಕ. XII, ತಿಪಟೂ. ೧೦-೪ ; ಸು. 930 ?). [?]

ದೊದ್ದಿ (ನಾ). ಒಂದು ಬಗೆಯ ಗಿಡ : "ಶಂ(ಕ)ಖಕರ್ಣಃ–ದೊದ್ದಿ, ಕತ್ತೆ" (ಓಷಧಿ. ೧೬೦). [?]

ದೊದ್ದೆ1, ದೊದ್ದೆಯ (ನಾ). ೧. ಗುಂಪು ; ಸಮೂಹ : ಎನಿತು ದೇವರ ದೊದ್ದೆ ಹಿಂಡುಗೊಳ್ಳದು ನೆನೆಯೆ (ರುದ್ರರ. ದೇ. ೨೦೭-೦೪) ; ಎತ್ತ ನೈರುತಿಗೀರುತಿಗಳಿವರೆತ್ತ ಜಲಧಿಪ ಗಿಲಧಿಪಂ ಫಡಯೆತ್ತ ಪವನಂಗಿವನ ದೊದ್ದೆಗೆ ಹೊದ್ದಲೇನಲ್ಲಿ (ಸಾನಂಜ. ೯-೧೫) ; ದೊದ್ದೆ ತೆಗೆಯಲಿ ಪಾರ್ಥ ಪವನಜರಿದ್ದರಾದರೆ ಬರಲಿ ಸಮರವ ಹೊದ್ದಲಾಪರೆ ಹೊಗಲಿ ಹರಿ ತೋಱಲಿ ಸಹಾಯತೆಯ (ಕುಪ್ಯಾಭೀ. ೮-೨೦) ; ಎದ್ದಾ ನೃಪಂ . . . ನಿರ್ಮಲತಪಸ್ವಿಗಳ ನಿಶ್ಚಲಹೃದಯ ಮಧ್ಯಪಂಕೇಜಾತದ ಗದ್ದುಗೆಯೊಳಿಸೆವ ಚಿದ್ರೂಪನಂ ಜಗವಱಿಯೆ ದೊದ್ದೆಯೊಳ್ಕೂಡಿ ತೇರ್ಗುದುರೆಯಂ ಪೊಡೆವುದಂ ಪೊದ್ದಿಸಿದ ಪಾರ್ಥನಾರಿದರೊಳೆನಲರ್ಜುನಂ ಬಂದಾತನಂ ಕಂಡನು (ಶೈಮಿಭಾ. ೫-೯). ೨. ಗದ್ದಲ ; ದೊಂಬಿ ; ಗಲಭೆ ; ಗೊಂದಲ : ನೆಱೆ ಕೂಗುವ ಕೊಳರ್ವಕ್ಕಿಯ ದೊದ್ದೆ [ಪಾಠಾಂ. ಡ್ಡಿ]ಯ ಪಱೆಯೊಪ್ಪೆ ಮಱಿದುಂಬಿಗಳ ಗಱಿಯ ಝುಂಕಾರ ಸುಸ್ವರ ಪೂರಿತ ಮಹವುರುಮೆಗಳಱಿಚಿದುವಾಗ (ಮೋಹತ. ೬-೦೭). ೩. ಸೈನ್ಯ ; ಪಡೆ ನೆರೆದ ದೊದ್ದೆಯನೊರಸಬಹುದೇನರಿದು . . . ಗಹನವೆ ನಿನ್ನ ವೀರರಿಗೆ (ಕುಪ್ಯಾಭೀ. ೧-೬) ; ಧಾತುಗೆಟ್ಟುದು ದೊದ್ದೆಯೆಂದೇ ಭೂತಳಾಧಿಪ ಬಗೆಯದಿರು (ಕುಪ್ಯಾದ್ರೋ. ೧೬-೦೩) ; ತೆವರು ದೊದ್ದೆಯ ಹೊಗಿಸಬೇಡುಳಿದವರನೆಂದೊಳಹೊಗುತ ನೇಮವನವಸರದ ಸೇವಕರಿಗಿತ್ತು (ತೊರರಾ. ೨-೨-೨೫) ; ಗದ್ದೆಯ ಗೊರವನೊಳ್ ಕಡಿದಾಡಿ ಪೊಗರುವೆತ್ತಿದ್ದೆ ನೀ ರಣರಂಗದೊಳಗೆ ಬಿದ್ದೆಯ ನನ್ನ ಬಾಧೆಗೆ ಕೃಷ್ಣ ಕರೆ ನಿನ್ನ ದೊದ್ದೆಯ ನಿಲಲೊಬ್ಬಗರಿದು (ಮೋಹತ. ೪೦-೧೮) ; ಇಂತು ದೊದ್ದೆಯ ಹೊಯ್ಲಿನಿಂ ಕ್ಷಿತಿಯಂತರದಿ ಮಡುಗಟ್ಟಿ ನೆತ್ತರ ಸಂತತಂ ಪರಿಯಲ್ಕೆ (ಅರ್ಜಾವಿ. ೬-೭೯). **ದೊದ್ದೆಯ :** ೧. ಗೆದ್ದುದೇ ರಣವೆಲವೊ ದಿವಿಜರ ದೊದ್ದೆಯದ ಸೂಳೆಯರ ಚೌರಿಗೆ ಬಿದ್ದಿನರ ವೀಳಯದ ಬಡಗರು ಭಟರ ಮೋಡಿಯಲಿ (ಕುಪ್ಯಾಅ. ೧೯-೨೫).

ದೊದ್ದೆ2 (ನಾ). ಉಗ್ಗು ; ತೊದಲುಮಾತು : (ಕಿ).

[ದೇ.॥ ತುಳು. ದೊದ್ದೆ, ಗೊದ್ದೆ]

ದೊ ಡ್ಡ ಕಾ ಜಿ (ನಾ). ಕೋಲಾಹಲವನ್ನುಂಟುಮಾಡುವವನು : ಗೊಂದಲವನ್ನುಂಟುಮಾಡಂವವನಂ ; ತೊಂದರೆಯಂನ್ನುಂಟುಮಾಡುವವನಂ: ಗುದ್ದುಗಳ ಪುಳಿಗಜಿಯೆ ಕೌರವ ದೊಡ್ಡಕಾಜಿನು ಕಾಣನವನನು ಹೊದ್ದಿಸಿದ ಹೊಲದತ್ತ ಬುತ್ತಿಯನುಂಡು ನಿಂದಿದನ (ಸಂಭಪ. ೨೩-೭೦).

[ದೊಡ್ಡ$_1$ + – ಕಾಜಿ]

ದೊಡ್ಡಗ (ನಾ). ೧. ಸೈನಿಕ: ಇದ್ದರಬುವತ್ತಾಬುಕೋಟಿಯ ದೊಡ್ಡಗರು ಮುನ್ನಮ್ಯತಮಥನದಲ್ಲಿದ್ದವರು ಪುತ್ತಲ್ಲಿ ದೇವಾಸುರರ ಕದನದಲಿ (ಸಂಭಪ. ೮-೦೦೩); ಎಲೆಲೆ ದೊಡ್ಡಗರೇಕೆ ಕೊಬ್ಬಿದರಳವನಜಿಯದೆ ನುಗ್ಗು ವಂಜಿದರೆ ದಳದ ದೊರೆಗದು ಭಂಗವೇ ಬಾಹಿರನೆ ಹೊಯ್ಕನುತ (ಕುವ್ಯಾಕ್ಯೋ. ೧೬-೨೯) : ಅದ್ದಲಿಸಿದುದು ತಲೆ ರಘೂತ್ತಮನಿದ್ದ ಠಾವನು ಹೇಳಿನುತ ಕಪಿ ದೊಡ್ಡಗರನಜಿಯಟ್ಟಿ ಕೊಲುಶಿಟ್ಟಣಿಸಿತಿದಿರಿನಲಿ (ಮೂಕರಾ. ೬-೨೮-೬೦) ; ದೊಡ್ಡಗರೇಕೆ ಹೊಕ್ಕರು ಕೊಲ್ಲುಕೊಲ್ಲೆಂದು ಹೆದ್ದೊರೆ ದೈತ್ಯರೆಯ್ದಿದರು (ಮೋಹತ. ೩೫-೦೪) ; ತುಳುನಾಡಿನರಸು ದೊಡ್ಡಗರ ತುಳಿಸುತೆಯ್ದಿ ತುಳಿಲುಗೈದನು ಚಕ್ರಧರಗೆ (ಭರಡ. ೨೨-೩೪) ; ದಾನವರ ಬಲದ ನೆರೆದ ದೊಡ್ಡಗರಾನಲರಿಯದೋಡಲ್ ಕಂಡು ದುರುಳಬಲ ಶುಂಭ ಧೂಮ್ರಾಕ್ಷವೃತ್ರಾದಿಗಳ್ ಕೈಕೊಂಡರಾಹವವನು (ಜಬಪು. ೨೬-೨೨). ೨. ಸಾಮಾನ್ಯಜನ ; ನಾಡಾಡಿ : ದೊಡ್ಡಗರು ರಕ್ಕಸನ ಕಾಣುತ ಕದ್ದು ಹಾಯ್ದರು ಜನಕ ಟಿಂತೆಯಲಿದ್ದನವ ನಡತಂದನುಗ್ಗಡಣೆಯ ನಿನಾದದಲಿ (ತೂರರಾ. ೦-೦೩-೦೦) ; ಮುದ್ದಿಸುತಿಹರು ಮಕ್ಕಳನವು ತೊಡೆಯ ಮೇಲಿದ್ದಂತೆ ಮಲವ ಬಿಡುವುವು ಎದ್ದು ವಸ್ತ್ರವ ಹಾಕಿ ಹೇಸುತಿಹರು ಛೀ ಛೀ ದೊಡ್ಡಗರೆನೆ ನಕ್ಕರವರು (ಭರಡ. ೬೩-೩೦): ಮದ್ದಳೆಯ ಗತಿಗೆ ಜಘನಗಳಿದ್ದಾಡಲು ನಗುತ ಕಂಡು ಲಾಲಿಪರಲ್ಲದೆ ಪದ್ಯ ಪದ ಕಾವ್ಯದರ್ಥವ ದೊಡ್ಡಗರೇಂ ಬಲ್ಲರೆಂದ ಚೂಡಾರತ್ನ (ನೀತಿಶಾ. ೭೩). [ದೊಡ್ಡ$_1$ +–ಗ$_2$]

ದೊಡ್ಡಗವಿಸು (ಕ್ರಿ). ಗುಂಪಾಗಿ ಮುತ್ತುವಂತೆ ಮಾಡು : ಆಕ್ರಮಣ ಮಾಡಿಸಂ : ಎದ್ದು ತಾನೈತಂದು ಸೇನೆಯ ದೊಡ್ಡಗವಿಸಿದ ಮುನಿವ ರಾಶ್ರಮವಿದ್ದು ಗೃಹಮಂಡಲವ ಕೊಂಡರು ಸೂಱೆಗರಂ ನೃಪನ (ಸಂಭಪ. ೨೬-೨೦). [ದೊಡ್ಡ$_1$ + ಕವಿಸು]

ದೊಡ್ಡಗೂಳು (ನಾ). ರಾಶಿಗಟ್ಟಲೆಯ ಕೂಳಂ,–ಅನ್ನ: ದೊಡ್ಡಗೂಳಿನ ಮೈಸಿರಿಯ ಬಲು ಬಿದ್ದನಿಕ್ಕುವ ಭೂತ ಪವಮಾನಜನ ಕಿಬ್ಬರಿಯ ಗುದ್ದಿದರೆ ಕಲಿಭೀಮನದಕಂಬ್ಬಿದ್ದು ಗೋಣನು ತಿರುಹಿ ಬಸುಜೊಳಗದ್ದಯಿಸಿ ಯರೆದರೆದು ಕಾಲಲಿ ತಿಕ್ಕಿದನು ಛೀಮ (ಕುಣ್ಯಾವಿ. ೬೫೩. ೯-೭೦).

[ದೊಡ್ಡ$_1$ + ಕೂಳ್ಯ (<ಕೂಬ್$_1$)]

ದೊಡ್ಡಯ 'ದೊಡ್ಡ'$_1$ ನೋ.

ದೊಡ್ಡವೋಗು (ಕ್ರಿ). ಗಲಭೆಯಾಗಂ ; ಕೋಲಾಹಲವುಂಟಾಗು : ಹೊದ್ದದೊಬ್ಬೊಬ್ಬರು ಕಲಹವಾಗೆದ್ದು ತಾವಿಜಿದಾಡಿದರು ಪುರಿ ದೊಡ್ಡವೋದಂದು ಹುಟ್ಟಿದುದು ವಿವರೀತವದಜಿಯೊಳಗೆ (ಜಬಪು. ೭೦-೩೭).

[ದೊಡ್ಡ$_1$ + ವೋಗು$_1$]

ದೊನವುರ (ನಾ). ಒಂದು ಊರಿನ ಹೆಸರಂ : ನೂರ್ಮಡಿ ಚೋಟಂ ನವಲಖ(ಖ್ಯ)ಬಲಂಬೆರಸು ಬಂದು ದೊನವುರದೊಳ್ ಬಟ್ಟಿಟ್ಟು ದೇಸ(ಶ)ವೆಲ್ಲವಂ ಸೂಜಿಗೊಣ್ಡು (ಎಇ. XVI, ೭೪-೨ ; 1007).

[P ಇದು 'ದೋನವುರ' ಅಥವಾ 'ದ್ರೋಣವುರ' ಎಂಬುದರ ಅವಲಿಖಿತ ವಿರಬಹುದೇ ?]

ದೊನ್ನಮಾರ (ನಾ). ಒಬ್ಬಾತನ ಹೆಸರು : ಶ್ರೀರಾಮರಾ ರಾಮಡಿನಾಡು ಮೂನೂಱಱ ನಾಣ್ಡಾರಸಾ ಆಳಿ ಅವರ ಮಗನ್ದೊನ್ನಮಾರನ್ ಚೊಱದ ನಚ್ಚಯನ್ನೊಳ್ತಟ್ಟು (ಎಇ. X, ಗೋರೀಲಿ. ೭೬-೩ ; ಸು. 760).

[ದೊನ್ನ? + ಮಾರ]

ದೊನ್ನೆ (ನಾ). ಬಾಳೆಯ ಅಥವಾ ಅಡಿಕೆಯ ಪಟ್ಟೆಯಿಂದ ಮಾಡಿದ ಬಟ್ಟಲು : ಎಲೆಬಟ್ಟಲು : ಮೃದುತರವೆನಿಪ ಪರಿಮಳಿಪ ಹೊಸ ಖಂಡಂಗಳಂ ಸವಿಗೊಳುತ ಪುಳುಕಿಸಿ ಹೊಲಿದ ದೊನ್ನೆಯೊಳಿರಿಸಿ ಬಾಸಣಿಸಿ (ಬಸಪು. ೧೯-೨೯) ; ದೊನ್ನೆಗಳ ಪರಹಿ ಬಾಳೆಲೆಹಾಳಿಯಂ ಹಾಕಿ ಬಿನ್ನಣದಿ ಮಾಡಿದಾ ಚೌಕದೆಡೆಗಳ ಮುಂದೆ . . . ಕುಳ್ಳಿರ್ದು (ಸಮ್ಮಕಾ. ೬-೨೬); ಮತ್ತದಕೆ ಹಾಲು ನೀರೆಜಿದು ಸಂಪಳಿಗಲಸಿ ಎತ್ತರದ ಮೇಲೆ ದೊನ್ನೆಯನಿರಿಸಿ ತುಪ್ಪವಂ ಹೆತ್ತದಂದದಿ ತೊಡೆದು ಹೊಯ್ದುಕೊಂಡದನಿಡ್ಡಲಿಗೆಯಂತೆ ಬೇಯಿಸುವುದು (ಸೂಪಶಾ. ೬-೬) ; ಸಣ್ಣನುಚ್ಚು ಇಟ್ಟುಕೊ ಗೊಡ್ಡುಳಿ ಕಾಸಿಕೊ ದೊನ್ನೆಯೊಳಗೆ ತುಪ್ಪ ಬಡಿಸಿಕೊ (ಪುರಂದ. ೩-೧೪೭-೬) ; ನಳಿನದಳದ ದೊನ್ನೆಯೊಳು ಶಾಂತೋದಕವ ಬೊಗೆದು ಪಾಸಂಗೈಸಿ (ನವಪೋ. ೬-೬೦) : ಅಡಕೆಯ ಹಾಳೆಗಳಿಂದ ಐದಾರು ದೊಡ್ಡದೊಡ್ಡ ದೊನ್ನೆಗಳನ್ನು ಹೊಲಿದರು (ಕಳಹು. ೬೫).

[ದೇ.ತ ತಮಿ. ತೊನ್ನೈ ; ಮಲ. ದೊನ್ನ ; ತುಳು. ತೆಲು. ದೊನ್ನೆ; ಕೂಗ. ಡೊನೊ ; ಕುವಿ. ದುನ್ನೋ]

ದೊಪ್ಪನೆ (ಅ). ದೊಪ್ಪೆಂದಂ ಶಬ್ದವಾಗುವ ಹಾಗೆ: ರಂಗಮಂಟಪದೊಳು ದೊಪ್ಪನೆ ಬಿದ್ದು (ಬಸರ. ೨-೫೦) ; ದೊ [ಪಾಠಾಂ. ತೊ]ಪ್ಪನೆ ಕೆಡೆಗುದನಿಗೊಟ್ಟು ಕರೆದು ಕರಂ ಮುಗಿದು ಹೊಡಮಟ್ಟು ಗಿಣ್ಣಲನಂತು ನೂಕುಗುಮತ್ತೆ ಮುಂದಿಡುಗು (ಬಸಪು. ೦೪-೦೪) : ತನ್ನ ಬಾಯಂ ಹೊಯ್ದುಕೊಳುತಂ ತನ್ನ ಶೋಕಾಕ್ರಾಂತದಿಂದಂ ತನ್ನ ತಾ ಮಜಿದಿಂತು ದೊ[ಪಾಠಾಂ. ಧೊ]ಪ್ಪನೆ ಕೆಡೆದು ನೆಲದಲ್ಲಿ (ಬಸಪು. ೪೫-೬) ; ನೆಲಕೆ ದೊಪ್ಪನೆ ಹಾಯ್ದುಕೊಂಡನು (ಕುವ್ಯಾಕ. ೧೩-೨೬); ದೊಪ್ಪನೆ ಎಚ್ಚರ ತಪ್ಪಿ ಬಿದ್ದಳು (ಬಂಕಿಮ. ೦೫೧).

ದೊಪ್ಪದೊಪ್ಪನೆ, ದೊಪ್ಪುದೊಪ್ಪನೆ (ದ್ವಿರುಕ್ತಿ): ದೊಪ್ಪದೊ [ಪಾಠಾಂ. ತೊಪ್ಪತೊ]ಪ್ಪನೆ ಟಿರಿಯ ಕಲ್ಲೊಳು ತಪ್ಪಲಿಡುತಂ ಸೋಹುತಂ ಹರಿತಪ್ಪ ಕೆಲವಾಡುಗಳನು . . . ಹೊಡೆದು (ಬಸಪು. ೨೦-೦೪) ; ಶೂಲೆ ಬಾಧಿಸುತಿಪ್ಪ ಸಂಕಟಕಾಲದಿಳೆಯೊಳು ದೊಪ್ಪದೊ[ಪಾಠಾಂ. ತೊಪ್ಪತೊ]ಪ್ಪನೆ ಕೆಡದು ಹೊರಳುತ್ತ ಮಿಗೆ ನರಳುತಿರಲು (ಬಸಪು. ೪೯-೨೬): ದೊಪ್ಪುದೊಪ್ಪನೆ ಪಜ್ಜೆಯಿಡುವಳು ದುಗುಡವ ಸೊಪ್ಪುಸೊಪ್ಪನೆ ತುಳಿಪಂತೆ (ಭರಡ. ೦೩-೬೫).

[ದೊಪ್ಪು + – ಅನೆ$_3$]

ದೊಪ್ಪು (ನಾ). ಒಂದು ಅನುಕರಣ ಶಬ್ದ : ಬೆರಸಿ ಪದಾತಿ ನೆಕ್ಕು ನೆರಲೆಂಬ ನೆಳಲ್‌ನೆಳಲೆಂಬ ಘಾರು ಘರ್ಘರ ಘರಿಲೆಂಬ ದೊಪ್ಪು ದೊದಲೆಂಬ . . . ನಿಷ್ಕುರವಂ ಮಿಗೆ ತಳ್ಕಿಜಿದತ್ತು ಯುದ್ದದೊಳು (ಗಿರಿಕ. ೬-೬೮).

ದೊಪ್ಪುಟು (ನಾ). ಒಂದಂ ಬಗೆಯ ಹುಳು: ಸ್ಪರ್ಶರಸಮೆರಡುಮನಜಿವ ಶಂಖ ಶುಕ್ತಿ ಗುಳ್ಳೆ ಗುಬ್ಬಿ ನಾಯಿನೊಳಲೆ ದೊಪ್ಪುಟು ಗೊಣ್ಣೆಹುಟು ಕ್ರಿಮಿ ಮೊದಲಾದುವೆಲ್ಲಜಿಯೊಳಂ (ಪಸಾರ. ೪೯). [? + ಪುಟು]

ದೊಪ್ಪೆ 'ಡೊಪ್ಪೆ' ನೋ.

ದೊಪ್ಪೆಗಿವಿ (ನಾ). ದೊನ್ನೆಯಂತೆ ಅಗಲವಾಗಿರುವ ಕಿವಿ : ಕೈಕಾಲುವತಿ ತೋರ ದೊಪ್ಪೆಗಿವಿ ದನಿ ಕಾಕು (ಕಳಕ್ಕೋಳ. ೨-೦೭).

[ದೊಪ್ಪೆ (<ಡೊಪ್ಪೆ) + ಕಿವಿ$_3$]

ದೊಪ್ಪೆನ್ (ಕ್ರಿ). ದೊಪ್ಪೆಂದಂ ಶಬ್ದಮಾಡಂ : ಘಾಯವಡೆದಾನೆಗಳು ಗುಳವನು ಹಾಯಿಕಲು ನೆಲಕುರುಳಿದವು ವಾನಾಯುಜಂಗಳು ಬಿಗುಹ ಬಿಡೆ ದೊಪ್ಪೆಂದವಾಜೆಯಲಿ (ಕುವ್ಯಾಕ. ೩-೪) ; ತಲ್ಲಿಂಗಮಂ ಕಂಡು ಕೋವಾವೃತಚಿತ್ತಂ ಬೇಗದಿಂ ಕೈಗೊಡಲಿಯನಧಟಿಂದೆತ್ತಿ ಹಾಯ್ದುಕ್ಕಿದಂ ತಶ್ಚಿತನಂ ದೊ[ಪಾಠಾಂ. ಧೊ]ಪ್ಪೆಂದು ಮುಂಡಂ ಕೆಡೆಯೆ ತಲೆ ಕರಂ ಬೀಳ್ವಿನಂ (ಕೃಷವಿ. ೬-೦೬). [ದೊಪ್ಪು + ಎನ್$_1$]

ದೊಬ್ಬಕೆ (ನಾ). ದಬ್ಬುವುದು; ನೂಕುವುದು: ಅನಿರೀಕ್ಷಿತವಾದ ಈ ದೊಬ್ಬಕೆಯಿಂದಾಗಿ ಅನಂತನ ಹೆಜ್ಜೆ ತಪ್ಪಿಹೋಗಿ ಅವನು ಮುಗ್ಗರಿಸಿ ಬಿದ್ದನು (ಒಡ್ಡಿಅ. ೧೫೭). [ದೊಬ್ಬು (<ದಬ್ಬು1) + –ಇಕೆ]

ದೊಬ್ಬಿಸು 'ದಬ್ಬಿಸು' ನೋ.

ದೊಬ್ಬು 'ದಬ್ಬು1' ನೋ.

ದೊಬ್ಬಳಿ 'ದಂಪ್ಪಳ' ನೋ.

ದೊಮ್ಮ (ನಾ). ಒಂದು ಪಂನೆತನದ ಹೆಸರು (?): ಪುಯ್ಕಲೊಳ್ ದೊಮ್ಮರ ಕಾಡವಂ ಸತ್ತು ಸ್ವರ್ಗ್ಗಾಲಯಕ್ಕೇಱಿದನ್ (ಎಇ. VI, ೦೬೩-೪ ; 780). [?]

ದೊಮ್ಮರ 'ದೊಂಬ' ನೋ.

ದೊಮ್ಮಳಿ (ನಾ). ೧. ಗುಂಪು; ಸಮೂಹ. ೨. ಗಾಬರಿ. 'ದೊಮ್ಮಳಿಸು' ಪರಾ. [<ದೊಂದುಳಿ ?]

ದೊಮ್ಮಳಿಸು (ಕ್ರಿ). ೧. ಗುಂಪುಗೂಡು; ಸಂದಣಿಗೊಳ್ಳು: ಧರಾಚಕ್ರ ಮನಾಕ್ರಮಿಸಿ ನಿಶಾತಹೇತಿಗರ್ಭಿಂಗಳುಮನೇಕಪ್ರಕಾರಕೇತನ ವಾಜಿರಾಜಿಗಳುಮಾಗಿ ದೊಮ್ಮಳಿಸಿ ನಡೆವ ರಥಂಗಳುಮಂ (ಪಂಪಭಾ. ೦೦-೫೦ ವ); ಅವಿಂತಾಳಾಪಂಗಳಿಂ ದೊ[ಪಾಣಾಂ. ದ]ಮ್ಮಳಿಸಿ ಕಿನಿಸಿ ಕೊಟ್ಟೂಳ್ವ ತಾತ್ಪರ್ಯಮೇಂ (ಸುಳುಮಾ. ೭-೪೦) ; ನೆರೆದ ರಾಜಲೋಕಮೆಲ್ಲಂ ರಾಜಸುತೆಯನೀಡಾಡಿ ಬಂದು ದೊಮ್ಮಳಿಸಿ ಮುಮ್ಮಟಿಕೊಂಡು ನೋಡುತ್ತಿರ್ಪುದುಂ (ಅರ್ಧನೇ. ೭-೫೯ ವ); ಅಂತುಭಯಬಳಚತುರಂಗವಾಹನಂಗಳೊಳೊರ್ವೊದಲೆ ದೊಮ್ಮಳಿಸಿ ಬೆರಸಿದಾಗಳ್ (ವರ್ಧಪು. ೮-೪೬). ೨. ಗಾಬರಿಯಾಗು; ಗಾಬರಿಪಡು: "ದೊಮ್ಮಳಿಸು–ತಿರ್ಯಕ್ಸಮೂಹ ಸಂಭ್ರಮೇ (ದನದ ಹಿಂಡಿನಂತೆ ಗಾಬರಿಪಡು)" (ಶಮಾಧಾ) : ಅಗ್ನಿಶಿವಾಮುಖಕ್ಕೆ ದೂರಮಪ್ಪ ಬಕ್ಕಬಯಲ ತಾಣದೊಳ್ ದೊಮ್ಮ [ಪಾಣಾಂ. ರ್ಮ]ಳಿಸಿ ನಿಂದು ಬಹುಜನಂಗಳುಮ್ಮಳಿಸಿ ತಮ್ಮೊಳಿಂತೆಂದರ್ (ಪಂರಾಮಾ. ೧೧-೦೫೫ ವ) ; ಆಗಳಂಜಲಿಮಂಜಲಿಮೆಂದು ಬೆಗಡುಗೊಂಡ ಗೋವಳಿಗರ ನೊಡಗೊಂಡು ದೊಮ್ಮಳಿಸಿ ಮುಮ್ಮಟಿಗೊಳ್ವ ಗೋವ್ಗಳನಟ್ಟಿಕೊಂಡು ಕಿಱಿದಂತರದೊಳಿರ್ದ ಗೋವರ್ಧನಗಿರಿಯ ಮಜ್ಜಿಗೆ ಪೋಗಿ (ಅರ್ಧನೇ. ೬-೧೦ ವ) ; ಹಯಂ ತಾಂ ತನಗೆ ತೂಪಿಱಿದ ಕೂರ್ಪಿನ ಪೆರ್ಮೆಯಿಂ ಸೊಮ್ಮುವೆರ್ಚಿ ದೊಮ್ಮಳಿಸಿ ಕಿಜಿಕಿಲ್ದು ಬಿಮ್ಮನೆ ನಡೆದು ಬಟಿಯ ಪೊಟಿಯಾ ವಿಕ್ಕು ಪೊಕ್ಕು ದಿಕ್ಕುಗೆಟ್ಟು ಮುಬ್ಬುಂಗಿ ಕಣ್ಮಾಯವಮಾಯ್ತು (ರಾಮಾಶ್ವ. ೧೫೦–೫೩). ೩. ವೇಗಗೊಳ್ಳು: ರಭಸಗೊಳ್ಳು: ಅಂತು ನೆಗಟ್ದ ಭಾವವ್ಯತಿಕರಂಗಳ್ ದೊಮ್ಮಳಿಸೆ ತಮ್ಮನಿಬರುಂ ಘಟ್ಟಿಸಿ ನಿಂದು ತಟ್ಟುತ್ತ ತಾಗಿ ಪೋಗದೆ (ಅನಂಪು. ೭-೪೭ ವ) ; ಅಂತು ನಿಂದಳವಿಯೊಳ್ ದೊಮ್ಮಳಿಸಿ ನೂಂಕುವ ದೈತೇಯಚಕ್ರಿಯ ಚತುರಂಗಬಲಮುಮನಿತುಮೊಂದೆ ವಲಿಖದೊಳ್ ಕೈಕೊಂಡು ನಿಜಗಜಘಟಾಪಟಲಕ್ಕೆ ಸೂಚೀಯಾನೆಯಂ ಮಾಡಿ (ಅನಂಪು. ೦೪-೭ ವ).

[ದೊಮ್ಮಳಿ + –ಇಸು3]

ದೊಮ್ಮೇಜಾಡ್ಯ (ನಾ). ಪಶುಗಳಿಗೆ ಬರುವ ಒಂದು ಬಗೆಯ ರೋಗ: (ಎಸಮ್ಮ. XV, ೪೦). [ದೊಮ್ಮೆ೦ (P←ತೆಲು. ದೊಮ್ಮ) + ಜಾಡ್ಯ]

ದೊರಕಿಸು (ಕ್ರಿ). ಪಡೆ; ಹೊಂದು; ಪಡೆದುಕೊಳ್ಳು: ಎಲ್ಲಾದರೂ ಒಂದು ಉದ್ಯೋಗ ದೊರಕಿಸಿ ಉಪಜೀವನಕ್ಕೆ ಮಾರ್ಗ ಮಾಡಿಕೊಳ್ಳಬೇಕು (ಮುಂಬಮಿ. ೪-೫೦) ; ಸರ್ಕಾರದ ಆ ಅನ್ಯಾಯದ ವಿರುದ್ಧ ಹೋರಾಡಿ ದೊರಕಿಸಿದ ಪ್ರಥಮವಿಜಯದಿಂದಾಗಿ ಹುಡುಗರೆಲ್ಲ ಹರ್ಷದಿಂದ ಹಾರಾಡುತ್ತಿದ್ದಾರೆ (ಆಗಸ್ಟ್. ೪೧) ; ಗಾಂಧೀಜಿ ಹೇಳುತ್ತಾರೆ–'ರಾಟೆಯ ತಿರುಗಿಸಿರಿ! ಸ್ವಾತಂತ್ರ್ಯವ ದೊರಕಿಸಿರಿ' ಎಂದು! (ಇತಿಶ್ರೀ. ೦೩೭).

[ದೊರಕು + –ಇಸು3]

ದೊರಕು (ಕ್ರಿ). ಸಿಗು; ಸಿಕ್ಕು; ಪ್ರಾಪ್ತವಾಗು; ಲಭ್ಯವಾಗು: ದೊರೆ; ವರರಾಜ್ಯಂ ಶ್ರೀಸಹಿತಂ ದೊರಕಲ್ ಕೈಕೊಳ್ಳದಿರ್ಪರಾರ್ (ಪಂಚತಂ. ೧೦೦-೧೩) ; ಮಂಪಮತಿಗಳಿಗೆ ದೊರಕದ ಲೇಸ ನೀಯಬೇಕೆಂದು ಮನದೊಳು ನೆನೆದನು (ಸಿದ್ಧರಾ. ೧-೨೩) ; ತನಗೆ ಮಣಿ ದೊರಕದೆಂಬೊಂದನುತಾಪದೆ ತಪನನೆಯ್ದಿದನೊ ಶರನಿಧಿಗೆಂಬನವೆಸೆವ ರಾಗದಿಂ ಭೋಂಕೆನೆಲಪರಾಂಭೋಧಿಗಿಟ್ಟಿದನಬ್ಜಸಹಾಯಂ (ರಶಕು. ೫-೧೮) ; ಧೇನುವೇತಕೆ ದಾನಗೊಂಬ ಮಹಾನುಭಾವರು ದೊರಕದಿದ್ದರೆ (ಸಂಭಪ. ೧೦-೧೧); ಇರಲಿರಲಿ ತೋಱಿಸುವೆ ಮುಂದಕೆ . . . ದೊರಕು ವಶುಭವ ಬೀದಿಗಲಹವನೆಂದಳು (ತಿರರಾ. ೨-೧-೨೯) ; ಪರಮಪಟ್ಟ್ಯಂಲ ಮಾರ್ಗಮಿಾ ಶರೀರದೊಳಿಲ್ಲಿ ದೊರಕಲರಿಯದು (ಜಿಬಪು. ೭-೨); ದುರ್ಲಭವಾದ ವಸ್ತುಗಳೆಲ್ಲವೂ ಅವನಿಗೆ ದೊರಕಿದ್ದವು (ಪರಿಚೇ. ೧೦).

[<ದೊರೆ1./ತುಳು.ದೊರಕು, ದೊರಂಕು, ದೂರಕ್; ತೆಲು. ದೊರಕು]

ದೊರಗು 'ತರಕು' ನೋ.

ದೊರಗುಉಸುಬು (ನಾ). ಒರಟಾದ ಮರಳು,–ಉಸುಬು; ದಪ್ಪ ಮರಳು: ಹೋಗುವ ದಾರಿಗೆ ದೊರಗುಉಸುಬನ್ನು ತಂದು ಸುರಿದು ಚೆನ್ನಾಗಿ ಮಾಡಿದ್ದಾರೆ (ಅಪೂಪ. ೩೨).

[ದೊರಗು (<ತರಕು) + ಉಸುಬು (<ಉಸುಕು)]

ದೊರಗುಗಾಜು (ನಾ). ಒರಟಾದ ಮೇಲ್ಮೈಯುಳ್ಳ ಗಾಜು; ಪಾರದರ್ಶಕವಲ್ಲದ ಗಾಜು: ಅದರ ಮುಂಗಡೆಯಲ್ಲಿ ಒಂದು ಭೂತಕನ್ನಡಿಯೂ ಹಿಂಗಡೆ ಒಂದು ದೊರಗುಗಾಜಿನ ಹಲಗೆಯೂ ಇವೆ (ವಿಜ್ಞಾ.ವಿ. ೮).

[ದೊರಗು (<ತರಕು) + ಗಾಜು (<ಕಾಜು)]

ದೊರಪಯ್ಯ (ನಾ). ಒಬ್ಬಾತನ ಹೆಸರು: ಪಡಿಯಜಿ ದೊರಪಯ್ಯನ ಪಿರಿಯರಸಿ ಪಾಂಬಬ್ಬೆ ತಲೆವಱಿದುಮೂವತ್ತುಪರಿಸಂ ತಪಂಗೆಯ್ದುಯ್ದಂ ನೋನ್ತುಚ್ಚಮಠಾಣಮೇಱಿದರ್ (ಎಕ. VI, ಕಡೂರು. ೦-೦೩; 971).

[<ದೋರ3 + ಅಪ (<ಅಪ್ಪ1) + ಅಯ್ಯ1]

ದೊರಯ್ಯನಾಯಕ (ನಾ). ಒಬ್ಬಾತನ ಹೆಸರು: ಅಯ್ಯಹರಸರ ಮಗಮ್ ದೊರಯ್ಯನಾಯಕ (ಮ್ಯಆರ. ೧೯೨೪, ೯೩-೪; 1021).

[<ದೋರ3 + ಅಯ್ಯ1 + ನಾಯಕ]

ದೊರೆ1 (ಕ್ರಿ). ೧. ಸಮೀಪಕ್ಕೆ ಬರು; ಬಳಿಸಾರು: ಮುಳಿಯಿಸುವ ಮುಳಿವ ತಿಳಿವುವ ತಿಳಿವೊಲಿಸುವ ದೊರೆವ ನೆರೆವ ರಮಣೀರಮಣಾಕುಳ ಕಳಕಳದಿಂದಂಗಜವಿಳಾಸದೆಱೆವೆಟ್ಟು ನೆಟ್ಟನಿದೆ ಪೆಜತುಂಟೇ (ಶಾಂತಿಪು. ೩-೧೧). ೨. ಕಾಣು; ತೋರು: ಮೂಡದೆಸೆಯೊಳ್ಕಿಂಪು ದೊರೆಯೆ ತಾರಗೆ ಪರೆಯೆ ಕೂಡೆ ತಂಗಾಳಿ ಮುಂಬರಿಯೆ (ಜೈಮಿಭಾ. ೨-೬೩). ೩. ದೊರಕು; ಸಿಕ್ಕು; ಸಿಗು; ಪ್ರಾಪ್ತವಾಗು; ಲಭಿಸು: ಎಮ್ಮ ಮಮ್ಮಂಗಮೆಮಗವಿಾಗಳನುವರಂ ದೊರೆಯಲಾಯ್ತು [ಪಾಣಾಂ. ದೊರೆಯಾಯ್ತು] (ಪಂಪಭಾ. ೧೧-೪೨ ವ) ; ನಗರಾಂಗನೆಯರ್ಮಹೋತ್ಸವಂ ದೊರೆದುದೆನುತ್ತಲಂಪು ವಿಗೆ ನೋಡಿದರಾ ಮನುಜೇಂದ್ರು ಚಂದ್ರನಂ (ಕಾರಪೂ. ೪೭೩) ; ಬಿಜಿಸಡೆಯಾ ಪದಹತಿಗಳಿವ ಪಲತೆಱದ ಜೀವಿಗಳಿಗೆ ವಿಮೋಕ್ಷಂ ದೊಜಿ[ರೆ]ವುದೆಂದಡೆ ಬೊಮ್ಮಯನ ಕೈಯಲಿ ಮರಣವಾದ (ಬಸಪು. ೩೪-೩೬) ; ಗುರುವಿನ ಗುರುಮನಾಗುವ ತನಕ ದೊರೆಯದಣ್ಣ ಮುಕುತಿ (ಪುರಂದ. ೩-೦೪ ಪಲ್ಲವಿ) ; ವಿಶೇಷ ಸುಕೃತದ ಫಲಂ ದೊರೆತುದೆನಗೆಂದವಂ ಬಿದ್ದನಚ್ಯುತನಂಘ್ರಿಗೆ (ಜೈಮಿಭಾ. ೭-೬೩) : ಸೀಮೆಗೆ ಯಿರಪಗೌಡ × ರಡು ಕೈವಡ ಮುಂತಾಗಿ ಸೀಮೆನಹೆನು ಮುಂತಾಗಿ ದೊರೆವ ತರು ಮುಂತಾಗಿ ಭೂಮಿಗೆ ನಾಲ್ಕುಮೂಲೆಗೆ ಕಲ್ಲು ನೆಟ್ಟದ್ದು (ಎಕ. VII, ಶಿವಮೊ. ೯೩-೨೭; ?); ಪರಮಾತ್ಮನ ದರ್ಶನ

ಕೇವಲ ತಪಸ್ಸಿನಿಂದಲೂ ಕರ್ಮಯೋಗದಿಂದಲೂ ದೊರೆಯಬೇಕೆಂಬುದಿಲ್ಲ (ಧರ್ಮಸಾ. ೮೩). ೪. ಉಂಟಾಗು ; ಸಂಭವಿಸು : ಮಂತ್ರಿ ಚತುರೋಪಾಯಂಗಳಂ ಬಲ್ಲೊಡಂ ದೊರೆವೋಲ್ ಚಿನ್ನಕೆ ಸೌರಭಂ (ಸೋಮೇಶ. ೧೧).

[ದೇ.॥ ತೆಲು. ದೊರೆಯು, ದೊರವು]

ದೊರೆ$_2$ (ನಾ). ೧. ಸಮಾನ ; ಎಣೆ ; ಸಾಟಿ; ಸರಿ: "ಸರಿ, ದೊರೆ . . . ಸಂಗಡಂ–ಈ ೧೮ ಸಮಾನಕ್ಕೆ ಪೆಸರ್" (ಕಶಸಾ. ೫೯–೨೯೦) ; ಹರಿಣಧರ ಸರಸಿಜಂಗಳ್ ದೊರೆಯಲ್ತವು ತನಗೆ ತಾನೆ ದೊರೆ ನಿನ್ನ ಮೊಗಂ (ಕವಿರಾ. ೩–೭೭) ; ಇದಱ ದೊರೆಗೆ ಗಿರಿಗಳುಮೊಳವೇ (ಆದಿಪು. ೭–೬೩) ; ಜಾಕವ್ವೆ ಗುಟ್ಟಿದ ಪೆಂಡಿರ್ ದೊರೆಯೇ (ಪಂಪಭಾ. ೦–೪೦) ; ನರನಾರಾಯಣ ರೆಂಬಿರ್ವರುಮೊಡಗೂಡಿದೊಡೆ ಗೆಲ್ವರಾರುರ್ವರೆಯೊಳ್ ನಿರುತಮೆನೆ ನೆಗಟ್ಟಿ ನಿಮ್ಮಿರ್ವರ ದೊರೆಗಂ ಬಗೆವೊಡಗ್ಗಳಂ ನರರೊಳರೇ (ಪಂಪಭಾ. ೧೨–೧೨೩) ; ದೊರೆಗಾಣೆಂ ನಿನಗೆ ಜಿನೇಶ್ವರ ಪೆಱರಂ ನಿನಗೆ ನೀನೆ ದೊರೆಯೆನಿಪೈ (ಅಜಿಪು. ೮–೨೨) ; ತೆನಿರಸದಿಂದಮೃತದ ದೊರೆಯೆನಿಸುವ ಕುಂಕುಮದ ರುಚಿಯನನುಕರಿಸುವ ಮಾವಿನ ಪಣ್ಣಂ (ಧರ್ಮಾಮೃ. ೮–೧೬); ಕಡೆಯಲೆಂದು ಪಾಲ್ಗಡಲೊಳ್ ತಂದಿರಿಸಿದ ಮಂದರಗಿರಿಗೇಂ ದೊರೆಯಾದುದೊ ಪೊನ್ನ ಕೋಂಟೆ (ಮಲ್ಲಿಪು. ೨–೩೧). ೨. ಸರಿಯಾದಂದು ; ಸಮಂಜಸವಾದಂದು : ಕವಿಗಳ ನಾಮಧಾರಕನರಾಧಿಪರೋಳಿಯೊಳೀತನೊಳ್ಳಿದಂ ಕವಿ ನೃಪನೀತನೊಳ್ಳಿದನೆನಲ್ ದೊರೆಯಲ್ತು (ಪಂಪಭಾ. ೧–೦೦); ನಿನ್ನಂ ಪುಸಿಯಾಡಿ ಕಾಡಲೆನಗೇಂ ದೊರೆಯೇ (ಪಂಪಭಾ. ೮–೪) ; ದೊರೆಯೊಳೊಬ್ಬನ ಹಾನಿ ಭಟರೆಲ್ಲರಿಗೆ ದೊರೆ (ಕುವ್ಯಾಶ. ೨–೧೯). ೩. ರೀತಿ ; ಬಗೆ ; ಕ್ರಮ : ಸ್ಯಂದನಾಶ್ವಂಗಳನೊಂದೆ ದೊರೆಯೊಳ್ ಪರಿಯೆ ಪರಿಚೋದಿಸಿ ಬಾಣಪಾತಪ್ರಮಾಣದೊಳ್ ನಿಱಿಸುವುದುಂ (ಶಾಂತಿಪು. ೪–೧೦ ವ) ; ಮದಮಾಂದ್ಯೋತ್ಪಾದನಾಪಹರಣಮಾರಣ ವಶೀಕರಣದ್ವೇಷಣಾದಿಗಳ್ಗೆ ಪೆಱವುವಿಾ ದೊರೆಯವರ್ಕೆ ಪಿರಿದುಮಾಗಮಂಗಳೆ ಪ್ರಮಾಣಂಗಳ್ (ಕಾದಂಉ. ೬೪೮); ಪೂಮಳೆಯಿಾ ದೊರೆಯಕ್ಕುಮೆಂಬಿನಂ ಸುರಿದುದು ಪುಷ್ಪವೃಷ್ಟಿ (ಎಕ. II, ೨೩೪–೩೯ ; ಸು. 1180).

ದೊರೆಗೆ ವರ್ = ಸಮನಾಗು ; ಸಮಾನವಾಗು : ಸಮಕ್ಕೆ ಬರು : ಹಾರಾದ್ಯಾಭರಣಂಗಳಿನಾ ರೂಪಾಶ್ಚರ್ಯಮಾಗೆ ಮಾಣಿಕಚಟ್ಟಂ ನೀರಂಜಿಸಿ ದಳಿವಿಡಿದ ಮಹಾರತ್ನದ ದೊರೆಗೆವಂದುದಾ ಸ್ತ್ರೀರತ್ನಂ (ಆದಿಪು. ೪–೪೨) ; ಖಳರೋಳಿಯೊಳ್ದೊರೆಗೆವಂದನೆನ್ನನದೇನನೆಂದವೆಂ (ಕಾದಂಉ. ೪೦೦) ; ಚತುರಾನ್ವಿತಮೆಂಬ ನೆಗಟ್ತಿಯಿಂದಿಳಾವಂತರೊಳಾರುಮೇಂ ದೊರೆಗೆ ವರ್ಪರೆ ಪೋಲಿಸೆ ಭಟ್ಟಪಾರ್ಯನೊಳ್ (ಲೋಕೋಪ. ೧–೧೧) ; ಹರಿಕಾನ್ತೆಯುಮಿಾ ಕಾನ್ತೆಯ ದೊರೆಗೆ ವರಲ್ಕಾಱಳು (ಎಕ. VI, ಮೂಡಗೆ. ೩೩–೨೪ ; 1129). ದೊರೆಯಾಗು = ಹೋಲಿಕೆಯನ್ನು ಪಡೆ,–ಹೊಂದು ; ಹೋಲು : ನೇಣ್ಬಲೆಯ ತೊಡರೊಳ್ ತೊಡಂಕಿ ನಡುಗುವ ಕುರಂಗಿಯೊಳ್ದೊರೆಯಪ್ಪಳ್ (ವರ್ಧಪು. ೪–೩೭ ವ) ; ಸುರನದಿಯ ಫೇನಪುಂಜದ ಸಿರಿಯಂ ಸಲೆ ತಳೆದು ತೊಳವ ತುಹಿನಾಚಲದೊಳ್ ದೊರೆಯಾದಂ (ಕುಸುಮಾ. ೧–೧೩೧). 'ಒರೆ$_7$' ಪರಾ.

ದೊರೆ$_3$, ಧೊರೆ (ನಾ). ೧. ಒಡೆಯ ; ರಾಜ ; ಪ್ರಭು ; ಅರಸು : ಗಾಂಗೇಯಂ ದೊರೆಯ ಪಿರಿಯ ಮಗನುಂ ಕ್ರಮಕ್ರಮಾರ್ಹನುಮಿರ್ದಂತೆನ್ನ ಮಗಳಂ ಕುಡೆವು (ಪಂಪಭಾ. ೧–೭೦ ವ) ; ಹೊನ್ನುಳ್ಳ ದೊರೆಯಂತೆ ಭಾವಿಸಿಕೊಂಡಂ ಹಮ್ಮಿನಲಿಪ್ಪನೆ ಭಕ್ತನು (ಚನ್ನವ. ಕ. ೧೨೧–೨೭೭) ; ದೊರೆಯೊಳ್ ಸ್ನೇಹವನಾಂತವಂ ಬಡವರಂ ತಾಂ ನೋಟ್ಟನೇ ಪ್ರೀತಿಯಿಂ (ಸೋಮೇಶ. ೪೦) ; ದೊರೆ ತತ್ತರುಳಿದರು ನೆರವು ಬಹುದು (ಕುವ್ಯಾಶ. ೨–೧೯) ; ಮಗಳಿಗೆ ವರನಾವ ಧರೆಯ ದೊ[ಪಾಠಾಂ. ಧೊ]ರೆಗಳೊಳಗೆಂದ (ವರ್ಧಚ. ೪–೮೩) ; ದೊರೆ ಎನ್ನ ಒಲವು ಸುಸ್ಥಿರವೆಂದೆಲ್ಲರ ಹಗೆ ತರವಲ್ಲ (ಪುರಂದ. ೨–೪೩–೨) ; ದೊರೆಯ ರಥವಾದರೂ ಎಣ್ಣೆಯಿಲ್ಲದೆ ತಿರುಗದು (ಗಾದೆ). ೨. ಯೂರೋಪಿನಿಂದ (ವಿಶೇಷವಾಗಿ ಇಂಗ್ಲೆಂಡಿನಿಂದ) ಬಂದ ಮನುಷ್ಯ ; ಇಂಗ್ಲೀಷ್ ಅಧಿಕಾರಿ, ಕಾಫಿ ತೋಟದ ಒಡೆಯ, ಪಾದ್ರಿ ಮುಂತಾದವರು : ದೊರೆಗಳ ಮನಸ್ಸಿಗೆ, ಅವಳು ಆತ್ಮಹತ್ಯೆ ಮಾಡಿಕೊಂಡಿರಬೇಕೆಂಬ, ಭೀತಿ ಹುಟ್ಟಿತು (ಜೋಮದು. ೯೪) ; ದೊರೆಗಳು ಪುಸ್ತಕಗಳನ್ನು ಇನಾಮು ಕೊಡುವದಕ್ಕೆ ಬರುತ್ತಾರೆ (ಮುಂಬಯಿ. ೧–೧೪). ೩. ಸಾಮರ್ಥ್ಯ ; ಪರಾಕ್ರಮ : ಪರಿಭವದ ಪೊಱೆಯನಾಂತಿರ್ದರಾತಿಗಳ್ಗಳ್ಕಿ ತನ್ನ ಕುಲಮುಂ ಚಲಮುಂ ದೊರೆಯುಂ ಕಿಡೆ ದಾಟ್ವಂ ಗಂಡರೂಪಿನೊಳ್ ಗಂಡನಲ್ತು ಪೆಂಡತಿಯೆ ವಲಂ (ಆದಿಪು. ೧೨–೯೬). ೪. ಹಿರಿಮೆ ; ಯೋಗ್ಯತೆ. 'ದೊರೆಗೆಡಿಸು' ಪರಾ. ೫. ಶ್ರೇಷ್ಠತೆ ; ಆಧಿಕ್ಯ. 'ದೊರೆಪೆಟ್ಟು$_3$' ಪರಾ. ಧೊರೆ : ೧. ನಿಮ್ಮ ಧೊರೆಗೆ ಶೀಘ್ರವಾಗಿ ಅರಿಕೆಮಾಡು (ಕೃಪಾಸ. ೫೩) ; ಆ ಸಮಿಾಪದ ಮಹೀಶೂರಪುರದ ಧೊರೆಗಳಂ ಕಾಪಿಟ್ಟುಕೊಂಡು ಇರುತ್ತಿರುವಳು (ಬೆಟ್ಟಅ. ೧೬–೨೫). ೬. ಅಧಿಕಾರಿ (?) : ಮಳಿಗೆಯೊಳಗೈನೂರ್ವ್ವರ್ ಸ್ವಾಮಿಗಳ್ ಬಿಟ್ಟಾಯಂ ಹೊಂಗೆ ಕೊಟ್ಟವರಲ್ಲಿಯಡಕೆಯೊಂದು ಕೊಂಡವರಲ್ಲಿಯಡಕೆಯೊಂದು ಎಣಿಸಿದ ಧೊರೆಗಳಲ್ಲಿ ಪ್ರತ್ಯೇಕವಡಕೆಯೊಂದು (ಎಇ.XX, ೧೨–೫೩ ; 1167).

[ದೇ.॥ ತಮಿ. ತುರೈ, ಮಲ; ತುರ ; ತುಳು. ದೊರೆ, ಧೊರೆ ; ತೆಲು. ದೊರ, ಧೊರ]

ದೊರೆಕಾರ್ಯ (ನಾ). (ಶ್ರೀಮಂತಿಕೆಯ) ಆಡಂಬರ : ಕಡೆವಳ್ಳಿ ಬೀಟುಮನೆ ಮುಂಗೆಯ್ವಾರ್ಭಟಂ ಸಾಲದಾ ದೊರೆಕಾರ್ಯಂ ಘೃತಮಿಲ್ಲದೂಟದ ಸುಖಂ . . . ಬಱಿಗೈಯಂ ಸುಱಿದಂತೆ (ಸೋಮೇಶ. ೧೭).

[ದೊರೆ$_3$ + ಕಾರ್ಯ]

ದೊರೆಕುಮಾರಿತಿ (ನಾ). ದೊರೆಯ ಮಗಳು ; ರಾಜಕುಮಾರಿ : ದೊರೆಕುಮಾರಿತಿಯರಾ ಬೀದಿಯೊಳರ್ತಿಯೊಳೆಡೆಯಾಡುತಿಹರು (ಕಂನವಿ. ೭–೧೯).

[ದೊರೆ$_3$ + ಕುಮಾರಿತಿ]

ದೊರೆಕೊಳ್$_1$, ದೊರೆಕೊಳ್ಳು (ಕ್ರಿ). ೧. ಸಿಕ್ಕು ; ಸಿಗು ; ಲಭಿಸು ; ಪ್ರಾಪ್ತವಾಗು : "ದೊರೆಕೊಳ್ – ಪ್ರಾಪ್ತೌ" (ಶಮಧಾ) ; ಧರಣೀಶರ ಕಾರುಣ್ಯಂ ದೊರೆಕೊಣ್ಡೊಡೆ (ಎಇ. XIII, ೩೩೦–೧೪ ; 929) ; ಪೂರ್ವಪುಣ್ಯಫಲದಿಂ ದೊರೆಕೊಂಡ ವಿಮಾನಂ (ಆದಿಪು. ೨–೬೮); ಸೌಖ್ಯಮದೆಂತುಂ ದೊರೆಕೊಂಡಿತಿಲ್ಲ ಹೃದಯಕ್ಕೋರಂತೆ (ಕಾದಂಪೂ. ೩೪೭); ಸಂದ ತಿರಿಕಂಗೆ ತೊವೆ ತುಪ್ಪಂ ದೊರೆಕೊಳಲುಣ್ಮೆ ನಲಿವ ತೆಱದಿಂ (ಧರ್ಮಾಮೃ. ೯–೩೦) : ದಿವಸಶ್ರೀ ದೊರೆಕೊಂಡ ಕೋಕಮಿಥುನಂ . . . ವಿರಾಜತ್ಕಳಹಂಸಯುಗ್ಮಮೆನೆ ಕೂಡಿ ಕ್ರೀಡಿಸುತ್ತಿರ್ಪರುತ್ಸವದಿಂದಾ ವಿಜಯಾವತೀಯುವತಿಯುಂ ವಿಶ್ವಂಭರೋರ್ವೀಶನುಂ (ಕುಸುಮಾ. ೩–೨೭) ; ಕೇಳಿದಗೆ ಮೋಕ್ಷದ ಮಂದಿರವು ದೊರೆಕೊಳ್ಗು (ಸಂಭಪ. ೮–೧೪೨). ೨. ಉಂಟಾಗು ; ಸಂಭವಿಸು; ಕೂಡಿಬರು : ನಿಮ್ಮ ಮನದಿಂ ಮಿಥ್ಯಾಕಳಂಕಂ ತೆರಳ್ದಿನಿಸುಂ ಪೋಗದು ಕಾಲಲಬ್ಧಿ ದೊರೆಕೊಂಡಂದಲ್ಲದೇಂ ಪೋಕುಮೇ (ಆದಿಪು. ೨–೨೨) ; ಪ್ರಸವಸಮಯಂ ದೊರೆಕೊಳೆ (ಪಂಪಭಾ. ೧–೦೪೪ ವ) ; ನುಡಿ ತಡವಪ್ಪುದೊಂದು ಮೊಗದೊಳ್ ಮುಱುಕಂ ದೊರೆಕೊಳ್ವುದೊಂದು . . . ಕಳ್ಗುಡಿದವರಂದಮಿಂತು (ಪಂಪಭಾ. ೨–೪೯) ; ಆ ಪುಲಿಯ ಪೂರ್ವಭವವೃತ್ತಾಂತಮುಮಂ ಕಾಲಲಬ್ಧಿ ದೊರೆಕೊಳೆ ತೊಱೆದಿರ್ದುದುಮನಱಿಪಿ (ಜಾವುಂಪು. ೨೫) ; ಗುರುವಂ ಲಘುಸಂಧಾನದೆ ನರನಿಸೆ ಗುರುಲಘುವಿಮಿಶ್ರಿತಂ ದೊರೆಕೊಳೆ ತದ್ಗುರು ತಚ್ಛಂದೋವೃತ್ತಿಗೆ ದೊರೆಯೆನಿಸಿರ್ದುದು ಮನಕ್ಕೆ ದುರ್ಯೋಧನನಾ (ಗದಾಯು. ೪–೪೮) ; ಇನಿತೊಂದಾಕ್ರೋಶಮಿಾ ನಾಗಶರ್ಮನೊಳೇಕಾರಣದಿಂದಮಿಂದು ದೊರೆಕೊಂಡತ್ತುಂ

(ಸುಳುಮಾ. ೭-೪೩) : ಪುರುಷುಗೆ ಸುದೈಕ್ಯತ್ವಂ ದೊರೆಕೊಂಡೊಡೆ (ಸಮಪ. ೫-೧೧) : ಬಲಿ ಕಾಲಲಬ್ಧ ದೊರೆಕೊಳೆ ಬಲವಂದಾ ಯತಿವರಂಭ್ರಯ್ಯಗ ದೊಳ್ ಬಿಟ್ಟು (ನೇಮಿಪು. ೫-೩೫) ; ಸ್ವರದಿಂ ಯಲದಿನನಾದಿಷ್ಟರೇಫದಿಂ ಪರದೊಳಮರ್ದು ತೋಜಿ ವರ್ಗಂ ದೊರೆಕೊಳ್ಗುಂ ವಾದೇಶಂ (ಕಾವ್ಯಾವ. ೬೩) ; ಪರಿಹಾಸಹೇತುಭಾವನೆ ದೊರೆಕೊಳೆ ಚಿತ್ರಕ್ಕೆ ಹಾಸ್ಯ ವೆಂಬ ರಸಂ ತಾಂ ಸರಸೋಕ್ತಿಗಳಿಂದವುದಾಹರಿಪೆಂ (ಶೃಂಗಾರ. ೧-೬೬). ೩. ಈಡೇರು ; ನೆರವೇರು : ಬಗೆ ದೊರೆಕೊಂಡುದಿಲ್ಲಿದು ವಿಧಾತ್ರನ ದೋಷ ವೊ (ಪಂಪಭಾ. ೧೩-೧೦೩) ; "ಲಭಿಸು" (ಪಂಪದೀ. ೫೬೦). ೪. ಸಿಕ್ಕಿ ಬೀಳು ; ವಶವಾಗು ; ಅಧೀನವಾಗು : ದೊರೆಕೊಂಡೆಯೆಂತುಮುಂ ಪಂಜರಬಂಧನವಾದುದೆಂತು (ಕಾದಂಪು. ೯೧). ೫. ಕಾಣು ; ತೋರು ; ಪ್ರಕಟವಾಗು : ಉರದೊಳ್ ಫಣಿ ಕರದೊಳ್ ಬಲ್ ಶರದೊಳ್ [ತೊ]ಜಿ ತೊಜಿಯ ಕೆಲದೊಳೆಸೆದಿರೆ ವೆಜಿ ಮುಂಗೊರಲೊಳ್ ಕಜಿಮಜಿಯಿಲ್ಲದೆ ದೊರೆಕೊಳೆ ಪ್ಯಡಸಡಿಗೆ ಹರಿಗನೆಱಗಿದನಾಗಳ್ (ಪಂಪಭಾ. ೪-೩೪) ; ಗುಣಲೋಪಂ ವರಶಬ್ದಶಾಸ್ತ್ರದೊಳ್ ತಾಂ ದೊರೆಕೊಳ್ಗುಂ (ವರ್ಧಪು. ೧-೪೭). **ದೊರೆಕೊಳ್ಳು** : ೬. ಪಡೆ ; ಹೊಂದು : ಸೀತಾ, ಚಂದ್ರಮತೀ, ದಮಯಂತೀ ಮೊದಲಾಗಿ ಸತಿಯರು ದೊರೆಕೊಂಡ ಸುಖವೆನು? (ಭಾರದ. ೪೮೩). [ದೊರೆ₁ + ಕೊಳ್₁]

ದೊರೆಕೊಳ್₂, ದೊರೆಗೊಳ್ (ಕ್ರಿ). ಸಮಾನವಾಗು ; ಸಾಟಿಯಾಗು ; ಹೊಂದಿಕೊಳ್ಳು : ದೊರೆಕೊಂಡಿರೆ ಸೊಗಯಿಸುಗುಂ ಪುರಾಣಕಾವ್ಯ ಪ್ರಯೋಗದೊಳ್ತತ್ಕಾಲಂ ವಿರಸಂ ಕರಮವು ದೇಸಿಗೆ ಜರದ್ಧೂವಿಷಯ ಸುರತರಸರಸಿಕತೆವೊಲ್ (ಕವಿಗಾ. ೧-೫೦) ; ಪರಿಗೀತಾರ್ಥಂ ಪೂರ್ವಾಪರ ದೊಳ್ಳಗೆವಾಗಳಿಂದುವೊಂದಱೊಳೊಂದುಂ ದೊರೆಕೊಂಡೊಂದದೊಡದು ದುಷ್ಕರಮೆ ವಿರುದ್ಧಾರ್ಥಮೆಂಬುದಾದಂ ದೋಷಂ (ಕವಿಗಾ. ೧-೮೧) ; ಸುರಿವರಲೊಂದು ಬೆಳ್ಸರಿಯದಾತ್ಮತನೂಭವನುತ್ಸಮಾಂಗದೊಳ್ ದೊರೆಕೊಳೆ ನಿಲ್ದದಲ್ಲಿ ಕುಸುಮಂ ಕೆಲವಲ್ಲುಗೆ ತನ್ನ ರತ್ನವಿಸ್ಫುರಿತಕಿರೀಟಮಂ ಕವಿದು ತಾನೆ ನರಂಗೆ ಕಿರೀಟನಾಮಮಂ ಸರಸದಿನಾಗಳುಚ್ಚರಿಸಿ ಸಾಹಸಮಂ ಪೊಗಟ್ಟಂ ಸುರಾಧಿಪಂ (ಪಂಪಭಾ. ೫-೧೦೩) ; ನಾಲ್ಕುಂ ಚರಣಂಗಳು ಮೊಂದರ್ಕೊಂದು ದೊರೆಕೊಂಡಿರೆಯದು ಸಮತ್ವಮೆನಿಪುದು (ಅಪ್ರತಿ. ೯-೧). **ದೊರೆಗೊಳ್** : ಇವಂ ಧರ್ಮದೊಳ್ ಧರ್ಮಸುತನಂ ನೇಮದೊಳ್ ರಾಮಚಂದ್ರನಂ ದೊರೆಗೊಂಡು (ಚಳವಿ. ೬-೦೦). [ದೊರೆ₂ + ಕೊಳ್₁]

ದೊರೆಕೊಳಿಸು₁ (ಕ್ರಿ). ೧. ಲಭಿಸುವಂತೆ ಮಾಡು ; ದೊರಕುವಂತೆ ಮಾಡು : ಪರ[ವ]ಸದ ಬಗೆಯೊಳೊಂದಂ ದೊರೆಕೊಳಿಸುವುದಱಿಗತರ್ಕ ತೋವಸ್ಥಾನಂ ನಿರುತಂ ಸಮಾಹಿತಾಳಂಕರಣಾಂತರವಮಕ್ಕುಮಿಂತು ತದುದಾಹರಣಂ (ಕವಿಗಾ. ೩-೦೫೬) : ಪುರುಪರಮೇಶ್ವರನಂದನ ದೊರೆಕೊಳಿಸುಗೆ ನಿನಗೆ . . . ಮಂಗಳಮಂ (ಆದಿಪು. ೦೪-೫೩) ; ನಾಳೆನುಣಿಸ ನೆನಗೆ ದೊರೆಕೊಳಿಸಿ ಬಂದುದು ಕರವೊಳ್ಳಿತಾಯ್ತೆಂದು ನಗುತಿರ್ವನ್ನೆಗಂ (ಪಂಪಭಾ. ೩-೩೬ ಪ) ; ಭಕ್ತಿಸಂವದವ ದೊರೆಕೊಳಿಸಿ ವಾರಿಸಿದ ವರಮಗುರುವೇ (ಶಿವಗೀ. ೬೫-೪೦೨) ; ವರಿಣಾಮವಶದೆ ಜನ್ಮಾಂತರದೊಳ್ ಶುಭಮಶುಭಮೆಂಬ ಕರ್ಮಂಗಳೊಳಾರ್ ದೊರೆಕೊಳಿಸಿದರಾವುದನಾ ದೊರೆಯದೆ ಫಲಮಕ್ಕುಮವರ್ಗೆ ವೆಱತಾದವುದೇ (ಕಂದ್ರಪು. ೩-೬೬). ೨. ಉಂಟುಮಾಡು : ತರಳತರಲೋಚನಂ ನಿರ್ಭರರಾಗರಸಂ ಮುಖಾರ ವಿಂದಂ ನಿನ್ನಾ ದೊರೆಕೊಳಿಸಿದೊಸಗೆಯೇಂ ಬಂಧುರಂ (ಕವಿಗಾ. ೩-೧೬) ; ದೊರೆಕೊಳಿಸುವ ತತ್ಕ್ರಿಯೆಯೊಳ್ ವರಿಣಮಿಸುವ ಫಲಮನಸ್ತಶಸ್ತ ತನುತ್ರೋತ್ಕರರಹಿತಂಗಸಹಾಯಂಗರಾತಿಬಲಜಯಮಸಳವೆ ದೊರೆಕೊಳಿ ಸುವವೋಲ್ (ಆದಿಪು. ೦೫-೦೭) ; ಕರವಿಲುಳಿತ ನೀಲಕಬರಿಭರಮಂ ಪಿಡಿದುಂ ವರಿಧವಿಸಲ್ ಕೃಷ್ಣಗೆ ವಿಗೆ ದೊರೆಕೊಳಿಸದೆ ಕೋಪಮುಂ ಮನಸ್ತಾಪಮುಮಂ (ಗದಾಯು. ೧-೫೯) ; ಭಾವಿಸಲ್ಕೌತುಕಪೇನಂ ಪಾಡದೇನಂ ದೊರೆಕೊಳಿಸದೂ ಸಂಸಾರಿಗೇನೇನನೇನಂ (ಸುಳುಮಾ. ೫-೪೮) ; ಮಹಾಬಲನ ಭುಜಾಪರಿಘಕ್ಕೆ ಕುಂದನಿನಿಸಂ ದೊರೆಕೊಳಿಸದನೆಂದೊಡೇಂ ಮಯಂ ದುರ್ಜಯನೋ (ಪಂರಾಮಾ. ೧೪-೦೬೯) : ಪಿರಿಮಂ ಬಿದಿ ನಿಜ ಜನ್ಮಾಕರವೆನಿಸಿದ ಪದ್ಮಜಾತಿಗಂ ಮ್ಲಾನತೆಯಂ ದೊರೆಕೊಳಿಸಿದನೆನೆ (ಪಂದ್ರಪು. ೯-೦೪). ೩. ಈಡೇರಿಸು ; ನೆರವೇರಿಸು : ಅಮರಸಾರ್ಥಕರೆಲ್ಲಂ ನೆರೆದು ವಿವಾಹಪುನಾಕೆಗೆ ದೊರೆಕೊಳಿಸಿದರ್ (ಆದಿಪು. ೬-೪೬). ೪. ಸೇರಿಸು ; ಕೂಡಿಸು : ಪಿರಿದಾಯಾಸದೆ ಗುಣಮಂ ದೊರೆಕೊಳಿಸಿದೊಡಂ ಖಲಂಗೆ ಗುಣಮಂ ಪಶ್ಚಾತ್ಕರಿಸಿ ಗುಣಿಯುಂ ವಿಭೇದಿಪ ಪರಿ ತೀಕ್ಷ್ಣ ಮುಖಿಂಗೆ ಸೂಚಿಯಂತಿರೆ ಸಹಜಂ (ಕಬಕಂ. ೧-೧೬).

[ದೊರೆಕೊಳ್₁ + – ಇಸು₅]

ದೊರೆಕೊಳಿಸು₂ (ಕ್ರಿ). ೧. ಹೋಲಿಕೆಗೊಳ್ಳು ; ಹೋಲು ; ಸಮವಾಗಿ ಕಾಣು : ಶರದುದಿತಶಶಿಕರನಿಂ ಸರಸಿರುಹಮುಮಿಾ ತ್ವದೀಯ ವದನ ಮುಮಿನಿತುಂ ದೊರೆಕೊಳಿಸುವೊಡೆ ಪರಸ್ಪರವಿರೋಧಿಗಳ್ ನಿರುತಮೆನೆ ವಿರೋಧೋಪಮಿತಂ (ಕವಿಕಾ. ೩-೭೫). ೨. ಸರಿಯಾಗಿ ಕಂಡುಹಿಡಿ ; ಗ್ರಹಿಸು : ಸ್ಮರನಸ್ತ್ರಸಮಿತಿಯದು ನಿರ್ಭರಮಂಗಮನುರ್ಚಿ ಪೋಗೆಯುಂ ಪೋಬಟ್ಟಿಯುಂ ದೊರೆಕೊಳಿಸಲಾಗದದಱಿಂ ಶರತತಿಯಲ್ತೆಂಬುದಿಂತು ಧರ್ಮಾಪೋಹಂ (ಕವಿಕಾ. ೩-೦೮೫). [ದೊರೆಕೊಳ್₂ + – ಇಸು₅]

ದೊರೆಕೊಳ್ಳು 'ದೊರೆಕೊಳ್₁' ನೋ.

ದೊರೆಗದ್ದುಗೆ (ನಾ). ೧. ರಾಜನ ಪೀಠ,–ಸಿಂಹಾಸನ. ೨. ರಾಜತ್ವ : ತೊರೆದು ದೊರೆಗದ್ದುಗೆಯನಿಲ್ಲಿಗೈತಂದನೈಸೆ (ಶ್ರೀರಾಮಾ. ೩೦೬-೫೫೫). [ದೊರೆ₃ + ಗದ್ದುಗೆ₂ (<ಗರ್ದುಗೆ₂)]

ದೊರೆಗಲಿ (ನಾ). ಸರಿಸಮಾನನಾದ ಪರಾಕ್ರಮಿ,–ಕಲಿ : ಹರಣದ ಬಿಯಕೊಂದಿನಿಸುಮನೆಣಿಸದ ದೊರೆಗಲಿಗಳ್ ಬಿನದಕೆ ನಡೆವಂದದಿ ಹರಿಸಂ ಎಗೆ ನಡೆತಂದರ್ (ಆಯುಕಾ. ೬-೩೪). [ದೊರೆ₂ + ಕಲಿ₃]

ದೊರೆಗಾಣ್ (ಕ್ರಿ). ಸಮಾನವಾಗಿ ಕಾಣು ; ಸರಿಯಾಗಿ ಕಾಣು : ದೊರೆಗಾಣಂ ನಿನಗೆ ಜನೇಶ್ವರ ವೆಱರಂ ನಿನಗೆ ನೀನೆ ದೊರೆಯೆನಿಪೈ ಮಂದರಗಿರಿಗೆ ಮಂದರಾದ್ರಿಯೆ ದೊರೆ ಜಲಧಿಗಗಾಧಜಲಧಿ ದೊರೆ ವೆಱವೊಳವೆ (ಅಜಿಪು. ೯-೩೩). [ದೊರೆ₃ + ಕಾಣ್]

ದೊರೆಗಿಡಿಸು 'ದೊರೆಗೆಡಿಸು' ನೋ.

ದೊರೆಗಿಡು (ಕ್ರಿ). ೧. ಸಾವರ್ಥ್ಯವನ್ನು ಕಳೆದುಕೊಳ್ಳು ; ಪರಾಕ್ರಮವನ್ನು ಕಳೆದುಕೊಳ್ಳು ; ಅಸಮರ್ಥವಾಗು : ಶರಚಾಪಚಕ್ರಭೀಕರಕರ ವಾಳಾಯುಧವಿರಾಜಿ ಪುತ್ಕರಯುಗವಿಂ ದೊರೆಗಿಡೆ ವೆಱಂಗೆ ಮುಗಿವುದೆ (ಆದಿಪು. ೦೩-೧೦೦). ೨. ಹಿರಿಮೆಯನ್ನು ಕಳೆದುಕೊಳ್ಳು ; ಅಯೋಗ್ಯವಾಗು : ದೊರೆಗಿಡೆ ಬಾಯ್ಗೆ ಬಂದುದನೆ ಬಯ್ದಂ (ಶೃಂಗಾರ. ೩-೧೫). [ದೊರೆ₃ + ಕಿಡು (<ಕೆಡು₁)]

ದೊರೆಗೆಡಿಸು, ದೊರೆಗಿಡಿಸಂ (ಕ್ರಿ). ಯೋಗ್ಯತೆ, ಹಿರಿಮೆ ಮೊದಲಾದವನ್ನು ಕಡಮೆ ಮಾಡು,–ಕೀಳಾಗಿಸು : ಸರ್ವೇಶನ ನಿಶ್ಚಳತಪದುರ ವಣೆಯ ತೇಜಮಂ ದೊರೆಗೆಡಿಸಲ್ ಕಳರವದಿಂ ಬಗ್ಗಿಸುವರಿಗಳಿಗಳ ಚಪ್ಪ ರಣೆಯೊಂದೆ ಸಾಲದೆ (ಗಿರಿಕ. ೬-೬೩) ; ವರುಣನ ಪುರುಳುಗೆಡಿಸಿ . . . ಧನದನನು ದೊರೆಗೆಡಿಸಿದನೀಶಾನ್ಯನನಿಳೆಯೊಳು ತಿರಿದುಣಿಸಿದನದಟಿಂದ (ತ್ರಿಪುಸಾಂ. ೬-೬೬). **ದೊರೆಗಿಡಿಸು** : ಕುರುವೃದ್ಧಂ ಕುಲವೃದ್ಧಂ ಸಂತ್ಸುತಂ ತಕ್ಕನೆಂದು ನಂಬಿದ ಸಭೆಯೊಳ್ ದೊರೆಗಿಡಿಸಿ ನುಡಿದೊಡೇ ನೊಲವರಮೆನ್ನದೆ ನೀನುಮದನೆ ಕೊಂಡೆಸಗುವ್ಯದೇ (ಪಂಪಭಾ. ೬-೪೪) ; ಮನುಜರೆಲ್ಲರ ವೆಂಪಂ ದೊರೆಗಿಡಿಸಿ ವೀರಗಜ್ಜನ ಹನುಮುಂ ಧರೆ ಪೊಗಳಲು

ಸುರಗತಿ ಪೋಪ (ಎಕ. VII, ಶಿವಮೊ. ೫೬-೨೬ ; 1125) ; ದೊರೆಗಿಡಿಸಿ ನುಡಿದು ಪರನಂ ಪರಿಭವಿಸಿಯುಮವನ ಮನದೊಳಾದಂ ಖೇದಂ ದೊರೆ ಕೊಂಡೊಡಂತೆ ಸುಖಿಯಿಪ ನರಂಗೆ ಮಾರಕರೆ ಮೆಚ್ಚಿಯಟ್ಟರೆ ಬಳಿಯಂ (ಉಸಾರ. ೪೭-೨೮೫). [ದೊರೆ$_3$ + ಕೆಡಿಸು$_1$]

ದೊರೆಗೆಡು (ಕ್ರಿ). ಕ್ರಮತಪ್ಪು ; ರೀತಿತಪ್ಪು : ರಘುರಾಮನಂಗನೆಯನೆನ್ನಂ ಸೀತೆಯಂ ಪಾತಕಂ ದೊರೆಗೆಟ್ಟುಯ್ದಪಂ (ಪಂರಾಮಾ. ೯-೧೪೩) ; ದೊರೆಗೆಟ್ಟು ಹುಸಿದೊಡು ನರಕ ರಾಜ್ಯಾಂತರಂ ನರಕವರಸುಗಳಿಗಾದೇಶವೆಂದೆನೆ ನರಕಿ ನರಕಕ್ಕೆ ತೆಕ್ಕುವನೆ (ಹಡಳಾ. ೧೦-೨೨) ; ದೊರೆಗೆಟ್ಟ ಮಾತು ಸೊಕ್ಕುವ ತಕ್ಕೆ ರಾಜಿಸೆ ನೆರೆದರನೇಕ ಬಂಧಗಳಿಂದೆ (ತ್ರಿಭುತಿ. ೧೩-೪೨). [ದೊರೆ$_2$ + ಕೆಡು$_1$]

ದೊರೆಗೊಳ್ 'ದೊರೆಕೊಳ್$_2$' ನೋ.

ದೊರೆತನ (ನಾ). ರಾಜನಾಗಿರುವಿಕೆ ; ರಾಜತ್ವ : ದೊರೆತನವದಿಲ್ಲೀತಗೆಂದಡೆ ದೊರೆಯ ಮಗನೀ ಊರೊಳಗೆ ಸತ್‌ಪುರುಷನಲ್ಲೆಂದೂಹಿಪಡೆ ಪುರುಷಾರ್ಥಪರ ನಾನು (ಬಸಪು. ೪೦-೧೫) ; ಉರಗನ ತುಳಿದ . . . ದೊರೆತನದೇಳ್ಗೆಯ ತೋಱಿಂದು ಧೂರ್ಜಟಿ ಶರತತಿಯಿಂದಲಿಕ್ಕಿದನು (ಮೋಹತ. ೩೯-೩೪) ; ದೊರೆತನದ ಬಾಳು ಮತ್ತು ಕೇಳಯ್ಯ ಕೃಷ್ಣ (ಪುರಂದ. ೨-೨೦೪-೧) ; ಎಮ್ಮ ರಾಜ್ಯಗಳ ಸುತ್ತಿ ಸುಳಿದು ಧೂಳಿಪಟಮಾಡೆ ನಮಗಿನ್ನೆತ್ತಣ ದೊರೆತನವೆಂದ (ಕಂನವಿ. ೧೭-೬೬) ; ಶಲನೆಂಬ ರಾಜನು ದಕ್ಷಿಣದೇಶದಲ್ಲಿ ದೊರೆತನವನ್ನು ಮಾಡುತ್ತಿದ್ದನು (ನೀತಿಚಿಂ. XI, ೧೨).

[ದೊರೆ$_3$ + – ತನ]

ದೊರೆತಾಯಿ (ನಾ). ರಾಜನ ತಾಯಿ ; ರಾಜಮಾತೆ : ಅದೆ ಕೋ, ಬರುವಳು . . . ದೇವರ ಕಣ್ಬೊಳಪಿನ ದೊರೆತಾಯಿ (ಪಾರಸಿ. ೮-೧೭೬).

[ದೊರೆ$_3$ + ತಾಯಿ (<ತಾಯ್)]

ದೊರೆನಿರಿಗೆ (ನಾ). ರಾಜನಿಗೆ ತಕ್ಕಂಥ ಮರ್ಯಾದೆ,–ರೀತಿ ; ರಾಜ ಮರ್ಯಾದೆ ; ರಾಜಯೋಗ್ಯವಾದ ಗೌರವ : ದೊರೆಯನುಪಚರಿಸಿದನು ದೊರೆನಿರಿಗೆಯಿಂ (ಶ್ರೀರಾಮಾ. ೨೦೮-೨೦೪).

[ದೊರೆ$_3$ + ನಿರಿಗೆ (<ನಿಱಿಗೆ)]

ದೊರೆಪಾಟಿ (ನಾ). ದೊರೆಯ ಅಂತಃಪುರ : ಹರಿಹರದೇವಿ ನಿಮ್ಮಮ್ಮ ನೊರ್ವಳೆ ಪಟ್ಟದರಸಿ ರಾಯಗೆ . . . ಮಿಕ್ಕ ನಾವೆಲ್ಲರು ದೊರೆಪಾಟಿ ಯೂಳಿಗದವರು (ಕುರಾಸಾಂ. ೨೬-೧೦೯).

[P ಇದು 'ದೊರೆಪಾಡಿ' ಎಂಬುದರ ಅಪಲಿಖಿತವಿರಬಹುದು]

ದೊರೆಮಗ (ನಾ). ಅರಸನಮಗ ; ರಾಜಕುಮಾರ : ಹಿರಿತನದ ಪೆರ್ಮೆಯುಳ್ಳ ದೊರೆಮಗನಾದರೇನು ಸಲ್ಲದೊ ಈ ಕಾರ್ಯ (ಪುರಂದ. ೨-೨೦೪-೧) ; ಅತಿಸುಲಭಸ್ವರ್ಗ ದೊರೆಮಗನ ಮೇಲೆ ಹೂಡಿತ್ತು ಘೋರಯುದ್ಧ (ಶಿಲಾಲ. ೫೫-೮) ; ಹುಡುಗನು ದೊರೆಯ ತೋಟದಲ್ಲಿ ಆಡುತ್ತಿರುವಾಗ ಒಂದು ಕಣಜ ಹಾರಿಬಂದು ದೊರೆಮಗನ ಕಣ್ಣನ್ನು ಕಡಿಯಿತು (ನೀತಿಚಿಂ. III, ೧೨) ; ದೊರೆಮಗನಿಗೆ ಉಡಿದಾರ ಸಿಕ್ಕಲಿಲ್ಲ (ನೀತಿಚಿಂ. VIII, ೧೧) ; ನಾನು ಕಲಿತ ವಿದ್ಯೆಯನ್ನು ಸಂತೋಷದಿಂದ ದೊರೆಮಗನಿಗೆ ಕಲಿಸಿಕೊಡುತ್ತೇನೆ (ಹಾಹುತ್ತ. ೮೧). [ದೊರೆ$_3$ + ಮಗ]

ದೊರೆಮಗಳು (ನಾ). ಅರಸನ ಮಗಳು ; ರಾಜಕುಮಾರಿ : ಒಲುಮೆ ವೊಲೆ ಸವಿಯಾದ ಗಾನವನುಲಿವ ದೊರೆಮಗಳೆಂಬೆನೋ! (ಇಂಗೀತ. ೧೨-೨೫).

[ದೊರೆ$_3$ + ಮಗಳು (<ಮಗಳ್)]

ದೊರೆಮುಗಿಲು (ನಾ). ದೊಡ್ಡಮುಗಿಲು ; ರಾಜಮುಗಿಲು : ದೊರೆ ಮುಗಿಲು ತರೆಮುಗಿಲು ನಿಡುಮೋಹರದ ಮುಗಿಲುಪ್ಪರದ ಮುಗಿಲು ಬ್ಬರದ ಝಾಡಿಯ ಜೋಡಿಗಳ ಜಂಗಳದ ಮುಗಿಲಿನಲಿ ತರಣಿ ಶಶಿ ತಾರಾ ಗೃಹಂಗಳ ಹರವು ನಿಂದುದು (ತೊರರಾ. ೪-೬-೫).

[ದೊರೆ$_3$ + ಮುಗಿಲು (<ಮುಗಿಲ್)]

ದೊರೆಮೋಡಿ (ನಾ). ರಾಜನಿಗೆ ತಕ್ಕ ಠೀವಿ ; ರಾಜಠೀವಿ, – ಗಾಂಭೀರ್ಯ : ಬೆಱಗಾದ ಸಿಂಗರ ಬೆಱಗಿನ ನಗೆನೋಟ ದೊರೆಮೋಡಿ ಗೂಡಿ ಬಪ್ಪಾಗ ಭರತರಾಜಗೆ ತಕ್ಕ ಮೈದುನನಿವನು (ಭರಡ. ೩೯-೯೦).

[ದೊರೆ$_3$ + ಮೋಡಿ]

ದೊರೆಯ (ನಾ). ಸಾಟಿಯಾದ ವ್ಯಕ್ತಿ ; ಸಮಾನನಾದ ವ್ಯಕ್ತಿ : ಸುರ ನದಿಯ ನೀರೊಳ್ ಮಿಂದಿನನಂ ನೋಡಿ ನಿನ್ನ ದೊರೆಯನೆ ಮಗನಕ್ಕೆಂದಾ ಹ್ವಾನಂಗೆಯ್ಯಲೊಡಂ (ಪಂಪಭಾ. ೧-೯೧) ; ಪುತ್ರನೆನ್ನ ದೊರೆಯಂ ನಿನಗಕ್ಕೆ (ಪಂಪಭಾ. ೧-೯೪). 'ಆದೊರೆಯ', 'ಈ ದೊರೆಯ' ಪರಾ.

ದೊರೆಯರ್ (ಬಹುವ) : ಅಗ್ರಮಹಿಷಿ ಭುವನಾಂಬಿಕೆ ವಾಗ್ದೇವಿಯರ ದೊರೆಯರೆನಿಸಿದ ದೀವಬ್ಬರಸಿಯರ ದೊರೆಗೆಟ್ಟರ್ ಪೆಱರೊಳರೆ (ಎಕ. X, ಮುಳಬಾ. ೩೮-೩; ಸು. 890). [ದೊರೆ$_2$ + – ಅ$_6$]

ದೊರೆಯಕ್ಕರ (ನಾ). [ಛಂದ] ಪಿರಿಯಕ್ಕರ, ದೊರೆಯಕ್ಕರ, ನಡುವ ಣಕ್ಕರ, ಎಡೆಯಕ್ಕರ ಮತ್ತು ಕಿರಿಯಕ್ಕರ ಎಂಬ ಐದು ಬಗೆಯ ಅಕ್ಕರವೃತ್ತಗಳಲ್ಲಿ ಒಂದು ; ಪ್ರತಿ ಪಾದದಲ್ಲಿಯೂ ಎರಡು ವಿಷ್ಣು, ಒಂದು ಬ್ರಹ್ಮ, ಎರಡು ವಿಷ್ಣು ಒಂದು ಬ್ರಹ್ಮ ಇರುವ, ಒಟ್ಟು ಆರು ಗಣಗಳಿಂದ ಕೂಡಿರುವ ಒಂದು ಅಕ್ಕರವೃತ್ತ : ದೊರೆವೆತ್ತ ಗಣದಿಂ ದೊರೆವೆತ್ತ ಪೆಸರಿಂ ದೊರೆಯಾಗಿ ಸಂದುದು ದೊರೆಯಕ್ಕರಂ (ಛಂದೋಂಬು. ೫-೨೪೩). 'ಪಿರಿಯಕ್ಕರ' ಪರಾ.

[ದೊರೆ$_2$ + ಅಕ್ಕರ$_2$]

ದೊರೆಯಾಳ್ (ನಾ). ಸರಿಸಮಾನನಾದ ವ್ಯಕ್ತಿ : ಕಾದಲೆನಗೆ ದೊರೆ ಯಾಳ್ದಿಟದೊಳಾರೆಂದು ವೀರಭದ್ರಂ ಕೋಟಿಸಿಡಿಲಂತೆ ಗರ್ಜಿಸಿದನು (ಜಬಪು. ೩೦-೦೪). [ದೊರೆ$_2$ + ಆಳ್$_3$]

ದೊರೆಯಿಸು (ಕ್ರಿ). ದೊರಕುವಂತೆ ಮಾಡು ; ಸಿಗುವಂತೆ ಮಾಡು : ಸುರೆ ನೆತ್ತರಿಂದೆ ಚಾತುರ್ಮಾಸ್ಯಮಂ ಕಳೆದ ಹಿರಿಯರಿದೆ . . . ಯತಿ ಮಾಂಸಮಂ ಭಾದ್ರಪದಕೆ ಬಿಡದೆ ದೊರೆಯಿಸುವರಿದೆ (ಜೈಮಿಭಾ. ೧೬-೨೮).

[ದೊರೆ$_1$ + – ಇಸು$_3$]

ದೊರೆಯೆಣಿಸು (ಕ್ರಿ). ಸಮಾನವಾಗಿ ಭಾವಿಸು ; ಹೋಲು : ಗುಣ ಜಾತ್ಯಾದಿಗಳಿಂ ದೊರೆಯೆಣಿಸುವುದು ಸಹೋಕ್ತಿಯೆಂಬುದಕ್ಕುಂ (ಕವಿರಾ. ೩-೧೫೪). [ದೊರೆ$_2$ + ಎಣಿಸು]

ದೊರೆವಕ್ಕಿ (ನಾ). ಎಣೆವಕ್ಕಿ ; ಚಕ್ರವಾಕ : ನಿಡುಕೇಶಪಾಶಮಂ ಬೀಸಿ ಮಿಗೆ ಚದರಿಸುತ್ತೊಮ್ಮೊಮ್ಮೆ ದೊರೆವಕ್ಕಿಯ ಬೆಡಗಿನಿಂ . . . ಎಡೆಯಾಡು ತಿರುತಿಪ್ಪ ಪಾಂಥರಂ ಕಣ್ಗೊನೆಯ ಕಡುನೋಟದಲಗಿನಿಂದಣಕಿಪಾ ಪಾಮರಿಯರಿಹ ಸೊಬಗದೇವೇಳ್ವೆನು (ಪರಶು. ೪-೦೮). [ದೊರೆ$_2$+ಪಕ್ಕಿ$_1$]

ದೊರೆವಟ್ಟೆ (ನಾ). ರಾಜಮಾರ್ಗ ; ರಾಜಬೀದಿ : ದೊರೆವಟ್ಟೆಯಂ ಪಿಡಿದು ಮಂಗಳವರೆಯ ನಾದಕ್ಕೆ ನಡೆನಡೆಯೆ ನಿಡುವೊಸಗೆ (ಶ್ರೀರಾಮಾ. ೫೦-೬೪೭).

[ದೊರೆ$_3$ + ಬಟ್ಟೆ$_1$]

ದೊರೆವಡು (ಕ್ರಿ). ಸಾಟಿಯಾಗು ; ಎಣೆಯಾಗು : ನೀಳದ ಪುತ್ಥಳಿಯ ದೊರೆವಟ್ಟ ಶಿಶುವನು ಕಂಡು ನಲಿವುತ ದೇವಿಗೆಱಗಿದನು (ಸಾಳ್ವಭಾ. ೨೦-೨೩). [ದೊರೆ$_2$ + ಪಡು$_1$]

ದೊರೆವಡೆ$_1$ (ಕ್ರಿ). ೧. ಸಿಕ್ಕು ; ಸಿಗು ; ಪ್ರಾಪ್ತವಾಗು : ಪರಮಂಗಷ್ಟ ಮಹಾಪ್ರತೀಹಾರಂ ದೊರೆವಡೆದೊಪ್ಪಿದುದದಱೊಳಪಾರಂ (ಅನಂಪು. ೧೦-೧೮ ರಗಳೆ) ; ತಂಬೆಲರು ಮೆಲ್ಲನೆ ತೀಡಲು ದೊರೆವಡೆದ ಕನಕಲತೆ ಯಂಗಪರಿಮಳವಿದೆಂದಱಿದು (ಸೌಂದಪು. ೧೪-೧೧) ; ತನಗೆ ದೊರೆವಡೆ ದೊಂದು ಜವ್ವನದ ಪೊಸಕುದುರೆಯಂ ನಿಟ್ಟಿಸಿಯಟ್ಕಱಿಂ ಪೊಂಪುಟಿ ವೋಗಿ (ರಾಮಾಶ್ವ. ೮೫-೧). ೨. ಈಡೇರು ; ನೆರವೇರು : ದೊರೆವಡೆದು ದಿರ್ವರ ಮನೋರಥಂ (ಶಾಂತಿಪು. ೧-೭೯). [ದೊರೆ$_1$ + ಪಡೆ$_1$]

ದೊರೆವಡೆ೨ (ಕ್ರಿ). ಪ್ರಸಿದ್ಧಿಯನ್ನು ಹೊಂದು; ಹೆಸರಾಗು; ಖ್ಯಾತಿಯನ್ನು ಪಡೆ: ದೊರೆವಡೆದ ಯಶೋಘನ ಭೂವರತಿಳಕನ ಕಣ್ಗಳಂಗರಕ್ಕರ್ ಮನಮಾಭರಣಂ . . . ಎನೆ ಸಂದತ್ತು ಚಂದ್ರಮತಿಗರಸಿತನಂ (ಯಶೋಧ. ೨-೩); ದೊರೆವಡೆದವ್ಯಯಲಿಂಗಂ ಸರಿ ಸರ್ವವಿಭಕ್ತಿಗಂ ತ್ರಿಲಿಂಗಕ್ಕಂ... ಸರಿಯೆನಿಸಿ ವಿಕಾರಮಿಲ್ಲದರ್ಥಮನೀಗುಂ (ಕವಿದ. ೯೦); ದೊರೆವಡೆದಿರ್ದ ಮುಂಬರೆಯದೊಳ್ಪಮಂ ಪುರುಳಾಗಿ ಪುತ್ತವಿಸಾ ದೊರೆಯವರಾವಗಂ ತಳೆಯೆ ಬಂದ ವಸಂತದ ಸೊಂಪು ಪಲ್ಲಿಕಾವರಿಮಳದೇಲ್ಗಿ . . . ಭಾವಿಸೆ ಬಂಜೆಯಾಗದೇ (ಪುಣ್ಯಾಸ್ರ. ೫-೪೮); ಆ ಜನನಾಯಕಂ . . . ತೋಳ್ಬಲಮೆ ಬಲಂ ನೈಜಮೆನಲಿಂತು ದೊರೆವಡೆದೀ ಜಗತೀಭರಮನೊಂದೆ ಪುರಮೆನಲಾಳ್ವಂ (ಧರ್ಮನಾ. ೩-೨); ದೊರೆವಡೆದ ಸಿರಿವಂತನಾತನ ವರತನುಜೆ ಗಂಧರ್ವದತ್ತೆಯು (ಸಾಳ್ವಭಾ. ೧೭-೨). [ದೊರೆ೩ + ಪಡೆ೧]

ದೊರೆವರ್ (ಕ್ರಿ). ಸದೃಶವಾಗು; ಎಣೆಯಾಗು; ಸಮವಾಗು: ಬಂದ ಬಸಂತಂಗಂದರವಿಂದಿನಿ ಸೇಸಿಕ್ಕಲೆಂದು ನೆಗಪಿದ ಹಸ್ತಕ್ಕೀಂ ದೊರೆವಂದುವೊ ಜಲಲವದಿಂದೆಸೆವುನ್ನಾಳವಿಕಚಕೋಕನದಂಗಳ್ (ಪಚದ್ರಪು. ೭-೫೯); ತಣ್ಣೀರೊಳಟ್ಟಿದ ತನಿಗೆಂಡಕ್ಕೆ ದೊರೆವರ್ಪ ಬವರಿಗಳ ಗಾವರಕ್ಕೆಟ್ಟತ್ತು (ರಾಮಾಶ್ವ. ೧೦೦-೧೨). [ದೊರೆ೨ + ಬರ್]

ದೊರೆವಾಡು (ನಾ). ಶ್ರೇಷ್ಠವಾದ ಹಾಡು; ಉತ್ತಮವಾದ ಹಾಡು: ಭೀಮವಿಕ್ರಮವಲ್ಲ ! ಹಾಹಾದಿ ಹೂಹುಗಳ ಸ್ತೋಮವಿದು–ತಿರುಹಾಡು ಸಾಕು ! ದೊರೆವಾಡುಗಳ ಸೀಮೆಗಳ ಸಮ್ರಾಟನಾಗಿ ಆಳುವವರೆಗೆ ಏನಾದರೇಸು ಸನಗೆ ? (ಗಿರಿ. ೧೪-೨). [ದೊರೆ೩ + ಪಾಡು೨]

ದೊರೆವೆಣ್ಣು (ನಾ). ಶ್ರೇಷ್ಠಳಾದ ಸ್ತ್ರೀ; ಉತ್ತಮ ಸ್ತ್ರೀ: ಒಡಯಕ್ಕೆಲದಲಿ ದೊರೆವೆಣ್ಣುಗಳು ಮುತ್ತುಮಾಣಿಕದಾರತಿ ಬೆಳಗಿ ಕಾಣಿಕೆಯಿತ್ತು ಕೆಯ್ಮುಗಿದರಂ (ಮೋಹತ. ೩೪-೧೪). [ದೊರೆ೩ + ಪೆಣ್ಣು (< ಪೆಣ್)]

ದೊರೆವೆಸರು (ನಾ). ಶ್ರೇಷ್ಠವಾದ ಹೆಸರಂ: ಹೊರೆಹೊಗದೆ ಬಿಳಿಕರಸವಾವರರರಸಗೆಂದನು ರವಿಜನೆಂಬೀ ದೊ[ಪಾಠಾಂ. ಧೊ]ರೆವೆಸರು ಬಂದಂದ ವಾವುದು ಹೇಳಬೇಕೆಂದ (ತೊರಣಾ. ೪-೨-೦೩).

[ದೊರೆ೩ + ಪೆಸರು೧ (<ಪೆಸರ್)]

ದೊರೆವೆಱು೧ (ಕ್ರಿ). ೧. ಲಭಿಸು; ಪ್ರಾಪ್ತವಾಗು; ದೊರಕು: ಅನಂತ ಕರ್ಮಜಯದಿಂ ದೊರೆವೆತ್ತುದು ಮತ್ತನಂತಜಿನ್ನಾಮಂ (ಅನಂಪು. ೧-೦). ೨. ಸೇರಿರು; ಕೂಡಿರಂ: ನಿರ್ಮಾಕುಲಮಪ್ಪನಂತಸುಖಮುಂ ಮೆಯ್ದೆತ್ತು ನಿನ್ನೊಳ್ಕರಂ ದೊರೆವೆತ್ತಿರ್ದುದು (ಸುಳುಮಾ. ೪-೩೨).

[ದೊರೆ೧ + ಪೆಱು೧]

ದೊರೆವೆಱು೨ (ಕ್ರಿ). ಹೊಂದಿಕೆಯಾಗಂ; ಸರಿಯಾಗು: ಅನೇಕ ವಾಕ್ಯ ಸಂಜಾತಗುಣಂ ತದೇಕವಚನಂಗಳೊಳಂ ದೊರೆವೆತ್ತು ಕೂಡುಗುಂ (ಕವಿರಾ. ೧-೧೦೯). [ದೊರೆ೨ + ಪೆಱು೧]

ದೊರೆವೆಱು೩ (ಕ್ರಿ). ೧. ಶ್ರೇಷ್ಠವಾಗು; ಮಿಗಿಲಾಗು; ಅಧಿಕವಾಗಂ; ಅತಿಶಯಂವಾಗಂ: ಅನುಕ್ರಮದಿಂದಂ ದೊರೆವೆತ್ತ ಸಪ್ತಪರಮಸ್ಥಾನಂಗಳಂ ಪೊರ್ದುವೈ (ಆದಿಪು. ೫-೬೩); ಪೊದಜೋಲಗಸಾಲೆ ಮೊಕ್ಕಳಂ ಬೀಸುವ ಗಾಳಿ ಚಾಮರದ ಗಾಳಿಯೆನಲ್ ದೊರೆವೆತ್ತದೇಂ ಸುಖಾವಾಸನಿವಿತ್ತ ವಾಯ್ಕೊ ವನವಾಸನಿವಾಸಮೆ ಪಾಂಡುಪುತ್ರರಾ (ಪಂಪಭಾ. ೭-೨೯); ಅರಸನಱಿದೇಂ ಮಹಾಪುರುಷರತ್ನದೊಳ್ ರತ್ನಮಂ ತಗಂಳ್ದಿದನೊ ಕರಂ ದೊರೆವೆತ್ತಿ ವೆರಡು ವಿಧೆ ಜೀವರತ್ನವಿಂದಜೀವರತ್ನಮೆಂಬಿನತೆ ವಲಂ (ಶಾಂತಿಪು.೨-೭೩); ಈರೇಳ್ಮಹೀಭಾಗಮಂ ದೊರೆವೆತ್ತುತ್ತಮಭೋಗದೊಳ್ ತಣಿಪಿದಂ ಭೂಪೋತ್ತಮಂ (ಪಂಚತಂ. ೬-೦೩); ದೊರೆವೆತ್ತ ತರ್ಕಶಾಸ್ತ್ರದ ಪರಿಣತಿಗಂ ನೆಗಟ್ಟ ಚಕ್ರವರ್ತಿಯ ಸಭೆಯೊಳ್ ಬೆರಲೆತ್ತಿದರ್ (ಸುಳುಮಾ. ೧-೪೪); ತರುಣಮೃಗಾಕ್ಷಿಯ ದೊರೆವೆತ್ತರುಣತಳಂ ಬಾಹುಲತೆಯ ಪಲ್ಲವಮೆನೆ ಭಾಸುರತಮನಾಗಿರ್ದಿನನೊಳ್ ಸುರತ ವಂನಿರ್ಮಡಿಸಂಗುಂ ನಿಜಸ್ಪರ್ಶನದಿಂ (ಜಗವಿ. ೧೦-೩೩); ಮನಸ್ಸಂಜಾತ ನಾರಾಯಣಾಮರಸಿಂಹಾದಿಗಳಿಂ ನೆಗಟ್ಟಿವಡೀ ಶೃಂಗಾರಮಿಗಳ್ಕರಂ ದೊರೆವೆತ್ತಶ್ತನೆ ಬೇಱೆ ವಿಸ್ತರಿಸಿದಂ (ಶೃಂಗಾರ. ೧-೧೩); ಪರಮ ದಯಾಗುಣಂ ನಯನದೊಳ್ ದೊರೆವೆತ್ತನುಕಂಪೆ ಕಾಯದೊಳ್ . . . ದೊರೆವಡೆದೊಪ್ಪೆ (ಅನಂಪು. ೧-೫); ಕಣ್ಗಳೋ ದೊರೆವೆತ್ತೊಪ್ಪುವ ನೈದಿರೋ (ಕಬ್ಬಿಕಾ. ೩೩೯). ೨. ಶೋಭೆಗೊಳ್ಳು; ಶೋಭಿಸಂ: ಅಂತು ದೊರೆವೆತ್ತು ಬಂದ ಬಸಂತದೊಳಾ ಮಾರಿದತ್ತನುಂ ಪುರಜನಮುಂ ತಂತವಂಗೆ ಚಂಡಮಾರಿಗೆ ಸಂತಸಮಂ ಮಾಡಲೆಂದು ಜಾತ್ರೆಗೆ ನೆರೆದರ್ (ಯಶೋಧ. ೧-೩೯); ದೊರೆವೆತ್ತು ತೋರ್ಪಯೋಧ್ಯಾಪುರದೊಳ್ ಚಿತ್ರಿಕಲಲಾಮನಿಷ್ಪನದೊರ್ಪಂ (ಪುಣ್ಯಾಸ್ರ. ೩-೩೯). [ದೊರೆ೩ + ಪೆಱು೧]

ದೊರೆಸಾನಿ (ನಾ). ೧. ಅರಸನ ಪತ್ನಿ; ರಾಣಿ: ವರಚಿತ್ರಲೇಪಿಯನಿತಾ ದೊರೆಸಾನಿಯ ನುಡಿಗಳೊರೆಯೆ ಧೊರೆಯಿಂತೆಂದಂ (ಸಾಗಂಪ. ೧೦೪-೦೦); ಮಣಭಾರ ಚನ್ನವ ಹೊತ್ತರೆ ಬಂತೇನು ಬಡತೊತ್ತು ದೊರೆಸಾನಿಯಲ್ಲ (ಇಂಚಾಪ. ೧೦೪-೭೯). ೨. ಇಂಗ್ಲೀಷ್ ಹೆಂಗಸಂ; ಆಂಗ್ಲಸ್ತ್ರೀ: ನನ್ನೂರಿನ ಚಾರ್ಲಿಚಾಪ್ಲಿನ್ ತನ್ನ ಹಿಂದಿನ ದೊರೆಸಾನಿಯ 'ಲೇಡಿವೇಷ' ಹಾಕಿಯೇ ಹಾಕುತ್ತಾನೆ (ನನ್ನೂರು. ೪೭) : ಈ ಊರಿನ ಆಸ್ಪತ್ರೆಯಲ್ಲಿ ಸೇರಿಸಿ . . . ವಿಶೇಷವಾಗಿ ಗಮನಿಸಲು ಒಬ್ಬ ದೊರೆಸಾನಿಯವರನ್ನೇ ನೇಮಿಸುತ್ತೇವೆ (ಪ್ರತಾಪ. ೧೦೬). 'ಅರಸಾನಿ' ಪರಾ.

[ದೊರೆ೩ + ಸಾನಿ]

ದೊರೆಹುಲ್ಲು (ನಾ). ನೀರಂ ನಿಂತಿರುವ ಸ್ಥಳಗಳಲ್ಲಿ ಬೆಳೆಯುವ ಒಂದು ಬಗೆಯ ಹುಲ್ಲು; ಜೊಂಡು: ಈಜಿಪ್ಟಿನವರು ಒಂದು ರೀತಿಯ ದೊರೆಹುಲ್ಲನ್ನು (Water Weeds) ಹೆಣೆದು ಅವುಗಳ ಚಾಪೆಯ ಮೇಲೆ ಕುಚ್ಚಿ (Brush) ನಿಂದ ಬರೆದರು (ಬಾಲಪ್ರ. I, ೩೦೭).

[<ತೊಱೆ೨ + ಹುಲ್ಲು (<ಪುಲ್)]

ದೊರ್ಪು ? (ನಾ). (?) : ತೊಡೆಯುಂ ಪೊಡೆಯುಂ ದೊರ್ಪಂ [ಪಾಠಾಂ. ಪರ್ಪಂ] ತೊಡವಲದಿಂ ಮದನನನಿಸೆ ನನೆಯಂಬುಗಳಂ ತೊಡೆಸಕ್ಕಿ ಮಾಡಿ ಕಾಂತೆಯ ತೊಡೆ ತೊಡೆದುವು ಕನಕಕದಳಿಕಾವಿಲಸನಮಂ (ಪುಣ್ಯಪು. ೩-೬೦); "ಸಾರ; ತಿರುಳು" (ಪ್ರಭಾ.). [?]

ದೊಲ್ಲಯಿಸು 'ದೋಲಯಿಸು' ನೋ.

ದೊಸಕ್ (ನಾ). ಒಂದು ಅನುಕರಣ ಶಬ್ದ. 'ದೊಸಕ್ಕನೆ' ಪರಾ.

ದೊಸಕ್ಕನೆ (ಅ). ದೊಸಕ್ಕೆಂದಂ ಶಬ್ದವಾಗುವ ಹಾಗೆ; ಒಮ್ಮೆಲೆ: ಬಿರುಗಾಳಿಯ ದಾಳಿಗೆ ಸಿಲುಕಿದ ಬಾಳೆಯ ಗಿಡ ದೊಸಕ್ಕನೆ ನೆಲಕ್ಕೊರಗಿ ದಂತಾಯ್ತು (ಆಳಾಳ. ೧೭). [ದೊಸಕ್ + – ಆನೆ೧]

ದೊಸರು (ನಾ). ಹುದಂಲು; ಕೆಸರು; ಪಂಕ: ಹಸುರಿನ ಆಶೆಗೆ ಹೋಗಿ ದೊಸರಿಗೆ ಬಿದ್ದ ಹಾಗಾಯ್ತು (ಹುಬ್ಬಹ. ೦೩೩). [<ಒಸರ್೧]

ದೊಸೆ (ಕ್ರಿ). ಕುಸಿ.

ದೊಸೆದು ಬೀಳು = ಕುಸಿದು ಬೀಳು: ಅದು ತುಂಬಾ ಹಳೆಯ ಮನೆಯಾದ್ದರಿಂದ ಇದ್ದಕ್ಕಿದ್ದಂತೆ ಗೋಡೆಗಳೆಲ್ಲಾ ದೊಸೆದು ಬಿದ್ದವು (ಕೂಡಿ). [?]

ದೊಳದೊಳ (ನಾ). ಒಂದು ಅನುಕರಣ ಶಬ್ದ: ಧುಳುಧುಳುಂ ದೊಪ್ಪೆಂಬ . . . ದೊಳದೊಳೆಂಬಃ ಧ್ವನಿಗಳವನಿಗೆ ಭಯವನೀವುತಿರೆ (ಸಾನಂಚ. ೯-೧೩).

ದೊಳ್ಳಾಯಿ (ನಾ). ಆಧಿಕ್ಯ; ಹೆಚ್ಚಳ: ಮಗುಳೆ ಮಗುಳೆ ಸುಮಂತ್ರ ಮನದುಬ್ಬೆಗದಲುಱೆ ಬೆಂಡಾಗಿ ವಿರಹದ ಧಗೆಯ ದೊ[ಪಾಠಾಂ. ಡಿ,ಡೊ]ಳ್ಳಾಯಿಯಲಿ ಬಂದನು ಕೌಸಲಾವತಿಗೆ (ತೊರಣಾ. ೨-೫-೨). 'ಡೊಳ್ಳಾಸ' ಪರಾ. [?]

ದೊಳ್ಳಾಸ 'ಡೊಳ್ಳಾಸ' ನೋ.

ದೊಳ್ಳು 'ಟೊಳ್ಳು' ನೋ.

ದೊಳ್ಳೆ 'ಟೊಳ್ಳು' ನೋ.

ದೊಳ್ಳೆಗಣ್ಣ (ನಾ). ಗುಳಿ ಬಿದ್ದ ಕಣ್ಣುಗಳುಳ್ಳವನೆಂ: ದೊಳ್ಳಾಯ್ತು ನೇತ್ರಂ ಅದಱಿಂ ಬಟ್ಟೊಕ್ಕೆಮನಗಾದುದು ಭಾವಿಸೆ ದೊಳ್ಳೆಗಣ್ಣನೆಂಬೀ ನಾಮಂ (ಪದ್ಮಸಾ. II, ೫೮೭ ; ಧರ್ಮಪ).

[ದೊಳ್ಳೆ (<ಟೊಳ್ಳು) + ಕಣ್ + – ಅ,]

ದೊಳ್ಳೆತನ (ನಾ). ಉಬ್ಬಿದ ಹೊಟ್ಟೆಯನ್ನು ಹೊಂದಿರುವಿಕೆ; ಡೊಳ್ಳು ಹೊಟ್ಟೆಯನ್ನು ಹೊಂದಿರುವುದು : "ತುಂದಿಲತಾ – ದೊಳ್ಳಿ [ಳ್ಳಿ] ತನವುಂ" (ನೀತಿವಾ. ೨೪-೬೨). [ದೊಳ್ಳೆ (<ಟೊಳ್ಳು) + – ತನ]

ದೋಂಟಿ, ದೋಟಿ$_1$ (ನಾ). ೧. (ಎಲೆ, ಹಣ್ಣು ಮೊದಲಾದುವುಗಳನ್ನು ಕೀಳಲು ಅನುಕೂಲವಾಗುವಂಥ) ತುದಿಯಲ್ಲಿ ಕೊಕ್ಕೆಯನ್ನು ಹೊಂದಿರುವ ಉದ್ದನೆಯ ಕೋಲು ; ಕೊಕ್ಕೆಕೋಲು: ಬೇಡಂ ತರುಶಾಖಾಖಗನೀಡವನಳ್ಕಿಱಿದು ದೋಂಟಿಯಿಂ ಕೆದಱುವವೋಲ್ (ಅನಂಪು. ೦೩-೨೮); ನಿತ್ಯಬಿಂದುಗೆ–ಬೆಡಂಗು . . . ದೋಂಟಿ, ಪೆಂಟಿ, ವಿಸ್ತಾಟು (ಶಮದ.೩೬ ಪ್ರಹೋ) : ದೇವಲೋಕದ ಕಲ್ಪವೃಕ್ಷದಗ್ರದ ರಸಫಲಾವಳಿಯ ನಿಚ್ಚಣಿಗೆ ದೋಂಟಿಯಿಲ್ಲದೆ ನೀಳ್ವೊಡಾವ ಯತ್ನವು (ವೀಶ್ಕಪು. ೧-೫-೨). **ದೋಟಿ**$_1$: ೧. ತೊಟ್ಟು ಬಿಡುವ ವೇಳೆಯನಱಿದ ಮತ್ತೆ ದೋಟಿಯನಿಕ್ಕಲೀತಕ್ಕೆ (ದಾಸೋಸಂ. ೬೫) : ನಿಲುಕದ ಹೂವಿಗೊರ್ವಳು ದೋಟಿಯ ಹಾಕಿ ಸೆಳೆಯೆ (ಕಂಪ್ರಸಾಂ. ೦೭-೧೦೩): ವಿಸ್ತಾರವೆತ್ತೆಸೆವ ಶಿವಭಕ್ತರೊಳ್ನುಡಿವರಕೆಯಾಟದಿಂದಿರಲೆರಲ್ದಟ್ಟಿ ದೊರೆದಲೆಗ ಪೂದೋಟದೊಳ್ಪೈಗರೆದು ಶರಣಾರ್ತಿಯಂದೆನಲು ಶರಣುಶರಣಾರ್ತಿಯೆಂದು ದೋಟಿಯಿಂದಲೆ ಗುತ್ತುಱಿಂಗೆದರ್ದು (ಮಡೀಪು. ೨೯-೪೩): ದೋಟಿಗೆ ದೊರೆತ ದೋರೆಹಣ್ಣನವನಿಗೆ ಮೆಲಿಸುವೆ (ಗಿಳಿವಿ ೬೧-೩೦) : ಪತ್ರೆ ಕೊಯ್ಯಲು . . . ಗೋದಾವರಮ್ಮನನ್ನು ದೋಟಿಗಾಗಿ ಕೇಳಿದೆ (ಪ್ರಶ್ನೆ. ೧೪೯) : ದೋಟಿಯಿಂದ ಜೇನು ತೆಗೆದ ಹಾಗೆ (ಗಾಡಿ). ೨. ಆನೆಯನ್ನು ಶಿವಿಯುವ ಅಂಕುಶ. 'ಕೈದೋಟಿ', 'ದೋಟಿಕೋಲು' ಪರಾ.

ದೋಂಟಿ ವಿಳಾಸ = ಅಂಕುಶಗಳಿಂದ ಆನೆಯನ್ನು ನಿಯಂತ್ರಿಸುವವನು ; ಒಂದು ಬಿರುದು : ಕಾಡಾನೆಮಲ್ಲರುಂ ಅಡವಿಕಂದರ್ಪರುಂ ದೋಂಟಿವಿಳಾಸರುಂ ವಂಟಿವುಗೆ ಕಾವರುಂ (ಸೌಇ. XV, ೩೧೧-೪೦ ; 1196). **ದೋಟಿಯನಿಕ್ಕು** = ಪ್ರಯತ್ನಪಡು ; ಯತ್ನಿಸು : ಬಂದುದನತಿಗಳಿಯದೆ ಬಾರದುದಕ್ಕೆ ದೋಟಿಯನಿಕ್ಕದೆ (ಡಡೊಮ್ಮ. ೪೦).

[ದೇ.ಪ ತಮಿ. ಮಲ. ತೋಟ್ಟಿ ; ತುಳು. ದೋಂಟಿ ; ತೆಲು. ದೋಟಿ]

ದೋಂಟಿಗೋಲು, ದೋಟಿಕೋಲು, ದೋಟಿಗೋಲು (ನಾ). ೧. = ದೋಂಟಿ ೧ : ಅರಳಿದ ಪುಷ್ಪ ಪರಿಮಳಿಸದಿಹುದೇ ತುಂಬಿದ ಸಾಗರ ತೊರೆನೆರೆಯಾಡದಿಹುದೇ ಆಕಾಶವ ಮುಟ್ಟುವವ ದೋಂಟಿಗೋಲ ಹಿಡಿವನೇ (ವಡಸಂ. ೫೦೬-೪೬). **ದೋಟಿಕೋಲು** : ೨. ಆನೆಯನ್ನು ಶಿವಿಯುವ ಕೋಲು ; ಅಂಕುಶ : "ಅಂಕುಶಃ, ಸೃಣಿಃ–೨ ಅಂಕುಶದ ಹೆಸರುಗಳು. ಕೊಕ್ಕೆಕೋಲು, ದೋಟಿಕೋಲು" (ಸಿದ್ಧಾಂಶಿ. ೩೦೩). **ದೋಟಿಗೋಲು** : ೧. ಪಾರಿಜಾತವೃಕ್ಷವೊಂದು ಕೊಂಬಿಗೆ ಊರುಗೋಲಾಗಿಯೂ ದೋಟಿಗೋಲಾಗಿಯೂ ಇರುವಂತೆ ತೋರುತ್ತದೆ (ದೀವೀಕಾ. ೧೫೧). [ದೋಂಟಿ + ಕೋಲು$_1$ (<ಕೋಲ್$_1$)]

ದೋಂಟಿವಲೆ, ದೋಟಿವಲೆ (ನಾ). ಪಕ್ಷಿಗಳ ಗೂಡುಗಳನ್ನು ಕಿತ್ತು ಹಕ್ಕಿಯ ಪೊಟ್ಟೆ ಮೊದಲಾದುವನ್ನು ಸಂಗ್ರಹಿಸಲಂ, ಮರಗಿಡಗಳಿಂದ ಹಣ್ಣುಗಳನ್ನು ಇಳಿಸಲು ಮತ್ತು ಬೇಟೆಗಳಲ್ಲಿ ಉಪಯೋಗಿಸಲು ಬಳಸುವ ದೋಟಿಗೆ ಅಳವಡಿಸಿದ ಬಲೆ : ಕೋಸುವಲೆ ದೋಂಟಿವಲೆ ಬಾಣಾಸನವಲಗಂಬು . . . ಪಾಶದ ನಾಯ್ವೆರಸು ಬನಕೆ ಬೇಡರ್ ನಡೆದರ್ (ಸೂಕ್ಪ್ರಸು. ೩-೧೦೩). **ದೋಟಿವಲೆ** : ದೋಟಿ [ಪಾಕಾಂ. ತೊಟ್ಪ, ತೋಟಿ, ತೋಡಿ]ವಲೆ ಗೂಟವಲೆ ಕಣ್ಣವಲೆ ... ಮಂದಸಿನವಲೆಯು ಹೊಜಿಗಳ ಬೇಡವಡೆ ನೆರೆದುದು (ಹಡಕಾ. ೫-೮).

[ದೋಂಟಿ + ಬಲೆ$_1$]

ದೋಂಟೆಕಾಲು (ನಾ). ೧. ನೀಳವಾದ ಕಾಲು. ೨. ಬೀಸಂಗಾಲು ; ದಾಪುಗಾಲು : ಏತಾಳರು– 'ಇದೊಂದು ಮುಲಾಜೇ' ಎಂದು ದೋಂಟೆಕಾಲಿಕ್ಕಿಕೊಂಡು, ಅಗೆಯ ಹೊರೆಯನ್ನು ನಟ್ಟಗದ್ದಿಗೆ ಸಾಗಿಸಿಯೇ ಬಿಟ್ಟರು (ಮರಮು. ೩೭). [←ತುಳು. ದೋಂಟೆಕಾರು]

ದೋಃಕಂಡೂಯನ (ನಾ). ತೋಳಿನ ತೀಟೆ,–ತಂಡಿತ : ಎನಗೆ ರಣರಭಸದಿಂ ಗಡ ಮನುಜಂ ಮೇಲೆತ್ತಿ ಬಂದನಿಂ ದೋಃಕಂಡೂಯನಮಂ ಕಟಲ್ಬಲೆಡೆಯೂಯ್ತೆನುತ್ತುಮುತ್ತರಳತಾಮ್ರಲೋಚನನಾದಂ (ಪಂರಾಮಾ. ೧೩-೩). [ಸಂ.]

ದೋಕರಿ (ನಾ). ಹುಲ್ಲನ್ನು ಕೀಳಲು ಉಪಯೋಗಿಸುವ ಒಂದಂ ಬಗೆಯ ಸಾಧನ : (ಕ). [<ದೋಕು]

ದೋಕು 'ದೇಕು' ನೋ.

ದೋಖಂಡೇರಾಯ (ನಾ). ಎರಡು ಕೈಗಳಲ್ಲೂ ಕತ್ತಿಯನ್ನು ಹಿಡಿದು ಹೋರಾಡುವವನು ; ಒಂದು ಬಿರುದು : ಇ ಕ ರ್ಯ ಖಡ್ಗದಿಂ ಕುರಿದರಿದಾ ಶ್ರೀಕರವೆಂಕಟಭೂಪಂ ದೋಃಖಂಡೇರಾಯನೆಂಬ ಬಿರುದಂ ಮೆರೆದಂ (ಕಳನ್ಯ. ೫-೧೭). [< ದು + ಖಂಡೇರಾಯ್$_0$]

ದೋಗುಣ (ಗು).=ದ್ವಿಗುಣ : ಅಧಸ್ತನೋಪರಿತನ ನಾನಾಗುಣಹಾನಿ ಶತಾಕೆಗಳುಂ ದುಗುಣಂ ದೋಗುಣಹಾನಿಯುಂ ಉಭಯಮನ್ಯೋನ್ಯಂ (ಗೊಮ್ಮಸಾ. ೫೫-೩). [<ದುಗುಣ]

ದೋಚಯ್ಯ (ನಾ). ಒಬ್ಬಾತನ ಹೆಸರು : ಶ್ರೀಪಾದಪದ್ಮಾರಾಧಕ ರಾಚಯ್ಯ ದೋಚಯ್ಯ ಮಗ ಜಗದೇವ (ಎಕ. VII, ಪನ್ನಗಿ.೩೨-೩೩೫ ; ಸು. 1050 ?). [ದೋಚ್$_0$ + ಅಯ್$_{g1}$]

ದೋಚು (ಕ್ರಿ). (ಸಿಕ್ಕಿದುದೆಲ್ಲವನ್ನು) ಕದಿ ; ಅಪಹರಿಸು ; ಲೂಟಿಮಾಡು : ಅವನ ಆಸ್ತಿಯನ್ನೆಲ್ಲ ದೋಚಿಕೊಂಡು ಹೋದುದಕ್ಕೆ ಪರಿಹಾರವನ್ನು ಕೊಡು (ಆರ್ಮಳ. ೦೮) : ದಾಮಾಜಿಗೆ ತಿಳಿಯದಂತೆ ಸಾಧ್ಯವಾದಷ್ಟು ಹಣವನ್ನು ದೋಚುತ್ತಿದ್ದನು (ಕಳಾಧ. ೬೦) ; ನೀನು . . . ದೋಚಿಕೊಂಡು ಹೋ ಗು ವ ವಳು, ಅಂತ ಗುಮಾನಿ ಇಡುತ್ತಾರೆ (ಕಂಗೂರಿ. ೯೪) ; ನನ್ನಲ್ಲಿ ಸ್ವಲ್ಪ ಹಣವೂ ಇತ್ತು. ಅದನ್ನೆಲ್ಲ ಆ ಅಳಿಯ ದೋಚಿಕೊಂಡ (ಜಳ್ಳಹಾ. ೦೦೩). [ದೇ.ಪ ತೆಲು. ದೋಚು]

ದೋಜಕ್ 'ದೋಜಕು' ನೋ.

ದೋಜಕು, ದೋಜಕ್ (ನಾ). ನರಕ : ಹಿಂದೂಜನರ ಉಪ್ಪ ತಿಂದು ಷಹೀದು ಆದರೆ ದೋಜಕು ಶಿವಾಯಿ ಅನ್ಯಥಾ ಇಲ್ಲ (ಚಿತ್ರಪಾ.೯೪). **ದೋಜಕ್** : ಹಿಂದೂಜನರ ಉಪ್ಪ ತಿಂದು ಷಹೀದ್ ಆದರೆ, ದೋಜಕ್ (ನರಕ) ಶಿವಾಯಿ ಅನ್ಯಥಾ ಇಲ್ಲ (ಪಾಳಗಾ. ೩೩).

[←ಪಾರ. ಹಿಂ. ದೋಜಖ್]

ದೋಟಿ$_1$ 'ದೋಂಟಿ' ನೋ.

ದೋಟಿ$_2$ (ನಾ). ಖಡ್ಗಯುದ್ಧದ ಒಂದು ಪಟ್ಟು,–ವರಸೆ : ಮೊಳಕಾಲುಗಳನ್ನು ವಕ್ಷಸ್ಥಳದಲ್ಲಿ ಇರಿಸಿ ಮೇಲಕ್ಕೆ ಹಾರಿ ಭ್ರಮಣವನ್ನು ಆಮೇಲೆ ಮಾಡಿ ಭೂಮಿಯಲ್ಲಿ ಕಾಲುಗಳಲ್ಲಿ ನಿಲ್ಲಬೇಕು ಅದು ದೋಟಿಯಂದು ನುಡಿಯಲ್ಪಡುವುದು (ಖಡ್ಗವೀ. ೪-೩೪). [?]

ದೋಟಿಕೋಲು 'ದೋಂಟಿಗೋಲು' ನೋ.

ದೋಟಿಗೋಲು 'ದೋಂಟಿಗೋಲು' ನೋ.

ದೋಟಿಯಿಕ್ಕು (ಕ್ರಿ). ದೋಟಿಯನ್ನು ಹಾಕಿ ಕೀಳಂ : ಜಿನಪತಿಗೆಱಗದೆ ಬಲ್ಲಾಳ್ತನದಿಂದಂ ಮಾಡಿಕೊಳ್ವೆನೆಂಬೊಡೆ ಸುಖಮಂ ತನಗದು ಮೊಗ್ಗಾದುದೆ ಮಾವಿನ ಪಣ್ಣೇಂ ದೋಟಿಯಿಕ್ಕಿ ತೆಗೆವಂತೆ ಸುಖಂ (ಧರ್ಮಾಮೃ. ೬-೦೭೦). [ದೋಟಿ$_1$ (<ದೋಂಟಿ) + ಇಕ್ಕು]

ದೋಟಿವಲೆ 'ದೋಂಟಿವಲೆ' ನೋ.

ದೋಣ$_1$ (ನಾ). ದೊಡ್ಡ ಹೊಟ್ಟೆಯುಳ್ಳವನು ; ಡೊಳ್ಳುಹೊಟ್ಟೆಯವನು : (ಕ). [ದೋಣು + – ಅ$_7$]

ದೋಣ$_2$ (ನಾ). ೧. ಒಂದಂ ಅಳತೆ ; ನಾಲ್ಕು ಕೊಳಗ : "ದೋಣ – ದ್ರೋಣ = ನಾಲ್ಕು ಕೊಳಗ" (ತದ್ಭವಕೋ. ೫೧). ೨. ದ್ರೋಣಾಚಾರ್ಯರ್: ಪರಿವೃತರೇಫಲೋಪಕ್ಕೆ ಕ್ರೀಣ – ಕೀಣ . . . ದ್ರೋಣ – ದೋಣ (ಕಪುರ. ೩೬೧ ಪ್ರಹೋ). ೩. ಮರದ ದೋಣಿ. ೪. ನೀರಿನ ತೊಟ್ಟಿ. ೫. ಒಂದು ದೇಶದ ಹೆಸರು. ೬. ಒಂದು ಪರ್ವತ. ೭. ಬೇಳಂ. ೮. ಕಣಜಿಗಿಲೆಗಿಡ. [<ಪ್ರಾ. ದೋಣ./ಸಂ. ದ್ರೋಣ]

ದೋಣಗಾವುಂಡ (ನಾ). ಒಬ್ಬಾತನ ಹೆಸರಂ : ದೋಣಗಾವುಂಡರುಂ ಎಳಗಾವುಂಡರುಂ (ಸೌಇ. XX, ೯-೦೭ ; ಸು. ೩ನೆಯು ೫೫ ?).

[ದೋಣ$_2$ + ಗಾವುಂಡ]

ದೋಣಮರಸ (ನಾ). ಒಬ್ಬಾತನ ಹೆಸರು : ದೋಣಮರಸನ ತಂಮ ಬಾಚರಸ ತಂನ್ನ ಪುಲ್ಲಿವಿಗೆಯ ಸಿದ್ಧಾಯದೊಳಗೆ ಆಚಂದ್ರಕಾಲಂ ಸಲಲು ಸೊಡರೆಣ್ಣೆಗೆ ಬಿಟ್ಟ ಪಣವಯ್ದು (ಕಇಶಾ. ೮೦-೦೪-೩ ; ಸು. 1088).

[ದೋಣ$_2$ + ಅಮ (<ಅಮ್ಮ$_1$) + ಅರಸ$_1$]

ದೋಣಶರ್ಮ (ನಾ). ಒಬ್ಬಾತನ ಹೆಸರಂ : ರೇಕಾದಿ ಬೋಯಸ್ಯ ಕಾಶ್ಯಾ (ಶ)ಪಗೋತ್ರ ದೋಣಶರ್ಮಾಣ ಎಕ್ಕರಿಶಃ (ಇಆ. VII, ೧೮೮-೩೨: ೪೮೨).

[ದೋಣ$_2$ + ಶರ್ಮ]

ದೋಣಿ$_1$ (ನಾ). ದೊಡ್ಡ ಹೊಟ್ಟೆಯವಳು ; ಡೊಳ್ಳುಹೊಟ್ಟೆಯವಳಂ : ಆ ದೋಣಿ ಹೇಗೆ ಓಡಬಲ್ಲಳು ? (ಕೂಡಿ). [ದೋಣ$_1$ + – ಇ$_2$]

ದೋಣಿ$_2$ 'ದೊಣೆ$_1$' ನೋ.

ದೋಣಿ$_3$, ಡೋಣಿ$_2$ (ನಾ). ೧. ನೀರಂ ತುಂಬಲುಂ ಇರುವ ತೊಟ್ಟಿ ; ನೀರಿನ ತೊಟ್ಟಿ : ಕಲ್ಲ ದೋಣಿಯೊಳಿಟ್ಟಿದ ನೀರಂತೆ ಕೈಕೊಳ್ಳದೆ ಸತಿಯರ ರೂಪನೆ ಭಾವಿಸುತಿರ್ಪುದುಂ (ಧರ್ಮಾಮೃ. ೭-೧೬೫). ೨. ಅಗಲವಾದ ಬಾಯಿಯನ್ನು ಹೊಂದಿರುವ ಪಾತ್ರೆ ; ಬಾನಿ : ತಿಂದನಾ ಕುಱಿ ಕೋಣ ಕಾಟಿಯನೊಂದು ಕಡೆಯಿಹ ಸುರೆಯ ದೋಣಿಯಂ ಹಲವು ಬಱುಗೆಯ್ದ (ಕಾತಿರಾ. ೨೪-೦೪) ; ಚಾರು ಕಸ್ತೂರಿ ಕರ್ಪೂರ ವೆರಸಿದ ಪನ್ನೀರ ಕೊಪ್ಪರಿಗೆದೋಣಿಗಳ ಕೇರಿಕೇರಿಯೊಳಿಡಿಗಟ್ಟಿನೊಳಿಡೆ ಪರಿವಾರ ವಸಂತವಾಡಿದುದು (ಧರಕ. ೪೦-೩೮) ; ಎಡೆಯೆಡೆಗೆ ತೀವಿದ ಸುಗಂಧದ ಕಟಾಹದಿಂ ಕಡುಗೆಂಪು ಬೀಱುವ ಜವಾದಿಯ ಘಟಂಗಳಿಂದೊಡನೆ ತೀವಿದ ಸುಕಸ್ತೂರಿಗಳ ದೋಣಿಯಿಂದೆಸೆವ ಕರ್ಪುರಂಗಳ ಕೊಡಗಳಿಂ (ಜಲಪು. ೩೭-೩೯). ೩. (ಧಾನ್ಯಗಳನ್ನು ತುಂಬಿಡುವ ಅಂಡಾಕಾರವಾದ) ದೊಡ್ಡ ಹರವಿ ; ಗುಡಾಣ : ಉಗ್ರಾಣದ ಅಕ್ಕಿಯ ದೋಣಿಯಲ್ಲಿ ಸತ್ತು ಬಿದ್ದಿದ್ದ ಇಲಿಯನ್ನು ಬಾಲದಿಂದೆತ್ತಿ . . . ಹೊರಗೆಸೆಯಲು (ಸಂಸ್ಕಾರ. ೬೩). ೪. ತಟ್ಟೆ ; ಹರಿವಾಣ : ನಾಯುಣ್ಣದ ದೋಣಿಯೊಳೂಡಿದೊಂಗೆ ಪದಯಿದನೆ ಕರುಂ (ಸುಳುಮಾ. ೨-೬೯). ೫. (ಮಂಳೆಯ) ನೀರು ಬಿದ್ದ ಹರಿದು ಹೋಗಲುಂ ಮನೆಯ ಮಾಳಿಗೆಗೆ ಅಳವಡಿಸಿದ ಕೊಳವೆ ; ಹರಿನಾಳಿಗೆ. ೬. ನೀರಿನ ಮೇಲೆ ತೇಲುವ ಸಾಧನ ; ನಾವೆ ; ತೆಪ್ಪ ; ಹರಿಗೋಲು : "ದೋ [ಪಾಠಾಂ. ಡೋ]ಣಿಯೆಂದೆನಲ್ ನಾವೆಯಕ್ಕುಂ" (ಮುಂಗರಾ. ೧೨೦-೪) : ತುಳುಕುನೀರಾಡಿದಂ ದೋಣಿಯಂದೇಱಿದನೆಂಬಂತೆ (ಸುಳುಮಾ. ೯-೪೩) : ಕಲ್ಲ ದೋಣಿಯನೇಱಿ ಬಂದ ತೊಱಿಯೊಳ್ ಪೋಪೆನೆಂಬನುಂ (ಧರ್ಮಾಮೃ. ೭-೩೭) : ತಾವರೆಯೆಸಳ ದೋಣಿಯ ಮೇಲೆ ಹಾಯ್ದುವು . . . ತುಂಬಿಗಳು (ಸಂಧಪ. ೧೬-೯) : ಎಡೆಯಾಡುತಿಹ ದೋಣಿ ದುಗ್ಗಿ ಕಪ್ಪಲು ದೊಡ್ಡ ಹಡಗುಗಳಿರವ ನೋಡಿದರಂ (ಧರಕ. ೨೩-೪೬) ; ಈಗ ಶೋಣದಲ್ಲಿ ದೋಣಿಗಳು ಓಡಾಡುತ್ತವೇನಂ ? (ಪಾಡಿಆ. ೫). **ದೋಣ್ಯೆ** : ಪಿ. ಹೆಣನನು ತೈಲದ ದೋಣಿಯೊಳಗಿರಿಸಿದಳು ಯೋಗದಲಿ (ನಿಢಾಗ. ೪-೦೧-೩೨) ; ಬಾಯದು ಕಲಗಚ್ಚಿನ ದೋಣಿ (ಚಿದಾವ. ೩೭-೬). ೪. ಹೊಸನಾಯ ದೋಣಿಯೊಳು ನೀನುಂಡು ನಾಯ್ಸಾವನಸವಸದೊಳಿಯ್ದುವದ್ದೃತಿಯೆಂದೆನಿಪ ಪುಲ್ಕಸನೆ ನಿನಗೇಕೆ ಬೊಮ್ಮದ ಮಾತುಗಳು (ವೀಕೃಪು. ೪-೪-೨೫) ; ಕತ್ತಿಯಂ ತಕ್ಕೊಂಡು ಮರದ ದೋಣಿಯೊಳುಂಡು . . . ಚೆನ್ನಬಸವಾಂಕನಲ್ಲಿಗಂ ಬಂದು (ಪ್ರಭುಪು. ೯-೨೦೦) ; ಬ್ರಾಹ್ಮಣರು ರಾಧಕ್ಕನವರ ಮನೆಯಲ್ಲಿ ಭೋಜನಕ್ಕೆ ಕುಳಿತೊಡನೆ ದೋಣಿಗೆ ನೀರಿಸಿ ? ಗಂಗಾಸಾನಿ ಶಂಭುಲಿಂಗನ ಮೂರ್ತಿಯ ಮುಂದೆ ಕುಳಿತು ಕೊಂಡಳು (ಗಂಗಾಸಾ. ೮೫). ೫. ಜಾಲಗಾಱಿನ ದೋಣಿಯಂತೆ ಬಳಸುವ ಹುಟ್ಟನಂತೆ ಬೈಚಿಟ್ಟ ನೆಲೆಯಂತೆ ಇದ್ದಡೇನು ಭೋಗಿಸಲರಿಯವಾಗಿ (ಮೋಳಿಮಾ. ೩೦-೧೩೪) ; ಗುಂಡಿಗೆ ಕೊಡ ಕೊಪ್ಪರಿಗೆ ಡೋಣಿ ಪಱಿಗೋಲು ಬೆಂಡುವರಗಳನು ತರಿಸಿ ಮಂಡಲವತಿ . . . ಎಯ್ದಿದನು (ಕುರಾಸಾಂ. ೨೭-೦೦೪) ; ವೆಸರುವಡೆದ ಮಧುರಸವಾಹಿನಿಯ ದಾಂಟಿಸಲು ಚಂದನ ದೋಣಿಗಡರ್ದು (ಮೋಹಕ. ೫-೨೬) : ಎಡೆಯೆಡೆ ಯೊಳಿಡಿಕಿಱಿದ ದೋಣಿಗಳ ಶ್ರೇಣಿಗಳ . . . ಪಡೆಪಿನಿಂ ಕಡಲೆಸೆದುದು (ಜಲಪು. ೨-೪) ; ಇವರ ನಾವು ಇನ್ನೂ ಆ ಸಂಗನ ದೋಣಿಯಿಂದ ತುಸ ದೂರದಲ್ಲೇ ಹೋಗುತ್ತಿತ್ತು (ಇಂದುಮು. ೬೬) : ಓಡಕು ದೋಣಿಗೆ ಗಿಡ್ಡಜಲ್ಲು (ಗಾದ). ೭. ಅಭಿಷೇಕದ ನೀರನ್ನು ತುಂಬುವ ಪಾತ್ರೆ : ದೇವರಂಗ ಭೋಗಕ್ಕೆ ಬಿಟ್ಟ ದೋಣಿ ಮೂಱು (ಸೌಇ. XI-11, ೨೦೩-೬ ; ?). ೮. ದನಗಳಿಗೆ ನೀರು ಹಾಕಲೆಂದು (ಮರದಿಂದ ಅಥವಾ ಕಲ್ಲಿನಿಂದ) ಮಾಡಿರುವ ಎಡೆ, –ಸ್ಥಳ : ಹೊಲೆಯರ ದನಗಳಿಗಾಗಿ ಕಲ್ಲಿನ ದೋಣಿಗಳನ್ನು ಮಗ್ಗುಲಲ್ಲಿಯೇ ಕಟ್ಟಿಸಲಾಯಿತು (ಹಬ್ಬಲಿ. ೨೩).

ದೋಣಿಯ ಪಂದ್ಯ = ನಾವೆಗಳನ್ನು ವೇಗವಾಗಿ ನಡೆಸುವ ಸ್ಪರ್ಧೆ ; ಕೇರಳದಲ್ಲಿ ಇದಂ ಪ್ರಸಿದ್ಧವಾದ ಒಂದು ಕ್ರೀಡೆ : ಓಣಂ ಹಬ್ಬದಲ್ಲಿ ದೋಣಿಯ ಪಂದ್ಯಗಳು ವಿಶೇಷವಾಗಿ ನಡೆಯುತ್ತವೆ (ಕೂಡಿ).

[<ಪಾಲಿ. ಪ್ರಾ. ದೋಣೀ./ಸಂ. ದ್ರೋಣೀ]

ದೋಣಿಕಡವು (ನಾ). ನಾವೆಯ ಮೂಲಕ ನದಿಯನ್ನು ಹಾಯ್ದು ದಾಟುವ ಸ್ಥಳ ; ಈ ಊರಿಗೆ ಒಂದು ಮೈಲಿಯ ಕೆಳಗೆ ಹೊಳೆ ದಾಟಲು ದೋಣಿಕಡವು ಇದೆ (ಕೂಡಿ).

[ದೋಣಿ$_3$ + ಕಡವು$_3$ (<ಕಡಹು$_2$)]

ದೋಣಿಕೊಂಡ 'ದೋಣಿಗೊಂಡ' ನೋ.

ದೋಣಿಗಾರ (ನಾ). ನಾವೆ ನಡೆಸುವವನು ; ಓಡುಗಾರ ; ಅಂಬಿಗ : ವಿದುರನು ಕಳಿಸಿದ್ದ ದೋಣಿ ಸಿದ್ಧವಾಗಿದ್ದಿತು. ದೋಣಿಗಾರನು ರಹಸ್ಯವನ್ನು ತಿಳಿದ ಸ್ನೇಹಿತನೆಂಬುದನ್ನು ಶೋಧಿಸಿ ತಿಳಿದುಕೊಂಡರು (ಪ್ಯಾಸಜಿ. ೬೬). [ದೋಣಿ$_3$ + – ಗಾರ (< – ಕಾಱ)]

ದೋಣಿಗೊಂಡ, ದೋಣಿಕೊಂಡ (ನಾ). ೧. ದೋಣಿಯಾಕಾರದ ಪಾತ್ರೆ ; ದೊನ್ನೆಯಾಕಾರದ ಹರವಿ, –ಮುಡಕೆ : ಮನುಷ್ಯರ್ಗಱಿಯಲಾಗದಂದೊಂದು ದೋಣಿಗೊಂ[ಪಾಠಾಂ. ಕೊಂ]ಡಮಂ ತರಿಸಿ ನೀರಂ ತೆಕ್ಕನೆ ತೀವಿಯದಱಿಯೊಳಗೆ ಚಮರಿಯನರ್ದಿ (ವಡ್ಡಾರಾ. ೬೨-೪). ೨. ನೀರಿನ ತೊಟ್ಟಿ : (ಕ). **ದೋಣಿಕೊಂಡಃ** ೧. ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ದೋಣಿ$_3$ + ಕೊಂಡ$_4$]

ದೋಣಿದಳ (ನಾ). ನಾವೆಯ ಆಕಾರದ ದಳ,–ಪಕಳೆ : ಉಳಿದ ಎರಡು ದಳಗಳು ಕೂಡಿಕೊಂಡು ದೋಣಿ ಆಕಾರದಂತಿವೆ. ಇವೇ ದೋಣಿದಳಗಳು (ಸಸ್ಯಶಾ. ೩೮). [ದೋಣಿ$_3$ + ದಳ$_2$ (= ದಲ)]

ದೋಣಿದಾಟು (ನಾ). = ದೋಣಿಕಡವು : "ದೋಣಿದಾಟು ; ಕಡವು" (Grind. ಇಂಕನಿ). [ದೋಣಿ$_3$ + ದಾಟು$_2$ (<ದಾಂಟು$_3$)]

ದೋಣಿಯೋಗು 'ದೊಣೆವೋಗು' ನೋ.

ದೋಣಿವಲೆ (ನಾ). ಒಂದು ಬಗೆಯ ಬಲೆ : ಕಾಲಸಃಭಟರು ದೋಣಿದ [ವ]ಲೆಗಳ ತೋಳ ಖಂಡಿಯ ಜಾಳುವಲೆಗಳವೋಲಿಯೇರಿನ ದೋರಿವಲೆಗಳಲೈದೆ ಕೂಡಿದರು (ಸಂಭಪ. ೮-೧೦೬) [ದೋಣಿ$_3$ + ಬಲೆ$_1$]

ದೋಣಿವೀಟ್ (ಕ್ರಿ). ಡೊಗರು ಬೀಳು ; ಕುಳಿಯಾಗು ; ಹಳ್ಳವುಂಟಾಗು : ಮದದಾನೆಗಳಾನೆಯೊಳ್ ಮೊಗಂಬುಗುತರೆ ದಂತದಂಡ ಹತಿಯಿಂ ಬಿಸುನೆತ್ತರ ಧಾರೆಗಳ್ ಭುಗಿಲ್ಬುಗಿಲೆನೆ ಪಾಯ್ದು ಪೊಣ್ಮಿದುವು ಕೋಟ್ಮಿದುಳೊಕ್ಕುವು ಬಲ್ಗರುಳ್ಗಳಿರ್ಬಗಿಯೆನೆ ದೋಣಿವಿಟ್ಟುದು [ಪಾಠಾಂ. ದೋಣಿಬಿರ್ದುವು] ಶಿರಂ ಬಿರಿಕೆರ್ದುದು ಕುಂಭಮಂಡಲಂ (ಪಂರಾಮಾ. ೧೦-೮೧). 'ಡೋಣಿವೀಟ್' ಪರಾ.

[ದೋಣಿ$_2$ (<ದೊಣೆ$_1$) + ಬೀಟ್$_1$]

ದೋಣಿವೋಗು 'ದೊಣೆವೋಗು' ನೋ.

ದೋಣು (ನಾ). ದೊಡ್ಡ ಹೊಟ್ಟೆ ; ಡೊಳ್ಳುಹೊಟ್ಟೆ. 'ದೋಣು ಹೊಟ್ಟೆ' ಪರಾ. [<ಟೊಳ್ಳು]

ದೋಣುಹೊಟ್ಟೆ (ನಾ). ದೊಡ್ಡದಾಗಿರುವ ಹೊಟ್ಟೆ : ಡೊಳ್ಳುಹೊಟ್ಟೆ : "ದೋಣುಹೊಟ್ಟೆ – ಗಡಗಿ ಹೊಟ್ಟೆ" (ಜಾನಕೋ. ೮).

[ದೋಣು + ಹೊಟ್ಟೆ$_1$ (<ಪೊಟ್ಟೆ$_1$)]

ದೋಣೆ (ನಾ). ಒಂದು ಊರಿನ ಹೆಸರು : ದಟ್ಟಿಯರು ಕುರ[ಬ]ರು ಗಣಿಗರು . . . ದೋಣೆಯ ಆಟ್ (ಇಅ. XIV, ೨೩೩-೫೯ ; ಸು. 9ನೆಯ ಶತ ?) : ದೋಣೇ ಕ್ರಮಯಿತಭಟ್ಟಪುತ್ರಾಯ (ಇಅ. XVI, ೨೪-೭೪ ; 1009). [?]

ದೋತರ 'ಧೋತ್ರ' ನೋ.

ದೋತರಜೋಡು (ನಾ). ಎರಡು ದೋತರಗಳು ; ಜೋಡಿ ಪಂಚೆ : ಒಂದೇ ತರದ ಎರಡು ದೋತರಗಳಿಗೆ ದೋತರಜೋಡು ಅನ್ನುತ್ತಾರೆ (ಮುಂಬಯಿ. ೩-೯೮). [ದೋತರ (<ಧೋತ್ರ) + ಜೋಡು]

ದೋತ್ರ 'ಧೋತ್ರ' ನೋ.

ದೋಧಕವೃತ್ತ (ನಾ). [ಛಂದ] ಪ್ರತಿಯೊಂದು ಚರಣದಲ್ಲಿ ಹನ್ನೊಂದು ಅಕ್ಷರಗಳಿರುವ ಒಂದು ಅಕ್ಷರವೃತ್ತದ ಹೆಸರು : ಇಂದುಗಣಂಗಳೆ ಮೂಱವಱಿಂದಂ ಮುಂದೆ ಗುರುದ್ವಯಮಾಗೆ ವಿರಾಮಂ ಬಂದು ಪದಾಂತದೊಳಿರ್ದೊಡೆ . . . ದೋಧಕವೃತ್ತಂ (ಛಂದೋಂಬು. ೨-೧೦೬); ೧೧ನೆಯ ತ್ರಿಷ್ಟುಪ್ಪಿನಲ್ಲಿ ...(vii) ಭತ್ರಯಮಿರ್ಗುರು ದೋಧಕವೃತ್ತಂ (ಕೈಪಿಡಿ. ೮೦). [ಸಂ.]

ದೋನೇಜ (ನಾ). ಎರಡು ಕೈಗಳಲ್ಲೂ ಭರ್ಜಿ ಅಥವಾ ಈಟಿಯನ್ನು ಹಿಡಿದು ಹೋರಾಡುವವನು ; ಒಂದು ಬಿರುದು : ವರ ಪಾತುಶಾಹ ಸೈನ್ಯೋತ್ಕರವನೆರಳ್ಕಯ್ಯೊಳಾಂತ ನೇಜಗಳಿಂ ಕೋಡಿರಿದು ಕಾಲ್ದೆಗೆಸಿ ವೆಂಕಟನರಪತಿ ದೋನೇಜನೆಂಬ ಬಿರುದಂ ಮೆರೆದಂ (ಕೆಳನೃ. ೫-೨೭).

[<ದು + ನೇಜ (<ನೇಜಯ)]

ದೋಪಿಡು (ಕ್ರಿ). ಹಾಳುಮಾಡು ; ನಾಶವನ್ನು ಉಂಟುಮಾಡು : ಪರಸ್ಥಳದವರ ಸಂಸಾರಕ್ಕೆ ಮನೆ ಕೊಟ್ಟು ಇಲ್ಲಿಂದ ಸಾಮಾನುಗಳನ್ನೆಲ್ಲಾ ಕಳುಹಿಸಿ ದೋಪಿಡುವುದು ಯಾವ ದೇವರಿಗೆ ಪ್ರೀತಿ ? (ತುರಾಯಿ. ೧೪೨).

[ದೋಪು + ಇಡು$_1$]

ದೋಪು (ನಾ). ನಾಶ ; ಹಾಳು : ಮನೆಯನ್ನು ದೋಪು ಮಾಡಿಬಿಟ್ಟು ಬಂದೆಯಾ ? (ಸಾವಿತ್ರಿ. ೩೫).

ದೋಪು ಕೊಡು = ಹಾಳಾಗುವಂತೆ ಕೊಡು : ದೋಪುಕೊಟ್ಟು ದರಿದ್ರನಾದ ಸುಮುಖನಿಗೆ ಬಹಳ ವ್ಯಸನವುಂಟಾಗಿ (ಕಥಾಮಂ. IV, ೭೪).

[←ತೆಲು. ದೋಪು= ಕಳವುಮಾಡು]

ದೋಪೆನ್ (ಕ್ರಿ). ದೋಪ್ ಎಂದು ಶಬ್ದವುಂಟಾಗು ; ದೊಪ್ಪೆನ್ನು : ಉಡಿಗುಂ ಸಿಙ್ಗದ ದಾಡೆಯುಂ ಛಿಟಿಲ್ಲೆನಲ್ ಸಙ್ಕ್ರುದ್ಧ ನಾಗೇನ್ದ್ರನಂ ಪೊಡೆಗುಂ ದೋಪೆನೆ ಮೇರೆದಪ್ಪಿ ಕವಿತರ್ಪ್ಪಂಭೋಧಿಯುಂ ಕೋಪದಿಂ ಕುಡಿಗುಂ (ಎಕ. XI, ಹೊಳಲ್ಕೆ. ೧೨೦-೩೩ ; ಸು. 1240).

[P ಇದು 'ದೊಪ್ಪೆನ್' ಎಂಬುದರ ಅಪಲಿಖಿತವಿರಬಹುದು]

ದೋಬಿ 'ಧೋಬಿ' ನೋ.

ದೋಬಿಖಾನೆ (ನಾ). ಅಗಸರು ಬಟ್ಟೆಗಳನ್ನು ಚಲುವೆ ಮಾಡುವ ಸ್ಥಳ: (Laundry. ಇಂಕನಿ). [ದೋಬಿ (<ಧೋಬಿ) + ಖಾನೆ]

ದೋಬಿಘಾಟ್ (ನಾ). ಅಗಸರು ಬಟ್ಟೆ ಒಗೆಯುವ ಸ್ಥಳ : ದೋಬಿಘಾಟ್ ಗಳಲ್ಲಿ ಅಗಸರು ಬಟ್ಟೆಗಳನ್ನು ಒಗೆಯುತ್ತಿದ್ದರು (ರೂಢಿ).

[←ಹಿಂ. ಧೋಬಿಘಾಟ್]

ದೋಬೀಪಾಟ್ (ನಾ). ಕುಸ್ತಿಯಲ್ಲಿ ಒಂದು ಪಟ್ಟು : ಕಳಾವರ್‌ಜಂಗ್, ಏಕಲಾಂಗ್, ದೋಬೀಪಾಟ್, ಟಿಬ್ಬಿ ಹಾರಿಸುವುದು, ಸವಾರಿ ಹಾಕುವದು . . . ಇತ್ಯಾದಿ ಪಟ್ಟುಗಳನ್ನೆಲ್ಲಾ ಸುಬ್ಬು ಚಬುಕಾಗಿ, ಸರಾಗವಾಗಿ ಉಪಯೋಗಿಸುವಂತೆ ಕಲಿತ (ಭೀಮಕಾ. ೪೩). [←ಹಿಂ. ಧೋಬೀಪಾಟ್]

ದೋಭಿ 'ಧೋಬಿ' ನೋ.

ದೋಮ 'ದೋವೆಂ' ನೋ.

ದೋಮದೆರೆ 'ದೋವೆಂತೆರೆ' ನೋ.

ದೋಮೆ, ದೋಮ (ನಾ). ಸೊಳ್ಳೆ ; ಗುಂಗಾಡು ; ನೊರಜು : ಧಾನ್ಯ ಹೆಚ್ಚಿದರೆ ದೋಮೆಗೆ ಏನು ? (ಗಾದೆ). **ದೋಮ** : 'ದೋವಂದೆರೆ' ಪರಾ. [ದೇ.॥ ತೆಲು. ದೋಮ ; ಕೊಲಾ. ಡೋಮೆ]

ದೋಮೆತೆರೆ, ದೋವಂದೆರೆ (ನಾ). ಸೊಳ್ಳೆಗಳು ಬಾರದಂತೆ ತಡೆಯಲು ಉಪಯೋಗಿಸುವ ಪರದೆ; ಸೊಳ್ಳೆಪರದೆ: "ಆಂದೋಳ ಪರಿಯಂಕಮೆನೆ ತೂಗುವಂಂಚಮಕ್ಕುಂ ದೆಶೆಗೆ ತೆರೆವಿಡಲ್ದೋಮೆತೆರೆ [ಪಾಠಾಂ. ದೋಮದೆರೆ] ಯಕ್ಕು" (ಮಂಗರಾ. ೬೧-೧೭). **ದೋಮದೆರೆ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ದೋಮೆ + ತೆರೆ$_4$]

ದೋಯಿಸ (ನಾ). = ಜೋಯಿಸ : ಕಾಲನಾಥದೋಯಿಸರ ಕೊಡಗಿಯನು ಅಪಹರಿಸ್ತವರು ಕಾಶಿಯ ಕ್ಷೇತ್ರದಲ್ಲಿ ತನ್ದೆ ತಾಯಿ ಗೋಉ ಬ್ರಾಹ್ಮರ ಕೊನ್ದ ಪಾಪಕ್ಕೆ ಹೋಹರು (ಎಕ. XIV, ಗುಂಡ್ಲುಪೇ. ೧೨೦-೧ ; ?). 'ಜೋಯಿಸ' ಪರಾ. [<ಸಂ. ಜ್ಯೋತಿಷ]

ದೋರ್$_1$ 'ದೋರೆ$_1$' ನೋ.

ದೋರ್$_2$ 'ದಾರ$_2$' ನೋ.

ದೋರ್$_3$, ಧೋರ್$_1$ (ನಾ). ಒಬ್ಬಾತನ ಹೆಸರು : ಸ್ತಸ್ತಿಶ್ರೀ ದೋರಂ ಪ್ರಿಥುವಿರಾಜ್ಯಂ ಕೆಯೆ (ಎಇ. VI, ೧೬೩-೧ ; ಸು. 780) ; ಕಲಿದೋರನಾ ನೋಡಿಸಿ ಪಲರಾನಿಱಿದು ಕೊನ್ದು ಗೆಲ್ದು ತಾನುಮ್ಮಡಿದು ಕಳಿಱನ್ ಸುರಾಲಯಮೇಱಿದಾನ್ (ಎಕ. VIII, ಸೊರಬ. ೫೪೨-೫ ; ಸು. 800). **ಧೋರ** : ಬೆಳ್ಗೊಳಾಧಿಪತಿಗಳಪ್ಪ ಶ್ರೀವರಮತಿಸಾಗರಪಂಡಿತಭಟಾರರ ಬೆಸದೊಳಣ್ಣಯನುಂ ದೇವಕೊಮಾರನುಂ ಧೋರನುಂ (ಎಕ. III, ಶ್ರೀರಂಗ. ೧೪೮-೧೧ ; 904 ?). 'ದೊರಪಯ್ಯ' ಪರಾ.

[<ಸಂ. ಧ್ರುವ]

ದೋರ4 (ನಾ). ೧. ದಾರ; ರಜ್ಜು. ೨. ಕೈಗೆ ತೊಡುವ ಒಂದಂ ಬಗೆಯ ಆಭರಣ. [ಸಂ.]

ದೋರಗವುಂಡ (ನಾ). ಒಬ್ಬಾತನ ಹೆಸರಂ: ಕಱಿಗೂಡಲ ದೋರಗವುಂಡ (ಮೈಆರಿ. ೧೯೧೯, ೧೦-೬೪ ; ೪೦೦).

[ದೋರ3 + ಗವುಂಡ (<ಗಾಮುಂಡ]

ದೋರೆಗಾಯಿ 'ದೋರೆಗಾಯ್' ನೋ.

ದೋರನೇರಿಳೆ (ನಾ). ಅರ್ಧ ಮಾಗಿದ ನೇರಿಲೆಹಣ್ಣು: ಅದರ ತಲೆ ಮೇಲೆ ಕೊಂಬು ಮೊಳೆತಿವೆ ದೋರನೇರಿಳೆಯ ಹಣ್ಣ ತೆರ (ಅಚಲ್ಕ. ೧೬-೦೨). [ದೋರ1 (<ದೋರೆ1) + ನೇರಿಳೆ1 (<ನೇಱಿಲ್)]

ದೋರಪಾಲ (ನಾ). ಬಾಗಿಲು ಕಾಯುವವನಂ; ದ್ವಾರಪಾಲಕ: ಬಂದನರಮನೆಗಾಗಿ ಬಾಗಿಲ ಮುಂದಣಿಡಬಲ ಹೇವಂವೇದಿಯ ಸಂದಣಿಯ ಜನ ನೋಡಲೆಂದನು ದೋರಪಾಲರಿಗೆ (ಕುವಾಸ. ೫-೨೬).

[<ಸಂ. ದ್ವಾರಪಾಲ]

ದೋರಪ್ಪರಸ (ನಾ). ಒಬ್ಬಾತನ ಹೆಸರಂ: ಸ್ವಸ್ತಿಶ್ರೀ ದೋರಪ್ಪರಸರ್ ಪೃಥಿವೀರಾಜ್ಯಂಗೆಯೆ (ಸೌಇಇ. XX, ೧೦-೧ : ೪ ನೆಯ ಶತ) : P ಇದಂ ರಾಷ್ಟ್ರಕೂಟದ ಅರಸಂ ಧ್ರುವನಿಗೆ ಅನ್ನಯಿಸಂತ್ತದೆ.

[ದೋರ3 + ಅಪ್ಪ1 + ಅರಸ1]

ದೋರಬ್ಬೆ (ನಾ). ಒಬ್ಬಾಕೆಯ ಹೆಸರು: ದೋರಬ್ಬೆಯ ಮಗಂ ಮಲ್ಲುಗ ಕೊಬ್ಬುಯಲ್ಪರಿದು ತುಱುವುಂ ಶೆಱಿಯುಮನಿಕ್ಕಿಸಿ ಕಾದಿ ಸತ್ತಂ (ಎಕ. XII, ತಿಪಟೂ. ೫೫-೨ : ಸು. ೪೫೦). [ದೋರ3 + ಅಬ್ಬೆ1]

ದೋರಯ್ಯ (ನಾ). ಒಬ್ಬಾತನ ಹೆಸರಂ: ಗಜ್ಜಿಗೊಣ್ಣ ಧೋಟಿಗಾವುಣ್ಣ ನುಮ್ ದೋರಯ್ಯನುಮ್ ... ಮೂವರುಮ್ (ಮೈಆರಿ. ೧೯೧೫, ೧೪-೯ ; ೧೦೬೦) : ಪೂರಿತ × × × ವಂಸದ × × × ದೋರಯ್ಯ × × × ರುಳ್ಳಿಕಾಯ್ಪಕೊಜ್ಞಾಣಿ ವರ್ಮ್ಮ ಧರ್ಮ್ಮ (ಎಕ. V, ಹಾಸನ. ೧೮೫-೦ : ?).

[ದೋರ3 + ಅಯ್ಯ1]

ದೋರಸಮುದ್ರ (ನಾ). ಒಂದಂ ಊರಿನ ಹೆಸರಂ: P ಈಗಿನ ಹಳೆ ಬೀಡಿಗೆ ಹಿಂದೆ ಇದ್ದ ಹೆಸರಂ. ಹೊಯ್ಸಳ ಬಲ್ಲಾಳ ಅರಸನ ರಾಜಧಾನಿಯಾಗಿದ್ದ ನಗರ. 'ಧ್ರುವಸಮುದ್ರ' ಎಂಬುದರ ಈಚಿನ ರೂಪ: ದೋರಸಮುದ್ರಕ್ಕಿದಿರೆತ್ತಿ ಬೇಲುವೂರಮಂ ಕೊಂಡಂತೆ (ಮುಂಬಠಾ. ೪೪೦-೪೦ ; ೧೦೬೦) : ಈ ಜಿನಾಲಯಮನೆತ್ತಿಸಿದಂ ವಿಭು ಬೊಪ್ಪದೇವನಗ್ಗಳಿಕೆಯ ರಾಜಧಾನಿಗಳೊಳೊಪ್ಪುವ ದೋರಸಮುದ್ರಮಧ್ಯದೊಳ್ (ಎಕ. V, ಬೇಲೂರು. ೦೩೪-೫೩ ; ೧೧೩೩) ; ಆಂತು ಸುಖಸಂಕಥಾವಿನೋದದಿಂ ದೋರಸಮುದ್ರದ ನೆಲವೀಡಿನೊಳು ರಾಜ್ಯಂಗೆಯ್ಯುತ್ತಮಿರೆ (ಎಕ. VII, ಶಿವಮೊ. ೫-೧೧ ; ೧೨೧೪).

[ದೋರ3 + ಸಮುದ್ರ1]

ದೋರಹಣ್ಣು 'ದೋರೆವಣ್' ನೋ.

ದೋರಾಂದೋಳನ (ನಾ). ತೋಳಿನ ಚಲನೆ,–ಅಲುಗಾಟ: ಲಸದ್ದೋರಾಂದೋಳನಜಾ ತಕಂಕಣರಣ್ಗುಣತ್ಕಾರಂ (ಕಂದ್ರಪು. ೧೦-೩).

[ಸಂ. ದೋರಾಂದೋಲನ]

ದೋರಿಯ1 (ನಾ). ಒಂದಂ ಬಗೆಯ ನೆಯ್ಗೆಯ ಬಟ್ಟೆ; ಪಟ್ಟೆ ಇರಂವ ಬಟ್ಟೆ: "ದೋರಿಯು ನಾಗವಟ್ಟಿ ... ದೇವಾಂಗಮೆಂದು ಪಟಭೇದಮಕ್ಕುಂ" (ಮಂಗರಾ. ೧೦೦-೨೮) ; ಮಗರಿಯ ದೋರಿಯವ ... ಮಂಟಿಗೆಗಳಂ ಸೋಲಿಪುವು ಸೀರೆವರದರ ಪಸರಂ (ಕಬ್ಕಾಕಾ. ೩೮) : ದೋರಿಯ ಪಟ್ಟೆಯ ತೊಱೆದಳೊರ್ವಳು ಹೊಸ ಸೀರೆಯ ತೊಱೆದ ಳೊರ್ವಬಲೆ (ಧರಚ. ೨೧-೩೦).

[←ಹಿಂ. ದೋರಿಯಾ ; ಮರಾ. ದೋರವಾ]

ದೋರಿಯ2 'ದೋರೆ2' ನೋ.

ದೋರೆ1, ಡೋರೆ, ದೋರ1 (ಗು). ೧. ಅರ್ಧ ಮಾಗಿದ; ಅರೆ ಹಣ್ಣಾದ; ಪಕ್ವವಾಗುತ್ತಿರುವ. 'ದೋರೆಗಾಯ್', 'ದೋರೆವಣ್' ಪರಾ. (ನಾ). ೨. ಅರ್ಧ ಮಾಗಿದ ಫಲ; ಅರೆಮಾಗಿದುದು: ಅಪರದಿಗ್ವಿಭಾಗದೊಳಿನಿಸೊಂದಾರಕ್ಕಮಾಗಿ ನೇಱಿಲ ದೋರೆಯನನುಕರಿಪುದಾದುದಾಗಸಮಾಗಳ್ (ಕಾವ್ಯಾವ. ೫೦೭) : ಅಂಕುರದಿಂ ಪ್ರವಾಳಕುಲದಿಂ ನನೆಯಿಂ ವಂಗುಳಿಂ ಪ್ರಸೂನದಿಂ ಕಿಱಿಗಾಯ್ಗಳಿಂ ತೊಱಿದ ದೋರೆಗಳಿಂ ತನಿವಣ್ಣ ಪಂಕ್ತಿಯಿಂದಂ ... ಆವ್ಯಮೊಪ್ಪುಗುಂ (ಗಿರಿಕ. ೨-೭೭) : ಮಿಡಿದೊಂಗಲನೊಂದು ಕೊಂಬು ಕಾಯ್ವಳಗಮನೊಂದು ಕೊಂಬು ಹದದೋರೆಗಳೋಳಿಯನೊಂದು ಕೊಂಬು ... ತಳೆದಿಂತು ಮನೋಹರ ಮಾಯ್ತು ಮಾಮರಂ (ಕುಸುಮಾ. ೧೦-೧೫೫) ; ಪೂ ಕದಿರ್ ಮಿಡಿ ದೋರೆ ಪಕ್ವಫಲಸಂತತಿಯಿಂ ದೊರೆವೆತ್ತು ಮಾಮರಂ ಮದನನ ಜನ್ಮಭೂಮಿಯೆನೆ ಪೆರ್ಮೆಯನಾಂತಿರಲೀನೊ ಕೌತುಕಂ (ಪುಣ್ಯಾಸ್ರ. ೩-೭೪). **ದೋರೆ:** ೨. ಕಾಯಿ ಡೋರೆ ಹಣ್ಣು ಮೊದಲಾದುವುಗಳಲ್ಲಿಯ ಗಂಧವನಱಿವುದು ಆಚಾರಲಿಂಗದಲ್ಲಿಯ ಪ್ರಸಾದಲಿಂಗ (ಆದಪ. ೧೪೪-೪೫೧). **ದೋರ:** ೧. 'ದೋರನೇರಿಳೆ' ಪರಾ. [ದೇ.॥ ತುಳು. ದೋರೆ; ತೆಲು. ದೋರ]

ದೋರೆ2, ದೋರಿಯ2, ದೋರ್ಯ (ನಾ). ೧. (ಕೈಗೆ ತೊಡುವ) ಒಂದಂ ಬಗೆಯ ಆಭರಣ.–ಬಳೆ: "ಅವಾಪಕಃ ಪಾರಿಹಾರ್ಯಃ–ಸೂಡಿಗಮೆಂಬ ಕಡಗ, ಚೂಡಾಲು, ಪೌಂಚಿ, ಕಂಕಣ, ಬೌಕಟ್ಟು, ದೋರೆ" (ಸಿದ್ಧಾಂತಿ. ೩೦೦); ಕಡಗ ಕಂಕಣ ಮಣಿ ದೋರೆ (ವಿದಾಕ್ಕ. ೭೧-೩) : ಕಂಕಣಂ ಚೂಡೆ ದೋರೆಯುಂ ಪರಡಿ ... ಕರದ್ವಯದ ಮಣಿಬಂಧದಲಿ ಒಲವಿನಿಂದಿಟ್ಟರು (ನವಮೋ. ೩೩-೪೦) ; ಅಳವಡಿಸಿ ತೋಳ ಬಾಪುರಿ ಬಂದಿ ಭುಜಕೀರ್ತಿಗಳನು ಪೊಂಬಳೆ ದೋರೆ ಕಂಕಣಂ ಚೂಡೆಯುಜ್ವಳಿಪ ಮಣಿ ವಂಯದ ಕಾಂಚೀಧಾಮ ರುಳಿಯು (ನವಮೋ. ೧೦-೩೫). **ದೋರಿಯ2:** ೨. (ಕರಾ) ಕೈಬಳೆಗಳ ಹಿಂದೆ ಇಡುವ ಆಭರಣ. **ದೋರ್ಯ:** ೧. ದೋರ್ಯ ಹರಡಿ ಕೈಕಟ್ಟು ಚೂಡ್ಯ ಈರೈದುಂಗುರವುಳ್ಳ ಬೆಟ್ಟು (ವಿದಾಕ್ಕ. ೦೨೩-೬) ; ಕಡಗ ಕಂಕಣ ದೋರ್ಯ ಚಳಕಿ ಭಾವುರಿಯ ಪೊನ್ನುಡಿಗೆಯ ರವಣಿ ತೋರಿದಳು (ದೇವೀಪ್ರ. ೪೬) ; ಸುಮಂಗಲಿಯರು ... ಹಿಂಬಳೆ, ಮುಂಬಳೆ, ದೋರ್ಯ, ಪೌಂಚಿ, ಹರಡೀಗುಂಡು, ಗೆಜ್ಜೆ, ಕಾಲುಸರ ... ಡಾಬು ಮೊದಲಾದ ಆಭರಣಗಳನ್ನು ಧರಿಸಿಕೊಂಡು (ಮಲಿಮ. ೩೮). [ದೇ.॥ ತೆಳು. ದೋರೆ]

ದೋರೆಕಾಯಿ 'ದೋರೆಗಾಯ್' ನೋ.

ದೋರೆಗರುಳು (ನಾ). ದೋರೆಗಾಯಂತೆ ಕೆಂಪಗಿರುವ ಕರುಳಂ: ಸಾರಥಿಯ ಶಿವ ಕೊಟ್ಟನಾದೊಡೆ ಮಾರಿಗುಬ್ಬಸವಾಗದಂತಕನೂರು ತುಂಬದೆ ದೊಳ್ಳು ನೂಕದೆ ರಣಪಿಶಾಚರಿಗೆ ದೋರೆಗರುಳಲಿ ದಾನವಿಯು ರೊದಲೇಱು ಹತ್ತದೆ ಹಬ್ಬವಾಗದೆ ಭೂರಿ ಭೇತಾಳರಿಗೆ ಹೋಹುದೆ ಬಜ್ಜಿದೆ ರಣವೆಂದ (ಕುವ್ಯಾವಿ. ೫-೨೫).

[ದೋರೆ1 + ಕರುಳು (<ಕರುಳ್)]

ದೋರೆಗಾಯ್, ದೋರಗಾಯಿ, ದೋರೆಕಾಯಿ, ದೋರೆಗಾಯಿ (ನಾ). ಅರ್ಧ ಮಾಗಿದ ಕಾಯಿ; ಹಣ್ಣಾಗಲು ಬಂದ ಕಾಯಿ: ಪುದಿದೆಳಗಾಯ್ ಬಸಂತದ ಮೊದಲ್ ನೆರೆದೊಪ್ಪುವ ದೋರೆಗಾಯ್ ಬಸಂತದ ನಡು ಪಣ್ ಬಸಂತದ ಸೆಜಂಗೆನೆ ತನ್ಮೈಯಮಪ್ಪಿನಂ ಬಸಂತದ ನಿಮಿರ್ದಾದಿಮಧ್ಯವಂತ ಸಾನಮೊಡಂಬಡೆ ತನ್ನೊಳಂ ಬಸಂತದೊ[ಳಮಿದೇಂ] ಬಸಂತದದಗುಂತಿಗೆ ಬಾಟ್ಕೊದಲಾಯ್ತೊ ಮಾಮರಂ (ಶಾಂತಿಪು.೭-೧೪೩) ; ಸೀಮಾವಿನ ದೋರೆಗಾಯ್ಗಳಂ ಗೊಲೆವೆರಸು ನೆಲಕ್ಕೆ ಬೀಟಲೀಯದೆ (ಧರ್ಮಾಮೃ. ೦೩-೩೦) : ಪೊಳೆವಲರ ಸಿಂಧೂರತಿಲಕದಿಂ ತತ್‌ಕಂಸುಮಕೆಳಸಿ ಬಾದೆಱಿದಿಗಳಗಳ

ಕುಂತಳದಿನವಟ ಕಳರುತಿಯ ಸವಿವಾತಿನಿಂ ತೋಱ[ರ]ದೋಱ[ರೆ]ಗಾಯ್ಗಳ ಕುಚಂಗಳಿನೊಪ್ಪುತೆ . . . ದಾಡಿಮಿಲಲನೆ ಶುಕನು ಮನೊಲಿಸಿಕೊಂಡಳೆನೆ (ಪದ್ಮರಾ. ೮-೩೬). **ದೋರಗಾಯಿ :** ಸೀಬೆಯ ಮರದಲ್ಲಿದ್ದ ದೋರಗಾಯಿಗಳನ್ನೆಲ್ಲಾ ಹುಡುಗರು ಕಿತ್ತು ಹಾಕಿದ್ದಾರೆ (ರೂಢಿ). **ದೋರೆಕಾಯಿ :** ಒಂದು ಮಾಗಿದ ಹಣ್ಣು, ಇನ್ನೊಂದು ಮಿಂಚುವ ದೋರೆಕಾಯಿ (ಶರಣ. ೪೯೭). **ದೋರೆಗಾಯಿ :** "ಶಲಾಟುಃ, ಆಮೇಫಲೇ-ಪಕ್ವವಾಗದೇ ಇರುವ ಕಾಯಿ, ಕಸುಗಾಯಿ, ದೋರೆಗಾಯಿ, ಎಳೆಗಾಯಿ, ಮಿಡಿಗಾಯಿ" (ಸಿದ್ಧಾಂತಿ. ೧೦೦) ; ನಸುಮಿಡಿಗಾಯಿ ಕಸುಗಾಯ್ದೋರೆಗಾಯಿಗಳ . . . ಭೂಜದಿನೆಸೆದುದ ದ್ಯಾನ (ತೊರರಾ. ೧-೯-೧೨); ಚೆಟ್ಟಾಗಿರಲಿ, ದೋರೆಗಾಯಾಗಿರಲಿ, ಅಥವಾ ಹಣ್ಣೇ ಆಗಲಿ ಬಹಳ ರುಚಿ (ನನ್ನೂರು. ೧೯೯).

[ದೋರೆ$_1$ + ಕಾಯ್$_4$./ತುಳು. ದೋರೆಕಾಯಿ ; ತೆಲು. ದೋರಗಾಯ]

ದೋರೆಗಾಯಿ 'ದೋರೆಗಾಯ್' ನೋ.

ದೋರೆಗೆಂಬಿಸಿಲ್ (ನಾ). ಅರ್ಧ ಮಾಗಿದ ಫಲದ ಬಣ್ಣವನ್ನು ಹೊಂದಿರುವ ಬಿಸಿಲು ; ಕೆಂಬಿಸಿಲು : ವಧೂಜನಪಾದಪಲ್ಲವಪ್ರಸರದ ಕಾಂತಿ ಕಾರ್ಮುಗಿಲ ಮೇಗೆಳನೇಸಱ ದೋರೆಗೆಂಬಿಸಿಲ್ಪಸರಿಸಿದಂತಿರಾಯ್ತು (ಅನಂಪು. ೦೦-೩೫). [ದೋರೆ$_1$ + ಕೆಂಬಿಸಿಲ್]

ದೋರೆಪಣ್ 'ದೋರೆವಣ್' ನೋ.

ದೋರೆವಣ್, ದೋರಹಣ್ಣು, ದೋರೆಪಣ್, ದೋರೆಹಣ್ಣು (ನಾ). ಪೂರ್ಣವಾಗಿ ಮಾಗದ ಹಣ್ಣು ; ಮಾಗಲಿರುವ ಹಣ್ಣು : ಅಂಬುಧಿಯೊಳುದಿರ್ದು ತೇಂಕುವುದುಂಬರ ಜಂಬುವಿನ ದೋರೆವಣ್ಣಪೊಲೆಸೆಗುಂ (ಅರ್ಧನೇ. ೦-೫೫) ; ತಳಿರ ಕಳಿಕೆಯ ಮಿಡಿಯ ಪೂಗುಡಿಯ ಪಣ್ಣ ದೋರೆವಣ್ಣ ಬೆರಕೆವಣ್ಣದೊಳ್ದಳಿರ ಪುದುವಿನಿಂ ಬೆಡಂಗುವಡೆದು (ಚಂದ್ರಪು. ೧-೦೦೫ ವ) ; ಜಂಬು ದೋರೆವಣ್ದೊಂಗಲನಾಂತುದು (ಅನಂಪು. ೯-೬) ; ಕೆಂಬರಲೆಂಬಂತೆ ಸಾರತರಮಾದ ದೋರೆವಣ್ಗಳಿಂದಿಂದ್ರನೀಲದಂದಂಬಡೆದು (ಶಬಶಂ. ೨-೪೨ ವ). **ದೋರಹಣ್ಣು :** ಪೂರ್ತಿ ಮಾಗಿದ ಹಣ್ಣಿಗಿಂತ ದೋರಹಣ್ಣು ಹೆಚ್ಚು ರುಚಿಯಾಗಿರುತ್ತದೆ (ರೂಢಿ). **ದೋರೆಪಣ್ :** ಕಳಿಕೆ ಕೊನರ್ ತಳಿರ್ ಮುಗುಳಲರ್ ಮಿಡಿ ಕಾಯ್ ನಸುದೋರೆ ದೋರೆಪಣ್ ಬಳಸಿರಲ್ . . . ಮದನತೋಮರಮಾದುದು ಬಂದ ಮಾಮರಂ (ಜಗವಿ. ೧೪-೨೭). **ದೋರೆಹಣ್ಣು :** ಕಾಯಿ ದೋರೆಹಣ್ಣು ಮೊದಲಾದವ ಱಲ್ಲಿಯ ಗಂಧವನಱಿವುದು ಆಚಾರಲಿಂಗದಲ್ಲಿಯ ಪ್ರಸಾದಲಿಂಗ ಇಂತಿದ ಱಲ್ಲಿಯ ಗಂಧತೃಪ್ತಿಯನಱಿವುದು ಆಚಾರಲಿಂಗದಲ್ಲಿಯ ಮಹಾಲಿಂಗ (ಆದವ. ೫-೧೨) ; ವಿಜಯನ ಸತಿಯಿಂದ ಫಲವಾಯಿತು ಅದು ಗಜರಾಜನಿಂದ ದೋರೆಹಣ್ಣಾಯ್ತು (ಪುರಂದ. ೫-೯೨-೨) ; ಬೋರೆಗಿಡದಿ ದೋಟಿಗೆ ದೊರೆತ ದೋರೆಹಣ್ಣನವನಿಗೆ ಮೆಲಿಸುವೆ (ಗಿಳಿವಿಂ. ೬೧-೩೨).

[ದೋರೆ$_1$ + ಪಣ್$_3$]

ದೋರೆವಲ್, ದೋರೆವಲ್ಲು (ನಾ). ದೋರೆಹಣ್ಣಿನಂಥ ನಸುಗೆಂಪು ಬಣ್ಣದ ಹಲ್ಲು : ಮಿಸುಗುವ ದೋರೆವಲ್ ಕರಮೆ ಮಾಸರಮಾದುದು ದೇಸೆಕಾರ್ತಿಯೊಳ್ (ಚಂದ್ರಪು. ೮-೫೧) ; ಮಿಸುನಿಯ ಕಂಕಣಂ ಪೊಳೆವ ಪೊಂಬಳೆ . . . ಹಳದಿಯಂಬರಮೊಪ್ಪುವ ದೋರೆವಲ್ ಕರಂ ಮಿಸುಗುವ ಪುಷ್ಪರಾಗಮಣಿಮುದ್ರಿಕೆಯಿಂದಮಲಂಪುಗೊಂಡು ನಿಂದಸಿಯಳು ಪೋಲ್ತಳಂಗಜನ ವಲ್ಲಭೆಯರ್ಚಿಪ ಪೊನ್ನ ಬೊಂಬೆಯಂ (ಸೂಕ್ತಿಸು. ೮-೪೦೯) ; ಕೆಂಬರಲ ಪಳಿವ ದೋರೆವಲ್ (ನಾಗಷ. ೨-೦೦೪). **ದೋರೆವಲ್ಲು :** ಗಂಡಸ್ಥಲಪನ್ನೆ ಕೊನರುವ ಕರ್ಮಿಸೆ ತೊಂಡೆವಣ್ದುಟಿ ದೋರೆವಲ್ಲು ಮಂಡಳಿಸುವ ಕಂಠಸರದ ನುಣ್ಗೊರಲನ ಕಂಡಾಕ್ಷಣ ಸೋತರೊಲಿದು (ಮೋಹತ. ೦೮-೬೩). [ದೋರೆ$_1$ + ಪಲ್]

ದೋರೆವಲಸು (ನಾ). ಅರ್ಧ ಮಾಗಿದ ಹಲಸು : ಕೆಲವು ಹೊಸ ದೋರೆವಲಸಿನ ತೊಳೆಯನುಕ್ಕರಿಸಿ ಪಲಭಾಗೆಯಂ ಮಾಡಿ ತಾಳಿದಂಗಳನಟ್ಟು (ಸೂಪಶಾ. ೫-೫೬). [ದೋರೆ$_1$ + ಪಲಸು (<ಪನಸು)]

ದೋರೆವಲ್ಲು 'ದೋರೆವಲ್' ನೋ.

ದೋರೆವಾಯ್ (ನಾ). ದೋರೆಹಣ್ಣಿನಂತೆ ಕೆಂಪಗಿರುವ ಬಾಯಿ ; ಕೆಂಬಾಯಿ : ಅಳಿದ ಕುರುಳ್ ತಡಂಮುಡಿದ ಸೋರ್ಮುಡಿ ಬೀಗಿ ಬೆಳರ್ತ ದೋರೆವಾಯ್ . . . ನವನಖಾಂಕಮಲಂಕರಿಸಲ್ ನಿಜೇಚ್ಛೆಯಿಂ ಸುಳಿವಬಲಾಜನಂ ದಿನಕರೋದಯಕಾಲದೊಳೊಪ್ಪಿ ತೋಱುಗುಂ ೯-೬೧). [ದೋರೆ$_1$ + ಬಾಯ್]

ದೋರೆವಾಯ್ದೆಱ[3] (ನಾ). ದೋರೆಹಣ್ಣಿನಂತೆ ಕೆಂಪಗಿರುವ ತುಟಿ ; ಕೆಂದುಟಿ : ಪಾಮರಿಯರ ದೋಱ[ರೆ]ವಾಯ್ದೆಱಿಗಳಂ ನೆಱಮಿಕ್ಷಿಸಿ ಬೀಡೆವೆತ್ತು ಬಿತ್ತರಿಸುವ ದಾಡಿಮವ್ರಜಮಿವೆಂಬಭಿಶಂಕೆಯನಪ್ಪುಕೆಯ್ದು (ಶಾಂತೀಶ್ವ. ೧-೯೩). [ದೋರೆ$_1$ + ಬಾಯ್ದೆಱ$_2$]

ದೋರೆವಿಸಿಲು (ನಾ). = ದೋರೆಗೆಂಬಿಸಿಲ್ : ಎಳನೇಸಱ ದೋರೆವಿಸಿಲು ಕತ್ತಲೆಯೊಳು ಪೊಳೆವಂತೆ (ಅನಂಚ. ೧೫-೫).

[ದೋರೆ$_1$ + ಬಿಸಿಲು (<ಬಿಸಿಲ್)]

ದೋರೆಹಣ್ಣು 'ದೋರೆವಣ್' ನೋ.

ದೋರ್ಗರ್ವ (ನಾ). ತೋಳಿನ ಶಕ್ತಿ ಅಥವಾ ಪರಾಕ್ರಮದ ಬಗ್ಗೆ ಇರುವ ಹೆಮ್ಮೆ,– ಗರ್ವ : ದೋರ್ಗರ್ವಮನಿರ್ವಲಂ ಪೊಗಟ್ದಿನಂ ಸೌಮಿತ್ರಿಯಂ ರಾಮನಂ ವಿರಥರ್ಮಾಡಿ ರಣಾಗ್ರದೊಳ್ ಪಿಡಿದುತಂದಾಂ ಕೊಟ್ಟಪೆಂ (ಪಂರಾಮಾ. ೧೪-೦೧೯) ; ದೋರ್ಗ್ಗರ್ವದೊಂದು × × ಆತನ ಸಹೋದರಂ ತಾಂ ಭೂತಳದೊಳು ಕೀರ್ತಿವೆತ್ತ(ಂ)ನಮಳಚರಿತ್ರಂ (ಸೌಇಇ. XV, ೨೩೩-೮ ; 1203); ಮೌನಮಂ ತಾಳ್ದಾ ಮಹಾಸಭೆಯೊಳ್ ದೋರ್ಗರ್ವಮುಳಿದ ಭಟರಂ ಮಿತ್ರರಂ ಬಂಧುವರ್ಗಂಗಳಂ ನೋಡಿ (ಜಿಬಪು. ೫೦-೪). [ಸಂ.]

ದೋರ್ದಂಡ (ನಾ). ದಂಡದಂತೆ ಉದ್ದವಾದ ತೋಳು ; ಶಕ್ತಿಯುತವಾದ ಬಾಹು ; ಭುಜಾದಂಡ : ಸುರಸಂದೋಹದ ತೀವಿ ತಂದಡಂ ಘಟಸಂಘಾತಂಗಳಾನಲ್ಕೆರಟ್ಕರದಿಂ ಬಾರದೆ ಮಾಣೆ ನಿರ್ಮಿಸಿದ ದೋರ್ದಂಗಳೊಳ್ ಭೂಷಣೋತ್ಕರಮಿಂಬಾಗಿರೆ (ಆದಿಪು. ೭-೮೬) ; ಈ ವಜ್ರಾ ವರ್ತಕೋದಂಡಮನವಯವದಿಂದೇಱಿಸಲ್ ಸಾಲ್ವ ದೋರ್ದಂಡಾವಷ್ಟಂಭ ಪ್ರಚಂಡಂ ಜನಕಜೆಗೆ ವರಂ ಬರ್ಪುದು (ಪಂರಾಮಾ. ೫-೭೬). [ಸಂ.]

ದೋರ್ದರ್ಪ (ನಾ). =ದೋರ್ಗರ್ವ : ದರ್ಪಕ ಮೇಘಚಂದ್ರಮುನಿಯೊಳ್ ಮಾಣ್ ನಿನ್ನ ದೋರ್ದರ್ಪಮಂ (ಪಂರಾಮಾ. ೧-೨೦); ಇವು ಕಂದರ್ಪಂಗೆ ದೋರ್ದರ್ಪವನಳಿಗಳಿಪಂ ಗಂಧವಾಹಂಗೆ ಸೌಗಂಧವನಬ್ಜಂಗೂರ್ಜಿತಾಟೋಪವನಡರಿಸುಗುಂ (ಜಗವಿ. ೪-೬೫). [ಸಂ.]

ದೋರ್ದಿ (ನಾ). (ತೆಂಗಿನ ನಾರಿನ) ದಪ್ಪವಾದ ಹಗ್ಗ : ಆಗ ಅಲ್ಲಿದ್ದ ಸದಸ್ಯರಲೊಬ್ಬನು "ದೋರ್ದಿಯಂತೆ (ತೆಂಗಿನ ನಾರಿನ ಹಗ್ಗದಂತೆ) ಯಾಕೆ ತಿರುಚಿಕೊಂಡು ಸುತ್ತುತ್ತಿದ್ದೀಯೆ ?" ಎಂದು ಆತನನ್ನು ವಿನೋದವಾಗಿ ಕೇಳಿದನು (ದಾದಾನ. ೪) ; 'ದೋರ್ದಿ'ಯನ್ನು ಸುಟ್ಟರೂ, ಅದರ ರುಚನ್ನು ನಾಶಮಾಡಲಾಗುವುದಿಲ್ಲ (ದಾದಾನ. ೪).

[←ಗುಜ. ದೋರಡಿ]

ದೋರ್ಬಲ, ದೋರ್ಬಳ (ನಾ). ತೋಳಿನ ಬಲ,–ಕಸುವು; ಭುಜಬಲ ; ಪರಾಕ್ರಮ : ಕಾಡ ಬಡನರಿ ಮೊಲ ಪುಲ್ಲೆಗಳಲ್ಲಿ ನಿನ್ನ ಸಾಹಸಮುಂ ದೋರ್ಬಲಮುಂ ಮೆಱೆಗುಮದಲ್ಲದೆ ಚಲದಂಕನೊಳೆನ್ನೊಳೆಂತುಮೇಂ ಮೆಱೆದಪುದೇ (ಶಬಶಂ. ೪-೨೭) ; ಹರ್ಷವರ್ಧನನನ್ನು ತನ್ನ ದೋರ್ಬಲದಿಂದ ಇರಿದಿಕ್ಕಿ . . . 'ಪರಮೇಶ್ವರ'ನೆಂದು ಬಿರುದು ಪಡೆದನು

(ಕವೀರ. ೧೩). **ದೋರ್ಬಳ :** ಕುಂತಳನೃಪಾಳಂ [ಕೂಡೆ] ಕೊಣ್ಡಾಡೆ ದೋರ್ಬಳಮಂ . . . ಮಧುವದಣ್ಣಾಧೀಶ್ವರಂ ತಾಳ್ದಿದಂ (ಕಇಆ. ೪-೨-೧೩೦ ; 1058) ; ದ್ವಿಗುಣಿಸಿದತ್ತು ದೋರ್ಬಳ ಚತುರ್ಬಳಮಿಾತನಿನೀ ನೃಪಂಗೆ (ಮಲ್ಲಿಪು. ೪-೧೫೦) ; ದೋರ್ಬಳವಾಯುನಂದನನೆ ಪುಟ್ಟಿದ ನಂದನನೆಂದು ನೋಡಿ (ಕುಸುಮಾ. ೬-೧೦೯). 'ದೋರ್ವಲ' ಪರಾ.

[ಸಂ.]

ದೋರ್ಬಲಿ (ನಾ). ತೋಳಿನ ಬಲವುಳ್ಳವನು ; ಭುಜಬಲವುಳ್ಳವನು ; ಪರಾಕ್ರಮಿ : ದೋರ್ಬಲಿಯೆನಗೆಱಗದ ಮೇಲರಸುಗಳಾರ್ಬಂದೆಱಗಿದರೇನು ಮಾರ್ಬಲವಿದ್ದೇನು ಫಲ ನನಗಿನ್ನೀ ದೋರ್ಬಲವಿದ್ದೇನು ಫಲವು (ಗೋಮಟೇ. ೦೨-೨೬). [ಸಂ. ದೋರ್ಬಲಿನ್]

ದೋರ್ಬಳ 'ದೋರ್ಬಲ' ನೋ.

ದೋರ್ಭಂಗ (ನಾ). ತೋಳಿನ ಪರಾಕ್ರಮಕ್ಕೆ ಅವಮಾನ ಮಾಡುವುದು; ಸೋಲಿಸುವುದು : ವೀರಂಗೆ ದೋರ್ಭಂಗಂ ಮಾಡಿದನೇನಲಂಘ್ಯ ಬಲನೋ ರಾಮಾನುಜಂ ಲಕ್ಷ್ಮಣಂ (ಪಂರಾಮಾ. ೮-೨೯) ; ಸಂಗರದೊಳ್ ಕುಡುವೆಂ ದೋರ್ಭಂಗಮಂ (ಪಂರಾಮಾ. ೦೩-೧೯೯) [ಸಂ.]

ದೋರ್ಮಂಡಲ (ನಾ). ಭುಜಪ್ರದೇಶ; ಬಾಹುವಲಯ : ದೋರ್ಮಂಡಲದೊಳ್ ತಳೆದಂ ಭೂಮಂಡಲಮಂ ತ್ರಿದಶಜಯಂ ಜಯಶ್ರೀರಮಣಂ (ಪಂರಾಮಾ. ೧೦-೬೮). [ಸಂ.]

ದೋರ್ಮಹಿಮೆ (ನಾ). ತೋಳಿನ ಶಕ್ತಿ ; ಪರಾಕ್ರಮದ ಹಿರಿಮೆ : ರಕ್ಕಸನ ದೋರ್ಮಹಿಮೆ ಮಡಲಿಱಿದು ಪರ್ಬಿದುದು (ಜಿಬಪು. ೪೭-೦೩).

[ಸಂ. ದೋರ್ಮಹಿಮನ್]

ದೋರ್ಮೂಲ (ನಾ). ಬಾಹುಮೂಲ ; ಕಂಕುಳು; ಬಗಲು: ಅಸಿತೇಕ್ಷು ಕಾರ್ಮುಕನೊಡಲನೇಳಿಪ ದೋರ್ಮೂಲ ಜಡೆವಾಳ ಬೇರ್ಮೂಲವೆರ್ದೆಗೊಳ್ವ ಭರ್ಮತಾಪಂರ ಸಾಸ್ಯ ಕೂರ್ಮೆಗಿಕ್ಕಿದ ವಸ್ಯವೊರ್ಮೊದಲಿವೆನೆ ರತಿಗೆ ನೂರ್ಮಡಿಯ ಗಾಡಿವಡೆಪರ್ (ಉದ್ಯದೇ. ೫-೨೨) : ಬಲಗಾಲ್ಪಿಂದೆಸೆಗಾಗೆ ವಾಮಪದಮಂ ಮುಂದಿಟ್ಟು ದೋರ್ಮೂಲಮುಂ ಮೊಲೆಯಗ್ರಂ ತದೆಲೋಱೆ ತೆಳ್ನಡು ಬಳುಂಕಲ್ ನುಣ್ಗೊರಲ್ಕೊಂಕೆ ಕೋಮಲೆ ನಿಂದು . . . ಎಚ್ಚಳಿನಿಯಂ ಭಾಪೆಂಬಿನಂ ದ್ವೀಪಿಯಂ (ರಾಜಶೇ. ೫-೯೮).

[ಸಂ.]

ದೋರ್ಯ 'ದೋರ್ಯ್ಯ' ನೋ.

ದೋರ್ಯುಗ (ನಾ). ಎರಡು ತೋಳುಗಳು ; ಬಾಹುಯುಗ್ಮ : ತನುಲತೆಗೆ ಶಾಖೆ ಕರತಳವನಜಕ್ಕೆ ಮೃಣಾಳನಾಳಮಕ್ಷಿಭ್ರಮರಕ್ಕೆ ನವೀನಶಿರೀಷಸ್ರಜಮೆನೆ ವನಿತೆಯ ದೋರ್ಯುಗಕ್ಕೆ ಪರ್ಯಾಯಂಗಳ್ (ಚಂದ್ರಪು. ೧೧-೧೦೦) ; ಹರಭಕ್ತರ್ ಬಂದೊಡುರ್ಬುತ್ತವರ ಚರಣಮಂ ಕಣ್ಗಳೊಳ್ ಕಂಠದೊಳ್ ಪೇರುರದೊಳ್ ಭಾಳಾಗ್ರ ದೋರ್ಯುಗದೊಳುಭಯಗಂಡಂಗಳೊಳ್ ತಾಳ್ದುಮೆತ್ತುತ್ತೊರೆಯುತ್ತುಪ್ಪುತ್ತೆ . . . ಬಾಳ್ದಿರ್ಪಿರವಂ ನೀನಿತ್ತು ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ (ರಕ್ಷಾಶ. ೫೮) . [ಸಂ.]

ದೋರ್ಯುದ್ಧ (ನಾ). ದ್ವಂದ್ವಯುದ್ಧ ; ಹೋರಾಟ ; ಜಗಳ : "ದೋರ್ಮಧ್ಯ[ರ್ಯುದ್ಧ]ಮೆನೆ ಕರೀರಕಮನಲು ಜಗಳಕ್ಕೆ ನಾಮ ಮಕ್ಕುಂ" (ಮಂಗರಾ. ೧೩೨-೩೦). [ಸಂ.]

ದೋರ್ವಲ, ದೋರ್ವಳ (ನಾ). ೧. = ದೋರ್ಬಲ : ವಿಜಯಶ್ರೀ ಕಾಂತೆಗಂ ಕಾಂತೆಗಂ ನಿನಗಂ ದೋರ್ವಲದಿಂದಮೊಂದೆ ಪಸೆಯೊಳ್ ಪಾಣಿಗ್ರಹಂಗೆಯ್ಯನೇ (ಪಂಪಭಾ. ೩-೬೫); ತನ್ನ ಬಾಣದ ಮೊನೆಯೊಳ್ ಮಾರ್ವಲಮಂ ತವಿಸಿದನೆನೆ ದೋರ್ವಲಮೇಂ ಬ್ರಹ್ಮರಥನೊಳವಿತಥಮಾಯ್ತೋ (ಪಂರಾಮಾ. ೨-೬೨); ಎನ್ನ ಪೆಂಡತಿಯೆನ್ನ ಬಾಂಧವರೆನ್ನ ಮೈಯೆನ್ನ ದೋರ್ವಲಮೆಂದು ಧರ್ಮದ ಬಟ್ಟೆಗಾಣದೆ (ಧರ್ಮಾಮೃ. ೬-೧೨೦): ಪರ್ವಿದ ಗರ್ವದ ಕೊರ್ವಿಂದಮರರಗುರ್ವಿಸೆ ಭರ್ಜಿಸಿ ದೋರ್ವಲಮಂ ಮೆಱೆದುರ್ವುವ ದುಷ್ಟಜಲಂಧರವಾರಿಧಿಗೌರ್ವಾನಲ ಜಯತು (ಉದ್ಯದೇ. ೬-೧೯). **ದೋರ್ವಳ :** ೧. ದೋರ್ವಳದಿಂ ಚತುರಬ್ಧಿ ಮೇಖಲಾವಳಯಿತ ಭೂಮಿಗಾದನೆಱೆಯಂ . . . ಶೂದ್ರಕನೆಂಬ ಭೂಭುಜಂ (ಕಾದಂಪೂ.೮): ದೋರ್ವಳದೃಪ್ತಂ ತಳತಂತ್ರಮಿರ್ಕೆಲದೊಳಿಂಬಾಗಿರ್ಪಿನಂ ಲೀಲೆಯಿಂ ತಳರ್ದಂ (ಪುಷ್ಪಪು. ೫-೧೮). ೨. ತೋಳಿನ ಶಕ್ತಿಯುಳ್ಳವನು; ಪರಾಕ್ರಮಿ : ಅದನಾಳ್ವನಪ್ರತಿಮ ದೋರ್ವಳನಾ ವಿಭುದೇವಸೇನಂ (ನೇಮಿಪು. ೬-೨) ; ಪುರದ ಬಹಿರಾವರಣಸೀಮಾಂತರದ ಸಂವೇಶದಲಿ ದೊರೆಗಳಿ ಬೀಡಾಯ್ತರಸು ಮನ್ನೆಯ ಮಂಡಲೇಶ್ವರ ಸೌರ್ವಭೌಮರಿಗೆ ದೋರ್ವಳರಿಗವನೀಸುರರಿಗಾ ವಿಟಶೂದ್ರ ಮೊದಲಾದರಿಗೆ ಮಿಕ್ಕಿನ ವಿವಿಧ ವರ್ಣಾಶ್ರಮ ಜನಂಗಳಿಗೆ (ತೂರರಾ. ೧-೧೨-೩೦).

[< ಸಂ. ದೋರ್ಬಲ]

ದೋರ್ವಲನ (ನಾ). ತೋಳುಗಳನ್ನು ಆಡಿಸುವುದು ; ಬಾಹುಚಲನೆ : ಚಾರಿ ಮೆಟ್ಟುವ ಭಂಗಿ ದೋರ್ವಲನಂ ಮನಂಗೊಳೆ ಮಂಜುಮಂಜೀರ ಕಂಕಣಕಿಂಕಿಣೀರುತಿ ಪೊಣ್ಮೆ ವಕ್ರಿತ ಕಂಧರಂ ಸ್ಮೇರವಕ್ತ್ರಸರೋರುಹಂ ಲಲಿತಾಯತೇಕ್ಷಣನಾಗಿ ಸಂಸಾರನಾಟಕಸೂತ್ರಧಾರಿ ಮುರಾರಿ ಕೈಪಱೆಗಾಡಿದಂ (ಜಗವಿ. ೩-೫೨). [ಸಂ.]

ದೋರ್ವಳ 'ದೋರ್ವಲ' ನೋ.

ದೋರ್ವಳಯ (ನಾ). ತೋಳಿಗೆ ತೊಡಿಸುವ ಒಂದು ಬಗೆಯ ಆಭರಣ; ತೋಳುಬಂದಿ ; ತೋಳುಬಳೆ ; ಬಾಹುಪೂರ : ಕಂಕಣಮಂ ತಗುಳ್ಚಿ ದೋರ್ವಳಯಮನಿಕ್ಕಿ ಮುದ್ರಿಕೆಯನೇಱಿಸಿ ನೂಪುರಮಂ ತೊಡರ್ಚಿ ಮಂಜುಳ ಕಟಿಸೂತ್ರಮಂ ತುಡಿಸಿ ಕಯ್ಗೆಯೆ ಕಣ್ಗೆಸೆದಂ ಜಿನಾರ್ಭಕಂ (ಪುಷ್ಪಪು. ೦೦-೬೩). [ಸಂ. ದೋರ್ವಲಯ]

ದೋರ್ವಳಯುತ (ನಾ). ತೋಳಿನ ಬಲದಿಂದ ಕೂಡಿದವನು ; ಭುಜಬಲವುಳ್ಳವನು ; ಪರಾಕ್ರಮಿ : ಎಲೆ ಸಹಜಾತೆ ನಿನ್ನನತಿವೇಗದೊಳಿಂದು ಪುರಂದರಾದಿಗಳ್ಬಳಯುತರಡ್ಡವಿಕ್ಕಿದೊಡೆ ಪೋಪೆನೆ ತಪ್ಪೆನೆನುತ್ತ . . . ದೋರ್ವಳಯುತನಾಹವಕ್ಕೆಳಸಿ ಪೊರ್ದಿರೆ ನಾಗಕುಮಾರಕುಂಜರಂ (ಪುಣ್ಯಾಸ್ರ. ೭-೬೨). [< ಸಂ. ದೋರ್ಬಲಯುತ]

ದೋರ್ವಿಕ್ರಾಂತ (ನಾ). = ದೋರ್ಬಲ : ನೆಗಟ್ದನಖಿಳರಾಜ್ಯಾಂಗನಾವಲ್ಲಭಂ ತಾನೆನೆ ದೋರ್ವ್ವಿಕ್ರಾಂತದಿಂದಾಚುಗಿನೃಪತನಯಂ ಬೊಮ್ಮ ಭೂಪಂ (ಸೌಇಇ. XI-II, ೧೧೯-೧೮ ; 948). [ಸಂ.]

ದೋಲ, ದೋಳ (ನಾ). ೧. ತೂಗಾಡುವುದು ; ಓಲಾಡುವುದು ; ಹೊಯ್ದಾಡುವುದು: ಕಾರುಣ್ಯದೋಲದುಯ್ಯಾಲೆಯಂ ನೆನೆ (ಶ್ರೀರಾಮಾ. ೩೧೦-೨೩೯). ೨. ಫಾಲ್ಗುಣ ಮಾಸದ ಹುಣ್ಣಿಮೆಯ ದಿನ ಮಾಡುವ ಶ್ರೀಕೃಷ್ಣನ ಉತ್ಸವ,—ಡೋಲೋತ್ಸವ. ೩. ಅಂದಣ ; ಪಲ್ಲಕ್ಕಿ. ೪. ಉಯ್ಯಾಲೆ ; ತೂಗುಮಂಚ : "ದೋಲಾಂದೋಲ [ಪಾಠಾಂ. ದೋಳಾಂದೋಳ]ಮುಯ್ಯಲಕ್ಕುಂ" (ಮಂಗರಾ. ೬೧-೧೭). 'ಆಂದೋಲ' ಪರಾ. ೫. ವ್ಯವಸಾಯದ ಒಂದು ಉಪಕರಣ ; ಕುಂಟೆ : (ಕಿ). **ದೋಳ :** ೪. ಮೇಲಿನ 'ಮಂಗರಾ' ಪ್ರಯೋಗದ ಪಾಠಾಂತರವನ್ನು ನೋಡಿ. 'ಆಂದೋಳ' ಪರಾ. ೫. "ದೋಳಂ ಕೂಂಟೆ" (ಮಂಗರಾ. ೧೦೯-೧). [ಸಂ.]

ದೋಲಕ (ನಾ). ತೂಗಾಡುವ ಕುಚ್ಚು ; ಲೋಲಕ: ಗಾಳಿಗೆ ತೂಗಾಡುವ ಝಲ್ಲರಿಗಳ ಸ್ಫಟಿಕ ದೋಲಕಗಳ ಟುಣ್‌ಟುಣ್ ಧ್ವನಿ ... ಕೇಳಬರುತ್ತವೆ (ಇಪ್ಪಕ. ೧೪೭). [ಸಂ.]

ದೋಲಯಿಸು 'ದೋಲಿಸು' ನೋ.

ದೋಲಾಯಂತ್ರ (ನಾ). "ಒಂದು ಪಾತ್ರೆಯಲ್ಲಿ ಕಷಾಯವನ್ನು ಹಾಕಿ ಅದರ ಬಾಯಿ ಮೇಲೆ ಅಡ್ಡಕಟ್ಟಿಗೆಯನ್ನಿಟ್ಟು ಅದಕ್ಕೆ ಔಷಧದ ಗಂಟು ಇಳಿಬಿಡಬೇಕು. ಆ ಗಂಟು ಕಷಾಯದಲ್ಲಿ ಅರ್ಧ ಮುಳುಗಿರಬೇಕು. ಇದಕ್ಕೆ ದೋಲಾಯಂತ್ರವೆಂಬ ಸಂಜ್ಞೆಯಿರುತ್ತದೆ" (ಗೃಹವೈ. ೪ ಅಡಿಟಿ): ಅದರೊಳಗಿನ ಕಸರು ಕಡ್ಡಿಗಳನ್ನಾರಿಸಿ ಅರಿವೆಯಲ್ಲಿ ಗಂಟುಕಟ್ಟಿ ತ್ರಿಫಲಾದ ಕಷಾಯದೊಳಗೆ ದೋಲಾಯಂತ್ರದಿಂದ ಕುದಿಸಬೇಕು (ಗೃಹವೈ. ೪). [ಸಂ.]

ದೋಲಿ (ನಾ). ಬೆಟ್ಟ ಮುಂತಾದ ಇಳಿದಾರಿನ ಪ್ರದೇಶಗಳಲ್ಲಿ ಮನುಷ್ಯರನ್ನು ಕೂರಿಸಿಕೊಂಡು ಮನುಷ್ಯರೇ ಹೊರುವ ತೊಟ್ಟಿಲಿನಂಥ ಒಂದು ವಿಧವಾದ ವಾಹನ: ಮದುವೆಯಾಗಿ ಮರುದಿಬ್ಬಣ ಬಂದದ್ದು ದೋಲಿಯಲ್ಲಿ (ಪಳಮ. ೫೫): ದೋಲಿಯಲ್ಲಿ ಪರ್ವತವನ್ನು ಹತ್ತುತ್ತಿದ್ದಾಗ, ಪರ್ವತದ ಮೇಲು ಕೆಳಗು ಪ್ರದೇಶಗಳಲ್ಲಿ ಚೈತ್ರಮಾಸದ ನಾನಾ ವಿಧವಾದ ಬೆಳೆ . . . ಸೌಂದರ್ಯದ ಉರಿಯನ್ನು ಎಬ್ಬಿಸಿತ್ತು (ನಿಬಂಧ. II, ೬೯): ಎರಡು ದೋಲಿಗಳನ್ನು ಹೊಂದಿಸಿಕೊಂಡು . . . ಕರೆದುಕೊಂಡು ಹೋಗಿ (ಬಂಕಿಮ. ೩೫೦). 'ಡೋಲಿ' ಪರಾ.

[ಸಂ. ದೋಲೀ]

ದೋಲಿಗ (ನಾ). ಕೆಲಸಗಾರ; ಸೇವಕ: ದಾವಣಿಗೊಂಟಮಂ ಪೊಡೆವ . . . ಗುಡಿಪೊಯ್ವ ಬೆನ್ನ ಪುಣ್ಣೋವುವ ನೀರ್ಗೊಳಕ್ಕೆ ಬಟಲ್ವೆಟ್ಟುಗಳಂ ಪೊಡವಕ್ಕಿಯಂ ಕರಂ ಭಾವಿಸೆ ಸೇರೆಗೊಂಡಡುವ ದೋಲಿಗರಿಂದೆಸೆದಂ ವಣಿಗ್ವರಂ (ದಶಕು. ೪-೭೮). [<ಜೋಲಿ$_1$ + –ಗ$_2$]

ದೋಲಿಸು, ದೊಲ್ಲಯಿಸು, ದೋಲಯಿಸಂ (ಕ್ರಿ). ಅಲ್ಲಾಡುವಂತೆ ಮಾಡು; ತೂಗಾಡಿಸು: ತಡಿಯ ಹೆಮ್ಮರದ ನೆರಳ ದೋಲಿಸುತ ಬಳಿಗೆ ಬರುವ ತೆರೆಯ ಕರದೊಳಾಂತು (ಹಂಸದ. ೬-೩೦). **ದೊಲ್ಲಯಿಸು:** ಇನ್ನು ಮೇತಕೆ ನಿನ್ನ ಪುಸುಕುಮೌನವ ತೊರೆಯೆ? ವುಚ್ಚಾಲಿಯಾಡಿ ದೊಲ್ಲಯಿಸುವೇಕೆನ್ನ? (ಗಿಳಿವಿಂ. ೪೭-೩). **ದೋಲಯಿಸು:** ಐರಾವತವೆನೆ ಬಿಳಮುಗಿಲಾನೆಯ ಸದರದಿ ಮುಟ್ಟುತ ನೇವರಿಸಿ, ಕುಸುಮಾವಳಿಯೆನೆ ಬಾನಿನ ನೀಲವ ಟೊಂಗೆಯ ತುದಿಯೊಳು ದೋಲಯಿಸಿ (ಮೂಂದಳಿ. ೫೭-೧೨). [ದೋಲ + –ಇಸ್ಯ$_3$]

ದೋಲು 'ಡೋಲು' ನೋ.

ದೋಲೆ (ನಾ). ಉಯ್ಯಾಲೆ; ತೊಟ್ಟಿಲು: "ದೋಲೆ (ದೋಲಿ)–ದೋಲಾ=ಡೋಲಿ" (ತದ್ಭವಕೋ. ೫೧). 'ಡೋಲೆ' ಪರಾ. [ಸಂ. ದೋಲಾ]

ದೋಲೋತ್ಸವ (ನಾ). ದೇವರ ಮೂರ್ತಿಯನ್ನು ಉಯ್ಯಾಲೆಯಲ್ಲಿ ಕೂರಿಸಿ ಮಾಡುವ ಉತ್ಸವ: ಶ್ರೀನಿವಾಸದೇವರ ಗುಡಿಯಲ್ಲಿ ಇಂದು ದೋಲೋತ್ಸವ ನಡೆಯುತ್ತದೆ (ಕೂಡಿ). 'ಡೋಲೋತ್ಸವ' ಪರಾ.

[ದೋಲ + ಉತ್ಸವ]

ದೋವತಿ 'ಧೋವತಿ' ನೋ.

ದೋವತ್ತಿ 'ಧೋವತಿ' ನೋ.

ದೋವು (ನಾ). (?): ಪಾಡಲಿದು ಕೋಮಳಾಂಗಂ ಬಾಡೆ ನಿಜಾವಯವದ ದವಳಮಣಿಭೂಷಣಮಂ ನೋಡುವಡೆ ದೋವಿನೋಲಿಯಾ (?) ತೋಡುಟಿಯಲ್ ಪೊಕ್ಕಳಬಲಿ ಜನಕಾಲಯವಂ (ನಳಚಂ. ೫೭೮). [?]

ದೋಶಿ (ನಾ). ಜೋಯಿಸ: ಜೋಶಿಗಳೂ ದೋಶಿಗಳೂ (ಹುಚ್ಚಾಟ. ೧೬). 'ಜೋಶಿ' ಪರಾ. [< ಸಂ. ಜ್ಯೋತಿಷಿನ್]

ದೋಶ್ಚಕ್ರ (ನಾ). ಕೈಯಲ್ಲಿರುವ ಚಕ್ರಾಯುಧ; ಹಸ್ತವರ್ತಿಯಾದ ಚಕ್ರಾಯುಧ: ಚಕ್ರರತ್ನವೊಂದೆಯಲ್ತು ಚಕ್ರಿಗಾನುಮಾಲ್ತ್ ದೋಶ್ಚಕ್ರಮೆಂದು ಬಂದು ಮುಂದೆ ನಿಲ್ದ ಮಾಚ್ಯಿಯಂ ಪ್ರಭಾಚಕ್ರಮೆಸೆಯೆ (ಆದಿಪು. ೩-೫೫). [ಸಂ.

ದೋಶ್ಶಾಲಿ (ನಾ). (ಸಮರ್ಥವಾದ) ತೋಳುಳ್ಳವನು; ಪರಾಕ್ರಮಶಾಲಿ: ವಿಜಯಾರ್ಧನಗಕ್ಕೆ ತ್ರಿದನಜೇಯ ದೋಶ್ಶಾಲಿ ರಾವಣಂ ನಿಜವಿಜಯಧ್ವಜನಿಗಳೀಟುಂ ನಿಜಸೀಮಾಪಜ್ರವೇದಿಯಿಂ ತಳರ್ದುವೆನಲ್ (ಪಂರಾಮಾ. ೧೧-೧೯೭). [ಸಂ. ದೋಶ್ಶಾಲಿನ್]

ದೋಷ (ನಾ). ೧. ಕುಂದು; ಕಳಂಕ: "ಕುಜುಹಿನಲ್ಲಿಯುಂ ಕಳಂಕದಲ್ಲಿಯುಂ ದೋಷವೆಂಬುದು" (ಹರಿಶಯು. ೧೩೭-೩೪): "ಕಡುಹಿ{ಕುಜುಹಿ}ನಲಿ ದೋಷದಲ್ಲಿ ವಿಗೆ ಕಳಂಕಮುದೆಂಬುದು" (ಮಂಗಣ. ೦೪೫-೦೯). ೨. ಕೊರತೆ; ನ್ಯೂನತೆ. 'ದೃಷ್ಟಿದೋಷ' ಪರಾ. ೩. ತಪ್ಪು; ಅಪರಾಧ: "ದೋಷವಪರಾಧ" (ಪಸು.ಕೋ. ೧೦೪-೦೮); ಗುಣಾರ್ಣವನೊಳ್ಳು ಮನ್ಮನೋವಾಸಮನೆಯ್ದೆ ಪೇಳ್ವಪೆನದಲ್ಲದೆ ಗರ್ವಮೆ ದೋಷಮ[ಬ್ಬಿ]ಗಂ ದೋಷಮೆ (ಪಂಪಭಾ. ೧-೦೩): ದೋಷಮುಮೇವಮುಂ ಶಕುನಿಯುಂ ಯುವರಾಜನಿನಾಯ್ತು (ಪಂಪಭಾ. ೧೩-೬೮): ಅವರ ಮಾತು ಮೀರಿದ ದೋಷಕ್ಕೆ ನಾವು ಪಾತ್ರರಾಗುವೆವು (ಮುಂಬಯಿ. ೪-೪೦). ೪. ಕೆಟ್ಟ ಕಾರ್ಯ; ಪಾಪ: "ಆಘಂ ನಕ್ತಾಂಕ ದೋಷಾಹ್ವಯಂ" (ನಾನಾರ್ಥ. ೧೬): ದೋಷವೆಲ್ಲಿಯದೊ ದುರಿತವಲ್ಲಿಯದೊ ಸಂಗಯ್ಯಾ ನಿಮ್ಮ ಮಾಣದೆ ನೆನೆವವಂಗೆ ಭವಕರ್ಮವೆಲ್ಲಿಯದೊ (ಬಸವ. ೯೭೦): ಹಿಂದೆ ಮಾಡಿದ ದೋಷ ಒಂದುಳಿಯದಜುಹಿದೆನೊ ತಂದೆ ಪುರಿಂದರವಿಠಲ ಬಂದೆನ್ನ ಸಲಹೊ (ಪುರಂದ. ೪-೪೪-೫). ೫. ಕೆಟ್ಟ ಗುಣ; ದುರ್ಗುಣ; ಅವಗುಣ: ಏಸು ಪುಣ್ಯವ ಗಳಿಸಿಕೊಂಡರು ದ್ವೇಷವೆಂಬೀ ದೋಷದಿಂದಲಿ ಲೇಸು ದೊರಕಾವುದೆ (ಅಮೃತ. ೨-೬೬): ರಾಗದ್ವೇಷಗಳಿಂಬುದು ದೋಷಗಳು (ಹಿಂದಸಾ. ೧೦೫). ೬. ಕೆಟ್ಟ ನಡತೆ; ದುಶ್ಚಾರಿತ್ರ್ಯ: ನೀಂ ಪೊಲ್ಲಮೆಗೆ ಕರಂ ಗೆಂಟಾಗಿರ್ದುಂ ನಿನ್ನ ದೋಷಮಂ ಕಂಡುಮೇಕೆ ಕಳೆಯದಿರ್ಪಯ್ ಬೇಗಂ ಕಳೆ ಕಳೆಯದುದಾಸೀನನಾಗಿರ್ದಿಯಾದೊಡೆ ಸೂಜಿಯ ಬಟಿಯ ದಾರದಂತೆ ದೋಷದ ಬಟಿಯನೆ ಪಾಪಂ ತಗುಳ್ದು ಬರ್ಕುಂ (ಜೀವಸಂ. ೩೪-೪೮ ವ). ೭. ಕೆಡುಕು; ಅನರ್ಥ: ಪರಮೇಶ್ವರನಾತಂ ತತ್ಪ್ರಪಾದಪಂ ಸ್ಮೆರಿಸಿದೋಂ ನಿರುಪಮಮಿದೆಂದು ಶಂಕಿಸದಿರು ಮುಟ್ಟದು ಗುಣಿಗೆ ದೋಷಿಗಕ್ಕುಂ ದೋಷಂ (ಶಾಂತಿಪು. ೩-೮೮); ಇಂದ್ರಿಯನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು (ಬಸವ. ೯೪೦). ೮. ಅವಂಗಳ ವಾದುದು; ಅಶುಭವಾದುದು: ಕೊರಲೊಳ್ ಕಣ್ಗಿಸೆದೊಪ್ಪೆ ದೇವಮಣಿ ಮೇಣ್ ರೋಚಮಾನಂ ಪೊದಟ್ಟಿರೆ ಪೂರ್ವಾಂಗದ ದೋಷಮಂ ನಿಟಲದೊಳ್ ನಿಶ್ರೇಣಕಾಕಾರದಿಂದಿರೆ ಮೇಣ್ ಪ(ಪು)ಲ್ಲಿಯ ಮಾಟ್ಯಿಯಿಂದಿರೆ ಶರೋದ್ದೋಷಂಗಳಂ ಮೇಖಿಳಾಂತರದೊಳ್ ತೋಱೆ ಪಶ್ಚಿಮಾರ್ಧದ ಶುಭಾವರ್ತಂಗಳುಂ ಪಿಂಗುಗುಂ (ಕೋಕೋಪ. ೧೧-೪೪). ೯. ಕತ್ತಲೆ; ಅಂಧಕಾರ. 'ದೋಷಾನುಷಂಗ' ಪರಾ. ೧೦. (ದೇಹಕ್ಕೆ ಸಂಬಂಧಿಸಿದ) ವಾತ, ಪಿತ್ತ, ಕಫಗಳೆಂಬ ಮೂರು ಬಗೆಯ ನ್ಯೂನತೆಗಳು: ಆನಾಮಯಂ, ಆರೋಗ್ಯಂ –ಎರಡೂ ರೋಗವಿಲ್ಲದೆಯಿರುವಿಕೆ, ವಾತ ಪಿತ್ತ ಶ್ಲೇಷ್ಮಗಳೆಂಬ ಮೂರು ದೋಷಗಳೂ ಸಮಾನವಾಗಿರುವಿಕೆ (ಸಿದ್ಧಾಂತಿ. ೧೮೪). ೧೧. (ರೋಗವು ತೀವ್ರವಾದಾಗ) ನಾಲಗೆಯ ಮೇಲೆ ಉಂಟಾಗುವ ಕೆಂಪು ಅಥವಾ ಕಪ್ಪು ಕಲೆ: ರೋಗವು ಬಲವಾಗಿ ನಾಲಗೆಯ ಮೇಲೆ ದೋಷ ಬಂತು (ನೀತಿಚಿಂ. I, ೭೭). ೧೨. (ರೋಗದ) ಚಿಕಿತ್ಸೆ: "ದೋಷಂ ಪ್ರತಿಕಾರಕ್ರಿಯೆ" (ಪಸು.ಕೋ. ೭೪-೪೩). ೧೩. [ಕಾವ್ಯವಿಮಾ] ಪದ, ಅರ್ಥ, ರಸಗಳಿಗೆ ಸಂಬಂಧಿಸಿದ ಕಾವ್ಯಪ್ರಯೋಗದ ನ್ಯೂನತೆಗಳು; ℙ ಪ್ರಾಚೀನ ಆಲಂಕಾರಿಕರ ಹೇಳಿಕೆಗಳ ಪ್ರಕಾರ ಕಾವ್ಯದೋಷಗಳ ಸಂಖ್ಯೆ ಹಾಗೂ ವಿವರಗಳಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ನಾಟ್ಯಶಾಸ್ತ್ರ

ಹಾಗು ಕಾವ್ಯಾವಲೋಕನಗಳ ಪ್ರಕಾರ ಕಾವ್ಯದೋಷಗಳು ಹತ್ತು. ಅವು ಯಾವುವೆಂದರೆ : "(ಅ) ಗೂಢಾರ್ಥ, ಅರ್ಥಾಂತರ, ಅರ್ಥಹೀನ, ಭಿನ್ನಾರ್ಥ, ಏಕಾರ್ಥ, ಅಭಿಪ್ಲುತಾರ್ಥ, ನ್ಯಾಯಾದಪೇತ, ವಿಷಮ, ವಿಸಂಧಿ, ಶಬ್ದಚ್ಯುತ (ನಾಟ್ಯಶಾ. ೧೬-೪೪/೧೭-೪೮). (ಆ) ಅಪಾರ್ಥ, ವ್ಯರ್ಥ, ಏಕಾರ್ಥ, ಸಸಂಶಯ, ಉಪಕ್ರಮ, ಶಬ್ದಹೀನ, ಯತಿಭ್ರಷ್ಟ, ಭಿನ್ನವೃತ್ತ, ವಿಸಂಧಿಕ, ದೇಶಕಾಲಕಲಾಲೋಕನ್ಯಾಯಾಗಮವಿರೋಧಿ (ಕಾವ್ಯಾವ. ೮೧-೮೮)'' (ಶ್ರೀವಕ್ಯ. ೧೧೯) : ಛಂದೋಂಬುಧಿಯ ಪ್ರಕಾರ ಕಾವ್ಯದೋಷಗಳು ಹದಿನೆಂಟು. ಅವು ಯಾವುವೆಂದರೆ : "ಅಸದರ್ಥ, ವಿಪರೀತಕಲ್ಪನೆ, ಅಭವ್ಯ, ದುಷ್ಕರ, ಗ್ರಾಮ್ಯ, ನೀರಸ, ಅಘ್ರೌಢತೆ, ಅಪ್ರತೀತಿವಚನ, ದುಸ್ಸಂಧಿ, ವಿಶ್ಲೇಷ, ನಷ್ಟಸಮಾಸ, ನಯನಾಶ, ರೀತಿವಿಫಲ, ದುರ್ಲಕ್ಷಣ, ಹಾಸ್ಯವಾಕ್, ವಿಷಮ, ಅಸೌಮ್ಯ, ಅನೋಜೆ (ಛಂದೋ.ಪು. ೧೦೦-ಪ. ೧)" (ಶ್ರೀವಕ್ಯ. ೧೧೯). ಸಂಸ್ಕೃತ ಆಲಂಕಾರಿಕರು ಮತ್ತು ಕನ್ನಡ ಆಲಂಕಾರಿಕರೆಲ್ಲರ ಅಭಿಪ್ರಾಯಗಳನ್ನು ಒಟ್ಟುಗೂಡಿಸಿ, ಕನ್ನಡ ಕೈಪಿಡಿಯಲ್ಲಿ ಒಂದು ಪ್ರತ್ಯೇಕ ವಿಭಾಗವನ್ನು ಮಾಡಿಕೊಂಡಿದ್ದಾರೆ. ಆ ವಿಭಾಗದ ಮೇರೆಗೆ ಈ ಕೆಳಕಂಡ ವಿವರಣೆಯನ್ನು ಕಾಣಬಹುದು. ಕಾವ್ಯದಲ್ಲಿ ಪದ, ಅರ್ಥ, ರಸಗಳೆಂಬುವು ತ್ರಿಮುಖ್ಯಪಾದುವುಗಳಾದುದರಿಂದ, ಕಾವ್ಯದೋಷಗಳನ್ನು ಪದದೋಷ, ಅರ್ಥದೋಷ ಮತ್ತು ರಸದೋಷಗಳೆಂದು ಮೂರು ಭಾಗ ಮಾಡಬಹುದು. "೧. ಪದದೋಷಗಳು ... ೧. ಶ್ರುತಿಕಟು-ಪರುಷಾಕ್ಷರಗಳಿಂದ ಕೂಡಿ ಕವಿಗೆ ಅಶಕ್ಯವಾಗಿ ಇರುವುದು. ೨. ಚ್ಯುತಸಂಸ್ಕಾರ - ವ್ಯಾಕರಣಕ್ಕೆ ವಿರುದ್ಧವಾಗಿರುವುದು. ೩. ಅಪ್ರಯುಂಕ್ತ - ಕೋಶ ವ್ಯಾಕರಣಗಳಿಗೆ ಒಪ್ಪಿಗೆಯಾಗಿದ್ದರೂ, ಪ್ರಯೋಗದಲ್ಲಿ ಇಲ್ಲದೇ ಇರುವುದು. ೪. ನಿಹತಾರ್ಥ-ಪ್ರಸಿದ್ಧವಾದ ಅರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿರುವುದು. ೫. ಅನುಚಿತಾರ್ಥ - ಹೇಳಬೇಕೆಂದಿರುವ ಅರ್ಥದ ಸ್ವಾರಸ್ಯವನ್ನು ಕೆಡಿಸುವುದು. ೬. ನಿರರ್ಥಕ - ಪಾದಪೂರಣಕ್ಕೆ ಮಾತ್ರ ಹಾಕಿರುವುದು. ೭. ಅಶ್ಲೀಲ - ಮನಸ್ಸು ಹಿಂದೆಗೆಯುವಂತೆ ಮಾಡುವುದು. ಇದು ಮೂರು ವಿಧ :-(i) ನಾಚಿಕೆಗೊಳಿಸುವುದರಿಂದ, (ii) ಜುಗುಪ್ಸೆ ಅಥವಾ ಅಸಹ್ಯವನ್ನುಂಟುಮಾಡುವುದರಿಂದ, (iii) ಅಮಂಗಲ ಅಥವಾ ಕೆಟ್ಟದ್ದನ್ನು ಸೂಚಿಸುವುದರಿಂದ. ೮. ಸಂದಿಗ್ಧ - ಗೊತ್ತಾದ ಒಂದು ಅರ್ಥವಿಲ್ಲದೆ ಹೀಗೋ ಹಾಗೋ ಎಂದು ಸಂದೇಹ ಹುಟ್ಟುವಂತೆ ಇರುವುದು. ೯. ಅಪ್ರತೀತ - ಕೇವಲ ಶಾಸ್ತ್ರಗಳಲ್ಲಿ ಮಾತ್ರವೇ ಬರುವುದು. ೧೦. ಗ್ರಾಮ್ಯ - ಗಂಭೀರವಲ್ಲದ್ದು. ೧೧. ಕ್ಲಿಷ್ಟ - ಪಾಠಕರಿಗೆ ಸುಲಭವಾಗಿ ಅರ್ಥವಾಗದಿರುವುದು. ೧೨. ಅವಿಮೃಷ್ಟವಿಧೇಯಾಂಶ - ಹೇಳಬೇಕೆಂದಿರುವ ವಿಷಯದಲ್ಲಿ ಪ್ರಮುಖ್ಯಭಾಗಕ್ಕೆ ತಕ್ಕ ಪ್ರಾಶಸ್ತ್ಯ ಕೊಡದಂತಿರುವುದು. ೧೩. ವಿರುದ್ಧಮತಿಕೃತ್ - ಹೇಳಬೇಕೆಂದಿದ್ದ ಅರ್ಥಕ್ಕೆ ಕೇವಲ ವಿರುದ್ಧವಾದ ಅರ್ಥವೂ ಆಗುವಂತಿರುವುದು. ವಾಕ್ಯದಲ್ಲಿ ಮಾತ್ರ ಬರತಕ್ಕ ದೋಷಗಳು. ೧. ಪ್ರತಿಕೂಲವರ್ಣ - ಪ್ರಸಕ್ತವಾದ ರಸಕ್ಕೆ ಅನುಗುಣವಲ್ಲದ ಅಕ್ಷರಗಳಿರುವುದು. ೨. ವಿಸಂಧಿ-ಎಂದರೆ (i) ಅಶ್ಲೀಲವು ತೋರುವ ಹಾಗೆ ಸಂಧಿ ಮಾಡಿರುವುದು. (ii) ಕವಿಗೆ ಬಿರುಸಾಗಿರುವಂತೆ ಸಂಧಿ ಮಾಡಿರುವುದು. ೩. ಅನುಚಿತ ವೃತ್ತ.-(i) ಛಂದಸ್ಸಿಗೆ ಅನುಸಾರಿಯಾಗಿದ್ದರೂ ಕವಿಗೆ ಶಕ್ಯವಲ್ಲದೆ ಇರುವುದು. (ii) ರಸಕ್ಕೆ ಅನುಗುಣವಲ್ಲದ ವೃತ್ತವನ್ನು ಉಪಯೋಗಿಸಿರುವುದು. ೪. ನ್ಯೂನಪದ - ಪ್ರಕೃತಾರ್ಥವನ್ನು ತಿಳಿಸುವುದಕ್ಕೆ ಸಾಕಾಗುವಷ್ಟು ಪದಗಳನ್ನು ಉಪಯೋಗಿಸಿಲ್ಲದಿರುವುದು. ೫. ಅಧಿಕಪದ - ಪ್ರಕೃತಕ್ಕೆ ಬೇಡದೆ ಇರುವ ಹೆಚ್ಚು ಪದಗಳನ್ನು ಉಪಯೋಗಿಸಿರುವುದು. ೬. ಪುನರುಕ್ತಿ - ವಿಶೇಷ ಪ್ರಯೋಜನವೇನೂ ಇಲ್ಲದೆ ಒಂದೇ ಅರ್ಥವುಳ್ಳ ಒಂದೇ ಪದವನ್ನು ಅನೇಕ ಸಾರಿ ಉಪಯೋಗಿಸಿರುವುದು. ೭. ಪತತ್ಪ್ರಕರ್ಷ - (ಅಲಂಕಾರವಾಗಲಿ ಬಂಧವಾಗಲಿ) ಮೊದಲು ಉತ್ಕೃಷ್ಟವಾಗಿದ್ದು, ಅನಂತರ ಬರಬರುತ್ತ ಕೀಳಾಗುವುದು. ೮. ಅಸ್ಥಾನಪದ - ಪದಗಳನ್ನು ಸರಿಯಾದ ಸ್ಥಾನಗಳಲ್ಲಿ ಉಪಯೋಗಿಸದೆ ಇರುವುದು. ೯. ಸಂಕೀರ್ಣ - ಎರಡು ಮೂರು ವಾಕ್ಯಗಳಿರುವ ಕಡೆಯಲ್ಲಿ ಒಂದರ ಪದಗಳು ಮತ್ತೊಂದರೊಡನೆ ಬೆರೆದು ಹೋಗಿ (ಅರ್ಥ ಮಾಡುವುದಕ್ಕೆ ಕಷ್ಟವಾಗಿ) ಇರುವುದು. ೧೦. ಪ್ರಸಿದ್ಧಿವಿರೋಧ - ಲೋಕಪ್ರಸಿದ್ಧಿಗೆ ವಿರುದ್ಧವಾದದು. ೧೧. ಅಕ್ರಮ-ಕ್ರಮಂತಪ್ಪಿರುವುದು. ೨. ಅರ್ಥದೋಷಗಳು. ೧. ಅಪುಷ್ಟಿ - ಪ್ರಮುಖ್ಯವಾಗಿ ಹೇಳಬೇಕೆಂದಿರುವ ವಿಷಯಕ್ಕೆ ಯಾವ ಅಂಶದಲ್ಲಿಯೂ ಪುಷ್ಟಿ ಅಥವಾ ಅತಿಶಯವನ್ನು ತರದೇ ಇರುವ ಸಂಗತಿಯನ್ನು ಹೇಳಿರುವುದು. ೨. ಕಷ್ಟತೆ - ಸುಲಭವಾಗಿ ಮನಸ್ಸಿಗೆ ಹಿಡಿಯದೆ ತಿಳಿದುಕೊಳ್ಳುವುದಕ್ಕೆ ಕ್ಲೇಶವನ್ನುಂಟುಮಾಡುವುದು. ೩. ವ್ಯಾಹತಿ - (ಯಾವುದಾದರೂ ಒಂದು ವಸ್ತುವನ್ನು ಹೊಗಳಿ ಅಥವಾ ನಿಂದಿಸಿ, ಆಮೇಲೆ ಅದಕ್ಕೆ) ವಿರುದ್ಧವಾಗಿ ಮತ್ತೇನನ್ನಾದರೂ ಹೇಳುವುದು. ೪. ಪುನರುಕ್ತಿ - ಹೇಳಿದ್ದನ್ನೇ ಹೇಳುವುದು. ೫. ದುಷ್ಕ್ರಮ - ಲೋಕಶಾಸ್ತ್ರಾದಿಗಳಿಗೆ ವಿರುದ್ಧವಾದ ಕ್ರಮದಲ್ಲಿ ಹೇಳಿರುವುದು. ೬. ಗ್ರಾಮ್ಯತೆ - ಸಭ್ಯರ ಮನಸ್ಸಿಗೆ ಸಂಕೋಚವನ್ನುಂಟುಮಾಡುವುದು. ೭. ಸಂದಿಗ್ಧತೆ - ಕವಿಯ ಭಾವವು ಹೀಗೋ ಹಾಗೋ ಎಂದು ಸಂದೇಹವಾಗುವಂತೆ ಇರುವುದು. ೮. (i) (ಲೋಕ)ಪ್ರಸಿದ್ಧಿವಿರೋಧ - ಜನಗಳಲ್ಲಿ ಪ್ರಸಿದ್ಧವಲ್ಲದೆ ಇರುವುದು. (ii) (ಕವಿ) ಪ್ರಸಿದ್ಧಿವಿರೋಧ - ಕವಿಗಳು ಹಿಂದಿನಿಂದಲೂ ಅನುಸರಿಸಿರುವ ಸಂಪ್ರದಾಯ ಅಥವಾ 'ಸಮಯ'ಕ್ಕೆ ವಿರುದ್ಧವಾಗಿರುವುದು. ೯. ವಿದ್ಯಾವಿರೋಧ - ಶಾಸ್ತ್ರ ಮುಂತಾದುಗಳಿಗೆ (ದೇಶಕಾಲಾದಿಗಳಿಗೂ) ವಿರುದ್ಧವಾಗಿರುವುದು. ೧೦. ಅನವೀಕೃತತ್ವ - ಅನೇಕ ಸಂಗತಿಗಳಿದ್ದರೂ ಅವುಗಳನ್ನು ಹೊಸ ಹೊಸ ಬಗೆಯಲ್ಲಿ ಹೇಳದೆ, ಒಂದೇ ಬಗೆಯಲ್ಲಿ ಹೇಳಿರುವುದು . . . ೩. ರಸದೋಷಗಳು. ೧-೩. ರಸಗಳು, ಸ್ಥಾಯಿಭಾವ, ಸಂಚಾರಿಭಾವ ಇವುಗಳ ಹೆಸರನ್ನು ಹೇಳುವುದು. (ಇವು ಯಾವಾಗಲೂ ಸನ್ನಿವೇಶವಿಶೇಷದಿಂದಲೂ ಅನುಭಾವಾದಿಗಳಿಂದಲೂ ವ್ಯಕ್ತವಾಗಬೇಕು). ೪-೫. ವಿಭಾವಾನುಭಾವಗಳು ಸಂಭವವಾಗಿ ತಿಳಿಯದೆ ಇರುವುದು. ೬. ಪ್ರಕೃತರಸಕ್ಕೆ ವಿರುದ್ಧವಾದ ವಿಭಾವಾನುಭಾವ ಸಂಚಾರಿಭಾವಗಳನ್ನು ಹೇಳುವುದು . . . ೭. ಒಂದೇ ರಸವನ್ನು ಬಿಟ್ಟು ಬಿಟ್ಟು ಪುನಃ ಪುನಃ ಪ್ರತಿವಾದಿಸುವುದು. ೮. ಅನುಚಿತಸ್ಥಾನದಲ್ಲಿ ವಿಸ್ತರಿಸುವುದು. ೯. ಯಾವುದಾದರೂ ಒಂದು ರಸವು ಧಾರಾಕಾರವಾಗಿ ಹೋಗುತ್ತಿರುವಾಗ ತಟ್ಟನೆ ಅದನ್ನು ನಿಲ್ಲಿಸಿಬಿಡುವುದು. ೧೦. ಅಂಗವಾದ ರಸವನ್ನು ವಿಸ್ತಾರ ಮಾಡುವುದು. ೧೧. ನಾಯಕ ನಾಯಿಕೆ ಮುಂತಾದ ಪ್ರಧಾನಾಂಶಗಳಿಗೆ ತಕ್ಕಷ್ಟು ಗಮನ ಕೊಡದೆ ಹೋಗಿರುವುದು. ಇದರಿಂದ ಮುಖ್ಯರಸಕ್ಕೆ ಅಡ್ಡಿಯಾಗುವುದು). ೧೨. ಪ್ರಕೃತಿ ವಿಪರ್ಯಯ - ಪಾತ್ರಗಳ 'ಪ್ರಕೃತಿ' ಅಥವಾ ಸ್ವಭಾವಕ್ಕೆ (ದಿವ್ಯ, ಅದಿವ್ಯ, ದಿವ್ಯಾದಿವ್ಯ, ಧೀರೋದಾತ್ತ ಇತ್ಯಾದಿ)

ಅನುಚಿತವಾಗಿರಬಹುದಾದ ನಡತೆಯನ್ನು ವರ್ಣಿಸಿರುವುದು. ಹೀಗೆಯೇ ದೇಶ, ಕಾಲ, ಪಾತ್ರಗಳ ವಯಸ್ಸು, ಜಾತಿ, ವೇಷ, ಮಾತು, ಕಥೆ ಇವುಗಳ 'ವಿಪರ್ಯಯ'ವನ್ನೂ ತಿಳಿದುಕೊಳ್ಳಬೇಕು. (೧೩). ರಸೋತ್ಪತ್ತಿಗೆ ಅಂಗವಾಗದಿರುವ, ಎಂದರೆ ಪ್ರಯೋಜಕವಲ್ಲದಿರುವ, ಸಂಗತಿಯನ್ನು ಹೇಳುವುದು. (೧೪). ಒಂದೇ ಕಡೆಯಲ್ಲಿ ಪರಸ್ಪರ ವಿರುದ್ಧವಾದ ಎರಡು ರಸಗಳನ್ನು ಪ್ರತಿಪಾದಿಸುವುದು" (ಕೈಪಿಡಿ. ೨೨೭) : ಅಸದರ್ಥಂ ವಿಪರೀತಕಲ್ಪನೆಯಭವ್ಯಂ ದುಷ್ಕರಂ . . . ಅಸೌಮ್ಯಮನೋಜೆಯೆಂಬಿವಿನಿತುಂ ದೋಷಂಗಳಷ್ಟಾದಶಂ (ಛಂದೋಂಬು. ೧-೪೬ ಅಡಿಪದ್ಯ); ಶ್ರುತಿವಿರಸಪದಕ್ಷೇಪಸ್ಥಿತಿಕಷ್ಟಂ ಗ್ರಾಮ್ಯಶಬ್ದ ಸಂದರ್ಭ ಸಮನ್ವಿತಮುಮಸಭ್ಯಾರ್ಥತೃತಿಸ್ಮೃತಿಯುಂ ನೀರಸಮೆನಿಪ್ಪುದಕ್ಕುಂ ದೋಷಂ (ಕಾವ್ಯಾವ. ೪೪೩) ; ಗುಣಮಂ ಕಂಡೊಡೆ ದುರ್ಜನಂ ಬಗೆವನಲ್ಲಂ ದೋಷಮಂ ಕಂಡ ಸದ್ಗುಣಿವೊಲ್ ದೋಷಮನಲ್ಲಿ ಕಂಡೊಡೆ ಖಳಂ ವಿಸ್ತಾರಿಕುಂ (ಸೂಕ್ತಿಸು. ೧-೬೩) ; ರಸಕ್ಕೆ ಅಡ್ಡಿಯಾಗುವುದೇ 'ದೋಷ' ವೆಂದು ಹೇಳಬಹುದು (ಕೈಪಿಡಿ. ೨೨೬). 'ಅಷ್ಟಾದಶ ದೋಷ' ಪರಾ. ೧೪. [ಜ್ಯೋತಿ] ಗ್ರಹಗಳ ಚಲನೆಯಿಂದ ಉಂಟಾಗುವ ಕೆಡುಕು : ಘಟಿಯಿಕ್ಕುಂ ಜಲಧೀಶಮಂಡಲದ ದೋಷಂ ಸದ್ಯಮತ್ತಿಂದ್ರಮಂಡಳದೋಷಂ ದಿನಸಪ್ತಮಕ್ಕೊಗೆಗು ಮತ್ತಾ ತಿಂಗಳೊಳ್ ವಹ್ನಿಮಂಡಳದೋಷಂ ಪವಮಾನಮಂಡಳದ ದೋಷಂ ತೋರ್ಕುವಿರ್ತಿಂಗಳೊಳ್ ಸಲೆಯುರ್ವೀವಳಯಪ್ರಕಂಪನಫಲಂ ಷಣ್ಮಾಸದೊಳ್ ತೋಱುಗುಂ (ಲೋಕೋಪ. ೪-೮೯). ೧೫. [ನ್ಯಾಯ] ಪ್ರಮೇಯದ ಹನ್ನೆರಡು ವಿಭಾಗಗಳಲ್ಲಿ ಒಂದು ; P ಆತ್ಮ, ಶರೀರ, ಇಂದ್ರಿಯ, ಅರ್ಥ, ಬುದ್ಧಿ, ಮನಸ್ಸು, ಪ್ರವೃತ್ತಿ, ದೋಷ, ಪ್ರೇತ್ಯಭಾವ, ಫಲ, ದುಃಖ ಮತ್ತು ಅಪವರ್ಗ ಎಂಬಿವು ಹನ್ನೆರಡು ವಿಭಾಗಗಳು. ಇವುಗಳ ವಿವರವು ಈ ಕೆಳಕಂಡಂತೆ ಇದೆ. ಆತ್ಮ = ಸರ್ವವನ್ನೂ ನೋಡತಕ್ಕವನು, ಅನುಭವಿಸತಕ್ಕವನು, ತಿಳಿಯತಕ್ಕವನು ; ಶರೀರ = ಆತ್ಮನ ಭೋಗಕ್ಕೆ ಆಶ್ರಯವಾದುದು ; ಇಂದ್ರಿಯಗಳು = ಸಾಧನಗಳು ; ಅರ್ಥ = ವಿಷಯಗಳು ; ಬುದ್ಧಿ = ಭೋಗ ; ಮನಸ್ಸು = ಇಂದ್ರಿಯಗಳು ಸಕಲವಿಷಯಗಳನ್ನೂ ತಿಳಿಯಲು ಪ್ರತ್ಯೇಕವಾಗಿ ಅಸಮರ್ಥವಾಗಿರುವುದರಿಂದ ಶರೀರೇಂದ್ರಿಯಾರ್ಥ ಬುದ್ಧಿ ಸುಖವೇದನೆಗಳಿಗೆ ಉತ್ಪತ್ತಿ ಕಾರಣವಾದುದು; ಪ್ರವೃತ್ತಿ= ಪುಣ್ಯಪಾಪಗಳು ; ದೋಷ = ರಾಗದ್ವೇಷಗಳು ; ಪ್ರೇತ್ಯಭಾವ = ಕೊನೆಯ ಹಂತವಾದ ಮೋಕ್ಷ ; ಫಲ = ಸುಖದುಃಖಾನುಭವಗಳು ; ಅಪವರ್ಗ = ತತ್ತ್ವಜ್ಞಾನವನ್ನು ಹೇತುವಾಗಿ ಹೊಂದಿರುವ ಉಪಾದೇಯ. ೧೬. [ತರ್ಕಶಾ] ತರ್ಕಶಾಸ್ತ್ರದಲ್ಲಿ ಉಕ್ತವಾಗಿರುವ ಲಕ್ಷಣ ಮತ್ತು ಹೇತುದೋಷಗಳು ; P ಅತಿವ್ಯಾಪ್ತಿ, ಅವ್ಯಾಪ್ತಿ, ಅಸಂಭವ, ಅನ್ಯೋನ್ಯಾಶ್ರಯ, ಆತ್ಮಾಶ್ರಯಗಳೆಂಬಿವು ಲಕ್ಷಣದೋಷಗಳು. ವ್ಯಭಿಚಾರ, ವಿರೋಧ, ಸತ್ಪ್ರತಿಪಕ್ಷ, ಅಸಿದ್ಧಿ, ಬಾಧೆಗಳೆಂಬಿವು ಹೇತುದೋಷಗಳು. 'ಲಕ್ಷಣದೋಷ', 'ಹೇತು ದೋಷ' ಪರಾ. ೧೭. [ಜೈನ] ಹದಿನೆಂಟು ಬಗೆಯ ವಿಘ್ನಗಳು ; P ದಿಗಂಬರ, ಶ್ವೇತಾಂಬರ ಸಂಪ್ರದಾಯಗಳಿಗನುಸಾರವಾಗಿ ಇವನ್ನು ಎರಡು ಪಟ್ಟಿಗಳಲ್ಲಿ ಕಾಣಬಹುದು : "ದಿಗಂಬರ ಸಂಪ್ರದಾಯದಂತೆ- ಕ್ಷುತ್ (ಹಸಿವು), ಪಿಪಾಸಾ (ನೀರಡಿಕೆ), ಜರಾ (ಮುಪ್ಪು), ಆತಂಕ (ರೋಗ), ಜನ್ಮ (ಹುಟ್ಟು), ಅಂತಕ (ಸಾವು), ಭಯ (ಅಂಜಿಕೆ), ಸ್ಮಯ (ಗರ್ವ), ರಾಗ, ದ್ವೇಷ, ಮೋಹ, ಚಿಂತೆ, ರತಿ, ನಿದ್ರೆ, ವಿಸ್ಮಯ, ವಿಷಾದ, ಸ್ವೇದ, ಖೇದ (ರತ್ನಕ. ದ. ಅ. ೬ ವ್ಯಾ). ಶ್ವೇತಾಂಬರ ಸಂಪ್ರದಾಯದಂತೆ- ವೀರ್ಯಾಂತರಾಯ, ಭೋಗಾಂತರಾಯ, ಉಪಭೋಗಾಂತರಾಯ, ದಾನಾಂತರಾಯ, ಲಾಭಾಂತರಾಯ, ನಿದ್ರಾ, ಭಯ, ಅಜ್ಞಾನ, ಜುಗುಪ್ಸಾ, ಹಾಸ್ಯ, ರತಿ, ಆರತಿ, ರಾಗ, ದ್ವೇಷ, ಅವಿರತಿ, ಕಾಮ, ಶೋಕ, ಮಿಥ್ಯಾತ್ವ (ರತ್ನಕ. ದ. ಅ. ೬ ವ್ಯಾ)" (ಶ್ರೀವತ್ಸ. ೨೦೩) : ನಿಧನ ನಿದ್ರೆ ಚಿಂತೆ ಲಜ್ಜೆ ಕ್ಷುಧೆ ತೃಷೆ ವಿಷಯ ಆಧಿವ್ಯಾಧಿ ದ್ಯೂತೋದ್ಯೋಗ ದಾಹಶೋಷ ರತಿ ಸ್ವೇದ ಕೋಪ ಶೋಕ ಉದ್ಭ್ರಮೆ ಭಯ ಎಂಬ ಹದಿನೆಂಟು ದೋಷಾವರಣನಾಗಿ (ಆದವ. ೦೫೦-೬೬೧). P ಈ ಪ್ರಯೋಗದಲ್ಲಿ ಬಂದಿರುವ ಪಟ್ಟಿಯ ಪ್ರಕಾರ ಕೆಲವು ಶಬ್ದಗಳು ಮೊದಲಿನ ಪಟ್ಟಿಗೆ ಹೊರತಾಗಿವೆಯಾದರೂ ಜೈನಮತದ ಪರಿಭಾಷೆಯನ್ನೇ ಇಲ್ಲಿ ಬಳಸಿಕೊಳ್ಳಲಾಗಿದೆಯೆಂಬ ಅಭಿಪ್ರಾಯದಿಂದ ಇದನ್ನು ಪ್ರತ್ಯೇಕವಾಗಿ [ವೀಶೈ] ಎಂದು ಸೂಚಿಸದೆ ಇಲ್ಲಿಯೇ ಪ್ರಯೋಗವನ್ನು ತೆಗೆದುಕೊಳ್ಳಲಾಗಿದೆ.

ದೋಷ ಕೊಡು = ತಪ್ಪು ಹೊರಿಸು ; ಆಪಾದನೆ ಮಾಡು ; ಆಪಾದಿಸು : ಮನೆಯಲ್ಲಿ ಅನೇಕ ಜನರಿದ್ದಾರೆ, ಯಾರಿಗೆಂದು ದೋಷ ಕೊಡುವಿರಿ? (ಇಪ್ಪಕ. ೩೦೭). [ಸಂ.]

ದೋಷಂಗೆಯ್ (ಕ್ರಿ). ತಪ್ಪುಮಾಡು ; ಅಪರಾಧ ಮಾಡು : ಪೊಲ್ಲಮೆಯೊಳ್ ತೀವಿರ್ದ ಗೃಹಸ್ಥರೆಲ್ಲಂ ಕಣ್ಣಿವೆ ಮಱೆಯಾದೊಡೆ ಬಾಟದನಿತಂ ಮಾಟ್ಟ ಸ್ನೇಹದ ಪ್ರಾಣವಲ್ಲಭೆಯುಮಂ ದೋಷಂಗೆಯ್ದಳೆಂಬುದಂ ಕೇಳ್ದ ನಿತಱೊಳೆ ಪೊಱಮಡಿಸಿ ಕಳೆವರ್ (ಜೀವಸಂ. ೩೪-೧೪ವ). [ದೋಷ+ಕೆಯ್,1]

ದೋಷಕರ (ನಾ). ೧. ಕೆಡುಕನ್ನುಂಟುಮಾಡುವಂಥದು ; ಅನರ್ಥಕಾರಿ : ಮೂಲಕಂ ಬಾಲಂ ದೋಷಹರಮಬಾಲಂ ದೋಷಕರಮದಱಿಂ ಪ್ರತ್ಯಕ್ಷ ಪರಿಚ್ಛೇದ್ಯಂ ವಸ್ತುತತ್ವಮನುಮಾನದಿಂ ವ್ಯಭಿಚರಿಸುಗುಂ (ಶಾಂತಿಪು. ೮-೧೨೮ ವ) ; ಶ್ಲೇಷ್ಮಪ್ರಶಮನಾರ್ಥಂ ಕೊಟ್ಟೌಷಧಂ ಪೆಱವುಟಿ ದೋಷಕರಂ (ಚಾವುಂಪು. ೨೯೩). ೨. ತಪ್ಪನ್ನು ಉಳ್ಳುದು; ತಪ್ಪಾದುದು: ಪಗಲಿರುಳೆಂಬಲ್ಲಿ ವಿಕಲ್ಪಗತಿಯಿನಾ ವ್ಯಂಜನಾಂತದೊಳೆ ಪೇಟ್ವರ್ ಸೂರಿಗಳಾಗಳೀಗಳೆಂಬೆಡೆಗಗಲ್ಜರುಟಿದೆಡೆಗಿನಾಗಮಂ ದೋಷಕರಂ (ಶಮದ. ೧೦೯). [ಸಂ.]

ದೋಷಕಾರಿ (ನಾ). ೧. ಪಾತಕಿ; ಪಾಪಿಷ್ಠ; ಪಾಪಿ: ಪ್ರಾಣಲಿಂಗಿಸಂಬಂಧಿಯಾದ ಲಿಂಗವಂತನು ಏಕಭುಕ್ತ ಉಪವಾಸಂಗಳನ್ನು ಮಾಡಲಾಗದು . . . ದೋಷಕಾರಿಯಪ್ಪನು (ಉರಿಪ. ೦೩೩-೧೨೨). ೨. ಕೆಡುಕನ್ನುಂಟುಮಾಡುವಂಥದು. ೩. ಕೆಡುಕನ್ನು ಉಂಟುಮಾಡುವವನು: ಕೆಡುಕ. [ಸಂ. ದೋಷಕಾರಿನ್]

ದೋಷಗರ್ಭಿತ (ಗು). ಕಳಂಕದಿಂದ ಕೂಡಿದ ; ಕಲುಷಿತವಾದ : ದೋಷಗರ್ಭಿತಧರ್ಮವನು ನಿರ್ಣೈಸಲಱಿಯದ ಮೂಢಮತಿಗೆ ಮುನೀಶ ಕೃಪೆಮಾಡೆಂದು ಮೈಯಿಕ್ಕಿದನು ಪಾಂಚಾಲ (ಕುವ್ಯಾಆ. ೦೬-೩೭). [ಸಂ.]

ದೋಷಗವೇಷಣ (ನಾ). ತಪ್ಪುಗಳನ್ನೇ ಹುಡುಕುವುದು ; ರಂಧ್ರಾನ್ವೇಷಣೆ ಮಾಡುವುದು ; ಛಿದ್ರಾನ್ವೇಷಣೆ : ಭಾಷಾವಿದರ್ ಕವಿತ್ವ ವಿಶೇಷಜ್ಞರ್ ನಿಕಷರಪ್ಪೊಡಪ್ಪುದು ಸಭೆಯೊಳ್ ಮಾಪಮುಖರಂತೆ ದೋಷಗವೇಷಣಪರರಪ್ಪರೆಂದೊಡದು ತೆಗಟಲ್ತೆ (ಆದಿಪು. ೧-೨೦). [ಸಂ.]

ದೋಷಗ್ರಾಹಿ (ನಾ). ೧. ತಪ್ಪುಗಳನ್ನು ಕಂಡು ಹಿಡಿಯುವವನು ; ದುರ್ಜನ : "ದೋಷಗ್ರಾಹಿ ಪುರೋಭಾಗಿ ದುರ್ಮುಖಂ ಮುಖರನವಂ" (ವಸ್ತುಕೋ. ೧೦೦-೦೮) ; "ದೋಷಗ್ರಾಹೀ, ಪುರೋಭಾಗೀ, ದ್ವಿಜಿಹ್ವಃ, ಮತ್ಸರೀ – ಈ ೪ ಮಚ್ಚರಿಪಂ" (ಹಲಾಯು. ೫೭-೧೯೧). ೨. ಕೆಟ್ಟರಕ್ತವನ್ನು ಹೀರುವುದು. ೧, ೨ : ಗೋಳಾಂಗೂಳರಂತೆ ಸಹಜಚಾಪಲ್ಯರುಂ ಜಳೂಕಾಮುಖರಂತೆ ದೋಷಗ್ರಾಹಿಗಳುಂ . . . ಎನಿಸಿ (ಸುಕುಮಾ. ೨-೫ ವ). [ಸಂ. ದೋಷಗ್ರಾಹಿನ್]

ದೋಷಘ್ನ (ನಾ). ೧. ಪಾಪವನ್ನು ನಾಶಮಾಡತಕ್ಕವನು; ಪಾತಕವನ್ನು ನಿವಾರಿಸುವವನು: ದೋಷಘ್ನನೆಯಾಪ್ತಂ ತದ್ಭಾಷಾತ್ಮಕಮವುಪ್ಪುದಾಗಮಂ (ಪಸಾಕ. ೪೩೬). ೨. ಕೆಡುಕನ್ನು ನಿವಾರಿಸುವವನು. [ಸಂ.]

ದೋಷಜ (ನಾ). (ದೇಹಕ್ಕೆ ಸಂಬಂಧಿಸಿದ) ವಾತ, ಪಿತ್ತ ಮತ್ತು ಕಫಗಳೆಂಬ ಮೂರು ನ್ಯೂನತೆಗಳಿಂದ ಉಂಟಾದ ವ್ಯಾಧಿ: ವ್ಯಾಧಿಯುಂ ಕರ್ಮಜವೆಂದೂ, ದೋಷಜವೆಂದೂ, ಕರ್ಮದೋಷಜವೆಂದೂ ಮೂರು ವಿಧವಾಗಿರುವುದು . . . ವಾತ ಪಿತ್ತ ಶ್ಲೇಷ್ಮ ಮೊದಲಾದ ದೋಷಗಳಿಂದುಂಟಾದ ವ್ಯಾಧಿಯು ದೋಷಜವೆನಿಸಿಕೊಂಬುದು (ಸಳ್ವ. ೨೩). [ಸಂ.]

ದೋಷಜ್ಞ (ನಾ). ೧. ತಿಳಿದವನು; ಪಂಡಿತ; ವಿದ್ವಾಂಸ: "ಸೂರಿ ಬುಧಂ ಕವಿ ವಾಗ್ಮಿ ವಿಶಾರದನಭಿರೂಪನನ್ವಿತಂ ದೋಷಜ್ಞಂ" (ವಸ್ತು ಕೋ. ೪೮-೪); ದೋಷಜ್ಞರ್ ಮುನಿದೊಸೆದು ಪರೀಕ್ಷಿಸಿದೊಡಮನುಪಮ ಗುಣವೊಂದದಂದು ಕೃತಿ ಸಂದಪುದೇ (ಪಾರ್ಶ್ವಪು. ೧-೭೯). ೨. ಉಪಾಧ್ಯಾಯ. ೩. [ವೈದ್ಯ] ರೋಗವು ಯಾವ ದೋಷದಿಂದ ಉಂಟಾಗಿದೆ ಎಂದು ಗುರುತಿಸಬಲ್ಲವನು; ರೋಗನಿದಾನವನ್ನು ಬಲ್ಲವನು; ವೈದ್ಯ: "ದೋಷಜ್ಞಂ ತಂತ್ರವೇದಿ ಬಿಜ್ಞಂ ವೈದ್ಯಂ" (ವಸ್ತು ಕೋ. ೭೪-೪೨); "ಆಯುರ್ವೇದೀ, ಭಿಷಕ್, ವೈದ್ಯಃ, ದೋಷಜ್ಞಃ, ಚಿಕಿತ್ಸಕಃ -ಈ ೫ ವೈದ್ಯಂ" (ಹಲಾಯು. ೦೦೦-೪೫೮). [ಸಂ.]

ದೋಷಜ್ವರ (ನಾ). (ದೇಹಕ್ಕೆ ಸಂಬಂಧಿಸಿದ) ವಾತ, ಪಿತ್ತ ಮತ್ತು ಕಫಗಳೆಂಬ ಮೂರು ವಿಧವಾದ ನ್ಯೂನತೆಗಳಲ್ಲಿ ಯಾವುದರಿಂದಲಾದರೂ ಉಂಟಾಗುವ ಜ್ವರ: ಕೊಡಸಿಗಬೀಜ, ಹಿಪ್ಪಲಿ, ಶೀಗೆ . . . ಕಷಾಯವಿಕ್ಕಿ ಕೊಡಲು, ಪೈತ್ಯಜ್ವರ, ವಿಷಮಜ್ವರ, ದೋಷಜ್ವರ ಸಹ ಗುಣವಾಗುವುವು (ಸಳ್ವ. ೮೦). [ದೋಷ + ಜ್ವರ]

ದೋಷತಟ್ಟು, (ಕ್ರಿ). ಕಳಂಕ ತಗುಲು; ಅಪವಾದ ಬರು: ಒಡಲೊಳಗೇ ಉಸಿರಿಲ್ಲ ಒಂದು ಕ್ಷಣವಾದರೆ ಜೀವ ನಿಲ್ಲುವುದಿಲ್ಲ ಮಡಿದರೆ ದೋಷತಟ್ಟುವುದು ಒಂದು ಹಿಡಿ ಅಕ್ಕಿಯಿಂದಲೆ ಕೀರ್ತಿ ಬಾಹೋದು (ಪುರಂದ. ೪-೬೯-೬). [ದೋಷ + ತಟ್ಟು]

ದೋಷತ್ರಯ (ನಾ). ೧. ದೋಷಾಶ್ರಯಂ, ಛಿದ್ರವಕ್ರ, ಕ್ರಿಮಿಂ ದೂಷಣಗಳೆಂದೆಂಬ (ಹವಳದ) ಮೂರು ಬಗೆಯ ನ್ಯೂನತೆಗಳು: ದೋಷಾಶ್ರಯಂ ಛಿದ್ರವಕ್ರಂ ಕ್ರಿಮಿದೂಷಣವೆಂದು ದೋಷತ್ರಯಮುಂಟದನುಳಿದು ನಿರ್ದೋಷವಿದ್ರುಮಮಂ ಕಾಮಿನಿಯರ್ ವಿಶೇಷಮಾಗಿ ತಾಳಲ್ ಸುಪಾಯುಷ್ಯಸುಪುತ್ರಾರೋಗ್ಯಾದಿಸಿದ್ಧಿಗಳಪ್ಪುವು (ಹಾಲಾಸ್ಯ. ೩-೧-೧೧೪೮). ೨. (ದೇಹಕ್ಕೆ ಸಂಬಂಧಿಸಿದ) ವಾತ, ಪಿತ್ತ ಮತ್ತು ಕಫಗಳೆಂಬ ಮೂರು ವಿಧವಾದ ನ್ಯೂನತೆಗಳು: "ದೋಷತ್ರಯಂವಾತ ಪಿತ್ತ ಶ್ಲೇಷ್ಮಂಗಳಕ್ಕುಂ" (ಮಂಗರಾ. ೧೦೪-೩); ಲವಂಗ, ಶುಂಠಿ . . . ಇವಿಪ್ಪನ್ನೂ ಸಮಭಾಗವಾಗಿ ಕೂಡಿ ಒಂದು ತೂಕ ಸಕ್ಕರೆ ಬೆರಸಿ ಬಿಸಿನೀರಿನಲ್ಲಿ ಕಲಸಿ, ತೆಗೆದು ಕೊಂಡರೆ ವಾತಪಿತ್ತಶ್ಲೇಷ್ಮ, ದ್ವಂದ್ವಜ್ವರ, ಸನ್ನಿಪಾತಜ್ವರ, ದೋಷತ್ರಯ . . . ಅತಿಸಾರ ಮೊದಲಾದ ವೈತ್ಯಜ್ವರಂ ಪೋಪುವುವು (ಸಳ್ವ. ೭೭). [ದೋಷ + ತ್ರಯ]

ದೋಷದೂರ (ನಾ). ೧. ಕುಂದಿಲ್ಲದಂದು; ಕಳಂಕವಿಲ್ಲದಂದು: ಶಾಸನಂ ವಿಶ್ರುತಮಖಿಳಹಿತಂ ದೋಷದೂರಂ ಗಭೀರಂ (ಎಳ. II, ೭೩-೨ : 1313); ಇಂತಿವ್ವೆದನಾನೊರ್ಬ್ಬಿಳಿಯಾಗಿ ಪೇಳ್ದೆನೆಲೆ ಮಂತ್ರಿಗಳಾಲಿಪುದೀ ಗುಣಾಂಕದಿಂದುರ್ಬಿದ ದೋಷದೂರವೆನಿಸುತ್ತೆ ವಿರಾಜಿಪ ಪಚ್ಚೆಯಂ ಜನರ್ (ಹಾರಾಸ್ಯ. ೩-೧-೯೦). ೨. ಕಳಂಕಗಳಿಂದ ದೂರವಾದವನು; ಕಳಂಕರಹಿತವಾದವನು: ದೋಷದೂರ ಶ್ರೀಪುರಂದರ ವಿಠ್ಠಲ ಪೋಷ ಭಕ್ತ ಸುವ್ಯಂದ (ಪುರಂದ. ೩-೨೪-೧೧). [ದೋಷ + ದೂರ]

ದೋಷದೂರತೆ (ನಾ). ೧. ತಪ್ಪಿಲ್ಲದಿರುವಿಕೆ. ೨. (ದೇಹಕ್ಕೆ ಸಂಬಂಧಿಸಿದ) ವಾತ, ಪಿತ್ತ, ಕಫಗಳೆಂಬ ಮೂರು ನ್ಯೂನತೆಗಳಿಂದ ದೂರವಾಗಿರುವಿಕೆ: ಕಫ ವಾತ ಪಿತ್ತ ದೋಷದೂರತೆಯುಂ ಜರಾಮಯ ವ್ಯಾಬಾಧಾಬಾಧಿತ್ವಮುಂ . . . ತನುಗಸುಸಂಗತಮಾಗೆ (ಶಾಂತಿಪು. ೦೦-೪೪ ಪ). [ಸಂ. ದೋಷದೂರತಾ]

ದೋಷದೂರೀಕರಣ(ನಾ). ಕುಂದು, ನ್ಯೂನತೆಗಳ ನಿವಾರಣೆ: ಅಶೇಷ ದೋಷದೂರೀಕರಣಪರಿಣತಾನ್ವಃಕರಣನುಮಪ್ಪ ಶ್ರೀಪನ್ನಯಕೀರ್ತಿ ಸಿದ್ಧಾನ್ತ ಚಕ್ರವರ್ತಿಗಳ್ (ಎಳ. II, ೭೭-೭೯ : 1176).

[ದೋಷ + ದೂರೀಕರಣ]

ದೋಷದೂಷಿತ (ನಾ). ಪಾಪದಿಂದ ಕಳಂಕಿತನಾದವನು.

[ದೋಷ + ದೂಷಿತ]

ದೋಷದೂಷಿತೆ (ನಾ). ಪಾಪ ಮಾಡಿದವಳು; ಕೆಟ್ಟ ಕೆಲಸ ಮಾಡಿ ಕಳಂಕ ಹೊಂದಿದವಳು: ಎಲೆ ಎಲೆ ದೋಷದೂಷಿತೆ ದುರಾತ್ಮಿಕೆ ಲಿಂಗದ ಪಾವನಾಂಗಮಂ ತೊಲಗದೆ ಬಾಯುಗುಳ್ ಸಿಡಿಯೆ ತೂಂಕಿಬಿದಪ್ಪೆ ವರಾಕಿ ಪಾಱಿನುತ್ಪಲೆದುಲಿದಾಕೆಯಂ ನಿಳಯದಿಂ ಪೊಱಗಿಕ್ಕಿ ನಿರೀಕ್ಷಿಪಾಗಳ್ (ವೃಷವಿ. ೯-೩೭). [ದೋಷ + ದೂಷಿತೆ]

ದೋಷದೃಷ್ಟಿ (ನಾ). ೧. ನ್ಯೂನತೆಯಿಂದ ಕೂಡಿದ ದೃಷ್ಟಿ. ೨. ದೃಷ್ಟಿಯಲ್ಲಿ ನ್ಯೂನತೆಯುಳ್ಳವನು; ದೃಷ್ಟಿ ದೋಷವುಳ್ಳವನು: ಥಳಥಳಿಪ ಪದಾರ್ಥವನೇಂ ಗಳ ಕಾಣ್ಬನೆ ದೋಷದೃಷ್ಟಿ (ಪುಪ್ಪಪು. ೧-೪೭). [ದೋಷ + ದೃಷ್ಟಿ]

ದೋಷನಿವಾರಣ (ನಾ). ಕುಂದು, ನ್ಯೂನತೆಗಳ ನಿವಾರಣೆ: ಜಡರಂ ಜಾತಿವಿಹೀನರಂ . . . ಪಡೆದಾ ದೋಷನಿವಾರಣಕ್ಕಮೃತದಂಡಾಧೀಶನಂ ಪುಣ್ಯದಿಂ ಪಡೆದಂ ಪದ್ಮಜಂ (ಎಳ. VI, ಕರೀಕ. ೪೫-೬೨ : 1196). [ದೋಷ + ನಿವಾರಣ]

ದೋಷಪ್ರತಿಕಾರ (ನಾ). ಪಾಪದ ವಿರುದ್ಧ ಮಾಡಬೇಕಾದ ಕ್ರಿಯೆ; ಪಾಪನಾಶ: ನಿಜಡ ಕಾಯೋತ್ಸರ್ಗದೊಳ್ ಶುದ್ಧಿ ತಳ್ತರೆ ದೋಷ ಪ್ರತಿಕಾರ ಸಾರತಪಮಂ ತತ್ಕಾಪಸಂ ತಾಳ್ದಿದಂ (ಸುಳುಮಾ. ೪-೧೩). [ದೋಷ + ಪ್ರತಿಕಾರ]

ದೋಷಭಾವ (ನಾ). ಪಾಪದ ಆಲೋಚನೆ; ಪಾತಕದ ಚಿಂತೆ: ಗಣ ಭೃತ್ಪದಾಂಬುರುಹಸಂಕುಳಮಾವಗಮಸ್ಮದೀಯಭಾವಾಂಗ ಪವಿತ್ರಮಾನಸ ದೊಳಿಂತೆಸೆದಿರ್ಕೆ ಸುರಾಗದೇಟ್ಗಿಯಿಂ ಪಿಂಗದೆ ದೋಷಭಾವಭವಬಂಧನ ಪದಾಮಯದುಃಖಿಸಂಕುಳಂ (ಖಮದ. ೧-೪). [ದೋಷ + ಭಾವ]

ದೋಷಭೂಯಿಷ್ಠ (ನಾ). (ಅನೇಕ) ನ್ಯೂನತೆಗಳಿಂದ ಕೂಡಿದುದು,–ತುಂಬಿದುದು: ಸಹಜವಾದ ಕರ್ಮವು ದೋಷಭೂಯಿಷ್ಠವಾಗಿದ್ದರೂ ಬಿಡಬಾರದ್ದು (ಧಾರವ. ೧೦೭). [ದೋಷ + ಭೂಯಿಷ್ಠ]

ದೋಷಮುಕ್ತ (ನಾ). ತಪ್ಪಿಲ್ಲದುದು; ಸರಿಯಾದುದು: ಕಾಸೂಸು ಕಟ್ಟಳಿಗಳ ಅನ್ವಯ ಮತ್ತು ಅವುಗಳ ವ್ಯಾಖ್ಯಾನ ದೋಷಮುಕ್ತ ವಾಗಿದೆಯೆ ಇಲ್ಲವೆ ಎಂದು ಸೆನೆಟ್ ಪರಿಶೀಲಿಸುತ್ತದೆ (ಪುನರು. ೬೪೩). [ದೋಷ + ಮುಕ್ತ]

ದೋಷಮೂರ್ಛಿತ (ನಾ). ಪಚ್ಚೆಯ ಐದು ವಿಧವಾದ ನ್ಯೂನತೆಗಳಲ್ಲಿ ಒಂದು: ಕೆಂಪುತಾವರೆಯಂ ಎಲೆಯಂ ಹಿಂಭಾಗದ ಬಣ್ಣವನ್ನು ಹೊಂದಿರುವ ಪಚ್ಚೆ: ದೋಷಲೇಶಾನ್ವಿತಂ ದುಷ್ಪಂ ದೋಷಮೂರ್ಛಿತಂ ದೋ[ಷಲೇಶಂ] ಮಂದದೋಷಮೆಂದಿಂತೀ ಪಂಚವಿಧಮಾದ ಸದೋಷ ಜಾತಿ ಮರಕತಮಂ ಪೇಳ್ದಂ (ಹಾರಾಸ್ಯ. ೩-೧-೮೮ ವ); ಹಲ್ಲರಬಾಹ್ಯಪತ್ರದ ವರ್ಣಮಂತದೆ ಲೋಕದೊಳ್ ಪಾಡಿನಿಂದಮೆ ದೋಷಮೂರ್ಛಿತ ಮೆಂಬರೆಯೆ ಪರೀಕ್ಷಕರ್ (ಹಾರಾಸ್ಯ. ೩-೧-೮೯). [ಸಂ.]

ದೋಷಮೂರ್ಛೆ (ನಾ). (ದೇಹಕ್ಕೆ ಸಂಬಂಧಿಸಿದ) ವಾತ, ಪಿತ್ತ ಮತ್ತು ಕಫಗಳೆಂಬ ಮೂರು ವಿಧವಾದ ನ್ಯೂನತೆಗಳಲ್ಲಿ ಯಾವುದರಿಂದಲಾದರೂ ಉಂಟಾಗುವ ಮೂರ್ಛೆ : ದುಂಪರಾಸ್ಮೆ, ಪಿಲ್ಲ ಪೀಲುಪಿಂಜರಗೆಡ್ಡೆ . . . ಇವಂ ಸಮಭಾಗವಾಗಿ ಕಷಾಯಂ ಮಾಡಿ ಕೊಡಲು ದೋಷಮೂರ್ಛೆ ಪರಿಹರ (ಸಕವೈ. ೧೭೩).

[ದೋಷ + ಮೂರ್ಛೆ]

ದೋಷರಹಿತ (ನಾ). ೧. ಪಾಪರಹಿತವಾದುದು ; ಶುದ್ಧವಾದುದು : ದೋಷಸಹಿತರಾದವರು ಪೇಳುವ ಧರ್ಮ ಲೇಸಲ್ಲವೆಂದವನುಳಿದು ದೋಷರಹಿತಮಪ್ಪ ದಯಯುತ ಧರ್ಮವ ಲೇಸಾಗಿ ಪಿಡಿಯಬಲ್ಲವರು (ದ್ವಾದಶಾ. ೧೧-೧೨). ೨. ಪಾಪಗಳಿಲ್ಲದವನು ; ಪವಿತ್ರನಾದವನು : ದೋಷಿಯು ನಾನಾದಡೇನಯ್ಯ ಸರ್ವದೋಷರಹಿತ ನೀನಲ್ಲವೆ (ಪುರಂದ. ೪-೦೪೨-೩). [ಸಂ.]

ದೋಷರಹಿತೆ (ನಾ). ಕಳಂಕಗಳಿಲ್ಲದವಳು; ಪವಿತ್ರಳಾದವಳು : ಸ್ಫೂರ್ತಿ ಸಿರಿಯೆ ನೀನುಕ್ಕಿ ಬಾ ಬೆಡಗುಗಾರ್ತಿ ನೀನೊಲಿದು ಬಾ ಭಾವಜಲಧಿ ಕೃಪೆ ದೋರು ಬಾ ದೋಷರಹಿತೆ ನೀ ಸಾರಿ ಬಾ (ಚಂದ್ರಮಾ. ೯-೦೪).

[ದೋಷರಹಿತ + – ಎ$_2$]

ದೋಷಲೇಶಾನ್ವಿತ (ನಾ). ಪಚ್ಚೆಯ ಐದು ವಿಧವಾದ ನ್ಯೂನತೆಗಳಲ್ಲಿ ಒಂದು ; ಕಾಡುನಿಂಬೆ ಬಣ್ಣದ ಕಾಂತಿಯನ್ನು ಹೊಂದಿರುವ ಪಚ್ಚೆ : ದೋಷಲೇಶಾನ್ವಿತಂ ದುಷ್ಟಂ ದೋಷಮೂರ್ಛಿತಂ ದೋ[ಷಲೇಶಂ] ಮಂದದೋಷವೆಂದಿಂತೀ ಪಂಚವಿಧಮಾದ ಸದೋಷಜಾತಿ ಮರಕತಮಂ ಪೇಳ್ವೆಂ (ಹಾಲಾಸ್ಯ. ೨-೧-೮೮ ಪ). [ಸಂ.]

ದೋಷವರ್ಜಿತ (ನಾ). ೧. ಪಾಪದಿಂದ ದೂರವಾದುದು ; ಪವಿತ್ರವಾದುದು : ದೋಷವರ್ಜಿತಮಂ ಜ್ಞಾನಲತಾಭಿವೃದ್ಧಿಯನಶೇಷಪ್ರೀತಿಯಂ ಲೋಕವಿಶ್ರುತಮಂ ಧರ್ಮಮನೇಕೆ ಮಿಕ್ಕ ಪುರುಷಾರ್ಥಕ್ಕಂ ಸಮಂ ಮಾಟ್ಪರೋ (ಮಲ್ಲಕಾ. ೦-೪೫). ೨. ಪಾಪಗಳನ್ನು ಬಿಟ್ಟವನು ; ಪವಿತ್ರನಾದವನು : ದೃಷ್ಟ ಶ್ರುತಾನುಭೂತ ದೋಷವರ್ಜಿತನುಂ ಮಂದ ತರಕಷಾಯಾನುರಂಜಿತಮಪ್ಪಾತಂಗಕ್ಕುಮವ ಱೊಳಪಾಯವಿಚಯಂ (ಚಾವುಂಪು. ೪೪೩). [ದೋಷ + ವರ್ಜಿತ]

ದೋಷವಿಡು (ಕ್ರಿ). ತಪ್ಪು ಹೊರಿಸು ; ಆಪಾದಿಸು : ತಮ್ಮ ವೆಚ್ಚಕ್ಕೆ ದೋಷವಿಡಬೇಕಲ್ಲದೆ ಎರಡನೆಯವರಿಗೆ ದೋಷವಿಡಬಾರದು (ಮುಂಬಯಿ. ೫-೮೬). [ದೋಷ + ಇಡು$_1$]

ದೋಷವಿದೂರ (ನಾ). ಪಾಪಗಳಿಂದ ದೂರನಾದವನು ; ಪವಿತ್ರನಾದವನು : ಲೇಸಾಗಿ ಮಡುವಿನೊಳ್ ಶೇಷನ ತುಳಿದಿಟ್ಟ ದೋಷವಿದೂರನ ತೂಗಿರೆ (ಪುರಂದ. ೨-೦೩೬-೪). [ಸಂ.]

ದೋಷವಿರಕ್ತ (ನಾ). ಕೆಟ್ಟ ಗುಣ ಅಥವಾ ಕೆಟ್ಟ ಕಾರ್ಯಗಳಲ್ಲಿ ಆಸಕ್ತಿಯಿಲ್ಲದವನು : ದೋಷವಿರಕ್ತನುಂ ಗುಣಾನುರಕ್ತನುಮಲ್ಲದೆ ಧರ್ಮಂ ಗೆಯ್ವನುಂ ಎಂತು ಪೆರ್ಚುಗುಂ (ಜೀವಸಂ. ೪೭-೨೦).

[ದೋಷ + ವಿರಕ್ತ]

ದೋಷಸಹಿತ (ನಾ). ಪಾಪದಿಂದ ಕೂಡಿದ ವ್ಯಕ್ತಿ ; ಪಾಪಿ : ದೋಷಸಹಿತರಾದವರು ಪೇಳುವ ಧರ್ಮ ಲೇಸಲ್ಲವೆಂದವನುಳಿದು ದೋಷರಹಿತಮಪ್ಪ ದಯಯುತ ಧರ್ಮವ ಲೇಸಾಗಿ ಪಿಡಿಯಬಲ್ಲವರು (ದ್ವಾದಶಾ. ೧೦-೧೨). [ದೋಷ + ಸಹಿತ]

ದೋಷಸಿದ್ಧಿ (ನಾ). ಅಪರಾಧಿಯೆಂಬ ನಿರ್ಧಾರ : ಜಾರಿಯಲ್ಲಿರುವ ಒಂದು ವಿಧಿಯನ್ನು ಉಲ್ಲಂಘಿಸಿದುದಕ್ಕಲ್ಲದೆ ಮತ್ತಾವ ಅಪರಾಧಕ್ಕಾಗಿಯೂ ಅವನ ಮೇಲೆ ದೋಷಸಿದ್ಧಿ ನಡೆಯತಕ್ಕುದಲ್ಲ (ಭಾಧಾನ. ೧೨).

[ದೋಷ + ಸಿದ್ಧಿ]

ದೋಷಹಚ್ಚು (ಕ್ರಿ). = ದೋಷವಿಡು : ಅವನಿಗೆ ಕೆಲವು ಜನರು ದೋಷಹಚ್ಚುತ್ತಾರೆ (ಮುಂಬಯಿ. ೫-೨೦೬). [ದೋಷ+ಹಚ್ಚು$_1$ (<ಪಚ್ಚು$_3$)]

ದೋಷಹರ (ನಾ). ಕೆಡುಕನ್ನು ನಾಶಮಾಡುವಂಥದು : ಮೂಲಕಂ ಬಾಲಂ ದೋಷಹರಮಬಾಲಂ ದೋಷಕರಮದಱಿಂ ಪ್ರತ್ಯಕ್ಷ ಪರಿಚ್ಛೇದ್ಯಂ ವಸ್ತುತತ್ವಮನುಮಾನದಿಂ ವ್ಯಭಿಚರಿಸುಗುಂ (ಶಾಂತಿಪು. ೮-೧೨೮ ಪ).

[ಸಂ.]

ದೋಷಹರಣ (ನಾ). ೧. ಪಾಪವನ್ನು ನಿವಾರಣೆ ಮಾಡುವಿಕೆ. ೨. (ದೇಹಕ್ಕೆ ಸಂಬಂಧಿಸಿದ) ವಾತ, ಪಿತ್ತ ಮತ್ತು ಕಫಗಳೆಂಬ ಮೂರು ಬಗೆಯ ನ್ಯೂನತೆಗಳನ್ನು ನಿವಾರಿಸುವಿಕೆ.

[ದೋಷ + ಹರಣ$_2$]

ದೋಷಹೊರಿಸು (ಕ್ರಿ). ಅಪವಾದಕ್ಕೆ ಹೊಣೆ ಮಾಡು,–ಈಡು ಮಾಡು : ಚೌಡಪ್ಪನವರ ಮೇಲೆ ದೋಷಹೊರಿಸುವುದು ನನಗೇಕೋ ಸರಿಯೆನಿಸದು (ಹಳ್ಳಹಾ. ೦೦೫). [ದೋಷ + ಹೊರಿಸು (<ಪೊಱಿಸು)]

ದೋಷಹೊರು (ಕ್ರಿ). ಅಪವಾದಕ್ಕೆ ಗುರಿಯಾಗು,–ಈಡಾಗು; ಅಪವಾದ ಹೊರು. 'ದೋಷಹೊರಿಸು' ಪರಾ.

[ದೋಷ + ಹೊರು (<ಪೊಱು)]

ದೋಷಾಂಧ (ನಾ). ದೋಷದಿಂದ ಕುರುಡಾದವನು : ಕಾಮಾತುರರುಂ ರಜೋಧಿಕರುಮೇಂ ಖೇದಕ್ಕೆ ಪಕ್ಕಾಗದಿರ್ಪರೆ ದೋಷಾಂಧರ್ (ಪಂರಾಮಾ. ೭-೬) ; ಪರಮದೇಶಿಕಶಿರೋಮಣಿಯೆ ದೋಷಾಂಧಮದಕರಿ ವಿಳಸಿತ ಸೃಣಿಯೆ (ವೀಕೈಪು. ೫-೮-೨). [ದೋಷ + ಅಂಧ]

ದೋಷಾಕರ (ನಾ). ೧. ಪಾಪಗಳ ಆಕರ,–ನೆಲೆ,–ಗಣಿ. ೨. ಕಪ್ಪು ಕಲೆಗಳಿಂದ ಕೂಡಿದವನು ; ಚಂದ್ರ : ಸರಿದಧಿಪತಿಯಂ ದೋಷಾಕರನಂತರ್ಮಲಿನನಾಗಿಯುಂ ಪೆರ್ಚಿಸುಗುಂ (ಕವಿರಾ. ೩-೩೫) ; ಮುಗ್ಧ ದೋಷಾಕರನಿಂ ವಕ್ರತ್ವಮಂ ದುಶ್ಚ್ಯವನನ ಹಯದಿಂ ವೇಗಮಂ ತಾಳ್ದಿ (ಕಾದಂಪೂ. ೫೪೬) ; ಇರದೆಯ್ತರ್ಪಂ ದೋಷಾಕರನವನಂ ನೋಡಲಾಗದೆಂದಾ ದಿನಪಂ ವರಧರ್ಮರಾಜಜನಕಂ ಕರಕುಳಮಂ ತೆಗೆದು ನೀಳಗಿರಿಯಂ ಸಾರ್ದಂ (ಹಮ್ಮೀರ. ೩-೦೩).

[ಸಂ. (ದೋಷ + ಆಕರ ; ದೋಷಾ + ಕರ)]

ದೋಷಾಕರರಹಿತ (ನಾ). ೧. ಪಾಪಗಳಿಗೆ ನೆಲೆ ನೀಡದಂಥದು ; ಪಾಪರಹಿತವಾದುದು. ೨. ಚಂದ್ರನಿಂದ ದೂರವಾದುದು ; ಚಂದ್ರರಹಿತವಾದುದು. ೧, ೨ : ಸರಸಗುಣಶಾಲಿ ದೋಷಾಕರರಹಿತಂ ಸ್ವಪ್ರಸಿದ್ಧಮತಿಬಂಧುರಮಂಬುರುಹಮದು ಮಿತ್ರರುಚಿವಿಸ್ಫುರಿತಂ ಸಿರಿಗಾದುದಲ್ತೆ ಮನೆ (ರಾಜಶೇ. ೬-೦೨೭). [ಸಂ.]

ದೋಷಾಗಮನ (ನಾ). ಪಾಪದ ಬರುವಿಕೆ ; ಪಾಪಸಂಬಂಧ ಉಂಟಾಗುವಿಕೆ : ರಾಗಮೆ ದೊರೆಕೊಳಿಕುಂ ದೋಷಾಗಮನಮನೆಂದು ಪೇಟ್ವ ತೆಱದಿಂ ಸಂಧ್ಯಾರಾಗಮೆ ದೊರೆಕೊಳಿಸಿತು ತಿಮಿರಾಗಮಮಂ (ಪುಷ್ಪಪು. ೦೩-೨೦). [ದೋಷ + ಆಗಮನ]

ದೋಷಾಚರ (ನಾ). ಕತ್ತಲೆಯಲ್ಲಿ ಓಡಾಡುವವನು; ನಿಶಾಚರ: ಖೇಚರ ಕಿನ್ನರ ಯಕ್ಷಪಿಶಾಚರ್ ಗಂಧರ್ವರಪ್ಸರಃಪ್ರಕರಂ ದೋಷಾಚರರೆಂದದ್ಭುತ ಗುಣಗೋಚರರವರೆಯ್ದೆ ದೇವಯೋನಿಗಳೆನಿಪರ್ (ವಸ್ತುಕೋ. ೦೦-೫೪).

[ಸಂ.]

ದೋಷಾತಿರೇಕ (ನಾ). ೧. ಹೆಚ್ಚಾದ ಕತ್ತಲೆ. ೨. ವಾತ, ಪಿತ್ತ ಮತ್ತು ಕಫಗಳ ಆಧಿಕ್ಯ. ೧, ೨ : ಸೊಡರ್ಗಳಿರುಳೆಣ್ಣೆಯಂ ನಿಲೆ ಕುಡಿದಟ್ಟಮೆ ವಟ್ಟುವೆನಿಸಿ ನಮೆದುವು ತನುಗಳ್ ಜಡತೆಯಿನದಂತೆ ಪೊಡರಲ್ ಕುಡುಗುಮೆ ದೋಷಾತಿರೇಕವರುಚಿನಿಮಿತ್ತಂ (ಪುಷ್ಪಪು. ೮-೧೭).

[ದೋಷ + ಅತಿರೇಕ]

ದೋಷಾತಿಸಾರ (ನಾ). (ದೇಹಕ್ಕೆ ಸಂಬಂಧಿಸಿದ) ವಾತ, ಪಿತ್ತ ಮತ್ತು ಕಫಗಳೆಂಬ ದೇಹದ ಮೂರು ವಿಧವಾದ ನ್ಯೂನತೆಗಳಿಂದ ಉಂಟಾಗುವ ಅತಿಸಾರ.-ಭೇದಿ : ಭದ್ರಮುಸ್ತೆ. ಅಮರದವಳ್ಳಿ . . . ಅತಿಬಜೆ, ಶುಂಠಿ, ನೆಲಬೇವು ಇವಂ ಸಮಭಾಗ ಕಷಾಯಂ ಕಾಸಿ ಕೊಡಲು ದೋಷಾತಿಸಾರಂ ಮಾಣ್ಗುಂ (ಸಳಪ್ಪ. ೩೨೨).

[ದೋಷ + ಅತಿಸಾರ]

ದೋಷಾನುವರ್ತನೆ (ನಾ). ೧. ಕೆಟ್ಟತನವನ್ನು ಅನುಸರಿಸುವಿಕೆ ; ಕೇಡನ್ನು ಅನುಸರಿಸುವುದು. ೨. ರಾತ್ರಿಗೆ ಹೊಂದಿಕೊಳ್ಳುವುದು ; ರಾತ್ರಿಯನ್ನು ಅನುಸರಿಸುವುದು. ೧, ೨ : ಜಗತ್ಪ್ರೀತಿಕರಪರಿಗೃಹೀತನಾಗಿಯುಂ ದೋಷಾನುವರ್ತನೆಗೊಳಗಾಗದಕಳಂಕರಾಜನುಂ . . . ಪುಣ್ಯಜನೇಶ್ವರನುಮೆನಿಸಿ (ಪುಷ್ಪಪು. ೩-೨೦ ಪ).

[ದೋಷ + ಅನುವರ್ತನೆ]

ದೋಷಾನುಷಂಗ (ನಾ). ಕತ್ತಲೆಯ ಸಹವಾಸ.-ಸಂಬಂಧ : ಕೋಕ ಮಿಥುನಂ ವಿಯೋಗೋದ್ರೇಕಂ ದೋಷಾನುಷಂಗದಿಂ ಸಮನಿಸೆ ಚಿಂತಾಕುಲಿತಮಾದುದಾರ್ಗಂ ವ್ಯಾಕುಲತೆಯನುಂಟುಮಾಟ್ಕುಮಿಷ್ಟವಿಯೋಗಂ (ಪಂಚಾಮಾ. ೧೧-೧೮೨). [ದೋಷ + ಅನುಷಂಗ]

ದೋಷಾನುಷಂಗೆ (ನಾ). ೧. ಕಳಂಕವನ್ನು ಹೊಂದಿದವಳು ; ಕಳಂಕಿತೆ. ೨. ಕತ್ತಲೆಯ ಸಹವಾಸವನ್ನುಳ್ಳವಳು. ೧, ೨ : ಲಕ್ಷ್ಮೀಮಹಾದೇವಿ ಕಮಳಿನೀಲಕ್ಷ್ಮಿಯಿಂ ಜಡಾಶಯನಿವಾಸಿಯೆನಿಸಿಯುಂ ಇಂದುಲೇಖಾ ಲಕ್ಷ್ಮಿಯಂ ವಕ್ರಸ್ವಭಾವೆಯೆನಿಸಿಯುಂ ನಕ್ಷತ್ರಲಕ್ಷ್ಮಿಯಂ ದೋಷಾನುಷಂಗೆಯೆನಿಸಿಯುಂ (ಮಲ್ಲಿಪು. ೩-೩೪ ಪ).

[ಸಂ. ದೋಷಾನುಷಂಗಾ (ದೋಷ + ಅನುಷಂಗ + –)]

ದೋಷಾನ್ವೇಷಣ (ನಾ). ೧. ತಪ್ಪನ್ನು ಹುಡುಕುವುದು ; ದೋಷವನ್ನು ಕಂಡುಹಿಡಿಯುವುದು : ತದೀಯ ವಯಸ್ಯನಾತನೆಗ್ಗಂ ಮಾರ್ಕೊಂಡು ದೋಷಾನ್ವೇಷಣಮಂ ಬಾರಿಸಿ (ಶಾಂತಿಪು. ೮-೭೯ಪ). ೨. ತಪ್ಪನ್ನು ಹುಡುಕುವವನು : ಕಾಳೋಗ್ರೋರಗನಂತೆ ದಾರುಣ ಮುಖರ್ ದುಷ್ಟರ್ ಖಳರ್ ದುರ್ಮುಖರ್ ದೋಷಾನ್ವೇಷಣರಪ್ಪವರ್ ಪಟುದೊಡೇನಂ ಮಾಟ್ಪರೇಗೆಯ್ಯರೋ (?) (ಸುಳುಮಾ. ೦-೪೭).

[ದೋಷ + ಅನ್ವೇಷಣ]

ದೋಷಾಪಚಯ (ನಾ). ೧. ಕೆಟ್ಟತನದ ಹಾನಿ.-ಹ್ರಾಸ. ೨. ಕತ್ತಲೆಯನ್ನು ಹೋಗಲಾಡಿಸುವುದು. ೧, ೨ : ಪ್ರಚುರ ಕಲಾನ್ವಿತರಕುಟಿಲ ಚಂಚಲರ್ ಶುದ್ಧಪಕ್ಷವೃತ್ತರ್ ದೋಷಾಪಚಯಪ್ರಕಾಶರೆನೆ ಬಾಲಚಂದ್ರ ದೇವಪ್ರಭಾವಮೇನಚ್ಚರಿಯೋ (ಪಂಚಾಮಾ. ೦-೦೮).

[ದೋಷ + ಅಪಚಯ]

ದೋಷಾಪತಿ (ನಾ). ರಾತ್ರಿಯ ಒಡೆಯ ; ದೋಷಾಕರ ; ಚಂದ್ರ : ದೋಷಾಪತಿ ಪಾಪಗ್ರಹಯುತನೆನೆ ಚತುರ್ಥಮಂದಿರದೊಳಾಕೆಗಕ್ಕುಂ ಕ್ಲೇಶಂ (ಜಾತತಿ. ೪-೨೮). [ಸಂ.]

ದೋಷಾಬಂಧು (ನಾ). ರಾತ್ರಿಯ ಬಂಧು ; ಚಂದ್ರ : ಸಂಧಿಗಳುಂ ಕೆಲವೆಡೆಯೊಳ್ ಬಂದು ವಿರೂಪಂಗಳಾಗಿ ಸಮನಿಸಿ ಕವಿತಾಬಂಧನದೊಳಾಗೆ ದೋಷಾಬಂಧುಗೆ ಶಶಲಕ್ಷ್ಮದಂತೆ ಕಱಿಯಂ ತರ್ಕುಂ (ಕವಿರಾ. ೦-೯೮).

[ಸಂ.]

ದೋಷಾಭಾಸ (ನಾ). ತಪ್ಪಿಲ್ಲದಿದ್ದರೂ ತಪ್ಪಾಗಿ ಕಾಣುವಂತೆ ಮಾಡುವಿಕೆ : ದೋಷಾಭಾಸಮನೊದವಿಪರೊಂದೆಡೆಗೆ ದುರ್ಜನಸ್ತುಷ್ಯತುಯೆಂಬುದನನುಕರಿಸಿ ಕವೀಂದ್ರರ್ ಪದಪಿಂ ಕೃತಿಯೊಳ್ ಪರೋಪಕೃತಿ ಪರತಂತ್ರರ್ (ರಾಜಶೇ. ೦-೪೭).

[ದೋಷ + ಆಭಾಸ]

ದೋಷಾಭಿಸಂಧಿ (ನಾ). ೧. ಕೆಡುಕನ್ನು ಉಂಟುಮಾಡುವ ಉದ್ದೇಶ ; ದೋಷಪೂರ್ಣವಾದ ಉದ್ದೇಶ ; ಮೋಸ ; ಸಂಚು : ಮನ್ನಿಸುವಿರೆಲೆ ಮಕ್ಕಳಿರ ಸಂಪನ್ನಸತ್ಯರು ನೀವು ಕರ್ಮಿಗಳೆನ್ನವರು ದೋಷಾಭಿಸಂಧಿಯ ಮಱೆದು ಕಳೆಯೆಂದ (ಕುಮಾಸ. ೦೩-೬೦). ೨. ಕತ್ತಲೆಯ ಸಂಬಂಧ.-ಕೂಟ. ೧, ೨ : ವರ್ಣಸಂಕರಂ ಚಿತ್ರದೊಳ್ ದೋಷಾಭಿಸಂಧಿ ದಿವಸವಿರಾಮದೊಳ್ . . . ಪಂಕ್ತಿಭೇದಂ ಲಿಪಿಗಳೊಳ್ ಅಕ್ಕುಮಲ್ಲದೆ ಜನಪದದ ಜನಂಗಳೊಳಿಲ್ಲ (ಜಗವಿ. ೨-೦ ಪ). [ದೋಷ + ಅಭಿಸಂಧಿ]

ದೋಷಾರಿ (ನಾ). ಪಾಪಕ್ಕೆ ಶತ್ರುವಾದವನು ; ದೇವರು : ಈಶನನೊಲಿದರ್ಚಿಸುವನ ಕೈ ಶುದ್ಧಂ ಶಿವನ ಪಾಡುವನ ಬಾಯ್ ಶುದ್ಧಂ ದೋಷಾರಿಯನೆನೆವನ ಮನ ತಾ ಶುದ್ಧ ಕಣಾ (ಶಂಕಳಂ. ೯೦). [ದೋಷ + ಅರಿ]

ದೋಷಾರೋಪ (ನಾ). ತಪ್ಪು ಹೊರಿಸುವುದು ; ಆಪಾದನೆ : ಈ ಸಂವಿಧಾನದ ರಾಷ್ಟ್ರಪತಿಯವರನ್ನು ಮಹಾಭಿಯೋಗಕ್ಕೆ ಗುರಿಪಡಿಸಬೇಕಾದರೆ, ಸಂಸತ್ತಿನ ಉಭಯಸದನಗಳಲ್ಲಿ ಯಾವುದೊಂದು ಸದನದವರಾಗಲಿ ದೋಷಾರೋಪ ಮಾಡತಕ್ಕುದು (ಭಾಧಾನ. ೩೦).

[ದೋಷ + ಆರೋಪ]

ದೋಷಾರೋಪಣ (ನಾ).=ದೋಷಾರೋಪ.

[ದೋಷ + ಆರೋಪಣ]

ದೋಷಾರೋಪಣೆ (ನಾ).=ದೋಷಾರೋಪ : ಪಾಪರ್‌ಚೀಟ ತೆಗೆದು ಕೊಂಡಿದ್ದ ಒಬ್ಬ ಸಾಲಗಾರನನ್ನು ದೋಷಾರೋಪಣೆಯಿಂದ ತಪ್ಪಿಸಿದ್ದಾಯ್ತು (ಪುನರು. ೨೦೨). [ದೋಷ + ಆರೋಪಣೆ]

ದೋಷಾರ್ತಿ (ನಾ). ಪಾಪದ ಪರಿಣಾಮದಿಂದ ದುಃಖಿಸುತ್ತಿರುವವನು : ಸಜ್ಜನದ್ವೇಷಿಯಂ ಸಂಚಳನಂ ದೋಷಾರ್ತಿಯಂ ದುರ್ಧರತರವಿರಸಕ್ರೀಡನಂ . . . ರಕ್ಷಿಪ್ಪುದು (ರಕ್ಷಾಶ. ೪೭).

[ದೋಷ + ಆರ್ತಿ]

ದೋಷಾಲೇಪ (ನಾ). ತಪ್ಪುಗಳ ಸಂಬಂಧ : ಈ ಪೇಟ್ದ ಮಾಟ್ಕೆಯಿಂ ದೋಷಾಲೇಪಂ ಪೊರ್ದದಂತಿರೆ ಸನ್ನಿಬಂಧವ್ಯಾಪೃತನಕ್ಕೆ ಗುಣವದರ್ಥಂ ವ್ಯಾಪಕಮಾಗೆ (ಕಾವ್ಯಾಪ. ೪೯೩). [ದೋಷ + ಆಲೇಪ]

ದೋಷಾವಕಾಶ (ನಾ). ೧. ಪಾಪ ಅಥವಾ ಕೆಟ್ಟಕಾರ್ಯಗಳಿಗೆ ಅನುಕೂಲವಾದ ಸಂದರ್ಭ.-ಸೌಕರ್ಯ. ೨. ಕತ್ತಲೆಗೆ ಆಸ್ಪದ. ೧, ೨ : ಒದವಂ ಭವ್ಯಮುಖಾಂಬುಜಕ್ಕೆ ಮುದಮಂ ಸದ್ಧರ್ಮಚಕ್ರಕ್ಕೆ ಸಂಪದಮಂ ಲೋಕದ ದೃಷ್ಟಿಗಸ್ತಪದಮಂ ದೋಷಾವಕಾಶಕ್ಕೆ . . . ಪಡೆಯುತ್ತಿಕ್ಷ್ವಾಕುವಂಶೇಂದ್ರಶೈಲದಿನತ್ಯೂರ್ಜಿತತೇಜನುದೃವಿಸಿದಂ ತ್ರೈಲೋಕ್ಯನಾಥಂ ಜಿನಂ (ಪುಷ್ಪಪು. ೧೦-೨). [ದೋಷ + ಅವಕಾಶ]

ದೋಷಾವಸಥ (ನಾ). ೧. ಪಾಪದ ನೆಲೆ.-ಆಶ್ರಯಸ್ಥಾನ : ಪಸೆಯೊಳ್ ಪಸುರ್ವಂದರೊಳಗ್ನಿಸಾಕ್ಷಿಯೊಳ್ ಕೊಂಡ ಪಾಂಡುಪತಿಯಿರೆ ದೋಷಾವಸಥರ್ ಪಾದರದಿಂ ಜನಿಯಿಸಿದರ್ (ಗದಾಯು. ೩-೩೮). ೨. ಕೆಡುಕಿಗೆ ನೆಲೆ : ನಯಮಂ ಪೇಟ್ಕೊಡೆ ಸಂಧಿ ಮಾಡಿಱಿಯದಿರ್ ಕೌಂತೇಯರೊಳ್ ಯುದ್ಧಮಕ್ಷಯದೋಷಾವಸಥಂ ಪ್ರಧಾನಪುರುಷರ್ ಕ್ಷತ್ರಕ್ಷಯಸ್ಥಾನಮೆಂದು ಯಥಾರ್ಥಂ ನುಡಿದಾರ್ತರಿಲ್ಲ (ಗದಾಯು. ೪-೬೬).

[ದೋಷ + ಅವಸಥ]

ದೋಷಾವಹ (ನಾ). ಅಮಂಗಳವನ್ನು ತರುವಂಥದು ; ಅಶುಭ ಪರಿಣಾಮವನ್ನುಂಟುಮಾಡುವಂತಹುದು : ಮನೆಯಿಂದೋಸಱಿಗೇಳಲೆಂದು ಬರಲಾಗಲ್ ಭೇರಿಮಾಂಗಲ್ಯ ತೂರ್ಯನಿನಾದಂ ಗುಡಿತೋರಣಂ . . . ಕಟ್ಟಿದಿರಾಗಿ ತೋಱೆ ಶುಭದಂ . . . ಮೇಷದವರಂ ಕಾಣಲ್ಕೆ ದೋಷಾವಹಂ (ಲೋಕೋಪ. ೧೨-೩೦) ; ದೇವ ಕನಸಿದು ಕರಂ ದೋಷಾವಹಂ (ಯಶೋಚ. ೩-೧೩). [ದೋಷ + ಆವಹ]

ದೋಷಾವಳಿ (ನಾ). ೧. ತಪ್ಪುಗಳ ಗುಂಪು,-ಸಮೂಹ. ೨. ಕತ್ತಲೆಯ ಗುಂಪು,-ಸಮೂಹ. ೧, ೨ : ಮಳಿನತೆ ಇಲ್ಲದ ಕುನ್ದಂ ತಳೆಯದ ಸಲೆ ರಾಹುಪೀಡೆಯೈದದ ದೋಷಾವಳಿಯೊಳ್ಪರಿಯಿಸದಸ್ತಾಚಳಕೆಳಸದ ಚನ್ದ್ರನೆನಿಸುವಂ ಶುಭಚಂದ್ರಂ (ಎಕ. VII, ಶಿಕಾರಿ. ೨೨೫-೭೦ ; 1204).

[ದೋಷ + ಆವಳಿ$_1$ (=ಆವಲಿ)]

ದೋಷಾವಿಲ (ನಾ). ೧. ತಪ್ಪಿನಿಂದ ಕೂಡಿದುದು. ೨. ಕೆಡುಕಿನಿಂದ ಕೀಳಾದುದು : ಸೇವೆಯ ಕಷ್ಟಂ ಸೀತಾದೇವಿಯನೀಡಾಡಿ ಬರ್ಪುದಡವಿಯೊಳೆನೆ ದೋಷಾವಿಲ[ಪಾಠಾಂ. ಳ]ಮನಳ್ಕಿ ರಾಘವದೇವಂಗೆ ಕೃತಾಂತ ವಕ್ತ್ರನದನೇಗೊಂಡಂ (ಪಂಚಾಮಾ. ೦೫-೭೪).

[ದೋಷ + ಆವಿಲ]

ದೋಷಾವೇಶ (ನಾ). ಪಚ್ಚೆಯ ಐದು ವಿಧವಾದ ನ್ಯೂನತೆಗಳಲ್ಲಿ ಒಂದು ; ಇಬ್ಬನಿ ಬಿದ್ದ ತಾವರೆಯ ಪತ್ರದಂತಿರುವ ಪಚ್ಚೆ : ದೋಷಲೇಶಾನ್ವಿತಂ ದುಷ್ಟಂ ದೋಷಮೂರ್ಛಿತಂ ದೋಷಾವೇಶಂ [ಪಾಠಾಂ. ಷಲೇಶಂ] ಮಂದದೋಷಮೆಂದಿಂತೀ ಪಂಚವಿಧಮಾದ ಸದೋಷಜಾತಿಮರಕತಮಂ ಪೇಳ್ವೆಂ (ಹಾಲಾಸ್ಯ. ೨-೧-೮೮ ಪ).

[ಸಂ.]

ದೋಷಾಶ್ರಯ (ನಾ). ಹವಳದ ಮೂರು ಬಗೆಯ ನ್ಯೂನತೆಗಳಲ್ಲಿ ಒಂದು ; ಕಳಂಕವನ್ನು ಹೊಂದಿರುವಂಥ ಹವಳ : ದೋಷಾಶ್ರಯಂ ಛಿದ್ರವಕ್ರಂ ಕ್ರಿಮಿದೂಷಣಮೆಂದು ದೋಷತ್ರಯಮುಂಟದನುಳಿದು ನಿರ್ದೋಷವಿದ್ರುಮಮಂ ಕಾಮಿನಿಯರ್ ವಿಶೇಷಮಾಗಿ ತಾಳಲ್ ಸುಖಾಯುಷ್ಯ ಸುಪುತ್ರಾರೋಗ್ಯಾದಿ ಸಿದ್ಧಿಗಳಪ್ಪುವು (ಹಾಲಾಸ್ಯ. ೨-೦-೧೦೪ ಪ). 'ದೋಷತ್ರಯ' ಪರಾ. [ಸಂ.]

ದೋಷಿ (ನಾ). ೧. ಕಳಂಕವನ್ನು ಹೊಂದಿರುವವನು; ಕಪ್ಪು ಕಲೆಗಳಿಂದ ಕೂಡಿದವನು ; ಚಂದ್ರ : ದೋಷಿ [ಪಾಠಾಂ. ಸಿ]ಯೊಡನಾಗಸವ ತಿರುಗಲಲಸಿ ಬಂದು ಧಗಧಗಿಪ ಬೆಳ್ದಿಂಗಳೊರ್ಮೊತ್ತಮಾಗಿ ಸೈನಿಗುರಿದತ್ತೆಂಬವೋಲ್ (ನಂದಿಮಾ. ೨-೪೦). ೨. ತಪ್ಪುಮಾಡಿದವನು ; ಅಪರಾಧಿ : ಶಂಕಿಸದಿರು ಮುಟ್ಟದು ಗುಣಿಗೆ ದೋಷಿಗಕ್ಕುಂ ದೋಷಂ (ಶಾಂತಿಪು. ೩-೮೮) : ದೋಷಿ ಪಿಡಿವಂತೆ ದಿವ್ಯದ ಕಾಸಿದ ಕುಟುವಂ ಕಡಂಗಿ ಕಾಳೋರಗನಂ ಕೂಸು ಪಿಡಿವಂತೆ ಪಿಡಿದಂ ಸಾಸಿಗನವಿವೇಕಿ ಸೀತೆಯಂ ದಶಕಂಠಂ (ಪಂಚಾಮಾ. ೯-೧೦೦) ; ತುಡುಕಿದ ದೋಷಿಯನಲ್ಲದೆ ಪಿಡಿಯದು ಘಟಸರ್ಪನಂತುಟಲ್ಲದೆ ತನ್ನಂ ತುಡುಕದ ನಿರ್ದೋಷಿಯುಮಂ ಪಿಡಿವುದು ಖಳಮುಖ ಘಟೋಗ್ರಜಿಹ್ವಾಸರ್ಪಂ (ಜಗವಿ. ೧-೦೨) ; ದೋಷಿಗೆ ತಕ್ಕ ದಂಡನೆಯ ಮಾಟ್ಟುದು ಮಾಡದುಪೇಕ್ಷಿಸಿರ್ದೊಡಾ ದೋಷಿ ಬಟಿಕ್ಕೆ ಧಾರಿಣಿಯೊಳಂ ಕುಶಮಿಲ್ಲದ ಹಸ್ತಿಯಂತೆ ನಿರ್ದೋಷಿಗಳಂ ಮದಾಂಧಗುಣದಿಂ ತುಟಿಗುಂ (ಸೂಕ್ತಿಸು. ೦೬-೦೦). ೩. ಕೆಟ್ಟ ನಡತೆಯುಳ್ಳವನು ; ದುರಾಚಾರಿ : ವಿಷಯದ ಸವಿ ತಲೆಗೇಱಿ ಶಿವಪೂಜೆಯ ಬಿಟ್ಟು ವೇಶಿಯರ ಎಂಜಲ ಹೇಸದೆ ತಿಂಬ ದೋಷಿಗಳನೇನೆಂಬೆನೈ (ದೇದಾಪ. ೩೫-೬೫).

[ಸಂ. ದೋಷಿನ್]

ದೋಷಿಗ (ನಾ). ತಪ್ಪು ಮಾಡಿದವನು ; ಅಪರಾಧಿ : ಆದ ಮುಳಿಸಿಂದ ಮೆಲ್ವಂ ತೇದುಂ ಕುಡಿಯಲ್ಕೆ ತಕ್ಕ ಪಗೆವನ ರುಧಿರಾಚ್ಛೋದಮನೆ ಕುಡಿದು ಮಾಣ್ದ ವೃಕೋದರನೇನಾವ ತೆಱದೊಳಂ ದೋಷಿಗನೇ (ಪಂಪಭಾ. ೧೨-೧೫೯). [ದೋಷ + – ಇಗ]

ದೋಷೆ (ನಾ). ಕತ್ತಲೆಯಿಂದ ಕೂಡಿದುದು ; ರಾತ್ರಿ : "ತಮಿಸ್ರೆ ನಿಶೆ ರಜನಿ ದೋಷೆ ರಾತ್ರಿ . . . ತ್ರಿಯಾಮ್ಯೆ ಯಾಮಿನಿಯಕ್ಕುಂ" (ವಸ್ತುಕೋ. ೦೫-೫) ; "ದೋಷಾ, ನಕ್ತಂ-೨ ರಜನೌ – ಇತಿ ರಾತ್ರಿಯೊಳು ಎಂಬ ಅರ್ಥದಲ್ಲಿ ವರ್ತಿಸುವವು" (ಸಿದ್ಧಾಂತಿ. ೩೭೬). [ಸಂ. ದೋಷಾ]

ದೋಷೇಂಗಿತೆ (ನಾ). ಅಂತರಂಗದಲ್ಲಿ ಕಳಂಕವುಳ್ಳವಳು : ನಡುಗುವೊಡಂ ಮೂಗರಳ್ದೊಡಂ ವ[ಪ]ದನೆರನನೆತ್ತುವಡಮಬಲೆಯರ್ಕಣ್ಕಡುಕೆಂಪಾದೊಡವಧರಂ ತವೆ (?) ತೆತ್ತುವಡಮಱಿಗೆ ದೋಷೇಂಗಿತೆಯರಂ (ಮದತಿ. ೧೦-೩೩). [ಸಂ. ದೋಷೇಂಗಿತಾ (ದೋಷ + ಇಂಗಿತ + –)]

ದೋಷೇತರ (ನಾ). ಕೆಡುಕನ್ನುಂಟುಮಾಡದಿರುವಂಥದು : ದೋಷೇತರನಾಪ್ತಂ ತದ್ಭಾಷಿತಮಪಹಿಂಸಮಾಗಮಂ ಷಡ್ಬೇದಾಕ್ಲೇಶಂ ಪದಾರ್ಥಮಿದೆ ಗಂಡೂಷಂ ನಿನಗಕ್ಕೆ ದುರಿತಕಫವಿಳಯನದೊಳ್ (ಶಾಂತಿಪು. ೭-೪). [ದೋಷ + ಇತರ]

ದೋಷೈಕದೃಷ್ಟಿ (ನಾ). ೧. ಕೇವಲ ತಪ್ಪುಗಳನ್ನೇ ಹುಡುಕುವುದು : ಕರ್ಣರಸಾಯನವೆನಿಸುವ ಕೃತಿಯೊಳು ದೋಷೈಕದೃಷ್ಟಿಯ ಖಳರು . . . ಕುಂದನೆ ಪರಿಗಣಿಸುವರು (ಇಂಜಾಪ. ೬೭-೨೩). ೨. ಕೇವಲ ತಪ್ಪುಗಳನ್ನೇ ಹುಡುಕುವವನು : ದೋಷೈಕದೃಷ್ಟಿಯಾದವನು ವಿಮರ್ಶಕನೆನಿಸಿಕೊಳ್ಳುವುದಿಲ್ಲ (ರೂಢಿ) [ಸಂ.]

ದೋಷೋದ್ಗಮ (ನಾ). ೧. ಕೆಡುಕಿನ ಹುಟ್ಟು ; ಕೆಡುಕುಂಟಾಗುವಿಕೆ. ೨. ಕತ್ತಲೆಯಾಗುವಿಕೆ. ೧, ೨: ಕೇತಕೀಧೃತಸತ್ಕಂಟಕಮಲ್ಲದಿಲ್ಲ ವಸುಧಾ ಸತ್ಕಂಟಕಂ ಕಾಳಕಲ್ಪಿತ ದೋಷೋದ್ಗಮಮಲ್ಲದಿಲ್ಲ ಪೆಱವುಂ ದೋಷೋದ್ಗಮಂ ದೇಶದೊಳ್ (ಪುಷ್ಪಪು. ೨-೩೦). [ದೋಷ + ಉದ್ಗಮ]

ದೋಸ (ನಾ). ೧. ತಪ್ಪು ; ಅಪರಾಧ : ಆ ಸುಕರಂ ಗಡ ತಮಗತಿ ಭಾಸುರ ಮೃಗರಾಜನಾಮಮುಂ ಗಡಮೆಂದಾ ದೋಸಕ್ಕೆ ಮುಳಿದು ನೆಗಟ್ಟರಿಕೇಸರಿ ಕೇಸರಿಗಳನಿತುಮಂ ತಳ್ತಿಱಿದಂ (ಪಂಪಭಾ. ೫-೪೯) ; ನನ್ನಿಗೆ ಬೀಗುವರ್ ನುಡಿ ತೊದಳ್ ದೋಸಕ್ಕೆ ಪಕ್ಕಾದೊಡಂ ಬಡಗಣ್ಡರ್ ಕಲಿಕಾಲದೊಳ್ ಕಲಿಗಳೊಳ್ಗಣ್ಡಂ ಬರಂ ಗಣ್ಡರೇ (ಎಕ. II, ೦೩೩-೭೦ : 982) ; ಕೂಸಂ ಕೊಟ್ಟಪೆನೆಂಬೀ ದೂಸಱ್ ನೀವಿಂತವಜ್ಞೆಗೆಯ್ಯುತ್ತೆನ್ನಂ ಬೀಸರಮನೆ ನುಡಿದಪಿರೀ ದೋಸಮೆ ನೀಮಱಿದುಮಱಿಯಿರೆನ್ನುನ್ನತಿಯಂ (ಪಂಚತಂ. ೨೬೦-೪) ; ಏಂ ದೋಸಮದೇಂ ಬನ್ನಂ ಬಿಸುಡಾ ಸವಣನ ಪೇಟ್ಟ ಜೈನಮತಮಂ ಬ್ರತಮಂ (ಸುಕುಮಾ. ೬-೪೯). ೨. ಪಾಪ ; ಕೆಟ್ಟ ಕಾರ್ಯ : "ದೋಸಂ ಸಪಾಪಾಹ್ವಯಂ" (ಕರ್ಣಾನಿ. ೭೦) ; ಸಾಸಿಗನೈ ಹರಿ ನೀಂ ಪೆಣ್ಗೂಸಂ ವಧಿಯಿಸಿದೆ ಪಶುವನಟಿದೈ ಮತ್ತಾ ದೋಸಕ್ಕೆ ಹೇಸದೀಗ ಮಹಾಸಭೆಯೊಳಗಗ್ರಪೂಜೆಗಗ್ರಣಿಯಾದೈ (ಜಗವಿ. ೦೬-೪೨) ; ಬ್ರಾಹ್ಮಣರುಮಂ ಕವಿಲೆಯು[ಮ]ನಳಿದ ದೋಸಕ್ಕೆ ಹೋಹರ್ (ಸೌಇಇ, IX-1, ೨೮೨-೦೭ ; ಸು. 1190) ; ನರಕಿಗಳು ಹೋಹ ದೋಸಕ್ಕೆ ಹೋಹರು (ಎಕ. IX, ಚನ್ನಪ. ೫೮-೨೩ ; 1478 ?). ೩. = ದೋಷ ೧೩ : ದೋಸಮಿನಿತೆಂದು ಬಗೆದುದ್ಭಾಸಿಸಿ ತಱಿಸಂದು (ಕವಿರಾ. ೦-೪೬) ; ದೋಸಮನೆ ಗುಣದವೋಲುದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್ದೇಸಿಯನೆ ನಿಱಿಸಿ ಖಂಡಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ (ಕವಿರಾ. ೧-೬೪). [<ಪ್ರಾ. ದೋಸ./ಸಂ. ದೋಷ]

ದೋಸಂಬೊರ್ದು (ಕ್ರಿ). (ಸೋಲನ್ನು ಪಡೆದು) ಕಳಂಕವನ್ನು ಹೊಂದು; ಕುಂದನ್ನು ಹೊಂದು : ದೋಸಂಬೊರ್ದಿದ ತುಟಿಲಸಂದನಂತೆ ಕಂದಿ ಚಾರಿತ್ರಂಗೆಟ್ಟ ಋಷಿಯಂತೆ ಮೆಯ್ಯಱಿಯದೆ ಕೋಳ್ಪಟ್ಟರಂತೆ ಪುಯ್ಯಲಿಟ್ಟೊಳಱಿಯಟುತ್ತುಮಿರೆ (ಜೀವಸಂ. ೧೦೩-೪೬ವ). [ದೋಸ + ಪೂರ್ದು]

ದೋಸವಂತ (ನಾ). ದೋಷಿ ; ಅಪರಾಧಿ : ಜಗಳವಂತಂ, ದೋಸವಂತಂ (ಶಬ್ದಾನು. ೪೦೨ ಪ್ರಯೋ). [ದೋಸ+–ವಂತ]

ದೋಸಿ (ನಾ). ೧. ಕಳಂಕವುಳ್ಳವನು ; ಕಲೆಯುಳ್ಳವನು : ದೋಸಿಯಾದಾ ಸಸಿಯ ತಲೆಯಲ್ಲಿ ತಾಳ್ದೆ ಪೂಬಾಸಿಗದೊಲೆನ್ನನೇಳಿಲಗೈದೆಯಿದು ಮಹಾದೋಸವೆಮ್ಮಿರ್ವರಂ ದಯದಲೆಡಬಲಗಣ್ಗಳಾಗಿ ನೀಂ ಕಾಣ್ಬುದೆಂದು ನೇಸಱಡಿದಾವರೆಯ ಭಯಭಕ್ತಿಯಿಂದಲೋಲೈಸುವಂದದೊಳು

ಸದ್ರುಚಿರತ್ನರುಚಿರಸಿಂಹಾಸನಂ ಭಾಸಮಾನಮದಾಗಿ ರಂಜಿಸಿದುದು (ನಂದಿಮಾ. ೪-೩೦). ೨. ತಪ್ಪು ಮಾಡಿದವನು; ಅಪರಾಧಿ: ನಡು ಗಣ್ಣಿನಿಂದ ಬೀರನ ಪೆತ್ತು ಕಳುಪೆ ಘುಡುಘುಡಿಸಿ ದೋಸಿಯ ತಲೆಯ ಹೊಡೆದಗ್ನಿಯೊಳಗಾರ್ದು ಕೆಡಹಿ ಕುಱಿದಲೆಯಿತ್ತನು (ಭಾವಜಿಂ. ೩-೦೩).

[< ಪ್ರಾ. ದೋಸಿ./ ಸಂ. ದೋಷಿನ್]

ದೋಸಿಅರಸ (ನಾ). ಒಬ್ಬಾತನ ಹೆಸರು: ಬಿಜಯಿತ್ತ ಬಾಣರಸ ಪ್ರಿಥಿವೀ ರಾಜ್ಯಂಗೆಯೆ ದೋಸಿಅರಸರಾ ಕಳಿಪುಲಿನಾಡಱುವತ್ತುಂ ಪಡೆದು ಕೊಟ್ಟೊಡುಂ (ಎಳ. X, ಮುಳಪಾ. ೨೪೪-೭ : ಸು. ೨೦೦).

[ದೋಸಿ? + ಅರಸ$_1$]

ದೋಸಿಗ (ನಾ). = ದೋಸಿ ೧: ದೋಸಿಗನ ಕವರ್ದ್ದುಟದೊರ್ಗೆ ಪರಿಹಾ[ರ]ಂ (ಇಆ. X, ೦೬೪-೭ ; 7ನೆಯ ಶತ?) ; ದೂಸಕರ ದೂಱುಗೇಳ್ದುಂ ಸಾಸಿಗನೆನ್ನಳವನಱಿದುಮಱಿಯದೆ ಪಿರಿದುಂ ದೋಸಿಗನಾದೊಡೆ ಕೊಲ್ಗುಂ ಪೇಸುವನಲ್ಲಂ (ಅರ್ಧನೇ. ೫-೦೩). [ದೋಸ + – ಇಗ]

ದೋಸೆ$_1$, ದ್ವಾಶಿ (ನಾ). ಅಕ್ಕಿ ಹಾಗೂ ಉದ್ದು ಅಥವಾ ಬೇರೆ ಧಾನ್ಯಗಳನ್ನು ಒಂದು ಪ್ರಮಾಣದಲ್ಲಿ ನೆನೆಸಿಟ್ಟು ನಂತರ ರುಬ್ಬಿ ಹೆಂಚಿನ ಮೇಲೆ ಹೊಯ್ದು ಬೇಯಿಸಿ ಮಾಡುವ ಒಂದು ಬಗೆಯ ಖಾದ್ಯ,–ತಿಂಡಿ: ಮಿಸಲು ಸೂಸಲಾಗಿ ದೋಸೆ ಕಡುಬ ಹೊಯ್ದು ಹಬ್ಬವ ಮಾಡಿಹೆನೆಂಬ ಹೇಸಿಗಳ ಮಾತ ಕೇಳಲಾಗದು (ವಚಸಂ. ೩೬೮-೮); ದೋಸೆಯನಟ್ಟ ವೋಲ್ ಮಳಲ ರಾಶಿಗಳೊಪ್ಪಮನಾಳ್ದುವು (ಬಾಧಪು. ೪-೭೮) ; ದೋಸೆಯಿಡ್ಡಲಿಗೆ ತಱಗು...ಎಂಬಿವನಾ ನಾರೀತತಿ ಮುನಿಜನಕ್ಕೆ ಬಡಿಸಿದುದಾಗಳ್ (ಶ್ರೀಪುವಿ. ೧೦-೩೪) ; ಹೆಸಱ ದೋಸೆಯ ಹೂವಿನೆಸಳಂತೆ ಸಂಬಳಿಸಿ ಹಸನಾಗಿ ಯುಪ್ಪುಮೆಣಸಿಕ್ಕಿ (ಸೂಪಶಾ. ೪-೫೩) ; ಸಣ್ಣಸೇವಗೆಯ ಮೆದೆ ಎಱೆ ಯಪ್ಪದಡಕಿಲಿಡ್ಡಲಿಗೆಗಳ ಬೋನ ದೋಸೆಯ ಲಗ್ಗೆ (ಸಮ್ಯಕೌ. ೭-೨೫) ; ದೋಸೆ ಕಜ್ಜಾಯ ... ಕಬ್ಬುವಿಲ್ಲೆಗಳನುಱೆ ಮಾಱುವರ್ ಬರುತಿರ್ದರು (ಜಿಬಪು. ೪೭-೪೨) ; ಹಸನಾದ ದೋಸೆಯುಂಡಲಿಗೆ . . . ಪನ್ನೀರನೊಸೆ ದರ್ಪಿಸಿದರಂಬಿಕೆಗೆ (ಕಂಸವಿ. ೨೨-೨೯) ; ದೋಸೆಯ ಊಟ ಊಟವಲ್ಲ, ದಾಸರ ಆಟ ಆಟವಲ್ಲ (ಗಾದೆ) ; ಎಲ್ಲರ ಮನೆಯ ದೋಸೆಯೂ ತೂತೇ (ಗಾದೆ) ; ಆರು ದೋಸೆ ಕೊಟ್ಟರೆ ಅತ್ತೆ ಕಡೆ, ಮೂರು ದೋಸೆ ಕೊಟ್ಟರೆ ಮಾವನ ಕಡೆ (ಗಾದೆ). **ದ್ವಾಶಿ**: ಯಿದಕೆ ಪಶ್ಚಿಮ ಅಗ್ರೋದಕದ ಭಾವಿ ಸುತ್ತಲು ವಡೆ ದ್ವಾಶಿಗೆ ಗದೆ ಅಗಲ ೨೦ ಉದ ೨೦ ಬೀಜವರ್ರಿ ಲೌ ೨ (ಎಳ. XI, ಹೊಳಲ್ಕೆ. ೭-೨೪ ; 1568). P ಇದರಲ್ಲಿ ಅಕ್ಕಿದೋಸೆ, ಅವಲಕ್ಕಿದೋಸೆ, ಈರುಳ್ಳಿದೋಸೆ, ಒಗ್ಗರಣೆದೋಸೆ, ಕಡಲೇ ಬೇಳೆ ದೋಸೆ, ಕಾಯಿದೋಸೆ, ಖಾಲಿದೋಸೆ, ಗೋದಿದೋಸೆ, ತುಪ್ಪದ ದೋಸೆ, ಮಸಾಲೆದೋಸೆ, ಮೊತ್ಯದ ದೋಸೆ, ಮೊಟ್ಟೆ ದೋಸೆ, ರವೆ ದೋಸೆ, ರಾಗಿದೋಸೆ, ಹೆಸರುಬೇಳೆ ದೋಸೆ ಮುಂತಾಗಿ ಅನೇಕ ಬಗೆಗಳಿವೆ.

[ದೇ.॥ ತಮಿ. ತೋಚೈ; ಮಲ. ದೋಶ; ತುಳು. ಕೊಡ. ತೆಲು. ದೋಸೆ]

ದೋಸೆ$_2$ (ನಾ). ಒಂದು ಬಗೆಯ ತರಕಾರಿ; ಸೌತೆಕಾಯಿ: ದೋಸೆ, ಸೋರೆಕಾಯಿ, ಸೊಂಡೆಗೆಣಸು, ಹುಳಿ . . . ಮೊಸರು, ಮಜ್ಜಿಗೆ ಮತ್ತು ಗುರುತ್ವವಾದಾಹಾರಂಗಳಿವೆಲ್ಲಂ ಖಾಸ, ಶ್ವಾಸ, ಬಿಕ್ಕುಳುರೋಗಂಗಳವರಿಗೆ ಅಪಥ್ಯಂಗಳೆಂದರಿವುದು (ಸಳಪ್ಯ. ೨೪೩). [← ತೆಲು. ದೋಸ]

ದೋಸೆವದ (ನಾ). ದೋಸೆಯ ಹಿಟ್ಟಿನ ಹದ; ದೋಸೆಯಂತೆ ತೆಳ್ಳಗೆ ಬಳುಕುವುದು: ಬಿಸಿಲ ಹೊಡೆಯಿಂದ ಕಂದದೆ ದೋಸೆವದದಿ ಸೊಗಯಿಸುವ ಸಕ್ಕರೆಗಳೆಳನೀರ ಕುಯಿದಿಳುಪಿ ತಣ್ಣಸವಾದ ತಾಣದೊಳಗಿರಿಸಿ (ಸೂಪಶಾ. ೨-೩೦). [ದೋಸೆ$_1$ + ಪದ$_1$]

ದೋಸ್ತ 'ದೋಸ್ತಿ' ನೋ.

ದೋಸ್ತದಾರ, ದೋಸ್ತಾರ, ದೋಸ್ತುದಾರ (ನಾ). ಗೆಳೆಯ; ಮಿತ್ರ: ಈ ಪ್ರಕಾರ ನಮ್ಮ ತಮ್ಮ ಸಖಿತ್ವವಾಗಿ ಇರುವ ವಿಸ್ತಾರದಲ್ಲಿ ನಡಸುವ ಬಗ್ಯೆ ದೋಸ್ತದಾರರಿಗೆ ಯಾವಾಗಲೂ ಆಗ್ರಹಾ ಉಂಟಾಗಿ ಇರುವದರಿಂದ (ರಾಜೇಂದ್ರ. ೧೬೬). **ದೋಸ್ತಾರ**: ದೋಸ್ತಾರರ ಮಾತ ಮೀರಬಾರದು (ರಾಜೇಂದ್ರ. ೯೩). **ದೋಸ್ತುದಾರ**: ದೋಸ್ತುದಾರರಾದಂಥವರ ಹೆಸರಿಗೆ ಒಂದು ವಕೀಲು ಟೀಪುಸುಲ್ತಾನರ ಬಳಿಗೆ ನೇಮಿಸಿ ಕಳುಹಿಸುವಾ ಎಂಬುದಾಗಿ, ಬರದು ಕಳುಹಿಸಿ ಇದ್ದೀತು (ರಾಜೇಂದ್ರ. ೧೫೩).

[ದೋಸ್ತ (<ದೋಸ್ತಿ) + – ದಾರ$_4$]

ದೋಸ್ತಾರ 'ದೋಸ್ತದಾರ' ನೋ.

ದೋಸ್ತಿ, ದೋಸ್ತ, ದೋಸ್ತು (ನಾ). ೧. ಮಿತ್ರತ್ವ; ಗೆಳೆತನ; ಸ್ನೇಹ: ತಮ್ಮ ದೋಸ್ತಿಯಿಂದಾ ನಮ್ಮನಸ್ಸಿನ ಸಂತೋಷ ವಡಂಬಡಿಕೆ ಮರ್ತಬೆ ಎಲ್ಲಾ ಜನರಿಗೂ ತಿಳಿಯುವ ಹಾಗೆ ಮಾಡುತ್ತಾ ಇದ್ದೇವೆ (ರಾಜೇಂದ್ರ. ೨೨೮); ನನಗೂ ಅವರಿಗೂ ಬಾಳ ದೋಸ್ತಿ (ಮಣ್ಯುಹೆ. ೧೨೦); ವಕೀಲರದು ನಮ್ಮದು ದೋಸ್ತೀ ಬಹಾಳರಿ (ರಕ್ತಧ್ವ. ೦೯೬); ನಮ್ಮಿಬ್ಬರಿಗೂ ಬಹಳ ದೋಸ್ತಿಯಾಯಿತು (ಮಧುನ. ೧೨೬). ೨. ಗೆಳೆಯ; ಮಿತ್ರ: ಅವನೂ ಅವನ ದೋಸ್ತಿ ಗಣೇಶನೂ ಬೀದಿ ಬೀದಿ ಅಲೆಯುತ್ತಾರೆ (ಶ್ಯಾಗಮ. ೦೯೦) ; ನಿಮ್ಮ ತಂದೆಯ ದೋಸ್ತಿ, ಸಾಮಾನ್ಯವಾದ ವ್ಯಕ್ತಿಯೇನಲ್ಲ (ಪುನರು. ೩೩೦) ; ಅವನ ಹಳೆಯ ದೋಸ್ತಿಗಳಲ್ಲಿ ಕೆಲವರು ಎಲ್ಲಾ ವಯಸ್ಸಾಗಿ ಶಕ್ತಿ ಉಡುಗಿದವರು (ಯೋಧಪು. ೯೩). **ದೋಸ್ತ**: ೨. ಮಹಾರಾಜೆಸಾಹೇಬರವರ್ರು ತಮ್ಮ ದೋಸ್ತರಾದ ಕರ್ನಲ ಕುಲೂಸ ಸಾಹೇಬರವರ ಹೆಸರ್ರಿನಲ್ಲಿ . . . ಕಟ್ಟಿಸಿದರ್ರು (ಎಳ. IX, ಚನ್ನಪ. ೫-೨ ; 1799) ; ವಸ್ತಾದ ಅಲ್ಲಿಭಟ್ಟರ ಜೀವದ ದೋಸ್ತನಾದ (ಹಬ್ಬಿಬ. ೪೭). **ದೋಸ್ತು**: ೧. ಅವರಿಬ್ಬರಿಗೂ ಒಳ್ಳೆಯ ದೋಸ್ತು (ರೂಢಿ).

ದೋಸ್ತಿ ಮಾಡು = ಸ್ನೇಹ ಮಾಡಿಕೊಳ್ಳು; ಗೆಳೆತನ ಬೆಳೆಸು: ಈಗ ಕೊಡಗಿನ ದೊರೆಗಳು ಹೈದರಲ್ಲೀಖಾನರ ಮಗ ಟೀಪುಸುಲ್ತಾನರ ಸಂಗಡ ವಿರುದ್ಧ ಮಡಗಿ ಇಂಗ್ರೇಜಿಯವರ ದೋಸ್ತಿ ಮಾಡಿಕೊಂಡು ಟೀಪುಸುಲ್ತಾನರಿಗೆ ಶತ್ರುವಾಗಿ ಇದ್ದಾರೆ (ರಾಜೇಂದ್ರ. ೮೮).

[← ಪಾರ. ಹಿಂ. ಮರಾ. ದೋಸ್ತೀ, ದೋಸ್ತ್]

ದೋಸ್ತಿಗಾರ (ನಾ). ಗೆಳೆಯ; ಸ್ನೇಹಿತ: ಅವನ ನಾಲ್ಕೈದು ದೋಸ್ತಿಗಾರರು ಆಗ ಅಲ್ಲಿಂದಲೇ ಹಾದುಹೋಗುತ್ತಿದ್ದರು (ಹೊಸಕ್ಷಿ. ೭೨).

[ದೋಸ್ತಿ + – ಗಾರ (<– ಕಾಱ)]

ದೋಸ್ತು 'ದೋಸ್ತಿ' ನೋ.

ದೋಸ್ತುದಾರ 'ದೋಸ್ತದಾರ' ನೋ.

ದೋಸ್ಸಾರ (ನಾ). ೧. ತೋಳಿನ ಶಕ್ತಿ,–ಸಾಮರ್ಥ್ಯ. ೨. ತೋಳಿನ ಶಕ್ತಿಯುಳ್ಳವನು; ಬಾಹುಬಲವುಳ್ಳವನು; ಪರಾಕ್ರಮಿ: . ಆರಾಧಿಸಿ ಪಡೆದಂ ಗಡ ತೇರಂ ದೋಸ್ಸಾರನಲ್ಲದಂಗೇವುದೊ ಪೇಟಱ ತೇರೆಂದು ಸಿಂಹರಥಮಂ ವೀರಶ್ರೀರಮಣನೇಱಿದಂ ರಘುವೀರಂ (ಪಂರಾಮಾ. ೧೪-೧೩೦). [ಸಂ.]

ದೋಸ್ಸಾಹಸ (ನಾ). ತೋಳಿನ ಬಲ,–ಶಕ್ತಿ,–ಸಾಹಸ; ಬಾಹುಬಲ; ಪರಾಕ್ರಮ: ಅನೇಕಾಹವದೃಷ್ಟದೋಸ್ಸಾಹಸಮಿದು ವರಾಟಸುಭಟ ಬಲಂ (ಆದಿಪು. ೧೩-೪೫ ವ). [ಸಂ.]

ದೋಹ$_1$ (ನಾ). = ದ್ರೋಹ: "ದೋಹ – ದ್ರೋಹ = ಹಾನಿ" (ತದ್ಯಕೋ. ೨೧) ; ಪರಿವೃತ ರೇಫಲೋಪಕ್ಕೆ — ಕ್ರೇಣಿ – ಕೇಣಿ . . . ದ್ರೋಹ – ದೋಹ (ಶಮದ. ೨೬೦ ಪ್ರಯೋ). [<ಪ್ರಾ. ದೋಹ./ಸಂ. ದ್ರೋಹ]

ದೋಹ$_2$ (ನಾ). ೧. ಹಾಲು ಕರೆಯುವುದು. ೨. ಹಾಲು; ಕ್ಷೀರ. ೩. ಹಾಲು ಕರೆಯುವ ಪಾತ್ರೆ. [ಸಂ.]

ದೋಹಂಬಡೆ (ಕ್ರಿ). ವಂಚನೆಗೊಳ್ಳು ; ಮೋಸಹೋಗು : ಆಹಾ ಕಾವುದಿ ದೋಹಂಬಡದು ದೇಹದೊಳಾತ್ಮಾಧ್ಯಾಸಂದಳಿದು . . . ಆನೆಂಬೀ ಭಾವಂ ಬಲುಹಾಗಿ ಈ ತೆಱದಿಂ ಪುರುಷನುಯೆನಿಸಿರ್ಪ ವಿತತ ಪ್ರಾಕೃತಸೃಷ್ಟಿಯೊಳಿರ್ಪ್ (ಪರಗೀ. ೫-೭). [ದೋಹ್ + ಪಡೆ]

ದೋಹದ (ನಾ). ೧. ಗರ್ಭಿಣಿಯರಿಗೆ ಉಂಟಾಗುವ ವಿಶೇಷ ಬಯಕೆ : ಸನ್ನಿಹಿತಗರ್ಭದೋಹದಸಂಪಾದನದಿಂ ವಿಳಾಸವತೀಮಹಾದೇವಿಯುಂ ಪ್ರಮುದಿತೆಯಪ್ಪಂತು ನೆಗಟುತ್ತುವಿರೆ (ಕಾದಂಪು. ೪೦೬) : ಬಯಕೆಯು ಬಾಗುಳಮಾ ಕಾಂತೆಯೊಳಂತದು ನೆಗಟ್ದುದಿಲ್ಲಣಂ ತೃಷ್ಣಾರ್ತಿಕ್ಷಯಕರನಿರೆ [ತಾಂ] ಗರ್ಭಾಶಯದೊಳ್ ತೋಱುಗುಮೆ ದೋಹದಂಗಳವೊಂದುಂ (ವರ್ಧಮಾ. ೦೦-೬೨) ; ತಾನೆ ಸೀತೆ ದೋಹದದಿನಡವಿಯ ರಿವೆಣ್ಗಳಂ ಕಾಣಲ್ಕೆಂದು ಬಯಸಿದಳ್ (ರಾಮಾಶ್ವ. ೨೭-೨೩). ೨. ಗರ್ಭ ; ಬಸಿರು. ೩. ಗಿಡಲತೆಗಳು ಪುಷ್ಟಿತವಾಗುವುದಕ್ಕೆ ಸಹಾಯಂ ಮಾಡುವ ವಿದ್ಯೆ; ವೃಕ್ಷಾಯುರ್ವೇದದಲ್ಲಿ ಹೇಳಿರುವಂತೆ ಗಿಡಗಳಿಗೆ ಮಾಡುವ ಒಂದು ಬಗೆಯ ಚಿಕಿತ್ಸೆ,-ಸಂಸ್ಕಾರ : ದೋಹದವೆಂದರೆ ಮರಗಿಡಗಳಲ್ಲಿ ಅಕಾಲದಲ್ಲಿ ಫಲಪುಷ್ಪಗಳು ಉಂಟಾಗುವಂತೆ ಮಾಡುವ ಕಾರ್ಯ (ಲೋಕೋಪ. XIV ಮುನ್ನುಡಿ) : 'ರತ್ನಾವಳಿ'ಯಲ್ಲಿ ಯಕ್ಷಿಣಿ ದೋಹದ ಮುಂತಾದ ವಿದ್ಯೆಗಳಿಂದಲೂ ಗಿಣಿ ಕೋಕಿಲ ಮುಂತಾದ ಪ್ರಾಣಿಗಳಿಂದಲೂ ಕಥೆ ಕಟ್ಟಿ, ಕವಿ ತನ್ನ ಸಂವಿಧಾನಕೌಶಲವನ್ನು ಚೆನ್ನಾಗಿ ಶೋರ್ಪಡಿಸಿಕೊಂಡಿದ್ದಾನೆ (ಸಂನಾಟ. ೦೯೬). P ಕಾವ್ಯಗಳಲ್ಲಿ ಪ್ರಯೋಗವಾಗಿರುವ ಕವಿಸಮಯಗಳಲ್ಲಿ ಸುಂದರಸ್ತ್ರೀಯರು ಸ್ಪರ್ಶ ಮಾಡುವುದರಿಂದ ಪ್ರಿಯಂಗು ವೃಕ್ಷವೂ, ಮದ್ಯಪಾನಮಾಡಿ ಉಗುಳುವುದರಿಂದ ವಕುಳವೃಕ್ಷವೂ, ಕಾಲಿನಿಂದ ಒದೆಯುವುದರಿಂದ ಅಶೋಕವೃಕ್ಷವೂ, ಕಡೆಗಣ್ಣನ್ನು ಹಾಯಿಸುವುದರಿಂದ ತಿಲಕವೃಕ್ಷವೂ, ಆಲಿಂಗನ ಮಾಡುವುದರಿಂದ ಕುರವಕವೃಕ್ಷವೂ ಕೂಡಲೇ ಚಿಗುರಿ ಪುಷ್ಪಭರಿತವಾಗುತ್ತವೆ ಎಂದು ವಿವರಣೆಗಳು ಬರುತ್ತವೆ. ೪. ಬಯಕೆ ; ಇಚ್ಛೆ ; ಅಭಿಲಾಷೆ; ಮನೋರಥ.

ದೋಹದ ಮಾಡು = ಗಿಡಲತೆಗಳ ಬಯಕೆಯನ್ನು ಪೂರೈಸು ; ಗಿಡಲತೆಗಳು ಪುಷ್ಪಿಸುವುದಕ್ಕೆ ಸಹಾಯ ಮಾಡು : ರಾಜೋದ್ಯಾನದ ಅಶೋಕವೃಕ್ಷಕ್ಕೆ ದೋಹದ ಮಾಡಿ ಅದರಲ್ಲಿ ಹೂ ಬಿಡಿಸಬೇಕಾಗಿತ್ತು (ಸಂನಾಟ. ೦೩೪). [ಸಂ.]

ದೋಹದಕ್ರಿಯೆ (ನಾ). ಗಿಡಲತೆಗಳ ಬಯಕೆಯನ್ನು ಪೂರೈಸುವಿಕೆ ; ಗಿಡಲತೆಗಳು ಪುಷ್ಪಿಸುವಂತೆ ಮಾಡುವಿಕೆ. [ದೋಹದ + ಕ್ರಿಯೆ]

ದೋಹದವತಿ (ನಾ). ಬಯಕೆಯುಳ್ಳ ಗರ್ಭಿಣಿ; ಬಸಿರಾಗಿ ಬಯಕೆಗಳನ್ನುಳ್ಳವಳು : "ಶ್ರದ್ಧಾಳುಃ,-ದೋಹದವತೀ-ವಿ ಬಸುರಿಂದ ಬಯಕೆಯುಳ್ಳವಳ ಹೆಸರುಗಳು" (ಸಿದ್ಧಾಂತಿ. ೦೭೩); ಮತ್ತೆ ನೀನು ದೋಹದವತಿಯಲ್ಲವೆ ? – ಏನದು ನಿನ್ನ ಬಯಕೆ ? (ಮುಂತ್ರಕ. ೦೪೩-೯).

[ಸಂ. ದೋಹದವತೀ]

ದೋಹದವೃಕ್ಷ (ನಾ). ಹೂವು ಬಿಡಲು ಸ್ತ್ರೀಯ ಪಾದಾಘಾತ,ಆಲಿಂಗನ, ನಗು, ಉಗುಳುಂವಿಕೆ ಇತ್ಯಾದಿಗಳನ್ನು ಬಯಸುವ ಮರ,-ವೃಕ್ಷ ; P ಇವುಗಳಲ್ಲಿ ಹತ್ತು ಬಗೆಯ ಮರಗಳಿವೆ; ಒಂದೊಂದಕ್ಕೂ ಒಂದೊಂದು ದೋಹದವುಂಟು. ಸುಂದರ ಸ್ತ್ರೀಯು ಪಾದಾಘಾತವನ್ನು ಬಯಸುವುದು ಅಶೋಕ, ಉಗುಳುಂವಿಕೆಯನ್ನು ಬಯಸುವುದು ವಕುಳ,ಸ್ಪರ್ಶವನ್ನು ಬಯಸುವುದು ಚೂತ,ನಗುವನ್ನು ಬಯಸುವುದು ಸುರಹೊನ್ನೆ, ಕಣ್ಣು ಹಾಯಿಸುವಿಕೆ ಅಥವಾ ನೋಟವನ್ನು ಬಯಸುವುದು ತಿಲಕ, ಆಲಿಂಗನವನ್ನು ಬಯಸುವುದು ಕುರವಕ, ಸಂಭಾಷಣೆಯನ್ನು ಬಯಸುವುದು ಕರ್ಣಿಕಾರ, ಉಸುರಿನ ಸೋಂಕನ್ನು ಬಯಸುವುದು ಸಿಂಧುವಾರ, ಹಾಡನ್ನು ಬಯಸುವುದು ಪ್ರಿಯಾಳು, ಮುಂಖಪ್ರಸನ್ನತೆಯನ್ನು ಬಯಸುವುದು ಚಂಪಕ : ವ್ಯಾಢ್ಯರಾದ ವನಿತೆಯರೊದೆದಡೆ ಮೇಲುಗಿದೊಡೆ ಸೋಂಕಿದೊಡೆ ನಕ್ಕರೆ ನೋಡಿದೊಡೆ ಆಲಂಗಿಸಿದೊಡೆ ನುಡಿದೊಡೆ ಉಸುರು ಸೋಂಕಿದೊಡೆ ಪಾಡಿದೊಡೆ ಮುಖಪ್ರಸನ್ನತೆ ಕಂಡರೆ ಕ್ರಮದಿಂ ಕುಸುಮಿತಂಗಳಪ್ಪ ಅಶೋಕ ವಕುಳ ಚೂತ ಸುರಹೊನ್ನೆ ತಿಲಕ ಕುರವಕ ಕರ್ಣಿಕಾರ ಸಿಂಧುವಾರ ಪ್ರಿಯಾಳು ಚಂಪಕಂಗಳೆಂಬ ದಶ ದೋಹದ [ಪಾಠಾಂ. ಳ] ವೃಕ್ಷಜಾತಿಗಳುಂ (ವಿವೇಳ. ೨೨೬). [ದೋಹದ + ವೃಕ್ಷ]

ದೋಹದಶಂಸಿನಿ (ನಾ). ದೋಹದವನ್ನು ಮಾಡಲು ಬಯಸುವವಳು: ದೋಹದಶಂಸಿನಿಯು ಒದೆದರೆ ಅಶೋಕವೃಕ್ಷವು ಬಹಳ ಹೂ ಬಿಡುವುದೆಂದು ಒಂದು ಸಂಸ್ಕೃತ ಕವಿಸಮಯವಿದೆ (ಕ್ರಾಂಚರ್ಮ. ೪ ಮುನ್ನುಡಿ).

[ಸಂ. ದೋಹದಶಂಸಿನೀ]

ದೋಹನ (ನಾ). ೧. ಹಾಲು ಕರೆಯುಂವುದು,-ಹಿಂಡುವುದು : "ಕಱೆ-ದೋಹನೇ (ಹಾಲು ಕರೆ)" (ಶಮುಧಾ) ; ಯಜ್ಞಾರ್ಥದಿಂ ಪಡೆದ ಪಶುಗಳ ಕ್ರಯವಿಕ್ರಯ ದೋಹನವಾಹನಾದಿಗಳೊಳುವಯೋಗಿಗಳಾದಂದನಿಷ್ಟಫಲ ಪ್ರಾಪ್ತಿಪ್ರಸಂಗವುಕ್ಕುಂ (ಜಾವುಂಪು. ೨೯೩) : ತೊರೆಯೆಂಬುದುಂಟು ನದಿಗಳೊಳು ದೋಹನದಲ್ಲಿ ಕಱೆಯೆಂಬುದುಂಟು . . . ಕುಟಿಲತನವೆಂದೆಂಬುದದು ಸಱಿಮಿಂಡಿಯರುಗಳಳಕಂಗಳೊಳಗುಂಟು (ಸಿದ್ಧೇಪು. ೩-೦೭). ೨. ಹಾಲು ಕರೆಯುವ ಪಾತ್ರೆ. ೩. ಬಯಂಕೆಗಳನ್ನು ಈಡೇರಿಸುವಿಕೆ. ೪. [ಯೋಗ] ನಾಲಗೆಗೆ ಮಾಡುವ ಒಂದು ಸಂಸ್ಕಾರ (?) ಛೇದನ ಚಾಲನ ದೋಹನಾದಿ ಕ್ರಿಯೆಗಳಿಂ ವೆರ್ಚದ ಜಿಹ್ವೆಯಂ ಭ್ರೂ ಮಧ್ಯಸ್ಥಾನಕ್ಕೇಱಿಸಿ ಸ್ಥಿರವೃಷ್ಟಿಯಾಗಿಹುದೇ ಬಾಹ್ಯಚೇಚರಿಯೆನಿಸುವುದು (ಪರಮಾ. ೦-೯). [ಸಂ.]

ದೋಹಲ, ದೋಹಳ (ನಾ). ೧. ಇಚ್ಛೆ ; ಬಯಂಕೆ ; ಅಪೇಕ್ಷೆ : "ದೋಹಲವಿಚ್ಛೆ ಮನೋರಥವೀಹೆ ಸ್ಪೃಹೆ ಕಾಂಕ್ಷೆ . . . ಸಮಾನವಾಚಕಮಕ್ಕುಂ" (ವಸ್ತುಕೋ. ೦೧೦-೩). ೨. ಬಸಿರಾದ ಹೆಂಗಸಿನ ಬಯಕೆ,-ಅಪೇಕ್ಷೆ : "ಗರ್ಭಿಣಿಗಳವ್ವ ಕಾವಿನಿಯರ್ ಬಯಸುವ ಬಯಕೆ ದೋಹಲಂ ದೌಹೃದಮುಂ" (ವಸ್ತುಕೋ. ೫೪-೦೪). ೩. ಒಣಗಿದ ಸಗಣಿ ; ಬೆರಣಿ.ದೋಹಳ : ೧. ಕುಸುಮಾವಚಯವಿಹರಣ ಪರಿಶ್ರಾಂತಿ ವಿಷ್ಣವಪ್ಪವನಕೇಳೀದೋಹಳಸುರಕುಮಾರಪ್ರಕರಾನುಲಿಪ್ಯಮಾನಸರ್ವಾಂಗೀಣಚಂದನದ್ರವನಿವೇಶದಿಂ (ಚಂದ್ರಪು. ೦-೮೩).೨. "ದೋಹಳಂ, ದೌಹೃದಂ, ಶ್ರದ್ಧಾ, ಲಾಲಸಾ-ಈ ೪ ಬಯಕೆ" (ಹಲಾಯು. ೪೨-೩೪೪) : "ದೋಹಳಂ ದೌಹೃದಂ ಶ್ರದ್ಧೆ ಲಾಲಸೆಯೆನಲು ಬಯಕೆಗಕ್ಕು ನಾಮಂ" (ಮುಂಗರಾ. ೪೧-೭) : ಗೆಲ್ದ ಜೆಟ್ಟಿಗರೆಸೆ ಸಂದ ಮಲ್ಲರನೆ ಪೋರಿಸಲುಂ ಪರಿದೊಂದು ದೋಹಳಂ ನೆಗಟ್ದುದು ಗರ್ಭದರ್ಭಕನ ದೋರ್ಬಲಗರ್ವಮನಂದು ವೇಟ್ಪವೋಲ್ (ಆದಿಪು. ೯-೪೮) : ಆಕೆಯಂ ದೋಹಳಂ ಕರಂ ಪೆರ್ಚಿದುದು (ಪಂಪಭಾ. ೦-೦೪೨) : ನಿಮ್ಮಡಿಗಳ ವಕ್ಷಸ್ಥಳಮಂ ವಿದಾರಿಸಿ ರಕ್ತಪಾನಮಂ ಮಾಟ್ಪೆನೆಂಬ ದೋಹಳವೆನಗೆ ಪಾಪಿಷ್ಠೆಗೆ ಪುಟ್ಟರ್ದುದು (ಪುಣ್ಯಾಸ್ರ. ೩-೮೬ ವ). 'ಪುತ್ರದೋಹಳ' ಪರಾ.

[ಸಂ.]

ದೋಹಳ 'ದೋಹಲ' ನೋ.

ದೋಹಳಗೈ (ಕ್ರಿ). ಇಚ್ಛೆಯಂನ್ನು ಪಡೆ ; ಅಭಿಲಾಷೆಯನ್ನು ಹೊಂದು ; ಬಯಸು ; ಅಪೇಕ್ಷಿಪಡು : ಇಂತೊಪ್ಪುತಿಹ ನಾರಿಯರು ನಂದನದಲ್ಲಿ ಕಂತುವ ಕೂರಾಳ್ಗಳಂತೆ ಸಂತೋಷದಲಿ ದೋಹಳಗೈದು ವರಪ್ರಾಣಕಾಂತರ ಬಳಗೈದಿದರು (ಕಂನವಿ. ೫-೦೦೯).

[ದೋಹಳ (= ದೋಹಲ) + ಗೈ (< ಕೆಯ್[1])]

ದೋಹಳಸಂದೋಹ (ನಾ). ಬಯಕೆಗಳ ಸಮೂಹ : ಅಂತು ಚಕ್ರವರ್ತಿ ಜನ್ಮೋತ್ಸವಸೂಚಕಮಪ್ಪ ದೋಹಳಸಂದೋಹಂ ನೆಗೞ್ ಸುಖಪ್ರಸೂತಿ ಸಮಯದೊಳ್ (ಆದಿಪು. ೮-೩೩ಪ).

[ದೋಹಳ (= ದೋಹಲ) + ಸಂದೋಹ]

ದೋಹಾ, ದೋಹೆ (ನಾ). ಹಿಂದಿ ಭಾಷೆಯಲ್ಲಿ ಎರಡು ಸಾಲುಗಳಿರುವ ಒಂದು ಬಗೆಯ ಪದ್ಯಜಾತಿ ; ದ್ವಿಪದಿ ; P ೪ ಸಾಲುಗಳಿದ್ದರೂ ಇದನ್ನು ಎರಡು ಸಾಲುಗಳಾಗಿ ಬರೆಯುತ್ತಾರೆ. ೧ ಮತ್ತು ೩ನೇ ಚರಣಗಳಲ್ಲಿ ೧೩ ಮಾತ್ರೆಗಳೂ ೨ ಮತ್ತು ೪ರಲ್ಲಿ ೧೧ ಮಾತ್ರೆಗಳಿದ್ದು ೨ ಮತ್ತು ೪ರ ಸಾಲುಗಳಲ್ಲಿ ಅಂತ್ಯಪ್ರಾಸವಿರುತ್ತದೆ : ಮೈಸೂರಿನಲ್ಲಿ ಹರಿಕಥೆಯ ದಾಸರು ಕಬೀರನ ದೋಹಾಗಳನ್ನು ಹಾಡುತ್ತಿದ್ದುದನ್ನು ನಾನು ಕೇಳಿದ್ದೇನೆ (ರೂಢಿ). **ದೋಹೆ** : ಕಬೀರನ ದೋಹೆಗಳ ತ್ಯಾಗರಾಜನ ಕೃತಿಗಳ, ಗಗನಭೇದಕ . . . ಜೀವತಲ್ಲೀನಕ ಶಕ್ತಿಯು ರಾಗರಸವಾದ ಕನ್ನಡ ಕೀರ್ತನೆಗಳು ಕನ್ನಡ ಕಂಠದಿಂದ ಬಂದರೆ ಇವುಗಳಲ್ಲಿಯೂ ಹುಟ್ಟಲಾರದೆ ? (ವಿಜಾಮಂ. ೫). 'ದುವಯಿ' ಪರಾ.

[←ಹಿಂ. ದೋಹಾ, ದೋಹರಾ ; ಮರಾ. ದೋಹಾ, ದೋಹರಾ, ದೋಹೋರಾ]

ದೋಹಿ (ನಾ). ಕೆಟ್ಟವನು ; ದ್ರೋಹಿ : (ಕಿ).

[<ಪ್ರಾ. ದೋಹಿ./ಸಂ. ದ್ರೋಹಿನ್]

ದೋಹಿಲ್, ದೋಹಿಲು, ದೋಹಿಲೆ (ನಾ). ದೂಷಣೆ ; ಮಿಥ್ಯಾಪವಾದ ; ನಿಂದೆ : "ದೋಹಿಲ್ – ದೂಱುವುದು" (ಚತುನಿ. ಕಿ. I, ೬೮). **ದೋಹಿಲು** : ಬಯಲಿಗಿಂತಕಟ ದೋಹಿಲನಿಕ್ಕಿದಪನು ನಿರ್ದಯದಿಂದಲೀ ಮುದುಕನಿವನನೀ ಸಭೆಯ ನಿರ್ಭಯದಿ ಪೊಗಿಸಿದ ಮೂಢನಾರವಗೆ ತಕ್ಕುದಂ ಮಾಳ್ಪೆನು (ಸೌಂದಪು. ೪-೬೬). **ದೋಹಿಲೆ** : "ದೋಹಿಲೆ ಗಾರಣಮೆಂದು" (ಕವಿಕಂ. ೦೯೭). [?]

ದೋಹಿಲು 'ದೋಹಿಲ್' ನೋ.

ದೋಹಿಲೆ 'ದೋಹಿಲ್' ನೋ.

ದೋಹೆ 'ದೋಹಾ' ನೋ.

ದೋಳ 'ದೋಲ' ನೋ.

ದೋಳ್ಳು$_1$ 'ಡೋಲು' ನೋ.

ದೋಳ್ಳು$_2$ (ನಾ). (?) : ಕೊಳನ ಕರಿಯ ಕಯದೊಡಗುಡಿಯ ಕಟೆಗೌಡಾ ವೀರಗರ ವೈಯಣಾ ದೋಳಿನತಿವಿದನ ಚೀಕವರ ಕಲದಲು ಗುಡಿಗಳು ಕೆರೆಗಳು ಆದಉ (ಎಕ. XI, ಹೊಳೆಲ್ಕೆ. ೭೬-೩೪ ; ?). [?]

ದೋಳುಗೆ (ನಾ). (?) : ಬತ್ತುವ ಬಾಯ್ ವಾತಜ್ವರ ಚೇಷ್ಟೆ ನೋಯೆ ಕಿವಿ ದೋಳುಗೆಗಳ್ (ಕಲ್ಯಾಕಾ. ೩-೭). [?]

ದೋಱು 'ಡೊಂಗಱ' ನೋ.

ದೋಱುವೀಟ್ 'ಡೊಗರುಬೀಳು' ನೋ.

ದೋಱುವೋಗು 'ಡೋಱುವೋಗು' ನೋ.

ದೌಕೂಲ (ನಾ). ರೇಶಿಮೆಯ ಬಟ್ಟೆ ; ದುಕೂಲ. [ಸಂ.]

ದೌಡಾಯಿಸು (ಕ್ರಿ). ೧. ಅತಿವೇಗವಾಗಿ ಓಡುವಂತೆ ಮಾಡು ; ವೇಗವಾಗಿ ಓಡಿಸು : ಕುದುರೆಯನ್ನು ದೌಡಾಯಿಸಿಕೊಂಡು ಓಡಿದನು (ಘಾಟೀಮು. ೬೪) ; ಮಿಗಿಲಾದ ಹೆದರಿಕೆಯೊಂದು ಆ ಕುರಿಯನ್ನು ಮನುಷ್ಯರಿದ್ದೆಡೆಗೆ ದೌಡಾಯಿಸಿ ಓಡಿಸಿರಬೇಕೆಂದು ಮೂರ್ತಿ ಭಾವಿಸಿದನು (ಪಂಜಪಂ. ೨೦೦) ; ಗಾಡಿಗಳನ್ನು ದೌಡಾಯಿಸಿಕೊಂಡು ಮಧ್ಯಾಹ್ನದ ವೇಳೆಗೆ ಸಂತೆಯ ಮಾಳವನ್ನು ಸೇರಿದ್ದರು (ಸರ್ವಮಂ. ೩೪೨). ೨. ಓಡು ; ಧಾವಿಸು : ಅವಳ ಅಭಿಲಾಷೆಯು ಹುಚ್ಚುಕುದುರೆಯಾಗಿ ದೌಡಾಯಿಸಿರದೆ ಆದರ್ಶದ ಅಧೀನವಾಗಿದ್ದಿತು (ಅಂಬುಜಾ. ೨೩) ; ಎಲ್ಲರೂ ಸವಾರರಾಗಿ ಇಪ್ಪತ್ತು ಕುದುರೆಗಳನ್ನು ಬೇರೆಯಾಗಿ ಓಡಿಸಿಕೊಂಡು ದೌಡಾಯಿಸಿದರು (ಒಡಕ. ೬೮). ೩. (ಆಲಂ) ಒಂದು ಸರಣಿಯಲ್ಲಿ ಹೋಗುತ್ತಿರುವಾಗ ಆತುರದಿಂದ ಮಧ್ಯೆ ಬಿಡು,-ಹಾರಿಸು ; ಚುಟುಕುಗೊಳಿಸು : ಯಾವ ಭಾಗವನ್ನೂ ಅತಿ ಹಿಗ್ಗಲಿಸದೆ, ಕೊನೆಕೊನೆಯಲ್ಲಿ ದೌಡಾಯಿಸದೆ . . . ಈ ಗುರಿಯನ್ನು ಸಾಧಿಸಿರುವುದು ಆಕ್ಸ್‌ಫರ್ಡ್ ನಿಘಂಟುಕಾರರ ಅಪೂರ್ವವಾದ ಪ್ರಶಸ್ತಿ (ಸಮಾಲೋ. ೨೬೮).

[<ದೌಡು + – ಇಸು$_3$]

ದೌಡು, ಡವುಡು (ನಾ). ೧. ಓಡುವುದು ; ಓಟ : ಈ ಮರೆವಿನ ಭೂತ ಮೆಟ್ಟಿಕೊಂಡ ಅಕರ್ಮಣ್ಯ ದಿನಗಳಿಂದ ಒಂದೇ ದೌಡಿನಲ್ಲಿ ಓಡಿಹೋಗಿ ಬಿಡೋಣ ಎಂಬ ಇಚ್ಛೆಯಾಗುತ್ತದೆ (ನಿಬಂಧ. II, ೧೨೬). ೨. "(ಕುದುರೆ, ಮೊ.ಗಳ) ನಾಗಾಲೋಟ (ನಾಲ್ಕು ಕಾಲುಗಳೂ ಒಂದೇ ಬಾರಿ ನೆಲ ಬಿಟ್ಟು ಎಗುರುವ ಓಟ) ; ದೌಡು ; ನಾಗಾಲೋಟದ ಸವಾರಿ" (Gallop. ಇಂಕನಿ). ೩. ಆಕ್ರಮಣ ; ಧಾಳಿ ; ದಂಡಯಾತ್ರೆ : ಕ್ರಿಸ್ತೀ ಶಕದ ೧೧ನೇ ಶತಕದಲ್ಲಿ ಗಿಝನಿಯ ಮಹಮೂದನು ಹಿಂದುಸ್ತಾನದಲ್ಲಿ ದೌಡುಗಳನ್ನು ಮಾಡಿದಂದಿನಿಂದ ಉತ್ತರಹಿಂದುಸ್ತಾನದಲ್ಲಿ ಮುಸಲ್ಮಾನರು . . . ಸಿಂಹಾಸನವನ್ನು ಸ್ಥಾಪಿಸಿದರು (ಕಥಾಗೆ. ೩೩೯). ೪. (ಉಕ) ಬೇಗ ; ಜಾಗ್ರತೆ. ಡವುಡು : (ಕಿ).

ದೌಡು ಕೀಳು = ಪಲಾಯನ ಮಾಡು ; ಬೇಗದಿಂದ ಧಾವಿಸು ; ಓಡು : ಕುದುರೆಯು ಸಮೀಪ ಬರುತ್ತಿರುವುದನ್ನು ಕಂಡು ಭಯದಿಂದೇದುತ್ತ ದೌಡು ಕಿತ್ತರು (ಕೋಹಿನೂ. ೦೬). ದೌಡು ಬರು = ಅವಸರವಾಗಿ ಬರು ; ವೇಗವಾಗಿ ಬರು ; ಬೇಗ ಬರು : ಅದರಲ್ಲಿಯೂ ಕೊನೆಕೊನೆಗೆ ಸ್ವಲ್ಪ ಓಡಿ ಓಡಿಯೆ ದೌಡುಬರಬೇಕಾಯ್ತು (ಮಲೆಮ. ೮೦೧) ; ಸೀತಮ್ಮನವರು ಮುಸುರೆ ಕೈಯಲ್ಲೇ ದಡ ದಡ ದೌಡುಬಂದರು (ಪಾಳಿಗಿ. ೧೨೬). ದೌಡು ಬಿಡು = ದೌಡು ಕೀಳು : ಅವನು ಕ್ಷಣಮಾತ್ರದಲ್ಲಿಯೇ. . . ಉಸುಬಿನ ಬಯಲ ಮೇಲೆ ನಾಗಾಲೋಟದಲ್ಲಿ ದೌಡುಬಿಡುತ್ತಿದ್ದನು (ಭಾರವೀ. ೩೯). ದೌಡು ಮಾಡು = ದಂಡೆತ್ತಿ ಬರು ; ಧಾಳಿ ಮಾಡು : ಆ ತಾಲ್ಲೂಕಿನಲ್ಲಿ ದೌಡು ಮಾಡುವಂಥಾದ್ದು ನಿಲ್ಲಿಸಿ . . . ಆ ಠಾಣ್ಯದ ಮಂದಿಗೆ ಸರದಾರನಾಗಿ, ಈ ನಗರಹಳ್ಳಿ ಪುಟ್ಟೇಗೌಡನು ಇದ್ದನು (ರಾಜೇಂದ್ರ. ೫೦) ; ಗಿಝನಿಯ ವಂಶದ ತುರ್ಕರು ಹಿಂದುಸ್ತಾನದ ಮೇಲೆ ದೌಡು ಮಾಡುವವರೆಗೆ ಮುಂದೆ ೨೦೦ ವರ್ಷ ಹಿಂದುಸ್ಥಾನವು ಶಾಂತವಾಗಿದ್ದಿತು (ಹಿಂಮುಸ. ೨೨) ; ತುಗಲಖ ಮಹಮ್ಮದನು ಈ ಪ್ರಾಂತದ ಮೇಲೆ ದೌಡು ಮಾಡಿ ನಾಗನಾಯಕನನ್ನು ಹಣ್ಣು ಮಾಡಿದ್ದರಿಂದ (ಕಮಲ. ೮೨). [←ಹಿಂ. ಮರಾ. ದೌಡ್]

ದೌಡೆ 'ದವಡೆ' ನೋ.

ದೌಡೋಡು (ಕ್ರಿ). ವೇಗವಾಗಿ ಓಡು ; ಅತಿ ಶೀಘ್ರವಾಗಿ ಓಡು : ತಂದನಿನ್ನೊರ್ವಂ ದುರಂತ ವೃತ್ತಾಂತಮಂ . . . ರಕ್ಕಸರ ಪಡೆ ಕೆಟ್ಟು, ಕಂಗೆಟ್ಟು . . . ಸೇನಾನಿಗಳ ಕಳೇವರಂಗಳಂ ತುಳಿ ತುಳಿದಿರದೆ ಲಂಕೆಯ ಕಡೆಗೆ ಪೆಡಂಮೆಟ್ಟಿ ದೌಡೋಡಿ ಬರುತಿರ್ಪುದಂ ! (ಶ್ರೀರಾಮಾ. ೬೫೭-೪೦೨) ; ಇನ್ನೀ ವಂಚಿಸುವಾಟವು ಸಾಗದು ಬಿನದ ಸಾಕಣ್ಣ, ಯಾರಿಗೆ ಮೆಚ್ಚು ? ಇಂತೀ ತೆರನಾ ಸರಸದಿ ನುಡಿಯಲು ದೌಡೋಡಿತು ಮೃಗ ಬಲು ನಾಚಿದ ವೊಲು (ಸೌಂದಸ. ೩೭). [ದೌಡು + ಓಡು$_1$]

ದೌತಿ 'ದವುತಿ' ನೋ.

ದೌತಿಮಣೆ (ನಾ). ಮಸಿಕುಡಿಕೆಯನ್ನಿಡುವ ಮಣೆ : (ಒಂದು ಅಥವಾ ಹೆಚ್ಚು ದೌತಿಗಳನ್ನಿಡುವುದಕ್ಕೆ, ಸಾ., ಲೇಖನಿಯಾಸರೆ, ಮೊ.ಗಳೊಂದಿಗೆ ಇರುವ) ದೌತಿಮಣೆ (Ink Stand. ಇಂಕನಿ).

[ದೌತಿ (<ದವುತಿ) +ಮಣೆ]

ದೌತ್ಯ (ನಾ). ೧. ದೂತನಾಗಿರುವಿಕೆ ; ದೂತನ ಕೆಲಸ : "ದೂತ್ಯಂ, ದೌತ್ಯಂ – ತದ್ಭಾವಕರ್ಮಣೋಃ, ದೂತಭಾವಕ್ಕೂ ದೂತಕೃತ್ಯಕ್ಕೂ ಹೆಸರು, ದೂತನಾಗುವಿಕೆ, ದೂತನು ಮಾಡತಕ್ಕ ಕೆಲಸ" (ಸಿದ್ಧಾಂತಿ. ೨೩೯). ೨. ರಾಯಭಾರ ; ದೂತತನ : ಅವರ ದೌತ್ಯವನ್ನು ವಹಿಸಿ, ಖುದ್ದು ವೆಂಕಟುವಿನ ಸವಾರಿಯೇ ಚಂದುವಿನ ಮನೆಗೆ ಹೋಯಿತು (ಜಾರುದಾ. ೭೦). ೩. ಸಂದೇಶ ; ವಾರ್ತೆ. [ಸಂ.]

ದೌಮಾಷಾಯ 'ದಾಮಾಷೆ' ನೋ.

ದೌರಾತ್ಮ್ಯ (ನಾ). ಕೇಡಿಗತನ; ದುರುಳತನ ; ದುಷ್ಟಸ್ವಭಾವ : ಅವನು ನನ್ನ ಮೇಲೆ ಯಜಮಾನಿಕೆ ಮಾಡಬೇಕೆಂಬ ಉತ್ಸಾಹದಿಂದ ದೌರಾತ್ಮ್ಯ ನಡಸಿದ್ದರೆ . . . ಏನೋ ಒಂದು (ಪದಾರ್ಥ) ಆಗುತ್ತಿದ್ದೆ (ನಿಬಂಧ. II, ೪) ; ನನ್ನ ವ್ಯಕ್ತಿತ್ವದಲ್ಲಿ ಈ ನಾನಾ ವಿರೋಧಗಳ ವಿಷಮ ದೌರಾತ್ಮ್ಯ ಇರುವುದರಿಂದಲೇ . . . ಇಷ್ಟು ನಿರಂತರವೂ ಇಷ್ಟು ಪ್ರಬಲವೂ ಆದ ರೋದನ (ನಿಬಂಧ. II, ೧೨೫). [ಸಂ.]

ದೌರಿತಕ (ನಾ). ಧೌರಿತಕ, ಆಸ್ಕಂದಿತ, ಪ್ಲುತ, ವಲ್ಗಿತ, ಚಾರುರೇಚಿತ ಗಳೆಂಬ ಐದು ವಿಧವಾದ ಕುದುರೆಯ ಓಟಗಳಲ್ಲಿ ಒಂದು : ಕುಕ್ಕುಲೋಟ : ಮೇಲಣ ರಾವುತನ ಭಾರವನು ಸಡ್ಡೆ ಮಾಡದೆ ಇದ್ದ ಸತ್ವದಿಂದ ಹಾಱುತ ನಡೆಯಲದು ದೌರಿತಕವೆನಿಸಿಕೊಂಬುವುದು (ಅಶ್ವಟೀ. ೨೫-೦). [<ಸಂ. ಧೌರಿತಕ]

ದೌರ್ಘಟ್ಯ (ನಾ). ಕೆಟ್ಟ ಘಟನೆಯುಂಟಾಗುವಿಕೆ ; ದುರ್ಘಟನೆ ಯಾಗುವಿಕೆ : ಹೀನೋತ್ಪಾತದ ಸೂಚನಾರ್ಥಮೊ . . . ಬ್ರಹ್ಮಾಂಡ ಸೃಷ್ಟ್ಯಂತಮೋ ನಾನೋಪಾಯದೊಳೊಂದಿ ನೋಡಲಮಮಾ ದೌರ್ಘಟ್ಯ ಮಾಯ್ತಲ್ಲದೇ ನೂನಂ ಪೋಗದು (ಹಮ್ಮೀರ. ೭-೯). [ಸಂ.]

ದೌರ್ಜನ್ಯ (ನಾ). ೧. ಕೆಟ್ಟತನ ; ದುಷ್ಟತನ. ೨. ಕೆಟ್ಟತನವುಳ್ಳ ವ್ಯಕ್ತಿ ; ದುರುಳ ; ನೀಚ : ಅಮರೇಂದ್ರನಂದದಿಂ ಶರಚಾಪಗಳ ಧರಿಸಿ ದಿವ್ಯ ತೇಜೋಮಯದಿ ಮೆರೆವ ನರಪುಂಗವನ ನೋಡಿ ವಿಸ್ಮಿತರಾದರಾಗಲಾ ದೌರ್ಜನ್ಯರು (ವಂಕಾರಾ. ೩-೧೦-೧೨). [ಸಂ.]

ದೌರ್ಜನ್ಯಕಾರಿ (ನಾ). ಕೆಟ್ಟ ಕೆಲಸವನ್ನು ಮಾಡುವವನು ; ದುಷ್ಟ : ಸಜ್ಜನರು ಸಾಯಲೊಡೆ ನಿರ್ಜರರು ಮಱುಗುವರು ದೌರ್ಜನ್ಯಕಾರಿ ಸತ್ತರೆ ಹತ್ತಿದ್ದ ಕಜ್ಜಿ ಹಱಿದಂತೆ (ಸರ್ವಜ್ಞ. ೮೧೪). [ಸಂ. ದೌರ್ಜನ್ಯಕಾರಿನ್]

ದೌರ್ಜ್ಞ್ಯತಂತ್ರ (ನಾ). ಕಾರಣಾಗಮದ ಏಳು ವಿಧಗಳಲ್ಲಿ ಒಂದು : ಕಾರಣತಂತ್ರ ಪಾವನತಂತ್ರ ದೌರ್ಜ್ಞ್ಯ[ಪಾಠಾಂ. ದೌರ್ಘ್ಯ]ತಂತ್ರ ಮಹೇಂದ್ರ ತಂತ್ರ ಭೀಮತಂತ್ರ ಮಾರಣತಂತ್ರ ಈಶಾನತಂತ್ರವೆಂದು ಕಾರಣಾಗಮದ ಸಪ್ತಭೇದಂಗಳು (ವಿವೇಕ. ೭೦). [ಸಂ. ?]

ದೌರ್ಬಲ್ಯ (ನಾ). ೧. ಬಲಹೀನತೆ ; ಅಶಕ್ತತೆ ; ದುರ್ಬಲತ್ವ : ಅವನ ದೇಹದ ದೌರ್ಬಲ್ಯಕ್ಕೆ ಕೆಟ್ಟ ಚಟಗಳೇ ಕಾರಣ (ರೂಢಿ). ೨. ಚಾಪಲ್ಯ ; ಗೀಳು : ಅವರ ಅಷ್ಟೊಂದು ಸಣ್ಣ ದೌರ್ಬಲ್ಯವನ್ನು ಒತ್ತಿ ತೋರಿಸಲಿಕ್ಕೆ ಅವರಾರಿಗೂ ಮನಸ್ಸು ಬರುವುದಿಲ್ಲ (ಕಂಬಹು. ೬೧) ; ಅವರಿಗೂ ಕೆಲವು ದೌರ್ಬಲ್ಯಗಳು ಇವೆ. ಅದರಿಂದಾಗಿ ಅವರು ತುಂಬಿದ ಕಷ್ಟದಲ್ಲಿ ಬೀಳುತ್ತಾರೆ (ಕುಸುಸಂ. ೧೪೭) ; ತನ್ನ ಮೃದುಹೃದಯದೊಂದು ದೌರ್ಬಲ್ಯಮಂ ಗುಪ್ತಮಂ, ಕಳ್ದಡಗಿ ಕಾಣ್ಬನಂ ಕಾಣ್ಬ ಕಲಿಯಾತ್ಮದಮೃತಂ ಕಾಳಕೂಟಕ್ಕೆ ತಿರುಗುವೊಲ್ ಕ್ರೂರವಾಯ್ತಾ ಕರ್ಬುರೇಂದ್ರನ ಭುಗಿಲ್ ಕೋಪ ಕರ್ಕೋಟಕಂ (ಶ್ರೀರಾಮಾ. ೫೭೯-೧೨೬). [ಸಂ.]

ದೌರ್ಭಾಗ್ಯ (ನಾ). ೧. ಅದೃಷ್ಟಹೀನತೆ ; ದುರ್ದೈವ : ಮಕ್ಕಳು ಸೌಭಾಗ್ಯಗಳೂ ಆಗಬಹುದು, ದೌರ್ಭಾಗ್ಯಗಳೂ ಆಗಬಹುದು (ಶಾಂತಲಾ. ೧೯೫). ೨. ಬಡತನ ; ದಾರಿದ್ರ್ಯ : ಬಡವನ ದೌರ್ಭಾಗ್ಯವಾತನ ತುಳಿವುದು ಪಾತಾಳದಿಂದತ್ತ ತಳಕೆ (ಇಂಜಾಪ. ೧೯೭-೭೫). [ಸಂ.]

ದೌರ್ಮದ್ಯ (ನಾ). ಕುಡಿದು ಅಮಲೇರಿ ಮಾಡುವ ರಂಪ. [ಸಂ.]

ದೌರ್ಮನಸ್ಯ (ನಾ). ದುರುದ್ದೇಶವನ್ನು ಹೊಂದಿರುವ ಮನಸ್ಸಿನ ಸ್ಥಿತಿ : ದುರ್ಭೋಜನ ಮಾಡಿದವರ ದೌರ್ಮನಸ್ಯದಂತೆ ಏನೋ ದುಗುಡ ಎಲ್ಲೆಲ್ಲೂ ದುಮದುಮಗುಟ್ಟುತ್ತಿದೆ (ಮಹಾಣ. ೨೯೫). [ಸಂ.]

ದೌರ್ಹೃದ (ನಾ). ೧. ಹಗೆತನ ; ವೈರ ; ದ್ವೇಷ ; ಶತ್ರುತ್ವ. ೨. ಗರ್ಭ; ಬಸಿರು. ೩. ಗರ್ಭಿಣಿಯರಿಗೆ ಉಂಟಾಗುವ ವಿಶೇಷವಾದ ಬಯಕೆ. ೪. ಬಯಕೆ; ಅಭಿಲಾಷೆ. 'ದೋಹದ' ಪರಾ. [ಸಂ.]

ದೌಲಚ್ಛಾದ, ದೌಲತ್‌ಜಾದಾ (ನಾ). ನರ್ತಕಿಯರು ಗಣ್ಯವ್ಯಕ್ತಿಗಳಿಗೆ ಗೌರವ ಸಲ್ಲಿಸಲು ಜಯಕಾರದೊಡನೆ ಮಾಡುವ ಸಲಾಮು : ಅವಳು ಅದೇ ದಿವಸ ಗೆಜ್ಜೆಕಟ್ಟಿ ಬಂದ ಬೀಗರಿಗೆ 'ದೌಲಚ್ಛಾದ' ಮಾಡಿ . . . ನಿನ್ನ ಮಗಳು ನಿನ್ನ ಹೆಸರು ಮೀರಿಸುತ್ತಾಳೆ ಎನ್ನಿಸಿದ್ದಳು (ಹಹಸ. ೫೨) ; ಪ್ರತಿಯೊಬ್ಬರ ಮುಂದೆ ನಿಂತು ಹರಿವಾಣ ಮುಂದೆ ಹಿಡಿದು ಬಲಗೈಯಲ್ಲಿ 'ದೌಲಚ್ಛಾದ' ಎಂದು ನಮಸ್ಕರಿಸಿದ್ದಾಳೆ ಆಕೆ (ಬಣ್ಣಮಾ. ೧೩). **ದೌಲತ್‌ಜಾದಾ** : ಶೀನಮಯ್ಯನು ಹದಿನೆಂಟು ಬಾರಿ 'ಶೀನಮಯ್ಯ ಮಹಾರಾಜಕೊ ದೌಲತ್‌ಜಾದಾ' ಮಾಡಿಸಿಕೊಂಡನು (ಮರಮ. ೧೬೪). [←ಅರ. ಮರಾ. ದೌಲತ್‌ಜಾದಾ, ದೌಲತ್‌ಜ್ಯಾದಾ]

ದೌಲತ್ 'ದೌಲತ್ತು' ನೋ.

ದೌಲತ್‌ಜಾದಾ 'ದೌಲಚ್ಛಾದ' ನೋ.

ದೌಲತ್ತು, ದವಲತ್, ದವಲತ್ತು, ದೌಲತ್ (ನಾ). ೧. ಐಶ್ವರ್ಯ ; ಸಂಪತ್ತು; ಸಿರಿ: ದೊರೆಗಳವರ ಖುದ್ದು ದೌಲತ್ತು (ಮಹಾವಂ. II, ೩೮); ನಿಮಗೆ ಪ್ರಾಣ, ಮಾನ (ಮರ್ಯಾದೆ), ದೌಲತ್ತು, ಇಜ್ಜತ್ತು ಮುಂತಾದವು ಹೆಚ್ಚಾಗಲಿ (ದೇವೀಜೌ. ೮೪). ೨. ವೈಭವ ; ಆಡಂಬರ ; ಠೀವಿ ; ದೊಡ್ಡಸ್ತಿಕೆ : ಏನ್ರಿ ಅಂತಹ ದೌಲತ್ತು ಬಂದಿರೋದು ನಿಮಗೇ ? ಅಂತ ಕೇಳ್ತೀನಿ ! (ಹನ್ನೊಂದ. ೮೩). ೩. ಅಧಿಕಾರ ; ಆಳ್ವಿಕೆ ; ಒಡೆತನ ; ದೊರೆತನ ; ಪ್ರಭುತ್ವ : ದೌಲತ್ತು ಕಂಪನಿಸರ್ಕಾರದ ಸುಫರ್ದಾಯಿತು (ಕುರಾಜ. ೪೩); ಹಿಂದಿನ ಜಗದ್ಗುರುಗಳವರು . . . ಬಾಳೆಹಳ್ಳಿ ದೌಲತ್ತು ಉಜ್ಜಯಿನಿ ಸಂಪತ್ತು ಎಂಬ ನಾಣ್ನುಡಿಯನ್ನು ಸಾರ್ಥಕಗೊಳಿಸಿ ಸತ್ಕೀರ್ತಿವಂತರಾಗಿದ್ದರು (ಗುರುದ. ೧೯). **ದವಲತ್** : ೧. ದವಲತ್–ದವಲತ್ತು (ಹೊನುಗ. ೧೧೩). **ದವಲತ್ತು** : ೧. ದನಗಳೇನು ಧನವಲ್ಲ ದವಲತ್ತೂ ಅಲ್ಲ (ಅಶೋಕ. ೮೬) ; ರೂಪಾಯಿ ದವಲತ್ತಿಗೆ ಬೆಲೆಯೇ ಹೊರತು ಮನುಷ್ಯರಿಗ್ಯಾರಯ್ಯಾ ಬೆಲೆ ಕಟ್ಟುತ್ತಾರೆ (ಸಾಹೇಬ್. ೧೪೨). ೨. ಠಾಕುಟೀಕಿನ ಕಟ್ಟು ಅದಕೆ ಚಿನ್ನದ ಕಟ್ಟು ಸಾಕೊ ಅಣ್ಣಯ್ಯ ದವಲತ್ತು (ಹಳ್ಳಿಯ. ೧೨೦) ; ಶ್ರೀಮಂತಿಕೆಯ ದವಲತ್ತು ಮತ್ತು ಸಾರ್ವಭೌಮ ವಂಶದೊಡನೆಯ ಸಂಬಂಧ, ಇದರಿಂದಾಗಿ ಅವರ ಶೀಲ ಮತ್ತಷ್ಟು ಹದಗೆಡುತ್ತಿದೆ (ಪುನರು. ೬೨) ; ದವಲತ್ತೇನೆ ಬೂಬಿ ಅಂದರೆ ಶೇಕದಾರ ನನ್ನ ಅಳಿಯ ಅಂದ್ಲಂತೆ (ಗಾದೆ). ೩. ಸರಕಾರದ ಅಹಂಮದಿ ದವಲತ್ತಿಗೆ ಶ್ರೇಯಸ್ಸು ಅಪೇಕ್ಷಿಸಿಕೊಂಡು ಸುಖದಲ್ಲಿಯಿರೋದು (ಎಕ. IX, ದೊಡ್ಡಬ. ೧೩-೫ ; ಸು. 1785) ; ನಮ್ಮ ಮಗನಿಗೆ ಪೆರಿಯಾಪಟ್ಟಣದ ದವಲತ್ತಿನಲ್ಲಿ ನಿಮ್ಮ ವೊಡಂಬಡಿಕೆಯಿಂದ ಕೂರಿಸಿ (ರಾಜೇಂದ್ರ. ೩) ; ಶ್ರೀರಂಗಪಟ್ಟಣದ ಬೊಕ್ಕಸಕ್ಕೆ ಬಂದ ಹಣವನ್ನು ದವಲತ್ತಿಗೆ ಎಂದು ನಿಷ್ಕರ್ಷೆ ಮಾಡಿದರು (ಜಾಮವಂ. I, ೧೨೪) ; ಇಲ್ಲಿ ಏನಿದ್ದರೂ ಔರಂಗಜೇಬನ ಮಹತ್ವ–ಅವನ ವೈಭವ, ದವಲತ್ತು, ಅಂತಃಪುರ ಇವುಗಳ ವರ್ಣನೆ (ಬಂಕಿಮ. ೨೫೬) ; ಅವನಿಗೂ ದವಲತ್ತು, ಅಟಾಟೋಪ ಮಾಡಲಿಕ್ಕೆ ಬರುತ್ತದೆ (ಸಾಹೇಬ್. ೩೫೭). **ದೌಲತ್** : ೨. ಒಳ್ಳೆಯ ದೌಲತ್ ನಡೆಸಿದವರಂತೆ ತಮ್ಮ ಕಾಲದಲ್ಲಿ (ಮರಳಿ. ೮೯). ೩. ಏನು ಮೋಸವಾಯಿತೋ ಸುಲ್ತಾನ ದೌಲತ್ ಯಾರ ಪಾಲಿಗೆ ಸೇರಿತೋ (ನಾಪದ. ೨೫).

ದೌಲತ್ತು ಮಾಡು, ದವಲತ್ತು ಮಾಡು, ದೌಲತ್ ಮಾಡು = ಆಡಳಿತ ನಡೆಸು ; ಅಧಿಕಾರ ಚಲಾಯಿಸು : ಎಲ್ಲಾರೂ ನನ್ನ ಮೇಲೆ ದೌಲತ್ತು ಮಾಡ್ತಾರೆ (ಅನ್ನಪ. ೪೧) ; ಶ್ರೀರಂಗಪಟ್ಟಣದಲ್ಲಿ ದವಲತ್ತು ಮಾಡಿದ ನವಾಬ ಹೈದರಲ್ಲಿಖಾನಬಹದರವರ ದರಬಾರಿನ ವರ್ತಮಾನದ ವಿವರ (ಹೈದರ. ೨೯) ; ನಮ್ಮೂರಿನಲ್ಲಿ ಒಬ್ಬ ಪೈಂಟ್‌ಮನುಷ್ಯ ದೌಲತ್ ಮಾಡ್ತಾ ಇದ್ದಾನೆ (ಪುನರು. ೩೧೪).

[←ಅರ.ಪಾರ. ಹಿಂ. ದೌಲತ್ ; ಮರಾ. ದೌಲತ್, ದವಲತ್]

ದೌವಾರಪಾರಿಕ (ನಾ). (?): ಚಿತ್ರನ್ಯಸ್ತ ದೌವಾರಪಾರಿಕಾವ್ಯಾಕಾಶದಿಂದೆಲೆ ವಿಮುಕದೆ ಮರವಟ್ಟು ನಿಂದ ಮಹಾಪ್ರಾತಿಹಾರ್ಯರುಮಂ (ಕರ್ಣಪಾ. ೩-೯ ವ). [< ದ್ವಾರ]

ದೌವಾರಿಕ (ನಾ). ಬಾಗಿಲುಕಾಯುವವನು ; ದ್ವಾರಪಾಲಕ ; ಪ್ರತೀಹಾರ : "ದ್ವಾಸ್ಥಃ, ದೌವಾರಿಕಃ ... ದ್ವಾರಪಾಲಃ, ಪ್ರತೀಹಾರಃ – ಈ ೮ ಪಡಿ(ಯ)ಹಾರಂ" (ಹಲಾಯು. ೭೦-೩೭೦) ; ಮಕರ ತೋರಣಾಳಂಕೃತ ಜ್ಯೋತಿರಮರದೌವಾರಿಕಪರಿವಾಳಿತ . . . ಮಂಗಳ ನವನಿಧಿಸಮನ್ವಿತ ಜಾತರೂಪಗೋಪುರಾಭ್ಯಂತರ ಮಹಾವೀಥೀಮಧ್ಯದೊಳ್ (ಆದಿಪು. ೧೦-೩೩ ವ) ; ಪೇಚರಂ ಬಂದು ದೌವಾರಿಕನಿಪೇದಿತ ವೃತ್ತಾಂತನಾಗಿ (ಶಾಂತಿಪು. ೨-೧೮ ವ) ; ಸಮಯವಿದಸಮಯವೆಂದೆನ್ನ ದಂಶಃಪುರದ ದೌವಾರಿಕರ್ತಡೆಯದಿರಲಿದೇ ವರವೆಂದನು (ರಾಘವ. ೯-೩೦) ; ಒಳಗೆವೊಗಲೆಳಸೆ ದೌವಾರಿಕರು ತಡುಬಿದೊಡೆ [ಶಾಕಾಂ. ಸಿದರೆ ಕಾವಾಳುಗಳು ತಡುಬಿ] ಬಳಸಿ ಲಿಂಗಾಲಯವ . . . ಪ್ರದಕ್ಷಿಣ ಬಂದುದಾ ಶುನಕನು (ಗುರುಚಾ. ೭-೮೪). [ಸಂ.]

ದೌವಾರಿಕೆ (ನಾ). ಬಾಗಿಲು ಕಾಯುವವಳು; ದ್ವಾರಪಾಲಕಿ : ದೌವಾರಿಕೆ ಬಣ್ಣಿಸಿದೊಡಮಾ ವಧು ತನ್ನ್ಯಪನನುಜಿದೆ ಪೋದಳ್ ಸಿರಿಯಂ ಜೀವದ ಮತಿ ತರೆ ಪುಣ್ಯಾಭಾವದಿನದು ನೆಲಸಿ ತೊಲಗಿ ಪೋದಂತಾಗಳ್ (ಶಾಂತಿಪು. ೫-೧೩೬); ಅವತಿ ದೂರದೊಳಿರ್ದ ದೌವಾರಿಕೆಯಂ ವೈಶಂಪಾಯನ ನೊಡಗೊಂಡು ಬರ್ವುದೆಂದಂ ತದ್ವೃತ್ತಾಂತಾಕರ್ಣನ ಕೌತುಕದಿಂ ಬೆಸಸೆ (ಕಾದಂಪೂ. ೪೧). [ಸಂ. ದೌವಾರಿಕಾ]

ದೌಷ್ಟ್ಯ (ನಾ). ದುಷ್ಟತನ; ಕೆಡುಕಂ : ಚಾರುದೃಶ್ಯಂಗಳಿಂ ಪ್ರೀತಿ ಹೃದಯ ವಿಕಾಸ ಕ್ರೂರ ದೌಷ್ಟ್ಯಂಗಳಿಂ ವೀರಾನುಕಂಪ . . . ದಾರಿಯುದ್ಧಾರಣವು (ಪುಂಗುಳಿ. ೪೫೬) ; ಅತಿಥಿದೇವರಂತೆ ಪೂಜೆಯನ್ನು ಗ್ರಹಿಸಿದವನ ದೌಷ್ಟ್ಯವನ್ನು ಎಣಿಸಬಾರದು (ಪುಷ್ಪಾಣ. ೧೮) ; ಶ್ರೀರಾಮಚಂದ್ರಂ, ವಿಭೀಷಣಶ್ರೀಬುದ್ಧಿ ಕಾಂ ಮಂತ್ರಿಯಾಗಿರೆ . . . ದಾನವಕುಲದ ದೌಷ್ಟ್ಯಕೆ ದವಾಗ್ನಿ ತಾನಾಗಿ, ನಮ್ಮನುಯ್ದನ್ ದೇವಿ ಸೀತೆಯ ಪತಿವ್ರತಾಧರ್ಮ ಧವಳ ಅರಾಕ್ಷಸಾಲಯಕೆ ! (ಶ್ರೀರಾಮಾ. ೬೪-೧೫೬). [ಸಂ.]

ದೌಹಿತ್ರ (ನಾ). ಮಗಳ ಮಗ ; ಮೊಮ್ಮಗ : "ಮಗಳ ಮಗಂ ದೌಹಿತ್ರಂ" (ಪಸ್ತು.ಕೋ. ೫೫-೨೨) ; "ಮಗಳ ಸುತ ದೌಹಿತ್ರನೆಂದೆನಿಕ್ಕುಂ" (ಮಂಗರಾ. ೯೩-೦೪) ; ಕವಿಸುಮನೋಬಾಣನ ಯಾದವ ಕಟಕಾಚಾರ್ಯನೆಸವ ದೌಹಿತ್ರವೆ ನಾಂ ಕವಿ ಕೇಶವನೆಂ ಯೋಗಿಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ (ಶಿಮುದ. ೨ ಟೀ೮೪). [ಸಂ.]

ದೌಹೃದ (ನಾ). ೧. ಹಗೆತನ ; ವೈರ ; ದ್ವೇಷ ; ಶತ್ರುತ್ವ. ೨. ಗರ್ಭ ; ಬಸಿರು. ೩. ಗರ್ಭಿಣಿಯಾದ ಹೆಂಗಸಿನ ಬಯಕೆ : "ಗರ್ಭಿಣಿಯರಪ್ಪ ಕಾವಿನಿಯರ್ ಬಯಸುವ ಬಯಕೆ ದೋಹಲಂ ದೌಹೃದಮುಂ" (ಪಸ್ತು.ಕೋ. ೫೪-೦೪) ; ತತ್ಕಾಂತಿಗೆ ನೆಗಟ್ಟುವು ಗರ್ಭಸ್ಥನುತ್ಸಾಹಮಂ ತೋಳ್ವಲಮಂ ಸಾಮ್ರಾಜ್ಯಮಂ ಸೂಚಿಸುವುಮೊಲತಿ ಚೋದ್ಯಂಗಳೀ ದೌಹೃದಂಗಳ್ (ಆದಿಪು. ೮-೫೩). ೪. ಬಯಕೆ; ಅಭಿಲಾಷೆ. " ದೋಹಳಂ ದೌಹೃದಂ . . . ಬಯಕೆಗಕ್ಕು ನಾಮಂ " (ಮಂಗರಾ. ೯೦-೭). [ಸಂ.]

ದ್ಯಾಸ 'ಧ್ಯಾಸ' ನೋ.

ದ್ಯು (ನಾ). ೧. ಹಗಲು ; ದಿವಸ : "ದಿವಸಃ, ದಿವಾ, ದಿನಂ, ದ್ಯುಃ, ಅಹಃ, ವಾಸರಃ, ಘಸ್ರಃ—ಈ ೭ ಹಗಲ್" (ಹಲಾಯು. ೧೪-೧೦೬) ; "ಅಹೆ ದ್ಯು ದಿನಂ ದಿವಂ ಘಸ್ರಮಾ ದಿವಸಮೆನೆ ಹಗಲ ವೆಸರೆನಿಕ್ಕುಂ" (ಮಂಗರಾ. ೩೦-೭). ೨. ಆಕಾಶ ; ಗಗನ : "ನಭಃ . . . ದ್ಯೌಃ, ವಿಹಾಯಸಃ, ಗಗನಂ, ದ್ಯುಃ—ಈ ೧೫ ಆಕಾಶಂ" (ಹಲಾಯು. ೩೨-೧೩೬). ೩. ಕಾಂತಿ; ಪ್ರಕಾಶ. ೪. ಸ್ವರ್ಗ : ದ್ಯುವಿಂ ಪಿಂಚಿತ್ವನೆ ಸಂಕಲ್ಪಾಶ್ವದ ಮನೋರಥಂ (ಸಾನಂದ. ೧೨-೩). [ಸಂ.]

ದ್ಯುಚರ (ನಾ). ೧. ಆಕಾಶದಲ್ಲಿ ಸಂಚರಿಸುವವನು ; ಗಂಧರ್ವ ; ವಿದ್ಯಾಧರ : ಪೇಚರನಿಶಾಚರದ್ಯುಚರಸಂಚಾರಮಲ್ಲದೆ ಭೂಚರ ಗೋಚರ ಮಲ್ಲೆಂದು (ಸುಳುಮಾ. ೭-೧೫೪) ; ದ್ಯುಚರಖಚರಾವನೀಚರ ನಿಚಯಂ ನಿಚಿತಪ್ರಮೋದಭರದಿಂ ಪುರದೊಳ್...ನರ್ತಿಸುತುಮಿರ್ದುದತಿ ಕೌತುಕದಿಂ (ವರ್ಧಪು. ೧೪-೫೬). ೨. ಆಕಾಶದಲ್ಲಿ ಚರಿಸಂವಂಥದಂ ; ಗ್ರಹ. ೩. ಪಕ್ಷಿ ; ಹಕ್ಕಿ. ೪. ದೇವತೆ. [ಸಂ.]

ದ್ಯುತಿ (ನಾ). ೧. ಬೆಳಕು ; ಕಾಂತಿ ; ಪ್ರಕಾಶ ; ಪ್ರಭೆ : "ಬೆಳಗುಂ ದ್ಯುತಿಯುಂ" (ಪಸ್ತು.ಕೋ. ೧೫೯-೭೭) ; "ಕರಮುಸ್ರಮಂಶುವಸುರೋಚಿ ದೀಧಿತಿ . . . ದ್ಯುತಿ ಪ್ರ ಗ್ರ ಹ ಂ ದೀಪ್ತಿ . . . ಶೋಚಿ ಘೃಣಿಯೆ ಪ್ರದ್ಯೋತಮಾ ರಶ್ಮಿ" (ಮಂಗರಾ. ೦೧-೩) ; ತದ್ಯೋಗಿಘಣಾಮಣಿ ದ್ಯುತಿಯೆ ಕಟ್ಟಲಿಯಂ ತಲೆದೋಲಿಲೀಯದಾ ನಾಗರ ನಾಗಕನ್ನೆಯರ ರೂಪುಗಳಿಟ್ಟಳೆವಾಗೆ (ಪಂಪಭಾ ೪-೧೬) ; ಮೃಡಹಾಸದ್ಯುತಿಯಂತೆ ಕಂತು ಶರದಂತಿರ್ದಚ್ಛವೆರ್ದಿಂಗಳಂ ಕಡುದಣ್ಪಿಂಗೆಡೆಗೊಂಡಿದೊಂದು ಬಿಸಿಲೆಂದಾಶ್ಚರ್ಯದಿಂದಂ ಜನಂ ನಡೆ ನೋಡುತ್ತೆ (ಜಗವಿ. ೪-೭೪) ; ಕಗ್ಗತ್ತಲೆಯು ಕಲ್ಗಬ್ಬಮಂ ಸೀಳ್ದು ಕೋಟಿಮಿಂಚುಗಳೊಮ್ಮೆ ಮಿಂಚಿದುವೆನಲ್ಕೆ ದ್ಯುತಿ ಪೊಣ್ಮಿದುದು (ಶ್ರೀರಾಮಾ. ೦೩-೩೫). ೨. ಕದಿರಂ ; ಕಿರಣ ; ರಶ್ಮಿ : ಚೆಲ್ವಿಂದಿಟ್ಟಳವೆನಿಸಿರ್ದುವರುಣಚರಣದ್ಯುತಿಗಳ್ (ಕಾದಂಪೂ. ೪೩). ೩. ಸೌಂದರ್ಯ : ಅತುಳ ಸ್ವಚ್ಛಾಂಬುವಿಂ ವಂಜ್ಜನಕೆಱೆದು ನವೀನ ಪ್ರಸೂನಪ್ರತಾನದ್ಯುತಿ ಸುತ್ತಲ್ ಸುಪ್ತಿ (ರಕ್ಷಾಶ. ೬೪). [ಸಂ.]

ದ್ಯುತಿಗರೆ (ಕ್ರಿ). ಬೆಳಕನ್ನು ಬೀರು ; ಹೊಳಪು ನೀಡು ; ಕಾಂತಿಯನ್ನುಂಟುಮಾಡು : ದ್ಯುತಿಗರೆವ ಮಾಣಿಕಂಕಣಗಳಿಟ್ಟು (ನವಮೋ. ೨೫-೨೯).

[ದ್ಯುತಿ + ಕರೆ (<ಕಱೆ$_1$)]

ದ್ಯುತಿಗುಂದು (ಕ್ರಿ). ಕಾಂತಿಹೀನವಾಗು; ನಿಸ್ತೇಜಗೊಳ್ಳು; ವಿಂಕಾಗು: ದ್ಯುತಿಗುಂದಿದರ್ಕನು ಪಡುಗಡೆ ನೋಡಿರಿ ಮುಳುಗುತಲಿರುವನಂ ಭರದೆ (ಇಂಕಾಶ. ೧೧೧-೧೫). [ದ್ಯುತಿ + ಕುಂದು$_1$]

ದ್ಯುತಿಮಾಲಿ (ನಾ). ಕಿರಣಗಳ ಮಾಲೆಯನ್ನುಳ್ಳವನು ; ಸೂರ್ಯ : ಮಿಕ್ಕಂ ವಿಷವಹ್ನಿಯಿಂ ವಿಳಯಕಾಲಜ್ವಾಲೆಯಂ ಭೋಗರತ್ನದ ಚೆಲ್ವಿಂ ದ್ಯುತಿವಮಾಲಿಯಿಂ ಮಸಕದಿಂ ದಂಭೋಳಿಯಂ ಕಾಳಿಯಂ (ಜಗವಿ. ೬-೮೩).

[ಸಂ. ದ್ಯುತಿಮಾಲಿನ್]

ದ್ಯುತಿವೀಱು (ಕ್ರಿ). ಬೆಳಕನ್ನು ಬೀರು ; ಕಾಂತಿಯನ್ನು ಸೂಸು ; ಪ್ರಕಾಶಿಸು : ದ್ಯುತಿವೀಱುವ ಮುತ್ತಿನ ಚಳಕಿಗೆಯಂ ಯುವತಿಯ ನಳತೋಳ್ಗೆ ಕಟ್ಟಿದಳ್ (ಜಗವಿ. ೧೦-೧೦೬). [ದ್ಯುತಿ + ಬೀಱು$_1$]

ದ್ಯುತಿಸಂಶ್ಲೇಷಣ (ನಾ). [ವಿಜ್ಞಾ.] ಸಸ್ಯಗಳು ಸೂರ್ಯನ ಬೆಳಕನ್ನು ತೆಗೆದುಕೊಂಡು ಅದರ ಮೂಲಕ ತನಗೆ ಅಗತ್ಯವಾದ ಶಕ್ತಿಯನ್ನು ಉತ್ಪಾದಿಸಿಕೊಳ್ಳುವ ಕ್ರಿಯೆ ; ಬೆಳಕನ್ನು ಸಂಯೋಜಿಸುವಿಕೆ ; ಕಿರಣಸಂಯೋಜನೆ : ಆ ಶಕ್ತಿ ಸಸ್ಯಗಳು ದ್ಯುತಿಸಂಶ್ಲೇಷಣ (Photosynthesis)ದಿಂದ ತಯಾರಿಸಿದ ಆಹಾರದಲ್ಲಿ ಶೇಖರಿಸಿದ ಸೂರ್ಯಶಕ್ತಿಯಿಂದ ಒದಗುತ್ತದೆ (ಕೀಟಪ್ರ. ೫೪). [ದ್ಯುತಿ + ಸಂಶ್ಲೇಷಣ]

ದ್ಯುತಿಸಂಶ್ಲೇಷಣೆ (ನಾ). = ದ್ಯುತಿಸಂಶ್ಲೇಷಣ : ದ್ಯುತಿಸಂಶ್ಲೇಷಣೆ (ಫೋಟೊಸಿಂತೆಸಿಸ್) ಉಸಿರಾಡುವಿಕೆ, ನೀರು ಮತ್ತು ಲವಣಗಳನ್ನು ಬೇರುಗಳ ಮುಖಾಂತರ ಹೀರುವುದು, ಇತ್ಯಾದಿ ಶರೀರದ ಕ್ರಿಯೆಗಳಿಗೆ ಉಷ್ಣಾಂಶ ಆವಶ್ಯಕ (ಕವಿಕೋ. I, ೧೧). [ದ್ಯುತಿ + ಸಂಶ್ಲೇಷಣೆ]

ದ್ಯುತ್ತು (ನಾ). ೧. ಕಾಂತಿ ; ಪ್ರಕಾಶ : ಉಗಾಗಮಂ ಬಂದಲ್ಲಿ ದ್ವಿತ್ವ ಮುಂಟು. ಅಪ್, ವಿಯತ್, ಸಂಯತ್, ವಿದ್ಯುತ್, ಜಗತ್, ದ್ಯುತ್ . . . ತಟಿತ್–ಇವಾದಿಯಾದುವು ಅಬಾದ್ಯಾಕೃತಿಗಣಂ (ಶಮುದ. ೬೬ ಅಡಿಟಿ); ಅಪ್ ವಿಯತ್ . . . ದ್ಯುತ್ . . . ತಟಿತ್ ಇತಿ ಅಬಾದಿರಾಕೃತಿಗಣಃ (ಶಕ್ಟಾಸು. ೧೩೫ ಪ್ರಯೋ). ೨. ಕದಿರು ; ಕಿರಣ ; ರಶ್ಮಿ. [ಸಂ. ದ್ಯುತ್]

ದ್ಯೂನ (ನಾ). [ಜ್ಯೋತಿ] ಲಗ್ನದಿಂದ ಏಳನೆಯಂ ರಾಶಿ,–ಸಪ್ತಮಸ್ಥಾನ: ದ್ವಾದಶರಾಶಿ ರಿಃಫಮದು ಜಾಮಿತ್ರ ದ್ಯೂನ ದ್ಯೂನಮೆಂದು ವಲಂ ಸಪ್ತಮ ರಾಶಿ ಛಿದ್ರಮದು ಲಗ್ನಕೃಷ್ಣಮಸ್ಥಾನಕಂ(ಜಾತಕಿ.೦-೩೩). 'ದ್ಯೂನ'ಪರಾ. [ಸಂ.]

ದ್ಯೂನಗೃಹ (ನಾ). = ದ್ಯೂನ : ದ್ಯೂನಗೃಹವಂದು ಪುಂರಾಶಿಯಾದಂದು ಪಾವಗೃಹಮಂತಾ ರಾಶಿಯಂ ನೋಟ್ಪಿಂಡೆ ಕೃಶತನುವಕ್ಕುಂ (ಜಾತಕಿ. ೩೦-೮). [ದ್ಯೂನ + ಗೃಹ]

ದ್ಯೂನದಿ (ನಾ). ಸ್ವರ್ಗಲೋಕದ ನದಿ ; ದೇವಗಂಗೆ ; ಸುರನದಿ : ಸಜ್ಜನಾಧಾರನಿರ್ದಂ ದ್ಯೂನದೀಫೇನಪ್ರತಾನಪ್ರಥಿತಪೃಥುಯಶಂ ಭಾರತೀ ಕರ್ಣಪೂರಂ (ಪಂಪಾಮಾ. ೬-೧೭೨) ; ದ್ಯೂನದೀಸಮ್ಮೋಹದಿಂದಂ ಜಡಗೆದಜಲುಮಾವಲ್ಲಭಂ ನಾಡೆಯುಂ ಸಾರ್ವಿನೆಗಂ . . . ಮುದ್ರಿಸಿದಂದು ಜಗಮಂ ಚಾರುಚಂದ್ರಾಂಶುಜಾಲಂ (ಕಂದ್ರಪು. ೯-೪೦ ವ). [ಸಂ. ದ್ಯೂನದೀ]

ದ್ಯೂನದೀಜ (ನಾ). ಗಂಗೆಯ ವಂಗ ; ಭೀಷ್ಮ : ದ್ಯೂನದೀಜಂ ಕುಡೆ ತೋಯಮಂತ್ರಬಲದಿಂ ಪೊಕ್ಕಿರ್ದಪಂ ಕಾಲವಂಚನೆಗೆಯ್ಯಲ್ಕೊಳನಂ (ಗದಾಪ. ೬-೩೮). [ಸಂ.]

ದ್ಯೂನದೀನಂದನ (ನಾ). = ದ್ಯೂನದೀಜ : ವೆಂಪಂಬರಾಭೋಗಮಂ ದ್ಯೂನದೀನನ್ದನನಂ ವಿನೂತಚರಿತಂ ಕೀಳ್ಮಾಡೆ ಮೇಲ್ಮಾಡಿದಂ (ಎಳ. VI, ಕಡೂಕು. ೫೦-೬೦ ; 1169). [ಸಂ.]

ದ್ಯೂನದೀಶ (ನಾ). ಗಂಗೆಯಂ ಒಡೆಯಂ,–ಪತಿ ; ಶಿವ : ದ್ಯೂನದೀಶಂ ಚಿತ್ಪ್ರಕಾಶಂ ಶರಣಜನಸದಾತೋಷನಾನಂದಕೋಶಂ (ಪಂಪಾಶ. ೮೦). [ದ್ಯುನದಿ + ಈಶ]

ದ್ಯುಮಣಿ (ನಾ). ಗಗನದ ರತ್ನ ; ದಿನಮಣಿ ; ಸೂರ್ಯ : "ರವಿ ಮಾರ್ತಾಂಡಂ ... ದ್ಯುಮಣಿ ತರಣಿ ಸಪ್ತಾಶ್ವನಾದಿತ್ಯನಕ್ಕುಂ" (ವಸ್ತುಕೋ. ೦೦-೬೪) : ಧರ್ಮಾಂಭೋಜಷಂಡದ್ಯುಮಣಿ ಬುಧಜನ ಪ್ರೀಣನಾಗ್ರೇಸರ ಗ್ರಾಮಣಿಯಾದಂ (ಅಜಿಪು. ೦೨-೦೩) ; ದ್ವಿಜನಂಶಾ[ಂಭೋದ]ಮಾರ್ಗ್ಗ ದ್ಯುಮಣಿ ಸಕಳಸಾಮನ್ತ ಚ[ಕ್ರಾಧಿ]ನಾಥಂ (ಕತಿಳ. ೫೦-೪೦-೬೭ ; ಸು. 11ನಿಪು ೫೪) : ದ್ಯುಮಣಿಗೆ ಕಟ್ಟಲಿ ಶರಭಕ್ಕೆ ವ್ಯಾಗೇಂದ್ರ ಸೆಡೆವ ಮಾಟ್ಕಿಯಿಂ ಸೆಡೆದನಿವಂ ನಿಮಗೆ (ಪಂಪಾಮಾ. ೬-೧೦೯) ; ದ್ಯುಮಣಿಯೊದೆದರೆ ತರಹರಿಸುವುದು ಶಿವಿರರಾಜನ ದೇಹವೀ ವಿಕ್ರಮದರಿದ್ರರಿಗಳುಕಿದರೆ ಬಳಿಕವ ಧನಂಜಯನೆ (ಕುವಾ.ಕ್ರೋ. ೦೪-೩೨) ; ದ್ಯುಮಣಿ ಕರ್ಣದ್ಯುಮಣಿ ಸಹಿತಸ್ತಮಿಸೆ ಕಮಲಿನಿ ಕೌರವನ ಮಂಖಕಮಂಲ ಬಾಡಿತು ಶಿವಿರ ಹೆಚ್ಚಿತು ಶೋಕತಮದೊಡನೆ (ಕುವಾ.ಕ. ೨೭-೩೧) ; ದ್ಯುಮಣಿಯಲ್ಲಮ ಸಿಕ್ಕದಾದನು ತಮದ ಮಾಯೆಗೆ (ಪ್ರಕುಲೀ. ೮-೩). [ಸಂ.]

ದ್ಯುಮಣಿದ್ಯುತಿ (ನಾ). ಸೂರ್ಯನ ಬೆಳಕು : ದ್ಯುಮಣಿದ್ಯುತಿ ಕುಮುದಕ್ಕಂ ಕಮಲಕ್ಕಂ ಮಾಡುವಂತೆ ಸಂಕೋಚ ವಿಕಾಸಮನೇಕ ಸಮಯದೊಳ್ ಶತ್ರುಮಿತ್ರಮಂಡಲಕೆ ಮಾಟ್ಪುವಾತನ ತೇಜಂ (ಪುಗ್ಗಿಪು. ೩-೦೬). [ದ್ಯುಮಣಿ + ದ್ಯುತಿ]

ದ್ಯುಮಣಿಪ್ರದ್ಯೋತ (ನಾ). =ದ್ಯುಮಣಿದ್ಯುತಿ : ದ್ಯುಮಣಿಪ್ರದ್ಯೋತದಿಂ ಪದ್ಮಿನಿಗೆ ನಗೆಯುಮಾನಂದಮುಂ ಲೀಲೆಯಿಂ ಶ್ರೀಯುವಂನೂನಂ. . . ಪುಟ್ಟುವಂತೆ (ಅರ್ಧನೇ. ೪-೭೫). [ದ್ಯುಮಣಿ + ಪ್ರದ್ಯೋತ]

ದ್ಯುಮಣಿಮಂಡಲ (ನಾ). ಸೂರ್ಯನ ಬಿಂಬ ; ಭಾನುವಲಯಂ : ತಮದ ಗಂಟಲನೊಡೆದ ಹರುಷ ದ್ಯುಮಣಿಮಂಡಲದಂತೆ ಜೀವಭ್ರಮೆಯ ಕವಚವ ಕಳೆದು ಹೊಳೆಹೊಳೆವಾತ್ಮನಂದದರಿ . . . ಯುಧಿಷ್ಠಿರ ದೇವ ನೆಸೆದನು ರಾಜತೇಜದರಿ (ಕುವ್ಯಾವಿ. ೧೦-೫). [ದ್ಯುಮಣಿ + ಮಂಡಲ]

ದ್ಯುಮಣಿಮಯೂಖ (ನಾ). = ದ್ಯುಮಣಿದ್ಯುತಿ : ತಮಮಂಧಂ ದ್ಯುಮಣಿ ಮಯೂಖೋದ್ಗಮಮುಲಿವವೊಲಲಿಗೆ ಜಗದ ಮಿಥ್ಯಾತ್ವತಮಸ್ತಮನ ಅಕಳಂಕದೇವಪ್ರಮಾಣ ರತ್ನಪ್ರದೀಪರಶ್ಮಿಕಳಾಪಂ (ಆದಿಪು. ೧-೦೬). [ದ್ಯುಮಣಿ + ಮಯೂಖ]

ದ್ಯುಮುಖ (ನಾ). ಮಂಜಾವ ; ಉಷಃಕಾಲ ; ಪ್ರಭಾತ : "ದ್ಯುಮುಖಂ ವಿಭಾತ ಪ್ರತ್ಯೂಷವೆನೆರಾ ಪ್ರಭಾತವೆನೆ . . . ಪ್ರಾಕ್ ಪ್ರಾತವೆನಲು ಕಲ್ಯಮೆಂದೆನಲು ಪ್ರಾಕ್ಕಾಲಮಕ್ಕು" (ಮಂಗರಾ. ೩೦-೭). [ಸಂ.]

ದ್ಯುಮ್ನ (ನಾ). ೧. ಕಾಂತಿ; ಪ್ರಕಾಶ. ೨. ಕಸುವು; ಬಲ; ಪರಾಕ್ರಮಂ ; ಶಕ್ತಿ : "ಪ್ರಾಣಃ, ಸ್ಥಾಮ, ಬಲಂ, ದ್ಯುಮ್ನಂ, ಓಜಃ, ಊಷ್ಮಾ, ತರಃ, ಸಹಃ–ಈ ೮ ಬಲ್ಯ(ಬಲುಹು)" (ಹಲಾಯು. ೧೩೦-೩೮). ೩. ಹಣ ; ಸಂಪತ್ತು ; ಐಶ್ವರ್ಯ ; ದ್ರವ್ಯ : "ದ್ಯುಮ್ನಂ ದ್ರವ್ಯಂ ದ್ರವಿಣಂ, . . . ವಿಭವಃ–ಈ ೧೫ ಒಡಮೆಯ ಪೆಸರ್" (ಹಲಾಯು. ೧೪-೫೦) : "ಧನಮುದಾ ದ್ಯುಮ್ನಮಾ ದ್ರವ್ಯಮೆಂದೆನಲು ವಿತ್ತಮದಕ್ಕುಂ" (ಮಂಗರಾ. ೦೭-೧೬). [ಸಂ.]

ದ್ಯುಲೋಕ (ನಾ). ಸ್ವರ್ಗಲೋಕ ; ದೇವಲೋಕ : ಒಬ್ಬ ಶಿವನು ದ್ಯುಲೋಕವೇ ಪರಬ್ರಹ್ಮವಸ್ತುವೆಂದೂ, ಮತ್ತೊಬ್ಬನು ಸೂರ್ಯನೇ ಪರಬ್ರಹ್ಮನೆಂದೂ . . . ನಿರೂಪಿಸಿದರು (ಭಾತತ್ತ್ವ. ೬೦) : ಅಗ್ನಿಯು . . . ಪ್ರಜಾಪತಿಯ ಉತ್ಪತ್ತಿಸ್ಥಾನವಾದ ದ್ಯುಲೋಕದಲ್ಲಿಯೂ ಅಸ್ತಿತ್ವವನ್ನು ಹೊಂದಿದ್ದಾನೆ (ಋಕಾರ. ೪೨). [ಸಂ.]

ದ್ಯೂತ (ನಾ). ೧. ಆಟ ; ಕ್ರೀಡೆ. ೨. ಪಗಡೆಯ ಆಟ ; ಜೂಜಂ : "ದ್ಯೂತಮದಕ್ಷವತಿ" (ವಸ್ತುಕೋ. ೬೫-೭೮) ; ಕೃತಕದ್ಯೂತವಿನೋದದಿಂ ದ್ರುಪದಜಾಕೇಶಾಂಬರಾಕೃಷ್ಟಿಯಿಂ ಧೃತರಾಷ್ಟ್ರಾತ್ಮಜ ಪಾಂಡುರಾಜಸುತರ ವಂನ್ನಂ ಕೊಲಲ್ಕೊಯಿದ್ದೆ (ಗದಾಯು. ೬-೪೦) ; ದ್ಯೂತದಲಿ ಮುನ್ನೇನ ನೊಡ್ಡಿದ ಸೋತನೇನನು ಶಿವಶಿವಾ (ಕುವ್ಯಾಶ. ೧೪-೫೨) : ದ್ಯೂತಾದಿಯಿಂ ಕೆಟ್ಟ ಭೂವರರಂ ಬಣ್ಣಿಪರೇಕೆ ಮೂಢ ಕವಿಗಳ್ (ಹಮ್ಮಿರ. ೦-೨೬). ೩. ಜೂಜಿಗೆ ಒಡ್ಡುವ ಹಣ : "ದ್ಯೂತಕರಂ ದ್ಯೂತಪಣಂ ದ್ಯೂತವೆನಿಪ್ಪುವು" (ವಸ್ತುಕೋ. ೧೩೨-೮೪). [ಸಂ.]

ದ್ಯೂತಕರ (ನಾ). ೧. ಆಟಗಾರ. ೨. ಜೂಜಾಡುವವನು ; ಜೂಜುಗಾರ : "ದ್ಯೂತಕರನೆನೆ ಕಿತವನೆನೆ ಜೂಜುಕಾಱಂ" (ಮಂಗರಾ. ೭೨-೭೪). ೩. ಜೂಜಿಗೆ ಒಡ್ಡುವ ಹಣ : "ದ್ಯೂತಕರಂ ದ್ಯೂತಪಣಂ ದ್ಯೂತವೆನಿಪ್ಪುವು" (ವಸ್ತುಕೋ. ೧೩೨-೮೪). [ಸಂ.]

ದ್ಯೂತಕಾರ (ನಾ). = ದ್ಯೂತಕರ ೨ : "ಕಿತವಃ, ದ್ಯೂತಕಾರಃ–ಈ ೨ ಜೂದುಗಾಱಂ" (ಹಲಾಯು. ೭೪-೭೪೪) : ದ್ಯೂತಕಾರನ ಪತ್ನಿಯುಂ ಅವನಿಂದ ತ್ಯಜಿಸಲ್ಪಟ್ಟವಳಾಗಿ ಪರಿತಾಪ ಪಡುತ್ತಾಳೆ (ಋಕ್ಕಾರ. ೩೦೯). [ಸಂ.]

ದ್ಯೂತಕಾರಕ (ನಾ). ೧. ಜೂಜನ್ನು ಆಡಿಸುವವನು ; ಜೂಜಿನ ಮನೆಯನ್ನು ನಡೆಸುವವನು : " ದ್ಯೂತಕಾರಕನೆನಲ್ಕಾಡಿಸುವನೆನಿಕ್ಕು " (ಮಂಗರಾ. ೭೨-೭೪). ೨. ಜೂಜಾಡುವವನು. [ಸಂ.]

ದ್ಯೂತಕೃತ್ತು (ನಾ). = ದ್ಯೂತಕರ ೨ : "ಧೂರ್ತಃ, ಅಕ್ಷದೇವೀ, ಕಿತವಃ, ಅಕ್ಷಧೂರ್ತಃ, ದ್ಯೂತಕೃತ್–೫ ಜೂಜು ಆಡುವವನ ಹೆಸರು" (ಸಿದ್ಧಾಂತಿ. ೨೬೫). [ಸಂ. ದ್ಯೂತಕೃತ್]

ದ್ಯೂತಕೇಳಿ (ನಾ). ಪಗಡೆಯ ಆಟ ; ಜೂಜಿನ ಆಟ ; ಜೂಜಾಟ : ಎಲವೊ ಕಪಟದ್ಯೂತಕೇಳೀಕಲುಷಿತಾಂತಃಕರಣ ನಿನ್ನೀ ಬಲಕೆ ಪತಿ ನೀನೋ ಕೃಪಾಚಾರಿಯನೊ ಗುರುಸುತನೊ (ಕುಪ್ಯಾಗ. ೧-೨) ; ದ್ಯೂತ ಕೇಳಿಯೊಳಜ್ಞಾತವಾಸದೊಳಂದು ಧಾತುಗುಂದದೆ ಪಾಂಚಾಲಿ ಓತು ಪಾಂಡವರನೊಲಿಸಿ ಹದಿಬದೆಯರ ಬೈತಲೆವಣಿಯೆನಿಸಿದಳು (ಹದಿಬ. ೩-೪೮).

[ದ್ಯೂತ + ಕೇಳಿ$_3$ (= ಕೇಲಿ)]

ದ್ಯೂತಕೌಶಲ (ನಾ). ಪಗಡೆಯಾಟದಲ್ಲಿ ತೋರಿಸುವ ಕೌಶಲ,– ಚಾತುರ್ಯ ; ಜೂಜಾಟದಲ್ಲಿ ತೋರಿಸುವ ಜಾಣತನ : ಬಱಿ ದೊಬ್ಬಾಟವೇತಕೆ ವಿಜಯಸಿರಿ ವಾಚಾಟರಿಗೆ ಮೆಚ್ಚುವಳೆ ತೋಱಾ ದ್ಯೂತಕೌಶಲವ (ಕುಪ್ಯಾಸ. ೧೩-೪೭). [ದ್ಯೂತ + ಕೌಶಲ]

ದ್ಯೂತಪಣ (ನಾ). ಜೂಜಿನಲ್ಲಿ ಒಡ್ಡುವ ಹಣ ; ಒಡ್ಡು : "ದ್ಯೂತಕರಂ ದ್ಯೂತಪಣಂ ದ್ಯೂತಮೆನಿಪ್ಪುವು" (ವಸ್ತುಕೋ. ೧೩೨-೮೮).

[ದ್ಯೂತ + ಪಣ$_3$]

ದ್ಯೂತಲೋಲುಪ (ನಾ). ಜೂಜಿನ ಗೀಳು ಹಿಡಿದವನು ; ಪಂದ್ಯದಲ್ಲಿ ಆಸಕ್ತನಾದವನು ; ನೃಪನಗ್ಗಳದ ಧರ್ಮಜ್ಞನು ವಿಶೇಷದ್ಯೂತ ಲೋಲುಪನು (ಕುಪ್ಯಾಸ. ೧೨-೧೮). [ದ್ಯೂತ + ಲೋಲುಪ]

ದ್ಯೂತವರ್ತಿ (ನಾ). ಜೂಜಿನಲ್ಲಿ ನಿರತನಾದವನು ; ಪಂದ್ಯದಲ್ಲಿ ಅತಿ ಯಾದ ಆಸಕ್ತಿವಹಿಸುವವನು ; ಜೂಜುಗಾರ : ನೃಪರು ಕೆಟ್ಟರೆ ಮಾನ್ಯವುಂಟೇ ಶಪಥವುಂಟೇ ದ್ಯೂತವರ್ತಿಗೆ (ಕೌಶಿರಾ. ೧೯-೨೦).

[ಸಂ. ದ್ಯೂತವರ್ತಿನ್]

ದ್ಯೂತಾಳಿ (ನಾ). ಜೂಜಾಡುವವನು ; ಜೂಜುಗಾರ : ಬಾಲರಜ್ಞರಿಗೆ ಸ್ತ್ರೀಲೋಲ ದ್ಯೂತಾಳಿಗಂ ಕೇಳು ಸುರೆಮಾಂಸಭಕ್ಷಿಗೆ ವ್ಯಸನದೋಷಿಗಂ ದೀಕ್ಷೆಯಿಂದೆಮಗೆ ಶಿವ ಶಿಕ್ಷೆಗಳಹವು ಮಗನೆ (ದೀಕ್ಷಾಬೋ. ೧೫-೨೩೦). 'ಜೂದಾಳಿ' ಪರಾ. [ದ್ಯೂತ + – ಆಳಿ$_3$]

ದ್ಯೂನ (ನಾ). [ಜ್ಯೋತಿ] ಜಾತಕನ ಲಗ್ನದಿಂದ ಏಳನೆಯ ಸ್ಥಾನ. 'ದ್ಯೂನಗೇಹ', 'ದ್ಯೂನಾಲಯ' ಪರಾ. [ಸಂ.]

ದ್ಯೂನಗೇಹ (ನಾ). = ದ್ಯೂನ : ಹಿಮಧಾಮಂ ದ್ಯೂನಗೇಹೋಪಚಯ ದೊಳ್ . . . ಸೌಮ್ಯನಿಂ ಪಂಚಮ ಕೇಂದ್ರಾಯತ್ರಿರಂಧ್ರಂಗಳೊಳತಿ ಶುಭದಂ ಶೇಷದೊಳ್ ಪೊಲ್ಲನಕ್ಕುಂ (ಜಾತತಿ. ೦೦-೪).

[ದ್ಯೂನ + ಗೇಹ]

ದ್ಯೂನಪತಿ (ನಾ). [ಜ್ಯೋತಿ] ಲಗ್ನದಿಂದ ಏಳನೆಯ ಸ್ಥಾನಕ್ಕೆ ಒಡೆಯ ನಾದವನು ; ಏಳನೆಯ ಮನೆಯ ಅಧಿಪತಿ : ದ್ಯೂನಪತಿಯೆನಿಸೆ ಕುಲದಭಿಮಾನದೇವತೆಯೆನಿಸಿ ತತ್ಸೂನು ಸೌಭಾಗ್ಯನೆನಿಸುವ ನಾರಿ ದೊರಕುವಳು ಸೋಮಸುತ ನೀಚಾರಿ ಮೂಢದೊಳ್ ಕಾಮಪತಿಯಂದೆನಿಸೆ ಪಾಪಸ್ತೊಮದಲ್ಲಿರಲವನು ಕುಲನಾಶಕಾರಿಯೆನಿಸುವನು (ಕೇರಪ್ರ. ೧೦-೨೦).

[ದ್ಯೂನ + ಪತಿ$_2$]

ದ್ಯೂನಾಲಯ (ನಾ). = ದ್ಯೂನ : ದ್ಯೂನಾಲಯಗತಮೆನಿತು ಗ್ರಹಮಾ ಲೆಕ್ಕದಲೇಡು ಬೆನ್ನಲಾ ಪಶುಗಕ್ಕುಂ (ಜಾತತಿ. ೫-೫). [ದ್ಯೂನ + ಆಲಯ]

ದ್ಯೋತ (ನಾ). ೧. ಹೊಳಪು ; ಪ್ರಕಾಶ ; ಕಾಂತಿ : ಸುಟಿದುದು ಪದಚಂಚನ್ನಖದ್ಯೋತಸುವ್ಯಕ್ತಪದಂ ಮಾರ್ಣಳಜಾಳಂ ಬಳಸಿದ ಜಳದೇವೀಸಮೂಹಂಬೊಲ್ ... ಇರುಳೊಳ್ ಜಾರನಾರೀಕದಂಬಂ (ಜಗವಿ. ೪-೨೯). ೨. ಸೂರ್ಯನ ಬೆಳಕು ; ಬಿಸಿಲು : "ಪ್ರಕಾಶಃ, ದ್ಯೋತಃ, ಆತಪಃ– ೩ ಬಿಸಲಿನ ಹೆಸರುಗಳು" (ಸಿದ್ಧಾಂತಿ. ೩೩). ೩. ಶಾಖ ; ಉಷ್ಣ. ದ್ಯೋತವಾಗು=ಹೊಳೆ ; ಸ್ಫುರಿಸು : ಕವಿಯ ಆಶಯ ಈ ಪದ್ಯದಿಂದ ಚೆನ್ನಾಗಿ ದ್ಯೋತವಾಗುತ್ತದೆ (ರೂಢಿ). [ಸಂ.]

ದ್ಯೋತಕ (ಗು). ೧. ಹೊಳೆಯುವ; ಪ್ರಕಾಶಿಸುವ. (ನಾ). ೨. ಸ್ಪಷ್ಟ ವಾಗಿ ತೋರಿಸುವಂಥದು,–ತಿಳಿಸುವಂಥದು : ಕಥಾಕಾವ್ಯಗಳೂ ಆ ಕಾಲದ ಜನರ ಮನಃಪ್ರವೃತ್ತಿಯ ಎರಡನೆಯ ದ್ಯೋತಕಗಳಾಗಿದ್ದುವು (ಸಾಹಿಸ. ೦೫) ; ಭಾಷೆಯು ಸಾಮಾಜಿಕ ಸಂಬಂಧದ ದ್ಯೋತಕವಾಗಿದೆಯೇ ಹೊರತು, ಜಾನಾಂಗಿಕ ಐಕ್ಯದ ಗುರುತಾಗಲಾರದು (ಭಾಷಾಶಾ. ೩೦); ಕುಸುಮಾ–ಶೀನರ ಬಗ್ಗೆ ನರಹರಿಯ ಕನಸು ಆವನ ಚಿಂತೆಯ ದ್ಯೋತಕ ವಾಗಿದೆ (ಸಮಜೇ.೨೬ ಪೀಠಿಕೆ). [ಸಂ.]

ದ್ಯೋತನ (ಗು). ೧. ಹೊಳೆಯುವ ; ಪ್ರಕಾಶಿಸುವ ; ಬೆಳಗುವ. ೨. ವಿವರಿಸಿ ತೋರಿಸುವ ; ವಿವರಿಸುವ. (ನಾ). ೩. ಬೆಳಕು ; ಕಾಂತಿ ; ಹೊಳಪು : "ದ್ಯುತ್, ದ್ಯುತಿಃ, ದ್ಯೋತನೀಯಂ, ದ್ಯುತ್ಯಂ, ದ್ಯೌತ್ಯಂ ಈ ೬ ಬೆಳಕು" (ಕಾಶಕ್ಯ. ೧೩೦). ೪. ನೋಟ ; ದೃಶ್ಯ : "ನಿಭಾಳನಂ, ನಿಶಮನಂ, ನಿಧ್ಯಾನಂ, ಅವಲೋಕನಂ, ಲಕ್ಷಣಂ, ದರ್ಶನಂ, ದೃಷ್ಟಿಃ, ದ್ಯೋತನಂ – ಈ ೮ ನೋಟಂ" (ಹಲಾಯು. ೯೩-೪೧೨). [ಸಂ.]

ದ್ಯೋತಿ$_1$ (ನಾ). ಹೊಳಪು ; ಪ್ರಕಾಶ ; ಕಾಂತಿ : ಅಮರಧನುರ್ದ್ಯೋ ತಿಯಂ ಪಂಚರತ್ನಚ್ಛವಿಯಿಂ ಕೀಳ್ಮಾಟ್ಟ ಸಲ್ಲಕ್ಷಣಗುಣನಿಧಿಗಳ್ ಪಲ್ಲಣಂ ಗಟ್ಟಿ ಬಂದಿರ್ದುವು . . . ತುರಂಗಂ (ಪುಷ್ಪಪು. ೫-೧೦).

[ಸಂ. ದ್ಯೋತಿಸ್]

ದ್ಯೋತಿ$_2$ (ಗು). ಪ್ರಕಾಶಮಾನವಾದ ; ಹೊಳೆಯುವ : ಶ್ರೀಮನ್ನಾ ಗೇಂದ್ರಭೋಗಸ್ಫುರದರುಣಮಣಿದ್ಯೋತಿಸಂಧ್ಯಾನಿಬದ್ಧಪ್ರೇಮಂ . . . ಹೇಮಪ್ರಭಾಪ್ರಸ್ಫುರಿತ ಗಿರೀಶ ಚಂಚಜ್ಜಟಾಜಾಲಜೂಟ ವ್ಯೋಮಪ್ರೋ ಧ್ಯಾಸಿಚಂದ್ರಂ ತ್ರಿಭುವನಜನಕಾನಂದಮಂ ಮಾಡುಗೆಂದುಂ (ಕಾದಂಪೂ. ೧).

[ಸಂ. ದ್ಯೋತಿನ್]

ದ್ಯೋತಿತ (ಗು). ಹೊಳೆಯುವಂತೆ ಮಾಡಿದ; ಬೆಳಗಿಸಿದ : ಆಳ್ದನಧಿಕ ಬಲನವನಿಪತಿವ್ರಾತಮಣಿಮಕುಟಕಿರಣದ್ಯೋತಿತಪಾದಂ ಸಪಾದಲಕ್ಷ ಕ್ಷಿತಿಯಂ (ಪಂಪಭಾ. ೧-೦೬) ; ಶ್ರೀಮನ್ನಾಕಾಧಿನಾಥಾನತಮಕುಟಮಣಿ ದ್ಯೋತಿತಾಂಘ್ರದ್ವಯಂ . . . ಕುಡುಗೆಮಗಮೃತಾವಾಸಮಂ ವೀರನಾಥಂ (ಸುಕುಮಾ. ೧-೦). [ಸಂ.]

ದ್ಯೋತಿತಾತ್ಮ (ನಾ). ಪ್ರಕಾಶಗೊಂಡ ಆತ್ಮವುಳ್ಳವನು ; ತಿಳಿವು ಹೊಂದಿದ ಅಂತರಂಗವುಳ್ಳವನು : ಆದರೆ ಸೂಕ್ತಿಸಹಸ್ರಗಳಿಂದ ದ್ಯೋತಿ ತಾತ್ಮರಾದ ಮಹಾತ್ಮರ ದೋಷಗಳನ್ನು ಉದ್ಘೋಷಿಸುವುದು ವಿಮರ್ಶಕನ ದೋಷವೇ ಆಗುವುದೆಂದು ಭಾವಿಸಿ ಅವುಗಳನ್ನಿಲ್ಲಿ ಬಿಡಿಸಿ ತೋರಿಸಲಿಲ್ಲ (ಧ್ವನ್ಯಾಲೋ. ೮೭). [ಸಂ.]

ದ್ಯೋತಿರಿಂಗಣ (ನಾ). ಮಿಂಚುಹುಳು ; ದೀಪದ ಹುಳು. 'ಜ್ಯೋತಿ ರಿಂಗಣ' ಪರಾ. [ಸಂ.]

ದ್ಯೋತಿಸು (ಕ್ರಿ). ೧. ಪ್ರಕಟವಾಗು ; ಕಾಣು ; ತೋರು : ಶೀತಕರ ತೋಯಂ ದ್ಯೋತಿಸಿರೆ ನೀಲಾಬ್ಜಾಯತನಯನೇ ಕೇಳೋತು ಶಶಿಕಾಂತಂ (ಧಂದೋಂಬು. ೨-೭೬). ೨. ಕಾಣಿಸು ; ತೋರಿಸು; ಪ್ರಕಾಶಗೊಳಿಸು; ಪ್ರಕಟಪಡಿಸು: ಮಹಾಪುಂಡರೀಕಮೆಂಬುದು ಕಾಲಾಪೇಕ್ಷೆಯಿಂ ವಜ್ರಧರ ಹಲಧರ ಚಕ್ರಧರಾದಿಗಳ ಉತ್ಪತ್ತಿ ಕಾರಣಮಂ ಅನುಷ್ಠಾನಮಂ ದ್ಯೋತಿ ಸುಗುಂ (ತತ್ತ್ವಪ್ರ. ೬೬). [ದ್ಯೋತನ + – ಇಸು$_3$]

ದ್ಯೋಧುನಿ (ನಾ). ದೇವನದಿ ; ಗಂಗೆ. [ಸಂ. ದ್ಯೋಧುನೀ]

ದ್ರಂಗ (ನಾ). ಪುರ ; ಪಟ್ಟಣ ; ನಗರ : 'ದ್ರಂಗ' ಶಬ್ದಕ್ಕೆ ಹೇಮಚಂದ್ರಾ ಚಾರ್ಯನು ಪುರಿ, ನಗರ ಎಂಬರ್ಥವನ್ನು ಹೇಳಿದ್ದಾನೆ (ಶಬ್ದವಿ. ೬೬). 'ಡಂಗ' ಪರಾ. [ಸಂ.]

ದ್ರಜ (ನಾ). (?) : ಸಾರಂಗದ ತಿದಿಯಲ್ಲಿ ದೋರೋ (ದಾರೂ ?) ದ್ರಜವ ತುಂಬಿದರು ಮೇರುಮಂದಿರದ ಮೇಲೆ ಮನೆಯ ಮಾಡಿದರು ಆರೋ ! ತಿದಿಯ ಹಱಿವೆ ಮನೆಯ ಸುಡುವೆ ನಿಲುವೆ ಹೊಸಪರಿಯಱಿಯಾ ಎನ್ನ ಪರಿಯ (ಸರ್ವಜ. ೨೯-೧೩೮). [?]

ದ್ರಢಿಮ (ನಾ). ಬಲವಾಗಿರುವಿಕೆ ; ಬಿಗುಹಂ ; ದೃಢತೆ : "ಯಂದೃಚ್ಛೆ ದಾರ್ಢ್ಯಂ ದ್ರಢಿಮಂ" (ವಸ್ತುಕೋ. ೧೧೫-೨೭). [ಸಂ. ದ್ರಢಿಮನ್]

ದ್ರಪ್ಸ (ಗು). ೧. ಹನಿಹನಿಯಾಗಿ ಬೀಳುವ ; ತೊಟ್ಟುತೊಟ್ಟಾಗಿ ಹನಿಯುವ. (ನಾ). ೨. ತೊಟ್ಟು ; ಹನಿ. ೩. ನೀರು ಬೆರಸಿದ ಮೊಸರು : "ದಧಿ ಘನೇತರಂ ತಾಂ ದ್ರಪ್ಸಂ" (ವಸ್ತುಕೋ. ೯೨-೩).

[ಸಂ.]

ದ್ರಬ್ಯ (ನಾ). ಹಣ ; ಧನ : ಬೆನಕಗಉಡನ ಕಯ್ಯಲು ತತ್ಕಾಲೋಚಿತ ಕ್ರಯ ದ್ರಬ್ಯವನು ಕ್ರಯಲಕ್ಷಣಲಕ್ಷಿತವಾಗಿ ಸಾಕಲ್ಯೇನ ಹಸ್ತಸ್ಥವಾಗಿ ಕೊಟ್ಟು (ಎಕ. XI, ಚಿತ್ರದು. ೧೨-೧೮ ; 1286). [<ಸಂ. ದ್ರವ್ಯ]

ದ್ರಬ್ಯನಿವೇದನಂಗೆಯ್ (ಕ್ರಿ). ಹಣವನ್ನು ಅರ್ಪಿಸು ; ಧನವನ್ನು ಸಮರ್ಪಿಸು : ನಗರ ಮಹಾಜನಂಗಳ್ಗಂ ಧರ್ಮಾರ್ತ್ಥರ ಪ್ರಾರ್ತ್ಥಿಸಿ ದ್ರಬ್ಯನಿವೇದನಂ [ಗೆ]ಯ್ದು (ಸೌಇಇ. XX, ೭೪-೩೧; 1112).

[ದ್ರಬ್ಯ + ನಿವೇದನ + ಕೆಯ್$_1$]

ದ್ರಮಿಳ 'ದ್ರಮಿಟ' ನೋ.

ದ್ರಮಿಟ, ದ್ರಮಿಳ, ದ್ರವಿಳ, ದ್ರವಿಟ (ನಾ). ೧. ಭಾರತದ ದಕ್ಷಿಣ ಪ್ರದೇಶದ ಪೂರ್ವ ತೀರದ ಪ್ರದೇಶ ; ದ್ರಾವಿಡದೇಶ ; ತಮಿಳು ನಾಡು : ವಂಗಾಙ್ಗ ಕಳಿಙ್ಗ ವತ್ತೂರ ಮಗಧ ಮದ್ರಕ ಕೇರಳ ಗಙ್ಗ ಮೂಷಕಪಾಣ್ಡ್ಯ ದ್ರಮಿಟ ಚೋಟಿಯಾಳುಕ ವೈಜಯಂತ್ಯ ಪ್ರಭುತಿರನೇಕ ಪರನ್ರಿಪತಿ ಸಮೂಹಾವಮರ್ದ್ದ ಲಬ್ಧ ವಿಜಯೇ (ಇಅ. XIX, ೦೭-೭ ; ಸು. 602). ದ್ರಮಿಳ : ೨. ದಕ್ಷಿಣದೇಶಕ್ಕೆ ಸಂಬಂಧಿಸಿದ ಜೈನಮುನಿ ಗಣಗಳಲ್ಲಿ ಒಂದು : ಗಣಗಳು: ದೇವ, ಸೇನ . . . ದ್ರಮಿಳ, ಪುನ್ನಾಗ ವೃಕ್ಷಮೂಲ (ಕಶಾಅ. ೮೬). ದ್ರವಿಳ : ೧. ದ್ರವಿಳಾನ್ಧ್ರ ಮಾಳವ ತುರುಷ್ಕಾದಿ ಪ್ರಸಿದ್ಧಾವನೀಶ್ವರರಂ ಸಾಧಿಸಿದಂ ಭುಜಾಸಿಬಳದಿಂ ಚಾಳುಕ್ಯ ಚಕ್ರೇಶ್ವರಂ (ಎಕ. XI, ದಾವಡ. ೩-೧೦ ; 1121). ದ್ರವಿಟ : ಇವರ್ಗಳೆಲ್ಲರುಮನಾಚಾರ್ಯರ್ ಮಾಡಿ ದ್ರವಿಟ [ಪಾಕಾಂ. ಡ. ೪] ವಿಷಯಕ್ಕೆ ಪೋಗಿಮೆಂದು ವಿಶಾಖಾಚಾರ್ಯರೊಡನೆ ಎಣ್ಪಾಸಿರ್ವರ್ ರಿಸಿಯರನಟ್ಟಿದರ್ (ವಡ್ಡಾರಾ. ೮೮-೨೨) ; ಕೌಶಿಕಾಂಧ್ರ ದ್ರವಿಳ[ಟ] ಗಜಮುಖಾಶ್ವಮುಖೋಷ್ಟ್ರಮುಖ ಖರಮುಖ . . . ತುರುಷ್ಕ ಪ್ರವರ ನಾನಾದ್ವೀಪ ದೇಶಾಧೀಶ್ವರರುಂ (ಪಂಪಧಾ. ೯-೯೫ ಪ).

[<ತಮಿಟ್./ಪ್ರಾ. ದಮಿಲ./ಸಂ. ದ್ರವಿಡ]

ದ್ರಮ್ಮ, ದಮ್ಮ$_2$ (ನಾ). ಚಿನ್ನದ ಒಂದು ಬಗೆಯ ನಾಣ್ಯ ; ಹದಿನಾರು ಪಣ ; ನಿಷ್ಕದ ಹದಿನಾರನೆಯ ಒಂದು ಭಾಗ : ದೀವಳಿಗೆಯ ಪರ್ವದನ್ದು ಕರಣಕ್ಕೆ ಇಪ್ಪತ್ತುನಾಲ್ಕು ದ್ರಮ್ಮ ತಳಾರರಿಗೆ ಇಪ್ಪತುನಾಲ್ಕು ದ್ರಮ್ಮ (ಹೈಅರಿ. VI, ೧೯೩೩-೩೪, ೧-೦೦ ; 872) ; ವರಿಸಕ್ಕೆ ಲೋಹ ದ್ರಮ್ಮಗಟ್ಟಳೆ ಪದಿನೈಯ್ದು ಪಣಮುಂ ಪನ್ನಿರ್ಕುಳೆ ಮೀರಿಯುಂ ಒರ್ಕುಳ ತುಪ್ಪಮುನ್ದಿಟುವೋನ್ (ಎಕ. III, ಮುಂಡ್ಯ. ೦೪-೧೧ ; 907) ; ವಿಪ್ರರ ವಿವಾಹಮುಮಾಗಪ್ಪನಿತಱೊಳೆಲ್ಲಮೊಸಗೆ ದ್ರಮ್ಮಮ್ಮೂಱಂ ತಪ್ಪಾ[ದೆ] ಮಾಣಿಯೊಳೆರಡಂ ಕೆಪ್ಪಿದರ್ (ಕಇ. II, ೪-೭ ; 918) ; ಸಿದ್ಧಾಯಮೆಲ್ಲಮ್ ದೇವರ್ಗ್ಗೆ ಬರಿಸಕ್ಕೆ ಅರಸರ್ಗ್ಗೆ ನಿಬದ್ಧಂ ಮೂವತ್ತು ಕರಿಯ ದ್ರಮ್ಮ(ಮ್ಮ)ಮಂ ಗೊರ ವರ್ತ್ತಿಱುವರ್ (ಇಅ. XII, ೨೫೭-೧೦ ; 951) ; ಎಲೆಯ ಸುಂಕಮಾವಟೆಗೆ ಕಟ್ಟು ೨ ಬಿಳಿಯೆಲೆಯ ಪೇಱಿಂಗೆ ೫ ಪೆರ್ಜುಂಕಕ್ಕೆ ದ್ರಮ್ಮ೧ (ನಾಂದೇಡ್. ೩-೨೨ ; 1047) : ಅಲ್ಲಿ ಪೂರ್ವ್ವಮರ್ಯ್ಯಾದೆಯಾಜ್ಞಾಲಂಘನಕ್ಕೆ ದಣ್ಡಂ ಕರಿಯ ದ್ರ × × ಮಯ್ವತ್ತೆರಡು ಪಿಡಿದಂಗೆ ದ್ರಮ್ಮ ಪನ್ನೆರಡು (ಹೈಅಸಿ. ೭-೧೧೦ ; 1056) ; ಕವಡೆಗಳಿಪ್ಪತ್ತಾಗಲು ಪವಣಿಸೆ ಕಾಕಿಣಿಯು ನಾಲ್ಕು ಪಣ ಪದಿನಾಱು ಭುವನದಿ ದ್ರಮ್ಮಗಳಿನಿತಂ ಸವನಿಸಿ ಪದಿನಾಱೊಳದುವೆ ನಿಷ್ಕವೆಂ [ಮೆಂ] ದಕ್ಕುಂ (ಭಾಸ್ಕರ. ೭೬-೪) ; ನಾಣ್ಯಗಳ ಕೋಷ್ಟಕ: ೨೦ ವರಾಟಕ=೧ ಕಾಕಿನಿ, ೪ ಕಾಕಿನಿ=೧ ಪಣ . . . ೧೬ ಪಣ = ೧ ದ್ರಮ್ಮ, ೧೬ ದ್ರಮ್ಮ=೧ ನಿಷ್ಕ (ಗಣಿಕ. ೨೮೨ ಅಡಿಟಿ). ದಮ್ಮ$_2$: ಕೆಯ್ಗೆ ಪನ್ನೆರಡುಂ ವರಿಸ ಪರಿಯಾರಯಿರ್ಮ್ಮತ್ತ[ರ್ಗ್ಗೆ]ಒನ್ದು ದಮ್ಮ (ಸೌಇಇ. IX-1, ೧೨-೨೨; ೮೬೭); ಅಯ್ಯಾ ಎನಗುಡಲಿಲ್ಲೇನುಮೊಂದು ದಮ್ಮಕ್ಕಾದೊಡಂ ಸೀರೆಯಂ ಕೊಂಡೀಯಿಮೆಂದೊಡೆ (ವಡ್ಡಾರಾ. ೭೭-೧೧); ಎಂಟು ದಮ್ಮದ ಪುಳ್ಳಿಯಂ ತಂದು (ವಡ್ಡಾರಾ. ೭೭-೨೦). 'ಕಳ್ಳದಮ್ಮ' ಪರಾ.

[←ಗ್ರೀಕ್. Drachme./<ಪ್ರಾ. ದಮ್ಮ./ಸಂ. ದ್ರಮ್ಮ]

ದ್ರವ (ಗು). ೧. ಓಡುವ. ೨. ಒಸರುವ ; ಜಿನುಗುವ. ೩. ಹರಿಯುವ ಸ್ವಭಾವದ ; ಪ್ರವಹಿಸುವ. (ನಾ). ೪. ಪಲಾಯನ ; ಓಟ : "ಪ್ರದ್ರಾವಃ, ಉದ್ರಾವಃ, ಸಂದಾವಃ, ವಿದ್ರವಃ, ದ್ರವಃ, ಅಪಕ್ರಮಃ, ಅಪಯಾನಂ-೮ ಪಲಾಯನವಾಗುವದಕ್ಕೆ ಹೆಸರು. ತಪ್ಪಿಸಿಕೊಂಡು ಓಡಿ ಹೋಗುವಿಕೆ" (ಸಿದ್ಧಾಂತಿ. ೨೭೦). ೫. ಹರಿಯುವಂತಹ ವಸ್ತು ; ನೀರು, ರಸ ಮೊದಲಾದುಂದು : "ರಸಂ ತಾಂ ದ್ರವಂ" (ವಸ್ತುಕೋ. ೧೨೨-೨೫) ; ಪವಣಱಿದು ಮಧುವುಮಂ ಹಿಕ್ಕವತ್ತಿಗೆಯ ಬೇರ ರಸಮುಂ ಶಶಿಯಮನೊಂದುವಿನಂ ತೊಡೆದೊಡೆ ಪುಷ್ಪಂ ದ್ರವಮಂ ಮಾಟ್ಕುಂ (ಲೋಕೋಪ. ೭-೪೭) ; ಯಾವತ್ತು ಸೃಷ್ಟ ಪದಾರ್ಥಗಳಿಗೆ ಭಾರವಿರುತ್ತದೆ. ಅವು ಘನ, ದ್ರವ, ಬಾಷ್ಪ ಅಂದರೆ ಅಪ್ರವಾಹಿ, ಪ್ರವಾಹಿ ವಾಯುರೂಪ ಎಂಬ ಮೂರು ರೂಪಗಳಿಂದ ಈ ಸೃಷ್ಟಿಯಲ್ಲಿ ವರ್ತಿಸುತ್ತವೆ (ಮುಂಬಯಿ. ೫-೩೩); ಕಂಡರೆ ಕರ್ರಗಿನ ದ್ರವದಂತೆ ಕಾಣಿಸುತ್ತಿತ್ತು (ದೀಪದ. ೨೫). ೬. ಆಟ; ಕ್ರೀಡೆ ; ಲೀಲೆ: "ದ್ರವಃ, ಕೇಳಿಃ, ಪರೀಹಾಸಃ, ಕ್ರೀಡಾ, ಲೀಲಾ, ನರ್ಮ-೬ ಸ್ತ್ರೀಪುರುಷರ ಪರಿಹಾಸಕ್ಕೆ ಹೆಸರುಗಳು. ಅಂದರೆ ಹೆಣ್ಣುಗಂಡು ಸೇರಿ ಸೊಗಸಿನಿಂದಾಡುವಿಕೆ" (ಸಿದ್ಧಾಂತಿ. ೬೦). 'ದ್ರವಿಸು' ಪರಾ. ೭. ತೇವ ; ಹಸಿ ; ಆರ್ದ್ರತೆ. ೮. ಕರಗುವಿಕೆ. ೯. ಕಷಾಯ ; ಅರ್ಕ. [ಸಂ.]

ದ್ರವಂತಿ (ನಾ). ೧. ನದಿ ; ಹೊಳೆ : ದಿವ್ಯದ್ರವಂತಿಗಳ್ ಕೂಡುವ ಮಹದ್ ಧ್ವನಿಯ ಜೋಗುಳವನಾಲಿಸುತೆ ನಿದ್ರಿಸಿದರಿನವಂಶಜರ್ (ಶ್ರೀರಾಮಾ. ೧೩೭-೩೩೨). ೨. ಇಲಿ ಯಾಲದಗಿಡ: "ನ್ಯಗ್ರೋಧೀ – ಅಲ, ಇಲಿವಾಲ, ದ್ರವಂತಿ" (ಓಷಧಿ. ೮೫). [ಸಂ. ದ್ರವಂತೀ]

ದ್ರವಗಲ್ಲು (ನಾ). ಚಂದ್ರನ ಕಿರಣಗಳ ಸ್ಪರ್ಶದಿಂದ ನೀರನ್ನು ಒಸರುವ ಕಲ್ಲು ; ಚಂದ್ರಕಾಂತ ಶಿಲೆ : ದ್ರವಗಲ್ಲ ಸೋಪಾನದ ಸರೋವರ ಕೇಶವನ ಕಣ್ಮನಕೆ ರಂಜಿಸಿತು (ಮೋಹತ. ೪-೫೫). [ದ್ರವ + ಕಲ್ಲು (<ಕಲ್$_3$)]

ದ್ರವಗಾಳಿ (ನಾ). = ದ್ರವವಾಯು : ರಾಸಾಯನಿಕಗಳನ್ನು (Chemicals) ಶುದ್ಧೀಕರಿಸುವುದಕ್ಕೂ ಶಕ್ತಿಯ ಉತ್ಪಾದನೆಗೂ . . . ದ್ರವಗಾಳಿಯನ್ನು (Liquid Air) ಬಳಸುತ್ತಾರೆ (ಶಿಲ್ಪನಾ. ೨೦೧). [ದ್ರವ + ಗಾಳಿ$_1$]

ದ್ರವಗೊಳಿಸು (ಕ್ರಿ). ನೀರಾಗುವಂತೆ ಮಾಡು ; ಕರಗುವಂತೆ ಮಾಡು.

[ದ್ರವ + ಕೊಳ್$_1$ + – ಇಸು$_3$]

ದ್ರವಣ (ನಾ). ೧. ಓಡುವಿಕೆ ; ಓಟ. ೨. ಒಸರುವಿಕೆ ; ಜಿನುಗುವಿಕೆ ; ಸ್ರವಿಸುವಿಕೆ : "ದ್ರವಣಂ, ದ್ರಾವಣಂ, ದ್ರುವಂ, ದ್ರೋತವ್ಯಂ . . . ದ್ರವ್ಯಂ – ಈ ೭ ನೀರ ಜಲ್ಲಿ" (ಕಾಶಕ್ಕ. ೭೬). ೩. ಪ್ರವಹಿಸುವಿಕೆ ; ಹರಿಯುವಿಕೆ. [ಸಂ.]

ದ್ರವತ್ರಪು (ನಾ). ೧. ಕರಗಿಸಿದ ಸೀಸ ಅಥವಾ ತವರ. ೨. ಕರಗಿಸಿದ ಸೀಸ ಅಥವಾ ತವರವನ್ನು ಮೈಮೇಲೆ ಸುರಿದು ಹಿಂಸಿಸುವ ನರಕ:

ಮತ್ತಂ ಕೃತು, ಪೂತಿಮಾಂಸ, ತಪ್ತ ಜತುಲೇಪ. ದ್ರವತ್ರವು, ಉಚ್ಛ್ವಾಸ ವೆಂಬೈದು ಮಂತ್ರಿನರಕಂಗಳಂ ಕೂಡಿ (ವಿವೇಕ. ೦೪೦). [ದ್ರವ + ತ್ರಪು]

ದ್ರವತ್ವ (ನಾ). ೧. ಕರಗುವ ಸ್ವಭಾವ.–ಗುಣ. ೨. [ದ್ವೈತ] ನಲವತ್ತು ಬಗೆಯ ಗುಣಗಳಲ್ಲಿ ಒಂದು : P ರೂಪ, ರಸ, ಗಂಧ, ಸ್ಪರ್ಶ, ಸಂಖ್ಯಾ, ಪರಿಮಾಣ, ಸಂಯೋಗ, ವಿಭಾಗ, ಪರತ್ವ, ಅಪರತ್ವ, ಗುರುತ್ವ, ದ್ರವತ್ವ, ಲಘುತ್ವ, ಮೃದುತ್ವ, ಕಠಿನತ್ವ, ಸ್ನೇಹ, ಶಬ್ದ, ಬುದ್ಧಿ, ಸುಖ, ದುಃಖ, ಇಚ್ಛಾ, ದ್ವೇಷ, ಪ್ರಯತ್ನ, ಧರ್ಮ, ಅಧರ್ಮ, ಸಂಸ್ಕಾರ, ಆಲೋಕ, ಶಮ, ದಮ, ದಯೆ, ತಿತಿಕ್ಷೆ, ಭಯ, ಬಲ, ಲಜ್ಜೆ, ಗಾಂಭೀರ್ಯ, ಸೌಂದರ್ಯ, ಔದಾರ್ಯ, ಸ್ಥೈರ್ಯ, ಶೌರ್ಯ, ಸೌಭಾಗ್ಯಗಳೆಂಬವು ನಲವತ್ತು ಬಗೆಯ ಗುಣಗಳು : ರೂಪ . . . ದ್ರವತ್ವ . . . ಸೌಭಾಗ್ಯವೆಂದು, ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಹಿಂದಸಾ. ೨೭೩). [ಸಂ.]

ದ್ರವಪಾವುಡ (ನಾ). [ವೀಶೈ] ಲಿಂಗಕ್ಕೆ ಅಭಿಷೇಕ ಮಾಡಿ, ಒರೆಸಲು ಉಪಯೋಗಿಸುವ ಬಟ್ಟೆ ; ಉದಕಪಾವುಡ.

[ದ್ರವ + ಪಾವುಡ$_1$ (<ಪಾವಡ$_1$)]

ದ್ರವರೂಪ (ನಾ). ಘನರೂಪವೂ ವಾಯುರೂಪವೂ ಅಲ್ಲದ, ನೀರನ್ನು ಅಥವಾ ಎಣ್ಣೆಯನ್ನು ಹೋಲುವ ಆಕೃತಿ : ಒಳವಲಯದಲ್ಲಿ ತರತರ ಯಾಗಿರುವ ದ್ರವರೂಪದ ವಸ್ತುವಿರುತ್ತದೆ (ಪ್ರಾಥಶಾ. ೪೪) ; ಒಂದು ಗ್ರಾಮ್ ತೂಕವುಳ್ಳ ಘನಪದಾರ್ಥವು ಬಿಸಿಯ ಮಟ್ಟದಲ್ಲಿ ವ್ಯತ್ಯಾಸ ಹೊಂದದೆ ದ್ರವರೂಪಕ್ಕೆ ತಿರುಗುವುದಕ್ಕೆ ಬೇಕಾಗುವ ಉಷ್ಣಕ್ಕೆ ದ್ರವ ಗುಪ್ತೋಷ್ಣವೆಂದೂ . . . ಹೆಸರು (ಭಾತವಿ. ೨೪೦).

[ದ್ರವ + ರೂಪ]

ದ್ರವವಸ್ತು (ನಾ). ಹರಿಯುವಂಥ ವಸ್ತು ; ದ್ರವರೂಪದ ಪದಾರ್ಥ: ಒಂದು ಗ್ರಾಮ್ ದ್ರವವಸ್ತುವು ಆವಿಯಾಗಲು ಬೇಕಾಗುವ ಉಷ್ಣಕ್ಕೆ ಬಾಷ್ಪಗುಪ್ತೋಷ್ಣವೆಂದೂ (Latent heat of vaporisation) ಹೆಸರು (ಭಾತವಿ. ೨೪೦). [ದ್ರವ + ವಸ್ತು]

ದ್ರವವಸ್ತ್ರ (ನಾ). = ದ್ರವಪಾವುಡ. [ದ್ರವ + ವಸ್ತ್ರ]

ದ್ರವವಾಯು (ನಾ). ನೀರಿನ ರೂಪಕ್ಕೆ ತಂದ ಅನಿಲ, – ಗಾಳಿ : "ಅತ್ಯಧಿಕ ಒತ್ತಡದಿಂದಲೂ ಶೈತ್ಯದಿಂದಲೂ ದ್ರವರೂಪಕ್ಕೆ ತಿರುಗಿಸಿದ ವಾಯು : ದ್ರವವಾಯು" (Liquid-air. ಇಂಳಿನಿ) ; ಕೆಲವು ವರ್ಷಗಳ ಹಿಂದೆ ದ್ರವವಾಯುವಿನಿಂದ ಒಂದು ಮೋಟಾರು ಕಾರನ್ನು ನಡೆಸಿದರು (ಶಿಲ್ಪನಾ. ೨೦೦). [ದ್ರವ + ವಾಯು]

ದ್ರವಸೇಚಕ (ನಾ). ನೀರನ್ನು ಹಾಯಿಸುವ ಸಾಧನ : "ನೀರನ್ನು ಹಾಯಿಸುವವನು (ವದು) ದ್ರವಸೇಚಕ ; ದ್ರವ ಹಾಯಿಸುವ ಸಲಕರಣೆ" (Irrigator. ಇಂಳಿನಿ). [ದ್ರವ + ಸೇಚಕ]

ದ್ರವಾಗ್ನಿ (ನಾ). ೧. ಯುದ್ಧದಲ್ಲಿ ಉರಿಯೆರಚುವ ಯಂತ್ರದಿಂದ ಶತ್ರುಗಳ ಮೇಲೆ ಚೆಲ್ಲುವ ಒಂದು ಬಗೆಯ ಉರಿಯುವ ದ್ರವ : (Liquid-fire. ಇಂಳಿನಿ). ೨. ಹರಳುಗಳಲ್ಲಿ ಇರುವ ಹೊಳಪಿನ ರೇಖೆ : ವಜ್ರದ ಹರಳೊಳಡಕವಾಗಿರುವ ದ್ರವಾಗ್ನಿಯಂತಾ ಫಾಲಗುಲ್ಮಮಾ ನಿಷ್ಪಟ ಬ್ರಹ್ಮಚರ್ಯದ ದೀಧಿತಿಯ ನೋಡ (ಗೂಢೋ. ೪-೨೭). [ದ್ರವ + ಅಗ್ನಿ]

ದ್ರವಾಶಯ (ನಾ). ನೀರನ್ನು ಸಂಗ್ರಹಿಸಿಡುವ ಸ್ಥಳ: ನಾಳಗಳು ಸಾಮಾನ್ಯ ಸುರುಳಿ, ಕವಲು ಅಥವಾ ಹಾಲೆ. ಕೆಲವು ವೇಳೆ ದ್ರವಾಶಯಗಳುಳ್ಳವು (ಕೀಟಪ. ೪೩) ; ಗಂಟಲಿಗೆ ಸೇರಿದಂತೆ, ಅಂತರ್ಜೀವಕದಲ್ಲಿ ಒಂದು ದ್ರವಾಶಯ (Reservoir) ವಿರುವುದು (ಪ್ರಾಥಶಾ. ೩೨). 'ಜಲಾಶಯ' ಪರಾ. [ದ್ರವ + ಆಶಯ]

ದ್ರವಿಡ (ನಾ). ೧. ಭಾರತದ ದಕ್ಷಿಣ ಪ್ರದೇಶದ ಪೂರ್ವತೀರದ ಪ್ರದೇಶ; ದ್ರಾವಿಡದೇಶ ; ತಮಿಳುನಾಡು : ಕರ್ನಾಟಾಂಧ್ರ ದ್ರವಿಡ ವರಾಟ . . . ಪಾಂಚಾಲ ವೆಂಗಿ ತೌಳವಾದಿ ದೇಶಭಾಷೆಗಳೊಳ್ ಪುಟ್ಟುವುವೆಲ್ಲಂ ಸರ್ವವಿಷಯಭಾಷಾಜಾತಿಗಳಕ್ಕುಂ (ಧಂಡೋಲು. ೧-೪೭) ; ಸೌರಾಷ್ಟ್ರ ಗುಜರಾಷ್ಟ್ರ ತುರುಕಾ ಇವು ಸ್ತ್ರೀರಾಜ್ಯ ವಜ್ರ ದ್ರವಿಡವೂ (ದೇವಾಂಪು. ೩-೪೦) ; ಸೌರಾಷ್ಟ್ರ ಸಿಂಗಳ ದ್ರವಿಡ ಕಾಂಬೋಜದೇಶದ ಸಕಲಶರಣ ರೈತರುತಿರ್ದರು (ಚಿಲಪು. ೬-೪೪). ೨. ತಮಿಳುನಾಡಿನ ಜನಾಂಗದ ಅಥವಾ ನಿವಾಸಿಗಳ ಹೆಸರು : "ತಿಗುಳನೆನೆ ದ್ರವಿಡ" (ಶಬ್ದಮಂ. ೬೫) ; ಈ ದೇಶದ ಮೂಲನಿವಾಸಿಗಳು ದ್ರವಿಡರು (ಮುಂಬಯಿ. ೪-೧೩೩). ೩. ದ್ರಾವಿಡ ಭಾಷೆಗಳಲ್ಲಿ ಒಂದು ; ತಮಿಳು. 'ದ್ರವಿಡ ಭಾಷೆ' ಪರಾ. [ಸಂ.]

ದ್ರವಿಡಭಾಷೆ (ನಾ). ತಮಿಳು ಭಾಷೆ : ಬಳ್ಳಿನೈನಾರರಿಂಬಾಗಿರ್ದೊಂದಿತಿಹಾಸಮಂ ದ್ರವಿಡಭಾಷಾಭೇದದಿಂ ಮಾಡಿದರ್ (ರಾಜಶೇ. ೧-೭೭) ; ತಮಿಳಿಗೆ ದ್ರವಿಡಭಾಷೆ ಎಂಬ ಹೆಸರು ತೀರ ಇತ್ತೀಚಿನ ಗ್ರಂಥಗಳಲ್ಲೂ ಸಿಗುತ್ತದೆ (ದ್ರಾವಿವಿ. ೦೧೦). [ದ್ರವಿಡ + ಭಾಷೆ]

ದ್ರವಿಡಮಂಟಂನ್ಯಾಯ 'ದ್ರವಿಡಮಂಟಕನ್ಯಾಯ' ನೋ.

ದ್ರವಿಡಮಂಟಕನ್ಯಾಯ, ದ್ರವಿಡಮ್ಮಂಟಂನ್ಯಾಯ, ದ್ರವಿಡವಂಡಕನ್ಯಾಯ (ನಾ). ಅನವಶ್ಯಕವಾದ ಶ್ರಮ ; ವೃಥಾ ಶ್ರಮ ; ಸುತ್ತು ಬಳಸು : ಅಱುವಿನಿಂದಲೆ ದ್ರವಿಡಮಂಟಕನ್ಯಾಯದಿಂ ಗುರುಸಿದ್ಧನೊಲ ವಹುದು ಕರ್ಮದಿಂದಿಲ್ಲಂ ಜಱಿಯುತೆ ನ ಕರ್ಮಣಾ ಎಂದಿಂತು ಶ್ರುತಿ ಮತ್ತೆ ಹರುಷದಿಂ ಜ್ಞಾನಾತ್ ಎನುತೆ ಪೊಗಳಿರಲು (ಕೃಳವ. ೫-೫-೫). **ದ್ರವಿಡಮಂಟಂನ್ಯಾಯ :** ಈ ದೇಶದಲ್ಲಿ ನಿರಾಯಾಸದಿಂದ ಕೂರಿಗೆಯಲ್ಲಿ ನೆಲ್ಲು ಬಿತ್ತಿ ಬೆಳೆಯುವುದಕ್ಕಾಗಿ ಸುಲಭವಾದ ಭೂಮಿ ಇರಲಾಗಿ "ದ್ರವಿಡ ಮಂಟಂ" ನ್ಯಾಯದಂತೆ ತೋಟಗಳಲ್ಲಿ ಗದ್ದೆಯನ್ನು ಮಾಡುವ ಪ್ರಯೋಜನ ವಿಲ್ಲ (ಕೃಟಿಪ್ರ. ೨೦೩). **ದ್ರವಿಡಮಂಡಕನ್ಯಾಯ :** ಘನಮುಕ್ತಿಯನೀವ ಮತವನುಳಿದು ಮಹಾಯಾತನೆಗೈಯ್ಯುವರೊಲಿದಾತಂಗನುವಕ್ಕುಂ ದ್ರವಿಡ ಮಂಡಕನ್ಯಾಯಮಿದುಂ (ಪರಗೀ. ೦-೬) 'ದ್ರಾವಿಡ ಪ್ರಾಣಾಯಾಮ' ಪರಾ. [ದ್ರವಿಡ + ಮಂಟಕ ? + ನ್ಯಾಯ]

ದ್ರವಿಡಮಂಡಕನ್ಯಾಯ 'ದ್ರವಿಡಮಂಟಕನ್ಯಾಯ' ನೋ.

ದ್ರವಿಡವೇದ (ನಾ). ತಮಿಳುದೇಶದ ವೈಷ್ಣವಭಕ್ತರು ಶರಣಾಗತಿ ತತ್ತ್ವವನ್ನು ಬೋಧಿಸಲುಂ ರಚಿಸಿದ ವೇದಾಂತತತ್ತ್ವಗಳನ್ನೊಳ ಗೊಂಡ ಕೃತಿಗಳು ; ಆಳ್ವಾರುಗಳ ರಚನೆಗಳು. [ದ್ರವಿಡ + ವೇದ]

ದ್ರವಿಡಾಮ್ನಾಯ (ನಾ). = ದ್ರವಿಡವೇದ. [ದ್ರವಿಡ + ಆಮ್ನಾಯ]

ದ್ರವಿಣ (ನಾ). ೧. ಆಸ್ತಿ ; ಸಂಪತ್ತು ; ಐಶ್ವರ್ಯ : "ದ್ಯುಮ್ನಮಾ ದ್ರವಿಣವಾ ದ್ರವ್ಯವೆಂದೆನಲು ವಿತ್ತಮದಕ್ಕು" (ಪಂಗಡಾ. ೧೬-೦೬) : ಸಾಹಸದ್ರವಿಣಸಾಧನದಂತೆಯುಂ ಗುಣಗಣಮಣಿಗಣಕೋಶಗೃಹದಂತೆಯು ವಾಗಿ (ಶಾಂತಿಪು. ೦-೮೦) ; ಗುಣದ್ರವಿಣದಿನಿರ್ವರುಂ ವಿನಯದಿಂ ಸಭೆಗುತ್ಸವಮಂ ನಿರ್ಮಿಸಿದರ್ (ಪುಷ್ಪಪು. ೪-೬೩) ; ಸುಕವಿನಿಕರ ದಾರಿದ್ರ್ಯ ವಿದ್ರಾವಣ ದ್ರವಿಣ ಧಾರ ಧಾರಾಧರ ಕರಾಗ್ರ ಪರಿಹತ ಸುರಧರಾರುಹ ಪ್ರಭಾವನುಂ (ರಾಜಶೇ. ೩-೧). ೨. ಹಣ ; ಉಪಾದ್ರಿಯೊಳ್ ದ್ರವಿಣಮಂ ಬಯ್ತು (ಅದಿಪು. ೩-೪) ; ಆ ಕೃಷೀವಲಂ ನೇಗಿಲಂ ಪಿಡಿದು ಪೊಡೆದು ಕಳಶಮಂ ಕಂಡು ಚೋದ್ಯಂಬಟ್ಟು ಇಂದಿಲ್ಲಿಯುಂಡಾತನ ದ್ರವಿಣಮಾಗದೆ ಮಾಣದಾನಿದಂ ಮನೆಗೊಯ್ದುದನುಚಿತಮಾತನಂ ಕರೆದೀವೆನೆಂದು . . . ಎಯ್ದುವಂದು ಪೊಡವಟ್ಟಿಂತೆಂದಂ (ಪುಣ್ಯಾಸ್ರ. ೧೪-೦೬ ವ). ೩. ಚಿನ್ನ. ೪. ಕಸುವು ; ಬಲ ; ಶಕ್ತಿ. ೫. ಶೌರ್ಯ; ಪರಾಕ್ರಮ. ೬. ವಸ್ತು; ಪದಾರ್ಥ. [ಸಂ.]

ದ್ರವಿಣೇಂದ್ರ (ನಾ). ಧನದ ಅಧಿಪತಿ ; ಅಷ್ಟದಿಕ್ಪಾಲಕರಲ್ಲಿ ಒಬ್ಬನಂ ; ಕುಬೇರ : ಇಂದ್ರಂ ದಲಗ್ನಿಯಮನುಂ ರುಂದ್ರತೆಯಿಂ ನಿರುತಿ ವರುಣನುಂ ವಾಯು ದ್ರವಿಣೇಂದ್ರಂ ಲಸದೀಶಾನಂ ಸಾಂದ್ರರ್ ದಿಕ್ಪಾಲಕರಷ್ಟಕಂ (ಹಾಲಾಸ್ಯ. ೪-೧೭-೨೫). [ದ್ರವಿಣ + ಇಂದ್ರ]

ದ್ರವಿತ (ನಾ). ೧. (ಮನಸ್ಸು) ಕರಗುವಿಕೆ, – ಆರ್ದ್ರವಾಗುವಿಕೆ : ಅವಳನ್ನು ಕಂಡೊಡನೆ ಸಿದ್ಧನಾಥನ ತಪಸ್ವೀಹೃದಯವೂ ದ್ರವಿತವಾಯಿತು (ಅಶ್ರಮ. ೭). ೨. ಅನುಕಂಪೆಯಿಂದ ಕರಗಿದವನು ; ಮೃದುವಾದ ಮನಸ್ಸನ್ನು ಹೊಂದಿದವನು : ಸ್ನೇಹದಿಂದ ದ್ರವಿತನಾಗಿ ತನ್ನ ಕೈಯನ್ನು ಕೋಮಲವಾದ ಮಾಯಾದೇವಿಯ ಭುಜದ ಮೇಲಾಡಿಸಿದನು (ಮೃಜಲ. ೧೦೦). [ಸಂ]

ದ್ರವಿಯಿಸು 'ದ್ರವಿಸು' ನೋ.

ದ್ರವಿಸು, ದ್ರವಿಯಿಸು (ಕ್ರಿ). ೧. ತೊಟ್ಟಿಕ್ಕು ; ಸುರಿ ; ಸ್ರವಿಸು : ಜೇನುತುಪ್ಪಂ, ಹಿಕ್ಕವತ್ತಿಗೆಯ ಬೇರ ರಸಂ, ಕರ್ಪೂರಂ ಇವನೊಂದಾಗಿ ಕೂಡಿ ಆವುದೊಂದು ಕಂಪುಳ್ಳ ಪೂಗಳ ಮೇಲೆ ತೊಡೆಯಲ್ ಆ ಪೂಗಳ್ ದ್ರವಿಸಿ ಪರಿಮಳಂಗಿಡದೆ ಕಂಪಪ್ಪುವು (ಲೋಕೋಪ. ೭-೪೭ ಟೀಕು) : ಶಶಿಕಾಂತದಿಂದೆಸೆವ ಕನ್ನಡಿಗೋಡೆಯ ಬಂದು ಮಱೆಗೊಂಡಿರಲ್ಕದು ದ್ರವಿಸುತಿರಲಾಗಿ (ಭಿಕ್ಷಾಪ. ೩-೩೨) : ತಾವವನೀಶನೊಡಗೂಡಿದಂತೆ ನವ ಭಾರತಿಯಲ್ಲಿ ತಣಿದರಿಂದ್ರಿಯರಸ ದ್ರವಿಸಿತು ಮಱೆಯ ಮಾತೇನು (ಭರಣ ೧೨-೧೩೬) ; ಚಂದ್ರಕಿರಣಗಳು ಸೊ[ಸೋ]ಂಕಿದ ಚಂದ್ರಕಾಂತಿಮಯ ಮಾದ ಪುತ್ಥಳಿ ಬೆವರ್ವಂತೆ ಸ್ತ್ರೀರು ಆ ಪರಿ ಕಾಮಕಳೆಯು ದ್ರವಿಸುವುದು (ಸೌಗಂಧಿ. ೪೯೨-೯). ೨. ರವಿಸು ; ಕ್ರೀಡಿಸು : ಕೂಟದೊಳ್ಮನ ಮುಳುಗಿ ಸೌಖ್ಯದಿಂ ದ್ರವಿಸುವರ್ಕಾಮಕಲೆಯರಿದಂಗನೆಯರಲ್ಲಿ ದೊರೆಕೊಂಡ ಪುರುಷ ರೊಡನೆ (ಜೈಮಿಭಾ. ೧೫-೪೭). ೩. ಹಸಿಯಾಗಿರು ; ಒಣಗದಿರು ; ಬಾಡದಿರು. ೪. (ಮನಸ್ಸು) ಕರಗು,-ಆರ್ದ್ರವಾಗು : (ಕ). ೫. ದ್ರವವಾಗು; ನೀರಾಗು : ಎಳೆಯಬಾಳೆಯ ಕಾಯಿ . . . ಜಾದಿಯ ಸೊಪ್ಪು[ಮ]ರೆ ನೇಱಿಲ ತಳಿರು ಮತ್ತಿವರ ತೊಕ್ಕವಱೊಳಗೆಯೊಂದೊಂದ ಕಳಿತಬಾಳೆಯ ಹಣ್ಣಿನೊಳು ಕಲಸಿ ಬಲು ಬಿಸಿಲಿನೊಳಗಿರಿಸೆ ತಾಂ ದ್ರವಿಸಿ ರಸವೊಸರೆ ಪಾನ ಕಕ್ಕತಿ ಸೊಗಸುವಡೆದಿರ್ಪುದು (ಸೂಪಶಾ. ೨-೩೪) ; ಬೆಂಗದಿರನುರಿಗೆ ಕರ್ಪೂರಶಿಲೆಯಂತೆವೋಲ್ ದ್ರವಿಸಿತಾ ಕೆರ್ಬಂಡೆ (ಶ್ರೀರಾಮಾ. ೩೮-೨೮೫). ದ್ರವಿಯಿಸು: ೧. ಅರನೇಱಿಲ ಪಣ್ಗಳನಿಕ್ಷುರಸದೊಳಿಂಬಾಗಿ ತೊಡೆ[ಳೆ]ದು ಘರ್ಮದೊಳಿಡುಗಚ್ಚರಿಯೆನೆ ತತ್ಕ್ಷಣದಿಂದವಱ ರಸಂ ದ್ರವಿಯಿಸು ಮಾವಗಂ (ಲೋಕೋಪ. ೮-೩೭). ೩. ಕುದಿಯಸಿ ಶಿಗ್ರುಮೂಳರಸಮಂ . . . ಪೂಸಿ ಬಟ್ಟಲೊಳ್ ಸದಮಳ ಕೇತಕೀದಳಮನಿಕ್ಕಿರದಿಂಬಿನೊಳಂ ವಿಶಿಷ್ಟದಿಂ ಮೃದುತರವಹ್ನಿಯೊಳ್ ಮಿದಿಯನಿಕ್ಕಲೊಡಂ ದ್ರವಿಯಿಕ್ಕು ಮಾವಗಂ (ಲೋಕೋಪ. ೭-೪೮). ೪. ಎಳೆಯ ಕಱುಂಕೆ ನೇಱಿಲೆಲೆಯೆಂಬವ ನಿಂಬಿನೆ ಪೂಸಿ ಘರ್ಮದೊಳ್ ಕಳೆದೊಡೆ ಬೆಚ್ಚರಂ ಸುಲಿದ ಬಾಟೆಯ ಪಣ್ ದ್ರವಿಯಿಕ್ಕುಮಾವಗಂ (ಲೋಕೋಪ. ೮-೩೬). ೬. ಒಸರು ; ಜಿನುಗು : ಚಂದ್ರಿಕೆಯಿಂದಂ ದ್ರವಿಯಿಪ ಚಂದ್ರೋಪಲದಂತೆ ನಿನ್ನ ಗುಣಗಣದಿಂದ ಚಂದ್ರಮುಖಿ ನಾಂದನಾಗಿ ನರೇಂದ್ರಂ ನುಡಿಯಲ್ಕಮಱಿಯದಿರ್ದಪಂ (ಕಾದಂಉ. ೦೭೭). [ದ್ರವ + – ಇಸ್ಸು]

ದ್ರವಿಳ 'ದ್ರವಿಂಟ' ನೋ.

ದ್ರವಿಳಗಣ 'ದ್ರವಿಟಗಣ' ನೋ.

ದ್ರವಿಳದೇಶ (ನಾ). ದ್ರಾವಿಡದೇಶ ; ತಮಿಳರ ನಾಡು : ದ್ರವಿಳ[ಪಾಕಾಂಡ]ದೇಶದೊಳರಸ ಕೇಳೊರ್ವವನಿಪಂ . . . ಭವರಹಿತನಿಱಿಭಕ್ತನೆಂಬಾ ಶಿವಗಣಾಗ್ರಣಿ ವಿತರಣದ ಕಣಿ ಸುವಿಮಳ ಸದಾಚಾರಮಾರ್ಗ ಸದಾನು ಪಾಲಕನು (ಬಸಪು. ೨೨-೦). [ದ್ರವಿಳ (<ದ್ರಮಿಟ) + ದೇಶ]

ದ್ರವಿಳಸಂಘ (ನಾ). [ಜೈನ] ದಕ್ಷಿಣದೇಶದಲ್ಲಿ ನೆಲಸಿದ ಜೈನಮುನಿಗಳ ಸಂಘಗಳಲ್ಲಿ ಒಂದು : ಅಯಿಜೆ ೩೦೦೮೮[ಲಾ] ಊರೂರಲು ಪಣ ೨ ಇನ್ತಿನಿತುಮಂ ದ್ರವಿಳಸಂಘಾಶ್ರಯಮಪ್ಪ ಪಲ್ಲವಜಿನಾಲಯಕ್ಕೆ ಕೊಟ್ಟಂ (ಕಇಅ. ೪೦-೫೮-೨೪ : 1087) ; ಶ್ರೀಮದ್ರವಿಳಸಂಘದರುಙ್ಗಳಾನ್ವಯದ ಗುಡ್ಡರಷ್ಟ ಶ್ರೀಮತುನಾರಸಿಙ್ಘ ಹೊಯ್ಸಳಗಾವುಣ್ಡಂ (ಎಕ. VI, ಕಡೂರು. ೬೯-೨೬ ; 1160). 'ದ್ರಾವಿಡಸಂಘ' ಪರಾ.

[ದ್ರವಿಳ (<ದ್ರಮಿಟ) + ಸಂಘ]

ದ್ರವಿಟ 'ದ್ರವಿಂಟ' ನೋ.

ದ್ರವಿಟಗಣ, ದ್ರವಿಳಗಣ (ನಾ).=ದ್ರವಿಂಟ : ೨ ಪೋಚಬ್ಬರಸಿಯರ್ದ್ರವಿಟಗಣದ ನನ್ದಿಸಂಘದರುಙ್ಗಳಾನ್ವಯದ ಗುಣಸೇನಪಣ್ಡಿತದೇವರ ಗುಡ್ಡಿ ಮಾಡಿಸಿದ ಬಸದಿ (ಎಕ. I (R), ೬೮-೦ ; ಸು. 11ನೆಯ ಶತ). ದ್ರವಿಳಗಣ : ಪೋಚಬ್ಬರಸಿಯರ್ತಮ್ಮ ಗುರುಗಳು ದ್ರವಿಳಗಣದ ನಂದಿಸಂಘದರುಂಗಳಾನ್ವಯದ ಗುಣಸೇನಪಣ್ಡಿತದೇವರ್ಗ್ಗೆ ಮಾಡಿಸಿ ಧಾರಾಪೂರ್ವಕಂ ಕೊಟ್ಟರು (ಎಕ. I (R), ೭೨-೪೨ ; 1059 ; ಎಕ. IX, ಕೊಡಗು. ೩೫-೪೩ ; 1058 ನೋ) ; ಗುರುಗಳ್ಸಿದ್ಧಾನ್ತ ತತ್ವಪ್ರಕಟನಪಟುಗಳ್ಪುಷ್ಪ ಸೇನವ್ರತೀಂದ್ರರ್ವ್ವರ ಸಂಘನ್ನನ್ದಿಸಂಘಂ ದ್ರವಿಳಗಣವಂ[ಹಾ]ರುಙ್ಗಳಾಮ್ನಾಯನಾಥಂ (ಎಕ. I (R), ೭೦-೩೪ ; 1064).

[ದ್ರವಿಟ (<ದ್ರಮಿಟ) + ಗಣ]

ದ್ರವೀಕರಣ (ನಾ). ೧. ಕರಗಿಸುವಿಕೆ ; ನೀರನ್ನಾಗಿ ಮಾಡುವಿಕೆ : ಅವನು ವಾಯುಗಳ ದ್ರವೀಕರಣ (Liquefaction) ಮಾಡಿದುದನ್ನು ವ್ಯಾಪಾರಕ್ಕಾಗಿ ತಾನು ಉಪಯೋಗಿಸಿಕೊಳ್ಳಲಿಲ್ಲ (ವಿಜ್ಞಾಕ. ೮೫). ೨. ಹಸಿಮಾಡುವಿಕೆ ; ತೇವಗೊಳಿಸುವಿಕೆ : "ನಾಂದು – ದ್ರವೀಕರಣೇ" (ಕಮಧಾ). ೩. ಹನಿಯುವಿಕೆ ; ಸ್ರವಿಸುವಿಕೆ. [ಸಂ.]

ದ್ರವೀಕರಿಸು (ಕ್ರಿ). ಕರಗಿಸು; ಆರ್ದ್ರೀಕರಿಸು : ಯಾವುದು . . . ನಮ್ಮ ಮನಸ್ಸನ್ನು ದ್ರವೀಕರಿಸುತ್ತದೆಯೋ ಮತ್ತು ತನ್ಮೂಲಕ ಮನಸ್ಸನ್ನು ಆನಂದಪಡಿಸುತ್ತದೆಯೋ ಅದು 'ಸುಂದರ' (ಸೌಂದಸ. ೪೬).

[ದ್ರವೀಕರಣ + – ಇಸ್ಸು]

ದ್ರವೀಕೃತ (ಗು). ಕರಗಿಸಿದ : ದ್ರವೀಕೃತ ಶಿಲಾಲೋಹಪ್ರವಾಹಂಗಳಂ ಓಕರಿಸುವಗ್ನಿಕುತ್ಕೀಲದಂದದೊಳಿಂತು ಕರೆದನುರಿವೆಂಕೆಯಂ ಮೇಘನಾದಂ (ಶ್ರೀರಾಮಾ. ೫೬೭-೪೨೯). [ಸಂ.]

ದ್ರವ್ಯ (ನಾ). ೧. ವಸ್ತು ; ಪದಾರ್ಥ : ಮುಕುಂದಂ ನಗಯಜ್ಞೋಪಯೋಗ್ಯ ದ್ರವ್ಯಂಗಳಂ ತಂದು (ಜಗವಿ. ೪-೮೦ ಪ) ; ಅನಲನ ನುಂಗಿದ ಶಿಲೆಯಂತೆ ಅರುಣನ ಕಿರಣವ ಕೊಂಡ ದ್ರವ್ಯದಂತೆ ಇನ್ನೇನುಪಮಿಸುವೆ (ಮೋಳಿಮಾ. ೬-೨೨) ; ವಸ್ತುವಿನ ಗುಣಗಳಲ್ಲಿ ಅದರಲ್ಲಿರುವ ದ್ರವ್ಯದ ಮೊತ್ತವು (Mass) ಒಂದು (ಶಿಲ್ಪನಾ. ೦೮೪). ೨. ಮೂಲವಸ್ತು ; ಕಚ್ಚಾಮಾಲು : ಯಾವುದು ಉಪಾದಾನಕಾರಣವಾಗಿರುವುದೋ ಅದು ದ್ರವ್ಯವೆನಿಸಿಕೊಳ್ಳುವುದು (ತತ್ವಕು. ೨). ೩. ಆಸ್ತಿ ; ಐಶ್ವರ್ಯ; ಸಂಪತ್ತು : "ದ್ರವಿಣಂ ದ್ರವ್ಯಂ ವಸ್ವರ್ಥವಿತ್ತ ರೈ ರಿಕ್ಥ ಸಾರಧನವೇ ಕಾರ್ಥಂ" (ವಸ್ತುಕೋ. ೨೯-೦೨) ; "ದ್ಯುಮ್ನಮಾ ದ್ರವಿಣಮಾ ದ್ರವ್ಯವೆಂದೆನಲು ವಿತ್ತಮದಕ್ಕು" (ಮಂಗರಾ. ೧೭-೦೬) ; ಹುಟ್ಟುತ ದ್ರವ್ಯವನಱಿಯದವಂಗೆ ಐಶ್ವರ್ಯವಂತ ಮಗನಾದರೆ ಲಕ್ಷಸಂಖೆಯ ಹಿರಣ್ಯವ ತಂದು ಸಂತೋಷ ಪಡಿಸುವಂತೆ (ಬಸವ. ೭೦೫). ೪. ಹಣ ; ಧನ : ಚಂದ್ರಾದಿತ್ಯರುಮಂ . . . ಒಸೆದರ್ಚಿಸಿ ಭೂಪೇಂದ್ರಂ ದ್ವಿಜರ್ಗಾದರದಿಂ ದ್ರವ್ಯಮನೀಯಲನಿತುಮುಪಶಮಮಕ್ಕುಂ (ಲೋಕೋಪ. ೪-೪೩) ; ದೇವರ ನಂದಾದೀವಿಗೆಗಲಂದೆಯ ಮುದ್ರಾವಣದ ಸುಂಕದೊಳಗೆ ತಿಂಗಳ್ದಿಂಗಳ್ಗೆ ಹತ್ತುಹತ್ತು ದ್ರ[ವ್ಯಮಂ] ಬಿಟ್ಟಂ (ಎಇ. XXVIII, ೩೫-೫೬ ; 1088) :

ಬಗ್ಗಾಲಿ ತನಗೆ ನೀಡಲಾದ ಅಷ್ಟೆಲ್ಲ ದ್ರವ್ಯವನ್ನು ಮರಳಿ ಮುದುಕನಿಗೇ ಅರ್ಪಿಸಿ . . . ಸಾಷ್ಟಾಂಗನಮಸ್ಕಾರ ಹಾಕಿದನು (ಕಂಬಹು. ೨೦); ದ್ರವ್ಯವಿದ್ದವನು ತಿಂದು ಸಾಯಲಿಲ್ಲ, ಸಾಲ ಮಾಡಿದವನು ತಿದ್ದಿ ಸಾಯಲಿಲ್ಲ (ಗಾಜಿ). ೫. ಒಂದು ಬಗೆಯ ನಾಣ್ಯ ಮತ್ತು ಅದರ ತೂಕ: ಒಂದು ದ್ರವ್ಯದಷ್ಟು ಹಿಪ್ಪಲಿಚೂರ್ಣವನ್ನು ಈ ಹಿಪ್ಪಲಿಯೊಳರ್ಧ ಗೌಜುಲವಣವನ್ನು ಚೂರ್ಣವಂ ಮಾಡಿ ಹಾಕಿ . . . ಒಂದು ಗುಳಿಗೆಯಂ ಕೊಡೆ ಜ್ವರಾತಿಸಾರ ಗ್ರಹಿಣಿ ಮುಂತಾಗಿ ಮಾಣ್ಗುಂ (ಸಕಪ್ರ. ೩೦೯). ೬. ಮರದಿಂದ ಮಾಡಿದ ಪ್ರತಿಮೆ: "ಮರದಿಂದ ಮಾಡಿದ ರೂಪು ಕಸ್ವರ ಷಡುದ್ರವ್ಯಂಗಳುಂ ದ್ರವ್ಯಮಕ್ಕು" (ನಾನಾರ. ೦೬೫). ೭. ಔಷಧಿ: ಮೂಲಿಕೆ: ಸಿರಿಸಂ ಗೋದಿ(ಣಿ) ಪಟೋಳಮಾಡುಳಿಚಮಾ ಸಪ್ತಚ್ಛದಂ ಬೇವು ಭಿನ್ನರುಹಂ ಪುಲ್ಗಿಲೆನಿಷ್ಟಿವಂ ತೆಗಪಿ ತದ್ದ್ರವ್ಯಂಗಳಂ ಕೊಂಡು ನೆಯ್ದೆರಸಟ್ಟಿಕ್ಕುಗೆ . . . ಮಾಣ್ಗುಂ ಕಫಂ (ಲೋಕೋಪ. ೯-೨೨೫): ಅಡಕಪುಟ್ಟನಬೇರು, ಬಿಳಿಹುಲಿಗಿಡದ ಬೇರು, ನೆಲತಾಟಿಗೆಡ್ಡೆ ಈ ಮೂರು ದ್ರವ್ಯಗಳನ್ನೂ . . . ಕಲ್ಕಮಾಡಿ ಸೇವಿಸಿದರೆ ಮೂತ್ರಕೃಚ್ಛ್ರ ಮತ್ತು ಶುಕ್ಲಮೇಹ ಮಾಣುವುವು (ಸಕಪ್ರ. ಪರಿ. ೪೯೩). ೮. [ಗಣಿತ] ಆರಂ ಎಂಬ ಸಂಖ್ಯೆಯ ಸಂಕೇತ: "ದಾ, ಖರ, ದ್ರವ್ಯ, ಋತು ... ಇಂತಿನಿತುಂ ಒಕ್ಕೆ ಪೆಸರು" (ಪ್ರವಹಾ. ೦೦-೨೩). ೯. [ತರ್ಕಶಾ] ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಮತ್ತು ಅಭಾವಗಳೆಂಬ ಏಳು ಬಗೆಯ ಪದಾರ್ಥಗಳಲ್ಲಿ ಒಂದು: ಕಾಣಾದವೆಂಬ ವೈಶೇಷಿಕ ಶಾಸ್ತ್ರವೇ ದ್ರವ್ಯ ಗುಣ ಕರ್ಮ . . . ಅಭಾವಗಳೆಂಬ ಪದಾರ್ಥ ಸಪ್ತಕಮಂ ಪ್ರತಿಪಾದಿಸುವುದಱಿಂ (ವಿಪೇಕ. ೦೦); ವೈಶೇಷಿಕ ದರ್ಶನದಲ್ಲಿ ಸಾಮಾನ್ಯವಾಗಿ ಪ್ರಪಂಚವನ್ನು ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ ಮತ್ತು ಅಭಾವವೆಂದು ಏಳು ಪದಾರ್ಥಗಳಾಗಿ ವಿಭಾಗ ಮಾಡಿರುವರು (ಹಿಂದಸಾ. ೦೦೨). ೧೦. ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ವಿಶಿಷ್ಟ, ಅಂಶಿ, ಶಕ್ತಿ, ಸಾದೃಶ್ಯ ಮತ್ತು ಅಭಾವಗಳೆಂಬ ಹತ್ತು ಬಗೆಯ ಪದಾರ್ಥಗಳಲ್ಲಿ ಒಂದು; P (ತಾರ್ಕಿಕದರ್ಶನದಲ್ಲಿ ಪ್ರಮೇಯಶಾಸ್ತ್ರವೆಂದು ಪರಿಗೃಹೀತವಾಗಿರುವ) ವೈಶೇಷಿಕದರ್ಶನದ ಪ್ರಕಾರ ಪದಾರ್ಥಗಳ ಸಂಖ್ಯೆ ಏಳಾದರೆ, ದ್ವೈತದರ್ಶನದ ಪ್ರಕಾರ ಇವುಗಳ ಸಂಖ್ಯೆ ಹತ್ತು ಎಂದಾಗಿದೆ. ದ್ವೈತದದರ್ಶನದಲ್ಲಿ ಮಾಡಿಕೊಂಡಿರುವ ವಿಭಾಗದ ಹತ್ತು ಬಗೆಗಳು ಮತ್ತು ಅವುಗಳ ವಿವರಣೆ ಕೆಳಕಂಡಂತೆ ಇದೆ:- (೧). ದ್ರವ್ಯ:-ಪರಮಾತ್ಮ, ಲಕ್ಷ್ಮಿ, ಜೀವಾತ್ಮ, ಅವ್ಯಾಕೃತಾಕಾಶ, ಪ್ರಕೃತಿ, ಗುಣತ್ರಯ, ಮಹತ್ತತ್ವ, ಅಹಂಕಾರತತ್ತ್ವ, ಬುದ್ಧಿ, ಮನಸ್ಸು, ಇಂದ್ರಿಯ, ಮಾತ್ರಾ, ಭೂತ, ಬ್ರಹ್ಮಾಂಡ, ಅವಿದ್ಯೆ, ವರ್ಣ, ಅಂಧಕಾರ, ಕಾಲ, ವಾಸನಾ, ಪ್ರತಿಬಿಂಬ ಎಂದು ಇಪ್ಪತ್ತು ವಿಧಗಳು. (೨). ಗುಣ:-ಇದರಲ್ಲಿ ನಲವತ್ತು ವಿಧಗಳಿವೆ. ವಿವರಣೆಗೆ- 'ದ್ರವತ್ವ' ಪರಾ. (೩). ಕರ್ಮ:-ವಿಹಿತ, ನಿಷಿದ್ಧ, ಉದಾಸೀನ ಎಂದು ಮೂರು ವಿಧ. ಶಾಸ್ತ್ರಾಧಿಕಾರಿಗಳ ಕರ್ಮವೆಲ್ಲವೂ ವಿಹಿತ, ನಿಷಿದ್ಧಗಳಲ್ಲಿ ಸೇರುವುವು. ಚಲನೆಯೆಂಬ ಇತರ ದ್ರವ್ಯಗಳಲ್ಲಿರುವ ಕರ್ಮ ಉದಾಸೀನ. (೪). ಸಾಮಾನ್ಯ:-ಜಾತಿ, ಉಪಾಧಿ ಎಂದು ಎರಡು ವಿಧಗಳಿವೆ. ಆತ್ಮತ್ವ, ಮನುಷ್ಯತ್ವ, ಗೋತ್ವಾದಿಗಳು ಜಾತಿಗಳು. ಸರ್ವಜ್ಞತ್ವ, ಪ್ರಮೇಯತ್ವ, ವಾಚ್ಯತ್ವಾದಿಗಳು ಉಪಾಧಿಗಳು. (೫). ವಿಶೇಷ:-ಭೇದವಿಲ್ಲದಿರುವ ಮತ್ತುವಿನಲ್ಲಿ ಭೇದವ್ಯವಹಾರಕ್ಕೆ ನಿರ್ವಾಹಕವಾಗಿರುವುದು. (೬), (೭). ವಿಶಿಷ್ಟ, ಅಂಶಿ:- ಈ ಎರಡು ಪದಾರ್ಥಗಳು ಅಬಾಧಿತ ಪ್ರಾಮಾಣಿಕ ವ್ಯವಹಾರದಿಂದ ಅಂಗೀಕರಿಸಲ್ಪಟ್ಟಿರುವುವು. (೮), (೯), (೧೦). ಶಕ್ತಿ, ಸಾದೃಶ್ಯ, ಅಭಾವ:-ಈ ಮೂರು ಪದಾರ್ಥಗಳೂ ಇತರ ದರ್ಶನಗಳಲ್ಲಿರುವ ಹಾಗೆಯೇ ಪ್ರಾಯಃ ಇಲ್ಲಿಯೂ ಇರುವುವು. ಸಹಜಶಕ್ತಿ, ಆಧೇಯಶಕ್ತಿ, ಪದಶಕ್ತಿ-ಈ ಮೂರು ಪ್ರಸಿದ್ಧವಾದುವುಗಳು. ಪರಮಾತ್ಮನಲ್ಲಿ ಅಚಿಂತ್ಯಶಕ್ತಿಯೊಂದಿರುವುದು. ಪದಶಕ್ತಿಯಲ್ಲಿ ಮುಖ್ಯ ಗೌಣಗಳಲ್ಲದೆ ಪರಮುಖ್ಯವೆಂದೊಂದು ಸ್ವೀಕರಿಸಲ್ಪಟ್ಟು ಸಕಲ ಶಬ್ದವಾಚ್ಯತ್ವವೂ ಪರಮಾತ್ಮನಿಗೆ ಸ್ಥಾಪಿಸಲ್ಪಟ್ಟಿರುವುದು. ಅಭಾವದಲ್ಲಿ ಭೇದವೆಂಬ ಅನ್ಯೋನ್ಯಾಭಾವವು ಆಶ್ರಯಸ್ವರೂಪವಾಗಿರುವುದು. ಅತ್ಯಂತಾಭಾವವು ಅಸತ್ಪ್ರತಿಯೋಗಿಕವು. ಶಶಶೃಂಗ, ಗಗನಕುಸುಮ ಮೊದಲಾದ ಅಪ್ರಾಮಾಣಿಕ ಅಸದ್ವಸ್ತುಗಳ ಅಭಾವವು: ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ವಿಶಿಷ್ಟ, ಅಂಶಿ, ಶಕ್ತಿ, ಸಾದೃಶ್ಯ, ಅಭಾವ ಎಂದು ಪದಾರ್ಥಗಳು ಹತ್ತು (ಹಿಂದಸಾ. ೨೬೫). ೧೧. [ಬೌದ್ಧ] ಜಾತಿ, ಗುಣ, ಕ್ರಿಯೆ, ನಾಮ ಮತ್ತು ದ್ರವ್ಯಗಳೆಂಬ ಐದು ವಿಧವಾದ ವಿಕಲ್ಪಗಳಲ್ಲಿ ಒಂದು: ವಿಕಲ್ಪಗಳು ಐದು-ಜಾತಿ, ಗುಣ, ಕ್ರಿಯೆ, ನಾಮ ಮತ್ತು ದ್ರವ್ಯ ಎಂದು. ಜಾತಿ, ಗುಣ, ಕ್ರಿಯೆಗಳು ಅಭಿನ್ನವಸ್ತುವಿನಲ್ಲಿ ಭೇದವನ್ನು ಕಲ್ಪಿಸುವುವು . . . ಗುಣ, ಕ್ರಿಯೆ, ನಾಮ ಮತ್ತು ದ್ರವ್ಯವಿಕಲ್ಪಗಳು ಭಿನ್ನವಸ್ತುಗಳಲ್ಲಿ ಅಭೇದವನ್ನು ಕಲ್ಪಿಸುವುವು (ಭಾತತ್ತ್ವ. ೨೨೫). 'ದ್ರವ್ಯಕಲ್ಪನೆ' ಪರಾ. ೧೨. [ಜೈನ] ದ್ರವ್ಯ, ಕ್ಷೇತ್ರ, ಕಾಲ, ಭವ, ಭಾವಗಳೆಂಬ ಐದು ವಿಧವಾದ ಸಂಸಾರಗಳಲ್ಲಿ ಒಂದು: ಮುಕ್ತಿಕಾರಣಂಗಳುಪಾದೇಯಂಗಳ್ ಅವಱೊಳ್ ದ್ರವ್ಯ ಕ್ಷೇತ್ರ ಕಾಲ ಭವ ಭಾವ ಭೇದದಿಂ ಪಂಚವಿಧಂ ಸಂಸಾರಂ (ಅದಿಪು. ೦೦-೬೦ ಪ); ದ್ರವ್ಯ ಕ್ಷೇತ್ರ ಕಾಲ ಭವ ಭಾವದಿಂದೊಡಗೂಡಿ ಉರ್ವಿಯ ಗತಿ ನಾಲ್ಕಱಲಿ ಪೂರ್ವಚತುರ್ದಶಜೀವಸಮಾಸದಿ ತೀವ್ರಭ್ರಮಣೆ ಸಂಸಾರ (ದ್ವಾದಶಾ. ೫-೨). 'ದ್ರವ್ಯಸಂಸಾರ' ಪರಾ. ೧೩. ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲಗಳೆಂಬ ಆರು ಬಗೆಯ ದ್ರವ್ಯಗಳು: ಕರ್ಮಾವೃತಂಗಳುಂ ಕರ್ಮವಿಮುಕ್ತಂಗಳುಮಪ್ಪ ಜೀವಾದಿ ದ್ರವ್ಯಂಗಳಾಧಾರಭೂತಮಪ್ಪ ಲೋಕವಿಭಾಗಮೆಂತೆಂದೊಡೆ (ಅಚಿಪು. ೦೦-೨ ಪ). 'ಷಡ್ದ್ರವ್ಯ' ಪರಾ. ೧೬. ತೀರ್ಥಂಕರರು ಉಪದೇಶಿಸಿರುವ ಪ್ರಥಮ, ಕರಣ, ಚರಣ ಮತ್ತು ದ್ರವ್ಯಗಳೆಂಬ ನಾಲ್ಕುವಿಧವಾದ ಅನುಯೋಗಗಳಲ್ಲಿ ಒಂದು: ಜೀವಾದಿ ಷಡ್ದ್ರವ್ಯಗಳನ್ನೂ ಏಳು ತತ್ವಗಳನ್ನೂ ನಿರೂಪಿಸುವ ಶಾಸ್ತ್ರಭಾಗ: ಪ್ರಥಮ, ಕರಣ, ಚರಣ, ದ್ರವ್ಯ ಎಂಬ ನಾಲ್ಕು ಅನುಯೋಗಗಳನ್ನು ಜೈನರ ಚತುರ್ವೇದಗಳೆಂದು ಕರೆಯಬಹುದು (ಭಾರದ. ೦೭೯). 'ದ್ರವ್ಯಾನುಯೋಗ' ಪರಾ. [ಸಂ.]

ದ್ರವ್ಯಕರ್ಮ (ನಾ). [ಜೈನ] ಆತ್ಮನ ಬಂಧದೊಂದಿಗೆ ಉಂಟಾಗುವ ಜ್ಞಾನಾವರಣಾದಿ ಪುದ್ಗಲಕರ್ಮದ ಸಮೂಹ: ಹೀಗೆ ವಿಶಿಷ್ಟರೂಪವನ್ನು ಹೊಂದಿದ ಪೌದ್ಗಲಿಕ ಪರಮಾಣುಪುಂಜವೇ ದ್ರವ್ಯಕರ್ಮವೆನಿಸುವುದು. ಇದಕ್ಕೆ ಕಾರ್ಮಣಶರೀರವೆಂದೂ ಹೆಸರು. ಇದು ಜನ್ಮಾಂತರದಲ್ಲಿಯೂ ಜೀವದ ಜೊತೆಗೆ ಸಾಗಿ, ಸ್ಥೂಲಶರೀರದ ನಿರ್ಮಾಣಕ್ಕೆ ಭೂಮಿಕೆಯಾಗುತ್ತದೆ (ಜೈನಪ. ೯). 'ಭಾವಕರ್ಮ' ಪರಾ.

[ದ್ರವ್ಯ + ಕರ್ಮ]

ದ್ರವ್ಯಕಲ್ಪನೆ (ನಾ). [ಬೌದ್ಧ] ಜಾತಿಕಲ್ಪನೆ, ಗುಣಕಲ್ಪನೆ, ಕ್ರಿಯಾಕಲ್ಪನೆ, ನಾಮಕಲ್ಪನೆ ಮತ್ತು ದ್ರವ್ಯಕಲ್ಪನೆಗಳೆಂಬ ಐದು ವಿಧವಾದ ವಿಕಲ್ಪಗಳಲ್ಲಿ ಒಂದು; ಒಂದೇ ಪ್ರದೇಶದಲ್ಲಿ ಕಂಡುಬರುವ ವಸ್ತುಗಳಿಗೆ ಅಭೇದವನ್ನು ಕಲ್ಪಿಸುವುದು; P ಈ ಐದು ವಿಧವಾದ ವಿಕಲ್ಪಗಳು ಕೆಲವು ವೇಳೆ ಅಭಿನ್ನ ವಸ್ತುವಿನಲ್ಲಿ ಭೇದಕಲ್ಪನೆಯನ್ನು ಮಾಡುವುವು. ಗೋವಿಗೂ ಗೋತ್ವಕ್ಕೂ ಭೇದವು ಕಂಡುಬರುವು

ದಿಲ್ಲ. ಆದರೆ ಗೋತ್ವವೆಂಬ ಜಾತಿಯು ಅವುಗಳಲ್ಲಿ ಜಾತಿಕಲ್ಪನೆಯನ್ನು ಮಾಡುವುದು. ಇದರಂತೆ ಗುಣಕಲ್ಪನೆ, ಕ್ರಿಯಾಕಲ್ಪನೆಗಳು ಅಭಿನ್ನ ವಸ್ತುವಿನಲ್ಲಿ ಭೇದಕಲ್ಪನೆ ಮಾಡುವುವು. ಶಬ್ದಾರ್ಥಗಳು ವಸ್ತುಸ್ಥಿತಿಯಲ್ಲಿ ಭಿನ್ನವಾದುವುಗಳು. ನಾಮಕಲ್ಪನೆಯು ಇವುಗಳಿಗೆ ಅಭೇದಕಲ್ಪನೆ ಮಾಡುವುದು. ಇದರಂತೆಯೇ ದ್ರವ್ಯಕಲ್ಪನೆಯು ಒಂದೇ ಪ್ರದೇಶದಲ್ಲಿ ಕಂಡುಬರುವ ವಸ್ತುಗಳಿಗೆ ಅಭೇದವನ್ನು ಕಲ್ಪಿಸುವುದು: ವಿಕಲ್ಪಗಳು ಅಥವಾ ಕಲ್ಪನೆಗಳು ಐದುವಿಧ-ಜಾತಿಕಲ್ಪನೆ, ಗುಣಕಲ್ಪನೆ, ಕ್ರಿಯಾಕಲ್ಪನೆ, ನಾಮಕಲ್ಪನೆ ಮತ್ತು ದ್ರವ್ಯಕಲ್ಪನೆ ಎಂದು (ಭಾತತ್ತ್ವ. ೨೬೬). [ದ್ರವ್ಯ + ಕಲ್ಪನೆ]

ದ್ರವ್ಯಚೇತನವಾದ (ನಾ). ಚೇತನವು ವಸ್ತುವಿನ ಅಸ್ತಿತ್ವದ ಒಂದು ಗುಣ ಎಂದು ವಾದಿಸುವ ವಾದ: "ದ್ರವ್ಯಕ್ಕೆ ಚೇತನವಿದೆ ಎಂಬ, ಅಥವಾ ಚೇತನವು ದ್ರವ್ಯದ ಒಂದು ಗುಣ ಎಂಬ ವಾದ: ದ್ರವ್ಯಚೇತನವಾದ" (Hylozoison. ಇಂಕನಿ). [ದ್ರವ್ಯ + ಚೇತನ + ವಾದ$_3$]

ದ್ರವ್ಯತಪ (ನಾ). ವಸ್ತುಸಂಗ್ರಹಕ್ಕಾಗಿ ಮಾಡುವ ತಪಸ್ಸು; ಕಪಟವಾದ ತಪಸ್ಸು: ದ್ರವ್ಯತಪದಿಂದವಲ್ಲದೆ ನಿರ್ವ್ಯಾಕುಳ ಭಾವತಪಮುಮಂ ತಳೆಯಂ ತಾಂ ನಿರ್ವ್ಯಾಜಮಿತನೆಂದಾ ದಿವ್ಯಾವಧಿಬೋಧರಱಿದು ತಪಮಂ ಕೊಟ್ಟರ್ (ಸುಳುಮಾ. ೩-೩೫). 'ಭಾವತಪ' ಪರಾ.

[ದ್ರವ್ಯ + ತಪ$_3$]

ದ್ರವ್ಯತ್ವ (ನಾ). ವಸ್ತುವಾಗಿರುವಿಕೆ; ವಸ್ತುವಿನ ಭಾವ: ಶಬ್ದಕ್ಕೆ ದ್ರವ್ಯತ್ವಮಂ ಜೈನರ್ ಪೇಳ್ದಿಪರ್ (ಶಮದ. ೨ ಟೀಕೆ); ದ್ರವ್ಯತ್ವ ವಿಧಾನ ಪ್ರಕರಣಮಪ್ಪುದಱಿಂ ಉಕ್ತಜೀವಂಗಳ್ಗಂ ಅದ್ರವ್ಯತ್ವ ವ್ಯವಚ್ಛೇದಾರ್ಥಂ ಉತ್ತರಸೂತ್ರಾವತಾರಂ (ತತ್ತ್ವಪ್ರ. ೨೩೦): ಮೋಕ್ಷದಲ್ಲಿ ಜೀವಾತ್ಮನು ತನ್ನ ಸ್ವಾಭಾವಿಕ ಸ್ಥಿತಿಯಲ್ಲಿರುವನು, ಅದೆಂತೆಂದರೆ ವಿಭುತ್ವ, ದ್ರವ್ಯತ್ವ, ನಿತ್ಯತ್ವ, ನಿರವಯವತ್ವ ನಾನಾತ್ವ ಮೊದಲಾದ ಧರ್ಮಗಳೊಡನೆ ಯಾವತ್ಕಾಲ ನಿರ್ದುಃಖಿಯಾಗಿರುತ್ತಾನೆ (ಹಿಂದಸಾ. ೦೨೪). [ಸಂ.]

ದ್ರವ್ಯನಿವೇದನಂಗೆಯ್ (ನಾ). =ದ್ರಬ್ಯನಿವೇದನಂಗೆಯ್: ಮಹಾಜನ ನೂಱಿಪ್ಪದಿಂಬರ ಕಯ್ಯಲು ದಂಡನಾಯಕಂ ನಾಗವರ್ಮ್ಮಯ್ಯಂಗಳು ದ್ರವ್ಯನಿವೇದನಂಗೆಯ್ದು ಧಾರಾಪೂರ್ವ್ವಕಂ ಸರ್ವ್ವನಮಶ್ಯ ಸರ್ವ್ವಬಾಧಾಪರಿಹಾರಮಾಗೆ ಪಡೆದು (ಸೌಇಇ. XX, ೮೦-೦೦; 1122).

[ದ್ರವ್ಯ + ನಿವೇದನ + ಕೆಯ್$_1$]

ದ್ರವ್ಯಪರಾವರ್ತನ (ನಾ). = ದ್ರವ್ಯಪರಿವರ್ತನ: ಮುನ್ನೆ ಕೊಂಡ ಪುದ್ಗಲಂಗಳಂ ಬಿಸುಟ್ಟು ಪೆಱವುಂ ಸ್ನಿಗ್ಧರೂಕ್ಷಾದಿ ವಿಕಲ್ಪಂಗಳಂ ಜನ್ಮ ಜನ್ಮಾಂತರಂಗಳೊಳ್ ಕೊಳ್ಳುತ್ತುಮಿಂತು ಮೂಱುಂ ಲೋಕದೊಳುಳ್ಳ ರೂಪದ್ರವ್ಯಂಗಳೆಲ್ಲಮಂ ನಿರವಶೇಷಮಾಗೆ ಕೈಕೊಳ್ವುದು ದ್ರವ್ಯಪರಾವರ್ತನಮೆಂಬುದು (ಸುಳುಮಾ. ೬-೬ ಪ); ಜೀವಾಜೀವ ದ್ರವ್ಯಪರಾವರ್ತನ ಹೇತು ವರ್ತನಾಲಕ್ಷಣಸದ್ಭಾವಂ ನಿತ್ಯಮಮೂರ್ತಂ ಕೇವಲಗಮ್ಯಂ ಸದಾನುಮೇಯಂ ಕಾಲಂ (ಪಂರಾಮಾ. ೦-೪೬). 'ಕ್ಷೇತ್ರಪರಾವರ್ತನ' ಪರಾ. [ದ್ರವ್ಯ + ಪರಾವರ್ತನ]

ದ್ರವ್ಯಪರಿವರ್ತನ (ನಾ). [ಜೈನ] (ಸಂಸಾರದಲ್ಲಿ ಪರಿಭ್ರಮಣ ಮಾಡುವ ಜೀವಗಳಿಗೆ ಉಂಟಾಗುವ) ದ್ರವ್ಯ, ಕ್ಷೇತ್ರ, ಕಾಲ, ಭವ ಮತ್ತು ಭಾವಗಳೆಂಬ ಐದು ರೀತಿಯ ಪರಿವರ್ತನಗಳಲ್ಲಿ ಒಂದು; ಪುದ್ಗಲ ಅಥವಾ ದ್ರವ್ಯದ ಮೂಲಕ ಆಗುವ ಭ್ರಮಣಕ್ಕೆ ತಗುಲುವ ಕಾಲಾವಧಿ: ಒಂದು ಜೀವಂಗಪ್ಪ ದ್ರವ್ಯಪರಿವರ್ತನಂ ನೋಕರ್ಮ ಪುದ್ಗಲಪರಿವರ್ತನಮೆಂದು ಕರ್ಮಪುದ್ಗಲಪರಿವರ್ತನಮಿಂದಿತ್ತೆಱಂ (ಜಾವುಂಪು. ೨೬೨); ದ್ರವ್ಯಪರಿವರ್ತನಂ ಲಬ್ಧ್ಯಪರ್ಯಾಪ್ತಕನುಂ ಸರ್ವಜಘನ್ಯಪ್ರದೇಶಶರೀರನುಂ ಲೋಕಮಧ್ಯಪ್ರದೇಶಾಷ್ಟಕಮಂ ಸ್ವಶರೀರ ಮಧ್ಯಪ್ರದೇಶಂ ಮಾಡಿ ಪುಟ್ಟಿದುದಂ ಕ್ಷುದ್ರಭವಗ್ರಹಣಮಂ ಪೊರ್ದಿಬಟ್ಟು ಮೃತಮಾದುದುಮಪ್ಪಾವುದೊಂದು ಸೂಕ್ಷ್ಮನಿಗೋಧಜೀವನದುವೇ (ಹಸಾರ. ೫೪೬). [ದ್ರವ್ಯ + ಪರಿವರ್ತನ]

ದ್ರವ್ಯಪೂರ್ವಕ (ನಾ). ಧನಸಹಿತವಾದುದು; ಹಣದಿಂದ ಕೂಡಿದುದು: ನ್ಯಾನಶಕ್ತಿಪಣ್ಡಿತರ್ ದ್ರವ್ಯಪೂರ್ವಕದಿಂ ಸರ್ವ್ವನಮಶ್ಯಮಾಗೆ ಯೂರಿಂಗೀಶಾನ್ಯದ ಶತ್ರದ ಕೆಯ್ಯಿಂ ಪಡುವಣ ಪಾಳ ಕೆಯ್ಯಂ ಕೊಣ್ಡು (ಸೌಇಇ. XX, ೫೭-೨೭; 1084). [ಸಂ.]

ದ್ರವ್ಯಭೋಗ (ನಾ). (?): ನರಭೋಗ ಶಿಲಾಭೋಗ ಪ್ರತಿಮಾಭೊಗ ದ್ರವ್ಯಭೋಗಾದಿಗಳ ವೈಚಿತ್ರ್ಯಮುಳ್ಳ ಲೋಕದೃಷ್ಟಾಂತಗಳಂ . . . ಸಮನ್ವಯಗೊಂಡು (ವಿವೇಳ. ೦೯೮). [ದ್ರವ್ಯ + ಭೋಗ]

ದ್ರವ್ಯಭ್ರಮೆ (ನಾ). ಸಂಸಾರದ ದುಃಖಕ್ಕೆ ಕಾರಣವಾಗುವ ಮೂರು ಭ್ರಮೆಗಳಲ್ಲಿ ಒಂದು; ಪದಾರ್ಥಗಳ ಗೋಚರತ್ವ, ಗುಣಧರ್ಮಗಳಿಂದ ಉಂಟಾಗುವ ತಪ್ಪುತಿಳಿವಳಿಕೆ ಅಥವಾ ಭ್ರಾಂತಿ: ಸಂಸಾರದಲ್ಲಿ ನಾನಾವಿಧವಾದ ದುಃಖಗಳನ್ನು ಕೊಡಿಸುವುದಕ್ಕೂ, ಪುನಃಪುನಃ ಸಂಸಾರದಲ್ಲಿ ಲೋಲಾಡುವಂತೆ ಮಾಡುವುದಕ್ಕೂ ಕಾರಕಭ್ರಮೆ, ಕ್ರಿಯಾಭ್ರಮೆ, ದ್ರವ್ಯಭ್ರಮೆ ಎಂಬ ಮೂರುವಿಧ ಭ್ರಮೆಗಳು ಕಾರಣವಾಗಿರುವುವು . . . ನಮ್ಮ ದೇಹ, ಹೆಂಡರು, ದ್ರವ್ಯ ಮೊದಲಾದವುಗಳೆ ನಮಗೆ ಸುಖಸಾಧನವೆಂದು ತಿಳಿಯುವುದೇ ದ್ರವ್ಯಭ್ರಮೆಯು (ಹಸಾರ. ೦೬-೨೯ ತಾತ್ಪರ್ಯ). 'ಕ್ರಿಯಾಭ್ರಮೆ' ಪರಾ. [ದ್ರವ್ಯ + ಭ್ರಮೆ]

ದ್ರವ್ಯಮುದ್ರೆ (ನಾ). [ಯೋಗ] ಮಂತ್ರಶಾಸ್ತ್ರ ಪ್ರಸಿದ್ಧವಾದ ಒಂದು ಬಗೆಯ ಹಸ್ತಮುದ್ರೆ (?): ದ್ರವ್ಯಮುದ್ರೆ . . . ಸಂಹಾರಮುದ್ರೆಯೆಂಬಾದಿಯಾಗಿ ಸಕಲ ಮುದ್ರೋಪಮುದ್ರಾಬಂಧಲಕ್ಷಣಂಗಳಂ ಗುರುಮುಖದಿಂದಱಿತು (ವಿವೇಳ. ೦೦೩). 'ಚಕ್ರಮುದ್ರೆ' ಪರಾ.

[ದ್ರವ್ಯ + ಮುದ್ರೆ]

ದ್ರವ್ಯಮೋಕ್ಷ (ನಾ). [ಜೈನ] ಸಂಪೂರ್ಣವಾಗಿ ಎಂಟು ಕರ್ಮಗಳಿಂದಲೂ ಶರೀರಾದಿ ಬಂಧನಗಳಿಂದಲೂ ಮುಕ್ತನಾಗಿ ಸಿದ್ಧರೂಪದಲ್ಲಿ ಆತ್ಮನು ತನ್ನ ಸ್ವಾಭಾವಿಕಸ್ಥಿತಿಯನ್ನು ಪಡೆಯುವುದು: ಆ ಕರ್ಮವೂ ಕರಗಿಹೋಯಿತೆಂದರೆ, ಆತ್ಮನು ಈ ಸಂಸಾರದಿಂದ ಮುಕ್ತನಾಗುವನು. ಆಗ ದ್ರವ್ಯಮೋಕ್ಷವೂ ಒದಗಿತೆಂದು ಹೇಳುವರು (ಜೈನಪ. ೫೦೦). 'ಭಾವಮೋಕ್ಷ' ಪರಾ. [ದ್ರವ್ಯ + ಮೋಕ್ಷ]

ದ್ರವ್ಯಯಜ್ಞ (ನಾ). ಯಾಗ, ದಾನ, ದೇವರ ಪೂಜೆ ಮುಂತಾದ ಸತ್ಕಾರ್ಯಗಳಿಗಾಗಿ ಹಣವನ್ನು ಅಥವಾ ದ್ರವ್ಯವನ್ನು ವಿನಿಯೋಗಿಸುವುದು: ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞ . . . ಹೀಗೆ ಅನಂತಯಜ್ಞಗಳನ್ನು ಶ್ರೀಕೃಷ್ಣನು ಹೇಳುತ್ತಾ ಯಜ್ಞದ ಮನೋಭಾವವನ್ನು ಕುರಿತು ಮೇಲಣ ಮಾತನ್ನು ಹೇಳುತ್ತಾನೆ (ಭಾರದ. ೦೦೬).

[ದ್ರವ್ಯ + ಯಜ್ಞ]

ದ್ರವ್ಯಯೋಗ (ನಾ). [ಜೈನ] ಶರೀರ ನಾಮಕರ್ಮದ ಉದಯದಿಂದ ಮನಸ್ಸು, ವಚನ, ಶರೀರ ಇವುಗಳ ಕ್ರಿಯೆಗೆ ಜೀವಪ್ರದೇಶದಲ್ಲಿ ಉಂಟಾಗುವ ಚಂಚಲತೆ: ಆತ್ಮಪ್ರದೇಶದಲ್ಲಿ ಉಂಟಾಗುವ ಪರಿಸ್ಪಂದ ನಾತ್ಮಕಕ್ರಿಯೆಯಿಂದಲೂ ಕರ್ಮ ಕಟ್ಟುವುದು, ಆ ಕ್ರಿಯಾಶಕ್ತಿಯು ದ್ರವ್ಯಯೋಗವೆನಿಸುವುದು (ಜೈನಪ. ೦೯೬). 'ಭಾವಯೋಗ' ಪರಾ.

[ದ್ರವ್ಯ + ಯೋಗ]

ದ್ರವ್ಯರ್ಷಿ (ನಾ). [ಜೈನ] ಮಿಥ್ಯಾದೃಷ್ಟಿಯುಳ್ಳ ಮುನಿ; ಆತ್ಮಜ್ಞಾನ ರಹಿತನಾದ ಮುನಿ; ಮುನಿವೇಷಧಾರಿ: ನಾಲ್ಸಾಸಿರ್ವರಸುಮಕ್ಕಳ್ ಪೋಗಲೊಲ್ಲದೆ ಅರಸನಾದುದನಪ್ಪೆವೆಂದು ಜಾತರೂಪಮಂ ಕೈಕೊಂಡು ದ್ರವ್ಯರ್ಷಿಯರಾಗಿರ್ದರ್ (ಜಾವುಂಪು. ೩೮). [ದ್ರವ್ಯ + ಋಷಿ]

ದ್ರವ್ಯಲಿಂಗಿ (ನಾ). = ದ್ರವ್ಯರ್ಷಿ : ಒಲವಿಂದೆ ಕೇವಲಂ ದ್ರವ್ಯಲಿಂಗಿಗಳ್ ತನ್ನನಂದು ಬಳಸಿಯುಮಿರೆ ನಿಶ್ಚಲತನು ಬಾಲಕುಜಂಗಳ ಪಲವಱ ನಡುವಿರ್ದ ಕಲ್ಪಕುಜಮನೆ ಪೋಲ್ತಂ (ಅದಿಪು. ೯-೮೨) ; ದೀಕ್ಷೆಯಿಲ್ಲದೆ ದ್ರವ್ಯಲಿಂಗಿಗಳಾಗಿರ್ದಾ ಕ್ಷಿತಿಪರ ನಟ್ಟನಡುವೆ ನಕ್ಷತ್ರಮಧ್ಯದ ಚಂದ್ರನಂತಾದಿ ಮುಮುಂಕ್ಷುವೊಪ್ಪಿದನು (ಗೋಮಟೇ. ೭-೯೨). [ಸಂ. ದ್ರವ್ಯಲಿಂಗಿನ್]

ದ್ರವ್ಯಲೇಶ್ಯ (ನಾ). [ಜೈನ] ವರ್ಣನಾಮಕರ್ಮದಿಂದ ಉಂಟಾಗುವ ಶರೀರದ ಬಣ್ಣ,-ವರ್ಣ ; P ಇದರಲ್ಲಿ ಕೃಷ್ಣ, ನೀಲ, ಕಾಪೋತ, ತೇಜ, ಪದ್ಮ ಮತ್ತು ಶುಕ್ಲಗಳೆಂಬ ಆರು ವರ್ಣಗಳಿವೆ : ನಿರ್ಗಂಥ ಸಂಪ್ರದಾಯದ ಗ್ರಂಥಗಳಲ್ಲಿ ಭಾವಲೇಶ್ಯ-ದ್ರವ್ಯಲೇಶ್ಯಗಳ ವಿವೇಚನೆಯು ವಿಸ್ತಾರವಾಗಿ ಬಂದಿದೆ (ಜೈನಪ. ೩೪೦). [ದ್ರವ್ಯ + ಲೇಶ್ಯ]

ದ್ರವ್ಯಲೇಶ್ಯೆ (ನಾ). = ದ್ರವ್ಯಲೇಶ್ಯ : ಶರೀರದೊಳಾದ ವರ್ಣಂ ದ್ರವ್ಯಲೇಶ್ಯೆ ಪರಿಣಾಮದೊಳಾದ ವರ್ಣಂ ಭಾವಲೇಶ್ಯೆಯಕ್ಕುಂ (ಪಸಾರ. ೪೧೦). 'ಭಾವಲೇಶ್ಯೆ' ಪರಾ. [ದ್ರವ್ಯ + ಲೇಶ್ಯೆ]

ದ್ರವ್ಯಲೋಪ (ನಾ). ದ್ರವ್ಯದ ಅಭಾವ ; ಹಣದ ಕೊರತೆ.
[ದ್ರವ್ಯ + ಲೋಪ]

ದ್ರವ್ಯವಂತ (ನಾ). ಹಣವುಳ್ಳವನು ; ಶ್ರೀವಂಂತ : ಸರ್ವರೂ ದ್ರವ್ಯವಂತರು ಅವರು ಅವರಲ್ಲಿ ಆಸೆಯೆ ಅಯ್ಯಾ (ಸಿದ್ಧವ. ಕೆ. ೪೨೦-೧೩೩೩) ; ಧನವಂತಂ, ದ್ರವ್ಯವಂತಂ (ಶಬ್ದಾನು. ೪೦೨ ಪ್ರಯೋ).
[ಸಂ. ದ್ರವ್ಯವತ್]

ದ್ರವ್ಯವಿವಕ್ಷೆ (ನಾ). ವಸ್ತುವಿನ ಸರ್ವತೋಮುಖವಾದ ಅಸ್ತಿತ್ವವನ್ನು ಸಾವಯವವಾಗಿ ಅರಿಯುವ ದೃಷ್ಟಿ : ಅನ್ವಯರೂಪವಾದ ದ್ರವ್ಯವಿವಕ್ಷೆಯನ್ನು ಬಿಟ್ಟು ಬೇರೆಬೇರೆ ಪರ್ಯಾಯಗಳನ್ನು ಮಾತ್ರ ವಿಚಾರ ಮಾಡಿದರೆ ವಸ್ತುವು ಬರಿಯ ಪರ್ಯಾಯರೂಪವಾಗಿ ತೋರುತ್ತದೆ (ಧಾರದ. ೦೮೦). [ದ್ರವ್ಯ + ವಿವಕ್ಷೆ]

ದ್ರವ್ಯವ್ಯಸನ (ನಾ). ಹತ್ತು ಬಗೆಯ ಚಿಂತೆಗಳಲ್ಲಿ ಒಂದು ; ಧನವನ್ನು ಶೇಖರಿಸಬೇಕೆಂಬ ತೀವ್ರಾಪೇಕ್ಷೆ ; ಹಣದ ಚಿಂತೆ : ತನುವ್ಯಸನ ರಾಜ್ಯವ್ಯಸನ ವಿಶ್ವವ್ಯಸನ ಸ್ತ್ರೀವ್ಯಸನ ಧಾನ್ಯವ್ಯಸನ ದ್ರವ್ಯವ್ಯಸನ ವಿದ್ಯಾವ್ಯಸನ ಉತ್ಸಾಹಕವ್ಯಸನ ಸೇವಕವ್ಯಸನ ಕಾಷ್ಠವ್ಯಸನಗಳೆಂಬ ದಶವ್ಯಸನಗಳಿಂ ಹಸಗೆಟ್ಟು (ವಿವೇಕ. ೨೪೬). 'ಸಪ್ತವ್ಯಸನ' ಹೋ.
[ದ್ರವ್ಯ + ವ್ಯಸನ]

ದ್ರವ್ಯಶಕ್ತಿ (ನಾ). ವಸ್ತುವಿನ ಮೂಲಗುಣ,-ಸಾಮರ್ಥ್ಯ : ಅನುಮಾನ ಪ್ರಮಾಣಮವಸ್ಥಾದೇಶಕಾಲಾದಿಗಳ್ ಭಿನ್ನವಪ್ಪುದಱಿಂ ದ್ರವ್ಯಶಕ್ತಿಯಿಂ ಭಿನ್ನಂ (ಶಾಂತಿಪು. ೮-೧೨೮ ವ). [ದ್ರವ್ಯ + ಶಕ್ತಿ]

ದ್ರವ್ಯಶುದ್ಧಿ (ನಾ). ೧. (ಉಪಯೋಗಿಸುವ) ಪದಾರ್ಥಗಳನ್ನು ಶುಚಿ ಮಾಡುವಿಕೆ : ದ್ರವ್ಯಶುದ್ಧಿ ಕ್ಷೇತ್ರಶುದ್ಧಿ ಕಾಲಶುದ್ಧಿ ಭಾವಶುದ್ಧಿವೆರಸಿ ಶ್ರುತಮುಮಂ ಶ್ರುತಧರರುಮಂ ಮನ್ನಿಸಿ ಪರಮಾಗಮಾಭ್ಯಾಸಮಂ ಮಾಟ್ಟುದು ಸ್ವಾಧ್ಯಾಯಮೆಂಬುದು (ಪಸಾರ. ೩೭೯) ; ಆತ್ಮಶುದ್ಧಿ ಸ್ನಾನಶುದ್ಧಿ ಲಿಂಗಶುದ್ಧಿ ಮಂತ್ರಶುದ್ಧಿಗಳಂ ವಿಸ್ತರಿಸುವುದಱಲ್ಲಿ (ವಿವೇಕ. ೧೦೩) ; ಸ್ಮೃತಿಗಳು ಬ್ರಹ್ಮಚಾರಿಯ ಜೀವನ . . . ನಿಷಿದ್ಧಾಹಾರ, ಆಶೌಚ, ದ್ರವ್ಯಶುದ್ಧಿ ಶ್ರಾದ್ಧ . . . ಶಾಂತಿಕರ್ಮಗಳನ್ನೂ ವಿವರಿಸುತ್ತವೆ (ಧಾರದ. ೩೭). 'ಭಾವಶುದ್ಧಿ' ಪರಾ. [ದ್ರವ್ಯ + ಶುದ್ಧಿ]

ದ್ರವ್ಯಶೂನ್ಯ (ನಾ). ಏನೂ ಇಲ್ಲದಿರುವಿಕೆ ; ನಿರ್ವಾಯುವಾಗಿರುವಿಕೆ ; ನಿರ್ವಾತಸ್ಥಿತಿ : ಗೆಲಿಲಿಯೊವಿನ ಶಿಷ್ಯನಾದ ಟಾರಿಸೆಲಿಯು . . . ಪಾದರಸದ ವಾಯುಮಾಪಕಯಂತ್ರವನ್ನು (Barometer) ಕಂಡುಹಿಡಿದು ದ್ರವ್ಯಶೂನ್ಯವಾದ ಸ್ಥಳದ (Vacuum) ಭಾವನೆಯನ್ನು ಸ್ಥಾಪಿಸಿದನು (ಶಿಲ್ಪಪಾ. ೦೧೧). [ದ್ರವ್ಯ + ಶೂನ್ಯ]

ದ್ರವ್ಯಸಂವರೆ (ನಾ). [ಜೈನ] ಬರಲಿರುವ ದ್ರವ್ಯದ ಆಸ್ರವವನ್ನು ತಡೆಯುವುದು ; ಕರ್ಮವು ಸೇರಿಕೊಳ್ಳುವುದನ್ನು ತಡೆಯುವುದು : ದ್ರವ್ಯಕರ್ಮದ ಬರವಂ ತಳರ್ವುದು ದ್ರವ್ಯಸಂವರೆಯೆಂಬುದು (ಶಾಸ್ತ್ರಪೀ. ೦೪೪-೧). [ದ್ರವ್ಯ + ಸಂವರೆ]

ದ್ರವ್ಯಸಂಸಾರ (ನಾ). [ಜೈನ] "ಪರಮಾಣು ಮುಂತಾದ ಎಲ್ಲಾ ಶರೀರವನ್ನು ಮೊದಲು ಸ್ವೀಕರಿಸಿ ಅನಂತರ ತ್ಯಜಿಸುವುದು" (ದ್ವಾದಶಾ. ೨೮೧ ಪಾರಿಭಾಷಿಕಕೋಶ) : ಪುದ್ಗಲಪರಿವರ್ತನದೊಳ್ ಕರ್ಮಪರಿವರ್ತನಕ್ಕೆ ಸೂಕ್ಷ್ಮನಿಗೋಧಂ ಲಬ್ಧ್ಯಪರ್ಯಾಪ್ತನವಿಗ್ರಹ ಪ್ರಥಮಸಮಯಮಂ ನೋಡ (ಮೊದ)ಲ್ಮಾಟ್ಟುದು ನೋಕರ್ಮಕ್ಕೆ ಪೇಟ್ದ ಪಂಜಂತ(ಪಜ್ಜತ್ತನ) ಶರೀರೋದಯ ಪ್ರಥಮಸಮಯಮಂ ಮೊದಲ್ ಮಾಟ್ಟುದು ದ್ರವ್ಯಸಂಸಾರಂ (ದಾವುಂಪು. ೨೭) ; ಅಮೂರ್ತಾತೀಂದ್ರಿಯಾನಂತಜ್ಞಾನಸುಖಾದ್ಯನಂತಗುಣಾಧಾರಭೂತಸಹಜಶುದ್ಧಪರಮಾತ್ಮದ್ರವ್ಯೇತರ ಚೇತನಾಚೇತನ ಮೂರ್ತಾಮೂರ್ತರೂಪ ಪೂರ್ವಾಪೂರ್ವ ಮಿಶ್ರಸಮಸ್ತಪುದ್ಗಳದ್ರವ್ಯಸಮೂಹಮಂ ಜ್ಞಾನಾವರಣಾದಿ ದ್ರವ್ಯಕರ್ಮರೂಪದಿಂ ಶರೀರಾದಿ ನೋಕರ್ಮರೂಪದಿಂ ಶರೀರಪೋಷಣನಿಮಿತ್ತಮಾದ ಅಶನಪಾನಾದಿ ಪಂಚೇಂದ್ರಿಯವಿಷಯರೂಪದಿಂ ಮೇಣನಂತವಾರಂ ಜೀವನಿಂ ಸ್ವೀಕರಿಸಿ ಬಿಡೆಪಟ್ಟ ಪರಿಸಂಖ್ಯೆಯನೊಂದು ದ್ರವ್ಯಸಂಸಾರಮೆಂಬುದು (ಪಸಾರ. ೩೩೬) ; ಪರಮಾಣು ಮುಂತಾದೆಲ್ಲ ಶರೀರವನುರು ಮೊದಲೊಳು ಕೊಂಡು ಬಿಟ್ಟು ಮರಳನಂತಬಾರಿ ಕೊಳುತಿರಲಂತದನ ಱಿವುದು ದ್ರವ್ಯಸಂಸಾರ (ದ್ವಾದಶಾ. ೩-೩). [ದ್ರವ್ಯ + ಸಂಸಾರ]

ದ್ರವ್ಯಸ್ಥಾಪನೆ (ನಾ). ನೆಲದಲ್ಲಿ ಹಣವನ್ನು ಹುದುಗಿಸುವುದು ; ನಿಧಿಯನ್ನು ಹುಗಿದಿಡುವುದು. [ದ್ರವ್ಯ + ಸ್ಥಾಪನೆ]

ದ್ರವ್ಯಸ್ವಭಾವಾಖ್ಯಾನ (ನಾ). [ಕಾವ್ಯಮೀ] ಸ್ವಭಾವೋಕ್ತಿ ಅಲಂಕಾರದ ನಾಲ್ಕು ಪ್ರಕಾರಗಳಲ್ಲಿ ಒಂದು ; ಒಂದು ವಸ್ತುವಿನ ಸ್ವರೂಪವನ್ನು ಇದ್ದಂತೆಯೇ ವರ್ಣಿಸುವುದು : ಆಯತ ವಿಳೋಳಲೋಚನೆಯನುನ್ನತಸ್ತನಯುಗೆಯಂ . . . ಪೃಥುನಿತಂಬಬಿಂಬೆಯನುಟಿದಂ ದ್ರವ್ಯಸ್ವಭಾವಾಖ್ಯಾನಂ (ಕವಿರಾ. ೩-೧೦) : ದ್ರವ್ಯಸ್ವಭಾವಾಖ್ಯಾನಕ್ಕೆ – ಕಱಿ ಕೊರಲೊಳ್ ಕಣ್ ನೊಸಲೊಳ್ . . . ನೆಱಿದಿರೆ ಕರಮೆಸೆದಂ ಪಲತೆಱದ ಮರುಳ್ವಡೆಯ ನಡುವುಮಾಪತಿರುದ್ರಂ (ಕಾವ್ಯಾವ. ೬೧೦).
[ದ್ರವ್ಯ + ಸ್ವಭಾವ + ಆಖ್ಯಾನ]

ದ್ರವ್ಯಹರಣ (ನಾ). ಹಣವನ್ನು ಕದಿಯುವುದು ; ಆಸ್ತಿಪಾಸ್ತಿಯನ್ನು ಅಪಹರಿಸುವುದು : (ಕಿ). [ದ್ರವ್ಯ + ಹರಣ$_2$]

ದ್ರವ್ಯಹೀನ (ನಾ). ಹಣವಿಲ್ಲದಿರುವವನು ; ಬಡವ ; ದರಿದ್ರ : ತನುಕೇಶಂ ಪುಣ್ಯವಂತಂ . . . ರೋಮಶಂ ದ್ರವ್ಯಹೀನಂ (ಲೋಕೋಪ. ೧೧-೨೬) ; ದ್ರವ್ಯಹೀನರಂದು ಬಂದು ಸುಂದರೇಶಮೂರ್ತಿಯಂ ಭವ್ಯಚಿತ್ತದಿಂದೆ ಪೂಜಿಸುತ್ತೆ (ಹಾಲಾಸ್ಯ. ೩-೬-೨೪). [ದ್ರವ್ಯ + ಹೀನ]

ದ್ರವ್ಯಾಂಜನ (ನಾ). ಒಂದು ಬಗೆಯ ಅಂಟು, ಲೇಪನದ್ರವ್ಯ ; P ಎಡಗೈಗೆ ಈ ಲೇಪನದ್ರವ್ಯವನ್ನು ಬಳಿದರೆ ಕಳೆದು ಹೋಗಿರುವ ಹಣವು ಮತ್ತೆ ಕಾಣುತ್ತದೆಂಬ ನಂಬಿಕೆಯಿದೆ.
[ದ್ರವ್ಯ + ಅಂಜನ]

ದ್ರವ್ಯಾದ್ವೈತ (ನಾ). ಭಾವಾದ್ವೈತ, ದ್ರವ್ಯಾದ್ವೈತ, ಕ್ರಿಯಾದ್ವೈತ ಎಂಬ ಮೂರು ಬಗೆಯ ಅದ್ವೈತಗಳಲ್ಲಿ ಒಂದು ; P "ತಾನೂ, ತನ್ನ ಹೆಂಡತಿ ಮಕ್ಕಳು ಮೊದಲಾದವರು ಮಾಡುವುದೂ ನೋಡುವುದೂ ಮೊದಲಾದ ಎಲ್ಲಾ ಕಾರ್ಯಗಳೂ, ಒಬ್ಬರಿಂದೊಬ್ಬರಿಗೆ ಉಪಕಾರ ಪ್ರತ್ಯುಪಕಾರವಾದ ಕ್ರಿಯೆಗಳನ್ನೆಲ್ಲಾ ಶ್ರೀ ಪರಮಾತ್ಮನೇ ಮಾಡಿಸುವವನು ಎಂದು ಎಲ್ಲಾ ಕಡೆಯಲ್ಲಿಯೂ ಇರುವ

ಭಗವದ್ರೂಪಗಳನ್ನು ಒಂದಾಗಿ ಭಾವಿಸುವುದಕ್ಕೆ ದ್ರವ್ಯಾದ್ವೈತ ವೆಂದು ಹೆಸರು" (ಹಸಾರ. ೫-೦೦ ತಾತ್ಪರ್ಯ); ಭಾವಾದ್ವೈತ, ದ್ರವ್ಯಾದ್ವೈತ, ಕ್ರಿಯಾದ್ವೈತ ಎಂಬ ಮೂರು ಅದ್ವೈತಗಳನ್ನು ಭಾವಿಸ ಬೇಕು (ಹಸಾರ. ೫-೦೦ ಟೀಕು). [ದ್ರವ್ಯ + ಅದ್ವೈತ]

ದ್ರವ್ಯಾನುಕೂಲ (ನಾ). ಹಣ ಒದಗುವುದು; ಹಣದ ಸೌಕರ್ಯ: ದಾನದಲಿ ವಿದ್ಯೆಯಾ ದಾನವೇ ದಾನಂ . . . ಜ್ಞಾನವನು ಗಳಿಸುವರೆ, ದ್ರವ್ಯಾನುಕೂಲಂ (ಕಎಪು. ೧೬-೬). [ದ್ರವ್ಯ + ಅನುಕೂಲ]

ದ್ರವ್ಯಾನುಯೋಗ (ನಾ). [ಜೈನ] ನಾಲ್ಕು ಬಗೆಯ ಅನುಯೋಗ ಗ್ರಂಥಗಳಲ್ಲಿ ಒಂದು; ಜೀವಾದಿ ಷಡ್ದ್ರವ್ಯಗಳನ್ನೂ ಏಳು ತತ್ವ ಗಳನ್ನೂ ನಿರೂಪಿಸುವ ಶಾಸ್ತ್ರಭಾಗ: ಇನ್ನೊಂದಧಿಕಾರಮುಂಟು ದ್ರವ್ಯಾನುಯೋಗಮೆಂಬುದು ಕೇಳ್ದ ಬಟಿಕ್ಕೆ ಜ್ಯೋತಿಷಶಾಸ್ತ್ರಮಂ ವಖ್ಯಾಣಿಸುವೆಂ (ವಡ್ಡಾರಾ. ೬-೦೨); ಕಿಱಿದುಮೊಂದಧಿಕಾರದಿಂ ದ್ರವ್ಯಾನುಯೋಗಮೆಂಬುದುಂಟದು ನಿಮ್ಮನ್ನರಪ್ಪ ನಿಶಿತಮತಿಗಳ್ಗೆ ಪಂಚರಾತ್ರಿಯೊಳೆ ಪ್ರತೀತಿಯಕ್ಕುಂ (ಸುಕುಮಾ. ೩-೩೭ ಪ). 'ಕರಣಾನಂ ಯೋಗ' ಪರಾ. [ದ್ರವ್ಯ + ಅನುಯೋಗ]

ದ್ರವ್ಯಾಯಿಲ (ನಾ). ಹಣವಂತ; ಧನಿಕ; ಶ್ರೀಮಂತ: ಮಲ್ಲಿಶೆಟ್ಟಿಯು ಮೆಂಬ ಹರದಂಗೆ ಶರಧಿಪರ್ಯಂತ ವ್ಯಾಪಾರಮಂ ಮಾಳ್ಪ ಸುತರುಂ . . . ಬಾಂಧವಜನಂ ಪರಿವೇಷ್ಟಿಸಿರೆ ಕೋಟಿ ದ್ರವ್ಯಾಯಿಲಂ ತ್ಯಾಗಭೋಗ ದೊಳಂ ಕೊಱತಿಲ್ಲದೆ (ಗುರುಚಾ. ೮-೪೨). [ದ್ರವ್ಯ + – ಆಯಿಲ್ಲ]

ದ್ರವ್ಯಾರ್ಜನೆ (ನಾ). ಹಣವನ್ನು ಗಳಿಸುವಿಕೆ; ಆಸ್ತಿಯನ್ನು ಸಂಪಾದಿ ಸುವಿಕೆ: ಅವರ ಜೀವನದ ಮುಖ್ಯಗುರಿ ದ್ರವ್ಯಾರ್ಜನೆಯಲ್ಲ (ಧರ್ಮಸಾ. ೦೦೬). [ದ್ರವ್ಯ + ಆರ್ಜನೆ]

ದ್ರವ್ಯಾರ್ಥಿಕನಯ (ನಾ). [ಜೈನ] ದ್ರವ್ಯಾರ್ಥಿಕನಯ ಮತ್ತು ಪರ್ಯಾಯಾರ್ಥಿಕನಯಗಳೆಂಬ ಎರಡು ಬಗೆಯ ನಯಗಳಲ್ಲಿ ಒಂದು; ದ್ರವ್ಯದ ಕಡೆಗೆ ಲಕ್ಷ್ಯವಿಡುವುದು; ಸಾಮಾನ್ಯ, ಅನ್ವಯ ಅಭೇದ, ಏಕತ್ವ ಇತ್ಯಾದಿ ಯಾವುದೇ ವಿಚಾರಮಾರ್ಗದಿಂದ ದ್ರವ್ಯದ ವಿಚಾರ ಮಾಡುವುದು: ಏಳು ನಯಗಳಲ್ಲಿ ದ್ರವ್ಯಾರ್ಥಿ ಕನಯ, ಪರ್ಯಾಯಾರ್ಥಿಕನಯಗಳು ಎಂದು ಎರಡು ಭಾಗ ಮಾಡಲಾಗಿದೆ . . . ಸಾಮಾನ್ಯ, ಅನ್ವಯ, ಅಭೇದ, ಏಕತ್ವ ಇತ್ಯಾದಿ ಯಾವುದೇ ವಿಚಾರಮಾರ್ಗದಿಂದ ದ್ರವ್ಯದ ವಿಚಾರ ಮಾಡುವುದು ದ್ರವ್ಯಾರ್ಥಿಕನಯವು (ಜೈನಪ. ೨೨೪). [ಸಂ.]

ದ್ರವ್ಯಾಶೆ (ನಾ). ಹಣದ ಆಸೆ; ಧನಾಪೇಕ್ಷೆ. [ದ್ರವ್ಯ + ಆಶೆ]

ದ್ರವ್ಯೇಂದ್ರಿಯ (ನಾ). [ಜೈನ] ಶರೀರನಾಮಕರ್ಮದಿಂದ ದೇಹಕ್ಕೆ ಉಂಟಾಗುವ ವಿಶೇಷ ಚಿಹ್ನೆಗಳು, ಸ್ಪರ್ಶನ, ರಸನಾ, ಘ್ರಾಣ, ಚಕ್ಷು ಮತ್ತು ಶ್ರೋತ್ರಗಳೆಂಬುವು; ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮಗಳೆಂಬ ಐದು ಇಂದ್ರಿಯಗಳು: ದ್ರವ್ಯೇಂದ್ರಿಯಮುಂ ಭಾವೇಂದ್ರಿಯಮುಂ ಎಂದಿಂತು ಇಂದ್ರಿಯಂಗಳಿತ್ತೆಱಂ (ತತ್ತ್ವಪ್ರ. ೯೬); ದ್ರವ್ಯೇಂದ್ರಿಯಗಳಿಂದ ಜೀವಿಗಳಲ್ಲಿ ಏಕೇಂದ್ರಿಯವೇ ಮೊದಲಾದ ಐದು ವಿಭಾಗಗಳಾಗುತ್ತವೆ (ಜೈನಪ.೨೯೫); ಪಂಚೇಂದ್ರಿಯಗಳಲ್ಲಿ ದ್ರವ್ಯೇಂದ್ರಿಯ, ಭಾವೇಂದ್ರಿಯ ಎಂದು ಎರಡು ಬಗೆಗಳು (ಜೈನಧ. ೩೦). 'ಭಾವೇಂದ್ರಿಯ' ಪರಾ. [ದ್ರವ್ಯ + ಇಂದ್ರಿಯ]

ದ್ರಷ್ಟ (ನಾ). ೧. ಕಣ್ಣು ಕಾಣುವವನು; ನೋಡುವವನು: ಹೊಳೆಯಲ್ಲಿ ತೇಲುವನ ಉಡಿಯ ಹಿಡಿದು ಹೋಹಂತ ಅಂಧಕ ದೃ[ದ್ರ]ಷ್ಟನ. ಹಿಂದೆ ಇದ್ದು ನಡೆನಡೆವಂತೆ (ಮೋಳಿಮಾ. ೩೫-೦೪೮); ಜೀವಾತ್ಮನಿಗೆ . . . ನೋಡುತ್ತಿರುವ ಸ್ವಭಾವ ಎಂದರೆ ಸಾಕ್ಷಿತ್ವವು ಇರುವುದರಿಂದ ಇವನು ದ್ರಷ್ಟಾ, ಇತರ ವಸ್ತುಗಳು ದೃಶ್ಯ (ಹಿಂಧಸಾ. ೫೯); ಕಣ್ಣು ಇತರ ವಸ್ತು ಗಳನ್ನು ನೋಡುತ್ತದೆ, ಇದರಲ್ಲಿ ದೃಶ್ಯ, ದ್ರಷ್ಟ ಎಂದರೆ ನೋಡಲ್ಪಡತಕ್ಕ ಮತ್ತು ನೋಡುವವನ ಭೇದವು ಸ್ಪಷ್ಟವಾಗಿದೆ (ಜೀವಾತ್ಮ. ೪೨). ೨. ಕಾಣಬಹುದಾದುದು; ಗೋಚರಿಸುವುದು; ನೋಟಕ್ಕೆ ಸಿಕ್ಕುವುದು: ಶಾಸ್ತ್ರದಿಂದಲೂ ದ್ರಷ್ಟಾ, ಬೋದ್ಧಾ, ಸರ್ವಜ್ಞಾತಾ ಎಂದು ಈಶ್ವರನ ಸ್ವರೂಪ ತಿಳಿಯಲ್ಪಡುವುದು (ಹಿಂದಸಾ. ೧೨೬). [ಸಂ. ದ್ರಷ್ಟೃ]

ದ್ರಷ್ಟವ್ಯ (ನಾ). ಸಾಕ್ಷಾತ್ಕರಿಸಿಕೊಳ್ಳಬೇಕಾದವನು; ದರ್ಶನವಾಗ ಬೇಕಾದವನು: ಸೇವ್ಯನನು ಸತ್ಕೃತಿಗಳಲಿ ದ್ರಷ್ಟವ್ಯನನು ದೃಢಚಿತ್ತದಲಿ ಮಂತ್ರವ್ಯನಾ ಶ್ರೋತವ್ಯನನು . . . ಅಜ್ಞಾನದಲಿ ಯೋದ್ಧ [ಪಾಠಾ: ಗ]ವ್ಯನೆಂದೇ ಸೆಣಸಿದೆವಲಾ (ಕುಪ್ಯಾಅ. ೬-೬೪). [ಸಂ.]

ದ್ರಷ್ಟಾರ (ನಾ). ದೈವಿಕವಾದ ತಿಳಿವಳಿಕೆಯನ್ನು ಹೊಂದಿದವನು; ದಿವ್ಯದೃಷ್ಟಿಯುಳ್ಳವನು; ದಾರ್ಶನಿಕ; ಪ್ರವಾದಿ: ಕ್ರೌಂಚದರ್ಶನ ಕವಿಯು ಮಂತ್ರದ್ರಷ್ಟಾರ (ಕ್ರೌಂಚಧ್ವ. ೩೩-೦೩); ಸಾಂಖ್ಯದರ್ಶನದ ದ್ರಷ್ಟಾರ ಮಹರ್ಷಿ ಕಪಿಲ (ಭಾರದ. ೧೧೩); ಆ ಕ್ಷಣದಿಂದಲೇ ಹಜರತ್ ಮಹಮ್ಮದರು ದ್ರಷ್ಟಾರರಾದರು (ಮನೋನಂ. ೨೮೮). [ಸಂ. ದ್ರಷ್ಟೃ]

ದ್ರಾಕ್ಷಾಪಾಕ (ನಾ). [ಕಾವ್ಯಮೀ] ಸರಳವಾಗಿ ಹಾಗು ಸುಲಭವಾಗಿ ರಸವನ್ನು ಗ್ರಹಿಸಲು ಸಾಧ್ಯವಾದ ಶೈಲಿ; P ದ್ರಾಕ್ಷಿಯ ಹಣ್ಣನ್ನು ಬಾಯಿಗೆ ಹಾಕಿಕೊಂಡು ಸುಲಭವಾಗಿ ಅಗಿದು ಅದರ ರಸವನ್ನು ಗ್ರಹಿಸಬಹುದು. ಹೀಗೆ ಸುಲಭವಾಗಿ ಅರ್ಥವಾಗುವುದು ದ್ರಾಕ್ಷಾಪಾಕ: ದ್ರಾಕ್ಷಾಪಾಕಮೆನೆ . . . ಅರ್ಥಮಂ ತಿಳಿವಾಗುಳುಂ ತಾತ್ಪರ್ಯಮಪೂಹಿಸುವಾಗಳುಂ ಒಂದೇ ಬಗೆಯಾಗಿ ಅಂದಮಾಗಿರ್ಕುಂ (ಅಪ್ರತಿ. ೨೨-೦೯); ದ್ರಾಕ್ಷಾಪಾಕದಂದದಿ . . . ನಾ ರಚಿಪೆ ಕಾವ್ಯವ ಸಾರಧರಿತದಲಿ (ಬಿಜ್ಜಪು. ೩-೯); ದ್ರಾಕ್ಷಾಪಾಕಕ್ಕೆ :–ಎಣಿಸೆ ನಖಂಗಳಿಂ ದುಡಿಯದಿರ್ದ ಚಿಗುರ್ ಕಡೆದೆಜ್ಜವಿತ್ಕದೊಳ್ಮಣಿ ಸವಿ ನೋಡದಿರ್ದಭಿನವಂ ಮಧು . . . ಅಕೆಯ ರೂಪನಘಂ ಗಡಾ ಅದಕ್ಕೆಣೆಯೆನೆ ಭೋಕ್ತೃವಂ ವಿಧಿಯದಾವನನೊಂದಿಪನಾಹ ಕಾಣೆ ನಾಂ (ಕೈಪಿಡಿ. ೨೨೫). 'ನಾರಿಕೇಳ ಪಾಕ' ಪರಾ. [ಸಂ.]

ದ್ರಾಕ್ಷಾಫಳ (ನಾ). ದ್ರಾಕ್ಷಿಯ ಹಣ್ಣು: ಅಯ್ಯ ಹಾವುಮೆಕ್ಕೆಯಲ್ಲಿ ದ್ರಾಕ್ಷಾಫಳವನಱಸುವರೆ (ಅದವ. ೦೩-೨೯). [ಸಂ. ದ್ರಾಕ್ಷಾಫಲ]

ದ್ರಾಕ್ಷಾರಸ (ನಾ). ೧. ದ್ರಾಕ್ಷಿಯ ಹಣ್ಣಿನ ರಸ; ದ್ರಾಕ್ಷಾಸಾರ. ೨. ದ್ರಾಕ್ಷಿಯ ರಸದಿಂದ ತಯಾರಿಸಿದ ಮದ್ಯ: ಪುರೋಹಿತ . . . ತಟ್ಟೆಯೊಂದರಲ್ಲಿ ರೊಟ್ಟಿಯನ್ನು ಸಣ್ಣಸಣ್ಣ ಚೂರುಗಳಾಗಿ ಕತ್ತರಿಸಿ ಕ್ರಮವಾಗಿರಿಸಿ, ಅನಂತರ ಅವುಗಳನ್ನು ಒಂದು ಬಟ್ಟಲಿನಲ್ಲಿದ್ದ ದ್ರಾಕ್ಷಾರಸಕ್ಕೆ ಸುರಿಯುತ್ತಿದ್ದನು (ಪುನರು. ೧೭೫); ಸೀಸೆಯನ್ನು ತಂಪಾದ ಕೆಂಪು ದ್ರಾಕ್ಷಾ ರಸದಿಂದ ತುಂಬಿ ಮರ್ಯಂಕಳು ಅದನ್ನು ವನ್ಯೂಷನಿಗೆ ಕೊಟ್ಟಳು (ಮಲೆನಾ. ೬೭). [ಸಂ.]

ದ್ರಾಕ್ಷಾರಿಷ್ಟ (ನಾ). [ವೈದ್ಯ] ಕೆಲವು ಔಷಧದ್ರವ್ಯಗಳ ಸಾರವನ್ನು ಬಟ್ಟೆಯಿಳಿಸಿ ತೆಗೆದು, ಸಕ್ಕರೆ, ಜೇನು ಮುಂತಾದ ವಸ್ತು ಗಳೊಡನೆ ಕೂಡಿಸಿ ದ್ರಾಕ್ಷಾರಸವನ್ನು ಸೇರಿಸಿ ತಯಾರಿಸುವ ಒಂದು ಬಗೆಯ ಕಷಾಯ. [ಸಂ.]

ದ್ರಾಕ್ಷಾವಲ್ಲಿ (ನಾ). ದ್ರಾಕ್ಷಿಯ ಹಣ್ಣಿನ ಬಳ್ಳಿ; ದ್ರಾಕ್ಷೆಬಳ್ಳಿ: ದ್ರಾಕ್ಷಾ ವಲ್ಲಿಯ ಫಲಮನಪೇಕ್ಷಿಸುವೊಡೆ ಕೋಟಿಯೆ(ಯ)ಚ್ಚಮಂ ತೊಡೆ ಮೇಣ ಭ್ಯುಕ್ಷಿಸು ಮಾಂಸಕಷಾಯಮನಕ್ಷೂಣಫಲಂಗಳಕ್ಕುಂ (ಲೋಕೋಪ. ೬-೫೩). [ಸಂ.]

ದ್ರಾಕ್ಷಾಸವ (ನಾ). = ದ್ರಾಕ್ಷಾರಸ ೨: ಫ್ರಾನ್ಸ್, ಪೋರ್ತುಗಾಲ ದೇಶ ಗಳಿಂದ ತರತರದ ದ್ರಾಕ್ಷಾಸವಗಳೂ ಮದ್ಯಗಳೂ ಬರುತ್ತವೆ (ಮುಂಬಯಿ. ೪-೦೬೦). [ಸಂ.]

ದ್ರಾಕ್ಷಿ (ನಾ). ೧. ಒಂದಂ ಬಗೆಯಂ ಬಳ್ಳಿ ಮತ್ತು ಅದರ ಹಣ್ಣು ; ಗೋಸ್ತನಿ : "ಗೋಸ್ತನಿ ಮೃದ್ವೀಕಾಭಿಧಾನೆ ತಾಂ ದ್ರಾಕ್ಷಿ" (ಪಸ್ತುಕೋ. ೩೬-೨೨) : ಮಾಂಸರಸಮಂ ಕಷಾಯಂ ಮಾಡಿ ತೊಡೆಯುತ್ತುಮಿರಲ್ ದ್ರಾಕ್ಷಿ ಸಂಪೂರ್ಣ ಫಲಮಪ್ಪುದು (ಲೋಕೋಪ. ೬-೩೩ ಟೀಕೆ) ; ನಮ್ಮಲ್ಲಿ ದ್ರಾಕ್ಷಿಯನ್ನು ಸುಲಭವಾಗಿ ಬೆಳೆಸಬಹುದು (ಪ್ರವಮ. ೫೮). ೨. ಒಣಗಿದ ದ್ರಾಕ್ಷಿ : ದ್ರಾಕ್ಷಿ, ಗೋಡಂಬಿಗಳ ಜೆಲೆ ಈಗ ಬಹಳ ಹೆಚ್ಚು (ರೂಢಿ).

[ಸಂ. ದ್ರಾಕ್ಷಾ]

ದ್ರಾಕ್ಷಿಚೂರ್ಣ (ನಾ). ದ್ರಾಕ್ಷಿ ಮುಂತಾದ ಅನೇಕ ಔಷಧಿದ್ರವ್ಯಗಳನ್ನು ಹಾಕಿ ಮಾಡಿದ ಪುಡಿ : ದ್ರಾಕ್ಷಿಚೂರ್ಣಿ-ದ್ರಾಕ್ಷಿಹಣ್ಣು, ಕೊತ್ತುಂಬರಿ . . . ಚೂರ್ಣಿಸಿ . . . ನಿತ್ಯವೂ ಉದಯಕಾಲದಲ್ಲಿ ಸೇವಿಸೆ ಪಿತ್ತಜ್ವರ; ಪಾಂಡು, ಕಾಮಾಲೆ ಸಹ ಮಾಣ್ಗುಂ (ಸಕವೈ. ೮೪).

[ದ್ರಾಕ್ಷಿ + ಚೂರ್ಣ]

ದ್ರಾಕ್ಷೆ (ನಾ). ೧. = ದ್ರಾಕ್ಷಿ ೧. : "ಮೃದ್ವೀಕಾ, ಗೋಸ್ತನೀ, ದ್ರಾಕ್ಷಾ, ಹಾರಹೂರಾ-ಈ ೪ ದ್ರಾಕ್ಷೆ" (ಹಲಾಯು. ೩೨-೪೦) ; ಓಳಿ ಮೆಣಸನಂ ದ್ರಾಕ್ಷೆಯನು ರಸದಾಳಿ ದಾಳಿಂಬಂಗಳಿಂ ತವೆ ಬಾಲದಿಂದಲಿ ಕಿತ್ತೊರಸಿ ಹುಡಿಹುಡಿಮಾಡಿದನು ಹನುಮ (ಕೌಶಿರಾ. ೧೦-೨೦) : ತೆಗೆದ ತೊಱೆ ಕಾಲುವೆಗಳುದ್ಯಾನಗಳ ಕಳಮ ದ್ರಾಕ್ಷೆ ಧವಳೇಕ್ಷುಗಳ ವನವೀಥಿಗಳನೀಕ್ಷಿಸು ತರಸನೈತಂದ (ತೊರರಾ. ೧-೬-೧೦). ೨. = ದ್ರಾಕ್ಷಿ ೨ : ಅರೆದಿಂಬಾಗಿರೆ ಬೆಂದ ಪೋಟಿಗೆಗಳಂ ತಚ್ಚೂರ್ಣ ಪಂಚಾಂಶಮಾಗಿರೆ ಖರ್ಜೂರಮನೆಲ್ಲದಂ ದೆಱದ ಪಣ್ಣಂ ದ್ರಾಕ್ಷೆಯಂ ಮತ್ತೆ ಶರ್ಕರೆಯು ಪೊಯ್ದು . . . ಖಂಡ ಲಡ್ಡುಗೆಗಳಂ ಮಾಟ್ಕೆಂದುಮಿ ಮಾಟ್ಕೆಯಿಂ (ಲೋಕೋಪ. ೮-೧೪).

ದ್ರಾಕ್ಷಾದಿ ಘೃತ = ದ್ರಾಕ್ಷೆ ಮುಂತಾದ ಅನೇಕ ಔಷಧಿದ್ರವ್ಯಗಳನ್ನು ಹಾಕಿಮಾಡಿದ ಔಷಧಿ,-ಲೇಹ್ಯ : ದ್ರಾಕ್ಷಾದಿಘೃತ . . . ಈ ಘೃತವನ್ನು ಹೊಟ್ಟೆಗೆ ಸೇವಿಸುವುದರಿಂದ ಅಸ್ಥಿಗತಜ್ವರ . . . ಪುರಾಣಜ್ವರಗಳೆಲ್ಲಾ ಮಾಣುವುವು (ಸಕವೈ. ಪರಿ ೪೦೬). ದ್ರಾಕ್ಷಾದಿ ಚೂರ್ಣ = ದ್ರಾಕ್ಷಿಚೂರ್ಣ : ದ್ರಾಕ್ಷಾದಿಚೂರ್ಣ-ದ್ರಾಕ್ಷೆ, ಭತ್ತದರಳು . . . ಈ ದ್ರವ್ಯಗಳಿಗೆ ಸಮಭಾಗ ಸಕ್ಕರೆಯನ್ನು ಹಾಕಿ ಸೇವಿಸಲು ಪಿತ್ತರೋಗ, ಪಾಂಡು, ಕಾಮಿಲಾ ರೋಗೆಗಳು, ರಕ್ತಪಿತ್ತ, ದಾಹಜ್ವರಗಳು ಪ್ರಮೇಹಗಳು ಮಾಣುವುವು (ಸಕವೈ. ಪರಿ ೪೧೬). ದ್ರಾಕ್ಷಾದಿ ಲೇಹ್ಯ = ದ್ರಾಕ್ಷೆ ಮುಂತಾದ ಅನೇಕ ಔಷಧಿ ದ್ರವ್ಯಗಳನ್ನು ಹಾಕಿ ಮಾಡಿದ ಔಷಧಿ,-ಲೇಹ್ಯ : (ಕಿ).

[ಸಂ. ದ್ರಾಕ್ಷಾ]

ದ್ರಾಗ್ಭೃತಕ (ನಾ). ಬಾವಿಯಿಂದ ಆಗ ತಾನೆ ಸೇದಿದ ನೀರು : "ದ್ರಾಗ್ಭೃತಕಂಯೆಂಬುದು ಅಗಟ್ತಿಯ ನೀರ್" (ಹಲಾಯು. ೧೦೭-೨೭).

[ಸಂ.]

ದ್ರಾಘಮ (ನಾ). ಉದ್ದ ; ನೀಳ ; ದೀರ್ಘತೆ : "ದ್ರಾಘಮಮಕ್ಕುಂ ಪ್ರಾಂಶುತೆ" (ಪಸ್ತುಕೋ. ೧೦೫-೨೯) ; ಮುದದಿಂದಂ ದ್ರಾಘಮಶ್ಲಾಘಿ ಬಾಹುಗಳಿಂದಂ ತೆಗೆದಪ್ಪಿಕೊಂಡನರಸಂ ಶ್ರೀರೂಪಕಂದರ್ಪನಂ (ಸುಳುಮಾ. ೧೦-೨); ಮೂಷೆಯಿಟ್ಟ ತೆಱದಿಂ ಗ್ರಾವಸ್ಥಲಂ ಲೋಹವಾದುವು ರೇಣುಸ್ಥಲಿ ಕಾಜುವಿಟ್ಟುವು ನಿದಾಘದ್ರಾಘಮೋದ್ರೇಕದೊಳ್ (ಪಂರಾಮಾ. ೭-೪೭) ; ದಿಶಾಕರಿ ಹಸ್ತಾಯತಮಾಂಸಲಂ ಭುಜಗರಾಜದ್ರಾಘಮಂ ವಿಶ್ವಭೂಧರಮಂ ತಾಳ್ದಿದುದೊಂದೆ ದಕ್ಷಿಣಭುಜಾದಂಡಂ ಧರಾಧೀಶನಾ (ಅನಂಪು. ೨-೬).

[ಸಂ. ದ್ರಾಘಮನ್]

ದ್ರಾಘಿಷ್ಠ (ಗು). ತುಂಬಾ ಉದ್ದವಾದ ; ಅತಿ ದೀರ್ಘವಾದ ; ಬಲಂ ನೀಳವಾದ. [ಸಂ.]

ದ್ರಾಪ (ನಾ). ೧. ಕೆಸರು ; ರಾಡಿ. ೨. ಗಗನ ; ಆಕಾಶ. ೩. ದಡ್ಡ ; ಮೂರ್ಖ ; ತಿಳಿಗೇಡಿ. [ಸಂ.]

ದ್ರಾಬೆ, ದ್ರಾಭೆ (ನಾ). ೧. ದಡ್ಡ ; ಪೆದ್ದ ; ಮೂರ್ಖ. ೨. ಕೆಲಸಕ್ಕೆ ಬಾರದವನು ; ನಿಷ್ಪ್ರಯೋಜಕ. ೩. ಕೊಳಕ ; ಹೊಲಸು ಮನುಷ್ಯ. ೪. ದುರ್ಬಲ ವ್ಯಕ್ತಿ : ಈಗಿನವರು ನಾಜೂಕು ಕಲಿತುಕೊಂಡು ಬಿಟ್ಟಿದ್ದಾರಮ್ಮ . . . ಒಂದೋ ಎರಡೋ ಆಗಲಿಕ್ಕಿಲ್ಲ-ದ್ರಾಬೆಗಳ ಹಾಗೆ ಆಗುವುದು (ತಾಯಿಕ. ೪೭). ದ್ರಾಭೆ : ೩. ಅವನ ಮೈಬಟ್ಟೆಗಳೂ ಕೊಳೆ ಹತ್ತಿ ನಾರುತ್ತಿದ್ದುವು . . . ಅಂತಹ ಎಷ್ಟೋ ಒಂದು ದ್ರಾಭೆಗಳನ್ನು ಪ್ರಪಂಚದಲ್ಲಿ ನೋಡಿದ್ದರಿಂದ ಅದರಲ್ಲಿ ಅವರಿಗೆ ನ್ಯೂನತೆ ಅಷ್ಟೇನೂ ಕಾಣಿಸಲಿಲ್ಲ (ಸುಖವಿ. ೮೪).

ದ್ರಾಬೆ ಜನ = ಕೊಳಕುತನದಿಂದ ಕೂಡಿದ ಜನ: ಮೈಗೆ ಸ್ನಾನವನ್ನು ಕಾಣಿಸದಂಥ ದ್ರಾಬೆಜನಗಳು ಇವರು (ರೂಢಿ). ದ್ರಾಬೆ ನಂಟ = ಅಸಹ್ಯವನ್ನು ಹುಟ್ಟಿಸುವ ನಂಟ ; ಬೇಜಾರಂ ಹೊಂದುವಂತೆ ಮಾಡುವ ಬಂಧಂ : ಈ ದ್ರಾಬೆ ನಂಟನ ಕಾಟ ನಮಗೆ ತಪ್ಪಿದ್ದಲ್ಲ (ರೂಢಿ). ದ್ರಾಬೆ ಮಾತು = ಕೆಲಸಕ್ಕೆ ಬಾರದ ಮಾತು ; ನೀರಸವಾಕ್ಕು : ಅವನ ದ್ರಾಬೆ ಮಾತು ಯಾವ ಪರಿಣಾಮವನ್ನೂ ಬೀರುವಂತಿರಲಿಲ್ಲ (ರೂಢಿ). ದ್ರಾಬೆ ಮುಖ = ಸಪ್ಪೆಯಾದ ಮುಖ ; ನೀರಸ ಮುಖ ; ನಿಸ್ತೇಜವಾದ ಮುಖ : ದ್ರಾಬೆಮುಖಕ್ಕೆ ಸೋಬಾನೆ ಒಂದು ಕೇಡು (ಗಾದೆ). ದ್ರಾಬೆ ಮೂತಿ = ದ್ರಾಬೆಮುಖ : ಈ ದ್ರಾಬೆಮೂತಿಗೆ ಎಷ್ಟು ಮಾಡಿದರೂ ಅಷ್ಟೇ (ರೂಢಿ). ದ್ರಾಬೆಮೋರೆ = ದ್ರಾಬೆಮುಖ : ಅವರು ದ್ರಾಬೆಮೋರೆ ಹಾಕಿ ಕೊಳ್ಳುವುದನ್ನು ನೋಡಿದರೆ ಮತ್ತೂ ರೇಗುತ್ತದೆ (ರೂಢಿ).

[<ಸಂ. ದ್ರಾಪ./ತಮಿ. ತಿರಾಪೈ; ತೆಲು. ದ್ರಾಬ , ದೇಬೆ]

ದ್ರಾಭೆ 'ದ್ರಾಬೆ' ನೋ.

ದ್ರಾಮಿಡ (ಗು). ದ್ರಾವಿಡದೇಶಕ್ಕೆ ಸಂಬಂಧಿಸಿದ : ತಾಂತ್ರಿಕಸಿದ್ಧಿ ಮಂತ್ರಂಗಳಿಂ ದ್ರಾಮಿಡ ವೈಕೃತ ಪ್ರಾಕೃತ . . . ಕ್ಷುದ್ರಮಂತ್ರಂಗಳಂ ಬೇಱೆ ಬೇಱೆ ಉಪದೇಶ ಅನುಷ್ಠಾನಪರೀಕ್ಷೆಗಳಿಂ ವಿವೇಕಿಸಿ ತಿಳಿದಿರಲಕ್ಕುಂ (ವಿವೇಕ. ೮೦). [<ಸಂ. ದ್ರಾವಿಡ]

ದ್ರಾಮಿಡಗೌಳ (ನಾ). [ಸಂಗೀತ] ಒಂದು ರಾಗದ ಹೆಸರು ; ಗೌಳ ರಾಗದ ಒಂದು ಪ್ರಭೇದ : ಕರ್ಣಾಟಗೌಳ ದ್ರಾಮಿಡಗೌಳವೆಂಬೇಳುಂ ಉಪಾಂಗಗೌಳ ರಾಗಂಗಳು (ವಿವೇಕ. ೨೩೪). [< ಸಂ. ದ್ರಾವಿಡಗೌಲ]

ದ್ರಾಮಿಡಘೂರ್ಜರಿ (ನಾ). [ಸಂಗೀತ] ಒಂದು ರಾಗದ ಹೆಸರು ; ಘೂರ್ಜರಿ ರಾಗದ ಒಂದು ಪ್ರಭೇದ : ಮಹಾರಾಷ್ಟ್ರಘೂರ್ಜರಿ ಸೌರಾಷ್ಟ್ರಘೂರ್ಜರಿ ದ್ರಾಮಿಡಘೂರ್ಜರಿ ದಕ್ಷಿಣಘೂರ್ಜರಿಯೆಂಬ ನಾಲ್ಕುಂ ಉಪಾಂಗಘೂರ್ಜರೀ ರಾಗಂಗಳು (ವಿವೇಕ. ೨೩೪).

[<ಸಂ. ದ್ರಾವಿಡಗೂರ್ಜರೀ]

ದ್ರಾಮಿಡವರಾಳಿ (ನಾ). [ಸಂಗೀತ] ಒಂದು ರಾಗದ ಹೆಸರು ; ವರಾಳಿ ರಾಗದ ಒಂದು ಪ್ರಭೇದ : ಸಿಂಧುವರಾಳಿ ಕನ್ನಡವರಾಳಿ ದ್ರಾಮಿಡವರಾಳಿ ಪ್ರಥಮವರಾಳಿಯೆಂಬ ನಾಲ್ಕು ರಾಗಂಗಳುಂ ಉಪಾಂಗವರಾಳಿಗಳು (ವಿವೇಕ. ೨೩೪). [<ಸಂ. ದ್ರಾವಿಡವರಾಲೀ]

ದ್ರಾಮಿಡಿ (ನಾ). ತಮಿಳುನಾಡಿನ ಹೆಂಗಸು ; ದ್ರಾವಿಡ ದೇಶದ ಸ್ತ್ರೀ : ಜೃಂಭತ್ಕೋಕೀ ವಿಯೋಗಾನಲ ವಿಪುಲ ಶಿಖಾಜಾಲ ಮುತ್ತಾಲನೃತ್ತಾರಂಭ ಕ್ಷುಭ್ಯದ್ಗಿರೀಶಪ್ರಚುರತರ ಜಟಾಮಾಲಮಾಶಾಂಗನಾ ಕೌಸುಂಭಾರಕ್ತೋತ್ತರೀಯಂ ಮಸಗಿತು ರಜನೀದ್ರಾಮಿಡೀಗಂಡಪಾಳೀಶುಂಭತ್ಸಿಂಧೂರಕಂ ಸಾಂಧ್ಯರುಚಿರವಿಕರೋತ್ಕೃತ್ತಮಂ ದೇಹರಕ್ತಂ' (ಚಿಕವಿ. ೬-೮).

[ದ್ರಾಮಿಡ + – ಇ]

ದ್ರಾವ (ನಾ). ೧. ಓಡುವಿಕೆ ; ಪಲಾಯನ. ೨. ವೇಗ ; ರಭಸ. ೨. ಹರಿಯುವಿಕೆ ; ಪ್ರವಹಿಸುವಿಕೆ. ೪. ಕರಗಿಸುವಿಕೆ. ೫. ಬಟ್ಟೆಯಿಳಿಸುವುದು. [ಸಂ.]

ದ್ರಾವಕ (ಗು). ೧. ಓಡುವಂತೆ ಅಥವಾ ಹರಿಯುವಂತೆ ಮಾಡುವ. ೨. ಕರಗಿಸುವ; ನೀರಾಗಿಸುವ. (ನಾ). ೩. ಕಾಂತಾಕರ್ಷಣವುಳ್ಳಂದು; ಆಯಸ್ಕಾಂತ; ಸೂಜಿಗಲ್ಲು. ೪. ಚಂದ್ರಕಾಂತಶಿಲೆ. ೫. ಕಳ್ಳ; ಚೋರ. ೬. ಚಾತುರ್ಯವುಳ್ಳವನು; ಕುಶಲ; ಚತುರ: ತೀವಿದರು ಹೊಱವಳಯದಲಿ ನಾನಾವಿಧದ ನಾಟಕದ ನರ್ತನ ಭಾವಕ ದ್ರಾವಕ ಸುಗಾಯಕ ಮಲ್ಲಚಿತ್ರಕರು (ಕುಪ್ಯಾಅ. ೧೨-೨೦); ಕೋವಿದರು ಕರ್ಣಾಂಘ್ರಿಯಂಗಹೀನರು ಮೂಕವಾಮನರು ದ್ರಾವಕರು ಜೂಜಿಗರು ಬಿರುದುಗಳ ತೋರುವರು (ತುರಂಗ. ೩೯-೩೫). ೭. ಕಾಮುಕ; ವ್ಯಭಿಚಾರಿ. ೮. ಜೇನುಮೋಣ. ೯. [ವೈದ್ಯ] ಬಟ್ಟಿಯಿಳಿಸಿ ತಯಾರಿಸಿದ ಔಷಧಿ: ದ್ರಾವಕವನ್ನು ಗಂಟಲೊಳಕ್ಕೆ ಲೇಪನ ಮಾಡಿಸಿಕೊಂಡೆ (ನಂಟರು. ೩೮). ೧೦. [ವಿಜ್ಞಾ] ಲೋಹವೇ ಮುಂತಾದುವನ್ನು ಕರಗಿಸಲು ಉಪಯೋಗಿಸುವ ಒಂದು ಬಗೆಯ ರಾಸಾಯನಿಕ ದ್ರಾವಣಾಮ್ಲ: ಸುಬ್ಬುವಿನ ಸಿಟ್ಟು ದ್ರಾವಕದಲ್ಲಿ ಬಿದ್ದ ಲೋಹದಂತೆ ಕರಗಿಹೋಯಿತು (ಭೀಮಕಾ. ೦೬೨); ರಾಸಾಯನಿಕಯಂತ್ರಗಳಿಂದ ಬರುವ ದುರ್ವಾಸನೆಯ ದ್ರಾವಕಗಳೆಲ್ಲಾ ನದಿಗಳಲ್ಲಿ ಬೆರೆತರೆ ಇನ್ನೇನಾಗುತ್ತೆ? (ಶಿಲ್ಪನಾ. ೦೫೭).

[ಸಂ.]

ದ್ರಾವಣ (ನಾ). ೧. ದ್ರವರೂಪದ ವಸ್ತು; ದ್ರವವಸ್ತು: ಪೊಟಾಸಿಯಂ ಪರ್ಮಾಂಗನೇಟ್ ದ್ರಾವಣವಾದರೋ ನೋಡುವುದಕ್ಕೆ ಊದಾಬಣ್ಣವಾಗಿ ಕಂಡರೂ ಹಸುರು, ನೀಲಿ ಬಣ್ಣಗಳ ಕೆಲವು ಭಾಗಕ್ಕೆ ಮಾತ್ರ ಸ್ವಲ್ಪವೂ ಪಾರದರ್ಶಕವಾಗಿರದೆ ಉಳಿದ ಬಣ್ಣಗಳಿಗೆ ಸಾಧಾರಣವಾಗಿರುತ್ತದೆ (ಭೌತವಿ. ೦೫೫); ಇನ್ನೊಂದು ಚೂರನ್ನು ಅದರೊಡನೆ ಸುಲಭವಾಗಿ ಬೆರೆಯುವ ದ್ರಾವಣದಲ್ಲಿಡುತ್ತೇನೆ (ಯೋಧಪು. ೫೭). ೨. ಕರಗಿಸುವಿಕೆ. ೩. (ಆಲಂ) ಮರುಳಾಗುವಿಕೆ; ಮೋಹಗೊಳ್ಳುವಿಕೆ: ಆ ಬೇರನ್ನು ತಾಮ್ರದ ತಗಡಿಗೆ ಹುದುಗಿಸಿ ಹಲ್ಲು ನುಲಿಯೆ ಏಳನೆಯ ಉಪ್ಪರಿಗೆಯಲ್ಲಿ ಇದ್ದ ಸ್ತ್ರೀಯಾದರೂ ದ್ರಾವಣ ತಪ್ಪದು (ಪಿಪ್ಪವಿ. ೨೦೨). [ಸಂ.]

ದ್ರಾವಣಿ (ನಾ). ಕರಗುವ ಸ್ವಭಾವವುಳ್ಳದು; ನೀರಾಗುವಂಥುದು: ಅಮರ್ದಿನುಂಡಿಗೆಗಳೆನಿಸುವ ಪಾಲುಂಡೆಗಳುಮನತಿಮೃದುಲಲಿತಕೋಮಲ ತಲಸಂಗಮಾತ್ರ ದ್ರಾವಣಿಯಪ್ಪ ಶಾಕವರ್ತಿಗೆಗಳುಮಂ ... ಪರಿಜನಕ್ಕೆಲ್ಲಂ ಬಡ್ಡಿಸಿದಾಗಳ್ (ಸುಕುಮಾ. ೦೦-೨೯ ವ). [ಸಂ. ದ್ರಾವಣಿನ್]

ದ್ರಾವಣೀಯ (ಗು). ಕರಗುವ; ದ್ರವಿಸುವ: ಅತಿಮೃದುರಸನಾಸಮ್ಮರ್ದನ ಮಾತ್ರದ್ರಾವಣೀಯಘೃತಪೂರಮುಂ (ಆದಿಪು. ೧೧-೨೬ ವ). [ಸಂ.]

ದ್ರಾವಾಗ್ನಿ (ನಾ). ಕರಗಿ ಹರಿಯುವ ಬೆಂಕಿ; ಲಾವಾರಸ: ಬೆಂಕಿವೆಟ್ಟುಗಳೋಕರಿಸಿದುವು ಭಯಂಕರಯಂಗಾಂತಕದ್ರಾವಾಗ್ನಿಯಂ (ಶ್ರೀರಾಮಾ. ೮೦೭-೦೯೭). [ದ್ರಾವ + ಅಗ್ನಿ]

ದ್ರಾವಿಡ (ಗು). ೧. ದ್ರವಿಡಕ್ಕೆ ಸಂಬಂಧಿಸಿದ: "ದ್ರಾವಿಡ" ಎಂಬ ಶಬ್ದ ದ್ರಮಿಳ ಎಂಬ ಒಂದು ಪೂರ್ವರೂಪದಿಂದ ಬೆಳೆದಿರುವ ರೂಪ ಎಂದು ತೋರುತ್ತದೆ (ನಮ್ಮನು. ೦೪). 'ದ್ರಾವಿಡಕುಲ', 'ದ್ರಾವಿಡಭಾಷೆ' ಪರಾ. (ನಾ). ೨. ದ್ರಾವಿಡದೇಶಕ್ಕೆ ಸೇರಿದವನು: ಮಧ್ಯಭಾರತದ ಪಶ್ಚಿಮ ಉತ್ತರ ಮಧ್ಯಭಾಗಗಳಲ್ಲಿ ಕ್ರಿ. ಪೂ. ೧೫೦೦ ರಿಂದ ೮೦೦ರವರೆಗೆ ... ತುರೇನಿಯನ್ ಪಂಗಡದವರು ಪ್ರಭುತ್ವ ಮಾಡುತ್ತಿದ್ದರು. ಅವರನ್ನೇ ಸೌಲಭ್ಯದೃಷ್ಟಿಯಿಂದ ದ್ರಾವಿಡರೆಂದು ಕರೆಯಲಾಗಿದೆ (ಭಾರದ. ೦೭೦). ೩. ದ್ರಾವಿಡದೇಶಕ್ಕೆ ಸಂಬಂಧಿಸಿದ ಭಾಷೆ: ಇವುಗಳಲ್ಲಿ ಸಿಗುವ ... ದ್ರಾವಿಡದ ಪದಗಳು ಮುಖ್ಯವೆನ್ನಬಹುದು (ದ್ರಾವಿವಿ. ೬೨). ೪. ತಮಿಳು ದೇಶ: ಅವಱಂ ಪೊಱಗೆ ಮತ್ತಂ ಕರ್ನಾಟಕ ಆಂಧ್ರ ದ್ರಾವಿಡ ... ದೇಶಭಾಷೆಗಳೊಳ್ ಪುಟ್ಟುವವೆಲ್ಲಂ ಸರ್ವವಿಷಯಭಾಷಾಜಾತಿಗಳಕ್ಕುಂ (ಧಂದೋಂಬು. ಕಿ. ೧-೬೭ ಅಡಿಟಿ). ೫. ಒಂದು ಜನಾಂಗ ಮತ್ತು ಆ ಜನಾಂಗಕ್ಕೆ ಸೇರಿದವನು; ತಮಿಳುನಾಡಿನವನು; ತಿಗುಳ: "ತಿಗುಳ ದ್ರಾವಿಡನಕ್ಕು" (ಮಂಗರಾ. ೧೦೨-೭). ೬. = ದ್ರಾವಿಡಸಂಘ: ಸಂಘಗಳು: ಮೂಲ, ನಂದಿ, ಯಾಪನೀಯ, ಯಾಪನೀಯನಂದಿ, ದ್ರಾವಿಡ, ಶ್ರೀಸಂಘ, ಕಿತ್ತೂರು (ಕಶಾಅ. ೮೬). ೭. [ವಾಸ್ತು] ಭಾರತೀಯ ವಾಸ್ತುಶಿಲ್ಪದ ನಾಗರ, ದ್ರಾವಿಡ ಮತ್ತು ವೇಸರಗಳೆಂಬ ಮೂರು ಪ್ರಭೇದಗಳಲ್ಲಿ ಒಂದು; ದಕ್ಷಿಣ ದೇಶದಲ್ಲಿರುವ ವಾಸ್ತುಶಿಲ್ಪ: ಆರು ಅಥವಾ ಎಂಟು ಮುಖಗಳುಳ್ಳ ದೇವಾಲಯ: ಶಿಲ್ಪಶಾಸ್ತ್ರಗಳಲ್ಲಿ ... ಉತ್ತರ ಭಾರತದಲ್ಲಿ ನಾಗರ, ಕಾವೇರಿಗೆ ದಕ್ಷಿಣದಲ್ಲಿ ದ್ರಾವಿಡ, ಮಧ್ಯದಲ್ಲಿ ವೇಸರ ರೀತಿಗಳಿವೆಯೆಂದು ಹೇಳಿದೆ (ಹೊಯ್ಸಪಾ. ೧); ಕಾಮಿಕಾಗಮ ಮತ್ತು ಸುಪ್ರಭೇದಾಗಮಗಳಲ್ಲಿಯೂ ಈ ಮೂರು ರೀತಿ (Style)ಗಳ ವಿಷಯವನ್ನು ಹೇಳಿದೆ. ಅವುಗಳೇ ನಾಗರ, ದ್ರಾವಿಡ ಮತ್ತು ವೇಸರ (ಭಾರದ. ೪೯೨).

ದ್ರಾವಿಡ ನಮೂನೆ = ದ್ರಾವಿಡ ವಾಸ್ತುಶಿಲ್ಪದ ಮಾದರಿ: ದ್ರಾವಿಡ ನಮೂನೆಯ ಶಿಖರವು ಅಡ್ಡಡ್ಡವಾದ ಹಂತಗಳಿಂದ ಕೂಡಿ, ಪಿರಮಿಡ್ಡಿನ ಆಕಾರವನ್ನು ಹೊಂದಿದೆ (ಭಾರದ. ೪೯೨). ದ್ರಾವಿಡ ರೀತಿ = ದ್ರಾವಿಡ ನಮೂನೆ: ನಾಗರ ಮತ್ತು ದ್ರಾವಿಡ ರೀತಿಗಳ ವಿಮಾನಗಳು ಚತುರಸ್ರಾಕಾರವಾಗಿದ್ದು ತುದಿಯಲ್ಲಿ ಶಿಖರವನ್ನು ಹೊಂದಿರುತ್ತವೆ (ಮ್ಯಾಪಾಸ್ತು. ೨೭). ದ್ರಾವಿಡ ಶೈಲಿ = ದ್ರಾವಿಡ ನಮೂನೆ: ಇಲ್ಲಿ ಕಾಣುವ ದ್ರಾವಿಡಶೈಲಿಯು ಐಹೊಳೆ, ಬಾದಾಮಿಯಲ್ಲಿರುವ ದೇವಾಲಯಗಳಿಗೂ ದಕ್ಷಿಣದ ಪಲ್ಲವ ಮತ್ತು ಚೋಳರು ಕಟ್ಟಿಸಿರುವ ಭವ್ಯವಾದ ದೇವಾಲಯಗಳಿಗೂ ಮಧ್ಯದ ಹೆಜ್ಜೆಯನ್ನಾಗಿ ಪರಿಗಣಿಸಬಹುದಾಗಿದೆ (ಮ್ಯಾಪಾಸ್ತು. ೩೫).

[ಸಂ.]

ದ್ರಾವಿಡಕ (ನಾ). ಒಂದು ಬಗೆಯ ಸಸ್ಯ; ಕಾಡುಅರಿಸಿನದ ಗಿಡ; ವನ ಹರಿದ್ರೆ; ಕಚೋರ: "ಕಚ್ಛೂರಕಃ ... ದ್ರಾವಿಡಕಃ, ಕಾಲ್ಯಕಃ, ವೇದ ಮುಖ್ಯಕಃ—ಈ ೪ ಗಂಧ ಕಚೋರದ ಹೆಸರುಗಳು" (ಸಿದ್ಧಾಂತಿ. ೦೪೩).

[ಸಂ.]

ದ್ರಾವಿಡತಪಸ್ಸು (ನಾ). ಆರ್ಯವರ್ಗಕ್ಕೆ ಸೇರದ, ಸಾತ್ವಿಕವಲ್ಲದ ತಪಸ್ಸು; ದುಷ್ಟಕಾರ್ಯಕ್ಕಾಗಿ ಶಕ್ತಿಯನ್ನು ಸಂಪಾದಿಸುವ ತಪಸ್ಸು: ದ್ರಾವಿಡತಪಸ್ಸಿನಿಂ ಮೃಡನಿಂ ಬರಂಗಳಂ ಪಡೆದನೆಂಬರ್ ಕಣಾ (ಶ್ರೀರಾಮಾ. ೨೯-೫೦). [ದ್ರಾವಿಡ + ತಪಸ್ಸು]

ದ್ರಾವಿಡದೇಶ (ನಾ). = ದ್ರಾವಿಡಧರೆ: ದ್ರಾವಿಡದೇಶದಲ್ಲಿ ನರಸಿಂಹ ನರಾಧಿಪನೆಂಬ ಭಕ್ತಂ ... ಒಪ್ಪುತಿರ್ಪಂ (ವೃಷವಿ. ೧೪-೦೦೧).

[ದ್ರಾವಿಡ + ದೇಶ]

ದ್ರಾವಿಡಧರೆ (ನಾ). ತಮಿಳುನಾಡು: ಸಂದ ಮಹಂತರೊಳು ದ್ರಾವಿಡ [ಪಾಕಂ. ೪]ಧರೆಯೊಳತ್ಯಂತಭಕ್ತನು (ಅಸಪು. ೨೪-೭೭).

[ದ್ರಾವಿಡ + ಧರೆ]

ದ್ರಾವಿಡಪದ್ಧತಿ (ನಾ). ೧. ದ್ರಾವಿಡಜನರಿಗೆ ಸಂಬಂಧಿಸಿದ ಸಂಪ್ರದಾಯ. ೨. [ಛಂದ] ದ್ರವಿಡವರ್ಗಕ್ಕೆ ವಿಶಿಷ್ಟವಾದ ರೀತಿ: ಆದರೂ ಶುದ್ಧದ್ರಾವಿಡಪದ್ಧತಿಯೊಂದು ಮೊದಲಿನಿಂದಲೂ ಸೂಕ್ಷ್ಮವಾದ ರೀತಿಯಲ್ಲಿ ಇದ್ದಿರಬೇಕೆಂದು ಊಹಿಸಬಹುದು (ಕ್ರೈಪಿಡಿ. ೦೮೨).

[ದ್ರಾವಿಡ + ಪದ್ಧತಿ]

ದ್ರಾವಿಡಪ್ರಬಂಧ (ನಾ). ತಮಿಳುದೇಶದ ವೈಷ್ಣವಭಕ್ತರು ಶರಣಾಗತಿ ತತ್ವವನ್ನು ಬೋಧಿಸಲು ರಚಿಸಿದ ವೇದಾಂತತತ್ವಗಳನ್ನೊಳಗೊಂಡ ಕೃತಿಗಳು; ಆಳ್ವಾರುಗಳ ರಚನೆಗಳು: ಆಚಾರ್ಯರ ಹೊಸಮತಕ್ಕೆ ಆಧಾರಗಳೆಂದು ಹೇಳಲಾದ ದ್ರಾವಿಡಪ್ರಬಂಧಗಳನ್ನು ರಚಿಸಿದವರಲ್ಲಿ ಬೇರೆ ಬೇರೆ ಜಾತಿಯವರಿದ್ದರೆಂದು ಹೇಳಲಾಗಿದೆ (ಭಾರದ. ೨೮೫).

[ದ್ರಾವಿಡ + ಪ್ರಬಂಧ]

ದ್ರಾವಿಡಪ್ರಾಣಾಯಾಮ (ನಾ). (ಆಲಂ) ಬಳಸುದಾರಿಯ ಸಾಧನೆ: ಅನವಶ್ಯಕವಾದ ಶ್ರಮಂ: ಇಷ್ಟೆಲ್ಲ ದ್ರಾವಿಡಪ್ರಾಣಾಯಾಮ ಮಾಡಿ, ಪೀಠಿಕಾರೂಪವಾಗಿ ಸ್ವಲ್ಪ ಹೇಳಿ ಇನ್ನು ವಿಷಯಕ್ಕೆ ಕೈ ಹಚ್ಚುತ್ತೇನೆ (ನಾಡಿಗೇ. ೨೮೯); ಇಷ್ಟೆಲ್ಲಾ ಒದ್ದಾಡಿ ದ್ರಾವಿಡಪ್ರಾಣಾಯಾಮ ಮಾಡ ಬೇಕೆ? (ಕುರುಳಾ. ೧೩); ಈ ದ್ರಾವಿಡಪ್ರಾಣಾಯಾಮವೆಲ್ಲಾ ಬೇಡ (ಹಂಗೀತೆ. ೪೫). P ದ್ರಾವಿಡರಲ್ಲಿ ಪ್ರಾಣಾಯಾಮಂ ಮಾಡುವಾಗ ಮೂಗನ್ನು ಹಿಡಿಯಬೇಕಾದರೆ ಬಲಗೈಯನ್ನು ತಲೆಯ ಸುತ್ತ ಬರುವಂತೆ ಚಾಲಿಸುವುದು ಒಂದು ಸಂಪ್ರದಾಯ.

[ದ್ರಾವಿಡ + ಪ್ರಾಣಾಯಾಮ]

ದ್ರಾವಿಡಬ್ರಾಹ್ಮಣ (ನಾ). ೧. ಪಂಚ ದ್ರಾವಿಡಭಾಷೆಗಳಲ್ಲಿ ಯಾವುದಾದ ರೊಂದನ್ನು ತಾಯ್ನುಡಿಯಾಗುಳ್ಳ ಬ್ರಾಹ್ಮಣ. 'ಪಂಚದ್ರಾವಿಡ' ಪರಾ. ೨. ತಮಿಳಂಭಾಷೆಯನ್ನು ತಾಯ್ನುಡಿಯಾಗುಳ್ಳ ಬ್ರಾಹ್ಮಣ.

[ದ್ರಾವಿಡ + ಬ್ರಾಹ್ಮಣ]

ದ್ರಾವಿಡಭಾಷೆ (ನಾ). ದಕ್ಷಿಣದೇಶದ ದ್ರವಿಡವರ್ಗಕ್ಕೆ ಸೇರಿದ ಭಾಷೆ ಗಳಲ್ಲಿ ಒಂದು; ತಮಿಳು, ಕನ್ನಡ, ಮಲಯಾಳ, ತುಳು, ತೆಲುಗು, ಕೊಡಗು ಇತ್ಯಾದಿ; P ದ್ರಾವಿಡಭಾಷಾವರ್ಗದ ಉಗಮ ಹಾಗು ಅವುಗಳ ಸಂಖ್ಯೆಗಳ ಬಗೆಗೆ ಖಚಿತವಾದ ವಿವರಣೆ ದೊರೆತಿಲ್ಲ. ದೊರೆತಿರುವ ವಿವರಣೆಯ ಆಧಾರದ ಪ್ರಕಾರ ಅದರ ಉಪಭಾಷೆ ಗಳ ಸಂಖ್ಯೆ ಮೂವತ್ತಕ್ಕೂ ಮೀರಿದೆ. ಇವುಗಳಲ್ಲಿ ಕೆಲವು ಉತ್ತರ ದೇಶದ ಕೆಲವು ಪ್ರದೇಶಗಳಲ್ಲಿಯೂ ನೆಲೆನಿಂತಿವೆ. ಉದಾಹರಣೆಗೆ ಗೋಂಡಿ (ಮಧ್ಯಪ್ರದೇಶ, ಬಿಹಾರ, ಒರಿಸ್ಸಾ), ಬ್ರಾಹೂಈ (ಬಲೂಚಿಸ್ಥಾನ, ಸಿಂಧ್), ಕಂಈ (ಒರಿಸ್ಸಾ), ಕಂವಿ (ಒರಿಸ್ಸಾ, ಆಂಧ್ರ), ಪೆಂಗು (ಒರಿಸ್ಸಾ), ಕೋಲಾಮಿ (ಮಧ್ಯ ಪ್ರದೇಶ, ಬೀರಾರ್), ಪರ್ಜಿ (ಮಧ್ಯಪ್ರದೇಶ, ಪಶ್ಚಿಮಬಂಗಾಳ), ಮಲ್ತೊ (ರಾಜಮಹಾಲ್ ಪರ್ವತಪಂಕ್ತಿ), ಒಲ್ಲಾರಿ, ಕೊರಗ (ದಕ್ಷಿಣ ಕನ್ನಡ), ಗದಬ (ಒರಿಸ್ಸಾ), ಕೊಯ (ಆಂಧ್ರ), ಕೊಂಡ (ಒರಿಸ್ಸಾ), ತೋಡ, ಬಡಗ, ಕೋತ (ನೀಲಗಿರಿ), ಕುರುಖ್ (ಬಿಹಾರ್, ಅಸ್ಸಾಂ), ನಾಯ್ಕಿ (ಮಹಾರಾಷ್ಟ್ರದ ಛಾಂದಾಜಿಲ್ಲೆ) ಮೊದಲಾದುವು: ಸಂಸ್ಕೃತದ ಪ್ರಭಾವ ಉಳಿದ ದ್ರಾವಿಡಭಾಷೆಗಳಿಗಿಂತ ತಮಿಳಿನಲ್ಲಿ ಕಡಮೆ (ದ್ರಾವಿವಿ. ೧೦೭); ದ್ರಾವಿಡಭಾಷೆಯ ಗುಂಪಿಗೆ– ತಮಿಳು (ದ್ರಾವಿಡ), ತೆಲುಗು, ಕರ್ಣಾಟಕ, ತುಳುವು, ಮಲೆಯಾಳ ಭಾಷೆ ಗಳು ಸೇರಿರುವುವು (ಭಾರದ. ೪೨೨). [ದ್ರಾವಿಡ + ಭಾಷೆ]

ದ್ರಾವಿಡವೇದ (ನಾ). = ದ್ರಾವಿಡ ಪ್ರಬಂಧ: ಈ ಆಳ್ವಾರುಗಳಲ್ಲಿ ಕೆಲವರು ರಚಿಸಿದ ತಿರುವಾಯ್ಮೊಟ್ ಮುಂತಾದ ಗೀತೆಗಳು ಚತುರ್ವೇದದ ಸಾರವ ನ್ನೊಳಗೊಂಡು ದ್ರಾವಿಡವೇದವೆಂದು ಖ್ಯಾತವಾಗಿವೆ (ಭಾರದ. ೨೮೫).

[ದ್ರಾವಿಡ + ವೇದ]

ದ್ರಾವಿಡಸಂಘ (ನಾ). [ಜೈನ] ದಕ್ಷಿಣದೇಶದಲ್ಲಿ ನೆಲಸಿದ ಜೈನಮುನಿಗಳ ಸಂಘ: ತಮಿಳುನಾಡಿನಲ್ಲಿ ದ್ರಾವಿಡಸಂಘವೆಂಬ ಸಂಘವಿದ್ದರೂ ಈ ಸಂಪ್ರದಾಯ ಅಲ್ಲಿ ಕಂಡುಬರುವುದಿಲ್ಲ (ಕಣಅ. ೮೬). 'ದ್ರವಿಳಸಂಘ' ಪರಾ. [ದ್ರಾವಿಡ + ಸಂಘ]

ದ್ರಾವಿಡಸಂಪ್ರದಾಯ (ನಾ). = ದ್ರಾವಿಡಪದ್ಧತಿ.

[ದ್ರಾವಿಡ + ಸಂಪ್ರದಾಯ]

ದ್ರಾವಿಡಸಂಸ್ಕೃತಿ (ನಾ). ದಕ್ಷಿಣದೇಶದ ದ್ರವಿಡವರ್ಗಕ್ಕೆ ಸೇರಿದವರ ಸಂಸ್ಕೃತಿ: ಡಾ॥ ಎ. ಪಿ. ಕರಮರಕರ್ ಎಂಬ ವಿದ್ವಾಂಸ ಮೊಹೆಂಜೊ ದಾರೊದ ಸಂಸ್ಕೃತಿ ನಿಶ್ಚಯವಾಗಿಯೂ ದ್ರಾವಿಡಸಂಸ್ಕೃತಿಯೆಂದೇ ಸಾರಿದನು (ದ್ರಾವಿವಿ. ೨೫). [ದ್ರಾವಿಡ + ಸಂಸ್ಕೃತಿ]

ದ್ರಾವಿಡಿ (ನಾ). ೧. ದ್ರಾವಿಡದೇಶದ ಹೆಂಗಸು. ೨. [ಸಂಗೀತ] ಒಂದು ರಾಗದ ಹೆಸರು: ಭರತಖಂಡದ ಹಲವು ಒಳನಾಡುಗಳಲ್ಲಿಯೂ ಭಿನ್ನವಾದ ಗಾನಪದ್ಧತಿಯಿತ್ತೆಂಬುದಕ್ಕೆ ಆಂಧ್ರಿ, ದ್ರಾವಿಡಿ, ಸೌವೀರಿ ಮುಂತಾದ ಪ್ರಾಚೀನ ಜಾತಿರಾಗಗಳ ಹೆಸರುಗಳೇ ಸಾಕ್ಷಿಯಾಗಿವೆ (ಗಾನಕೆ. ೪೬). [ಸಂ. ದ್ರಾವಿಡೀ]

ದ್ರಾವಿತ (ಗು). ಕರಗಿದ; ದ್ರವವಾದ: ಕೊಳದೊಳ್ನಿಂದು ತರತ್ತರಂಗ ಜಳಮಂ ಮಿಂದಲ್ಲಿ ನಗ್ನಾಂಗಿ ಪೊಕ್ಕಳಿನಾದಚ್ಛಲದಿಂ ಕುಮಂತ್ರಜಪಮಂ ತದ್ವೇಷದಿಂ ಮಾಡೆ ಕೋಮಳೆ ಶೂನ್ಯಾಧ್ವಮನ್ಯೆದೆ ದಾಂಟಿ ನಿಜಪಾದಂ ಪೋಗೆ ಮೈಗಂದಿ ಬೀಳ್ದಳಿದಂ ದ್ರಾವಿತ ಚಂದ್ರಸಾಂದ್ರತರರುಗ್ಭಾಸ್ವತ್ಕರಂ ಭಾಸ್ಕರಂ (ರಾಜಶೇ. ೦೩-೩೨). [ಸಂ.]

ದ್ರಾವಿಳ (ನಾ). = ದ್ರಾವಿಡ ೨: ನಾಗರದ್ರಾವಿಳಕಳಿಂಗವೆಸರ ಯಾಮಂ ನಾತ್ಯಂತರಮೆಂಬ ಜಾತಿಗಳೊಳಂ (ಮಹಾನೇ. ೦೫-೨೭ ಪ).

[<ದ್ರಾವಿಡ]

ದ್ರು (ನಾ). ಮರ; ವೃಕ್ಷ: "ತರು ಶಾಖಿ . . . ದ್ರುಮಂ ದ್ರು ಶಾಳಂ . . . ಮರಂ ನಗಂ ಕುಟಮನೋಕಹಂ ಶಿಖಿ ವೃಕ್ಷಂ" (ವಸ್ತುಕೋ. ೩೦-೧); "ತರು ವನಸ್ಪತಿ ಸಾಲಮಂಘ್ರಿಪಂ ದ್ರು ದ್ರುಮಂ . . . ಕುಜಮೆನಲು ವೃಕ್ಷಕ್ಕೆ ನಾಮವಕ್ಕುಂ" (ಮಂಗರಾ. ೩೦-೧). [ಸಂ.]

ದ್ರುಕಿಲಿಮ (ನಾ). ಒಂದು ಬಗೆಯ ಮರ; ದೇವದಾರು ವೃಕ್ಷ: "ಚಕ್ರ ಪಾದಪಃ, ಪಾರಿಭದ್ರಃ, ಭದ್ರದಾರು, ದ್ರುಕಿಲಿಮಂ . . . ಪೂತಿಕಾಷ್ಠಂ– ೭ ದೇವದಾರು ವೃಕ್ಷದ ಹೆಸರು" (ಸಿದ್ಧಾಂತಿ. ೦೨೪). [ಸಂ.]

ದ್ರುಗುಯುಗಳ (ನಾ). ಕಣ್ಣುಗಳ ಜೋಡಿ; ನಯನದ್ವಯ: ದ್ರುಗುಯುಗಳ ವರೆದೆಱೆಯೆ [ಪಾಕಾಂ. ದೃಗುಯುಗವನರೆದೆಱೆದು] ರೋಮಾಳಿಗಳು ತಕ್ಕೆಯ ಸಾರೆ ಕೊರಳರೆಮಗುಳೆ ಹಿಂಗಾಲ್ಗೊಂಡು ಖುರವನು ತೂಗಿಯೊಲೆದೊಲೆದು . . . ತೂಕಡಿಸಿದವು ತುರಗ (ಕುಷ್ಯಾವಿ. ೮-೮೪). [<ಸಂ. ದೃಗ್ಯುಗಲ]

ದ್ರುಗುರಜ (ನಾ). ಕಣ್ಣಿಗೆ ಬಿದ್ದ ದೂಳು: ರುಜೆಯನಲುಗುವ ರದನವ ದ್ರುಗುರಜವನು . . . ವೈರಿವ್ರಜವನುಳುಹುವನೆಗ್ಗನು (ಕುಷ್ಯಾಅ. ೮-೩೯)

[<ಸಂ.ದೃಗ್ರಜ]

ದ್ರುಗ್ಧ (ಗು). ೧. ಕಾಡಿಸಿದ; ಪೀಡಿಸಿದ; ತೊಂದರೆಪಡಿಸಿದ. ೨. ದ್ರೋಹಮಾಡಿದ. (ನಾ). ೩. ತೊಂದರೆ; ಪೀಡೆ. [ಸಂ.]

ದ್ರುಘಣ (ನಾ). ೧. (ಮರದಿಂದ ಮಾಡಿದ) ಕೊಡತಿ; ಗುದಿಗೆ: "ಮುದ್ಗರಃ, ದ್ರುಘಣಃ–ಈ ೨ ಡಂಗೆ" (ಹಲಾಯು. ೭೮-೩೨೦); "ದ್ರುಘಣಮೆನೆ ಡಂಗೆ" (ಮಂಗರಾ. ೮೮-೩೭). ೨. ಕೊಡಲಿ; ಪರಶು.

[ಸಂ.]

ದ್ರುಣ (ನಾ). ೧. ಚೇಳು; ವೃಶ್ಚಿಕ: "ವೃಶ್ಚಿಕಂ ದ್ರುಣಂ" (ವಸ್ತುಕೋ. ೪೦-೮). ೨. ಬಿಲ್ಲು; ಧನುಸ್ಸು: "ದ್ರುಣಂ ಕಾರ್ಮುಕಂ . . . ಚಾಪ ಮೆನಲು ಬಿಲ್ಲಿಂಗೆ ನಾಮಂ" (ಮಂಗರಾ. ೮೭-೩೨). ೩. ಕತ್ತಿ. [ಸಂ.]

ದ್ರುಣಿ (ನಾ). ೧. ಜರಿ; ಸಾವಿರಕಾಲು; ಲಕ್ಷ್ಮೀಚೇಳು. ೨. ಹೆಣ್ಣು ಆಮೆ. ೩. ಮರದ ತೊಟ್ಟಿ; ದೋಣಿ. [ಸಂ. ದ್ರುಣಿ, ದ್ರುಣೀ]

ದ್ರುತ (ಗು). ೧. ವೇಗವಾದ; ಶೀಘ್ರವಾದ. 'ದ್ರುತಗತಿ' ಪರಾ. ೨. ಹರಿದ; ಓಡಿದ. ೩. ಕರಗಿದ; ದ್ರವವಾದ: ಗಗನಕೆ ಸಹಜಾ ಭರಣಂ ಜಗದಾತ್ಮಂ ಕಲ್ಪಿತ ಶಶಿಮೂರ್ತಿಯೆನಿಪ್ಪಾ ಜಗತಃಪ್ರಸೂತಿ ನೀಡುಗೆ ಸೊಗಮಂ ದ್ರುತಕನಕಸದೃಶದಶಶತಕಿರಣಂ (ಜಾತತಿ. XI ಉಪೋದ್ಘಾತ). ೪. ಚದರಿದ; ಹರಡಿದ. (ನಾ). ೫. ವೇಗ; ರಭಸ: "ದ್ರಾಕ್, ಚಪಳಂ . . . ದ್ರುತಂ, ಅಂಜಸಾ, ಝಟಿತಿ – ಈ ೧೬ ಶೀಘ್ರಂ" (ಹಲಾಯು. ೧೦೬-೦೨); "ತ್ವರಿತಂ ದ್ರುತಂ ಕ್ಷಿಪ್ರಮಾಶು ಲಘು

. . . ತೂರ್ಣಮಹ್ನಂ ಶೀಘ್ರಮಕ್ಕು" (ಮಂಗರಾ. ೦೨೬-೭); ದ್ರುತದೊಳೆ ಪೋಗಿ ದೇವಿಯ ಸಮೀಪದೆ . . . ನಿನ್ನ ಮಧುರಾವಳಿ ವೀಣೆಯ ವಾದನ ಪ್ರಗಲ್ಭಿತ ಪದದಿಂದೆ ಕೌತುಕಮನೋಲಗಿಸು (ಕುಸುಮಾ. ೦೩-೩೫); ವರ್ಣಗಳ ಉಚ್ಚಾರಣೆಯಲ್ಲಿ ಬರಬಹುದಾದ 'ದ್ರುತ', 'ವಿಲಂಬಿತ' ಮುಂತಾದ ವಕ್ತೃವ್ಯಾಪಾರವನ್ನೂ "ಧ್ವನಿ"ಯೆನ್ನಲಾಗಿದೆ (ಧ್ವನ್ಯಾಲೋ. ೩೯ ಅಡಿಟಿ). ೬. ತೀವ್ರಗತಿ; ಶೀಘ್ರವಾದ ಚಲನೆ: ಪುಣ್ಯರೇಖೆಯೆ ಕೊಂಕಿ ಪುಟ್ಟಿತೆನೆ ಪಾಪಚಕ್ರದ ವಕ್ರತಾದ್ರುತಂ, ಇಂದೊ ನಾಳೆಯೊ ಎಂದೊ ಗೆಲ್ಲದಿರ್ಪುದೆ ಋತಂ ತನ್ನ ಮುನ್ನಿನ ಋಜುತೆವೆತ್ತು? (ಶ್ರೀರಾಮಾ. ೨೮೨-೦೩೦). ೭. ಚೇಳು; ವೃಶ್ಚಿಕ: "ದ್ರುತಃ, ಆಳಿಃ, ವೃಶ್ಚಿಕಃ – ಈ ೩ ತೇಟ್ (ಚೇಳು)" (ಹಲಾಯು. ೦೦೬-೨೩); "ದ್ರುತಮಾಲಿ ವೃಶ್ಚಿಕಂ ಕ್ರೂರಚೇಟ್ನಿಕುಂ" (ಮಂಗರಾ. ೦೦೯-೫). ೮. ದೋಣಿಯನ್ನು ನಡೆಸುವ ಸಾಧನ; ಹುಟ್ಟು: "ಖಜಿಕೆ ದರ್ವೀ ದಾರುಹಸ್ತಂ ದ್ರುತಂ ಹುಟ್ಟೆನಿಕ್ಕು" (ಮಂಗರಾ. ೬೦-೦೮). ೯. [ಸಂಗೀತ] ಅನುದ್ರುತ, ದ್ರುತ, ಲಘು, ಗುರು, ಪ್ಲುತ ಮತ್ತು ಕಾಕಪಾದ ಎಂಬ ತಾಳದ ಆರು ಅವಯವಗಳಲ್ಲಿ ಒಂದು; ಅನುದ್ರುತದ ಎರಡರಷ್ಟು ಕಾಲ: ಗುರು ಲಘು ದ್ರುತ ಪ್ಲುತಂಗಳ ಸರ್ವಪರಿವಿಡಿದು ಸೂಡಿ ದಾಭರಣಗಳುಲಿಯೆ ನೆಱ್ ತಾಡಿಸಲು ತಾಳಗಳ (ಸನತ್ಕು. ೪-೧೨); ಅನುದ್ರುತ, ದ್ರುತ, ಲಘು, ಗುರು, ಪ್ಲುತ ಮತ್ತು ಕಾಕಪಾದ ಇವೇ ಷಡಂಗಗಳು (ಸಂಗೀಚಂ. ೫೪). ೧೦. ದ್ರುತ, ಮಧ್ಯ ಮತ್ತು ವಿಳಂಬ ಎಂಬ ಮೂರು ವಿಧವಾದ ಲಯಭೇದಗಳಲ್ಲಿ ಒಂದು; ವೇಗವಾದ ಕಾಲ; ತೀವ್ರವಾದ ಲಯ: ದ್ರುತವಿಲಂಬಿತಮಧ್ಯಲಯಂ ತತ್ವಾನುಗತಾಘಗತಿತ್ರಯಂ ಜತಿಯೊಳೊಂದುವಿನಂ ಪದಿನೆಂಟು ಚಾರಿ ಮನೋಹರಮಾಗೆ . . . ಭಾರತಿಕನೋಜೆಗೆ ಬಾಜಿಸಿದಂ ಚಿತ್ತಕ್ಕೆ ಚಮತ್ಕೃತಿಯಪ್ಪಿನಂ (ಮಲ್ಲಿಪು. ೮-೩೫); ದ್ರುತಮಧ್ಯಲಯವಿಳಂಬಿತಗತಿಯತಿ ಕೌತುಕಮನೀಯೆ (ಮಹಾನೇ. ೮-೫೪); ಲಯದಲ್ಲಿ ದ್ರುತ (ಹೆಚ್ಚಿನ ವೇಗ) ಮಧ್ಯ (ಹೆಚ್ಚೂ ಅಲ್ಲದ, ನಿಧಾನವೂ ಅಲ್ಲದ) ಮತ್ತು ವಿಳಂಬ (ನಿಧಾನ) ಎಂದು ಮೂರು ವಿಧ (ಸಂಗೀಚಂ. ೫೭); ಬುದ್ಧಿವಂತರಾದ ಕೆಲವರು ಗೀತವನ್ನು ವಿಲಂಬವೂ ದ್ರುತವೂ ಅಲ್ಲದ ಮಧ್ಯಕಾಲದಲ್ಲಿ ನಡೆಯಿಸಬೇಕೆನ್ನುವರು (ಗಾನಳ. ೭೬). [ಸಂ.]

ದ್ರುತಕಾಲ (ನಾ). = ದ್ರುತ ೧೦: ಕೃಷ್ಣಯ್ಯರ್ . . . ಸ್ವರಾಭ್ಯಾಸವನ್ನು ನಾಲ್ಕುಸ್ಥಾಯಿಗಳಲ್ಲಿಯೂ ದ್ರುತಕಾಲದಲ್ಲಿಯೂ ವಿಲಂಬಿತಕಾಲದಲ್ಲಿಯೂ (ಮಂದ ಮತ್ತು ತೀವ್ರಗತಿಗಳಲ್ಲಿ) ನಡೆಸುತ್ತಿದ್ದರು (ಸಂಗೀತ. ೯೬).

[ದ್ರುತ + ಕಾಲ]

ದ್ರುತಗತಿ (ನಾ). ಶೀಘ್ರವಾದ ಚಲನೆ,-ಗಮನ: ದ್ರುತಗತಿಯಿಂ ಮೇಧಾವಿಳಯುತದಿಂದೇಟ್ಟಂದು ಭೂಪಮನ್ಮಥನಂತಾ ವ್ರತಿಪತಿಯ ಪದಪಯೋಜದ್ವಿತಯಕ್ಕಾನಮ್ರನಾದನತ್ಯುತ್ಸವದಿಂ (ಕುಸುಮಾ. ೧೫-೦೦೪); ಗತಿರಹಿತರಿರವು ತನ್ನಂ ಬೆತೆಗೊಳಿಸಲ್ಕಾಳಲಾಱದುದ್ಧರಣಾರ್ಥಂ ದ್ರುತಗತಿಯಿನವರನೆಲೆಗೀ ಧೃತವ್ರತಂ ನಡೆವ ಭಂಗಿಯೇನಚ್ಚರಿಯೋ (ವಸ್ತುವಂ. ೭-೫೨); ತನಗೆ ಅರ್ಥವಾಗದ ಭಾಷೆಯಲ್ಲಿ ಓದಿ ಹೇಳಲ್ಪಟ್ಟ ಪದ್ಯಗಳಲ್ಲಿರುವ ಏರಿಳಿತಗಳ ಆವೃತ್ತಿ, ದ್ರುತಗತಿ ಅಥವಾ ವಿಲಂಬ ಚಲನೆ ಸ್ವರಮೇಳದಂತೆ ತನ್ನಲ್ಲಿ ಉತ್ಸಾಹದ ಅಥವಾ ವಿಷಾದದ ಭಾವವನ್ನು ಪ್ರೇರಿಸುತ್ತದೆ (ಸಾಹಿಪ್ರ. ೭೦); ದ್ರುತಗತಿಯಲ್ಲಿ ಸಂಗೀತವು ಮುಗಿದ ಮೇಲೂ ನಿರಂತರವಾದ ಶ್ರುತಿಯು ಶಾಂತವಾಗಿ ಸಾಗುವಂತೆ (ವಂಶವ್ಯ. ೨). [ದ್ರುತ + ಗತಿ]

ದ್ರುತಚಾಲನ (ನಾ). ತ್ವರಿತಗತಿ; ಶೀಘ್ರವಾಗಿ ಚಲಿಸುವಿಕೆ: ದ್ರುತಚಾಲನದಿಂದ ವೇಗವಾಗಿ ಮುಂದಕ್ಕೆ ಹೋಗುವುದು ಯಂತ್ರದ ಗಾಡಿಯ ಸಂಬಂಧದಲ್ಲಿ ನಿಜವಾಗಬಹುದು (ನಿಬಂಧ. II, ೨೦೦). [ದ್ರುತ+ಚಾಲನ]

ದ್ರುತಪದ (ನಾ). [ಛಂದ] ಜಗತೀಛಂದಸ್ಸಿನ ಒಂದು ಭೇದ; ಪ್ರತಿಪಾದದಲ್ಲಿಯೂ ಹನ್ನೆರಡು ಅಕ್ಷರಗಳುಳ್ಳ ನಾಲ್ಕು ಪಾದಗಳ ಒಂದು ವರ್ಣವೃತ್ತ; ಕ್ರಮವಾಗಿ ನ ಭ ಜ ಯ ಗಣಗಳು ಒಂದು ಸಾಲಿನಲ್ಲಿರುವ ವೃತ್ತ: ಶತಮುಖೇಂದು ರವಿತೋಯಮುಮಾಗಲ್ ಯತಿಪದಂ ನಿಲವು ದಂತಿಯೊಳಕ್ಕುಂ ಶತದಳಾಯತವಿಲೋಚನೆ ವೃತ್ತಂ ದ್ರುತಪದಂ ದ್ರುತಪದೋಕ್ತಿಗಳಿಂದಂ (ಛಂದೋಂಬು. ೨-೧೩೨); ದ್ರುತಪದಂ ನಭಜಯಂಗಳಿನಕ್ಕುಂ (ಕೈಪಿಡಿ. ೮೧). [ಸಂ.]

ದ್ರುತಯಾನ (ನಾ). ವೇಗವಾದ ನಡಗೆ; ತ್ವರಿತಗತಿ; ತೀವ್ರಗಮನ: ದ್ರುತಯಾನೋತ್ಕಂಪಿ ಪೀನೋದರನವನಿಪನೊಡ್ಡೋಲಗಕ್ಕೈದೆ (ಚಂದ್ರಪು. ೨-೬೪). [ದ್ರುತ + ಯಾನ]

ದ್ರುತವಿಡು (ಕ್ರಿ). ನೊಂದುಕೊಳ್ಳು; ದುಃಖಪಡು: ವಸುಧಾಧೀಶನ ತೇಜವಲ್ಲವೆ ಕುಮಾರಂ ನಿಮ್ಮನಾರಯ್ದು ರಕ್ಷಿಸಲೀ ಮಂಗಲಯಾತ್ರೆಯೊಳ್ ದ್ರುತವಿಡಲ್ ಬಾಯ್ವಿಟ್ಟಬಲ್ಕಾಗ ಸೈರಿಸಿಮಿಂ ಸ್ವಾಮಿಯ ಚಿತ್ತಮಂ ಕದಡದತ್ತಲ್ಸಾರಿಮೆಂದೊತ್ತಿ ಬಗ್ಗಿಸಿದರ್ ಮಂತ್ರಿಮಹತ್ತರರ್ ನೃಪವಧೂವಾರಾಂಗನಾವರ್ಗಮಂ (ಅನಂಪು. ೩-೦೦೩).

[ದ್ರುತ + ಇಡು$_1$]

ದ್ರುತವಿಲಂಬಿತ, ದ್ರುತವಿಳಂಬಿತ (ಗು). ೧. (ಚಲನೆಯಲ್ಲಿ) ವೇಗ ಮತ್ತು ಮಂದವಾಗಿರುವ. (ನಾ). ೨. ವೇಗವಾದ ನಡತೆ ಮತ್ತು ಮಂದವಾದ ನಡಗೆ: ನಗರಾರಣ್ಯವಿಶೇಷಂ ಬಗೆಗಿಲ್ಲೆನೆ ಕಾಲನಿಯಮದಿಂ ಬನದಿಂ ಚರ್ಯೆಗೆ ಪೊಱಮಟ್ಟಂ ಮುನಿ ತನ್ನ ಗಮನಮಂ ದ್ರುತವಿಲಂ [ಪಾಠಾಂ. ಳಂ]ಬಿತಂ ಪೊರ್ದದೆನಲ್ (ಪಂರಾಮಾ. ೦೬-೬೩). ೩. [ಛಂದ] ಜಗತೀಛಂದಸ್ಸಿನ ಒಂದು ಭೇದ; ಪ್ರತಿಪಾದದಲ್ಲಿಯೂ ಹನ್ನೆರಡು ಅಕ್ಷರಗಳುಳ್ಳ ನಾಲ್ಕುಪಾದಗಳ ಒಂದು ವರ್ಣವೃತ್ತ; ನ ಭ ಭ ರ ಗಣಗಳು ಕ್ರಮವಾಗಿ ನಾಲ್ಕುಪಾದಗಳಲ್ಲಿಯೂ ಬರುವ ವೃತ್ತ: ದ್ರುತವಿಲಂಬಿತಂ ನಭಭರಂಗಳುಮೊಂದಿರೆ ಪಾದದೊಳ್ ಶುಭಕರಂ ಯತಿ ನಿಲ್ತಿರೆ ರಂಧ್ರದೊಳ್ ಪ್ರಭು ಕವೀಂದ್ರಸಹಾಯದೊಳಾದುದಿಂತಿಭಗತೀದ್ರುತಪೂರ್ವವಿಲಂಬಿತಂ (ಛಂದೋಂಬು. ೨-೦೨೫). ದ್ರುತವಿಳಂಬಿತ: ೧. ದ್ರುತವಿಳಂಬಿತಮನ್ಯುಚಯಂಗಳೊಳ್ ತತ ಘನಾದಿ ಚತುರ್ವಿಧವಾದ್ಯದೊಳ್ . . . ಶತಮುಖಂ ಮೆಱೆದರ್ತಿಯೊಳಾಡಿದಂ (ವರ್ಧಮಾ. ೦೨-೫೦). ೨. ದ್ರುತವಿಳಂಬಿತ ಸಂಭ್ರಮ . . . ವರ್ಜಿತ ಗತಿಕ್ರಮಮೊಪ್ಪೆ ವನಾಂತದಿಂ ವ್ರತಿ ಬರುತ್ತಿರೆ (ಪುಷ್ಪಪು. ೧೩-೧೦೭). ೩. ದ್ರುತವಿಳಂಬಿತಂ-ಎಣಿಸಿ ವೆರ್ವರಲಿಂದಮೆ ಶಸ್ತ್ರಮಂ ಗುಣಿಸುಗಾವೆರಲಂ ಪದಿಮೂಱಱಿಂ ಗಣಿದಮೇನವನೊತ್ತುವುದೇಱಱಿಂ ದುಱಿದುವಂತವು ಶಸ್ತ್ರದ ಲಕ್ಷಣಂ (ಲೋಕೋಪ. ೦೦-೦೦೨). [ಸಂ.]

ದ್ರುತವಿಳಂಬಿತ 'ದ್ರುತವಿಲಂಬಿತ' ನೋ.

ದ್ರುತಿ(ನಾ). ೧. ಕರಗುವಿಕೆ; ದ್ರವಿಸುವುದು: ಇದು ಸ್ವಾಂತಃಕರಣದ ದ್ರುತಿಯೇ ಸರಿ; ಲೌಕಿಕವಾದ ಶೋಕದಂತಲ್ಲ. ರಸದಿಂದ ತುಂಬಿದ ಗಡಿಗೆ ತುಳುಕುವಂತೆ, ಚಿತ್ತವೃತ್ತಿಯು ಉಕ್ಕಿ ಹೊರಮೂಡುವ ಮಾತುಗಳಂತೆ . . . ಅದು ಸಮುಚಿತ ಛಂದೋರೂಪವನ್ನು ತಳೆದು ಹೊರಹೊಮ್ಮಿತು (ಧ್ವನ್ಯಾಲೋ. ೧೯ ಅಡಿಟಿ). ೨. ಕರಗಿದುದು; ರಸ; ದ್ರವ: ಪೊಳೆವ ರಜತಾಭ್ರಕ ದ್ರುತಿಗಳಿನಮೃತರಸಪ್ರವಾಹದಿಂದಭಿಷವಮಗ್ಗಳಿಸೆ ತಳತಳಿಸಿ ತೊಳಗುವ ಪಳುಕಿನ ಪುತ್ಥಳಿಕೆಯಂತೆ ಕರಮೆಸೆದಿರ್ದಳ್ (ಕಾದಂಪು. ೬೬೮).

[ಸಂ.]

ದ್ರುಪದ$_1$ (ನಾ). [ಸಂಗೀತ] ಒಂದು ಬಗೆಯ ತಾಳ: ನಮ್ಮ ದೇಶದ ಸಂಗೀತದಲ್ಲಿ...ದ್ರುಪದ, ಧೂಮಾಳಿ, ಎಕ್ಕಾ ಎಂಬ ಹಲವು ತಾಳಪದ್ಧತಿಗಳಿರುವುವು (ಬಾಲಪ್ರ. II, ೧೦೪೦). [<ಸಂ. ದ್ರುತಪದ]

ದ್ರುಪದ್ಯ (ನಾ). ೧. ಮರದ ಕಂಬ. ೨. ಪಾಂಚಾಲ ದೇಶದ ಅರಸು ; ದ್ರೌಪದಿಯ ತಂದೆ : ಕುಂಭಸಂಭವನನಾ ದ್ರುಪದಂ ಕಡುಸಿಗ್ಗು ಮಾಡಿದಂ (ಪಂಪಭಾ. ೨-೪೮) ; ದ್ರುಪದನನುಜರು ಸೋಲಿಸಿದರೈ ಕೌರವೇಂದ್ರನ ಬಲವ (ಕುಪ್ಯಾಆ. ೭-೬೪). ೧, ೨ : ಆ ಮಹಾವನಂ . . . ಪಾಂಡವಪ್ರಕರ ದಂತಾತ್ತಭೀಮನಕುಲದ್ರುಪದಮುಂ ಅರ್ಜುನೋರ್ಜಿತಮುಂ (ಚಂದ್ರಪು. ೫-೫೨ ವ). [ಸಂ.]

ದ್ರುಪದಜೆ (ನಾ). ದ್ರುಪದರಾಜನ ಮಗಳು ; ದ್ರೌಪದಿ : ಗುಣಾರ್ಣವ ನನಾ ದ್ರುಪದಜೆಯನೊಡನೆ ಕುಳ್ಳಿರಿಸಿ ಹಿತಪುರೋಹಿತ ಪ್ರಾಜ್ಯಾಜ್ಯಾಹುತಿ ಹುತಹುತವಹ ಸಪುಕ್ಷದೊಳ್ ಕೆಯ್ನೀರೆಱೆದು ಪಾಣಿಗ್ರಹಣಂಗೆಯ್ಸೆ (ಪಂಪಭಾ. ೩-೭೪ ವ). [ಸಂ. ದ್ರುಪದಜಾ]

ದ್ರುಪದತನೂಭವ (ನಾ). ದ್ರುಪದರಾಜನ ಮಗ ; ಧೃಷ್ಟದ್ಯುಮ್ನ : ದ್ರುಪದತನೂಭವಂ ಕುಪಿತನಾಗಿ ಮಹಾಭರದಿಂದೆ ಬಂದು (ಮಹಾನೇ. ೧೩-೩೦). [ದ್ರುಪದ + ತನೂಭವ]

ದ್ರುಪದನಂದನ (ನಾ). = ದ್ರುಪದತನೂಭವ : ಧರ್ಮನಂದನಂ ದ್ರುಪದನಂದನಂಗೆ ಬಟಿಯನಟ್ಟಿ ಬರಿಸಿ (ಪಂಪಭಾ. ೧೦-೫ ವ).
[ದ್ರುಪದ + ನಂದನ]

ದ್ರುಪದನಂದನೆ (ನಾ). = ದ್ರುಪದಜೆ : ಈ ಭುಜಾದಂಡಮುಂ . . . ಈ ಧನುರ್ದಂಡಮುಮುಳ್ಳಿನಂ ದ್ರುಪದನಂದನೆ ಸಂಧಿಯನಾಗಲೀವೆನೇ (ಗದಾಯು. ೦-೭೩). [ದ್ರುಪದ + ನಂದನೆ]

ದ್ರುಮ (ನಾ). ಮರ ; ವೃಕ್ಷ : "ವೃಕ್ಷಃ . . . ದ್ರುಮಃ, ಪಾದಪಃ-ಈ ೧೯ ಮರಂ" (ಹಲಾಯು. ೨೯-೨೩) ; "ತರು ವನಸ್ಪತಿ ಸಾಲಮಂಘ್ರಿಪಂ ದ್ರು ದ್ರುಮಂ ಧರಣಿಜಂ . . . ಕುಜಮೆನಲು ವೃಕ್ಷಕ್ಕೆ ನಾಮಮಕ್ಕುಂ" (ಮಂಗರಾ. ೩೦-೦) ; ದ್ರುಮಪಲ್ಲವ ತಳನಿಪತಿತ ಹಿಮಾಂಬು ಘಟಿಕಾಳಿ ನಾಡೆ ಸೊಗಯಿಸಿದವುದು (ಶಾಂತಿಪು. ೫-೮೯) ; ಶಾಲ್ಮಲೀಚೈತ್ಯಜಂಬೂದ್ರುಮದೊಳ್ . . . ವಿಶ್ರುತಾಕೃತಿಮ ಚೈತ್ಯಾವಾಸ ಪೂಜೋತ್ಸವದಿನಗಲನಲ್ಲಿಂದಮೆಂದುಂ ಸುರೇಂದ್ರಂ (ಸುಕುಮಾ. ೯-೪೧) ; ಕರ್ಣನು ಬೇರು ಹಱಿದಾ ದ್ರುಮದವೊಲು ಗತಶೌರ್ಯನು (ಕುಪ್ಯಾದ್ರೋ. ೧೬-೫೬). [ಸಂ.]

ದ್ರುಮಪತ್ರಪಾತ್ರೆ (ನಾ). ಎಲೆಗಳಿಂದ ಮಾಡಿದ ಪಾತ್ರೆ ; ದೊನ್ನೆ : ಸುಮಮಕರಂಡದಿಂದೆ ಕಪಿ ಕೈದೊಳೆದಾ ದ್ರುಮಪತ್ರಪಾತ್ರೆಯಂ ಸಮೆದದಱಲ್ಲಿ ತುಂಬಿ ತುಳಿವೊಂದದ ಪೂಗಳನೈದೆ ತುಂಬಿಕೊಂಡು (ರಾಜಕೇ. ೦-೦೨೭). [ದ್ರುಮ + ಪತ್ರ + ಪಾತ್ರೆ]

ದ್ರುಮಯೋಧಿ (ಗು). ಗಿಡ, ಮರಗಳನ್ನೇ ಆಯುಧವನ್ನಾಗಿ ಉಪಯೋಗಿಸುವ : ಇತ್ತಲಿಂತಿಂತೆ ಶಿಬಿರಶಿಬಿರದಿ ಬೀಡುಬೀಡಿನೊಳ್ ದ್ರುಮಯೋಧಿ ಸೈನಿಕರ್ ತಂತಮ್ಮ ಸತ್ಯದ ಸಮರ್ಥನೆಗೆ ವಾದಿಸುತ್ತಿರಲ್ (ಶ್ರೀರಾಮಾ. ೮೨೪-೩೪೧). [ಸಂ. ದ್ರುಮಯೋಧಿನ್]

ದ್ರುಮರಾಜಿ (ನಾ). ಮರಗಳ ಸಾಲು : ದ್ರುಮರಾಜೀರಾಜಿತಂ ಜಂಗಮ ಮಿದುದಯಶೈಳಂ ತದಗ್ರಾಧಿರೂಢಂ ಹಿಮರೋಚಿರ್ಮಂಡಳಾಳಂಕೃತ ಮಿದಭಿನವಂಲಕ್ಷ್ಮಂ (ಪರ್ಧಪು. ೮-೪). [ದ್ರುಮ + ರಾಜಿ$_1$]

ದ್ರುಮವಿತತಿ (ನಾ). ಮರಗಳ ಗುಂಪು, -ತೋಪು : ಬೇರಿಂ ಪೀರ್ದುಂ ತಣಿಯದೆ ನೀರಜಗಂಧಾನುಬಂಧಿಜಳಮಂ ಕೊಂಬಿಂ ಪೀರಲ್ಕೊಡರಿಸಿದವುದೆನೆ ತೀರದ್ರುಮವಿತತಿಯೆಱಗಿ ತುಱುಗಿದುದದಱೊಳ್ (ಚಂದ್ರಪು. ೦-೮೪). [ದ್ರುಮ + ವಿತತಿ]

ದ್ರುಮಾಮಯ (ನಾ). ೧. ಮರಗಳಿಗೆ ಬರುವ ರೋಗ ; ಸಸ್ಯರೋಗ : (ಕಿ). ೨. ಅರಗು ; ಲಾಕ್ಷ : "ಲಾಕ್ಷಾ, ರಾಕ್ಷಾ . . . ದ್ರುಮಾಮಯಃ-೬ ಅರಗಿನ ಹೆಸರುಗಳು" (ಸಿದ್ಧಾಂತಿ. ೦೭೯). ೩. ಅಂಟು ; ಗೋಂದು.
[ದ್ರುಮ + ಆಮಯ]

ದ್ರುಮೋತ್ಪಲ (ನಾ). ಬೆಟ್ಟದಾವರೆ ; ಕೊಸಗು : "ದ್ರುಮೋತ್ಪಲಃ, ಕರ್ಣಿಕಾರಃ, ಪರಿವ್ಯಾಧಃ-ಈ ೩ ಕೊಸಗಿನ ಮರ" (ನಾಚಿರಾ. ೧೦೮) ; "ದ್ರುಮೋತ್ಪಲಃ, ಕರ್ಣಿಕಾರಃ . . . ಬೆಟ್ಟತಾವರೇ ಹೆಸರುಗಳು" (ಸಿದ್ಧಾಂತಿ. ೦೦೦). [ಸಂ.]

ದ್ರುವಜಲ (ನಾ). ಸದಾ ನೀರು ಇರುವುದು ; ಬತ್ತದ ಸೆಲೆಯುಳ್ಳುದು : ನೀವು ಕಟಸ್ತಕ ಕೆಱೆ ದ್ರುವಜಲವಾದರೆ (ಸೌಇಎ. ೧೯೩೪, ಪುಂಗನೂರು. ೦೫೬-೧೭ ; 1419). [<ಸಂ. ಧ್ರುವಜಲ]

ದ್ರುವಣಿ (ನಾ). ಒಂದು ಬಗೆಯ ಗಿಡ : "ಘೋರಾಮ್ರಿ ಹುಳುಕುಡಿ ದ್ರುವಣಿ[ಪಾಠಾಂ. ದ್ರವಣಿ. ಧ್ರುವಣಿ] ಪುಸ್ತಕವಲ್ಲಿ ಗೌರಿ ಗೊಟ್ಟಕ್ಕಿ ಪನ್ನಂಗಿಯೆನೆ ನೆಲಬೇವು" (ಮಂಗರಾ. ೪೪-೪೫). [?]

ದ್ರುವಯ (ನಾ). ಮಾನ ; ಅಳತೆ : "ದ್ರುವಯಂ, ಪಾಯ್ಯಂ . . . ಮಾನಶಬ್ದದ ಅರ್ಥವುಳ್ಳವುಗಳು" (ಸಿದ್ಧಾಂತಿ. ೨೫೭). [ಸಂ.]

ದ್ರುಹಿಣ (ನಾ). ತ್ರಿಮೂರ್ತಿಗಳಲ್ಲಿ ಒಬ್ಬ ; ಬ್ರಹ್ಮ ; ಸೃಷ್ಟಿಕರ್ತ : "ಬ್ರಹ್ಮಾ . . . ದ್ರುಹಿಣಃ . . . ಕಮಲಾಸನಃ-ಈ ೨೦ ಬ್ರಹ್ಮನ ಪೆಸರ್" (ಹಲಾಯು. ೨-೭) ; ದ್ರುಹಿಣವಿನಿರ್ಮ್ಮಿತಮೆನೆ × × ಣಯುತಂ ಬಾಣ ಗದ್ಯ[ವಾ] ಲಿಖಿತ ಪಿತಾಮಹನೆನ್ದೊರೆಯೊಳೊಪ್ಪಿರಲ್ (ಸೌಇಇ. XI-11, ೧೪೭-೬೫ ; 1099) ; ಕಣ್ಗೆಸೆದಂ ತ್ರಿಶೂಲಿಯಸಮಕರೋಟಿಮಾಲಿ ದ್ರುಹಿಣಶಿರಃಕಪಾಲಿ (ಭಿಕ್ನಾಚ. ೧-೦೪) ; ಯಮಲೋಕಕನಿತಱೊಳ್ ದ್ರುಹಿಣನೆಯ್ತಂದು-ಇವರೆಲ್ಲರ್ ನಿಚ್ಚಂ ವಿಷ್ಣುವಂ ಗಾನಯೋಗದಿಂ ಪೂಜಿಸುತಿರ್ದರ್ . . . ಎಂಬಾಗಳ್ (ಅದ್ಭುತ. ೧೮-೮). [ಸಂ.]

ದ್ರುಹಿಣಸುತ (ನಾ). ಬ್ರಹ್ಮನ ಮಗ ; ಕರ್ದಮನೆಂಬ ಬ್ರಹ್ಮರ್ಷಿ : ಯಥೋಕ್ತವಿಧಿಗಳಲಿ ದ್ರುಹಿಣಸುತನಲಿ ಸುತೆಗೆ ಪಾಣಿಗ್ರಹಣವನು ಮಾಡಿಸಿದನು (ನಿಭಾಗ. ೩-೦೦-೨೮). [ದ್ರುಹಿಣ + ಸುತ]

ದ್ರುಹಿಣಾಂಡ (ನಾ). ಬ್ರಹ್ಮಾಂಡ ; ಜಗತ್ತು : ದ್ರುಹಿಣಾಂಡೋದರ ಪಂಕಜಾಕರದೊಳುತ್ಕೂರ್ಮಂ . . . ರಾಜದ್ಧಾತ್ರಿಯೆಂಬಾ ಸರೋರುಹ ಮಧ್ಯಸ್ಥಿತ ನೂತ್ನಕರ್ಣಿಕೆಯವೊಲ್ತೋರ್ಕುಂ ಸುವರ್ಣಾಚಲಂ (ಶಾದ್ಯಟ. ೦-೪೦). [ದ್ರುಹಿಣ + ಅಂಡ$_2$]

ದ್ರೇಕ್ಕಾಣ (ನಾ). [ಜ್ಯೋತಿ] ಲಗ್ನದ ಮೂರನೆಯ ಒಂದು ಭಾಗ ; P ಇದರಲ್ಲಿ ಮೇಷ, ಕರ್ಕಾಟಕ, ತುಲಾ, ಮಕರರಾಶಿಗಳ ಮೊದಲನೆಯ ದ್ರೇಕ್ಕಾಣವು ಆ ರಾಶಿಯೇ ಆಗುತ್ತದೆ. ಎರಡನೆಯ ದ್ರೇಕ್ಕಾಣವು ಅದರ ಐದನೆಯ ರಾಶಿಯಾಗುತ್ತದೆ. ಮೂರನೆಯ ಭಾಗವು ಅದರ ಒಂಬತ್ತನೆಯ ರಾಶಿಯಾಗುತ್ತದೆ. ಹಾಗೆಯೆ ವೃಷಭ, ಸಿಂಹ, ವೃಶ್ಚಿಕ, ಕುಂಭ ಈ ರಾಶಿಗಳಲ್ಲಿ ಒಂದನೆಯ ದ್ರೇಕ್ಕಾಣವು ಅದರ ಒಂಬತ್ತನೆಯ ರಾಶಿಯಾಗುತ್ತದೆ. ಎರಡನೆಯ ಭಾಗವು ಲಗ್ನದ್ರೇಕ್ಕಾಣವೇ ಆಗುತ್ತದೆ. ಮೂರನೆಯ ಭಾಗವು ಪಂಚಮರಾಶಿಯಾಗುತ್ತದೆ. ಮಿಥುನ, ಕನ್ಯಾ, ಧನುಸ್ಸು, ಮೀನ ಈ ರಾಶಿಗಳ ಒಂದನೆಯ ಭಾಗ ಪಂಚಮರಾಶಿ ದ್ರೇಕ್ಕಾಣ. ಎರಡನೆಯ ಭಾಗ ನವಮರಾಶಿ ದ್ರೇಕ್ಕಾಣ, ಮೂರನೆಯ ಭಾಗ ಲಗ್ನರಾಶಿ ದ್ರೇಕ್ಕಾಣವಾಗುತ್ತದೆ. ಉದಾಹರಣೆಗೆ : ಮೇಷಲಗ್ನಪ್ರಮಾಣ ೪-೨೮. ಇದರಲ್ಲಿ-೧-೨೯ ಮೇಷದ್ರೇಕ್ಕಾಣ, ೨-೫೯ ಸಿಂಹ ದ್ರೇಕ್ಕಾಣ, ೪-೨೮ ಧನುಃದ್ರೇಕ್ಕಾಣ. ವೃಷಭಲಗ್ನಪ್ರಮಾಣ ೫-೩. ಇದರಲ್ಲಿ-೧-೪೧ ಮಕರದ್ರೇಕ್ಕಾಣ, ೩-೨೨ ವೃಷಭ ದ್ರೇಕ್ಕಾಣ, ೫-೩ ಕನ್ಯಾದ್ರೇಕ್ಕಾಣ. ಮಿಥುನಲಗ್ನಪ್ರಮಾಣ ೫-೨೮. ಇದರಲ್ಲಿ—೧-೪೯ ತುಲಾದ್ರೇಕ್ಕಾಣ, ೩-೩೯ ಕುಂಭ ದ್ರೇಕ್ಕಾಣ, ೫-೨೮ ಮಿಥುನದ್ರೇಕ್ಕಾಣ. ಹೀಗೆಯೇ ಉಳಿದ ರಾಶಿಗಳಿಗೂ ಕಲ್ಪಿಸಿಕೊಳ್ಳಬೇಕು. ದ್ರೇಕ್ಕಾಣವು ಜಾತಕಫಲ ಮತ್ತು

ಪ್ರಶ್ನೆ ಹೇಳುವಾಗ ಉಪಯೋಗಕ್ಕೆ ಬರುತ್ತದೆ: ದ್ರೇಕ್ಕಾಣಮುಂ ಮೂಱೆನಿಕ್ಕುಂ (ಜಾತತಿ. ೦-೨೭); ದ್ರೇಕ್ಕಾಣಮುಚಿತಮದಱಿಂ ಮಿಕ್ಕಿರ್ಕುಂ ಹೋರೆ (ಚಿಕವಿ. ೪-೪೭); ಶುಭಲಗ್ನಂ ಶುಭತಾರೆ ಯೋಗಕರಣಂ ದ್ರೇಕ್ಕಾಣ ಹೋರಾಸಮಂ (ರಾಂಶಮುಂ ?) ಶುಭಂ (ಬೀಳವಂ. ೨-೦೬೮).

[ಸಂ.]

ದ್ರೋಣ (ನಾ). ೧. (ನೀರನ್ನು ತುಂಬಿಡುವ) ದೋಣಿಯಾಕಾರದ ಮರದ ಪಾತ್ರೆ. ೨. ಎಲೆಗಳಿಂದ ಮಾಡಿದ ಪಾತ್ರೆ; ದೊನ್ನೆ: ಮಾಣದೆ ಸೋರ್ವಿಂದ್ರಿಯಮಂ ದ್ರೋಣದೊಳಾಂತಲ್ಲಿಯೊಗೆದ ಶಿಶುವಂ ಕಂಡೀ ದ್ರೋಣದೊಳ್ ಪುಟ್ಟಿದೀತಂ ದ್ರೋಣನೆ ಪೋಗೆಂದು ಪೆಸರನಿಟ್ಟಂ ಮುನಿಪಂ (ಪಂಪಭಾ. ೨-೪೩). ೩. ಒಂದು ಅಳತೆ; ನಾಲ್ಕು ಕೊಳಗ: "ಆಢಕಃ-೧ ಕೊಳಗದ ಹೆಸರು, ದ್ರೋಣಃ-೧ ನಾಗಳಧ ಹೆಸರು, ಕೆಲವರು ಇಕ್ಕಳವೆಂಬುವರು" (ಸಿದ್ಧಾಂತಿ. ೨೫೯); ಒಂದು ಸೊಲ್ಲಗೆಯೇ ನಿಕುಂಜವದು ನಾಲ್ಕಾಗಲೊಂದು ಕುಡಬವದು ನಾಲ್ಕಾಗಲೊಂದು ಪ್ರಸ್ಥವಾ ಪ್ರಸ್ಥವೆರಡಾಗಲೊಂದು ವಾಹವದೆರಡಾಗಲೊಂದು ಆಢಕವದು ನಾಲ್ಕಾಗಲೊಂದು ದ್ರೋಣ (ವಿವೇಕ. ೭); ದ್ರೋಣದಿ ಷೋಡಶಭಾಗವ ಕಾಣುತಲಂ ಭಾರ್ಯಮೆನ್ನುತದು ನಾಲ್ಕಕಂಯೆಣಿಸೆ ದಾಢಕ ಪ್ರಸ್ತಂ ಕ್ಷೋಣಿಯೊಳುಂ ಭಾಗೆಗಾಣು ನಾಲ್ಕಕೆ ಕುಡುಬಂ (ಭಾಸ್ಕರ. ೭೪-೧); ೪ ಆಢಕ=೧ ದ್ರೋಣ (೩೨ ಸೇರು) (ಸಕವ್ಯ. XIII, ಷ್ಟಸಾವನ). P ಈ ಅಳತೆಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ೪. ಇಂದ್ರನ ಏಳು ಮೇಘ ವರ್ಗಗಳಲ್ಲಿ ಒಂದು; P ಇದರಲ್ಲಿ ಎರಡು ವಿಧ: ೧. ಸಂವರ್ತ, ಭೀಮನಾದ, ದ್ರೋಣ, ಚಂಡ, ಬಲಾಹಕ, ವಿದ್ಯುತ್ಪತಾಕ, ಶೋಣ. ೨. ಸಂವರ್ತ, ಆವರ್ತ, ಪುಷ್ಕಲಾವರ್ತ, ದ್ರೋಣ, ಕಾಳ, ನೀಲ, ಮಹಾಕಾಳ: ಸಿಡಿಲ ಬಳಗಮನೊಳಕೊಂಡ ದ್ರೋಣ ಮಹಾದ್ರೋಣ ಪುಷ್ಕಳಾವರ್ತ ಸುವರ್ತಕಂಗಳೆಂಬ ಮುಗಿಲ್ಗಳಂ ಬೆಸಸಿದಾಗಳ್ (ಪಂಪಭಾ. ೫-೯೫ ಪ). ೫. ಕಾಡ ಕಾಗೆ; ಹೊಲೆಕಾಗೆ; ಮಂಡಕಾಗೆ; ಅಡವಿಯ ಕಾಗೆ: "ಕಾಕೋಲಃ, ಮೌಕುಳಿಃ, ದ್ರೋಣಃ, ಕೃಷ್ಣಕಾಕಃ, ವನಾಶ್ರಯಃ-ಈ ೫ ಅಡವಿಯ ಕಾಗೆ" (ಹಲಾಯು. ೪೦-೯೩); "ಶಿತಿಕಾಕಂ ವನಾಶ್ರಯಂ ಮೌಕುಳಿ ದ್ರೋಣಮಾ ಕಾಕೋಳಮೆನೆ ಕಾಡ ಕಾಗೆ" (ಮಂಗರಾ. ೫೦-೪). ೬. ಚೇಳು; ವೃಶ್ಚಿಕ. ೭. [ಜ್ಯೋತಿ] ವೃಶ್ಚಿಕರಾಶಿ. ೬, ೭: ಮಕರ ಕರ್ಕಟಕ ಹರಿ ಮಿಥುನದಿಂದನಿಮೇಷನಿಕರದಿಂ ದ್ರೋಣಂ ತಿಮಿನಂಗಳಿಂ ದೊಪ್ಪುತಕಳಂಕಮೆನೆ . . . ರಂಜಿಸಿತು ವಾರಾಶಿ (ಶ್ರೀರಾಮ. ೩-೨೯). ೮. ಕಪ್ಪೆ; ಮಂಡೂಕ. ೯. ಪಾಂಡವ, ಕೌರವರುಗಳಿಗೆ ಧನುರ್ವಿದ್ಯೆಯನ್ನು ಕಲಿಸಿದ ಗುರು; ಅಶ್ವತ್ಥಾಮನ ತಂದೆ: P ಭರದ್ವಾಜನೆಂಬ ಮಹರ್ಷಿಗೆ ಘೃತಾಚಿಯೆಂಬ ಅಪ್ಸರ ಸ್ತ್ರೀಯನ್ನು ನೋಡಿದ ಕೂಡಲೆ ವೀರ್ಯಸ್ಖಲನವಾಗಲು, ಅದನ್ನು ದೊನ್ನೆಯಲ್ಲಿಟ್ಟು ರಕ್ಷಿಸಿದನು. ಅದರಿಂದ ಮಗನೊಬ್ಬನು ಹುಟ್ಟಿದುದರಿಂದ ಅವನಿಗೆ ದ್ರೋಣನೆಂದು ಹೆಸರಾಯಿತು: ದ್ರೋಣಂ ಗಡಮಿಷುವಿದ್ಯೆಗೆ ಜಾಣಂ (ಪಂಪಭಾ. ೨-೫೭); ದ್ರೋಣನೆಮಗೊಳ್ಳಿಕೆಯ್ದಂ ದ್ರೋಣನ ಸುತನೊಳ್ಳಿಕೆಯ್ಯದಿರ್ಕುಮೆ (ಗದಾಯು. ೩-೬೧); ಹಳೆವಿದಿರ ಮೆಳೆಯಲಿ ಮೊಳಗಿದುರಿಯವೊಲುಱುಹಿದನು ದ್ರೋಣ (ಕುಪ್ಯಾದ್ರೋ. ೦೭-೨೫). ೧೦. ಬಿಲ್ಲು; ಧನುಸ್ಸು: ಈಶ್ವರನ ದ್ರೋಣವ ಮಾಡಿ ಪದ್ಮನಾಭನ ನಾರಿಯ ಮಾಡಿ ಕಮಲಜನೆಂಬ ಬಾಣವ ತೊಟ್ಟು ಮೂಱುಭುವನವನೆಚ್ಚವರಾರೋ (ಅಪಚಂ. ೧೭೭-೭೯೦); ಚಾಪದಿಂದ (ಒಂದು ರೀತಿಯ ಬೊಂಬು) ಮಾಡಿದ್ದು ಕೋದಂಡ, ದಾರುವಿನಿಂದ (ಒಂದು ರೀತಿಯ ಮರ) ಮಾಡಿದ್ದು ದ್ರೋಣ, ಶೃಂಗದಿಂದ (= ಕೊಂಬು) ಮಾಡಿದ್ದು ಧನುಸ್ ಅಥವಾ ಶಾರ್ಙ್ಗ (ಕಶಾಅ. ೨೭೩ ಅಡಿಟಿ). ೧೧. = ದ್ರೋಣಮುಖ: ರಾಮಣೀಯಕ ಖೇಟ ಪತ್ತನ ಭೂಮಿಗೆಸೆವ ದ್ರೋಣ ಸಂವಾಹನಗಳಂ ಪೊಕ್ಕು . . . ನಡೆತಂದನು ಪ್ರಿಯಂಗುಷ್ಠಾಮಹಾವನಕೆ (ಸನತ್ಕು. ೩-೨೦) ೧೨. ತುಂಬೆಯ ಗಿಡ ಮತ್ತು ಅದರ ಹೂವು. 'ದ್ರೋಣಕುಸುಮ', 'ದ್ರೋಣಪುಷ್ಪ' ಪರಾ. [ಸಂ.]

ದ್ರೋಣಕಲಶ (ನಾ). = ದ್ರೋಣ ೨: ದ್ರೋಣಕಲಶದೊಳಾದ ದೆಸೆಯಿಂ ದ್ರೋಣನಾದನು (ಕುಪ್ಯಾಅ. ೬-೨೨). [ಸಂ.]

ದ್ರೋಣಕಾಕ (ನಾ). ಒಂದು ಬಗೆಯ ಕಾಗೆ; ದೊಡ್ಡಕಾಗೆ: "ದ್ರೋಣಕಾಕಃ, ಕಾಕೋಲಃ-೨ ಮುದಿಕಾಗೆ, ಮಾದೇಕಾಗೆ" (ಸಿದ್ಧಾಂತಿ. ೧೩೯). [ಸಂ.]

ದ್ರೋಣಕುಸುಮ (ನಾ). ತುಂಬೆಹೂವು: ಪ್ರಭುಶೆಟ್ಟಿಯ ಮಿದ್ದೆಯೊಳು ದ್ರೋಣಕುಸುಮದ ಮಳೆಯಂ ಕಱೆಸಿದಂ (ಗುರುಜಾ. ೦೩-೯೯).

[ದ್ರೋಣ + ಕುಸುಮ]

ದ್ರೋಣಕ್ಷೀರೆ (ನಾ). ನಾಲ್ಕು ಕೊಳಗದಷ್ಟು ಹಾಲು ಕರೆಯುವ ಹಸು: "ದ್ರೋಣಕ್ಷೀರಾ, ದ್ರೋಣದುಘಾ-೨ ಇಕ್ಕಳ ಹಾಲು ಕರೆಯುವ ಆಕಳು" (ಸಿದ್ಧಾಂತಿ. ೨೯೫). [ಸಂ. ದ್ರೋಣಕ್ಷೀರಾ]

ದ್ರೋಣಜ (ನಾ).=ದ್ರೋಣಪುತ್ರ: ದ್ರೋಣಜನಾ ಪಾಂಚಾಲಕ್ಷೋಣೀತರ ನಿಕ್ಕಿ ತಲೆಗಳಂ ತಂದು ಕುರುಕ್ಷೋಣೀಶನಿದಿರೊಳಿಟ್ಟಿಪಿ ಕೃಪಾಣೋಗ್ರ ಭುಜಾಗ್ರನಿರ್ಪುದುಂ (ಮಹಾನೇ. ೦೩-೩೦); ದಿವ್ಯಾಸ್ತ್ರಶಸ್ತ್ರಂಗಳಿಂ ಕಲ್ಗಳಿಂ ಕಾಷ್ಠದಿಂ ಹಿಮದಿಂದೆ ಬೆಂಕಿಯಿಂ ಹಸ್ತದಿಂ ಪಾದದಿಂ ದಮಿತ ಹನನೋಪಾಯದಿಂ ನೋಯಿಸುವರಿಲ್ಲವಮರ ಯಕ್ಷ ಪಿಶಾಚ ರಾಕ್ಷಸ ಮನುಷ್ಯಾದಿಗಳೊಳು ದ್ರೋಣಜನೆ ಕೇಳಾ (ರಾಘಚ. ೬-೩೫).

[ಸಂ.]

ದ್ರೋಣದುಘೆ (ನಾ).=ದ್ರೋಣಕ್ಷೀರೆ: "ದ್ರೋಣಕ್ಷೀರಾ, ದ್ರೋಣದುಘಾ-೨ ಇಕ್ಕಳ ಹಾಲು ಕರೆಯುವ ಆಕಳು" (ಸಿದ್ಧಾಂತಿ. ೨೯೫); ಓಹೋ ಹೊಗಟದಿರೆನಿಸಿದುವಾ ಹದದೊಳ್ ಜಲಧಿಘೋಷಮಂ ಧೇನುಪ್ರಷ್ಠೌಹಿ ದ್ರೋಣದುಘಾಧೃತದೋಹನಘನಧೀರದುಗ್ಧಧಾರಾಧ್ವನಿಗಳ್ (ಲೀಲಾವ. ೫-೧೦೮). [ಸಂ. ದ್ರೋಣದುಘಾ]

ದ್ರೋಣಪುತ್ರ (ನಾ). ದ್ರೋಣಾಚಾರ್ಯನ ಮಗ; ಅಶ್ವತ್ಥಾಮ: ಇನಜನಿಂ ತೀರದ ಕಜ್ಜಂ ದ್ರೋಣಪುತ್ರನಿಂ ತೀರ್ದಪುದೇ (ಗದಾಯು. ೩-೬೦); ದ್ರೋಣಪುತ್ರ, ರುದ್ರಮಿತ್ರ, ನಿನ್ನ ಪೆಸರ ಪಟಿ ಇದೇನ್ ? (ಅಶ್ವತ್ಥಾ. ೬-೦೦೮). [ದ್ರೋಣ + ಪುತ್ರ]

ದ್ರೋಣಪುಷ್ಪ (ನಾ). = ದ್ರೋಣಕುಸುಮ: ಸಂತತಂ ದ್ರೋಣಪುಷ್ಪಂಗಳಿಂ ಬ್ರಹ್ಮನತ್ಯಂತ ಸದ್ಭಕ್ತಿಯಿಂ ಬ್ರಹ್ಮೇಶ್ವರನ ಪಾದಮಂ ತಾನೆ ಪೂಜೆಯಂ ರಚಿಸಿ ಮತ್ತಾ ಬ್ರಹ್ಮಪದವಿಯಂ ಸಲೆ ಪಡೆದನು (ಆರಾಜ. ೩-೨೩); ದೂರ್ವಾಂಕುರ ದ್ರೋಣಪುಷ್ಪವದ್ರುಗಂಚಿಗಳಿಂ ಪರ್ವತದೊಳಿಳಿವ ಜಲದಿಂದೊರ್ವನೆಯಭಿಷೇಕಕೆಱೆವುದೆಂದು ಗಡಭವಾ (ಗುರುಬೋ. ೫-೦೩೬).

[ದ್ರೋಣ + ಪುಷ್ಪ]

ದ್ರೋಣಮುಖ (ನಾ). ನಾಲ್ಕುನೂರು ಗ್ರಾಮಗಳನ್ನೊಳಗೊಂಡ ಸೀಮೆಯ ಮುಖ್ಯಪಟ್ಟಣ; ಜಲಸ್ಥಲಮಾರ್ಗಗಳನ್ನುಳ್ಳ ಪುರ; P ಇದರ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ:(ಕ)ದಂಬಪತ್ತನವಾ ದ್ರೋಣಮುಖಗಳಿಂ (ಬೊಂಕಶಾ. ೧೯೪೪, ಬಂಕಾಪುರ. ೨೦-೦೩; 1069).

[ಸಂ.]

ದ್ರೋಣಮ್ಮ (ನಾ). ಒಬ್ಬಾತನ ಹೆಸರು: ನಾನಾನೃಪಕುಳಪ್ರಧಾನ ಭೂತಾಗುಣವಂಶೋತ್ಪನ್ನೋ ದ್ರೋಣಮ್ಮ ನಾಮಧೇಯಸ್ತಸ್ಯ ಸೂನುಃ (ಸೌಇಇ. XX, ೫-೨೫; 728). [ದ್ರೋಣ + ಅಮ್ಮ]

ದ್ರೋಣಾಮುಖ (ನಾ). = ದ್ರೋಣಮುಖ : ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ (ವಡ್ಡಾರಾ. ೭-೨) : ತೊಂಭತ್ತೈಸಾಸಿರ ದ್ರೋಣಾಮುಖಂಗಳುಂ ನಾಲ್ವತ್ತೆಣ್ಣಾಸಿರ ಪಟ್ಟಣಂಗಳುಂ . . . ಪದಿನೆಣ್ಣಾಸಿರ ಮ್ಲೇಚ್ಛರಾಜರು ಮಾತ್ಮೀಯಸಾಮ್ರಾಜ್ಯಪರಿಚ್ಛೇದಮಾಗೆ (ಆದಿಪು. ೧೫-೩ ಪ) : ತೊಂಬತ್ತಾಱುಸಾಸಿರ ದ್ರೋಣಾಮುಖಂಗಳಿಂದಂ . . . ಪದಿನೆಣ್ಣಾಸಿರ್ವರ್ ಮ್ಲೇಚ್ಛರಾಜರಿಂದಂ ನೆಱೆದೈಶ್ವರ್ಯದ ಮೇಗೆ (ಶಾಂತಿಪು. ೧೦-೮೪ ಪ) : ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖ ಸಂವಾಹಗಳೊಳ್ ವಿಹಾರಿಸುತ್ತುಂ (ಸುಕುಮಾ. ೪-೨೦ ಪ) : ಗ್ರಾಮ ಮಡಂಬ ಖರ್ವಡ ಪುರ ದ್ರೋಣಾಮುಖಾದ್ಯಂಗಳಂ ಸನಿವಾಸಾರ್ಥ ಮೊಡರ್ಚಿ ಸರ್ವಜನಮುಂ ವಾಸ್ತುಪ್ರಕಾರಂಗಳಿಂದನಂವಪ್ಪಂತೆ ನೆಗಳ್ಚುಗುಂ ಮನೆಗಳಂ ತತ್ತನ್ಮಹಾಸ್ಥಾನದೊಳ್ (ವಿಷ್ಣುಪು. ೧-೨-೨೨).

[< ದ್ರೋಣಮುಖ]

ದ್ರೋಣಾಸ್ಯ (ನಾ). = ದ್ರೋಣಮುಖ : ತನತು ಪದಪಾಂಸುವಿಂ ಗ್ರಾಮ ನಗರ . . . ದ್ರೋಣಾಸ್ಯ ನಿಗಮಪತ್ತನತತಿ ಪಾವನಮಾಗೆ ವಿಹಾರಿಸುತ್ತೆ (ಪುಷ್ಪಪು. ೦೪-೦೪). [ಸಂ.]

ದ್ರೋಣಿ (ನಾ). ೧. ದೋಣಿ ; ನಾವೆ : "ಅಂಬುವಾಹಿ ತಾಂ ದ್ರೋಣಿ" (ವಸ್ತುಕೋ. ೨೪-೧೨) ; ಸೋಪಾನಪದ್ಧತಿಗಳೊಳ್ ಗಿರಿದುರ್ಗಾರೋಹಣಮುಮಂ ದ್ರೋಣಿ ಯಾನಪಾತ್ರಾದಿಗಳೊಳ್ ಜಲದುರ್ಗೋತ್ತರಣಮುಮನುಪದೇಶಂಗೆಯ್ದು (ಆದಿಪು. ೬-೬೨ ಪ) ; ನೋಡುತಿರೆ ಮಂತ್ರಿ ದಡದಲಿ ನಿಂತು, ಬರಬರುತೆ ಕಿರಿದಾಗಿ, ಕಡೆಗೆ ಕಣ್ಮರೆಯಾದುದಾ ದ್ರೋಣಿ (ಶ್ರೀರಾಮಾ. ೯೮-೫೫೯). ೨. ದೊನ್ನೆ : ತಂದಳ್ ಸುರಸುಂದರಿ ಚಂದನರಸಭರಿತಾಯತ ಕೇತಕೀದಲದ್ರೋಣಿಗಳಂ (ಪಂರಾಮಾ. ೦೬-೯೦). ೩. ಮರದಲ್ಲಿ ಕೊರೆದು ಮಾಡಿದ ಪಾತ್ರೆ. ೪. ಎರಡು ಬೆಟ್ಟಗಳ ನಡುವಿನ ಕಣಿವೆಪ್ರದೇಶ ; ಕಮ್ಮರಿ ; ಕಂದಕ : ಹೊಕ್ಕನು ಕನಕಶೈಲ ದ್ರೋಣಿಗಳ ದುರ್ಬಲಸುರೌಘವನಾಣೆಗಂಜಿಸಿ ಕಳೆದುಕೊಂಡನು ಸಕಲ ವಸ್ತುಗಳ (ಕುಪ್ಯಾಸ. ೩-೪೦). ೫. (ಸಮುದ್ರದಲ್ಲಿಯ) ಅತಿ ಆಳವಾದ ಪ್ರದೇಶ ; ಕೊಲ್ಲಿ : ಕೆಲವು ಕಡೆ ಸಾಗರ ಬಹಳ ಆಳವಾಗಿದೆ. ಆ ಪ್ರದೇಶಗಳನ್ನು ದ್ರೋಣಿ ಅಥವಾ ಪಾತಾಳ (Troughs or Deeps) ಎಂದು ಕರೆಯುತ್ತಾರೆ (ಭೂವಿಪ. ೮೨). ೬. ನೀಲಿಯ ಗಿಡ. ೭. ವೀಣೆಯ ಬುರುಡೆ : ವೀಣೆಗೆ ಪತ್ರವಿಲ್ಲದಿದ್ದರೆ, ಚರ್ಮವಿಲ್ಲದಿದ್ದರೆ, ದ್ರೋಣಿಯಿಲ್ಲದಿದ್ದರೆ, ದಂಡವಿಲ್ಲದಿದ್ದರೆ, ಉಪವೀಣೆಯಿಲ್ಲದಿದ್ದರೆ, ತಂತಿಯಿಲ್ಲದಿದ್ದರೆ, ಕಮಾನು ಇಲ್ಲದಿದ್ದರೆ, ಪುರುಷನ ಸಾಮರ್ಥ್ಯ ಪ್ರಯತ್ನಗಳಿಲ್ಲದಿದ್ದರೆ ಶಬ್ದ ಹುಟ್ಟುವುದೆ ? (ಬುದ್ಧಪ. ಮಿಲಿಂದ. ೭೩).

[ಸಂ. ದ್ರೋಣಿ, ದ್ರೋಣೀ]

ದ್ರೋಣಿಕೆ (ನಾ). ಸಣ್ಣ ದೋಣಿ ; ಚಿಕ್ಕ ನಾವೆ : ತೇರ್ಗಳೀರೊಡ್ಡುಗಳ್ ಪವಣಂ ಮಿಱಿದಸೃಗ್ಜಳಾಪಗೆಯೊಳಂದಾಳುತ್ತುಮೇಟುತ್ತೆ ಪೋದುವು ದುರ್ವಾಯುಗೆ ಸಂದ ವಾರಿಧಿಯ ನಾನಾ ದ್ರೋಣಿಕಾಶ್ರೇಣಿಯೊಲ್ (ಮಹಾನೇ. ೦೨-೪೫). [ಸಂ. ದ್ರೋಣಿಕಾ]

ದ್ರೋಣೀದಹನ (ನಾ) : ಒಂದು ಬಗೆಯ ಯುದ್ಧಸಾಧನ (?) : ಬಿಲ್ಲು ತೀರು . . . ದ್ರೋಣೀದಹನ ಶತಘ್ನಿ ಸಹಸ್ರಘ್ನಿ . . . ಪೇಟಕ ಮುಂತಾದ ಶತ್ರುಜಯಾತ್ಮರಕ್ಷಾಧಿ ಸಾಧನವಿಶೇಷಂಗಳಿಂದಲುಂ (ವಿವೇಕ. ೨೬೩).

[ಸಂ.]

ದ್ರೋಹ (ನಾ). ೧. ವಿಶ್ವಾಸಘಾತ ; ವಂಚನೆ ; ಮೋಸ : "ಅಪಕಾರಃ, ದ್ರೋಹಃ–ಈ ೨ ಹೊಲ್ಲವೆ" (ಹಲಾಯು. ೧೨೭-೮೬) ; "ದ್ರೋಹಮಪಕಾರ ಮಕ್ಕುಂ" (ಮಂಗರಾ. ೧೩೨-೨೬) ; ನೀ ಮುಂತಾಗಿ ಬಂದ ಭಕ್ತರ ನೀಯೆನ್ನದಿದ್ದರೆ ಅದೇ ದ್ರೋಹ (ಬಸವ. ೭೧೮) ; ದ್ರೋಹದಿಂದ ಪಡೆದ ರಾಜ್ಯ, ದ್ರೋಹದಿಂದಲೇ ಹೋಗಬಹುದು (ಹಂಗೀತೆ. ೦೯೪). ೨. ತಪ್ಪು ; ಅಪರಾಧ. ೩. ಹಗೆ ; ವೈರ : "ವಿದ್ವೇಷಂ ದ್ರೋಹಂ ವೈರಂ ವಿರೋಧಮೆನೆ ಪಗೆಯಕ್ಕುಂ" (ವಸ್ತುಕೋ. ೧೦೦-೪). ೪. ಮೋಸಮಾಡುವವನು ; ವಂಚಕ : ನೀಚನಾ ದ್ರೋಹನಾ ಸಂಚಳನಾ ಚಂಡಾಲನಾ ಪಾತಕನಿರವನಿದಂ ನೋಡು ಪಂಕೇಜವಕ್ತ್ರೇ (ಗದಾಯು. ೮-೪೫) ; ನೀವಿಾ ದ್ರೋಹನ ಮುಂದೆ ನಿಂದಿರ್ದೇನೆಂದು ಚಿಂತಿಸುತಿರ್ದಪಿರೆನೆ (ಪಂಚತಂ. ೦೮೦-೧೦).

ದ್ರೋಹ ಎಣಿಸು = ದ್ರೋಹ ಬಗೆ : ಹಾಲು ಕುಡಿದ ಮೇಲೆ ಮನೆಗೆ ದ್ರೋಹ ಎಣಿಸುವುದಿಲ್ಲ (ಪದ್ಮಸ. ೧೫೬). ದ್ರೋಹಕಾಳಾನಳ = ದ್ರೋಹ ಮಾಡುವವರಿಗೆ ಪ್ರಳಯಾಗ್ನಿಯಂತಿರುವವನು ; ಒಂದು ಬಿರುದು : ವೈರಿಬಳಜಳಧಿಬಡವಾನಳಂ ದ್ರೋಹಕಾಳಾನಳಂ . . . ಶ್ರೀಮತು ಮನ್ನಿಯ ದೋಗಯ್ಯಂ (ಎಕ. VII, ಶಿಕಾರಿ. ೨೦-೧೮ ; 1082). ದ್ರೋಹ ಘರಟ್ಟ=ವಂಚಕರಿಗೆ ಅರೆಗಲ್ಲಿನಂತಿರುವವನು; ಶತ್ರುನಾಶಕ; ಒಂದು ಬಿರುದು : ಶ್ರೀಮನ್ಮಹಾಪ್ರಧಾನಂ ದಂಡನಾಯಕಂ ದ್ರೋಹ ಘರಟ್ಟಂ ಗಂಗರಾಜಂ (ಎಕ. II, ೭೩-೨೦ ; 1118) ; ವೈರಿಭೇರುಂಡಂ ರಿಪುರಾಯಘಟೆಯ ದಿಶಾಪಟ್ಟಂ ದ್ರೋಹಘರಟ್ಟಂ ದೇವಗುರುಚರಣ ಸರಸೀರುಹಭೃಂಗಂ (ನಾಂದೇಡ್. ೨೯-೦೦; 1130). ದ್ರೋಹ ಬಗೆ=ಅಪಕಾರವನ್ನು ಎಣಿಸು ; ಕೇಡನ್ನು ಬಯಸು ; ದ್ರೋಹ ಮಾಡು : ನಿಮಗೆ ದೇವರು ಎಂದಿಗೂ ದ್ರೋಹ ಬಗೆಯುವುದಿಲ್ಲ (ದೇವಹಂ. ೨೪೪). ದ್ರೋಹ ಮಾಡು = ಎರಡು ಬಗೆ ; ಕೇಡೆಣಿಸು ; ವಂಚಿಸು : ಅವರು ನಿಮಗೆ ದ್ರೋಹ ಮಾಡಬಾರದು (ಧರ್ಮಸಾ. ೪೩) ; ದೋಸೆ ತಿನ್ನುವ ಆಸೆಯಿಂದ ಇದ್ದ ಸೊಸೆಗೆ ದ್ರೋಹ ಮಾಡಿದ ಪಾಪ ನನ್ನದು (ಪದ್ಮಸ.೬೧). ದ್ರೋಹವಾಗು = ಅಪಕಾರವಾಗು ; ಕೇಡಾಗು : ನನ್ನಿಂದ ಅವಳಿಗೆ ಯಾವ ದ್ರೋಹವಾಗಿದೆ ? (ಪದ್ಮಸ. ೧೫೨) ; ಅದರಿಂದ ಮಗಳಿಗೆ ದ್ರೋಹವಾಗುತ್ತದೆಯೆ ? (ದೇವಹಂ. ೧೦೪). [ಸಂ.]

ದ್ರೋಹಚಿಂತನ (ನಾ). ಮೋಸಮಾಡುವಿಕೆ ; ದ್ರೋಹವನ್ನು ಬಗೆಯುವಿಕೆ : ವ್ಯಾಪಾದಃ ದ್ರೋಹಚಿಂತನಂ (ಸಿದ್ಧಾಂತಿ. ೪೨).

[ದ್ರೋಹ + ಚಿಂತನ]

ದ್ರೋಹಿ (ನಾ). ೧. ಕೇಡಿಗ ; ಮೋಸಗಾರ ; ವಂಚಕ : ಪಚ್ಚಡಿಕೆಯಂ ಪತ್ತಿರ್ದ ಕೂಱೆಯಂ ಕಂಡರಸಂಗೆ ನಿದ್ರಾಭಂಗಮಂ ಮಾಡಿದ ದ್ರೋಹಿಯಿ [ಪಾಠಾಂ. ಹನಿ] ದಕ್ಕುಮೆಂದು ಮಂದವಿಸರ್ಪಿಣಿಯಂ ಕೊಂದರ್ (ಪಂಚತಂ. ೦೩೦-೧೬); ಆನು ಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದರೆ ನಿಮಗಾನು ದ್ರೋ[ಹಿಯು]ಯ್ಯಾ (ಬಸವ. ೪೦೭); ಕೈಯ ಕರಾಳಪರಶುವನೆತ್ತಿ ನೆಲದಲಿ ಬೀಳಹೊಡೆದನು ಪಿತನ ತಲೆಯನು ದ್ರೋಹಿ ಕೆಡೆಯೆನುತ (ಬಸಪು. ೯-೧೩) ; ದ್ರೋಹಿಗಳು ಧೂಳಾಯ್ತು ಬಳಿಕಿನೊಳೀ ಹದನು ಬಂದಿದೆ (ಕುಪ್ಯಾಕ. ೭-೪೫) ; ಪಡೆಯೊಳಗದಾವನು ದ್ರೋಹಿಯಿಲ್ಲೆಂದ (ಕೌಶಿರಾ. ೪೩-೨೧). ೨. ಮೋಸ ಮಾಡಿದುದು; ವಂಚನೆ ಮಾಡಿದುದು: ಕರ್ಣನುಗ್ರರಥಮಂ ಮುಂ ನುಂಗಿದೀ ದ್ರೋಹಿಯೊಳ್ ನೆಲದೊಳ್ ಪಂಬಲೆ (ಪಂಪಭಾ. ೧೩-೧೭).

[ಸಂ. ದ್ರೋಹಿನ್]

ದ್ರೋಹಿಗ (ನಾ). = ದ್ರೋಹಿ ೧ : ಹೊಯಿಸಳರಾಜ್ಯದ ದ್ರೋಹಿಗರನ್ನು ನಾಶಮಾಡಿ ದೇಶವನ್ನು ವಿಸ್ತಾರಪಡಿಸಿ, ನಿರುಪಾಧಿಕ ಮಾಡಿ, ದೇಶಸೇವೆಯನ್ನು ಮಾಡಿದ ಈ ಕತ್ತಿಯನ್ನು ಇನ್ನು ನೀನು ಹಿಡಿ (ಶಾಂತಲಾ. ೧೪೧).

[ದ್ರೋಹ + – ಇಗ]

ದ್ರೋಹಿತನ (ನಾ). ಮೋಸಗಾರಿಕೆ ; ವಂಚನೆ : ಈ ಸಂಸ್ಥಾನವು ಬಹು ಬಲವಾದದ್ದು. ಪಿತೂರಿಯೂ ದ್ರೋಹಿತನವೂ ಇಲ್ಲದಿದ್ದರೆ ಹೈದರನಿಗೂ ಜೈಸಲಸಾಧ್ಯವಾದದ್ದು (ಚಿತ್ರಪಾ. ೯). [ದ್ರೋಹಿ + – ತನ]

ದ್ರೌಣಿ (ನಾ). ೧. ದ್ರೋಣಾಚಾರ್ಯನ ಮಗ ; ಅಶ್ವತ್ಥಾಮ : ನಡೆ ಕುರುಕ್ಷ್ಮಾಪಾಳನಿರ್ದಲ್ಲಿಗೆಂದರವಿಂದಾಲಯೆಯಂ ಮಗುಟ್ಟಿದನದೇನಾ ದ್ರೌಣಿ ಶೌರ್ಯಾರ್ಥಿಯೋ (ಪಂಪಭಾ. ೧೩-೧೦೨) ; ಜೋಳದ ಪಾಟಿಯಂ ಬಗೆದರಿಲ್ಲಾ ದ್ರೌಣಿಯುಂ ದ್ರೋಣನುಂ (ಗದಾಯು. ೨-೧೧) ; ಇವರಂ ಸುಡುವುದೇ ಲೋಹಿತಾಶ್ವಾಸ್ತ್ರವೆನೆ ದ್ರೌಣಿ ನಾನಲ್ಲವೆ ಶಿವಾರ್ಚಕನೆಂದನು (ರಾಘಚ. ೬-೩೬). ೨. ದೋಣಿ ; ನಾವೆ. ೧, ೨ : ಕೌರವಕ್ಷಿತಿವರನ ಸೇನೆಯಂತಾ ದ್ರೌಣಿಯಿಂ ವೃಕ್ಷದಂತಾ ಪ್ರವಾಳದಿಂದ . . . ಒಪ್ಪಿತು ಸಮುದ್ರಂ (ಭಾವಜಂ. ೧-೨೩). P ಇಲ್ಲಿರುವ ಶ್ಲೇಷಾರ್ಥವು ವ್ಯಾಕರಣ ಶುದ್ಧವೆಂದು ಹೇಳಲಾಗುವುದಿಲ್ಲ. [ಸಂ.]

ದ್ರೌಣಿಕ (ನಾ). ನಾಲ್ಕು ಕೊಳಗ ಬೀಜವನ್ನು ಬಿತ್ತುವಷ್ಟು ಭೂಮಿ ; ದ್ರೌಣಿಕಃ – ನಾಲ್ಕು ಕೊಳಗ ಬಿತ್ತತಕ್ಕ ಭೂಮಿಯ ಪೆಸರು (ಗುರುಬಾ. ೨೯೬). [ಸಂ.]

ದ್ರೌಪದಿ (ನಾ). ೧. ದ್ರುಪದರಾಜನ ಮಗಳು ; ಪಾಂಡವರ ಪತ್ನಿ : ಆಗಳ್ ದ್ರೌಪದಿ ತನ್ನ ಕೇಶಪಾಶಮಂ ದುಶ್ಶಾಸನಂ ಪಿಡಿದು ತೆಗೆದನೆಂಬ ಸಿಗ್ಗಗ್ಗಳಂ ಪೆರ್ಚೆ ಸಭೆಯೊಳಿಂತೆಂದಳ್ (ಪಂಪಭಾ. ೭-೯ ವ) ; ಮರು ತ್ಪುತ್ರಂ ಬಟಿಯಟ್ಟಿ ಕರಸಿ ತೋಱಲ್ಕೇಕಚ್ಛತ್ರೀಕೃತ ಜಗದಹಿತಕ್ಷತ್ರಿಯ ಕುಳಕಾಳರಾತ್ರಿಯಂ ದ್ರೌಪದಿಯಂ (ಗದಾಯು. ೮-೪೪) ; ಮಗನು ಧೃಷ್ಟ ದ್ಯುಮ್ನ ದ್ರೌಪದಿ ಮಗಳು ಭಾರದ್ವಾಜನೆತ್ತಿದ ಹಗೆಗೆ ಹರುವಾಯ್ತೆನುತ ಹಿಗ್ಗಿದ ದ್ರುಪದಭೂಪಾಲ (ಕುಷ್ಠಾಅ. ೭-೭೪). ೨. [ಜ್ಯೋತಿ] ಒಂದು ನಕ್ಷತ್ರದ ಹೆಸರು : ಅದರ ಕೆಳಗೆ ಕುಂತಿಯವರೆಗಿನ ಖಗೋಳಪ್ರದೇಶವೆಲ್ಲ ಆಂಡ್ರಾಮಿಡ ರಾಶಿಗೆ ಸೇರಿದೆ. ಆಂಡ್ರಾಮಿಡವನ್ನು ದ್ರೌಪದಿಯೆಂದು ಕರೆದಿದೆ (ನಕ್ಷತ್ರ. ೨೮). [ಸಂ. ದ್ರೌಪದೀ]

ದ್ವಂದ್ವ (ನಾ). ೧. ಎರಡು ; ಜೊತೆ ; ಯುಗಳ : "ಯುಗ್ಮಂ, ಯುಗಂ, ಯುಗಳಂ, ದ್ವಂದ್ವಂ . . . ಯಮಳಂ–ಈ ೮ ಅಮಳ್" (ಹಲಾಯು. ೧೦೬-೦೫) ; ಎರಡರಲ್ಲೆ ಎಲ್ಲವಾಗಿ ಎರಡೆಂಬುದೆ ಅಲ್ಲವಾಗಿ ದ್ವಂದ್ವದಲ್ಲಿ ದಂಪತಿ ವಿಶ್ವವಾದ ಶಿವಸತಿ (ಅರಳು. ೪೪೬-೦೮) ; ಚೆಂದ ವೇಗ ಸ್ತಿಮಿತ ದನುವು ಹುಳಿಯುಪ್ಪನುವು ದ್ವಂದ್ವದನುವುಗಳಿಂದ (ಮಂಕುಳ. ೪೪೮). ೨. ಪರಸ್ಪರ ವಿರುದ್ಧವಾದ ಗುಣ, ಸ್ವಭಾವ, ಸ್ಥಿತಿ ಅಥವಾ ವಸ್ತು ಮೊದಲಾದುವುಗಳ ಜೋಡಿ ; ಶೀತ – ಉಷ್ಣ, ಕತ್ತಲೆ– ಬೆಳಕು, ಸುಖ – ದುಃಖ, ಕಹಿ – ಸಿಹಿ ಇತ್ಯಾದಿ : ಸುಖ – ದುಃಖಗಳ ದ್ವಂದ್ವದಲ್ಲಿ ಸಿಲುಕದಿರು (ಧರ್ಮಸಾ. ೧೩೨) ; ಜೀವನು . . . ಲಾಭ– ನಷ್ಟ, ಜಯ–ಅಪಜಯಗಳೆಂಬ ದ್ವಂದ್ವಗಳಲ್ಲಿಯೇ ಯಾವಾಗಲೂ ಸಿಲುಕಿ ನರಳುತ್ತಿರುವನು (ಕಕ್ತಿವಿ. ೧೭). ೩. ಬೇರೆ ಬೇರೆ ಎಂಬ ಭಾವನೆ ; ದ್ವೈತಭಾವ : ಹುಟ್ಟಿಸುವಾತ ಬ್ರಹ್ಮನಾದಡೆ ಅರ್ಚಿಸಲೇಕೊ ನಿಮ್ಮುವ . . . ಕೊಂದು ಹೊದ್ದಿಸುವಾತ ರುದ್ರನಾದಡೆ ಮಹಾದ್ವಂದ್ವವ ನುಡಿಯ ಲೇಕೊ ನಿಮ್ಮುವ (ಮೋಳಿಮಾ. ೭-೨೩) ; ಆ ಒಂದಾದುದನೆ ನೋಡಿ ದ್ವಂದ್ವವನೆ ಹಱಿದು ನಿಮ್ಮ ಸಂಗಸುಖದೊಳಗೋಲಾಡಿ ಸುಖಿಯಾದೆ ನಯ್ಯಾ (ಲಿಂಗವ. ೭೬-೭೯) ; "ದ್ವಂದ್ವಗಳ ಗೆದ್ದಂದು" ; "ಕಾನನಕೆ ನಡೆದು ಏಕಾಂತದಲಿ ಕುಳಿತಂದು" ; ಎಂದು ಒಬ್ಬೊಬ್ಬರೊಂದನು ಹೇಳಿ ತೆರಳಿದರು (ಕೋಗಿಲೆ. ೬೪-೧೬). ೪. ವಿಶೇಷವಾಗಿ ಇಬ್ಬರು ಮಾಡುವ ಯುದ್ಧ ; ಮಲ್ಲಯುದ್ಧ, ಕುಸ್ತಿ ಇತ್ಯಾದಿ : "ಸಂಗ್ರಾಮಃ, ಸಮಿತಿಃ, ಸಮಿತ್ . . . ದ್ವಂದ್ವಃ, ವಿಗ್ರಹಃ – ಈ ೩೫ ಕಾಳೆಗಂ" (ಹಲಾಯು. ೭೫-೨೯೯). ೫. ಸಂದೇಹ ; ಸಂಶಯ. ೬. ಜಗಳ ; ಚರ್ಚೆ ; ವಾದವಿವಾದ : ಚರ್ಚಾಕೂಟದಲ್ಲಿ ಅವನಿಗೂ . . . ಚರಿತ್ರೆಯ ಅಧ್ಯಾಪಕರಿಗೂ ದ್ವಂದ್ವ ಪ್ರಾರಂಭವಾಗಿ ಬಿಡುತ್ತಿತ್ತು ! (ಭೂಮಿತಾ. ೭). ೭. ಇಬ್ಬರು ಸೇರಿ ಏಕಾಂತದಲ್ಲಿ ಮಾತನಾಡುವ ರಹಸ್ಯ,–ಗುಟ್ಟು. ೮.=ದ್ವಂದ್ವಸಮಾಸ: ದ್ವಿಪದಂ ಮೇಣ್ ಬಹುಪದಮನ್ಯಪದಾರ್ಥದೊಳೊಂದಿ ನಿಲೆ ಬಹುವ್ರೀಹಿ ಸಮಸ್ತಪದಾರ್ಥಂ ದ್ವಂದ್ವಂ ಪೂರ್ವಪದಪ್ರಾಧಾನ್ಯಮವ್ಯಯಾಭಾವಾಖ್ಯಂ (ಕಾವ್ಯಾವ. ೨೦೮) ; ಪದಾರ್ಥದ ಗಡಣಂ ದ್ವಂದ್ವಮೆನಿಪ್ಪುದು (ಶಮದ. ೧೬೫ ಅಡಿಟಿ) ; ಅನೇಕ ಪದಗಳಿಗೆ ಸಮುಚ್ಚಯವು ತೋರಿ ಆಗುವ ಸಮಾಸವು ದ್ವಂದ್ವ (ಕೈಪಿಡಿ. ೨೨). [ಸಂ.]

ದ್ವಂದ್ವಕರ್ಮ (ನಾ). ಪರಸ್ಪರ ವಿರುದ್ಧವಾದ ಕಾರ್ಯ : ಸರ್ವ ಜೀವರು ಗಳಂತೆ ಪುಣ್ಯಪಾಪ ಸುಖದುಃಖ ಸ್ವರ್ಗ ನರಕಂಗಳೆಂಬ ದ್ವಂದ್ವಕರ್ಮಂಗಳ ಹೊದ್ದಿರ್ಪನೆ ಶಿವನು (ಅಖಂಡೇ. ೦೦೬-೬೨). [ದ್ವಂದ್ವ + ಕರ್ಮ]

ದ್ವಂದ್ವಜ (ಗು). ಬೇರೆ ಬೇರೆಯಾದುದರ ಸಂಬಂಧದಿಂದುಂಟಾದ ; ಭಿನ್ನಪ್ರಕೃತಿಗಳ ಸಂಕರದಿಂದ ಜನ್ಯವಾದ : ದ್ವಂದ್ವಜ ಪಿತೃಮಾತೃತೆಯಿಂ ದ್ವಂದ್ವಜಯವಸಾನ್ನಪಾನಖಾನಾದಿಗಳಿಂ ದ್ವಂದ್ವಜ ಋತುಸಂಗತದಿಂ ದ್ವಂದ್ವಪ್ರಕೃತಿಗಳೆ ಪುಟ್ಟುಗುಂ ತುರಗಂಗಳ್ (ಅಶ್ವಶಾ. ೬-೮೯).

[ಸಂ.]

ದ್ವಂದ್ವಜ್ವರ (ನಾ). ವಾತ, ಪಿತ್ತ, ಕಫ–ಇವುಗಳಲ್ಲಿ ಯಾವುದಾದರೂ ಎರಡರ ದೋಷದಿಂದ ಬರುವ ಜ್ವರ ; ಎರಡು ದಿನಕ್ಕೊಮ್ಮೆ ಬರುವ ಜ್ವರ : ದ್ರಾಕ್ಷಿಹಣ್ಣು . . . ಕಟುಕರೋಹಿಣಿ ಇವುಗಳ ಕಷಾಯ ವನ್ನು ಕಾಯಿಸಿ. . . . ಕೊಡಲು ತ್ರಿದೋಷಜ್ವರ, ದಾಹಜ್ವರ, ಶ್ವಾಸ, ದ್ವಂದ್ವಜ್ವರ, ಮದ, ಮೂರ್ಛೆ ಸಹ ಮಾಣ್ಗುಂ (ಸಕವೈ. ೧೧೧).

[ದ್ವಂದ್ವ + ಜ್ವರ]

ದ್ವಂದ್ವನಾಡಿ (ನಾ). ವಾತ, ಪಿತ್ತ ಮತ್ತು ಕಫ ಇವುಗಳನ್ನು ಸೂಚಿಸುವ ನಾಡಿಗಳಲ್ಲಿ ಯಾವುದಾದರೂ ಎರಡು ನಾಡಿ : ನಾಡಿಯ ಗತಿಭೇದಂ ಗಳಿಂದ ವಾತ ಮೊದಲಾದ ನಾಡಿಗಳನ್ನೂ ವಾತ ಪಿತ್ತಾದಿ ದ್ವಂದ್ವನಾಡಿ ಗಳನ್ನೂ ತಿಳಿದು ಹೇಳುವುದು (ಸಕವೈ. ೧೩). [ದ್ವಂದ್ವ + ನಾಡಿ$_1$]

ದ್ವಂದ್ವಪ್ರಕೃತಿ (ನಾ). ೧. ಬೇರೆ ಬೇರೆ ಸ್ವಭಾವ. ೨. ಬೇರೆ ಬೇರೆ ಸ್ವಭಾವವುಳ್ಳುದು : ದ್ವಂದ್ವಜ ಪಿತೃಮಾತೃತೆಯಿಂ ದ್ವಂದ್ವಜಯವಸ್ನಾನ ಪಾನಖಾನಾದಿಗಳಿಂ ದ್ವಂದ್ವಜ ಋತುಸಂಗತದಿಂ ದ್ವಂದ್ವಪ್ರಕೃತಿಗಳೆ ಪುಟ್ಟುಗುಂ ತುರಗಂಗಳ್ (ಅಶ್ವಶಾ. ೬-೮೯). [ದ್ವಂದ್ವ + ಪ್ರಕೃತಿ]

ದ್ವಂದ್ವಪ್ರಯತ್ನ (ನಾ). ಯುದ್ಧದ ಪ್ರಯತ್ನ ; ಕದನ ಹೂಡುವಿಕೆ : ಖಂಡೇರಾಯನೊಡನೆ ಪುನಃ ದ್ವಂದ್ವಪ್ರಯತ್ನ ಮಾಡಬಾರದೆಂದು . . . ತನ್ನ ಅಧಿಕಾರವನ್ನು ಭದ್ರಗೊಳಿಸಿಕೊಂಡನು (ಒಡಕ. ೯೪).

[ದ್ವಂದ್ವ + ಪ್ರಯತ್ನ]

ದ್ವಂದ್ವಪ್ರಾಸ (ನಾ). [ಛಂದ] ಪದ್ಯದ ಪ್ರತಿಸಾಲಿನ ಮೊದಲನೆಯ ಮತ್ತು ಮೂರನೆಯ ಸ್ವರಗಳ ನಡುವೆ ಒಂದೇ ಬಗೆಯ ವ್ಯಂಜನ ಅಥವಾ ವ್ಯಂಜನಗುಚ್ಛ ಎರಡು ಸಾರಿ ಆವೃತ್ತಿಗೊಳ್ಳತಕ್ಕುದು (?) : ದ್ವಿಪ್ರಾಸಂ ಸುಭಗ ದ್ವಂದ್ವಪ್ರಾಸಂ ಕಾವ್ಯರಚನೆಘಟಿ(ಗುಚಿ) ತಮ (ಮೆ) [ನಿ]ಪ್ಪಾ ತ್ರಿಪ್ರಾಸಂ [ಸಲೆಯಂತಾ] [ದಿಪ್ರಾಸಂ] ಬೇಱೆ ನಾಲ್ಕು ತೆಱ ನಾಗಿರ್ಕುಂ (ಕವಿರಾ. ೩-೨೩೦) ; ಉದಾ :–ಒಂದೊಂದಱ ಸೌಂದರ್ಯ ಮನೊಂದೊಂದೀಕ್ಷಿಸಲೊಡರ್ಚಿ ನಾಸಿಕಮಡ್ಡಂ ಬಂದಂದಮನೀಕ್ಷಿಸಿ ಪೆಱನಿಂ[ದಂ] ದೀಕ್ಷಿಸು [ವು]ವವಳ ನಿಡಿಯೆಸಟ್ಗಣ್ಗಳ್ (ಕವಿರಾ. ೩-೨೩೩) ; ದ್ವಿಪ್ರಾಸಂ ಸುಭಗಂ ದ್ವಂದ್ವಪ್ರಾಸಂ ಕಾವ್ಯರಚನೆಗುಚಿತಮೆನಿಪ್ಪ ತ್ರಿಪ್ರಾಸಂ ಸಲೆಯಂತಾದಿಪ್ರಾಸಂ ಬೇಱೆ ನಾಲ್ಕುತೆಱನಾಗಿರ್ಕುಂ (ಛಂದೋಂಬು. ೦-೧೯).

[ದ್ವಂದ್ವ + ಪ್ರಾಸ]

ದ್ವಂದ್ವಮೇಹ (ನಾ). ಒಂದು ವಿಧವಾದ ಮೇಹರೋಗ : ವಿಷ್ಣುಕ್ರಾಂತಿ ಪರ್ಣವಂ ತಂದು ಕರೆದಿಂ ಮರ್ದಿಸಿ ಬಂದ ನೊರೆ ಕೂಡೆ ಒಂದು ಪಾವು ರಾಯಪುರಿಯ ಸಕ್ಕರೆಯಿಂದ ಕಲ್ಕ ಮಾಡಿ ಕೂಡಿ ಮೂರು ದಿನ ಕೊಳ್ಳಲು ದ್ವಂದ್ವಮೇಹ ನಾಶ (ವಿವೈವಿ. ೧೨೨). [ದ್ವಂದ್ವ + ಮೇಹ]

ದ್ವಂದ್ವಯುದ್ಧ (ನಾ). ಇಬ್ಬರು ಮಾಡುವ ಕಾಳಗ ; ಕುಸ್ತಿ ; ಮಲ್ಲಯುದ್ಧ : ಅಂತಿರ್ವರುಂ ದ್ವಂದ್ವಯುದ್ಧದೊಳ್ ತಟ್ಟು ಕಾದೆ (ಶಾಂತಿಪು. ೪-೪೪ ಪ) ; ದ್ವಂದ್ವಯುದ್ಧಕ್ಕೆ ಧರ್ಮನಂದನಾದಿಗಳ ಮೊಗಮಂ ನೋಡಿ (ಗದಾಯು. ೬-೬೧ ಪ) ; ಕೊಂದು ವಜ್ರಹನುವಂ ದ್ವಂದ್ವಯುದ್ಧದೊಳ್ ದ್ವಿವಿದಂ ತಾನುಮೇರ್ವಡೆದುರುಳಿದನ್ (ಶ್ರೀರಾಮಾ. ೬೩೧-೬೦).

[ದ್ವಂದ್ವ + ಯುದ್ಧ]

ದ್ವಂದ್ವಯೋಗ (ನಾ). [ಕಾಮಶಾ] ಎರಡು ಉಗುರುಗಳಿಂದಾದ ಗಾಯದ ಗುರುತು : ಎರಡುಗುರ್ಗಳಿಂ ಕದಪಧರಮುರೋಜಂಗಳಂ ಕರಮೊತ್ತಲುಂತದೇ ದ್ವಂದ್ವಯೋಗ (ಜನವ. ೬-೩೮) ; ಪಂಚನಖಯೋಗ, ದ್ವಂದ್ವಯೋಗ, ಅರ್ಧಚಂದ್ರಕ, ಮಂಡಲ, ಮಯೂರಪಥ, ಶತಪ್ಲುತ, ಉತ್ಪಲಪೆಂಬ ಸಪ್ತವಿಧ ನಖೋಪಕ್ಷತವಿಹಿತರಿಂ (ವಿವೇಕ. ೨೩೦). 'ನಖಕ್ಷತ' ಪರಾ. [ಸಂ.]

ದ್ವಂದ್ವರೋಗ (ನಾ). ವಾತ ಮತ್ತು ಪಿತ್ತ ಈ ಎರಡರ ದೋಷದಿಂದಾದ ಕಾಯಿಲೆ : ಬಹಳ ಶ್ಲೇಷ್ಮರೋಗಗಳಲ್ಲಿ . . . ಕೋಳಿಗಳ ಹಾಗೂ ನಾಡಿ ನಡೆವುದು. ವಾತ ಪಿತ್ತವೆರಡೂ ಕೂಡಿದ ದ್ವಂದ್ವರೋಗದಲ್ಲಿ ಅಡಿಗಡಿಗೆ ಹಾವಿನ ಹಾಗೆ ನಡೆಯುತ್ತ ಮತ್ತು ತಟತಟನೆ ಹಾರಾಡುತ್ತಲಿಹುದು (ಸಕವೈ. ೧೨). [ದ್ವಂದ್ವ + ರೋಗ]

ದ್ವಂದ್ವವಿರಹಿತ (ನಾ). ಜೀವಾತ್ಮನ ಮತ್ತು ಪರಮಾತ್ಮನ ಐಕ್ಯವನ್ನು ಕಂಡವನು ; ಯೋಗಿ ; ಯತಿ : ಇಂದ್ರಿಯವನೊಡೆತುಳಿದು ಕರ್ಮದ ಬಂದಿಯನು ತಲೆಬಳಚಿ . . . ದ್ವಂದ್ವವಿರಹಿತನಾಗಿ ವಿಶ್ವದಲೊಂದಿ ಮೆಱೆಯಲು ಬಲ್ಲವನು ಗುರುವೆಂದೆನಿಸುವನು (ಕುಷ್ಯಾಉ. ೩-೮೩).

[ದ್ವಂದ್ವ + ವಿರಹಿತ]

ದ್ವಂದ್ವಸಮಾಸ (ನಾ). [ವ್ಯಾಕ] "ಎರಡು ಅಥವಾ ಅನೇಕ ಪದಗಳು ಅರ್ಥದಲ್ಲಿ ಮುಖ್ಯ ಅಮುಖ್ಯ ಎಂಬ ಭೇದವಿಲ್ಲದಂತೆ ಜೊತೆಗೂಡಿ ಸಮಾಸವಾದರೆ ದ್ವಂದ್ವಸಮಾಸವೆಂದು ಹೆಸರು" (ಮಧ್ಯಮ. ೧೪೬) ; ದ್ವಂದ್ವಸಮಾಸಕ್ಕೆ—ರಾಮರಾವಣೌ . . . ಸುಖದುಃಖ (ಶಬ್ದಾದ. ೪೬).

[ದ್ವಂದ್ವ + ಸಮಾಸ]

ದ್ವಂದ್ವಾಗಮ (ನಾ). ಶಾಂತಾಗಮದ ಏಳು ಭೇದಗಳಲ್ಲಿ ಒಂದು : ಲಿಂಗಾಧ್ಯಕ್ಷ ಸುರಾಧ್ಯಕ್ಷ ಶಂಕರತಂತ್ರ ಮಹೇಶ್ವರಾಗಮ ಅಸಂಖ್ಯತಂತ್ರ ಅನಿಲಾಗಮ ದ್ವಂದ್ವಾಗಮವೆಂದು ಶಾಂತಾಗಮದೇಳು ಭೇದಂಗಳು (ವಿವೇಕ. ೭೦). [ದ್ವಂದ್ವ + ಆಗಮ]

ದ್ವಂದ್ವಾರ್ಥ (ನಾ). ಶ್ಲೇಷಾರ್ಥ ; ಎರಡು ವಿಧವಾದ ಅರ್ಥ ; ಬೇರೆ ಬೇರೆ ರೀತಿಯ ಅರ್ಥ : ಅರ್ಥವಾಯಿತು ತಾನೆ, ದ್ವಂದ್ವಾರ್ಥ ? (ಚಂದ್ರಸ. ೪೪-೩). [ದ್ವಂದ್ವ + ಅರ್ಥ]

ದ್ವಂದ್ವಾರ್ಥತೆ (ನಾ). ಎರಡು ಅರ್ಥಗಳನ್ನು ಹೊಂದಿರುವಿಕೆ ; ಭಿನ್ನವಾದ ಎರಡು ಅರ್ಥಗಳನ್ನು ಪಡೆದಿರುವಿಕೆ : ದ್ವಂದ್ವಾರ್ಥತೆ, ಸಂದಿಗ್ಧತೆ ; ಅನಿಶ್ಚಯಾರ್ಥ (Ambiguity. ಇಂಕನಿ).

[ಸಂ. ದ್ವಂದ್ವಾರ್ಥತಾ]

ದ್ವತೊಗೆಯನೂರ್ (ನಾ). ಒಂದು ಊರಿನ ಹೆಸರು : ಕೊದಮೂಕುನಾಮಗ್ರಾಮಂ ಕುಂಬ(ಭ)ಸ(ಶ)ರ್ಮ್ಮಭಟ್ಟಃ ದ್ವತೊಗೆಯನೂರ್ನ್ನಾಮಗ್ರಾಮಂ ಕಾಶ್ಯಪಗೋತ್ರಃ (ಇಆ. XVIII, ೩೬೭-೧೫ ; ೩ನೆಯ ಶತ).

[? + ಊರ್]

ದ್ವಯ (ನಾ). ಜೊತೆ ; ಜೋಡಿ ; ಮಿಥುನ ; ಯುಗಳ : "ಯುಗ್ಮಂ, ಯುಗಂ . . . ದ್ವಯಂ, ಯಮಂ, ಯಮಳಂ – ಈ ೮ ಅಮಳ್" (ಹಲಾಯು. ೦೦೬-೦೫) ; ಮೃಷ್ಟಾನ್ನವ ನೆನೆದರೆ ಹೊಟ್ಟೆ ತುಂಬುವುದೇ . . . ನೆನೆದಡಾಗದು ನಿರ್ಧರಿಸಿ ದ್ವಯಕುಳವಳಿದು ಬೆರೆಯಬಲ್ಲಡೆ ಸದ್ಗುರು ಸಿದ್ಧಸೋಮೇಶ್ವರಲಿಂಗವು ತಾನೇ (ಸರ್ವವ. ೧೮೨-೮೩೫) ; ಬೆಳೆಯೆಂಬ ಧಾತು ಸಸ್ಯಾವಳಿಯೊಳ್ ಬಳೆಯೆಂಬ ಧಾತು ಮಿಕ್ಕೆಡೆಯೊಳ್ ಸಂಗಳಿಕುಂ ತಿಳಿಯಲ್ಬರ್ಪುದು ಬೆಳೆ ಬಳವಿಗಳೆಂಬ ಭಾವವಚನದ್ವಯದೊಳ್ (ಕಮದ. ೨೦೮) ; ಬಿಜಯಂಗೈದ ಮಂಗಳದ್ವಯಗಳಂ ಮುದ್ದಿಸಿದರುಪಚರಿಸಿದರ್ ದಶರಥಕುಮಾರರಂ (ಶ್ರೀರಾಮಾ. ೩೫-೧೮೬). [ಸಂ.]

ದ್ವಯಭಾವ (ನಾ). ಬೇರೆ ಬೇರೆ ಎಂಬ ಭಾವ ; ದ್ವೈತ : ದ್ವಯಭಾವಂ ನಮಗಿಲ್ಲ ಬಲ್ಲವರೆ ನಾನುಂ ನೀನುಮಿಾ ಮಾತ ನಿಶ್ಚಯಂ (ಜಗವಿ. ೧೮-೬೬). [ದ್ವಯ + ಭಾವ$_2$]

ದ್ವಯವಿಡಿ (ಕ್ರಿ). ದ್ವೈತಭಾವವನ್ನು ಹೊಂದು : ದ್ವಯವಿಡಿದುದಕ್ಕೆ ಎರಡಿಲ್ಲದೆ ಮೀಱಲಿಲ್ಲವಾಗಿ ಜಗವನಱಿವುದಕ್ಕೆ ದಿವ ರಾತ್ರಿಯಲ್ಲಡೆ ಮೀಱಿ ತೋಱಲಿಲ್ಲವಾಗಿ ಸಂಸಾರವ ಹಱಿವುದಕ್ಕೆ ನಿಃಕಳಂಕಮಲ್ಲಿಕಾರ್ಜುನನಲ್ಲದಿಲ್ಲವಾಗಿ (ಮೋಳಿಮಾ. ೦-೦). [ದ್ವಯ + ಪಿಡಿ$_1$]

ದ್ವಯಾತಿಗ (ನಾ). ೧. ರಜೋಗುಣ ಹಾಗು ತಮೋಗುಣಗಳೆರಡನ್ನೂ ಮೀರಿದವನು ; ಸತ್ತ್ವಗುಣವುಳ್ಳವನು ; ಸಾತ್ವಿಕ : "ವಿರಜಸ್ತಮಾಃ, ದ್ವಯಾತಿಗಃ – ೨ ರಜೋಗುಣವನ್ನೂ ತಮೋಗುಣವನ್ನೂ ಬಿಟ್ಟ ಸಾತ್ವಿಕನ ಹೆಸರು" (ಸಿದ್ಧಾಂತಿ. ೨೨೮). ೨. ಸುಖ, ದುಃಖ ಮೊದಲಾದ ದ್ವಂದ್ವಗಳನ್ನು ಬಿಟ್ಟವನು ; ನಿರ್ಲಿಪ್ತ ; ವಿರಕ್ತ. [ಸಂ.]

ದ್ವಾಃಸ್ಥ (ನಾ). ≡ ದ್ವಾಸ್ಥ : ವಂದಿಪ ನುತಿಪ ದ್ವಾಃಸ್ಥರಂ ಮನ್ನಿಸುತ . . . ಮೌನದಿಂ ದಿಟ್ಟಿಸಿದನು (ಪಂಕಾರಾ. ೨-೮-೧). [ಸಂ.]

ದ್ವಾಃಸ್ಥಿತ (ನಾ). ಬಾಗಿಲು ಕಾಯುವವನು ; ದ್ವಾರಪಾಲಕ. [ಸಂ.]

ದ್ವಾತ್ರಿಂಶತಿ (ನಾ). = ದ್ವಾತ್ರಿಂಶತ್ತು. 'ದ್ವಾತ್ರಿಂಶತಿದೋಷ' ಪರಾ.

[ಸಂ.]

ದ್ವಾತ್ರಿಂಶತಿದೋಷ (ನಾ). [ಜೈನ] ಸಾಮಾಯಿಕಕ್ಕೆ ಅಡ್ಡಿಯಾದ ಮೂವತ್ತೆರಡು ಬಗೆಯ ದೋಷಗಳು ; P ವ್ರತಾಚರಣೆಯನ್ನು– ೧. ಆಯಾಸಪಡುತ್ತ ಪ್ರೀತಿಯಿಲ್ಲದೆ ಮಾಡುವುದು. ೨. ಬೇಸರದಿಂದ ಮಾಡುವುದು. ೩. ಯಾರಿಗೂ ಕಾಣದಂತೆ ಒಳಹೊಕ್ಕು ಮಾಡುವುದು. ೪. ಬೇರೆಯವರನ್ನು ಗದರಿಸುತ್ತ ತಾನು ಒಲೆದಾಡುತ್ತ ಮಾಡುವುದು. ೫. ಮುಖವನ್ನು ಮೇಲಕ್ಕೆತ್ತಿ ಮಾಡುವುದು. ೬. ತೆವಳಿ, ತೆವಳಿ ನಿಧಾನವಾಗಿ ಮಾಡುವುದು. ೭. ಮೀನಿನಂತೆ ಹೊಳೆಯುತ್ತ ಆಡಂಬರದಿಂದ ಮಾಡುವುದು. ೮. ಇನ್ನೊಬ್ಬರ ಮೇಲೆ ಬಹಳ ಕೋಪಿಸಿಕೊಂಡು ಮಾಡುವುದು. ೯. ಕೈಯನ್ನು ಕಟ್ಟಿಕೊಂಡು ಅನಾಸಕ್ತಿಯಿಂದ ಮಾಡುವುದು. ೧೦. ಇನ್ನೊಬ್ಬರಿಗೆ ಹೆದರಿ ಮಾಡುವುದು. ೧೧. ಇನ್ನೊಬ್ಬರಿಂದ ಹೆದರಿಸಲ್ಪಟ್ಟು ಮಾಡುವುದು. ೧೨. ಅತಿಶ್ರದ್ಧೆಯಿಂದ ಕೂಡಿ ಮಾಡುವುದು. ೧೩. ಇತರರು ತಿಳಿಯದಂತೆ ಕದ್ದು ಮಾಡುವುದು. ೧೪. ಇತರರಿಗೆ ಅಡ್ಡಿತಂದು ತಾನು ಗರ್ವದಿಂದ ಮಾಡುವುದು. ೧೫. ಜಗಳವಾಡಿ, ಆ ಅಸಮಾಧಾನ ಪರಿಹಾರ ಮಾಡದೆ ಮಾಡುವುದು. ೧೬. ಗಟ್ಟಿಯಾಗಿ ಪಠನ ಮಾಡುತ್ತ ಮಾಡುವುದು. ೧೭. ಮಾಡಲಾಗದ ವಿಚಾರಗಳನ್ನು ಕುರಿತು ಮಾತನಾಡುತ್ತ ಮಾಡುವುದು. ೧೮. ಇತರರನ್ನು ಅವಹೇಳನ ಮಾಡುತ್ತ ಮಾಡುವುದು. ೧೯. ಹಣೆಯಲ್ಲಿ ಮೂರು ರೇಖೆಯುಂಟಾಗುವಷ್ಟು ಕೋಪದಿಂದ ಮಾಡುವುದು. ೨೦. ಅವಯವಗಳನ್ನು ಮುದುರಿಕೊಂಡು ಮಾಡುವುದು. ೨೧. ವಿಶ್ವಾಸವಿಲ್ಲದ ಗುರುಗಳನ್ನು ಕಂಡು ಮಾಡುವುದು. ೨೨. ಅಣಿಯಿಲ್ಲದೆ ಮಾಡುವುದು. ೨೩. ಗುರುಗಳಿಗೆ ಕಾಣಗೊಡದಂತೆ ಮಾಡುವುದು. ೨೪. ಶ್ರವಣರು ಬಂದರಲ್ಲಾ ಈ ಬಿಟ್ಟಿಯ ಕೆಲಸ ಹೇಗಾದರೂ ಮುಗಿಯಲೆಂದು ವಿವಿಧ ಉಪಕರಣ

ಗಳನ್ನು ಕೂಡಿಸಿ ಮಾಡುವುದಂ. ೨೫. ಉಪಕರಣಗಳಂ ಇಲ್ಲದೆಯೇ ಮಾಡುವುದು. ೨೬, ೨೭, ೨೮. ತ್ರಿಸಂಧ್ಯೆಯಲ್ಲಿ ಮಾಡುವುದನ್ನು ವಂಶಾರಂ ಫಳಿಗೆ ವಂಂಚೆ ಅಥವಾ ತಡಮಾಡಿ ಮಾಡಂವುದಂ. ೨೯. ಮಂತ್ರಾದಿಗಳನ್ನು ಉಚ್ಚರಿಸದೆ ಮೌನವಾಗಿ ಮಾಡುವುದಂ. ೩೦. ಸನ್ನೆಗಳನ್ನು ತೋರುತ್ತ ಮಾಡುವುದಂ. ೩೧. ಬಹಳ ಕರ್ಕಶ ಧ್ವನಿಯಿಂದ ಮಂತ್ರಾದಿಗಳನ್ನು ಹೇಳಿ ಮಾಡುವುದಂ. ೩೨. ಮಂತ್ರಾದಿಗಳನ್ನು ಹಾಡುತ್ತ ಮಾಡುವುದು : ಪ್ರತಿದಿನ ಸಾಮಾಯಿಕವ ನಿರಾಲಸ್ಯಯುತನಾಗಿ ಮಾಳ್ಪುದರ್ಚಿಯೊಳು ಸತತ ದ್ವಾತ್ರಿಂಶತಿ ದೋಷವ ತೊಲಗಿಸಿ ಅತಿವಿಶೋಧಿ ಸಹಿತಾಗಿ (ದ್ವಾದಶ. ೧೧-೭೦೪). 'ದೋಷ' ಪರಾ. [ದ್ವಾತ್ರಿಂಶತಿ + ದೋಷ]

ದ್ವಾತ್ರಿಂಶತ್ತು (ನಾ). ಒಂದಂ ಸಂಖ್ಯೆ ; ವಂಾವತ್ತೆರಡು : ಅಭಿನವೋದ್ಯತ್ತ ಧೌತ ಶಂಖಶಶಾಂಕವಿಶದ ಜಲಾರ್ದ್ರಜಲ ಕುಸುಮಂಗಳಂ ಸಾರ್ವಭೌಮೋಚಿತ ದ್ವಾತ್ರಿಂಶದ್ಭಾರುಚಾವರಂಗಳಂ ಮಾಡಿ ಪಿಡಿಸಿಯುಂ (ಆದಿಪು. ೯-೪೦ ಪ). [ಸಂ. ದ್ವಾತ್ರಿಂಶತ್]

ದ್ವಾತ್ರಿಂಶತ್ಕ್ಷತ್ರಿದಶಪತಿ (ನಾ). [ಜೈನ] ವಂಾವತ್ತೆರಡಂ ವಂಂದಿ ವ್ಯಂತರೇಂದ್ರರು; ಇವರಲ್ಲಿ ಕಿನ್ನರರ ಗುಂಪಿನಲ್ಲಿ ಇಬ್ಬರು ಇಂದ್ರರಿದ್ದಾರೆ : ೧. ಕಿನ್ನರ. ೨. ಕಿಂಪುರುಷ. ಕಿಂಪುರುಷರ ಗುಂಪಿನಲ್ಲಿ ಇಬ್ಬರು ಇಂದ್ರರಿದ್ದಾರೆ: ೧. ಸತ್ಪುರುಷ. ೨. ವಂಹಾಪುರುಷ. ಮಹೋರಗರ ಗುಂಪಿನಲ್ಲಿ ಇಬ್ಬರು ಇಂದ್ರರಿದ್ದಾರೆ. ೧. ಅತಿಕಾಯ. ೨. ವಂಹಾಕಾಯ. ಗಂಧರ್ವರ ಗುಂಪಿನಲ್ಲಿ ಇಬ್ಬರು ಇಂದ್ರರಿದ್ದಾರೆ: ೧. ಗೀತರತಿ. ೨. ಗೀತಯಂಶ. ಯಕ್ಷರ ಗುಂಪಿನಲ್ಲಿ ಇಬ್ಬರು ಇಂದ್ರರಿದ್ದಾರೆ : ೧. ಪೂರ್ಣಭದ್ರ. ೨. ವಂಣಿಭದ್ರ. ರಾಕ್ಷಸರ ಗುಂಪಿನಲ್ಲಿ ಇಬ್ಬರು ಇಂದ್ರರಿದ್ದಾರೆ : ೧. ಭೀಮ. ೨. ವಂಹಾಭೀಮ. ಪಿಶಾಚಿಗಳ ಗುಂಪಿನಲ್ಲಿ ಇಬ್ಬರು ಇಂದ್ರರಿದ್ದಾರೆ : ೧. ಕಾಳ. ೨. ವಂಹಾಕಾಳ. ಭೂತಗಳ ಗುಂಪಿನಲ್ಲಿ ಇಬ್ಬರು ಇಂದ್ರರಿದ್ದಾರೆ : ೧. ಸುರೂಪ. ೨. ಪ್ರತಿರೂಪ. ಇವರಲ್ಲಿ ದಕ್ಷಿಣೋತ್ತರ ಭೇದದಿಂದ ದ್ವಿಗುಣಿತವಾಗಿ ಒಟ್ಟು ಮೂವತ್ತೆರಡು ಮಂದಿ ವ್ಯಂತರೇಂದ್ರರಾಗುತ್ತಾರೆ. ವಂತ್ತು ಒಟ್ಟು ಇಂದ್ರರ ಸಂಖ್ಯೆ ನೂರಂ. ಹೇಗೆಂದರೆ–ಭವನವಾಸಿಗಳು ೪೦; ವ್ಯಂತರೇಂದ್ರರಂ ೩೨, ಕಲ್ಪವಾಸಿಗಳಂ ೨೪, ಸೂರ್ಯ ವಂತ್ತು ಚಂದ್ರರು ೨, ಚಕ್ರವರ್ತಿ ೧, ಸಿಂಹ ೧ : ಚಿತ್ರಾತ ಪೃಥ್ವಿಂ ಶತಪತ್ರವನಸ್ಥಳಿಯನಿಟ್ಟು ಗಗನಂ ದೆಸೆಯಂ ಚಿತ್ರಿಸೆ ಕರೀಟ ಕಿರಣಂ ದ್ವಾತ್ರಿಂಶತ್ಕ್ಷತ್ರಿದಶಪತಿಗಳಂದೇಟ್ರಂದರ್ (ಪುಣ್ಯಪು. ೦೪-೨೬೪). [ಸಂ.]

ದ್ವಾತ್ರಿಂಶದಿಂದ್ರ (ನಾ). = ದ್ವಾತ್ರಿಂಶತ್ಕ್ಷತ್ರಿದಶಪತಿ : ಕೈಲಾಸಶೈಲವಿಶಾಲ ಸ್ಫಟಿಕಸ್ಥಲೀನಿಕಟಮಂ ದ್ವಾತ್ರಿಂಶದಿಂದ್ರರ್ಕಳುತ್ಸವದಿಂದರ್ಚಿಸುವಾಗಳೇಂ ಕಱಿದುದೋ ಕರ್ಣಾವ್ಯತಾಸಾರಮಂ . . . ಸುರಸತೀಮಂಜೀರಿಕಾ ತಿಂಜಿತಂ (ಪಂಡಾಪು. ೦೬-೯೬). [ಸಂ.]

ದ್ವಾತ್ರಿಂಶದುಪಚಾರ (ನಾ). [ವೀಶೈ] ವಂಾವತ್ತೆರಡು ಬಗೆಯ ಸೇವೆ: ಬಳಿಕ ಪರಮಪವಿತ್ರದ್ರವ್ಯಂಗಳಿಂ ಮಾಳ್ಪ ಉಪಚಾರಂಗಳೊಳಗೆ ತ್ರಿವಿಧೋಪಚಾರ . . . ದ್ವಾತ್ರಿಂಶದುಪಚಾರ [೩೨] ಉಂಟವೆಱಲ್ಲಿ ಆವಾಹನ ಆಸನ ಪಾದ್ಯ ಅರ್ಘ್ಯ ಆಚಮನೀಯ ಸ್ನಾನ ವಸ್ತ್ರ ಯಜ್ಞೋಪವೀತ ಭೂಷಣ ಗಂಧ ಅಕ್ಷತೆ ಪುಷ್ಪ ಧೂಪ ದೀಪ ನೈವೇದ್ಯ ವಂಖವಾಸನ ನೀರಾಜನ ದರ್ಪಣ ಫಲಾರ್ಪಣ ತಾಂಬೂಲ ಪ್ರದಕ್ಷಿಣ ನಮಸ್ಕಾರ ಸ್ತೋತ್ರ ಪುರಾಣಪಠಣ ಛತ್ರ ಚಾಮರ ವ್ಯಜನ ಶಯ್ಯೆ ಸಂಗೀತ ನೃತ್ಯ ವಾದ್ಯ ಆತ್ಮಾರೋಪಣಮೆಂಬ ದ್ವಾತ್ರಿಂಶದುಪಚಾರಂಗಳಂ ಸಮಂತ್ರಕಮಾಗಿ ಮಾಡಿ (ವೀಚೇಳ. ೦೬೮). [ಸಂ.]

ದ್ವಾತ್ರಿಂಶದೇಕಕಲ್ಯಾಣ (ನಾ). [ಜೈನ]ಒಂದಂ ವ್ರತ: ಧರ್ಮಮಂ ಕೇಳ್ದು ಸಂಸಾರಶರೀರಭೋಗನಿರ್ವೇಗಮಂ ಬೋಧಿಸೆ ಸಮ್ಯಗ್ದರ್ಶನಸಮೇತಂ ಸಕಳಶ್ರಾವಕವ್ರತಂಗಳಂ ಕೆಯ್ಕೊಂಡು ಮನೆಗೆ ವಂದು ದ್ವಾತ್ರಿಂಶದೇಕ ಕಲ್ಯಾಣಂಗಳಂ ನೋನುತಿರ್ಪನ್ನೆಗಂ (ಶಾಂತಿಪು. ೯-೦೩ ಪ). [ಸಂ.]

ದ್ವಾದಶ (ಗು). ೧. ಹನ್ನೆರಡನೆಯ : ದ್ವಾದಶಭಾಗವೊಂದು ಗೃಹಕಕ್ಷ್ಯಂ (ಜಾತಕ. ೧-೨೬) ; ದ್ವಾದಶದಿನಕ್ಕೆ ನಾವುಕರಣೋತ್ಸವಮಂ ಮಾಡಲೆಂದು ಗಾರ್ಗ್ಯನೆಂಬ ಪುರೋಹಿತಂ ತಿರೋಹಿತವೇಷನಾಗಿ ಬಂದು (ಜಗವಿ. ೩-೨೬ ಪ). (ನಾ). ೨. ಒಂದಂ ಸಂಖ್ಯೆ; ಹನ್ನೆರಡು: ದ್ವಾದಶಯೋಜನ ಸಂಸರ್ಪನ್ನಿನಾದಂಗಳಪ್ಪಾ ನಂದಿಗಳೆಂಬ ಪನ್ನೆರಡುಂ ಮಹಾಭೇರಿಗಳುಂ (ಆದಿಪು. ೧೫-೩ ಪ) ; ಗಗನತಲದೊಳು ದ್ವಾದಶಯೋಜನಸಮವೃತ್ತ ಸಂಸ್ಥಾನಮುಂ (ಅಜಿಪು. ೭-೩೦ ಪ). [ಸಂ.]

ದ್ವಾದಶಕೂಟ (ನಾ). [ಜ್ಯೋತಿ] ಕನ್ಯೆಗೂ ವರನಿಗೂ ವಿವಾಹವು ಕೂಡಿಬರುವುದೆ ಹೇಗೆ ಎಂದಂ ನೋಡುವ ಹನ್ನೆರಡು ಕೂಟಗಳು ; ಇವು ೧. ದಿನ, ೨. ಗಣ, ೩. ಮಾಹೇಂದ್ರ, ೪. ಸ್ತ್ರೀದೀರ್ಘ, ೫. ಯೋನಿ, ೬. ರಾಶಿ, ೭. ಗ್ರಹಮೈತ್ರ, ೮. ವಶ್ಯ, ೯. ರಜ್ಜು, ೧೦. ವೇಧಾ, ೧೧. ವರ್ಣ, ೧೨. ನಾಡೀ. ಇವುಗಳಲ್ಲಿ ದಿನಕೂಟಕ್ಕೆ ವಂಾರಂ, ಗಣಕೂಟಕ್ಕೆ ಆರಂ, ಯೋನಿಕೂಟಕ್ಕೆ ನೆಲ್ಕು, ರಾಶಿ ಕೂಟಕ್ಕೆ ಏಳುಂ, ಗ್ರಹಮೈತ್ರಕ್ಕೆ ಐದುಂ, ವಶ್ಯಕೂಟಕ್ಕೆ ಎರಡುಂ, ವರ್ಣಕೂಟಕ್ಕೆ ಒಂದಂ, ನಾಡೀಕೂಟಕ್ಕೆ ಎಂಟುಂ ಹೀಗೆ ದ್ವಾದಶ ಕೂಟಗಳಿಂದ ವಂಾವತ್ತಾರಂ ಗುಣಗಳಿವೆ. ಅದರಲ್ಲಿ ಹದಿನೆಂಟುಂ ಕೂಡಿಬಂದರೆ ವಂದಂವೆ ಮಾಡಬಹುದೆಂದುಂ ತೀರ್ಮಾನಿಸುತ್ತಾರೆ. ಅಲ್ಲದೆ ಗಣಕೂಟ, ಯೋನಿಕೂಟ, ರಾಶಿಕೂಟ, ಗ್ರಹಮೈತ್ರಕೂಟ, ನಾಡೀಕೂಟವೆಂಬ ಐದಂ ಕೂಟಗಳಿಗೆ ವಿಶೇಷವಾಗಿ ಗಮನಕೊಡುತ್ತಾರೆ. [ದ್ವಾದಶ + ಕೂಟ]

ದ್ವಾದಶಗಂಧರ್ವ (ನಾ). ತುಂಬುರು, ನಾರದ, ಹಾಹಾ, ಹೂಹೂ, ವಿಶ್ವಾವಸಂ, ಉಗ್ರಸೇನ (ಅಗ್ರಸೇನ), ವಸಂರುಚಿ (ಸಂರುಚಿ), ಪರಾವಸಂ (ಸರ್ವಾವಸು), ಚಿತ್ರಸೇನ, ಊರ್ಣಾಯಂ (ಊರ್ಣಾಹ), ಧೃತರಾಷ್ಟ್ರ ವಂತ್ತು ಸೂರ್ಯವರ್ಚಂರೆಂಬ ಹನ್ನೆರಡಂ ವಂಂದಿ ಗಂಧರ್ವರಂ: ತುಂಬುರ ನಾರದ . . . ಸೂರ್ಯವರ್ಚ [ರ್ಮ] ರೆಂಬ ದ್ವಾದಶಗಂಧರ್ವರೇ ಪರಿವಾಟಯಿಂ ಪಾಡುವರು (ವಿವೇಳ. ೩೬೬). [ದ್ವಾದಶ + ಗಂಧರ್ವ]

ದ್ವಾದಶಗಣ (ನಾ). [ಜೈನ] ಸವಂವಸರಣಸಭೆಯಲ್ಲಿ ಸೇರುವ ಹನ್ನೆರಡು ಬಗೆಯ ವರ್ಗಗಳು ; ಇವು ೧. ಮುನಿ, ೨. ಕಲ್ಪಜಸ್ತ್ರೀ, ೩. ಆರ್ಯಿಕೀರ, ೪. ಜ್ಯೋತಿಷ್ಕಸ್ತ್ರೀ, ೫. ವ್ಯಂತರಸ್ತ್ರೀ, ೬. ನಾಗಸ್ತ್ರೀ, ೭. ನಾಗದೇವತೆ, ೮. ವ್ಯಂತರ ದೇವತೆ, ೯. ಜ್ಯೋತಿಷ್ಕ ದೇವತೆ, ೧೦. ಕಲ್ಪವಾಸಿ, ೧೧. ವಂನುಷ್ಯ, ೧೨. ತಿರ್ಯಕ್ ಪ್ರಾಣಿ: ದ್ವಾದಶಗಣ ಸರಸ್ಸರೋಜವಿದಳನಶೋಭಾಪ್ರಭಾವಪ್ರಸವಪಾರೀಣದಿವ್ಯ ವಚನಮರೀಚಮಾಲಿರೋಚಿರ್ನಿಚಯತ್ರಿಜಗಜ್ಜೀವಾವಳಿಯಂ ಕರಣತ್ರಯಶುದ್ಧಿಯಿಂದೆಱಗಿ (ಶಾಂತಿಪು. ೯-೬೯) ; ಗಣಧರಾದೀಶ್ವರವರ್ಗಮುಂ . . . ನರನಿಕುರುಂಬಮುಂ ತಿರ್ಯಕ್ತತಿಯುಮೆಂದೀ ದ್ವಾದಶ ಗಣಂಗಳುಮಂ ಇಂತನುಕ್ರಮದೊಳಿರ್ದ ಸಮವಸರಣಭೂಮಂಡಲದೊಳು (ಶಾಪುಂಪು. ೪೬) : ಮುನಿ ಕಲ್ಪಜಸ್ತ್ರೀಯರು . . . ನರ ತಿರ್ಯಂಚಂಗಳೆಂಬ ದ್ವಾದಶಗಣ ಕರವ ಮುಂಗಿದು ಬಳಸಿರಲು (ದ್ವಾದಶ. ೧೦-೪೬೯) : ಧರ್ಮಶ್ರವಣಮಂ ಕೇಳ್ದ ಪರಿವೃತದ್ವಾದಶಗಣಗಳಂ ಪರಮಶೋಭೆಯನಾಂತ ದೇವನ ಚರಣದಿದಿರಲಿ ಹರಹಿದನು ತನುಲತೆಯನವನಿಪತಿ (ಸನತ್ಕು. ೧-೩೬). [ದ್ವಾದಶ + ಗಣ]

ದ್ವಾದಶಗ್ರಾಮಿ (ನಾ). ದ್ವಾದಶಾದಿತ್ಯರ ಹನ್ನೆರಡು ಮಂದಿ ಸಾರಥಿಗಳ ಗುಂಪಿಗೆ ಸೇರಿದವನು : P ೧. ರಥಭೃತ್, ೨. ರಥಜ, ೩. ರಥಚಿತ್ರ, ೪. ರಥಾಶ್ವ, ೫. ಅರಣ, ೬. ಸುಷೇಣ, ೭. ಸೇನಜಿತ್, ೮. ತಾರ್ಕ್ಷ್ಯ, ೯. ವೃತ್ತ, ೧೦. ಅರಿಷ್ಟನೇಮಿ, ೧೧. ಋತಜಿತ್, ೧೨. ಸತ್ಯಜಿತ್ : ರಥಭೃತ್ ರಥಜ . . . ಸತ್ಯಜಿತ್ತುಗಳೆಂಬ ದ್ವಾದಶಗ್ರಾಮಿಗಳ ಪರಿಕ್ರಮದಿಂ ಸಾರಥಿಗಳು (ವಿವೇಕ. ೨೬೭). [ಸಂ. ದ್ವಾದಶಗ್ರಾಮಿನ್]

ದ್ವಾದಶಚಕ್ರವರ್ತಿ (ನಾ). [ಜೈನ] ಅರುವತ್ತುವಂಶೂರು ವಂದಿ ಶಲಾಕಾಪುರುಷರಲ್ಲಿರುವ ಹನ್ನೆರಡು ಮಂದಿ ಸಾಮ್ರಾಟರು: P ೧. ಭರತ, ೨. ಸಗರ, ೩. ಮಘವಾ, ೪. ಸನತ್ಕುಮಾರ, ೫. ಶಾಂತಿ, ೬. ಕುಂಥು, ೭. ಅರ, ೮. ಸುಭೌಮ, ೯. ಪದ್ಮ (ಮಹಾಪದ್ಮ), ೧೦. ಹರಿಷೇಣ, ೧೧. ಜಯಸೇನ (ವಿಜಯ), ೧೨. ಬ್ರಹ್ಮದತ್ತ : ಅವಸರ್ಪಿಣಿಕಾಲದ (ದೊಳ್) . . . ದ್ವಾದಶಚಕ್ರವರ್ತಿಗಳುಂ ನವಬಲದೇವರುಂ ನವಕೇಶವರುಂ ನವಪ್ರತಿಶತ್ರುಗಳಪ್ಪರೆಂಬುದುಂ (ಕಾವುಂಪು. ೨೯೭). [ದ್ವಾದಶ + ಚಕ್ರವರ್ತಿ]

ದ್ವಾದಶತಪ (ನಾ). [ಜೈನ] ಸಂವರಕ್ಕೆ ಮಾರ್ಗವಾದ ಹನ್ನೆರಡು ಬಗೆಯ ತಪಸ್ಸು : P ಇದು ಬಹಿರಂಗತಪಸ್ಸು ಮತ್ತು ಅಂತರಂಗತಪಸ್ಸು ಎಂದು ಎರಡು ವಿಧ. ಅನಶನ (ಉಪವಾಸವನ್ನು ಮಾಡುವುದು), ಅವಮೋದರ್ಯ (ಅಲ್ಪಾಹಾರವನ್ನು ತೆಗೆದುಕೊಳ್ಳುವುದು), ವೃತ್ತಿಪರಿಸಂಖ್ಯಾನ (ಆಹಾರನಿಮಿತ್ತವಾಗಿ ಇಷ್ಟೇ ಮನೆಗಳಿಗೆ ಅಥವಾ ಇಲ್ಲಿಯವರೆಗೇ ಹೋಗುತ್ತೇನೆಂದು ಮುಂತಾಗಿ ನಿಯಮಿಸಿಕೊಳ್ಳುವುದು), ರಸಪರಿತ್ಯಾಗ (ಹಾಲು, ತುಪ್ಪ ಮೊದಲಾದ ರಸಪದಾರ್ಥಗಳನ್ನು ಬಿಡುವುದು), ವಿವಿಕ್ತವಾಸ (ಏಕಾಂತದಲ್ಲಿ ವಾಸಮಾಡುವುದು), ಕಾಯಕ್ಲೇಶ (ಶರೀರವನ್ನು ದಂಡಿಸುವುದು)ಎಂಬುದು ಆರು ಬಗೆಯ ಬಹಿರಂಗತಪಸ್ಸು. ಪ್ರಾಯಶ್ಚಿತ್ತ (ದೋಷಗಳನ್ನು ಶುದ್ಧಿಗೊಳಿಸುವುದು), ವಿನಯ (ಪೂಜ್ಯವಿಷಯಗಳಲ್ಲಿ ಆದರಭಾವ, ನಮ್ರತೆ), ವೈಯಾವೃತ್ಯ (ಸ್ವತಃ ಮತ್ತು ಅನ್ಯದ್ರವ್ಯಗಳ ಸಹಾಯದಿಂದ ಸೇವೆ ಮಾಡುವುದು), ಸ್ವಾಧ್ಯಾಯ (ಜ್ಞಾನಸಂಪಾದನೆಗಾಗಿ ಆಲಸ್ಯವನ್ನು ಬಿಡುವುದು), ವ್ಯುತ್ಸರ್ಗ (ಬಾಹ್ಯಾಭ್ಯಂತರಪರಿಗ್ರಹದಲ್ಲಿ ಮಮತೆಯನ್ನು ಬಿಡುವುದು), ಧ್ಯಾನ (ಚಿತ್ತಚಾಂಚಲ್ಯವನ್ನು ತ್ಯಜಿಸುವುದು) ಎಂಬುದು ಆರು ಬಗೆಯ ಅಂತರಂಗತಪಸ್ಸು : ದ್ವಾದಶ ತವಂಗಳುಂ ಕರವಾದರದಿಂ ಮೂರ್ತಿಗೊಂಡು ನಮ್ಮಯ ಪುರಕತ್ಕಾದರದಿಂ ಬಂದುವು ಪುಣ್ಯೋದಯದಿಂದೆನಿಸಿ ನೆಗಟ್ಟ ದಿವ್ಯಮುನೀಂದ್ರರ್ (ಧರ್ಮಾಮೃ. ೯-೧೩) : ಆ ದ್ವಾದಶತಪಮಂ ತಳೆದಾ ದ್ವಾವಿಂಶತಿ ಪರೀಷಹಂಗಳುಮಂ ಗೆಲ್ದದ್ವೈತಂ ಮುನಿವುಂಖ್ಯಂ ಸ್ಯಾದ್ವಾದಮತಾದ್ವಿತೀಯನೆನೆ ಪೆಸರ್ವೆತ್ತಂ (ಕಂದ್ರಪು. ೧೦-೧೬) : ದ್ವಾದಶತವದಧಿದೇವತೆಯಾದ ದಯಾಲಕ್ಷ್ಮಿವೋದ ಬಟ್ಟಿಕೆ . . . ಜೀವಂ ಪೋದೊಡಲಂ ತಾದುದಾ ತಪೋಧನನ ಮನಂ (ವರ್ಧಪು. ೩-೦೯) : ಜೈನಮತದಲ್ಲಿ ಶ್ರಿಗುಪ್ತಿಗಳು . . . ಪಂಚಚಾರಿತ್ರಗಳು ದ್ವಾದಶತವಗಳು ಇವುಗಳಿಂದ ಸಂವರವು ಸಾಧಿಸಲ್ಪಡುವುದು (ಜೈನಧ. ೩). [ದ್ವಾದಶ + ತಪ]

ದ್ವಾದಶನಾಮ (ನಾ). ೧. ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ ಮತ್ತು ದಾಮೋದರನೆಂಬ ವಿಷ್ಣುವಿನ ಪ್ರಸಿದ್ಧವಾದ ಹನ್ನೆರಡು ಹೆಸರುಗಳು. ೨. ದೇಹದ ಮೇಲೆ ಧರಿಸುವ ಹನ್ನೆರಡು ನಾಮಂಗಳು : ದ್ವಾದಶನಾಮದ ಗಂಧಂ ವೇದಾಧ್ಯಯನಾನುವಾದದಾನನಮೆಸೆಯಲ್ ವೇದಾಧ್ಯ ವಿಪ್ರವೇಷಮನಾದಂ ಕೈಕೊಂಡು (ಭುಹಾನೀ. ೬-೦೬೩) : ಸಿರಿ ಊರ್ಧ್ವಪುಂಡ್ರ ದ್ವಾದಶನಾಮ ವಿಡುವರ ಪರಿಚಾರಕರ ಪರಿಚಾರಕನೆನಿಸೆನ್ನ (ಕನಕ. ೦೫೦-೨). : ದ್ವಾದಶನಾಮ ತುಲಸಿಮಾಲಾವಳಿಯ ಧಾರಣದಿ ವಿಷ್ಣು ಮೂರ್ತಿಯ ಭಜಿಸುವಾ ವಸುಧೆಸುರರಂ ಕೆಲರುಮಾ ಪಟ್ಟಣಮನಿರದೆ ಪೊಸದಾಣ್ಮಕರ್ತುಡಾರೆನಲುಸುರ್ವೆ (ನಪಮೋ. ೦೦-೧೧).

[ದ್ವಾದಶ + ನಾಮ]

ದ್ವಾದಶಭಾವನೆ (ನಾ). =ದ್ವಾದಶಾನುಪ್ರೇಕ್ಷೆ : ದ್ವಾದಶಭಾವನೆಗಳು . . . ಆ ಹನ್ನೆರಡು ಭಾವನೆಗಳು ಅನಿತ್ಯ ಅಶರಣ . . . ದೋಧಿ ದುರ್ಲಭ ಮತ್ತು ಧರ್ಮ ಎಂದು ಇವೆ . . . ಈ ಭಾವನೆಗಳು ದ್ವಾದಶಾಂಗವಾಣಿಯ ಕೇವಲಸಾರದಂತಿವೆ . . . ಇವುಗಳಿಗೆ ಅನುಪ್ರೇಕ್ಷೆ ಎಂದೂ ಹೇಳುವರು (ಶ್ರಾವಕಾ. ೨೫೮). [ದ್ವಾದಶ + ಭಾವನೆ]

ದ್ವಾದಶಮಾರ್ತಂಡ (ನಾ). ಧಾತಾ, ಮಿತ್ರ, ಅರ್ಯಮಾ, ಶಕ್ರ, ವರುಣ, ಅಂಶ, ಭಗ, ವಿವಸ್ವಾನ್, ಪೂಷಾ, ಸವಿತಾ, ತ್ವಷ್ಟಾ, ವಿಷ್ಣು ಎಂಬ ಹನ್ನೆರಡು ಜನ ಆದಿತ್ಯರು ; P ಇಲ್ಲಿ ಸೂಚಿತವಾಗಿರುವ ೧೨ ಜನ ಆದಿತ್ಯರ ಉಲ್ಲೇಖ ಇನ್ನೂ ಬೇರೆ ಬೇರೆ ಆಕರಗಳಲ್ಲಿ ಬೇರೆ ಬೇರೆಯಾಗಿ ಸಿಗುತ್ತದೆ : ದ್ವಾದಶಮಾರ್ತಂಡರನೇಕಾದಶರುದ್ರರನಪ್ಪವಸುಗಳಂ ನೆಱಿ ಕಂಡಂ (ಜಗವಿ. ೩-೦೦೯).

[ದ್ವಾದಶ + ಮಾರ್ತಂಡ]

ದ್ವಾದಶರವಿ (ನಾ). = ದ್ವಾದಶಮಾರ್ತಂಡ : ಸಂತಸದಿಂದಂ ದ್ವಾದಶರವಿಗಳ್ ಮಹೋಜ್ವಳರ್ ನಡೆತಂದರ್ (ಗಿರಿಕ. ೦೦-೬೫).

[ದ್ವಾದಶ + ರವಿ]

ದ್ವಾದಶರಾಕ್ಷಸ (ನಾ). ದ್ವಾದಶಾದಿತ್ಯರಿಗೆ ಅಂಗರಕ್ಷಕರಾದ ಹನ್ನೆರಡು ಮಂದಿ ದೈತ್ಯರು ; P ಪ್ರಹೇತಿ, ಪೌರುಷೇಯ, ವಧ, ದರ್ಪ, ವ್ಯಾಘ್ರ, ಕ್ರೂರ, ಆಪಸ್ಫ, ವಾತ, ವಿದ್ಯುತ್, ದಿವಾಕರ, ಬ್ರಹ್ಮವೇತ್ತ ಮತ್ತು ಯಜ್ಞವೇತ್ತ : ಪ್ರಹೇತಿ ಪೌರುಷೇಯ . . . ಯಜ್ಞವೇತ್ತರೆಂಬ ದ್ವಾದಶರಾಕ್ಷಸರೇ ಕ್ರಮದಿಂದವರ ಮೃಗಾವಲವರು (ವಿವೇಕ. ೨೬೭). [ದ್ವಾದಶ + ರಾಕ್ಷಸ]

ದ್ವಾದಶರಾಜಕ (ನಾ). =ದ್ವಾದಶಚಕ್ರವರ್ತಿ : ದ್ವಾದಶರಾಜಕಮೆಂ[ಶಾಕಾಂ. ರೆಂ]ಬುದನೋದುಗಳೊಳ್ ಕೇಳಲಾದುದಲ್ಲದೆ ಕಾಣಲ್ಕಾದುದೆ ಲವಣೋದಧಿವೃತಮೇದಿನಿಯೊಳ್ ದೇವ ನಿನ್ನ ಪೆಸರೆಸೆವೆಡೆಯೊಳ್ (ಆದಿಪು. ೧೪-೦೪) : ದ್ವಾದಶರಾಜಕಮಂ ಗೆಲ್ದಾದುನ್ನತಿ ವೆರ್ಚಿ ಕರ್ಮರಿಪು ವಿಜಯದೊಳಾಸಾದಿತ ಕೇವಲಲೋಚನನಾ ದೇವಂ ವೋಕ್ಷಲಕ್ಷ್ಮಿಗಧಿಪತಿಯಾದಂ (ಶಾಂತಿಪು. ೭-೩೨).

[ದ್ವಾದಶ + ರಾಜಕ]

ದ್ವಾದಶರಾಶಿ (ನಾ). ೧. [ಜ್ಯೋತಿ] ಮೇಷ, ವೃಷಭ, ಮಿಥುನ, ಕರ್ಕಟಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಮಕರ, ಕುಂಭ ಮತ್ತು ಮೀನ ಎಂಬ ಹನ್ನೆರಡು ರಾಶಿಗಳ ಹೆಸರು : ದ್ವಾದಶ ಕೋಷ್ಠಗಣಂಗಳುಮಾದರದಿಂ ಬಳಸಿ ಮೊದಲ ಕೋಷಮದೇಂ ಮೆಲ್ವಾದುದೊರವಿಮಂಡಳಮಂ ದ್ವಾದಶರಾಶಿಗಳ್ ಬಳಸಿದಂದದಿನಾದಂ (ಕಂದ್ರಪು. ೧೫-೦೨) : ಗ್ರೀಕರ ದ್ವಾದಶರಾಶಿವದ್ಧತಿಯು ಭಾರತದ ಖಗೋಳಜ್ಞರ ಮನಸ್ಸನ್ನು ಆಕರ್ಷಿಸಿತು (ನಕ್ಷತ್ರ. ೧೭). ೨. ಜಾತಕನ ಜನ್ಮಲಗ್ನದಿಂದ ಹನ್ನೆರಡನೆಯ ರಾಶಿ : ದುಶ್ಚಿಕ್ಯಸಂಜ್ಞಂ ತೃತೀಯವೆದರ್ ದ್ವಾದಶರಾಶಿ ರಿಃಫಮದು (ಜಾತಕ. ೦-೩೩). [ದ್ವಾದಶ + ರಾಶಿ]

ದ್ವಾದಶವರ್ಣ (ನಾ). ಹನ್ನೆರಡು ಅಕ್ಷರಗಳು : ಯಕಾರದಿಂ ಅಕಾರಾದಿ ಷೋಡಶವರ್ಣಂಗಳು ಣಕಾರದಿಂ ಕಕಾರಾದಿ ದ್ವಾದಶವರ್ಣಂಗಳು . . . ಉದಿಸಿದವು (ಅಧ್ಯಪಾ. ೬-೨). [ದ್ವಾದಶ + ವರ್ಣ]

ದ್ವಾದಶಸಂಗ್ರಹಕೃಷ್ಟಿ (ನಾ). [ಜೈನ] ಅಪ್ರತ್ಯಾಖ್ಯಾನಕ್ರೋಧ, ಅಪ್ರತ್ಯಾಖ್ಯಾನಮಾನ, ಅಪ್ರತ್ಯಾಖ್ಯಾನಮಾಯೆ, ಅಪ್ರತ್ಯಾಖ್ಯಾನಲೋಭ, ಪ್ರತ್ಯಾಖ್ಯಾನಾವರಣಕ್ರೋಧ, ಪ್ರತ್ಯಾಖ್ಯಾನಾವರಣಮಾನ, ಪ್ರತ್ಯಾಖ್ಯಾನಾವರಣಮಾಯೆ, ಪ್ರತ್ಯಾಖ್ಯಾನಾವರಣಲೋಭ, ಸಂಜ್ವಲನಕ್ರೋಧ, ಸಂಜ್ವಲನಮಾನ, ಸಂಜ್ವಲನಮಾಯೆ, ಸಂಜ್ವಲನಲೋಭ ಎಂಬ ಹನ್ನೆರಡು ಸಂಗ್ರಹಗಳ ಕರ್ಮಪರಮಾಣುಶಕ್ತಿಯನ್ನು ಕುಂಠಿತಗೊಳಿಸುವುದು; "ಅಪ್ರತ್ಯಾಖ್ಯಾನ, ಪ್ರತ್ಯಾಖ್ಯಾನ ಮತ್ತು ಸಂಜ್ವಲನ ಈ ಹನ್ನೆರಡು ಕಷಾಯಗಳ ಫಲ ಕೊಡುವ ಸಾಮರ್ಥ್ಯವನ್ನು ಕಡಿಮೆ ಮಾಡುವುದು" (ಆದಿಪು. ಕೋಶ): ಉಚಿತ ಕೃಷ್ಟಿವಿಧಾನದಿನನಂತಗುಣಹಾನಿರೂಪದಿಂ ದ್ವಾದಶಸಂಗ್ರಹಕೃಷ್ಟಿಗಳಂ ಮಾಡುತ್ತುಂ (ಆದಿಪು. ೧೦-೧೪ ವ); ಉಚಿತಕೃಷ್ಟಿಕ್ರಿಯೆಯಿಂ ಪೂರ್ವಾಪೂರ್ವಸ್ಪರ್ಧಕಾನುಭಾಗಮನನಂತಗುಣಹಾನಿರೂಪದಿಂ ದ್ವಾದಶಸಂಗ್ರಹಕೃಷ್ಟಿಗಳಂ ಮಾಡುತ್ತುಂ (ಚಂದ್ರಪು. ೧೪-೬೧ ವ).

[ದ್ವಾದಶ + ಸಂಗ್ರಹ + ಕೃಷ್ಟಿ]

ದ್ವಾದಶಸತ್ವ (ನಾ). [ಕಾಮಶಾ] ಸ್ತ್ರೀಯರಲ್ಲಿರುವ ಹನ್ನೆರಡು ಬಗೆಯ ಮನೋಧರ್ಮಗಳು; P 'ಜನವಶ್ಯ' ಗ್ರಂಥದ ಐದನೆಯ ಸಂಧಿಯಲ್ಲಿ ಇವುಗಳ ವಿವರಣೆಯನ್ನು ಹೀಗೆ ಕೊಡಲಾಗಿದೆ–"ಸುರ ಯಕ್ಷ ಗಂಧರ್ವ ನ[ಪಾಠಾಂ. ವ]ರ ನಾಗ ಕಾ[ಪಾಠಂ. ನಾ]ಕ ವಾನರ ಮುನಿ ಪಿಶಾಚ ರಾಕ್ಷಸ ಕಿನ್ನರ ಖರಮೆಂಬ ಪೆಸರ ಪನ್ನೆರಡು ಸ[ಪಾಠಾಂ. ತ]ತ್ತ್ವದ ಬಗೆಯ ನೊರೆವೆನಾಲಿಸು ಸರೋಜಾಯತಾಕ್ಷಿ ॥೨೫॥ ಪರಿಮಳಾಂಗದ ಮನೋಹರ ವದನದುಜ್ಜ್ವಲದ ಗರುವಿಕೆಯ ದಾನಶಕ್ತಿಯ ಯುಕ್ತಿಯ ಪುರುಷಭಕ್ತಿಯ ಪಲರ ಪೊರೆವ ಧನಮುಳ್ಳ ಭಾಸುರಗುಣದವಳೆ ದೇವಸತ್ತ್ವದವಳು ॥೨೬॥ ಸುರತಕ್ಕೆ ನಲಿವ ಸಿಂಗರಕೆ ಸೇರುವ ಸುರೆಗೆ ಹರುಷಿಸುವ ಪನಜಲಕ್ರೀಡೆಗೊಲಿವ ಸರಸಕ್ಕೆ ಸಲಂವ ಸೌಂದರಕೆ ಲಜ್ಜೆಗೆ ನಿಜಾಕರಮೆನಿಪವಳೆ ಯಕ್ಷಸತ್ತ್ವದವಳು ॥೨೭॥ ತಾಂಬೂಲ ಗಂಧ ಮಾಲ್ಯಾಂಬರಾಂಬುಪ್ರಿಯದ ಪೊಂಬಣ್ಣದೊಳ್ನುಡಿಯ ರತಿಯಿಚ್ಛೆಯ ಇಂಬಱಿವ ಸಂಗೀತವಂ ಬಲ್ಲ ಬಗೆಯೊಳಾರಂ ಬಗೆಯದವಳೆ ಗಂ[ಪಾಠಾಂ. ಗಾಂ]ಧರ್ವಸತ್ತ್ವೆ ॥೨೮॥ ಋಜುಚಿತ್ತದಿಷ್ಟರ್ಗೆ ನಿಜದೊಳೊಲಿದಿರ್ಪ ಭಾವಜಕೇಳಿಗುತ್ಸಾಹಿಸುವ ದೈವವ ಭಜಿಸಿವೊಡಲಂ ಕಟ್ಟುವ ಜಡಮೆನಿಪಮಲನೀರಜನೇತ್ರೆಯವಳೆ ನರಸತ್ತ್ವದವಳು ॥೨೯॥ ಮೃದುಶೈತ್ಯಮಪ್ಪ ದೇಹದ ನಿದ್ದೆಗೆಯ್ದಿರವಿನಧಿಕ ವೆಂದೆನಿಪ ವಸ್ತುಗಳನೊಲ್ವ ಪುದುಗುವ ತೊಳಲ್ವ ಗೀತದೊಳಿಚ್ಛೆಯಿಡುವ ಸುಯ್ಯೊದವಿದವಳೇ ನಾಗಸತ್ತ್ವದವಳು ॥೩೦॥ ಕ್ರೂರಬುದ್ಧಿಯ ಚಲಿಸುವೋರೆಗಣ್ಣಿನ ಪಲರೊಳೋರಂತೆ ಪಿರಿದುಂಬ ಗೂಢರತದ ಆರನುಱಿನಂಬದಾಚಾರದಿಂ ನಡೆಯದ ಕಠೋರಸ್ವರದವಳೇ ಕಾಕಸತ್ತ್ವೆ ॥೩೧॥ ಹಿತವನಱಿಯದೆ ಚಲಿಪ ಮತಿಯ ಕೋಪದ ಕುಹಕದತಿಶಯದ ಬಹ್ವಾಶನದ ನಿಲ್ಲದ ಗತಿಯ ಘನನಖದಂತಹತಿಯುಳ್ಳ ಸರಸಸಂಗತಿಯಱಿಯದವಳೆ ಕಪಿಸತ್ತ್ವದವಳು ॥೩೨॥ ವಿನಯದ ವಿವೇಕದಿಂಪಿನ ಸೈರಣೆಯ ನುಡಿಯ ಜನನಿಜನಕರ್ಗಂಜಿ ನಡೆವ ಹಿತವ ನೆನೆವ ನಿರ್ಮತ್ಸರದ ಘನಭಕ್ತಿರತದ ಮಾನಿನಿಯೆ ಮುನಿಸತ್ತ್ವದವಳಬ್ಜಗಂಧಿ ॥೩೩॥ ಅಸಿಯ ನಡುವಿನ ಮಿಸುಗುವೆಸಳ್ಗಣ್ಣ ಪಿರಿದುಂಬ ಬಿಸುಮೆಯ್ಯ ಮದ್ಯ ಮಾಂಪ್ರೀತಿಯ ಪುಸಿಗೇಳ್ವಿರುಳ್ ತೊಳಲ್ವ ಸಸಿನಿರದೆ ಲಜ್ಜೆಯಳಿದೆಸೆವಳೆ ಪಿಶಾಚ[ಪಾಠಾಂ. ಚಿ]ಸತ್ತ್ವದವಳಂಗನೆ ॥೩೪॥ ಚಲದ ಕೋಪದ ಪುಸಿಯ ಕಲಹದಾತುರದಿರುಳ್ ನೆಲೆಗೆಟ್ಟು ಸುಳಿವ ಕಡುಗೆಂಪು ಮೆಯ್ಯ ಪಲಲಾಶನದ ಸುರೆಗೆ ನಲಿವ ಸಾಹಸದ ಚಾಪಲದವಳೆ ದೈತ್ಯಸತ್ತ್ವ[ಪಾಠಾಂ. ತ್ವ]ದವಳ ಬಲೆ ॥೩೫॥ ಬಗೆ ಲಜ್ಜೆಯಳವೆಂಬಿವಗಲ್ದ ಘನಮತ್ಸರದ ಜಗಳವಾಡುವ ತೊಡುವ ಪೂಗಂಧವ ಮಿಗೆ ಬಯಸುವಲ್ಲಿಗಲ್ಲಿಗೆ ನಿಲ್ವ ಬಣ್ಣವನೆ ಬಿಡಿದುಡುವಳವಳೆ ಕಿನ್ನರಸತ್ತ್ವೆಯು ॥೩೬॥ ಎರಸೆ ನಿರ್ಲಜ್ಜೆ ದುಶ್ಚರಿತೆ ದುರ್ವಾಕ್ಯೆ ಮತ್ಸರಯುಕ್ತೆ ದುಷ್ಟೆ ಪುರುಷಾನುರಕ್ತೆ ಪಿರಿದೆನಲು ಬೈದು ಪೊಯ್ದರಂದಿರದೊದೆದೊಡಂ ಹರುಷೆಯಪ್ಪವಳೆ ಖರಸತ್ತ್ವದವಳು ॥೩೭॥: ದೇವಸತ್ವ ಯಕ್ಷಸತ್ವ ಗಂಧರ್ವಸತ್ವ ನರಸತ್ವ ನಾಗಸತ್ವ ಕಾಕಸತ್ವ ವಾನರಸತ್ವ ಮುನಿಸತ್ವ ಪಿಶಾಚಸತ್ವ ರಾಕ್ಷಸಸತ್ವ ಕಿನ್ನರಸತ್ವ ಖರಸತ್ವವೆಂಬ ದ್ವಾದಶಸತ್ವದ ಸತಿಯರಿಂ (ವಿವೇಕ. ೨೪೫). [ದ್ವಾದಶ + ಸತ್ವ$_1$]

ದ್ವಾದಶಸರ್ಪ (ನಾ). ದ್ವಾದಶಾದಿತ್ಯರ ಕುದುರೆಗಳನ್ನು ಕಟ್ಟುವ ಅಧಿಕಾರಿಗಳಾದ ವಾಸುಕಿ, ಕಂಕವೀರ, ತಕ್ಷಕ, ನಾಗ, ಇಳಾಪುತ್ರ, ಶಂಖಪಾಲ, ಐರಾವತ, ಧನಂಜಯ, ಮಹಾಪದ್ಮ, ಕರ್ಕೋಟಕ, ಕಂಬಳ ಮತ್ತು ಅಶ್ವತರವೆಂಬ ಹನ್ನೆರಡು ವಿಧವಾದ ಹಾವುಗಳು: ವಾಸುಕಿ ಕಂಕವೀರ ತಕ್ಷಕ . . . ಅಶ್ವತರರೆಂಬ ದ್ವಾದಶಸರ್ಪಂಗಳೇ ಪರಿವಿಡಿದಾ ವಾಜಿಬಂಧನಾಧಿಕಾರಿಗಳು (ವಿವೇಕ. ೨೬೬).

[ದ್ವಾದಶ + ಸರ್ಪ]

ದ್ವಾದಶಸಾರತೈಲ (ನಾ). ಗರುಗ, ಬಳ್ಳಿಸೊಂಡೆ, ಆಡುಸೋಗೆ, ನೆಲಗುಳ್ಳ, ಚೇಳುಬಾಲ, ಅಡಿಕೆಚಟ್ಟು, ಕೊಮ್ಮೆ, ಲೊಕ್ಕಿ, ಸೂರ್ಯಭಕ್ತ, ತಾರೆ, ಎಸಗ ಮತ್ತು ಎಲಹುರಿಗಳೆಂಬ ಹನ್ನೆರಡು ವಿಧವಾದ ಔಷಧಿಮೂಲಿಕೆಗಳಿಂದ ತೆಗೆದ ಎಣ್ಣೆ: ದ್ವಾದಶಸಾರತೈಲ – ಗರುಗ, ಬಳ್ಳಿಸೊಂಡೆ, ಆಡುಸೋಗೆ . . . ಎಲಹುರಿ–ಇದರಲ್ಲಿ ಪ್ರತ್ಯೇಕ ಸ್ವರಸಗಳ ಸಮವಾಗಿ ತೆಗೆದು (ಸಕವೈ. ೨೨೬). [ದ್ವಾದಶ + ಸಾರ$_3$ + ತೈಲ$_1$]

ದ್ವಾದಶಸ್ಥಾನ (ನಾ). [ಜ್ಯೋತಿ] ಜಾತಕನ ಜನ್ಮಕುಂಡಲಿಯಲ್ಲಿರುವ ಹನ್ನೆರಡು ಮನೆ,–ಭಾವ; P ೧. ಜನ್ಮಲಗ್ನದ ಮನೆ–ಲಗ್ನಸ್ಥಾನ (ತನುಸ್ಥಾನ), ೨. ಧನಸ್ಥಾನ, ೩. ಭ್ರಾತೃಸ್ಥಾನ (ಸಹಜ), ೪. ಬಂಧುಸ್ಥಾನ (ಮಿತ್ರಸ್ಥಾನ), ೫. ಪುತ್ರಸ್ಥಾನ, ೬. ರಿಪುಸ್ಥಾನ, ೭. ಭಾರ್ಯಾಸ್ಥಾನ, ೮. ಮೃತ್ಯುಸ್ಥಾನ (ನೈಧನ), ೯. ಭಾಗ್ಯಸ್ಥಾನ (ಧರ್ಮಸ್ಥಾನ), ೧೦. ಕರ್ಮಸ್ಥಾನ (ಉದ್ಯೋಗ), ೧೧. ಲಾಭಸ್ಥಾನ, ೧೨. ವ್ಯಯಸ್ಥಾನ. ಆಯಾ ಸ್ಥಾನಗಳ ವಿಷಯವನ್ನು ಆ ಸ್ಥಾನದಲ್ಲಿರುವ ಗ್ರಹಗಳ ಬಲಾಬಲಗಳಿಂದ ನಿರ್ಣಯಿಸುತ್ತಾರೆ. ಉದಾ: ಎರಡನೆಯ ಸ್ಥಾನದಲ್ಲಿ ಗುರು ಮೊದಲಾದ ಶುಭಗ್ರಹಗಳಿದ್ದು ಶುಭಗ್ರಹಗಳ ದೃಷ್ಟಿ ಮೊದಲಾದ ಸಾಮಗ್ರಿಗಳಿದ್ದರೆ ಜಾತಕನು ಧನವಂತನಾಗುತ್ತಾನೆ, ಇತ್ಯಾದಿ: ದ್ವಾದಶಸ್ಥಾನಗಳ ಬಲಾಬಲಗಳನ್ನು ತಿಳಿದುಕೊಳ್ಳದೆ ಜಾತಕಫಲವನ್ನು ಹೇಳುವುದಕ್ಕಾಗುವುದಿಲ್ಲ (ರೂಢಿ). [ದ್ವಾದಶ + ಸ್ಥಾನ]

ದ್ವಾದಶಾಂಗ (ನಾ). [ಜೈನ] ಜೈನರ ಧರ್ಮಗ್ರಂಥಗಳ ಹನ್ನೆರಡು ಭಾಗಗಳು; P ೧. ಆಚಾರಾಂಗ–ಮೋಕ್ಷಮಾರ್ಗಕ್ಕೆ ಸಹಾಯಕವಾಗುವ ಆಚಾರಗಳ ಅಂದರೆ ಕುಳಿತುಕೊಳ್ಳುವುದು, ಮಲಗುವುದು, ಆಹಾರಸ್ವೀಕಾರ ಇತ್ಯಾದಿಯಾದ ವಿಧಗಳ ವರ್ಣನೆ. ೨. ಸೂತ್ರಕೃತಾಂಗ–ಜ್ಞಾನದ, ವಿನಯಾದಿಯ ಅಥವಾ ಸ್ವಮತ, ಪರಮತಗಳ ಕ್ರಿಯೆಯ ಸಂಕ್ಷೇಪವಾದ ವರ್ಣನೆ. ೩. ಸ್ಥಾನಾಂಗ–ಒಂದರಿಂದ ಅನೇಕ ಭೇದರೂಪ ಜೀವ ಪುದ್ಗಲಾದಿಗಳ ವರ್ಣನೆ. ೪. ಸಮವಾಯಾಂಗ–ಶಾಸ್ತ್ರಗಳ ಅಂಗೋಪಾಂಗಗಳ ನಿತ್ಯಸಂಬಂಧಜ್ಞಾನ. ೫. ವಾಖ್ಯಾಪ್ರಜ್ಞಪ್ತ್ಯಂಗ–ಗಣಧರರಿಂದ ಕೇಳಲಾದ ೬೦ ಸಾವಿರ ಪ್ರಶ್ನೆಗಳಿಗೆ ತೀರ್ಥಕರರು ಉತ್ತರ ಹೇಳಿದ ವರ್ಣನೆ. ೬. ಜ್ಞಾತೃಧರ್ಮಕಥಾಂಗ ಜ್ಞಾತಾ ಎಂಬ ಗಣಧರದೇವನ ಪ್ರಶ್ನೆಗಳ ಅನುಸಾರವಾಗಿ ಉತ್ತರರೂಪವಾದ ಧರ್ಮಕಥೆ ೭. ಉಪಾಸಕಾಧ್ಯಯನಾಂಗ ಶ್ರಾವಕರು ಆಚರಿಸುವ ಕ್ರಿಯೆಯನ್ನು ತಿಳಿಸುವ ಶಾಸ್ತ್ರ. ಉಪಾಸಕನು ದಾನ ಅಥವಾ ಪೂಜೆಯಿಂದ ಸಂಘದ ಸೇವೆ ಸಲ್ಲಿಸುವ

ವಿವರಣೆ. ಶ್ರಾವಕರ ಪ್ರತಿಮಾ, ವ್ರತ, ಶೀಲ, ಆಚಾರ, ಕ್ರಿಯೆ, ಮಂತ್ರಾದಿಕಗಳ ವರ್ಣನೆ. ೮. ಅಂತಕೃದ್ದಶಾಂಗ-ಕೈವಲ್ಯಕ್ಕೆ ಹೋಗುವವರ ವರ್ಣನೆ; ಮೋಕ್ಷಗಾಮಿಗಳ ಬಗ್ಗೆ ವರ್ಣನೆ. ೯. ಅನುತ್ತರೋಪಪಾದಿಕದಶಾಂಗ – ಪ್ರತಿಯೊಬ್ಬ ತೀರ್ಥಂಕರನ ಜೀವನಾವಧಿಯಲ್ಲಿ ಹತ್ತು ಜನ ಮಹಾಮುನಿಗಳು ಉಪಸರ್ಗವನ್ನು ಅನುಭವಿಸಿ ೫ ಅನುತ್ತರ ವಿಮಾನಗಳಲ್ಲಿ ಯಾವುದಾದರೊಂದರಲ್ಲಿ ಜನ್ಮವನ್ನು ಹೊಂದುವ ಭಾಗದ ವರ್ಣನೆ. ೧೦. ಪ್ರಶ್ನ ವ್ಯಾಕರಣಾಂಗ-ಆಕ್ಷೇಪಣೀಯ, ವಿಕ್ಷೇಪಣೀಯ, ಸಂವೇದನೀಯ, ನಿರ್ವೇದನೀಯವೆಂಬ ನಾಲ್ಕು ಬಗೆಯ ಧರ್ಮಕಥೆಗಳ ವರ್ಣನೆ; ಅನೇಕ ಪ್ರಶ್ನೆಗಳಿಗೆ ಉತ್ತರ ಹೇಳುವ ರೀತಿ. ೧೧. ವಿಪಾಕ ಸೂತ್ರಾಂಗ-ಕರ್ಮದ ಬಂಧ, ಉದಯ, ಫಲ ಇತ್ಯಾದಿಗಳ ವರ್ಣನೆ. ೧೨. ದೃಷ್ಟಿವಾದಾಂಗ-ಕ್ರಿಯಾ ವಿಂಥ್ಯಾವಾದದ ನಿರಾಕರಣೆಯ ವಿವರಣೆ. ಇದರಲ್ಲಿ ೫ ಭೇದಗಳಿವೆ. ೧. ಪರಿಕರ್ಮ ೨. ಸೂತ್ರ. ೩. ಪ್ರಥಮಾನುಯೋಗ. ೪. ಪೂರ್ವಗತ. ೫. ಚೂಲಿಕಾ: ಗುರುವಿನನುಮತದಿಂ ದ್ವಾದಶಾಂಗಚತುರ್ದಶಪೂರ್ವಂಗಳಂ ಕಲ್ತು (ಆದಿಪು. ೦೪-೦೫ ಪ); ವಿಶಾಖಿಗಣಪ್ರಮುಖಂ ಮಾರ್ಗಶಿರ ಸಿತೈಕಾದಶಿಯ ಪೂರ್ವಾಹ್ಣದೊಳ್ ದ್ವಾದಶಾಂಗದರ್ಥಂಗಳುಮಂ . . . ಅವಧಾರಿಸಿ (ಶಾಂತಿಪು. ೧೪-೨೬೬). [ದ್ವಾದಶ + ಅಂಗ]

ದ್ವಾದಶಾಂಗವೇದ (ನಾ). = ದ್ವಾದಶಾಂಗ: ಆಚಾರಾಂಗ, ಸೂತ್ರಕೃತಾಂಗ, ಸ್ಥಾನಾಂಗ, ಸಮವಾಯಾಂಗ, ವ್ಯಾಖ್ಯಾಪ್ರಜ್ಞಪ್ತ್ಯಂಗ, ಜ್ಞಾತೃಕಥಾಂಗ, ಉಪಾಸಕಾಧ್ಯಯನಾಂಗ, ಅಂತಕೃದ್ದಶಾಂಗ, ವಿಪಪಾದಕ ದಶಾಂಗ, ಪ್ರಶ್ನವ್ಯಾಕರಣಾಂಗ, ವಿಪಾಕಸೂತ್ರಾಂಗ, ದೃಷ್ಟಿವಾದಾಂಗಗಳೆಂಬ ಹನ್ನೆರಡು ಅಂಗಗಳಿವೆ. ಇವುಗಳಿಗೆ ದ್ವಾದಶಾಂಗವೇದಗಳೆಂದೂ ಜೈನಾಗಮದಲ್ಲಿ ಸಂಕೇತವಿದೆ (ಶಾಕಪ್ರ. ೧೭೯). [ದ್ವಾದಶಾಂಗ + ವೇದ]

ದ್ವಾದಶಾಂಶ (ನಾ). [ಜ್ಯೋತಿ] ರಾಶಿಯ ಹನ್ನೆರಡನೆಯ ಒಂದು ಭಾಗ; P ಲಗ್ನವನ್ನು ಹನ್ನೆರಡು ಭಾಗಗಳನ್ನಾಗಿ ಮಾಡಿದರೆ ಪ್ರತಿಯೊಂದು ಭಾಗಕ್ಕೂ ದ್ವಾದಶಾಂಶವೆಂದು ಹೆಸರು. ಪ್ರತಿಯೊಂದು ರಾಶಿಯ ಮೊದಲನೆಯ ದ್ವಾದಶಾಂಶವು ಆ ರಾಶಿಯೇ ಆಗುತ್ತದೆ. ಮುಂದಕ್ಕೆ ಕ್ರಮವಾಗಿ ರಾಶಿಗಳ ದ್ವಾದಶಾಂಶಗಳು ಪ್ರಾರಂಭವಾಗುತ್ತವೆ. ಉದಾ.– ಮೇಷಲಗ್ನ ಪ್ರಮಾಣ ೪-೨೮ ಅದರ ಗತ ಎಂದರೆ ೦-೨೨ ಆಗುತ್ತದೆ. ೦-೨೨ ಮೇಷ, ೦-೪೫ ವೃಷಭ, ೧-೮ ಮಿಥುನ, ೧-೩೧ ಕರ್ಕಾಟಕ, ೧-೫೨ ಸಿಂಹ, ೨-೧೪ ಕನ್ಯಾ, ೨-೩೬ ತುಲಾ, ೨-೫೯ ವೃಶ್ಚಿಕ, ೩-೨೧ ಧನುಸ್ಸು, ೩-೪೩ ಮಕರ, ೪-೬ ಕುಂಭ, ೪-೨೮ ಮೀನ. ಹೀಗೆಯೇ ಇತರ ರಾಶಿಗಳಿಗೂ ಲೆಕ್ಕ ಹಾಕಿಕೊಳ್ಳಬೇಕು. ಜಾತಕಫಲನಿರ್ಣಯದಲ್ಲಿ ಇದು ಬಹಳ ಉಪಯುಕ್ತವಾಗಿದೆ: ತದ್ಗೃಹ ದ್ವಾದಶಾಂಶಮನಾಳ್ದರ್ ಸ್ವಗೃಹಾದಿ ರಾಶಿಪತಿಗಳ್ (ಜಾತಕ. ೧-೨೮). [ದ್ವಾದಶ + ಅಂಶ]

ದ್ವಾದಶಾತ್ಮ (ನಾ). ಹನ್ನೆರಡು ಸ್ವರೂಪಗಳಲ್ಲಿ ಕಾಣಿಸುವವನು; ಸೂರ್ಯ; ನೇಸರು: "ಆದಿತ್ಯಃ, ಸವಿತಾ ಃ . . ದ್ವಾದಶಾತ್ಮಾ, ತ್ರಯಾತನುಃ–ಈ ೪೭ ಆದಿತ್ಯನ ಪೆಸರ್" (ಹಲಾಯು. ೭-೩೬); "ನಿಶಿವ್ಯರಿ ಮಿಹಿರಂ . . . ದ್ವಾದಶಾತ್ಮಂ ತ್ರಯಿತನು ವಿಭಾವಸು ಸಪ್ತಸಪ್ತಿ ಸವಿತಾರಂ ಸಹಸ್ರಾಂಶು ಪೂಷ್ಣನೆನೆ ಸೂರ್ಯನಕ್ಕುಂ" (ಪುಂಗರಾ. ೧೦-೨); ಆದಿಶಕ್ತಿಯನಾಂತು ಮೆಟ್ಟಿ ದ್ವಾದಶಾತ್ಮನನವ್ಯತಕರನಂ ಕಟ್ಟಿ . . . ಓಂಕಾರವಂ ತಾನುಚ್ಚರಿಸಲು (ಲಸಪು. ೩೩-೯೯) : ದ್ವಾದಶಾತ್ಮನ ಭಜಿಸಿದರೆ ಭಕ್ಷ್ಯಾದಿ ಬಹುವಿಧದನ್ನ ಸಿದ್ಧಿವುದು (ಕುವ್ಯಾಅ. ೧-೭). [ಸಂ. ದ್ವಾದಶಾತ್ಮನ್]

ದ್ವಾದಶಾತ್ಮಕ (ನಾ). = ದ್ವಾದಶಾತ್ಮ: ದ್ವಾದಶಾತ್ಮಕನಿಂದಲುಷ್ಣ ದಿವಸವೆಂತೆ ದೇವರಾಜೇಂದ್ರನಿಂ ಏರಿದು ಸೊಬಗಿಂದೊಪ್ಪಿತತುಳ ಪಂಪಾನಗರವು (ರಾಘಪ. ೦-೪೨). [ಸಂ.]

ದ್ವಾದಶಾದಿತ್ಯ (ನಾ). = ದ್ವಾದಶಮಾರ್ತಂಡ: ಅತಿಶಯಮಪ್ಪ ರೂಪುಂ . . . ತೇಜವುಮಂ ದ್ವಾದಶಾದಿತ್ಯರ್ಕಳೊರ್ಮೊದಲೆ ಉದಯಂಗೆಯ್ದಂತೆ ಬೆಳಗಿದವ್ವುದು (ಪಡಾ.ಕಾ. ೬೬-೭); ಶ್ರುತಿಗಗಮ್ಯ ದ್ವಾದಶಾದಿತ್ಯ ನಪ್ರತಿಮಮಹಿಮಂಗೆ ಪ್ರತಿಯುಂಟೆ (ಲಸವ. ೩೫೯): ದ್ವಾದಶಾದಿತ್ಯರು ನವಬ್ರಹ್ಮಾದಿ ಬುಧ ಸಪ್ತಋಷಿಗಳುಂ . . . ಬಂದರೀಶನನೋಲಯಿಸಲೆಂದು (ಲಸಪು. ೧-೪೨) ; ಧಾತಾ ಅರ್ಯಮಾ ಮಿತ್ರ ವರುಣ ಇಂದ್ರ ವಿವಸ್ವಾನ್ ಪರ್ಜನ್ಯ ಪೂಷ ಅಂಶುಮಾನ್ ಗಭಸ್ತಿಮಾನ್ ತ್ವಷ್ಟ್ರ ಎಮ್ಬುಗಳೆಂಬರೇ ಕ್ರಮದಿಂ ದ್ವಾದಶಾದಿತ್ಯರು (ವಿಪೇಕ. ೨೬೬) [ದ್ವಾದಶ + ಆದಿತ್ಯ]

ದ್ವಾದಶಾನುಪ್ರೇಕ್ಷೆ (ನಾ). [ಜೈನ] ಜೈನಮುನಿಗಳು ಧ್ಯಾನ ಮಾಡಬೇಕಾದ ೧೨ ಬಗೆಯ ತತ್ತ್ವಗಳ ಅನುಚಿಂತನೆ; ಜೈನಮುನಿಗಳಿಗೆ ವೈರಾಗ್ಯ ಹುಟ್ಟಲು ಕಾರಣವಾದ ೧೨ ಬಗೆಯ ಭಾವನೆಗಳ ಚಿಂತನೆ; P ೧. ಅನಿತ್ಯಾನುಪೇಕ್ಷೆ: ದೇಹವು ಕ್ಷಣಭಂಗುರವಾದುದು; ಸಂಸಾರದ ಸರ್ವ ಅವಸ್ಥೆಗಳೂ ಅನಿತ್ಯವಾದುದು ಎಂಬ ಭಾವನೆ. ೨. ಅಶರಣಾನುಪೇಕ್ಷೆ: ಹುಟ್ಟು, ಸಾವು, ವಯಸ್ಸು, ರೋಗ ವಯಂತಾದವುಗಳ ಭಯದಿಂದ ಯಾರೂ ತನ್ನನ್ನು ರಕ್ಷಿಸಲಾರರೆಂದೂ ರತ್ನತ್ರಯಾತ್ಮಕ ಧರ್ಮವೇ ಶರಣೆಂದೂ ಭಾವಿಸುವಿಕೆ. ೩. ಸಂಸಾರಾನುಪೇಕ್ಷೆ: ನರಕ, ಪಶು, ಮಾನವ, ದೇವ ಈ ೪ ಗತಿಯೂ ದುಃಖಮಯವಾದುದೆಂದು ಭಾವಿಸುವಿಕೆ. ೪. ಏಕತ್ವಾನುಪ್ರೇಕ್ಷೆ: ಜೀವನು ಒಂಟಿಯಾಗಿಯೇ ಹುಟ್ಟುವುದು ಮತ್ತೆ ಸಾಯುವುದು. ಒಂಟಿಯಾಗಿಯೇ ಸುಖ – ದುಃಖಗಳನ್ನು ಅನುಭವಿಸುವುದು ಎಂಬ ಭಾವನೆ. ೫. ಅನ್ಯತ್ವಾನುಪ್ರೇಕ್ಷೆ: ಜೀವದಿಂದ ದೇಹ, ಕುಟುಂಬ ಇತ್ಯಾದಿ ಪ್ರತಿಯೊಂದೂ ಭಿನ್ನ ಎಂಬ ಚಿಂತನೆ. ೬. ಅಶುಚಿತ್ವಾನುಪ್ರೇಕ್ಷೆ: ದೇಹವು ಮಲ, ಮೂತ್ರಗಳಿಂದ ಕೂಡಿ ಅಪವಿತ್ರವಾಗಿದೆ. ಮನುಷ್ಯದೇಹದಲ್ಲಿ ಒಂದಾದರೂ ಶುಚಿಯೂ ಪವಿತ್ರವೂ ಇಲ್ಲವೆಂದು ಭಾವಿಸುವುದು. ೭. ಆಸ್ರವಾನುಪ್ರೇಕ್ಷೆ: ಮನ, ವಚನ, ಕಾಯಗಳ ಶುಭ ಅಥವಾ ಅಶುಭ ಪ್ರವೃತ್ತಿಯಿಂದ ಕರ್ಮದ ಜನನ. ಅದು ಬಂಧನಕಾರಿಯಾದುದು ಎಂಬ ಚಿಂತನೆ. ೮. ಸಂವರಾನುಪ್ರೇಕ್ಷೆ: ಮನ, ವಚನ, ಕಾಯಗಳ ನಿಗ್ರಹದಿಂದ ಅಥವಾ ಅವುಗಳನ್ನು ಧರ್ಮದಿಂದ ನಡೆಸುವುದರಿಂದ ಕರ್ಮಬಂಧ ನಿರೋಧವಾಗುತ್ತದೆ ಎಂಬ ಚಿಂತನೆ. ೯. ನಿರ್ಜರಾನುಪ್ರೇಕ್ಷೆ: ತಪಸ್ಸು ಅಥವಾ ಆತ್ಮಧ್ಯಾನದ ಮೂಲಕ ಕರ್ಮಕ್ಷಯದ ಸಮಯಕ್ಕೆ ಮೊದಲೇ ಕರ್ಮವು ಕ್ಷಯಿಸುವುದು ಎಂಬ ಭಾವನೆ. ಕರ್ಮವನ್ನು ಕ್ಷಯಿಸುವ ಅನಶನವೇ ಮೊದಲಾಗಿ ಹದಿಮೂರು ಪ್ರಕಾರವಾದ ತಪಸ್ಸನ್ನು ಕುರಿತಂ ವಿಚಾರ, – ಚಿಂತನೆ. ೧೦. ಲೋಕಾನುಪ್ರೇಕ್ಷೆ: ಲೋಕದಲ್ಲಿರುವ ಜೀವಿಗಳು ಯಾವುವು ಇದು ಸಾದಿಯೋ ಅನಾದಿಯೋ ಎಂದು ಭಾವಿಸುವುದು. ೧೧. ಬೋಧಿದುರ್ಲಭಾನುಪ್ರೇಕ್ಷೆ: ರತ್ನತ್ರಯಧರ್ಮವು ಲಭ್ಯವಾಗುವುದು ಬಹಳ ಕಠಿನವೆಂಬ ಭಾವನೆ. ೧೨. ಧರ್ಮಾನುಪ್ರೇಕ್ಷೆ: ಜಿನೇಂದ್ರನಿಂದ ಹೇಳಲ್ಪಟ್ಟ ಧರ್ಮವೇ ಹಿತವನ್ನುಂಟುಮಾಡುವುದು ಎಂಬ ಭಾವನೆ: ಸಿದ್ಧ ಪರಮೇಷ್ಠಿಗಳಷ್ಟಗುಣಂಗಳಂ ನಿನೆಯುತ್ತುಮುದ್ಭುವಾದಿ ದ್ವಾದಶಾನುಪ್ರೇಕ್ಷಾಭಾವನಾಭಾವಿತಾಂತಃಕರಣನಾಗಿ . . . ಧರ್ಮಧ್ಯಾನಮಂ ಧ್ಯಾನಿಸುತ್ತುಂ (ಆದಿಪು. ೦೦-೦೪ ಪ) : ಭಟ್ಟಾರಕರ್ ದಶಕುಲಧರ್ಮ

ಮುಮಂ ದ್ವಾದಶಾನುಪ್ರೇಕ್ಷೆಯುಮಂ ದ್ರಾವಿಂಶತಿಪರೀಷಹಂಗಳುಮಂ . . . , ಕೇಳ್ದು (ಜಾವುಂಪು. ೭೪) : ಎಂದಿಂತು ಪರಮನಿರ್ವೇಗ ಪರನಾಗಿ ನುಡಿದನಿತಱಿಂ ಮಾಣದೆ ಮತ್ತಂ ದ್ವಾದಶಾನುಪ್ರೇಕ್ಷೆಗಳನನು ಗತಿಯಿನನು ಸ್ಮರಿಸಲ್ ಬಗೆದು (ಪುಷ್ಪಪು. ೧೩-೪೩ ಪ).

[ದ್ವಾದಶ + ಅನುಪ್ರೇಕ್ಷೆ]

ದ್ವಾದಶಾಪ್ಸರಸ್ತ್ರೀ (ನಾ). ಕೃತಸ್ಥಲೆ, ಪುಂಜಿಕಸ್ಥಲೆ, ಮೇನಕೆ, ಸಹಕನ್ಯೆ; ಪ್ರಮೋಚಂತಿ, ವಿಶ್ವಾಚಿ, ಘೃತಾಚಿ, ಊರ್ವಶಿ, ಪೂರ್ವಚಿತ್ತಿ, ತಿಲೋತ್ತಮೆ, ರಂಭೆ ಮತ್ತು ಭದ್ರೆಯರೆಂಬ ಹನ್ನೆರಡಂ ಮಂದಿ ದೇವಗಣಿಕೆಯರು : ಕೃತಸ್ಥಲೆ . . . ತಿಲೋತ್ತಮೆ ರಂಭೆ ಭದ್ರೆಯರೆಂಬ ದ್ವಾದಶಾಪ್ಸರಸ್ತ್ರೀಯರು ಕ್ರಮದಿಂ ನರ್ತನವಂ ಮಾಳ್ಪರು (ವಿವೇಕ. ೨೬೬). [ದ್ವಾದಶ + ಅಪ್ಸರ + ಸ್ತ್ರೀ]

ದ್ವಾದಶಾಯತನ (ನಾ). [ಬೌದ್ಧ] ಕಿವಿ, ಚರ್ಮ, ಕಣ್ಣು, ನಾಲಗೆ, ಮೂಗು ಎಂಬ ಪಂಚೇಂದ್ರಿಯಗಳು ಮತ್ತು ಮನಸ್ಸು ಹಾಗು ಪಂಚೇಂದ್ರಿಯ ವಿಷಯಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮತ್ತು ಧರ್ಮ ಎಂಬ ಹನ್ನೆರಡು ಬಗೆಯ ಆಯತನಗಳ : ಈ ಸ್ಕಂದಪಂಚಕದಲ್ಲೇ ದ್ವಾದಶಾಯತನ ಅಷ್ಟಾದಶ ಧಾತುಗಳು ಎಂದು ವಿಚಾರವಿರುವುದು. ದ್ವಾದಶಾಯತನವೆಂದರೆ ಮನಸ್ಸನ್ನು ಸೇರಿಸಿ ಆರು ಇಂದ್ರಿಯಗಳು, ಧರ್ಮವನ್ನು ಸೇರಿಸಿ ಆರುವಿಷಯಗಳು (ಹಿಂದಸಾ. ೨೯). [ದ್ವಾದಶ + ಆಯತನ]

ದ್ವಾದಶಾಹ (ನಾ). ೧. ಹನ್ನೆರಡು ದಿನಗಳ ಕಾಲ. ೨. ಹನ್ನೆರಡು ದಿನಗಳಲ್ಲಿ ನೆರವೇರಿಸಬೇಕಾದ ಒಂದು ಯಜ್ಞ : ದ್ವಾದಶಾಹವೆಂಬುದು ಹನ್ನೆರಡು ಹಗಲುಗಳಲ್ಲಿ ನೆರವೇರಿಸಬೇಕಾದ ಒಂದು ಯಜ್ಞ (ಕಕ್ತಿವಿ. ೯೮). ೩. ಒಬ್ಬ ವ್ಯಕ್ತಿಯು ಮೃತನಾದಾಗ ಹನ್ನೆರಡನೆಯ ದಿನ ಮಾಡುವ ಪಿತೃಕ್ರಿಯೆ ; ಸಪಿಂಡೀಕರಣಾದಿಕರ್ಮ. [ಸಂ.]

ದ್ವಾದಶಿ (ನಾ). ಚಾಂದ್ರಮಾನದ ಪ್ರತಿಪಕ್ಷದ ಹನ್ನೆರಡನೆಯ ತಿಥಿ : ಮಾಘ ಶುದ್ಧ ದ್ವಾದಶಿ (ಯಪರಾಹ್ಣದೊಳ್) . . . ಸಾಸಿರ್ವರರಸು ಮಕ್ಕಳ್ವೆರಸು ದೀಕ್ಷೆಯಂ ಕೈಕೊಂಡು (ಜಾವುಂಪು. ೧೦೪) ; ದ್ವಾದಶಿಯೊಳ್ ದಿನಾಧಿಪತಿ ಪಂಚಮಿಯೊಳ್ ಮಹಿಜಂ . . . ನಿಲೆ ದಗ್ಧವಾರಂ (ಲೋಕೋಪ. ೦-೪) ; ರಾಮಭಟ್ಟಾರಕರೆಂತುಮಸ್ಖಲಿತಚಿತ್ತದಿಂ ಶುಕ್ಲಧ್ಯಾನಪ್ರವಿಷ್ಟರಾಗಿ ಮಾಘಮಾಸದ ಶುಕ್ಲಪಕ್ಷದ ದ್ವಾದಶಿಯ ಬೆಳಗಪ್ಪ ಜಾವದೊಳ್ (ಪಂರಾಮಾ. ೧೬-೬೭ ಪ) ; ದ್ವಾದಶಿಯೊಳು ಕುಶಶಯನ ಪೂಜೆಯಂ ಮಾಡಿ ಭುಂಜಿಪರ್ (ಜೈಮಿಧಾ. ೨೯-೦೩). [ಸಂ. ದ್ವಾದಶೀ]

ದ್ವಾದಸಿ (ನಾ). = ದ್ವಾದಶಿ : ಹೇಮಳಂಬಿ ಪ್ರಸಿದ್ಧಂ ಸ್ವಸ್ತಂ ಮಾಸಂಗಡಂ ಕಾರ್ತ್ತಿಕಮಸಿತದಿನಂ ದ್ವಾದಸೀಸೋಮವಾರಂ (ಎಕ. IV, ಹೆಗ್ಗಡ, ೦೮-೨ ; 1057) : ಅಮಾವಾಸೆ ದ್ವಾದಸಿಗೆ ದೋಸೆಗೆ ಉದು ಮು ೧ ಅಕಿ ಮು ೧ (ಸೌಇಇ. IX-11, ೪೫೨-೪೭ ; 1450). [<ಸಂ. ದ್ವಾದಶೀ]

ದ್ವಾಪರ (ನಾ). ೧. ಚತುರ್ಯುಗಗಳಲ್ಲಿ ಮೂರನೆಯದು ; ಮಾನುಷ್ಯಮಾನದಲ್ಲಿ (೮೬೪,೦೦೦ ವರ್ಷಗಳ ಅವಧಿಯನ್ನುಳ್ಳ) ಮೂರನೆಯ ಯುಗ : ದ್ವಾಪರದಲಿ ಶ್ರೀಗುರು ಶಿಷ್ಯಂಗೆ ಝುಂಂಕಿಸಿ ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯ ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ ಆಗಲಿ ಮಹಾಪ್ರಸಾದವೆಂದೆನಯ್ಯ (ಅವಚಂ. ೧೩-೫೨) ; ದ್ವಾಪರದ ಮಱೆ ಜವನಿಕೆಯಲೀ ದ್ವಾಪರವೊ ಕೃತಯುಗವೊ ಧರ್ಮದ ರೂಪು ನಾನಾಮುಖವಲವತರಿಸಿತೊ (ಕುಮ್ಯಾಸ. ೬-೧೨) ; ಸಾರಸುತನಿಲ್ಲದೆ ತದ್ರಾಜಂ ದ್ವಾಪರದೊಳ್ ಶಿವನೈಜೋನ್ನತಭಕ್ತಿ ಮುಕ್ತಿಗೆಂತೆನುತಿರ್ದಂ (ಹಮ್ಮೀರ. ೨-೨) ; ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು ! (ಪಾಂಡಜ. ೦೨-೨). ೨. ಎರಡು ಎಂಬ ಸಂಖ್ಯೆಯನ್ನು ಸೂಚಿಸುವ ಚಿಹ್ನೆಯುಳ್ಳ ಪಗಡೆಯ ದಾಳದ ಒಂದು ಮುಖ, – ದುಗವಿರುವ ಮುಖ : ಕೃತದಲ್ಲಿ ನಾಲ್ಕು ಅಂಕಗಳಿರುವುವು. ಆ ಅಂಕವು ಬಿದ್ದರೆ ತ್ರೇತೆ (೩), ದ್ವಾಪರ (೨), ಕಲಿ (೧) ಎಂಬ ಗರಗಳ ಅಂಕಗಳೂ ಸೇರಿ ಹತ್ತಾಗುವವು (ಬ್ರಹ್ಮಧಾ. ೨೦೭ ಅಡಿಟಿ). ೩. ದ್ವಾಪರಯುಗಪುರುಷ. ೪. ಶಂಕೆ; ಸಂದೇಹ; ಸಂಶಯ : "ಸಂದೇಹದಲ್ಲಿಯುಂ ದ್ವಾಪರಮೆಂಬುದು" (ಹಲಾಯು. ೦೩೧-೩) ; "ಚಿ(ಕಿ)ತ್ಸಿತವಚನಂ ದ್ವಾಪರಂ" (ವಸ್ತುಕೋ. ೧೩೯-೦೨೬). ೫. ಕಾಳಗ ; ಯುದ್ಧ : "ಯುಗಂ ಕದನಂ ಸಂದೆಗಮಿಂತು ದ್ವಾಪರವೆನಿಕ್ಕುಂ" (ನಾನಾರ. ೯೭). ೬. (ಆಲಂ) ಹಳೆಯ ಕಾಲ ; ಪ್ರಾಚೀನಕಾಲ. [ಸಂ.]

ದ್ವಾಪರಯುಗ (ನಾ). = ದ್ವಾಪರ ೧ : ದ್ವಾಪರಯುಗ ಎಂಟುಲಕ್ಷ ಅಱುವತ್ತುನಾಲ್ಕುಸಾವಿರವರುಷದಲ್ಲಿ ಸೌರಾಷ್ಟ್ರಸೋಮೇಶ್ವರದೇವರು ಮೂಲಸ್ಥಾನ (ಆದವ. ೪೬-೦೩೧). [ದ್ವಾಪರ + ಯುಗ]

ದ್ವಾಪಾರ (ನಾ). ೧ = ದ್ವಾಪರ ೧. : ತ್ರಿಪುರಂ ಬೆಂದುದು ರುದ್ರನಿಂ ಕೃತಯುಗ ಪ್ರಾರಂಭದೊಳ್ . . . ದ್ವಾಪಾರದೊಳ್ ಖಾಂಡವಂ ಕಪಿರಾಜ ಧ್ವಜನಿಂ (ಗದಾಯು. ೧-೨೫) ; ದ್ವಾಪಾರದಲಿ ಭಾವಜಜನಕನಾಗುದವಿಸಿದನು ತ್ರಿಜಗವಱಿಯಲು ಬಾದರಾಯಣನೆಂಬ ನಾಮದಲಿ (ಬಸಪು. ೫೪-೩೨). ೨.=ದ್ವಾಪರ ೪ : "ಸರ್ವಸಂದೇಹದಲ್ಲಿ ದ್ವಾಪಾರವೆಂಬುದು" (ಮಂಗರಾ. ೦೩೮-೦). [<ಸಂ. ದ್ವಾಪರ]

ದ್ವಾಮುಷ್ಯಾಯಣ (ನಾ). ಜನ್ಮ ಕೊಟ್ಟ ತಂದೆ ಮತ್ತು ದತ್ತು ತೆಗೆದುಕೊಂಡ ತಂದೆ ಈ ಇಬ್ಬರಿಗೂ ಉತ್ತರಾಧಿಕಾರಿಯಾಗುವ ಮಗ : ಆದರೆ ನಾವು ದ್ವಾಮುಷ್ಯಾಯಣರು. ನಾವು ದೇವತೆಗಳ ಪುತ್ರರು ಹೇಗೋ ಹಾಗೆಯೇ ದಾನವರಿಗೂ ಪುತ್ರವರ್ಗ (ನಡದಾ. II, ೦೩೮೮). [ಸಂ.]

ದ್ವಾರ (ನಾ). ೧. ಬಾಗಿಲು : "ದ್ವಾಃ, ದ್ವಾರಂ, ವಳಜಂ–ಈ ೩ ಬಾಗಿಲ್" (ಹಲಾಯು. ೫೦-೦೪೫) ; "ವಳಜಮಾ ದ್ವಾರ್ ದ್ವಾರಮೆನಲು ಮನೆವಾಗಿಲಕ್ಕುಂ" (ಮಂಗರಾ. ೫೯-೦೨) ; ಒಂದು ದ್ವಾರದಲ್ಲಿ ಬಂದ ಆತ್ಮಂಗೆ ಹಲವು ದ್ವಾರ ಉಂಟೆಂದು ಹೊಲಬುದಪ್ಪಿ ನುಡಿವವರ ನೋಡಾ (ಮೋಳಿಮಾ. ೧-೦) ; ದ್ವಾರ ಚತುಷ್ಕಾನ್ವಿತಮಂ . . . ನಯನವಿನೋದಾಗರಮೆನಿಪ್ಪ ಪಟಮಂಡಪಮಂ ಸೌಧರ್ಮೇಂದ್ರದತ್ತ ಹಸ್ತಾವಳಂಬನೊಳಪೊಕ್ಕು (ಚಂದ್ರಪು. ೦೩-೦೦೪). ೨. ದೇಹದ ನವರಂಧ್ರಗಳು : ಸಪ್ತಧಾತುಮಯ ಒಂಬತ್ತು ದ್ವಾರದಿಂ . . . ಪೂತಿ ಗಂಧ ಕುತ್ತದಾಗರವೆನಿಸುವುದು (ದ್ವಾದಶಾ. ೦೦-೭೪೦). 'ನವದ್ವಾರ' ಪರಾ. ೩. ಉಪಾಯ ; ಮಾರ್ಗ ; ದಾರಿ. [ಸಂ.]

ದ್ವಾರಗೊಲ್ಲ (ನಾ). ಬಾಗಿಲನ್ನು ಕಾಯುವ ಸೇವಕ ; ದ್ವಾರಪಾಲಕ : ಚಂದಮಂದಿರಬಾಗಿಲೊಳು ಮುನಿ ನಿಂದು ನುಡಿದನು ದ್ವಾರಗೊಲ್ಲಗೆ ಬಂದ ಕೌಶಿಕನೆಂದು ನೃಪನಿಗೆ ಇಂದು ತಿಳುಪೆಂದು (ಹಮಚ. ೦೧).

[ದ್ವಾರ + ಗೊಲ್ಲ$_1$]

ದ್ವಾರನಿಯುಕ್ತ (ನಾ). ಬಾಗಿಲು ಕಾಯುವ ಕೆಲಸಕ್ಕೆ ನೇಮಕಗೊಂಡವನು ; ದ್ವಾರಪಾಲಕನಾಗಿ ನೇಮಕಗೊಂಡವನು : ರಜತಮಯ ಚತುರ್ಗೋಪುರದೊಳ್ ಕನಕಗದಾಹಸ್ತರ್ ದ್ವಾರನಿಯುಕ್ತರ್ ಜ್ಯೋತಿರಮರನಾಯಕರಿರ್ಪರ್ (ಮಲ್ಲಿಪು. ೧೪-೦೩೯). [ದ್ವಾರ + ನಿಯುಕ್ತ]

ದ್ವಾರಪಟ್ಟ (ನಾ). ೧. ಬಾಗಿಲುವಾಡ. ೨. ಕದ. ೩. ಬಾಗಿಲ ತೆರೆ ; ಬಾಗಿಲಿನ ಪರದೆ. [ಸಂ.]

ದ್ವಾರಪತಾಕೆ (ನಾ). ಬಾಗಿಲಿಗೆ ಕಟ್ಟಿರುವ ಬಾವುಟ, – ನಿಶಾನೆ : ದ್ವಾರಪತಾಕೆಗಳುಂ . . . ಇಂದ್ರಧ್ವಜಂಗಳೆಂದಿಂತಿವು ನಿಷ್ಕಾರಣದಿನುಡಿದು ಕೆಡೆದೊಡೆ ಧಾರಿಣಿಯಧಿಪತಿಗೆ ಮರಣಮಕ್ಕುಮಮೋಘಂ (ಲೋಕೋಪ. ೪-೫೯). [ದ್ವಾರ + ಪತಾಕೆ]

ದ್ವಾರಪಾಲ (ನಾ). ರಾಜಸೇವಕರಾದ ಹದಿನೆಂಟು ಬಗೆಯ ಪ್ರಧಾನದಲ್ಲಿ ಒಬ್ಬ; ದ್ವಾರನಿಯಂಕ್ತ; ಬಾಗಿಲು ಕಾಯುವವನು: "ದ್ವಾಸ್ಸ್ಥಿಃ, ದೌವಾರಿಕಃ . . . ದ್ವಾರಪಾಲಃ, ಪ್ರತೀಹಾರಃ–ಈ ರ ಪಡಿ(ಯ)ಹಾಱಂ" (ಹೆಲಾಯು. ೭೦-೨೭೦); ಪೌರೋಹಿತಂ ದಂಡನಾಥನಧ್ಯಕ್ಷನಧಿಕಾರಿ ಮಂತ್ರಿಪ್ರಧಾನಂ ಮಹೋಗ್ರಾಣಿ ಭಂಡಾರಿ ಸೇನಾನಾಯಕಂ ಸಂಧಿವಿಗ್ರಹಿ ಪ್ರತಿಹಾರಿಯಂತಸ್ಥಿತಂ ದ್ವಾರಪಾಲಂ ಕರಣಿಕಂ ದಂಡಪಾಣಿ ಕೊಠಾರಿ ಯುವರಾಜನಾ ತಳವಾಱನೆಂಬಿವರು ಭೂರಮಣರಲ್ಲಿ ವಿನಿಯೋಗಮಂ ತಾಳ್ದು ಪದಿನೆಣ್ಬರ್ ಪ್ರಧಾನರೆನಿಕುಂ (ಮಂಗರಾ. ೮೦-೧೧); ಬಸವನಿರವಂ ದ್ವಾರಪಾಲರ ದೆಸೆಯೊಳಱಿದು ಮರಳ್ದು (ಬಸಪು. ೩೫-೪೨). [ದ್ವಾರ + ಪಾಲ್ಕ]

ದ್ವಾರಪಾಲಕ, ದ್ವಾರಪಾಳಕ (ನಾ). ೧. = ದ್ವಾರಪಾಲ: ಪ್ರಜಾಪತಿ ಮಹೀಪಾಲನಂ ದ್ವಾರಪಾಲಕಸಂದರ್ಶಿತಂ ಕಂಡು (ಶಾಂತಿಪು. ೫-೯೦ ಪ); ಕರೆಯಿರೆ ಹಿತವರಂ ಕರಣಿಕನಿಯೋಗಪ್ರತತಿಯಂ ಪರಿಚಾರಕರನಾ ದ್ವಾರಪಾಲಕರ (ಬಸಪು. ೩೫-೪೪). ೨. ದೇವಸ್ಥಾನದ ಮುಖ್ಯದ್ವಾರದ ಎರಡು ಕಡೆ ಇರುವ ವಿಗ್ರಹ. ದ್ವಾರಪಾಳಕ: ೧. ಸಿದ್ಧಾರ್ಥನೆಂಬ ದ್ವಾರಪಾಳಕಂ ಕಂಡು (ಪುಷ್ಯಾಸ್ತ್ರ. ೦೦-೨೦ ಪ). [ದ್ವಾರ + ಪಾಲಕ]

ದ್ವಾರಪಾಳಕ 'ದ್ವಾರಪಾಲಕ' ನೋ.

ದ್ವಾರಪ್ರದೇಶ (ನಾ). ಬಾಗಿಲಿನ ಸಮೀಪದ ಪ್ರದೇಶ: ಆ ಕಿರಾತಂ ಕೊಂಡೊಯ್ದು ದೇತಾಳಗುಹೆಯಂ ದೂರಾಂತರದೊಳ್ ತೋಱಲದಱ ದ್ವಾರಪ್ರದೇಶದಲ್ಲಿ (ಪುಷ್ಯಾಸ್ತ್ರ. ೭-೬೭ ಪ). [ದ್ವಾರ + ಪ್ರದೇಶ]

ದ್ವಾರಬಂಧ (ನಾ). ೧. ಬಾಗಿಲಿನ ನಿಲುವು; ಕದಗಳಿಗೆ ಆಸರೆಯಾದ ಬಾಗಿಲಿನ ಚೌಕಟ್ಟು: ವಿಚಿತ್ರಮಣಿಮಯೂಖಚಿತ್ರಿತದ್ವಾರಬಂಧ ಬಂಧುರಮುಂ (ಆದಿಪು. ೧೩-೪೬ ಪ): ಪವಿಮಣಿಯ ದ್ವಾರಬಂಧಂ ಜಂತೆ (ಕುಮಾಪು. ೦-೫೫): ಮೇಲಿನ ಭುವನೇಶ್ವರಿ, ದ್ವಾರಬಂಧ, ಗೋಡೆಯ ಹೊರಭಾಗ, ಶಿಖರ ಎಲ್ಲವೂ ಅತ್ಯಂತ ಸೂಕ್ಷ್ಮವಾದ ಕೆತ್ತನೆಗಳಿಂದ ಕೂಡಿವೆ (ಹೊಯ್ಸಪಾ. ೦೦). ೨. ಕದ; ಬಾಗಿಲುಪಡಿ: "ಸಾಮ್ಯದೊಳು ಕುಡುಬದೊಳ್ ದ್ವಾರಬಂಧದೊಳ್ ಪಡಿಯೆನಿಕ್ಕು" (ಕಬ್ಬಮಂ. ೯೬).

[ದ್ವಾರ + ಬಂಧ]

ದ್ವಾರವಟ್ಟ 'ದಾರವಟ್ಟ' ನೋ.

ದ್ವಾರವಾಟಿಕೆ (ನಾ). ಬಾಗಿಲುವಾಡ: ಎದ್ದ ಹುಲಿಮುಖ ದ್ವಾರವಾಟಿಕೆ ವಜ್ರದುಕ್ಕಿನ ಲಾಳವಿಂಡಿಗೆಯಿದ್ದ ಬಾಗಿಲ ಹೊಕ್ಕು ನೋಡುತ ಒಳಗೆ ಬರುತಿರ್ದ (ರೇವಕಾ. ೨-೫). [<ದ್ವಾರವಟ್ಟ ?]

ದ್ವಾರಾ (ಅ). ಮೂಲಕ; ಮುಖಾಂತರ: ಅಂಚೆ ದ್ವಾರಾ ಪುಸ್ತಕದ ಭಾಂಗಿ ಈ ದಿನ ಬಂದಿದೆ (ರೂಢಿ). [ಸಂ.]

ದ್ವಾರಾಪೇಕ್ಷೆ (ನಾ). [ಜೈನ] (ಅಡುಗೆ ಸಿದ್ಧವಾದೊಗ ಗೃಹಸ್ಥನು) ಬಾಗಿಲಲ್ಲಿ ನಿಂತುಕೊಂಡು ಜೈನಸಂನ್ಯಾಸಿಗಳು ಚರಿಗೆಬರುವುದನ್ನು ನಿರೀಕ್ಷಿಸುವಿಕೆ: ವ್ರತೋಪೇತಂ ದೀನಜನತಾಕಲ್ಪಾಂಘ್ರಪಂ ಶ್ರೀಯಂ ನಿರಾಕುಳಮನುಭವಿಸುತ್ತುಮಿರ್ದು ಮತ್ತೊಂದು ಪುಣ್ಯದಿನದೊಳನಗಾರ ಸಮಯದೊಳ್ ದ್ವಾರಾಪೇಕ್ಷೆಯೊಳಿರೆ (ಶಾಂತಿಪು. ೬-೬೯ ಪ).

[ದ್ವಾರ + ಅಪೇಕ್ಷೆ]

ದ್ವಾರಾವತೀಪುರ (ನಾ). ಒಂದು ಊರಿನ ಹೆಸರು: ವೀರಲಕ್ಷ್ಮೀಕಾನ್ತಂ ದ್ವಾರಾವತೀಪುರವರೇಸ್ವ × × × ಗರುಡಧ್ವಜಂ ಸಂಕಚಕ್ರಲಾಂಚನಂ ಶ್ರೀಮನ್ಮಹಾಸಾಮನ್ತಂ (ಸೌಇಇ. XI-1, ೮೬-೧೪; 1050). [ಸಂ.]

ದ್ವಾರಾವಲೋಕನ (ನಾ). = ದ್ವಾರಾಪೇಕ್ಷೆ: ತನ್ನ ಭೂರಿವಿಡಾಯವಬಿಟ್ಟು ದ್ವಾರಾವಲೋಕನಕಡಿಯಿಟ್ಟನಂಗಶೃಂಗಾರವೆರಸಿ ಭಕ್ತಿಯಿಂದ (ಭರಜ. ೩-೩). [ದ್ವಾರ + ಅವಲೋಕನ]

ದ್ವಾರಿಕ (ನಾ). = ದ್ವಾರಪಾಲ: "ದ್ವಾರಿಕಂ [ಪಾಠಾಂ. ದೌವಾರಿಕಂ] ದ್ವಾಸ್ಥನೆನೆ ಬಾಗಿಲವನಕ್ಕು" (ಮಂಗರಾ. ೭೯-೫). [ಸಂ.]

ದ್ವಾರಿಗ (ನಾ). = ದ್ವಾರಪಾಲ: ಸುಂಕದೊಳ್ ನಿಯಂಕ್ತಂ, ಸುಂಕಿಗಂ. ಏವಂ ಬಾಗಿಲಿಗಂ, ದ್ವಾರಿಗಂ, ಭಂಡಾರಿಗಂ (ಶಬ್ದಾನು. ೪೦೮ ಪ್ರಯೋ).

[ದ್ವಾರ + – ಇಗ]

ದ್ವಾವತಿ (ನಾ). ಒಂದು ಊರಿನ ಹೆಸರು: ಚಂದ್ರಾದಿತ್ತ್ಯರ್ಕ್ಕಳಣ ಸಾಗೆಯುಂ ಚಕ್ರ್ಯಮೆ ಬೇಳಮಾಗೆಯುಂ ವಜ್ರಕವಚಮೆ ಕಂಚುಳಿಕೆಯಾಗೆಯುಂ ದ್ವಾವತಿಯ ಭಂಡಮೆ ತಾಯಿ [ಭ]ಂಡಮಾಗೆಯುಂ ಐಸಂಬರಮ ಅಮೌಲ್ಯ ವಸುಗಳಾಗೆಯುಂ ನಡೆದುಂ ನುಡಿದುಂ ಸಂದ . . . ಸ್ವಾಮಿಗಳ್‌ಗೆ ಸಾಷ್ಟಾಂಗಮೆಱಗಿ ಪೊಡವಟ್ಟು (ಕಇ. IV, ೫೫-೦೩; 1000 ?) [ಇದು 'ದ್ವಾರಾವತಿ' ಎಂಬುದರ ಅಪಲಿಖಿತವಿರಬಹುದೆ ?]

ದ್ವಾವಿಂಶತಿ (ನಾ). ಒಂದು ಸಂಖ್ಯೆ; ಇಪ್ಪತ್ತೆರಡು: ದಶಸಹಸ್ರಧರಣೀಶ್ವರರೊಡನೆ ಜಿನೇಶರೂಪಮಂ ತಾಳ್ದಿ . . . ಅಚ್ಯುತಕಲ್ಪದೊಳ್ ದ್ವಾವಿಂಶತಿಪಾರಾವಾರಪರಮಾಯುಷ್ಯನೆನಚ್ಯುತೇಂದ್ರನುಮಾಗಿ (ಆದಿಪು. ೩-೫೭ ಪ); ಆ ಕಲ್ಪದ್ವಯದ ಕಲ್ಪವಾಸಿಗರೆಲ್ಲಂ ತ್ರಿಹಸ್ತೋತ್ಸೇಧರುಂ ದ್ವಾವಿಂಶತಿ ಸಾಗರೋಪಮಾಯುಷ್ಯರುಂ ಮನಃಪ್ರವೀಚಾರದಿವ್ಯಸುಖರುಮಪ್ಪರ್ (ಸುಕುಮಾ. ೦೦-೬೮ ಪ); ಉತ್ಕೃಷ್ಟದಿಂ ಯಥಾಸಂಖ್ಯೆಯಿಂ ಏಕ ತ್ರಿ ಸಪ್ತ ದಶ ಸಪ್ತದಶ ದ್ವಾವಿಂಶತಿ ತ್ರಯಸ್ತ್ರಿಂಶತ್ಸಾಗರೋಪಮಪ್ರಮಿತಂ (ತತ್ತ್ವಪ್ರ. ೩೨). [ಸಂ.]

ದ್ವಾವಿಂಶತಿಜಲಧಿ (ನಾ). [ಜೈನ] ಇಪ್ಪತ್ತೆರಡುಸಾಗರವೆಂಬ ಪ್ರಮಾಣದಷ್ಟು ಕಾಲ: ಅಖಿಲಸುಖಮನುಂಡರ್ ದ್ವಾವಿಂಶತಿಜಲಧಿವರೆಗಮಿಂದ್ರಪ್ರತೀಂದ್ರರ್ (ಶಾಂತಿಪು. ೭-೦೦೦). [ದ್ವಾವಿಂಶತಿ + ಜಲಧಿ]

ದ್ವಾವಿಂಶತಿಪರೀಷಹ (ನಾ). [ಜೈನ] ಕ್ಷುತ್ತು, ಪಿಪಾಸೆ (ತೃಷ್ಣೆ), ಶೀತ, ಉಷ್ಣ, ದಂಶಮಕ್ಷಿಕ (ದಂಶಮಶಕ), ನಗ್ನತೆ, ಅರತಿ, ಸ್ತ್ರೈಣ, ಚರ್ಯೆ, ಶಯ್ಯೆ, ನಿಷದ್ಯೆ, ಆಕ್ರೋಶ, ವಧೆ, ಯಾಚನೆ, ಅಲಾಭ, ಅದರ್ಶನ, ರೋಗ, ಸತೃಣಸ್ಪರ್ಶ, ಪ್ರಜ್ಞೆ, ಅಜ್ಞಾನ, ಮಲ, ಸಸತ್ಕಾರಪುರಸ್ಕಾರ ಎಂಬ ಇಪ್ಪತ್ತೆರಡು ಬಗೆಯ ಪರೀಷಹಗಳು: ಭಟ್ಟಾರಕರ್ ದಶಕುಲಧರ್ಮಮುಮಂ ದ್ವಾದಶಾನುಪ್ರೇಕ್ಷೆಯುಮಂ ದ್ವಾವಿಂಶತಿಪರೀಷಹಂಗಳುಮಂ . . . ಕೇಳ್ದು (ಜಾವುಂಪು. ೮೩); ಮತ್ತಂ ತ್ರಿದಂಡ ತ್ರಿಶಲ್ಯ ತ್ರಿಗಾರವಂಗಳಂ ಕ್ರಮಕ್ರಮದಿಂ ಕಟಲ್ಚಿ ಕಳೆಯುತ್ತುಂ . . . ದ್ವಾವಿಂಶತಿಪರೀಷಹಮುಮಂ ತನ್ನಂ ಮಿಗಲೀಯದೆ ತಳೆದು (ಸುಕುಮಾ. ೩-೪೬ ಪ). 'ಪರೀಷಹ' ಪರಾ.

[ದ್ವಾವಿಂಶತಿ + ಪರೀಷಹ]

ದ್ವಾವಿಂಶತಿಶ್ರುತಿ (ನಾ). [ಸಂಗೀತ] ನಾದಾಂತಾ, ನಿಷ್ಫಲಾ, ಗೂಢಾ, ಸಕಲಾ, ಮಧುರಾ, ಕಥಾ, ಏಕಾಕ್ಷರಾ, ಭೃಂಗರೀತಿ, ರಥಗೀತಿಕಾ, ಸಂಪ್ರೋಕ್ತಾ, ರಂಜಿತಾ, ಪೂರ್ಣಾ, ಅಲಂಕಾರಿಣೀ, ವಾಂಶೀ, ಮಣಿಕಾ, ತ್ರಿಸ್ಥಾನಾ, ಲಲಿತಾ, ಸುಸ್ವರಾ, ಭಾಷಾಂಗಾ, ಪಾಲಿಕಾ, ಸಂಪೂರ್ಣಾ, ಪ್ರಸನ್ನಾ ಎಂಬ ಇಪ್ಪತ್ತೆರಡು ವಿಧವಾದ ಶ್ರುತಿಗಳು: ಸಪ್ತಸ್ವರಗಳೇ ಅಲ್ಲದೆ ದ್ವಾವಿಂಶತಿಶ್ರುತಿ, ಅವುಗಳ ಪ್ರದರ್ಶನಕ್ಕೆ ಉಪಯೋಗಿಸಲಾಗುವ ಧ್ರುವವೀಣೆ . . . ಇವುಗಳನ್ನೆಲ್ಲಾ ವಿವರಿಸಿದ್ದಾನೆ (ಭಾರದ. ೫೩೮). 'ಶ್ರುತಿ' ಪರಾ.

[ದ್ವಾವಿಂಶತಿ + ಶ್ರುತಿ]

ದ್ವಾಶಿ 'ದೋಸೆ' ನೋ.

ದ್ವಾಸ್ಥ (ನಾ). = ದ್ವಾರಪಾಲ: "ದೌವಾರಿಕಂ ದ್ವಾಸ್ಥ [ಪಾಠಂ. ಸ್ತ] ನೆನೆ ಬಾಗಿಲವನಕ್ಕು" (ಮಂಗರಾ. ೭೯-೫). [ಸಂ.]

ದ್ವಿ (ನಾ). ೧. ಒಂದು ಸಂಖ್ಯೆ; ಎರಡು: ದ್ವಿ ತ್ರಿ ಪದರಚಿತವೃತ್ತಿ ವಿಚಿತ್ರೌಪಮ್ಯಾದ್ಯಲಂಕ್ರಿಯಾಸಮುಪೇತಂ . . . ಪಾಂಚಾಲರೀತಿಯೆನೆ ಪೆಸರ್ವಡೆಗುಂ (ಕಾವ್ಯಾವ. ೭೮೪); ಬೆ, ಬೆನ್ನಿ, ಯಮ, ನಯನ, ಅಕ್ಷಿ, ದ್ವಂದ್ವ, ದ್ವ, ದ್ವಿ, ದ್ವಯ, ದಂಪತಿ ಇಂತಿನಿತುಂ ೨ಕ್ಕೆ ಹೆಸರು (ವ್ಯವಹಾ. ೧೦-೧೨); ಏಕ ದ್ವಿ ತ್ರಿ ಚತುಃ – ಪಂಚಾಕಲಿತಾರ್ಥಂಗಳಾಗಿ ಱಟನೊಳವು (ಶಮದ. ೨೩). ೨. = ದ್ವಿವಚನ: ಏಕ ದ್ವಿತ್ವ ಬಹುತ್ವ ಮನೇಕ ದ್ವಿ ಬಹುತ್ವವಸ್ತುಗಳೊಳಾಚರಿಪರ್ (ಶಮದ. ೯೪). [ಸಂ.]

ದ್ವಿಕ (ನಾ). ೧. ಎರಡನ್ನು ಒಳಗೊಂಡುದು; ಯುಗಳ; ಜೋಡಿ; ಜೊತೆ: ಇನ್ನು ಕೆಲವು ದ್ವಿಕ (ಜೋಡಿ)ಗಳಾಗಿಯೂ ತ್ರಿಕ(ಮೂರು ಮೂರು) ಗಳಾಗಿಯೂ ಅಥವಾ ಅನೇಕಗಳಾಗಿಯೂ ಇವೆ (ಜ್ಯೋತಿರ್ವಿ. ೨೦). ೨. ಕಾಗೆ. ೩. ಚಕ್ರವಾಕ. [ಸಂ.]

ದ್ವಿಕರ್ಮ (ನಾ). ೧. ಎರಡು ಕರ್ಮಗಳು; ಪಾಪ ಮತ್ತು ಪುಣ್ಯ ಎಂಬ ಕರ್ಮ. ೨. [ವ್ಯಾಕ] ಎರಡು ಕರ್ಮಪದಗಳು: (ಕಿ).

[ದ್ವಿ + ಕರ್ಮ]

ದ್ವಿಕರ್ಮಕ (ನಾ). [ವ್ಯಾಕ] ಎರಡು ಕರ್ಮಪದಗಳನ್ನೊಳಗೊಂಡ ಕ್ರಿಯಾಪದ: ದೋಹನಾದಿಗಳೊಳ್ ದ್ವಿಕರ್ಮಕಮುಂಟು (ಶಮದ. ೧೨೮ ಪ್ರಯೋ); ಕೆಲವು ಧಾತುಗಳಿಗೆ ಎರಡು ಕರ್ಮಪದಗಳಿರುವುದುಂಟು. ಅಂಥವಕ್ಕೆ ದ್ವಿಕರ್ಮಕಗಳೆಂದು ಹೆಸರು (ಮಧ್ಯಮ. ೦೭೭). [ಸಂ.]

ದ್ವಿಖುರ (ನಾ). ೧. ಎರಡು ಗೊರಸು. ೨. ಸೀಳಿದ ಗೊರಸನ್ನು ಹೊಂದಿರುವ ಕುದುರೆ: ಹಸುಗಳ ಗೊರಸಿನಂತೆ ಯೆರಡು ಗೊರಸುಗಳುಳ್ಳ ಅಶ್ವವು ದ್ವಿಖುರವೆನಿಸಿಕೊಳ್ಳುವುದು (ಸೌಗಂಧಿ. ೩೦೨-೦೦).

[ದ್ವಿ + ಖುರ]

ದ್ವಿಗು (ನಾ). [ವ್ಯಾಕ] ತತ್ಪುರುಷ ಸಮಾಸದ ಒಂದು ಭೇದ; ಪೂರ್ವಪದವು ಸಂಖ್ಯಾವಾಚಕವಾಗಿರುವ ತತ್ಪುರುಷ: ಉತ್ತರಪದದರ್ಥಂ ಮೆಯ್ವೆತ್ತಿರೆ ತತ್ಪುರುಷಮಂತದೇಕಾಶ್ರಯಮಾಗುತ್ತುಮಿರೆ ಕರ್ಮಧಾರಯಮೆತ್ತಂ ದ್ವಿಗುಸಂಜ್ಞಮದುವೆ ಸಂಖ್ಯಾದಿಪದಂ (ಕಾವ್ಯಾವ. ೨೦೪); ತತ್ಪುರುಷಂ ಸಮಂತದೇಕಾಶ್ರಯಮಾಗೆ ಕರ್ಮಧಾರಯಮಕ್ಕುಂ ಅದು ಸಂಖ್ಯಾಪೂರ್ವಕಮಾಗೆ ದ್ವಿಗುವಕ್ಕುಂ (ಶಮದ. ೦೬೪ ವೃತ್ತಿ); ವಿಶೇಷಣವು ಸಂಖ್ಯಾವಾಚಕವಾಗಿದ್ದರೆ ದ್ವಿಗು. ಉದಾ. ಒಂದು + ಪಿಡಿ = ಒರ್ಪಿಡಿ (ಕೈಪಿಡಿ. ೨೧). [ಸಂ.]

ದ್ವಿಗುಣ (ನಾ). ೧. ಎರಡರಷ್ಟು; ದುಪ್ಪಟ್ಟು; ಎರಡರಿಂದ ಗುಣಿಸಿದುದು: ದ್ವಿಗುಣಂ ಗುಡಮಾಗಿರೆ ಬೇಸಗೆಯೊಳ್ . . . ಅಷ್ಟಗುಣಂ ಮಾಗಿಯೊಳಿಂಬಿನೆ ಪೊಗೆಗೆಡೆಗೊಟ್ಟಂದು ಸಾದು ತಾಂ ಲೇಸಕ್ಕುಂ (ಲೋಕೋಪ. ೭-೫೯); ನೆಗೞ್ದ ನೃಪರೊಳಗೆ ಮುಂ ಕವಿತೆಗೆ ಮುಂದಂ ಭೋಜನುತ್ಪಲಂ ಶ್ರೀಹರ್ಷಂ ಮಿಗಿಲವರಿಂ ಬಲ್ಲಾಳಂ ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ (ಯಶೋಚ. ೦-೧೭). ೨. ರಜೋಗುಣ ಮತ್ತು ತಮೋಗುಣವೆಂಬ ಎರಡು ಗುಣ; [ಮಿಗೆ ರ]ಣದೊಳ್ ಪರಿಚಿತ[ಮಾ] ದ್ವಿಗುಣಮದೋರಂತೆ ಮಟ್ಟಮಿರ್ದುದು ಮತ್ತಂ ವಿಗತ ವಿಕಾರಾಕಾರಂ ಸೊಗಯಿಸುಗುಂ ನಿನ್ನ ರೂಪು ಶಾಂತಾಧಾರಂ (ಕವಿರಾ. ೩-೧೯೭).

ದ್ವಿಗುಣ ದ್ವಿಗುಣ (ದ್ವಿರುಕ್ತಿ): ಸುತ್ತಿರ್ದುದು ನಂದೀಶ್ವರ ಸಮುದ್ರ ಮಿಂತು ದ್ವಿಗುಣದ್ವಿಗುಣ ವಿಸ್ತಾರದಿಂ (ಸುಕುಮಾ. ೧೧-೫೪ ವ). [ಸಂ.]

ದ್ವಿಗುಣಂಗೆಯ್ (ಕ್ರಿ). ಎರಡರಿಂದ ಗುಣಿಸು; ಇಮ್ಮಡಿಗೊಳಿಸು; ಹೆಚ್ಚು ಮಾಡು: ಬಗೆದಾವೃತ್ತಪದಾಂತಮೆಯ್ದುವಿನೆಗಂ ಸಂಖ್ಯಾಂಕಮಂ ಸೂಕ್ತದಿಂ ದ್ವಿಗುಣಂಗೆಯ್ದು (ಛಂದೋಂಬು. ೬-೨೬೨).

[ದ್ವಿಗುಣ + ಕೆಯ್$_1$]

ದ್ವಿಗುಣಗೊಳ್ಳು (ಕ್ರಿ). ಎರಡರಷ್ಟಾಗು; ಇಮ್ಮಡಿಯಾಗು; ಹೆಚ್ಚಾಗು: ನೆಕ್ಲುದೋವ್ ದ್ವಿಗುಣಗೊಂಡ ಆಶ್ಚರ್ಯದಿಂದ ನುಡಿದನು (ಪುನರು. ೨೦೩).

[ದ್ವಿಗುಣ + ಕೊಳ್ಳು$_1$ (< ಕೊಳ್$_1$)]

ದ್ವಿಗುಣಿ (ನಾ). ೧. ಎರಡರಷ್ಟು ಗುಣ ಉಳ್ಳ ವ್ಯಕ್ತಿ ಅಥವಾ ವಸ್ತು. ೨. ಎರಡರಷ್ಟು ಆದುದು; ಇಮ್ಮಡಿಯಾದುದು.

[ಸಂ. ದ್ವಿಗುಣಿನ್]

ದ್ವಿಗುಣಿತ (ನಾ). ಎರಡರಷ್ಟಾದುದು; ಇಮ್ಮಡಿಯಾದುದು: ದೇವಾಲಯದ ಗೋಡೆ ಮತ್ತು ಮೇಲ್ಛಾವಣಿ ದ್ವಿಗುಣಿತವಾಗಿವೆ(ಹೊಯ್ಸಪಾ.೧೨೩): ವಣಿಜನ ವೃತ್ತಾಂತದಿಂದ ನಮ್ಮ ಮಹಾರಾಜನ ದುಃಖವು ದ್ವಿಗುಣಿತವಾಯಿತು (ಶಾಕುಂತ. ೯೪-೦೦). [ಸಂ.]

ದ್ವಿಗುಣಿಸು (ಕ್ರಿ). ಎರಡರಿಂದ ಗುಣಾಕಾರ ಮಾಡು; ಹೆಚ್ಚಿಸು; ಇಮ್ಮಡಿಗೊಳಿಸು: ದ್ವಿಗುಣಿಸಿ ವೃತ್ತಮನದಱೊಳ್ ಬಗೆದೊಂದಂ ಕಳೆದೊಡಕ್ಕುಮಂಗುಲಿಗಳವಂ ಮಿಗಲಾರದಧ್ವಯೋಗದೆ ನೆಗೞ್ದುಪದೇಶದೊಳಪರಿಮಿತಂ ಪ್ರಸ್ತಾರಂ (ಛಂದೋಂಬು. ೬-೨೬೬); ಯುವತಿಯರೋರೊರ್ವರ ತಲೆನವಿರಂ ತಲೆನವಿರೊಳಡಸಿ ಕಟ್ಟುತ್ತುಂ ಮೋದುವುದುಂ ದ್ವಿಗುಣಿಸಿದುದು ಹಾರವಂ ಪ್ರತಿಧ್ವಾನದಿಂ ಜನೇಂದ್ರಾಲಯದೊಳ್ (ಪಂಠಾಮಾ. ೧೪-೦೦೧); ವದನಾಬ್ಜಾಸವಗಂಧಲಂಪಟರಟದ್ಭೃಂಗಂಗಳಂ ಸೋಯಲೆತ್ತಿದ ನೀಳೋತ್ಪಳಮಾಳೆಯಂ ದ್ವಿಗುಣಿಸಲ್ಕಾರ್ತತ್ತು . . . ಅಪಾಂಗಾಳೋಕನಂ ನಲ್ಲಳಾ (ಕಾವ್ಯಾವ. ೯೩೦): ದ್ವಿಗುಣಿಸಿದುವು ಶಕ್ರನ ನಿಮಿರ್ದೊಗೆವ ಭುಜಂಗಳ ನಖಂಗಳಿಂ . . . ನವಗ್ರಹಂಗಳ ರುಚಿಗಳ್ (ಪುಷ್ಪಪು. ೦೨-೩೮). [ದ್ವಿಗುಣ + – ಇಸ್ಸು$_3$]

ದ್ವಿಗುಣೀಕೃತ (ಗು). ಎರಡರಷ್ಟಾಗಿ ಮಾಡಿದ; ದುಪ್ಪಟ್ಟಾಗಿಸಿದ; ಇಮ್ಮಡಿಗೊಳಿಸಿದ: ತಪ್ತತಪನೀಯವರ್ಣಂ ಸಪ್ತಾರತ್ನಿಪ್ರಮಾಣನಾ ಪ್ರಥಮ ಮಹಿಪ್ರಾಪ್ತಾವಬೋಧನುಪಚಿತದೀಪ್ತಿದ್ವಿಗುಣೀಕೃತಾಂಗನನುಪಮವಿಭವಂ (ವರ್ಧಮಾ. ೬-೪೭): ದ್ವಿಗುಣೀಕೃತಪ್ರಕೃತಿಪ್ರಮೋದನುಂ . . . ದಶಾಂಗಭೋಗಸಂಗತನುಮಾಗಿ (ಚಂದ್ರಪು. ೭-೩೫ ವ).

[ಸಂ.]

ದ್ವಿಗುಣೀಭೂತ (ಗು). ಎರಡರಷ್ಟಾದ; ಇಮ್ಮಡಿಯಾದ: ಅದು ಕಾಣಲೊಡಂ ದ್ವಿಗುಣೀಭೂತ ಶೋಕೋದ್ರೇಕನಾಗಿ (ಚಂದ್ರಪು. ೫-೦೧ವ).

[ಸಂ.]

ದ್ವಿಗುಸಮಾಸ (ನಾ).=ದ್ವಿಗು: ದ್ವಿಗು=ದ್ವಿಗುಸಮಾಸ (ಶಮದ. ೧೬೪ ಅಡಿಟಿ): ದ್ವಿಗುಸಮಾಸಕ್ಕೆ–ಪಂಚೇಂದ್ರಿಯಾಣಿ, ಸಪ್ತಾಂಗಾನಿ (ಶಬ್ದಾದ. ೪೬).

[ದ್ವಿಗು + ಸಮಾಸ]

ದ್ವಿಚರಮ (ನಾ). [ಜೈನ] ಎರಡು ಸಲ ಮಾನವಜನ್ಮವನ್ನು ಹೊಂದಿ ಮುಕ್ತನಾಗುವವನು; P ವಿಜಯಾದಿ ವಿಮಾನಗಳಿಂದ ಚ್ಯುತನಾಗಿ ಮನುಷ್ಯನಾಗಿ ಹುಟ್ಟಿ ಸಂಯಮಿಯಾಗಿ ಮತ್ತೆ ವಿಜಯಾದಿಗಳಲ್ಲಿ ಹುಟ್ಟಿ ಅಲ್ಲಿಂದ ಚ್ಯುತನಾಗಿ ಮತ್ತೆ ಮಾನವನಾಗಿ ಸಿದ್ಧಿಯನ್ನು ಪಡೆಯುವವನು: ದ್ವಿಚರಮಾಃ – ದ್ವಿಚರಮರಪ್ಪರ್ (ತತ್ತ್ವಪ್ರ. ೨೨೩).

[ಸಂ.]

ದ್ವಿಚರಮತ್ವ (ನಾ). [ಜೈನ] ಎರಡುಸಲ ಮಾನವಜನ್ಮವನ್ನು ಹೊಂದಿ ಮುಕ್ತಿ ಹೊಂದುವಿಕೆ; P ಒಂದು ಜನ್ಮ, ಎರಡು ಜನ್ಮ ಮತ್ತು ಅನೇಕ ಜನ್ಮಗಳಲ್ಲಿ ಮುಕ್ತಿಯನ್ನು ಪಡೆಯುವುದೆಂದು ಮೂರು ಬಗೆಗಳಿವೆ: ಪರಮೋತ್ಕೃಷ್ಟತ್ವದಿಂ ಅವರ್ಗೆ ಸರ್ವಾರ್ಥಸಿದ್ಧಿನಾಮಂ ಅನ್ವರ್ಥಾಭಿಧಾನಮಕ್ಕುಂ ಅದಱಿಂ ಅವರ್ಗೆ ಏಕಚರಮತ್ವಸಿದ್ಧಿಯಕ್ಕುಂ ದ್ವಿಚರಮತ್ವಂ ಮನುಷ್ಯಶರೀರಾಪೇಕ್ಷೆಯಿಂ ಅಪ್ಪುದು (ತತ್ತ್ವಪ್ರ. ೨೨೩).

[ಸಂ.]

ದ್ವಿಚರಮದೇಹ (ನಾ). = ದ್ವಿಚರಮ : ದ್ವಿಚರಮದೇಹನೆ ನೀನೀ ಸಚರಾ ಚರಸೇವ್ಯಂ (ಮಹಾನೇ. ೧೬-೭೫). [ದ್ವಿಚರಮ + ದೇಹ]

ದ್ವಿಚರಮಸಮಯ (ನಾ). [ಜೈನ] ಎರಡನೆಯ ಸಲ ಮಾನವತ್ವವನ್ನು ಪಡೆಯುವ ಅವಧಿ : ಸ್ವಕೀಯ ದ್ವಿಚರಮಸಮಯದೊಳನ್ಯತರ . . . ನೀಚೈರ್ಗೋತ್ರಂಗಳೆಂಬ ದ್ವ್ಯಧಿಕ ಸಪ್ತತಿ ಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಮಹಾನೇ. ೦೬-೦೧೦ ಪ); ಮುಂದೆ ಈ ಗುಣಸ್ಥಾನದ ದ್ವಿಚರಮ ಸಮಯದಲ್ಲಿ ೭೨ ಕರ್ಮಪ್ರಕೃತಿಗಳು ತೊಲಗುವುವು (ಜೈನಪ. ೩೮೪). 'ದ್ವಿಚರಮತ್ವ' ಪರಾ. [ದ್ವಿಚರಮ + ಸಮಯ]

ದ್ವಿಚಾರಿಣಿ (ನಾ). ಇಬ್ಬರು ಪುರುಷರಲ್ಲಿ ಅನೈತಿಕ ಸಂಬಂಧವುಳ್ಳವಳು: ದಿಲ್ಲೀಶ್ವರನ ಸೇವೆಯನ್ನು ಮಾಡಿರುವುದರಿಂದ ದ್ವಿಚಾರಿಣಿಯಾಗೆನು (ಕಪಾಕುಂ. ೮೦). [ಸಂ. ದ್ವಿಚಾರಿಣೀ]

ದ್ವಿಜ (ಗು). ೧. ಎರಡು ಸಲ ಹುಟ್ಟಿದ. (ನಾ). ೨. ಬ್ರಾಹ್ಮಣ : "ಬ್ರಾಹ್ಮಣಃ, ಬಾಡವಃ, ವಿಪ್ರಃ . . . ದ್ವಿಜಃ – ಈ ೧೦ ಬ್ರಾಹ್ಮಣಂ" (ಹಲಾಯು. ೬೫-೨೩೭) ; ವ್ರತಸಂಸ್ಕಾರದಿನಾದರ್ ವಿತತಗುಣರ್ ಬ್ರಾಹ್ಮಣರ್ ಕ್ರಿಯಾಸಂತತಿ ಸಂಯುತರುಚಿತಸತ್ಕ್ರಿಯಾವಿರಹಿತನಾತಂ ನಾಮಧಾರಕಂ ದ್ವಿಜನಲ್ಲಂ (ಆದಿಪು. ೦೫-೧೫) ; ದೀನಾನಾಥರ್ಗೆ ವೃದ್ಧ ದ್ವಿಜ ಮುನಿನಿಕರಕ್ಕಂದೆಡರ್ ಪೋಪಿನಂ . . . ಧರ್ಮಜಂ ಸೂಱೆಗೊಟ್ಟಂ (ಪಂಪಭಾ. ೬-೪೦) ; ದ್ವಿಜನಾಚಾರತೆಯುಳ್ಳವಂ (ಸೋಮೇಶ. ೯) ; ಅರಸುಗಳಿಗಿದು ವೀರ ದ್ವಿಜರಿಗೆ ಪರಮವೇದದ ಸಾರ . . . ಕಾವ್ಯಕೆ ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ (ಕುವ್ಯಾಆ. ೦-೦೯). ೩. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳಲ್ಲಿ ಯಾವುದಾದರೊಂದರಲ್ಲಿ ಜನಿಸಿದವನು ; ೫ ಉಪನಯನವನ್ನು ಮತ್ತೊಂದು ಜನ್ಮವೆಂದು ಪರಿಗಣಿಸುತ್ತಾರೆ. ಸ್ಮೃತಿಯಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳಿಗೆ ಉಪನಯನದ ಯೋಗ್ಯತೆಯಿದೆ : "ಬ್ರಾಹ್ಮಣಃ, ಕ್ಷತ್ರಿಯಃ, ವೈಶ್ಯಃ – ಈ ಮೂಱು ವರ್ಣಮಂ ದ್ವಿಜರೆಂಬುದು" (ಹಲಾಯು. ೬೫-೨೩೮) ; "ನಾಲ್ಕುವರ್ಣಂಗಳೊಳು ಬ್ರಾಹ್ಮಣಂ ಕ್ಷತ್ರಿಯಂ ವೈಶ್ಯನೆಂಬೀ ಮೂಱುವರ್ಣಂ ದ್ವಿಜಾಖ್ಯಮಕ್ಕುಂ" (ಮಂಗರಾ. ೭೪-೦). ೪. ಮೊಟ್ಟೆಯಾಗಿ ಒಮ್ಮೆ, ಮೊಟ್ಟೆಯೊಡೆದು ಒಮ್ಮೆ ಹೀಗೆ ಎರಡು ಸಲ ಹುಟ್ಟುವುದು ; ಹಕ್ಕಿ, ಹಾವು, ಗೋಸುಂಬೆ ಇತ್ಯಾದಿ : "ಪತತ್, ಪತಂಗಃ . . . ವಾಜೀ, ದ್ವಿಜಃ – ಈ ೨೬ ಹಕ್ಕಿ" (ಹಲಾಯು. ೪೦-೮೫) ; "ಶಕುನಿ . . . ದ್ವಿಜಂ ಪಕ್ಷಿ ವಿಖಗಂ ವಿಹಾಯಸಂ ಪತಗಂ ಪತಂಗಂ . . . ಶಕುಂತಿಯೆನೆ ಪಕ್ಷಿ" (ಮಂಗರಾ. ೫೦-೦) ; ದ್ವಿಜರೋಳ್ಪಂಡಿತ ಕಾಮವಾಜಿಮುನಿ ನಾಮಾನಂದ ಸಂತಾನ ಹಾ ಸುಜನ ಶ್ರೀನಗವಾಸ ಚೆಂಗುಡಿಯ ಮೂಗೆನ್ನಾತ್ಮಚೈತನ್ಯಮೇ (ಹಮ್ಮೀರ. ೪-೬೦). ೫. ಹಲ್ಲು ; ದಂತ : "ದಶನಃ, ದ್ವಿಜಃ, ದಂತಃ, ರದಃ, ರದನಃ – ಈ ೫ ಪಲ್ (ಹಲ್ಲು)" (ಹಲಾಯು. ೮೭-೩೭೩) ; "ಸಾಲುವಲ್ಲು ದ್ವಿಜಂ ರದನಂ ರದಂ ದಶನಮಾ ದಂತಮೆಂದೆನಿಕ್ಕುಂ" (ಮಂಗರಾ. ೯೪-೪). 'ದ್ವಿಜಹತಿ' ಪರಾ. ೬. ನಕ್ಷತ್ರ ; ತಾರೆ. 'ದ್ವಿಜಸಮೂಹ' ಪರಾ. ೭. ಧಾನ್ಯಸಮೂಹ. ೮. ಚಂದ್ರ ; ಶಶಿ : "ವಿಪ್ರರೊಳು ದಂತದೊಳು ಚಂದ್ರನೊಳು ಪಕ್ಷಿಯೊಳು ಸರ್ಪನೊಳ್ ತಾರೆಯೊಳ್ ದ್ವಿಜಮಕ್ಕು" (ಮಂಗರಾ. ೧೫೦-೪೯) ; "ಅಂಡಜ ಗೃಹೋರಗ ಭೂಸುರ ದಂತ ಚಂದ್ರನೊಳ್ ಧಾನ್ಯಸಮೂಹದೊಳ್ ಸರಟದೊಳ್ ಭಗಣಂಗಳೊಳುಂ ದ್ವಿಜಾಂಕಿತಂ" (ನಾನಾರ. ೩೭). ೯. ಕಿವಿಯ ಆಭರಣ ; ಓಲೆ : "ಖಗಕುಲ ಸರ್ಪಂ ವಿಪ್ರಂ ಮೃಗಧರ ನಕ್ಷತ್ರ ಧಾನ್ಯ ತಾಟಂಕಂ ಹಲ್ ಬಗೆಗೆಂಟು ನಾಮ ನೋಡಲ್ ಜಗಕೀ ದ್ವಿಜ ಶಬ್ದ" (ನಾನಾಕಂ. ೭೯).

[ಸಂ.]

ದ್ವಿಜಕುಲ (ನಾ). ೧. ಬ್ರಾಹ್ಮಣರ ಕುಲ, – ಜಾತಿ : ದ್ವಿಜಕುಲತಿಲ ಕೋಪಮರಗ್ರಜಾನುಜರ್ ಮಲ್ಲಪಯ್ಯ ಪುನ್ನಮಯ್ಯಂಗಳ್ (ಶಾಂತಿಪು. ೧೨-೬೩) ; ದ್ವಿಜಕುಲ ಸಂಜಾತರ್ಗಡ ನಿಜದಿಂ ನೀಮಾರ್ಯಪುರುಷರುಂಗಡ (ವೃಷವಿ. ೩೧-೦೩). ೨. ಬ್ರಾಹ್ಮಣರ ಕುಲದಲ್ಲಿ ಜನಿಸಿದವನು ; ಬ್ರಾಹ್ಮಣ : ಕುಡುವುದೆ ಕನ್ನೆಯಂ ದ್ವಿಜಕುಲಂಗಿದು ವಿಶ್ವನರೇಂದ್ರವೃಂದದೊಳ್ ತೊಡರ್ದ ಪರಾಭವಂ (ಪಂಪಭಾ. ೩-೬೬) ; ದ್ವಿಜಕುಲ ನೆನಿಸುವನೀ ಪ್ರವ್ರಜಿತದೊಳೆಸಗಿದೊಡೆ ದೋಷಮುಂಟೆಂದು ಮನುವ್ರಜವಾಕ್ಯಮುಂಟು (ಸುಕುಮಾ. ೩-೩೦). ೩. ಹಕ್ಕಿಗಳ ಗುಂಪು : ಮಾಂಸವನಿಕ್ಕಿಯಾ ದ್ವಿಜಕುಲಕೆ ಸತ್ರವನಿಕ್ಕಿದುವು ದಿಗುವಲಯದೊಳು ರಣಧೀರನಂಬುಗಳು (ಕುವ್ಯಾವಿ. ಓರಿಇ. ೮-೪೩). [ದ್ವಿಜ + ಕುಲ]

ದ್ವಿಜಗತಿ (ನಾ). ೧. ಬ್ರಾಹ್ಮಣರ ವ್ಯವಹಾರ. ೨. ಪಕ್ಷಿಗಳ ಚಲನೆ ; ಹಕ್ಕಿಗಳ ಹಾರಾಟ. ೧, ೨ : ಘನನಾಮಂ ಲೋಕದೊಳ್ ಪೆರ್ನಗೆಗೆಡೆಯೆನೆಸಿತ್ತಕ್ಕಟಾ ಕೆಮ್ಮನೀ ಮಿತ್ರನ ತೇಜಕ್ಕಡ್ಡಲಾದೆಂ ದ್ವಿಜಗತಿಗೆಡಿಸಿರ್ದೆಂ ಜಗತ್ಪಂಕಮೆನ್ನಿಂ ಜನಿಸಿತ್ತು . . . ಎನುತ್ತಂ ಚಿಂತೆಯಿಂ ಬೆಳ್ಪಡರ್ದುದೆನೆ ತದಬ್ದಂ ಶರನ್ಮೇಘಮಿರ್ಕುಂ (ರಾಜಶೇ. ೬-೪). [ದ್ವಿಜ + ಗತಿ]

ದ್ವಿಜಗಮನ (ನಾ). (ಗರುಡ) ಪಕ್ಷಿಯ ಮೇಲೆ ಸಂಚರಿಸುವವನು ; ವಿಷ್ಣು : ದ್ವಿಜನಾಗಿ ಬಂದ ನಾರದಮುನಿ ಅಂದು ದ್ವಿಜಗಮನನ ಬಳಿಗೆ ಪೋಗಿ ತುತಿಸಿ (ತೀರ್ಥಮ. ೨೮೦). [ದ್ವಿಜ + ಗಮನ$_2$]

ದ್ವಿಜಗಮನೆ (ನಾ). (ಹಂಸ)ಪಕ್ಷಿಯ ನಡಗೆಯಂತೆ ನಡಗೆಯುಳ್ಳವಳು; ಹಂಸಗಮನೆ : ದ್ವಿಜಗಮನೆ ದ್ವಿಜಯುಗ್ಮವಕ್ಷೋಜೆ ಲಾಲಿಸೌ (ನವಮೋ. ೩-೨೭). [ಸಂ. ದ್ವಿಜಗಮನಾ]

ದ್ವಿಜಚಕ್ರ (ನಾ). ೧. ಬ್ರಾಹ್ಮಣರ ಸಮುದಾಯ. ೨. (ಚಕ್ರವಾಕ) ಪಕ್ಷಿ. ೧, ೨ : ದ್ವಿಜಚಕ್ರಕ್ಕನಿಮಿತ್ತಮಾತ್ಮಕರದಿಂ ಸಂತಾಪಮಂ ಮಾಡಿಯುಂ ದ್ವಿಜರಾಜಂ . . . ರಜನೀಸಂಚರನಾಗಿಯುಂ ಕುವಲಯಾಪ್ತಂ ನೋಡಿದೇಂ ಚಿತ್ರಮೋ (ರಾಜಶೇ. ೦೦-೭೩). [ಸಂ.]

ದ್ವಿಜತನೂಜ (ನಾ). ಬ್ರಾಹ್ಮಣನ ಮಗ : ಮೃಡನ ಸುತನುಂ ದ್ವಿಜತನೂಜನೆಂದುಂ ತಾನೆ ತಾನಾಗಿ ಬಾಲಲೀಲೆಯ ಬಸವನೊಪ್ಪಿದಂ (ಬಸರ. ೧-೧೫೬). [ದ್ವಿಜ + ತನೂಜ]

ದ್ವಿಜತ್ವ (ನಾ). ಬ್ರಾಹ್ಮಣತ್ವ ; ಬ್ರಾಹ್ಮಣ್ಯ : ಮತ್ತಂ ತಮ್ಮ ದ್ವಿಜತ್ವ ಮನಱಿಪುವ ಬಗೆಯಿನಿಂತೆಂದಂ (ಜಾವುಂಪು. ೨೨೬) ; ದ್ವಿಜತ್ವವು ಸದ್ಗಮಳೋತ್ತಮಭಕ್ತಿನಿಷ್ಠಿತವಹುದೆ ಭಾವಿಸಲು (ಬಸಪು. ೩-೭೮) ; ಬ್ರಾಹ್ಮಣ–ಕ್ಷತ್ರಿಯ–ವೈಶ್ಯ ಈ ಮೂರುವರ್ಣದವರಿಗೆ ಉಪನಯನದಿಂದ ದ್ವಿಜತ್ವ ಬರುವದರಿಂದ . . . ವೇದಾಧಿಕಾರವಿರುವದು (ಮಾಧವ. ೪೦೨). [ಸಂ.]

ದ್ವಿಜನಿಕರ (ನಾ). ೧. ಬ್ರಾಹ್ಮಣರ ಗುಂಪು. ೨. ಪಕ್ಷಿಗಳ ಸಮೂಹ : ತಾರೆಗಳು ತಮತಮಗೆ ತಲೆದೋಱೆ ಕತ್ತಲೆಯು ಬೀಱಿ ಭೀಕರಮಾಗೆ ದ್ವಿಜನಿಕರವಾಶ್ರಯವ ಸೇರೆ (ಪ್ರೌಢರಾ. ೧೩-೨೮) ; ಒಂದು ಮಾರ್ಗದೊಳೆ ನಡೆಯದೆ ಸದಾ ದ್ವಿಜನಿಕರದಂದಮಂ ಕಿಡಿಸಿ . . . ಕುಂದನಿತ್ತುದಱಿಂದೆ ಸಾರಥಿ ಹೆಳವನಾದಂ (ಜೈಮಿಭಾ. ೧೭-೪೩). ೧, ೨ : ದ್ವಿಜನಿಕರಂ ಧೌತವ ನಕ್ಕಜದಿಂ ಮೇಲ್ಪಿಡಿದು ಪೋಪ ತೆಱದಿಂದಾಗಳ್ ದ್ವಿಜನಿಕರಂ ಧೌತವ ನಕ್ಕಜದಿಂ ಮೇಲ್ಪಿಡಿದು ಪೋದುದೀಕ್ಷಿಸೆ ಭೂಪಂ (ನಳಚಂ. ೫೨೯).

[ದ್ವಿಜ + ನಿಕರ$_1$]

ದ್ವಿಜನ್ಮ (ನಾ). ೧. (ಉಪನಯನದಿಂದ ಸಂಸ್ಕಾರ ಹೊಂದಿದ) ಬ್ರಾಹ್ಮಣ, ಕ್ಷತ್ರಿಯ ಅಥವಾ ವೈಶ್ಯ ; ದ್ವಿಜ : ಆಱುಂ ವೃತ್ತಿಗಳನಿವಂ ಮಿಾಱಿದರಲ್ಲರ್ ದ್ವಿಜನ್ಮರೀ ವೃತ್ತಿಗಳಿಂ ಬೇಱಾದರ್ ದ್ವಿಜರುಂತೇಂ ಬೇಱುಂಟೆ ಮನುಷ್ಯಜಾತಿ ತಾನೊಂದೆ ವಲಂ (ಆದಿಪು. ೦೫-೧೪). ೨. ಬ್ರಾಹ್ಮಣ : ಧರಾಮರರೀ ಬ್ರಾಹ್ಮಣರೆಂದು ಕೊಂಡು ಕೊನೆ

ದಾ ಷಟ್ಖಂಡ ಭೂಮಂಡಲೇಶ್ವರನೋರಂತೆ ನೆಗಟ್ಟಿ ಕೂಡೆ ನೆಗಟ್ಟಿತ್ತೆತ್ತಂ ದ್ವಿಜನ್ಮಾನ್ವಯಂ (ಆದಿಪು. ೧೫-೨೦) ; ದ್ವಿಜನ್ಮಂಗೆ ಗುಣಾನ್ವಿತೆ ಸತಿ ಸಜ್ಜನಿಕೆಗರುಂಧತಿಗೆ ಮಿಗಿಲ್ ಕೌಂಡಿಕಬ್ಬೆ (ಧಂದೋಂಬು. ೧-೧೬) ; ಜಗಮಱಿಯಲೀ ದ್ವಿಜನ್ಮನ ಮಗಳಿಂತೀ ಕನ್ನೆ ಮುನ್ನಮೋದಿದ ವೇದಾದಿಗಳನೊಱಲ್ದೀಗಳುದಾತ್ತಗೀತದಿಂದೋದಿದಂದಮಿದು ಬಿಸವಂದಂ (ಸುಕುಮಾ. ೭-೫೭). [ಸಂ. ದ್ವಿಜನ್ಮನ್]

ದ್ವಿಜನ್ಮದಾನ (ನಾ). ಬ್ರಾಹ್ಮಣರಿಗೆ ನೀಡುವ ದಾನ, – ಕೊಡುಗೆ : ವಸುವಂ ದ್ವಿಜನ್ಮದಾನದೆ ಪೊಸಜವ್ವನಮಂ ಸ್ವದಾರಸಂತೋಷದೆ ನಿನ್ನಸಂವಂ ಪತಿಕಾರ್ಯದೆ ವರ್ಜಿಸಿದೈ (ಗದಾಯು. ೫-೨೨).

[ದ್ವಿಜನ್ಮ + ದಾನ]

ದ್ವಿಜನ್ಮವಂಶ (ನಾ). ಬ್ರಾಹ್ಮಣ ವಂಶ,–ಕುಲ : ಸೋಮಶರ್ಮನೆಂಬೊಂ ದ್ವಿಜನ್ಮವಂಶಲಲಾಮಂ (ಸುಕುಮಾ. ೨-೩). [ದ್ವಿಜನ್ಮ + ವಂಶ]

ದ್ವಿಜನ್ಮವರ್ಣ (ನಾ). ಬ್ರಾಹ್ಮಣಜಾತಿ ; ದ್ವಿಜವರ್ಗ : ಅಂತು ಭವಿಷ್ಯ ದ್ವಿಜನ್ಮವರ್ಣಕಧ್ಯಯನಾಧ್ಯಾಪನದಾನಪ್ರತಿಗ್ರಹಯಜನಯಾಜನವಿಶಿಷ್ಟ ವೃತ್ತಿಯುಮಂ . . . ನಿಱಿಸಿ (ಆದಿಪು. ೮-೮೩ ಪ). [ದ್ವಿಜನ್ಮ + ವರ್ಣ]

ದ್ವಿಜನ್ಮಸಭೆ (ನಾ). ಬ್ರಾಹ್ಮಣರ ಗುಂಪು : ಮೂಡುವ ಬಾಳದಿನೇಶಬಿಂಬ ದೊಂದೆಸಕದಿನಾ ದ್ವಿಜನ್ಮಸಭೆಯಂ ಪೊಱಮಟ್ಟೊಡೆ ಮಾಸಿದಂದಮುಂ ಪಸದನದಂತೆ ಕಣ್ಗೆಸೆದು ತೋಱಿದುದಾ ಕದನತ್ರಿಣೇತ್ರನಾ (ಪಂಪಭಾ. ೩-೬೦). [ದ್ವಿಜನ್ಮ + ಸಭೆ]

ದ್ವಿಜಪ್ರಕರ (ನಾ). = ದ್ವಿಜನಿಕರ ೨ : ಬಿಲ್ವಂ ದಾಳಿಂಬಮರಂ ದ್ವಿಜ ಪ್ರಕರಮುಂ ಭೃಂಗಾಳಿ ತಂಗಾಳಿಯುಂ . . . ಇರ್ದ ವನಾಂತರಾಳದೊಳ್ ಪದ್ಮಾಕರಮಿರ್ಪುದು (ಹಮ್ಮೀರ. ೪-೧೭). [ದ್ವಿಜ + ಪ್ರಕರ$_3$]

ದ್ವಿಜರಾಜ (ನಾ). ೧. ಬ್ರಾಹ್ಮಣಶ್ರೇಷ್ಠ : ದ್ವಿಜರಾಜಂ ನಾಗದೇವಂ ಕಮಳಜಕುಳದಿಗ್ನಾಗನನ್ತಾತನಗ್ರಾತ್ಮಜನುರ್ವ್ವೀಸುಂದರಂ ಸೋವರಸನು (ಸೌಇಇ. XX, ೩೧೩-೦ : 12ನೆಯ ಶತ). ೨. ಬ್ರಾಹ್ಮಣರ ಅಧಿಪತಿ,– ಅಧಿದೇವತೆ ; ಚಂದ್ರ : "ಇಂದುಃ, ಚಂದ್ರಃ . . . ದ್ವಿಜರಾಜಃ, ರಜನಿಕರಃ . . . ವಿಧುಃ, ದಾಕ್ಷಾಯಣೀರಮಣಃ – ಈ ೨೧ ಚಂದ್ರನ ಪೆಸರ್" (ಹಲಾಯು. ೮-೪೩) ; "ಇಂದು . . . ಚಂದ್ರಮಂ ವಿಧು ಸೋಮನತ್ರಿಗೋತ್ರಜನಬ್ಧಿನಂದನಂ ದ್ವಿಜರಾಜನೆನೆ ಸುಧಾಂಶುವೆನಿಕ್ಕು" (ಮಂಗರಾ. ೦೧-೪) ; ದ್ವಿಜರಾಜಂಗೆಣೆವಂದು ಚಕ್ರಹತಿಯಿಂ ಸ್ವರ್ಭಾನು ತುಂಡಾಗನೇ (ಸೋಮೇಶ. ೪೫) ; ದ್ವಿಜರಾಜಂ ಕಮಲಾರಿಯಾಗಿ ವಿಧು ಹಂಸದ್ವೇಷಿ ಮೇಣಾಗಿಯುಂ ನಿಜದಿಂದಬ್ಜನಭಂಗಲಕ್ಷಣಯುತಂ ತಾನಾಗಿ (ರಾಜಶೇ. ೦೧-೭೩) ; ಜನತಾಹ್ಲಾದವಂನೀವುದಚ್ಚರಿಯೆ ಚಂದ್ರಂ . . . ದ್ವಿಜರಾಜನಬ್ಜನರಿದೇ ದೃಕ್ಕಪ್ಪುದುಂ ಶೌರಿಯಾ (ಚಿಕವಿ. ೬-೨೦). ೧, ೨ : ಈ ಮಹಾಪುರುಷಂ . . . ತೀವ್ರತೇಜನಾಗಿಯುಂ ಮಾರ್ತಂಡ ನಲ್ತು ದ್ವಿಜರಾಜನಾಗಿಯುಂ ನಕ್ಷತ್ರಪತಿಯಲ್ತು (ಜಗವಿ. ೮-೧೦ ಪ). ೩. ಪಕ್ಷಿಗಳ ರಾಜ ; ಗರುಡ. ೧, ೩ : ದ್ವಿಜರಾಜಸುಸೇವಿತಂ ಬಲ ಜ್ಯಾಯನಭೇದ್ಯಮಂತ್ರಕುಶಲಂ ಬಲಿಬಂಧನನಂತೆ ರಾಯನಾರಾಯಣ ನೆಂಬುದುರ್ವಿ . . . ಬೂಚನ (ಎಕ. V, ಅರಸೀ. ೧೭೨-೨೩ ; 1162). ೪. ಗಂಡಭೇರುಂಡ ಪಕ್ಷಿ : ಪವನನಿನವಂ ... ದ್ವಿಜರಾಜರಿಂದವನುದಕದಿಂ ಮಾರ್ಕೊಂಡಾಂತಾಂತವಂ ಹಳಿ ಗೆಲ್ವುದುಂ (ಶಾಂತಿಪು. ೪-೩೦). ೫. ಹಾವು ಗಳ ರಾಜ ; ಆದಿಶೇಷ. [ಸಂ.]

ದ್ವಿಜರಾಜಧರ (ನಾ). ಚಂದ್ರನನ್ನು ಧರಿಸಿದವನು;–ಶಿವ : ಸಾಂತ್ವನವೆಸರ ದ್ವಿಜಂ ದ್ವಿಜರಾಜಧರನನೋರೊಂದು ದೆವಸಂ ನೀರುಂಡುಂ ಗಾಳಿಯುಂಡು ಮುಣದೆಯುಂ ತಪಮನಾಚರಿಸುತಿರಲೊಡಂ (ರಾಮಾಶ್ವ. ೦೩೭-೦೦).

[ಸಂ.]

ದ್ವಿಜವಂತಿ (ನಾ). = ದ್ವಿಜಾವಂತಿ : ಪಲ್ಲವಿ ಶೇಷಯ್ಯರ್ ಅವರು . . . ಬೇರೊಂದು ಕಚೇರಿಯಲ್ಲಿ ದ್ವಿಜವಂತೀ ರಾಗವನ್ನು ಬಹಳ ವಿಸ್ತಾರವಾಗಿ ಹಾಡಿ ತೋರಿಸಿದರು (ಸಂಗೀತ. ೪೭). [<ಸಂ. ದ್ವಿಜಾವಂತೀ]

ದ್ವಿಜವಂಶ (ನಾ).=ದ್ವಿಜನ್ಮವಂಶ : ದ್ವಿಜವಂಶಮನಾ ಭರತಂ ಸೃಜಿಯಿಸಿದಂ (ಅಜಿಪು. ೧೦-೧೬) ; ಇನ್ತು ನಿಜಗೋತ್ರಶಿಖಾವಂಣಿಯುಂ ದ್ವಿಜವಂಶ ಭೂಷಣ[ರುಮೆ]ನಿಸಿ ನೆಗರ್ತ್ತೆ[ವಡೆದು] (ಸೌಇಇ. XX, ೭೪-೧೬ ; 1112); ದ್ವಿಜವಂಶಾರ್ಣವಪಾರಿಜಾತಕುಜದೇಶೀಯಂ ... ನಾಗವರ್ಮನಿದನುರ್ವೀ ಸಂಸ್ತುತಂ ಮಾಡಿದಂ (ಕಾವ್ಯಾವ. ೯೬೦). [ದ್ವಿಜ + ವಂಶ]

ದ್ವಿಜವಂಶಜ (ನಾ). ಬ್ರಾಹ್ಮಣವಂಶದಲ್ಲಿ ಹುಟ್ಟಿದವನು ; ಬ್ರಾಹ್ಮಣ : ಮಹೀಪತಿಗಂ ದ್ವಿಜವಂಶಜಗಮೇತೆಱ ಕೆಳೆ (ಪಂಪಭಾ. ೨-೪೮).

[ಸಂ.]

ದ್ವಿಜವರ (ನಾ). ೧. = ದ್ವಿಜರಾಜ ೧ : ಪರಮಬ್ರಹ್ಮತನೂಭವರ್ ದ್ವಿಜ ವರರ್ ವರ್ಣೋತ್ತಮರ್ ಲೋಕಪೂಜ್ಯರ್ (ಆದಿಪು. ೧೫-೨೦) ; ಫಲಾ ವಳಿಯಂ ವಿನಯದಿನಾ ದ್ವಿಜವರಂಗೆ ಕಪಿವರನಿತ್ತಂ[ಪಾಠಾಂ. ಜಂಗೆ ಕಪಿ ತಂದಿತ್ತಂ] (ಪಂಚತಂ. ೦೦೦-೧೯) ; ದ್ವಿಜವರ ಸೋಮಶರ್ಮನ ವಧೂಟಿಕೆ . . . ದಾನಮಂ ಋಷಿಗೆ ಕೊಟ್ಟು (ಪುಷ್ಯಾಸ್ತ. ೧೨-೨೯). ೨. ಪಕ್ಷಿಗಳಲ್ಲಿ ಶ್ರೇಷ್ಠವಾದುದು ; ರಾಜಹಂಸ : ಉಣಲ್ಕಿತ್ತಬ್ಜಬೀಜಂಗಳಂ ಶರದಂಭೋಜಿನಿ ಮಾಡಿದಳ್ ದ್ವಿಜವರಂಗಾತಿಥ್ಯಸತ್ಕಾರಮಂ (ರಾಜಶೇ. ೬-೦೦). [ದ್ವಿಜ + ವರ$_3$]

ದ್ವಿಜಸಂತತಿ (ನಾ). ೧. ಬ್ರಾಹ್ಮಣರ ಗುಂಪು. ೨. ಪಕ್ಷಿಗಳ ಸಮೂಹ. ೧, ೨ : ದ್ವಿಜಸಂತತಿಋಕ್ಶಾಖಾನಿಜಾಶ್ರಿತಸ್ಥಿತಿಯಿನಿರ್ವವೊಲ್ ತದ್ವನ ದೊಳ್ ದ್ವಿಜಸಂತತಿ ಋಕ್ಶಾಖಾನಿಜಾಶ್ರಿತಸ್ಥಿತಿಯಿನಿರ್ಪುದು (ನಳಚಂ. ೬೦೬). [ದ್ವಿಜ + ಸಂತತಿ]

ದ್ವಿಜಸಮೂಹ (ನಾ). ನಕ್ಷತ್ರಗಳ ಗುಂಪು ; ತಾರೆಗಳ ಸಮೂಹ : ಅದೋ ದ್ವಿಜಸಮೂಹವು, ನನ್ನನ್ನು ನೋಡಲೆಂದು ಕಣ್ದೆರೆದು ನಿಲುಕುತ್ತಿದೆ (ಹಗಲಿ. ೧೦). [ದ್ವಿಜ + ಸಮೂಹ]

ದ್ವಿಜಹತಿ (ನಾ). ೧. ಬ್ರಾಹ್ಮಣರ ಕೊಲೆ. ೨. ಹಲ್ಲಿನಿಂದುಂಟಾದ ಗಾಯ ; ದಂತಕ್ಷತ. ೧, ೨ : ದ್ವಿಜಹತಿ ವನಿತಾಧರದೊಳ್ ಪ್ರಜಾತಿಪಾತಂ ಮದಾಳಿಕುಳದೊಳ್ಬನದೊಳ್ಕುಜನಾಳೀಕಾಕರಸಂಭಜನಂ ತಲೆದೋರ್ಕುಮಲ್ಲದಿಲ್ಲಾ ನಾಡೊಳ್ (ರಾಜಶೇ. ೨-೨೯). [ಸಂ.]

ದ್ವಿಜಾಂಗನೆ (ನಾ). ೧. ಬ್ರಾಹ್ಮಣಸ್ತ್ರೀ. ೨. ಹೆಣ್ಣು ಹಕ್ಕಿ : ಎನ್ನನಿಲ್ಲಿರಿಸಿ ಪೆಱತೊಂದು ದ್ವಿಜಾಂಗನೆಯೊಳ್ ನೆರೆದು ಸುಖದಿನಿರ್ಪಿರೆ (ಧರ್ಮಾಮೃ. ೨-೨೨೦). [ದ್ವಿಜ + ಅಂಗನೆ]

ದ್ವಿಜಾತ (ನಾ). ದ್ವಿಜ ; ಬ್ರಾಹ್ಮಣ : ಸಹಜಭಕ್ತರ್ಗೆ ಒಲವಿನೆತ್ತುವ ಕೈಗಳಂ ದುರ್ಮಲಿನ ಕರ್ಮಚರದ್ವಿಜಾತರ್ಗಲಸದೆತ್ತುವದಧಮಜಾತರ್ಗಧಮ ಜಾತವಲಾ (ಬಸಪು. ೩-೪೭). [ಸಂ.]

ದ್ವಿಜಾತಿ (ನಾ). ೧. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಈ ಮೂರು ವರ್ಣಗಳಲ್ಲಿ ಯಾವುದಾದರೊಂದಕ್ಕೆ ಸಂಬಂಧಿಸಿದವನು : ನಟ್ಟನಡು ಕಟ್ಟಕಡೆ . . . ನೀರ ತಡಿ ಮನೆಗಟ್ಟುವೊಡಶುಭಂ ದ್ವಿಜಾತಿವರ್ಗಕ್ಕೆಲ್ಲಂ (ಲೋಕೋಪ. ೩-೧೨). ೨. ಬ್ರಾಹ್ಮಣಜಾತಿಯಲ್ಲಿ ಹುಟ್ಟಿದವನು : ಬ್ರಾಹ್ಮಣ : ಅಂಗವಂಗಿಗಸಾಧ್ಯವಾದುದನಂಗಿಗೊಡಬಡುವುದೆ ದ್ವಿಜಾತಿಗೆ ಸಂಗತಾನುಷ್ಠಾನಪರವೆಂಬುದು ನೃಪಸ್ತೋಮ (ಕುಷ್ಯಾಆ. ೦೫-೦೮). ೩. ಪಕ್ಷಿ ; ಹಕ್ಕಿ. ೨, ೩ : ಮತ್ತಮಾ ವನಂ . . . ಕುಜಾತಿ ಸಮೃದ್ಧ ಮಾಗಿಯುಂ ದ್ವಿಜಾತಿಮನೋಜ್ಞಮುಂ ಪರಿಗತಶಬರೋಪಯುಕ್ತ ಮಾಗಿಯುಮವಿಗ್ರಹಸಮಗ್ರಸ್ಥಳಮುಂ . . . ಎನಿಸಿರ್ದುದು (ರಾಜಶೇ. ೫-೭೪ ಪ). [ಸಂ.]

ದ್ವಿಜಾತಿರೂಪ (ನಾ). ಪಕ್ಷಿಯ ಸ್ವರೂಪ ; ಹಕ್ಕಿಯ ಆಕಾರ : ಕದನ ದೊಳಾನ್ತರಾತಿಗಹಿ[ಯಲ್ಲ]ದ ರಾಹು ದ್ವಿಜಾತಿರೂಪನಲ್ಲದ ವಿನತಾಸು[ತಂ] (ಸೌಇಇ. XX, ೫೦-೧೬ ; ?). [ದ್ವಿಜಾತಿ + ರೂಪ]

ದ್ವಿಜಾಧಮ (ನಾ). ಕೀಳಾದ ಬ್ರಾಹ್ಮಣ ; ಹೆಸರಿಗೆ ಮಾತ್ರ ಬ್ರಾಹ್ಮಣನಾದವನು : "ಬ್ರಹ್ಮಬಂಧುಃ, ದ್ವಿಜಾಧಮಃ – ಈ ೨ ದ್ವಿಜಾಧಮಂ" (ಹಲಾಯು. ೬೭-೨೫೧) ; "ಬ್ರಹ್ಮಬಂಧುವೆನೆ ದ್ವಿಜಾಧಮನೆನಿಕ್ಕು" (ಮಂಗರಾ. ೭೫-೭). [ದ್ವಿಜ + ಅಧಮ]

ದ್ವಿಜಾವಂತಿ (ನಾ). [ಸಂಗೀತ] ಒಂದು ರಾಗದ ಹೆಸರು ; ಹರಿಕಾಂಭೋಜಿಯ ೨೮ನೆಯ ಮೇಳಕರ್ತ ರಾಗ : ರಾಗ ದ್ವಿಜಾವಂತಿ (ಶಂಕರಾಭರಣ) ಆದಿತಾಳ (ಹನುಮ. ೭೨). [ಸಂ. ದ್ವಿಜಾವಂತೀ]

ದ್ವಿಜಿಹ್ವ (ಗು). ೧. ಎರಡು ನಾಲಗೆಯುಳ್ಳ ; ಎರಡು ನುಡಿಯುವ. (ನಾ). ೨. ಎರಡು ಮಾತನಾಡುವವನು ; ಮಾತಿಗೆ ತಪ್ಪುವವನು ; ಅವಿಶ್ವಾಸಿ : "ಎರಡು ನುಡಿವವ ಪುರೋಭಾಗಿ ದ್ವಿಜಿಹ್ವನಕ್ಕು" (ಮಂಗರಾ ೬೮-೯). ೩. ಚಾಡಿ ಹೇಳುವವನು ; ಚಾಡಿಕೋರ. ೪. ಎರಡು ನಾಲಗೆಯುಳ್ಳದು ; ಹಾವು ; ಸರ್ಪ : "ಉರಗಂ ಭೋಗಿ . . . ಸರ್ಪಂ ದ್ವಿಜಿಹ್ವಾಹ್ವಯಂ" (ವಸ್ತುಕೋ. ೧೯-೭). ೨, ೪ : ಉದಧಿಯಂತೆ ಜಡಸ್ವಭಾವರುಂ ವಿಷಮೋರಗನಂತೆ ದ್ವಿಜಿಹ್ವರುಂ . . . ಎನಿಸಿ (ಸುಕುಮಾ. ೨-೫ ಪ) ; ಅದು ಸಲೆ ರಾಜಶೂನ್ಯಮುರುರಾಜವಿಭಾಸಿಯೆನಾಂ ದ್ವಿಜಿಹ್ವಸಂಪದಮದು ಸಜ್ಜನಕ್ಕೆ ಶರಣಾಂ (ಪುಷ್ಪಪು. ೯-೩೨) ; ಛಿದ್ರನಿವಾಸರಂ ಪದವಿಹೀನರನಶ್ರುತರು ದ್ವಿಜಿಹ್ವರಂ . . . ರೌದ್ರತರಾಸ್ಯರಂ ಬೆರಸುವಾತನನೀತಿಯ ಸೇತುವಲ್ಲವೇ (ನಳದಂ. ೬೦೦). ೫. ಸೀಳಿದ ನಾಲಗೆಯುಳ್ಳುದು : ದ್ವಿಜಿಹ್ವಂ ಹೀನಾಧಿಕದಂತನೇಕಮುಷ್ಕಂ ತ್ರಿಕರ್ಣವೆನಿಪಶ್ವಮಶುಭಲಕ್ಷಣಮಕ್ಕುಂ (ಲೋಕೋಪ. ೧೦-೮೬). ೬. ನಾಲಗೆಯ ಒಂದು ರೋಗ. [ಸಂ.]

ದ್ವಿಜೆ (ನಾ). ೧. ಒಂದು ಬಗೆಯ ಅಂಟುಗಿಡ ; ಭಾರಂಗಿ ಗಿಡ. ೨. ಒಂದು ಬಗೆಯ ಗಂದಿಗೆ ವಸ್ತು ; ರೇಣುಕ : "ದ್ವಿಜಾ, ಹರೇಣುಃ . . . ಭಸ್ಮಗಂಧಿನೀ – ೬ ರೇಣುಕಾ ಎಂಬುವ ಗ್ರಂಧ್ಯ ದ್ರವ್ಯದ ಹೆಸರು" (ಸಿದ್ಧಾಂತಿ. ೧೪೦). [ಸಂ. ದ್ವಿಜಾ]

ದ್ವಿಜೇಶ (ನಾ) ೧. ಬ್ರಾಹ್ಮಣರ ಅಧಿಪತಿ; ಚಂದ್ರ : ಪರನಖಕಾಂತಿಯೊಳ್ಪೊಳೆವ ಚಂದ್ರನನೀಕ್ಷಿಸಿ ಸದ್ವಿಜೇಶ ಮಚ್ಚರಣದೊಳೇಕೆ ಬಿರ್ದೆಯೆನುತಂ (ತ್ರಿಪುವಿ. ೨೪-೧೬೦). ೨. ಪಕ್ಷಿಗಳ ರಾಜ ; ಗರುಡ. ೩. ಕರ್ಪೂರ. [ಸಂ.]

ದ್ವಿಜೋತ್ತಮ (ನಾ). ಬ್ರಾಹ್ಮಣರಲ್ಲಿ ಶ್ರೇಷ್ಠನಾದವನು; ಉತ್ತಮನಾದ ಬ್ರಾಹ್ಮಣ : ಒಂಭತ್ತನೆಯ ತಿಂಗಳೊಳ್ . . . ದ್ವಿಜೋತ್ತಮರಿಂ ಗೋತ್ರಿಕಾಬಂಧನಮುಂ ಮಂತ್ರಪ್ರಸಾಧನಮುಂ ರಕ್ಷಸೂತ್ರಮುಮಂ ಗರ್ಭಿಣಿಗೆ ಮಾಟ್ಟುದು (ಜಾವುಂಪು. ೨೦೪). [ದ್ವಿಜ + ಉತ್ತಮ]

ದ್ವಿಜೋತ್ತಮೆ (ನಾ). ಉತ್ತಮಳಾದ ಬ್ರಾಹ್ಮಣಸ್ತ್ರೀ : ಆ ದ್ವಿಜೋತ್ತಮೆ ಅಲ್ಲಿಯ ಮಣಿಮಯವಿಚಿತ್ರಜಿನಭವನಂಗಳಂ ಕಂಡು ಭಕ್ತಿಪೂರ್ವಕಮವೆಲ್ಲಮಂ ಪೂಜಿಸಿ (ಪುಣ್ಯಾಸ್ರ. ೧-೯೪ ಪ). [ಸಂ. ದ್ವಿಜೋತ್ತಮಾ]

ದ್ವಿಜೋಪಚಾರ (ನಾ). ೧. ಬ್ರಾಹ್ಮಣನಿಗೆ ಮಾಡುವ ಸತ್ಕಾರ. ೨. ಹಲ್ಲನ್ನು ಉಜ್ಜುವುದು. ೧, ೨ : ಸ್ವರಾಗಸಂತತಿ ಶುನಕಗೋಷ್ಠಿಯೊಳು ಚತುರದ್ವಿಜೋಪಚಾರಂ ದಂತಧಾವನದೊಳು ವಿತತಧರ್ಮಶ್ರವಣವಂತ್ಯಕಾಲದೊಳಗೆ . . . ಅಲ್ಲದಾ ನಾಡೊಳಿಲ್ಲೆಂದ ವಿಶ್ವಾಮಿತ್ರನು (ಹಡಕಾ. ೨-೦೦). [ದ್ವಿಜ + ಉಪಚಾರ]

ದ್ವಿಟ್ಕುಲ (ನಾ). = ದ್ವಿಟ್ಟಕ್ರ : ನೆಗಟ್ಟಂ ದ್ವಿಟ್ಕುಲಕುಲನಗದಳನಪಟುಪವಿಪ್ರತಿಮಭುಜಂ (ಕಾವ್ಯಾವ. ೧೯೭). [ಸಂ.]

ದ್ವಿಟ್ಟಕ್ರ (ನಾ). ವೈರಿಗಳ ಗುಂಪು ; ಶತ್ರುಗಳ ಸಮೂಹ : ದ್ವಿಟ್ಟಕ್ರಯೋಧನ ಪ್ರಕಟಸೂದನ ಘನವಿರಾಟ್ಟಾರುಗಾತ್ರಕೃತವಿಷ್ಣುಕಮಳಜತುರಾಷಾಟ್ಟಕಿತಚಂಚಲಿತ ತಾಂಡವಾಡಂಬರ ದಿಗಂಬರಾಂಬರಕುಂತಲ (ಉದ್ಯದೇ. ೬-೩೨). [ಸಂ.]

ದ್ವಿಟ್ಪುರ (ನಾ). ೧. ಶತ್ರುಗಳ ನಗರ ; ಹಗೆಗಳ ಪಟ್ಟಣ. ೨. ಶತ್ರುವಿನ ಶರೀರ : ದ್ವಿಟ್ಪುರಧ್ವಂಸರತಕ್ರೋಧಂ ವೃಷಾಂಕಂ . . . ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ (ಜಗವಿ. ೧-೩). [ಸಂ.]

ದ್ವಿತಯ (ನಾ). ೧. ಎರಡು ; ಜೊತೆ ; ಜೋಡಿ ; ಯುಗಳ : ಯುಗ್ಮಂ . . . ದ್ವಿತಯಂ, . . . ಯಮಳಂ – ಈ ೮ ಅಮಳ್" (ಹಲಾಯು. ೦೦೬-೦೫) ; ಅತಿಶಯಪುಣ್ಯಂ ಗರ್ಭಾವತರಣ ಜನ್ಮಾಭಿಷೇಕ ನುತಕಲ್ಯಾಣ ದ್ವಿತಯಮನೆಯ್ದಿರ್ದ ಜಗತ್ಪತಿ ಘನರಥನಭಿಮುಖಂ ವಿಮೋಹಾಂತರಥಂ (ಶಾಂತಿಪು. ೯-೩೯) ; ವೀರರ ವೀರ ವಿಮುಕ್ತಾಹಾರಂ ಭವದರಿವಧೂಸ್ತನ ದ್ವಿತಯಂ ಕಣ್ಣೀರಿಂ ಮಿಂದೆದೆಗರ್ಚಿಂದೋರಂತಿರೆ ಬೆಂದು ಚರಿಸುತಿರ್ಪುದು ತಪಮಂ (ಕಾದಂಪೂ. ೬೧). ೨. [ಗಣಿತ] ಎರಡು ಎಂಬ ಸಂಖ್ಯೆ : ಇಂತಿದು ಸಮಬಂಧದ್ವಿತಯಾಂತರಮಾ ವಿಷಮಬಂಧಮಿನ್ನಿಂತಕ್ಕುಂ (ಕವಿರಾ. ೨-೫೭); ಗಗನ ಗಗನಾಕಾಶ ರಸನವದ್ವಿತಯೈ[ಪಾಕಾಂ.ದ್ವಿತೀಯೈ] ಕ್ಯದಂತೆಗಳ್ ತ್ರೇತೆಯಕ್ಕುಂ (ಮಂಗರಾ. ೨೨-೦೪). [ಸಂ.]

ದ್ವಿತೀಯ (ಗು). ೧. ಎರಡನೆಯ : ಅಂತು ಯತಿಯಂ ಪೇಟ್ಗೂರ್ಪಂತಾದ್ಯದೊಳಲಸದಾರ್ಯೆಯೊಳ್ ಕಂದದೊಳಂ ಸಂತಂ ದ್ವಿತೀಯಪಾದಗತಾಂತದೊಳಕ್ಕೆದು ಚತುಷ್ಪದೀಪದವಿಗಳೊಳ್ (ಕವಿರಾ. ೧-೭೭) : ಆ ದ್ವಿತೀಯಮುನೀಶ್ವರನಗ್ರಮುನೀಶ್ವರಾದೇಶದಿಂ . . . ಜನ್ಮಾಂಧಕಿಯಲ್ಲಿಗೆ ಬಂದು (ಸುಕುಮಾ. ೫-೨೩ ಪ) ; ಈ ತೆಱದಿಂದ ವರ್ತಿಸುವನುದ್ದಿಷ್ಟನೆಂಬಾತ ದ್ವಿತೀಯಗುಣಧಾಮ (ದ್ವಾದಶಾ. ೦೦-೭೬೦). (ನಾ). ೨. ಜೊತೆಗಾರ ; ಸಂಗಾತಿ. ೩. ಎರಡು ; ಭಿನ್ನವಾದುದು : ಶ್ರುತಿಯೇಕ ಏವ ರುದ್ರೋನ ದ್ವಿತೀಯೆಂದಾವಗಂ ಪೇಳ್ವಂದದಿಂ (ಬಸಪು. ೫೪-೯).

ದ್ವಿತೀಯ ವಯಸ್ಸು = ಆಯುಷ್ಯದ ಉತ್ತರಭಾಗ ; ಇಳಿವಯಸ್ಸು ; ಅಪರವಯಸ್ಸು : (ಕಿ). ದ್ವಿತೀಯವಿವಾಹ = ಎರಡನೆಯ ಮದುವೆ : (ಕಿ). ದ್ವಿತೀಯಾವತಾರ = (ದೇವರ) ಎರಡನೆಯ ಹುಟ್ಟು ; (ದೇವರು) ಎರಡನೆಯ ಸಲ ಹುಟ್ಟಿ ಬರುವಿಕೆ : ಸಾರಲಿಲ್ಲದ ಪುರುಷನೀತ ದ್ವಿತೀಯಾವತಾರದ ಶ್ರೀದೇವಿ ನೀನು ಓರಂತೆ ಸೊಗವಾಳುವುದೆಂದು ಬೀಳ್ಕೊಂಡು.ನಾರದನಡರಿದ ನಭವ (ಮೋಹತ. ೦೩-೮೨). [ಸಂ.]

ದ್ವಿತೀಯಕಲ್ಯಾಣ (ನಾ). [ಜೈನ] ಜಿನನ ಪಂಚಮಹಾಕಲ್ಯಾಣಗಳಲ್ಲಿ ಜನ್ಮಾಭಿಷೇಕೋತ್ಸವ ಎಂಬ ಎರಡನೆಯ ಕಲ್ಯಾಣ : ಪರಮೇಶ್ವರ ದ್ವಿತೀಯ ಕಲ್ಯಾಣಕರಣೋತ್ಸುಕಾಂತಃಕರಣನೈರಾವತಾರೂಢಂ ಶಚೀ ಸಮೇತನುಂ ಚರ್ತುವಿಧಾಮರಪರೀತನುಮಾಗಿ (ಪುಷ್ಪಪು. ೦೦-೫ ಪ). 'ಜನ್ಮಸವನ', 'ಪಂಚಮಹಾಕಲ್ಯಾಣ' ಪರಾ. [ದ್ವಿತೀಯ + ಕಲ್ಯಾಣ]

ದ್ವಿತೀಯದ್ವೀಪ (ನಾ). [ಜೈನ] ಎರಡನೆಯ ದ್ವೀಪ ; ಧಾತಕೀದ್ವೀಪ : ಅಂತಲ್ಲಿಂದಂ ತಳರ್ದು ಬಂದಿ ದ್ವಿತೀಯದ್ವೀಪದ ಯಾಮ್ಯದಿಶೆಯೊಳೆಸೆ ವಿಷುಕಾಧಾರಿಣೀಧರದ ಮೂಡಣ ಭರತದೊಳ್ (ಚಂದ್ರಪು. ೪-೭೯ ಪ). 'ದ್ವೀಪ' ಪರಾ. [ದ್ವಿತೀಯ + ದ್ವೀಪ]

ದ್ವಿತೀಯಪೀಠ (ನಾ). [ಜೈನ] ಜಿನನು ಸಮವಸರಣದಲ್ಲಿ ಮಂಡಿಸುವ ಮೂರು ಪೀಠಗಳನ್ನೊಳಗೊಂಡ ಆಸನಗಳಲ್ಲಿ ಎರಡನೆಯದು : ಮೇಘರಥಧರಾಧೀಶ್ವರನುಂ . . . ಸಮವಸರಣಮಂ ಪೊಕ್ಕು ಪ್ರಥಮ ದ್ವಿತೀಯ ತೃತೀಯ ಪೀಠಂಗಳುಮನನುಕ್ರಮದಿನರ್ಚಿಸಿ(ಶಾಂತಿಪು.೯-೬೯ ಪ). [ದ್ವಿತೀಯ + ಪೀಠ]

ದ್ವಿತೀಯರ್ಕ್ಷ (ನಾ). [ಜ್ಯೋತಿ] ಎರಡನೆಯ ಸ್ಥಾನ : ಇನವರ್ಜ್ಯಂ ಕ್ಷಿತಿಜಾದಿಗಳ್ ಹಿಮಮಯೂಖಂಗೆ . . . ಒಂದಿ ನಿಲೆ ಮತ್ತಂ ತದ್ದ್ವಿತೀಯರ್ಕ್ಷದೊಳ್ ಸುನಫಾಯೋಗಂ (ಜಾತತಿ. ೧೪-೧).

[ದ್ವಿತೀಯ + ಋಕ್ಷ]

ದ್ವಿತೀಯಾವಿಭಕ್ತಿ (ನಾ). [ವ್ಯಾಕ] ಏಳಂ ವಿಭಕ್ತಿಗಳಲ್ಲಿ ಎರಡನೆಯದು : ಕರ್ಮಾರ್ಥವನ್ನು ಸೂಚಿಸುವ ವಿಭಕ್ತಿ : ದ್ವಿತೀಯಾವಿಭಕ್ತಿಗೆ – ಚೆಚ್ಚರಂ ನುಡಿದನೆಂಬಲ್ಲಿ ಚೆಚ್ಚರಮಂ ನುಡಿದನೆಂಬ ದ್ವಿತೀಯೆಯನಱಿವುದು (ಶಮದ. ೯೦ ಪ್ರಯೋ) ; ದ್ವಿತೀಯಾವಿಭಕ್ತಿ . . . ಇದು ಕರ್ಮಾರ್ಥದಲ್ಲಿ ಬರುವುದು. ಕರ್ಮವೆಂದರೆ ಕ್ರಿಯೆಗೆ ವಿಷಯವಾದದ್ದು (ಕೈಪಿಡಿ. ೩೪). [ಸಂ.]

ದ್ವಿತೀಯೆ (ನಾ). ೧. ಹೆಂಡತಿ ; ಭಾರ್ಯೆ ; ಪತ್ನಿ : "ಹೆಂಡತಿ[ಯಲ್ಲಿ]ಯುಂ ದ್ವಿತೀಯಾಯೆಂಬುದು" (ಹಲಾಯು. ೧೩೩-೧೬) ; "ವಿವಾಹಮಾದಾ ಕಾಂತೆಯ ದ್ವಿತೀಯೆಯೆಂಬುದು" (ಮಂಗರಾ. ೧೩೯-೬) ; ನಿನ್ನ ದ್ವಿತೀಯೆಯನವಳನೊರ್ವ ರಕ್ಕಸಂ ಕೊಂಡುಯ್ಗೆ (ಅದ್ಭುತ. ೧೩-೧೦). ೨. ಪಕ್ಷದ ಎರಡನೆಯ ತಿಥಿ ; ಬಿದಿಗೆ. ೩. = ದ್ವಿತೀಯಾವಿಭಕ್ತಿ : ಮತ್ತಾ ದ್ವಿತೀಯೆಗಂ ಮನಮೊತ್ತರಿಸಿರ್ಕುಂ ವಿಭಾಷೆಯಿಂ ನಿಧನದೊಳಂ ಪತ್ತಿ ನಿಮಿರ್ದಮರ್ದು ನಿಲ್ಕುಮುದಾತ್ತತೆ ಮಿಗೆ ದಂ ತೃತೀಯೆಗೇದಂತಂ ಮೇಣ್ (ಕಾವ್ಯಾವ. ೧೦೭) ; ನಾನಾ ತೆಱದ ಲಿಂಗಂಗಳ್ಗೆ ಪರವಾಗಿ ನಾಮವಿಭಕ್ತಿಗಳ್, ಮ್ (ಸೂ. ೧೦೫), ಅಮ್ (ಸೂ. ೧೦೪, ೧೦೬), ಇಮ್ (ಸೂ. ೧೦೭), ಕೆ (ಸೂ. ೧೧೩, ೧೧೪), ಅತ್ (ಸೂ. ೧೦೬, ೧೧೬), ಅದ್ (ಸೂ. ೧೦೬, ೧೧೭), ಒಳ್ (ಸೂ. ೧೧೯) ಎಂದು, ಪ್ರಥಮೆಗಂ, ದ್ವಿತೀಯೆಗಂ, ತೃತೀಯೆಗಂ, ಚತುರ್ಥಿಗಂ, ಪಂಚಮಿಗಂ, ಷಷ್ಠಿಗಂ, ಸಪ್ತಮಿಗಂ – ಏಱಾಗಿ, ಕಾರಕವಶದಿಂ ಪತ್ತುಗುಂ (ಶಮದ. ೯೩ ವೃತ್ತಿ). [ಸಂ. ದ್ವಿತೀಯಾ]

ದ್ವಿತ್ವ (ನಾ). ೧. ಜೋಡಿ ; ಜೊತೆ. ೨. [ಗಣಿತ] ಎರಡು ಎಂಬ ಸಂಖ್ಯೆ. ೩. [ವ್ಯಾಕ] ವ್ಯಂಜನಗಳ ಸಂಯುಕ್ತಾಕ್ಷರ ; ಒತ್ತಕ್ಷರ : ಮೊದಲೊಳನುಸ್ವಾರಂ ಬೆರಸದಂತಪುಲ್ಲಿಂಗದೊಳ್ ಗೆಯಕ್ಕುಂ ದ್ವಿತ್ವಂ ವಿದಿತ ನಪುಂಸಕದೊಳ್ ಪಕ್ಷದಿಂ ತೃತೀಯಂ ಚತುರ್ಥಿಗಂತುಱಿದುವಱೊಳ್ (ಕಾವ್ಯಾವ. ೧೧೩) ; ಒಂದು ಹ್ರಸ್ವಸ್ವರದಿಂದ ಕೂಡಿ ಅಂತ್ಯದಲ್ಲಿ ನಣಯಲಳಗಳನ್ನುಳ್ಳ ಶಬ್ದಗಳಿಗೆ ಸ್ವರ ಪರವಾದರೆ ಆ ಅಂತ್ಯವ್ಯಂಜನಗಳಿಗೆ ಸಾಮಾನ್ಯವಾಗಿ ದ್ವಿತ್ವ ಬರುತ್ತದೆ (ಕೈಪಿಡಿ. ೧೦) ; ದ್ವಿತ್ವವಂದರೆ ಒಂದೇ ವರ್ಣವನ್ನು ಎರಡು ವರ್ಣವಾಗಿಮ್ಮಡಿಸಿ ಸಂಯುಕ್ತವಾಗಿ ಹೇಳುವುದು (ಹೊನುಗ. ೨೬). ೪. ಒತ್ತಕ್ಷರವುಳ್ಳ ಪದ ; ದ್ವಿತ್ವವನ್ನು ಹೊಂದಿರುವ ಪದ : ಕೆಲವು ನಿಜಬಿಂದುಗಳ್ ಕೆಲಕೆಲವು ವಿಕಲ್ಪಾರ್ಥಬಿಂದುಗಳ್ ದ್ವಿತ್ವಂಗಳ್ ಕೆಲವಾ ಶಿಥಿಲದ್ವಿತ್ವಂ ಕೆಲಮುಭಯಮುಮಾಗಿ ಕೆಲವು ಪದನಱಿವುದವಂ (ಶಮದ. ೩೬). ೫. = ದ್ವಿವಚನ : ಅವಱೊಳ್ ದ್ವಿತ್ವಬಹುತ್ವಂ ಬವರಿಸೆ ತಳ್ತಿರ್ಕುಮಲ್ಲಿ ಗಳ್ ಶಬ್ದಂ ಮತ್ತವು ಸರ್ವನಾಮ ಗುಣವಚನ ವೃತ್ತಿಯಂ ತಾಳ್ದೆ ನೆಗೞ್ಗುಮವು ಬಹುಳತೆಯಿಂ (ಕಾವ್ಯಾವ. ೮೭) : ಏಕ ದ್ವಿತ್ವಬಹುತ್ವ ಮನೇಕದ್ವಿ ಬಹುತ್ವವಸ್ತುಗಳೊಳಾಚರಿಪರ್ ಸ್ವೀಕಾರ್ಯಂ ಕನ್ನಡದೊಳಗೇಕಬಹುತ್ವಂ (ಶಮದ. ೯೪). [ಸಂ.]

ದ್ವಿತ್ವವಿಕಲ್ಪ (ನಾ). [ವ್ಯಾಕ] ಒತ್ತಕ್ಷರವು ಇಲ್ಲದೆಯೂ ಇರುವುದು : ಚತುರ್ಥಿಯ 'ಗೆ' ಕಾರಕ್ಕೆ ದ್ವಿತ್ವವಿಕಲ್ಪವೂ ಇದೆ—ಬುಧರ್ಗೆ, ಬುಧರ್ಗ್ಗೆ . . . ಇತ್ಯಾದಿ (ಸಂಶೋಧ. ೬೦). [ದ್ವಿತ್ವ + ವಿಕಲ್ಪ]

ದ್ವಿತ್ವವೃತ್ತಿ (ನಾ). [ವ್ಯಾಕ] ವ್ಯಂಜನಗಳ ಸಂಯುಕ್ತ ಸ್ವರೂಪ ; ಒತ್ತಕ್ಷರವಾಗಿರುವಿಕೆ : ಸ್ವರಮಮರ್ದಿರೆ ಮುಂದೇಕಸ್ವರದೊಳ್ ನಣಲಯಳಕಾರಮನಿತುಂ ಹ್ರಸ್ವಾಕ್ಷರ ಪೂರ್ವಮಾಗೆ ಪೀನಂ ಸ್ವರೂಪದಿಂ ದ್ವಿತ್ವವೃತ್ತಿಯಂ ತಾಳ್ದಿರ್ಕುಂ (ಕಾವ್ಯಾವ. ೭೯) : ಪ್ರತಿಷೇದಧರ್ಥದೊಳೆ ಧಾತುವಿಂಗೆ ವಿಭಕ್ತಿ ಪರಮಾದೊಡಂ ಭೂತಕಾಲಕ್ರಿಯೆಯೊಳ್ ಪ್ರತಿಷೇಧಮನುಸಿರ್ವ ಅದೆ ಎಂಬುದು ಪರಮಾದೊಡಂ ನಣಲಯಳಂಗಳ್ಗೆ ದ್ವಿತ್ವವೃತ್ತಿನಿತ್ಯಂ (ಶಮದ. ೭೦ ವೃತ್ತಿ). [ದ್ವಿತ್ವ + ವೃತ್ತಿ]

ದ್ವಿತ್ವಾಕ್ಷರ (ನಾ). [ವ್ಯಾಕ] ವ್ಯಂಜನಗಳ ಸಂಯುಕ್ತಾಕ್ಷರ ; ಒತ್ತಕ್ಷರ : "ದ್ವಿತ್ವಾಕ್ಷರಮದು ದಡ್ಡಕ್ಕರಮೆಂದು ತಿಳಿವುದು" (ಚತುನಿ. ೨೪) : ಪರಪದಪೂರ್ವಂ ದ್ವಿತ್ವಾಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾಕ್ಷರಮಾಗೆ ಸಂಧಿದೋಷಂ ಸರೇಫಮಿದಿರಾಗೆ ಶಿಥಿಲಮೆಂದನುಸರಿಪರ್ (ಶಮದ. ೩೯). 'ದಡ್ಡಕ್ಕರ' ಪರಾ. [ದ್ವಿತ್ವ + ಅಕ್ಷರ]

ದ್ವಿದಲ, ದ್ವಿದಳ (ಗು). ೧. ಎರಡು ಬೇಳೆಯಾಗುವ,–ಹೋಳಾಗುವ. (ನಾ). ೨. ಎರಡು ಪಕಳೆಗಳು. ೩. ಎರಡು ಬೇಳೆ ಆಗುವ ಕಾಳು. ದ್ವಿದಳ: ೧. 'ದ್ವಿದಳಧಾನ್ಯ' ಪರಾ. ೨. ಷೋಡಶದಳ ಷೋಡಶಾಕ್ಷರ ದ್ವಿದಳ ದ್ವಿಯಕ್ಷರ (ದ್ವಯಾಕ್ಷರ) ಎಂಬ ಚಕ್ರದಳ ಅಕ್ಷರಂಗಳೆಲ್ಲವೂ ಬಯಲಾದವು (ಸಿದ್ಧೇವ. ೨೦೦-೬೧೪). [ದ್ವಿ + ದಲ]

ದ್ವಿದಳ 'ದ್ವಿದಲ' ನೋ.

ದ್ವಿದಳಧಾನ್ಯ (ನಾ). ಅವರೆ, ತೊಗರಿ, ಉದ್ದು, ಹೆಸರು ಮೊದಲಾದ, ಎರಡು ಬೇಳೆಯಾಗುವ ಧಾನ್ಯ,– ಕಾಳು : ಭಾರಿ ಅಮಾನಿಕೆರೆಯಿದ್ದು . . . ರಾಗಿ, ದ್ವಿದಳಧಾನ್ಯಗಳನ್ನು ಹೇರಳವಾಗಿ ಬೆಳೆಯುತ್ತಾರೆ (ನಿಟ್ಟೂಶಾಂ. ೨) ; ದೇಹವನ್ನು ಬೆಳೆಸುವ ಆಹಾರಗಳು . . . ಅವರೆ, ಸೋಯಾಬೀನ್ (Soya Bean) ಇತ್ಯಾದಿ ದ್ವಿದಳಧಾನ್ಯಗಳು (ಗೃಹವಿ. ೮).

[ದ್ವಿದಳ (= ದ್ವಿದಲ) + ಧಾನ್ಯ]

ದ್ವಿದಳಪದ್ಮ (ನಾ). [ಯೋಗ] ಯೋಗ ಸಾಧನೆಯಲ್ಲಿ ಕುಂಡಲಿನಿಯ ಶಕ್ತಿಯು ಎಚ್ಚತ್ತು ನಿಲ್ಲುವ ಸ್ಥಾನ : ಆಜ್ಞಾಚಕ್ರದ ದ್ವಿದಳಪದ್ಮದಲ್ಲಿ ಅವಿರಳ ಸುಜ್ಞಾನಪೀಠದೊಳಗೆ ಅಮೃತಮಯ ಲಿಂಗವ ಕಂಡೆನು ನೋಡಾ (ಸಿದ್ಧೇವ. ೧೭೮-೩೪೧).

[ದ್ವಿದಳ (= ದ್ವಿದಲ) + ಪದ್ಮ]

ದ್ವಿದೃಷ್ಟಿ (ನಾ). ಬಿಂಬಗಳು ಎರಡಾಗಿ ಕಾಣಿಸುವುದು ; ಒಂದು ಬಗೆಯ ಕಣ್ಣಿನ ದೋಷ : ಮಗುವಿಗುಂಟಾಗುವ ಅಡಚಣೆಗಳು : (೧) ಚೆನ್ನಾಗಿ ಕಾಣಿಸದೇ ಇರುವುದು . . . ದ್ವಿದೃಷ್ಟಿ ಅಥವಾ ಮಂಜುದೃಷ್ಟಿ (ನಿಮ್ಮದೃ. ೪೪). [ದ್ವಿ + ದೃಷ್ಟಿ]

ದ್ವಿಧರ್ಮ (ನಾ). ಎರಡು ಬೇರೆ ಬೇರೆ ಮತ,–ಧರ್ಮ ; ಭಿನ್ನಧರ್ಮ. ದ್ವಿಧರ್ಮದ ಕುಟುಂಬ=ಗಂಡಹೆಂಡಿರು ಬೇರೆ ಬೇರೆ ಮತಾಚರಣೆಯನ್ನು ಹೊಂದಿರುವ ಸಂಸಾರ ; ಗಂಡ ಹೆಂಡಿರು ಬೇರೆ ಬೇರೆ ಮತಧರ್ಮಗಳಿಗೆ ಸೇರಿರುವ ಕುಟುಂಬ: ಇಂಥದೊಂದು ದ್ವಿಧರ್ಮದ ಕುಟುಂಬದಲ್ಲಿ . . . ಹೆಂಡತಿ ಮತ್ತು ಮಗ ಇವರಷ್ಟೇ ಹಿಂದೂಗಳಾದಿ ಇರುವಂಥ ಅವಸ್ಥೆ ಕೆಲದಿನ ನಡೆದು ಬಂತು (ಸ್ಮೃತಿಚಿ. ೪).

[ದ್ವಿ + ಧರ್ಮ]

ದ್ವಿಧಾ (ಅ). ೧. ಎರಡು ಭಾಗವಾಗಿ. ೨. ಎರಡು ವಿಧವಾಗಿ,–ರೀತಿಯಾಗಿ. [ಸಂ.]

ದ್ವಿಧಾಕೃತ (ನಾ). ಎರಡಾಗಿ ಒಡೆದುದು ; ಎರಡು ಹೋಳಾದುದು ; ಭಗ್ನವಾದುದು : "ಭಿನ್ನಂ ಭಂಗುರ ಭಗ್ನಂ ಛಿನ್ನಂ ವೃಕ್ಣಂ ದ್ವಿಧಾಕೃತಂ ಛಿತಮಕ್ಕುಂ" (ವಸ್ತುಕೋ. ೧೦೬-೪೮). [ಸಂ.]

ದ್ವಿಧಾಕೃತಿ (ನಾ). ಎರಡು ಆಕಾರ ; ಒಂದೇ ಬಗೆಯ ಎರಡು ರೂಪ : ಕೀರ್ತಿಯ ಮಡಲ್ವ ಸುಧೆಯೊಳ್ದ್ವಿಧಾಕೃತಿಯಾಯ್ತೊ ಸಂತಸದ ಬೆಳಸಿನ ಬೆಳೆದ ಪಸುಗೆಯೋ ಸಲ್ವ ಕುಲದೇಳ್ಗೆಯ ಸಸಿಯ ಕೋಡೊ . . . ಏನಲ್ಕುಶಲವರ್ಕುಶಲದಿಂ ಕಣ್ಗೆಸೆವರಾಶ್ರಮದೊಳು (ಜೈಮಿಭಾ. ೧೯-೪೯).

[ಸಂ.]

ದ್ವಿಧಾಗತಿ (ನಾ). ೧. ಎರಡು ರೀತಿಯ ಸಂಚಾರ. ೨. ಮೋಸ ; ಇಬ್ಬಗೆಯಂ ವಹಿವಾಟುಂ. ೩. ನೀರಂ ಮಂತ್ತು ನೆಲ ಎರಡರ ವೇಲೂ ಚಲಿಸುವ ಪ್ರಾಣಿ ; ಏಡಿ, ಮೊಸಳೆ ಇತ್ಯಾದಿ. [ಸಂ.]

ದ್ವಿಧಾಭಾವ (ನಾ). ಇಬ್ಬಗೆಯ ಭಾವನೆ; ಎರಡಂ ಬಗೆಯಂ ಯೋಚನೆ : ಇದರ ಬಗ್ಗೆ ಅವನ ಮನಸ್ಸಿನಲ್ಲಿ ಒಂದಿಷ್ಟೂ ಒಂದು ಸಲವಾದರೂ ದ್ವಿಧಾಭಾವ ಮೂಡಬಾರದೆ ? (ಇಪ್ಪಳೆ. ೩೭೧). [ಸಂ.]

ದ್ವಿಧಾವೃತ್ತಿ (ನಾ). ಭಿನ್ನಭಿನ್ನ ಧೋರಣೆಗಳಿರುವ ವೃತ್ತಿ.–ನಡವಳಿಕೆ,–ವ್ಯವಹಾರ : ಆದಮನಾ ನಂದನಚ್ಯುತಿಯನ್ನು ಬಣ್ಣಿಸಿರುವ ಮಹಾಕವಿಯ ದ್ವಿಧಾವೃತ್ತಿ ನಿನ್ನ ಮನದಿ ಬಂದಿತು (ಚಂತಪ. ೨೯-೦೩) : ಅವನಲ್ಲಿಯ ದ್ವಿಧಾವೃತ್ತಿಯ ನಿರ್ಣಯವನ್ನೂ ಅವನು ದೈವಕ್ಕೇ ಬಿಟ್ಟು ಕೊಟ್ಟಿದ್ದ (ಸಮಜೀ. ೩೩೨) ; ಎರಡು ಕಣ್ಣಿಗೆ ಕಾಣುವ ವಸ್ತು ಒಂದು, ಎರಡು ಕಿವಿಗೆ ಕೇಳಿಸುವ ಶಬ್ದ ಒಂದು. ಅವುಗಳಿಗೆ ದ್ವಿಧಾವೃತ್ತಿಯಿಲ್ಲ ಮೂಲತಃ (ಆಠಳು. ೦೯). [ಸಂ.]

ದ್ವಿಪ (ನಾ). ಎರಡಂ ಹಂತದಲ್ಲಿ ನೀರು ಕುಡಿಯುವಂಥದಂ ; P ಸೊಂಡಿಲಿನಿಂದ ನೀರನ್ನು ಒಮ್ಮೆ ಹೀರಿ ತರುವಾಯ ಅದನ್ನು ಬಾಯಿಗೆ ಸುರಿದುಕೊಂಡು ಕುಡಿಯುವಂಥದು ; ಆನೆ : " ಮಾತಂಗಃ, ದ್ವಿರದಃ, ದ್ವಿಪಃ, ಕರೀ, ಗಜಃ, ಸ್ತಂಬೇರಮಃ, ಅನೇಕಪಃ, ಕುಂಭೀ, ಕುಂಜರಃ, ವಾರಣಃ, ಇಭಃ, ರದೀ, ಸಾಮೋದ್ಭವಃ, ಸಿಂಧುರಃ– ಈ ೧೪ ಆನೆಯ ಪೆಸರ್ " (ಹಠಾಯು. ೩೬-೬೧) : ವಿಪುಳತರಕಟಕನುದ್ದಿ ದ್ವಿಪಹಲೆ (ರಿ)ಮಹೀಪತಿನಿಷೇವ್ಯನುನ್ನತಪಾದಂ ವ್ಯಪನೀತಶ್ರೀಫಲದಂ ವಿಪರೀತಕನಪ್ಪನಂತು ಭೂಭೃನ್ನಾಥಂ (ಕವಿಗಾ. ೩-೦೧೦) ; ಭಗದತ್ತಂ ಸುಪ್ರತೀಕದ್ವಿಪಮನುಪಚಿತೋತ್ಸಾಹದಿಂ ತೋಲಿ ಕೊಟ್ಟಂ (ಪಂಪಭಾ. ೧೦-೬೯) : ಘನಶೌರ್ಯಾನಲಧೂಮವಲ್ಲಿವದನಾಂಭೋಜಾಳಿನೀಮಾಲೆಯೌವನಗಂಧದ್ವಿಪದಾನಲೇಪೆ ವವುರಾಲೇಖ್ಯಪ್ರಭೋನ್ಮೀಲನಾಂಜನರುಗ್ಮೇಖೆ ವಿವಾಹಮಂಗಳಕಿದೇ ಭೂಸಂಜ್ಞೆಯೆಂಬಂತೆ ಚೆಲ್ವನದೇಂ ಶ್ಮಶ್ರುವಿಕಾಸರೇಖೆ ತಳೆದತ್ತೀಗಳ್ಕುಮಾರಾಸ್ಯದೊಳ್ (ಕಾದಂಬ. ೪೦೦) ; [ತಪಿ]ಯಿಂ ನಿರ್ಧೂತದೋಷಂ ವಿಶದಶಶಿಯಿನತ್ಯಂತಕಾಂತಂ ಸದಾನ ದ್ವಿಪದಿಂ ಭದ್ರಾನ್ನ [ಯಂ] (ಸುಳುಮಾ. ೯-೦೦೭). [ಸಂ.]

ದ್ವಿಪಕ್ಷ (ನಾ). ೧. ಎರಡು ರೆಕ್ಕೆ : ಎರಡು ಪಕ್ಕಗಳಿದ್ದರೆ ದ್ವಿಪಕ್ಷವಿಮಾನ (Biplane) ಎನಿಸುವುದು (ಶಾಲಿಶ್ರ. II, ೯೪೫). ೨. ಎರಡಂ ಪಾರ್ಶ್ವ,–ಬದಿ : ದಿ ಪಕ್ಷದಲ್ಲಿ ಕಂಗೊಳಿಸುತ್ತಿದ್ದ ಮಹಾಸೌಧಗಳಿದ್ದ ವಿಶಾಲವೂ ಸುಂದರವೂ ಆದ ರಾಜವೀಥಿಗಳಲ್ಲಿ . . . ಆ ಬಂದಿ ಮೇರಿಯಟ್ಟಳ ಗೃಹಾಭಿಮುಖವಾಗಿ ಸಾಗಿತು (ಪುನರು. ೩೩೬). ೩. ಎರಡು ಗುಂಪು,–ಪಂಗಡ. [ದ್ವಿ + ಪಕ್ಷ]

ದ್ವಿಪಕ್ಷೀಯ (ಗು). ಎರಡಂ ಗುಂಪಿಗೆ ಸೇರಿದ ; ಎರಡಂ ಪಂಗಡಕ್ಕೆ ಸಂಬಂಧಿಸಿದ. [ದ್ವಿ + ಪಕ್ಷೀಯ]

ದ್ವಿಪಘಟಾಳಿ (ನಾ). ಗಜಗಳ ಗುಂಪು ; ಆನೆಗಳ ಸಮೂಹ : ನೆಗಟ್ದರಿ ಘೂರ್ಜರದ್ವಿಪಘಟಾಳಿಗೆ ತನ್ನಯ ಸೂಚಿಯಾನೆ ತೊಟ್ಟಗೆ ಸಮರಾಗ್ರ ದೊಳ್ಪರಿಯೆ (ಗದಾಯು. ೧-೦೬). [ದ್ವಿಪ + ಘಟಾಳಿ]

ದ್ವಿಪಘಟೆ (ನಾ). = ದ್ವಿಪಘಟಾಳಿ : ಪಡುವಣ ಕಡಲೊಳ್ ನಿತ್ಯರಿಸದ ನೆಗೆದುವು ಜಳಮತ್ತ ದ್ವಿಪಘಟೆಗಳಿನಿಸಿದುವು ಘನಘಟೆಗಳ್ (ಪುಗ್ಗಿಪು. ೮-೮೪). [ದ್ವಿಪ + ಘಟೆ]

ದ್ವಿಪದ (ಗು). ೧. ಎರಡಂ ಪಾದಗಳನ್ನೊಳಗೊಂಡ. (ನಾ). ೨. ಎರಡಂ ಕಾಲುಗಳನ್ನುಳ್ಳ ಜೀವ, – ಪ್ರಾಣಿ : ಕ್ಷೇತ್ರವಾಸ್ತು ಧನಧಾನ್ಯದ್ವಿಪದ . . . ಭಾಂಡಪ್ರಭೇದದಿಂ ಪತ್ತುಂ ತೆಱದ ಬಾಹ್ಯ ಪರಿಗ್ರಹಮುಮಂ . . . ಪತ್ತುವಿಟ್ಟು (ಪರ್ಮಪು. ೧೦-೬ ವ). ೩. ಎರಡಂ ಪದಗಳು : ದ್ವಿಪದಂ ಮೇಣ್ ಬಹುಪದಮನ್ಯಪದಾರ್ಥದೊಳಿಂದಿ ನಿಲೆ ಬಹುವ್ರೀಹಿ (ಕಾವ್ಯಾವ. ೨೦೮). ೪. [ಛಂದ] ಪ್ರತಿ ಸಾಲಿನಲ್ಲಿ ಮೂರಂ ವಿಷ್ಣು, ಒಂದು ಬ್ರಹ್ಮಗಣ ಬರುವ ಪದ್ಯಜಾತಿ: ಈ ದ್ವಿಪದದ ಧಾಟಿ ತೆಲುಗಿನಲ್ಲಿ ಬಲು ಹಳೆಯದು (ಸಮೂಕೋ. ೨೦೮) ; ಈ ನಾಟಕಗಳು ಪದ್ಯ, ಕಥ್ಯ, ದ್ವಿಪದ, ಭಾಷಣಗಳು ಮುಂತಾದವುಗಳಿಂದ ರಂಜಿಸಲ್ಪಟ್ಟಿವೆ (ಧಾರಾದ. ೫೫೫). [ಸಂ.]

ದ್ವಿಪದಿ (ನಾ). ೧. [ಛಂದ] ಎರಡಂ ಪಾದಗಳನ್ನೊಳಗೊಂಡ ಒಂದಂ ವೃತ್ತ. ೨. ಪ್ರತಿಪಾದದಲ್ಲಿಯೂ ಐದು ಮಾತ್ರೆಯು ಗಣ ಮೂರೂ, ಮೂರಂ ಮಾತ್ರೆಯಂ ಗಣ ಒಂದೂ ಇರುವ ಒಂದು ವಿಧವಾದ ಪದ್ಯಜಾತಿ : ಒಟ್ಟು ಹದಿನೆಂಟು ಮಾತ್ರೆಗಳು ಒಂದೊಂದಂ ಸಾಲಿನಲ್ಲಿರುವ ಪದ್ಯ ; P ಕನ್ನಡ ಕೈಪಿಡಿಯಲ್ಲಿ ಕೊಟ್ಟಿರುವ ದ್ವಿಪದಿಯಲ್ಲಿ "ಮೋಸಗಾರರ ಕೂಡೆ ಬೆರಸದಿರ ಬೇಕು" ಎಂಬ ಲಕ್ಷ್ಯದಲ್ಲಿ ೫ ಮಾತ್ರೆಯ ೩ ಗಣ, ೩ ಮಾತ್ರೆಯ ೧ ಗಣ ಬರುತ್ತದೆ. ಇದಂ ಒಟ್ಟು ೧೮ ಮಾತ್ರೆಗಳಾಗುತ್ತದೆ. ಮೊದಲನೆಯಂ ಗಣದಲ್ಲಿ ೬ ಮಾತ್ರೆಗಳೂ ಬಳಿಕ ೪ ಮಾತ್ರೆಗಳ ೫ ಗಣಗಳಿರಬೇಕೆಂದೂ ಕೊನೆಯಲ್ಲಿ ಗುರುವಿರಬೇಕೆಂದೂ ೨ ಮಂತ್ತು ೬ನೆಯಂ ಗಣಗಳಂ ಜಗಣವೇ ಆಗಬೇಕೆಂದೂ ದ್ವಿಪದಿಯಂ ಲಕ್ಷಣವನ್ನು ಸೋಮೇಶ್ವರನೆಂಬುವನು ಹೇಳಿದ್ದಾನೆಂದು ಭರತ ಕೋಶದಲ್ಲಿದೆ. ಈ ಲಕ್ಷಣದಂತೆ ೨೬ ಮಾತ್ರೆಗಳು ಒಂದೊಂದಂ ಸಾಲಿನಲ್ಲಿ ಬಂದಂತಾಗುತ್ತದೆ. ದ್ವಿಪದಿಯನ್ನು ಚರ್ಚರೀನರ್ತನದಲ್ಲಿ, ಗೀತದಲ್ಲಿ ಉಪಯೋಗಿಸುತ್ತಿದ್ದರೆಂದು ತಿಳಿದುಬರುತ್ತದೆ : ದ್ವಿಪದಿ (ತೆಲುಗಿನಲ್ಲಿ ದ್ವಿಪದ) . . . ಪಾದಕ್ಕೆ ಮೂರು ವಿಷ್ಣು, ಒಂದು ಬ್ರಹ್ಮ ; ೫.೫.೫.೩–ಎರಡು ಸಲ : ಹಸಿದು ಬಂದವರಿಂಗಶನವೀಯಬೇಕು ಶಿಶುಗಳಿಗೆ ಪಾಲ್ಬೆಣ್ಣೆಗಳ ನಡಸಬೇಕು (ಕೈಪಿಡಿ. ೦೫೧) ; ಇದರಲ್ಲಿಯ ಪದ್ಯಗಳು ದ್ವಿಪದಿಗಳು. ಇಲ್ಲವೆ ಚೌಪದಿಗಳು (ಕವಿಪು. ೬೧೫) : ದ್ವಿಪದಿಯನ್ನೆ ದ್ವಿಗುಣಿತಗೊಳಿಸಿದಾಗ ಚೌಪದಿಯಾಗುವುದು (ಸಂಕೋಛ. ೦೬೨). 'ತ್ರಿಪದಿ' ಪರಾ. ೩. ಒಂದು ಬಗೆಯ ಪ್ರಾಕೃತದ ಪದ್ಯ.

[ಸಂ. ದ್ವಿಪದೀ]

ದ್ವಿಪದೀಖಂಡ (ನಾ). ಹಾಡಲು ಅನುಕೂಲವಾಗಿರುವ ಮಾತ್ರಾ ಪ್ರಧಾನವಾದ ಎರಡು ಸಾಲಿನ ಪದ್ಯ ; ಬಿಡಿಪದ್ಯ ; P ಇದರಲ್ಲಿ ಹಲವಾರು ಭೇದಗಳಿವೆ. ಶ್ರೀ ಹರ್ಷನ ರತ್ನಾವಳೀನಾಟಿಕೆಯಲ್ಲಿ ಬರುವ ದ್ವಿಪದೀಖಂಡದಲ್ಲಿ ಒಂದನೇ ಅಂಕದ ಹನ್ನೆರಡು ಮಂತ್ತು ಹದಿಮೂರನೆಯಂ ಪದ್ಯಗಳ ಒಂದೊಂದು ಸಾಲಿನಲ್ಲಿ ೨೬ ಮಾತ್ರೆಗಳಿವೆ ಕಲಾವತಿ, ಕನಕಾಂಗಿಯೆಂಬ ಚೇಟಿಯರಿರ್ವರುಂ ದ್ವಿಪದೀಖಂಡ ಮೆಂಬ ಪಾಡುಗಳಂ ಪಾಡುತ್ತ ಬಂದರ್ (ಮಿತ್ರಗೋ. ೯). [ಸಂ.]

ದ್ವಿಪದ್ವಿಷ್ಟ (ನಾ). ಆನೆಯ ವೈರಿ ; ಸಿಂಹ : ರುಂದ್ರದ್ವಿಪದ್ವಿಷ್ಟವಿಷ್ಟರ ವಿಶ್ರಾಂತನನಾತ್ಮಕಾಂತನನುಪಾಂತೋದ್ದಾಮ ಸೀಪಾಂತಿನೀಕರಚಾಮರೋಶ್ಮರ ಮರುದ್ವ್ಯಕೀರ್ಣಕರ್ಣಾಬ್ಜನಂ ಸಾರ್ತಂದು (ಪುಪ್ಪಪು. ೯-೦೦೪).

[ದ್ವಿಪ + ದ್ವಿಷ್ಟ]

ದ್ವಿಪಪತಿ (ನಾ). ಆನೆಗಳ ಒಡೆಯ; ಗಜೇಂದ್ರ : ದ್ವಿಪಪತಿಗೆ ದಂತಭಂಗಂ . . . ಅಪಮಾನಿಗೆ ಮಾನಭಂಗವಾದುದೆ ಮರಣಂ (ನೀತಿಸಾ. ೦೧೧).

[ದ್ವಿಪ + ಪತಿ]

ದ್ವಿಪಮಾರ್ಗ (ನಾ). ಆನೆಯು ಹಾದುಹೋಗಿರುವ ದಾರಿ : ಅವಗತ ಫಲತ್ವಮಂ ಭಗ್ನವಾತಿತೋತ್ಪಾತ ವಿಧಿಯನೆಯ್ದಿದ ನೃಪರಿಂ ದ್ವಿಪಮಾರ್ಗಮೆಂತು ಹತಪಾದವಂಗಳಿಂ ಭಯದಮಂತೆ ಭಯದಂ ಮಾರ್ಗಂ (ಶಾಂತಿಪು. ೦೦-೦೩೮). [ದ್ವಿಪ + ಮಾರ್ಗ]

ದ್ವಿಪರೂಪು (ನಾ). ಆನೆಯ ಆಕಾರ. – ಆಕೃತಿ : ವಸಿತೆ ಭೂತಿಯ ಉದರದಲ್ಲಿ ಗಜಮುಖನೆಂಬ ದನುಜ ಪುಟ್ಟಲ್ಕವಳು ದ್ವಿಪರೂಪ ಬಿಟ್ಟು ಮುನ್ನಿನ ತೆಱದಿ ತನ್ನೋಪನೆಡೆಗೆ ಪೋಗಲ್ಕೆ (ಪ್ರಾಥಕಾ. ೧–೮).

[ದ್ವಿಪ + ರೂಪು]

ದ್ವಿಪವಿಲಸಿತ (ಗಂ). ೧. ಎರಡು ವಜ್ರಾಯುಧಗಳಿಂದ ಶೋಭಿಸುವ. ೨. ಆನೆಯಂ ವಿಲಾಸದಿಂದ ಕೂಡಿದ. ೧, ೨ : ಆ ವನಂ . . . ದ್ವಿಪ ವಿಲಸಿತವಾಗಿಯುಮಗಣಿತವಜ್ರೋಪರಂಜಿತಮುಂ ವಿತತಕರಾರ್ಕೋಪ ಲಸಿತವಪವಾಗಿಯುಂ ಬಹುಲತಾರಾರಾಜಿತಮುಂ ತತತಾಪಸಸಮುಚ್ಚಯ ಮಾಗಿಯುಮಶೋಕಸಂಗತವೆನಿಸಿರ್ದುದು (ರಾಜಶೇ. ೫–೭೪ ವ).

[ಸಂ. (ದ್ವಿ + ಪವಿ + ಲಸಿತ) ; (ದ್ವಿಪ + ವಿಲಸಿತ)]

ದ್ವಿಪವೈರಿ (ನಾ). = ದ್ವಿಪದ್ವಿಷ್ಟ : ಉಪಶಮದಿಂದಾಸ್ತಿಕ್ಕದಿನುಪಾಸ್ತಿ ಸಂಯೋಗದಿಂ ದಯಾಳುತೆಯಿಂದಂ ದ್ವಿಪವೈರಿ ಬೆಳಗುಗುಮ್ಮಳವಿಪಾಟನ ಪ್ರವಣಮನುಪಮಂ ಸಮ್ಯಕ್ತ್ವಂ (ವರ್ಧಮಾ. ೬–೨೫). [ದ್ವಿಪ + ವೈರಿ]

ದ್ವಿಪಸ್ಕಂಧ (ನಾ). ಆನೆಯ ಹೆಗಲು. – ಭುಜ : ರದನಂಗಳ್ ನಾಲ್ಕ ಱಿಂದದ್ಭುತವೆನಿಪ ಸಹಸ್ರದ್ವಿಪಸ್ಕಂಧದೊಳ್ ಪೂಡಿದ ವಿದ್ಯಾದೇವತಾ ನಿರ್ಮಿತರಥಮನತಿಕ್ಷೋಭದಿಂದೇಱಿ ಬಂದಂ (ಪಂಚಮಾ. ೦೪–೦೫).

[ದ್ವಿಪ + ಸ್ಕಂಧ]

ದ್ವಿಪಾದ (ನಾ). ಎರಡು ಪಾದಗಳು : ಮನುಜಂ ದ್ವಿಪಾದವಶು ತಾನೆನಿಪ ವನುಂ . . . ಜಿನಮತಮನರ್ಥಿಯಿಂ ಕೇಳ್ದ ನರಂ ತಾಂ ಜೈನನೆನಿಸಿ ಪಂಡಿತನಕ್ಕುಂ (ಸಮಪ. ೩–೩೨). 'ದ್ವಿಪಾದಶೀರ್ಷಾಸನ' ಪರಾ.

[ದ್ವಿ + ಪಾದ]

ದ್ವಿಪಾದಶೀರ್ಷಾಸನ (ನಾ). [ಯೋಗ] ಯೋಗಾಸನಗಳಲ್ಲಿ ಒಂದು ಭಂಗಿ; ಎರಡೂ ಕಾಲುಗಳನ್ನು ಮೇಲೆತ್ತಿ ಮಾಡುವ ಶೀರ್ಷಾಸನದ ಒಂದು ಭಂಗಿ : ಮುಖ್ಯವಾದ ಕೆಲವು ಆಸನಗಳು :– ಅಷ್ಟವಿನ್ಯಾಸಗಳು ೧. ಉತ್ತಾನಾಸನ . . . ೩೦. ದ್ವಿಪಾದಶೀರ್ಷಾಸನ (ಕಾಠದ. ೦೬೭).

[ದ್ವಿಪಾದ + ಶೀರ್ಷಾಸನ]

ದ್ವಿಪಾದ್ಯ (ನಾ). ಎರಡು ಪಟ್ಟು ತಪ್ಪದಂಡ ; ಇಮ್ಮಡಿ ತಪ್ಪುದಂಡ : "ದ್ವಿಪಾದ್ಯಃ, ದ್ವಿಗುಣೋ ದಂಡಃ–ಎರಡರಷ್ಟು ದಂಡ ತೆಗೆದುಕೊಳ್ಳುವುದಕ್ಕೆ ಹೆಸರು. ದುಗುಣಜುಲ್ಮಾನೆ" (ಸಿದ್ಧಾಂತಿ. ೩೦೯). [ಸಂ.]

ದ್ವಿಪಾರಿ (ನಾ). = ದ್ವಿಪದ್ವಿಷ್ಟ : ದ್ವಿಪಾರಿಗುಣ್ಮವ ರಸನಾಗ್ರಮಂ ವುಲಿಗೆ ಕೈಯೆರಡಂ ನಿರ್ಮಿದೆತ್ತಿ ಪಂದಿಗೊಪ್ಪುವ ಮೊಳಕೈಯ ತೋರ್ವರರೆಬರ್ ಬಿಯದರ್ ಸಲೆ ಸನ್ನೆವೇಂಟಿಯೊಳ್ (ರಾಜಶೇ. ೫–೮೩). [ದ್ವಿಪ +ಅರಿ]

ದ್ವಿಪೆ (ನಾ). ಒಂದು ಬಗೆಯ ಗಿಡ ; ದೊಡ್ಡ ಕಣಗಿಲೆ ಗಿಡ : "ದ್ವಿಪೆಯನ್ಮ ದಿಕೆ[ಪಾಠಾಂ ಯುನ್ಮಧುಕೆ] ವೆರ್ಗಣಗಿಲಸಿವರ್ಣ" (ಮಂಗರಾ. ೪೨–೩೭).

[?]

ದ್ವಿಪೇಂದ್ರ (ನಾ). ಶ್ರೇಷ್ಠವಾದ ಆನೆ; ಗಜರಾಜ : ಯಾಮದ್ವಿಪೇಂದ್ರ ಪ್ರತಾನಕಟೋನ್ಮುಕ್ತಮದೌಘಕರ್ದಮಿತಕಾಂತಂ ರಾ ಜ ಗೇ ಹಾ ಜಿ ರಂ (ಹಂದ್ರಪು. ೦–೫೧) ; ಅನ್ನೆಗಮಾ ದ್ವಿಪೇಂದ್ರನುಂ ದಿನದಿನಂ ಮೊದಲಾಗಿ ನೀರಂ ಕುಡಿಯದೆ ಕವಳಂಗೊಳ್ಳದಿರ್ಪುದದಱ ಪರಿಚಾರಕಂ ಬಂದು ರಾಮಂಗೆ ಬಿನ್ನವಿಸಲ್ (ಪುಣ್ಯಾಸ್ರ. ೨–೪ ವ).

[ದ್ವಿಪ + ಇಂದ್ರ]

ದ್ವಿಪ್ರತಿ (ನಾ). ೧. ಎರಡು ಪ್ರತಿ : ದ್ವಿಪ್ರತಿಯಲ್ಲಿ ಪ್ರಾರ್ಥನಾಪತ್ರವನ್ನು ಹಾಕಬೇಕು (ರೂಢಿ). ೨. ವಂಡೂಲ ವಂತ್ತು ಅದರ ಎರಡನೆಯ ಪ್ರತಿ; ನಕಲು : ಸ್ಕೀರಿಯೋ ಮತ್ತು ಎಲೆಕ್ಟ್ರೋಫಲಕಗಳನ್ನು ಹಾಫ್‌ಟೋನ್ ಮತ್ತು ಲೈನ್ ಪಡಿಯಚ್ಚುಗಳನ್ನು ದ್ವಿಪ್ರತಿಗಳೆಂದು ಕರೆಯುವರು (ಮುದ್ರಣ. ೫೬). [ದ್ವಿ + ಪ್ರತಿ]

ದ್ವಿಪ್ರಾಸ (ನಾ). [ಛಂದ] ಪದ್ಯದ ಪ್ರತಿಸಾಲಿನಲ್ಲಿಯೂ ಮೊದಲ ಮತ್ತು ವಂಜರನೆಯ ಸ್ವರಗಳ ನಡುವೆ ಒಂದೇ ರೀತಿಯ ಎರಡು ವ್ಯಂಜನಗಳು ಸವಂವಾಗಿ ಬರುವ ಪ್ರಾಸ ; ಉದಾ:– ಅರಸರೊಳಿರೆ ನೀಂ ಸರಸಮನರಸಿಯವೊಲಾಡುತಿರ್ದೆ ನಿನಗಿದು ಗುಣಮೇ ಅರಸರ್ ಸರಸಮನಱಿವರೆ ಸರಸಮನಾದರಸರಲ್ಲದವರೊಳ್ ಮಗಳೇ (ಕವಿರಾ. ೩–೨೩೩) : ದ್ವಿಪ್ರಾಸಂ ಸುಭಗಂ ದ್ವಂದ್ವಪ್ರಾಸಂ ಕಾವ್ಯರಚನೆ(ಗುಚಿ) ತ(ವೆಂ)[ನ]ಪ್ಪಾ ತ್ರಿಪ್ರಾಸಂ [ಸಲೆಯಂತಾ ದಿಪ್ರಾಸಂ] ಬೇಱೆ ನಾಲ್ಕು ತೆಱನಾಗಿರ್ಕುಂ (ಕವಿರಾ. ೩–೨೩೨) : ದ್ವಿಪ್ರಾಸಂ ಸುಭಗಂ ದ್ವಂದ್ವಪ್ರಾಸಂ ಕಾವ್ಯರಚನೆಗುಚಿತಮೆನಿಪ್ಪ ತ್ರಿಪ್ರಾಸಂ ಸಲೆಯಂತಾದಿಪ್ರಾಸಂ ಬೇಱೆ ನಾಲ್ಕು ತೆಱನಾಗಿರ್ಕುಂ (ಛಂದೋಂಬು. ೧–೪೬ ಅಡಿಪಠ್ಯ). [ದ್ವಿ+ಪ್ರಾಸ]

ದ್ವಿಭಂಗಿ (ನಾ). [ನಾಟ್ಯ] ದೇಹವು ಎರಡು ಕಡೆ ವಂಗಡಿರುವುದಂ,– ಬಾಗಿರುವುದು : ಅಂಗಭಂಗಿಗಳಲ್ಲಿ ಒಂದು : ದೇವತಾಮೂರ್ತಿಗಳ . . . ಸಮಭಂಗಿ, ದ್ವಿಭಂಗಿ, ತ್ರಿಭಂಗಿ ಮೊದಲಾದ ಅಂಗವಿನ್ಯಾಸಗಳ ವೈಖರಿಗಳನ್ನು ಸಕಾರಣವಾಗಿ ಚಿತ್ರಿಸಿದ್ದಾರೆ (ಕಾಠದ. ೬೬).

[ದ್ವಿ + ಭಂಗಿ]

ದ್ವಿಭಾಗ (ನಾ). ಎರಡು ಸಮಭಾಗ. 'ದ್ವಿಭಾಗಿಸಂ' ಪರಾ.

[ದ್ವಿ + ಭಾಗ]

ದ್ವಿಭಾಗಿಸು (ಕ್ರಿ). ಎರಡು ಸಮಭಾಗವನ್ನಾಗಿ ಮಾಡಂ.–ಬೇರ್ಪಡಿಸಂ: ಒಂದೇ ಆದ ಅರ್ಧನಾರೀನಟೇಶ್ವರನನ್ನು ದ್ವಿಭಾಗಿಸಿ ಈಶ್ವರ–ಪಾರ್ವತಿಯರನ್ನಾಗಿ ಹುಟ್ಟಿಸಿದ ಮೇಲೆ ಅವರೆನ್ನು ಒಂದುಗೂಡಿಸುವ ರತಿ ಕಾಮರು ಬೇಕೇ ಬೇಕು (ಸಾಹಿತ್ಯ. ೦೪೩). [ದ್ವಿಭಾಗ + – ಇಸು]

ದ್ವಿಭಾಷಾಕ್ಷೇತ್ರ (ನಾ). ಯಾವುದಾದರೂ ಎರಡು ಭಾಷೆಗಳನ್ನು ಪ್ರಧಾನವಾಗಿ ಆಡುವ ಮಾತಾಗಿ ಉಪಯೋಗಿಸುತ್ತಿರುವ ಕ್ಷೇತ್ರ,– ಸಂಗಮಪ್ರದೇಶ; ಕೋಲಾರ, ಕಾಸರಗೋಡು, ಬೆಳಗಾವಿ ಇತ್ಯಾದಿ.

[ಸಂ.]

ದ್ವಿಭಾಷಾಚತುರ (ನಾ). ಎರಡು ಭಾಷೆಗಳಲ್ಲಿ ನೈಪುಣ್ಯ ಪಡೆದವನು ; ಕೇಶವನ ಇನ್ನೊಂದು ಸಮಸ್ಯೆಯೆಂದರೆ ಅಭಿವ್ಯಕ್ತಿಯ ಎಡಬಿಡಂಗಿತನ. ಅವನು ದ್ವಿಭಾಷಾಚತುರ (ಹೊಸಕ್ಕ. ೫೯೬). [ಸಂ.]

ದ್ವಿಭಾಷಾವಲಯ (ನಾ). = ದ್ವಿಭಾಷಾಕ್ಷೇತ್ರ : ಕರ್ನಾಟಕ ದೇಶದಲ್ಲಿ ಬೆಳಗಾಂ ಮತ್ತು ಮಡಕಸಿರಾಗಳು ದ್ವಿಭಾಷಾವಲಯಗಳು (ರೂಢಿ). [ಸಂ.]

ದ್ವಿಭಾಷಿ (ನಾ). ೧. ಎರಡು ಭಾಷೆಗಳನ್ನು ಬಲ್ಲವನು. ೨. ಭಾಷಾಂತರ ಮಾಡಿ ಹೇಳುವವನು ; ದಂಬಾಷಿ : ಆದುದರಿಂದ ದ್ವಿಭಾಷಿಯಾಗಿದ್ದ ಸಿಪಾಯಿನ ಕಡೆ ಅವನೂ ತಿರುಗಿದನು (ಕುಲಕಾ. ೧೦೩) ; ಎಷ್ಟೋ ಸಲ ತಾನೇ ದ್ವಿಭಾಷಿಯಾಗಿ ಅವರೆದುರು ನಿಂತು ಮಾತನಾಡಿದ್ದುಂಟು (ಜಯಂತ. ೩೨). [ಸಂ. ದ್ವಿಭಾಷಿನ್]

ದ್ವಿಭಾಷಿತ್ವ (ನಾ). ಎರಡು ಭಾಷೆಗಳನ್ನು ಉಪಯೋಗಿಸುವುದು: ಈ ದ್ವಿಭಾಷಿತ್ವದ ಪರಿಣಾಮವಾಗಿ ಪರ್ಜಭಾಷೆ ಪರಭಾಷೆಯ ಪದಗಳನ್ನು ವಿಪುಲವಾಗಿ ಪಡೆಯತೊಡಗಿದೆ (ಕ್ರಾವಿವಿ. ೦೬೩). [ಸಂ.]

ದ್ವಿಮಾತ್ರ (ನಾ). [ಛಂದ] (ಉಚ್ಚಾರಣೆಗೆ) ಎರಡು ಮಾತ್ರೆಗಳಷ್ಟು ಕಾಲ ತೆಗೆದುಕೊಳ್ಳುವುದು ; ದೀರ್ಘಾಕ್ಷರ ; ಗುರು : ಸ್ವರದೊಳಗ ಮೇಕಮಾತ್ರಾನಿರತಂ ಹ್ರಸ್ವಂ ದ್ವಿಮಾತ್ರಮಂತದು ದೀರ್ಘಂ (ಶಾಬ್ದಿಕ. ೦೦); ಸ್ವರ ವ್ಯಂಜನದಿನೇಕಮಾತ್ರಮಾದೊಡೆ ಹ್ರಸ್ವಂ, ದ್ವಿಮಾತ್ರಮಾದೊಡೆ ದೀರ್ಘಂ. ತ್ರಿಮಾತ್ರಮಾದೊಡೆ ಪ್ಲುತಂ (ಕವಿಮ. ೦೦ ವೃತ್ತಿ). [ಸಂ.]

ದ್ವಿಮಾಸ (ನಾ). ಎರಡು ತಿಂಗಳು : ತ್ರಿದಿನಕ್ಕೊರ್ಮೆ ಫಲಾದನಂ ನೆಗಳ್ದಾತಂಗೊಂದು ತಿಂಗಳ್ ದ್ವಿಮಾಸದೊಳಾಱುಂ ದಿನಕೊರ್ಮೆ ತತ್ಫಲಚಯಾಹಾರಂ (ಶಬಕಂ. ೩–೯೯). [ದ್ವಿ + ಮಾಸ]

ದ್ವಿಮುಖ (ಗು). ೧. ಎರಡು ಮುಖಗಳುಳ್ಳ. (ನಾ). ೨. ಎರಡು ಮುಖಗಳಿಂದ ಕೂಡಿದುದು: ಸಂಖ್ಯಾವಾಚಿ ಸಮಾಸಕ್ಕೆ–ಏಕಾಂಗ, ದ್ವಿಮುಖ . . . ದಶವ್ಯಾಕರಣ–ಎಂದು ಸಮಾಸಮಾಗಲೊಡಂ (ಶಮಾದ. ೮೨ ಪ್ರಯೋ). ೩. ಇಬ್ಬಗೆಯಾದುದು; ಎರಡು ವಿಧವಾದುದು: ಮಾನವನ ಜೀವನದ ಹೋರಾಟ ದ್ವಿಮುಖ–ಬದುಕುವ ಸಲುವಾಗಿಯೇ ಹೋರಾಟವೊಂದು; ಉತ್ತಮ ಆದರ್ಶಸಾಧನೆಗಾಗಿ ನಡೆಯುವ ಹೋರಾಟವೊಂದು (ಪುಕ್ಕಾರ. ೧ ಟೀಕೆ)). ೪. ಎರಡು ತಲೆಯ ಹಾವು; ಇರ್ತಲೆಹಾವು: " ದ್ವಿಮುಖಮಹಿರಣಿಯೆನಲ್ಕಿರ್ತಲೆಗನಕ್ಕು " (ಮಂಗರಾ. ೧೧೮-೨). [ದ್ವಿ + ಮುಖ]

ದ್ವಿಮುಖಿ (ನಾ). ಎರಡು ಬಗೆಯಾಗಿರುವುದು: ಕುವಿಭಾಷೆ ಒರಿಯಾ ಮತ್ತು ತೆಲುಗುಭಾಷೆಗಳ ಗಡಿಯ ನಡುವೆ ದ್ವಿಮುಖಿಯಾದ ಪ್ರಭಾವಕ್ಕೆ ಒಳಗಾಗಿ ಬಾಳುತ್ತಿದೆ (ದ್ರಾವಿವಿ. ೧೭೦). [ಸಂ. ದ್ವಿಮುಖಿ:]

ದ್ವಿಯಾಮ (ನಾ). ಎರಡು ಜಾವ,–ಯಾಮಂ: ದೂಜಾವಂ, ದುಜಾವಂ, ದ್ವಿಯಾಮಂ (ಶಬ್ದಾನು. ೩೭೭ ಪ್ರಯೋ). [ಸಂ.]

ದ್ವಿರದ (ಗು). ೧. ಎರಡು ಹಲ್ಲುಗಳನ್ನು ಹೊಂದಿದ; ಎರಡು ದಂತಗಳಿಂದ ಕೂಡಿದ. (ನಾ). ೨. ಆನೆ; ಗಜ: "ಮಾತಂಗಃ, ದ್ವಿರದಃ . . . ಸಿಂಧುರಃ– ಈ ೧೪ ಆನೆಯ ಪೆಸರ್" (ಹಲಾಯು. ೩೬-೬೦); ವನ್ಯಗಂಧದ್ವಿರದಮೆ ಕೊಳನಂ ಪೊಕ್ಕವೋಲ್ ಕಾದಿ ತೋರ್ಪೆಂ (ಪಂಪಭಾ. ೧೧-೮೭); ಸಿಂಹಹಸ್ತಾವಲಂಬದ್ವಿರದಂಬೋಲಿರ್ದೆನೀ ಮಾಯೆಯ ಮುಖದೆಡೆಯೊಳ್ (ರಕ್ಷಾಶ. ೨೬); ಹರಿದುದಗ್ಗದ ಸುಪ್ರತೀಕ ದ್ವಿರದ (ಕುಪ್ಯಾಬ್ರೋ. ೪-೭೭). [ಸಂ.]

ದ್ವಿರದಕರ (ನಾ). ಆನೆಯ ಸೊಂಡಿಲು: ಕರಮೆಂಬುದು (ದ್ವಿರದಕರಂ) ಪರಿಭಾವಿಪುದಿಂತಿದಂ ಪ್ರಯೋಗಾಂತರದಿಂ (ವಸ್ತುಕೋ. ೧೩೫-೧೦೨).

[ದ್ವಿರದ + ಕರ$_3$]

ದ್ವಿರದಘಟಾಳಿ (ನಾ).=ದ್ವಿಪಘಟಾಳಿ: ದ್ವಿರದಘಟಾಳಿಯೊತ್ತರದಿ ಪಾಯ್ವೆಡೆಯೊಳ್ನದಿ ಸೇತುಗಟ್ಟಿದಂತಿರೆ (ತ್ರಿಪುವಿ. ೨೪-೨೮೪) [ದ್ವಿರದ + ಘಟಾಳಿ]

ದ್ವಿರದಘಟೆ (ನಾ).=ದ್ವಿಪಘಟಾಳಿ: ವಜ್ರಾಯುಧಾಂಕಂ ದ್ವಿರದಘಟೆಯುಂ . . . ಸಮರದೊಳೋರಂತೆ ಮಾಜಾಂತು ಗೆಲ್ದಂ (ಸುಕುಮಾ. ೭-೪).

[ದ್ವಿರದ + ಘಟೆ]

ದ್ವಿರದಾನನ (ನಾ). ಆನೆಯ ಮುಖವುಳ್ಳವನು; ಗಣಪತಿ; ಗಜಾನನ: ಷಟ್ಪದರಾಜಿಚುಂಬಿತಕಪೋಲಯುಗಂ ದ್ವಿರದಾನನಂ . . . ನಮಗೀಗೆ ಮನೋರಥಂಗಳಂ (ಪಂಚತಂ. ೨೭೨-೧೮). [ದ್ವಿರದ + ಆನನ]

ದ್ವಿರದಾರೋಹ (ನಾ). ಆನೆಯನ್ನು ಏರುವವನು; ಮಾವುತ: ದ್ವಿರದಾರೋಹಂ ಯುದ್ಧೋದ್ಧುರಮನನಾಧೋರಣಂ ನಿಷಾದಿಯೆನಿಕ್ಕುಂ (ವಸ್ತುಕೋ. ೮೪-೧೧). [ದ್ವಿರದ + ಆರೋಹ]

ದ್ವಿರದಾರೋಹಕ (ನಾ). = ದ್ವಿರದಾರೋಹ: ದ್ವಿರದಾರೋಹಕ ವಾಜಿವಾಹಕ ವರೂಥಾರೂಢ ಭೂಪಾಲ ಕಿನ್ನರಯಾತಾಂಕುಶ ಖಾತ ಖಡ್ಗಖರ ಕಾಂಡಾನೇಕಶಸ್ತ್ರಾಂಶುವುಂ ಸ್ಫುರಿತಾಂಗಾಭರಣಾಂಶುವುಂ ಭುವನಮಂ ಜ್ಯೋತಿರ್ಮಯಂ ಮಾಡೆ (ಮಹಾನೇ. ೧೧-೧೧೦).

[ದ್ವಿರದ + ಆರೋಹಕ]

ದ್ವಿರದಾರೋಹಣ (ನಾ). ಆನೆಯನ್ನು ಏರುವಿಕೆ; ಆನೆಸವಾರಿ: ದ್ವಿರದಾರೋಹಣ ಯೋಗ್ಯವೀಥಿ ಹಯವೈಹಾಳಿ ಪ್ರದೇಶಂ (ಪುಷ್ಪಪು. ೪-೩೪).

[ದ್ವಿರದ + ಆರೋಹಣ]

ದ್ವಿರದಾಸ್ಯ (ನಾ). = ದ್ವಿರದಾನನ: ಈ ಮಹಾಪುರುಷಂ . . . ಕ್ರೌಂಚಾರಾತಿಯಾಗಿಯುಂ ಷಣ್ಮುಖನಲ್ತು ಪರಶುಧರನಾಗಿಯುಂ ದ್ವಿರದಾಸ್ಯನಲ್ತು (ಜಗವಿ. ೮-೧೦ ವ). [ದ್ವಿರದ + ಆಸ್ಯ]

ದ್ವಿರದೇಂದ್ರ (ನಾ). ಶ್ರೇಷ್ಠವಾದ ಆನೆ; ಗಜರಾಜ; ಗಜೇಂದ್ರ: ದ್ವಿರದೇಂದ್ರಸ್ಕಂಧಮಂ ರುಗ್ಮಿಣಿಯೊಡನೊಲವಿಂದೇಱಿ . . . ಲೀಲೆಯಿಂ ಬಂದು ಪೊಕ್ಕಂ ಪುರಮಂ (ಮಹಾನೇ. ೭-೪೦); ಆ ದ್ವಿರದೇಂದ್ರಂ ಮೂಱುದಿನಂಬರಂ ನಿರಾಹಾರನಾಗಿರಲ್ (ಪುಣ್ಯಾಸ್ರ. ೨-೮ ವ).

[ದ್ವಿರದ + ಇಂದ್ರ]

ದ್ವಿರಸನ (ನಾ). ೧. ಎರಡು ನಾಲಗೆಯುಳ್ಳುದು; ಹಾವು; ನಾಗ: "ವಿಷಧರಃ, ದಂದಶೂಕಃ . . . ದ್ವಿರಸನಃ, ಕಾದ್ರವೇಯಃ, ದರ್ವೀಕರಃ, ದೃಕ್‌ಧ್ರುತಿಃ, ಭುಜಂಗಮಃ–ಈ ೨೫ಪಾವಿನ ಪೆಸರ್"(ಹಲಾಯು. ೧೦೫-೧೮). ೨. ನಾಗದೇವತೆ: ದ್ವಿರಸನರಟ್ಕೆದರ್ ಕೆಟಗೆ ಮೇಗೆ ದಿವೌಕಸರುಳ್ಕಿದರ್ (ಮಹಾನೇ. ೧೨-೪). ೩. ಆಡಿದ ಮಾತಿಗೆ ತಪ್ಪುವವನು; ವಂಚಕ. ೧, ೩: ಅಪದಸ್ಥಂ ವಿಷವಕ್ತ್ರಕಂ ದ್ವಿರಸನಂ ಮಿತ್ರದ್ವಿಷಂ ವಕ್ರಗಾಮಿ ಪರೋಪದ್ರವಕಾರಿ ದುಷ್ಟಮತಿ ಛಿದ್ರಾನ್ವೇಷಿ . . . ಎನೆ ಪಾವಂ ಪೋಲ್ತು ಲೋಕಕ್ಕೆ ವರ್ತಿಪ ದುರ್ಪೋದ[ರ್ಬೋಧ]ನನುಗ್ರನಂ ತಪಸಿಯೆಂಬರ್ಮೂಢರೀ ಲೋಕದೋಳ್ (ಸಮಪ. ೧೪-೧೪). [ಸಂ.]

ದ್ವಿರಸನಬಾಣ (ನಾ). ಹಾವಿನ ಮಂತ್ರವನ್ನು ಅಭಿಮಂತ್ರಿಸಿ ಪ್ರಯೋಗಿಸುವ ಅಸ್ತ್ರ; ಸರ್ಪಾಸ್ತ್ರ: ದ್ವಿರಸನಬಾಣಂ ವಿಜಯನ ಗರುತ್ಮಶರದಿಂದೆ ನುಚ್ಚುನುಱಿಯಪ್ಪುದುಂ (ಮಹಾನೇ. ೧೨-೨೩೨). [ದ್ವಿರಸನ + ಬಾಣ]

ದ್ವಿರಾಷ್ಟ್ರವ್ಯಾಪಾರ (ನಾ). ಎರಡು ದೇಶಗಳ ನಡುವಿನ ಪರಸ್ಪರ ಮಾರಾಟ, ಕೊಳ್ಳಾಟ; ಅಂತರ ರಾಷ್ಟ್ರೀಯ ವ್ಯಾಪಾರ: ರಕ್ಷಣಾಸುಂಕ, (Protective Tariff), ವಿನಿಮಯಹತೋಟಿ . . . ದ್ವಿರಾಷ್ಟ್ರವ್ಯಾಪಾರ (Bilateral Trade), ಹಾಗು ವಿನಿಮಯ ಒಪ್ಪಂದಗಳು (ಅಂತಸಂ. ೯).

[ದ್ವಿರಾಷ್ಟ್ರ$_0$ + ವ್ಯಾಪಾರ]

ದ್ವಿರುಕ್ತಿ (ನಾ). ೧. [ವ್ಯಾಕ]ಒಂದು ವರ್ಣ ಅಥವಾ ಒಂದು ಪದವನ್ನು ಎರಡು ಸಲ ಉಚ್ಚರಿಸುವಿಕೆ: ಹೀಗೆ ಒಂದು ವಿಶೇಷವಾದ ಅರ್ಥವನ್ನು ಸೂಚಿಸುವುದಕ್ಕಾಗಿ ಪದವನ್ನು ಎರಡು ಬಾರಿ ಪ್ರಯೋಗಿಸುವುದಕ್ಕೆ ದ್ವಿರುಕ್ತಿ ಎಂದು ಹೆಸರು (ಮಧ್ಯಮ. ೧೯೦); ದ್ವಿರುಕ್ತಿ (೧) ದೂರ, ಸಾಮೀಪ್ಯ . . . ಬಾಧೆ ಇವು ಮೊದಲಾದ ಅರ್ಥಗಳು ತೋರುವಲ್ಲಿ ಒಂದೇ ಪದವನ್ನು ಅನೇಕಾವೃತ್ತಿ ಪ್ರಯೋಗಿಸುವರು (ಕೈಪಿಡಿ. ೬೦). ೨. ಒತ್ತಕ್ಷರ; ದ್ವಿತ್ವ: ಸ್ವರಮಾದಿಯಪ್ಪುವವು ಮುಂತಿರೆ ದೀರ್ಘಂ ಮೊದಲೊಳಗುರುಗಕ್ಕುಂ ತದವಾಂತರದೊಳ್ ಣಟಳನತಂಗಳ್ ದೊರೆಕೊಳೆ ತಳೆಗುಂ ದ್ವಿರುಕ್ತಿಯಂ ಬಹುಳತೆಯಿಂ (ಕಾವ್ಯಾವ. ೨೧೯); ಅತ್ವಂ = ದ್ವಿರುಕ್ತಿಯಾದ ನಡು ಕಡೆ ಎಂಬ ಶಬ್ದಂಗಳ ಮೊದಲ ಪದದ ಕಡೆಗೆ ಅಕಾರಂ . . . ಬರ್ಪುದು (ಶಮಾದ. ೧೯೩ ಟೀಕೆ).

ದ್ವಿರುಕ್ತಿಕಾರ್ಯ = ವೀಪ್ಸೆ ಮತ್ತು ಅನುಕರಣ–ಇವುಗಳಲ್ಲಿ ಬರುವ ದ್ವಿರುಕ್ತಿಯ ಸ್ವರೂಪದಲ್ಲಿ ಉಂಟಾಗುವ ವ್ಯತ್ಯಾಸ,–ಬದಲಾವಣೆ: ದ್ವಿರುಕ್ತಿಕಾರ್ಯಗಳು: –(i) ದ್ವಿರುಕ್ತಿಯಲ್ಲಿ ಪ್ರಾರಂಭದ ತುದಿ ಮೊದಲ್ ಶಬ್ದಗಳಿಗೆ ತುತ್ತ ಮೊತ್ತ ಎಂದೂ ಕಡೆ ನಡು ಶಬ್ದಗಳಿಗೆ ಕಟ್ಟ ನಟ್ಟ ಎಂದೂ ರೂಪಗಳು ಬರುವುವು. ಉದಾ:–ತುತ್ತ ತುದಿ, ಮೊತ್ತಮೊದಲ್, ಕಟ್ಟಕಡೆ, ನಟ್ಟನಡು (ಕೈಪಿಡಿ. ೬೦). [ಸಂ.]

ದ್ವಿರೂಢೆ (ನಾ). ಎರಡು ಸಲ ಮದುವೆಯಾದ ಹೆಂಗಸು.

[ಸಂ. ದ್ವಿರೂಢಾ]

ದ್ವಿರೂಪ (ನಾ). ೧. ಎರಡು ಆಕಾರ, – ಸ್ವರೂಪ: ದರಹಾಸನಿಭಾಸಿತ ವಕ್ತ್ರಶೋಭೆಯ ನೆವದಿಂದೆ ಚಂದ್ರವಳಯಂ ತಳೆದತ್ತನಿಶಂ ದ್ವಿರೂಪಮಂ (ಚಂದ್ರಪು. ೨-೧೫). ೨. ಎರಡು ರೂಪವುಳ್ಳುದು: ದ್ವಿರೂಪ–ಬಹುರೂಪತ್ವ . . . ಹವಳದ ನಿರ್ಮಾಣ – ಇವೆಲ್ಲವೂ ಈ ವಂಶದ ವಿಶೇಷ ಲಕ್ಷಣಗಳು (ಪ್ರಾಚಿಶಾ. ೧೩೨). [ಸಂ.]

ದ್ವಿರೇಫ (ನಾ). ಭ್ರಮರ ಎಂಬ ತನ್ನ ಹೆಸರಿನಲ್ಲಿ ಎರಡು ರಕಾರಗಳನ್ನುಳ್ಳ ಕೀಟ ; ತುಂಬಿ : "ಮಧುಕರಃ . . . ಅಳೀ, ದ್ವಿರೇಫಃ – ಈ ೧೩ ತುಂಬಿ" (ಹಲಾಯು. ೪೩-೧೦೧) ; "ಅಳಿ ಚಂಚರೀಕಮಿಂದಿಂದಿರಂ ತುಂಬಿ . . . ಶಿಳೀಮುಖಮದಳಿನಂ ದ್ವಿರೇಫಮದು . . . ಭ್ರಮರಮಕ್ಕುಂ" (ಮಂಗರಾ. ೫೨-೧೦) ; ಸರಸಿಜವೋ ಮೊಗವೋ ಮೇಣ್ದ್ವಿರೇಫವೋ ಲೋಲನಯನಯುಗವೋ ಮನದೊಳ್ಪಿರಿದುಂ ಸಂಶಯಂ (ಕವಿರಾ. ೩-೭೦) ; ಸಿರಿಸದ ಪೂಮಾಲೆಗಳಂ ದ್ವಿರೇಫಮಾಲೆಗಳ ಬಳಸಿದಂತಿಕ್ಕಿದಳಾ ತರುಣಿಯ ಮುಂಗೈಗಳೊಳಂ ಹರಿನೀಲದ ಪಿಂಡುಗಂಕಣಂಗಳನಾಗಳ್ (ಬಾಧಪು. ೧೧-೫೯) ; ತ್ರಾಹಿ ಗಿರಿಜಾನನಾಂಭೋಜಮಗ್ನಮಾದ್ಯದ್ವಿರೇಫ (ಉದ್ಯದೇ. ೩-೩೧). [ಸಂ.]

ದ್ವಿರೇಫಕುಳ (ನಾ). ತುಂಬಿಗಳ ಗುಂಪು ; ಭ್ರಮರಗಳ ಸಮೂಹ : ಅಲರ ತೊಂಗಲ ಮೇಲೆ ಗಾವರಿಪ ದ್ವಿರೇಫಕುಳಂಗಳಿಂ (ಹಾಲಾಸ್ಯ. ೧-೧೧-೪).

[ದ್ವಿರೇಫ + ಕುಳ್ಕ (= ಕುಲ)]

ದ್ವಿರೇಫತತಿ (ನಾ). = ದ್ವಿರೇಫಕುಳ : ನಿಜಶರೀರಸೌರಭಕೆ ಸೋಲ್ತು ತದ್ವ್ಯಾಜದಿಂ ದ್ವಿರೇಫತತಿ ಚಾಪದಿಂ ತೊಲಗೆ (ಮಲ್ಲಿಪು. ೧೪-೨೮೩).

[ದ್ವಿರೇಫ + ತತಿ$_2$]

ದ್ವಿರೇಫಾಳಿ (ನಾ). = ದ್ವಿರೇಫತತಿ : ಶಾಳಿವನಗಂಧಾಂಧದ್ವಿರೇಫಾಳಿ ಕಣ್ಗೊಳಿಸಿತ್ತು (ಪಂಪಭಾ. ೭-೭೦). [ದ್ವಿರೇಫ + ಆಳಿ$_4$ (= ಆಲಿ$_4$)]

ದ್ವಿರ್ಭಾವ (ನಾ). [ವ್ಯಾಕ] ಒತ್ತಕ್ಷರ ; ದ್ವಿತ್ವ : ಅಪ್, ಕ್ಷುತ್ . . . ವಾಕ್ – ಇವು ಮೊದಲಾದುವರ್ಕೆ ಉತ್ವಂ ಬೆರಸಿ ದ್ವಿರ್ಭಾವಮಾಗಿ ಅಪ್ಪು, ಕ್ಷುತ್ತು – ಎಂಬಂತಾದೊಡಂ (ಶಮದ. ೮೬ ಪ್ರಯೋ) ; ಅಕಾರಾಂತ ನಪುಂಸಕಲಿಂಗದ ಏಕವಚನದಲ್ಲಿ ಬರುವ 'ಕೆ' ಕಾರಕ್ಕೆ ವಿಕಲ್ಪವಾಗಿ ದ್ವಿರ್ಭಾವವೂ ಇದೆ – 'ಮರಕ್ಕೆ' ಎಂಬಂತೆ (ಸಂಶೋಧ. ೬೦). [ಸಂ.]

ದ್ವಿಲಿಪಿ (ನಾ). ಎರಡು ಬಗೆಯ ಲಿಪಿ : ಈ ನಿಯಮಕ್ಕೆ ಬಾಧೆ ತರುವ ಮತ್ತೊಂದು ಅಂಶವೆಂದರೆ ಭಿನ್ನಲಿಪಿಗಳನ್ನು ಬಳಸುವ ಮತ್ತು ಭಿನ್ನಭಾಷೆಗಳನ್ನು ಆಡುವ ಪ್ರಾಂತ್ಯಗಳ ಗಡಿಗಳ ಉದ್ದಕ್ಕೂ ಎಡೆಬಿಡದೆ ಇರುವ ದ್ವಿಭಾಷಾ, ದ್ವಿಲಿಪಿವಲಯಗಳು (ಭಾರದ. ೩೯). [ದ್ವಿ + ಲಿಪಿ]

ದ್ವಿವಚನ (ನಾ). [ವ್ಯಾಕ] ಎರಡು ಸಂಖ್ಯೆಯ ವಸ್ತು, ವ್ಯಕ್ತಿ ಮುಂತಾದುವುಗಳನ್ನು ಸೂಚಿಸುವ ಶಬ್ದರೂಪ : ಪ್ರಮಾಣಾಂತರ ಸಂಖ್ಯಾನಿವೃತ್ತ್ಯರ್ಥಂ ದ್ವಿವಚನನಿರ್ದೇಶಂ ಪ್ರಮಾಣಕ್ಕೆ ಮಾಡೆಪಟ್ಟುತ್ತು (ಶತ್ರ್ಯಪ್ರ. ೫೩) ; ಸ್ವೀಕಾರ್ಯಂ ಕನ್ನಡದೊಳಗೇಕ ಬಹುತ್ವಂ ದ್ವಿವಚನ ಮುಚಿತದೆ ಬರ್ಕುಂ (ಶಿಮದ. ೯೪) ; ಫಿಜಿಯನ್ ಎಂಬ ಭಾಷೆಯಲ್ಲಿ ಏಕವಚನ, ದ್ವಿವಚನ, ತ್ರಿವಚನ ಮತ್ತು ಬಹುವಚನವೆಂಬ ನಾಲ್ಕು ಬಗೆಯ ವಚನಗಳಿವೆ (ದ್ರಾವಿವಿ. ೨೭೫). [ಸಂ.]

ದ್ವಿವಪ್ತೃ (ನಾ). ಮಲತಂದೆ ; ಬಲತಂದೆ : "ಬಲದಂದೆ ದ್ವಿವಪ್ತೃವಕ್ಕುಂ" (ಮಂಗರಾ. ೯೨-೧೨). [ಸಂ.]

ದ್ವಿವಾರಂ (ಅ). ಎರಡು ಸಲ ; ಎರಡು ಬಾರಿ : ಮತ್ತಂ ತದವಗಾಹನದಿಂ ದ್ವಿವಾರಮ ಯೇ ಪುಟ್ಟಿ ಪಂಚತ್ವಮನೆಯ್ದಿ (ಪಸಾರ. ೫೪೬). [ಸಂ.]

ದ್ವಿವಿಧ (ನಾ). ಎರಡು ಪ್ರಕಾರ : ನಿನ್ನ ಬೆಸಗೊಂಡ ತತ್ವಮುಂ ಹೇಯೋಪಾದೇಯರೂಪದಿಂ ದ್ವಿವಿಧಮಕ್ಕುಂ (ಆದಿಪು. ೧೦-೬೦ ವ).

[ದ್ವಿ + ವಿಧ]

ದ್ವಿವೇದನೀಯ (ನಾ). [ಜೈನ] ಆತ್ಮನಿಗೆ ಸುಖ ಅಥವಾ ದುಃಖವನ್ನುಂಟುಮಾಡುವ, ಸಾತಾವೇದನೀಯ ಮತ್ತು ಅಸಾತಾವೇದನೀಯ ಎಂಬ ಎರಡು ವಿಧವಾದ ಕರ್ಮಪ್ರಕೃತಿ ; ‖ ಜೀವನಿಗೆ ಸುಖಾನುಭವವನ್ನುಂಟುಮಾಡುವ ಕರ್ಮೋದಯ ಸಾತಾವೇದನೀಯ, ದುಃಖಕ್ಕೆ ಕಾರಣವಾದ ಕರ್ಮೋದಯ ಅಸಾತಾವೇದನೀಯ: ಪಂಚಜ್ಞಾನಾವರಣಂಗಳುಂ ದ್ವಿವೇದನೀಯಂಗಳುಂ ಅಷ್ಟಾವಿಂಶತಿ ಮೋಹನೀಯಂಗಳುಂ . . . ಸತ್ವಪ್ರಕೃತಿಗಳೆಂದುತ್ತರಪ್ರಕೃತಿಗಳು ಶ್ರೀವೀತರಾಗಸರ್ವಜ್ಞರಿಂದು ನಿರೂಪಿಸಲ್ಪಟ್ಟುವು (ಗೂಮ್ಯಸಾ. ೬-೮).

[ದ್ವಿ + ವೇದನೀಯ]

ದ್ವಿವ್ಯಕ್ತಿತ್ವ (ನಾ). ಎರಡು ವಿಧವಾದ ವ್ಯಕ್ತಿತ್ವ ; ದ್ವಿಮುಖ ವ್ಯಕ್ತಿತ್ವ : ಹಾಗೆ ಮಾಡಲು ಯತ್ನಿಸಿದರೂ ದ್ವಿವ್ಯಕ್ತಿತ್ವವು ಹೆಚ್ಚು ದಿನ ಬಾಳಲಾರದು (ಧರ್ಮಶ್ರೀ. ೨೭೯). [ದ್ವಿ + ವ್ಯಕ್ತಿತ್ವ]

ದ್ವಿಶಾಲಾಲಯ (ನಾ). ಎರಡು ಅಂತಸ್ತಿನ ಮನೆ : ತದ್ಗುರು . . . ದ್ವಿಶರೀರರಾಶಿಯೊಳಿರಲ್ಕಕ್ಕುಂ ದ್ವಿಶಾಲಾಲಯಂ (ಜಾತತಿ. ೪-೧೪).

[ಸಂ.]

ದ್ವಿಶಿಖರ (ನಾ). ೧. ಒಂದು ಪರ್ವತದ ಹೆಸರು : ಶೈಲೇಂದ್ರ ದ್ವಿಶಿಖರ . . . ಹಿಮಾದ್ರಿಗಳೆಂಬ ದಶಕುಲಪರ್ವತಂಗಳೇ ಪೂರ್ವೋಕ್ತ ಗಂಧಮಾದನವೆಂಬ ಕೀಲಕಪರ್ವತಕ್ಕೆ ತೆಂಕಣದಿಕ್ಕಿನಲ್ಲಿಹವು (ವಿವೇಕ. ೨೦೫). ೨. [ನಾಟ್ಯ] ಎರಡು ಶಿಖರಹಸ್ತಗಳನ್ನು ಕೂಡಿಸಿ ಹಿಡಿಯುವುದು ; ‖ "ಮತ್ತೊಬ್ಬರನ್ನು ಶಪಿಸುವುದು, ಚಿಟುಕುಮುರಿಯುವುದು, ಸ್ತ್ರೀಯರ ಜಗಳ, 'ಇಲ್ಲ' ಎನ್ನುವುದು ಇವುಗಳನ್ನು ತೋರಿಸುವಾಗ" (ಲಾಸ್ಯರಂ. ೨೪೬ ಗದ್ಯಾನುವಾದ) ; ದ್ವಿಶಿಖರ – ಎರಡುಂ ಶಿಖರಕರಂಗಳ್ ಸರಿಯಾಗೊಂದಲ್ಕೆ ಸಂಯುತಂಗಳೊಳಧಿಕಂ ತರುಣೀ ದ್ವಯಶಿಖರಾಖ್ಯಂ ಪಿರಿದುಂ ಶಾಪಿಸುವ ಚಿಟುಕುಮುರಿವಿನಿತಱೊಳಂ (ಲಾಸ್ಯರಂ. ೨-೮೦). [ದ್ವಿ + ಶಿಖರ]

ದ್ವಿಶಿರ (ನಾ). ಎರಡು ತಲೆಗಳನ್ನು ಹೊಂದಿರುವುದು ; ಭೇರುಂಡಪಕ್ಷಿ : ಪಸಿದೆಯ್ತಂದುಣ್ಬುದಾ ಪೆಣ್ಬುಲಿಯ ಮೊಲೆಯನಲ್ಲಿರ್ದ ಸಾರಂಗಶಾಬಂ ದ್ವಿಶಿರಂ ತಾಯ್ದಪ್ಪಿ ಪಾಯ್ದೆಂಟಡಿಗೆ ಕುಟುಕನೊಲ್ದೂಡುಗುಂ (ಶಬಶಂ. ೨-೬೫). [ದ್ವಿ + ಶಿರ$_2$]

ದ್ವಿಷ (ನಾ). ಹಗೆ ; ಶತ್ರು : "ಅರಿ ವಿರೋಧಿ . . . ದ್ವಿಷಂ ಶಾತ್ರವ ನರಾತಿಯಾಪ್ರತ್ಯನೀಕಂ ಪರಿಪಂಥಿಯೆನಲು ಹಗೆಯಕ್ಕು" (ಮಂಗರಾ. ೮೬-೨೯) ; ಬಲಸಂಪನ್ನಂ ದ್ವಿಷ[ಷ]ನಂ ರಣದೊಳ್ ಭಿನ್ನರಥಂ ಮಾಡಿ ಪಿಡಿದು ತಂದೆನಗಿತ್ತಂ (ಬಂಹರಿ. ೫-೩೧). [ಸಂ.]

ದ್ವಿಷಜ್ಜನ (ನಾ). ಹಗೆಯಾದ ಜನ ; ವೈರಿಜನ ; ಶತ್ರುಜನ: ಶ್ರೀಶೀಲಭದ್ರಂ ದ್ವಿಷಜ್ಜನದುರ್ಭಾರಗಜಾಂಕುಶಂ ಸುಜನರತ್ನಂ ತಾನೆನಲ್ಕೇಂ ಕೃತಾರ್ಥನೊ . . . ಶ್ರೀಧರಂ (ಜಾತತಿ. ೧-೫). [ಸಂ.]

ದ್ವಿಷಜ್ಜಾತ(ನಾ). ೧. ಶತ್ರುವಿನಿಂದುಂಟಾದುದು. ೨. ಶತ್ರುವಿನ ಮಗ: ದ್ವಿಷಜ್ಜಾತಂ ಚೂತಂ ಪಿತೃವನಮದಾಯ್ತುಂಬುಜವನಂ ವಿಷಾದಾಯಂ ಕಾಯಂ ವನಿತೆಗವನಿಂ ಚಿತ್ತಭವನಿಂ (ಲೀಲಾವ. ೭-೮೩). [ಸಂ.]

ದ್ವಿಷತೆ (ನಾ). ಹಗೆತನ ; ಶತ್ರುತ್ವ : ಹುಸಿ ಪರದ್ರೋಹವು ಪರಸ್ತ್ರೀವ್ಯಸನಪೇಯವಸೂಯೆ ಮಾನ್ಯದ್ವಿಷತೆ ಪತಿತಸಮೇತಮತ್ಮಸ್ತುತಿಯೆ ನಿಷ್ಠುವನು ಬಿಸುಟು ತದ್ವಿಪರೀತದಲಿ ವರ್ತಿಸುವನವನೇ ರಾಯನು (ಕುಮ್ಯಾಉ. ೩-೭೦). [ಸಂ. ದ್ವಿಷತಾ]

ದ್ವಿಷತ್ತು (ನಾ). ಶತ್ರು ; ವೈರಿ : "ಅಭಿಯಾತಿಃ, ಅರಾತಿಃ, ಅಮಿತ್ರಂ, ರಿಪುಃ, ಪ್ರತಿಪಕ್ಷಃ, ವಿಪಕ್ಷಃ, ವಿರೋಧೀ, ಅರಿಃ, ಅಹಿತಃ, ಅಸಹನಃ, ಜಿಘಾಂಸುಃ, ಪರಿಪಂಥೀ, ಪರಃ, ಅಸುಹೃತ್, ಪ್ರತ್ಯರ್ಥೀ, ಪ(ತ್ಯ)ರ್ಯವಸ್ಥಾತಾ, ದ್ವೇಷೀ, ವೈರೀ, ಶಾತ್ರವಃ, ಶತ್ರುಃ, ಸಪತ್ನಃ, ಭ್ರಾತೃವ್ಯಃ, ಪ್ರತ್ಯನೀಕಃ, ದ್ವಿಷತ್ – ಈ ೨೪ ಹಗೆ" (ಹಲಾಯು. ೭೫-೩೦೨).

[ಸಂ. ದ್ವಿಷತ್]

ದ್ವಿಷತ್ಸೇನೆ (ನಾ). ಶತ್ರುಸೈನ್ಯ ; ಹಗೆಗಳ ಪಡೆ : ಎರಡುಂ ತೋಳ್ ನೆರವೊಂದೆ ಬಿಲ್ನೆರವಸಂಖ್ಯಾತಂ ದ್ವಿಷತ್ಸೇನೆ ಖೇಚರರಂ ಭೂಚರನೊಂದೆ ಮೆಯ್ಯೊಳೆ ಕೊಲುತ್ತಿರ್ದಪ್ಪಂ (ಪಂರಾಮಾ. ೯-೧೨೨). [ಸಂ. ದ್ವಿಷತ್ಸೇನಾ]

ದ್ವಿಷದ್ಬಳ (ನಾ). = ದ್ವಿಷತ್ಸೇನೆ : ಶ್ರೀರಮಣಿಯಂ ದ್ವಿಷದ್ಬಳಪಾರಾವಾರ ದೊಳುದಗ್ರಭುಜವಿಜಯಮಹಾಮೇರುವನೆ ಕಡೆದು ಪಡೆದಳವಾರುಮ ನಿಟಿಸಿದುದುದಾತ್ತನಾರಾಯಣನಾ (ಪಂಪಭಾ. ೪-೧). [ಸಂ. ದ್ವಿಷದ್ಬಲ]

ದ್ವಿಷದ್ಭೂಮಿಪ (ನಾ). ಶತ್ರುರಾಜ : ತ್ರಿಜಗದ್ವ್ಯಾಪಿತಕೀರ್ತಿಕುಂತಳ ಧರಾಧೀಶಂ ದ್ವಿಷದ್ಭೂಮಿಪವ್ರಜಕಾಲಂ ಹರಿಮೂರ್ತಿ ನಿರ್ಮಳಗುಣಂ (ಮದತಿ. ೧-೩). [ಸಂ.]

ದ್ವಿಷದ್ಯೋಷೆ (ನಾ). ಹಗೆಯ ಹೆಂಡತಿ ; ಶತ್ರುವಿನ ಪತ್ನಿ : ನಾವೆಸಗ ವೇಳ್ದುದಂ ತಾನೆ ಸಾಧಿಸಿಹನಾ ದ್ವಿಷದ್ಯೋಷೆಯ ತಂದು (ಶ್ರೀರಾಮಾ. ೫೬೨-೨೯೨). [ಸಂ. ದ್ವಿಷದ್ಯೋಷಾ]

ದ್ವಿಷನ್ನೃಪ (ನಾ). ಶತ್ರುರಾಜ : ಸಾಧಿತಶತ್ರುಪಡ್ಬಲರನುಕ್ರಮದಿಂ ಚರರಂ ದ್ವಿಷನ್ನೃಪಾಷ್ಟಾದಶತೀರ್ಥದೊಳ್ನಡೆಯಿಸಲ್ನೆಱೆವರ್ (ಶಾಂತಿಪು. ೨-೪೨) ; ಒಂದು ದಿವಸಂ ದ್ವಿಷನ್ನೃಪವಂದಿತಚರಣಂ . . . ತಂದಂ ಜಿನೇಂದ್ರ ದೀಕ್ಷೆಗೆ ಬಗೆಯಂ (ವರ್ಧಮಾ. ೩-೩೬). [ಸಂ.]

ದ್ವಿಷನ್ಮೇದಿನೀಶ್ವರ (ನಾ). = ದ್ವಿಷನ್ನೃಪ : ರಣಜಯೋದ್ಯೋಗಂ ದ್ವಿಷನ್ಮೇದಿನೀಶ್ವರಸಂಹಾರಹವಿರ್ಭುಜಂ ಭುಜಬಳಂ (ಎಳ. II, ೧೩೩-೧೩ ; 982). [ಸಂ.]

ದ್ವಿಷ್ಟ (ಗು). ೧. ದ್ವೇಷದ ; ಹಗೆತನದ ; ಪ್ರತಿಪಕ್ಷದ. (ನಾ). ೨. ತಾಮ್ರ. [ಸಂ.]

ದ್ವಿಷ್ಠ (ಗು). ಎರಡರಲ್ಲಿರುವ ; ಎರಡು ಸ್ಥಳಗಳಲ್ಲಿರುವ. [ಸಂ.]

ದ್ವಿಸಂದಿ (ನಾ). ಒಂದು ಊರಿನ ಹೆಸರು : ದ್ವಿಸನ್ದಿ ಸತ್ತಿವಂಗಲದ ಗಂಗವೂರ ತತ್ ಪಶ್ಚಿಮಶ್ಚಾಮ್ (ಮೈಆರಿ. ೧೯೧೯, ೧೧-೧೦ ; ?). [?]

ದ್ವಿಸಂಧಿಗ್ರಾಹಿ (ನಾ). ಶ್ಲೋಕ, ಕಾವ್ಯ ಮುಂತಾದುವನ್ನು ಎರಡು ಸಲ ಕೇಳಿದ ಕೂಡಲೆ ನೆನಪಿನಲ್ಲಿಡುವ ಸಾಮರ್ಥ್ಯವುಳ್ಳವನು. [ಸಂ. ದ್ವಿಸಂಧಿಗ್ರಾಹಿನ್]

ದ್ವಿಸಪ್ತತಿಪ್ರಕೃತಿ (ನಾ). [ಜೈನ] ಎಪ್ಪತ್ತೆರಡು ವಿಧವಾದ ಪ್ರಕೃತಿಗಳು; P ೧. ಅನ್ಯತರವೇದನೀಯ, ೨. ದೇವಗತಿ, ೩. ನರಕಗತ್ಯಾನುಪೂರ್ವಿ, ೪. ತಿರ್ಯಗ್ಗತ್ಯಾನುಪೂರ್ವಿ, ೫. ಮನುಷ್ಯಗತ್ಯಾನುಪೂರ್ವಿ, ೬. ದೇವಗತ್ಯಾನುಪೂರ್ವಿ, ೭. ಔದಾರಿಕಶರೀರ, ೮. ವೈಕ್ರಯಿಕಶರೀರ, ೯. ಆಹಾರಕಶರೀರ, ೧೦. ತೈಜಸಶರೀರ, ೧೧. ಕಾರ್ಮಣಶರೀರ, ೧೨. ಸಮಚತುರಸಂಸ್ಥಾನ, ೧೩. ನ್ಯಗ್ರೋಧಸಂಸ್ಥಾನ, ೧೪. ಸ್ವಾತಿಸಂಸ್ಥಾನ, ೧೫. ಕುಬ್ಜಸಂಸ್ಥಾನ, ೧೬. ವಾಮನಸಂಸ್ಥಾನ, ೧೭. ಹುಂಡಸಂಸ್ಥಾನ, ೧೮. ಶ್ವೇತವರ್ಣ, ೧೯. ಪೀತವರ್ಣ, ೨೦. ಹರಿತವರ್ಣ, ೨೧. ಅರುಣವರ್ಣ, ೨೨. ಕೃಷ್ಣವರ್ಣ, ೨೩. ತಿಕ್ತ, ೨೪. ಕಟು, ೨೫. ಕಷಾಯ, ೨೬. ಆಮ್ಲ, ೨೭. ಮಧುರ, ೨೮. ವಜ್ರವೃಷಭನಾರಾಚಸಂಹನನ, ೨೯. ವಜ್ರನಾರಾಚಸಂಹನನ, ೩೦. ನಾರಾಚಸಂಹನನ, ೩೧. ಅರ್ಧನಾರಾಚಸಂಹನನ, ೩೨. ಕೀಲಿತಸಂಹನನ, ೩೩. ಅಸಂಪ್ರಾಪ್ತಸೃಕಪಾಟಿಕಾಸಂಹನನ, ೩೪. ಔದಾರಿಕಾಂಗೋಪಾಲನ, ೩೫. ವೈಕ್ರಯಿಕಾಂಗೋಪಾಂಗ, ೩೬. ಆಹಾರಕಾಂಗೋಪಾಂಗ, ೩೭. ಸುಗಂಧ, ೩೮. ದುರ್ಗಂಧ, ೩೯. ಮೃದುಸ್ಪರ್ಶ, ೪೦. ಕರ್ಕಶಸ್ಪರ್ಶ, ೪೧. ಗುರುಸ್ಪರ್ಶ, ೪೨. ಲಘುಸ್ಪರ್ಶ, ೪೩. ಶೀತಸ್ಪರ್ಶ, ೪೪. ಉಷ್ಣಸ್ಪರ್ಶ, ೪೫. ಸ್ನಿಗ್ಧಸ್ಪರ್ಶ, ೪೬. ರೂಪಸ್ಪರ್ಶ, ೪೭. ಅಗುರುಲಘು, ೪೮. ಉಪಘಾತ, ೪೯. ಪರಘಾತ, ೫೦. ಉಚ್ಛ್ವಾಸ, ೫೧. ಪ್ರಶಸ್ತವಿಹಾಯೋಗತಿ, ೫೨. ಅಪ್ರಶಸ್ತವಿಹಾಯೋಗತಿ, ೫೩. ಸ್ಥಿರ, ೫೪. ಅಸ್ಥಿರ, ೫೫. ಶುಭ, ೫೬. ಅಶುಭ, ೫೭. ಸುಸ್ವರ, ೫೮. ದುಸ್ವರ, ೫೯. ಸುಭಗ, ೬೦. ದುರ್ಭಗ, ೬೧. ಪ್ರತ್ಯೇಕಶರೀರ, ೬೨. ಅಯಶ, ೬೩. ಯಶ (ಕೀರ್ತಿ), ೬೪. ಅನಾದೇಯ, ೬೫. ನಿರ್ಮಾಣ, ೬೬. ಆಹಾರಪರ್ಯಾಪ್ತಿ, ೬೭. ಶರೀರಪರ್ಯಾಪ್ತಿ, ೬೮. ಇಂದ್ರಿಯಪರ್ಯಾಪ್ತಿ, ೬೯. ಉಚ್ಛ್ವಾಸನಿಶ್ವಾಸಪರ್ಯಾಪ್ತಿ, ೭೦. ಭಾಷಾಪರ್ಯಾಪ್ತಿ, ೭೧. ಮನಃಪರ್ಯಾಪ್ತಿ, ೭೨. ನೀಚೈರ್ಗೋತ್ರ. ಇದರ ಗಣನೆಯಲ್ಲಿ ಆದಿಪುರಾಣದ ಬೇರೆ ಮುದ್ರಣಗಳಿಗೆ ಹಾಗೂ ತತ್ತ್ವರತ್ನಪ್ರದೀಪಿಕೆ ಮೊದಲಾದ ಜೈನಾಕರಗ್ರಂಥಗಳಿಗೆ ವ್ಯತ್ಯಾಸವು ಕಂಡುಬರುತ್ತದೆ. ಕೆಲವು ಹೊಸದಾಗಿ ಸೇರಿವೆ, ಕೆಲವು ಬಿಟ್ಟುಹೋಗಿವೆ. ಪ್ರಕೃತ ಈ ಗಣನೆಯು ಆದಿಪುರಾಣದ ೧೬-೪೯ ಪಚನದಲ್ಲಿ ಕೊಟ್ಟಿರುವಂತೆ ಪಾಠವನ್ನು ಶುದ್ಧಿಗೊಳಿಸಿ ಕೊಡಲಾಗಿದೆ: ಪಂಚಷಟ್ಕಾಂಗೋಪಾಂಗದ್ವಿಕಂ ಗಂಧದ್ವಿಕಂ ಸ್ಪರ್ಶಾಷ್ಟಕಂ ಅಗುರುಲಘುಂ . . . ನೀಚೈರ್ಗೋತ್ರಂಗಳೆಂಬ ದ್ವಿಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಆದಿಪು. ೧೬-೪೯ ವ). [ದ್ವಿ + ಸಪ್ತತಿ + ಪ್ರಕೃತಿ]

ದ್ವಿಸಪ್ತಲೋಕ (ನಾ). ಈರೇಳು ಲೋಕ ; ಹದಿನಾಲ್ಕು ಲೋಕಗಳು ; P ೧. ಭೂಲೋಕ, ೨. ಭುವರ್ಲೋಕ, ೩. ಸುವರ್ಲೋಕ, ೪. ಮಹರ್ಲೋಕ, ೫. ಜನಲೋಕ, ೬. ತಪೋಲೋಕ, ೭. ಸತ್ಯಲೋಕ, ೮. ಪಾತಾಳ, ೯. ಮಹಾತಳ, ೧೦. ರಸಾತಳ, ೧೧. ತಳಾತಳ, ೧೨. ಸುತಳ, ೧೩. ವಿತಳ, ೧೪. ಅತಳ : ಸಪ್ತಾಶ್ವ ಚಂದ್ರವಸು ಮನುಗಳಂ ಬಡಿದು ದ್ವಿಸಪ್ತಲೋಕಂಗಳ್ಗೆ ಠಾಣೆಯವನಿಟ್ಟು (ಜಿಬಪು. ೪೭-೧೧). [ದ್ವಿ + ಸಪ್ತಲೋಕ]

ದ್ವಿಸರ (ನಾ). ಎರಡೆಳೆಯ ಹಾರ,-ಸರ : ತುಲಸಿಯ ಮಣಿ ಸರೋಜ ಮಣಿಗಳ ಕೊರಳೊಳಷ್ಟಕಷ್ಟಕೆ ಯೇಕಸರ ದ್ವಿಸರ ತ್ರಿಸರಂಗಳಂ ಧರಿಸಿ ಮಿಸುನಿವೆರಸಿ (ಕೃಷ್ಣವಿ. ೨-೧೭). [ದ್ವಿ + ಸರ್ಕ]

ದ್ವಿಸಹಸ್ರಜಿಹ್ವ (ನಾ). ಎರಡುಸಾವಿರ ನಾಲಗೆಯುಳ್ಳವನು; ಆದಿಶೇಷ : ಅಹಿರಾಜಂ ದ್ವಿಸಹಸ್ರಜಿಹ್ವನಱಿಯಂ ವ್ಯಾವರ್ಣಿಸಲ್ ಬಲ್ಲನೇ ಮಹಿಯೊಳ್ ಮಾನವನೊಂದೆ ನಾಲಗೆಯೊಳ್ (ಜಗವಿ. ೨-೩೭). [ಸಂ.]

ದ್ವಿಸಾಗರೋಪಮಾಯುಷ್ಯ (ನಾ). [ಜೈನ] ಎರಡುಸಾಗರದಷ್ಟು ಆಯುಷ್ಯವನ್ನುಳ್ಳ ವ್ಯಕ್ತಿ : ಅಲ್ಲಿಯ ವೈಮಾನಿಕರೆಲ್ಲಂ ಸಪ್ತಹಸ್ತೋತ್ಸೇಧಶರೀರರುಮುತ್ಕೃಷ್ಟದಿಂ ದ್ವಿಸಾಗರೋಪಮಾಯುಷ್ಯರುಂ ಕಾಯಪ್ರವೀಚಾರರುಮಪ್ಪರ್ (ಸುಕುಮಾ. ೧೧-೬೦ ವ). [ಸಂ.]

ದ್ವಿಸ್ವಭಾವ (ನಾ). ೧. ಎರಡು ವಿಧವಾದ ಸ್ವಭಾವ. ೨. [ಜ್ಯೋತಿ] ದ್ವಾದಶರಾಶಿಗಳಲ್ಲಿ ಒಂದು ವರ್ಗ ; ಚರ ಮತ್ತು ಸ್ಥಿರರಾಶಿಗಳ ಧರ್ಮವನ್ನೂ ಹೊಂದಿರುವ ರಾಶಿ ; P ಮೇಷಾದಿ ದ್ವಾದಶರಾಶಿಗಳಲ್ಲಿ ಮೂರು ಬಗೆಗಳಿವೆ. ಕೆಲವು ಚರರಾಶಿ, ಕೆಲವು ಸ್ಥಿರರಾಶಿ, ಕೆಲವು ದ್ವಿಸ್ವಭಾವರಾಶಿ. ಚರರಾಶಿ – ಮೇಷ, ಕರ್ಕಾಟಕ, ತುಲಾ, ಮಕರ. ಸ್ಥಿರರಾಶಿ–ವೃಷಭ, ಸಿಂಹ, ವೃಶ್ಚಿಕ, ಕುಂಭ. ದ್ವಿಸ್ವಭಾವರಾಶಿ – ಮಿಥುನ, ಕನ್ಯಾ, ಧನುಸ್ಸು, ಮೀನ : ಅಂಶಕದೊಳ್ ವರ್ಗೋತ್ತಮದಂಶಕಮಕ್ಕುಂ . . . ಸ್ಥಿರಗೃಹ ಮಧ್ಯಾಂಶಕಮುಂ ದ್ವಿಸ್ವಭಾವದಂತ್ಯಾಂಶಕಮುಂ (ಜಾತತಿ. ೧-೩೮). [ದ್ವಿ + ಸ್ವಭಾವ]

ದ್ವೀಂದ್ರಿಯ (ನಾ). [ಜೈನ] ಸ್ಪರ್ಶನ ಮತ್ತು ರಸನ ಈ ಎರಡು ಇಂದ್ರಿಯಗಳು ಮಾತ್ರ ಇರುವ ಜಂತು : ಸ್ಪರ್ಶನ ರಸನೇಂದ್ರಿಯೋಪೇತಂಗಳಪ್ಪ ಶಂಖಾದಿ ದ್ವೀಂದ್ರಿಯಂಗಳುಂ . . . ಮನುಷ್ಯಾದಿ ಪಂಚೇಂದ್ರಿಯಂಗಳುಮೆಂದಿಂತು ತ್ರಸಜೀವಂಗಳ್ ಚತುರ್ವಿಧಮಕ್ಕುಂ (ಆದಿಪು. ೧೦-೬೦ ವ) ; ಆ ತ್ರಸಜೀವಿಗಳುಂ ದ್ವೀಂದ್ರಿಯಾದಿ ವಿಕಳೇಂದ್ರಿಯಂ ಷಡ್ವಿಧಂ (ಜೀವಸಂ. ೬-೩ ವ) ; ದ್ವೀಂದ್ರಿಯಂಗಳು ಇಱುವೆ ತಗುಣೆ . . . ಮೊದಲಾಗೊಡೆಯವಾಗಿ ಪುಟ್ಟಿ ಕೆಲವು ಸತ್ತು . . . ದುರ್ಗತಿಗಳ್ಗೆ ಸಲ್ವುವು (ಶ್ರಾವಕಾ. ೧೨೩). [ದ್ವಿ + ಇಂದ್ರಿಯ]

ದ್ವೀಪ (ನಾ). ೧. ಸುತ್ತಲೂ ನೀರಂಳ್ಳ ಎತ್ತರವಾದ ಭೂಭಾಗ; ನೀರಿನಿಂದ ಸುತ್ತುವರಿದ ಭೂಮಿ; ಅಂತರೀಪ; ನಡುಗಡ್ಡೆ: ದ್ವೀಪಾದ್ಯಿವರ್ಗಕ್ರಮವಮದುವುವಮಸಂಖ್ಯಾತವಮಾ ಸಂಖ್ಯೆಯೊಳ್ಳಾತ್ಪರ್ಯಂ ಗೆಯ್ವನ್ನ ವೆಂಬಗ್ಗಳಿಕೆಯನಿಸೆದತ್ಕೀಕರಜ್ಞುಪ್ರಪುರಾಣಂ (ಆದಿಪು. ೧-೪೬); ನೆಗಟ್ಟಾ ದ್ವೀಪದ ಮಧ್ಯದಲ್ಲಿ ಕಲಶಂ ಚಂಡಪ್ರಭಂ ಪಂಜರಂ ಭಗಣಂ ಪಲ್ಲವಮಂಬುರಾಶಿಯನೆ . . . ಗಗನಚ್ಛತ್ರದ ಹೇಮದಂಡಮೆನಿಸಲ್ ಸಾಲ್ದತ್ತು ಹೇಮಾಚಲಂ (ಜಗವಿ. ೧-೫೫); ಜಲಧಿ ಮಾತೃಕೆ ವಾರ ಕುಲ ಗಿರಿಗಳು ವಿಭಕ್ತಿ ದ್ವೀಪ ಸರ್ಪಾವಳಿ ಮುನೀಶ್ವರರುಗಳ ಧಾತುಗಡಣದ ವೇದಿಗಳ ತಿಳಿದು . . . ನಡವವರುಗಳು ನಿರ್ಮಳದಲೆಡಹದೆ ಬೆರಸಿ ಕೊಂಬರು ಮುಕ್ತಿರಾಜ್ಯವನು (ಕುವ್ಯಾಳಾ. ೪-೬೪); ಎಲ್ಲಾ ಕಡೆಗಳಲ್ಲಿಯೂ ನೀರಿನಿಂದ ಸುತ್ತಲ್ಪಟ್ಟರುವ ಭೂಭಾಗವು "ದ್ವೀಪವು (Island)" ಎಂದು ಕರೆಯಲ್ಪಡುತ್ತದೆ (ಭೂಗೋಳ. ೧೦). ೨. ನೀರಿನ ಮಧ್ಯದ ಮರಳಿನ ದಿಣ್ಣೆ: "ಸೈಕತಃ, ಪುಳಿನಂ, ದ್ವೀಪಂ (ಸಿಕತಾ) – ಈ ೩ ಮಳಲ ದಿಣ್ಣೆ (ದಿಣ್ಣೆ)" (ಹಲಾಯು. ೧೦೦-೪೪); "ಪುಳಿನಮೆನೆ ಸೈಕತಮೆನಲು ದ್ವೀಪ ವೆಂದೆನಲು ವಂಳಲೊಟ್ಟಲಕ್ಕು" (ಪುಂಗರಾ. ೧೨೨-೧೧). ೩. ಮೇರು ಪರ್ವತದ ಸುತ್ತಲಿನ ಭೂಭಾಗ; P ಪುರಾಣಗಳ ಪ್ರಕಾರ ಜಗತ್ತಿನಲ್ಲಿ ಜಂಬೂ, ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ ಮತ್ತು ಪುಷ್ಕರ ಎಂದೂ ಏಳು ದ್ವೀಪಗಳಿವೆ. ಇವು ಕಮಲದ ದಳದಂತೆ ಮೇರು ಪರ್ವತವನ್ನು ಸುತ್ತುಗಟ್ಟಿವೆ ಮತ್ತು ಒಂದೊಂದೂ ಬೇರೆಬೇರೆ ಸಾಗರದಿಂದ ಬೇರೆಯಾಗಿವೆ. ಈ ದ್ವೀಪಗಳ ಸಂಖ್ಯೆಯ ಬಗೆಗೆ ಭಿನ್ನಾಭಿಪ್ರಾಯಗಳಿವೆ. 'ಸಪ್ತದ್ವೀಪ' ಪರಾ. ೪. ಆಶ್ರಯಂಸ್ಥಾನ. ೫. ಒಂದು ಅಳತೆ: "ವರ್ತನೆಯದ್ಯವತ್ತು ಮಂಡಲಮೆನಿಕ್ಕುವೈವತ್ತು ವಾರ್ತಮೆನಿಕ್ಕವೈವತ್ತು ಸಂಖ್ಯೆವರಲುತ್ತಮದ್ವೀಪಮಕ್ಕು" (ಪುಂಗರಾ. ೯೬-೦೪). ೬. [ಜೈನ] ಜೈನಗ್ರಂಥಗಳಲ್ಲಿ ಹೇಳಿರುವ ಮುಖ್ಯವಾದ ಎಂಟು ದ್ವೀಪಗಳು; P ೧. ಜಂಬೂದ್ವೀಪ, ೨. ಧಾತಕೀದ್ವೀಪ, ೩. ಪುಷ್ಕರವರದ್ವೀಪ, ೪. ವಾರುಣೀವರದ್ವೀಪ, ೫. ಕ್ಷೀರವರ ದ್ವೀಪ, ೬. ಘೃತವರದ್ವೀಪ, ೭. ಇಕ್ಷುವರದ್ವೀಪ, ೮. ನಂದೀಶ್ವರ ದ್ವೀಪ. 'ದ್ವಿತೀಯದ್ವೀಪ', 'ತೃತೀಯದ್ವೀಪ' ಪರಾ. ೭. (ಆಲಂ) ಸಂಪರ್ಕರಹಿತ ಸ್ಥಳ. [ಸಂ.]

ದ್ವೀಪಕಲ್ಪ (ನಾ). ಪೂರುಕಡೆ ನೀರುಳ್ಳ ಭೂಭಾಗ; ಪರ್ಯಾಯ-ದ್ವೀಪ: ಹಿಂದೂದೇಶದ ತೀರ ದಕ್ಷಿಣತುದಿಯಲ್ಲಿಯೂ ಮಲಯಾ ದ್ವೀಪಕಲ್ಪದಲ್ಲಿಯೂ . . . ವಾಸವಾಗಿರುತ್ತಾರೆ (ಪ್ರಾಂಬಯ. ೫-೨೯೦); ಕೊಂಚ ಕಡವೆಯಾಗಿ ಎಲ್ಲಾ ಕಡೆಗಳಲ್ಲಿಯೂ ನೀರಿನಿಂದ ಸುತ್ತಲ್ಪಟ್ಟರುವ ಭೂಭಾಗವು "ಅರ್ಧ ದ್ವೀಪವು (Peninsula), ಪರ್ಯಾಯದ್ವೀಪ, ದ್ವೀಪ ಕಲ್ಪ" ಎಂದು ಕರೆಯಲ್ಪಡುತ್ತದೆ (ಭೂಗೋಳ. ೧೦); ದ್ವೀಪಕಲ್ಪ (ಪೆನಿನ್‌ಸ್ಯುಲ)ದಲ್ಲಿಯ ಬಹಳ ಬಿತ್ತಿದ ಪ್ರದೇಶಗಳಿಂದರೆ ಬಳ್ಳಾರಿಯ ಸುತ್ತಲಿರುವ ಎತ್ತರದ ಪ್ರದೇಶಗಳು (ದಥಾ. ೫). [ಸಂ.]

ದ್ವೀಪಖಂಡ (ನಾ). =ದ್ವೀಪ ೧: ಪೊರಪೊಣ್ಮುತ್ತ ಗೋಚರಿಪುದೊಂದದ್ಭುತಂ ದ್ವೀಪಖಂಡಮದೊ ಸಸ್ಯಹೀನಂ ಪ್ರಾಣರಹಿತಂ (ಶ್ರೀರಾಮಾ. ೧೬೫-೪೬).

[ದ್ವೀಪ + ಖಂಡ]

ದ್ವೀಪಜಾಲ (ನಾ). ನಡುಗಡ್ಡೆಗಳ ಗುಂಪು,– ಸಮೂಹ: ಒಂದ ಕ್ಕೊಂದು ಸಮೀಪದಲ್ಲಿರುವ ಅನೇಕ ದ್ವೀಪಗಳಿಗೆ "ದ್ವೀಪಜಾಲವು (Archipelago)" ಎಂದು ಹೆಸರು. ಏಷ್ಯಾಮೈನರಿಗೂ ಮತ್ತು ಗ್ರೀಸ್ ದೇಶಕ್ಕೂ ಮಧ್ಯದಲ್ಲಿರುವ ದ್ವೀಪಜಾಲಕ್ಕೆ "ನಿರ್ದಿಷ್ಟ ದ್ವೀಪಜಾಲ (The Archipelago)" ಎಂದು ಹೆಸರು (ಭೂಗೋಳ. ೦೦).

[ದ್ವೀಪ + ಜಾಲ$_1$]

ದ್ವೀಪದ್ರಾಕ್ಷಿ (ನಾ). ಒಂದಂ ಬಗೆಯ ಒಣದ್ರಾಕ್ಷಿ: "ದ್ವೀಪದ್ರಾಕ್ಷಿ (ಮೆಡಿಟರೇನಿಯನ್ ಸಮುದ್ರಪ್ರಾಂತಗಳಲ್ಲಿ ಬೆ ಳೆಯುವ ಬೀಜವಿಲ್ಲದ ದ್ರಾಕ್ಷಿಯನ್ನು ಒಣಗಿಸಿ ತಯಾರಿಸಿದ್ದು)" (Currant. ಇಂಕಾ); ದ್ವೀಪ ದ್ರಾಕ್ಷಿ, ಖರ್ಜೂರದ ಹಣ್ಣು . . . ಲವಂಗ ಇವುಗಳನ್ನು ಸಮಭಾಗವಾಗಿ ಚೂರ್ಣವನ್ನು ಮಾಡಿ (ಸಕವೈ. ೮೪). 'ದೀಪದ್ರಾಕ್ಷಿ' ಪರಾ.

[ದ್ವೀಪ + ದ್ರಾಕ್ಷಿ]

ದ್ವೀಪದ್ರಾಕ್ಷೆ (ನಾ). =ದ್ವೀಪದ್ರಾಕ್ಷಿ: ಸಕ್ಕರೆ ದ್ವೀಪದ್ರಾಕ್ಷೆಹಣ್ಣು ಈ ಎರಡುಮಂ ಜೇನ ತುಪ್ಪದಲ್ಲಿ ಕಲಸಿ ಮೆದ್ದು ತಱುವಾಯೊಳ್ ತಣ್ಣೀರಂ ಕುಡಿಯಲ್ ಪಿತ್ತಂ ಕಿಡುವುದು (ಧೂರ್ತೋಕ್ತ.೯-೦೦ ಟೀಕು). 'ದೀಪದ್ರಾಕ್ಷೆ' ಪರಾ. [ದ್ವೀಪ + ದ್ರಾಕ್ಷೆ]

ದ್ವೀಪಧಾತ್ರಿ (ನಾ). = ದ್ವೀಪ ೧: ಧರಣಿಜಾಪ್ರಾರ್ಥನಾಶೀರ್ವಾದ ವಿಂದಿರುಗೊಳೆ ಬಂದುದೆನೆ ಧಾವಿಸಿತ್ತೀರ್ದು ತನಗಭಮುಖಂ ಆ ದ್ವೀಪಧಾತ್ರಿ (ಶ್ರೀರಾಮಾ. ೪೦೮-೪೦೩). [ದ್ವೀಪ + ಧಾತ್ರಿ]

ದ್ವೀಪಪತಿ (ನಾ). ದ್ವೀಪದ ಒಡೆಯ,–ರಾಜ: ಶರಧಿಗಳ ವಳಯದಖಿಳ ದ್ವೀಪಪತಿಗಳ ತಲೆಗಳನು ಹೊಡೆದು (ತೊರಣಾ. ೧-೮-೩೭).

[ದ್ವೀಪ + ಪತಿ$_3$]

ದ್ವೀಪವತಿ (ನಾ). ೧. (ಮಧ್ಯೆಮಧ್ಯೆ ದ್ವೀಪವನ್ನು ಹೊಂದಿರುವ) ನದಿ; ಹೊಳೆ; ತೊರೆ: "ಸಿಂಧುಃ . . . ದ್ವೀಪವತೀ, ಸರಿತ್, ರೋಧೋವಕ್ತ್ರಾ – ಈ ೨೧ ತೊಟಿ" (ಹಲಾಯು. ೦೦೦-೪೪); "ನದಿ ತರಂಗಿಣಿ ತಟಿನಿ . . . ದ್ವೀಪವತಿಯಾಪಗೆಯೆನೆ ತೊಟಿಗೆ ನಾಮಂ" (ಮಂಗರಾ. ೦೩೨-೦೦). ೨. ಭೂಮಿ. [ಸಂ. ದ್ವೀಪವತೀ]

ದ್ವೀಪಸಮುದಾಯ (ನಾ). = ದ್ವೀಪಜಾಲ: (Archipelago. ಪಾರಿನಿ. ೬).

[ದ್ವೀಪ + ಸಮುದಾಯ]

ದ್ವೀಪಾಂತರ (ನಾ). ಬೇರೆ ದ್ವೀಪ; ದೂರದಲ್ಲಿರುವ ದ್ವೀಪ; ಪರದೇಶ: ದ್ವೀಪಾಂತರಮಂ ಶ್ವೇತದ್ವೀಪಸ್ಥೀ ನೋಡಲೆಂದು ಬಂದಳೊ (ಕಾದಂಪು. ೬೬೬); ವಾತಾಪಿಪುರವರೇಶ್ವರನುಮಶ್ವಮೇಧಯಜ್ಞದೀಕ್ಷಿತನುಂ ದ್ವೀಪಾಂತರಪ್ರಕಟಪ್ರಭಾವನುಮೆನಿಸಿದ ಪುಲಿಕೇಶಿದೇವನಂ (ಗದಾಯು. ೨-೬ ಪ).

ದ್ವೀಪಾಂತರಕ್ಕೆ ಕಳುಹಿಸು = ಕರಿನೀರಿನ ಶಿಕ್ಷೆಗೆ ಒಳಗುಮಾಡು; ದೇಶಭ್ರಷ್ಟನನ್ನಾಗಿಸು. [ದ್ವೀಪ + ಅಂತರ]

ದ್ವೀಪಾಂತರವಾಸ (ನಾ). ತಪ್ಪು ಮಾಡಿದವರಿಗೆ ದೂರದ ದ್ವೀಪದಲ್ಲಿ ವಾಸಮಾಡುವಂತೆ ಕೊಡುವ ಒಂದು ಬಗೆಯ ಶಿಕ್ಷೆ; ಕರಿನೀರಿನ ಶಿಕ್ಷೆ: ದ್ವೀಪಾಂತರವಾಸ ಮಾಡಬೇಕೆಂಬ ರಾಜದಂಡನೆಗೆ ಗುರಿಯಾದವರು ಇರುವದಕ್ಕಾಗಿ ಈ ದ್ವೀಪಗಳಲ್ಲಿ ಸ್ಥಳವು ಏರ್ಪಾಟಾಗಿದೆ (ಭೂಗೋಳ. ೭೦).

[ದ್ವೀಪಾಂತರ + ವಾಸ$_3$]

ದ್ವೀಪಾಂತರಶಿಕ್ಷೆ (ನಾ). ತಪ್ಪು ಮಾಡಿದವರಿಗೆ ದ್ವೀಪಾಂತರವಾಸವನ್ನು ದಂಡನೆಯಾಗಿ ವಿಧಿಸುವ; ಒಂದಂ ಬ ಗೆ ಯ ಕಠಿನಶಿಕ್ಷೆ; ಕರಿ ನೀರಿನ ಶಿಕ್ಷೆ: ರಾಜಮೋಹನನಿಗೂ ಭಿಕ್ಷುವಿಗೂ ದ್ವೀಪಾಂತರಶಿಕ್ಷೆ ಯಾಯಿತು (ಬಂಕಪು. ೪೨). [ದ್ವೀಪಾಂತರ + ಶಿಕ್ಷೆ]

ದ್ವೀಪಿ (ನಾ). ೧. ಹುಲಿ; ಶಾರ್ದೂಲ; ವ್ಯಾಘ್ರ: "ವ್ಯಾಘ್ರಃ, ದ್ವೀಪೀ, ಪುಂಡರೀಕಃ, ತರಕ್ಷುಃ, ಶಾರ್ದೂಲಃ, ಚಿತ್ರಕಾಯಃ, ಮೃಗಾರಿಃ – ಈ ೭ ಹುಲಿ" (ಹಲಾಯು. ೩೮-೭೩): ನಿನಗಾದುಪಹತಿಯೆನಗಾದಪುದು ನಡೆಯೆಂ ದೆರಡುಂ ಆ ಕಪಟತಾಪಸರೂಪಧಾರಿಯಪ್ಪ ದ್ವೀಪಿಯ ಸಮೀಪಕ್ಕೆ ಬಂದು ಪೊಡೆವಟ್ಟು (ಪಂಚತಂ. ೩೩೩-೦೦): ಸಳನೆಂಬ ನೃಪಂ ಸೆಳೆಯಿಂದೆ ಕೋಪನ ದ್ವೀಪಿಯನೊಂದನೊರ್ವ್ವ ಮುನಿ ಪೊಯ್ಸಳೆಯೆಂದಡೆ ಪೊಯ್ದು ಗೆಲ್ದು (ಎಳ. IV, ನಾಗಮಂ. ೭೦-೨ ; 1178). ೨. ಚಿರತೆ.

[ಸಂ. ದ್ವೀಪಿನ್]

ದ್ವೇಷ (ನಾ). ೧. ಹಗೆತನ; ವಿರೋಧ; ವೈರ: ಷೋಡಶವಿಕಾರ – ರಾಗ, ದ್ವೇಷ, ಕಾಮ, ಕ್ರೋಧ, ಲೋಭ . . . ಶ್ರದ್ಧೆ ಈ ಹದಿನಾರೆಂದು ವಾಸುದೇವಮನನದಲ್ಲಿರುವದು (ಅಮೃತ. ೬-೩೬ ಟೀಳು); ಅವಿದ್ಯಾ, ರಾಗ, ದ್ವೇಷ, ಭಯ, ಮೋಹ ಮುಂತಾದುವು ಅಥವಾ ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ, ಅಭಿನಿವೇಶ – ಇವು (ಬೃಹದ್ಧಾ. ೪೩ ಅಡಿಟಿ); ಸ್ಮೃತಿ . . . ದ್ವೇಷ ಮೊದಲಾದುವು ಮನಸ್ಸಿನಿಂದ ಹುಟ್ಟುವುವು (ಧಾತತ್ತ್ವ. ೨೯೬); ನಿಮ್ಮಿಬ್ಬರ ಮೇಲೂ ಅಕಿಗೆ ದ್ವೇಷವಿದೆ (ಪದ್ಮಕ. ೧೩೮). ೨. ಅಪೇಕ್ಷೆ ಇಲ್ಲದಿರುವಿಕೆ; ಅರುಚಿ: ಬೇಕೆಂಬ ಇಚ್ಛೆಯೇ ರಾಗ, ಬೇಡವೆಂಬ ಇಚ್ಛೆಯೇ ದ್ವೇಷ(ಹಿಂದಸಾ. ೫೩); ದ್ವೇಷ ಅಥವಾ ಅನಿಚ್ಛೆಯು ನಿವೃತ್ತಿಕಾರಣ (ಹಿಂದಸಾ. ೬೪). ೩. ಜಾಗುಪ್ಸೆ: ಅಸಹ್ಯ; ಹೇವರಿಕೆ. ೪. ಕೋಪ; ಕ್ರೋಧ: ದ್ವೇಷಂ ವಿರಹಿಗಳೊಳ್ ಪರಿತೋಷಂ ಮಧುಮತದೊಳಾಗೆ ಬಂದರ್ ಕೆಲರುಂ ಯೋಷಿಜ್ಜನವುಲರಂಬಿನ ವೇಷಂ ಗೊಂಡಂತೆ ನೆಱಿದು ಪೂದುಡುಗೆಗಳಂ (ಶಾಂತಿಪು. ೮-೩೩).

ದ್ವೇಷ ಸಾಧಿಸು=ಹಗೆಯನ್ನು ಸಾಧನೆಮಾಡು: ಇಷ್ಟು ದ್ವೇಷ ಸಾಧಿಸಿ, ಆ ಮಕ್ಕಳಾದರೂ ಸುಖವಾಗಿದ್ದಾರೆಯೇ ? (ಕಬುಕ. ೧೧೭).

[ಸಂ.]

ದ್ವೇಷಣ (ನಾ). ೧. ಶತ್ರುತ್ವ; ಹಗೆತನ; ವೈರ. ೨. ಶತ್ರು; ಹಗೆ; ವೈರಿ. [ಸಂ.]

ದ್ವೇಷಿ (ನಾ). ಹಗೆ; ಶತ್ರು; ವೈರಿ: "ಅಭಿಯುತಃ . . . ದ್ವೇಷೀ, ವೈರೀ . . . ದ್ವಿಷತ್–ಈ ೨೪ ಹಗೆ" (ಹಲಾಯು. ೭೫-೩೦೨).

[ಸಂ. ದ್ವೇಷಿನ್]

ದ್ವೇಷಿಸು (ಕ್ರಿ). ೧. ಹಗೆತನ ಸಾಧಿಸು; ಶತ್ರುತ್ವವನ್ನು ಬೆಳೆಸು: ನಾನು ಪ್ರೀತಿಯನ್ನು ದ್ವೇಷಿಸುತ್ತೇನೆ; ಆ ಕಾರಣ ದ್ವೇಷವನ್ನು ಪ್ರೀತಿಸುತ್ತೇನೆ (ಕಾತ್ಯಲ್ಕ. ೩೮೬). ೨. ಹೇವರಿಸು; ಅಸಹ್ಯಪಡು: ಅವನು ತೀರಾ ದ್ವೇಷಿಸುವ ಹುರಿಹಿಟ್ಟನ್ನು ತಿನ್ನೆಂದರೆ ಅವನಿಗೆ ಕೋಪ ಉಂಟಾಗದೆ ಇರುವುದೇ ? (ಮೊಗ್ಗು. ೩೬). [ದ್ವೇಷ + – ಇಸು]

ದ್ವೇಷ್ಟೃ (ನಾ). = ದ್ವೇಷಿ. [ಸಂ.]

ದ್ವೇಷ್ಯ (ಗು). ೧. ಹಗೆತನದ; ಶತ್ರುತ್ವದ; ವೈರದ. (ನಾ). ೨. ಶತ್ರು; ವೈರಿ: "ಅಕ್ಷಿಗತಃ, ದ್ವೇಷ್ಯಃ, ಪ್ರಣಾಯ್ಯಃ, ಅಸಮ್ಮತಃ – ಈ ೪ ಅನಿಷ್ಟಂ" (ಹಲಾಯು. ೬೦-೩೦೧). [ಸಂ.]

ದ್ವೈಗುಣಿಕ (ನಾ). ಹೆಚ್ಚು ಬಡ್ಡಿಗೆ ಹಣ ಕೊಡುವವನು; ದುಪ್ಪಟ್ಟು ಬಡ್ಡಿ ಹಾಕುವವನು; ಕುಸೀದಕ: "ದ್ವೈಗುಣಿಕಃ, ವಾರ್ಧುಷಿಕಃ, ವೃದ್ಧ್ಯಾಜೀವಃ, ಕುಸೀದಕಃ – ಈ ೪ ಬಡ್ಡಿಗುಡುವವಂ" (ಹಲಾಯು. ೪೩-೧೦೭); "ಕುಸೀದಕನು ವಾರ್ಧುಷಿಕನಾ ದ್ವೈಗುಣಿಕ[ಪಾಠಾಂ. ದ್ವೈತಗುಣಿ] ನೆನಲು ವೃಧ್ಯಾಜೀವನೆನೆ ಬಡ್ಡಿಗೊಡುವನಕ್ಕುಂ" (ಮಂಗರಾ. ೧೦೨-೦).

[ಸಂ.]

ದ್ವೈತ (ನಾ). ೧. ಉಭಯಂತ್ವ; ಎರಡಾಗಿರಂವಿಕೆ; ದ್ವಿತ್ವ; ದ್ವಂದ್ವ ಸ್ಥಿತಿ: ಕೂರ್ಮೆ ಬಿಸುಗೆಯಿಂ ದ್ವೈತ ತಾನದ್ವೈತಮುಪ್ಪುದೊಂದುಚ್ಚರಿಯೆ (ಶ್ರೀರಾಮಾ. ೦೨-೩೧೫); ಕಾಯುಕೆ ಕಣ್ಣಳೆರಡಿರ್ಪ ಮಾಳ್ಕೆಯಿಂ ದ್ವೈತ ವಿರ್ದುದು ಸೀತೆ ರಾಮರೊಳಗದ್ವೈತಿ ತಾನಾಗಿ! (ಶ್ರೀರಾಮಾ. ೫೫-೩೦). ೨. ಎರಡು; ಜೊತೆ; ಜೋಡಿ: "ದ್ವಂದ್ವಮುಭಯಂ ದ್ವಯಂ ಯುಗ್ಮ ಯುಮಳಂ ಯುಗಂ ದ್ವೈತಮೆನಲುಯೆರಡಕ್ಕೆ ಪೆಸರಕ್ಕು" (ಮಂಗರಾ. ೦೨೯-೦). ೩. [ತತ್ತ್ವಶಾ] ಜೀವ ಮತ್ತು ಈಶ್ವರಭೇದವನ್ನು ಪ್ರತಿಪಾದಿಸುವ ಒಂದು ತತ್ತ್ವ: ಜೀವಾತ್ಮ ಮತ್ತು ಪರಮಾತ್ಮ ಬೇರೆ ಬೇರೆ ಎಂದು ಹೇಳುವ, ಮಧ್ವಾಚಾರ್ಯರಿಂದ ಸ್ಥಾಪಿತವಾದ ತತ್ತ್ವ: ಪ್ರಸಿದ್ಧವಾದ ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಗಳೆಂಬ ಶ್ರಿಮತಗಳಲ್ಲಿ ಒಂದು : ಕೋವಿವರ ಸಂಗವನುಳಿದು ಮಾಯಾ ವಿಲಾಸವ ನೆಲೆಯ ನೋಡದೆ ಸಾವುತಿಹುದೇ ದ್ವೈತ (ಕುವ್ಯಾಉ. ೪-೭೫); ಗೀತೆಯಲ್ಲಿ ಆಚಾರ್ಯಶ್ರೇಷ್ಠ ಶಂಕರರು ಅದ್ವೈತವನ್ನು ಕಂಡರೆ ಮಧ್ವರು ದ್ವೈತವನ್ನು ಕಾಣುತ್ತಾರೆ (ಧರ್ಮಸಾ. ೧೫೯). ೪. ಸಂದೇಹ; ಶಂಕೆ; ಸಂಶಯ. ೫, ೪: ದ್ವೈತವ ಹೇಳುವ ಹಿರಿಯರೆಲ್ಲರು ದ್ವೈತಕ್ಕೊಳಗಾದರು ನಿಸ್ಸಂಸಾರವ ಹೇಳುವ ಹಿರಿಯರೆಲ್ಲರು ಸಂಸಾರದ ಸಾರವ ಚಪ್ಪರಿದು ಕೆಟ್ಟರು (ವೀತೀಮಾ. ೦೪-೫೦). [ಸಂ.]

ದ್ವೈತದರ್ಶನ (ನಾ). = ದ್ವೈತಮತ: ಶ್ರೀಮಧ್ವಾಚಾರ್ಯರು . . . ಪ್ರತಿಪಾದಿಸಿರುವ ದ್ವೈತವೇದಾಂತವನ್ನು ದ್ವೈತದರ್ಶನವೆಂದು ಕರೆಯುತ್ತಾರೆ (ಧಾರವಿ. ೩೭೩). [ದ್ವೈತ + ದರ್ಶನ]

ದ್ವೈತಪಾಶುಪತ (ನಾ). [ಶೈವ] ಶೈವಮತದ ಎಂಟು ಪ್ರಭೇದಗಳಲ್ಲಿ ಒಂದು : ಶೈವಮತದಲ್ಲಿ ನಾವು ಎಂಟು ಪ್ರಭೇದಗಳನ್ನು ಕಾಣಬಹುದು. (೧) ದ್ವೈತ ಪಾಶುಪತ, (೨) ದ್ವೈತಶೈವಸಿದ್ಧಾಂತ, (೩) ದ್ವೈತಾದ್ವೈತ ಲಕುಲೀಶಪಾಶುಪತ, (೪) ವಿಶಿಷ್ಟಾದ್ವೈತಶೈವ, (೫) ವಿಶೇಷಾದ್ವೈತ (ವೀರಶೈವ), (೬) ಸಂದಿಕೇಶ್ವರ ಶೈವ, (೭) ರಸೇಶ್ವರಶೈವ, (೮) ಕಾಶ್ಮೀರಶೈವ (ಧಾರವಿ. ೩೦೦). [ದ್ವೈತ + ಪಾಶುಪತ]

ದ್ವೈತಭಕ್ತಿ (ನಾ). ಜೀವಾತ್ಮವು ಪರಮಾತ್ಮನಿಗೆ ತೋರುವ ಭಕ್ತಿ: ದ್ವೈತಭಕ್ತಿಯಲ್ಲಿ ಕೊನೆಯವರೆಗೂ ಭೇದವು ಇದ್ದೇ ಇರುವುದು . . . ಈ ದ್ವೈತಭಕ್ತಿಯಲ್ಲಿ ಸಾಮರಸ್ಯವಿಲ್ಲದುದರಿಂದ ಇದು ಸಂಸಾರಬಂಧವಿಮೋಚಕವಲ್ಲ (ಶಿವಾಸೂ. ೧೩೫-೪೫) : ಸದಮಲದ್ವೈತಭಕ್ತಿಯು ನವವಿಧಮಾಗಿ ಚದುರೆ ತೋರುವುದದ ವಿವರಿಪೆ (ಪೀರಾಂಚ. ೯). 'ಅದ್ವೈತಭಕ್ತಿ' ಪರಾ. [ದ್ವೈತ + ಭಕ್ತಿ]

ದ್ವೈತಭಾವನೆ (ನಾ). ಜೀವಾತ್ಮ ಮತ್ತು ಪರಮಾತ್ಮ ಎರಡೂ ಬೇರೆ ಬೇರೆ ಎಂದು ತಿಳಿಯುವಿಕೆ: ಭಕ್ತಸ್ಥಲದಿಂದ ಐಕ್ಯಸ್ಥಲಕ್ಕೆ ದ್ವೈತಭಾವನೆಯಿಂದ ಅದ್ವೈತಸಿದ್ಧಿಗೆ ಮುಂದುವರಿಯುವುದೇ ಸಾಧನೆ (ಶೂನ್ಯಸಂ. ೭).

[ದ್ವೈತ + ಭಾವನೆ]

ದ್ವೈತಮತ (ನಾ). ಮಧ್ವಾಚಾರ್ಯರಿಂ ಪ್ರತಿಪಾದಿಸಿದ ಮಂತ; ಆತ್ಮ ಮತ್ತು ಪರಮಾತ್ಮರಲ್ಲಿ ಭೇದವನ್ನು ಹೇಳುವ ಮಂತ: ಜೀವರಿಗೂ ಪರಮಾತ್ಮನಿಗೂ ವಾಸ್ತವಾರ್ಥಿಕವಾದ ಭೇದವನ್ನು ಇಹದಲ್ಲಿಯೂ ಪರದಲ್ಲಿಯೂ ಸ್ಥಾಪಿಸಿರುವುದರಿಂದ ಇವರ ಮತಕ್ಕೆ ದ್ವೈತಮತವೆಂಬ ಹೆಸರು ಬಂದಿದೆ (ಧಾರವಿ. ೩೭೪). P "ಶ್ರೀಮಧ್ವಾಚಾರ್ಯರ ಸಿದ್ಧಾಂತತತ್ತ್ವಗಳಾದ ಮೇಲೆ ಉದಾಹರಿಸಿದ ಒಂಭತ್ತು ಪ್ರಮೇಯಂಗಳ ಸಾರಾಂಶವನ್ನು ಅವರ ಗ್ರಂಥದ ಆಧಾರದಿಂದಲೇ ಸಂಗ್ರಹರೂಪವಾಗಿ ಪ್ರತಿಪಾದಿಸಲಾಗಿದೆ. ೧. ಶ್ರೀಹರಿಯು ಸರ್ವೋತ್ತಮನು. ೨. ಈ ಜಗತ್ತು ಸತ್ಯವಾದುದಂ (ವಿಂಧ್ಯೆಯಲ್ಲ, ಸುಳ್ಳಲ್ಲ). ೩. ಚೇತನ, ಅಚೇತನ ಮತ್ತು ಈಶ್ವರ ಇವರಿಗಿರುವ ಭೇದವು ಸತ್ಯವಾದಂದು (ಪಾರಮಾರ್ಥಿಕವು). ೪. ಸಕಲಜೀವರೂ ಶ್ರೀಹರಿಗೆ ಅಧೀನರು ಮಂತ್ತು ಅವನ ದಾಸರು. ೫. ಜೀವರು ಪರಸ್ಪರ ತಾರತಮ್ಯವುಳ್ಳವರು. ೬. ಜೀವನಿಗೆ ಸ್ವರೂಪಾನಂದವುಂಟಾಗುವುದೇ ಮುಕ್ತಿಯಂ. ೭. ಅಂತಹ ಮೋಕ್ಷಕ್ಕೆ ನಿರ್ಮಲವಾದ ಭಕ್ತಿಯು ಮುಖ್ಯಸಾಧನವು. ೮. ಪ್ರತ್ಯಕ್ಷ, ಅನುಮಾನ ಮತ್ತು ಆಗಮಂ ಎಂಬುದಾಗಿ ಪ್ರಮಾಣಗಳು ಮೂರು ಬಗೆಯಾಗಿವೆ. ೯. ಸಕಲ ವೇದಗಳಿಂದಲೂ ಮುಖ್ಯವಾಗಿ ಪ್ರತಿಪಾದ್ಯನು ಶ್ರೀಹರಿಯು. ಈ ಪ್ರಮೇಯನವರತ್ನಮಾಲಿಕೆಯೇ ಶ್ರೀಮದಾನಂದತೀರ್ಥರು ಲೋಕಕ್ಕೆ ಧಾರೆಯೆರೆದಿರುವ ಸಿದ್ಧಾಂತದ ಸಾರವು" (ಧಾರವಿ. ೩೭೫).

[ದ್ವೈತ + ಮತ]

ದ್ವೈತಮಾರ್ಗ (ನಾ). = ದ್ವೈತಮತ: ದ್ವೈತಮಾರ್ಗಕ್ಕೆ ಪುಟಿತ್ತು ಎಂಬುದು ಎಂದೆಂದಿಗೂ ಸಟೆ (ಶಾನವ. ೧೭-೧೫). [ದ್ವೈತ + ಮಾರ್ಗ]

ದ್ವೈತವಾದ (ನಾ). ಜೀವಾತ್ಮ ಮಂತ್ತು ಪರಮಾತ್ಮರಲ್ಲಿರುವ ಭೇದವನ್ನು ಕುರಿತು ಹೇಳುವ ವಾದ; Pಮಧ್ವಾಚಾರ್ಯರಂ ಸಾರಿದ ಸಿದ್ಧಾಂತ. "ಒಂದೇ ತತ್ತ್ವದಿಂದ ಎಂಬ ವಾದವನ್ನು ಏಕತ್ವವಾದ ಅಥವಾ ಏಕತತ್ತ್ವವಾದ ಎನ್ನುತ್ತಾರೆ. ಎರಡರಿಂದ ಎನ್ನುವ ವಾದವನ್ನು ದ್ವೈತವಾದ, ದ್ವಿತತ್ತ್ವವಾದ(ಡ್ಯೂಯಲಿಸಂ) ಎನ್ನುತ್ತಾರೆ" (ಕವಿಕೋ. IX, ೮೮೦). [ದ್ವೈತ + ವಾದ]

ದ್ವೈತವೇದಾಂತ (ನಾ). = ದ್ವೈತಮತ: ಜೀವ ಜಗತ್ತುಗಳು ಪರಮಾತ್ಮನಿಗೆ ಶರೀರರೂಪದಿಂದ ಸಂಬಂಧಪಟ್ಟಿರುವುದನ್ನು ಸಹಿಸಲಾಗದೆ, ಅವುಗಳಲ್ಲಿ ಪರಸ್ಪರ ಪ್ರತ್ಯೇಕತೆಯನ್ನು ಪ್ರತಿಪಾದಿಸಲು ದ್ವೈತವೇದಾಂತವು ಹೊರಟಿತು (ಶಕ್ತಿ. ೦೬). [ದ್ವೈತ + ವೇದಾಂತ]

ದ್ವೈತಸಿದ್ಧಾಂತ (ನಾ). = ದ್ವೈತಮತ: ದ್ವೈತಸಿದ್ಧಾಂತವನ್ನು ಸ್ಥಾಪಿಸಿದ ಆಚಾರ್ಯಪುರುಷರಾದ ಶ್ರೀಮಧ್ವಾಚಾರ್ಯರು ಉಡುಪಿಗೆ ಸಮೀಪದಲ್ಲಿರುವ ಶಿವಳ್ಳಿಯಲ್ಲಿ . . . ಜನಿಸಿದರು (ಕಣಾಅ. ೦೬೧); ಮೋಕ್ಷದಲ್ಲಿಯೂ ಜೀವರು ಪರಸ್ಪರ ತಾರತಮ್ಯಸಹಿತರಾಗಿಯೇ ಇದ್ದಾರೆಂಬುದು . . . ದ್ವೈತಸಿದ್ಧಾಂತದಲ್ಲಿ ಪ್ರತಿಪಾದಿಸಿರುವರು (ಭಾರದ. ೩೭೭).

[ದ್ವೈತ + ಸಿದ್ಧಾಂತ]

ದ್ವೈತಾದ್ವೈತ (ನಾ). ೧. ದ್ವೈತ ಮಂತ್ತು ಅದ್ವೈತಸಂಪ್ರದಾಯ: ಇತರ ಮತದ ದ್ವೈತಾದ್ವೈತಶಾಸ್ತ್ರವ ಕೇಳಿ ಅಹುದೋ ಅಲ್ಲವೋ ಏನೋ ಎಂತೋ ಎಂದು ಸಂದೇಹಿಸಿದಲ್ಲಿ ಅದು ಅಜ್ಞಾನ ನೋಡಾ (ಸಿದ್ಧೇಶ್ವ. ೨೦-೫೬). ೨. [ವೀಶೈ] ದ್ವೈತದಿಂದ ಪ್ರಾರಂಭಿಸಿ ಅದ್ವೈತದಲ್ಲಿ ಕೊನೆಗೊಳ್ಳುವ ಮತ; ವೀರಶೈವಮತ: "ವೀರಶೈವಧರ್ಮವನ್ನು ದ್ವೈತಾದ್ವೈತವೆಂದೂ ಶಕ್ತಿವಿಶಿಷ್ಟಾದ್ವೈತವೆಂದೂ ಕರೆಯುವುದುಂಟು" (ಶೂನ್ಯಸಂ. ೧೩೫); ಶಿವಶರಣರ ತತ್ವಸಿದ್ಧಾಂತಕ್ಕೆ ಶಕ್ತಿವಿಶಿಷ್ಟಾದ್ವೈತ, ದ್ವೈತಾದ್ವೈತ, ಪಟ್ಸ್ಥಲಸಿದ್ಧಾಂತ, ಭೇದಾಭೇದ ಇವೇ ಮೊದಲಾದ ಪೆಸರುಗಳಿವೆ (ಭಾರದ. ೩೦೮). [ದ್ವೈತ + ಅದ್ವೈತ]

ದ್ವೈತಿ (ನಾ). ೧. ಜೀವಾತ್ಮ ಮಂತ್ತು ಪರಮಾತ್ಮ ಬೇರೆಬೇರೆಯೆಂದು ತಿಳಿಯುವವನಂ: ನಿತ್ಯಮುಕ್ತನಾದ ನಿಜಲಿಂಗೈಕ್ಯನು ದ್ವೈತಿಯಲ್ಲ ಅದ್ವೈತಿಯಲ್ಲ ಕಾಣಾ (ಸಿದ್ಧೇಶ್ವ. ೨೨-೫೯); ಈಶ್ವರನಿಗೂ ಜೀವಿಗೂ ಯಾವ ಸ್ಥಿತಿಯಲ್ಲಿಯೂ ಅಭೇದವನ್ನು ಒಪ್ಪದೆ ದ್ವೈತವೇ ವೇದಾಂತದ ಸಿದ್ಧಾಂತವೆನ್ನುವವರು ದ್ವೈತಿಗಳು (ಭಾರದ. ೧೫೧). ೨. ಮಾಧ್ವಮತಸ್ಥ.

[ಸಂ. ದ್ವೈತಿನ್]

ದ್ವೈತೀಯಕ (ಗು). ಎರಡನೆಯ: ದ್ವೈತೀಯಕಜನಪಂಗದ್ವೈತಂಗಜಿತಂಗಿ ಭುವನದಯಿತಂಗಾಗಳ್ ದೈತೇಂದ್ರರೆಲ್ಲಮೆಱಗಿದರಾತತವುಣ್ಮಂಗೆ ಜಗದೊಳಿಗದರೊಳರೆ (ಅಜಪು. ೫-೩). [ಸಂ.]

ದ್ವೈಧ (ನಾ). ೧. ಎರಡಾಗಿರುವಿಕೆ; ಬೇರೆಯಾಗಿರುವಿಕೆ. ೨. ಎರಡು ವಿಧ; ಎರಡು ಪ್ರಕಾರ: ಅರ್ಥಂ ದ್ವೈಧಮಾಗೆ ಮನದ ಸಂಶಯಮಂ ಪರಿಚ್ಛೇದಿಸಿ . . . ತಿಳಿದು (ಮಲ್ಲಿಪು. ೩-೦೦). ೩. ದ್ವೇಷ; ವಿರೋಧ: ಕುರುಕುವರರೊಳೆ ವೊಳೆತಕಟಸೂಯೆ ಕೌರವರು ಪಾಂಡವರಂದು ದ್ವೈಧದ ತೃಣಾಗ್ನಿ ಕೊವೆಕೊವೆದು ಸಿವಿಸಿವಿಸುತಿದೆ! ಎಂದಿಗಾವ ದವಾಗ್ನಿಯಾಗಿ ಧಗಧಗಿಸುವುದೊ (ಹಿಪ್ಪರ. ೪೪-೦೭). ೪. ಭೇದ: ಚಿತ್ತವಿರೆ ಚಿಂತೆಗಳು ಜೀವವಿರೆ ಜಗವೆಂಬ ದ್ವೈಧವೇ ಮೆರೆಯೆ (ಪುಂಡೀ. ೧೬-೬). ೫. = ದ್ವೈಧೀಭಾವ ೨: "ದ್ವೈಧಂ–ಶತ್ರುಗಳಿಗೆ ಪರಸ್ಪರ ಭೇದಬುದ್ಧಿಯನ್ನು ಕಲ್ಪಿಸುವಿಕೆ" (ಸಿದ್ಧಾಂಶಿ. ೩೪೦). 'ಪಡ್ಗುಣ' ಪರಾ.

[ಸಂ.]

ದ್ವೈಧೀಭಾವ (ನಾ). ೧. ಎರಡು ವಿಧವಾದ ಭಾವನೆ; ಸಂಶಯಭಾವನೆ: ಮನುಷ್ಯನು ಹೀಗೋ ಹಾಗೋ ಎಂದು ದ್ವೈಧೀಭಾವದಿಂದ ಯಾವ ಕಾರ್ಯಕ್ಕೂ ಹೋಗಬಾರದು (ಭೀಷ್ಮಕ. ೦೬). ೨. [ರಾಜನೀ] ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ ಮಂತ್ತು ಸಂಶ್ರಯ ಎಂಬ ಆರು ಬಗೆಯ ಭೇದೋಪಾಯಗಳಲ್ಲಿ ಒಂದು; ಶತ್ರುಗಳನ್ನು ಭೇದೋಪಾಯಂಗಳಿಂದ ಒಡೆಯುವಿಕೆ: ಸಂಧಿವಿಗ್ರಹದ್ವಯಾವಸ್ಥಾನಂ ದ್ವೈಧೀಭಾವಮಕ್ಕುಂ (ಚಾವುಂಪು. ೩೦೦); ತನ್ನ ಮಾನವನೆನ್ನರುಮೆಯಿಂದಂತು ಕಾಕಾಕ್ಷಿಗೋಳಕನ್ಯಾಯದಿಂದಿರ್ವರುಂ ದ್ವೈಧೀಭಾವಮೆಂಬುದಕ್ಕುಂ (ಪಂಚತಂ. ೩೦೯-೦೩). [ಸಂ.]

ದ್ವೈಪ (ಗು). ೧. ಹುಲಿಗೆ ಸಂಬಂಧಿಸಿದ; ಹುಲಿಯ ತೊಗಲಿನಿಂದ ಮಾಡಿದ. (ನಾ). ೨. ಹುಲಿಯ ಚರ್ಮ. ೩. ಹುಲಿಯ ಚರ್ಮವನ್ನು ಹೊದಿಸಿದ ರಥ: "ದ್ವೈಪಃ, ವೈಯಾಘ್ರಃ–೨ ದ್ವೀಪಿಚರ್ಮಾವೃತರಥ–ಹುಲಿಯ ತೊಗಲು ಹೊದಿಕೆಯುಳ್ಳ ರಥದ ಹೆಸರು" (ಸಿದ್ಧಾಂತಿ. ೩೦೭). [ಸಂ.]

ದ್ವೈಪಾಯನ (ನಾ). ೧. (ಯಮುನಾನದಿಯಂ) ದ್ವೀಪದಲ್ಲಿ ಜನಿಸಿದವನು; ವ್ಯಾಸಮಹರ್ಷಿ: "ಸಾತ್ಯವತೇಯಃ, ಪಾರಶರ್ಯಃ, ದ್ವೈಪಾಯನಃ, ವ್ಯಾಸಃ – ಈ ೪ ವ್ಯಾಸಂ" (ಹಲಾಯು. ೬೮-೨೫೯). 'ಕೃಷ್ಣ ದ್ವೈಪಾಯನ' ಪರಾ. ೨. ಒಂದು ಮಡುವಿನ ಹೆಸರಂ: ಪಾಂಡವರು ದ್ವೈಪಾಯನವೆಂಬ ಆ ಮಡುವಿನ ಹತ್ತಿರಕ್ಕೆ ಬಂದ ಕೂಡಲೆ ಧರ್ಮರಾಜನು ಕೃಷ್ಣನನ್ನು ಕುರಿತು . . . ಎಂದನು (ವಕಥಾ. ೩೦೯). P ಕನ್ನಡಕಾವ್ಯಗಳಲ್ಲಿ ಇದನ್ನೇ ವೈಶಂಪಾಯನಸರೋವರವೆಂದಂ ಕರೆದಿದೆ. [ಸಂ.]

ದ್ವೈಮಾತುರ (ನಾ). ೧. ಇಬ್ಬರು ತಾಯಂದಿರನ್ನು ಹೊಂದಿದವನು. ೨. ಗಣೇಶ: "ವಿವಾಯಕಃ, ವಿಘ್ನರಾಜಃ, ದ್ವೈಮಾತುರಃ . . . ಗಜಾನನಃ–೮ ಶಿವಪುತ್ರನಾದ ಗಣಪತಿಯ ಹೆಸರುಗಳು" (ಸಿದ್ಧಾಂತಿ. ೩೦); P (i) ಸ್ಕಂದಪುರಾಣದ ಮೇರೆಗೆ: ಗಣಪತಿಯಂ ರಾಜವರೇಣ್ಯನಿಗೆ ರಾಣಿ ಪುಷ್ಪಕೆಯಲ್ಲಿ ಚತುರ್ಭುಜ, ಆನೆಯ ತಲೆಯೊಡನೆ ಹುಟ್ಟಿದನಂ. ಪುಷ್ಪಕೆ ಭಯಗೊಂಡಂ ಆ ಶಿಶುವನ್ನು ಒಂದಂ ಸರೋವರದಲ್ಲಿ ಬಿಟ್ಟಳಂ. ಪಾರ್ಶ್ವನೆಂಬ ಋಷಿ ಆದನ್ನು ತನ್ನ ಆಶ್ರಮಕ್ಕೆ ಕೊಂಡೊಯ್ದು ತನ್ನ ಸತಿ ದೀಪವತ್ಸಲೆಗೆ ಕೊಟ್ಟನಂ. ಆಕೆ ಆ ಶಿಶುವನ್ನು ಸಲಹಿದಳು. ಗಣಪತಿಗೆ ಹೀಗೆ ಇಬ್ಬರು ತಾಯಂದಿರಾದರಂ. (ii) ಮತ್ಸ್ಯಪುರಾಣದ ಮೇರೆಗೆ: ಪಾರ್ವತಿಯಂ ತನ್ನ ಮೈಗೆ ಅಂಗರಾಗವನ್ನು ಪೂಸಿಕೊಂಡಾಗ ಕೆಳಗೆ ಬಿದ್ದುದರಲ್ಲಿ ಒಂದು ಪುರುಷಾಕಾರದ ಬೊಂಬೆಯನ್ನು ಮಾಡಿದಳು. ಅದಂ ಆನೆಯ ಆಕಾರವಾಗಿತ್ತು. ಆಕೆ ಅದನ್ನು ಗಂಗೆಯಲ್ಲಿ ತೇಲಿಬಿಟ್ಟಳು. ಗಂಗೆ ಅದನ್ನು ಪುತ್ರವಾತ್ಸಲ್ಯದಿಂದ ಮಂಗೂ ಎಂದಳು. ಪಾರ್ವತಿಯೂ ಹಾಗೇ ಕರೆದಳು. ಹೀಗೆ ಗಣಪತಿ ಇಬ್ಬರು ತಾಯಂದಿರನ್ನು ಪಡೆದನಂ. ೩. ಜರಾಸಂಧ; P ಬೃಹದ್ರಥನಿಗೆ ಬಹುಕಾಲ ಮಂಕ್ಕಳಾಗದುದರಿಂದ ಅವನು ಚಂಡಕೌಶಿಕಮುನಿಯ ಮರೆಹೊಕ್ಕನಂ. ಆ ಮಹರ್ಷಿ ಒಂದು ಮಾವಿನ ಹಣ್ಣನ್ನು ಮಂತ್ರಿಸಿ ರಾಣಿಗೆ ಕೊಡಬೇಕೆಂದು ಕೊಟ್ಟನು. ರಾಜನು ಆ ಹಣ್ಣನ್ನು ಎರಡು ಭಾಗ ಮಾಡಿ ತನ್ನ ಇಬ್ಬರು ಪತ್ನಿಯರಿಗೂ ಕೊಟ್ಟನು. ರಾಣಿಯರು ಗರ್ಭವತಿಯರಾಗಿ, ನವಮಾಸಾನಂತರ ಶಿಶುವಿನ ಒಂದೊಂದಂ ಹೋಳನ್ನು ಹೆತ್ತು, ಆ ವಿಕಾರಶಿಶುವನ್ನು ತಿಪ್ಪೆಯಲ್ಲಿ ಬಿಸಾಡಿದರು. ಜರೆಯೆಂಬ ರಾಕ್ಷಸಿ ಆ ಎರಡು ಸೀಳುಗಳನ್ನೂ ಕೂಡಿಸಿದುದರಿಂದ ಮಗು ಬದುಕಿತು. ಜರಾಸಂಧನ ಜನನವಾದುದು ಹೀಗೆ. [ಸಂ.]

ದ್ವೈವಿಧ್ಯ (ನಾ). ೧. ಎರಡು ವಿಧ, – ಪ್ರಕಾರ. ೨. ಉಭಯಸಂಕಟ ; ಬಿಕ್ಕಟ್ಟು ; ಪೇಚು : ಮಹಾಶಯ ! ತಾವು ದ್ವೈವಿಧ್ಯದಲ್ಲಿ ಸಿಕ್ಕಿರುವಂತೆ ತೋರುವುದು (ಪಿಶಾಪ. ೦೧). [ಸಂ.]

ದ್ವೈಹಾಯನ (ನಾ). ಎರಡು ವರ್ಷಗಳ ಅವಧಿ. [ಸಂ.]

ದ್ವ್ಯಂಗರಾಶಿ (ನಾ). [ಜ್ಯೋತಿ] ಚರರಾಶಿ ಮತ್ತು ಸ್ಥಿರರಾಶಿ ಎರಡರ ರೂಪವನ್ನು ಪಡೆದಿರುವ ರಾಶಿ ; ದ್ವಿಸ್ವಭಾವದ ರಾಶಿ ; ಮಿಥುನ, ಕನ್ಯಾ, ಧನುಸ್ಸು ಮತ್ತು ಮೀನ ಎಂಬ ರಾಶಿಗಳು: ಚರಗೃಹಮಷ್ಟಮಮಾಗಿರೆ [ಪರ]ಮಂಡಲದೊಳ್ . . . ದ್ವ್ಯಂಗ ರಾಶಿಯಾಗಿರೆ ತದೃಕ್ಷಮಧ್ಯದೆ ಮಂಡಿಗುಂ (ಜಾತತಿ. ೨೩-೩). [ಸಂ.]

ದ್ವ್ಯಕ್ಷರ (ನಾ). ೧. ಎರಡುಅಕ್ಷರಗಳುಳ್ಳುದು : ದ್ವಿದಳ ದ್ವ್ಯಕ್ಷರ [ಪಾಕಾಂ. ದ್ವಿಯಕ್ಷರ, ದ್ವಯಾಕ್ಷರ]ಎಂಬ ಚಕ್ರದಳ ಅಕ್ಷರಂಗಳೆಲ್ಲವೂ ಬಯಲಾದವು ನೋಡಾ (ಸಿದ್ಧೇವ. ೨೦೦-೬೧೪). ೨. [ಛಂದ]ಎರಡೇ ಅಕ್ಷರಗಳುಳ್ಳ ಪದ್ಯ ; ಎರಡುಅಕ್ಷರಗಳನ್ನು ಮಾತ್ರ ಬಳಸಿ ಬರೆದ ಪದ್ಯ : ನಿರೋಷ್ಠ್ಯ, ಅತಾಲವ್ಯ, ಏಕಾಕ್ಷರ, ದ್ವ್ಯಕ್ಷರ, ಹಾರಬಂಧ, ಮುರಜಬಂಧ ಮುಂತಾದ ನಾನಾವಿಧಗಳುಂಟು (ಕೈಪಿಡಿ. ೨೩೪). [ಸಂ.]

ದ್ವ್ಯಕ್ಷರಿ (ನಾ). ೧. ಎರಡು ಅಕ್ಷರಗಳನ್ನುಳ್ಳ ಮಂತ್ರ : ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ, ಚತುರಾಕ್ಷರಿ, ಪಂಚಾಕ್ಷರಿ, ಷಡಕ್ಷರಿ ಮುಂತಪ್ಪ ಪ್ರಸಿದ್ಧಮಂತ್ರಂಗಳೊಳವಲ್ತೆ (ರಾಮಾಶ್ವ. ೦೧೬-೧). ೨. = ದ್ವ್ಯಕ್ಷರ ೨ : ದ್ವ್ಯಕ್ಷರಿ ದನುಸಂದನನಿನನಂದನನಿನನಂದನನಿನನನಂದನನ ನಂದನನಂ (ಮದತಿ. ೬-೧೦); ಅಕ್ಷರಬಿಂದುಚ್ಯುತಕಂ ದ್ವ್ಯಕ್ಷರಿಯೇಕಾಕ್ಷರಂ ನಿರೋಷ್ಠ್ಯ ಮತಾಲವ್ಯಾಕ್ಷರಮೆನೆ . . . ನೆಗಟ್ಗುಂ ಪಲವುಂ (ಕಾವ್ಯಾವ. ೫೭೦). [ಸಂ. ದ್ವ್ಯಕ್ಷರೀ]

ದ್ವ್ಯಣುಕ (ನಾ). ಎರಡು ಪರಮಾಣುಗಳ ಸೇರಿಕೆಯಿಂದ ಉಂಟಾದುದು : ಎರಡು ಪರಮಾಣುಗಳು ಸಂಬಂಧ ಹೊಂದಿ ದ್ವ್ಯಣುಕ ಹುಟ್ಟುವದು (ಭಾರದ. ೨೩೦) ; ಎರಡು ಅಣುಗಳು ಸೇರಿ ಒಂದು ದ್ವ್ಯಣುಕವಾಗುತ್ತದೆ (ತತ್ತ್ವಪ್ರಾ. ೨೫೭). [ಸಂ.]

ದ್ವ್ಯಧಿಕ (ನಾ). ಎರಡರಷ್ಟು ; ಇಮ್ಮಡಿ : ನೀಚೈರ್ಗೋತ್ರಂಗಳೆಂಬ ದ್ವ್ಯಧಿಕಸಪ್ತತಿಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಮಹಾನೇ. ೧೬-೦೦೦ ವ). [ಸಂ.]

ದ್ವ್ಯಧಿಕತೆ (ನಾ). ಎರಡರಷ್ಟಾಗಿರುವುದು ; ಎರಡುಪಟ್ಟಾಗಿರುವುದು ; ಇಮ್ಮಡಿ : ದ್ವಿಗುಣಕ್ಕೆ ಚತುರ್ಗುಣಂ ದ್ವಿಗುಣದ್ವಯಾಧಿಕಮಪ್ಪುದಱಿಂ ದ್ವ್ಯಧಿಕಮೆಂಬುದಕ್ಕುಂ ಆ ಶಬ್ದಂ ಪ್ರಕಾರಾರ್ಥಂ ತತ್ಪ್ರಕಾರಂ ದ್ವ್ಯಧಿಕತೆಯಕ್ಕುಂ (ತತ್ತ್ವಪ್ರ. ೨೪೯). [ಸಂ. ದ್ವ್ಯಧಿಕತಾ]

ದ್ವ್ಯರ್ಥಕ (ಗು). ೧. ಎರಡು ಅರ್ಥಗಳುಳ್ಳ. ೨. ಸಂದಿಗ್ಧಾರ್ಥವುಳ್ಳ. [ಸಂ.]

ದ್ವ್ಯರ್ಧ (ನಾ). ಒಂದೂವರೆ ; ಒಂದು ಮತ್ತು ಎರಡನೆಯದರಲ್ಲಿ ಅರ್ಧ. [ಸಂ.]

ದ್ವ್ಯರ್ಧಾಕ್ಷ (ನಾ). ಚಿತ್ರಕಲೆ ಮುಂತಾದುವುಗಳಲ್ಲಿ ಒಂದೂವರೆ ಕಣ್ಣು ಕಾಣುವಂತಿರುವ ಭಂಗಿ : ಎಸೆಗುಂ ಋಜ್ವಾಗತಂ . . . ಮೆಚ್ಚಿಸುಗುಂ ದ್ವ್ಯರ್ಧಾಕ್ಷವೆಂಬಂತಿರೆ ಸೊಗಯಿಪುತಿರ್ಪಂಗನಾಭಂಗಿಯಂ ಚಿತ್ರಿಸಿ ಚಿತ್ರಕ್ಕಾಯುವೊಯ್ದುಂ ಮದನನೆನೆ ಮಹಾದೇವಿ ಕಣ್ಗೊಪ್ಪಿ ತೋರ್ಪಳ್ (ಅಚಿಪು. ೩-೪೫). [ಸಂ. (ದ್ವ್ಯರ್ಧ + ಅಕ್ಷಿ + –)]

ದ್ವ್ಯರ್ಧಾಕ್ಷಿ (ನಾ). = ದ್ವ್ಯರ್ಧಾಕ್ಷ : ರಥಾಂಗಮಿಥುನಂ ದ್ವ್ಯರ್ಧಾಕ್ಷಿಯಿಂ ಬರ್ಹಿಮಂಡಳಿ ಪಾರ್ಶ್ವಾಗತದಿಂದದೇಂ ಪಡೆದುವೋ ಪಂಚಾಂಡಕವ್ಯಕ್ತಿ ಕಣ್ಗೊಳೆ ಕಂದರ್ಪನ ಬಾಣಪಂಚಕದವೊಲ್ ಚಿತ್ರಕೃತಿಕ್ಷೋಭಮಂ (ಮಲ್ಲಿಪು. ೫-೪೧). [ಸಂ.]

ದ್ವ್ಯಷ್ಟ (ನಾ). ಒಂದು ಬಗೆಯ ಲೋಹ; ತಾಮ್ರ: "ತಾಮ್ರಕಂ–ಶುಲ್ಬಂ, ಮ್ಲೇಚ್ಛಮುಖಂ, ದ್ವ್ಯಷ್ಟಂ. ವರಿಷ್ಟಂ, ಉದುಂಬರಂ, ಓದುಂಬರಂ–೬ ತಾಮ್ರದ ಹೆಸರುಗಳು" (ಸಿದ್ಧಾಂತಿ. ೨೬೦). [ಸಂ.]

ದ್ವ್ಯಹ (ನಾ). ಎರಡು ದಿನಗಳ ಅವಧಿ. [ಸಂ.]

ದ್ವ್ಯಾಮುಷ್ಯಾಯಣ (ನಾ). = ದ್ವಾಮುಷ್ಯಾಯಣ. [ಸಂ.]

ದ್ವ್ಯಾಹಿಕ (ನಾ). ಎರಡು ದಿನಗಳಿಗೊಮ್ಮೆ ಬರುವ ಜ್ವರ ; ಎರಡರ ಜ್ವರ : ಮಾಕ್ಷಿಕ, ತಾಳಕ, ಸುವರ್ಣ ಇವೆಲ್ಲವನ್ನು ಎಕ್ಕದ ಹಾಲಲ್ಲೂ . . . ಜೇನುತುಪ್ಪದಲ್ಲೂ ಕೊಡಲು ಸರ್ವ ವಿಷಮಜ್ವರ, ಏಕಾಹಿಕ, ದ್ವ್ಯಾಹಿಕ, . . . ಧಾತುಗತಶ್ವಾಸ ಹರಂ (ವಿವೈವಿ. ೧೬). [ಸಂ.]

ದ್ವ್ಯಾಹಿಕಜ್ವರ (ನಾ).=ದ್ವ್ಯಾಹಿಕ : ಬೆಳ್ಳುಳ್ಳಿ, ಅಗರಧೂಮ ಇವುಗಳನ್ನು ನಾಲ್ಕು ನಾಲ್ಕು ತೂಕ ಚೂರ್ಣವಂ ಮಾಡಿ . . . ತೈಲವನ್ನು ಅಭ್ಯಂಗನಕ್ಕೆ ಉಪಯೋಗಿಸಲು . . . ದ್ವ್ಯಾಹಿಕಜ್ವರ, ವಿಷಮಜ್ವರ ಮೊದಲಾದವುಗಳು ನಾಶವಾಗುವುವು (ಸಕವೈ. ೭೩). [ದ್ವ್ಯಾಹಿಕ + ಜ್ವರ]

*

ಧ

ಧ (ನಾ). ೧. ಕನ್ನಡ ವರ್ಣಮಾಲೆಯ ಮೂವತ್ತೊಂಬತ್ತನೆಯ ಅಕ್ಷರ. ೨. [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ : "ಅಱಿ ಝುಧಳ ಮೊಂಬತ್ತು" (ಮಂಗರಾ. ೦೦೪-೧೦). ೩. [ಸಂಗೀತ] ಸಪ್ತಸ್ವರಗಳಲ್ಲಿ ಆರನೆಯದು ; ಧೈವತ : ಸ್ಥಾಯಿಸಂಚಾರಿಗಳ ಸ ರಿ ಗ ಮ ಪ ಧ ನಿ ಯ ಸರದಾಯತದ . . . ತಾರ ಮಧ್ಯ ಮಂದ್ರಗಳಿಂದೆ ಸೊಗಸುಗೊಳಿಸಿ ಗೇಯರಸಮೊಸರೆ ಪಾಡಿದರು (ಜೈಮಿಭಾ. ೨೦-೫೮) ; ಸಪ್ತಸ್ವರಗಳು ಕ್ರಮವಾಗಿ ಸ, ರಿ, ಗ, ಮ, ಪ, ಧ, ನಿ ಎಂಬ ಸಂಕೇತಾಕ್ಷರಗಳಿಂದ ಪ್ರಯೋಗದಲ್ಲಿವೆ (ಸಂಗೀದಂ. ೧೫). ೪. [ಛಂದ] ಅಂಶಗಣಗಳಲ್ಲಿ ಒಂದು ; ರುದ್ರಗಣ ; ನಾಲ್ಕು ಅಂಶಗಳನ್ನುಳ್ಳಗಣ.

ಧಂ (ನಾ). ಒಂದು ಅನುಕರಣ ಶಬ್ದಂ : ಪೊಗೆದುದು ಪೊತ್ತಿದತ್ತು . . . ಧಂ ಧಗಿಲ್ ಧಗಿಲ್ ಧಗಿಲೆನುತಟ್ಟಿ ತಟ್ಟಿದುದು ಮುಟ್ಟಿತು ಸುಟ್ಟಿತು ತಿಂದು ತೇಗಿದತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ (ಗಿರಿಕ. ೮-೪೭) ; ನಿಸ್ಸಾಣಧ್ವನಿ ತಂಬಟ ಸ್ಫುಟ ಧಡಂ ಧಂ ನಾದ ಭೀತರ್ಪ್ಪಲರ್ನಿಸ್ಸತ್ವರ್ವ್ವಿಸುಟೋಡಿ ನಾಡ ನಗರಿ ಭಂಡಾರವಂ ಪೆಂಡಿರಂ (ಎಕ. VIII, ಸಾಗರ. ೦೫-೨೮ ; 1218) ; ಧಂ ಧಳಧಳರೆಂದು ಬಾಱಿಸಿದರು ದೇವದುಂದುಭಿಗಳನುಳ್ಳೆಯೆನುತೆ (ಮೋಹತ. ೪೨-೧೨) ; ಕಡಲು ಕುಣಿಯೆ ಗೊಂದಣ ತೆರೆಮುರಿ ನೊರೆ ಧಂ ಧಣ (ಹೃದಸ. ೩೭-೧೨) ; ಧಂ ಧಂ ಎನ್ನುವ ಶಬ್ದ ಕೇಳಿಬರುತ್ತಿದೆ (ರೂಢಿ).

ಧಂಧಂ (ದ್ವಿರುಕ್ತಿ) : ಧಂಧಂ ಧಗಿಲ್ಬುರ್ಗಿರ್ ಘಂಘರಿಲೆಂದೇ ನಳ್ವಿತೋ ಸೇವುಣಬಳವನಮಂ ವೀರಬಲ್ಲಾಳ ಕೋಪೋದ್ಧುರದಾವೋಗ್ರಾನಳಂ (ಎಳ. VI, ತರೀಳ. ೪೫-೪೩ : 1196); ಶ್ರಿದಶರಬ್ಬರಿಸಿ ಅನಕ ದುಂದುಭಿಶಂಖ ಧಂಧಂ ಧಣಾ ಸಂಗಮಪಧನೀಯೆಂದೆನುತ . . . ತುತಿಸಿದರು (ವಿದಾಕ್ಕ. ೯೨-೨).

ಧಂದೆ,ದಂಧೆ, ಧಂಧೆ (ನಾ). ೧. ಜೀವನೋದ್ಯೋಗ; ಜೀವನೋಪಾಯಂ; ಹೊಟ್ಟೆಪಾಡಿನ ವೃತ್ತಿ : ಮಾನು ಹಿಡಿಯುವದೇ ಅವರ ಮುಖ್ಯ ಧಂದೆಯಾಗಿತ್ತು (ಪಾನಕ. ೬) : ಸ್ವಂತ ಧಂದೆಯಿಂದ ಉಪಜೀವನ ಮಾಡುವ ವೈದ್ಯ ವೆಂಕಪ್ಪ (ಸಮಜೀ. ೧೧ ಟೀಠಿಕೆ). ೨. ಕೆಲಸ ; ಕಾರ್ಯ : ಊಟಕ್ಕೆ ಬೇಕಾಗುವ ಎಲೆ-ಪೊನ್ನೆಗಳನ್ನು ಅಂಗಡಿಯಿಂದ ಖರೀದಿಮಾಡಿ ತರುವದು ಕೇವಲ ಅಬ್ರಾಹ್ಮಣ್ಯ ಧಂದೇ ಎಂದು ಅವನ ಠಾವಮತ (ದೀಪಹ. II, ೨). ೩. ವ್ಯಾಪಾರ : 'ಮೋಹಿನೀಸಿಂಧೂರ'ದ ಧಂದೆ ತೆಗೆದುಹಾಕಿಬಿಡುತ್ತಾರಂತೆ (ಸಾಹೀದ್. ೨೩೩). ದಂಧೆ : ೨. ನಾವು ಎಂದಾದರೂ ಆ ದಂಧೆ ಮಾಡೇವೇ ? (ಬಡುಜ. ೩೦೩) ; ಅಂಗಡಿಯಲ್ಲಿ ದಂಧೆ ಮಾಡು (ಮುಕ್ತ. ೦೪೩). ೩. ಅದೇ ದಂಧೆಯಲ್ಲಿ ಲಕ್ಷಾಂತರರೂಪಾಯಿ ಸಂಪಾದನೆಮಾಡಿದ ಕಂಪನಿಗಳೂ ಕುಂಟುತ್ತಲೇ ಇದ್ದವು (ಪುಧುಸಂ. ೩೩). ಧಂಧೆ : ೧. ಹೊಟ್ಟೆ ಧಂಧೇನ ಬರವಣಿಗೆ ಮಾಡಿಕೊಂಡು, ಇಂಗ್ಲಂಡದೊಳಗೆ, ಅಮೇರಿಕಾದೊಳಗ ನಡೀಬಹುದು (ಅಪನಾ. ೩೦೩). ೩. ಅವನ ಧಂಧೆ ಮುಗ್ಗಿಸುವ ಉತ್ಸುಕತೆಯೂ ನನಗಿಲ್ಲ (ಗಾಳಿಹ. ೧೪೭).

[←ಹಿಂ. ಧಂಧಾ ; ಮರಾ. ಧಂದಾ ; ಗುಜ. ಧಂಧೋ]

ಧ ಧೆ 'ಧಂದೆ' ನೋ.

ಧಕಲ್ಪಟ್ಟಿ 'ಧಕಲಪಟ್ಟಿ' ನೋ.

ಧಕಾರ (ನಾ). [ವ್ಯಾಕ] 'ಧ' ಎಂಬ ಅಕ್ಷರ : ಯತ್ವಮಿಶ್ರ ಧಕಾರಕ್ಕತ್ವಂ ಬೆರಸಿದ ದಕಾರಂ-ಆಧೃಕ್ಷ-ಅದ್ದಿಕ (ಶಮದ. ೨೬೬ ಪ್ರಯೋ). [ಸಂ.]

ಧಕುಕು (ನಾ). ಒಂದಂ ಅನುಕರಣ ಶಬ್ದ : ವಿಕಳಾಂಧಕಾಸುರನ ಶೂಲದಿಂದಿಱಿದು ಮೇಲಕೆ ನೆಗಹಿ ನೆಲಕಿಕ್ಕಿಯೆರ್ದೆಯ ತುಳಿದಾಡಿದಂ ಧಕುಕು ಧಿಕುಕೆಂಬ ವಾದ್ಯಧ್ವನಿಗೆ ನಾಲ್ಕನೆಯ ಲೀಲೆಯುಂ ಶಿವ ನಮಸ್ತೇ (ಗುರುಚಾ. ೪-೧೦).

ಧಕ್ಕಡ, ದಕ್ಕಡ, ದಕ್ಕಡೆ, ದಕ್ಕಳ, ಧಕ್ಕಡಿ, ಧಕ್ಕಡೆ, ಧಕ್ಕಳ (ಗು). ೧. ಗಟ್ಟಿಮುಟ್ಟಾದ; ದೃಢಕಾಯವಾದ : ವೈಸರದ ಬಲುಬಂಧ ಧಕ್ಕಡ ವಾಸುಗಿಯಂ ಮೇಳವದ ವರವಕ್ಷೀಶ ಮಾರುತಿ ಕದನಕ್ಕೆವಡಿಯಿಂದ ಎಮಗಿಲೆನಲು (ಕುವ್ಯಾವಿ. ೬೦೩. ೪-೬೩) : ಜಡಿದಿಟ್ಟನೊಕುವ ಡೊಂಬಿಗರ ದವಡಿಗರ ಧ[ಪಾಠಾಂ. ದ]ಕ್ಕಡ ರಕ್ಕಸರ ಹನುಮ (ತೂರರಾ. ೩-೪-೩೩). (ನಾ). ೨. ದಿಟ್ಟ; ಧೈರ್ಯಸ್ಥ ; ಸಾಹಸಿಗ; ಶೂರ : ಸಿಕ್ಕಿದವ ಧಾಳಿಯಲಿ ಧೈರ್ಯದ ಧ[ಪಾಠಾಂ. ದ]ಕ್ಕಡರ ಮನ ಹರಹಿನೊಳಹಾಯಿಕ್ಕಿದರು ಕಡೆಗಣ್ಣ ಬಲಿಗಳ ಮುನಿಮ್ಯಗಾವಳಿಗೆ (ಕುವ್ಯಾಅ. ೧೪-೬) ; ನೂಕಿದೊಡೆ ಕರ್ಣಾದಿ ದೊರೆಗಳ ಡಾಕನಾನುವರಾರು ದಿವಿಜಾನೀಕದಲಿ ಧ[ಪಾಠಾಂ. ದ]ಕ್ಕಡರಃಸಂರು ದುವ್ಯಾಳಿಸಿತು ನಭಕೆ (ಕುವ್ಯಾಅ. ೧೪-೦೩) ; ಭಾನು ಬಿಂಬವ ಮೊಗೆವ ಲೌಡೆಯ ಮಾನಸದ ಧಕ್ಕಡರು ಕಲಿ ಪವಮಾನತನಯನ ಮುತ್ತಿಕೊಂಡರು ರಾಯರಾವುತರು ಧಕ್ಕಡರು ನೂಕಿದರು ಕಯಂಗಳಂ ತೇರ್ಗಳಂ (ತುರಂಗ. ೩೩-೦೪). ೩. ತೀಕ್ಷ್ಣತೆ; ಶೀಘ್ರತೆ; ಉಜ್ವಲತೆ: ಆಗ ದೀಪ್ತಯು ಧಕ್ಕಡದಿ ತೋರುವವು ಖಳವಳ ನೀರು ಕುದಿವಂತೆ (ಜ್ಞಾನಸಿಂ. ೧೩-೪೪). ದಕ್ಕಡ : ೨. ದಾನವರು ದಕ್ಕಡರು ಧೈರ್ಯೋದ್ದಾನಶೀಲರು ಘಾಯವನು ಗಿರಿಯಾನಬಾರದು ಮುಷ್ಟಿಬಲ ವೆಗ್ಗಳರು ಸತ್ತ್ವದಲಿ (ಕುವ್ಯಾದ್ರೋ. ೧೭-೩೩) : ಭೀತಿಗೊಳುತಿದೆ ಮಾಜು ಬಲ ಮರ್ಮು ಪುತು ದಕ್ಕಡ ದಿಟ್ಟರಿವುಸಂಘಾತ ವಾರಿಧಿಬಾಡಬಾನಲಕೀರ್ತಿ ಜಗರಕ್ಷುಂಪ (ಕುವ್ಯಾಳ. ೩೦-೦೩) : ದಕ್ಕಡರು ಬಲ್ಲವರಾಂತರರಿಭಟನ (ಕುವ್ಯಾಶ. ೨-೪೪). ೪. ದಿಟ್ಟತನ ; ಸಾಹಸ ; ಶೌರ್ಯ : ಆ ಕುದುರೆಯ ಬೆಂಗಾಪಿನ ದಕ್ಕಡದ ಗಂಡುಗಲಿಗಳ ಗಂಡಂ ರಾಘವಾವರಜನೆನ್ನನಿಂತು ಪೇಳ್ದಟ್ಟದಂ (ರಾಮಾಶ್ವ. ೦೪೨-೦೬). ದಕ್ಕಡೆ : ೨. ಕಕ್ಕಡೆಯ ಕರವಾಳ ಹರಿಗೆಯ ದಕ್ಕಡೆಯರೊತ್ತಂಬರಿಸಿ ಬೊಬ್ಬಿಕ್ಕಿ ಬಿಜುಗುಂಡುಗಳಲೆಬ್ಬಿದರಂಜನಾಸುತನ (ತೂರರಾ. ೩-೩-೦೯). ೫. ದಾಂಡಿಗ ; ಸ್ಥೂಲಕಾಯಂ ; ದೃಢಕಾಯಂ: ತೋಜದಿರಲವಗೆಚ್ಚಱಿಕೆ ಕರ್ವರ್ಜಿರುಕ್ಕಿನ ಚಮ್ಮಟಿಗೆಗಳಲೇಱಿ ಹೊಯ್ದರು . . . ದಳವೇಱಿದುದು ದಕ್ಕಡೆಯ ರಕ್ಕಸನೊಱಿಕೆಯ ಬಲುನಿದ್ರೆ ತೊಡೆಯನು ತಟ್ಟಿದಂದದಲಿ (ತೂರರಾ. ೬-೩೬-೩೭). ದಕ್ಕಳ : ೪. ಶ್ರೀಭುವನ ಕಂಪಿಸುತಿರ್ದುದ್ದೆ ರಣದವಕಿಗರ ದ[ಪಾಠಾಂ. ಧ]ಕ್ಕಳ [ಪಾಠಾಂ. ಡ]ದ ದೆಖ್ಖಾಳದ ಮಹಾಹವಕೆ (ತೂರರಾ. ೪-೩-೦೩). ಧಕ್ಕಡಿ: ೬. ಅತಿಶಯಂ; ಹೆಚ್ಚಳ : ಬೆಕ್ಕಸಂಬಡುತಸುರಪತಿ ತನ್ನಿಕ್ಕೆಲದ ಕರತಳದ ಮುಸುಕಿನ ಧಕ್ಕಡಿಯ ದುರ್ಮಾನದಲಿ ಹೊಕ್ಕನು ಪುರಾಂತರವ (ತೂರರಾ. ೬-೩೬-೨). ಧಕ್ಕಡೆ : ೨. ಧಕ್ಕಡೆಯರಾನಕದ ದನಿ ದಶದಿಕ್ಕನುಬ್ಬಿಸೆ (ತೂರರಾ. ೧-೦೩-೪೩) ; ಅರಿಶರೌಘಂಗಳಂ ಕತ್ತರಿಸಿ ಕರಚಮತ್ಯತಿಯೊಳ್ಧಕ್ಕಡೆಯರೆಚ್ಚಸ್ತ್ರಮಂ (ತುರಂಗ. ೬೬-೭). ಧಕ್ಕಳ : ೪. ಮೇಲಿನ 'ದಕ್ಕಳ' ಉಲ್ಲೇಖಕ್ಕೆ ಕೊಟ್ಟಿರುವ 'ತೊರರಾ' ಪ್ರಯೋಗದ ಪಾಠಾಂತರವನ್ನು ನೋಡಿ. [←ಮರಾ. ಧಕ್ಕಡ್, ಧಾಕಡ್]

ಧಕ್ಕಡತನ, ದಕ್ಕಡತನ (ನಾ). ೧. ಶೂರತನ; ಸಾಹಸವೃತ್ತಿ : ದಾನವರ ಧ[ಪಾಠಾಂ. ದ]ಕ್ಕಡತನವನದನೇನನೆಂಬೆನು ಜೀಯ (ಕುವ್ಯಾಅ. ೧೪-೩೦). ದಕ್ಕಡತನ: ೨. ದುಷ್ಟತನ; ಕೇಡಿಗತನ: ವಿವಿಧವನಪರಿಯಟಣದಾಯಾಸವನು ತತ್ಪರಿಸರದ ಕಂಟಕನಿವಹವನು ದಾನವರ ದಕ್ಕಡತನದ ದಟ್ಟಣೆಯ . . . ವಿವರಣವನಱುಹಿದನು (ಕುವ್ಯಾಅ. ೦೭-೩). [ಧಕ್ಕಡ + – ತನ]

ಧಕ್ಕಡಿ 'ಧಕ್ಕಡ' ನೋ.

ಧಕ್ಕಡಿಗ, ದಕ್ಕಡಿಗ (ನಾ). ೧. ದಿಟ್ಟ; ಬಲಶಾಲಿ; ಶೂರ. ೨. ದುಷ್ಟ ; ಕೆಡುಕ. 'ಧಕ್ಕಡಿಗತನ' ಪರಾ. ದಕ್ಕಡಿಗ : ೧. ಅವರು ಬಲು ದಕ್ಕಡಿಗರೆಮಗೆ ಮಣಿಯರು (ಪ್ರಭುಪು. ೯-೩೪೭); ದಾಟಿಡುವ ದೆಖ್ಖಾಳದ ದಕ್ಕಡಿಗರಂ ತಱುಬಿ ನಿಂದಂ (ರಾಮಾಶ್ವ. ೦೪೩-೩೦). ೨. ಕಾಯಿಗೆ ತಪ್ಪಿದ ದಕ್ಕಡಿಗನಿಗೆ ಆವಾಜ್ಞೆಯೆಂದು ನೀವೆಲ್ಲರು ಪೇಳಿ (ಸಾರಂಗ. ೩೦) ; ನಿನ್ನ ಮಾನಮಂ ಕೊಂಬ ದಕ್ಕಡಿಗರಾರು (ನವಮೋ. ೯-೪೮).

[ಧಕ್ಕಡ + – ಇಗ]

ಧಕ್ಕಡಿಗತನ (ನಾ). ದುಷ್ಟತನ ; ಕೆಡಂಕಂತನ : ಧನಗಿತ್ತಿಯಾ ಧಕ್ಕಡಿಗ [ಪಾಠಾಂ. ಯ]ತನವ ನೋಡುನೋಡನುಮಾನದನು ಲೇಸುಲೇಸೆಂದು ತಲೆದೂಗಿ ಕೌಟಲ್ಯವನು ಮಾಡಿ ಕಣ್ಣಾಟ್ಟುವಳು ಬಾಯ ಕಟ್ಟದಿರಳಂ (ಸಿಂಗಿರಾ. ೦೫-೦೦). [ಧಕ್ಕಡಿಗ + – ತನ]

ಧಕ್ಕಡೆ 'ಧಕ್ಕಡ' ನೋ.

ಧಕ್ಕಡೆಯ, ದಕ್ಕಡೆಯ (ನಾ). ಕಲಿ; ಶೂರ; ಸಮರ್ಥ; ದಿಟ್ಟ; ಅಭವಂಗೆ ಶಕ್ಯ ಮುನ್ನಲ್ಲಾನದೇಸರ ಧಕ್ಕಡೆಯ ನಾಚಿಸದಿರೀ ಕಡೆಗಿಕ್ಕು ಸಂಗರದಾನಿರೂಪಸ್ಥಿತಿಯ ವೀಳೆಯವ (ಅಂಬಿಕಾ. ೪೯-೭). ದಕ್ಕಡೆಯ : ಚಕ್ಕನೆ ನಿಜರಥವನಂತಲ್ಲಿಗೈದಿಸುತೆ ದಕ್ಕಡೆಯನಹ ವ್ಯಾಸ್ರವುಂಖನಿಂಗಿಂತೆಂದನು (ಘೋರಾಸು. ೦೩). [ಧಕ್ಕಡೆ (<ಧಕ್ಕಡ) + – ಅ,]

ಧಕ್ಕಡೆಯತನ, ದಕ್ಕಡೆಯತನ (ನಾ). ೧. ಕಲಿತನ ; ಪರಾಕ್ರಮ ; ಶೌರ್ಯ ; ಸಾಮರ್ಥ್ಯ: ಮರ್ಕಟರ ದಳದುಳದ ದೂಱನ ಧ[ಪಾಠಾಂ. ದ]ಕ್ಕಡೆಯತನ ಬಿದ್ದುದ್ದೆ ಕರ್ಣಕ್ಕೆ ಕವಲಕ್ರಿಯನ ಸುತ ಸಾಮರ್ಥ್ಯನೆಂದನೆಯ (ತೂರರಾ. ೪-೦೦-೦೭). ೨.=ಧಕ್ಕಡಿಗತನ : ನೈಋತಿ ಮಾತನಾಡದಿರು ತೆಗೆ ವಳಾವಳಿ ಬೇಡ ವರುಣ ಚಲಿಸದಿರು ಪವಮಾನ ಧನದೇಶ ಧಕ್ಕಡೆಯತನವು

ಸಲದು ಸಾರಿರಿ ದನುಜಸುರರು...ಎಂದು ಸಲೆ ವೇತ್ರಕರ್ ಬರಾ ಬರಿಗೆಯ್ಯ ತಿರ್ದರಾ ಭಾಳನೇತ್ರನ ಸಭೆಯೊಳು (ನಂದಿಮಾ. ೫-೩೮). **ದಕ್ಕಡೆಯತನ:** ೧. ಚಕ್ಕನೆ ಮೇಘನಾದಂ ಮುಳಿದು ಘರ್ಜಿಸುತೆ ಉಕ್ಕು ವಾತುರದಿಂದೆ ನಿಜವರೂಥವನುಳಿದು ದಕ್ಕಡೆಯತನದಿನಂಬರಕಡರ್ದು ಧನುವಿನಿಂ ಶರ ವರ್ಷಮಂ ಕರೆವುತೆ (ಘೋರಾಸು. ೨೬). [ಧಕ್ಕಡೆಯ + – ತನ]

ಧಕ್ಕಲು 'ದಕ್ಕಲು' ನೋ.

ಧಕ್ಕಳ 'ಧಕ್ಕಡ' ನೋ.

ಧಕ್ಕಾ 'ಧಕ್ಕೆ₃' ನೋ.

ಧಕ್ಕಾಧಿಂಗಿ (ನಾ). ತಾಳವೇಳವಿಲ್ಲದ ಕುಣಿತವನ್ನು ಸೂಚಿಸುವ ಒಂದು ಅನುಕರಣ ಶಬ್ದ : ಕುಣೇಬ್ಯಾಡ, ಕುಣೇಬ್ಯಾಡಾ ಧಕ್ಕಾಧಿಂಗಿ, ನಿನಗೇನು ಗೊತ್ತ ತಂಗಿ (ದಾಸಹು. ೫೩).

ಧಕ್ಕಾಮುಕ್ಕಿ, ಢಕ್ಕಾಮುಕ್ಕಿ, ಧಕ್ಕಿಮುಕ್ಕಿ, ಧಕ್ಕೆಮುಕ್ಕೆ (ನಾ). ೧. ಗದ್ದಲ ; ತಿಕ್ಕಾಟ ; ನೂಕುನುಗ್ಗಲು ; ಸಂಮರ್ದ : ಆ ರಸ್ತೆ ಒಮ್ಮೆಗೇ ಎರಡಡಿ ಅಗಲದ ಓಣಿಯಾಗಿ ಬಿಟ್ಟರೆ, ಹೋಗಿ ಬರುವವರಲ್ಲಿ ಧಕ್ಕಾಮುಕ್ಕಿಯಾಗುವುದಿಲ್ಲವೇ ! (ಬಾಲಪ್ರ. III, ೧೩೦೪). ೨. ಗುದ್ದಾಟ ; ಹೊಡೆದಾಟ; ಮಾರಾಮಾರಿ : "ಧಕ್ಕಾಮುಕ್ಕಿ–ತೆಕ್ಕೆಮುಕ್ಕಿ; ಬಡಿದಾಟ" (ಜಾನಕೋ. ೮); ಅದೇನು ಇಲ್ಲ. ಧಕ್ಕಾಮುಕ್ಕಿಯ ಹೊತ್ತಿನಲ್ಲಿ ಮಹಾದೇವ ತುಸು ಕಚ್ಚಿದ್ದ (ಕುರಿಹಿಂ. ೩೫). **ಢಕ್ಕಾಮುಕ್ಕಿ :** (ಕಿ). **ಧಕ್ಕಿಮುಕ್ಕಿ :** ೧. ದಯಮಾಡಿ ನನಗೆ ಧಕ್ಕಿಮುಕ್ಕಿ ಮಾಡಬೇಡಿರಿ. ದೂರಿಂದಲೇ ಮಾತಾಡಿರಿ (ಮೋಹಿನೀ. ೧೨೬). ೩. ಪೆಟ್ಟು ; ಹೊಡೆತ ; ಆಘಾತ : ಮುಂದೆ ಎಷ್ಟೋ ಧಕ್ಕಿಮುಕ್ಕಿಗಳನ್ನು ಹೊಂದಿ ಸ್ಪೇನಕ್ಕೆ ಮುಟ್ಟುವಷ್ಟರಲ್ಲಿ ಅರ್ಧ ಹಡಗಗಳು ಸಹ ಉಳಿದಿದ್ದಿಲ್ಲ (ಇಂಗ್ಲಇ. ೫೯). **ಧಕ್ಕೆಮುಕ್ಕೆ :** ೩. ಹಿಂದೂಧರ್ಮವು ಬಹುಕಾಲದಿಂದ ಪರಧರ್ಮದವರ ಧಕ್ಕೆಮುಕ್ಕೆಗಳ ಪರಂಪರೆಗಳಿಗೆ ತಲೆ ಕೊಟ್ಟು ನುಗ್ಗುನುರಿಯಾಗಿದ್ದರೂ . . . ಚಿರಸ್ಥಾಯಿ ಯಾಗಿರುವದು (ಹಿಂಮುಸ. ೨).

[←ಹಿಂ. ಧಕ್ಕಾಮುಕ್ಕೀ ; ಮರಾ. ಧಕ್ಕಾಬುಕ್ಕೀ, ಧಕಾಬುಕಾ ಧಕಾಬುಕೀ, ಧಕೀಬುಕೀ,]

ಧಕ್ಕಿಮುಕ್ಕಿ 'ಧಕ್ಕಾಮುಕ್ಕಿ' ನೋ.

ಧಕ್ಕೆ₁ 'ಡಕ್ಕೆ' ನೋ.

ಧಕ್ಕೆ₂, ದಕ್ಕೆ₂ (ನಾ). ೧. ಏಟು ; ಪೆಟ್ಟು ; ಹೊಡೆತ ; ಆಘಾತ : ಲೇಡನ್‌ಜಾರದಲ್ಲಿ ವಿದ್ಯುತ್ತು ಬಹಳ ಸಂಚಿತವಾಗಿದ್ದರೆ, ಅದರ ಧಕ್ಕೆಯು ನಮಗೆ ತಡೆಯುವದಿಲ್ಲ (ಮುಂಬಯಿ. ೫-೨೧೯); ಕಲ್ಲು ಬೀಳುತ್ತಲೆ ಇದ್ದುವು. ಯಾರಿಗೂ ಧಕ್ಕೆಯಾಗಲಿಲ್ಲ (ಮೇದಿಮ. ೧೨೪). ೨. ವಿಪತ್ತು ; ಆತಂಕ ; ಹಾನಿ ; ನಷ್ಟ : ಜ್ಞಾನಾಂಬೆಗೆ ನಡುಕವುಂಟಾಗಿ ಜ್ವರವೂ ಬಂದು ಗರ್ಭಕ್ಕೇ ಧಕ್ಕೆ ಬರುವಂತಾಗಿಬಿಟ್ಟಿತು (ಪ್ರತಾಪ. ೪೧) ; ಮನೆಯ ಮಾನಕ್ಕೆ ಧಕ್ಕೆ ತಗಲಿದಾಗ ಜೀವದ ಹಂಗುದೊರೆದು ಕಾದಿದ್ದ (ದಕ್ಷಿನ. ೧೧೦) ; ಕುಲದ ಕೀರ್ತಿಗೆ, ತನ್ನ ಪ್ರತಿಷ್ಠೆಗೆ ಧಕ್ಕೆ ಬರದಂತೆ ಭಯದಿಂದ ನಡೆದುಕೊಂಡು ಬಂದಿರುವನು (ವಾರಾಕ್ಯ. ೬೯) ; ನಿನ್ನ ನೌಕರಿಗೆ ಧಕ್ಕೆ ಬಂದೀತು (ನಾಪೋಲೀ. ೨೫೬). **ದಕ್ಕೆ₂ :** ೨. ಅನ್ನ ತಿನ್ನದೇ ಸತ್ತರೂ ಅವರವರ ಧರ್ಮಕ್ಕೆ ದಕ್ಕೆಯಾಗಬಾರದು (ಕಾವೇರಿ. ೨೯).

ಧಕ್ಕೆ ಹತ್ತು = ತೊಂದರೆಯಾಗು : ನಿನ್ನಂಥ ಸಾವಿರಾರುಜನ ಸಾಹಸಿಗಳು . . . ಪ್ರಯತ್ನಿಸಿದರೂ ನನ್ನ ಒಂದು ಕೂದಲಿಗೆ ಕೂಡ ಧಕ್ಕೆ ಹತ್ತಲಾರದು (ಅಂಬಿಕೆ. ೧೫). [←ಹಿಂ. ಮರಾ. ಧಕ್ಕಾ]

ಧಕ್ಕೆ₃, ಧಕ್ಕಾ (ನಾ). ಸಮುದ್ರದಲ್ಲಿ ಹಡಗುಗಳು ನಿಲ್ಲುವುದಕ್ಕಾಗಿ ಏರ್ಪಡಿಸಿದ ಸ್ಥಳ ; ಹಡಗುಕಟ್ಟೆ : ಧಕ್ಕೆಗಳೆಂಬುವು ಸಮುದ್ರದಿಂದ, ಶಾಂತವಾದ ಸ್ಥಳಕ್ಕೆ ಬಂದು, ದಡಕ್ಕೆ ತಾಗಿ ಹಡಗುಗಳು ನಿಲ್ಲುವ ಸ್ಥಳಗಳು (ಬಾಲಪ್ರ. II, ೮೧೬) : ಬಂದರದ ಧಕ್ಕೆಗೆ ದೇಶ ಬಿಟ್ಟು ಇಷ್ಟು ದೂರ ಬಂದು, ಸ್ವಾಗತಿಸಿ ಇಲ್ಲಿಂದ ಕರೆದುಕೊಂಡು ಹೋಗಬೇಕಾಗಿದೆ ಒಬ್ಬ ಮಹಾಪುರುಷನನ್ನು (ಭಾರತಿ. ೨೫) ; ಆ ಸಂತೆಯ ಬಯಲನ್ನು ಕೊರೆದು ತೆಗೆದಂತೆ ಹಳ್ಳಕ್ಕೆ ಹೊಂದಿ ಗಚ್ಚಿನ ಧಕ್ಕೆ ! (ಬೆಟ್ಟಹೊ. ೨). **ಧಕ್ಕಾ :** ಜಲಮಾರ್ಗದಿಂದ ಕಳುಹಿಸುವುದಕ್ಕೆ ಧಕ್ಕಾ ಫಿ ಹೋಡಿ ಬಾಡಿಗೆಯ ಖರ್ಚು ತಕ್ಕೊಳ್ಳುವ ದರಗಳು (ಮುಂಬವ್ಯಾ. ೪೦ ಪ್ರಸ್ತಾವನೆ).

[←ಮರಾ. ಧಕ್ಕಾ./ಇಂ. Dock]

ಧಕ್ಕೆ₄ (ನಾ). ಹಡಗಿನ ಅಟ್ಟ,–ಮೇಲುಭಾಗ: ನನ್ನ ಸೋದರನೊಡನೆಯೂ ಸ್ನೇಹಿತರೊಡನೆಯೂ ಹಡಗಿನ ಧಕ್ಕೆಗೆ ಬಂದುದಾಯಿತು (ಅಪೂಪ. ೪) ; ಪ್ರತಿನಿಧಿಯು ಹಡಗಿನ ಧಕ್ಕೆಗೆ ಬಂದು ಕಣ್ಣರಳಿಸಿ ನೋಡಿದನು (ಕಪಪು. ೬-೫೬). [←ಇಂ. Deck]

ಧಕ್ಕೆಬಲಿ 'ಡಕ್ಕೆಬಲಿ' ನೋ.

ಧಕ್ಕೆಮುಕ್ಕೆ 'ಧಕ್ಕಾಮುಕ್ಕಿ' ನೋ.

ಧಗ (ನಾ). ಒಂದು ಅನುಕರಣ ಶಬ್ದ : ನಿಶಾಟರನುಂಡನಗ್ನಿ ಛುಮ್ಮೆಂಬ ಛಟಚ್ಛಟೆಂಬ ಧಗಯೆಂಬ ಧಗದ್ಧಗಯೆಂಬ [ಪಾಠಾಂ. ಧಗಲ್‌ಧಗಲೆಂಬ] ಥಟ್ಟುಪೊಟ್ಟೆಂಬ ರವಂ ಕಱುತ್ತಡಸಿ ಮೆಲ್ವ ಸರಕ್ಕನುಸಾರಿಯಪ್ಪಿನಂ (ಕಾವ್ಯಾವ. ೨೮).

ಧಗಧಗ, ಧಗದ್ಧಗ (ದ್ವಿರುಕ್ತಿ) : ಪಶ್ಚಿಮಾಶಾನಿಳಪಾತೋಜ್ಜೃಂಭಿತಂ ಬಂದುದು ವಿರಹಿತರುವ್ರಾತಮಂ ಪರ್ವುವುಗ್ರಾನಳನೆಂಬಂತಬ್ದಕಾಲಂ ಸ್ತನಿತಧಗಧಗಧ್ವಾನರೌದ್ರಾಯಮಾಣಂ (ಚಂದ್ರಪು. ೪-೨೯) ; ಧಗಧಗಂ ಧಗಧಗಂ ಧಗಧಗಿಲ್ ಛಿಮಿಛಿಮಿಲ್ ಛುರಿಛುರಿಲ್ ಛಟಛಟೆಂದು . . . ಕೆಂಗಿಡಿಗೆದಱಿ ದಾವಾಗ್ನಿ ಮುತ್ತಿತ್ತು ನಾಲ್ದೆಸೆಯನು (ಹಚಕಾ. ೧೦-೬) ; ಧಗಧಗ ಎಂಬುದಂ ಧಗಧಗಂ ಎನಲಾಗದು (ಶಮದ. ೬೧ ಪ್ರಯೋ) ; ಉರಿಯೊಳಾಜ್ಯವನೆಱೆದೊಡಂತುಬ್ಬರಿಸಿ ಧಗಧಗ ಎನುತ ಶಕೆಯಾವರಿಸಿದ ವೊಲು (ಬಸಪು. ೪೪-೨) ; ಧಗಧಗ ನಿಸ್ವನಂ ನಿಮಿರೆ ಕೆಂಗಿಡಿ ಸೂಸೆ (ವೃಷವಿ. ೨೯-೧೪೦); ಧಗಧಗಾ ಉರಿಯುತಿದೆ ಹೇಗೊ ಹತ್ತಿದ ಬೆಂಕಿ (ಅರರೋ. ೨೬) ; ಧಗದ್ಧಗೆಂದುರಿವ ದಳ್ಳುರಿಯೊಳ್ ಪಿಡಿದೊತ್ತಿ (ಧರ್ಮಾಮ್ಯ. ೧೨-೨೫೮). **ಧಗಧಗಧಗಿಸು** = ಅಧಿಕವಾಗಿ ಪ್ರಜ್ವಲಿಸು : ಉರಿಯ ತೆಕ್ಕೆಯಲಿ ಧಗಧಗಧಗಿಸಿ ಧಾಳಿಟ್ಟುದು ಮಹಾಶರವಹಿತವೋಹರಕೆ (ಕುಮ್ಯಾದ್ರೋ. ೧೯-೫೫).

ಧಗಡ₁ (ನಾ). ಜಾರ; ವಿಟ: ಎಲ್ಲಿಗೈದಿದನೊ ಧಗಡ ತೋರು ಬೇಗದಿ ನಿನ್ನ ಚಲ್ವಿಕೆಯು ಘನವಾಯ್ತೆಯೆನುತ ಕೊಲ್ಲುತಿರೆ (ಚಂದ್ರಾವ. ೪೫).

[←ಹಿಂ. ಧಗಡಾ ; ಮರಾ. ಧಗಡ]

ಧಗಡ₂ (ನಾ). ದಾಂಡಿಗ ; ದಡಿಯ ; "ಹುಂಬ" (ಜಾನಕೋ. ೮). P ಸಂಸ್ಕೃತ ಜೈನಗ್ರಂಥಗಳಲ್ಲಿ 'ಮಹಮ್ಮದೀಯ ಸೈನಿಕ,–ಭಟ' ಎಂಬ ಅರ್ಥದಲ್ಲಿ ಇದು ಬಳಕೆಯಲ್ಲಿದೆ.

[←ಮರಾ. ಧಾಂಗಡ್ ; ಗುಜ. ದಗಡ, ಧಗಡೋ]

ಧಗಡಿ₁, ದಗಡಿ (ನಾ). ಉದ್ಧಟ ವ್ಯಕ್ತಿ ; ಧೂರ್ತವ್ಯಕ್ತಿ ; ಜಗಳಗಂಟಿ : ಬುಗುಡೀಯ ಕೊಟ್ಟೇನೆಂದು ಬೆಡಗಿನಿಂದ ಎನ್ನ ತಂದ ಬುಗ್ದೀ ಕೇಳಿದರಲ್ಲಿ ಬುಗ್ಡಿ ಪಾಂಡವರಾದ್ದ ಪಗ್ಡಿ ... ಛೀ ಅತ್ತ ಹೋಗು ಧಗಡಿ ಹೋಗೆನುತಾನೆ (ಕನಕ. ೮೮-೬) ; ಬುಗುಡಿ ಆದರೆ ಧಗಡೀ ಮಗಳಿಗೆ ಆಗದೆ ? (ಗಾಜೆ). **ದಗಡಿ :** ಘೇ ದಗಡಿ ಜಾಯೆಂದು ನಿಜಕರದೊಳಿಹ ಕಲ್ಲ ಬೈದು ಕೊಡೆ (ಪ್ರೌಢರಾ. ೭-೪೭) ; "ವಾಗ್ದೇವಿ ಬಂದಳು ದಗಡಿ" ಎಂದು ಘಟ್ಟಿಯಾಗಿ ಉಚ್ಚರಿಸುತ್ತ . . . ನೆಲದ ಮೇಲೆ ಬಿದ್ದು ಹೊರಳಿದರು (ವಾಗ್ದೇವಿ. ೪೦).

[←ಮರಾ. ಧಗಡೀ. ಧಾಂಗಡೀ./ತೆಲು. ಧಗಿಡಿ, ಧಗಿಡೀ]

ಧಗಡಿ₂ 'ದಾಗುಡಿ' ನೋ.

ಧಗದ್ಧಗಿತ (ಗು). ಧಗಧಗ ಎಂದೂ ಸದ್ದುಮಾಡುವ; ಧಗಧಗಿಸುವ: ಧೃತ ಧಗದ್ಧಗಿತರವ ನಿರ್ಮಳಶಿಖಾಳಿಯಂ ಸತತಗತಿಪಥಮನಡರ್ವುಜ್ವಳ ಜ್ವಾಲೆಯಂ . . . ನೋಡಿ ಗಜಗಮನೆ ಕನಸೆಂದು ಬಗೆವನ್ನೆಗಂ (ಆದಿಪು. ೭-೩೭ ಕಗಳೆ). [ಸಂ.]

ಧಗದ್ಧಗಿಸು 'ಧಗಧಗಿಸು' ನೋ.

ಧಗಧಗನೆ (ಅ). ಧಗಧಗ ಎಂದು; ತೀಕ್ಷ್ಣವಾದ ಜ್ವಾಲೆಯನ್ನು ಚಿಮ್ಮಿ; ಪ್ರಜ್ವಲಿಸಿ: ಸಿಡಿಲು ತಗಲಿದ ಮರ ಧಗಧಗನೆ ಉರಿದು ಹೋಯಿತು (ಕೂಡಿ).

ಧಗಧಗಧಗನೆ (ದ್ವಿರುಕ್ತಿ): ಧಗಧಗಧಗನೆ ಪೊತ್ತುವ ಜ್ವಾಲೆಗಳ ಮಾಲೆ ಭುಗುಭುಗುಭ ಗಿಲ್ಮುಗಿಲ್ಮುಗಿಲೆಂದು ಡಾವರಿಸೆ (ಕ್ರಮಿಪಾ. ೮-೪೯).

[<ಧಗ + – ಅನೆ$_1$]

ಧಗಧಗಿಲ್ (ನಾ). ತೀಕ್ಷ್ಣವಾಗಿ ಉರಿಯುವುದನ್ನು ಅನುಕರಿಸುವ ಶಬ್ದ: ಧಗಧಗಿಲ್ ಧಗಧಗಿಲ್ ಘರಿಘರಿಲ್ ಘರಿಘರಿಲ್ . . . ಧಗಧಗಿಲ್ ಧಿಮಿಧಿಮಿಲ್ ಘುರಿಘುರಿಲ್ ಧಟಧಟೆಂದು . . . ಕೆಂಗಿಡಿಗೆದಱಿ ದಾವಾಗ್ನಿ ಮುತ್ತಿತ್ತು ನಾಲ್ದೆಸೆಯನು (ಹಜಕಾ. ೦೦-೬).

ಧಗಧಗಿಸು, ಧಗದ್ಧಗಿಸು (ಕ್ರಿ). ೧. (ಬೆಂಕಿ) ಧಗಧಗವೆಂದು ಉರಿ; ಪ್ರದೀಪ್ತವಾಗು; ಪ್ರಜ್ವಲಿಸು: ದೆಸೆಗಳಂ ದಹಿಸುತ್ತೆ ರಸೆಯನಲ್ಲಾಡಿಸುತೆ . . . ಒಗೆದುದು ಮಹಾವಿಷಂ ಧಗಧಗಿ[ಪಾಠಾಂ. ಧಳಧಳಿ, ದಳದುಳಿ]ಸಿ ಮುಳಿದು ಬೆಂಬತ್ತಿತು ಮಹಾವಿಷಂ (ನಂಬಿರ. ೦-೦೪); ಧಗಧಗಿಸಿ ಮಸಗಿ ದಳ್ಳುರಿ ನೆಗತೆರೆ (ಲಂಹರಿ. ೮-೩೦); ಉಬ್ಬುತುಪರಿಗೆ ಧಗಧಗಿಸುತಡುಗಬ್ಬುಗಳನಾಹುತಿಗೊಳುತ್ತಂ . . . ಭಾಳನೇತ್ರನ ನಿಬ್ಬರದ ಭಾಳಾಂಬಕಾಗ್ನಿಗೆ ಸಮವೆನಿಸುತಿರಲು (ಬಸಪು. ೪೪-೩೦); ವಿಕಟ ವಿಕ್ರಮ ವಿಸ್ಫುಲಿಂಗಪ್ರಕರದಿ ಧಗಧಗಿಸುತಿದೆ ಸಾಯಕವ ನಿಲಿಸಾ ನೀನೆನುತ ಭಂಗಿಸಿತು ಪರಿವಾರ (ಕುಮ್ಮಾದೋ್ರ. ೧೯-೩೩); ಗಗನದಲಿ ಬಳಿಕಸುರಪತಿ ಧಗಧಗಿಪ ಕಿಚ್ಚನು ಕಂಡು ಬೆಚ್ಚಿದು ಬೆಗಡಿನಲಿ ಬೆಸಸಿದನು (ತೊರಠಾ.೩-೮-೩೯); ಓದಿರುಮೆಳೆ ಧಗಧಗಿಸೆ ಘನ ಹೆಬ್ಬಿದಿರು ಧಟಧಟರೆನಲುವುರಿಯೊಳು ಕದಳಿಗಳು ಸಿವಿಸಿವಿಸೆ (ನಳಚ. ೬-೭); ಹಗಲೆಲ್ಲ ಧಗಧಗಿಸಿ, ಇರುಳು ಮಗಮಗಿಸಿ ಬೆಳಗು ಬಂದಿತು ದುಃಖದುಮ್ಮಾನಗಳ ಕುಡಿದ: ಸುಖದ ಸುಮ್ಮಾನಗಳ ಹೆಜ್ಜೆಯಿರಿಸಿ (ನಂಉಮು. ೪೩-೦೩). ೨. ಸುಟ್ಟುಹೋಗು; ಉರಿದುಹೋಗು; ದಹಿಸಿಹೋಗು: ಧಗಧಗಿಸಿದಜುವತ್ತುಸಾವಿರ ಸಗರರನು ಸಂಸ್ಕಾರದುಖದಲಿ ತೆಗೆಯಲೋಸುಗ ತವದಲಿದ್ದನು ಕಮಲ ಗರ್ಭಂಗೆ (ತೊರಠಾ. ೦-೦೩-೦೩). ೩. ಥಳಥಳಿಸು; ಮಿರುಗು: ಅಗಣಿತ ಕಲಶಗಳಿಂದ ಸೌಧದ ಸಾಲು ಧಗಧಗಿಸಲು ಕಂಡರವರು (ಅಂಜಪ. ೭-೩೦೬); ಕಣ್ಗೆ ತೋಱಿದನಿಂದ್ರಚಾಪದೊಳು ಮೂಡಿದ ನೃಪನಂತೆ ವಿಗೆ ತೋರಮುತ್ತಿನ ತೊಡಿಗೆಯೊಡನೆ ಧಗಧಗಿಸುವ ಲಾವಣ್ಯದಿಂದ (ಭರಪ. ೦-೪೪). **ಧಗದ್ಧಗಿಸು**: ೪. (ಝಳ) ಹೆಚ್ಚಾಗು; ಪ್ರಖರವಾಗು: ಮಂದರಮಹೀಧರಪ್ರಮಾಣದಾಲಿಗೋಡುವ ಲೋಹಪಿಂಡಮಂ . . . ಕರಗಿಸಲಾರ್ಪ ಘರ್ಮವೊರ್ಮೆ ಮಾಣದೆ ಧ[ಪಾಠಾಂ. ದ]ಗದ್ಧಗಿಸುತ್ತು ವಿರ್ಪುದು (ಪಧಪು. ೧೦-೩ ವ); ಒಗೆವ ದಿನೇಶನಂ ಹರಿವ ಸಿಂಧುವ ನೂದುವ ಗಾಳಿಯಂ ಧಗದ್ಧಗಿಸುವ ಕಿಚ್ಚಂ . . . ದೈವಮೆಂದೆಱಗುವಾತನೆ ದೇವವಿಮೂಢನಾಗನೆ (ಪಸಾಕ. ೪೭). 'ದಹಿಸು' ಪರಾ.

[<ಧಗ + – ಇಸ್$_5$]

ಧಗಮು 'ದಗವು' ನೋ.

ಧಗಮೆನ್ (ಕ್ರಿ). ಧಗ್ಗನೆ ಉರಿ: ಮಗನೆ ಪದಿನಾಲ್ಕು ವರುಷದ ಮಗನೈ ನಿನ್ನನ್ನನೊರ್ವನಂ ಪಗವಡೆಯೆಱದ್ದುಗಳನೆಂಬಿಂತೆಲ್ಕೆವೇಟ್ಟಿರ್ದೆ ಧಗಮೆನೆ ಸೈರಿಸುವುಪಾಯಮಾವುದು ಕಲುವೇ (ಪಜಭಾ. ೧೨-೯೧). [ಧಗ+ಎನ್$_7$]

ಧಗಲ್ (ನಾ). ಒಂದು ಅನುಕರಣ ಶಬ್ದ. 'ಧಗಲಿಡು' ಪರಾ.

ಧಗಲಿಡು (ಕ್ರಿ). ತೀಕ್ಷ್ಣವಾಗಿ ಉರಿ; ಭುಗಿಲಿಡು: ಪುಟನೆಗವ ಕಿಡಿಗಳ ತೇಜಿಗಳ ಭುಗಿಭುಗಿಪ ಕೆಮ್ಮುರಿ ರಥದ ಸಾಲ್ಗಳೊಳೊಗುವ ಕೆಂಡಗಳ ಧಗಲಿಡುವ ಕಾಲಾಳ ಕಡುಹಿನ ಹೊಗರಿನಲಿ ಹೊದರೆದ್ದು ದೈತ್ಯನ ವಿಗಡವಳಪನು ಮುಸುಕಿದನು (ಅಂಬಿಕಾ. ೦೬-೩೭). [ಧಗಲ್ + ಇಡು$_1$]

ಧಗಿಲ್, ಧಗಿಲು (ನಾ). ಒಂದು ಅನುಕರಣ ಶಬ್ದ: ಧಾ ಧಗಿಲ್ ಧಗಿಲ್ ಧಗಿಲೆನುತಬ್ಬ ತಬ್ಬದಂದು ಮುಟ್ಟಿತು ಸುಟ್ಟಿತು ತಿಂದು ತೇಗಿದತ್ತಗ್ನಿಯದೆ ನಿಂದ ಪೂಗಣ್ಮೆಯನಂ ಪಣೆಗಣ್ಣಿರಿ ಹಂಪೆಯಾಳ್ದನಾ (ಗಿರಿಕ. ೮-೪೭). **ಧಗಿಲು**: ಯುಗಜುಗ ಪ್ರಳಯವಹಂದೂ ಕಾಣೆನಿಂದೂ ಕಾಣೆ ಧಗಿಲು ಭುಗಿಲೆಂದುರಿವಂದೂ ಕಾಣೆನಿಂದೂ ಕಾಣೆ (ಬಸವ. ೫೪೨); ಧಗಿಲು ಭುಗಿಲೆಂದು ಮುಸುಕಿದ ಮಹಾಜ್ವಾಲೆ ಇದೇನೊ (ಸಿದ್ಧವ. ಕ. ೦೯-೫೪); ಧಗಿಲು ಭುಗಿಲೆನುತೆ ಮಾಮಸಕದಿ ಮಸಗಿ ತೊನೆದು ಬಸುಱಂ ಹೊಸೆದು (ತಿರುರ. ದೀ. ೦೮-೩).

ಧಗಿಲು 'ಧಗಿಲ್' ನೋ.

ಧಗೆ 'ದಗೆ$_1$' ನೋ.

ಧಗ್ಗನೆ (ಅ). ಬೇಗನೆ; ಒಮ್ಮಿಂದೊಮ್ಮೆ: ಇದು ಧಗ್ಗನೆ ಉರಿಯುತ್ತದೆ. ಉರಿಯುವಾಗ ಸುಟ್ಟ ಕಾಗದದ ವಾಸನೆ ಬರುತ್ತದೆ (ಗ್ರಹವಿ. ೬೩).

[ಧಗ್$_0$ + – ಅನೆ$_1$]

ಧಟ (ನಾ). ೧. ತಕ್ಕಡಿ; ತ್ರಾಸು: "ಧಟ–ದಿಬ್ಬದ ತೂಲೆ" (ನಾಚರಿ. ೬); "ಧಟಃ–ತಕ್ಕಡಿ" (ಸಿದ್ಧಾಂತಿ. ೪೯೦). ೨. ದಿವ್ಯಗಳಲ್ಲಿ ಒಂದು; ತಕ್ಕಡಿಯಿಂದ ಪರೀಕ್ಷಿಸುವ ದಿವ್ಯ: 'ದಿವ್ಯ' ಪರಾ. ೩. [ಜ್ಯೋತಿ] ತುಲಾರಾಶಿ: "ಧಟ = ತುಲಾರಾಶಿ" (ಜಾತತಿ. ಪರಿ. ೩೭೭). [ಸಂ.]

ಧಟಧಟ (ನಾ). ಒಂದು ಅನುಕರಣ ಶಬ್ದ: ಸಳೆವುತೆ ಹಿಮ್ಮೆಟ್ಟುತೆ ನಿಂದಿರುತಂ ಪದತಳದಿಂ ಧಟಧಟ ಕಿಱ್ದಿನುತಂ [ಪಾಠಾಂ. ಪದತಳದೊಳೆ ತಟಗಿರ್ಪೆಂದೆನುತಂ] ಮೃದುಗತಿಯೊಳ್ ಘಲಘಲಕೆಂದೆನುತಂ (ಭೃಂಗೀರ.ಹ. ೪೭೦-೦೦).

ಧಟಿ$_1$ (ನಾ). ೧. ಹರಕುಬಟ್ಟೆ; ಚಿಂದಿಬಟ್ಟೆ. ೨. ಲಂಗೋಟಿ; ಕೌಪೀನ. [ಸಂ. ಧಟೀ]

ಧಟ್$_2$ (ನಾ). ಶಿವ. [ಸಂ. ಧಟನ್]

ಧಟನಿ (ನಾ). ಉಡಿದಾರ; ಕಟಿಸೂತ್ರ. [ಸಂ. ಧಟನೀ]

ಧಟ್ಟಣೆ (ನಾ). ೧. ಅಬ್ಬರ; ಆಟೋಪ; ಉರವಣೆ: ಉರುಪರಾಕ್ರಮ ತೇಜ ಪಡುವಣ ತರಣಿಯಾದುದು ಧಟ್ಟಣೆಯ ಧರಧುರಕೆ ನಿರ್ದ್ರವಜಿಹ್ವೆಯಾದುದು ನಿಮಿಷನಿಮಿಷದಲಿ (ಕುವ್ಯಾಸ. ೩-೧೦೩); ವಾದ್ಯಧ್ವನಿಯ ಧಟ್ಟಣೆ ಧಾತುಗೆಡಿಸಿತು ಜಗದ ಜೋಡಿಗಳ (ಕುವ್ಯಾಅ. ೦೯-೦೫); ಅರಸ ಕೇಳವರಬ್ಬರುಬ್ಬನ ಧುರದಧ [ಪಾಠಾಂ. ಥ]ಟ್ಟಣೆ ಪಸರಿಸಿತು ಸುರನರರನಾ ಸಮಯದಲಿ (ಕುಬ್ಯಾಗ. ೫-೫೬); ನಿನ್ನವನೆನಿಸುವಂತಕನಂಜೆ ಭಜಿಸುತ್ತಿಹನು ನಿಮ್ಮಡಿಯ ದಿನದ ಭೋಗವದಾ ಚತುರ್ದಶವನುಗಳಿರವಾತಂಗೆ ಮಿಗಿಲೇ ಮನುಜರಿನ್ನೆಂತಂಜದಿಹರಂತೀನ ಧಟ್ಟಣೆಗೆ (ನಿಘಗ. ೪-೦೬-೩೬); ಕುಶಿಕಸುತ ತತ್ಪುತ್ರರೆಡೆಗೈದಿ ಬನ್ನವಿಸಿ ವಿಸದ ನುಡಿಗಳ ಕೇಳುತವರು ಫಲವಿಾಯದಿರೆ ರಸೆಯೊಳಿಕ್ಕಿದುರ್ಘಟದೊಳೀ ಪರಿಯ ಧಟ್ಟಣೆಯ ವ[ಪಾಠಾಂ.ರ] ಚನದಿಂ ಗೈದರೈಸೆ (ವಂಕಾರಾ.೦-೦೮-೦೩); ಭೀಮನ ಧಟ್ಟಣೆಯಿದೆಸೆಯಿಂದ ಜರಾಸಂಧನ ನಾಲಗೆಯು ನಿರ್ದ್ರವವಾಯಿತು (ಹಾಜಸೂ. ೩೪). ೨. ಘಟ್ಟಣೆ; ಏಟು; ಹೊಡೆತ: ಏಳುದಿನ ಪರಿಯಂತ ಧರಣೀಪಾಲಕುಲಕೌಸ್ತುಭನು . . . ಅಮರಾದ್ರಿಯನು ಬಲಗೊಂಡು ಕಾಲನನು ಜವಗೆಡಿಸಿ ಶಿರುಗಿದಡೇಳುಸಾವಿರ ಕಲ್ಪನೆಗಳಾ ಘಾಲಿಗಳ ಧಟ್ಟಣೆಯಲಾದವು (ನಿಘಗ. ೩-೦ ೩೯). [ಧಟ್ಟಿಸು+–ಅಣ್ಕೆ./ಮರಾ. ದಟಾವಣೇ, ದಟಣೇ]

ಧಟ್ಟಿ ' ದಟ್ಟಿ$_1$ ' ನೋ.

ಧಟ್ಟಿಸು ' ದಟ್ಟಿಸು$_2$ ' ನೋ.

ಧಟ್ಟುಬಿ (ನಾ). (?) : ತೊಳ್ತುಬಿ, ಧಟ್ಟುಬಿ, ಮುಮ್ಮಬಿ, ಮಣ್ಣಬಿ, ಚಪ್ಪಬಿ (ಶಬ್ದಾನು. ೧೪೦ ವ್ಯಾಖ್ಯಾ). "ತುಳಿದಾಟ; ಹಾವಳಿ" (ಕ್ರಡೂ.).

[?]

ಧಟ್ಟೈಸು ' ದಟ್ಟಿಸು$_2$ ' ನೋ.

ಧಡ$_1$ ' ತಡ$_2$ ' ನೋ.

ಧಡ$_2$ (ನಾ). ಮುಂಡ; ಅಟ್ಟಿ : "ಅಟ್ಟಿ, ದಿಂಡು, ಧಡ" (ಳಂನುಹು. ೭೮) ; ಧಡವು ನಿಡಿದಾಗಿ ಪುಚ್ಚದ ಕಡೆಗೆ ಸಣ್ಣಾಗುತ್ತ ಹೋಗಿರುತ್ತದೆ (ಮುಂಲಬಿ. ೩-೫೫) ; ಶಿವಪ್ಪನ ಧಡ ಒಂದೆಡೆ ಹಾಗು ರುಂಡವೊಂದೆಡೆ ಬಿದ್ದಿತ್ತು (ಶಿಶಾಮು .೩೦) ; ನೀನು ಆಕೆಯನ್ನು ಹುಡುಕಿ ತರದಿದ್ದರೆ ನಿನ್ನ ಶಿರವು ಧಡದ ಮೇಲೆ ಉಳಿಯಲಾರದೆಂಬುದನ್ನು ಲಕ್ಷ್ಯದಲ್ಲಿಟ್ಟುಕೋ (ಅಂಬಿಳ. ೩೯).

[<ಪ್ರಾ. ಧಡ]

ಧಡ$_3$ 'ದಿಡ' ನೋ.

ಧಡಂ (ನಾ). ಒಂದು ಅನುಕರಣ ಶಬ್ದ : ನಿಸ್ತಾಣಧ್ವನಿ ತಂಬಟಸ್ಫುಟ ಧಡಂ ಧಂ ನಾದ (ಎಳ. VIII, ಸಾಗರ. ೦೫-೨೬; 1218).

ಧಡಂಧುಡುಕಿ = ಒಂದು ಬಗೆಯ ಆಟ; ಧ ವಂಧ್ಯ ಒಂದುಂ ಕಂಭಕ್ಕೆ ಜೋಡಿಸಿರುವ ಉದ್ದವಾದ ವಂರದ ತುಂಡಿನ ಎರಡೂ ಕಡೆಗಳಲ್ಲಿ ಒಬ್ಬೊಬ್ಬರಾಗಲೀ ಅನೇಕರಾಗಲೀ ಕುಳಿತಂ ಕೆಳಕ್ಕೂ ಮೇಲಕ್ಕೂ ಚಲಿಸಿ ಆಡುವ ಆಟ. ಇಂಗ್ಲೀಷಿನ See-Saw ಎಂಬ ಆಟಕ್ಕೆ ಸಮಾನವಾದಂದಂ. ಸಂಸ್ಕೃತದಲ್ಲಿ ಇದನ್ನು ' ಉಚ್ಚಾವಚಕ್ರೀಡೆ ' ಎಂದು ಕರೆದಿದ್ದಾರೆ.

ಧಡಕ್, ಧಡಕು (ನಾ). ೧. ಒಂದು ಅನುಕರಣ ಶಬ್ದ : ಧಡಕ್, ಧಡಕ್ ಎಂದು ಸದ್ದು ಮಾಡುತ್ತಾ ರೈಲು ಹೊರಟಿತು (ಕೂಡಿ). **ಧಡಕು** : ೨. ಕುಲುಕಾಟ : ವಿದ್ಯಾರ್ಥಿಗಳು ಬಾಗಿಲಿಗೆ ಹಾಯ್ದರು. ಆದರೆ ಪ್ರತಿ ಧಡಕಿಗೆ ಅದು ಕಿರ್ರೆಂದು ಒದರಿ ಇದ್ದಕ್ಕಿದ್ದಂತೆ ನಿಲುತ್ತಿತ್ತು (ರಶ್ಮಿ. ೧೫೮) ; ಬಂಡಿ ಉಯ್ಯಾಲೆಯಂತೆ ತೂಗಾಡುತ್ತಿತ್ತು. ರಸ್ತೆಯಲ್ಲಿ ಕಲ್ಲುಗಳೇನೂ ಇರದಿದ್ದುದರಿಂದ ಧಡಕಿರಲಿಲ್ಲ (ಬಿಂದಜೀ. ೫).

ಧಡಕಸ (ನಾ). ರಭಸ ; ವೇಗ : ಧಡಕಸದಿಂದ ತಾ ಖಿಡ್ಗವ ಸೆಳೆದಾನು ಬಿಡದ ಕಡವನೆನುತಾಲಿವರನ್ನು (ಸಾಸಂಗ. ೦೯). [?]

ಧಡಕು ' ಧಡಕ್ ' ನೋ.

ಧಡಕ್ಕನೆ (ಅ). ಒಮ್ಮೆಲೆ ; ತಕ್ಷಣ ; ಕೂಡಲೆ : ನೀನು ಬರುವುದೊಂದೇ ತಡ, ಧಡಕ್ಕನೇ ಆರಾಮಕುರ್ಚಿಯ ಮೇಲೆ ಬಹಳ ದಣಿದವನಂತೆ ಬಿದ್ದು ತೇಕುತ್ತ ಉಶ್, ಉಶ್, ಎನ್ನುವಿ (ಬ್ರಹ್ಮಜೀ. ೦೯೪). [ಧಡಕ್ + –ಅನ್ನೆ$_1$]

ಧಡಗ (ನಾ). (?) : ಕಡಗವ ಕೊಟ್ಪೇನೆಂದು ಸಡಗರದೆನ್ನ ತಂದ ಕಡಗ ಕೇಳಿದರಲ್ಲಿ ಕಡಗ ಅಂಬರದಲ್ಲಿ ಗುಡುಗ ಮುಂಗೈ ಮೇಲಿನ ಗಿಡುಗ ಎತ್ತಿನ ಮ್ಯಾಲಿನ ಧಡಗ ಹೋಗೆನುತಾನೆ (ಕನಕ. ೮೮-೩). [?]

ಧಡಧಡ (ನಾ). ಒಂದು ಅನುಕರಣ ಶಬ್ದ. 'ಧಡಧಡನೆ' ಪರಾ.

ಧಡಧಡನೆ (ಅ). ಬೇಗಬೇಗನೆ : ಧಡಧಡನೆ ಅಂಬುಧಿಯಾ ದಾಟ ಸೀತೆಗೆ ಗುರುತಾ ಕೊಡಕೊಡುತ್ತ ಕುಸ್ತರಿಸಿದಂತ ಹನುಮಂತಾ (ಪಾಂಡೀ. ೨೮-೦).

[ಧಡಧಡ + – ಅನ್ನೆ$_1$]

ಧಡಧಡಿ ' ಧಡಧಡೀತ ' ನೋ.

ಧಡಧಡಿಸು$_1$ 'ದಡದಡಿಸು' ನೋ.

ಧಡಧಡಿಸು$_2$ (ಕ್ರಿ). ಧಡಧಡನೆ ಹರಿ ; ರಭಸದಿಂದ ಪ್ರವಹಿಸಂ : ರಕ್ತಬೀಜಂಗೆರಡು ಕಾಣಿಸಲೊಡನೆ ಭುಗುಳಿಸಿ ಮೇರೆಯಿಲ್ಲದ ರಕ್ತ ಧಡಧಡಿಸಿತ್ತು ಕುಂಭನಿಗೆ (ಅಂಬಿಕಾ. ೪೧-೨೬). [ಧಡಧಡ + – ಇಸು$_3$]

ಧಡಧಡೀತ, ಧಡಧಡಿ (ಅ). ಮುಚ್ಚುಮರೆಯಿಲ್ಲದೆ; ಬಹಿರಂಗವಾಗಿ; ನಿಸ್ಸಂಕೋಚವಾಗಿ: ಧಡಧಡೀತ ಮನ್ಯಾಗ ಸೊಸೀ ಇದಾಳ, ಮತ್ತೂಂದ ಮಾದವೀ ಮಾಡತ್ಯಾನಂದರ ಯಾರರ ಹೆಣ್ಣ ಕೊಟ್ಯಾರು? (ನಿಸರ್ಗ. ೩೦೦). **ಧಡಧಡಿ** : ಹಗಲೀಗೇ ಸರಸವಾಡ್ತೀಯೇನೆ ಬಂದವನ ಜತೆಗೆ ಧಡಧಡೀ ಜಗಲಿಯ ಮೇಲೆ ? (ಮುತ್ತುದಾ. ೦೭೭). [←ಮರಾ. ಧಡಧಡೀತ]

ಧಡಪಡ, ದಡಬಡ$_2$ (ನಾ). ೧. ಆತುರ; ವೇಗ. 'ಧಡಪಡಿಸಂ' ಪರಾ. ೨. ಗದ್ದಲ; ಗಲಾಟೆ;ಅಬ್ಬರ: ಕಿಟ್ಟಿಯ ಧಡಪಡವನ್ನು ಕೇಳಿ ಪುಸ್ತಕದತ್ತ ಲಕ್ಷಕೊಡದೆ ಸದ್ದು ಕೇಳತೊಡಗಿದಳು (ಗಂಮಾಯಿ. ೦೩) ; ೩. ಈಗ ಹೀಗೆ ಮನೆಯೊಳಗ ಧಡಪಡಮಾಡಿದರೆ? (ಅಕೋಳ. ೭೨). ಶ್ರಮಂ; ಪ್ರಯತ್ನ; ದುಡಿಮೆಂ : ನಮ್ಮ ಧಡಪಡ ಸರ್ವರ ಕಲ್ಯಾಣದ ಸಲುವಾಗಿ ನಡೆದಿತ್ತು (ದೀಪಹ. II, ೩೭೦). ' ಧಡಪಡಿಸು ' ಪರಾ. **ದಡಬಡ$_2$** : ೧. ಕೆಲಸವನ್ನು ಬೇಗ ಮುಗಿಸಬೇಕೆಂದು ದಡಬಡ ಅಂತ ಮಾಡಿದರೆ ಕೆಲಸವೇ ಕೆಟ್ಟುಹೋಗುತ್ತದೆ (ಕೂಡಿ).

ಧಡಪಡ ಮಾಡು, ದಡಬಡ ಮಾಡು = ೧. ಅಬ್ಬರಮಾಡು ; ಗದ್ದಲ ಮಾಡಂ: ಕಾರಣವಿಲ್ಲದೆ ಯಾಕೆ ಹೀಗೆ ಧಡಪಡ ಮಾಡುತ್ತಿದ್ದೀ ? (ಕೂಡಿ). ೨. ಪ್ರಯತ್ನಮಾಡು ; ಶ್ರಮಪಡು : ನೀನು ಕಲಿಯಬೇಕು . . . ಒಬ್ಬ ಒಳ್ಳೆಯ ಆಫೀಸರನ ಅಥವಾ ಡಾಕ್ಟರನ ಕೈಹಿಡಿಯಬೇಕು ಎಂದು ನಾನು ಇಷ್ಟೆಲ್ಲ ಧಡಪಡ ವಹಾಡುತ್ತಿರುವೆ (ಕ್ಷಿತಿಜ. ೬೬). ೩. ಚಡಪಡಿಸು; ಒದ್ದಾಡಂ : ರೋಗಿಯು ಹಿಂದಿ ತೆಗೆದಂತೆ ನಿಃಸತ್ವನೂ ಚಿಂತಾತುರನೂ . . . ಧಡಪಡ ಮಾಡುವವನೂ ಆಗಿರುವನು (ಒಹಧೀ. ೬). ೪. ಆತುರಪಡು : ಇದರಲ್ಲೆಲ್ಲ ದಡಬಡ ಮಾಡಿದರೆ ಕೆಲಸವೇ ಕೆಟ್ಟುಹೋಗುತ್ತ (ಮುನಿಮಾ. ೦೪೩). [←ಮರಾ. ಧಡಪಡ, ಧಡಫಡ, ಧಡಬಡ]

ಧಡಪಡಿಸು, ತಡಪಡಿಸಂ, ತಡಫಡಿಸು, ದಡಪಡಿಸಂ, ದಡಬಡಿಸು$_2$ (ಕ್ರಿ). ೧. ಆತುರಪಡು; ತವಕಿಸಂ; ಗಡಿಬಿಡಿಮಾಡು : ನನ್ನನ್ನು ಜೇಲಿಗಟ್ಟಲು ಬ್ರಿಟಿಶ್ ಸರಕಾರವೇ ಟೊಂಕಕಟ್ಟಿ ನಿಂತಿರುವಾಗ ಇವನು ಇಷ್ಟು ಧಡಪಡಿಸಿದನಲ್ಲ ! (ಮುನಿಚಿ. ೪೨) : ಅಂಥ ಮನೆಗೆ ಆಸುಪಾಸಿನ ಜನ ಹೆಣ್ಣು ಕೊಟ್ಟು ದಿವ್ಯಸಂಬಂಧ ಬೆಳಿಸಲು ಹೇಗೆ ಧಡಪಡಿಸಿಲಿಲ್ಲವೋ – ಅರಿಯೆ! (ದೀಪಸಿ. ೨೩). ೨. ಪ್ರಯತ್ನಮಾಡಂ : ತಮ್ಮ ಹೆಸರಿನ ಸುತ್ತಲೂ ಒಂದು ಹೊಳವು ಹೆಣೆಯಬೇಕೆಂದು . . . ಅದಕ್ಕಾಗಿ ಚಡಪಡಿಸಿ, ಧಡವಡಿಸಿ, ಹಗಲು ರಾತ್ರಿ ಒಂದು ಮಾಡಿ, ಅವಿಶ್ರಾಂತವಾಗಿ ಬೆವರು ಸುರಿಸುತ್ತಾರೆ (ಗಾಳಿ. ೬೩) ; ಐದುವರ್ಷಗಳವರೆಗೆ ಧಡಪಡಿಸಿದರೂ ಆಧ್ಯಾತ್ಮಿಕ ದೃಷ್ಟಿಯಿಂದ ಯಾವ ಫಲವೂ ನನಗೆ ದೊರೆಯಲಿಲ್ಲ(ಮಹಾಯೋ. ೦೭೩) ; ನಿನ್ನದೊಳ್ಳೆಯದಾಗಲಿಯೆಂದೇ ನಾನು ಧಡಪಡಿಸಿದೆ (ಸಮಾಜೀ. ೦೯೮) : ಎಲ್ಲಾ ಅದಕ್ಕೆ, ಅದರ ಉನ್ನತಿಗೆ ಎಂದೇ ಧಡಪಡಿಸುತ್ತಾರೆ (ದೀಪಹ. I, ೦೬). ೩. ಚಡಪಡಿಸು ; ಒದ್ದಾಡು; ಕಳವಳಿಸು : ಪಾಪ! ಬಡ ಮನೋಹರನಂತೂ ಒಂದೇ ಸವನೆ ಧಡಪಡಿಸುತ್ತಿರಬಹುದು (ಕುಬ್ಜಾ. ೨೨೨) ; ಬೇಟಿಗಾರರ ಸಪ್ಪಳವನ್ನು ಕೇಳಿ ಚಿಗರೆಗಳು ನಿಲ್ಲುವ ಹಾಗೆ ಬಾಗಿಲಮುಂದೆ ವಾಸವಾಗಿದ್ದ ಗೋಪಿಯು ಮಾತ್ರ ಕವಿಗಳನ್ನು ನಿವಿರಿಸಿ ನಿಲ್ಲುತ್ತದೆ, ಧಡಪಡಿಸುತ್ತದೆ (ಕಲಸಂ. ೪). **ತಡಪಡಿಸು** : ೧. ಓಡೋಡಿ ಬಂದಿರುವೆ ಹಡೆದವ್ವ ತಡದರು ಒಡೆಯಗೆ ಊಣಸಲು ತಡವಡಿಸಿ ಬಂದರೆ ಓಡಲ್ಲಿ ಹೋದೆಯೊ ಎನ ತಂದೆ (ಸಿದ್ಧಪು. ೪-೮). **ತಡಫಡಿಸು** : ೧. ಆಕೆಯು ತಡಫಡಿಸುತ್ತ ರಾಮನ ಬಳಿಗೆ ಹೋಗಿ (ತುಳಸೀ.೨೨೬). ೩. ನಿರ್ಮಲೆ ತಡಫಡಿಸುತ್ತ ಹಾಸಿಗೆಯಲ್ಲಿ ಎದ್ದೇ ಕುಳಿತಳು (ಮುತ್ತುದಾ. ೨೦೬). **ದಡಪಡಿಸು** : ೧. "ದಡಪಡಿಸು–ಒದ್ದಾಡು ; ಗಡಿಬಿಡಿ ಮಾಡಂ" (ಜಾನಕೋ. ೦). **ದಡಬಡಿಸು$_2$**: ೧. ಸದ್ದುಕೇಳಿ ಹೆಂಗಸರೆಲ್ಲ ದಡಬಡಿಸುತ್ತ ಎದ್ದು ಹೋದರು (ಕೂಡಿ). [ಧಡಪಡ + –ಇಸು$_3$]

ಧಡಯ 'ಧಡೆ$_1$' ನೋ.

ಧಡರ್ (ನಾ). ಒಂದು ಅನುಕರಣ ಶಬ್ದ : ಬೆದಜಿ ಎದೆ ಧ[ಪಾಠಾಂ. ಬೆ]ಡರೆಂದು ಬಡಿಯಲು (ಸಮ್ಮಕಾ. ೧೦-೬೮).

ಧಡಲ್ (ನಾ). ಒಂದು ಅನುಕರಣ ಶಬ್ದ : ಅನೆಪಟಾಕಿ ಹಚ್ಚಿದ ತಕ್ಷಣ ಧಡಲ್ ಎಂದು ಸಿಡಿಯಿತು (ಕೂಡಿ).

ಧಡಲ್ಬಾಜಿ (ನಾ). ಒಂದು ಬಗೆಯ ಪಟಾಕಿ; ದೊಡ್ಡ ಅನೆಪಟಾಕಿ : ನೆಲಕ್ಕೆ ಅಪ್ಪಳಿಸಿ ಗರ್ಜಿಸುವ 'ನೆಲಗುಮ್ಮೆ', ಹೆಡಬಿಚ್ಚಿದ ಹಾವಿನ ಮರಿಯಂತಹ ತಾಳೆಮಡಲಿನ 'ಧಡಲ್ಬಾಜೀ' (ಮೂಕರುದಾ. ೫೧೬) ; ಧಡಲ್ಬಾಜಿ ಸಪ್ಪಳವ ಬೇಡುವದು ಡೊಳ್ಳು ಡೊಂಬರಾಟ(ಜೀವಂ. ೯೫-೯) ; ಪಟಾಕ್ಷಿ, ಚಟಾಕಿ, ಧಡಲ್‌ಬಾಜಿ . . . ಮೊದಲಾದ ಶಬ್ದಗಳು ಅನುಕರಣದಿಂದಲೇ ಬಂದುವು (ಭಾಷಾಶಾ. ೫). [< ಧಡಲ್]

ಧಡವ (ನಾ). ದಾಂಡಿಗ; ಟೊಣಪ: ಹತ್ತುವರ್ಷದ ಧಡವ ಆಗಿದ್ದೀಯೇ. ಇನ್ನೂ ಬರೆಯಲು ಬರುವುದಿಲ್ಲವೆ ? (ಕೂಡಿ) 'ಗಡವ' ಪರಾ. [?]

ಧಡವೆ (ನಾ). ದಾಂಡಿಗಿತ್ತಿ; ಟೊಣಪೆ : ಹನ್ನೆರಡು ಹದಿಮೂರು ವರ್ಷದ ಧಡವೆಯರಾಗಿ ಏನ್ರೇ ಅದು ಆಡೋದು? (ಕನಕ. ೯೬). [ಧಡವ+-ಎ$_2$]

ಧಡಾಡಿ (ನಾ). ಜಬರ್ದಸ್ತು ; ಜೋರು : ಭಾಳ ಧಡಾಡಿ ಆಸಾಮಿ (ಧನಂಜ. ೩೧). [← ಮರಾ. ಧಡಾಡೀ]

ಧಡಾರ್ (ನಾ). ಒಂದಂ ಅನುಕರಣ ಶಬ್ದ. 'ಧಡಾರನೆ' ಪರಾ.

ಧಡಾರನೆ (ಅ). ಜೋರಾಗಿ; ರಭಸವಾಗಿ : ಒಳಗೆ ನಡೆದು ಧಡಾರನೆ ಬಾಗಿಲು ಮುಚ್ಚಿಕೊಂಡು ಹೊರಟೇ ಹೋದರು (ಮೂಪ್ರೇಪ. ೦೭೬).

[ಧಡಾರ್ + – ಅನೆ$_1$]

ಧಡಿ 'ತಡಿ$_2$' ನೋ.

ಧಡಿಕೆ (ನಾ). ಕುಲುಕಾಟ; ತುಯ್ದಾಟ : ಗಾಡಿಯ ಧಡಿಕೆಗೆ ಒಳಗೆ ಕುಳಿತವರ ಮೈ ನುಗ್ಗುನುಚ್ಚಾಗುತ್ತಿತ್ತು (ಕಂದಹು. ೨೮) ; ಬೀದಿಯ ಪ್ರತಿಯೊಂದು ಏರಿ – ಇಳಿಜಾರಿನ ಧಡಿಕೆಗೆ ಕೆಸರು ಅಲುಗಾಡಿ ಕೆಳಗೆ ಬಿದ್ದು . . . ಪ್ರಯಾಣಿಕರನ್ನು ತೊಂದರೆಗೀಡುಮಾಡಿದಂತಾಗುತ್ತಿತ್ತು (ಬಂಜನ್. ೩೦೪). [<ಧಡಕ್]

ಧಡಿಗ 'ದಡಿಗ' ನೋ.

ಧಡಿಗತನ (ನಾ). ದುಷ್ಟತನ ; ನೀಚತನ : ಕಡನ ಕೊಟ್ಟವರೊಡನೆ ಧಡಿಗತನ ಮಾಡುವ ಭ್ರಷ್ಟ ಬಡವರಿಗೆ ಕೊಟ್ಟ ನುಡಿ ನಡೆಸದವ ಭ್ರಷ್ಟ (ಪುರಂದ. ೪-೦೫೬-೧). [ಧಡಿಗ (< ದಡಿಗ) + – ತನ]

ಧಡಿದೋತರ 'ದಡಿದೋತ್ರ' ನೋ.

ಧಡಿಯ$_1$ 'ದಡಿಯ$_1$' ನೋ.

ಧಡಿಯ$_2$ 'ಧಡೆ$_1$' ನೋ.

ಧಡೂತಿ, ದಡೂತಿ (ನಾ). ೧. ಗಟ್ಟಿವಂಟ್ರಾಗಿರುವುದು : ಧಪ್ಪಪುಷ್ಟ; ದೃಢಕಾಯ : ಆರೋಗ್ಯಶಾಸ್ತ್ರದ ಗಂಧವನ್ನೇ ಅರಿಯದ ಹಳ್ಳಿಗರು ಎಷ್ಟೊಂದು ಧಡೂತಿಗಳಾಗಿದ್ದಾರೆ (ಮೂಲಾನ. ೮೫) ; ಮುದುಕಿ ಧಡೂತಿಯಾಗಿದ್ದಳು (ಎದೀ. ೨೯). ೨. (ಸೀರೆ, ಧೋತರ ಮೊದಲಾದಂವು) ಒತ್ತಾಗಿ ನೆಯ್ದಿರುವಿಕೆ; ತೂಕವಾಗಿರುವಿಕೆ : ಸೀರೆ ಧಡೂತಿಯಾಗಿದೆ. ಬಾಳಿಕೆ ಬರುತ್ತದೆ (ಕೂಡಿ). **ದಡೂತಿ** : ೧. ದೊಂದಿವಿಾಸೆಯ ಆ ವ್ಯಕ್ತಿ ಉದ್ದವಾಗಿ ದಡೂತಿಯಾಗಿದ್ದನು (ಪುನರು. ೨೩). ೨. ಎಲ್ಲಾ ಸೀರೆಗಳನ್ನೂ ನೋಡಿ "ಅಕ್ಕ, ಇದು ತುಂಬ ಚೆನ್ನಾಗಿದೆ ! ದಡೂತಿಯಾಗಿದೆ ! ಇದನ್ನು ಉಟ್ಟುಕೊ" ಎಂದಳು (ಕಲರು. ೬೩). ೩. ಶಕ್ತಿ; ಸಾಮರ್ಥ್ಯ; ಸತ್ವ ; ಯೋಗ್ಯತೆ : ಹನ್ನೊಂದನೇ ದಿನ ಅವರವರ ದಡೂತಿಯಿದ್ದಷ್ಟು ದಾನ ಧರ್ಮಗಳನ್ನು ಕೊಡುತ್ತಿದ್ದರು (ಹುಟ್ಟಹ. ೬೯).

[← ಮರಾ. ಧಡೋತೀ, ಧಡೌತಾ]

ಧಡೆ$_1$, ಡಡಯಂ, ದಡಿಯ$_2$, ದಡೆ$_3$, ದಡೆಯ, ಧಡಯಂ, ಧಡಿಯ$_2$, ಧಡೆಯ (ನಾ). ಹತ್ತು ಅಥವಾ ಹನ್ನೆರಡು ಸೇರುಗಳ ಒಂದು ಅಳತೆ; ಮಣದ ನಾಲ್ಕನೆಯ ಒಂದು ಭಾಗ : ವಾಡಿಕೆಯಾಗಿ ೧೨ ಸೇರಿಗೆ ಒಂದು ಧಡೆ, ೪ ಧಡೆಗೆ ಒಂದು ಮಣ (ಕಭಾಗ. ೩೮೯) ; ಧಡ ಬತ್ತಾಸನ್ನೂ ನಾಲ್ಕುಸೇರು ಪುಟಾಣಿಯನ್ನೂ ಬಹಳ ಸೋತವರಂತೆ ಖರೀದಿ ಮಾಡುತ್ತಾರೆ (ಶ್ರೀಶ್ರಹೂ. ೪೬) ; ನನಗೆ ಧಡೆ ಬಂಗಾರ ಇಡಸತಾನು (ರಕ್ತಧ್ಯ. ೦೫೧). **ದಡಯಂ** : ವಂದು ಮಣುವಿಂಗೆ ದಡಯಂ ನಾಲ್ಕುಂ ಪಂಚೇರು ಧಂದದೊಳೆಂಟು ಡಾಶೇರು ಪೋಡಶಮಕ್ಕುಂ (ಧಾಸ್ಕರ. ೭೫-೭). **ದಡಿಯ$_2$** : ಒಂದು ದಡಿಯ ಹುಣಸೆಹಣ್ಣು ತಾ (ಕೂಡಿ). **ದಡೆ$_3$** : ಬೆಲ್ಲ ವಿದ್ದ ಕಡೆ ನೊಣ, ದಡೆ ನಾಲ್ಕಕ್ಕೆ ಮಣ (ಗಾಡ). **ದಡೆಯಂ** : ಶಶಿ ಖಂಡು ಗಕಷ್ಟತುಮಣ ಶಶಿ ಮಣುವಿಗೆ ದಡೆಯ ನಾಲ್ಕು ತಪ್ಪದು ಬಟುಕಂ ಶಶಿ ದಡೆಯಕೆ ಸೇರ್ ಪತ್ತುಂ ಶಶಿ ಸೇರಿಂಗಂ ಪಾವು ನಾಲ್ಕು ತಪ್ಪದು ನಿರುತಂ (ವ್ಯವಹಾ. ಅನುಬಂಧ. I. ೩). **ಧಡಯಂ** : ವೇಷಭೂಷಣಗಳನ್ನು ಬದಲಾಯಿಸಿ . . . ಒಂದು ಧಡಯ ಬಂಗಾರ ಸಹಿತವಾಗಿ ಲಗ್ನವಾಡಿಸಿದರಂತೆ (ಕಥವಿ. ೪೦೯). **ಧಡಿಯ$_2$** : ಒಂದು ಧಡಿಯ ಬೆಲ್ಲ ಹೊತ್ತು ತರಲು ಆಗಲಿಲ್ಲವೆ ? (ಕೂಡಿ). **ಧಡೆಯ** : ಪಂಚೇರು ಧಡೆಯ ಮಣ ಪ್ರಮಾಂತಾದುವುಗಳಿಂದ . . . ವ್ಯಾಪಾರ ಮಾಡುವಂತೆ ಕಟ್ಟಳೆ ಮಾಡಿಸಿದರು (ಜಾಮುವಂ. ೧೦೯). [←ಮರಾ. ಧಡಾ]

ಧಡೆ$_3$ (ನಾ). ಒಂದಂ ಬಗೆಯ ಕರುಳುರೋಗ; ಕಾಲರಾ : ನಾನಾ ಧಡೇದ ಬ್ಯಾನಿ ಬಂದು ಸತ್ತಾ ಅಂತ ನಾ ಸುಳ್ಳು ಹೇಳೂದಿಲ್ಲ (ಗ್ರಾಮಾಹು. ೩೨). [←ಮರಾ. ಧಡಾ]

ಧಡೆಯ 'ಧಡೆ$_1$' ನೋ.

ಧಡ್ಡ 'ದಡ್ಡ$_2$' ನೋ.

ಧಣಂ (ನಾ). ಒಂದಂ ಅನುಕರಣ ಶಬ್ದ. 'ಧಣಮ್ಮನೆ' ಪರಾ.

ಧಣಗರಿ (ನಾ). ಎತ್ತುಗಳಲ್ಲಿ ಒಂದು ಜಾತಿ : ಎತ್ತುಗಳಲ್ಲಿ ಸೋರಟೇ . . . ಧಣಗರೀ, ಖಿಲಾರೀ, ಹಣಬಿರಿ, ಬೆಲ್ಲರಿ ಎಂಬ ೮ ಜಾತಿಗಳುಂಟು (ಕಭಾಗ. ೫೭). [?]

ಧಣಧಣ (ನಾ). ಒಂದು ಅನುಕರಣ ಶಬ್ದ : ಧಣಧಣಮೆಂದುಲಿದೊಡನೇಂ ತಣಿದುಬ್ಬರೆ ನೀಂ ಧನಂ ಧನಂ ಧನವೆನಲ್ (ಚಿಕವಿ. ೬-೧೫೩). [ಸಂ.]

ಧಣಧಣತ್ಕೃತಿ (ನಾ). ಧಣಧಣ ಎಂಬ ಶಬ್ದ : ಸಿಡಿಲ ಮಜ್ಜೆ ತಾ ಕಾರ್ಮುಕದೊಳುಗ್ಗಡಿಸುವಂತಿರೆ ಧಣಧಣ[ಪಾಠಾಂ. ಧಣಧಣ]ತ್ಕೃತಿ ಜಡಿಯೆ (ತೂಕರಾ. ೬-೬-೫೦). [ಸಂ.]

ಧಣಧಣರು (ನಾ). ಒಂದು ಅನುಕರಣ ಶಬ್ದ : ಮೊರೆವ ಶಂಖವ್ಯೂದಂಗ ಭೇರಿಗಳುಬುಬ ಧಣ[ಪಾಠಾಂ. ಧಂ]ಧಣರನಲು ವಿಗೆ ಮೋಹರಿಸಲಾ ನಿಸ್ಸಾಳತತಿ ಘನವಾದ್ಯ ಪೋಪಿಸಲು (ನಳಚ. ೩-೭೩).

ಧಣಮ್ಮನೆ (ಅ). ಧಣಂ ಎಂದು : ಅನುಕರಣಕ್ಕೆ–ಖಣಿಲ್ಲನೆ . . . ಧಣಮ್ಮ [ಪಾಠಾಂ. ಮ್ಮೆ]ನೆ ಪೊಟ್ಟನೆ (ಶವಿದ. ೦೪ ಪ್ರಹೋ). [ಧಣಂ + – ಅನೆ$_1$]

ಧಣಾ (ನಾ). ಒಂದು ಅನುಕರಣ ಶಬ್ದ : ಶ್ರಿದಶರಬ್ಬರಿಸಿ ಅನಕ ದುಂದುಭಿ ಶಂಖ ಧಂ ಧಂ ಧಣಾ ಸರಿಗಮವಧನೀಯೆಂದೆನುತ . . . ತುತಿಸಿದರು (ವಿದಾಕ್ಕ. ೯೨-೨).

ಧಣಾರ್ (ನಾ). ಲೋಹದ ಪಾತ್ರೆಗಳು ಬೀಳುವಾಗ ಉಂಟಾಗುವ ಸದ್ದನ್ನು ಅನುಕರಿಸುವ ಶಬ್ದ : ಅಟ್ಟದ ಮೇಲಿನಿಂದ ಪಾತ್ರೆ ಧಣಾರ್ ಎಂಬ ಸದ್ದಿನೊಂದಿಗೆ ಬಿದ್ದಿತು (ಕೂಡಿ).

ಧಣಿ 'ದನಿ$_2$' ನೋ.

ಧಣಿಧಣಿ (ನಾ). ಒಂದು ಅನುಕರಣ ಶಬ್ದ : ಪರನು ಧಣಿಧಣಿ ಎಂದು ರೂಪಾಯಿ ಸುರಿದನು (ಹುಟ್ಟಹ. ೦೪).

ಧಣಿಯು, ಧನಿಯು₁ (ನಾ). ೧. ಒಡೆಯ; ಯಜಮಾನ : ಧಣಿಯರ ಮನೆ ಮುಂದ ಕಾವಲು ಮಾಡಣ್ಣ (ಅರಳು.೪೩-೭). **ಧನಿಯು₁ : ೨. ಹಣವಂತ; ಧನಿಕ :** "ಉಳ್ಳವ, ಒಡೆಯ, ರೊಕ್ಕಸ್ತ, ಧನಿ(ಯ)" (ಶಂನುಹು. ೭೪). [<ಪ್ರಾ. ಧಣಿಅ./ಸಂ. ಧನಿಕ]

ಧಣಿರ್ (ನಾ). ಒಂದು ಅನುಕರಣ ಶಬ್ದ : **ಹಟ್ಟೀಲಿ ಒಳಕಲ್ಲು ಕೂಟ್ಸಿಗೇಲಿ ಸೇದೋ ಬಾವಿ ಹೊಕ್ಕು ಕುಟ್ಟದರೆ ಧಣರೆಂಬೋ ಒನಕೆಯ ಕೆತ್ತಿಸಿದವ್ಯಾಜೆ** ಸುಖ ಬಾಳೊ (ನಾಷದ. ೧೫೪).

ಧಣು₁ (ನಾ). ಮೆಚ್ಚಿಕೆಯನ್ನು ಸೂಚಿಸುವ ಮಾತು ; ಕೊಂಡಾಟದ ನುಡಿ : "ಅರರೆ ಧಣು ಭಾವು ಭಳರೇ ಧಿರುರೇ ಮರುಳು ಪುತುರೆ ವಾಯ್ಯು ಜಾಗೂ ಸಲೆ ಸುಂದರೆಯೆನೆ ಕೊಂಡಾಟದ ನುಡಿ" (ಧಾರವಿ. ೪೬) ; **ಕೈದುಡುಕುತಿರ್ದರು ಧಣುದರುರಿ ಜಗಜಟ್ಟಿ ಭಾಪೈನುತ** (ಸಾಳ್ವಭಾ. ೨೨-೬೭).

ಧಣುಧಣು (ದ್ವಿರುಕ್ತಿ) : ಏರೆ ಧಣುಧಣು ಪುತುರೇ ಬಿಲುಗಾಱ (ಕುವಾ.ಭೀ. ೪-೧೪) ; ಅರರೆ ಧಣುಧಣು ಪುತು ಪಾಯಿಕು ಸರಿಯು ಕಾಣೆನು ಭಾಪೆನುತ ಎಸ್ತರಿಸಿ ದಾನವೈರಿ ಕರ್ಣನ ಹಿರಿದು ಹೊಗಳಿದನು (ಕುವಾ.ಕ. ೩೬-೦೭) ; **ಖಂಡಿಸಿದೆ ನೀನಿವನ ಧಣುಧಣುವೆನುತೆ ಪೊಗಳಿದರು** (ರಾಮಾಸಂ. ೬-೭-೨೮).

ಧಣುವೆ (ನಾ). ಮಲ್ಲಯುದ್ಧದ ಒಂದು ಪಟ್ಟು (?) : ಕರವಳಯು ತಳಹತ್ತ ಡೊಕ್ಕರ ಶಿರವ ಧಣು ಧಣುವಟ್ಟ ತಳ ಪೊಪ್ಪರ ದುವಂಗುಲ ಕಂದ ಡೊಕ್ಕರ ತೋರಹತ್ತದಲಿ . . . ತೋಱಿದರು ಕೌಶಲವ (ಕುವಾ.ಅ. ೬-೨೯). [?]

ಧಣುರೆ (ನಾ). ಒಂದು ಕೊಂಡಾಟದ ನುಡಿ : **ಲೇಸು ಲೇಸೆಲೆ ಪಾರ್ಥ ಧಣುರೆ ಸಿಬಾಸು ಕಾಣೆವು ತಾವು ಬದುಕಿದ್ದೀಸುಕಾಲ ಮಹಾಸುಭಟರ ಪರಿವೃತವುಂಟವರ್ಗೆ ಈಸು ದೃಢಮನವಿಲ್ಲ** (ಕೋಗಯು. ೦೮-೩೨). 'ಧಿರುರೆ'. 'ಭಳಿರೆ' ಪರಾ.

ಧಣುವಟ್ಟ 'ದಣುವಟ್ಟ' ನೋ.

ಧಣುವಟ್ಟ 'ದಣುವಟ್ಟ' ನೋ.

ಧಣ್ಣಗವಾಡಿ (ನಾ). ಒಂದು ಊರಿನ ಹೆಸರು : **ಶ್ರೀಮತ್ ಶ್ರೀಪುರುಷ ಮಹಾರಾಜರ್ ಪೃಥುವೀರಾಜ್ಯಂಗೆಯೆ ಕೆಸುಗೊಳವೊಡೆಯ ಬಿನಾಮ್ಮಬ್ಬಿ ಧಣ್ಣಗವಾಡಿಯಂ ಬ್ರಹ್ಮದೇಯಂಗೊಟ್ಟಂ** (ಎಕ. IV, ಹಿಗ್ಗಡ. ೪-೩ ; ಸು. 750). [ಧಣ್ಣಗ್ + ಪಾಡಿ]

ಧಣ್ಣೆಕುತ್ತಾರೆವಿಗುರವಿ (ನಾ). ಒಬ್ಬಾಕೆಯ ಹೆಸರು : **ಶ್ರೀಪೆರುಮಾಳು ಗುರುವಡಿಗಳಾ ಶಿಷ್ಯ ಧಣ್ಣೆಕುತ್ತಾರೆವಿಗುರವಿ × × × ಡಿಪ್ಪಿದಾರ್** (ಎಕ. II, ೭-೧ ; ಸು. 700). [?]

ಧತ್ತೂರ (ನಾ). ಒಂದು ಬಗೆಯ ಗಿಡ ; ಉಮ್ಮತ್ತ ; ವಂದ್ದು ಗಂಣಿಕೆ : "ಧ[ಪಾಣಂ. ದು]ತ್ತೂರಮಾ ಕನಕಮುನ್ಮತ್ತಮೆನಿಸಿಕ್ಕು" (ಪುಂಗಣ. ೩೮-೩೭). [ಸಂ.]

ಧತ್ತೂರಿ 'ದತ್ತೂರ' ನೋ.

ಧತ್ವ (ನಾ). [ವ್ಯಾಕ] ಧಕಾರ : **ಯಾತ್ವ ವಿಶ್ರ ಧತ್ವಕ್ಕೆ ದತ್ವಮತ್ವಕ್ಕಿತ್ವಂ** (ಕವಿಪ. ೨೭೬). [ಸಂ.]

ಧಧಾಂ (ನಾ). ಒಂದು ಅನುಕರಣ ಶಬ್ದ : **ಮುಟ್ಟಿರುದು ಕುಲನಗ ವ್ರಾತವುಂ ವೀರಬಲ್ಲಾಳನೃಪಂ ಸೂಳ್ಕೆಸವೇಟ್ಟಿಕ್ಕಸರ ಸಮರಧಾರೀ ಧಧಾಂ ಧಾಂ ಧಧಾಂಧ ಧ್ವನಿ** (ಸೂಕ್ತಿಸು. ೦೮-೦೬).

ಧನ (ನಾ). ೧. ದುಡ್ಡು ; ಹಣ : "ದ್ರವಿಣಂ ದ್ರವ್ಯಂ ವಸ್ವರ್ಥ ವಿತ್ತ . . . ಧನವೇಕಾರ್ಥಂ" (ವಸ್ತುಕೋ. ೩೯-೦೩) ; **ಧನಮಂ ಮರ್ಯಾದೆಯಿಂದಾರ್ಜಿಸಿ** (ಪಂತಾಮಾ. ೩-೦೬೧) ; **ಧನಮುಳ್ಳಿನೆಗಂ ವೇಶ್ಯಾಂಗನೆ ಪ[ತ್ನು]ಗುಂ** (ಬಂಹರಿ. ೪-೩೦). ೨. ಸಂಪತ್ತು ; ಐಶ್ವರ್ಯ : "ದ್ಯುಮ್ನಂ . . . ಧನಂ, ಹಿರಣ್ಯಂ, ವಸು, ವಿಭವಂ-ಈ ೧೫ ಒಡಮೆಯ ಪೆಸರ್" (ಹರಿವಯು. ೧೪-೮೦) ; **ಧನಮೆಂಬುದು ವಿಭುಗೆ ಯಶೋಧನಂ** (ಆದಿಪು. ೦೪-೭೪) ; **ಧನವ ಬೇಡಿದಡೀವೆ** (ಬಸವ. ೭೦೬) ; **ಸರ್ವಋತುಗಳೊಳು ಫಲವಿಡಿದೊಜಗುವ ತರುಕುಲಂ ಬತ್ತ ದೊಂದೇ ವರಿಯಲಿಹ ಸರೋವರವೆಮ್ಮ ಧನವು** (ಹತಕಾ. ೮-೬) ; **ಧನವನುಳ್ಳ ಮಹಾತ್ಮನಾವುದ ನೆನೆದೊಡದು ಕೈಸಾರುವುದು** (ಕುವಾ.ಉ. ೪-೫೫). ೩. ಗೋಧನ : ಪಶು ಸಂಪತ್ತು : "ಗೋವ್ಯಂದಂ, ಗೋಧನಂ, ಧನಂ-ಈ ಮೂಱು ತುಱ ವಿನ ಹಿಂಡು" (ಹರಿವಯು. ೪೪-೦೦೭); "ಗೋ ಮಹಿಷ ಪ್ರಭೃತಿ ಪಶುಸ್ತೋಮಂ ಪ್ರಧನಂ ಧನಾಹ್ವಯಂ" (ವಸ್ತುಕೋ. ೯೦-೦೪). ೪. [ಜ್ಯೋತಿ] ಜಾತಕನ ಜನ್ಮಲಗ್ನದಿಂದ ಎರಡನೆಯ ಸ್ಥಾನ : **ಸಹಜಾಯವ್ಯಯ ಧನ ದಶ ಸುಹೃದ್ಗೃಹಸ್ಥಾಯಿಯಾಗೆ ತತ್ಕಾಲದೊಳಾ ಗ್ರಹವಂತರು ತತ್ಕಾಲಿಕ ಸುಹೃದ್ಗೃಹಂ ವರಯುತಂ ದ್ವಿಷದ್ಗೃಹವೆನಿಕುಂ** (ಜಾತಕ. ೩-೦೭). ೫. [ಗಣಿತ] ಅಧಿಕ ಚಿಹ್ನೆ ; ಸಂಕಲನವನ್ನು ಸೂಚಿಸುವ ಚಿಹ್ನೆ ; + ಗುರುತು : **ವರ್ಗಮೂಲಕ್ಕೆ ಧನ, ಋಣ ಚಿಹ್ನೆಗಳೆರಡನ್ನೂ ಕೊಡದೆ ಒಂದೇ ಮೂಲವು ಕೊಡಲ್ಪಟ್ಟಿದೆ** (ಗಚಿಪ. ೦೪) : **ಬ್ರಹ್ಮಗುಪ್ತ ಹೇಳಿರುವಂತೆ : "ಧನ ಮತ್ತು ಋಣ ಇವುಗಳ ಗುಣಲಬ್ಧ ಋಣ ; ಎರಡು ಋಣಗಳದ್ದು ಧನ ; ಧನವನ್ನು ಧನದಿಂದ ಗುಣಿಸಿದರೆ ಧನ"** (ಕಕ್ಷಪ್ರಾ. ೪೭೦) : **ಋಣವಸ್ತುಕಣಗಳು ಧನ ಆಧಾರಬಿಂದುವನ್ನು (Nucleus) ಸುತ್ತುವರಿದು ಪರಮಾಣುಗಳುಂಟಾಗಿಪೆ** (ನಿಕಿಯು. ೩೩೦). ೬. [ಜ್ಯೋತಿ] ಮನೆ ಕಟ್ಟುವಾಗ ನೋಡುವ ಒಂದು ಲೆಕ್ಕಾಚಾರ ; P ಮನೆಯ ನಿವೇಶನದ ಉದ್ದಸಂಖ್ಯೆಯನ್ನು ಅಗಲಸಂಖ್ಯೆಯಿಂದ ಗುಣಿಸಿ ಬಂದ ಫಲವೇ ಕ್ಷೇತ್ರಫಲ. ಅದನ್ನು ಎಂಟರಿಂದ ಗುಣಿಸಿ, ಹನ್ನೆರಡರಿಂದ ಭಾಗಿಸಿದರೆ ಉಳಿಯುವ ಶೇಷವೇ ಧನ. ಕ್ಷೇತ್ರಫಲವನ್ನು ಮೂರರಿಂದ ಗುಣಿಸಿ, ಎಂಟರಿಂದ ಭಾಗಿಸಿದರೆ ಉಳಿಯುವ ಶೇಷವೇ ಋಣ. **ಋಣಕ್ಕಿಂತ ಧನ ಹೆಚ್ಚಾಗಿದ್ದರೆ ಶುಭ : ಪದಮಂ ರಂಧ್ರದಿನೊತ್ತಿಯೆತ್ತು ಗಜದಿಂ ಕೊಳ್ ವಿಂಕ್ಕುದಕ್ಕುಂ ಧನಂ ತದವಾಪ್ತಂ ನಗಸಂಗುಣಂ ಫಣಿಹೃತಂ ಶೇಷಂ ಬಿಯುಂ ಲಬ್ಧಪಂತದು ತಾನಾ ಮನೆಗಾಯಂ** (ಲೋಕೋಪ. ೩-೨೦).

ಧನಕನಕ = ಹಣ ಮತ್ತು ಹೊನ್ನು : "ಧನಕನಕವಾಚಕಂ ರೈ ಶಬ್ದಂ" (ವಸ್ತುಕೋ. ೦೨೩-೪೨) ; **ಧನಕನಕಮುಳ್ಳನಿಕ ದಿನಕರನಪೋಲಕ್ಕು ಧನಕನಕ ಹೋದ ಮಱುದಿನ ಹಾಳೂರ ಶುನಕನಂತಕ್ಕು** (ಸರ್ವಜ್ಞ. ೦೨೩೭); **ಕಪ್ಪಕಾಣಿಕೆಗಳನ್ನು ತಂದು ಧನಕನಕಸಂಗ್ರಹ ಮಾಡಿಕೊಳ್ಳಬೇಕಾಗಿತ್ತು** (ವಡಕಥಾ. ೯೦). . **ಧನಕನಕವಸ್ತುವಾಹನ = ಐಶ್ವರ್ಯ, ವಾಹನ ವುಂಟಾದುವು. ಧನದಾತ = ಹಣವಂತ; ಧನಿಕ: ಧನದಾತಂ ಕಱಿದಾಗಿ ದೊಡ್ಡಿತೆನೆ ಲಿಂಗಂ ದೊಡ್ಡದಾದಂದು ನಿರ್ಧನಂ** (ಲೋಕೋಪ. ೦೧-೫). **ಧನ ಧಾನ್ಯ = ಸಂಪತ್ತು ಮತ್ತು ಆಹಾರಧಾನ್ಯ : ಧನಧಾನ್ಯದಿಂ ಪೂರ್ಣವಾದಿಳೆಯೊಡೆತನವ ತನ್ನಿಂ ತಾನೆ ಕೊಱಿದು** (ಕರ್ಣಪ. ೯-೮). **ಧನ ಧಾನ್ಯ ಸಮೃದ್ಧಿ = ಸಂಪತ್ತು ಹಾಗು ದವಸಧಾನ್ಯಗಳಿಂದ ತುಂಬಿರುವುದು : ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರವು ಧನಧಾನ್ಯ ಸಮೃದ್ಧಿಯಿಂದ ಕೂಡಿದ್ದಿತು** (ಕೂಧಿ). **ಧನಮುಳ್ಳಂ, ಧನವುಳ್ಳವ=ಹಣವನ್ನುಳ್ಳವನು; ಹಣವಂತ : ಧನಮುಳ್ಳನುಮಂ ಬಿಡದೊಯ್ಯನೆ ಸಾಯದೆ ಬಂದಿವಿಡಿದವಂ ಬಾಟ್ಗಿಂದಂದನವರತಂ ಜನರಂ ಬಿಡಿದ ನರಂಗೆರಡುಂಟೆ ಬಗೆವೊಡಿನ್ನೀ ಜಗದೊಳ್** (ಧರ್ಮಾಮೃ. ೩-೦೯೭) ; **ಧನಮುಳ್ಳನುಮಿಲ್ಲದನುಂ ಮನದಾಣ್ಮನುಮೊತ್ತೆಯಾಣ್ಮನುಂ ನೆರೆವೆಡೆಯೊಳ್ ತನಗೆ ಸರಿಯೆನಿಪ ಬರ್ದಿನ ವನಿತೆಗೆ ಸಲೆ ಸಂದುದುಬ್ಬಿದರೊಳ್ ಸಂದಪುದೇ** (ಲೀಲಾವ. ೩-೮೭);

ಪ್ರತ್ಯಯಕ್ಕೆ–ಧನಮುಳ್ಳಂ, ಧಾನ್ಯಮುಳ್ಳಂ, ಗುಣಮುಳ್ಳಂ (ಶಮದ. ೨೦೬ ಪ್ರಯೋ); ಹಡೆದುಂಬ ಸೂಳೆಯಂತೆ ಧನವುಳ್ಳವರನಱಸಿಯಱಸಿ ಬೋಧಿಸಲು ಪ್ರಾರ್ಥಿಸಲು ಮುನ್ನ ನಾನಱಿಯೆನಯ್ಯಾ (ಬಸವ. ೪೧೩). ಧನಮುಳ್ಳಾತ = ಧನದಾತ : ಧನಮುಳ್ಳಾತಂ ದಿಟಂ ಜಾಣೊಡೆಯನಧಿಕ ನುರ್ವೀಶ್ವರು ಮನ್ಮಥಂ ಸಜ್ಜನನೆಲ್ಲಾ ವಿದ್ಯೆಯೊಳ್ ಬಲ್ಲವಂ (ದಶಕು. ೮-೭೯). [ಸಂ.]

ಧನಂಗುಳಿ (ನಾ). ಹಣವನ್ನು ಗಳಿಸುವ ಸ್ವಭಾವವುಳ್ಳವನು : ಆಟಂಗುಳಿ, ಲಂಚಂಗುಳಿ, ಧನಂಗುಳಿ (ಶಬ್ದಾನು. ೩೮೩ ಪ್ರಯೋ).

[ಧನ + – ಗುಳಿ$_5$ (< – ಕುಳಿ$_3$)]

ಧನಂಜಯ (ಗು). ೧. ಧನವನ್ನು ಗೆಲ್ಲುವ. (ನಾ). ೨. ಬೆಂಕಿ ; ಅಗ್ನಿ : ಗಿರಿಶಲಲಾಟಲೋಚನಧನಂಜಯದಿಂ ಪರಿದಗ್ಧನಾದ ಭಾಸುರಕುಸುಮೇಷು . . ಜಲಕ್ಕನುದ್ಭವಿಪನೆಂಬವೊಲ್ (ರಾಜಶೇ. ೧೧-೬೦). ೩. ಅಗ್ನಿಯ ಅಧಿದೇವತೆ : "ಸ್ವಾಹಾಪ್ರಿಯಂ ಸಪ್ತರಸನನಪ್ಪಿತ್ತಂ ಧನಂಜಯಂ . . . ವಿರೋಚನನೆನಿಸ್ಕುಂ" (ಮಂಗರಾ. ೧೪-೬) : ತೂಗಿ ಬಾಣವ ಹೂಡಿ ಕಿವಿವರೆಗಾಗಿ ಬರಸೆಳೆದಾರಿ ಬೊಬ್ಬಿಱಿದಾಗಲಿಂತೆಂದನು ಧನಂಜಯನಾ ಧನಂಜಯಗೆ (ಕುಪ್ಯಾಅ. ೨೦-೨೪). ೩. ಅರ್ಜುನನಿಗಿರುವ ಹತ್ತು ಹೆಸರುಗಳಲ್ಲಿ ಒಂದು ; ೪ ಯುಧಿಷ್ಠಿರನ ರಾಜಸೂಯಯಾಗದ ಸಮಯದಲ್ಲಿ ಹೇರಳವಾದ ಧನರಾಶಿಯನ್ನು ಅರ್ಜುನನು ಸಂಪಾದಿಸಿತಂದುದರಿಂದ ಅವನಿಗೆ ಈ ಹೆಸರು ಬಂದಿತು : ನಸುನಗುತರ್ಜುನನು ಫಲುಗುಣ ಧನಂಜಯ ಜಿಷ್ಣು ಸಿತವಾಹನ ವಿಜಯ ಬೀಭತ್ಸು ಪಾರ್ಥ ಕಿರೀಟಿ ಮೊದಲಾದ ವಿನುತ ಕೃಷ್ಣನು ಸವ್ಯಸಾಚಿಗಳೆನಿಪ ಪೆಸರನು ತಿಳುಪಿ (ಕುಪ್ಯಾವಿ. ೬-೪೬). 'ದಶನಾಮ' ಪರಾ. ೪. ಶರೀರದಲ್ಲಿರುವ ನಾಗ, ಕೂರ್ಮ, ಕೃಕರ, ದೇವದತ್ತ ಮತ್ತು ಧನಂಜಯವೆಂಬ ಪಂಚವಾಯುಗಳಲ್ಲಿ ಒಂದು : "ಶೀರ್ಷದಲಿಹಾನಿಲಂ ಧನಂಜಯನಕ್ಕು" (ಮಂಗರಾ. ೧೫-೧೨) : ಶಿವ ಜೀವರೊಂದುದಲ್ಲಿ ಪ್ರಾಣ ಅಪಾನ . . . ಧನಂಜಯ ಎಂಬ ದಶವಾಯುಗಳ ಗಮನಾಗಮನದ ವಿಷಯವ್ಯಾಪ್ತಿಗಳು ಅಡಗಿ ಆತ್ಮಲಿಂಗಸಂಬಂಧಿಯಾದೆನು (ಸಿದ್ಧೇವ. ೧೦೩-೩೨೦). 'ಧನಂಜಯವಾಯು' ಪರಾ. ೫. ದಶರೂಪಕವೆಂಬ ಲಕ್ಷಣಗ್ರಂಥವನ್ನು ಬರೆದವನು : ಗ್ರಂಥಕರ್ತೃವಾದ ಧನಂಜಯ ಗ್ರಂಥಾಂತ್ಯಶ್ಲೋಕದಲ್ಲಿ . . . ಅದರ ಹೆಸರನ್ನು ಸೂಚಿಸಿದ್ದಾನೆ (ದಶರೂ. XII, ಪೀಠಿಕೆ). [ಸಂ.]

ಧನಂಜಯಲೋಚನ (ನಾ). ಕೆಂಡಗಣ್ಣ ; ಶಿವ : ಕಾಲಕಂಧರವರ ದೇವದೇವ ಹರಿರಾಜ ಧನಂಜಯಲೋಚನಾಂಧಕಾಸುರಹರ . . . ಪಾಲಿಸಾ (ಹಮ್ಮೀರ. ೮-೮೯). [ಧನಂಜಯ + ಲೋಚನ]

ಧನಂಜಯವಾಯು (ನಾ) = ಧನಂಜಯ ೪ : ನುಡಿ ನುಡಿಯಲಿಕ್ಕೆ ಬುದ್ಧಿಯ ಮಾಡಿಸುವದೊಂದು ಧನಂಜಯವಾಯು . . . ಹಸ್ತದಲ್ಲಿ ದೇವದತ್ತವಾಯು ಜಿಹ್ವೆಯಲ್ಲಿ ಧನಂಜಯವಾಯು (ಚನ್ನವ. ೬೬-೧೩) ; ಧನಂಜಯವಾಯು ನೀಲವರ್ಣ (ಸಿದ್ಧೇವ. ೧೦೯-೩೬೪) ; ಧನಂಜಯವಾಯುವಿನಿಂ ಶೋಕಮೋಹಂಗಳಹವು (ವಿವೇಕ. ೩೨).

[ಧನಂಜಯ + ವಾಯು]

ಧನಂಜಯಾಂಬಕ (ನಾ). = ಧನಂಜಯಲೋಚನ : ಪಾಂಡುಪುತ್ರನಾತಂ ಜಡಿದೊತ್ತೆ ಜಾಱಿ ಪೆಱಸಾರ್ವನೆ ಧೀರಧನಂಜಯಾಂಬಕಂ (ಶಬಶಂ. ೪-೪೪). [ಧನಂಜಯ + ಅಂಬಕ]

ಧನಂಬಡೆ (ಕ್ರಿ). ಐಶ್ವರ್ಯವನ್ನು ಸಂಪಾದಿಸು : ತಾಯುಮಂ ವನಿತೆಯುಮಂ ಬಿಸುಟ್ಟು ಪರದಾಡಿ ಧನಂಬಡೆಯಲ್ಕೆ ಪೋಗೆ (ಮಹಾನೇ. ೪-೧೦೭) ; ಸಂಸ್ಕೃತದ ನಿತ್ಯಬಿಂದುಗೆ–ಗುಣಂಗೊಂಡಂ . . . ಪ್ರಿಯಂ ನುಡಿದಂ ; ಧನಂಬಡೆದಂ (ಶಮದ. ೧೬೭ ಪ್ರಯೋ). [ಧನ + ಪಡೆ$_1$]

ಧನಕೋ (ಗು). ೧. ಸಾಲ ಕೊಡುವ ; ಲೇವಾದೇವಿಯ : ಋಣಕೋ ಜನರ ಹೊಲಮನೆಗಳನ್ನು ಜಪ್ತ ಮಾಡಿಸಿ, ದನಕರುಗಳನ್ನು ಮಾರಿಸಲು ಹಂಬಲಿಸುವ ಧನಕೋ ಜನರು ಅಧರ್ಮದ ಅರ್ಥಶಾಸ್ತ್ರವನ್ನೇ ಹಿಂಬಾಲಿಸುತ್ತಾರೆ (ಭಾರಸಂ. ೧೬೩). (ನಾ). ೨. ಬಡ್ಡಿವ್ಯವಹಾರ ಮಾಡುವವನು ; ಲೇವಾದೇವಿ ಮಾಡುವವನು : ವಿಶ್ವಾಸ ಅವನ ಬಿನ್ ವ್ಯಾಜದ ಧನಕೋ ಆಗಿದ್ದ (ದೀಪಪ. I, ೧೬೮). [← ಮರಾ. ಧನಕೋ]

ಧನಕೋಶ (ನಾ). ಹಣವನ್ನು ಶೇಖರಿಸುವ ಸ್ಥಳ ; ಕೋಶಾಗಾರ ; ಭಾಂಡಾರ ; ಖಜಾನೆ : ಧನಕೋಶಂ ನವಹೇಮತಾಮರಸಕೋಶಂ ದೇಶಮಾ ಸೈಕತಾವನಿದೇಶಂ ಸಹಕಾರಿ ಸಾರಸಹಕಾರಂ ಮಂತ್ರಿ ಮಂದಾನಿಳಂ . . . ತಾನಾಗೆ ತದ್ವನದೊಳ್ ದರ್ಪಕಚಕ್ರವರ್ತಿ ಮೆಱೆವಂ ಸಪ್ತಾಂಗಸಾಮ್ರಾಜ್ಯಮಂ (ಚಂದ್ರಪು. ೧೧-೫೯).

[ಧನ + ಕೋಶ]

ಧನಕ್ಷಯ (ನಾ). ಹಣ ಹಾಳಾಗುವುದು ; ದ್ರವ್ಯಹಾನಿ : ಶುನಕಶಕುನಮಂ ಪೇಟ್ಟೆಂ . . . ಪಿಂದೆ ವಕ್ರಿಸೆ ಮುಂದೆ ತಿರ್ದೆ ಸಮಂತು ಮುಂದೆ ಧನಕ್ಷಯಂ (ಲೋಕೋಪ. ೧೩-೨೪) ; ಧನಕ್ಷಯವನುಂ ದ್ರವ್ಯಾರ್ಜನೆಯನುಂ ಗೃಹಭಿದ್ರವನುಂ ತನಗಾದವಮಾನವನುಂ ಪ್ರಕಟಿಸಲಾಗದು (ವಿವೇಕ. ೧೫೦).

[ಧನ + ಕ್ಷಯ]

ಧನಗರ (ನಾ). ೧. ಕುರಿ ಕಾಯುವವನು ; ಕುರುಬ : ಧನಗರರು–ಇವರು ಕಾನಡಾಜಿಲ್ಲೆಯಲ್ಲಿ . . . ಇರುತ್ತಾರೆ (ಕಥಾಗೆ. ೧೭೫). ೨. ಏನೂ ತಿಳಿಯದವನು ; ದಡ್ಡ. [← ಮರಾ. ಧನಗರ]

ಧನಗಾಹಿ (ನಾ). ಹಣವನ್ನು ಕಾಯುವವನು ; ಕೋಶವನ್ನು ರಕ್ಷಿಸುವವನು ; ಭಂಡಾರಿ : ಸುರಪ ನಾಯಕನಗ್ನಿಯಿಂಧನಿ ಮರುತ ಬೋವನು ಯಮನು ಗೋವನು ವರುಣನಸಗನು ಹರನು ಹರಸುವ ಯಕ್ಷ ಧನಗಾಹಿ (ಕೌಶಿರಾ. ೧೦-೬೭). [ಧನ + ಕಾಹಿ]

ಧನಚಿಹ್ನೆ (ನಾ). = ಧನ ೫ : ಈ ದೂರಗಳು ಕನ್ನಡಿಯ ಮುಂದುಗಡೆ ಇದ್ದರೆ ಧನಚಿಹ್ನೆಯನ್ನು ಹಾಕಬೇಕು (ಭೌತವಿ. ೧೭೨). [ಧನ + ಚಿಹ್ನೆ]

ಧನದ (ಗು). ೧. ಐಶ್ವರ್ಯವನ್ನು ಕೊಡುವ. (ನಾ). ೨. ಕುಬೇರ : "ಧನದಂ ಕುಬೇರನಳಕಾಧಿನಾಯಕಂ ಗುಹ್ಯಕೇಶ್ವರಂ ವೈಶ್ರವಣಂ" (ವಸ್ತುಕೋ. ೮-೪೬) ; "ಪೊನ್ನೊಡೆಯ ತಿಸುಳಿಗೆಳೆಯನುಮೆನ್ನಲ್ ತಾಂ ಧನದನಕ್ಕು" (ಕವಿಕಂ. ೩೯) ; ಧನದಂ ಕಾಂಚನಪಂಚರತ್ನಮಯಮಂ ರೈವೃಷ್ಟಿಯಂ ಮಾಡುವಲ್ಲಿ (ಆದಿಪು. ೭-೨೪) ; ಧನದನ ಕಾಂಚನಮಿವರನುದಿನಮೊರೆವ ಸುವರ್ಣರಜದ ತೂಕಕ್ಕೆ ವರೆಲ್ ಕನಸಿನೊಳಮಾಱದೆನಿಸುವ ಧನಪತಿಗಳ ಬಚ್ಚ ರಾಪಣಂಗಳಳುಂಬಂ (ಪುಷ್ಪಪು. ೨-೮೭) ; ಆ ಮಹಾಂತಕ ವರುಣ ಧನದರು ಕೊಟ್ಟರಂಬುಗಳ (ಕುಪ್ಯಾಅ. ೭-೭) ; ಪಿರಿಯಳ್ಗೆ ಧನದಂ ಕಿಱಿಯಳ್ಗೆ ರಾಪಣ ಕುಂಭಕರ್ಣ ವಿಭೀಷಣ ಶೂರ್ಪನಖೆಯರುದ್ಭವಿಸಿದರ್ (ರಾಮಾಶ್ವ. ೧೩-೧೫). ೩. ಐಶ್ವರ್ಯವಂತ ; ಶ್ರೀಮಂತ. ೨, ೩ : ಅಳಕಾಪುರಿಯೆನೆ ಧನದಾವಳಿಯಿಂದಮರಾವತಿಯೆನೆ ವಿಬುಧಾಶ್ರಯದಿಂ ವಿಳಸದ್ಭೋಗಾವತಿಯೆನೆ ಸಲೆ ಭೋಗಿಗಳಿಂ ಬಬಾಪ್ಪು ಮಾಳಿಗೆ ರಯ್ಯಂ (ಎಇ. XV, ೩೧೫; 1172) ; (ಶಾಪಮಂ. ೮೦೮ ನೋ). ೪. ಧನವನ್ನು ದಾನ ಮಾಡುವವನು. ೨, ೩, ೪ : ಅತಿಭೋಗಿಸೇವ್ಯಮನ್ತದು ಪೆಸರ್ವೆತ್ತು ರಂಜಿಸುವ ಭೋಗವತೀಪುರದನ್ತೆ ಭಾವಿಸಲ್ಕದು ಧನದ ಪ್ರಸೇವ್ಯವಳಕಾಪುರದನ್ತೆನೆ ಬಳ್ಳಿಗಾವೆಗಾವುದೊ ಪಡಿಪಟ್ಟಣಂ (ಎಕ. VII, ಶಿಕಾರಿ, ೧೦೦-೩೭; 1129). ೨, ೪ : ಧನದಂ ಭಿಕ್ಷುಸಖಂಗೆಳ್ಳನಿತಂ ಧನಮಿಯದಾದನಾ ನಾಮಂ ಸುಮ್ಮನೆ ಬಂದುದೆಂದು ನಗುತುಂ ಧನದಾಪ್ತನನಲ್ಲಿ ಮನ್ನಿಪರ್ ಘನಧನದರ್ (ರಾಜಶೇ. ೨-೯೫). ೩, ೪ : ಧನದರಲ್ಲದ ಧನದರಿಲ್ಲ ತಕ್ಕರಲ್ಲದೆ ಟಕ್ಕರಿಲ್ಲ ಜನ್ನಮಲ್ಲದೆ ಬನ್ನಮಿಲ್ಲ (ಅಜಿಪು. ೧-೨೦ ವ). [ಸಂ.]

ಧನದನಿವಾಸ (ನಾ). ೧. ಕುಬೇರನ ವಾಸಸ್ಥಾನ. ೨. ಶ್ರೀಮಂತನ ವಾಸಸ್ಥಾನ. ೧, ೨: ಧನದನಿವಾಸದಿಂ ಮಣಿಮಯೋಜ್ವಳದೇವಕುಲಂ ಗಳಿಂದೆ ನಂದನವನದಿಂ . . . ಪೌದನಪುರವೊಪ್ಪುತಿರ್ಪುದಮರಾವತಿಯಂತೆ ಸುವರ್ಣಗೋಪುರಂ (ಪಾರ್ಶ್ವಪು.೦-೧೧೧). [ಧನದ + ನಿವಾಸ]

ಧನದಭವನ (ನಾ). ಕುಬೇರನ ಅರಮನೆ: ಧನದಭವನಮೆನಿಪ ಸಿರಿಯ ಬಚ್ಚರಾಪಣಂಗಳಿಂ ಪೊದಟ್ಟ [ಕಾವ]ಣಂಗಳಿಂ (ಪಂಪಭಾ. ೧-೫೮ ರಗಳೆ). ಧನದ + ಭವನ]

ಧನದಮಿತ್ರ (ನಾ). ಕುಬೇರನ ಗೆಳೆಯ; ಶಿವ: ಉದ್ರಿಕ್ತಸತ್ವಾವೇಶಂ ಕಲ್ಯಾಣಭೂಭೃತ್ಸದನ ಧನದಮಿತ್ರಂ ಧರಾಧಾರಧರ್ಮಂ . . . ನಂದಿ ಕೇಶಂ ಮಹೇಶಂ (ರಾಜಶೇ. ೧-೧). [ಧನದ + ಮಿತ್ರ]

ಧನದಸಖ (ನಾ).=ಧನದಮಿತ್ರ: ಅನಘನಪ್ಪ ಹಲಾಯುಧನನಾ ಧನದಸಖ ನನುರಂಗನಾಗುತ ತೆಗೆದು ಬಿಗಿಯಪ್ಪಿ (ಬಸಪು. ೨೫-೪೯); ಶಿಶಿರಗಿರಿಸುತೆ ಯರಸ ಸರಸಗುಣಗಣನಿಖಿಳಖುಷಿಹೃದಯ ನಿಲಯ ಧನದಸಖ ಜಿತಗೆಜ ದನುಜ . . . ಜಯಜಯತು (ಸೌಂದಪು. ೧೩-೧) [ಸಂ.]

ಧನದಾಚಲ (ನಾ). ಕುಬೇರನು ವಾಸಿಸುವ ಬೆಟ್ಟ; ಕೈಲಾಸಪರ್ವತ: ಧನದಾ[ಪಾಠಾಂ. ಕನಕಾ]ಚಲಕ್ಕೆ ಬಡಗಣದೆನೆ ವಿಜಯಾರ್ಧಾಚಲಕ್ಕೆ ತೆಂಕಣ ದೆನೆ . . . ಮ್ಲೇಚ್ಛದೇಶಮಿರ್ಪುದಪಾರಂ (ಪಂಠಾಮಾ. ೪-೩೭). [ಧನದ + ಅಚಲ]

ಧನದಾಚಟ (ನಾ). = ಧನದಾಚಲ: ಅದು ಕನಕಾದ್ರಿಯಂ ತಾಳಿ × × × ಸ್ತಿತಿಕರಂ ಧನದಾಚಟದಂ × × × (ಸೌಇಇ. XX, ೭೯-೯; 1119). [<ಸಂ. ಧನದಾಚಲ]

ಧನದಾದ್ರಿ (ನಾ). = ಧನದಾಚಲ: ವಿವಿಧವಿನೋದಸುಖಂ ವೈಶ್ರವಣಂ ಧನದಾದ್ರಿಯೊಳ್ ಸುಖಂ ವಸಿಯಿಸುವಂತವನಿಪನಾ ಮಾಡದೊಳುದ್ಭ ವಾಂಬುನಿಧಿ ವಿಶ್ವಸೇನನುದಿನಮಿರ್ಕುಂ (ಶಾಂತಿಪು. ೯-೧೪೯). [ಧನದ + ಅದ್ರಿ]

ಧನದಾನ (ನಾ). ಹಣದ ರೂಪದಲ್ಲಿ ಕೊಡುವ ದಾನ; ದ್ರವ್ಯದಾನ: ಸುರೇಶ್ವರಂ ವಿಲೋಕನದಿನಹೀಶ್ವರಂ ವಿಭವವರ್ಣನೆಯಿಂದೆ ಧನೇಶ್ವರಂ ವಿನೂತನ ಧನದಾನದಿಂ ನೆರೆದರ್ (ಶಾಂತಿಪು. ೯-೪೩); ಆದರದಿಂ ಗೋದಾನಂ ಸ್ತ್ರೀದಾನಂ ವಸ್ತ್ರದಾನಮಿಭಕುಲದಾನಂ ಭೂದಾನಂ ಧನದಾನಂ ಶ್ರೀದಾನಂ ಗುಡುತುಮೊಪ್ಪಿದಂ ಗಿರಿರಾಜಂ (ಗಿರಿಕ. ೩-೬೩). ಧನಲಕ್ಷ್ಮಿದೇವಿ ನಿಮಗೊಲಿಯಬೇಕೆಂದು, ಮನದಣಿಯೆ ಧನದಾನ ಮಾಡಿ ನಮಗಿಂದು (ಕಎಪು. ೧೫-೨). [ಧನ + ದಾನ]

ಧನದಾನುಜ (ನಾ). ಕುಬೇರನ ಸಹೋದರ; ರಾವಣ: ಕಂಡಾ ಧನಪ ದಿಗ್ಭಾಗದಲಿ ಧನದಾನುಜನ ಪುರವರವ (ತೊರರಾ. ೫-೧-೩೬). [ಧನದ + ಅನುಜ]

ಧನದಾಪ್ತ (ನಾ).=ಧನದಮಿತ್ರ: ಧನದು ಭಿಕ್ಷುಸಖಂಗೆಳ್ಳನಿತಂ ಧನವಿಾಯ ದಾದನಾ ನಾಮಂ ಸುಮ್ಮನೆ ಬಂದುದೆಂದು ನಗುತುಂ ಧನದಾಪ್ತನನಲ್ಲಿ ಮನ್ನಿಪರ್ ಘನಧನದರ್ (ರಾಜಶೇ. ೨-೯೫). [ಧನದ + ಆಪ್ತ]

ಧನದಾಹಿ (ನಾ). ಹಣದ ದಾಹವುಳ್ಳವನು; ಧನದ ದುರಾಸೆಯುಳ್ಳ ವನು: ಅಂತರಂಗಜೀವನದಲ್ಲಿ ಆಸೆಬುರುಕರು, ಧನದಾಹಿಗಳು ಆಗಿ ಯಾವುದೇ ಅಕೃತ್ಯಕ್ಕೆ ಹೇಸದ ಜನ . . . ನಮ್ಮ ನಾಯಕರಾಗಿ (ಭಾರದ. ೪೭೧). [ಸಂ. ಧನದಾಹಿನ್]

ಧನಧವ (ನಾ). ಐಶ್ವರ್ಯಕ್ಕೆ ಅಧಿಪತಿಯಾದವನು; ಕುಬೇರ: ದಿನ ಕರಂ ಬಂದುದಯವಾದನೊ ಧನಧವಂ [ಪಾಠಾಂ. ವರಂ] ಬೈಚಿಟ್ಟ ನಿಧಿಯೋ ಕನಕಗಿರಿ ಮೂಡಿದುದೊಯೆನಲುಜ್ವಳಿತವಾಗಿರಲು (ಬಸಪು. ೫-೫೮). [ಧನ + ಧವ]

ಧನನಾಥ (ನಾ).= ಧನಧವ: ಅಮರನಾಥ ಮಹಿಷನಾಥ ಸರಿನ್ನಾಥ ಧನನಾಥ ಸನಾಥಮಪ್ಪ ದಿಕ್ಪಾಲರ ಕೇಳೀಪ್ರಾಸಾದಂಗಳಿಂದಂ (ಅಜಿಪು. ೭-೨೦ ವ). [ಧನ + ನಾಥ]

ಧನನಾಶ (ನಾ). ಸಂಪತ್ತು ಹಾಳಾಗುವಿಕೆ: ಧನುಜೇಜ್ಯಂ ಕುಜಗೇಹ ದೊಳ್ ನಿಲೆ ಪರಸ್ತ್ರೀಲೋಲನಾಳಾಪದಿಂ ಧನನಾಶಂ (ಜಾತತಿ. ೧೭-೨೯). [ಧನ + ನಾಶ]

ಧನಪ (ನಾ). = ಧನಧವ: "ಧನಪನಂ ಏಕಕುಂಡಲನೆಂಬುದು" (ಮಂಗರಾ. ೧೩೮-೧); ಧನಪ ವಿಷ್ವಕ್ಸೇನ ವೈದ್ಯಾಶ್ವಿನಿಗಳಿಗೆ ಸರಿಯೆನಿಪ ಷಣ್ಮುಖನನುಜ (ಹಸಾರ. ೨೮-೪). [ಸಂ.]

ಧನಪತಿ (ನಾ). ೧. = ಧನಧವ: "ಧನಪತಿ ಯಕ್ಷಂ ಶ್ರೀದಂ ಮನುಷ್ಯ ಧರ್ಮಂ . . . ಗುಹ್ಯಕೇಶ್ವರಂ ವೈಶ್ರವಣಂ" (ವಸ್ತುಕೋ. ೮-೪೬); ಧನಪತಿಯೆಂಬಭಿಧಾನಂ ತನಗೆಂತನ್ಯಾರ್ಥರಕ್ಷಕಂಗೆಂದು ಕುಬೇರನ ನಿಳಿಕೆಯ್ವರ್ ನಿಜಮಪ್ಪನುಪಮಧನದಿಂದೆ ಚಿನ್ನವರದರ್ ಪುರದೊಳ್ (ಕುಸುಮಾ. ೨-೧೧೨); ನುತ ಸುರಪತಿಯುಂ ಸ್ವಾಹಾಪತಿಯುಂ ಪಿತೃ ಪತಿಯುಮಸುರಯಾದಃಪತಿಯುಂ ರಯಪತಿಯುಂ ಧನಪತಿಯುಂ ಪಶು ಪತಿಯುಮೆನಿಸಿದಾಶಾಪತಿಗಳ್ . . . ಇರ್ದರ್ (ಪುಷ್ಪಪು. ೧೦-೮೦); ನೀ ಯಕ್ಷೇಶನಲ್ಲಿಗೆ ಹೋಗಿ ಬೇಡುವುದೀ ಸರೋರುಹವಾವ ಘನ ಧನ ಪತಿಯುದಾರನಲೆ (ಕುವ್ಯಾಅ. ೧೦-೪೮). ೨. ಧನಿಕ; ಶ್ರೀಮಂತ: ರವಿ ಚಾಪಕ್ಷೇತ್ರದೊಳ್ ನಿಂದೊಡೆ ಧ[ಪಾಠಾ. ಜ]ನಪತಿ ಸತ್ಪೂಜಿತಂ ದಾರುಣಂ ವೈದ್ಯವಿದಂ ತಕ್ಷೋಪಜೀವ್ಯಂ (ಜಾತತಿ. ೧೭-೧೭); ಅತಿಶುದ್ಧವರ್ಣದಿಂದಂ ಕ್ಷಿತಿಪತಿ ಸಾಮಾನ್ಯವರ್ಣದಿಂದೆ ಧನಪತಿ (ಲೋಕೋಪ. ೧೧-೩೧); ಕಳ ನೊಳಗಲಗುಡಿದ ಕಲಿಯಂತೆ ಧನಪತಿ ಸುಲಿಗೆವಡೆದಂತೆ . . . ಹೆಂಪಳಿದಿರ್ದ ನಸುರೇಂದ್ರ (ತೊರರಾ. ೬-೨೬-೭); ಕೋಡುಳ್ಳವನ್ನೆ ನೀನುಱ್ ಪಾಡುಳ್ಳವನಹುದು ಭಳಿರೆ ಧನಪತಿ ರವಿಗಂ ನೋಡಿ ಬಡ ಕಾಣಿ ಸೊಡರಂ ನೀಡುವೊಲ್ನುಡಿದೆಯ್ದಿರದೆ ನಡೆನಡೆಯೆಂದರ್ (ಹಮ್ಮೀರ. ೨-೧೧೮). [ಧನ + ಪತಿ$_2$]

ಧನಪತಿತ್ವ (ನಾ). ಧನದ ಒಡೆತನ: ಪ್ರಜಾಪತಿಬ್ರಹ್ಮನು ಮೊಮ್ಮಗನಾದ ವೈಶ್ರವಣನಲ್ಲಿ ಪ್ರೀತಿಗೊಂಡು ಅವನಿಗೆ ಅಮರತ್ವ ಧನಪತಿತ್ವ ಲೋಕ ಪಾಲತ್ವ . . . ಇವುಗಳನ್ನು ಕೊಟ್ಟನು (ವಚಭಾ. ೪೦೩). [ಸಂ.]

ಧನಪತಿಪ್ರಿಯ (ನಾ). = ಧನದಮಿತ್ರ: ಮನಸಿನೊಳು ಗರ್ವಿಸಿದ ಸಿರಿ ಯಾಳನ ಮದಾಪಹರಾರ್ಥಮಾಗಲು ಧನಪತಿಪ್ರಿಯನಾ ಹಲಾಯುಧನಂ ಮೆಱೆದನಂದು (ಬಸಪು. ೨೫-೫೨). [ಧನಪತಿ + ಪ್ರಿಯ]

ಧನಪತಿಮಿತ್ರ (ನಾ). = ಧನದಮಿತ್ರ: ಧರೆಯೆ ರಥ ವನಜಾಸನನು ರಥ ಸೂತನಾ ಶೈಲೇಶ ಧನಪತಿಮಿತ್ರ ಸುರಕುಲಸಾರ್ವಭೌಮಂಗೆ (ಅಮ್ಮತ. ೬-೧); ಧನಪತಿಮಿತ್ರ ಗಾತ್ರರುಚಿನಿರ್ಜಿತಮಿತ್ರ ಕರಾಲಕಾಲಮರ್ದನ (ರಾಜಶೇ. ೧೦-೫೯). [ಧನಪತಿ + ಮಿತ್ರ]

ಧನಪದಿಕ್ಕು (ನಾ). ಉತ್ತರ ದಿಕ್ಕು: ಕಂಡಾ ಧನಪದಿಗ್ಭಾಗದಲಿ ಧನದಾನು ಜನ ಪುರವರವ (ತೊರರಾ. ೫-೧-೩೬). [ಧನಪ + ದಿಕ್ಕು]

ಧನಪಸಖ (ನಾ). = ಧನದಮಿತ್ರ: ಧನಪಸಖನೊಲಿದಾಗ ನಿಜರೂಪಮಂ ತೋಱೆ . . . ಸಾಯುಜ್ಯವನು ಕೊಡುವೆ ಬಾಯೆಂದು ಕರೆದೊಡೆ (ಪ್ರೌಢರಾ. ೧೦-೫೧). [ಸಂ.]

ಧನಪಾಲ, ಧನಪಾಳ (ನಾ). ಧನವನ್ನು ರಕ್ಷಿಸುವವನು; ಕುಬೇರ. ಧನಪಾಳ: ಧನಪಾಳನ ಪುಣ್ಯಮನೆಯ್ದನುನಯದಿಂ ಧಾರೆಗೊಂಡು ನಿಜ ರಾಜ್ಯಮನಿತ್ತು ನೃಪಂ ಪುರಮಂ ಪೊಱಮಡಲನುಗೆಯ್ಯಲ್ ಶಂಭು ರೂಪುದೋಱೆದನಾಗಳ್ (ಶ್ರೀಪುವಿ. ೫೯-೧೧). [ಸಂ.]

ಧನಪಾಳ 'ಧನಪಾಲ' ನೋ.

ಧನಬಲ, ಧನಬಳ (ನಾ). ೧. ಹಣದ ಬಲ; ಸಂಪತ್ತಿನ ಸಾಮರ್ಥ್ಯ: ತನ್ನ ಧನಬಲದಿಂದ ವಿದೇಶವ್ಯಾಪಾರದಲ್ಲಿಯೂ ಅದು . . . ಪ್ರಬಲಿಸಲು ಶಕ್ತವಾಗಿತ್ತು (ಹಿಂಪ್ರ. ೩೧೩). **ಧನಬಳ**: ೨. ಒಂದು ಬಗೆಯ ತೆರಿಗೆ: ಅಲ್ಲಿ ಮನ್ನೆಯ ನಿಬ್ಬದ ಕಿಱುದೆಱೆಗಳವಾವುವೆನ್ದಡೆ ಮನೆವಣಂ ಪಿರಿಯ ರವಣಂ ಧನಬಳಂ ಕಾಳಗೊಲ್ಲು . . . ಇನ್ತೀ ನಡೆವ ತೆಱೆಗಳ್ (ಸೌಇ. XX, ೪೭-೩೭ ; 1074). [ಧನ + ಬಲ್ಲ]

ಧನಬಳ 'ಧನಬಲ' ನೋ.

ಧನಮದ (ನಾ). ಅಷ್ಟಮದಗಳಲ್ಲಿ ಒಂದು; ಐಶ್ವರ್ಯದ ಸೊಕ್ಕು; ಶ್ರೀಮಂತಿಕೆಯಂ ಅಹಂಕಾರ: ಧನಮದ ಪೊತ್ತಲ್ಲಿ ದರಿದ್ರವಾಗಿ ಕಾಡಿತ್ತು ಮಾಯೆ ಹರಿಶ್ಚಂದ್ರಂಗೆ (ಸಿದ್ಧವ. ೪. ೦೫೫-೫೨೦) ; ಧನಮದದಿ ಕುಲಮದದಿ ವಿದ್ಯಾಭಿನದಿ . . . ದ್ವಿಜಗುರುವನು ವಿಧಾಡಿಸಿ (ಕುವಾ೫ಉ. ೩-೪೧). [ಧನ + ಮದ]

ಧನರಕ್ಷಕ (ನಾ). ಸಂಪತ್ತನ್ನು ಕಾಪಾಡುವವನು; ಕುಬೇರ: ಧನರಕ್ಷಕನುಮಕೃತ್ರಿಮಜಿನಗೃಹಮಂ ನೋಡಿ ಸಮವಸೃತಿಯಂ ಪದೆದಿಂಬಿನೆ ಮಾಟ್ಟಿಂ (ಪಾರ್ಶ್ವಪು. ೦೩-೦೪). [ಧನ + ರಕ್ಷಕ]

ಧನರಕ್ಷೆ (ನಾ). ಸಂಪತ್ತಿನ ರಕ್ಷಣೆ: ಧನರಕ್ಷೆಗೆ ಲೋಭಂ ನಿಜತನುರಕ್ಷೆಗೆ ಪುಸಿ ನಿಜಾತ್ಮರಕ್ಷೆಗೆ ಭಯವೆಂಬಿನಿತುಮಕಾರಣಮಿವಱೊಳಗನವೇಕ್ಷಕನೆನಿಸಿ ನೆಗಟ್ಟಿನಿಱಿವ ಬೆಡಂಗಂ (ಗದಾಯು. ೩-೮). [ಧನ + ರಕ್ಷೆ]

ಧನರೇಖೆ (ನಾ). [ಸಾಮುದ್ರಿ] ಸಿರಿವಂತನಾಗುವುದನ್ನು ಸೂಚಿಸುವ ಅಂಗೈಯ ಗೆರೆ: "ಮಧ್ಯಮರೇಖೆಯು ಧನರೇಖೆಯನಿಸುಗು" (ಸಾಮುಲ. ೪೬-೦೧) : ಈ ರೇಖೆಯೆ ಧನರೇಖೆಯಿದಾರಯ್ಕಂ ನುಡಿಗುಮಿವನ ಪೇರ್ಗೆ ಸಿರಿಯಂ ನೂಱಿಂಬರ್ ಧನದರುಮಿಾ ಶ್ರೀರಪುಣಂ ಕೊಟ್ಟ ಕತದೆ ಧನಿಕರೆನಿಕ್ಕುಂ (ವಸ್ತು೦. ೫-೩೫). 'ಅರ್ಥರೇಖೆ' ಪರಾ. [ಧನ + ರೇಖೆ]

ಧನಲಕ್ಷ್ಮಿ (ನಾ). ಐಶ್ವರ್ಯದ ಅಧಿದೇವತೆ: ಧನಲಕ್ಷ್ಮಿದೇವಿ ನಿಮಗೊಲಿಯಬೇಕೆಂದು, ಮನದನಿಯೆ ಧನದಾನ ಮಾಡಿ ನಮಗಿಂದು (೪೭ಪು. ೦೫-೨).

ಧನಲಕ್ಷ್ಮಿಪೂಜೆ = ದೀಪಾವಳಿಯ ಮೂರನೆಯ ದಿನ ಮಾಡುವ ಲಕ್ಷ್ಮಿಯ ವಿಶೇಷವಾದ ಪೂಜೆ: ಧನಲಕ್ಷ್ಮಿಪೂಜೆಯಾ ದಿನವಾದುದೆಂದು ಮನೆಬಾಗಿಲಿಗೆ ನಾವು ಬಂದಿರುವೆವಿಂದು (೪೭ಪು. ೦೫-೨).

[ಧನ + ಲಕ್ಷ್ಮಿ]

ಧನಲಾಭ (ನಾ). ಹಣದ ಗಳಿಕೆ; ಐಶ್ವರ್ಯವನ್ನು ಸಂಪಾದಿಸುವುದಂ: ಅವನೀಪತಿಗಳನೋಲೈಸಿ ಪಡೆವ ಧನಲಾಧದಿನುನ್ನತಗಿರಿಗುಹಾಂತರಾಳ ಸ್ಥಿತಿಲಾಭಂ ಪೂಜ್ಯಂ (ಪಂಚತಂ. ೦೩೪-೨) : ಧನಲಾಭವು[ನೊಳ್ಳಿಣಿಸಂ ಕನಕವು]ನೋಪವರ ಕೂಟಮಂ ಕಬ್ಬಲೆಯೆ ತಿಳಿವುಗುಂ ಮುಂಬಗಲೊಳ್ (ಕೋಕೋಪ. ೧೨-೩೫). [ಧನ + ಲಾಭ]

ಧನಲೋಭ (ನಾ). ಹಣದ ಅತ್ಯಾಶೆ; ಸಿರಿಯಂ ದುರಾಸೆ: ತನುಲೋಭ ಮನಲೋಭ ಧನಲೋಭ ಮುಂದುಗೆಡಿಸಿ ಕಾಡಿಹುವೆನ್ನಾ (ಬಸವ. ೩೦೫). [ಧನ + ಲೋಭ]

ಧನಲೋಭಿ (ನಾ). ಹಣದ ದುರಾಸೆಯುಳ್ಳವನು; ಜಿಪುಣ. [ಸಂ. ಧನಲೋಭಿನ್]

ಧನವಂಚಕ (ನಾ). ಹಣವ ವಿಷಯದಲ್ಲಿ ಮೋಸಮಾಡುವವನು: ಪೆಱರ್ ಧನವಂಚಕರ್ ಕರುಣಮಿಲ್ಲದೆ ಕೊಂದರ್ (ಧರ್ಮಾಮೃ. ೦೩-೦೩೦) : ಭಕ್ತಿಯೆಳ್ಳನಿತಿಲ್ಲ . . . ತನುವಂಚಕ ಮನವಂಚಕ ಧನವಂಚಕ ನಾನಯ್ಯಾ (ಬಸವ. ೩೦೭) : ಮೂದಲಿಸಲುಂ ಪ್ರಾಣವಂಚಕನಾದವಂಗಂ ಲಿಂಗಭಕ್ತಿ ಸುವೇಧಿಸದು ಧನವಂಚಕಂಗೆ ಸುಸಾಧ್ಯವಾಗದದು (ಬಸಪು. ೩೯-೦೯).

[ಧನ + ವಂಚಕ]

ಧನವಂತ (ನಾ). ಶ್ರೀಮಂತ; ಸಾಹುಕಾರ: ಹಣವಂತ: "ಅಢ್ಯಃ, ಸಮೃದ್ಧಃ, ಧನವಾನ್, ಇನಃ, ಇಭ್ಯಃ, ಧನೀ, ಈಶ್ವರಃ – ಈ ೭ ಧನವಂತಂ" (ಹೇಶಾಯು. ೫೯-೩೦೦) ; ಧನವಂತಂ ಶುಚಿವಿಕ್ರಯಕ್ಕೆ ಕುಶಲಂ ಮೇಧಾವಿ ರೋಗಾನ್ವಿತಂ . . . ನಿಡಿಯಂ ಚಲತೃಶಶರೀರಂ ತುಂಗನಾಸಂ ಸ್ವಬಂಧುನಿಕಾಯಕ್ಕುಪಕಾರಿ ತೆತ್ತಿಗನೆನಿಕ್ಕುಂ ತೌಲಿಗೇಹೋದ್ಭವಂ (ಜಾತಕ. ೧೭-೭) ; ಧನವಂತಂ ಸ್ನಿಗ್ಧತ್ವಚನ ನೂನಸೌಖ್ಯಂ ಮೃದುತ್ವಚಂ (ಕೋಕೋಪ. ೦೦-೩೫) ; ಸ್ಥೂಲಭಾಗ್ಯಪ್ರಾಣಿ ಭಾಪುರಿ ಲೋಲಕಾರು ಣ್ಯಾತ್ಮ ಭಲರೇ ಪಾಲಿತಾರ್ಥನಿಕಾಯ ಭಲರೇ ಭಲರೆ ಧನವಂತ (ಬಸಪು. ೩೦-೩೫) ; ಕಾಮುವನ್ನು ಬಿಟ್ಟರೆ ಧನವಂತನಾಗುತ್ತಾನೆ (ವಚಭಾ. ೦೮೧).

[ಸಂ. ಧನವತ್]

ಧನವಂತ್ರಿ 'ಧನ್ವಂತ್ರಿ' ನೋ.

ಧನವಿಕಾರ (ನಾ). ೧. ಐಶ್ವರ್ಯದಿಂದ ಉಂಟಾಗುವ ಅವಗುಣ; ಧನಮದ. ೨. ಹಣದ ಮೇಲಿನ ಮೋಹ,-ಆಸೆ: ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ (ಬಸವ. ೬೯೩) ; ತನು ಮನವನಂಡಲೆವ ಧನವಿಕಾರದ ಭಯ ನೋಡಾ (ಸಿದ್ಧವ. ೪೫-೦೩೮). [ಧನ + ವಿಕಾರ]

ಧನವಿಕಾರಿ (ನಾ). ಐಶ್ವರ್ಯದ ಮದವುಳ್ಳವನು: ಮನವಿಕಾರಿಗೆ ಲಿಂಗ ವಲ್ಲಿಯದೊ ಧನವಿಕಾರಿಗೆ ಪ್ರಸಾದವಲ್ಲಿಯದೊ (ಸಿದ್ಧವ. ೪. ೪೦೯-೦೩೦೪). [ಸಂ. ಧನವಿಕಾರಿನ್]

ಧನವಿಧೇಯಕ (ನಾ). ಹಣಕಾಸಿನ ಮಸೂದೆ: ಧನವಿಧೇಯಕಗಳ ಮತ್ತು ಇತರ ವಿತ್ತವಿಧೇಯಕಗಳ ಸಂಬಂಧವಾಗಿ . . . ಒಂದು ವಿಧೇಯವನ್ನು ಮಂಡಿಸುವುದು ಸಂಸತ್ತಿನ ಉಭಯಸದನಗಳಲ್ಲಿ ಯಾವುದೊಂದರಲ್ಲಾದರೂ ವ್ಯಥಮತಃ ಪ್ರಾರಂಭವಾಗಬಹುದು (ಭಾಧಾನ. ೩೩).

[ಧನ + ವಿಧೇಯಕ]

ಧನವಿಹೀನ (ನಾ). ಹಣವಿಲ್ಲದವನು; ಬಡವ: ೇಶ್ವಮೇಧವು ಧನವೆನಿಸಿ ಬಹುದಕ್ಷಿಣಾನ್ವಿತವಾಗಬೇಕದಕೆ ಧನವಿಹೀನನು ನಾನು ರಣಹತ ಮನುಜ ಪತಿಗಳು ಸುತರು ಬಾಲಕರೆನವರತವತ್ಯಂತಶೋಕಾಕ್ರಾಂತರಾಗಿಹರು (ತಿಮ್ಮಭಾ. ೦-೦೬) ; ಧನವಿಹೀನಗೆ ತನ್ನ ಕುಲ ಜಾತಿ ಧರ್ಮಂಗಳನುಗೂಡಿ ಕೊನೆಸಾಗುವುವೆ (ಕರ್ಣಪ. ೯-೩೨). [ಧನ + ವಿಹೀನ]

ಧನವು (ನಾ). ಹಣ; ಧನ: ತನುವಿನ ಧನವಿನ ಪೆಂಡಿರ ತನಯನ ಕಡು ಮೋಹದಿಂದೆ ನೀನಿಂತಾದ್ಯೆ (ಧರ್ಮಾಮೃ. ೦೪-೭೭) ; ರಾಜ್ಯನಿವಹದೋಳ್ಧ ನವಿಗಂ ಬಗೆಯಿಲ್ಲ ಮುನ್ನ ಕೌರವನು ಸೇದಿಹನೆಲ್ಲ ಪಣಗಳಂ ಪುಜೆಗಳಲಿ ಹರಣವನ್ನುಳಿಸಿ ಬಿಟ್ಟು (ತುರಂಗ. ೮೦-೭). 'ದನವು' ಪರಾ. ಇದನ್ನು 'ಕದ, ಕದವು', 'ದನ, ದನವು' ಮುಂತಾದ ಶಬ್ದಗಳ ಸಾದೃಶ್ಯದಿಂದ ಮಾಡಿಕೊಳ್ಳಲಾಗಿದೆ. [<ಸಂ. ಧನ]

ಧನವ್ಯಸನ (ನಾ). ಸಪ್ತವ್ಯಸನಗಳಲ್ಲಿ ಒಂದು; ಹಣ ಕೂಡಿಡುವುದರಲ್ಲಿ ಅತಿಯಾದ ಆಸಕ್ತಿ: ತನುವ್ಯಸನ ಮನವ್ಯಸನ ಧನವ್ಯಸನ ವಾಹನವ್ಯಸನ ಉತ್ಸಾಹವ್ಯಸನ ಸೇವಕವ್ಯಸನ ಮತ್ಸರವ್ಯಸನವೆಂಬ ಸಪ್ತವ್ಯಸನಂಗಳ ಸ್ವಷ್ಟದಲ್ಲಿ ನೆನೆಯದೆ (ವಚಸಂ. ೪೫೩-೫೯) : ತನುವ್ಯಸನ ಮನವ್ಯಸನ ಧನವ್ಯಸನ ರಾಜ್ಯವ್ಯಸನ ವಿಶ್ವವ್ಯಸನ ಉತ್ಸಾಹವ್ಯಸನ ಸೇವಕ(ಸೇವಕಾ)ವ್ಯಸನ ಎಂಬ ಸಪ್ತವ್ಯಸನಂಗಳ ಸಂಹಾರವ ಮಾಡಿದ ನಿರ್ವ್ಯಸನಿಯ ನೋಡಾ (ಸಿದ್ಧೇವ. ೦೫೮-೪೭೬). 'ಸಪ್ತವ್ಯಸನ' ಪರಾ. [ಧನ + ವ್ಯಸನ]

ಧನವ್ಯಯ (ನಾ). ಹಣದ ವೆಚ್ಚ; ಧನವ್ಯಯ: ಅರ್ಥಶಾಸ್ತ್ರವು ಧನಾರ್ಜನೆ ಮತ್ತು ಧನವ್ಯಯ ಉದ್ಯೋಗದಲ್ಲಿ ನಿರತರಾಗಿರುವ ಮನುಷ್ಯರನ್ನು ಕುರಿತು ವಿಚಾರ ಮಾಡುತ್ತದೆ (ಭಾರದ. ೩೩೨).

[ಧನ + ವ್ಯಯ]

ಧನಸಂಗ್ರಹ (ನಾ). ೧. ಹಣವನ್ನು ಕೂಡಿಡುವುದು: ಕೇಂದ್ರ ಸರ್ಕಾರಕ್ಕೂ ಪ್ರಾಂತ ಅಥವಾ ಸ್ಥಳೀಯ ಧನಸಂಗ್ರಹಸಂಸ್ಥೆಗಳಿಗೂ ಯಾವ ಸಂಬಂಧಗಳು ಏರ್ಪಟ್ಟಿವೆ (ಹಣಪ್ರ. ೨೨೭). ೨. ಒಬ್ಬಾತನ ಹೆಸರು: ಮನ್ನೆಯವಲ್ಲಭನುಂಮೆನಿಸಿದ ಪಿರಿಯ ಧನಸಂಗ್ರಹನೆ ಮಗ(ಂ) ನಿನ್ದಪಠಸಂ . . . ಧನಸಂಗ್ರಹನ ಮಗ (ಸೌಇಇ. XX, ೭೧-೩೫ : 1100) ; ಶ್ರೀಕೈಲಾಸನ್ರಿಪು ಜಗತ್ತಿಳಕನುದ್ದಾಮಧಾಮಂಗೆ . . . ಸಂಗ್ರಾಮರಾಮಂ ಜಯಶ್ರೀಕಾನ್ತಂ ಧನಸಂಗ್ರಹಂ ತನಯಂ (ಸೌಇಇ. XX, ೩೦೯-೧೮ ; 12ನೆದು ಶತ). [ಧನ + ಸಂಗ್ರಹ]

ಧನಸಂಚಯ (ನಾ). = ಧನಸಂಗ್ರಹ ೧: ಕೃಷಿ ಗೋರಕ್ಷಣ ವಾಣಿಜ್ಯಗಳಿಂದ ಧನಸಂಚಯ ಮಾಡಿ ತದ್ವಾರಾ ಜಗತ್ತನ್ನು ಪೋಷಿಸುತ್ತಾ ಐಶ್ವರ್ಯವನ್ನು ಭೋಗಿಸತಕ್ಕದ್ದು (ಮಾಧವ. ೩೯೫).
[ಧನ + ಸಂಚಯ]

ಧನಸಂಪತ್ತಿ (ನಾ). ಹಣಕಾಸು ; ಐಶ್ವರ್ಯ : ಧನಸಂಪತ್ತಿ ವಿಭುತ್ವವೃತ್ತಿ ಘನದೋರ್ದರ್ಪಪ್ರಭಾವ್ಯಾಪ್ತಿ . . . ತನ್ನೊಳಳವಟ್ಟೋರಂತಿರಲ್ (ನೇಮಿಪು. ೧-೬೮) ; ಲಜ್ಜಾನದಿಂದಲೊ ಧನಸಂಪತ್ತಿಯಿಲ್ಲದ್ದರಿಂದಲೊ . . . ಆ ಪ್ರದೇಶದ ಜನರು ಎದುರಿಗಿರುವ ಪ್ರಯೋಜನವನ್ನು ರೂಢಿಸಲಾಗದಿರಬಹುದು (ಹಣಪ್ರ. ೧೩೬). [ಧನ + ಸಂಪತ್ತಿ]

ಧನಸಂಸ್ಥ (ನಾ). [ಜ್ಯೋತಿ] ಜಾತಕನ ಜನ್ಮಲಗ್ನದಿಂದ ಎರಡನೆಯ ಸ್ಥಾನದಲ್ಲಿರುವವನು : ಖರರುಜ್ಜಂದನನೊಂದಿದಂದುದಯದೊಳ್ ರೋಗಾನ್ವಿತಂ . . . ಧನಸಂಸ್ಥನಾಗಧನನಕ್ಕುಂ (ಜಾತತಿ. ೧೮-೧೪).
[ಸಂ.]

ಧನಸಹಾಯ (ನಾ). ಆರ್ಥಿಕ ನೆರವು ; ಹಣದ ಪೂರೈಕೆ : ಆ ಕನ್ಯೆಯರ ಪಾಣಿಗ್ರಹಣ ಮಾಡುವುದರಿಂದ ಮಂಡಲೇಶ್ವರರಿಗೆ ಜನ ಧನಸಹಾಯ ಮಾತ್ರವಲ್ಲದೆ ಆ ಸಾಮಂತರಿಗೂ ದೊಡ್ಡವರೊಡನೆ ನಂಟುತನ ಬೆಳೆಸಿದೆ ವೆಂಬ ಮಾನ ಗೌರವಗಳೂ ಉಂಟಾಗುತ್ತಿದ್ದುವು (ಶಾಂತಲಾ. ೯೩) ; ಸರ್ಕಾರದ ಧನಸಹಾಯ ಪಡೆದು ಖಾಸಗಿಸಂಸ್ಥೆಗಳು ಬೆಳೆದಿವೆ (ರೂಢಿ).
[ಧನ + ಸಹಾಯ]

ಧನಸ್ಥಾನ (ನಾ). [ಜ್ಯೋತಿ] ಎರಡನೆಯ ಸ್ಥಾನ: ದಿವಸೇಂದ್ರಂ ಕೇಂದ್ರ ಲಾಭಾಷ್ಟಮ ನವಮ ಧನಸ್ಥಾನದೊಳ್ ಭೌಮನಿಂ . . . ಲಗ್ನದಿನುಪಚಯ ತೂರ್ಯಾಂತ್ಯದೊಳ್ ಮಾಬ್ಯುಮೊಳ್ಪಂ (ಜಾತತಿ. ೧೦-೩) ; ಅಮರೇಜ್ಯಂ ಕೇಂದ್ರ ಲಾಭಾಷ್ಟಮ ಸಹಜ ಧನಸ್ಥಾನದೊಳ್ ಲಗ್ನದಿಂ ಪಂಚಮಷಷ್ಠೈ ಕಾದಶಾಸ್ತದ್ವಿತನು ನವಮಪಾತಾಕರ್ಮಂಗಳೊಳ್ . . . ಪೂಜ್ಯನಕ್ಕುಂ (ಜಾತತಿ. ೧೦-೦೦). [ಧನ + ಸ್ಥಾನ]

ಧನಹರಿ (ನಾ). ಒಂದು ಬಗೆಯ ಸುಗಂಧದ್ರವ್ಯ : "ರಾಕ್ಷಸೀ, ಚಂಡಾ, ಧನಹರೀ . . . ಗಣಹಾಸಕಃ-೬ ಕರೀಕಚೋರಂ, ಬಲರಾಕ್ಷಸೀಗಡ್ಡೆ" (ಸಿದ್ಧಾಂತಿ. ೧೪೧). [ಸಂ. ಧನಹರೀ]

ಧನಹಾರಿ (ನಾ). = ಧನಹರಿ : "ರಾಕ್ಷಸೀ-ತುಳಸಿ, ಚಂಡೆ, ಧನಹಾರಿ" (ಓಷಧಿ. ೧೩೭). [< ಸಂ. ಧನಹರೀ]

ಧನಹೀನ (ನಾ). ಧನವನ್ನು ಕಳೆದುಕೊಂಡವನು ; ದರಿದ್ರ : ಧರ್ಮ ನಿಮಿತ್ತವಾಗಿ ಧನಹೀನನಾದಾತಂಗೆ ಬಡತನವಾದೊಡಂ ಒಪ್ಪುವನಂ (ಪಂಚತಂ. ೩೦೧-೧೦) ; ಲಿಂಗಮುದ್ದಮಿಲ್ಲದೆ ಕಿಱಿದಾಗಿ ದೊಡ್ಡಿತಾಗಿರಲ್ ಧನವಂತನಪ್ಪಂ ಉದ್ದಮಾಗಿರಲ್ ಧನಹೀನನಪ್ಪಂ (ಲೋಕೋಪ. ೧೧-೫ ಟೀಕೆ) ; ಧನಹೀನಂ ಧನಮಿತ್ರಂ ಧನಮುಳ್ಳವನಾವನಸ್ವರೂಪಂ ಚಿದ್ರೂಪ ನಿವಾಸಿಯಾನದರ್ಕಂದೆನಗಮವಂಗಂ ವಿದೂಷಕರ್ ಪಗೆವೊಯ್ದರ್ (ದಶಕು. ೮-೮೧) ; ಧನಹೀನರು ಸೇರಿ ಬರುತಿರೆ ಧನವುಳ್ಳ ಜನರು ಪಾತಕಿಯ ಕಂಡಂತೆ ತನುವ ಕೊಂಕಿಪರು (ಕರ್ಣಪ. ೯.೧೫). [ಧನ + ಹೀನ]

ಧನಾಕಾಂಕ್ಷೆ (ನಾ). ಹಣದ ಆಶೆ : ಅವಳಿಗೆ ತಂದೆಯ ವಿಷಯದಲ್ಲಿರುವ ಪ್ರೀತಿಯು ಧನಾಕಾಂಕ್ಷೆಯಿಂದಲ್ಲವೆಂದೂ ವಿಶದವಾಯಿತು (ಕವಿಕ. ೨೪).
[ಧನ + ಆಕಾಂಕ್ಷೆ]

ಧನಾಗಮ (ನಾ). ಹಣದ ಪ್ರಾಪ್ತಿ ; ಧನಲಾಭ : ತನಗೆ ಧನಾಗಮಮಂ ಕಾಣದೆ (ನೇಮಿಪು. ೪-೫೫ವ) ; ಪ್ರಾಜ್ಞನಾಗಿರ್ಪವನಧಿಕಾರಿಯಾದುದು . . . ಯಶವಹುದಮಿತ ಧನಾಗಮವಪ್ಪುದು ನಾಕಲೋಕದ ಸುಖವಹುದು (ಇಂಪಾಪ. ೧೭೩-೫೧). [ಧನ + ಆಗಮ]

ಧನಾಢ್ಯ (ಗು). ೧. ಶ್ರೀಮಂತಿಕೆಯಿಂದ ಕೂಡಿದ : ಗೃಹೋಪಕಂಠವನ ಭೂಜಮೆ ಕಲ್ಪಮಹೀಜದೊಪ್ಪಮಂ ತಳೆಯೆ ಧನಾಢ್ಯ ದಂಪತಿಯೆ ತದ್ಭವದಂಪತಿಯಂದಮಂ ಪುದುಂಗೊಳಿಸೆ ಪುರಂ ವಿರಾಜಿಪುದು ದೇವಕುರು ಪ್ರತಿಮಾನಮೆಂಬಿನಂ (ಚಂದ್ರಪು. ೧೧-೭೨). (ನಾ). ೨. ಹಣವಂತ ; ಸಿರಿವಂತ : "ಹೊನ್ನುಳ್ಳವಂ ಧನಾಢ್ಯನೆನಿಕ್ಕು" (ಮಂಗರಾ. ೭೦-೧೬) ; ಉದಯಿಸಿದಾಲಯಕ್ಕುಪಚಯಾಲಯದಲ್ಲಿ ಸಮಸ್ತಸೌಮ್ಯರೊಂದಿದೊಡತಿ ಧನ್ಯನೆಂಗುಮವರಾಯೆಡೆಯೊಳ್ ನೆಲಸಲ್ ಧನಾಢ್ಯಂ (ಜಾತತಿ. ೧೨-೩೩).
[ಧನ + ಆಢ್ಯ]

ಧನಾದೇಶ (ನಾ). ಅಂಚೆಯ ಮೂಲಕ ಹಣವನ್ನು ಕಳಿಸುವ ವ್ಯವಸ್ಥೆ ; ಮನಿಯಾರ್ಡರು : ಇತ್ತೀಚೆಗೆ ಧನಾದೇಶದ ಶುಲ್ಕವನ್ನು ಏರಿಸಿದ್ದಾರೆ (ರೂಢಿ). [ಧನ + ಆದೇಶ]

ಧನಾಧಿಕ (ನಾ). = ಧನಾಢ್ಯ೨ : "ಧನಿ ಧನಾಧಿಕನಾಢ್ಯಂ" (ವಸ್ತುಕೋ ೬೨-೬೫). [ಧನ + ಅಧಿಕ]

ಧನಾಧಿಪ (ನಾ). ೧. ಶ್ರೀಮಂತ ; ಧನಿಕ : ಜನೇಂದ್ರಮಂದಿರಮಃ . . . ಕೀರ್ತಿ ಧೀಂಕಿಡೆ ದೆಸೆಗಂ ವಿಳಾಸದೊಳು ಮಾಡಿಸಿದಂ ಭರದಿಂ ಧನಾಧಿಪಂ (ಪುಣ್ಯಾಸ್ರ. ೮-೪). ೨. ಸಂಪತ್ತಿನ ಒಡೆಯ; ಕುಬೇರ. [ಧನ+ ಅಧಿಪ]

ಧನಾಧೀಶ್ವರ (ನಾ).=ಧನಾಧಿಪ೨: "ಧನಾಧೀಶ್ವರಂ ಬಲನುಂ ಪಟ್ಟಣ ಮೇಕ ಕುಂಡಲಮೆನಿಕ್ಕುಂ" (ನಾನಾರ. ೧೪೮). [ಧನ + ಅಧೀಶ್ವರ]

ಧನಾಧ್ಯಕ್ಷ (ನಾ). ೧. = ಧನಾಧಿಪ ೨: "ಐಳಬಿಳಃ, ಪೌಲಸ್ತ್ಯಃ . . . ಧನಾಧ್ಯಕ್ಷಃ, ಉತ್ತರಾಶಾಪತಿಃ . . . ಪುಣ್ಯಜನೇಶ್ವರಃ-ಈ ೧೭ ಕುಬೇರನ ಪೆಸರ್" (ಹಲಾಯು. ೧೪-೭೮) ; "ಯಕ್ಷಂ ಮನುಷ್ಯಧರ್ಮಂ ನೃವಾಹನ ಧನಾಧ್ಯಕ್ಷನುತ್ತರದಿಗ್ವರಂ . . . ಎನೆ ಕುಬೇರನೆನಿಸಿಕ್ಕು" (ಮಂಗರಾ. ೧೬-೧೫) ; ಮತ್ತಮಾ ಧನಾಧ್ಯಕ್ಷನ ಕಱೆವ ವಸುಧಾರೆ (ಮಹಾನೇ. ೮-೪೨ ವ). ೨. ಕೋಶಾಧಿಕಾರಿ ; ಭಂಡಾರಿ. [ಧನ + ಅಧ್ಯಕ್ಷ]

ಧನಾಯೆ (ನಾ). ಹಣವನ್ನು ಸಂಪಾದಿಸುವ ಆಸೆ ; ಧನಲೋಭ : "ತೃಷ್ಣಾ, ಅಭಿಲಾಷಾ . . . ಧನಾಯಾ, ಗರ್ಧನಾ-ಈ ೬ ಕಾಂಕ್ಷೆ" (ಹಲಾಯು. ೬೦-೨೦೯). [ಸಂ. ಧನಾಯಾ]

ಧನಾರ್ಜನೆ (ನಾ). ಹಣದ ಸಂಪಾದನೆ : ಕರ್ಮಗಳಲಿ ಧನಾರ್ಜನೆಗಳಲಿ ಶರ್ಮೆ ಪುತ್ರೋತ್ಪತ್ತಿ ಕರದಿಂ ನಿರ್ಮಲಿನದಮೃತತ್ವಮಾಗದು ತ್ಯಾಗಮನ ಮಿರದೆ (ಗಗತಾ. ೧೬-೨೩) ; ಮಾನವನು ಸರ್ವ ಪ್ರಯತ್ನದಿಂದಲೂ ಧನಾರ್ಜನೆ ಮಾಡಬೇಕು (ಹುಕ್ಕಾರ. ೮೭ ಟೀಕೆ).
[ಧನ + ಆರ್ಜನೆ]

ಧನಾರ್ಥಿ (ನಾ). ಹಣವನ್ನು ಬಯಸುವವನು : ಜಯಲಕ್ಷ್ಮೀಧಾಮ ಧನಾರ್ಥಿಯೆನಲ್ಲೆಂ (ಪಂಚತಂ. ೧೯೪-೧೪). [ಸಂ. ಧನಾರ್ಥಿನ್]

ಧನಾಶಾವೃದ್ಧಿ (ನಾ). = ಧನಾಯೆ : "ಧನಾಶಾವೃದ್ಧಿ ಧನಾಯಾಖ್ಯೆ" (ವಸ್ತುಕೋ. ೬೨-೬೫). [ಸಂ.]

ಧನಾಶ್ರಯ (ನಾ). ಕೋಶಾಗಾರ ; ಭಂಡಾರ : "ಆ ಲತಿಕಾಸಮೂಹ ಗುರುಗುಂಜಿ ಧನಾಶ್ರಯ ಗುಂಜವಾಚಕಂ" (ನಾನಾರ. ೧೩೪).
[ಧನ + ಆಶ್ರಯ]

ಧನಾಶ್ರೀ (ನಾ). [ಸಂಗೀತ] ಒಂದು ರಾಗದ ಹೆಸರು : ನಮ್ಮ ಧನ್ಯಾಸಿಯನ್ನೇ ಹೋಲುವ 'ಧನಾಶ್ರೀ' ರಾಗದ ರೂಪವರ್ಣನೆಯನ್ನು ಹೀಗೆ ಹೇಳಲಾಗಿದೆ (ಭಾರದ. ೫೪೩). [ಸಂ.]

ಧನಿ$_1$ 'ದನಿ$_1$' ನೋ.

ಧನಿ$_2$ (ನಾ). ೧. ಹಣವಂತ; ಧನಿಕ: "ಧನಿ ಧನಾಧಿಕನಾಢ್ಯಂ" (ವಸ್ತುಕೋ. ೬೨-೬೫) ; ನಿಲೆ ಬುಧಂ . . . ಉಕ್ಷತೌಲಿಗಳೊಳಾಚಾರ್ಯಂ ಬಹುಸ್ತ್ರೀ ಸುತಂ ಗುರುಭಕ್ತಂ ಧನಿ [ಪಾಶಾಂ. ದಾನಿ] ಸತ್ಯವಾಕ್ಯನೆನಿಕುಂ (ಜಾತಕ. ೧೭-೨೨). ೨. ಒಡೆಯ ; ಯಜಮಾನ ; ಸ್ವಾಮಿ : ನಾಲ್ವತ್ತುಕೋಟಿ ಸಂಪತ್ತಿಗೆ ಅಪನು ಧನಿಯಾಗಿದ್ದನು (ಬುದ್ಧಜಾ. ೧೩೮) ; ಬಡಬಗ್ಗರು ಕೈಒಡ್ಡಿದಾಗ ನೀಡೂ ಧನಿ ಬಾಪೂಸಾಬ (ಗ್ರಾಮಾಯ. ೨೬) ; ಧನಿಯ ಹೆಂಡತಿ ಕಂಡರೆ . . . ಶಿಕ್ಷೆ ಕೂಡ ಸಿಗಬಹುದಿತ್ತು (ರಕ್ತರೂ. ೨). ೩. ಧನಾಧಿಪ ; ಕುಬೇರ : "ಬಳಬಿಳಃ, ಪೌಲಸ್ತ್ಯಃ . . . ಧನೀ, ಪುಣ್ಯಜನೇಶ್ವರಃ– ಈ ೧೭ ಕುಬೇರನ ಪೆಸರ್" (ಹಲಾಯು. ೧೪-೭೯) ; ಸುರಪತಿ ಕೇಳ್ ಶಿಖಿ ಕೇಳ್ ಯಮ ಕೇಳ್ . . . ಧನಿ ಕೇಳ್ ಶಿವ ಕೇಳ್ ದುರುಳನೊಡಲ ಮೇಲಿನ್ನಿರೆನಿರೆನಿರೆನೆಂದಱುಪುವೊಲ್ ತಲೆತಿರುಗಿದುದು (ವೀರೇಶ. ೧-೬೩) ; ಧನಿ ಧನವನೆಂಬ ನಾಮಂ ತನಗೇಕೆ ಪರಾರ್ಥರಕ್ಷಕಂಗೆ ಕುಬೇರುಗೆನುತಿಱೆಕೆಯ್ವರ್ ತಮ್ಮಯ ಧನವೆಣಿಕೆಯನಱಿಯದಾ ಪುರದ ಸಿರಿವಂತರ್ (ಶಾಂತೀಶ್ವ. ೧-೧೨೦) ; ಬೇಡು ಬೇಡು ದಾನವೇಂದ್ರನೊ ಯಿಂದ್ರಪದವೋ . . . ಭೂನಾಥ ಹುಶ್ಚಂದ್ರನಂತೆ ಸಾಮ್ರಾಜ್ಯವೊ ಧನಿಯಂತೆ ನವ ನಿಧಿಗಳೋ (ನವಮೋ. ೧೯-೬೨). ೪. ಬುದ್ಧ : "ಬುದ್ಧನದ್ವಯವಾದಿ ದಶಬಲಂ ಜನನತನುಜಿದ್ಧರ್ಮವಾನ್ ಶೌಕ್ಯನಾ ಸುಗತನಾ ಲೋಕಜಿದ್ಧನಿ ಸಮಂತಭದ್ರನೆನಲ್ಕೆ ಬೌದ್ಧಂ" (ಮಂಗರಾ. ೭-೨೩). [ಸಂ. ಧನಿನ್]

ಧನಿಕ (ನಾ). ಹಣವಂತ ; ಸಿರಿವಂತ ; ಸಾಹುಕಾರ : ಹೃದಯದೊಳ್ನವರ್ ಪೆಱವರ್ ಧನಿಕರ್ ಬಡವರ್ ಸಮಂತು ಬೇಡದವರಡುರ್ತು ಬೇಡಿದವರೆನ್ನದೆ . . . ಕೋಶಗೃಹಂ ಬಱಿದಾಗೆ ಕೊಟ್ಟು (ಚಂದ್ರಪು. ೬-೮೦) ; ಲೆಕ್ಕವಿಲ್ಲದೆ ಬಾಳ್ವ ಧನಿಕನನಕ್ಕಱಿಂದಿರೈದು ಸಾಸಿರದೊಕ್ಕಲಾಗಿ ಬರ್ದುಂಕು ನೀನೆಂದುಱಿ ಪರಸಿದಂತ (ಬಸಪು. ೧-೩೪) ; ಧನಿಕನಂತೆ ಸಮಸ್ತ ಸುಖ ಸಂಜನಿಸುವುದೆ ಸರ್ವಕ್ಕೆ ಸಾಧನ ಧನ (ಕುಪ್ಪಾಉ. ೪-೫೫) ; ಧನದಾಸೆಗಾಗಿ ನಾ ಧನಿಕರ ಮನೆಗಳ ಕೊನೆಬಾಗಿಲಲಿ ನಿಂದು ತೊಳಲಿ ಬಳಲಿದೆನೊ (ಪುರಂದ. ೪-೧೩೬-೧) ; ಕೊಟ್ಟ ಧನಿಕರು ಬಂದು ನಿಷ್ಠುರದ ಮಾತಾಡಿ ಕೆಟ್ಟ ಬೈ ಬೈಯುವರು (ಕಏಪು. ೨೨-೧). [ಸಂ.]

ಧನಿಯ$_1$ 'ಧಣಿಯ' ನೋ.

ಧನಿಯ$_2$ (ನಾ). ಸ್ತುತಿಪಾತ್ರ ; ಧನ್ಯ ; ಕೃತಾರ್ಥ : ಮನದ ಭಾವಗಳ ಪೂರ್ಣದಿನೊರೆಯಲರಿತ ಕವಿ . . . ಅನುರೂಪದಿಂದ ವಾಸ್ತವಗೊಳಿಪ ಕೃತಿಚತುರ ಧನಿಯರಿವರೆಲ್ಲಿಹರೊ ? (ಮಂಕುಶ. ೫೬೭).

[<ಪ್ರಾ. ಧಣಿಅ./ಸಂ. ಧನ್ಯ]

ಧನಿಯ$_3$ (ನಾ). ಕೊತ್ತುಂಬರಿಬೀಜ ; ಹವೀಜ : ವಾಯುವಿಳಂಗ, ಹಿಪ್ಪಲಿ, ಬೆಲ್ಲ, ಧನಿಯ . . . ಒಂದು ವರ್ಷಕ್ಕಿಂತಲೂ ಹೆಚ್ಚಾಗಿ ಹಳೆಯದಾಗಿರಬೇಕು (ಸಕಪ್ರ. XIII, ಪ್ರಸ್ತಾವನೆ) ; ಧನಿಯ, ಸಾಸಿವೆ, ಹುಚ್ಚೆಳ್ಳು ಮೊದಲಾದುವುಗಳನ್ನು ಸ್ವಲ್ಪಸ್ವಲ್ಪವಾಗಿ ಅನುಕೂಲವಾದ ಸ್ಥಳಗಳಲ್ಲೆಲ್ಲಾ ಬೆಳೆಯುತ್ತಾರೆ (ವೃವಮ. ೪೪). [<ಸಂ. ಧನ್ಯಾ]

ಧನಿಷ್ಠ$_1$ (ನಾ). [ಜ್ಯೋತಿ] ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು ಮತ್ತು ಆ ನಕ್ಷತ್ರದಲ್ಲಿ ಬರುವ ಮಳೆ ; ಫೆಬ್ರವರಿ ತಿಂಗಳ ೨ನೆಯ ತಾರೀಖಿನಿಂದ ೧೫ನೆಯ ತಾರೀಖಿನ ಮಧ್ಯದ ಅವಧಿಯಲ್ಲಿ ಪ್ರಾರಂಭವಾಗುವ ಮಳೆ : (ಮಗೃಚಿ. IV, ೭೭೮). [ಸಂ. ಧನಿಷ್ಠಾ]

ಧನಿಷ್ಠ$_2$ (ನಾ). ಬಹಳ ಧನವುಳ್ಳವನು ; ದೊಡ್ಡ ಶ್ರೀಮಂತ. [ಸಂ.]

ಧನಿಷ್ಠೆ (ನಾ). ೧. ಬಹಳ ಹಣವಂತಳಾದ ಹೆಂಗಸು. ೨. [ಜ್ಯೋತಿ] ಅಶ್ವಿನಿ ಮೊದಲಾದ ಇಪ್ಪತ್ತೇಳು ನಕ್ಷತ್ರಗಳಲ್ಲಿ ಇಪ್ಪತ್ತಮೂರನೆಯದು : "ಧನಿಷ್ಠಾ, ಶ್ರವಿಷ್ಠಾ–ಈ ೨ ದನಿಷ್ಠೆ" (ಹಲಾಯು. ೧೦-೫೦) ; ಧನಿಷ್ಠೆ ಮೊದಲೆನೆ ಭಗಣಾ (ಜಾತಕ. ೨೪-೧೫) ; ಅಶ್ವಿನಿ ಭರಣಿ ಕೃತ್ತಿಕೆ . . . ಶ್ರವಣ ಧನಿಷ್ಠೆ . . . ರೇವತಿಗಳೆಂಬಿಪ್ಪತ್ತೇಳು ತಾರೆಗಳು (ವಿವೇಕ. ೨೫೮). [ಸಂ. ಧನಿಷ್ಠಾ]

ಧನಿಸುತ (ನಾ). ಕುಬೇರನ ಮಗ ; ನಳಕೂಬರ : ಭದ್ರನೊ ದತ್ತಕನೊ ಪಂಚಾಳನೋ ಮೇಣ್ ಕೂಚಿಮಾರನೊ ಮೇಲೆ ಧನಿಸುತನೋ ಜಯಂತನೊ ಕಾಮನೋ ಎನಲು (ಬಸಪು. ೪೦-೧೯). [ಧನಿ$_2$ + ಸುತ]

ಧನು (ನಾ). ೧. ಬಿಲ್ಲು ; ಧನುಸ್ಸು : "ಧನು ಕೋದಂಡಂ ಬಾಣಾಸನಮಸ್ತ್ರಂ ಕಾರ್ಮುಕಾಖ್ಯವುದು ಚಾಪಂ" (ವಸ್ತುಕೋ. ೮೫-೧೭) ; ಧನು ಕಾಮಂ ಗಿಕ್ಷುದಂಡಂ (ಆದಿಪು. ೩-೯೧) ; ಧನುವುಂ ಕರ್ಬಿನ ಬಿಲ್ ಗಡಂ (ಕಾವ್ಯಾವ. ೭೫೨) ; ಧನುವಿನ ಟಂಕೃತಂ ವಿಶಿಖಭೀಂಕೃತಂ . . . ವನಜಭವಾಂಡಮಂ ಪುದಿಯೆ (ಜಗವಿ. ೧೫-೫) ; ಧನುವಂ ಕೊಂಡೊತ್ತಿ . . . ಕಾಯ್ದಿನಿಂ ದೇಱಿಸುವ ಸರಭಸಕ್ಕುರ್ವಿ ತರ್ಗಿತ್ತು ನಾಗೇಂದ್ರನ ಭೋಗಂ (ಕುಸುಮಾ. ೧೦-೪೫) ; ಧನು ತನಗೆ ನೆಗಹಲ್ಕೆ ಕೃಷ್ಣಾಜನವೊ ಸಾಲಗ್ರಾಮದೇವರೊ (ಕುಪ್ಪಾಉ. ೧೫-೧೭). ೨. ನಾಲ್ಕು ಹಸ್ತಗಳ ಒಂದು ಅಳತೆ ; ಧನುವೆಂಟು ನಾಲ್ಕು ನಾಲ್ಕಂತನುಕ್ರಮದಿನುದಯಮೆನಿಪ ಮೂಱುಂ ಪೀಠಂ ಘನವೈಡೂರ್ಯಮಯಂ ಭರ್ಮನಿರ್ಮಿತಂ ಪಂಚರತ್ನಸಂಚಿತ ಮೆಸೆಗುಂ (ಪಾರ್ಶ್ವಪು. ೧೬-೩೦) ; ಪ್ರಂತರದೇವರ್ಕಳೆಲ್ಲರುತ್ಸೇಧವು ಸಂತತ ಹತ್ತುಧನುಗಳು (ದ್ವಾದಶಾ. ೬-೧೫೨). ೩. [ಜ್ಯೋತಿ] ಹನ್ನೆರಡು ರಾಶಿಗಳಲ್ಲಿ ಒಂಬತ್ತನೆಯದು ; ಪಮೂಲಾ, ಪೂರ್ವಾಷಾಢ ಮತ್ತು ಉತ್ತರಾಷಾಢದ ಒಂದು ಪಾದ ಸೇರಿ ಧನೂರಾಶಿಯಾಗುತ್ತದೆ : ಚರರಾಶಿ ಕುಳೀರ ತುಲಾಧರ ಮೃಗ ಮೇಷಂ ಘಟೋಕ್ಷ ವೃಶ್ಚಿಕ ಸಿಂಹಂ ಸ್ಥಿರರಾಶಿ ಧನು ಝಷಂ ಸುಂದರಿ ಮಿಥುನಂ ದ್ವಿಸ್ವಭಾವರಾಶಿಗಳೆನಿಕುಂ (ಜಾತಕ. ೧-೨೩) ; ಧನು ಮಿಥುನಂ ಘಟಂ ವನಿತೆ ಗೋಪತಿ ವೃಶ್ಚಿಕಮೆಂಬ ಲಗ್ನಮೇಟನೆಯದು (ಲೋಕೋಪ. ೨-೫೨) ; ಧನುಗೆವರೆ ದೇವಗುರು ಮಿಂಬಿನಲಿ ತಿಳಂ ಪಟ್ಟಿಯುಪು ಮುಂ ಘನಮಕ್ಕುಂ (ಅಬ್ಬಮ. ೧೨-೧೧೭) ; ವನಿತೆಯೊಳು ಕಮಲಾರಿಯಿದ್ದನು ಕನಕ ಮನ್ಮಥನೆಡೆಯೊಳಿದ್ದನು ಧನುವಿನೊಳಗಿನತನುಜನಿದ್ದನು ಭಗಣಚಕ್ರದಲಿ (ಕೌಶಿರಾ. ೧೩-೪೮). 'ದ್ವಾದಶರಾಶಿ' ಪರಾ. [ಸಂ.]

ಧನುಕೋಟಿ (ನಾ). = ಧನುಷ್ಕೋಟಿ ೧ : "ಬಿಲ್ಲ ಕೊಪ್ಪಟನಿ ಧನುಕೋಟಿಯೆಂದೆನಿಸಿಕ್ಕು" (ಮಂಗರಾ. ೪೭-೫೫). [ಧನು + ಕೋಟಿ$_1$]

ಧನುಗೊಳ್ (ಕ್ರಿ). ಬಿಲ್ಲನ್ನು ತೆಗೆದುಕೊಳ್ಳು : ಕಡುಗಾಯ್ದು ಕೋಪದಿಂ . . . ಗಾಂಡಿವಿಯುಂ ಧನುಗೊಂಡೊಡೆ (ನೇಮಿಪು. ೧೦-೫೮).

[ಧನು + ಕೊಳ್$_1$]

ಧನುಧಾರಿ (ನಾ). ೧. ಬಿಲ್ಲನ್ನು ಧರಿಸಿದವನು ; ಧನುರ್ಧಾರಿ. ೨. ಅರ್ಜುನ: ಯೋಗೇಶನಿಂದ ಧನುಧಾರಿಯಲ್ಲಿ ಅನಿಮೇಷ ಭೇದವಾಯ್ತು (ಹ್ಯದಸ. ೯-೧೧). [ಸಂ. ಧನುಧಾರಿನ್]

ಧನುರಾಗಮ (ನಾ). ಅಸ್ತ್ರಪ್ರಯೋಗಗಳನ್ನು ಕುರಿತ ಶಾಸ್ತ್ರ : ಧನುರ್ವಿದ್ಯೆ: ಇನಿಬರೊಳಗೀತನೊರ್ವನೆ ಧನುರಾಗಮದೆಡೆಗೆ ಕುಶಲನಕ್ಕುಂ (ಪಂಪಭಾ. ೨-೫೫) ; ಆ ಗಗನೇಚರನುಂ ಧನುರಾಗಮವಿದ್ಯಾಗಮ್ಯಕನಿಧಿ ವಿದ್ಯೆಗಳಿಂ ಪೋಗದೆ ಕಾದುತ್ತಿರೆ (ಶಾಂತಿಪು. ೪-೨೫). [ಸಂ.]

ಧನುರಾಸನ (ನಾ). [ಯೋಗ] ಬಿಲ್ಲಿನಾಕಾರದಲ್ಲಿ ಶರೀರವನ್ನು ಬಾಗಿಸುವ ಒಂದು ಆಸನ : ಮುಖ್ಯವಾದ ಕೆಲವು ಆಸನಗಳು : ೧. ಉತ್ತಾನಾಸನ . . . ೨೧. ಧನುರಾಸನ (ಭಾರದ. ೧೬೭). [ಸಂ.]

ಧನುರಿ (ನಾ). ನಾಲ್ಕು ಬಗೆಯ ಶಿಲ್ಪಗಳಲ್ಲಿ ಒಂದು: ಬಿಲ್ಲಿನಂತೆ ಬಾಗಿರುವ ರಚನೆ: ಧನುರಿ ಮಧುರಿ ಸಾಧಾರಿಣೆ ಪಾಸಿಯೆಂಬ ರೇಖಾ ಚತುಷ್ಕದೊಳಂ ಬಾರುತೆವೆತ್ತು (ಮಹಾನೇ. ೦೫-೩೭ ವ). P ಇದಂ ಸಾಮುದ್ರಿಕ ಲಕ್ಷಣಗಳನ್ನು ಹೇಳುವಾಗಲೂ 'ಬಿಲ್ಲಿನಂತೆ ಬಾಗಿರುವ ರೇಖೆ' ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. [?]

ಧನುರ್ಗತಿ (ನಾ). ಬಿಲ್ಲಿನ ಆಕಾರ: ಗುದಸ್ಥಾನದಲ್ಲಿ ಆಧಾರಚಕ್ರ ಪೃಥ್ವಿ ಎಂಬ ಮಹಾಭೂತ ಚತುಃಕೋಣೆ ಬೌದಳ ಪದ್ಮ . . . ಲಿಂಗಸ್ಥಾನದಲ್ಲಿ ಸ್ವಾಧಿಷ್ಠಾನಚಕ್ರ ಅಪ್ಪುವೆಂಬ ಮಹಾಭೂತ ಧನುರ್ಗತಿ ಷಡುದಳ ಪದ್ಮ (ಅವಚಂ. ೪೪-೧೪೪). [ಸಂ.]

ಧನುರ್ಗುಣ (ನಾ). ಬಿಲ್ಲಿನ ಹೆದೆ; ಸಿಂಜಿನಿ: ಧನುರ್ಗುಣವೇಗತಾಡನಾ ಕಳಿತವಿಕೀರ್ಣಕೋಷ್ಠಮನೆ ಕೂರ್ಮವಿನಿಷ್ಕುರಪೃಷ್ಠಭಾಗಮೆಂದು . . . ಧರಿತ್ರಿ ಬಂದು ನಿಶ್ಚಳತೆಯಿನಿರ್ಪಳಲ್ತೆ ಭುಜಮಂಡಳದೊಳ್ ವಸುಧಾಧಿ ನಾಥನಾ (ಕಂದ್ರಪು. ೩-೩೧) ; ಚಂಡ ಧನುರ್ಗುಣಮಂ ನೀವಿ ಜೀವೊಡೆಯ ಲೊಡನೆ (ಕಬಶಂ. ೪-೦೭ ವ). [ಸಂ.]

ಧನುರ್ಗುಣಕ್ವಣಿತ (ನಾ). ಬಿಲ್ಲಿನ ಹೆದೆಯನ್ನು ಮಿಡಿದಾಗ ಆಗುವ ಧ್ವನಿ; ಧನುಷ್ಟಂಕಾರ: ಜಾಣ್ತಾತು ಧನುರ್ಗುಣಕ್ವಣಿತಮಂ ಪುಷ್ಪಾಸ್ತ್ರ ನಿಂದಾಗಳಾಗಿಸೆ ಪಣ್ಯಾಜನಮಿರ್ದುದೋಲಗದೊಳ್ (ರಾಜಶೇ. ೦೩-೪೭). [ಧನುರ್ಗುಣ + ಕ್ವಣಿತ]

ಧನುರ್ಗೇಹಜ (ನಾ). [ಜ್ಯೋತಿ] ಧನುರಾಶಿಯಲ್ಲಿ ಹುಟ್ಟಿದವನಂ: ಬಸವಾಯಂ ಕವಿ ವಾಗ್ಮಿ ದೀರ್ಘಮುಖಕಂಠಂ ಧಾರ್ಮಿಕಂ ತ್ಯಾಗಿ . . . ನಿವುಣಂ ಮಹೋದ್ಯಮಿ ನಿಗೂಢಾಂಸಂ ಧನುರ್ಗೇಹಜಂ (ಜಾತಕ. ೦೭-೯). 'ದ್ವಾದಶರಾಶಿ' ಪರಾ. [ಸಂ.]

ಧನುರ್ಗ್ರಹ (ನಾ). ೧. ಬಿಲ್ಲುಗಾರ. ೨. ಕ್ಷೇತ್ರಪರಿಮಾಣವನ್ನು ಅಳೆಯಂವುದಕ್ಕಾಗಿ ಬಳಸುವ ಒಂದಂ ಮಾನ; ಇಪ್ಪತ್ತೈಳು ಅಂಗುಲಗಳ ಒಂದಂ ಅಳತೆ: ಕ್ಷೇತ್ರಪರಿಮಾಣವನು ಯೋಜನವನುಂ ಧನುರ್ಹಸ್ತದಿಂ ಮಾಡುವದು ಮತ್ತಮಾ ಧನುರ್ಗ್ರಹಹಸ್ತವು ನಾಲ್ಕಾಗ ಲೊಂದು ಧನುವೆನಿಸುವದು (ವಿವೇಕ. ೩೦೧). [ಸಂ.]

ಧನುರ್ಜ್ಯಾರವ (ನಾ). ಬಿಲ್ಲಿನ ಹೆದೆಯ ಟಂಕಾರ; ಸಿಂಜಿನಿಯಂ ಧ್ವನಿ: ಧನುರ್ಜ್ಯಾರವಂ ಬಳೆಯಲ್ ಜೀವೊಡೆಗೆಯ್ದು (ನೇಮಿಪು. ೧೪-೪). [ಸಂ.]

ಧನುರ್ಜ್ಯಾರುತಿ (ನಾ). = ಧನುರ್ಗುಣಕ್ವಣಿತ: "ಧನುರ್ಜ್ಯಾರುತಿಯೊಳ್ ಟಂಕಾರಂ" (ವಸ್ತುಕೋ. ೩೧-೩೯). [ಸಂ.]

ಧನುರ್ದಂಡ (ನಾ). ಬಿಲ್ಲು; ಧನುಸ್ಸು: ೇನ್ಯದುರ್ಧರನಿಜಧನುರ್ದಂಡಮಂ ತದ್ವ್ಯಜನಿಗೆ ಕೋಪಕಟುಲದಕ್ಷಿಣದಿಕ್ಪಾಲಭೃಕುಟೀವಿಭ್ರಮಮಂ ಮಾಡ ಲ್ಪಡೆಯದೆಯುಂ (ಆದಿಪು. ೧೪-೧೦೩ ವ) ; ಆಹವಶೌಂಡಮಿಾ ಧನುರ್ದಂಡ ಮುಮುಳ್ಳಿನಂ ದ್ರುಪದನಂದನೆ ಸಂಧಿಯನಾಗಲೀವೆನೇ (ಗದಾಯು. ೦-೭೩); ಶಬರಶಂಕರಂ ಪ್ರಚಂಡಧನುರ್ದಂಡಮಂ ಕೆಯ್ಕೊಂಡು ತಿರುವೊಯ್ದು ಜೇವೊಡದು ಬಾಣವಂ ಪೂಡಿ ತೆಗೆನೆಱೆದಚ್ಚಾಗಳ್ (ಕಬಶಂ. ೪-೪೬ ವ). [ಸಂ.]

ಧನುರ್ಧರ (ನಾ). ಧನುಸ್ಸನ್ನು ಹಿಡಿದಿರುವವನಂ; ಬಿಲ್ಲುಗಾರ: ಮಾನಂ ಸಮಂತೆಚ್ಚು ಮೆಚ್ಚಿಸಿದಂ ದೇವರುಮಾಂ ಧನುರ್ಧರರುಮಂ ವಿದ್ವಿಷ್ಟ ವಿದ್ರಾವಣಂ (ಪಂಪಭಾ.೩-೬೩): ಪ್ರವಿಪುಲಧನುರ್ಧರಂ ಶ್ಯಾಮವರ್ಣನಾಯ ವ್ಯಯಕ್ರಿಯಾರುಚಿ . . . ಯುವಶಿಮಧ್ಯಮ ದ್ರೇಕ್ಕಾಣಂ (ಜಾತಕ. ೧೯-೦೭) ; ಜವನೆರ್ದೆ ಬರ್ಬುವ ತೆಜದಿಂ ತವುತರ್ವುದುಮುಭಯಬಲ ಧನುರ್ಧರಸೈನ್ಯಂ (ಪಂರಾಮಾ. ೦೩-೫೩) ; ದಿಕ್ಕುಗಳೇಣು ಮುಱಿಯಲು ಹೊಕ್ಕಿಸುವ ಬಿಲುಜಾಣರುರವಣೆ ಲಜ್ಜಿಸಿತು ಲೋಕದ ಧನುರ್ಧರರ (ಕುವ್ಯಾಭೀ. ೪-೧೭). [ಸಂ.]

ಧನುರ್ಧರಪ್ರಾಯ (ಗು). ಅನೇಕ ಬಿಲ್ಲುಗಾರರಿಂದ ಕೂಡಿರುವ: ಚಿರಾತಾವರ್ತರೆಂಬಿರ್ವರ್ ಮ್ಲೇಚ್ಛರಾಜರ್ ಧನುರ್ಧರಪ್ರಾಯಮುಮು ಶ್ವೀಯ ಬಹಳಮುಂ ಹಾಸ್ತಿಕಸಾಧನಮುಮಪ್ಪ ತಮ್ಮ ಬಲಮನೊಂದು ಮಾಡಿ ಕೂಡಿಕೊಂಡು (ಆದಿಪು. ೧೩-೫೬ ವ). [ಸಂ.]

ಧನುರ್ಧರಫಾಲನೇತ್ರ (ನಾ). ೧. ಬಿಲ್ಲುಗಾರರಲ್ಲಿ ಶಿವನಿಗೆ ಸಮಾನ ನಾದವನಂ. ೨. ದ್ರೋಣಾಚಾರ್ಯಂ: ಸಾತ್ಯಕಿ ಬಿಲ್ಲನಿಳುಹಿದ ನುತ್ತಮಾಂಗಕೆ ಕರಯುಗವ ಚಾಚುತ್ತ ಬಿನ್ನೈಸಿದ ಧನುರ್ಧರಫಾಲನೇತ್ರಂಗೆ (ಕುವ್ಯಾದಿತ್ರಿ. ೧೨-೪). [ಧನುರ್ಧರ + ಫಾಲನೇತ್ರ]

ಧನುರ್ಧಾರಣ (ನಾ). ೧. ಬಿಲ್ಲನ್ನು ಹಿಡಿಯುವುದು. ೨. ಪ್ರೋದ್ಗೀತಾಗಮದ ಹದಿನಾರು ಭೇದಗಳಲ್ಲಿ ಒಂದಂ: ಕವಚಾಗಮ ವರಾಹ ತಂತ್ರ . . . ಪಶುಬಂಧಸಂಹಿತೆ ದಂಡಧರತಂತ್ರ ಕುಶತಂತ್ರ ಧನು ರ್ಧಾರಣ ಶಿವಜ್ಞಾನ ವಿಜ್ಞಾನ . . . ಭರತ ಆತೋದ್ಯವೆಂದು ಪ್ರೋದ್ಗೀತಾಗಮದ ಪೋಡಶಭೇದಂಗಳು (ವಿವೇಕ. ೭೧). [ಸಂ.]

ಧನುರ್ಧಾರಿ (ನಾ). = ಧನುರ್ಧರ: ದ್ರೇಕ್ಕಾಣದೇವತೆಯು ಮನುಷ್ಯನ ಮುಖ ಮತ್ತು ಕುದುರೆಯ ಶರೀರವುಳ್ಳವನೂ ಧನುರ್ಧಾರಿಯೂ . . . ಆಗಿರುವನು (ಜಾತಕ. ೧೯-೩೫ ಟೀಕೆ). [ಸಂ. ಧನುರ್ಧಾರಿನ್]

ಧನುರ್ಬಲ, ಧನುರ್ಬಳ (ನಾ). ೧. ಬಿಲ್ಲಂಗಾರರ ಪಡೆ; ಧನುರ್ಧಾರಿಗಳ ಸೈನ್ಯ: ಕೀಱಿ ಬಂದುವು ಹಯಂ ರಣಭೂಮಿಗೆ ತೇರ್ ತೆರಳ್ದು ಬಂದುವು ತಱಿಸಂದು ಬಂದುವು ಕಡಂಗಿ ಧನುರ್ಬಲಮಿರ್ವಲಂಗಳೊಳ್ (ಪಂರಾಮಾ. ೧೩-೯೫). ೨. ಬಿಲ್ಲಿನ ಬಲ: ಈಗ ನಾನು ನಿನಗೆ ದಾರಿ ಕೊಟ್ಟರೆ, ಮಿಕ್ಕವರೂ ಹೀಗೆಯೇ ನನ್ನನ್ನು ಧನುರ್ಬಲದಿಂದ ಆಜ್ಞೆ ಮಾಡಿಯಾರು (ವಚಭಾ. ೪೧೦). ಧನುರ್ಬಳ: ೧. ಅಂತು ಚತುರ್ಭುಜನಗುರ್ವಾದ ಧನುರ್ಬಳಂ ಕಱಿಪ ಶರಾಸಾರದಿಂ . . . ತರ್ಗಿ ಮುಗ್ಗುವುದಂ ಕಂಡು (ನೇಮಿಪು. ೭-೩೪ ವ). [ಸಂ.]

ಧನುರ್ಬಾಳ 'ಧನುರ್ಬಲ' ನೋ.

ಧನುರ್ಭಂಗ (ನಾ). ಬಿಲ್ಲನ್ನು ಮುರಿಯುವುದಂ. [ಸಂ.]

ಧನುರ್ಭೇದನ (ನಾ). = ಧನುರ್ಭಂಗ. [ಸಂ.]

ಧನುರ್ಮಧ್ಯ (ನಾ). ಬಿಲ್ಲಿನ ಮಧ್ಯಭಾಗ; ಬಾಣ ಹೂಡುವ ಸ್ಥಳ; ಬಿಲ್ಲನ್ನು ಕೈಯಲ್ಲಿ ಹಿಡಿಯುವ ಸ್ಥಳ. [ಸಂ.]

ಧನುರ್ಮಾಸ (ನಾ). ಸೂರ್ಯನಂ ಧನುರಾಶಿಯಲ್ಲಿರುವ ಅವಧಿ: ಸಾಮಾನ್ಯವಾಗಿ ಡಿಸೆಂಬರ್ ಹದಿನಾಲ್ಕನೆಯಂ ತಾರೀಖಿನಿಂದ ಜನವರಿ ಹದಿನಾಲ್ಕನೆಯಂ ತಾರೀಖಿನವರೆಗಿನ ಕಾಲ; P ಈ ಅವಧಿಯಲ್ಲಿ ಬೆಳಗಿನ ಜಾವದಲ್ಲಿ ವಿಶೇಷವಾದ ಪೂಜೆ, ವ್ರತಗಳನ್ನು ಆಚರಿಸ ಲಾಗುವುದು: ಧನುರ್ಮಾಸದಂಥ ಪ್ರಸಂಗದಲ್ಲಿ ಹುಗ್ಗಿಯ ಸಮಾರಂಭ ವಾಗಲಿಲ್ಲ (ಸ್ಕಂತಿ. ೦೪೭) : ಧನುರ್ಮಾಸದಲ್ಲಿ ಬೆಳಗ್ಗೆ ಎದ್ದು ಸ್ನಾನಾದಿಗಳ ನಂತರ ಹುಗ್ಗಿ ಪೊಂಗಲುಗಳನ್ನು . . . ತಿಂದು ಕುಡಿಯಬೇಕೆಂಬ ಋತು ಧರ್ಮಗಳು ಎಂಥ ಹಿತಕರ್ತವ್ಯಗಳೋ ನಕ್ಷತ್ರಗಳ ಗಳಿತನವನ್ನು ಬಯಸು ವುದು ಅಂಥ ಹಿತಕರ್ತವ್ಯಗಳಲ್ಲೊಂದು (ನಕ್ಷತ್ರ. ೨). [ಸಂ.]

ಧನುರ್ಮುಷ್ಟಿ (ನಾ). ಕ್ಷೇತ್ರಪರಿಮಾಣವನ್ನು ಅಳೆಯುವುದಕ್ಕಾಗಿ ಬಳಸುವ ಒಂದು ಮಾನ: ಪಟ್ಟಣಾದಿಕವನೇ ಧನುರ್ಮುಷ್ಟಿಹಸ್ತದಿಂ ಮಾಡುವದು (ವಿವೇಕ. ೩೦೧). [ಸಂ.]

ಧನುರ್ಲತೆ (ನಾ). ೧. ಬಿಲ್ಲು; ಧನುಸ್ಸು: ಧನುರ್ಲತಾಗುಣನಿನಾದಮನಾಲಿಸಿ ಕೇಳಲುಂ ಮನಂ ಬೆರ್ಚದೆ ಸಿಂಹಪೋತಕಮನೋವಲುಮಾಕೆಯ ದೋಹಳಂ ಕರಂ ಪೆರ್ಚಿದುದಾ ಗುಣಾರ್ಣವನ ಮುಂದಣ ಬೀರಮನಂ[ದೆ] ತೋರ್ಪ ವೋಲ್ (ಪಂಪಭಾ. ೦-೦೪೨) : ವಿಳಾಸದಿಂದಮೇಱಿಸಿದಲರ್ವಿಲ್ಲನೈಕ್ಷವ ಧನುರ್ಲತೆ . . . ಎನಿಪ್ಪವೊಲಾಂತಳಾಕೆಯೂ ಪಸದನದೊಳ್ ಜಗತ್ತ್ರಿತಯ

ಚಿತ್ತವಿಮೋಹನಶಕ್ತಿಯೇಟ್ಗೆಯಂ (ಚಂದ್ರಪು. ೬-೬೬) ; ನಿನ್ನ ಧನುರ್ಲತಾ ಹತಿಯ ಬಾಸುಳಿ ಪೂಗಳ ಮಾಲೆಯೊಚ್ಚತಂ ನಿನ್ನಯ ಮುಷ್ಟಿಯುದ್ದಮದು ಮತ್ಪದಪೂಜೆ ನಿಜಂ ಧನಂಜಯಾ (ಶಬಶಂ. ೫-೪೦). ೨. ಒಂದು ಬಗೆಯ ಬಳ್ಳಿ ; ಸೋಮಲತೆ. [ಸಂ. ಧನುರ್ಲತಾ]

ಧನುರ್ವಂಶ (ನಾ). ಬಿಲ್ಲಿನಂತೆ ಬಾಗಿದ ಬೆನ್ನುಮೂಳೆಯುಳ್ಳುದಂ : ಪರಿಪೂರ್ಣಗ್ರೀವನುಮತಿವಿಶಾಲೋರಸ್ಸ್ಥಳನುಂ ಧನುರ್ವಂಶನುಂ ವಿಪುಲೋಪಚಿತಾಂಸನುಂ (ಅಜಿಪು. ೪-೨೦ವ). 'ವಂಶ' ಪರಾ. [ಸಂ.]

ಧನುರ್ವರ್ಮ (ನಾ). ಬಿಲ್ಲಿನ ಹೊದಿಕೆ,-ಗವಸಣಿಗೆ : "ಬಿಲ್ಲ ಗವಸಣಿಗೆ ಧನುರ್ವರ್ಮಮೆನಿಸಿಕ್ಕು" (ಮಂಗರಾ. ೮೭-೩೩). [ಸಂ.]

ಧನುರ್ವಳ (ನಾ). = ಧನುರ್ಬಲ ೧ : ಯಾದವಪತಾಕಿನೀಪತಿ ಧನುರ್ವಳಕ್ಕೆ ಕೆಯ್ವಾಸುವುದುಂ (ನೇಮಿಪು. ೭-೮೫ ವ). [<ಸಂ. ಧನುರ್ಬಲ]

ಧನುರ್ವಾತ (ನಾ). ದೇಹವು ಬಿಲ್ಲಿನಂತೆ ಸೆಟೆಯುವ ಒಂದು ಬಗೆಯ ವಾತರೋಗ ; ಸೆಟೆರೋಗ : ಬೆಳ್ಳುಳ್ಳಿ, ಚಿತ್ರಮೂಲದ ರಸದಲ್ಲಿ ಕೊಡಲು ಅಷ್ಟವಿಧ ಧನುರ್ವಾತಂಗಳು ಮಾಣುವುವು (ವಿವೃವಿ. ೪೭) ; ಪಾಂಡುರೋಗ, ಶ್ವಾಸ, ಖಾಸ, ಜ್ವರ, ಧನುರ್ವಾತ ಮುಂತಾದ ರೋಗಂ ಬಿಡುಗಡೆಯಹುದು (ಸಕವೈ. ೧೭೯) ; ವಾತವಿಕಾರ, ಸನ್ನಿ, ಧನುರ್ವಾತ ಮುಂತಾದವುಗಳಿಗೆ ಆಯುವರಿತು ಕಲ್ಕ, ಬಿಸಿ ಮೊದಲಾದವುಗಳನ್ನು ಹಾಕಲು ಬಲ್ಲವಳಾಗಿದ್ದಳು (ಶಾಂತಲಾ. ೩೩೬). [ಸಂ.]

ಧನುರ್ವಾಯು (ನಾ). = ಧನುರ್ವಾತ : ದಪ್ಪದುಟಿಯ, ಧನುರ್ವಾಯು ಹಿಡಿದ ಕಂಠದ . . . ರಾಜಕುಮಾರ ಕೋರ್ಚಗೀನ್ ಅನಂತರ ಬಂದನು (ಪುನರು. ೪೫೮). [ಸಂ.]

ಧನುರ್ವಿದ್ಯೆ (ನಾ). ಬಿಲ್ವಿದ್ಯೆ : ನೆಱೆಯೆ ಧನುರ್ವಿದ್ಯೆಯ ಕಣ್ದೆಱೆವಿನೆಗಂ ಕಲ್ತ ನಿಮ್ಮ ಮಕ್ಕಳ ಮೆಯ್ಯೊಳ್ ಮೆಱೆದಪ್ಪೆನೆನ್ನ ವಿದ್ದೆಯಂ (ಪಂಪಭಾ. ೨-೬೫) ; ಕೃಪಾಚಾರ್ಯನೆಂಬ ಬ್ರಾಹ್ಮಣನು ವೃಷ್ಣಿವಂಶದ ರಾಜರಿಗೂ ಇತರ ರಾಜರಿಗೂ ಧನುರ್ವಿದ್ಯೆಯನ್ನು ಹೇಳಿಕೊಡುತ್ತಿದ್ದನು (ವಡಭಾ. ೧೭).

[ಸಂ. ಧನುರ್ವಿದ್ಯಾ]

ಧನುರ್ವೀಣೆ (ನಾ). ಒಂದು ಬಗೆಯ ತಂತೀವಾದ್ಯ : ಧನುಸ್ಸಿನ ಹಂಬಿನ ಮೇಲೆ ಬಾಣ ಹರಿದು ನಾದೋತ್ಪತ್ತಿ ಮಾಡಿ, ಈಗಿನ ಪಿಟೀಲುವಾದ್ಯಕ್ಕೆ ರೂಪ ಕೊಟ್ಟ ಕಾರಣ, ಈ ವಾದ್ಯದ ಪ್ರಾಚೀನರೂಪಕ್ಕೆ ಧನುರ್ವೀಣಾ ಎಂದು ಹೆಸರು ಬಂದಿದೆ (ಸಂಗೀಚಂ. ೧೧೪) ; ಧನುರ್ವೀಣೆ ಅಥವಾ ಪಿಟೀಲಿನ ಪೂರ್ವ ಮಾದರಿಯಾದ ರಾವಣಾಸ್ತ್ರವು ಇಂದಿನ ಪಾಶ್ಚಾತ್ಯಪಿಟೀಲು ರೂಪಿತವಾದುದರಲ್ಲಿ ಬಹು ಪ್ರಭಾವವನ್ನು ಬೀರಿದೆ (ಭಾರದ. ೫೪೫).

[ಸಂ. ಧನುರ್ವೀಣಾ]

ಧನುರ್ವೇದ (ನಾ). ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮತ್ತು ಅರ್ಥಶಾಸ್ತ್ರಗಳೆಂಬ ನಾಲ್ಕು ಉಪವೇದಗಳಲ್ಲಿ ಒಂದು ; ಅಸ್ತ್ರಪ್ರಯೋಗಗಳನ್ನು ಕುರಿತು ಹೇಳುವ ವೇದ ; ಬಿಲ್ವಿದ್ಯೆ : ಬಾಹುಬಲಿಗೆ ಕಾಮತಂತ್ರ ಸಾಮುದ್ರಿಕಾಯುರ್ವೇದ ಧನುರ್ವೇದ ಹಸ್ತ್ಯಶ್ವತಂತ್ರ ರತ್ನಪರೀಕ್ಷೆಗಳುಮಂ . . . ಉಪದೇಶಂಗೆಯ್ದಂ (ಆದಿಪು. ೮-೬೦ ವ); ಯಾದವವಂಶಜರುಂ ನಾನಾ ದೇಶ ನರೇಂದ್ರರುಂ ಘಟೋದ್ಭವನ ಧನುರ್ವೇದಮನೆ ಕಲಲ್ ಬಂದಾಳಾದರ್ (ಪಂಪಭಾ. ೨-೫೬); ಪರಶುರಾಮನ ಕಂಡು ಹೊಕ್ಕೆನು ಗರುಡಿಯನು ದ್ವಿಜನೆಂದು ಕಲಿತೆನು ವರ ಧನುರ್ವೇದವನು ಪಡೆದೆನು ದಿವ್ಯಮಾರ್ಗಣವ (ಕುವ್ಯಾಕ. ೯-೩೧) ; ಉಪವೇದ ಚತುರ್ವಿಧಂಗಳಲ್ಲಿ ಧನುರ್ವೇದವು ಶತ್ರುಜಯಾರ್ಥಮಾಗಿಯೇ ಮಂತ್ರಾಸ್ತ್ರಪ್ರಯೋಗಾಧಿಗಳಂ ಕಲ್ಪಿಸುವುದು (ವಿವೇಕ. ೪) ; ಅನುಪಮ ಧನುರ್ವೇದದುರುಮಂತ್ರ ಶಕ್ತಿಯಿಂ ತೀವಿದ ಮಹಾಶರವನು ತೆಗೆದಾರ್ದು ಫಲುಗುಣನೆಚ್ಚನು (ಜೈಮಿಭಾ. ೧೩-೪೬). [ಸಂ.]

ಧನುರ್ವೇದಿ (ನಾ). ಧನುರ್ವೇದವನ್ನು ಅಭ್ಯಾಸಮಾಡಿದವನು : ಧನುರ್ವೇದಿಯುಂ ಶಬ್ದವೇದಿಯುಮಪ್ಪ ಬಿಲ್ಲ ಬಿನ್ನಣಿಯನೊರ್ವನಂ ಕರೆದು ನಿಚ್ಚಂ ವಕ್ರಿಸುತ್ತಿರ್ಪ ನಿಚ್ಚಲವಕ್ಕಿಯನೆಚ್ಚು ಬಾಯೆಂದು ಪೇಳ್ವುದುಂ (ಪಂಚತಂ. ೧೨೬-೧೮). [ಸಂ. ಧನುರ್ವೇದಿನ್]

ಧನುರ್ಹಸ್ತ (ನಾ). = ಧನುರ್ಮುಷ್ಟಿ (?) : ಕ್ಷೇತ್ರಪರಿಮಾಣವನು ಯೋಜನವನುಂ ಧನುರ್ಹಸ್ತದಿಂ ಮಾಡುವದು ಮತ್ತಮಾ ಧನುರ್ಗ್ರಹ ಹಸ್ತವು ನಾಲ್ಕಾಗಲೊಂದು ಧನುವೆನಿಸುವದು (ವಿವೇಕ. ೩೦೧). [ಸಂ.]

ಧನುವಟ್ಟಿ 'ದಣುವಟ್ಟಿ' ನೋ.

ಧನುಶ್ರುತಿ (ನಾ). = ಧನುರ್ವೇದ : ಕೃಪನನುಜೆಯನು ತಂದು ದ್ರೋಣಂ ಗುಪಯಮವ ಮಾಡಿದನು ಹರ್ಷದಿ ದ್ರುಪದ ಬಂದೀ ದ್ರೋಣನೊಡ ನಱಿದನು ಧನುಶ್ರುತಿಯ (ಕುವ್ಯಾಅ. ೬-೨೩). [ಸಂ.]

ಧನುಶ್ಶಲಾಕೆ (ನಾ). = ಧನುರ್ದಂಡ : ಮಣಿಯನೆ ಕಾತ. ಕಲ್ಪಲತೆ ಸಿಂಜಿನಿಯಂ ತೆಗೆದಿಟ್ಟ ಪುಷ್ಟಮಾರ್ಗಣನ ಧನುಶ್ಶ[ಪಾಠಾಂ. ನುಃಶ]ಲಾಕೆ ಮುಗುಳೇಱಿದ ಮಲ್ಲಿಗೆ ಸುತ್ತುತಂ ನಭೋಮಣಿರುಚಿಯಂ ತೆಱಂಬೊಳೆವ ಪದ್ಮಿನಿ ತಾನೆನಿಸುತ್ತೆ ತಾಳ್ದ ಸನ್ಮಣಿಪಿಣಿಲಚ್ಚಮುತ್ತು ಕನಕಾಂಬರದಿಂ ಕಮಳಾಕ್ಷಿ ತೋಱಿದಳ್ (ರಾಜಶೇ. ೧೦-೧೭).

[ಸಂ. ಧನುಶ್ಶಲಾಕಾ]

ಧನುಷ್ಕೋಟಿ (ನಾ). ೧. ಬಿಲ್ಲಿನ ತುದಿ ; ಕೊಪ್ಪು ; ಗೊಲೆ: "ಧನುಷ್ಕೋ[ಪಾಠಾಂ. ನುಃಕೋ]ಟಿ ಕೊಪ್ಪು ಗೊಲೆಯೆನಿಸಿರ್ಕುಂ" (ಕವಿಕಂ. ೮೦). ೨. ರಾಮೇಶ್ವರದ ಬಳಿಯಲ್ಲಿದ್ದ ಒಂದು ತೀರ್ಥಕ್ಷೇತ್ರ : ವರ ಧನುಷ್ಕೋಟಿಯಲ್ಲಿ ಮಿಂದೀಶ್ವರಪದಾಂಬುಜಕೆಱಗಿ (ಕುವ್ಯಾಅ. ೧೯-೧೫). ೩. [ಜ್ಯೋತಿ] ಧನೂರಾಶಿ. ೨, ೩ : ಮಕರ ಕರ್ಕಟಕ ಹರಿ ಮಿಥುನದಿಂ ದನಿಮೇಷನಿಕರದಿಂ ದ್ರೋಣಂ ತಿಮಿನಂಗಳಿಂದೊಪ್ಪುತಕಳಂಕಮೆನೆ ಧನುಷ್ಕೋಟಿಯಿಂ ಬೆರೆದತುಳ ವೃಷಕೆ ನೆಲೆವನೆಯಿದೆನಿಸಿ . . . ರುಜಿಸಿತು ವಾರಾಶಿ ರಾಶಿರಾಶಿಯನಾಂತ ಗಗನದಂತೆ (ಶ್ರೀರಾಮ. ೩-೨೯). [ಸಂ.]

ಧನುಷ್ಟಂಕಾರ (ನಾ). ಬಿಲ್ಲಿನ ಹೆದೆಯನ್ನು ಮಿಡಿದಾಗ ಆಗುವ ಧ್ವನಿ ; ಸಿಂಜಿನಿಯ ಧ್ವನಿ; ಬಿಲ್ಲಿನ ಟಂಕಾರ : ತುರಗಗರ್ಜನೆ ರಥದ ಚೀತ್ಕೃತಿ ವರ ಧನುಷ್ಟಂಕಾರ ಕಪಿಯಬ್ಬರಣೆ . . . ಅರರೆ ಹೊದಱಿದ್ದವು (ಕುವ್ಯಾವಿ. ೬-೬೩). [ಸಂ.]

ಧನುಷ್ಟಂಕೃತ (ನಾ). = ಧನುಷ್ಟಂಕಾರ : ಲಲಿತಭ್ರೂಕಾರ್ಮುಕಂ ಕೇಕರ ರುಚಿ ನನೆಗೋಲ್ ಕುಂತಳಂ ಮೌರ್ವಿ ಮಂಜೀರಲಸದ್ಧ್ವಾನಂ ಧನುಷ್ಟಂಕೃತಮೆನೆ . . . ಪಂಚೇಷು ಗೆಲ್ಲಂಬಡೆವಿನಮಿಸುಗುಂ (ಜಗವಿ. ೨-೩೩).

[ಸಂ.]

ಧನುಷ್ಪಟ (ನಾ). ಒಂದು ಬಗೆಯ ಮರ; ಮೊರಲೆ; ಪ್ರಿಯಾಲಂ; "ಮೊರಟೆಗಿಡ" (ಅಮರ. ಟೀಕೆ). [ಸಂ.]

ಧನುಷ್ಪಾಣಿ (ನಾ). ಧನುಸ್ಸನ್ನು ಹಿಡಿದಿರುವವನು ; ಧನುರ್ಧಾರಿ : ನಡೆಗೊಂಡನಡವಿಕೇಳ್ವಟ್ಟೆಯೊಳಿಳಾತ್ಮಜಾವಲ್ಲಭಂ . . . ಭೀಷಣ ಧನುಷ್ಪಾಣಿಯಾಗಿ (ಶ್ರೀರಾಮಾ. ೧೨೬-೫೫). [ಸಂ.]

ಧನುಸ್ಸು (ನಾ). ೧. ಬಿಲ್ಲು : ಮನಸ್ಸು, ಪಯಸ್ಸು, ಯಶಸ್ಸು, ಶಿರಸ್ಸು, ಧನಸ್ಸು (ಶಬ್ದಾನು. ೧೩೩ ಪ್ರಯೋ). ೨. ವೃತ್ತದ ಒಂದು ಭಾಗ ; ಕಮಾನು. ೩. [ಜ್ಯೋತಿ]ಹನ್ನೆರಡು ರಾಶಿಗಳಲ್ಲಿ ಒಂಬತ್ತನೆಯದು; ಧನೂರಾಶಿ : ಖಗೋಳದಲ್ಲಿ ಮೇಷ ವೃಷಭ ಮಿಥುನ ಕರ್ಕಟ ಸಿಂಹ ಕನ್ಯೆ ತುಲೆ ವೃಶ್ಚಿಕ ಧನುಸ್ಸು ಮಕರ ಕುಂಭ ಮೀನವೆಂಬ ಪನ್ನೆರಡು ರಾಶಿಗಳೇ . . . ನಾಲ್ಕು ನಾಲ್ಕು ಪಾದಗಳಿಂದ ನೂಱಿಂಟಾಗಿ (ವಿವೇಕ. ೨೫೮) ; ಲಗ್ನವು . . . ಮಿಥುನ ಮೀನ ಧನುಸ್ಸು ಕನ್ಯಾರಾಶಿಗಳಾದರೆ ಉತ್ತರದಲ್ಲಿ ರುತ್ತದೆ (ಜಾತತಿ. ೪-೧೭ ಟೀಕೆ). [ಸಂ. ಧನುಸ್]

ಧನೂರಾಶಿ (ನಾ).=ಧನುಸ್ಸು ೩: ಧನೂರಾಶಿಯ ಮೊದಲನೆಯ ದ್ರೇಕ್ಕಾಣ ದೇವತೆಯು ಮನುಷ್ಯನ ಮುಖ ಮತ್ತು ಕುದುರೆಯ ಶರೀರವುಳ್ಳವನೂ ಧನುರ್ಧಾರಿಯೂ . . . ಆಗಿರುವನು (ಜಾತಕ. ೧೯-೩೫ ಟೀಳಿ). [ಸಂ.]

ಧನೇಶ (ನಾ).=ಧನಾಧಿಪ ೨: ನೆಱೆದಿತಿವರಾರ್ಜವರೇ ಸಂದ ಸುರೇಂದ್ರನುಂ . . . ಧನೇಶನುಂ (ನೇಮಿಪು. ೧೧-೧೦೩) : ಪಲಬುರ್ಧನವರ್ ತವ್ಮೊಳಗಲಕೆಯಲೊರ್ವಂ ಧನೇಶನೆಂದೇಳಿಸುತಂ (ಕೃಪುವಿ. ೭-೨೫).

[ಧನ + ಈಶ]

ಧನೇಶ್ವರ (ನಾ). ೧. ಧನಾಧಿಪತ್ತಿ: ಕುಬೇರ: ಸುರಪತಿ ಸೂತ್ರಧಾರ ನಮರಾವಳಿ ಶಿಲ್ಪಿಗಣಾ ಧನೇಶ್ವರಂ ಬರೆದು[ದ]ಪವಣ್ಗೆ ಜಾಣ್ಗೆವರೆ ನಿರ್ಮಿಸಿದಂ ಪುರಮುಂ (ಶಾಂತಿಪು. ೯-೧೩೮) : ಸರನಿಧಿನಾಯಕನ ದಿಶಾವರ ದಿಡೆಯೊಳ್ನಟ್ಟ ಕಲ್ ಧನೇಶ್ವರನ ದಿಶಾವರದಿಡೆಯೊಳ್ ಪುಟ್ಟಿಗೆ ದೇವರ ತೋಂಟಂ ಮೇರೆ (ಎಳ. VII, ಶಿಕಾರಿ. ೯೯-೯೬ : 1113) : ಪಷ್ಕರದಲ್ಲಿ ತಂದನು ಧನೇಶ್ವರನಾ ತಪೋವನಕೆ (ಕುವ್ಯಾಲಿ. ೭-೪). ೨. ಐಶ್ವರ್ಯವಂತ; ಹಣವಂತ: ಬುದ್ಧಿವಂತಂ ಧನೇಶ್ವರನುರ್ವೀಪತಿ (ಜಾತಕ. ೧೪-೧೩). [ಧನ + ಈಶ್ವರ]

ಧನೋತ್ಕರ (ನಾ). ಹಣದ ಮೊತ್ತ; ಸಂಪತ್ತು : ಧನೋತ್ಕರಮುಂ ಮೆಯ್ಮಿರವುಂ ಕಳತ್ರಭರಮುಂ ಸಂಕ್ಲೇಶಮುಂ ಮಾಡುಗುಂ (ಜೀವಸಂ. ೧೪-೩೭). [ಧನ + ಉತ್ಕರ]

ಧನ್ಯ (ಗು). ೧. ಧನವನ್ನು ಕೊಡುವ; ಧನಲಾಭಕ್ಕೆ ಕಾರಣವಾದ. (ನಾ). ೨. ಹಣವಂತ; ಸಿರಿವಂತ; ಧನಿಕ: ಮುಸಲಭವಂ ಧನ್ಯಂ ಮಾನಸಮೇತಂ ಬಹುವಿಧಕ್ರಿಯಾಶಕ್ತನವಂ (ಜಾತಕ. ೧೩-೧೧; ; ಸಂಭಗನುದ್ದಮೆನಪ್ಪೆದೆಯಾತಂ ಧನ್ಯಂ (ಲೋಕೋಪ. ೧೧-೪). ೩. ಅದೃಷ್ಟಶಾಲಿ; ಪುಣ್ಯಶಾಲಿ; ಸದ್ದೈವಿ: "ಸುಕೃತೀ, ಪುಣ್ಯವಾನ್, ಧನ್ಯಃ – ೩ ಪುಣ್ಯವುಳ್ಳವನ ಪೆಸರು. ಒಳ್ಳೆಯ ಅದೃಷ್ಟವಂತನು" (ಸಿದ್ಧಾಂತಿ. ೨೭೪) : ಕ್ಷೇಮಂಕರತೀರ್ಥಕರನ್ಯವಕುಮಾರಂಗಂ ಧನ್ಯಂ ಕನಕಚಿತ್ರೆಗಂ ವಜ್ರಾಂಕಿತ ತಳವಿಳಸಿತಂ ಪವಿತ್ರಂ ಪುತ್ರಂ (ಶಾಂತಿಪು. ೭-೧೦೫) ; ನೀನೊಲಿದವನೇ ಧನ್ಯ ಜಗಕ್ಕೆ ಪಾವನ (ಬಸವ. ೫೦೭) : ಧನ್ಯರೆಮ್ಮವೊಲದಾರ್ ಮುನ್ನಾದವರ್ (ಜಗವಿ. ೩-೫) ; ನಿಮ್ಮ ದೆಸೆಯಿಂದೇಸು ಧನ್ಯರೊ ನಾವು (ಕುವ್ಯಾಉ. ೪-೩೮): ಏನು ಧನ್ಯಳೋ ಲಕುಮಿ ಎಂಥಾ ಮಾನ್ಯಳೊ ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು (ಪುರಂದ. ೧-೭೭ ಪಲ್ಲವಿ) : ಸಕಲಮಂತ್ರಾಸ್ತ್ರವಿದನೇ ರಣಕಲಾಪಂಡಿತಂ ತಾನೆ ಗುರು.ವಹನೆನಲ್ ಧನ್ಯನೈಸಲೆ ರಾಮಚಂದ್ರಂ (ಶ್ರೀರಾಮಾ. ೩೦-೭೭). ೪. ಗುಣವಂತ; ಸದ್ಗುಣಿ; ಸಜ್ಜನ: ಅಗಣಿತಪುಣ್ಯನಬ್ಬೆಯೊಡವುಟ್ಟಿದ ಮಾವನಶೇಷಶಾಸ್ತ್ರಪಾರಗನತಿಧನ್ಯನೆಂದು ವರಿಭಾವಿಸಿ ಬಂದೊಡವಜ್ಜೆಗೆಯ್ದು ನಾಮ್ಮುಗದೆದೆಬೆಲ್ಲಮಂ ಪುಗಿಸಿ (ಸುಳುಮಾ. ೨-೭೩). ೫. ಕರ್ತವ್ಯವನ್ನು ನೆರವೇರಿಸಿದವನು; ಕೃತಕೃತ್ಯ: ಕೃತಾರ್ಥ: ಇಂದು ಕೃತಕೃತ್ಯನಾದಂ ದೇವ ಸಡೆ ತಂದೆ ಇಂದಾನು ಧನ್ಯನಾದಂ ದೇವ ಕರುಣಿಸಿದೆ (ಇಹರ. ದೇ. ೩೭-೪) ; ಧನ್ಯನಾದಂ ಪುಣ್ಯನಾದಂ ಮಾನ್ಯನಾದಂ . . . ಯತಿವರಂಗಿಂದೆನ್ನುವಂ ಕೊಟ್ಟು (ಬಸಪು. ೨೪-೧೨) ; ನಿನ್ನ ನೋಡಿ ಧನ್ಯನಾದೆನೊ ಹೇ ಶ್ರೀನಿವಾಸ (ಪುರಂದ. ೩-೭ ಪಲ್ಲವಿ) : ಧನ್ಯ ನಾಂ! ಧನ್ಯೆ ನೀಂ! ಧನ್ಯವಿಂ ರವಿಕುಲಂ! (ಶ್ರೀರಾಮಾ. ೧೪-೪೭೩) : ನಿನ್ನ ದರ್ಶನದಿಂದ ನನ್ನ ಪಾಪವೆಲ್ಲ ತಾ ಹೋಯಿತು ನಾನು ಧನ್ಯನಾದೆನು (ತೀಪಥ. ೧). ೬. ಧನ; ಸಂಪತ್ತು. [ಸಂ.]

ಧನ್ಯಂಗಿರು (ಕ್ರಿ). ಧನ್ಯವೆಂದು ಭಾವಿಸು; ಕೃತಾರ್ಥನೆಂದು ತಿಳಿ: ಧಂದೋವೇದೀನಟಂ ನೀಂ ಕೊಳದೊಡವಿಂದೆ ಕೊಳ್ಳೆಂದನೆಂದಂದೆ ಧನ್ಯಂಗೆತ್ತಾಂ ಸಿಗ್ಗಾಗೆ ; ನೀನಕ್ಕೆಮ ಕೊಳುವುಳಿವಂ. ನೀಡೆ ತಪ್ಪೇನೊ ದೇವಾ! (ಗಿಳಿವಿಂ. VII, ಸಮರ್ಪಣ). [ಧನ್ಯ + ಗಿರು (<ಗಿಜು)]

ಧನ್ಯತೆ (ನಾ). ೧. ಐಶ್ವರ್ಯವಂತಿಕೆ; ಸಂಪತ್ಸಮೃದ್ಧಿ. ೨. ಅದೃಷ್ಟ; ಸುದೈವ; ಸೌಭಾಗ್ಯ: ಕ್ಷಿತಿಯೊಳಿತನ್ಯಾಯದಿಂದವಹಿತವನಾಚರಿಸಲ್ಕೆ ಮಿಗೆ ಧನ್ಯತೆಯನೀವುದು ಚೋದ್ಯವಲ್ಲಾ . . . ಭಕ್ತಸ್ಥಿತಿಗೆ ಕೂರ್ತಿಹೆ ಭಕ್ತವತ್ಸಳ ಭಕ್ತಪರತಂತ್ರ (ಬಸಪು. ೩೦-೭೩) : ಒಂದು ಫಲದಿಂದೆ ತನ್ನ ಕುವರಿಗೆ ಮರುತ್ಪುತ್ರನಲ್ಲದೆ ಅನ್ಯರಾ ಪತಿಯಾಗಿ ವರಿಸಬೇಕೆಂಬ ಚೈತನ್ಯವಿಲ್ಲೇನು ಮಾತುವೆನಿನ್ನು ನಿನಗೀವ ಧನ್ಯತೆಗೆ ಬಾಹಿರಂ ತಾನಾದೆನು (ಜೈಮಿಭಾ. ೯-೭). ೩. ಕೃತಾರ್ಥತೆ; ಕೃತಕೃತ್ಯತೆ; ಸಾರ್ಥಕತೆ: ಕಣ್ಣಿರುವ ನಿಮಗೆ ಕಣ್ಣಿ ಧನ್ಯತೆಯೆ ತಿಳಿಯುದಲ್ಲಾ (ಕಂದ್ರಸ. ೪೩-೧೭) ; ನಿನ್ನಂಥ ಒಬ್ಬ ಸಚ್ಚಿಷ್ಯನನ್ನು ಪಡೆಯುವುದರಲ್ಲೇ ಗುರುವಿನ ಧನ್ಯತೆಯಿದೆ (ಹೂಸಕ್ಷ. ೩೮). [ಸಂ. ಧನ್ಯತಾ]

ಧನ್ಯವಾದ (ನಾ). ೧. ಕೃತಜ್ಞತೆಯಂ ನುಡಿ: ಕೃತಜ್ಞತಾ ಪೂರ್ವಕವಾದ ಪ್ರಶಂಸೆ ಹಾಗು ವಂದನೆ: ಸಭೆಯ ಕಡೆಯಲ್ಲಿ ನೆರವಾದವರೆಲ್ಲರಿಗೂ ಕಾರ್ಯದರ್ಶಿಗಳು ಧನ್ಯವಾದವನ್ನು ಹೇಳಿದರು (ಕೂಢಿ). ೨. (ವಿಶೇಷವಾಗಿ ಕ್ರೈಸ್ತರು) ದೇವರಿಗೆ ಸಲ್ಲಿಸುವ ಕೃತಜ್ಞತೆ: ಅವನು ಆಗಾಗ್ಗೆ ಪ್ರಭುಭೋಜನ ಧನ್ಯವಾದಸಮರ್ಪಣ ಆರಾಧನೋತ್ಸವ ಮೊದಲಾದ ಸಮಾರಂಭಗಳಲ್ಲಿ ಕಡ್ಡಾಯವಾಗಿ ಹಾಡರಿ ಹಾಕದೇಕಾಗಿತ್ತು (ಪುನರು. ೩೭೨). ೩. ಮೆಚ್ಚುಗೆ; ಪ್ರಶಂಸೆ; ಹೊಗಳಿಕೆಯ ಮಾತು: ಶೇಷಣ್ಣನವರು ಕೀರ್ತಿಶೇಷರಾದರು. ಬದುಕಿದ್ದಷ್ಟು ದಿನ ನಿಮಿಷ ನಿಮಿಷವನ್ನೂ ಧನ್ಯವಾದಗಳಿಂದ ಕಳೆದರು (ಗಾನಳ. ೬).

[ಧನ್ಯ + ವಾದ]

ಧನ್ಯಾಸಿ (ನಾ). [ಸಂಗೀತ] ಒಂದು ರಾಗದ ಹೆಸರು: ಸಮಸ್ತರಾಗಂಗಳೊಳಗೆ ರಾವಃಕ್ರಿಯೆ ಭೂಪಾಳಿ . . . ಬಿಲಹರಿ ಧನ್ಯಾಸಿ ಕಲ್ಯಾಣಿ . . . ಮಧ್ಯಮಾವತಿಯೆಂಬ ಮೂವತ್ತಾಱು ರಾಗಂಗಳೇ ಮುಖ್ಯವಾಗಿ ಬಳಕೆಯಿಂದಘನಾತನರಲ್ಲಿ ಪ್ರಸಿದ್ಧಗೊಂಡಿರ್ಪುವು (ವಿವೇಕ. ೩೩೪) : ಧನ್ಯಾಸಿ ಎಂದು ಈ ರಾಗದ ಪ್ರಾಚೀನನಾಮ . . . ೮ನೇ ಮೇಳಕರ್ತ ಹನುಮತೋಡಿಯಲ್ಲಿ ಜನ್ಯ. ಉಪಾಂಗರಾಗ. ಕರುಣಾರಸಪ್ರಧಾನರಾಗ. ಸಾಧಾರಣ ಗಾಂಧಾರ, ಶುದ್ಧಧೈವತ, ಕೈಶಿಕನಿಷಾದಗಳು ಜೀವಸ್ವರಗಳು (ಸಂಗೀಕಂ. ೧೫೩) : ಪಲ್ಲವಿ ಶೇಷಯ್ಯರ್ ಅವರು ಧನ್ಯಾಸಿರಾಗದ ಆಲಾಪನೆ ಮತ್ತು ಪಲ್ಲವಿಯನ್ನು ೮ ಗಂಟೆಗಳ ಕಾಲ ಹಾಡಿದರು (ಸಂಗೀತ. ೪೭) : ನಮ್ಮ ಧನ್ಯಾಸಿಯನ್ನೇ ಹೋಲುವ "ಧನಾಶ್ರೀ" ರಾಗದ ರೂಪವರ್ಣನೆಯನ್ನು ಹೀಗೆ ಹೇಳಲಾಗಿದೆ (ಛಾದ ೩೮೩). [ಸಂ.]

ಧನ್ಯೆ (ನಾ). ೧. ಪುಣ್ಯವಂತೆ; ಭಾಗ್ಯವಂತೆ: ಆಸ್ಯಂ ಶರಚ್ಚಂದ್ರನನಿಬೊಸೆ ಕರಂ ಧನ್ಯೆ ತತ್ಕನ್ಯೆಯಕ್ಕುಂ (ಲೋಕೋಪ. ೧೧-೩೦) : ಧನ್ಯ ನಾಂ! ಧನ್ಯೆ ನೀಂ! ಧನ್ಯವಿಂ ರವಿಕುಲಂ! (ಶ್ರೀರಾಮಾ. ೧೪-೪೭೩). ೨. ದಾದಿ. ೩. ಒಂದು ಬಗೆಯ ನೆಲ್ಲಿ; ಬೆಟ್ಟನೆಲ್ಲಿ. ೪. ಕೊತ್ತುಂಬರಿ; ಧನಿಯಂ.

[ಸಂ. ಧನ್ಯಾ]

ಧನ್ವ (ನಾ). ೧. ಬಿಲ್ಲು; ಧನುಸ್ಸು : "ಅಸ್ತ್ರಂ, ಧನುಃ, ಇಷ್ವಾಸಃ, ಕೋದಂಡಃ, ಧನ್ವ . : . ದ್ರುಣಾ – ೪೯ ಬಿಲ್ಲು" (ಹಲಾಯು. ೭೭-೩೧೦) : ನೊದೆ ನಾಣಲ್ಬೆತ್ತ ಬಲ್ಬಜಧನ್ವಂಗಳಂ ವಿಗಿಲಾಗಿ ಸಂಗ್ರಹಂಗೆಯ್ಯಬೇಕು (ಭಾರಶಾಂ. ೩೩೯-೭೮). ೨. ಮರುಭೂಮಿ : "ಮರು ಧನ್ವಾಹ್ವಯಮೂಷರವಿರಿಣಂ" (ವಸು.ಕೋ. ೩೭-೩) : "ನೀರಿಲ್ಲದಿಳೆ ಮರುಧನ್ವಮಕ್ಕುಂ" (ಮುಂಗರಾ. ೩೪-೩). [ಸಂ. ಧನ್ವನ್]

ಧನ್ವಂತರಿ (ನಾ). ೧. ಸೂರ್ಯ ; ನೇಸರು. ೨. ದೇವತೆಗಳ ವೈದ್ಯ: ಮೂಲಿಕೆ ಲಿಂಗವ ಪೂಜಿಸಿ ಮರಣದೂರತ್ವ ದುಃಖಸಮಾಪತ್ವ ಪಡೆದರು ನೋಡಾ ಧನ್ವಂತರಿಗಳು (ಸಿದ್ಧವ. ೪. ೧೮೨-೬೧೦) ; ಧನ್ವಂತರಿ ನಮ್ಮಿ ವಾಶರಥಿ (ಆಹಕ್ಕೆ. ೧೧೪-೧೧) : ನನ್ನ ಧನ್ವಂತರಿ ವ್ಯಯೋಗಕ್ಕೆ ಸಮಾನ

ವಾದ ಔಷಧವು ಎಲ್ಲಿಯೂ ಇಲ್ಲ (ನಿಷ್ಕಾಮ. ೩೨). ☞ ದೇವತೆಗಳು ಮತ್ತು ರಾಕ್ಷಸರು ಸಮುದ್ರಮಥನ ಮಾಡಿದಾಗ ಈತನು ಕ್ಷೀರ ಸಮುದ್ರದಲ್ಲಿ ಅಮೃತಕಲಶದೊಂದಿಗೆ ಉದಿಸಿ, ಆಯುರ್ವೇದ ವನ್ನು ಪ್ರಚಾರಮಾಡಿದನು. [ಸಂ.]

ಧನ್ವಂತ್ರಿ, ಧನವಂತ್ರಿ (ನಾ). = ಧನ್ವಂತರಿ ೨ : "ಔಷಧಾಚಾರ್ಯರೆನೆ ಧನ್ವಂತ್ರಿಯೆನಿಸಿಕ್ಕು" (ಮಂಗರಾ. ೧೧೫-೭). ಧನವಂತ್ರಿ : ತನುಶುದ್ಧರಾದ ರೆಂಬೋದು ಮನಕೆ ಧನವಂತ್ರಿ ವೈದ್ಯನೆ ನಿನಗೆ ತೋರಿತು ಕಾಣೊ (ವೋಕ್ಷದೀ. ೨೪-೨೦). [<ಸಂ. ಧನ್ವಂತರಿ]

ಧನ್ವನ (ನಾ). ಒಂದು ಬಗೆಯ ಗಿಡ : "ಬಚ್ಚಿಲಃ-ಧನ್ವನ, ಚೆಳ್ಳೆ" (ಓಷಧಿ. ೯೭) ; "ಮಹಾಬಲ-ತಮಾಲ, ಧನ್ವನ, ಮೊಸಳೆ" (ಓಷಧಿ. ೧೦೬). [ಸಂ.]

ಧನ್ವಯಾಸ (ನಾ). ಒಂದು ಬಗೆಯ ಗಿಡ ; ತುರುಚೆ : "ಯಾಸಃ, ಯವಾಸಃ, ದುಸ್ಪರ್ಶಃ, ಧನ್ವಯಾಸಃ, ಕುನಾಶಕಃ . . . ದುರಾಲಭಾ-೧೦ ತೀಟಕಸಂಧಿ ಹೆಸರುಗಳು. ನಸುಗುನ್ನೇ ಹೆಸರುಗಳು. ತುರುಚೀಬಳ್ಳಿ" (ಸಿದ್ಧಾಂತಿ. ೧೩೩). [ಸಂ.]

ಧನ್ವಿ (ನಾ). ೧. ಬಿಲ್ಲುಗಾರ ; ಧನುರ್ಧರ : ತುಡೆ ಧನ್ವಿ ಸರಲನೊರ್ವಂ ಗೆಡೆವುಗೆ ಮತ್ತೊರ್ವನವನನದು ತಱಿವವೊಲ್ (ಶಾಂತಿಪು. ೬-೨೯) ; ಒರ್ವನೆ ಧನ್ವಿಯೆನಲ್ ಸಕಲೋರ್ವರೆಯಂ ಕಾದು ತನ್ನ ಬಾಣದ ಮೊನೆಯೊಳ್ ಪರ್ವಲಮಂ ತವಿಸಿದಂ (ಪಂರಾಮಾ. ೨-೬೨) ; ಧನ್ವಿ ಪದಾತಿವ್ರಾತಟಂಕಾರದಿನುರುಕಹಳ್ಳಾಜಾಲಪೂತ್ಕಾರದಿಂ . . . ವಿಷ್ವಪಮಂ ಶಬ್ದಾತ್ಮಕಂ ಮಾಡಿದುದುಭಯವಃಹೀಭೃಚ್ಚಮೂಚಕ್ರವಾಳಂ (ಚಂದ್ರಪು. ೧೦-೬೭) ; ನಗರಾಜನಂತಚಲಾಂಗನಾಗಿ ಧನ್ವಿಯಂತೆ ಲಕ್ಷ್ಯೈಕಾಗ್ರಚಿತ್ತನೆನಿಸಿ (ರಾಜಶೇ. ೧೦-೫೭ ವ) ; ನಿಶ್ಚಿತ ನಾರಾಚಮಯ ತೂಣೀರಮಂ ಧರಿಸಿ . . . ಕಲಿ ಧನ್ವಿ ಹಳುವ ಹೊಕ್ಕನು ಹೊಮ್ಮರೆಯ ಹಿಂದೆ (ಶ್ರೀರಾಮಾ. ೨೩೫-೧೯೦). ೨. ಒಂದು ಬಗೆಯ ಮರ ; ಕೆಂಪು ಮತ್ತಿಮರ : "ಬಿಲ್ವರಂ ಧನ್ವಿಯಕ್ಕು" (ಮಂಗರಾ. ೩೬-೧೮). ೩. ಅರ್ಜುನ. ೪. ವಿಷ್ಣು. ೫. ಶಿವ. [ಸಂ. ಧನ್ವಿನ್]

ಧಬಕ (ನಾ). (ಉಕ) ದಡ್ಡ ; ಹೆಡ್ಡ : ಎತ್ತು ಮೂಟೆ ಹೊತ್ತಂತೆ ಡಿಗ್ರಿಗಳನ್ನು ಹೊರಲು ಬಂದ ಧಬಕರು ಉಮೇಶನ ಪ್ರತಿಭೆಯನ್ನು ಕಂಡು ದಿಙ್ಮೂಢರಾಗಿ ಶರಣು ಬಂದಿದ್ದರು (ದಾಕೂಟ. ೩). [?]

ಧಬಕಿ (ನಾ). (ಉಕ) ದಡ್ಡಿ ; ತಿಳಿಗೇಡಿ ಹೆಂಗಸು ; ಮೂರ್ಖ ಹೆಂಗಸು : ಆಕೇನು ಧಡ್ಡೆ, ಧಬಕಿ ? ತಿಳಿಸಿ ಹೇಳಿದ ಮ್ಯಾಲೆ ಯಾಕ ಶಿದ್ದಿ ಕೊಳ್ಳೊದಿಲ್ಲಾ (ವೈನಿ. ೧೭೭). [ಧಬಕ + – ಇ3]

ಧಬಧಬೆ, ದಬದಬೆ (ನಾ). (ಉಕ) ತಡಸಲು ; ಜಲಪಾತ : ನದಿಯ ಮುಖ, ಧಬಧಬೆ ಮುಂತಾದವುಗಳನ್ನು . . . ತೋರಿಸಿ ಕಲಿಸುವುದರಿಂದ ಆಗುವಷ್ಟು ಲಾಭವು ಬರೇ ಬಾಯಿಯಿಂದ ಬೇಕಾದಷ್ಟು ಹೇಳಿದರೂ ಆಗುವದಿಲ್ಲ (ವಿಜಾಭಾ. ೩) ; ಕನ್ನಡ ಜಿಲ್ಲೆಯೊಳಗಿನ ಪ್ರಸಿದ್ಧ ಧಬಧಬೆಯಾದ ಗೇರಸೊಪ್ಪೆ (ಅಂಬಿಕೆ. ೨೭). ದಬದಬೆ : ಎನ್ನನುಳಿದು ಪೋಗದಿರಿ ನೀವೆಂದು ಪೇಳುವಳು ಕೇಳ್ಯೋರ್ಗರೆವ ದಬದಬೆಯ ಸರದಿಂ ನದೀರವಣ ನಂಬುಗೆಯೊಳು (ಮಹಾಂತೇ. ೨೨-೩೮).

[←ಮರಾ. ಧಬಧಬಾ, ಧಬಧಬೀ]

ಧಮಕಿ (ನಾ). ಬೆದರಿಕೆ ; ಗದರಿಕೆ : ಗಂಡನಾಗುವವನ ಬಗ್ಗೆ ಯೋಚಿಸುತ್ತಿರಲಿ . . . ಯಾವುದರದೂ 'ಧಮಕಿ' ಇಲ್ಲದಿರುವುದು ಸರಿಯಲ್ಲ (ಮೂರುದಾ. ೧೦೩) ; ಜಮೀನ್ದಾರನ ಧಮಕಿಗೆ ಏನು ಉತ್ತರ ಕೊಡುವುದು, ಇದೇ ವಿಚಾರಣೀಯ ವಿಷಯವಾಗಿತ್ತು (ಜಮೀನ್ದಾ. ೬೨) ; ನೀ ದಾದಾಗ ಕೊಟ್ಟ ಧಮಕೀಯಿಂದ ಪುಷ್ಕಳ ಫಾಯದೇ ಆಗೇದ (ದೀಪಹ. II, ೨೮೧).

ಧಮಕಿ ಹಾಕು = ಬೆದರಿಕೆ ಹಾಕು : ಕುಡಿಯೂದಕ್ಕ ರೊಕ್ಕಾ ಕೊಡಿರಂತ ಧಮಕೀ ಹಾಕೂದೇನು . . . ಸಿಕ್ಕವರನ್ನು ಹಿಡಿದು ಬಡಿಯೂದೇನು (ಮಾಮ್ಮಹ. ೩೮) [←ಮರಾ. ಧಮಕೀ, ಧಮಕಾ ; ಹಿಂ. ಧಮಕೀ]

ಧಮಣಿ 'ದಮಣಿ' ನೋ.

ಧಮಣಿಗ (ನಾ). ದಮಣಿಗಾಡಿ ಹೊಡೆಯುವವನು ; ಪೆಟ್ಟಿಗೆ ಗಾಡಿ ಹೊಡೆಯುವವನು : ಇಬ್ಬರೂ ಅದರೊಳಗಿಂದ ಕೆಳಗಿಳಿದರು. ಧಮಣಿಗನು ಅವರ ಗಂಟು ಗದಡಿಗಳನ್ನು ಕಟ್ಟೆಯ ಮೇಲೆ ಇಟ್ಟನು (ರಕ್ತಧ್ವ. ೧೦೧). [ಧಮಣಿ (<ದಮಣಿ) + – ಗ3]

ಧಮನ (ನಾ). ಒಂದು ಬಗೆಯ ಹುಲ್ಲು ; ಲಾಳದ ಕಡ್ಡಿ. [ಸಂ.]

ಧಮನಿ (ನಾ). ೧. ಕೊಳವಿ ; ನಳಿಕೆ ; ನಾಳ : "ಧಮನಿಯೆನೆ ಕೊಟವಿ" (ಮಂಗರಾ. ೬೧-೨೦) ; ಕೆಂಗೆಂಡದ ಧಮನಿಯಂ ಸುಖಮೆಂದು ಮುದ್ದಿಸಲ್ಬೋಗೆ ಸುಖಮನೀವುದೆ (ವಂಶಾಭಾ. ೨-೯-೧೭). ೨. ರಕ್ತನಾಳ; ನರ ; ನಾಡಿ : ಧಮನಿ, ಗಮನಿ, ಲೋಲೆ, ಧೃತಿ, ಸರ್ವಗಾ ಎಂಬೈದು ನಾಮವನುಳ್ಳ ನಾಡಿಯು ತಾನು ಏಕರೂಪವಾಗಿಯೇ ಆಲದ ಬೀಳಿನ ಹಾಗೆ ನೂಲಿನಂತೆ ಐದು ಬೆರಳಿಗೂ ಪ್ರಧಾನವಾದ ಹೆಬ್ಬೆಟ್ಟಿನ ಮೂಲದಲ್ಲಿರುವ ನರದ ಮೇಲೆ ಸಣ್ಣನಾಗಿ ಕಾಣಬರುವುದು (ಸಕಶೃ. ೧೦) ; ವೈದಿಕವಲ್ಲದೆ ಶೂರಶಿಪಾಯಿಯ ನೆತ್ತರೂ ನಮ್ಮ ಧಮನಿಯಲ್ಲಿ ಆಡುತ್ತಿತ್ತು ಎನ್ನುವುದಕ್ಕೆ ಅವು ಸಾಕ್ಷಿಯಾಗಿವೆ (ದೀಪಹ. II, ೯೪). ೩. ಕೊರಳು ; ಕಂಠ : "ಕೊರಲುಮಾಸ್ಯಂ ಗಳಂ ಧಮನಿ ಕಂಧರ ಶಿರೋಧರಮದಾ ಗ್ರೀವಮೆನಿಸಿಕ್ಕು" (ಮಂಗರಾ. ೯೫-೭). [ಸಂ.]

ಧಮ್ಮ1, ದಮ್ಮ1, ದರುಮ, ದರ್ಮ, ಧರುಮ (ನಾ). ೧. ದಾನ ; ಧರ್ಮಕಾರ್ಯ : ರಾಜರಕ್ಷಿತಂ ಧಮ್ಮ[ಂ] (ಕಇಅ. ೦೦-೩-೩೪೭ ; 1062) ; ಇ ಧಮ್ಮಕ್ಕಾರಾನುಂ ಅಡ್ಡಂ ಬಂದವರು ಅಯ್ಯೂರ್ವ್ವ ಸ್ವಾಮಿಗಳ್ಗಿದಿರಾದವರು (ಸೌಇಇ. XX, ೧೫೯-೦೮ ; 1163) ; ಪಾರಣೆಯ ಜಂಗಮಾರಾ[ಧ]ನೆಗೆ ಕೊತ್ತಸಿಗೆ ಇ (ಈ) ಧಮ್ಮಕ್ಕೆ [ಇ]ದು ವಿವರ ಎಂದು ನಾಗರಸ[ರು] ಕೊಟ್ಟ ಸಾಸನ (ಎಇ. XXI, ೧೪-೭೫ ; 1260) ; ಯಿಂ ಧಮ್ಮಕ್ಕೆ ಆವನಾನೊಬ್ಬ ತಪ್ಪಿದಡೂ ಗಂಗೆಯ ತಡಿಯ ಖಪಿಲೆಯ ಕೊಂದ ಪಾಪದಲಿ ಹೋಹರು (ಎಕ. IX, ಚಿಂಗಳೂ. ೮-೩೯ ; 1440). **ದಮ್ಮ1** : ೧. ಈ ದಮ್ಮವನಟಿದವರ್ ಕವಿಲೆಯುಂ ಬಾಣರಾಸಿಯುಂ ವನಟಿದ ಪಾಪಕ್ಕೆ ಪೋವರ್ (ಎಕ. X, ಚಿಂತಾಮ. ೩೦-೦೭ ; 1047) ; ಉಸಿದೆ ನಿಜ ದಮ್ಮಮಂ ಮೇಣ್ ಕಱುಪಿಂದ ಪೆಱರ ದಮ್ಮಮಂ ಮೇಣಳಿವಂತೆಱಿಗೊಳುವಂ ಪುಳುಕೊಣ್ಡದೊಟಱುವತ್ತುಸಹಸ್ರಮುದು ಭವಿಸಿಕು (ಎಕ. VI, ತರೀಕೆ. ೬೨-೨೭ ; 1104?). ೨. ಧರ್ಮ ; ನೀತಿ : "ಧರ್ಮ-ದಮ್ಮ" (ಶಮದ. ೨೬೦ ಪ್ರಯೋ) ; ಮನೆವಾಟ ದಮ್ಮಮ ವೆಲ್ಲಮಂ ನೀನೆ ಬಲ್ಲೆ (ಪಂಪತಂ. ೦೩೦-೬) ; ದಮ್ಮವಿಮ್ಮಡಿಯಾಯ್ತು ದನುಜರ ಹೆಮ್ಮೆ ಕರಿಮೊಳೆಯೋಯ್ತು (ಅಕ್ಕೃಹ. ೬-೩೨). ೩. ಧರ್ಮದ ಅಧಿದೇವತೆ ; ಯಮ : "ಜವನಱಂ ದಮ್ಮನು" (ಶಬ್ದಮಂ. ೦೩) ; "ದಮ್ಮನೆಂದೆನಲಂತಕಂ" (ಕಶರ. ೫೦). ೪. ತತ್ತ್ವೋಪದೇಶ : ವಿಮಲ ವಾಹನ ಜಿನಪತಿಯಂ ಪ್ರದಕ್ಷಿಣಂಗೆಯ್ದು ಪೂಜಿಸಿ ಪೊಡೆವಟ್ಟು ದಮ್ಮ [ಪಾಠಾಂ. ಧರ್ಮ]ಮಂ ಕೇಳ್ದು (ಅರ್ಧನೇ. ೨-೪೨ ಪ). **ದರುಮ** : ೨. ದರುಮದ ಚರಕಂ ನನ್ನಿಯ ಪೊರ್ಕುಳುಮಂರಿವು ಸಮಾಧಿ ಧೃತಿಯುಮಿರೆ ನೇಮಿ ಅರಮನೆ ನಯವಿನಯಮುಮಂ ಹಿತಕಾ ಪರಿಷದದೊಳವಂ ನಡೆಯಿಸಿವಂ (ಸೌನಂದ. ೩-೦೦). **ದರ್ಮ** : ೧. ಮಲ್ಲಿಕಾರ್ಜುನರಾಯ ಮಹಾರಾಯರಿಗೆ ದರ್ಮ್ಮವಾಗಿ ಬಿಟು ದರ್ಮ್ಮಶಾಸನಗಳನೂ ಬರಸಿ ಕೊಡಹೇಳಿ (ಎಕ. X, ಪೌರಿಂಗ್. ೦೮-೪; 1465). ೨. ಪುಣ್ಯವುಂಟಾಗುವಿಕೆ; ಪುಣ್ಯ ಸಂಪಾದನೆ : ಸಾಳುವ ನರಸಿಂಗರಾಜಪೊಡಯರಿಗೆ ದರ್ಮ್ಮವಾಗ

ಬೇಕೆಂದು ಯಾಸ್ವರಿನಾಯಕರು ಎಳ × × × (ಎಕ. X, ಬೌರಿಂಗ್. ೧೯-೬ ; 1472). ಧರುಮ : ೨. ಧರುಮಕೆನ್ನ ಮಾರಿ, ತಾನು ಕರುಮಬಾಹ್ಯ ಆಗಿಹನು (ನಡೆದಾ. I, ೪೨೧). ೬. ಮತ : ನನ್ನ ಕಾಣದ ಮುನ್ನ ಕಾಣೆ ನಾ ನಿನ್ನನೆಂದು ಸಾರುವವೈಸೆ ಧರುಮಂಗಳೆಲ್ಲ (ಗಿಳಿವಿಂ. ೫೬-೩).

[<ಪ್ರಾ. ಧಮ್ಮ./ಸಂ. ಧರ್ಮ]

ಧಮ್ಮ₂ 'ದಮ್ಮ₃' ನೋ.

ಧಮ್ಮಕಾಳು (ನಾ). ದಪ್ಪವಾದ ಕಾಳು,-ಬೀಜ; ದಡಿಗಾಳು : ಗಿಡ್ಡಕಾಳು ಧಮ್ಮಕಾಳು ಮೊದಲಾದ ಕನಿಷ್ಠಪ್ರತಿಯ ನೆಲ್ಲುಬೀಜವನ್ನು ಬಿತ್ತಿ ಅಕ್ಕಿಯನ್ನು ಕೆಡಿಸಿಕೊಳ್ಳುತ್ತಾರೆ (ಕೃಷಿಪ್ರ. ೬೪).

[ಧಮ್ಮ₂ (<ದಮ್ಮ₃) + ಕಾಳು₂ (<ಕಾಳ್₂)]

ಧಮ್ಮಗಳ್ (ನಾ). ಬಿಟ್ಟಿಯಾಗಿ ಕೊಡುವ ಹೆಂಡ : ಧಮ್ಮಗಳ್ಳೆಱೆವುತುಂ (ಬಾಧಪು. ೦೦-೧೬೨). [ಧಮ್ಮ₁ + ಕಳ್₃]

ಧಮ್ಮಗುದ್ದಿ (ನಾ). ದಪ್ಪವಾದ ಮರದ ತುಂಡು : ಹಮ್ಮುಯೆಂಬೊದೆ ಎಮ್ಮೆ ಗಮ್ಮುಯೆಂಬೋದೆ ಹಗ್ಗ ಹೆಮ್ಮೆಯೆಂಬೊದೆ ಅದಕ್ಕೆ ಧಮ್ಮಗುದ್ದಿ (ಪುರಂದ. ೨-೫೫-೧). [ಧಮ್ಮ₂ (<ದಮ್ಮ₃) + ಗುದ್ದಿ (<ಗುದ್ದಿ₃)]

ಧಮ್ಮಪದ (ನಾ). ಬುದ್ಧನ ವಚನಗಳ ಸಂಕಲನ : ಧಮ್ಮಪದ ಥೇರಗಾಥಾ ಥೇರೀಗಾಥೆಗಳೂ, ಸುತ್ತನಿಪಾತದ 'ಸುತ್ತ' ವೆಂಬ ಹೆಸರಿನ ಶುದ್ಧಗಾಹೆಗಳೂ 'ಗಾಥಾ' (ಬುದ್ಧಪ. ೫ ಪ್ರವೇಶ). [ಧಮ್ಮ₁ + ಪದ₂]

ಧಮ್ಮಮಗ್ಗ (ನಾ). [ಬೌದ್ಧ] ಧರ್ಮಮಾರ್ಗ; ಬುದ್ಧನು ಪ್ರತಿಪಾದಿಸಿದ ಆರ್ಯ ಅಷ್ಟಾಂಗಿಕ ಮಾರ್ಗ; Pಸಮ್ಯಕ್‌ದೃಷ್ಟಿ, ಸಮ್ಯಕ್‌ಸಂಕಲ್ಪ, ಸಮ್ಯಕ್‌ವಾಕ್, ಸಮ್ಯಕ್‌ಕರ್ಮಾಂತ, ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್‌ಸ್ಮೃತಿ, ಸಮ್ಯಕ್‌ಸಮಾಧಿ-ಇವೇ ಆ ಮಾರ್ಗದ ಎಂಟು ಅಂಗಗಳು : ಮಾರನಂ ಮುರಿದು ಸಂಬುದ್ಧನೆಮ ಗಗ್ಗಂ ನಿಬ್ಬಾಣವೊಂದೆ, ತಣ್ಣೆಯರಣ್ಯಮಂ ತರಿದು, ತೋರ್ದನರಿ ಯಟ್ಟಂಗಿಕದ ಧಮ್ಮಮಗ್ಗಂ (ಗಿಳಿವಿಂ. ೪೫-೮). 'ಸಮ್ಯಕ್‌ದೃಷ್ಟಿ' ಪರಾ.

[< ಸಂ. ಧರ್ಮಮಾರ್ಗ]

ಧಮ್ಮಸ 'ದಮ್ಮಸು' ನೋ.

ಧಮ್ಮಸವಿಕ್ಕು (ಕ್ರಿ). ನೆಲವನ್ನು ಕುಟ್ಟಿ ಸಮಮಾಡು ; ಧಮ್ಮಸುಮಾಡು: ಹೊತ್ತ ಅರೆಬಂಡೆಯಂ ಹೆಗಲಿಂದೆ ಹಾಯ್ಕಿ . . . ಬದ್ದನಿಯ ಚಪ್ಪಳೆ ಗಳುಣ್ಮುವೋಲಪ್ಪಳಿಸಿ ತೋಳ್ಗಳಂ ಜಂಘೆ ಧಮ್ಮಸವಿಕ್ಕೆ ಕುಪ್ಪಳಿಸಿ . . . ವಾನರರಸಂಖ್ಯಪಂಕ್ತಿಗಳೆಸೆದುವಲ್ಲಲ್ಲಿ (ಶ್ರೀರಾಮಾ. ೫೯೨-೨೨೮).

[ಧಮ್ಮಸ (<ದಮ್ಮಸು) + ಇಕ್ಕು]

ಧಮ್ಮಿಲ್ಲ (ನಾ). ಹೆಣೆದು ಮುಡಿಕಟ್ಟಿ ಅಲಂಕರಿಸಿದ ಕೂದಲು, - ಕೇಶ ರಚನೆ; ತುರುಬು ; ಮುಡಿ; ಕಬರಿ: "ಕಬರಿ ಧಮ್ಮಿಲ್ಲ ಕಚೋದ್ಬಂಧನಂ" (ವಸ್ತುಕೋ. ೭೦-೨೦) ; "ವೇಣೇ, ಧಮ್ಮಿಲ್ಲಃ, ಕುಂತಳಃ, ಕಬರೀ - ಈ ೪ ಮುಡಿ" (ಹಲಾಯು. ೮೭-೩೭೬) ; "ಕಬರಿ ಕುಂತಳಂ ವೇಣಿ ಧಮ್ಮಿಲ್ಲ ಮೆನಲಾ ಕಟ್ಟುಮುಡಿ" (ಮಂಗರಾ. ೯೪-೬) ; ಮೊಗಮಂ ತಾವರೆ ಕಣ್ಣನುತ್ಪಳದಳಂ ಧಮ್ಮಿಲ್ಲಮಂ ಸೋಗೆ ಸೆಳ್ಳುಗುರಂ ಕೇದಗೆ . . . ಆರಾಧಿಸಿ ಪೋಲ್ತುವೆನ್ನದೆ ಸರೋಜಾತಾದಿ ನಿಸ್ಸಾರವಸ್ತುಗಳೊಳ್ ಪೋಲಿಸುವಂತುಟೇಮ್ಮರುಳನೇ ರೂಪಂ ವಿಚಿತ್ರಾಂಗಿಯಾ (ಆದಿಪು. ೬-೮೫); ದುಶ್ಶಾಸನಂ ತನಗಂ ಮೆಲ್ಲನೆ ಮೃತ್ಯು ಸಾರೆ ತೆಗೆದಂ ಧಮ್ಮಿಲ್ಲಮಂ ಕೃಷ್ಣೆಯಾ (ಪಂಪಭಾ. ೭-೫) ; ಬಿಟ್ಟಿರ್ದ ಧಮ್ಮಿಲ್ಲಮುಂ ಪೊಸತೊಂದೊಪ್ಪ ಮನೀಯೆ . . . ಬಂದತ್ತು ಗೋಪೀಜನಂ (ಜಗವಿ. ೩-೮೯) ; ಉರಮಿಂಬಿಲ್ಲ ಪಯೋಧರದ್ವಯದ ಕೊರ್ಬಿಂಗೆ . . . ಬೆನ್ನಿಂಬಿಲ್ಲ ಧಮ್ಮಿಲ್ಲಬಂಧುರ ಸೀಮಾವಳಯಕ್ಕೆ (ಗಿರಿಕ. ೪-೫೮) ; ಧಮ್ಮಿಲ್ಲದುರುಭರಕೆ ನಟಣೆಯಲಿ ಬಳುಕಿದುದು ಕೊರಳು (ತೊರರಾ. ೩-೪-೬) ; ನಸುವಣ್ಣದುಟಿಯರ್ಗೆ ಕಿಸು ವಣ್ಣಗಣ್ಣರ್ಗೆ ಸಸಿನಾದ ಧಮ್ಮಿಲ್ಲದವರ್ಗೆ ಒಸೆದುಡತೊಡಲು ಕೊಟ್ಟು (ಭೈರಸೂ. ೨೮೩) ; ಬಲುಮುಡಿಗಳುಂಟು ಭಾವೆಯರ ಧಮ್ಮಿಲ್ಲದೊಳ್ ಹೊಳಹು ಮುರುಹುಂಟು ನಾಟ್ಯದ ವನಿತೆಯರೊಳು (ರುಕ್ಮಾಂಗ. ೪-೧೯); ಧಮ್ಮಿಲ್ಲವನು ರಚಿಸು, ಮೆಯ್ಯ ಸಿಂಗರಿಸು (ಯಶೋಧ. ೪೭-೧೫) ; ಸಿಲ್ಕಿದು ವೆನಲ್ಕೆ ರಜನಿಯ ಕುರುಳ ಧಮ್ಮಿಲ್ಲಕ್ಕೆ ಪೂವರಿಲ್ಗಳಂತೆವೋಲಲ್ಲಲ್ಲಿ ತೋರ್ದುವಯ್ ಮಿನುಗುವ ಮಿಸುನಿ ತಾರೆ (ಶ್ರೀರಾಮಾ. ೨೬೦-೮೭೯).

[ಸಂ.]

ಧಮ್ಮಿಲ್ಲದ್ಯುತಿ (ನಾ). ಮುಂಡಿಯ ಹೊಳಪು ; ತುರುಬಿನ ಕಾಂತಿ : ಪಿರಿದುಂ ಮಾಡಿತ್ತು . . . ಸುರಸ್ತ್ರೀಯರಪಾಂಗಾಕ್ಷಿಪ್ರಭಾಸಂಚಯದಿನುದಿತ ದೇಹಾಂಶುಸಂದೋಹದಿಂ ಮೇದುರಧಮ್ಮಿಲ್ಲದ್ಯುತಿಸ್ತೋಮ ದಿನಧರಮಯೂ ಖಾಳಿಯಿಂದೆತ್ತಲುಂ ಪಾಂಡುರಿತಂ ಪೈಶಂಗಿತಂ ಕರ್ಬುರಿತ ಮರುಣಿತಂ ವ್ಯೋಮರಂಗಂ ಬೆಡಂಗಂ (ಚಂದ್ರಪು. ೧೨-೭೭).

[ಧಮ್ಮಿಲ್ಲ + ದ್ಯುತಿ]

ಧಮ್ಮೇತ (ನಾ). ಬಾವಿಯಿಂದ ನೀರನ್ನು ಧರ್ಮಾರ್ಥವಾಗಿ ಎತ್ತುವ ಏತ : ಬಾಡನ ಹಟ್ಟಿಯಲು ಧಮ್ಮೇತದ ಸ್ಥಳದಿಂ ತೆಂಕಲು ತಕ್ಕಿಲವು (ಎಇ. XIV, ೨೬೨-೪೦ ; 1173) ; ಹರಿವ ಕಿಱುವಳ್ಳದಿಂ ಪಡುವಲು ಧಂಮೇತದ ಬಾವಿಯಿಂ ತೆಂಕಲು ತೋಟ ಮತ್ತ × × × (ಸೌಇಇ. XV, ೦೨೮-೩೪ ; 1174). 'ಧರ್ಮೇತ' ಪರಾ. [ಧಮ್ಮ₁ + ಏತ₁]

ಧರ (ನಾ). ೧. ಬೆಟ್ಟ ; ಪರ್ವತ : "ಅಚಳಃ, ಶಿಳೋಚ್ಚಯಃ . . . ಧರಃ, ಅದ್ರಿಃ, ಕುಧ್ರಃ-ಈ ೧೪ ಬೆಟ್ಟು" (ಹಲಾಯು. ೨೭-೦೧). ೨. ವಿಷ. 'ಧರಭೋಗಿ' ಪರಾ. ೩. ಖಡ್ಗ. [ಸಂ.]

ಧರಣ₁ (ಗು). ೧. ಧರಿಸಿರುವ ; ಹೊತ್ತಿರುವ : ಆಧಾರವಾಗಿರುವ. (ನಾ). ೨. ಧರಿಸುವಿಕೆ : "ಧರಣಂ, ಧಾರಣಂ . . . ಧಾರ್ಯಂ ಈ ೬ ತಾಳ್ಕೆ" (ಕಾಶಕೃ. ೦೨೮). ೩. ಆಧಾರ. ೪. ಅಣೆಕಟ್ಟು ; ಕಟ್ಟೆ. ೫. ಸೂರ್ಯ. ೬. ಚಿನ್ನದ ಅಥವಾ ಬೆಳ್ಳಿಯಿಂದ ಮಾಡಿದ ಒಂದು ಬಗೆಯ ನಾಣ್ಯ ; ಗದ್ಯಾಣದ ಅರ್ಧಭಾಗ : "ನಾಲ್ಕು ಹಾಗಂ ಪಣ ಮಯ್ದು ಪಣಂ ಧರಣಂ ಧರಣದ್ವಯಂ ಗದ್ಯಾಣಂ" (ಪಸಾರ. ೯೪) ; ಪೂಸವನಕ್ಕಂ ಚೌಲಕ್ಕಂ ಧರಣಂ (ಇಆ. VIII, ೨೮೭-೫೯ ; ೨ನೆಯ ಶತ) ; ಮತ್ತೊನ್ದು ಈಸ್ವರಲಯಕ್ಕೆ ಕೊಟ್ಟ ಧರಣಂ ಎವ(ಂ)ಙ್ಗಲ್ಲಳೊನ್ದು (ಸೌಇಇ. XI-1, ೩೫-೯ ; 933) ; ಕಿಱಿಯ ದೀಪಾವಳಿಯಲು ತಿಱುವ ಅರುವಣಂ ಗದ್ಯಾಣ ೧ ಧರಣ ೧ (ಸೌಇಇ. XX, ೦೦೯-೩೦ ; 1148) ; ಪ್ರತಾಪಕೆ ಪಣವು ಬಾಣಂ ಪ್ರತಾಪಕಂ ಧರಣವೆರಡು ಚೌಲಂ ನಾಲ್ಕುಂ (ವ್ಯವಹಾ. ಅನುಬಂಧ. I, ೫) ; ಬೆಳೂರು ಗದ್ದೆಯಲ್ಲಿ ಕಂದಾಯ ಅಯಿದು ಹೊನ್ನು ಧರಣದ ಭೂಮಿಗೆಯಲ್ಲ ಚತುಸ್ಸೀಮೆ ವಿವರ (ಎಕ. XIV, ತಿರುಮ. ೦೬೪-೦೯ ; 1653) ; ರಾಮಟೆಂಕೀನಾಣ್ಯವು ಕಟಾಕಟಿ ನಾಲ್ಕು ತೊಲಿ ಇರುತ್ತಿತ್ತು . . . ಕಾಲುಪಾಲಿನ ನಾಣ್ಯಕ್ಕೆ ಧರಣವೆನ್ನುವರು. ಅದು ೧ ತೊಲಿ ತೂಕವಿರುತ್ತಿತ್ತು (ಕಭಾಗೆ. ೨೮೦) ; ಪಾವಲೆ ಇಲ್ಲದಿದ್ದರೆ ಧರಣ ಕೊಡಬಾರದೆ ? (ಗಾದೆ). ೭. ಒಂದು ತೂಕದ ಪ್ರಮಾಣ; ಕಾಲು ತೊಲೆ; ಹತ್ತು ಪಲದ ತೂಕ : ಭಂಗಿಸೊಪ್ಪಿನ ರಸದಿಂ ಮರ್ದಿಸಿ ಮೂರು ಧರಣ ತೂಕವಂ ಜೇನುತುಪ್ಪವೆರಸಿ ಕೊಡಲು ಸಕಲವಾದ ಅತಿಸಾರವೂ ಗುಣವಹುದು (ಸಕವೈ. ೩೨೪) ; ಗ ೧ ತೂಕ ಶರ್ಕರೆ, ಧರಣ ತೂಕ ಏಲಕ್ಕಿಯನು ಹಾಕಿ . . . ಉಣ್ಣಲು ಬಹುಮೂತ್ರಕೃಚ್ಛ್ರ, ಮೇಹ ಮುಂತಾಗಿ ಮಾಣ್ಗುಂ (ಸಕವೈ. ೩೮೫) ; ವಟಕಗಳಿಗೆ ತಕ್ಕಂತೆ ಗುಡಪಾಕ ಮಾಡಿ ಕಲಸಿ ಜೊತೆಗೆ ಒಂದೊಂದು ಧರಣ (ಕಾಲು ತೊಲ) ಯವಕ್ಷಾರ, ಸದ್ಯಕ್ಷಾರ . . . ಸೇವಿಸಿದರೆ ಶ್ವಾಸಕಾಸ . . . ಅತಿಸಾರ ಗಳೆಲ್ಲಾ ನಾಶವಾಗುವುವು (ಸಕವೈ. ಪರಿ. ೪೪೭). [ಸಂ.]

ಧರಣ₂ 'ಧರಣ್₂' ನೋ.

ಧರಣಿ₁ (ನಾ). ೧. ಇಳೆ; ಭೂಮಿ; ಪೃಥ್ವಿ; ನೆಲ: "ಸ್ಥಿರೆ ಧರಣಿ ಧಾತ್ರಿ ಮೇದಿನಿ ಧರಿತ್ರಿ ಧರೆಯವನಿ ಪೃಥ್ವಿ ರಸೆ ವಸುಧೆ ವಸುಂಧರೆ ಕು ಮಹಿ ಜಗತಿ ವಿಶ್ವಂಭರೆ ಗೋ ಕ್ಷ್ಮಾ ಕ್ಷೋಣಿ ಭೂಮಿ ಭೂ ಗೋತ್ರೆ ನೆಲಂ" (ವಸ್ತುಕೋ. ೨೬-೧); ಮೆಚ್ಚೆ ನಾನೀ ಧರಣಿಯುಳಿರವಾನೆನ್ದು ಸನ್ಯಾಸನಂ ಗೆಯ್ದು (ಎಕ.II, ೮೮-೩; ಸು. 700); ಧರಣಿಯಂ ವಿಕ್ರಾಂತದಿಂದಂ ರಸಾತಲದಿಂ ದೆತ್ತಿದನಾವಂ (ಪಂಪಭಾ. ೬-೪೦); ಧರಣಿಗೆ ಧೈರ್ಯಮಂಬುಧಿಗೆ ಗುಣ್ಬು ಸಹಸ್ರಕರಂಗೆ ತೇಜಂ . . . ತನ್ನದೊಂದಿರವಿನೊಳಾದುವು (ಕಾದಂಪೂ. ೨೪೩); ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ ಹರದ ಕುಳ್ಳಿರ್ದ (ಬಸವ. ೧೧೩); ಧರಣಿಯನೊಕ್ಕಲಿಕ್ಕಿ ದಿಗಧೀಶರನೊತ್ತಿ ಮೆಟ್ಟಿ (ಗಿರಿಕ. ೬-೫). ೨. ಭೂಮಿದೇವಿ; ಭೂಮಿತಾಯಿ: ಧರಣಿ ನುಂಗುವಳಿಬ್ಬರನು ಸಂಗರವ ಜಯಿಸದ ನೃಪನ ದೇಶಾಂತರವ ಚರಿಸದ ಪಂಡಿತನನು (ಕುಮ್ಮಾಉ. ೩-೨೨). 'ಧರಣಿಜಾತೆ' ಪರಾ. ೩. ರಾಜ್ಯ: ಧರಣಿಯಂ ಪಚ್ಚಾಳ್ವಂ (ಪಂಪಭಾ. ೧೩-೮೫). ೪. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ: "ಧರಣಿ ಶಶಿಯೆನಲೊಂದು" (ಮಂಗರಾ. ೧೦೩-೮). ೫. [ಛಂದ] ಅಕ್ಷರಗಣಗಳಲ್ಲಿ ಒಂದು; ಮಗಣ (– – –): ಗುರುಲಘುಮಿಶ್ರಂ ಮೂಱಕ್ಕರದಿಂ ಗಣಮಿಡು ಲತಾಂಗಿ ಬರೆದೆಂಟುಗಣಂ ಧರಣಿ ಜಲಾಗ್ನಿ ಮಾರುದ್ವ್ಯೋಮ ರವಿ ಶಶಾಂಕೇಂದ್ರನಿಲಯಮಿವು ಗಣನಾಮಂ (ಛಂದೋಂಬು. ೧-೩೭). ೬. ಒಂದು ದೇವತೆಯ ಹೆಸರು; ಪ್ಲೇಗಿನಮ್ಮ: ಹೊತ್ತಿನಂತೆ ಮತ್ಕಾರ ನೆನೆದೇವು ಹುತ್ತದಲ್ಲಿರುವೋ ಧರಣೀಯ ಧರಣಿ ಕಾಳಿಂಗನ ಹೊತ್ತಿನಂತೆ ಎದ್ದು ನೆನೆದೇವು (ನನ್ನೂರು. ೩೦). ೭. (?): ಆಶಿಯ ಆರಿಕೆಯ ಕರವಿಡಿದು ಭವವಾಸನೆ ಲೇಸು ತನಗೆಂದು ಅನುದಿನವು ಅದಕ್ಕೆ ಧರಣಿಯೆಂಬರು (ಉದ್ಯೋಪ್ರ. ೭-೩೭-೨೨).

ಧರಣಿಯಮರ=ಧರಣಿಸುರ: ಧರಣಿಯಮರರ ಸೇವೆಯನು ವಿಸ್ತರಿಸಿ (ಕುಮ್ಮಾಉ. ೫-೬೭); ಧರಣಿಯಮರರ ಶಾಪವದು ಪರಿಹರಿಸುವುದೆ (ನಿಘಾಗ. ೦-೧೦-೫೯). [ಸಂ.]

ಧರಣ್₂, ಧರಣ₂, ಧರಣೆ (ನಾ). ಕೊಟ್ಟ ಮಾತಿನ ಅಥವಾ ಕೋರಿಕೆಯ ಪೂರೈಕೆಗಾಗಿ ಒತ್ತಾಯಪಡಿಸುವ ಉದ್ದೇಶದಿಂದ ಅದಕ್ಕೆ ಸಂಬಂಧಿಸಿದವರ ಸಮಕ್ಷದಲ್ಲಿ, ಉದ್ದೇಶ ಫಲಿಸುವವರೆಗೂ ಕದಲದೆ ಪಟ್ಟು ಹಿಡಿದು ಕುಳಿತುಕೊಳ್ಳುವಿಕೆ: ಅಂದೇ ಸಂಪನ್ನೂ ಅರ್ಧದಿನ ಕೆಲಸಕ್ಕೆ ಹೋಗದೇ ಕಚೇರಿಯ ಮುಂದೆ ಧರಣೀ ಕೂತು ಆಚರಿಸಲು ಯೋಚಿಸಿದರು (ಅಪನಾ. ೧೧೧). **ಧರಣ₂:** ಅವರು ಧರಣ ಕೂತು ಸಾಧಿಸಿಕೊಂಡರು (ರೂಢಿ). **ಧರಣೆ:** ಫವುಜಿಗೆ ಕರಾರು ಬಾಕಿ ಮಾಡಬೇಕಾದ್ದಕ್ಕೆ ದಂಗೆ ಧರಣೆ ಆಗಿರುವುದನ್ನು ತಿಳಿದು (ಹೈದರ. ೭೦).

ಧರಣಿ ಮುಷ್ಕರ = ಕೋರಿಕೆಯ ಪೂರೈಕೆಗಾಗಿ ಪಟ್ಟು ಹಿಡಿಯುವುದು: ತಮ್ಮ ಬೇಡಿಕೆಗಳ ಪೂರೈಕೆಗಾಗಿ ಒತ್ತಾಯಿಸಿ ಕಚೇರಿಯವರೆಲ್ಲರೂ ಇಂದು ಧರಣಿ ಮುಷ್ಕರವನ್ನು ಪ್ರಾರಂಭಿಸಿದರು (ರೂಢಿ). **ಧರಣಿ ಹಿಡಿ, ಧರಣ ಹಿಡಿ** = ಧರಣಿಮುಷ್ಕರವನ್ನು ಮಾಡು: ತಮ್ಮ ಅಹವಾಲಿಗೆ ಸರಿಯಾದ ಪ್ರತಿಕ್ರಿಯೆ ಸಿಗದಿದ್ದಾಗ ಶ್ರಮಜೀವಿಗಳು ಧರಣಿ ಹಿಡಿಯದೆ ಬೇರೆ ಮಾರ್ಗವಿಲ್ಲ (ರೂಢಿ); ಆ ದುರಾಗ್ರಹಿ ಇನ್ನೂ ಮನೆಯಲ್ಲಿ ಕುಳಿತು ಧರಣ ಹಿಡಿಯುತ್ತಿದ್ದರೆ, ಅದನ್ನು ನೋಡುವುದೆಂತು ಎಂಬ ಭೀತಿ (ಕರುಳ. ೭೦). **ಧರಣ ಹೂಡು** = ಧರಣಿಹಿಡಿ: ಅವರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಇಂದಿನಿಂದ ಧರಣಿಹೂಡಿದ್ದಾರೆ (ರೂಢಿ). **ಧರಣೀಸಂಪು** = ಧರಣಿಮುಷ್ಕರ: ಅವನ ಪ್ರೇಯಸಿ . . . ಒಮ್ಮೊಮ್ಮೆ ಧರಣೀಸಂಪು ಹೂಡಿ ನೆಲವನ್ನಟ್ಟಿ ಮಲಗಿಬಿಡುತ್ತಾಳೆ (ಗಾಳಿಪ. ೧೦).

[← ಹಿಂ. ಧರನಾ; ಮರಾ. ಧರಣೇ]

ಧರಣಿಜ (ನಾ). ೧. ಭೂಮಿಯಲ್ಲಿ ಹುಟ್ಟಿದುದು; ಗಿಡ; ಮರ: "ತರು ವನಸ್ಪತಿ ಸಾಲಮಂಘ್ರಿಪಂ ದ್ರು ದ್ರುಮಂ ಧರಣಿಜಂ . . . ಕುಜಮೆನಲು ವೃಕ್ಷಕ್ಕೆ ನಾಮವಕ್ಕುಂ" (ಮಂಗರಾ. ೩೧-೦). ೨. ಭೂಮಿದೇವಿಯ ಮಗ; ಅಂಗಾರಕ; ಮಂಗಳಗ್ರಹ: ಧರಣಿಜಗೃಹಮೆನಿ ಪೊಟನೆಯ ರಾಶಿಯೊಳ್ ನಿಂದ ಗುರುವನೀಕ್ಷಿಸೆ ಶನಿ . . . ಮಡಿಗುಮವಂ (ಜಾತಕ. ೬-೨೦). ೩. ನರಕಾಸುರ. [ಸಂ.]

ಧರಣಿಜಾತ (ನಾ).=ಧರಣಿಜ ೧: ಪರಿಪರಿಯ ಘನಸಾರಚಂದನಧರಣಿಜಾತಾಮೋದಶೀತಳ ಪರಮಸಂಗತಿಗಂಗಮಂ ತಾನೊಗ್ಗುತಂ ಶಿವನು (ಬಸಪು. ೨೬-೪೪). [ಸಂ.]

ಧರಣಿಜಾತೆ (ನಾ). ಭೂಮಿಯ ಮಗಳು; ಭೂಜಾತೆ; ಸೀತೆ: ನಡೆಯುತೆಲಿವನೆಯಂಗಳಕ್ಕಲ್ಲಿ ನಿಂದಳು ಧರಣಿಜಾತೆ (ಶ್ರೀರಾಮಾ. ೨೩೯-೨೯೮).

[ಸಂ. ಧರಣಿಜಾತಾ]

ಧರಣಿಜೆ (ನಾ). = ಧರಣಿಜಾತೆ: ಧರಣಿಜೆಯನುಯ್ದ ಲಂಕಾಪುರೇಶನಂತಪ್ಪ ಗಂಡರುಂ ಸತ್ತರ್ ನಿತ್ತರಿಸದೆ (ಧರ್ಮಾಮೃ. ೪-೨೩೯); ಹರಿಗೆ ಧರಣಿಜೆ ಲಕ್ಷ್ಮಣಂಗಾ ತರುಣಿಯೂರ್ಮಿಳೆ ಕೀರ್ತಿಯೆಂಬಳ ಭರತದೇವಗೆ ಇತ್ತು ಶತ್ರುಹದನನಿಗಿತ್ತು ಮಾಲಿನಿಯ (ಕೌಶಿಕಾ. ೨-೫೯). [ಸಂ. ಧರಣಿಜಾ]

ಧರಣಿಧರ (ನಾ). ೧. ಭೂಮಿಯನ್ನು ಹೊತ್ತಿರುವುದು. ೨. ವಿಷ್ಣು: "ವಿಷ್ಣುಃ, ಕೃಷ್ಣಃ . . . ಗೋವಿಂದಃ, ಧರಣಿಧರಃ, ಸುಪರ್ಣಕೇತುಃ . . . ಗದಾಧರಃ – ಈ ೪೫ ನಾರಾಯಣನ ಪೆಸರ್" (ಹಲಾಯು. ೫-೨೩). ೩. ಪರ್ವತ. ೪. (ಅಷ್ಟ)ದಿಗ್ಗಜ. ೫. ಆಮೆ; ಕೂರ್ಮ. ೬. ಆದಿಶೇಷ. ೭. ರಾಜ: ಧರಣಿಧರ ನಮ್ಮ ದುರ್ನೀತಿಯಂ ನೋಡದಿರು (ಕ್ಷೇಮಿಭಾ. ೨೪-೩೮). [ಸಂ.]

ಧರಣಿಪ (ನಾ). ಭೂಮಿಯನ್ನು ಪಾಲಿಸುವವನು; ಅರಸ; ರಾಜ; ಭೂಪಾಲ: ಧರಣಿಪನಂ ಬೀಟ್ಕೊಂಡಾತುರದಿಂ . . . ಶಿವಭದ್ರಂ ಬರಲ್ (ಉದ್ಭಟ. ೭-೫); ಧರಣಿಪಂ ಮೊದಲಾಗಿ ತಾವೊಂದೊಂದು ದಿನದಲ್ಲಿ ನರರು ಸರ್ಬರು ಬಂದು ನೋಡಲು (ಬಸಪು. ೩೪-೩೦); ಧರಣಿಪನ ಸಂತೈಸಿದನು ಮುನಿವರನು (ಕುಮ್ಮಾಉ. ೪-೦೨೨). [ಸಂ.]

ಧರಣಿಪತಿ (ನಾ). = ಧರಣಿಪ: ಧರಣಿಪತಿ ಕೀರ್ತಿದೇವಂ ನಿರುತಂ ಪೊಂಕಮ್ಮಿತ್ತಾದುದೆನಿಸಿದಂ (ಸಮಪ. ೧-೪೬); ಧರಣಿಪತಿಯಪ್ಪ ಚಕ್ರೇಶ್ವರನೊಳ್ ಧುರಧರೆಗೆ ವಂದು (ನೇಮಿಪು. ೧೧-೯೭); ಧರಣಿಪತಿ ಧರ್ಮಜನ ಮುಖಸಂದರುಶನವ ಮಾಡಿದನು (ಕುಮ್ಮಾಅ. ೪-೪೦).

[ಧರಣಿ₁ + ಪತಿ₂]

ಧರಣಿಪಾಗ್ರಣಿ (ನಾ). ರಾಜರಲ್ಲಿ ಶ್ರೇಷ್ಠನಾದವನು: ಕೇಳ್ಗಣಮಣಿಯೆ ಧರಣಿಪಾಗ್ರಣಿಯೆ (ಕ್ಷೇಮಿಭಾ. ೧೨-೫). [ಧರಣಿಪ + ಅಗ್ರಣಿ]

ಧರಣಿಪಾಧ್ವರ (ನಾ). ರಾಜಸೂಯಯಾಗ: ನಿಮ್ಮ ಕೃಪೆಯಲಿ ಧರಣಿಪಾಧ್ವರ ಸಿದ್ಧಿಯಾಯ್ತು ನಿರಂತರಾಯದಲಿ (ಕುಮ್ಮಾಸ. ೧೧-೭).

[ಧರಣಿಪ + ಅಧ್ವರ]

ಧರಣಿಪಾಲ, ಧರಣಿಪಾಳ (ನಾ). ಭೂಮಿಯನ್ನು ಪಾಲಿಸುವವನು ರಾಜ: ಧರಣಿಪಾಲಾಜ್ಞಾಧಿಮುದ್ರಾಸಮಂಕಿತಮಾಗಿರ್ದುದು ಕಾರಣಂ ತಲೆಯ ಮೇಲಿಟ್ಟಾದರಂ ಮಾಡರೇ (ಪಾಧಪು. ೦-೪೨); ಧರಣಿಪಾಲ ಮೃಗಂಗಳನು ಸಲೆ ಬರಿಸಿ ಸದೆದನು (ಕುಮ್ಮಾಅ. ೧೪-೧೦೮). **ಧರಣಿಪಾಳ:** ಈ ಧರಣಿಪಾಳತನೂಜೆಗೆ ಮತ್ತಿನನ್ಯಕನ್ಯಾವಳಿಗಳ್ ಸಮಾನತೆಯನೆಯ್ದುವರಾರೊ ಸಮಸ್ತಲೋಕದೊಳ್ (ಪಾಧಪು. ೧೧-೧೬೦).

[ಧರಣಿ₁ + ಪಾಲ₄]

ಧರಣಿಪಾಲಕ (ನಾ). = ಧರಣಿಪ: ಧರಣಿಪಾಲಕನಾಗ ಕಳುಹಿದಡರಿಯುವರಸಂ ಮರಳಿ ಬರುತಂ (ಬಸಪು. ೫೩-೪೬). [ಧರಣಿ₁ + ಪಾಲಕ]

ಧರಣಿಪಾಳ 'ಧರಣಿಪಾಲ' ನೋ.

ಧರಣಿಭೃತ್ತು (ನಾ). ೧. ಬೆಟ್ಟ ; ಪರ್ವತ. ೨. ದೊರೆ ; ರಾಜ. ೧, ೨: ಜನಚಿತ್ತಾಹ್ಲಾದಪಾದಂ ಸಕಲಧರಣಿಭೃನ್ಮಸ್ತಕನ್ಯಸ್ತಮಾಗಿರ್ಪನಮುಚ್ಚಂಡ ಪ್ರತಾಪೋದಯಮಂರಿಕುಮುದಾಭೋಗವಿಧ್ವಂಸಿಯಾಗಿರ್ಪನಂ . . . ಒಳ್ಪಂ ಪೆತ್ತುದಾತ್ತಂ ಬೆಳಗುಗೆ ಜಗಮಂ ಗೋಪಮಾರ್ತಂಡದೇವಂ (ಜಗವಿ. ೧-೪).

[ಸಂ. ಧರಣಿಭೃತ್]

ಧರಣಿಮಂಡಲ (ನಾ). ಭೂಮಂಡಲ ; ಪೃಥ್ವಿ : ಧರಣಿಮಂಡಲಮಧ್ಯದೊಳಗೆ ಮೆರೆಯುತಿಹ ಕರ್ನಾಟದೇಶದೊಳಿರುವ ಕಾಳಿಂಗನೆಂಬ ಗೊಲ್ಲನ ಪರಿಯ ನಾನೆಂತು ಪೇಳ್ವೆನು (ಗೋಪಾಡು. ೧-೧). [ಧರಣಿ+ಮಂಡಲ]

ಧರಣಿಮತ್ಸ್ಯನ್ಯಾಯ (ನಾ). ಲೌಕಿಕನ್ಯಾಯಗಳಲ್ಲಿ ಒಂದು ; ನೀರಿನಿಂದ ಹೊರಗೆ ಬಂದು ನೆಲದ ಮೇಲೆ ಬಿದ್ದಿರುವ ಮೀನಿನ ದೃಷ್ಟಾಂತ ; P ಆಶ್ರಯವನ್ನು ಕಳೆದುಕೊಂಡಿರುವುದನ್ನು ಸೂಚಿಸುವ ನ್ಯಾಯ. ಇದರ ಪರಿಣಾಮ ನಾಶವೆಂಬ ಅರ್ಥದಲ್ಲಿ ಉಪಯೋಗವಾಗುತ್ತದೆ: ಪರಚಕ್ರಕ್ಕೆಡೆಮಾಡಿ ಧರಿತ್ರಿಯ ತರುಣಿಯರ್ಬಾಲವೃದ್ಧರನೆಯ್ದೆ ಅರಸ ಕೇಳ್ಬಿಟ್ಟು ನೀವಿಲ್ಲಿರುತಿರಲಿನ್ನು ಧರಣಿಮತ್ಸ್ಯನ್ಯಾಯವೆನೆ ಕೇಳ್ದು (ಕ್ರಿಭುತಿ. ೪-೧೮). [ಧರಣಿ$_1$ + ಮತ್ಸ್ಯ + ನ್ಯಾಯ]

ಧರಣಿರುಹ (ನಾ). = ಧರಣಿಜ ೧ : ತಮ್ಮಲ್ಲಿರ್ದ ಪಕ್ವಫಳಮಿರದೀವೆಯೆಂಬತ್ತಿಯಮಳಪಣ್ಬಾರದಿಂದುರೆ ಬದರಿ ಧರಣಿರುಹ ಸಲೆ ವಿರಾಜಿಸುತಿರ್ದವಾ ಬನದೊಳು (ನವಮೋ. ೪-೨೯). [ಸಂ.]

ಧರಣಿವರ (ನಾ). = ಧರಣಿಪ : ಕೀಳಿನ ಹೊಲೆಯರಿಗೆ ಶಿವಭಕ್ತಿಮಹಿಮೆಯ ದಳವಿಯೇ ತಿಳಿಯಲಿಕೆ ಬಿಜ್ಜಳಧರಣಿವರ ಕೇಳು (ಬಸಪು. ೩೬-೪೯).

[ಧರಣಿ$_1$ + ವರ$_3$]

ಧರಣಿವಲ್ಲಭ (ನಾ). = ಧರಣಿಪ : ಅನುಮತಿಸಿ ಸಕಲರಾಜ್ಯೋದ್ಧರಣ ಕರಣಮನಿತ್ತು ಬಿಜ್ಜಳಧರಣಿವಲ್ಲಭನು (ಬಸಪು. ೩-೧೯). [ಧರಣಿ$_1$+ವಲ್ಲಭ]

ಧರಣಿಸಂಭೂತೆ (ನಾ). = ಧರಣಿಜಾತೆ : ಧರಣಿಸಂಭೂತೆ ಊರ್ಮಿಳೆಯೊಡನೆ ಮಾತಾಡಿ ಮುಗಿವನಿತರೊಳ್ (ಶ್ರೀರಾಮಾ. ೪೪-೪೩೭).

[ಸಂ. ಧರಣಿಸಂಭೂತಾ]

ಧರಣಿಸುತ (ನಾ). ಮಂಗಳಗ್ರಹ ; ಕುಜಗ್ರಹ : ಧರಣಿಸುತಾಂಶದೊಳ್ ಪ್ರಹರಣಾನಲ ಸಾಹಸಧಾತುವಿಂ (ಜಾತಕ. ೧೦-೪) ; ಧರಣಿಸುತ ಮೃಗವೇಱಿ ನಿಂದಿರೆ ಶಶಿಜ ವಿನಯದಲಿ ತರಣಿಸುತ ಜೂಕದಲಿ ಮೆಱೆದಿರೆ . . . ಪುತ್ರೋದಯಗಳಾದುವು ಭೂಪ ದಶರಥಗೆ (ಕಾಶಿಖಂ. ೧-೬೬).

[ಧರಣಿ$_1$ + ಸುತ]

ಧರಣಿಸುತೆ (ನಾ). = ಧರಣಿಜಾತೆ : ಅಂತೆನಿಪ ವೆಣ್ಣಮೆಯ್ಯನ ಕಾಂತೆ ಗುಣವ್ರಾತೆ ಧರಣಿಸುತೆಗಂ ಮಿಗಿಲೆಂಬಂತೊದವಿದ ಪತಿಭಕ್ತಿಯನಾಂತೆಸೆದಳ್ ಪೋಟಕಬ್ಬೆಯೆಂಬಳ್ ಪೆಸರಿಂ (ಧಂದೋಂಬು. ೧-೨೧). [ಸಂ. ಧರಣಿಸುತಾ]

ಧರಣಿಸುರ (ನಾ). ಭೂಮಿಯ ಮೇಲಿರುವ ದೇವತೆಯೆಂದು ಭಾವಿಸಲಾದವನು ; ಭೂಸುರ ; ಬ್ರಾಹ್ಮಣ : ಧರಣಿಸುರಂ ಮನದೊಳ್ ಕೊಕ್ಕರಿಸದೆ ಕಪಿಳನ ಸಪಜ್ಞಿಭೋಜನಮಂ ಸ್ವೀಕರಿಸಿದಂ (ಶಾಂತೀಶ್ವ. ೬-೩೪) ; ಧರಣಿಸುರರಾ ಪಾದರಕ್ಷೆಯ ಸರಿಯ ತೂಕಕೆ ಬಾರದಾದರು (ಬಸಪು. ೫೫-೫೭) ; ಧರಣಿಸುರನೆಂದೆನ್ನ ಠಕ್ಕಿಸಿ ಶರಪ ಬೇಡಿದೆ (ಶುಕ್ರಾಶ. ೯-೩೨). [ಧರಣಿ$_1$ + ಸುರ]

ಧರಣೀಂದ್ರ$_1$ (ನಾ). (?) : ಹರನ ಕೊರಳಲ್ಲಿಪ್ಪ ಕರೋಟಿಮಾಲೆಯ ಶಿರದ ಲಿಖಿತವ ಕಂಡು ಮರುಳುತಂಡಗಳು ಓದಿ ನೋಡಲು ಇವನಜ ಇವ ಹರಿ ಇವ ಸುರಪತಿ ಇವ ಧರಣೀಂದ್ರನಿವನಂತಕನೆಂದು ಹರುಷದಿಂದ ಸರಸವಾಡಿತ್ತ ಕಂಡು (ಬಸವ. ೫೩೯).

[P ಇದು 'ಧರಣೇಧ್ರ' ಎಂಬುದರ ಅಪಲಿಖಿತವಿರಬಹುದು]

ಧರಣೀಂದ್ರ$_2$ (ನಾ). [ಜೈನ] ಪಾರ್ಶ್ವನಾಥ ತೀರ್ಥಂಕರನ ಯಕ್ಷ : ಧರಣೀಂದ್ರನೆನಭವನ ಕಿಂಕರನೆಂ (ಆದಿಪು. ೯-೧೧೧) ; ವಂದನಾಭಕ್ತಿಗೆ ವಂದ ಧರಣೀಂದ್ರನಂ ಕಂಡು ತತ್ಸೌಂದರ್ಯಮಹಿಮೆಗೆ ನಿದಾನಂಗೆಯ್ದು ಭವನಾಮರಲೋಕದೊಳ್ ಧರಣೀಂದ್ರನಾಗಿ ಪುಟ್ಟಿದಂ (ಶಾಂತಿಪು. ೬-೮೨ ವ); ದೇವರ್ ಬಿಲ್ವಿಡಿವಂತು ಬಲ್ಮಡೆಯೆ ವಜ್ರಾವರ್ತ ಚಾಪಕ್ಕೆ ಮೇಣ್ ದೇವೇಂದ್ರಂ ಧರಣೀಂದ್ರನಲ್ಲದುಱಿದರ್ ಬಿಲ್ವೊಯ್ದು ನಿಲ್ವನ್ನರಾರ್ (ಪಂರಾಮಾ. ೯-೫೬, ; ಈ ನಾಗಾಲಯದ ಧರಣೀಂದ್ರಂಗೆ ತೋಱೆ ಪೊಡೆ ಮಟ್ಟು ಬಾಯೊಂದು ಬೇಱೊಂದು ಮನೆಯೊಳಿರಿಸಿದ ಚರುಗಮಂ ಕುಡುವುದುಂ (ಧರ್ಮಾಮೃ. ೧೨-೧೮೪).

[P ಇದು 'ಧರಣೇಂದ್ರ' ಎಂಬುದರ ಅಪಲಿಖಿತವಿರಬಹುದು]

ಧರಣೇಕಂದ (ನಾ). ಒಂದು ಬಗೆಯ ಗಡ್ಡೆ : "ವಕ್ರಕಂದಃ-ಧರಣೇಕಂದ" (ಓಷಧಿ. ೧೪೭). [ಸಂ.]

ಧರಣೇಚಕ್ರ (ನಾ). ೧. ಭೂಮಂಡಲ : ಧರಣೇಚಕ್ರಮನೊಪ್ಪುಗೊಳ್ ಬಗೆಯದರ್ವಿದ್ವೇಷಮಂ (ಗದಾಯು. ೭-೪೪) , ಧರಣೇಚಕ್ರದೊಳಾರ್ಗ ಮಗ್ಗಳಮಿಳಾದೇವಾನ್ವವಾಯಂ (ಸುಕುಮಾ. ೬-೪೭); ಧರಣೇಚಕ್ರಮುಮಂ ವಿಯತ್ತಳಮುಮಂ ಗಂಟಿಕ್ಕುವರ್ . . . ಮಳಲೊಳಂ ನೀರ್ಮಾಡುವರ್ ಜೋಡೆಯರ್ (ಧರ್ಮಾಮೃ. ೩-೧೩೪). ೨. ಭೂಮಂಡಲದ ಜನ : ಧರಣೇಚಕ್ರಂ ಪದಪಂಕರುಹಮನೀ ತೆಱದಿನಗಲದೋಲಗಿಸುವುದಂ ನಿರವಿಸುತಿರ್ದುದು (ಪಾರ್ಶ್ವಪು. ೭-೧೦೬). [ಸಂ.]

ಧರಣೇಜ (ನಾ). ೧. = ಧರಣಿಜ ೧ : ನೆಱೆಯೆ ಪಣೆಮುಟ್ಟಿ ಕೈವಂದೆಱಗಿದುದಿದು ದೇವ ನಿನಗೆ ಹೃದಯಂ ತಾನೆತ್ತಱೆದುದೆನವೇಡ ಧಾರಿಣಿಯೆಱೆಯಂಗೆಱಗುವುದು ಚೋದ್ಯಮೇ ಧರಣೇಜಂ (ಚಂದ್ರಪು. ೭-೯೪). ೨. = ಧರಣೇಜ ೨: ಧರಣೇಜಂ ಪದನೈದು . . . ದೈತ್ಯಗುರುವಿಪ್ಪತ್ತೊಂದು ಸಂವತ್ಸರಂ ಪರಮೋಚ್ಚಾಂಶದೊಳೊಂದಿ ನಿಂದೊಡದು ಪಿಂಡಾಯುಷ್ಯಮಕ್ಕುಂ (ಜಾತಕ. ೯-೧೦). [ಸಂ.]

ಧರಣೇಜಾತ (ನಾ). = ಧರಣೇಜ ೧ : ತೋರವಣ್ದೊಂಗಲಿಂ ತಳೆದೊಪ್ಪ ಕ್ಕೊಳಗಾದ ಚೂತ ಧರಣೇಜಾತಂಗಳಿಂ . . . ಪಡೆದುದಾನಂದಮಂ ನಂದನಂ (ಮಹಾನೇ. ೪-೨೩). [ಸಂ.]

ಧರಣೇತಲ, ಧರಣೇತಳ (ನಾ). ನೆಲ ; ಭೂಮಿ ; ಭೂತಳ. **ಧರಣೇತಳ:** ಧರಣೇತಳ ಘನತಮಮಂ ಕರಗಿಸಿ ಭಾಸ್ವತ್ಕರಂಗಳಿಂ ಗಗನತಳಕ್ಕಿರದಡರ್ವ ವಿಸ್ಫುರದ್ದಿನಕರನಂ ಚಿತ್ರಾಂಗದಾವನೀಶಂ ಕಂಡಂ(ಆದಿಪು. ೧೬-೪೮) ; ತಳಕ್ಕೆ-ಕರತಳ, ಕೆಂದಳ, ತಟ್ಟತಳ, ತಳಹಗ್ಗ, ಧರಣೇತಳ (ಶಮದ. ೨೯೮ ಪ್ರಯೋ) ; ಮಾಚಯ್ಯಂಗೆಱಗಲೊಡನೆ ಆತನುಂ ತಾವಿಬ್ಬರುವಸಂಖ್ಯಾತ ಭಕ್ತಗಣಗಂಳಿಗೆ ಧರಣೇತಳದೊಳಷ್ಟಾಂಗದಂಡಪ್ರಣಮವಂ ಮಾಡಿ (ಬಸಪು. ೩೭-೫೭). [ಸಂ.]

ಧರಣೇತಳ 'ಧರಣೇತಲ' ನೋ.

ಧರಣೇಧರ (ನಾ). ೧. ವಿಷ್ಣು : ಧರಣೇಧರಂ ದ್ರುಹಿಣನಷ್ಟದಿಕ್ಪಾಲಕರ್ ಭರದಿಂದ ಬಂದು ಹೊಱಹೊಯ್ಯಲಂ ತಾಗೆ (ಲಶಿಚಂ. ೧೭-೧೮). ೨. ಬೆಟ್ಟ; ಪರ್ವತ : "ಧರಮದ್ರಿ ಕುಧರಂ . . . ಪರ್ವತಂ ಧರಣೇಧರಂ ಶೃಂಗಿ ಸಾನುಮಂತಂ ಗೋತ್ರಮೆನಲು ಬೆಟ್ಟಕ್ಕೆ ನಾಮಂ" (ಮಂಗರಾ. ೨೯-೧) ; ಧರಣೇಧರಂಗಳೈವತ್ತೆರಡಱೊಳಂ ಚೆಲ್ವುವೆತ್ತ ಜಿನಗೃಹಂ (ಸುಕುಮಾ. ೧೧-೫೧). [ಸಂ.]

ಧರಣೇಧರಣ (ನಾ). ೧. ಭೂಮಿಯನ್ನು ಹೊತ್ತಿರುವುದು ; ಬೆಟ್ಟ. ೨. ಭೂಮಿಯನ್ನು ಧರಿಸಿರುವವನು ; ಭೂಮಂಡಲಕ್ಕೆ ಆಧಾರವಾಗಿರುವವನು : ಹರಿಯೆ ಧರಣೇಶಕ್ತಿ ತಾನೆಂದೊರೆವನಲ್ಲದೆ ಹರನೆ ಧರಣೇಧರಣನೆಂದೊರೆಯನು (ಬಸಪು. ೫೭-೨೭). [ಸಂ.]

ಧರಣೀಧವ (ನಾ). ಭೂಮಿಯ ಒಡೆಯಂ; ಅರಸ; ರಾಜ: ಧರಣೀಧವ ವೇಟಿನಗಾ ವಃಮಲ್ಲಣ ಚೋಳ ಮೂರ್ಖನಯನಾರಿಗಳಂಬರ ಚಾರಿತ್ರಮಂ (ಉದ್ಭಟ. ೦೨-೨೯). [ಸಂ.]

ಧರಣೀಧ್ರ (ನಾ). ೧. ಪರ್ವತ: ಧರಣೀಧ ಂಗಳ್ಗಮುಬ್ಬಪ್ರತತಿಗ (ಮೆಸೆಗುಂ) ಕೂಡೆ ಜೀಮೂತನಾಮಂ (ಪಸ್ತು ಕೋ. ೧೦೯-೭). ೨. ಆದಿಶೇಷ: ಸಿದ್ಧಾಂತ ಮುನೀಂದ್ರರಿಂದ್ರಧರಣೀಧ್ರನಿಭಕ್ಷಮಾರೀಡ್ಯಸತ್ಕೃಮರ್ (ಧರ್ಮಾಮೃ. ೦-೨೭). ೩. ಆದಿಕೂರ್ಮ. [ಸಂ.]

ಧರಣೀನಾಥ (ನಾ). = ಧರಣೀಧವ: ಧರಣೀನಾಥರ ಸಾಮಂತರ ದಂಡೇಶ್ವರರ ಪಡೆವಳರ ಕಲಿಗಳ . . . ಗೃಹವೀಧಿಗಳಿನಾ ಪುರಂ ರಂಜಿಸುಗುಂ (ಉದ್ಭಟ. ೧-೪೦); ಧರಣೀನಾಥರನೆಯ್ದೆ ಕಾಣಿಸಿಕೊಳುತ್ತುಂ . . . ಅನತರನೀಗಳ್ ಕಾಯುತುಂ ಬಂದು (ಶಾಂತೀಶ್ವ. ೩-೬೨). [ಸಂ.]

ಧರಣೀಪತಿ (ನಾ). = ಧರಣೀಧವ: ಅನೆಯುಂ ಕುದುರೆಯುಂ ಧರಣೀಪತಿ ಸಾಱಿ ಬೀಱಿದಂ (ಚಂದ್ರಪು. ೬-೪೦). [ಸಂ.]

ಧರಣೀಪಾಲ, ಧರಣೀಪಾಳ (ನಾ). = ಧರಣೀಧವ: ಧರಣೀಪಾಲ ಸಹಸ್ರ ಸಂವೃತನೆನಲ್ ಸಂದಿರ್ದುವೇಕಾಕಿಯಂತಿರೆ . . . ತನ್ನಂ ಬಗೆವಂ ತನೊಡರಹಿತಂ ವಿಶ್ವಂಭರಾವಲ್ಲಭಂ (ಕಾದಂಪು. ೩೨೭): ಧರಣೀಪಾಲ ಸುತರ್ಕಳಂ ತೃಣಸಮಾನರ್ಗಂಡು (ಪಾಪಾನೇ. ೯-೦೦೫); ಧರಣೀಪಾಲರೊಳಗಗ್ಗಳೆಯನೈ ಧರ್ಮಜನು (ಕುವ್ಯಾಉ. ೪-೦೩೦). **ಧರಣೀಪಾಳ**: ವರಸಿಂಹಾಸನದಿಂದಮೆಟ್ಟು ಧರಣೀಪಾಳಂ . . . ಸದೃಕ್ಷಿಯಿಂ ಪೋಗಿ (ಪಾಧಪು. ೩-೦೩). [ಸಂ.]

ಧರಣೀಪಾಳ 'ಧರಣೀಪಾಲ' ನೋ.

ಧರಣೀಪಾಳಕ (ನಾ). = ಧರಣೀಧವ: ಧರಣೀಪಾಳಕ ದಂಡನಾಯಕ ಮಹಾಸಾಮಂತ ಮಂತ್ರಿವ್ರಜಂಬೆರಸಾಸ್ಥಾನದೊಳಿರ್ದು (ಪುಷ್ಪಪು. ೯-೦೦೮); ಧರಣೀಪಾಳಕನಾ ಕುಮಾರಕನ ವಕ್ಕಾಲೋಕನಂಗೆಯ್ದು (ಪಾಧಪು. ೦೨-೭೩). [ಸಂ. ಧರಣೀಪಾಲಕ]

ಧರಣೀಪುತ್ರ (ನಾ). ಅಂಗಾರಕ; ಮಂಗಳಗ್ರಹ. 'ಧರಣೀಪುತ್ರನಿವಾಸ' ಪರಾ. [ಸಂ.]

ಧರಣೀಪುತ್ರನಿವಾಸ (ನಾ). [ಜ್ಯೋತಿ] ಮೇಷ ಮತ್ತು ವೃಶ್ಚಿಕ ರಾಶಿ; ಅಂಗಾರಕನ ಕ್ಷೇತ್ರ: ಧರಣೀಪುತ್ರನಿವಾಸದೊಳ್ ನಿಲೆ ಬುಧಂ ಕೂಟಕ್ರಿಯಾವೇದಿ ತಸ್ಕರನದ್ರವ್ಯನಸತ್ಯವಾದಿ . . . ನಾಸ್ತಿಕಂ (ಜಾತಕ. ೦೬-೨೨). [ಸಂ.]

ಧರಣೀಪೂಜ್ಯ (ನಾ). ೧. ಭೂಮಂಡಲಕ್ಕೆ ಗೌರವಾರ್ಹವಾದುದು: ಧರಣೀಪೂಜ್ಯಂ ಭವ್ಯೋತ್ತರವಂದ್ಯಂ ಕಾವ್ಯರತ್ನಮಮಳಯಶಶ್ಶೀಕರಂ (ಧರ್ಮಾಮೃ. ೧೪-೧೬೫). ೨. ಭೂಮಂಡಲಕ್ಕೆ ಗೌರವಾರ್ಹನಾದವನು; ಲೋಕಪೂಜ್ಯ. [ಸಂ.]

ಧರಣೀಭರ (ನಾ). = ಧರಣೀಭಾರ: ಭರತನನೇಕಾಧ್ವರಭರನಿರತಂ ಜಸಮುಬ್ಬಿಯೆ ಕಬ್ಬಿಯೆ ಭೂಪರ್ ಪಲರಾದರಿಸಿದ ಧರಣೀಭರಮಂ ಧರಿಯಿಸಿದಂ ಪ್ರತಿಮನೆಂಬನಪ್ರತಿಮಬಲಂ (ಪಂಪಭಾ. ೦-೬೪). [ಸಂ.]

ಧರಣೀಭರ್ತೃ (ನಾ). = ಧರಣೀಧವ: ಧರಣೀಭರ್ತೃ ಭುಜಂಗಸೇನನವನೀ ಸಾವಮ್ರಾಜ್ಯಮಂ ಕೀರ್ತಿಶೇಖರನೊಳ್ ನೆರ್ಮಿಸಿ (ಅನಂಪು. ೨-೫೭). [ಸಂ.]

ಧರಣೀಭಾರ (ನಾ). ರಾಜ್ಯದ ಹೊಣೆ; ಆಡಳಿತದ ಹೊಣೆ; ರಾಜ್ಯಭಾರ: ಧರಣೀಭಾರಮನಾರೊ ಪೊತ್ತಪರಿದಂ ನೀಂ ಪೋಗಿ ಭಾಸ್ವತ್ಪಥೋಧರಮಂ ತಾಳ್ದಿದೊಡೆ (ವರ್ಧಪು. ೨-೬೦); ಧರಣೀಭಾರಕ್ಕೆ ಯತೀಂದ್ರನನೊಡಂಬಡಿಸಿ . . . ಕಂಭಂದಪ್ಪಿದ ಕರಿಯಂತೆ ತಪೋವನಕ್ಕೆ ನಡೆದನಿಳೇಶಂ (ಯಶೋಧ. ೨-೦೩). [ಸಂ.]

ಧರಣೀಭೃತ್ಪತಿ (ನಾ). ೧. ರಾಜರಲ್ಲಿ ಶ್ರೇಷ್ಠನಾದವನು. ೨. ಪರ್ವತಗಳಲ್ಲಿ ಶ್ರೇಷ್ಠವಾದುದು. ೧, ೨: ದೊರೆವೆತ್ತುನ್ನತಿಯಿಂ . . . ವಸುಂಧರೆಗೆ ತಾಂ ಮಧ್ಯಸ್ಥಮಾದೊಳ್ವಿನಿಂ ಧರಣೀಭೃತ್ಪತಿಪೂಜ್ಯಮಾದ ಮಹಿಮಾವಷ್ಟಂಭದಿಂ ನಾಡೆ ಸುಂದರಮಾಗಿರ್ದುದು ಪೋಲ್ತು ಮಂದರನಗಂ ಸಾಹಿತ್ಯಸರ್ವಜ್ಞನಂ (ಮಲ್ಲಿಪು. ೧-೬೯). [ಸಂ.]

ಧರಣೀಮಂಡನ (ನಾ). ಭೂಮಂಡಲಕ್ಕೆ ಅಲಂಕಾರಪ್ರಾಯವಾದುದು. ಧರಣೀಮಂಡನನೆಂಪ್ಪೆಗುಂ ಮಳಯದೇಶಂ ತನ್ನಹೀಶ್ರೀಗೆ ಕುಂಜರಶ್ರೇಳಂ ತೊಡವಂತದಕ್ಕೆ ತಿಳಕಂ ವೇಗಾವತೀಸಿಂಧು(ಪಾರ್ಶ್ವಪು. ೪-೫೭). [ಸಂ.]

ಧರಣೀಮಂಡಲ, ಧರಣೀಮಂಡಳ (ನಾ). = ಧರಣೀಮಂಡಲ: ವರ ಶೃಂಗಾರರಸಪ್ರವಾಹಮತುಳಾಲಂಕಾರಸಂಶೋಭಿತಂ ಧರಣೀಮಂಡಲ ಲಾಲಿತಂ (ಪಾಧಪು. ೦-೩೦): ಕೊಂಡಗುಳಿಯೊಳು ಕೇಶಿರಾಜನಖಂಡಿತ ಪ್ರತಿಭಾಪೆ ಧರಣೀಮಂಡಲ[ಪಾಠಾಂ. ಳ] ದೊಳತಿಕೀರ್ತಿಯಾಯಿತ್ತೀ ಕಟಕವಱಿಯೆ (ಬಸಪು. ೩೭-೫೯). **ಧರಣೀಮಂಡಳ**: ಧರಣೀಮಂಡಳದಲ್ಲಿ ಸಾರತರಸೌಖ್ಯಕ್ಕೀಕೆಯೇ ಸೀಮೆ (ಪಾಧಪು. ೨-೫೩). [ಸಂ.]

ಧರಣೀಮಂಡಳ 'ಧರಣೀಮಂಡಲ' ನೋ.

ಧರಣೀಮಾರ್ಗ (ನಾ). ಭೂಮಿಯ ಮೇಲ್ಮೈ; ಭೂತಳ; ಭೂಮಾರ್ಗ: ಅತಿಶಯಪಂಚರುಚಿಪ್ರತಿಕೃತಿಹರಿತಂ ತಾವ್ಯಕೃಷ್ಣಪೀತಸಿತಶ್ರೀಧೃತವಾಗಿ ಸೂಯಿಯಾಣದ ವಿತಾನಮಂ ಪೋಲ್ತುದಖಿಳಧರಣೀಮಾರ್ಗಂ (ಪಾಂತಿಪು. ೦೦-೫೨). [ಸಂ.]

ಧರಣೀರಕ್ಷಣ (ನಾ). ರಾಜ್ಯದ ಕಾಪು: ಧರಣೀರಕ್ಷಣಮಂತ್ಯಾಕ್ಷರಮಂ . . . ಪೊನ್ನೊರೆಯಿಂದಂ ಬರೆದಂತಾ ನೃಪನ ತೋಳ ಬಾಳ್ವೊಗರಿಸೆಗುಂ (ಮಲ್ಲಿಪು. ೩-೦೩): ಧರಣೀರಕ್ಷಣದಕ್ಷದಕ್ಷಿಣಭುಜಂ ಲಕ್ಷ್ಮೀಧರಂ ಮೈದುನಂ (ಪಂಡಾಮಾ. ೯-೦೪೩). [ಸಂ.]

ಧರಣೀರಾಯ (ನಾ). ದೊರೆ: ರಾಜ: ಧರಣೀರಾಯರೆಲ್ಲರ ಗೆಲಿದು ತಂದನು . . . ಅನುಪಮಿತಮೌಲ್ಯಪನಮಲಮೌಕ್ತಿಕವ (ಕುವ್ಯಾಆ. ೦೬-೬). [<ಧರಣಿ$_1$ + ರಾಯ]

ಧರಣೀರುಹ (ನಾ). = ಧರಣಿಜ ೧: ಶ್ರಿದಶಧರಣೀರುಹದೊಳೊಳುಗಂಪು ವಿರ್ಪವೊಲಖಿಳಭಕ್ತರೊಳು ಪುರವಾಗಿಹ ನಿಮ್ಮ ಕೃತಿಯಂ ಪಾರವೆಯ್ದಿಸಿ ಪೊರೆವುದು (ಬಸಪು. ೧-೭). [ಸಂ.]

ಧರಣೀವರಾಹ(ನಾ).೧. ಭೂಮಂಡಲವನ್ನು ತನ್ನ ಕೋರೆದಾಡೆಗಳಿಂದ ಎತ್ತಿಹಿಡಿದ ವರಾಹ: ಗೋಡೆಗಳ ಮೇಲೆ . . . ಈ ವಿಗ್ರಹಗಳಿವೆ: ರತಿ–ಮನ್ಮಥ . . . ಹೂಮಾಲೆ ಹಿಡಿದ ಭೂದೇವಿ, ಧರಣೀವರಾಹ, ಕಾಳಿಂಗಮರ್ದನ (ಹೊಯ್ಸಾ. ೧೪). ೨. ವಿಜಯನಗರದ ರಾಜರಿಗೆ ಸಲ್ಲುತ್ತಿದ್ದ ಒಂದಂ ಬಿರುದಂ: ಧರಣೀವರಾಹ ಕಠಾರಿಯ ಸಾಳ್ವ ಬಿರಿದಾತಂಬರ ಗಂಡ (ಸಾಇತಿ. XX, ೨೩೬-೬; 1566). [ಸಂ.]

ಧರಣೀವಲ್ಲಭ (ನಾ). = ಧರಣಿಪ: ಧರಣೀವಲ್ಲಭನಾಜ್ಞೆಯಿಲ್ಲದೆನಗೆಂತುಂ ಬರ್ವುದೌಚಿತ್ಯಮಲ್ತು (ಪಂಡಾಮಾ. ೧೧-೧೧೦): ಧರಣೀವಲ್ಲಭ ನೀಂ ಮಹಾಮಹಿಮೆಯಿಂ ಬಂದು . . . ಸಮಂತಿರು (ನೇಮಿಪು. ೩-೧೯): ಧರಣೀವಲ್ಲಭ ತನ್ನುನಿನಿರೀಕ್ಷಣಕ್ಷಣದೊಳಲರ್ದು ಕಡವಿನ ಮರಗಳ್ ಪರಿಗತರೋಮಾಂಚತೆಯಿಂ ದೊರೆಮಾಡಿದುದೆನ್ನ ತನುವುವುಂ ನೆಱಿ ತನ್ನೊಳೆ (ಚಂದ್ರಪು. ೨-೯೯). [ಸಂ.]

ಧರಣೀವಳಯ (ನಾ). ೧. ಭೂಲೋಕ; ಭೂಮಂಡಲ. ೨. ಭೂಮಂಡಲದ ಜನ: ಧರಣೀವಳಯಂ ಟೀಎನೆ ಪರಧನವುಂ ಕಪಟವೃತ್ತಿಯಿಂ ವಂಚಿಸಿ ಕೊಂಡು (ಪಂಡಿತಂ. ೦೬೨-೨೩): ಒಳಗೆ ಕುಜನರು ಹೊಱಗೆ ಧರಣೀವಳಯಮಾನ್ಯರು (ಕುವ್ಯಾಸ. ೧-೩೪). [ಸಂ. ಧರಣೀವಲಯ]

ಧರಣೇಶ (ನಾ). ದೊರೆ; ರಾಜ : ಧರಣೇಶಂ ದಯೆಗೆಯ್ದುಮಗ್ರಮಹಿಷೀ ಸಂಪತ್ತಿಯಂ . . . ಪುತ್ರಮೋಹರಸಾಸ್ವಾದನತೃಪ್ತಿಯಿಲ್ಲವೆನುತುಂ (ಮಲ್ಲಿಪು. ೩-೧೦೭) ; ಧರಣೇಶನ ಯಂತ್ರದ ಕತ್ತುರಿನೀರೆಸೆವಸಿಯ ಧಾರೆಯಗ್ರದೊಳೊರ್ವಳ್ ಸ್ಮರನಸಿಯ ಧಾರೆಯಗ್ರದೊಳಿರವಿಂತುಟು ವಿಜಯಲಕ್ಷ್ಮಿಗೆಂಬವೊಲಿರ್ದಳ್ (ಚಂದ್ರಪು. ೭-೧೩೬) ; ಧರಣೇಶಂ ಕವಿದೊತ್ತಿ ಮುತ್ತಿ ಪೊಸನೀರಂ ಸೂಸುವ . . . ಕಾಮಿನೀವೃಂದವುಂ ಪಿರಿದಾನಂದದಿನೊಲ್ದು ನೋಡಿ (ಉದ್ಯಟ. ೯-೧೨೦). [ಸಂ.]

ಧರಣೇಶಕ್ತಿ (ನಾ). ಭೂಮಿಗೆ ಆಧಾರವಾದ ಶಕ್ತಿ : ಹರಿಯೆ ಧರಣೇಶಕ್ತಿ ತಾನೆಂದೊರೆವನಲ್ಲದೆ ಹರನೆ ಧರಣೇಧರಣನೆಂದೊರೆಯನು (ಬಸಪು. ೫೭-೨೭). [ಸಂ.]

ಧರಣೇಶಾವಾಸ (ನಾ). ಅರಮನೆ ; ರಾಜಭವನ : ಸಿಂಗದ ಸಿಸು ಬಳೆವೊಂದಂದದಿಂದಾರ್ಪು ತೇಜಸ್ಸ್ಫುರಿತಂ ವಿಕ್ರಾಂತಮೆಂಬೀ ಗುಣವೊಡವೆಳೆಯುತ್ತಿರ್ಪಿನಂ ನಂದನಂ ತದ್ಧರಣೇಶಾವಾಸದೊಳ್ ಶೋಭಿಸುತಿರೆ ಬಳೆದಂ (ಚಂದ್ರಪು. ೩-೧೦೪). [ಧರಣೇಶ + ಆವಾಸ]

ಧರಣೇಶ್ವರ (ನಾ). ೧. = ಧರಣೇಶ: ಧರಣೇಶ್ವರ ವಚನಾಮೃತಪರಿಷೇಕದೆ . . . ಪರಮೇಶ್ವರಿ ಮಗನನಂದು ಪೆತ್ತಂತೊಸೆದಳ್ (ಅಜಿಪು. ೩-೧೫) ; ಧರಣೇಶ್ವರಸುತೆಯಾಗಿಯುಮರಣ್ಯದೊಳ್ ಬಿಟ್ಟು ಸಾವ ದುಷ್ಕರ್ಮಫಲಂ ದೊರೆಕೊಂಡತ್ತೆನಗೆ (ಪಂರಾಮಾ. ೧೪-೫೫) ; ಸೊಗಯಿಸುವುದು ಧರಣೇಶ್ವರಗೇಹ ವಿಶಾಲವಜ್ರನಿರ್ಮಿತಶಾಳಂ (ಚಂದ್ರಪು. ೧-೧೩೮). ೨. ಶಿವ. ೩. [ಗಣಿತ] ಹದಿನಾರು ಎಂಬ ಸಂಖ್ಯೆಯ ಸಂಕೇತ ; P ಹದಿನಾರು ಜನ ಚಕ್ರವರ್ತಿಗಳಂ ಪುರಾಣಪ್ರಸಿದ್ಧರು. ಆದುದರಿಂದ 'ಧರಣೇಶ್ವರ' ಎಂಬ ಶಬ್ದಕ್ಕೆ ೧೬ ಎಂಬ ಅರ್ಥ ಬರುತ್ತದೆ : ಎರಡುಂ ಮೂಱುಂ ನಾಲ್ಕುಂ ಗುರುವಿಂ ಪ್ರಸ್ತರಿಸಲುಬುನಿಧಿ ಗಜ ಧರಣೇಶ್ವರ ಗಣಮೊಗೆ ಗುಮವರ್ಕಂ ಸರಸಿಜಭವವಿಷ್ಣುರುದ್ರಸಂಜ್ಞೆಗಳಕ್ಕುಂ (ಛಂದೋಂಬು. ೫-೩). [ಸಂ.]

ಧರಣೇಸಮುತ್ಥಿತ (ನಾ). ನೆಲದಿಂದ ಮೇಲೆ ಎದ್ದುದು: ಧರಣೇಸಮುತ್ಥಿತಂ ಪಾಂಸುರೇಣು ಚೂರ್ಣಾಭಿಧಾನಕಂ ಕ್ಷೋದಂ ಧೂಳಿ ರಜಂ ಪರಾಗಮೆಂದಿವು ತೆರಳ್ದು ಪುದಿದಿರ್ದುದಕ್ಕುಮದು ಪಿಂಜಳಕಂ (ವಸ್ತುಕೋ ೯೧-೧೩). [ಸಂ.]

ಧರಣೇಸುತ (ನಾ). ೧. ಅಂಗಾರಕ. ೨. ಭೂದೇವಿಯ ಮೊಮ್ಮಗ ; ಭಗದತ್ತ : ಧರಣೇಸುತನಟಿದಂ ದಿಕ್ಕರಿ ಕೆಡೆದುದು ನರಶರಂಗಳಿಂ ಭುವನಮಂಮಿನ್ನುರಿಯದಿರದು (ಪಂಪಭಾ. ೧೧-೮೨). P ಇದು 'ಧರಣಿಜಸುತ', ಎಂಬುದರ ಅಪಲಿಖಿತವಿರಬೇಕು. [ಸಂ.]

ಧರಣೇಸುತೆ (ನಾ). ಭೂಸುತೆ ; ಸೀತೆ : ಅಭಿರಾಮಗುಣಗಣವಶೀಕರಣೇಯತಾನುಕರಣೇಯ ಧರಣೇಸುತೆಯುಂ (ಎಕ. II (R), ೧೫೮-೨೪ ; 1120). [ಸಂ. ಧರಣೇಸ ತಾ]

ಧರಣೇಸುರ (ನಾ). = ಧರಣಿಸುರ : ಧರಣೇಸುರರಂ ವಿಮಲಾಧ್ವರವಂ ಸಜ್ಜನರಂ . . . ಭೂವರರೊಲ್ದು ರಕ್ಷಿಸದೊಡಾರ್ಪೊರೆವವರ್ (ಉದ್ಯಟ. ೨-೨೬) ; ಉಲ್ಲಾಸಭಕ್ತಿರತಿಸ್ಥಿರರು ಧರಣೇಸುರರು ಹರವೇಷಧರರಘಹರರು ಚಿದ್ವರರು (ಬಸಪು. ೪೬-೯) ; ಅರಣಿಯನು ತಂದಿತ್ತು ಧರಣೇಸುರನ ಮನ್ನಿಸಿ . . . ಕಳುಹಿದನು (ಕುಮ್ಯಾಅ. ೨೩-೫೨). [ಸಂ.]

ಧರಣೇಹಾರ (ನಾ). ಭೂಮಿಗೆ ಸರದಂತೆ ಅಲಂಕಾರಪ್ರಾಯವಾದುದು : ಧರಣೇಹಾರಂ ಹಸ್ತಿನಪುರ ಮಮರಪುರೋಪಹಾಸಿ ಭೂವನಿತೆಯ ಕರ್ಪುರದ ಕರಂಡಗೆ ಸೌಖ್ಯದ ಪರವರಿ ಪೊಸವೇಟದಿರ್ಕೆ ಸಯ್ಪಿನ ತಾಣಂ (ಶಾಂತಿಪು. ೯-೧೩೯). [ಸಂ.]

ಧರಣೆ 'ಧರಣ್ಯೆ' ನೋ.

ಧರಣೇಂದ್ರ (ನಾ). [ಜೈನ] ಪಾರ್ಶ್ವನಾಥತೀರ್ಥಂಕರನ ಯಕ್ಷ : ಧರಣೇಂದ್ರನಱಿದು ಭೋಂಕೆನೆ ಧರಾತಳಂ ಬಿರಿಯೆ ನೆಗೆದು ಬರ್ಪಂ (ಆದಿಪು. ೯-೧೦೦) ; ಧರಣೇಂದ್ರನ ಸತಿಯರ್ಗಂ ಸುರರಾಜನ ಪೆಂಡವಾಸದೊಳ್ವೆಂಡಿರ್ಗಂ ಕರಮೆನ್ನರಸಿಯರಯ್ನೂರ್ವರುಮಗ್ಗಳಮವರನೆಂತು ಬಿಸುಟಾನಿರ್ವೆಂ (ಧರ್ಮಾಮ್ಯ. ೧೪-೪೦). [ಸಂ.]

ಧರತಿ, ಧರ್ತಿ (ನಾ). (ವಿಶಿಷ್ಟವಾದ) ಶೈಲಿ ; ರೀತಿ ; ಧೋರಣೆ ; ಧಾಟಿ : ಕೆಲಸಾನ ಆಟಿಗೆ ಮಾಡೂವ ಸೂಟಿಗೆ ಹಸನಾದ ಧರತಿಗೆ ಮೆಚ್ಚಿದೆ ಗರತಿಗೆ (ಗಂಗಾತ. ೩೩-೧೨) ; ಪಲ್ಲವಿಗಳ ಸೊಲ್ಲೆತ್ತುವ ಧಾಟಿ ಧರತಿಗಳು ಅನೇಕವಿವೆ (ಕರ್ನಾಕ. ೩೭೭) ; ಅವಳು ನಗುವ 'ಧರತಿ' ಪೂರ್ಣ ಹಾಗೆಯೇ ಇದೆ (ಹೊಸಕ್ಷಿ. ೧೯೭) ; ಅಹಾ ! ಏನು ಧಾಟಿ ! ಅಹಾ ! ಏನು ಹಾಡುವ ಧರತಿ ! (ಕನ್ನಜಾ. ೪೨). ಧರ್ತಿ : ಇಂದಿರೆಯ ಮಾತಿನ ಧರ್ತಿ ಮೋಜಿನ ದೆನಿಸಿ ಎಲ್ಲರೂ ಬಿದ್ದುಬಿದ್ದು ನಕ್ಕರು (ಕೊನಕಾ. ೧೦) ; ತಾನು ಅನಿಕೇತ, ಅನಂತಪ್ರವಾಸಿ ಎನ್ನುವ ಧರ್ತಿಯಲ್ಲಿದ್ದಾಳೆ (ದೀಪಹ. II, ೧೭೫).

[←ಮರಾ. ಧರತೀ, ಧರ್ತೀ]

ಧರಧುರ, ದರದುರ (ನಾ). ೧. ಆರ್ಭಟ ; ಕೋಲಾಹಲ ; ರಭಸ ; ಅಬ್ಬರ ; ಆಡಂಬರ : ನೆಱೆ ನಂಬೊ ನೆಱೆ ನಂಬೊ ಧರಧುರವಿಲ್ಲದೆ ಸಾವ ವೇದಿಗಳಂತೆ (ಬಸವ. ೧೪೯) ; ಬಿರಿಯಲಬುಜಭವಾಂಡವಿದೆ ಕಪಿವರನ ಕಳಕಳ ದೇವದತ್ತದ ಧರಧುರದ ದೆಖ್ಖಾಳವಿದೆ ಗಾಂಡಿವದ ಬೊಬ್ಬೆಯಿದೆ (ಕುಮ್ಯಾವಿ. ೭-೪) ; ತುರಗಹೃದಯಧ್ವನಿಯ ಸಿಡಿಲಿನ ಧರಧುರದ ಗರ್ಜನೆಯ . . . ಬಱನ ಬರವನು ವಿರಚಿಸುವೊಡೆ ವಿಧಾತೃಗಳವಲ್ಲ (ಕುಮ್ಯಾಉ. ೩-೬೩) ; ಗಿರಿಯ ಮುತ್ತಿದ ಮುಗಿಲವೊಲು ಹೊಗೆ ಹೊರಳಿಗಟ್ಟಿತು ಮೇಲೆ ದಳ್ಳುರಿ ಧರಧುರದಲೊಳಬೀಳುತಿದ್ದವು ಕಿಡಿಯ ಚೂಣಿಯಲಿ (ಕುಮ್ಯಾದ್ರೋ. ೧೯-೪೫) ; ನಿಸ್ಸಾಳಕೋಟಿಯ ಧರಧುರದ ದೆಖ್ಖಾಳದಲಿ ತಲೆದೋಱಿದನು ಪಾರ್ಥ (ಕುಮ್ಯಾಕ. ೪-೧೯). ೨. ಹೆಚ್ಚಳ ; ಅತಿಶಯಂ; ಆಧಿಕ್ಯ : ಹರೆದ ಬಲ . . . ಮೊರೆವ ಬಹುವಿಧವಾದ್ಯರಭಸದ ಧರಧುರದ ಕೆಂಧೂಳಿಯಲಿ ಮೋಹರಿಸಿ ಮುಸುಕಿತು ಭೀಮಸೇನನ ರಥದ ಬಳಸಿನಲಿ (ಕುಮ್ಯಾಕ. ೧೯-೭) ; ಬೆರಳಲಂಬನು ತೂಗಲುರಿ ಘೂತ್ಕರಣೆಯಲಿ ಪಂಠಿಸಿತು ಸುಯ್ಲಿನ ಧರಧುರದ ಬೆಳುನೊರೆಯ ಲಹರಿಯ ವಿಷದ ಲೋಳೆಗಳ (ಕುಮ್ಯಾಕ. ೨೫-೫) ; ಹೊಱವಡಲಿ ಜನವೈದೆ ಮಧುರಾಪುರಕೆ ನೋಡುವ ಬಿಲ್ಲ ಹಬ್ಬದ ಧರಧುರದ ಸಂಭ್ರಮವನಾ ಹೊಳಲೊಪ್ಪವನು (ನಿಭಾಗ. ೧೦-೩೪-೧೯). ೩. ತೀವ್ರತೆ ; ತೀಕ್ಷ್ಣತೆ : ಬರಬರಲು ರಿಪುಭಟನ ಹೊಯ್ಗುಳ ಧರಧುರಕೆ ಕಲಿ ಸಾತ್ಯಕಿಯ ತರಹರಣೆ ತಗ್ಗಿತು ಮಹಿಮೆ ಮುಗ್ಗಿತು ಮುಱಿದುದಗ್ಗಳಿಕೆ (ಕುಮ್ಯಾದ್ರೋ. ೧೪-೧೦). ೪. ಉಗ್ರವಾದ ಕಾಳಗ ; ತೀವ್ರವಾದ ಯುದ್ಧ (?) : ಅಸಂಖ್ಯಾತ ನಿವಾತಕವಚರಂ ಧರಧುರದೊಳ್ ತಳತಾಳುಕನಿಕಾಯಮಂ [ಪಾಠಾಂ. ಧುರಂಧರೋದ್ಯತ್ತಾಳ ತಳತ್ತಾಳನಿಕಾಯಮಂ] ಸಾಯಕಸಘಾತದಿಂ ಯಮಪುರಕ್ಕೆ ಕಳುಪಿ (ಜಗವಿ. ೧೫-೫ ವ). ದರದುರ : ೫. ಶ್ರೇಷ್ಠ ; ಅಧಿಕ ; ದುರಂಧರ : ಆನು ನಿಮ್ಮ ಭಕ್ತಿಯಲ್ಲಿ ದರದುರನೆಂಬೆ ದಿಟಕ್ಕೆ ಬಂದರೆ ಕಾಣದಂತಡ್ಡಮೊಗ ವಿಕ್ಕುವೆಗರುಡಂಗೆ ಘಟಸರ್ಪನ ತೋಱುವಂತೆ (ಬಸವ. ೩೧೧).

[?]

ಧರಭೋಗಿ (ನಾ). ೧. ವಿಷವನ್ನುಳ್ಳುದಂ ; ಹಾವು. ೨. ಖಡ್ಗವನ್ನು ಬಳಸುವವನು ; ಖಡ್ಗಯುದ್ಧದಲ್ಲಿ ಸಂತೋಷಿಸುವವನು. ೧, ೨ : ಜಳನಿಧಿವೋಲು(ಲ್) ಗಭೀರನಹಿರಾಜನವೋಲು(ಲ್) ಧರಭೋಗಿ ಚಂದ್ರಮಂಡಳದವೊರೀ(ಲೀ)ಕ್ಷಣಪ್ರಿಯಂ . . . ಎನುತ್ತೆ ಬಣ್ಣಿಸುತವಿಪ್ಪುದು ಧಾರಿಣಿ ಚೀಲಗೌಂಡನ (ಕಇ. IV, ೧೦-೩೦ ; 1121).

[ಸಂ. ಧರಭೋಗಿನ್]

ಧರಸೋಡಿ (ವಾ). ಹೊಲ ಗದ್ದೆಗಳ ಮೇರೆಯನ್ನು ಗೊತ್ತುಮಾಡುವಾಗ ಅಂಕುಡೊಂಕಾಗಿರುವ ಅಂಚಿನ್ನು ನೇರವಾಗಿರುವಂತೆ ಅಕ್ಕಪಕ್ಕದ ಭೂಮಿಯ ಭಾಗವನ್ನು ಸರಿಪಡಿಸುವ ಪದ್ಧತಿ: ಧರಸೋಡಿ ಕೊಡುವಾಗ ಹ ಎಂಬಲ್ಲಿ ನ ಎಂಬಲ್ಲಿ ಸಹ ಕಂಪಾಸುಯಿಟ್ಟು ಅಂತರ ತೆಗೆದು ಉಳಿದ ಅಂತರದಲ್ಲಿ ಕೂಡಿಸಿಕೊಳ್ಳಬೇಕು. ಅದಕ್ಕೆ ಹೊರಗಿನದು ಧರಸೋಡಿ ಅಂದರೆ ಬಿಟ್ಟುಬಡತಕ್ಕದ್ದು (ಭೂಮಿಅ. ೪೭).

[←ಮರಾ. ಧರಸೋಡ]

ಧರಾಗ್ರ (ನಾ). = ಧರಣೀತಲ : ಸುರನರರಾಜಕಂ ಸಭೆ ಧರಾಗ್ರಮೆ ಕೂಡೆ ಸಮ್ಮುರ್ರಂಗಂ (ನೇಮಿಪು. ೯-೧೬೫) ; ವಿದಿತವಾಯುಶ್ರೀಯುಂ ಕೀರ್ತಿಯುಂ ಸದಮಳ ಜ್ಞಾನಾಭವೃದ್ಧಿಯುಂ ಒದಗಿ ಬಾಳುತ್ತಿಪ್ಪರವಿರತವೀ ಧರಾಗ್ರದೊಳು (ಬಸಪು. ೪೮-೩೨). [ಸಂ.]

ಧರಾಚಕ್ರ (ನಾ). = ಧರಣೀಚಕ್ರ ೧: ಪೆಜ[ನಾ]ವಂ ಧರಾಚಕ್ರಕ್ಕೆಱಿಯಂ ಕೆಳಿಯಪ್ಪವಂ ನೆಱೆ ಯಾರಿಣಿಯೆಂಬನ್ನಂ ಕುಱಿತಬ್ದಿಗೆ ಬನ್ನಮಂ (ಶವಿಕಾ. ೨-೧೨೫) ; ಬೆಸಕೆಯ್ದತ್ತು ಸಮುದ್ರಮುದ್ರಿತಧರಾಚಕ್ರಂ (ಪಂಪಭಾ. ೧-೧೧೦) : ತಿಜ್ರನೆ ತಿರುಗುವ ಧರಾಚಕ್ರಭ್ರಾಂತಿಯೊಳ್ ತಮಗೆ ಚಿತ್ತ ಭ್ರಾಂತಿಯಾಗೆ (ಗದಾಯು. ೯-೩೦ ಪ). [ಸಂ.]

ಧರಾತಲ, ಧರಾತಳ (ನಾ). = ಧರಣೀತಲ : ಮಾನಕ್ಕೆ ದೊರಕಲು ಸಂತಸದಿ ಕೊಂಡಧಿಕಸಂಭ್ರಮವಾಂತು ಪರಿತರಲೆಡಹೆ ಅಕ್ಕಿ ಧರಾತಲ [ಪಾಣಾಂ. ೪]ದೊಳೊಗಲು (ಬಸಪು. ೨೭-೧೭) : ಆ ಸತ್ಕೇಶಚಾಮಯನ ಸಾಂಗಭಾಷೆ ಧರಾತಲ[ಪಾಣಾಂ. ೪]ದೊಳುತ್ತುಂಗವಾಯಿತು (ಬಸಪು. ೩೭-೫೮). **ಧರಾತಳ** : ಪಟಿಯ ಧರಾತಳಮಂ ಗುಣದಟ್ಟಾವನೊಡಂಬಡದ ಕಾಮುದಂಗೀಯದದರ್ಕಟಾಪೆ ದೆಸೆಗಳ್ಗೆ ಕೆಮ್ಮನೆ ಮೊಬಗುವಿರೇಂ ಮೋಟಿಗಿದಂತೆ ಕೊಳ್ವವೆ ಮಟ್ಟಿಗಳ್ (ಕಾವ್ಯಸಾ. ೪೭೭ ಹೊದ್ರಳ) : ಧರಾತಳಮಂ ಕೊಟ್ಟನಿವಂ ಜಳಾಂಜಳಿಯುಮಂ ನಾಂ ಕೊಟ್ಟಿನಿಲ್ಲ (ಗದಾಯು. ೫-೩೦) ; ಬುಡಸಹಿತ ಬಲುಮರ ಧರಾತಳಕ್ಕುಡಿದು ಬಿದ್ದವು (ತೊರಹಾ. ೧-೧೦-೦೪).

[ಸಂ.]

ಧರಾತಳ 'ಧರಾತಲ' ನೋ.

ಧರಾತ್ಮಜ (ನಾ). = ಧರಣಿಸುತ: "ವಕ್ರಃ, ಅಂಗಾರಕಃ . . . ಧರಾತ್ಮಜಃ– ಈ ೫ ಮಂಗಳನ ಪೆಸರ್" (ಹಲಾಯು. ೯-೪೬). [ಸಂ.]

ಧರಾತ್ಮಜೆ (ನಾ). = ಧರಣಿಜಾತೆ : ತಿಂಗಳ್ಮನೆಯ ಮಿಗವೆ. . . ಬರುತಿರೆ ಧರಾತ್ಮಜಾವದನಮಂ ತನ್ನ ಸದನಂಗೆತ್ತು (ಶ್ರೀಧಾಮಾ. ೨೩೦-೩೨).

[ಸಂ. ಧರಾತ್ಮಜಾ]

ಧರಾದಾನ (ನಾ). ಭೂಮಿಯನ್ನು ದಾನವಾಗಿ ಕೊಡುವುದು ; ಭೂದಾನ : ಷೋಡಶಮಹಾದಾನಗಳನ್ನು ಮಾಡಬೇಕೆಂದು ನಿಶ್ಚಯಿಸಿ . . . ಎಲ್ಲವನ್ನೂ ಮಾಡಿದರು. ಅವು ಯಾವವೆಂದರೆ . . . ೧೧. ಧರಾದಾನ ೧೨. ವಿಶ್ವಚಕ್ರದಾನ (ಕಾಮವಂ. ೯೬). 'ಷೋಡಶದಾನ' ಪರಾ.

[ಸಂ.]

ಧರಾಧರ (ನಾ). ೧. ಭೂಮಿಯನ್ನು ಹೊತ್ತಿರುವಂಥದು : ಧುರದಗ್ಗಳದ ಗಮನಕೆ ಕರಿಗಳಡೆಗೆಡವ್ವ ಧರಾಧರದ [ಪಾಣಾಂ. ದಿಙ್ಮಾವಳಿಯ, ಧರಾತಳದ, ಧರಾತಳಕೆ] (ತೊರಹಾ. ೬-೨೭-೬). ೨. ಪರ್ವತ : ಆಯುಂ ಶ್ರೀಯುಂ ವಿಜಯಮುಮಾಯತಿಯುಂ ನೃಪತಿ ನಿನಗೆ ನಿಜ ಸಂತತಿಯುಂ ನ್ಯಾಯದೆ ಪೆರ್ಚುವುದಕ್ಕೀ ತೋಯಧಿ ಧರ[ಣೀಧ]ರಾಧರ ಸ್ಥಿತಿವರಿಗಂ (ಶವಿಕಾ. ೩-೨೦೬) ; ಅನ್ಯದೈವಧರಾಧರಾಶನಿ ಅನ್ಯದೇವಾರ್ಣವಕಳಶಭವ (ಬಸಪು ೫೩-೪). 'ಧರಾಧರಧರ' ಪರಾ. ೩. ವಿಷ್ಣು. ೪. ದೊರೆ ; ರಾಜ : ಚೌಪಳಿಗೆಗಳೊಳ್ ಧರಾಧರಧುರಂಧರಬಂಧುರ ರಾಜಕಂ . . . ಅವ್ವಳಿಸಿರೆ (ಪಂಪಭಾ. ೩-೫೩). [ಸಂ.]

ಧರಾಧರಧನ್ವ (ನಾ). (ಮೇರು) ಪರ್ವತವನ್ನು ಬಿಲ್ಲಾಗಿ ಮಾಡಿಕೊಂಡವನಂ ; ಶಿವ : ಧನಪತಿಮಿತ್ರ ಗಾತ್ರರುಚಿ ನಿರ್ಜಿತಮಿತ್ರ . . . ಧರಾಧರಧನ್ವ ಶಶಾಂಕಖಂಡಮಂಡನ (ರಾಜಶೇ. ೧೦-೫೯).

[ಸಂ. ಧರಾಧರಧನ್ವನ್]

ಧರಾಧರಧರ (ನಾ). ೧. ಬೆಟ್ಟವನ್ನು ಎತ್ತಿ ಹಿಡಿದವನು. ೨. ಭೂಮಿಯನ್ನು ಮೇಲೆತ್ತಿದವನು ; ವಿಷ್ಣು : ೩. ಕೃಷ್ಣ : ದೋರ್ಗರ್ವದಿಂದಾಂತ ವೈರಿ ಧರಾಧೀಶಬಲಕ್ಕೆ ಗಾಂಡಿವಧರಂ ಗಂಗಾಧರಂ ತುಂಗ ಶಕ್ತಿಧರಂ ವಜ್ರಧರಂ ಧರಾಧರಧರಂ ಶ್ರೀ ಕೀರ್ತಿ ವಿದ್ಯಾಧರಂ (ಪಂಚತಂ. ೪-೬) ; ಸಾಹಸದೊಳ್ ಧರಾಧರಧರಂ ಭುಜವೀರ್ಯದೆ ನಿಜವ್ರತಾಪಸನ್ದೋ ಹದೊಳಜ್ರ್ಜುನಂ . . . ವಿಷ್ಣುನ್ನಿವಾಳನೊಳಾರಿದಿವ್ಪರ್ವರ್ (ಆಳ. VI, ಕಡೂರು. ೫೧-೧೧. 1169). 'ಗಿರಿಧರ' ಪರಾ.

[ಸಂ.]

ಧರಾಧರಧೈರ್ಯ (ನಾ). ಬೆಟ್ಟದಂತೆ ಅಚಲವಾದ ಸ್ಥೈರ್ಯವುಳ್ಳವನು : ಗುರು-ಸನ್ನಿಧಿಯೊಳ್ಮುನ್ನಂ ಪರಿಣತವಡೆದಿರ್ದ ಸಕಳವಿದ್ಯೆಯನೀಗಳ್ ಪರಿವಿಡಿಗೆಯ್ವುಂತೆ ಕಳಾಧರನಾದಂ ಶ್ರೀಧರಂ ಧರಾಧರಧೈರ್ಯಂ (ಮಲ್ಲಿಪು. ೪-೦೩೪). [ಧರಾಧರ + ಧೈರ್ಯ]

ಧರಾಧರೇಂದ್ರ (ನಾ). ದೊಡ್ಡ ಬೆಟ್ಟ; ಪರ್ವತಗಳಲ್ಲಿ ಶ್ರೇಷ್ಠವಾದುದು: ದುರ್ಬ್ಬಾರಾರಿಧರಾಧರೇಂದ್ರಕುಳಿಶಂ ಶ್ರೀವಿಷ್ಣುಭೂಪಾಳನಾರ್ದ್ದರ್ಬ್ಬಟ್ಟಲ್ ಸೆಡೆದೂಡಿ ಪೋಗಿ ಭಯದಿಂದಾಬಂದನೀಬಂದನೆಂದುರ್ಬ್ಬೀಪಾಳರ ಕಣ್ಗೆ ಲೋಕವನಿತುಂ ತದ್ಭೂವವಾಗಿರ್ಪ್ಪುದುಂ ಸರ್ಬ್ಬಂ ವಿಷ್ಣುಮಯಂ ಜಗತ್ತೆನಿವುದೇಂ ಪ್ರತ್ಯಕ್ಷಮಾಗಿರ್ದ್ದುದೋ (ಆಳ. V, ಬೇಲೂರು. ೦೬೧-೦೯ : ಸು. 1160). [ಧರಾಧರ + ಇಂದ್ರ]

ಧರಾಧಾರ (ನಾ). ೧. ದೊರೆ ; ರಾಜ : ಪಾರಾವತಮುಂ ಗಿಡಿಗಂ ಭೋರೆಂದೋರಂತೆ ಮುಟ್ಟಿ ಬೆನ್ನಟ್ಟಿ ಧರಾಧಾರನೆಯೆನ್ನಂ ಕಾವುದಕಾರಣಮಾ ಶ್ಯೇನಕೋಪಮಪಗತಪಾಪಾ (ಶಾಂತಿಪು. ೯-೮೪). ೨. ಬೆಟ್ಟ ; ಪರ್ವತ. 'ಧರಾಧಾರಧರ್ಮ' ಪರಾ. [ಸಂ.]

ಧರಾಧಾರಧರ್ಮ (ನಾ). ೧. (ಮೇರು)ಪರ್ವತವನ್ನೇ ಬಿಲ್ಲನ್ನಾಗಿ ಮಾಡಿಕೊಂಡವನಂ ; ಶಿವ. ೨. ಬಹುಜನರು ಆಶ್ರಯಿಸಿರುವ ಶೈವಧರ್ಮದಲ್ಲಿ ನಿರತನಾದವನು ; ಬಸವೇಶ್ವರ. ೧, ೨ : ಶ್ರೀಶೈಲಾದಿಪ್ರಸಿದ್ಧಂ . . . ಧನದಮಿತ್ರಂ ಧರಾಧಾರಧರ್ಮಂ (ರಾಜಶೇ. ೧-೧).

[ಸಂ. ಧರಾಧಾರಧರ್ಮನ್ (ಧರಾಧಾರ + ಧರ್ಮ + –) ;
(ಧರಾ + ಆಧಾರ + ಧರ್ಮ + –)]

ಧರಾಧಿಪ (ನಾ). = ಧರಣೀಪ : ಪುಣ್ಯಕಥೆಯಂದದೆ ಭಾವಿಸಿ ಕೇಳ್ವುದಾ ಧರಾಧಿಪನ ಶರನ್ನಿಶಾಸರಕಳೋಜ್ಜ್ವಳಮಂ ಜಸಮಂ ಜಗದ್ಜನಂ (ಪಂಪ್ರಪು. ೨-೬) ; ಧರಾಧಿಪನತುಳಹರುಷದ ಹೊನಲಿಸಲಿ ಹೊದಱಿದ್ದು . . ನುಡಿದನು (ತೊರಹಾ. ೧-೫-೧೦) ; ಸಂತಾನಕಾಮಿ ಧರಾಧಿಪಂ . . ಪುತ್ರಾಭವಾಧಿಯಾ ಸಮಾಧಿಯೊಳ್ ತಾನಿರಲ್ (ಶ್ರೀಧಾಮಾ ೦೨-೩೦೬).

[ಸಂ.]

ಧರಾಧಿಪತಿ (ನಾ).=ಧರಣೀಪ : ತದ್ಧರಾಧಿಪತಿ ತನ್ಮನಿನಾಥರೆ ವಾದಪದ್ಧದೊಳ್ ಬಿಟ್ಟಿಟ್ಟು (ನೇಮಿಪು. ೨-೨೪) ; ಬರೆ ಬಳವಾ ಧರಾಧಿಪತಿ ಕಾಲನ ದಾಟಿಯ ಮೂಲಕರ್ತ್ಯವೀ ನರಪತಿಯೆಂಬಿನಂ ನಡೆದು (ಪುಹಾನೇ. ೫-೮೦).

[ಸಂ.]

ಧರಾಧಿಪತ್ಯ (ನಾ). ಭೂಮಿಯಂ ಒಡೆತನ : ಧರಾಧಿಪತ್ಯಪತಿಯಾಗದವಂ ಧರಣೀಶಪುತ್ರನೇ (ಪುಹಾನೇ. ೪-೬೪) ; ತಂದಳು ಮತ್ತೆ ವಲ್ಕಲವ ವನ ನಿವಾಸಧರಾಧಿಪತ್ಯದ ಜನಪತನದುಡುಗೊಟ್ಟಿಯಿದೀಗೆಂದೆನುತ (ತೊರಹಾ. ೨-೩-೪೫). [ಸಂ.]

ಧರಾಧೀಶ (ನಾ). = ಧರಣಿಪ : ಈಬುಂದಂ ಧರಾಧೀಶನೆಂಬರವಂ ಪೊಂಪುಬೋಗೆ (ಆದಿಪು. ೧೨-೧೨೬) ; ಚಂದಾವುರದ ಧರಾಧೀಶನಪ್ಪ ಸೂರ್ಯಮಹಾರಾಜನ ಸುತಂ ಸಾಮಾನ್ಯಲ್ಲೆಂಬುದುಂ (ಮಹಾನೇ. ೯-೪೩ ವ). [ಸಂ.]

ಧರಾಧೀಶ್ವರ (ನಾ). = ಧರಣಿಪ : ಸ್ತಿಮಿತಸಾಗರ ಧರಾಧೀಶ್ವರನವಿನಶ್ವರ ಸುಖಾನುಭವನಿರತಂ (ಶಾಂತಿಪು. ೧-೭೩ ಪ) ; ಧಿಗಿಲೆಂದುದು ಧರಾಧೀಶ್ವರನ ತಂದೆಯ ಹೃದಯದಲಿ (ಕುವ್ಯಾಳ. ೧-೨). [ಸಂ.]

ಧರಾಧ್ರ (ನಾ). = ಧರಾಧರ ೨ : ಪ್ರತಾಪವಿನನಂ ಘನಧೈರ್ಯಗುಣಂ ಧರಾಧ್ರಮಂ . . . ಗೆಲ್ದು ತೋಱದಾ ಭೂವನ ಖಡ್ಗವೊಂದೆ ಸಲೆ ಗೆಲ್ದುದೆ ವೈರಿನರಾಧಿನಾಥರಾ (ರಾಜಶೇ. ೩-೭). [ಸಂ.]

ಧರಾನಂದನೆ (ನಾ).=ಧರಣಿಜಾತೆ : ಧರಾನಂದನೆಯ ಪಾಣಿಗ್ರಹಣದುಜ್ಜಗದನಿತ ಪೇಳ್ದೆಚ್ಚಱಸಿದನು ಮೇಲಣ ಮಹೋತ್ಸವವ (ಕೊರಣ. ೦-೦೬-೮). [ಸಂ. ಧರಾನಂದನಾ]

ಧರಾಪುತ್ರಿ (ನಾ). = ಧರಣಿಜಾತೆ : ಪಂತದಿಂ ಪಾಡಿನಿಂದೊಬ್ಬರೊಬ್ಬರ ಕಾಡಿ ಕರುಬಿಂದೆ ಬಂದರಿಲ್ಲಿಗೆ ಧರಾಪುತ್ರಿಯಂ ಕೈವಿಡಿಯೆ (ಕ್ರೀರಾಮಾ. ೪೦-೩೭). [ಸಂ. ಧರಾಪುತ್ರೀ]

ಧರಾಭಾಗ (ನಾ). ಭೂಮಿ ; ನೆಲ : ಆ ಮರುತಾತ್ಮಪ್ರಭವಂ ಮರುಜ್ಜವದಿನೆಯ್ತಂದುದ್ಧತಂ ಕೌರವೇಶ್ವರನೂರುದ್ವಯಮಂ ಗದಾಪರಿಘದಿಂ ಪೊಯ್ಯಲ್ ಧರಾಭಾಗದೊಳ್ ಗಿರಿ ಬೀೞ್ವಂತಿರೆ ಬಿೞ್ದಂ (ನೇಮಿಪು. ೧೨-೨೦೨). [ಸಂ.]

ಧರಾಭಾರ (ನಾ). ಆಡಳಿತದ ಹೊಣೆ ; ರಾಜ್ಯಭಾರ : ನೀನೆ ಜಟ್ಟಿಗನೈ ಮುನ್ನಿನೂರಂಟುವೇಡ ಮಗನೇ ಕೈಕೊಳ್ ಧರಾಭಾರಮಂ (ಪಂಪಭಾ. ೧-೮೦) ; ನಿನಗಸ್ಮದ್ವಚನಂ ವಿಧೇಯಮದಱಿಂ ಕೈಕೊಳ್ ಧರಾಭಾರಮಂ (ಪಂಪಭಾ. ೬-೮೬) ; ಸಂಸಾರಕ್ಕೆ ಪೇಸಿ . . . ಅರಿಂಜಯಂಗೆ [ರಾಜ್ಯಾಭಿಷೇಕಂ ಮಾಡಿ] ಧರಾಭಾರಮನೊಪ್ಪಿಸಿ (ಧರ್ಮಾಮೃ. ೪-೩೬೪). [ಸಂ.]

ಧರಾಮಂಡಲ, ಧರಾಮಂಡಳ (ನಾ). ಧರಣಿಮಂಡಲ; ಭೂಮಂಡಲ; ಪೃಥ್ವಿ : ಮುಂ ಕೊಂಬ ಮುಂದಿ ಕಾದುರಿಗೆ ಧರಾಮಂಡಲಂ ಸಂಕುಲದ ವಾದ್ಯಧ್ವನಿಗೆ. ದಿಶಾಮಂಡಲಂ . . . ಸಂಕೋಚವೆನೆ ಬಂದು ಪಿಡಿದು ಪಾರ್ಥನ ತುರಗಮಂ ಕಟ್ಟಿ ಬಳಸಿ ಪದ್ಮವ್ಯೂಹಮಾಗಿ ನಿಂದಾರ್ದುದಾ ಸೇನೆ ನಲಿದು (ಕೃಷ್ಣಾ. ೦೨-೪). **ಧರಾಮಂಡಳ** : ಅಕ್ಕಣನೆ ಸುತಂ ಸಾಸ್ತ್ರನೊಳಕ್ಕುಂ ದೊರೆ ಚಾರುದತ್ತ ಬಲಿ[ಸಿ]ಬಗುತ್ತಂ ಏಸಿಕ್ಕ ನರನಾತನಾರ್ಪಿ[ರ್ಪ]ಗಕ್ಕುಮೆ ದೊರೆಯಾಗಲೀ ಧರಾಮಣ್ಡಳದೊಳ್ (ಸೌಇಇ. XX, ೩೫-೪೪ ; 1081) [ಸಂ.]

ಧರಾಮಂಡಳ 'ಧರಾಮಂಡಲ' ನೋ.

ಧರಾಮರ (ನಾ).=ಧರಣಿಸುರ: ಚಾರಿತ್ರಶುದ್ಧರ್ ಧರಾಮರರೀ ಬ್ರಾಹ್ಮಣರೆಂದು ಕೊಂಡುಕೊನೆದಾ ಷಟ್ಖಂಡಭೂಮಂಡಲೇಶ್ವರನೋರಂತೆ ನೆಗಟ್ಟಿ ಕೂಡೆ ನೆಗಟ್ಟದ್ತೆತ್ತಂ ದ್ವಿಜನ್ಮಾನ್ವಯಂ (ಆದಿಪು. ೧೫-೨೧) : ಪರಸುವ ಧರಾಮರರ ಪರಕೆಯ ರವಂಗಳಿಂ (ಅಜಿಪು. ೪-೭) ; ಧಾಮ ನಾಮಧೇಯಗ್ರಾಮದೊಳಿರ್ಪಂ ಧರಾಮರಂ ವಿಮುಂಚಿಯೆಂಬಂ (ಶಾಂತಿಪು. ೬-೪೨ ಪ) ; ಧರಾಮರರಂ ಕನಿಷ್ಠಕುಲದ ಮನುಜರಿಗೆ ಸೋಂಕಲಾಗದಿದೇಬುದೊದುಂಟೇ (ಬಸವ. ೫೬-೪೩). [ಸಂ.]

ಧರಾಮರತ್ವ (ನಾ). ಬ್ರಾಹ್ಮಣ್ಯ ; ಬ್ರಾಹ್ಮಣನಾಗಿರುವಿಕೆ : ಪಡೆಯ ಬಾರದ ದಿವ್ಯರುಪ್ಪ ಧರಾಮರತ್ವಮನಮ್ಮ ನೀಂ ಪಡೆದು ಮತ್ತದನೊಲ್ಲದಿಲ್ಲಿಗೆ ವಂದು . . . ಪೊರ್ದಿದೈ ಜನದೀಕ್ಷೆಯಂ (ಧರ್ಮಾಮೃ. ೦-೬೬). [ಸಂ.]

ಧರಾಮರಪತಿ (ನಾ). ೧. ಭೂಮಿಗೆ ಇಂದ್ರನಂತಿರುವವನು ; ದೊರೆ ; ರಾಜ : ಇರೆ ಚಂದ್ರಂ ತೊಲೆಯೊಳ್ ಹಿಮಕರಣಸುತಾದಿ ಗ್ರಹಶ್ರಯಂ ನೋಡೆ ಧರಾಮರಪತಿ (ಕಾತಪ. ೨೦-೬), ೨. ಶ್ರೇಷ್ಠನಾದ ಬ್ರಾಹ್ಮಣ : ಕಮಂಡಲು ಪಳಚ್ಚನೆಸೆದಿರ್ದುದು ಶುದ್ಧಾಂತಃಕರಣೋಪಾಧ್ಯಾಯಾಂತೇವಾಸಿಯವೊಲಾಧರಾಮರಪತಿಯಾ (ಅನಂಪು. ೩-೪೪). [ಸಂ.]

ಧರಾರುಹ (ನಾ). ಮರ ; ವೃಕ್ಷ : ವೆಡೆಯೆತ್ತಿ ನಲಿವ ನಾಗಂಗಳಂ ಕೊನೆಗೊಂಬುಗಳೊಳ್ ತಾಳ್ದು . . . ಮಾಣಿಕ್ಯದ ಮರಂಗಳಂತಿರಂದಂಬೆತ್ತ ಚಂದನಧರಾರುಹಂಗಳಿಂ (ಕಲಶಂ. ೩-೩೫ ವ). [ಸಂ.]

ಧರಾವರ (ನಾ). ರಾಜ ; ದೊರೆ : ಅಂತು ಬಂದ ನಾರದನನಾದರದಿಂದಾ ಧರಾವರಂ ಸಮುಚಿತಾಸನದೊಳಿರಿಸಿ (ನೇಮಿಪು. ೧೧-೬೮ ವ). [ಸಂ.]

ಧರಾವರೆ (ನಾ). ಶ್ರೇಷ್ಠವಾದ ಭೂಮಿ : ಪಲಕಾಲಂ ಭರತಧರಾವರೆಯೆಲ್ಲಂ ಭೋಗಭೂಮಿಯಾಗಿರೆ . . . ಭೋಗಭೂಮಿಜರ್ ಸುಖದಿನಿರಲ್ (ಸಮುಪ. ೩-೯). [ಸಂ. ಧರಾವರಾ]

ಧರಾವಲಯ, ಧರಾವಳಯ (ನಾ). = ಧರಾಮಂಡಲ: ಅಡಿದಳಿರ್ಗೆ ಧರಾವಲಯಂ ಕಡುವೆಟ್ಟತ್ತಾಗೆ ನಡೆಯಲಱಿಯದೆ ಮನುಜರ್ ಸೆಡೆಯೆ ಹಯಾದಿಗಳಿಂದಂ ನಡೆಯಿಸಿದಂ ಕಲಿಸಿ ವಾಹನಾರೋಹಣಮಂ(ಪಂಂಪಭಾ. ೧-೬೬). **ಧರಾವಳಯ** : ಅಂತು ನಿರಂತರಂ ಧರಾವಳಯವೆಲ್ಲಂ ಬಲಮಯಮಾಗೆಯುಂ ... ಅಗುರ್ವಾಗಿ ನಡೆಯೆ (ವರ್ಧಮಾ. ೮-೫೧ ವ) ; ಧರಾವಳಯಮಂ ಪ್ರಚಂಡಭುಜದಂಡದೊಳ್ ತಾಳ್ದಿದಂ (ಮಲ್ಲಿಪು. ೩-೦೨) ; ಶೂರತ್ವದೊಳೀ ಧರಾವಳಯದೊಳ್ ವಿಭು ಕೇಶವರಾಜನೊಪ್ಪುವಂ (ಸೌಇಇ. XX, ೨೪೮-೪೪ : 1228) ; ಧರಾವಳಯಪೂಜಿತನಾ ಜಿತಶತ್ರುಭೂಭುಜಂ ಮಗಳ್ದಿರು ಮನಳಿಯನುಮಂ ಮುಂದಿಟ್ಟು ಪುರುಮನರಮನೆಯುಮಂ ಪೊಕ್ಕು (ಮಹಾನೇ. ೪-೫೮). [ಸಂ.]

ಧರಾವಲ್ಲಭ (ನಾ). = ಧರಣಿಪ : ಆ ಧರಾವಲ್ಲಭಂ ಮಂಥರೆಯ ಭೀಷಣೈಕಾಂತತೆಗೆ ಬಗೆಗರಗಿ (ಕ್ರೀರಾಮಾ. ೨೩-೬೦೪). [ಸಂ.]

ಧರಾವಳಯ 'ಧರಾವಲಯ' ನೋ.

ಧರಾವಿಭಾಗ (ನಾ). ಭೂಭಾಗ ; ದೇಶ : ಪನ್ನಗಕೇತನಂಗೆ ಧರಾವಿಭಾಗಮನಿತ್ತು . . . ಬನ್ನವಿಲ್ಲದೆ ಬಾಬ್ಬುದೇಂ ಪುಬುವಾನಸಂಗೆನಗಕ್ಕುಮೇ (ಪಂಪಭಾ. ೪-೧೬). [ಸಂ.]

ಧರಾಸುತ (ನಾ). = ಧರಣಿಸುತ. [ಸಂ.]

ಧರಿತ್ರಿ (ನಾ). ೧. ನೆಲ ; ಭೂಮಿ ; ಪೃಥ್ವಿ : "ಸ್ಥಿರೆ ಧರಣಿ ಧಾತ್ರಿ ಮೇದಿನಿ ಧರಿತ್ರಿ ಧರೆಯವನಿ ಪೃಥ್ವಿ . . . ಭೂಮಿ ಭೂ ಗೋತ್ರೆ ನೆಲಂ" (ವಸು.ಕೋ. ೩೬-೧) ; ಧರಿತ್ರಿಯಂ ಜೇಯೆನೆ ಬೇಡಿಕೊಳ್ಳದೆ ವಿರೋಧಿನರೇಂದ್ರರನೊತ್ತಿ ಕೊಂಡುಂ (ಪಂಪಭಾ. ೧-೧) ; ನಿನಗಾರ್ ದೊರೆ ಮಾನವರೀ ಧರಿತ್ರಿಯೊಳ್ (ಪುಷ್ಪಪು. ೪-೬೬) ; ವಿರಹ ವಿಸ್ಮೃತಿ ಕೇವಳವೋ ಧರಿತ್ರಿಯೊಳ್ (ನಳಚ. ೬೩); ಅವಗೆ ಧರಿತ್ರಿಯೊಳಗೆಣೆಯಾವನೈ ಭೂಪಾಲ (ಕುವ್ಯಾಳ. ೩-೬೩). ೨. ಜನ : ಮಗನೆಂಬಂತು ಧರಿತ್ರಿ ನಿನ್ನನುಜರಂ ಕೈಕೊಂಡು ಮುಂ ಪೂಣ್ದ ನನ್ನಿಗೆ ಬನ್ನಂ ಬರಲೀಯದಾರ್ತಸಗಿದೀ ವಿಖ್ಯಾತಿಯುಂ ಕೀರ್ತಿಯುಂ ಮುಗಿಲಂ ಮುಟ್ಟಿದುದಲ್ತೆ (ಪಂಪಭಾ. ೧-೮೧). [ಸಂ. ಧರಿತ್ರೀ]

ಧರಿತ್ರೀಜಾತ (ನಾ). = ಧರಾರುಹ : ಆತಪಂ ಪರಿದಾದಡಂ ಸಂಪ್ರೀತಿಯಲಿ ಬಂದೇಱಿದಡೆ ಚಂದ್ರಾತಪದೊಳಿರಿಸುವ ಧರಿತ್ರೀಜಾತ ಜಾತಿಗಳ (ಬಸವ. ೧೯-೪೯). [ಸಂ.]

ಧರಿತ್ರೀತಳ (ನಾ). ಭೂಲೋಕ ; ಭೂಮಿ : ಅಪ್ರಮಿತಮುನಿಮಾಳೆಯೊಳ್ ವರ್ಧಮಾನಮುನಿ ನೆಗಟ್ದನೀ ಧರಿತ್ರೀತಳದೊಳ್ (ಸುಳುಮಾ. ೧-೩೪). [ಸಂ. ಧರಿತ್ರೀತಲ]

ಧರಿತ್ರೀತಿಳಕ (ನಾ). ಭೂಲೋಕಕ್ಕೆ ತಿಲಕದಂತೆ ಭೂಷಣಪ್ರಾಯಂ ವಾದಂದು : ಆ ಕುರುಜಾಂಗಲವಿಷಯಮಹೀಕಾಂತೆಗೆ ಪೊಸತೆ ಸಮಂದ ಮುತ್ತಿನ ಮುಡಿ ಧಾತ್ರೀಕರ್ಣಪೂರಮವನಿಸ್ತ್ರೀಕರಲೀಲಾಂಬುಜಂ ಧರಿತ್ರೀ ತಿಳಕಂ (ಶಾಂತಿಪು. ೯ ೧೩೮). [ಸಂ. ಧರಿತ್ರೀತಿಲಕ]

ಧರಿತ್ರೀಧವ (ನಾ). = ಧರಣಿಪತಿ : ಅವರವರ ಮತಗಳ ಧರಿತ್ರೀಧವ ನೊರೆಯಲು (ಶಂಕಬಾ. ೧೦-೬). [ಸಂ.]

ಧರಿತ್ರೀನಾಥ (ನಾ). = ಧರಣಿಪ : ಕುಸುಮದತ್ತಂಗೆ ಧರಿತ್ರೀನಾಥ ಪದವಿಯಂ ಕೊಟ್ಟು ನರಪತಿ ಬಟಿಕ ದೀಕ್ಷೆಯಂ ಕೈಕೊಂದಂ (ಯಶೋಧ. ೪-೭೬). [ಸಂ.]

ಧರಿತ್ರೀಪಾಲ, ಧರಿತ್ರೀಪಾಳ (ನಾ). = ಧರಣಿಪ : ಕೇಳು ಜನಮೇಜಯ ಧರಿತ್ರೀಪಾಲ ನಿಮ್ಮಯ ಪೂರ್ವಪೃಥ್ವೀಪಾಲರಿದ್ದರು ನಿಮ್ಮತಿಂದ ವಿರಾಟನಗರಿಯಲಿ (ಕುಮಾವಿ. ೨-೧). **ಧರಿತ್ರೀಪಾಳ :** ಪನದೇವಂ ಕಂಡೋಲಗಿಸಿದಂ ಧರಿತ್ರೀಪಾಳಂಗೆ ಸನೀಂದ್ರಸಾರವಸ್ಮೃತ್ಕರಮಂ (ವರ್ಧಮಾ. ೯-೬೩). [ಸಂ.]

ಧರಿತ್ರೀಪಾಳ 'ಧರಿತ್ರೀಪಾಲ' ನೋ.

ಧರಿತ್ರೀಮಿತ್ರ (ನಾ). ಇಡೀ ಭೂಲೋಕಕ್ಕೆ ಗೆಳೆಯನಂತಿರುವವನು ; ಲೋಕಕ್ಕೆ ಉಪಕಾರಿಯಾದವನು : ಎಲ್ಲಿ ಬಂದುದೊ ತುರಂಗಂ ಕೇಳಿಯೇಕಾದುದೀ ಶಿಶುವಿಂತೇಕಳಿದತ್ತೊ . . . ಕೋಪಿಸಿ ಚೋಳಾಧಿಪನೇಕೆ ಕೊಲ್ವನೊ ಧರಿತ್ರೀಮಿತ್ರನಂ ಪುತ್ರನಂ (ರಾಜಶೇ. ೧೪-೪೬). [ಸಂ.]

ಧರಿತ್ರೀರಮಣ (ನಾ). = ಧರಣಿಪ : ಪತ್ರೀಂದ್ರವಾಹನಂ ಬಳಿಕ್ಕೆದೆ ಪಾಂಡವ ಧರಿತ್ರೀರಮಣರಿದಿರ್ಗೊಂಡರು (ಕೃಷ್ಣಮಿಶ್ರಾ. ೨-೪೬). [ಸಂ.]

ಧರಿತ್ರೀವಲ್ಲಭ (ನಾ). = ಧರಣಿಪ : ರತ್ನಕಂಬಲಮನಾ ಧರಿತ್ರೀವಲ್ಲಭಂ ಮುಹುರ್ಮುಹುರಾಲೋಕನಕುತೂಹಳಚಿತ್ತನಾಗಿ ವಿಸ್ಮಯಂಬಟ್ಟು (ಸುಕುಮಾ. ೧೦-೧೦೫ ವ). [ಸಂ.]

ಧರಿತ್ರೀಸ್ತುತ್ಯ (ನಾ). ಲೋಕದ ಹೊಗಳಿಕೆಗೆ ಪಾತ್ರನಾದವನು ; ಲೋಕಪೂಜ್ಯ : ಸೂರ್ಯಮಿತ್ರಬ್ರುತಿಪತಿಗವಧಿಜ್ಞಾನವೊಪ್ಪಿರ್ದುದಂ ಕಂಡು ಧರಿತ್ರೀಸ್ತುತ್ಯಂ . . . ತುಷ್ಟನಾದಂ ಪರಮಜಿನಮತಾಂಭೋಜಿನೀ ರಾಜಹಂಸಂ (ಸುಕುಮಾ. ೩-೪೮). [ಸಂ.]

ಧರಿಯಿಸು 'ಧರಿಸು' ನೋ.

ಧರಿಸು, ಧರಿಯಿಸು (ಕ್ರಿ). ೧. (ಕೈಯಲ್ಲಿ) ಹಿಡಿ ; ತೆಗೆದುಕೊಳ್ಳು : ಹರಕೆಯನು ಕೈಕೊಂಡಮಿತವಿಕ್ರಮನಿಪುಧಿಚಾಪಕೃಪಾಣವನು ಧರಿಸಿ ಗಮಿಸಿದನು ಮುನಿಯೊಡನೆ (ತೊರರಾ. ೦-೯-೪೨). ೨. ಹೊರು ; ನಿರ್ವಹಿಸು ; ಹೊತ್ತುಕೊಳ್ಳು : ರುಂಹರಿ ರುಜೆಗೆ ಸರಿದಳು ಧರಿಸಲಾಱದೆ ವೈರಿವಾಹಿನಿಯ (ತೊರರಾ. ೬-೦೭-೧೨). ೩. ತಾಳು ; ತಳೆ : ತನುವಿನಲ್ಲಿ ಸುಖವ ಧರಿಸಿಕೊಂಡಡೆ ಆ ತನುವಿಂಗೆ ಕೊಱತೆ ನೋಡಾ (ಅಪಚಂ. ೯೬-೪೩) ; ಮಧುಸೇಕಮನಾದರಿಸದೆ ವಕುಳಂ ಮುಕುಳಮನರಲಂ ಧರಿಸಿದುದು ಕೊಂಬುಕೊಂಬಿನೊಳೆಲ್ಲಂ (ಚಂದ್ರಪು. ೨-೯೨) ; ಶಿರದೊಳು ಧರಿಸಿಯವರ ನಿಜಾಜ್ಞೆಯಂ (ಬಸಪು. ೪೮-೨೧) ; ಬಂಜೆ ಗರ್ಭವ ಧರಿಸುವಳು ಧನಧಾನ್ಯಗೋಧನಸಂಪದಾದಿಗಳು ಭರಿತವಾಗಿಹವಾ ಮುನಿಪನಿಹ ಧರಣಿಯಲಿ (ತೊರರಾ. ೦-೩-೬೦) ; ಪರಮಪವಿತ್ರೋದಕವ ಹಸ್ತದೊಳಾಂತಾ ಶಿರದೊಳು ಧರಿಸಿಕೊಂಡು (ಮೋಹತ. ೬-೪೪) ; ನಕ್ಷತ್ರಮಯ ರಾತ್ರಿಯಂ ಧರಿಸಿ ಸೂರ್ಯನೆ ಶೋಭಿಪಂತೆ . . . ಪೊಳೆದುದು ಕಣ್ಗೆ ಮಂಗಳದಮರ ಮೂರ್ತಿ (ಶ್ರೀರಾಮಾ. ೧೩-೩೪೩). ೪. (ಉಡುಪು, ಆಭರಣ ಮೊದಲಾದಂವನ್ನು) ತೊಡು ; ಹಾಕಿಕೊಳ್ಳು ; ಧಾರಣೆಮಾಡು : ಏಕ ಮುಖದ ರುದ್ರಾಕ್ಷಿಯ ಒಂದನೆ ಪಶ್ಚಿಮದಲ್ಲಿ ಧರಿಸುವುದಯ್ಯ (ಅದಪ. ೧೮-೪೫) ; ನೆನೆದು ಭೋಂಕೆನಲೆದ್ದು ರುದ್ರಾಕ್ಷಿಯಂ ಧರಿಸಿ (ಸಂಬಿರ. ೦೯-೭೨) ; ಮಗುವು ವೇಷವ ಧರಿಸಿ ದೂರದಲಗಲಿ ಹೋಗಲು ತನ್ನ ಚಿತ್ತಕೆ ಢಗೆಯ ಡಾವರವಾಯ್ತು (ಕುಮಾದ್ರೋ. ೬-೬೪) ; ಧರಿಸಿದನು ನವರತ್ನಖಚಿತಾಭರಣ ದಿವ್ಯಾಂಬರ ಸುಮೂಲ್ಯಸುಗಂಧನಿಕರವನು (ನಳಚ. ೨-೧೧) ; ಮಿಱುಪ ಕಿರೀಟವುಂಟದನಂದು ಧರಿಸಿಶಿಲ್ಲುಱ ಮನದೊಂದು ಲೀಲೆಯೊಳು (ಧರಚ. ೧-೩೪) ; ಜಡೆಯೆಡೆಯೊಳು ಗಂಗೆಯ ಮುಡಿದಂಡೆಯಾಗಿ ಧರಿಸಿದ . . . ಚೆನ್ನ ನಂಜುಂಡನಡಿದಾವರೆಗೆಱಗುವೆನು (ಕಂನವಿ. ೦-೭) ; ಇನ್ನಿಬ್ಬರು ಒಳ್ಳೇ ಉಡುವು ಧರಿಸಿದ್ದ ಗಂಡಸರು ಬಂದಿದ್ದರು (ಚಂಗಾಳ್ವ. ೪೭೫). ೫. ತಿಲಕ, ವಿಭೂತಿ, ಗಂಧ, ಮುದ್ರೆ, ನಾಮ ಮುಂತಾದುವುಗಳನ್ನು ಹಚ್ಚಿಕೊಳ್ಳು, – ಇಟ್ಟುಕೊಳ್ಳು : ನಿಮ್ಮ ಲಾಂಛನವ ಧರಿಸಿಪ್ಪ ಉದರಪೋಷಕ ನಾನಯ್ಯಾ (ಬಸವ. ೩೪೦) ; ಭಸಿತ ರುದ್ರಾಕ್ಷಾದಿ ಮುದ್ರೆಗಳ ನಿರ್ಮಲತೆಯಿಂ ಧರಿಸಿ ಚರಿಸುತ ಚರ್ಮ ದುರ್ಮುದ್ರೆಗಳನೇ . . . ಧರಿಸುವುದುಚಿತವೇ ಹೇಳು (ಬಸಪು. ೩-೪೮). ೬. ತೊಡಿಸು ; ಮಂಡಿಸು ; ತೊಟ್ಟುಕೊಳ್ಳುವಂತೆ ಮಾಡು : ಕೆಲರು ಹೂವಿನ ಹಾಸಿಗೆಯ ಕೋಮಲೆಗೆ ಸಮೆದರು ಕೆಲರು ಚಿಗುರಿನ ತೊಡವ ಧರಿಸಿದರು[ಪಾಣಾಂ. ನಾನಾ ವಿವಿಧ ಶೃಂಗೋಪಚಾರವ ರಚಿಸಿ] (ನಳಚ. ೦-೪೦). ೭. ಪಡೆ ; ಹೊಂದು : ಕೋಲು ಧರಿಸಿದವೆಱಕೆಗಳನೆನೆ ಚಾಳಿಸಿತು ಪಡೆ (ಕುಮಾದ್ರೋ. ೧-೭೦) ; ರಕ್ತಜಲದಲಿ ಕರುಳ ಹೂಮಾಲೆಯಲಿ ವೀರರಣಾಭಿಷೇಕವನು ಧರಿಸಿ . . . ಮನದುಬ್ಬರದಲಿಱಾಡಿದರೆ ದಿಟ ಕೃತಕೃತ್ಯತಾನೆಂದ (ಕುಮಾಕ. ೮-೩೯) ; ಲತಾಂಗಿಯ ದಕ್ಷಿಣಹಸ್ತಂ ಧರಿಸಿತು ಪರಿದುಂ ಚೆಲ್ವಿಕೆಯಾ (ಜಯಶಾ. ೨-೦೪) ; ವಿಶೇಷಮಾಂದ್ಯವನಾಂತು ದೊಳ್ಳಡೆ ಬಳಲ್ಕೆಯಂ ಧರಿಸಿ (ಚಿಬಪು. ೪-೧೦) ; ಶರ್ಮ ಎಂಬ ಉಪಪದ ವನ್ನು ಬ್ರಾಹ್ಮಣರಲ್ಲದೆ ಅನ್ಯರು ಧರಿಸುತ್ತಿದ್ದಿಲ್ಲವೆಂಬುದನ್ನು ಜ್ಞಾಪಕವಿಡ ಬೇಕು (ಕರ್ಣಾಅ. ೭). ೮. (ವ್ರತ ಮೊದಲಾದುವನ್ನು) ಕೈಕೊಳ್ಳು ; ಆಚರಿಸು : ಪಾಶುಪತ ಸುವ್ರತವ ಧರಿಸಿದುದಾ ಸುಪರ್ವಸ್ತೋಮ (ಕುಮಾಕ. ೬-೩೩). ೯. ತಡೆ ; ತಡೆಹಿಡಿ ; ನಿರೋಧಿಸು ; ನಿಲ್ಲಿಸು : ವರನದಿಗಳಲಿ ಮುಳುಗಿ ಮೂಗಿನ ಬೆರಳಲೂರ್ಧ್ವಶ್ವಾಸಪವನನ ಧರಿಸಿ ಕಾಲತ್ರಯಜಪಾನುಷ್ಠಾನಹೋಮದಲಿ . . . ನೀಮಾಚರಿಸುವುದು (ಕುಮಾಕ. ೧೧-೬೦). ೩, ೯ : ಶಶಿರವಿಗಳ ನೆಱ ಧರಿಸಿ ಸಂತೋಷದೆ ಪಶುಪತಿಯಂತೆ ರಾಜಿಸುತ . . . ರಂಜಿಸಿದುದಾ ಬನ ದೊರೆಯಂತೆ (ಕಂನವಿ. ೨-೫೦). ೧೦. ಒಳಕೊಳ್ಳು ; ಒಳಗೊಂಡಿರು : ಕ್ಷೀರಾಬ್ಧಿ ಹರಿಯ ಧರಿಸಿಕೊಂಡಿಹುದು (ಕಂನವಿ. ೫-೪೨). ೧೧. ಆಧಾರವಾಗು ; ಆಸರೆಯಾಗು : ಅಗ್ನಿ ವಾಯುವ ಧರಿಸಿ ವಾಯು ಆಕಾಶವ ಧರಿಸಿ ಆಕಾಶ ಅಪ್ಪುವ ಧರಿಸಿ (ಮೋಕಮಾ. ೨-೨). **ಧರಿಯಿಸು :** ೨. ಪಲ ರಾದರಿಸಿದ ಧರಣೀಭರಮಂ ಧರಿಯಿಸಿದಂ ಪ್ರತಿಮನಂಬನಪ್ರತಿಮಬಲಂ (ಪಂಪಧಾ. ೦-೬೪) ; ಧರಿಯಿಸಿ ಮಂದರಮಂ ಕೂರ್ಮರೂಪದಿಂ (ಜಗವಿ. ೮-೦೬) ; ಕಡು ಸೊಗಯಿಸುವೀ ಕುಸುಮದ ಫಲಮೇ ಪೊಡವಿಯನೆಲ್ಲಮ ನೊಂದೇ ತೋಳೊಳ್ ಗಡಣದಿ ಧರಿಯಿಪುದಪ್ಪುದು ನಿಶ್ಚಯಂ (ಜಯಶಾ. ೨-೪೬). ೩. ಪರಮಜಿನೇಂದ್ರವಾಣಿಯ ಸರಸ್ವತಿ ದೇಜದು ವೆಣ್ಣ ರೂಪಮಂ ಧರಿಯಿಸಿ ನಿಂದುದಲ್ತು (ಆದಿಪು. ೧-೯) ; ಹರಿ ವರ್ಷಜಧನುವಂ ಸಂಹರಿಸ ಲೊಡಂ ಚೈತ್ರಚಾಪಮಂ ಜಿನಚಂದ್ರಂ ಧರಿಯಿಸಿದಂ (ಶಾಂತಿಪು. ೧೦-೦೩೫); ಮಲಮಂ ಧರಿಯಿಸಿ ನಾಣಂ ತೊಲಗಿಸಿ ನಿರ್ಗ್ರಂಥವಿರ್ದು (ಧರ್ಮಾಮೃ. ೦-೦೦೩) ; ಎಟ್ಟಿ ಸುಟ್ಟುರಿಯವೊಲಪ್ಪುದರ್ಥಮನುಪಾರ್ಜಿಸುವಲ್ಲಿ ನಿಜಾಭಿ ಮಾನಮಂ ಧರಿಯಿಸುವಲ್ಲಿ ಚಾದಗೆವೊಲಪ್ಪುದು ತಪ್ಪದಮಾತ್ಯಲಕ್ಷಣಂ (ಕಾವ್ಯಸಾ. ೪೨೨). ೪. ಧರಿಯಿಸಿ ಮಣಿಮೇಖಲೆಯಂ ಕರಮೆಸೆದತ್ತಲಘು ಜಘನೆಯತಿಘನಜಘನಂ (ಜಗವಿ. ೧೦-೦೦೩). ೭. ಆನಿದಜಂದವಂ ಧರಿಯಿಸಲ್ವೇಬ್ಕೆಂದು ನೀಲೋತ್ಪಲಪ್ರಿಯನಿನ್ನುಂ ನೆಱ ಪೆರ್ಚುತು

ಕ್ಕುಯುತುಂ ತಾನಿರ್ಪನಭ್ಯಾಸದಿಂ (ಧರ್ಮಾಮೃ. ೩-೦೬೭) ; ಇರೆ ನವಪದ್ಮ ರಾಗಚಷಕಂ ನಿಜಹಸ್ತತಳಾಗ್ರದೊಳ್ ಮನೋಹರಿ . . . ನವೋದಿತಚಂದ್ರ ಬಿಂಬಮಂ ಧರಿಯಿಸಿದಿಂದ್ರದಿಗ್ವನಿತೆಯಂತೆಸೆದಳ್ ಮಧುಪಾನಗೋಷ್ಠಿ ಯೊಳ್ (ಜಗವಿ. ೦೬-೧೧೫) ; ಇರದಧಿಕಭ್ರಾಂತತೆಯಂ ಧರಿಯಿಸಿ ಕಡುಗಂದಿ ಜಿನುಗುವಾಱಡಿಯಾದಂತಿರೆ ತೋರ್ಪಿ ಪರಿಜನಮಂ ಹರಿಸದೊಳೊಡಗೂಡಿ ತೋಱು ಚರಣಾಂಬುಜಮಂ (ಚಂದ್ರಪು. ೫-೧೫) ; ಈ ಚಿತ್ರದ ಪಡಿರೂಪಂ ಧರಿಯಿಸಿದಾ ಚೆನ್ನಿಗನಲ್ಲದೆಯುಳಿದವರೆನ್ನಯ ಸೋದರರು (ಜಯಾಕಾ. ೩-೭೫) ; ಅರಸುಗುಣಂಗಳನತಿಭೀಕರಕಾಂತಂಗಳನವಂ ವಿಯಚ್ಚರರಾಜಂ ಧರಿಯಿಸಿದಂ ಜಳನಿಧಿ ಜಳಚರಚಯಮಂ ರತ್ನಚಯಮುಮಂ ಧರಿಯಿಪ ವೊಲ್ (ಕಾವ್ಯಾಪ. ೨೪೯). ೮. ನಿಷ್ಠುರಮಪ್ಪ ಬಾಹ್ಯತಪಮಂ ಧರಿಯಿಸಿದಂ ಸೂರ್ಪನಂದು ಮಾಯಾತಪಮಂ (ಧರ್ಮಾಮೃ. ೬-೩೬) ; ಸಮಸ್ತ ಬುಧರ್ಮುದದಿ ಧರಿಯಿಸುವ ರತ್ನತ್ರಯಸುರತ್ನಗಿರಿ ಪೆರ್ಮೆವಡೆದುದು (ಸಾಳ್ಯಭಾ. ೦-೬). ೧೦. ಧರಿಯಿಸೆ ತನ್ನಾಜ್ಞೆ ವಸುಂಧರೆಯಂ ಧರೆ ತಾಳ್ದೆ ತನ್ನ ವಿಶದಯಶೋವಲ್ಲರಿಯಂ ವಿದ್ವದ್ಗೋಷ್ಠೀನಿರತಂ ಸುಖಸಂಕಥಾ ವಿನೋದದೊಳಿರ್ದಂ (ಮಲ್ಲಿಪು. ೩-೨೫) ; ಶರಧಿಯ ನದಿಗಳ್ ಧರಿಯಿಸ ಲಾರ್ತಪುವೆ ತೊಱೆಯ ನೀರಂ ಕೆರೆಗಳ್ ಧರಿಯಿಸಲಾರ್ಕುಮೆ ಭಾವಿ ಗಳರಿದೆನಿಸುವ ತೊಱೆಯ ನೀರ್ಗಳಂ ತಾಳ್ದುಗುಮೇ (ಧರ್ಮಾಮೃ. ೬-೧೩೪). ೧೨. ಪಾಲಿಸು ; ರಕ್ಷಿಸು : ಧರೆಯಂ ಸದ್ಧರ್ಮಾಶ್ರಯ ಧರೆಯಂ . . . ಆಕಲ್ಪಂ ನೀಂ ಧರಿಯಿಸೆ ತಪಮದೆ (ಚಂದ್ರಪು. ೯-೪೧).

[ಧರಣ$_1$ + – ಇಸು$_3$]

ಧರುಮ 'ಧಮ್ಮ$_1$' ನೋ.

ಧರೆ (ನಾ). ೧. ನೆಲ ; ಭೂಮಿ ; ಭೂಲೋಕ : "ತಿರೆ ಪೊಡವಿ ರತ್ನವಸಿಱಳ್ ಧರೆಯೆಳೆಯೆಂದೆನ್ನಲಿರದೆ ಧಾರಿಣಿಯಕ್ಕುಂ" (ಕವಿಕಂ. ೪೭) ; ಧರೆ ರತ್ನಗರ್ಭಮಾದುದು ಸುರರೆಲ್ಲಂ ಹರ್ಷಗರ್ಭರಾದರ್ (ಆದಿಪು. ೭-೨೬) ; ಧರೆ ಕಂಪಂಗೊಳ್ವಿನಂ ಪೆರ್ವಡೆಗಳೆರಡುಮೋರೊಂದಱೊಳ್ ತಾಗೆ ತೂರ್ಯಸ್ವರಮುಂ . . . ಕ್ಷುಭಿತಜಲನಿಧಿಧ್ವಾನದಂತಾದುದೆತ್ತಂ (ಪಂಠಾಮಾ. ೦೩-೩೭) ; ಮಱೆಯಿಲ್ಲದೆ ಪೊಯ್ನಾರಿಂ ಬೆಳೆಗುಮೆ ಧರೆ (ಧರ್ಮಾಮೃ. ೧-೪೯) ; ಬಿತ್ತಿ ಬೆಳೆಯಬಹುದೆ ಧರೆಯಿಲ್ಲದೆ (ಬಸವ. ೩೯೮) ; ಧರೆಯಂ ಮೂಱಡಿ ಮಾಡಿದ ಹರಿ ಬರ್ಪೊಡೆ ತಡವೆ (ಜಗವಿ. ೧೦-೫೨) ; ಧರೆ ಬೀಜಂಗಳ ನುಂಗೆ ಬೇಲಿ ಹೊಲನೆಲ್ಲಂ ಮೇದೊಡಂ (ಸೋಮೇಶ. ೨೯) ; ಕರೆವ ಕಹಳೆಗಳ ಮಹಾರವದೊಳಗೆ ಧರೆ ನಡುಗೆ (ನಂಬಿರ. ೭-೦೨೦) ; ಧರೆಯಂ ಸ್ಥಿರೆಯೆನಿಸಿದಂ . . . ಅದೇಂ ಸಮರ್ಥನೊ ಪದ್ಮಂ (ಪುಷ್ಪಪು. ೩-೨) ; ಧರೆಯೊಳೀ ಹೊತ್ತಿನಲಿ ನಿನಗೆ . . . ಅದಾವುದು ಕೊಱತೆ (ಕುಮ್ಯಾಉ. ೩-೭೮). ೨. ಭೂಲೋಕದ ಜನ ; ಜನತೆ : ಧರೆ ಬಣ್ಣಿಸೆ ಸೈಯಡಿಯೊಳ್ . . . ಹರಿಹರಭವನಂಗಳನಚ್ಚರಿಯೆನೆ ಮಾಡಿಸಿದಂ (ಪಂಚತಂ. ೧೦-೦೫) ; ಧರೆ ಕೊಂಡು ಕೊನೆದು ಬಣ್ಣಿಪುದರಿದೆ (ಧರ್ಮಾಮೃ. ೪-೨೬೫) ; ಧರೆಗಾಚಾರಮನಱಿಪಲ್ ಗುರುವಿಂ ಕೃತವಿದ್ಯನಾದ ಕೃಷ್ಣಂ ಗುರುವಂ ಗುರುದಕ್ಷಿಣೆಯಂ ಬೇಡೆನೆ (ಜಗವಿ. ೭-೧೪) ; ಧರೆಯೊಳಗೆ ಕಡು ಮೂರ್ಖರಿವರಿಬ್ಬರು ಕಣಾ ದುರಿಯೋಧನನು ದಶಶಿರನು (ಕುಮ್ಯಾಉ. ೩-೦೭). ೩. ರಾಜ್ಯ : ಧರೆಯಂ ಕುಡುವಂದೆನಗಂ ಗುರು ತನಗಂ ರಾಜ ನಾಮಮಂ ಕೊಟ್ಟೊಡೆ ನೋಡಿರೆ ತನಗೀಗಳ್ ರಾಜಾಧಿರಾಜನೆಂದಿಟ್ಟು ಕೊಂಡನಡಕಿಲ್ಲೆಸರಂ (ಆದಿಪು. ೧೪-೭೮) ; ಕುರುಪತಿಯಂ ವಿಷ್ಣು ಬೇಡಿದಂ ಧರೆಯರೆಯಂ (ಶಮದ. ೬೪ ಪ್ರಯೋ) ; ಸಕಲ ಧರೆಯ ಜನವೈತಹುದು ಗಡ (ನಿಭಾಗ. ೧೦-೩೪-೧೯). ೪. ಮಣ್ಣು ; ಧೂಳು : ಬೆಂದ ಮಡಕೆ ಮರಳಿ ಧರೆಯ ಕೂಡಬಲ್ಲುದೆ (ಸಿದ್ಧೇಪ. ೨೦೨-೬೨೦). ೫. ಭೂದೇವಿ : ರಮೆ ಧರೆಯರಿಂದಲಾಲಿಂಗಿತ್ವದಿ ಕಮಲಜಾದಿಗಳಿಂದ ತುತಿಸಿಕೊಳ್ಳುತ ಹೃದಯ ಕಮಲದೊಳಗಿರುವ ಶ್ರೀವಿಜಯವಿಠಲನ ಕಂಡೆ (ವಿದಾಕೃ. ೫೭-೫). ೬. [ಗಣಿತ] ಒಂದು ಎಂಬ ಸಂಖ್ಯೆಯ ಸಂಕೇತ : "ಶಶಾಂಕ ಸೋಮಂ . . . ವಸುಧಾತಳಮಾ ಸಿತಕರ ರಸೆ ಧರೆ ಇಳೆ ರೂಪವೈಕಮೊಂದಱ ನಾಮಂ" (ವ್ಯವಹಾ. ೯-೧) ; ಗಿರಿ ಗಿಣಿ ದಿವಿಗಿರಿ ಗುಣದಿವಿ ಗಿರಿ ಗುಣನಿಕರಂ ಪುರಗಣಿತಂ ಧರೆ ಧರೆ ಧರೆ ಧರೆ ಧರೆ ಧರೆ ಧರೆ ಧರೆ ಧರೆಯಂ ಪರಿಗಣಿತಂ (ಭಾಸ್ಕರ. ೪೪-೩). ೭. [ಛಂದ] ಅಕ್ಷರ ಗಣಗಳಲ್ಲಿ ಒಂದು ; ಮಗಣ (– – –) : ಆದಿಯ ಮಧ್ಯಾಂತದೆ ಗುರುವಾದೊಡೆ ಶಶಿ ಸೂರ್ಯ ವಾಯು ಗುರುವಿರೆ ಧರೆ ಮತ್ತಾದಿಯ ಮಧ್ಯಾಂತದೆ ಲಘುವಾದೊಡೆ ಜಲ ವಹ್ನಿ ಗಗನ ಲಘುವಿಂ ನಾಕಂ (ಛಂದೋಂಬು. ೧-೩೭ ಅಡಿಪದ್ಯ) ; ಧರೆ ಜಲ ನಿಶಾಕರಂ ಸುರಪುರಗಣಮುಂ ಶುಭಮೆನಿಕ್ಕುಂ (ಛಂದೋಂಬು. ೧-೪೪).

[ಸಂ. ಧರಾ]

ಧರೆವೋಜು (ನಾ). ಪ್ರಪಂಚವೇ ಸಂತೋಷದಿಂದ ತುಂಬಿರುವಂತೆ ತೋರುವಿಕೆ ; ಅತಿಯಾದ ಸಂತೋಷ : ಸರಗೀಯ ಕೊಂಡ್ಹಂಗ ಸರದಿತ್ತ ನನ ಮನವು ಸರಿಬಾರದವರು ಇದರೀಗಿ ಬಂದರ ಧರೆವೋಜನ ಮನವು ನೆಲ ನೋಡಿ (ಕನ್ನಜಾ. ೧೦೩). [ಧರೆ + ಪೋಜು]

ಧರ್ತಿ 'ಧರತಿ' ನೋ.

ಧರ್ಮ (ನಾ). ೧. ಜಗತ್ತಿನ ಸ್ಥಿತಿಗತಿಗಳ ದೃಷ್ಟಿಯಿಂದ ದೃಢವಾಗಿ ಹಿಡಿಯಬೇಕಾದುದು,–ನಿಷ್ಠೆಯಿಂದ ಪಾಲಿಸಬೇಕಾದುದು ; ವಾಡಿಕೆ ಯಾಗಿ ಬಂದ ಮತಸಂಬಂಧವಾದ ಅನುಷ್ಠಾನ : ಕಟ್ಟಳೆ ; ವಿಧಿ ; ಆಚಾರ; ಸಂಪ್ರದಾಯ; ವಿಹಿತವಾದ ಆಚರಣೆ: ಈ ಸಂಸೃತಿಯೊಳ್ ಧರ್ಮಾಧರ್ಮಸ್ಥಿತಿಯೆ ವಲಂ ಸ್ವರ್ಗನರಕಸುಖದುಃಖಕರಂ(ಆದಿಪು. ೫-೭೭); ದಯವಿಲ್ಲದ ಧರ್ಮವದೇವುದಯ್ಯಾ . . . ದಯವೇ ಧರ್ಮದ ಮೂಲ ವಯ್ಯಾ (ಬಸವ. ೨೪೭) ; ಧರ್ಮಮನಾದಿಯಿನೊದವಿದ ಕರ್ಮದ ಕೇಡಿಂಗೆ ಮೂಲಂ (ಜೀವಸಂ. ೨೦೩-೧) ; ಧರ್ಮಂ ಧಾರ್ಮಿಕನಿಂದೆ ನಿಲ್ವುದು (ಅನಂಪು. ೩-೬೩) ; ಧರ್ಮದಾಧಾರದಲಿಹುದು ಜಗ ಧರ್ಮವುಳ್ಳನನಾಶ್ರ ಯಿಸುವುದು ಧರ್ಮವೇ ನೂಕುವುದು ಜನ್ಮಾಂತರದ ಪಾತಕವ . . . ಆ ಧರ್ಮವನು ಬಿಟ್ಟಿಹುದು ಬದುಕಲ್ಲ (ಕುಮ್ಯಾಉ. ೪-೫೯) ; ಧರ್ಮವೆಂದರೆ ಮನುಷ್ಯನು ಇಹಪರದೃಷ್ಟಿಯಿಂದ ಸುಖಕ್ಕಾಗಿ ಮಾಡಬೇಕಾದ ಕೆಲಸಗಳು (ಹಿಂದಸಾ. ೧೪೯). ೨. ಪುಣ್ಯ : "ಧರ್ಮಃ, ಪುಣ್ಯಂ, ವೃಷಃ, ಶ್ರೇಯಃ, ಸುಕೃತಂ–ಈ ೫ ಪುಣ್ಯದ ಪೆಸರ್" (ಹಲಾಯು. ೨೦-೧೨೫) ; ಇದನಾರಾರ್ಸ ಲಿಪ್ಪೋರ[ವ]ರ್ತ್ತೆ ಧರ್ಮಮಾರಾರಿದಾ ಕೆಡಿಪ್ಪೋರವರ್ತ್ತೆ ಪಾಪ (ಸೌಇಇ. XX, ೯-೨೦ ; ಸು. ೩ನೆಯ ಶತ) ; ಧರ್ಮಕೆ ಕೈಬಾರದೀ ಕಾಲ ಪಾಪಕರ್ಮಕೆ ಮನಸೋಲೋದೀ ಕಲಿಕಾಲ (ಪುರಂದ. ೦-೧೨೦ ಪಲ್ಲವಿ). ೩. ಚತುರ್ವಿಧ ಪುರುಷಾರ್ಥಗಳಲ್ಲಿ ಒಂದು ; ಸದ್ಗತಿಗೆ ಸಾಧನವಾದ ಅನುಷ್ಠಾನ : "ಧರ್ಮಾದಿ ಪುರುಷಾರ್ಥಮಕ್ಕು" (ಮಂಗರಾ. ೭೭-೧೨) ; ಪರಮಸುಖಪದ ಶ್ರೀಧರ್ಮಕಾಮಾರ್ಥಮೋಕ್ಷಸ್ಥಿರವಿಷಯ. ವಿಶೇಷಾಖ್ಯಾನವಿಖ್ಯಾತತತ್ತ್ವಂ (ಕವಿರಾ. ೩-೨೦೦) ; ಧರ್ಮಾರ್ಥಕಾಮಮೆಂಬವು ಧರ್ಮಾರ್ಥಿಜನಕ್ಕೆ ನೆಱೆದ ನೆರ್ಮಂತವಱೊಳ್ ಧರ್ಮಂ ಪ್ರಧಾನಮರ್ಥಂ ಧರ್ಮಾಂಘ್ರಿಪಫಲಮದರ್ಕೆ ರಸಮದು ಕಾಮಂ (ಆದಿಪು. ೧೦-೫೦) ; ಅರ್ಥದಿಂ ಧರ್ಮವನು ಧರ್ಮ ದಿನರ್ಥವನು ಧರ್ಮಾರ್ಥವೆರಡನು ವ್ಯರ್ಥಕಾಮದಲಳಿಯಲೇ ರಾಜ್ಯಾಭಿ ಲಾಷೆಯಲಿ (ಕುಮ್ಯಾಸ. ೧-೨೮) ; ಧರ್ಮ ಅರ್ಥ ಕಾಮ ಮೋಕ್ಷವೆಂಬ ಚತುರ್ವಿಧಫಲಪದಂಗಳ ನಾನೊಲ್ಲೆನಯ್ಯಾ (ಅಖಂಡೇ. ೧೬೧-೨೨). ೪. ಕರ್ತವ್ಯ : ಮಕ್ಕಳಿಗೆ ಬುದ್ಧಿ ಹೇಳುವುದು ತಂದೆ ತಾಯಿಗಳ ಧರ್ಮ (ರೂಢಿ). ೫. ಯಮರಾಜ: "ಯಮನರ್ಕಸುತಂ ಧರ್ಮಂ . . . ಅಂತಕಂ ಕೀನಾಶಂ" (ವಸ್ತುಕೋ. ೮-೪೧) ; "ಯಮಂ ಧರ್ಮನಂತಕಂ . . . ಕೀನಾಶಂ ಕೃತಾಂತನಕ್ಕುಂ" (ಮಂಗರಾ. ೧೫-೧೦) ; ಧರ್ಮನಂ ಮೂದಲಿಸಲ್

ಪೋದಂ ಪುತ್ರನನಱಸಲ್ಪೋದನೆ ಯಮಪುರಕೆ ಮುತ್ತಬಾಣಂ ದ್ರೋಣಂ (ಗದಾಯು. ೩-೨೫); ಸುರಪತಿ ದಹನಂ ಧರ್ಮಂ ನಿರುತಿ ವರುಣನನಿಳನೈಳ ಬಿಳನೀಶ ಮಹೀಶ್ವರನಿಂದುವೆಂಬ ದಿಕ್ಪಾಳರುಮಂ ದಶದಿಶೆಯೊಳಿರಿಸಿ ಪರಿಕರಸಹಿತಂ (ಚಂದ್ರಪು. ೧೨-೧೧೩). 'ಧರ್ಮಜ' ಪರಾ. ೬. ಪಾಂಡವರಲ್ಲಿ ಹಿರಿಯ; ಯುಧಿಷ್ಠಿರ. ೨, ೬: ನುತಧರ್ಮ್ಮಂ ರಿಪುಭೀಮನರ್ಜ್ಜುನ ಯಶಂ ವಿದ್ವಿಷ್ಟಭೂಭೃದ್ಯಮಂ ... ಭಾಸ್ವತ್ಸುಮಿತ್ರೋದ್ಭವಂ ಕ್ಷಿತಿಪಾಳಂ ನರಸಿಂಹದೇವಂ (ಎಕ. V, ಬೇಲೂರು. ೧೯೩-೪೩; 1161). ೭. ಗುಣ; ಸ್ವಭಾವ; ಲಕ್ಷಣ: "ಧರ್ಮಃ, ಸ್ವಭಾವಃ, ಆತ್ಮಾ – ಈ ೩ ಸ್ವಭಾವಂ" (ಹಲಾಯು. ೧೨೯-೯೭); "ಧರ್ಮಂ ಗುಣಸ್ವಭಾವವಾಚಿ" (ವಸ್ತುಕೋ. ೧೨೯-೭೧); ಬಗೆಯಲ್ಕೆ ಧರ್ಮದಿಂ ಕ್ಷತ್ರಧರ್ಮವಾವರ್ಗೆ ವಿರುದ್ಧಂ (ಗದಾಯು. ೩-೩೫); ಪೆಱವರ ಧರ್ಮಂಗಳನೇತೆಱದಿಂದು ತಂದು ಪೆಱವರೊಳ್ ಪತ್ತಿಸಿ ಕಣ್ದೆಱೆಯೆ ಚತುರೋಕ್ತಿ ಕೃತಿಯೊಳ್ ನೆಱೆದಿರೆ ಪೇಟ್ವುದು ಸಮಾಧಿಯೆನೆ ಪೆಸರ್ವಡೆಗುಂ (ಕಾವ್ಯಾವ. ೫೧೯); ಶೈಶವದಲ್ಲಿ . . . ಉಷಾ ಬೆಳೆಯುತ್ತಿದ್ದಳು. ಬೆಳೆಯುವದೇ ಅವಳ ಧರ್ಮವಾಗಿತ್ತು (ಸಮಜೀ. ೧೨೩೩). ೮. ಬಿಲ್ಲು; ಚಾಪ: ಸ್ಮರವೈರಿಧರ್ಮವಕ್ಷೋಜೆ ಸ್ಮರಹರಕಾಂಡಚತುರಾವತಾರಮಧ್ಯೇ (ಪ್ರೌಢರಾ. ೬-೨೨). ೧, ೮: ಗುಣಮೇಱಿದ ಧರ್ಮಂ ಮಾರ್ಗಣತತಿಯಂ ಲಕ್ಷ್ಯಸಿದ್ಧಿಯೊಳ್ ಕೂಡಿ ನೃಪಾಗ್ರಣಿಯನಿಹಸೌಖ್ಯದಿಂದಮೆ ತಣಿಪುದದೆ ಪರಮಸುಖೈಕಕಾರಣಮಲ್ತೇ (ಪುಷ್ಪಪು. ೩-೧೧). 'ದಶಧರ್ಮಧಾರಿ' ಪರಾ. ೯. ನ್ಯಾಯ; ನೀತಿ: ಧರ್ಮವೆಂಬುದು ಪರಮಪದವಾ ಧರ್ಮವನು ಬಿಟ್ಟಿಹುದು ಬದುಕಲ್ಲರಸ ಕೇಳೆಂದ (ಕುಮಾಲಿ. ೪-೫೯); ಸತಿ ಸಹಜಾತ ಸುತರುಗಳ ತವಿಸುವುದು ತಾ ಧರ್ಮವಲ್ಲ (ತೊರರಾ. ೪-೨-೩೦); ಧರ್ಮವೇ ಜಯವೆಂಬ ದಿವ್ಯಮಂತ್ರ ಮರ್ಮವನ್ನಱಿತು ಮಾಡಲು ಬೇಕು ತಂತ್ರ (ಪುರಂದ. ೨-೭೫ ಪಲ್ಲವಿ); ಆತನೇ ಪಾಲಿಸುವನಿವನ ಭೂತಳಮಂ ನಿಜಾತಿಶಯಧರ್ಮದಿಂದೆಳ್ಳನಿತು ದೋಷಮಿಲ್ಲದೆ (ಜೈಮಿಭಾ. ೧೭-೧೩). ೧೦. ದತ್ತಿ; ದಾನ; ಉಚಿತವಾಗಿ ಕೊಟ್ಟುದು: ಈ ಧರ್ಮಮಂ ಕಿಡಿಸಿದಾತ ವಾರಣಾಸಿಯೊಳು ಕುರುಕ್ಷೇತ್ರದೊಳು ಸಾಸಿರ್ವ್ವ × × ರ ಸಾಸಿರ್ವ್ವ ಕವಿಲೆಯ ಕೊನ್ದ ಪಂಚಮಹಾಪಾತಕ[ವಕ್ಕು] (ಸೌಇಇ. XX, ೩೨-೪೪; 1045); ಈ ಧರ್ಮ್ಮಮನೋನ್ತಿರ್ ಕಿಡಿಸಿದವರಧೋಗತಿಗಿಳಿವರು (ಸೌಇಇ. XX, ೧೭೫-೬೨; 1190); ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿ ನೋಡಿದ (ಗಾದ); ಕೆಟ್ಟು ನಂಟರ ಸೇರಬೇಡ. ಕೊಟ್ಟ ಧರ್ಮ ತಿರುಗಿ ಕೇಳಬೇಡ (ಗಾದ). ೧೧. ನಿಷ್ಠೆ; ಶ್ರದ್ಧೆ; ಭಕ್ತಿ: (ಕಿ). ೧೨. ಮತ; ದರ್ಶನ: ಜೈನಧರ್ಮವು ವಿಶ್ವದ ಅತ್ಯಂತ ಪ್ರಾಚೀನಧರ್ಮಗಳಲ್ಲೊಂದಾಗಿದೆ (ಭಾರದ. ೧೬೮); ಇತರ ಪಂಥದವರು 'ಮತ', 'ದರ್ಶನ', 'ಸಿದ್ಧಾಂತ' ಎಂದು ಯಾವುದನ್ನು ಹೆಸರಿಸುವರೋ ಅದನ್ನು ಬುದ್ಧನು "ಧರ್ಮ" ಎಂದು ಕರೆದನು (ಭಾರದ. ೧೯೦). ೧೩. ದಯೆ; ಕರುಣೆ; ಕೃಪೆ: ಬೆಂದ ಮನವೆನ್ನ ಮತಿಗೆಡಿಸಿ ಕಾಡಿತ್ತು ಎನ್ನ ತಂದೆ ಕೂಡಲಸಂಗಮದೇವಾ ಇವ ಮಾಣಿಸು ನಿಮ್ಮ ಧರ್ಮ (ಬಸವ. ೪೯); ದೇವರ ಧರ್ಮದೊಳೊಂದು ಬೇಂಟೆ ದೊರೆಕೊಂಡರೆ ಕೂಡಲಸಂಗಮದೇವಂಗರ್ಪಿತವ ಮಾಡುವೆ (ಬಸವ. ೯೦೭); ನೀನೆ ಜಂದಾಳ್ಮಾಡೆ ಯುಕ್ತಿ ಕೊಂಬುದೆ ದೇವ ನೀನೇ ಬಂದಾಳೆನಲು ಧರ್ಮಮುಂಟೇ ದೇವ (ನಂಬಿರ. ೭-೧೫೨). ೧೪. ರೀತಿ; ಕ್ರಮ: ಶೆಟ್ಟರು ವೃತ್ತಿಯಿಂದ ವ್ಯಾಪಾರಿ. ಅದೇ ಧರ್ಮದಿಂದ ಸಾಕಷ್ಟು ಸಂಪಾದಿಸಿದ್ದರು (ಹೊಸಕ್ಷಿ: ೩೩). ೧೫. ಒಂದು ಬಗೆಯ ತೆರಿಗೆ: ಒಂದು ಹೊಲದ ಮೇಲೆ ಹಾಕಬಹುದಾಗಿದ್ದ ತೆರಿಗೆಗಳಿವು–ಸಿದ್ಧಾಯ, ಅರಸರ ಸೇಸೆ, ಕಾಣಿಕೆ, ದಾಯ, ಧರ್ಮ ಇತ್ಯಾದಿಗಳು (ಕಶಾಅ. ೪೦೫). ೧೬. ನ್ಯಾಯವಾದ ಬಡ್ಡಿ: ಧನವೆಲ್ಲ ಮಲ್ಲಿಕಾರ್ಜುನನ ಧರ್ಮವ್ಯಯದದೆನೆ ಧರ್ಮದೊಳಗೆಮ್ಮ ಭಾಗೆಯರ್ಥದಲಿ ಬೆಳೆವನಿತು ಧರ್ಮವನಾದೊಡಂ ಕರುಣಿಸೆಮಗೆ (ಸಿದ್ಧರಾ. ೮-೫); ಒಡಲಿಲ್ಲದುಸುಳುಂಟೆ ನಿಮಗೆನ್ನ ಮೇಲೆ ಬಪ್ಪೊಡವೆಯಿಲ್ಲೆನೆ ಧರ್ಮವುಂಟೆ ಕೆಡುವೊಡವೆಯುಂ ಕೊಡೆ ಕಂಡು ಕೆಡದ ಧರ್ಮವ ಕೊಡುವೆನೇ ಎನಲು (ಸಿದ್ಧರಾ. ೮-೬); ಈತ ಕದ್ದು ತಂದೆಮ್ಮರ್ಥದೊಳಗೆಮ್ಮ ಭಾಗೆಯಂ ಕೊಡು ಕೊಡದೊಡದಱ ಬೆಂಬಳಿಯ ಧರ್ಮವನಾದೊಡಂ ಕೊಡೆಂದೆನೆ ಕೊಡಂ (ಸಿದ್ಧರಾ. ೮-೮). ೧೭. ಬಿಟ್ಟಿ; ಪುಕ್ಕಟೆ: ನೀನೇನು ಧರ್ಮಕ್ಕೆ ಕೆಲಸ ಮಾಡುತ್ತಿಲ್ಲ. ಸಂಬಳ ತೆಗೆದುಕೊಂಡ ಮೇಲೆ ಸರಿಯಾಗಿ ಕೆಲಸ ಮಾಡು (ರೂಢಿ). ೧೮. ಯಜ್ಞ; ಯಾಗ. ೧೯. ಯಜ್ಞದಲ್ಲಿ ಸೋಮಪಾನ ಮಾಡುವವನು. ೨೦. ಶಿವ. ೨೧. ಅರಸ; ದೊರೆ. ೨೨. ಉತ್ಪಾತ. ೨೩. ವಿಷ; ಗರಳ: "ಗಿರಿಶನೊಳು ಕಾಲನೊಳು ಪುಣ್ಯದೊಳು ಬಿಲ್ಲಿನೊಳು ಗರಳದೊಳ್ ಕ್ರತುವಿನೊಳು ಧರ್ಮಮಕ್ಕು" (ಮಂಗರಾ. ೧೪೮-೪೪); "ಅರಸುತ್ಪಾತಂ ಬಿಲು ವಿಷ ಹರ ಪುಣ್ಯಂ ಯಜ್ಞಮಹಿಂಸೆ ಯಮ ಚಾರಿತ್ರಂ ನಿರುತದಿ ದಶ ಧರ್ಮಾಖ್ಯಂ" (ನಾನಾಕಂ. ೧೦೯). ೨೪. [ಕಾವ್ಯಮಿಾ] ಉಪಮಾಲಂಕಾರದಲ್ಲಿ ಎರಡು ವಸ್ತುಗಳ ನಡುವೆ ಇರುವ ಸಾಧಾರಣ ಧರ್ಮ,– ಸಾಮಾನ್ಯ ಧರ್ಮ: ಉಪಮೇಯಮುಮುಪಮಾನಮುಮುಪಮಾವಾಚಕಮುಮಂತೆ ಧರ್ಮಮುಮಿವರಲ್ಲಪವರ್ತಿಸೊಂದೆರಡು ಮೂರ್ಚಪಲಾಕ್ಷಿಯಿದೆಂಟು ಬಗೆಯ ಲುಪ್ತೋಪಮೆಗಳ್ (ನರಜ. ೧೦-೩). ೨೫. [ಜ್ಯೋತಿ] ಜನ್ಮಲಗ್ನದಿಂದ ಒಂಬತ್ತನೆಯ ಸ್ಥಾನ: ಸಿತನಿಂ ಧರ್ಮ ಧನಾರಿ ಪಂಚಮ ದಶಾಯಸ್ಥಾನದೊಳ್ ಮಂದನಿಂ ತ್ರಿತಯಾರಾತಿ ಸುತಾಂತ್ಯದೊಳ್ . . . ಇಂದ್ರಮಂತ್ರಿ ಶುಭದಂ ಶೇಷಂಗಳೊಳ್ ನಿಂದಿತಂ (ಜಾತತಿ. ೧೦-೧೧); ದನುಜೇಜ್ಯಂ ಧರ್ಮ ಕರ್ಮ ತ್ರಿ ತನು ಧನ ಚತುಷ್ಪಂಚ ರಂಧ್ರಾಯದೊಳ್ . . . ಲೇಸೆನಿಕ್ಕುಂ (ಜಾತತಿ. ೧೦-೧೨). 'ಧರ್ಮನಿವಾಸ' ಪರಾ. ೨೬. = ಧರ್ಮಧ್ಯಾನ: ಆರ್ತ ರೌದ್ರ ಧರ್ಮ ಶುಕ್ಲಾಭಿಧಾನಧ್ಯಾನಚತುಷ್ಟಯಮುಮಂ (ಸುಕುಮಾ. ೩-೩೯ ವ); ಪರಿಹರಿಸಿ ಚಿತ್ತದಿಂದಾರ್ತರೌದ್ರಮಂ ಧರ್ಮ ಶುಕ್ಲಮೆಂಬೀಯೆರಡುಂ ಸ್ಥಿರಮಾಗೆ ದಿವ್ಯಮುನಿಪಂ ನಿರಂತರಧ್ಯಾನಯೋಗತತ್ಪರನಾದಂ (ಮಲ್ಲಿಪು. ೧೧-೪೪). 'ಧ್ಯಾನಚತುಷ್ಟಯ' ಪರಾ. ೨೭. ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಹದಿನೈದನೆಯವನು; ಧರ್ಮನಾಥ: ವಿಮಳ ಅನಂತ ಧರ್ಮ . . . ವರ್ಧಮಾನರೆಂಬಿಪ್ಪತ್ತುನಾಲ್ವರ್ ತೀರ್ಥಕರರ್ (ಜಾವುಂಪು. ೪೦೨). ೨೮. = ಧರ್ಮದ್ರವ್ಯ: ಚೇತನಾರಹಿತಮಜೀವತತ್ತ್ವಂ ಅದು ಗತಿಸ್ಥಿತ್ಯವಗಾಹಶರೀರಾದಿ ವರ್ತನಾಹೇತು ಧರ್ಮಾಧರ್ಮಾಕಾಶ ಪುದ್ಗಲ ಕಾಲಭೇದದಿಂ ಪಂಚವಿಧಂ (ಆದಿಪು. ೧೦-೬೩ ವ); ಲೋಕಾಕಾಶದಲ್ಲಿ ಧರ್ಮ ಎಂಬುವ ಒಂದು ದ್ರವ್ಯವಿದೆ. ಈ ದ್ರವ್ಯವು ಜಗತ್ತಿನಲ್ಲಿ ಹವೆಯು ಇರುವಂತೆಯೇ ಇರುತ್ತದೆ . . . ಇದು ಆತ್ಮನ ಗಮನಕ್ಕೆ ಸಹಾಯಮಾಡುತ್ತದೆ (ಜೈನಪ. ೩೪೦). ೨೯. ದ್ವಾದಶಾನುಪ್ರೇಕ್ಷೆಗಳಲ್ಲಿ ಒಂದು; ಧರ್ಮವನ್ನು ಕುರಿತ ಚಿಂತನೆ: ಅಧ್ರುವಮಶರಣಮೇಕತ್ವಮನ್ಯತ್ವಮಶುಚಿತ್ವಂ ಸಂಸಾರಂ ಲೋಕಮಾಸ್ರವಂ ಸಂವರೆ ನಿರ್ಜರೆ ಬೋಧಿದುರ್ಲಭ ಧರ್ಮಸ್ವಾಖ್ಯಾತಮೆಂಬುವ ಪನ್ನೆರಡು ಮನುಪ್ರೇಕ್ಷೆಯಂ ಕ್ರಮದಿನನುಸ್ಮರಿಸುತ್ತುಮಿರ್ಪನ್ನೆಗಂ (ಅಜಿಪು. ೬-೬೦ ವ). 'ದ್ವಾದಶಾನುಪ್ರೇಕ್ಷೆ' ಪರಾ. ೩೦. [ದ್ವೈತ] ನಲವತ್ತು ವಿಧವಾದ ಗುಣಗಳಲ್ಲಿ ಒಂದು: ರೂಪ, ರಸ, ಗಂಧ, ಸ್ಪರ್ಶ . . . ಧರ್ಮ, ಅಧರ್ಮ, ಸಂಸ್ಕಾರ . . . ಸೌಭಾಗ್ಯವೆಂದು ಸಾಮಾನ್ಯವಾಗಿ ನಲವತ್ತು ವಿಧ ಗುಣಗಳು (ಹಿಂದಸಾ. ೨೬೫). ೩೧. [ಯೋಗ] ಮೂರು ಬಗೆಯ ಚಿತ್ತ ಪರಿಣಾಮಗಳಲ್ಲಿ ಒಂದು: ನಿರೋಧ, ಸಮಾಧಿ, ಏಕಾಗ್ರತಾ ಎಂಬ ಮೂರು ವಿಧವಾದ ಚಿತ್ತಸ್ಥಿತಿಗಳು ಧರ್ಮ ಲಕ್ಷಣ ಅವಸ್ಥಾ ಎಂಬ ಸೂಕ್ಷ್ಮ

ಸ್ಥೂಲರೂಪವಾದ ಚಿತ್ತಪರಿಣಾಮಗಳೆನ್ನಲ್ಪಡುವುವು (ಹಿಂದುಸಾ. ೧೦೩). P ಧರ್ಮವನ್ನು ಬೇರೆ ಬೇರೆ ವಿಧಗಳಾಗಿ ವಿಂಗಡಿಸುತ್ತಾರೆ. "ಧರ್ಮ-೨: (ಅ) ಪ್ರವೃತ್ತಿಧರ್ಮ, ನಿವೃತ್ತಿಧರ್ಮ (ಮಹಾಭಾ. ಶಾಂತಿ. ೨೪೦-೬, ಅನುಶಾಸನ. ೨೧೧). (ಆ) ವಿದಿತ (ವ್ಯಕ್ತ), ಅವಿದಿತ (ಅವ್ಯಕ್ತ) (ಕೇನ. ೨-೪ ಭಾ). (ಇ) ಪಶುಧರ್ಮ, ಪತಿ ಧರ್ಮ (ಕ್ರಿಯಾಸಾರ. ಉಪದೇಶ. ೩). ಧರ್ಮ-೩: (ಅ) ದ್ವಿಜಾತಿಯ: ಅಧ್ಯಯನ, ಇಜ್ಯಾ, ದಾನ (ಗೌಧಸೂ. ೧೦-೧; ೮-೯ಭಾ; ಭಾಗ. ೧೧-೩೯; ಕಾಠಕ. ೨೮). (ಆ) ಬ್ರಾಹ್ಮಣರಿಗೆ ವಿಶೇಷವಾಗಿರುವ: ಪ್ರವಚನ (ಅಧ್ಯಾಪನ), ಯಾಜನ, (ಶುದ್ಧನಾದವನಿಂದ) ಪ್ರತಿಗ್ರಹ (ಗೌಧಸೂ. ೧೦-೨; ೭-೧ ಭಾ.; ಧರ್ಮಸಿಂ. ಪೂ. ೩-೨೪೧). ಅಥವಾ - ಯಾಜನ, ಅಧ್ಯಾಪನ, ಶುದ್ಧ ಪ್ರತಿಗ್ರಹ (ಮನು. ೧೦-೭೬-೪೧೧) (ಇ) ನಿತ್ಯಕರ್ಮ, ನೈಮಿತ್ತಿಕ ಕರ್ಮ, ಕಾಮ್ಯಕರ್ಮ (ವ್ಯಾಸಸ್ಮೃತಿ, ೩-೧; ಛಾಂದೋಗ್ಯ. ೧೦೬೫). (ಈ) ಕಾಯಿಕ, ವಾಚಿಕ, ಮಾನಸಿಕ (ಚರಕ. ೧೧-೫೪). (ಉ) ಸತ್ಯ, ತಪಸ್ಸು, ಅಧ್ಯಯನಾಧ್ಯಾಪನ (ತೈತ್ತಿರೀ. ೩೨೩). (ಊ) ಯಜ್ಞ, ದಾನ, ತಪಸ್ಸು (ಗೀತಾಭಾ. ೧೮-೩). (ಋ) ದೈವ, ಪಿತ್ರ್ಯ, ಮಾನುಷ (ಬೃಹದಾ. I, ೫೬). (ಋೂ) ಹೀನ, ಮಧ್ಯಮ, ಉತ್ತಮ (ಚರಕ. ೨೨೭). (ಎ) ಫಲಭೋಗದ ದೃಷ್ಟಿಯಿಂದ: ಸಂಚಿತ, ಆರಬ್ಧ, ಆಗಾಮಿ (ತೈತ್ತಿರೀ. ೪). (ಏ) ಸಾತ್ತ್ವಿಕ, ರಾಜಸ, ತಾಮಸ (ಗೀತಾಭಾ. II ೧೮-೨೩-೨೫). (ಐ) ಶಸ್ತ್ರಚಿಕಿತ್ಸೆಯ: ಪೂರ್ವಕರ್ಮ, ಪ್ರಧಾನ ಕರ್ಮ, ಪಶ್ಚಾತ್ ಕರ್ಮ (ಸುಶ್ರುತ). (ಒ) ಪೂಜಾರಾಧ್ಯ. ಪುಣ್ಯಯಜ್ಞ, ದೃಢ ಚರ್ಯಾ (ಆದಿಪು. ೧೫-೧೬ ವ). (ಓ) ಶಸ್ತ್ರಕರ್ಮ, ಕ್ಷಾರಕರ್ಮ, ಅಗ್ನಿಕರ್ಮ (ಚರಕ. II ೧೪-೩೫). (ಔ) ಕರ್ಮ, ಅಕರ್ಮ, ವಿಕರ್ಮ (ಗೀತಾಭಾ. ೨೫೨). (ಅಂ) ಮೈದಂಗವಾದನದ: ತ್ವಂಕ್ಕ, ಆಲಿಂಗ್ಯ, ಊರ್ಧ್ವಕ (ವಿಚಿಂ. ೪-೩೯). (ಅಃ) ಪರಸ್ವಾನಭಿಧ್ಯತೆ, ಸರ್ವಸತ್ತ್ವಸೌಹಾರ್ದ, ಕರ್ಮಫಲಶ್ರದ್ಧೆ (ಮಹಾಭಾ. ಅನುಶಾಸನ. ೧೩-೫). (ಕ) ಪರಸ್ವಗ್ರಹಣ, ಅಶಾಸ್ತ್ರೀಯಹಿಂಸೆ, ಪರದಾರಗ್ರಹಣ (ಮನು. ೧೨-೬). ಧರ್ಮ-೫: (ಅ) ವರ್ಣ ಧರ್ಮ,ಆಶ್ರಮ-,ಗುಣ-, ವರ್ಣಾಶ್ರಮ-, ನಿಮಿತ್ತ-(ಗೌಧಸೂ. ೧-೧-ಭಾ). (ಆ) ಅಹಿಂಸಾ, ಸತ್ಯ, ಅಕ್ರೋಧ, ಶೌಚ, ಇಂದ್ರಿಯ ಸಂಯಮ (ಮನು - ಗೌಧಸೂ. ೧೦-೧ ಭಾ). (ಇ) ಸತ್ಯ, ಅಕ್ರೋಧ, ದಾನ, ಅಹಿಂಸಾ, ಪ್ರಜನನ (ವಸಿಷ್ಠ - ಗೌಧಸೂ. ೧೦.೫೧ ಭಾ). (ಈ) ಶಬ್ದಪ್ರವೃತ್ತಿಗೆ ನಿಮಿತ್ತವಾದವು: ಜಾತಿ, ದ್ರವ್ಯ, ಗುಣ, ಕ್ರಿಯೆ, ಸಂಬಂಧ. (ಉ) ಯೋಗಾಭ್ಯಾಸದ: ಪ್ರಾಣಾಯಾಮ, ಧ್ಯಾನ, ಪ್ರತ್ಯಾಹಾರ, ಧಾರಣಾ, ಸ್ಮರಣ (ವಾಯುಪು. I-೧೦-೭೧). ಧರ್ಮ-೮: (ಅ) ಕ್ಷಮೆ, ಸತ್ಯ, ದಯೆ, ದಾನ, ಶೌಚ, ಇಂದ್ರಿಯನಿಗ್ರಹ, ದೇವಪೂಜೆ, ಹವನ, ಸಂತೋಷ, ಸ್ತೇಯವರ್ಜನ (ಧರ್ಮಸಿಂ. ೧-೮). (ಆ) ಧರ್ಮದ (i) ಇಜ್ಯಾ, ಅಧ್ಯಯನ, ದಾನ, ತಪಸ್ಸು, ಸತ್ಯ, ಕ್ಷಮಾ, ದಮ, ಅಲೋಭ (ಮಹಾಭಾ. ವನ. ೨-೭೫). (ii) ತಪ, ಸತ್ಯ, ಕ್ಷಮಾ, ದಯಾ, ಶೌಚ, ದಾನ, ಯೋಗ, ಬ್ರಹ್ಮಚರ್ಯ (ವಾಮನ. ೮. ೨೨-ಸಂ. ೧೫೧). ಧರ್ಮ-೯: ಸಾರ್ವವರ್ಣಿಕ ಧರ್ಮಗಳು: ಅಕ್ರೋಧ, ಸತ್ಯವಚನ, ಸಂವಿಭಾಗ, ಕ್ಷಮಾ, ಸ್ವಪತ್ನಿಯಲ್ಲಿ ಪ್ರಜನನ, ಶೌಚ, ಅದ್ರೋಹ, ಆರ್ಜವ, ಭೃತ್ಯಭರಣ (ಮಹಾಭಾ. ಶಾಂತಿ. ೬೦-೭, ೮). ಧರ್ಮ-೧೦: (ಅ) ಆತ್ಮನ: ಉತ್ತಮ ಕ್ಷಮೆ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪಸ್ಸು, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ (ತತ್ತ್ವಪ್ರ. ೯-೩೨೫, ೩೨೬; ಪೂರ್ವಪು. ೧೧-೧೦೩, ೧೦೪). (ಆ) ಭೈಕ್ಷ, ಅಸ್ತೇಯ, ಶೌಚ, ಅಪ್ರಮಾದ, ಅವ್ಯವಾಯ, ಭೂತದಯೆ, ಕ್ಷಮಾ, ಅಕ್ರೋಧ, ಗುರುಶುಶ್ರೂಷಾ, ಸತ್ಯ (ವಾಯುಪು. I-೮-೧೭೬, ೧೭೭)" (ಶ್ರೀವತ್ಸ. ೨೧೮).

ಧರ್ಮ ಕೊಡು=ದಾನಮಾಡು: ಕಷ್ಟದಲ್ಲಿರುವವರಿಗೆ ಧರ್ಮ ಕೊಡಲು ಹಿಂಜರಿಯಬಾರದು (ಕೂಡಿ). ಧರ್ಮದ ಬಡ್ಡಿ = ನ್ಯಾಯವಾದ ಬಡ್ಡಿ : ಧರ್ಮದ ಬಡ್ಡಿಯ ಮೇಲೆ ಹಣ ಕೊಡುವ ವಿಷಯದಲ್ಲಿಂತೂ ಯಾವ ಸಂದೇಹವೂ ಇರಲಾರದು (ಹೋಧಪು. ೩೧). ಧರ್ಮದ ಮದುವೆ = ತೆರ ಇಲ್ಲದೆ ಹೆಣ್ಣನ್ನು ತಂದುಕೊಳ್ಳುವುದು. ಧರ್ಮದ ಮೇರು= ಧರ್ಮದ ಆಚರಣೆಯಲ್ಲಿ ಮೇರುವಿನ ಉನ್ನತಿಯನ್ನು ಪಡೆದವನು ; ಒಂದು ಬಿರುದು : [ಗು]ಣಸಂಪನ್ನಂ ಸ್ಥಿರನುಡಿವಾತಂ ಧರ್ಮ್ಮದ ಮೇರು ಸೋಮೇಶ್ವರ[ದಾ]ಸ ಪಾ × × × ವಯ್ಯಂ (ಶಾಇಶಾ. XX, ೨೪-೪೪ ; 1084) : ವಿಪ್ರಕುಳಪ್ರದೀಪರೀಶ್ವರಚರಣಾಬ್ಜಭೃಂಗರಧಿಕಸ್ಫೂರ್ತಿ ಧರ್ಮ್ಮದ ಮೇರುಗಳ್ (ಶಾಇಶಾ. XX, ೩೭-೦೩ ; 1084). ಧರ್ಮ ನೀಡು = ಧರ್ಮ ಕೊಡು : ಪ್ರವಾಹಪರಿಹಾರನಿಧಿಗೆ ಆ ಸಂಸ್ಥೆಯು ಉದಾರವಾಗಿ ಧರ್ಮ ನೀಡಿತು (ಕೂಡಿ). ಧರ್ಮ ಬೇಡು= ದಾನ ಬೇಡು : ಕೆಲವರು ಸೋಮಾರಿಗಳಾಗಿ ಧರ್ಮ ಬೇಡುವುದನ್ನೇ ಅಭ್ಯಾಸ ಮಾಡಿಕೊಂಡು ಬಿಡುತ್ತಾರೆ (ಕೂಡಿ). ಧರ್ಮ ಮಾಡು = ೧. ಸತ್ಕರ್ಮವನ್ನು ಮಾಡು ; ಪುಣ್ಯ ಕಾರ್ಯ ಮಾಡು : ಧರ್ಮ ಮಾಡುತ್ತೇನೆಂದು ಸುಳ್ಳು ಹೇಳಿ ಧನಾರ್ಜನೆ ಮಾಡುತ್ತಾನೆ (ಜಾತಕ. ೦೭-೧೦ ಬೀಳ). ೨. ದಾನ ಮಾಡು : ಇಂಥಾ ಜನ್ಮಾನೋಡೋ ಧರ್ಮಾ ಮಾಡೊ (ಡಾಸಿಗ. ೬೭-೨); ಧರ್ಮ ಮಾಡಿದರೂ ಮರ್ಮ ತಿಳಿಯಬೇಕು (ಗಾಡ). ಧರ್ಮ ಹಾಕು = ಧರ್ಮ ಕೊಡು : ಆಗರ್ಭಶ್ರೀಮಂತರಾದವರು ಹಿಂದಿನ ಕಾಲದಲ್ಲಿ ಪ್ರತಿನಿತ್ಯ ಧರ್ಮ ಹಾಕುವುದಕ್ಕಾಗಿಯೇ ಸ್ವಲ್ಪ ದ್ರವ್ಯವನ್ನು ಮಿಸಲಾಗಿಡುತ್ತಿದ್ದರು (ಕೂಡಿ).

[ಸಂ.]

ಧರ್ಮಎತ್ತ (ನಾ). = ಧಮ್ಮೇತ (?) : ಶ್ರೀ[ಮ][ದಾ]ಹವಮಲ್ಲದೇವರಲ್ಲಿ ಮೂನೂಱು ಗದ್ಯಾಣಂ ಧರ್ಮಎತ್ತಜ್ಞಿಯ್ಕೆ ಪ[ಞ್ಚಾ]ರ ಸಂವಜಮಾಗಿ ಪ್ಪಡೆದಂ ಊರಂ ವಿದ್ವಜ್ಜನಕ್ಕಾದರದೊಳ್ ಭರಣಂಗೆಯ್ದು (ಶಾಇಶಾ. XI-i, ೪೫-೪೬ ; 980). [P ಇದು 'ಧರ್ಮಏತ' ಎಂಬುದರ ಅಪಲಿಖಿತ]

ಧರ್ಮಏತ 'ಧರ್ಮೇತ' ನೋ.

ಧರ್ಮಂಗೆಯ್ (ಕ್ರಿ). ೧. ಪುಣ್ಯಕಾರ್ಯವನ್ನು ಮಾಡು : ಧರ್ಮಂಗೆಯ್ಗುಲ್ ಬಯಸುಗುಮೊರ್ಮೆ ಜಿನಾಗಮಮನೋಜಿಯಿಂ ಕೇಳ್ದ ನರಂ (ಸಮಪ. ೩-೫೦) : ಧರ್ಮಂಗೆಯ್ವನ ಫಲಮನಿಲ್ಲಿಯ ಮನ್ನೆಯುಮಂ ಮಹಿಮೆಯನಱಿಪುತಿರ್ಪುದನೊಳ್ಳಿತ್ತು ಬಗೆದು ಭಾವಿಸಿ ನೋಟ್ಪುದು (ಬಂಚರಿ. ೦೦-೦೨ ಪ). ೨. ದಾನಮಾಡು : ಬಸವಯ್ಯಂ ರುದ್ರಹೋಮಂಗ್ಗೆಯ್ದು ಸಹಸ್ರಭೋಜನಮಾಡಿ ಬಲಿಯಂ ಕಳೆದು ಧರ್ಮ್ಮಂಗೆಯ್ದು (ಎಕ. IV, ಹಿಗ್ಗಡ. ೦೬-೬ ; 1021). [ಧರ್ಮ + ಕೆಯ್$_1$]

ಧರ್ಮಂಬೆಱು (ಕ್ರಿ). ಧರ್ಮದೀಕ್ಷೆಯಂನ್ನು ಪಡೆ : ಆ ಮುನಿನಾಥಂ ಜಿನ ಮಾರ್ಗಮನೀಯೆ . . . ಶುಕ್ರನುಮಾ ಎನುತ ಬೃಹಸ್ಪತಿಯುಮಂತೆ ಧರ್ಮಂಬೆತ್ತರ್ (ನೇಮಿಪು. ೫-೩೬). [ಧರ್ಮ + ಪೆಱು$_1$]

ಧರ್ಮಂಬೇಟ್ (ಕ್ರಿ). ನ್ಯಾಯವಾದುದನ್ನು ಹೇಳು ; ಧರ್ಮಸಮ್ಮತವಾದುದನ್ನು ತಿಳಿಸು: ಕರ್ಮಮುಳ್ಳಂ ಮನುಷ್ಯಭವಂಬಡೆದು ಧರ್ಮಮಂ ಮಱೆದು ನೆಗಟ್ಟ್ಯೊಡಂ . . . ಧರ್ಮಂಬೇಟಲ್ ಬಲ್ಲವರುಮೇಗೆಯ್ವರ್ (ಜೀವಸಂ. ೭೭-೭೪೮). [ಧರ್ಮ + ಪೇಟ್]

ಧರ್ಮಕಂಟಕ(ನಾ). ೧. ಧರ್ಮಕ್ಕೆ ಉಂಟಾಗುವ ತೊಂದರೆ,–ವಿಪತ್ತು. ೨. ಧರ್ಮಕ್ಕೆ ಹಾನಿಯನ್ನುಂಟುಮಾಡುವವನು : ಧರಣಿಯಲಿ ಮುರವೈರಿಯಿರ್ದಡೆ ನಿರುತ ತಮಗೀ ವಿಧಿಯೆ ದುಷ್ಪರ ಶಿರವನುಜ್ಜಿ ಚಂಡಾಡದಿಹನೇ ಧರ್ಮಕಂಟಕರ (ನಿಶಾಗ. ೧-೦೫-೧೧).

[ಧರ್ಮ + ಕಂಟಕ]

ಧರ್ಮಕಥನ (ನಾ). ಧರ್ಮವನ್ನು ಕುರಿತು ಹೇಳುವುದು,–ವ್ಯಾಖ್ಯಾನ ಮಾಡುವುದಂ; ಧರ್ಮಬೋಧೆ : ಮುನಿಪತಿ ವಾಚನೆಯಿಂ ಪೃಚ್ಛನೆಯಿನನುಪ್ರೇಕ್ಷೆಯಿಂ . . . ಧರ್ಮಕಥನದಿಂದಂ ವಿನುತಸ್ವಾಧ್ಯಾಯವೆಂಬ ತಪಮಂ ತಳೆದಂ (ಶುಕುಮಾ. ೪-೦೮).

[ಧರ್ಮ + ಕಥನ]

ಧರ್ಮಕಥೆ (ನಾ). ಧಾರ್ಮಿಕ ವ್ಯವಹಾರವನ್ನು ತಿಳಿಸುವ ಕಥೆ : ಇತ್ತ ಮೇಘರಥಂ . . . ಧರ್ಮಕಥೆಯಂ ಪಲರ್ಗೆ ಪೇಟುತ್ತಿರ್ಪನ್ನೆಗಂ (ಜಾಪುಂಪು. ೩೦೪) : ವೇಸುವದಣ್ಣನಾಯಕಂ . . . ಧರ್ಮ್ಮಕಥಾಪ್ರಸಂಗದಿಂ ಧರ್ಮ್ಮಕಾರ್ಯ್ಯತತ್ಪರನಾಗಿ (ಸಾಇತಿ. XX, ೧೪೭-೩೬ : 1161).

[ಧರ್ಮ + ಕಥೆ]

ಧರ್ಮಕರ (ನಾ). ೧. ಧರ್ಮವನ್ನು ಮಾಡುವವನು. ೨. ಬಿಲ್ಲನ್ನು ಹಿಡಿದಿರುವವನು. ೧, ೨ : ಕನಕನಗೇಂದ್ರಧರ್ಮಕರನಾಗಿಯುಮುನ್ನತ ಧರ್ಮಹಂತ್ಯ . . . ಎಂದೆನಿಸಿರ್ದನಹೀಂದ್ರಭೂಷಣಂ (ರಾಜಶೇ. ೧೪-೧೪೪).

[ಸಂ.]

ಧರ್ಮಕರಕ (ನಾ). ಭಿಕ್ಷುಗಳು ಉಪಯೋಗಿಸುವ ನೀರಿನ ಪಾತ್ರೆ : ಸ್ಥವಿರನು [ಒಂದು] ಧರ್ಮಕರಕದಲ್ಲಿ ನೀರು ಹಿಡಿದುಕೊಂಡು (ಬುದ್ಧಚ. ಮಿಂದ. ೧೩). [ಧರ್ಮ + ಕರಕ]

ಧರ್ಮಕರ್ತ (ನಾ). ದೇವಸ್ಥಾನದ ಖರ್ಚಿನ ಮೇಲ್ವಿಚಾರಕ; ಧರ್ಮದರ್ಶಿ ; ಧರ್ಮಾಧಿಕಾರಿ : (ಕ). [ಧರ್ಮ + ಕರ್ತ]

ಧರ್ಮಕರ್ಮ (ನಾ). ೧. ಧಾರ್ಮಿಕ ಕಾರ್ಯ ; ಯಜ್ಞ, ಯಾಗ, ಪೂಜೆ ಮೊದಲಾದ ಕರ್ಮ : ಜನ್ಮಕುಲಧನಜಾತಿವರ್ಣಪ್ರಭೇದವಂ ಗಣಿಸದೆಯೆ ಮನದ ಹೃದಯದ ಧರ್ಮಕರ್ಮವನೆ ಹಿಡಿದು ಮನ್ನಣೆಯಾಡಿ (ಶ್ರೀರಾಮಾ. ೭-೦೫೧) : ವೇದಗಳೂ ವೇದೋದಿತ ಧರ್ಮಕರ್ಮಗಳೂ ಅಳಿಸಿ ಹೋಗುವ ಕಲಿಯುಗದಲ್ಲಿ ಸ್ಮೃತಿಗಳನ್ನು ಕೇಳುವರಾರು ? (ಧಾಕಥ. ೬೮). ೨. ಪುಣ್ಯ ಕರ್ಮ ; ಪುಣ್ಯಸಂಪಾದನೆಯ ಕಾರ್ಯ.

ಧರ್ಮಕರ್ಮ ಸಂಯೋಗ = ೧. ಪುಣ್ಯಕರ್ಮ ಫಲಿಸುವಿಕೆ ; ಅದೃಷ್ಟ ಕೂಡಿಬರುವಿಕೆ : ಧರ್ಮಕರ್ಮ ಸಂಯೋಗದಿಂದ ಅದೇ ವೇಳೆಗೆ ಅವರೂ ಅಲ್ಲಿಗೆ ಬಂದುದರಿಂದ ನನಗೆ ಅವರ ದರ್ಶನ ಆಯಿತು (ಕೂಡಿ). ೨. ಆಕಸ್ಮಿಕ. [ಧರ್ಮ + ಕರ್ಮ]

ಧರ್ಮಕಹಳೆ 'ಧರ್ಮಗಹಳೆ' ನೋ.

ಧರ್ಮಕಾಯ (ನಾ). ಧರ್ಮರೂಪವಾದ ದೇಹವುಳ್ಳವನು ; ಧರ್ಮವೇ ಶರೀರವಾಗಿರುವವನು : ಬುದ್ಧನ ಪಾರ್ಥಿವವಾದ ಕಾಯ ಕಣ್ಮರೆಯಾದರೂ ಆತ 'ಧರ್ಮಕಾಯ'ನಾಗಿ ಶಾಶ್ವತನಾಗಿದ್ದಾನೆ (ಧಾಕಥ. ೧೯೩).

[ಧರ್ಮ + ಕಾಯ]

ಧರ್ಮಕಾರ್ಯ (ನಾ). ೧. ಧರ್ಮ ಅಥವಾ ಪಂತಸಂಬಂಧವಾದ ಆಚರಣೆ ; ಸದಾಚಾರ. ೨. ಸತ್ಕರ್ಮ ; ಪರೋಪಕಾರದ ಕೆಲಸ ; ಪುಣ್ಯಕಾರ್ಯ : ಆದಿಭಟ್ಟಾರಕವ್ಯತಿಕರಸ್ಥಿತಿಯನಾನಂದನೆಂಬಂ ಧರ್ಮಕಾರ್ಯನಿಮಿತ್ತಂ ಬಂದಱಿಪಿದೊಡೆ (ಆದಿಪು. ೦೬-೪೪ ವ); ಮೃತ್ಯುಪಾಶದಲ್ಲಿ ಸಿಕ್ಕಿರುವ ಚತುರಂಗಸೇನೆಯನ್ನು ಮೃತ್ಯುವಿನಿಂದ ಬಿಡುಗಡೆ ಮಾಡಿದರೆ ಅದು ಒಂದು ದೊಡ್ಡ ಧರ್ಮಕಾರ್ಯವಾಗುತ್ತದೆ (ವಡಕಥಾ. ೨೩೦).

[ಧರ್ಮ + ಕಾರ್ಯ]

ಧರ್ಮಕುಮಾರ (ನಾ). ಯಮಧರ್ಮನ ಮಗ ; ಧರ್ಮರಾಯ ; ಯುಧಿಷ್ಠಿರ : ಪಾಂಡವರಾಯ ಧರ್ಮಕುಮಾರ ಗೆಲಿದನು ಕೌರವೇಶ್ವರನ (ಕುವ್ಯಾಳ. ೪ ಸೂಕನ). [ಧರ್ಮ + ಕುಮಾರ]

ಧರ್ಮಕೃತ್ಯ (ನಾ). = ಧರ್ಮಕಾರ್ಯ ೨ : ಭಾಷೆಯನ್ನು ಯಾರೂ ಯಾರ ಉಪಕಾರಕ್ಕೆ ಕಲಿಯುವುದಿಲ್ಲ ; ಅದು ಧರ್ಮಕೃತ್ಯವೂ ಅಲ್ಲ : ಉಸಿರಾಟದಂತೆ ಅದು ಸ್ವಾಭಾವಿಕವೂ ಅಲ್ಲ (ವಿಜಾಮಂ. ೧೪).

[ಧರ್ಮ + ಕೃತ್ಯ]

ಧರ್ಮಕ್ಷೇತ್ರ (ನಾ). ೧. ಧರ್ಮವು ಬೆಳೆಯಲು ಯೋಗ್ಯವಾದ ಕ್ಷೇತ್ರ ; ಪುಣ್ಯಕ್ಷೇತ್ರ ; ಪವಿತ್ರಕ್ಷೇತ್ರ; ತೀರ್ಥಕ್ಷೇತ್ರ: ಅಂತು ಧರ್ಮಕ್ಷೇತ್ರಂಗಳಂ ವಿಹರಿಸಿ ವಿನೇಯಜನಾಶಯಕುಶೇಶಯಂಗಳನಲರ್ಚುತುಂ ಬಂದು (ಆದಿಪು. ೧೦-೬೮ ವ) : ಅಮರಾನೀಕಮನೇಕಂ ಕ್ರಮಯುಗವಿನ್ಯಸ್ತಮಸ್ತಕಂ ಬಳಸಿರೆ ವಿಶ್ವಮಿಸುವಪೋಲ್ ಧರ್ಮಕ್ಷೇತ್ರಮದಾವುದೆನೆ ಸಮವಸರಣ ದೆಡೆಯನೆ ನಡೆದಂ (ಶಾಂತಿಪು. ೧೨-೩೧) : ಧರ್ಮಕ್ಷೇತ್ರವೇ ಕರ್ಮಕ್ಷೇತ್ರ (ಧಾಕಥ. ೧೨೦). ೨. ಭಾರತ. ೩. ಧಾರ್ಮಿಕನಾದ ವ್ಯಕ್ತಿ. [ಧರ್ಮ+ಕ್ಷೇತ್ರ]

ಧರ್ಮಗತಿ (ನಾ). ೧.ಧರ್ಮದ ಮಾರ್ಗ; ಧರ್ಮದ ಹಾದಿ: ಧರ್ಮಗತಿಯು ತಾರತಮ್ಯವ ತಿಳಿವೊಡೆ ವೆರ್ಮೆಯು ಬಿಟ್ಟು ಬೇಸಱದೆ ನಿರ್ಮಲಮತಿಯಾಗಿ ನೀ ನಡೆ ಮಿಥಿಲೆಗೆ ಧರ್ಮವ್ಯಾಧನ ಬಳಿಗೆ (ಪಡಿಬ.೨-೪೪). ೨. ನ್ಯಾಯವಾದ ಕ್ರಮ,–ರೀತಿ ; ಸರಿಯಾದ ನಡವಳಿಕೆ : ದುಷ್ಪಬುದ್ಧಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮಗತಿಯಂ ಬಿಟ್ಟು (ಪಂಡತಂ. ೧೭೬-೩೦) : ಗೆಲವಿದೆಂತುಟೊ ತನ್ನ ಸೋಲಿದು ಬಳಿಕ ಸೋತರೆ ಧರ್ಮಗತಿಯನು ತಿಳಿದು ಹೇಳಲಿ ತತ್ಸಭಾಸದರೆಂದಳಿಂದುಮುಖಿ (ಕುವ್ಯಾ.ಸ ೧೪-೪೦). [ಧರ್ಮ + ಗತಿ]

ಧರ್ಮಗರಣಿಗ (ನಾ). ಧರ್ಮಕಾರ್ಯಕ್ಕೆ ಮಾಡುವ ವ್ಯಯವನ್ನು ಬರೆಯುವವನು; ಧರ್ಮಕಾರ್ಯಗಳ ಲೆಕ್ಕವನ್ನಿಡುವವನು: ಪಾಲಿಪು ಕೊಳ್ಕಯುಂ ಅರಮನೆ ತಾಣದ ಭಾಗಮುಮ್ ಅರ್ಚ್ಚಕಮ್ಮೆನ್ರಿಯಿಕೆ ಕೊಟ್ಟ ಸೇನವರಸರುಂ ಧರ್ಮ್ಮಗರಣಿಗರುಂ (ಎಳ. VI, ಕೊಪ್ಪ. ೩೭-೧೦ : ಸು. 6757). [ಧರ್ಮ + <ಕರಣಿಕ]

ಧರ್ಮಗಹಳೆ, ಧರ್ಮಕಹಳೆ, ಧರ್ಮಗಾಳೆ (ನಾ). ಯುದ್ಧದಲ್ಲಿ ಗೆದ್ದವರು ಕರುಣೆಯಿಂದ ಯುದ್ಧವನ್ನು ನಿಲ್ಲಿಸುವ ಸೂಚನೆಗಾಗಿ ಊದಿಸುವ ಕಹಳೆ: ಮುಱಿಯಲಿಱಿದು ಪಾಳೆಯ ಪರಿಯಂತರ ಒಱಿಸಿ ಧರ್ಮಗಹಳೆಯ [ಜಾತಾಂ.ಗಾಳೆಯನು]ನೆಱಿಗಲಿ ರಾವು ತಿರುಗಿದನೊಯ್ಯನೆ ತನ್ನುಱುವ ಭಟರ ಮೋಹರದೊಳು (ಕುರಾಸಾಂ. ೦೫-೧೨೧) : ಬರಲು ಬಹುದು . . . ದುರ್ಧರದ ಸಾಹಸರೆಂದು ಅಡ್ಡೈತರೆ ವಿಭೀಷಣ ಧರ್ಮಗಹಳೆಗಳುಲಿಯಲಿತ್ತೆರದಿ (ಆರಾಮಾ. ೩೬೨-೭೪). **ಧರ್ಮಕಹಳೆ :** ತಿಮ್ಮಣ್ಣನಾಯಕನು ಧರ್ಮಕಹಳೆಯನ್ನು ಹಿಡಿಸಿದನು. ಕದನವು ನಿಂತಿತು (ಕವೀಕ. ೧೨೨) ; ದಂಡಿನವರ ತಿಳುವಳಿಕೆಗೆ ಕೂಚುನಗಾರಿ, ಧರ್ಮಕಹಳೆ ಮೊದಲಾದ್ದನ್ನು ಉಪಯೋಗಿಸುತ್ತಿದ್ದಂತೆ ತಿಳಿಯಬರುವ ಸಂಗತಿಯು . . . ಸೇನೆಯಲ್ಲಿ ಒಂದು ವಿಧವಾದ ತರಬಿಯತ್ತು ಇತ್ತೆಂದು ತೋರಿಸುವುದು (ಚಿತ್ರಪಾ. ೬ ಉಪೋದ್ಘಾತ). **ಧರ್ಮಗಾಳೆ :** ಪಾಳೆಯ ಪರಿಯಂತ ಮುಱಿಯಲಿಱಿದು ಧರ್ಮಗಾಳೆಯ ದನಿಯನೆಲ್ಲರಸು ಕೇಳಿಸುತೊಯ್ಯನೆ ತಿರುಗಿದನೆಂದು ಕಟ್ಟಾಳು ಕಾಟಣ್ಣ ಲೀಲೆಯೊಳು (ಕುರಾಸಾಂ. ೪೨-೭೮) : ದಾಳಿಯಂ ಮಾಡಿದುದು ಹರಗಣಂ ಪುರದ ಪೆರ್ಬಾಗಿಲೊಳ್ ಗಾಡದಿಂ ಧರ್ಮಗಾಳೆಯನಿರದೆ ಪಿಡಿಸಿ ತಿರುಗಿತು ವಿಜಯದುತ್ಸವದೊಳು (ಚಿಬಪು. ೪೪-೪೬) ; ಸಾವಿಗೆ ಭಯಗೊಂಡು ಬೇಡಿಕೊಳ್ವವರಮ ಕಾವೆನು ಭಯ ಬೇಡೆಂದು ತೀವಿದ ಧರ್ಮಗಾಳೆಯ ಹಿಡಿಸಿದನಾ ಭೂವರನಂಜರಾಜೇಂದ್ರ (ಕಂನವಿ. ೦೬-೪೩). 'ದಮ್ಮಗಹಳೆ' ಪರಾ. [ಧರ್ಮ + ಕಹಳೆ]

ಧರ್ಮಗಳ್ (ನಾ). ಉಚಿತವಾಗಿ ಕೊಡುವಕಳ್ಳು; ದಾನವಾಗಿ ಕೊಡುವ ಮದ್ಯ: ನೆರೆದೆಲ್ಲರ್ ಕಳ್ಗುಡಿಯುತ್ತಿರೆ ಬಡವರ್ಗಲ್ಲಿ ಧರ್ಮಗಳ್ಳೆಂದೆಱೆವರ್ (ಧರ್ಮಾಮೃ. ೧-೧೫೪). 'ಧರ್ಮಗಳ್ಗುಡಿ' ಪರಾ.
[ಧರ್ಮ + ಕಳ್$_3$]

ಧರ್ಮಗಳೆ (ನಾ). (ಲಕುಲೀಶ) ಯತಿಯ ಧರ್ಮದಂಡ; ಯೋಗದಂಡ: ಹರನರಸಂ ಸುರರ್ನ್ನೆರದ ಗುಣ್ಡು ಜಟಾವಳಿ ತೊಂಗಲಿನ್ದ್ರ ದುರ್ಧರಗಿರಿ ಸೇತು ಧರ್ಮ್ಮಗಳೆಯಂಕದ ಮದ್ದಳೆ ಧೂಮ ವೇಳೆ ವಿಸ್ಫುರಿತ ಶಿವಾಗಮಂ ಸುರಿಗೆಯಾಗಿರೆ ಪಾಪವನೊತ್ತಿ ಕುತ್ತಿ ನಿಷ್ಠುರಮಿಱಿದಿನ್ತು ಕೊನ್ದ ತಪದಂಕಮಿದೀ ತಪದಂಕಕಾಱನ (ಎಳ. XII, ಶಿರಾ. ೨೮-೬೮; 943). [ಧರ್ಮ + ಗಳೆ (<ಗಟ^3)]

ಧರ್ಮಗಳ್ಗುಡಿ (ಕ್ರಿ). ಉಚಿತವಾಗಿ ಕಳ್ಳನ್ನು ಕುಡಿ; ಬಿಟ್ಟಿ ಹೆಂಡ ಕುಡಿ: ಕಳ್ಳೊಳ್ ಬೊಟ್ಟನಿಟ್ಟುಕೊಂಡು ಕೆಲದರ್ಗೆಲ್ಲಂ ಬೊಟ್ಟಿಟ್ಟು ಕಿಱಿಯರ್ಪಿರಿಯರಱಿದು ಪೊಡವಟ್ಟು ಧರ್ಮಗಳ್ಗುಡಿವರ್ಗೆಲ್ಲಂ ಮಿಸಲ್ಗಳ್ಳನೆಱೆದು (ಪಂಪಭಾ. ೪-೮೭ ವ). [ಧರ್ಮಗಳ್ + ಕುಡಿ$_1$]

ಧರ್ಮಗಾಮಿ (ನಾ). ಧರ್ಮಮಾರ್ಗದಲ್ಲಿ ನಡೆಯುವವನು: ಧರ್ಮಗಾಮಿಗಳಾದ ಅವರು ಹೆಚ್ಚುಕಡಮೆಯಾಯಿತೆಂದರೆ ಸುಮ್ಮನಿರುವುದಿಲ್ಲ (ವಚಭಾ. ೨೯). [ಸಂ. ಧರ್ಮಗಾಮಿನ್]

ಧರ್ಮಗಾಮುಂಡ (ನಾ). ಒಬ್ಬಾತನ ಹೆಸರು: ಶ್ರೀಪಾಲನಾವಾಸ್ಯ ಧರ್ಮ್ಮಗಾಮುಣ್ಡ ಪುತ್ರಜಃ ಪ್ರಾತಿಷ್ಟಿಪಚ್ಛಿಲಾಪಟ್ಟಂ ಸ್ಥೇಯಾದಾಚನ್ದ್ರತಾರಕಂ (ಸೌಇಇ. XX, ೯-೧೪; ಸು. 8ನೆಯ ಶತ).
[ಧರ್ಮ + ಗಾಮುಂಡ]

ಧರ್ಮಗಾರಿಯ (ನಾ). = ಧರ್ಮಕಾರ್ಯ೨: ಯಾ ಮರಿಯಾದೆಯಲು ಧರ್ಮ್ಮಗಾರಿಯವನು ನಡಸುವರು (ಎಳ. XI, ಹೊಳಲ್ಕೆ. ೭೫-೨೦; 1405 ?). [<ಸಂ. ಧರ್ಮಕಾರ್ಯ]

ಧರ್ಮಗಾಳೆ 'ಧರ್ಮಗಹಳೆ' ನೋ.

ಧರ್ಮಗುಣ (ನಾ). ೧. ಸತ್ಕರ್ಮವನ್ನು ಮಾಡುವ ಗುಣ; ಸದ್ಗುಣ: ವನಜದ್ವಿಟ್ಸುತನೊಂದಿದಂದುದಯದೊಳ್ ಪ್ರಾಜ್ಞಂ . . . ಜಾಮಿತ್ರ ಕೇತನದೊಳ್ ಧರ್ಮಗುಣಾನ್ವಿತಂ (ಜಾತತಿ. ೧೮-೧೦). ೨. ಬಿಲ್ಲಿನ ಹೆದೆ: ಸೊಗಯಿಪ ಧರ್ಮಗುಣಂಗಳನಗಲಿದೊಡಾಕ್ಷಣದೊಳನ್ಯರಂ ಕೊಂದವ ವಂಬುಗಳೆಂದಡೆ ವಿರಹಿತಧರ್ಮಗುಣರ್ ಪೆಱರಂ ವಿಘಾತಿಸುವುದದ್ಭುತಮೇ (ಬಾಧಪು. ೧೩-೬೩) ೧, ೨: ಕೃತವಿದ್ಯರ ಭೀಕರಶರ ತತಿ ಮೊಳೆತೇವಂತೆ ಸಮೆದು ಬಿಟ^3 ಸಂಗರದೊಳ್ ಗತಿಗಂತುಟು ಧರ್ಮಗುಣಚ್ಯುತದಿ ನಧೋಗತಿಗೆ ಬೀಟ್ವುದೊಂದಚ್ಚರಿಯೇ (ಗದಾಯು. ೪-೩೩); ಕಡುವೇಗಿ ಧರ್ಮ್ಮ ಗುಣಮಂ ಬಿಡುವುದು ಖರದೂಷಣಾನ್ವಿತಂ ಮೂದಲೆಯಂ ಪಡೆದುದು ಬಲ್ಲಾಳನ ದಿಟನುಡಿಯೊಳ್ಪಡಿಯಾ ಗಲಾರ್ಪ್ಪುದೇ ರಾಮಶರಂ (ಎಳ. V, ಬೇಲೂರು. ೦೭೫-೯; 1186)
[ಧರ್ಮ + ಗುಣ]

ಧರ್ಮಗುತ್ತಿ (ನಾ). ಒಂದು ಬಗೆಯ ಬತ್ತ: ಕುಂದದ ಚಂದ್ರಲೇಖೆ . . . ನಿರಂತರಮೊಪ್ಪುವ ಧರ್ಮಗುತ್ತಿಯೆಂಬಂದದನೇಕ ನಾಮವೆಸೆಗುಂ ಮೃದುಬಂಧುರ ಗಂಧಶಾಲಿಗಳ್ (ಮಲ್ಲಿಕಾ. ೪-೬೮). [?]

ಧರ್ಮಗುರು (ನಾ). ಧರ್ಮಮಾರ್ಗವನ್ನು ಉಪದೇಶಿಸುವ ಗುರು: ಶ್ರೀಮನ್ನಾಗಸ್ವಾಮಿ × × × ಧರ್ಮ್ಮಗುರುಗಳಲ್ಲಿ ಜವಳಿ[ಗು]ಳವಂ ಮನ್ನಣೆ ಪ್ರತಿಪತ್ತಿವೆರಸು ಬ್ರಹ್ಮಪುರಿಗೆ ಕೇರಿಯು [ಕೆ]ಯ್ಯುಮಂ . . . ಪಡೆದು (ಸೌಇಇ. XI-1, ೬೪-೧೮; 1028); ಡಾ. ಆಬಟ್‌ರು ಆಗ ಟಿಳಕರ ಧರ್ಮಗುರುವಾಗಿದ್ದರೆಂದು ಹೇಳಲಡ್ಡಿಯಿಲ್ಲ (ಸ್ಮೃತಿಚಿ. ೧೮೬).
[ಧರ್ಮ + ಗುರು$_2$]

ಧರ್ಮಗೇಹ (ನಾ). ೧. ಧರ್ಮಕ್ಕೆ ಆಶ್ರಯವಾದುದು: ಧರ್ಮದ ನೆಲೆ: ನಿಜನೇತ್ರಂ ಲೋಕನೇತ್ರಂ ನಿಜಭರಣಮಿಳಾಚಕ್ರಭಾರಾವಹಂ ಮೇಣ್ ನಿಜವಾಹಂ ಧರ್ಮಗೇಹಂ ನಿಜಧನು ದನುಜಾರಾತಿಜಾತಾಧಿವಾಸಂ . . . ಕುಡುಗೆಮಗತುಳ ಶ್ರೇಯಮಂ ಶೈಲಜೇಶಂ (ರಾಜಶೇ. ೧-೨). ೨. [ಜ್ಯೋತಿ] ಜಾತಕನ ಜನ್ಮಲಗ್ನದಿಂದ ಒಂಬತ್ತನೆಯ ಸ್ಥಾನ.
[ಧರ್ಮ + ಗೇಹ]

ಧರ್ಮಗೊಡ್ಡು (ನಾ). ೧. ಕಂದಾಚಾರದಲ್ಲಿ ನಿಷ್ಠೆ; ವ್ಯವಹಾರಜ್ಞಾನವಿಲ್ಲದಿರುವಿಕೆ: ಧರ್ಮಗೊಡ್ಡಿನ ಹುಚ್ಚನೀ ನಮ್ಮವನ ಕಯ್ಗೆ ಈ ಶಾಸನವು ದೊರೆವಟ್ಟು (ಮಂತ್ರಶ. ೧೩-೧೦). ೨. ವ್ಯವಹಾರಜ್ಞಾನವಿಲ್ಲದಿರುವ ವ್ಯಕ್ತಿ; ಕರ್ಮಠ. [ಧರ್ಮ + ಗೊಡ್ಡು$_1$]

ಧರ್ಮಗೊಳಗ (ನಾ). ಕಣದ ಧಾನ್ಯರಾಶಿಯಲ್ಲಿ ಧರ್ಮಕ್ಕಾಗಿ ಮೊಟ್ಟ ಮೊದಲು ತೆಗೆದಿಡುವ ಒಂದು ಕೊಳಗದಷ್ಟು ಧಾನ್ಯ: ಅದಱ ಸೀಮೆ ಮೂಡಲು ವಿರಟನ ದಿಬ್ಬೆ ಬಡಗ ಕೈರವಿಯ ಹಳ್ಳ ತಂಕ ಕೆಱೆಯ ಹಳ್ಳಂ ಮೇರೆ ಕೆಱೆಯ ಕೊರಲು ದೇವಗೊಳಗಂ ಧರ್ಮಗೊಳಗವೆರಡು ದೇವರ ನಂದಾದೀವಿಗೆಗೆ ಬಿಟ್ಟ ಗಾಣವೆರಡು (ಎಳ. XI, ಚಳ್ಳಕೆ. ೨೦-೩೬; 1087). 'ದೇವಗೊಳಗ' ಪರಾ. [ಧರ್ಮ + ಕೊಳಗ$_1$]

ಧರ್ಮಗೋಷ್ಠಿ (ನಾ). ಧಾರ್ಮಿಕ ಪ್ರವಚನಗಳ ಸಭೆ, – ಕೂಟ: ಮಸೀದಿಗಳಲ್ಲಿ ಕೊರಾನಿನ ಪಠನದ ಮೂಲಕ ನಡೆಯುವ ಸನ್ಮಾರ್ಗ ಬೋಧನೆಯೂ ಹಿಂದೂದೇವಾಲಯಗಳಲ್ಲಿ ನಡೆಯುವ ಧರ್ಮಗೋಷ್ಠಿಗಳೂ . . . ಉತ್ತಮವೂ ಉದಾತ್ತವೂ ಆದ ಸಮಾಜನಿರ್ಮಾಣಕ್ಕೆ ನೆರವಾಗುತ್ತಿವೆ (ಶಿಕ್ಷದ. ೬೩). [ಧರ್ಮ + ಗೋಷ್ಠಿ]

ಧರ್ಮಗೌರವ (ನಾ). ಧರ್ಮದ ಬಗೆಗೆ ಇರುವ ಆದರ; ಧರ್ಮವನ್ನು ಕುರಿತ ಶ್ರದ್ಧೆ: ಈ ಕ್ರೂರಜನರ ನಡತೆಯಿಂದ ನಿನ್ನ ಧರ್ಮಗೌರವವೆಲ್ಲಾ ಹೋಗಿ ಬಿಟ್ಟಂತೆ ಕಾಣುತ್ತದೆ (ವಚಭಾ. ೯೯).
[ಧರ್ಮ + ಗೌರವ]

ಧರ್ಮಗ್ರಂಥ (ನಾ). ಮತದ ಪ್ರಕ್ರಿಯೆ, ತತ್ತ್ವ, ವಿಧಿ ಮುಂತಾದುವುಗಳನ್ನು ವಿವರಿಸುವ ಗ್ರಂಥ; P ವೇದ, ಬೈಬಲ್ಲು, ಕೊರಾನು ಮುಂತಾದುವು: ವೈದಿಕರೂ ಅವೈದಿಕರೂ ಪರಸ್ಪರರ ಧರ್ಮಗ್ರಂಥಗಳ ಅಧ್ಯಯನವನ್ನು ಮಾಡಬಹುದಲ್ಲವೆ? (ಮಾಧವ. ೪೨೦); ಲಕುಲೀಶ-ಪಾಶುಪತದ ಧರ್ಮಗ್ರಂಥಗಳು ದೊರಕಿದಂತೆ ಕಾಳಾಮುಖರ ಧರ್ಮಗ್ರಂಥಗಳು ಪ್ರತ್ಯೇಕವಾಗಿ ದೊರೆತಿಲ್ಲ (ಕಶಾಅ. ೦೩೩).
[ಧರ್ಮ + ಗ್ರಂಥ]

ಧರ್ಮಗ್ಲಾನಿ (ನಾ). ಧರ್ಮದ ಹಾನಿ; ಧರ್ಮ ನಷ್ಟವಾಗುವಿಕೆ: ಕೃಷ್ಣಾವತಾರವಾದದ್ದು ದ್ವಾಪರಯುಗದ ಅಂತ್ಯದಲ್ಲಿ ನಡೆದ ಧರ್ಮಗ್ಲಾನಿಯ ಕಾರಣದಿಂದ (ಭಾರದ. ೧೦೮); ಅರ್ಜುನನ ಅಳಲಿಗೆ ಕಾರಣ . . . ವರ್ಣಸಾಂಕರ್ಯ, ವರ್ಣಸಾಂಕರ್ಯದಿಂದ ಧರ್ಮಗ್ಲಾನಿ, ಧರ್ಮಗ್ಲಾನಿಯಿಂದ ನರಕಪ್ರಾಪ್ತಿ (ಭಾರದ. ೧೧೨). [ಧರ್ಮ + ಗ್ಲಾನಿ]

ಧರ್ಮಘಾತಕ (ನಾ). ೧. ಧರ್ಮದ ಉಲ್ಲಂಘನೆ; ಧರ್ಮದ್ರೋಹ: ನನ್ನನ್ನು ಕೋರದೆಯೇ ನೀನು ಆ ರಾಜನ ಸಹವಾಸ ಮಾಡಿದ್ದು ಧರ್ಮಘಾತಕವೇನಲ್ಲ (ವಚಭಾ. ೩೯೫). ೨. ಧರ್ಮವನ್ನು ಉಲ್ಲಂಘಿಸುವವನು; ಧರ್ಮದ್ರೋಹಿ. [ಧರ್ಮ + ಘಾತಕ]

ಧರ್ಮಚಕ್ರ (ನಾ). ೧. ಧರ್ಮಸಾಮ್ರಾಜ್ಯ; ಧರ್ಮವುಳ್ಳ ಚಕ್ರಾಧಿಪತ್ಯ. ೨. ಧರ್ಮರಕ್ಷಣೆ ಮಾಡಿದ ಚಕ್ರಾಯುಧವನ್ನು ಧರಿಸಿದವನು; ವಿಷ್ಣು. ೧, ೨: ಪ್ರತಿಪಾಲಿತಧರ್ಮಚಕ್ರಂ . . . ಈ ಚಳುಕ್ಯನಾರಾಯಣದೇವ ನೀಗೆಮಗೆ ಮಂಗಳಕಾರಣಮುತ್ಸವಂಗಳಂ (ಗದಾಯು. ೧-೧). ೩. ಬುದ್ಧ. ೪. [ಬೌದ್ಧ] ಧರ್ಮದ ಸಂಕೇತವಾದ ಚಕ್ರ: ಭರತಖಂಡದ ರಾಷ್ಟ್ರ

ಧ್ವಜದಲ್ಲಿ . . . "ಧರ್ಮಚಕ್ರ" ವಿಶ್ವಸಾಮರಸ್ಯವನ್ನು ಸಾಕ್ಷಾತ್ಕರಿಸಿದ ವೈದಿಕಋಷಿಗಳ ದಿವ್ಯಸಂದೇಶದ ಪ್ರತೀಕ (ಪುಕ್ಸಾರ. ೪೭ ಪೀಠಿಕೆ) ; ಸಕಲ ಜಗತ್ತಿಗೂ ಮಾರ್ಗದರ್ಶಕವಾಗಿರಬೇಕೆಂದು ನೆಹರೂ ಅವರು ವೇದ ಪ್ರಶಂಸಿತವಾದ ಆದಿತ್ಯನ ಧರ್ಮಚಕ್ರವನ್ನೂ . . . ರಾಷ್ಟ್ರಧ್ವಜದಲ್ಲಿ ಅಳವಡಿಸಿ (ಪುಕ್ಸಾರ. ೧೨೦ ಪೀಠಿಕೆ) ; ಎಂತಾದರು ಈ ದುರಂತಕಿಹುದೆ ಕೊನೆಯ ಅಂಕವು? 'ಸಂಭವಾಮಿ ಯುಗೇಯುಗೇ' ಅಗೋ ಧರ್ಮಚಕ್ರವು (ನೆಲಮು. ೪೦-೨೪) ; ಬೌದ್ಧರಿಗೆ (ಹೀನಯಾನ) ಪೂಜಾರ್ಹವಾದ ಸಂಕೇತಗಳನ್ನು ಮೂರು ಗುಂಪುಗಳನ್ನಾಗಿ ವಿಭಾಗಿಸಬಹುದು . . . (iii) ಉದ್ದೇಶಿತ : ಸ್ತೂಪ, ಧರ್ಮಚಕ್ರ ಮತ್ತು ತ್ರಿರತ್ನಚಿಹ್ನೆಗಳು ಇದರಲ್ಲಿ ಮುಖ್ಯವಾದುವು (ಭಾರದ. ೪೯೫). 'ಧರ್ಮಚಕ್ರಪ್ರವರ್ತನ' ಪರಾ. ೫. [ಜೈನ] ತೀರ್ಥಂಕರನು ವಿಹಾರ ಮಾಡುವ ಸಮಯದಲ್ಲಿ ಆತನ ಮುಂದೆ ಚಲಿಸುವ, ಸೂರ್ಯನನ್ನು ಮೀರಿಸುವ ಪ್ರಕಾಶದಿಂದ ಕೂಡಿದ, ಸಾವಿರ ಅರಗಳನ್ನುಳ್ಳ ಚಕ್ರ : ಜಿನಚಂದ್ರದೇವಂ ನಡೆಯೆ ಧರ್ಮಚಕ್ರಂ ಮುಂದೆ ನಡೆಯೆ (ಶಾಂತಿಪು. ೧೨-೧೪ ವ) ; ಪಸರಿಸಿದ ಕುತೀರ್ಥಧ್ವಾಂತಮಂ ತೂಳ್ದಿ . . . ಪೆಂಪಿಂ ವಿಶದವಿಭವತೇಜ ಶ್ಚಕ್ರಮರ್ಕಂಬೊಲುದ್ಯೋತಿಸು ಸಕಲಧಾತ್ರೀಚಕ್ರದೊಳ್ ಧರ್ಮಚಕ್ರಂ (ಅಜಿಪು. ೧-೧೬) ; ಪಡೆದಚ್ಚರಿಯಿಂ ಸಹಸ್ರಭಾನು ತ್ವಿ [ಡ] ದುದ್ಯೋತಿ ಸುರೇಂದ್ರಕಲ್ಪಿತಾರ್ಘ್ಯಂ ಕಿಡೆ ದುರ್ಮತದುಸ್ತಮ ಪ್ರಭಾವಂ ನಡೆಗುಂ ಸಂದಿಸಿ ಮುಂದೆ ಧರ್ಮಚಕ್ರಂ (ವರ್ಧಮಾ. ೧೪-೨೭). ೬. ಯಕ್ಷರ ತಲೆಯ ಮೇಲೆ ಸಮವಸರಣಕಾಲದಲ್ಲಿ ಇರುವ ಚಕ್ರಾಕಾರವಾದ ಒಂದು ಬಗೆಯ ಆಭರಣ : ಧರ್ಮಚಕ್ರಪರಚಕ್ರಮನಾಕ್ರಮಿಸಲ್ಕೆ ಸಾಲ್ದ ಭಾಸುರತರ ತೀವ್ರತೇಜದಪರಾಜಿತೆ ಮಾಟ್ಕೆಮತಿಪ್ರಕಾಶಮಂ (ಮಲ್ಲಿಪು. ೧-೯) ; ನಾಲ್ಕುಂ ದೆಸೆಯೊಳಂ ಧರ್ಮಚಕ್ರಮಂ ಧರಿಯಿಸಿರ್ಪ ಯಕ್ಷೇಂದ್ರರಿಂ . . . ಪ್ರಥಮಪೀಠಮಕ್ಕುಂ (ಪಸಾರ. ೫೬೬). ೭. ಚಕ್ರಾಕಾರವಾದ ಒಂದು ಬಗೆಯ ಆಭರಣವನ್ನು ಧರಿಸಿರುವವನು : ಅದಜ ನಾಲ್ಕುಂ ದಿಙ್ಮುಖಂಗಳೊಳ್ . . . ಧರ್ಮ ಚಕ್ರರ್. ಯಕ್ಷರ್ಕಳಿರ್ಪರ್ (ಮಹಾನೇ. ೧೫-೬೮ ವ). [ಧರ್ಮ + ಚಕ್ರ$_1$]

ಧರ್ಮಚಕ್ರಪ್ರವರ್ತನ (ನಾ). ೧. [ಬೌದ್ಧ] ಧರ್ಮಚಕ್ರವನ್ನು ಚಲಿಸುವಂತೆ ಮಾಡುವುದು. ೨. "ಬುದ್ಧನು ಮಾಡಿದ ಮೊತ್ತಮೊದಲನೆಯ ಉಪದೇಶಕ್ಕೆ 'ಧರ್ಮಚಕ್ರಪ್ರವರ್ತನ' ವೆಂದೂ ಆತನ ವಚನಗಳ ಮಣಿಹಾರಕ್ಕೆ 'ಧರ್ಮಪದ' ವೆಂದೂ ಹೆಸರು" (ಭಾರದ. ೧೯೨) : ನಾಲ್ಕು ಆರ್ಯಸತ್ಯಗಳನ್ನು ಭಗವಂತನು ತನ್ನ ಮೊದಲ ಶಿಷ್ಯರಿಗೆ ವಿಶದೀಕರಿಸಿದನು. ಈ ಪ್ರಸಂಗವನ್ನು "ಧರ್ಮಚಕ್ರಪ್ರವರ್ತನ" ಎಂದು ಕರೆದಿದ್ದಾರೆ. ಇಲ್ಲಿ 'ಚಕ್ರ' ವೆಂದರೆ 'ರಾಜ್ಯ'. ಭಗವಂತನು ಧರ್ಮರಾಜ್ಯವನ್ನು 'ಪ್ರವರ್ತನ' ಮಾಡಿದನೆ ಹೊರತು 'ಸ್ಥಾಪನ' ಮಾಡಲಿಲ್ಲವೆಂಬ ಒಳ ಅರ್ಥವನ್ನು ಇಲ್ಲಿ ಗಮನಿಸಬಹುದು (ಭಾರದ. ೧೯೬) ; ಭಗವಂತನು ಧರ್ಮಚಕ್ರಪ್ರವರ್ತನವನ್ನು ಗೈದಾಗ . . . ಅನೇಕ ದೇವತೆಗಳೂ ಧರ್ಮವನ್ನು ಕಂಡುಕೊಂಡರು (ಬುದ್ಧಪ. ಮಿಲಿಂದ. ೨೫). [ಧರ್ಮಚಕ್ರ + ಪ್ರವರ್ತನ]

ಧರ್ಮಚಕ್ರಮುದ್ರೆ (ನಾ). [ಶಿಲ್ಪಶಾ] (ಬುದ್ಧನ) ಮೂರ್ತಿಶಿಲ್ಪದ ಒಂದು ಭಂಗಿ,-ಮುದ್ರೆ : ವೈರೋಚನನ ಪ್ರತಿಮೆಯು "ಧರ್ಮಚಕ್ರಮುದ್ರೆ" ಇಂದಲೂ ಅಕ್ಷೋಭ್ಯಬುದ್ಧನ ಪ್ರತಿಮೆಯು 'ಭೂಮಿಸ್ಪರ್ಶ' ಮುದ್ರೆಯಿಂದಲೂ . . . ಕೂಡಿರುತ್ತವೆ (ಭಾರದ. ೫೧೪).

[ಧರ್ಮಚಕ್ರ + ಮುದ್ರೆ]

ಧರ್ಮಚತ್ರ, ಧರ್ಮಛತ್ರ (ನಾ). ಧರ್ಮಾರ್ಥವಾಗಿ ಊಟ ವಸತಿಗಳನ್ನು ಒದಗಿಸುವ ಸ್ಥಳ : ಮೈಸೂರಿನಲ್ಲಿರುವ ಪೂರ್ಣಯ್ಯನವರ ಧರ್ಮಚತ್ರವು ಹಿಂದಿನ ಕಾಲದಿಂದಲೂ ಬಡಬಗ್ಗರಿಗೆ ಆಶ್ರಯ ನೀಡುತ್ತಿದೆ (ರೂಢಿ). **ಧರ್ಮಛತ್ರ** : ರಂಗಮ್ಮನ ವಠಾರವೇನು ಧರ್ಮಛತ್ರ ಕೆಟ್ಟು ಹೋಯ್ತೆ? (ರಂಗವ ೩೨) ; ಆ ಧರ್ಮಛತ್ರದ ಆವಾರದಲ್ಲಿ . . . ವಸುಮತಿಯೂ ಒಬ್ಬಳಾಗಿ ನಿಂತಳು (ಮಣ್ಣಮ. ೦೩೫).

[<ಸಂ. ಧರ್ಮಸತ್ರ]

ಧರ್ಮಚರಿತ (ನಾ). = ಧರ್ಮಚಾರಿ : ಧರ್ಮಚರಿತ ದುರಿತದೂರ . . . ಪ್ರಪಂಚರಹಿತ ಪರಾಪರ (ಸಿದ್ಧೇವ. ೩-೭). [ಧರ್ಮ + ಚರಿತ]

ಧರ್ಮಚಾರಿ (ನಾ). ಧರ್ಮಮಾರ್ಗದಲ್ಲಿ ನಡೆಯುವವನು ; ಧರ್ಮವನ್ನು ಆಚರಿಸುವವನು : ಧರ್ಮವೇ ಖಂಡಿತವಾಗಿಯೂ ಧರ್ಮಚಾರಿಯನ್ನು ರಕ್ಷಿಸುತ್ತದೆ (ಭಾರದ. ೧೯೨). [ಸಂ. ಧರ್ಮಚಾರಿನ್]

ಧರ್ಮಚಿಂತಾಪನ್ನೆ (ನಾ). ಧರ್ಮಾಚರಣೆಯ ಕ್ರಮವನ್ನು ಕುರಿತು ಚಿಂತೆಗೆ ಒಳಗಾದವಳು : ನಿನ್ನ ನೆನೆದಂಗನೆಗೆ ಬಹುದು ಪತಿವ್ರತಾಭಾವ ಎನ್ನನುಜ್ಞೆಗೆ ಧರ್ಮಚಿಂತಾಪನ್ನೆಯಾಗದಿರೆಂದು ಕೃಪೆಯಲ್ಲಿ ತನ್ನ ಸಿರಿಕರ ತಳವನಿರಿಸಿದನುತ್ತಮಾಂಗದಲಿ (ಕುವ್ಯಾಅ. ೧೬-೫೨).

[ಸಂ. ಧರ್ಮಚಿಂತಾಪನ್ನಾ]

ಧರ್ಮಚಿಂತಾಯಕ (ನಾ). ಧರ್ಮವನ್ನು ಕುರಿತು ಚಿಂತಿಸುವವನು : ಸಿದ್ಧಾರ್ಥಸೆಟ್ಟಿಯಂ . . . ಭಾನುದತ್ತಶೆಟ್ಟಿಯ ಧರ್ಮಚಿಂತಾಯಕನಪ್ಪ ಧನದತ್ತನ ಸಮೀಪದೊಳಿರಿಸಿ (ಮಹಾನೇ. ೪-೧೧೯ ವ).

[ಧರ್ಮ + ಚಿಂತಾಯಕ]

ಧರ್ಮಚಿಂತೆ (ನಾ). ಧರ್ಮದಲ್ಲಿ ಆಸಕ್ತಿ ; ಧರ್ಮವನ್ನು ಕುರಿತ ಎಣಿಕೆ ; ಧರ್ಮಬುದ್ಧಿ : "ಉಪಾಸ್ತಿಃ. ಧರ್ಮಚಿಂತಾ-ಈ ೨ ಧರ್ಮಬುದ್ಧಿ" (ಹಲಾಯು. ೦೨೬-೮೫) ; ಅನುಪಮ ಧರ್ಮಚಿಂತೆ . . . ಕಿಂಕರರ ಪರಿವರ್ತನ ಕ್ರಿಯೆಯ ಸಮ್ಮದದೊಳ್ ಸಲೆ ಕೂಡಿ ತದ್ಧರಾವರನಖಿಲಾವನೀವಳಯಮಂ ಪರಿಪಾಲಿಸುತಿರ್ದಂ (ಮಹಾನೇ. ೩-೨೨). [ಸಂ. ಧರ್ಮಚಿಂತಾ]

ಧರ್ಮಚಿತ್ತ (ನಾ). ಧರ್ಮಬುದ್ಧಿ ; ಧರ್ಮಿಷ್ಠತೆ : ಬರ್ಮಗಾವುಣ್ಡಂ ಧರ್ಮಚಿತ್ತದೊಳ್ನೆಗಳ್ದು . . . ಧಾರಾಪೂರ್ವ್ವಕದಿಂ ಬೆಂಗೇರಿಯ ಕೆಱೆಯ ಕೆಳಗೆ ಬಿಟ್ಟ ಗಟ್ಟಿ ಮತ್ತರೊನ್ದು (ಸಾಇಇ. XX, ೩೫-೦೦ ; 1055).

[ಧರ್ಮ + ಚಿತ್ತ]

ಧರ್ಮಚ್ಯುತ (ನಾ). ಧರ್ಮವನ್ನು ಬಿಟ್ಟವನು ; ಧರ್ಮಭ್ರಷ್ಟ ; ಧರ್ಮಮಾರ್ಗದಿಂದ ದೂರವಾದವನು : ರಾಜನನ್ನು ಕೊಂದು ಧರ್ಮಚ್ಯುತನಾದ ಇವನಿಗೆ ಪೂಜೆ ಮಾಡಿದೆಯಲ್ಲಾ, ಇಂಥ, ನೀನು ಧರ್ಮಾತ್ಮ ಹೇಗಾದೀಯೆ? (ವಚಭಾ. ೮೨). [ಧರ್ಮ + ಚ್ಯುತ]

ಧರ್ಮಚ್ಯುತಿ (ನಾ). ೧. (ಕೈಕೊಂಡ) ಧರ್ಮವನ್ನು ಬಿಡುವುದು ; ಧರ್ಮಭ್ರಷ್ಟತೆ. ೨. ಬಿಲ್ಲನ್ನು ಬಿಟ್ಟುಹೋಗುವುದು ; ಬಿಲ್ಲಿನಿಂದ ಚಿಮ್ಮಿ ಮುಂದಕ್ಕೆ ಹೋಗುವುದು. ೧, ೨ : ಧೃತಧರ್ಮಚ್ಯುತಿ ಬಾಣಸಂಹತಿಗೆ ಬದ್ಧಾವೈಕೃತಂ ವಾರಣಕ್ಕೆ ತಮಃಸಂಗತಿ ರಾತ್ರಿಗೆ . . . ಜನಕ್ಕಿಲ್ಲಲ್ಲಿ ಬೇಱೆಲ್ಲಿಯುಂ (ಪುಷ್ಪಪು. ೨-೨೯). [ಧರ್ಮ + ಚ್ಯುತಿ]

ಧರ್ಮಛತ್ರ 'ಧರ್ಮಚತ್ರ' ನೋ.

ಧರ್ಮಜ (ಗು). ೧. ಧರ್ಮಬುದ್ಧಿಯಿಂದ ಹುಟ್ಟಿದ. (ನಾ). ೨. ಯಮ ಧರ್ಮನ ಮಗ ; ಪಾಂಡವರಲ್ಲಿ ಹಿರಿಯ ; ಯುಧಿಷ್ಠಿರ : "ಪಾಂಡವಂ ಧರ್ಮಜಂ ಯುಧಿಷ್ಠಿರನು ಧರ್ಮಪುತ್ರನೆಂದೆನಿಕು" (ಮಂಗರಾ. ೭೮-೩) ; ಕಃ ಕೇನಾರ್ಥೀ ಕೋ ದರಿದ್ರಃ ಎನುತುಮನಿತುಮಂ ಧರ್ಮಜಂ ಸೂಱೆಗೊಟ್ಟಂ (ಪಂಪಭಾ. ೬-೪೦) ; ಹರಿ ಕೇಳ್ ಧರ್ಮಜ ಕೇಳ್ ಸುರೇಂದ್ರಸುತ ಕೇಳ್ ಮಾದ್ರೀಸುತರ್ ಕೇಳಿಮಿರ್ವರುಮಿಂತೆಯ್ದಿದುದಲ್ತೆ . . . ಭೀಮಪ್ರತಿಜ್ಞಾಕ್ಷರಂ (ಗದಾಯು. ೮-೬೪) ; ಜೂಜನಾಡಿ ಧರ್ಮಜ ಮುಖ್ಯರಳಿದರು (ಬಸಪು. ೪೪-೬೪) ; ವಾರುವದ ಖುರ ನಾಲ್ಕಱಲಿ ಮಣಿಚಾರು ಕನಕವ ಸುರಿದು ಧರ್ಮಜ ತೇರನೇಱಿದನು (ಕುವ್ಯಾಭೀ. ೧-೬೨) ;

ನಿರ್ಮಲವಾಜಿಯಂ ಸುವೇಗಂ ತಂದು ನಿಲಿಸಿದಂ ಧರ್ಮಜನ ಸಮ್ಮುಖದೊಳರಿ (ಜೈಮಿಭಾ. ೩-೧೧). ೩. ಬಿಳಿಯ ಹಕ್ಕಿ : ☞ ಧರ್ಮಜ ನೆಂದರೆ ಪಾಂಡವ. 'ಪಾಂಡವ' ಶಬ್ದಕ್ಕೆ 'ಬಿಳಿಹಕ್ಕೆ' ಎಂಬರ್ಥವೂ ಉಂಟು : ಸುರಪತಿಯ ಬೆಳ್ಕಡಿಯ ರಥಚರಣದ ಪಾವಕನ ಮಾನಿಯ ಧರ್ಮಜನ ಲಸತ್ತುರಗದ ಗಜಗಂಡದ ಭಾಸುರವಾದ್ಯದ ವೆಸರ ಖಗಕುಳಂ ಕರವೆಸಗುಂ (ರಾಜಶೇ. ೩-೬೦). ೪. ಔರಸಪುತ್ರ. [ಸಂ.]

ಧರ್ಮಜನಕ (ನಾ). ೧. ಯಮನ ತಂದೆ ; ಸೂರ್ಯ. ೨. ಧರ್ಮವನ್ನು ಪ್ರಚಾರ ಮಾಡುವವನು; ಧರ್ಮಿಷ್ಠ. ೧, ೨ : ಕಮಳಾನಂದನಕಾರಿ ಚಾರುಕಮಳ ಪ್ರೋದ್ಭಾಸಿಹಸ್ತಂ ವಿರೋಧಿಮದಧ್ವಾಂತವಿಭೇದಿ ಧರ್ಮ್ಮ ಜನಕಂ ಸನ್ಮಾರ್ಗ್ಗವಿದ್ಯೋತನಂ . . . ಲೋಕಪನೆಲ್ಲಂ ಬೆಳಗುತ್ತ ವಿರ್ಕ್ಕೆ ದೊರೆವೆತ್ತಾದಿತ್ಯನತ್ಯುರ್ಜ್ಜಿತಂ (ಎಳ.VI, ಕಡೂರು. ೬೬-೩೮ ; 1172). [ಧರ್ಮ + ಜನಕ]

ಧರ್ಮಜಾಗೃತಿ (ನಾ). ಧರ್ಮವು ಉಚ್ಚ್ರಾಯಸ್ಥಿತಿಯಲ್ಲಿರುವುದಂ : ಭಾರತದಲ್ಲಿ ಅನೇಕ ಮಹಾತ್ಮರು ಜನಿಸಿ ಧರ್ಮಜಾಗೃತಿಯನ್ನುಂಟು ಮಾಡಿದ್ದಾರೆ (ಕೂಡಿ). [ಧರ್ಮ + ಜಾಗೃತಿ]

ಧರ್ಮಜ (ನಾ). ಧರ್ಮವನ್ನು ಬಲ್ಲವನು : ಧರ್ಮಜ್ಞರಧರ್ಮಮೆನೆ ವಾರ್ಧಕರಸಂಬದ್ಧಮೆನೆ . . . ಸಮುದ್ರಕ್ಷೋಭದಂತೆ ಘೂರ್ಣಿಸುವ ಜನಕ್ಷೋಭಮಂ ಕೈಕೊಳ್ಳದೆ (ಜಗವಿ. ೨-೫೩ವ) ; ಕಾರುಣಿಕರ್ ಧರ್ಮಜ್ಞರ್ ಚಾರಿತ್ರಸವೇತರಿನಿವ ನಿಮ್ನನ್ನರನಾಗಾರತೆಯಿಂ ಪಾವನ ಮನಗಾರತೆಯಿಂದೆಸಗುವೆಸಕಮಿಂ ಪೆಱಿತುಂಟೇ (ಪಂದ್ರಪು ೪-೪೦); ಧರ್ಮ್ಮಜ್ಞನೇ ಧರ್ಮ್ಮಜಂ ಬಲವದ್ವೈರಿಮದಪ್ರತಾಪಹ[ರ]ನೇ ಅಮ್ಮಮ್ಮ ತಾನನ್ತಕಂ . . . ಬುಧನುತ ಶ್ರೀನಾಕಧೂಪಾಳಕಂ (ಸೌಇತಿ. XX, ೩೦೩-೬ ; ಸು. 12ನೆಯ ಶತ) ; ನೀನಲಾ ಧರ್ಮಜ್ಞನಂದಾ ಮಾನಿನಿಯರ ವಿವಾಹದಲಿ ನೀನೇನ ಮಾಡಿದೆ ಬೇಸಱಿಸಿ ಬಳಲಿಸಿದೆ ಬಾಲಕಿಯ (ಕುಪಾ.ಸಾ. ೧೦-೪೦) : ಜನನಿ ಶಿಶುವನು ಸತ್ಯಲೀನನು ವಿನುತ ಸದ್ವರ್ತನೆಯ ಸತ್ಪುರುಷನು ಸದಾ ಚಾರವನು ಸಜ್ಜನನಧಿಕ ಸದ್ಗುಣವ ಜನಪನೈಶ್ವರ್ಯಿಯವನು ಧರ್ಮಜ್ಞನು ಯಶೋಲಭ್ಯನು ಸಲಹುವ ನೆನಹಿನವೊಲಭಿಮಾನರಕ್ಷೆಯ ಸತಿಯ ಕಪಿ ಕಂಡ (ತೊರರಾ. ೫-೩-೨೫). [ಸಂ.]

ಧರ್ಮಜ್ಞತೆ (ನಾ). ಧರ್ಮವನ್ನು ತಿಳಿದಿರುವಿಕೆ; ಧರ್ಮಜ್ಞನಾಗಿರುವಿಕೆ: ಯತಿಗಳಾದಿರಿ ನೀವು ರೋಷಚ್ಯುತರಲೇ ಬಳಿಕೇನು ಧರ್ಮಜ್ಞತೆಯ ನೆಲೆಗಳನಱಿದ ಮನವೆಱಗುವುದ ಕಾಳಗಕೆ (ಕುಪಾ.ಉ. ೬-೨೧).

[ಸಂ. ಧರ್ಮಜ್ಞತಾ]

ಧರ್ಮಡೋಣಿ (ನಾ). (ದನಕರಂ ಮೊದಲಾದುವುಗಳು ನೀರು ಕುಡಿಯುವುದಕ್ಕಾಗಿ) ಧರ್ಮಾರ್ಥವಾಗಿ ಕಟ್ಟಿಸಿದ ತೊಟ್ಟಿ ಅಥವಾ ದೋಣಿ : ನಂಮ ಗ್ರಾಮಕೆ ಧರ್ಮಡೋಣಿಗೆ ನೀರ ಹೊಯಿವದಕೆ ಊರಿಗೆ ಪಡುವಲು ಅಲದ ಮರನ ಪಟಿಯನು ಧರ್ಮವಿತದ ನೀರ ಯೆತುವದಕೆ ನಾಉ ಸರ್ವಮಾನ್ಯವಾಗಿ ಬಿಟಿಉ . . . ಗಟ ತಿಂವೋಜ ಗೊವುಲಪಲಿ ಮಲ್ಲೋಜಯಿವರು ಮುಂತಾದ ವೋಜುಗಳು ಧರ್ಮ ಡೋಣಿಗೆ ನೀರ ಎತುವ ಕಬಿನದ ಏತದ ಬಾನೆ ಕಬಿನದ ಕಟ್ಟು ಯಿಪ್ಪಂ ಧರ್ಮವನು ತಪದೆ ನಡಸಿ ಬಾಹೆಉ (ಸೌಇತಿ. IX-II, ೬೭೦-೯ ; 1559).

[ಧರ್ಮ + ಡೋಣಿ (< ದೋಣಿ)]

ಧರ್ಮತತ್ಪರ (ನಾ). ಧರ್ಮದ ಆಚರಣೆಯಲ್ಲಿ ಆಸಕ್ತನಾದವನು : ಧರ್ಮಪರಾಯಣ : ಸಕಳಾಗಮಕೋವಿದರೆಂದು ಧರ್ಮ್ಮತತ್ಪರರಿವರೆಂದು ಕೂರ್ತ್ತು ಮುಲಯಾಳ ತಪೋನಿಧಿ ದೇವಸಿಂಗಿಜೀಯರ ಪದ ಯುಗ್ಮಮಂ ಪಡೆದು ಕಚ್ಚಿದರ್ (ಸೌಇತಿ. XX, ೮೯-೩೯ ; 10767).

[ಧರ್ಮ + ತತ್ಪರ]

ಧರ್ಮತನಯ (ನಾ). ೧. ಯುಂಧಿಷ್ಠಿರ; ಧರ್ಮರಾಯಂ : ಶಶಾಂಕಸಂಕಾಶ ಯಶೋಧವಳಿತಭುವನಂ ತಾಗಿದನವಯವದಿಂ ಬಂದು ಧರ್ಮತನಯನ ಬಲದೊಳ್ (ಸಂಪಭಾ. ೧೨-೩೯) : ಒಡವುಟ್ಟಿದನೆಂದಱಿದೊಡೆ ಕುಡುಗುಂ ರಾಜ್ಯಮನೆ ಧರ್ಮತನಯಂ ನಿನಗಾಂ ಕುಡಲಾರ್ತೆನಿಲ್ಲ (ಗದಾಹು. ೩-೧೯). ೨. ಧರ್ಮವನ್ನು ತನ್ನ ಬಳಿ ಕಲಿತ ಶಿಷ್ಯ. – ವಿದ್ಯಾರ್ಥಿ : ರಾಮ ದೇವಾಚಾರ್ಯನ ಧರ್ಮತನಯನಾದ ಜಯದೇವಪಂಡಿತನಿಗೆ . . . ಪೂಜಾರ್ಥವಾಗಿ ಕೊಟ್ಟನು (ಕರ್ಣಾಲಿ. ೮೯). ೩. ಧರ್ಮಶಾಸ್ತ್ರದ ಪ್ರಕಾರ ವಂಗನೆನಿಸಿಕೊಳ್ಳುವವನು. [ಧರ್ಮ + ತನಯ]

ಧರ್ಮತೊಂಬು (ನಾ). ಧರ್ಮಾರ್ಥವಾಗಿ ಕಟ್ಟಿಸಿದ ತೂಬು : ಇದುವೆ ಸೂದೂಱು ನೊಯ್ಕವಾಲರಯ್ಕಮ್ಮನ್ಗೆ ಧರ್ಮತೊಂಬುಂ ಕೊಟ್ಟರ್ (ಎಕ. XIV, ತಿರುಮ. ೨೫೭-೧೨ ; ಸು. 800). [ಧರ್ಮ + ತೊಂಬು]

ಧರ್ಮದ (ನಾ). ಧರ್ಮ ಮಾಡುವವನು; ಧರ್ಮಿಷ್ಠ : ಪ್ರಿಯಮಾದುದು ಧರ್ಮಂ ಪೃಥ್ವಿಯ ಸೂನುವಿನಿಂದಧರ್ಮವಂತದು ತಾನಪ್ರಿಯಮಾಯ್ತು ತನಗೆ ಸಹಜಾರಿಯಿಂದಮೇನಾ ಧರಾಧಿಪಂ ಧರ್ಮದನೋ (ಪರ್ಧಮಾ. ೬-೫೫) : ಧರ್ಮದರಾಗೆ ಮೀಗೆ ಸುಖಿಯವ್ವುದು ಸಂದೆಯಮೆಂದು ಗೆಯ್ಕುದಿರ್ಪೊಂದು ಮರುಳ್ತನಂ ತಗುಳ್ದವಂದಿರಂ (ಬಂಹರಿ. ೧೨-೧೩).

[ಸಂ.]

ಧರ್ಮದರ್ಶಿ (ನಾ). ಚತ್ರ, ದೇವಾಲಯ, ಮಠ ಮಂಂತಾದ ಸಾರ್ವಜನಿಕ ಸಂಸ್ಥೆಗಳಿಗೆ ಸೇರಿದ ಆಸ್ತಿಯನ್ನು ನೋಡಿಕೊಳ್ಳುವ ಗೌರವ ಸದಸ್ಯ : ಟ್ರಸ್ಟಿ : ದೇವಸ್ಥಾನಕ್ಕೆ ಹೀಗೆ ಬಂದ ದತ್ತಿಗಳನ್ನು ರಕ್ಷಿಸಲು ನಾರ್ಕಾರು ಜನರನ್ನು ಧರ್ಮದರ್ಶಿಗಳಾಗುವಂತೆ ಕೇಳಿಕೊಳ್ಳುತ್ತಿದ್ದರು (ಕಶಾಲಿ. ೦೬೯) : ಕಂದಾಯ ರಾಜ ಅಥವಾ ರಾಜಾಧಿಕಾರಿಗಳ ಸ್ವಂತ ವೇತನವಲ್ಲ ; ಅದು ಪ್ರಜೆಗಳಿಗೆ ಸೇರಿದುದು. ಅದಕ್ಕೆ ಅವರು ಬರಿಯ ಧರ್ಮದರ್ಶಿ ಮಾತ್ರ (ಧಾರದ. ೩೭೦) : ಆಂತರರಾಷ್ಟ್ರೀಯ ಹಣ ಕಾಸಿನ ವಿಷಯಗಳ ಬಗ್ಗೆ ಧರ್ಮದರ್ಶಿ (Trustee) ಅಥವಾ ಏಜೆಂಟ್ ಆಗಿ ವರ್ತಿಸುವುದು ಮೊದಲನೆಯ ಬಗೆಯ ಕಾರ್ಯಾಚರಣೆಯಾಗಿದೆ (ಅಂತಸಂ. ೧೪೭). [ಸಂ. ಧರ್ಮದರ್ಶಿನ್]

ಧರ್ಮದರ್ಶಿಮಂಡಲಿ (ನಾ). ಧರ್ಮದರ್ಶಿಗಳ ಸಮಿತಿ : ಭಗವಂತನಿಂದ ಸಂಸ್ಥಾಪನೆಗೊಂಡಿದ್ದ ಈ ಸುಸ್ಥಿರ ಸಂಸ್ಥೆಗೆ ಕೇವಲ ಮಾನವೀಯ ಸಂಸ್ಥೆಯಾದ ಧರ್ಮದರ್ಶಿಮಂಡಲಿಯ ರಕ್ಷಣೆ ಅತ್ಯಗತ್ಯವಾಗಿತ್ತು (ಪುನಶ್ಚು. ೪೧೩). [ಧರ್ಮದರ್ಶಿ + ಮಂಡಲಿ]

ಧರ್ಮದಾಯ (ನಾ). ಸಾರ್ವಜನಿಕ ಧರ್ಮಕಾರ್ಯಗಳನ್ನು ನಡೆಸುವುದಕ್ಕಾಗಿ ಬಿಟ್ಟುಕೊಟ್ಟ ದತ್ತಿ. – ಕಾಣಿಕೆ, – ದೇಣಿಗೆ : ಪೂರ್ವದಿಂದ ನಡೆದುಬರುತ್ತಿರುವ ದೇವದಾಯ ಬ್ರಹ್ಮದಾಯ ಧರ್ಮದಾಯ . . . ಉಂಬಳಿ ರಕ್ತಕೊಡಗೆ ಮುಂತಾದುವೇನೂ ಹೆಚ್ಚುಕಡಮೆಯಾಗದಂತೆಯೂ . . . ನಮ್ಮ ಕರಣಿಕರು ಎಚ್ಚತ್ತಿರಬೇಕು (ಕಿರುಗಂ. ೩೬-೩೧).

[ಧರ್ಮ + ದಾಯ]

ಧರ್ಮದೀಕ್ಷೆ (ನಾ). ಯಾವುದಾದರೂ ಒಂದು ಮತಕ್ಕೆ ಸೇರಿಸಿಕೊಳ್ಳುವಾಗ ಮಾಡುವ ಸಂಸ್ಕಾರ : ಕ್ರಿಸ್ತೀಯಧರ್ಮದ ಅಧ್ಯಾಸವಾದ ನಂತರ ನಾಲ್ಕುತಿಂಗಳಿಗೆ ಮುಂಬಯಿಯ ಭೇಂಡಿಬಜಾರದಲ್ಲಿರುವ ಅಮೆರಿಕನ್ ಮಿಶನ್ನಿನ ಚರ್ಚಿನಲ್ಲಿ ಧರ್ಮದೀಕ್ಷೆ ಕೊಟ್ಟರು(ಸ್ಮೃತಿಚಿ. ೧೫೬).

[ಧರ್ಮ + ದೀಕ್ಷೆ]

ಧರ್ಮದೂರ (ನಾ). = ಧರ್ಮಚ್ಯುತ : ಧರ್ಮದೂರನು ನಿನ್ನವನು ಸತ್ಕರ್ಮಬಾಹಿರನಾತ್ಮರಚಿತವಿಕರ್ಮದೋಷದೊಳಿವ ನಿನ್ನವನೆಂದನಾ ವಿದುರ (ಕುಪಾ.ಉ. ೬೦೩. ೩-೦೩ ಹೆಚ್ಚಿನ ಪದ್ಯ).

[ಧರ್ಮ + ದೂರ]

ಧರ್ಮದೃಷ್ಟಿ (ನಾ). ಧಾರ್ಮಿಕ ಪ್ರಜ್ಞೆ ; ಧರ್ಮಪರತೆ : ನಮ್ಮ ರಾಯನ ಧರ್ಮದೃಷ್ಟಿಯು ಆಶ್ಚರ್ಯಕರವಾದದ್ದು ! (ಶಾಕುಂತ. ೬೭-೧೬) ; ಮನ ವಚನ ಕಾಯಗಳಲ್ಲೂ ಸತ್ಯನಿಷ್ಠೆ, ಧರ್ಮದೃಷ್ಟಿ, ನ್ಯಾಯಪರತೆ – ಇವು ವ್ಯಾಪಿಸಿದಲ್ಲದೆ ಶಿವಾನುಗ್ರಹ ದೊರೆಯದು (ಶಕ್ತಿವಿ. ೭೪).

[ಧರ್ಮ + ದೃಷ್ಟಿ]

ಧರ್ಮದೇವತೆ (ನಾ). ಧರ್ಮದ ಅಭಿಮಾನಿದೇವತೆ ; ಧರ್ಮದ ಅಧಿದೇವತೆ : ಬಿಲ್ವಫಲ ಲಿಂಗವ ಪೂಜಿಸಿ ನಮ್ಮ ಪ್ರಥಮಪಾದವ ಪಡೆದರು ನೋಡಾ ಧರ್ಮದೇವತೆಗಳು (ಸಿದ್ಧವ. ಕ. ೧೮೩-೬೧೦) ; ಧರ್ಮದೇವತೆಯೇ ಈ ರೂಪವನ್ನು ತಳೆದು ಬಂದು ನ್ಯಾಯವನ್ನು ತೀರ್ಪು ಮಾಡುತ್ತಿರುವಳು (ಕವಿಕ. ೧೯) ; ಗೀತಾಂಜಲಿಯ ಪದ್ಯಗಳಲ್ಲಿ ವೇದಾಂತದ ಪರಿಪಾಕವಿದೆ. ಧರ್ಮದೇವತೆಯ ಅವತಾರವಿದೆ (ಧರ್ಮಸಾ. ೮೨). [ಧರ್ಮ + ದೇವತೆ]

ಧರ್ಮದೇಶನ (ನಾ). ಧರ್ಮೋಪದೇಶ ; ಧರ್ಮಬೋಧನೆ : "ಅನಿತ್ಯ–ದುಃಖ–ಅನಾತ್ಮ" ಎಂಬ ಈ ಮೂರು ತತ್ವಗಳನ್ನು ಭಗವಂತನು ತನ್ನ ಮೊದಲಿನ ಮೂರು ಧರ್ಮದೇಶನಗಳಲ್ಲಿ ಸ್ಪಷ್ಟಪಡಿಸಿದ್ದಾನೆ (ಭಾರದ. ೨೦೦).

[ಧರ್ಮ + ದೇಶನ]

ಧರ್ಮದೇಶನೆ (ನಾ). = ಧರ್ಮದೇಶನ : ಯೇಸು ತನ್ನ ಧರ್ಮದೇಶನೆಯನ್ನು ಪ್ರಾರಂಭಿಸಿದಂದಿನಿಂದ . . . ಡಂಭಾಚಾರವನ್ನೂ, ಆಷಾಢಭೂತಿತನವನ್ನೂ . . . ಅಣಕಿಸುತ್ತಿದ್ದನು (ಗೊಲ್ಡೊಥಾ. VI, ಮುನ್ನುಡಿ).

[ಸಂ. ಧರ್ಮದೇಶನಾ]

ಧರ್ಮದ್ರವ್ಯ (ನಾ). [ಜೈನ] ಜೀವ, ಪುದ್ಗಲ, ಧರ್ಮ, ಅಧರ್ಮ, ಕಾಲ ಮತ್ತು ಆಕಾಶವೆಂಬ ಆರುಬಗೆಯ ದ್ರವ್ಯಗಳಲ್ಲಿ ಒಂದು ; ಲೋಕಾಕಾಶವನ್ನು ವ್ಯಾಪಿಸಿರುವ ಈ ಅಖಂಡ, ಅಮೂರ್ತ ದ್ರವ್ಯವು ಉದಾಸೀನಭಾವದಿಂದ ಜೀವ, ಪುದ್ಗಲಗಳ ಗತಿಗೆ ಸಹಾಯಕವಾಗಿರುತ್ತದೆ : ಜೀವದ್ರವ್ಯ ಪುದ್ಗಲದ್ರವ್ಯ ಧರ್ಮದ್ರವ್ಯ ಅಧರ್ಮದ್ರವ್ಯ ಆಕಾಶದ್ರವ್ಯ ಕಾಲದ್ರವ್ಯವೆಂಬ ಷಡ್ದ್ರವ್ಯಂಗಳ ಗುಣಪರ್ಯಾಯಮುಮಂ . . . ವ್ಯಾಖ್ಯಾನಂಗೆಯ್ಯಲ್ (ಸುಕುಮಾ. ೩-೩೯ ವ) ; ಜೀವ–ಪುದ್ಗಲಗಳೆರಡರಲ್ಲಿಯೂ ಕ್ರಿಯಾಶೀಲತೆಯು ಇದೆ. ಇವು ಒಂದು ಸ್ಥಾನದಿಂದ ಇನ್ನೊಂದು ಸ್ಥಾನಕ್ಕೆ ಹೋಗುವಾಗ, ಸ್ಥಳಾಂತರದ ಕ್ರಿಯೆಗೆ–ಗತಿಗೆ–ಉದಾಸೀನಭಾವದಿಂದ ಸಹಾಯ ಮಾಡುವ ದ್ರವ್ಯಕ್ಕೆ (Medium of Motion) ಧರ್ಮದ್ರವ್ಯವೆಂದು ಜೈನರು ಹೇಳುತ್ತಾರೆ (ಜೈನಪ. ೪೨೨) ; ಧರ್ಮದ್ರವ್ಯ (Principle of Motion), ಜೀವ ಮತ್ತು ಅಜೀವ ದ್ರವ್ಯಗಳ ಸಂಚಾರಕ್ಕೆ ಸಹಾಯ ಮಾಡುವುದು (ಭಾರದ. ೧೮೬).

[ಧರ್ಮ + ದ್ರವ್ಯ]

ಧರ್ಮದ್ರೋಹ (ನಾ). ೧. ನಿಯಮವನ್ನು ಮೀರುವುದು ; ಕರ್ತವ್ಯಚ್ಯುತಿ ; ಧರ್ಮದ ಉಲ್ಲಂಘನೆ : ಮತ್ತಾರ್ಗ್ಗಂ ಸಲ್ಲದೀ ಬಸದಿಯೊಡೆಮೆಯನತ್ಯುದ್ವೃತ್ತಂಗನ್ತದು ತಾನೆಱ್ದಿಗುತ್ತಂಗ್ರಾಮಕ್ಕೆ × × ಧರ್ಮ್ಮದ್ರೋಹಂ (ಸೌಇಇ. XI-1, ೩೩-೭೭ ; 1007) ; ಉದ್ರೇಕದಿಂ ಮುನಿವರನೊಳಾಡಿ ತಪ್ಪಿದ ಗುರುದ್ರೋಹವೊಂದು . . . ಇದಱ ಸಂಗಡಕೆ ಧರ್ಮದ್ರೋಹಮ್ಮೆದಾಗದಿಹುದೆ ತನಗಶ್ವಮಂ ಕಂಡು ಕೊಂಡೊಯ್ಯದಿರಲು (ಜೈಮಿಭಾ. ೪-೨) ; ಆಕ್ಷೇಪಿಸುವದೂ ಇದ್ದದ್ದರಲ್ಲಿ ಹೆಚ್ಚುಕಡಿಮೆ ಮಾಡ ಹೋಗುವದೂ ಧರ್ಮದ್ರೋಹವೇ ಸರಿ (ಮಾಧವ. ೪೪೧). ೨. ಧರ್ಮಕ್ಕೆ ದ್ರೋಹ ಬಗೆಯುವವನು : ಧರ್ಮದ್ರೋಹಚಕ್ರಂ ಸುಗಿದು ಪುಗೆ ದಿಶಾಚಕ್ರಮಂ (ಮಲ್ಲಿಪು. ೧೪-೨೫೩). [ಧರ್ಮ + ದ್ರೋಹ]

ಧರ್ಮದ್ರೋಹಪರ (ನಾ). ಧರ್ಮದ್ರೋಹದಲ್ಲಿ ತೊಡಗಿದವನು,–ಆಸಕ್ತನಾದವನು : ಅನ್ಯಾಯಿಗಳಿಗೆತ್ತಣ ದೈವ ಧರ್ಮದ್ರೋಹಪರರಿಗೆ ಜಯವದೆತ್ತಣದು (ಕೌಶಿರಾ. ೨೬-೯). [ಸಂ.]

ಧರ್ಮದ್ರೋಹಿ (ನಾ). = ಧರ್ಮದ್ರೋಹಪರ : ಪಾಪಿಗಳುಂ ಧರ್ಮದ್ರೋಹಿಗಳುಂ ತಮ್ಮನಱಿಯಲೀಯದೆ ದಿವಸಕ್ರಮದಿಂ ಬಳೆದ ಪಾಪದಿಂದಂ ಮಹಾನರಕದೊಳ್ಬಿರ್ದು ಬಹುದುಃಖಮನುಣ್ಬರ್ (ಧರ್ಮಾಮೃ. ೪-೪೨) ; ಗಾಹುಗತಕದಲುಳಿವ ಧರ್ಮದ್ರೋಹಿ ತಾನಲ್ಲ (ಕುಮ್ಯಾದ್ರೋ. ೧೯-೪೩). [ಸಂ. ಧರ್ಮದ್ರೋಹಿನ್]

ಧರ್ಮಧರ (ನಾ). = ಧರ್ಮರಕ್ಷಕ : ಗಟ್ಟಿಯ ಪಾಟಿಯನಟಿದು ಬೆಳೆವೆನೆಂಬನುಂ ಧರ್ಮದ ಪಾಟಿಯನಟಿದು ಸುಖಮಂ ಪಡೆವೆನೆಂಬನುಂ ಬೇಳಪ್ಪರ್ ಬುದ್ಧಿಯೊಡೆಯನಾಗನದಱಿನೆಡೆಯುಡುಗದೆ ಧರ್ಮಧರನ [ಪಾಠಾಂ. ಧರ್ಮಜರ]ಪ್ಪುದು (ಜೀವಸಂ. ೨೨೩-೦೯). [ಸಂ.]

ಧರ್ಮಧ್ಯಾನ (ನಾ). [ಜೈನ] ಆರ್ತಧ್ಯಾನ, ರೌದ್ರಧ್ಯಾನ, ಧರ್ಮಧ್ಯಾನ ಮತ್ತು ಶುಕ್ಲಧ್ಯಾನಗಳೆಂಬ ನಾಲ್ಕು ಬಗೆಯ ಧ್ಯಾನಗಳಲ್ಲಿ ಒಂದು ; ಧರ್ಮವಿಷಯಗಳನ್ನು ಸದಾ ನೆನೆಯುತ್ತಿರುವುದು ; P ಸಾಧಕನು ಸಾಮ್ಯತೆಯನ್ನು ಅಭ್ಯಾಸ ಮಾಡುವುದಕ್ಕಾಗಿ ಯಾವ ಧ್ಯಾನವನ್ನು ಅನುಷ್ಠಾನ ಮಾಡುವನೋ ಅದಕ್ಕೆ ಧರ್ಮಧ್ಯಾನವೆಂದು ಹೆಸರು. ರಾಗದ್ವೇಷಗಳನ್ನು ಬಿಟ್ಟು ಅರ್ಥಾತ್ ಸೌಮ್ಯಭಾವದಿಂದ ಜೀವಾದಿ ಪದಾರ್ಥಗಳನ್ನು, ಅವು ಯಾವ ಸ್ವರೂಪದಲ್ಲಿರುವುವೋ ಅವೇ ರೂಪಗಳಿಂದ ಧ್ಯಾನಿಸುವುದು ಧರ್ಮಧ್ಯಾನ. ಇದರಲ್ಲಿ ಆಜ್ಞಾವಿಚಯ, ಅಪಾಯವಿಚಯ, ವಿಪಾಕವಿಚಯ ಮತ್ತು ಸಂಸ್ಥಾನವಿಚಯಗಳೆಂಬ ನಾಲ್ಕು ಒಳಭೇದಗಳಿವೆ. ಜೈನ ಗ್ರಂಥಗಳಲ್ಲಿ ಇನ್ನೂ ಹಲವಾರು ಒಳಭೇದಗಳು ನಿರೂಪಿತವಾಗಿವೆ: ಮೃತಕಸೆಜ್ಜೆಯೊಳಿರ್ದು ಸಂನ್ಯಸನಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಧ್ಯಾನಿಸುತಿರ್ಪನ್ನೆಗಂ (ವಡ್ಡಾರಾ. ೨೯-೨) ; ಮುನ್ನಮಾಜ್ಞಾವಿಚಯಮಪಾಕವಿಚಯವಿಪಾಕವಿಚಯಸಂಸ್ಥಾನವಿಚಯಮೆಂಬ ನಾಲ್ಕುಂ ಧರ್ಮಧ್ಯಾನಮಂ ಧ್ಯಾನಿಸುತ್ತುಂ (ಆದಿಪು. ೧೦-೦೪ ವ) ; ದುರಿತವೃಕ್ಷದ ಬೇರಂ ಧರ್ಮ[ಪಾಠಾಂ. ಶುಭ]ಧ್ಯಾನಮೆಂಬ ಕುಠಾರದಿಂ ಕಡಿಯುತ್ತಿರೆ (ಜೀವಸಂ. ೧೮೦-೬) ; ತವದಾಜ್ಞಾವಿಚಯಮಪಾಕವಿಚಯವೆನೆಯುಂ ವಿಪಾಕವಿಚಯಂ ಸಂಸ್ಥಾನವಿಚಯವೆನೆಯುಂ ಪೆಸರ್ವೆತ್ತುವು ನಾಲ್ಕುಂ ತಮ್ಮೊಳೆಸೆಯೆ ಧರ್ಮಧ್ಯಾನಂ (ಪುಷ್ಪಪು. ೧೪-೩೩) ; ಅಪಾಯವಿಚಯಂ ಉಪಾಯವಿಚಯಂ ಜೀವವಿಚಯಂ ಅಜೀವವಿಚಯಂ ವಿಪಾಕವಿಚಯಂ ವಿರಾಗವಿಚಯಂ ಭವವಿಚಯಂ ಸಂಸ್ಥಾನವಿಚಯಂ ಆಜ್ಞಾವಿಚಯಂ ಕಾರಣವಿಚಯಮೆಂದಿಂತು ಧರ್ಮಧ್ಯಾನಂ ಪತ್ತು ತೆಱನಪ್ಪುದು (ಪಸಾರ. ೫೯೩). 'ಧರ್ಮಯೋಗ' ಪರಾ. [ಧರ್ಮ + ಧ್ಯಾನ]

ಧರ್ಮಧ್ವಜ (ನಾ). ೧. ಧರ್ಮದ ಸಂಕೇತವಾದ ಧ್ವಜ: ಧರ್ಮರಾಜನು ಸಿಂಹಪೀಠವನು ಅಡರಿದೊಲು ಧರ್ಮಪ್ರಾಣವು ಧರ್ಮಧ್ವಜದ ನೆಳಲಿನಲೀ ಧರ್ಮಚೇತನವ ಪ್ರತಿಬಿಂಬದಂತಿರುವ ನೃಪಧರ್ಮದಿಂ ಪಾಲಿಸುತ್ತಿರಲಿಲ್ಲಿ ಢಿಲ್ಲಿ (ಕಎಪು. ೫೫-೧೮). ೨. (ಆಲಂ) ಧರ್ಮದ ಹೆಸರಿನಲ್ಲಿ ಸ್ವಾರ್ಥವನ್ನು ಸಾಧಿಸುವವನು ; ಧರ್ಮಿಷ್ಠನ ವೇಷ ಹಾಕಿಕೊಂಡವನು ; ಆಷಾಢಭೂತಿ : "ಧರ್ಮಧ್ವಜಃ, ಲಿಂಗವೃತ್ತಿಃ–ಈ ೨ ತಪೋವೇಷಗೊಂಡವಂ" (ಹಲಾಯು. ೬೭-೨೫೧) ; "ಬ್ರಹ್ಮರೊಳು ತಪವೇಷಗೊಂಬವಂ ಧರ್ಮಧ್ವಜಂ ಲಿಂಗವೃತ್ತಿಯಕ್ಕುಂ" (ಮಂಗರಾ. ೭೫-೭) ; ವನಿತಾಪುತ್ರರತಂ ವಿಲಜ್ಜನಲಸಂ ಧರ್ಮಧ್ವಜಂ . . . ಮೃಗಪ್ರೋದ್ಭವಂ (ಜಾತತಿ. ೧೭-೧೦).

[ಧರ್ಮ + ಧ್ವಜ]

ಧರ್ಮಧ್ವಜಿ (ನಾ). = ಧರ್ಮಧ್ವಜ ೨. [ಸಂ. ಧರ್ಮಧ್ವಜಿನ್]

ಧರ್ಮನಂದನ (ನಾ). ಯಮನ ಮಗ ; ಪಾಂಡವರಲ್ಲಿ ಹಿರಿಯ ; ಧರ್ಮರಾಜ ; ಯುಧಿಷ್ಠಿರ : ಆಗಳ್ ಧರ್ಮನಂದನಂ ಮುಕುಂದಂಗೆ ಬಱಿಯನಟ್ಟಿ ಬರಿಸಿ (ಪಂಪಭಾ. ೧೦-೪ವ) ; ಎನಗಿದಯುಕ್ತಮೆಂದಿರದೆ

ಪೆರ್ಬುಸಿಯೊಳ್ಬುದಿದಿರ್ದ ಧರ್ಮನಂದನನನೆ ಧರ್ಮನಂದನನೆನಲ್ಕೊರೆ . . . ವೇಡಿಯಾಗಿ ಮತ್ಸ್ಯನ ಮನೆವೊಕ್ಕ ಪಾರ್ಥನನೆ ಪಾರ್ಥನೆನಲ್ಕೊರೆ ಗಂಡರೆಂಬರೇ (ಗದಾಯು. ೩-೩೨) ; ರಾಜವರಿವಾಟಗಳ ಪಂಥದ ಜೂಜ ಬಲ್ಲರೆ ಕರೆಯಿ ಬಾರದಡಾ ಜನಾರ್ದನನಾಣೆಯೆಂದನು ಧರ್ಮನಂದನನು (ಕುವಾ.ಸಾ. ೧೩-೪೦). [ಧರ್ಮ + ನಂದನ]

ಧರ್ಮನಿರ್ಣಯ (ನಾ). ಧರ್ಮದ ನಿಯಮ.–ಸಿದ್ಧಾಂತ : ಅವುದಿದಕೆನು ನೀತಿಯೆನೆ ಧೌಮ್ಯಾದಿ ಸುಜನವ್ರಾತ ನಿಶ್ಚೈಸಿದರು ಮನದಲಿ ಧರ್ಮ ನಿರ್ಣಯವ (ಕುವಾ.ಅ. ೩೨-೪೯) ; ನಾಭಿಯಿಂದವೆ ಕೆಳಗೆ ಕೈವಾಡುವುದು ಸಲ್ಲದು ಗದೆಯ ಕದನದಲಿ ಚಲಿಸಲಾಗದು ಧರ್ಮನಿರ್ಣಯದೊಳಗಿದೊಂದೆ ಭಾಷೆ ಮಾಡಿದಿರಳಿದಿರನ್ಯಾಯದಲಿ ಕೊಂದಿರಿ ಕೌರವೇಶ್ವರನ (ಕುವಾ.ಗ. ೯-೩೩). [ಧರ್ಮ + ನಿರ್ಣಯ]

ಧರ್ಮನಿರ್ಣಾಯಕ (ಗು). ಧರ್ಮವನ್ನು ಕುರಿತು ನಿರ್ಧಾರ ಮಾಡುವ.–ನಿಶ್ಚಯಿಸುವ : ಧರ್ಮನಿರ್ಣಾಯಕ ಪ್ರಮಾಣವು ವೇದ (ಶಾಕರ. ೪೯). [ಸಂ.]

ಧರ್ಮನಿವಾಸ (ನಾ). [ಜ್ಯೋತಿ] ಜನ್ಮಲಗ್ನದಿಂದ ಒಂಬತ್ತನೆಯ ಸ್ಥಾನ : ಕನೇನಿರೆ ಲಗ್ನದೊಳ್ ಕ್ಷತತನು ವಿತ್ತಸ್ಥಾನದೊಳ್ ಕದನ್ನಭುಜಂ ಧರ್ಮನಿವಾಸದೊಳಘಕರನನ್ಯನಿಲಯದೊಳ್ ರವಿಗೆ ಪೇಟ್ಟಫಲಮಂ ಪಡೆಗುಂ (ಜಾತಕ. ೦೮-೯). [ಧರ್ಮ + ನಿವಾಸ]

ಧರ್ಮನಿಶ್ಚಯ (ನಾ). = ಧರ್ಮನಿರ್ಣಯ : ಈ ಸುಡಿಯ ಸಲಿಸಿದೊಡೆ ಇವನಪಮಾನಹತನಿದು ಧರ್ಮನಿಶ್ಚಯವೇನು ಸಂಶಯವಿಲ್ಲೆನುತ ಸುಡಿದುದು ಮುನಿಸ್ತೋಮ (ಕುವಾ.ಅ. ೩೨-೪೦) ; ಧರ್ಮನಿಶ್ಚಯವನ್ನು ತಿಳಿದ ನನ್ನಂಥವನು ಅನ್ಯರ ಕೈಸೇರಿದ ಹೆಂಗಸನ್ನು . . . ಹೇಗೆ ಇಟ್ಟು ಕೊಳ್ಳುವುದು ? (ವಚಭಾ. ೪೦೩). [ಧರ್ಮ + ನಿಶ್ಚಯ]

ಧರ್ಮನಿಷ್ಠ (ನಾ). ಧರ್ಮದಲ್ಲಿ ನಿಷ್ಠೆಯಂಳ್ಳವನು, – ಶ್ರದ್ಧೆಯಂಳ್ಳವನು; ಧರ್ಮಿಷ್ಠ : ವಸುಧೆಯೊಳು ಧರ್ಮನಿಷ್ಠರನೊಯ್ವ ಮಾರ್ಗವದು ಸಸಿನವದು ಸಾರೆಯದು ಸ್ವಸ್ಥವದು ಸೌಖ್ಯವದು (ಸಾನಂಚ. ೪-೯೯) : ಅಧರ್ಮಶೀಲರು ಪರರು ನೀವತಿ ಧರ್ಮನಿಷ್ಠರು (ಕುವಾ.ಸಾ. ೧-೧೦). [ಧರ್ಮ + ನಿಷ್ಠ]

ಧರ್ಮನಿಷ್ಠೆ (ನಾ). ಧರ್ಮದಲ್ಲಿ ಇಟ್ಟಿರುವ ಅಚಲವಾದ ನಂಬಿಕೆ, – ಶ್ರದ್ಧೆ : ಧರ್ಮನಿಷ್ಠೆಯಿಂದ ಭಾರತೀಯ ಸಾಮಾಜಿಕ ಜೀವನವೇ ಬೆಳಗಿತು (ಭಾರದ. ೬೮೮) ; ಕಠಿಣವಾದ ಧರ್ಮನಿಷ್ಠೆಯಿಂದ ನಡೆಯುವವಳು ಅಜ್ಜಿ (ಕಂಬಹು. ೪೪). [ಧರ್ಮ + ನಿಷ್ಠೆ]

ಧರ್ಮಪಟ್ಟು (ನಾ). ಧರ್ಮದ ವಿವರಣೆ; ದಾನದ ಪಟ್ಟಿ, – ದಾಖಿಲು: ಯಿ ಧರ್ಮಪಟ್ಟಿಸಲ್ಲಿ ಅಡ್ಡಿ ನಡಸಿದರೆ ವಂಕ್ಯಾದಲ್ಲಿ ಹಂದಿಭಕ್ಷಣೆ ಮಾಡಿದ ಹಾಗೆ ಯೆಂದು ಬರೆಸಿ ಕೊಟ್ಟ ಧರ್ಮಪರವಾನೂ (ಎಳ. IX, ಚನ್ನಪ. ೦೫೪-೦೭ ; 1767). [ಧರ್ಮ + ಪಟ್ಟು೨ (<ಪಟ್ಟಿ೨)]

ಧರ್ಮಪತ್ತನ (ನಾ). ೧. ಶ್ರಾವಂತಿ ನಗರ. ೨. ಮೆಣಸು. [ಧರ್ಮ + ಪತ್ತನ]

ಧರ್ಮಪತ್ನಿ (ನಾ). ವಿಧಿಪೂರ್ವಕವಾಗಿ ಮದುವೆಯಾದ ಹೆಂಡತಿ : ಧರ್ಮಪತ್ನಿ ಬಾಯಲಿದು ಕೊರಲ್ಗೆ ಪಾಯ್ದು ಪರಿದಾಡುವ ಬಾಲಕನಾದ ಶೋಕದಿಂ ಗಟಗಟ ಕಣ್ಣ ನೀರ್ ಸುರಿಯೆ ಚಿಂತಿಪ ಪಾರ್ವನ ಶೋಕದೊಂದು ಪೊಂಪುಟಿಯನೆ ನೋಡಿ (ಪಂಚಭಾ. ೩-೨೩) ; ನೀವಿಂಥ ಯತಿಸ್ವರೂಪಮಂ ಕೈಕೊಂಡ ವಾರ್ತೆಯಂ ನಿಮ್ಮ ಮುನ್ನಿನ ಧರ್ಮಪತ್ನಿಯಪ್ಪ ರೋಮದತ್ತೆ . . . ಅಱಿದು (ಸುಳುಮಾ. ೩-೭೭) ; ಧರ್ಮಪತ್ನಿಯನ್ನು ಬಿಟ್ಟವನ ಹೆಸರನ್ನು ಎತ್ತುವುದಕ್ಕೆ ಯಾರಿಗೆ ತಾನೆ ಮನಸ್ಸು ಬಂದೀತು ? (ಶಾಕುಂತ. ೧೦೭-೩). [ಸಂ. ಧರ್ಮಪತ್ನೀ]

ಧರ್ಮಪಥ (ನಾ). ಧರ್ಮದ ಹಾದಿ.–ಪೂರ್ಗ : ಭಲರೆ ನೃಪೇಂದ್ರಾ ದಯೆಯೊಳ್ ನೆಲೆಗೊಳಿಸಿದೆ ಮನಮುಂ . . . ಧರ್ಮಪಥದೊಳ್ ಸಲೆ ಸಂದಪೆ ಕಾಲಲಬ್ಧಿ ಪೊಲಗೆಡಿಸುವುದೇ (ಯಶೋಚ. ೦-೬೯) ; ಧರ್ಮಪಥ ಹೇಲುವಟ್ಟಿಯೆನಿಸಿದ ಹಮ್ಮಿನಲಿ ಕೆಡಬೇಡ ನೀತಿಯ ನೆಮ್ಮಿದವ ಕೆಡನೆಂದು ನಾರದ ನುಡಿದನರಸಂಗೆ (ಕುವಾ.ಉ. ೯-೧೩). [ಸಂ. (ಧರ್ಮ+ಪಥಿನ್+–)]

ಧರ್ಮಪದ್ಧತಿ (ನಾ). = ಧರ್ಮಪಥ: ಧರ್ಮಪದ್ಧತಿಯನೀಕ್ಷಿಸಲಿವಳನಿಂದು ವಿಮಾಡುವುದು ಮತವಲ್ಲೆಂದವಂ ತಿಳಿದನು (ಜೈಮಿಭಾ. ೧೧-೩೦). [ಧರ್ಮ + ಪದ್ಧತಿ]

ಧರ್ಮಪರ (ನಾ). ಧರ್ಮದಲ್ಲಿ ವಿಶೇಷವಾದ ಶ್ರದ್ಧೆಯುಳ್ಳವನು ; ಧರ್ಮನಿಷ್ಠ ; ಧರ್ಮಿಷ್ಠ : ನಿರ್ದ್ರವ್ಯನಂ ಸೂಳೆಯರ್ ಖಳನಂ ಧರ್ಮಪರರ್ . . . ಬಿಡುವಂತೆ ರಾಜ್ಯದಳಪಂ ಬಿಟ್ಟರಿ ಖಗಾಧೀಶ್ವರಂ (ಧರ್ಮಾಮೃ. ೩-೪೩) : ಧರ್ಮಪರರಗರ್ಲ್ಲದೆವ್ಮಯ್ಯ ನಿರ್ಮಲಚಾರಿತ್ರ ವಿಂಬುಕೆಯ್ಯುದು (ಯಶೋಚ. ೦-೬೪) ; ದೈವಬಲವವರಲ್ಲಿ ನೀವೇ ದೈವ ಹೀನರು ಧರ್ಮಪರರವರ್ಯೆವರೂ ಸತ್ಪುರುಷಶೀಲರು ನೀವಧಾರ್ಮಿಕರು (ಕುವಾಭೀ. ೦-೩೩). [ಸಂ.]

ಧರ್ಮಪರವಾನಿಗೆ (ನಾ). = ಧರ್ಮಪರವಾನು : ಸೈದುಮಹಮ್ಮದು ಆಕಲಶಾ ಪಾದ್ರಿಯವರಿಗೆ ಬರಸಿ ಕೊಟ್ಟ ಧರ್ಮಪರವಾನಿಗೆ ಕ್ರಮವೆನ್ತೆನ್ದರೆ (ಎಳ. IX, ಚನ್ನಪ. ೦೦೪-೬ ; 1767). [ಧರ್ಮ + ಪರವಾನಿಗೆ (<ಪರವಾನಗಿ)]

ಧರ್ಮಪರವಾನು (ನಾ). ದತ್ತಿ ಅಥವಾ ದಾನ ಕೊಟ್ಟುದಕ್ಕಾಗಿ ಬರೆಸಿದ ಶಾಸನ ; ದಾನಶಾಸನ : ಯಿ ಧರ್ಮಪಟ್ಟಸಲ್ಲಿ ಅಡ್ಡಿ ನಡಸಿದರೆ ವಂಕ್ಯಾದಲ್ಲಿ ಹಂದಿಭಕ್ಷಣೆ ಮಾಡಿದ ಹಾಗೆ ಯೆಂದು ಬರೆಸಿ ಕೊಟ್ಟ ಧರ್ಮ ಪರವಾನೂ (ಎಳ. IX, ಚನ್ನಪ. ೦೦೪-೦೬ ; 1767). [ಧರ್ಮ + ಪರವಾನು (<ಪರವಾನಾ)]

ಧರ್ಮಪರಾಙ್ಮುಖ (ನಾ). ಧರ್ಮದ ಬಗೆಗೆ ಉದಾಸೀನತೆಯನ್ನು ಹೊಂದಿದವನಂ : ಧರ್ಮಪರಾಙ್ಮುಖರನ್ನು ಉಪಾಯಾಂತರದಿಂದ ದಂಡಿಸಿ ಮಾಡುವ ಧರ್ಮರಕ್ಷಣವು ಅಧರ್ಮವಾಗಬಹುದೋ ? (ಮಾಧವ. ೩೬). [ಧರ್ಮ + ಪರಾಙ್ಮುಖ]

ಧರ್ಮಪರಾಙ್ಮುಖತೆ (ನಾ). ಧರ್ಮದ ಬಗೆಗೆ ವಿಮುಂಖವಾಗಿರುವುದು.–ಉದಾಸೀನತೆ: ಕೃತಕಾರ್ಯ ದ್ವೇಷವೊ ವಿಶ್ರುತ ಧರ್ಮಪರಾಙ್ಮುಖತೆಯೊ ಅವಹೇಳನವೋ (ಶಾಕುಂತ. ೬೬-೩). [ಧರ್ಮ + ಪರಾಙ್ಮುಖತೆ]

ಧರ್ಮಪರಾಯಣ (ನಾ). =ಧರ್ಮಪರ: ನಿಮ್ಮಯ್ಯಂ ಧರ್ಮಪರಾಯಣಂ ಮಹಾಪುರುಷಂ (ಶಾಪುಪು. ೩೯೪) ; ಅವನ ಮಗನೂ ಈಗ ತಂದೆಯಂತೆಯೇ ಧರ್ಮಪರಾಯಣನಾಗಿದ್ದಾನೆ (ವಚಭಾ. ೨೮). [ಧರ್ಮ + ಪರಾಯಣ]

ಧರ್ಮಪರಿಣಾಮ (ನಾ). (ವಸ್ತುವಿನ) ಸ್ವಭಾವ ಅಥವಾ ಗುಣದಲ್ಲಿ ಆಗುವ ಬದಲಾವಣೆ,–ವ್ಯತ್ಯಾಸ : ಬಾಹ್ಯವಸ್ತುಗಳಲ್ಲೂ ತಂತಮಗೆಂದ ಆಗತಕ್ಕ ಪಟುವಾದಿ ಪರಿಣಾಮವು ಧರ್ಮಪರಿಣಾಮ (ಹಿಂದಶಾ. ೧೦೩). [ಧರ್ಮ + ಪರಿಣಾಮ]

ಧರ್ಮಪಾನೀಯ (ನಾ). ಧರ್ಮಾರ್ಥವಾಗಿ (ದಾರಿಗರಿಗೆ) ಕೊಡುವ ನೀರಂ ಅಥವಾ ಪಾನೀಯಂ : ಪೂರ್ವಪದಾಂತ್ಯಕ್ಕೆ ದೀರ್ಘಮುಂ ಉತ್ತರಪದಾದಿಗೆ ಲೋಪಮುಮಾಗಿ–ಕಾಂಸ್ಯತಾಳ–ಕಂಸಾಳ ; ಧರ್ಮ ಪಾನೀಯ–ದಮ್ಮಾಣಿಎಂದಾಯ್ತು (ತಮಾದ. ೩೯೩ ಪ್ರಹೋ). [ಧರ್ಮ + ಪಾನೀಯ]

ಧರ್ಮಪಾಲ (ನಾ). ಧರ್ಮವನ್ನು ರಕ್ಷಣೆಮಾಡುವವನು ; ಧರ್ಮಿಷ್ಠ : ನಿನ್ನಂತಾವಂ ಜನ್ಮಸಾಫಲ್ಯಮನಱಿ ಪಡೆದಂ ಭೂಪರೊಳ್ ಧರ್ಮಪಾಲಂ (ಪಾಭಪು. ೩-೬೩). [ಧರ್ಮ + ಪಾಲ]

ಧರ್ಮಪಾಲನ (ನಾ). ಧರ್ಮವನ್ನು ರಕ್ಷಿಸುವುದು ; ಧರ್ಮದ ರಕ್ಷಣೆ : ಧರ್ಮಪಾಲನರೂಪವಾದ ತಪಶ್ಚರ್ಯವನ್ನು . . . ಹೆಚ್ಚು ಕಠಿಣತರವಾಗಿಯೇ ಅಲ್ಲ, ಉಗ್ರತರವಾಗಿಯೂ ಆಚರಿಸಬೇಕಾಗುವದು (ಪ್ರಾಧವ. ೩೬೫). [ಧರ್ಮ + ಪಾಲನ]

ಧರ್ಮಪೀಠ (ನಾ). ೧. ಧರ್ಮದ ತಳಹದಿ,-ಬುನಾದಿ : ರಾಜ್ಯವಾಗಲಿ ಕೋಶವಾಗಲಿ ಧರ್ಮಪೀಠದ ಮೇಲೆ ಸ್ಥಾಪಿತವಾದಾಗ ಭೂಷಣವಾಗುವುದು (ದಾನಚಿಂ. ೧೬೫). ೨. ಧರ್ಮಪ್ರಸಾರ ಮಾಡುವ ಸ್ಥಳ ; ಮಠ : ಸಂನ್ಯಾಸಿಗಳು ಧರ್ಮಪೀಠದಿಂದ ಮಾಡುವ ಉಪದೇಶಗಳನ್ನು ಜನರು ಶ್ರದ್ಧೆಯಿಂದ ಲಾಲಿಸಬೇಕು (ರೂಢಿ). ೩. ನ್ಯಾಯಾಲಯದಲ್ಲಿ ನ್ಯಾಯಾಧೀಶನು ಕುಳಿತುಕೊಳ್ಳುವ ಸ್ಥಳ : ಧರ್ಮಪೀಠದಲ್ಲಿ ಕುಳಿತು ನ್ಯಾಯಾಧೀಶನು ಕೊಡುವ ತೀರ್ಪನ್ನು ಜನರು ಒಪ್ಪಬೇಕು (ರೂಢಿ).
[ಧರ್ಮ + ಪೀಠ]

ಧರ್ಮಪುತ್ರ (ನಾ). ೧. ಧರ್ಮಪತ್ನಿಯಲ್ಲಿ ಹುಟ್ಟಿದ ಮಗ. ೨. ನ್ಯಾಯಶಾಸ್ತ್ರದ ದೃಷ್ಟಿಯಿಂದ ಮಗನೆಂದು ಪರಿಗಣಿತನಾಗುವವನು. ೩. ಪಾಂಡವರಲ್ಲಿ ಹಿರಿಯ ; ಯುಧಿಷ್ಠಿರ : "ಪಾಂಡವಂ ಧರ್ಮಜಂ ಯುಧಿಷ್ಠಿರನು ಧರ್ಮಪುತ್ರನೆಂದೆನಿಕು" (ಮಂಗರಾ. ೭೮-೩) ; ಧರ್ಮದೊಳ್ ನಿರ್ಮಲಚಿತ್ತಂ ಧರ್ಮಪುತ್ರಂ (ಪಂಪಭಾ. ೧೪-೬೪) ; ಆ ಧರ್ಮಪುತ್ರಂ ದಯಾಪರನೆಂದೆಲ್ಲರ ಪೇಟ್ಟ ಮಾತು ಪುಸಿಯಾಯ್ತಾ ಕಾರ್ಮುಕಾಚಾರ್ಯನಂ . . . ಕೊಂದಾಗಳ್ (ಗದಾಯು. ೩-೨೩) ; ಹಯಮೇಧಸತ್ರಸಾಧನಕೆ ವೇದವ್ಯಾಸಮುನಿ ಧರ್ಮಪುತ್ರನಂ ಬೋಧಿಸಿ ಮರಳ್ದಂ (ಕೃಷ್ಣಿಭಾ. ೨-೪೭). [ಧರ್ಮ + ಪುತ್ರ]

ಧರ್ಮಪುರ (ನಾ). = ಧರ್ಮಪುರ: ವಿನುತಚಳುಕ್ಯವಂಶಪತಿ ವಿಕ್ಕರಿಕೇಸರಿ ಸನ್ದ ವಿಕ್ರಮಾರ್ಜುನವಿಜಯಕ್ಕೆ ಧರ್ಮಪುರಮೆನ್ದು ಮದೀಯವಿದೆನ್ದು ಕೀರ್ತಿಶಾಸನಮನೆ ಕೊಟ್ಟ ಶಾಸನದ ಪಂಪನನಾ ಬಿರುದೊಂದು ಜೈನ ಶಾಸನದ ನೆಗಳ್ತೆಯ ವೃಷಭಪರ್ವತಮನ್ತದು ತಾನೆ ಪೇಳದೇ (ಕನ್ನನು. ೩೩-೧೧-೯) ; ಭ್ರಾತರ್ದ್ಧರ್ಮಪುರಂ ಪ್ರಯಾಮ ಕಿಮತೋ ಜೈನಾಭಿಷೇಕೋತ್ಸವ ಕ್ಷೀರಪ್ಲಾವಿತತುಂಗ ಶೃಂಗ ವೃಷಭಕ್ಷೋಣೀಧ್ರ ವಿಖ್ಯಾತಮಹೇ ಯಾತ್ರಾಯಾತಸಮಸ್ತಭವ್ಯ ಜನತಾ ಸನ್ಮಾನದಾನೋದ್ಯತಂ ಪಂಪಾರ್ಯಾನುಜಮತ್ರ ಭೀಮತನುಜಂ ಸಮ್ಯಕ್ತ್ವರತ್ನಾಕರಂ (ಕನ್ನನು. ೩೨-೧೧-೮). [ಧರ್ಮ + ಪುರ$_2$]

ಧರ್ಮಪೋಷಕ (ನಾ). ೧. ಧರ್ಮಕ್ಕೆ ಸಹಾಯಕವಾದುದು : ಧರ್ಮಪೋಷಕವಾದ ಅರ್ಥ ಕಾಮಗಳೆ ಜೀವನದ ಪುಷ್ಟಿ ಮತ್ತು ಸಾರ್ಥಕ್ಯ ಸಂಪಾದಕ (ಪುಷ್ಪಾರ. ೧೦೭ ಟೀಕೆ). ೨. ಧರ್ಮವನ್ನು ಕಾಪಾಡುವ ರಾಜನೇ ಮೊದಲಾದವರು : ನಾಲ್ವಡಿ ಕೃಷ್ಣರಾಜ ಒಡೆಯರು ಧರ್ಮಪೋಷಕರಾಗಿದ್ದರು (ರೂಢಿ). [ಧರ್ಮ + ಪೋಷಕ]

ಧರ್ಮಪ್ರಕಾಶನ (ನಾ). ಧರ್ಮವನ್ನು ಬೆಳಕಿಗೆ ತರುವುದು ; ಧರ್ಮಪ್ರಚಾರ : ಧರ್ಮಪ್ರಕಾಶನ ಕುಂಠಿತವಾದ ಕಾಲದಲ್ಲೆಲ್ಲ ವಸಿಷ್ಠಾದಿ ಆಧ್ಯಾತ್ಮಸಂಪನ್ನರೆ ರಾಷ್ಟ್ರನಾಯಕರಾಗಿ ಧರ್ಮಸಂರಕ್ಷಣೆ ಮಾಡುತ್ತಿದ್ದಾರೆ (ಪುಷ್ಪಾರ. ೧೨೨ ಟೀಕೆ). [ಧರ್ಮ + ಪ್ರಕಾಶನ]

ಧರ್ಮಪ್ರಚಾರ (ನಾ). ಧರ್ಮದ ಪ್ರಸಾರ ; ಧರ್ಮವನ್ನು ಹರಡುವಿಕೆ : ವಾಸ್ಕೋಡಿಗಾಮನು ಇಂಡಿಯಾಕ್ಕೆ ಬಂದ ಮೇಲೆ ಕ್ರೈಸ್ತಮತದ ಧರ್ಮಪ್ರಚಾರವು ಅಧಿಕವಾಗಿ ಬೆಳೆಯಿತು (ರೂಢಿ). [ಧರ್ಮ + ಪ್ರಚಾರ]

ಧರ್ಮಪ್ರಚಾರಕ (ನಾ). ಧರ್ಮವನ್ನು ಜನತೆಯಲ್ಲಿ ಪ್ರಚಾರಮಾಡುವವನು : ಅಶೋಕನು ಮಹಿಷಮಂಡಲಕ್ಕೂ ಧರ್ಮಪ್ರಚಾರಕರನ್ನು ಕಳುಹಿಸಿದ್ದನೆಂದು ಬೌದ್ಧಗ್ರಂಥಗಳಿಂದ ತಿಳಿದುಬರುತ್ತದೆ (ಕರ್ನಾಅ. ೨).
[ಧರ್ಮ + ಪ್ರಚಾರಕ]

ಧರ್ಮಪ್ರತಿಪಾಳ (ನಾ). ಧರ್ಮವನ್ನು ಕಾಪಾಡುವವನು; ಧರ್ಮಿಷ್ಠ : ಮಹಾಮಹೇಶ್ವರಂ ಸಮಯಧ [ರ್ಮ]ಪ್ರತಿಪಾಳರುಮಪ್ಪ ಕಾಚಿಯ ಸಾಹಣಿ[ಯಂ] . . . ಧಾರಾಪೂರ್ವ್ವಕಂ ಮಾಡಿಕೊಟ್ಟರು (ಸಾಇಇ. XX, ೨೨೮-೧೨ ; 1207). [ಸಂ. ಧರ್ಮಪ್ರತಿಪಾಲ]

ಧರ್ಮಪ್ರತಿಪಾಳಕ (ನಾ). = ಧರ್ಮಪ್ರತಿಪಾಳ : ಕಿರಿಯ ಗೋವಣರಸ ಧರ್ಮಪ್ರತಿಪಾಳಕನಿಂ[ದ]ರಸನ ಮಗ ಆಹುಮಲ್ಲರಸ . . . ಭೂಮಿಯಂ ಸರ್ವ್ವನಮಸ್ಯಮಾಗಿ ಬಿಟ್ಟರು (ಸಾಇಇ. XX, ೮೫-೧೮ ; 1124).
[ಸಂ. ಧರ್ಮಪ್ರತಿಪಾಲಕ]

ಧರ್ಮಪ್ರತಿಪಾಳನ (ನಾ). ಧರ್ಮವನ್ನು ಸಂರಕ್ಷಿಸುವುದು,-ಆಚರಿಸುವುದು : ವೀರಬಣಂಜಸಮಯಧರ್ಮ್ಮಪ್ರತಿಪಾಳನ ವಿಸುದ್ಧ ಗುಡ್ಡಧ್ವಜ ವಿರಾಜಿತಾನೂನ . . . ಆಚಾರಕಲಿಗಳಪ್ಪ ಶ್ರೀಮದಯ್ಯೂರ್ವ್ವಸ್ವಾಮಿಗಳುಂ (ಸಾಇಇ. XI-11, ೧೪೮-೭ ; 1099). [ಸಂ. ಧರ್ಮಪ್ರತಿಪಾಲನ]

ಧರ್ಮಪ್ರತಿಷ್ಠಾಪಕ (ನಾ). ಧರ್ಮವನ್ನು ಸ್ಥಾಪಿಸುವವನು : ರಾಮನು ಇಂದಿಗೂ ನಮಗೆ ಧರ್ಮಪ್ರತಿಷ್ಠಾಪಕನೆಂದು ಅವತಾರವಾಗಿ ತೋರುವನು (ಪ್ರಬಂಧ. ೫೩). [ಧರ್ಮ + ಪ್ರತಿಷ್ಠಾಪಕ]

ಧರ್ಮಪ್ರತಿಷ್ಠಾಪನೆ (ನಾ). ಧರ್ಮವನ್ನು ನೆಲೆಗೊಳಿಸುವಿಕೆ: ಅಧರ್ಮವು ತಲೆದೋರಿದಾಗ ಮಹಾತ್ಮರು ಧರ್ಮಪ್ರತಿಷ್ಠಾಪನೆಯನ್ನು ಮಾಡಲು ಶ್ರಮಿಸುತ್ತಾರೆ (ರೂಢಿ). [ಧರ್ಮ + ಪ್ರತಿಷ್ಠಾಪನೆ]

ಧರ್ಮಪ್ರಭಾವ (ನಾ). ೧. ಧರ್ಮದ ಮಹಿಮೆ,-ವರ್ಚಸ್ಸು : ಅವಂ . . . ಧರ್ಮಪ್ರಭಾವಮಂ ದಿವಿಜಲೋಕಕ್ಕೆ ಮೆಚ್ಚಿಯುತ್ತಂ ನಿಜನಿವಾಸಕ್ಕೆ ಪಂದು (ವರ್ಧಮಾ. ೬-೪೬ಪ) ; ಕಂಟಕನಲಾ ಧರ್ಮಪ್ರಭಾವಕ್ಕೆ ಕೌರವೇಶ್ವರನು (ಕುವ್ಯಾಗ. ೩-೨). ೨. ಯಮಧರ್ಮನ ಮಹಿಮೆ,-ಶಕ್ತಿ. ೧, ೨ : ಸತ್ಪುರುಷನಂತೆ ನಿಷ್ಕಪಟಮಹಿಮಾವಳಂಬಿಯುಂ ಯಾಮ್ಯದಿಶೆಯಂತೆ ಧರ್ಮಪ್ರಭಾವವಿಭಾವಿತಮುಮೆಂಬ ಮಹನೀಯ ಮಹಿಮೆಯಂ ತಳೆದು (ಪುಷ್ಪಪು. ೯-೩೦ ಪ). [ಧರ್ಮ + ಪ್ರಭಾವ]

ಧರ್ಮಪ್ರಭಾವನೆ (ನಾ). [ಜೈನ] ಸಮ್ಯಗ್ದರ್ಶನದ ಎಂಟು ಅಂಗಗಳಲ್ಲಿ ಕೊನೆಯದು : ನಿಶ್ಶಂಕೆಯುಂ . . . ವಾತ್ಸಲ್ಯಮುಂ ಧರ್ಮಪ್ರಭಾವನೆಯುಮೆಂದು ಎಸೆವಂಗಮೆಂಟಱಿಂ ರಂಜಿಸುವ ಮಹಾನರ್ಘ್ಯಮಪ್ಪ ದರ್ಶನಮಂ . . . ಕೈಕೊಂಡು (ಧರ್ಮಶ್ರಾ. ೧-೭೮) ; ಕಡೆಯಲುಳಿದಿರ್ದ ಪಲ್ಕಪ್ರಮಿತಕಾಲದೊಳ್ ಧರ್ಮಪ್ರಭಾವನಾಪ್ರಕಾಶಮೆಲ್ಲಂ ವಿಚ್ಛಿತ್ತಿಯನೆಯ್ದಿ (ಪಾಧಪು. ೬-೩೭ ಪ). [ಧರ್ಮ + ಪ್ರಭಾವನೆ]

ಧರ್ಮಪ್ರವರ (ನಾ). ೧. ಶ್ರೇಷ್ಠವಾದ ಧರ್ಮ. ೨. ಧರ್ಮದ ಆಚರಣೆಯಲ್ಲಿ ಶ್ರೇಷ್ಠನಾದವನು ; ಧರ್ಮಿಷ್ಠ : ಅವರು ನಿವಗತಿಭಕ್ತರೈ ಬಾಂಧವರೆಲೇ ತಪ್ಪೇನು ಧರ್ಮಪ್ರವರರಿಗೆ ನೀವೊಲಿದಿರೆಂದನು ಕೌರವರಾಯ (ಕುವ್ಯಾಸ. ೧೬-೯). [ಧರ್ಮ + ಪ್ರವರ]

ಧರ್ಮಪ್ರವಚನ (ನಾ). ಧರ್ಮವನ್ನು ಕುರಿತು ಮಾಡುವ ವ್ಯಾಖ್ಯಾನ : ಧರ್ಮದ ಬಗೆಗೆ ತಿಳಿವಳಿಕೆಯನ್ನುಂಟುಮಾಡಲು ಅಲ್ಲಲ್ಲಿ ಧರ್ಮಪ್ರವಚನಗಳು ನಡೆದರೆ ಒಳ್ಳೆಯದು (ರೂಢಿ). [ಧರ್ಮ + ಪ್ರವಚನ]

ಧರ್ಮಪ್ರವರ್ತಕ (ನಾ). ಧರ್ಮವನ್ನು ಪ್ರಚಾರ ಮಾಡುವವನು; ಧರ್ಮದ ಪ್ರೇರಕ : ಸೃಷ್ಟಿಕರ್ತನು . . . ಮಹಾತ್ಮರಾದ ಧರ್ಮಪ್ರವರ್ತಕರ ಮುಖಾಂತರವಾಗಿ ಜ್ಞಾನರಾಶಿಯನ್ನು ಹುಟಿಕೊಟ್ಟಿರುವನು (ಮಾಧವ. ೪೧೪). [ಧರ್ಮ + ಪ್ರವರ್ತಕ]

ಧರ್ಮಪ್ರವರ್ತನ (ನಾ). ಧರ್ಮಕ್ಕೆ ಉಂಟಾಗುವ ಪ್ರಚೋದನೆ : ತ್ರಿಜ್ಞಾನಧರರು ಪುಟ್ಟಿ . . . ಸಕಲಭುವನವಿಹಿತಧರ್ಮಪ್ರವರ್ತನಹೇತುವಪ್ಪುದಱಿಂ ಧರ್ಮನಾಥರೆಂದನ್ವರ್ಥನಾಮಮನಿಟ್ಟು ಪೋದಂ (ಚಾವುಂಪು. ೧೭೩). [ಧರ್ಮ + ಪ್ರವರ್ತನ]

ಧರ್ಮಪ್ರವೃದ್ಧಿ (ನಾ). ಧರ್ಮದ ಏಳಿಗೆ; ಧಾರ್ಮಿಕ ಕರ್ಮಾನುಷ್ಠಾನದ ಮೇಲ್ಮೆ,-ಹೆಚ್ಚಳ: ಎಲ್ಲಿಯವು ಧರ್ಮಪ್ರವೃದ್ಧಿಗಳೆಲ್ಲಿಯದು ಯಜ್ಞಾದಿ ಕರ್ಮವಿವೆಲ್ಲವಂ ತಾಂ ಹೇಳಲೇನಿನ್ನೆಂತು ಸಂದಹವು (ಬಸಪು. ೫೫-೬).

[ಧರ್ಮ + ಪ್ರವೃದ್ಧಿ]

ಧರ್ಮಪ್ರಸಂಗ (ನಾ). ಪುಣ್ಯದ ವಿಚಾರ,-ಸಂಗತಿ,-ವಿಷಯ: ಬಿಜ್ಜಲ ಮಹಾರಾಜಂ ಬಿಜಯಂಗೆಯ್ದು . . . ಅನಿಬರುವೊಂದಾಗಿ ಬಂದು ಕುಳ್ಳಿರ್ದ್ದು ಕೋಡಿಯಮಠದ ಧರ್ಮ್ಮಪ್ರಸಂಗಮಂ ಮಾರ್ಪ್ಪುದುಂ (ಎಕ. VII, ಶಿಕಾರಿ. ೧೦೨-೩೫ ; 1162) ; ಕುವರ[ಮ]ಲಿದೇವಂ . . . ಸುಖ ಸಂಕಥಾವಿನೋದದಿಂ ರಾಜ್ಯಂಗೆಯ್ಯುತಿರ್ದ್ದದೊಂದು ದಿವಸಂ ಧರ್ಮ ಪ್ರಸಂಗಮಾಗೆ . . . ಒದವಿದ ಸರಸಿಜಮರ್ಕ್ಕಭ್ಯುದಯದಿನಲರ್ವನ್ತೆ ಜನದ ಮನ[ಮ]ಲರ್ವಿನೆಗಂ ಸದಯೋಕ್ತಿಮುಕ್ತಿಯಿಂ ವಿಭೂ [ವು] ಳಿಯಣ್ಣಂ ಧರ್ಮ್ಮಪ್ರಸಂಗಮಂ ಪುಟ್ಟಿಸಿದಂ (ಕಇ. IV, ೩೮-೪೧ ; 1187) ; ಕೋಣ ವತ್ತಿಯ ಸೆಟ್ಟಿಕವ್ವೆ ಮಾಡ್ಸಿದ ಸಾತಯನಹಳ್ಳಿಯ ಹರಿಹರೇಶ್ವರದೇವರ ಧರ್ಮ್ಮಪ್ರಸಂಗವಂ ಬಿಂನಪಂಗೆಯ್ದು ಆ ದೇವರ ಶ್ರೀಕಾರ್ಯಕ್ಕೆ ಹೆಡೆದ ವ್ರಿತ್ತಿ (ಕಇ. IV, ೧-೯೯ ; 1204). [ಧರ್ಮ + ಪ್ರಸಂಗ]

ಧರ್ಮಪ್ರಿಯ (ನಾ). ೧. ಧರ್ಮದಲ್ಲಿ ಆಸಕ್ತಿಯುಳ್ಳವನು ; ಧರ್ಮಿಷ್ಠ: ಯಥಾ ರಾಜಾ ತಥಾ ಪ್ರಜಾ ಎಂಬವೊಲೋಜೆಯೊಳೋಜೆಗೊಂಡು ಧರ್ಮಪ್ರಿಯರಾದರ್ ಪ್ರಜೆಗಳುಂ (ಆದಿಪು. ೧೬-೪೦). ೨. ಧರ್ಮರಾಜ ನಲ್ಲಿ ಪ್ರೀತಿಯುಳ್ಳವನು. ೧,೨: ಪಾರ್ಥನಂತೆ ಧರ್ಮಪ್ರಿಯನುಂ...ನಿಚ್ಚ ಗಲಿಯಂತೆ [ಧರ್ಮದೊಳ್] ನಿಶ್ಶಂಕನುಮಪ್ಪುದು (ಧರ್ಮಾಮ್ಯ. ೪-೪೬).

[ಧರ್ಮ + ಪ್ರಿಯ]

ಧರ್ಮಫಲ (ನಾ). ವಿಹಿತವಾದ ಕರ್ಮಗಳ ಆಚರಣೆಯಿಂದ ದೊರೆಯುವ ಫಲ,-ಲಾಭ: ನಮ್ಮನ್ನು ನಾವು ಕೊಂದುಕೊಂಡು ಏನು ಧರ್ಮಫಲ ಸಾಧಿಸಿದ ಹಾಗಾಯಿತು ? (ವಚಭಾ. ೩೨೮).

[ಧರ್ಮ + ಫಲ$_1$]

ಧರ್ಮಬಂಧಿತ (ಗು). ೧. ಧರ್ಮದ ನಿಬಂಧನೆ ಅಥವಾ ಕಟ್ಟಿಗೆ ಒಳಗಾದ. (ನಾ). ೨. ಧರ್ಮದ ಕಟ್ಟಿಗೆ ಒಳಗಾದ ವ್ಯಕ್ತಿ: ನಾನೇನು ಮಾಡಲಿ ? ನಾನಿಂದು ಧರ್ಮಬಂಧಿತಳು (ನಿಕಲು. ೨೦೨).

[ಧರ್ಮ + ಬಂಧಿತ]

ಧರ್ಮಬಲ (ನಾ). ಧರ್ಮದ ಪ್ರಭಾವ,-ಸಾಮರ್ಥ್ಯ: ಎತ್ತಲೊಲೆವುದು ಧರ್ಮಬಲ ತಾನತ್ತಲೊಲೆವುದು ದೈವ ದೈವವದತ್ತಲೊಲೆದಿಹುದತ್ತ ವಿಜಯಶ್ರೀಯ ಕುಡಿನೋಟ (ಕುವ್ಯಾದ್ರೋ. ೪-೨). [ಧರ್ಮ+ಬಲ$_2$]

ಧರ್ಮಬಹಿರ್ಮುಖ (ನಾ). ಧರ್ಮದಿಂದ ವಿಮುಖನಾದವನು: ಬಳಿಮುಖ ಧರ್ಮಬಹಿರ್ಮುಖ ಚಳಮತಿ ನೀಂ ರೌದ್ರಭಾವಮಂ ತಳೆ ದಿಂತೇಕೊಳಪುಗುವೆ ಘೋರದುರ್ಗತಿಗಳೊಳ್ (ನೇಮಿಪು. ೩-೭೫).

[ಧರ್ಮ + ಬಹಿರ್ಮುಖ]

ಧರ್ಮಬಾಹಿರ (ನಾ). ೧. ಧರ್ಮಕ್ಕೆ ಹೊರತಾದುದು: ಈ ನಿಯಮಕ್ಕೆ ಹೊರಗಾದ ಉದಾಹರಣಗಳು ಎಲ್ಲಿಯಾದರೂ ಕಂಡುಬಂದರೆ ಅವು ಕೇವಲ ಅಪವಾದವೆಂದಾಗಲಿ, ಧರ್ಮಬಾಹಿರವೆಂದಾಗಲಿ ತಿಳಿಯಬೇಕು (ಮಾಧವ. ೩೨೭). ೨. ಧರ್ಮವನ್ನು ಉಲ್ಲಂಘನೆ ಮಾಡಿದವನು; ಧರ್ಮಭ್ರಷ್ಟ: ಧರ್ಮಬಾಹಿರನೂ ಕಠಿನಹೃದಯನೂ ದುಷ್ಟನೂ . . . ಆದ ರಾಜನನ್ನು ತನ್ನ ಸ್ವಾಮಿಯೆಂದು ಸ್ವೀಕರಿಸಲು ಹುಸೇನರು ಹೇಗೆ ಒಪ್ಪಲಿಲ್ಲವೋ (ರಾಮರಾ. ೯೭). [ಧರ್ಮ + ಬಾಹಿರ]

ಧರ್ಮಬಾಹಿರತೆ (ನಾ). ಧರ್ಮಭ್ರಷ್ಟತೆ; ಧರ್ಮಕ್ಕೆ ಹೊರತಾಗಿರುವಿಕೆ: ಗೋವಿಂದರಾಯರ ಧರ್ಮಬಾಹಿರತೆ-ನೀತಿಬಾಹಿರತೆಯನ್ನು ಶ್ರೀಗಳವರ ನಿದರ್ಶನಕ್ಕೆ ತರಬೇಕು (ಸಮಜೀ. ೩೭). [ಧರ್ಮಬಾಹಿರ+-ತೆ$_3$]

ಧರ್ಮಬುದ್ಧಿ (ನಾ). ೧. ಸತ್ಕರ್ಮದಲ್ಲಿ ಆಸಕ್ತಿ; ಸದಾಚಾರ: ವಿಟ್ಟರಸಂಗಳು . . . ಧರ್ಮ್ಮಬುದ್ಧಿಯಂ ಪಡೆದು ನಿಜಾರ್ತ್ಥದಿಂದೆಸೆಯೆ ನಿರ್ಮ್ಮಿಸಿದಂ ಮ್ರಿಡಗೇಹಮಂ (ಸೌಇಇ. XX, ೧೦೫-೪೪ ; 1146) ; ನಿನ್ನನ್ನು ನೋಡಿದ ಮೇಲಾದರೂ ನನಗೆ ಧರ್ಮಬುದ್ಧಿ ಬರುವುದು ಬೇಡವೇ ? (ಪ್ರತಾಪ. ೧೩). ೨. (ದೇವರ) ಸೇವೆ; ಉಪಾಸನೆ; ಆರಾಧನೆ: "ಉಪಾಸ್ತಿಯೆನೆ ಧರ್ಮಬುದ್ಧಿಯದು" (ಮಂಗರಾ. ೧೩೬-೩೯).

[ಧರ್ಮ + ಬುದ್ಧಿ]

ಧರ್ಮಬೋಧನೆ (ನಾ). ಧರ್ಮವನ್ನು ಕುರಿತು ಮಾಡುವ ಉಪದೇಶ; ಧರ್ಮದ ಬಗೆಗೆ ಅರಿವನ್ನುಂಟುಮಾಡುವಿಕೆ: ಅವರೆಲ್ಲರೂ ತಮ್ಮ ಧರ್ಮಬೋಧನೆಯನ್ನು ಕೇಳಲು ಅವಕಾಶ ಕೊಟ್ಟಿದ್ದರು (ಕಶಾಅ. ೧೬೮).

[ಧರ್ಮ + ಬೋಧನೆ]

ಧರ್ಮಬೋಧೆ (ನಾ). = ಧರ್ಮಬೋಧನೆ: ಧರ್ಮವಿಪ್ಲವಪರಿಸ್ಥಿತಿ ಯುಂಟಾದಾಗ ಮಹಾತ್ಮರು ಅವತರಿಸಿ ಜನರಿಗೆ ಧರ್ಮಬೋಧೆಯನ್ನೂ ತತ್ವಬೋಧೆಯನ್ನೂ ಮಾಡುತ್ತಿದ್ದರು (ಭಾರದ. ೨೬೯).

[ಧರ್ಮ + ಬೋಧೆ]

ಧರ್ಮಬ್ರಯ 'ಧರ್ಮವ್ರಯ' ನೋ[illegible]

ಧರ್ಮಭಗಿನಿ (ನಾ). ೧. ಒಡಹುಟ್ಟಿದವಳು; ಸಹೋದರಿ. ೨. ಧಾರ್ಮಿಕ ದೃಷ್ಟಿಯಿಂದ ಅಥವಾ ನ್ಯಾಯಶಾಸ್ತ್ರದ ದೃಷ್ಟಿಯಿಂದ ಸಹೋದರಿ ಯೆನಿಸಿದವಳು: ನಮ್ಮಲ್ಲಿ ಧರ್ಮಕ್ಕೆ ಅಂಥಾ ಸಂಕುಚಿತಾರ್ಥವಿಲ್ಲದಿದ್ದರೂ ನಾವೂ ಸ್ವಲ್ಪ ಹೆಚ್ಚುಕಡಿಮೆ ಅಂಥಾ ಅರ್ಥದಲ್ಲಿಯೇ ಧರ್ಮಭ್ರಾತ, ಧರ್ಮಭಗಿನಿ, ಧರ್ಮಾಚಾರ್ಯ, ಧರ್ಮಾಧಿಕಾರಿ ಎಂಬಿತ್ಯಾದಿಯಾಗಿ ಅನ್ನುತ್ತೇವೆ (ಆರ್ಯಧ. ೧೦) ; ಒಂದೇ ಮತದವರಾದ ಸ್ತ್ರೀಪುರುಷರು ಪರಸ್ಪರ ಧರ್ಮಭ್ರಾತರು, ಧರ್ಮಭಗಿನಿಯರು (ಆರ್ಯಧ. ೧೦ ಅಡಿಟಿ).

[ಸಂ. ಧರ್ಮಭಗಿನೀ]

ಧರ್ಮಭಂಡಾರ (ನಾ). ಧರ್ಮದ ಕೋಶ,-ನೆಲೆ: ಹರಿಗನ ಧರ್ಮಭಂಡಾರದಂತೆ ಸಾರಮಾದುದು . . . ಧರ್ಮವುರಂ (ಪಂಪಭಾ. ೧೪-೫೬). [ಧರ್ಮ + ಭಂಡಾರ (<ಬಂಡಾರ)]

ಧರ್ಮಭೂತಜ್ಞಾನ (ನಾ). [ವಿಶಿಷ್ಟಾ] (ದೀಪಕ್ಕೆ ಪ್ರಭೆಯಂತೆ) ಜೀವಾತ್ಮ ಪರಮಾತ್ಮರನ್ನು ಆಶ್ರಯಿಸಿಕೊಂಡಿರುವ ದ್ರವ್ಯವಿಶೇಷ; P ಇದು ಸಕಲ ವ್ಯಾಪಾರಗಳಿಗೂ ಕಾರಣಭೂತವಾಗಿದೆ. ಇತರ ವಸ್ತುಗಳಿಗೆ ಪ್ರಕಾಶಕವಾಗಿಯೂ ಸ್ವಯಂಪ್ರಕಾಶವಾಗಿಯೂ ಇದೆ. ಇದು ಪ್ರತಿ ಜೀವಕ್ಕೂ ಬೇರೆ ಬೇರೆಯಾಗಿದೆ: ಧರ್ಮಭೂತಜ್ಞಾನ, ವಿಶಿಷ್ಟಾದ್ವೈತಜ್ಞಾನ ಮೀಮಾಂಸೆಯ ಆಧಾರ. ಅದು ಜಗತ್ತು, ಅತ್ಮ, ಬ್ರಹ್ಮ ಇವುಗಳ ಸ್ವರೂಪವನ್ನು ಅರಿಯಲು ಬೇಕಾದ ಬೆಳಕು ನೀಡುತ್ತದೆ (ತತ್ವಪ್ರಾ. ೩೨೫) ; ಅತ್ಮ ದ್ರವ್ಯಗಳೂ ಸ್ವಯಂಪ್ರಕಾಶವಾಗಿ ಜ್ಞಾನಶಬ್ದಕ್ಕೆ ಗೋಚರವಾದುದರಿಂದ ವ್ಯತ್ಯಾಸ ತೋರುವುದಕ್ಕಾಗಿ ಧರ್ಮಭೂತಜ್ಞಾನ ವೆಂದು ಇದು ವ್ಯವಹರಿಸಲ್ಪಡವುದು (ಹಿಂದಸಾ. ೨೩೯). [ಸಂ.]

ಧರ್ಮಭೂಮಿ (ನಾ). ೧. ಧರ್ಮಕ್ಕೆ ಆಶ್ರಯವಾದ ಭೂಮಿ; ಧರ್ಮಕ್ಷೇತ್ರ: ಮಹಾಪು(ಂ)ಣ್ಯನದೀತೀರದಲು ಪ್ರಖ್ಯಾತವಾಗಿರ್ದ್ದ ಧರ್ಮ್ಮಭೂಮಿಯಂ ಶ್ರೀಮನ್ಮಹಾಪ್ರಧಾ[ನಂ] . . . ಕಂಡು (ಸೌಇಇ. XX, ೧೫೪-೪೫ ; 1172) ; ಭಾರತವು ಜಗತ್ತಿನ ಸತ್ಯಪ್ರೇಮಿಗಳ ದೃಷ್ಟಿಯಲ್ಲಿ ಧರ್ಮಭೂಮಿಯೆಂಬ ಯಶಸ್ಸನ್ನು ಪಡೆದಿದೆ (ಭಾರದ. ೪೭). ೨. ಭಾರತ.

[ಧರ್ಮ + ಭೂಮಿ]

ಧರ್ಮಭೂಷಣ (ನಾ). ಧರ್ಮವೇ ಆಭರಣವಾಗುಳ್ಳವನು; ಧರ್ಮಿಷ್ಠ: ಆ ಮುನಿಮುಖ್ಯಶಿಷ್ಯತಿಲಕಂ ನೆಗಟ್ಟಂ ಸಲೆ ಧರ್ಮಭೂಷಣಂ (ಖಮದ. ೧-೧೯). [ಧರ್ಮ + ಭೂಷಣ]

ಧರ್ಮಭ್ರಂಶ (ನಾ). = ಧರ್ಮಬಾಹಿರತೆ : ಗಂಡನೊಡನೆ ಬಾಳುವುದು ಹೆಂಗಸಿಗೆ ಧರ್ಮಭ್ರಂಶವೇಂಬ ಈ ಕುಶಿಕ್ಷಣವನ್ನು ನಿನಗೆ ಕೊಟ್ಟವರು ಯಾರು ? (ಲಂಕಿಮ. ೩೩೧). [ಧರ್ಮ + ಭ್ರಂಶ]

ಧರ್ಮಭ್ರಷ್ಟ (ನಾ). = ಧರ್ಮಬಾಹಿರ ೨: ಅನೃತವನ್ನು ಹೇಳಿದರೆ ಪಾಪ ಬರುತ್ತದೆ. ತಾನೂ ಧರ್ಮಭ್ರಷ್ಟನಾಗುತ್ತೇನೆ ಎಂದು ಧರ್ಮರಾಜನು ನಿರಾಕರಿಸುತ್ತಾನೆ (ಭಾರದ. ೧೦೩). [ಧರ್ಮ + ಭ್ರಷ್ಟ]

ಧರ್ಮಭ್ರಷ್ಟತೆ (ನಾ). = ಧರ್ಮಬಾಹಿರತೆ : ಜಗತ್ತಿನಲ್ಲಿ ಈಗ ಹಲವು ವೈದಿಕಧರ್ಮಗಳೂ ಹಲವು ಅವೈದಿಕಧರ್ಮಗಳೂ ಪ್ರಚಲಿತವಾಗಿರಲಿಕ್ಕೆ . . . ಮನುಷ್ಯನ ಧರ್ಮಭ್ರಷ್ಟತೆಯೇ ಕಾರಣವು (ಮಾಧವ. ೪೧೯).

[ಸಂ. ಧರ್ಮಭ್ರಷ್ಟತಾ]

ಧರ್ಮಭ್ರಾತ (ನಾ). ೧. ಒಡಹುಟ್ಟಿದವನು ; ಸಹೋದರ. ೨. ಧಾರ್ಮಿಕವಾಗಿ ಅಥವಾ ನ್ಯಾಯಶಾಸ್ತ್ರದ ದೃಷ್ಟಿಯಿಂದ ಸಹೋದರರನೆನಿಸಿಕೊಳ್ಳುವವನು : ನಮ್ಮಲ್ಲಿ ಧರ್ಮಕ್ಕೆ ಅಂಥಾ ಸಂಕುಚಿತಾರ್ಥವಿಲ್ಲದಿದ್ದರೂ ನಾವೂ ಸ್ವಲ್ಪ ಹೆಚ್ಚುಕಡಿಮೆ ಅಂಥಾ ಅರ್ಥದಲ್ಲಿಯೇ ಧರ್ಮಭ್ರಾತಧರ್ಮಭಗಿನಿ, ಧರ್ಮಾಚಾರ್ಯ, ಧರ್ಮಾಧಿಕಾರಿ ಎಂಬಿತ್ಯಾದಿಯಾಗಿ ಅನ್ನುತ್ತೇವೆ (ಆರ್ಯಧ. ೧೦). [ಸಂ. ಧರ್ಮಭ್ರಾತೃ]

ಧರ್ಮಮಾತೆ (ನಾ). (ಕ್ರೈಸ್ತರಲ್ಲಿ ಜ್ಞಾನಸ್ನಾನ ಮಾಡಿಸುವಾಗ) ರಕ್ಷಣೆಯ ಹೊಣೆಯನ್ನು ಹೊತ್ತವಳು : P ಇದಂ ಇಂಗ್ಲೀಷಿನ 'God Mother' ಎಂಬುದರ ಅನುವಾದ : ನನ್ನನ್ನು ನಿಮ್ಮ ಜತೆಗೆ ಕರಕೊಂಡು ಹೋಗಿರಿ . . . ನೀವು ನನ್ನ ಧರ್ಮಮಾತೆಯಾಗಿರಿ (ಸ್ಮೃತಿಚಿ. ೪೪೪). [ಧರ್ಮ + ಮಾತೆ]

ಧರ್ಮಮಾರ್ಗ (ನಾ). ಧರ್ಮಸಮ್ಮತವಾದ ಮಾರ್ಗ ; ನ್ಯಾಯವಾದ ದಾರಿ,-ಕ್ರಮ ; ಸನ್ಮಾರ್ಗ : ಭವಪ್ರಭವಜೀವಿಗೆ ನಿರ್ಮಲಧರ್ಮಮಾರ್ಗದೊಳ್ ಮನಮೊಸೆದಾಗಳುಂ ನಡೆಯವೇಟ್ಟುದುಂ (ಪಂಚತಂ.೫೯-೧೬) : ತಂದೆ ತನ್ನೊಡಹುಟ್ಟಿದಾತನುಯೆಂದು ಕಾಂಬುದೆ ಧರ್ಮಮಾರ್ಗವು (ಕಾಶಿರಾ. ೪೬-೬೩) : ಮೆಱಿವ ನಾನಾಬಗೆವಸ್ತುಗಳನು ದಯವೆರೆಸುತೆ ಧರ್ಮಮಾರ್ಗದಲಿ ಕರೆದಾ ಕ್ಷಣ ಕ್ರಯಕೀವ ಹರೆದರ ಸುರುಚಿರೆಗ್ರಹಗಳೊಪ್ಪಿದುವು.(ಕಂನವಿ. ೬-೩೦). [ಧರ್ಮ + ಮಾರ್ಗ]

ಧರ್ಮಮಾಹಾತ್ಮ್ಯ (ನಾ). ಧರ್ಮದ ಹಿರಿಮೆ,-ಘನತೆ,-ಹೆಚ್ಚಳ : ಪೇೞ್ದನವನೀಶಂ ಧರ್ಮಮಾಹಾತ್ಮ್ಯಮಂ (ಶಮುಕ. ೪-೯೦).

[ಧರ್ಮ + ಮಾಹಾತ್ಮ್ಯ]

ಧರ್ಮಮಿಮಾಂಸಾಶಾಸ್ತ್ರ (ನಾ). ವೇದಾರ್ಥನಿರ್ಣಯ ಮಾಡಲು ಆಧಾರಭೂತವಾದ ಶಾಸ್ತ್ರ ; ಜೈಮಿನಿಮಹರ್ಷಿಗಳಿಂದ ಪ್ರವೃತ್ತವಾದ ಶಾಸ್ತ್ರ ; ಪೂರ್ವಮಿಮಾಂಸಾಶಾಸ್ತ್ರ : ಉಪನಿಷತ್ತುಗಳು ವೇದಗಳಿಗೆ ಸೇರಿದ ಗ್ರಂಥಗಳಾದುದರಿಂದ ವೇದವ್ಯಾಖ್ಯಾನವಾದ ಧರ್ಮಮಿಮಾಂಸಾಶಾಸ್ತ್ರ, ಪೂರ್ವಮಿಮಾಂಸೆ ಎಂದೂ ವೇದಾಂತ ವ್ಯಾಖ್ಯಾನವಾದ ಬ್ರಹ್ಮಮಿಮಾಂಸಾಶಾಸ್ತ್ರ ಉತ್ತರಮಿಮಾಂಸೆ ಎಂದೂ ವ್ಯವಹಾರ (ಹಿಂದಸಾ. ೧೮೫). [ಸಂ.]

ಧರ್ಮಮಿಮಾಂಸೆ (ನಾ). = ಧರ್ಮಮಿಮಾಂಸಾಶಾಸ್ತ್ರ : ಜೈಮಿನಿ ಸೂತ್ರಕ್ಕೆ ಪೂರ್ವಮಿಮಾಂಸೆ, ಧರ್ಮಮಿಮಾಂಸೆಯೆಂದೂ ಬಾದರಾಯಣ ಸೂತ್ರಕ್ಕೆ ಉತ್ತರಮಿಮಾಂಸೆ, ಬ್ರಹ್ಮಮಿಮಾಂಸೆಯೆಂದೂ ವ್ಯವಹಾರ (ಹಿಂದಸಾ. ೧೮೪). [ಧರ್ಮ + ಮಿಮಾಂಸೆ]

ಧರ್ಮಮೂಢ (ನಾ). ಧರ್ಮದ ಬಗೆಗೆ ಸರಿಯಾದ ಜ್ಞಾನವಿಲ್ಲದವನು : ಜಗತ್ತು ಧರ್ಮಮೂಢರಿಂದ ಹಾಗೂ ನೀತಿಬಾಹಿರರಿಂದ ತುಂಬಿರುವುದನ್ನು ನೋಡಿ ಕವಿಯ ಮನಸ್ಸು ಅಧೀರವಾಗುವುದು (ಗೊತ್ತುಗು. ೩೭).

[ಧರ್ಮ + ಮೂಢ]

ಧರ್ಮಮೂಲ (ನಾ). ೧. ಧರ್ಮವನ್ನು ಆಧಾರವಾಗಿ ಉಳ್ಳುದು : ಕಿಳಿದು ನೋಡಿರೆ ರಾಮ ಧರ್ಮಸ್ಥಳಕೆ ನೀವು ಸಹಾಯವಿನಿಬರ ಗೆಲವು ನಿರ್ಮಳಧರ್ಮಮೂಲವೊ ಧರ್ಮವಿರಹಿತವೊ (ಕುವ್ಯಾಗ. ೬-೫). ೨. ಧರ್ಮಕ್ಕೆ ಆಧಾರವಾದ ಗ್ರಂಥ : ವೇದ, ಆಗಮ ಮುಂತಾದುವು.

[ಧರ್ಮ + ಮೂಲ]

ಧರ್ಮಮೇಘ (ನಾ). [ಯೋಗ] ಧ್ಯಾನಾಭ್ಯಾಸದಿಂದ ಲಭಿಸುವ ಆನಂದ ; P ಸಮಾಧಿಯಲ್ಲಿ ಸಂಪ್ರಜ್ಞಾತ ಸಮಾಧಿ, ಅಸಂಪ್ರಜ್ಞಾತ ಸಮಾಧಿ ಎಂದು ಎರಡು ಬಗೆ. ಸಂಪ್ರಜ್ಞಾತವು ಒಂದಂ ಆಲಂಬನವನ್ನು ಕುರಿತು ಮಾಡುವ ಸಮಾಧಿ. ಅದು ಸವಿಕಲ್ಪ. ವಿರಕ್ತನಾದವನ ಸಾಧನೆಯಂ ನಿರಾಲಂಬ, ನಿರ್ವಿಕಲ್ಪ. ಅದಕ್ಕೆ ಅಸಂಪ್ರಜ್ಞಾತವೆಂದುಂ ಹೆಸರುಂ. ಈ ಸಮಾಧಿಯಲ್ಲಿ ವಿವೇಕವುಂಟಾಗುತ್ತದೆ. ಇದು ಪರಮಸಿದ್ಧಿ : ಧ್ಯಾನಾಭ್ಯಾಸದಿಂದ ಬರತಕ್ಕ ಆನಂದಕ್ಕೆ ಧರ್ಮಮೇಘವೆಂದು ಹೆಸರು (ಹಿಂದಸಾ. ೧೦೯). [ಸಂ.]

ಧರ್ಮಯುದ್ಧ (ನಾ). ೧. ಮೋಸವಿಲ್ಲದೆ ಮಾಡುವ ಯುದ್ಧ ; ಧರ್ಮಸಮ್ಮತವಾದ ಕಟ್ಟಳೆಗಳಿಗೆ ಅನುಸಾರವಾಗಿ ನಡೆಸುವ ಯುದ್ಧ : ಸಮಸ್ತಜನಸಂಹರಣಕಾರಣಮಪ್ಪರಣದೊಳೀವಂದಪ್ಪದೆಂದು ಧರ್ಮಯುದ್ಧಮನೆ ತಮ್ಮೊಳ್ ಸಮಂಕಟ್ಟಿ (ಆದಿಪು. ೧೪-೧೦೦ ವ) ; ಪೆಜತನಿನ್ನೆವಗೆ ನುಡಿಯಲೆಡೆಯಿಲ್ಲ ಧರ್ಮಯುದ್ಧಮಂ ನೋಡಲ್ದೆಟ್ಟುಂ (ಪಂಪಭಾ. ೦೩-೯೦ ವ) : ಆ ಪ್ರಸ್ತಾವದೊಳ್ ಧರ್ಮಯುದ್ಧಮಂ ನೆನೆದು ಇಱಿಯೆಂ ಬಿಟ್ಟನೆಂದೀ ಬಿಱುಬಂದುಂ ಬೀಸಿ ಗದೆಯ ಗಾಳಿಯ ಕೋಟಿಚ್ಚಿಱಿಸಿದುದು ಭೀಮನಂ ಮೆಯ್ಮಱಿದವನಂ (ಗದಾಯು. ೮-೩೦ ವ). ೨. ಧರ್ಮರಕ್ಷಣೆಗಾಗಿ ಮಾಡುವ ಯುದ್ಧ ; ಜೇಹಾದ್ ; P 'Crusade' ಎಂಬ ಆಂಗ್ಲಪದವನ್ನು ಕೆಲವುವೇಳೆ 'ಧರ್ಮಯುದ್ಧ' ಎಂದುಂ ಅನುವಾದ ಮಾಡುತ್ತಾರೆ. [ಧರ್ಮ + ಯುದ್ಧ]

ಧರ್ಮಯೋಗ (ನಾ).=ಧರ್ಮಧ್ಯಾನ: ಚಿತ್ತಪನಾತ್ಮಸೊಳಡಗಿಸೆ ನಿಶ್ಚಯದುತ್ತಮ ಧರ್ಮಯೋಗವದು (ಭರಡ. ೬೯-೩೬) ; ಅಱಿವು ಬೆಳಗು ಸುಖ ಕಿಱಿದಾಗಿ ತೋಱುತ ಮಱಿಸುತಹುದು ಧರ್ಮಯೋಗ ಅಱಿವು ಬೆಳಗು ಸುಖ ಪಿರಿದಾಗಿ ತೋಱುತ ಮಱಿಸದಿಹುದು ಶುಕ್ಲಯೋಗ (ಭರಡ. ೬೯-೩೮). [ಧರ್ಮ + ಯೋಗ]

ಧರ್ಮರಕ್ಷಕ (ನಾ). ಧರ್ಮವನ್ನು ಕಾಪಾಡುವವನು : ಧರ್ಮರಕ್ಷಕಂ ಜಲಧಿಮುದ್ರಿತಧರಾಧೀಶ ಪಾವನ ಶಿವನ ಕಳಿಯಂಶ ಚಿನ್ಮಾನಿನೀಶ ಸೌರಂಭಾಳಿಯಿಂದ ಸತ್ಕೀರ್ತಿನೆಸೆದಂ (ಭಾವಚಿಂ. ೪-೩೦). [ಧರ್ಮ+ರಕ್ಷಕ]

ಧರ್ಮರಕ್ಷಣ(ನಾ).=ಧರ್ಮರಕ್ಷಣೆ: ಧರ್ಮರಕ್ಷಣ ಮಾಡುವದಕ್ಕಾಗಿ ಅವರಂ ಸ್ವತಃ ಕೃತಘ್ನತೆಯ ಪಾಪಕ್ಕೆ ಗುರಿಯಾದದ್ದು ಅವರ ಸ್ವಾರ್ಥತ್ಯಾಗವ ಲಕ್ಷಣವಾಗಿರುವದು (ಮಾಧವ. ೪೬೦). [ಧರ್ಮ + ರಕ್ಷಣ]

ಧರ್ಮರಕ್ಷಣೆ (ನಾ). ಧರ್ಮವನ್ನು ಉಳಿಸುವುದು.-ಕಾಪಾಡುವುದು : ಆತ್ಮರಕ್ಷಣೆಗಿಂತ ಧರ್ಮರಕ್ಷಣೆಯು ಪ್ರಿಯವಾಯಿತು (ಭಾರದ. ೩೮೮).

[ಧರ್ಮ + ರಕ್ಷಣೆ]

ಧರ್ಮರತ (ನಾ). ಧರ್ಮದಲ್ಲಿ ಮಗ್ನನಾದವನು ; ಧರ್ಮಾಸಕ್ತಿಯುಳ್ಳವನು : ಧರ್ಮಸ್ವಾಮಿ ಜಿನೇಶ್ವರಧರ್ಮರತಂ ಸಾರ್ಥವಾಹಕಂ . . . ಬೀಡಂ ಬಿಟ್ಟಂ (ವರ್ಧಮಾ. ೬-೭). [ಧರ್ಮ +ರತ]

ಧರ್ಮರತಿ (ನಾ). ಧರ್ಮದಲ್ಲಿ ಆಸಕ್ತಿ, - ಪ್ರೀತಿ ಅಛವಿನುತ ಧರ್ಮರತಿಯುಂ ಸ್ವಭಾವವೈರಾಗ್ಯಭಾವಮುಂ ಸರ್ವಭವಾನುಭವವಿರಕ್ತತೆಯುಂ ದುರ್ಲಭಮದು ಭವ್ಯಪ್ರಬೋಧಿಯಿನಿಕ್ಕುಂ (ಸುಳುಮಾ. ೦೩-೩೭) ; ಇದೆಂಥ ಗುರುಭಕ್ತಿ, ಇದೆಂಥ ಧರ್ಮರತಿ, ಇದೆಂಥ ನಿಯಮನಿಷ್ಠೆ! (ಭರಡ. ೪೯೪).

[ಧರ್ಮ + ರತಿ$_1$]

ಧರ್ಮರಾಜ (ನಾ). ೧. ಯಮ : "ಶಮನಃ . . . ಧರ್ಮರಾಜಃ, ಯಮಃ . . . ಶ್ರಾದ್ಧದೇವಃ . . . ಈ ೧೬ ಜವನ ಪೆಸರ್" (ಹಲಾಯು. ೧೩-೭೨). ೨. ಬುದ್ಧ : ಬೌದ್ಧಪ್ರಪಂಚದಲ್ಲಿ . . . ಬುದ್ಧನು 'ಧರ್ಮರಾಜ,' ಆತನ ಶಿಷ್ಯಪ್ರಧಾನನಾದ ಸಾರಿಪುತ್ರನು 'ಧರ್ಮಸೇನಾಪತಿ' (ಭಾರದ. ೧೯೨). ೩. ಜಿನ. ೪. ಪಂಚಪಾಂಡವರಲ್ಲಿ ಹಿರಿಯವನು; ಯುಧಿಷ್ಠಿರ : ಉಭಯಸೈನ್ಯಂಗಳಂ ಕಂಡತ್ತ ರಾಜರಾಜನುಮಿತ್ತ ಧರ್ಮರಾಜನುಮೊಡನೊಡನೆ ಕೆಯ್ವಾಸಿದಾಗಳ್ (ಪಂಪಭಾ. ೧೦-೬೫ ವ) ; ಪರಹಿತಕಾರ್ಯ್ಯಮಂ ನೆಱೆಯೆ ಮಾರ್ಪೆಡೆಗಂ ಸಲೆ ಧರ್ಮ್ಮರಾಜಂ (ಸೌಇಇ. XX, ೭೬-೩೮; 1118) ; ಧರ್ಮರಾಜನಿಗೆ "ಅಣ್ಣಾ! ಧರ್ಮಮಾರ್ಗದಿಂದಲೇ ರಾಜ್ಯ ಪಡೆದುಕೋ . . ." ಎಂದು ಹೇಳಿದನು (ವಚಭಾ. ೧೨೦). ೫. (ಧರ್ಮದಿಂದ ಆಳುವ) ರಾಜ ; ದೊರೆ. [ಧರ್ಮ + ರಾಜ]

ಧರ್ಮರಾಜಜನಕ (ನಾ). ಯಮನ ತಂದೆ; ಸೂರ್ಯ : ಇರದೆಯ್ತರ್ಪಂ ದೋಷಾಕರನವನಂ ನೋಡಲಾಗದೆಂದಾ ದಿನಪಂ ವರಧರ್ಮರಾಜಜನಕಂ . . . ನೀಳಗಿರಿಯಂ ಸಾರ್ದಂ (ಹಮ್ಮೀರ. ೩-೦೩).

[ಧರ್ಮರಾಜ + ಜನಕ]

ಧರ್ಮರಾಜ್ಯ (ನಾ). ಸತ್ಯ, ನ್ಯಾಯ, ನಿಷ್ಪಕ್ಷಪಾತತೆಗಳನ್ನುಳ್ಳ ರಾಜ್ಯ; ಸುರಾಜ್ಯ: ಭಗವಂತನು ಧರ್ಮರಾಜ್ಯವನ್ನು 'ಪ್ರವರ್ತನ' ಮಾಡಿದನೆ ಹೊರತು 'ಸ್ಥಾಪನ' ಮಾಡಲಿಲ್ಲ (ಭಾರದ. ೧೯೬). [ಧರ್ಮ + ರಾಜ್ಯ]

ಧರ್ಮರಾಯ (ನಾ). ೧. ಯುಧಿಷ್ಠಿರ : ಕ್ಷಮೆಯೊಳ್ ಧರ್ಮರಾಯ ಶಕ್ತಿಗೆ ಭೀಮ . . . ಶ್ರೀಕೃಷ್ಣರಾಜವಡೆಯರೈಯನವರು (ಎಕ. III (R), ಗುಂಡ್ಲುಪೇ. ೮೦-೫ ; 1673) : ಕುದುರೆ ಇಲ್ಲಿಯೇ ಉಳಿದುಬಿಟ್ಟು ಧರ್ಮರಾಯನ ಯಾಗ ನಿಂತುಹೋದೀತು (ಬಿದುರಿ. ೮ ಪ್ರಸ್ತಾವನೆ). ೨. ಸತ್ಯವಂತ ; ನ್ಯಾಯವಂತ ; ಧರ್ಮಿಷ್ಠ. [ಧರ್ಮ + ರಾಯ]

ಧರ್ಮರುಚಿ (ನಾ). ಧರ್ಮಪ್ರಿಯ ; ಧರ್ಮಿಷ್ಠ : ಸ್ಥಿರಸತ್ಯವ್ರತಿಯೆಂದು ಧರ್ಮರುಚಿಯೆಂದಾ ಧರ್ಮಪುತ್ರಂ ದಯಾಪರನೆಂದೆಲ್ಲರ ಪೇಟ್ದ ಮಾತು ಪುಸಿಯಾಯ್ತಾ ಕಾರ್ಮುಕಾಚಾರ್ಯನಂ . . . ಕೊಂದಾಗಳ್ (ಗದಾಯು. ೩-೨೩) ; ರಾಜಗುರು, ಧರ್ಮರುಚಿ, ಶಿಷ್ಯತತಭಕ್ತನ್, ಯೋಧಾಗ್ರಗಣ್ಯನ್ (ಅಶ್ವತ್ಥಾ. ೧೭-೩೭೩). [ಧರ್ಮ + ರುಚಿ]

ಧರ್ಮಲಂಡ (ನಾ). ಧರ್ಮವಿರೋಧಿ ; ಧರ್ಮದ್ರೋಹಿ : ಅವರೆಲ್ಲ ಅವನ ಮೇಲೆ ಧರ್ಮಲಂಡನೆಂಬ ಆಪಾದನೆ ಹೊರಿಸಿ . . . ವಿಚಾರಣೆಗೆ ಗುರಿಮಾಡಿದ್ದರು (ಬೆಂಜನ್. ೦೫೯) ; ಅವರು ಧರ್ಮಲಂಡರಾಗಿ, ಹೇಡಿಗಳಾಗಿ . . . ತಮ್ಮ ಸರ್ವಸ್ವವನ್ನು ಯವನರಿಗೆ ಅರ್ಪಿಸಿ ನಿಷ್ಕ್ರಿಯರಾಗಿ ನೋಡುತ್ತಿದ್ದರು (ರಾಜ್ಯೋದ. ೩); ಧರ್ಮಲಂಡ ತಾನು! ಮತ್ತೆ ಮೊದಲಿಗೆ "ಶ್ರೀ" ಅಂತ ಬೇರೆ ಹಚ್ಚಿಕೊಳ್ಳೋದು! (ಅಶ್ವಮೇ. ೧೯).

[ಧರ್ಮ + ಲಂಡ$_1$]

ಧರ್ಮಲುಪ್ತೆ (ನಾ). = ಧರ್ಮಲುಪ್ತೋಪಮೆ : ಧರ್ಮಲುಪ್ತೆಯೆಂತೆನೆ ಚಂದ್ರಂಗಿಂದ್ರಂಗೆ ಹರಿಶ್ಚಂದ್ರಂಗೆಣೆಯೆಂದೊಡಾವ ಚಂದಂ ಚಿಕದೇವೇಂದ್ರಂಗೆ ಸದ್ಗುಣಾಬ್ಧಿಗುಪೇಂದ್ರಂಗೆಣೆಯೆಂಬುದೊಂದೆಯಂದಮೆ ನಿಕ್ಕುಂ ಇದಱೊಳ್ ಚಂದ್ರೇಂದ್ರ ಹರಿಶ್ಚಂದ್ರರಂ ದೊರೆಗೊಳಿಸುವೆಡೆಯೊಳಾಹ್ಲಾದಕರತ್ವೈಶ್ವರ್ಯಸತ್ಯವಾಕ್ಯತ್ವಂಗಳೆಂಬ ಸಮಾನಧರ್ಮಂಗಳಂ ಪೇಟದಿರ್ಪುದಱಿಂ ಧರ್ಮಲುಪ್ತೆಯಾದುದು (ಅಪ್ರತಿ. ೩೪-೨೦).

[ಸಂ. ಧರ್ಮಲುಪ್ತಾ]

ಧರ್ಮಲುಪ್ತೋಪಮೆ (ನಾ). [ಕಾವ್ಯಮೀ] ವಾಚಕಲುಪ್ತೆ, ಧರ್ಮಲುಪ್ತೆ, ಧರ್ಮವಾಚಕಲುಪ್ತೆ, ವಾಚಕೋಪಮೇಯಲುಪ್ತೆ, ಉಪಮಾನಲುಪ್ತೆ, ವಾಚಕೋಪಮಾನಲುಪ್ತೆ, ಧರ್ಮೋಪಮಾನಲುಪ್ತೆ ಮತ್ತು ಧರ್ಮೋಪಮಾನವಾಚಕಲುಪ್ತೆ ಎಂಬ ಎಂಟು ಬಗೆಯ ಲುಪ್ತೋಪಮೆಗಳಲ್ಲಿ ಒಂದು ; ಸಾಧಾರಣಧರ್ಮಕ್ಕೆ ಲೋಪವಾಗಿರುವ ಉಪಮಾಲಂಕಾರ ; P 'ಇವಳ ಮುಖವು ಚಂದ್ರನಂತಿದೆ' ಎಂಬ ವಾಕ್ಯದಲ್ಲಿ 'ಮುಖ'-ಉಪಮೇಯ, 'ಚಂದ್ರ'-ಉಪಮಾನ, 'ಅಂತೆ'-ಉಪಮಾವಾಚಕ. 'ಕಾಂತಿಯಲ್ಲಿ' ಎಂಬ ಪದವಿಲ್ಲ. ಅದೇ ಧರ್ಮ. ಅದು ಲುಪ್ತವಾಗಿರುವುದರಿಂದ ಧರ್ಮಲುಪ್ತೆ. ಉದಾ : ಅನಿಮಿಷ ಚಾಪದಂತೆ ಸಿರಿ ಶಾರದನೀರದಕಾಂತಿಯಂತೆ ಯೌವನದೆಸಕಂ ತೃಣಾಗ್ರಗತವಾಃಕಣಿಕಾಗಣದಂತೆ ಸಂದ ಜೀವನಂ (ಪಂಚತಂ. ೫೯-೦೬). [ಸಂ. ಧರ್ಮಲುಪ್ತೋಪಮಾ]

ಧರ್ಮವಂತ (ನಾ). ೧. ಸದ್ಗುಣಿ ; ಸದಾಚಾರಸಂಪನ್ನ ; ಧರ್ಮಿಷ್ಠ : ಈತನು ಧರ್ಮವಂತ, ರೂಪವಂತ, ಗುಣವಂತ (ವಚಭಾ. ೧೭೧). ೨. ಉದಾರಿ ; ದಾನಶೀಲ : ದುಡ್ಡು ಎಲ್ಲಿಂದೋ ಬರುತ್ತದೆ. ಬಡವರಿಗಾಗಿ ಧರ್ಮವಂತರು ಕಳಿಸುತ್ತಾರೆ (ಮಣ್ಣಿಮ. ೧೩೫).

[ಸಂ. ಧರ್ಮವತ್]

ಧರ್ಮವಣ್ಣಿಗೆ (ನಾ). (?) : ಚೈತ್ರಪವಿತ್ರ ಅತಿಥಿಯಭ್ಯಾಗತ ತಪೋಧನರಗ್ರಾಸಕ್ಕೆ ಬಿಟ್ಟ ತಕ್ಕಿಲ ಮತ್ತರ್ ೧ ಅಲ್ಲಿಂ ಪಡುವಲು ಸಮಸ್ತಪ್ರಾಣಿಗಳ್ಗೆ ಬಿಟ್ಟ ಧರ್ಮವಣ್ಣಿಗೆಗೆ ಕಂಬ ೪೫೦ (ಸೌಇಇ. IX-1, ೨೯೬-೬೮ ; 1176).

[ಧರ್ಮ + ?]

ಧರ್ಮವತಿ (ನಾ). [ಸಂಗೀತ] ಒಂದು ರಾಗದ ಹೆಸರು : ಧರ್ಮವತಿ-ಜನಕರಾಗ ೧೦ನೇ ದಿಶಿಚಕ್ರದಲ್ಲಿ ೫ನೇ ಮೇಳ. ಕ್ರಮಸಂಖ್ಯೆ ೫೯ (ಸಂಗೀದಂ. ೦೬೫). [ಸಂ. ಧರ್ಮವತೀ]

ಧರ್ಮವತ್ತಳೆ, ಧರ್ಮವತ್ಥಳೆ (ನಾ). ದಾನಪತ್ರ ; ದಾನಶಾಸನ : ಧರ್ಮ್ಮವತ್ತಳೆಯ ಶಾಸನಮರ್ಯ್ಯಾದೆಯಲ್ ತಿಱುವ ಸಿದ್ಧಾಯಂ (ಎಇ. XV, ೭೯-೨೦ ; 1050) : ಲಕ್ಷ್ಮಮಂಡಲಿಕಂ ನಿರ್ಮ್ಮಳ ಧರ್ಮವತ್ತಳೆಯ ನಷ್ಟೋದ್ಧಾರಮಂ ಮಾಡಿದಂ (ಎಇ. XV, ೩೪೦-೩೨; 1071) ; ೫೦ ಗದ್ಯಾಣ ಪೊಂನಂ ಪಿಂಡಾದಾನದಿಂದಂ ಧರ್ಮ್ಮವತ್ತಳೆಯಿಂ ತಿಱುವಂತಾಗಿ ಧಾರಾಪೂರ್ವ್ವಕಂ ಮಾಡಿ ಆಚಂದ್ರಾರ್ಕ್ಕತಾರಂಬರಂ ಕೊಟ್ಟರ್ (ಸೌಇಇ. XI-1, ೦೫೪-೬೩ ; 1104) : ತುಂಬುಳದ ಮಹಾಜನಂ ನೂರನಾಲ್ವದಿಂಬರ್ಗ್ಗಂ ಧಾರಾಪೂರ್ವ್ವಕಂ ಮಾಡಿ ಬಿಟ್ಟ ಧರ್ಮ್ಮವಾವೂರಲು ಧರ್ಮ್ಮವತ್ತಳೆಯಾಗಿ ತಿಱುವ ಸಿದ್ಧಾಯದ ಪೊಂನೊಳಗೆ ವ್ಯಾಖ್ಯಾನದುಪಾಧ್ಯಾಯರ್ಗ್ಗೆ ಗದ್ಯಾಣ ಮೆಂಟು (ಸೌಇಇ. IX-1, ೦೬೫-೨೦ ; 1107). **ಧರ್ಮವತ್ಥಳೆ** : ಯಾವ ಕಾಲಕ್ಕಂ ಪೂರಾಯಂ ಹೀನಾಯಮೆನ್ನದೆ ವರ್ಷನಿಬನ್ಧದಿಂ ಧರ್ಮ್ಮವತ್ಥಳೆಯಾಗಿ × × × (ಎಕ. XI, ದಾವಣ. ೧೪೨-೨೫ ; 1062).

[ಧರ್ಮ + ಪತ್ತಳೆ]

ಧರ್ಮವತ್ಥಳೆ 'ಧರ್ಮವತ್ತಳೆ' ನೋ.

ಧರ್ಮವನಚಾರಿ (ಗು). ತಪೋಭೂಮಿಯಲ್ಲಿ ಅಥವಾ ಆಶ್ರಮದಲ್ಲಿ ಸಂಚರಿಸುವ : ಆವನಿಂದಾದೊಡಂ ಹತಿ ತಾಂ ಸಂಭವಿಸಿತ್ತೊ ಧರ್ಮವನಚಾರಿಪ್ರಾಣಿವರ್ಗಕ್ಕೆ . . . ಎಂದು ತೊಳಲ್ವುದೆನ್ನಯ ಮನಂ ನಿರ್ಣೈಸದೇನೊಂದುಮಂ (ಶಾಕುಂತ. ೬೩-೨೧)

[ಸಂ. ಧರ್ಮವನಚಾರಿನ್]

ಧರ್ಮವರ್ತನೆ (ನಾ). ಒಳ್ಳೆಯ ನಡತೆ; ಸತ್ಕರ್ಮದ ಆಚರಣೆ ; ಸದಾಚಾರ: ನೆಟ್ಟನನಂತನಾಥನಪವರ್ಗಮನೆಯ್ದಿದನಂತರಂ ಕರಂ ಕೆಟ್ಟುದು ಧರ್ಮವರ್ತನೆ (ಬಾಧಪು. ೦೬-೪೭). [ಧರ್ಮ + ವರ್ತನೆ]

ಧರ್ಮವರ್ಧನ (ನಾ). ಧರ್ಮದ ಏಳಿಗೆ,-ಅಭಿವೃದ್ಧಿ : ಈಶನ ಭವನಮ್ಮುಕುನ್ದಭವನಂಗಳನಿಂಬಿನೆ ಮಾಡಿ ಧರ್ಮ್ಮವರ್ದ್ಧನದೆ ಕನೀಯನನ್ದನನ ರಾಜ್ಯಮನೀಕ್ಷಿಸುಗೆ (ಎಕ. X, ಮುಳಬಾ. ೩೮-೩೨ ; ಸು. 890).

[ಧರ್ಮ + ವರ್ಧನ]

ಧರ್ಮವಾದಿನಿ (ನಾ). ಧರ್ಮದ ಪರವಾಗಿ ವಾದಿಸುವವಳು ; ಧರ್ಮದ ಪಕ್ಷಪಾತಿ : ಅವಳು ಧರ್ಮವಾದಿನಿ. ಪತಿಯು ದೇವರೆಂದು ಭಾವಿಸಿದ್ದಳು (ಕಾವೇರಿ. ೨೮). [ಸಂ. ಧರ್ಮವಾದಿನೀ]

ಧರ್ಮವಿಘಾತಕ (ನಾ). ಧರ್ಮವನ್ನು ಕೆಡಿಸುವವನು ; ಧರ್ಮವನ್ನು ನಾಶಪಡಿಸುವವನು ; ಧರ್ಮದ್ರೋಹಿ ; ದುರ್ಮಾರ್ಗಿ : ಸುನೀತನಾ ಧರ್ಮಜನು ಧರ್ಮವಿಘಾತಕರು ನಾವೆಮ್ಮ ಕಳುಹುವುದೆನುತ ಹೋಗಿ ವಂಟ (ಕುಮಾ.ಸ. ೧೨-೩೬) ; ಅನ್ಯರನ್ನು ಬಲಾತ್ಕರಿಸುವ ದುಷ್ಟರು, ಅಧಾರ್ಮಿಕ ನೀಚಸ್ವಾರ್ಥಪರಾಯಣರಾದದ್ದರಿಂದ ಅವರು ಧರ್ಮವಿಘಾತಕರಾಗುವರು (ಮಾಧವ. ೪೮೭). [ಧರ್ಮ + ವಿಘಾತಕ]

ಧರ್ಮವಿಚಾರ (ನಾ). ೧. ಧರ್ಮದ ವಿಷಯ,–ದೃಷ್ಟಿ : ಧರ್ಮವಿಚಾರದೊಳಂ ಜಿನಧರ್ಮಮೆ ಮಿಗಿಲೆಂದು ನಂಬಿ ಭಾಸ್ಕರದೇವಂ . . . ಸದ್ಧರ್ಮಕಥಾಳಾಪದಿಂದಮಿರ್ದು (ಧರ್ಮಾಮೃ. ೯-೧೦೩). ೨. ಧರ್ಮದ ವಿಷಯದಲ್ಲಿ ನಡೆಯುವ ಚರ್ಚೆ. [ಧರ್ಮ + ವಿಚಾರ]

ಧರ್ಮವಿಜಯ (ನಾ). ಧರ್ಮದಿಂದ ಗೆಲ್ಲುವವನು ಇದು . . . ಶ್ರೀಮದಜಿತಸೇನಭಟ್ಟಾರಕಚರಣಕಮಲಚಂಚರೀಕಂ ಧರ್ಮವಿಜಯ ಶ್ರೀಮಚ್ಚಾವುಂಡರಾಜವಿರಚಿತ ತ್ರಿಷಷ್ಟಿಲಕ್ಷಣಮಹಾಪುರಾಣದೊಳ್ ವೃಷ್ಣಿದಂತಪುರಾಣಂ (ಚಾವುಂಪು. ೧೫೯). [ಧರ್ಮ + ವಿಜಯ]

ಧರ್ಮವಿಜಯಿ (ನಾ). ಧರ್ಮವು ತನ್ನ ಕಡೆ ಇಲ್ಲವೆಂದು ತಿಳಿದರೆ ಸೋಲುವವನು ; ಅಹಿಂಸಾಮಾರ್ಗದಿಂದ ಗೆಲ್ಲಬಹುದಾದವನು : ಅರ್ಥವಿಜಯಿಯುಂ ಅಸುರವಿಜಯಿಯುಂ ಧರ್ಮವಿಜಯಿಯುಮೆಂಬ ದರಸುಗಳ್ ಮೂವರಪ್ಪರ್ . . . ಅವರೊಳುತ್ತಮಸ್ವಭಾವಮಪ್ಪರ್ ಧರ್ಮವಿಜಯಿಗಳ್ ಸಾಮಲಕ್ಷಣಮಪ್ಪುಪಾಯದಿಂ ಸಾಧ್ಯರ್ (ಚಾವುಂಪು. ೩೦೬). [ಸಂ.ಧರ್ಮವಿಜಯಿನ್]

ಧರ್ಮವಿನಾಶಿ (ನಾ). = ಧರ್ಮವಿಘಾತಕ : ಆ ಶಕುನಿ ಪೂರ್ವಾರ್ಜಿತದ ಡೊಳ್ಳಾಸದಲಿ ಡಾವರಿಸಿ ಧರ್ಮವಿನಾಶಿ ನಕುಲನ ಗೆಲಿದು ಬೊಬ್ಬಿಱಿದವ ನಿಪನ ಜಱಿದ (ಕುಮಾ.ಸ. ೦೪-೦೪). [ಸಂ. ಧರ್ಮವಿನಾಶಿನ್]

ಧರ್ಮವಿನೋದ (ನಾ). ಧರ್ಮದಲ್ಲಿ ಸಂತೋಷಗೊಳ್ಳುವವನು : ಎಸೆವ ಸಕವರ್ಷಮಂ ಮಾಣಿಸಿ ವಿಕ್ರಮವರ್ಷವೆಂದು ತನ್ನಯ ವೆಸರಂ ವಸುಮತಿ ನೆಗಳ್ದಿದ ಸಾಹಸಿಗಂ ಜಗದೇಕದಾನಿ ಧರ್ಮವಿನೋದ (ಸೌಇಇ. XX, ೧೩-೩೦ ; ?). [ಧರ್ಮ + ವಿನೋದ]

ಧರ್ಮವಿಪ್ಲವ (ನಾ). ಧರ್ಮವು ನಷ್ಟವಾಗಿ ಹೋಗುವಿಕೆ,–ಲೋಪವಾಗುವಿಕೆ : ಲೋಕದಲ್ಲಿ ಧರ್ಮವಿಪ್ಲವಪರಿಸ್ಥಿತಿಯುಂಟಾದಾಗ ಮಹಾತ್ಮರು ಅವತರಿಸಿ ಜನರಿಗೆ ಧರ್ಮಬೋಧೆಯನ್ನೂ ತತ್ವಬೋಧೆಯನ್ನೂ ಮಾಡುತ್ತಿದ್ದರು (ಕಾರದ. ೨೬೯). [ಧರ್ಮ + ವಿಪ್ಲವ]

ಧರ್ಮವಿರೋಧಿ (ನಾ). ಧರ್ಮವನ್ನು ದ್ವೇಷಿಸುವವನು : ಧರ್ಮವಿರೋಧಿಗಳು ದುಷ್ಕರ್ಮಪಯೋಧಿಗಳು ... ನಿರ್ಮೂಲಿಸುಗೆ ಗಜೇಂದ್ರುಂ ವೆರ್ಮೆಯು ಯಕ್ಷಂ (ವರ್ಧಪು. ೦-೮). [ಸಂ. ಧರ್ಮವಿರೋಧಿನ್]

ಧರ್ಮವಿವಾಹ (ನಾ). ಧರ್ಮಾರ್ಥವಾಗಿ ಮಾಡುವ ವಂದುವೆ : ಧರ್ಮಸ್ಥಳದಲ್ಲಿ ಈ ಸಲ ನಡೆದ ಧರ್ಮವಿವಾಹದ ಸಂದರ್ಭದಲ್ಲಿ ಅನೇಕ ಮದುವೆಗಳಾದುವು (ಕೂಡಿ). [ಧರ್ಮ + ವಿವಾಹ]

ಧರ್ಮವಿಹೀನ (ನಾ). ೧. ಧರ್ಮದಿಂದ ದೂರವಾದುದು ; ನೀತಿಯಿಂದ ಹೊರತಾದುದು : ಧರ್ಮವಿಹೀನವಾದ ಈಗಿನ ರಾಜಕೀಯ ಪರಿಸ್ಥಿತಿಯನ್ನು ನೋಡಿದರೆ . . . ಸುರಕ್ಷಿತತೆಯ ನಂಬಿಗೆಯು ಎಲ್ಲಿ ಉಳಿದದೆ (ಮಾಧವ. ೩೮೮). ೨. ಸದ್ಗುಣವಿಲ್ಲದವನು ; ಧರ್ಮಲಂಡ : ಸಕಳ ಧರ್ಮ[ಪಾತಾಂ. ಪುಣ್ಯ] ವಿಹೀನರುಗಳಂ ... ಅಲ್ಪಶೀಲರನೆಮ್ಮನುದ್ಧರಿಸಿ (ಲಸಪು. ೫೬-೪೪). [ಧರ್ಮ + ವಿಹೀನ

ಧರ್ಮವೀರ (ನಾ). ೧. ಧರ್ಮಕ್ಕಾಗಿ ಅಥವಾ ಯಾವುದೇ ಮಹೋದ್ದೇಶಸಾಧನೆಗಾಗಿ ಹಿಂಸೆ ಅಥವಾ ಸಾವಿಗೆ ಬಲಿಯಾಗುವವನು ; ಹುತಾತ್ಮ : ಆರ್ಕಿಮಿಡಿಸನಿಗೆ ಧರ್ಮವೀರನ (Martyr) ಸಾವು ಬಂತು (ಶಿಲ್ಪಿನಾ. ೯೯) ; ಧರ್ಮವೀರರ ತ್ಯಾಗಶೀಲವೂ ಸನ್ಯಾಸಿಗಳ ಆನಂದವೂ ವ್ರತಶೀಲರ ಸಂಯಮಶಕ್ತಿಯೂ ಆದ ಯೇಸುಭಗವಾನ್ ನಮ್ಮನ್ನುದ್ಧರಿಸು (ಪುನರು. ೧೭೮). ೨. [ಕಾವ್ಯಮೀಮಾ] ವೀರರಸದ ಒಂದು ಪ್ರಭೇದ; ದಾನವೀರ, ಧರ್ಮವೀರ, ದಯಾವೀರ ಮತ್ತು ಯುದ್ಧವೀರ ಎಂಬ ನಾಲ್ಕು ಬಗೆಯ ರಸಗಳಲ್ಲಿ ಒಂದು: ಭರತನು ದಾನವೀರ, ಧರ್ಮವೀರ, ಯುದ್ಧವೀರ–ಎಂದು ವೀರರಸವನ್ನು ಮೂರು ಪ್ರಕಾರವಾಗಿ ವಿಂಗಡಿಸುತ್ತಾನೆ ; ದಯಾವೀರವನ್ನು ಇವುಗಳ ಜೊತೆಗೆ ಕೆಲವರು ಸೇರಿಸುತ್ತಾರೆ . . . ಧರ್ಮರಾಯನಲ್ಲಿ ಕಾಣಬರತಕ್ಕದ್ದು ಧರ್ಮವೀರವೆನ್ನುತ್ತಾರೆ (ಕಾರಮೀ. ೪೦೧). ೩. ಧರ್ಮವೀರ ಎಂಬ ರಸಕ್ಕೆ ಆಧಾರನಾದ ನಾಯಕ. [ಧರ್ಮ + ವೀರ]

ಧರ್ಮವೂರ (ನಾ). ಒಂದು ಸ್ಥಳದ ಹೆಸರು ; ℙ ಕನ್ನಡದ ಆದಿಕವಿ ಪಂಪನು ನೆಲಸಿದ್ದ ಊರು : ಹರಿಗನ ಧರ್ಮಭಂಡಾರದಂತೆ ಸಾರಮಾದುದು ಬಿಟ್ಟಗ್ರಹಾರಮಾ ಬಚ್ಚೆಸಾಸಿರದೊಳಂ ಧರ್ಮವೂರಂ (ಪಂಪಭಾ. ೦೪-೫೦) ; ಜಿನವಲ್ಲಭಂ ಸಬ್ಬನಾಡ ನಟ್ಟನಡುವಣ ಧರ್ಮವೂರಿಂದುತ್ತರದಿಗ್ಭಾಗದ ವೃಷಭಗಿರಿಯೆಂಬನಾದಿಸಂಸಿದ್ಧತೀರ್ಥದ ದಕ್ಷಿಣದಿಶಾಭಾಗದೀಸಿದ್ಧಶಿಲೆಯೊಳ್ತಮ್ಮ ಕುಲದೈವಮಾದ್ಯನ್ತ ಜಿನಬಿಂಬಂಗಳುಮಂ . . . ಮಾಡಿಸಿದಂ . . . ಬರೆದುದೆ ತಾಂಬ್ರಶಾಸನಮದೇಯಮೆ ಧರ್ಮವೂರಂ ನೆಗಟ್ತಿವೆತ್ರಿಂಗನ ಕೊಟ್ಟುದೇ ನೆಗಟ್ದ ಪಂಪನ ಪೆತ್ತುದೆ ಪೇಳ್ಮಿಮೆನ್ದು ನೀಮ್ಮರುಳಿ ಪಲರ್ಮ್ಮೆಯುಂ ಪಲಬರಂ ಬೆಸಗೊಳ್ಳದೆ ಪೋಗಿ ನೋಡ ಸುನ್ದರವೃಷಭಾಚಲೋನ್ನತಶಿಳಾತಳದೊಳ್ಬರೆದಕ್ಕರಂಗಳಂ (ಕನ್ನನು. ೩೨-೦೦-೬,೯). [< ಧರ್ಮವೂರ]

ಧರ್ಮವೃಂದ (ನಾ). ಕರ್ತವ್ಯಗಳ ಸಮೂಹ : ಒಂದರೊಡನೊಂದಾಗಿ ಬಂದು ನಿಂದಿಹ ಧರ್ಮವೃಂದದಲಿ ಪೂರ್ಣಮನ ಹೊಂದಿಸುತಲಿ (ಕಎಪು. ೩೨-೨). [ಧರ್ಮ + ವೃಂದ]

ಧರ್ಮವೃತ್ತಿ (ನಾ). ಧರ್ಮದ ಕೆಲಸ ; ಧಾರ್ಮಿಕಕಾರ್ಯ : ಶ್ರೀಯಂ ಕೂರಿಸಿ ತಾಳ್ದಂ ಶ್ರೀಯೋನಿಧಿ ಧರ್ಮವೃತ್ತಿಯಂ ವೆರ್ಚಿಸುತುಂ (ಚಾಧಪು. ೦೨-೦). [ಧರ್ಮ + ವೃತ್ತಿ]

ಧರ್ಮವೃದ್ಧಿ (ನಾ) ಪುಣ್ಯದ ಏಳಿಗೆ,–ಹೆಚ್ಚಳ: ನಿಟಲನ್ಯಸ್ತಕರಾಬ್ಜಸಂಪುಟ ವಿನಮ್ರಾತ್ಮಾಂಗರಂ ಭಕ್ತಿಲಂಪಟರಂ ತನ್ಮನಿ ಧರ್ಮವೃದ್ಧಿ ನಿವಾಗೆಂದಾನಾಲ್ವರಂತಸ್ತವಃಪಟಮಂ ಪಿಂಗಿಸಿ (ಶಾಂತಿಪು. ೬-೯). [ಧರ್ಮ+ವೃದ್ಧಿ]

ಧರ್ಮವೃಕ್ಷ (ನಾ). ಧರ್ಮಾರ್ಥವಾಗಿ ನಟ್ಟ ಮರ,–ಸಾಲುಮರ : ಒಡೆದು ತಟಾಕವ ಧರ್ಮವೃಕ್ಷಗಳನು ಕಡಿದು . . . ಕಣ್ಗೆಡಿಸಿದರೇವೇಳ್ವೆನೆದನು (ಕಂನವಿ. ೪-೦೪). [ಧರ್ಮ + ವೃಕ್ಷ]

ಧರ್ಮವೊಳಲ್ 'ಧರ್ಮವೊಟಲ್' ನೋ.

ಧರ್ಮವೊಟಲ್, ಧರ್ಮವೊಳಲ್ (ನಾ). ಒಂದು ಊರಿನ ಹೆಸರು ; ℙ ಈಗಿನ ಧಾರವಾಡಜಿಲ್ಲೆಯ ಡಂಬಳ : ಪರಮಮಾಹೇಶ್ವರಿ ಧರ್ಮವೊಟಲನಾಳುತ್ತಿರೆ ಅಲ್ಲಿ ಕೊಟ್ಟುದು ಪದಿಕ್ಕಣ್ಣುಗ ಮಣ್ಣು (ಎಇ. XII, ಶಿಡಾ. ೨೪-೪೯ ; ಸು. 900) ; ಶ್ರೀಮತ್ ಬಾಚಯ್ಯಸೆಟ್ಟಿಯರಳಿಯಂ ಗೋತ್ರಪವಿತ್ರಂ ಬಿರಯ್ಯಸೆಟ್ಟಿಯರ್ ಧರ್ಮವೊಟಲ ನಗರ ಜನಾಳಯಕ್ಕೆ . . . ಕೊಟ್ಟ ಮೊಕ್ಕೆಯ ಪೊಸಪೊಂಗದ್ಯಾಣ ೩೫ (ಸೌಇಇ. XI-1, ೧೪-೭ ; 1058). **ಧರ್ಮವೊಳಲ್** : ಮಹಿವೋನ್ನತರಪ್ಪ ಶ್ರೀಮದ್ಧರ್ಮವೊಳಲ ಪದಿನಱುವರು(ವರ್) ಸೆಟ್ಟಿಗಳು ಮಹಾನಗರಮುಂ (ಮು)ವಿರ್ದ್ದು (ಇಆ. X, ೦೨೬-೦೫; 1095). [ಧರ್ಮ + ಪೊಟಲ್]

ಧರ್ಮವ್ಯಯ (ನಾ). ಧರ್ಮಕ್ಕಾಗಿ ಮಾಡುವ ಖರ್ಚಿನ ಹಣ : ತನ್ನ ಸಖನಂ ಧರಾಮರನನ್ನಯದಿಂ ಬರಿಸಿ ರುದ್ರದತ್ತಂಗಿತ್ತಂ ಮುನ್ನಿನ ಲೆಕ್ಕದ ಪೊನ್ನಂ ಪನ್ನೆರಡಬ್ದಕ್ಕೆ ತಕ್ಕ ಧರ್ಮವ್ಯಯಮಂ (ನೇಮಿಪು. ೩-೮೫).
[ಧರ್ಮ + ವ್ಯಯ]

ಧರ್ಮವ್ಯಯ, ಧರ್ಮಬ್ರಯ (ನಾ). ದಾನ, ಧರ್ಮಗಳಿಗಾಗಿ ಮಾಡುವ ವೆಚ್ಚ : ಗುಣಶಾಸನದಿನಾಳ್ವರ ಸತ್ರಕ್ಕೆ ಮತ್ತರ್ನ್ನೂಱು ಮನೆಯೆರಡು ಅನ್ತು ಧರ್ಮ್ಮವ್ಯಯಕ್ಕಂ ಉಪಬಿಯಕ್ಕಂ ಮತ್ತರ್ಮ್ಮೂನೂಱು (ಎಇ. XX, ೬-೩೦ : 1012). **ಧರ್ಮಬ್ರಯ** : ತವಗಂ ಮಹಾಜನಕ್ಕಂ ಪ್ರಜೆಗಂ ಮಾಡಿದ ವ್ಯವಸ್ಥೆಯುಂ ಧರ್ಮ್ಮಬ್ರಯದುಪಬಿಯದ ಮಾನ್ಯದ ಭೂಮಿಯ ನಿವೇಶನದ ಪ್ರಮಾಣಮೆನ್ತೆನೆ (ಎಇ. XX, ೬-೧೫ ; 1012) ; ಮಾನ್ಯದ ಸತ್ರದ ಧರ್ಮ್ಮಬ್ರಯದುಪಬಿಯದನ್ತನಿತುವೆಡೆಯ ಕೆಯ್ಮತ್ತರೈನೂಱುಮ ನಲ್ಲಿಯಲ್ಲಿಯ ನಿವೇಶನಂಗಳುವನೆನಿತು ದುಷ್ಕಾಲವಾದಡಂ ಮಹಾಜನಂ ಕಾದೂಡುವರ್ (ಎಇ. XX, ೬-೪೪ ; 1012). [ಧರ್ಮ + ವ್ಯಯ]

ಧರ್ಮವ್ಯುಚ್ಛೇದ (ನಾ). ಧರ್ಮದ ನಾಶ,–ಲಯ : ಅಂತು ಧರ್ಮ ವ್ಯುಚ್ಛೇದಮಾದ ಕಾಲದೊಳ್ (ಅನಂಪು. ೪-೧೩೫ ವ). [ಧರ್ಮ+ವ್ಯುಚ್ಛೇದ]

ಧರ್ಮಶಪಥ (ನಾ). ಧರ್ಮದೃಷ್ಟಿಯಿಂದ ಮಾಡಿದ ಪ್ರತಿಜ್ಞೆ : ನಾನು ಸತಿಯಾಗಿ ಇದುದ್ದು ನಿಜವಾಗಿದ್ದರೆ, ಭಗವಂತನೆ ಸಾಕ್ಷಿಯಾಗಿರುವ, ನೀನು ಸಹಸಾ ಎಂದೆಂದಿಗೂ ನಿನ್ನ ಧರ್ಮಶಪಥ ಉಲ್ಲಂಘಿಸಲಾರಿ (ಇಪ್ಪಕ. ೨೨೩). [ಧರ್ಮ + ಶಪಥ]

ಧರ್ಮಶರಣ (ನಾ). ಧರ್ಮವೇ ಆಶ್ರಯವಾಗಿರುವವನು; ಧರ್ಮವನ್ನು ಮೊರೆಹೊಕ್ಕವನು,–ನಂಬಿದವನು : ಯಾರು ಆತ್ಮದೀಪರಾಗಿ . . . ಧರ್ಮದೀಪರಾಗಿ, ಧರ್ಮಶರಣರಾಗಿ, ಅನನ್ಯಶರಣರಾಗಿ ವಿಹರಿಸುವರೋ ಆ ಶಿಕ್ಷಾಕಾಮರು, ನನ್ನ ಭಿಕ್ಷುಗಳಲ್ಲಿ ಅತ್ಯಗ್ರರಾಗುವರು (ಭಾರದ. ೨೦೧).
[ಧರ್ಮ + ಶರಣ]

ಧರ್ಮಶಾಲೆ (ನಾ). ೧. ಪ್ರವಾಸಿಗಳು ಇಳಿದುಕೊಳ್ಳುವುದಕ್ಕಾಗಿ ಏರ್ಪಡಿಸಿರುವ ಮನೆ ; ಧರ್ಮಛತ್ರ : ತಿರುಕನೋರ್ವನೂರ ಮುಂದೆ ಮುಱುಕು ಧರ್ಮಶಾಲೆಯಲ್ಲಿ ಒಱಗಿ ಇರಲು ಅಲ್ಲೆ ಒಂದು ಕನಸ ಕಂಡನು (ಕನಕ. ೨೦೩-೧) ; ನಿನಗೆ ಅರಮನೆ ಯಾವುದು, ಧರ್ಮಶಾಲೆ ಯಾವುದು ಇಷ್ಟು ಸಹ ತಿಳಿಯುವುದಿಲ್ಲವೊ ? (ಮುಂಬಯಿ. ೪-೧೫೨). ೨. ಬಡವರ ವಸತಿಗಾಗಿ ಏರ್ಪಡಿಸಿದ ಆಶ್ರಯ : ಹಳ್ಳಿಹಳ್ಳಿಗಳಿಂದ ಬಂದ ನಿರ್ಗತಿಕರ ಬಿಡಾರವಾಗಿತ್ತು ಈ ಪಟ್ಟಣದ ಧರ್ಮಶಾಲೆ (ಮಹಾಮ. ೧೩೧).
[ಸಂ. ಧರ್ಮಶಾಲಾ]

ಧರ್ಮಶಾಸನ (ನಾ). ೧. = ಧರ್ಮಸಾಧನ ೨ : ಇಂದರಸಪೊಡೆಯರು ತಮಗೆ ಪುಣ್ಯಾರ್ಥವಾಗಿ ಬರಸಿದ ಧರ್ಮ್ಮಶಾಸನದ ಕ್ರಮವೆಂತೆಂದರೆ (ಎಕ. VIII, ಸಾಗರ. ೧೬೪-೧೮ ; 1498) ; ನೀವು ನಿಮ್ಮ ಶಿಷ್ಯಪಾರಂಪರ್ಯ ವಾಗಿ ಅಧಿಕ್ರಯದಾನ ಪರಿವರ್ತನೆಗೆ ಸಲ್ಲುವ ಹಾಗೆ ಅನುಭವಿಸಿಕೊಂಡು ಬರುಲುಳ್ಳವರು ಯಂದು ಕೊಟ್ಟ ಭೂದಾನ ಧರ್ಮಶಾಸನ (ಎಕ. XIV, ಮೈಸೂರು. ೧೧೪-೬೮ ; 1663). ೨. ಧರ್ಮದಿಂದ ಆಳುವವನು : ಕಟ್ಟುಕೊಡಗೆ, ಧರ್ಮಶಾಸನ ಎಂಬ ಬಿರುದುಗಳನ್ನು ಉತ್ತಮ ಜನರಿಗೆ ಕೊಡುವಲ್ಲಿ ಇವರು ನಾಡು ಹಾಗೂ ಗಾವುಡರ ಪ್ರತಿನಿಧಿಗಳಾದ ಅಧಿಕಾರಿ ಗಳೊಂದಿಗೆ ಸಹಕರಿಸುತ್ತಿದ್ದರು (ತುಳುನಾ. ೧೦೩). [ಧರ್ಮ + ಶಾಸನ]

ಧರ್ಮಶಾಸ್ತ್ರ (ನಾ). ಧರ್ಮಾಧರ್ಮಗಳನ್ನು ಕುರಿತು ಜನತೆಗೆ ಅಪ್ಪಣೆ ಕೊಡಿಸುವವನು ; ಧರ್ಮವನ್ನು ವಿಧಿಸುವವನು,–ಶಾಸನ ಮಾಡು ವವನು : ಕವಿ ಧರ್ಮಶಾಸ್ತ್ರಪೆಂಬದಟವೆಸರ್ಗೆ ಸಿಲ್ಕದೆ ಜನಂ ತನಗೊಪ್ಪುತೆ ಮರ್ಚಿ ನಚ್ಚಿ ಮೋದದೆ ಪುದುವಾಳ್ವವೋಲ್ ವಿಧಿಸುವಂ ಬಿಸವಂದಮೆ ಲೋಕಶಾಸನಂ (ಸಂಸಪ. ೩೯-೧೦). [ಧರ್ಮ + ಶಾಸ್ತ್ರ]

ಧರ್ಮಶಾಸ್ತ್ರ (ನಾ). ೧. ಸದಾಚರಣೆಯ ವಿಧಿ, ನಿಯಮಗಳನ್ನು ನಿರೂಪಿಸುವ ಶಾಸ್ತ್ರ; ಮನು, ಪರಾಶರ ಮೊದಲಾದವರಿಂದ ರಚಿತ ವಾದ ಸ್ಮೃತಿ : ಎರಡ(ಎಂಟ)ನೆಯ ದೀಕ್ಷಾನ್ವಯಕ್ರಿಯೆಯೊಳ್ ಅವತಾರ ವೆಂಬುದು ತನ್ನನಾಶ್ರಯಿಸಿದ ಭವ್ಯಜನಕ್ಕೆ ವೇದಮುಂ ಪುರಾಣಮುಂ ಧರ್ಮಶಾಸ್ತ್ರಮುಂ ಚಾರಿತ್ರಮುಂ . . . ಎಂಬ ದಶವಿಧದೊಳಲ್ಲಿ ಮೊದಲ ವೇದಮೆಂಬುದು (ಚಾವುಂಪು. ೨೨೧) ; ಬಣ್ಣಸರಂಗೊಳ್ವಂತೆ ಧರ್ಮಶಾಸ್ತ್ರಂ ಪೇಳ್ದರ್ (ಸಮಪ. ೩-೭೬) ; ಹಿರಿಯರಿದೆ ಸಾಮಾಜಿಕರು ಸಚ್ಚರಿತರಿದೆಲಾ ಸ್ತ್ರೀಮತವನುತ್ತರಿಸಲಾಗದೆ ಧರ್ಮಶಾಸ್ತ್ರದೊಳಂದಿಂದುಮುಖಿ (ಕುಮಾಸ. ೧೪-೮೪) ; ಈ ದಿವ್ಯಸಂದೇಶ ಉಪನಿಷತ್ತು, ಗೀತಾ, ಬ್ರಹ್ಮಸೂತ್ರ, ಇತಿಹಾಸ, ಪುರಾಣ, ಧರ್ಮಶಾಸ್ತ್ರ . . . ಇತ್ಯಾದಿ ನಾನಾ ಪ್ರಣಾಳಿಕೆಗಳ ಮೂಲಕ . . . ತನ್ನ ಪ್ರಭಾವವನ್ನು ಬೀರಿದೆ (ಪುಸ್ಕಾರ. ೧೬ ಟೀಕೆ). ೨. ನ್ಯಾಯಶಾಸ್ತ್ರ : ಅಕಟೆಮ್ಮ ಧರ್ಮಶಾಸ್ತ್ರದಿ ಮರಣದಂಡಕೆಡೆಯಿರೆ, ಪರರ ಬಾಗಿಲಿಗೆ ನೀತಿಭಿಕ್ಷೆಗೆ ಬರುವೆವೇನಿಂತು (ಗೊಲ್ಕೂಥಾ. ೬-೧೬೫).
[ಧರ್ಮ + ಶಾಸ್ತ್ರ]

ಧರ್ಮಶಾಸ್ತ್ರಜ್ಞ (ನಾ). ಧರ್ಮಶಾಸ್ತ್ರವನ್ನು ತಿಳಿದವನು. [ಸಂ]

ಧರ್ಮಶೀಲ (ನಾ). ಸದಾಚಾರಸಂಪನ್ನ ; ಧರ್ಮಿಷ್ಠ : ಧರ್ಮಶೀಲರಿ ಗಳಪದೆತ್ತಣ ಧರ್ಮವರ್ತಿಗಳದೆಲ್ಲ ಮಾಡಿದ ಕರ್ಮ ನಿಷ್ಫಲವೆಂಬ ನೀತಿ ಯದಿಲ್ಲಿ ಕಂಡುದಲ (ಶಾಶಿರಾ. ೧೯-೬೩) ; ಧರ್ಮಶೀಲರೊಡನೆ ಒತ್ತಾಯದ ಪ್ರಯತ್ನದಿಂದ ವ್ಯವಹರಿಸ ಹೋಗುವದು . . . ತಮ್ಮ ರಾಷ್ಟ್ರೋದ್ಧಾರತೆ ಯನ್ನು ಮುಂದೆ ಮಾಡಿದಂತಾಗುವದಿಲ್ಲವೊ? (ಮಾಧವ. ೪೬೫). [ಸಂ.]

ಧರ್ಮಶೀಲೆ (ನಾ). ಒಳ್ಳೆಯ ನಡತೆಯುಳ್ಳವಳು ; ಗುಣವಂತೆ ; ಧರ್ಮಿಷ್ಠೆ. [ಸಂ. ಧರ್ಮಶೀಲಾ]

ಧರ್ಮಶ್ರದ್ಧೆ (ನಾ). ಧರ್ಮದಲ್ಲಿ ಆಸಕ್ತಿ,–ನಿಷ್ಠೆ : ಭಾರತೀಯರ ಜೀವನ ದಲ್ಲಿ ಧರ್ಮಶ್ರದ್ಧೆ ಜೀವನಾದ್ಯಂತವನ್ನೂ ಸಂಪೂರ್ಣವಾಗಿ ಆವರಿಸಿದೆ (ಭಾರದ. ೩೨೬); ಅವರ ಧರ್ಮಶ್ರದ್ಧೆಯ ದೃಢತೆಯು ಬಲು ಬೆಲೆಯುಳ್ಳದ್ದು (ಮಾಧವ. ೩೭೭). [ಧರ್ಮ + ಶ್ರದ್ಧೆ]

ಧರ್ಮಶ್ರವಣ (ನಾ). ೧. ಧಾರ್ಮಿಕ ತತ್ತ್ವಗಳ ನಿರೂಪಣವನ್ನು ಕೇಳು ವುದು : ಧರ್ಮಶ್ರವಣಾನಂತರಮಿಂತೆಂದು ಬಿನ್ನಪಂಗೆಯ್ದರ್ (ಶಾಂತಿಪು. ೭-೬೬ ವ) ; ವಿತತಧರ್ಮಶ್ರವಣವಂತ್ಯಕಾಲದೊಳಗಾಶ್ರಿತ ಪರ್ವವಿಭವ ವೇಣುಗಳೊಳು . . . ಅಲ್ಲದಾ ನಾಡೊಳಿಲ್ಲೆಂದ ವಿಶ್ವಾಮಿತ್ರನು (ಹಜಕಾ. ೨-೧೧); ಧರ್ಮಶ್ರವಣಾನಂತರಮೊರ್ಮೆಯೆ ತಮ್ಮಿರ್ವರಾಯುರವಸಾನಮಂ . . . ಮುನಿಗಳಂ ಬೆಸಗೊಂಡರ್ (ಶಾಂತೀಶ್ವ. ೭-೪೩) ; ಅವಧರಿಸು ಮಾರ ವೈರಿ ಧರ್ಮಶ್ರವಣಕೋಸುಗ ಬಾರೆವಾವ್ ಪಾರ್ಥಿವರ ಪಂಥದ ಕದನ ವಿದ್ಯಾಕಾಮವೆಮಗಾಯ್ತು (ಕುಮಾಸಂ. ೧-೩೦) ; ಅವನಿಪತಿ ಚಿತ್ತೈಸು ಧರ್ಮಶ್ರವಣಮುಖದಲಿ . . . ಸುಪೇಣಾದಿಗಳು ಸತಿಸಹಜಾತಸುತರು ಗಳ ತವಿಸುವುದು ತಾ ಧರ್ಮವಲ್ಲೆಂದವರು ನುಡಿಯಲು (ತೊರಾ. ೪-೨-೩೦) ; ಧರ್ಮಶ್ರವಣವಿದೇತಕೆ ಮೂರ್ಖಗೆ (ಪುರಂದ. ೨-೧೭೬ ಪಲ್ಲವಿ). ೨. ಧಾರ್ಮಿಕ ತತ್ತ್ವಗಳ ಬಗೆಗೆ ಮಾಡುವ ವ್ಯಾಖ್ಯಾನ,–ಪ್ರವಚನ: ಎನಗುಪದಿರ್ಕುಮೆ ನಿನ್ನ ಪೇಳ್ದ ಧರ್ಮಶ್ರವಣಂ (ಪಂಪಭಾ. ೯-೪೫) ; ಶ್ರವಣಾಮೃತಮೆನೆ ಧರ್ಮಶ್ರವಣಂ ಮೃದುಮಧುರರುಚಿರಗಂಭೀರರವಂ ಶ್ರವಣದಿನಾಚಾಸಿದು ವಿವಿಧವಿನೇಯಮನಿಂತು ಶಾಂತಿಜಿನನಪವೃಜಿನಂ (ಶಾಂತಿಪು. ೧೨-೨೩) ; ಹೈಂಗರ ಸಭಾಮಂಟ [ಪದಲು ವೈ]ಗಿನ ಧರ್ಮ್ಮ ಶ್ರವಣಕ್ಕೂ ತಮ್ಮ ವಕ್ಷಣಶಾಲೆಯಲು ತರ್ಕಶಾಸ್ತ್ರಮಂ ವ್ಯಾಖ್ಯಾನಮಾಡು ವಂತಾಗಿ ಬಿಟ್ಟ ಗದ್ಯಾಣ ೩೦ (ಸೌಇಇ. XI-11, ೧೫೯-೩೨ ; 1111) ; ದುಃಖ ದೊಳ್ ಸೈರಿಸುವುದೆಂದು ನಿಮ್ಮ ಪೇಳ್ದ ಧರ್ಮಶ್ರವಣಮೆನಗೆಯೊ ನಿಮಗವ ಕ್ಕುಮೊ ಪೆ ಟ್ಟೊಂ (ಜೀವಸಂ. ೨೨-೪೦ ವ). [ಧರ್ಮ + ಶ್ರವಣ]

ಧರ್ಮಶ್ರವಣಂಗೆಯ್ (ಕ್ರ). ಧರ್ಮೋಪದೇಶವನ್ನು ಮಾಡು; ಧಾರ್ಮಿಕ ತತ್ತ್ವಗಳನ್ನು ನಿರೂಪಿಸು: ನೀಂ ತಪ್ಪದೆ ನುಡಿಯೆಂದು ಧರ್ಮಾಧಿಕರಣಂ ಧರ್ಮಶ್ರವಣಂಗೆಯ್ದುಸಿರದಿರ್ಪುದುಂ(ಪಂಚತಂ. ೧೭೬-೧೯). [ಧರ್ಮಶ್ರವಣ + ಕೆಯ್$_1$]

ಧರ್ಮಶ್ರವಣಂಗೆಯ್ಸು (ಕ್ರ). ಧಾರ್ಮಿಕ ತತ್ತ್ವಗಳನ್ನು ಕೇಳುವಂತೆ ಮಾಡು: ದೇವರುಳ್ಕೊಡೆ ಧಾರಿಣೀಶ್ವರನ ಮುಂಗಡೆ ತೋಱಲಾಗದೆ ತೋರ್ಪೆನೆಂಬವನುರ್ವಿಯೊಳ್ ಎಂದು ಧರ್ಮಶ್ರವಣಂಗೆಯ್ಸುತಿರ್ಪಿನಂ (ಧರ್ಮಾಮೃ. ೫-೩೪). [ಧರ್ಮಶ್ರವಣ + ಕೆಯ್ಸು]

ಧರ್ಮಸಂಕಟ (ನಾ). ಪರಸ್ಪರ ವಿರುದ್ಧವಾದ ಎರಡು ಬಗೆಯ ಕರ್ತವ್ಯಗಳಲ್ಲಿ ಯಾವುದನ್ನು ಮಾಡಬೇಕು ಎಂಬುದು ನಿಶ್ಚಿತವಾಗಿ ತಿಳಿಯದೆ ಉಂಟಾಗುವ ಪೇಚಿನ ಪರಿಸ್ಥಿತಿ; ಇಕ್ಕಟ್ಟಿನ ಪ್ರಸಂಗ; ಉಭಯ ಸಂಕಟ: 'ಧರ್ಮಸಂಕಟ' ಎಂದರೆ ಒಂದಕ್ಕೊಂದು ವಿರೋಧವಾದ ಕರ್ತವ್ಯಗಳಲ್ಲಿ ಯಾವುದನ್ನು ಮಾಡುವುದು ಎಂಬುದು ನಿಶ್ಚಯವಾಗಿ ತಿಳಿಯದೆ ಭ್ರಾಂತಿಯಾಗುವ ಸ್ಥಿತಿ (ವ್ಯಾಸಜಿ. ೩೦೯); ಇಂದ್ರ ಮತ್ತು ಅಗ್ನಿಯು ಶಿಬಿಯ ಮನೋದಾರ್ಢ್ಯವನ್ನು ಪರೀಕ್ಷಿಸುವುದಕ್ಕೋಸ್ಕರ ಅವನಿಗೊಂದು ಧರ್ಮಸಂಕಟವನ್ನು ತಂದಿಡುತ್ತಾರೆ (ಭಾರದ. ೧೦೩): ಭಾವನೊಡನೆ ಮಾತನಾಡದೆ ಈ ಧರ್ಮಸಂಕಟ ಬಗೆಹರಿಯುವಂತಿಲ್ಲ (ಪಾತ್ಕಲ್ಯ. ೩೫೮); ಅವನು ಎದುರಿಸಬೇಕಾಗಿ ಬಂದ ದೊಡ್ಡ ಧರ್ಮಸಂಕಟ . . . ಪ್ರಮಿತ್ಯೂಸನ್ನೆ ಪರ್ವತಾರಣ್ಯದ ಹೆಬ್ಬಂಡೆಗೆ ಬಂಧಿಸಿ ಬಿಸಿಯಬೇಕಾಗಿ ಬಂದದ್ದು (ಲಕ್ಷ್ಮೀಪ. XLVI, ೬೧೫). [ಧರ್ಮ + ಸಂಕಟ]

ಧರ್ಮಸಂತತಿ (ನಾ). ೧. ಧರ್ಮಪತ್ನಿಯಿಂದ ಪಡೆದ ಸಂತಾನ: ಧರ್ಮಸಂತತಿನಿಮಿತ್ತಂ ಧರ್ಮಪತ್ನೀಪರಿಗ್ರಹಮಂ ಕೈಕೊಳವೇಟ್ಪುದು (ಪುಷ್ಪಪು. ೧೩-೯೫); ಸಹಜಂ ಮುನ್ನಮೆ ದೇವ ನಿನ್ನ ಮನದೊಳ್ ವೈರಾಗ್ಯಮುಂಟಾದೊಡಂ ಮಹಿಶಂ [ಯಂ] ರಕ್ಷಿಪ ಧರ್ಮಸಂತತಿ ನಿಮಿತ್ತಂ ರಾಜ್ಯಮಂ ತಾಳ್ದಿ ನಿಸ್ಪೃಹನಾಗಿರ್ಪವೊಲಿರ್ದನಿನ್ನೆವರಂ (ಪುಷ್ಪಪು. ೧೩-೬೫). ೨. ಧಾರ್ಮಿಕವಾಗಿ ಮಗನಂತಿರುವವನು. [ಧರ್ಮ + ಸಂತತಿ]

ಧರ್ಮಸಂತಾನ (ನಾ). ೧.=ಧರ್ಮಸಂತತಿ ೧. ೨. ಒಂದೇ ಧರ್ಮವನ್ನು ನಂಬಿರುವ ಜನರ ಗುಂಪು ಮತ್ತು ಆ ಗುಂಪಿಗೆ ಸೇರಿದವನು ಸೂಳೆಗೆ ಹುಟ್ಟಿದ ಕೂಸಿನಂತೆ ಅರನಾದಡೆಯೂ ಅಯ್ಯಾ ಅಯ್ಯಾ ಎನಲಾಜಿ ಚೆನ್ನಯ್ಯನೆಮ್ಮಯ್ಯನು ಚೆನ್ನಯ್ಯನ ಮಗ ನಾನು ಕೂಡಲ ಸಂಗನ ಮಹಾಮನೆಯೊಳು ಧರ್ಮಸಂತಾನ ಭಂಡಾರಿ ಬಸವಣ್ಣನು (ಬಸವ. ೪೧೬). [ಧರ್ಮ + ಸಂತಾನ]

ಧರ್ಮಸಂತೆ, ಧರ್ಮಸಂಥೆ (ನಾ).=ಧರ್ಮಸಂಸ್ಥೆ: ಎಲ್ಲರಂ ಕುಳ್ಳಿರಿಸಿಯೆ ಕೇಳ್ದ [ಧ]ರ್ಮ್ಯಸಂಥೆಯನಿಸಿಯೆ ಮಾಯ್ದೇವರಸಂ ಮಾಡಿದ ಧ(ಂ)ರ್ಮ್ಯಂ ಧರೆಯೊಳಗಿದು ಧರ್ಮ್ಯಸಂತೆಯಾಚಂದ್ರಾರ್ಕ್ಕಂ (ಸೌಇಇ. XX, ೧೭೫-೭೭ : 1190). **ಧರ್ಮಸಂಥೆ:** ಮಾಯಿದೇವ ದಣ್ಣನಾಯಕಂ ತಂಮಾಳ್ಕೆಯು ಮೂವತ್ತಾಱುಂ ಬಾಡದ ರಾಜಧಾನಿ ಬೀವಿನೂರಲು ಧರ್ಮದಾರವೆಯುಮಂ ಧರ್ಮ್ಯಸಂಥೆಯುಂ ಮಾಡಿ (ಸೌಇಇ. XX, ೧೭೫-೭೭ ; 1190). [< ಧರ್ಮಸಂಸ್ಥೆ]

ಧರ್ಮಸಂಥೆ 'ಧರ್ಮಸಂತೆ' ನೋ.

ಧರ್ಮಸಂದೇಶ (ನಾ). ಧರ್ಮದ ಬೋಧೆ: ಇತಿಹಾಸ ಪುರಾಣಗಳು, ಅತ್ಯುತ್ತಮ ಕಾವ್ಯಗಳು, ಶಿಲ್ಪಕಲೆಗಳು ಇವುಗಳ ಮೂಲಕ ಧರ್ಮಸಂದೇಶ ಸರ್ವತ್ರ ಪ್ರಸರಿಸುವಂತಾಯಿತು (ಶುಕ್ಸಾರ. ೧೦೭ ಬೀಠಿಕೆ). [ಧರ್ಮ + ಸಂದೇಶ]

ಧರ್ಮಸಂಸ್ಥಾಪನೆ (ನಾ). ಅಳಿದುಹೋಗುತ್ತಿರುವ ಧರ್ಮವನ್ನು ಪುನಃ ಪ್ರತಿಷ್ಠಿಸುವುದು,–ಸ್ಥಿರಗೊಳಿಸುವುದು: ವಿದ್ಯಾರಣ್ಯರನ್ನು ಹರಿಹರನು "ಧರ್ಮಸಂಸ್ಥಾಪನೆಗೆ ಹುಟ್ಟಿದ ಪರಂಜ್ಯೋತಿಯ ೀಪರ ಅವತಾರ"ವೆಂದೆ ಪ್ರಶಂಸಿಸಿದ್ದಾನೆ (ಶುಕ್ಸಾರ. ೧೧೧ ಬೀಠಿಕೆ). [ಧರ್ಮ + ಸಂಸ್ಥಾಪನೆ]

ಧರ್ಮಸಂಸ್ಥೆ (ನಾ). ಅಗತ್ಯವಿರುವ ದರಿದ್ರರಿಗೆ ಸಹಾಯ ಮಾಡುವ ಸಂಘ: ಬಡವರ ಹಿತಚಿಂತನೆಗಾಗಿ ಅನಾಥಾಲಯ, ಧರ್ಮಸಂಸ್ಥೆ, ಅಶಕ್ತ ಪೋಷಕಸಂಘ ಮುಂತಾದುವುಗಳನ್ನು ಸ್ಥಾಪಿಸಿರುತ್ತಾರೆ (ರೂಢಿ). [ಧರ್ಮ + ಸಂಸ್ಥೆ]

ಧರ್ಮಸಂಹಿತೆ (ನಾ). =ಧರ್ಮಶಾಸ್ತ್ರ ೧: ಶಿವಪುರಾಣದ ಧರ್ಮಸಂಹಿತೆಯೊಳಜಸುತಗೆ ಶಿವನು ವಿಷಮಂ ಧರಿಸಿ ಚಂದ್ರಧರನಾದುದಂ . . . ಪೇಳ್ದಪೆಂ (ಲಕಿಚಂ. ೧೩ ಸೂಚನೆ). [ಧರ್ಮ + ಸಂಹಿತೆ]

ಧರ್ಮಸಖಾಯಿ (ನಾ). ಧರ್ಮಕಾರ್ಯದಲ್ಲಿ ಸಹಾಯಕನಾದವನು,–ಜೊತೆಗಾರ: ತಂನ ಧರ್ಮ್ಮಸಖಾಯಿಯಪ್ಪ ತಣ್ಮಂತುಳದಾಸರಿಗೆ ಸಂತಾನಗಾಮಿಯಾಗಿ ಕೊಟ್ಟ ಪ್ರಸಾದ ಮಾನ ೧ (ಕ್ರಿಅರಿ. ೧೯೪೬, ೩೧-೩೨ : 1314). [ಧರ್ಮ + ಸಹಾಯಿ$_0$ (<ಸಹಾಯಿ)]

ಧರ್ಮಸತ್ರ (ನಾ). ಪ್ರಯಾಣಿಕರು ಮೊದಲಾದವರಿಗೆ ಪುಕ್ಕಟೆಯಾಗಿ ವಸತಿ, ಊಟಗಳನ್ನು ಒದಗಿಸಲಾಗುವ ಮನೆ; ಛತ್ರ: ಇದೇನು ಮನೆಯೋ ಧರ್ಮಸತ್ರವೋ? (ರೂಢಿ). [ಧರ್ಮ + ಸತ್ರ]

ಧರ್ಮಸಭೆ (ನಾ). ೧. ನ್ಯಾಯವನ್ನು ನಿರ್ಣಯಿಸುವುದಕ್ಕಾಗಿ ಸೇರುವ ಸಭೆ; ನ್ಯಾಯಾಸ್ಥಾನ. ೨. ಮತಸಂಬಂಧವಾದ ವಿಷಯುಗಳನ್ನು ಕ್ರಮಪಡಿಸುವುದಕ್ಕಾಗಿಯೂ ಆದೇಶಗಳನ್ನು ನೀಡುವುದಕ್ಕಾಗಿಯೂ ಸೇರುವ ಸಭೆ: ಪೂರ್ವಾಚಾರಪರಾಯಣರು ಆಗಿಂದಾಗ್ಗೆ ಧರ್ಮಸಭೆಗಳನ್ನು ನಡಸಿ, ಸದ್ಧರ್ಮದ ಸ್ವರೂಪವನ್ನು ಶೋಧಿಸಿ ಸ್ಥಿರಪಡಿಸಲು ಪ್ರಯತ್ನಿಸಿದರು (ಭಾರದ. ೩೨೬). ೩. [ಜೈನ] ಕೇವಲಜ್ಞಾನದೊರಕಿದ ಮೇಲೆ ತೀರ್ಥಂಕರನು ಧರ್ಮೋಪದೇಶ ಮಾಡುವ ಸಭೆ; ಸಮವಸರಣಮಂಟಪ: ಮಹಾವೀರನ ಧರ್ಮಸಭೆಯಲ್ಲಿ (ಸಮವಸರಣ) ಎಲ್ಲ ಜಾತಿಯ ಜನರೂ ಇರುತ್ತಿದ್ದರು (ಕ್ರಿನಪ. ೫೧). [ಧರ್ಮ + ಸಭೆ]

ಧರ್ಮಸಾಕ್ಷಿ (ನಾ). ಧರ್ಮದ ಪ್ರಮಾಣ,–ಸಾಕ್ಷಿ: ಸಾವಂತ ಮನ್ನೆಯ ಮಂಡಲೇಶ್ವರರು ಪೊಡವಿ ತಮ್ಮನಿತಱಲಿ ರಾವಣನಡಗಿರದವೋರಾಣೆ ಭಾರದ ಗಡಿಯ ಕೊಟ್ಟರು ಬಳಿಕ ತಮ್ಮಯ ಧರ್ಮಸಾಕ್ಷಿಯಲಿ (ತೊರಕ. ೪-೯-೩೨). [ಧರ್ಮ + ಸಾಕ್ಷಿ]

ಧರ್ಮಸಾಧನ (ನಾ). ೧. ಧರ್ಮವನ್ನು ಗಳಿಸುವಿಕೆ: ಪಾತ್ರಕ್ಕೆ ಧರ್ಮಸಾಧನಮಪ್ಪ ಧನಮಂ ಕುಡೆ ಕೊಟ್ಟಂಗಂ ಕೊಂಡಂಗಂ ಉಭಯಲೋಕದೊಳ್ ಹಿತಮಕ್ಕುಂ (ಜಾವುಂಪು. ೧೩೬) : ಅರ್ಥಸಾಧನ ಧರ್ಮಸಾಧನವರ್ಥ ಧರ್ಮದಲುಭಯಲೋಕಕನರ್ಥಸಾಧನ ಕಾಮವೆಂದನು ಮುನಿ ನೃಪಾಲಂಗೆ (ಕುವ್ಯಾಸ. ೧-೩೪) ; ಪಾರಮಾರ್ಥಿಕ ಧರ್ಮಸಾಧನಕ್ಕೆ ಐಹಿಕವ್ಯವಹಾರದ ತೃಪ್ತಿಯು ಬೇಕು (ಮಾಧವ. ೩೮೭). ೨. ಧರ್ಮಕಾರ್ಯವನ್ನು ನಡೆಸಿಕೊಂಡು ಹೋಗುವುದಕ್ಕಾಗಿ ಹಾಕಿಕೊಟ್ಟ ದತ್ತಿ; ಧರ್ಮಶಾಸನ: ಚವುಡಿಸೆಟ್ಟರಿಗೆ ಹೂವಿನ ಚಿನಯ್ಯನು ಕೊಟ ಧರ್ಮಸಾಧನದ ಸಂಬಂಧನನ್ನ ಕ್ಷೇತ್ರವು ಅಡಹಾಗಿಲು ನೀವು ಆ ಕ್ಷೇತ್ರವನು ಬಿಡಿಸಿ (ಎಕ. II (೩), ೩೫೮-೩: 1537); ಸ್ಥಾನಿಕ ಅಪಾಜಿ ಪೂಜೆಯನು ಸಮರ್ಪಿಸಿಕೊಂಡುಯಿರೆಂದು ಕೊಟ್ಟ ಧರ್ಮಸಾಧನ (ಎಕ. IX, ಹೊಸಕೋಟೆ. ೧-೧೪ : 1569). P ಧರ್ಮಸಾಧನಗಳು–ಅಹಿಂಸೆ, ಕ್ಷಮೆ, ಸತ್ಯ, ಅಲೋಭ, ಲಜ್ಜೆ, ಶ್ರದ್ಧೆ, ಇಂದ್ರಿಯನಿಗ್ರಹ, ದಾನ, ಯಜ್ಞ, ತಪ, ಧ್ಯಾನ. [ಧರ್ಮ + ಸಾಧನ]

ಧರ್ಮಸಾಮ್ರಾಜ್ಯ (ನಾ). ಧರ್ಮವೇ ಪ್ರಧಾನವಾಗಿರುವ ರಾಜ್ಯ.
[ಧರ್ಮ + ಸಾಮ್ರಾಜ್ಯ]

ಧರ್ಮಸಾರ (ನಾ). ಧರ್ಮದ ತಿರುಳು, – ಸತ್ತ್ವ : ನೀನು ಧರ್ಮಸಾರವನ್ನು ಬಲ್ಲವನು (ಭೀಷ್ಮಚ. ೨೦೯). [ಧರ್ಮ + ಸಾರ್ಯ]

ಧರ್ಮಸಾರತಿ (ನಾ). ಧರ್ಮವನ್ನು ನಡೆಸಿಕೊಂಡು ಹೋಗುವವನು : ಶ್ರೀಮದ್ಭೀಮರಸರ್ಸ್ವರ್ಗುಣಜನಸಂಸ್ತೂಯಮಾನ ಧರ್ಮ್ಮಸಾರತಿ ಚತುಸ್ಸಮಯಾಶ್ರಯ ಸಕಳಭುವನವಿಖ್ಯಾತಕೀರ್ತ್ತಿ (ಕಇಅ. ೮೫-೧೮-೧೪, 932). [<ಸಂ. ಧರ್ಮಸಾರಥಿ]

ಧರ್ಮಸಾವರ್ಣಿಕ (ನಾ). ಹದಿನಾಲ್ಕು ಮನುಗಳಲ್ಲಿ ಒಬ್ಬ ; ಹನ್ನೊಂದನೆಯ ಮನು : ಸಕಲಧರ್ಮಪದ್ಧತಿಪ್ರವರ್ತಕರಾಗಿ ಶಿವಪ್ರಸಾದದಿಂ ಲೋಕಾಧಿಪತ್ಯಂಗೈದು ಸ್ವಾಯಂಭುವ . . . ಧರ್ಮಸಾವರ್ಣಿಕ . . . ಇಂದ್ರಸಾವರ್ಣಿಕರೆಂಬ ಹದಿನಾಲ್ಕು ಮನುಗಳೊಳಗೆ(ವಿವೇಕ. ೨೦೪). [ಸಂ.]

ಧರ್ಮಸಿದ್ಧ (ನಾ). ಧರ್ಮಶಾಸ್ತ್ರವನ್ನು ಚೆನ್ನಾಗಿ ಬಲ್ಲವನು ; ಧರ್ಮಾಚರಣೆಯಲ್ಲಿ ಸಿದ್ಧಿಯನ್ನು ಪಡೆದವನು : ನೀನು ಧರ್ಮಸಿದ್ಧನಾಗಿ ಕಾಣುತ್ತೀಯೆ ; ನಿನಗೆ ತಿಳಿಯದ್ದೇ ಇಲ್ಲವೆಂದು ನನಗೆ ತೋರುತ್ತದೆ (ವಚಭಾ. ೧೫೭). [ಧರ್ಮ + ಸಿದ್ಧ]

ಧರ್ಮಸುತ (ನಾ).=ಧರ್ಮಪುತ್ರ ೨ : ಲಜ್ಜಾಭರದಿಂದಂ ತಲೆಯನೆಱಗಿದಂ ಧರ್ಮಸುತಂ (ಗದಾಯು. ೬-೩೯) ; ಧರ್ಮಮಯವೀ ಯಜ್ಞ ನೀನೇ ಧರ್ಮಸುತನೆಂದಿದ್ದೆವಿಲ್ಲಿ ವಿಕರ್ಮವಾಯಿತು (ಕುವ್ಯಾಸ. ೮೩೧) ; ಹಯಮಂ ಬಿಟ್ಟು ನೆಲದೆಱೆಯ ಧರ್ಮಸುತನಂ ಕಂಡು ಬದುಕುವುದು ಲೇಸು (ಜೈಮಿಭಾ. ೧೪-೯); ಧರ್ಮಸುತನಿಂದೆಯುಂ ಮಿಗೆ ಧಾರ್ಮಿಕನೆನಿಪವನ ಮೊಮ್ಮನಂದದೊಳೊಗೆದಂ . . . ಚಾಮರಾಜನಾದಿಬಿಡೌಜಂ (ಚಿಕವಿ. ೨-೬೨).
[ಧರ್ಮ + ಸುತ]

ಧರ್ಮಸೂಕ್ಷ್ಮ (ನಾ). ಧರ್ಮದ ರಹಸ್ಯ,–ಮರ್ಮ : ರಾಯ ಮುನ್ನವೆ ತನ್ನ ಸೋತಬುಜಾಯತಾಕ್ಷಿಯ ಬಳಿಕ ಸೋತರೆ ಧರ್ಮಸೂಕ್ಷ್ಮದಲಿ ರಾಯ ಸಭೆಯಲಿ ಹಿರಿಯರಱಿದದರಾಯತವನಱುಹಿದರೆ ಬಹೆನೆಂದಾ ಯುವತಿ ಬಿನ್ನಹ ಮಾಡಿದಳು (ಕುವ್ಯಾಸ. ೧೪-೫೮) ; ಧರ್ಮಸೂಕ್ಷ್ಮವನ್ನು ಅರಿಯದೆ ಯಾವ ಕಾರ್ಯವನ್ನೂ ಮಾಡಬಾರದು (ನೀತಿಚಿಂ. X, ೧೦) ; ಪಾಂಡವರೇ! ನೀವು ಹುಡುಗರು; ಧರ್ಮಸೂಕ್ಷ್ಮವನ್ನರಿಯಿರಿ (ವಚಭಾ. ೮೧).
[ಧರ್ಮ + ಸೂಕ್ಷ್ಮ]

ಧರ್ಮಸೂತ್ರ (ನಾ). ಸನಾತನ ಹಿಂದೂಜನಾಂಗದ ವರ್ಣಾಶ್ರಮಾಚಾರ, ರಾಜಧರ್ಮ ಮೊದಲಾದ ಆಚಾರ ವ್ಯವಹಾರಗಳನ್ನು ವಿಧಿಸುವ ಸೂತ್ರರೂಪವಾದ ಸ್ಮೃತಿಗ್ರಂಥ; P ಗೌತಮಧರ್ಮಸೂತ್ರ, ಬೋಧಾಯನಧರ್ಮಸೂತ್ರ, ಆಪಸ್ತಂಬಧರ್ಮಸೂತ್ರವೆಂಬ ಮೂರು ಧರ್ಮಸೂತ್ರಗ್ರಂಥಗಳು ಈಗ ಉಪಲಬ್ಧವಾಗಿವೆ. ಧರ್ಮಸೂತ್ರಗಳು ಆಚಾರವ್ಯವಹಾರಗಳನ್ನು ವಿಧಿಸುವಂತೆ, ಗೃಹ್ಯಸೂತ್ರಗಳು ಹಿಂದೂಜನಾಂಗದಲ್ಲಿ ಸಂಸಾರಿಗಳು ಅನುಸರಿಸಬೇಕಾದ ಪುಂಸವನ, ಸೀಮಂತ, ಜಾತಕರ್ಮ, ವಿವಾಹ, ಅಂತ್ಯೇಷ್ಟಿ ಮೊದಲಾದ ಸಂಸ್ಕಾರಗಳ ಕ್ರಮವನ್ನು ವಿಧಿಸುತ್ತವೆ. ಸ್ಮೃತಿಗಳು ಶ್ಲೋಕರೂಪವಾಗಿರುತ್ತವೆ. ಇವು ಸೂತ್ರರೂಪವಾಗಿವೆ : ಗೌತಮಧರ್ಮಸೂತ್ರ (೧-೨) ವಶಿಷ್ಠಧರ್ಮಸೂತ್ರಗಳಲ್ಲಿ "ಸ್ಮೃತಿಯು ಧರ್ಮದ ಆಧಾರ" ಎಂದು ಹೇಳಿದೆ (ಭಾರದ. ೫೦). [ಧರ್ಮ + ಸೂತ್ರ]

ಧರ್ಮಸೂತ್ರಕಾರ (ನಾ). ಧರ್ಮಸೂತ್ರಗಳನ್ನು ರಚಿಸಿದವನು : ಆಪಸ್ತಂಬಾದಿ ಧರ್ಮಸೂತ್ರಕಾರರು ಭರತಖಂಡದ ಸಮಗ್ರ ಸಾಮಾಜಿಕ ನೀತಿಯಲ್ಲಿ ಐಕ್ಯವನ್ನೂ ದಾರ್ಢ್ಯವನ್ನೂ ಉಂಟುಮಾಡಿದರು (ಋಕ್ಸಾರ. ೧೦೩ ಪೀಠಿಕೆ). [ಸಂ.]

ಧರ್ಮಸೆರೆ (ನಾ). ಮದುವೆಯಾಗುವುದು ಕಷ್ಟವಾಗಿರುವ ಹೆಣ್ಣಿನ ಸ್ಥಿತಿ ; ಕನ್ಯಾಸೆರೆ : ವಯಸ್ಸಿಗೆ ಬಂದಿರುವಳು. ಬ್ರಹ್ಮಲಿಖಿತವಿದ್ದರೆ ಈ ವರುಷ ಧರ್ಮಸೆರೆಯನ್ನು ಬಿಡಿಸಬೇಕೆಂದಿರುವೆ (ಜಯಂತ. ೨೭೫).

ಧರ್ಮಸೆರೆ ಬಿಡಿಸು=ಮದುವೆಯಾಗುವುದು ಕಷ್ಟವಾಗಿರುವ ಹೆಣ್ಣಿಗೆ ಮದುವೆ ಮಾಡಿಸು : ಅಂಗಹೀನ ಹುಡುಗಿಯರಿಗೆ ಮಂಗಳಸೂತ್ರ ಕಟ್ಟಿಸುವುದಕ್ಕೆ 'ಧರ್ಮಸೆರೆ ಬಿಡಿಸುವುದು' ಅಥವಾ 'ಕನ್ಯಾಸೆರೆ ಬಿಡಿಸುವುದು' ಎಂದು ಹೇಳುತ್ತಾರೆ (ಧರ್ಮಸೆ. ಮುನ್ನುಡಿ) ; ಲೀಲೀ ಲಗ್ನದಾಗ ಆಕೀದು ಧರ್ಮಸೆರೆ ಬಿಡಿಸಿದರಾತು (ಧರ್ಮಸೆ. ೮೮).
[ಧರ್ಮ + ಸೆರೆ$_2$ (<ಸೆಱೆ$_2$)]

ಧರ್ಮಸೇನ (ನಾ). ಒಬ್ಬಾತನ ಹೆಸರು : ಶ್ರೀಕಿತ್ತೂರಾ ವೆಳ್ಮಾದದಾ ಧರ್ಮ್ಮಸೇನ ಗುರವಡಿಗಳಾ ಶಿಷ್ಯರ್ (ಎಕ. II, ೨೪-೧ ; ಸು. 700).
[ಸಂ.]

ಧರ್ಮಸ್ತಂಭ (ನಾ). ಧರ್ಮಕಾರ್ಯಗಳ ವಿವರಗಳನ್ನು ಕೆತ್ತಿರುವ ಕಂಭ : ಶ್ರೀಮಕುಟೇಶ್ವರದೇವಸ್ಥಾನದ ಮುಂದೆ ಧರ್ಮಸ್ತಂಭವನ್ನು ಊರಿದನು (ಕರ್ಣಾಅ. ೫೫). [ಧರ್ಮ + ಸ್ತಂಭ]

ಧರ್ಮಸ್ಥಲ, ಧರ್ಮಸ್ಥಳ (ನಾ). ೧. ಧರ್ಮದ ನೆಲೆ ; ಧರ್ಮಕ್ಕೆ ಆಶ್ರಯವಾದ ಸ್ಥಿತಿ. ಧರ್ಮಸ್ಥಳ : ೧. ಈ ಶಾಸನಮರ್ಯಾದೆಯಂ ಮೀಱಿದವರು ಧರ್ಮಸ್ಥಳವ ಕೆಡಸಿದವರು . . . ಸಮಯದ್ರೋಹರು ರಾಜದ್ರೋಹರು (ಎಕ. II, ೩೩೩-೨೦ ; 1206) ; ತಿಳಿದು ನೋಡಿರೆ ರಾಮ ಧರ್ಮಸ್ಥಳಕೆ ನೀವು ಸಹಾಯವು (ಕುವ್ಯಾಗ. ೬-೫). ೨. ದಕ್ಷಿಣಕನ್ನಡ ಜಿಲ್ಲೆಯ ಒಂದು ಪ್ರಸಿದ್ಧ ತೀರ್ಥಕ್ಷೇತ್ರ : ಪಡುಬಿದ್ರೆಯಲ್ಲಿ ಜರಗುವ ಡಕ್ಕೆಬಲಿ, ಧರ್ಮಸ್ಥಳದಲ್ಲಿ ಹದಿನೆರಡು ವರ್ಷಗಳಿಗೊಮ್ಮೆ ನಡೆವ 'ನಡಾವಳಿ' ಎಂಬ ಉತ್ಸವ . . . ಇವುಗಳು ಪ್ರಾಮುಖ್ಯವಾದುವುಗಳಾಗಿವೆ (ತುಳುನಾ. ೨೫೩). ೩. ನ್ಯಾಯವನ್ನು ನಿರ್ಣಯಿಸುವ ಸ್ಥಳ ; ನ್ಯಾಯಾಸ್ಥಾನ : ಆ ಕಾಂತೆಯರೆನ್ನ ತನ್ನ ಪತಿಯೆಂದೋರೊರ್ವರೊಳ್ ಕಾದು ತಿರ್ಪಿನೆಗಂ ಮಾಣಿಸಿಯಿರ್ದ ನಾಲ್ವರವರಂ ಧರ್ಮಸ್ಥಳಕಟ್ಟಿದರ್ (ಪದ್ಯಸಾ. II, ೬೧೨ ; ಧರ್ಮಪ). ೪. ಪವಿತ್ರವಾದ ಸ್ಥಳ ; ಪುಣ್ಯಸ್ಥಳ.
[ಧರ್ಮ + ಸ್ಥಲ]

ಧರ್ಮಸ್ಥಳ 'ಧರ್ಮಸ್ಥಲ' ನೋ.

ಧರ್ಮಸ್ಥಾಪಕ (ನಾ). ಧರ್ಮವು ನೆಲೆಗೊಳ್ಳುವಂತೆ ಮಾಡುವವನು ; ಧರ್ಮವನ್ನು ಪ್ರತಿಷ್ಠಾಪಿಸುವವನು : ನೀವು ನಿಜವಾಗಿಯೂ ಧರ್ಮಸ್ಥಾಪಕರೇ ಸರಿ (ಮಾಧವ. ೩೮೭). [ಧರ್ಮ + ಸ್ಥಾಪಕ]

ಧರ್ಮಸ್ಥಾಪನೆ (ನಾ). ಧರ್ಮವನ್ನು ನೆಲೆಗೊಳಿಸುವುದು.
[ಧರ್ಮ + ಸ್ಥಾಪನೆ]

ಧರ್ಮಸ್ಥಿತಿ (ನಾ). ನ್ಯಾಯವಾಗಿರುವಿಕೆ ; ಧರ್ಮದ ನೆಲೆ : ಗಣಧರದೇವರುಮಂ ಮುನಿಗಣಮುಮನತಿಭಕ್ತಿಭರದೆ ಬಂದಿಸಿ ಭವ್ಯಾಗ್ರಣಿಗಳ್ ಬಱಿಯಂ ಮಾನವ ಗಣಭೂಮಿಯೊಳಿರ್ದು ಕೇಳ್ದು ಧರ್ಮಸ್ಥಿತಿಯಂ (ಮಹಾನೇ. ೩-೫); ಧ್ಯಾನಿಸುವೆಂ ಧರ್ಮಜಿನಾಧೀಶನನೀ ಪಂಚದಶಸುತೀರ್ಥಾಧಿಪನಂ ಮಾನಿತಧರ್ಮಸ್ಥಿತಿಯಂ . . . ಒಲವಿಂ (ಬಾಧಪು. ೧೬-೩೯೬) ; ಪತಿಗಳಿವರಂಜಿದರು ಧರ್ಮಸ್ಥಿತಿಯನಱಿದವರಳುಕಿದರು . . . ಕೃಷ್ಣ ನೀನೆ ಗತಿಯೆನುತ ಬಾಯ್ವಿಡಲು ಲಜ್ಜಾಸ್ಥಿತಿಯನುಳುಹಿದ ದೈವ ನೀ ಮೈದೋಱಿದೈ ತನಗೆ (ಕುವ್ಯಾಅ. ೨-೧೩). [ಧರ್ಮ + ಸ್ಥಿತಿ]

ಧರ್ಮಸ್ವ (ನಾ). ಧಾರ್ಮಿಕಕಾರ್ಯಗಳಿಗಾಗಿ ಕೊಟ್ಟ ದತ್ತಿ ; ಧರ್ಮನಿಧಿ : ಧಾರ್ಮಿಕಶಿಕ್ಷಣವನ್ನು ಕೊಡಬೇಕಾದ ಕಟ್ಟುಪಾಡುಳ್ಳ ಯಾವುದಾದರೂ ಧರ್ಮಸ್ವಕ್ಕೆ ಅಥವಾ ನ್ಯಾಸಕ್ಕೆ ಅಧೀನವಾಗಿ ಆ ಸಂಸ್ಥೆಯು ಸ್ಥಾಪಿತವಾಗಿದ್ದಲ್ಲಿ (ಭಾಧಾನ. ೧೭). [ಸಂ.]

ಧರ್ಮಹಂತೃ (ನಾ). ೧. ಧರ್ಮವನ್ನು ಹಾಳುಮಾಡುವವನು. ೨. [ವೀಶೈ] ಕಾಲಯಮನನ್ನು ನಾಶಮಾಡಿದವನು. ೧, ೨: ಕನಕನಗೇಂದ್ರಧರ್ಮಕರನಾಗಿಯುಮುನ್ನತಧರ್ಮಹಂತೃ[ಪಾಠಾಂ.ತ್ಯ] ಸಂಜನಿತಪರಾರ್ಥನಾಗಿಯುಮುದಗ್ರಪರಾರ್ಥಹರಂ ಪ್ರದತ್ತಕಾಮನುಮೆನಿಸಿರ್ದು ಕಾಮಮಥನಂ . . . ಎಂದೆನಿಸಿರ್ದನಹೀಂದ್ರಭೂಷಣಂ (ರಾಜಶೇ. ೧೪-೦೪೪).

[ಸಂ.]

ಧರ್ಮಹಸ್ತ (ನಾ). ೧. ರಕ್ಷಣೆಯನ್ನು ನೀಡುವ ಕೈ; ಅಭಯಹಸ್ತ : ಅವನತರ್ಗ್ಗೆ ಧರ್ಮ್ಮಹಸ್ತವನವಯವದಿಂ ನೀಡಿ ಚಾಣ × × ಯೊಳವರತ [ವಂ] ಕೊಂಡುಂ ಧಾರ್ಮ್ಮಿಕನೆನಿಸುವನೀ ಜಯಕೇಸಿದೇ × × ವಿಪರೀತ (ಸೌಇಇ. XX, ೧೦೭-೩೮ ; 1138). ೨. ದಾನವನ್ನು ಮಾಡುವವನು.

[ಸಂ.]

ಧರ್ಮಹಾನಿ (ನಾ). ಧರ್ಮದ ನಾಶ; ಧರ್ಮಕ್ಕೆ ಒದಗುವ ಕೇಡು,-ತೊಂದರೆ : ನಿನ್ನಂತಪ್ಪ ದುರ್ಮಂತ್ರಿಯ ಕಾರಣದಿಂ ಪಿಂಗಳಕಂಗೆ ಧರ್ಮಹಾನಿಯುಂ ಯಶೋಹಾನಿಯುಮಾಗಿ ಮಾಣದೆ ಪ್ರಾಣಹಾನಿಯುಮಾಗಲಿರ್ದುದು (ಪಂಚತಂ. ೧೬೮-೨) ; ಏಕೆ ನಾಚಿಕೆ ಧರ್ಮಹಾನಿ ವ್ಯಾಕುಳತೆಯಿನ್ನೇಕೆ . . . ಏಕೆ ಭಯ ನಮಗಿನ್ನು (ಕುವ್ಯಾದ್ರೋ. ೧೯-೪೦).

[ಧರ್ಮ + ಹಾನಿ]

ಧರ್ಮಹೀನ (ನಾ). ೧. ಧರ್ಮಕ್ಕೆ ದೂರವಾದಂದು ; ಧರ್ಮಬಾಹಿರವಾದಂದು : ರಾಷ್ಟ್ರವು . . . ಧರ್ಮಹೀನವಾದ ಮಾಯಾವೀ ಯುದ್ಧಕ್ರಮವನ್ನು ಕೈಕೊಂಡು ಶಾರೀರಬಲವನ್ನು ಕಳಕೊಳ್ಳುವದು (ಮಾಧವ. ೪೯೭). ೨. ನೀತಿ, ನ್ಯಾಯಗಳನ್ನು ಬಿಟ್ಟವನು ; ಅಧರ್ಮಿ ; ಧರ್ಮಬಾಹಿರ : ಅಲ್ಲಿ ನೀನು ಸುಯಿಧಾನದಿಂ ರಕ್ಷಿಸಲು ಧರ್ಮಹೀನನ ಸಾರೆ ನಿಲ್ಲೆನೆಂದು ನೆಲದಲಡಗಿ ಹೋಗುತ್ತಲದೆ (ಉರಿಪೆ. ಕ. ೯-೧೫) ; ದೈವದೂರರು ಧರ್ಮಹೀನರು ನೆಯ್ವ ನೆಯ್ಗೆಗಳೆನುತ ಮಿಗೆ ಬಿಸುಸುಯ್ವುತಿರ್ದರು ಕರ್ಣ ಕೃಪ ಗುರು ನಂದನಾದಿಗಳು (ಕುವ್ಯಾದ್ರೋ. ೧೪-೪೬).

[ಧರ್ಮ + ಹೀನ]

ಧರ್ಮಾಂತರ (ನಾ). ತನ್ನ ಮತವನ್ನು ಬಿಟ್ಟು ಬೇರೆ ಮತವನ್ನು ಸ್ವೀಕರಿಸುವುದು; ಮತಾಂತರ : ಭಾರತೀಯ ವಿದ್ಯಾರ್ಥಿಗಳನ್ನು ಕಂಡು "ನೀನು ಧರ್ಮಾಂತರವಾಗುವುದು ಸಾಧ್ಯವೇ" ಎಂದು ಕಿವಿಯಲ್ಲುಸಿರುವ ಪಾದ್ರಿ (ಸಮಜೀ. ೧೫ ಪೀಠಿಕೆ) ; ಆ ದಿನಗಳಲ್ಲಿ ಧರ್ಮಾಂತರವೆಂದರೆ ಜನಕ್ಕೆ ಮೃತ್ಯುವಿಗಿಂತ ಭಯಂಕರವೆನಿಸಿತ್ತು (ಸ್ಮೃತಿಚಿ. ೬). [ಸಂ.]

ಧರ್ಮಾಂಧ (ನಾ). ತನ್ನ ಮತವನ್ನು ಕುರಿತು ಅತ್ಯಭಿಮಾನವೂ ಅನ್ಯಮತಗಳನ್ನು ಕುರಿತು ದ್ವೇಷವೂ ಉಳ್ಳವನು ; ಸ್ವಮತಾಭಿಮಾನದಿಂದ ವಿವೇಕವನ್ನು ಕಳೆದುಕೊಂಡವನು; ಮತಾಂಧ: ಧರ್ಮಾಂಧರೀ ಯೇಹೂದ್ಯರ್ (ಗೊಲ್ಡೊಥಾ. ೭-೧೯೫) ; ಮುಕ್ತಿಯ ಸರ್ಟಿಫಿಕೇಟ್‌ಗಾಗಿ . . . ಧರ್ಮಾಂಧರ ಆಷಾಡಭೂತಿ ನೀತಿಗಳಿಗೆ ಕೊನೆ ಮೊದಲೇ ಇಲ್ಲ (ಜೀವಾತ್ಮ. ೨೦೭). [ಧರ್ಮ + ಅಂಧ]

ಧರ್ಮಾಂಧತೆ (ನಾ). ತನ್ನ ಮತವನ್ನು ಕುರಿತು ಅತ್ಯಭಿಮಾನವನ್ನೂ ಅನ್ಯಮತಗಳನ್ನು ಕುರಿತು ದ್ವೇಷವನ್ನೂ ಹೊಂದಿರುವಿಕೆ : ಸಂಪ್ರದಾಯದ ಸೆರೆಯಲ್ಲಿಯೂ ಧರ್ಮಾಂಧತೆಯ ತಳದಲ್ಲಿಯೂ ಸಿಕ್ಕುಬಿದ್ದ ಅವರ ಪ್ರೀತಿಯು . . . ಈಗ ಎಚ್ಚರಾಗಿತ್ತು (ಸಮಜೀ. ೨೪೦).

[ಸಂ. ಧರ್ಮಾಂಧತಾ]

ಧರ್ಮಾಗಮ (ನಾ). ಧಾರ್ಮಿಕ ವಿಧಿನಿಯಮಗಳ ಗ್ರಂಥ ; ನ್ಯಾಯಶಾಸ್ತ್ರ : ಧರ್ಮಾಗಮ, ಧರ್ಮಾಸನ, ಧರ್ಮಾಧ್ಯಕ್ಷ, ಧರ್ಮಾಧಿಷ್ಠಾನ, ಧರ್ಮಾಧಿಕರಣ ಇತ್ಯಾದಿಗಳಲ್ಲಿ ಧರ್ಮಕ್ಕೆ ನ್ಯಾಯ ಎಂದರ್ಥವು (ಆರ್ಯಧ. ೧೧). [ಧರ್ಮ + ಆಗಮ]

ಧರ್ಮಾಗ್ರೇಸರ (ನಾ). ಧರ್ಮಾಚರಣೆಯಲ್ಲಿ ಶ್ರೇಷ್ಠನಾದವನು : ಜನರು 'ಇವನೇ ಮಧ್ಯಮ ಪಾಂಡವ!' ಎಂದರು ... 'ಅಸ್ತ್ರವಿದ್ಯಾಗ್ರಗಣ್ಯ' ಎಂದರು ; 'ಧರ್ಮಾಗ್ರೇಸರ' ಎಂದರು (ವಚಭಾ. ೨೩).

[ಧರ್ಮ + ಅಗ್ರೇಸರ]

ಧರ್ಮಾಚರಣ (ನಾ). ಸದಾಚಾರ ಪರಿಪಾಲನೆ ; ಧರ್ಮಾನುಷ್ಠಾನ : ಈಗ ಗರ್ಭಿಣಿಯಾದ ಈಕೆಯನ್ನು ಧರ್ಮಾಚರಣಾರ್ಥವಾಗಿ ಪ್ರತಿಗ್ರಹಿಸುವುದು (ಶಾಕುಂತ. ೬೬-೮). [ಧರ್ಮ + ಆಚರಣ]

ಧರ್ಮಾಚರಣೆ (ನಾ). = ಧರ್ಮಾಚರಣ : ಧರ್ಮಾಚರಣೆಯಲ್ಲಿಯೂ ಈಕೆ ಪರಾಧೀನೆ (ಶಾಕುಂತ. ೧೫-೧೦) ; ವಿವಾಹವು ಹೆಂಗಸರಿಗೆ ಧರ್ಮಾಚರಣೆಗೆ ಏಕಮಾತ್ರ ಸೋಪಾನವಾಗಿರುವುದು (ಕಪಾಕುಂ. ೩೧).

[ಧರ್ಮ + ಆಚರಣೆ]

ಧರ್ಮಾಚಾರ (ನಾ). = ಧರ್ಮಾಚರಣ. [ಧರ್ಮ + ಆಚಾರ]

ಧರ್ಮಾಚಾರ್ಯ (ನಾ). ಮತದ ಗುರು ; ಧರ್ಮಗುರು ; ಮತಾಚಾರ್ಯ : ಧರ್ಮಾಚಾರ್ಯ, ಧರ್ಮಾಧಿಕಾರಿ . . . ಇತ್ಯಾದಿ ಪ್ರಜೋಗಗಳಲ್ಲಿ ಧರ್ಮವೆಂದರೆ ಮತವೆಂದೇ ಅರ್ಥಮಾಡಬೇಕು (ಆರ್ಯಧ. ೧೦) ; ಈ ದಿವ್ಯ ಸೌಂದರ್ಯದ ಕಾವ್ಯಮಯವಾದ ಅನುಭಹವನ್ನು ಭಾರತೀಯ ಧರ್ಮಾಚಾರ್ಯರು ನಾನಾಬಗೆಯಾಗಿ ಹಾಡಿದ್ದಾರೆ (ಸೌಂದಸ. ೧೧೨).

[ಧರ್ಮ + ಆಚಾರ್ಯ]

ಧರ್ಮಾತ್ಮ (ನಾ). ೧. ಧರ್ಮದಲ್ಲಿ ಶ್ರದ್ಧೆಯುಳ್ಳವನು ; ಸದಾಚಾರ ಸಂಪನ್ನ ; ಧರ್ಮಿಷ್ಠ : ಕುರುಭೂಪಾಲನು ಪಾಂಡುಪುತ್ರರು ಮಹಾಧರ್ಮಾತ್ಮರೆಂದಿತ್ತನೇ (ಸೋಮೇಶ. ೫೪) ; ಪ್ರಕಟಪಾಪರಿಗಹುದು ಸಾಮ್ರಾಜ್ಯಕವು ಧರ್ಮಾತ್ಮರಿಗೆಯಾ ಪರಿ ವಿಕಟತೆಯಸುರರಾಜ್ಯವೆಂಬುದು ಪೌರಜನ ಮಱುಗಿ (ಕುವ್ಯಾಆ. ೮-೮೯) ; ಧರ್ಮಾತ್ಮನೆಂದರೆ ಪುಣ್ಯಾತ್ಮನು (ಆರ್ಯಧ. ೧೧). ೨. ದಯಾವಂತ ; ದಾನಶೀಲ : ಅನಾಥನಾದ ಆ ಬಾಲಕನು ಧರ್ಮಾತ್ಮರ ಸಹಾಯದಿಂದ ವಿದ್ಯಾಭ್ಯಾಸವನ್ನು ಪೂರೈಸಿದನು (ರೂಢಿ). [ಸಂ. ಧರ್ಮಾತ್ಮನ್]

ಧರ್ಮಾತ್ಮಜ (ನಾ). = ಧರ್ಮಪುತ್ರ ೨: ಅರಿಯಂತೀಯರಿಯಂ ಕಱುತ್ತರಿಯೆನುತ್ತಾರ್ದಿಟ್ಟಮತ್ರಂ ನಭೋಂತರದೊಳ್ ತಾಂ ಶಿಶುಪಾಲಮಸ್ತಕ ಸಮೇತಂ ಪಾಱೆ ಧರ್ಮಾತ್ಮಜಾಧ್ವರದೊಳ್ ಬಾಯಿನವಂ ಸುರಾಂಗನೆಯರೀವಂತಾಯ್ತು (ಜಗವಿ. ೦-೬೨). [ಧರ್ಮ + ಆತ್ಮಜ]

ಧರ್ಮಾದಾಯ (ನಾ). ೧. ಧರ್ಮಕಾರ್ಯಗಳಿಗಾಗಿ ಸರಕಾರವು ಪ್ರತಿವರ್ಷವೂ ವಿಶಾಸಲಾಗಿರಿಸುವ ಮೊತ್ತ. ೨. ದಾನಕ್ಕಾಗಿ ಕೊಡುವ ಹಣ ; ಧರ್ಮಕಾರ್ಯಕ್ಕಾಗಿ ತೆಗೆದಿಡುವ ಹಣ ; ದೇವರ ಹಣ : ಭಂಗಾರ ಬೆಳ್ಳಿಯ ಖರೀದಿಗೆ ಆಡತಿ ಧರ್ಮಾದಾಯ, ದಲಾಲಿ ಹಾಂಗು ಹಕ್ಕಶಾಯಿಯ ದರಗಳು (ಪಾನು ೧೨, ಕಲಮು ೨೪) (ಮುಂಬವ್ಯಾ. ೧೮ ಪ್ರಸ್ತಾವನೆ) ; ನಾವು ಖರೀದಿ ಮತ್ತು ವಿಕ್ರಯದ ಜೀನಸುಗಳ ಮೇಲೆ ಹೊರಿಸುವ ಪಾಠಶಾಲಾ ಅಥವಾ ಧರ್ಮಾದಾಯವೆಂಬ ಬಾಬು ಸೋಲಾಪುರದ ವೀರಶೈವ ಲಿಂಗಾಯತರ ಸಂಸ್ಕೃತಪಾಠಶಾಲೆಗಾಗಿ ತೆಗೆದುಕೊಳ್ಳೋಣಾಗುತ್ತದೆ (ಮುಂಬವ್ಯಾ. ೩ ಅಡಿಟಿ) ; ಧರ್ಮಾದಾಯ-ನೂರು ರೂಪಾಯಿಗೆ ಅರ್ಧಾ ಆಣೆ (ಮುಂಬವ್ಯಾ. ೧೩). [ಧರ್ಮ + ಆದಾಯ]

ಧರ್ಮಾಧಿಕರಣ (ನಾ). ೧. ನ್ಯಾಯವನ್ನು ನಿರ್ಣಯಿಸುವ ಆಡಳಿತ ಶಾಖೆ ; ನ್ಯಾಯಾಲಯ ; ನ್ಯಾಯಾಸ್ಥಾನ : ತಳವಾಱಂ . . . ನಾವಿದನುಮವನ ಪೆಂಡತಿಯುಮಂ ಪಿಡಿದೊಡಗೊಂಡು ಪೋಗಿ ಧರ್ಮಾಧಿಕರಣದ ತಾಣಾಂತರದೊಳಿರಿಸಿದು (ಪಂಚತಂ. ೭೯-೨) ; ಧರ್ಮಾಧಿಷ್ಠಾನ, ಧರ್ಮಾಧಿಕರಣ-ಇತ್ಯಾದಿಗಳಲ್ಲಿ ಧರ್ಮಕ್ಕೆ ನ್ಯಾಯ ಎಂದರ್ಥವು(ಆರ್ಯಧ.೧೦). ೨. ನ್ಯಾಯವನ್ನು ನಿರ್ಣಯಿಸುವ ಅಧಿಕಾರಿ; ನ್ಯಾಯಾಧಿಪತಿ:

ಧರ್ಮಾಧಿಕರಣಂಗಳಲ್ಲಿಗೆ ಬಂದು ತಂತಮ್ಮ ವೃತ್ತಾಂತಮಂ ಸವಿಸ್ತರಂ ಪೇಳ್ಪ ಕೇಳ್ದು . . . ಶಿರಮಾರವಲ್ಲಭನದು ಅವರ್ಗೆ ಪತಿಯಕ್ಕುಂ ಎಂದು ಧರ್ಮಾಧಿಕರಣಂಗಳ್ ಪೇಳ್ದು ಪೋದರ್ (ಪದ್ಮಸಾ. II, ೬೦೩ ವ ; ಧರ್ಮಪ).

ಧರ್ಮಾಧಿಕರಣದವರ್ = ನ್ಯಾಯವನ್ನು ನಿರ್ಣಯಿಸುವ ಅಧಿಕಾರಿಗಳು : ಧರ್ಮಾಧಿಕರಣದವರ್ ನಾವಿದನಂ ಕರೆದು . . . ಬೆಸಗೊಂಡೊಡೆ (ಪಂಚತಂ. ೭೯-೬) ; ಹೆದಱದಿರು ತೆಕ್ಕದಿರು ಅಂಜದಿರು ಲೋಗರಿಟ್ಟುದೊನಿನ್ನ ಕೃತಕವೋ ಹೇಳು ಧರ್ಮಾಧಿಕರಣದವರಂ ಕರಸುವೆಂ ನುಡಿಸುವೆಂ ಕಾವೆನೆಂದವನಿಪಂ ಬೆಸಗೊಂಡಡೆ (ಹಡಪಾ. ೧೩-೭) [ಧರ್ಮ + ಅಧಿಕರಣ]

ಧರ್ಮಾಧಿಕಾರ (ನಾ). ೧. ಧರ್ಮದಿಂದ ರಾಜ್ಯಭಾರ ಮಾಡುವುದು ; ಧಾರ್ಮಿಕ ಆಚರಣೆಗಳಂ ಸರಿಯಾಗಿರುವಂತೆ ನೋಡಿಕೊಳ್ಳುವ ರಾಜ್ಯಭಾರ : ಪುರುಕುಲದ ಅರಸರಿಂದ ಧರ್ಮಾಧಿಕಾರದಲ್ಲಿ ನಿಯುಕ್ತನಾದ ನಾನು, ಆಶ್ರಮವಾಸಿಗಳ ನಿರ್ವಿಘ್ನವಾದ ಕ್ರಿಯೆಯನ್ನು ತಿಳಿಯುವುದಕ್ಕೆ ಈ ಧರ್ಮಾರಣ್ಯಕ್ಕೆ ಬಂದಿರುವೆನು (ಶಾಕುಂತ. ೧೩-೧೯). ೨. ಧರ್ಮವನ್ನು ಅನುಸರಿಸುವ ಹಕ್ಕು,-ಅಧಿಕಾರ : ಕ್ಷತ್ರಿಯ-ವೈಶ್ಯವರ್ಣದವರಿಗೆ ವೈದಿಕ ಧರ್ಮಾಧಿಕಾರವೂ ವೈದಿಕ ಸಂಸ್ಕಾರಗಳೂ ಇದ್ದೇ ಇರುವವು (ಮೂಧಪ. ೪೦೪). [ಧರ್ಮ + ಅಧಿಕಾರ]

ಧರ್ಮಾಧಿಕಾರಿ (ನಾ). ೧. ನ್ಯಾಯಾಧೀಶ; ನ್ಯಾಯಾಧಿಕಾರಿ : "ಪ್ರಾಡ್ವಿವಾಕಃ, ಅಕ್ಷದರ್ಶಕಃ -೨ . . . ನ್ಯಾಯನಿರ್ಣಾಯಕನ ಹೆಸರುಗಳು. ಜಡ್ಜಿ, ಮುನಸೀಫ್, ಧರ್ಮಾಧಿಕಾರಿ" (ಸಿದ್ಧಾಂತಿ. ೩೩೬). ೨. ಮಠಾಧಿಕಾರಿ; ಮಠಾಧಿಪತಿ : ಧರ್ಮಾಚಾರ್ಯ, ಧರ್ಮಾಧಿಕಾರಿ . . . ಇತ್ಯಾದಿ ಪ್ರಯೋಗಗಳಲ್ಲಿ ಧರ್ಮವೆಂದರೆ ಮತವೆಂದೇ ಅರ್ಥಮಾಡಬೇಕು (ಅರ್ಥಧ. ೧೦) ; ಹನ್ನೆರಡನೆಯ ಪೈದಿ ಧರ್ಮಾಧಿಕಾರಿಯೊಬ್ಬನ ಮಗಳು (ಪುನರು. ೧೪೩). ೩. ರಾಜನು ಮಾಡಿದ ದಾನ, ಧರ್ಮಗಳನ್ನು ಹಂಚಲು ನಿಯುಕ್ತನಾಗಿದ್ದ ಅಧಿಕಾರಿ. [ಸಂ. ಧರ್ಮಾಧಿಕಾರಿನ್]

ಧರ್ಮಾಧಿಕ್ರಮ (ನಾ). ಧರ್ಮದ ಅನುಸರಣೆ ; ಧರ್ಮಾನುಷ್ಠಾನ : ಬರಿಯ ಇಷ್ಟಪೂರ್ತಗಳು ದಾನಗಳು-ಇವುಗಳನ್ನು ಮಾಡಿದವರಿಗೆ ಧರ್ಮಾಧಿಕ್ರಮದಲ್ಲಿ ದಕ್ಷಿಣಾಮಾರ್ಗದಿಂದ ಗತಿಯಾಗುವುದೆಂದೂ . . . ತಿಳಿಯಬಹುದಾಗಿದೆ (ಬ್ರಹ್ಮಭಾ. ೪೩). [ಧರ್ಮ + ಅಧಿಕ್ರಮ]

ಧರ್ಮಾಧಿಷ್ಠಾನ (ನಾ). ನ್ಯಾಯಾಲಯ; ನ್ಯಾಯಾಸ್ಥಾನ : ಧರ್ಮಾಸನ, ಧರ್ಮಾಧ್ಯಕ್ಷ, ಧರ್ಮಾಧಿಷ್ಠಾನ, ಧರ್ಮಾಧಿಕರಣ ಇತ್ಯಾದಿಗಳಲ್ಲಿ ಧರ್ಮಕ್ಕೆ ನ್ಯಾಯ ಎಂದರ್ಥವು (ಅರ್ಥಧ. ೧೧). [ಧರ್ಮ + ಅಧಿಷ್ಠಾನ]

ಧರ್ಮಾಧ್ಯಕ್ಷ (ನಾ). ೧. ನ್ಯಾಯಾಧೀಶ ; ನ್ಯಾಯಾಧಿಪತಿ : ತದಾಭರಣ ವೃತ್ತಾಂತಮಂ ಪೇಳ್ವುದುಮರಸಂ ಧರ್ಮಾಧ್ಯಕ್ಷರಂ ಬರಿಸಿ ವಿಚಾರಿಸಿಮೆನೆ (ಜಾವುಂಪು. ೪೩೯) ; ಧರ್ಮಾಸನ, ಧರ್ಮಾಧ್ಯಕ್ಷ . . . ಇತ್ಯಾದಿಗಳಲ್ಲಿ ಧರ್ಮಕ್ಕೆ ನ್ಯಾಯ ಎಂದರ್ಥವು (ಅರ್ಥಧ. ೧೧). ೨. ವಿಷ್ಣು. ೩. ಮತ-ಧರ್ಮ, ನೀತಿ-ನಿಯಮಂಗಳ ಪಾಲಕ,-ರಕ್ಷಕ : (ಕ). ೪. ಮಠಾಧಿಪತಿ. [ಧರ್ಮ + ಅಧ್ಯಕ್ಷ]

ಧರ್ಮಾನುಜ (ನಾ). ೧.ಧರ್ಮರಾಯನ ತಮ್ಮ; ಅರ್ಜುನ: ಜಗದ್ಗುರು ಪೆಂಬರ್ . . . ಧರ್ಮಾನುಜಂಗೇಕೆ ಕಿಂಕರನಾದಂ (ಗದಾಯು. ೩-೪೩) ; ವಾಸವನ ಸೂನು ಮೃತನಾದನೇ ಧರ್ಮಾನುಜಂ ಪ್ರಾಣಮಂ ತೊಱೆದನೇ (ಕೃಷ್ಣಮಿಶ್ರಾ. ೨೩-೩೪). ೨. ಧರ್ಮರಾಯನ ತಮ್ಮಂದಿರಾದ ಭೀಮ, ನಕುಲ, ಸಹದೇವ. [ಧರ್ಮ + ಅನುಜ]

ಧರ್ಮಾನುಪ್ರೇಕ್ಷೆ (ನಾ). [ಜೈನ] ಹನ್ನೆರಡು ಅನುಪ್ರೇಕ್ಷೆಗಳಲ್ಲಿ ಒಂದು ; ಧರ್ಮಪ್ರಾಪ್ತಿಯಿಂದ ಅಭ್ಯುದಯಂ, ನಿಶ್ರೇಯಸಗಳು ದೊರೆಯುವುದೆಂಬ ಭಾವನೆ : ಆ ಧರ್ಮಾನುಪ್ರೇಕ್ಷೆಯಂ ಮೋಕ್ಷಾರ್ಥಮಾಗೆ ನೀನಿಂ ನೆಗೆಱೆಲ್ವೇಟ್ಟುಂ (ಜೀವಸಂ. ೨೦೭ ಅಡಿಟಿ) ; ಪನ್ನೊಂದುತೆಱದ ಗೃಹಸ್ಥಧರ್ಮದೊಳು ಪತ್ತುತೆಱದ ಭೇದ ರತ್ನತ್ರಯಾತ್ಮಕಧರ್ಮದೊಳಂ ನೆಗೆಟ್ಟೊಡಲ್ಲದೆ ಪರಪರಮೋತ್ತಮಮುಕ್ತಿಸುಖಂ ದೊರಕೊಳ್ಳದೆಂದು ಚಿಂತಿಸುವುದು ಧರ್ಮಾನುಪ್ರೇಕ್ಷೆ (ಶ್ರಾವಕಾ. ೧೪೭-೩). 'ದ್ವಾದಶಾನುಪ್ರೇಕ್ಷೆ' ಪರಾ. [ಧರ್ಮ + ಅನುಪ್ರೇಕ್ಷೆ]

ಧರ್ಮಾನುರಕ್ತ (ಗು). ಧರ್ಮದಲ್ಲಿ ಆಸಕ್ತಿಯುಳ್ಳ: ಶ್ರೀಕಣ್ಠಪರಮೇಶ್ವರ ಚರಣಕಮಳಭಕ್ತಿಯಿಂ ಧರ್ಮಾನುರಕ್ತಚಿತ್ತದಿಂ . . . ಬಟ್ಟ ವ್ರಿತ್ತಿ (ಎಕ. VIII, ಸೊರಬ. ೪೭೬-೧೧ ; 991). [ಧರ್ಮ + ಅನುರಕ್ತ]

ಧರ್ಮಾನುರಕ್ತಿ (ನಾ). ಧರ್ಮದ ಬಗೆಗಿರುವ ಆಸಕ್ತಿ,-ಒಲವು. [ಧರ್ಮ + ಅನುರಕ್ತಿ]

ಧರ್ಮಾನುರಾಗ (ನಾ). ೧. ಧರ್ಮದಲ್ಲಿರುವ ಆಸಕ್ತಿ,-ಶ್ರದ್ಧೆ : ಧರ್ಮಾನುರಾಗದಿಂ . . . ಜಿನಧರ್ಮದ ಪೆರ್ಮೆಗೆ ರಾಗಿಸರೆ ಭವ್ಯರಜೀವಿನ ದಿವ್ಯರ್ (ಶಾಂತಿಪು. ೧೨-೩೭) ; ಅನೇಕ ದೇವಕಾಂತೆಯರಂ ಧರ್ಮಾನುರಾಗದಿಂ ಕಲ್ಪಿಸಿ ಕಟೀಪುವುದುಂ (ಮಹಾನೇ. ೮-೪೨ ವ). ೨. ದಾನಮಾಡುವುದರಲ್ಲಿ ಆಸಕ್ತಿ ; ದಾನಬುದ್ಧಿ : ಧರ್ಮ್ಮಾ [ನು] ರಾಗದಿಂ × × × ಕೊಟ್ಟರೀ ಧರ್ಮ್ಮಮಂ (ಸಾಇಇ. XX, ೪೮-೨೧ ; 1074). [ಧರ್ಮ + ಅನುರಾಗ]

ಧರ್ಮಾನುರಾಗಿ (ನಾ). ಧರ್ಮದಲ್ಲಿ ಆಸಕ್ತಿಯುಳ್ಳವನು; ಧರ್ಮಿಷ್ಠ : ಮತ್ತಮುಟಿದ ದೇಶಾಧೀಶ್ವರರುಂ ಧರ್ಮಾನುರಾಗಿಗಳಲ್ಲದೆ ಪರಾಂಗನಾಪೇಕ್ಷಕರಲ್ಲರ್ (ಧರ್ಮಾಮೃ. ೪-೨೦೩); ಪೊಲ್ಲಮೆಯೊಳಡಂಗಿ ಕಿಡದೆ ಧರ್ಮಾನುರಾಗಿಯಪ್ಪುದು (ಜೀವಸಂ. ೧೨೪-೪ ವ). [ಸಂ. ಧರ್ಮಾನುರಾಗಿನ್]

ಧರ್ಮಾನುಷ್ಠಾನ (ನಾ). ವಿಹಿತವಾದ ಕರ್ಮಗಳ ಆಚರಣೆ : ಧರ್ಮಾನುಷ್ಠಾನದ ಆವಶ್ಯಕತೆಯನ್ನು ಒತ್ತಿ ಹೇಳುವುದೇ ಸ್ಮೃತಿಗಳ ಮುಖ್ಯಧ್ಯೇಯ (ಭಾರದ. ೫೧). [ಧರ್ಮ + ಅನುಷ್ಠಾನ]

ಧರ್ಮಾನುಸರಣ (ನಾ). = ಧರ್ಮಾನುಷ್ಠಾನ : ಧರ್ಮಾನುಸರಣದಿಂದಲೆ ಉಳಿದ ಪುರುಷಾರ್ಥಗಳೂ ಸಿದ್ಧಿಸುತ್ತವೆ (ಪುಕ್ಕಾರ. ೧೦೪ ಟೀಕೆಗಳ). [ಧರ್ಮ + ಅನುಸರಣ]

ಧರ್ಮಾಪೋಹ (ನಾ). [ಕಾವ್ಯಮೀ] ಅರ್ಥಾಲಂಕಾರಗಳಲ್ಲಿ ಒಂದು ; ಅಪಹ್ನುತಿ ಅಲಂಕಾರದ ಒಂದು ಭೇದ : ಕುಸುಮಂಗಳೆಂಬ ಮಾತದು ಪುಸಿ ದಹನಮಯಂಗಳೆಂಬುಗಳ್ ಮನಸಿಜನಾ ಜಸಮಟೀಯೆ ಸುಡುವುದೆ (ವೆ)ರ್ದೆಯಂ ಬಿಸಿಯವಿವೆಂದಿಂತೆ ಪೇಳ್ದ ಧರ್ಮಾಪೋಹಂ (ಕವಿರಾ. ೩-೧೦೪); ಸ್ಮರನಸ್ತ್ರಸಮಿತಿಯದು ನಿರ್ಭರಮಂಗಮನುರ್ಚಿ ಪೋಗೆಯುಂ ಪೋಬಟಿಯಂ ದೊರೆಕೊಳಿಸಲಾಗದದಱಿಂ ಶರತತಿಯಲ್ತೆಂಬುದಿಂತು ಧರ್ಮಾಪೋಹಂ (ಕವಿರಾ. ೩-೧೦೫). P ಒಂದು ವಸ್ತುವಿನಲ್ಲಿರುವ ಸಹಜವಾದ ಧರ್ಮವನ್ನು ಅಲ್ಲಗಳೆದು ಬೇರೆಯ ಧರ್ಮವನ್ನು ಆರೋಪಿಸುವುದು. ಇಲ್ಲಿ ಮೊದಲನೆಯ ಪ್ರಯೋಗದಲ್ಲಿ 'ಮನ್ಮಥನ ಬಾಣಗಳು ಹೂವುಗಳು' ಎಂಬ ಮಾತು ಸುಳ್ಳು. ಅವು ಅಗ್ನಿರೂಪಗಳು. ಇಲ್ಲಿ ಕುಸುಮಧರ್ಮವನ್ನು ಅಲ್ಲಗಳೆದು ಅಗ್ನಿಧರ್ಮವನ್ನು ಆರೋಪಿಸಲಾಗಿದೆ. ಆದುದರಿಂದ ಧರ್ಮಾಪೋಹಾಪಹ್ನುತಿ. ಎರಡನೆಯ ಪ್ರಯೋಗದಲ್ಲಿ ಮನ್ಮಥನ ಬಾಣಗಳ ಸಮೂಹವು ಶರೀರವನ್ನು ಭೇದಿಸಿಕೊಂಡುಹೋದರೂ ಹೋದ ಮಾರ್ಗವನ್ನು ಕಂಡು ಹಿಡಿಯಲಾಗುವುದಿಲ್ಲ. ಆದುದರಿಂದ ಇವು ಬಾಣಗಳ ಸಮೂಹವಲ್ಲ. ಬಾಣಗಳಾಗಿದ್ದರೆ ಹೋದ ಸ್ಥಳ ಮತ್ತು ಹೊರಕ್ಕೆ ಬಂದ ಸ್ಥಳಗಳನ್ನು ಗೊತ್ತುಮಾಡಬಹುದಾಗಿತ್ತು ಎಂಬಲ್ಲಿ ಬಾಣಗಳನ್ನು ಬಾಣಗಳಲ್ಲ ಎಂದು ನಿಷೇಧ ಮಾಡಿದೆ. ಇಲ್ಲಿ ಬೇರೊಂದನ್ನು ಆರೋಪಿಸಿಲ್ಲ. ಇದು ಹಿಂದಿನ ಉದಾಹರಣೆಗಿಂತ ಸ್ವಲ್ಪ ಬೇರೆಯಾಗಿದೆ. ದಂಡಿಯು ಇದನ್ನು 'ಸ್ವರೂಪಾಪಹ್ನುತಿ' ಎಂದು ಹೇಳಿದ್ದಾನೆ. [ಧರ್ಮ + ಅಪೋಹ]

ಧರ್ಮಾಯತ್ತ (ನಾ). ಧರ್ಮದಿಂದ ಕೂಡಿದುದು ; ಧರ್ಮಸಮ್ಮತವಾದುದು : ನ್ಯಾಯಾರ್ಜಿತವಿತ್ತಂ ಧರ್ಮಾಯತ್ತಮೆನಿಪ್ಪ ರಾಜವೃತ್ತಂ ತನಗೇಕಾಯತ್ತಮಾಗೆ ಧರೆಯಂ ಜೀಯೆನಿಸಿದನಿಂತುದಾತ್ತಚರಿತರುಮೊಳರೇ (ಪಂರಾಮಾ. ೨-೭೦). [ಧರ್ಮ + ಆಯತ್ತ]

ಧರ್ಮಾರಣ್ಯ (ನಾ). ಋಷಿಗಳು ವಾಸಿಸುವ ಅರಣ್ಯ ; ತಪೋವನ ; ಧರ್ಮವನ್ನು ಶಿಷ್ಯನಿಗೆ ಉಪದೇಶಿಸುವ ಸ್ಥಳ ; P ಸಾಮಾನ್ಯವಾಗಿ ಅರಣ್ಯದ ಮೃಗಾದಿಗಳಲ್ಲಿರುವ ದ್ವೇಷಾದಿಗಳು ಮಾಯವಾಗಿರುವ ಕಾಡು ; ಋಷ್ಯಾಶ್ರಮ : ಧರ್ಮಾಧಿಕಾರದಲ್ಲಿ ನಿಯುಕ್ತನಾದ ನಾನು ಆಶ್ರಮವಾಸಿಗಳ ನಿರ್ವಿಘ್ನವಾದ ಕ್ರಿಯೆಯನ್ನು ತಿಳಿಯುವುದಕ್ಕೆ ಈ ಧರ್ಮಾರಣ್ಯಕ್ಕೆ ಬಂದಿರುವೆನು (ಶಾಕುಂತ. ೧೩-೧೬) ; ಸಾವಿರಾರು ರಾಕ್ಷಸರನ್ನು ಕೊಂದು ರಾಮನು ಆ ಧರ್ಮಾರಣ್ಯವನ್ನು ಕ್ಷೇಮಗೊಳಿಸಿದನು (ವಚಭಾ. ೪೦೫). [ಧರ್ಮ + ಅರಣ್ಯ]

ಧರ್ಮಾರ್ಥ (ಗು). ೧. ಉಚಿತವಾದ ; ಪುಕ್ಕಟೆಯಾದ : ಧರ್ಮಾರ್ಥ ದಾನಗಳು ಮತ್ತು ಧರ್ಮಾರ್ಥ ದಾನಗಳ ಸಂಸ್ಥೆಗಳು (ಭಾಧಾನ. ೨೯೫). (ನಾ). ೨. ಸಹಾಯ ಮಾಡುವ ಮನೋಧರ್ಮ ; ಧರ್ಮದೃಷ್ಟಿ : ರೋಗಿಗಳಿಗೆ ಧರ್ಮಾರ್ಥವಾಗಿ ಔಷಧ ಕೊಡುವ ಏರ್ಪಾಡು (ತೇಮೋಡ. ೩೪). ೩. ಪುಕ್ಕಟೆ ; ಬಿಟ್ಟಿ : ಧರ್ಮಾರ್ಥವಾಗಿ ದೋಣಿ ನಡೆಸುತ್ತೇನೆ (ವಚಭಾ. ೩). [ಸಂ.]

ಧರ್ಮಾರ್ಥಿ (ನಾ). ಧರ್ಮವನ್ನು ಆಚರಿಸುವ ಬಯಕೆಯುಳ್ಳವನು ; ಪುಣ್ಯಸಂಪಾದನೆ ಮಾಡಲು ಬಯಸುವವನು : ಇಂತಪ್ಪ ಧರ್ಮಾರ್ಥಿ [ಪಾಠಾಂ. ರ್ಮವರ್ತಿ]ಯೆನ್ನ ಮನೆಯೊಳಿರಲ್ವೇಡ (ವಡ್ಡಾರಾ. ೧೫೧-೮); ಧರ್ಮಾರ್ಥಿಗಳ್ಗೆ ಧರ್ಮಮುಮನಾಗಳುಂ ಪ್ರತಿಬೋಧಿಸಿ (ಜಾವುಂಪು. ೨೦೭) ; ಧರ್ಮಪುತ್ರನಪ್ಪ ಯುಧಿಷ್ಠಿರಂ ಧರ್ಮಾರ್ಥಿಯುಂ ಯಶೋರ್ಥಿಯುಮಾಗಿ ರಾಜಸೂಯಯಾಗಂಮಾಡಲುದ್ಯೋಗಂಗೆಯ್ದು (ಪಂಚತಂ. ೨೩೫-೨೦). [ಸಂ. ಧರ್ಮಾರ್ಥಿನ್]

ಧರ್ಮಾವರ್ಣವಾದ (ನಾ). [ಜೈನ] ದರ್ಶನಮೋಹನೀಯಕರ್ಮದ ಆಸ್ರವಗಳಲ್ಲಿ ಒಂದು ; ಧರ್ಮವನ್ನು ಕುರಿತ ನಿಂದೆ ; ಧರ್ಮನಿಂದೆ: ಜಿನೋಪದಿಷ್ಟಧರ್ಮಂ ನಿರ್ಗುಣಂ ತದುಪಸೇವಿಗಳಸುರರಪ್ಪರೆಂಬ ಅಸದುತ್ತರಸಮೂಹಂ ಧರ್ಮಾವರ್ಣವಾದಂ (ತತ್ತ್ವಪ್ರ. ೨೬೦). 'ಅವರ್ಣವಾದ' ಪರಾ. P ಇದರಲ್ಲಿ ಕೇವಲ್ಯವರ್ಣವಾದ, ಶ್ರುತಾವರ್ಣವಾದ, ಸಂಘಾವರ್ಣವಾದ, ಧರ್ಮಾವರ್ಣವಾದ ಮತ್ತು ದೇವಾವರ್ಣವಾದ ಎಂಬ ಐದು ಬಗೆಗಳಿವೆ. ಕೇವಲಿ ಮೊದಲಾದ ವಿಷಯದಲ್ಲಿ ಬೋಷೋದ್ಘಾಟನೆಯು ದರ್ಶನಮೋಹನೀಯಕರ್ಮಾಸ್ರವವಾಗುತ್ತದೆ. [ಧರ್ಮ + ಅವರ್ಣವಾದ]

ಧರ್ಮಾವಳಿ (ನಾ). ಧರ್ಮಗಳ ಸಮೂಹ ; ಧರ್ಮವಿಚಾರಗಳ ವಿವರ : ತಿಳುಹು ಧರ್ಮಜ ಸಕಲ ಧರ್ಮಾವಳಿಯ ಸಾರವನು (ಕುಪ್ಯಾಅ. ೨೩-೩೮). [ಧರ್ಮ + ಆವಳಿ$_1$ (= ಆವಲಿ)]

ಧರ್ಮಾವಾಸ (ನಾ). ಧರ್ಮದ ನೆಲೆ ; ಧರ್ಮಕ್ಕೆ ಆಶ್ರಯವಾದ ಸ್ಥಳ: ಪಾವನನದಿಗಳಾಡುಂಬೊಲ ವಿಪುಳಧರ್ಮಾವಾಸ ವಿಪುಳಪುಣ್ಯದ ಪಕ್ಕೆ ತೀವಿರ್ದ ಶಿವಭಕ್ತಿಯಾಗಾರಮಖಿಳದೇಶಾವಳಿದು ನಾಯಕರತ್ನ (ತ್ರಿಭುತಿ. ೨-೧೧). [ಧರ್ಮ + ಆವಾಸ]

ಧರ್ಮಾವಿರುದ್ಧತ್ವ (ನಾ). ಧರ್ಮಕ್ಕೆ ಅವಿರೋಧವಾಗಿರುವಿಕೆ ; ಧರ್ಮಸಮ್ಮತವಾಗಿರುವಿಕೆ : ಧರ್ಮಾವಿರುದ್ಧತ್ವ : ಭಾರತೀಯ ಅರ್ಥಶಾಸ್ತ್ರವು ಧರ್ಮ, ಮತ, ನೀತಿ, ಅಧ್ಯಾತ್ಮ ಇವುಗಳನ್ನು ವಿರೋಧಿಸುವುದಕ್ಕೂ ನಿರಾಕರಿಸುವುದಕ್ಕೂ ಹೋಗುವುದಿಲ್ಲ (ಭಾರದ. ೩೫೩). [ಸಂ.]

ಧರ್ಮಾಸನ (ನಾ). ನ್ಯಾಯನಿರ್ಣಯ ಮಾಡುವಾಗ ನ್ಯಾಯಾಧೀಶನು ಕುಳಿತುಕೊಳ್ಳುವ ನ್ಯಾಯಪೀಠ : ಧರ್ಮಾಗಮ, ಧರ್ಮಾಸನ, ಧರ್ಮಾಧ್ಯಕ್ಷ . . . ಇತ್ಯಾದಿಗಳಲ್ಲಿ ಧರ್ಮಕ್ಕೆ ನ್ಯಾಯ ಎಂದರ್ಥವು (ಆರ್ಯಧ. ೧೧); ಧರ್ಮಾಸನ ಹೊರಳುತಿವೆ ಸಿಂಹಾಸನ ಉರುಳುತಿವೆ (ಗರಿ. ೧೧೫-೧೯). [ಧರ್ಮ + ಆಸನ]

ಧರ್ಮಾಸೂಯೆ (ನಾ). (ಅನ್ಯ) ಮತವನ್ನು ಕುರಿತ ಅಸಹನೆ : ಧರ್ಮಾಂಧರೀ ಯೇಹೂದ್ಯರಿವರಿಗೀ ಯೇಸುವಿನೊಳಿರುವ ಧರ್ಮಾಸೂಯೆಗಾಂ ದುಡುಕೆ ಗಂಡೋಲಿಗಳ ಗೂಡಿಗೆಸೆದ ಕಲ್ಲಂತಾಗದಿರದು (ಗೊಲ್ಡೊಥಾ. ೭-೧೯೭). [ಧರ್ಮ + ಅಸೂಯೆ]

ಧರ್ಮಾಸ್ತಿಕಾಯ (ನಾ). [ಜೈನ] ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ಎಂಬ ಐದು ಬಗೆಯ ಅಸ್ತಿಕಾಯಗಳಲ್ಲಿ ಒಂದು ; ಬಹುಪ್ರದೇಶದಲ್ಲಿ ವ್ಯಾಪಕವಾಗಿರುವ ಧರ್ಮದ್ರವ್ಯ : ಪುಣ್ಯಪಾಪಮೆಂಬುದು ಗಂಧರ್ವನಗರವಿಳಾಸಮುಂ ಧರ್ಮಾಸ್ತಿಕಾಯಮೆಂಬುದು ಮರುಮರೀಚಿಕಾನಿಕಾಯಂಗಳುಂ . . . ಜೀವಿತ ಮರಣಂಗಳೆಂಬಿವಱಿಟ್ಟಳಮುಂ ಪುಸಿಯ ಪೊಟ್ಟಳಮುಮಕ್ಕುಂ (ಶಾಂತಿಪು. ೮-೧೩೨ ವ) ; ಜೀವಾಸ್ತಿಕಾಯಂ ಪುದ್ಗಲಾಸ್ತಿಕಾಯಂ ಧರ್ಮಾಸ್ತಿಕಾಯಂ ಅಧರ್ಮಾಸ್ತಿಕಾಯಂ ಆಕಾಶಾಸ್ತಿಕಾಯಮೆಂಬ ಪಂಚಾಸ್ತಿಕಾಯನಿಕಾಯಮುಮಂ . . . ವ್ಯಾಖ್ಯಾನಂಗೆಯ್ಯಲ್ (ಸುಕುಮಾ. ೩-೩೯ ವ) ; ಅಣುಗಳ ಪುಂಜವೇ ಪುದ್ಗಲದ್ರವ್ಯವು. ಅದರಲ್ಲೂ ಅಸಂಖ್ಯಾತ ಅಂಶಗಳಿರುವುವು. ಅವುಗಳಿಗೆ ಪ್ರದೇಶವೆಂದು ಹೆಸರು . . . ಅಸ್ತಿಕಾಯವೆಂದರೆ ಬಹುಪ್ರದೇಶವುಳ್ಳ ವಸ್ತುವೆಂದರ್ಥ . . . ಜೀವಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ ಆಕಾಶಾಸ್ತಿಕಾಯ, ಪುದ್ಗಲಾಸ್ತಿಕಾಯ ಎಂದು ವ್ಯವಹಾರವಿರುವುದು (ಹಿಂದಸಾ. ೮೧). 'ಪಂಚಾಸ್ತಿಕಾಯ' ಪರಾ. P ಇದು ಅನಂತ ಹಾಗೂ ಗುರುವೂ ಲಘುವೂ ಅಲ್ಲದ ಗುಣವುಳ್ಳುದು. ಇದರ ರೂಪವು ಯಾವಾಗಲೂ ಪರಿಣಾಮವನ್ನು ಹೊಂದುತ್ತಿರುತ್ತದೆ. ಇದು ನಿತ್ಯ. ಗತಿಕ್ರಿಯಾಯುಕ್ತವಾದ ದ್ರವ್ಯಗಳ ಕ್ರಿಯೆಯಲ್ಲಿ ನಿಮಿತ್ತ ಭೂತವಾಗಿರುತ್ತದೆ. ಇದು ಯಾವುದರ ಕಾರ್ಯವೂ ಅಲ್ಲ. [ಧರ್ಮ + ಅಸ್ತಿಕಾಯ]

ಧರ್ಮಾಸ್ಪತ್ರೆ (ನಾ). ರೋಗಿಗಳಿಗೆ ಪುಕ್ಕಟೆಯಾಗಿ ಔಷಧೋಪಚಾರ ಮಾಡುವ ಆಸ್ಪತ್ರೆ ; ಉಚಿತ ಚಿಕಿತ್ಸೆ ನೀಡುವ ದವಾಖಾನೆ : ಹೇಗಿದ್ದರೂ ಧರ್ಮಾಸ್ಪತ್ರೆ. ಅದರಲ್ಲೂ ಇಲ್ಲಿ ಬರುವವರು ಎಲ್ಲ ನಿರ್ಗತಿಕರು (ದೀಪದ. ೯೭). [ಧರ್ಮ + ಆಸ್ಪತ್ರೆ]

ಧರ್ಮಿ (ಗು). ೧. ಒಳ್ಳೆಯ ಗುಣವುಳ್ಳ ; ಪುಣ್ಯಕಾರ್ಯಗಳನ್ನು ಆಚರಿಸುವ. ೨. ನಿಯಮಗಳನ್ನು ಪಾಲಿಸುವ ; ಕರ್ತವ್ಯಗಳನ್ನು ತಿಳಿದುಕೊಂಡ. (ನಾ). ೩. ಲಕ್ಷಣಗಳನ್ನುಳ್ಳುದು ; ವಿಶಿಷ್ಟಗುಣ ಅಥವಾ ಸ್ವಭಾವಕ್ಕೆ ಆಶ್ರಯವಾದುದು : ನೇರವಾಗಿ ಧರ್ಮಿಯನ್ನು ಹೇಳದೇ ಗೌಣವಾದ ಧರ್ಮಗಳನ್ನು ಹೇಳಿಬಿಟ್ಟು ಅದರಿಂದ ಧರ್ಮಿಯಿರುವುದನ್ನು ಊಹಿಸಿಕೊಳ್ಳಿ ಎನ್ನುವುದು ಯಾವ ನ್ಯಾಯ ? (ಭಾರಮಿ. ೧೩೭) ; ಆತ್ಮ, ಅನಾತ್ಮ—ಎಂಬ ಧರ್ಮಿಗಳನ್ನು ಇವುಗಳ ಧರ್ಮಗಳನ್ನೂ (ಬ್ರಹ್ಮಭಾ. ೨ ಅಡಿಟಿ). ೪. ಸದಾಚಾರಿ ; ಧರ್ಮಿಷ್ಠ : ಧರ್ಮಿಗಂ ಕೊಲೆಯೇ ಮಂತ್ರಿಗಮಿಚ್ಚಕಾಱತನಮೇ (ಗದಾಯು. ೫-೪೬) ; ದೇವಂಗಾಱದೆ ಧರ್ಮಿಯಂ ಬಡಿದರ್ (ಪುಷ್ಪಪು. ೧೨-೮೬) ; ಧರ್ಮಿಯನು ಜನವಾಶ್ರಯಿಸುವುದು (ಕುಪ್ಯಾಉ. ಓರಿಇ. ೩-೧೩ ಹೆಚ್ಚಿನ ಪದ್ಯ) ; ಹೊಲಗೇರಿಯಲಿ ಹುಟ್ಟು ಎಲುವಿನ ಗೃಹವಾಸ ಸಲೆ ಧರ್ಮಿ ದಾನಿಯೆನಿಸದೆ ಹಾರುವನು ಕುಲಕೆ ಹೋರಿಹನು (ಸರ್ವಜ್ಞ. ೯೬೦). ೫. ಕರುಣೆಯುಳ್ಳವನು ; ದಯಾಮಯ : ಕೂಡಲಸಂಗಮದೇವಾ ನೀನೆನಗೊಳ್ಳಿದನಾದರೆ ಎನ್ನ

ಹೊಗಳತೆಗಡ ಬಾರಾ ಧರ್ಮಿ (ಬಸವ. ೩೮೬) : ಎನ್ನ ಜನ್ಮವ ತೊಡೆದನೀ ಧರ್ಮಿ ಎನ್ನ ಜನ್ಮವನತಿಗಳೆದನೀ ಧರ್ಮಿ (ಬಸವ. ೪೮೧) : ಪಶು ಪಂಕದಲ್ಲಿರೆಬ್ಬಿಸುವ ಧರ್ಮಿಯ ಕಾಣೆ (ದೀಕ್ಷಾದೋ. ೧೫-೩೪) : ಸೊಡರು ಲಂಚವ ಕೊಂಡು ಕೊಡುವದೊಪ್ಪಚಿ ಬೆಳಗ ಪೊಡವಿಗೆ ಸೂರ್ಯ ಬೆಳಗೀವೊಲ್ ಲಂಚವನು ಹಿಡಿಯನವ ಧರ್ಮಿ (ಸರ್ವಜ್ಞ. ೧೫೧೬). ೭. [ನಾಟ್ಯ] "(ನಾಟ್ಯ) 'ಧರ್ಮಿ' ಎಂದರೆ ನಟರು ಆಚರಣೆಯಲ್ಲಿಟ್ಟುಕೊಂಡಿರತಕ್ಕ "ಸಮಯ" ಅಥವಾ ಸಂಪ್ರದಾಯ. ಆಡಂವ ಮಾತನ್ನು ಸಂಗೀತದಲ್ಲಿ ಹೇಳುವುದು, ನರ್ತನ ಮಾಡುತ್ತ ನಡೆದು ಬರಂವುದು, ಸ್ವಗತದಲ್ಲಿ ಹತ್ತಿರವಿರುವ ನಟರೂ ಆಡಿದ ಮಾತನ್ನು ಕೇಳದಂತಿರಂವುದು-ಇತ್ಯಾದಿ" (ಸಂಪಾಟ. ೧೩).

[ಸಂ. ಧರ್ಮಿನ್]

ಧರ್ಮಿಷ್ಠ (ನಾ). ಧರ್ಮದಲ್ಲಿ ಅತ್ಯಂತ ಶ್ರದ್ಧೆಯುಳ್ಳವನಂ ; ಧರ್ಮಮಾರ್ಗದಲ್ಲಿ ನಡೆಯಂವವನಂ ; ಧರ್ಮಾತ್ಮ : ಅನಲ್ಪಬುದ್ಧಿ ಸುಖಿ ಧರ್ಮಿಷ್ಠ ಕಲಾವೇದಿ ಸತ್ಕರತಂ ಶಾಸ್ತ್ರವಿದಂ . . . ಕನ್ಯಾನಿವಾಸೋದ್ಭವಂ (ಜಾತಕ. ೧೬-೬) ; ಅರಸ ಧರ್ಮಿಷ್ಠನು ಯುಧಿಷ್ಠಿರ ಧರಣಪತಿಯುತ್ತಮನು ಪವನಜ ನರರು ವಿನಯಾನ್ವಿತರು (ಕುವ್ಯಾಸ ೧೨-೩೨) ; ಪಾಂಡವರು ಧರ್ಮಿಷ್ಠರು (ನೀತಿಚಂ. I, ೧೮). [ಸಂ.]

ಧರ್ಮೀತ, ಧರ್ಮವಿತ(ನಾ).=ಧರ್ಮೈತ : ಪುರಿಕರನಗರದ ಅಯ್ನೂರ್ಬರೆ ನಡೆಯಿಸುವನ್ತು ಮಾಡಿ ಧರ್ಮೀತಮುಮಂ . . . ಸಾನನ್ದದೆ ಶ್ರೀಸಾನ್ತಿಸೆಟ್ಟಿ ಪರಿರಕ್ಷಿಸಿದಂ (ಶಾಇಶ. XX, ೫೫-೩೦ : 1082) ; ಕೋಟೆಯ ಕೆಯ್ಯ ಸ್ಥಳದೊಳಗೆ ಪಾತ್ರ ಪಾವುಳಕ್ಕೆ ಬಿಟ್ಟ ಮತ್ತರು ಇನೂಱು ಇಪ್ಪತ್ತು . . . ಧರ್ಮೀತಕ್ಕೆ ಹತ್ತು (ಕಇ. II, ೧೬-೪೪ : 1122) ; ನಾಗವಾವಿಯ ಖಂಡಸ್ಫುಟಿತ ಜೀರ್ನೋ(ರ್ಣೋ)ದ್ಧಾರಕ್ಕವಲ್ಲಿಯ ಧರ್ಮೀತಕ್ಕಂ . . . ಕೊಕ್ಕುಳಿಗೇರಿಯ ಹಾಳಹಸುಗೆಯೊಳಗೆ ಸರ್ವನಮಶ್ಕ(ಸ್ಯ)ವಾಗಿ ಬಿಟ್ಟ ಮತ್ತರಾಱು (ಎಇ. XVIII, ೨೦೬-೪೦ : 1162); ಕೆಱೆಯ ಕೆಳಗಣ ಧರ್ಮೀತದ ಭಾವಿಯಿಂ ತೆಂಕಲುಂ ಬಡಗಲುಂ (ಶಾಇಶ. IX-1, ೬೬೬-೩೭ : 1229) : [ಧ]ರ್ಮೀತದ ಕೆಯ್ಯ ಪಡುವಣ ಬಡಗಣ ಗುಡ್ಡೆ (ಶಾಇಶ. XX, ೬೬೫-೧ ; ಸು. 13ನೆಯ ಶತ). **ಧರ್ಮವಿತ** : ಶಿವಮಣನಾಯಕರು ತಂವು ಪೊಡೆಯಗೆ ಪು[ಣ್ಯ]ವಾಗಲೆಂದು ಸೋಗೆಯ ಧರ್ಮವಿತಕ್ಕೆ ಕೊಟ್ಟ ದಣಾಯಕರ ಪುರ (ಶಾಇಶ. IX-II, ೫೦೬-೬ : 1516). [ಧರ್ಮ + ವಿತ$_1$]

ಧರ್ಮೈಕರಕ್ಷಕ (ನಾ). ನ್ಯಾಯವನ್ನು ರಕ್ಷಿಸುವ ವಿಶೈಕ ವ್ಯಕ್ತಿ ; ಧರ್ಮಪಕ್ಷಪಾತಿ : ನೀವು ಮಾಡಿದ ಸತ್ಕಭಾಷೆಗೆ ನೀವಲಾ ತಪ್ಪದಿರಿ ನೋಟಕರಾವು ಮಧ್ಯಸ್ಥಿತರಲೇ ಧರ್ಮೈಕರಕ್ಷಕರು (ಕುವ್ಯಾಗ. ೮-೩೪).

[ಧರ್ಮ + ಏಕ + ರಕ್ಷಕ]

ಧರ್ಮೋತ್ತರ (ಗು). ಧರ್ಮಪ್ರಧಾನವಾದ ; ಧಾರ್ಮಿಕ ವಿಚಾರಗಳಿಂದ ಪರಿಪೂರ್ಣವಾದ : ಶಿವಮಠದೊಳುಚ್ಚರಿಪ ಶಿವಪುರಾಣಂಗಳಂ ಶಿವಧರ್ಮ ಧರ್ಮೋತ್ತರಪ್ರಸಂಗಂಗಳಂ . . . ಪೇಳುತುಂ (ಸಂಬಿರ. ೯-೧೦೩).

[ಧರ್ಮ + ಉತ್ತರ]

ಧರ್ಮೋತ್ಸವ (ನಾ). ಧಾರ್ಮಿಕ ಉತ್ಸವ ; ಧಾರ್ಮಿಕ ಕಾರ್ಯಂಗಳ ಆಚರಣೆ : ಬಗೆ ಧರ್ಮೋತ್ಸವಮೆಲ್ಲಿತಲ್ಲಿಗೆ . . . ತನ್ನಂ ತಡವಿಲ್ಲದುಯ್ಕೆ (ಶಾಂತಿಪು. ೭-೭೭). [ಧರ್ಮ + ಉತ್ಸವ]

ಧರ್ಮೋದಕ (ನಾ). ಮೃತರಾದವರಿಗೆ ಮರಣದಿನದಿಂದ ಹತ್ತನೆಯ ದಿನ ಎಂದರೆ ದಶಾಹದಂದು ಜ್ಞಾತಿಗಳೂ ಬಂಧುಗಳೂ ಕೊಡುವ ತಿಲೋದಕ : ಹಿಂದಿನ ದ್ವೇಷವನ್ನು ನೆನಪಿನಲ್ಲಿಟ್ಟುಕೊಂಡು ಅಣ್ಣನಿಗೆ ಧರ್ಮೋದಕವನ್ನು ನೀಡಲು ಸ್ವಂತ ತಮ್ಮನೇ ಬರಲಿಲ್ಲ (ರೂಢಿ).

[ಧರ್ಮ + ಉದಕ$_2$]

ಧರ್ಮೋದಯ (ನಾ). ೧. ಧರ್ಮದ ಅಭಿವೃದ್ಧಿ.-ಏಳಿಗೆ : ಕೃತಯುಗದೊಳ್ ಧರ್ಮೋದಯದತಿಸುಖದುನ್ನತಿಗಳಿಂದಮಿಪ್ಪುದು ಲೋಕಂ (ಲಾಸ್ಯರಂ. ೦-೩). ೨. ಧರ್ಮದ ಬಗೆಗೆ ಉಂಟಾಗುವ ಎಚ್ಚರ.-ತಿಳಿವಳಿಕೆ. [ಧರ್ಮ + ಉದಯ]

ಧರ್ಮೋದ್ಧಾರ (ನಾ). ೧. ಧರ್ಮವನ್ನು ಎತ್ತಿಹಿಡಿಯುವುದಂ ; ಧರ್ಮಸಂರಕ್ಷಣೆ: ಧರ್ಮೋದ್ಧಾರಮಂ ಮಾಡಿದವರ ಮಟಮೆಯಂತೆಂದೊ × × × (ಸೌಇಶ. XX, ೩೩೪-೧೦ : 1206). ೨. ಧರ್ಮವನ್ನು ರಕ್ಷಿಸುವವನು,-ಎತ್ತಿಹಿಡಿಯುವವನು : ಶೂರಧೀರನುದಾರಧರ್ಮೋದ್ಧಾರ ವಿವಿಧವಿಚಾರ ಸುಜನಾಧಾರ ರಿಪುಸಂಹಾರ. . . ಸುಜನ ಸ್ವಾಮಿಕಾರ್ಯಾಗಾರ ನೆನಿಸುವ ಮಂತ್ರಿಯುಂಟೇ ರಾಯ ನಿನಗೆಂದ (ಕುವ್ಯಾಸ. ೧-೭೧).

[ಧರ್ಮ + ಉದ್ಧಾರ]

ಧರ್ಮೋದ್ಧಾರಕ (ನಾ). ಧರ್ಮವನ್ನು ಎತ್ತಿಹಿಡಿಯುವವನು ; ಧರ್ಮಸಂರಕ್ಷಕ : ಕೃಷ್ಣನು ಧರ್ಮೋದ್ಧಾರಕನಾದನು (ಹುಕ್ಕಾರ. ಕಿಂ೩ ೬೧೫). [ಧರ್ಮ + ಉದ್ಧಾರಕ]

ಧರ್ಮೋದ್ಯೋಗ (ನಾ). ಧರ್ಮಕಾರ್ಯ ; ಧರ್ಮದಿಂದ ಕೂಡಿದ ಆಚಾರ,-ವ್ಯವಹಾರ : ಆಗಣಮಿಗಣಮಿವೆನ್ನವೆನ್ನದೆ ಧರ್ಮೋದ್ಯೋಗದಿಂದ ರಕ್ಷಿಸುವರ್ (ಸೌಇಶ. XI-1, ೫೩-೮೦ : 1007) : ಪಾಪೋದ್ಯೋಗಮನೆ ಬಿಸುಟು ಧರ್ಮೋದ್ಯೋಗದೊಳಡರಿರ್ಪ ಜೈನರಣ್ಣ ವಿದಗ್ಧರ್ (ಧರ್ಮಾಮೃ. ೩-೨೦೯) : ಧರ್ಮೋದ್ಯೋಗಾನುರಾಗೋಲ್ಲಸಿತಹೃದಯನುದ್ಯದ್ವಿಭೂಷಾವಳೀರೋಚಿರ್ಮಾಳಾಚಿತ್ರಿತಾಭ್ರಂ . . . ಸೌಧರ್ಮೇಂದ್ರಂ ಬಂದಂ (ಪಂದ್ರಪು. ೦೨-೪೩). [ಧರ್ಮ + ಉದ್ಯೋಗ]

ಧರ್ಮೋದ್ಯೋಗಿನಿ (ನಾ). ಧರ್ಮಕಾರ್ಯದಲ್ಲಿ ನಿರತಳಾಗಿರುವವಳಂ : ಕಂಚಲಮಹಾದೇವಿಯರ ಮಟಮೋನ್ನತಿಕೆಯೇ ದೊರೆತನೆ . . . ನಿತ್ಯ ಪ್ರವರ್ತಿತ ದಯದಾನಧರ್ಮೋದ್ಯೋಗಿನಿ (ಸೌಇಶ. XX, ೪೬-೧೦; 1045).

[ಸಂ. ಧರ್ಮೋದ್ಯೋಗಿನೀ]

ಧರ್ಮೋಪದೇಶ (ನಾ). ೧. ಧರ್ಮಶಾಸ್ತ್ರ. ೨. ಧಾರ್ಮಿಕತತ್ತ್ವಗಳನ್ನು ಬೋಧಿಸುವುದಂ : ಆತನುಮಾ ಪೇಟ್ಟ ಧರ್ಮೋಪದೇಶಮುಮಂ ಬಿಟ್ಟು ತನ್ನ ಮುನ್ನಿನ ದುಷ್ಪಮಂತ್ರಿಗಳ ಮಾತಂ ಕೈಕೊಂಡಂ (ಪಂಚತಂ. ೦೩೬-೦೩) ; ಧರ್ಮೋಪದೇಶಮಿಲ್ಲದೆ ಕರ್ಮಮನುಪಶಮಿಪ ಚರಿತವಿಲ್ಲದೆ ದುಃಖಕ್ಕಾರ್ಮಮನಿಸಿರ್ದ ಲೌಕಿಕಧರ್ಮದೊಳಿಸಗುವನೆ ಸಮಯಮೂಢಂ (ಧರ್ಮಾಮೃ. ೫-೨೪) ; ದೇಶಂ ಧರ್ಮೋಪದೇಶಂ ಶ್ರುತಬಲಮೆ ಬಲಂ . . . ಆದತ್ತನೆ ತನಗೆ ಜಗತ್ಪಿದ್ಧರಾದ್ಧಾಂತಚಕ್ರಾಧೀಶಂ ಸಪ್ತಾಂಗ ಸಾಮ್ರಾಜ್ಯದಿನಿಳಿಗೆಸೆದಂ ವೀರನಂದಿವ್ರತೀಂದ್ರಂ (ಪಂದ್ರಪು. ೧-೩೯) : ನೀನೇನೂ ನಮಗೆ ಧರ್ಮೋಪದೇಶವನ್ನು ಮಾತಬೇಕಾದುದಿಲ್ಲ (ಕವಿಕ. ೩೮). ೩. [ಜೈನ] ಸ್ವಾಧ್ಯಾಯದ ಐದು ಅಂಗಗಳಲ್ಲಿ ಒಂದು : ಸ್ವಾಧ್ಯಾಯವು ವಾಚನೆ, ಪೃಚ್ಛನೆ, ಅನುಪ್ರೇಕ್ಷೆ, ಆಮ್ನಾಯ, ಧರ್ಮೋಪದೇಶ ಎಂದು ಆಯ್ದು ಬಗೆಯಾಗಿದೆ . . . ದುರ್ಮಾರ್ಗದಿಂದ ತಿರುಗಿಸುವುದಕ್ಕೂ ಸತ್ಯಮಾರ್ಗವನ್ನು ತೋರಿಸುವುದಕ್ಕೂ ಧರ್ಮಾರ್ಥವಾಗಿ ಉಪದೇಶಿಸುವುದು ಧರ್ಮೋಪದೇಶ ಸ್ವಾಧ್ಯಾಯವು (ಕ್ರಿಸಿದ. ೮೮).

[ಧರ್ಮ + ಉಪದೇಶ]

ಧರ್ಮೋಪದೇಶಂಗೆಯ್ (ಕ್ರಿ). ಧರ್ಮವನ್ನು ಕುರಿತಂ ಉಪದೇಶಿಸಂ : ನಭೋಯಾನದೊಳ್ ಕಿಱಿದು ಪೊಬ್ಬುಗೆಯುಂ . . . ಧರ್ಮೋಪದೇಶಂಗೆಯುತ್ತುಮುತ್ತಮತೀರ್ಥೇಶ್ವರಂ ವಿಹರಿಸೆ (ಶಾಂತಿಪು.೦೨-೨೩ ಪ) : ಆ ಕೇಸರಿಗಾಸುರಕರ್ಮಂಗೆಯ್ಯಲ್ವೇಡೆಂದು ಧರ್ಮೋಪದೇಶಂಗೆಯ್ದು ಪರಲೋಕಕ್ಕುತ್ತರಸಾಧಕನಾಗಿ ನಡೆವೆಂ (ಪಂಚತಂ. ೦೩೬-೨).

[ಧರ್ಮೋಪದೇಶ + ಕೆಯ್$_1$]

ಧರ್ಮೋಪದೇಶಕ (ನಾ). ೧. ಧರ್ಮತತ್ತ್ವಗಳನ್ನು ಉಪದೇಶ ಮಾಡುವವನು; ಧರ್ಮಗುರು. ೨. ಮತಪ್ರಚಾರಕ: ಅಶೋಕಮಹಾರಾಜನು ಬನವಾಸಿಗೆ ಧರ್ಮೋಪದೇಶಕರನ್ನು ಕಳುಹಿಸಿದ್ದನೆಂಬ ಮಹಾವಂಸದ ವಚನದಿಂದ ದೃಢವಾಗುತ್ತದೆ (ಕರ್ಣಾಅ. ೨). [ಧರ್ಮ + ಉಪದೇಶಕ]

ಧರ್ಮೋಪದೇಶಿ (ನಾ). ಧಾರ್ಮಿಕತತ್ತ್ವಗಳನ್ನು ಬೋಧಿಸುವವನು; ಧರ್ಮೋಪದೇಶಕ: ಧರ್ಮೋಪದೇಶಿಯಪ್ಪಂ ದುರ್ಮನನೇ ಶಾಂತನಾಪ್ತನಲ್ಲಂ ರುದ್ರಂ (ಸಮಪ. ೮-೬೩). [ಸಂ. ಧರ್ಮೋಪದೇಶಿನ್]

ಧರ್ಮೋಪನಯನ (ನಾ). ಧರ್ಮಾರ್ಥವಾಗಿ ಮಾಡುವ ಮುಂಜಿ: ಇಂದು ದೇವಸ್ಥಾನದಲ್ಲಿ ಧರ್ಮೋಪನಯನವನ್ನು ಏರ್ಪಡಿಸಿದ್ದರು (ರೂಢಿ). [ಧರ್ಮ + ಉಪನಯನ]

ಧರ್ಮೋಪಮಾನಲುಪ್ತೆ (ನಾ). [ಕಾವ್ಯಮಿಾ]ಲುಪ್ತೋಪಮಾಲಂಕಾರದ ಒಂದು ಪ್ರಭೇದ; ಉಪಮಾನ ಉಪಮೇಯಗಳಲ್ಲಿರುವ ಸಾಧಾರಣಧರ್ಮವೂ ಉಪಮಾನವೂ ಉಕ್ತವಾಗದಿರುವುದು: ಧರ್ಮೋಪಮಾನಲುಪ್ತೆಯೆಂತೆನೆ:– ಗಂಡೇಟ್ಟಿಂದೂರಂ ಕೈಕೊಂಡಿರೆ ನೀಂ ಕೊಂಗುನಾಡ ಪೆಱಗೋಂಟೆಗಳಂ ಕೊಂಡುದುದಂ ಕೊನರಿಪುದದು ದಂಡಾ ಪೂಪಂಬೊಲಲ್ತೆ ಚಿಕದೇವೇಂದ್ರಾ (ಅಪ್ರತಿ. ೩೭-೧೦); ಇದಱೊಳ್ ಅಂದೂರಂ ಪೆಱಗೋಂಟೆಗಳಂ ಕೊಂಡೈ ಎಂಬ ಉಪಮೇಯಮಂ ವೊಲ್ ಎಂದು ವಾಚಕಪದಮಂ ಪೇೞ್ದು ಕೋಲಂ ಕಜ್ಜಾಯಂಗಳಂ ನುಂಗಿದನೆಂಬ ಉಪಮಾನಮಂ ಕಡುಗೆಯ್ಮೆ ಮೆಲ್ಗೆಯ್ಮೆಗಳೆಂಬ ಸಾಧಾರಣಧರ್ಮಮುಮಂ ಪೇೞದಿರ್ಪುದಱಿಂ ಧರ್ಮೋಪಮಾನಲುಪ್ತೆಯಾದುದು (ಅಪ್ರತಿ. ೩೮-೧). [ಸಂ. ಧರ್ಮೋಪಮಾನಲುಪ್ತಾ]

ಧರ್ಮೋಪಮಾನವಾಚಕಲುಪ್ತೆ (ನಾ). [ಕಾವ್ಯಮಿಾ] ಲುಪ್ತೋಪಮಾಲಂಕಾರದ ಒಂದು ಪ್ರಭೇದ; ಉಪಮಾನ ಉಪಮೇಯಗಳಲ್ಲಿರುವ ಸಾಧಾರಣಧರ್ಮವೂ ಉಪಮಾನವೂ ಉಪಮಾವಾಚಕ ಶಬ್ದವೂ ಲೋಪವಾಗಿರುವುದು: ಧರ್ಮೋಪಮಾನವಾಚಕಲುಪ್ತೆಯೆಂತೆನೆ:–ಪೊಸಊರಂ ಮುತ್ತಿದುದಂ ಮಸಗಿ ಮಹೀಶೂರಸುಭಟರೆಯ್ದಿದುದಂ ತಾಂ ಮಿಸುಗುವಿನಂ ಮೂಗರಿದುದನೆಸವಂತಂ ಕೋಕಿಲಾಮ್ರಮೆಂದಂ ಮಂದಂ ಇದಱೊಳ್ ಎಸವಂತರಾವು ತನ್ನ ಮೂಗು ಪೋದುದುಂ ಕೋಗಿಲೆ ಬರ್ಪುದುಂ ಮಾಂಬಳಂ ಬಿಟ್ಟಂತಾಕಸ್ಮಿಕಮಾದುದೆಂಬಲ್ಲಿ ಮೂಗರಿದುದೆಂಬ ಉಪಮೇಯಮಾತ್ರಮಂ ಪೇೞ್ದು ಇದರ್ಕುಪಮಾನಮಾದ ಆಮ್ರಪತನಮಂ ಆಕಸ್ಮಿಕಮೆಂಬ ಸಮಾನಧರ್ಮಮುಮಂ ಅಂತೆಯೆಂಬ ವಾಚಕಪದಮುಮಂ ಪೇೞದಿರ್ಪುದಱಿಂ ಧರ್ಮೋಪಮಾನವಾಚಕಲುಪ್ತೆಯಾದುದು (ಅಪ್ರತಿ. ೩೮-೧೩). [ಸಂ. ಧರ್ಮೋಪಮಾನವಾಚಕಲುಪ್ತಾ]

ಧರ್ಮೋಪಮೆ (ನಾ). [ಕಾವ್ಯಮಿಾ] ಅರ್ಥಾಲಂಕಾರಗಳಲ್ಲಿ ಒಂದು; ಉಪಮಾಲಂಕಾರದ ಒಂದು ಪ್ರಭೇದ; ಉಪಮಾನ ಉಪಮೇಯಗಳಲ್ಲಿರುವ ಸಾಧಾರಣಧರ್ಮವು ಮಾತಿನಲ್ಲಿ ಉಕ್ತವಾಗಿರುವುದು: ತಳಿರ್ಗಳವೋಲ್ ಮೆಲ್ಲಿದುವೀ ತಳಂಗಳಳಿಕುಳದವೋಲ್ ವಿನೀಳಂಗಳ್ ನಿನ್ನಳಕಾಳಿಗಳೆಂಬುದನಾಕುಳಮಿಲ್ಲದೆ ವಿಬುಧರಱಿಗೆ ಧರ್ಮೋಪಮೆಯಂ (ಕವಿರಾ.೩-೬೧); P ಈ ಪ್ರಯೋಗದಲ್ಲಿ 'ತಳಿರ್ಗಳವೋಲ್ ಮೆಲ್ಲಿದುವೀ ತಳಂಗಳ್' ಎಂಬಲ್ಲಿ ಉಪಮಾನವಾದ ತಳಿರುಗಳಲ್ಲೂ ಉಪಮೇಯವಾದ ಅಂಗೈಯಲ್ಲೂ ಇರುವ ಸಮಾನಧರ್ಮವಾದ ಮೆಲ್ಬು ಶಬ್ದತಃ ಹೇಳಿದೆ. ಆದುದರಿಂದ ಧರ್ಮೋಪಮೆ. ಉಳಿದ ಪ್ರಯೋಗಗಳಲ್ಲೂ ಹೀಗೆಯೇ ಸಮನ್ವಯಂ ಮಾಡಿಕೊಳ್ಳಬೇಕು; ಧರ್ಮೋಪಮೆಗೆ ಜಲನಿಧಿವೊಲ್ ಗಂಭೀರಂ ಬಲವೈರಿಯವೊಲ್ ಸಮಗ್ರವಿಭವಸನಾಥಂ ಕುಲಗಿರಿವೊಲ್ ನಿಷ್ಕಂಪಂ ಬಲಿಯಂತೆವೊಲಧಿಕದಾನಿ ದಾನವಿನೋದಂ (ಕಾವ್ಯಾವ. ೬೬೭). [ಧರ್ಮ + ಉಪಮೆ]

ಧರ್ಮೋಪಮೇಯಲುಪ್ತೋಪಮೆ (ನಾ). [ಕಾವ್ಯಮಿಾ] ಲುಪ್ತೋಪಮಾಲಂಕಾರದ ಒಂದು ಪ್ರಭೇದ; ಸಾಧಾರಣಧರ್ಮವೂ ಉಪಮೇಯವೂ ಉಕ್ತವಾಗದಿರುವುದು; P ಇದು ಎಂಟು ವಿಧವಾದ ಲುಪ್ತೋಪಮೆಯಲ್ಲಿ ಸೇರಿಲ್ಲ: ಧರ್ಮೋಪಮೇಯಲುಪ್ತೋಪಮೆ: ಎಳ್ಳನಿತು ನಿನ್ನ ಮಾತಂ ಕೇಳ್ವೆನೆಂದೆಣಿಕೆಗೊಳ್ಳದಿರು ಪರಿಚರ್ಯೆ ಮನೆವಾಳ್ತೆಯೆಂದೆಂಬ ತಳ್ಳಿಯವಳಲ್ಲ ನೀನೆಂದುದಂ ಮಾಡೆನೆಂದಾ ಚಂಡಿ ಚಂಡಿಗೊಳಲು ಮುಳ್ಳಿಡಿದ ಮರನೇಱಿದಂತಾದುದಿಹಪರಕಿದೊಳ್ಳಿತಾದವುದೆ ಬಂದುದು ತಪೋಹಾನಿಯೆಂದಳ್ಳೆಯೊಳ್ ಕೋಲ್ಗೊಂಡ ತೆಱದೊಳುದ್ದಾಲಕಂ ಚಿಂತಿಪಂ ಪ್ರತಿದಿನದೊಳು. ಈ 'ಮುಳ್ಳಿಡಿದ ಮರನೇಱಿದಂತಾದುದು' ಎಂಬಲ್ಲಿ 'ಚಂಡಿಯನ್ನು ಮದುವೆ ಮಾಡಿಕೊಂಡದ್ದು' ಎಂಬ ಉಪಮೇಯವಾಗಲಿ 'ಹಿಂಸೆ ಕೊಡುವುದು' ಎಂಬ ಧರ್ಮವಾಗಲಿ ಉಕ್ತವಾಗಿಲ್ಲ (ಕೈಪಿಡಿ. ೨೫೭); (ಜೈಮಿಭಾ. ೧೦-೨೪ ನೋ.) [ಧರ್ಮ + ಉಪಮೇಯ + ಲುಪ್ತೋಪಮೆ]

ಧರ್ಮ್ಯ (ಗು). ೧. ಧರ್ಮಸಮ್ಮತವಾದ; ಪುಣ್ಯಕರವಾದ. (ನಾ). ೨. ನ್ಯಾಯಯುಕ್ತವಾದುದು: ಯಾರು ಸರ್ವಾಧಾರನಾದ ನನ್ನ ಸಂಬಂಧಿಯಾದುದರಿಂದ ಧರ್ಮ್ಯವೆನಿಸುವ ನನ್ನ ಪ್ರೀತಿಸಾಧನವಾದ ಇದುವರೆಗೆ ನಿರೂಪಿತವಾದ ತತ್ತ್ವವನ್ನು ಶ್ರದ್ಧೆಯಿಂದ . . . ಉಪಾಸನ ಮಾಡುತ್ತಾರೆಯೋ ಅವರೇ ನನ್ನ ಭಕ್ತರು (ಭಾತತ್ವ. ೧೨೮). [ಸಂ.]

ಧರ್ಷ (ನಾ). ೧. ಧೈರ್ಯ; ದಿಟ್ಟತನ; ಧಾರ್ಷ್ಟ್ಯ. ೨. ಸೊಕ್ಕು; ಗರ್ವ. ೩. ದೂಷಣೆ; ನಿಂದೆ. ೪. ನಪುಂಸಕ; ಕೊಜ್ಜೆ. [ಸಂ.]

ಧರ್ಷಣ (ನಾ). ೧. ಅಪಚಾರಮಾಡುವುದು; ನೋಯಿಸುವುದು. ೨. ಮೇಲೆ ಬೀಳುವುದು; ಆಕ್ರಮಿಸುವುದು; ಆಕ್ರಮಣ. ೩. ಅಪಮಾನ. ೪. ಸಂಭೋಗ. ೫. ಅತ್ಯಾಚಾರ. [ಸಂ.]

ಧರ್ಷಣಿ (ನಾ). ನೀತಿಗೆಟ್ಟವಳು; ವ್ಯಭಿಚಾರಿಣಿ: "ಪುಂಶ್ಚಲೀ ಧರ್ಷಣೀ ... ಪಾಂಸುಲಾ–೮ ಹಾದರಗಿತ್ತಿಯ ಹೆಸಂಗಳು" (ಸಿದ್ಧಾಂತಿ. ೧೬೯). [ಸಂ.]

ಧರ್ಷಿಣಿ (ನಾ). = ಧರ್ಷಣಿ: "ಪಾಂಸುಳಾ, ಬಂಧಕೀ, ಸ್ವೈರಿಣೀ . . . ಧರ್ಷಿಣೀ, ಕುಲಟಾ, ಅವಿನೀತಾ, ಅಭಿಸಾರಿಕಾ–ಈ ೧೦ ಹಾದರಗಿತ್ತಿ" (ಹಲಾಯು. ೮೦-೩೪೨). [ಸಂ. ಧರ್ಷಿಣೀ]

ಧವ (ನಾ). ೧. ಗಂಡಸು; ಪುರುಷ. ೨. ಗಂಡ; ಪತಿ: "ಕಾಂತಃ, ಕಮಿತಾ, . . . ಧವಃ . . . ಅನುಕಃ – ಈ ೧೪ ಗಂಡಂ" (ಹಲಾಯು. ೮೨-೩೪೩); ನಿನ್ನ ಧವನುಗ್ರನತಿದುಶ್ಚರಿತ್ರಂ ಸಂತತಂ (ಅರಾಚ.೧೬-೩); ನವದಶೈಕಾದಶ ಸಂಖ್ಯೆಯ ಧವರ ನೆಱೆ ವರಿಸಿರ್ದ ವಾಙ್ಮಾಶಿವೆಯರೆಣೆಯೇ ನಾಗಮಾಂ ಬಾಸತ್ಪತಿವ್ರತೆಗೆ (ತಿಮ್ಮಶಾಂ. ೧-೧೨). ೩. ಒಡೆಯ; ಯಜಮಾನ; ಅಧಿಪತಿ: ಉದಯದ್ಗೃಹದ್ರೇಕ್ಕಾಣಂ ಮೊದಲಾಗಿರೆ ಮಂದಣಿಪ್ಪತ್ತೆರಡನೆ ತ್ರ್ಯಂಶಾಂಶದ ಪತಿಯ ಗುಣದೆ ಮೇಣ್ ತತ್ಸದನದ ಧವಗುಣದೆ ಸಾವು ಸಮನಿಸಿ ಬರ್ಕುಂ (ಜಾತತಿ. ೨೩-೨೧). 'ದಿಗ್ಧವ' ಪರಾ. ೪. ಒಂದು ಬಗೆಯ ಗಿಡ: "ಧವಃ, ಅರ್ಜುನಃ . . . ಮೋಕ್ಷಃ–ಎಂಬಿವು ಮರಂಗಳು ಮಪ್ಪುವು" (ಹಲಾಯು. ೧೩೫-೨೬). [ಸಂ.]

ಧವಗೇಡಿ (ನಾ). ಒಡೆಯನಿಲ್ಲದವನು; ಅನಾಥ; ದಿಕ್ಕಿಲ್ಲದವನು: ದಯೆಗೆಯ್ದು ಧವಗೇಡಿಯೆನಿಸದವರ ಅವಿರಳನೇ ಗುರು ನಮಸ್ತೇ (ಮೈಲಾರ. ೧೮೮-೧). [ಧವ + ಕೇಡಿ$_1$]

ಧವಡ$_1$, ದವಡ (ನಾ). ೧. ಹುಂಬ; ಅವಿವೇಕಿ: ಧವಡರೈ ನೀವ್[ಪಾಠಾಂ. ಧವಡತನದಲಿ, ಕವಡುತನದಲಿ]ದಿಟ್ಟರಹಿರಂಗವಣೆಯೊಳ್ಳಿತು ನಿಮ್ಮ ನಿಜವನು ವಿವರಿಸಾ ನೀವಾರು (ಕುವ್ಯಾಸ. ಓರಿಇ. ೨-೮೩). ದವಡ: ೨. ಹಟಮಾರಿ: ಕಳ್ಳ ಹಾದರಿಗ ಕೊಯ್ಕ ದವಡ ಬಾಜಾರ ಪಲ್ಲರನೆಲ್ಲ ನೆರವಿದೆ (ಬಿಜ್ಜರಾ. ೮-೪೨). ೩. ಕೆಡುಕ; ನೀಚ; ದುಷ್ಟ. 'ಅತಿದವಡ' ಪರಾ. [←ಮರಾ. ಧವಡ]

ಧವಡ$_2$ (ನಾ). (?) : ವರ್ಗಚತುರ್ಥಾಕ್ಷರಂಗಳ್ಗೆ ಘಟಿಯಂ . . . ಧಟಂ, ಧಾಳಿ, ಧಾರಿ, ಧವಳಂ (ಧವಡಂ) (ಶಮದ. ೧೫ ಪ್ರಯೋ). [?]

ಧವಡತನ, ದವಡತನ (ನಾ). ೧. ಹುಂಬತನ ; ಅವಿವೇಕ : ಕೈತವದ ಭಂಡರು ನೀವೊ ನಾವೋ ಸಾಕದಂತಿರಲಿ ಧವಡತನ[ಪಾಠಾಂ. ದವಡತನ, ಕವಡುತನ]ದಲಿ ದಿಟ್ಟರಹಿರಂಘವಣೆಯೊಳ್ಳಿತು ನಿಮ್ಮ ನಿಜವನು ವಿವರಿಸಿರೆ ನೀವಾರು ಹೇಳೆಂದನು ಜರಾಸಂಧ (ಕುವ್ಯಾಸ. ೨-೭೪). ೨. ಹಟಮಾರಿತನ. **ದವಡತನ** : ೧. ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ಧವಡ$_1$ + – ತನ]

ಧವಲ, ಧವಳ (ಗಂ). ೧. ಬಿಳಿಯ ; ಶುಭ್ರವಾದ. 'ಧವಲಪಕ್ಷ' ಪರಾ. ೨. ಅಂದವಾದ ; ಸುಂದರವಾದ. ೩. ಶ್ರೇಷ್ಠವಾದ ; ಘನತೆಯಿಂದ ಕೂಡಿದ. (ನಾ). ೪. ಬಿಳುಪು. ೫. ಶ್ರೇಷ್ಠವಾದ ಎತ್ತು. ೬. ಒಂದು ಬಗೆಯ ಕರ್ಪೂರ ; ಚೀನಿಕರ್ಪೂರ. ೭. ಒಂದು ಬಗೆಯ ಗೀತಪ್ರಬಂಧ ; ವಿವಾಹ ಮೊದಲಾದ ಮಂಗಳಕಾರ್ಯಗಳಲ್ಲಿ ಹಾಡುವ ಆಶೀರ್ವಾದಪರವಾದ ಹಾಡು ; P ಇದು ನಾಲ್ಕು, ಆರು ಅಥವಾ ಎಂಟು ಪಾದಗಳಿಂದಲೂ ಸಾಮಾನ್ಯವಾಗಿ ಆರು ಮಾತ್ರೆಯ ಗಣಗಳಿಂದಲೂ ಕೂಡಿರುತ್ತದೆ : ಶುಭಮುಹೂರ್ತದೊಳು ಕಲ್ಯಾಣಮಂಟಪದಿ ಕುಳಿತು ರಾಣಿಯರು ಸಹಿತಿಲ್ಲಿ ಧವಲ ಶೋಭನಗಳಂ ಜಾಣತನದಿಂ ಕೇಳಿ ಪರಕೆಯಂ ಕೈಕೊಂಡು (ಬೀಳವಂ. ೨-೧೧೮) ; ಆ ಧವಲದ ಕವಿಗಳ ಕೊಂಡಾಟದ ನಾದಮೊಪ್ಪಿದುದು (ಗುರುಚ. ೪೭೫). **ಧವಳ** : ೧. ಧವಳಧೌತ ದುಕೂಳಾಂತರೀಯಮಂ . . . ಪ್ರಸೂನರಚನಾವಿಚಿತ್ರಶೇಖರನುಂ . . . ಗಾರುಡಮಣಿಪ್ರಭಾವಿಭಾಸಿತಮಣಿಯಂಗುಳೀಯನುಮಾಗಿ (ವರ್ಧಮಾ. ೧೨-೩೩ ವ) ; ಚತುರ್ಥಸ್ನಾನದೊಳ್ ಧವಳಮಂಗಳಾಲಂಕೃತೆಯಾಗಿ ನಿಜಮನಃಪ್ರಿಯನ ಸೂಟ್ಗೆವಂದು. (ಚಂದ್ರಪು. ೩-೮೩ವ) ; ಶಂಖಧವಳಕಂಠದೊಳ್ ಪತ್ತುವಿಡಿದೇಕ ಮುಖೀರುದ್ರಾಕ್ಷಮೊಂದು ತೆಱಂಬೊಳೆಯೆ (ರಾಮಾಶ್ವ. ೪೦-೨೫). ೪. "ಗೌರಃ, ಶ್ವೇತಃ, ಸಿತಃ, ಶುಭ್ರಃ, ವಳಕ್ಷಃ, ಧವಳಃ . . . ಪಾಂಡುರಃ– ಈ ೧೨ ಬಿಳಿದು" (ಹಲಾಯು. ೧೨೧-೪೭) ; ಶರದದ ಮುಗಿಲ್ಗಳೆಸೆದುವತಿಧವಳಂಗಳ್ (ಆಗವಿ. ೪-೬೦) ; ಚೆಂದುಟಿ ಹವಳವು ಸುಲಿಪಲ್ಲು ಧವಳವು (ಇಂಜಾಪ. ೮೮-೨೭). ೭. ಧವಳಗಜೇಂದ್ರಮುಂ ಧಳವಚಾಮರಮುಂ ಧವಳಾತಪತ್ರಮುಂ . . . ಬೆರಸಷ್ಟದಿಕ್ತಟಂ ಧವಳಿಸೆ ಕೀರ್ತಿಯಿಂ ಧವಳ[ಪಾಠಾಂ. ಬೆಳಗೆ]ಮಂಗಳಗೇಯದಿನೊಪ್ಪಿ ಬರ್ಪ ಕೌರವಧವಳಂಗೆ ದೇಸಿಗನೆ ಬರ್ಪವೊಲೊರ್ವನೆ ಬರ್ಪುದಾದುದೇ (ಗದಾಯು. ೫-೪೦) ; ವಿವಾಹಗೇಹವನು ನೋಡುತ್ತ ಬರಬರಲಲ್ಲಿ ಮಂಗಳಾರತಿವಿಡಿದು ಧವಳಮಂ ಹಾಡುತಿರಲು (ಸಿದ್ಧರಾ. ೮-೮೯) ; ನುಣ್ಣನಿಯ[ಯಿ]ಂ ಧವಳಾಖ್ಯವಂ ಸುವಾಸಿನಿಯರೊಱಲ್ದು ಪಾಡಿಯೆ ನುತಿರ್ಪ ರವಂ ಪರೆದಿರ್ದುದೆಲ್ಲಿಯುಂ (ನಳಚಂ. ೪೨೫) ; ಇಕ್ಕೆಲದಿ ಕಳಸ ಕನ್ನಡಿವಿಡಿದು ಮುತ್ತೈದೆಯರು ಧವಳಮಂ ಪಾಡಲು (ಲಶಿಚಂ. ೧೫-೨೫) ; ಎಲ್ಲಿಯುಂ ಪಾಡುತಿಹ ಧವಳಶೋಭಾನೆಗಳನೆಲ್ಲಮಂ ತ್ರಿಗುಣಾತ್ಮ ತೋರುತ್ತೆ (ಪರಶು. ೪-೬೩). 'ಧವಳಾರ$_2$' ಪರಾ. ೮. ಪಂಚಮಹಾವಾದ್ಯಗಳಲ್ಲಿ ಒಂದು ; ಶಂಖ : ಶೃಂಗವಾದ್ಯವೆಂಬ ಕೊಂಬು ತಮ್ಮಟವೆಂಬ ಹಲಿಗೆ ಶಂಖವೆಂಬ ಧ[ಪಾಠಾಂ. ದ]ವಳ ಭೇರಿಯೆಂಬ ಬಾಜಾ ಜಯಘಂಟೆಯೆಂಬ ಜಾಗಟೆ ಇತ್ತೆಱದ ಪಂಚಮಹಾವಾದ್ಯಂಗಳಂ (ವಿವೇಕ. ೨೩೬).

[ಸಂ.]

ಧವಲಚಾಮರ, ಧವಳಚಾಮರ (ನಾ). ಬಿಳಿಯ ಚಾಮರ, – ಚವರಿ : ವಿಳಾಸಿನೀನಿಕರಕರಾಂದೋಳಿತ ಧವಲಚಾಮರಸ್ತೋಮಮಯೂಖಂಗಳುಂ ತತ್ಕೇಕರಕಾಂತಿಸಂತಾನಂಗಳುಮಮೃತಪಯೋಧಿ ಲಹರಿಕಾಲಾವಣ್ಯವಂ ಬೀಱಲ್ (ಮಹಾನೇ. ೧೧-೦೨೬ ವ). **ಧವಳಚಾಮರ** : ಧವಳಚಾಮರಮುಂ ಧವಳಾತಪತ್ರಮುಂ . . . ಬೆರಸಷ್ಟದಿಕ್ತಟಂ ಧವಳಿಸೆ ಕೀರ್ತಿಯಿಂ (ಗದಾಯು. ೫-೪೦) ; ನಲಿದು ನರ್ತಿಪಂಚೆಗಳೆನೆ ಬೀಸುವ ಧವಳಚಾಮರಂಗಳ್ (ಪುಷ್ಪಪು. ೫-೧೭). [ಧವಲ + ಚಾಮರ]

ಧವಲಚ್ಛತ್ರ, ಧವಳಚ್ಛತ್ರ (ನಾ). (ಅರಸೊತ್ತಿಗೆಯ ಚಿಹ್ನೆಯಾದ) ಬಿಳಿಯ ಕೊಡೆ ; ಶ್ವೇತಚ್ಛತ್ರ : ಧವಲಚ್ಛತ್ರಚ್ಛಾಯೆಯಿನವನೀಚಕ್ರಕ್ಕೆ ಚಂಡಕರತಾಪಂ ಸಂಭವಿಸದೆನೆ ತನ್ನ ಜಸದಿಂ ಧವಳಿಸಿದಂ ಧವಳಕೀರ್ತಿದಿಗ್ಭಿತ್ತಿಗಳಂ (ಪಂರಾಮಾ. ೧೦-೧೦೮). **ಧವಳಚ್ಛತ್ರ** : ಉನ್ನತಧವಳಚ್ಛತ್ರಚ್ಛನ್ನವಿಯತ್ತಳನನಿಂದುಕುಳತಿಳಕನನಿಂತನ್ನೆಯದಿಂದೀ ಪಟುವಿನೊಳೆನ್ನರಸನನಿಂತು ಬಿದಿಯೆ ತಂದಿಕ್ಕುವುದೇ (ಪಂಪಭಾ. ೨-೮೨) ; ಕಿಕ್ಕಿಱಿಗಿಱಿದ ಧವಳಚ್ಛತ್ರಂಗಳೊಳ್ ತಳ್ಪೊಯ್ದು (ಶಾಂತಿಪು. ೧೦-೨೦ ವ) ; ಮಾರಾರಿಯ ಕಾರುಣ್ಯದಿಂ ಬಂದ ದಂಡಿಗೆಯ ಧವಳಚ್ಛತ್ರದ . . . ಬಿಂಕದ ಬಾಹತ್ತರನಿಯೋಗಂ (ನಂಬಿರ. ೮-೧೬) ; ಧವಳಚ್ಛತ್ರದೆಡಬಲಕೊಲೆವ ಚೌರಿಗಳ . . . ಕುಮಾರವರ್ಗದ ಸುಳಿವುಗಳ ಸೌರಂಭದಲಿ ಹೊಱವಂಟನಾ ಭೂಪ (ಕುವ್ಯಾಸ. ೧೨-೯೮). [ಸಂ.]

ಧವಲತೆ, ಧವಳತೆ (ನಾ). ಬಿಳುಪು ; ಗೌರವರ್ಣ : ಅವಿಶೇಷದಿನುದ್ಗಮದೊಳ್ ಧವಲ[ಪಾಠಾಂ. ಳ]ತೆ . . . ವಿವಿಕ್ತವರ್ಣವ್ಯವಸ್ಥೆಯಿಂದೊಂದಿರ್ಕುಂ (ಕಾವ್ಯಾವ. ೮೯೪). **ಧವಳತೆ** : ಸಲಿಲಂ ನಿರ್ಮಳಮಾದುವು ತಳೆದುದಾಗಸಂ ಧವಳತೆಯಂ (ಗಿರಿಕ. ೯-೬೪) ; ಪೊರೆಪೊರೆಯಾಗಿ ದಳವೇಱಿ ಬಹಳತರ ಧವಳತೆಯನಾಂತ ಮುಗಿಲ ಮೊತ್ತಮೆತ್ತಲುಂ ಬಿತ್ತರಂಬಡೆಯೆ (ಬಾಧಪು. ೪-೬೬ ವ) ; ತೊಳೆದರೆ ಮಸಿಗೆ ಧವಳತೆಯುಂಟೆ (ಕೌಶಿರಾ. ೩೬-೪೭). [ಸಂ. ಧವಲತಾ]

ಧವಲಪಕ್ಷ, ಧವಳಪಕ್ಷ (ನಾ). ೧. ಬಿಳಿಯ ರೆಕ್ಕೆ. ೨. ಬಿಳಿಯ ರೆಕ್ಕೆಗಳನ್ನುಳ್ಳ ಪಕ್ಷಿ. ೩. ಶುಕ್ಲಪಕ್ಷ. **ಧವಳಪಕ್ಷ** : ೩. ವೈಶಾಖಮಾಸದ ಧವಳಪಕ್ಷದ ಪಂಚಮಿಯ ಶುಭದಿವಸದಭಿಜಿಲ್ಲಗ್ನದಲಿ ಮೂರ್ಧಾಭಿಷೇಚನದ ವಿವರವಾಯ್ತು (ತೊರರಾ. ೨-೧-೧೪). [ಧವಲ + ಪಕ್ಷ]

ಧವಲಯಶ, ಧವಳಯಶ (ನಾ). ಶುಭ್ರವಾದ ಕೀರ್ತಿ ; ಕಳಂಕರಹಿತವಾದ ಯಶಸ್ಸು : ಧವಲ[ಪಾಠಾಂ. ಳ]ಯಶದಿಂ ಬೊಮ್ಮಿದೇವಂ ಭುವನವಂದಿತನಾಗಿ ಪರಮೋತ್ಸವದೊಳಾ ಕಲ್ಯಾಣಕಟಕದೊಳೆಂದಿನಂತಿರ್ದ (ಬಸಪು. ೩೪-೩೭). **ಧವಳಯಶ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ. ಧವಲಯಶಸ್]

ಧವಲಾಂಗ, ಧವಳಾಂಗ (ನಾ). ಬಿಳಿಯ ಬಣ್ಣದ ಮೈ, – ದೇಹ : ಸ್ವಚ್ಛತರ ಧವಲಾಂ[ಪಾಠಾಂ. ಳಾಂ]ಗದತಿಮನೋಹರ ಪೀತಪುಚ್ಛದ . . . ಕೋಮಲ ತುರಂಗಮಂ ಸಾಧಿಸಿ ಮಹಾಕ್ರತುವನಾಚರಿಪೊಡೆ (ಜೈಮಿಭಾ. ೨-೨೬). **ಧವಳಾಂಗ** : ಧವಳಾಂಗ[ಪಾಠಾಂ. ಳಾರ]ಪ್ರಭೆ ದೆಸೆಯಂ ಧವಳಿಸಲಮರಾವತೀ ನಗರದಿಂದಾಗಳ್ . . . ಸುರಗಜಮದಿರದೆ ಬಂದತ್ತಾಗಳ್ (ತ್ರಿಪುವಿ. ೬೩-೬). [ಧವಲ + ಅಂಗ$_2$]

ಧವಲಾಕ್ಷತ, ಧವಳಾಕ್ಷತ (ನಾ). ಬಿಳಿಯ ಅಕ್ಷತೆ : ಶಿವದೇವ್ಯಾದಿ ಸವಿತ್ರೀನಿವಹಮುಂ . . . ಪರಸುತ್ತಿಕ್ಕುವ ಧವಲಾಕ್ಷತಮಮರೆ ಮಸ್ತಕಾಗ್ರದೊಳ್ (ಮಹಾನೇ. ೧೧-೧೦೪). **ಧವಳಾಕ್ಷತ** : ಧವಳಾಕ್ಷತಕುಸುಮಚರುಪ್ರವರ ಸುಗಂಧಪ್ರದೀಪಫಳಪರಿಕರದಿಂ . . . ಅರ್ಘ್ಯಮೇನೊಪ್ಪಿದುದೋ (ವರ್ಧಮಾ. ೧೨-೨೬). [ಸಂ.]

ಧವಲಾಗಾರ, ಧವಳಾಗಾರ (ನಾ). ೧. ಸುಣ್ಣ ಬಳಿದ ಮನೆ. ೨. ಸೌಧ ; ಹರ್ಮ್ಯ ; ಅರಮನೆ. **ಧವಳಾಗಾರ** : ೨. ಧವಳಾಗಾರತರತ್ತರಂಗಬಹಳಂ . . . ಇಳಾಮಧ್ಯದೊಳೆಟ್ಟ ಪಾಲ್ಗಡಲೆನಲ್ ಸಾಕೇತಮೇಂ ಸಾಲ್ವುದೋ (ಅನಂಪು. ೧-೮೮) ; ಆಗಾರಕ್ಕೆ–ಕ್ಷೀರಾಗಾರ–ಕೀರಾರ, ಕೀಲಾರ . . . ಧವಳಾಗಾರ–ಧವಳಾರ (ಶಮದ. ೨೯೫ ಪ್ರಯೋ). 'ಧವಳಾರ$_3$' ಪರಾ.

[ಧವಲ + ಆಗಾರ]

ಧವಲಾತಪತ್ರ, ಧವಳಾತಪತ್ರ (ನಾ). = ಧವಲಚ್ಛತ್ರ : ಧವಲಾತಪತ್ರ ವಾರಣವಿವಿಧಧ್ವಜಚಾಮರಂಗಳಂ ರಾಜ್ಯಶ್ರೀಗಿವು ತೊಡವೆಂದವನೊಲ್ಲದೆ ಭುವನೇಶಂ ರಾಜಭವನಮುಂ ಪೊಱಪಟ್ಟಂ (ಪಂಂಪಾ. ೨-೪೮). **ಧವಳಾತ ಪತ್ರ :** ಧವಳಾತಪತ್ರಮುಡ್ಡಂ ದಿವಸಕೆ ಸಲಲೀಯದಂತಿರ್ಪುದು ವಿಚಳ ದ್ಧವಳಮಚಮರರುಹಂ ಬೀಸುವ ನೆವದಿಂ ಪಾಜಿ ಬೀಸುವುದು ನೃಪ ಗುಣಮಂ (ಗದಾಯು. ೯-೧೧) ; ತನ್ನುಬೇಂದುವನಭೀಕ್ಷಿಸಲ್ಕೈದಿದ ಚಂದ್ರ ಬಿಂಬದಂತಿರೆ ಧವಳಾತಪತ್ರಂ (ರಾಜಶೇ. ೧೦-೧೪). [ಧವಲ + ಆತಪತ್ರ]

ಧವಲಾಯತ, ಧವಳಾಯತ (ನಾ). = ಧವಲಾಗಾರ ೨ : ಗೌರಿಯರಸಂ ನಿರ್ಮಿಸಿದ ಶೃಂಗಾರಸಿಂಹಾಸನವೊ ಶಿವನ ವಿಹಾರಧವಲಾ [ಪಾಠಾಂ. ಳಾ] ಯತವೊ ಶಂಕರರಚಿತಮಂಟಪವೊ (ಬಸವ. ೧೨-೧೫). **ಧವಳಾಯತ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ಧವಲ + ಆಯತ್ಮ]

ಧವಲಿ (ನಾ). ಬಿಳಿಯ ಹಸು,-ಆಕಳು. [ಸಂ. ಧವಲೀ]

ಧವಲಿತ, ಧವಳಿತ (ಗು). ೧. ಬಿಳಿದಾಗಿಸಿದ; ಅಚ್ಚ ಬಿಳಿದಾಗಿ ಮಾಡಿದ. **ಧವಳಿತ :** ೧. ಅಚ್ಚಬಿಳ್ದಿಂಗಳೊಳ್ ಸುಧಾಧವಳಿತೋತ್ತುಂಗ ರಮ್ಯಹರ್ಮ್ಯದೆರಡನೆಯ ನೆಲೆಯ ಬೌವಳಿಗೆಯ ಮುಂದಣ ರಮ್ಯ ಹರ್ಮ್ಯಾಗ್ರದೊಳೆ (ಪಂಪಭಾ. ೪-೩೨ ವ) ; ರಾಕ್ಷಸರಾಜಂ ಕೇಳ್ದು ದುಷ್ಪಾ ಕಿರಣಧವಳಿತಾಸ್ಥಾನನಿಂತೆಂದನಾಗಳ್(ಜಗವಿ. ೨-೪೫). (ನಾ).೨. ಬಿಳುಪು; ಬಿಳಿಯ ಬಣ್ಣ : ಆಗಳಾಗಳೆಸೆಯೆ ಪಾಸುವ ವಸುಧಾಲೇವದಿನತಿವಿಶಾ ಲಭಿತ್ತಿ [ಬಿಭ್ರದ್ಭಾ]ಗವೆಲ್ಲಂ ಧವಳಿತಮಾದುವು (ವರ್ಧಮಾ. ೧೦-೬೯ ವ). ೩. ಶಿವ : ಒಬ್ಬ ಕೆಂಚನೊಬ್ಬ ಕರಿಕನೊಬ್ಬ ಶುದ್ಧಧವಳಿತನೆಂತಯ್ಯಾ ಲಿಂಗವೆ (ಬಸವ. ೫೪೩). [ಸಂ.]

ಧವಲಿಮ, ಧವಳಿಮ (ಗು). ೧. ಬಿಳಿಯ ಬಣ್ಣದ ; ಬಿಳುಪಾದ: ಅವಿರಳ ಪಯೋನಿಧಿಯನಟ್ಟಹಾಸಂ ಮಾಡುವವೊಲಿರ್ದುದಾ ಪುರಂ ಪ್ರಾಸಾದ ಕೋಟಿಗಳ ಧವಲಿ [ಪಾಠಾಂ. ಳಿ]ಮ ಸುಧಾಕೀರ್ಣರುಚಿಗಳಿಂ (ಚೈಮಿಭಾ. ೧೨-೩೫). (ನಾ). ೨. = ಧವಲತೆ : ಸರ್ವಾಂಗಭಸಿತದಿಂ ನರಮಿಂ ಕಾರುಣ್ಯದಿನಶಿಧವಲಿಮದಿಂ ಪುಣ್ಯಂ ಪಣ್ಣಾದ ತೆಱದಿ ತಾಪ ಸರಿರ್ಪರ್ (ಗಿರಿಕ. ೦-೬೩). **ಧವಳಿಮ :** ೧. ವಿಚಳದ್ಧವಳಮಚಮರರುಹಂ ಬೀಸುವ ನೆವದಿಂ ಪಾಜಿ ಬೀಸುವುದು ನೃಪಗುಣಮಂ (ಗದಾಯು. ೯-೧೧). ೨. ಅಮಳತರ ರದನರುಚಿಸಂಕ್ರಮಃಧವಳಿಮಮಧರವಿದ್ರುಮಂ ನರ್ತಕಿ ಯಾ (ರಾಜಶೇ. ೧೨-೪೦) ; ದಶರಥನ ಕೀರ್ತಿಯೋಲುಳಿದುದಯ್ ಭಸ್ಮ ಧವಳಿಮರಾಶಿ (ಶ್ರೀರಾಮಾ. ೧೫೦-೨೨೮). [ಸಂ. ಧವಲಿಮನ್]

ಧವಲೆ (ನಾ). = ಧವಲಿ. [ಸಂ. ಧವಲಾ]

ಧವಲೋತ್ಪಲ, ಧವಳೋತ್ಪಳ (ನಾ). ಬಿಳಿಯ ನೈದಿಲೆ : ಇಡೆ ಶಶಿ ಮುಖಿಯರ್ ಕಂಡಾಗಡೆ ಧವಲೋತ್ಪಲ [ಪಾಠಾಂ. ಳೋತ್ಪಳ]ದ ನಡುವೆ ಚಂದನರಸಮಂ ಬಿಡೆ ತೀವಿಕೊಂಡು ನಡೆನಡೆದೊಡನೊಡನಿಟ್ಟಟ್ಟು ಜೊನ್ನಮಂ ಪಸರಿಸಿದರ್ (ಗಿರಿಕ. ೪-೩೮). **ಧವಳೋತ್ಪಳ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಧವಲ + ಉತ್ಪಲ]

ಧವಳ 'ಧವಲ' ನೋ.

ಧವಳಕ (ನಾ). ಬೆಳ್ಳಗಿರುವವನು ; ಗೌರಾಂಗ : ಹರಿಯ ಬೊಮ್ಮನು ಕೆಂಚ ಕಿಱಿಯ ಹರಿ ತಾ ಕರಿಗ ಪುರಹರನು ಶುದ್ಧಧವಳಕನು [ಪಾಠಾಂ. ಧವಳಾಂಕ] ಇವರುಗಳು ಸರಿಯೆ ದೈವಕ್ಕೆ (ಸರ್ವಜ್ಞ. ೩೦೯).

[ಸಂ. ಧವಲಕ]

ಧವಳಕಮಳ (ನಾ). ಬಿಳಿಯಬಣ್ಣದ ತಾವರೆ : ಸಮುತ್ತುಂಗಮಂಗಳ ಸ್ಫೂಪಂಗಳಂ ಧವಳಕಮಳದಳಾಳಂಕೃತಂಗಳೆಂಬ ಸಂಕೆಯನನುಕರಿಸೆಯುಂ (ಪಾಧಪು. ೧೬-೨೨೫ ವ). [ಧವಳ (=ಧವಲ) + ಕಮಳ (=ಕಮಲ)]

ಧವಳಗಜ (ನಾ). ಬಿಳಿಯ ಆನೆ ; ಐರಾವತ : ಇಂದ್ರಾಣಿಯುಕ್ತನಿಂದ್ರಂ ಧವಳಗಜಸಮಾರೋಹಣಂಗೆಯ್ದು . . . ಬಂದು (ಪಾಧಪು. ೧೬-೩೩೬).

[ಧವಳ (=ಧವಲ) + ಗಜ]

ಧವಳಗಜೇಂದ್ರ (ನಾ). ಶ್ರೇಷ್ಠವಾದ ಬಿಳಿಯ ಆನೆ : ಧವಳಗಜೇಂದ್ರಮುಂ ಧವಳಚಾಮರಮುಂ . . . ಬೆರಸಪ್ಪುದಿಕ್ಕಟಂ ಧವಳಿಸೆ ಕೀರ್ತಿಯಿಂ (ಗದಾಯು. ೩-೪೧). [ಧವಳ (=ಧವಲ) + ಗಜೇಂದ್ರ]

ಧವಳಗಿರಿ (ನಾ). ೧. ಹಿಮಾಲಯ ಪರ್ವತ : ಇಂದಿನ ಬೆಳಕಿಗೆ ಕಣ್ಣು ತೆರೆದು, ಧ್ವಜವತ್ತಿ ಹಿಡಿಯಲಿದೆ ಧವಳಗಿರಿ ! (ನಿಲಮು. ೪೩-೩೦) ; ಧವಳ ಗಿರಿಯಿಂದ ಕನ್ಯಾಕುಮಾರಿಯವರೆಗೆ ಬಿಡುಗಡೆಗೆ ಕಾದಿಹುದು ಒಂದು ಖಂಡ (ದೀಪಮ. ೩೧-೧೬). ೨. ಹಿಮಾಲಯಪರ್ವತದ ಒಂದು ಅತ್ಯುನ್ನತ ಶಿಖರ : ಉನ್ನತದಲ್ಲಿ ಎವರೆಸ್ಟ್ ಶಿಖರಕ್ಕೆ ಎರಡನೇದು ಧವಳಗಿರಿ (ಭೂಗೋಳ. ೩೧). [ಸಂ. ಧವಲಗಿರಿ]

ಧವಳಗ್ರೀವ (ನಾ). ಬಿಳಿಯ ಕೊರಳು ; ಬೆಳ್ಳನೆಯ ಕಾಂತ್ತಿಗೆ : ಧವಳ ಗ್ರೀವಾವೇಷ್ಟಿತ ಸುವರ್ಣಪರಿಪೂರ್ಣಶ್ಯಂಖಳಾಬಂಧಮದೇಂ ಧವಳಾಂಭೋ ಧರ ಪರಿರಂಭವಿಳಾಸಿನಿಯ ಚಿರರುಚಿಯನಭಿನಯಿಸಿದುದೋ (ಪುಗ್ಗಿಪು. ೪-೧೫೩). [ಧವಳ (=ಧವಲ) + ಗ್ರೀವ]

ಧವಳಚಮರರುಹ (ನಾ). ಬಿಳಿಯ ಚಾಮರ : ಧವಳಚಮರರುಹಪವನನ ನವಮಾನಂಗೆಯ್ದು ಕಂದ ನಿಷ್ಕಾರಚೀರೀರವ ಮುಖಿಪರುಷಕಾನನಪವ ಮಾನನ ಸೋಂಕನಾಸೆಗೆಯ್ಗಲ್ ಬಗೆದ್ಪೆ (ಪಂಂಪಾ. ೬-೧೦).

[ಧವಳ (=ಧವಲ) + ಚಮರರುಹ]

ಧವಳಚಾಮರ 'ಧವಲಚಾಮರ' ನೋ.

ಧವಳಚ್ಛತ್ರ 'ಧವಲಚ್ಛತ್ರ' ನೋ.

ಧವಳತಲ್ಪ, ಧವಳತಳ್ಪ (ನಾ). ಬೆಳ್ಳನೆಯ ಹಾಸಿಗೆ ; ಶಂಭ್ರವಾದ ಹಾಸಿಗೆ : ಜಳಶಯನನವತರಿಸುವುದಂ ತಿಳಿದಲ್ಲಿಂ ಮುನ್ನ ದುಗ್ಧವಾರಿಧಿ ತಳ್ಪಚ್ಛಳದಿಂದವತರಿಸಿತ್ತಾ ನಿಳಯದೊಳೆನೆ ಧವಳತಲ್ಪಮೆಸೆದುದನಲ್ಪಂ (ಜಗವಿ. ೨-೭೪). **ಧವಳತಳ್ಪ :** ಶರದದ ಬೆಳ್ಮುಗಿಲ್ವೂಜಿಯಿನುಣ್ಮುವ ನಿರ್ಮಳಮೌಕ್ತಿಕಕ್ಕೆ ತಾಂ ದೊರೆಯೆನೆ ಪುಟ್ಟಿದಂ ಧವಳತಳ್ಪಯುಗಾಂತರ ದೊಳೆ ನಮೇರುಶೇಖರಧರನಾತ್ಮನೂತ್ನವಯಸಂ (ಹಂರಿಪು. ೪-೬೧).

[ಸಂ. ಧವಲತಲ್ಪ]

ಧವಳತಳ್ಪ 'ಧವಳತಲ್ಪ' ನೋ.

ಧವಳತೆ 'ಧವಲತೆ' ನೋ.

ಧವಳದಂತ (ನಾ). ಬೆಳ್ಳನೆಯ ಹಲ್ಲು : ವನಲಕ್ಷ್ಮೀಕಾಂತೆಯ ಕಾಂತ ಧವಳದಂತಾಳಿಯವೊಲ್ ಸೊಗಯಿಸಿತು ಕುಂದಕುಟ್ಮಲನಿಕರಂ (ಹಂರಿಪು. ೩-೧೩). [ಧವಳ (=ಧವಲ) + ದಂತ]

ಧವಳದಂತಿ (ನಾ). = ಧವಳಗಜೇಂದ್ರ : ಧವಳದಂತಿಯ ಹೆಗಲಿನಲಿ ರಾಘವನ ಕಂಡೆನು (ತೊರಕಾ. ೫-೩-೭೧). [ಧವಳ (=ಧವಲ) + ದಂತಿ]

ಧವಳದ್ಯುತಿ (ನಾ). ಬೆಳ್ಳನೆಯ ಕಾಂತಿ : ಧವಳದ್ಯುತಿಯಿಂ ದೆಸೆಯುಂ ಧವಳಿಸುತುಂ . . . ಧವಳೇಂದುಕಾಂತವಿರಚಿತಧವಳಾಗಾರಂಗಳೊರ್ಮೆಯುಂ ರಮ್ಯತರಂ (ಕುಸುಮಾ. ೨-೯೧). [ಸಂ. ಧವಲದ್ಯುತಿ]

ಧವಳಪಕ್ಷ 'ಧವಲಪಕ್ಷ' ನೋ.

ಧವಳಪ್ರಾಸಾದ (ನಾ). = ಧವಲಾಗಾರ ೨ : ವಿವಿಧಮಣಿಶಬಲಿತಂ ರಮ್ಯ ವಿಧಾನ ಸುವರ್ಣಕಲಶಕಿರಣೋದ್ಯೋತಂ ಅವಿರಳವಾದ್ಯಸಮೇತಂ ಧವಳ ಪ್ರಾಸಾದ ಸಾರದೇವಾಗಾರಂ (ಜಗವಿ. ೨-೨೩). [ಸಂ. ಧವಲಪ್ರಾಸಾದ]

ಧವಳಮರೀಚಿ (ನಾ). ಬೆಳ್ಳನೆಯ ರಶ್ಮಿ, – ಕಾಂತಿ : ದುಕೂಲದ ಧವಳ ಮರೀಚಿಯುಂ ಭಸಿತದ ಪ್ರಭೆಯುಂ ದಟ್ಟೈಸಿ ವೆಱೆಯೆ (ಬಸರ. ೪-೭೩).

[ಧವಳ (=ಧವಲ) + ಮರೀಚಿ]

ಧವಳಯಶ 'ಧವಲಯಶ' ನೋ.

ಧವಳಯಶೋನಿಧಿ (ನಾ). ಶುಭ್ರವಾದ ಕೀರ್ತಿಗೆ ಆಶ್ರಯನಾದವನು : ಅಖಿಳಕಳಾಪ್ರವೀಣನನಿಮಿತ್ತಬಾನ್ಧವಂ ಮನುಚರಿತಂ ಧವಳಯಶೋನಿಧಿಯೆನೆ ಪೆಂಪುವಡೆದು ಜಗದೊಳಗೆ [ಕೊ]ಮ್ಮಿಮಯ್ಯ ನೆಗಟ್ಟಂ (ಸೌಇಇ. V, ೮೪೫-೨೩ ; 1066). [ಸಂ. ಧವಲಯಶೋನಿಧಿ]

ಧವಳರಥ (ನಾ). ೧. ಬಿಳಿಯ ರಥ. ೨. ಬಿಳಿಯರಥವನ್ನು ಹೊಂದಿದವನು: ಧವಳಹಯಂ ಧವಳರಥಂ ಧವಳೋಷ್ಣೀಷಂ ಶಶಾಂಕಸಂಕಾಶಯಶೋಧವಳಿತಭುವನಂ ತಾಗಿದನವಯವದಿಂ ಬಂದು ಧರ್ಮತನಯನ ಬಲದೊಳ್ (ಪಂಪಭಾ. ೧೧-೩೯). [ಧವಳ (=ಧವಲ) + ರಥ]

ಧವಳಲೋಚನೆ (ನಾ). ಹೊಳಪಿನ ಕಣ್ಣುಗಳುಳ್ಳವಳು : ಧವಳಲೋಚನೆಯ ಕಟಾಕ್ಷಾಳೋಕಂ ಮುತ್ತಿನ ಝುಂಪಾಳಂ ಕವಿದಂತೆ ಬಳಸಿದುದು ತತ್ಕುಜಮಂ (ಚಂದ್ರಪು. ೭-೧೦೩). [ಸಂ. ಧವಲಲೋಚನಾ]

ಧವಳವಸನ (ನಾ). ಬಿಳಿಯ ಬಟ್ಟೆ : ಧವಳವಸನಂಗಳೊಳವಿತರವಸ್ತ್ರ ಸಾಧಾರಣ ವಿವಾದೊಳಂ ತಾಂ ವ್ಯವಹರಿಕುಮಂಶುಕಾಖ್ಯಾನ (ವಸ್ತುಕೋ. ೧೪೦-೧೩೨). [ಧವಳ (=ಧವಲ) + ವಸನ]

ಧವಳವಿಲೋಚನ (ನಾ). ಹೊಳಪಿನ ಕಣ್ಣು ; ಕಾಂತಿಯುಕ್ತವಾದ ಕಣ್ಣು : ಧವಳವಿಲೋಚನಂ ಧವಳಚಾಮರಮಾಗೆ ಲಲಾಟಪಟ್ಟಮೊಪ್ಪುವ ಪೊಸವಟ್ಟಮಾಗೆ . . . ಪೋಲ್ತು ತೋಱುವುದಸಿತೋತ್ಪಲೇಕ್ಷಣೆಯ ಯೌವನಲಕ್ಷ್ಮಿಯೆ ರಾಜ್ಯಲಕ್ಷ್ಮಿಯಂ (ಅಜಿಪು. ೨-೨೫) ; ಧವಳಾತಪತ್ರಮುಂ ಧವಳವಿಲೋಚನೋತ್ಪಲವಧೂಜನಮುಂ ಬೆರಸಷ್ಟದಿಕ್ತಟಂ ಧವಳಿಸೆ ಕೀರ್ತಿಯಿಂ (ಗದಾಯು. ೫-೪೧) ; ಧವಳವಿಲೋಚನಂ ಪೊಳೆವ ಪೂವನೆ . . . ಜಾತ್ಯರುಣಾಧರಾಂಶು ಪಲ್ಲವಮನೆ ಪೋಲೆ (ಅರ್ಧನೇ. ೩-೫೮).

[ಸಂ. ಧವಲವಿಲೋಚನ]

ಧವಳವಿಲೋಚನೆ (ನಾ). = ಧವಳಲೋಚನೆ : ಜವನಿಕೆಯಂ ಕಳೆಯೆ ರಂಗದೊಳ್ಕಣ್ಗೆಸೆದಳ್ ಧವಳವಿಲೋಚನೆ (ಮಲ್ಲಿಪು. ೮-೩೮).

[ಸಂ. ಧವಲವಿಲೋಚನಾ]

ಧವಳವಿಷಯ (ನಾ). ಒಂದು ನಾಡಿನ ಹೆಸರು ; ಬೆಳುವಲನಾಡು : ಪಾಳಯತಿ ಮಹಾಶ್ರೀಮತಿ ವಿನಯಾಂಬುಧಿನಾಮ್ನೀ ಧವಳವಿಷಯಂ ಸರ್ವ್ವಂ (ಮುಂಬರಾ. X, ೧೯೦-೪ ; 902) ; (ಎಇ. X111, ೧೯೨-೪ ; 902 ನೋ). P ಇದು 'ಬೆಳ್ವೊಲ' ಎಂಬುದರ ಸಂಸ್ಕೃತೀಕರಣ.

[ಧವಳ (=ಧವಲ) + ವಿಷಯ]

ಧವಳಸರ್ಷಪ (ನಾ). ಬಿಳಿಯ ಸಾಸುವೆ : ದೂರ್ವಾಂಕುರ ಸಿತಾಕ್ಷತ ಧವಳಸರ್ಷಪ ವರಫಲಾವಳಿಯ ತರಿಸಿದನು (ಕುವ್ಯಾಕ. ೧-೨೮).

[ಧವಳ (=ಧವಲ) + ಸರ್ಷಪ]

ಧವಳಸ್ತಂಬೇರಮ (ನಾ). = ಧವಳಗಜ : ಧವಳಸ್ತಂಬೇರಮಂ ಗೋಪತಿ ಹರಿ ಸಿರಿ ಪೂಮಾಲೆ ಪೂರ್ಣೇಂದುಬಿಂಬಂ . . . ಎಂದಿಂತಿವನಾರ್ನಿನ್ನಂದದಿಂ ಸುಂದರಿ ಕನಸುಗಳಂ ಕಾಣ್ಬ ಸೈಪಿಂಗೆ ನೋಂತರ್ (ಮಲ್ಲಿಪು. ೧೧-೧೨೦).

[ಧವಳ (=ಧವಲ) + ಸ್ತಂಬೇರಮ]

ಧವಳಹಯ (ನಾ). ೧. ಬಿಳಿಯ ಕುದುರೆ. ೨. ಬಿಳಿಯ ಕುದುರೆಗಳಿಂದ ಕೂಡಿದವನು ; ಬಿಳಿಯ ಕುದುರೆಗಳನ್ನುಳ್ಳವನು : ಧವಳಹಯಂ ಧವಳರಥಂ ಧವಳೋಷ್ಣೀಷಂ . . . ತಾಗಿದನವಯವದಿಂ ಬಂದು ಧರ್ಮತನಯನ ಬಲದೊಳ್ (ಪಂಪಭಾ. ೧೧-೩೯).

[ಧವಳ (= ಧವಲ) + ಹಯ]

ಧವಳಹಾಸ (ನಾ). ಬೆಳ್ಳನೆಯ ನಗೆ : ಹೊರಗೆ ನೀಲಾಕಾಶ, ಮುಗಿಲು, ತೊರೆ, ತೆರೆ, ಕಾನು, ಹಿಮಗಿರಿಯ ಕಂದರದ ಧವಳಹಾಸ (ನಡಬಂ. ೪೧-೪).

[ಧವಳ (= ಧವಲ) + ಹಾಸ$_2$]

ಧವಳಾಂಗ 'ಧವಲಾಂಗ' ನೋ.

ಧವಳಾಂಗಪ್ರಭೆ (ನಾ). ಬೆಳ್ಳನೆಯ ದೇಹಕಾಂತಿ : ಧವಳಾಂಗಪ್ರಭೆ ದೆಸೆಯಂ ಧವಳಿಸೆ [ತನಿಗಂಪನಾಳ್ದು ಕಡುದಣ್ಪೆನಸುಂ] ಕವಿತರೆ ನೀಡಿದನಾಗಳ್ ದಿವಿಜೇಭಕರಾನುಕಾರಿ ನಿಜಕರಯುಗಮಂ (ಕಾದಂಪೂ. ೯೩೮). [ಧವಳ (= ಧವಲ) + ಅಂಗಪ್ರಭೆ]

ಧವಳಾಂಬರ (ನಾ). = ಧವಳವಸನ : ರುಚಿರಮೆನಿಸಿರ್ದ ಧೌತ ಧವಳಾಂಬರದಿಂ ಕರಮೆಸೆದಂ (ಕಾದಂಪೂ. ೭೮). [ಧವಳ (= ಧವಲ) + ಅಂಬರ]

ಧವಳಾಂಶು (ನಾ). ಶುಭ್ರವಾದ ಕಿರಣ : ಧವಳಾಂಶೂಜ್ಜ್ವಳತಂಖ ದೀಧಿತಿಯಿನಾ ರತ್ನಾಕರಂ ಕೂಡೆ ಬಣ್ಣವುರಂ ತೀವಿದ ಮಾಟ್ಕೆಯಿಂ ದೆಸೆವಿನಂ ಚೆಲ್ವಾದನಬ್ಜೋದರಂ (ಜಗವಿ. ೧-೪೯).

[ಧವಳ (= ಧವಲ) + ಅಂಶು]

ಧವಳಾಕ್ಷ (ನಾ). = ಧವಳವಿಲೋಚನ : ಅನುಲೇಪಾತಿಶಯಪ್ರಭಾವದಿಂ . . . ಕರಮೊಪ್ಪಿ ತೋರ್ಪ ಧವಳಾಕ್ಷಂ ಶೋಭಿತಾಂಗಂ ಭುಜಾನನಮೆಂದಿಂ ತಿವಗಣ್ಯಪುಣ್ಯಜನಿತಂ ಜೀವಕ್ಕೆ ನಿರ್ವ್ಯಾಕುಲಂ (ಸುಕುಮಾ. ೫-೩೬).

[ಸಂ. ಧವಲಾಕ್ಷ]

ಧವಳಾಕ್ಷತ 'ಧವಲಾಕ್ಷತ' ನೋ.

ಧವಳಾಕ್ಷತೆ (ನಾ). ಬಿಳಿಯ ಅಕ್ಷತೆ : ವಿಕೀರ್ಯಮಾಣಪ್ರಸವ ಧವಳಾಕ್ಷತಾ ಸಾರ ಪ್ರಕಾಶವಿಶದಮುಂ . . . ಎನಿಸಿ ಗೋವರ್ಧನ ನಗಂ ಸೊಗಯಿಸೆ (ಜಗವಿ. ೪-೮೨). [ಸಂ. ಧವಲಾಕ್ಷತಾ]

ಧವಳಾಕ್ಷಿ (ನಾ). = ಧವಳಲೋಚನೆ : ಧವಳಾಕ್ಷಿ ಸುಧಾಧವಳಿತಗವಾಕ್ಷ ಜಾಳಾಂತರಂಗಳೊಳ್ ವದನಮನಿಟ್ಟವಳೋಕಿಸುವವಳಿಂದಂ ಧವಳಿಸಿದುವೊ ಕಣ್ಣವೆಳ್ಪು ದಿಗುಭಿತ್ತಿಗಳಂ (ಸುಕುಮಾ. ೧೧-೯) ; ರವಿಯಂ ಕಂಡುದಱಿಂದಂ ಧವಳಾಕ್ಷಿ ಜಿನೇಂದ್ರಸಮಯವರ್ಧನನಂ . . . ಪಡೆವೈ (ಧರ್ಮಾಮ್ಯ. ೧೦-೧೭). [ಸಂ. ಧವಲಾಕ್ಷೀ]

ಧವಳಾಗಾರ 'ಧವಲಾಗಾರ' ನೋ.

ಧವಳಾತಪತ್ರ 'ಧವಲಾತಪತ್ರ' ನೋ.

ಧವಳಾತಪವಾರಣ (ನಾ). = ಧವಲಾತಪತ್ರ : ಧವಳಾತಪವಾರಣಮಂ ಪ್ರವಿಮಳ ಚಮರಜಮನಸಮಸಿಂಹಾಸನಮಂ ಭುವನಪ್ರಭುವಿಂಗಿತ್ತಂ (ಪಾರ್ಶ್ವಪು. ೧೧-೧೮). [ಧವಳ (= ಧವಲ) + ಆತಪವಾರಣ]

ಧವಳಾಪಾಂಗ (ನಾ). ೧. ಬೆಳ್ಳಗೆ ಹೊಳೆಯುವ ಕಡೆಗಣ್ಣು. ೨. ಚೆಲುವಾದ ಕಡೆಗಣ್ಣುಳ್ಳುದು : ಧವಳಾಪಾಂಗಂ ಕೇಕಾರವಮುಖರಂ ಹರಿತಶಾಬಲಾಂಕಕಳಾಪಂ ನವಿಲಾಟಂ ಸೊಗಯಿಸುಗುಂ ಸುವಿನೀಲಾಯತಗಳಂ ಪಯೋದಾಗಮದೊಳ್ (ಕವಿರಾ. ೩-೭); ಧವಳಾಪಾಂಗಮರೀಚಿಗಳ್ ಪುದಿದುವೆಂಬನ್ನಂ ಕಪೋಳಂ ಬೆಳರ್ತುವು (ಮಲ್ಲಿಪು. ೪-೯೮) ; ಧವಳಾಪಾಂಗಮರೀಚಿ ಮಂಡಳಿಸಿ ನಿಂದಂತಿರ್ಪ ಕರ್ಪೂರಕರ್ಣವತಂಸಂ (ಅನಂಪು. ೭-೯೦).

[ಧವಳ (= ಧವಲ) + ಅಪಾಂಗ]

ಧವಳಾಬ್ಜ (ನಾ). = ಧವಳಕಮಳ : ಧವಳಾಬ್ಜಸಿತಚ್ಛತ್ರಂ ನವೀನ ಕಳಹಂಸಧವಳಚಾಮರನಿದಿರ್ವರ್ಪವೊಲೆಸೆವಂ ನಿನಗುತ್ಪಲಧವಲಂ ಶರದವನಿಪಾಲಕಂ ಕವಿಧವಳಾ (ಲೀಲಾವ. ೫-೪೩) ; ಧವಳಾಬ್ಜ ಗೌರಹಂಸ ಪ್ರವರನ ಮೇಲಬ್ಜರಾಗರುಚಿಯೆನಿಪಬ್ಜೋದ್ಭವನೇಂ ಬೆಳಗುತ್ತಿರ್ದನೊ ಧವಳಾಭ್ರದ ಮೇಲೆ ಬೆಳಗುವೆಳನೇಸಱವೋಲ್ (ಜಗವಿ. ೧-೩೭).

[ಧವಳ (= ಧವಲ) + ಅಬ್ಜ]

ಧವಳಾಭ್ರ (ನಾ). ಬೆಳ್ಮುಗಿಲು ; ಬಿಳಿಯ ಮೋಡ : ಅಬ್ಜೋದ್ಭವನೇಂ ಬೆಳಗುತ್ತಿರ್ದನೊ ಧವಳಾಭ್ರದ ಮೇಲೆ ಬೆಳಗುವೆಳನೇಸಱವೋಲ್ (ಜಗವಿ. ೧-೩೭). [ಧವಳ (= ಧವಲ) + ಅಭ್ರ]

ಧವಳಾಯತ 'ಧವಲಾಯತ' ನೋ.

ಧವಳಾರ$_1$ 'ದವಳಾರ್ಯ' ನೋ.

ಧವಳಾರ$_2$, ಧವಳಾರ, ದವಳಾರ್ಯ (ನಾ). ೧. [ಸಂಗೀತ] ಒಂದು ಬಗೆಯ ಗೀತೆ : ಧವಳಾರಮಂ ಪಾಡುವರು ಮಾಂಗಲ್ಯ ಪಾರ್ವತಿಯ ಹರ್ಮ್ಯವಿದು ನೋಡೆಂದು ಬಿನ್ನವಿಸಿದಂ ಮುನಿವನು (ರಾಘವ. ೬-೭೪) ; ಧವಳಾರ ಸೋಭಾನಾ (ಮಾಡಿಕ್ಕಾ. VI, ೧೩೯). **ಧವಳಾರ** : ೧. ರಾಗ=ತೋಡಿ, ಧವಳಾರ, ಏಕತಾಳ (ಸಮುಮು. ೩೩). ೨. ಒಂದು ರಾಗದ ಹೆಸರು : ಕೆಲವೊಂದು ಮಂಗಳಗೀತಗಳನ್ನು ನಮ್ಮ ದೇವಾಲಯಗಳಲ್ಲಿ ಹಾಡುವ ವಾಡಿಕೆಯಿದೆ. ಅದರಲ್ಲಿ 'ಧವಳಾರ'ವೆಂಬ ಅಪೂರ್ವವಾದ ರಾಗವನ್ನು ಕೇಳಿದ್ದೇನೆ (ಕಾಪಗೀ. ೦೦೭). **ದವಳಾರ್ಯ** : ೧. ಚಿಕ್ಕಲಿಗ ಮುದ್ದವ್ವೆಯರ್ಗಂ ವ್ಯಕ್ತದಿಂ ದವಳಾರಮಂ ಪಾಡಿ ಸಂತತಂ ನಕ್ತಕರ ಜೂಟಶರಣರ ಸೇವೆಯಂ ಮಾಡಿ (ಪ್ರಭುಪು. ೯-೧೫೩) ; ಸೂಳೆಯರು ದಶಳಾರ ಶೋಭನಗಳನು ಪಾಡುತಲಿ ಇದಿರುಗೊಂಡರು (ಕಂಕದಾ. ೫-೩೬).

[ಧವಳ (= ಧವಲ) + ಆರ? ./ಸಂ. ಧವಲ]

ಧವಳಾರ$_3$ (ನಾ). ಸುಣ್ಣ (?) : ಎಳಿ ತುಪ್ಪ ನೂಲು ಧವಳಾರದ ಭಂಡಿ ಕಳುಕು ಅಡುಗಬ್ಬು ಹೊಗೆದೆಱಿ ಕಬ್ಬಿಲದೆಱಿ ಮಗ್ಗದೆಱಿ ಕಾವಲಿದೆಱಿ . . . ಎಲ್ಲವನೂ ಕಾರುಣ್ಯಂ ಮಾಡಿ ಧಾರಾಪೂರ್ವ್ವಕಂ ಮಾಡಿ ಕೊಟ್ಪರು (ಎಕ. VI, ಕಡೂರು, ೪೯-೪೦ ; 1291) ; ಧವಳಾರದ ಭಂಡಿ ಅಡುಗಬ್ಬಿನ ಭಂಡಿ . . . ಬಿಟ್ಟು (ಎಕ. XVI, ಚಿಕ್ಕನಾ. ೭೧-೨೫ ; ?). [?]

ಧವಳಿತ 'ಧವಲಿತ' ನೋ.

ಧವಳಿಮ 'ಧವಲಿಮ' ನೋ.

ಧವಳಿಸು (ಕ್ರಿ). ೧. ಬೆಳ್ಳಗಾಗು ; ಅಚ್ಚಬಿಳುಪಾಗು : ಧವಳಗಜೇಂದ್ರಮುಂ ಧವಳಚಾಮರಮುಂ . . . ಬೆರಸಪ್ಪದಿಕ್ಕಟಂ ಧವಳಿಸೆ ಕೀರ್ತಿಯಿಂ ಧವಳಮಂಗಳಗೇಯದಿನೊಪ್ಪಿ ಬರ್ಪ ಕೌರವಧವಳಂಗೆ ದೇಸಿಗನೆ ಬರ್ಪವೊಲೊರ್ವನೆ ಬರ್ಪುದಾದುದೇ (ಗದಾಯು. ೫-೪೦) ; ಅಕಳಂಕಚಂದ್ರ ವಾಕ್ಚಂದ್ರಿಕೆಯಿಂ ಧವಳಿಸೆ ದಿಗಂಬರಶ್ರೀಧವ್ಯಪ್ರಕರಚಕೋರಂ ನಲಿದುದಾ (ಪಂಡಾಮಾ. ೧-೧೩) ; ಅನಿಮಿಷವಧು ಕತ್ತುರಿಗದಡಿನ ಚಳಯಂಗೊಟ್ಪಳಲ್ಲಿ . . . ಕಡೆಗಣ್ಣ ಕಾಂತಿ ಧವಳಿಸುವಿನೆಗಂ (ಅನಂಪು. ೬-೪೬) ; ಮಹೋತ್ಪಲ ಮಿತ್ರನಿದಿರಿನಲಿ ಧಾತು ಧವಳಿಸಬಲ್ಲುದೇ ಖದ್ಯೋತಕೀಟಕದ (ತೊರಣಾ. ೩-೭-೩೮). ೨. ಹೊಳೆ ; ಮಿರುಗು : ತೆಱೆದ ಕಣ್ಗಳೊಳೆ ಧವಳಿಸಿದ ನಿಜವದನಮಂ (ಆದಿಪು. ೬-೩೭ ೮೫೪) ; ಮಿಸುಗಿ ದರ್ಪಣ ಧವಳಿಸಿದುದು ಭೂಪನ ಶಶಿಮುಖಿ ಗರ್ಭವ ಧರಿಸೆ (ಕಂಪವಿ. ೪-೫೯). ೩. ಸುಣ್ಣವನ್ನು ಬಳಿ ; ಬಿಳಿಯಂ ಬಣ್ಣವನ್ನು ಲೇಪಿಸು : ಬೀಸುವ ಚಾಮರಂಗಳ ಪೊಳಪಿನೊಳಮೆತ್ತಿದ ಬೆಳ್ಗೊಡೆಗಳ ಬೆಳ್ಪಿನೊಳಂ ದೆಸೆಗಳೆಲ್ಲಂ ಧವಳಿಸಿದನ್ನವಾಗೆ (ಪಂಪಭಾ. ೩-೫೪ ವ) ; ನಸುನಗೆ ದಶನಪ್ರಭೆಯಿಂದೆ ಕೂಡಲಾ ದೆಸೆ ಧವಳಿಸಿದವೊಲಾಯ್ತು (ಕಾದಂಪು ೪೮೩ ೮ಗಳೆ) ; ಒಳಗೆ ಶೋಧಿಸಿ ಹೊಱಗೆ ಧವಳಿಸಿ ಧಾವದಿಂದ ಗುಡಿತೋರಣವ ಕಟ್ಟಿದನಯ್ಯಾ (ಸರ್ವಜ್ಞ. ೭೫-೪೨೦) ; ನಯನಪ್ರಭೋಜ್ಜ್ವಲಜ್ಯೋತ್ಸ್ನೆಯಿನಾದಂ ಕನ್ನೆ ಮುನ್ನ ಧವಳಿಸಿ ಭೂಷಾ ಚಯಮಣಿಗಣನಿಚಯದೆ ತಾಂ ಬಯಲಂ ಚಿತ್ರಿಸಿದಳ್ (ಪಂದ್ರಪು. ೫-೧೦೫) ; ಕಡುಚೆಲ್ವ ಮೇಲ್ವಲಗೆ ನೆಲಗಟ್ಟುಗೋಡೆಗಳ ಗಡಣಮಂ ಧವಳಿಸಲು ನೃಪಕೀರ್ತಿ ದಶದಿಕ್ಕಿನೆಡೆಗೆ ಶೀವಿದ ತೆಱದೊಳೆಸೆಯೆ . . . ಬರೆದರು (ಭಾವಚಿಂ. ೫-೨೫). ೪. ಬೆಳ್ಳಗಾಗುವಂತೆಮಾಡು ; ಬೆಳಗು : ಭವನಾಂತರಮಂ ನೆಱಿ ಧವಳಿಸುತಿರ್ದಪುದೀ ತುಱುಗೆವೆಮಗಣ್ಪೆಳಗು ಪ್ರೌಢರೀ ಕೇಕ್ಷಣನಾ (ಕಾದಂಪು. ೪೩೦) ; ಬಾಯ್ದೆಱಿಯಂ ಧವಳಿಸೆ ನಿಜದಂತಕಾಂತಿ ಸಂತಾನಂಗಳ್ . . . ನೆಱಿನುಡಿದಳ್ (ಮಲ್ಲಿಪು. ೪-೭೬) ; ಧವಳಿಸಿತವ್ವುಂಚಿ ಕೌಮುದಿ ಧೌತಧಾತ್ರಿಯಂ ಸುಪ್ರಜನರಾತ್ರಿ (ಶ್ರೀರಾಮಾ. ೩೭೪-೦೪).

[ಧವಳ (= ಧವಲ) + – ಇಸು$_3$]

ಧವಳೇಕ್ಷಣೆ (ನಾ). = ಧವಳಲೋಚನೆ : ಧವಳೇಕ್ಷಣೆ ಬಾಯ್ದೆಱಿಯಂ ಧವಳಿಸೆ ನಿಜದಂತಕಾಂತಿಸಂತಾನಂಗಳ್ . . . ನೆಱಿ ನುಡಿದಳ್ (ಮಲ್ಲಿಪು. ೪-೭೬). [ಸಂ. ಧವಳೇಕ್ಷಣಾ]

ಧವಳೇಕ್ಷು (ನಾ). ಬಿಳಿಯ ಕಬ್ಬು ; ರಸದಾಳಿ ಕಬ್ಬು : ಧವಳೇಕ್ಷುಚ್ಛಾಯ ನಿಷಣ್ಣವುಗಳಂದದೊಳೆ ನೆಗಟ್ಟ ಬಣ್ಣಮನಾ ಶೈಶವದಿಂ ಕಾಕಳಿಯೊಳ್ ಚಕ್ರವರ್ತಿಯಂ ಪಾಡಿ ಶಾಳಿಗೋಪಿಯರೆಸೆದರ್ (ಶಾಂತಿಪು. ೧೦-೧೩೪) ; ಕಳಮ ದ್ರಾಕ್ಷೆ ಧವಳೇಕ್ಷುಗಳ ವನವೀಥಿಗಳನೀಕ್ಷಿಸುತರಸನೈತಂದ (ತೊರಣಾ. ೧-೬-೧೨) ; ಮದನದಿಗ್ವಿಜಯಕ್ಕೆದುವನೆಂದು ಧನುಗಳ ಮುದೆ ಪೂಜೆಪೊಡಿಟ್ಪಂತೆ ಒದಗಿದ ಧವಳೇಕ್ಷುದಂಡವೋಲಗದ ಚೌಸದನದೆ ಪೂಗಳೊಪ್ಪಿದವು (ಕಂಪವಿ. ೨೦-೪೨). [ಧವಳ (= ಧವಲ) + ಇಕ್ಷು]

ಧವಳೋತ್ತರೀಯ (ನಾ). ಬಿಳಿಯ ಮೇಲುವಸ್ತ್ರ, – ಶಲ್ಯ : ಇಟ್ಟ ವಿಭೂತಿಯ ತೊಟ್ಟ ರುದ್ರಾಕ್ಷೆಯ ಹೊದೆದ ಧವಳೋತ್ತರೀಯದ ಉಟ್ಟ ತಳರ್ಗಾಸೆಯ . . . ಶೈವಶೃಂಗಾರಂ ಸರ್ವಾಂಗದೊಳ್ ಬಳೆಯೆ (ನಂಬಿಕ. ೧೬-೧೦೩). [ಧವಳ (= ಧವಲ) + ಉತ್ತರೀಯ]

ಧವಳೋತ್ಪಳ 'ಧವಲೋತ್ಪಲ' ನೋ.

ಧವಾದಿನಿ (ನಾ). ಗಂಡನನ್ನು ನುಂಗಿದವಳು ; ಗಂಡನ ಸಾವಿಗೆ ಕಾರಣಳಾದವಳು : ಕಂಬವಿನಾಶಿನಿ ಧವಾದಿನಿ ಪಾಪಿ ದುರ್ಮಾರ್ಗಕಲಿತೆ ಸುರಪತಿಯಂತಜೇಯನಂ ಗಿರಿಯಂತೆ ಚಲನೆಯಿಲ್ಲದನಂ . . . ಪಲವುವಿಧ ಕರ್ಮದಿಂ ಸಂತಾಪಗೊಳಿಸುತಿಹೆ (ವಂಕಾರಾ. ೩-೦೨-೨೦).

[ಸಂ. ಧವಾದಿನೀ]

ಧವಿತ್ರ (ನಾ). (ಯಜ್ಞದ ಅಗ್ನಿಗೆ ಗಾಳಿಹಾಕಲು ಉಪಯೋಗಿಸುವ) ಕೃಷ್ಣಾಜಿನದಿಂದ ಪೂಡಿದ ಬೀಸಣಿಗೆ. [ಸಂ.]

ಧಸ್ (ನಾ). ಒಂದು ಅನುಕರಣ ಶಬ್ದ : ಆ ಸಮಯದಲ್ಲಿ ಅವಳ ಎದೆ ಧಸ್ ಅಂದಿತು (ಮಂಜುಳ. ೯೦).

ಧಸಕ್ (ನಾ). ಒಂದು ಅನುಕರಣ ಶಬ್ದ. 'ಧಸಕ್ಕೆನ್ನು' ಪರಾ.

ಧಸಕ್ಕೆನ್ನು (ಕ್ರಿ). ಹೌಹಾರು ; ನಡುಗು : ಬ್ರಾಹ್ಮಣಯ ಎದೆಯು ಧಸಕ್ಕೆಂದಿತು (ಹುಬ್ಬಹ. ೫೩) ; ಆಚಾರ್ಯರ ಎದೆ ಧಸಕ್ಕೆಂದಿತು (ಸಮಜೀ. ೦೦೭). [ಧಸಕ್ + ಎನ್ನು (<ಎನ್$_1$)]

ಧಸರಿ (ನಾ). ಒಂದು ಬಗೆಯ ಸೊಪ್ಪು : ಬಹುಮೂತ್ರವಾಗಿ ಇರುವಂಥವರುಗಳಿಗೆ . . . ಕೊಡುವಂಥಾ ಮೇಲೋಗರಗಳು – ಗಣಜಲೆಸೊಪ್ಪು . . . ಮಜ್ಜಿಗೆ, ಹೊನಗೊನ್ನೆ, ಧಸರಿ, ಬೇವಿನಹೂವು, (ವಿವೈವಿ.೧೫೬). [?]

ಧಸವಂಧ 'ದಶವಂಧ' ನೋ.

ಧಸಿಕೆ (ನಾ). ಆಕಸ್ಮಿಕ ಭಯ, ದುಃಖ ಮೊದಲಾದುವುಗಳಿಂದ ಮನಸ್ಸಿಗೆ ಉಂಟಾದ ಆಘಾತ, – ಪೆಟ್ಟು : ರಾತ್ರಿ ಕೆಟ್ಟಕನಸುಗಳು ಬೀಳುತ್ತವೆ, ಮನಸಿನಲ್ಲಿ ಧಸಿಕೆ ಕುಳಿತಿದೆ (ಕುರಿಹಿಂ. ೪೩). [←ಮರಾ. ಧಸಕಾ]

ಧಸ್ಸನ್ನು (ಕ್ರಿ). ಹೌಹಾರು ; ಭಯಹೊಂದು : ಆ ದೃಶ್ಯವನ್ನು ಕಂಡು ನಾರಾಯಣಶಾಸ್ತ್ರಿಯ ಹೊರತು ಉಳಿದವರೆಲ್ಲರ ಎದೆಗಳು ಧಸ್ಸೆಂದವು! (ಅಂದಿಕೆ. ೦೩) ; ಕಕ್ಕನ ಎದೆ ಧಸ್ಸೆಂದಿತು (ಕನಕ. ೩೧).

[ಧಸ್ + ಎನ್ನು (<ಎನ್$_1$)]

ಧಳಂ 'ಧಟಂ' ನೋ.

ಧಳಧಳನೆ (ಅ). ದಡದಡನೆ ; ಸರಸರನೆ : ಹೆಳವನಲ್ಲಿಗೆ ಗಂಗೆ ಧಳಧಳನೆ ಬರ್ದಂತೆ (ದೀಕ್ಷಾಬೋ. ೮೫-೦೦) ; ಧಳಧಳ[ಪಾಠಾಂ. ದಳದಳ]ನೆ ಪುಳಕದಗೆ ಸಳನಳಸೆ ಕಣ್ಣಳಿಂಬಳು ಗಳಗಳನೆ ಬಾಷ್ಪಂ ಸುಳಿದೊಗುತಿರೆ (ಶಾನಂಕ. ೦-೬೫) ; ಆನಂದಾಶ್ರು ಕಣ್ಣಿಂಬೊಳ್ ಧಳಧಳ[ಪಾಠಾಂ. ದಳದಳ]ನೆ ಸುರಿಯೆ (ಪದ್ಮಕಾ. ೬-೩೮). [<ಧಳಂ + – ಅನೆ$_1$]

ಧಟ (ನಾ). (?) : ಆದಿಗ್ರಹಣಾದನ್ಯತ್ರಾಪಿ – ಘಟಿಯಂ, ಝಳಂ, ಠಕ್ಕು, ಢೊಕ್ಕರಂ, ಧಟಂ[ಪಾಠಾಂ. ಳಂ],ಭರಂ (ಭಾಷಾಭೂ. ೧೦ ವೃತ್ತಿ) ; ವರ್ಗ ಚತುರ್ಥಾಕ್ಷರಂಗಳ್ಗೆ – ಘಟಿಯಂ, ಘಾಟಿಗೆ . . . ಢೊಕ್ಕರಂ, ಧಟ [ಪಾಠಾಂ.ಳಂ], ಧಾಳಿ, ಧಾರಿ, ಧವಳಂ (ಧವಡಂ) (ಶಮದ. ೧೫ ಪ್ರಯೋ).

[P ಇದು 'ದಟ' ಎಂಬುದರ ಪರ್ಯಾಯರೂಪವಿರಬಹುದು]

ಧಟಂ, ಧಳಂ (ನಾ). ಒಂದು ಅನುಕರಣ ಶಬ್ದ : ಖಟಿಲ್ಲೆನೆ . . . ಧಟ ಮ್ಮೆನೆ, ಘಟಿಲ್ಲೆನೆ – ಇವು ಮೊದಲಾದ ಮಹಾಪ್ರಾಣಾನುಕರಣಂಗಳ್ ನಿತ್ಯಱಟಂಗಳ್ (ಶಮದ. ಪರಿ. ೦). **ಧಳಂ :** ಕೋಳಾಹಳೋತ್ಕರ ನಿಸ್ಸಾಳ ಧಳಂ ಧಳಂ ಧಳರವಂ ಪರ್ಬಿತ್ತು ಮೂಲೋಕವಂ (ಗಿರಿಕ. ೬-೫೪).

ಧಳಂಧಳಂ, ಧಳಂಧಳ, ಧಳಧಳಂ (ದ್ವಿರುಕ್ತಿ) : ನಿಸ್ಸಾಳಧ್ವನಿ ಧಳಂ ಧಳಮ್ಮೆನೆ (ತಿರುನಾ. ದೇ. ೨೨೨-೧) ; ಕೋಕಿಳಕುಳ ನಿಸ್ಸಾಳ ಧಳಂಧಳಂ ಧಳಂಧಳ ನಿನಾದಮುಣ್ಮೆತ್ತಾಗಳ್ (ಗಿರಿಕ. ೮-೩) ; ಧಳಧಳಂ ಜೊಱ್ಱಿಂಬ ದಱದಱ ದೊಳದೊಳೆಂಬೀ ಧ್ವನಿಗಳವನಿಗೆ ಭಯವನೀವುತಿರೆ (ಸಾನಂಜ. ೮-೦೩) ; ಧಳಧಳಂ ಧಳಧಳಂ ಧಳಮೆಂಬ ಶಬ್ದಸಮ್ಮಿಳಿತ ಕೋಣಪ್ರಹಾರ ದಿನುಣ್ಮೆದತಿರವಂ . . . ಆವರಿಸಲು (ಜಿಬಪು. ೩೮-೧). 'ಧಟಮ್ಮನೆ' ಪರಾ.

ಧಟಗ (ನಾ). ಒಂದು ನಾಯಿಯ ಹೆಸರು : ಲೋಕನೆಂಬುದು ಎಟ್ಟಕ್ಕೈದು ಪಂದಿಯಂ ಕೊನ್ದತ್ತು ಇದುವೆರಸಿ ಯೀ ನಾಯಕ ಧಟಗನೆಂಬುದು ಪಿರಿಸನ್ದಿ ಮಗ ಯಿಪ್ಪತ್ತಱು ಪನ್ದಿಯಂ ಕೊನ್ದನ್ (ಎಕ. X, ಮುಳಬಾ. ೮೫-೨ ; ಸು. 975). [?]

ಧಟಮ್ಮನೆ (ಅ). ಧಳಂ ಎಂಬ ಸದ್ದಿನೊಂದಿಗೆ : ಅನುಕರಣಕ್ಕೆ – ಖಣಿಲ್ಲನೆ . . . ಧಟಮ್ಮನೆ, ಭೋರನೆ ಎಂಬಿವಾದಿಯಾಗಱಿವುದು (ಶಮದ. ೧೪ ಪ್ರಯೋ) ; ಘುಳುಮ್ಮನೆ ಧಟ[ಪಾಠಾಂ. ಳು]ಮ್ಮನೆ ಮೊದಲಾದುವು ಮಹಾಪ್ರಾಣಾಕ್ಷರವುಳ್ಳ ಅನುಕರಣಗತ ನಿತ್ಯಱಟಗಳಾದ ಪದಗಳು (ಶಬ್ದಾನು. ೧೪೧ ವ್ಯಾಖ್ಯಾ). [ಧಟಂ + – ಅನೆ$_1$]

ಧಾಂ (ನಾ). ಒಂದು ಅನುಕರಣ ಶಬ್ದ : ಕುಳ ಭೂಭೃನ್ಮಸ್ತಕಂ ಸೀಳೆ ಧಾತ್ರಿಗೆ ತಾಂ ಪರ್ಬಿದುದುರ್ಬಿ ಧಾಂ[ಪಾಠಾಂ. ದಾಂ]ಧಳಧಳ ಸ್ಪಾರೋರು ಭೇರೀರವಂ (ರಾಜಶೇ. ೬-೩೧) ; ಬಳೆದು ನೆಗೆತಂದು ಧಾಂ[ಪಾಠಾಂ. ದಾಂ] ಧಳಧಳಂಧಳ ಧ್ವನಿಯುಳುರ್ಕೆಗೊಳೆ (ರಾಜಶೇ. ೬-೪೪).

ಧಾಂಧಾಂ (ದ್ವಿರುಕ್ತಿ) : ಧಾಂಧಾಂ ಧಾಂಧಳಂಬಿಕ್ಕಿದ ಕುಡುಹಿನ ನಿಸ್ಸಾಳ ಘೋಷಕ್ಕೆ ರಾಯರ್ ಕೆಡೆದರ್ (ಸೂಕ್ತಿಸು. ೧೮-೨).

ಧಾಂಡಿಗ 'ದಾಂಡಿಗ' ನೋ.

ಧಾಂಡಿಗಿತ್ತಿ (ನಾ). ಕಸುವುಳ್ಳವಳು ; ಗಟ್ಟಿಗಿತ್ತಿ : ಧಾಂಡಿಗಿತ್ತಿಯೊಬ್ಬಳು ಇದ್ದಕ್ಕಿದ್ದಂತೆ ಒಳಗೆ ಬಂದಳು (ರೂಢಿ).

[ಧಾಂಡಿಗ (<ದಾಂಡಿಗ) + – ಇತ್ತಿ]

ಧಾಂದಲೆ, ದಾಂದಲೆ, ದಾಂಧಲೆ (ನಾ). ಗದ್ದಲ ; ಗಲಾಟೆ ; ಹಾವಳಿ ; ಕೋಲಾಹಲ : ಒಂದು ಕಡೆ ಮರಾಠರ ಧಾಂದಲೆ, ಮತ್ತೊಂದು ಕಡೆ ನಿಜಾಮನ ಉಪಟಳ (ಸುವರ್ಣ. ೨೯೯) ; ಹಿಂಡು ಹೊಲೆಯರಿಗೆ ಬೆಳತನಕ ಧಾಂದಲೆ ಹಾಕಲಿಕ್ಕೆ ಅವಕಾಶ ಕೊಟ್ಟಾನ (ಗಂಗಾಸಾ. ೧೦೩) ; ಯಾರರೆ ಧಾಂದಲೆ ಹಾಕತಾರ. ಅದನ್ನೆಲ್ಲಾ ಥಮ್ಮಣಿ ಮಾಡತೀವಿ (ಧನಂಜ. ೩೧). **ದಾಂದಲೆ:** ಅಲ್ಲೇ ನೀ ಎಟ್ಟದು ದಾಂದಲೇ ಹಾಕೂದು? (ಹೂಬಿಸಿ. ೧೦) ; ಈ ದಾಂದಲೆ ಏಕೆ ಬೇಕು? (ತುಳುನಾ. ೯). **ದಾಂಧಲೆ :** ದೇವರ ಉತ್ಸವ ದಲ್ಲೂ ದಾಂಧಲೇನಾ ? (ನಮ್ಮಳ್ಳಿ. ೫೯) ; ಬಲಿಷ್ಠರಾದವರು ಪ್ರಬಲಿಸಿ ದಾಂಧಲೆ ಮಾಡಿ ದೊರೆತಷ್ಟು ದ್ರವ್ಯವನ್ನು ವಿವಿಧ ವಿಧಗಳಲ್ಲಿ ದೋಚು ತ್ತಿದ್ದರು (ಪೈಮಹ. ೨೦). [←ಹಿಂ. ಧಾಂಧಲ್ ; ಮರಾ. ಧಾಂದಲ್]

ಧಾಂಧೂಂ 'ಧಾಮಧೂಮ' ನೋ.

ಧಾಕ (ನಾ). ಹೆದರಿಕೆ ; ದಿಗಿಲು ; ಭಯ ; ಆತಂಕ : ಇಷ್ಟು ಜನರು ಕೂಡಿದಾಗ ನಿರ್ಣಯಕ್ಕೆ ಬರೋದು ಅವಸರದ ಕೆಲಸ ಅದೀತೇನೋ ಅಂತ ನನಗ ಧಾಕ (ಹೆದರಿಕೆ) ಅದ (ನಿಹಾರ. ೨೦). [←ಹಿಂ. ಮರಾ. ಧಾಕ್]

ಧಾಟಿ$_1$ (ನಾ). ಆಕ್ರಮಣ ; ಮುತ್ತಿಗೆ ; ದಾಳಿ (?) : ಪುರುಡಿನ ಗರುಡಿ ಸೊರ್ಕಿನಿರ್ಕೆ ಮುಳಿಸಿನ ಬೆಳಸು . . . ಬಲ್ ಚದುರ ಚಾವಡಿ ಚಢಾಳ ದೋಳಿ ಬೇಟದ ಧಾಟಿ ಸಿಂಗರದ ರಂಗಭೂಮಿ ... ರಾಜಿಸುವ ಸೂಳೆಗೇರಿ (ಪದ್ಮರಾ. ೮-೮೭). 'ದಾಟಿ' ಪರಾ. [<ಸಂ. ಧಾಟೀ]

ಧಾಟಿ$_2$ 'ದಾಟಿ$_2$' ನೋ.

ಧಾಡಧಾಡ (ನಾ). ಒಂದು ಅನುಕರಣ ಶಬ್ದ : ಗೆಲವಿಂದಂ ಮದ್ದುಗುಂಡಂ ತುಂಬಿ ಹಾರಿಸುತ ಧಾಡಧಾಡೆಂಬ ರವದಿಂ (ಕೃಷ್ಣವಿ. ೫-೯೩).

ಧಾಡನೆ (ಅ). ರಭಸದಿಂದ ; ಇದ್ದಕ್ಕಿದಂತೆ : "ಧಾಡನೇ" ಬಿದ್ದೆದ್ದು ರೋದನಮಾಡಿದಳು ಕಲ್ಕರಗುವಂತೆಯೆ (ಪಾರ್ವಪ. ೧-೩೨).

[ಧಾಡ್$_0$ + ಅನೆ$_1$]

ಧಾಡಸಿ 'ಧಾಡಸಿ' ನೋ.

ಧಾಡಸೀ, ಧಾಡಸಿ (ಗು). ೧. ದಿಟ್ಟತನದ ; ಅಪಾಯವನ್ನು ಲೆಕ್ಕಿಸದ ; ಸಾಹಸ ಪ್ರವೃತ್ತಿಯ. ೨. ದುಡುಕಿನ ; ದುಡುಕುತನದ : ವಾಮನ ರಾಯರೇ ನಿಮ್ಮದು ಬಹು ಧಾಡಸೀ ಸ್ವಭಾವ (ಬೇಟಿನಾ. ೨೩೧). **ಧಾಡಸಿ:** ೧. ಉಡುಪೀಯವರು ಭಾಳ ಧಾಡಸಿ ಮಂದಿ (ರಕ್ತಧ್ವ. ೨೨). ೨. ಹಿರಿಯ ಮಗ ಧೀರನ ಧಾಡಸಿ ಪ್ರಕರಣವೊಂದು ಕರುಳು ಕೊರೆಯುತ್ತಿತ್ತು (ಸಾವಿಉ. ೧೬೦). [←ಮರಾ. ಧಾಡಸೀ, ಧಾಡಶೀ]

ಧಾಡಸೀತನ (ನಾ). ದುಡುಕು ; ದುಡುಕುತನ : ವ್ಯಾಪಾರದಲ್ಲಿಯೂ ಕೂಡ ನಾನೇನೂ ಧಾಡಸೀತನ ಮಾಡುತ್ತಿದ್ದಿಲ್ಲ (ಗೀಚುಗೆ. ೪೭) ; ಅನುಭವ, ಧಾಡಸೀತನ ಅವನಿಗೆ ವಯಸ್ಸಿನ ಮಾನದಿಂದ ಬರಲಿಲ್ಲ (ದೀಪಹ. II, ೪೨೦). [ಧಾಡಸೀ + – ತನ]

ಧಾಡಿ, ದಾಡಿ$_3$ (ನಾ). ಕೇಡು ; ತೊಂದರೆ ; ವಿಪತ್ತು ; ರೋಗ : ನನಗೇನಾಗಿದೆ ಧಾಡಿ, ಗುಂಡಕಲ್ಲ ಹಾಗಿದ್ದೀನಿ (ಮರಳಿ. ೧೭೦) ; ಅವನಿಗೇನು ಧಾಡಿ, ಊರ ತುಂಬ ಸ್ನೇಹಿತರು, ಎಲ್ಲೋ ಹಿಂಡಿ ತೀರ್ಥ ಆಗಿರುತ್ತೆ (ನಟಿಸಾ. ೫) ; ಅಲ್ಲಿಕ್ಕೇನಾತೋ ಧಾಡೀ ನಿನಗ ಏಳು (ತಿಡುಗು. ೨೦) ; ನಾಲ್ಕುವರ್ಷ ಕಣ್ಣು ಮುಚ್ಚಿ ಕುಳತಿ ಅಂದರ ಆ ಹೊಲಕ್ಕೂ ಧಾಡಿ ಬರತದ (ಅಶೋಕ. ೫೭). **ದಾಡಿ$_3$:** ಇನ್ನು ಹತ್ತು ದಿನ ರಾತ್ರಿ ಎಲ್ಲಾ ಜಾಗರಣೆ ಮಾಡಿದರೂ ಈ ದೇಹಕ್ಕೆ ದಾಡಿಯಿಲ್ಲ (ಪದ್ಮಸ. ೨೩೩) ; ನನಗೆ ದಾಡಿ ಬರಲಿಕ್ಕಿಲ್ಲ (ಮರಮ. ೨೫೬). [←ಮರಾ. ಧಾಡ್]

ಧಾತ (ನಾ). ೧. ಬ್ರಹ್ಮ ; ಸೃಷ್ಟಿಕರ್ತ : ಧಾತ ಮಾಡುವ ತೆಱಪನಱಿಯದೆ ಕಾಡುವ ಕಮ್ಮಟದೇಹಿಗಳ ನೋಡಾ (ಕೋಲಶಾಂ. ೭-೨೫) ; ಧಾತೃ ಶಬ್ದದ ತಕಾರಕ್ಕೆ – ಧಾತ, ಮಾಂಧಾತ (ಶಮದ. ಕಿ. ೮೪ ಪ್ರಯೋ) ; ಧಾತನೆಣ್ಣೆಯ ಗಾಣದೆಳ್ಳುಕಾಳಲೆ ನೀನು (ಮಂಕುಕ. ೩೫೭). ೨. ದ್ವಾದಶಾದಿತ್ಯರಲ್ಲಿ ಒಬ್ಬನು : ಧಾತಾ, ಅರ್ಯಮಾ, ಮಿತ್ರ, ವರುಣ ... ತ್ವಷ್ಟ, ವಿಷ್ಣುಗಳೆಂಬವರೇ ಕ್ರಮದಿಂ ದ್ವಾದಶಾದಿತ್ಯರು (ವಿವೇಕ. ೨೬೬).

[ಸಂ. ಧಾತೃ]

ಧಾತಕಿ (ನಾ). ಆರೆಹೂವು ; "ಮರಾಟಿಮೊಗ್ಗು" (ಸಂಕನಿ) : ಪಿಷ್ಟೋದಕ ಗುಡ ಧಾತಕೀ ಸಂಯೋಗದಿಂದಮೆಂತು ಮದವಿಕಾರಮೆಸೆದಪ್ಪುದು ಅಂತೆ (ಆದಿಪು. ೨-೯ ವ) ; 'ಧಾತಕೀಕುಸುಮ' ಪರಾ. [ಸಂ. ಧಾತಕೀ]

ಧಾತಕೀಕುಸುಮ (ನಾ). ಆರೆ ಹೂವು : "ಅಗ್ನಿಜ್ವಾಲಾ, ಸುಭಿಕ್ಷಾ, ಧಾತಕೀ, ಧಾತುಪುಷ್ಟಿಕಾ ಈ ೪ ಧಾತಕೀಕುಸುಮ" (ನಾಚರಾ. ೧೧೦) ; "ಅಗ್ನಿಜ್ವಾಲಾ, ಸುಭಿಕ್ಷಾ, ಧಾತಕೀ, ಧಾತುಪುಷ್ಟಿಕಾ–೪ ಧಾತಕೀಕುಸುಮ" (ಸಿದ್ಧಾಂತಿ. ೧೪೦) ; ಧಾತಕೀಕುಸುಮ, ಲೋಧ್ರ, ಮಂಜಿಷ್ಠೆ, ಲಾಮಂಚ,

ಶ್ರೀಗಂಧ ಇವ್ಪನೂ ಸಮಾಂಶವಾಗಿ ನೀರಿಂದ ಅರೆದು ಮೈಗೆ ಲೇಪಿಸಲು ಸಕಲಗ್ರಹಗಳು ಹರವಹವು (ವೈದ್ಯಸಾ. II, ೧೫) : ಮಂಜಿಷ್ಠೆ, ಧಾತಕೀ ಕುಸುಮ, ತಾವರೆಕುಸುಮ . . . ಪಾಕದಲ್ಲಿಳಿಹಿ ಶರೀರಕ್ಕೆ ಲೇಪಿಸೆ ಪಿತ್ತ ಜ್ವರ, ಉನ್ಮಾದ, ಮೂರ್ಛೆ ಸಹ ಮಾಣುವುವು (ಸಳವ್ಯ. ೮೫). [ಸಂ.]

ಧಾತಕೀಖಂಡ (ನಾ).=ಧಾತಕೀಷಂಡ; ಲ ವಂಧ್ಯಲೋಕದಲ್ಲಿರುವ ಒಂದು ದ್ವೀಪ. ಇದರ ಒಳಭಾಗದಲ್ಲಿ ಧಾತಕೀವೃಕ್ಷವಿದೆ. ಇದು ರತ್ನಮಯವಾಗಿದೆ. ಅದರಿಂದಲೇ ಈ ದ್ವೀಪಕ್ಕೆ ಧಾತಕೀಖಂಡವೆಂದು ಹೆಸರು ಬಂದಿದೆ. ಇದು ನಾಲ್ಕು ಲಕ್ಷ ಯೋಜನ ವಿಸ್ತಾರವಾಗಿದೆ. ಇದರ ನಾಲ್ಕು ಕಡೆಯಲ್ಲೂ ಕಾಲೋದಧಿ ಸಮುದ್ರವಿದೆ. ಇದಕ್ಕೆ ಅಧಿಪರುಗಳಂ ವ್ಯಂತರದೇವರಾದ ಪ್ರಭಾಸ ಮತ್ತು ಪ್ರಿಯದರ್ಶನರು : ಜಂಬೂದ್ವೀಪಂ ಲವಣಸಮುದ್ರಂ ಧಾತಕೀಖಂಡದ್ವೀಪಂ ಕಾಳೋದಕಸಮುದ್ರಂ ಪುಷ್ಕರವರದ್ವೀಪಂ ಪುಷ್ಕರವರಸಮುದ್ರಂ (ತತ್ತ್ವಸ್ಥ. ೧೫೫). [ಸಂ.]

ಧಾತಕೀಷಂಡ (ನಾ). [ಜೈನ] ಪುಷ್ಕರದ್ವೀಪದಲ್ಲಿ ಒಂದು ಭಾಗ; ಧಾತಕೀ ಎಂಬ ವೃಕ್ಷ ಪ್ರಧಾನವಾಗಿರುವ ದ್ವೀಪ : ಆನೀ ಭವಕ್ಕೆ ಮೂಱನೆಯ ಭವದೊಳ್ ಈ ಧಾತಕೀಷಂಡದ ಮೂಡಣ ಮಂದರದ . . . ಪಾಟಳಿಗ್ರಾಮದೊಳ್ . . . ನೆಲಸಲೊಡಂ (ಆದಿಪು. ೩-೪೬ ಪ) : ಧಾತಕೀಷಂಡದ ಮೂಡಣಮಂದರದ ಪೂರ್ವವಿದೇಹದ ಸೀತಾನದಿಯ . . . ದಕ್ಷಿಣಶ್ರೇಣಿಯೊಳ್ (ಶಾಂತಿಪು. ೬-೮೪ ಪ) ; ಲವಣಸಮುದ್ರಮುದಂ ನಾಲ್ಕು ಲಕ್ಷ ಯೋಜನದಗಲದಿಂ ಬಳಸಿರ್ದುದು ಧಾತಕೀಷಂಡದ್ವೀಪಂ (ಸುಕುಮಾ. ೧೧-೫೦ ಪ) ; ಉದ್ದತೋಲ್ಬಣ ರೋಷಂ ಪರಿಯಿಟ್ಟು ಮುತ್ತಿದ ವೊಲಿರ್ಪಂ ಧಾತಕೀಷಂಡವಿಖ್ಯಾತಕ್ಷಣಭದ್ರಂ ಸಸಮುದ್ರಮಂ ಬಳಸಿ ಜಂಬೂದ್ವೀಪವಿನ್ಯಾಸಮಂ (ಪಂದ್ರಪು. ೦-೬). [ಸಂ.]

ಧಾತಾರ (ನಾ). ಬ್ರಹ್ಮ ; ಸೃಷ್ಟಿಕರ್ತ : "ಬ್ರಹ್ಮಾ-ಧಾತಾರಂ" (ಕಾಶಕ್ಯ. ೨೯೦) : ಭರ್ತಾರಂ, ಭರ್ತೃ ; ಧಾತಾರಂ, ಧಾತೃ ; ಹೋತಾರಂ, ಹೋತೃ (ಧಾಷಾಭೂ. ೧೧೦ ಪ್ರಯೋ). [ಸಂ. ಧಾತೃ]

ಧಾತು (ನಾ). ೧. ಮೂಲವಸ್ತು ; ವಮೂಲಘಟಕ,– ಅಂಶ,– ಸತ್ವ : ಆಚಾರಲಿಂಗವಿಡಿದು ಗುರುಲಿಂಗವ ಕಾಣಬೇಕು . . . ಪ್ರಸಾದಲಿಂಗ ವಿಡಿದು ಮಹಾಲಿಂಗವ ಕಾಣಬೇಕು ಇಂತೀ ಷಡುಸ್ಥಲದ ಧಾತುವ ಸಂಬಂಧಿಸಿ ಒಂದು ಮಾಡಿಕೊಂಡಿಪ್ಪೆ ಈ ಕರಸ್ಥಲದ ಅನುವ ಗೋಹೇಶ್ವರನ ಶರಣ ಸಂಗನ ಬಸವಣ್ಣ ಬಲ್ಲ (ಅವಪಂ. ೦೬೫-೭೫೭) ; ಕಲ್ಲುಪ್ಪ ಕರ್ಪುರವು ಸೊಲ್ಲೆರಡು ಧಾತೊಂದು ಖುಲ್ಲನೊಳ್ಳಿದನ ರೂಪೊಂದು ಗುಣದೊಳಗೆ ಎಲ್ಲ ಅಂತರವು (ಸರ್ವಜ್ಞ. ೫೧೨). ೨. ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶಗಳೆಂಬ ಪಂಚಮಹಾಭೂತಗಳು. ೩. ಆಕಾಶವನ್ನು ಬಿಟ್ಟು ಉಳಿದ ಭೂತಗಳು : "ಅಂಬರವರ್ಜಿತ ಪಂಚಭೂತದೊಳ್ . . . ಶೀಲಮಿಂತಿವಕೆ ಧಾತುವೆನಿಕ್ಕು" (ನಾನಾರ. ೮೩). ೪. ದೇಹದೊಳಗಿನ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ, ಶುಕ್ರಗಳೆಂಬ ಏಳು ಮುಖ್ಯವಾದ ಘಟಕಗಳು ; ಸಪ್ತಧಾತುಗಳು : ಪಂಚೇಂದ್ರಿಯ ಸಪ್ತಧಾತು ಹಂಚು ಹಱಿಮಾಡಿ ಕಾಡಿಹುವಯ್ಯಾ (ಬಸವ. ೪೭) : ಜಲಧಿ ವಸುತ್ಯಕೆ ವಾರ ಕುಲಗಿರಿಗಳು ಏಳಕ್ಕಿ ದ್ವೀಪ ಸರ್ವಾವಳಿ ಮುನೀಶ್ವರರುಗಳ ಧಾತುಗಡಣದ ವೇದಿಗಳ ಶಿಖರು . . . ಪಡೆವವರುಗಳು ನಿರ್ಮಳದಲೆಡಹದೆ ಬೆರಸಿಕೊಂಬರು ಮುಕ್ತಿರಾಜ್ಯವನು (ಕುವಾ೫ಳು. ೪-೩೪) : ಧಾರುಣಿಯ ಲಂಪಟರು ಕದನವ ಹಾರಿ ಬಂದರು ಗಡ ಕೃತಾಂತನ ಭೂರಿ ಭೂತದ ಧಾತುವಾಯಿತು ಲೇಸುಲೇಸೆಂದ (ಕುವಾಭೀ. ೦-೪) : ಧಾತು ಏಳನು ಕಲೆತು ಭೂತ ಪಂಚಕವಾಗಿ ಓತು ದೇಹವನು ಧರಿಸಿರ್ದ ಮನುಜರ್ಗೆ ಜಾತಿ ಎತ್ತಣದು (ಸರ್ವಜ್ಞ. ೯೭೫) : ಧಾತುಗಳು ರಸಧಾತು, ರಕ್ತಧಾತು, ಮಾಂಸಧಾತು, ಮೇದೋಧಾತು, ಅಸ್ಥಿಧಾತು, ಮಜ್ಜಧಾತು, ಶುಕ್ಲಧಾತು ಎಂದು ಏಳು ತೆರನಾಗಿವೆ (ಸಳವ್ಯ. ೯೮). ೫. ದೇಹದೊಳಗಿನ ವಾತ, ಪಿತ್ತ, ಕಫಗಳೆಂಬ ಮೂರು ದ್ರವ್ಯಗಳು : ಒಂದೊಂದು ಧಾತುವಿನ ಹೆಚ್ಚಿಗೆಯಿಂದಲೂ ಎರಡು ಧಾತುಗಳ ಮಧ್ಯಮ ಮಾಂದ್ಯಗಳ ವ್ಯತ್ಯಾಸಗಳಿಂದಲೂ ಪುಟ್ಟುವ ಸನ್ನಿದೋಷವಾರು (ಸಳವ್ಯ. ೦೩೧) : ಅನ್ನೋದಕ ತಗ್ನಿಗಳೆಂಬ ಮೂರರಿಂದ ಹುಟ್ಟುವುದು ವಾತ, ಪಿತ್ತ, ಶ್ಲೇಷ್ಮ ವೆಂಬ ಮೂರು ಧಾತುಗಳು (ಹಸಾರ. ೯-೩ ಟೀಕು). ೬. ಲೋಹ ; ಖನಿಜ: ಧಾತುವಿನ ಪಾತ್ರೆಗಳನ್ನು ಬಳಸುವ ಮನೆಗಳು ತೀರ ವಿರಳವಾಗಿದ್ದವು (ಪ್ರೇಮಾಶ್ರ. ೩೪೮) ; ಸುಟ್ಟ ಅದಿರು ಶುದ್ಧವಾಗಿ ಧಾತುವಾಗುತ್ತದೆ (ಶಕೃಕ್ಷೇಲ. ೦೮-೨) : ಅರರೆ! ಧಾತು ಪ್ರಕರವರಸನೆನಿಸುವ ಕನಕ! ಅರಿಯೆಯಾ ನಿನಗೆಂತು ಬಂದುದೀ ದೇಹಂ ? (ಪಂಚಿನ. ೧೬೯-೧೧) ; ಭೂತ ಭವಿಷ್ಯಗಳ ಮಾತ್ತೇಳಿ ಓಲಿಸುವರು ಧಾತು ಬಂಗಾರ ಮಾಡುವರು (ಸಿದ್ಧಪು. ೩೨-೧೪). ೭. ಆತ್ಮ ; ಪರಮಾತ್ಮ ; ಪರಬ್ರಹ್ಮ. 'ಧಾತುಗೆಡು' ಪರಾ. ೮. ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ಚರ್ಮಗಳೆಂಬ ಐದು ಜ್ಞಾನೇಂದ್ರಿಯಗಳು. ೯. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ (ಪಂಚಮಹಾಭೂತಗಳ) ಐದು ಗುಣಗಳು ; ಪಂಚ ತನ್ಮಾತ್ರೆಗಳು : ವಿಕಳನಾದನು ವಂಚೇಂದ್ರಿಯ ಧಾತುವಿನಿಂದ ಮತಿಗೆಟ್ಟಿನು ಮನದ ವಿಕಾರದಿಂದ (ಬಸವ.೪೩). ೧೦. ವಂಶಾವಳಿ; ಎಲುಬು: "ಅಸ್ಥಿ, ಧಾತು, ಕೀಕಸಂ, ಕುಲ್ಯಂ– ಈ ೪ ಎಲ್ಲುವ" (ಹರಿಹಯು. ೧೦೪-೦೦). ೧೧. ಕಾವಿಬಣ್ಣದ ಕಲ್ಲು ; ಕೆಂಪು ಬಣ್ಣದ ಶಿಲೆ ; ಗೈರಿಕ : "ಗೈರಿಕಂ, ಧಾತುಃ–ಈ ೨ ಜಾದು" (ಹಲಾಯು. ೨೪-೦೩) ; "ಗೈರಿಕಂ ಧಾತುವೆನೆ ಜಾಜಕ್ಕುಂ" (ಮುಂಗರಾ. ೩೦-೩) : ಧಾತು ರಕ್ತಾಶೋಕಕಸಲಯವಿಭಾಸಿಭಾಸುಃ ಸಟಾಕಲಾಪಮಲಂಡೆ (ಪಂಕತಂ. ೩೫-೦೩) : ದಾರುಣರಕ್ತವಕ್ತ್ರಮೃಗರಾಜಯುಗಕ್ಕೆ . . . ಸಧಾತು ಕುಭೃದ್ಯುಗಕ್ಕೆ ಸಿಂದೂರಿತ ಗಂಧಸಿಂಧುರಯುಗಕ್ಕೆಣೆಯೆಂಬಿನಮಣ್ಮೆ ಕಾದಿದರ್ ಕೌರವರಾಜನುಂ ಕುರುಕುಲಾಂತಕನುಂ ರುಧಿರಾಕ್ತಮೂರ್ತಿಗಳ್ (ಗದಾಯು. ೯-೦೭) ; ಮಹೋತ್ಪಲಮಿತ್ರನಿದಿರಿನಲಿ ಧಾತು ಧವಳಿಸಬಲ್ಲುದೇ (ತೊರಕಾ. ೩-೭-೩೮). ೧೨. ಸ್ವಭಾವ ; ಸಹಜವಾಗಿರುವಿಕೆ ; ವಿಶಿಷ್ಟವಾದ ಗುಣ ; ಇರವು ; ಸ್ಥಿತಿ : ಪೂತುರೇ ರಣವೆಂಬುದೆಮ್ಮಯ ಧಾತುಕಲಿ ಮೂಡಲಿಸಿ ಕರೆದರೆ ರಾಜ್ಯಸಿರಿಯೇಕೆ (ಕುವಾಡ್ರೋ. ೦೫-೩೫) : ಬನದ ಸೀತೆಯ ಧಾತನಱಿ ಹೋಗೆನೆ . . . ಲಂಕಾನಗರಿಗೈತಂದ (ತೊರಕಾ. ೬-೪೨-೧) : ಮಾತು ಮುನ್ನಿನವೋಲು ಬಳಕೆಯ ರೀತಿ ಮುನ್ನಿನವೋಲು ಚಿತ್ತದ ಧಾತು ಬೇಱೊಂದಾಯ್ತು (ನಿಧಾಗ. ೧೦-೭೩-೩೪) : "ಇಳೆಯಾದಿ ಭೂತಂಗಳಲಿ ಪಂಚಲೋಹದಲಿ ಹಲವು ವರ್ಣದಲಿ ಸ್ವಭಾವದಲಿ ರಸ ಎಧಿರ ವೆಲುಮಾಂಸ ಮೊದಲಾದ ದೇಹದಲಿ ಧಾತುವೆಂಬಭಿಧಾನ ವರ್ತಿಸಿರ್ಕುಂ" (ಮುಂಗರಾ. ೧೪೬-೩೪). ೧೩. ರೇತಸ್ಸು ; ಶುಕ್ಲ ; ವೀರ್ಯ : "ಧಾತು ರೇತಂ ಶುಕ್ಲಂ" (ವಸು.ಕೋ. ೭-೩೦) : ರುಧಿರ . . . ಶುಕ್ಲಮೆಂಬ ಸಪ್ತ ಧಾತುಗಳ್ ಕ್ರಮದಿಂ ವರ್ಧಿಸಲಾ ಜೀವನಾದೊಡೆ ಆಯಾ ಧಾತುಮಯನಾಗಿ ಪುರುಷನ ಗರ್ಭದಲ್ಲಿ ಮಾಸತ್ರಯವಿರ್ದು (ವಿವೇಕ. ೩೩೫). ೧೪. ಶಕ್ತಿ; ಸಾಮರ್ಥ್ಯ. 'ಧಾತುಗೆಡಿಸು', 'ಧಾತುಗೆಡು' ಪರಾ. ೧೫. ಧೈರ್ಯ. 'ಧಾತುಗುಂದು' ಪರಾ. ೧೬. ಅರುವತ್ತು ಸಂವತ್ಸರಗಳಲ್ಲಿ ಒಂದು; ಹತ್ತನೆಯ ಸಂವತ್ಸರ : ಮತ್ತಮಾ ವರುಷವೇ ಪ್ರಭವ . . . ಧಾತು ...ಅಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೩೩೧). ೧೭. ಎಚ್ಚರ; ಪ್ರಜ್ಞೆ : ಪ್ರಜ್ಞೆ ತಪ್ಪಿ ಮಂಚದ ಮೇಲೆ ಬಿದ್ದುಕೊಂಡಿದ್ದ ರಂಗಮ್ಮನಿಗೆ ಶೈತ್ಯೋಪಚಾರ ಮಾಡಿ ಧಾತು ಬರುವಂತೆ ಮಾಡಿದ್ದರಂತೆ (ಮುಳವ. ೪೭೬). ೧೮. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : ತುರಗ · ಹಯಂ ಧಾತು . . . ಸ್ವರ ಸಾಗರ ಪರ್ವತಾದ್ರಿಯೇಟರ ನಾಮಂ (ವ್ಯವಹಾ. ೯-೬).

೧೯. [ವ್ಯಾಕ] ಕ್ರಿಯಾಪದದ ಮೂಲರೂಪ : ಪ್ರತ್ಯಯರಹಿತವಾದ ರೂಪ : ಧಾತುಗನೇಕಾಕ್ಷರಕಾಖ್ಯಾತವಿಭಕ್ತಿಗಳ ಮೊದಲೊಳಿಸುತಾನಕ್ಕುಂ ಹೇತು ಪ್ರಯೋಗದೊಳ್ (ಕಾಪ್ರಾಪ. ೪೦೭) ; ಕ್ರಿಯೆಯರ್ಥದ ಮೂಲಂ ಪ್ರತ್ಯಯರಹಿತಂ ಧಾತು . . . ಧಾತುಗೆ ವಿಭಕ್ತಿಯಾಜ್ಞಾಗಿರ್ಕುಂ (ಕಮುಪ್ರ. ೩೦೬) ; ಸಂಧಿ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅವಭ್ರಂಶ, ಅವ್ಯಯವೆಂಬಷ್ಟಪ್ರಕಾರಮಂ ಪ್ರಪಂಚಿಸುವ ವ್ಯಾಕರಣದೋಷಮಿಲ್ಲದೆ (ವಿವೇಕ. ೩೯೦) ; ಕ್ರಿಯೆಯನ್ನು ತಿಳಿಸುವ ಪ್ರಕೃತಿಯೇ ಧಾತು (ಮುದ್ರಕು. ೭೦). ೨೦. [ಸಂಗೀತ] ಹಾಡಿನ ಸಾಹಿತ್ಯಕ್ಕೆ ಪೂರಕವಾಗಿ ಬರುವ ದ್ರವ್ಯ ; P ಪ್ರಾಚೀನ ಸಂಗೀತಶಾಸ್ತ್ರದ ಪ್ರಕಾರ ಸ್ವರ, ಪದ, ಬಿರುದು, ಪಾಟ, ತೇನ (ತೇನಕ ಅಥವಾ ತೆನ್ನ), ತಾಳಗಳೆಂಬ ಆರು ದ್ರವ್ಯಗಳು. ಆಧುನಿಕ ಸಂಗೀತಶಾಸ್ತ್ರದ ಪ್ರಕಾರ ರಾಗ, ಗಮಕ, ವರ್ಣಮೆಂಟ್ಟುಗಳು. ಒಳ್ಳೆಯ ಸಂಗೀತದಲ್ಲಿ 'ಧಾತು' ಮತ್ತು 'ಮಾತು'ಗಳೆರಡೂ ಹೊಂದಿಕೊಂಡಿರುತ್ತವೆ. ಭರತಕೋಶದಲ್ಲಿ 'ಧಾತು' ಎಂಬುದು, (ವಾದ್ಯಗಳನ್ನು) ಬೇರೆ ಬೇರೆ ರೀತಿಯಿಂದ ಬಾರಿಸುವಾಗ ಅಥವಾ ನುಡಿಸುವಾಗ ಹೊರಡುವ ಬೇರೆ ಬೇರೆ ರೀತಿಯ ಸ್ವರವಿಶೇಷವೆಂದೂ ಇದರಲ್ಲಿ ವಿಸ್ತಾರ, ಅವಿದ್ಧ, ವ್ಯಂಜನ ಮತ್ತು ಕರಣಗಳೆಂಬ ನಾಲ್ಕು ಬಗೆಗಳುವೆಯೆಂದೂ ವಿವರಿಸಲಾಗಿದೆ : ಕಳಿತಪಂಚಮಾಂಚಿತ ಮೃದುಧ್ವನಿಯಂ ಗೆಲೆವಂದು ಸುಸ್ವರಂ ಲಳಿ ಲುಳಿ ಧಾತು ರೀತಿ ಗತಿಯೋಡೆ ಬಜಾವಣೆ . . . ಬೆಡಂಗು ಭಂಗಿ ಸಂಗಳಿಸೆ ಸುಕಂಠೆ ಪಾಡಿ ಪುದಿದಳ್ ಮುದಮಂ ನರನಾಥಚಿತ್ತದೊಳ್ (ಕುಸುಮಾ. ೦-೩೭) : ಜಾತಿ ಲಯ ತಾಳ ರೀತಿ ಗಮಕಂ ಯತ [ತಿ] ತೋಪು ಕಳಾಸ ಧಾತು ಮೇಣತಿರಸಭಾವಬಿಂಕಂ . . . ರುಚಿರಗಾನಸುತಾಳದ ಮಾರ್ಗಮೊಪ್ಪುವಂತಿ ಚತುರತ್ವದಿಂದಭಿನಯಂಗಳನೂಹಿಸುತಾಡಿ ತೋಱಿದರ್ (ಚಕ್ಕದೇ. ೦೩೩) ; ಪೂರ್ಣಕಂಠದಿಂದ (ಧಾತು ಮತ್ತು ಮಾಟು) ಮಹಾವೈದ್ಯನಾಥ ಅಯ್ಯರ್ ಅವರು ಹಾಡುತ್ತಿದ್ದರು (ಸಂಗೀತ. ೯). [ಸಂ.]

ಧಾತುಕ್ಷಯ (ನಾ). ೧. ದೇಹದೊಳಗಿನ ರಸಾದಿ ಧಾತುಗಳಂ ಕಡಮೆಯಾಗುವುದು. ೨. ವೀರ್ಯನಾಶ : ಧಾತುಕ್ಷಯದಿಂದ ರಕ್ತವು ಕ್ಷೀಣಿಸಿ ಹೊಟ್ಟೆಯೊಳಗಿನ ಆಂತ್ರಗಳು ದುರ್ಬಲವಾಗಿ ಅನ್ನವು ಚನ್ನಾಗಿ ಜೀರ್ಣವಾಗಲಾರದೆಂದು ವೈದ್ಯಶಾಸ್ತ್ರದ ಸಿದ್ಧಾಂತವಿರುವದು (ಬ್ರಹ್ಮಜೀ. ೨೨). ೩. ನಿತ್ರಾಣ ; ದೌರ್ಬಲ್ಯ ; ನಿಶ್ಶಕ್ತಿ : ಧಾತುಕ್ಷಯಂ ಮನಃಪ್ರತಿಘಾತಂ ಪುಟ್ಟಿಸುಗುಮೊಂದು-ಮಾಲಸ್ಯಮನಪ್ರೀತಿಯಿನಸಹ್ಯತೆಯಿನಭಜಾತೋಜ್ಜ್ವಂ ಭಣತೆಯಿಂದಮದನಱಿಗಱಿವಂ (ಶೃಂಗಾಶ. ೨-೩೪). [ಧಾತು + ಕ್ಷಯ]

ಧಾತುಕ್ಷೀಣತೆ (ನಾ). = ಧಾತುಕ್ಷಯ ೨ : ವೀರ್ಯವು ನೀರಿನಂತೆ ತೆಳ್ಳಗಾಗುವದು . . . ಧಾತುಕ್ಷೀಣತೆಯು ಹೆಚ್ಚಾಗುವುದು (ಬ್ರಹ್ಮಜೀ. ೨೦). [ಧಾತು + ಕ್ಷೀಣತೆ]

ಧಾತುಗತ (ಗು). ಮಂಗಳೆಯೊಳಗೆ ಸೇರಿಕೊಂಡಿರುವ ; ಅಸ್ಥಿಗತವಾದ : ಸರ್ವವಿಷಮಜ್ವರ, ಏಕಾಹಿಕ, ದ್ವ್ಯಹಿಕ, ತ್ರ್ಯಹಿಕ, ಚಾತುರ್ಥಿಕ, ಸನ್ನಿಪಾತ ಧಾತುಗತಶ್ವಾಸಹರಂ (ವಿದ್ಯಾವಿ. ೦೬). [ಧಾತು + ಗತ೩]

ಧಾತುಗರ್ಭ (ನಾ). [ಬೌದ್ಧ] ಬುದ್ಧನ ಅವಶೇಷಗಳನ್ನು ಕಾಯ್ದಿಟ್ಟಿರುವ ಕಟ್ಟಡ ; ಚೈತ್ಯಾಲಯ ; ಡಾಗೋಬ ; ಪಗೋಡ : ಈ ರಾಜ್ಯಗಳಿದ್ದ ಪ್ರದೇಶದಲ್ಲಿ ಭಾರತೀಯ ಶಿಲ್ಪಗಳೂ, ಬೌದ್ಧಸ್ತೂಪಗಳೂ, ಧಾತುಗರ್ಭಗಳೂ ವಿಶೇಷವಾಗಿ ದೊರೆತಿವೆ (ಭಾರದ. ೩೪೦) ; 'ಪಾಗನ್'ನ ರಾಜ . . . ಬೌದ್ಧಧರ್ಮವನ್ನು ಸ್ವೀಕರಿಸಿ ದೇಶದಲ್ಲೆಲ್ಲ ಧಾತುಗರ್ಭಗಳನ್ನು ಕಟ್ಟಿಸಿ . . . ಬರ್ಮಾ ಇತಿಹಾಸದಲ್ಲಿ ಸುವರ್ಣಯುಗವನ್ನು ಆರಂಭಿಸಿದ (ಭಾರದ. ೩೪೦). [ಧಾತು + ಗರ್ಭ]

ಧಾತುಗುಂದು (ಕ್ರಿ). ೧. ಶಕ್ತಿಗುಂದಂ ; ದುರ್ಬಲವಾಗು ; ನಿರ್ವಿಣ್ಣವಾಗು : ಘಾತಿಯಲಿ . . . ಧಾತುಗುಂದಿದನಳ್ಕಿಱಿದವಳ್ಕಿಗಳು (ಕುವಾ೩. ೧೪-೧೦) ; ಅಂಗಜನವುಪಟಳದಿ ಕಡುನೊಂದು ಧಾತುಗುಂದಿಹಳಾತರುಣಿ (ನಳಚ. ೨-೪೬) ; ಮುಸಗಿದುದು ಕೆಂದೂಳಿ ಗಗನವ ಮುಸುಕಿದರೆ ರವಿ ಧಾತುಗುಂದಿ ಪಸರಿಸಿತು ಎಣ್ದೆಸೆಯಾ (ರಾಮುಚ. ೯೪) ; ಅಡಿಗಡಿಗೆ ಧಾತುಗುಂದುವ ಧೈರ್ಯಮೆಸೆಯಲೆಸೆದರ್ ಶಿವನ ಬೆಂಕೊಂಡು ಸುರಸತಿಯರು (ಶಿಲಪು. ೧೯-೩೨) ; ದ್ಯೂತಕೇಳಿಯೊಳಜ್ಞಾತವಾಸದೊಳಂದು ಧಾತುಗುಂದದೆ ಪಾಂಚಾಲಿ ಒತು ಪಾಂಡವರನೊಲಿಸಿ ಪದಿಬದೆಯರ ಬೈತಲೆವಣಿಯೆನಿಸಿದಳು (ಪದಿಬ. ೩-೪೪). ೨. ಧೈರ್ಯಗುಂದಂ; ಕಂಗೆಡು: ಈತನಿನ್ನೇನ ತಂದವನೆಂದು ಚಿತ್ತದಲಿ ಧಾ[ಖಾಖಾಂ. ದಾ]ತುಗುಂದದಿರಿ ಮಜುಗದಿರಿ (ಸೋಮಚ. ೨-೦೨೨) ; ಧಾತುಗುಂದಿದೆ ಪತಿಯ ಕಾಣದೆ ಭೀತಿಯಂಲಿ ನಿಮ್ಮಡಿಯ ಕಂಡೆನು (ನಳಚ. ೩-೩೬). [ಧಾತು + ಕುಂದು$_1$]

ಧಾತುಗೆಡಿಸು (ಕ್ರಿ). ಶಕ್ತಿಗುಂದಿಸು ; ದುರ್ಬಲಗೊಳಿಸು; ಸತ್ವಗುಂದಿಸು: ರಜನೀಚರರ ಕಟ್ಟಣೆ ಧಾತುಗೆಡಿಸಿತು ದಿಟ್ಟರುಬ್ಬಟೆಯ (ಕುವಾ೩ದ್ರೋ. ೦೫-೨೬) ; ಈತನೆಮ್ಮುವ ತನ್ನ ಮೂಗಿನ ಮಾತರಿಶ್ವನ ಬಿಜುಬಿನಲಿ ನೆಜಿ ಧಾತುಗೆಡಿಸಿದನು (ತೊರಠಾ. ೫-೮-೪೩). ೨. ಧೈರ್ಯಗುಂದಿಸು ; ಹೆದರಿಸು : ತನ್ನನೀ ಪರಿ ಧಾತುಗೆಡಿಸುವುದುಚಿತವೇ (ತೊರಠಾ. ೩-೧೧-೪೧). [ಧಾತುಗೆಡು + – ಇಸ್ಕು]

ಧಾತುಗೆಡು (ಕ್ರಿ). ೧. ಶಕ್ತಿಗುಂದಂ; ದುರ್ಬಲವಾಗು : ಬಳಲು ; ಆಯಾಸಗೊಳ್ಳು : ಧೃತಿಗೆಟ್ಟು ಮನ ಧಾತುಗೆಟ್ಟರೆ ಅವ್ವುದು ತಪ್ಪದು (ಬಸವ. ೬೭೭) ; ಸತಿ ಮಾಯಾಮೋಹವಾಚ್ಯಾದಿಸೆ ನೆಜಿ ಧೃತಿಗೆಟ್ಟಿಂ ವೃಥಾ ಧಾತುಗೆಟ್ಟಿಂ (ರಕ್ಷಾಶ. ೫೩); ಈರ್ಯೆದುವವಾಸದಿಂ ಧಾ[ಖಾಖಾಂ. ದಾ]ತು ಗೆಟ್ಟಱಿಯದೀ ವ್ಯಾಘ್ರಪುರಮಂ ಪೊಗಲು ವ್ಯಾಘ್ರಪುರಮಾದುದೆಮಗೆ (ಸೋಮಚ. ೩-೮೮) ; ಯಕ್ಷನಿಟ್ಟ ನಿಪಾತತೃಣಮಂ ನೆಗಪಲಾಱದೆ ಧಾತು ಗೆಟ್ಟರು ವಿಷ್ಣುಧಾತರು ತಾವೆ ಘನವೆಂದು (ಬಸಪು. ೫೪-೪೭) ; ಘಾಸಿಯಾದರು ಘಾಯವಡೆದು ವಿಳಾಸವಳಿದುದು ರಿವುಭಟನ ಗೆಲುವಾಸೆ ಬೀತುದು ಧಾತು ಗೆಟ್ಟುದು ಸರಳ ಸಾರದಲಿ (ಕುವಾ೩ದ್ರೋ. ೬-೩೦) : ಟಿಬ್ಬರಿಸುವನೆ ಕಲಿಭೀಮನೆಬ್ಬಟೆಯರಿಗಳಾಹವಧೀರರಾದರೆ ಧಾತುಗೆಡುವವನೆ (ಕುವಾ೪. ೧೨-೨೬) : ನೆಗ್ಗಿದುದು ಧರೆ ಭಟರ ಘಾಯದ ಲಗ್ಗೆಗಮರೇಶ್ವರರು ಸರಕನು ಹುಗ್ಗಿದರು . . . ದಿಗ್ಗಜಂಗಳು ಧಾತುಗೆಟ್ಟವು (ನಿಘಾಗ. ೧೦-೪೪-೫೭) : ಆ ತುರಂಗಮವ ಬಿಡು ಧಾತುಗೆಡಬೇಡೆನುತ್ಪಾತನಂ ನರನೆಚ್ಚನಂ (ಜೈಮಿಭಾ. ೦೩-೬). ೨. ಧೈರ್ಯಗುಂದಂ ; ಕಂಗೆಡು ; ತಬ್ಬಿಬ್ಬಾಗು : ಓತು ನಡೆಗೊಂಡು ಕಂಗೆಟ್ಟು ಮಗುಳೆಯ್ತಂದು ಭೀತಿಯಿಂದೆಱಗಿ ಕಿಂಕರ್ವಾಣಮಂ ತೋಱಿ ಧಾತುಗೆಡಬೇಡೆಂದು ಮಲ್ಲಿಕಾರ್ಜುನನ ಸುಖಿಸದನಕ್ಕೆ ಕೊಂಡೊಯ್ದನು (ಸಿದ್ಧರಾ. ೪-೪೬): ಏನು ಮಾಡಲಯ್ಯ . . . ಧಾತುಗೆಟ್ಟು ಬೆಳ್ಳಿ ಬಂಗಾರದಲಿ ಮೆಱೆವ ಧೂರ್ತೆಯರ ನೋಡುವೀ ಚಕ್ಷುರಿಂದ್ರಿಯಂಕೆ (ಕನಕ. ೮೪-೦). ೩. ಎಚ್ಚರತಪ್ಪು ; ಪ್ರಜ್ಞೆತಪ್ಪು ; ನಿಶ್ಚೇಷ್ಟಿತನಾಗು: ಧಾತುಗೆಟ್ಟನು ಭೀಮ ಮುಸುಕಿತು ಭೀತಿ ನಮ್ಮೆಲ್ಲರನು (ಕುವಾ೪ಗ. ೭-೪೩). ೪. ಕಳೆಗುಂದು ; ನಿಸ್ತೇಜವಾಗು : ಕಂಠಮಾಲೆಯೊಳ್ಪಾತಿನಾಯಕರತ್ನಮಂ ತೆಗೆದು ಬಿಸುಟಂತೆ ಧಾತುಗೆಟ್ಟಿದೆ ತವ್ಮ ಬಲಂ (ಜೈಮಿಭಾ. ೦೩-೫೮). ೫. ಆಕಾರವನ್ನು ಕಳೆದುಕೊಳ್ಳು ; ರೂಪುಗೆಡು : ಪವನಬಲ ಪರಿದಳಿತ ಕದಳೀನಿವಹದಲಿ ನಭ ಧಾತುಗೆಟ್ಟುದು ರವಿಗೆ ಕಾವಥವಾಯ್ತು (ಕುವಾ೩ದ್ರೋ. ೩-೦೦.) ೬. ಆತ್ಮಸ್ವರೂಪವನ್ನು ಕಳೆದುಕೊಳ್ಳು : ಹಸಿದು ತಾರಕೂಟವ ಕೇಳಹೋದರೆ ಕೂಟವೆದ್ದು ಬಡಿದರು ಸಾಕಾರ ಮೊದಲು ಧಾತುಗೆಟ್ಟೆಯಲ್ಲಾ ವರಶಿವಾ (ಸರ್ವಜ್ಞ. ೬-೦೩೦). [ಧಾತು + ಕೆಡು$_1$]

ಧಾತುಗೊಳ್ (ಕ್ರಿ). ಎಚ್ಚರಗೊಳ್ಳು ; ಚೇತನಗೊಳ್ಳು : ಮೊದಲ್ ಚೇತನಂಗೊಂಡೆಟ್ಟ ಲಕ್ಷ್ಮಣನ ಶೈತ್ಯೋಪಚಾರದಿಂ ರಾಘವಂ ಧಾತುಗೊಂಡರೆಗಳಿಗೆ ಪರ್ಯಂತಂ ಪೋನಮಿರ್ದು (ಅದ್ಭುತ. ೩೪-೨೪).

[ಧಾತು + ಕೊಳ್$_1$]

ಧಾತುಜ್ಞ (ನಾ). ಚಿನ್ನ ಮೊದಲಾದ ಖನಿಜಗಳ ಪರೀಕ್ಷೆಯಲ್ಲಿ ಬಲ್ಲಿದ : ಧಾತುಜ್ಞರ್ ಸಂತತ ತನುಧಾತುಜ್ಞರ್ ಭೂರಿ ಸಾರಧಾತುಜ್ಞರ್ ಸದ್ಧಾತುಜ್ಞರ್ ನೆರೆದಿರ್ದರ್ ಕೌತುಕ ಹಮ್ಮೀರ ವೀರರಾಜನ ಸಭೆಯೊಳ್ (ಹಮ್ಮೀರ. ೨-೦೧೩). [ಸಂ.]

ಧಾತುತಪ್ಪು (ಕ್ರಿ). ಎಚ್ಚರ ತಪ್ಪು ; ಪ್ರಜ್ಞೆ ತಪ್ಪು : ಸಿಡಿಲು ಬಡದ್ಹಾಂಗಾಯ್ತು. ಧಾತುತಪ್ಪಿ ಬಿದ್ದಿದ್ದೆ (ಕಾನೂರು. ೦೩೩). [ಧಾತು + ತಪ್ಪು$_1$]

ಧಾತುನಷ್ಟ (ನಾ). ೧. ವೀರ್ಯನಾಶ : ಎಲೆ ಬಂಗಾರವನ್ನು . . . ಮೂಱು ತೂಕ ಪರ್ಯಂತರ ಶರೀರಧಾತುನಷ್ಟಕ್ಕೆ ಚೇನುತುಪ್ಪದಲ್ಲಿ ಗುಳಿಗೆಯಾಗಿ ಕೊಡುವುದು (ವಿವೈವಿ. ೪೦). ೨. ಚೈತನ್ಯಗುಂದುವಿಕೆ ; ಬಲಹೀನತೆ. [ಧಾತು + ನಷ್ಟ]

ಧಾತುನಾಶ (ನಾ). = ಧಾತುನಷ್ಟ ೨ : ವಾತದೋಷದಿಂದ . . . ಧಾತುನಾಶದಿಂದ ಹುಟ್ಟಿದ ತೃಷ್ಣೆ ಐದು ಪ್ರಕಾರ (ವೈದ್ಯಸಾ. I, ೦೮೩).

[ಧಾತು + ನಾಶ]

ಧಾತುನಾಶನ (ನಾ). ೧. ದೇಹದ ಸಪ್ತಧಾತುಗಳನ್ನು ನಾಶಮಾಡುವಂಥದು. ೨. = ಧಾತುನಷ್ಟ ೨. ೩. ಹುಳಿ ಅಂಬಲಿ,-ಗಂಜಿ.

[ಧಾತು + ನಾಶನ]

ಧಾತುಪ (ನಾ). ದೇಹದೊಳಗಿನ ಸಪ್ತಧಾತುಗಳಲ್ಲಿ ಪ್ರಮುಖವಾದುದು,- ಮೊದಲನೆಯದು ; ರಸ ; ಅನ್ನರಸ ; ಅನ್ನಕ್ಷೀರ.

[ಸಂ.]

ಧಾತುಪಾಠ (ನಾ). [ವ್ಯಾಕ] ಕ್ರಿಯಾಪದದ ಮೂಲರೂಪಗಳು ಮತ್ತು ಅವುಗಳ ಅರ್ಥಗಳನ್ನು ತಿಳಿಸುವ ಭಾಗ : ಪ್ರತಿವ್ಯಾಕರಣಕ್ಕೂ ಒಂದು ಧಾತುಪಾಠವು ಸೇರಿದೆಯೆಂದು ಹೇಳುವುದು ಸಂಪ್ರದಾಯ (ಕಾಶಕೃ. VII, ೩೬೫). [ಧಾತು + ಪಾಠ$_3$]

ಧಾತುಪುಷ್ಟಿ (ನಾ). ೧. ದೇಹದ ಸಪ್ತಧಾತುಗಳ ಬೆಳವಣಿಗೆ. ೨. ವೀರ್ಯವೃದ್ಧಿ. ೩. ದೈಹಿಕ ಸಾಮರ್ಥ್ಯ,-ಶಕ್ತಿ.

[ಧಾತು + ಪುಷ್ಟಿ]

ಧಾತುಪುಷ್ಪಿಕೆ (ನಾ). = ಧಾತಕಿ. [ಸಂ. ಧಾತುಪುಷ್ಪಿಕಾ]

ಧಾತುಭಾವ (ನಾ). (?) : ಈ ತೆಱದ ಕರುಣಾಂತರಂಗವ್ರಾತದೊಳ್ಬಳಿ ವಿಡಿದು ಬಳಲುವ ಧಾತುಭಾವಂ ವಿಕರಿಸದುಯೆಂದಿಹುದು ಕೃಷ್ಣೋಕ್ತಿ (ವಿವೇಧ. ೯-೩೧). [ಧಾತು + ಭಾವ$_3$]

ಧಾತುಮಲ, ಧಾತುಮಳ (ನಾ). ೧. ಇಂದ್ರಿಯಗಳಿಂದ ಹುಟ್ಟುವ ಕೊಳೆ ; ಬೆವರು ಮೊದಲಾದುವು : ಧಾತುಮಲಾದಿ ದೋಷಸಹಿತಂ ಪೊಱಗುಗ್ರದುರಂತ ಕರ್ಮ ಸಂಘಾತವಿಭಾಗ ಮತ್ತೊಳಗೆ ಬೋಧದ ಭಾಗಮದತ್ತ (ಜೀವಸಂ. ೧೨೮-೦೮) ; ಮೆಯ್ಯ ಪೊರೆಗಳಿಂತು ಮೂಱುಭಾಗಂ ಅಲ್ಲಿ ಪೊಱಗಣ ಭಾಗಂ ಧಾತುಮಲಾದಿ. ದೋಷಸಹಿತಂ (ಜೀವಸಂ. ೧೨೮-೦೮ ವ). ೨. ಸೀಸ. **ಧಾತುಮಳ** : ೧. ಧಾತುಮಳ[ಪಾಕಾಂ. ಲ] ದೋಷರಹಿತಂ ವೀತನಖಶ್ಮಶ್ರುಕೇಶಲೋಮಂ . . . ಮನೋಹರರೂಪಂ (ಆದಿಪು. ೬-೩೮). [ಸಂ.]

ಧಾತುಮಳ 'ಧಾತುಮಲ' ನೋ.

ಧಾತುಮಾಕ್ಷಿಕ (ನಾ). ಗಂಧಕ ಹಾಗು ಕಬ್ಬಿಣಗಳ ಸಂಯೋಗದಿಂದಾದ ರಾಸಾಯನಿಕ ದ್ರವ್ಯ : "ಧಾತುಮಾಕ್ಷಿಕ-ಮಾಕ್ಷಿಕಭೇದ" (ಔಷಧಿ. ೮೦).

[ಸಂ.]

ಧಾತುಮಾಕ್ಷಿಕಚೂರ್ಣ (ನಾ). ಒಂದು ಬಗೆಯ ಔಷಧಿ ಚೂರ್ಣ : ಧಾತಮಾಕ್ಷಿಕಚೂರ್ಣಂ:-ಕಬ್ಬಿಣದ ಪುಡಿ, ಎಳ್ಳು, ಶುಂಠಿ, ಹಿಪ್ಪಲಿ, ಮೆಣಸು . . . ಎಂಬಿವಂ ಸಮಾನಂಕೊಂಡು ಇವೆಲ್ಲರ ಸಮಾನ ಧಾತುಮಾಕ್ಷಿಕಚೂರ್ಣಂ ಇದಂ ಚೇನುತುಪ್ಪದೊಳು ಕಲಸಿ ಗುಳಿಗೆಯಂ ಮಾಡಿ ಬಳಿಕ ಹಾಲಲ್ಲಿ ಕುಡಿಯಲು ಹೆಲವುಕಾಲದಿಂ ಕೂಡಿಬಂದ ಪಾಂಡುರೋಗ ಹರವೆಂದು ಪೊಗಳಲ್ಪಟ್ಟಿರುವುದು (ವಿವೈವಿ. ೩೪).

[ಧಾತುಮಾಕ್ಷಿಕ + ಚೂರ್ಣ$_2$]

ಧಾತುರಸ (ನಾ). ೧. ಕರಗಿದ ಲೋಹ ; ಲೋಹರಸ : ಖನಿಜಕ್ಕೆ ಉಷ್ಣತೆ ತಗಲಿ ಅದರಿಂದ ಧಾತುರಸ ಹೊರಟದ್ದರಿಂದ ಜನರಿಗೆ ಅದು ತಿಳಿದಿರಬಹುದು (ಮುಂಬಯಿ. ೪-೯೧). ೨. ಕೆಂಪುವರ್ಣದ ರಸ : ವದನಸರೋಜದೀ ಪರಿಮಳಕ್ಕೆಱಗಿರ್ದಳಿಯೆಂಬ ಚೆಲ್ವನೊಲ್ದೊದವಿದ ಕುಂತಳಂ . . . ಅರುಣಾಧರ ಧಾತುರಸಾನುಲೇಪನಂ ಪುದಿದ ಕಪೋಲ ಭಿತ್ತಿ ಮೆಱೆಗುಂ ಪದಪಿಂ ಮೃಗಶಾಬನೇತ್ರೆಯಾ (ಮಲ್ಲಿಕಾ. ೬-೭೬).

[ಧಾತು + ರಸ]

ಧಾತುರೇಣು (ನಾ). ಕಾವಿಯ ಕಲ್ಲಿನ ಧೂಳು ; ಗೈರಿಕ ಧಾತುವಿನ ಧೂಳು : ಬಳಸಿದುದರ್ಕವಾಜಿ ಖುರಘಟ್ಟಿತಮಾದವರಾದ್ರಿಯಿಂದಮುಚ್ಚಳಿಸಿದ ಧಾತುರೇಣುವೆನೆ . . . ಸಂಜೆಯ ಕೆಂಪುಲೋಕಮಂ (ಚಂದ್ರಪ್ರ. ೮-೪). [ಧಾತು + ರೇಣು]

ಧಾತುಲಕ್ಷಣ (ನಾ). ೧. ವಾತ, ಪಿತ್ತ, ಕಫಾದಿಗಳ ಲಕ್ಷಣ. ೨. ವೇದಗಳಲ್ಲಿ ಬರುವ ಕೆಲವು ಕ್ರಿಯಾಪ್ರಕೃತಿಗಳನ್ನು ಕುರಿತ ಒಂದು ಗ್ರಂಥ. [ಧಾತು + ಲಕ್ಷಣ]

ಧಾತುವಾದ (ನಾ). ೧. ಅದುರಿನಿಂದ ಲೋಹವನ್ನು ತೆಗೆಯುವ ವಿದ್ಯೆ ; ಖನಿಜಶಾಸ್ತ್ರ : ಧಾತುವಾದೋಪಾಧ್ಯಾಯನ ಕೆಯ್ಗೆಮಂದ ಸುವರ್ಣಪಾಷಾಣಮೆಂತು ಪಿಂಡೀಬದ್ಧದಹನತಾಪನತಾಡನಕ್ರಿಯೆಗಳಿಂ ಶುದ್ಧಲೋಹಮಕ್ಕುಮಂತೆ ಭವ್ಯನುಂ ಮನುಷ್ಯಭವಕ್ಕೆ ವಂದಲ್ಲಿ . . . ಶ್ರಾವಕನಪ್ಪುದು (ಜೀವಸಂ. ೪-೯ ವ). ೨. ಕ್ಷುದ್ರಲೋಹಗಳಿಂದ ಚಿನ್ನವನ್ನು ಸಿದ್ಧಪಡಿಸುವ ವಿದ್ಯೆ : "ರಸವಾದ" (ನಾನಾರ. ಕಿ. ೦೪) : ದಿವಸಾಧೀಶನೊಳೊಂದಿನಿಂದ ಶಶಿಯುಂ ಯಂತ್ರಂಗಳಂ ಬಲ್ಲನೈಂದವನಿಂದಂ ನಿಪುಣಂ ದಿನೇಶಸುತನಿಂದಂ ಧಾತುವಾದಪ್ರಿಯುಂ . . . ಎನಿಕುಂ (ಜಾತಕಿ. ೧೫-೧). [ಧಾತು + ವಾದ$_3$]

ಧಾತುವಿಜ್ಞಾನ (ನಾ). ಖನಿಜಶಾಸ್ತ್ರ. [ಧಾತು + ವಿಜ್ಞಾನ]

ಧಾತುವೃದ್ಧಿ (ನಾ). ವೀರ್ಯವೃದ್ಧಿ ; ಶುಕ್ಲವೃದ್ಧಿ ; ಶರೀರಕಾಂತಿ, ಕಂಠಶುದ್ಧಿ, ಅಗ್ನಿಪಟುತ್ವ, ಧಾತುವೃದ್ಧಿ ಸಹ ಉಂಟಾಗುವುದು (ಸಕವೃ. ೨೦೮).

[ಧಾತು + ವೃದ್ಧಿ]

ಧಾತುವೈರಿ (ನಾ). ಗಂಧಕ. [ಸಂ. ಧಾತು ವೈರಿನ್]

ಧಾತೂವಾದ (ನಾ). = ಧಾತುವಾದ ೨ : ನಾರು ಬೇರಂಜನಂ ಘುಟಿಕೆ ಮೂಲಿಕೆ ಬಿಲದ್ವಾರ ರಸಸಿದ್ಧಿ ಧಾತೂವಾದ ವಶ್ಯ ಕುಟಿಲಾರಾಧನಂ . . . ಪರಕಾಯೆಪ್ರವೇಶಮಂ ಬಯಸುವ ವಿಕಾರಿಸಿದ್ಧರು ಸರಿಯೆ ಸಿದ್ಧರಾಮಂಗೆ (ಸಿದ್ಧರಾ. ೧-೯).

[P ಇದು ಛಂದಸ್ಸಿಗಾಗಿ ಮಾಡಿಕೊಂಡ ರೂಪ]

ಧಾತೃ (ನಾ). ೧. ನಿರ್ಮಾಪಕ ; ಸಂರಕ್ಷಕ. ೨. ಆಧಾರನಾದವನು ; ಆಕರನಾದವನು. ೩. ಬ್ರಹ್ಮ. ೪. ವಿಷ್ಣು. ೫. ಆತ್ಮ ; ಪರಬ್ರಹ್ಮ. ೬. ಬ್ರಹ್ಮಸೃಷ್ಟಿಯ ನಂತರ ಉಳಿದ ಜಗತ್ತನ್ನು ಸೃಷ್ಟಿಸಿದ ಸಪ್ತಋಷಿಗಳು. ೭. (ವಿವಾಹಿತ)ಸ್ತ್ರೀಯ ಉಪಪತಿ ; ಮಿಂಡ. ೮. ನಲವತ್ತೊಂಬತ್ತು ವಾಯುಗಳಲ್ಲಿ ಒಂದು. ೯. ಕ್ರಮಪಡಿಸುವವನು ; ವ್ಯವಸ್ಥಿತವಾಗಿ ಇಡುವವನು. ೧೦. ವಿಧಿ ; ಅದೃಷ್ಟ.

೧೧. [ಛಂದ] ಬ್ರಹ್ಮಗಣದ ಒಂದು ವಿಧ ; ಒಂದು ಗುರು ಒಂದು ಲಘುವಿನಿಂದ ಕೂಡಿದ ಗಣ (—ಲ) : ಬ್ರಹ್ಮಗಣಮೊಂತೆಂದೊಡೆ :- ಬ್ರಹ್ಮಂ ದ್ರುಹಿಣಂ ಧಾತೃ ಸುರಪ (ಛಂದೋಂಬು. ೫-೨೪೦ ವ). ೧೨. [ವೀಶೈ] ರುದ್ರನ ನೂರು ಹೆಸರುಗಳಲ್ಲಿ ಒಂದು : ಕಪಾಲೀಶ . . . ಧಾತೃ ವಿಧಾತೃ . . . ಎಂಬ ದಶರುದ್ರುರುಂ ಬ್ರಹ್ಮಾಂಡದೂರ್ಧ್ವ ದೇಶದಲ್ಲಿಹರು . . . ಸರ್ವಜ್ಞರೆನಿಸಿರ್ವರು ವಿವೇಕ. ೩೩೩). [ಸಂ.]

ಧಾತೃಪುತ್ರ (ನಾ). ಬ್ರಹ್ಮನ ಮಗ ; ನಾರದ : ಇರೆ ಸರಸಿಜೋದರನಾದರದಿಂದಂ ಧಾತೃಪುತ್ರನಂ ಬೆಸಗೊಂಡಂ (ನೇಮಿಪು. ೧೧-೭೨).

[ಧಾತೃ + ಪುತ್ರ]

ಧಾತೃಸೃಷ್ಟಿ (ನಾ). ಬ್ರಹ್ಮನ ಸೃಷ್ಟಿ : ಆವುದು ಧಾತೃಸೃಷ್ಟಿಗೆ ಮೊದಲ್ ಹುತಹವ್ಯಮನಾಂಪುದಾವುದಿನ್ನಾವುದು ಹೋತೃ ಶಬ್ದಗುಣಮಾವುದವಾವುವು ಕಾಲಕರ್ತೃಗಳ್ (ಶಾಕುಂತ. ೧-೧). [ಧಾತೃ + ಸೃಷ್ಟಿ]

ಧಾತ್ರ (ನಾ). ಬ್ರಹ್ಮ; ಸೃಷ್ಟಿಕರ್ತ: "ಅರಲಿಚ ನಾಲ್ಕೊಗ ನುಡಿವೆಣ್ಣೆಱಯ . . . ಬಿದಿಯು ಬೊಮ್ಮಂ ಪರಿಕಿಸೆ ಸಲೆ ಬೇದಬಿಜ್ಜೆಗನುಮೆನೆ ಧಾತ್ರಂ" (ಕವಿಕಂ. ೨೯) ; ಏಂ ಜಾಣನೋ ಧಾತ್ರಂ ರೂಪನಿಷ್ಪಾದನವಿಧಿಯೊಳ್ (ಆದಿಪು. ೩-೧೧) ; ಉಜ್ವಳಾಂಗಿಯಂ ಧವಳಗುಣದೆ ನಿರ್ಮಿಸಿದನಾಗವೇಱ್ಕುಂ ಧಾತ್ರಂ [ಪಾಠಾಂ. ಪ್ರೋಕ್ತಂ] (ಕಾದಂಪೂ. ೬೬೧) ; ನಮ್ಮ ಕೊಳ್ಳೊಡೆಗ ತಕ್ಕೆಡೆಯಂ ಸಮಕಟ್ಟಿ ಕೊಟ್ಟನೇಂ ಧನ್ಯನೊ ಧಾತ್ರಂ (ಪಂರಾಮಾ. ೨-೭) ; ಧಾತ್ರಪಂಚಮಶಿರಪಾತ್ರ ಪನ್ನಗಯಜ್ಞಸೂತ್ರ (ಧೈರವೇ. ೧-೪).

[ಸಂ. ಧಾತೃ]

ಧಾತ್ರಿ (ನಾ). ೧. ದಾದಿ ; ಸಾಕುತಾಯಿ ; ಉಪಮಾತೆ : "ಧಾತ್ರೀ, ಉಪಮಾತಾ—ಈ ೨ ದಾದಿ" (ಹಲಾಯು. ೮೪-೩೩೩) ; "ಓತು ಸಾಕಿದ ಧಾತ್ರಿ ದಾದಿಯೆನಿಸಿಕ್ಕುಂ" (ಮಂಗರಾ. ೯೩-೧೩) ; ಧಾತ್ರಿಯೊಳನ್ಯರ ತೇಜೋಮಾತ್ರಮನಾಂ ಸಲಿಸೆನೆಂಬ ತೆಱದಿಂ ಪೊಯ್ಯಲ್ ಧಾತ್ರಿಯ ಕಯ್ಯಂ ನಿಮಿರ್ವಂ ಕ್ಷತ್ರಶಿಖಾಮಣಿ ಮಣಿಪ್ರದೀಪಾಂಕುರಮಂ (ಪಂರಾಮಾ. ೩-೧೨೫) ; ವರಣಮಾಲಿಕೆಯನ್ನು ಕೈಯಲ್ಲಿ ಹಿಡಿದು ಧಾತ್ರೀಸಮೇತಳಾಗಿ ಸಭಾಮಂಟಪಕ್ಕೆ ಬಂದು ನಿಂತಳು (ಆರ್ಯಕೀ. ೪). ೨. ತಾಯಿ ; ಜನನಿ. ೩. ನೆಲ; ಭೂಮಿ; ಇಳೆ : "ಸ್ಥಿರೆ ಧರಣಿ ಧಾತ್ರಿ ಮೇದಿನಿ ಧರಿತ್ರಿ ಧರೆ . . . ಭೂಮಿ ಭೂ ಗೋತ್ರೆ ನೆಲಂ" (ವಸ್ತುಕೋಶ. ೨೬-೧) : ಮಾರಿ ಪಸವಿಟ್ಟಿ ಬಱಂ ಪೆಱವುಂ ಧಯಂಗಳಾಕುಲಿತಗೆಳ್ಲ ಧಾತ್ರಿ ಪುಸಿವೋಗದು . . . ಬಣ್ಣಿಸಲಾನಱಿಯೆಂ ವಿದೇಹಮಂ (ಆದಿಪು. ೧-೫೨) ; ಧಾತ್ರಿಯುಮಾನೀ ಹುತಾಶನಪುತ್ರಿಯುಮಂ ಬಱಿದೆ ಸೋಲ್ತನಲ್ಲಂಜೂದಿಂ (ಗದಾಯು. ೧-೬೦) ; ಕಾಳೆಗದೊಳ್ತಡಂಗಡಿದು ಮುಂದಣ ಥಟ್ಟನವುಂಕಿ . . . ಮೆಟ್ಟಿ ತಿವಿದಾಳ್ತನವಚ್ಚರಿಯಾಯ್ತು ಧಾತ್ರಿಯೊಳ್ (ಎಕ. VI, ತರೀಕೆ. ೪೫-೨೫; 1196 ; ಹರಿಶ್ಚಂದ್ರಭೂನಾಥನೊಳಗಸತ್ಯವನು ಕಾಣಸಲು ಬಲ್ಲರು ಧಾತ್ರಿಯೊಳು ಮುನ್ನ ಹುಟ್ಟಿದವರಿಲ್ಲ (ಹಚಶಾ. ೨-೨೦) : ನಿಂದ ಭರಕ್ಕೆ ಧಾತ್ರಿ ನಡುಗುತ್ತಿರೆ ಮೆಟ್ಟಲಯಕ್ಕೆ ದಿಗ್ಗಜಂ ಪಿಂದಡಿಯಿಟ್ಟು ಬೆರ್ಚುತಿರೆ (ಅನಂಪು. ೫-೯೮) ; ಪುತ್ರ ಕಳತ್ರ ಪರಿಗ್ರಹ ಗಾತ್ರ ಧನೈಶ್ವರ್ಯ ಮೆಂಬಿವಾರ್ಗವಾನಿತ್ಯಂ ಧಾತ್ರಿಯೊಳ್ (ಪುಪ್ಪಪು. ೧೩-೨೬) ; ಸುಯೋಧನ ನರಸಿಯಲ್ಲಾ ಧಾತ್ರಿ (ಕುಮಾಶ. ೨-೫೪). ೪. ಭೂಲೋಕದ ಜನ ; ಜನತೆ : ತುಱುಗೆಮೆ ನೀಳ್ದ ಪುರ್ವ ನಿಡುಗಣ್ . . . ಎಂದು ಧಾತ್ರಿ ಪೊಗಟ್ಟುಂ ಪೊಗಟ್ಟುನ್ನರೆ ಕಂತಿ ಪಾದ್ರಿಗಳ್ (ಪಂಪಭಾ. ೧-೧೦೮) ; ಧಾತ್ರಿ ಪಟಿವಂತು ತನ್ನಂ ಧಾತ್ರೀಜನಮಡಸಿ ಪಿಡಿದು ಪರಿಭವಿಸುವುದುಂ ಮಿತ್ರಂ ಶಲಭಕ್ಕೆನೆ ಮುನಿ ನೇತ್ರೇಂದ್ರಿಯಲೋಭದಿಂದಮಂದಳ್ಳವಟ್ಟಂ (ಪಂರಾಮಾ. ೪-೮೫). ೫. ನೆಲ್ಲಿಗಿಡ ಮತ್ತು ಅದರ ಕಾಯಿ ; ಆಮಲಕ: "ಧಾತ್ರೀ, ಆಮಳಕೀ, ಶಿವಾ—ಈ ೩ ನೆಲ್ಲಿ" (ಹಲಾಯು. ೧೦೦-೪೬೪).

೬. [ಛಂದ] ಅಕ್ಷರಗಣಗಳಲ್ಲಿ ಒಂದು ; ಮೂರು ಗುರುಗಳಿರುವ ಗಣ; ಮಗಣ (— — —) : ಗುರು ಮೂಱಾಗಿರೆ ಧಾತ್ರಿ ಮುಂತೆರಡು ಬಿಣ್ಪಂ ತೋಯಂ (ಛಂದೋಂಬು. ೧-೩೮). [ಸಂ. ಧಾತ್ರೀ]

ಧಾತ್ರಿಕೆ (ನಾ). ೧.=ಧಾತ್ರಿ ೧: ಅನಂತರಮಮರ ಧಾತ್ರಿಕಾನಿಕಾಯಮುಮಂ . . . ಜಗತ್ಪತಿ ಪಿತೃಗಳುಮಂ ಬೀಱ್ಕೊಂಡು (ನೇಮಿಪು. ೮-೦೬೭ ವ) : ಉತ್ಸವೋನ್ಮತ್ತ ಧಾತ್ರಿಕಾ [ಪಾಠಾಂ. ಧಾತ್ರೇಯಿಕಾ] ನಿಕಾಯವಿಕೀರ್ಣ ಪಿಷ್ಟಾತಕ ಚೂರ್ಣ ಸಂಜಾತಪಿಂಜರವರ್ಣಪಲಿತಶ್ಮಶ್ರುಕೂರ್ಚೋಪವಿದ್ಧ ವೃದ್ಧಕಂಚುಕಿಸಂಚಯಮುಮಂ (ಚಂದ್ರಪು. ೩-೯೬ ವ). ೨. = ಧಾತ್ರಿ ೫.

[ಸಂ. ಧಾತ್ರಿಕಾ]

ಧಾತ್ರಿಜ (ನಾ). ೧. ಭೂಮಿಯ ಮಗ. ೨. ಅಂಗಾರಕ. ೩. ನರಕಾಸುರ. 'ಧಾತ್ರಿಜಾಂತಕ' ಪರಾ. ೪. ಮರ ; ವೃಕ್ಷ. [<ಸಂ. ಧಾತ್ರೀಜ]

ಧಾತ್ರಿಜಾಂತಕ (ನಾ). ನರಕಾಸುರನನ್ನು ಕೊಂದವನು; ಕೃಷ್ಣ ; ವಿಷ್ಣು: ಧಾತ್ರಿಜಾಂತಕ ಕಪಟನಾಟಕಸೂತ್ರ ಪರಮಪವಿತ್ರ . . . ರಕ್ಷಿಸು ನಮ್ಮನನವರತ (ಹರಿಸಾ. ೯). [ಧಾತ್ರಿಜ +ಅಂತಕ]

ಧಾತ್ರಿಜೆ (ನಾ). ದಾದಿಯ ಮಗಳು ; ಕನ್ನಿಕೆ ಧಾತ್ರಿಜೆಯಂತಿರದೆ ಕುಮಾರಿಕೆಯ ಮನದ ಪರಿಚಾರಿಕೆಯಂ ರಥಮಂ ನಡೆಯಿಸೆಂಬುದುಂ (ಶಾಂತಿಪು. ೫-೧೧೦). ೨. ಭೂಮಿಯ ಮಗಳು ; ಸೀತೆ. [<ಸಂ. ಧಾತ್ರೀಜಾ]

ಧಾತ್ರಿಧರ (ನಾ). ಬೆಟ್ಟ ; ಪರ್ವತ : ಲಾಕ್ಷ ಕೃಶಾನು ಧಾತ್ರಿಧರ ಕಾಷ್ಠಗಳೆಂಬವು ಕೀಲಕಾಹ್ವಯಂ (ನಾನಾರ. ೧೦೨). [<ಸಂ. ಧಾತ್ರೀಧರ]

ಧಾತ್ರಿಪ (ನಾ). ಭೂಮಿಯ ಒಡೆಯ,-ರಾಜ ; ಭೂಲೋಕದ ಒಡೆಯ: ಧಾತ್ರಿಪ ಫಣಿಪರ್ ಖೇಚರಪ ತ್ರಿದಶಪರೆಯ್ದೆ ವಿಶ್ವಕರ್ಮಂ ಬರೆದಂ ಚಿತ್ರಪಟಮಂ ದಲೆನೆ ಭುವನತ್ರಿತಯಂ ಕಾಣಲಾದುದಭವನ ಸಭೆಯೊಳ್ (ಶಾಂತಿಪು. ೯-೬೯). [ಸಂ. ಧಾತ್ರೀಪ]

ಧಾತ್ರಿಪತಿ (ನಾ). ಭೂಮಿಯ ಒಡೆಯ ; ರಾಜ ; ದೊರೆ : ವಿಷಧಿವರೀತ ಧಾತ್ರಿಪತಿ ವಾರಿಧಿಯಿಂ ಮಹಿಮಾಳಯಂ ಗಜದ್ವಿಷದಿನಘೋರ ಭೂರಿಭುಜ ನನ್ನನನಿಂ ಪಡೆವೈ ತನೂದರೀ (ನೇಮಿಪು. ೭-೧೦೮) : ಧನವೆ ಸಾಧನವರಸಿಗಾ ಧನವನಿತು ದೊರಕೊಳಲಿದಿರದಾರೈ ಧಾತ್ರಿಪತಿಗಳಲಿ (ಕುಮಾಸ. ೧-೭೦).

[ಸಂ. ಧಾತ್ರೀಪತಿ]

ಧಾತ್ರಿಪಾಲ (ನಾ). ಭೂಮಿಯನ್ನು ಕಾಪಾಡುವವನು ; ರಾಜ ; ದೊರೆ : ಧಾತ್ರಿಪಾಲನೇ ಕೇಳು ನಿನ್ನಯಾ ಮಿತ್ರನೋರ್ವನೂ ಕಾದಿ ರಣದೊಳು ಪೃಥ್ವಿಗೊರಗಿಹ (ರತ್ನಾಕ. ೨೦). [ಸಂ. ಧಾತ್ರೀಪಾಲ]

ಧಾತ್ರಿವಲ್ಲಭ (ನಾ). ಭೂಮಿಯ ಒಡೆಯ; ರಾಜ; ದೊರೆ: ಭವದನುಜಕ್ಷಯಮಂ ಧಾತ್ರಿವಲ್ಲಭಂ ಕಂಡು ಸಂಧಿಮಾಡಲ್ ಶೋಕಾನಿವಹಂ ಬಗೆವಂ ಧರ್ಮಜನವನಾ ಕೃತಕಪ್ರತಿಜ್ಞೆಯಂ ಕೇಳ್ದಱಿಯಾ (ಗದಾಯು. ೪-೬).

[ಸಂ. ಧಾತ್ರೀವಲ್ಲಭ]

ಧಾತ್ರಿಸರ (ನಾ). (?) : ಲಲಿತ ಶ್ರೀಮುದ್ರೆ ಊರ್ಧ್ವತಿಲಕ ತಪ್ತಲಾಂಛನ ಹೊಳೆವ ದ್ವಾದಶನಾಮ ತುಲಸಿ ದಂಡೆ ಕಳಧೌತಮಿರ್ವಾಂಗಾರಾ ನಳಿನಾಕ್ಷ ಧಾತ್ರಿಸರ ಗಳದೊಳೊಪ್ಪು ಶ್ಲಾಘ್ಯ ಬಲು ವೈರಾಗ್ಯಭಾಗ್ಯದ (ಪ್ರಸಕೀ. ೪೪-೩). "ನೆಲ್ಲೀಕಾಯಿ ಸರ" (ಪ್ರಸಕೀ. ೬೫೨).

[ಧಾತ್ರಿ + ಸರ್ಯ ; ? ಇದು ನಳಿನಾಕ್ಷದಾ ತ್ರಿಸರ ಎಂದು ಇರುಬಹುದೆ ?]

ಧಾತ್ರೀಜನ (ನಾ). ೧. ದಾದಿಯರು: ನಿರ್ವರ್ತಿತ ತ್ರಿಭುವನಪತಿಭವೋತ್ಸವನಾಗಿ ಸಮವಯಾದಿ ವಿಜಯವಯಸ್ಕರುಮನಮರ ಧಾತ್ರೀಜನಮುಮಂ . . . ನಿಯೋಜಿಸಿ (ಶಾಂತಿಪು. ೦೦-೮೦ ವ) : ಮಾತೃಗಣಪೂಜಾವಿಧಾನ ತತ್ಪರರಾದ ಧಾತ್ರೀಜನಂಗಳೊಳಂ (ಕಾದಂಪೂ. ೪೧೩). ೨. ಭೂಲೋಕದ ಜನ : ಪರಿವಾರ ಸಮುದ್ಧರಣೆ ಧಾತ್ರೀಜನರಕ್ಷಾಮಣಿ ಸಾಹಸವಿದ್ಯಾಧರಿ

ಸಕಳಕಳಾವತಿ ಶ್ರೀಮತ್ರಿಭುವನಮಲ್ಲ ವಿಶಾಳವಕ್ಷಸ್ಥಳ [ನಿವಾಸಿನಿ]ಯರಪ್ಪ ಪಟ್ಟಮಹಾದೇವಿ (ಸೌಇಇ. XX, ೬೧-೯; 1094). ೧, ೨: ಗೋತ್ರಾರಿ ಬೆಸಸೆ ನೆಗಟ್ಟಪಗೋತ್ರಾರಿಯ ಶೈಶವೋಚಿತಕ್ರಿಯೆಗೆಲ್ಲಂ ಧಾತ್ರೀಜನಮಾಗಿಸಿದಂ ಧಾತ್ರೀಜನಚಾರುಚತುರದೇವೀಜನಮಂ (ಪುಷ್ಕಪು. ೧೨-೫೪).

[ಸಂ.]

ಧಾತ್ರೀಜಾತ (ನಾ). ಗಿಡ ; ಮರ : ಒಂದನೊಂದಱೊಳೊತ್ತಿ ಪಾಱಲು ಮುಂದೆ ಪೇರುರಿಯೊಗೆದು ಬೇಯಲು ಮಂದವಾಗಿ ನೆಗಳ್ದ ಧಾತ್ರೀಜಾತ ಜಾತಿಗಳ (ಬಸಪು. ೧೯-೫೭). [ಸಂ.]

ಧಾತ್ರೀತನಯ (ನಾ). ಮಂಗಳಗ್ರಹ ; ಅಂಗಾರಕ ; ಕುಜ : ಇರೆ ಧಾತ್ರೀತನಯಂ ದಿನೇಶಗೃಹದೊಳ್ ಸ್ವಲ್ಪಾಂಗನಾಸೂನು ದುರ್ಗರತಂ ಕ್ಲೇಶ ಸಹಿಷ್ಣು ನಿಸ್ವನೆನಿಕುಂ (ಜಾತತಿ. ೧೭-೨೦). [ಸಂ.]

ಧಾತ್ರೀತನಯೆ (ನಾ). ಭೂಮಿಯ ಮಗಳು ; ಸೀತೆ.

[ಸಂ. ಧಾತ್ರೀತನಯಾ]

ಧಾತ್ರೀತಲ, ಧಾತ್ರೀತಳ (ನಾ). ಭೂತಳ ; ಭೂಲೋಕ : ಆ ವಧು ಬೆರ್ಚಿ ತದ್ವಸನಮಂ ಧಾತ್ರೀತಲಕ್ಕಿಕ್ಕಿ ಪಾದನಿಘರ್ಷಕ್ಕೊಳಗಾಗಿಸುತ್ತುಮಿರೆ ಕಂಡು (ಮಹಾನೇ. ೫-೧೩೦) ; ಇನ್ನೆಲ್ಲಿಯದು ಸದುಭಕ್ತಿ ಬೀತುದಲ್ಲಾ ಹರಹರಾ ಧಾತ್ರೀತಲ[ಪಾಠಾಂ. ಳ]ದೊಳೆಂದೆನುತ ಭಕ್ತವ್ರಾತವುಮ್ಮಳಿಸುತ್ತ (ಬಸಪು. ೩೭-೨೨). **ಧಾತ್ರೀತಳ** : ಶ್ರುತದೇವೀವಚನಾಮೃತಂ ಶ್ರುತಕಥಾಳಾಪಂ . . . ಮ[ಹೋರ್ಮ್ಯುಲ್ಲಾ]ಸಿ ವಾರಾಶಿವಾರಿತಧಾತ್ರೀತಳಗೀತಿ ನಿರ್ಮಳ ಯಶಂಗಾರೂಢಸರ್ವಜ್ಞ ಭೂಪತಿಗೊಲ್ದಾಗಳುಮಿಾಗೆ ಮಂಗಳ ಮಹಾಶ್ರೀಯಂ ಜಯಶ್ರೀಯುಮಂ (ಪಂಪಭಾ. ೧೪-೩೨) ; ಬಳಾಚ್ಯುತರ್ ನಡೆದುಬಂದಂತೆಯ್ದಿದರ್ ತಾಭರೂಧರಮಂ ಸಂಗತತುಂಗಶೃಂಗ ಕುಳಮಂ ಧಾತ್ರೀತಳಖ್ಯಾತಮಂ (ನೇಮಿಪು. ೭-೭೮). [ಸಂ.]

ಧಾತ್ರೀತಳ 'ಧಾತ್ರೀತಲ' ನೋ.

ಧಾತ್ರೀಧರ (ನಾ). ಬೆಟ್ಟ ; ಪರ್ವತ : ಹರಹಾಸಕ್ಕೊಂದೆರಟ್ ದಿಕ್ಕರಿ ರದನಕ್ಕೆರಟ್ಟೂಱು . . . ಕೈಲಾಸಧಾತ್ರೀಧರಕೆಂಟೊಂಬತ್ತು ಮೇಲಾಗಿರೆ ಪಸರಿಸಿದಂ ಕೀರ್ತಿಯಂ ನಾಗವರ್ಮಂ (ಧಂರೋಂಬು. ೧-೨೩) ; ಪರಮ ಸ್ಯಾದ್ವಾದ ವಿದ್ಯಾನಿಶಿತಕುಲಿಶದಿಂ ತೀವ್ರಮಿಥ್ಯಾತ್ವಧಾತ್ರೀಧರಮಂ ಮುಂ ನುಚ್ಚುನೂಱಪ್ಪಿನೆಗಮೊಡೆದು. . . ವಿಖ್ಯಾತಿವೆತ್ತೀ ಧರೆಗಾಚಾರ್ಯಾಕಳಂಕ ವ್ರತಿಯ ಚರಣಮಂ ವಂದಿಪೆಂ ಭಕ್ತಿಯಿಂದಂ (ಬಾಧಪು. ೧-೦೯).

[ಸಂ.]

ಧಾತ್ರೀಧವ (ನಾ). ದೊರೆ ; ರಾಜ : ನಿಜಸಾಮರ್ತ್ಥ್ಯದಿಂದಾದ್ಯ ಧಾತ್ರೀಧವರಂ ತಾಂ ತನ್ನೊಳುಜ್ಜೀವಿಸಿ ಪೆಸರ್ವ್ವಡೆದಂ ವೀರಬಲ್ಲಾಳದೇವಂ (ಎಕ. V, ಅರಸೀ. ೧೨೭-೨೨ ; 1185); ಶಿವಸಮಯಿ ನಸುನಗತ ಧಾತ್ರೀಧವನ ಮುಖವಂ ನೋಡಿ ತಾನಿಂತೆಂದು ಬೆಸಸಿದನು (ಬಸಪು. ೫೦-೩೪). [ಸಂ.]

ಧಾತ್ರೀಪತಿ (ನಾ). = ಧಾತ್ರೀಧವ : ಧಾತ್ರೀಪತಿಗಱಿಪಿ ಮರುತ್ಪುತ್ರಂ ಬಱಿಯಟ್ಟಿ ಕರೆಸಿ ತೋಱಲ್ . . . ದ್ರೌಪದಿಯಂ (ಗದಾಯು. ೮-೪೪).

[ಸಂ.]

ಧಾತ್ರೀಪುತ್ರಿ (ನಾ). ೧. ದಾದಿಯ ಮಗಳು: ಧಾತ್ರೀಪುತ್ರಿಯ ಮಾತನೆಯ್ದೆ ಕೇಳ್ದಾತನಂ ನೋಡಿ (ಶಾಂತಿಪು. ೫-೧೦೯ ವ). ೨. ಭೂಮಿಯ ಮಗಳು ; ಸೀತೆ. [ಸಂ. ಧಾತ್ರೀಪುತ್ರೀ]

ಧಾತ್ರೀಫಲ, ಧಾತ್ರೀಫಳ (ನಾ). ನೆಲ್ಲಿಗಿಡ ಮತ್ತು ಅದರ ಕಾಯಿ ; ಆಮಲಕ : ಹೊಳೆಕೌವಮರ, ಧಾತ್ರೀಫಲ, ನೀರುಗಣಿಗಲು (ಮೃಜಿಗಿ. ೧೨-೨೦೦). **ಧಾತ್ರೀಫಳ** : ತ್ರಿದ್ವ್ಯೇಕದಿನಾಂತರಿತ ಬದರಾಕ್ಷ ಧಾತ್ರೀಫಳ[ಪಾಠಾಂ. ಬದರಾಕ್ಷಾಮಲಕ]ಪ್ರಮಾಣಾಹಾರಂಗಳುಮಪ್ಪ ಮಿಥುನಂಗಳ್ಗೆ ಸಂಭೋಗ್ಯಮಾಗಿ ಸಲೆ (ಆದಿಪು. ೬-೪೮ ವ). [ಸಂ.]

ಧಾತ್ರೀಫಳ 'ಧಾತ್ರೀಫಲ' ನೋ.

ಧಾತ್ರೀರಜ (ನಾ). ಭೂಮಿಯ ಧೂಳು : ಎತ್ತೆತ್ತಲುಂ . . . ಮುಸುಕಿತ್ತೀ ಜಗಮೆಲ್ಲಮಂ ಬಳಪದ ಪ್ರಕ್ಷುಣ್ಣ ಧಾತ್ರೀರಜಂ (ವರ್ಧಮಾ. ೪-೩೮).

[ಸಂ. ಧಾತ್ರೀರಜಸ್]

ಧಾತ್ರೀರುಹ (ನಾ). ಮರ ; ಗಿಡ : ವಿಯತ್ತಳದಿಂ ತಮಾಲಧಾತ್ರೀರುಹ ಮೂಲಭೂತಲಕೆ ವರ್ಪನಂ . . . ಚಾರಣಯೋಗಿಯಂ ನೃಪತಿ ಕಂಡಂ (ಚಂದ್ರಪು. ೩-೬೯); ಮನದಿಂ ಬೇಗಂ ಮುಟ್ಟಿದಂ . . . ಪವನನಂದನನಿಂದ್ಯ ಗುಣನೆಸೆವಶೋಕಧಾತ್ರೀರುಹಮಂ (ಕಾವ್ಯಾವ. ೧೦೬) ; (ಶಮದ. ೧೦೬ ಪ್ರಯೋ ನೋ). [ಸಂ.]

ಧಾತ್ರೀವಲ್ಲಭ (ನಾ). ಭೂಮಿಯ ಒಡೆಯ ; ರಾಜ ; ದೊರೆ : ಧಾತ್ರೀವಲ್ಲಭಂನಿಜ ರಾಜಭವನದೊಳಂ ರಾಜಧಾನಿಯೊಳಮೆಡೆವಱಿಯದೆ . . . ಪಿರಿದುಮೊಸಗೆಯಂ ಮಾಡಿಸುತ್ತುಂ (ಬಾಧಪು. ೬-೪೪ ವ). [ಸಂ.]

ಧಾತ್ರೀಶ (ನಾ). ಭೂಮಿಯ ಒಡೆಯ ; ರಾಜ ; ದೊರೆ : ಧಾತ್ರೀಶನ ಸಾಂದ್ರಮನಸ್ಸೂತ್ರದೊಳಾ ಸತಿಯ ಗುಣಗಣೋದ್ಗಮತತಿಯಂ ಚಿತ್ರ ವಿಧದಿಂ ತೊಡರ್ಚಿದ ಧಾತ್ರಂ ಮುಂ ಮಾಲೆಗಾಱರೊಡನಾಡಿದನೋ (ಚಂದ್ರಪು. ೩-೨೮); ಧಾತ್ರೀಶ ಕೇಳ್ಕೌತುಕವನೇಳುದಿನಮಹೋರಾತ್ರಿಗಳೊಳಂ ಬಿಡದೆ ಕಾದಿದರ್ (ಜೈಮಿಭಾ. ೨೫-೩೮). [ಸಂ. (ಧಾತ್ರೀ + ಈಶ)]

ಧಾತ್ರೀಶಾಜ್ಞೆ (ನಾ). ಅರಸನ ಅಪ್ಪಣೆ ; ರಾಜಾಜ್ಞೆ : ಧಾತ್ರೀಶಾಜ್ಞೆಯಿನುಣ್ಮೆದತ್ತು ಪೊಟಲೊಳ್ ಪಾಪಪ್ರತೀಪದ್ವಿಪೈಕತ್ರಾಸಪ್ರದಪುಣ್ಯ ಕೇಸರಿರವಂ (ಚಂದ್ರಪು. ೨-೧೦೯). [ಧಾತ್ರೀಶ + ಆಜ್ಞೆ]

ಧಾತ್ರೀಸುತೆ (ನಾ). ದಾದಿಯ ಮಗಳು : ಅ[ಜ್ಜ]ರನಾಪ್ತರನಱಿಕೆಯ [ಬೆಜ್ಜ]ರಮೊಡನಾಡಿ ಬೆಳೆದ ಧಾತ್ರೀಸುತೆಯಂ ಗು[ಜ್ಜ]ರನಡಪದ ಡವಕೆಯ ಮಜ್ಜನದ ವಿಳಾಸವತಿಯರಂ . . . ಮಗಳ್ಗೆ ಬಱಿವಱಿಗೊಟ್ಟಂ (ವರ್ಧಮಾ. ೩-೯೮). [ಸಂ. ಧಾತ್ರೀಸುತಾ]

ಧಾತ್ರೀಹವನ (ನಾ). ಕಾರ್ತೀಕಮಾಸದಲ್ಲಿ ತೋಟ ಮುಂತಾದ ವನಪ್ರದೇಶದಲ್ಲಿ ನೆಲ್ಲಿಯ ಮರದ ಬುಡದಲ್ಲಿ ವಿಧ್ಯುಕ್ತವಾಗಿ ನಡೆಸುವ ಒಂದು ಹೋಮ ; P ಈ ಹೋಮವಾದ ಮೇಲೆ ವನಭೋಜನ ನಡೆಸುವ ಪದ್ಧತಿ ಸಂಪ್ರದಾಯವಾಗಿದೆ. [ಸಂ.]

ಧಾತ್ರೇಯಿ (ನಾ). ದಾದಿಯ ಮಗಳು ; ಉಪಮಾತೆಯ ಮಗಳು : "ಉಪಮಾತೃ ಧಾತ್ರಿ ತತ್ಪುತ್ರಿ ಪೇಟ್ ಧಾತ್ರೇಯಿಯುಂ ಭುಜಿಷ್ಯೆಯು ಮಕ್ಕುಂ" (ವಸ್ತುಕೋ. ೫೬-೨೫). [ಸಂ. ಧಾತ್ರೇಯಾ]

ಧಾತ್ರೇಯಿಕ (ನಾ). ದಾದಿಯ ಮಗ ; ಉಪಮಾತೆಯ ಮಗ : ದಾದಿಯ ಮಗಂ ಧಾತ್ರೇಯಿಕಂ (ಕಾಮಶಾ. ೮-೨೦೬). [ಸಂ.]

ಧಾತ್ವಂಗ (ನಾ). [ಸಂಗೀತ] ಸಂಗೀತದ ಅಂಗ,-ಭಾಗ ; P "ಧಾತುವೆಂದರೆ ಪ್ರಬಂಧದ ಅವಯವ. ಅದು ನಾಲ್ಕು ವಿಧ; ಉದ್ಗ್ರಾಹವು ಮೊದಲನೆಯದು ; ನಂತರ ಮೇಲಾಪಕ ಧ್ರುವಗಳು, ಮತ್ತು ಆಭೋಗ ; ಇವುಗಳ ಲಕ್ಷಣವನ್ನು ಕ್ರಮವಾಗಿ ಹೇಳಲಾಗುವುದು. ಪ್ರಬಂಧದ ಮೊದಲನೆಯ ಭಾಗವು ಉದ್ಗ್ರಾಹವೆಂದು ಪ್ರಸಿದ್ಧವಾಗಿದೆ-ಮೊದಲಿನಲ್ಲಿ ಗೀತವನ್ನು ಎತ್ತಿಕೊಳ್ಳುತ್ತದೆ-ಎಂದರೆ ಇದರಿಂದ ಗೀತವು ಪ್ರಾರಂಭಿಸಲ್ಪಡುತ್ತದೆ ಎಂಬುದರಿಂದ (ಈ ಹೆಸರು ಬಂದಿದೆ). ಉದ್ಗ್ರಾಹ ಧ್ರುವಗಳೆರಡನ್ನೂ ಪರಸ್ಪರವಾಗಿ ಒಟ್ಟುಗೂಡಿಸುವ ಕಾರಣದಿಂದ ಪ್ರಬಂಧದ ಎರಡನೆಯ ಭಾಗವು ಮೇಲಾಪಕವೆಂದು ಹೇಳಿದೆ. ಶಾಶ್ವತವಾಗಿ ಇರುವುದರಿಂದ (ಇದ್ದೇ ತೀರಬೇಕಾದುದರಿಂದ) ಮೂರನೆಯ ಅವಯವವು ಧ್ರುವವೆಂಬ ಸಂಜ್ಞೆಯನ್ನು ಪಡೆದಿದೆ. ಪ್ರಬಂಧದ ಆಭೋಗವನ್ನು ಎಂದರೆ ಪರಿಪೂರ್ತಿಯನ್ನು ಮಾಡುವುದರಿಂದ ಪ್ರಬಂಧದ ನಾಲ್ಕನೆಯ

ಅವಯಂವವು ಆಭೋಗವೆಂದಂ ಸ್ಮೃತವಾಗಿದೆ" (ಪಶುಪ್ರ. ೫೧) : ಉದ್ಗ್ರಹ ಧ್ರುವ ಮೇಲಾಪಕ ಆಭೋಗಂಗಳೇಬ ನಾಲ್ಕಂ ಧಾತ್ವಂಗಂಗಳಂ (ಕಂದ್ರಪು. ೦೫-೬೫ ವ). [ಧಾತು + ಅಂಗ]

ಧಾತ್ವರ್ಥ (ನಾ). [ವ್ಯಾಕ] ಧಾತುವಿನ ಅಭಿಪ್ರಾಯ, – ಆಶಯ : ಪ್ರಕೃತಿಗಳಂ ಧಾತ್ವರ್ಥದ ವಿಕಲ್ಪದಿಂದಱಿದು ಸಮಱಿಕೊಳ್ವುದು ಬಹು ರೂಪಕಮನದಂ ಪೇಟಲ್ಕಾ ಸಕಳಂ ವಾಕ್ಪತಿಯುಮಾಱಂ (ಕಾವ್ಯಾವ. ೪೨೦).

[ಧಾತು + ಅರ್ಥ]

ಧಾನುಷ್ಕ(ನಾ). ಬಿಲ್ಲುಬಾಣಗಳಿಂದ ಯುದ್ಧಮಾಡುವವನು; ಬಿಲ್ಲಾರ: ಆಚೂಲಸ್ವಸ್ತಿಕಬದ್ಧ ವಿಚಿತ್ರವಸ್ತ್ರದ್ವಯೋದ್ದಾಮ ಧಾನುಷ್ಕಂ (ಆದಿಪು. ೦೩-೪೩ ಪ) : ಅ ತ್ಕು ತ್ಯ ಪ್ಪ ವಂ ಶಂ ಗ ಳ ನ್ವಿ ತ ಸ ದ್ದ ರ್ಮ ಗು ಣಂ ಗಳಸ್ಮತಿಗಳ್ ನಿಸ್ಕಂಶ ಧಾನುಷ್ಕಸಂಗತಿಯಿಂದಂ ಪರಮರ್ಮಭೇದಿ ಗಳೆನಲ್ ತೀಕ್ಷ್ಣಂಗಳುಂ ಮಾಂಸಲೋಹಿತವಕ್ಕಂಗಳುಮಾದುವೆನ್ನರು ಮನೇಂ ದುಸ್ಸಂಗವೇಗೆಯ್ಯದೋ (ಹಂಪಾಮಾ. ೦೩-೩೦).

[ಸಂ.]

ಧಾನುಷ್ಕತೆ (ನಾ). ಬಿಲ್ಲುಗಾರಿಕೆ ; ಬಿಲ್ವಿದ್ಯೆಯ ಜಾಣ್ಮೆ ; ಬಿಲ್ಬಲ್ಮೆ : ನಿನ್ನ ಧಾನುಷ್ಕತೆಯಿನಾಂ ಜಗದಿ ಜಸವಡೆವೆ! ಉದ್ದಂಡ ಬಾಳಣುಗ! (ಹಪ್ಪಿರ. ೪-೫೦). [ಸಂ. ಧಾನುಷ್ಕತಾ]

ಧಾನುಷ್ಕಬಲ, ಧಾನಂಷ್ಕಬಳ (ನಾ). ಬಿಲ್ಲಾರರ ಪಡೆ : ಅನೇಕ ವರ್ಣಾಕೀರ್ಣತ್ರಿಸರವೇಣಿಕಾಗಾಢಗ್ರಥಿತತ್ರಾವುಷಕೋಶ . . . ಪ್ರಾಪ್ತ ಖಡ್ಗಧೇನುಕಮಾಂಧ್ರಧಾನುಷ್ಕಬಲಂ[ಪಾಠಾಂ. ೪೦] (ಆದಿಪು. ೦೩-೪೫ ವ).

ಧಾನುಷ್ಕಬಳ : ಎಡಱಿ ಕಡಲೊಳ್ ಮಹಾರ್ಣವಂ . . . ತಾಪವೋಲ್ ಭರದಿಂದಾಗಡೆ ತಡೆಯದೆ ಕಡುಗಾಯ್ಪಿಂದಡುರ್ತು ಭೋರೆಂದು ತಾಗೆ ಧಾನುಷ್ಕಬಳಂ (ನೇಮಿಪು. ೦೨-೩೦೭). [ಧಾನುಷ್ಕ + ಬಲ]

ಧಾನುಷ್ಕಬಳ 'ಧಾನುಷ್ಕಬಲ' ನೋ.

ಧಾನುಷ್ಕಾನೀಕ (ನಾ).=ಧಾನುಷ್ಕಬಲ : ಧಾನುಷ್ಕಾನೀಕದೊಳಾ ಧಾನುಷ್ಕಾನೀಕವಶ್ವದಬಮಶ್ವದೊಳ್ . . . ತಾಗಿದುವಾಗಳ್ (ನೇಮಿಪು. ೦೦-೦೩೦). [ಧಾನುಷ್ಕ + ಅನೀಕ]

ಧಾನುಷ್ಮತೆ (ನಾ).=ಧಾನುಷ್ಕತೆ : ಸವನಕರ್ಮದಲೀತ ದೌಷ್ಮಂತಿವೊಲು ಧಾನುಷ್ಮತೆಯಲಂಗ್ರಾಹವದಲರ್ಜುನ ಪವನನಂದನರೆಬ್ಬರಿಗೆ ಸಮನು (ನಿಘಾಗ. ೧-೮-೯). [ಸಂ. ಧನುಷ್ಮತ್ತಾ]

ಧಾನೆ (ನಾ). ೧. ಹುರಿದ ಯವೆ ಅಥವಾ ಅಕ್ಕಿ ; ಕಾಚಿಕ್ಕಿ : "ಧಾನಾ ಯೆಂಬುದು ಉಮ್ಮುಗೆ" (ಹಲಾಯು. ೪೬-೪೩) : "ಪರಿಧೃಷ್ಟಂ ಯವಮು ದಱಿಗೆ ಧಾನಾನಾಮಂ" (ಪಸ್ತು ಕೋ. ೪೩-೦೧). ೨. ಹುರಿದ ಧಾನ್ಯದ ಹಿಟ್ಟು : ಹುರಿಹಿಟ್ಟು. ೩. ಕಾಳು ; ಧಾನ್ಯ. ೪. ಕೊತ್ತುಂಬರಿಬೀಜ ; ಧನಿಯ. [ಸಂ. ಧಾನಾ]

ಧಾನ್ಯ (ನಾ). ೧. ಕಾಳು ; ದವಸ : ಉಳ್ಳ ಪ್ರತ್ಯಯಕ್ಕೆ –ಧನಮುಳ್ಳಂ, ಧಾನ್ಯಮುಳ್ಳಂ, ಗುಣಮುಳ್ಳಂ (ಶಬ್ದ. ೨೦೬ ಪ್ರಯೋ) : ಶಮಿ, ಶಿಂಬಿ –ಧಾನ್ಯದ ತೊಗಟು (ನಾಜಿರಾ. ೬) ; ಕದಿರೆಂದು ಧಾನ್ಯದ ತೆನೆಗೆ ನಾಮ ವಕ್ಕುಂ (ಶಬ್ದಮಂ. ೬೭) : ಇನಕುಲಾನ್ವಯತಿಲಕ ಚಿತ್ತೈಸೆನಗೆ ಸವಿಯಹುದಿನ್ನು ಧಾನ್ಯದ ತನುವನೀಕ್ಷಣ ಬೇಕು ದೇವರು ತರಿಸಿ ನೀವೆಂದಾ (ರಾಮಿಕ. ೦೦-೪೦) ; ದೇಶ ಕೋಸಲವಿಹುದು ಧನ ಧಾನ್ಯ ಜನ ತುಂಬಿ ಸರಯೂನದಿಯ ಮೇಲೆ (ಶ್ರೀರಾಮಾ. ೬-೦೫೬) : ಧಾನ್ಯ ಧನವಾಗದೇ, ಮಾನ್ಯ ಪೂಜ್ಯನಾಗನೇ ? (ಗಾದ). ೨. ಕೊತ್ತುಂಬರಿಬೀಜ ; ಧನಿಯ. ೩. "ಭತ್ತ" (ಕೋಕೋಪ. ೪-೬೭ ಟೀಕೆ) ; ನೆಲದಾಟನರೆದು ಪಾಲೊಳ್ ಕಲಸಿ ಬಟ್ಟಿಕ್ಕಲ್ಲಿ ಬೆಣ್ಣೆಗೊಂಡೇಟುದಿನಂ ನಿಲಿಸಿಟ್ಟು ಧಾನ್ಯದೊಳ್ ಕರ್ಣಲೇಪನಂಗೆಯ್ಯೆ ಕರ್ಣವರ್ಧನಮಕ್ಕುಂ (ಕೋ ಕೋ ೧-ಪ. ೪-೬೭). ೪. ಒಂದಂ ತೂಕದ ಪ್ರಮಾಣ ; ನಾಲ್ಕು ಎಳ್ಳಿನ ತೂಕ : ಪರದರ ಪುತ್ರಿಗೆತ್ರಣದೊ ವೀಣೆಯ ಜಾಣಱಿವಂತು ಬಳ್ಳಿಮೋ ಪರಿಕಿಸೆ ವಾನವೋ ಪೆಡಗೆಯೋ ವೊಱಿನೋ ಪಸರಕ್ಕೆದಂದು ಬಿತ್ತರಿಸುವ ಧಾನ್ಯಮೋ ವೊಸತಿದೆಂದಡೆ (ಪಾಹಾನೇ. ೪-೦೦೩).

ಧಾನ್ಯದ ಸುಂಕು=ಭತ್ತ, ಜೋಳ, ಗೋದಿ ಮೊದಲಾದ ಧಾನ್ಯಗಳ ಕವಚದ ಮೊನಚಾದ ತುದಿ ; ಊಬು : "ಕಂಕಾರುಃ–ಧಾನ್ಯದ ಸುಂಕು" (ಓಷಧಿ. ೩೩). [ಸಂ.]

ಧಾನ್ಯಕ (ನಾ). ೧. ಕೊತ್ತುಂಬರಿಬೀಜ ; ಧನಿಯ ; ಹವೀಜ : "ಕುಸ್ತುಂಬುರು, ಧಾನ್ಯಕಂ–ಈ ೨ ಕೊತ್ತುಂಬರಿ" (ಹಲಾಯು. ೦೦೧-೪೭೩) ; ಕುಸುಂಭಕಾರ್ಪಾಸ ಸರ್ಷಪ ಜೀರಕಧಾನ್ಯಕಾದಿ ವಿವಿಧಧಾನ್ಯಭೇದಂಗಳುಂ (ಆದಿಪು. ೬-೬೩ ವ). ೨. ಭತ್ತ : "ಸ್ತಂಬಕಂ ಧಾನ್ಯಕಂ ವ್ರೀಹಿ" (ಪಸ್ತು ಕೋ. ೪೪-೦೬). [ಸಂ.]

ಧಾನ್ಯಕಚೂರ್ಣ (ನಾ). ಕೊತ್ತುಂಬರಿಬೀಜದ ಪುಡಿ; ಧನಿಯದ ಪುಡಿ: ಸಮನಾಗಿ ಕೂಡಿ ವೊಸತುವ್ವಮೆಣ್ಣೆವೊಸರಳಿಗಳೆಂಬವಂ ಧಾನ್ಯಕಚೂರ್ಣಮನಿಕ್ಕಿ ಕಾಸಿದಂದುತ್ತಮಗಂಧಂ ತಾನೆನಿಪ್ಪ ತುಪ್ಪಮದಕ್ಕುಂ (ಕೋಕೋಪ. ೪-೪೦). [ಧಾನ್ಯಕ + ಚೂರ್ಣ]

ಧಾನ್ಯಕೋಷ್ಠ (ನಾ). ದವಸ ಧಾನ್ಯಗಳನ್ನು ಸಂಗ್ರಹಿಸಿಡುವ ಕಣಜ ; ಹಗೇವು ; ಕಂಸೂಲ : "ಧಾನ್ಯಕೋಷ್ಠಂ ಕುಸೂಲಂ" (ಮಂಗರಾ. ೬೩-೦).

[ಧಾನ್ಯ + ಕೋಷ್ಠ]

ಧಾನ್ಯಕೋಷ್ಠಕ (ನಾ).=ಧಾನ್ಯಕೋಷ್ಠ : "ಕುಸೂಲಂ, ಧಾನ್ಯಕೋಷ್ಠಕಂ–ಈ ೨ ಕುದಿರು" (ಹಲಾಯು. ೩೨-೦೫೭). [ಧಾನ್ಯ + ಕೋಷ್ಠಕ]

ಧಾನ್ಯತ್ವಚ (ನಾ). ಧಾನ್ಯದ ಮೇಲಿನ ಸಿಪ್ಪೆ ; ತುಷ : "ಧಾನ್ಯತ್ವಚಂ ತುಷಂ ತಾನಕ್ಕುಂ" (ಪಸ್ತು ಕೋ. ೪೫-೩೦). [ಸಂ. ಧಾನ್ಯತ್ವಚ್]

ಧಾನ್ಯಪುಟ (ನಾ). (ಔಷಧಗಳ ತಯಾರಿಕೆಯಲ್ಲಿ) ಧಾನ್ಯದ ನಡುವೆ ಅಡಗಿಸಿಟ್ಟು ಶಾಖ ಕೊಡುವುದು : ಬೆಲ್ಲವತ್ತದ ಬೀರಿನ ಚಕ್ಕೆ . . . ಪಾಕವ ಮಾಡಿ ಇಳುಹಿ ಪೂಡಿಯ ಮಾಡಿ ಧಾನ್ಯಪುಟದಲ್ಲಿರಿಸಿ . . . ಕೆಗೆದುಕೊಳ್ಳಲು (ಸಳವ್ಯ. ೦೬೫) ; ಚೆನ್ನಾಗಿ ಕಲಸಿ ಬಾಯಿಕಟ್ಟಿ ಒಂದು ವಕ್ಷ ಧಾನ್ಯಪುಟದಲ್ಲಿರಿಸಿ . . . ವ್ಯಾತಃಕಾಲದಲ್ಲಿ ಗಳ ತೂಕವಂ ಸೇವಿಸುವುದು (ಸಳವ್ಯ. ೩೦೪). [ಧಾನ್ಯ + ಪುಟ]

ಧಾನ್ಯಮಂಜರಿ (ನಾ). ಕಾಳಂ ತುಂಬಿದ ತೆನೆ,– ಕದಿರು : ತಿಳಿದ ತಡಿದಡಿಯ ಮಡಿಗಳ ಜಳದೊಳ್ ರಂಜಿಸುವ ಧಾನ್ಯಮಂಜರಿಯ ನೆಬಲ್ ಪೊಳೆಯೆ ತೆನೆವೋದುವಿವು ಬೇರ್ಗಳನೆನಿಪುವು ಬೆಳೆದ ಕಬವೆ ಭೂಸಾರತೆಯಿಂ (ಕಂದ್ರಪು. ೦-೪೩). [ಧಾನ್ಯ + ಮಂಜರಿ]

ಧಾನ್ಯಮಂಜರಿಕೆ (ನಾ).=ಧಾನ್ಯಮಂಜರಿ : ತಿಂಗಳ್ಗಿ ಮೂಱು ಮಟಿಗಳ್ ಪಿಂಗದೆ ಪದನಾಗಿ ಕೊಳ್ವುವಲ್ಲಿಯ ಬೆಳೆಯುಂ ಕಂಗದ್ಭುತಮಂ ಪೆರ್ಚಿಪು ದಂಗೀಕೃತ ಬಹಳ ಧಾನ್ಯಮಂಜರಿಕೆಗಳಿಂ (ಪಾಧಪು. ೪-೬).

[ಧಾನ್ಯ + ಮಂಜರಿಕೆ]

ಧಾನ್ಯಮದ್ಯ (ನಾ). ಕಾಳುಂಗಳಿಂದ ತಯಾರಿಸಿದ ಮದ್ಯ : ಧಾನ್ಯದಿಂದ ತಯಾರಿಸಿದ ಏಲ್, ಬಿಯರ್, ಪೋರ್ಟರ್, ಮೊ. ಮದ್ಯ: ಧಾನ್ಯಮದ್ಯ (Malt-Liquor. ಇಂಕನಿ). [ಧಾನ್ಯ + ಮದ್ಯ]

ಧಾನ್ಯರೇಖೆ (ನಾ). [ಸಾಮುದ್ರಿ] ದವಸ ಧಾನ್ಯಗಳ ಸಮೃದ್ಧಿಯನ್ನು ಸೂಚಿಸುವ ಹಸ್ತರೇಖೆ : ಮಣಿಬಂಧಕ್ಕೆ ವಾಮಭಾಗದಲ್ಲಿ ಧಾನ್ಯರೇಖೆಯಿರುವುದು (ಸಾಮುಲ. ೬೨-೦೪). [ಧಾನ್ಯ + ರೇಖೆ]

ಧಾನ್ಯವೃದ್ಧಿ (ನಾ). ಅಧಿಕವಾದ ದವಸ ಧಾನ್ಯಗಳ ಬೆಳೆ; ಕಾಳುಬೆಳೆಗಳ ಸಮೃದ್ಧಿ : ಧಾನ್ಯವೃದ್ಧಿಯುಂಟಾಗಿ ಅವರು ಸುಖದಿಂದ ಜೀವಿಸುವರು (ಸಾಮುಲ. ೬೩-೦೪). [ಧಾನ್ಯ + ವೃದ್ಧಿ]

ಧಾನ್ಯವ್ಯಸನ (ನಾ). ಹತ್ತು ಬಗೆಯ ವ್ಯಸನಗಳಲ್ಲಿ ಒಂದು; ಕಾಳುಗಳನ್ನು ಸಂಗ್ರಹಿಸುವ ಗೀಳು: ತನುವ್ಯಸನ ರಾಜ್ಯವ್ಯಸನ ವಿಶ್ವವ್ಯಸನ ಸ್ತ್ರೀವ್ಯಸನ ಧಾನ್ಯವ್ಯಸನ ದ್ರವ್ಯವ್ಯಸನ ವಿದ್ಯಾವ್ಯಸನ ಉತ್ಸಾಹಕವ್ಯಸನ ಸೇವಕವ್ಯಸನ ಕಾಷ್ಠವ್ಯಸನಗಳೆಂಬ ದಶವ್ಯಸನಗಳಿಂ ಹಸಗೆಟ್ಟು (ವಿವೇಕ. ೨೪೬). 'ಸಪ್ತವ್ಯಸನ' ಪರಾ.

[ಧಾನ್ಯ + ವ್ಯಸನ]

ಧಾನ್ಯಶೀರ್ಷಕ (ನಾ). ತೆನೆ; ಕದಿರು: "ಕಣಿಶಂ, ಧಾನ್ಯಶೀರ್ಷಕಂ–ಈ ೨ ತೆನೆ" (ಹಲಾಯು. ೯೫–೪೨೫). [ಧಾನ್ಯ + ಶೀರ್ಷಕ]

ಧಾನ್ಯಶೂಕ (ನಾ). ಕಾಳಿನ ಮೇಲಿರುವ ಊಬು: "ಧಾನ್ಯಶೂಕಂ, ಕಿಂಶಾರು–ಈ ೨ × × ×" (ಹಲಾಯು. ೯೫–೪೨೫). [ಧಾನ್ಯ + ಶೂಕ]

ಧಾನ್ಯಸಂಚಯ (ನಾ). ಕಾಳು, ದವಸಗಳ ಸಂಗ್ರಹ: ಶಿಲಾವ್ಯೂಢ ಧಾನ್ಯಸಂಚಯೋಪಭೋಗಿಜನನಿವಾಸಿಗಳಪ್ಪ ಸಂವಾಹಂಗಳುಮಂ (ಆದಿಪು. ೮–೬೪ ವ). [ಧಾನ್ಯ + ಸಂಚಯ]

ಧಾನ್ಯಸಮಿತಿ (ನಾ). ವಿವಿಧ ಬಗೆಯ ಧಾನ್ಯಗಳು: ಪುದಿದ ತಱಗೆಲೆಗಳಂ ಕಂಡುದಱಿಂದಂ ಧಾನ್ಯಸಮಿತಿ ನೀರಸಮಕ್ಕುಂ (ಆದಿಪು. ೧೫–೪೩).

[ಧಾನ್ಯ + ಸಮಿತಿ]

ಧಾನ್ಯಸುಂಕ (ನಾ). ೧. ದವಸರೂಪದಲ್ಲಿ ಕೊಡುವ ತೆರಿಗೆ: ಬೆಳೆದದ್ದರಲ್ಲಿ ಕಾಲುಭಾಗವನ್ನೇ ಧಾನ್ಯಸುಂಕಕ್ಕೆ ಮೀಸಲಿಡಲಾಯಿತು (ರೂಢಿ). ೨. ದವಸಗಳ ಮೇಲೆ ಹಾಕುವ ತೆರಿಗೆ: ಧಾನ್ಯಸುಂಕವೇ ಮೊದಲಾದ ಕಂದಾಯಗಳನ್ನು, ವಸೂಲಾದ ಕೂಡಲೆ ತಾಲ್ಲೂಕುಖಜಾನೆಗೆ ತಲುಪಿಸುವ ಕೆಲಸ ತಳವಾರನದು (ರೂಢಿ). [ಧಾನ್ಯ + ಸುಂಕ]

ಧಾನ್ಯಾಂಶ (ನಾ). ಕಾಳಿನ ತುಂಡು,–ನುಚ್ಚು: "ಕಣಮಕ್ಕುಂ ಧಾನ್ಯಾಂಶಮುಂ" (ವಸ್ತುಕೋ. ೦೩೭–೦೦೭). [ಧಾನ್ಯ + ಅಂಶ]

ಧಾನ್ಯಾಗಾರ (ನಾ). ದವಸಗಳನ್ನು ಸಂಗ್ರಹಿಸಿಡುವ ಉಗ್ರಾಣ; ಕಣಜ: 'ಮಳಿಗೆ' ಎಂಬುದು ಮೇಲೆ ಹೇಳಿದ ಸಾರ್ವಜನಿಕ ಧಾನ್ಯಾಗಾರವನ್ನು ಸೂಚಿಸಬಹುದು. ಇಂತಹ ಧಾನ್ಯಾಗಾರಗಳು ಈಗ ಇಲ್ಲವಾದರೂ . . . ಹಿಂದೆ ಕೆಲವು ಊರುಗಳಲ್ಲಿ ಅವುಗಳಿಗಾಗಿ ಮೀಸಲಾಗಿದ್ದ ಮನೆಗಳನ್ನು ಕಾಣಬಹುದಾಗಿದ್ದಿತು (ಕಶಾಅ. ೩೫೯).

[ಧಾನ್ಯ + ಆಗಾರ]

ಧಾನ್ಯಾಗುರು (ನಾ). ಒಂದು ಬಗೆಯ ಅಗುರು,–ಧೂಪ: "ಧೂಪಾಗುರುಃ–ಧಾನ್ಯಾಗುರು" (ಓಷಧಿ. ೮೨). [ಧಾನ್ಯ + ಅಗುರು$_2$]

ಧಾನ್ಯಾಮ್ಲ (ನಾ). ಹುಳಿಮಜ್ಜಿಗೆ ಸೇರಿಸಿ ಮಾಡಿದ ಅಂಬಲಿ,–ಗಂಜಿ: "ಧಾನ್ಯಾಮ್ಲಂ, ಅರನಾಳಂ, ಸಂಧಾನಂ, ಕಾಂಜಿಕಂ, ಸೌವೀರಂ–ಈ ೫ ಅಂಬಿಲಂ" (ಹಲಾಯು. ೫೩–೦೬೩). [ಧಾನ್ಯ + ಅಮ್ಲ]

ಧಾನ್ವನ (ಗು). ಮರುಭೂಮಿಯಲ್ಲಿರುವ: 'ಧಾನ್ವನದುರ್ಗ' ಪರಾ.

[ಸಂ.]

ಧಾನ್ವನದುರ್ಗ (ನಾ). ಮರುಭೂಮಿಯಿಂದ ಸುತ್ತುವರಿಯಲ್ಪಟ್ಟು ಪ್ರವೇಶಿಸಲು ದುಸ್ಸಾಧ್ಯವಾದ ದುರ್ಗ; ಧನ್ವದುರ್ಗ; ಸ್ಥಳದುರ್ಗ: ಆನತಕ್ಷತ್ರಿಯರೊತ್ತುಗೊಂಡ ಗಿರಿದುರ್ಗಕ್ಕುಗ್ರವಜ್ರಾಗ್ನಿ . . . ಧಾನ್ವನದುರ್ಗಕ್ಕೆ ಬೃಹಲ್ಲಯಾಗ್ನಿಯೆನೆ ತನ್ನುದ್ಯತ್ಪ್ರತಾಪಾಗ್ನಿ ನೀಟ್ದಿನಸುಂ ಪರ್ವಿ ವಿಗುರ್ವಿಸಲ್ (ಪುಷ್ಪಪು. ೫–೫೦). [ಧಾನ್ವನ + ದುರ್ಗ]

ಧಾಪಿಸು (ಕ್ರಿ). ಜೋರಾಗಿ ಶ್ವಾಸೋಚ್ಛ್ವಾಸ ಮಾಡು; ಏದುಸಿರು ಬಿಡು; ಉಬ್ಬಸಪಡು: ಕುಂಬಾರನ ಕುಲಿಮಿಯ ತಿದಿಯಂತೆ ಧಾಪಿಸುತಿಪ್ಪುದು (ಉದ್ಯೋಪ್ರ. ೬–೩೧–೫). [ಧಾಪು + – ಇಸು$_3$]

ಧಾಪು (ನಾ). ಉಸಿರು; ಶ್ವಾಸ: ಮೂರುಗಾವುದ ದೂರದಿಂದ ಒಂದೇ ಧಾಪಿನಲ್ಲಿ ಓಡಿಬಂದು (ದೀಪಹ. II, ೩೪೮). [←ಮರಾ. ಧಾಪ್]

ಧಾಬಳಿ, ಡಾವಳಿ, ಧಾವಳಿ$_2$ (ನಾ). ೧. ಮಡಿಗಾಗಿ ಉಟ್ಟುಕೊಳ್ಳುವ ಉಣ್ಣೆಯ ಒರಟಾದ ಬಟ್ಟೆ: ಮಡಿ ಯಾಕ ? ಧಾಬಳಿ ಕೊಡು ಅವಗ (ಸಾವಿಉ. ೦೫); ಜಾನಕೀಬಾಯರು ಅಸ್ತವ್ಯಸ್ತವಾಗಿ ಉಟ್ಟುಕೊಂಡಿದ್ದ ಧಾಬಳಿ (ಸಮಜೀ. ೭ ಪೀಠಿಕೆ). **ಡಾವಳಿ**: (ಕ). **ಧಾವಳಿ$_2$**: ೧. ದತ್ತನು ಮಗನಲ್ಲ ಧಾವಳಿ ಮಡಿಯಲ್ಲ ಭಟ್ಟನು ಭಟನು ತಾನಲ್ಲ (ಇಂಜಾಪ. ೦೭೧–೪೨); ಆಚಾರ್ಯರೇ ದಾವ ಊರು ಅಂದರೆ ಧಾವಳಿ ಮೂರು ಹಣ ಎಂದರಂತೆ (ಗಾದೆ). ೨. ನಯವಾದ ಉಣ್ಣೆಯ ಬಿಳಿಯ ಕಂಬಳಿ; ಉಣ್ಣೆಯ ಹೊದಿಕೆ; ಶಾಲು: ಒಂದು ಒಳ್ಳೇ ಮಂಡ್ಯದ ಧಾವಳಿ . . . ಕೊಟ್ಟರಾಯಿತೆಂದರು (ಕಪುವಿ. II, ೨೨೩); ಹೆಗಲ ಮೇಲಿನ ಧಾವಳಿಯನ್ನೇಕೆ ಕೆಳಗೆಸೆದ ಸೆಲೀಮಾ (ಹುರುನಾ. ೦೪೭).

ಧಾಬಳಿ ಹಚ್ಚಿಕೊಳ್ಳು, ಧಾಬಳಿ ಹಚ್ಚಿಗೊಳ್ಳು = (ಮಡಿಯ ಸಲುವಾಗಿ) ಧಾಬಳಿಯನ್ನು ಉಟ್ಟುಕೊಳ್ಳು: ಅಜ್ಜಿ ಧಾವಳಿ ಹಚ್ಚಿಕೊಂಡು ನೀರಿಗೆ ಹೋಗಿದ್ದರು (ವೀನಾದ. ೨೪); ಬೀ. ಏ. ಕ್ಕ ಬಂದರೂ ಧಾಬಳೀ ಹಚ್ಚಿಗೊಂಬೂದನ್ನೇನು ಬಿಡವಲ್ಲಿ (ದೀಪಹ. II, ೧೩).

[?./ ಮರಾ. ಧಾಬಳೀ, ಧಾಬಳ, ಧಾಬಡೀ./ತಮಿ. ತಾವಳಿ; ತೆಲು. ಧಾವಳಿ]

ಧಾಬೆ (ನಾ). ದನದ ಹಕ್ಕೆ; ಕೊಟ್ಟಿಗೆ: ಬಾಪೂಸಾಹೇಬ ಧಾಬೆಯಲ್ಲಿಯೇ ನಿಂತು ಆ ಕೆಲಸ ಮಾಡಿಸಬೇಕಾಯಿತು (ಗ್ರಾಮಾಯು. ೦೪); ಕಾಕಾನ ದನದ ಧಾಬೇದಲ್ಲಿ . . . ಇಜ್ಜೋಡಿನ ದನ ಸಿಗುವಂತಿಲ್ಲ (ದೀಪಹ. I, ೦೩).

[← ಮರಾ. ಧಾಬೇ = ಮಣ್ಣಿನ ಭಾವಣೆಯಳ್ಳ ಮನೆ; ಹಿಂ. ಧಾಬಾ = ಮಣ್ಣಿನ ಮಾಳಿಗೆ]

ಧಾಮ (ನಾ). ೧. ಆಶ್ರಯಸ್ಥಾನ; ವಾಸಸ್ಥಾನ; ಮನೆ: "ಧಾಮ, ನಿಕೇತನಂ, ಸದನಂ . . . ನಿವಸನಂ, ಆಲಯಃ–ಈ ೩೧ ಮನೆ" (ಹಲಾಯು. ೪೯–೦೩೬); "ಮಂದಿರಂ ಧಾಮ ವಸಿತಂ . . . ಮನೆಗೆ ಪೆಸರಕ್ಕು" (ಮಂಗರಾ. ೫೮–೭); ಆರ್ಹಂತ್ಯಲಕ್ಷ್ಮೀಧಾಮಂ ಮಾಟ್ಕೆಮ್ಮ ಹೃತ್ಪದ್ಮಮನಜಿತಜಿನೇಂದ್ರಕ್ರಮಾಂಭೋರುಹಶ್ರೀ (ಅಜಿಪು. ೦–೧); ರಾಮಂಗೆ ಸುಕವಿಕಳ್ಪಾರಾಮಂಗೆ . . . ಸಕಳಗುಣಗಣಧಾಮಂಗೆಣೆಯೊಳರೆ ವಸುಮತೀಮಂಡಳದೊಳ್ (ಶಾಪಮಂ. ೦೪೬೦; 1151); ಜಿತಕಾಮನತಿಭೀಮ ಸುಖಧಾಮ . . . ಸೋಮಧರ ಸಲಹುಗೆಮ್ಮ (ಸಿದ್ಧರಾ. ೦–೦); ಈ ಮಹಿಮನಿರ್ದಲ್ಲಿಹುದು ಪರಿಣಾಮವೆಂದು ಶಿವಾಲ್ಯದೊತ್ತಿನ ಧಾಮದೊಳಗಾಶ್ರಯಿಸಿದಂ ಸತಿಶಿಷ್ಯಸಹವಾಗಿ (ಶಂಕದಾ. ೬–೪೭). ೨. ನೆಲೆ; ಸ್ಥಳ; ಜಾಗ: ವಾಮೆಯರಿಗೆಲ್ಲ ವಾಮಾಂಗಸೂಚನೆ ಶುಭದ ಧಾಮಮೆಂದೆನುತ . . . ಅವನೀಜಾತೆಯತುಲಸಂತಸವ ತಳೆದು (ವೆಂಕಾರಾ. ೫–೦೦–೪೫). ೩. ಕಿರಣ; ರಶ್ಮಿ: "ಉಸ್ರಃ, ಧಾಮ, ವಸುಃ . . . ಕರಃ, ಪಾದಃ, ವಿರೋಕಃ, ಗೌಃ –ಈ ೩೨ ರಶ್ಮಿಗಳ ಪೆಸರ್" (ಹಲಾಯು. ೮–೩೯); ಸೋಮಧಾಮಾವೃತ ಜಟಾಪಟಲವೇಷನಾಶಾಮಯ ಭಯಾತೀತನೂತನಾಂಗಂ . . . ಪ್ರೇಮದಿಂದೆಮಗೆ ಭಕ್ತಿಯನೀಗೆ (ಸಿದ್ಧರಾ. ೧–೦). ೪. ಹೊಳಪು; ಕಾಂತಿ; ತೇಜಸ್ಸು; ಬೆಳಕು: "ತೇಜದಲ್ಲಿಯುಂ ಧಾಮಮೆಂಬುದು" (ಹಲಾಯು. ೦೩೩–೦೨); "ಕಾಂತಿಯುಂ ಧಾಮಮೆಂದೆಂಬುದು" (ಮಂಗರಾ. ೧೯೯–೬); ಸೋಮನೊಳು ತಿಳಿಜೊನ್ನ ರವಿಯೊಳು ಧಾಮ ದರ್ಪಣದೊಳಗೆ ನಿರ್ಮಳ . . . ಎಸೆವಂತೆ (ಶಂಕದಾ. ೦–೪೭). ೫. ಘನತೆ; ಗೌರವ; ಠೀವಿ; ವೈಭವ. ೬. ಶಕ್ತಿ; ಸಾಮರ್ಥ್ಯ; ಪ್ರತಾಪ: ಸ್ಥಿರಪುಣ್ಯಧಾಮ ಧಾಮಪ್ರಬಲ ಬಲವಂತ ಶ್ರುತಿಸಕಲ ಸಾಮ ಸಾಮಸ್ತುತ್ಯ ಪಂಪಾಧಿಪತಿ ವಿರೂಪಾಕ್ಷ ಕರುಣಿಸುವುದೆಮಗೆ (ಹಚಕಾ. ೧–೩). ೭. ದೇಹ; ಶರೀರ. ೮. ಗುಂಪು; ಹಿಂಡು; ತಂಡ.

[ಸಂ. ಧಾಮನ್]

ಧಾಮಕ (ನಾ). = ದಾಮಂ : ಅಸುಕೆಯ ಪೊಸದಳಿರ್ದುಱುಗಲಿಂ . . . ಅಮರಪ್ರಸವದ ಧಾಮಕಪರೀತಧಮನಿಗಳಿಂದಂ (ಮಹಾನೇ. ೯-೧೧೧).

[P ಇದು ದಾಮಂಕ ಎಂಬುದರ ಅಪಲಿಖಿತವಿರಬಹುದು.]

ಧಾಮಣ (ನಾ). ವಿಷವಿಲ್ಲದ ಸರ್ಪಗಳಲ್ಲಿ ಒಂದು ಬಗೆ: ನಿರ್ವಿಷಸರ್ಪಗಳಲ್ಲಿ ಹೆಬ್ಬಾವು ಶ್ರೇಷ್ಠ. ಇದಲ್ಲದೆ ಮಣ್ಣುಮುಕ್ಕ, ಧಿವಡ, ಧಾಮಣ, ಅಧೇಲಾ, ಹಸರುಹಾವು ಮುಂತಾದ ಜಾತಿಗಳು ಹಲವುಂಟು (ಶಧಾಗೆ. ೬೭).

[←ಮರಾ. ಧಾಮಣ ; ಹಿಂ. ಧಾಮಿನ್]

ಧಾಮಧೂಮು, ದಾಮದೂಮಂ, ಧಾಂಧೂಂ (ನಾ). ೧. ಗಡಿಬಿಡಿ ; ಗೊಂದಲ ; ಅಲ್ಲೋಲಕಲ್ಲೋಲ ; ಕ್ಷೋಭೆ : ನಡೆದ ಧಾಮಧೂಮಿನಲ್ಲಿ ಜಯಚಂದ್ರನ ದೇಹವು ಅನೇಕರ ತುಳಿತಕ್ಕೆ ಸಿಕ್ಕಿ ಜರ್ಝರಿತವಾಯಿತು (ಭಾಇಪ್ರ. ೫೫೯). **ದಾಮದೂಮ :** ೨. ನಾಶ ; "ಬೀಳು ; ಹಾಳು" (ಜಾನಕೋ. ೪) ; ಕಿಱುಕಿಚ್ಚು ಹರವರಿಯ ಬಿಂಜದಡವಿಯ ನಿಮಿಸದೊಳ್ ದಾಮದೂಮಮಂ ಮಾಡದಿಹುದೆ (ಸಮ್ಯಕ್ತ್ವಾ. ೧-೪೮) : "ಧಾಳಾಧೂಳಿ ಮಾಡುವುದು" (ಸಮ್ಯಕ್ತ್ವಾ. ಕೋಶ). **ಧಾಂಧೂಂ :** ೧. ಶತ್ರುಗಳ ಧಾಂಧೂಂ ಶಬ್ದಗಳು ಕಿವಿಗೆ ಬೀಳುತ್ತಲೇ ಉಳಿದಿದ್ದ ರಾಜಪುತ್ರರ ರಮಣಿಯರೆಲ್ಲರೂ ಸ್ವಹಸ್ತದಿಂದ ಮಾಡಿದ ಚಿತೆಗಳನ್ನೇರಿ . . . ನಭೋಮಂಡಲದಲ್ಲಿ ಲೀನರಾದರು (ಧಶ್ರೋಕ. ೧೪೧).

ಧಾಂಧೂಂ ಮಾಡು = ದುಂದುವೆಚ್ಚಮಾಡು ; ಸಿಕ್ಕಾಪಟ್ಟೆ ವೆಚ್ಚಮಾಡು : ಸುಮ್ಮನೆ ಇದ್ದರೆ ಗೂಂಡಾಗಳು ಧಾಂಧೂಂ ಮಾಡಿ ಎಲ್ಲ ಹಾಳು ಮಾಡಿಬಿಡುತ್ತಾರೆ (ರೂಢಿ). [←ಮರಾ. ಧಾಮಧೂಮ್]

ಧಾಮನಿಧಿ (ನಾ). ತೇಜೋನಿಧಿ ; ಸೂರ್ಯ. [ಸಂ.]

ಧಾಮಾರ್ಗವ (ನಾ). ೧. ಒಂದು ಬಗೆಯ ಸಸ್ಯ ; ಉತ್ತರಣಿ ; ಅಪಾಮಾರ್ಗ. ೨. ಕಹಿ ಹೀರೆ ಬಳ್ಳಿ. [ಸಂ.]

ಧಾಯಿಟಿಹೂವು (ನಾ). ಧಾತಕೀಕುಸುಮಂ : ಧಾಯಿಟಿಹೂವು (ದಾದಿ ಹೂವು) (ಮುಂಬಪ್ರಾ. ೧೬೧). 'ಧಾತಕಿ' ಪರಾ.

[ಧಾಯಿಟಿ (P ←ಮರಾ. ಧಾಯಟೀ) + ಹೂವು (<ಪ್ರೂ)]

ಧಾಯ್ಯೆ (ನಾ). ಯಾಗಮಂತ್ರಗಳೊಂದಿಗೆ ಸೇರಿಸಿ ಹೇಳುವ ಮಂತ್ರ : ಅಗ್ನಿಯಲ್ಲಿ ಸಮಿತ್ತನು ಹಾಕಿ ಉದ್ದೀಪನಗೊಳಿಸಲು ಹೇಳುವ ಮಂತ್ರ : "ಸಾಮಿಧೇನೀ. ಧಾಯ್ಯಾ—೨ ಅಗ್ನಿಯನ್ನು ಮೊದಲು ಪ್ರಜ್ವಲಿಸುವ ಹಾಗೆ ಮಾಡುವದಕ್ಕೆ ಹೇಳಬೇಕಾದ ವೇದಮಂತ್ರಕ್ಕೆ ಹೆಸರು" (ಸಿದ್ಧಾಂಶಿ. ೧೫೯). [ಸಂ. ಧಾಯ್ಯಾ]

ಧಾರ (ನಾ). ೧. ಧಾರಾಕಾರವಾಗಿ ಮಳೆ ಸುರಿಯುವಿಕೆ ; ಜೋರಾಗಿ ಮಳೆಬರುವಿಕೆ. ೨. ಇದ್ದಕ್ಕಿದ್ದಂತೆ ಬೀಳುವ ಸುರಿಮಳೆ. ೩. ಆಳವಾದ ಜಾಗ ; ಕುಳಿ ; ಗರ್ತ. ೪. ಮಂಜು ; ಹಿಮ ; ತುಷಾರ. ೫. ಅಲೆ ; ತರಂಗ. ೬. ರೋಗ ; ವ್ಯಾಧಿ. ೭. ಭಯದ ನುಡಿ: "ತುಷಾರ ತರಂಗ ರೋಗ ಭೀತ್ಯುಕ್ತಿ ಗರ್ತಸೂತ್ರವಿ ವು ಧಾರಸಮಾಹ್ವಯಂ" (ನಾನಾರ. ೧೩).

[ಸಂ.]

ಧಾರಕ (ಗಂ). ೧. ಧರಿಸಿರುವ ; ಹೊತ್ತಿರುವ ; ಹೊಂದಿರುವ. 'ಕರ್ಣಧಾರಕ', 'ಲಿಂಗಧಾರಕ' ಪರಾ. (ನಾ). ೨. (ವಸ್ತುವಿಗೆ) ಆಧಾರವಾದುದು, ಪಾತ್ರೆ, ಪೆಟ್ಟಿಗೆ ಮುಂತಾದುವು. ೩. ಕಂಭ ; ಸ್ತಂಭ : "ಧಾರಕಂ ಸ್ತಂಭಮೆನಿಸಿಕ್ಕುಂ" (ಮಂಗರಾ. ೫೯-೧೩). ೪. ಧರಿಸಿದವನು ; ತಾಳಿದವನು ; ಕೈಕೊಂಡವನು : "ಧರಕಃ, ಧರಮಾಣಃ, ಧಾರಕಃ, ಈ ೩ ತಾಳ್ವಂ" (ಶಾಶಕ್ತ. ೧೨೮) ; ವೀರಶೈವಾಚಾರ ದೀಕ್ಷಾಧಾರಕನತಿ ನಿರ್ವಿಕೋಭಯಕರ್ಮನಿರ್ಮಲನ (ಬಸಪು. ೩-೪೯). ೫. ಆಧಾರನಾದವನು ; ಬೆಂಬಲಿಗ : ನೆನೆದವರಿಗೆ ನಾನು ಧಾರಕನಾಗಿ ನಿಲ್ಲುತ್ತೇನೆ (ರಾಜಸೂ. ೧೧೦). ೬. ಜೀವನಾವಶ್ಯಕವಸ್ತು ; ಜೀವಿಸುವುದಕ್ಕೆ ಅಗತ್ಯವಾದ ದ್ರವ್ಯ : ಆವಶ್ಯಕತೆಗಳು (Necessaries), ಪ್ರಿಯಕರಗಳು (Comforts) ಮತ್ತು ಭೋಗವರಿಕರಗಳು (Luxuries) . . . ಈ ಮೂರು ಜಾತಿಯ ದ್ರವ್ಯಗಳನ್ನು ರಾಮಾನುಜ ಗೀತಾಭಾಷ್ಯದಲ್ಲಿ ಧಾರಕ, ಪೋಷಕ, ಭೋಗ್ಯಕ ಎಂದು ಕರೆದಿದೆ (ಭಾರದ. ೩೩೫). [ಸಂ.]

ಧಾರಣ (ನಾ). ೧. ಹಿಡಿಯುವಿಕೆ ; ಧರಿಸುವಿಕೆ ; ಆಧಾರವಾಗಿರುವಿಕೆ : ಅವಕಾಶ, ವ್ಯೂಹನ, ಪಚನ, ಸಂಗ್ರಹಣ, ಧಾರಣವೆಂದು ಆಕಾಶಾದಿ ಪಂಚಮಹಾಭೂತಗಳ ಕೃತ್ಯಗಳು (ಹಿಂದಸಾ. ೨೯೮) ; ಕರ್ಮದಿಂದ ವ್ಯಕ್ತಿಯ ಧಾರಣವಾಗುತ್ತದೆ (ಪ್ರಬಂಧ. ೧೧೮). ೨. ಆಧಾರವಾದುದು : ಅನೂನ ದಾನಗುಣದರ್ಜಿತಪೂರಣನಿಷ್ಪತುಷ್ಪದಾ[ಧಾ]ರಣಂ . . . ಅಮ್ಮನ ಗಂಧವಾರಣಂ (ಗದಾಯು. ೧-೧೭). ೩. (ಉಡುಪು, ಆಭರಣ ಮೊದಲಾದುವನ್ನು) ತೊಡುವಿಕೆ ; ಹಾಕಿಕೊಳ್ಳುವಿಕೆ : ಒಂದು ಘೇತ್ಕಾರಿಣೇ ತಂತ್ರೋಕ್ತ ಕವಚವನ್ನು ಕೊಟ್ಟು ಕಳಿಸುವೆನು, ಅದನ್ನು ಧಾರಣಮಾಡಿ ನೋಡಿರಿ (ಶಾರಹಿಂ. ೧೬೭). ೪. ತಾಳುವಿಕೆ ; ಸಹಿಸುವಿಕೆ ; ತಾಳ್ಮೆ. ೫. ಜೋಪಾನವಾಗಿ ಉಳಿಸಿಕೊಂಡು ಬರುವಿಕೆ ; ಕಾಪಾಡುವಿಕೆ ; ಪಾಲನೆ ; ಪೋಷಣೆ. ೬. ಹೊಂದಿರುವಿಕೆ ; ಪಡೆದಿರುವಿಕೆ. ೭. ಪ್ರತ್ಯಕ್ಷಜ್ಞಾನದ ನಾಲ್ಕು ಅಂಗಗಳಲ್ಲಿ ಒಂದು ; ಒಮ್ಮೆ ನೋಡಿ ತಿಳಿದ ವಸ್ತುವನ್ನು ಮತ್ತೊಮ್ಮೆ ನೋಡಿದಾಗ ಗುರುತು ಹಿಡಿಯುವುದಕ್ಕೆ ಕಾರಣವಾದ ಶಕ್ತಿ; ಸ್ಮರಣಶಕ್ತಿ: ಒಂದನೆಯದರಲ್ಲಿ ಅವಗ್ರಹ, ಈಹಾ, ಅವಾಯ, ಧಾರಣ ಎಂದು ನಾಲ್ಕುವಿಧ . . . ಅನಂತರ ಯಾವಾಗ ನೋಡಿದರೂ ಗುರುತುಹಿಡಿಯುವ ಸ್ಮರಣೆಗೆ ಕಾರಣವಾದ ಜ್ಞಾನಧಾರಣೆ (ಹಿಂದಸಾ. ೮೩). ೮. ಅಂಕೆಯಲ್ಲಿಡುವಿಕೆ ; ನಿಗ್ರಹ. ೯. ಉಪವಾಸವ್ರತವನ್ನು ಹಿಡಿಯುವಿಕೆ ; ಉಪವಾಸಾಚರಣೆ. 'ಧಾರಣ ಪಾರಣೆ' ಪರಾ. ೧೦. [ಯೋಗ] ಯೋಗದ ಎಂಟು ಅಂಗಗಳಲ್ಲಿ ಒಂದು ; ಇಂದ್ರಿಯಪ್ರವೃತ್ತಿಗಳನ್ನು ನಿರೋಧಿಸಿ ಚಿತ್ತವನ್ನು ಹೃತ್ಕಮಲದಲ್ಲಿರುವ ಪರಮಾತ್ಮನಲ್ಲಿ ದೃಢವಾಗಿ ನೆಲೆಗೊಳಿಸುವುದು: ಯಮನಿಯಮ ಸ್ವಾಧ್ಯಾಯಧ್ಯಾನಧಾರಣಮೋನಾನುಷ್ಠಾನಜಪಸಮಾಧಿ ಶೀಲಸಂಪನ್ನರ್ (ಸೌಇಇ. XX, ೪೬-೧೬ ; 1072) ; ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಷ್ಟಾಂಗ ಯೋಗನಿಷ್ಠೆ (ವಿವೇಕ. ೧೮೩) : ವಶವ ಮಾಡಿದ ಚಿತ್ತವಾತ್ಮನ ವ್ಯಸನದಲ್ಲಿರೆ ಧಾರಣವು (ಅಮೃತ. ೬-೮೦). [ಸಂ.]

ಧಾರಣಪಾರಣೆ (ನಾ). ಒಂದು ದಿವಸ ಉಪವಾಸ, ಮರುದಿವಸ ಊಟ ಈ ಕ್ರಮದಲ್ಲಿ ಮಾಡುವ ಒಂದು ವ್ರತ : (ಕ).

[ಧಾರಣ + ಪಾರಣೆ./ಮರಾ. ಧಾರಣಪಾರಣ, ಧಾರಣಾಪಾರಣಾ]

ಧಾರಣಯೋಗ (ನಾ). = ಧಾರಣ ೧೦ : ಅನವಚ್ಛಿನ್ನ ತೈಲಧಾರೆಯಂತೆ ಶಿವಧ್ಯಾನಮಂ ಮಾಡುತಿರಲು ಆ ಧ್ಯಾನಾಕಾರದಿಂ ಕರಿಗೊಂಡ ವಸ್ತುವಿನೊಳು ಆ ಮನವು ನಿಶ್ಚಲಮಾಗಲದೇ ಧಾರಣಯೋಗ ನೋಡಾ (ಅಖಂಡೇ. ೨೨೦-೬೧) ; ಅದೇ ನಾದಬಿಂದು ಅದೇ ಪರಬ್ರಹ್ಮಸ್ವರೂಪವಾಗಿಯು ಕಳೆಗಳಿಗೆ ಆಧಾರವಾಗಿಯುಯಿರುವುದು ಯದೇ ದಾ[ಧಾ]ರಣಯೋಗ (ತತ್ತ್ವಬಿಂ. ೨೭-೪). [ಧಾರಣ + ಯೋಗ]

ಧಾರಣಶಕ್ತಿ (ನಾ). ೧. ಆಧಾರವಾಗಿರುವ ಶಕ್ತಿ; ಧರಿಸುವ ಸಾಮರ್ಥ್ಯ: ಪೃಥ್ವಿಯಲ್ಲಿ ಧಾರಣಶಕ್ತಿಯೂ . . . ಆಕಾಶದಲ್ಲಿ ವ್ಯಾಪನಶಕ್ತಿಯೂ ಸ್ವಾಭಾವಿಕವಾಗಿ ನೆಲೆಸಿರುವುದನ್ನು . . . ಕಾಣಬಹುದಾಗಿದೆ (ಶಕ್ತಿವಿ. ೩೦). ೨. ತಡೆಯುವ ಶಕ್ತಿ ; ಸಹಿಸುವ ಶಕ್ತಿ : ಧಾರಣಶಕ್ತಿ ಚೆನ್ನಾಗಿದ್ದುದರಿಂದ ಇಂಥ ಖಾಯಿಲೆಯಿಂದ ಪಾರಾದರು (ರೂಢಿ). ೩. ನೆನಪಿಡುವ ಶಕ್ತಿ : ಒಮ್ಮೆ ಅನುಭವಿಸಿದ ಬಿಂಬಗಳನ್ನು ಅಳಿಯದಂತೆ ಉಳಿಸಿಕೊಳ್ಳುವುದಕ್ಕೆ ಧಾರಣಶಕ್ತಿಯೆಂದು ಹೆಸರು (ಶಿಕ್ಷದ. ೩೨೦). [ಧಾರಣ + ಶಕ್ತಿ]

ಧಾರಣಹಾರಣ (ನಾ). = ಧಾರಣಪಾರಣೆ : ಧಾರಣಹಾರಣಬ್ರತದೊಳಿಂ ತೊಡಲಂಜದೆ ಮಾಡಿ ನೈಷ್ಠಿಕಾಯಾತದೊಳೊಪ್ಪಿ . . . ಕಾಮಾರಿಯ ನರ್ಚ್ಚಿಸಲ್ಕೆ ನಲಿದಿರ್ಪ್ಪ ಮುನೀಶ್ವರ ನೀ ಧ್ರುವೇಶ್ವರ (ಸೌಇಇ. XI-1, ೯೭-೩೨ ; 1062). [< ಧಾರಣಪಾರಣೆ]

ಧಾರಣಾವಂತ (ನಾ). ಸ್ಮರಣಶಕ್ತಿಯುಳ್ಳವನು. [ಸಂ. ಧಾರಣಾವತ್]

ಧಾರಣಾವ್ರತ (ನಾ). ಉಪವಾಸ ವ್ರತ; ಅನಶನ ವ್ರತ: ಅವುಗಳನ್ನು ಪಡೆಯಲು ಬೇರೆ ಗತಿಗಾಣದೆ ನಂಜರಾಜಯ್ಯನ ಮನೆ ಮುಂದೆ ಸಾಲುಸಾಲಾಗಿ ಧಾರಣಾವ್ರತ ಹಿಡಿದು ಅವರು ಕುಳಿತುಬಿಟ್ಟರು (ಒಡೆಕ. ೬೯). [ಸಂ.]

ಧಾರಣ$_2$ 'ಧಾರಣೆ' ನೋ.

ಧಾರಣೆ$_1$ (ನಾ). ೧. ಹಿಡಿಯುವಿಕೆ; ಧರಿಸುವಿಕೆ ; ಆಧಾರವಾಗಿರುವಿಕೆ: ಓರೆಪೋರೆಯೊಳಾಡಿ ಧರ್ಮದ ಧಾರಣೆಯ ಧಟ್ಟಿಸುವದಿದು ಗಂಭೀರರಿಗೆ ಗರುವಾಯಿಯೇ (ಕುಪ್ಪಾಸ. ೧೪-೮೪). ೨. ಪಾಲನೆ ; ಪೋಷಣೆ : ಇಲ್ಲಿ ಕರ್ಮವೆಂದರೆ ತನ್ನ ಮತ್ತು ಸಮಾಜದ ಧಾರಣೆ ಹಾಗೂ ವಿಕಾಸಕ್ಕಾಗಿ . . . ಪ್ರತಿಯೊಬ್ಬನೂ ಮಾಡತಕ್ಕ ಕರ್ತವ್ಯವು (ವಚರ. ೮೮). ೩. ಪ್ರತ್ಯಕ್ಷಜ್ಞಾನದ ನಾಲ್ಕು ಅಂಗಗಳಲ್ಲಿ ಒಂದು ; ಒಮ್ಮೆ ನೋಡಿ ತಿಳಿದ ವಸ್ತುವನ್ನು ಮತ್ತೊಮ್ಮೆ ನೋಡಿದಾಗ ಗುರುತು ಹಿಡಿಯುವುದಕ್ಕೆ ಕಾರಣವಾದ ಶಕ್ತಿ ; ಸ ರಣಶಕ್ತಿ : ಧಾರಣೆಯು (Perceptual Retention) ಇಂದ್ರಿಯಜ್ಞಾನದ ವಿಷಯವನ್ನು ಸ್ಥಿತಿಶೀಲವಾಗಿ ಮಾಡುವುದು . . . ಧಾರಣೆಯಲ್ಲಿ ಬಂದ ಬಳಿಕ ಇಂದ್ರಿಯಜ್ಞಾನವು ಪರಿಪೂರ್ಣವಾಗುವುದು (ಕ್ರೈಸಧ. V, ಉಪೋದ್ಘಾತ). ೪. ಸನ್ಮಾರ್ಗದಲ್ಲಿರುವ ನಿಷ್ಠೆ,–ಸೈರಣೆ, – ಧೃತಿ. ೫. [ಯೋಗ] ಯೋಗದ ಎಂಟು ಅಂಗಗಳಲ್ಲಿ ಒಂದು ; ಇಂದ್ರಿಯಪ್ರವೃತ್ತಿಗಳನ್ನು ನಿರೋಧಿಸಿ ಚಿತ್ತವನ್ನು ಹೃತ್ಕಮಲದಲ್ಲಿರುವ ಪರಮಾತ್ಮನಲ್ಲಿ ನೆಲೆಗೊಳಿಸುವುದು : ಜಾಗ್ರಸ್ವಪ್ನಸುಷುಪ್ತಿಯಲಿ ಅತಿಶೀಘ್ರದಿಂ ತೋರಿಸುವ ತೋರ್ಕೆಯು ಭರ್ಗನೆಂದೇ ಕಾಣುತಿಹುದೇ ಧಾರಣೆಯುಯೆಂದ (ಜ್ಞಾನಸಿಂ. ೦೭-೩೩); ಧಾರಣೆಯೆಂದರೆ ಶುಭವಾದ ಆಶ್ರಯವಾದ ನಾಭಿಚಕ್ರ, ಹೃದಯ, ಜಿಹ್ವಾಗ್ರ, ನಾಸಾಗ್ರ, ಶಿರಸ್ಸು ಮೊದಲಾದ ಶರೀರದವಯವದಲ್ಲಿ ಅಥವಾ ಹೊರಗಿನ ಶುಭವಾದ ಮಂಗಳಕರವಾದ ವಸ್ತುವಿನಲ್ಲಿ ಚಿತ್ತವನ್ನು ಸ್ಥಿರವಾಗಿ ನಿಲ್ಲಿಸುವ ಅಭ್ಯಾಸ ಮಾಡುವುದು. ಇದೇ ದೇಶಬಂಧವು (ಹಂಚಸಾ. ೧೦೬) ; ಸಂಪ್ರಜ್ಞಾತ ಸಮಾಧಿಯ ಸಿದ್ಧಿಗೋಸ್ಕರ ನಾಭಿಚಕ್ರ, ಹೃದಯ, ನಾಸಿಕಾಗ್ರ ಇತ್ಯಾದಿ ಸಾ ನಗಳಲ್ಲಿ ಚಿತ್ತವನ್ನು ಸ್ಥಿರಪಡಿಸುವುದರ ಪೆಸರು ಧಾರಣೆ ಎನಿಸುವುದು (ಮುಮುಕ್ಷು. ದ್ವಿತೀಯಸೋಪಾನ). [ಸಂ. ಧಾರಣಾ]

ಧಾರಣೆ$_2$, ದಾರಣೆ, ಧಾರಣೆ (ನಾ). ಪೇಟೆಯ ವಸ್ತುಗಳ ಮಾರಾಟದ ಬೆಲೆ : ಊರೊಳಗಿದ್ದ ತಂಬುಲಿಗರ್ ಹುಟ್ಟಿದ ಧಾರಣೆಯಿಂ ರೊಕ್ಕಮಾಡಿ ಕುಡುವರ್ (ಮುಂಬರಾ. XII, ೧೫-೪೯ ; 1223); ಧಾನ್ಯಮಂ ಗಣಿಸಿ ಕೊಡುತ್ತದಱ ವೃದ್ಧಿಯಂ ಬಯಸಿ ಧಾರಣೆಯ ತರ್ಗಂ ಹೋರುವವನು (ವೀಶೈಪು. ೪-೦೭-೨೯) ; ಹನ್ನೆರಡೊನ್ನಿಗೆ ಖಂಡುಗ ಇನ್ನೂಱಂ ಕೊಡಲು ಮತೆ ಆ ಧಾರಣೆಯೊಳಂ ಮುನ್ನೂಱು ಹೊನ್ನಿಂಗೆ ಕೊಡರೆ ಸನ್ನುತಮತಿ ಬತ್ತವನಿತು ಖಂಡುಗಮಕ್ಕುಂ (ಧಾಸ್ಕರ. ೨೧-೦) ; ಅಳತೆಯಲ್ಲಿ ತಟವಟವುಂಟಾಗದೆ ಧಾರಣೆಯಲ್ಲಿ ಹೆಚ್ಚು ಕುಂದಿಲ್ಲದೆ (ಸೌಗಂಧಿ. ೭೨೬-೦೪) ; ವರ್ತಕರು ಮನಸೀ ಧಾರಣೆಗಳನ್ನು ಏರಿಸದಂತೆ ಸರ್ಕಾರವು ತಡೆದು ಧಾರಣೆಯನ್ನು ಗೊತ್ತುಪಡಿಸಬೇಕು (ಧಾರದ. ೩೬೦). **ದಾರಣೆ**: 'ದಾರಣೆ ವಾಸಿ' ಪರಾ. **ಧಾರಣೆ** : ಊರುಊರಲಿ ಧನ ಸೂರೆ ಬಿಟ್ಟರೆ ಏನು ಮಾರುವ ಧಾರಣೆ ಏರಿ ಇಳಿದರೇನು (ವಿಸಾಸು. ೪೮-೩) ; ಮಂದಿಗೆಲ್ಲ ಯಾವ ಧಾರಣೆಯಿಂದ ಕೊಡುತ್ತೀಯೋ ಅದೇ ಧಾರಣೆಯಿಂದ ಕೊಡು (ಪ್ರಡಸ. ೧೩). [?./ಮರಾ. ಧಾರಣ./ತಮಿ. ತಾರಣ್ಯೆ; ತೆಲು. ದಾರಣ]

ಧಾರಣೆವಾಸಿ, ದಾರಣೆವಾಸಿ (ನಾ). =ಧಾರಣೆ$_2$: ಧಾರಣೆವಾಸಿ ದಿನದಿನಕ್ಕೆ ಗಗನಕ್ಕೇರುತ್ತಿದೆ (ರೂಢಿ). **ದಾರಣೆವಾಸಿ**: ಒಳವ್ಯಾಪಾರದಲ್ಲಿ ದಾರಣೆವಾಸಿಗಳೂ ಹೊರವ್ಯಾಪಾರದಲ್ಲಿ ಮಾರುವೆಯ ದರವೂ ಹಣದ ಬೆಲೆಯನ್ನು ಅಳೆಯುವುವು (ಹಣಪ್ರ. XVII, ವಿಷಯಸಂಗ್ರಹ.

[ಧಾರಣೆ$_2$ + ವಾಸಿ$_1$]

ಧಾರಪೂರ್ಬಕ 'ಧಾರಾಪೂರ್ಬಕಂ' ನೋ.

ಧಾರಯಿಸು (ಕ್ರಿ). ತಾಳು ; ಹೊಂದಿರು ; ಧರಿಸು : ಆರೋಗ್ಯಭಾಗ್ಯವನು ಮನಕೆ ತನುಗೆಂತಂತೆ ಹಾರಯಿಸುವೊಡೆ ಹಲವು ಸರಳನೀತಿಗಳ ಧಾರಯಿಸು ನೆನಸಿನಲಿ ನುಡಿಯಲ್ಲಿ ನಡತೆಯಲಿ ಪಾರಾಗು ಸುಳಿಯಿಂದ (ಮಂಕುಕ. ೮೦೬). [ಧಾರಣ + – ಇಸು$_3$]

ಧಾರಯ್ಸು (ಕ್ರಿ). ಧಾರೆಯಾಗಿ ಸುರಿಸು ; ಧಾರಾಕಾರವಾಗಿ ಎರಚು : ಕಾಮಿನೀವೃಂದಮಂ ಪಿರಿದಾನಂದದಿನೊಲ್ದು ನೋಡಿ ನಗುತುಂ ಬೆಳ್ಪಂ ಪ್ರಸಾರಿಪ್ಪ ಸಚ್ಛರದಿಂದೂಪಳಶೃಂಗಮುಕ್ತವಿಮಳಾಂಭೋಧಾರೆ ಧಾರಯ್ಸುದಂ (ಉದ್ಭಟ. ೯-೦೨೧). [ಧಾರ + – ಇಸು$_3$]

ಧಾರವಾಡಿ (ನಾ). ಹಳೆಯ ಕಾಲದ ಒಂದು ಚಿನ್ನದ ನಾಣ್ಯ ; ಧಾರವಾಡದಲ್ಲಿ ಟಂಕಿಸಿದ ನಾಣ್ಯ : ಧಾರವಾಡಿ . . . ಕಿಮ್ಮತ್ತು ರೂ. ೩, ಆ. ೮ (ಕಭಾಗೆ. ೨೮೦) ; ಇನ್ನೂ ಇತರ ಬಂಗಾರದ ನಾಣ್ಯಗಳು ವಿಶೇಷವಾಗಿದ್ದವು. ಯಾವವೆಂದರೆ :– ೧ ಗಬರು ೧ ಮೊಹರು . . . ೧ ಧಾರವಾಡಿ (ಚಿಕ್ರಪಾ. ೧೦೪). [< ಧಾರವಾಡ$_1$]

ಧಾರಾಕಾರ (ನಾ). ಏಕಪ್ರಕಾರವಾದುದು ; ಸತತವಾದುದು ; ಬಿಡುವಿಲ್ಲದಿರುವುದು : ಮೋಡ ನೂತೇ ನೂಲುವದು ಬಳಿ ದಾರ ಧಾರಾಕಾರದಿ (ನೆಲಮು. ೦೦-೦೭).

ಧಾರಾಕಾರವಾಗಿ = ಎಡೆಬಿಡದೆ ; ಒಂದೇಸಮನೆ : ಕೆನ್ನೆಗಳ ಮೇಲೆ ಕಣ್ಣೀರು ಧಾರಾಕಾರವಾಗಿ ಪ್ರವಹಿಸುತ್ತಿತ್ತು (ಪುನರು. ೧೪೩) ; ಮಳೆ ಧಾರಾಕಾರವಾಗಿ ಸುರಿಯಿತು (ಪುನರು. ೨೯೯). [ಸಂ.]

ಧಾರಾಗೃಹ (ನಾ). ತಾಪನಿವಾರಣೆಗಾಗಿ ಏರ್ಪಡಿಸಿದ, ಕಾರಂಜಿ ಮೊದಲಾದುವುಗಳಿಂದ ಧಾರೆಯಾಗಿ ನೀರನ್ನು ಎರಚುವ ಮನೆ ; ನೀರು ಸಿಂಪಡಿಸುವ ಏರ್ಪಾಟಿರುವ ಮನೆ ; ಕಾರಂಜಿಮನೆ : ಎಲ್ಲಿ ಕೊಳನೆಲ್ಲಿ ತಣ್ಬುಟೀಲೆಲ್ಲಿ ಲತಾಭವನಮೆಲ್ಲಿ ಧಾರಾಗೃಹಮಂತಲ್ಲಿಯೆ ತೊಡರ್ದಲ್ಲಿಯೆ ನಿಂದಲ್ಲಿಯೆ ರಮಿಸಿದಳಾಕೆ ಮರು[ದಾ]ತ್ಮಜನೊಳ್ (ಪಂಪಭಾ. ೩-೦೯) ; ತಳಿರ ತಳಿರ ಜೊಂಪಂ ಕೂಡೆ ಸೇಡಾಗಿರಲ್ ಕೆಯ್ ಕೊಳೆ ಕುಳಿರ್ವೂವು ಬಂದತ್ತೊಳಗುಟೀದನಿಕುಂ ಧಾರಾಗೃಹಂ ಚಂದ್ರಕಾಂತೋಪಳದೊಳೆ ಸಮೆದಿರ್ದಂತಾಲಿ ಕೋಡುತ್ತುಮಿರ್ಕುಂ (ಶಾಂತಿಪು. ೮-೦೪) ; ಬಿಡದೆ ಸುರಿವ ಸೊನೆಯ ಸೋನೆಯುಂ ತಳೆದ ಸಹಕಾರಮಂ ತಳೆದು ರತಿಪತಿಯ ಧಾರಾಗೃಹದಂತಿರ್ದ ಮಾಧವೀಲತೆಯ ಜೊಂಪಂಗಳೊಳಂ (ಮಲ್ಲಿಪು. ೨-೩೩) ; ಸರಸಿ ಪೋಲ್ತುದು ಚಿತ್ತಜನ ನಿಯಂತ್ರಯಂತ್ರಧಾರಾಗೃಹಮಂ (ಚಂದ್ರಪು. ೭-೦೪೪). [ಸಂ.]

ಧಾರಾಗೃಹೀತ (ನಾ). ಧಾರಾಪೂರ್ವಕವಾದ ದಾನದಲ್ಲಿ ಪಡೆದುದು ; ವಿಧಿಪೂರ್ವಕವಾಗಿ ಪಡೆದುದು,–ಸ್ವೀಕರಿಸಿದುದು. [ಸಂ.]

ಧಾರಾಗ್ರ (ನಾ). ಅಲಗಿನ ತುದಿ,–ಮೊನೆ. [ಸಂ.]

ಧಾರಾಟ (ನಾ). ೧. ಚಾತಕಪಕ್ಷಿ : ಎಲೆ ಧಾರಾಟವೆ ಕಾಲಕಾಲದೊಳ ಗಾಪತ್ತಾಪ ವಿಶ್ರಾಂತಿಯಂ ತಳೆಯುತ್ತಿಪ್ಪ ಪಯೋ[ಎ]ಧರಂಗೆ ಘನದಾನ ಶ್ರೇಷ್ಠವೆ ಪೇಳಲುಜ್ವಲಮಾಗಿಪ್ಪುದು ಪುಟ್ಟುವಾಗಲೆ ವಿದಾಹವ್ಯಾಧಿ ಪೀಡಾಮಹೀಜಲತಾಜೀವನ ಜೀವನಪ್ರಕೃತಿ ನೋಡಿಂತೆನ್ನ (ಅಪ್ರಶ. ೨೯). ೨. ಕುದುರೆ. ೩. ಮೋಡ. ೪. ಮದಿಸಿದ ಆನೆ ; ಮದ್ದಾನೆ.

[ಸಂ.]

ಧಾರಾದತ್ತ (ನಾ). ಧಾರೆ ಎರೆದು ಕೊಟ್ಟ ದಾನ ; ಧಾರಾಪೂರ್ವಕವಾಗಿ ದಾನ ಮಾಡಿದುದು. [ಸಂ.]

ಧಾರಾಧರ (ನಾ). ೧. ಮೋಡ ; ಮೇಘ : "ಅಭ್ರಂ, ಅಬ್ದಃ, ಘನಃ . . . ಧಾರಾಧರಃ, ಧೂಮಯೋನಿಃ, ಜೀಮೂತಃ, ಬಲಾಹಕಃ–ಈ ೧೦ ಮುಗಿಲ ಪೆಸರ್" (ಹಲಾಯು. ೧೦-೫೨) : ಕರಿಕಳಭಂಗಳ್ ಬಿಸವಲ್ಲರಿಗೆತ್ತ ಅಗುತ್ತುಮಿರ್ಪ ಧಾರಾಧರವುಷ್ಕರಧಾರೆಗಳಂ ಕರವುಷ್ಕರದಿಂ ಬರೆ ತೆಗೆದುವಂದರಣ್ಯಾಂತರದೊಳ್ (ಜಗವಿ. ೪-೨೪). ೨. ಸ್ರವಿಸುವ ತುಟಿಯುಳ್ಳುದು. ೧, ೨ : ಅದು ಧಾರಾಧರಮಬ್ದದಂತೆ ಪೊಳೆಯಂತಾವರ್ತ ಯುಕ್ತಂ . . . ಉದಂಚಚ್ಚಂದ್ರಬಿಂಬಬೊಲಭ್ಯುದಯ ಶ್ರೀಕರಲಕ್ಷಣಾಂಕ ಮೆನಿಸಿತ್ತಾ ರಾಜವಾಜಿದ್ವಯಂ (ರಾಜಶೇ. ೧೨-೧೦೨).

[ಸಂ. (ಧಾರಾ + ಧರ ; ಧಾರಾ + ಅಧರ)]

ಧಾರಾನಾಥ (ನಾ). ೧. ಧಾರಾಪಟ್ಟಣದ ದೊರೆ ; ಮಾಳವ ರಾಜ. ೨. ಭೋಜರಾಜ. P 'ಧಾರಾ' ಎಂಬುದಂ ಈಗಿನ ಮಧ್ಯಪ್ರದೇಶದ 'ಧಾರ್' ಎಂಬ ಪಟ್ಟಣ : ಧಾರಾನಾಥ ಮಹಾಭಯಜ್ವರಕರಂ ಚೋಳೋರ್ವ್ಯಕಾಳಾನ್ತಕಂ (ಎಕ. VII, ಶಿಕಾ೧. ೧೪೪-೬ ; 1077). [ಸಂ.]

ಧಾರಾನಿಳಯ (ನಾ). = ಧಾರಾಗೃಹ : ಮಂಗಲಸವನಸಮಯಾನಂತರಂ ಜಾನಕಿ ನೀರಾಜನ ವಿರಾಜಮಾನೆ ಧಾರಾನಿಳಯಜಲಯಂತ್ರಪುತ್ರಿಕೆಯಂತೆ ನಯನಪುತ್ರಿಕೆಗೆ ಮಣಿಭೂಷಣವೆನಿಸಿ (ಪಂರಾಮಾ. ೫-೪೦ ವ).

[ಸಂ. ಧಾರಾನಿಲಯ]

ಧಾರಾಪಂಚಕ (ನಾ). [ಅಶ್ವಶಾ] ಕುದುರೆಯ ಆಸ್ಕಂದಿತ, ಧೌರಿತಕ, ರೇಚಿತ, ವಲ್ಗಿತ ಮತ್ತು ಪ್ಲುತಗಳೆಂಬ ಐದು ಬಗೆಯ ನಡಗೆಗಳು; P ಈ ಐದು ಬಗೆಗಳ ಇನ್ನೊಂದು ಪಟ್ಟಿ ಹೀಗಿದೆ : "ವಿಕ್ರಮಾ (ಸಾಮಾನ್ಯ ನಡಗೆ), ಪುಲಕಾ (ನಾಗಾಲೋಟ), ಪೂರ್ಣಕಂಠೀ (ಮುಖ ನೆಟ್ಟಗಿಟ್ಟುಕೊಂಡು ಓಡುವುದು), ತ್ವರಿತಾ (ಸ್ವ ಇಚ್ಛೆಯಂತೆ ವೇಗವಾಗಿ ಓಡುವುದು), ನಿರಾಲಂಬಾ (ಪೆಟ್ಟು ಕೊಟ್ಟ ಮೇಲೆ ಓಟ): (ನಕುಲನ ಅಶ್ವಶಾಸ್ತ್ರ, ಧಾರಾಧ್ಯಾಯಂ, ಪ. ೧, ೨.)" (ಶ್ರೀವತ್ಸ. ೨೨೩): ವಾಜಿಯಂ ಧಾರಾವಂಚಕದೊಳ್ ವಿಚಿತ್ರಲಯದಿಂ ತಾವೇೞ್ದು ಬರ್ದೀ ಮಹಾಧೀರರ್ ಕಾಲ್ನಡೆಯೊಳ್ ನೃಪಾವಸಥದಿಂ ಬರ್ದಂದಮಾವಂದವೋ (ಪಂರಾಮಾ. ೬-೦೫೦). [ಸಂ.]

ಧಾರಾಪಾತ (ನಾ). ೧. ಮಳೆಯ ಧಾರೆಯ ಹೊಡೆತ. ೨. ಖಡ್ಗ ಧಾರೆಯ ಹೊಡೆತ. ೧, ೨ : ಪರಿದುಂ ಸಂಗರಂಗದೊಳ್ ಕವಿವ ಧಾರಾಪಾ [ಪಾ] ತದಿಂ ಪಾಱುಗಚ್ಚರಿಯಲ್ತದ್ಗತ ರಾಜಹಂಸನಿವಹಂ (ಪಂಪಭಾ. ೫-೧೦೧). [ಸಂ.]

ಧಾರಾಪೂರ್ಬಕಂ, ಧಾರಪೂರ್ಬಕ (ಅ). = ಧಾರಾಪೂರ್ವಕಂ.

ಧಾರಾಪೂರ್ಬಕಂ ಮಾಡು, ಧಾರಪೂರ್ಬಕವಾಡು = ವಿಧಿವತ್ತಾಗಿ ನೀರನ್ನು ಎರೆದು ದಾನಮಾಡುಂ : ಬ್ರಹ್ಮಶಕ್ತಿಗೆ ಧಾರಾಪೂರ್ಬಕಂ ಮಾಡಿ (ಎಕ. VI, ಕಡೂರು. ೩೨-೧೪ ; 1139) ; ಕೇತಲದೇವಿಯರು ಚಂಡೇಸ್ವರ ದೇವರ್ಗ್ಗೆ ಧಾರಪೂರ್ಬಕ ವಾಡಿ ಒಜಿಟನ ಕೋಲಲು ಬಿಟ್ಟ ಕೆಯಿ ಮತ್ತ ೧ಳ (ಸೌಇಇ. XX, ೫೧-೩೩ ; 1077). [<ಸಂ. ಧಾರಾಪೂರ್ವಕಂ]

ಧಾರಾಪೂರ್ವಂ (ಅ). = ಧಾರಾಪೂರ್ವಕಂ : ಪಲವು ಜೈನಾಗ್ರಹಾರಂಗಳ ನಾಗಳ್ ಕೊಟ್ಟನಲ್ಲಿ ರತ್ನತ್ರಯಮಂಜುಳ ಜೈನೋಪಾಧ್ಯಾಯರ ಬಳಗಕ್ಕೆ ಹಿರಣ್ಯಕಾದಿ ಧಾರಾಪೂರ್ವಂ (ಪಾಧಪು. ೧೬-೪೮೦). [ಸಂ.]

ಧಾರಾಪೂರ್ವಕ (ಅ). ಧಾರೆಸಹಿತವಾಗಿ ; ವಿಧಿವತ್ತಾಗಿ : ವರ್ಷಂಪ್ರತಿ ಮೂಱು ಗದ್ಯಾಣ ಪೊನ್ನನಾಚಂದ್ರಾರ್ಕ್ಕತಾರಂಬರಂ ಸಲ್ವನ್ನಾಗಿ ಧಾರಾ ಪೂರ್ವ್ವಕವಾಗಿ ಕಾಲಂ ಕರ್ಚ್ಚಿ ಬಿಟ್ಟರ್ (ಸೌಇಇ. XX, ೧೦೪-೨೪ ; 1188) ; ಧಾರಾಪೂರ್ವಕವಾಗಿ ಮದುವೆಯಾದ ಹೆಣ್ಣು (ಭಾರದ. ೧೪೩). [ಸಂ.]

ಧಾರಾಪೂರ್ವಕಂ (ಅ). ಧಾರೆಸಹಿತವಾಗಿ ; ವಿಧಿವತ್ತಾಗಿ : ಆ ಧರಾಮಠಂಗೆ ಧಾರಾಪೂರ್ವಕಮಪ್ಪ ಪದದೊಳ್ ಶುಕ್ರನೆಂದಂ (ನೇಮಿಪು. ೫-೨೨ ವ) ; ಧಾರಾಪೂರ್ವಕಮಾಗಿ ಕೊಟ್ಟರವರಂ ತಾಮಾಕ್ಷಣಂ ಹರ್ಷದಿಂ (ದಿವ್ಯಪ. ೧೩-೪೯).

ಧಾರಾಪೂರ್ವಕಂ ಮಾಡು = ವಿಧಿವತ್ತಾಗಿ ನೀರನ್ನು ಎರೆದು ದಾನ ಮಾಡುಂ : ತೆಱಿಯಳತೆಯ ಪಿರಿಯ ಕೋಲೊಳ್ ಧಾರಾಪೂರ್ವ್ವಕಂ ಮಾಡಿ ಬಿಟ್ಟ ನೆಲಂ (ಸೌಇಇ. XX, ೨೦-೬೪ ; 1019). **ಧಾರಾಪೂರ್ವಕ ಮಾಗು** = ಧಾರಾಪೂರ್ವಕವಾಗಿ ವಂದಂವೆಯಾಗ್ಗು–ಪರಿಗ್ರಹಿಸಂ : ಧಾರಾಪೂರ್ವಕಮಾದ ಪೆಣ್ಗಳಿಂಳವರ್ ಪ್ರತ್ಯೇಕಮೇಕೈಕ ಪತ್ನೀರಾಗ ವ್ರತಿಕರ್ ಮದಕ್ಷಯನಿಮಿತ್ತಂ ಕಾಮುಮಂ ತೀರ್ಚುವರ್ (ರತ್ನಾಶ. ೬೩).

[ಸಂ.]

ಧಾರಾಭಿಷೇಕ (ನಾ). ಧಾರೆಯೆರೆದು ಮಾಡುವ ಅಭಿಷೇಕ : ಮಾಗಧಾದಿ ವ್ಯಂತರಾವುರರ್ ಮಾಡಿದ ಧಾರಾ [ಪಾಣಾಂ. ಪಾದಾ] ಭಿಷೇಕದೊಳಂ ಪೌರರ್ ಮಾಡಿದ ನಳನೀಪತ್ರಪುಟಪ್ರಸಾದಿತ ಸಾರಜಳಪಾದಾಭಿಷೇಚನ ದೊಳಂ ಅಭಿಷೇಕವಿಧಿಯಂ ನಿರ್ವರ್ತಿಸಿ (ಆದಿಪು. ೯-೬೯ ವ) ; ಧಾರಾಭಿಷೇಕ ಮಿದುವೆ ತಪೋರಾಜ್ಯಕ್ಕೆನಿಸೆ ಸುರಿವ ಮಟಿ ಘನರುತಿ ತೂರ್ಯಾರವಮಾಗೆ ಮುನೀಂದ್ರಂ ಬೇರೂಱಿದ ಬೀಟಲಂತೆ ಮರವೊದಲಿರ್ದಂ (ಹಂದ್ರಪು. ೧೧-೦೪). [ಸಂ.]

ಧಾರಾಮದ (ನಾ). ಧಾರೆಯಾಗಿ ಸುರಿವ (ಆನೆಯ) ಮದೋದಕ ; ಎಡೆಬಿಡದೆ ಸುರಿವ ವಂದಜಲ : ಧಾರಾಮದದಿಂದೆ ನೆಲಂ ಬೈರಗಿ ಬೀಟ್ಪಂದದಿಂದೆ ಬಿಡುತವ್ಪ ಮಹಾವಾರಣಘಟೆಯಿಂ ನಿಚ್ಚಂ ಕಾರಂ ಕೈಕೊಂಡು ಮೆಱಿವುದಾತನ ರಾಜ್ಯಂ (ಸೂಕ್ತಿಸು. ೫-೪). [ಸಂ.]

ಧಾರಾರಶ್ಮಿ (ನಾ). (ಖಡ್ಗದ) ಅಲಗಿನ ಹೊಳಪು ; ಖಡ್ಗಧಾರೆಯಿಂದ ಹೊಮ್ಮುವ ಕಾಂತಿ : ಮಕುಟರತ್ನದ ಲಹರಿ ಖಡುಗದ ವಿಕಟ ಧಾರಾರಶ್ಮಿ ದೀಪಪ್ರಕರದಲಿ ಥಳಥಳಿಸಿ ರವಿಯವೊಲೆಸೆದನಾ ದ್ರೋಣ (ಕುಮ್ಮಾದ್ರೋ. ೦-೩೮). [ಸಂ.]

ಧಾರಾಲಯ (ನಾ). ೧. ಕುದುರೆಯ ಐದು ಬಗೆಯ ನಡಗೆಯಂ ಲಯ. ೨. ಧಾರಾಗೃಹ. ೧, ೨ : ವನವಲ್ಲೀಲಾಸ್ಯದಿಂ ಜೇರ್ಕೊಟವಿಯನನುಂ ಬದ್ಧಾಳಿಯಿಂ ವಾರನಾರೀಜನಮುಂ ಧಾರಾಲಯೋದ್ಯದ್ಗತಿಚತುರತೆಯಿಂ ವಾಜಿಯಂ ಸೌರಭಾಲಂ ಬನದಿಂ ಗೋಸರ್ಗಮಂ ಲಾಲಿತ ಕುಶಲವ ಸಾಂಗತ್ಯದಿಂ ರಾಮಸೀಮಂತಿನಿಯಂ ಪೋಲ್ತಲ್ಲಿ ನಿಚ್ಚಂ ಸುಟಿವುದು ಬಹಳಾವೋದಪುರಂ ಸಮಾರಂ (ಪುಷ್ಪಪು. ೩-೪೪).

[ಸಂ. (ಧಾರಾ + ಲಯ ; ಧಾರಾ + ಆಲಯ)]

ಧಾರಾವರುಷ (ನಾ). ಧಾರಾಕಾರವಾಗಿ ಸುರಿಯುವ ಮಳೆ : ತುತ್ತ ನೀಡಿದರಮರಪತಿಗೆ ಘೃತವೆತ್ತಿ ನಾರಾವರುಷದಲಿ ಶಿಖಿ ತುತ್ತ ನಾಲಗೆ ಗೊನೆಗಳಲಿ ಕೈಕೊಂಡು ಹುರಿಗೊಂಡ (ನಿಡಾಗ. ೧-೮-೩೭).

[<ಸಂ. ಧಾರಾವರ್ಷ]

ಧಾರಾವರ್ತ (ನಾ). ಧಾರಾಕಾರವಾದ ಮಳೆ ; ಸುರಿಮಳೆ : ಕಾರಮೇಘ ವೆದ್ದು ಧಾರಾವರ್ತ[ಪಾಣಾಂ. ತಿರ್] ಸುರಿವಾಗ ಧಾರಿಣಿಯೆಲ್ಲವು ಮುಳುಗಿತ್ತು ನೋಡಾ (ಅವಪಂ. ೭೬-೪೪೦) ; ಧಾರಾವರ್ತವೆನಿಸಿ ಕಾರ್ಮುಗಿಲಿಂ ಕಱಿವ ಪೆರ್ಮಟಿಯೊಳಮಂಜದೆ . . . ತಳರ್ದು ನಡೆವಾಗಳ್ (ಜಗವಿ. ೩-೮ ವ).

[ಸಂ.]

ಧಾರಾವರ್ಷ (ನಾ). ೧. = ಧಾರಾವರುಷ. ೨. ಒಬ್ಬಾತನ ಹೆಸರು ; P ಧ್ರುವನೆಂಬ ರಾಜನಿಗೆ ಇದ್ದ ಹೆಸರು : ಧಾರಾವರ್ಷಶ್ರೀವಲ್ಲಭ ಮಹಾರಾಜಾಧಿರಾಜಸ್ಯೈ ಪುತ್ರಃ (ಎಕ. III (R), ನಂಜನ. ೩೭೮-೫೧ ; 808).

[ಸಂ.]

ಧಾರಾವರ್ಷಕಂ (ಅ).=ಧಾರಾಪೂರ್ವಕಂ : ದೇವರ್ಗೆ ತಿರು[ವ]ಮುದಿಙ್ಗೆ ಬಿಟ್ಟ ಭೂಮಿಯುಮಂ ಕಲ್ವಟ್ಟಿ ಕೊಡುವುದಕ್ಕೆ ತಿರುವಾಯಿಮೊಟ್ ಪುದಿಯಿನಾಲ್ ಒಡೆಯಾರ್ ಧಾರಾವರ್ಷಕಂ ಈವನು . . . ಈಶಾನ ಈಶ್ವರ ಮುದಿಯಾರ್ಗ್ಗೆ ಕೊಟ್ಟುದು ಒಡೆಯಾರ್ಕ್ಕ ಕರ್ಮ್ಮ ಧಾರಾವರ್ಷಕಂ . . . ಕೊಟ್ಟ ತಿವಳಿ ೧ (ಮೈಆರಿ. ೧೯೪೭, ೨೮-೮ ; 1032). [ಸಂ.]

ಧಾರಾವಾಹಿ (ಗು). ೧. ಎಡೆಬಿಡದ; ಅವಿಚ್ಛಿನ್ನವಾದ ; ಸಂತತವಾದ. (ನಾ). ೨. ಸಂತತವಾದುದು ; ಎಡೆಬಿಡದುದು : ನವೀನವೂ ಮಹತ್ತರವೂ ಆದ ಸ್ವಯಂದರ್ಶನವು . . . ಕಲ್ಪನೆಯೊಳಗೂ ಜೀವನದೊಳಗೂ ಸಂತತವಾಗಿ ಧಾರಾವಾಹಿಯಾಗಿ ಪ್ರವಹಿಸುತ್ತಲಿರುವುದು (ಪ್ರಬಂಧ. ೧೩೬). ೩. ಅನುಕ್ರಮವಾಗಿ, ಭಾಗಶಃ ಅನೇಕ ಸಂಚಿಕೆಗಳಲ್ಲಿ ಪ್ರಕಟವಾಗುವ ಕಥೆ, ಕಾದಂಬರಿ ಮೊದಲಾದಂದು : ಈಚೀಚೆಗೆ ನಿಯತಕಾಲಪತ್ರಿಕೆಗಳಲ್ಲಿ ಬರುತ್ತಿರುವ ಧಾರಾವಾಹಿಗಳು ಜನಪ್ರಿಯವಾಗಿವೆ(ರೂಢಿ). [ಸಂ. ಧಾರಾವಾಹಿನ್]

ಧಾರಾವಾಹಿಜ್ಞಾನ (ನಾ). ತಿಳಿದುಕೊಂಡ ವಿಷಯವನ್ನು ಕುರಿತು ಮತ್ತೆ ಮತ್ತೆ ಚಿಂತನೆ ಮಾಡುವುದು: ಒಂದು ವಿಷಯದ ಜ್ಞಾನವುಂಟಾದ ಬಳಿಕ ಉಂಟಾಗುವ ಅದೇ ವಿಷಯದ ಧಾರಾಕಾರವಾದ ಜ್ಞಾನವನ್ನು ಧಾರಾವಾಹಿಜ್ಞಾನ (ಅನುವ್ಯವಸಾಯ)ವೆಂದು ಹೇಳುವರು (ಜೈನಧ. XI, ಉಪೋದ್ಘಾತ). [ಧಾರಾವಾಹಿ + ಜ್ಞಾನ]

ಧಾರಾಸಂಪಾತ (ನಾ). ಎಡೆಬಿಡದೆ ಸುರಿವ ಮಳೆ ; ಒಂದೇ ಸಮನೆ ಸುರಿಯುವ ಮಳೆ ; ಆಸಾರ : "ಧಾರಾಸಂಪಾತಃ, ಆಸಾರಃ–ಈ ೨ ಮಟ್" (ಹಲಾಯು. ೧೧-೫೯) ; "ಧಾರಾಸಂಪಾತಮದಾಸಾರಂ" (ವಸ್ತುಕೋ. ೧೧-೬೧). [ಸಂ.]

ಧಾರಾಸಾರ (ನಾ). = ಧಾರಾಸಂಪಾತ : ಚಾರುನಯನಾಪಾಂಗ ಧಾರಾಸಾರ ಪಿಯೂಷದಲಿ ಲೀಲೋದಾರನಿಧಿ ಮೆಱಸುತ್ತಲಿರ್ದನು ಭೋಜನದ ಸವಿಯ (ನಿಭಾಗ. ೧೦-೧೩-೧೨) ; ಧಾರಾಸಾರ ಸುರಿವ ಮುನ್ನಾಕಾಶದಂತೆ ಮೇಘಾಚ್ಛನ್ನವಾಗುತ್ತಿದೆ (ಹೆಚ್ಚೆರ. ೨೩-೨). [ಸಂ.]

ಧಾರಾಹತಿ (ನಾ). ಅಲಗಿನ ಏಟು,–ಹೊಡೆತ : ಧಾರಾಹತಿಯಿಂ ಖಂಡಿಸದಾರಂ ಜಿನನಾಥನುಟಿಯಲುಟಿದರನೇಕಾಕಾರಂ ಲೋಕಾಕಾರದೊಳೋರಗಲಮೆನಿಪ್ಪ ಕಾಲಚಕ್ರಮಮೋಘಂ (ಪಂರಾಮಾ. ೧-೪೭).

[ಸಂ.]

ಧಾರಾಳ (ನಾ). ೧. ಸಮೃದ್ಧಿ; ವಿಪುಲತೆ. ೨. ಅಡೆತಡೆಯಿಲ್ಲದಿರುವುದು; ಹಿಡಿತವಿಲ್ಲದಿರುವುದು ; ಸಂಕೋಚವಿಲ್ಲದಿರುವುದು. ೩. ಉದಾರಬುದ್ಧಿ ; ಔದಾರ್ಯ ; ದಾನಶೀಲತೆ : ಧಾರಾಳಿದ್ದವನ ಹತ್ತಿರ ಹೇರಾಳ ಕೇಳಬಹುದು (ಗಾದೆ).

ಧಾರಾಳವಾಗಿ=೧. ವಿಪುಲವಾಗಿ; ಹೇರಳವಾಗಿ ; ಯಥೇಚ್ಛವಾಗಿ, ಸಮೃದ್ಧವಾಗಿ : ಎಲ್ಲವನ್ನು ಮನೆಯಾಕೆ ಧಾರಾಳವಾಗಿ ಬಡಿಸಿದಳು (ರಂಗಕ. ೧೨೬) ; ತರಕಾರಿಗಿಡಗಳಿಗೆ ಸಮಯಕ್ಕೆ ಸರಿಯಾಗಿ ಧಾರಾಳವಾಗಿ ನೀರು ಹಾಕಬೇಕು (ಅಡುಸೌ. ೧೨೭). ೨. ನಿಸ್ಸಂಕೋಚವಾಗಿ ; ಅಡೆತಡೆಯಿಲ್ಲದೆ ; ಮುಕ್ತಕಂಠದಿಂದ : ರಸಿಕತೆ, ಪಾಂಡಿತ್ಯ ಮತ್ತು ಕಲಾಭಿಮಾನ ಇವುಗಳು ರಾಯನ ವೈಯುಕ್ತಿಕ ಗುಣವಿಶೇಷಗಳೆಂದು ಧಾರಾಳವಾಗಿ ಹೇಳಬಹುದು (ಕೃದೇವ. ೧೧). ೩. ಉದಾರಬುದ್ಧಿಯಿಂದ: ಗೋಮತೀತೀರದಲ್ಲಿ ಧಾರಾಳವಾಗಿಯೂ ನಿರಾತಂಕವಾಗಿಯೂ ಹತ್ತು ಅಶ್ವಮೇಧಯಾಗಗಳನ್ನು ನಡಸಿದನು (ವಚಭಾ. ೪೦೪) ; ಒಬ್ಬ ಪರೀಕ್ಷಕರು ಅಂಕಿಗಳನ್ನು ಕೊಡುವಾಗ ಹಿಡಿತದಿಂದಿದ್ದರೆ ಮತ್ತೊಬ್ಬರು ಧಾರಾಳವಾಗಿರಬಹುದು (ಶಿಕ್ಷದ. ೩೪೪).

[ಸಂ. ಧಾರಾಲ./ತಮಿ. ತಾರಾಳ ; ಮಲ. ತೆಲು. ಧಾರಾಳ]

ಧಾರಾಳತನ (ನಾ). = ಧಾರಾಳತ್ವ : ಧಾರಾಳತನದಲ್ಲಿ ತಂದೆಯನ್ನೂ ಮೀರಿಸುವ ಮಗ ಈತ (ರೂಢಿ). [ಧಾರಾಳ + – ತನ]

ಧಾರಾಳತೆ (ನಾ). = ಧಾರಾಳತ್ವ : ಅವರ ಧಾರಾಳತೆ ಅನೇಕರ ಜೀವನಕ್ಕೆ ಮಾರ್ಗವಾಯಿತು (ರೂಢಿ). [ಧಾರಾಳ + – ತೆ$_3$]

ಧಾರಾಳತ್ವ (ನಾ). ಬಿಡುಗೈಯ ಗುಣ ; ದಾನಶೀಲತೆ ; ಔದಾರ್ಯ : ಅಪ್ಪಾಜಿಯ ಅನ್ನದಾನ ಧಾರಾಳತ್ವವನ್ನು ಹೊಗಳಿ ಮಾತನಾಡುತ್ತಿದ್ದರು (ಚಂಗಾಳ್ವ. ೧೭೨). [ಸಂ. ಧಾರಾಲತ್ವ]

ಧಾರಾಳಿ (ನಾ). ಉದಾರಿ ; ದಾನಶೀಲ : ಒಬ್ಬರು ದುಡ್ಡು ಹೆಚ್ಚು ಖರ್ಚು ಮಾಡಿದರು ಎಂದರೆ ನಾವು ಅವರನ್ನು 'ಧಾರಾಳಿ' ಎನ್ನುತ್ತೇವೆ (ಆಳನಿ. ೧೬೨) ; ಅವನ ಹೆಂಡತಿಯು ಧಾರಾಳಿಯಾಗಿದ್ದಳು (ನೀತಿಚಿಂ. VI, ೧೩); ಮನೆಯ ತುಂಬ ಧಾರಾಳಿಗಳೇ (ದಾನಚಿಂ. ೧೦೩).

[ಧಾರಾಳ + – ಇ$_3$]

–ಧಾರಿ (ಪ್ರ). ಧರಿಸಿರುವವನು, ಹೊಂದಿರುವವನು ಎಂಬರ್ಥದಲ್ಲಿ ಹತ್ತುವ ತದ್ಧಿತ ಪ್ರತ್ಯಯ. 'ಖದ್ದರಧಾರಿ', 'ತಿರುನಾಮಧಾರಿ' ಪರಾ. [ಸಂ. ಧಾರಿನ್]

ಧಾರಿಡು (ಕ್ರಿ). ಧಾರೆಯಾಗಿ ಸುರಿ ; ಧಾರಾಕಾರವಾಗಿ ಹರಿ : ಸಿಡಿವ ತಲೆಗಳ ಬಳಿವಿಡಿದು ಧಾರಿಡುವ ರಕುತದಲೆರಡು ಬಲದಲಿ ಹಿಡಿದ ದೀವಿಗೆ ನಂದಿದವು (ಕುವ್ಯಾದ್ರೋ. ೧೬-೧೭) ; ಶರ ಶರಾಸನ ಖಡ್ಗ ಕವಚವ ಧರಿಸಿ ಧಾರಿಡುವಶ್ರುಕಣದುಬ್ಬರದ ಚಿಂತಾಭಾರದಲಿ ಹೊಱವಂಟನಾಶ್ರಮವ (ತೊರರಾ. ೩-೯-೧೪). [ಧಾರ + ಇಡು$_1$]

ಧಾರಿಣಿ (ನಾ). ೧. ನೆಲ ; ಭೂಮಿ ; ಪೃಥ್ವಿ "ತಿರೆ ಪೊಡವಿ ರನ್ನವಸಿಱಳ್ ಧರೆಯೆಳೆಯೆಂದೆನ್ನಲಿರದೆ ಧಾರಿಣಿಯಕ್ಕುಂ" (ಕವಿಕಂ. ೪೭) ; ಶ್ರೀರಮಣಿ ಗೌರಿ ಸಚಿ ಧಾರಿಣಿಯ ಪುತ್ರಿ . . . ಜಯಧಾರೆ ಜಸಧಾರೆ ನಯಧಾರೆ ಭಯಹಾರೆ ಪತಿಭಕ್ತೆ ಧೃತಶಕ್ತೆಯೆನೆ (ಎಕ. III (B), ಹೆಗ್ಗಡ. ೬೦-೨೮ ; 1057) ; ಧಾರಿಣಿಯಂ ಮಗುಟ್ಟಿ ಕುಲಪರ್ವತಮಂ ನೆಲೆಯಿಂ ತೆರಳ್ಚಿ . . . ಆರಿದಿರಾಂತೊಡಂ ಜವನ ಬಾರಿಗೆ ಸೋವತಮಾಗಿರೆ ಮಾಟ್ಪಿಂ (ಪಂರಾಮಾ. ೯-೧೩೩) ; ಧಾರಿ[ಪಾಕಾಂ. ರು]ಣಿಯ ಜನರೆಲ್ಲರೂ ಹೇಡಿ ಮಾಸ್ತಿ ಎಂದ ಬಳಿಕ ವೀರತ್ವವೆಲ್ಲಿಯದೋ (ಮಾಧೂಳ. ೪೮೦-೧೦೨) ; ಸ್ಫಟಿಕೋಪಲಂಗಳಿಂ ಧಾರಿಣಿ ಕೂಡೆ ಹಪ್ಪಳಿಗೆಯೊತ್ತಿದುದೋ . . . ದಿಟಕೆ ತಾನೆನಿಸಿತ್ತಮೃತಾಂಶುರಶ್ಮಿಯಿಂ (ಚಂದ್ರಪು. ೮-೩೯) ; ಆರು ಹಿತವರು ನಿನಗೆ ಮೂಱು ಮಂದಿಗಳೊಳಗೆ ನಾರಿಯೋ ಧಾರಿಣಿಯೊ ಬಲು ಧನದ ಸಿರಿಯೋ (ಪುರಂದ. ೧-೧೩೨ ಪಲ್ಲವಿ). ೨. ರಾಜ್ಯ : ಗುಣಹಾನಿಗೆ ಬೆರ್ಚದೆ ಧಾರಿಣಿಯಂ ಪ್ರಣಯದಿನಿಳೇಶನಿತ್ತೊಡಮೇಂ ಲಕ್ಷ್ಮಣನೀಯಲೀಯನೆಂಬುದ ನೆಣಿಸಳೆ (ಪಂರಾಮಾ. ೬-೧೦೭). ೩. ಸುಷುಮ್ನಾನಾಡಿಯ ನಾಲ್ಕು ಪಾರ್ಶ್ವಗಳಲ್ಲೂ ಇರುವ ನಾಲ್ಕು ನಾಡಿಗಳಲ್ಲಿ ಒಂದು : ಸುಷುಮ್ನಾನಾಡಿಗೆ ನಾಲ್ಕು ದಿಕ್ಕುಗಳಲ್ಲೂ ಇಡಾ, ಪಿಂಗಳಾ, ವಜ್ರಿಕಾ, ಧಾರಿಣೀ ಎಂಬ ನಾಲ್ಕು ನಾಡಿಗಳಿರುವವು (ಹಸಾರ. ೮-೩ ತಾತ್ಪರ್ಯ).

[ಸಂ. ಧಾರಿಣೀ]

ಧಾರಿಣಿಧವ (ನಾ). ದೊರೆ ; ಅರಸ : ನೂರಂ ಕಲಿವನೆ ಪಂಡಿತ ನೂರಂ ಉಳಿಸಿದನೆ ಧನಿಕ ನೂರೂರಾಳ್ವನೆ ಧಾರಿಣಿಧವನೌಷಧಿಕನು ನೂರಕೆ ನಂಜುಂಡಲಿಂಗ ನತಜನಸಂಗಾ (ಪಂಚಶ. ೨೯-೪೦). [ಸಂ. ಧಾರಿಣೀಧವ]

ಧಾರಿಣೀಚ್ಛಾಯ (ನಾ). [ಅಶ್ವಶಾ] ಬಿಳಿಯಂ ಬಣ್ಣದ್ದಾಗಿದ್ದು ಅಲ್ಲಲ್ಲಿ ಕಪ್ಪು ಛಾಯೆಯುಳ್ಳ ಕುದುರೆ : ನಾನಾವರ್ಣದೊಳವಿಚ್ಛಿನ್ನಾನನದ ಸ್ನಿಗ್ಧ ಬಹುಳ ರುಚಿ ಭಾವಿಪೊಡಿಂ ತಾನಧಿಕಮಾಗಿ ದೇಹಸ್ಥಾನಕದೊಳ್ ನೆಗಟ್ ಧಾರಿಣೀಚ್ಛಾಯ ಹಯಂ (ಅಶ್ವಶಾ. ೩-೪೭). 'ತಳಚ್ಛವಿ' ಪರಾ.

[ಸಂ. (ಧಾರಿಣೀ + ಛಾಯಾ + –)]

ಧಾರಿಣೇಚ್ಛಾಯಿ (ನಾ). = ಧಾರಿಣೇಚ್ಛಾಯ : ತಿಳಿಗೊಳನ ಬಿಳಿಯ ತಾವರೆಯಲರ್ಗಳ ಗೊಂದಣೆ(ಳಿ)ಪ ಕಾರ್ಮುಗಿಲ್ಗಳ ರುಚಿಯಂ ತಳೆದು ಥಳಥಳಿಸಿ ತೊಳತೊಳತೊಳಗುತ್ತಿರ್ಪಂದು ಧಾರಿಣೇಚ್ಛಾಯಿ ಹಯಂ (ಅಶ್ವಶಾ. ೩-೪೮). [ಸಂ. ಧಾರಿಣೇಚ್ಛಾಯಿನ್]

ಧಾರಿಣೇಧವತೆ (ನಾ). ದೊರೆತನ ; ರಾಜನ ಪದವಿ : ಈ ದಿವ್ಯಕಾವ್ಯಮಂ ಭಕ್ತಿಯೊಳು ನೂರೆಂಟು ಬಾರಿ ವಾಚಿಸಿ ಕೇಳಿದರಿಗಹುದು ಧಾರಿಣೇಧವತೆ ಮನದಿಷ್ಟಸಾಧನಗಳುಂ ಕೈಸಾರ್ಗುಮತಿವೇಗದೆ (ವೆಂಕಾಶಾ. ೩ ಫಲಸ್ತುತಿ. ೧೬).
[ಸಂ. ಧಾರಿಣೇಧವತಾ]

ಧಾರಿಣೇಪತಿ (ನಾ). ಭೂಮಿಯ ಒಡೆಯ ; ರಾಜ ; ದೊರೆ : ಪುತ್ರದೋಹಳಕಾರಣಮಂ ಧಾರಿಣೇಪತಿಗೆ ಸವಿಸ್ತರಂ ಬಿನ್ನವಿಸೆ (ಚಂದ್ರಪು. ೩-೬೨ ವ). [ಸಂ.]

ಧಾರಿಣೇಶ (ನಾ). = ಧಾರಿಣೇಪತಿ : ಆರುಮಟಿಯದವೊಲೀ ಕಾನನದೊಳರ್ದನಾಂ ಧಾರಿಣೇಶರಭೂಷಣಂಗಳೇತಕೆ ನಮಗೆ (ಚೈತ್ರಿಘಾ. ೨೦-೧೨).
[ಸಂ. (ಧಾರಿಣೀ + ಈಶ)]

ಧಾರಿಣೇಶಯನ (ನಾ). ನೆಲದ ಮೇಲೆ ಮಲಗುವುದು : ಒಳ್ಪೊತ್ತು ನಿಂದುಣ್ಬುದಾರಯಮಸ್ನಾನಮಚೀಳ ಸಂಯಮಮದಂತೋನ್ಮಾರ್ಜನಂ ಧಾರಿಣೇಶಯನಂ ರೋಜೆನಿಸಿರ್ದ ಮೂಲಗುಣಮಿಪ್ಪರ್ತೆಂಟುಮಂ ತಾಳ್ದಿದಂ (ಸುಕುಮಾ. ೩-೪೬). [ಸಂ.]

ಧಾರಿಸು (ಕ್ರಿ). ಅಲಗಿನಿಂದ ಸೀಳು.– ಕತ್ತರಿಸು : ವೀರಶರಣರ ನೋಡು ಕೈಯೊಳು ಚೂರಿ ಹಿಡಿದಿಹರಾಡಿಕೊಳುವರ ಧಾರಿಸುವರ್ (ಬಿಜ್ಜಪು. ೬೦-೪೮). [ಧಾರೆ + – ಇಸು]

ಧಾರುಣಿ (ನಾ). ನೆಲ ; ಭೂಮಿ ; ಪೃಥ್ವಿ : "ಧರಣಿ ಧಾರು[ಪಾಠಾಂ. ರಿ]ಣಿ ಧಾತ್ರಿ ಭೂರ್ಭೂಮಿ ಮಹಿ ವಸುಂಧರೆ . . . ಸರ್ವಂಸಹಾಖ್ಯೆಯೆನೆ ನೆಲಕೆ ನಾಮಂ" (ಮಂಗರಾ. ೨೯-೦) ; ಸಿಂಹಪೀಠದೊಳೆಸೆದಿರ್ದು ಧಾರುಣಿಗೆ ಚೋದ್ಯಮನಾಗಿಪ ನಂಬಿಯಣ್ಣನೊಪ್ಪಿದಂ (ಸಂಬಿರ. ೪-೩) ; ಧಾರುಣಿಯೊಳೊಜಿಗರ್ದ ಶರಣಶರೀರವಂ ನೋಡುತ್ತ . . . ಬರುತಿರಲು (ಬಸಪು. ೨೨-೧೨) ; ಧಾರುಣಿಯ ಲಂಪಟರು ಕದನವ ಹಾರಿ ಬಂದರು ಗಡ (ಕುವ್ಯಾಭೀ. ೧-೪). [<ಸಂ. ಧಾರಿಣೀ]

ಧಾರುಣಿಯಾಣ್ಮ (ನಾ). =ಧಾರಿಣೀಧವ : ಧಾರುಣಿಯಾಣ್ಮನಿದಕೆ ಮಾರ್ನುಡಿಯಾವುದೆಂದು ಚಿಂತಿಸುತ ಮಗುಳಿಂತೆಂದನು (ಸೌಂದಪು. ೪-೭೭).
[ಧಾರುಣಿ + ಆಣ್ಮ (<ಆಳ್ಮ)]

ಧಾರುಣಿರುಹ 'ಧಾರುಣೀರುಹ' ನೋ.

ಧಾರುಣೀಜಾತ (ನಾ). = ಧಾರುಣೀರುಹ : ದೂರದಲಿ ನೆಳಲೊಪ್ಪಿ ತೋಱುವ ಧಾರುಣೀಜಾತಾವಳಿಗಳೊಳು . . . ವಿಹರಿಸುವರು (ಬಸಪು. ೧೯-೪೭). [<ಸಂ. ಧಾರಿಣೀಜಾತ]

ಧಾರುಣೀತಲ, ಧಾರುಣೀತಳ (ನಾ). ಭೂತಳ ; ಭೂಲೋಕ : ಧಾರುಣೀತಲ[ಪಾಠಾಂ. ಳ]ಕವತರಿಸಿ ಸುಕುಮಾರನಂ ತಕ್ಕೈಸುತಂ (ಬಸಪು. ೩೦-೩). **ಧಾರುಣೀತಳ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [<ಸಂ. ಧಾರಿಣೀತಲ]

ಧಾರುಣೀತಳ 'ಧಾರುಣೀತಲ' ನೋ.

ಧಾರುಣೀಧರ (ನಾ). ಬೆಟ್ಟ ; ಪರ್ವತ : ಕಕುದ್ಧಾರುಣೀಧರದ ಮೇಲಣ ಗವಿಯ ಶಾಂತನಂಜೇಶ ಜಯ ಸುಪ್ರಕಾಶ (ವೀರೈಪು. ೩-೧-೨).
[<ಸಂ. ಧಾರಿಣೀಧರ]

ಧಾರುಣೀನಾಥ (ನಾ). = ಧಾರಿಣೀಧವ : ಶೈವದೀಕ್ಷಾಲಿಂಗಿತನನಂತ್ಯಜನೆನುತ್ತವೆ ಹೇಂಗೆ ನುಡಿಯಲುಬಹುದು ಹೇಳಾ ಧಾರುಣೀನಾಥ (ಬಸಪು. ೩೭-೬೭). [<ಸಂ. ಧಾರಿಣೀನಾಥ]

ಧಾರುಣೀಪತಿ (ನಾ). = ಧಾರಿಣೀಧವ : ಧಾರುಣೀಪತಿಯಿದಿರೊಳೊಪ್ಪಿ ದೂರದಲಿ ಕಂಡಸಮ ಬಸವಕುಮಾರನಂ (ಬಸಪು. ೩-೧೩) ; ನಿನ್ನ ವೈಭವಕೆ ಆರು ಸರಿಯೈ ಕರ್ಣ ನಡೆನಡೆ ಧಾರುಣೀಪತಿಯಾಗು (ಕುವ್ಯಾಕಾ. ೦೦-೦೦).
[<ಸಂ. ಧಾರಿಣೀಪತಿ]

ಧಾರುಣೀರುಹ, ಧಾರುಣಿರುಹ (ನಾ). ಗಿಡ ; ಮರ ; ವೃಕ್ಷ : ಧಾರುಣೀರುಹತತಿಯೊಳಾ ಕಲ್ಪವೃಕ್ಷವಾ ಮಾರುತಾಶನಿಗಳೊಳು ಶೇಷಂ . . . ಎಂತಧಿಕವಂತಾರಯ್ಯಲೆಲ್ಲ ಶೈವದೊಳು ಮಿಗಿಲೆನಿಸುವೀ ವೀರಶೈವವದು (ವೀರೈಪು. ೬-೩-೨). **ಧಾರುಣಿರುಹ** : ಕಣಿಯೊ ಪರುಷದ ನಿಧಿಯೊ ಚಿಂತಾಮಣಿಯ ನಂದನಮೋ ದಿವಿಜಧಾರುಣಿರುಹಂಗಳ ನೆಲೆಯೊ (ಬಸಪು. ೧-೩೯). [<ಸಂ. ಧಾರಿಣೀರುಹ]

ಧಾರುಣೀವಲಯ, ಧಾರುಣೀವಳಯ (ನಾ). ಭೂಮಂಡಲ ; ಪೃಥ್ವಿ : ಸಕಳೇಶ್ವರನೆ ಬಲ್ಲನು ಧಾರುಣೀವಲ[ಪಾಠಾಂ. ಳ]ಯದೊಳೆಸೆವ ನಿಮ್ಮನು ವಿನಿರವೆನುತ (ಬಸಪು. ೬೧-೭೨) **ಧಾರುಣೀವಳಯ** : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [<ಸಂ. ಧಾರಿಣೀವಲಯ]

ಧಾರುಣೀವಳಯ 'ಧಾರುಣೀವಲಯ' ನೋ.

ಧಾರುಣೀಶ (ನಾ). ದೊರೆ ; ರಾಜ : ನಿಡುಮಾರನೆಂಬಾ ಧಾರುಣೀಶನು ವೀರಶೈವಾಚಾರ್ಯವಾರ್ಯನುದಾರಿ ತಾನಾಳ್ದ (ಬಸಪು. ೩೦-೪೩).
[< ಸಂ. ಧಾರಿಣೀಶ]

ಧಾರುಣೀಷಣ (ನಾ). ನೆಲವನ್ನು ಪಡೆಯುವ ಆಸೆ ; ರಾಜ್ಯದಾಸೆ : ಸತ್ಯವೆನಿಪ್ಪ ಸಬಳದಲಿ ಧಾರುಣೀಷಣ ದರ್ಪವೆಂಬಾ ತೋರ ಕರಡಿಯನಿಱಿದು ಸಮಯಾಚಾರವೆಂಬಾ ತೋಮರದಿನಳ ಖಡ್ಗಿಯಂ ಹಱಿಸಿ (ಬಸಪು. ೩೪-೩೪). [<ಸಂ. ಧಾರಿಣೀಷಣ]

ಧಾರುಣೀಸುತೆ (ನಾ). ಭೂಮಿಯ ಮಗಳು ; ಸೀತೆ : ಧಾರುಣೀಸುತೆಯವೊಲು ದೃಢಮನಸ್ಕರದಾರು ? (ಮಂಕುಶಿ. ೨೭೭).
[< ಸಂ. ಧಾರಿಣೀಸುತಾ]

ಧಾರುಣೀಸುರ (ನಾ). ಭೂಸುರ ; ಬ್ರಾಹ್ಮಣ : ಧಾರುಣೀಸುರ ಕರ್ಮಜನ್ಮವು ಕ್ರೂರಕರ್ಮವಲಾ (ಬಸಪು. ೩-೪೫). [<ಸಂ. ಧಾರಿಣೀಸುರ]

ಧಾರೆ (ನಾ). ೧. ಪ್ರವಾಹ : ಈ ಜಲಪಾತವು ನಾಲ್ಕು ಧಾರೆಗಳಾಗಿ ಧುಮುಕುತ್ತದೆ (ಶಪಪು. ೬-೬೦). ೨. ಮೇಲಿನಿಂದ ಹರಿದು ಬರುವ ನೀರು, ಎಣ್ಣೆ ಮೊದಲಾದ ದ್ರವಪದಾರ್ಥಗಳ ಹರಿಯುವಿಕೆ : "ಓಘಃ, ಪ್ರವಾಹಃ, ವೇಣೀ, ಧಾರಾ, ಸ್ರೋತಃ, ರಯಃ – ಈ ೬ ತೊಱೆಯ ಹರಿಹಂ" (ಹಲಾಯು. ೦೦೦-೪೭) ; "ಧಾರೆ ಪ್ರವಾಹಮೋಘಂ ವೇಣಿ ರಯಮೆನಲು ನೀರ ಹರಿಯಕ್ಕುಂ" (ಮಂಗರಾ. ೧೨೬-೧೨) ; ಕ್ಷೀರಂ ದಧಿ [ಪೃ]ತ ಸಿತಮಧುಧಾರಾಳಿಯ ಲಕ್ಕಿಗಡುಗೆಗೊಟ್ಟ [ಸೊಂ]ಟಗೆ ಕರ್ಪೂರದಿ ಪೂರಣಮಾಡಿ ಮನೋರಾಗದೆ ಚಿತ್ರವಿಧದ ಪೂಜಾವಿಧಿಯಂ (ಸೌಇಇ. XX, ೪೯-೫೦ ; 1076 ?) ; ಕೋಪಿ ಮಜ್ಜನಕ್ಕೆಱೆದರೆ ರಕ್ತದ ಧಾರೆ (ಬಸವ. ೬೫೦) ; ಧಾರೆಗಳವನಿಯನೊಳಪೊಕ್ಕೋರಂತುಚ್ಚಳಿಸಿ ವಿಾಱುತಿರೆ . . . ತೆಱಪುಗುಡದೆ ಕಱೆದುವು ಮಳೆಗಳ್ (ಗಿರಿಕ. ೯-೪೯). ೩. ಎಡೆಬಿಡದೆ ಸುರಿವ ಮಳೆ ; ಧಾರಾಕಾರವಾಗಿ ಬೀಳುವ ಮಳೆ. ೪. (ಕತ್ತಿ ಮೊದಲಾದುವುಗಳ) ಹರಿತವಾದ ಅಂಚು.–ಅಲಗು.–ಬಾಯಿ : ಭೂಮಂಡಳಪತಿಯ ಖಡ್ಗಧಾರಾಜಳದೊಳ್ ಸಾಮ್ರಾಜ್ಯಲಕ್ಷ್ಮಿ ಸಲೆ ನೆಲಸಿರ್ಪಳ್ (ಕಾದಂಪೂ. ೧೧) ; ಶಿವಾಚಾರವೆಂಬುದೊಂದು ಬಾಳ ಬಾಯ ಧಾರೆ (ಬಸವ. ೭೮೯) ; ಪೊಸಮಸೆಯ ಧಾರೆಯೊಳ್ತೆಳ್ತೆಸೆದಿರೆ ಜಸದಗೆಗಳಂತೆ ಮುತ್ತುಗಳಿದಿರಾದ ಸುಹೃತ್ಕಿರಿಶಿರಮಂ ಪೋಳ್ದಸಿ ವಿಾಸುವುದು ಸೋಯಿದೇವಭೂವಲ್ಲಭನ (ಎಳ. V, ಚನ್ನರಾ. ೨೦೩-೧೮ ; 1223) ; ಚಪಳ ವಿಶಾಳಲೋಚನೆ ಜಯಾಂಗನೆ ಧಾರೆಯೊಳರ್ದು ನೋಡಿ ಮನ್ನಿಪಳೆನೆ

(ಅನಂಪು. ೨-೭) ; ನೀ ಸಹಿತ ನಿನ್ನೆಣೆಗಳಹ ಸೈಂಧವನನೀ ರಾಧೇಯ ಶಕುನಿಗಳ ರಣದೊಳಗೆ ಭೀಮಾರ್ಜುನರ ಮಾರ್ಗಣದ ಧಾರೆಗೆ ವೀರನಾರಾಯಣನೆ ಸೇರಿಸಿ ಕೊಡುವನು (ಕುಮಾಸ. ೧೩-೭೮) ; ಕೂರಲಗ ಧಾರೆಯ ನಿರೀಕ್ಷಿಸುತ (ಕೊರರಾ. ೩-೪-೦೫) ; ಹಂಗೊಲೆ ವೀರರಿಗೆ ಮೈಸಿರಿಯೆ ತಂಗಿಗೆ ಪಾಱಿ ಬರುಹವೆ ಕೊರಳ ಖಡುಗದ ಧಾರೆ ಲೇಸೆಂದ (ನಿಭಾಗ. ೦೦-೨-೧೧) ; ಬಾನ ನೀಲಿಯ ಕುಡಿದು ನಕ್ಷತ್ರಗಳ ಮುಡಿದು ಮೋಡ – ಕುಡಿಮಿಂಚುಗಳ ಧಾರೆ ಹಿಡಿದು (ನಲಮು. ೫೦-೨). ೫. (ಮದುವೆಯಲ್ಲಿ) ಕೈನೀರೆರೆಯುವಿಕೆ ; ಕನ್ಯಾದಾನ : ನಾಳೆ ಶುಕ್ರವಾರ ಧಾರೆ (ಸಾಲ್ಕಮ. ೧೮) ; ಧಾರೆಸಮಯಕ್ಕೆ ಯಾಕೆ ಬರಲಿಲ್ಲ ? (ಸೋತುಗಾ. ೪೦). ೬. ದಾನ ಮಾಡುವಾಗ ಎರೆಯುವ ನೀರು ಮೊದಲಾದುವು : ಜನಮೇಜಯನು ಮುನ್ನಿತ್ತ ಅಗ್ರಹಾರವಿದಂ ಪುನರಪಿ ಸಮಗ್ರದಲ್ಲುದ್ಧರಿಸಿ ಧಾರೆಯನಗ್ರದಿಂದಿಂದೆಱೆದು . . . ಸಲಹಿ (ಬಸಪು. ೫೬-೪೫) ; ತೋರಣಮಿಂದಿರವಿಲ್ಲು ವೃಷ್ಟಿಯೇ ಸಂಗತಧಾರೆಯಾಲಿವರಲೊಪ್ಪುವ ಮುತ್ತಿನ ಸೇಸೆಯಾಗೆ ಕಾರುಂ ಗಗನಸ್ಥಳೀರಮೆಯುವೊಂದಿದರೊಂದು ವಿವಾಹಲೀಲೆಯಂ (ರಾಜಶೇ. ೯-೧೧೮). ೭. ಸಾತತ್ಯ ; ಎಡೆಬಿಡದಿರುವಿಕೆ ; ನಿರಂತರತೆ : ಒಂದರ ಹಿಂದೆ ಒಂದು ಬರುವ ಅವಸ್ಥೆಗಳಲ್ಲಿ ಏಕ್ಯತೆ ಮತ್ತು ಧಾರೆ (ನಿರಂತರತೆ) ಇರಬಲ್ಲದು (ಜೀವಾತ್ಮ. ೨೫೬). ೮. [ಅಶ್ವಶಾ] ಕುದುರೆಯ ಆಸ್ಕಂದಿತ, ಧೌರಿತಕ, ರೇಚಿತ, ವಲ್ಗಿತ ಮತ್ತು ಪ್ಲುತಗಳೆಂಬ ಐದು ಬಗೆಯ ನಡಗೆಗಳು : ಐದು ಧಾರೆಗಳಿಂದ ತಿದ್ದುವಡೆವುದು. ಐದು ಧಾರೆಗಳು ಆವುವೆಂದರೆ ಆಸ್ಕಂದಿತ, ಧೌರಿತಕ, ರೇಚಿತ, ವಲ್ಗಿತ, ಪ್ಲುತ (ಅಶ್ವಟೀ. ೨೯-೭). 'ಧಾರಾಪಂಚಕ', 'ಪಂಚಧಾರೆ$_1$' ಪರಾ.

ಧಾರೆಯನೆಱೆ = ಧಾರೆಯೆಱೆ ೨ : ತನುಗುಳ್ಳ ಸರ್ವರಾಜ್ಯವನು ವಿಶ್ವಾಮಿತ್ರಮುನಿಗೆ ಧಾರೆಯನೆಱೆದ[ಪಾಕಾಂ. ದಾನವನಿತ್ತ]ನವನೀಶನು (ಹಡಪಾ. ೯-೩೩). ಧಾರೆಯಾಗಿಸು = ಧಾರೆಯೆಱೆ ೨ : ಹೃದಯವನ್ನು ತನ್ನನ್ನಲ್ಲದ ಬೇರೆಯವರಿಗೆ ಧಾರೆಯಾಗಿಸಿದ್ದೇನೆಂದು ಆನಂದ ಬಗೆದ (ಕಮನಿ. ೨೩೩). ಧಾರೆಯಾಗು = ಕನ್ಯಾದಾನವಿಧಿ ಪೂರೈಸು,–ಪೂರೈಕೆಯಾಗು : ಧಾರೆಯಾದ ನಂತರ ಕೈತೊಳೆಸಿ ಗಂಡನ ಕೈಯಿಂದ ಹೆಣ್ಣಿನ ಕೊರಳಿಗೆ ತಾಲಿ ಕಟ್ಟಿಸುತ್ತಾರೆ ಹೋಯಿಸರು (ಸನ್ನೂರು. ೯೦).

[ಸಂ. ಧಾರಾ]

ಧಾರೆಕಂಕಣ (ನಾ). ಧಾರೆಯೆರೆದು ಕೊಡುವಾಗ ಹೆಣ್ಣಿಗೆ ತೊಡಿಸುವ ಕಡಗ, – ಬಳೆ : ಧಾರೆಕಂಕಣ ಚೂಡ್ಕ ತೋಳ್ತಾಯಿತ . . . ವೀರ ಮುದ್ರಿಕೆಯ ಗಂಭೀರಳಿಟ್ಟು (ಕರ್ಣಾಳ. ೨೩೭). [ಧಾರೆ + ಕಂಕಣ]

ಧಾರೆಗಟ್ಟು (ಕ್ರಿ). ಧಾರಾಕಾರವಾಗು ; ಎಡೆಬಿಡದೆ ಸುರಿ : ಸೃಷ್ಟಿಕರ್ತನ ಭಾವನಾಪ್ರವಾಹವೇ ಕಾವ್ಯರೂಪದಿಂದ ಧಾರೆಗಟ್ಟಿ ಹರಿಯುತ್ತಿರುವುದೊ ಎಂದೆನಿಸುವುದು (ಮುಂಗಾಪು. ೭೦) ; ಶರೀರದಲ್ಲಿಯ ಬೆವರು ಧಾರೆಗಟ್ಟುವ ತನಕ ದುಡಿಯುವೆನು (ಬ್ರಹ್ಮಶಿ. ೧೯೪) ; ಕಣ್ಣೀರು ಧಾರೆಗಟ್ಟಿ ಹರಿಯಹತ್ತಿದವು (ಪೃನಿ. ೦೫) ; ಕಣ್ಣೀರು ಧಾರೆಗಟ್ಟಿಹವು ಕೊಳ್ಳ ತುಂಬಿ (ಸಿದ್ಧಪು. ೫-೫೯). [ಧಾರೆ + ಕಟ್ಟು$_1$]

ಧಾರೆಗಱೆ (ಕ್ರಿ). ಧಾರಾಕಾರವಾಗಿ ಸುರಿಸು : ಮಿಗೆ ವಸುಧಾರೆಗಱೆದದಱಿಂದ ವಸುಮತಿಯು ಭೂಲಲನೆಗಾ ರತ್ನಗರ್ಭೆಯು ಮೇಲೆನಿಸಿದಾ ಪೆಸರೆರಡು ಸಮ್ಮೇಳವಾಯ್ತು (ಶಾಳ್ಳಧಾ. ೩೨-೪). [ಧಾರೆ + ಕಱೆ$_1$]

ಧಾರೆಗಾಳೆ (ನಾ). ಒಂದು ಬಗೆಯ ಕಹಳೆ : ಪರನೃಪರಂ ಪಳಂಚಲೆದು ಬಂದಡೆ ವಿಕ್ರಮಚಕ್ರಿ ತಂನನಾದರಿಸಿ ವಿ[ಳಾ]ಸದಿಂ ಧವಳಶಂಖಮನಗ್ಗದ ಧಾ[ರೆ]ಗಾಳೆಯಂ ಬರುದಿನ ಸಾಮಮಂ . . . ಅಚ್ಚರಿಯೆನೆ ವೆತ್ತ ಮೆಂಪಿ ನಳವಾರಳವೀಶ್ವರದಣ್ಣನಾಥನ (ಸೌಇಇ. XX, ೭೯-೦೩ ; 1112).

[ಧಾರೆ? + ಕಾಳೆ (<ಕಹಳೆ)]

ಧಾರೆಗೆದಱು (ಕ್ರಿ). ಧಾರೆಯಾಗಿ ಹರಡು ; ಧಾರಾಕಾರವಾಗಿ ಪಸರಿಸು: ಅದಱ ಕರ್ಣಚಮರದ ರುಳ್ಳಿಯಂತೆ ಜಲ್ಲೆನೊಟ್ಟಿ ಧಾರೆಗೆದಱೆ ಪೇರೈಸಿ ಸೂಸುವುಭಯಕಟದ ಸೊರ್ಕುಕದಡಿನ ತರ್ಕೆಗಡಲ್ಗಳ್ (ಅನಂಪು. ೧೩-೨೦ ಪ).

[ಧಾರೆ + ಕೆದಱು$_1$ (<ಕೆದಱ್$_1$)]

ಧಾರೆಗೊಳ್ (ಕ್ರಿ). ಧಾರಾಪೂರ್ವಕವಾಗಿ ಪಡೆ; ದಾನವಾಗಿ ಸ್ವೀಕರಿಸು: ಗೂಳಿಗನ ಕಟ್ಟೆಯಲ್ಲಿ ಮಹಾಜನಂಗಳ ಕೈಯ್ಯಲು ಧಾರೆಗೊಂಡ ಕೆಯಿ ಮತ್ತರು ಮೂಱು (ಸೌಇಇ. 1X-I, ೩೩೩-೫೦ ; 1215).

[ಧಾರೆ + ಕೊಳ್$_1$]

ಧಾರೆಣ್ಣೆ (ನಾ). (ನಂದಾದೀವಿಗೆಗೆ) ಸದಾ ಪೂರೈಸಬೇಕಾದ ಎಣ್ಣೆ : ದೇವರ ನಂದಾದೀವಿಗೆ ನಡೆವಂತಾಗಿ ಗಾಣಂಗಳನಿತೊಡವನಿತಱಲುಂ ಹೊಯ್ವ ಗಾಣಗಳಲು ಪ್ರತ್ಯೇಕ ನೋಡಿ ಕೊಂಬಂತಾಗಿ ಬಿಟ್ಟ ಧಾರೆಂಣ್ಣೆಯದ್ದ ಸೊಳಸ (ಕಇ. I, ೨೫-೯೦ ; ಸು. 1186). [ಧಾರೆ + ಎಣ್ಣೆ]

ಧಾರೆನೀರು (ನಾ). ಕನ್ಯಾದಾನವಿಧಿಯಲ್ಲಿ ವರನ ಕೈಗಳಲ್ಲಿ ವಧುವಿನ ಕೈಗಳನ್ನಿರಿಸಿ ಧಾರೆ ಎರೆಯುವ ನೀರು.

[ಧಾರೆ + ನೀರು$_1$ (< ನೀರ್$_1$)]

ಧಾರೆಮುಹೂರ್ತ (ನಾ). ಕನ್ಯೆಯನ್ನು ಧಾರಾಪೂರ್ವಕವಾಗಿ ದಾನ ಮಾಡುವ ಲಗ್ನ,–ಸಮಯ : 'ಇವತ್ತೇನು ದಿಬ್ಬಣ ಧಾರೆಮುಹೂರ್ತಕ್ಕೆ ಬರಾ ತರಾ ಇಲ್ಲ!' ಅಂತಾ ಹೇಳ್ತಾ ಇದ್ದ (ಮಲೆಮ. ೬೫೦).

[ಧಾರೆ + ಮುಹೂರ್ತ]

ಧಾರೆಯೆರೆ 'ಧಾರೆಯೆಱೆ' ನೋ.

ಧಾರೆಯೆಱೆ, ಧಾರೆಯೆರೆ (ಕ್ರಿ). ೧. ಕನ್ಯಾದಾನ ಮಾಡು; ಮದುವೆಮಾಡಿ ಕೊಡು : ಧಾರೆಯೆಱೆದನು ದ್ರುಪದ ಪಾಂಡುಕುಮಾರರಿಗೆ ನಿಜಸುತೆಯನು(ಕುಮಾಆ. ೧೬-೬೫). ೨. ಧಾರಾಪೂರ್ವಕವಾಗಿ ದಾನಮಾಡು: ಆ ನೆಲನ ದೇವರ್ಗ್ಗೆ ಧಾರೆಯೆಱೆದು ಕೊಟ್ಟು ತಮ್ಮ ಧರ್ಮ್ಯಂ ಮಾಡಿ ಪ್ರತಿಪಾಳಿಸಿದರ್ (ಸೌಇಇ. XX, ೨೧-೬೨ ; 1019) ; ಹಿಡಿಯದಿರು ಮುರವೈರಿ ಪಾರ್ಥನ ಬಿಡುಬಿಡೀತನ ಖಡ್ಗಕಿದೆಯೆನ್ನೊಡಲು ತನ್ನನೆ ಧಾರೆಯೆಱೆದೆನು ನಯನವಾರಿಯಲಿ (ಕುಮಾಕ. ೦೭-೪) ; ಭೂಸುರರಿಗೊಲಿದು ಊರುಗಳ ನೂಱಗ್ರಹಾರವ ಧಾರೆಯೆಱೆದಿತ್ತಂತೆ ಫಲ ಕೈಸೇರುವದು (ಹರಿಸಾ ೧೦೬). **ಧಾರೆಯೆರೆ** : ೧. ಮಗಳನ್ನು ಧಾರೆಯೆರೆದು ನರಸಿಂಹಯ್ಯನಿಗೆ ಒಪ್ಪಿಸಿದರು (ಕೀಲುಗೊಂ. ೩೫) ; ಇಂದು ಧಾರೆಯೆರೆಯುವ ದಿನ (ಮೂಲಾನ. ೧೨೪) ; ಪಂಡಿತರು . . . ಅಧಿಕ ಸಂತೋಷದಿಂದ ತಮ್ಮ ಹೃದಯಮಣಿಯಂತಿದ್ದ ಮಗಳನ್ನು ಪ್ರಭುಗಳಿಗೆ ಧಾರೆಯೆರೆದು ಕೊಟ್ಟರು (ಶಾಂತಲಾ. ೧೦೫). ೩. ಸಮರ್ಪಿಸು ; ನೀಡು : ಉಪಯುಕ್ತವಾದ ಗ್ರಂಥಗಳ ಬೆಳವಳಿಗೆಗೆ ತಮ್ಮ ಸರ್ವಸಾಹಸವನ್ನೂ ಧಾರೆಯೆರೆಯುವುದು ಅವರ ವಿದ್ಯಾಪ್ರೇಮವನ್ನು ವ್ಯಕ್ತಮಾಡುತ್ತದೆ (ನೀಗಟ್ಟು. ೭೯) ; ಇರುವ ಪ್ರೀತಿಯ ಧಾರೆಯೆರೆದಿರಿ, ಮಮತೆ ಹೂಗಳ ಸುರಿದಿರಿ (ನಲಮು. ೫೩-೫).

ಧಾರೆಯೆರೆದು ಕೊಡು=ಮದುವೆ ಮಾಡಿಕೊಡು: ಮಗಳನ್ನು ಎಂಟನೆಯ ವರುಷದಲ್ಲಿಯೇ ಧಾರೆಯೆರೆದು ಕೊಡದ್ದು ದೊಡ್ಡ ಅಪರಾಧವೂ ಆಗಿದ್ದಿತು (ಗಂಗಾಸಾ. ೨೬). [ಧಾರೆ + ಎಱೆ$_1$]

ಧಾರೆವಟ್ಟಲು (ನಾ). ೧. ಅಭಿಷೇಕಕ್ಕಾಗಿ ದೇವರ ತಲೆಯ ಮೇಲೆ ತೂಗುಬಿಟ್ಟ ಧಾರಾಪಾತ್ರೆ. ೨. ಸೋಸುವ ಪಾತ್ರೆ : ಮನ ಧಾರೆವಟ್ಟಲು ಕೂಡಲಸಂಗನ ಶರಣರು ಹಿಡಿಯದ ಭಂಡವನು ಆರಾದೊಡಾಗಲಿ ಹೋಗಲೀಯರಯ್ಯಾ (ಬಸವ. ೨೩೮) ; ಈರೈದು ತಲೆಯನರಿದು ಧಾರೆವಟ್ಟಲಲಿ [ಪಾಕಾಂ. ನಿ]ಕ್ಕಿ ಧಾರುಣಿಯ ಮೇಲೆ ತಂದಿರಿಸಿದವರಾರೋ (ಅವಪಂ. ೬೬-೨೯೦) ; ಧಾರೆವಟ್ಟಲ ಕಳೆದುಕೊಂಡು ನೀರ ಸೋದಿಸಿ ನೋಡಿದರೆ ದೂರದಲಿ ಕಾಣಬರುತ್ತಿಹುದು ನೋಡಾ (ಅವಪಂ. ೭೫-೩೩೦). ೩. ಜರಡಿ:

ಲಿಂಗದಲ್ಲಿ ಕಠಿಣವುಂಟೆ . . . ಪ್ರಸಾದದಲ್ಲಿ ಅನುರುಚಿಯುಂಟೆ ಈ ತ್ರಿವಿಧದಲ್ಲಿ ಭಾವಭೇದವನಱಸುವೆನು ಕೂಡಲಸಂಗಮದೇವಾ ಧಾರೆವಟ್ಟಲೆನ್ನ ಭಕ್ತಿ (ಬಸವ. ೨೮೫); ಬಿಟ್ಟು ರಸವನುಱ್ ಕಸವ ಪಿಡಿವ ಧಾರೆವಟ್ಟಲ ಪೋಲ್ವ ದೂಸಕರು (ನಾಗಕು. ೧-೭೨). [ಧಾರೆ + ಬಟ್ಟಲು(<ಬಟ್ಟಲ್)]

ಧಾರೆಸೀರೆ (ನಾ). ಧಾರೆಯೆರೆದು ಕೊಡುವಾಗ ಹೆಣ್ಣಿಗೆ ಉಡಿಸುವ ಸೀರೆ : ಪೆಟ್ಟಿಗೆಯ ಮೇಲೆ ಮುಚ್ಚಳಕ್ಕೆ ಬಿಗಿದ ಧಾರೆಸೀರೆ ಮತ್ತು ಕುಪ್ಪಸ (ನನ್ನೂರು. ೮೩). [ಧಾರೆ + ಸೀರೆ$_2$]

ಧಾರೆಹುಳಿ 'ದಾರೆಹುಳಿ' ನೋ.

ಧಾರೋದಕ (ನಾ). = ಧಾರೆನೀರು : ಧಾರೋದಕದಿಂದ ಯಥಾವಿಧಿಯಾಗಿ ಧಾರೆಯೆರೆದು ... ಶಾಂತಲೆಯನ್ನು ಆ ಮಹಾಭಾಗನಿಗೆ ಇತ್ತರು (ಶಾಂತಲಾ. ೦೦೮). [ಸಂ.]

ಧಾರೋಷ್ಣ (ಗು). ೧. (ಹಾಲು) ಕರೆಯುವಾಗ ಧಾರೆಯಲ್ಲಿ ಇರುವಷ್ಟು ಬಿಸಿಯು: ಆರೋಗ್ಯವುಳ್ಳ ದನದ ಆಗ ತಾನೆ ಕರೆದ ಧಾರೋಷ್ಣ ಹಾಲು ಕುಡಿಸುವುದು (ಮನೆಮ. ೩೩). (ನಾ). ೨. ಆಗ ತಾನೇ ಕರೆದ ಬೆಚ್ಚನೆ ಹಾಲು : ಏಲಕ್ಕಿ, ಜೀರಿಗೆಯುಂ ಸಮಸಕ್ಕರೆಗೂಡಿ ನಿತ್ಯವು ೨ ವರಹತೂಕವಂ ಧಾರೋಷ್ಣದಲ್ಲಿ ತೆಗೆದುಕೊಳ್ಳಲು ಪಿತ್ತಹರ (ಸಳವ್ಯ. ೦೩೩). [ಸಂ.]

ಧಾರ್ತರಾಷ್ಟ್ರ (ನಾ). ೧. ಧೃತರಾಷ್ಟ್ರನ ಮಗ; ಕೌರವ; (ವಿಶೇಷವಾಗಿ) ದುರ್ಯೋಧನ ; ೯ ನೂರು ಜನ ಧಾರ್ತರಾಷ್ಟ್ರರ (ಧೃತರಾಷ್ಟ್ರನ ಪುತ್ರರ) ಹೆಸರುಗಳ ಪಟ್ಟಿ ಹೀಗಿದೆ : ದುರ್ಯೋಧನ, ದುಶ್ಶಾಸನ, ದುಸ್ಸಹ, ದುಶ್ಶಲ, ಜಲಸಂಧ, ಸಮ, ಸಹ, ವಿಂದ, ಅನುವಿಂದ, ದುರ್ಧರ್ಷ, ಸುಬಾಹು, ದುಷ್ಪ್ರಧರ್ಷಣ, ದುರ್ಮರ್ಷಣ, ದುರ್ಮುಖ, ದುಷ್ಕರ್ಣ, ಕರ್ಣ, ವಿವಿಂಶತಿ, ವಿಕರ್ಣ, ಶಲ, ಸತ್ವ, ಸುಲೋಚನ, ಚಿತ್ರ, ಉಪಚಿತ್ರ, ಚಿತ್ರಾಕ್ಷ, ಚಾರುಚಿತ್ರ (ಶರಾಸನ), ದುರ್ಮದ, ದುರ್ವಿಗಾಹ, ವಿವಿತ್ಸು, ವಿಕಟಾನನ, ಊರ್ಣನಾಭ, ಸುನಾಭ, ನಂದ, ಉಪನಂದಕ, ಚಿತ್ರಬಾಣ, ಚಿತ್ರವರ್ಮ, ಸುವರ್ಮ, ದುರ್ವಿರೋಚನ, ಅಯೋಬಾಹು, ಮಹಾಬಾಹು, ಚಿತ್ರಾಂಗ, ಚಿತ್ರಕುಂಡಲ, ಭೀಮವೇಗ, ಭೀಮಬಲ, ಬಲಾಕೀ, ಬಲವರ್ಧನ, ಉಗ್ರಾಯುಧ, ಸುಷೇಣ, ಕುಂಡೋದರ, ಮಹೋದರ, ಚಿತ್ರಾಯುಧ, ನಿಷಂಗೀ, ಪಾಶೀ, ವೃಂದಾರಕ, ದೃಢವರ್ಮ, ದೃಢಕ್ಷತ್ರ, ಸೋಮಕೀರ್ತಿ, ಅನೂದರ, ದೃಢಸಂಧ, ಜರಾಸಂಧ, ಸತ್ಯಸಂಧ, ಸದಸ್ಸುವಾಕ್, ಉಗ್ರಶ್ರವ, ಉಗ್ರಸೇನ, ಸೇನಾನೀ, ದುಷ್ಪರಾಜಯ, ಅಪರಾಜಿತ, ಪಂಡಿತಕ, ವಿಶಾಲಾಕ್ಷ, ದುರಾಧರ, ದೃಢಹಸ್ತ, ಸುಹಸ್ತ, ವಾತವೇಗ, ಸುವರ್ಚಸ (ಬಹ್ವಾಶೀ), ಆದಿತ್ಯಕೇತು, ನಾಗದತ್ತ, ಆಗ್ರಯಾಯಿ, ಕವಚೀ, ಕ್ರಥನ, ದಂಡೀ, ದಂಡಧಾರ, ಧನುರ್ಗ್ರಹ, ಉಗ್ರ, ಭೀಮರಥ, ವೀರಬಾಹು, ಅಲೋಲುಪ, ಅಭಯ, ರೌದ್ರಕರ್ಮ, ದೃಢರಥಾಶ್ರಯ, ಅನಾಧೃಷ್ಯ, ಕುಂಡಭೇದೀ, ವಿರಾವೀ, ಚಿತ್ರಕುಂಡಲ, ಪ್ರಮಥ,ಪ್ರಮಾಥೀ (ವೀರ್ಯವಾನ್), ದೀರ್ಘರೋಮ,ದೀರ್ಘಬಾಹು, ಮಹಾಬಾಹು, ವ್ಯೂಢೋರು, ಕನಕಧ್ವಜ (ಕುಂಡಾಶೀ), ವಿರಜಾ. ಹೀಗೆ ಧೃತರಾಷ್ಟ್ರನಿಗೆ ನೂರು ಜನ ಗಂಡುಮಕ್ಕಳೂ ದುಶ್ಶಲಾ ಎಂಬ ಹೆಣ್ಣುಮಗಳೂ ಗಾಂಧಾರಿಯಲ್ಲಿ ಜನಿಸಿದರು. ಯುಯುತ್ಸು ಎಂಬುವನು ಧೃತರಾಷ್ಟ್ರನಿಗೆ ವೇಶ್ಯೆಯಲ್ಲಿ ಹುಟ್ಟಿದ ಮಗ. ಹೀಗೆ ಧಾರ್ತರಾಷ್ಟ್ರರು 'ನೂರೊಂದು ಮಂದಿ' ಎಂದು ಮಹಾಭಾರತದ ಆದಿಪರ್ವದ ೧೧೭ನೆಯ ಅಧ್ಯಾಯದಲ್ಲಿ ಹೇಳಿದೆ (ಗೋರಖಪುರದ ಪ್ರತಿ). ಇವರ ಹೆಸರು ಮತ್ತು ಆನುಪೂರ್ವಿಯಲ್ಲಿ ಬೇರೆ ಬೇರೆ ಪ್ರತಿಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವು ಕಂಡುಬಂದಿದೆ. (ಶ್ರೀವತ್ಸ. ೨೨೩ ನೋ) : ಕೆಡೆದನಿಲಾಭಾಗದೊಳ್ ಧಾರ್ತರಾಷ್ಟ್ರಂ (ಪಂಪಭಾ. ೦೩-೯೬); ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ (ಗದಾಯು. ೭-೩೦). ೨. ಕೊಕ್ಕು ಮತ್ತು ಕಾಲು ಕಪ್ಪಾಗಿರುವ ಹಂಸ ಪಕ್ಷಿ : "ಕರಿಯವಪ್ಪ ಕಾಲ್ಮೊಗಂಗಳಿಂ ಧಾರ್ತರಾಷ್ಟ್ರಂಗಳೆಂಬುದು" (ಹಲಾಯು. ೪೨-೯೯) ; "ಆ ಕಾಲ್ಮೊಗಂ ಕಪ್ಪೆನಲು ಧಾರ್ತರಾಷ್ಟ್ರಮೆನಿಕು" (ಮಂಗರಾ. ೩೦-೭). ೧, ೨ : ಭ್ರೂಲತೆಯ ಸುರಚಾಪದುರುಕೇಶಾಳಿಗಳ ಕಾರ್ಮುಗಿಲಪಾಂಗದ ಸಾಲ ಕುಡಿಮಿಂಚುಗಳ ನೂಪುರರವದ ಮೊಳಗುಗಳ ಆ ಲತಾಂಗಿಯ ಗಮನವೇ ಮಳೆಗಾಲದಂತಿರೆ ಧಾರ್ತರಾಷ್ಟ್ರಕುಲಾಳಿ ನಿಲುವುದೆ ಪವನಜನ ಸಂಪ್ರತಿಯ ಸೇರುವೆಗೆ (ಕುಮಾಉ. ೬-೧೭) ; ಅಹಿತರುಗಳಂ ಧಾರ್ತರಾಷ್ಟ್ರರಂ ಕೂಡಿಕೊಂಡಿಹುದಱಿಂದಚಲನಾಗಿಹೆನೆಂದು ಹರಿಯೊಡನೆ ಬಹ ಪಾರ್ಥನಂ ಕರೆದು ಮೂದಲಿಪ ತೆಱದಿಂದೆ ವಿಂಧ್ಯಾದ್ರಿ ಮುಂದೆಸದುದು (ಕೃಷ್ಣವಿಭಾ. ೧೦-೨). [ಸಂ.]

ಧಾರ್ಮಿಕ (ಗು). ೧. ಧರ್ಮಕ್ಕೆ ಸಂಬಂಧಪಟ್ಟ; ಮತ ಅಥವಾ ದರ್ಶನಕ್ಕೆ ಸಂಬಂಧಿಸಿದ : ವಿಚಾರವರ ತಾತ್ವಿಕ ಧಾರ್ಮಿಕಗ್ರಂಥಗಳು ರವೀಂದ್ರರನ್ನು ಸಾಹಿತ್ಯಲೋಕದ 'ಗುರುದೇವ'ನನ್ನಾಗಿ ಮಾಡಿವೆ (ಧರ್ಮಸಾ. ೮೧) ; ಯಾವುದಾದರೂ ಧಾರ್ಮಿಕ ಅಥವಾ ಸಾಂಪ್ರದಾಯಿಕ ಸಂಸ್ಥೆಯ ಕಾರ್ಯಕಲಾಪಗಳ ಸಂಬಂಧದ ಯಾವನಾದರೂ ಪದಧಾರಿಯಾಗಲಿ . . . ಯಾವುದಾದರೂ ವಿಶಿಷ್ಟ ಸಂಪ್ರದಾಯಕ್ಕೆ ಸೇರಿದವನಾಗಿ ಇರಬೇಕೆಂದು ಉಪಬಂಧವನ್ನು ಮಾಡಿರುವ ಯಾವುದೊಂದು ವಿಧಿಯ ಅಮಲಿಗೂ ಬಾಧಕವಾಗತಕ್ಕುದಲ್ಲ (ಭಾಧಾನ. ೯). ೨. ಧರ್ಮಬುದ್ಧಿಯ; ಧರ್ಮಿಷ್ಠನಾದ : ಆ ಬರಗೆಟ್ಟ ಬಡ ಹುಡುಗರು ಉಣ್ಣುವ ಸಂಭ್ರಮ ನೋಡಿ, ಆ ಧಾರ್ಮಿಕ ವೈದ್ಯನಿಗೆ ಪರಮಸಂತೋಷವಾಯಿತು (ಮುಂಬಯಿ. ೪-೭೮). (ನಾ). ೩. ಧರ್ಮದಿಂದ ಕೂಡಿದುದು ; ಪುಣ್ಯಕರವಾದುದು: ಕೃತಯುಗಮಾದುದು ಕಲಿಯುಗಮತಿ ಧಾರ್ಮಿಕಮಾಯ್ತು ವಿಕ್ರಮಾದಿತ್ಯನೃಪಂ ಪ್ರತಿಪಾಳಿಪ ರಾಷ್ಟ್ರಂ (ಎಇ. XXVIII, ೫-೯ : 1082). ೪. ಧರ್ಮವನ್ನು ಆಚರಿಸುವವನು : ಬಸೆವಾಯಂ ಕವಿ ವಾಗ್ಮಿ ದೀರ್ಘಮುಖಕಂಠಂ ಧಾರ್ಮಿಕಂ ತ್ಯಾಗಿ . . . ಧನುರ್ಗ್ರೇಹಜಂ (ಜಾತಕಿ. ೧೭-೯) ; ಧರ್ಮಂ ಧಾರ್ಮಿಕನಿಂದೆ ನಿಲ್ವುದದಱಿಂದು ಧಾರ್ಮಿಕಾಗ್ರೇಸರಂ ಧರ್ಮಂ (ಅನಂಪು. ೩-೬೩) ; ಕಾಪಥವೇಕೆ ನಿಮಗಿದು ಪಾಂಡುಪುತ್ರರು ನೀವು ಧಾರ್ಮಿಕರು (ಕುಮಾಅ. ೧೬-೩೪) ; ಫಲಸಂಪ್ರಸರ ಛತ್ರವನೆಸಗಿಯುಪವನ ವೆಸೆದುದೈ ಧಾರ್ಮಿಕನವೊಲು ಯದುರಾಯನಿದಿರಿನಲಿ (ಕುಮಾಉ. ೭-೨೪). ೫. ಬಿಲ್ಲನ್ನು ಹಿಡಿದಿರುವವನು. ೪, ೫ : ಮಾಣಿಯ ಕೌಂಕುಟ ಚರಿತ ಪುರಾಣದ ಕವಳಿಗೆ ಸಮಾನಮಾಯ್ತುಮಳವಚೋಬಾಣಂ ತೆಕ್ಕನೆ ತೀವಿದ ತೂಣೀರತಳಾಗ್ರಭಾಗದೊಳ್ ಧಾರ್ಮಿಕನಾ (ಅನಂಪು. ೨-೪೫). [ಸಂ.]

ಧಾರ್ಮಿಕಜನ (ನಾ). ಧರ್ಮದಲ್ಲಿ ಶ್ರದ್ಧೆಯಿಳ್ಳ ಜನ; ಧರ್ಮಿಷ್ಠರಾದ ಮಂದಿ : ಧಾರ್ಮಿಕಜನಜನಿತಾನಂದಸಂದೋಹವಿದ್ಯಾರಸದೊಳ್ ಸಂಸಾರ ಸಾರೋದಯವಿರಚಿತದೊಳ್ ವಾಗ್ವಧೂಮುದ್ರೆಯೊಳ್ ಮುದ್ರಿಸಿ ನಿಂದತ್ತಾದಿತೀರ್ಥೇಶ್ವರನ ಚರಿತದೊಳ್ ವಾಕ್ಯಮಾಣಿಕ್ಯಕೋಶಂ (ಆದಿಪು. ೧೬-೭೯). [ಧಾರ್ಮಿಕ + ಜನ]

ಧಾರ್ಮಿಕಜಿಜ್ಞಾಸೆ (ನಾ). ೧. ಧರ್ಮವನ್ನು ಕುರಿತ ಆಸಕ್ತಿ, - ಕುತೂಹಲ. ೨. ಧರ್ಮವನ್ನು ಕುರಿತ ವಾದ : ಅನುಭವಮಂಟಪದಲ್ಲಿ ನಡೆದ ಧಾರ್ಮಿಕಜಿಜ್ಞಾಸೆಯ ಸಮಯದಲ್ಲಿ ಅಪಾರವಾದ ವಚನರಾಶಿ ನಿರ್ಮಾಣವಾಯ್ತು (ಶೂನ್ಯಕು. ೩೫). [ಧಾರ್ಮಿಕ + ಜಿಜ್ಞಾಸೆ]

ಧಾರ್ಮಿಕತತ್ವ (ನಾ). ಧರ್ಮಕ್ಕೆ ಸಂಬಂಧಿಸಿದ ಸಿದ್ಧಾಂತ : ಶೂನ್ಯ ಸಂಪಾದನೆಯಲ್ಲಿ ಅನೇಕ ಧಾರ್ಮಿಕತತ್ವಗಳ . . . ಪ್ರಸಕ್ತಿ ಬರುತ್ತದೆ (ಶೂನ್ಯಕು. ೦೫೯). [ಧಾರ್ಮಿಕ + ತತ್ವ$_1$]

ಧಾರ್ಮಿಕತನ (ನಾ). ಸದಾಚಾರಸಂಪನ್ನತೆ ; ಗುಣವಂತಿಕೆ ; ಧರ್ಮಪರತೆ : ವಿದೇಹ ಪರಂಪರೆಯ ನೃಪರ ಚರಿತವನು ಕೊಂಡಾಡಿ ಜನಕನ ನಿರತಿಶಯವಂಶಪ್ರಸಿದ್ಧಸ್ಫುರಿತಧಾರ್ಮಿಕತನವನೊರೆದನು ಮುನಿ ವಸಿಷ್ಠಂಗೆ (ತೊರರಾ. ೧-೧೬-೨೦). [ಧಾರ್ಮಿಕ + – ತನ]

ಧಾರ್ಮಿಕತೆ (ನಾ). = ಧಾರ್ಮಿಕತನ : ಅಜಂತಾಕಲೆಯಲ್ಲಿನ ಮಾನವೀ ಲಕ್ಷಣ, ಸಂತೋಷ, ನಯವಾದ ಉದ್ದೀಪನ, ಪರಿಶುದ್ಧ ಧಾರ್ಮಿಕತೆ ಇವೆಲ್ಲವೂ ರಜಪೂತ ಕಲೆಯಲ್ಲಿದೆ (ಧಾರದ. ೩೫೯). [ಸಂ. ಧಾರ್ಮಿಕತಾ]

ಧಾರ್ಮಿಕವೃತ್ತಿ(ನಾ). ೧. ಧರ್ಮಕ್ಕೆ ಸಂಬಂಧಪಟ್ಟ ವೃತ್ತಿ,–ನಡವಳಿಕೆ. ೨. ಬಿಲ್ಲನ್ನು ಹಿಡಿದಿರುವುದು. ೧, ೨: ವಿತತಗುಣಮಾರ್ಗಣಾಸಕ್ತತೆಯಿಂದನವರತ ಮೋಕ್ಷಸಂಧಾನಮನಸ್ಕತೆಯಿಂ ಧಾರ್ಮಿಕವೃತ್ತಿಯಿನತಿಶಯಿಪಂ ನೇಮಿಚಂದ್ರಸೈದ್ಧಾಂತೀಶಂ (ಚಂದ್ರಪು. ೧-೩೪). [ಧಾರ್ಮಿಕ + ವೃತ್ತಿ$_2$]

ಧಾರ್ಮಿಕಶಿಕ್ಷಣ (ನಾ). ಮತೀಯ ತತ್ತ್ವಗಳ ಹಾಗೂ ಆಚಾರಗಳ ಬೋಧನೆ: ರಾಜ್ಯನಿಧಿಯಿಂದ ಸಂಪೂರ್ಣವಾಗಿ ಪೋಷಿತವಾದ ಯಾವುದೇ ವಿದ್ಯಾಸಂಸ್ಥೆಯಲ್ಲಿ ಯಾವ ಧಾರ್ಮಿಕ ಶಿಕ್ಷಣವನ್ನೂ ಕೊಡತಕ್ಕುದಲ್ಲ (ಭಾಧಾನ. ೧೬). [ಧಾರ್ಮಿಕ + ಶಿಕ್ಷಣ]

ಧಾರ್ಷ್ಟಿಕ (ಗು). ದಿಟ್ಟನಾದ ; ಧೈರ್ಯವಂತನಾದ. [ಸಂ.]

ಧಾರ್ಷ್ಟ್ಯ (ನಾ). ೧. ಉದ್ಧಟತನ ; ಔದ್ಧತ್ಯ ; ಕೊಬ್ಬು : ಬಿನ್ನಪಂಗೆಯ್ದುದೆ ಧಾರ್ಷ್ಟ್ಯಂ ಸೇವೆಯುಂ ಚಾಪಲಂ . . . ಈವುದೆ ವಿಭವದ ಗರ್ವಂಬೊಲಾದಪ್ಪುದೀಗಳ್ (ಕಾದಂಉ. ೧೧೨) ; ಏದೊರೆ ಪೆಂಪೊ ಲಕ್ಷ್ಮಿ ನಿಜವಲ್ಲಭೆ ಜಾಹ್ನವಿ ತನ್ನ ಪಾದಪದ್ಮೋದಕಂ ... ಎಂದೆನಿಪ್ಪ ದುಗ್ಧೋದಧಿ ತಲ್ಪನಂ ನರನಭಿಷ್ಟುತಿಗೆಯ್ದುದು ಧಾರ್ಷ್ಟ್ಯಮಲ್ಲವೇ (ಜಗವಿ. ೧-೨೦) ; ಬಂಗಾಳಿ ಭಾಷೆಯ ಪರಿಚಯವಿಲ್ಲದ ನಾನು ಠಾಕೂರರ ಶೈಲಿಯ ಪ್ರಸ್ತಾಪ ಮಾಡಿರುವುದು ಒಂದು ದೃಷ್ಟಿಯಿಂದ ಧಾರ್ಷ್ಟ್ಯ (ನಿಬಂಧ. II, IX ಮುನ್ನುಡಿ). ೨. ದಿಟ್ಟತನ ; ಕೆಚ್ಚು ; ಧೈರ್ಯ : ಸರ್ ಕೆ. ಶೇಷಾದ್ರಿ ಅಯ್ಯರ್ ಅವರ ಧಾರ್ಷ್ಟ್ಯದಿಂದಲೂ . . . ದೇಶವು ಹೊಸರೂಪವನ್ನೇ ತಾಳಿತು (ಮೈಸಾಸ್ತು. ೨೦). [ಸಂ.]

ಧಾರ್ಷ್ಣ್ಯ (ನಾ). ಉದ್ಧಟತನ ; ಜೋರು ; ಜುಲುಮು ; ಒರಟುತನ. [ಸಂ.]

ಧಾಲಕೆ ? (ನಾ). (?) : ಸ್ವಸ್ತ್ಯಕಾಳವರಿಷದೇವ ಶ್ರೀಪ್ರಿಥು(ಥಿ)ವೀವಲ್ಲಭ ಮಹಾರಾಜಾಧಿರಾಜನಾನೆವೆಡ(ಡ)ಙ್ಗಂ ಮದಗಜಮಲ್ಲಂ ಧಾಲಕೆ ನಲ್ಲಾತಂ ಶ್ರೀಕನ್ನರದೇವನ ರಾಜ್ಯಮುತ್ತರೋತ್ತರಂ ಸಲುತ್ತಿರೆ (ಇಆ. XII,೨೫೭-೨; 951). [P ಇದು 'ಛಲಕೆ' ಎಂಬುದರ ಅಪಲಿಖಿತವಿರಬಹುದು]

ಧಾವ (ನಾ). (ಉಕ) ಬಂಡಿಯ ಗಾಲಿಗಳಿಗೆ ಸುತ್ತಲೂ ಬಡಿದಿರುವ ಕಬ್ಬಿಣದ ಪಟ್ಟಿ ; ಚಕ್ರದ ಪಟ್ಟಿ ; ಗಾಡಿಪಟ್ಟಿ ; ಗಾಡಿಯ ಹಳಿ : ಧಾವ ಬಿಗಿಸುವುದಕ್ಕೆ ಗಾಡಿಯ ಗಾಲಿಗಳನ್ನು ಕಮ್ಮಾರನ ಮನೆಗೆ ಕಳಿಸಿದೆ (ರೂಢಿ). [←ಮರಾ. ಧಾವ]

ಧಾವಂತ, ದಾವಂತ (ನಾ). ೧. ಅವಸರ ; ಗಡಿಬಿಡಿ ; ತರಾತುರಿ : ನಮ್ಮ ಧಾವಂತದಲಿ ನಮಗೆ ಕಾಣುವುದೆಲ್ಲ ಕೋಳಿ ಬೆದಕಿದ ಬೂದಿರಾಸಿ (ಶಿಶಾಲ. ೧೬-೬) ; ಈ ದಿನ ರಜ. ಧಾವಂತವೇನೂ ಇಲ್ಲ (ಜೀವಾತ್ಮ. ೧೩೮) ; ಈಗ ಇಷ್ಟೊಂದು ಏದುಸಿರು ಬರುವಂಥ, ಕೆಲಸಕಾರ್ಯಗಳ ಧಾವಂತ ವಿರಲಿಲ್ಲ (ನಿಬಂಧ. II, ೩೧). ೨. ಕಕ್ಕುಲತೆ ; ಮೋಹ ; ಮಮಕಾರ : ಊರು, ಕೇರಿ, ದೇಶ ಅಂತ ಧಾವಂತ ಮಾಡಬಾರದು. ದೇಶವೆಲ್ಲ ನಮ್ಮ ಸಂಸಾರ . . . ಅಂತ ಭಾವಿಸಬೇಕು (ಜಂಗೂಲಿ. ೧೨). ೩. ಕಠಿನವಾದ ಕೆಲಸ ; ಘನವಾದ ಕಾರ್ಯ (?) : ನನಗೇನ ಅಡಿಗೆ ಧಾವಂತೇನ ಬಿಡ (ರಕ್ತಧ್ವ. ೨೨೦). ೪. (?) : ಅಷ್ಟಾಂಗ ಬಂಧಕವು ಆಸನದ ಬಂಧಕವು ದೃಷ್ಟಿ ಕುಡುರಿಸುವ ಧಾವಂತ ಬಂಧಕವು (ಚಿದಾಕೋ. ೧೦೦-೭). **ದಾವಂತ:** ೫. ಬಳಲಿಕೆ ; ಸಂಕಟ ; ಆಯಾಸ ; ಶ್ರಮ : ನಡಯಿಂದ ದಾ[ಪಾಠಾಂ. ಧಾ]ವಂತಮಾಯಿತು (ವಂಕಾರಾ. ೨-೨೪-೫೨) ; ಬಲರಾಮನಿಗೆ ಹಸಿವಿನ ದಾವಂತದಿಂದ ವಾಸನಾಶಕ್ತಿ ಎರಡರಷ್ಟಾಗಿ ಭಕ್ಷ್ಯಗಳನ್ನಿಟ್ಟಿದ್ದ ಅಲಮಾರುವಿನ ಬಳಿಗೆ ಅಂಬು ಎಸೆದಂತೆ ಆತ ಹೋಗಿನಿಂತನು (ಕೃಷ್ಣಾ. ೨೬). [?./ತಮಿ. ತಾವನ್ತ ; ತೆಲು. ದಾವಂತ]

ಧಾವಂತಪಡು, ದಾವಂತಬಡು (ಕ್ರಿ). ೧. ಆತುರಪಡು : ನೀವೇ ಬೇಗರಾಗುವ ಹಾಗೆ ಧಾವಂತಪಡುತ್ತಿದ್ದೀರಲ್ಲಪ್ಪಾ (ರಾಗಿಚಿ. ೧೭೩). **ದಾವಂತಬಡು :** ೨. ಬಳಲಿಕೆಯನ್ನು ಹೊಂದು ; ಬಳಲು ; ಆಯಾಸಪಡು : ದಾವಂತಬಡುತ ತನ್ನಿಚ್ಛೆಯನೆ ಘೋಷಿಸುವ ಭಾವವೆಂತಹ ಭಕುತಿ (ಮಂಕುಶ. ೫೮೦). [ಧಾವಂತ + ಪಡು$_1$]

ಧಾವಕ (ಗು). ೧. ಶುದ್ಧಿಗೊಳಿಸುವ ; ತೊಳೆಯುವ. 'ಅಸಿಧಾವಕ' ಪರಾ. ೨. ಓಡುವ; ವೇಗವಾಗಿ ಹೋಗುವ. [ಸಂ.]

ಧಾವತಿ, ದಾವತಿ (ನಾ). ೧. ದಣಿವು ; ಬಳಲಿಕೆ ; ಆಯಾಸ ; ಶ್ರಮ : ಈಸು ಧಾವತಿಯಿಂದೆ ನಾ ಕಡುಘಾಸಿಯಾದೆನು ಬೆಂದ ಹುಣ್ಣನು ಕೀಸುವರೆ ಕಂಬಿಯಲಿ ಕೇಳಕಟೆಂದಳಾ ಮಾಯೆ (ಪ್ರಭುಲೀ. ೭-೬೪) ; ಭಾವಿಸಿ ಗುಳಿಗೆಯನಿತ್ತರೆ ಜ್ವರಗಳ ಧಾವತಿ ಪರಿಹರವಹುದು (ಸಾಳ್ವಸಾಂ. ೧೯) ; ನಾನಾ ತರದ ದುಃಖ ಧಾವತಿಯಿಂದೆ ಆತ್ಮ ಕೆಟ್ಟು ನಷ್ಟವಾಗಿ ಹೋಯಿತ್ತು ನೋಡಾ (ಅಖಂಡೇ. ೧೦-೭) ; ಇಬ್ಬರೂ ತನಗಾಗಿ ಪಡುತ್ತಿದ್ದ ಧಾವತಿ ಕಂಡು ಅವಳು ನಕ್ಕಳು (ಶನಿಸಂ. ೧೧೮). ೨. ನೋವು ; ತೊಂದರೆ ; ದುಃಖ : ಭವವುಳ್ಳನ್ನಕ್ಕರ ಧಾವತಿ ಮಾಣದು ಶರೀರ ಉಳ್ಳನ್ನಕ್ಕರ ಅವಸ್ಥೆ ಮಾಣದು (ಅವಚಂ. ೩೦-೧೫೫) ; ಅಯ್ಯ ನಿಮ್ಮ ಮಹಂತರ ಕೂಡಿಯಗಲುವ ಧಾವತಿಯಿಂದ ಸಾವುದೇ ಕರ ಲೇಸು ಕಂಡಯ್ಯ (ಮಹಾದೇ. ಬ. ೬೦-೧೪೯) ; ಈ ಸತಿಯನೀ ಶುಚಿಯನೀ ಪತಿವ್ರತೆಯ ನಾನೀಸು ಧಾವತಿಗೊಳುಗುಮಾಡಿದೆನು (ಹಡಕಾ. ೧೨-೪೬) ; ಸ್ಮೃತಿಪುರಾಣದೊಳು ತೊಳಲಿ ಕಂಗಾಣದಲೆ ಪರಿಪರಿಯ ಮಾರ್ಗಗಳ ಪಿಡಿಪಿಡಿದು ಧಾವತಿಯೊಳು ಬಳಲುವರು (ವಂಕಾರಾ. ೫-೨೦-೧೩) ; ದೇವನಲ್ಲಿ ಬಕುತಿಭಾವದಲ್ಲಿ ನಿಷ್ಠೆ ನೋವಿಗೆ ಹೆದರಬೇಡವ್ವ ಸಂಸಾರದಿ ಧಾವತಿ ತಿಳಿದು ನಡೆಯವ್ವ (ಸಿದ್ಧಪು. ೧-೭೫). ೩. ದುಡಿಮೆ ; ಕೆಲಸ ; ಉದ್ಯೋಗ; ಪರಿಶ್ರಮ : ತನ್ನ ತಾನರಿಯುವ ಧಾವತಿ ಹಗುರವಲ್ಲ (ಬಾಳಬ. ೨೦) ; ಧಾವತಿ ಮುಗಿದ ಮೇಲೆ ನೆಲದ ಮೇಲೆ ಅವನ ದೃಷ್ಟಿ ಬಿತ್ತು (ಕೈಹಿಕಾ. ೧೦೬) ; ಆಯುಧವನು ಹೂಡದೇನೆ ಆದ ಪಾರ್ಥಸಾರಥಿ ಯುದ್ಧವೆ ಸ್ಥಿರವಾದರೂನು ಶಾಂತಿಗಾಗಿ ಧಾವತಿ (ನಲಮು. ೪೦-೮). ೪. ಗಡಿಬಿಡಿ ; ಅವಸರ : ಬಹಳ ಧಾವತಿಯಲ್ಲಿ ಹೊರಟು ಬರಬೇಕಾಯ್ತು (ರೂಢಿ). **ದಾವತಿ :** ೧. ಕಿತಕಂ ದೇವತೆಗೇಕೆ ಪೇಟ್ಟ್ ಪರಸಿ ಗಂಡಂ ಬೇಡಿಕೊಂಡೆನ್ನ ಪೆಂಡತಿಗಿತ್ತೈ ಪುಟ್ಟೊಂದು ಪೆಣ್ಣನಿದನೊಲ್ಲಳ್ನೀನೆ ಕೊಳ್ಳಾದ ದಾವತಿಯಕ್ಕುಂ (ಅರ್ಧನೇ. ೭-೫೦) ; ಬಲು ದಾವತಿಯಾಯ್ತು ಮಂತ್ರಿ ನಿನಗೆ (ಜಿನರಾ. ೬-೧೩೪); ಸಂಸೃತಿಯ ದಾವತಿಯು ಕಳೆದು ಘನಮುಕ್ತಿಯೆಂದೆಂಬ ಭಾವೆಯೊಡವೆರಸಿ (ಕೈಕವ. ೧-೧-೫); ಹೈಮಾವತಿಯ ಅಡಿಗೆಯ ದಾವತಿಯನ್ನು ತಪ್ಪಿಸುವುದು (ಎರಸಿ. ೧೦೨). ೨. ತನ್ನ ಸುತನಾದ ಮಲಹಣಗೆ ಆತನು ದಾ[ಪಾಠಾಂ. ಧಾ]ವತಿಯಿಲ್ಲದಂತೆ ದಿನಕ್ಕೆ ಸಾವಿರ ಹೊನ್ನ ಬಳಸಿ ಸುಖಮಿರಲಿಯೆಂದು (ಧೃರಸೂ. ೪೯). ೩. "ದಾವತಿ = ದುಡಿಮೆ ; ಕೆಲಸ"(ಜಾನಕೋ. ೪); ಹೊತ್ತ ಹೊರೆಗಳಿಂದ ನೆತ್ತಿ ಬೋರೆಯು ಹರಳೊತ್ತಿ ಪಾದವು ಬೊಕ್ಕೆಯೊಡೆದು ಹಸ್ತಕೆ ದಾವತಿಯಿಲ್ಲವೆಂದೆನಲಾಗ (ಆಮುಸಾಂ. ೬-೫) ; ಹಿರಿಯ ಗೌಡನು ದಾವತಿಗಳನ್ನು ಹಂಚಿ ಹಾಕುವುದರಲ್ಲಿಯೂ ... ಕೆಲಸ ಸರಿಯಾಗಿ ನಡೆದಿದೆಯೊ ಇಲ್ಲವೊ ಎಂಬುದನ್ನು ನೋಡುವುದರಲ್ಲಿಯೂ ತನ್ನ ಎಲ್ಲ ವೇಳೆಯನ್ನು ಕಳೆಯುತ್ತಿದ್ದನು (ಮತಂಓ. ೫೩). 'ಧಾವಂತ' ಪರಾ.

ದಾವತಿ ಬೀಳು = ಕಷ್ಟಪಡು ; ಶ್ರಮಿಸು : (ಕ). ದಾವತಿ ಮಾಡು = ದಾವತಿ ಬೀಳು : (ಕ). [?./ಮರಾ. ಧಾವತೀ]

ಧಾವತಿಗೆಡು (ಕ್ರಿ). ಕೆಲಸವಿಲ್ಲದಿರು : ಧಾವತಿಗೆಟ್ಟು ನಾ ತಿರುಗೆನು ಕರುಣೆಯ ತೀವಿದ ಸಾಕಾರ ನೀನಿರಲು (ಸಿದ್ಧಪು. ೬-೫). [ಧಾವತಿ+ಕೆಡು$_1$]

ಧಾವತಿಗೊಳ್, ದಾವತಿಗೊಳ್, ಧಾವತಿಗೊಳು, ಧಾವತಿಗೊಳ್ಳು (ಕ್ರಿ). ೧. ಆಯಾಸಪಡು ; ಬಳಲು; ದಣಿ: ದೇವ ನಿಮ್ಮ ಪೂಜಿಸಿ ಧಾ[ಪಾಠಾಂ. ದಾ]ವತಿಗೊಂಬಡೆ ಆ ದಾವತಿಯಿಂದ ಮುನ್ನಿನ ವಿಧಿಯೇ ಸಾಲದೆ (ಅವಚಂ. ೧೭-೬೬) ; ಕಾಯ ಕಲ್ಪಿತಕ್ಕೆ ಒಳಗು ಜೀವ ಭವಕ್ಕೊಳಗು ಈ ಉಭಯದ ಠಾವನಱಿಯದೆ ಧಾವತಿಗೊಂಬರೆಲ್ಲರು (ನಗೆಮಾ. ೪೧೯-೨೭) ; ಅನ್ಯರಾಳಾಗಿ ದುಡಿದು ಧಾವತಿಗೊಂಡು ಧನವನಾರ್ಜಿಸಿ (ಹಡಕಾ. ೧೨-೨೯). ೨. ಶ್ರಮಪಡು ; ಕಷ್ಟಪಡು ; ದುಡಿ ; ಕೆಲಸಮಾಡು : ಹಲವು ಕಾಲ ಧಾ[ಪಾಠಾಂ. ದಾ]ವತಿಗೊಂಡು ಒಟ್ಟಿದ ಹಿದಿರೆಯು ಒಂದು ಮಿಡುಕುಱಲ್ಲಿ ಬೇವಂತೆ (ಬಸವ. ೨೧೩). **ದಾವತಿಗೊಳ್** : ೧. ಮೇಲಿನ 'ಅವಚಂ. ೧೭-೬೬' ಪ್ರಯೋಗದ ಪಾಠಾಂತರವನ್ನು ನೋಡಿ. **ಧಾವತಿಗೊಳು** : ೧. ದೈವತಂತ್ರಾಖ್ಯವೆ ಬಿಂಬ ಕ್ರಿಯವೇ ತಿಳಿ ಧಾವತಿಗೊಳದಿರಿ ಇದನೆ ತೊರದು ವ್ಯರ್ಥ (ವಿಪ್ರಸು. ೨೭-೧೫). **ಧಾವತಿಗೊಳ್ಳು** : ೧. ಕೈಗೆ ಕೈಗಳ ಪಿಡಿವುತೊರ್ವರೊರ್ವರನಪ್ಪಿ ಬನದಿ ಧಾವತಿಗೊಳ್ಳುತೆ ಸುಯ್ಗಂಪ ಬೀರುತೆಡೆಯಾಡುತೆ (ಪಂಕಾರಾ. ೨-೨೦-೧೨) ; ಭಾವನಂದನದಲ್ಲಿ ಯಾವ ಹೂವರಳಲು ಧಾವತಿಗೊಳ್ಳುತೆ ಕೋಗಿಲೇ ! ಯಾವ ನೂತನ ನನ್ನಿ ಕಾವನ ಶರಕೆಂದು ಕೂಗುವಿ ನೀ ಹೇಳು ಕೋಗಿಲೇ ! (ಗರಿ. ೨೭-೮). ೨. ಹಿಂದೆ ಧಾವತಿಗೊಂಡು ಫಲವೇನಿಂದು ಕೆಡಿಸದ ರಾಮನೆಂದಳಲಿತ್ತು ಕಪಿಸೇನೆ (ಕೌಶಿರಾ. ೪೩-೩೫) ; ಶೃಂಗಾರದಲ್ಲಿ ಬೇರಿಳಿಸಿ, ವೀರದಲ್ಲಿ ಕುಡಿವರಿದು, ಹಾಸ್ಯಾದಿಗಳಲ್ಲಿ ಹಬ್ಬುಗೊಂಡು ಶಾಂತಿಯಲ್ಲಿ ನೆಲಸಿ ನಿಲ್ಲುವಂತೆ ರಸಿಕತೆಯು ಧಾವತಿಗೊಳ್ಳುತ್ತದೆ (ಸುವರ್ಣ. ೪೨). [ಧಾವತಿ + ಕೊಳ್$_1$]

ಧಾವತಿಗೊಳಿಸು (ಕ್ರಿ). ೧. ಬಳಲಿಸು ; ಆಯಾಸಪಡಿಸು : ಆ ಮನಸ್ಸು ಸಂಕಲ್ಪ ವಿಕಲ್ಪದಿಂದ ಹಿಡಿಯುತ್ತ ಬಿಡುತ್ತ ಬೇಕು ಬೇಡ ಎಂಬೆರಡರಲ್ಲಿ ಸರ್ವರನ್ನೂ ಧಾವತಿಗೊಳಿಸುತ್ತಿರುವುದು (ಅವಚಂ. ೩೯೨-೭೪ ಭಾವಾನುವಾದ). ೨. ದುಃಖಗೊಳಿಸು ; ತೊಂದರೆಪಡಿಸು : ಹಸಿವು ನೀರಡಿಕೆ ನಿದ್ರಾಲಸ್ಯವಾಗಿ ಸಂದಿಸಿ ಹೋಗಿ ಹೊಕ್ಕಲ್ಲಿ ಹೊಕ್ಕು ಧಾವತಿಗೊಳಿಸಿ ಹುಸಿಗೆ ಹೂಂಕೊಳಿಸುವೆಂ (ಹಡಕಾ. ೯-೧೮) ; ಒಬ್ಬುಳ್ಳ ಮಗ ದುರುಳನಾಗಿ ಜಡನಾಗಿ ಧಾವತಿಗೊಳಿಸದೆ ನಡೆದು ಹರದಾಡಿ ಗಳಿಸಿದವೆನೆಂಬುದನು ನಮ್ಮೊಡಲು ಹದುಳಿಪ್ಪಲ್ಲಿ ಕಂಡೆವು (ಸೋಮಚ. ೧-೯೭).

[ಧಾವತಿಗೊಳ್ + – ಇಸು$_3$]

ಧಾವತಿಗೊಳು 'ಧಾವತಿಗೊಳ್' ನೋ.

ಧಾವತಿಗೊಳ್ಳು 'ಧಾವತಿಗೊಳ್' ನೋ.

ಧಾವತಿಪಡು 'ಧಾವತಿಬಡು' ನೋ.

ಧಾವತಿಬಡು, ದಾವತಿಪಡು, ದಾವತಿಬಡು, ಧಾವತಿಪಡು (ಕ್ರಿ). ದಣಿ; ಬಳಲು ; ಆಯಾಸಪಡು : ಗೋವ ಕಾಯಲು ಪೋಗಿ ಧಾವತಿಬಟ್ಟು ಬಹು ದೇವಕಿದೇವಿಯೆ ಈವಾಗ ಬಂದೆನು (ಪುರಂದ. ೧-೮೦-೧) ; ಧಾವತಿಬಟ್ಟು ಬಂದಿರಿ ಬಳಲಿದಿರಿಯೆಂದಾ ವಿಭು ಮೈದುನರ್ಗೊರೆದ (ಭರಣ. ೭೯-೬೬). **ದಾವತಿಪಡು** : ಇವರು ಆತನ ಪರಮಮಿತ್ರರೆಂದೇ ಇಲ್ಲಿಯ ತನಕ ದಾವತಿಪಟ್ಟು ಬಂದಿದ್ದಾರೆ (ಅರಗಿ. ೧೨). **ದಾವತಿಬಡು** : ಪದ್ಮಾವತಿ . . . ನೆಱೆ ದಾವತಿಬಡುತ್ತಳವಳಿವ ಕಾಷ್ಠಾಂಗಾರಕನ ಕಂಡು ಕ್ಷಿತಿಯೊಳಿವನಿಂತಿಲ್ಲ ಬಿಡದ ಧೃತಿಬಡುವ ನರನೆಂದು ವಿಟಗದ್ಭುತದಿ ತೋಱಿಸಲು (ಜೀವಂಚ. ೩-೫). **ಧಾವತಿಪಡು** : ಕುಲಕೆ ದುರ್ಯಶಮಡಸಿತೆಂದು ಧಾವತಿಪಟ್ಟು ಜಲಧಿಯಂ ಕಟ್ಟಿ (ಪಂಕಾರಾ. ೬-೬೩-೨೮). [ಧಾವತಿ + ಪಡು$_1$]

ಧಾವನ (ನಾ). ೧. ಓಡುವುದು. ೨. ಹರಿಯುವುದು. ೩. ಆಕ್ರಮಣ ; ಮುತ್ತಿಗೆ. ೪. ಉಜ್ಜುವುದು ; ತೊಳೆಯುವುದು ; ಶುದ್ಧಗೊಳಿಸುವುದು : "ಧಾವನಂ ತೀಡುವುದೆನಿಕ್ಕು"(ಮಂಗರಾ. ೧೦೦-೨೫). 'ದಂತಧಾವನ' ಪರಾ. [ಸಂ.]

ಧಾವನಿ (ನಾ). ಒಂದು ಬಗೆಯ ಗಿಡ ; ನರಿಹೊನ್ನೆಗಿಡ : "ಕ್ರೋಷ್ಟು ವಿನ್ನಾ, ಸಿಂಹಪುಚ್ಛೀ, ಕಲಶೀ, ಧಾವನೀ, ಗುಹಾ-೫ ನರಿಬಾಲದ ಹುಲ್ಲು, ನರಿಬಾಲದ ಹೊನ್ನೆ" (ಸಿದ್ಧಾಂತಿ. ೧೦೭). [ಸಂ. ಧಾವನೀ]

ಧಾವಲ್ಯ, ಧಾವಳ್ಯ (ನಾ). ಬಿಳುಪು ; ಬಿಳಿಯ ಬಣ್ಣ : ಮಿಸುಪ ನಯನಂಗಳೋ ತನ್ನೊಳಗೆ ತೋಱುವೀಶಾಂಘ್ರಿನಖಧಾವಲ್ಯವೋ (ಆರಾಜ. ೫-೨); ಮದಧಾರಾಸಾರದಿಂ ಧಾರಿಣಿಯನಣಿಯರಂ ನಾಂದು ತದ್ಗಂಧಧಾವಲ್ಯದ ಮಿಂಚಿಂದೆಲ್ಲ ದಿಕ್ಕಂ ತೊಳಗಿ ಬೆಳಗುತಂ . . . ಒಪ್ಪಿದುದು ಮುದಿತ ನೀಲಾಚಲಾಭಂ ಮದೇಭಂ (ಮಲ್ಲಕಾ. ೪-೬೨೦). 'ಧಾವಲ್ಯಗಾತ್ರ' ಪರಾ. **ಧಾವಳ್ಯ** : ನೀರಿನಲ್ಲಿ ಶೈತ್ಯವು ತಗ್ಗಿಗೆ ಇಳಿಯೋಣವೂ, ಭೂಮಿಯ ಮೇಲೆ ಇರೋಣವೂ . . . ಅಣುತ್ವವೂ ಧಾವಳ್ಯವೂ ಅಣಗದೆ ಇರೋಣವೂ ಈ ಮೊದಲಾದ ಗುಣಗಳು ಉಂಟು (ಅನಂಶ. ೪೬). [ಸಂ.]

ಧಾವಲ್ಯಗಾತ್ರ (ನಾ). ಬೆಳ್ಳನೆಯ ಮೈಬಣ್ಣದವನು ; ಗೌರಾಂಗ : ಧಾತ್ರಪಂಚಮಶಿರಪಾತ್ರ ಪನ್ನಗಯಜ್ಞಸೂತ್ರ ತ್ರಿನೇತ್ರ ಧಾವಲ್ಯಗಾತ್ರ (ಭೈರವೇ. ೧-೪). [ಧಾವಲ್ಯ + ಗಾತ್ರ]

ಧಾವಳಿ$_1$ 'ದಾವಣಿ$_2$' ನೋ.

ಧಾವಳಿ$_2$ 'ಧಾಬಳಿ' ನೋ.

ಧಾವಳ್ಯ 'ಧಾವಲ್ಯ' ನೋ.

ಧಾವಿಸು (ಕ್ರಿ). ವೇಗವಾಗಿ ಚಲಿಸು ; ಓಡು : ಧಾವಿಸಿತ್ತತಿಜವದಿ ಕಡವೆ ಹಿಂಡೊಂದು (ಶ್ರೀರಾಮಾ. ೧೫೬-೧೧೦) ; ಅನಾಥ ಜೀವದಂತೆ ರೈಲು ಧಾವಿಸುತ್ತಿತ್ತು (ರೂಪಸ. ೧) ; ಪುರುಷರು . . . ಗಲಭೆ ನಡೆಯುತ್ತಿದ್ದ ಸ್ಥಳಕ್ಕೆ ಧಾವಿಸಿದರು (ಯೋಧರು. ೧). [ಧಾವನ + – ಇಸು$_3$]

ಧಾಷತ್ತು$_1$ (ನಾ). ಹೆದರಿಕೆ ; ಭಯ ; ದಿಗಿಲು : (ಕ).

[←ಪಾರ. ಹಿಂ. ಮರಾ. ದಹಶತ್]

ಧಾಷತ್ತು$_2$ (ನಾ). ದಿಟ್ಟತನ ; ಧೈರ್ಯ : (ಕ). [<ಸಂ. ಧೃಷತ್]

ಧಾಳ 'ಡಾಲು$_2$' ನೋ.

ಧಾಳಾಧೂಳಿ 'ದಾಟೂದಾಟಿ' ನೋ.

ಧಾಳಿ 'ದಾಟಿ' ನೋ.

ಧಾಳಿಕಾರ 'ದಾಟಿಕಾಱ' ನೋ.

ಧಾಳಿಕ್ರಮ (ನಾ). ಆಕ್ರಮಣವ ರೀತ್ರಿ,-ಬಗೆ : ಅರಸದ್ಧಾಳಿಕ್ರಮದೊಳ್ ಶಿವಾಪಂನ ಪಿಡಿದು ಮಗುಳೆ ಬಂದು ಪೂವಿನ ಪಡಂಗಿಲಿಯಪ್ಪಯಣವೀಡಿನೊಳ್ (ಸೌಇಇ. IX-1, ೧೦೦-೨೯ ; 1045).

[ಧಾಳಿ (<ದಾಟಿ) + ಕ್ರಮ]

ಧಾಳಿಗೊಳ್ (ಕ್ರಿ). ಆಕ್ರಮಣಕ್ಕೆ ಈಡಾಗು,-ಒಳಗಾಗು : ಧಾಳಿಗೊಂಡವರೊಳಗೆ ಮುನ್ನಿನ ಕಾಲನೇಮಿಯ ಪರಿಯ ಕದನವ ಹೋಲಿಸಲು ಬಹುದಲ್ಲಿ (ಕುಪ್ಯಾಆ. ಓರಿಇ. ೨೬-೨೭). [ಧಾಳಿ (<ದಾಟಿ) + ಕೊಳ್$_1$]

ಧಾಳಿಡು 'ದಾಟಿಯಿಡು' ನೋ.

ಧಾಳಿನಡೆಸು (ಕ್ರಿ). ೧. ಮೇಲೆ ಬೀಳು; ಮುತ್ತು ; ಮುತ್ತಿಗೆ ಹಾಕು; ಆಕ್ರಮಣ ಮಾಡು: ಮುಷ್ಕರದ ಸಮಯದಲ್ಲಿ ವಿದ್ಯಾರ್ಥಿಗಳು ಪೋಲೀಸ್ ಠಾಣೆಯ ಮೇಲೆ ಧಾಳಿ ನಡೆಸಿದರು (ರೂಢಿ). ೨. (ಬರಹ ಅಥವಾ ಮಾತಿನ ಮೂಲಕ) ಪ್ರತಿಭಟಿಸು ; ವಿರೋಧಿಸು : ನಾವು ಹೇಳಿ ಕೊಡುವವರ ಮೇಲೆಲ್ಲ ಪತ್ರಿಕೆಯಲ್ಲಿ ಧಾಳಿ ನಡೆಸೋಣ (ಶಾಲಮ. ೫೮).

[ಧಾಳಿ (<ದಾಟಿ) + ನಡೆಸು$_1$ (<ನಡೆಯಿಸು)]

ಧಾಳಿಯಿಡು 'ದಾಟಿಯಿಡು' ನೋ.

ಧಾಳಿವರಿ 'ದಾಳಿವರಿ' ನೋ.

ಧಾಟೂಧಾಟಿ 'ದಾಟೂದಾಟಿ' ನೋ.

ಧಾಟಿ 'ದಾಟಿ' ನೋ

ಧಾಟಿಡು 'ದಾಟಿಯಿಡು' ನೋ.

ಧಾಟಿವರಿ 'ದಾಳಿವರಿ' ನೋ.

ಧಿಂ (ನಾ). ಒಂದು ಅನುಕರಣ ಶಬ್ದ. 'ಧಿಮ್ಮೆನ್' ಪರಾ.

ಧಿಂಧಿಂ (ದ್ವಿರುಕ್ತಿ) : ಧಿಂಧಿಂ ಧಿಮಿಕ್ಕು ಧಿಮಿಕೆಂದಿಂದೀವರಲೋಲ ಲೋಚನೆಯು ಮುಂದೊಲವಿಂ ವ್ಯಂದಾರಕವಧುವೊರ್ವಳ್ ಕುಂದದ ಜಾಣಿಂದ ಮುರಜಮುಂ ಬಾಜಿಸಿದಳ್ (ಕಾಧಪು. ೬-೮೮) ; ತಂದೋಂ ಧಿತ್ತೋಂ ಧೋಮೆಂದೆನುತಂ ಧಿಂಧಿಂ ಧಿಮಿಧೀಧಿಮಿತೆಂದೆನುತಂ (ತುಂಗಧ. ೨).

ಧಿಂಕಿಡು 'ಧೀಂಕಿಡು' ನೋ.

ಧಿಂಕು 'ಧೀಂಕು' ನೋ.

ಧಿಂಗು, ಡಿಂಗು$_{೨}$, ದಿಂಗು (ನಾ). ೧. "ಉಲ್ಲಾಸ; ಸಂತೋಷ" (ಪ್ರಶಬ್ದ) : ಹೊಂಗಿತಿತ್ತಲು ವಿಜಯ ದುರ್ಜಯ ನುಂಗಿತಿತ್ತಲು ರಾಯಭೇರಿ ಮೃದಂಗ ವಿತ್ತಲು ಬಾಯ ಹೊಯ್ಗುಳವತ್ತ ಮೊಳಗಿದುವು ಧಿಂಗುಯಿತ್ತಲು ಧುರದ ಭಾರಿಯ ಕಂಗೆಡಿತೆ ಮೇಣತ್ತ (ಆಂಬಿಕಾ. ೨೮-೪೪). **ಡಿಂಗು$_{೨}$** : ೨. ಆಡಂಬರ; ಠೀವಿ ; ಡೌಲು : ಈಗ ನೋಡಿದರೆ ಅಂಗಳದಲ್ಲಿ ಚಪ್ಪರ ಸಹ ಡಿಂಗು ಆಗಿ ಬಿಟ್ಟಿದೆ (ಮುರಮ. ೪೪). **ದಿಂಗು** : ೩. ಅಬ್ಬರ ; ಗದ್ದಲ ; ಕೋಲಾಹಲ : ಬಲಸಹಿತಲೆ ದಿಂಗಿನಿಂದೈತಂದು ಸಾಗರನ ಬಲುಸಾಹಸಂಗಳ ಮ್ಮುರಿದು (ತುರಂಗ. ೨೧-೪೭).

ದಿಂಗಾಗು = ಠೀವಿಯಿಂದ ಕೂಡಿರು ; ಜೋರಾಗಿರು: ಇನ್ನೂ ಎಮಸೆ ಹುಟ್ಟಿದ ಬೋಳ, ಆಗಲೆ ಆ ಹುಡುಗೀನ ಕಟ್ಟಿಕೊಂಡು ಏನು ದಿಂಗಾಗಿದಾನೆ (ಮುಲಮ. ೦೪೭). [←ಮರಾ. ಧಿಂಗಾ]

ಧಿಕು (ನಾ). ತಿರಸ್ಕಾರವನ್ನು ಸೂಚಿಸುವ ಒಂದು ಮಾತು,–ನುಡಿ.

ಧಿಕುಧಿಕು (ದ್ವಿರುಕ್ತಿ): ಮುಕುತಿಯ ಒಲ್ಲೆ ಮುಕುತಾರ್ಥ ಇದನೆ ಬೇಕು ಧಿಕುಧಿಕು ಈ ಸೌಖ್ಯ ಬೇಡದವನ ಜನ್ಮ (ಪೋಷ್ಣದೀ. ೨೯-೨). [ಸಂ. ಧಿಕ್]

ಧಿಕ್ಕನೆ (ಅ). ಕೂಡಲೆ ; ಬೇಗನೆ : "ತುಂಹಂ, ಭೋರೆನೆ, ಭೋಂಕನೆ, ಬೆಕ್ಕನೆ, ಗಟಗಟನೆ, ಧಿಕ್ಕನೆ, ಘಟ್ಟಾಲನೆ, ಬೇಗಂ – ಈ ೮ ಶೀಘ್ರಂ" (ಕಶಾ. ೧೨-೨೨೯) ; "ಬೆಕ್ಕನೆ ಧಿಕ್ಕನೆ ಭೋರನೆಯನೆ ಭೋಂಕನೆನಲು . . . ಗಟಗಟನೆ . . . ಘ[ಟ್ಟಾ]ಲನೆನ್ನಲದು ಶೀಘ್ರಾರ್ಥಂ" (ಕವಿಕಂ. ೧೧೧) ; ಧಿಕ್ಕನೆ ಮನೆಯ ಶಟ್ಟಿ ಬಂದನಾ ಹೊತ್ತಿನೊಳು (ಕಾರಿರ. ದೇ. ೨೮೫-೬) ; ಇತ್ತ ಸದ್ಗುರುಮೂರ್ತಿಯಂ ಕಾಣುತ್ತ ಧಿಕ್ಕನೆ ಹದಱಿ ಸಂಭ್ರಮಿಸುತ್ತ ಬಸವನು . . . ಸಾಷ್ಟಾಂಗದೊಳೆಱಗಿ ನಮಿಸಿ (ಬಸಪು. ೪-೫೮) ; ಮಾಂಧಾತ ಸುತ್ಯಾಗವ ಬೇಡ ಬಂದವಗೆ ರಾಗದಿಂದೊಡಲ ಧಿಕ್ಕನೆ ಸೀಳ್ದು ಭಾಗವ ಕೊಟ್ಟುದನಱಿಯಾ (ಮೋಹತ. ೫-೫೪) ; ಧಿ[ಪ್ರಾಕಾಂ. ದಿ]ಕ್ಕನೇಳಿನ್ನು ಮುನ್ನಿನ ಭೋಗದಿಂದ ಶತಕೋಟಿ ಮಡಿ ಮಿಗಿಲಪ್ಪುದು (ಗುಭಚ. ೩-೧೦೬) ; ಸಂಸಾರ ಧಿಕ್ಕನೆ ಬಿಟ್ಟು ತಂದಗೆ ತಿರಿದು (ಷಡಿಲ. ೩-೦೩೨). 'ದಿಕ್ಕನೆ' ಪರಾ.

[ಧಿಕ್$_{೦}$ + – ಅನ್ನೆ$_{೧}$]

ಧಿಕ್ಕರಣೆ (ನಾ). ತಿರಸ್ಕಾರ: ನಿಂದೆ ; ಧಿಕ್ಕಾರ : ಸಗರನಂದನರುರಿಯೊಳಿದ್ದರು ಮುನಿಯ ಧಿಕ್ಕರಣೆಯ ವಿಘಾತಿಯಲಿ (ತೊರಠಾ. ೧-೦೩-೧೩).

[ಸಂ. ಧಿಕ್ಕರಣ]

ಧಿಕ್ಕರಿಸು (ಕ್ರಿ). ೧. ಹೀಯಾಳಿಸು ; ನಿಂದಿಸು ; ತಿರಸ್ಕರಿಸು; ಕಡೆಗಣಿಸು ; ಕೀಳುಮಾಡು : ನಿನಗೆ ತರಳತೆಯಿದೆತ್ತಣಿಂ ಬಂದುದೇದು ಧೈರ್ಯಮೆ ಧಿಕ್ಕರಿಸುವಂತೆಯುಂ ಅತಿಲಜ್ಜಿತೆಯಾಗಿ (ಕಾದಂಉ. ೭೩) ; ಜಾಯಿಲನ ಬಡನಡುವಂ ಚಕ್ಕನೆ ತುಂಡಿಸಿ ಮಲೆಯುತೆ ಧಿಕ್ಕರಿಸಿತ್ತತುಳ ಕೋಪನೀಡಂ ಕ್ರೋಡಂ (ಗಿರಿಕ. ೧-೦೦೫) ; ಪಿರಿಯರೆವೆಂದು ಧಿಕ್ಕರಿಸಿ ಬಯ್ವುದು ತಕ್ಕುದೆ (ಶಮದ. ೩೩೦ ಪ್ರಯೋ) ; ಇಂತು ಕಿನ್ನರ ಬೊಮ್ಮಿದೇವ ಮಹಂತನಂ ಧಿಕ್ಕರಿಸಿ ನುಡಿಯಲು (ಬಸಪು. ೪೯-೩೩); ದಿಕ್ಕರಿನಿಕುರುಂಬಮನುರುಮುದದಿಂ ಧಿಕ್ಕರಿಸುವ ಗಜಘಟೆ (ಜಯಭಾ. ೬-೦೮) ; ಮೃಡನ ಧಿಕ್ಕರಿಸುವೆನೆಂದು ಕೋಪವ ತಾಳಿ ನಡೆದ ಮನ್ಮಥ ಸೂಟಿಯಲಿ (ಮೋಹತ. ೬-೩೭) ; ರಕ್ಕಸನು . . . ಸರ್ವರ ಸೊಕ್ಕಿ ವೆಕ್ಕಸವಾಗಿ ಗರ್ವದಿ ಧಿಕ್ಕರಿಸಿ ನುಡಿವ (ಅಮೃತ. ೩-೩೨). [ಧಿಕ್ಕರಣೆ + – ಇಸ್ಕು]

ಧಿಕ್ಕವಣೆ (ನಾ). [ಸಂಗೀತ] (?) : ಝಂಕಾರದ ಸುಸಿರಿಕೆಯಂ ನೋಡಿ ಸಂಚದೊಳ್ ಸುಸಂಚನೆನಿಸಿ ಕರಂಗಳ ಬಹುರೇಖೆಯು ಚಾರಣೆಯ ಧಿಕ್ಕವಣೆಯು ನೇವಣೆ ಬೊಲ್ಲವಣೆಯ ಬಿಡಂಗು ಬಿತ್ತರಿಕೆಯುಂ ಬೀಱಿ ಬಾಜಿಸಃತ್ತಿರೆಯುಂ (ಶಾಂತೀಶ್ವ. ೬-೪೩ ಪ), [?]

ಧಿಕ್ಕಾರ (ನಾ). ೧. ನಿಂದೆ ; ತಿರಸ್ಕಾರ ; ಅಗೌರವ : ವಾರಿತಾಹಂಕಾರನಂ ಹೂಂಕಾರಮದಧಿಕ್ಕಾರನಂ ಗತಮಾರಕರ್ಮವಿಕಾರನಂ ವೀರಾವತಾರನನು (ಬಸಪು. ೫-೦೬) ; ವ್ಯಾಚೀನಸಾಪ್ರದಾಯ ಪಾಲಿಸಿದ ಭಾರತೀಯರಿಗೆ . . . ಸಾರ್ವಜನಿಕಸ್ಥಳಗಳಲ್ಲಿ ಧಿಕ್ಕಾರ (ಮುಕ್ಕಾರ. ೧೧೩ ಟೀಠಿಳಿ). ೨. ತಿರಸ್ಕಾರಕ್ಕೆ ಯೋಗ್ಯವಾಮದು ; ಹೀನಾಯ : ತಾಯಿಯ ಮಾತು ನಿನಗೂ ಧಿಕ್ಕಾರವಾಗಿದೆ (ಕಾವೇರಿ. ೩೪). [ಸಂ.]

ಧಿಕ್ಕಿಟ (ನಾ). ಒಂದು ಅನುಕರಣ ಶಬ್ದ : ಟಕ ವಿಕಟ ಧಿಕ್ಕಿ[ಪ್ರಾಕಾಂ. ಕ್ಕ]ಟ ಧಿಕಟ ಧಿಮ್ಮಿಕಟವೆಂಬಾ ರವವೆಸವ ಕೇಳಿಕೆಯನಾಡಿಸುತ್ತಿದ್ದಹರು (ಬಸಪು. ೩೭-೮) ; ನೀರಿನೊಂದಿಗೆ ಅರು ಬಂದಿಗೆ ಹೇರಿ ನೆತ್ತಿಯ ಮೇಲಕೆ, ಹಾರಿ ಧಿಕ್ಕಿಟ, ಕುಣಿದನೆಕ್ಕಟ ನೀರು ಹೊರಗಡೆ ಬೆಲ್ಲದೆ (ಕಎಪು. ೩೮-೭).

ಧಿಕ್ಕೃತ (ಗು). ೧. ತಿರಸ್ಕರಿಸಿದ ; ಕಡೆಗಣಿಸಿದ : "ಅವರೀಣಂ ಧಿಕ್ಕೃತಂ" (ಪಸ್ತುಕೋ. ೦೦೭-೫೦). (ನಾ). ೨. ಬೈಗುಳು ; ನಿಂದೆ. [ಸಂ.]

ಧಿಕ್ಕೃತಿ (ನಾ). = ಧಿಕ್ಕಾರ ೧. 'ಧಿಕ್ಕೃತಿಗೈ' ಪರಾ. [ಸಂ.]

ಧಿಕ್ಕೃತಿಗೈ (ಕ್ರಿ). ತಿರಸ್ಕಾರ ಮಾಡು ; ಅಂಗೀಕರಿಸದಿರಂ : ಹಿಮಕಣ ಸಂಗತ ಕುಂದವನಳಿವೊಲ್ ಹಿತವಾಗನುಭವಿಸಲುವಿಸಿಕೆಯ ಧಿಕ್ಕೃತಿಗೈಯಲುಮಾರಂ (ಶಾಕುಂತ. ೬೭ ಅಡಿಟಿ). [ಧಿಕ್ಕೃತಿ + ಗೈ (<ಕೆಯ್$_{೧}$)]

ಧಿಕ್ಕೃತೆ (ನಾ). ತಿರಸ್ಕಾರವನ್ನು ಹೊಂದಿದವಳು ; ತಿರಸ್ಕೃತೆ : ಎನ್ನಂ ಧಿಕ್ಕೃತೆಯಾಗಿ ತನ್ನ ಜನಮಂ ಬೆನ್ನಂಟಲುದ್ಯುಕ್ತೆಯಪ್ಪನ್ನಂ (ಶಾಳುಂಶ. ೮೫-೭). [ಸಂ. ಧಿಕ್ಕೃತಾ]

ಧಿಗಿಲ್ (ನಾ). ಒಂದು ಅನುಕರಣ ಶಬ್ದ : ಅಗಲಿದನೆಂದೆನ್ನ ಮನ ಧಿಗಿಲೆಂದಿತ್ತೆಲಗವ್ವಾ (ಬಸವ. ೩೭೪) ; ಜಗದಾಧಾರಕನದಟುಂ ಧಿಗಿಲೆನೆ ಮೇಲೇಱಿ ತುಳಿದು ರಾಕ್ಷಸನಸುವಂ ತೆಗೆದು (ಜಗವಿ. ೬-೩೭) ; ಬೆದಱಿತಾ ಯಾಸ್ಥಾನ ಧಿಗಿಲೆಂದುದು ಧರಾಧೀಶ್ವರನ ತಂದೆಯ ಹೃದಯದಲಿ (ಕುವ್ಯಾಕ. ೧-೨) ; ಧೊಕ್ಕು ಧಡ ಸಬುದಗಳಲಿಳಿ ಗುಮ್ಮಿಕ್ಕೆ ಕೂರುಮಸುಱಿಚೆ ದಿಗ್ಗಜ ಧಿಕ್ಕು ಧಿಗಿಲೆನೆ ಧೈರ್ಯಬಲರೊದಗಿದರು ಸಂಸದಲಿ (ತೊರಠಾ. ೪-೪-೩೭). 'ದಿಗಿಲ್' ಪರಾ.

ಧಿಗಿಲನೆ (ಅ). ೧. ಕೂಡಲೆ ; ಬೇಗನೆ ; ಸರಕ್ಕನೆ : ಧಿಗಿಲನೆ ಮನಂ ಬೆದಱಿ ಪರವೆ ಕಾಣುತ್ತಲ್ಲಿ (ಸಂಬಿರ. ೪-೦೧೦) ; ಯೋಗವಟ್ಟಿಗೆಯ ಎಱಿ ಸಡಿಲಿಸಿ ಧಿಗಿಲನೆದ್ದನು (ನಿಶಾಗ. ೪-೩-೩೮) ; ಧಿಗಿಲನೆದ್ದಳು ಕುಸುಮಾಜಿ ಕೈಮುಗಿದಿಂದು . . . ಸಂಗತನಿವಾಸಕೆ ಪೋಪೆನೆಂದಳು (ಭರಡ. ೬-೦೧) ; ಆಜು ಖಂಡದ ನೃಪರು ಚಕ್ರಿಗೆ ತೊಂಡರಪನೆಮ್ಮ ಮನೆಗೆ ಧಿಗಿಲನೆಯ್ದುವನೇನು (ಭರಡ. ೩೭-೪೯). ೨. ಭಯದಿಂದ ಕೂಡಿ ; ನಿಬ್ಬೆರಗಾಗಿ : ಧಿಗಿಲ[ಪ್ರಾಕಾಂ. ಲೆ]ನೆ, ಭುಗಿಲನೆ, ಭೋರನೆ ಎಂಬನುಕರಣಪದಂಗಳ್ ಬರೆಯುಂ . . . ಅವ್ಯಯಪದಂಗಳಪ್ಪವು (ಶಮದ. ೩೦೦ ವೃತ್ತಿ). 'ದಿಗಿಲನೆ' ಪರಾ. [ಧಿಗಿಲ್ + – ಅನ್ನೆ$_{೧}$]

ಧಿಟ್ಟ 'ದಿಟ್ಟ$_1$' ನೋ.

ಧಿಟ್ಟತನ 'ದಿಟ್ಟತನ' ನೋ.

ಧಿವಾಕು 'ದಿವಾಕು' ನೋ.

ಧಿಮಿ (ನಾ). ಒಂದು ಅನುಕರಣ ಶಬ್ದ : ಧಿಂಧಿಂ ಧಿಮಿ ಧೀ ಧಿವಿ ತ್ತೆಂದನುತಂ (ತುಂಗಭ. ೨).

ಧಿಮಿಧಿಮಿ (ದ್ವಿರುಕ್ತಿ): ಬೊಗರಿಯಂತೆಯೆ ತಿಗರಿಯಂತೆಯೆ ನೆಗೆದು ಕುಣಿದನು ಧಿಮಿಧಿಮಿ (ಕಎಪು. ೩೮-೮).

ಧಿಮಿಕಿಟ (ನಾ). ಒಂದು ಅನುಕರಣ ಶಬ್ದ ಮದ್ದಳೆಗಳಂ ಹರುಷದಿಂ ಧಿಂ ಧಿಮಿಕಿಟೆಂದು ಧ್ವನಿಮಾಡೆ (ಗುರುಚಾ. ೧-೦೯).

ಧಿಮಿಕು (ನಾ). ಒಂದು ಅನುಕರಣ ಶಬ್ದ : ತದ್ಧಿಮಿ ಧಿಮಿಕೆಂದು ಕುಣಿಸೆ ಕುಣಿದಾಡುತ್ತ (ವಿದಾಕ್ಕ. ೯೪-೩).

ಧಿಮಿಕ್ಕು (ನಾ). ಒಂದು ಅನುಕರಣ ಶಬ್ದ : ಧಿಂಧಿಂ ಧಿಮಿಕ್ಕು ಧಿಮಿಕೆಂದಿಂದೀವರಲೋಲಲೋಚನೆಯ ಮುಂದೊಲವಿಂ ವ್ಯಂದಾರಕವಧು ವೊರ್ವಳ್ ಕುಂದದ ಜಾಣಿಂದ ಮುರಜಮಂ ಬಾಜಿಸಿದಳ್ (ಕಾರಪು. ೬-೮೮).

ಧಿಮುಕ (ನಾ). ತಟ್ಟುವಿಕೆ ; ಚುಕ್ಕುಬಡಿಯಂವಿಕೆ : ಅತ್ತಾನ ಕಾಡ್ಯಾನ ಮತ್ತೇನು ಬೇಡ್ಯಾನ ಮೆತ್ತಮೆತ್ತನ ಧಿಮುಕವ ಕೊಟ್ಟರ ಗಪ್ಪುಚಿಪ್ಪಾಗಿ ಮಲಗ್ಯಾನ (ಗರಕಿ. ೮೫) ; "ಏಟುಂ" (ಗರಕಿ. ಕೋಪ). [?]

ಧಿಮ್ಮನೆ (ಅ). ಕೂಡಲೆ ; ತಟ್ಟನೆ : ಧಿಮ್ಮನೆ ಭೀಷ್ಮನಡಹಾಯ್ದು ಸೆಳೆದು ಕೊಂಡನು ಖಡುಗವನು (ಕುವ್ಯಾಸ. ೧೦-೩೬) ; ಎನಲುಂ ಧಿಮ್ಮನೆ ಕೊಳದೊಳಗೆ ನಿಂದನು ಮುಕುಂದನು ಸುರಪಸುತನಾನನವ ನೋಡುತದೇನ ದೇನೆನೆ ಬಿಕ್ಕಿ ಬಿರಿದಳುತ ತನಯನಳಿಯದೆ ಮಾಣ ಗಗನಧ್ವನಿಯೊಳಾದುದು ವಾರ್ತೆ (ಕುವ್ಯಾದ್ಯೋ. ೮-೬) ; ಧರಣಿಪತಿ ಮುನಿಸಾರ್ವಭೌಮನ ಬರವ ಕಾಣುತ ಧಿ [ಪಾಠಾಂ.ದಿ] ಮ್ಮನುರುವಿಪ್ಪರವನಿಳಿದಿದಿರ್ವಂದು (ತೊರಕಾ. ೧-೯-೩೦) ; ಆ ನುಡಿಗೆ ಸುಕೇತು ಕಿಸುಗಣ್ಣೆ ಗಡಿಗೊಂಡು ತನ್ನಾ ತೇರಿನೆಳಿಗೆ ಧಿಮ್ಮನೆ ಧುಮ್ಮಿಕ್ಕಿ (ರಾಮಾಶ್ವ. ೯೫-೩೪) ; "ರಭಸದಿಂದ" (ಪ್ರಭಣ್ಣ) ; ಧಿಮ್ಮನೇ ಬರಲಿಹರು ಈ ದಿನ ಶುಂ ಮಹಾಶಯರು (ಅಠಕೋ. ೩). 'ದಿಮ್ಮನೆ' ಪರಾ. [ಧಿಂ + – ಅನೆ$_1$]

ಧಿಮ್ಮಿಕಿಟ (ನಾ). ಒಂದು ಅನುಕರಣ ಶಬ್ದ : ಟಕ ವಿಕಟ ಧಿಕ್ಕಟ ಧಿಕಟ ಧಿಮ್ಮಿಕಿ [ಪಾಠಾಂ. ಕ]ಟವೆಂಬಾ ರವವೆಸವ ಕೇಳಿಕೆಯನಾಡಿಸುತಿದ್ದಹರು (ಬಸಪು. ೩೭-೮).

ಧಿವ್ಮೆನ್ (ಕ್ರಿ). ಧಿಂ ಎಂದುಂ ಶಬ್ದವಾಗುಂ : ದಂಧಣಂ ಧಳಧಳ ಧಳಂಧಳ ಧ್ವನಿಗೆ ದಿಕ್ಸಂಧಿಗಳ್ ಸಡಿಲಲಾ ಫಣಪ ದಿಕ್ಕರಿಗಳ ಶಿರಂ ಧಿವ್ಮೆನುತ್ತೆ ಕಿವುಡೆಸೆಯಲಾ . . . ಜಗದೊಳಂಧಕಾಸುರನ ಭೇರೀರವಂ ಪೊಣ್ಮಿದುದು (ಜಿಬಪು. ೪೭-೩೦). [ಧಿಂ + ಎನ್ಸ್$_1$]

ಧಿರು (ನಾ). ಭಲೆ, ಭಾವು ಎಂಬಂತೆ ಮೆಚ್ಚಿಕೆಯನ್ನು ಸೂಚಿಸುವ ಒಂದು ಮಾತು.–ಕೊಂಡಾಟದ ನುಡಿ : ಧಿರು ಮಾಧವಿಯೂರ್ವಸಿ ಹೋಯಿರೆ ನಚ್ಚಣಿ ರಂಭೆ ಭಲ ತಿಲೋತ್ತವೆ ... ಎನೆ ಪೊಗಟ್ಟರಲ್ತೆ ಸುರಭಾರತಿಯರ್ (ಅನಂಪು. ೪-೯೧) ; ಮುಂದೆ ಪಾಯವಧಾರು ರಿವುನ್ನಪ ಬಂದಿಕಾಱಿವಧಾರು ಧಿರುಪಯವೆಂದು ಕಳಕಳ ಗಜಱು ಮಿಗೆ ಕುರುಭೂಮಿಗೈತಂದ.(ಕುವ್ಯಾದ್ಯೋ. ೧-೦೯).

ಧಿರುಧಿರು (ದ್ವಿರುಕ್ತಿ) : ಪೂತು ಸಾರಥಿ ಭಾವು ಮರುಳೇ ಸೂತ ಧಿರ.ಧಿರು ಎನುತ ರಥಿಕವ್ರಾತ ಮಿಗೆ ಬೋಳ್ಕೆಸಿಕೊಂಡರು ಹಯದ ವಾಘೆಗಳ (ಕುವ್ಯಾಧೀ. ೪-೯೩) ; ಹಳುರೆ ಧಿರುಧಿರು ಭಾವು ಮರುಳು ಮಂಗಳೆ ಮಹಾಸಚಿಯಾದಿಪ್ರಾಯಾಲಲನೆಯವಧಾರೆಂಬ ದನಿ ಕೇಳಿತು ರಘುಪತಿಯ (ತೊರಕಾ. ೬-೫೩-೪೯).

ಧಿರುರೆ, ಧೀರುರೆ (ನಾ). = ಧಿರು : "ಅರರೆ ಧಣಂ ಭಾವು ಭಳಿರೇ ಧಿರುರೇ [ಪಾಠಾಂ. ಧೀರುರೆ] ಮರುಳು ಪೂತುರೆ ಪಾಯ್ಕು ಚಾಗು ಸಲಿ ಸುಂಪುರೆಯೆನೆ ಕೊಂಡಾಟದ ನುಡಿ" (ಭಾರನಿ. ೪೬) ; ಧಿರುರೆ ವಾಯವಧಾರೆನಲು ಸತಿಯರ ಸಮೇಳದಲಬಲೆ ಮಣಿಬಂಧುರದ ಹಾವುಗೆಯಿಂದ ಬಂದಳು ಮಜ್ಜನದ ಮನೆಗೆ (ತೊರಕಾ. ೧-೦೪-೦೪) ; ಭಾಪುರೆ ಧಿರುರೆ ತಿರುರೆ ಝಣುರೆಂಬ ನುಡಿಗಳೊಪ್ಪಿದುವು (ಭರಚ. ೬೩-೪೬) ; ಸುರರು ಭಾಪು ಧಿರುರೆ ಎನಲು ಹರಿ ಸುರೇಂದ್ರ ಜೀಯಮೆನಲು (ಸುಸಾಕ. ೪೦-೩). **ಧೀರುರೆ** : ವೇಲಿನ 'ಭಾರನಿ' ಪ್ರಯೋಗದ ಪಾಠಾಂತರವನ್ನು ನೋಡಿ.

ಧಿವಡ (ನಾ). ವಿಷವಿಲ್ಲದ ಸರ್ಪಗಳಲ್ಲಿ ಒಂದು ಬಗೆ : ನಿರ್ವಿಷಸರ್ಪಗಳಲ್ಲಿ ಹೆಬ್ಬಾವು ಶ್ರೇಷ್ಠ. ಇವಲ್ಲದೆ ಮಣ್ಣುಮುಕ್ಕ, ಧಿವಡ, ಧಾಮಣ, ಅಧೇಲಾ, ಹಸರುಹಾವು ಮುಂತಾದ ಜಾತಿಗಳು ಹಲವುಂಟು (ಕಭಾಗ. ೬೭).

[?]

ಧಿಷಣ (ನಾ). ೧. ಬುದ್ಧಿವಂತ ; ಮೇಧಾವಿ ; ಪಂಡಿತ : "ಪ್ರತಿಭಾ ಸಂವಿತ್ಪ್ರಜ್ಞಾಮತಿ . . . ಪ್ರತಿಪತ್ತಿ ಧೀ ಮನೀಷಾನ್ವಿತನಪ್ಪಂ ಪಂಡಿತಂ ವಿಪಶ್ಚಿದ್ಧಿಷಣಂ" (ವಸ್ತು.ಕೋ. ೯೮-೩) ; ಧಿಷಣರ ಕೃತಿಗಳೊಳಿಸೆವಭಲಪಿತ ಗುಣಂಗಳನೆ ಬಿಸುಟು . . . ದೋಷಾವಿಷಮನೆ ಪೊರ್ದಿರ್ಪ್ಪವಲ್ತೆ ಕುಕವಿ ಬಕಂಗಳ್ (ಆದಿಪು. ೧-೩೨) ; ಎಸೆವ ಸತ್ಯತ್ಯಾಗ ಶೌರ್ಯೋಚಿತ ವ್ಯವಸಾಯೇತರನಪ್ಪವಂಗೆ ಧಿಷಣರ್ ನಿಮ್ಮಂದಿಗರ್ . . . ಈವುದೆ ಖಿಗೋದ್ಯಚ್ಚಕ್ರವರ್ತಿತ್ವಮಂ (ಪಂಚತಂ. ೨೫೬-೮) ; ಧಿಷಣನೆನಿಪ್ಪ ಮಂತ್ರಿ ಗುಚಿತಂ ಪತಿಕಾರ್ಯಂ (ಜಗವಿ. ೫-೬೪). ೨. ದೇವತೆಗಳ ಗುರು ; ಬೃಹಸ್ಪತಿ : "ವಾಚಸ್ಪತಿಃ, ಆಂಗಿರಸಃ, ಬೃಹಸ್ಪತಿಃ, ಗುರುಃ, ಜೀವಃ, ಧಿಷಣಃ, ತ್ರಿದಶಾಚಾರ್ಯಃ,ಚಿತ್ರಶಿಖಂಡಿಪ್ರಸೂತಿಃ (ಕಥ್ಯತೇ)–ಈ ೮ ಬೃಹಸ್ಪತಿಯ ಪೆಸರ್" (ಹಲಾಯು. ೯-೪೭) ; ದಂಡದೊಳ್ ರೋಹಿಣೀ ನಂದನನಂತಾ ದ್ವಂದ್ವದೊಳ್ಶುತಮೆನೆ ಧಿಷಣಂ ಕರ್ಕಿಯೊಳ್ಸಂತಮಿಂತಿರ್ಪಿನಂ . . . ಪುತ್ರನಂ ಪೆತ್ತಳಾಗಳ್ (ಸುಕುಮಾ. ೧೦-೩೬) ; ಆ ದೇವರ್ಷಿ ನಿಕಾಯಂ ಧಿಷಣಯುತಂ ಮನದೊಳ್ಪಿಂದಿಂತು ಪೊಗಳ್ದುದು (ವಿಷ್ಣುಪು. ೩-೧೬೧). ೩. (ಆಧ್ಯಾತ್ಮಿಕ ವಿಷಯಗಳಲ್ಲಿ) ಗುರು. [ಸಂ.]

ಧಿಷಣೆ (ನಾ). ಬುದ್ಧಿಶಕ್ತಿ ; ಪ್ರಜ್ಞೆ : "ಬುದ್ಧಿಃ, ಮನೀಷಾ, ಧಿಷಣಾ, ಧೀಃ . . . ಚೇತನಾ–೧೪ ಬುದ್ಧಿಯ ಹೆಸರುಗಳು" (ನಿದ್ಯಾಂತಿ. ೪೪).

[ಸಂ. ಧಿಷಣಾ]

ಧಿಷ್ಣ (ನಾ). ೧. ರಾಕ್ಷಸರ ಗುರು ; ಶುಕ್ರಾಚಾರ್ಯ : "ಉಶನಾ, ಶುಕ್ರಃ, ಕಾವ್ಯಃ, ದೈತ್ಯಗುರುಃ, ಭಾರ್ಗವಃ, ಕವಿಃ, ಧಿಷ್ಣ್ಯಃ–ಈ ೭ ಶುಕ್ರನ ಪೆಸರ್" (ಹಲಾಯು. ೯-೪೪). 'ಧಿಷ್ಣ್ಯಶಿಷ್ಯ' ಪರಾ. ೨. ಸ್ಥಾನ ; ಜಾಗ ; ನಿವಾಸ ; ಮನೆ : "ಆವಾಸಃ . . . ಮಂದಿರಂ, ಧಿಷ್ಣ್ಯಂ, ಧಾಮ . . . ನಿವಸನಂ, ಆಲಯಃ – ಈ ೩೧ ಮನೆ" (ಹಲಾಯು. ೪೯-೦೩೬) ; ಧಿಷ್ಣ್ಯವರಧರ ವಿಗತತೃಷ್ಣಾಘ ರಜತಗಿರಿಧಿಷ್ಣ್ಯ (ಪದ್ಮಕಾ. ೭-೦) ; ತುಷ್ಟಮಾನಸರಾಗಿ ತಿರುಗಿ ತಾವಿಟ್ಟಿದಿರ್ದ ಧಿಷ್ಣ್ಯಕ್ಕೆ ಬರುತ (ವರ್ಧವ. ೩-೪೨). ೩. ಬೆಂಕಿ ; ಅಗ್ನಿ : "ಧಿಷ್ಣ್ಯಂ ಗೃಹರ್ಕ್ಷ ಪಾವಕನಾಮಂ" (ವಸ್ತು.ಕೋ. ೧೩೦-೦೩). 'ಧಿಷ್ಣ್ಯನೇತ್ರ' ಪರಾ. ೪. ತಾರೆ ; ನಕ್ಷತ್ರ : "ರಿಕ್ಷಮುಡು ತಾರೆ ತಾರಗೆ ನಕ್ಷತ್ರಂ ಜ್ಯೋತಿ ತಾರಕಂ ಭಂ [ಧಿಷ್ಣ್ಯಂ]" (ವಸ್ತು.ಕೋ. ೧೪-೭೮). 'ಧಿಷ್ಣ್ಯವರ' ಪರಾ. ೫. ನಕ್ಷತ್ರಪುಂಜ ; ಅಶ್ವಿನೀ, ಭರಣೀ ಮೊದಲಾದ ಇಪ್ಪತ್ತೇಳು ನಕ್ಷತ್ರಗಳು. ೬. ಬುದ್ಧಿವಂತ ; ಧೀಮಂತ ; ಮೇಧಾವಿ. ೭. ಬ್ರಹ್ಮ ; ಚತುರ್ಮುಖಿ : "ಭವನಂ ನಕ್ಷತ್ರ ಧೀಮಾನ್ವನಜಜಮಿವು ಧಿಷ್ಣ್ಯಭಧಾನಂ" (ನಾನಾರ. ೬೦). ೮. ಭಕ್ತ (?) : ಧಿಷ್ಣ್ಯಗಣಸೇವ್ಯೋನ್ಮದಿಷ್ಣು ದನುಜ ನಿರಾಕರಿಷ್ಣು ಜಯ ವಿಶ್ವನಾಥ (ಪದ್ಮಕಾ. ೭-೦). [ಸಂ.]

ಧಿಷ್ಣ್ಯನೇತ್ರ (ನಾ). ಕೆಂಡಗಣ್ಣ ; ಶಿವ : ಧಿಷ್ಣ್ಯನೇತ್ರಾಪತ್ರಪಿಷ್ಣು ದಕ್ಷ ಸಹಿಷ್ಣು . . . ಜಯ ವಿಶ್ವನಾಥ (ಪದ್ಮಕಾ. ೭-೧).
[ಧಿಷ್ಣ್ಯ + ನೇತ್ರ]

ಧಿಷ್ಣ್ಯವರ (ನಾ). ನಕ್ಷತ್ರಗಳ ಒಡೆಯ ; ತಾರಾಪತಿ ; ಉಡುಂಪತಿ ; ಚಂದ್ರ. 'ಧಿಷ್ಣ್ಯವರಧರ' ಪರಾ. [ಧಿಷ್ಣ್ಯ + ವರ]

ಧಿಷ್ಣ್ಯವರಧರ (ನಾ). ಚಂದ್ರನನ್ನು ಧರಿಸಿದವನು ; ಶಿವ: ಧಿಷ್ಣ್ಯವರಧರ ವಿಗತತೃಷ್ಣೌಘ ರಜತಗಿರಿಧಿಷ್ಣ್ಯ . . . ಜಯ ವಿಶ್ವನಾಥ (ಪದ್ಮಕಾ. ೭-೧).
[ಸಂ.]

ಧಿಷ್ಣ್ಯಶಿಷ್ಯ (ನಾ). ಶುಕ್ರಾಚಾರ್ಯನ ಶಿಷ್ಯ ; ರಾಕ್ಷಸ ; ಅಸುರ : ಧಿಷ್ಣ್ಯಶಿಷ್ಯಾರಿನಂತ ಕೃಷ್ಣಕಂಕಾಳಕರ . . . ಜಯ ವಿಶ್ವನಾಥ (ಪದ್ಮಕಾ. ೭-೧). [ಧಿಷ್ಣ್ಯ + ಶಿಷ್ಯ]

ಧಿಜ್ಜನೆ (ಅ). ಜೋರಾಗಿ ; ಗಿರ್ರನೆ ; ರಭಸವಾಗಿ : ಹೊಡೆದ ನಿಷ್ಠುರಹತಿ ಗಂಧ್ರ್ವಮೆಗೊಂಡು ಬೇರೊಡಲ ಧಿಜ್ಜನೆ ತಿರುಗಿಸುತೆ (ಮೋಹತ. ೩೮-೬೦).
[ಧಿಜ್ಜ್ + – ಅನೆ]

ಧೀ (ನಾ). ಅರಿವು ; ಬುದ್ಧಿ ; ಜಾಣ್ಮೆ ; ವಿವೇಕ : "ಪ್ರೇಕ್ಷಾ, ಪ್ರಜ್ಞಾ, ಪ್ರತಿಭಾ, ಧೀಃ, ಧಿಷಣಾ . . . ಉಪಲಬ್ಧಿಃ – ಈ ೧೩ ಬುದ್ಧಿ" (ಹಲಾಯು. ೫೫-೧೭೯) ; ಗಾಯತ್ರಿಯನೆ ಪರಮಮಂತ್ರವೆಂದಾರ್ಯರ್ ಧೀಯಂ ಪ್ರಚೋದಿಸೆಂದನುದಿನದಿ ಬೇಡಿದರು ಶ್ರೇಯಸ್ಸು ಧೀಮಹಿಮ (ಮಂಕುಶಕ. ೫೪೬) ; ಧೀಯೆಂದರೆ ಶಾಸ್ತ್ರದಿಂದಲೂ, ಅನುಭವದಿಂದಲೂ, ಹಿತಾಹಿತವನರಿಯುವ ಬುದ್ಧಿಯು (ಆರ್ಯಧ. ೨೨೨). [ಸಂ.]

ಧೀಂಕಿಡು, ದಿಂಕಿಡು, ದೀಂಕಿಡು, ಧಿಂಕಿಡು (ಕ್ರಿ). ೧. ನೆಗೆ; ಜಿಗಿ; ಎಗರು; ಹಾರು : "ಧೀಂಕಿಡುವುದೆಂದುಂ, ಕೊಣಕಿಡುವುದೆಂದುಂ, ಸರಳಿಸಿತೆಂದುಂ ದಾಂಟುವುದರ್ಕೆ ಪೆಸರ್" (ಕಶಸಾ. ೬-೧೧೧) ; ಉಪವನತಳದೊಳ್ ತಳ್ತುದೆಂಬಂತೆ ದಿಗ್ರಾಜಿಗಳೊಳ್ ಧೀಂ[ಪಾಠಾಂ. ಧಿಂ]ಕಿಟ್ಟುದೆಂಬಂತೆ . . . ಒಗೆದತ್ತುತ್ತಾರರಾಗಂ ತ್ರಿಭುವನಭವನೋದ್ಭೇದಿ ಶಂಖಪ್ರಣಾದಂ (ಶಾದಂಉ. ೪೨೪) ; ಮುಂಕೊಂಡು ಧೀಂಕಿಟ್ಟು ಪಾಯುತ್ತಮರುತ್ತೋಡುತ್ತೆ ಪೀಱುತ್ತಡಸಿ ಕೆಡಪಿತೊಂದೇಣನಂ ಚಿತ್ರಕಾಯಂ (ಗಿರಿಕ. ೧-೧೫) ; ನೆಲಗಟ್ಟಿನೊಳ್ ಮೆಱೆದು ಮಾರ್ಪೊಳೆಯುತ್ತಿರೆ ಕಂಡು ಕುಂತಲಂ ಕೆದಱ್ ಕುಚಂ ಕದಕ್ಕದಿಸೆ . . . ಇದೊಂದು ದೂಳಿಚಿತ್ರದ ಖಣಮೆಂದು ಮೈಯೊರಸಿ ಧೀಂಕಿಡುವರ್ ಕಡೆಯೊಳ್ ಲತಾಂಗಿಯರ್ (ಅನಂಪು. ೬-೪೪); ಧೀಂಕಿಟ್ಟನಲ್ಲಿಂದೆ ಕಲಿ ಹನುಮನಾ ರಣದೊಳಂಕಿತದ ಕುಶನ ಬಾಣಂಗಳಿಂ (ಶ್ರೀಮಿಥಾ. ೨೧-೧೦) ; ಅಬುಲ್‌ಫಜಲ್, ಧೀಂಕಿಟ್ಟು ಬಂದು . . . ಪ್ರಶ್ನಿಸಿದ (ಸೂರಜ. ೧೪) ; ಓಡು, ಧೀಂಕಿಡು, ಹರಿ, ಧಾವಿಸು (ಕಂಸುಹು. ೮೦). ೨. ಹಬ್ಬು ; ಚಾಚು ; ಪಸರಿಸು ; ದಾಂಗುಡಿಯಿಡು : ಸಂತತಂ ಸೌಭಾಗ್ಯಲತೆ ಧೀಂಕಿಡುತಿರಲ್ (ಮಾನರ. ಹ. ೬೫-೩೨) ; ನಿಸ್ಸಾಳಧ್ವನಿ ದಿಕ್ತಟಕ್ಕೆ ಧೀಂ[ಪಾಠಾಂ. ದಿಂ]ಕಿಡೆ ಭೇರೀರವಂ ಬೊಮ್ಮಾಂಡವನಡರೆ (ನಂಬಿರ. ೧೮-೫೯) ; ನಾನಾಪಟಹಪಟುನಿನಾದಂ ನಭಕ್ಕಾಕ್ಷಣಂ ಧೀಂಕಿಡೆ (ಕುಸುಮಾ. ೩-೨೮) ; ಇಂತು ತಪೋಬೀಜಂ ಚಿತ್ತಭೂಮಿಯೊಳ್ ಬೇರೂಱ್ . . . ನಿಷ್ಠೆಯೊಳ್ ಕುಡಿವರಿದು ಪರಿದು ಪರ್ವಿ ಪುರಹರನರಸಿಯ ಮೆಲ್ಲಡಿಗಳ್ಗೆ ನಿಲ್ಲದೆ ಧೀಂಕಿಡೆ (ಗಿರಿಕ. ೩-೧೨ ಪ). ೩. ಮುಂದುವರಿ ; ಮುನ್ನುಗ್ಗು : ಪೂಡೆಯಲರಾತನಕ್ಷಿಗಮಗೋಚರಮಾಗಿರೆ ನೀಱ್ಕೆ ನೋಡಿ ಧೀಂಕಿಡುವ ರಥಧ್ವಜಾಗ್ರಮನದುಂ ಮಸುಳುತ್ತಿರೆ ತೇರ ಧೂಳಿಯಂ ಬಿಡೆ ನಡೆ ನೋಡಿ (ಜಗವಿ. ೫-೧೦೦) ; ಝಗಝಗಿಸಿ ಹೊಳೆ ಹೊಳೆವ ಬಾಯ್ದಾರೆಗಳ ಬೆಳಗಿನ ದಾಳಿ ಧೀಂಕಿಡೆ ಮೊಗೆದವರ್ಜುನನಂಬುರಿವುಚತುರಂಗಜೀವನವ (ಕುಮಾಧೀ. ೮-೫೧). **ದಿಂಕಿಡು** : ೧. "ದಿಂಕಿಡುದಾಂಟು ಮಿಳ್ಳಿಸೆನೆ ಸರಳಿಸೆನೆ ಕೊಣಕಿಡುವುದಕ್ಕು" (ಶಬ್ದಮಂ. ೩೨) ; ಪರಿವ ಲೋಹಿತದಿಂ ಪರಿದಂಬರಕ್ಕೆ ದಿಂ[ಪಾಠಾಂ. ಧಿಂ]ಕಿಡುವ ಶಿರಂಗಳಿಂದತಿಭಯಂಕರಮಾದುದು ಸಂಗರಾಂಗಣಂ (ಪಂರಾಮಾ. ೧೩-೧೦೪) ; ಜಳಮೃಣಾಳನಾಳಮಂ ಜಳವ್ಯಾಳಮೆಂದು ಕೆಲದ ಬಿಲದಿಂ ಪಿಡಿಯಲೆಂದು ದಿಂ[ಪಾಠಾಂ. ಧೀಂ]ಕಿಡುವ ವಿಷಾಪಹಾರಶಾಲೂರಜಾಲಂಗಳೊಳಂ (ಚಂದ್ರಪು. ೫-೪೦ ಪ). ೨. ಅಷ್ಟದಿಗ್ಭಿತ್ತಿಯಂ ದಿಂ[ಪಾಠಾ. ಧೀಂ]ಕಿಟ್ಟತ್ತು ರಘುಪ್ರವೀರವಿಜಯಪ್ರಸ್ಥಾನಭೇರೀರವಂ (ಪಂರಾಮಾ. ೧೨-೧೭). ೩. ಕಡುದೀರ್ಘ ಗುಹೆ ಬಲುಕಾಲ ಮುಚ್ಚಿದ್ದು ಬಾಯ್ಬಿಡುವಾಗ ಬೆಂಕಿ ದಿಂಕಿಡದೆ (ಧರಚ. ೨೮-೭೬). **ದೀಂಕಿಡು** : ೧. ನಲಿನಲಿದು ದೀಂ[ಪಾಠಾಂ. ಧಿಂ]ಕಿಟ್ಟು ತಾಯ ಮುಂದೆ ಪರಿವೆಳಗಱುವಿನಂತೆ (ವರ್ಧಪು. ೧೧-೯೯ ಪ) ; ಜಿಂಕೆಯೊಲು ದೀಂಕಿಡುವ ಸೋಂಕು ಸೊಗವೇ (ಗರಿ. ೪-೭). **ಧಿಂಕಿಡು** : ೧. ಜಲಧಿಯನು ಧಿಂಕಿಟ್ಟು ಸೀತಾಲಲನೆಗುಂಗುರವಿತ್ತು (ಅರ್ಜುವಿ. ೧೪-೧೦). ೩. ಪಂಚವಟಿಯಿಂದ ಅಣ್ಣ ರಾವಣನಲ್ಲಿಗೆ ಓಡಿಹೋದ ಶೂರ್ಪಣಖಿಯಂತೆ ಗಾಢಾಂಧಕಾರದ ಕಾಡಿಗೆ ಧಿಂಕಿಟ್ಟುದು (ಹರಿಶ. ೪೮). [ಧೀಂಕು + ಇಡು]

ಧೀಂಕು, ದಿಂಕು, ದೀಂಕು, ಧಿಂಕು (ನಾ). ೧. ನೆಗೆತ ; ಜಿಗಿತ ; ಹಾರಿಕೆ. 'ಎರಲೆಧೀಂಕು', 'ಧೀಂಕಿಡು' ಪರಾ. **ದೀಂಕು** : ೧. ದಿಂಕಿಂ ತೆಗೆನೆಱ್ ದಿಸೆ ಚಾಪಂ ಕುಟಿಲತೆಗೆಟ್ಟು . . . ಬಿಲ್ಲ ಕೊಪ್ಪು ಕೊಡಂಕೆಯ ಕೊಪ್ಪಿನ ವೊಲಮರೆ (ಶಾಂತಿಪು. ೪-೪೩). 'ಎರಲೆದಿಂಕು', 'ದಿಂಕುಗೊಳ್', 'ದಿಂಕುವಾಱು' ಪರಾ. ೨. ಉಲ್ಲಾಸದಿಂದ ಕುಣಿದಾಡುವಿಕೆ, – ಕುಪ್ಪಳಿಸುವಿಕೆ : (ಕ). **ದೀಂಕು** : ೧. 'ದೀಂಕಿಡು' ಪರಾ. **ಧಿಂಕು** : ೧. ಮಱೆಗಱಿಗೆಯೊಂದು ಧಿಂಕಾದತ್ತು ಹುಡುಗನೆನಿಸುವ ಪಾರ್ವನಾಪರಶುರಾಮನೆಚ್ಚಂಬಿಗೊಳಗಾದುದಬ್ಧಿ (ವೀರಶೈಪು. ೨-೩-೧೮). [?]

ಧೀಂದ್ರಿಯ (ನಾ). ಮನಸ್ಸು, ಕಣ್ಣು, ನಾಲಗೆ, ಮೂಗು, ಚರ್ಮ ಮತ್ತು ಕಿವಿಗಳೆಂಬ ಆರು ಜ್ಞಾನೇಂದ್ರಿಯಗಳು : "ಧೀಂದ್ರಿಯಂ – ಮನೋನೇತ್ರಾದಿ ಮನೋನೇತ್ರಜಿಹ್ವಾಘ್ರಾಣತ್ವಕ್‌ಶ್ರೋತ್ರಗಳ ಹೆಸರು" (ಸಿದ್ಧಾಂತಿ. ೪೬). ಪ ಕೆಲವರು ಮನಸ್ಸನ್ನು ಬಿಟ್ಟು ಐದು ಜ್ಞಾನೇಂದ್ರಿಯಗಳೆಂದು ಹೇಳಿದ್ದಾರೆ. ಕೆಲವರು ಮನಸ್ಸನ್ನೂ ಸೇರಿಸಿ ಆರು ಎಂದು ಹೇಳಿದ್ದಾರೆ. [ಧೀ + ಇಂದ್ರಿಯ]

ಧೀತೃಷ್ಣೆ (ನಾ). ಬುದ್ಧಿಯ ಬಯಕೆ ; ಜ್ಞಾನಪಿಪಾಸೆ : ನಿನ್ನೀ ಮೇರು ಕೃತಿಯ . . . ಮಾನಸಸರೋವರದಿ ಪೂರ್ಣತೃಪ್ತಿಯನೀಂಟಿ ಶಾಂತವಾದುದು ನನ್ನ ಧೀತೃಷ್ಣೆ (ಅಗ್ನಿಹಂ. ೮೯-೭). [ಧೀ + ತೃಷ್ಣೆ]

ಧೀಬಿಗರ್ತ ? (ನಾ). ನರಕಕೂಪ (?) : ಧರ್ಮಮನಿದಂ ಪರಿಪಾಲಿಸಿದಂಗೆ ಸರ್ಬ್ಬಪಾಪಕ್ಷಯವುದ್ಧತಿಕ್ಕೆಯಿನಿದಕ್ಕಳಿವಂ ಬಗೆದಂಗ ಶೇಷವಂ ಶಕ್ಷಯವಕ್ಕುವಾ ಖಳನಿಳಾಮರ ಗೋನಿವಹಂಗಳಂ ಸ್ವಹಸ್ತಕ್ಷತಿಗೆಯ್ದು ಪಾತಕನವಂ ನೆಱ್ ಬೀಳುವ ಧೀಬಿಗರ್ತ್ತದೊಳ್ (ಶಾಸಹ. ೯೭ ; ೧೦೭೯). [?]

ಧೀಮಂತ (ನಾ). ೧. ಬುದ್ಧಿವಂತ ; ಜಾಣ ; ಮೇಧಾವಿ : ಮಹಾಮಹಿಭುಜರ್ ಶೌರ್ಯೋಗ್ರ ಧೀಮಂತರುಂಕದ ಸಾಮಂತರುದಾರವೀರವಿಭವ ಶ್ರೀಮನ್ನೆಯರ್ (ಪುಷ್ಪಪು. ೮-೩೯) ; ಕುವರವಿಷ್ಣು ಯೋಗ್ಯಪುತ್ರ, ಧೀಮಂತ, ಸತ್ತ್ವಶಾಲಿ (ಶಾಂತಲಾ. ೩೮). ೨. ಜ್ಞಾನಿ ; ಪಂಡಿತ : ಧೀಮಂತಂ ದೇವದೇವಂ ಪುಲಿಗಿರಿನಗರೀಶಾಸನಾಂಕಂ ಮೃಗಾಂಕಂ (ಸೋಮೇಶ. ೧) ; ಧೀಮಂತರುದ್ದೀಪ್ತ ಚಿತ್ತದುಳಿವನು ಮೆರೆವ ನಾರಣನ ಕರುಣಾಕಟಾಕ್ಷ (ಮಲಿದೇ. ೫೮-೯). [ಸಂ. ಧೀಮತ್]

ಧೀಮಂತಿಕೆ (ನಾ). ಬುದ್ಧಿವಂತಿಕೆ ; ಜಾಣ್ಮೆ : ಕಾವೇರಿಯ . . . ದರ್ಶನ ತೆಗೆದುಕೊಂಡವರಲ್ಲಿ ಸ್ವಾತಂತ್ರ್ಯ, ಧೀಮಂತಿಕೆ, ಗಂಭೀರತೆಯನ್ನು ತುಂಬಿ ಕಳುಹಿಸುತ್ತಿದೆ (ಅವತಂ. ೨೯). [ಧೀಮಂತ + – ಇಕೆ]

ಧೀಮಣಿ (ನಾ). ೧. ಬುದ್ಧಿವಂತರಲ್ಲಿ ಶ್ರೇಷ್ಠ ; ಮಹಾಮೇಧಾವಿ : ಬಲದೇವಧೀಮಣಿ ತನಯಳಂ ಬಸವಂಗೆ ಭಕ್ತಿಯೊಳಿತ್ತು ಶರಣೆಂದ (ಬಸಪು. ೪ ಸೂಚನೆ) ; ಭೂಮಿಯೊಳು ಕೇಳುವೆವೆ ಕಾಂಬೆವೆ ವೇಮಧೀಮಣಿ

ನಿವೊಳ್ಳಲ್ಲದೆ ಸೋಮನೇಮ ಕಪರ್ದರೂಪಾ ಸತ್ಯಸಲ್ಲಾಪ (ಬಸಪು. ೪೬-೭೯). ೨. ಪಂಡಿತಶ್ರೇಷ್ಠ : ಒಡನೆ ಚಾವಡಿಗೆಯ್ದಿ ಧೀಮಣಿಗಳಂ ಕರೆಸಿ (ಗುರುಚಾ. ೦೪-೭೪). [<ಸಂ. ಧೀಮನ್ಮಣಿ]

ಧೀಮತಿ (ನಾ). ಜಾಣೆ ; ಬುದ್ಧಿವಂತೆ "ಪ್ರಾಜ್ಞಾ, ಧೀಮತೀ–ವಿ ಬಹಳ ಬುದ್ಧಿಯುಳ್ಳವಳು" (ಸಿದ್ಧಾಂತಿ. ೦೬೦). [ಸಂ. ಧೀಮತೀ]

ಧೀಮಾಯಿ (ನಾ). ಜಡತೆ ; ಮಾಂದ್ಯ ; ಚುರುಕಿಲ್ಲದಿರುವಿಕೆ : ತಮ್ಮ ಅಧಿಕಾರ ತಮ್ಮ ಘನತೆಗೆ ತಕ್ಕುದಲ್ಲವೆಂಬ ಭಾವನೆಯಿಂದಲೋ ಅಥವಾ ಸ್ವಾಭಾವಿಕ ಧೀಮಾಯಿ ಇಂದಲೋ, ಅವರು ಕೆಲಸವನ್ನು ಹೊತ್ತು ಮುತವರ್ಜಿ ತೋರಿಸುತ್ತಿರಲಿಲ್ಲ (ಕಲನಿ. ೨೦೬).

[←ಮರಾ. ಧಿಮಾಳ, ಧಿಮ್ಮಾಳ]

ಧೀಮೂಢತೆ (ನಾ). ಬುದ್ಧಿಯಿಲ್ಲದಿರುವಿಕೆ ; ತಿಳಿವಳಿಕೆಯಿಲ್ಲದಿರುವಿಕೆ ; ಮೂಢತ್ವ : ಮೈಮುಟ್ಟಿ ಮನಮುಟ್ಟಿ ಬರುವೆ, ರೂಪವ ನೋಡೆ ನೀ ಮೂಡಿ ಬುದ್ಧಿಯೊಳು ನೆಡುವೆ, ರಸವನು ಸವಿಯೆ ಧೀಮೂಢತೆಯ ನೊಡೆದು ನಿಲ್ಲಿಸುವೆ ಚಿತ್ಕವನಂ (ಗಿರಿ. ೯-೩). [ಧೀ + ಮೂಢತೆ]

ಧೀಯುತ (ನಾ). = ಧೀಮಂತ ೧ : ಧೀಯುತರು ನವನಾಥಸಿದ್ಧರಜೀಯ ಸಾಧ್ಯಪ್ರವರಮುಖ್ಯಮಹಾಯತೀಂದ್ರರು ಬಂದರೀಶನನೋಲಯಿಸಲೆಂದು (ಬಸಪು. ೧-೪೦) ; ಧೀಯುತಂ ನೀನುಗ್ರಕೋಪಮಂ ಬಿಡಬೇಹುದು (ವೀಶಿಪು. ೩-೧೧-೩೮). [ಧೀ + ಯುತ]

ಧೀರ (ಗು). ೧. ಧೈರ್ಯದಿಂದ ಕೂಡಿದ ; ದಿಟ್ಟತನದ. ೨. ಸ್ಥಿರವಾದ ಮನಸ್ಸುಳ್ಳ ; ದೃಢತೆಯುಳ್ಳ : ಧೀರ ಪಗಲೊಣೆಯಾಂಡಂ ರಾರಾಜಿಸುತಿರ್ಪ ಪುಷ್ಪಕಂ . . . ತಾರಾದ್ರಿಗೆ ಬಂದುದಭವನಾಜ್ಞೆಯೊಳಾಗಳ್ (ತ್ರಿಪುವಿ. ೦೨-೩೦). ೩. ಗಂಭೀರವಾದ ; ಉದ್ವೇಗವಿಲ್ಲದ : ಅತಿಕುಶಲ [ಸ]ಲೀಲಾಚಾರ ಲೋಕೋಪಕಾರೋದಿತ ಪರಮಗುಣೈಕೋದಾರ ಧೀರಾಧಿಕಾರಂ (ಕವಿರಾ. ೩-೨೦೯). 'ಧೀರಪ್ರಕೃತಿ' ಪರಾ. ೪. ಮನೋಹರವಾದ. (ನಾ). ೫. ಧೈರ್ಯ ; ದಿಟ್ಟತನ ; ಎದೆಗಾರಿಕೆ : ಅರಿದರಿದು ತೆಗೆವವನ ಧೀರವು ಹಿರಿದು ನೋಡೆನಲಖಿಳದೇವರ ನೆಂವಿ ಭಾವನೆ (ಕಾಶಿರಾ. ೨-೪೩). 'ಧೀರನಿಧಿ' ಪರಾ. ೬. ಧೈರ್ಯಶಾಲಿ ; ದಿಟ್ಟ : ಧೀರಂ ವಾದೀಯತನಯಂ ಮಾರನಿಭಂ ತೊಱೆದನೆನ್ನ ಕಾರಣದಿಂದಂ ಚಾರುತರಸ್ತ್ರೀಯರಂ (ನೇಮಿಪು. ೩-೨೮) ; ನಮ್ಮ ಕೂಡಲಸಂಗನ ಶರಣರು ಧೀರರು ಉಳಿದವರೆಲ್ಲ ಅಧೀರರು (ಬಸವ. ೪೪೪) ; ಧೀರಂ ಧೀರಂಜಿತಂ ನಿ ಂ ತಡೆದಿರದೆ ಯಶಸ್ಸಾಧನಂ ಸಾಧನಂ (ಜಗವಿ. ೦೫-೫೬) ; ಧೀರಾ ನವೋಸ್ತ್ರ ಗಣಗಣಧಾರಾರಾಜಿತ ತಪಃಕ್ರಮೋದಿತ ಶೂರಾ (ಜೀವಸಂ. ೧೦೬-೫೩) ; ಧೀರಂ ಪಿಂಗಳಲೋಚನಂ ನಿಶಿತದಂಷ್ಟ್ರಂ ಭೀಮ್ಯ ವಕ್ತ್ರಂ . . . ವಿರಾಜಿಸುದುದ್ಧಿರೀಕರಂ ಸೂಕರಂ (ಗಿರಿಕ. ೧-೦೦೦) ; ಕಿಟ್ಟ ಕರವಾಳ್ಗಮೆನಗಂ . . . ಬೆದಱದೆ ನಿಂದಟ್ಟಿಯನೆ ನುಡಿವರಿವರ ನೆಗಟ್ಟಿ ಕರಂ ಪಿರಿದ ಧೀರರಕಟ ಕುಮಾರರ್ (ಯಶೋಧ. ೦-೬೧) ; ಧೀರಂ ದಿವ್ಯಮಹತ್ವಸತ್ವಮಹಿತಂ ಭಗೋಪಮಂ ಭಾಸುರಾಕಾರಂ (ವೃಷವಿ. ೩೬-೩). ೭. ಬುದ್ಧಿವಂತ ; ಜಾಣ : ಧೀರನಪ್ಪನುಮಂ ಹಾಸ್ಯಂ ಮಾಬ್ಬಳ್ . . . ವಿನೀತನಂ ದೂರದಿಂ ನೋಡಿ ಪಾತಕನಿವನೆಂದು ತಿಳಿದು ಪೋಗಳಂದಿರೆ ನಂಬದಿರ್ (ಕಾದಂಪು. ೫೯೯). ೮. ಪಂಡಿತ ; ವಿದ್ವಾಂಸ : "ಧೀರಃ, ಧೀಮಾನ್ . . . ಮತಿಮಾನ್–ಈ ೨ರ ವಿದ್ವಾಂಸರ್" (ಹಲಾಯು. ೫೫-೦೭೭). ೯. ಸಮುದ್ರ ; ಕಡಲು. ೧೦. ಕೇಸರ ; ಕುಂಕುಮಕೇಸರಿ. ೧೧. ಗೌತಮ ಬುದ್ಧ. [ಸಂ.]

ಧೀರತನ (ನಾ). = ಧೀರತೆ ೧ : ಶರಣು ದಶರಥರಾಮದೂತಗೆ . . . ಧೀರ ತನದಲಿ ಅಕ್ಷಕುಮಾರನ ಪ್ರಾಣವನು ಕೊಂಡಗೆ (ಕನಕ. ೦೩-೦).

[ಧೀರ + – ತನ]

ಧೀರತನು (ನಾ). ದೃಢವಾದ ಶರೀರವುಳ್ಳವನಂ : ಧೀರತನು ಧುರದುಂದಿ ಹನುಮಯ್ಯರಿಂ ಸೇವಿಸಿದ ನಿಮ್ಮಂಘ್ರಿಕಮಲವ ದೂರ ಮಾಡದೆ ಸಲಹಯ್ಯ (ಕನಕ. ೭-೩). [ಧೀರ + ತನು]

ಧೀರತೆ (ನಾ). ೧. ಕೆಚ್ಚು ; ದಿಟ್ಟತನ ; ಧೈರ್ಯ : ವಸುಮತಿ ಸಾಕ್ಷಿ ಧೀರತೆಗೆ . . . ರಿಪುಬುಜೆ ಮಂಡಳಮೆಯ್ದೆ ಸಾಕ್ಷಿ ಸಾಹಸಕೆ (ಸೌಇಡಿ. XX, ೪೬-೩೦ ; 1072) ; ಧೀರತೆಯನೊಡನೆ ತೊಱೆದು ತಪೋರಮಣಸಹಸ್ರ ಮಂತು ಬಳಸಿರ್ಪಿನೆಗಂ ತಾರಾನಿಕರಂ ಬಳಸಿದ ಮೇರುವಿನಂತಿರ್ದನಾ ಜಗತ್ರಯತಿಲಕಂ (ಅನಂಪು. ೯-೭೮). ೨. ದೃಢತೆ ; ಸ್ಥೈರ್ಯ. 'ಧೀರತೆಗಿಡು' ಪರಾ. [ಸಂ. ಧೀರತಾ]

ಧೀರತೆಗಿಡು (ಕ್ರಿ). ಸ್ಥೈರ್ಯವನ್ನು ಕಳೆದುಂಕೊಳ್ಳು ; ದಾರ್ಢ್ಯವಿಲ್ಲದಾಗು : ಧೀರತೆಗಿಡದೆ ಪರೀಷಹವೀರರನುಗ್ರೋಗ್ರತಪದೊಳಂ ಗೆಲ್ದು (ಶಾಂತಿಪು. ೪-೦೨೯). [ಧೀರತೆ + ಕಿಡು (<ಕೆಡು$_1$)]

ಧೀರತೆವಿಡಿ (ಕ್ರಿ). ದಿಟ್ಟತನವನ್ನು ಹೊಂದು ; ಕೆಚ್ಚಿನಿಂದ ಕೂಡಿರು : ಅರಿವಿನ ಬೇಲಿಯ ತಲೆಮಟ್ಟ ಧೀರತೆವಿಡಿಯುತ ಹಾರುತ ನೆಗೆಯುತ ಚಿದ್ಭನಜಪಲೆಯು ಸಾಗುತಿರೆ (ಪ್ರಬಂಧ. ೦೦೪). [ಧೀರತೆ + ಪಿಡಿ$_1$]

ಧೀರತ್ವ (ನಾ). ೧. ಕೆಚ್ಚು ; ಧೈರ್ಯ : ಊರಿಂಗೆ ದೊರೆ ರೂಪು . . . ರಾಜಂಗೆ ಧೀರತ್ವ ರೂಪು (ಸರ್ವಜ್ಞ. ೭೦೪). ೨. ದೃಢತೆ ; ಸ್ಥೈರ್ಯ : ನನೆಗೋಲ್ ನಟ್ಟು ಕೊನತಃಪೋಲ್ ಪುಳಕಮುಣ್ಮೆತ್ತು . . . ದಿಟದಿಂ ಹೃದ್ದೇಹಮಂ ತನ್ನಿತಂಬಿನಿ ಪೊಕ್ಕಂತಿರೆ ಕಂಪನಕ್ಕೆ ತನು ಕೈಗೊಟ್ಟತ್ತು ಧೀರತ್ವಮಂ ಮನದಿಂ ಸುಯ್ ಪೊಱಗಣ್ಗೆ ಪೊತ್ತಡಕುವಂತಿರ್ದತ್ತು ಭೂಪಾಲನಾ (ಕಾವ್ಯಸಾ. ೫೬೦) ; ನೀನೀಗ ಧೀರತ್ವವಿದು ಮೇರೆಯ ಮಿಱಿ ಬಲು ಮೋಹವಾರಿಧಿಯೊಳು ಮುಳುಗುವುದ (ಕಂನವಿ. ೯-೦೫೨). [ಸಂ.]

ಧೀರನಿಧಿ (ನಾ). ಧೈರ್ಯಕ್ಕೆ ಆಕರನಾದವನು ; ಧೈರ್ಯನಿಧಿ : ಧೈರ್ಯಸ್ಥ : ಧೀರನಿಧಿ ಬಟ್ಟಬೇವನೊಳೋರಗೆ ಬಲ್ಲಾಳನಿಂತು ನರಸಿಂಹ ಸುತಂಗಾರೆಣೆ (ಯುಶೋಧ. ೦-೦೩). [ಧೀರ + ನಿಧಿ]

ಧೀರಪ್ರಕೃತಿ (ನಾ). ಗಂಭೀರಸ್ವಭಾವ: ಧೀರಪ್ರಕೃತಿಗೆ ಸೌಮ್ಯಾಕಾರಕ್ಕನು ಗುಣಮೆನಿಪ್ಪ ನಯವಿನಯವಚಸ್ಸಾರತೆಗೆ ಮೆಚ್ಚಿ ರಘುಕುಲವೀರಂ ಕಾ ಎನ್ನ ದೃಷ್ಟಿಯಿಂದೀಕ್ಷಿಸಿದಂ (ಪಂರಾಮಾ. ೧೧-೪೦). [ಧೀರ + ಪ್ರಕೃತಿ]

ಧೀರಪ್ರಶಾಂತ (ನಾ). = ಧೀರಶಾಂತ : ನಾಯಕನಲ್ಲಿ ಧೀರೋದಾತ್ತ, ಧೀರಲಲಿತ, ಧೀರೋದ್ಧತ, ಧೀರ(ಪ್ರ)ಶಾಂತ ಎಂದು ನಾಲ್ಕು ವಿಧ . . . ಧೀರ(ಪ್ರ)ಶಾಂತನಲ್ಲಿ ವಿಶೇಷಗುಣಗಳಿಲ್ಲ. ಮೇಲೆ ಹೇಳಿದ ನಾಯಕ ಸಾಮಾನ್ಯಲಕ್ಷಣಗಳು ಮಾತ್ರ ಇರುತ್ತವೆ. (ಇವರು ಪ್ರಾಯಿಕವಾಗಿ ಬ್ರಾಹ್ಮಣರು ಅಥವಾ ವೈಶ್ಯರು). ಉದಾಹರಣೆ : –ಮಾಧವ, ಚಾರುದತ್ತ (ಕೃಬಡಿ. ೨೦೯) ; ವೀರಶೃಂಗಾರದ ಪ್ರಧಾನನಾಯಕ 'ಧೀರಲಲಿತ', ದಾನವೀರ–ಧರ್ಮವೀರ–ಶಾಂತರಸಗಳಲ್ಲಿ ಪ್ರಧಾನನಾಯಕ 'ಧೀರಪ್ರಶಾಂತ' (ದೃಶ್ಯಾಲೋ. ೧೩೮ ಅಡಿಟಿ). [ಧೀರ + ಪ್ರಶಾಂತ]

ಧೀರಮೂರ್ತಿ (ನಾ). ಧೈರ್ಯವಂತ ; ದಿಟ್ಟ : ಮೊಸಳೆಯೆ ರಾಜಾಧಿರಾಜನು ನೀರೊಳು ಇಲಿ ಬಿಲಬೊಳು ಧೀರಮೂರ್ತಿ (ಇಂಡಾಪ. ೩೩೩-೫೯).

[ಧೀರ + ಮೂರ್ತಿ]

ಧೀರಲಲಿತ (ನಾ).[ಕಾವ್ಯಮೀ]ಕಾವ್ಯ ಅಥವಾ ರೂಪಕದ ನಾಯಕರಲ್ಲಿ ಒಂದು ಭೇದ ; ವೃದುಸ್ವಭಾವದವನೂ ಸಂಗೀತ, ಸಾಹಿತ್ಯದಲ್ಲಿ ಆಸಕ್ತನೂ ಆದ ನಾಯಕ : ಧೀರೋದಾತ್ತ ಧೀರೋದ್ಧತ ಧೀರಲಲಿತ ಧೀರಶಾಂತರೆಂಬ ಚತುರ್ವಿಧ ಶೃಂಗಾರನಾಯಕರಿಂ (ವಿವೇಕ. ೩೩೮) ; ಧೀರ ಲಲಿತನ ವಿಶೇಷಗುಣಗಳು–ಮೃದುಸ್ವಭಾವ, ಸಂಗೀತಸಾಹಿತ್ಯಗಳಲ್ಲಿ ಆಸಕ್ತನಾಗಿ ನಿಶ್ಚಿಂತನಾಗಿ ಸುಖವಾಗಿ ಇದ್ದುಬಿಡುವಿಕೆ. ಉದಾಹರಣೆ–ವತ್ಸರಾಜ (ಸಂನಾಟ. ೦೬). [ಧೀರ + ಲಲಿತ]

ಧೀರವಶಿ (ನಾ). ವಿದ್ವಾಂಸರಿಗೆ ವಶವಾಗುವವನು: ಶ್ರೀರಾಮನಾಹ್ಲಾದ ರೂಪಿ. ಔದಾರ್ಯನಿಧಿ . . . ಮತ್ಸರವಿದೂರನತ್ಯಂತಶಾಂತಿಖನಿ. ಪ್ರಿಯ ಭಾಷಿ. ಹಿತಸಖಂ. ಮಿತಮಾರ್ಗಿ. ಧೀರವಶಿ (ಶ್ರೀರಾಮಾ. ೫೭-೯೪).

[ಸಂ. ಧೀರವಶಿನ್]

ಧೀರಶಾಂತ (ನಾ). [ಕಾವ್ಯಮೀ]ಕಾವ್ಯ ಅಥವಾ ರೂಪಕದ ನಾಯಕರಲ್ಲಿ ಒಂದು ಭೇದ; ರಸಿಕನೂ ಮಾರ್ದವವುಳ್ಳವನೂ ಶುಚಿಯೂ ಸುಖಿಯೂ ಪ್ರಸನ್ನನೂ ಮನೋಹರನೂ ಆಗಿದ್ದು, ಬ್ರಾಹ್ಮಣನೋ ಅಥವಾ ವಣಿಜನೋ ಆಗಿರುವ ನಾಯಕ: ಧೀರೋದಾತ್ತ ಧೀರೋದ್ಧತ ಧೀರಲಲಿತ ಧೀರಶಾಂತರೆಂಬ ಚತುರ್ವಿಧ ಶೃಂಗಾರ ನಾಯಕರಿಂ (ವಿವೇಕ. ೩೨೮); ಧೀರೋದಾತ್ತಲಲಿತರೀ ಧರಿಣಿಯೊಳ್ ನೆಗಟ್ಟಿ ಧೀರಶಾಂತೋದ್ಧತರೆಂದಾರಯೆ ಪೇಟ್ಟೀ ಗುಣಯುತರೋರಂತಿರೆ ನಾಲ್ವರಾದರ್ (ರಸರ. ೩-೭೩ ಸೂತ್ರ); ಧೀರಶಾಂತನಲ್ಲಿ ವಿಶೇಷಗುಣಗಳಿಲ್ಲ. ನಾಯಕ ಸಾಮಾನ್ಯಲಕ್ಷಣವೇ ಅವನ ಗುಣಗಳು (ಅವನು ಸಾಮಾನ್ಯವಾಗಿ ಬ್ರಾಹ್ಮಣ ಅಥವಾ ವೈಶ್ಯನಾಗಿರುತ್ತಾನೆ). ಉದಾಹರಣೆ – ಮಾಧವ, ಚಾರುದತ್ತ (ಸಂನಾಟ. ೦೮). [ಧೀರ + ಶಾಂತ]

ಧೀರಾರಾಧಿತ (ಗು). ಜ್ಞಾನಿಗಳಿಂದ ಪೂಜಿತವಾದ: ಧೀರಾರಾಧಿತಪಾದ ಪದ್ಮನಖಿಲಶ್ರುತ್ಯಂತವಿದ್ಯೋದಿತಂ (ವಸ್ತುವಂ. ೧೦೮).

[ಧೀರ + ಆರಾಧಿತ]

ಧೀರುರೆ 'ಧಿರುರೆ' ನೋ.

ಧೀರೈಸು (ಕ್ರಿ). ಧೈರ್ಯದಿಂದ ಎದುರಿಸು: ದೂರದ ಸೀಮೆಗೆ ನಾರಿ ನಾನೊಬ್ಬಳೆ ಧೀರೈಸನಾರೆ ದಿನಗಳ (ನಾಪದ. ೬೮).

ಧೀರೈಸಿಕೊಳ್ಳು = ಧೈರ್ಯ ತಂದುಕೊಳ್ಳು; (ಮನಸ್ಸಿಗೆ) ಸಮಾಧಾನ ಹೇಳಿಕೊಳ್ಳು: ದೂರದ ಅಕ್ಕಯ್ಯ ಸುಖದಾಗೆ ಇದಾಳೆಂದು ಧೀರೈಸಿಕೊಂಡೆ ಮನದಾಗೆ (ನಾಪದ. ೬೮). [ಧೀರ + – ಇಸು]

ಧೀರೋದಾತ್ತ (ಗು) ೧. ಆಳವಾದ ಮತ್ತು ಉನ್ನತವಾದ: ಧೀರೋದಾತ್ತ ಗುಣೋತ್ತರನಾರಯೆ ಚಿಕದೇವರಾಯನತಿರವಿತೇಜಂ(ಅಪ್ರತಿ.೩೪-೧೬); ಜನಕಜಾರಮಣ ಧೀರೋದಾತ್ತ ವಕ್ಷವಾರ್ಧಿಯ ನೀಲನಾವೆಯೊಳ್ ತೇಲಿದನು ಶಾಂತಿಯ ತುರೀಯಕೆ (ಶ್ರೀರಾಮಾ. ೧೬೪-೩೪೭); ಇಂತಹ ಪ್ರತಿಮೆಯಲ್ಲಿ ಧೀರೋದಾತ್ತಗುಣಗಳೂ ಮಾನವ ಮೈತ್ರಿಯ ಲಕ್ಷಣಗಳೂ ಸೇರಿ ಪ್ರತಿಮೆಯ ಬಹುಮುಖತೇಜಸ್ಸನ್ನು ಉಜ್ವಲಿಸುತ್ತವೆ (ಬದ್ಧಪ್ರ. Lxvii ಪೀಠಿಕೆ). (ನಾ). ೨. ಧೀರನೂ ಉದಾತ್ತವಾದ ಗುಣಗಳಿಂದ ಕೂಡಿದವನೂ ಆದ ವ್ಯಕ್ತಿ; ಗಂಭೀರನೂ ಸದ್ಗುಣಿಯೂ ಆದವನು: ಬಸವರಾಜಂ ಲಿಂಗಸದರ್ಥಂ ಜಂಗಮಸುರತರುಸಾರಹೃದಯಂ ಧೀರೋದಾತ್ತಂ ಸತ್ಯಸಂಧಂ ದಯಾನಿಧಿ (ಬಸರ. ೧೨-೫೦); ಚಚ್ಚರ ಬೆಸಸು ಬೆಸನಾವುದೆಂದು ಧೀರೋದಾತ್ತನೆರಡುಕೈಮುಗಿಯುಲು (ಹಡಕಾ. ೮-೪೮); ಧೀರೋದಾತ್ತಂ ಜಲಧಿಗಭೀರಂ (ನಳಚಂ. ೧೫೦); ಚೆಲ್ಲಿದ ಕರಣಂಗಳಂ ಮೆಲ್ಲನೆ ಸಂತೈಸಿಕೊಂಡು ಧೀರೋದಾತ್ತ ಸಾರ್ವಭೌಮಂ ಮುಂದಣ್ಗೆ ನಡೆತರುತ್ತಂ (ರಾಜಶೇ. ೬-೭೧ ವ). ೩. [ಕಾವ್ಯಮೀ] ಕಾವ್ಯ ಅಥವಾ ರೂಪಕದ ನಾಯಕರಲ್ಲಿ ಒಂದು ಭೇದ; ಉದಾತ್ತನೂ ಗಂಭೀರನೂ ಆದ ನಾಯಕ: ಧೀರೋದಾತ್ತ ಧೀರೋದ್ಧತ ಧೀರಲಲಿತ ಧೀರಶಾಂತರೆಂಬ ಚತುರ್ವಿಧ ಶೃಂಗಾರನಾಯಕರಿಂ (ವಿವೇಕ. ೩೨೮); ಧೀರೋದಾತ್ತನಲ್ಲಿರುವ ವಿಶೇಷ ಗುಣಗಳೇನೆಂದರೆ:–ಸುಖದುಃಖಗಳಿಂದ ಚಲಿತವಾಗದಿರುವ 'ಮಹಾಸತ್ತ್ವ', ಗಾಂಭೀರ್ಯ, ಕ್ಷಮೆ, ಆತ್ಮಶ್ಲಾಘನೆ ಮಾಡಿಕೊಳ್ಳದಿರುವುದು, ಸ್ಥೈರ್ಯ, ವಿನಯದಿಂದ ಮುಚ್ಚಿದ ಅಹಂಕಾರ, ಹಿಡಿದ ಕೆಲಸವನ್ನು ಸಾಧಿಸುವ ಸಾಮರ್ಥ್ಯ. ಉದಾಹರಣೆ:– ದುಷ್ಯಂತ, ರಾಮ, ಜೀಮೂತವಾಹನ, ಹರಿಶ್ಚಂದ್ರ ಇತ್ಯಾದಿ (ಕೈಪಿಡಿ. ೨೦೯). [ಧೀರ + ಉದಾತ್ತ]

ಧೀರೋದಾರ (ನಾ).=ಧೀರೋದಾತ್ತ ೨: ತನಯನನೆತ್ತಿಕೊಳುತ ಮಂತ್ರಿಯನು ಮಾತಾಡಿಸುತ ಸತಿಯನೋವುತ್ತ ನಕ್ಷತ್ರಕನ ಕೂಡುತ್ತರಂಗುಡುತ ರಣ್ಯಮಂ ನೋಡುತ್ತ ನಡೆದ ಧೀರೋದಾರನು[ಪಾಠಾಂ. ನಾ ಭೂಪಾಲನು] (ಹಡಕಾ. ೧೦-೧). [ಧೀರ + ಉದಾರ]

ಧೀರೋದ್ಧತ (ನಾ). [ಕಾವ್ಯಮೀ] ಕಾವ್ಯ ಅಥವಾ ರೂಪಕದ ನಾಯಕರಲ್ಲಿ ಒಂದು ಭೇದ; ದರ್ಪ, ಮಾತ್ಸರ್ಯ, ಅಹಂಕಾರ, ರೌದ್ರ, ಚಾಂಚಲ್ಯ, ಆತ್ಮಶ್ಲಾಘನೆ ಮುಂತಾದ ವಿಶೇಷ ಗುಣಗಳಿಂದ ಕೂಡಿದ ನಾಯಕ ಅಥವಾ ಪ್ರತಿನಾಯಕ: ಧೀರೋದ್ಧತನಲ್ಲಿರುವ ವಿಶೇಷಗುಣಗಳೇನೆಂದರೆ:–ದರ್ಪಮಾತ್ಸರ್ಯಗಳು, ಮಾಯಾಮೋಸಗಳು, ಅಹಂಕಾರ, ರೌದ್ರ ಚಾಂಚಲ್ಯಗಳು, ಆತ್ಮಶ್ಲಾಘನೆ. (ಪ್ರತಿನಾಯಕನು ಸಾಮಾನ್ಯವಾಗಿ ಧೀರೋದ್ಧತನಾಗಿರುತ್ತಾನೆ). ಉದಾಹರಣೆ:– ದುರ್ಯೋಧನ. ರಾವಣ (ಕೈಪಿಡಿ. ೨೦೯); ನಾಯಕರಲ್ಲಿ ಧೀರೋದಾತ್ತ, ಧೀರಲಲಿತ, ಧೀರೋದ್ಧತ, ಧೀರಶಾಂತ ಎಂದು ನಾಲ್ಕುವಿಧ (ಸಂನಾಟ. ೦೭); ವೀರರೌದ್ರದ ಪ್ರಧಾನ ನಾಯಕ 'ಧೀರೋದ್ಧತ' (ಧ್ವನ್ಯಾಲೋ. ೦೩೮ ಅಡಿಟಿ).

[ಧೀರ + ಉದ್ಧತ]

ಧೀವರ (ನಾ). ೧. ಬುದ್ಧಿಯಿಂದ ಶ್ರೇಷ್ಠನಾದವನು; ಬುದ್ಧಿವಂತ; ಜ್ಞಾನಿ: ಹರುಷದಿಂ ತಾನುಂ ಬಸವಧೀವರನುಮಖಿಳನಿಯೋಗದೋಲಗವೆರಸಿ ಬರುತಿಪ್ಪೆಡೆಯೊಳು (ಬಸಪು. ೫-೧೯); ವರದ ಮಹಿಮಾನ್ವಿತನೆ ಧೀವರನುರುಜಿತೇಂದ್ರಿಯ ಪರಮಚಿದ್ಧನ (ಮಡಿಭ. ೪). ೨. ಬೆಸ್ತರವನು; ಮೀನುಗಾರ; ಜಾಲಗಾರ: "ಕೈವರ್ತಃ, ಧೀವರಃ, ದಾಶಃ, ಮತ್ಸ್ಯಬಂಧೀ, ಜಾಳಿಕಃ – ಈ ೫ ಜಾಲಗಾಱಂ" (ಹಲಾಯು. ೯೭-೪೪೦); "ಧೀವರ ಜಾಳಿಕ ದಾಶನಾಮ ಮೀಂಗುಲಿಗಂ" (ವಸ್ತುಕೋ. ೬೬-೮೪); ಕರೆಸಿದನು ಧೀವರನ ನಯ್ಯಂಗರಸಿಯಾಗಲಿ ನಿನ್ನ ಮಗಳೆನಲು (ಕುವ್ಯಾಅ. ೨-೨೭); ಪ್ರಳಯ ಕಾಲದೇಕಾರ್ಣವದೊಳುನ್ಮತ್ತ ಕಚ್ಛಪ ಮತ್ಸ್ಯಯುಗಮಂ ತೆಗೆವ ಧೀವರೋತ್ತಂಸರೂಪಂ ಹರಂ (ಪದ್ಮರಾ. ೧೦-೧೩೪); ಧೀವರಗೆ ಬೇಡಿದುದನಿತ್ತು ಕಳುಹೆ (ಪ್ರೌಢರಾ. ೧೧-೩೩). ೩. ಬೇಟೆಗಾರ; ಬೇಡ; ವ್ಯಾಧ: ಹಸ್ತಮನಾ ಪಾವಿನ ಪಲ್ಗೆ ಕೊಟ್ಟು ಸತ್ತಾತನ ಪೊಟಲೊಳೆ ಮುಖ್ಯನಪ್ಪ ಧೀವರ[ಪಾಠಾಂ. ದೀವರ, ದೀವಳ]ನಾದಂ (ಅರ್ಧನೇ. ೩-೮೫); ಪಿಡಿದೊಂದು ಪೆರ್ಬುಲಿಯನೊರ್ವಂ ಕಕ್ಷದಿಂದೊತ್ತಿ ತನ್ನ ಗೃಹಕ್ಕೆಟ್ಟರುತಿರ್ದನೊಂದೆಡೆಯೊಳುದ್ಯದ್ಧೀವರಂ ಧೀವರಂ (ಜಗವಿ. ೦೬-೨೦); ಬಂದ ಸುಜನಮೃಗ ಧೀವರಂ[ಪಾಠಾಂ. ನಖಿಳ ಮುನಿಪಾವನಂ, ನಖಿಳ ಮುನಿಪಾವಕಂ, ದುರ್ಬೋಧಭಾವಕಂ] ಕಪಟಪಟು ಕೌಶಿಕಂ ವಾಸಿಷ್ಠಮುನಿ ಹೋದ ಹೊತ್ತನಱಿದು (ಹಡಕಾ. ೩-೫); ಹೇವವಿಲ್ಲದೆ ಕಾದಬೇಹುದು ಧೀವರರ ಪೋಲ್ ತಡಿಕೆವಲೆಯಲಿ ಲಾವುಗೆಯ ಹೊಯ್ದಂದವಲ್ಲೆನುತೆಚ್ಚನಾ ಪಾರ್ಥ (ಕುವ್ಯಾಕ. ೨೨-೨೮); ಗಗನಗಹನದೊಳೆ ಗಮಿಯಿಪ ಖಗಕ್ಕೆ ಪತ್ತೀಂದ್ರ ಧೀವರಂ ಬೀಸಿದ ರೇಣುಗಣ ನವಜಾಲಕೊಳಗಾಯ್ತೊಗುಮಿಗೆಯಿಂದನಿಮಿಷ ಪ್ರತಾನಂ ಚಿತ್ರಂ (ರಾಜಶೇ. ೬-೪೩). [ಸಂ.]

ಧೀವರೆ (ನಾ). ಬೇಡಿತಿ; ಶಬರಿ: ಪೊಸಮುತ್ತಿನ ಪುಟ್ಟುವ ನೀರೊ ತೋರ್ಪ ಬೆಳ್ದಿಂಗಳ ಬಯ್ಕೆಯೋ ಜಗದ ಧೀ[ಪಾಠಾಂ. ದೀ]ವರೆಯರ್ಕಳ ಕಣ್ಣ ಬೆಳ್ಪು ಬೆಳ್ಳಂಗೆಡೆದತ್ತೊ ಪೇಟಿಮೆನೆ ನಿರ್ಮಲಮಾದುದು ನೀರಜಾಕರಂ (ಅರ್ಧನೇ. ೫-೧೦೦). [ಧೀವರ + – ಎ]

ಧೀವರ್ತನೆ (ನಾ). ಬುದ್ಧಿಪೂರ್ವಕವಾದ ಆಚರಣೆ: "ಬುದ್ಧಿಯಂ ನಡತೆ" (ಮಂಕುಕ. ಕೋಶ): ದೈವವೆನಿಸಿರುತೆ ವಿಶ್ವಪ್ರಕೃತಿಶಕ್ತಿಯಲಿ ಜೀವವಾಸನೆಗಳಲಿ ಪೂರ್ವಕೃತವೆನಿಸಿ ಧೀವರ್ತನೆಯಲಿ ಪೌರುಷವೆನಿಸಿ ಪರಸತ್ತ್ವ ತ್ರೈವಿಧದೊಳಿರುತಿಹುದು (ಮಂಕುಕ. ೧೫೦).

[ಧೀ + ವರ್ತನೆ]

ಧೀವಶ (ನಾ). ೧. ಬುದ್ಧಿಗೆ ವಶವಾದಂದು. ೨. ಕೆಚ್ಚು ; ಧೈರ್ಯ : ಆಳ ನೋಯಿಸಿ ನೋಡುತಿಹ ಹೀಹಾಳಿ ತಾನೇಕಕಟಕಟ ದೊರೆಯಾಳ ಧೀವಶವೆನುತ ಸಹದೇವಾದಿಗಳು ಜಱಿದು (ಕುಪ್ಪಾಕ. ೧೧-೩೯). ೩. ಉದ್ಧಟತನ; ಧಾರ್ಷ್ಟ್ಯ : ತಪೋವನದೊಳಿಂದೆಮ್ಮ ನೀಂ ಕೊಱಚಾಡಲೆಂದು ಬೀಡಂ ಬಿಟ್ಟೆಯಱಿದಱಿದು ನಿನ್ನ ಧೀವಶವೆಂದನಂ (ಹಡಕಾ. ೮-೫).

[ಸಂ.]

ಧೀವಶಿ (ನಾ). ದಿಟ್ಟ ; ಶೂರ ; ಸಾಹಸಿ : ಇನ್ನೇಕೆ ನುಡಿದೆನ್ನ ನಾಚಿಸುವೆ ಭೂಪಾಲ ನಿನ್ನಂತೆ ಸತ್ಯರುತ್ತಮರಧಿಕಧೀವಶಿಗಳುನ್ನತ ಶಿವೈಕ್ಯರಿಳೆಯೊಳಗಿಲ್ಲ (ಹಡಕಾ. ೧೧-೨೯) ; ಭಟರು ಬಳಲಿದರಿಂದು ರಣವುತ್ಕಟವು ಧೀವಶಿಗಳು ಮಹಾರಥರಟಕಟಿಸುತಿದೆ (ಕುಪ್ಪಾದ್ರೋ. ೧೫-೪೨).

[ಸಂ. ಧೀವಶಿನ್]

ಧೀವಸ 'ದೀವಸ' ನೋ.

ಧೀವಸತನ (ನಾ). ಎದೆಗಾರಿಕೆ ; ಧೈರ್ಯ : ಬಿಸಿಲು ಮಳೆ ಚಳಿಗಳಿಗೆ ಸಲೆ ಸೈರಿಸುವ ದೇಹವೆ ನಿನ್ನದಿದು ಧೀವಸತನಕ್ಕಾ[ಪಾಠಾಂ. ದೀವಸಿಕೆಗಾ]ವಂಜುವೆವು ಕೆಲಸಾರು ನೀನೆಂದ (ತೊರರಾ. ೨-೩-೩೫).

[ಧೀವಸ (<ದೀವಸ) + – ತನ]

ಧೀವಸಿ 'ದೀವಸಿ' ನೋ.

ಧೀವಸಿಗ 'ದೀವಸಿಗ' ನೋ.

ಧೀವಾಸ (ನಾ). ಮನಸ್ಸಿನ ಆಶಯ ; ಮನೋರಥ ; ಸಂಕಲ್ಪ : ಆ ಸರೋಜಾನನೆಯ ಬಲು ಧೀವಾಸವೆಂತುಟೊ ತಪವದೆತ್ತ ಶಿರೀಷ ಕುಸುಮಾಧಿಕ ಸುಕೋಮಲಗಾತ್ರೆ ತಾನೆತ್ತ (ನಿಭಾಗ. ೪-೫-೨೮)). [ಸಂ.]

ಧೀಶಕ್ತಿ (ನಾ). ಬುದ್ಧಿಶಕ್ತಿ ; ಪ್ರಜ್ಞೆ : ವೈಜ್ಞಾನಿಕ ಅನ್ವೇಷಣೆಗೆ ಬೇಕಾದ ಧೀಶಕ್ತಿಯಿಂದಲೂ . . . ಜೀವವನ್ನು ಪಡೆಯದಿರುವ ಮತಶ್ರದ್ಧೆ ಶ್ರದ್ಧೆಯಲ್ಲ (ಪುಕ್ಸಾರ. ೪ ಪೀಠಿಕೆ). [ಧೀ + ಶಕ್ತಿ]

ಧೀಸಚಿವ (ನಾ). ಬುದ್ಧಿಶಾಲಿಯಾದ ಮಂತ್ರಿ; ಸಲಹೆಗಳನ್ನು ಕೊಡಲು ಸಮರ್ಥನಾದ ಮಂತ್ರಿ : "ಮಂತ್ರೀ, ಧೀಸಚಿವಃ, ಅಮಾತ್ಯಃ – ೩ ಆಲೋಚನೆಯನ್ನು ಹೇಳುವ ಮಂತ್ರಿಯ ಹೆಸರುಗಳು" (ಸಿದ್ಧಾಂತಿ. ೨೩೫).

[ಧೀ + ಸಚಿವ]

ಧುಂಧುಮಾರ (ನಾ). ೧. ಒಂದು ಬಗೆಯ ಹುಳು ; ಇಂದ್ರಗೋಪ. ೨. ಮನೆಯಿಂದ ಹೊರಬರುವ ಹೊಗೆ. ೩. ಹಲ್ಲಿ. [ಸಂ.]

ಧುಡುಂ (ನಾ). ಒಂದು ಅನುಕರಣ ಶಬ್ದ. 'ಧುಡುಮ್ಮಿಱಿ' ಪರಾ.

ಧುಡುಮಿಸು (ಕ್ರಿ). ಧಾವಿಸು : ಕೂಡಲೇ ಸಲೂನಿನಲ್ಲಿ ಧುಡುಮಿಸುತ್ತೀರಿ (ಗಾಳಿಪ. ೮೧). [ಧುಡುಂ + – ಇಸು$_3$]

ಧುಡುಮ್ಮಿಱಿ (ಕ್ರಿ). ಎರಡೂ ಕೈಗಳಿಂದ ನೀರಿನಲ್ಲಿ ಧುಡುಂ ಎಂದು ಶಬ್ದಮಾಡು : ಮನೋಜಸುಖಾರ್ಣವಮಧ್ಯದೊಳ್ ಮನಂಗುಡುತ ಮಮರ್ಚುತೀಸುತೆ ಧುಡುಮ್ಮಿಱಿಯುತ್ತಮೆ ಪಾಂಥನೊಪ್ಪಿದಂ (ಗಿರಿಕ. ೨-೧೯). [ಧುಡುಂ + ಇಱಿ$_1$]

ಧುಡುಮ್ಮಿಱಿವೊಯ್ (ಕ್ರಿ). "ನೀರನ್ನು ಟುಮಂಕಿ ಹೊಡೆ" (ಪ್ರಭಣ್ಣ) : ಮೇಲಕೆ ಪುಟನೆಗೆವ ಧುಡುಮ್ಮಿಱಿವೊಯ್ವ ತಿರಿವ ತೇಂಕಾಡುವ ಮುಕ್ಕುಳಿಪ . . . ಅಬಲಾಸಂತತಿ . . . ಅರಸನ ಬಗೆಯಂ ಬಂಧಿಸಿತು (ಜಯಕಾ. ೧೧-೪೧).

[ಧುಡುಮ್ಮಿಱಿ + ಪೊಯ್$_1$]

ಧುಡುಮ್ಮಿಱಿವೊಯ್ಲು (ನಾ). ಎರಡೂ ಕೈಗಳಿಂದ ನೀರನ್ನು ಸಶಬ್ದವಾಗಿ ಹೊಡೆಯುವಿಕೆ : ವಿಳಸದ್ವಿಮಲಾಬ್ಜದ ಕಳಿವೂವಿಂ ಕಳೆದೆಸೆವೆಸಳ ನಡುವೆ ತಮ್ಮಯ ಕರತಳದ ಧುಡುಮ್ಮಿಱಿವೊಯ್ಲಿಂದೇಳ್ವಮಲಾಂಬುಕಣಂ ಬಿಳ್ದು ತಳತಳಿಸುತ್ತಿರೆ (ಜಯಕಾ. ೧೧-೫೧).

[ಧುಡುಮ್ಮಿಱಿ + ಪೊಯ್ಲು]

ಧುತ್ (ನಾ). ಒಂದು ಅನುಕರಣ ಶಬ್ದ. 'ಧುತ್ತೆನ್' ಪರಾ.

ಧುತ (ಗಂ). ೧. ಅಲ್ಲಾಡಿಸಿದ; ಕಲಕಿದ; ಕಂಪನಗೊಳಿಸಿದ. ೨. ಬಿಟ್ಟ; ತ್ಯಜಿಸಿದ. (ನಾ). ೩. [ನಾಟ್ಯ] ತಲೆಯನ್ನು ಮೆಲ್ಲನೆ ಎಡಕ್ಕೂ ಬಲಕ್ಕೂ ಅಡ್ಡಲಾಗಿ ತಿರುಗಿಸುವುದು : ಪಲ್ಲಟದಿಂದೆಡಬಲಕಂ ಮೆಲ್ಲನೆ ತಿರುಪಲ್ಕೆ ಶಿರಮನದು ಧುತಮೆನಿಕುಂ (ಲಾಸ್ಯರಂ. ೧-೭೯) ; ಧುತಂ ವಿಧುತಂ . . . ಸಮಂ ಪಾರ್ಶ್ವಾಭಿಮುಖಂ–ಈ ಹತ್ತೊಂಬತ್ತುಂ ಶಿರೋಭೇದಂಗಳ್ (ಲಾಸ್ಯರಂ. ೧-೭೮ ವ). [ಸಂ.]

ಧುತಿಪುರ (ನಾ). ಒಂದು ಊರಿನ ಹೆಸರು : ಧುತಿಪುರೇ ನಿವರ್ತನಾನಿ ಅಷ್ಟ (ಎಇ. V, ೮-೫ ; 650). [ಧುತಿ$_0$ + ಪುರ$_2$]

ಧುತ್ತೂರ 'ದುತ್ತೂರ' ನೋ.

ಧುತ್ತೂರಮತ್ತ (ನಾ). ದತ್ತೂರಿಯನ್ನು ಸೇವಿಸಿ ಭ್ರಮೆಗೊಂಡವನು,–ಹುಚ್ಚು ಹಿಡಿದವನು : ಧುತ್ತೂರಮತ್ತರೊಳ್ ಸ್ತಂಭಕುಂಭಾದಿಗಳೆಲ್ಲಂ ಶಾತಕುಂಭಾಭಾಸಂಗಳಾಗಿ ತೋರ್ಪಂತೆ (ಚಂದ್ರಪು. ೮-೫೫ ವ). P ದತ್ತೂರಿಯನ್ನು ಸೇವಿಸಿದವರಿಗೆ ಲೋಕವೆಲ್ಲ ಹಳದಿಯಾಗಿ ಕಾಣುವುದೆಂಬ ನಂಬಿಕೆಯಿದೆ. [ಧುತ್ತೂರ (<ದುತ್ತೂರ) + ಮತ್ತ$_3$]

ಧುತ್ತೆನ್ (ಕ್ರಿ). ಧುತ್ ಎಂದು ಕಾಣಿಸು ; ದಿಢೀರನೆ ಎದುರಿಗೆ ನಿಲ್ಲು : ಮುರಾರಿಯ ಸಮಸ್ಯೆ ಧುತ್ತೆಂದು ಬಂದಿತು (ಮುಗಿಮ. ೮) ; ಮಗಳ ಮದುವೆಯ ಚಿಂತೆ ಧುತ್ತೆಂದು ಮುಂದೆ ನಿಂತು ಎದೆಯನ್ನು ಚೂರುಚೂರು ಮಾಡಿತು (ಅಪವಾ. ೧೦೫) ; ಜೀವಮಾನದಲ್ಲಿ ಎಂದೂ ಕಾಣದ ಸಮಸ್ಯೆಗಳು ಅವರ ಮುಂದೆ ಧುತ್ತೆಂದು ನಿಂತುವು (ಮುತ್ತೈದೆ. ೧೬); ಅನ್ನದ ಸಮಸ್ಯೆ 'ಧುತ್ತೆಂದು' ಬಾಯ್ದೆರೆದು ನುಂಗಲು ನಿಂತಿತು (ಬರಹಾ. ೯೨).

[ಧುತ್ + ಎನ್$_1$]

ಧುತ್ತ್ಯಾ (ನಾ). ೧. ಅನಿರೀಕ್ಷಿತವಾಗಿ ಬಂದು ಎದುರಿಗೆ ನಿಲ್ಲುವವನು. ೨. ದಾಂಡಿಗ ; ದಡಿಯ : ಎಂಟು ಜನಾ ಹಾವನೂರವರು, ಧುತ್ತ್ಯಾ ನಂತವರು ಬಂದರ ಅಸಗೊಳ್ಳಲಿಲ್ಲರಿ ಅಂವಾ (ಗ್ರಾಮಾಯ. ೨೪೦).

[←ಮರಾ. ಧುತ್ಯಾ]

ಧುನಿ (ನಾ). ನದಿ ; ಹೊಳೆ : "ಹ್ರದಿನಿ ತರಂಗಿಣಿ . . . ಸಮುದ್ರಸತಿ ಧುನಿ ತೊಱಿ" (ವಸ್ತುಕೋ. ೨೩-೧೧) ; "ನದಿ ತರಂಗಿಣಿ ತಟಿನಿ ಧುನಿ . . . ಎನೆ ತೊಱಿಗೆ ನಾಮಂ" (ಮಂಗರಾ. ೧೩೩-೧೦) ; ಧುನಿ ಶಶಿ ನಿಟಿಲಾಕ್ಷಂ . . . ಪಂಚಾಸ್ಯದಿಂದಮಾಶ್ವರನೆಸೆದಂ (ತ್ರಿಪುವಿ. ೩೪-೧೮) ; ಗೋಮತಿ ಸಮಾಖ್ಯದ ಧುನಿಯದೊಂದುಂಟು (ತಿಮ್ಮಶಾಂ. ೧೧-೩೭) ; ಮುಂತೆ ನಿಲುವೀಯ್ಯದತಿಘೋರಲೋಹಿತದ ಧುನಿ ಲವಣಾಬ್ಧಿಯೋಲ್ ಕೆಡೆವೊಲು (ವೆಂಕಾರಾ. ೬-೩೬-೪೨) ; ಹೊಸಸೃಷ್ಟಿಯ ಕನಸೊಂದನು ಬಗೆಗೊಂಡನೊ ನಲ್ಲಂ . . . ಈ ವನಕಂದರವಂ, ಮಂಜುಳನಾದಿನಿ ಧುನಿಯಂ, ಸ್ವರ್ಣಾರುಣನಭವಂ (ಮಾಂದಳಿ. ೪೩-೧೧). [ಸಂ.]

ಧುನಿಕುಮಾರಕ (ನಾ). ನದಿಯ ಮಗ ; ಗಾಂಗೇಯ ; ಭೀಷ್ಮ : ಧುನಿಕುಮಾರಕ ನುಡಿದನು (ತಿಮ್ಮಶಾಂ. ೨-೬೬). [ಧುನಿ + ಕುಮಾರಕ]

ಧುನಿಬಾವಾ (ನಾ). ಸಾಂಬ್ರಾಣಿ ಮೊದಲಾದ ಸುಗಂಧದ್ರವ್ಯಗಳ ಹೊಗೆ ಹಾಕಿ ಮೈಕಾಯಿಸಿಕೊಳ್ಳುವ ಸಾಧು,–ಗೋಸಾಯಿ : ಶಿವನ ನಕಲು ಮಾಡುವ ಧುನಿಬಾವಾಗಳೂ ಇಲ್ಲಿದ್ದರು (ಪರಿಹಾ. ೧೫೯೫).

[ಧುನಿ$_0$ (P ← ಹಿಂ. ಧೂನೀ) + ಬಾವಾ]

ಧುನಿರಾಣಿ (ನಾ). ನದಿಗಳ ಅರಸಿ ; ಮಹಾನದಿ : ಧುನಿರಾಣಿ ಗಂಗೆಯೆ ನಿನಗೆ ನೆನವಿಹುದೇನಾ ಶುಭಗಳಿಗೆ (ಗಿಳಿವಿಂ. ೧೦-೫). [ಧುನಿ + ರಾಣಿ]

ಧುಪ್ಪುಧುಪ್ಪು (ನಾ). ಒಂದು ಅನುಕರಣ ಶಬ್ದ : ಇರ್ವರು ಧುಪ್ಪುಧುಪ್ಪೆಂಬಂತೆ ಹೊಡೆದಾಡುತಿರ್ದರಾಹವದೆ (ಮೋಹತ. ೩೮-೩೭). 'ದುಪುದುಪು' ಪರಾ.

ಧುಬಲಿ (ನಾ). ದಪ್ಪವಾದ ಹೆಂಗಸು ; ಟೊಣಪಿ : ನಮ್ಮವ್ವ ! ಏನು ಕಾಟ ಈ ಧುಬಲೇರದು ! (ಎಕ್ಕಿಕ್ಕೆ. ೯೭) ; ಗೋಲ ಉಟಗೊಂಡು ಧುಬಲಿ ಬರತದಲ್ಲ, ಅದರ ಜೋಡಿ ಹೋಗಿದ್ದಾಳು ಹವಾ ತಿನ್ನಲಿಕ್ಕೆ ! (ಎಕ್ಕಿಕ್ಕೆ.೦೩೨).

[<ಡುಬಲಿ./ಮರಾ. ಧುಬುಲಾ]

ಧುಮ್ (ನಾ). ಒಂದು ಅನುಕರಣ ಶಬ್ದ. ಧುಮ್ಮೆನ್' ಪರಾ.

ಧುಮಧುಮಲಾಡು (ಕ್ರಿ). ದುಮುಗುಟ್ಟು ; ಸಿಡಂಕು ; ಕೋಪವನ್ನು ವ್ಯಕ್ತಪಡಿಸು : ಹಬ್ಬದ ದಿನದಿಂದಲೂ ಸೊಸೆಯ ಮೇಲೆ ಆಕೆ ಧುಮ ಧುಮಲಾಡುತ್ತಲೇ ಇದ್ದಾಳೆ (ಲಕ್ಷ್ಮೀಶ್ರ. ೯೩).

[←ತೆಲು. ದುಮುದುಮಲಾಡು]

ಧುಮಶ್ಚಕ್ರಿ (ನಾ). ಗೊಂದಲ; ಗಲಾಟೆ: ಈ ಪ್ರಕಾರ ಆ ಜನವಸತಿಯಿಂದ ದೂರವಾಗಿದ್ದ ಗೃಹದಲ್ಲಿ ತಾಸೆರಡು ತಾಸು ಧುಮಶ್ಚಕ್ರಿಯು ನಡೆದರೂ ಯಾರಿಗೂ ಗೊತ್ತಾಗಲಿಲ್ಲ (ಮಂಜುಳ. ೭೪). [←ಮರಾ. ಧುಮಶ್ಚಕ್ರೀ]

ಧುಮುಕು 'ದುಮ್ಮಿಕ್ಕು' ನೋ.

ಧುಮ್ಮನೆ (ಅ). ಧುಮ್ ಎಂಬ ಶಬ್ದದೊಡನೆ : ಅನುಕರಣಕ್ಕೆ–ಖಣ್ಣನೆ, ಖಟಿಲ್ಲನೆ. ಧಮ್ಮನೆ, ಧುಮ್ಮನೆ [ಪಾಕಾಂ. ಧುಮ್ಮೆನೆ] (ಕಮಾದ. ೦೯ ಪ್ರಯೋ). [ಧುಮ್ + – ಅನೆ$_1$]

ಧುಮ್ಮಿಕ್ಕು 'ದುಮ್ಮಿಕ್ಕು' ನೋ.

ಧುಮ್ಮಿಡು (ಕ್ರಿ). ಕೆಳಗೆ ಇಳಿ ; ಬೀಳು : ಮುಡಿಯುಳಿದ ಶಿರೋಜ ಧುಮ್ಮಿಟ್ಟು–ನೆಲದೊಳಗೀಜ ಮೂರ್ಜಡೆಗಳುಗಟ್ಟಿ ತನು ಬಾಗಿ ಬಳಲುತಲಿ (ಹನುಮ. ೩೯-೩). [ಧುಮ್ + ಇಡು$_1$]

ಧುಮ್ಮುಚಿ 'ದುಮಂಜಿ' ನೋ.

ಧುಮ್ಮೆನ್ (ಕ್ರಿ). ಧುಮ್ ಎಂದು ಶಬ್ದಮಾಡು: ಧುಡುಹೆಂಬ ಧುಮ್ಮೆಂಬ ಧೋರೆಂಬ ಭೋರೆಂಬ ಕೂರಸಿಗಳುರವಣೆಯ ದನಿಯಡಸುತಂ ವುಟ್ಟೆ (ಇಹರ. ದೀ. ೪೩-೩). [ಧುಮ್ + ಎನ್$_1$]

ಧುರ$_1$ 'ದುರ' ನೋ.

ಧುರ$_2$ (ನಾ). ೧. ನೊಗ. ೨. ಬಂಡಿಯ ಈಸಿನ ಮುಂಭಾಗ ; ಗಾಡಿಯಲ್ಲಿ ನೊಗವನ್ನು ಕಟ್ಟುವ ಭಾಗ ; ವಂಕೂಕಿ. ೩. ಕಡಾಣಿ ; ಕಡೆಗೀಲು. ೪. ಉಚ್ಚಸ್ಥಾನ ; ಗೌರವಪೂರ್ಣವಾದ ಸ್ಥಾನ. ೫. ಭಾರ; ಹೊಣೆ ; ಜವಾಬ್ದಾರಿ : ದೊರತನದ ಜಟಿಲಗಳ, ಕುಲಟಗಳ, ಕಠಿನಗಳ ಭರತನುಳಿಸಿದನೆ ರಾಮನ ತೀರ್ಪಿಗೇದು ? ಅರಿವಿಗಿಹ ಕರ್ತವ್ಯಭಾರವನು ತಾನರಿತು ಧುರವ ಧರಿಸಿದನವನು (ಮಂಕುಳ. ೭೦೯).

[ಸಂ. ಧುರ್]

ಧುರಂಧರ (ಗು). ೧. ಭಾರವನ್ನು ಹೊರುವ. – ಹೊತ್ತಿರುವ. ೨. ಹೊಣೆಗಾರಿಕೆಯಂನ್ನು ಹೊತ್ತಿರುವ. (ನಾ). ೫. ಭಾರ ಹೊರಲು ಯೋಗ್ಯವಾದ ಪಶು; ಹೊರೆ ಹೊತ್ತುಕೊಳ್ಳಲಂ ಅರ್ಹವಾದ ಪ್ರಾಣಿ : "ಧೂರ್ವಹಃ, ಧುರ್ಯಃ, ಧೌರೇಯಃ, ಧುರೀಣಃ, ಧುರಂಧರಃ–ಶಿ ಬಂಡಿ, ಗೋಣಿ, ನೇಗಲು ಮುಂತಾದ ಭಾರವನ್ನು ಹೊತ್ತು ಶಕ್ತಿಯುವ ಎತ್ತು ಮುಂತಾದ ದನಗಳ ಹೆಸರುಗಳು" (ನಿದ್ಯಾಕ್ಷಿ. ೨೯೩). ೪. ಹೊಣೆಯನ್ನು ಹೊರುವವನು ; ಮುಂಖಂಡ ; ನಾಯಕ ; ಮುಂದಾಳು : ವಿಚಿತ್ರವೀರ್ಯನಂ ಗಾಂಗೇಯಂ ಧರಾಭಾರ ಧುರಂಧರನಂ ಮಾಡಿ (ಪಂಪಭಾ. ೦-೭೩ ವ). 'ಧುರಂಧರಿಕೆ' ಪರಾ. ೫. ಕೆಲಸವನ್ನು ನಿರ್ವಹಿಸುವವನು : ಸಮರ್ಥ : ಸಹದೇವನಾತನ ಸವಹರೆಯ ನಕುಲಾಂಕನಿವರಾಹವಧುರಂಧರರು (ಕುವ್ಯಾಭೀ. ೨-೦೫) ; ಅಸಹಾಯಶೂರ ಧೈರ್ಯದೆ ಪರಾಕ್ರಮಧೀರನಸಮಕೀರ್ತಿಯ ವಿಸ್ತಾರ ಜಸದ ಕಾರ್ಯಕೆ ಧುರಂಧರ ನಂಜರಾಜೇಂದ್ರ ರಸೆಯ ತೊಜೆದು ಪೋದ ನಿಂದು (ಕಂನವಿ. ೦೯-೯೪.) 'ಕಾರ್ಯಂಧುರಧರ' ಪರಾ. [ಸಂ.]

ಧುರಂಧರತೆ (ನಾ). ೧. ಹೊಣೆಗಾರಿಕೆ ; ಜವಾಬ್ದಾರಿ ವಹಿಸಿಕೊಳ್ಳುವುದು : ವಿಶ್ವವಿಶ್ವಂಭರಾ ಧುರಂಧರತೆಗಂ ವೀರಶ್ರೀನಿವಾಸವಿಳಾಸಕ್ಕಂ. . . ತಾನೊರ್ವನೆ ನಿರುಪಮಜನ್ಮಭೂಮಿಯಾಗಿ (ಕಾಂತಿಪು. ೩-೪೯ ವ) ; ರಾಜ್ಯಭರಧುರಂಧರತೆಗೆ ಕುಮಾರಂ ತರುಣನಾದೊಡಂ ನೀಮೆ ಸಾಲ್ವಿರ್ (ಪುಣ್ಯಪು. ೯-೯೯). ೨. ಸಾಮರ್ಥ್ಯ : ಈ ರಣಧುರದೊಳ್ ಧುರಂಧರತೆಯಿಂ ಹರಿಕಂಧರನೆಂಬನೊಡ್ಡಿದಂ (ವರ್ಧಮಾ. ೪-೩೦). [ಸಂ. ಧುರಂಧರತಾ]

ಧುರಂಧರಿ, ಧುರಂಧುರಿ (ನಾ). ೧. ಅದ್ಧೂರಿ ; ವೈಭವ ; ಭವ್ಯತೆ : ನಿನ್ನ ಮನಿ ಲಗ್ನದ ಧುರಂಧರಿ ನೋಡಿದರ ಜಮಖಂಡಿ ಮಹಾರಾಜನ ಲಗ್ನ ನೆನಸೂ ಹಂಗ ಆಯ್ತು (ಗಂಮಾಯಿ. ೧೬೮) ; ಕಲ್ಯಾಣಮಂಟಪವು ಹೇಗಾಗಿದೆ . . . ಏನು ಕೇಳುವಿಯಪ್ಪ ! ಎಷ್ಟು ಧುರಂಧರಿಯಿಂದ ಮಾಡಿರುವಿ (ಕನಕಿ. ೬೫). **ಧುರಂಧುರಿ** : (ಗಂ). ೨. ಸಡಗರದ ; ಅದ್ಧೂರಿಯಾದ : ಹಗಲಾಗಲಿ ಧುರಂಧುರಿ ಜಾತ್ರಿ ನಿದ್ದಿಗಿರಲಿ ರಾತ್ರಿ (ಹಾಡುಪಾ. ೪೨-೫). [←ಮರಾ. ಧುರಂಧರೀ, ಧುರಂಧುರೀ]

ಧುರಂಧರಿಕೆ (ನಾ). ಮುಂದಾಳುತನ ; ಮುಂಖಂಡತ್ವ : ಧುರಧುರಂಧರಿಕೆಯನು ತಾನೇ ಧರಿಸಿ ಕಳುಹಿದನಿಂದ್ರಜಿತುವನು (ತೊರರಾ. ೬-೪೦-೬).

[ಧುರಂಧರ + – ಇಕೆ]

ಧುರಂಧುರಿ 'ಧುರಂಧರಿ' ನೋ.

ಧುರಕೋಳಾಹಳಿಗ (ನಾ). ಯುದ್ಧದಲ್ಲಿ ಕೋಲಾಹಲವನ್ನು ಮಾಡುವವನು ; ಶೂರ : ರಣದಗ್ಗಳೆಯ ಸುಭಟರ ಜಯಿಸು ಧುರಕೋಳಾಹಳಿಗ ನೆನಿಸು (ಕುವ್ಯಾದ್ರೋ. ೬೧೩. ಪರಿ. ೩೭೯).

[ಧುರ$_1$ (<ದುರ) + ಕೋಳಾಹಳ (=ಕೋಲಾಹಲ) + – ಇಗ]

ಧುರಗಲಿ 'ದುರಗಲಿ' ನೋ.

ಧುರಗಳ್ಳ (ನಾ). ಯುದ್ಧದಿಂದ ಪಲಾಯನ ಮಾಡುವವನು,–ತಪ್ಪಿಸಿಕೊಳ್ಳುವವನು ; ರಣಹೇಡಿ : ವೀರರಂಗವ ಬಿಟ್ಟು ನೀನೀ ಚೋರರಂಗವ ಕಲಿತೆ ಹೊಸತೇ ನಾರಿಗಳ್ಳನು ತಂದೆ ನೀ ಧುರಗಳ್ಳ ಹಸನಾಯ್ತು (ಕಾಶಿರಾ. ೦೯-೨೮). [ಧುರ$_1$ (<ದುರ) + ಕಳ್ಳ$_1$]

ಧುರಚಮತ್ಕೃತಿ (ನಾ). ಯುದ್ಧದಲ್ಲಿ ತೋರುವ ಕೌಶಲ,–ಚಾತುರ್ಯ: ಜೋದರ ಧುರಚಮತ್ಕೃತಿ ಬೆಜಗನಿತ್ತುದು ದೇವಸಂತತಿಗೆ (ಕುವ್ಯಾಭೀ. ೪-೮೬). [ಧುರ$_1$ (<ದುರ) + ಚಮತ್ಕೃತಿ]

ಧುರಧರ (ನಾ). ಜವಾಬ್ದಾರಿಯನ್ನು ಹೊರುವವನು ; ಹೊಣೆಗಾರ : ಎಂದಾದಪೆನೀ ಲಲನೆಗೆ ನಂದನನುರುರಾಜ್ಯಭಾರಧುರಧರನೆಂಬೀ ಸಂದೇಹ ಮೆನ್ನ ಮನದೊಳ್ ಕುಂದದೆ ನೆಲಸಿರ್ದುದೆಂದು ಬನ್ನಯಿಸಲೊಡ (ಜಾಧಪು. ೩-೩೮). [ಸಂ.]

ಧುರಧರಣಿ (ನಾ). = ಧುರಧರೆ : ಅಂಧಾಸುರಧ್ವಂಸಧರುಧರಣಿಯಂತೆ ನೀಲಕಂಠನೃತ್ತಾಡಂಬರಮುಂ (ಕುಸುಮಾ. ೦-೭೪ ವ) ; ಧುರಧರಣಿ ಪೆಣ ಮಯಮಾಗೆ ಭಯಂಕರಮನಾಳ್ದುದಾಹವರಂಗಂ (ಮಹಾನೇ.೦೨-೭೪) ; ಪರಿವಿತಪರಿವಾರ ತುರಗಸಹಿತ ರಾಮ ಧುರಧರಣಿಯೊಳು ಮಾಜಾಂತು ಇರದೆ ನಿಂದನು ಸುರುತಾಳನ ಸಕಲ ಮೋಹರಕದಿರಾಗಿ ಬೇಗದೊಳು (ಕುರಾಸಾಂ. ೪೩-೫೮). [ಧುರ$_1$ (<ದುರ) + ಧರಣಿ$_1$]

ಧುರಧರೆ (ನಾ). ಕಾಳಗದ ಕಣ ; ಯುದ್ಧಭೂವಿಂ ; ರಣರಂಗ : ನೆತ್ತರ ವೆರ್ಮಲಿ ಕಜಿದತ್ತುಪೇಂದ್ರನಿಂ ಧುರಧರೆಯೊಳ್ (ಪಂಡಾಮಾ. ೯-೭೬) ; ಶರಣೆನುತಂಜಿ ಬಂದು ಮಜಿವೊಕ್ಕಡೆ ಕಾವೆಡೆಯಲ್ಲಿ ವಜ್ರಪಂಜರ . . . ಧುರಧರೆಯಲ್ಲಿ ಕಾಳಕ್ರಿತಾಂತನೆನುತ್ತ ಚಣ್ಣೆಕುಂ ವರವಿಬುಧವ್ರಜಂ (ಕಇ. IV, ೦-೭೬ ; 1204) ; ಧುರಧರೆಯಲ್ಲಿ ಸೋಲ್ತು ತಮವೇಳ್ತುರಗಾ ಕೃತಿಯಿಂ ವರೂಥಮಂ ಧರಿಯಿಸಿ (ತ್ರಿಪುವಿ. ೭-೮೨).

[ಧುರ$_1$ (<ದುರ) + ಧರೆ]

ಧುರಧಾರಿಣಿ (ನಾ). = ಧುರಧರೆ : ಧುರಭರಮನಾಂಪ ತನಗದು ಸಿರಕ್ಕೆ ಸಿವುಡೆನಿಸೆ ತೆರ್ಕೆಯಿ ಶುಂಡಂ ದೋಃಪರಿಘಾಸಿಯಿಂದೆ ಪೊಯ್ದಂ ಕರಿಕರಮಂ ಪಱಿದು ಪಾಱಿ ಧುರಧಾರಿಣಿಯೊಳ್ (ಮಹಾನೇ. ೦೩-೬೪).

[ಧುರ್$_1$ (<ದುರ) + ಧಾರಿಣಿ]

ಧುರಧೀರ (ನಾ). ಯುದ್ಧಮಾಡುವುದರಲ್ಲಿ ಶೂರನಾದವನು ; ರಣಧೀರ : ಧರಣೀಶಂ ಧುರಧೀರನಾಗೆ ಧನಮುಳ್ಕಂ ತ್ಯಾಗಿಯಾಗಲ್ . . . ದೊರೆವೋಲ್ ಚಿನ್ನಕೆ ಸೌರಭಂ (ಶೋಮೇಶ. ೧೧) ; ಧುರಧೀರ ಸಾಹಸ ಚಿತ್ರಸೇನನುದಾರಗುಣನಿಧಿ ಬಂದು ಕಂಡನು ವಿತ್ರಭಾವದಲಿ (ಕುವ್ಯಾಉ. ೧೧-೩೭) ; ಧುರಧೀರ ಸೇದಿರಾಜಂ ಗುರುತರ ಗಣಪದಮನಿತ್ತು ಸುರತತಿ ಪೊಗಳುತ್ತಿರೆ ವೆಱಿದೊಪ್ಪುವ ಪುಲಿಗೆಱೆಪುರಪತಿ ಸೋಮೇಶನೊಲ್ದು ಪಾಲಿಕೆ ನಮ್ಮಂ (ತ್ರಿಪುವಿ. ೩೫-೦) ; ಧುರಧೀರ ರಕ್ತಬೀಜಾಸುರಂ ಭಕ್ಷಿಸುವುದಕ್ಕೆ ಬಾಯ್ದೆಱೆದಿದ್ದಾ ವರದುರ್ಗಿಯ ಪಲ್ಗಳವೊಲ್ ಪಿರಿದುಪ್ಪರಗೋಂಟೆದೆನೆಗಳೊಪ್ಪಿದವಮವು (ಹಮ್ಮೀ. ೧-೬೧).

[ಧುರ್$_1$ (<ದುರ) + ಧೀರ]

ಧುರಧುರಂಧರ(ನಾ). ಹೋರಾಟದಲ್ಲಿ ಮುಂದಾಳು: ವರಯುಧಾಮನು ಕೃಮೌಂಜಸನುರು ಶಿಖಂಡಿ ಸುಚೇಕಿತಾನರು ಧುರಧುರಂಧರ ವೀರ ಪಾಂಚಾಲಕ್ಷಿತೀಶ್ವರರು (ಕುವ್ಯಾಉ. ೧೧-೩೨) ; ವಿಮಲ ಸಹಣಿಗಳವರ ಕರೆಯೆನುತ ಧುರಧುರಂಧರರೊಱಿದರು (ಕುವ್ಯಾಭೀ. ೪-೪೬) ; ವಿರಚಿಸಿದನಾ ವೀರ ದಶಕಂಧರಶಿರಃಕಂತುಕವಿನೋದದ ಧು[ಪಾಠಾಂ. ಧ]ರ ಧುರಂಧರ ದುಷ್ಪದೋರ್ದಂಡಪ್ರಕಾಪಕವ (ತೊರಠಾ. ೬-೫೨-೩).

[ಧುರ್$_1$ (<ದುರ) + ಧುರಂಧರ]

ಧುರಧುರೀಣತೆ (ನಾ). ಯುದ್ಧದ ಮುಂದಾಳುತನ,–ನಾಯಕತ್ವ : ಸರಿಯದಾರೈ ನಿನಗೆ ನಂಬುಗೆಗೆರವ ತಾರದೆ ಸ್ವಾಮಿಕಾರ್ಯದ ಧುರಧುರೀ[ಪಾಠಾಂ. ಧುರದ ಪರಿ]ಣತೆ ನಿನ್ನೊಳಾಯ್ತು (ತೊರಠಾ. ೬-೩೮-೧೯).

[ಧುರ್$_1$ (<ದುರ) + ಧುರೀಣತೆ]

ಧುರಪರಿಷ್ಕೃತ (ನಾ). ಅನೇಕ ಯುದ್ಧಗಳನ್ನು ಮಾಡಿ ದಕ್ಷತೆಯನ್ನು ಪಡೆದವನು; ಯುದ್ಧಪರಿಣತ: ಎಲವೋ ಧುರಪರಿಷ್ಕೃತನಲ್ಲ ಸಾರ್ಸುಡು ನಿನ್ನ ಸಾಹಸವ (ತೊರಠಾ. ೬-೪೪-೨). [ಧುರ್$_1$ (<ದುರ) + ಪರಿಷ್ಕೃತ]

ಧುರಪಲಾಯನ (ನಾ). ಯುದ್ಧಮಾಡಲಾರದೆ ಅಂಜಿ ಓಡಿಹೋಗುವುದು ; ಹೋರಾಟದಿಂದ ಪಲಾಯನ ಮಾಡುವಿಕೆ : ಆರ ದಳವದು ಧುರಪಲಾಯನ ಚಾರುದೀಕ್ಷಿತರಾಯ್ತು (ಕುವ್ಯಾಳ. ೧೪-೯).

[ಧುರ್$_1$ (<ದುರ) + ಪಲಾಯನ]

ಧುರಭರ (ನಾ). ಯುದ್ಧದ ವೇಗ; ಕದನದ ತೀವ್ರತೆ : ಧುರಭರಮನಾಂಪ ತನಗದು ಸಿರಕ್ಕೆ ಸಿವುಡೆನಿಸೆ ತೆರ್ಕೆಯಿಂ ಶುಂಡಂ ದೋಃಪರಿಘಾಸಿಯಿಂದೆ ಪೊಯ್ದಂ ಕರಿಕರಮಂ ಪಱಿದು ಪಾಱಿ ಧುರಧಾರಿಣಿಯೊಳ್ (ಮಹಾನೇ. ೧೩-೬೪). [ಧುರ್$_1$ (<ದುರ) + ಭರ]

ಧುರಮಂಡಲ (ನಾ). = ಧುರಧರೆ : ಧುರಮಂಡಲದೆ ದೇವರ ಪಾದಪದ್ಮವ ಹರುಷದೆ ಕಾದು ಬೆಸಸಿದ ಪಿರಿದು ಸೇವೆಯ ವಾಳ್ಪೆವೆಂಬೂಳಿಗದರ ಬಿರುದಿನ ನುಡಿಗಳೊಪ್ಪಿದವು (ಕಂನವಿ. ೯-೪೩). [ಧುರ್$_1$ (<ದುರ) + ಮಂಡಲ]

ಧುರಮುಖಿ (ನಾ). ಯುದ್ಧದ ಮುಂಚೂಣಿ : ಧುರಮುಖದೊಳಂತಕನ ಹಸಿವಡಗೆ ಮಾರಿ ಕೊಕ್ಕರಿಸಿ (ಹಡಕಾ. ೧೦-೦೪).

[ಧುರ್$_1$ (<ದುರ) + ಮುಖ]

ಧುರವಿಜಯ (ನಾ). ಯುದ್ಧದಲ್ಲಿ ಗೆದ್ದವನು,–ಜಯಶಾಲಿಯಾದವನು: ವರಚಂದ್ರಗಿರಿಯ ಸುಪರಿಸ್ಕರಣವನಾಕ್ರಮಿಸಿರಲ್ಕೆ ಸೈನ್ಯಸಮೇತಂ ಧುರವಿಜಯನನಿಕ್ಕೇರಿಯ ಮುರಿಯಪನಂ ಕಳುಹಿ ಮಗುಳ್ದಂ ವಶಗೆಯ್ದಂ (ಕಳಸ್ಕ. ೧೦-೫೬). [ಧುರ್$_1$ (<ದುರ) + ವಿಜಯ]

ಧುರವಿಶಾರದ (ನಾ). ಯುದ್ಧದಲ್ಲಿ ನಿಷ್ಣಾತ ; ಹೋರಾಟದಲ್ಲಿ ನಿಪುಣ ; ಶೂರ : ಧುರವಿಶಾರದನಹೆ ವಿರಾಟನ ಹಿರಿಯ ಮಗ ನೀನು (ಕುವ್ಯಾಭೀ. ೫-೩೫). [ಧುರ್$_1$ (<ದುರ) + ವಿಶಾರದ]

ಧುರಾವನಿ (ನಾ). = ಧುರಧರೆ : ನೆತ್ತುರ ತೆಱಿಗಳ್ ಪರಿದವು ಸುತ್ತುಂ ಬಳಸು ಧುರಾವನೀಮಂಡಳದೊಳ್ ಸತ್ತ ಚತುರಂಗಮಿನಿತೆನಲತ್ತಳಗಂ ಬಗೆದು ನೋಡ್ಪಡಾ ಬ್ರಹ್ಮಂಗಂ (ಮಹಾನೇ. ೧೩-೦೫೫) ; ಪರಿಹರಿಸಿ ನರನಂ ಧುರಾವನಿಯೊಳಡಗೆಡಹಿ ಹರನಂದು ಮೆಟ್ಟಿ ಮೆಲ್ಲಡಿ ಸೋಂಕುಮಾತ್ರದಿಂದರುಣಜಲಮಂ ಕಾಱಿದಂ. (ಕಬಪ್ರ. ೫೩-೫೬).

[ಧುರ್$_1$ (<ದುರ) + ಅವನಿ]

ಧುರಾವಹ (ನಾ). ಹೊಣೆಯನ್ನು ಹೊರುವವನು ; ಹೊಣೆಗಾರ : ನೀವು ಕೌರವ ಸರ್ವದಳದ ಧು[ಪಾಠಾಂ. ದು]ರಾವಹರಲೇ ಬಾಣಸೃಷ್ಟಿ ಕೃತಾವಧಾನವ ತೋಱಿನುತ ನೃಪನೆಚ್ಚು ಬೊಬ್ಬಱಿದ (ಕುವ್ಯಾಕ. ೨-೫೫).

[ಸಂ.]

ಧುರೀಣ (ಗು). ೧. ಭಾರವನ್ನು ಹೊತ್ತ,–ವಹಿಸಿಕೊಂಡ ; ಹೊಣೆಗಾರಿಕೆಯನ್ನು ವಹಿಸಿಕೊಂಡಿರುವ,–ಹೊತ್ತಿರುವ. (ನಾ). ೨. ದಕ್ಷನಾದವನು ; ಸಮರ್ಥ ; ನಿಪುಣನಾದವನು : ತಳ್ಕೇಸಾದಿದಂ ಕೋಟಗೊರ್ವನೆ ಬಿಲ್ಗೊಂದು . . . ಧನುರ್ಧರಧುರೀಣಂ ದ ರ್ಧರಂ ಲಕ್ಷಣಂ (ಪಂರಾಮಾ. ೧೪-೦೬೬) ; ಅಪಾರವಾಗಿ ದುಡಿದ ಪಾಶ್ಚಾತ್ಯ ಸೇವಾಧುರೀಣರಲ್ಲಿ . . . ಇವನೂ ಉನ್ನತಸ್ಥಾನವನ್ನು ಪಡೆದಿದ್ದಾನೆ (ಪಾಶ್ಮಾವಿ. ೪೯). ೩. ಮುಂದಾಳು ; ಅಗ್ರಗಣ್ಯ ; ನಾಯಕ : ಆಧುನಿಕ ಪ್ರಪಂಚದ ಕೆಲವೊಂದು ಮುಖ್ಯಮುಖ್ಯ ಸಂಗತಿಗಳು ಭಾರತದ ಪ್ರಮುಖ ಧುರೀಣರ ಹಾಗು ಸಾರ್ವಜನಿಕ ಸೇವಾನಿರತಜನರ ಮನಸ್ಸನ್ನು ಸೆಳೆದಿದ್ದವು (ಮಹಾಯೋ. ೩೯) ; ಕ್ರಾಂತಿದೇವಿಯ ಪರಮಭಕ್ತರೂ ಸ್ವಾತಂತ್ರ್ಯ ಚಳವಳಿಯ ಧುರೀಣರೂ ಆಗುವರು (ಜಗಸಂ. ೩) ; ಸಾಮ್ಯವಾದ ಮತ್ತು ಮಾನವತಾವಾದದ ಧುರೀಣರ ಅಭಿಪ್ರಾಯದ ಮೇರೆಗೆ ಸಾಮಾಜಿಕ ಸುಲಿಗೆಯ ಸಾಧನವನ್ನು ಸಿದ್ಧಪಡಿಸುವುದಕ್ಕಾಗಿ ಧರ್ಮವು ಸುಳ್ಳುಸುಖದ ಕಲ್ಪನೆಯನ್ನೀಯುತ್ತದೆ (ಧರ್ಮಶಾ. ೧೧). ೪. ಭಾರ ಹೊರುವ ಪ್ರಾಣಿ ; ನೊಗವನ್ನು ಹೊರುವ ಎತ್ತು : "ಧುರೀಣ ಧೌರೇಯ ಧುರ್ಯನಾಮಾ ಭದ್ರಂ" (ವಸ್ತುಕೋ. ೯೯-೩) ; "ಧೂರ್ವಹಃ, ಧುರ್ಯಃ, ಧೌರೇಯಃ, ಧುರೀಣಃ, ಧುರಂಧರಃ–೫ ಬಂಡಿ, ಗೋಣಿ, ನೇಗಲು ಮುಂತಾದ ಭಾರವನ್ನು ಹೊತ್ತು ಶಕ್ತಿಯುವ ಎತ್ತು, ಮುಂತಾದ ದನಗಳ ಹೆಸರುಗಳು" (ನಿಘಂಶಿ. ೩೯೩). [ಸಂ.]

ಧುರೀಣತೆ(ನಾ). ೧.ಕಾರ್ಯಚತುರತೆ,–ಸಾಮರ್ಥ್ಯ. ೨. ಮುಂದಾಳುತನ ; ನಾಯಕತ್ವ ; ಪ್ರಾಮುಖ್ಯತೆ : ಜಾನಕಿಬಾಯರ ಧುರೀಣತೆಯು ಮನೆಯಲ್ಲಿ ತೀರ ಪ್ರಖರವಾಗಿತ್ತು (ಸಮಾಜೀ. ೬೩). [ಸಂ. ಧುರೀಣತಾ]

ಧುರೀಣತ್ವ (ನಾ). ಮುಂದಾಳುತನ ; ನಾಯಕತ್ವ : ಕುಸ್ತಿಯಲ್ಲಿ ಭಾಗವಹಿಸಲು ಪಾದಳ್ಳಿಯ ಕುಸ್ತಿಗಡಿಗಳು ದಾದಾನ ಧುರೀಣತ್ವದಲ್ಲಿ ಬಂದಿದ್ದರು (ಗ್ರಾಪಚಾಯ. ೫೧). [ಸಂ.]

ಧುರ್ಯ (ನಾ). ೧. ಸಮರ್ಥ ; ಚತುರ ; ಕಾರ್ಯಧುರಂಧರ : ಧನುರ್ಜೇಜ್ಯಂ . . . ನಿಲೆ . . . ದಂಪತಿಕ್ಷೇತ್ರದೊಳ್ ಧನವಂತಂ ಧರಣೀಶ ಕಾರ್ಯಭರಧುರ್ಯಂ ಸತ್ಯಳಾಕೋವಿದಂ (ಜಾತಪಿ. ೧೬-೩೯) ; ನಿಜಗುರು ಸಪರಿಯ ಕ್ಷೀಣನಂ ಗುರುಚರಣಗಂಧಾಘ್ರಾಣನಂ ಗುರುಕಾರ್ಯ ಧುರ್ಯನನು (ಬಸಪು. ೩೯-೫೩) ; ಜಕ್ಕಣಾಚಾರ್ಯ ಭಕ್ತಿಸಕಾರ್ಯ ಪರಮಶಿವಸವಯ ಧುರ್ಯ (ಪ್ರಾಥಠಾ. ೧೦-೮). ೨. ಪ್ರಮುಖಸ್ಥಾನದಲ್ಲಿರುವವನು ; ಆಡಳಿತಗಾರ. ೩. ಸಚಿವ. ೪. ಮುಂದಾಳು ; ನಾಯಕ ; ಅಗ್ರಗಣ್ಯ. ೫. (ಬಂಡಿಯ ಮೂಕಿಗೆ ಹೊದಿಸಿರುವ)

ಭಾರವನ್ನು ಹೊರುವ ಕುದುರೆ, ಎತ್ತು ಮೊದಲಾದುವು ; ಗಾಡಿಗೆ ಕಟ್ಟುವ ದನ : "ಧುರ್ಯಃ, ಧೌರೇಯಃ–ಈ ೨ ಹೂಟದೆತ್ತು" (ಹಲಾಯು. ೪೪–೧೧೦); "ಧುರ್ಯಂ ತಿದ್ದಿದುಕ್ಷಮದು" (ಮಂಗರಾ. ೫೩–೧). ೬. ಚತುರತೆ ; ಸಾಮರ್ಥ್ಯ : ಅವರೊಳೊಂದೊಂದಕ್ಕೊಡಂಬಡಿಸಿ ಸಾಂಗದಿಂದ ಪುರಾಣ ಸೂಕ್ತ್ಯರ್ಥಂಗಳೊಳು ಬಹುಸಮಯಿಗಳ ಚಿತ್ತಂಗಳೊಳಗಹುದಹುದೆನಿಸಿ ಚಾತುರ್ಯಧುರ್ಯದಲಿ (ಬಸಪು. ೫೩–೫೯). [ಸಂ.]

ಧುರ್ಯೆ (ನಾ.) ಗರ್ಭಿಣಿ ; ಬಸುರಿ : "ವರಧುರ್ಯೆ [ಪಾಠಾಂ. ದುರ್ಯೆ] ಸತ್ವೆಯಂತರ್ವತ್ನಿ ಗುರ್ವಿಯೆಂದರೆ ಗರ್ಭಿಣಿಯೆನಿಕ್ಕು" (ಮಂಗರಾ. ೯–೧೭). [ಸಂ. ಧುರ್ಯಾ]

ಧುವನ (ಗು). ೧. ಅಲ್ಲಾಡಿಸುವ ; ನಡುಗಿಸುವ. (ನಾ). ೨. ಅಲ್ಲಾಡಿಸುವುದು ; ಕಂಪನ. ೩. ಬೆಂಕಿ ; ಅಗ್ನಿ. [ಸಂ.]

ಧುವಿತ್ರ (ನಾ). ೧. ಯಾಗದಲ್ಲಿ ಅಗ್ನಿಯನ್ನು ಉರಿಯಿಸಲು ಕೃಷ್ಣಾಜಿನದಿಂದ ತಯಾರಿಸಿದ ಬೀಸಣಿಗೆ : "ಧುವಿತ್ರಂ [ಪಾಠಾಂ. ಧವಿತ್ರಂ] . . . ಯಜ್ಞದಲ್ಲಿ ಅಗ್ನಿಪ್ರಜ್ವಲನ ಮಾಡುವುದಕ್ಕೋಸ್ಕರ ಕೃಷ್ಣಾಜಿನದಿಂದ ಮಾಡಲ್ಪಟ್ಟ ಬೀಸಣಿಗೆ ಹೆಸರು, ಹುಲ್ಲೇಚರ್ಮದ ಬೀಸಣಿಗೆ" (ಸಿದ್ಧಾಂತಿ. ೨೨೦). ೨. ಬೀಸಣಿಗೆ. [ಸಂ.]

ಧುಸುಮುಸಿ 'ಧುಸುಮುಸು' ನೋ.

ಧುಸುಮುಸು, ದುಸುಮುಸಿ, ದುಸುಮುಸು, ಧುಸುಮುಸಿ (ನಾ). ಅಂತಸ್ತಾಪ ; ದುಮುಗುಡುವಿಕೆ ; ಆಂತರಿಕ ಕೋಪ ; ಕೋಪದಿಂದ ಒಳಗೊಳಗೇ ಸಿಡಿಮಿಡಿಗೊಳ್ಳುವುದು : ರಾಣಿಯ ಮನಸ್ಸಿನಲ್ಲಿ . . . ಮದುವೆಯ ಕಾರಣದಿಂದ ಒಳಗಿಂದೊಳಗೆ ಧುಸುಮುಸು ಇದ್ದದ್ದು ನಿನಗೆ ಗೊತ್ತೇ ಅದೆ (ಮಂಜುಕ. ೧೦೨). **ದುಸುಮುಸಿ** : ನಾನು ವೈನಿಯವರೊಂದಿಗೆ ಇಲ್ಲದ ದುಸುಮುಸಿ ಬಿಟ್ಟುಬಿಟ್ಟುದಕ್ಕೆ ವತ್ಸಲೆಗೂ ಎಷ್ಟೊಂದು ತೃಪ್ತಿ! (ವೈನಿ. ೧೧೧) ; ನಮ್ಮ ನಮ್ಮ ಜಗಳಾಟ, ದುಸುಮುಸಿ ಇವು ನಡಿಯೋವ (ಗಂಮಾಯಿ. ೨೦). **ದುಸುಮುಸು** : ಗಾಡಿಯಲ್ಲಿದ್ದ ಪ್ಯಾಸಂಜರರು ದುಸುಮುಸು ಶುರುಮಾಡಿದರು (ಬೆಂಗಬ. ೧೪೬). **ಧುಸುಮುಸಿ** : ಮದುವೆಮನೆಯಲ್ಲೇ ಬೀಗರ ಧುಸುಮುಸಿ ಶುರು ಆಗಿಬಿಟ್ಟಿತು (ರೂಢಿ).

ದುಸುಮುಸುಗುಟ್ಟು=ಸಿಡಿಮಿಡಿಗೊಳ್ಳು ; ದುಮುಗುಟ್ಟು : ದುಸುಮುಸುಗುಟ್ಟುವ ಸತಿಸುತರಿಂದಲಿ ಹಸಗೆಟ್ಟದ್ದೇನೊ (ಜಗದಾ. ೩೦೮–೨). **ದುಸುಮುಸು ಮಾಡು, ದುಸುಮುಸಿ ಮಾಡು, ಧುಸುಮುಸಿ ಮಾಡು**=ದುಸುಮುಸುಗುಟ್ಟು : ದುರುಗಮ್ಮನಂತೆ ಮುಖ ಮಾಡಿ ದುಸುಮುಸು ಮಾಡೋದು ಒಂದು ಬುಟ್ಟು ಬೇರೆ ಇನ್ನೇನೂ ನಾ ಕಾಣೆ (ಬೆಂಗಬ. ೧೩) ; ಸಧ್ಯಕ್ಕೆ ನೀನು ನಲನೊಡನೆ ದುಸುಮುಸು ಮಾಡುತ್ತಿರುವುದನ್ನು ಬಿಟ್ಟುಬಿಡು (ನಲದ. ೬೦); ತುದೆ ತಾಯಿಯ ಸಂಗಡ ದುಸುಮುಸಿ ಮಾಡಿರದಿದ್ದರೂ ಕಿರಣಲೇಖೆಗೆ ಅದು ಯಾವುದೂ ಅನ್ಯಾಯವೆಂದು ಅನಿಸುತ್ತಿದ್ದಿಲ್ಲ (ಇಪ್ಪಕ. ೪೧೨) ; ಅವರು ಮೆಲ್ಲ ಮೆಲ್ಲನೆ ನಮ್ಮಂತೆ ಮನೆಯಲ್ಲಿ ಕೆಲಸ ಮಾಡಲಾರಂಭಿಸಿದರು. . . . ಒಂದೂ ಅಪಶಬ್ದವನ್ನಾಡಲಿಲ್ಲ. ಎಂದೂ ಧುಸುಮುಸಿ ಮಾಡಲಿಲ್ಲ (ಸ್ಮೃತಿಚಿ. ೩೬೨). **ಧುಸುಮುಸು ಹಾಯು** = ದುಸುಮುಸುಗುಟ್ಟು : ಅವೂ ಧುಸುಮುಸು ಹಾಯುವ ಕ್ಷುದ್ರಗುಣಾ ಕಲೀತಾವಲ್ಲ ಅಂತ ಚಿಂತಿ ಬಿದ್ದದ (ಕಾಗಿಕ. ೧೦೦). [←ಮರಾ. ಧುಸ್‌ಮುಸ್]

ಧುಸ್ತುರ (ನಾ). = ಧುಸ್ತೂರ. [ಸಂ.]

ಧುಸ್ತೂರ (ನಾ). ಉಮ್ಮತ್ತಿಗಿಡ ; ದತ್ತೂರ. [ಸಂ.]

ಧುಳಧುಳ (ನಾ). ಒಂದು ಅನುಕರಣ ಶಬ್ದ. 'ಧುಳಧುಳನೆ' ಪರಾ.

ಧುಳಧುಳನೆ (ಅ). ಧುಳಧುಳ ಎಂಬ ಶಬ್ದದೊಡನೆ ; ವೇಗವಾಗಿ : ಬಂದರು ಧುಳಧುಳನಬಲೆಯರಾ ಗಾಡಿಕಾಱನಿದ್ದೆಡೆಗೆ (ಭರಚ. ೪–೧೧೭). [ಧುಳಧುಳ + – ಅನ್ನೆ]

ಧುಳುಧುಳು (ನಾ). ಒಂದು ಅನುಕರಣ ಶಬ್ದ : ಛಟಿಲ್ ಛಟಿಲೆಂಬ ಕಟಿಪಟಿನಿಟಿಲು ನಿಱಿಲೆಂಬ ಧುಳುಧುಳುಂ ದೊಪ್ಪೆಂಬ ಗುಱುಗುಱು ಧಳಧಳಂ ಜೋಱೆಂಬುದಱದಱದೊಳದೊಳೆಂಬೀ ಧ್ವನಿಗಳವನಿಗೆ ಭಯವನೀವುತಿರೆ (ಸಾನಂಡ. ೮–೧೩) ; ಕಲಕಿ ಸಾಗರ ತುಳುಕಿ ಜಲ ದುಂ ಧುಳುಧುಳುಂ . . . ಎನಿಪ ಹೆಕ್ಕಳದ ಘೋಷಗಳೆಸಗಿ ಘುಮ್ಮಿಡಿದವು ನಭೋಂತರವ (ಆನಂರಾ. ೫–೪–೫೨).

ಧೂಢಸೆಲ (ನಾ). ಒಂದು ಬಗೆಯ ಸಸ್ಯ ; ಕಾಡುತೆಂಗು : ಡಡ್ಸಲ, ಧೂಢಸೆಲ, ಬೆಟ್ಟತೆಂಗು, ಕಾಡುತೆಂಗು (ಮೃಜಿಗಿ. ೮–೧೪೦). [?]

ಧೂತ (ಗು). ೧. ನಡುಗಿದ ; ಕಂಪನಗೊಂಡ. ೨. ಕೊಡವಿದ ; ಝಾಡಿಸಿದ. 'ಪದಧೂತಧೂಳಿ' ಪರಾ. ೩. ತೆಗೆದು ಹಾಕಿದ ; ನಿವಾರಿಸಿದ ; ನಾಶಮಾಡಿದ. 'ಧೂತಪಾಪೆ' ಪರಾ. ೪. (ಗಾಳಿಯಿಂದ) ಹರಡಿದ ; ವ್ಯಾಪ್ತವಾದ ; ಹಬ್ಬಿದ ; ಚದರಿದ. 'ಧೂತಧೂಮ' ಪರಾ. ೫. ಬಿಟ್ಟ ; ತೊರೆದ ; ತ್ಯಜಿಸಿದ ; ಮುಕ್ತವಾದ. 'ಧೂತಪಾಪ' ಪರಾ. ೬. ಶುಚಿಮಾಡಿದ ; ಸ್ವಚ್ಛಗೊಳಿಸಿದ. (ನಾ). ೭. ಬಿಟ್ಟುದು ; ತ್ಯಜಿಸಿದುದು : "ತ್ಯಕ್ತಂ, ಹೀನಂ, ವಿಧುತಂ, ಸಮುಜ್ಝಿತಂ, ಧೂತಂ, ಉತ್ಸೃಷ್ಟಂ–೬ ಬಿಡಲ್ಪಟ್ಟದು" (ಸಿದ್ಧಾಂತಿ. ೩೫೨). [ಸಂ.]

ಧೂತಧೂಮ (ನಾ). ಹರಡಿದ ಹೊಗೆ ; ಹಬ್ಬಿದ ಹೊಗೆ : ಕಾಸಿದವು ಘಣಕುಲವ ಮೇಣ್ದೊಳ್ಳಾಸದಲಿ ಡಾವರಿಸಿದವು ಕಿಡಿ ಧೂತಧೂಮದಲಿ (ಕುವ್ಯಾಆ. ೨೦–೬೦). [ಧೂತ + ಧೂಮ]

ಧೂತಪಾತಕ (ನಾ). ಪಾತಕವನ್ನು ಕಳೆದುಕೊಂಡ ವ್ಯಕ್ತಿ ; ಪಾಪದಿಂದ ಮುಕ್ತನಾದವನು : ನೀತಿವಿದ ಕೇಳೈದಿದರು ನಿಮ್ಮಾತಗಳು ಹಿಮಗಿರಿಗೆ ಹರಿಪದಪೂತಪುಣ್ಯನದೀವಿಗಾಹನಧೂತಪಾತಕರು (ನಿಭಾಗ. ೧–೯–೪೧). [ಧೂತ + ಪಾತಕ]

ಧೂತಪಾಪ (ಗು). ಪಾತಕದಿಂದ ಮುಕ್ತವಾದ; ಪವಿತ್ರವಾದ: ಅಂಧಕಾಸುರನ ಸುಕುಮಾರನೆನಿಸುವ ತಾ ಕಂ ಧರಾವಲಯದ ಕಕುದ್ಗಿರಿಯ ದಕ್ಷಿಣದೊಳಂ ಧೂತಪಾಪಸಂಕುಲಭವಿಷ್ಯಚ್ಛೀಲಲೋಲೈಶ್ಚಸತ್ಪರ್ವಕಾ ಕಂಧರದೊಳ್ . . . ತಪದಿಂದಿರ್ದನು (ವೀಶ್ವಪು. ೩–೨೧–೩೫). [ಧೂತ+ಪಾಪ್ಯ]

ಧೂತಪಾಪೆ (ನಾ). ೧. ಪಾಪವನ್ನು ನಾಶಮಾಡುವವಳು,–ಕಳೆಯುವವಳು. ೨. ಪಾಪಮುಕ್ತೆ ; ನಿರ್ದೋಷಿ ; ಪಾಪವಿರಹಿತೆ. ೩. ಕಾಶಿಯಲ್ಲಿರುವ ಒಂದು ನದಿಯ ಹೆಸರು ; P ಈ ನದಿಯ ವಿಷಯವು ಕಾಶೀಖಂಡದ ೫೧ನೆಯ ಅಧ್ಯಾಯದಲ್ಲಿದೆ. ಭೃಗುವಂಶದ ವೇದಶಿರನೆಂಬ ಮಹರ್ಷಿಯ ಮಗಳು ಧೂತಪಾಪೆ ಎಂಬುವಳು ತಪಸ್ಸಿನ ಮೂಲಕ ಜಗತ್ತಿನಲ್ಲಿ ತಾನು ಅತ್ಯಂತ ಪವಿತ್ರಳಾಗಿರುವಂತೆ ಬ್ರಹ್ಮನಿಂದ ವರವನ್ನು ಪಡೆದಳು. ಒಮ್ಮೆ ಧರ್ಮಪುರುಷನು ಇವಳನ್ನು ಮೋಹಿಸಿ ತಾನು ನದಿಯಾಗುವಂತೆ ಶಾಪವನ್ನು ಪಡೆದನು ಮತ್ತು ಇವಳು ಶಿಲೆಯಾಗುವಂತೆ ಶಪಿಸಿದನು. ಧೂತಪಾಪೆಯು ಚಂದ್ರಶಿಲೆಯಾಗಿ ಚಂದ್ರೋದಯಕಾಲದಲ್ಲಿ ದ್ರವವಾಗಿ ನದಿಯ ರೂಪದಿಂದ ಧರ್ಮನನ್ನು ಸೇರಿದಳು. ಅವಿಮುಕ್ತಕ್ಷೇತ್ರವೆಂದು ಪ್ರಸಿದ್ಧವಾದ ಕಾಶೀಕ್ಷೇತ್ರದಲ್ಲಿ ಧೂತಪಾಪಾನದೀ ಮತ್ತು ಧರ್ಮನದಿಗಳು ಐಕ್ಯರೂಪದಿಂದಿವೆಯೆಂದು ನಂಬಿಕೆಯಿದೆ. ೧, ೨, ೩ : ಗೋಮತಿ ಧೂತಪಾಪೆ . . . ಸಮಸ್ತದೇವತಾವರಣೆ ಕವೇರಕನ್ಯೆ ಕೆಳಗೊಂಡಳನೇಕನದೀ ವಿಳಾಸಮಂ (ರಾಜಶೇ. ೨–೬) ; ಪುತ್ರನೊರ್ವಂ ರಾಜನಣುಗಿಯೆ ಜಗನ್ಮಾತೆ ಮಿತ್ರನಭವಂ ಧೂತಪಾಪೆ ತನ್ನರಸಿ . . . ಎಂದು ಘೋಷಿಪುದೆಂ ಬೊಲರ್ಣವಂ ಬಾಯ್ವಿಡುತ್ತಿರ್ಪುದೆಂದುಂ (ಶೀರಾಮ. ೩–೨೧). [ಸಂ. ಧೂತಪಾಪಾ (ಧೂತ + ಪಾಪ + –)]

ಧೂತಾಂಗ (ನಾ). [ಬೌದ್ಧ] "ಭಿಕ್ಷುವು ಧೌತನಾಗಬೇಕಾದರೆ ಆಚರಿಸ ಬೇಕಾದ ಹದಿಮೂರು ವಿಶೇಷನಿಯಮಂಗಳು" (ಬುದ್ಧಪ. ಮಿಲಿಂದ. ೨೬ ಕೋಶ); P ಧೂತಾಂಗಗಳು ೧೩. ಅವುಗಳ ವಿವರವು 'ವಿನಯಂ', 'ವಿಸುದ್ಧಿಮಗ್ಗ' ಮತ್ತು 'ಮಿಲಿಂದಪಞ್ಹ' ಗಳಲ್ಲಿ ದೊರಕುತ್ತದೆ. ಅವು ಯಾವುವೆಂದರೆ : ೧. ಪಂಸುಕೂಲಿಕ ಅಂಗ : ತೇಪೆ ಹಾಕಿದ ವಸ್ತ್ರಗಳನ್ನು ಧರಿಸುವುದು. ೨. ಪೇಚೀವರಿಕ ಅಂಗ: ಮೂರು ವಸ್ತ್ರಗಳನ್ನು ಮಾತ್ರ ಧರಿಸುವುದು. ೩. ಪಿಂಡಪಾತಿಕ ಅಂಗ : ಭಿಕ್ಷೆಗಾಗಿ ಸಂಚರಿಸುವುದು. ೪. ಸಪದಾನಿಕ ಅಂಗ: ಭಿಕ್ಷೆ ಗಾಗಿ ಸಂಚರಿಸುವಾಗ ಯಾವ ಮನೆಯನ್ನೂ ಬಿಡದಿರುವುದು. ೫. ಏಕಾಸನಿಕ ಅಂಗ : ಕುಳಿತು, ಒಂದೇ ಸಲಕ್ಕೆ ಊಟ ಮುಗಿಸುವುದು. ೬. ಪತ್ತಪಿಂಡಿಕ ಅಂಗ: ಭಿಕ್ಷಾಪಾತ್ರೆಯೊಂದರಿಂದಲೇಊಟ ಮಾಡು ವುದು. ೭. ಖಲುಪಚ್ಛಾಭತ್ತಿಕ ಅಂಗ: ಒಂದು ಸಲ ಊಟಮಾಡಿದ ಮೇಲೆ ಮತ್ತೆ ಏನೂ ತಿನ್ನದಿರುವುದು. ೮. ಆರಞ್ಞಿಕ ಅಂಗ : ಅರಣ್ಯದಲ್ಲಿ ವಾಸಿಸುವುದು. ೯. ರುಕ್ಖಮೂಲಿಕ ಅಂಗ : ವೃಕ್ಷ ಮೂಲದಲ್ಲಿ ವಾಸಿಸುವುದು. ೧೦. ಅಬ್ಭೋಕಾಸಿಕ ಅಂಗ : ಬಯಲಿ ನಲ್ಲಿ ವಾಸಿಸುವುದು. ೧೧. ಸುಸಾನಿಕ ಅಂಗ : ಶ್ಮಶಾನದಲ್ಲಿ ವಾಸಿಸುವುದು. ೧೨. ಯಥಾಸಂಥತಿಕ ಅಂಗ : ವಾಸಿಸುವುದಕ್ಕೆ ಯಾವ ಎಡೆ ಸಿಕ್ಕಿದರೆ ಅದರಲ್ಲಿ ತೃಪ್ತನಾಗಿರುವುದು. ೧೩. ನೇಸ ಜ್ಜಿಕ ಅಂಗ : ಕುಳಿತಿರುವ ಹಾಗೆಯೇ (ಎಂದಿಗೂ ಮಲಗಿಕೊಳ್ಳದೆ) ನಿದ್ರೆ ಮಾಡುವುದು. ಈ ಧೂತಾಂಗಗಳನ್ನು ಆಚರಿಸುವುದರಿಂದ, ಅಧ್ಯಾತ್ಮಜೀವನಕ್ಕೆ ಅಡ್ಡಿಯಾಗುವ "ಕ್ಲೇಶ" (ಕಿಲೇಸ)ಗಳನ್ನು ಕಳೆದುಕೊಳ್ಳಬಹುದು. ಇಂಥ ಕ್ಲೇಶಗಳು ಹತ್ತು. ಅವು ಯಾವು ವೆಂದರೆ :-ಲೋಭ, ದ್ವೇಷ, ಮೋಹ, ಮಾನ, ದೃಷ್ಟಿ, ವಿಚಿಕಿತ್ಸೆ, ಸ್ತ್ಯಾನ, ಔದ್ಧತ್ಯ, ಅಹ್ರೀಕ ಮತ್ತು ಅನೌತ್ತಪ್ಯ : ಪೂರ್ವದಲ್ಲಿ ಮಾಡಿದ ಪಾಪಕರ್ಮಗಳ ಫಲದಿಂದ ಈ ಶಾಕ್ಯಪುತ್ರರಾದ ಶ್ರಮಣರು ಪರಿವ್ರಜಿಸುವರು ; ಧೂತಾಂಗಗಳನ್ನೂ ಕಾಪಾಡುವರು (ಬುದ್ಧಪ. ಮಿಲಿಂದ. ೨೬) ; ಹದಿಮೂರು ಧೂತಾಂಗಗಳಲ್ಲಿ ಹಲವನ್ನು ಆಚರಿಸಿದರು (ಚೀನಾಪೌ. ೯೦). [ಧೂತ + ಅಂಗ್]

ಧೂತಿ (ನಾ). ಅಲುಗಾಡಿಸುವುದು; ಬೀಸುವುದು. 'ಧೂತಿಸು' ಪರಾ. [ಸಂ.]

ಧೂತಿಸು (ಕ್ರಿ). (ಚಾಮರವನ್ನು) ಬೀಸು : ಆತಪತ್ರವನಾಂತಿರೊಗ್ಗಿ ಮಾಳೆಲೆ ಮಗುಳೆ ದೂ[ಧೂ]ತಿಸೆಲೆ ರೋಹಣಿ ಸಿತಚಾಮರವ ಶೈಲಜಾತೆಯಂಗಕ್ಕೆ . . . ರತಿ ತೋಱು ಕೈಪಿಡಿಯನೆಂಬ ಕಳಕಳವೆಸದುದು (ಮಹೀಪ. ೧-೫೧). [ಧೂತಿ + – ಇಸು]

ಧೂನನ (ನಾ). ೧. ಅಲುಗಾಡಿಸುವಿಕೆ ; ಬೀಸುವಿಕೆ. ೨. ಕಂಪಿಸುವಂತೆ ಮಾಡುವಿಕೆ. ೩. [ನಾಟ್ಯ] ಇಪ್ಪತ್ತು ಬಗೆಯ ಕರಕರ್ಮಭೇದಗಳಲ್ಲಿ ಒಂದು: ಧೂನನ, ಶ್ಲೇಷ, ವಿಶ್ಲೇಷ, ಕ್ಲೇಪ, ರಕ್ಷಣ, ಮೋಕ್ಷಣ, ಪರಿಗ್ರಹ, ನಿಗ್ರಹ, ಉತ್ಕೃಷ್ಟ, ಆಕೃಷ್ಟಿ, ವಿಕೃಷ್ಟಿ, ತಾಡನ, ದೋಡನ, ಭೇದ, ಭೇದ, ಸ್ಫೋಟನ, ಮೋಟನ, ವಿಸರ್ಜನ, ಆಹ್ವಾನ, ತರ್ಜನ – ಈ ಇಪ್ಪತ್ತು ಕ ಕರ್ಮಭೇದಂಗಳ್ (ಲಾಸ್ಯರಂ. ೪-೧೩ ವ). [ಸಂ.]

ಧೂಪ (ನಾ). ೧. ಬೆಂಕಿ ತಗುಲಿದಾಗ ಸುವಾಸನೆಯನ್ನು ಬೀರುವ ಒಂದು ಬಗೆಯ ಅಂಟುಪದಾರ್ಥ ; ಸಾಂಬ್ರಾಣಿ, ಹಾಲುಮಡ್ಡಿ, ಗುಗ್ಗುಳ ಮುಂತಾದ ಸುಗಂಧಪದಾರ್ಥ : P ದೇವತಾರ್ಚನ ವಿಧಿ ಯಲ್ಲಿ ಕೆಲವು ಧೂಪಭೇದಗಳು ವಿವರಿಸಲ್ಪಟ್ಟಿದೆ. ೧. **ಪಂಚಾಂಗ ಧೂಪ :** ಚಂದನ, ಕುಂಕುಮ, ಹೊಸಕರ್ಪೂರ, ಗುಗ್ಗುಳ ಮತ್ತು ಅಗರು–ಈ ಐದು ಸುಗಂಧದ್ರವ್ಯಗಳನ್ನು ಹಾಕಿ ಧೂಪವನ್ನು ಕೊಡುವುದು. ೨. **ಷಡಂಗಧೂಪ :** ಸಕ್ಕರೆ, ತುಪ್ಪ, ಜೇನುತುಪ್ಪ, ಗುಗ್ಗುಳ, ಅಗರು, ಚಂದನ ಈ ಆರು ದ್ರವ್ಯಗಳನ್ನು ಹಾಕಿ ಧೂಪ ವನ್ನು ಕೊಡುವುದು. ೩. **ಅಷ್ಟಾಂಗಧೂಪ :** ಗುಗ್ಗುಳ, ಅಗರು, ತೇಜಪತ್ರ, ಶ್ರೀಗಂಧ, ಕರ್ಪೂರ, ಬಾಲಕ, ಕುಷ್ಠ ಮತ್ತು ಹೊಸ ಕುಂಕುಮ–ಈ ಎಂಟು ದ್ರವ್ಯಗಳನ್ನು ಹಾಕಿ ಧೂಪವನ್ನು ಕೊಡ, ವುದು. ೪. **ದಶಾಂಗಧೂಪ :** ಮಧು, ಮಾಸ್ತ, ಘೃತ, ಗಂಧ ಗುಗ್ಗುಳ, ಅಗರು, ಶೈಲಜ, ಸರಲ, ಸಿಹ್ಲ(ಲೋಬಾನ ಅಥವಾ ಹಾಲುಮಡ್ಡಿ) ಮತ್ತು ಸಿದ್ಧಾರ್ಥ (ಬಿಳಿಸಾಸಿವೆ)–ಈ ಹತ್ತು ದ್ರವ್ಯಗಳನ್ನು ಹಾಕಿ ಧೂಪವನ್ನು ಕೊಡುವುದು. ೫. **ದ್ವಾದಶಾಂಗ ಧೂಪ :** ಗುಗ್ಗುಳ, ಚಂದನ, ಪತ್ರ, ಕುಷ್ಠ, ಅಗರು, ಕುಂಕುಮ, ಜಾತೀಕೋಷ, ಕರ್ಪೂರ, ಜಟಾಮಾಂಸಿ, ಬಾಲಕ, ತ್ವಕ್(ಲವಂಗ) ಮತ್ತು ಲಾಮಂಚ–ಈ ಹನ್ನೆರಡು ದ್ರವ್ಯಗಳನ್ನು ಹಾಕಿ ಧೂಪವನ್ನು ಕೊಡುವುದು. ೬. **ಷೋಡಶಾಂಗಧೂಪ :** ಗುಗ್ಗುಳ, ಸರಲ, ದಾರು (ದೇವದಾರು), ಪತ್ರ, ಚಂದನ, ಹ್ರೀವೇರ, ಅಗರು, ಕುಷ್ಠ, ಬೆಲ್ಲು, ಸರ್ಜರಸ, ಘನ(ಕೊನ್ನಾರಿಗಡ್ಡೆ), ಹರೀತಕಿ, ನಖಿ, ಲಾಕ್ಷಾ, ಜಟಾಮಾಂಸಿ, ಶೈಲಜ–ಈ ಹದಿನಾರು ದ್ರವ್ಯಗಳನ್ನು ಹಾಕಿ ಧೂಪವನ್ನು ಕೊಡುವುದು : ಆ ದಂಪತಿಯಂ ಪುದುಂಗೊಳಿಸಿ ಲೋಕಾ ಶ್ಚರ್ಯಮಂ ಮಾಡಿ ಕೊಂದುದು ಕೃಷ್ಣಾಗರು ಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್ (ಆದಿಪು. ೫-೨೩) ; ಒಂದು ತೊಲೆ ಪೂಸ ಧೂಪಮಂ ತಂದು (ಕೊಂಗುರ. ದೇ. ೧೫೨-೨೨) ; ಧೂಪದೆಣೆಗೊಲ್ದು ಚಂದ್ರಕಲಾಪಂಗರ್ಪಿಸುವೆನೆನ್ನ ದೇಹವನು (ಉದಯ. ೦೦-೧೨೧) ; ಅಮರದವಳ್ಳಿ, ರಾಸ್ನೆ . . . ಶುಂಠಿ ಇವಂ ಸಮಾನವಾಗಿ ಕೂಡಿ ಇಷ್ಟರ ಸಮಾಂಶ, ಗುಗ್ಗುಳದ ಧೂಪವನ್ನು ಸಹ ತುಪ್ಪದಲ್ಲಿ ಅಟ್ಟು . . . ಸೇವಿಸಲು ವಾತಜ್ವರಂ ಮಾಣ್ಗುಂ (ಶಕವೈ. ೬೮). ೨. (ಸಾಂಬ್ರಾಣಿ, ಹಾಲುಮಡ್ಡಿ ಮುಂತಾದ) ಸುವಾಸನೆಯ ಪದಾರ್ಥಗಳಿಂದ ಹೊರಡುವ ಹೊಗೆ : ಅಗಳಾಚಾರಧೂಪಗ್ರಹಣಾಂಜನಕ್ಲೇದಸಮಾ ಕುಲಾಕ್ಷಿಪರಿಮ್ಲಾನ(ತಾ)ಬೀಜಾಂಕು (ರೀಭೂತ) ರ ಕರ್ಣಪೂರ ಪಾಟಳ ಗಂಡರೇಖಮುಖಮಂಡಳಜ್ಯೋತಿಃಪ್ರಭೆಯೊಂದು ಲೀಲಾಲಕ್ಷ್ಮಿಗಾವಾಸ ಮಾಗಿರೆ (ಶಾಂತಿಪು. ೬-೦೮ ಪ) ; ಮಗಮಗಿಪ ಧೂಪದಿಂ ಜೊಂಡಗರ್ಬಿನಿಂಪಂ ಫಲಂಗಳಿಂದುಣಿಸಿಂ . . . ಬಗೆಗೊಳಿಕುಂ ಚಿತ್ರಶಾಲೆ (ಮದಿತಿ. ೦೦-೨೭) ; ನಲಿದು ಬೀಸುವ ಧೂಪವೆಣ್ದೆಸೆಗಳಂ ಮುಟ್ಟೆ (ಕೊಂಗುರ. ದೇ. ೧೫೩-೬) ; ಧೂಪಿತ ದಿಙ್ಮಂಡಲದಿಂದಾಪತದಳಿನೀವಿತಾನಕಾಘ್ರಾತದಿನುದ್ವೃಷಿತೋ ಷ್ಮಾಯಮಾಣಸುಧೂಪದಿನಾಂ ಧರ್ಮನಾಥನಂ ಪೂಜಿಸುವೆಂ (ಪಾರಪು. ೯-೧೪೯) ; ಶೈತ್ಯ ಸೌರಭ್ಯ ಮೂಂದ್ರಮೆಂಬ ತ್ರಿವಿಧಮದಸಮೃದ್ಧಮಾದ ಪನ್ನೀರು ಲಾಮಂಚ ಅಗರು ಕೃಷ್ಣಾಗರು ಧೂಪ ಶ್ರೀಗಂಧ ಪುಷ್ಪವೃಕ್ಷ ದಿವ್ಯಮೂಲ ಪರಿಮಳಮೃಗ ಕರ್ಪೂರವೃಕ್ಷ ಹಿಮಾದಿ ಸಂಪರ್ಕದಿಂ ರಮ್ಯ ಮಾದ ಮಂದಮಾರುತ ಸ್ಪರ್ಶನದಿಂದ ಪ್ರೇಕ್ಷಣೀಯಮಾಗಿರ್ಕುಂ (ವಿವೇಕ ೨೦೩) ; ಧೂಪ ಹಾಕಿದರೆ ಪಾಪ ಹೋದೀತೆ (ಗಾದೆ). ೩. ಹೊಗೆ; ಧೂಮ: ಎಡೆಗೊಡದು ಬೇಂಟೆ ದಿಗುಬಂಧನಂ ಮಾಡು ಕಾಡೊಡೆಯನಂ ನೋನು ಸೊಕ್ಕಿನ ಧೂಪಮಂ ಬೀಸು (ಹಡಕಾ. ೫-೨೯). ೪. ಗುಗ್ಗುಳದ ಮರ : "ಶ್ರೀವಾಸಃ–ದೇವದಾರು, ಧೂಪ" (ಓಷಧಿ. ೧೬೭); ಚಿಲಕಧೂಪ, ಚಿಲಕಡಿ, ಗುಗ್ಗುಳಧೂಪ, ಮಡ್ಡಿಮರ, ಮಾದಿ, ಚಿತ್ತ, ಧೂಪ (ಮೃಜಿಗಿ. ೧೩-೨೩೭).

ಧೂಪದ ಕಡ್ಡಿ = ಧೂಪದ ಬತ್ತಿ ; ಊದುಗಡ್ಡಿ ; ಊದುಬತ್ತಿ : ದೇವರ ಮುಂದೆ ಧೂಪದ ಕಡ್ಡಿ ಉರಿಯುತ್ತಿದೆ (ರೂಢಿ). **ಧೂಪದ ಕೊಡ**= ಧೂಪ ಹಾಕುವ ಪಾತ್ರೆ,–ಉಪಕರಣ; "ಸುಗಂಧದ್ರವ್ಯ, ಶಿವಪೂಜೆಗೆ ಉಪಯೋಗವಾಗುವ ವಸ್ತು" (ಶಕಸಾ. ೨೪-೮). **ಧೂಪದ ಗಿಡ** = ಧೂಪ

ಳ : "ಕುಂಭಂ, ಉಲೂಖಲಕಂ, ಕೌಶಿಕಃ, ಗುಗ್ಗುಲುಃ, ಪುರಃ – ೫ ಗುಗ್ಗುಳ ಗಿಡ, ರಾಳದ ಗಿಡ, ಧೂಪದ ಗಿಡ" (ಸಿದ್ಧಾಂತಿ. ೦೦೫). **ಧೂಪದ ಬತ್ತಿ** = ಊದುಬತ್ತಿ : ದೇವರ ಮುಂದೆ ಹತ್ತಿಸಿಟ್ಟಿರುವ ಧೂಪದ ಬತ್ತಿ ಘಮ ಘಮಿಸುತ್ತಿದೆ (ರೂಢಿ). **ಧೂಪದ ಮರ** = ಗುಗ್ಗುಳದ ಮರ : "ಸರ್ಜರಸ = ಧೂಪದ ಮರಂ" (ಕಾಶಕೃ. ೯೬) ; ಧೂಪದ ಮರ, ಸಾಲುಧೂಪ, ಬಿಳೀ ಗುಗ್ಗಲ, ಬಿಳೀಡಾಮರ್, ಹಾಗಡಮರ, ಉಗುಳು ಧೂಪ (ಪ್ರಾಣಿಗ. ೭೭-೧೫೭೬). **ಧೂಪ ದೀಪ ನೈವೇದ್ಯ** = ಮೂರ್ತಿಪೂಜೆಯ ಮೂರು ಪ್ರಮುಖ ಅಂಗಗಳು ; ಧೂಪ ಹಾಕುವುದು, ದೀಪ ಬೆಳಗುವುದು ಮತ್ತು ಆಹಾರ ಪದಾರ್ಥವನ್ನು ಅರ್ಪಣೆ ಮಾಡುವುದು : ದೇವರಂಗ ಭೋಗಕ್ಕ ಧೂಪ ದೀಪ ನೈವೇದ್ಯಕ್ಕ ತಪೋಧನರಾಹಾ ದಾನಕ್ಕವೆಂದು . . . ಅಡಕೆದೋಂಟ ಕಮ್ಮವಿಪ್ಪತ್ತುಯ್ದು (ಕಇ. IV, ೦೦-೬೩ ; 1121). **ಧೂಪಮಂ ತೋಱು**=(ಆಲಂ) ಮನಸ್ಸನ್ನು ಕೆರಳಿಸು,–ಉದ್ರೇಕಗೊಳಿಸು : ಮನದ ಪಿಶಾಚಕ್ಕೆ ವಚನರಚನಾಧೂಪಮಂ ತೋಱೆ ವಿರಹವಿಕಾರಮಂ ಕೆಳರ್ಚಿ ನಿನ್ನೊಳಾಕೆಯಂ ಕೂಡುವುಪಾಯಮನೀಗಳೆ ಮಾಡಿದವೆಂ (ಅನಂಪು. ೦೧-೩೬ವ).

[ಸಂ.]

ಧೂಪಂಗುಡು 'ಧೂಪಂಗೊಡು' ನೋ.

ಧೂಪಂಗೊಡು, ಧೂಪಂಗುಡು (ಕ್ರಿ). ೧.=ಧೂಪವಿಕ್ಕು ೧ : ವರದೈವಕೆ ಧೂಪಂಗೊಡೆ ಪೊರೆಯದೆ ಮಾಣ್ದಪುದೆ ಕೊಟ್ಟ ಪೂಜಕನಿರವಂ (ಮಲ್ಲಿಕಾ. ೧-೪೧). **ಧೂಪಂಗುಡು** : ೨. = ಧೂಪಮಿಕ್ಕು ೨ : ಕಸ್ತೂರಿ ಒಂದು ಭಾಗೆ, ಶ್ರೀಗಂಧಂ ಎರಡು ಭಾಗೆ . . . ಕೊಂಡು ಅರೆದು ಪುಟವನಿಕ್ಕಿ ಜೇನುತುಪ್ಪ ಸಕ್ಕರೆಗಳಂ ಕೂಡಿ ಧೂಪಂಗುಡಲ್ ಉದಯಭಾಸ್ಕರನೆಂಬ ಸಾದಪ್ಪುದು (ಲೋಕೋಪ. ೭-೫೪ ಟೀಕೆ). [ಧೂಪ + ಕೊಡು$_1$]

ಧೂಪಂದೋಱು (ಕ್ರಿ). ೧. ಧೂಪ ವನ್ನು ಹಾಕು. ೨. (ಆಲಂ) ಕೆರಳಿಸು ; ಉದ್ರೇಕವನ್ನುಂಟುಮಾಡು : ನಾನವನ ಬಟ್ ಇರ್ದು ಮರುಳ್ಗೆ ಧೂಪಂದೋಱುತಾ ಮನಃಕ್ಷೋಭಂ ತೆರೆವಂಸಗೆ ಊದಿದೆನ್ (ಅಶ್ವತ್ಥಾ. ೩-೪೭). [ಧೂಪ + ತೋಱು]

ಧೂಪಕ (ನಾ). ೧. ಸುವಾಸನೆಯ ಹೊಗೆ ; ಧೂಪ. ೨. ಸುಗಂಧ ದ್ರವ್ಯಗಳನ್ನು ಮಾಡುವವನು ಮತ್ತು ಮಾರುವವನು; ಸುಗಂಧಕಾರ.

ಧೂಪಕದಂಟು = ಹಾಲುಮಡ್ಡಿ, ಗುಗ್ಗುಳ ಮುಂತಾದ ಸುಗಂಧ ದ್ರವ್ಯಗಳ ಅಂಟು : ಭೀಮಗುಂಡರಸನು ತಂನಾಳ್ಕೆಯೊಳು ಕಾ[ಳ್ದು]ಗೆಯಲಿ ಕೊಟ್ಟ . . . ಮ ೧೨ ಮನೆ ೧ ಮತ್ತಂ ಬೆಳ್ಳಗಲಿಯಲಿ ಕುದುರೆ ಮಾಱೆದಡೆ ಧೂಪಕದಂಟಿಗೆ ಮ ೧ (ಸೌಇ. XX, ೨೨೬-೨೬ ; 1306).

[ಸಂ.]

ಧೂಪಗುಂಡಿಗೆ (ನಾ). ಧೂಪವನ್ನು ಹಾಕುವ ಪಾತ್ರೆ : ಸೂರ್ಯಕಾಂತದ ಧೂಪಗುಂಡಿಗೆಯೊಳಳವಱಯದೆ ಸೆಜ್ಜೆವಳನಿಕ್ಕಿದ ಕೇಶಸಂಸ್ಕಾರದ ಕಾಲಾಗರುಧೂಪಂ (ಆದಿಪು. ೫-೨೨ ವ) ; ಧೂಪಗುಂಡಿಗೆಯೊಳಳವಱಯದೆ ಸೆಜ್ಜೆ ವಳನಿಕ್ಕಿದ ಕೇಶಸಂಸ್ಕಾರದ ಧೂಪದ ಪೊಗೆ ಪುದಿದು ಕೊಳೆ (ಜಾವುಂಪು. ೨೭) ; ಕೋಪದಲ್ಲಿ ಶಿವಕಳೆಯದ ಕರಡಿಗೆಯನೆ ಮುಱಿದ ಧೂಪ[ಪಾಕಾಂ. ಧೂಪದ] ಗುಂಡಿಗೆಯನೊಡೆದ ದೀಪಾರತಿಯ ನಂದಿಸಿದ . . . ಪಾಪಕರ್ಮ ಕೂಡಲ ಸಂಗಮದೇವಾ ನಿಮ್ಮ ಶರಣ (ಬಸವ. ೯೦೦). [ಧೂಪ + ಗುಂಡಿಗೆ$_2$]

ಧೂಪಘಟ (ನಾ). ಧೂಪ ಹಾಕುವ ಪಾತ್ರೆ : ಪದಿನಾಱು ಧೂಪಘಟಂಗಳಿಂದವೊಪ್ಪಿ ತತ್ಕನಕಶಾಲಾಭ್ಯಂತರದೊಳ್ (ಆದಿಪು. ೦೦-೩೦ ವ) ; ಒಂದೊಂದು ನಾಟ್ಯಶಾಲೆಯ ಮುಂದೊಂದೊಂದೆನಿಸಿ ಧೂಪಘಟಮುಂ ಪದಿನಾಱುಂದೆಸೆದಿರ್ದುವು ಪದಿನಾಱುಂ ದಿವಮುಮನಡರೆ ಸುರಭಿಧೂಮ ಸ್ತೋಮಂ (ಚಂದ್ರಪು. ೧೫-೫೪); ಪ್ರಶಸ್ತವಸ್ತುವಿಸ್ತಾರಗೋಪುರಸ್ತೂಪ ಧೂಪಘಟಮಂಡಳೀಮಂಡಿತ ಶ್ರೀಮಂಡಪ ಮಧ್ಯಾಧ್ಯಾಸಿತ ವಿಚಿತ್ರ ಪೀಠತ್ರಯಾಗ್ರಮಂ . . . ಅಳಂಕರಿಸಿ (ಪರ್ಧಪು. ೦೬-೧೭ ವ); ಕೆಲಂಬರ್ . . . ಮಗಮಗಿಸುವಗರು ಧೂಪದ ಪೊಗೆಯ ಪೊದಱ್ ಕವಲ್ವರಿದು ನೊಗದಿಂದೊಗೆದು ಸಮಾವರಿಸುವ ಧೂಪಘಟಂಗಳಂ ಕರವಲ್ಲವದಿಂ ಪಿಡಿದು ನಡೆಯೆಯುಂ (ಪಾಧಪು. ೦೬-೩೫೮ ವ). [ಧೂಪ + ಘಟ]

ಧೂಪದಾನಿ (ನಾ). ಧೂಪ ಹಾಕುವ ಪಾತ್ರೆ,–ಕರಂಡಕ: ಧೂಪದಾನಿಗಳು ನಡೆಯಲಿರುವ ಧರ್ಮಕಥಾಶ್ರವಣದಿಂದ ತೃಪ್ತವಾಗಿಯೋ ಎಂಬಂತೆ ಸಂತೋಷದಿಂದ ಧೂಪಮೇಘಗಳನ್ನು ಸೃಜಿಸುತ್ತಿದ್ದುವು (ನಡಧಾ. II, 1452) ; ಪುರೋಹಿತನ ಮುಂದೆ ಧೂಪದಾನಿಯನ್ನು ತಂದಿಟ್ಟು ಬಾಗಿಲ ಬಳಿಯಲ್ಲಿಯೇ ನಿಂತಿದ್ದ ಕಾತ್ಯೂಷಾಳ ಮೇಲೆಯೆ ಅವನ ದೃಷ್ಟಿಸಮಸ್ತವೂ ಕೇಂದ್ರೀಕೃತವಾಗಿತ್ತು (ಪುನರು. ೬೬). [ಧೂಪ + ದಾನಿ$_2$]

ಧೂಪಧೂಮ (ನಾ). ಧೂಪದಿಂದ ಹೊರಟ ಸುವಾಸನೆಯ ಹೊಗೆ : ನವಧೂಪಧೂಮಧೂಸರಿತನಭೋವಿವರಂ (ಆದಿಪು. ೦೦-೨೯) ; ನೆಱೆ ತೀವಿ ಪುರದೊಳಗೆ ಧೂಪಧೂಮಂ ಕೂಡೆ (ತಿರುಗ. ದೇ. ೬-೬) ; ಕಾಳಾಗುರು ಪ್ರಮುಖಧೂಪಧೂಮಂಗಳಂ . . . ಪೂಜಿಸಿದಂ (ಪುಷ್ಪಪು. ೯-೫) ; ಅಗರು ಚಂದನಂಗಳ ಧೂಪಧೂಮದಾಮೋದಮುಂ ಮೂಗಿಂಗೆ ನಲ್ಗಂಪನೀಯಂ ದಿಹುದು (ಶ್ರೀರಾಮಾ. ೧೦೫-೧೫೬) ; ಎಲ್ಲೆಲ್ಲೂ ಸೃಷ್ಟಿದೇವಿಗಿಟ್ಟ ಧೂಪ ಧೂಮಾ ಲಹರಿಲಹರಿ ಕಂಪಬಳ್ಳಿ ; ಚಿತ್ತರಂಗ ಭೂಮಾ ದಾಂಗುಡಿಗಳ ಬಿಡುತಲಿತ್ತು (ನಾದಲೀ. ೮೪-೦೩). [ಧೂಪ + ಧೂಮ]

ಧೂಪಧೂಮಘಟ (ನಾ). = ಧೂಪದಾನಿ : ವಿವಿಧಮಣಿಪ್ರಕಾರವಿರಾಜಿತ ಧೂಪಧೂಮಘಟಮೆಸೆದಿರ್ಕಂ (ಆದಿಪು. ೦೦-೨೯). [ಧೂಪಧೂಮ + ಘಟ]

ಧೂಪಧೂಮ್ರ (ನಾ).=ಧೂಪಧೂಮ : ವಿತತನಾನಾಧೂಪಧೂಮ್ರಜನಿತ ಘನಾವಳಿ ಮುಸುಂಕಿದಂದದೊಳತಿತಮಂ ಪರ್ಬಿದುದು (ಬಸಪು. ೧೧-೪೮).

[ಧೂಪ + ಧೂಮ್ರ]

ಧೂಪಪಾತ್ರೆ (ನಾ). = ಧೂಪದಾನಿ : "ಸುಗಂಧದ್ರವ್ಯಗಳನ್ನು ಹೊಗೆ ಹಾಕುವ ಪಾತ್ರೆ : ಧೂಪಪಾತ್ರೆ ; ರಂಧ್ರಗಳಿರುವ ಮುಚ್ಚಳವುಳ್ಳ ಸುಗಂಧ ದ್ರವ್ಯಸಂಪುಟ" (Cassolette. ಇಂಗಿನ). [ಧೂಪ + ಪಾತ್ರೆ]

ಧೂಪಭಾಜನ (ನಾ). = ಧೂಪದಾನಿ : ಚರು ಮಣಿಪರ್ಯಾಣಕ್ಕೆ ಬಿಡು ಮುತ್ತಿನ ಸೇಸೆಗೆ ಧೂಪಭಾಜನಕ್ಕೆ . . . ಪುಣ್ಯನದೀಜಲಪೂರ್ಣರತ್ನ ಭಾಸುರಕಲಶಕ್ಕೆ ಮೋಱೆ ಪವಣೆಲ್ಲನೆ ಪೂಜಿಸಿದಂ ರಘೂದ್ವಹಂ (ಪಂಚಾಮಾ. ೧೨-೭). [ಧೂಪ + ಭಾಜನ]

ಧೂಪಮಾನೆಯ (ನಾ). ಧೂಪಕ್ಕಾಗಿ ಕೊಟ್ಟ ಭೂದಾನ : ದೀಪ ಮಾನೆಯ ಕೊಟ್ಟ ಧೂಪಮಾನೆಯ ಕೊಟ್ಟ ಸೋಪಾನ ಕಟ್ಟಿ ಭೀಮೆಯೊಳು ಇಳಿಯುವದಕೆ ಸೋಪಾನಮಾನೆ ವತನಿತ್ತ (ಶರಪ. ೩೩೨) ; (ಕನ್ನಡಾ. ೩೦೬ ನೋ). 'ದೀಪಮಾನೆಯ' ಪರಾ. [ಧೂಪ + ಮಾನೆಯ (<ಮನ್ನೆಯ)]

ಧೂಪಮಿಕ್ಕು, ಧೂಪವಿಕ್ಕು, ಧೂಪಿಕ್ಕು (ಕ್ರಿ). ೧. ಗುಗ್ಗುಳ, ಸಾಂಬ್ರಾಣಿ ಮೊದಲಾದ ಸಂಗಂಧವಸ್ತುಗಳ ಹೊಗೆಹಾಕು ; ಧೂಪಹಾಕು. ೨. (ಆಲಂ) ಉದ್ರೇಕಗೊಳಿಸು ; ಕೆರಳಿಸು ; ಆವೇಶಗೊಳಿಸು : ಸಾಹಸಿಯ ಆವೇಶಕ್ಕೆತ್ತಿದಾರತಿಯಾಯ್ತುಡವಿವೆಂಕೆ : ಧೂಪಮಿಕ್ಕಿತು ಹಗಿನ ಗಂಪು (ಶ್ರೀರಾಮಾ. ೪೦೬-೮೦). **ಧೂಪವಿಕ್ಕು** : ೧. ತನಗೆ ನೇಮಂ ಕೊಂಗುಲಿಯ ಧೂಪವಿಕ್ಕುವುದು (ಕೊಂಗುರ. ದೇ. ೧೫೨-೧೧). ೩. ಹೊಗೆ ಹಾಕು : ನಖವೆಂಬ ಗಂಧದ್ರವ್ಯವ ಹಸುವಿನ ತುಪ್ಪವೆರಸಿ ಧೂಪವಿಕ್ಕಲಂ ಶಿಶುವಿಗೆ ಸುಖವಹುದು (ವೈದ್ಯಸಾ. II, ೧೭) ; ಲೊಕ್ಕಿ ಸೊಪ್ಪು, ಕೊಮ್ಮೆ ಸೊಪ್ಪು . . . ಚೂರ್ಣಿಸಿ ಧೂಪವಿಕ್ಕಲಂ ಸನ್ನಿಪಾತ ಗುಣವಹುದು (ಸಳವೈ. ೧೮೦). **ಧೂಪಿಕ್ಕು** : ೨. ಏರ್ವಡೆದ ಮರದ ಮೆಯ್ಯಿಂ ಸೋರ್ದ ಕಂಪಿನಂಟುಗಳುರಿಯೆ ಧೂಪಿಕ್ಕಿದವೊಲಾಯ್ತು ಹನುಮನಾವೇಶಕ್ಕೆ ಗಂಧ ಧೂಮಂ (ಶ್ರೀರಾಮಾ. ೪೦೪-೩೦). [ಧೂಪ + ಇಕ್ಕು]

ಧೂಪವರ್ತಿ (ನಾ). ಸುಗಂಧವಸ್ತುಗಳಿಂದ ತಯಾರಿಸಿದ ಬತ್ತಿ; ಊದುಕಡ್ಡಿ; ಅಗರುಬತ್ತಿ: ಸುರದಾರು ಪೂತಿ ಮುರೆ ಸಜ್ಜರಸಂ ಲಘುಲಾಕ್ಷೆಯಿವರ ಚೂರ್ಣವನಿಂಬಾಗರಳೆಯೊಳ್ ಪುದಿದು ಪೊತ್ತಿಸೆ ಸುರಭಿಕೃತಂ ಧೂಪವರ್ತಿಯಿದು ಕೇವಳವೇ (ಲೋಕೋಪ. ೬-೩೩); ಕದಂಬದೂವಿನಿಡುಕುಱೊಳ್ ಮಡಂಗಿದ ಧೂಪವರ್ತಿಯ ಕರಂಡಕಂಗಳಿಂ (ಚಂದ್ರಪು. ೮-೪ ವ).

[ಧೂಪ + ವರ್ತಿ]

ಧೂಪವರ್ತಿಕೆ (ನಾ). = ಧೂಪವರ್ತಿ: ಯುವತಿಯರ ಮುಡಿಗಳೊಳ್ ಧೂಪವರ್ತಿಕಾಧೂಮಲೇಖವಿಡಿದಿವು ಮೊರೆಯಂತ್ತಿವೆ ಕೇಳಿಸಿದಪುವಂ ಗೋದ್ಧವಶಿಕ್ಷಿತ ವಂಶವಾದ್ಯಮಂ ಸಭೆಗಳಿಗಳ್ (ವರ್ಧಪು. ೫-೭).

[ಧೂಪ + ವರ್ತಿಕೆ]

ಧೂಪವಿಕ್ಕಿಸು (ಕ್ರಿ). ಹೊಗೆಯನ್ನು ಹಾಕಿಸು: ನಖ ಎಂಬ ಗಂಧದ್ರವ್ಯ, ಹಸುವಿನ ಹಲ್ಲುಗಳಿಂದ ಧೂಪವಿಕ್ಕಿಸಲು ಶಿಶುವಿಗೆ ಸುಖವಹುದು. (ಗ್ರಹ ಹರವಹುದು.) (ವೈದ್ಯಸಾ. II, ೨೦).

[ಧೂಪವಿಕ್ಕು (<ಧೂಪವಿಕ್ಕು) + – ಇಸು$_3$]

ಧೂಪವಿಕ್ಕು 'ಧೂಪವಿಕ್ಕು' ನೋ.

ಧೂಪಹಾಕು (ಕ್ರಿ). ೧. ಸುಗಂಧವಸ್ತುಗಳ ಹೊಗೆ ಹಾಕು; ಧೂಪವಿಕ್ಕು: ನೀವು ದೃಢದಿ ಹೋಗಿ ದೇವರ ಗುಡಿಗೆ ಧೂಪಾ ಹಾಕ್ರಿ (ಕನ್ನಇಾ. ೦೬೭). ೨. ಹೊಗೆಹಾಕು: ಗೂಗೆಯ ಎಡಪಕ್ಕದ ಗರಿ, ಜೇನುತುಪ್ಪ . . . ಕಾಗೆಯ ವಿಷ್ಟೆ ಇವಂ ಸಮಾನವಾಗಿ ಚೂರ್ಣವಂ ಮಾಡಿ . . . ಈ ಚೂರ್ಣವನ್ನೇ ಧೂಪ ಹಾಕುವುದು (ಸಕವೈ. ೧೧೯). ೩. (ಆಲಂ) ಉದ್ರೇಕಗೊಳಿಸು; ರೇಗಿಸು; ಕೆರಳಿಸು: ಅವನಿಗೆ ಚೆನ್ನಾಗಿ ಧೂಪ ಹಾಕಿ ಬಂದಿದ್ದೇನೆ (ರೂಢಿ). [ಧೂಪ + ಹಾಕು (<ಪಾಯ್ಕು$_1$)]

ಧೂಪಳಿಸು (ಕ್ರಿ). ನಿಟ್ಟುಸಿರು ಬಿಡು: ಧೂಪಳಿಸುತೆಡೆಗೆಡೆಗೆ ಸೈರಿಸುತಾ ಪುರಂಧ್ರಿಯು ಮರಳಿ ಮರಕಲಾಪಭನ್ನೆಯ ನೆಟ್ಟದೃಷ್ಟಿಯೊಳೆರ್ದರೀಕ್ಷಿಸುತ (ಅಂಬಿಕಾ. ೩೪-೭೬); "ಮೂರ್ಛೆಹೋಗು; ಭ್ರಮೆಗೊಳ್ಳು" (ಪ್ರಧಾ).

[< ದೂಪಿಸು$_1$]

ಧೂಪಾವೋದ (ನಾ). ಧೂಪದ ಕಂಪು,–ಪರಿಮಳ: ತೆಱೆಯದೆ ರನ್ನದ ಪಡಿಗಳ್ ತೆಱೆದುವು . . . ಮೊಱೆದು ಪಾಱುವ ಪಱಮೆಗಳೊಡನುಣ್ಮೆ ಪೊಣ್ಮೆ ಧೂಪಾವೋದಂ (ಶಾಂತಿಪು. ೬-೧೭); ಅವಿರಳಧೂಪಾವೋದಸಂಸಂಗಿ ಭೃಂಗಾನ್ವಿತಂ . . . ಎಸೆವುದು (ಚಂದ್ರಪು. ೧-೧೫೦); ಬಗೆಗೊಳಿಪ ಧೂಪಾವೋದದೊಳ್ಪೊಱೆದ ದವನದ ಸೀಗುಱುಯಂ ಪೊಂಬಾಳೆಯ ಚಾಮರಮಂ . . . ಕೆಲಕೆಲದೊಳ್ ಪಿಡಿದು (ರಾಜಶೇ. ೧೩-೪೫ ವ).

[ಧೂಪ + ಆವೋದ]

ಧೂಪಾಯಿತ (ಗು). ೧. ಪರಿಮಳಿತವಾದ; ಸುಗಂಧಪೂರಿತ. ೨. ನೊಂದ; ಕ್ಲೇಶಗೊಂಡ; ಬಳಲಿದ; ಆಯಾಸಗೊಂಡ; ದಣಿದ. ೩. ಕಾಯಿಸಿದ; ಕಾದ; ಸಂತಪ್ತ. (ನಾ). ೪. ಕಾಯಿಸಿದುದು; ಸಂತಪ್ತವಾದುದು: "ಸಂತಾಪಿತಃ, ಸಂತಪ್ತಃ, ಧೂಪಾಯಿತಃ, ಧೂಪಿತಃ, ದೂನಃ–೫ ಬಿಸಿಲು, ಸೆಕೆ ಮುಂತಾದವುಗಳಲ್ಲಿ ಹೋಗಿ ಹೊರಡುವಂತೆ ವಣಗಿಸಿ ಕಾಯಿಸಲ್ಪಟ್ಟಂಥಾದ್ದು" (ಸಿದ್ಧಾಂತಿ. ೩೫೧). [ಸಂ.]

ಧೂಪಾರತಿ (ನಾ). ೧. ಸುಗಂಧವಸ್ತುಗಳಿಂದ ಆರತಿ ಎತ್ತುವುದಕ್ಕೆ ಉಪಯೋಗಿಸುವ ಸಾಧನ, – ಉಪಕರಣ; ಧೂಪಾರತಿಯನ್ನು ಮಾಡುವ ಹಿಡಿಯುಳ್ಳ ಪಾತ್ರೆ,–ಸಾಧನ: ತಿರುಮಲದೇವಿ ಅ(ಂ)ಮ್ಮನವರು ಶ್ರೀವಿಠಲದೇವರಿಗೆ . . . ಸಮರ್ಪಿಸ್ತ ಚಿ(ಂ)ನ್ನದ ಹರಿವಾಣ ೧ . . . ನಾಗಾರತಿ ೧ ಧೂಪಾರತಿ[೧] (ಸೌಇಇ. IV, ೨೭೩-೪೨; 1513); ಬಾಗಿಲಲ್ಲಿಯ ಧೂಪಾರತಿಯೊಳಗಿಂದ ಅಂಗಾರವನ್ನು ಹಚ್ಚಿಗೊಂಡಳು (ಗಂಗಸಾ. ೯). ೨. ಧೂಪದಿಂದ ಮಾಡುವ ಆರತಿ: ಮಹದಾಕಾಶವೇ ಅಕ್ಷತೆ ಪರಾಪರವೆ ಪತ್ರೆ ಪುಷ್ಪ ನಿರ್ಮಳವೆ ಲಿಂಗಾರ್ಚನೆ ಮಹಾಪ್ರಕಾಶವೆ ಪೂಜೆ ನಿತ್ಯನಿರಂಜನವೆ ಧೂಪಾರತಿ [ಪಾಶಾಂ. ಧೂಪ ದೀಪಾರತಿ] (ಅವಚಂ. ೮೪-೨೭೪); ಮಜ್ಜನಕ್ಕೆಱೆದು ಧೂಪಾರತಿಗಳಂ ಕೊಟ್ಟು ಸಜ್ಜನಸ್ನೇಹದಿಂ ಭಕುತಿಯಂ ಮುಂದಿಟ್ಟು (ವಾಗೀಶ. ದೇ. ೨೫೫-೧೯); ಧೂಪಾರತಿಯ ನಾ ಮಾಡಲಿಲ್ಲ ಒಂದು ದೀಪವನಾದರೂ ಹಚ್ಚಲಿಲ್ಲ (ಪುರಂದ. ೧-೧೭೭-೮); ನರುಗಂಪಿನ ನವ್ಮೊಲವಿನ ಧೂಪಾರತಿ ಸ್ವೀಕರಿಸುತ ಹಾಲ್ಗಡಲೊಳು ಹರಿಯಂದದಿ ಎಂದುಮಿಂತೆ ನಲಿನಲಿದಿರು (ಗೋಕುನಿ. ೩೧-೫); ಮೂರು ಮಿನೀಟನಲ್ಲಿ ಧೂಪಾರತಿ ಮುಗಿಸಿ ಮಂಗಳಾರತಿಗೇ ಬಾದುಬಿಟ್ಟಿದ್ದ (ವೈನಿ. ೨೨೧). 'ದೂಪಾರತಿ' ಪರಾ.

[ಧೂಪ + ಆರತಿ$_1$]

ಧೂಪಾರ್ತಿ (ನಾ). ಧೂಪ ಹಾಕುವ ಪಾತ್ರೆ; ಧೂಪದಾನಿ: "ಧೂಪಾರ್ತಿ= ಶಿವಪೂಜೆಯಲ್ಲಿ ಸಾಂಬ್ರಾಣಿ (ಸುಗಂಧದ್ರವ್ಯ)ವೊದಲಾದುವನ್ನು ಹಾಕಲು ಅನುವಾದ ಅಗ್ನಿಯ ಪಾತ್ರೆ" (ಶರಸಾ. ೨೪-೮); "ಧೂಪ ಸುಡುವ ಪಾತ್ರೆ: ಧೂಪದಾನಿ; ಧೂಪಾರ್ತಿ" (Censor. ಇಂಕನಿ). [< ಧೂಪಾರತಿ]

ಧೂಪಿಕ್ಕು 'ಧೂಪವಿಕ್ಕು' ನೋ.

ಧೂಪಿತ (ಗು). ೧. ಸುಗಂಧವಸ್ತುಗಳಿಂದ ವಾಸನೆ ಹಿಡಿದಿರುವ; ಧೂಪದ ಹೊಗೆ ಹಾಕಿದ; ಸುಗಂಧದ್ರವ್ಯಗಳಿಂದ ಪರಿಮಳಿತವಾದ: ಧೂಪಿತದಿಙ್ಮಂಡಲದಿಂವಾಪತದಳಿನೀವಿತಾನಕಾಳ್ಯಾತದಿನುದ್ಯುಪಿತೋಷ್ಮಾಯಮಾಣಸುಧೂಪದಿನಾಂ ಧರ್ಮನಾಥನಂ ಪೂಜಿಸುವೆಂ (ಜಾಧಪು. ೮-೧೪೯). ೨. ನೊಂದ; ಕ್ಲೇಶಗೊಂಡ; ಬಳಲಿದ; ಆಯಾಸಗೊಂಡ. ೩. ಪ್ರಚೋದನೆಗೊಂಡ; ಉದ್ದೀಪ್ತವಾದ: ಮಧುರಸ್ಮಿತಕಟಾಕ್ಷ ನಿರೀಕ್ಷಣಂಗಳಲಿ ಧೂಪಿತಸ್ಮರವಶತೆಯಲಿ ತದ್ರೂಪವನು ನೆನೆವುತ್ತ ಭವಭಯ ತಾಪವನು ಕಳೆದೈದಿದರು (ನಿಭಾಗ. ೧೦-೧೦೨-೩೪). ೪. ಕಾಯಿಸಿದ; ಸಂತಪ್ತಗೊಂಡ. (ನಾ). ೫. ಕಾಯಿಸಿದುದು; ಸಂತಪ್ತವಾದುದು: "ಸಂತಾಪಿತಃ, ಸಂತಪ್ತಃ, ಧೂಪಾಯಿತಃ, ಧೂಪಿತಃ, ದೂನಃ–೫ ಬಿಸಿಲು, ಸೆಕೆ ಮುಂತಾದವುಗಳಲ್ಲಿ ಹೋಗಿ ಹೊರಡುವಂತೆ ವಣಗಿಸಿ ಕಾಯಿಸಲ್ಪಟ್ಟಂಥಾದ್ದು" (ಸಿದ್ಧಾಂತಿ. ೩೫೧). 'ಧೂಪಾಯಿತ' ಪರಾ. [ಸಂ.]

ಧೂಪಿಸು$_1$ 'ದೂಪಿಸು$_1$' ನೋ.

ಧೂಪಿಸು$_2$ (ಕ್ರಿ). ೧. ಸುಗಂಧವಸ್ತುಗಳ ಹೊಗೆಯನ್ನು ಹಾಕು; ಧೂಪಹಾಕು; ಪರಿಮಳವನ್ನುಂಟುಮಾಡು: ಚೆನ್ನೆಸೆದು ಮಹಿಷಾಕ್ಷಿಗುಗ್ಗುಳವಂ ಧೂಪಿಸಿ[ಪಾಶಾಂ. ನಿಧೂಪಿಸಿ, ನಿರೂಪಿಸಿ] ಸೋಮಧಾರಿಗೆ ತನ್ನ ತೂಕವನಿಕ್ಕಿಯಂತರ್ಧೂಪವಂ ಕೊಟ್ಟು (ಬಸಪು. ೪೩-೨೦); ಹಲವು ಪರಿಯ ಸುಗಂಧಧೂಪಂಗಳನು ಧೂಪಿಸಿ[ಪಾಶಾಂ. ಸಮರ್ಪಿಸಿ] (ಪ್ರಭುಲೀ. ೪-೮೨); ಮಲಯಜವನನುಲೇಪನಂಗೆಯ್ದು ಧೂಪಿಸಿದ ಬಿಳಿಯ ಪಟ್ಟೆಯನುಟ್ಟು . . . ಸೌಂದರಂ ವನಕೆ ಪೊಱಮಟ್ಟನು (ಸೌಂದಪು. ೧೦-೧೧); "ಸುಗಂಧದ್ರವ್ಯವನ್ನು ಹಚ್ಚು" (ಪ್ರಧಾ). ೨. ಹೊಗೆ ಹಾಕು,–ಹಾಯಿಸು; ಹೊಗೆಕೊಡು: ಸ್ವಯಂಪತಿತ ಸಾರಪತ್ರಫಳಬೀಜಮಂ . . . ಬೃಹತೀತ(ಫ)ಳಕ್ಷಾರವಾರಿಯೊಳ್ ಪುದಿದುಕೊಂಡು ಧೂಪಿಸಿ ವಿಳಂಗದಿಂ ತುಪ್ಪದಿಂ (ಲೋಕೋಪ. ೬-೬). ೩. ಹೊಗೆಯಾಡು; ಹೊರಸೂಸು; ಸುಳಿವು ತೋರು: ತನ್ನ ಕಾರ್ಯಸೀಮೆಯನ್ನು ಮೀರಿದ ಸುಗ್ರೀವನ ಗೈಮೆ ಎಂಬುದು ಒಂದಿಷ್ಟು ಅಧಿಕಪ್ರಸಂಗವೇ ಆಯಿತೆಂದು ರಾಮನ ಆ 'ಕಡೆಗಣ್ಣಿ'ನಲ್ಲರಳಿದ ಕಿನಿಸಿನಲ್ಲಿ ಧೂಪಿಸುತ್ತಿದೆ (ಪಾರ್ತಿಸು. ೯೭). ೪. (ಆಲಂ) ಇಲ್ಲವಾಗು; ನಾಶವಾಗು: ವಾಣಿವಲ್ಲಭಗಾದುದತಿನಿತ್ರಾಣ ನಾಲಿಗೆ ನೆತ್ತಿಗಡರ್ದುದು ಧೈರ್ಯ ಧೂಪಿಸಿತು (ಅಂಬಿಕಾ. ೪೦-೪೫).

[ಧೂಪ + – ಇಸು$_3$]

ಧೂಪೋದ್ಧಾರ (ನಾ). ಧೂಪವನ್ನು ಎತ್ತುವುದು ; ಧೂಪದ ಅರ್ಪಣೆ ; ಧೂಪಹಾಕುವುದು : ಮೂಱುಂ ಪೊತ್ತುಮರ್ಚನಾ ಪುರಸ್ಸರಂ ಧೂಪೋದ್ಧಾರಂಗೆಯ್ದು ನಿರಂತರ ತ್ರಿಸಂಧ್ಯಾಸೇವೆಯುಮೆಂದೆಂಟು ತೆಱದ ಪೂಜೆಯುಮನರ್ಕಪೂಜೆಯುಮುಂ ಮನ್ನಿಸಿ (ಆದಿಪು. ೧೫-೧೩ಎ). [ಧೂಪ + ಉದ್ಧಾರ]

ಧೂಮ (ನಾ). ೧. ಹೊಗೆ : "ಧೂಮಮೆನೆ ಹೊಗೆಯಕ್ಕುಂ" (ಮಂಗರಾ. ೧೪-೮) ; ಆ ದಂಪತಿಯುಂ ಪುದುಂಗೊಳಿಸಿ ಲೋಕಾಶ್ಚರ್ಯಮುಂ ಮಾಡಿಕೊಂದುದು ಕೃಷ್ಣಾಗರುಧೂಪಧೂಮನಿವಹಂ ಕೃಷ್ಣೋರಗಂ ಕೊಲ್ವವೋಲ್ (ಆದಿಪು. ೫-೨೩) ; ಚಾಮರಿಯರ್ ಧೂಮಂಪೊಕ್ಕ ಕಣ್ಣಂತೆ ನೋಡಲಾಱದಿರೆ (ಧರ್ಮಾಮೃ. ೪-೧೫೯) ; ಅಪ್ಪುವಿನ ಯೋಗದ ಕಾಷ್ಠ ಹೊತ್ತುವಲ್ಲಿ ಮೆತ್ತನೆ ತವುದ ಧೂಮ ಶುಷ್ಕದ ಅಪ್ಪುವಿನ ಗುಣ (ಮೋಳಿಮಾ. ೭-೨೪); ಕಪಿಯುಂ ಗಾಣಿಗ ಪಾವು . . . ವಿಧವೆಯಂ ಕೊಂದಾಟಮುಂ ಧೂಮಮುಂ ನಿಪುಣರ್ ಕಂಡರೆ ಪೋಗರೈ (ಸೋಮೇಶ. ೬೮); ಧೂಮಂ ಪೊಂಗಿದ ಶಿಖಿಯಂತೆ . . . ತೊಳಗಿದುಂ ಭೂಪಾಲಂ (ನಳಚಂ. ೭೨೮) ; ಧೂಮಚುಂಬಿತ ಚಿತ್ರದಂತೆ ಸನಾಮರಿದ್ದುದು (ಕುಮಾಸ. ೨೭-೩) ; ಮುಸುಕುವ ಮರ್ಬೆನಿಪ್ಪಿಡುವ ಬಾಣತುಪಾಕದ ಧೂಮದುರ್ಬುಗಂ (ಶಿಶಿವಿ. ೬-೧೭). ೨. ಮೋಡ ; ಮೇಘ. ೩. ಉಳ್ಳೆ ; ಬಾಲಚುಕ್ಕೆ. 'ಧೂಮಕೇತು' ಪರಾ. ೪. ಒಂದು ನರಕದ ಹೆಸರು : ಮತ್ತಂ ಪೂತಿವಕ್ತ್ರ ರಕ್ತಪೂತಿ ಮೃತ್ತಿಕೆ ಕಣ ಧೂಮವೆಂಬೈದು ಮಂತ್ರಿನರಕಂಗಳಂ ಸುತ್ತಿ ಭೀಮವೆಂಬರಸುನರಕವಿಹುದು (ವಿವೇಕ. ೧೮೦). 'ಧೂಮಪ್ರಭೆ' ಪರಾ. ೫. ಒಂದು ಬಗೆಯ ಮರ: (ಮೃಚ್ಛಿಗಿ. ೩೧-೬೦೬); ಪಶ್ಚಿಮಘಟ್ಟದ ಕಾಡುಗಳ ಅತಿ ಎತ್ತರವಾದ ಮರ ಇದುಧೂಮ (ಹಸುಹೋ. ೨೬೩). ೬. ರಾವಣನ ಒಬ್ಬ ಮಂತ್ರಿಯ ಹೆಸರು: ಧೂಮನೆನಿಸಿದೆ ಹಿಂದೆ ಮತ್ತಾ ಧೂಮಕೇತುವೆನಿಪ್ಪೆ ರಣದಲಿ (ಕೌಶಿರಾ. ೨೦-೭). ೭. = ಧೂಮಾಯ : ಪಸರಿಸೆ ತರದಿಂ ಧ್ವಜಧೂಮಸಿಂಹಶುನಕೋಕ್ಷಖರಗಜಧ್ವಾಂಕ್ಷಂಗಳ್ ದೆಸೆಯಿಂದೆ ಮೂಡನಾಳ್ಗಂ ದೆಸೆಯಾಯ ಶುಭದಮಲ್ಲಿ ಪೆಱವಶುಭಂಗಳ್ (ಲೋಕೋಪ. ೩-೧೯) ; ವಿವಿಧವಾದ ಪ್ರಾಸಾದಾದಿಗಳು ಎಂಟು ವಿಧವಾದ ಗಜ, ಉಷ್ಟ್ರ (ಒಂಟೆ) . . . ಧ್ವಜ, ಧೂಮ, ಶ್ವಾನ ಎಂಬ ಆಯಗಳನ್ನರಿತು ನಿರ್ಮಾಣವಾಗತಕ್ಕದೆಂದೂ . . . ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರಗಳು ತಿಳಿಸುತ್ತವೆ (ಭಾರದ. ೮೦). ೮. [ದ್ವೈತ] ಪರಮಾತ್ಮ ; ವಿಷ್ಣು : ಅಜ್ಞಾನಾದಿಗಳನ್ನು ನಿರಾಕರಿಸುವುದರಿಂದ ಧೂಮನೆಂದು ಪರಮಾತ್ಮನಿಗೆ ಹೆಸರು (ಹಸಾರ. ೬-೨ ಟೀಕು).

ದೂಮಮಾಡು=(ಸುಟ್ಟು) ಹೊಗೆಯೇಳುವಂತೆ ಮಾಡು ; ಹಾಳುಮಾಡು ; ನಾಶಮಾಡು : ಧೂಮಮಾಡಿದನೆನಿಸದಿರ್ದಡೆ ನಾಮವನು ನಾ ಕಳೆಸಿಕೊಂಬೆನು ನಾಮಶೂನ್ಯರ ಮಾಡಿ ಡುವೆನು ರಾಮಸೇನೆಯನು (ಕೌಶಿರಾ. ೨೦-೭). [ಸಂ.]

ಧೂಮಕರ (ನಾ). ಹೊಗೆಯನ್ನುಂಟು ಮಾಡುವವನು ; ಅಗ್ನಿ : ಹರಿಮುಖಸುರರ್ ಭೀತಿಯಿಂ ನುಡಿಯುಡುಗಿ ಧೂಮಕರನನೀಕ್ಷಿಸೆ (ಪದ್ಮರಾ. ೧೦-೨೨೧). [ಸಂ.]

ಧೂಮಕುಣಿಕೆ (ನಾ). ಒಂದು ಬಗೆಯ ಸಸ್ಯ : ಮೋಹಲತೆಯುಂ ಧೂಮಕುಣಿಕೆಯುಂ . . . ಕೃತಾಂಜಲಿಯಂದು ಮುಟ್ಟಿದರೆ ಮುರುಟುವನು (ಕಾಮಶಾ. ೧೦-೨೩೯) ; ಕೆಂಗೊಡದ ಲಿಂಗಮುಂ ಕರ್ಪೂರ ಧೂಮಕುಣಿಕೆ ಬೀಜ ಜೇನುತುಪ್ಪ ಪಾದರಸ ಇವೆಲ್ಲವಂ ಕೊಡುವದು (ಕಾಮಶಾ. ೧೦-೨೬೮).

[ಧೂಮ ? + ಕುಣಿಕೆ]

ಧೂಮಕೇತನ (ನಾ). ೧. ಹೊಗೆಯನ್ನು ಧ್ವಜವಾಗಿ ಉಳ್ಳವನು ; ಅಗ್ನಿ : "ವಸು ಸಿತೇತರಗತಿ ಸ್ವಾಹಾಪ್ರಿಯಂ . . . ಧೂಮಕೇತನಂ ಶುಚಿ ವಿರೋಚನನೆನಿಕ್ಕುಂ" (ಮಂಗರಾ. ೧೪-೬). ೨. ಧೂಮಕೇತು : ಉಳ್ಳೆ. [ಧೂಮ + ಕೇತನ]

ಧೂಮಕೇತು (ನಾ). ೧. ಹೊಗೆಯನ್ನು ಧ್ವಜವಾಗಿ ಉಳ್ಳವನು : ಅಗ್ನಿ : ನುತವರಪ್ರಸಾಧಿ ಪರಸಮಯ ನಿರ್ಧೂಮ ಧೂಮಕೇತುಂ ಶಿಷ್ಟಪರಿಪಾಲಕಂ (ಗುರುಚಾ. ೧೩-೩) ; ಕೋಪದಿಂ ತನ್ನ ನಿಟಿಲ ಧೂಮಕೇತುವಿನ ನಯನಮಂ ತೆರೆಯಲಿರಿದಪನು (ನವಮೋ. ೫-೧೧). ೨. ಹೊಗೆಯಂತೆ ಕಾಣಿಸಿಕೊಳ್ಳುವ ಒಂದು ಉಲ್ಕೆ ; ಆಕಾಶದಿಂದ ಕೆಳಕ್ಕೆ ಬೀಳುವ ತೇಜಃಪುಂಜವಾದ ವಸ್ತು ; ಬಾಲಚಿಕ್ಕೆ : ಆಂಜನೇಯನೊಡರಿಸೆ ಲಂಕಾದಹನಮನಸುರೇಂದ್ರ ವಿನಾಶಹೇತುಗಳ್ ಧೂಮಕೇತುಗಳ್ ನೆಗೆದುವೆನಲ್ (ಪಂರಾಮಾ. ೧೧-೧೪೫) ; ತೋಱುತಿದ್ದನು ಧೂಮಕೇತುವಿನಂತೆ ಕಪಿಪಡೆಗೆ (ಕೌಶಿರಾ. ೨೪-೩೪) ; ಮೇಳವಿಸಿದವು ಧೂಮಕೇತು ದಿಶಾಳಿಯಲಿ ರಥಕೇತುದಂಡದ ಮೇಲೆ ಹದ್ದೆಱಗಿದವು ಕಲಿಖರದೂಷಣಾದಿಗಳ (ತೋರರಾ. ೩-೫-೮) ; ಮೂಡಿದವು ಪ್ರತಿಸೂರ್ಯ ಧೂಮಕೇತುಗಳು ಓಡಾಡಿದವು ಬೀಡಿನಲಿ ಹದ್ದುಕಾಗೆಗಳು (ಕನಕ. ೨೦೨-೧೨) ; ಕಂಜಬಾಂಧವನ ರಥದಶ್ವಗಳು ಬೆದರಿದವು ಧೂಮಕೇತು ಮೂಡಲು (ನವಮೋ. ೧೨-೭೩) ; ಧೂಮಕೇತುಗಳ್ ದೆಸೆದೆಸೆಗೆ ಮುಸುಂಕೆ (ರಾಮಾಶ್ವ. ೬೬-೮) ; ಪಡುವಲಲ್ಲಿ ಧೂಮಕೇತು ಬಾಲ ಬೀಸಿ ಮೂಡಿರೆ (ಅರಳು. ೨೪೭-೬). ೩. (ಆಲಂ) ಅವಮಂಗಳವನ್ನುಂಟು ಮಾಡುವುದು ; ಅನಿಷ್ಟಕರವಾದುದು : "ಉನ್ನತ ತೀವ್ರ ಶಕ್ತನಹ ಸರ್ಪಾರ್ಚಿಯೊಳು ಮಹೋತ್ಪಾತದೊಳು ಧೂಮಕೇತುವದೆನಿಕ್ಕುಂ" (ಮಂಗರಾ. ೧೪೪-೨೫) ; "ಮಹೋತ್ಪಾತಂ ಪಾವಕಂ ಧೂಮಕೇತುವೆನಿಕ್ಕುಂ" (ನಾನಾರ. ೩೪) ; ಧಾರೆಯ ಮಿಗೆ ಹಿಡಿದ ಖಂಡೆಯವೊ ಕಾಮನ ಹಗೆಗೆ ಹುಟ್ಟಿದ ಧೂಮಕೇತುವೊ ರೂಪು ಸುರಸತಿಯ (ಕುಮಾಅ. ೮-೩) ; ಈ ನಿರ್ಣಯವು ಯೋಗ್ಯವಿದ್ದರೂ ರಾಜಕೀಯ ಧೂಮಕೇತುವಾಗಿದೆ (ನೂರಜ. ೪೩). ೪. ಅಮಂಗಳವನ್ನುಂಟುಮಾಡುವವನು ; ಅನಿಷ್ಟವನ್ನುಂಟುಮಾಡುವವನು : ನುಡಿದನ್ತೆಗಣ್ಡಂ ಸಮರಧನಂಜಯ ವೈರಿಕುಳಾನ್ತಕಮರಿಬ[ಲ]ಧೂಮಕೇತುಯಾಪಮಲ್ಲನಂಕಕಾಱಂ (ಕಇಅ. ೪೮-೫-೧೪ ; 978) ; ಘಣಿಪತಿಕೇತನ ಧೂಮಕೇತುವುಂ ಪಾಂಡವಬಲಪ್ರದೀಪನುಂ . . . ಎನಿಸಿದ ಭೀಮಸೇನಂ (ಗದಾಯು. ೨-೧ ಪ) ; ತ್ರಿದಶಾರಿ ಧೂಮಕೇತುವನುದರದೊಳೀ ದೇವಿ ತಳೆದುದರ್ಕಿದೆ ದೃಷ್ಟಾಂತದ ಧೂಮಲೇಖೆಯೆನೆ ಕರ್ಪೂರವಿದ ರೋಮಾಳಿ ರಂಜಿಕುಂ (ಜಗವಿ. ೨-೯೧). [ಧೂಮ + ಕೇತು]

ಧೂಮಜ್ವಾಲೆ (ನಾ). ಹೊಗೆಯಿಂದ ಕೂಡಿದ ಬೆಂಕಿ : ಉರಿ : ನೆಗೆವ ಧೂಮಜ್ವಾಲೆಗಳ್ ಬಿಟ್ಟು ಪೆರ್ಗಿಡಿಗಳ್ ಪೊಣ್ಮುವ ಪೂತ್ಕ್ರಿಯಾರಭಸಮಾದಂ ಭೀತಿಯಂ ಮಾಡೆ (ವರ್ಧಪು. ೦೪-೬೮). [ಧೂಮ + ಜ್ವಾಲೆ]

ಧೂಮಧೂಸರಿತ (ಗು). ಹೊಗೆಯಿಂದ ಆವೃತವಾಗಿ ಮಲಿನವಾದ ಗಿರಣಿಗಳ ಧೂಮ-ಧೂಸರಿತ ಬಾಂದಳದಲ್ಲಿ ಎಂದು ಮೆರೆವು ದೊ ನಿಮ್ಮ ತ್ಯಾಗಧ್ವಜವು! (ಗಂಗಾತ. ೫೩-೯). [ಧೂಮ + ಧೂಸರಿತ]

ಧೂಮಧ್ವಜ (ನಾ). ೧. ಹೊಗೆಯನ್ನು ಲಾಂಛನವಾಗಿ ಉಳ್ಳವನು ; ಬೆಂಕಿ : ಅಗ್ನಿ : "ವಸು ವೈಶ್ವಾನರನಾಶುಶುಕ್ಷಣಿ ಹುತಾಶಂ . . . ಧೂಮಧ್ವಜಂ ಪಾವಕಂ" (ವಸ್ತುಕೋ. ೭-೩೯); ವಾಮನಪದಹತಿ ವಿದಳಿತ ಜೀಮೂತ ವಿಮುಕ್ತಬಹುಳಜಲಧಾರೆಗಳಿಂದಾ ಮುನಿಜನಾಪಕಾರಕಧೂಮಧ್ವಜನೆಯ್ದೆ ನಂದಿಪೋದತ್ತಾಗಳ್ (ಅರ್ಧನೇ. ೬-೩೫) ; ಭೂಮಿಯಂದದೊಳು ಸರ್ವಕ್ಕಾಶ್ರಯಮಪಾದೆಯ್ದೆ . . . ಧೂಮಧ್ವಜಂಬೊಲರಿವಿಧ್ವಂಸನಾವಾಯುವಂತೀ ಜಗತ್ಪ್ರಾಣವೈ (ವೀರೈಪು. ೫-೬-೨). ೨. ಮೂರು ಎಂಬ ಸಂಖ್ಯೆಯ ಸಂಕೇತ : ಭುಜಪಕ್ಷಯುಗ ಧೂಮಧ್ವಜ ಪಾದಗುರುವಿನೊಳಜನಿರ್ದ ರಸದೊಳಂ ಪೆಱವೆಡೆಗಳೊಳಧೋಕ್ಷಜಗಣಮಾದೊಡದುವೆ ಚಿತ್ರಿಕೆ (ಛಂದೋಂಬು. ೫-೨೪೯ ಅಡಿಟಿ). P ಗಾರ್ಹಪತ್ಯ, ಆಹವನೀಯ ಮತ್ತು ದಕ್ಷಿಣಾಗ್ನಿ ಎಂದು ಅಗ್ನಿ ಮೂರು ಎಂಬುದರ ಮೇಲೆ ಈ ಅರ್ಥ ಬಂದಿದೆ.

[ಧೂಮ + ಧ್ವಜ]

ಧೂಮಧ್ವಜಾಕ್ಷ (ನಾ). ಅಗ್ನಿಯಂನ್ನು ಕಣ್ಣಾಗಿ ಉಳ್ಳವನಂ ; ಕೆಂಡಗಣ್ಣ; ಶಿವ : ಭಕ್ತಜನಪ್ರೇಮಿಯಾನತಕಲ್ಪಕುಜ ಕುಮುದಸಖಿಗೋಪ ಧೂಮ ಧ್ವಜಾಕ್ಷ ದುರಿತವ ಪಱುದು ಪಾಲಿಪುದು (ಪ್ರಾಥಠಾ. ೧-೧).

[ಸಂ. (ಧೂಮಧ್ವಜ + ಅಕ್ಷಿ + –)]

ಧೂಮಪಟ (ನಾ). "(ಸೈನಿಕ ಕಾರ್ಯಾಚರಣೆಗಳನ್ನು ಮರಸಿಡಲು ಉಪಯೋಗಿಸುವ) ಹೊಗೆಯಂ ತೆರೆ, ಧೂಮಪಟ" (Smoke Screen. ಇಂಕನ್ನಡ). 'ಧೂಮಗೋಳ' ಪರಾ. [ಧೂಮ + ಪಟ್ಟ]

ಧೂಮಪತಾಕ (ನಾ). = ಧೂಮಧ್ವಜ ೧ : ಹರಿ ಕೇಳ್ ಧೂಮಪತಾಕ ಕೇಳ್ ನಿರುತಿ ಕೇಳ್ (ಕಮದ. ೨೩೦ ಪ್ರಯೋ). [ಧೂಮ + ಪತಾಕ]

ಧೂಮಪತಾಕೆ (ನಾ). ಹೊಗೆಯಂ ಚಿಹ್ನೆ, – ಪತಾಕೆ : ಧೂಮಪತಾಕೆ ಮುದ್ಗ್ರವತೀವ ಭಯಂಕರಸಪ್ತಜಿಹ್ವೆಗಳ್ . . . ಒಪ್ಪಿ ಸಂತತಂ ಹೇಮ ನಿಭಾಂಗನಾದನಲನಿಂದ್ರಸಮೀಪದೊಳಿರ್ದಂ (ನಳಚಂ. ೨೫೮).

[ಧೂಮ + ಪತಾಕೆ]

ಧೂಮಪಾನ (ನಾ). ೧. (ಕೆಲವು ರೋಗಗಳ ನಿವಾರಣೆಗಾಗಿ) ಹೊಗೆಯನ್ನು ಸೇದುವುದಂ, –ಕುಡಿಯುವುದಂ : ರೂಕ್ಷಾಹಾರ . . . ಧೂಮಪಾನೆ, ಮಧುರಾಹಾರ, ನಸ್ಯ, ವಮನ, ಸೇಕ, ಉಪವಾಸ ಮೊದಲಾದಂಥಾ ಪಾನಾಹಾರವಿಹಾರಗಳಿಂಬ ಔಷಧಗಳಿಂದ ಅತ್ಯುಗ್ರವಾದ ಶ್ಲೇಷ್ಮ ಶಮನವಹುದು (ವೈದ್ಯಸಾ. I, ೩೪); ಧೂಮಪಾನ.–ಕುರುಟಿಗೆ ಸೊಪ್ಪು, ಅಮರದ ವಳ್ಳಿ . . . ಗರುಗದ ಸೊಪ್ಪು –ಇವುಗಳ ರಸದಿಂದ ಪಟ್ಟೆ ಅರಿವೆಯನಾದರು, ಸಣ್ಣಪಾವಡೆಯನಾದರು ಪ್ರತ್ಯೇಕನಾಗಿ ಪ್ರತಿದಿನವೂ ಭಾವನೆಯ ಮಾಡಿ ಆ ಪಾವಡೆಗೆ ಮಣಿಶಿಲೆಯ ಚೂರ್ಣವ ತೊಡೆದು ಅದಂ ಬತ್ತಿಯಂ ಮಾಡಿ ಬಿಡಲದ ದಂಟಿನಿಂದ ಹೊಗೆಯಂ ತೆಗೆದುಕೊಳ್ಳುವುದು (ಸಕವೈ. ೩೩೭). ೨. (ಚುಟ್ಟಾ, ಬೀಡಿ, ಸಿಗರೇಟು ಮುಂತಾದ) ಹೊಗೆಬತ್ತಿಯನ್ನು ಸೇದುವುದು, –ಕುಡಿಯುವುದಂ: ತಾವು ಧೂಮಪಾನ ಮಾಡುವುದಕ್ಕೇನೂ ಅಡ್ಡಿಯಿಲ್ಲವಷ್ಟೆ ? (ಬಿನ್ನಜೀ. ೩೨) ; ಇಬ್ಬರು ಬೆಟೆನ್‌ರು ಒಬ್ಬ ಸ್ನೇಹಿತನ ಮನೆಯ ಬಾಗಿಲಿನಲ್ಲಿ ಕುಕ್ಕರಗಾಲಿನಲ್ಲಿ ಕುಳಿತುಕೊಂಡು ಉದಾಸೀನರಾಗಿ ಧೂಮಪಾನ ಮಾಡಿ ಉಗಿಯುತ್ತಿದ್ದರು (ಮುಳಿನಾ. ೦೮೪) ; ಧೂಮಪಾನವನ್ನು ನಿಷೇಧಿಸಿದೆ (ಠೂಧಿ). [ಧೂಮ + ಪಾನ್ಯ]

ಧೂಮಪ್ರಭೆ (ನಾ). [ಜೈನ] ರತ್ನಪ್ರಭೆ, ಶರ್ಕರಾಪ್ರಭೆ, ವಾಲುಂಕಪ್ರಭೆ, ಪಂಕಪ್ರಭೆ, ಧೂಪಂಪ್ರಭೆ, ತಮಃಪ್ರಭೆ ಮತ್ತು ಮಹಾತಮಃಪ್ರಭೆ ಎಂಬ ಏಳು ನರಕಗಳಲ್ಲಿ ಐದನೆಯದಂ : ಅರಿಷ್ಟೆಯಂಬ ಪೆಸರನ್ನುಳ್ಳ ಧೂಮಪ್ರಭೆಯೆಂಬಯ್ದನೆಯ ನರಕಬಿಲಂಗಳೆಲ್ಲಂ ಮೂಱು ಲಕ್ಷಮಕ್ಕುಂ (ಅಜಿಪು. ೦೧-೬ ವ) ; ಇರ್ಪತ್ತು ಸಾಸಿರ ಯೋಜನಬಾಹುಲ್ಯದಿಂ ಧೂಮಪ್ರಭೆಯೆಂಬಯ್ದನೆಯ ನರಕಂ (ಸುಕುಮಾ. ೦೦-೪೦ ವ); ಮೂಱು ಲಕ್ಷೆ ಬಿಲದಿಂ ಪುದಿದಿರ್ದಯ್ದನೆಯದೆನಿಪ ಧೂಮಪ್ರಭೆಯೊಳ್ (ಮಲ್ಲಿಪು. ೧೫-೦೫೦) ; ಅಮೃತಮತಿಯಪ್ಪವಂಕಂಗೆ ಮಾರುಳ್ಕೊಂಡತ್ತೆ ಗಂಡನಂ ವಿಷದಿಂ ಕೊಂದು ಮಡುತ್ತು ಯವಂ ಕೊಲೆ ಪಂಚಮನರಕದೊಳಿಟ್ಟಿಳರಸ ಧೂಮಪ್ರಭೆಯೊಳ್ (ಯಶೋಚ. ೪-೫೬). [ಧೂಮ + ಪ್ರಭೆ]

ಧೂಮಮಾರ್ಗ (ನಾ). ಯಜ್ಞಯಾಗಾದಿಗಳನ್ನು ಮಾಡಿದವರಂ ಪರಲೋಕಕ್ಕೆ ಹೋಗುವ ಮಾರ್ಗ: ಮೂರುಗತಿ–ದೇವತೋಪಾಸಕರ ದೇವಯಾನ . . . ಇಷ್ಟಾಪೂರ್ತಗಳನ್ನು ಮಾಡಿದವರ ಪಿತೃಯಾಣ (ಇದಕ್ಕೆ ಕೃಷ್ಣಮಾರ್ಗವೆಂದೂ, ಧೂಮಮಾರ್ಗ ವೆಂದೂ ಹೆಸರು) (ಅಮೃತ. ೬-೨೨ ಟೀಕು). [ಧೂಮ + ಮಾರ್ಗ]

ಧೂಮಮಾಲಿಕೆ (ನಾ). ಹೊಗೆಯಂ ಸಾಲು, –ಪಂಕ್ತಿ, –ಪರಂಪರೆ : ಸಮುದ್ರದ ನೀರು ಹೀರುವ ಹಾಗೆ ಬಿರುಘಾಳಿ ಬೀಸಲು ಧೂಮಮಾಲಿಕೆಗಳು ಏಳುತ್ತವೆ (ಆವಂಶ. ೫೦). [ಧೂಮ + ಮಾಲಿಕೆ]

ಧೂಮಮಾಳೆ (ನಾ). = ಧೂಮಮಾಲಿಕೆ : ಭ್ರಾಜಿತ ಧೂಮಮಾಳೆ ಮಧುಪಾವಳಿ ಕೇಸುರಿ ಕೆಂದಳಿರ್ ತದುರ್ವೀಜಮುದಗ್ರವಹ್ನಿಯೆನೆ . . . ಪೊತ್ತಿಸಿದ ದೀಪಮೆನಿಪ್ಪುವು ತಳ್ತಶೋಕೆಗಳ್ (ಶಾಂತಿಪು. ೭-೧೬೨).

[ಧೂಮ + ಮಾಳೆ$_1$ (= ಮಾಲೆ)]

ಧೂಮಯೋನಿ (ನಾ). ಹೊಗೆಯಿಂದ ಉತ್ಪನ್ನವಾದುದಂ : ಮೋಡ : "ಸ್ನನಯಿತ್ನು ವಾರಿವಾಹಂ ಘನಾಘನಂ ಧೂಮಯೋನಿ . . . ಬಳಾಹಕಂ ಜೀವಂಜೂತಂ" (ವಸು.ಕೋ. ೧೦-೫೮); "ವಾರಿಧರಮಬ್ದಂ . . . ಧೂಮಯೋನಿ . . . ಜೀಮೂತಮೆನಲು ಮೇಘಕ್ಕೆ ನಾವಂ" (ಮುಂಗರಾ. ೧೬-೩).

[ಸಂ.]

ಧೂಮರಾಶಿ (ನಾ). ಹೊಗೆಯ ರಾಶಿ,–ಗುಂಪು : ಇಡಿದ ಧೂಳಿಯ ಧೂಮರಾಶಿಯ ಪಡೆ ವಿರಾಟನ ಮಗನ ಕಂಗಳಿಗೊಡನೊಡನೆ ದಾವಾಗ್ನಿಯಂತಿರೆ ತೋಱುತಿದಿರಿನಲಿ (ಕುವ್ಯಾವಿ. ೬-೩). [ಧೂಮ + ರಾಶಿ]

ಧೂಮಲ, ಧೂಮಂಳ (ಗು). ೧. ಬೂದಂಬಣ್ಣದ. (ನಾ). ೨. ಕಪ್ಪು ಮತ್ತು ಕೆಂಪು ಬಣ್ಣಗಳ ವಿಂಶ್ರಣದಿಂದ ಉಂಟಾದ ಬಣ್ಣ ; ಊದಾ ಬಣ್ಣ ; ಬೂದಂಬಣ್ಣ ; ಹೊಗೆಬಣ್ಣ : "ಧೂಮಲಂ [ಪಾಠಾಂ. ಳಂ] ಧೂಮ್ರಮೆನೆ ಕೆಂಪುಗೂಡಿದ ಹಸುರು" (ಮುಂಗರಾ. ೧೩೦-೩೧). **ಧೂಮಳ:** ೨. "ಧೂಮ್ರಃ, ಧೂಮಳಃ–ಈ ೨ ಕೆಂಪುಹಸುರುಮಪ್ಪುದು" (ಹಲಾಯು. ೧೨೨-೫೩). [ಸಂ.]

ಧೂಮಲಿಪಿ (ನಾ). ಒಂದಂ ಬಗೆಯ ಗೂಢಲಿಪಿ : ಲಿಪಿಗಳ ವಿವರ–ಗಗನಲಿಪಿ, ಧೂಮಲಿಪಿ, ಜಲಲಿಪಿ . . . ಯಾ ಆಗಣಿತ ಲಿಪಿಗಳ ನೋಡಲಱಿಯದೆ ಬಿಜ್ಜಳರಾಯನ ಸಭೆಯೊಳು ಕಳಕಳಗೊಳುತಿದ್ದರು ವಿದ್ವಾಂಸರುಗಳೆಲ್ಲಾ (ಭಾಸ್ಕರ. ೬೬-೪). [ಧೂಮ + ಲಿಪಿ]

ಧೂಮಲಿಸು (ಕ್ರಿ). ಹೊಗೆಯ ಬಣ್ಣವನ್ನು ತಾಳು ; ಬೂದಂಬಣ್ಣಕ್ಕೆ ತಿರುಗು : ಬಗೆಯ ನಸು ಧೂಮಲಿಸಿ ಹೊಗರುವೀ ಸಂಜೆ ನಿನ್ನೆಗರಿಕೆಯ ಸುತ್ತಲು ಕರಂಗುತಿಹುದು (ಗೀವಿಂ. ೪-೦೯). [ಧೂಮಲ + – ಇಸ್ಯು]

ಧೂಮಲೇಪೆ (ನಾ). ಹೊಗೆಯ ಗೆರೆ,–ರೇಪೆ : ಶ್ರಿದಶಾರಿ ಧೂಮ ಕೇತುವನುದರದೊಳೀ ದೇವಿ ತಳೆದುದರ್ಕದೆ ದೃಷ್ಟಾಂತದ ಧೂಮಲೇಪೆಯೆನೆ ಕರ್ವೊದವಿದ ರೋಮಾಳಿ ರಂಜಿಕುಂ ದೇವಕಿಯ (ಜಗವಿ. ೨-೯೧) ; ನಾವೆಯೊಳ್ ನಿಂದ ಭರತಂ ಧೂಮಲೇಪೆಯೆನೆ ನೋಡುತಂ (ಶ್ರೀರಾಮಾ. ೧೬೧-೨೬೦). [ಧೂಮ + ಲೇಪೆ]

ಧೂಮವರ್ಣ (ಗು). ಹೊಗೆಯಂ ಬಣ್ಣ ; ಬೂದಂಬಣ್ಣ.

[ಧೂಮ + ವರ್ಣ]

ಧೂಮವ್ರಾತ (ನಾ). ಹೊಗೆಯಂ ಸಮೂಹ,–ದಟ್ಟಣೆ : ಎಳೆಯ ರವಿ ರಶ್ಮಿಯಲಿ ಪ್ರೇತಾಂಗಗಳ ಧೂಮವ್ರಾತದ[ಪಾಠಾಂ. ಜ್ವಾಲೆಯ] ಲಿ . . . ಆಯುಷವಿಳಿದು ಹೋಗದೆ ದಿನದಿನದೊಳು (ಕುವ್ಯಾಉ. ೩-೫೬ . [ಧೂಮ + ವ್ರಾತ]

ಧೂಮಶಕಟ (ನಾ). ಹಬೆಯಿಂದ ಓಡುವ ಗಾಡಿ ; ಹೊಗೆಬಂಡಿ ; ರೈಲುಗಾಡಿ ; ಉಗಿಬಂಡಿ : ರಾಮಶರ್ಮನು ಆ ರಾತ್ರಿಯ ಧೂಮಶಕಟದಲ್ಲಿ ವಿಜಯನಗರಕ್ಕೆ ಹೋದನು (ಲಕ್ಷ್ಮೀಪ್ರ. ೩೭೬) ; ಕನ್ನಡದ ಕುಲಕ್ಕೇ ಸೇರಿ ಹೋಗಿರುವ ಪದಗಳನ್ನು ಕಿತ್ತೊಗೆದು ಹೊಗೆಬಂಡಿ (ಅಥವಾ ಧೂಮಶಕಟ), ನ್ಯಾಯಸ್ಥಾನ ಮೊದಲಾದವನ್ನು ಬಳಸಬೇಕೆಂದು ಯಾರನ್ನೂ ಒತ್ತಾಯಪಡಿಸುತ್ತಿರಲಿಲ್ಲ (ನಂಟಕು. ೫೩).

[ಧೂಮ + ಶಕಟ]

ಧೂಮಸಂಹತಿ (ನಾ). ಹೊಗೆಯಂ ಸಮೂಹ,–ಗುಂಪು : "ಧೂಮ್ಯಾ. ಧೂಮಸಂಹತಿಃ–ಈ ೨ ಪೊಗೆ" (ಹಲಾಯು. ೧೨-೭೬).

[ಧೂಮ + ಸಂಹತಿ]

ಧೂಮಸ್ತೋಮ (ನಾ). = ಧೂಮಸಂಹತಿ : ಕಾಳಾಗರು ಧೂಪೋದ್ದಾಮ ಧೂಮಸ್ತೋಮ ಜಲ ಜೀಮೂತ ಸಮುದಯ ಶ್ಯಾಮಳಮುಂ . . . ಎನಿಸಿ ಗೋವರ್ಧನ ನಗಂ ಸೊಗಯಿಸೆ (ಜಗವಿ. ೪-೮೨ ಪ); ವಜ್ರಜಂಘನುಂ ಶ್ರೀಮತಿಯುಂ ಸೆಜ್ಜಾಗೃಹದೊಳು ನಿದ್ರೆಗೆಯ್ದಿರೆ ಸೆಜ್ಜೆವಳಂ ಧೂಪಘಟ ಮನುದ್ದೀಪಿಸಿ ಗವಾಕ್ಷಮಂ ತೆಱೆಯಲ್ಕದು ಪೋಗೆಯಾ ಧೂಮ ಸ್ತೋಮದಿಂ[ಪಾಠಾಂ. ಧೂಮದಿಂ]ಮರಣಮನೆಯ್ದಿ (ಪುಣ್ಯಾಸ್ರ. ೧೦-೧ ಪ); ತಲೆಗೆ ಕಂಬಳಿ ಕವಿಚಿಕೊಂಡು ಮೇಲಕ್ಕೆ ಅಡರುವ ಧೂಮಸ್ತೋಮವನ್ನು . . . ಹೀರಿ ಹೀರಿ (ನಂಟರು. ೩೮). [ಧೂಮ + ಸ್ತೋಮ]

ಧೂಮಳ 'ಧೂಮಲ' ನೋ.

ಧೂಮಾಂಕ (ನಾ). ಧೂಮಂಧ್ವಜ ; ಅಗ್ನಿ ; ಬೆಂಕಿ : ಧೂಮಾಂಕ ರಾಮಾಕ್ಷ ಶ್ಯಾಮಾಂಗ ವಾಮಾಲಲಾಮಾಂಕ ವಾಮಾಂಗ ಹೇಮಾಗ ಧಾಮಾರಿಕಾ ಮಾಂತಕ (ಉದ್ಭಟಾ. ೩೦-೩೬). [ಧೂಮ + ಅಂಕ]

ಧೂಮಾಕ್ಷ (ನಾ). ಈಶ್ವರ ; ಶಿವ : ಸಾಮಜವೇಱಿ ಸಕ್ತಿಗೆಯ ನೆರಳಿನಲ್ಲಿ ಧೂಮಾಕ್ಷನಂತಿಹನಾರೊ (ಕಂನವಿ. ೧೨-೫೭).

[ಸಂ. (ಧೂಮ + ಅಕ್ಷಿ + -)]

ಧೂಮಾದಿಮಾರ್ಗ (ನಾ). = ಧೂವಂಮಾರ್ಗ :ವಿದಿತ ಧೂಮಾದಿಮಾರ್ಗ ದೊಳರ್ಚಿರಾದಿಮಾರ್ಗದೊಳಯ್ದಿ ಮರಳಲಿಲ್ಲವಾತಂ ಪೂರ್ಣಪದವೆ ತಾನಾದ ಕತದಿಂದೆ (ಅನುಶಾ. ೬-೬-೧೨) ; ಮಿಸುಪ ಕೈವಲ್ಯವಿಷಯವದು ಕಾರಣಂ ಕರ್ಮಯೋಗದುರು ಧೂಮಾದಿಮಾರ್ಗ (ವೀಶ್ಯಪು. ೫-೨೦ ಪ). [ಸಂ.]

ಧೂಮಾಯ (ನಾ). [ವಾಸ್ತು] ಕಟ್ಟಡದ ನಿರ್ಮಾಣ ಕ್ರಮದಲ್ಲಿ ನೋಡಬೇಕಾದ ಎಂಟು ಬಗೆಯ ಆಯ ಪ್ರಕಾರಗಳಲ್ಲಿ ಒಂದು ; P ಹಿಂದಿನ ಕಾಲದಲ್ಲಿ 'ಆಯ'ವನ್ನು ನಿರ್ಣಯಮಾಡಿಕೊಳ್ಳದೆ ಮನೆಯಂನ್ನು ಕಟ್ಟುತ್ತಿರಲಿಲ್ಲ. ಆಯವು ಸರಿಯಾಗಿರದಿದ್ದರೆ ಆ ಮನೆಯಲ್ಲಿ ವಾಸಿಸುವವರಿಗೆ ಅನಿಷ್ಟವುಂಟಾಗುವುದೆಂಬ ನಂಬಿಕೆ ಯಿತ್ತು. ಮತ್ಸ್ಯಪುರಾಣದ ೨೫೭ನೆಯ ಅಧ್ಯಾಯದಲ್ಲಿ ಆಯದ ವಿಷಯವು ವಿವೃತವಾಗಿದೆ. ಯಜಮಾನನ ಮೊಳದಿಂದಲಾಗಲಿ, ಗೇಣಿನಿಂದಲಾಗಲಿ ನಿವೇಶನದ ಉದ್ದ, ಅಗಲಗಳನ್ನು ಅಳೆದು ಉದ್ದದ ಸಂಖ್ಯೆಯನ್ನು ಅಗಲದ ಸಂಖ್ಯೆಯಿಂದ ಗುಣಿಸಿ ೮ ರಿಂದ ಭಾಗಿಸಲು ೧ ಉಳಿದರೆ ಅದಂ ಧ್ವಜಾಯ, ೨ ಉಳಿದರೆ ಅದಂ ಧೂಮಾಯಂ. ಹೀಗೆಯೇ ೩ ಉಳಿದರೆ ಸಿಂಹಾಯ, ೪ ಉಳಿದರೆ ಶುನಕಾಯಂ, ೫ ಉಳಿದರೆ ವೃಷಭಾಯಂ, ೬ ಉಳಿದರೆ ಖರಾಯಂ, ೭ ಉಳಿದರೆ ಗಜಾಯಂ ಮಂತ್ತು ನಿಶ್ಶೇಷವಾದರೆ ಕಾಕಾಯಂ. ಧ್ವಜಾ ಯಂಕ್ಕೆ ಯಾವ ಕಡೆ ಬೇಕಾದರೂ ಬಾಗಿಲಿರಬಹುದಂ, ಆದರೆ ಪಶ್ಚಿಮದಿಕ್ಕಿನ ಬಾಗಿಲು ಶ್ರೇಷ್ಠ. ಸಿಂಹಾಯಕ್ಕೆ ಉತ್ತರದ ಬಾಗಿಲು, ವೃಷಭಾಯಂಕ್ಕೆ ಪೂರ್ವದ ಬಾಗಿಲು ಮತ್ತು ಗಜಾಯಂಕ್ಕೆ ದಕ್ಷಿಣದ ಬಾಗಿಲು ಇರಬೇಕೆಂದು ಹೇಳಿದೆ. 'ಕಾಲಾಮೃತ'ವೆಂಬ ಜ್ಯೋತಿಷ್ಯಗ್ರಂಥದಲ್ಲಿ-ನಿವೇಶನದ ಉದ್ದದ ಅಳತೆಯು ಅಗಲದ ಅಳತೆಗಿಂತ ಕಾಲುಭಾಗ ಅಧಿಕವಾಗಿ ಸಮಸಂಖ್ಯೆಯಾಗಿದ್ದರೆ ಧ್ವಜಾಯ, ಕಾಲುಭಾಗ ಕವ್ಮಿಯಾಗಿ ಸಮಸಂಖ್ಯೆಯಾಗಿದ್ದರೆ ಗಜಾಯಂ, ಕಾಲು ಭಾಗ ಕವ್ಮಿಯಾಗಿ ಬೆಸಸಂಖ್ಯೆಯಾಗಿದ್ದರೆ ಸಿಂಹಾಯಂ, ಕಾಲುಭಾಗ ಅಧಿಕವಾಗಿ ಬೆಸಸಂಖ್ಯೆಯಾಗಿದ್ದರೆ ವೃಷ ಭಾಯಂ, ಹೆಚ್ಚು ಕವ್ಮಿಗಳಿಲ್ಲದೆ ಸಮಸಂಖ್ಯೆಯಂಳ್ಳದ್ದಾದರೆ ಕಾಕಾಯಂ, ಅರ್ಧ ಅಧಿಕವಾಗಿ ವಿಷಮಸಂಖ್ಯೆಯಾಗಿದ್ದರೆ ಖರಾಯಂ, ಕೇವಲ ವಿಷಯಸಂಖ್ಯೆಯಂಳ್ಳದ್ದಾದರೆ ಶುನಕಾಯಂ, ಅರ್ಧಾರ್ಧಿಕ ವಾಗಿ ಸಮಸಂಖ್ಯೆಯುಳ್ಳದ್ದಾದರೆ ಧೂಮಾಯ—ಎಂದು ಹೇಳಿದೆ. ಅಲ್ಲದೆ, ಎಂಟು ದಿಕ್ಕುಗಳಲ್ಲಿ ಯಾವ ದಿಕ್ಕಿಗೆ ಯಾವ ಆಯವು ಶ್ರೇಷ್ಠವೆಂಬುದನ್ನು ವಿವರಿಸಿ, ಗಜಶಾಲೆ. ಗೋಶಾಲೆ ಮೊದಲಾದ ವುಗಳಿಗೆ ಬೇರೆ ಬೇರೆ ಆಯಗಳನ್ನು ಹೇಳಿದೆ. ಧ್ವಜಾಯವು ಎಲ್ಲ ಆಯಗಳಿಗಿಂತಲೂ ಶ್ರೇಷ್ಠವಾದುದೆಂದು ನಿರೂಪಿತವಾಗಿದೆ. ಇವೇ ಅಲ್ಲದೆ ಬೇರೆ ಬೇರೆ ರೀತಿಗಳಿಂದ ಆಯದ ವಿಷಯವನ್ನು ವಿವರಿಸಿರುವುದೂ ಉಂಟು : ವಿಸ್ತಾರವಾಗಿ ಉದ್ದ ಅಗಲವನು ಅಳದು ವೊಟ್ಟುಗೂಡಿಕೊಂಡ ಕೋಲು ಯೆಷ್ಟೋ ಅದನು ೩ ಹೆಚ್ಚಿ . . . ಅದಂ ೮ರಿಂದ ಭಾಗಿಸಿ ಉಳಿದವು ಆಯಂಗಳೂ ೧ ವುಳಿದರೆ ಧ್ವಜಾಯ, ೨ಕ್ಕೆ ಧೂಮಾಯ (ಆಯಾಟೀ. ೧-೩); ತಱುವಾಯಿಂದೆ ಧ್ವಜಾಯಂ, ಧೂಮಾಯಂ . . . ವಾಯುಸಾಯಂ—ಈ ಎಂಟು ಆಯಂಗಳುಂ ಮೂಡಲ್ ಮೊದಲಾಗಿ ಸವ್ಯದಿಂದೆ ಎಂಟು ದಿಕ್ಕಿನಲ್ಲಿಯುಮಿರ್ಪುವು (ಶೋಕೋಪ. ೩-೦೯ ಟೀಕೆ).

[ಧೂಮ + ಆಯ$_1$]

ಧೂಮಾವಳಿ (ನಾ).=ಧೂಮಾಳಿ$_1$: "ಧೂಮಾವಳಿ ಧೂಮ್ಯೆ" (ವಸ್ತು.ಕೋ. ೦೦೩-೩೦). [ಧೂಮ + ಆವಳಿ$_1$ (= ಆವಲಿ)]

ಧೂಮಾಳಿ$_1$ (ನಾ). ಹೊಗೆಯ ಸಮೂಹ,–ದಟ್ಟಣೆ : ಆ ಕುಂಕುಮ ವಾರಿಧಾರೆಗಳೆ ಸಜ್ಜ್ವಳಾಳಿ ಧೂಮಳಿ ಷಟ್ಚರಣಂಗಳ್ ನೆಗೆದಾಡುತಿರ್ಪು ವೆನಲಾ ಕಾಮಪ್ರತಾಪಾಗ್ನಿ ಯೆಟ್ಟುರಿವಂತಿರ್ದುದು ನೋಟ್ಪ ಕಾಮುಕ ಜನಕ್ಕಾ ವಾರಿಕೇಳೀಹ್ರದಂ (ನೇಮಿಪು. ೦೩-೩೩). ಢಾಳಿಸುವ ಪರಿಧೌತ ಮೌನ ಕರಾಳ ತೇಜೋಗರ್ಭ ತಪಧೂಮಾಳಿಯಲಿ ಮೇಘಾಳಿ ಮಸಗಿದುದು (ಕುವ್ಮಾಅ. ೩-೦೦). [ಧೂಮ + ಆಳಿ$_4$ (=ಆಲಿ$_4$)]

ಧೂಮಾಳಿ$_2$ (ನಾ). [ಸಂಗೀತ] ಒಂದು ತಾಳದ ಹೆಸರು : ನಮ್ಮ ದೇಶದ ಸಂಗೀತದಲ್ಲಿ ರೂಪಕ (ದಾದರಾ) . . . ತ್ರಿವುಡೆ (ಧಮಾರ), ಧೂಮಾಳಿ, ಏಕ್ಕಾ ಎಂಬ ಹಲವು ತಾಳವದ್ಧತಿಗಳಿರುವುವು (ಬಾಲಶ್ರ. II. ೧೦೪೦).

[?]

ಧೂಮ್ಯ (ನಾ). ಹೊಗೆಯ ಸಮೂಹ,-ಗುಂಪು : ಬಳಿಗುಂ ತಕ್ಷಣ ಶಾಂತ ಸಾಂಧ್ಯರುಚಿವಹ್ನಿಜ್ವಾಲಧೂಮ್ಯಂ (ಜಗವಿ. ೬-೧೦). 'ಧೂಮ್ಯೆ' ಪರಾ.

[ಸಂ. ಧೂಮ್ಯಾ]

ಧೂಮ್ಯಾಟ (ನಾ). ೧. (ನೀರಿನೊಳಗಾಡುವ) ಒಂದು ಬಗೆಯ ಪಕ್ಷಿ : ಕುಕ್ಕುಟಹಕ್ಕಿ : "ಕಳಿಂಗಃ, ಭೃಂಗಃ, ಧೂಮ್ಯಾಟಃ–೩ ಕುಕ್ಕೂಟಿಯೆಂಬ ಹಕ್ಕಿಯ ಹೆಸರುಗಳು, ಆಂಧ್ರದಲ್ಲಿ ಕೂಕಲಮೂಗ ಪಕ್ಷಿ" (ಸಿದ್ಧಾಂತಿ. ೦೩೮). ೨. ಚಾತಕ ಪಕ್ಷಿ : "ಭೃಂಗಃ, ಕಳಿಂಗಃ, ಧೂಮ್ಯಾಟಃ, ಸಾರಂಗಃ, ಚಾತಕಃ–ಈ ೫ ಚಾದಗೆ" (ಹಲಾಯು. ೪೨-೯೩). [ಸಂ.]

ಧೂಮ್ಯೆ (ನಾ). = ಧೂಮ್ಯ : "ಧೂಮಾವಳಿ ಧೂಮ್ಯೆ" (ವಸ್ತು.ಕೋ. ೧೦೩-೩೦) ; "ಧೂಮ್ಯಾ, ಧೂಮಸಂಹತಿಃ– ಈ ೨ ಪೊಗೆ" (ಹಲಾಯು. ೧೨-೬೬). [ಸಂ. ಧೂಮ್ಯಾ]

ಧೂಮ್ರ (ಗು). ೧. ಹೊಗೆಯ ಬಣ್ಣದ ; ಬೂದಂಬಣ್ಣದ : ಅರಸಿಯರ ಕಣ್ಣನೀರ್ಗಳ ಬೆರಸಿದ ಕಾಡಿಗೆಯ ಕರ್ವು ಪೋಲ್ತತ್ತು ಕುಚಾಂತರದೊಳ್ ಬೀಟುತ್ತುಂ ತತ್ಪರಿತಾಪಜ್ವಲನಧೂಮ್ರಧೂಮಚ್ಛವಿಯಂ ಅಜಿಪು. ೦೦-೪೪). ೨. ಮಂಕಾದ ; ಮಾಸಲುಬಣ್ಣದ. (ನಾ). ೫. ಬೂದಂಬಣ್ಣ ; ಹೊಗೆಯಂಬಣ್ಣ : "ಧೂಮ್ರ ಧೂಸರ ನಾಮಂ" (ವಸ್ತು.ಕೋ. ೦೦೯-೬೪) ; ವೀರಂ ಗೌರಂ ರೌದ್ರಮಹಾರಕ್ತಂ . . . ಕಾರುಣ್ಯಂ ಧೂಮ್ರಂ (ಕಾವ್ಮಾಪ. ೮೬೬). ೪. ಅಚ್ಚಕೆಂಪು ; ಕಡುಗೆಂಪು. ೫. ಕಪ್ಪು ಮತ್ತು ಕೆಂಪುಬಣ್ಣಗಳ ವಿಂಶ್ರಣ ; ಊದಾಬಣ್ಣ : "ಧೂಮ್ರಃ, ಧೂಮಳಃ–ಈ ೨ ಕೆಂಪು ಹಸುರುಮಪ್ಪುದು" (ಹಲಾಯು. ೧೨೨-೫೨) ; "ಧೂಮ್ರಃ, ಧೂಮಲಃ, ಕೃಷ್ಣಲೋಹಿತಃ–೩ ಕಪ್ಪುಕೆಂಪು ಬೆರತ ಬಣ್ಣ. ಅಂದರೆ ಕಾರ್ಮುಗಿಲು ಕೆಂಬಾರದ ಬಣ್ಣ" (ಸಿದ್ಧಾಂತಿ. ೪೮). ೬. ಒಂದು ಬಗೆಯ ಧೂಪ,–ಸುಗಂಧದ್ರವ್ಯ ; ಲೋಬಾನ : ಅನವರತ ಸಂಧುಕ್ಷಮಾಣ

ಕಾಲಾಗುರುಧೂಪಧೂಮ್ರಸುರಭಿಪರಿಮಳಮಿಳದಳಿತಾಳಾಕುಳೀಕೃತ ಕನ್ಯಾ ಪರಿವಾರ (ಶಾಂತಿಪು. ೩-೧೧೩ ವ). ೭. ಪಾಪ; ದುಷ್ಟತನ; ಕೆಟ್ಟತನ. ೮. ಹೊಗೆ; ಧೂಮ. 'ಧೂಪಧೂಮ್ರ', 'ಧೂಮ್ರವರ್ಣ' ಪರಾ. [ಸಂ.]

ಧೂಮ್ರಕ (ನಾ). ಬೂದುಬಣ್ಣದ ಪ್ರಾಣಿ: ಒಂಟಿ; ಉಷ್ಟ್ರ. [ಸಂ.]

ಧೂಮ್ರಚ್ಛದ (ನಾ). ಹೊಗೆಯ ಬಣ್ಣದ ಪಕ್ಕಗಳುಳ್ಳ ಒಂದು ಬಗೆಯ ಪಕ್ಷಿ: ಕೆಂಬೂತ: "ಧೂಮ್ರಚ್ಛದಂ ಚಿಂಬೋತಮೆಂದೆನಿಕ್ಕುಂ" (ಮಂಗರಾ. ೩೨-೧೧). [ಸಂ.]

ಧೂಮ್ರಪತ್ರ (ನಾ). ಹೊಗೆಸೊಪ್ಪು: ತಂಬಾಕು. 'ಧೂಮ್ರಪತ್ರೆ' ಪರಾ. [ಧೂಮ್ರ + ಪತ್ರ./ ತೆಲು. ಧೂಮ್ರಪತ್ರ]

ಧೂಮ್ರಪತ್ರೆ (ನಾ). ಬೂದಿಯ ಬಣ್ಣ ಅಥವಾ ಅಚ್ಚಕೆಂಪು ಬಣ್ಣದ ಎಲೆಗಳನ್ನುಳ್ಳ ಒಂದು ಬಗೆಯ ಸಸ್ಯ: ಹೊಗೆಸೊಪ್ಪು: "ಗುಂಡ್ರುಣೇ – ಧೂ ಮ್ರ ಪ ತ್ರೆ" (ಓಷಧಿ. ೩೦); "ಗೃಧ್ರಪತ್ರ – ಧೂ ಮ್ರ ಪ ತ್ರೆ" (ಓಷಧಿ· ೩೦). [ಧೂಮ್ರ + ಪತ್ರೆ]

ಧೂಮ್ರಪಾನ (ನಾ). ಹೊಗೆಬತ್ತಿಯನ್ನು ಸೇದುವುದು: ಧೂಮ್ರಪಾನದ ಆತುರವು ಹೆಚ್ಚಾಯಿತು (ಕುಟಿಮಾ. ೪೬). 'ಧೂಮಪಾನ' ಪರಾ.

[ಧೂಮ್ರ + ಪಾನ]

ಧೂಮ್ರಪಾನಿ (ನಾ). (ತಪಸ್ಸಿನ ಕಾಲದಲ್ಲಿ) ಹೊಗೆಯನ್ನು ಮಾತ್ರ ಸೇವಿಸುವವನು: ಧೂಮ್ರಪಾನಿಗಳೂ, ಪಂಚಾಗ್ನಿ ಸಾಧನಿಗಳೂ ಆದ ನೈಷ್ಠಿಕ ತಾಪಸಿಗಳಿಗೂ ಸಹ ಕಾಮತಾಪವನ್ನುಂಟು ಮಾಡತಕ್ಕ ವಸಂತರಾಜನ ... ವಿರಾಜಮಾನನಾಗಿದ್ದಾನೆ (ಮಂಜುಳ. ೧೧).

[ಸಂ. ಧೂಮ್ರಪಾನಿನ್]

ಧೂಮ್ರವಕ್ತ್ರ (ನಾ). (ಕೋಪದಿಂದ) ಕೆಂಪಡರಿದ ಮುಖ: ಕೆಂಪೇರಿದ ಮುಖ: ಧೂಮ್ರವಕ್ತ್ರದ ಸ್ವೇದಬಿಂದುಗಳ ಜಡಿವ ರೋಷದ ಭರದಲಿ ... ಕಡಿತಡಿದು ಬಿಸುಟನು ಗುರುಸುತನು ಸಾರಥಿಯ ರಥಹಯವ (ಕುಮ್ಮಾಕ. ೧೪-೩೦). [ಧೂಮ್ರ + ವಕ್ತ್ರ]

ಧೂಮ್ರವರ್ಣ (ನಾ). ೧. ಹೊಗೆಯ ಬಣ್ಣ; ಬೂದುಬಣ್ಣ: ಚೇಳು ಕಚ್ಚಿದರೆ ... ಕಚ್ಚಿದ ಗಾಯ ಅತಿವೇದನೆಯುಳ್ಳದಾಗಿಹುದು. ಧೂಮ್ರವರ್ಣ ಉಳ್ಳದಾಗಿಹುದು (ವೈದ್ಯಸಾ. II, ೧೯೦). ೨. ಆಚ್ಚಕೆಂಪು; ಕಡುಗೆಂಪು. ೩. ಧೂಪ; ಸುಗಂಧದ್ರವ್ಯ. ೪. ಒಂದು ಬಗೆಯ ಸಸ್ಯ.

[ಧೂಮ್ರ + ವರ್ಣ]

ಧೂಮ್ರಾಂಬರ (ನಾ). ಹೊಗೆಯ ಬಣ್ಣದ ಬಟ್ಟೆ: ಬೂದು ವರ್ಣದ ವಸ್ತ್ರ: ಮೆಲ್ಲನೆ ಮಲಗಿಸುತ ಏವಾಚೂರ್ಣಮಂ ಎದೆಯೊಳಂ ಪರಪಿ ಧೂಮ್ರಾಂಬರವ ಒದ್ದೆಗೈದದನು ಬಾಸಣಿಸಿ ... ಬಹು ಶೃತ್ಕೋಪ ಚಾರಮಂಗೈವುತಿರೆ (ನವವಿ೦. ೬-೫೭); ಆಳಿಯರು ಧೂಮ್ರಾಂಬರವ ಪೊದಿಸಿ ... ಪೊರವಳೆಯೊಳಗೆಯತಿ ಜಾಗ್ರದಿಂ ಕಾಯ್ದಿರಲು (ನವವಿ೦. ೩೬-೩೮). [ಧೂಮ್ರ + ಅಂಬರ]

ಧೂಮ್ರಾಂಶ (ನಾ). ಹೊಗೆಯ ಕಣ.–ಅಂಶ: ವಿಜ್ಞಾನಿಗಳು ಈ ಮೋಡಗಳು ಧೂಮ್ರಾಂಶಗಳಿಂದ ಆಗಿರಬೇಕೆಂದು ನಂಬಿದ್ದಾರೆ (ಆಕಾಶ. ೧೬).

[ಧೂಮ್ರ + ಅಂಶ]

ಧೂಮ್ರಾಕ್ಷ (ಗು). ೧. ಬೂದುಬಣ್ಣದ ಕಣ್ಣುಳ್ಳ. (ನಾ). ೨. ರಾವಣನ ಮಂತ್ರಿಯಾಗಿದ್ದ ಒಬ್ಬ ರಾಕ್ಷಸನ ಹೆಸರು: ಆತು ನಿಂದನು ಕಪಿಬಲಕೆ ಬಳಿಕಾ ತಮಿಸ್ರಾಚರ ವನೇಚರ ದೂತಧೂಳೀಪಟಲಪಟುಧೂಮ್ರಾಕ್ಷ ಗರ್ಜಿಸುತ (ತೊರಣಾ. ೬-೧೭-೦೪). [ಸಂ. (ಧೂಮ್ರ + ಅಕ್ಷಿ +–)]

ಧೂಮ್ರಾರ್ಚಿ (ನಾ). ಹೊಗೆಯಿಂದ ಕೂಡಿದ ಬೆಂಕಿಯ ಜ್ವಾಲೆ: ಮೇಲೆ ಧೂಮ್ರಾರ್ಚಿಯಾ ನೀಲರತ್ನಂ (ವೀಶೈಪು.೩-೧೧-೩೧). [ಧೂಮ್ರ + ಅರ್ಚಿ]

ಧೂಮ್ರಾವರ್ತ (ನಾ). = ಧೂಮ್ರಾವರ್ತನ: ಪುಲಕಂ ಪತ್ರಕಂ ಬಿಂದುಕಂ ಧೂಮ್ರಾವರ್ತಂ ಉದ್ವರ್ತನಂ ಚಿತ್ರವರ್ತಮೆಂಬಾಱುಮಣ್ಮಗಳೊಳಂ ... ಮಯ ಮಾಂಡವ್ಯ ವಿಶ್ವಕರ್ಮರೆಂಬ ಮರ್ತ್ಯಚಿತ್ರಕರ್ ಬರೆದ ಚಿತ್ರಂಗಳೊಳಂ (ಕಂದ್ರಪು. ೧೫-೭೦ ವ). [ಸಂ.]

ಧೂಮ್ರಾವರ್ತನ (ನಾ). ಚಿತ್ರಗಳಿಗೆ ಬಣ್ಣ ಹಾಕುವುದರಲ್ಲಿ ಒಂದು ರೀತಿ: ಅನಲಕಂ ಪತ್ರಕಂ ಬಿಂದುಕಂ ಧೂಮ್ರಾವರ್ತನ[ಪಾಠಾಂ. ಕ] ಮುದ್ವರ್ತನಂ ಚಿತ್ರಪ್ರವರ್ತನಮೆಂಬಾಱುಂ ತೞದಣ್ಮೆಯುಮಂ ಚಿತ್ರ ಚಿತ್ರಾರ್ಧ ಚಿತ್ರಾಭಾಸಮೇಬ ಮೂಱುಂ ಪ್ರಕಾರಮುಮಂ (ಮಲ್ಲಿಪು. ೩-೪೨). [ಸಂ.]

ಧೂಯ್ಯ (ನಾ). (?): ಆ ಗ್ರಾಮಕ್ಕೆ ಸಲುವ ಗದ್ದೆ ಬೆದ್ದಲು ತೋಟ ತುಡಕೆ ಅಡುಮನೆ ಕಳ ಕೊಟ್ಟಾರ ಸುಂಕ × × × ಸುವರ್ನಾದಾಯ ಅಣೆ ಅಱು ಕಟ್ಟು ಂಗ್ಗ ಮನೆವಣಗೂಡೆ ಧೂಯ್ಯ ಮೊದಲಾದ ಆ ಸಕಲ ಸ್ವಾಮ್ಯ ಸಹವಾದ ಯಿ ಗ್ರಾಮದ ಚತುಸೀಮೆಯೊಳಗೆ (ಎಕ. III, ತಿರುಮ. ೪೯-೦೩ ; 1520). [?]

ಧೂರ್ಜಟಿ (ನಾ). ಶಿವ; ಈಶ್ವರ: "ಭವನೀಶಂ ಶಂಭು ರುದ್ರಂ ... ಮೃಡಂ ಧೂರ್ಜಟಿ ಫಣಿಟಕಂ ವಾಮದೇವಂ ವೃಷಾಂಕಂ" (ಪಸ್ತುಕೋ. ೩-೦೩) : ನುಡಿಯುದೆ ಪೋಗಲೀಯೆನೆಲೆ ಪೋದೊಡೆ ಧೂರ್ಜಟಿಯಾಣೆ ಮಿಜಿ ಪೋದೊಡೆ ಕಲಿಭೀಮನಾಣೆಯೆನೆ (ಗದಾಯು. ೪-೪೫) ; ಧೂರ್ಜಟಿಯವಧಾರಿದೆನುತರ್ಜುನವರದಂಗೆ ಗುಗ್ಗಳಪನರ್ಪಿಸುತಂ (ಉದ್ಭಟ. ೧೦-೩೦) ; ತಾರಕಾಸುರಗೆ . . . ವರಧೂರ್ಜಟಿಯಿಂದಲುದಿಸಿದ ನಂದನ ನಿಂದ ಕೇಡಹುದು (ವೀಆಹತ. ೩-೦೬) ; ಧೂರ್ಜಟಿ ಜಟಿಲಜಟಾಮಾಲಿ ಕಾಲಾಂತಂ ಶಂಕರಂ (ರಾಜಶೇ. ೦೪-೦೫೩) ; ಆದರ್ಕಾ ಧೂರ್ಜಟಿ . . . ದೂಱಿದಿರೆನ್ನನೆಂಬುದುಂ (ರಾಮಾಶ್ವ. ೦೫೬-೦೯) ; ಧೂರ್ಜಟಿಯೆ ನರರೂಪಮಂ ತಾಳ್ದಿದನೆನಲ್ಕೆ ಬ್ರಹ್ಮಸುಲಗ್ನಮನನೊರ್ವ ತೇಜಸ್ವಿಋಷಿಧ್ಯಾನಸ್ಥನಾಗಿರ್ದಂ (ಶ್ರೀರಾಮಾ. ೦೫೩-೩೦೩). ೨. [ಛಂದ] ಒಂದು ಗುರು, ಎರಡು ಲಘುಗಳು ಬರುವ ನಾಲ್ಕು ಮಾತ್ರೆಗಳ ಒಂದು ಗಣ: ಗಿರಿಶಂ ಧೂರ್ಜಟಿ ಶರ್ವಂ ಪುರಾರಿ ಪುರರಿಪುವೆನಿಪ್ಪುವಿಂತಯ್ದು ಬರೆ ಶಶಿ ಪುರ ವಿಷಯಾದ್ರಿಯೊಳಿರದಿರ್ಕೆ ಪುರಾರಿಯೆಂಬ ಗಣಂ (ಛಂದೋಂಬು. ೪-೩೨೮). [ಸಂ.]

ಧೂರ್ತ (ಗು). ೧. ಮೋಸದ; ವಂಚನೆಯ; ಅಪ್ರಾಮಾಣಿಕವಾದ: ಧೂರ್ತಜನಂ ನಿಜವ್ಯಸನಮಂ ಪರಿತರ್ಪಿಸಲೆಂದಧರ್ಮದೊಳ್ ವರ್ತಿಸುವಂತು ಯೋಚಿಸುಗುಮುಳ್ಳರಂ (ಪಾರ್ಶ್ವಪು. ೩-೬೪). ೨. ವಿಷಯಲಂಪಟನಾದ; ವಿಟವೃತ್ತಿಯುಳ್ಳ; ಕಾಮುಕನಾದ; ಪಟಿಂಗತನದ. (ನಾ). ೩. ದುರುಳ; ದುಷ್ಟ; ಕೆಡುಕುಮಾಡುವವನು: "ದುರುಳನೆನಲ್ ಧೂರ್ತನಾಮಂ" (ಚತುನಿ. ೮೩) ; ಬನಮೆನ್ನಾಳ್ವ ಬನಂ ನಿಶಾಬಲಮಿದಿಂ ತಸ್ಮದ್ಬಲಂ ಧೂರ್ತನೈ ನಿನಗೀ ಪೊಟ್ಟಜಿಂಳಿತ್ತ ಬರ್ಪದಟನಿಂತಾರಿತ್ತ ರೆಂದಾಂತೊಡೆ (ಪಂಪಭಾ. ೩-೩೪) ; ಆ ಪುರದೊಳ್ ದ್ಯೂತವ್ಯಸನ ವಿಳಭೂತಿಯಾಷಾಢಭೂತಿಯೆಂಬ ಧೂರ್ತನೊರ್ವನಿರ್ಪಂ (ಪಂಚತಂ. ೭೦-೯) ; ಕ್ರೂರರತ್ಯಧಮರುದ್ರೇಕಿಗಳು ದುರ್ಜನಾಕಾರಿಗಳು ಧೂರ್ತ [ಪಾಠಾಂ. ಕಾರ ದುರ್ನೀತ] ರೊಳಗಾಗಿ ಶರಣೆನಲು ನಿಜವೈರಮಂ ಬಿಡುವರು (ಹಡಕಾ. ೯-೩೦) ; ನಿಮ್ಮ ಕೆಡಿಸುವರಲ್ಲ ಧೂರ್ತರು ತಮ್ಮ ಮತದಲಿ ತಾವೆ ಕೆಟ್ಟರು (ಕುಮ್ಮಾವಿ. ೩-೦೨೮) ; ಧೂರ್ತರೀ ತೆರದಿನಾರ್ಯರಂ ಕೊಲುತಿರ್ದರ್ (ಶ್ರೀರಾಮಾ. ೦೯೦-೪೦೨). ೪. ಮೋಸಗಾರ; ವಂಚಕ; ಮಾಯಾವಿ; ಕಪಟಿ: "ಕಿತವಂ ಮಾಯಾವಿ ಧೂರ್ತಂ" (ವಸ್ತುಕೋ. ೯೯-೬) ; "ದಾಂಡಾ ಜನಿಕಃ, ಕುಹಕಃ . . . ಧೂರ್ತಃ . . . ಮಾಯಾ – ಈ ೧೧ ಮಾಯಾವಿ" (ಹಲಾಯು. ೫೮-೦೯೪) ; ವರವಿನೀತರು ಕೆಲರು ಕೆಲಬರು ಧೂರ್ತರಾಗಿಹರು

(ಕುಮ್ಯಾದ್ರೋ. ೧೩-೯); ನಿಜಶ್ರೇಯಪ್ರಾಪ್ತಿಗೆ ಶುಂಠತನದಲಿ ಮೆಱೆದ ಕರಣಿಕ ಧೂರ್ತರನು ಕಂಡ (ಕೌಶಿಂಗ. ೧೦-೩೦). ೬. ವಿಟ; ಕಾಮುಕ; ಸ್ತ್ರೀಲೋಲ: "ಷಿಡ್ಗ – ಧೂರ್ತ" (ಓಷಧಿ. ೧೭೩); ಧೂರ್ತಾ ತುಟುಂಕೆ ಕತ್ತುರಿನೀರ್ತುಱುಗಿದ ಮೊಗದಿನಲೆದುವಬಲೆಯ ಮೊಲೆಗಳ್ (ಲೀಲಾವ. ೧೩-೧೩೪). ೭. ಉಮ್ಮತ್ತಿಗಿಡ; ದತ್ತೂರಿ: "ಉನ್ಮತ್ತಃ, ಕಿತವಃ, ಧೂರ್ತಃ, ದುತ್ತೂರಃ, ಕನಕಾಹ್ವಯಃ, ಮಾತುಲಃ, ಮದನಃ – ೭ ಉಮ್ಮತ್ತೀಗಿಡದ ಹೆಸರುಗಳು, ಉಮ್ಮತ್ತಗಿಡ" (ಸಿದ್ಧಾಂತಿ. ೧೩೦). ೮. ಜೂಜುಕೋರ. ೯. ತುಂಟ; ಕಿಡಿಗೇಡಿ: ಮಗನು ಕನಲದೆ ಮಾಣನೆನಗಿನ್ನೆಗವೆನುತ್ತೈತಂದು ಕಂಡಳು ಮಗನ ಕೆಲಸವನೆತ್ತ ಹೋದನೊ ಧೂರ್ತನೆಂದೆನುತ (ನಿಭಾಗ. ೧೦-೮-೨೯). [ಸಂ.]

ಧೂರ್ತಕ (ನಾ). ೧. ಮೋಸಗಾರ; ಕಪಟಿ: ವರಧೂರ್ತಕನೊಂದೆಸಗಲ್ ಪುರಕೆಲ್ಲಾ ಕೇಡು ಬರ್ಪುದಿದು ಸಿದ್ಧಾಂತಂ (ಮಲ್ಲಕಾ. ೧-೨೫). ೨. ನರಿ. [ಸಂ.]

ಧೂರ್ತಕಾಮಿ (ನಾ). ವಂಚಕನಾದ ಕಾಮುಕ; ಶಠ: ಧೂರ್ತಕಾಮಿಯ ಪೋಲು ಕಂಡ ಶ್ರೀಶಂಭುವಿನ ಬಾಣಾಗ್ನಿಯು ನಮ್ಮ ಪಾಪವನ್ನೆಲ್ಲ ಸುಟ್ಟು ರುಹಲಿ (ಧ್ವನ್ಯಾಲೋ. ೬೪). [ಧೂರ್ತ + ಕಾಮಿ$_1$]

ಧೂರ್ತಜನ (ನಾ). ಕೆಟ್ಟ ಜನ; ದುರುಳ ಮಂದಿ; ಕಪಟಿಗಳಾದ ಜನ: ಜಗತ್ಪೂತಮೆನಿಸಿದ ಮಹಾಪೂತಜಿನಾಲಯಕ್ಕೆ ಬಂದನೇಕ ಧೂರ್ತಜನ ಮನಸಮ್ಮೋಹನತಮಃಪಟಮಂ ಚಿತ್ರಪಟಮನಾ ಚೈತ್ಯಾಲಯದ ಕೆಲದ ಪಟ್ಟಸಾಲೆಯ ಮುಂತೆ ನೇಱಿ (ಆದಿಪು. ೩-೪೫ ವ); ಸೇವಕಂ ಮೊದಲೊಳ ರಸಂಗಂ ತದನಂತರಂ ಪ್ರಧಾನರ್ಗಂ . . . ಸಲುಗೆಯನುಳ್ಳವರ್ಗಂ ಧೂರ್ತ ಜನಕ್ಕಂ ಭೀತನಾಗಿರಲ್ವೇಟ್ಟುಂ (ಪಂಚತಂ. ೫೨-೧೮); ಕೀರ್ತಿಯಹುದರಿ ಭಟನ ಸಮರದೊಳಾರ್ತರಲಿ ಕಾದಿದರೆ ಸೇರದು ಧೂರ್ತಜನ ನಗದಿಹುದೆ ರಾವಣನಧಿಕಬಲನೆಂದು (ತೊರರಾ. ೬-೪೫-೩೫). [ಧೂರ್ತ + ಜನ]

ಧೂರ್ತತನ (ನಾ). ೧. ಮೋಸಗಾರಿಕೆ; ಕಪಟತನ; ವಂಚಕತ್ವ. ಆ ಪಾಶಕಂ ನರಕಗತಿಗೆಯ್ದುವ ಧೂರ್ತತನದಿಂ ಕುಟಿಲಮಾರ್ಗಾಂತರ್ಗತನಾಗಿ ಪೋಗೆ (ಪಂಚತಂ. ೭೦-೧೯); ಧೂರ್ತತನದಿಂ ಕಾದಿ ಕೂಡುವೆನಾರ್ತು ಪರಿಯಂತರದಲಾ ತ್ರೈಮೂರ್ತಿಯನು ಮೂದಲಿಸಿದಲ್ಲದೆ ಮುಕುತಿ ಯಿಲ್ಲೆಂದ (ಕೌಶರಾ. ೨೩-೧೯); ಇಷ್ಟೆಲ್ಲ ದೊಡ್ಡಮನುಷ್ಯ, ಸಾಧು ಮನುಷ್ಯ ಅಂತಾರಲ್ಲ. ಎಂಥ ಧೂರ್ತತನ ತೋರಿಸಿದರು (ಮೂರುದಾ. ೧೩೪) ೨. ಶಠವೃತ್ತಿ; ವಿಟವೃತ್ತಿ: ನಿನ್ನ ಧೂರ್ತತನವನ್ನರಿತಿರುವುದರಿಂದ ಮತ್ತೆ ತಪ್ಪಿಸಿಕೊಳ್ಳದಂತೆ ಬಾಹುಪಾಶದಲ್ಲಿ ಕಟ್ಟಿಹಾಕುವೆನು (ಧ್ವನ್ಯಾಲೋ. ೬೩ ಅಡಿಟಿ). [ಧೂರ್ತ + – ತನ]

ಧೂರ್ತತ್ವ (ನಾ). ಮೋಸ; ಕುತಂತ್ರ; ಕಪಟ; ವಂಚನೆ. [ಸಂ.]

ಧೂರ್ತಭಂಜನ (ನಾ). ದುರುಳರನ್ನು ನಾಶಮಾಡುವವನು; ದುಷ್ಟರನ್ನು ಸಂಹರಿಸುವವನು; ಪರಮಾತ್ಮ: ಧೂರ್ತಭಂಜನ [ಪಾಠಾಂ. ಪಾರ್ಥಸಾರಥಿ] ಕಾಗಿನೆಲೆಯಾದಿಕೇಶವನ ಸಂಕೀರ್ತನೆಯ ಮಾಡಿ ಸುಖಿಯಾಗೊ ಮನ (ಕನಕ. ೧೦೯-೩). [ಧೂರ್ತ + ಭಂಜನ]

ಧೂರ್ತಲಕ್ಷಣ (ನಾ). ಮೋಸಗಾರನ ಲಕ್ಷಣ; ವಂಚಕನ ಲಕ್ಷಣ: ನಾನು ಮಾಡಿದ ಆತ್ಮಸಮರ್ಪಣವು ಅತಿವಿನಯಗೂಡಿದ ಧೂರ್ತಲಕ್ಷಣವಾಯಿತು (ವಚಕಾ. ೮೫). P ಧೂರ್ತಲಕ್ಷಣಗಳು ಆರು ವಿಧ: "ಅತ್ಯಾಚಾರ, ಅನಾಚಾರ, ಅತಿನಿಂದೆ, ಅತಿಸ್ತುತಿ, ಅತಿಶೌಚ, ಅಶೌಚ" (ಶ್ರೀವತ್ಸ. ೨೨೬). [ಧೂರ್ತ + ಲಕ್ಷಣ]

ಧೂರ್ತವಿದ್ಯೆ (ನಾ). ಮೋಸಗಾರಿಕೆ; ಕಪಟತನ: ಒಲಿದುದನು ಬೇಡೆನೆ ದುಷ್ಟಕೌರವ ನಮ್ಮ ನಟ್ಟಿದ ಧೂರ್ತವಿದ್ಯೆಯಲಿ (ಕುಮ್ಯಾಅ. ೦೬-೪೯). [ಧೂರ್ತ + ವಿದ್ಯೆ]

ಧೂರ್ತಶಿಖಾಮಣಿ (ನಾ). ದೊಡ್ಡ ಮೋಸಗಾರ; ಮಹಾವಂಚಕ: ಆ ಧೂರ್ತಶಿಖಾಮಣಿ ನಾರಾಯಣಭಟ್ಟಂಗೆ ನಂಬುಗೆಯನೆಂತು ಮಾಬ್ಪೆಂ (ಪಂಚತಂ. ೨೨೯-೧೯). [ಧೂರ್ತ + ಶಿಖಾಮಣಿ]

ಧೂರ್ತೆ (ನಾ). ೧. ಮೋಸಗಾತಿ; ವಂಚಕಿ: ರಾಕ್ಷಸಾಂಶಕೆಯೆಂದು ನೀನಱಿ ಧೂರ್ತೆಯಂ (ಮುವತಿ. ೩-೪); ವನಜಾಕ್ಷಿ ದೋಷಿಯಲ್ಲದ ನಿನಗೆ ಕರಂ ಪೊಲ್ಲಗೆಯ್ದೆನೆಂದಿರದಾತ್ಮಾಂಗನೆಯ ಪದಕ್ಕೆಱಗಿದನೆನ್ನನುಮಱಿಗುಮೆ ಧೂರ್ತೆಯಪ್ಪ ಕಾಂತೆಯ ಮನಮಂ (ಪಂಚತಂ. ೭೮-೨); ಕಪಟಿಯರು ಧೂರ್ತೆಯರು ಹಾಸ್ಯದ ಕುಪರಿಯರು (ಬಸಪು. ೪೦-೫೪). ೨. ಕಾಮುಕಿಯಾದವಳು. [ಸಂ. ಧೂರ್ತಾ]

ಧೂರ್ತೋಕ್ತಿ (ನಾ). ಮೋಸದ ಮಾತು; ಕಪಟದ ನುಡಿ: ಬೇಗಂ ಕ್ಷುರಭಾಂಡಮನೀಯೆಂದು ಬೇಡಿದೊಡವಳ್ ಧೂರ್ತೋಕ್ತಿಯಿಂ ತನ್ನ ದೋಷಮಂ ಪರಿಹರಿಸಲಿದೊಂದು ಉಪಾಯಮಾದುದೆಂದು ಚಾಳಂ ಕಲ್ಲ ಮೇಲೀಡಾಡಿದೊಡೆ (ಪಂಚತಂ. ೭೮-೧೮). [ಧೂರ್ತ + ಉಕ್ತಿ]

ಧೂರ್ವಹ (ಗು). ೧. ಭಾರವನ್ನು ಹೊರುವ. (ನಾ). ೨ ಭಾರಹೊರುವ ಎತ್ತು ಮುಂತಾದ ಪ್ರಾಣಿ: "ಧೂರ್ವಹಃ, ಧುರ್ಯಃ, ಧೌರೇಯಃ, ಧುರೀಣಃ, ಧುರಂಧರಃ–೫ ಬಂಡಿ, ಗೋಣಿ, ನೇಗಲು ಮುಂತಾದ ಭಾರವನ್ನು ಹೊತ್ತು ಶಳೆಯುವ ಎತ್ತು ಮುಂತಾದ ದನಗಳ ಹೆಸರುಗಳು" (ಸಿದ್ಧಾಂತಿ. ೨೯೩). ೩. ಕಾರ್ಯವನ್ನು ನಿರ್ವಹಿಸುವವನು. [ಸಂ.]

ಧೂಲ 'ದೂಲ' ನೋ.

ಧೂಲಿ, ಧೂಳಿ (ನಾ). ೧. ವಂಣ್ಣಿನ ಪುಡಿ,–ರಜ,–ರೇಣು; ದೂಳು. ೨. ಪುಡಿ; ಚೂರ್ಣ: "ಚೂರ್ಣಂ ಧೂಲಿ[ಪಾಠಾಂ. ೪] ಪಾಂಸು ರೇಣು ಕ್ಷೋದವಾ ರಜಂ ಸಣ್ಣಹುಡಿಯೆಂದೆನಿಕ್ಕುಂ" (ಮಂಗರಾ. ೮೪-೨೩). ೩. ನಿರ್ದಿಷ್ಟವಾದ ಒಂದು ಸಂಖ್ಯೆ: (ಕಿ). ಧೂಳಿ: ೧. "ಪಾಂಸುಃ, ಕ್ಷೋದಃ, ರೇಣುಃ, ಚೂರ್ಣಂ, ಧೂಳೀ, ರಜಃ–೫೬ ಧೂಳಿ" (ಹಲಾಯು. ೭೩-೨೮೯); ನೆಲನುಮಾಕಾಶಮೊಂದೊಂದಱೊಳ್ ತಾಗಿದ ಬೇಗದೊಳಂಬರಂಬರಂ ನೆಗೆದ ಧೂಳಿಯೊಳ್ ದೆಸೆಯಱಿಯದೆಯುಂ (ಪಂಪಭಾ. ೧೦-೭೦ ವ); ಕೆಳವಳಿಸುವ ಕಪಿಯ ಭೂತ ಹೊಡೆದು ಚೇಳೂಱ ಘಾಳಿಯೊಳು ನಿಂದು ಧೂಳಿಯ ಹೊಯ್ವುತ್ತಿದೆ (ಆದವ. ೧೫-೩೨); ಸುರತರುಣೀ ಚಳಾಳಕಮೃಗೋದ್ಭವರೇಣು . . . ಧೂಪದೊಳ್ ಪೊರೆದಿರೆ ಧೂಳಿಯಂತೆ ತರಲಾರ್ತುದಮರ್ತ್ಯರ ಚಿತ್ತವೃತ್ತಿಗಂಬರತಲಯಾನಮಲ್ಲದವನೀತಲಯಾನಮಿದೆಂಬ ಶಂಕೆಯಂ (ಅನಂಪು. ೫-೪೨); ತರುಣಿಗೆ ಅರಿವಿಧುಂತುದನಾಯ್ತು ರಥಪದತಳಿತ ಧೂಳಿಯಲಿ (ಕುಮ್ಯಾದ್ರೋ. ೪-೫೮); ಧೂಳಿ ಧಟ್ಟಿಸಲಟ್ಟಿ ಸುಂಟರುಗಾಳಿ ಬೀಸಿತು (ತೊರರಾ. ೩-೫-೮); ಬಾಲೆಯರ ಸಮ್ಮೇಳವೆಂಬೀ ಧೂಳ ಬಿದ್ದರೆ ಕಾಹುದೇ ಕಣ್ಣಾಲಿ (ನಿಭಾಗ. ೬-೭-೧೧); ಸುಟ್ಟುರೆಗೆ ಧೂಳಿ ತರಗೆಲೆ ತಿರ್ರನೆಯ ಸುತ್ತುವೋಲ್ (ಶ್ರೀರಾಮಾ. ೨೭-೭೧೩). [ಸಂ.]

ಧೂಲಿದೂಸರ (ನಾ). ಧೂಳಿನಿಂದ ತುಂಬಿದುದು; ಧೂಳಿನಿಂದ ಬೂದಂ ಬಣ್ಣವಾದುದು: ಆಗ ಪುಷ್ಪಪರಾಗಗಳ ಲೇಪನದಿಂದ ಅವುಗಳ ದೇಹಗಳು ಧೂಲಿದೂಸರವಾದುತಾಗಿರಲು, ಅವಕ್ಕೆ ಒಂದು ಬಗೆಯ ಶೋಭೆಯುಂಟಾಗಿತ್ತು (ಮಾಧವ. ೪೪). [<ಸಂ. ಧೂಲಿಧೂಸರ]

ಧೂಲಿಶಾಲ, ಧೂಳಿಶಾಳ (ನಾ). = ಧೂಳೀಶಾಲ: ಕೈಳಾಸಾಚಳಮನೇಱಿ ಧೂಲಿ [ಪಾಠಾಂ. ೪೯] ಶಾಲದಿಂ ತಗುಳ್ದು ಪೂರ್ವೋಕ್ತವರ್ಣನೋಪೇತಮಪ್ಪ ವೃಷಭನಾಥನಾಸ್ಥಾನಮಂಟಪಮಂ ನೋಡುತ್ತುಂ (ಆದಿಪು. ೧೩-೮೨ ವ). ಧೂಳಿಶಾಳ: ಅಡಱೊಳ್ ಪರ್ಯಂತದೇಶಂಬಿಡಿದು ಬಳಸಿಯುಂ ಸುತ್ತುಗೊಂಡೆಯ್ದೆ ನೀ[ಳ್ದಿರ್ಪು]ದು ನಾನಾರತ್ನಪಾಂಶು ಪ್ರಕರಪರಿಕರಂ ಧೂಳಿಶಾಳ[ಂ] ವಿಶಾಳಂ (ಪರ್ಧಮಾ. ೧೩-೩೮). [ಸಂ.]

ಧೂಲೀಪಟಲ, ಧೂಳೀಪಟಲ (ನಾ). ಧೂಳಿನ ಆವರಣ, – ತೆರೆ : ಕಿವಿಯುಂ ಮುಟ್ಟಿತ್ತು . . . ಧೂಲೀಪಟಲಪಿಹಿತಕೇತುದ್ವಿಪಾನೀಕ ಘಂಟಾನಿವಹವ್ಯಾಪಾರಂ (ಆದಿಪು. ೧೪-೯೪). **ಧೂಳೀಪಟಲ :** ಪಾದಾಭಿಘಾತವಿಚಲಂ ಮೇದಿನ್ಯುತ್ಥಿತವಿಶಾಲಧೂಳೀಪಟಲಾಚ್ಛಾದಿತ ಗಗನಂ ನಡೆದುದು ಪಾದಾತಂ ಚತುರಶೀತಿಕೋಟಿಪ್ರಮಿತಂ (ಆದಿಪು. ೧೧-೩೩); ಲೋಕೈಕಮಿತ್ರನಿರೆ ಪೆಱರ್ಗೇಕೆಯೊ ಪೃಥುತೇಜಮೆಂದು ಸೈರಿಸದ ವೊಲತ್ಯಾಕೀರ್ಣಂ ಮಸುಳಿಸಿತು ದಿವಾಕರಕಿರಣಮನುದಗ್ರಧೂಳೀಪಟಲಂ (ಪುಷ್ಪಪು. ೫-೪೧); ಪದಘಾತಧೂಳೀಪಟಲ ಪರಿಚುಂಬಿಸಿದುದಂಬರವ (ಕುವ್ಯಾಅ. ೧೯-೪೦). [ಸಂ.]

ಧೂಲೀಪ್ರತಾನ, ಧೂಳೀಪ್ರತಾನ (ನಾ). = ಧೂಲೀಪಟಲ : ಕುಲಿಶನಿಭ ಶಿಲಾಭೇದಿಬಾಣಂಗಳುಂ ಭೇದಿಸವೆಂಬುತಾಯ್ತುತಿಕ್ಷೋಭದಿನುಭಯಬಲ ಕ್ಷೋಭಧೂಲೀ[ಪಾಠಾಂ. ಳೀ]ಪ್ರತಾನಂ (ಆದಿಪು. ೧೪-೯೫). **ಧೂಳೀಪ್ರತಾನ:** ದೊರೆಗೆವಂದುರ್ವಿ ಕೈಮಿಕ್ಕ ಪೆರ್ಚಿಂ ರೋದಸ್ಯಾಭಾಗಮಂ ತೀವಿದುದಖಿಳ ಬಳೋದ್ಧೂತಧೂಳೀಪ್ರತಾನಂ (ವರ್ಧಮಾ. ೮-೪೩). [ಸಂ.]

ಧೂವಳಿಸು (ಕ್ರಿ). (?) : ಹಾವಳಿಸಿ ಧೂವಳಿಸಿ ಕಾವಳಿಸಿದಹಿತರೊಳಗಾವರಿಸಿ (ಜಿನಮು. ೨೦-೩೦). 'ಧೂಪಳಿಸು' ಪರಾ. [?]

ಧೂಸರ (ಗು). ೧. ಬೂದಿಬಣ್ಣದ ; ಧೂಳಿನ ಬಣ್ಣದ. ೨. ಬಿಳಿ ಹಾಗು ಹಳದಿ ಬೆರೆತ ಬಣ್ಣದ : ವಿಮಲವಕ್ಷಸ್ಥಲನುಂ ದೀರ್ಘಾಯುತಬಾಹು ಯುಗಳನುಂ ಪರ್ಯುಷಿತಚುದನಾಂಗರಾಗಧೂಸರೋರುದಂಡನುಂ (ಕಾದಂಪೂ. ೯೮೬). (ನಾ). ೩. ಬೂದುಬಣ್ಣ : "ಧೂಮ್ರ ಧೂಸರ ನಾಮಂ" (ವಸ್ತುಕೋ. ೧೦೮-೬೪) ; ಉದಕಂ . . . ಧೂಸರಂ ಪೊನ್ನ ಬಣ್ಣದ ಮಣ್ಣೊಳ್ ಪರಲಾಗಿ ಕೆಂಪೆಸೆವ ಮಣ್ಣೊಳ್ ಕೈಪೆಯಾಗಿರ್ಕುಂ (ಲೋಕೋಪ. ೫-೮) ; ಆ ಸೇನಾರಜದಿಂ ಪರಿಧೂಸರಮಾದುರುನಿಜಾಂಗಮಂ ತೊಳೆಯಲ್ಕೆಂದು (ರಾಜಶೇ. ೬-೨೭). [ಸಂ.]

ಧೂಸರಿತ (ಗು). ೧. ಬೂದುಬಣ್ಣವಾದ ; ಬೂದುಬಣ್ಣದಿಂದ ಕೂಡಿದ : ನವಧೂಪಧೂಮಧೂಸರಿತ ನಭೋವಿವರಂ (ಆದಿಪು. ೧೦-೨೯) ; ತತ್ಪ್ರಮಾಣಾವಿರಳಿಸಮುಚ್ಚಳದಗುರುಧೂಪಧೂಮಧೂಸರಿತಸುರಸರಣಿ ಮಣಿಮಯಧೂಪಘಟಸಮೇತಮುಂ ಅಪ್ಪ ಜಾತರೂಪಮಯ ವಿಶಾಳಶಾಳಂ ಬಳಸೆ ವಿಳಸಿತಮಾದ ಸಮುದ್ಯದುದ್ಯಾನಭೂಮಿಯಲ್ಲಿ (ವರ್ಧಪು. ೧೫-೯೬ ವ). ೨. ಮಲಿನವಾದ ; ಮಾಸಲಾದ. (ನಾ). ೩. ಮಲಿನವಾದುದು ; ಮಾಸಲಾದುದು : ಚಳಗಳಕಂಬಳಂ ಚಳನ ಕಂಪಿತತುಂಗಕಕುದ್ಭರಂ . . . ಖುರೋಚ್ಚಳದುರುರೇಣುಧೂಸರಿತನಗ್ರ ವಿಶೀರ್ಣ ವಿಷಾಣನಾತ್ತಮಾಂಸಳತನು ಬಂದುದಂದು ಮುಹುರುತ್ಥ ಬೃಹದ್ರವನೊಂದು ಪುಂಗವಂ (ಚಂದ್ರಪು. ೨-೨೮). [ಸಂ.]

ಧೂಸರು (ನಾ). ಬಣ್ಣಗುಂದುವಿಕೆ ; ಮಲಿನವಾಗುವಿಕೆ : ಪರಿತಾಪ ದಿನಲರ್ವಾಸೊಳ್ ಪೊರಳ್ದು ಮೇಣ್ ಧೂಸರಾಂತ ಬಿಸಖಂಡಗಳಿಂ ಪರಿಮಳಿಪ ನಿನ್ನ ಮೆಲ್ಲೊಡಲ್ (ಶಾಕುಂತ. ೩೯ ೬೯). [<ಸಂ. ಧೂಸರ]

ಧೂಳ್ 'ದೂಳಿ' ನೋ.

ಧೂಳಾಟ 'ದೂಳಾಟ' ನೋ.

ಧೂಳಿ 'ಧೂಲಿ' ನೋ.

ಧೂಳಿಕ (ನಾ). ಒಂದು ಬಗೆಯ ಸಸ್ಯ ; ರಾಗಿ : "ಧೂಳಿಕಂ ರಾಗಿಯದು" (ಮಂಗರಾ. ೧೧೦-೪). [?]

ಧೂಳಿಕಡವ 'ದೂಳಿಗಡವ' ನೋ.

ಧೂಳಿಕಾಕೇಳಿ (ನಾ). ಮಣ್ಣಿನ ಆಟ ; ಧೂಳಾಟ : ಸುರಕುಮಾರರ್ ಧೂಳಿಕಾಕೇಳಿಯೊಳ್ . . . ಜಿನಾರ್ಭಕನ ಮೇಲೆಲ್ಲಂ ರಜೋಜಾಳಮಂ ಕಡು ಪಿಂದಂ ಕೆದಱುತ್ತುಂ (ಬಾಧಪು. ೯-೫೫). [ಸಂ. ಧೂಲಿಕಾಕೇಲಿ]

ಧೂಳಿಕೇಳಿ (ನಾ). = ಧೂಳಿಕಾಕೇಳಿ : ಮಾಣದೆ ಧೂಳಿಕೇಳಿಗೆ ಕ[ಪಾಠಾಂ. ಮೂಳಿಗೆಗ]ಡಂಗುವ ಸಾರ್ಚಿದ ತಾಯ ಜಂಘೆ ನಿಶ್ರೇಣಿಯೊಲಾಗೆ ಮೆಟ್ಟಿ ತೊಡೆಯೇಱುವ : . . . ಕಂಡರ ಹಸ್ತತಾಳಕಲ್ಯಾಣರವಕ್ಕೆ ನರ್ತಿಸುವಮುದ್ದು ಗಳೊಪ್ಪುಗುಮಾ ಮುಕುಂದನಾ (ಮಲ್ಲಕಾ. ೭-೦೭೧); (ಸೂಕ್ತಿಸು. ೭-೬೭ ನೋ.) [ಧೂಳಿ (=ಧೂಲಿ) + ಕೇಳಿ$_3$ (=ಕೇಲಿ)]

ಧೂಳಿಕೋಂಟೆ 'ಧೂಳಿಗೋಂಟೆ' ನೋ.

ಧೂಳಿಗಡವ 'ದೂಳಿಗಡವ' ನೋ.

ಧೂಳಿಗಾಲ್ (ನಾ). ಧೂಳಿನಿಂದ ಕೂಡಿದ ಕಾಲು : ತತ್ಸುರರಾಜಸ್ತುತ್ಯ ನತ್ಯಾಸುರಭುಜಗಮಹಾಶಯ್ಯೆಯಾಂ ಧೂಳಿಗಾಲೊಳ್ ತ್ವರಿತಂ ಬಂದೇಱಿ ಪಟ್ಟಿರ್ದೆಡದ ಕರದೊಳಾ ಶಾರ್ಙ್ಗಮಂ ಕೊಂಡು ಭೋಂಕಲ್ (ನೇಮಿಪು. ೧೩-೪೨). [ಧೂಳಿ (=ಧೂಲಿ) + ಕಾಲ್$_1$)]

ಧೂಳಿಗೆದಱು (ಕ್ರಿ). ೧. ಧೂಳೆಬ್ಬಿಸು. ೨. ನಾಶಮಾಡು: ಕಾಳಗಕೆ ನೆರೆದಖಿಳ ದೂತರ ಧೂಳಿಗೆದಱಿದು [ಪಾಠಾಂ. ಡಹಿದು] ಮೃತ್ಯುವಿನ ಗೋನಾಳಿಯಲಿ ಚಾಚಿದನು ಚಾಪಳಚಂದ್ರಹಾಸಕವ (ತೊರರಾ. ೦-೮-೩೫).

[ಧೂಳಿ (=ಧೂಲಿ) + ಕೆದಱು$_1$ (<ಕೆದಱ್$_1$)]

ಧೂಳಿಗೈ (ಕ್ರಿ). ಹಾಳುಮಾಡು ; ನಾಶಮಾಡು : ಬಾಲಕಿಯ ರೂಪದಲಿ ಬಂದಿಹ ಕಾಲಮೃತ್ಯು ಕಣಾ ಮಹೀಸುತೆ ಧೂಳಿಗೈಯದೆ ಬಿಡಳು ರಾಕ್ಷಸ ಕುಲವ (ಆನಂರಾ. ೫-೨-೫೦). [ಧೂಳಿ (=ಧೂಲಿ) + ಗೈ (<ಕೆಯ್$_1$)]

ಧೂಳಿಗೊಳಗ (ನಾ). ಒಂದು ಬಗೆಯ ಅಳತೆ (?) : ಶ್ರೀಮದಂಗಜೇಶ್ವರ ದೇವರಂಗಭೋಗಕ್ಕ . . . ತಪೋಧನರಾಹಾರದಾನಕ್ಕವೆಂದು . . . ಕೊಳದ ಕೆಳಗೆ ಹಕ್ಕಲು ಮತ್ತಮ ಮೂಱು ಆಯ ಹೊಂಗೆ ಬೇಳೆ ಧೂಳಿಗೊಳಗ ೧ (ಕಇ. IV, ೧೦-೬೫, 1121). [ಧೂಳಿ? + ಕೊಳಗ$_1$]

ಧೂಳಿಗೋಂಟೆ, ಧೂಳಿಕೋಂಟೆ, ಧೂಳಿಗೋಟೆ (ನಾ). ಪುಡಿಪುಡಿಯಾದ ಕೋಟೆ; ಧ್ವಂಸವಾದ ಕೋಟೆ; ಧೂಳಾದ ದುರ್ಗ : ಧೂಳಿಗೋಂಟೆಯ ಕೊಂಡಳಿದು ರಾಜಾಲಯಕೆ ಬರೆ (ಸಂಭಪ. ೧೮-೮೯) ; ಆ ನಗರಿಯ ಧೂಳಿಗೋಂಟೆಯ ಕೊಳಲೆಂದಾ ನಾಡ ನಾಡಮನ್ನೆಯರು ಆನದೆ ಬಂದು ಮುತ್ತಿದ ರಾರ್ಭಟೆಯಿಂ (ನೇಮಿಸಂ. ೧೨-೭೨) ; ಮಲೆತರಂ ದಿಂಡುದಱಿವುತ್ತಮಿದಿರಾದ ದುರ್ಗಂಗಳಂ ಧೂಳಿಗೋಂಟೆಗಳ ಕೊಂಡು (ಜಿಬಪು. ೨೩-೩೦). **ಧೂಳಿಕೋಂಟೆ :** ಕೋಂಟೆಗೆ – ತಟಿಗೋಂಟೆ, ಧೂಳಿಕೋಂಟೆ, ಹತ್ತುಗೋಂಟೆ (ಶಮದ. ೨೯೮ ಪ್ರಯೋ) ; ನಡೆದು ಬಂದಾ ನೇಮಿ ಕಂಡನು ಕಂಪಿಲ ಪೊಡವಿಪತಿಯ ಪೌಜುಗಳನು ಕೆಡಹಿ ಕೋಂಟೆಯ ಧೂಳಿಕೋಂ[ಪಾಠಾಂ. ಗೋಂ]ಟೆಯ ಕೊಳ್ಳಿಮೆಂದೊಡನೆ ನುಡಿದನು ಖಾನರಿಗೆ (ಕುರಾಸಾಂ. ೩೯-೧೦). **ಧೂಳಿಗೋಟೆ :** ಉಚ್ಚಙ್ಗಿಯಂ ಮುತ್ತಿ ದುರ್ದ್ಧರ ತೇಜೋನಿಧಿ ಧೂಳಿಗೋಟೆಯನೆ ಕೊಣ್ಡಾ ಕಾಮದೇವ (ಎಕ. II, ೩೩೫-೧೪; 1195); ದನುಜರಧಮರು ಧೂಳಿಗೋಟೆಯ ಕ್ಷಣಕೆ ಕೊಂಡರದಿಂದ್ರನಮರಾವತಿಯ ವ್ಯಾಹೃತಿಯ (ಸಂಭಪ. ೭-೨೩); ಇಂದು ನಾಳಿನಲಿ ಧೂಳಿಗೋಟೆಯ ಕೊಂಡು ಲಂಕೆಯ ಹಾಳುಮಾಡಿ ನರೇಂದ್ರ ತನ್ನಯ ಬಾಲಕಿಯ ಕೊಂಡೊಯ್ಯದಿರನು (ತೊರರಾ. ೬-೬-೫೭); ಧಾಳಿಯೊಳಗೆ ವೈರಿನೃಪರ ದುರ್ಗಂಗಳ ಧೂಳಿಗೋಟೆಯ ಕೊಂಡ ಧೀರ (ಕಂನವಿ. ೮-೭೭). 'ದೂಳಿಗೋಂಟೆ' ಪರಾ.

ಧೂಳಿಗೋಟೆಯಾಗು = ಧೂಳಿಗೋಟೆವೋಗು : ಕೋಟಿಮನ್ಮಥರ ಬಾಣಂಗಳ ಮಸಕವ ನೋಟದೊಳಗೆ ತೋಱುತಹಳೆ ಪಾಟಿ ಯಾರವಳಿಗೆ ನಾಳೆ ನಿನ್ನೆದೆ ಧೂಳಿಗೋಟೆಯಹುದು ಕಾಣಲೊಡನೆ (ಭರಚ. ೩೭-೯೪). **ಧೂಳಿಗೋಟೆವೋಗು** = ಹಾಳಾಗು ; ನಾಶವಾಗು : ವಿಷ್ಣು ಮಹೀಪತಿ ಧೂಳಿಗೋಟೆವೋದುದು ತಳಕಾಡು ತಲೆಮಲೆ ಪೆರ್ವ್ವಯಲಾದುದು (ಮೈಅರಿ. ೧೯೪೦, ೦-೨೦; ಸು. 12ನೆಯ ಶತ).

[ಧೂಳಿ (=ಧೂಲಿ) + ಕೋಂಟೆ]

ಧೂಳಿಚಿತ್ರ (ನಾ). = ದೂಳಿಚಿತ್ರ : ಇದೊಂದು ಧೂ[ಪಾಠಾಂ. ದೂ]ಳಿಚಿತ್ರದ ಖಣಮೆಂದು ಮೈಯ್ಯೊರಸಿ ಧೀಂಕಿಡುವರ್ ಕಡೆಯೊಳ್ ಲತಾಂಗಿಯರ್ (ಅನಂಪು. ೬-೪೪). [ಧೂಳಿ (= ಧೂಲಿ) + ಚಿತ್ರ]

ಧೂಳಿಗೋಟೆ 'ಧೂಳಿಗೋಂಟೆ' ನೋ.

ಧೂಳಿಜಾಡಿಸು (ಕ್ರಿ). ಧೂಳನ್ನು ಕೊಡಹು,-ಒದರು : ಧೂಳಿಜಾಡಿಸಿ ಸುರುಳಿ ಬಿಚ್ಚಿದ ನಕಾಶದಲಿ ಮೂಡಿಸಿರಿ ಹೊಸಬಾಳ ಸಂಚಿಕೆಯನು (ನೆಲಮು. ೨೦-೧೬). [ಧೂಳಿ (= ಧೂಲಿ) + ಜಾಡಿಸು]

ಧೂಳಿಡಿಸು (ಕ್ರಿ). ೧. ಧೂಳಾಗುವಂತೆ ಮಾಡು : ೨. ಹಾಳುಮಾಡು : ರಥಗಳಲಿ ಲಟಕಟಿಸಿ, ದುರ್ಗಗಳ ಧೂಳಿಡಿಸಿ, ಜನಜನವನೇ ಬಡಿದು ಸೆರೆಹಿಡಿದು ತರಲು (ಪಾರಸಿ. ೬-೧೩೫). [ಧೂಳ್ (<ದೂಳಿ) + ಇಡಿಸು$_2$]

ಧೂಳಿತ (ನಾ). (ಪವಿತ್ರವಾದ) ಭಸ್ಮ,-ಬೂದಿ: ಕೊಡುವೆ ನೀ ನಂಬೆಂದು ಮೃಡಮೂರ್ತಿ ಭಸಿತವ ಬಿಡದೆ ಧರಿಸಿ ಧೂಳಿತವನು ತಡೆಯದದನ್ ಕೈಯ್ಯೊಳಿಡಲದ ಸೆಱಗಿಗೆ ಕಡುವೇಗದಿಂದ ಹರಸುತ (ಅಮುಸಾಂ. ೧-೫).
[ಸಂ. ಧೂಲಿತ]

ಧೂಳಿಧೂಸರ (ನಾ). = ಧೂಲಿದೂಸರ : ಧೂಳಿಧೂಸರದ ಸಂಧ್ಯಾಂಗನೆಯ ಬಗೆಯನಂಗೀಕರಿಸಿ . . . ಎಸೆದಿರ್ದಳು (ಭಿಕ್ಷಾಜ. ೩-೩೩).
[ಧೂಳಿ (= ಧೂಲಿ) + ಧೂಸರ]

ಧೂಳಿಧೂಸರಿತ (ಗು). ೧. ಧೂಳಿನಿಂದ ಆವೃತವಾದ,-ಮಸುಕಾದ : ನೋಡು ನೋಡೆಲೆ ಮಗನೆ ನಿನ್ನೊಡನಾಡಿಮಕ್ಕಳು . . . ಸಂತೋಷದಲಿ ನಿನ್ನೊಡನಾಡುತಿದ್ದರೆ ನೀನು ಹಸಿದಿಂತಾಡುವೈ ನೆಱೆ ಧೂಳಿಧೂ[ಪಾಠಾಂ. ದೂ]ಸರಿತಾಂಗನೆಂದೆನಿಸಿ (ನಿಭಾಗ. ೧೦-೧೦-೫೦). (ನಾ). ೨. ಹಾಳಾದುದು ; ಮಣ್ಣುಪಾಲಾದುದು : ದಾದಾನ ಆಶೆ-ಆಕಾಂಕ್ಷೆ, ಅವನು ಕಲ್ಪಿಸಿಕೊಂಡ ಮನೋಮಂದಿರ ಧೂಳಿಧೂಸರಿತವಾಗುತ್ತವೆ (ದೀಪಹ. II, ೨೨೧). [ಧೂಳಿ (= ಧೂಲಿ) + ಧೂಸರಿತ]

ಧೂಳಿಪಟ (ನಾ). ಮುರಿದುಬಿದ್ದು, ಹುಡಿಹುಡಿ ಯಾಗುವಿಕೆ ; ನಾಶವಾಗುವಿಕೆ: "ಧೂಳಿಪಟ, ಧೂಳೀಪಟ್ಟ-ಧೂಲೀಪಟ" (ತದೃಕೋ. ೫೧); ಕೋಟೆಗ × × × ನಾಟ್ಟತಿದನೊಪ್ಪೊದೊಡೆ ನಿಶಾರ್ದ್ಧದೆ ಧೂಳಿಪಟಂಗಳಾಗವೇ (ಎಕ. VIII (8), ಸೊರಬ. ೫೮೭-೧೯ ; 1207) ; ಆಕ್ಷೇಪಕ್ಕೆ . . . ಮುತ್ತಿದನೋ ಇಂದೆ ಕೋಂಟೆ ಧೂಳಿಪಟಂ [ಪಾಠಾಂ. ಧೂಳಿಪಟ್ಟಂ] (ಶಮದ. ೫೭ ಪ್ರಯೋ). 'ದಿಶಾಪಟ' ಪರಾ.

ಧೂಳಿಪಟ ಮಾಡು = ನಾಶಗೊಳಿಸು ; ಹಾಳುಮಾಡು ; ಪುಡಿಪುಡಿ ಮಾಡು : ನಿಮಿಷಕೆ ಧೂಳಿಪಟ ಮಾಡಿದನು ಕರ್ಣನ ಮನ್ನಣೆಯ ಭಟರ (ಕುಪಾ ಕ. ೧೩-೧೫) ; ಚಾಮರವ ಗೋವಳಿಗೋಲ ಡೊಂಕಣಿಯೊಡ್ಡನೆತ್ತಿದ ಸಿಂಧ ಸೀಗುರಿಯ ಧೂಳಿಪಟ ಮಾಡಿದನು (ಕುಪ್ಯಾಕ. ೨೪-೧೦) ; ಮುತ್ತಿಗೆಯಿಕ್ಕಿ ಸಾಂಬಳ್ಳಿಯ ಸೆಳೆದವನೊತ್ತಿ ಬಂದೆಮ್ಮ ರಾಜ್ಯಗಳ ಸುತ್ತಿಸುಳಿದು ಧೂಳಿಪಟ ಮಾಡೆ ನಮಗಿನ್ನೆತ್ತಣ ದೊರೆತನವೆಂದ (ಕಂನವಿ. ೧೭-೬೬) ; ಕೌರವನ ಸೇನೆಯನ್ನು ಧೂಳಿಪಟ ಮಾಡಿ ತೊಲಗಿಸಿ ಬಿಡುತ್ತೇನೆ (ಕಸಾಚಿ. ೭೯). ಧೂಳಿಪಟವಾಗು = ಸಂಪೂರ್ಣ ನಾಶವಾಗು ; ಮಣುಪಾಲಾಗು : ಅರ್ಗ್ಗಿ ತರ್ಗ್ಗದ ನೆಲೆಗೋಟೆ ಧೂಳಿಪಟವಾಗದ ದುರ್ಗ್ಗಕುಳಂ (ಎಇ V, ೧೬-೧೦ ; 1121) ; ಉಲ್ಲಾಸದಿಂ ಮೆಟ್ಟುವ ಪದದೊಳಿಳೆ ಧೂಳಿಪಟವಾಗೆ (ಬಸಪು. ೧೭-೦೬) ; ಆದಿತ್ಯರ ಮನೆಯು ನೆಱೆ ಧೂಳಿಪಟವಾಯ್ತು (ಬಸಪು. ೫೬-೩೩) ; ಧೂಳಿಪಟವಾಯಿತು ಹಿರಣ್ಯಪುರಾಲಯದ ನೆಲೆಗಟ್ಟು (ಕುಪ್ಯಾಅ. ೧೨-೪೭). [ಸಂ. ಧೂಲಿಪಟ]

ಧೂಳಿಪಟ್ಟ (ನಾ). = ಧೂಳಿಪಟ : ಘನಸಂಗ್ರಾಮದೆ ಭೈರಾದೇವಿಯ ಸೀಮೆಯನುರೆ ಧೂಳಿಪಟ್ಟಮಂ ವಿರಚಿಸಿದಂ (ಕೆಳನ್ಯ. ೩-೮೩).
[ಸಂ. ಧೂಲಿಪಟ್ಟ]

ಧೂಳಿಮಾಕಾಳ (ನಾ). ಈಶ್ವರನ ಒಂದು ರೂಪ ; ಕಾಲಭೈರವ : ಸಿದ್ಧರಾಮಯ್ಯನೆಂದಾತಂಗೆ ಗಿರಿಜಾತೆ ಕೊಟ್ಟ ಹೆಸರಂ ಬಿಟ್ಟು ಧೂಳಿಮಾ[ಪಾಠಾಂ. ಧೂಳಿಮಹ]ಕಾಳನೆಂದು ನೀತಿಗೆಡೆ ಕುಲದೈವವೆಸರಿಂದ ಕರೆದು (ಸಿದ್ಧರಾ. ೨-೯) ; ಧೂಳಿಮಾಕಾಳನೇ ಮೈಗೊಂಡು ಬೀಸುತಿರೆ ನಿಮ್ಮ ಬೇವೇ ತಂಪು ಸೂಸುತಿರಲು (ಗಂಗಾತ. ೫೧-೫). [ಧೂಳಿ(=ಧೂಲಿ) + ಮಾಕಾಳ]

ಧೂಳಿಮಾರುತ (ನಾ). ಧೂಳಿನಿಂದ ತುಂಬಿದ ಬಿರುಗಾಳಿ : ಮರಳು ಕಾಡುಗಳಲ್ಲಿ ಧೂಳಿಮಾರುತ (Dust Storms)ಗಳಿಗೆ ಬಹಳ ಹೆದರಬೇಕು (ಧೂವಿವ. ೨೫೭). [ಧೂಳಿ (=ಧೂಲಿ) + ಮಾರುತ]

ಧೂಳಿಮುಕ್ಕು (ಕ್ರಿ). ಮಣ್ಣುಮುಕ್ಕು ; ನಾಶವಾಗು.
[ಧೂಳಿ (= ಧೂಲಿ) + ಮುಕ್ಕು$_1$]

ಧೂಳಿವಿಡು (ಕ್ರಿ). ೧. ಧೂಳನ್ನು ಏಳಿಸು ; ಧೂಳುಂಟುಮಾಡು : ಕಡೆವಾಯ ಕೆನ್ನೆತ್ತರ ಹೊಲಸಿಂಗೆ ಪೋಗದೆ ಮುಸುಱುವ ನೊಟವಿಂಗೆ ಕೆರಳ್ದು ಝಾಡಿಸುತೊದೆಯೆ ಜೀರೆಟ್ಟ ಹೆಟ್ಟೆಗಳ್ ಮೇಲೆ ಪಳಂಚಿ ಧೂಳಿವಿಡುತಿರೆ (ಕುಸುಮಾ. ೧೪-೨೯ ವ). ೨. (ಆಲಂ) ಒಣಗು ; ನಿರ್ದ್ರವವಾಗು (?) : ತೇರ ಧೂಳಿಯಂ ಬಿಡೆ ನಡೆ ನೋಡಿ ಧೂಳಿಯುಮಡಂಗಿರೆ ಕೃಷ್ಣನ ತೇರಧೂಳಿಯಪ್ಪೊಡಮಿರದಾಯ್ತೆನುತ್ತಬಳೆ ಧೂಳಿವಿಡುತ್ತಿರೆ ಬಾಯ್ಪಲುಂಬಿದಳ್ (ಜಗವಿ. ೫-೧೦೦). [ಧೂಳಿ (= ಧೂಲಿ) + ಇಡು$_1$]

ಧೂಳಿಶಾಳ 'ಧೂಲಿಶಾಲ' ನೋ.

ಧೂಳಿಸು (ಕ್ರಿ). ೧. ಹುಡಿ ಹರಡು, ಕೀಟಗಳ ಹತೋಟಿಗೆ . . . ಪುಡಿಯನ್ನು ಧೂಳಿಸಬೇಕು (ಕೀಟಬೆ. ೭೪). ೨. ಧೂಳನ್ನೆಬ್ಬಿಸು ; ಧೂಳು ಹರಡುವಂತೆ ಮಾಡು : ಬಂದನು ಶಿಖಂಡಿ ರಥವನ್ನಡರಿ ಧೂಳಿಸುತ್ತಂದು ಬಿಲ್ಲಂ ಪಿಡಿದು (ತುರಂಗ. ೪೭-೨೨). ೩. ಲೇಪಿಸು ; ಪೂಸು : ವಿಭೂತಿಯ ಗುಳಿಗೆಯನು ನೆಗ್ಗೊತ್ತಿ ಸರ್ವಾಂಗದಲಿ ಧೂಳಿಸಿದ[ಪಾಠಾಂ. ಲೇಪಿಸಿದ] (ಕುಪ್ಯಾಕ. ೭-೧೧;) ವರವಿಭೂತಿಯನೆಸೆವ ಸರ್ವಾಂಗದೊಳ್ ಧೂಳಿಸಿ (ಚಬಪು. ೫೦-೪೭) ; ೪. ನಾಶಮಾಡು : ಆಳು ಅವನಾಗಿರ್ದು ಲೋಕವ ಧೂಳಿಸುವ ಸತ್ವಾದಿರಕ್ಷಣೆ ದಾಳಿಯವನೊಪ್ಪಿಸುವುದುಚಿತವೆ (ಜಿನಭಾ. ೪೭-೪೪).
[ಧೂಳಿ (= ಧೂಲಿ) + ಇಸು$_2$]

ಧೂಳೀಕೇಳಿ (ನಾ). ದೂಳಿನಲ್ಲಿ ಆಡುವ ಆಟ ; ಮಣ್ಣಾಟ : ನುತವಾರ ಸ್ತ್ರೀಕುಚಾಗ್ರಚ್ಯುತಮೃಗಮದಕಾಶ್ಮೀರಕರ್ಪೂರಧೂಳೀಕೃತಧೂಳೀಕೇಳಿ ಚಂಚದ್ಭ್ರಮರಚಲಶಿಖಂಡಂ . . . ಲೀಲೆಯಿಂ ಬಾಲಕನೆನೆ ಸುಳಿದಂ ಸ್ವೈರಚಾರಂ ಸಮೀರಂ (ರಾಜಶೇ. ೧೧-೭೭). [ಸಂ. ಧೂಲೀಕೇಲಿ]

ಧೂಳೀಚಿತ್ರ (ನಾ). ಬಣ್ಣಬಣ್ಣದ ಪುಡಿಯಿಂದ ರಚಿಸಿದ ಚಿತ್ರ : ಧೂಳೀಚಿತ್ರದೋಜೆಯುಮಂ . . . ಪರಿಭಾವಿಸಿ ನೋಡಿ (ಮಲ್ಲಿಪು. ೫-೪೨) ; ಆಯಾದು ವಿಸ್ತಾರಮೆಂಬ ಮಾನದ್ವಯದೊಳಂ ರಸಚಿತ್ರಂ ಧೂಳೀಚಿತ್ರ ಮೆಂಬೆರಡೋಜೆಯೊಳಂ . . . ಆಳವಡೆ (ಚಂದ್ರಪು. ೧೫-೭೦ ವ) ; ಮೂವಿಧ ರಸಚಿತ್ರದ ಧೂಳೀಚಿತ್ರದ ಕಡುಬಿನ್ನಣದರಡು ತೆಱಂ . . . ಭೂಪನ ಕಣ್ಗಿನಿದಂ ಪುಟ್ಟಿಸಿತು (ಜಯಕಾ. ೩-೬). [ಸಂ. ಧೂಲೀಚಿತ್ರ]

ಧೂಳೀದೂಸರ (ನಾ). = ಧೂಲಿದೂಸರ : ದೆಸೆಗಳೇ ವಾಸಸ್ಸು ರಾಜ್ಯ ಪ್ರಸರಣವು ನಿರ್ಲಜ್ಜೆ ಜಟೆ ರಂಜಿಸುವ ಧೂಳೀದೂಸರದ ಗಂಗಾಧರನವೋಲು (ಕುಪ್ಯಾಉ. ೪-೧೧೧). [<ಸಂ. ಧೂಲೀಧೂಸರ]

ಧೂಳೀಧೂಸರ (ಗು). ೧. ಧೂಳಿನಿಂದ ತುಂಬಿದ ; ಧೂಳಿನಿಂದ ಬೂದು ಬಣ್ಣಕ್ಕೆ ತಿರುಗಿದ: ಧೂಳೀಧೂಸರ ವರರತ್ನಾಳಿಗಳಂ ಕಂಡ ದೂಸಱಂದಂ ಧರಣೀಪಾಳಕಮುನಿಪರ್ ಪಂಚಮಕಾಲದೊಳಣಮಾಗರಲ್ತೆ ಋದ್ಧಿಪ್ರಾಪ್ತರ್ (ಆದಿಪು. ೧೫-೩೮). (ನಾ). ೨. = ಧೂಲಿದೂಸರ : ಧೂಳೀಧೂಸರದ ರಥದೊಳಗೆ ನಿಂದಾ ಶಕ್ರಸಾರಥಿ ನುಡಿಸಿದನು ನರನ (ಕುಪ್ಯಾಅ. ೭-೧೪
[ಸಂ. ಧೂಲೀಧೂಸರ]

ಧೂಳೀಧ್ವಂಸ (ನಾ). ಮಣ್ಣುಪಾಲಾಗುವಿಕೆ ; ನಾಶ ; ಹಾಳಾಗುವಿಕೆ : ನೆಲಕ್ಕೂ ಭೂಮಿಗೂ ನಡುವೆ ಮಿಂಚು ಬಡಿಯುವುದು. ಇಂಥ ಬಡಿತಕ್ಕೆ ಮರಗಳೂ ಕಟ್ಟಡಗಳೂ ಧೂಳೀಧ್ವಂಸವಾಗುವುದುಂಟು (ಬಾಲಪ್ರ. III, ೧೩೩೪). [ಸಂ. ಧೂಲೀಧ್ವಂಸ]

ಧೂಳೀಪಟ (ನಾ). = ಧೂಳಿಪಟ : ಎಷ್ಟು ಸಾಮ್ರಾಜ್ಯಗಳು ಧೂಳೀಪಟವಾಗಿವೆ (ನನದಿ. ೩೮).

ಧೂಳೀಪಟ ಮಾಡು=ಧೂಳಿಪಟಮಾಡು ; ನಾಶಮಾಡು ; ಹಾಳುಮಾಡು: ಎಲ್ಲರನ್ನೂ ಧೂಳೀಪಟ ಮಾಡಿ ಹೇಳಹೆಸರಿಲ್ಲದೆ ಮಾಡಿಬಿಡುತ್ತಿದ್ದೆ (ಕುರುಕಾ. ೯೮) ; ರಾಯ ರಾಮಲಿಂಗನ ಸೂಚನೆ ಕೇಳಿದೊಡನೆಯೆ ಬರುಗಾಳಿಯಂತೆ ಶತ್ರುಗಳ ಮೇಲ್ನುಗ್ಗಿ ಧೂಳೀಪಟ ಮಾಡಿದನು (ಆಳಾಕ. ೨೨).

[ಸಂ. ಧೂಲೀಪಟ]

ಧೂಳೀಪಟಲ 'ಧೂಲೀಪಟಲ' ನೋ.

ಧೂಳೀಪಟ್ಟ (ನಾ). = ಧೂಳಿಪಟ : ಮುತ್ತಿದನೋ ಇಂದೆ ಕೋಂಟೆ ಧೂಳೀಪಟ್ಟಂ [ಪಾಠಾಂ. ಧೂಳಿಪಟಂ] (ಶಮದ. ೩೭ ಪ್ರಯೋ.); ಇದಿರಾದ ಬಲುದುರ್ಗಗಳನು ಧೂಳೀಪಟ್ಟಮಂ ಮಾಡುತ (ಸಮ್ಯಕಾ. ೮-೨೭). ೨. ಧೂಳಿನ ರಾಶಿ, ಒಟ್ಟಿಲು : "ಧೂಳೀಪಟ್ಟಮೆನಲ್ಕಡರಿ ಧೂಳಿ ಪುಟ್ಟಿದುದಕ್ಕುಂ" (ಭಾರನಿ. ೬೭). [ಸಂ. ಧೂಲೀಪಟ್ಟ]

ಧೂಳೀಪ್ರತಾನ 'ಧೂಲೀಪ್ರತಾನ' ನೋ.

ಧೂಳೀಪ್ರಾಕಾರ (ನಾ). = ಧೂಳೀಶಾಲ : ಆ ಧೂಳೀಪ್ರ[ಪ್ರಾ]ಕಾರದಿಂ ದೊಳಗೆ ನಾಲ್ಕುಂ ದಿಶಾಭಾಗದೊಳಮಿನ್ನೇಸಱುಮಿರ್ಬಡಲುಮಾಗಿ ನೀಳ್ದ ಪೆರ್ವೀದಿಗಳ ನಟ್ಟನಡುವೆ (ವರ್ಧಮಾ. ೧೩-೩೮ ವ).

[ಸಂ. ಧೂಲೀಪ್ರಾಕಾರ]

ಧೂಳೀಶಾಲ, ಧೂಳೀಶಾಳ (ನಾ). [ಜೈನ] ಸಮವಸರಣಮಂಟಪದ ಮೊದಲನೆಯ ಪ್ರಾಕಾರ : ಕೈಳಾಸಾಚಳಮನೇಱಿ ಧೂಳೀ[ಪಾಠಾಂ. ಲಿ]ಶಾಲದಿಂ ತಗುಳ್ದು ಪೂರ್ವೋಕ್ತವರ್ಣನೋಪೇತಮಪ್ಪ ವೃಷಭನಾಥನಾಸ್ಥಾನ ಮಂಟಪಮಂ ನೋಡುತ್ತುಂ (ಆದಿಪು. ೧೩-೮೨ವ). **ಧೂಳೀಶಾಳ** : ಪಲಯಾಕೃತಿಯಿಂದಿದನೇಂ ಬಳಸಿದುದೊ ಸುರೇಂದ್ರಚಾಪಮಂಡಲಮೆನೆ ಬಳ್ವಳ ಬಳೆದ ಪಂಚರತ್ನದ ಬೆಳಗಿಂದಂ ಬೆಳವುದಲ್ಲಿ ಧೂಳೀಶಾಳಂ (ಆದಿಪು. ೧೦-೨೩) ; ಪಂಚರತ್ನಧೂಳೀಶಾಳದಿಂ ಪರಿವೇಷಂಗೊಂಡ ಸಮವಸರಣಮಂಡಳಮಂ ಪುಗುವ ಸಹಸ್ರಾಕ್ಷನ (ಮಲ್ಲಿಪು. ೦೪-೨೧೦).

[ಸಂ. ಧೂಲೀಶಾಲ]

ಧೂಳೀಶಾಳ 'ಧೂಳೀಶಾಲ' ನೋ.

ಧೂಳೀಸಾಳ (ನಾ). = ಧೂಳೀಶಾಲ : ರುತುಮಾನದ ದ್ವಾರಕುಟ್ಟಂ ಮೊದಲ್ಗೊಂಡು ಧೂಳೀಸಾಳಂಬರಮಂತರಾಳಚಕ್ರವಾಳಸ್ಥಳದೊಳೆಲ್ಲಂ ಕಿಕ್ಕಿಱಿಗಿಱಿದು (ಭಾಧಪು. ೧೬-೨೨೦ ವ). [ಸಂ. ಧೂಲೀಸಾಲ]

ಧೂಳು 'ಮೂಳಿ' ನೋ.

ಧೂಳುಭೂಮ (ನಾ). ಮದುವೆಯ ಸಂದರ್ಭದಲ್ಲಿ ಗಂಡು ಹೆಣ್ಣನ್ನು ಒಟ್ಟಿಗೆ ಕೂರಿಸಿ ಸಂಜೆಯ ಹೊತ್ತು ಹಾಕುವ ಊಟ : ವಧೂವರರನ್ನು ಧೂಳುಭೂಮಕ್ಕೆ ಕೂರಿಸಿದ್ದಾರೆ (ರೂಢಿ).

[ಧೂಳು (<ದೂಳಿ) + ಭೂಮ$_1$ (<ಭೂವ)]

ಧೂಳುಮಱೆ (ನಾ). ಘರ್ಷಣೆಯಾಗುವುದನ್ನು ತಪ್ಪಿಸಲು ರಥಕ್ಕೆ ಹಾಕಿರುವ ಮರದ ಅಥವಾ ಕಬ್ಬಿಣದ ಕಾಪು;-ಸಾಧನ : "ರಥಗುಪ್ತಿಃ, ವರೂಥಃ-ಈ ೨ ಧೂಳುಮಱೆ" (ನಾಚಿರಾ. ೧೩೪).

[ಧೂಳು (<ದೂಳಿ) + ಮಱೆ$_2$]

ಧೂಳೆಬ್ಬಿಸು (ಕ್ರಿ). ೧. ಧೂಳು ಏಳುವಂತೆ ಮಾಡು ; ಧೂಳನ್ನು ಏಳಿಸು : ಕುದುರೆಗಳು ಧೂಳೆಬ್ಬಿಸುತ್ತಾ ಓಡಿದವು (ರೂಢಿ). ೨. ಮಣ್ಣುಪಾಲುಮಾಡು ; ಹಾಳುಮಾಡು : ಇವತ್ತು ಇವರ ಮಾನ ಮರ್ಯಾದೆಯೆಲ್ಲಾ ಧೂಳೆಬ್ಬಿಸಿಬಿಡ್ತೀನಿ (ರಂಗವ. ೨೨೯). ೩. (ಆಲಂ) ತಿರುಗು ; ಅಲೆದಾಡು : ಅವನ ಎಣಿಕೆಯಲ್ಲಿ-ಆ ಸ್ನೇಹಿತರು ಬಂದದ್ದಾದರೆ, ನಾಲ್ಕು ದಿನ ನಗರವನ್ನೆಲ್ಲ ಧೂಳೆಬ್ಬಿಸಬಹುದು – ಎಂದಿತ್ತು (ಆಳನಿ. ೧೦೭). ೪. ಕೀಟಲೆಮಾಡು : ಸುಮ್ಮನೆ ಧೂಳೆಬ್ಬಿಸುವುದೇ ಅವನ ಸ್ವಭಾವ (ರೂಢಿ). [ಧೂಳು (<ದೂಳಿ) + ಎಬ್ಬಿಸು (<ಎಱ್ಬಿಸು)]

ಧೂಳೆರಚು (ಕ್ರಿ). ೧. ಮಣ್ಣನ್ನು ಎರಚು. ೨. (ಆಲಂ) ಕಳಂಕಗೊಳಿಸು ; ಕೆಟ್ಟ ಹೆಸರನ್ನು ತರು : ವಂಶದ ಮೇಲೆ ಧೂಳೆರಚಿದೆಯಲ್ಲ (ಕಗದ್ಯ. II, ೨೯).

[ಧೂಳು (<ದೂಳಿ) + ಎರಚು (<ಎಱಚು)]

ಧೂಳೋದಕ (ನಾ). [ವೀಶೈ] "ಗುರು ಮನೆಗೆ ಬಂದಾಗ ಪಾದ ತೊಳೆದ ತೀರ್ಥ" (ಶರಸಾ. ೨೪-೭). [P: ಇದು 'ಧೂಳ್ಯುದಕ' ಎಂಬುದರ ಅಶುದ್ಧವಾದ ರೂಪ]

ಧೂಳ್ಗೋಂಟೆ 'ದೂಳಿಗೋಂಟೆ' ನೋ.

ಧೃತ (ಗು). ೧. ತಳೆದ; ಧರಿಸಿದ: ಧೃತದೇವೇಂದ್ರವಿಮಾನರುಂದ್ರಮಹಿಮಂ . . . ಕಲಧೌತತುಂಗಕಲತಂ ಚೆಲ್ವಾಯ್ತು ರಾಜಾಲಯಂ (ಆದಿಪು. ೬-೧೦೭) ; ಆರೋಪಿತಚಾಪಂ ಸಂಧಾರಿತಲವಚಂ ಧೃತೋಗ್ರಶರಧಿಯುಗಂ ತಾನಾರಂದ ಮಲ್ಲವಂ (ಪಂಪಭಾ. ೮-೧೨) ; ಧೃತ ಪಂಚರತ್ನಮಂ ರಾಗಿತೆಯೊಳ್ ಭೂಷಣಮನಾಂಪ ತೆಱದಿಂದೆ ವಿರಾಗಿತೆಯೊಳ್...ಆಂತನಾ ವಿಭು ತಪಮಂ (ಚಂದ್ರಪು. ೧೦-೨) ; ಧೃತಪಂಕಾರ್ದ್ರಮಯಾಳಿಕಂ ಧೃತ ವಿಶೀರ್ಣಾಗೋಚ್ಚ ಶೃಂಗಂ . . . ಬರುತಿದ್ದುದುದ್ಧತಘನಧ್ವಾನೋತ್ಕರಂ ಶಾಕ್ವರಂ (ಕುಸುಮಾ. ೧೦-೦೪೨) ; ಧೃತನಿದ್ರಾಲಸ್ಯಭಾರಂ ತೊಲಗೆ (ಸೂಕ್ತಿಸು. ೯-೬೩) ; ಧೃತಚಕ್ರವಾಕಿನೀಪರಿಪೂತನಾಕಿನೀ . . . ಎನುತಿರ್ದರು (ವೀಶೈಪು. ೩-೨೩-೭೪). ೨. ಹಿಡಿದ : ಧೃತಕನಕವೇತ್ರಲತೆ ಚಿತ್ರಿತಮಾಗೆ ಕರಾಂಗುಳೀಯಕ ಪ್ರಭೆಯಿಂದಂ ಪ್ರತಿಹಾರಪದವಿಯಂ ತಳೆದು (ಪುಷ್ಪಪು. ೧೩-೦೦೩). ೩. ಹೊಂದಿದ ; ಪಡೆದಿರುವ : ಧೃತನಾನಾವರ್ಣಪರ್ಣಚೃವಿಸಮುದಯ ಸಂದರ್ಶನೀಯಂ . . . ಪೌರರ್ಗೆ ಪಂಚೇಂದ್ರಿಯಸುಖದೊದವಂ ನಂದನಂ ಮಾಬ್ಬುದೆಂದುಂ (ಚಂದ್ರಪು. ೧-೦೧೨). ೪. ಕಾಪಾಡಲ್ಪಟ್ಟ ; ರಕ್ಷಣೆಗೊಂಡ. ೫. ಇಟ್ಟ ; ಇಡಲ್ಪಟ್ಟ. ೬. ನಿರ್ಧರಿಸಿದ ; ದೃಢವಾದ. ೭. ತಯಾರಾದ ; ಸಿದ್ಧವಾದ. ೮. ಉಪಯೋಗಿಸಿದ ; ಬಳಸಿದ. (ನಾ). ೯. ಹೊರುವುದು ; ತಳೆಯುವುದು ; ಧರಿಸುವುದು ; ಧಾರಣೆ. [ಸಂ.]

ಧೃತಕಂಟಕ (ನಾ). ಮುಳ್ಳುಗಳನ್ನು ಪಡೆದಿರುವುದು ; ಮುಳ್ಳುಗಳನ್ನುಳ್ಳುದು : ಧೃತಕಂಟಕಮಾದೊಡಮುನ್ನತಿಯಿಂ ಕೇತಕಿಯೊಳೆಱಗಿದುದು ಮಧುಕರಂ (ಗಿರಿಕ. ೨-೬೪). [ಧೃತ + ಕಂಟಕ]

ಧೃತಕಂಬಲ (ನಾ). ಕಂಬಲನೆಂಬ ಸರ್ಪವನ್ನು ಧರಿಸಿದವನು ; ಶಿವ : ನಿಜಾಂಗಧೃತಕಂಬಲ ಧನಂಜಯ ಮದಂಬಕ (ರಾಜಶೇ. ೧೩-೫೪).

[ಧೃತ + ಕಂಬಲ]

ಧೃತಕಳಾಕಳಾಪ (ನಾ). ೧. ಅರುವತ್ತುನಾಲ್ಕು ಕಲೆಗಳನ್ನು ಪಡೆದವನು. ೨. ಹದಿನಾರು ಕಲೆಗಳನ್ನು ಹೊಂದಿದವನು. ೧, ೨ : ಅರಿಗೋತ್ರಭೇದಿ ವಿಬುಧೇಶ್ವರನಲ್ಲಂ ಧೃತಕಳಾಕಳಾಪಂ ದೋಷಾಕರನಲ್ಲಂ (ಕವಿರಾ. ೩-೧೧೨).

[ಧೃತ + ಕಳಾಕಳಾಪ (= ಕಲಾಕಲಾಪ)]

ಧೃತಗೋತ್ರ (ನಾ). (ಮಂದರ) ಪರ್ವತವನ್ನು ಹೊತ್ತವನು; ಕೂರ್ಮ: ಚಿತ್ರವದನೇವೇಳುವೆನು ಧೃತಗೋತ್ರನುತ್ಸಾಸದಲಿ ವರವೇದತ್ರಯಂಗಳನುಗುಳಿದನು ಕಾರುಣ್ಯನಿಧಿಯೆಂದ (ನಿಭಾಗ. ೨-೩-೩೨).

[ಧೃತ + ಗೋತ್ರ$_2$]

ಧೃತಚಂದ್ರ (ನಾ). ಚಂದ್ರನನ್ನು ಧರಿಸಿದವನು ; ಶಶಿಧರ ; ಶಿವ ಮಳೆಯರಾಜನ ಕಥೆಯ ಕೇಳ್ದರ್ಗೆ ಧೃತಚಂದ್ರ ಮನದಿಷ್ಟವೀವನು (ಪ್ರೌಢರಾ. ೯-೬೫). [ಧೃತ + ಚಂದ್ರ$_2$]

ಧೃತದೀಕ್ಷ (ನಾ). ವ್ರತವನ್ನು ಹಿಡಿದವನು ; ವ್ರತವನ್ನು ತೊಟ್ಟವನು : ಧಾತ್ರಿಯೊಳಾಪನ್ನಾಭಯಸತ್ರದೆ ಧೃತದೀಕ್ಷರಲ್ತೆ ಪುರುಕುಲದರಸರ್ (ಶಾಕುಂತ. ೨೮-೫೧). [ಸಂ. (ಧೃತ + ದೀಕ್ಷಾ + –)]

ಧೃತಧೈರ್ಯ (ನಾ). ಧೈರ್ಯವನ್ನು ಉಳ್ಳವನು ; ದಿಟ್ಟ : ಧೃತಧೈರ್ಯಂ ತುಂಗಶೌರ್ಯಂ ರಜತಶಿಖರಿಧಾಮಂ . . . ಪಂಪಾಧಿನಾಥಂ (ಉದ್ಭಟ. ೧೩-೧೩೮). [ಧೃತ + ಧೈರ್ಯ]

ಧೃತನವಶಶಿ (ನಾ). ಬಾಲಚಂದ್ರನನ್ನು ಧರಿಸಿದವನು ಶಿವ: ಅತಿಶಯ ಮಹಿಮಂ ಧೃತನವಶಶಿವಿಶ್ರುತವರಗುಣಗಣಧಾಮಂ (ಹಮ್ಮೀರ. ೨-೧೦).
[ಧೃತ + ನವಶಶಿ]

ಧೃತಮಂಡಲಿ (ನಾ). ಒಂದು ಬಗೆಯ ಸಸ್ಯ : "ತ್ರಿಪದಿ ಧೃತಮಂಡಲಿ [ಪಾಠಾಂ. ೪] ಮರಾಳಪದಿಯೆನೆ ಹಂಸಪಾದಿ" (ಮಂಗರಾ. ೪೨-೩೯). [ಸಂ.]

ಧೃತಮನೋರಥ (ನಾ). ದೃಢವಾದ ಮನಸ್ಸುಳ್ಳವನು ; ಸ್ಥಿರಮನಸ್ಕ : ಆ ಪುರಮನಾಳ್ವನುದ್ಗತ ಗೋಪುರಮಂ ವಿಜಿತಶಕ್ರಧನಪತಿವರುಣ ತ್ರೈಪುರಮಂ ಧರಣೀಮಣಿ ನೂಪುರಮಂ ಧೃತಮನೋರಥಂ ಪದ್ಮರಥಂ (ಅನಂಪು. ೩-೧೯). [ಧೃತ + ಮನೋರಥ]

ಧೃತಮೋಹ (ನಾ). ಮೋಹಕ್ಕೊಳಗಾದವನು : ಹಾಹಾಧ್ವನಿ . . . ಸುತ್ತಿರ್ದೊಡದಂ ಸಾಹಸಿಗಂ ಕೇಳ್ಗುಂ ಧೃತಮೋಹಂ ಕೇಳ್ಗುಮೆ ಜಿತಾರ್ತ ಕುರರೀರವಮಂ (ಶಾಂತಿಪು. ೬-೩೩). [ಧೃತ + ಮೋಹ]

ಧೃತರಜ (ನಾ). ಧೂಳಿನಿಂದ ಕೂಡಿದುದು : ಧೃತರಜನನಿಲಂ ದಿತಿಜಪ್ರತಿ ಕೂಲಂ ಹರಿಗೆ ಸೈನ್ಯದರ್ಶನದನುಕೂಲತೆಯಂ ಮೆಱೆವಂ (ಜಗವಿ. ೧೫-೧೫).
[ಧೃತ + ರಜ$_1$]

ಧೃತರಾಷ್ಟ್ರ (ನಾ). ೧. ಸ್ಥಿರವಾದ ಚಕ್ರಾಧಿಪತ್ಯವನ್ನು ಉಳ್ಳವನು. ೨. ಒಳ್ಳೆಯ ಅರಸ. ೩. ಒಳ್ಳೆಯ ಅರಸನಿಂದ ಆಳಲ್ಪಟ್ಟ ದೇಶ. ೪. ಕುರುವಂಶದ (ದುರ್ಯೋಧನ ಮುಂತಾದ ನೂರು ಜನ ಕೌರವರ ತಂದೆಯಾದ) ಅಂಧ ದೊರೆ : "ಅಂಧರಾಜನೆನೆ ಧೃತರಾಷ್ಟ್ರನಕ್ಕುಂ" (ಮಂಗರಾ. ೭೮-೩) ; ಧೃತರಾಷ್ಟ್ರಂ ನುಡಿದಾರ್ತನೇ ಹರಿ ಭರಂಗೆಯ್ದಾರ್ತನೇ (ಪಂಪಭಾ. ೧೦-೧೦) ; ಧೃತರಾಷ್ಟ್ರಕ್ಷಿತಿಪಾಲ ಕೇಳ್ ಜನನಿ ಕೇಳ್ ಗಾಂಧಾರಿ (ಗದಾಯು. ೬-೩೫); ಭರತವಂಶದೊಳ್ಳೆದು ಮಿಗೆ ನೂರ್ವರು ಕುಮಾರರು ಪಾಂಡು ಧೃತರಾಷ್ಟ್ರರಿಗೆ ಜನಿಸಿದರು (ಕುವ್ಯಾಅ. ೪ ಸೂಚನೆ). ೫. ಒಂದು ಹಾವಿನ ಹೆಸರು : ಬಳಿಕ ಧೃತರಾಷ್ಟ್ರನೆಂಬ ದುರ್ವ್ಯಾಳಪತಿ ನುಡಿದನು (ಜೈಮಿಭಾ. ೨೪-೨೦). ೬. ಒಬ್ಬ ಗಂಧರ್ವನ ಹೆಸರು : ಪುರಂದರಂ ಧೃತರಾಷ್ಟ್ರನೆಂಬ ಗಂಧರ್ವಂಗೆ ನೇಮಿಸಿದನು (ಜೈಮಿಭಾ. ೫-೪೧). ೭. ಒಬ್ಬ ಯಕ್ಷನ ಹೆಸರು : ಹೇಮಕೂಟಪರ್ವತದಲ್ಲಿ ಮಣಿಭದ್ರ . . . ಧೃತರಾಷ್ಟ್ರ ಪೂರ್ಣಭದ್ರ ವಿರೂಪಾಕ್ಷರೆಂಬವರು ಮೊದಲಾದ ಕೋಟಿಯಕ್ಷರ ಪಟ್ಟಣಂಗಳುಂ (ವಿವೇಕ. ೨೧೭). ೮. ಒಂದು ಬಗೆಯ ಪಕ್ಷಿ. ೯. (ಆಲಂ)ಕುರುಡ ; ಅಂಧ.
[ಸಂ.]

ಧೃತವೇತ್ರ (ನಾ). ದಂಡವನ್ನು ಹಿಡಿದುಕೊಂಡವನು : ಧೃತವೇತ್ರಂ ಚಾರುಚೀನಾಂಬರರಚಿತಶಿರೋವೇಷ್ಟನಂ . . . ಅವನಿಪನೊಡ್ಡೋಲಗ ಕ್ಕೈದೆ (ಚಂದ್ರಪು. ೨-೭೪). [ಧೃತ + ವೇತ್ರ]

ಧೃತವ್ರತ (ನಾ) ೧. ಶ್ರೇಷ್ಠವಾದ ವ್ರತಗಳ ನಿಯಾಮಕ : ಎಲೈ ಅಗ್ನಿಯೇ, ಧೃತವ್ರತನೂ, ಸಕಲರಿಗೂ ಪ್ರಭುವೂ, ಪ್ರಕಾಶಮಾನನೂ ಆದ ವರುಣನೂ ನೀನೆ (ಋಕ್ಸಾರ. ೧೭). ೨. ವ್ರತವನ್ನು ಹಿಡಿದವನು.
[ಧೃತ + ವ್ರತ]

ಧೃತಶಕ್ತೆ (ನಾ). ೧. ವೀರನನ್ನು ಹೊಂದಿದವಳು ; ಪರಾಕ್ರಮಿಯ ಹೆಂಡತಿ. ೨. ಸಮರ್ಥರಾದವರನ್ನು ಪೋಷಿಸುವವಳು ; ಶೂರರಿಗೆ ಆಶ್ರಯವನ್ನು ಕೊಡುವವಳು. ೧, ೨ : ಶ್ರೀರಮಣಿ ಗೌರಿ . . . ವತಿಭಕ್ತೆ ಧೃತಶಕ್ತೆಯೆನೆ ಸನ್ದೀ ವೀರನಿಧಿಯಂ ಚಲದ ವಾರಿನಿಧಿಯಂ ಗುಣದ ಚಾರುನಿಧಿಯಂ ನೆಗರ್ದ ದೇಕಲೆಯನಿನ್ತೀ ನಾರಿಜನರನ್ನಮನದಾರೊ ಮಱೆವರ್ (ಎಕ. IV, ಹೆಗ್ಗಡ. ೧೮-೨೯ ; 1057).
೧೧೬-೧೧). [ಸಂ. ಧೃತಶಕ್ತಾ]

ಧೃತಶಶಿಖಂಡ (ನಾ). ಚಂದ್ರಕಳೆಯನ್ನು ಧರಿಸಿದವನು ; ಶಿವ : ಧೃತಶಶಿಖಂಡ ಜಿತಸುಮಕಾಂಡ ವಿತರಣಶೌಂಡ ಭೃತಜಗದಂಡ (ಶಾಕುಂತ.
[ಧೃತ + ಶಶಿಖಂಡ]

ಧೃತಶಶಿಶಕಲ (ನಾ).=ಧೃತಶಶಿಖಂಡ: ಧೃತಶಶಿಶಕಲಂ ಕೃತಭುವನಕುಲಂ . . . ನುತಗಿರಿಜಾರಮಣಂ (ವೃಷವಿ. ೩೪-೬೫). [ಧೃತ + ಶಶಿಶಕಲ]

ಧೃತಶಸ್ತ್ರ (ನಾ). ಶಸ್ತ್ರವನ್ನು ಧರಿಸಿದವನು ; ಶಸ್ತ್ರಧಾರಿ : ಕೊಲಬಹುದು ಧೃತಶಸ್ತ್ರನಾದಡೆ ಕೊಲುವೆನೆಂತಾಚಾರ್ಯಸುತನನು ತಿಳಿಯ ಹೇಳೆಂದೆನುತ ಬೀಡಿಕೆಗಾಗಿ ನಡೆತಂದ (ನಿಭಾಗ. ೧-೪-೩೦). [ಧೃತ + ಶಸ್ತ್ರ]

ಧೃತಶೈತ್ಯ (ನಾ). ತಂಪನ್ನು ಹೊಂದಿರುವುದು ; ಶೈತ್ಯವನ್ನೊಳಗೊಂಡಿರುವುದು: ಧೃತಶೈತ್ಯಂ ಧಾರಾಜಲಯುತಮನುಕಂಪಾನ್ವಿತಂ ದಲೆನಿಸಿಯುಂ . . . ರಿಪುನೃಪರ್ಗೀವುದಧಿಕತಾಪೋದಯಮಂ (ಚಂದ್ರಪು. ೨-೩).
[ಧೃತ + ಶೈತ್ಯ]

ಧೃತಸತ್ವೆ (ನಾ). ಗರ್ಭಿಣಿ : "ಗುರ್ವಿಣಿ ಧೃತಸತ್ವೆಯುಮಂತರ್ವತ್ನಿಯೆನಿ ಪ್ಪೊಡಾಕೆ ಗರ್ಭಿಣಿಯೆನಿಕ್ಕುಂ" (ವಸ್ತುಕೋ. ೫೪-೧೪).
[ಸಂ. ಧೃತಸತ್ವಾ]

ಧೃತಸೋಮ (ನಾ). = ಧೃತಚಂದ್ರ : ಧೃತಸೋಮ ಗತಕಾಮ ಚಿರಲಿಂಗ ವರಸಂಗ . . . ಗಿರಿಜೇಶ (ಹಚಕಾ. ೧-೫). [ಧೃತ + ಸೋಮ]

ಧೃತಿ (ನಾ). ೧. ಹಿಡಿದುಕೊಳ್ಳುವುದು ; ತೆಗೆದುಕೊಳ್ಳುವುದು. ೨. ತಾಳುವಿಕೆ ; ಧರಿಸುವುದು. ೩. ಪಡೆಯುವುದು ; ಹೊಂದುವುದು. ೪. ಧೈರ್ಯ ; ಧೀರತನ ; ಎದೆಗಾರಿಕೆ ; ಕೆಚ್ಚು : ಧೃತಿಯ ನವಳುಬಿಸಿ . . . ನಡೆವಾಗಳ್ (ಲೀಲಾವ. ೬-೪೯) ; ಪೊಱಗತುಳ ಧೃತಿಯ ನಾಂತಂ ನೆಱೆ ಮನದೊಳ್ ತಳೆದನೆಸೆವ ಕುಸುಮಾವಳಿಯಂ (ಕುಸುಮಾ. ೧೦-೧೦೩) : ಮರಳಿ ಧೃತಿಯಿಂದೆದ್ದು ಕೋಪಾತುರನು ತುರಗವನೊದೆದು ಕೆಡಹಲು (ಕೌಶಿರಾ. ೩೬-೨೯) ; ಪೆಣ್ಣಾದೊಡಂ ನೀನೆನಗೆ ಮತಿಯೊಳುಂ ಧೃತಿಯೊಳುಂ ಗಂಡಿಗೆಣೆ (ಶ್ರೀರಾಮಾ. ೨೦೫-೧೨೬). ೫. ತಾಳ್ಮೆ ; ಸಹನೆ ; ಸಂಯಮ : ಧೃತಿ ಬಂದಾಗಲೆ ಮಾಣೆಂಬ ತೆಱದೆ ಪೇಸಿದನರಸಂ (ಯಶೋಚ. ೨-೫೩) : ವಿರತಿ ವಿವೇಕ . . . ಧೃತಿ ಸ್ಮೃತಿ . . . ತಪಸ್ಸು ಯೋಗ ನಿಶ್ಚಯ ಮುಂತಾದ ಸಾತ್ವಿಕಗುಣಗಳಿಂ ಸುಖಮಹಿತೋರ್ಧ್ವಲೋಕಂಗಳಂ ಸಾರ್ದು (ವಿವೇಕ. ೨೪೭) ; ಅಱಿದು ಪಂಚಾರ್ಥವನು ಧೃತಿಯನು ಮೆಱೆದು ಮನವನು ನಿಲಿಸಿ ತನ್ನೀ ದಿವ್ಯಮೂರ್ತಿಯಲಿ ಅಱಿಯದಿತರವನಿರಲು ನೀವೆನ್ನಱಕೆಯಲಿ ನಾಲುಕು ಯುಗಗಳುತ್ತರಿಸಲಾ ನಿಮಗಂದು ಮೈದೋಱೆದೆನು ನಾನೆಂದ (ನಿಭಾಗ ೧೦-೪-೨). ೬. ಸ್ಥಿರವಾಗಿರುವುದು ; ಅಚಲತೆ ; ಸ್ಥೈರ್ಯ : ಆತನ ಮಾತಂ ಕೇಳ್ದಪಗತಶೋಕನುಮುಪಗತವಿವೇಕನುಮಾಗಿ ಧೃತಿಯಂ ತಾಳ್ದು (ಅಜಿಪು. ೯-೬೨) ; ಧೃತಿಯಿಂ ಮಚ್ಚರಿಸುವ ಪರ್ವತಮಂ ತಾನಿಕ್ಕಿ ಮೆಟ್ಟಿದಂತಿರೆ . . . ಇರ್ದಂ ಯೋಗಧುರ್ಯನಚಲಿತಧೈರ್ಯಂ (ಅರ್ಧನೇ. ೬-೨೦) ; ಅರ್ಥಬಂಧುಸುತಾದಿಗಳ ಪ್ರಾಪ್ತ್ಯಪ್ರಾಪ್ತಿಗಳಲ್ಲಿ ಹರ್ಷಶೋಕ ವಿಲ್ಲದಿರ್ಪುದೇ ಧೃತಿಯೆನಿಸುವುದು (ವಿವೇಕ. ೧೪೯) ; ಧೃತಿಯಾ ಶ್ರದ್ಧಾ ಸುಖವಿವಿದಿಷಾವಿವಿದಿಷಮೆಂಬತಿಶಯಗಳೈದು ವಿಧಮರಿತು ಮತ್ತದ ತಿಳಿದು ಮತಿಯಿಂದ ಮತ್ತುಸಿರಿ ಕೊನೆಗಾಣಲೆಸಗುವುದೆ ಧೃತಿ(ವಂಕಾರಾ. ೩-೬-೪೩);

ಹಾನಿವೃದ್ಧಿಯಿಂ ಮತಿಗೆ ವಿಕೃತಿ ತೋರದಿರಲದೆ ಧೃತಿ(ವೇದಾಂಪ. ೩-೫-೦೭). ೭. ಸಂತೋಷ; ಆನಂದ; ಉಲ್ಲಾಸ. 'ಧೃತಿವೆಱು' ಪರಾ. ೮. ಚಂದ್ರನ ಹದಿನಾರು ಕಲೆಗಳಲ್ಲಿ ಒಂದು: ಚಂದ್ರನಾದೊಡೆ ಅಮೃತ . . . ಧೃತಿ ಶಶಿನಿ ಚಂದ್ರಿಕೆ . . . ಕಾಮದಾಯಿನಿಯೆಂಬ ಷೋಡಶಕಲೆಗಳಿಂ ಭರಿತನಾಗಿ (ವಿವೇಕ. ೨೬೭). ೯. ಒಂದು ಬಗೆಯ ಸಸ್ಯ: "ಧೃತಿ [ಪಾಠಾಂ. ದ್ಯುತಿ]ಯೆನಲು ಮುಷ್ಟೆಯುಕ್ಕು" (ಮಂಗರಾ. ೪೫-೪೮) ೧೦. ಒಂದು ನಾಡಿಯ ಹೆಸರು: ಧವನಿ, ಗಮನಿ, ಲೋಲೆ, ಧೃತಿ, ಸರ್ವಗಾ ಎಂಬೈದು ನಾಮವನುಳ್ಳ ನಾಡಿಯು ... ಕಾಣಬರುವುದು (ಸಕವೃ. ೧೦). ೧೧. ವಿಶ್ವೇದೇವತೆಗಳಲ್ಲಿ ಒಬ್ಬ ದೇವತೆಯ ಹೆಸರು. 'ವಿಶ್ವೇದೇವ' ಪರಾ. ೧೨. ಮನಸ್ಸಿನ ಹದಿನಾರು ಬಗೆಯ ವಿಕಾರಗಳಲ್ಲಿ ಒಂದು: ಐತರೇಯೋಪನಿಷತ್ತಿನಲ್ಲಿ ಸಂಜ್ಞಾನ (ಚೇತನಭಾವ) . . . ಪ್ರಜ್ಞಾನ, ಮೇಧಾ, ದೃಷ್ಟಿ, ಧೃತಿ, ಮತಿ, ಮನೀಷಾ . . . ಈ ಹದಿನಾರು ಮನಸ್ಸಿನ ವಿಕಾರಗಳೆಂದಿರುವವು (ಅಮೃತ. ೬-೨೬ ಟೀಕು). ೧೩. [ಛಂದ] ಅಕ್ಷರ ಛಂದಸ್ಸಿನಲ್ಲಿ ಹದಿನೆಂಟನೆಯ ಛಂದಸ್ಸಿನ ಹೆಸರು: ಉಕ್ತೆ ಅತ್ಯುಕ್ತೆ . . . ಧೃತಿ ಅತಿಧೃತಿ . . . ಉತ್ಕೃತಿ ಎಂದಿಪ್ಪತ್ತಾಱು ಛಂದಂಗಳಕ್ಕುಂ (ಛಂದೋಂಬು. ೧-೪೬ವ). ೧೪. [ಜ್ಯೋತಿ] ವಿಷ್ಕಂಭ ಮೊದಲಾದ ಇಪ್ಪತ್ತೇಳು ಯೋಗಗಳಲ್ಲಿ ಎಂಟನೆಯದು: ವಿಷ್ಕಂಭ ಪ್ರೀತಿ . . . ಧೃತಿ ಶೂಲ . . . ಬ್ರಹ್ಮ ಐಂದ್ರ ವೈಧೃತಿಗಳೆಂಬಿಪ್ಪತ್ತೇಳು ಯೋಗಂಗಳುಂ (ವಿವೇಕ. ೩೩೦); ಯೋಗಗಳತಿಶಯವನರಿಯೈಯ ಪೇಳುವೆ ವ್ಯತಿಯು ಧೃತಿ ವಿಷ್ಕಂಭ ಶೂಲವು (ಗಗತಾ. ೪-೬೯). 'ಧೃತಿಯೋಗ' ಪರಾ. ೧೫. [ಕಾವ್ಯಮೀ] ಮೂವತ್ತಮೂರು ಸಂಚಾರೀಭಾವಗಳಲ್ಲಿ ಒಂದು; ಜ್ಞಾನ, ಅಭೀಷ್ಟಪ್ರಾಪ್ತಿ ಮುಂತಾದುವುಗಳಿಂದ ಆಸೆಯು ಪೂರ್ಣವಾಗುವುದು; ಸಂತುಷ್ಟಿ; ತೃಪ್ತಿ: ಧೃತಿ ನಿದ್ರಾ ವೇಗ . . . ಇವಿಂತೆಯ್ದೆ ಸಂಚಾರಿಭಾವಂ (ಕಾವ್ಯಾವ. ೭೯೫); ಮತಿ ಲಜ್ಜೆ . . . ಧೃತಿ ತರ್ಕ ಉನ್ಮಾದ . . . ಅಪಸ್ಮಾರಗಳೆಂಬ ಮೂವತ್ತುಮೂಱು ಸಂಚಾರೀಭಾವಂಗಳಿಂ ಪರಿವರ್ಧಿಸಿ (ವಿವೇಕ. ೨೨೭); ಜ್ಞಾನ ಮೊದಲಾದವುಗಳಿಂದ ಉಂಟಾಗುವ ಸಂತುಷ್ಟಿಯೇ ಧೃತಿ (ಭಾರಮೀ. ೩೪೭). ; ೧೬. [ಯೋಗ] ಧ್ಯೇಯವಸ್ತುವಿನಲ್ಲಿ ಅಚಲವಾಗಿ ಮನಸ್ಸನ್ನು ನೆಲೆಗೊಳಿಸುವುದು; ಧಾರಣ. 'ಧೃತಿತ್ರಯ' ಪರಾ. ೧೭. [ಜೈನ] ಐವತ್ತುಮೂರು ಗರ್ಭಾನ್ವಯ ಕ್ರಿಯೆಗಳಲ್ಲಿ ನಾಲ್ಕನೆಯದು: ದ್ವಾದಶಾಂಗದೊಳ್ ಪೇಳ್ದ ಆದಾನ ಪ್ರೀತಿ ಸುಪ್ರೀತಿ ಧೃತಿ . . . ಎಂಬಯ್ವತ್ತುಮೂಱು ಗರ್ಭಾದಿ ನಿರ್ವಾಣ ಪರ್ಯಂತಂಗಳಪ್ಪ ಗರ್ಭಾನ್ವಯಕ್ರಿಯಗಳುಂ (ಆದಿಪು. ೧೫-೧೫ವ); ೨ನೇ ತಿಂಗಳ ಗರ್ಭವತಿಗೆ . . . ಅತ್ತಿಹಣ್ಣಿನ ರಸವಂ ಸಹ ಮಂತ್ರಪೂರ್ವಕ ಉದರದ ಮೇಲೆ ಬೀಳುವಂತೆ ಹಾಕುವುದೇ ಧೃತಿಯೆಂಬ ನಾಲ್ಕನೆ ಕರ್ಮವು (ಪುರುಷ. ೧೯೯). 'ದೀಕ್ಷೆ' ಪರಾ. ೧೮. [ನ್ಯಾಯ] ದೇವರಿದ್ದಾನೆಂದು ಸಾಧಿಸುವ ಹೇತುಗಳಲ್ಲಿ ಒಂದು; P ವಿಶ್ವವು ಕುಸಿದು ಬೀಳದಂತೆ ಧಾರಣೆ ಮಾಡುವ ಕಾರ್ಯದಿಂದ ಅದಕ್ಕೆ ಕಾರಣಭೂತನಾದವನು ಒಬ್ಬನು ಇರಲೇಬೇಕು-ಅವನೇ ದೇವರು ಎಂದು ತಾರ್ಕಿಕರು ಸಾಧಿಸುತ್ತಾರೆ: ಧೃತಿಯೆಂದರೆ ಭೂಗೋಳ ಖಗೋಳ ಮೊದಲಾದ ವಸ್ತುಗಳನ್ನು ಧರಿಸುವ ಪುರುಷನಿರಬೇಕು (ಹಿಂದಸಾ. ೧೨೭). [ಸಂ.]

ಧೃತಿಗಿಡಿಸು 'ಧೃತಿಗೆಡಿಸು' ನೋ.

ಧೃತಿಗಿಡು 'ಧೃತಿಗೆಡು' ನೋ.

ಧೃತಿಗುಂದು (ಕ್ರಿ). ಎದೆಗುಂದು; ಧೈರ್ಯವನ್ನು ಕಳೆದುಕೊಳ್ಳು: ಪರಿಜನಮಾಮೆ ದಲ್ ನಿನಗೆ ನೀಂ ಧೃತಿಗುಂದದಿರು (ಕುಸುಮಾ. ೦೪-೧೧೮); ಪುರಹರನಿಟ್ಟ ಪುಲ್ಲ ಮುಱಿಯಂ ಮುರವೈರಿ ವಿರಿಂಚಿ ಮುಖ್ಯ ನಿರ್ಜರರದ ನೆತ್ತಲಾಱದೆ ವಲಂ ಧೃತಿಗುಂದಿದರ್ (ರಾಜಶೇ. ೦೩-೨೪).

[ಧೃತಿ + ಕುಂದು$_1$]

ಧೃತಿಗೆಡಿಸು, ಧೃತಿಗಿಡಿಸು (ಕ್ರಿ). ಅಧೈರ್ಯವನ್ನುಂಟುಮಾಡು; ಎದೆಗೆಡಿಸು: ಅತಿಕಾಂಕ್ಷೆಯೆಂಬಗಳತಿ ವಿಸ್ಮಯವಾಗಿ ಕ್ಷಿತಿಯನೊಡೆದು ನಾಗತಿಯ ಧೃತಿಗೆಡಿಸುತ ಬಳಸಿಹುದಾ ಪುರದೊಳು (ತ್ರಿಪುಸಾಂ ೪-೪೦); ದಿನದಿಂದ ದಿನಕ್ಕೆ ಆತನನ್ನು ಧೃತಿಗೆಡಿಸುತ್ತಿದ್ದವು ಅಂಥವೇ (ವಾತ್ಸಲ್ಯ. ೨೭೬). ಧೃತಿಗಿಡಿಸು: ಮೂದಲಿಸಿ ಧೃತಿಗಿಡಿಸಿ ಬೆಂಕೊಣ್ಡು ಮತ್ತಂ (ಎಕ. II, ೨೪೦-೨೭; ಸು. 1175). [ಧೃತಿ + ಕೆಡಿಸು$_1$]

ಧೃತಿಗೆಡು, ಧೃತಿಗಿಡು (ಕ್ರಿ). ಧೈರ್ಯವನ್ನು ಕಳೆದುಕೊಳ್ಳು; ಅಧೈರ್ಯಪಡು; ಎದೆಗುಂದು: ಮದನ ಮದೋದ್ರೇಕದಿನೆನ್ನಿದಿರೊಳ್ ಧೃತಿಗೆಟ್ಟು ಸಿಗ್ಗಿನಿಂ ತನ್ನೊಳ್ ಪೊಲ್ಲದನೆತ್ತಾಚರಿಸುಗುಮೋ (ಕಾದಂಪೂ. ೮೨೫); ಮತಿಗೆಟ್ಟೆನು ಮನದ ವಿಕಾರದಿಂದ ಧೃತಿಗೆಟ್ಟೆನು ಕಾಯವಿಕಾರದಿಂದ (ಬಸವ. ೪೩); ವ್ರತಿಗಳ್ . . . ಮತಿಗೆಟ್ಟರ್ ಧೃತಿಗೆಟ್ಟರ್ (ಗಿರಿಕ. ೮-೨೩); ಇನಿತು ಧೃತಿಗೆಡಲೇಕೆ (ಬಸಪು. ೨೫-೨೩); ಪಟುಭಟರು ಧೃತಿಗೆಟ್ಟು ದೆಸೆದೆಸೆಗಳಲಿ ಮಿಗೆ ಸಾಲಿಟ್ಟು ಸರಿದುದು (ಕುವ್ಯಾಕ. ೧೯-೯೮). ಧೃತಿಗಿಡು: ಧೃತಿಗಿ[ಪಾಠಾಂ. ಗೆ]ಡಬೇಡ ಧೈರ್ಯವನಾಂತು ಬಾರೆಂದು ರತಿರಾಜ ಮೂದಲಿಸಿದನು (ಮೋಹತ. ೦೨-೯೨). [ಧೃತಿ + ಕೆಡು$_1$]

ಧೃತಿತ್ರಯ (ನಾ). [ಯೋಗ] ಸಾತ್ತ್ವಿಕಿ, ರಾಜಸಿ ಮತ್ತು ತಾಮಸಿ ಎಂಬ ಮೂರು ಬಗೆಯ ಧೃತಿ,-ಯೋಗಾಂಗವಾದ ಧಾರಣ; P ಯೋಗಾಭ್ಯಾಸದಿಂದ ಮನಸ್ಸು, ಪ್ರಾಣ, ಇಂದ್ರಿಯವ್ಯಾಪಾರಗಳನ್ನು ಹತೋಟಿಯಲ್ಲಿಟ್ಟುಕೊಂಡು ಬೇರೆ ಕಡೆಗೆ ತಿರುಗದಂತೆ ಮಾಡುವುದು ಸಾತ್ತ್ವಿಕೀಧೃತಿ; ಫಲಾಪೇಕ್ಷೆಯಿಂದ ಮನಸ್ಸು, ಪ್ರಾಣ, ಇಂದ್ರಿಯಗಳನ್ನು ಬಿಗಿಹಿಡಿದು ಮಾಡುವ ಧ್ಯಾನ ರಾಜಸೀ ಧೃತಿ; ನಿದ್ರೆ, ಭಯ, ಶೋಕ, ವಿಷಾದ, ಮದ ಇವೊಂದನ್ನೂ ಬಿಡದೆ ದುರ್ಬುದ್ಧಿಯಿಂದ ಕೂಡಿರುವುದು ತಾಮಸೀಧೃತಿ. ಹೀಗೆ ಭಗವದ್ಗೀತೆಯಲ್ಲಿ ಧೃತಿತ್ರಯದ ವಿವರಣೆ ಇದೆ: ತಾಪತ್ರಯ ಕರ್ಮತ್ರಯ . . . ಧೃತಿತ್ರಯ ಗುಣತ್ರಯ ಶಕ್ತಿತ್ರಯ ಕಾಲತ್ರಯ (ವೇದಾಂಪ. ೪-೧೮-೪). [ಧೃತಿ + ತ್ರಯ]

ಧೃತಿಯುಕ್ತ (ಗು). ೧. =ಧೃತಿಯುತ ೧. (ನಾ). ೨. =ಧೃತಿಯುತ ೨: ಧೃತಿಯುಕ್ತರ್ ಶೌರ್ಯಯುಕ್ತರ್ ಕುರುಕುಲಧರಣೀಶರ್ಕಳ್ (ಮಹಾನೇ. ೧೩-೯). [ಸಂ.]

ಧೃತಿಯುತ (ಗು). ೧. ಧೀರತೆಯನ್ನು ಹೊಂದಿದ; ಧೈರ್ಯವುಳ್ಳ: ಧೃತಿಯುತಕ್ಷತ್ರಿಯನು ವೇದಪ್ರತಿಯುತಶ್ರೋತ್ರಿಯನಹಿಂಸಾರತನು ಮಹಪುರುಷನು (ಕುವ್ಯಾಅ. ೨೩-೪೧). (ನಾ). ೨. ಧೀರ; ಧೈರ್ಯಶಾಲಿ: ಪತಿಯ ಮುಸುಕಿದನಾ ಸುಮಂತನು ಧೃತಿಯುತರ ನೆಱೆಗಾಹಲಿರಿಸಿದ ಸುತರ ಬಳಿಗಟ್ಟಿದನು ದೂತರ ಬೇಗ ಬಹುದೆನುತ (ಕೌಶಿರಾ. ೪-೭).

[ಸಂ.]

ಧೃತಿಯೋಗ (ನಾ). = ಧೃತಿ ೧೪: ಧೃತಿಯೋಗಕೆ ರವಿ: ೪೨ ಗಳಿಗೆ ಮೇಲೆ ತ್ಯಾಜ್ಯಾ (ಭಾಸ್ಕರ. ೭೦-೮). [ಧೃತಿ + ಯೋಗ]

ಧೃತಿವೆಱು (ಕ್ರಿ). ಉತ್ಸಾಹದಿಂದ ಕೂಡಿರು; ಉಲ್ಲಾಸಗೊಳ್ಳು; ಸಂಭ್ರಮಪಡು: ಧೃತಿವೆತ್ತಾ ತವದಿಗ್ಜಯೋದ್ಯಮಭವದ್ಭೇರೀಪ್ರಣಾದಕ್ಕೆ ಕಂಪಿತಮಪ್ಪಾದಿಯ ಕೂರ್ಮನಂ ಫಣಿಪನಂ . . . ಭೂಮಿ ಬಿಸುಟ್ಟು ಬಂದು ಪಿರಿದುಂ ನಿಶ್ಚಿಂತದಿಂ ಸುಪ್ರತಿಷ್ಠಮಾಗಿರ್ಪುದು ಸುಪ್ರತಿಷ್ಠಿತ ಪಟಿಷ್ಠೋದ್ದಂಡದೋರ್ದಂಡದೊಳ್ (ಅರ್ಧನೇ. ೪-೩೪); ಧೃತಿವೆತ್ತಂ ನೃಪಕಂತುವೀ ತೆಱಂ (ಕುಸುಮಾ. ೧೦-೧೦೪). [ಧೃತಿ + ಪೆಱು$_1$]

ಧೃತಿಹೀನ (ನಾ). ಧೈರ್ಯವಿಲ್ಲದವನು : ಕ್ಷಿತಿಯೊಳು ಧನಾಢ್ಯರುಂ ಸಕಲ ವ್ಯವಹಾರಿಗಳು ಧೃತಿಹೀನರೆರಡನೆ ಕುಬೇರರೆಂದೆನಿಸುವರು. . . ವೈಶ್ಯರು (ನವವೋ. ೩-೪೧). [ಧೃತಿ + ಹೀನ]

ಧೃಷ್ಟ (ಗು). ೧. ಧೈರ್ಯವುಳ್ಳ ; ಕೆಚ್ಚಿನ ; ಆತ್ಮವಿಶ್ವಾಸದ. ೨. ದಯೆಯಿಲ್ಲದ ; ಕ್ರೂರವಾದ ; ಒರಟಾದ. ೩. ನಾಚಿಕೆಯಿಲ್ಲದ ; ಲಜ್ಜೆಯಿಲ್ಲದ. ೪. ವಿಷಯಲಂಪಟನಾದ ; ದುರ್ಮಾರ್ಗಿಯಾದ. ೫. ಮುಂದೆ ನುಗ್ಗುವ ಸ್ವಭಾವದ ; ಧಾರ್ಷ್ಟ್ಯದ ; ದುಡುಕುತನದ. ೬. ದುರಭಿಮಾನದ ; ಗರ್ವದಿಂದ ಕೂಡಿದ. (ನಾ). ೭. ಆತ್ಮವಿಶ್ವಾಸವುಳ್ಳವನು ; ಗಟ್ಟಿಗ ; ಧೈರ್ಯಶಾಲಿ : ಧೃಷ್ಟಂ ವರವಕ್ರೋಕ್ತಿ ವಿಶಿಷ್ಟಂ . . . ಎನಿಪ್ಪ ದೂತಮುಖ್ಯನಂ (ಪಾರ್ಶ್ವಪು. ೩-೫೦). ೮. ಧಾರ್ಷ್ಟ್ಯವುಳ್ಳವನು ; ಉದ್ಧಟ ; ದುಡುಕಿನವನು : "(ಧೃಷ್ಟ) ನಾತಂ ವಿಯಾತಂ" (ವಸ್ತುಕೋ. ೯೯-೬) ; "ವಿಯಾತಾ. ಧೃಷ್ಟಃ – ಈ ೨ ಬಗೆಯದವಂ" (ಹಲಾಯು. ೬೦-೩೦೬); "ಧೃಷ್ಟಃ. ಧೃಷುಃ. ವಿಯಾತಃ– ೩ ದಿಟ್ಟತನವುಳ್ಳವನ ಪೆಸರು" (ಸಿದ್ಧಾಂತಿ. ೩೩೯) ; ಈ ಕಥೆ ಗುಣ್ಪುವೆತ್ತುದವರುಂ ಜ್ಞಾನರ್ಧಿಸಂಪನ್ನರೆಂದಿರದಾಂ ಧೃಷ್ಟನೆನೀ ಕಥಾಬ್ಧಿಯುಮನೇನೀ ಸಲ್ಮನಂದಂದೆನೋ (ಆದಿಪು.೧-೩೫). ೯. [ಕಾವ್ಯಮೀ] ದಕ್ಷಿಣ, ಧೃಷ್ಟ, ಅನುಕೂಲ ಮತ್ತು ಶಠ ಎಂಬ ನಾಲ್ಕು ಬಗೆಯ ಶೃಂಗಾರನಾಯಕರಲ್ಲಿ ಒಂದು ವಿಧ; "ಧೃಷ್ಟನೆಂದರೆ, ತನ್ನ ಪತ್ನಿಯಲ್ಲಿ ಅಪರಾಧ ಮಾಡಿ ದೋಷಗಳು ಸ್ಪಷ್ಟವಾಗಿದ್ದು ತಾನು ಆಕ್ಷೇಪಣೆಗೆ ಗುರಿಯಾದರೂ ನಾಚಿಕೆ ಪಟ್ಟುಕೊಳ್ಳದವನು" (ಕೈಪಿಡಿ. ೩೦೦); ಆಗಳರಸನಾ ಧೃಷ್ಟನ ಖಾತ್ವಾಸಮೀಕರಣನ್ಯಾಯಮಾದ ಮುಳಿಸುಂ ತಿಳಿಪುಮಿರ್ವರ್ಗ ಮುಬ್ಬೆಗಮಂ ಪಡೆದುದೆಂದಿಂತೆಂದಂ (ಚಂದ್ರಪು. ೮-೫೪ವ) ; ಶೃಂಗಾರನಾಯಕರಲ್ಲಿ ದಕ್ಷಿಣ, ಧೃಷ್ಟ, ಅನುಕೂಲ, ಶಠ ಎಂದು ನಾಲ್ಕು ವಿಧ (ಸಂನಾಟ. ೧೮). [ಸಂ.]

ಧೃಷ್ಣು (ಗು). ೧. ಕೆಚ್ಚಿನ; ದಿಟ್ಟತನವುಳ್ಳ; ಧೈರ್ಯವುಳ್ಳ. ೨. ನಾಚಿಕೆಯಿಲ್ಲದ ; ನಿರ್ಲಜ್ಜೆಯ. ೩. ಬಲವುಳ್ಳ ; ಪ್ರಭಾವವುಳ್ಳ. (ನಾ). ೪. ದಿಟ್ಟತನವುಳ್ಳವನು ; ಉದ್ಧಟ : "ಧೃಷ್ಟ, ಧೃಷ್ಣು, ವಿಯಾತ" (ನಾಚಿಕಾ. ೬); "ಧೃಷ್ಟಃ, ಧೃಷ್ಣುಃ, ವಿಯಾತಃ–೩ ದಿಟ್ಟತನವುಳ್ಳವನ ಪೆಸರು" (ಸಿದ್ಧಾಂತಿ. ೩೩೯). [ಸಂ.]

ಧೇನಿಕೆ, ಗೇಣಿಕೆ, ಗೇನಿಕೆ (ನಾ). ಯೋಚನೆ; ಧ್ಯಾನಿಸುವಿಕೆ : ಎದೆ ತೀವಿ, ಕಣ್ ತುಂಬಿ ನಲುಮೆ ಹರಿದಾಡಿತ್ತು ತಾಯ ಧೇನಿಕೆ, ಎಣಿಕೆ ಅದರಲ್ಲಿ ಮುಳುಗೆ (ಪಿಪಾಸೆ. ೩೬-೮). ಗೇಣಿಕೆ: "ಗೇಣಿಕೆ–ವಿಚಾರ; ಕಲ್ಪನೆ" (ಜಾನಕೋ. ೫೦). ಗೇನಿಕೆ : ಕೈಯೊಳಗೆ ಕಾಸಿದ್ದರೆ, ಕುಣಿದಾಡಿಸಿಬಿಡುವೆ. ಮತ್ತೆ ಮನಸ್ಸಿನೊಳಗೆ ಗೇನಿಕೆ ಹಾಕ ಹತ್ತಿದ (ಕೊತಕಾ. ೩೨). 'ಧೇನಿಸು' ಪರಾ. [<ಧ್ಯಾನ +– ಇಕೆ]

ಧೇನಿಸು, ಗೇಣಿಸು, ಗೇನಿಸು, ಜಾನಿಸು (ಕ್ರಿ). ೧. ಚಿಂತಿಸು ; ಧ್ಯಾನ ಮಾಡು : ಈಸು ಪುಣ್ಯವ ಮಾಡಿ ದಿನದಿನ ಧೇನಿಸೆ (ವೈಕುಂಪ. ೩-೪೪) ; ಮನೋಭಾವವ ಧೇನಿಸಿ ನೋಡುತ್ತ (ವಿದಾಕ್ಯ. ೧-೪೪) ; ಅಹರ್ನಿಶೀ ಧೇನಿಸುವೆ ನಿನ್ನನ್ನು (ಜಗದಾ. ೧೬೮) ; ತಮಗೊಗ್ಗಿದುದನು ಧೇನಿಸಿ ಜೀರ್ಣಿಸಿ ನಭದಲಿ ನೆಗೆದು ಸೊಬಗನು ವರ್ಣಿಸಿ (ಚಿಂತನ. ೮೦-೩೩). ೨. ಯೋಚಿಸು; ವಿಚಾರಿಸು ; ಬಗೆ : ಧೇನಿಸಿದರೀ ಜಗದೊಳೆಲ್ಲಿಯು ಕಾಣೆ ನಿನಗನು ರೂಪ ಪುರುಷನ (ಪಾರ್ವಪ. ೨-೪೭) ; ಪದ್ಮಾವತಿಯು ಮನದಲ್ಲಿ ಧೇನಿಸಿದಳು (ಸಮಜೀ. ೮೭). ೩. ನೆನೆಸಿಕೊಳ್ಳು ; ಸ್ಮರಿಸು : ಆಗ ಕಂಡ ಅವಳನ್ನು ಅನಂತನು ಚೆನ್ನಾಗಿ ಧೇನಿಸಿಕೊಂಡ (ಕಾಗಕ. ೫೩). ಗೇಣಿಸು : ೨. ಅವಳನ್ನು ಮುಂದೆ ಕೂಡ್ರಿಸಿಕೊಂಡು ಬಲು 'ಖುಷಿ'ಯಿಂದ ಮಕ್ಕಳಾದ ಮೇಲೆ ಉತ್ತಮ ನಡೆತನವನ್ನು ಮಾಡೋಣವೆಂದು ಗೇಣಿಸುತ್ತಾನೆ (ಕನ್ನಜಾ. ೬೦). ಗೇನಿಸು : ೨. ಏನು ಮಾಡಲಿ . . . ಎಂದು ಮನಸ್ಸಿನೊಳಗೆಯೇ ಗೇನಿಸುತ್ತಿದ್ದಳು (ಕೊತಕಾ. ೪೩) ; ಬಿದ್ದುಕೊಂಡೇ ಗೇನಿಸತೊಡಗಿದಳು (ಮಾಲತಿ. ೧) ; ಗೇನಿಸಿ ಗೇನಿಸಿ ಜಂಪುಹತ್ತಲು ಒಂದು ಕನಸು ಸುಳಿಯಿತು (ಪವನ. ೩೬). ಜಾನಿಸು: ೧. "ಜಾನಿಸು–ಧ್ಯಾನೇ" (ಶಮಧಾ) ; ದೇವರಂ ಜಾನಿಸುತ್ತಂ ಪಂಚನಮಸ್ಕಾರಮಂ ಮನದೊಳು ಚ್ಚಾರಿಸುತ್ತಂ (ವಡ್ಡಾರಾ. ೧೦೧-೦೬) ; ಜಿನೇಂದ್ರನಂ ಬಗೆವ ಮನಂ ಗಡಂ ಮಗುಚ್ಚು ಜಾನಿಪ ಕಣ್ಗಡಂ (ಆದಿಪು. ೩-೬೦) ; ಮುನ್ನಿನಂದದೊಳ್ ಮನಂಗೊಂಡು ಜಾನಿಸುತಿರ್ದಂ (ಕಾದಂಉ. ೪೪೬). ೨. ಈ ನುಡಿಯನ್ನು ಕೇಳಿ ಭೀಷ್ಮಕಭಗಿನಿ ಜಾನಿಸಿ ನುಡಿದಳು ಜಾಣೆ (ಕಾಮಕ. ೧-೩೭) ; ಎಂದಿಗವನ ಪಡಿಮೊಗದೊಳು ಸಂದಪೆನೆಂದೆಡೆವಿಡದೆ ಜಾನಿಪಳು (ಹದಿಬ. ೭-೩೯) ; ರಘುಪ್ರವರನುಂ ಮನಮಱುಗಿ ಇನಿಸುಂ ಪೊಟ್ಟು ಜಾನಿಸಿ (ರಾಮಶ್ವ. ೨೦-೨೪). ೩. ಆನಂದವ ಮಾಡು ಮಾಡುತೊಪ್ಪುವುತ್ತಮಾಂಗಿಯಂ ಜಾನಿಸಿದು ನೃಪಾಲಕಂ (ಉದ್ಯಟ. ೩-೧೧೧). ℙ ಇಲ್ಲಿ ಒಟ್ಟಿಗೆ ಪರಿಶೀಲಿಸಿರುವ 'ಧೇನಿಸು' ಎನ್ನುವ ಶಬ್ದದ ಪರ್ಯಾಯರೂಪಗಳ ವ್ಯುತ್ಪತ್ತಿಯ ಬಗ್ಗೆ ಅನುಮಾನವಿದೆ. 'ಧೇನಿಸು', 'ಜಾನಿಸು' ಎನ್ನುವ ರೂಪಗಳು 'ಧ್ಯಾನ' ದಿಂದಲೂ, 'ಗೇಣಿಸು', 'ಗೇನಿಸು' ಎನ್ನುವ ರೂಪಗಳು 'ಜ್ಞಾನ' ದಿಂದಲೂ ನಿಷ್ಪನ್ನವಾಗಿರಬೇಕು. ಇದು ಪರಿಶೀಲನಾರ್ಹ. [<ಧ್ಯಾನ +– ಇಸು$_3$]

ಧೇನು (ನಾ). ೧. ಆಕಳು ; ಹಸು ; ಗೋವು : ಮೊಸರಂ ದುಗ್ಧಮನಾಜ್ಯಮಂ ಸೆಗಣಮಂ ಧಾನ್ಯಂಗಳಂ ಧೇನುವಂ . . . ಬಸೆಯಂ ತನ್ನಿದಿರಾಗಿ ಬರ್ಪುವವ(ನಿಂ)ಕಾಣ್ಬಂತುಟತ್ಯುತ್ತಮಂ (ಲೋಕೋಪ. ೧೨-೪೮); ಹರಿಶ್ಚಂದ್ರ ಭೂಭುಜಂ ತನ್ನ ಸಾರ್ದರ . . . ತನ್ನಂತೆ ಮಾಳ್ಪುನ್ನತಿಕೆಯಂ ಕಂಡು . . . ಮೂಗುವಟ್ಟುದಮರರ ಧೇನು [ಪಾಠಾಂ. ಹಯಂ] (ಹಚಕಾ. ೧-೪೨) ; ಧೇನುಮಹಾತ್ಮ್ಯೆಯನಿತೊಂದು ದೊಡ್ಡಿತೇಂ (ರಾಮಶ್ವ. ೧೦೪-೮) ; ನಾನು ಅತಿಶಯವಾದ ಸ್ತುತಿಯ ಮೂಲಕ ಧೇನುವಿಗೆ ಆಹ್ವಾನ ಕೊಡುತ್ತೇನೆ (ಹುಕ್ಕಾರ. ೩೬೯). ೨. ಹೊಸದಾಗಿ ಕರುಹಾಕಿರುವ ಹಸು ; ಈದ ಆಕಳು ; ಎಳಗಂದಿ : "ಧೇನು ನವಸೂತಿ . . . ನೈಚಿಕೆಯೆನಿಕುಂ" (ವಸ್ತುಕೋ. ೯೦-೭) ; "ಧೇನುಃ, ನವಪ್ರಸೂತಾ–ಈ ೨ ಎಳಗಂದಿ" (ಹಲಾಯು. ೪೫-೧೧೫) ; ಎಳಗಂದಿ ಧೇನುವಕ್ಕು" (ಮಂಗರಾ. ೫೪-೪). ೩. ಬಯಸಿದುದನ್ನು ಕೊಡುವ ದೇವಲೋಕದ ಹಸು; ಕಾಮಧೇನು: "ಸುರಭಿ ಸುರಪಶು ಧೇನುವೆನೆ ಕಾಮಧೇನುವಿಗೆ ಪೆಸರೆನಿಕ್ಕುಂ" (ಮಂಗರಾ. ೯-೩೦). ೪. ಹೆಣ್ಣಾನೆ ; ಪಿಡಿ : "ವಶಾ ಕರಿಣೀ ಧೇನು ಕರೇಣುಗಳ್ ಗಜವಧೂಪರ್ಯಾಯದೊಳ್ ವರ್ತಿಕುಂ" (ವಸ್ತುಕೋ. ೮೭-೩೧). ೫. ಬ್ರಾಹ್ಮಣರಿಗೆ ಕೊಡುವ ಹಸು ಅಥವಾ ಅವರ ಬದಲಾಗಿ ಇನ್ನು ಯಾವುದಾದರೂ ವಸ್ತುಗಳ ದಕ್ಷಿಣೆ,–ದಾನ. ೬. ಭೂಮಿ. ೭. ಖಡ್ಗ ; ಅಸಿಧೇನು : ಮುನಿಯಂತೆ ಕರಿಯಂತೆ ಶಶಿಯಂತೆ ಭಟನಂತೆ ವನಕುಸುಮದಂತೆಯಿಶಾನ್ಯವೃಭವದಂತೆ ಘನತರವ್ರತವಶಾರೋಹಿಣೀ ಧೇನು ಸಂಸುರಭಿ ವೃಷಯುಕ್ತಮಾಗಿ . . . ವೈಶಾಖಿಶಬ್ದದೊಳ್ ವ್ರಜಮೆಸೆದುದು (ಚಬಪು. ೧೧-೦೮). [ಸಂ.]

ಧೇನುಕ (ನಾ). ೧. ಕತ್ತೆಯ ಆಕಾರದ ಒಬ್ಬ ರಾಕ್ಷಸ ; ಧೇನುಕಾಸುರ : ಆ ಮಹಾ ತಾಳವನಮಂ ಧೇನುಕನೆಂ ರಾಸಭರಾಕ್ಷಸಂ ಕಾದಿರ್ಪಂ (ಜಗವಿ. ೪-೩೯ವ) ; ಸುರರು ಭಾಪೆನೆ ತಾಳವನವನು ಬೆರಸಿ ಮುಱಿದರು ಬಾಲಕೇಳಿಯ ಪರಿಣತರು ಧೇನುಕನನಚ್ಯುತರಾಮರುರವಣಿಸಿ (ನಿಭಾಗ. ೧೦-೧೫ ಸೂಚನೆ). ೨. [ಕಾಮಶಾ] ಒಂದು ವಿಧವಾದ ರತಿಬಂಧ ; ಹಸುವಿನಂತೆ ಅಂಚೆಗಾಲಿನ ಬಂಧವಲ್ಲಿರುವ ಸ್ತ್ರೀಯನ್ನು ಪುರುಷನು ಗೂಳಿಯ ರೀತಿಯಲ್ಲಿ ಸಂಭೋಗಿಸುವುದು : ಸ್ತ್ರೀಯು ಪಶುವಿನ ಹಾಗೆ

ಮೈಗಾಲು ಮೇಲೆಯೆರಡು ಕೈಗಳನಿಕ್ಕಿ ಮೆಲ್ಲನೆ ನಡೆಯಲ್ಕೆ ಗೂಳಿಯಂತೆ ಎತ್ತುಗಳ ರವಂಗೆಯ್ಯುತ್ತಾ ಪುರುಷ ರಮಿಸುತ್ತಾ ನಡೆಯುತ್ತಿರೆ ಧೇನುಕ ಮೆಂಬ ಕರಣಂ (ಕಾಮಶಾ. ೬-೦೪೯). [ಸಂ.]

ಧೇನುಕಕರಣ (ನಾ). = ಧೇನುಕ ೨ : ಬಾಗಿ ಪದಯುಗಕೆ ಕಾಮಿನಿ ಕೆಯ್ಗಳ ನಿಟ್ಟೊಯ್ಯನಡಿಯಿಡಲ್ ಪ್ರಿಯನಡರ್ದಿಂಬಾಗಿ ತಳವೂರು ಪೃಷ್ಠ ವಿಭಾಗದೆ ಮನ ಮೊಲ್ದು ನೆರೆಯೆ ಧೇನುಕಕರಣಾ ಪುನ್ಯವಿ. ೧೪-೩೬). [ಸಂ.]

ಧೇನುಕುಚ (ನಾ). ಹಸುವಿನ ಕೆಚ್ಚಲು : ಸುಗಂಧಿಯೆಂಬ ವಿಷಯಮುಂಟ ದಜ್ಞೊಳ್ ಕರಪೀಡನಂ ಧೇನುಕುಚದೊಳ್ ಬಂಧನಂ ಕಜ್ಜದೊಳ್ . . . ಅಲ್ಲದಿಲ್ಲಮೆಲ್ಲಿಯುಂ (ಚಂದ್ರಪು. ೩-೯ವ). [ಧೇನು + ಕುಚ]

ಧೇನುಕೆ (ನಾ). ೧. ಹೊಸವಾಗಿ ಕರು ಹಾಕಿರುವ ಹಸು; ಈದ ಆಕಳು; ಎಳಗಂದಿ. ೨. ಹೆಣ್ಣಾನೆ ; ಪಿಡಿ : "ಪಿಡಿಯಾನೆಯಲ್ಲಿಯುಂ ಧೇನುಕಾ, ಗಣೆಕಾ ಎಂಬುದು" (ಹಲಾಯು. ೦೩೩-೦೩). ೩. ಆನೆಯ ಹೆಣ್ಣು ಪಂರಿ ; ಮರಿ ಹೆಣ್ಣಾನೆ : "ಎಳೆಯ ಪಿಡಿಯಾನೆಯಲ್ಲಿ ಅಸುಗೊಳಿಸಿ ಧೇನುಕಾ ಗಣೆಕಾಯೆನಿಪುದು"(ಮಂಗರಾ.೦೩೯-೭). ೪. (ಯಾವುದಾದರೂ) ಹೆಣ್ಣುಪ್ರಾಣಿ. ೫. ಕಠಾರಿ ; ಸುರಿಗೆ ; ಚೂರಿ : "ಬಾಲಕರೇಣಾ ಶಸ್ತ್ರ ದನುಜಂ ಪಶುವಿಂತಿವು ಧೇನುಕಾಖ್ಯೆ" (ನಾನಾರ. ೧೯). [ಸಂ. ಧೇನುಕಾ]

ಧೇನುವಿಗ್ರಹಣ (ನಾ). ಹಸುಗಳನ್ನು ಸೆರೆಹಿಡಿದೊಯ್ಯುವುದು ; ಗೋಗ್ರಹಣ : ಧೇನುವಿಗ್ರಹಣವನು ಮಾಡಿದನಂದು ಕುರುರಾಯ (ಕುವ್ಯಾವಿ. ೪-೬೧). [ಸಂ.]

ಧೇನುಷ್ಯೆ (ನಾ). ೧. ಸಾಲ ತೀರುವವರೆಗೂ ಹಾಲು ಕರೆದುಕೊಳ್ಳಲು ಸಾಲ ಕೊಟ್ಟವನ ವಶದಲ್ಲಿರುವ ಹಸು : "ಧೇನುಷ್ಯಾ-ಬಂಧಕೇ-ಸೆರೆಯಲ್ಲಿ ಸಿಕ್ಕಿದ ಆಕಳಿಗೂ ಆಡವು ಹಾಕಲ್ಪಟ್ಟ ಆಕಳಿಗೂ ಹೆಸರು" (ಸಿದ್ಧಾಂತಿ. ೨೯೩). ೨. ಕ್ಷೀರಾಗಾರದಲ್ಲಿರುವ ಹಸು. [ಸಂ. ಧೇನುಷ್ಯಾ].

ಧೇಯ (ಗು).. ೧. ಇಡಬೇಕಾದ. ೨. ತೆಗೆದುಕೊಳ್ಳಬೇಕಾದ. ೩. ಉತ್ಪತ್ತಿಯಾಗುವ. (ನಾ). ೪. ಉತ್ಪತ್ತಿಯಾದುದು. [ಸಂ.]

ಧೈಂಚ (ನಾ). ಒಂದು ಬಗೆಯ ಸಸ್ಯ: ಮುಳ್ಳು ಜೇನಂಗಿ. ಧೈಂಚ (ಮೃಜಿಗಿ. ೬೯-೦೪೧೪). [?]

ಧೈಂಡಿ (ನಾ). (ಮೊಸರು) ಗಟ್ಟಿಯಾದುದು ; ಗಡ್ಡೆ ; ಗರಣೆ : ಒಳ್ಳೆಯ ಹೆಪ್ಪು ಹಾಕಿದ ಧೈಂಡಿ ಮೊಸರು (ರಂಗಕ. ೧೩೬) ; ಅವರೆಕಾಯಿ ಹುಳಿ, ಹುರುಳಿ ಹಪ್ಪಳ ಮತ್ತು ಧೈಂಡಿ ಮೊಸರು (ಮನೋನಂ. ೨೦೦). [?]

ಧೈನುಕ (ನಾ). ಹಸುಗಳ ಸಮುದಾಯ ; ಆಕಳ ಹಿಂಡು. [ಸಂ.]

ಧೈರಿಯ (ನಾ). ದಿಟ್ಟತನ ; " ಧೈರ್ಯ " (ಪ್ರಭಾಕ್ಷಾ). [< ಸಂ. ಧೈರ್ಯ]

ಧೈರ್ಯ (ನಾ). ೧. ದಿಟ್ಟತನ ; ಕೆಚ್ಚು ; ಎದೆಗಾರಿಕೆ : "ಧೈರ್ಯದೊಳು ಹೊನ್ನಿನೊಳು ಕ್ರೂರದೊಳು ... ಪರುಷವಕ್ಕು" (ಮಂಗರಾ. ೧೩೦-೩೧); ಎಲ್ಲಿತ್ತೊ ಧೈರ್ಯಮುಪಶಮಮಲ್ಲಿತ್ತೊ ಜಿತೇಂದ್ರಿಯತ್ವಗುಣಮಲ್ಲಿತ್ತೋ ಎಲ್ಲಿತ್ತೊ ನಿನ್ನ ಶೌರ್ಯಮದಲ್ಲಿತ್ತುಪಭೋಗರಾಗವಿಷಯದ್ವೇಷಂ (ಕಾದಂಪೂ. ೭೭೩); ಮಜಿಃವುಗೆ ಕಾವಂ ಯುದ್ಧಧುರಂಧರಂ ಧೈರ್ಯಧರಾಧರಂ (ಸೌಇಇ. XI-1, ೯೨-೮; 1054 . ಧೈರ್ಯಂ ಘೋರತಪಂ ಪರೀಷಹ ಸಮೂಹಪ್ರಾಪ್ತಿಯೊಳ್ ಸಂದ ತಾತ್ವರ್ಯಂ (ಚಂದ್ರಪು. ೧-೩) ; ಧೈರ್ಯಂ ಸರ್ವಪರೀಷಹಾನ್ವಯ ಜಯಂ (ಜೀವಸಂ. ೨-೩) ; ತಳರು ಬಾಡದೆ ಧೈರ್ಯಸುರುಂಜದ (ಕುವ್ಯಾಸ. ೦೪-೯೬) ; ಬಳಿಕ ಧೈರ್ಯಂ ಸರ್ವತ್ರಸಾಧನ ವೆಂಬ ವಿಳಸಿತ ವಾಕ್ಯಾರ್ಥವನು ತಿಳಿದವನೀಶ್ವರನಲೆವ ವಿಷಾದವ ತೊಳೆದು ವಿವೇಕಜಲದೊಳು (ಕುರಾಸಾಂ. ೪೨-೩೩) ; ನಡೆತಂದನಾ ವೀರಭದ್ರಂ ಧೈರ್ಯರಸಸಮುದ್ರಂ (ವೀಕೃಪು. ೩-೩-೪೨) ; ತೃಷ್ಣೆಯೆ ದೇವಿಯೆ ನಿನಗಿದೊ ನಮನವು ಧೈರ್ಯವಿಪ್ಲವಕಾರಿಯೆಂದೆ ಮೂರು ಲೋಕದ ನಾಥನಾದರು ವಿಷ್ಣುವು ವಾಮನನಾದ ನಿನ್ನಿಂದೆ (ಇಂಜಾಪ. ೦೮೨-೯೨).

೨. ಅಚಲವಾಗಿರುವುದು ; ಗಾಂಭೀರ್ಯ ; ನಿಶ್ಚಲತೆ ; ದೃಢತೆ : "ಪಾಷಾಣಮುಂ ಪರ್ವತಂ ಧೈರ್ಯಂ ಗ್ರಾವಸಮಾಹ ಯಂ"(ನಾನಾರ.೦೦೭ . ೩. ಸಹನೆ ; ಶಾಂತತೆ ; ತಾಳ್ಮೆ. [ಸಂ.]

ಧೈರ್ಯಂಗಿಡು ' ಧೈರ್ಯಂಗೆಡು ' ನೋ.

ಧೈರ್ಯಂಗೆಡು, ಧೈರ್ಯಂಗಿಡು, ಧೈರ್ಯಗೆಡು (ಕ್ರಿ). ಎದೆಗುಂದು ; ಅಧೈರ್ಯಪಡು ; ಧೈರ್ಯವನ್ನು ಕಳೆದುಕೊಳ್ಳು : ಧೈರ್ಯಂಗೆಟ್ಟತ್ತು [ಪಾಠಾಂ ಕೆಟ್ಟತ್ತು] ಸರ್ವಾಕ್ಷಮಮೆನಿಪುದಱಿಂಗೊಳ್ವರ್ತಿಸುಱಿರ್ಪೆನಿಂತೀ ತಿರ್ಯಗ್ಜಾತಿತ್ವದೊಳ್ (ಕಾದಂಉ. ೭೦೩) ; ಎಡರು ಬಂದಡಸಿರಲು ಧೈರ್ಯಂಗೆಡುವರೇ (ಕಾಶಿರಾ. ೯-೨೬). ಧೈರ್ಯಂಗಿಡು : ಮಱುಗಿಸೆ ಪರೀಷಹಂಗಳ್ ನೆಱೆ ಧೈರ್ಯಂಗಿಡುವರನ್ಯಯತಿಗಳ್ (ಸಮಪ. ೭-೨೦) ; ನಿಷ್ಕಂಪಿತಶರೀರನಾಗಿ ಧೈರ್ಯಂಗಿಡದಿರಲ್ವೇಟ್ಟುಂ (ವರ್ಧಪು. ೧೨-೧೦೨). ಧೈರ್ಯಗೆಡು : ಇವನ ಕೆಡುನಿಬ್ಬರವ ಧಾಳಿಗೆ ಧೈರ್ಯ [ಪಾಠಾಂ. ಧಾತು]ಗೆಟ್ಟುದು ಕೂಡೆ ಕುರುಸೇನೆ (ಕುವ್ಯಾದ್ರೋ. ೧೬-೧೩). [ಧೈರ್ಯ + ಕೆಡು$_1$]

ಧೈರ್ಯಕ್ಷತಿ (ನಾ). ಕೆಚ್ಚಿನ ನಾಶ,-ನಷ್ಟ ; ಎದೆಗೇಡು ; ಅಧೈರ್ಯ : ದುರ್ಯೋಧನನ ಮನದ ಧೈರ್ಯಕ್ಷತಿಗೆ ಮನಃಕ್ಷತನಾಗಿ ಸಿಗ್ಗಾಗಿ ತಲೆಯಂ ಬಾಗಿ ಧರ್ಮನಂದನನಿರೆ (ಗದಾಯು. ೬-೩೯ವ). [ಧೈರ್ಯ + ಕ್ಷತಿ]

ಧೈರ್ಯಗುಂದು (ಕ್ರಿ). ಧೈರ್ಯಕುಗ್ಗು : ಆಸಮಸಾಹಸಿ ಧೈರ್ಯಗುಂದದೆ ದೆಸೆಯ ನೋಡದೆ ಕಾದುತಿರೆ (ಕಾಶಿರಾ. ೨೬-೩೨).

[ಧೈರ್ಯ + ಕುಂದು$_1$]

ಧೈರ್ಯಗುಣ (ನಾ). ಸ್ಥಿರತ್ವ ; ನಿಶ್ಚಲತೆ : ಕ್ಷಿತಿಪತಿಯ ಧೈರ್ಯಗುಣ ಪರ್ವತಮಂ ತಱಗೆಗೆಗೊಟ್ಟಲಂ ತೂಳ್ದುವವೋಲ್ ಅತಿವೇಗದ ಪಾಱಿಸಿದುದು ಸುತವಿರಹಪ್ರಳಯಪರುಷಪವನಾಘಾತಂ (ಚಂದ್ರಪು. ೩-೯).

[ಧೈರ್ಯ + ಗುಣ]

ಧೈರ್ಯಗೆಡಿಸು (ಕ್ರಿ). ಭಯಂಪಡಿಸು ; ಎದೆಗೆಡಿಸು : ಜಝ್ಝರದ ಡಿಂಡಮ ಡಮರು ಪಟಹದ ಧಗಧುರದ ದನಿ ಧೈರ್ಯಗೆಡಿಸಿತು ಸಕಲಸಾಗರವ (ಕುವ್ಯಾಕ. ೧೦-೮). [ಧೈರ್ಯ + ಕೆಡಿಸು$_1$]

ಧೈರ್ಯಗೆಡು 'ಧೈರ್ಯಂಗೆಡು' ನೋ.

ಧೈರ್ಯಗೊಳಿಸು (ಕ್ರಿ). ಧೈರ್ಯವನ್ನು ತುಂಬು.

[ಧೈರ್ಯಗೊಳ್ಳು + – ಇಸು$_3$]

ಧೈರ್ಯಗೊಳ್ಳು (ಕ್ರಿ). ಕೆಚ್ಚನ್ನು ಪಡೆದುಕೊಳ್ಳು, – ಹೊಂದು ; ಧೈರ್ಯಶಾಲಿಯಾಗು. [ಧೈರ್ಯ + ಕೊಳ್ಳು$_1$ (< ಕೊಳ್$_1$)]

ಧೈರ್ಯದರಿದ್ರ (ನಾ). ಕೆಚ್ಚನ್ನು ಕಳೆದುಕೊಂಡವನು ; ಎದೆಗುಂದಿದವನು ; ಎದೆಗೇಡಿ : ಘನವಿಕರ್ಮದ ವಿಲಗದಲಿ ನಿಜತನುಜಶೋಕದ ತಗಹಿನೊಳಗರ್ಜನನು ಧೈರ್ಯದರಿದ್ರನಾದನು (ಕುವ್ಯಾದ್ರೋ. ೯-೩೨).

[ಧೈರ್ಯ + ದರಿದ್ರ]

ಧೈರ್ಯನಿಧಿ (ನಾ). ಕೆಚ್ಚಿನ ಆಗರ,-ಆಶ್ರಯಸ್ಥಾನ ; ಬಹಳ ಧೈರ್ಯಶಾಲಿ ; ಅಚಲವಾಗಿರುವವನು: ಧೈರ್ಯನಿಧಿ ಕೊಂಡಕುಂದಾಚಾರ್ಯರ ಚರಣಂಗಳೊಲೆದು ನೆಲಮುಟ್ಟದ ತಾತ್ವರ್ಯಮನಱಿದೆಂ (ಅರ್ಧನೇ. ೧-೦೪) ; ಅಡಿಗೆಱಗಿ ನಡೆದನಾ ಧೈರ್ಯನಿಧಿ ಭೂಪಾಲನು (ಹಪಕಾ. ೯-೬೦).

[ಧೈರ್ಯ + ನಿಧಿ]

ಧೈರ್ಯಪರ (ಗು). ೧. ಧೀರತ್ವವನ್ನು ಹೊಂದಿದ ; ಧೀರನಾದ : ಧೈರ್ಯಪರ ಗೃದ್ಧಪಿಂಛಾಚಾರ್ಯ ಪಟ್ಟಾಸೀಹನಂದಿ ಜಗತೀಖ್ಯಾತಾಚಾರ್ಯ ಪ್ರಭಾಪಮತ್ಕಾರ್ಶ್ಯಮದಂ ಪೊಗಟ್ಟಡಬ್ಬಜಂಗಮಸಾಧ್ಯಂ (ಮಹಾನೇ. ೧-೦೪). (ನಾ). ೨. ಧೀರ ; ಅಚಲನಾಗಿರುವವನು : ಧೈರ್ಯಪರಸ್ವಪರತಪಸ್ಯಾರ್ಯರ್ ತತ್ತ್ವಾರ್ಥಕರ್ತೃಗಳ್ ಜಿನಮತತಾತ್ವರ್ಯರ್ (ಸುಕುಮಾ. ೦-೦೩). [ಸಂ.]

ಧೈರ್ಯಯುತ (ನಾ). = ಧೈರ್ಯಪರ : ಧೈರ್ಯಯುತರ್ಧರಸೇನಾ ಚಾರ್ಯರ್ . . . ದಯಗೆಯ್ದ ವಿಮಳರತ್ನತ್ರಯಮಂ (ಧರ್ಮಾಮೃ. ೦-೦೨). [ಸಂ.]

ಧೈರ್ಯವಂತ (ನಾ). = ಧೈರ್ಯಶಾಲಿ : ಸುಕುಮಾರಸ್ವಾಮಿಯನಹೊ ಸೂರಾ ಅಹೊ ಮಹಾವುರುಷ ಅಹೊ ಧೈರ್ಯವಂತ ಅಹೊ ಸಂಸಾರಭೀರು ... ಎಂದು ದೇವತೆಗಳ್ ಪೊಗಟ್ಟ ಕಳಕಳಧ್ವನಿಪ್ರಸಮಂ ದೇವದುಂದು ಭಿಯ ರವಮುಮಂ ಯಶೋಭದ್ರೆ ನೋಡಿ (ಪಡ್ಮಾ.ರಾ. ೩೯-೨೧).

[ಸಂ. ಧೈರ್ಯವತ್]

ಧೈರ್ಯಶಾಲಿ (ನಾ). ದಿಟ್ಟತನವುಳ್ಳವನು ; ಕೆಚ್ಚು ತುಂಬಿದವನು : ಅವನು ತುಂಬ ಧೈರ್ಯಶಾಲಿ (ರೂಢಿ). [ಸಂ. ಧೈರ್ಯಶಾಲಿನ್]

ಧೈರ್ಯಸ್ಖಲನ (ನಾ). ಎದೆಗೆಡುವಿಕೆ ; ಹೆದರುವಿಕೆ : ಜಲಪೃಷ್ಠಮಾಟ್ಟು ಧೈರ್ಯಸ್ಖಲನಾರ್ಥಂ ಬೆಟ್ಟುಗಳ್ ಸಿಡಿಲ್ವೊಡದುಂ ವಿರ್ಮಟಿಗಳಿಱಗಿದೊಡೆ ಯೋಗೋತ್ಕಲಿತಮನರ್ ಬಱಲೋರ್ವರಧ್ಯಾಗವುದೊಳ್ (ಪಾರ್ಶ್ವನಾ. ೩-೦೦೨). [ಧೈರ್ಯ + ಸ್ಖಲನ]

ಧೈರ್ಯಸ್ಥ (ನಾ). ಭಯಪಡದವನು ; ಧೈರ್ಯವನ್ನು ಕಳೆದುಕೊಳ್ಳದವನು ; ಧೈರ್ಯಶಾಲಿ : ಅವನು ಬಹಳ ಧೈರ್ಯಸ್ಥನಾದ ಮನುಷ್ಯ (ರೂಢಿ). [ಸಂ.]

ಧೈರ್ಯಾವಲಂಬೆ (ನಾ). ದಿಟ್ಟತನವನ್ನು ಅವಲಂಬಿಸಿರುವವಳು : ಧೀರೆ : ಧೈರ್ಯಾವಲಂಬೆಯೆನಿಸಿದ ಭಾರ್ಯೆಯೆ ಧೀರಾಭಿಧಾನಮಂ ತಾಳ್ದುಗುಂ (ಶೃಂಗಾರ. ೩-೩೭).

[ಸಂ. ಧೈರ್ಯಾವಲಂಬಾ (ಧೈರ್ಯ + ಅವಲಂಬ + –)]

ಧೈವತ (ನಾ). [ಸಂಗೀತ] ಸಪ್ತಸ್ವರಗಳಲ್ಲಿ ಆರನೆಯದು : ಷಡ್ಜ ವೃಷಭ ಗಾಂಧಾರ ಮಧ್ಯಮ ಪಂಚಮ ಧೈವತ ನಿಷಾದಗಳೆಂಬ ಸಪ್ತಸ್ವರಮುಮಂ (ಅಜಿಪು. ೫-೩೦ವ) ; ಶೃಂಗಾರಾರ್ದ್ರಂ ಕಕುಭಜನಿತಂ ಧೈವತಂ ಸಂಗ್ರಹ ನ್ಯಾಸಾಂಗಂ . . . ಮಧ್ಯಮಂ ಮಂದ್ರಮೆಂಬೀ ಪಾಂಗಿಂ ವೇಳಾವಳಿಯ ನೊಲವಿಂ ಪ್ರೌಢಿ ಪಾಡುತ್ತುಮಿರ್ಪಳ್ (ಶೀಲಾವ. ೨-೩೦) ; ಮಧ್ಯಮ ಧೈವತ ಷಡ್ಜ ಪಂಚಮ ನಿಷಾದ ರುಷಭ ಗಾಂಧಾರಂಗಳೆಂಬ ಸಪ್ತಸ್ವರ ಸಂಯೋಗಸಂಜಾತ ದೇಶೀಯರಾಗಂಗಳಂ . . . ವಲಿ ಹವಣ ಠಾಯಂಗಳಿಂದಾಳಾಪನೆಂಗೆಯ್ದು (ಕಾರಪು. ೪-೧ ವ) ; ಷಡ್ಜಮಾ ಋಷಭಮಾ . . . ಧೈವತಂ ಸನಿಷಾದಮೋರಂತೆ ಸಪ್ತಸ್ವರಂಗಳಕ್ಕು (ಪಾಂಗರಾ. ೨೩-೩) ; ಕ್ರಮವಾಗಿ ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ ಮತ್ತು ನಿಷಾದ ಎಂದು ಸಪ್ತಸ್ವರಗಳ ಹೆಸರುಗಳು (ಸಂಗೀಪಂ. ೦೫).

[ಸಂ.]

ಧೊಕ್ (ನಾ). ಒಂದು ಅನುಕರಣ ಶಬ್ದ.

ಧೊಕ್ಕನೆ = ಧೊಕ್ ಎಂಬ ಶಬ್ದದೊಡನೆ : ವೇರುರಮಂ ಧೊಕ್ಕನೆ ಕುತ್ತಿ ಚಕ್ಕನೆ ಭುಜದ್ವಂದ್ವಂಗಳಿಂದೆತ್ತಿ (ಎಳ. VI, ತರೀಳ. ೪೫-೫೩; 1196).

ಧೊಕ್ಕನೆ (ಅ). ಕೂಡಲೇ ; ತಕ್ಷಣ ; ಬೇಗನೆ : ಇಕ್ಕಲ್ ಧೂಪಮನದು ತಾಂ ಧೊಕ್ಕನೆ ಫಣಿವೃಶ್ಚಿಕಾಖುವಿಷಮಂ ಕಳೆಗುಂ (ಜಮದ. ೧೬-೯೪) ; ಧೊಕ್ಕನೆ ಪೊಱಮಟ್ಟು ಶ್ರೀಕೃಷ್ಣ ಸಲೆ ಪೌಜಿಕ್ಕ ವೇಳಿಸಿದ ಭೂಭುಜರ (ವೀಜಿತ. ೩೭-೩). 'ದೊಕ್ಕನೆ' ಪರಾ. [ಧೊಕ್ + – ಅನೆ೧]

ಧೊಣೆ 'ದೊಣೆ೧' ನೋ.

ಧೊಪ್ (ನಾ). ಒಂದು ಅನುಕರಣ ಶಬ್ದ.

ಧೊಪ್ಪೆನೆ = ಧೊಪ್ ಎಂಬ ಶಬ್ದದೊಡನೆ : ಧೊಕ್ಕನೆ. ಧೊಪ್ಪೆನೆ. [ಪಾಠಾಂ. ಧೋಪೆನೆ] ಭೋಂಕೆನೆ (ಧಾಪಾಧೂ. ೧೧ ವೃತ್ತಿ) ; ಅನುಕರಣಕ್ಕೆ–ಖಿಣಲ್ಲನೆ . . . ಧೊಪ್ಪೆನೆ[ಪಾಠಾಂ ಧೊಪ್ಪನೆ, ಧೊಪ್ಪನೆ] ಪೊಟ್ಟನೆ (ಶಮದ. ೧೪ ಪ್ರಯೋ).

ಧೊಪ್ಪನೆ (ಅ). ಧೊಪ್ ಎಂದು ಶಬ್ದವಾಗುವಂತೆ ; ಒಮ್ಮೆಲೆ : ತಿರು ನೀಲಕಂಠರುಬ್ಬರಿಸುತ್ತೆ ಪರಿತಂದು ಚರಣತಳದಲ್ಲಿ ಧೊಪ್ಪನೆ ಕೆಡೆದು (ತಿರುರ. ದೇ. ೩೫-೩೦) ; ಸುಭದ್ರೆ ನಡೆತಂದು ನೆಲಕೆ ಧೊಪ್ಪನೆ ಕೆಡೆದು ಸಭೆಯಲಿ ಹಲುಬಿದಳು (ಕುಬ್ಜಾಕ್ರೋ. ೬-೦೩) ; ಧೊಪ್ಪನೆ ಕೆಡೆದು ಹೊರಳಿದನು (ಕೌತಿರಾ. ೩೩-೩೬) ; ಹಾ ರಣಧೀರ ಹಾಹಾಯೆಂದು ಧೊಪ್ಪನೆ ಕೆಡೆದಳಾ ತಾರೆ (ತೊರರಾ. ೪-೫-೨).

ಧೊಪ್ಪ ಧೊಪ್ಪನೆ (ದ್ವಿರುಕ್ತಿ) : ಧೊಪ್ಪು ಧೊಪ್ಪನೆ ಕಲ್ಲಂದಿಡುತೋಡು ವಾಡುಗಳಂ ಕರಂ ತಪ್ಪುವಂತಿರೆ ಮೆಲ್ಲಮೆಲ್ಲನೆ ಬಂದು (ವೃಪವಿ. ೦೧-೬೪).

[ಧೊಪ್ + – ಅನೆ೧]

ಧೊಪ್ಪಳಿಸು (ಕ್ರಿ). ಧೊಪ್ ಎಂದಂ ಉರುಳಂ, –ಕುಸಿ : ಎರಡನೆಯ ಕ್ಷಣಕ್ಕೆ 'ಆಯ್ಯೋ' ಎಂದು ಕಿರುಚಿ ನೆಲಕ್ಕೆ ಧೊಪ್ಪಳಿಸಿದಳು (ಕುಡಿಕೂ. ೩೫) ; ಕಾಣೆಯ ಎದುರಿಗೆ ನಿಲ್ಲಿಸಿದ ಹೊಡೆವಂಚದ ಮೇಲೆ ಅದು ಧೊಪ್ಪಳಿಸಿ ಎರಗಿತು (ಕುಡಿಕೂ. ೩೦೩). [< ಧೊಪ್ + – ಇಸು೩]

ಧೊರಯ್ಗ (ನಾ). (?) : ಕನ್ದುಕಮಾಳನ ಧಟಕೆ ಧೊರಯ್ಗಂ ವೈರಿ ಕಾಳಾನಳಂ ಚಣ್ಡಮಾರ್ತ್ತಣ್ಡಂ (ಎಳ. VIII, ಸೊರಬ. ೯೮-೨ ; 912) ; ಗುಣಕೆ ಧೊರಯ್ಗ ಸುಭಟಚೂಡಾಮಣಿ ಸತ್ಯರತ್ನಾಗರಂ ತೇಜಾಗರಂ ಶ್ರೀಮತ್ಸಾನ್ತಿವರ್ಮ (ಎಳ. VIII, ಸೊರಬ. ೪೭೭-೦೦; 991). [?]

ಧೊರೆ 'ದೊರೆ೪' ನೋ.

ಧೊರೆಪೂಜೆ (ನಾ). ವೈಭವದಿಂದ ಮಾಡುವ ಪೂಜೆ, –ಆರಾಧನೆ : ಸುರಹಿರಿ ನಮ್ಮ ದೇವರ ಕಾಳಿ ಧೊರೆಪೂಜೆ ಮಾಡುವೆನ (ಪುಲ್ಲಿಗ. ೩).

[ಧೊರೆ (< ದೊರೆ೪) + ಪೂಜೆ೪]

ಧೋ (ನಾ). ಒಂದು ಅನುಕರಣ ಶಬ್ದ. 'ಧೋಯೆನ್' ಪರಾ.

ಧೋಧೋ (ದ್ವಿರುಕ್ತಿ) : ರಾತ್ರಿಯಲ್ಲಿ ಧೋಧೋ ಮಳೆ ಬಿದ್ದಿತು (ಋದ್ಧಜಾ. ೦೩) ; **ಧೋಧೋಕಾರ** = ಮಳೆಯ ಹೊಡೆತದ ಶಬ್ದ : ಏಕಪ್ರಕಾರವಾಗಿ ಸುರಿಯುವ ಮಳೆಯ ಧೋಧೋಕಾರ (ವಾತ್ಸಲ್ಯ. ೨).

ಧೋಂಕಾರ (ನಾ). ಒಂದು ಅನುಕರಣ ಶಬ್ದ : ನಮ್ಮ ತನು ಮನ ಆತ್ಮಗಳಲ್ಲಿ ಆ ಧೋಂ ಕಾರದ ಶಂಖನಾದ ದುಮ್ಮುದುಮಿಸತೊಡಗಿತು (ಮುಕ್ತ. ೫೩).

ಧೋಕಾ, ಡೋಕಾ, ಢೋಕಾ (ನಾ). ೧. ಅನರ್ಥ ; ಅಪಾಯ : ಧೋಂಡೂ ಬಾಯಿಗೆ ತುಳಸಿಯನ್ನು ಕಸಬಿನ ಕಣದಲ್ಲಿ ನಿರಂತರ ಬಿಡುವುದು ಧೋಕಾದ್ದೆಂದು ಅನಿಸತೊಡಗಿತ್ತು (ದೀಪಹ. II, ೧೦೬). **ಡೋಕಾ** : (ಕ). **ಢೋಕಾ** : ೨. ಮೋಸ ; ವಂಚನೆ ; ಅದರಲ್ಲೇನು ಢೋಕಾ ಇಲ್ಲ (ಒಡಮು. ೩). [← ಹಿಂ. ಧೋಕಾ, ಢೋಖಾ ; ಮರಾ. ಢೋಕಾ]

ಧೋತರ 'ಧೋತ್ರ' ನೋ.

ಧೋತಿ 'ಧೋವತಿ' ನೋ.

ಧೋತ್ರ, ದೋತರ, ದೋತ್ರ, ಧೋತರ (ನಾ). ೧. ಉಡುವ ಬಟ್ಟೆ, –ವಸ್ತ್ರ : ಕೂಡೆ ಕುಳ್ಳಿರ್ದಖಿಳ ವಿಪ್ರರ ನೋಡಿ ಮೆಲ್ಲನೆ ಧೋತ್ರ ದರ್ಭೆಯ ಗೂಡ ಸಂವರಿಸುತ್ತ ಸಭೆಯಿಂದೆದ್ದನಾ ಪಾರ್ಥ (ಕುವಾಅ. ೧೫-೯) ; ನೆಲ ಕೆಳಲ್ಕ ಬಹಿರ್ವಾಸ ಪಲ್ಕ ಧೋತ್ರಂಗಳ (ವೀಕವಿ. ೪-೦೦) ; ಕಟ್ಟಿದಿರಿನೊಳ್ ತೋರ್ಪ ಮಟ್ಟಿಯ ಮರುಳ್ ವಿಪ್ರರುಟ್ಟ ಧೋತ್ರಂಗಳಂ ಸೆಳೆದು ಭಂಗಿಸಿ (ಕಪಪು. ೩೨-೪೫) ; ಧೋತ್ರಗಳನ್ನು ಉಡುಗೊರೆಯಾಗಿ ಕಳುಹಿದ್ದಳು (ದೀವೀಪಾ. ೫). ೨. ಭುಜದ ಮೇಲೆ ಹಾಕಿಕೊಳ್ಳುವ ವಸ್ತ್ರ : ವಲ್ಲಿ : ಉತ್ತರೀಯ : "ವಿಪರ್ಯಸ್ತಿಕಂ ಧೋತ್ರಮಕ್ಕುಂ" (ಕುಂಗರಾ. ೭೬-೯) ; ತೆಗೆ ಶಿಲವನೌಪಾಸನದ ಕೊಳವಿಗಳ ಧೋತ್ರವ ಪುಸ್ತಕವ (ತೊರರಾ. ೫-೮-೭೦) ; ಜರಿಯ ಧೋತ್ರವನ್ನು ಹೊದ್ದುಕೊಂಡು ಸ್ವಯಂ ವೆಂಕಪ್ಪ ನಾಯಕರು ದಯಪಾಡಿಸಿ (ಶ್ರೀರಾಹು. ೦೪೭). **ದೋತರ** : ೧. ದೋತರ ಉಟ್ಟುಕೊಂಡು ಬೀದಿಯೊಳಗೆ ನೀರು ಹೊತ್ತುಕೊಂಡು ಹೋಗುವ

ಯಾವುದೊ ಅನಾಥ ಬಡ ವಿಧವಾ ಕಾಣಿಸ್ತಾಳೆ (ಸಂಧ್ಯಾಕಾ. ೪೫); 'ಈತನ ತಪವಿನ್ನೂ ತೀರದಿರೆ ವಿಘ್ನಕೆ ನಿಮ್ಮಯ ವಾಣಿಯ ತಂದಿರೆ' ಎನ್ನುವೆ ನಾ ಮುನಿ ದೋತರವೆಳೆದು (ಗಣೇಶ. ೧೧-೨೨೭); ಒಂದು ಚಕ್ಕಡಿಯು ಬರುತ್ತಿತ್ತು . . . ಹಿಂದಕ್ಕೂ ಮುಂದಕ್ಕೂ ದೋತರ ಬಿಗಿದುದರಿಂದ ಅದರಲ್ಲಿ ಯಾರಿರುವರೆಂಬುದು ತಿಳಿಯುತ್ತಿರಲಿಲ್ಲ (ರಕ್ತಧ್ವ. ೧೨). ೨. ಧಡಿಯ ದೋತರವನ್ನು ಹೆಗಲ ಮೇಲೆ ಸರಿಯಾಗಿ ಒಗೆದುಕೊಂಡು ಒಂದು ಮೂಲೆಗೆ ಹೋಗಿ ಬಾಯೊಳಗಿನ ತಾಂಬೂಲವನ್ನು ಉಗುಳಿ ಬರುತ್ತ ನುಡಿದ (ಅಶೋಕ. ೪). **ದೋತ್ರ**: ೧. ಎಸೆವ ದೋತ್ರದಿನುಜ್ವಲಿಪ ಕಟಿದೇಶಂ (ಪದ್ಮರಾ. ೫-೧೬); ನುತ ಪಲ್ಲವಮೆ ದೋತ್ರಮುಂ ಬಹಿರ್ವಾಸಮುಂ ತತಪಿಕಸ್ವರಮೆ ವೇದಸ್ವರಂ . . . ಎನೆಯೊಂದಶೋಕವೃಕ್ಷಂ ಮೆಱೆದುದು (ಪದ್ಮರಾ. ೫-೨೮); ದೋತ್ರ ದೊಡ್ಡದಾದರೆ ಗೋತ್ರ ದೊಡ್ಡದೇ (ಗಾದೆ). **ಧೋತರ**: ೧. ಹಳೆಯ ಮಾದರಿಯ ಅಂಗಿ, ಅಂಥದೇ ಕೋಟು, ಒಂದು ಧೋತರ (ರತ್ನಗೋ. ೫); ಪಾದಗಳನ್ನೂ ಮುಚ್ಚುವಂತೆ ಉಟ್ಟ ಶುಭ್ರವರ್ಣದ ಧೋತರ (ಆಪೋಲೀ. ೧೩೦); ನನಗೆ ಒಂದು ಜೋಡಿ ಧೋತರ ಬರುತ್ತವೆ ಎಂದು ಮತ್ತಷ್ಟು ಹಿಗ್ಗಾಯಿತು (ವೃನಿ. ೧೭೯); ಮೈಯಾಗೆ ಒಂಟೀ (ಪಟ್ಟೆ) ಧೋತರವಾ ಧರಿಸ್ಯಾರೋ (ಹುಟ್ಟಿಹ. ೦೦೦); ಕೋಟು ಶರ್ಟುಗಳನ್ನು ತೆಗೆದು, ಧೋತರದ ಮೇಲೆ ಮಲಗಿದ್ದ ರಾಯರು (ಫಲಸಂ. ೫೦). ೨. ಧೋತರದಿಂದ ಹಣೆಯ ಮೇಲಿನ ಬೆವರು ಹನಿಗಳನ್ನು ಒರೆಯಿಸಿಕೊಂಡರು (ಹೆಂದುಟಿ. ೦೦೦); ಧೋತರವನ್ನು ಹೊದ್ದುಕೊಂಡು ಶೆಟ್ಟಿಯ ಮನೆಗೆ ಹೋಗೋಣ ನಡೆಯಿರಿ (ಹಬ್ಬಿಬ. ೧೯). 'ಧೋವತಿ' ಪರಾ.

[←ಮರಾ. ಧೋತ್ರ್, ಧೋತ್ರಾ, ಧೋತರ್ ; ಹಿಂ. ಧೋತರ್, ಧೋತರಾ./ತುಳು. ದೋತ್ರ]

ಧೋಬಿ, ಡೋಬಿ, ದೋಬಿ, ದೋಭಿ (ನಾ). ಬಟ್ಟೆಗಳನ್ನು ಒಗೆದು ಮಡಿಮಾಡುವ ಕಸಬಿನವನು; ಅಗಸ; ಮಡಿವಾಳ; ರಜಕ: ನಮ್ಮ ಧೋಬಿ ಬಟ್ಟೆಗಳನ್ನು ಚೆನ್ನಾಗಿ ಒಗೆಯುತ್ತಾನೆ (ರೂಢಿ). **ಡೋಬಿ**: ಅಗಸ, ಡೋಬಿ, ಮಡಿವಾಳ (ತುಳುನಾ. ೧೭೩); ರೈಲಿನಲ್ಲಿ ಹಜಾಮರಿದ್ದಾರೆ ಡೋಬಿಗಳೂ ಇದ್ದಾರೆ (ಆಳನಿ. ೩). **ದೋಬಿ**: ಅದಲು ಬದಲಾಗಿ ಹುದೀಯಂಗಿಯೆನ್ನುತೆ ದೋಬಿಯ ಬರಿದೆ ದೂರುವರೆ (ಪಂಪ್ರವೀ. ೦೦೬-೨೨). **ದೋಭಿ**: ದೇವಭಾವದ ಹೊಳೆಗೆ ಮರುಳುಕಡ ಸಾಬಿ, ಕಲ್ಲುಕಡವೆಮ್ಮ ಗುಡಿ ಭಟ್ಟನೇ ದೋಭಿ (ಗಣೇಶ. ೭೦-೪).

[←ಹಿಂ. ಮರಾ. ಧೋಬೀ]

ಧೋಯೆನ್ (ಕ್ರಿ). ಧೋ ಎಂದು ಕೂಗು: ಈಯಲಿಱಿಯಲ್ ಶರಣ್ಬುಗೆ ಕಾಯಲ್ ಕ್ಷತ್ರಿಯರೆ ಬಲ್ಲರಲ್ಲದೆ ಬ್ರಹ್ಮರ್ ಭೋಯೆನಲುಂ ಬಲ್ಲರ್ ಕೊಲೆ ಧೋಯೆನಲುಂ ಬಲ್ಲರಿಱಿಯಲವರೆತ್ತಱಿವರ್ (ಗದಾಯು. ೨-೧೬). P ಗದಾಯುದ್ಧಸಂಗ್ರಹದಲ್ಲಿ ತೀನಂಶ್ರೀಯವರು ಸ್ವೀಕರಿಸಿರುವ ಪಾಠಾಂತರ 'ಅವಿಧೋ' ಎನ್ನುವುದು. ಈ ಶಬ್ದವನ್ನೂ ನಿಘಂಟಿನಲ್ಲಿ ಸ್ವೀಕರಿಸಲಾಗಿದೆ. 'ಅವಿಧೋ' ಪರಾ. [ಧೋ + ಎನ್$_1$]

ಧೋರ$_1$ 'ದೋರ$_3$' ನೋ.

ಧೋರ$_2$ (ನಾ). ಒಂದು ಬಗೆಯ ವಾದ್ಯ; ನಗಾರಿ; ಭೇರಿ: ಕಾಹಳವೆಂಬ ಗೌರಿಕಾಳೆ ದುಂದುಭಿಯೆಂಬ ಧೋರ . . . ವಾದ್ಯಂಗಳಂ (ವಿವೇಕ. ೨೩೬). [?]

ಧೋರಣ (ನಾ). ೧. (ಆನೆ, ಕುದುರೆ, ರಥ ಮೊದಲಾದ) ವಾಹನ: "ಅದಿದೆನ್ನದೆ ವಾಹನಮಾವುದಾದೊ[ಡಂ] ಪತ್ರ ಯುಗ್ಯ ಧೋರಣಸಾಮಂ" (ವಸ್ತುಕೋ. ೮೮-೪೦); "ಪಕ್ಷಮಾ ವಾಹನಂ ಧೋರಣಂ ರಥ ಹಯಂ" (ಮಂಗರಾ. ೮೫-೨೫); "ಯಾನಂ, ಯುಗ್ಯಂ, ಪತ್ರಂ, ಧೋರಣಂ ೪ ಸರ್ವಂ ವಾಹನಂ – ನಾನಾ ಬಗೆಯಾದ ಸಕಲ ವಾಹನಗಳಿಗೂ ಹೆಸರುಗಳು" (ಸಿದ್ಧಾಂತಿ. ೨೫೪). ೨. ಕುದುರೆಯ ನಡಗೆಯಲ್ಲಿ ಒಂದು ಪ್ರಕಾರ. ೩. ಚುರುಕಾಗಿ ಹೋಗುವುದು; ಚಟುವಟಿಕೆಯಿಂದ ನಡೆಯುವುದು. ೪. ಗುರಿ; ಧ್ಯೇಯ: (ಕ). ೫. ಕ್ರಮ; ಧಾಟಿ: (ಕ). ೬. ಶೈಲಿ; ರೀತಿ: (ಕ). ೭. ವಿಚಾರಧಾರೆ; ಆಲೋಚನೆಯ ಮಾರ್ಗ: ಎಲ್ಲೋ ವಿಳಾಸ ತಪ್ಪಿ ಬಂದಿರಬೇಕು ಎಂಬ ಧೋರಣದಿಂದ ಆ ಆಗಂತುಕನನ್ನು ಅವರು ಪ್ರಶ್ನಿಸಿದ ಹಾಗಿತ್ತು (ಹೊಸಕ್ಷಿ. ೪೦); ಆದಷ್ಟು ವಸತಿಗಳನ್ನು ತಪ್ಪಿಸಿದಾ ರಿಹಿಡಿಯುವ ಧೋರಣವನ್ನಿಟ್ಟುಕೊಂಡೆವು (ಮೇದಿಮ. ೧೨೯). ೮. ವರ್ತನೆ; ವೃತ್ತಿ; ನಡವಳಿಕೆ: ತಮ್ಮ ಸಂಸ್ಥೆಯ ಆಡಳಿತವನ್ನು ನೋಡಲು ಧೋರಣವನ್ನು ಕಾಯಲು ನಿರ್ದೇಶಕರ ಮಂಡಲವೊಂದನ್ನು ಆರಿಸುತ್ತಾರೆ (ತಕ್ಕಡಿ. ೪೬). ೯. ಒಲವು; ಪ್ರವೃತ್ತಿ: (ಕ). [ಸಂ.]

ಧೋರಣೆ (ನಾ). ೧. (ರಚಿಸುವುದರಲ್ಲಿ) ಒಳ್ಳೆಯ ಶೈಲಿ, -ರೀತಿ: (ಕ). ೨. ಧಾಟಿ; ಕ್ರಮ: ಮ್ಯಾನೇಜರರಿಗೆ ಅಧ್ಯಕ್ಷರ ಧೋರಣೆ ಸರಿ ಬೀಳಲಿಲ್ಲ (ದುಂಬಿಕ. ೧೫೯); ವಿಶಿಷ್ಟದ್ವೈತ ಧೋರಣೆಯು ಇಲ್ಲಿ ಒಂದು ವೈಲಕ್ಷಣ್ಯವನ್ನು ತೋರಿಸುತ್ತದೆ (ಭಾರದ. ೨೫೯); ಈ ಪ್ರಜಾಸತ್ತಾತ್ಮಕ ಧೋರಣೆಯು ಸಾಹಿತ್ಯವನ್ನಾದರೂ ಆವರಿಸಿದೆ (ಪ್ರಬಂಧ. ೦); ನೀವು ಈಗ ಎಂತಹ ಅನುಚಿತ ಧೋರಣೆಯನ್ನು ತಳೆದಿದ್ದೀರಿ (ಹಬ್ಬಿಬ. ೨೨೯); ಇದುವರೆಗೆ ಕಾಂಗ್ರೆಸ್ ಮುಂದಾಳುಗಳ ಧೋರಣೆಯಲ್ಲಿ ತಿಲಕ್ ನಂಬಿಕೆಯನ್ನಿಟ್ಟಿದ್ದರು (ಸ್ವಾವೀರ. ೫೯). ೩. ವಿಚಾರಧಾರೆ; ಆಲೋಚನೆಯ ಮಾರ್ಗ: ಒಂದೇ ರೀತಿಯ ವಿಚಾರವನ್ನೂ ಧೋರಣೆಗಳನ್ನೂ ಬೆಳಸಿಕೊಂಡು ಬಂದಿದ್ದೇವೆ (ದೂರಸ. ೮೦); ಅವಳಿಗೆ ನನ್ನ ಮಾತುಗಳು, ವಿಚಾರಗಳು ಮತ್ತು ಧೋರಣೆಯ ಬಗ್ಗೆ ಸಂಪೂರ್ಣ ಅರಿವಿದ್ದಿತು (ಹೇಮಂತ. ೨೫೫); ಪತ್ರದ ಧೋರಣೆಯನ್ನು ತಿಳಿದುಕೊಂಡು ದೇಸಾಯರಿಗೆ ಅವಮರ್ಯಾದೆಯಾದಂತಾಯಿತು (ಗಂಮಾಯಿ. ೯೮). ೪. ವರ್ತನೆ; ವೃತ್ತಿ; ನಡವಳಿಕೆ: ಇವರೆಲ್ಲರ ಮಧ್ಯೆ ತಟಸ್ಥ ಧೋರಣೆಯನ್ನು ವಹಿಸುವವಳೆಂದರೆ ಮುದುಕಿ (ಹಳ್ಳಿಹಾ. ೦೦೭); ಬರ್‌ಬ್ಯಾಂಕ್ . . . ತನ್ನ ಧೋರಣೆಗಳಲ್ಲಿ ಟೀಕೆ ಅಥವಾ ತರ್ಕಕ್ಕೆ ಅವಕಾಶ ಕೊಡದವನು (ಸಸ್ಯಕ. ೩೨). ೫. ಗತ್ತು; ಠೇಂಕಾರ; ಹಮ್ಮು: ಅವರು ತುಂಬ ಧೋರಣೆಯಿಂದ ಮಾತನಾಡುವರು (ರೂಢಿ); ಅವನು ತುಂಬ ಧೋರಣೆಯ ವ್ಯಕ್ತಿ, (ರೂಢಿ). ೬. ನಿಲವು: ಈಗಿನ ಸಾಹಿತ್ಯದ ಧೋರಣೆ ಪ್ರಾಚೀನಸಾಹಿತ್ಯಕ್ಕೆ ಹೊಂದುವುದಿಲ್ಲ (ರೂಢಿ); ೭. (ಆಲಂ) ಉದಾಸೀನತೆ; ಅಲಕ್ಷ್ಯ: ದುರ್ಯೋಧನನ ಆಶ್ರಯದಲ್ಲಿದ್ದುಕೊಂಡು ಪಾಂಡವರನ್ನು ಧೋರಣೆಯಿಂದ ನೋಡುತ್ತಿದ್ದನು (ವಚಭಾ. ೧೮); ರಭಸ ಪ್ರವೃತ್ತಿಯನ್ನೋ ಧೋರಣೆಯನ್ನೋ ಅವಲಂಬಿಸಿದರೆ ತಪ್ಪಾಗುವುದು ಅನಿವಾರ್ಯ (ಕನ್ನಸಂ. ೧೬೩); ಇದಕ್ಕೆ ಬಹುಮಟ್ಟಿಗೆ ಇಂಜಿನಿಯರಿಂಗ್ ಖಾತೆಯ ಧೋರಣೆಯೆ ಕಾರಣ (ಶಿಕ್ಷದ. ೭೩೫. [ಸಂ. ಧೋರಣ]

ಧೋವತಿ, ದೋವತಿ, ಧೋತಿ (ನಾ). ಗಂಡಸರು ಉಡುವ ಬಟ್ಟೆ; ಪಂಚೆ; ಧೋತ್ರ ಬಂದನಿತ್ತಲು ಪಾರ್ವನೊಲಿದಂದು ಪೂಸಿದ ವಿಭೂತಿ ರುದ್ರಾಕ್ಷೆ ಧೋವತಿಯೆಸೆಯೆ (ಕಡ್ಡರ. ದೇ. ೧೩೩-೧೫); ಮಿಗಿಲು ಧೋ[ಪಾಠಾಂ. ದೋ] ವತಿ ದರ್ಭೆ ಸಂಬಳಿಗೆಗಳನೊಂದೆಡೆಯಲಿ ಮಡಗಿ (ಬಸಪು. ೫೬-೨೮). **ದೋವತಿ**: ದೋವತಿಯಿಂ ಪಾದರಕ್ಷೆಯಂ [ಪಾಠಾಂ. ಧೋತ್ರಮುಮಂ ಪಾದರಕ್ಕೆಯಂ] ಸುತ್ತಿ (ಸಮಪ. ೧೪-೧೫೪); ಪುಲಿ ದೊವಲ ದೋವತಿಯ ನಿರ್ಮಲಂ . . . ವಿರೂಪಾಕ್ಷನೊಪ್ಪಿದಂ (ಕಾರಿರ. ದೇ. ೨೯೬-೧೬); ಜನ್ನಿವಾರಮಂ ನೇರಗಟ್ಟಿ ದೋವತಿಯಿಂ ಮಲ್ಲಗಾಸೆಯನುಟ್ಟು (ವೃಷವಿ. ೩೮-೯೦ವ). **ಧೋತಿ**: ಒಟ್ಟಿಗೆ ನಾಲ್ಕು ಧೋತಿಗಳನ್ನು ಕೊಂಡುಕೊಳ್ಳಬೇಕು (ರೂಢಿ). 'ಧೋತ್ರ' ಪರಾ.

[<ಸಂ ಧೃತವಸ್ತ್ರ ?./ಹಿಂ. ಧೋವತೀ, ಧೋತಿ ; ಮರಾ. ಧೋತೀ./ತೆಲು. ದೋವತಿ, ದೋತಿ]

ಧೌತ (ಗು). ೧. ತೊಳೆದ ; ಸ್ವಚ್ಛವಾಡಿದ ; ಶುಭ್ರಗೊಳಿಸಿದ : ತರುಣೋರಗನಃನಿರ್ಮೋಕರುಚಿರಮೆನಿಸಿರ್ದ ಧೌತಧವಳಾಂಬರದಿಂ ಕರವೆಸೆದಂ . . . ನರೇಂದ್ರಂ (ಕಾದಂಪೂ. ೭೪) ; ಶ್ರೀಮದಮರಮಣಿ ಮುಕುಟರಂಜಿತ ರತ್ನಧಾಮಾಬಃಧಾರಾಧೌತತಾಮರಸಾಂಘ್ರಿಯುಗಲ ವೀರನಾಥನುದ್ದಾಮಸುಖವನೀವುದೆಮಗೆ (ಶ್ರೀಪಾಲ. ೦-೧). ೨. ಬೆಳ್ಳಗಿರುವ ; ಕಾಂತಿಯುಕ್ತವಾದ : ಎಂದಾಗಳ್ ಅಮಿತತೇಜಂ ದಂತಾಂಶು ಧೌತಕಪೋಳಫಳಕನಾಗಿ (ಆದಿಪು. ೪-೪೦೪). (ನಾ). ೩. ತೊಳೆದುದು ; ಶುಭ್ರವಾದುದು ; ಸ್ವಚ್ಛವಾದುದು : "ನಿರ್ಮಿತಂ, ಪ್ರಕ್ಷಾಳಿತಂ, ಧೌತಂ – ಈ ೩ ತೊಳೆಯಲ್ಪಟ್ಟುದು" (ಹಲಾಯು. ೬೪-೩೫೪) ; "ಧೌತಮೆನಲು ಪ್ರಕ್ಷಾಳಿತವುದೆನಲು ತೊಳೆವುದಕ್ಕೆ ನಾಮಂ" (ಪುಂಗರಾ. ೬೬-೪) ; ಅಸಿಲತೆ ರಣಧೌತಮದಿ' [ಪಾಠಾಂ. ರಣಧೌತಿಮದಿಂ] ಮಸಿಮುಸುಡನ ಜೀವಕಕ್ಷಿನಿಂ ಕಂದಿದೊಡೆಣ್ಣೆಸೆಯನಡರ್ದನ್ನ ಕೀರ್ತಿಪ್ರಸರದ ಕುಡಿ ಕೈಪಿಸೊರೆಯ ಕುಡಿಯುವೊಲಕ್ಕುಂ (ಯಶೋಚ. ೨-೩೩ . ೪. ಬೆಳ್ಳಗಿರುವುದು: "ಧೌತಂ ಸಿತಂ ಗೌರಮರ್ಜುನಂ . . . ನಿಜ ಶ್ವೇತಪಕ್ಕಂ" (ಪುಂಗರಾ. ೧೩೦-೩೨). ೫. ಬೆಳ್ಳಿ; ರಜತ. ೬. ಮಡಿ ಮಾಡಿದ ಬಟ್ಟೆ; ಒಗೆದ ಬಟ್ಟೆ: ಒಂದುದಯದಲ್ಲಿದ್ದು ಸುಸ್ನಾನಮಂಗೈದು ಚಂದದಿಂ ಧೌತವುಮನುಟ್ಟು (ನವಮೋ. ೦೮-೬) ; ಅಸುರೇಂದ್ರ ಸ್ನಾನವ ಮಾಡಲಾದು ತರುಣಿಯರು ಧೌತವುನೀಯ್ಕಲಳವಟ್ಟು ಮಣಿಖಚಿತಪಾವುಗೆಗಳಾ ತ್ವರಿತದಿಂದೀಯ್ಕಲವನಡಿಯುಗಂಗಳಿಗವರ್ಚಿ (ನವಮೋ. ೦೮-೪೦). ೭. (ಆಲಂ) ಮಸೆದುದು ; ಹರಿತ ಮಾಡಿದುದು : "ನಿಶಾತಂ, ನಿಶಿತಂ, ಧೌತಂ, ತೇಜಿತಂ – ಈ ೪ ಮಸೆದುದು" (ಹಲಾಯು. ೭೪-೩೨೦) ; "ಧೌತಂ ತೇಜಿತಂ ಮಸೆವ ತೆಱನಕ್ಕು" (ಮಂಗರಾ. ೪೪-೩೪). [ಸಂ.]

ಧೌತಕೀರ್ತಿ (ನಾ). ಧವಳಕೀರ್ತಿ ; ಶುದ್ಧವಾದ ಯಶಸ್ಸು : ಅನವದ್ಯ ಜಿನಾಗಮವಿದ್ಯನಿದ್ದ ದುಗ್ಧೋದಧಿಧೌತಕೀರ್ತಿವಿಶದಂ ಭರತಾವನಿರಾಜ ಪೂಜಿತಂ (ಶಾಂತಿಪು. ೦-೩೯). [ಧೌತ + ಕೀರ್ತಿ]

ಧೌತವಲ್ಕಲ (ನಾ). ಬೆಳ್ಳಗಿರುವ ನಾರುಬಟ್ಟೆ: ಧೌತವಲ್ಕಲಮನಲುಂಬು ವಕ್ಷವಣಯಂ ಸಮೆವೀ ಮೃವಸಾಯವೆತ್ರಲುಂ (ಕಾದಂಪೂ. ೩೩೪).

[ಧೌತ + ವಲ್ಕಲ]

ಧೌತವಸನ (ನಾ). = ಧೌತವಸ್ತ್ರ ; ಕುಶಜಾತಪವಿತ್ರಮಾತ್ರಧೌತವಸನ ಮುದ್ಯಮೌಂಜ ಮೃಗತುಂದಿಯೆರಚ್ಛಿಸ ಕೋವಣಂಗಳಿಂಬಿ ಕಡುರಮ್ಯಮಾದ ವಟುವೇಷಮನಾಂತು (ಪರ್ಪು. ೧೬-೪) ; ಪರಿವೃತ ಧೌತವಸನಸಮಂಚಿತ ಕೋಮಳ ಕಳೇವರರುಂ (ರಾಜಶೇ. ೪-೩೬೮).

[ಧೌತ + ವಸನ]

ಧೌತವಸ್ತ್ರ (ನಾ). ಮಡಿಮಾಡಿದ ಬಟ್ಟೆ ; ಶುಭ್ರವಸ್ತ್ರ : ತದ್ಧರ್ಮ ಕಳಸಾರೋಹಣಮಾಗಿ ನೆಱಿಯನಿರ್ವ್ಹಹಿಸಿದಗ್ಗಂಗಾಜಳಧೌತವಸ್ತ್ರಪವಿತ್ರೀ ಕೃತೋತ್ತಮಾಂಗಯರಪ್ಪರ್ ಶ್ರೀಮದಕ್ಕಂ ನಾಲಬರಸಿಯರು (ಕಇಆ. ೪೯-೩-೩೭; ೪೭೩) ; ತೀರ್ಥಸ್ನಾನಾರ್ಥಂ ಪರಸ್ಥಾನಂಗೆಯ್ವ ವಾನಪ್ರಸ್ಥ ಜನಂಗಳ ಧೌತವಸ್ತ್ರಪವಿತ್ರಾಕ್ಷಸೂತ್ರಂಗಳಂ ತಮ್ಮ ಕವಲ್ಗೊಂಬುಗಳೊಳ್ ನೇಱಿಸಿಕೊಂಡಿಂಬಿನೊಳವರೊಡನೆ ನಡೆವ ಸಾರಂಗಸಮೂಹಮುಮಂ (ಪಂಡಿತಂ. ೧೧೯-೩) ; ಪ್ರಾತಃಸಮಯದೊಳ್ ಜರಾಸಂಧಚಕ್ರವರ್ತಿ ಪವನಜಳಸ್ನಾನಪವಿತ್ರಗಾತ್ರನುಂ ಧೌತವಸ್ತ್ರಪರಿಧಾನನುಮಾಗಿ (ಪುಷಾನೇ. ೦೧-೦೪೦೮). [ಧೌತ + ವಸ್ತ್ರ]

ಧೌತಾಂಬರ (ನಾ). ೧. = ಮಡಿಬಟ್ಟೆ : "ಮರಣದೊಳು ಧೌತಾಂಬರದೊಳು ಮಡಿ" (ಶಬ್ದಮಂ. ೯೫) ; ಮಡಿಯೆಂಬುದು ಧೌತಾಂಬರದೆಡೆಯೆಳ್ಕಡಿಯೆಂಬುದಲ್ಪದಂಡದೊಳೇಗಂ ಪಿಡಿಯೆಂಬುದು ಕರಣೆಯೊಳೆಡೆವಡದಿರ್ಪುವು ಬೇಱೆ ಮತ್ತವಿರ್ಪ್ಪಾ ನಾಡೊಳ್ (ವೀರವಿ. ೦-೪೮). ೨. ಬಿಳಿಯ ಬಟ್ಟೆ : ಅಂಬರಮೆಲ್ಲಂ ಕೂಡೆ ಧೌತಾಂಬರದ ನವವಿತಾನಂಬೊಲಿಂಬಾದುದು (ರಾಜಶೇ. ೧೧-೬೭). [ಧೌತ + ಅಂಬರ]

ಧೌತಾಂಶುಕ (ನಾ). = ಧೌತವಸ್ತ್ರ : ಧೌತಾಂಶುಕದೊಳಗೆ ತಂಬುಲವ ಕಟ್ಟಿದರು (ಕುವ್ಯಾಆ. ೧೪-೪). [ಧೌತ + ಅಂಶುಕ]

ಧೌತಿ (ನಾ). [ಯೋಗ] ಧೌತಿ, ಬಸ್ತಿ, ನೇತಿ, ತ್ರಾಟಕ, ನೌಲಿಕ ಎಂಬ ಷಟ್ಕರ್ಮ ಕಪಾಲಭಿತ್ತಿ ಎಂಬ ಹತಯೋಗದ ಆರು ಅಂಗಗಳಲ್ಲಿ ಒಂದು : P ನಾಲ್ಕು ಅಂಗುಲ ಅಗಲದ, ಹದಿನೈದು ಮೊಳ ಉದ್ದದ ವಸ್ತ್ರವನ್ನು ನೆನೆಸಿ ಸ್ವಲ್ಪ ಸ್ವಲ್ಪವಾಗಿ ನುಂಗಿ ಪುನಃ ಅದನ್ನು ಗುದದ್ವಾರದ ಮೂಲಕ ಹೊರಗೆ ತೆಗೆಯಬೇಕು. ಈ ಧೌತಿಕರ್ಮದಿಂದ ಕೆಮ್ಮು, ಕುಷ್ಠ ಮುಂತಾದ ಇಪ್ಪತ್ತು ವಿಧ ಶ್ಲೇಷ್ಮರೋಗಗಳೂ ವಾಸಿಯಾಗುವುವು : ಬಿಳಿಯ ಪಾವಡೆಯನೊಂದು ತುದಿಯಂ ಪಿಡಿದು ಮತ್ತೊಂದು ತುದಿಯ ವೆಲ್ಲನೆ ಹೃದಯಪರ್ಯಂತಮಾಗಿ ನುಂಗಿ ತೆಗೆವುದೂ ಧೌತಿಯೆನಿಪುದು (ಶಿವಪ್ರ. ೬-೫). [ಸಂ.]

ಧೌತೋದಕ (ನಾ). ಶುದ್ಧವಾದ ನೀರು : ವಿಮಲಧೌತೋದಕ . . . ಸಕಲಭೋಗಾಹುತಿಗೆ ಪೋಪೋದಕವೆನಿವುದೀ ಪರಮಪಾದೋದಕಂ (ಶಂಕದಾ ೧೦-೬೦). [ಧೌತ + ಉದಕ]

ಧೌರಿತಕ (ನಾ). [ಅಶ್ವಶಾ] ಕುದುರೆಯ ಚಲನೆಯಲ್ಲಿ ಒಂದು ಪ್ರಕಾರ ; ಕಣ್ಕುಲೋಟ : "ಧೌರಿತಕಂ, ಬಿಸುನಡೆ, ಭರದಾಂಡ್" (ಸಿದ್ಧಾಂತಿ. ೩೫೦). 'ಪ್ರಚಧಾರ್ಕೆ' ಪರಾ. [ಸಂ.]

ಧೌರೇಯ (ನಾ). ೧. ಭಾರ ಹೊರಲು ಯೋಗ್ಯವಾದ ಎತ್ತು, ಕುದುರೆ ಮುಂತಾದ ಪ್ರಾಣಿ : "ಧುರ್ಯಃ, ಧೌರೇಯಃ – ಈ ೨ ಹೂಟ ದೆತ್ತು" (ಹಲಾಯು. ೪೪-೧೧೦) ; "ಧೂರ್ವಹಃ, ಧುರ್ಯಃ, ಧೌರೇಯಃ, ಧುರೀಣಃ, ಧುರಂಧರಃ – ೫ ಬಂಡಿ, ಗೋಣಿ, ಸೇಗಲು ಮುಂತಾದ ಭಾರವನ್ನು ಹೊತ್ತು ಶಕ್ತಿಯುಪ ಎತ್ತು ಮುಂತಾದ ದನಗಳ ಹೆಸರುಗಳು" (ಸಿದ್ಧಾಂತಿ. ೩೪೩). ೨. ಭಾರವನ್ನು ಹೊತ್ತಿರುಪವನು : ಹೊಣೆಗಾರಿಕೆಯನ್ನು ವಹಿಸಿಕೊಂಡವನು; ಜವಾಬ್ದಾರಿಯನ್ನು ಹೊತ್ತಿರುಪವನು: ಚಾಳುಕ್ಯರಾಜರಾಜ್ಯಭಾರಧೌರೇಯನುಂ (ಕಇಆ. ೫-೩-೦೪೬ ; 1068) ; ಅರ್ಥಿಜನತಾಸುರಭೂಜಾರಾಮಂ ಧರ್ಮೋದ್ಯಮಧೌರೇಯನುದಾತ್ತ ಚಿತ್ತನಭನವಪಂಪಂ (ಪಂರಾಮಾ. ೬-೦) ; ವಿಶ್ವವಿಶ್ವಂಭರಾಭಾರಧಾರಣಾ ಧೌರೇಯನುಮಾಸಾದಿತ ಯುವರಾಜವದವಿರಾಜನುಮಾಗಿ (ಪರ್ಪಾ. ೬-೬೮. ವ). ೩. ಕುದುರೆ ; ಅಶ್ವ. [ಸಂ.]

ಧೌರೇಯಕ (ನಾ). = ಧೌರೇಯ. [ಸಂ.]

ಧ್ಯಾತೃ (ನಾ). ಧ್ಯಾನ ಮಾಡುವವನು : ಆ ಧ್ಯಾನಯೋಗಮರ್ಹತ್ಸಮಯದೊಳ್ ಧ್ಯಾನಂ ಧ್ಯೇಯಂ ಧ್ಯಾತೃ ಫಲವೆಂದು ಚತುರಂಗಮಕ್ಕುಂ (ಅಜಿಪು. ೮-೨೪ ವ) ; ಧ್ಯಾತೃಹೃದಯಪ್ರಮೋಘಶಮಲವ್ರಾತಪರ್ವತವಜ್ರನನು . . . ತಾಪಕ್ಲೇಶಜಲನಿಧಿಸೇತುವನು ನೆನೆವುದು ತದಂಘ್ರಿಸರೋಜವನ ಬಿಡದೆ (ನಿಘಗ. ೩-೦೩-೩೯) ; ಧ್ಯಾನದಾಧಿಕ್ಯದ ವಿವೇಕದಿಂ ಧ್ಯಾತೃವಾ ಧ್ಯಾನಾದಿ ಭೇದವಳಿದಾ ಧ್ಯೇಯ ಸುಸ್ವರೂಪ (ವೀಶಿಪು. ೫-೦೭-೦೬). [ಸಂ.]

ಧ್ಯಾನ (ನಾ). ೧. ಚಿಂತನೆ ; ಮನಸ್ಸಿನಲ್ಲೇ ಯೋಚನೆ ಮಾಡುವುದು ; ಮನನ : "ಲಕ್ಷಣಂ ದರ್ಶನಂ ಧ್ಯಾನಮವಲೋಕನಂ ನೋಟಮಕ್ಕುಂ" (ಪುಂಗರಾ. ೧೩-೩); ಧ್ಯಾನದೊಳಭವಂ ನೆಱೆದಿನಿಸಾನುಮನರೆಮುಟ್ಟಿ ಕಣ್ಗಳಂ (ಪಂಪಭಾ. ೮-೦೩) ; ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ (ಲಸವ. ೫೦೬) ; ಶಿವನುತಿಧ್ಯಾನದೊಳು ಮೂರ್ಧಪೋದರ್ಕೆಲರು (ತಿಭಾರ. ದೇ. ೧೫-೪) ; ವನಜನಾಭಧ್ಯಾನಸುಧೆಯಲಿ ನನೆದು ಹೊಂಗಿದ ಕರಣ ಹೊರೆಯೇಱುತ್ತು ನಿಮಿಷದಲಿ (ಕುವ್ಯಾದ್ರೋ. ೦-೪೩) ; ಬಿನ್ನಹ ಗುರುವೇ ಧ್ಯಾನಕೆ ಬೆ ಸಜ್ಜಾದಾಗ ನಿನ್ನನಾದಿಯಂ ಮಾಡಿಕೊಂಡು ಕನ್ನಡದೊಳಗೊಂದು ಕಥೆಯ

ಪೇಳುವೆನದು ನಿನ್ನಾಜ್ಞೆ ಕಂಡ್ಯ ನನ್ನೊಡೆಯ (ಭರಡ. ೧-೩); ಒಂದು ಸಂಜೆ ಸಂಚಾರ ಹೊರಟು ಯಾವುದೋ ಧ್ಯಾನದಲ್ಲಿ ನಡೆಯುತ್ತಿರುವಾಗ (ಭಾವಗೀ. ೧೨). ೨. ಗಮನ; ಲಕ್ಷ್ಯ: ಹಾಗದ ಕೆರಹ ಹೊಱಗೆ ಕಳೆದು ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವನಂತೆ ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲ (ಬಸವ. ೧೯೯). ೩. ಆತ್ಮನನ್ನು ಯಾವಾಗಲೂ ಧ್ಯಾನಿಸುತ್ತಿರುವುದು; ಆತ್ಮಚಿಂತನೆ; ತಪಸ್ಸು: ಧ್ಯಾನಮರೀಚಿಯಿಂ ಬೆದಱ ಘಾತಿತಮಸ್ತಮಂ (ಆದಿಪು. ೧೦-೧೭); ಧ್ಯಾನ ನಿಶಿತಖಡ್ಗದಿನಘಸಂಕುಳಮೆಯ್ದೆ ಬೆದಱ (ಶಾಂತಿಪು. ೯-೩೭); ಪ್ರಾಯಶ್ಚಿತ್ತಂ ವಿನಯಂ ವೈಯ್ಯಾವೃತ್ಯಂ ಜಿನಂಗೆ ಕೂಡದು ದೋಷಾಪಾಯತಿಯಿಂ ಧ್ಯಾನಂ ಸ್ವಾಧ್ಯಾಯವ್ಯುತ್ಸರ್ಗಮುಂಟು (ಅಜಿಪು. ೧೩-೩೧); ಧ್ಯಾನಂ ಮುಕ್ತಿ ಪ್ರಾಪ್ತಿವಿಧಾನಂ (ಮಲ್ಲಿಪು. ೧೪-೭೬); ಮುಖದಲ್ಲಿ ಮಂತ್ರ ಹೃದಯದಲ್ಲಿ ಧ್ಯಾನ ಪ್ರಾಣದಲ್ಲಿ ಲಿಂಗ ನೆನಹು ಕರಿಗೊಂಡ ಶಿವಾತ್ಮ ಶರಣನ ಹೃದಯವೇ ಪರಮೇಶ್ವರಂಗೆ ನಿವಾಸಸ್ಥಾನ (ನೆಲೆವನೆ)ಯಾಗಿಪ್ಪುದಯ್ಯ (ಸಿದ್ಧೇವ. ೮೫-೨೫೩); ಶೋಧಿಸಿದ ನಿಜಚೈತನ್ಯ ತಾನೆಂದೆಂಬುದೇ ಧ್ಯಾನ (ಅಮೃತ. ೬-೮೦); "ದೇಹಾದಿಗಳ ಎಚ್ಚರವಿಲ್ಲದೆ ತಾನು ಬ್ರಹ್ಮವೆಂದಿರುವುದು" (ಅಮೃತ. ಟೀಕು); ಧ್ಯಾನವೆಂದರೆ ಇತರ ವಿಷಯಗಳಲ್ಲಿ ಹೋಗದೆ ಆತ್ಮ ವಿಷಯದಲ್ಲೇ ಮನಸ್ಸನ್ನು ಸ್ಥಿರವಾಗಿಡುವ ಅಭ್ಯಾಸ (ಹಿಂದಸಾ. ೨೨೦). 'ಆತ್ಮಧ್ಯಾಸ' ಪರಾ. ೪. [ಯೋಗ] ಯೋಗದ ಅಷ್ಟಾಂಗಗಳಲ್ಲಿ ಒಂದು; ಮನಸ್ಸನ್ನು ಒಂದೇ ವಿಷಯದಲ್ಲಿ ಸ್ಥಿರವಾಗಿ ಇಡುವುದು; ಏಕಾಗ್ರತೆ: "ತತ್ವಾದಿ ಚಿಂತನಂ ತಾಂ ಧ್ಯಾನಂ" (ವಸ್ತುಕೋ. ೨೦-೦೮); ಯಮನಿಯಮಸ್ವಾಧ್ಯಾಯಧ್ಯಾನಧಾರಣಮೋನಾನುಷ್ಠಾನ ಜಪಸಮಾಧಿ ಶೀಳಸಂಪ್ಪನ್ನರ್ (ಸೌಇಇ. XX. ೪೬-೦೬; 1072); ಮೀಂಬುಲಿಗನ ಹಕ್ಕಿಯಂತೆ ನೀರ ತಡಿಯಲ್ಲಿದ್ದು ಮೂಗ ಹಿಡಿದು ಧ್ಯಾನವ ಮಾಡು[ವಿ]ರಯ್ಯಾ (ಬಸವ. ೫೭೯); ಯಮನಿಯಮ . . . ಧ್ಯಾನಧಾರಣಸಮಾಧ್ಯಷ್ಟಾಂಗಯೋಗನಿಷ್ಠೆ (ವಿವೇಕ. ೦೪೩); "ಧ್ಯಾನ (ಅದನ್ನೆ ಎಡೆಬಿಡದೆ ನೆನೆಯುವುದು)" (ಅಮೃತ. ೨-೩೬ ಟೀಕು); ಯಮನಿಯಮ . . . ಧ್ಯಾನಧಾರಣಸಮಾಧಿಗಳೆಂಬ ಅಷ್ಟಾಂಗಯೋಗದೊಳಗೆ (ಅಖಂಡೇ. ೨೧೪-೫೫); ಪ್ರಾಣಾಯಾಮ ಪ್ರತ್ಯಾಹಾರ ಧಾರಣ . . . ಧ್ಯಾನಸುಸಮಾಧಿಗಳ ಸಾಧಿಸಲು (ಗಗತಾ. ೦೦-೬೮); ಧ್ಯಾನವೆಂದರೆ ಧ್ಯೇಯವಸ್ತುವಿನಲ್ಲಿ ಚಿತ್ತಸ್ಥಿರೀಕರಣವು (ಹಿಂದಸಾ. ೧೦೬); ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಈ ಎಂಟೂ ಆವಶ್ಯಕ (ಭಾರದ. ೧೨೭). 'ಅಷ್ಟಾಂಗಯೋಗ' ಪರಾ. ೫. ರಾಜಯೋಗದ ಹದಿನೈದು ಅಂಗಗಳಲ್ಲಿ ಒಂದು: ರಾಜಯೋಗಕ್ಕೆ . . . ಅಂಗ ತಾ ಹದಿನೈದು . . . ಯಮ ಪ್ರಥಮ ನಿಯಮವೆರಡು . . . ಹದಿನಾಲ್ಕು ಧ್ಯಾನವು ಚಿತ್ತಕರಿ ಹದಿನೈದನೇಯದು ಸಮಾಧಿ (ಜ್ಞಾನಸಿ. ೧೭-೧೪). 'ರಾಜಯೋಗ' ಪರಾ.

ಧ್ಯಾನ ಮಾಡು = ಚಿಂತನೆ ಮಾಡು; ಧ್ಯಾನಿಸು: ಇದರಲ್ಲಿ ಸ್ಥೈರ್ಯವುಂಟಾದರೆ ಮುಂದಕ್ಕೆ ಧ್ಯಾನ ಮಾಡುವುದಕ್ಕೆ ಅರ್ಹತೆಯುಂಟಾಗುತ್ತದೆ (ಭಾರದ. ೧೬೪); ಧ್ಯಾನ ಮಾಡುತ್ತ ಕುಳಿತ ಕೂಡಲೆ ಗುರುವಿನ ಧ್ಯಾನಸ್ಥ ಮೂರ್ತಿಯು ಪ್ರತ್ಯಕ್ಷ ನನ್ನ ಎದುರಿಗೆ ಬಂದು ನನಗೆ ಯಾವುದೂ ಕೇಡಾಗುತ್ತದೆ! (ಮಾಧವ. ೯೨); ಇಲ್ಲಿಯೂ ಕುಳಿತು ಧ್ಯಾನ ಮಾಡುತ್ತಾರೆ; ನದಿದಂಡೆಯಲ್ಲಷ್ಟೇ ಅಲ್ಲ (ಆಳನಿ. ೦೦೦). P ಜೈನರ ಪ್ರಕಾರ ಆರ್ತಧ್ಯಾನ, ರೌದ್ರಧ್ಯಾನ, ಧರ್ಮಧ್ಯಾನ ಮತ್ತು ಶುಕ್ಲಧ್ಯಾನ ಎಂದು ಧ್ಯಾನದಲ್ಲಿ ನಾಲ್ಕು ಬಗೆ. ಈ ಒಂದೊಂದರಲ್ಲೂ ಉಪಭೇದಗಳಿವೆ. [ಸಂ.]

ಧ್ಯಾನಂಗೈ (ಕ್ರಿ). ಚಿಂತನೆಮಾಡು; ಧ್ಯಾನಮಾಡು; ಧ್ಯಾನಿಸು: ಸಕಲವಿಶ್ವವನಾ ವಿರಾಡ್ರೂಪೆಂದು ಧ್ಯಾನಂಗೈಯುವುದೆ ನಿಶ್ಚಯದವಸರ ಸಮಾಹಿತಿಯು (ಗಗತಾ. ೧೪-೪೩). [ಧ್ಯಾನ + ಗೈ (<ಕೆಯ್$_1$)]

ಧ್ಯಾನಂಬೆಱು (ಕ್ರಿ). = ಧ್ಯಾನಂಗೈ: ಭಕ್ತಿಯಿಂ ತತ್ಪದಧ್ಯಾನಂಬೆತ್ತು ದಯಾಬ್ಧಿಯಂ ಘನತಪಂಗೆಯ್ದೊಚ್ಚತಂ ಮಚ್ಚಿಪೆಂ (ಶಬಶಂ. ೨-೮೯.

[ಧ್ಯಾನ + ಪೆಱು$_1$]

ಧ್ಯಾನಗಮ್ಯ (ಗು). ೧. ಏಕಾಗ್ರತೆಯಿಂದ ಕೂಡಿದ ಚಿಂತನೆಗೆ ಗೋಚರವಾಗುವ. (ನಾ). ೨. ಏಕಾಗ್ರತೆಯಿಂದ ಕೂಡಿದ ಚಿಂತನೆಗೆ ಗೋಚರವಾಗುವುದು: ಶಿಲೆಯಿಂದ, ಮರದಿಂದ . . . ಮರಳಿನಿಂದ ಧ್ಯಾನಗಮ್ಯವಾದ ವಿನೋಮಯಮೂರ್ತಿಯಾಗಿ ಮತ್ತು ರತ್ನಾದಿಗಳಲ್ಲಿ ನಿರ್ಮಿಸಿಕೊಂಡು ಪೂಜಿಸಬಹುದೆಂದು ಆಧಾರವಿದೆ (ಭಾರದ. ೭೮). ೩. ಏಕಾಗ್ರತೆಯಿಂದ ಕೂಡಿದ ಚಿಂತನೆಗೆ ಗೋಚರನಾಗುವವನು; ಪರಮಾತ್ಮ.

[ಧ್ಯಾನ + ಗಮ್ಯ]

ಧ್ಯಾನಗಮ್ಯೆ (ನಾ). ಏಕಾಗ್ರತೆಯಿಂದ ಕೂಡಿದ ಚಿಂತನೆಗೆ ಗೋಚರವಾಗುವವಳು: ಎಲೆ ಮಾತೆ! ನೀಂ ಭಕ್ತವತ್ಸಲೆ ಸಾಜಂ! ಧ್ಯಾನಗಮ್ಯೆ ಸಾಜಂ! (ರಾಮಾಶ್ವ. ೬೨-೧೧).

[ಸಂ. ಧ್ಯಾನಗಮ್ಯಾ (ಧ್ಯಾನ + ಗಮ್ಯ + –)]

ಧ್ಯಾನಗೋಚರ (ನಾ). ಏಕಾಗ್ರಚಿಂತನೆಯಿಂದ ಕಾಣಿಸುವವನು: ಧ್ಯಾನಗೋಚರನಾಗಿ ವನಿತೆಯ ಮಾನಿಸದಲಿಹ ಪರಮಹಂಸನು ಮಾನುಷಾಕೃತಿಯಾಗಿ ತೋಱಿದ ಬಾಹ್ಯರಚನೆಯಲಿ (ಕುಪ್ಯಾಅ. ೦೬-೩೩).

[ಧ್ಯಾನ + ಗೋಚರ]

ಧ್ಯಾನಚತುಷ್ಟಯ (ನಾ). [ಜೈನ] ಆರ್ತ, ರೌದ್ರ, ಧರ್ಮ ಮತ್ತು ಶುಕ್ಲ ಎಂಬ ನಾಲ್ಕು ಬಗೆಯ ಧ್ಯಾನ: ಆರ್ತರೌದ್ರಧರ್ಮ ಶುಕ್ಲಾಭಿಧಾನಧ್ಯಾನಚತುಷ್ಟಯಮುಮಂ (ಸುಕುಮಾ. ೩-೩೯ ವ).

[ಧ್ಯಾನ + ಚತುಷ್ಟಯ]

ಧ್ಯಾನಚಿತ್ತ (ನಾ). ಏಕಾಗ್ರಚಿತ್ತದಿಂದ ಚಿಂತನೆ ಮಾಡುವವನು; ಧ್ಯಾನದಲ್ಲಿ ಮನಸ್ಸನ್ನಿಟ್ಟವನು: ಶಿವಸಂಗಧ್ಯಾನಚಿತ್ತಂ ಶಿವಚರಣಲತಾ ಪುಷ್ಪವೃಂದಾಯಮಾನಂ (ನಂಬಿರ. ೨ ಸೂಚನೆ). [ಧ್ಯಾನ + ಚಿತ್ತ]

ಧ್ಯಾನತತ್ಪರ (ನಾ). = ಧ್ಯಾನಪರಾಯಣ: ಹಗಲು ಹಸಿವಿನ ಚಿಂತೆ ಇರುಳು ವಿಷಯದ ಚಿಂತೆ . . . ಇವು ಮಾದಲ್ಲದೆ ಸದಾಶಿವನ ಧ್ಯಾನತತ್ಪರನಾಗಿ ಶಿವತತ್ವವಿಚಾರದೊಳಗಿರಲೊಲ್ಲೆನು ನೋಡಾ (ಸಿದ್ಧೇವ. ೪೫-೧೨೮); ಹುಕ್ಕನು ... ಕೈಜೋಡಿಸಿ ಕಣ್ಣು ಮುಚ್ಚಿಕೊಂಡು ಗುರುಧ್ಯಾನತತ್ಪರನಾಗಿ ಕುಳಿತುಕೊಂಡುಬಿಟ್ಟನು (ಮಾಧವ. ೯೬). [ಧ್ಯಾನ + ತತ್ಪರ]

ಧ್ಯಾನದರ್ಶಿತ (ಗು). ಧ್ಯಾನಕ್ಕೆ ಗೋಚರವಾಗುವ; ಧ್ಯಾನದಿಂದ ತೋರಿಸಲ್ಪಟ್ಟ: ಕೇವಲ ಧ್ಯಾನದರ್ಶಿತಾನುಭವಗಳಿಂದಲೂ ಸೌಂದರ್ಯಾನುಭವಸಾಧ್ಯ (ಸೌಂದಸ. ೬೮); ಧ್ಯಾನದರ್ಶಿತ ದೇವತೆಗಳ ಈ ವರ್ಣನೆಯೇ ಮುಂದಿನ ಶಿಲ್ಪಕಲಾಚಾರ್ಯರ ಪರಿಭಾವನೆಯ ವಸ್ತುಗಳಾಗಿ, ಭಾರತೀಯ ದೇವದೇವತಾವಿಗ್ರಹಗಳ ಮಾದರಿಗಳೂ ಆದುವೆನ್ನುವುದು ಗಮನಾರ್ಹವಾದ ಸಂಗತಿ (ಸೌಂದಸ. ೯೯). [ಧ್ಯಾನ + ದರ್ಶಿತ]

ಧ್ಯಾನನಿಯೋಗವಾದ (ನಾ). [ಅದ್ವೈತ] ಪರಬ್ರಹ್ಮದ ಚಿಂತನೆಯಿಂದ ಉಂಟಾದ (ನಿಯೋಗವೆಂಬ) ಪುಣ್ಯಸಂಸ್ಕಾರದ ಮೂಲಕ ಮೋಕ್ಷವು ಲಭ್ಯವಾಗುವುದೆಂಬ ಸಿದ್ಧಾಂತ, – ತತ್ತ್ವ: ಇದರಲ್ಲಿ ಧ್ಯಾನನಿಯೋಗವಾದ, ನಿಷ್ಪ್ರಪಂಚೀಕರಣನಿಯೋಗವಾದ ಇವೇ ಮೊದಲಾದ ಪ್ರಭೇದಗಳಿರುವುವು (ಹಿಂದಸಾ. ೨೨೫). [ಧ್ಯಾನ + ನಿಯೋಗ + ವಾದ$_3$]

ಧ್ಯಾನಪರ (ಗು). ೧. (ಪರಮಾತ್ಮನ) ಚಿಂತನೆಯಲ್ಲಿ ಮನಸ್ಸನ್ನಿಟ್ಟ. (ನಾ). ೨. (ಪರಮಾತ್ಮನ) ಚಿಂತನೆಯಲ್ಲಿ ಮನಸ್ಸನ್ನಿಟ್ಟವನು: ಆ ನಗರದೊಳ್ಕುಂತಳೇಶ್ವರಂ ನಿರ್ಮಲಜ್ಞಾನದಿಂ . . . ಧ್ಯಾನಪರನಾಗಿರ್ಪನು (ಜೈಮಿಭಾ. ೩೦-೪೩); ಬಾಲ್ಯದಿಂದೆ ನೀನಗಧರಧ್ಯಾನಪರನಾಗಿರ್ಪೆ (ಜೈಮಿಭಾ. ೩೧-೭೦). [ಸಂ.]

ಧ್ಯಾನಪರಾಯಣ (ನಾ). ಚಿಂತನೆಯಲ್ಲಿ ಆಸಕ್ತನಾದವನು, – ಮಗ್ನನಾದವನು,— ತನ್ಮಯನಾದವನು : ತ್ರಿಜಗದ್ಗುರುವೇ ಗುರುವೆಂದು ತತ್ಪದಸರಸಿಜಧ್ಯಾನಪರಾಯಣನಾಗಿ (ಆದಿಪು. ೧೬-೬೨ವ).

[ಧ್ಯಾನ + ಪರಾಯಣ]

ಧ್ಯಾನಬಲ (ನಾ). ಧ್ಯಾನದಿಂದ ಉಂಟಾಗುವ ಶಕ್ತಿ ; ಸತತವಾದ ಚಿಂತನೆಯಿಂದ ಒದಗುವ ಬಲ ; ಆಧ್ಯಾತ್ಮಿಕ ಚೈತನ್ಯ : ನಿಯಾಮವನಾಂತು ಜಪಿಸುವ ವಾಗ್ವಿಷೀಯ್ಯದಲೆಂತು ಮಾಯಾವಿಲಯಮಪ್ಪುದು ಧ್ಯಾನಬಲಮಿರದೇ (ಗಗತಾ. ೧೦-೨೦). [ಧ್ಯಾನ + ಬಲ$_2$]

ಧ್ಯಾನಮಗ್ನ (ನಾ). = ಧ್ಯಾನಪರಾಯಣ : ಆಗ ತ್ರಿಕಾಲಜ್ಞಾನಿಯಾದ ಋಷಿಯು ಸ್ವಲ್ಪ ಹೊತ್ತು ಧ್ಯಾನಮಗ್ನನಾದನು (ಮಣಿಸ. ೬೫).

[ಧ್ಯಾನ + ಮಗ್ನ]

ಧ್ಯಾನಮುದ್ರೆ (ನಾ). ಚಿಂತನೆಯಿಂದ ಕೂಡಿದ ಮುಖಭಾವ : ಲಕ್ಷ್ಯೈಕಾಗ್ರತೆಯಿಂ ಧ್ಯಾನಮುದ್ರಾಸಮನ್ವಿತನಾಗಿ ಕುಳ್ಳಿರ್ದು (ವಿವೇಕ. ೦೦೨) ; ಅವನ ಮುಖ ಧ್ಯಾನಮುದ್ರೆಯಿಂದ ಗಂಭೀರವಾಗಿತ್ತು (ಪುನರು. ೬೨). [ಧ್ಯಾನ + ಮುದ್ರೆ]

ಧ್ಯಾನಯೋಗ (ನಾ). = ಧ್ಯಾನ ೩ : ಧ್ಯಾನಯೋಗಾದಿಗಳಿಂ ತನ್ನೊಳ ಹೊಱಗೆಲ್ಲಮುಂ ದೇವತಾತಾದಾತ್ಮ್ಯಮಂ ಪಡೆದು (ವಿವೇಕ. ೦೦೩) : ಶುದ್ಧಪ್ರಸಾದಜ್ಯೋತಿಯುಂ ಧ್ಯಾನಿಸುವುದೇ ಧ್ಯಾನಯೋಗ (ಅಖಂಡೇ. ೨೨೦-೮೦) ; ಮೂರನೆಯದದು ಧ್ಯಾನಯೋಗವು (ಗಗತಾ. ೨೦-೦೮) ; ದೇಹೇಂದ್ರಿಯವಿಷಯಗಳನ್ನೆಲ್ಲಾ ದೃಶ್ಯಭಾವದ ಅಕ್ಷರವನ್ನು ಮಾಡಿಕೊಂಡು ಆತ್ಮಧ್ಯಾನದಲ್ಲಿಯಿರುವದೇ ಧ್ಯಾನಯೋಗಯಂಬುವದು (ತತ್ವಚಿಂ. ೨೭-೦೪). [ಧ್ಯಾನ + ಯೋಗ]

ಧ್ಯಾನಯೋಗಿ (ನಾ). ಧ್ಯಾನ ಮಾಡುವವನು ; ತಪಸ್ವಿ : ಧ್ಯಾನಯೋಗಿಯು ಏಕಾಂತಮನಸ್ಕನಾಗಿ, ಪ್ರತ್ಯೇಕನಾಗಿ ಭಾವಗಳನ್ನು ಚರ್ಚಿಸುತ್ತಾನೆ (ಬಂಕಿಮ. XXII, ಮುನ್ನುಡಿ). [ಸಂ. ಧ್ಯಾನಯೋಗಿನ್]

ಧ್ಯಾನಶೀಲ (ಗು). ೧. ಚಿಂತನಶೀಲವಾದ ; ಯೋಚನಾಪರ. (ನಾ). ೨.ಧ್ಯಾನಮಗ್ನನಾದವನು ; ಚಿಂತನಶೀಲ. [ಸಂ.]

ಧ್ಯಾನಸ್ಥ (ಗು). ೧. = ಧ್ಯಾನಶೀಲ ೧ : ಧ್ಯಾನ ಮಾಡುತ್ತ ಕುಳಿತ ಕೂಡಲೆ ಗುರುವಿನ ಧ್ಯಾನಸ್ಥಮೂರ್ತಿಯು ಪ್ರತ್ಯಕ್ಷ ನನ್ನ ಎದುರಿಗೆ ಬಂದು ಕುಳಿತುಕೊಳ್ಳುವುದರಿಂದ, ಆ ಧಿವ್ಯಮೂರ್ತಿಯ ದರ್ಶನಾನಂದದೊಳಗೆ ನನಗೆ ಯಾವುದೂ ಬೇಡಾಗುತ್ತದೆ ! (ಮಾಧವ. ೯೨). (ನಾ).೨. =ಧ್ಯಾನಶೀಲ ೨: ಧ್ಯಾನಸ್ಥನಾಗುವ ಮೊದಲು ಹೀಗೆ ಕರ್ತವ್ಯಭ್ರಷ್ಟನಾಗಿ ಕುಳಿತುಕೊಳ್ಳುವದು ಯೋಗ್ಯವಲ್ಲೆಂದು ಪಶ್ಚಾತ್ತಾಪಪಡುವೆನು (ಮಾಧವ. ೯೨) ; ಧ್ಯಾನಸ್ಥನಾಗಿರುವ ತಪಸ್ವಿಯೊಬ್ಬನ ತಲೆಯನ್ನು ಕತ್ತಿ ಹಿಡಿದಿರುವ ಸೈನಿಕನೊಬ್ಬನು ಕತ್ತರಿಸಿದ್ದಾನೆ (ಕಶಾಅ. ೩೪೬). [ಸಂ.]

ಧ್ಯಾನಾತೀತ (ನಾ). ಚಿಂತನೆಗೆ ಮೀರಿದುದು ; ಪರಾತ್ಪರವಸ್ತು ; ಪರಮಾತ್ಮ : ಧ್ಯಾನ ಮೌನವನಱಯೆ ಧ್ಯಾನಾತೀತ ತಾನೆಯಾಯಿತ್ತಾಗಿ ಜ್ಞಾತೃಜ್ಞಾನಜ್ಞೇಯಂಗಳೆಲ್ಲವೂ ಮೀಱಿ ಅಭಿನವಮಲ್ಲಿಕಾರ್ಜುನನಲ್ಲಿ ಪರಮಸುಖಿಯಾಡೆನು (ವಚಸಂ ೫೦೫-೪೨). [ಧ್ಯಾನ + ಅತೀತ]

ಧ್ಯಾನಾಧೀನ (ಗು). ಚಿಂತನೆಗೆ ಒಳಗಾಹ : ಧ್ಯಾನಪರವಾದ : ಸುಧರ್ಮಾಚಾರ್ಯರುಜ್ಜಯಂತಪರ್ವತದೊಳಾಧ್ಯಾತ್ಮಧ್ಯಾನಾಧೀನಮಾನಸರಾಗಿ ಘಾತಿಕರ್ಮಂಗಳಂ ಘಾತಿಸಿ ಕೇವಲವಿಭೂತಿಯಂ ಪಡೆದು (ಸುಕುಮಾ. ೪-೨ವ) ; ಧ್ಯಾನಾಧೀನಮನಂ ಮುನೀಂದ್ರನಿರೆ ಕರ್ಮಂ ಘಾತಿಸಂಘಾತಮಾ ಧ್ಯಾನೋಗ್ರಾನಳನಿಂದಮಂದುರಿಯೆ (ಮಹಾನೇ. ೩-೧೪೩). [ಸಂ.]

ಧ್ಯಾನಾನಂದ (ನಾ). ಪರಬ್ರಹ್ಮದ ಚಿಂತನೆಯಿಂದ ದೊರಕುವ ಆನಂದ: 'ಥಿಯೊರಿಯಾ' ಎಂದರೆ 'ಧ್ಯಾನಾನಂದ'. ಅದು ದೇವನ ಒಂದು ಲಕ್ಷಣ. ಮನುಷ್ಯನ 'ಧ್ಯಾನಾನಂದ' ಅನುಭವವು ದೇವನ 'ಧ್ಯಾನಾನಂದ'ದ ಅಂಶವೇ ಎಂದು ಪೇಳಬಹುದು (ಧರ್ಮಸಾ. ೧೪೪). [ಧ್ಯಾನ + ಆನಂದ]

ಧ್ಯಾನಾರೂಢ (ನಾ). ೧. ಧ್ಯಾನವನ್ನು ಕೈಕೊಳ್ಳುವುದು ; ಪರತತ್ವದ ಚಿಂತನೆ: ಶ್ರೀನಾ[ರೀ]ನಿಳೆಯಂ ಶ್ರೀಮಿನಾಂಬರ ದಿಬ್ಯಸ್ಥಾ[ನಾ] [ಮೋ]ದಿ ಚೂಡಾಮಣಿಮುನಿಪಂ ಧ್ಯಾನಾರೂಢದೆ ನೋಡಿ ತಾನೊಪ್ಪೆ ಕೇವಳಜ್ಞಾನ ಪ್ರಸಿದ್ಧಮೇಂ ಪ್ರಕಟಿಸಿದ (ಕಇಅ. ೩೮-೫೨-೨; ?). ೨. ಧ್ಯಾನವನ್ನು ಕೈಗೊಂಡವನು. [ಧ್ಯಾನ + ಆರೂಢ]

ಧ್ಯಾನಿ (ನಾ). ಪರತತ್ವವನ್ನು ಕುರಿತು ಚಿಂತಿಸುವವನು ; ಧ್ಯಾನಶೀಲ : ವಿಗತೇಂದ್ರಿಯಾದಿ ಮನೋವಿಷಯನಭವಾನವರತಂತರ್ಗತಧ್ಯಾನಿ (ಬಸಪು. ೫೩-೧) ; ಕಣ್ಣಿನಲ್ಲಿ ಕಾಮ ಮನದಲ್ಲಿ ಕ್ರೋಧ . . . ಅಱುಹಿನಲ್ಲಿ ಮಾಯಾ ಉಳ್ಳನ್ನಕ್ಕರ ಎಂತು ಭಕ್ತನೆಂಬೆ . . . ಎಂತು ಧ್ಯಾನಿಗಳೆಂಬೆ ಎಂತು ಅನುಭಾವಿಗಳೆಂಬೆ (ಸಿದ್ಧೇವ. ೯೦-೨೭೫). [ಸಂ. ಧ್ಯಾನಿನ್]

ಧ್ಯಾನಿಸು (ಕ್ರಿ). ೧. ಪರತತ್ವವನ್ನು ಕುರಿತು ಚಿಂತಿಸು ; ಧ್ಯಾನಮಾಡು: ಶುಕ್ಲಧ್ಯಾನಮಂ ಧ್ಯಾನಿಸಿ ಎಂಟು ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ಪೋದರ್ (ವಡ್ಡಾರಾ. ೧೦೪-೦೭) ; ನಾಲ್ಕುಂ ಧರ್ಮಧ್ಯಾನಮಂ ಧ್ಯಾನಿಸುತ್ತುಂ (ಆದಿಪು. ೧೦-೧೪ವ) ; ಇಂತೀ ತ್ರಿಶುದ್ಧಿಗಳಿಂ ಧ್ಯಾನಿಸುವೆಮ್ಮನೋತೆಱಗುವೆಮ್ಮಂ ಬಂದಿವೆಮ್ಮಂ ತ್ರಿಕಾಲಗಯೋಗರ್ ಪರಮೇಶ್ವರರ್ ಪರಸುಗಿಂ ವಾತ್ಸಲ್ಯದಿಂ (ಶಾಂತಿಪು. ೧-೫) ; ಪ್ರಶಸ್ತಧ್ಯಾನಮಂ ಧ್ಯಾನಿಸುವಾಗಳ್ (ಅಜಿಪು. ೮-೨೮ವ) ; ಜಾನಿಪೊಡೆ ಚತುರ್ಭುಜನಂ ಧ್ಯಾ[ಪಾಠಾಂ. ಜಾ] ನಿಪುದೋ ಮೇಣ್ದಶಾವತಾರದ ರೂಪಂ ಧ್ಯಾ [ಪಾಠಾಂ. ಜಾ] ನಿಪುದೊ (ಸಮಪ. ೮-೧೪೫); ಷಡ್ವಸ್ತುವಂ ಷಡ್ಚಕ್ರಭುವನೇಜಮಧ್ಯದೊಳ್ ಧ್ಯಾನಿಸಿ (ಪದ್ಮರಾ. ೨-೪೮) ; ರುದ್ರಾಣಿ ಘನಧೈರ್ಯದಿಂದೆ ಸಾನುರಾಗದೆ ತನ್ನ ಹೃತ್ಕಮಲಮಧ್ಯದೊಳ್ ಧ್ಯಾನಿಸಿದಳೀಶನಂ (ಜಬಪು. ೩೬-೩). ೨. ಚಿಂತನೆ ಮಾಡು ; ಗಮನದಲ್ಲಿಡು : ಆಲೋಚಿಸು : ಗಗನಮಂ ಪೃಥ್ವಿಯಂ . . . ಭದ್ರವೀರಸೌಂದರ್ಯಮಂ, ಧ್ಯಾನಿಸುತೆ ಭಾವಿಸುತೆ ರೂಪಿಸುತೆ ಕಾಮಿಸಿದನಾ ಭೂಮಿಪಂ (ಶ್ರೀರಾಮಾ. ೧೨-೩೧೦) ; ಪರಿಭಾವಿಸು ! ಆಸ್ವಾದಿಸು ! ಧ್ಯಾನಿಸು ! ಒಂದಾಗು ! (ಅನಿಕೇ.೦೮-೧೦). ೩. ಆತ್ಮಚಿಂತನೆ ಮಾಡು; ಆತ್ಮವನ್ನು ಕುರಿತು ಚಿಂತಿಸು: ದೇಹ ಬೇಱಾತ್ಮ ಬೇಱಂದಾತ್ಮ ಕಲೆಯ ಮುನ್ನೊಲ್ದು ಧ್ಯಾನಿಸಿದ ಫಲದಿಂದ ದೊರೆಕೊಂಡುದಾ ರಾಯಗಾರೂಪು (ಭರಜ. ೦-೫೪); ಧ್ಯಾನಿಸಿದನೊಂದೆರಡು ಗಳಿಗೆ (ಜೈಮಿಭಾ. ೦೦-೩೭).

[ಧ್ಯಾನ + –ಇಸು$_3$]

ಧ್ಯಾಮ (ನಾ). ೧. (ಒಂದು ಬಗೆಯ) ಸುಗಂಧಪೂರಿತವಾದ ಹುಲ್ಲು ; ಸುವಾಸನೆಯನ್ನು ಬೀರುವ ಹುಲ್ಲು. ೨. ಹಂಚೀಕಡ್ಡಿ : "ಕತ್ತೃಣಂ ಪೌರಂ, ಸೌಗಂಧಕಂ, ಧ್ಯಾಮಂ [ಪಾಠಾಂ. ಧ್ಯಾಯಂ], ದೇವಜಗ್ಧಕಂ, ರೌಹಿಷಂ – ೬ ಕಾಚೀಹುಲ್ಲು, ಕಾಚೀಕಡ್ಡಿ, ಹಂಚೀಕಡ್ಡಿ, ಬರಗುಕಡ್ಡಿ, ಇವುಗಳೆಲ್ಲಕ್ಕೂ ಹೆಸರುಗಳು" (ಸಿದ್ಧಾಂತಿ. ೦೫೦). [ಸಂ.]

ಧ್ಯಾಸ, ದ್ಯಾಸ (ನಾ). ೧. ಚಿಂತನೆ ; ಧ್ಯಾನ : ಈ ಸಾಧನಶಾಸ್ತ್ರದಲ್ಲಿಯ ಭವತಾರಕರು ಹೇಳುವ ಮೊದಲನೆಯ ಅಂಶವು ನ್ಯಾಸ ಮತ್ತು ಧ್ಯಾಸ ಎಂಬುದು (ಪರಪ. ೫೮) ; ರಂಗಕ್ಕನಿಗೆ ಮಾತ್ರ ಆ ಶೀರೆಯ ಧ್ಯಾಸ ಬಿಡಲಿಲ್ಲ (ದೀಪಹ. II, ೦೨೨). ೨. ಎಚ್ಚರ ; ಪ್ರಜ್ಞೆ ; ಅರಿವು : ಅಲ್ಲಿದ್ದವರಿಗೆ . . . ಅಜಿತ ಮನೋರಮೆಯ ವಿಷಯದಲ್ಲೂ ಧ್ಯಾಸವಿರಲಿಲ್ಲ (ಶೇಪ್ರಶ್ನ. ೫೨) : ನಾನು ಎರಡು ಸಲ ಕೂಗಿದೆ, ನಿನಗೆ ಇತ್ತ ಧ್ಯಾಸವೇ ಇರಲಿಲ್ಲ (ಮಲೆಮ. ೫೭); ಅವನ 'ಧ್ಯಾಸ'ವೇನೂ ಅತ್ತ ಇದ್ದ ಹಾಗಿಲ್ಲ (ಸಂಗಾಗೌ. ೬). ೩. ನೆನಪು ; ಜ್ಞಾಪಕ . ನನಗೆ ಬಿಂದೂನ ಕ್ರಾಪಿನದೇ ಧ್ಯಾಸ (ವೈನಿ. ೭೦) ; ಅವರ ಧ್ಯಾಸವೇ ಉಳಿಯಲಿಲ್ಲ (ಕನಕೆ. ೨೭). ೪. ಲಕ್ಷ್ಯ ; ಗಮನ : ಬರೇ ತಿನೂವರ ಕಡೇನ ಧ್ಯಾಸಾ (ದೀಪಹ. II, ೫೬).

ದ್ಯಾಸ : ೨. "ಸ್ವಾಮಿಗೆ ಯಾಕೋ ಹೊರಗಿನ ದ್ಯಾಸೇ ಇಲ್ಲ" ಎಂದು ಅವರ ಗಮನವನ್ನು ತನ್ನತ್ತ ಸೆಳೆದ (ಸುದಸಂ. ೭೯). ೩. ನೆನಪು : (ದ್ಯಾಸ-ನೆನಪು ಜಾನಕೋ. ೪).

ಧ್ಯಾಸ ಬರು = ಗಮನಕ್ಕೆ ಬರು ; ಲಕ್ಷ್ಯಕ್ಕೆ ಬರು : ಅವನ ದನಿ ಸೋತಿದ್ದುದು ಧ್ಯಾಸ ಬಂದಿತು ಮೇಖಲೆಗೆ (ಅಳಾಕ. ೦೫೬).

[←ಮರಾ. ಧ್ಯಾಸ]

ಧ್ಯೇಯ (ಗು). ೧. ಉದ್ದೇಶಿಸಿದ ; ಲಕ್ಷಿಸಿದ : ಸಮಾಧಿಯೆಂದರೆ ಈ ಧ್ಯಾನವೆಂಬ ಅತಿ ಸ್ವಚ್ಛಚಿತ್ತವೃತ್ತಿಪ್ರವಾಹಕ್ಕೂ ಧ್ಯೇಯವಸ್ತುವಿಗೂ ಭೇದ ತೋರದೆ ಧ್ಯೇಯವಸ್ತು ಸ್ವರೂಪದಲ್ಲೇ ಲೀನವಾಗುವಿಕೆ. ಇದನ್ನು ಧ್ಯೇಯಮಾತ್ರಸ್ಫೂರ್ತಿಯೆನ್ನುವರು (ಹಿಂದಸಾ. ೦೦೬). (ನಾ). ೨. ಲಕ್ಷ್ಯ ; ಉದ್ದೇಶ ; ಗುರಿ : "ಉದ್ದೇಶ ; ಗುರಿ; ಧ್ಯೇಯ" (Cause. ಪತ್ರಿನಿ. ೧೩) ; ಜೀವನಕ್ಕೆ ಧ್ಯೇಯವೊಂದಿದೆಯೆಂಬುದನ್ನು ಅರಿಯುವುದೆ ಕಷ್ಟ (ಪುಕ್ಕಾರ ೧. ಪೀಠಿಕೆ) ; ನಿರಂತರ ಸೇವೆಯೇ ನದಿಗಳ ಧ್ಯೇಯ (ನನದಿ. ೧೭) ; ಜೈನರಂತೆ ಶೈವರೂ ಸರ್ವಭೂತಹಿತವನ್ನೇ ತಮ್ಮ ಉಚ್ಚ ಧ್ಯೇಯವನ್ನಾಗಿ ಮಾರ್ಪಡಿಸಿಕೊಂಡರು (ಸಾಹಿಸ. ೦೩೪). ೩. ಧ್ಯಾನದ ವಸ್ತು,-ಗುರಿ : ಪ್ರಾಯೋಪಗಮನವಿಧಿಯಿಂ ಕಾಯಮನಳವಡಿಸಿ ವಿಮಳಶುದ್ಧಧ್ಯಾನಂ ಧ್ಯೇಯ [ಪಾಠಾಂ. ದೇಯ, ಧೇಯ]ದೊಳಮರೆ ಮುಮುಕ್ಷುಜ್ಯಾಯಂ ಪಂಡಿತಸಮಾಧಿವಿಧಿಯಂ ತಳೆದಂ (ಅನಂಪು. ೪-೩೭). ೪. ಆದರ್ಶ. 'ಧ್ಯೇಯಜೀವಿ', 'ಧ್ಯೇಯವಾದಿ' ಪರಾ. [ಸಂ.]

ಧ್ಯೇಯಜೀವಿ (ನಾ). ಉತ್ತಮ ಉದ್ದೇಶವನ್ನಿಟ್ಟುಕೊಂಡಿರುವವನು ; ಆದರ್ಶವಾದಿ : ಮೈ ಮನಸ್ಸನ್ನು ಮನ್ನಿಸದೆ, ಒಂದು ಕ್ಷಣ ಕುಳ್ಳಿರಲೂ ಒಲ್ಲದೆ, ಕರ್ಮನಿರತರಾಗುವುದು ಧ್ಯೇಯಜೀವಿಗಳ ಹುಚ್ಚು (ಕಒಸಾ. IX. ಪೀಠಿಕೆ). [ಸಂ. ಧ್ಯೇಯಜೀವಿನ್]

ಧ್ಯೇಯವಸ್ತು (ನಾ). ಧ್ಯಾನ ಮಾಡಬೇಕಾದ ವಸ್ತು ; ಪರಮಾತ್ಮ : ಧ್ಯಾನಯೋಗದ ಧ್ಯೇಯವಸ್ತುವೆ ತಾನೆನುತ (ಗಗತಾ. ೦೬-೩೯) ; ಸಮಾಧಿಯೆಂದರೆ ಈ ಧ್ಯಾನವೆಂಬ ಅತಿಸ್ವಚ್ಛಚಿತ್ತವೃತ್ತಿಪ್ರವಾಹಕ್ಕೂ ಧ್ಯೇಯವಸ್ತುವಿಗೂ ಭೇದ ತೋರದೆ ಧ್ಯೇಯವಸ್ತುಸ್ವರೂಪದಲ್ಲೇ ಲೀನವಾಗುವಿಕೆ (ಹಿಂದಸಾ. ೦೦೬). [ಧ್ಯೇಯ + ವಸ್ತು]

ಧ್ಯೇಯವಾದ (ನಾ). ಉತ್ತಮವಾದ ಉದ್ದೇಶದ ಸಾಧನೆಯನ್ನು ಪ್ರತಿಪಾದಿಸುವ ವಾದ ; ಆದರ್ಶವಾದ : ಧ್ಯೇಯವಾದದ ಆಂತರಿಕ ಸ್ಫೂರ್ತಿಯು ಆತ್ಮದ ಅಮರವಾದ ಆಕಾಂಕ್ಷೆಗಳೊಳಗಿಂದಲೇ ಉದ್ಭವಿಸುತ್ತಿರುವುದು (ಪ್ರಬಂಧ. ೧೧೧) ; ಅವನು ಜೀವನದ ಎಲ್ಲ ವಿಷಯಗಳನ್ನೂ ಧ್ಯೇಯವಾದದ ದೃಷ್ಟಿಕೋನದಿಂದ ನೋಡುವ ಮನುಷ್ಯ (ದೂರಸ. ೪).

[ಧ್ಯೇಯ + ವಾದ್ಯ]

ಧ್ಯೇಯವಾದಿ (ನಾ). = ಧ್ಯೇಯಜೀವಿ : ಮೊದಲಿನಿಂದಲೂ ಕನ್ನಡರು ವೀರರು, ಉದಾತ್ತರು, ಧ್ಯೇಯವಾದಿಗಳು (ಭಾಷಾಶಾ. ೨೫೮).

[ಸಂ. ಧ್ಯೇಯವಾದಿನ್]

ಧ್ಯೇಯಸಾಧನೆ (ನಾ). ಉದ್ದೇಶದ ಸಾಧನೆ ; ಗುರಿಯನ್ನುಮುಟ್ಟಲು ಮಾಡುವ ಪ್ರಯತ್ನ : ಧ್ಯೇಯಸಾಧನೆಯ ಪ್ರಯತ್ನವೂ ಮಾನವನ ಸಹಜಪ್ರವೃತ್ತಿಯೇ ಹೊರತು ಕೃತಕವಲ್ಲ (ಪುಕ್ಕಾರ. ೦ ಪೀಠಿಕೆ).

[ಧ್ಯೇಯ + ಸಾಧನೆ]

ಧ್ರುಪದ 'ದುರಪದ' ನೋ.

ಧ್ರುವ (ಗು). ೧. ಸ್ಥಿರವಾದ ; ಅಚಲವಾದ. ೨. ನಿಶ್ಚಿತವಾದ ; ಸಂಶಯವಿಲ್ಲದ ; ದೃಢವಾದ. ೩. ನಿತ್ಯವಾದ ; ಬದಲಾಗದ ; ಶಾಶ್ವತ ; ನಿರಂತರ ; ಸತತ. (ನಾ). ೪. ನಿತ್ಯವಾದುದು ; ಸ್ಥಿರವಾದುದು ; ಶಾಶ್ವತವಾದುದು : "ಸತತಂ . . . ಧ್ರುವಮವಿರತಂ [ನಿರು]ತರಮಜಸ್ರಮೆನೆ ತಾಂ ನಿತ್ಯಂ" (ವಸ್ತುಕೋ. ೧೦೯-೬೭) ; "ನಿತ್ಯಂ ಧ್ರುವಂ ಶಾಶ್ವತಮದು ಸನಾತನಮನಶ್ವರಂ ಸ್ಥಿರಮೆನಿಕ್ಕು" (ಮಂಗರಾ. ೮-೨೫) ; ಧ್ರುವವಲಾ ರಾಜಾಗತೋಧರ್ಮವು ವಿದಿತವಿದ ನೀವಱಿಯಿರೇ (ಬಸಪು. ೫೫-೮) ; ದಿವಿಜರಿಪು ಕೇಳೆಲವೂ . . . ಧ್ರುವವು ನಿನಗಾಯುಷ್ಯವೆಂಬುತ್ಸವದಿ ನಮ್ಮನು ಕೆಣಕಿ ಲಯಮೃತ್ಯುವಿನ ಕೈವಶವಾದ ನೀನೆಂದಸುರ ಹರ ನುಡಿದ (ತೊರರಾ. ೬-೫೦-೦೩) ; ಅಧ್ರುವವನು ತೂರಿ, ಧ್ರುವದೆದೆಯನು ತೋರಿ . . . ಪುಣ್ಯಸಮೀರನು ಬರುತಿಹನು (ಪಾಂಡಜ. ೨೩-೭). ೫. ಉತ್ತಾನಪಾದರಾಯನ ಮಗ ; ಧ್ರುವಲೋಕದ ಅರಸು : ಲೋಕೋತ್ತರದ ಪದದಲಿ ನಿಂದನಾ ಧ್ರುವನಧಿಕತೇಜದಲಿ' (ನಿಭಾಗ. ೪-೯ ಸೂಚನೆ) ; ಕರಿ ಧ್ರುವ ಬಲಿ ಪಾಂಚಾಲೆ ಆಹಲ್ಯೆಯ ಪೊರೆದವ ನೀನಂತೆ (ಪುರಂದ. ೨-೭೦-೧) ; ಜಲಜಾಕ್ಷಭಕ್ತಿಯಿಂ ಪ್ರಹ್ಲಾದನಾಗಿ ನಿಶ್ಚಲ ಹರಿ ಧಾನ್ಯದಿಂ ಧ್ರುವನಾಗಿ (ಚೈಮಿಭಾ. ೨೯-೧೪). ೬. ಒಂದು ನಕ್ಷತ್ರದ ಹೆಸರು. "ಧ್ರುವಃ, ಔತ್ತಾನಪಾದಿಃ – ೨ ಧ್ರುವನಕ್ಷತ್ರದ ಹೆಸರು" (ಸಿದ್ಧಾಂತಿ. ೩೦). 'ಧ್ರುವನಕ್ಷತ್ರ' ಪರಾ. P ಧ್ರುವನು ನಾರದರಿಂದ ಮಂತ್ರೋಪದೇಶವನ್ನು ಪಡೆದು ತಪಸ್ಸನ್ನಾಚರಿಸಿ, ಸಾಮ್ರಾಜ್ಯವನ್ನಾಳಿ ಬಳಿಕ ಧ್ರುವಮಂಡಲವಾದನೆಂದು ಪುರಾಣಗಳಲ್ಲಿ ಹೇಳಿದೆ. ೭. ಎಂಟು ಜನ ವಸುಗಳಲ್ಲಿ ಒಬ್ಬ. 'ಅಷ್ಟವಸು' ಪರಾ. ೮. ಭೂಮಿಯ ಅಕ್ಷದ ಉತ್ತರ ಹಾಗು ದಕ್ಷಿಣದಿಕ್ಕಿನ ಕೇಂದ್ರ ಬಿಂದುಗಳು ; ಉತ್ತರಧ್ರುವ ಮತ್ತು ದಕ್ಷಿಣಧ್ರುವ : ಭೂಮಿಯು ತನ್ನ ಮೈಸುತ್ತು ಸರ್ವಕಾಲವೂ ತಿರುಗುತ್ತಿದ್ದಾಗ್ಯೂ ಅದರ ಬುಡ, ತಲೆ, ಇವೆರಡು ಬಿಂದುಗಳು ಸ್ಥಿರವಾಗಿ ಇರುತ್ತವೆ. ಈ ಸ್ಥಿರಬಿಂದುಗಳನ್ನು ಧ್ರುವಗಳೆಂದೆನ್ನುವರು (ಮುಂಬಯಿ. ೬-೬೦) ; ಪೂಜಕನೂ ಪೂಜ್ಯನೂ ಬೇರೆ ಬೇರೆ ಎಂಬುದರ ಕಲ್ಪನೆಗೂ ಇಬ್ಬರೂ ಒಂದೇ ಎಂಬ ಕಲ್ಪನೆಗೂ ಎರಡು ಧ್ರುವದ ಅಂತರ (ಭಾರದ. ೨೮೪) ; ಇಂದ್ರಿಯಾನುಭವಕ್ಕೆ ಪ್ರತಿಭಾನವೂ ಭಾವನೆಗೆ ಆಲೋಚನೆಯೂ ಎದುರು ಧ್ರುವಗಳಂತಿವೆ (ಶಿಕ್ಷದ. ೬೩೩). ೯. ಅಯಸ್ಕಾಂತದ ಪ್ರತಿತುದಿಯಲ್ಲೂ ಇರುವ ಪ್ರದೇಶ : ಕಬ್ಬಿಣವನ್ನು ಆಕರ್ಷಿಸುವ ಗುಣವನ್ನೇ ಕಾಂತತ್ವವೆಂದು (Magnetism) ಕರೆಯುವರು. ಈ ಗುಣವು ಕಾಂತದ ತುದಿಯಲ್ಲಿ ಹೆಚ್ಚಾಗಿದೆ . . . ಹೀಗೆ ಈ ಗುಣವು ಕೇಂದ್ರೀಕೃತವಾಗಿರುವ ಸ್ಥಾನಗಳನ್ನು ಕಾಂತದ ಧ್ರುವಗಳೆಂದು (Poles) ಕರೆಯುತ್ತೇವೆ (ಭೌತವಿ. ೩೦೦). ೧೦. ಕಂಬ ; ಗೂಟ: "ಧ್ರುವಂ ಶಂಕ್ವಾಖ್ಯಂ" (ವಸ್ತುಕೋ. ೩೧-೭) ; "ಗೂಂಟ ಮತ್ತೆ ಶಿವಕಂ ಧ್ರುವಂ ಪುಳಕಮೆನಿಸಿಕ್ಕು" (ಮಂಗರಾ. ೮೫-೨೭). ೧೧. (ಕೊಂಬೆ, ರೆಂಬೆಗಳನ್ನು ತರಿದ) ಮರದ ಬೊಡ್ಡೆ,-ಕಾಂಡ ; ಮೋಟುಮರ ; ಮರದ ತುಂಡು : "ಸ್ಥಾಣುಃ, ಧ್ರುವಃ, ಶಂಕುಃ–೩ ಮೋಟಿನ ಹೆಸರು. ಗೂಟ, ಮೇಕು" (ಸಿದ್ಧಾಂತಿ. ೧೧೧). ೧೨. ಎಣ್ಣೆಯ ಗಾಣದಲ್ಲಿ ಉಪಯೋಗಿಸುವ ಮರದ ತುಂಡು.-ದಿಮ್ಮಿ. ೧೩. [ಜ್ಯೋತಿ] ವಿಷ್ಕಂಭ ಮೊದಲಾದ ಇಪ್ಪತ್ತೇಳು ಯೋಗಗಳಲ್ಲಿ ಹನ್ನೆರಡನೆಯದು ; P ಇದೊಂದು ಶುಭ ಯೋಗವೆಂದು ಹೇಳುತ್ತಾರೆ : ವಿಷ್ಕಂಭ ಪ್ರೀತಿ ಆಯುಷ್ಮಾನ್ ಸೌಭಾಗ್ಯ ಶೋಭನ ಅತಿಗಂಡ ಸುಕರ್ಮ ಧೃತಿ ಶೂಲ ಗಂಡ ವೃದ್ಧಿ ಧ್ರುವ ವ್ಯಾಘಾತ ಹರ್ಷಣ ವಜ್ರ ಸಿದ್ಧಿ ವ್ಯತೀಪಾತ ವರೀಯಾನ್ ಪರಿಘ ಶಿವ ಸಿದ್ಧ ಸಾಧ್ಯ ಶುಭ ಶುಕ್ಲ ಬ್ರಹ್ಮ ಐಂದ್ರ ವೈಧೃತಿ ಗಳೆಂಬಿಪ್ಪತ್ತೇಳು ಯೋಗಂಗಳುಂ (ವಿವೇಕ. ೩೨೦) ; ಯೋಗಗಳತಿಶಯವನರಿಯ್ಯೆಯ್ಯ ಪೇಳುವೆ ವ್ಯತಿಯು ಧೃತಿ ವಿಷ್ಕಂಭ ಶೂಲವು . . . ಧ್ರುವ ಪರಿಘ (ಗಗತಾ. ೪-೬೯). ೧೪. [ಸಂಗೀತ] ಒಂದು ತಾಳದ ಹೆಸರು : ಬೇಗದಿ ಧ್ರುವ ಮಠೆಯವು ಪಡಿಮಠೆಯವು ಯೇಗೈಯಲಡತಾಳಗಳು (ತರ್ಕಕೌ. ೭-೫೬) ; ಧ್ರುವ, ಮಠ್ಯ, ರೂಪಕ, ಜಂಪೆ, ತ್ರಿಪುಟ, ಅಟ್ಟ,

ಏಕವೆಂಬ ಸಪ್ತತಾಳ ಭೇದಂಗಳಂ (ವಿವೇಕ. ೨೩೮); ಆದಿತಾಳದಿಂದ ಧ್ರುವ, ಮಟ್ಟ, ರೂಪಕ, ಝಂಪೆ, ತ್ರಿವುಡೆ, ಅಷ್ಟ, ಏಕತಾಳಗಳು ಹುಟ್ಟಿದವು (ಯಕ್ಷಗಾ. ೨೩). ೧೫. ದೇಶೀಗೀತಗಳಲ್ಲಿ ಒಂದು ಪ್ರಕಾರ : ಸಾಮಾನಿಕ ಜನಚೇತೋ[ರಾ]ಮಂ ಪ್ರಾಸಾದಿಕಾಂತರಾಕ್ಷೇಪಕ ವಿನಿಷ್ಕ್ರಾಮ ಪ್ರವೇಶ ಗಾನರಸಾಮೃತಮೆಸಗುಂ ಧ್ರುವ ಪ್ರಯೋಗಾನುಗತಂ (ಅಜಿಪು. ೫-೧೦); ಮಾತೃಕಾದಿದೇಶೀಪ್ರಬಂಧಂಗಳೊಳಂ ಧ್ರುವಾದಿ ದೇಶೀಗೀತಂಗಳೊಳಂ (ಚಂದ್ರಪು. ೧೫-೭೨ ವ). ೧೬. ಹಾಡು ಅಥವಾ ಪದ್ಯದ ಪಲ್ಲವಿ. ೧೭. [ಅಶ್ವಶಾ] ಕುದುರೆಯ ಮೈಮೇಲಿನ ಸುಳಿ : ಧ್ರುವಮನ್ಯಂ ಶುಭಮೆಂದಪ್ಪುವು ಸುಟಿಗಳ್ ನೂಱುಭೇದದಿಂದಂ ತುರಗಕ್ಕವಯವದಿಂದಂ ದೊಳವಪ್ಪುವುಮಷ್ಟವಿಧಂ ಸ್ಥಾನಮವರ್ಕೆ ನೂಱೂಱಕ್ಕುಂ (ಅಶ್ವಶಾ. ೪-೧). 'ದಶಧ್ರುವ' ಪರಾ. [ಸಂ.]

ಧ್ರುವಉಂಡಿಗೆ 'ಧ್ರುವವುಂಡಿಗೆ' ನೋ.

ಧ್ರುವಕ (ನಾ).=ಧ್ರುವ ೧೦. "ಧ್ರುವಕಃ, ಶಿವಕಃ, ಶಂಕುಃ, ಶಳಕಃ, ಕಿ.ಳಃ, ೬ ಗುಡಿಯ ಗೂಂಟಂ" (ಹಲಾಯು. ೭೪-೨೯೭). [ಸಂ.]

ಧ್ರುವಕ್ಷೇತ್ರ (ನಾ). [ಅಶ್ವಶಾ] ಕುದುರೆಯ ದೇಹದ ಮೇಲಿರುವ ಹತ್ತುವಿಧವಾದ ರೋಮದ ಸುಳಿಗಳಿರುವ ಸ್ಥಳ : ಸಂಗತ ದಶಧ್ರುವ ಕ್ಷೇತ್ರಂಗಳ್ ಶುಭಲಕ್ಷಣಂಗಳಮೃತೋದ್ಭವವಾಹಂಗಳಜಮೃಗ್ಯುಳೂಕ ಭವಂಗಳ್ ಪದಿನೆಂಟುಕೋಟಿ ಜಾತ್ಯಶ್ವಂಗಳ್ (ಶಾಂತಿಪು. ೧೦-೧೨೮). 'ದಶ ಧ್ರುವ' ಪರಾ. [ಧ್ರುವ + ಕ್ಷೇತ್ರ]

ಧ್ರುವಗತಿ (ನಾ). ಶಾಶ್ವತವಾದ ಸ್ಥಿತಿ; ಮೋಕ್ಷ: ಧ್ರುವಗತಿಯನೆಗೃದಿದನು ಬಳಿಕಾ ಧ್ರುವನಖಿಳ ಸಂಸಾ ಸಂಖವಧುವವಿದೆಂದಚ್ಯುತನ ಕಿಂಕರರೊಡನೆ ನಲವಿನಲಿ (ನಿಭಾಗ ೪-೧೦ ಸೂಚನೆ). [ಧ್ರುವ + ಗತಿ]

ಧ್ರುವಜಲ (ನಾ). ಬತ್ತದೆ ನಿಂತಿರುವ ನೀರು; ಶಾಶ್ವತವಾದ ನೀರು: ಧ್ರುವಜಲದಲ್ಲಿ ತಾವರೆಯಂ ನೆಟ್ಟಂತೆ ಚಂದ್ರಗುಪ್ತನಲ್ಲಿ ರಾಜ್ಯಲಕ್ಷ್ಮಿಯಂ ನಿಲ್ಲಿಸಿದೆನು (ಮುದ್ರಾಮು. ೨೮೯); ಈ ಬಾವಿಯಲ್ಲಿ ಧ್ರುವಜಲವಿದೆ. ಉರಿ ಬೇಸಿಗೆಯಲ್ಲೂ ಇದರಲ್ಲಿ ನೀರಿದ್ದೇ ಇರುತ್ತದೆ (ರೂಢಿ) [ಧ್ರುವ + ಜಲ$_2$]

ಧ್ರುವತಾರೆ (ನಾ). ೧.= ಧ್ರುವನಕ್ಷತ್ರ : ಒಡನೊಡನಾ ಕುಮಾರಕನ ಬೆಂಬಳಿಯೊಳ್ ಮಿಗೆ ಪಿಂದುಗೊಂಡು ಸಂಗಡದೊಳೆ ಕೂಡಿಬಂದರಧಿರಾಜ ಕುಮಾರಕರಂದನೇಕರುಂ ತಡೆಯದೆ ತಾರಕಾವಿತತಿಗಳ್ ಧ್ರುವತಾರೆಯ ಪಿಂದೆ ಬರ್ಪವೊಲ್ (ಬಾಧಪು. ೯-೯೨); ಇದೇ ಪುರಾಣೇತಿಹಾಸ ಪ್ರಸಿದ್ಧವಾದ ಧ್ರುವತಾರೆ (ನಕ್ಷತ್ರ. ೨೬). ೨. ಶಾಶ್ವತವಾಗಿ ಬೆಳಗುವವನು; ಸ್ಥಿರವಾಗಿ ಪ್ರಕಾಶಿಸುವವನು : ಅವನು ವಿಜ್ಞಾನಪ್ರಪಂಚದಲ್ಲಿ ಧ್ರುವತಾರೆಯಾಗಿದ್ದಾನೆ (ರೂಢಿ). ೩. (ಆಲಂ) ಆದರ್ಶವಾದ ಗುರಿ: ಪರೋಪಕಾರವೇ ನನ್ನ ಜೀವನದ ಧ್ರುವತಾರೆ (ರೂಢಿ). [ಧ್ರುವ + ತಾರೆ$_2$]

ಧ್ರುವತಾಳ (ನಾ). [ಸಂಗೀತ] ಒಂದು ತಾಳದ ಹೆಸರು : ಸಂಕೀರ್ಣ ಜಾತಿ ಧ್ರುವತಾಳದಲ್ಲಾದರೂ ತಂತಿಗಳು ಕಡಿದು ಹೋಗುವಷ್ಟು, ಪಲ್ಲವಿಯನ್ನು ಗಂಟೆಗಳ ಕಟ್ಟಲೆ ಬಾರಿಸಿ, ಸಂಖ್ಯೆಯಿಲ್ಲದ ಸಂಗತಿಗಳಿಂದ ಸಂಗೀತವನ್ನು ಅಲ್ಲಾಡಿಸಿಬಿಡುವವರಿದ್ದಾರೆ (ಗಾನಕ. ೨); ಧ್ರುವತಾಳ, ಮಠ್ಯತಾಳ . . . ಏಕತಾಳ ಇವೇ ಸೂಳಾದಿ ಸಪ್ತತಾಳಗಳು (ಸಂಗೀಚಂ. ೫೯).

[ಧ್ರುವ + ತಾಳ್$_2$ (=ತಾಲ)]

ಧ್ರುವತ್ವ (ನಾ). ೧. ಶಾಶ್ವತ ಸ್ಥಿತಿ; ಸ್ಥಿರವಾಗಿರುವಿಕೆ : ಪೂರ್ವಗತ ಮೆಂಬುದು . . . ಏದು ಪದಂಗಳಿಂ ಉತ್ಪಾದ ವ್ಯಯ ಧ್ರುವತ್ವಾದಿಗಳಂ ವರ್ಣಿಸುಗುಂ (ತತ್ತ್ವಪ್ರ. ೬೧). ೨. [ಸಂಗೀತ] ವೇಗವಾದ ಲಯ,-ಗತಿ. [ಸಂ.]

ಧ್ರುವ ನಕ್ಷತ್ರ (ನಾ). (ಯಾವಾಗಲೂ ಸ್ಥಿರವಾಗಿ, ಚಲಿಸದೆ ಇರುವುದೆಂದು ಹೇಳಲಾದ) ಒಂದು ನಕ್ಷತ್ರ : ಬಡಗದಿಕ್ಕಿಗೆ ಹಡಗ ನಡಿಸಿದರೆ, ಆ ಹಡಗಿನೊಳಗಿರುವವರಿಗೆ ಧ್ರುವನಕ್ಷತ್ರವು ಮೇಲೆ ಏರಿದಂತೆ ಕಾಣುತ್ತದೆ (ಮುಂಬಯಿ. ೪-೬೭). ತನ್ನ ಸ್ಥಿರವಾದ ಸ್ಥಾನದಲ್ಲಿ, ಮೋಡವಾಡದೆ ಶುಭ್ರವಾಗಿರುವ ರಾತ್ರಿಗಳಲ್ಲಿ . . . ಈ ನಕ್ಷತ್ರವನ್ನು ನಾವು ನೋಡಬಹುದು. ಇದೇ ಧ್ರುವನಕ್ಷತ್ರ (ಆಕಾಶ. ೫೨); ಹಿಂದಿನ ಕಾಲದಲ್ಲಿ ಧ್ರುವನಕ್ಷತ್ರವನ್ನು ಮನಸ್ಸಿನ ಸ್ಥಿರತೆ ಮತ್ತು ದೃಢಸಂಕಲ್ಪಕ್ಕೆ ಸಂಕೇತವಾಗಿ ಗೌರವಿಸುತ್ತಿದ್ದರು (ಆಕಾಶ. ೭೪). [ಧ್ರುವ + ನಕ್ಷತ್ರ]

ಧ್ರುವನಿಧಿ (ನಾ). ಬ್ಯಾಂಕುಗಳಲ್ಲಿಡುವ ಶಾಶ್ವತವಾದ ಹಣ,-ಪುದುವಟ್ಟು : ಧರ್ಮಕಾರ್ಯಕ್ಕಾಗಿ ಒಂದು ಧ್ರುವನಿಧಿಯನ್ನು ಇಡಬೇಕು (ರೂಢಿ). [ಧ್ರುವ + ನಿಧಿ]

ಧ್ರುವಪೈರು (ನಾ). ದೀರ್ಘಕಾಲ ಇದ್ದು ಫಲ ಕೊಡುವ ತೆಂಗು, ಅಡಕೆ ಮುಂತಾದ ಬೆಳೆ : ಧ್ರುವಪೈರಿನಿಂದ ಉತ್ಪತ್ತಿ ಹೆಚ್ಚು (ರೂಢಿ).

[ಧ್ರುವ + ಪೈರು (<ಪಯಿರ್)]

ಧ್ರುವಫಲ (ನಾ).=ಧ್ರುವಪೈರು : (ಕಿಸಂಗ್ಲಾ. ೧೪೯). [ಧ್ರುವ + ಫಲ$_1$]

ಧ್ರುವಬೇರ (ನಾ). ಆಳವಾದ ಮೂಲವುಳ್ಳ ವಿಗ್ರಹ; ಕದಲಿಸಲಾಗದ ಪ್ರತಿಮೆ; ಅಚಲಪ್ರತಿಮೆ : "ಅಚಲಪ್ರತಿಮೆ" ಗಳಿಗೆ "ಮೂಲವಿಗ್ರಹ" ವೆಂದೂ ಹೆಸರು. ಇವುಗಳಿಗೆ "ಧ್ರುವಬೇರ" ಎಂದೂ ಹೆಸರುಂಟು. . . . ಇವುಗಳನ್ನು ಸ್ಥಾನದಿಂದ ಸ್ಥಾನಕ್ಕೆ ಕದಲಿಸಲಸಾಧ್ಯ ಭಾರದ. ೫೧೨).

[ಧ್ರುವ + ಬೇರ$_3$]

ಧ್ರುವಮಂಡಲ (ನಾ). ೧. = ಧ್ರುವಲೋಕ. ೨. = ಧ್ರುವ ೧೪ : ಧ್ರುವಮಂಡಲದೊಸರ್ವಮರ್ವಂ ಸುವಿಲಾಸದಿನುಂಡು (ಉದ್ಕಟಿ. ೩-೪೨).

[ಧ್ರುವ + ಮಂಡಲ]

ಧ್ರುವಮೃತ್ಯು (ನಾ). ಎಂದಿಗೂ ತಪ್ಪದ ಮೃತ್ಯು,-ಮರಣ : ಕಾಲನನು ಮೀಱುವರಾರು ಪೌರಾತನಕೃತ ಧ್ರುವಮೃತ್ಯುವನು ಗೆಲುವಾತನಿಲ್ಲ (ಕುಪ್ಯಾದ್ರೋ. ೭-೩೩). [ಧ್ರುವ + ಮೃತ್ಯು]

ಧ್ರುವಯಷ್ಟಿ (ನಾ). ಕಂಬ; ಗೂಟ : "ಧ್ರುವಯಷ್ಟಿ ಕಣೆಯಕ್ಕು" (ಮಂಗರಾ. ೬೩-೨೬). [ಧ್ರುವ + ಯಷ್ಟಿ]

ಧ್ರುವರಕ್ಷಕ (ನಾ). ಧ್ರುವ ನಕ್ಷತ್ರವನ್ನು ಕಾಯುವ ನಕ್ಷತ್ರ,-ಬಳಸಿರುವ ತಾರೆ: ಈ ಎರಡು ನಕ್ಷತ್ರಗಳು ಅತಿ ಸಮೀಪದಲ್ಲದ್ದುಕೊಂಡು ಯಾವಾಗಲೂ ಧ್ರುವತಾರೆಯನ್ನು ಬಳಸುತ್ತಿರುವುದರಿಂದ ಇವಕ್ಕೆ ಧ್ರುವರಕ್ಷಕರೆಂಬ ಹೆಸರು ಬಂದಿದೆ (ನಕ್ಷತ್ರ. ೭೭). [ಧ್ರುವ + ರಕ್ಷಕ]

ಧ್ರುವಲೋಕ (ನಾ). ಧ್ರುವನಕ್ಷತ್ರಮಂಡಲ; ಧ್ರುವಮಂಡಲ : ಸುತ್ತ ಬಳಸಿ ಪೆಟಲವರು ಕೋವಿಗಳನು ತೆತ್ತಿಸಲವರಾರಭಟೆಯ ವೃತ್ತಿಯಿಂ ತಾರಗೆಗಳ ಗೂಳೆಯವಿರದೆತ್ತಿತು ಧ್ರುವಲೋಕದತ್ತ (ಕುರಾಸಾಂ. ೧೦-೩೫); ಕಿವುಡುಕೀಳಲು ದೆಸೆಗಳು ದೆಸೆಯಾನೆಗಳ್ಳಿವಿಯ ಕೊಡಹಲು ಮೇಘಗಳು ಧ್ರುವಲೋಕದತ್ತ ಪಾಱಲು ವಾದ್ಯರವದಿಂದ ತವೆ ಕಾಣಿಸಿದವು ಪೌಜುಗಳು (ಕುರಾಸಾಂ. ೧೨-೪೬). [ಧ್ರುವ + ಲೋಕ]

ಧ್ರುವವೀಣೆ (ನಾ). ಒಂದು ಬಗೆಯ ವೀಣೆ : ಅವನ ಬೃಹದ್‌ಗ್ರಂಥ . . . ನಾಟ್ಯಕ್ಕೆ ಸಹಾಯವಾಗುವಂತೆ ಬರೆಯಲ್ಪಟ್ಟಿದ್ದರೂ, ಸಪ್ತಸ್ವರಗಳೇ ಅಲ್ಲದೆ, ದ್ವಾವಿಂಶತಿ ಶ್ರುತಿ, ಅವುಗಳ ಪ್ರದರ್ಶನಕ್ಕೆ ಉಪಯೋಗಿಸಲಾಗುವ ಧ್ರುವವೀಣೆ, ಚಲವೀಣೆ . . . ಇವುಗಳನ್ನೆಲ್ಲಾ ವಿವರಿಸಿದ್ದಾನೆ (ಭಾರದ. ೫೩೮). [ಧ್ರುವ + ವೀಣೆ]

ಧ್ರುವವುಂಡಿಗೆ, ಧ್ರುವಉಂಡಿಗೆ (ನಾ). ಶಾಶ್ವತವಾದ ಮಾನ್ಯ : ಮಹಾಜನಂಗಳು . . . ತಮ್ಮೊಳು ಸರ್ವೈಕಮತ್ಯವಾಗಿ ಹಳ್ಳಿಗಳನು ಧ್ರುವವುಣ್ಡಿಗೆಯಾಗಿ ಹಚ್ಚಿಕೊಣ್ಡ ಕ್ರಮವೆನ್ತೆನ್ದಡೆ (ಎಕ. VI, ತರೀಕೆ. ೫೩-೩; 1290 ?). **ಧ್ರುವಉಂಡಿಗೆ** : ಬೀಚರಸಯ್ಯಂಗಳು ತ(ಂ)ಮ್ಮ ಸೆಮ್ಮಿನ ಒಂದು ವೃತ್ತಿಗೆ ಆ ದಶಕದ ಮಹಾಜನಂಗಳನೊಡಂಬಡಿಸಿ ಹಸುಗೆಯಂ

ಧ್ರುವಉಂಡಿಗೆಯಾಗಿ ಹಿಡಿದ ದೋ×ಯಗದ್ದೆ ಕಂಬಂ ನೂಱಯಿವತ್ತುಮಂ ಧಾರಾಪೂರ್ಬ್ಬಕಂ ಮಾಡಿ ಕೊಟ್ಟರು (ಸೌಇಇ. IX-1, ೨೯೫-೨೫ ; 1172) ; ತೆಂಕಾತೂರು ಯಿಂತಿನಿಸಱಲಿಯುಂ ಪ್ರತಿಪ್ರತ್ತಿ ವಿಭಾಗಂ ಮಾಡಿಯಿಕ್ಕಿದ ಉಂಡಿಗೆ ಧ್ರುವಉಣ್ಡಿಗೆ . . . ಈ ಧ್ರುವಉಣ್ಡಿಗೆಯನಳಿಹಿ(ಪಿ)ದವರು . . . ಗ್ರಾಮದ್ರೋಹಿಗಳು (ಮೈಆರಿ, ೧೯೩೦, ೫೯-೩ ; 1226).

[ಧ್ರುವ + ಉಂಡಿಗೆ]

ಧ್ರುವಸ್ಥಾನ (ನಾ). ಭೂಮಿಯಂ ಅಕ್ಷದ ತುದಿ,-ಕೊನೆ.

[ಧ್ರುವ + ಸ್ಥಾನ]

ಧ್ರುವೀಕರಣ (ನಾ). ವಿವಿಧ ರಾಜಕೀಯ ಪಂಗಡಗಳಲ್ಲಿರುವ ಶಕ್ತಿಗಳು ಯಾವುದೋ ಒಂದು ಕಾರಣಕ್ಕಾಗಿ ಒಟ್ಟು ಸೇರುವಿಕೆ : ಚುನಾವಣೆಯ ಸಮಯದಲ್ಲಿ ಯಾವಯಾವ ರಾಜಕೀಯಪಕ್ಷಗಳು ಧ್ರುವೀಕರಣ ಹೊಂದುತ್ತವೆಯೋ ಹೇಳಲಾಗುವುದಿಲ್ಲ (ರೂಢಿ). [ಸಂ.]

ಧ್ರುವೆ (ನಾ). ೧. (ಯಜ್ಞ ಮಾಡುವಾಗ ಉಪಯೋಗಿಸುವ) ಮರದ ಸೌಟು,-ಸಟ್ಟುಗ. ೨. ಕುರುಟಿಗೆ ಗಿಡ. ೩. ಶಾಲಪರ್ಣೀ ಗಿಡ ; ಮೂರೆಲೆಹೊನ್ನೆ : "ವಿದಾರಿಗಂಧಾ, ಅಂಶಮತೀ, ಶಾಲಪರ್ಣೀ, ಸ್ಥಿರಾ, ಧ್ರುವಾ – ೫ ಮೂರೆಲೆಹೊನ್ನೆ ಹೆಸರು" (ಸಿದ್ಧಾಂತಿ. ೧೩೮). ೪. [ಅಶ್ವಶಾ] ಕುದುರೆಯ ದೇಹದ ಮೇಲಿರುವ ರೋಮದ ಸುಳಿ : ತನುವಂ ಧ್ರುವೆಯಂ ಸತ್ವಮನನಃಪಮವರ್ಣಪ್ರಕಾರಮಂ ಪದಗತಿಯಂ ಸ್ವನಮಂ ಛಾಯೆಯನಾರಯ್ದನಿತಟೊಳಂ ಪೇಳ್ವುದಷ್ಟವಿಧ ಲಕ್ಷಣಮಂ (ಅಶ್ವಶಾ. ೦-೧೭) ; ಈರಯ್ದುಂ ಧ್ರುವೆಗಳ್ ಸ್ಥಾನಾರುಹಮಲ್ಲದೊಡಮಯ್ದುವರ್ಷದೊಳಟಿಗುಂ (ಅಶ್ವಶಾ. ೬-೬). [ಸಂ. ಧ್ರುವಾ]

ಧ್ರುವೋನ್ಮುಖತ್ವ (ನಾ). (ಅಯಸ್ಕಾಂತವು) ಧ್ರುವಗಳ ಕಡೆ ಅಭಿಮುಖವಾಗುವಿಕೆ,-ತಿರುಗುವಿಕೆ : ಲೋಹಚುಂಬಕದ ಮುಖ್ಯ ಗುಣಗಳು ಯಾವವೆಂದರೆ, ಅದು ಕಬ್ಬಿಣವನ್ನು ಎಳೆದುಕೊಳ್ಳುತ್ತದೆ ; ಸೂಜಿಯ ಮೊನೆಯ ಮೇಲೆ ತಿರುಗಲಿಕ್ಕೆ ಬರುವ ಹಾಗೆ ಅದರದೊಂದು ಪಟ್ಟಿಯನ್ನು ಇಟ್ಟರೆ, ಒಂದು ತುದಿಯು ಉತ್ತರಕ್ಕೂ ಎರಡನೇದು ದಕ್ಷಿಣಕ್ಕೂ ತಪ್ಪದೆ ಆಗುತ್ತವೆ. ಈ ಗುಣಕ್ಕೆ ಧ್ರುವೋನ್ಮುಖತ್ವವೆಂಬ ಹೆಸರು (ಮುಂಬಯಿ. ೫-೨೨೯). [ಸಂ.]

ಧ್ರೌವ್ಯ (ನಾ). ಸ್ಥಿರವಾಗಿರುವಿಕೆ ; ನಿತ್ಯತೆ : ಉತ್ಪಾದ-ಉತ್ಪತ್ತಿಯುಂ, ವ್ಯಯ – ವಿಪತ್ತಿಯುಂ, ಧ್ರೌವ್ಯ – ಧ್ರುವತ್ವಮುಂ ಎಂದಿವಱೊಳ್, ಯುಕ್ತಂ-ಕೂಡಿದುದು, ಸತ್-ಸಲ್ಲಕ್ಷಣಮಕ್ಕುಂ (ತತ್ತ್ವಪ್ರ. ೨೪೬) ; ವಸ್ತು ಸ್ವರೂಪವು ಉತ್ಪಾದ, ವ್ಯಯ, ಧ್ರೌವ್ಯ (ಸ್ಥಿರ) ಎಂಬ ಮೂರು ರೂಪವಾಗಿದೆ (ಭಾರದ. ೦೮೦). [ಸಂ.]

ಧ್ವಂಕೃತಿ (ನಾ). ಧ್ವಂ ಎಂಬ ಶಬ್ದ : ಶಂಖ ಕಹಳಾಧ್ವಾನದಂತೆ ಕೇಳಲದೆ ಧ್ವಂಕೃತಿಯೆನಿಪುದು (ಶಿವಪ್ರ. ೬೩-೧). [ಸಂ.]

ಧ್ವಂಸ (ನಾ). ೧. ಕೆಳಗೆ ಬೀಳುವುದು ; ಪತನ. ೨. ಮರೆಯಾಗುವುದು; ಕಾಣದಾಗುವುದು. 'ಅಪಧ್ವಂಸ' ಪರಾ. ೩. ಇಲ್ಲವಾಗಿಸುವುದು; ಹೋಗಿಸುವುದು. ೪. ನಾಶ ; ನಷ್ಟ ; ಅಳಿವು : ಅಂಧಾಸುರಧ್ವಂಸ ಧುರಧರಣಿಯಂತೆ ನೀಲಕಂಠ ನೃತ್ಯಾಡಂಬರಮುಂ (ಕುಸುಮಾ. ೧-೭೪ ವ).

ಧ್ವಂಸ ಮಾಡು = ನಾಶಮಾಡು ; ಹಾಳುಮಾಡು : ಶತ್ರುಗಳನ್ನು ಧ್ವಂಸಮಾಡುವ ಹಟತೊಟ್ಟು, ಸನ್ಮಾರ್ಗವನ್ನುಲ್ಲಂಘಿಸಿದ ಪರಶುರಾಮನೆಂಬ ತಾಪಸನಿಗೆ ಈ ಧನುಸ್ಸು ಧರ್ಮೋಪದೇಶಮಾಡಿದೆ (ಧ್ವನ್ಯಾಲೋ. ೩೩ ಅಡಿಟಿ) ; ಅವರು ಯಾರ್ಯಾರ ಮನೆಗಳನ್ನು ಹಗಲಿನಲ್ಲೇ ಸುಟ್ಟು ಧ್ವಂಸ ಮಾಡಿದ್ದರು . . . ಎಂದು ಬಣ್ಣಿಸುವುದನ್ನು ಕೇಳಿದಾಗ ಅವಳಿಗೆ ಅವರ ವಿಷಯದಲ್ಲಿ ಭಯವಲ್ಲದೆ ಇನ್ನಾವ ಭಾವನೆಯೂ ಬರಲಿಲ್ಲ (ಆಳನಿ. ೧೧೩).

[ಸಂ.]

ಧ್ವಂಸಕ (ಗು). ೧. ನಾಶಪಡಿಸುವ. (ನಾ). ೨. ನಾಶಮಾಡುವವನು. ೩. (ಅತಿಯಾದ ಕುಡಿತದಿಂದ ಉಂಟಾಗುವ) ಒಂದು ಬಗೆಯ ರೋಗ. [ಸಂ.]

ಧ್ವಂಸನ (ನಾ). ೧. ಕೆಳಗೆ ಬೀಳಿಸುವಿಕೆ. ೨. ಪತನ ; ಬೀಳುವುದು. ೩. ಇಲ್ಲವಾಗುವುದು ; ಹೋಗುವುದು. ೪. ನಾಶಪಡಿಸುವಿಕೆ ; ಹಾಳುಮಾಡುವುದು : ದಶಮುಖಧ್ವಂಸನ ಸೇವಾಸಮಾಜದಂತೆ ಪ್ಲವಗಪ್ರಕೀರ್ಣಮುಂ (ಕುಸುಮಾ. ೧-೨೨ ವ). ೫. ನಾಶ ; ಅಳಿವು. ೬. ಚಲ್ಲಾಪಿಲ್ಲಿ ಮಾಡುವುದು ; ಚದುರಿಸುವುದು . ೭. ಚಿಮುಕಿಸುವುದು. [ಸಂ.]

ಧ್ವಂಸನೀಯ (ಗು). ೧. ನಾಶವಾಗಬೇಕಾದ. (ನಾ). ೨. ಇಲ್ಲವಾಗುವುದು ; ಹೋಗುವುದು. [ಸಂ.]

ಧ್ವಂಸಿ (ನಾ). ೧. ಬೀಳುವುದು ; ಪತನ. ೨. ಬೀಳಿಸುವುದು. ೩. ನಾಶಮಾಡುವುದು. ೪. ನಾಶಮಾಡುವವನು : ನಾಂ ಕಂಡೆ ದಕ್ಷಾಧ್ವರ ಧ್ವಂಸಿಯನುಱುಮಹಿಮಾವೇಷ್ಟನಂ ಶ್ರೇಷ್ಠನಂ (ವೀರವಿ. ೫-೭೮).

[ಸಂ. ಧ್ವಂಸಿನ್]

ಧ್ವಜ (ನಾ). ೧. ಬಾವುಟ ; ಪತಾಕೆ : "ವೈಜಯಂತೀ, ಪತಾಕಾ, ಕೇತುಃ, ಕೇತನಂ, ಧ್ವಜಃ – ಈ ೫ ಪಟ(ಹಳ)ಯಿಗೆ" (ಹಲಾಯು. ೭೫-೩೦೪) ; ಧ್ವಜಮಂ ಖಂಡಿಸಿ ಪೂಟ್ದು ಬಾಣದೊಳೆ ಧೃಷ್ಟದ್ಯುಮ್ನನಂ ನೆಟ್ಟನೊಟ್ಟಜೆಯಿಂ ತೂಳ್ದಿ ಶಿಖಂಡಿಯಂ (ಪಂಪಭಾ. ೧೧-೫೯) ; ಧ್ವಜ ದರ್ಪಣ ಚಂಚಚ್ಚಮರಜ ಮಣಿ ಭೃಂಗಾರ ಸುಪ್ರತಿಷ್ಠಿತತಾಳವೃಜನ ಕಳಶಾತಪತ್ರಂ ತ್ರಿಜಗತ್ಪತಿಗಷ್ಟಮಂಗಳಂ ಸೊಗಯಿಸುಗುಂ (ಅಜಿಪು. ೪-೪೧); ವಾಯುಸುತ ಖಾತಿಯಲಿ ಹಲಗೆಯಡಾಯುಧವ ಕೊಂಡರಿಭಟನ ಮೇಲ್ವಾಯಿದಡೆ ಸಮ್ಮುಖವ ಬಿಟ್ಟನು ಧ್ವಜದ ಕಂಭದಲಿ ಆಯುಧವ ಕೊಂಡೈದಿದಡೆ ಹಗೆ ಮಾಯವಾದನು (ಕುವ್ಯಾದ್ರೋ. ೦೩-೫೭) ; ಸೇನೆಯಂ ಸಂಹರಿಸಿ ತಮ್ಮ ಕಾವಲು ಮಾಡಿಕೊಂಡು ಧ್ವಜವಂ ನೆಟ್ಟು (ಸೌಗಂಧಿ. ೨೫೬-೨೦) ; ಅಟ್ಟಳಿಗಳ ಮೇಲೆ ಧ್ವಜಗಳು ಹಾರುತ್ತಿದ್ದುವು (ಕಶಾಅ. ೨೮೭) ; ಗಿರಣಿಗಳ ಧೂಮ ಧೂಸರಿತ ಬಾಂದಳದಲ್ಲಿ ಎಂದು ಮೆರೆವುದೊ ನಿಮ್ಮ ತ್ಯಾಗಧ್ವಜವು ! (ಗಂಗಾತ. ೫೩-೦೦). ೨. ಗುರುತು ; ಚಿಹ್ನೆ. ೩. ಪುರುಷನ ಜನನೇಂದ್ರಿಯ ; ಶಿಶ್ನ : ಧ್ವಜವೆತ್ತಿವೊಱಗಿದಾಣ್ಮನ ನಿಜಕಟಿತಟದೊತ್ತುಗೊಂಡು ಕಾಮಿನಿ ಪದಪಂಕಜಮಿಟ್ಟು ಚುಂಬಿಸುತಂ ಗಜಗೃಹಜಲಮೊಗೆವೊಲೊಂದೆ ಮುದಮೆನಿಸಿರ್ಕುಂ (ಮನ್ಮವಿ. ೦೪-೪೨) ; ಪುರುಷನತಿಕಾಮದಿಂ ತರುಣಿಯೊರ್ವಳ ಲಜ್ಜೆಯೆಱೆದೆಡೆಯೊಳೀ ಧ್ವಜವನಿಟ್ಟುಂ (ಜನವ. ೯-೫೫). ೪. [ವಾಸ್ತು] ಕಟ್ಟಡದ ನಿರ್ಮಾಣ ಕ್ರಮದಲ್ಲಿ ಅನುಸರಿಸಬೇಕಾದ ಎಂಟು ಆಯಪ್ರಕಾರಗಳಲ್ಲಿ ಒಂದು : ಪಸರಿಸಿ ತರದಿಂ ಧ್ವಜ ಧೂಮ ಸಿಂಹ ಶುನಕೋಕ್ಷಖರಗಜಧ್ವಾಂಕ್ಷಂಗಳ್ ದೆಸೆಯಿಂದೆ ಮೂಡನಾಳ್ಗುಂ ದೆಸೆಯಾಯಂ ಶುಭದಮಲ್ಲಿ ಪೆಱವಶುಭಂಗಳ್ (ಲೋಕೋಪ. ೩-೧೯) ; ವಿವಿಧವಾದ ಪ್ರಾಸಾದಾದಿಗಳು ಎಂಟು ವಿಧವಾದ ಗಜ, ಉಷ್ಟ್ರ (ಒಂಟೆ), ಖರ, ಸಿಂಹ, ವೃಷ, ಧ್ವಜ, ಧೂಮ, ಶ್ವಾನ ಎಂಬ ಆಯಗಳನ್ನರಿತು ನಿರ್ಮಾಣವಾಗತಕ್ಕದೆಂದೂ . . . ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರಗಳು ತಿಳಿಸುತ್ತವೆ (ಭಾರದ. ೮೦). P ಈ ವಿವರಣೆಯಲ್ಲಿ ವ್ಯತ್ಯಾಸಗಳಿವೆ. 'ಧೂಮಾಯ' ಪರಾ. [ಸಂ.]

ಧ್ವಜಗಂಭ (ನಾ). ಹಡಗು ಅಥವಾ ದೋಣಿಯ ಪಟವನ್ನು ಕಟ್ಟುವ ಕಂಬ ; ಕೂವೆಕಂಬ : ಹಡಗಿನ ಧ್ವಜಗಂಭ ತುದಿಯನ್ನಡರುತೊಂದು ವಿಹಂಗ ಕುಳ್ಳಿರಲು (ಗಗಶಾ. ೧೫-೨೭). [ಧ್ವಜ + ಕಂಭ]

ಧ್ವಜದ್ರುಮ (ನಾ). ಎತ್ತರವಾದ ಮರ ; ತಾಳೆಮರ ; ತಾಲವೃಕ್ಷ : "ತಳಂ ತಾಳ ಧ್ವಜದ್ರುಮಂ" (ಮಂಗರಾ. ೩೪-೯). [ಸಂ]

ಧ್ವಜಪಟ (ನಾ). ಬಾವುಟ; ಪತಾಕೆ: ಆ ತೋರ್ಪುದಾ ತೋರ್ಪುದೆ ಬಾನೊಳ್ ಧ್ವಜಪಟಂ (ಶಮದ. ೧೯೫ ಪ್ರಯೋ); ಧ್ವಜಪಟವೃಂದ ಪಲ್ಲವಿತ ಮೆಲ್ಲೆಡೆಯೊಳ್ ನೆಱೆ ಕೀಲಿಸಿರ್ದ ಪೀನಜನಮನಃಪ್ರಮೋದಕರ ಮೌಕ್ತಿಕ ಪುಷ್ಪಿತಮುದ್ಧಬೋದ್ಯ ಭಾವಜನನದಕ್ಷರತ್ನಕಳಶಾವಳಿಸತ್ಫಳಿತಂ ದಲಾಗಿ (ಬಾಧಪು. ೦-೦೬೭). [ಧ್ವಜ + ಪಟ್ಟ]

ಧ್ವಜಪಟೀವಾತ (ನಾ). ಬಾವುಟದ ಬಟ್ಟೆಯು ಹಾರಾಡುವಾಗ ಉಂಟಾಗುವ ಗಾಳಿ: ಕಿವಿ ಶಬ್ದಂಗಿಡೆ ಘಂಟಿಕಾಘನಠಣತ್ಕಾರಂಗಳಿಂದೆಯ್ದೆ ದಿಙ್ನಿವಹಂ ಮೇಘಕುಳಂ ಚಳಧ್ವಜಪಟೀವಾತಂಗಳಿಂ ಕೂಡೆ ತೂಳ್ದೆ ವಿಯನ್ಮಂಡಲಮಧ್ಯದೊಳ್ ಬಹುತರಂ ನಕ್ಷತ್ರಸಂಭನ್ನವಾಗೆ ವಿಮಾನಾವಳಿ ಕೋಪದಿಂದ ತಳರ್ದಂ ವಿದ್ಯಾಧರಾಧೀಶ್ವರಂ (ಚಂದ್ರಪು. ೬-೦೪). [ಸಂ.]

ಧ್ವಜಭಂಗ (ನಾ). ೧. ಬಾವುಟ ಮುರಿದು ಬೀಳುವಿಕೆ. ೨. ಶಿಶ್ನವು ಏಳದಿರುವಿಕೆ; ನಪುಂಸಕತ್ವ; P ಇದರಲ್ಲಿ ಐದು ವಿಧ: "ವಾತಿಕ, ಪೈತ್ತಿಕ, ಶ್ಲೇಷ್ಮಿಕ, ಸಾನ್ನಿಪಾತಿಕ, ರಕ್ತಜ" (ಶ್ರೀವತ್ಸ. ೨೩೭). [ಧ್ವಜ + ಭಂಗ]

ಧ್ವಜಭೂಮಿ (ನಾ). ಬಾವುಟವನ್ನು ನೆಟ್ಟಿರುವ ಭೂಮಿ: ಧ್ವಜಭೂಮಿಯ ಬಳಯಿಗೆಗಳೊಡನೊಡನೆ ಬಳೆದು ಬಳಸೆಯುಂ ದಶಾಂಗಕಲ್ಪವೃಕ್ಷನಂದನ ವನಮಂ ಮಾಲ್ಯಾಂಗಮಯಮೆಂಬ ಸಂದೆಗದೊಳೊಂದಿಸೆಯುಂ (ಬಾಧಪು. ೧೬-೨೨೫ ಪ). [ಧ್ವಜ + ಭೂಮಿ]

ಧ್ವಜಮಯ (ಗು). ಪತಾಕೆಗಳಿಂದ ಕೂಡಿದ; ಬಾವುಟಗಳಿಂದ ಆವೃತವಾದ: ಧ್ವಜಮಯಮಂಬರಂ ಗಜಮಯಂ ಭುವನಂ ಪ್ರಳಯ ಪ್ರಚಂಡ ಭೂಭುಜಮಯಮಷ್ಟದಿಗ್ವಳಯಂ (ಪಂಪಭಾ. ೯-೯೮); ಧ್ವಜಮಯ ಮಂಬರಂ ಕರಿತುರಂಗವರೂಥಸಮಸ್ತಶಸ್ತ್ರಭೃಧ್ವಜಮಯಮುರ್ವಿ (ಮಹಾನೇ. ೧೨-೦೪). [ಸಂ.]

ಧ್ವಜಮುದ್ರೆ (ನಾ). ಸಂಕಲ್ಪ, ಪೂಜೆ, ಜಪ ಮುಂತಾದುವುಗಳಲ್ಲಿ ಮಾಡುವ ಹಸ್ತಮುದ್ರೆಗಳಲ್ಲಿ ಒಂದು: ವಸ್ತ್ರಮುದ್ರೆ ಚಕ್ರಮುದ್ರೆ ಮಹಾಮುದ್ರೆ ಶೋಧಿನೀಮುದ್ರೆ . . . ಧ್ವಜಮುದ್ರೆ ಲಿಂಗಮುದ್ರೆ . . . ಸಂಹಾರಮುದ್ರೆಯೆಂಬಾದಿಯಾಗಿ ಸಕಲಮುದ್ರೋಪಮುದ್ರಾಬಂಧ ಲಕ್ಷಣಗಳಂ ಗುರುಮುಖದಿಂದಱಿತು (ವಿವೇಕ. ೧೦೩). [ಧ್ವಜ + ಮುದ್ರೆ]

ಧ್ವಜವಂದನೆ (ನಾ). (ದೇಶ ಮುಂತಾದುವುಗಳ ಸಂಕೇತವಾದ) ಬಾವುಟಕ್ಕೆ ಗೌರವಸೂಚಕವಾಗಿ ಸಲ್ಲಿಸುವ ವಂದನೆ, -ನಮಸ್ಕಾರ: ಸ್ವಾತಂತ್ರ್ಯದಿನಾಚರಣೆಯಂದು ಎಲ್ಲರೂ ಧ್ವಜವಂದನೆಯನ್ನು ಸಲ್ಲಿಸಬೇಕು (ರೂಢಿ). [ಧ್ವಜ + ವಂದನೆ]

ಧ್ವಜಸ್ತಂಭ (ನಾ). ಬಾವುಟವನ್ನೇರಿಸುವ ಕಂಬ: ಭೋಗಮಂಟಪದ ಸಮ್ಮುಖದೊಳ್ ಧ್ವಜಸ್ತಂಭಮಂ ನಿಲಿಸಿ (ಕೆಳನ್ಯ. ೯-೯೭); ಡೆಂಕಣಿ ಎಂಬುದು ಕನ್ನಡಕೋಶಕಾರರು ಹೇಳುವ ಧ್ವಜಸ್ತಂಭವಲ್ಲವೆಂದೂ, 'ಅದೊಂದು ಭವ್ಯವಾದ ಆಯುಧವಿಶೇಷ' ವೆಂದೂ . . . ಪ್ರತಿಪಾದಿಸಿದ್ದಾರೆ (ಕಶಾಅ. ೨೮೭); ಯಜ್ಞಕುಂಡಗಳೆಲ್ಲ ದಯಾವೃಕ್ಷಕ್ಕೆ ಕುಂಡಗಳಾದವು. ಯಜ್ಞಸ್ತಂಭಗಳೆಲ್ಲ ಅಹಿಂಸಾಧ್ವಜಸ್ತಂಭಗಳಾದವು! (ದಾನಚಿಂ. ೮).

[ಧ್ವಜ + ಸ್ತಂಭ]

ಧ್ವಜಾದಂಡ (ನಾ). = ಧ್ವಜಸ್ತಂಭ: ಧ್ವಜಾದಂಡಂಗಳೆಂಬ ಭುಜಾದಂಡಂಗಳಂ ನೆಗಪಿ (ಬಾಧಪು. ೦೨-೨೦ ಪ). P ಇದು 'ಭುಜಾದಂಡ' ಎಂಬುದರ ಸಾದೃಶ್ಯದಿಂದ ಮಾಡಿಕೊಂಡ ರೂಪ.

[< ಸಂ. ಧ್ವಜದಂಡ]

ಧ್ವಜಾಯ (ನಾ). = ಧ್ವಜ ೪: ಧ್ವಜಾಯಂ, ಧೂಮಾಯಂ . . . ವಾಯಸಾಯಂ – ಈ ಎಂಟು ಆಯಂಗಳುಂ ಮೂಡಲ್ ಮೊದಲಾಗಿ ಸವ್ಯದಿಂದೆ ಎಂಟು ದಿಕ್ಕಿನಲ್ಲಿಯುಮಿರ್ಪುವು (ಲೋಕೋಪ. ೩-೧೯ ಟೀಕೆ). ; ವಿಸ್ತಾರವಾಗಿ ಉದ್ದ ಆಗಲವನು ಅಳದು ಪೊಟ್ಟುಗೂಡಿಕೊಂಡ ಕೋಲು ಎಷ್ಟೋ ಅದನು ೨ ಹೆಚ್ಚಿ . . . ಅದಂ ರಱಿಂದ ಭಾಗಿಸಿ ಉಳಿದವು ಆಯಂಗಳೂ ೧ ಉಳಿದರೆ ಧ್ವಜಾಯ (ಆಯಟೀ. ೦-೫). 'ಧೂಮಾಯ' ಪರಾ.

[ಧ್ವಜ + ಆಯ$_1$]

ಧ್ವಜಾರೋಹಣ (ನಾ). ಬಾವುಟವನ್ನು ಏರಿಸುವಿಕೆ: ಧ್ವಜಾರೋಹಣವೆಂಬ ಉತ್ಕೃಷ್ಟ ವಿಧಾನಂ, ಆದಿಕಲ್ಯಾಣಂ, ಪ್ರತಿಷ್ಠಾವಿಧಾನದೊಳಾದಿ ಕಲ್ಯಾಣಮೆಂದು ಬುಧಾಃ-ವಿದ್ವಜ್ಜನಂಗಳು . . . ಪೇಳ್ವರು (ಪ್ರತಿಷ್ಠಾ. ೩-೨); ಶಾಲೆಯಲ್ಲಿ ಧ್ವಜಾರೋಹಣ ನಡೆಯಿತು (ರೂಢಿ).

[ಧ್ವಜ + ಆರೋಹಣ]

ಧ್ವಜಿ (ನಾ). ಹೆಂಡವನ್ನು ತಯಾರಿಸಿ ಮಾರುವವನು; ಈಡಿಗ: ಚಕ್ರಿಯೊಬ್ಬಗೆ ಹತ್ತು ಕಡಿಕರ ಲೆಕ್ಕವಂತಾ ಚಕ್ರಿ ಹತ್ತಱ ಲೆಕ್ಕದೊಳಗಾ ಧ್ವಜಿ ಕಣಾ ಧ್ವಜಿ ಹತ್ತಱ ಸಮಾನ (ಕುಪ್ಯಾಲು. ೪-೧೦೩). [ಸಂ. ಧ್ವಜಿನ್]

ಧ್ವಜಿನಿ (ನಾ). ಬಾವುಟವನ್ನು ಹಿಡಿದಿರುವ ಸೈನ್ಯ; ಧ್ವಜವನ್ನು ಹೊಂದಿದ ಪಡೆ, -ದಂಡು: "ಪೃತನಾನೀಕ ಧ್ವಜಿನೀ ಪತಾಕಿನೀ . . . ಅಕ್ಷೌಹಿಣಿ ತಾಂ" (ವಸ್ತುಕೋ. ೮೩-೭); ವಿಜಯಾರಂಭಪುರಸ್ಸರವಿಜಯ ಗಜಂಗಳನೆ ಪಿಡಿದು ಘೂರ್ಜರರಾಜಧ್ವಜಿನಿಯನಿಱಿದೋಡಿಸಿ ಭುಜವಿಜಯದೆ ವಿಜಯನುಮನಿಱಿಸಿದಂ ನರಸಿಂಹಂ (ಪಂಪಭಾ. ೧-೩೬); ಧ್ವಜಿನೀ ಮಧ್ಯದೊಳೊರ್ವರೋ ಎನಲುಮಿಲ್ಲೆಂಬಂತು ವಿದ್ಯಾಧರವ್ರಜಮಳ್ಕಾಡಿದು ದುಗ್ರಶಸ್ತ್ರತತಿಯಿಂ (ಶಾಂತಿಪು. ೪-೩೬); ವಿಜಯಾರ್ಧನಗಕ್ಕೆತ್ತಿದನಜೇಯ ದೋಶ್ಶಾಲಿ ರಾವಣಂ ನಿಜವಿಜಯಧ್ವಜಿನಿಗಳಬ್ಧಿಗಳೇಱುಂ ನಿಜಸೀಮಾವಜ್ರ ವೇದಿಯಿಂ ತಳರ್ದುವೆನಲ್ (ಪಂರಾಮಾ ೦೦-೦೯೭); ನಿಜಭುಜದರ್ಪಮಂ ಮುಱಿವೆನೆನ್ನದಟಂ ತವೆ ತೋರ್ಪೆನಾಂತ ತಧ್ವಜಿನಿಯನಿಕ್ಕಿ ಭೂತಗಣ ಕೌತಣಮಂ ಮಿಗೆ ಮಾಳ್ಪೆಂ (ರಾಜಶೇ. ೬-೩೯). [ಸಂ. ಧ್ವಜಿನೀ]

ಧ್ವಜಿನೀಪತಿ (ನಾ). ಸೇನಾಧಿಪತ್ಯವನ್ನು ವಹಿಸಿಕೊಂಡವನು; ಪಡೆವಳ; ಸೇನಾಪತಿ; ದಳವಾಯಿ: ಅಂತಲ್ಲಿ ಬೀಡಂ ಬಿಟ್ಟು ಮುನ್ನಿನಂತೆ ಪಶ್ಚಿಮಖಂಡಮುಮನಖಂಡಪ್ರತಾಪಧ್ವಜನಂದು ತನ್ನ ಧ್ವಜಿನೀಪತಿಯನಟ್ಟಿ ಬಾಯ್ಕೇಳಿಸಿ ಚಕ್ರರತ್ನಮಂ ಮುಂದಿಟ್ಟು (ಆದಿಪು. ೦೩-೫೭ಪ).

[ಸಂ.]

ಧ್ವಜಿನೀಪತಿತ್ವ (ನಾ). ಸೇನಾಪತಿಯ ಅಧಿಕಾರ, – ಪದವಿ; ಸೈನ್ಯಾಧಿಪತ್ಯ: ಮಱಿಯಾನೆ ರಿಪುಪ್ರಭೇದನೋತ್ಪನ್ನ ಜಯಾಭಿರಾಮನೆನಗೀತನೆ ನಚ್ಚಿನ ಪಟ್ಟದಾನೆಯೆಂದೇಂ ನೆಱೆ ನಚ್ಚಿ ಮಾಡಿದನೊ ವಿಷ್ಣುನೃಪಂ ಧ್ವಜಿನೀಪತಿತ್ವಮಂ (ಎಕ. VI, ಚಿಕ್ಕಮ. ೧೬೦-೪೪ ; 1108 ?).

[ಸಂ.]

ಧ್ವಜಿನೀಮುಖ್ಯ (ನಾ). = ಧ್ವಜಿನೀಪತಿ: ಧ್ವಜಿನೀಮುಖ್ಯಕುಮಾರ ಮಂಡಳಿಕಮಂತ್ರಿಮ್ಲೇಚ್ಛ ರಾಜಾಂಗನಾವ್ರಜ (ಪಾರ್ಶ್ವಪು. ೦೦-೦೦೩).

[ಸಂ.]

ಧ್ವನನ (ನಾ). ೧. ಶಬ್ದ ಮಾಡುವುದು; ಸದ್ದು ಮಾಡುವುದು. ೨. ಸೂಚನೆ ಕೊಡುವುದು; ಸುಳಿವು ಕೊಡುವುದು. ೩. ಗುನುಗುಟ್ಟುವುದು. ೪. [ಕಾವ್ಯಮೀ] ವ್ಯಂಜನಾವೃತ್ತಿ; ವಾಚ್ಯ ಮತ್ತು ಲಕ್ಷ್ಯ (ಅಭಿಧಾ ಮತ್ತು ಲಕ್ಷಣಾವೃತ್ತಿಗಳನ್ನು ತಿಳಿಸುವ) ಅರ್ಥಕ್ಕಿಂತಲೂ ಭಿನ್ನವಾದ ಅರ್ಥವನ್ನು ತಿಳಿಸುವ ವ್ಯಂಜನಾವ್ಯಾಪಾರ; ಸೂಚ್ಯಾರ್ಥ: ಅಭಿಧೆಯೂ ಅಲ್ಲದೆ, ಲಕ್ಷಣೆಯೂ ಅಲ್ಲದೆ, ಅನುಭವಗೋಚರವಾದ ಶಬ್ದವ್ಯಾಪಾರವೆಂದರೆ ಧ್ವನನವೇ ಸರಿ (ಧ್ವನ್ಯಾಲೋ. ೪೭); ಇವು ಮುಖ್ಯಾರ್ಥವೂ ಆಗುವುದಿಲ್ಲ, ಲಕ್ಷ್ಯಾರ್ಥವೂ ಆಗುವುದಿಲ್ಲ; ಇಂಥ ಅರ್ಥವು 'ವ್ಯಂಗ್ಯಾರ್ಥ' ವೆನ್ನಿಸುತ್ತದೆ, ಇದಕ್ಕೆ 'ಧ್ವನಿ', 'ಧ್ವನನ', 'ದ್ಯೋತನ' ಮುಂತಾದ ಹೆಸರುಗಳೂ ಉಂಟು (ಕೈಪಿಡಿ. ೧೭೭).

[ಸಂ.]

ಧ್ವನನಮಾರ್ಗ (ನಾ). ಸೂಚ್ಯವಾಗಿ ತಿಳಿಸುವ ರೀತಿ ; ವ್ಯಂಗ್ಯಾರ್ಥ ವಿಧಾನ : ಮಾನವ್ಯ ವ್ಯಕ್ತಿತ್ವದ ಕೆಲ ಮನೋಭಾವಗಳು ಧ್ವನನಮಾರ್ಗದಿಂದ ರೂಪಿಸಲ್ಪಡುವುವು (ಸವ್ಯಕಾ. ೦೨೫). [ಧ್ವನನ + ಮಾರ್ಗ]

ಧ್ವನಿ (ನಾ). ೧. (ಕಂಠದಿಂದ ಹೊರಡುವ) ಸಪ್ಪಳ ; ಸದ್ದು : "ನಾದಂ ಸ್ವರಂ ಘೋಷಮಾ ಶಬ್ದವಾ ರವಂ ಗರ್ಜನಂ ಘೋಷಣಂ ಧ್ವನಮಾ ನಿನದಮಾ ಧ್ವನಿಯೆನಿಕ್ಕುಂ" (ಮಂಗರಾ. ೯-೩೦) ; ಸುಡುವ ಮನೆಯ ನಡುವಿನಿಂದ ಕರೆಯುವ ಮಗುವಿನ ಧ್ವನಿಯಂತೆ 'ಮೇ' ಎನ್ನುವ ಧ್ವನಿಯೂ ಕೇಳಿಸಿತು (ಕಾಲೂರ. ೬ ಕಥಾಸಾರ). ೨. (ವಾದ್ಯಗಳ) ನಾದ,-ಸ್ವರ : ಮೃದುವಾದ ವೀಣಾನಾದದಂತೆ ಘಂಟಾನಾದದ ಕಡೆಯಂತೆ ಕೇಳಲದೆ ಧ್ವನಿಯನಿಪುದು (ಶಿವಪ್ರ. ೬೨-೧೧). ೩. (ಸಂಗೀತ ಗಾರನ) ಕಂಠ ; ಶಾರೀರ. ೪. ಪ್ರತಿಧ್ವನಿ ; ಮಾರ್ದನಿ. ೫. "ಧ್ವನಿಯೆಂದರೆ ವಾತಾವರಣದ ತೆರೆಗಳು" (ಮುಂಬಯಿ. ೫-೦೦೪). ೬. [ಭಾಷಾಶಾ] ಉಚ್ಚಾರಣಾಂಗಗಳಿಂದ ಉತ್ಪಾದಿತವಾಗಿ ಭಾಷೆಯಲ್ಲಿ ಬಳಕೆಯಾಗುವ ಸದ್ದು ; ಸ್ವನ. ೭. [ಕಾವ್ಯಮೀ] ವಾಚ್ಯಾರ್ಥ ಲಕ್ಷ್ಯಾರ್ಥ ಮತ್ತು ವ್ಯಂಗ್ಯಾರ್ಥ ಎಂಬ ಮೂರು ಬಗೆಯ ಅರ್ಥಗಳಲ್ಲಿ ಒಂದು ; ವಾಚ್ಯಾರ್ಥ ಮತ್ತು ಲಕ್ಷ್ಯಾರ್ಥಕ್ಕಿಂತ ಭಿನ್ನವಾದ ಶಬ್ದ ಅಥವಾ ಅರ್ಥದ ಸಾಮರ್ಥ್ಯದಿಂದ ತೋರುವ ಅರ್ಥ ವಿಶೇಷ ; "ಕಾವ್ಯದಲ್ಲಿ ಪ್ರಧಾನವೂ ಪರಮಾರ್ಥವೂ ಆಗಿ ನಿಲ್ಲುವ ವ್ಯಂಗ್ಯಾರ್ಥಕ್ಕೆ 'ಧ್ವನಿ' ಎಂದು ಹೆಸರು" (ಭಾರಮೀ. ೪೮) : ಇಂದ್ರ ಚಂದ್ರಾಂಕದಿಂ ವ್ಯಾಕರಣಮಂ ವಿಲಸಿತಧ್ವನಿಗಳಿಂ . . . ಕಾವ್ಯಮಂ ಪೋಲ್ತು ರಂಜಿಸುವುದಾ ನಂದನಂ ನಂದನಂ (ಪದ್ಮರಾ. ೮-೨೬) ; ಧ್ವನಿಯೆ ಕಾವ್ಯದ ಜೀವವೆಂದು ಲಕ್ಷಣಶಾಸ್ತ್ರದಲ್ಲಿ ಹೇಳಿದೆ (ಭಾರದ. ೯೩) ; 'ಧ್ವನಿ'ಯು ವ್ಯಾಪಕತತ್ವ ; ಎಲ್ಲ ಅಲಂಕಾರಗಳಿಗೂ ಸಾರ್ಥಕ್ಯವನ್ನು ಕಲ್ಪಿಸುವ ಅಲಂಕಾರ್ಯ (ಧ್ವನ್ಯಾಲೋ. ೩೩ ಅಡಿಟಿ). ೮. ಒಂದು ಅಲಂಕಾರ: ಧ್ವನಿಯೆಂಬುದಲಂಕಾರಂ ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ (ಕವಿರಾ. ೩-೨೦೮). P ಕವಿರಾಜಮಾರ್ಗಕಾರನ ಪ್ರಕಾರ ಧ್ವನಿಯೆಂಬುದು ಅಲಂಕಾರ. ಇದು ವಿಮರ್ಶನಾರ್ಹ. ೯. ವ್ಯಂಗ್ಯಾರ್ಥ ಪ್ರಧಾನವಾದ ಕಾವ್ಯ ; ಧ್ವನಿಪೂರ್ಣವಾದ ಕಾವ್ಯ; ಉತ್ತಮಕಾವ್ಯ: ಆವೆಡೆಯೊಳಂ ವಾಚ್ಯದತ್ತಣಿಂದಧಿಕಮಪ್ಪ ವ್ಯಂಗ್ಯಮನುಳ್ಳುದುತ್ತಮ ಕಾವ್ಯಂ ಆ ಕಾವ್ಯಮುಂ ಧ್ವನಿಯೆಂದು ಪೂರ್ವಾಚಾರ್ಯರಿಂ ಪೇಟ್ಪಟ್ಟುದು (ರಸರ. ಪರಿ. ೦, ೦೦೮) ; ಇಂಥ ಧ್ವನಿಯುಳ್ಳ ಕಾವ್ಯವಿಶೇಷವನ್ನೂ ಧ್ವನಿಯೆಂದು ಕರೆಯುವುದುಂಟು . . . ಯಾವುದರಲ್ಲಿ [ವಾಚ್ಯವಾದ] ಅರ್ಥವಾಗಲಿ [ವಾಚಕವಾದ] ಶಬ್ದವಾಗಲಿ, ತಾವು ಅಧೀನವಾಗಿ ನಿಂತು ವ್ಯಂಗ್ಯಾರ್ಥವನ್ನು ಅಭಿವ್ಯಕ್ತಗೊಳಿಸುವುವೋ ಆ ಕಾವ್ಯವಿಶೇಷವು ಧ್ವನಿಯೆಂದು ವಿದ್ವಾಂಸರ ಹೇಳಿಕೆ (ಭಾರಮೀ. ೫೨) ; ಎಲ್ಲಿ 'ಅರ್ಥ'ವಾಗಲಿ ಅಥವಾ 'ಶಬ್ದ'ವಾಗಲಿ, (ಅನುಕ್ರಮವಾಗಿ) ತನ್ನನ್ನು ಅಥವಾ ತನ್ನ ಅರ್ಥವನ್ನು ಅಪ್ರಧಾನವಾಗಿಸಿಕೊಂಡು, ಆ ವ್ಯಂಗಾರ್ಥವನ್ನು ಸೂಚಿಸುವುವೋ-ಆ ಕಾವ್ಯವಿಶೇಷವನ್ನು ಪಂಡಿತರು ಧ್ವನಿಯೆಂದು ಕರೆದಿದ್ದಾರೆ (ಧ್ವನ್ಯಾಲೋ. ೨೬).

ಧ್ವನಿ ಕೂರು=ಗಂಟಲು ಕಟ್ಟು; ಗಂಟಲಿನ ಬಾಧೆಯಿಂದ ಸರಿಯಾಗಿ ಧ್ವನಿ ಹೊರಡದಿರು : ಭಾಷಣದ ದಿನ ಬೆಳಗ್ಗೆ ಧ್ವನಿ ಕೂತುಹೋಗಿತ್ತು ಎನ್ನುವುದಕ್ಕಿಂತ ಹೊತುಹೋಗಿತ್ತು ಎಂದರೆ ಸತ್ಯಕ್ಕೆ ಹತ್ತಿರವಾಗಬಹುದು (ನಂಟರು. ೩೭). ಧ್ವನಿ ಬೀಳು = ಧ್ವನಿ ಕೂರು : ನೆಗಡಿಯಿಂದ ಅವರ ಧ್ವನಿ ಬಿದ್ದುಹೋಗಿದೆ (ರೂಢಿ). ಧ್ವನಿಮಾಡು=ಸ್ವರ ಹೊರಡಿಸು; ಕೂಗು: ಧ್ವನಿ ಮಾಡಿದರೆ ಹನಿ ಬಿಟ್ಟೇತೇ ? (ಗಾದೆ). ಧ್ವನಿ ಹೂತುಹೋಗು=ಧ್ವನಿ ಕೂರು: ಗಂಟಲುಬೇನೆಯಿಂದ ಅವರ ಧ್ವನಿಹೂತುಹೋಗಿದೆ (ರೂಢಿ). [ಸಂ.]

ಧ್ವನಿಕಾರ(ನಾ). [ಕಾವ್ಯಮೀ] ಧ್ವನಿತತ್ತ್ವವನ್ನು ಪ್ರತಿಪಾದಿಸಿದವನು ; ಆನಂದವರ್ಧನ : ಒಂದು ವೇಳೆ ಧ್ವನಿಕಾರನೂ ಆನಂದವರ್ಧನನೂ ಬೇರೆ ಬೇರೆಯೆಂದೂ ಆನಂದವರ್ಧನನು ವೃತ್ತಿಭಾಗವನ್ನು ಮಾತ್ರ ಬರೆದನೆಂದೂ ಒಪ್ಪಿಕೊಂಡರೂ, ಇಬ್ಬರಿಗೂ ಕಾಲದಲ್ಲಿ ಬಹಳ ಅಂತರವುಂಟೆಂದು ಹೇಳುವ ಹಾಗಿಲ್ಲ (ಭಾರಮೀ. ೬೨). P "ಧ್ವನಿಕಾರಿಕೆಗಳನ್ನು ಬರೆದವನೇ ಬೇರೆ, ವೃತ್ತಿಕಾರನಾದ ಆನಂದವರ್ಧನನೇ ಬೇರೆ-ಎಂದು ಹೇಳುವವರು ಕಾರಿಕಾಕಾರನನ್ನು "ಧ್ವನಿಕಾರ" ನೆಂದು ನಿರ್ದೇಶಿಸುವುದು ರೂಢಿಯಾಗಿದೆ" (ಭಾರಮೀ. ೬೨ ಅಡಿಟಿ). [ಸಂ.]

ಧ್ವನಿಕಾವ್ಯ (ನಾ). [ಕಾವ್ಯಮೀ] ವ್ಯಂಗ್ಯಾರ್ಥಪ್ರಧಾನವಾದ ಕಾವ್ಯ ; ಉತ್ತಮಕಾವ್ಯ : ಒಂದು ಕಾವ್ಯದಲ್ಲಿ ವಾಚ್ಯಕ್ಕಿಂತಲೂ ವ್ಯಂಗ್ಯಾರ್ಥವೇ ಅತಿಶಯವಾಗಿದ್ದರೆ ಆ ಕಾವ್ಯವು 'ಧ್ವನಿಕಾವ್ಯ', 'ಉತ್ತಮಕಾವ್ಯ' ವಾಗುವುದು (ಕೈಪಿಡಿ. ೧೮೩). [ಧ್ವನಿ + ಕಾವ್ಯ]

ಧ್ವನಿಗಯ್ 'ಧ್ವನಿಗೆಯ್' ನೋ.

ಧ್ವನಿಗುಡು 'ಧ್ವನಿಗೊಡು' ನೋ.

ಧ್ವನಿಗೆಯ್, ಧ್ವನಿಗಯ್, ಧ್ವನಿಗೈ (ಕ್ರಿ). ೧.ಶಬ್ದ ಮಾಡು ; ಸದ್ದು ಮಾಡು: ಚಿಲಿಮಿಲಿ ಧ್ವನಿಗೆಯ್ದು ವಿಹಂಗಮಂಗಳೆಬ್ಬಱ್ ಕುಟುಕಂ ಕೊಳಲ್ಕಿರದೆ ಪಾಱಿದುವೆಣ್ಡೆಸೆಗಂ ಪ್ರಭಾತದೊಳ್ (ಕುಸುಮಾ. ೦೦-೮೫). **ಧ್ವನಿಗಯ್** : ೧. ಎಂಟುದಿಕ್ಕಿನ ಹಗ್ಗಗಳನೊತ್ತಿ ಪಿಡಿದೀರೆಂಟಾಳು ಧ್ವನಿಗಯ್ಯೆ ಬಳಿಕ ಉಂಟಿಲ್ಲವೆಂಬಂತಡಿಯನಿಕ್ಕುವುದದು ತುಂಟಕುದುರೆಯೆಂಬಂತೆ (ಕುರಾಸಾಂ. ೯-೫೫). **ಧ್ವನಿಗೈ** : ೧. ಪಕ್ಷಿಕುಲಂಗಳುಂ ತತ್ತ್ಯಾರ್ಯಗಳಾದ ಹಾಡುವ ಕುಣಿವ ಧ್ವನಿಗೈವ ಕರೆಯುವ .... ಪರಮೇಶ್ವರ ಸೃಷ್ಟಿಯೊಳು ಜೀವಬುದ್ಧಿವಿಶೇಷವೈಲಕ್ಷಣ್ಯಕ್ಕೆ. ನಿದರ್ಶನಗಳಾಗಿರ್ಕುಂ (ವಿವೇಕ. ೨೦೨). ೨. ಹೇಳು ; ನುಡಿ ; ಅಭಿಪ್ರಾಯಪಡು: ಈಗಾಗಲೇ ಕೆಲಕೆಲವು ಕವಿಗಳು ಈ ರೀತಿಯಲ್ಲಿ ಧ್ವನಿಗೈದಿರುವರು (ಪ್ರಬಂಧ. ೧೩೨).

[ಧ್ವನಿ + ಕೆಯ್$_1$]

ಧ್ವನಿಗೈ 'ಧ್ವನಿಗೆಯ್' ನೋ.

ಧ್ವನಿಗೊಡು, ಧ್ವನಿಗುಡು (ಕ್ರಿ). ಶಬ್ದವನ್ನುಂಟುಮಾಡು; ಧ್ವನಿಮಾಡು; ಕೂಗು : ಎಮಗೆ ಕೇಳಬಹಾಂಗೆ ಧ್ವ[ಪಾಠಂ. ದ]ನಿಗೊಟ್ಟು ಕರೆಯಲಿಲ್ಲಿಗೆ ಬಾರದಿಹನೇ (ಬಸಪು. ೨೪-೩೫) ; ಬಳ್ಳಿಗಳೊಳು ಮಂಜುಳಧ್ವನಿಗೊ [ಪಾಠಾಂ. ಗು]ಡದ ಪರಮೆ ಪರಮೆಗೆ ಸಂತಸಂ ಜನಿಸದರಲರಲ ನವಪರಿಮಳಂಗಳಿಂದು ಹಡಿಯದೆಳಗಾಳಿಯೆಳಗಾಳಿಯಿಲ್ಲದಿಹ ಬನವಿಲ್ಲವಾ ನಾಡೊಳು (ಜಿಬಪು. ೦೦-೫). **ಧ್ವನಿಗುಡು:** ಬಹಳ ಶಂಖ ಧ್ವನಿಗುಡಲು ಬಿಱುಗಹಳೆಗಳು ಪರಸಮಯಕಾನನದಹನವೆನುತಂ ಮೊರೆಯಲು (ಬಸಪು. ೫೦-೧೭). 'ದನಿಗೊಡು' ಪರಾ. [ಧ್ವನಿ + ಕೊಡು$_1$]

ಧ್ವನಿಜಾರು (ನಾ). "ಒಂದು ಧ್ವನಿಯಿಂದ ಮತ್ತೊಂದು ಧ್ವನಿಗೆ ಹೋಗುವಾಗ, ಧ್ವನ್ಯಂಗಗಳಲ್ಲಿ ಮಾಡುವ ಕ್ರಮೇಣವಾದ ವ್ಯತ್ಯಾಸ" (Glide, ಇಂಕನಿ) : ಹೀಗೆಯೇ ಇಕಾರಾಂತ ಹಾಗು ಎಕಾರಾಂತ ಪ್ರಕೃತಿಗಳಿಗೆ ತೃತೀಯೆಯ ಪ್ರತ್ಯಯಗಳು ಸೇರುವಾಗ - ಯ - ಎಂಬ ಧ್ವನಿಜಾರು ಬಂದು ಹೋಗುವುದೂ ಉಂಟು (ದ್ರಾವಿವಿ. ೨೨೩).

[ಧ್ವನಿ + ಜಾರು$_2$ (<ಜಾಱು$_2$)]

ಧ್ವನಿತ (ಗು). ೧. ಶಬ್ದಮಾಡಿದ ; ಸದ್ದುಮಾಡಿದ. ೨. ವ್ಯಂಗ್ಯವಾಗಿ ಸೂಚಿಸಿದ ; ಸೂಚ್ಯ. (ನಾ). ೩. ವ್ಯಂಗ್ಯವಾಗಿ ತೋರುವುದು ; ವ್ಯಂಜಿತವಾದುದು; ಸೂಚ್ಯವಾದುದು : ಯಾವ ಲಕ್ಷ್ಯದಲ್ಲಿ ಶಬ್ದದಿಂದ ನೇರವಾಗಿ ವಾಚ್ಯವಾಗಿರದ ಮತ್ತು ಕೇವಲ ಶಬ್ದಶಕ್ತಿಯಿಂದ ಧ್ವನಿತವಾಗುತ್ತಿರುವ, ಅಲಂಕಾರವಿರುವುದೋ, ಅದು ಮಾತ್ರ ಶಬ್ದಶಕ್ತಿಮೂಲ ಧ್ವನಿ (ಧ್ವನ್ಯಾಲೋ. ೮೮) : ನಮ್ಮ ಅಂತರಾತ್ಮದಿಂದಲೋ ಇತರ ವಸ್ತು

ಮತ್ತು ವ್ಯಕ್ತಿಗಳಿಂದಲೋ ಧ್ವನಿತವಾಗುವ ಭಾವಗಳು ನಮ್ಮ ಆಲೋಚನೆಯನ್ನು ಬಹುವಾಗಿ ರೂಪಿಸುತ್ತವೆ (ಶಿಕ್ಷದ. ೫೫೨); ಇದು ಅವನ ನಾಟಕಗಳಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಧ್ವನಿತವಾಗಿದೆ (ಬದ್ಧಪ್ರ. XXXIV, ಪೀಠಿಕೆ); ಇಲ್ಲಿ ಎರಡೂ ಪುರುಷಗಳ ಪ್ರಯೋಗದಿಂದ ನೃಪತುಂಗನಲ್ಲದ ವ್ಯಕ್ತಿ ಗ್ರಂಥಕಾರನಾಗಿರಬೇಕೆಂದು ಸ್ಫುಟವಾಗಿ ಧ್ವನಿತವಾಗಿದೆ (ಕಸಾಚ. ೫೪); ಕಾವ್ಯದಲ್ಲಿ . . . ರಸವು ಯಾವಾಗಲೂ 'ವ್ಯಂಗ್ಯ' ಅಥವಾ 'ಧ್ವನಿತ'ವಾಗುವುದೆಂದೂ ಹೇಳಿಬಿಟ್ಟರೆ ಕಾವ್ಯಾತ್ಮವಿಚಾರವಾಗಿ ಇರತಕ್ಕ ಪರಸ್ಪರ ಭಿನ್ನಾಭಿಪ್ರಾಯಗಳು ಹೋದಂತಾಗುತ್ತದೆ (ಕೈಪಿಡಿ.೦೭೪). ೪. ಶಬ್ದಮಾಡುವಂಥದು; ಧ್ವನಿಮಾಡುವಂಥದು: "ಸ್ವನಿತಂ, ಧ್ವನಿತಂ–೨ ಕೂಗುತ್ತಿರುವಂಥಾದ್ದು, ಮೊರೆಯುತ್ತಿರುವಂಥಾದ್ದು" (ಸಿದ್ಧಾಂತಿ. ೩೪೮). ೫. ಶಬ್ದ; ಧ್ವನಿ. ೬. (ಮೋಡದ) ಗರ್ಜನೆ; ಮೊಳಗು.

ಧ್ವನಿತವಾಗು = ವ್ಯಂಗ್ಯವಾಗಿ ಸೂಚಿತವಾಗು; ಸೂಚ್ಯವಾಗು; ವ್ಯಂಜಿತವಾಗು: ಇಲ್ಲಿ ನಿದರ್ಶನಾಲಂಕಾರದಿಂ ಸಾಳುವಮಲ್ಲನ ಗುಣಂಗಳ್ ವರ್ಣಿಪೊಡಶಕ್ಯಮೆಂದು ಪೇಟ್ವ ಅಸಾಧಾರಣ ತದ್ವಿಶೇಷಂಗಳಂ ಪ್ರಕಾಶಿಸುವಲ್ಲಿ ತತ್ಪರಮಾದಾಕ್ಷೇಪಾಲಂಕಾರಂ ಧ್ವನಿತಮಾಯ್ತು (ರಸರ. ಪರಿ. ೧ ೧೩೧). [ಸಂ.]

ಧ್ವನಿತಂತು (ನಾ). ಶಬ್ದವನ್ನು ಹೊರಡಿಸಲು ಸಹಾಯಕವಾಗುವ ಸೂಕ್ಷ್ಮವಾದ ನರ: (Vocal-Chord. ಇಂಕನಿ). [ಧ್ವನಿ + ತಂತು$_1$]

ಧ್ವನಿತತ್ತ್ವ (ನಾ). = ಧ್ವನಿತತ್ವ: ಧ್ವನಿತತ್ತ್ವದಿಂದ ಒಂದು ವಿಷಯ ಚೆನ್ನಾಗಿ ಸ್ಥಾಪಿತವಾಗುತ್ತದೆ. ಯಾವುದನ್ನೇ ಆಗಲಿ ನೇರವಾಗಿ ವಿವರಿಸಿ ಹೇಳದೆ, ಅದರ ಕಾರ್ಯಕಾರಣಗಳನ್ನು ತಿಳಿಸಿ ಸೂಚಿಸಿಬಿಡುವುದೇ ಶ್ಲಾಘ್ಯ (ಭಾರಮೀ. ೩೨೯). [ಧ್ವನಿ + ತತ್ತ್ವ]

ಧ್ವನಿತತ್ವ (ನಾ). [ಕಾವ್ಯಮೀ] ವ್ಯಂಗ್ಯಾರ್ಥವು ಕಾವ್ಯದ ಸಾರ ಎಂಬ ತತ್ತ್ವ; ವಾಚ್ಯಾರ್ಥ, ಲಕ್ಷ್ಯಾರ್ಥಗಳಿಂದ ಭಿನ್ನವಾದ ಅರ್ಥವೇ ಮುಖ್ಯವೆಂಬ ಸಿದ್ಧಾಂತ: ವ್ಯಂಜಕತ್ವದ ವೈಶಿಷ್ಟ್ಯವನ್ನು ವಿವರಿಸುವ ನಮ್ಮ ಧ್ವನಿತತ್ವವು ಅನೇಕ ಭಿನ್ನಾಭಿಪ್ರಾಯಗಳನ್ನು ದೂರಮಾಡುವುದೆಂದೂ . . . ನಂಬುತ್ತೇವೆ (ಧ್ವನ್ಯಾಲೋ. ೨೦೮). [ಧ್ವನಿ + ತತ್ವ$_1$]

ಧ್ವನಿತಾರ್ಥ (ನಾ). ವ್ಯಂಜಿತವಾದ ಅರ್ಥ; ವ್ಯಂಜನಾವ್ಯಾಪಾರದಿಂದ ತೋರುವ ಅರ್ಥ; ವ್ಯಂಗ್ಯಾರ್ಥ: ಸಸ್ಯಜೀವನದಿಂದ ಪ್ರಾಣಿಜೀವನಕ್ಕೆ ಇದನ್ನು ಅನ್ವಯಿಸಿಕೊಂಡರೆ ವಸ್ತುವಿನ ಹಿಂದೆ ಧ್ವನಿತಾರ್ಥ ಬೇಕಾದ ಹಾಗಿರುವುದು ಕಂಡುಬರುತ್ತದೆ (ಬಂಕಿಮ. ೩೦); ನವೀನಾಲಂಕಾರಿಕರು ಕಾವ್ಯದಲ್ಲಿ ಧ್ವನಿತಾರ್ಥಕ್ಕೆ ಇರುವ ಪ್ರಾಧಾನ್ಯದ ಮೇಲೆ ಕಾವ್ಯಗಳನ್ನು ವಿಭಾಗ ಮಾಡಿರುತ್ತಾರೆ (ಕೈಪಿಡಿ. ೦೮೨); ಕಾವ್ಯಾತ್ಮಕ ಎನ್ನುವ ಶಬ್ದದ ಧ್ವನಿತಾರ್ಥಗಳನ್ನು ನಾವು ಎಚ್ಚರಿಕೆಯಿಂದ ಯೋಚಿಸಿದರೆ ಸಾಕು; ಉತ್ತರ ಕೂಡಲೇ ತಾನಾಗಿಯೇ ಹೊಳೆಯುತ್ತದೆ (ಸಾಹಿಪ್ರ. ೬೨); ಮೇಲೆ ಉದ್ಧರಿಸಿದ ಪೊನ್ನನ ಅವತರಣಿಕೆಯ ಧ್ವನಿತಾರ್ಥವೆಂದು ತೋರುವುದು (ಸಾಹಿಸ. ೨೩). [ಧ್ವನಿತ + ಅರ್ಥ]

ಧ್ವನಿತೆಗೆ (ಕ್ರಿ). ೧. ಶಬ್ದವನ್ನು ಹೊರಡಿಸು. ೨. ಮಾತನಾಡು: ಯಾರ ಗಂಟಲೂ ಬೊಬ್ಬಿರಿದು ಧ್ವನಿತೆಗೆಯುವಷ್ಟು ಶಕ್ತಿಯುತವಾಗಿದ್ದಂತೆ ಕಾಣಿಸಲಿಲ್ಲ (ಆಳನಿ. ೧೫೮). [ಧ್ವನಿ + ತೆಗೆ$_1$]

ಧ್ವನಿಪರಿವರ್ತನೆ (ನಾ). ೧. ಕಂಠ ಬದಲಾಗುವಿಕೆ. ೨. [ಭಾಷಾಶಾ] ಸ್ವರಗಳ ಬದಲಾವಣೆ, – ರೂಪಾಂತರ: ಸಿಥಿಯನ್ – ದ್ರಾವಿಡ ವರ್ಗಗಳ ಬಾಂಧವ್ಯವನ್ನು ಬೆಸೆಯುವಷ್ಟು, ಧ್ವನಿಪರಿವರ್ತನೆ ಹಾಗೂ ಧ್ವನಿಸ್ಥಾಯಿತ್ವದ ನಿಯಮಗಳು ಈ ಹೋಲಿಕೆಯಲ್ಲಿ ಅಡಗಿವೆಯೆ? (ದ್ರಾವಿವಿ. ೩೮). [ಧ್ವನಿ + ಪರಿವರ್ತನೆ]

ಧ್ವನಿಪೆಟ್ಟಿಗೆ (ನಾ). ಧ್ವನಿತಂತುಗಳಿರುವ ಗಂಟಲ ಕುಹರ: ಧ್ವನಿ ಪೆಟ್ಟಿಗೆಯಿಂದ ಧ್ವನಿ ಹೊರಡುತ್ತದೆ (ರೂಢಿ). [ಧ್ವನಿ + ಪೆಟ್ಟಿಗೆ]

ಧ್ವನಿಪ್ರತಿಫಲಕ (ನಾ). "ಭಾಷಣವೇದಿಕೆ, ಮೊ.ಗಳ ಮೇಲೆ ಹಾಕಿರುವ, ಶ್ರೋತೃವೃಂದದ ಕಡೆಗೆ ಧ್ವನಿಯನ್ನು ತಿರುಗಿಸಲು ಸಹಾಯವಾಗುವ ಮೇಲ್ಕಟ್ಟು" (Sounding-board. ಇಂಕನಿ). [ಧ್ವನಿ + ಪ್ರತಿಫಲಕ]

ಧ್ವನಿಪ್ರಸ್ಥಾನ (ನಾ). [ಕಾವ್ಯಮೀ] ಧ್ವನಿಯು ಕಾವ್ಯದಲ್ಲಿ ಪ್ರಮುಖವಾದುದೆಂದು ಹೇಳುವ ವ್ಯವಸ್ಥೆ: ಧ್ವನಿಪ್ರಸ್ಥಾನದವರು ವ್ಯಂಗ್ಯವೆಂದು ಕರೆಯುವ ಅರ್ಥವನ್ನೆಲ್ಲಾ, ಅಭಿಧಾವೃತ್ತಿ, ಲಕ್ಷಣಾವೃತ್ತಿಗಳೆಂದು ಮೊದಲಿನಿಂದಲೂ ಶಾಸ್ತ್ರಕಾರರು ಒಪ್ಪಿಕೊಂಡಿರುವ ಶಬ್ದವ್ಯಾಪಾರಗಳಿಂದಲೇ ಸಾಧಿಸುವುದು ಅಶಕ್ಯವೆ? (ಭಾರಮೀ. ೩೩೪). [ಧ್ವನಿ + ಪ್ರಸ್ಥಾನ]

ಧ್ವನಿಭ್ರಮೆ (ನಾ). ಉಚ್ಚಾರಣೆಯಿಂದ ಶಬ್ದದ ಸ್ವರೂಪದ ಬಗೆಗೆ ಉಂಟಾಗುವ ಭ್ರಾಂತಿ: ಬೇರೊಬ್ಬರು ಹಸ್ತಪ್ರತಿಯನ್ನು ಓದಿ ಹೇಳಿ ಪ್ರತಿಕಾರನು ಅದನ್ನು ಬರೆದುಕೊಳ್ಳುವಾಗ ಧ್ವನಿಭ್ರಮೆ (Phonetic Confusion) ಆಗುವುದುಂಟು (ಭಾರಪ. ೭೧). [ಧ್ವನಿ + ಭ್ರಮೆ]

ಧ್ವನಿಮಗ್ನ (ನಾ). ೧. ಧ್ವನಿಯನ್ನು ಆಲಿಸುವುದರಲ್ಲಿ ತಲ್ಲೀನನಾದವನು,–ಮುಳುಗಿದವನು. ೨.ವ್ಯಂಗ್ಯಾರ್ಥವನ್ನು ಅಳವಡಿಸುವುದರಲ್ಲಿ ನಿರತನಾಗಿರುವವನು. ೧, ೨: ಪದಶಬ್ದಕಾತರನಾಗಿಹನೀತನು . . . ಧ್ವನಿಮಗ್ನನೀತನು ಕವಿಯಂತೆ ಕಾದಲನಿಹನು (ಇಂಡಾಪ. ೮೦-೯೪). [ಧ್ವನಿ + ಮಗ್ನ]

ಧ್ವನಿಮಾ (ನಾ). [ಭಾಷಾಶಾ] ಸ್ವರ; ಧ್ವನಿ; P ಭಾಷಾಶಾಸ್ತ್ರದಲ್ಲಿ 'Phoneme' ಎಂಬ ಪದಕ್ಕೆ ಸಮಾನಾರ್ಥವಾಗಿ ಬಳಸುವ ಪಾರಿಭಾಷಿಕ ಶಬ್ದ: ಕೊಡಗುಭಾಷೆಯಲ್ಲಿ ಒಟ್ಟು ೩೨ ಧ್ವನಿಮಾಗಳು ಇರುವಂತೆ ತೋರುತ್ತದೆ (ದ್ರಾವಿವಿ. ೦೩೮); ತಮಿಳು ವರ್ಣಮಾಲೆಗೆ Phonemic ಪದ್ಧತಿ ಅನುಸರಿಸಿ ಲಿಪಿವ್ಯವಸ್ಥೆಯಾಗಿದ್ದಿತು. ಅಲ್ಲಿ ಘೋಷ ಮತ್ತು ಅಘೋಷ ಸ್ಪರ್ಶಗಳು ಸ್ವತಂತ್ರಧ್ವನಿಮಾಗಳಾಗಿರದೆ, ಉಪಧ್ವನಿಮಾಗಳಾಗಿವೆ (ಭಾಷಾಶಾ. ೦೦೩). 'ರೂಪಿಮಾ', 'ಸ್ವನಿಮಾ' ಪರಾ P 'ಧ್ವನಿಂ ಮಾತೀತಿ ಧ್ವನಿಮಾ'. ಸ್ವರವನ್ನು ಅಳೆಯುವುದು, ಅದರ ಕಾರ್ಯಗಳನ್ನು ಗುರುತಿಸುವುದು ಇತ್ಯಾದಿ ಅರ್ಥಗಳನ್ನು ಹೇಳಬಹುದು. ಭಾಷಾಶಾಸ್ತ್ರವು ಬೆಳೆಯುತ್ತಿರುವಾಗ ಇಂಥ ಕೆಲವು ಶಬ್ದಗಳನ್ನು ವಿದ್ವಾಂಸರು ಹೊಸದಾಗಿ ಟಂಕಿಸುತ್ತಾರೆ. ಅವುಗಳನ್ನು ಒಪ್ಪಿಕೊಳ್ಳಬೇಕು. [ಸಂ.]

ಧ್ವನಿಮಾರ್ಪಾಟು (ನಾ). ೧. = ಧ್ವನಿಪರಿವರ್ತನೆ ೧. ೨. = ಧ್ವನಿಪರಿವರ್ತನೆ ೨: ನೋಹಿ, ಬೆಪ್ಪು, ಕತ್ತಲೆ, ಹೆಮ್ಮೆ – ಇವು . . . ನೋಂಪಿ, ಬೆಳ್ಳು, ಕಟ್ಟಲೆ, ಪೆರ್ಮೆ ಈ ಮಾತುಗಳ ರೂಪಾಂತರಗಳು, ತಕ್ಕ ಧ್ವನಿಮಾರ್ಪಾಟುಗಳಿಂದ (Phonetic Changes) ಸಿದ್ಧಿಸತಕ್ಕವು (ಕಒಸಾ. ೧೨೨). [ಧ್ವನಿ + ಮಾರ್ಪಾಟು]

ಧ್ವನಿಮುದ್ರಕ (ನಾ). ೧. ಧ್ವನಿಮುದ್ರಿಕೆಯಲ್ಲಿ ಧ್ವನಿಯನ್ನು ಸಂಗ್ರಹ ಮಾಡಿಕೊಳ್ಳಲು ಬಳಸುವ ಉಪಕರಣ,–ಯಂತ್ರ: ನಮ್ಮ ಮನೆಯಲ್ಲಿ ಒಳ್ಳೆಯ ಧ್ವನಿಮುದ್ರಕವಿದೆ (ರೂಢಿ). ೨. ಧ್ವನಿಮುದ್ರಣವನ್ನು ಮಾಡಿಕೊಳ್ಳುವವನು: ಅವನು ಧ್ವನಿಮುದ್ರಕನಾಗಿ ಕೆಲಸಮಾಡುತ್ತಿದ್ದಾನೆ (ರೂಢಿ). [ಧ್ವನಿ + ಮುದ್ರಕ]

ಧ್ವನಿಮುದ್ರಣ (ನಾ). ಧ್ವನಿಮುದ್ರಿಕೆಯಲ್ಲಿ ಧ್ವನಿಯನ್ನು ಸಂಗ್ರಹ ಮಾಡಿಕೊಳ್ಳುವಿಕೆ: ಆ ಚಲನಚಿತ್ರದ ಧ್ವನಿಮುದ್ರಣ ಚೆನ್ನಾಗಿದೆ (ರೂಢಿ). [ಧ್ವನಿ + ಮುದ್ರಣ]

ಧ್ವನಿಮುದ್ರಣಯಂತ್ರ (ನಾ). = ಧ್ವನಿಮುದ್ರಕ ೧ : ಧ್ವನಿಮುದ್ರಣ ಯಂತ್ರದಿಂದ ಸಂಗ್ರಹಿಸಿದ್ದು (ಕಬಕಾ. ೫೦ ಪ್ರಸ್ತಾವನೆ).

[ಧ್ವನಿಮುದ್ರಣ + ಯಂತ್ರ]

ಧ್ವನಿಮುದ್ರಿಕೆ (ನಾ). ೧. ಧ್ವನಿಯನ್ನು ಮುದ್ರಿಸಿದ ತಟ್ಟೆ, ಟೇಪು ಮೊದಲಾದ ಸಾಧನ. ೨. ಧ್ವನಿಸಂಗ್ರಹ ಮಾಡಿಕೊಳ್ಳುವ ತಟ್ಟೆ ಯಾಕಾರದ ಸಲಕರಣೆ : ಮೇಘಮಲ್ಲಾರವನು ಹಾಡಿ ಮಳೆಯನು ಕರೆದ ಗಾಯಕನ ಧ್ವನಿಮುದ್ರಿಕೆಯನೆ ತಂದು (ಅರಕೋ. ೫೮); ದಕಾಂಶ ವರ್ಗೀಕರಣಪದ್ಧತಿಯಂತೆ ಗ್ರಂಥಾಲಯದಲ್ಲಿ ಅವ್ಯಾಹತವಾಗಿ ಕೊಳ್ಳ ಲಾಗುವ ಓಲೆಗ್ರಂಥ, ಹಸ್ತಪ್ರತಿ, ಪುಸ್ತಕ, ಧ್ವನಿಮುದ್ರಿಕೆ, ಚಲನಚಿತ್ರ (Films), ಸೂಕ್ಷ್ಮಪತ್ರಕ (MicroCard) ಮುಂತಾದವುಗಳನ್ನು . . . ವಿಭಜಿಸಲಾಗುತ್ತದೆ (ಗ್ರಂಥಾಲ. ೦೦) : ಅಂತು ನನ್ನ ಬರಹ ಧ್ವನಿಮುದ್ರಿಕೆ ಯಲ್ಲ ಎಂಬುದನ್ನು ಹೇಳಿ, ತಮ್ಮ ಮುಂದಕ್ಕೆ ಅದನ್ನು ಇರಿಸುತ್ತಿದ್ದೇನೆ (ಜಾನಗೀ. VI ಪ್ರಸ್ತಾವನೆ). [ಧ್ವನಿ + ಮುದ್ರಿಕೆ]

ಧ್ವನಿಮುದ್ರಿಸು (ಕ್ರಿ). ಧ್ವನಿಯಂನ್ನು ಧ್ವನಿಮುದ್ರಿಕೆಯಲ್ಲಿ ಸಂಗ್ರಹಮಾಡಿ ಕೊಳ್ಳು : ಅವರು ಭೈರವಿರಾಗದಲ್ಲಿ 'ಚಿಂತಯ ಮಾಂ' ಎಂಬ ಕೀರ್ತನೆ ಯನ್ನು ಹಾಡುತ್ತಿದ್ದಾಗ . . . ಮಹಾರಾಜ ಎ ಅದನ್ನು ಎಡಿಸನ್ನನ ಫೋನೋಗ್ರಾಫಿನಲ್ಲಿ (ಮೇಣದ ಸುರುಳಿಯ ಮೇಲೆ) ಧ್ವನಿಮುದ್ರಿಸಿ ಕೊಂಡನು (ಸಂಗೀತ. ೫೦). [ಧ್ವನಿ + ಮುದ್ರಿಸು]

ಧ್ವನಿಯಿಸು 'ಧ್ವನಿಸು' ನೋ.

ಧ್ವನಿರಮ್ಯ (ಗು). ೧. ಕೇಳಲಂ ಚೆನ್ನಾಗಿರುವ. – ಮನೋಹರವಾದ. ೨. ಧ್ವನಿಶಕ್ತಿಯಂ ಮೂಲಕ ರಮ್ಯವಾದ : ಸೂಚ್ಯತೆಯಿಂದ ಚೆಲುವಾದ : ಧ್ವನಿರಮ್ಯವಾದೊಂದೆ ಪದವನಿಟ್ಟುದರಿಂದೆ ಕವಿವಾಣಿ ಶೋಭಿಪುದಲ್ತೆ (ಇಂಕಾಪ. ೬೬-೩೦). [ಧ್ವನಿ + ರಮ್ಯ]

ಧ್ವನಿಲೇಖನ (ನಾ). ಧ್ವನಿಯನ್ನು ಮುದ್ರಿಸಿಕೊಳ್ಳುವುದಂ : ಸ್ವಲ್ಪ ದಿವಸಗಳನ್ನು ಜಾನಪದ ಗೀತೆಗಳ ಧ್ವನಿಲೇಖನಕ್ಕಾಗಿಯೂ ಕಳೆದೆ (ಜಾನಗೀ. V, ಪ್ರಸ್ತಾವನೆ). [ಧ್ವನಿ + ಲೇಖನ]

ಧ್ವನಿವರ್ಧಕ (ನಾ). ೧. ಧ್ವನಿಯಂನ್ನು ಹೆಚ್ಚಿಸುವುದಂ. ೨. ಮೂಡಿದ ಶಬ್ದವನ್ನು ಹೆಚ್ಚುಮಾಡುವ ಸಾಧನ : (ಧ್ವನಿಗ್ರಾಹಕವನ್ನು ಕವಿಗಿಟ್ಟು ಕೊಳ್ಳದೆ ನಿಸ್ತಂತುವಾರ್ತಾಧ್ವನಿಯನ್ನು ಗಟ್ಟಿಯಾಗಿ ಕೇಳಲಾಗುವ) ಧ್ವನಿ ವರ್ಧಕ (ಯಂತ್ರ) (Loud-Speaker. ಇಂಳಿ); ಅದರೆಡೆಯಲ್ಲಿ ಧ್ವನಿವರ್ಧಕ ಗಳು ಉಪನ್ಯಾಸಕನ ಭಾಷಣವನ್ನು ಹೊರಸೂಸಲು ಆತುರವಾಗಿದ್ದವು (ಗೋಪುರ. ೦೫೯); ಮುಂದುಗಡೆಯೇ ಧ್ವನಿವರ್ಧಕ ವಿನುಗುತ್ತಾ ಭರವಸೆ ಕೊಡುತ್ತಿತ್ತು (ಸಂಬರು. ೩೯); ಹೊರಗಡೆಗೆ ಧ್ವನಿವರ್ಧಕಗಳನ್ನು ಏರ್ಪಡಿ ಸಿದ್ದರು (ಕಲಾಸಾ. ೮೮). [ಧ್ವನಿ + ವರ್ಧಕ]

ಧ್ವನಿವಾದ (ನಾ). = ಧ್ವನಿತತ್ವ : ಕಾವ್ಯಕ್ಕೆ ವ್ಯಾಪ್ತಾನವೇ ಕೂಡದೆಂದು ಧ್ವನಿವಾದದ ಅಭಿಪ್ರಾಯವಲ್ಲ (ಭಾರವಿಾ. ೩೩೦). [ಧ್ವನಿ + ವಾದ್ಯ]

ಧ್ವನಿವಾಹಕ (ನಾ). "ಒಂದು ಕೋಣೆಯಲ್ಲಿ ಮಾಡಿದ ಶಬ್ದಗಳನ್ನು, ಅಥವಾ ಆಡಿದ ಮಾತುಗಳನ್ನು, ಮತ್ತೊಂದು ಕೋಣೆಯಲ್ಲಿ ಗ್ರಹಿಸಿ ಬರೆಯಲಾಗುವಂತೆ ಧ್ವನಿವೃದ್ಧಿಮಾಡುವ ಸಲಕರಣೆ : ಧ್ವನಿವಾಹಕ" (Dictograph. ಇಂಳಿ). [ಧ್ವನಿ + ವಾಹಕ]

ಧ್ವನಿವಿಕಾರ (ನಾ). ೧. [ಕಾವ್ಯವಿಾ] (ಭಯ, ದುಃಖ ಮೊದಲಾದುವು ಗಳಿಂದ ಉಂಟಾದ) ಧ್ವನಿಯ ಬದಲಾವಣೆ ; ಸ್ವರವಿಕಾರ : 'ಕಾಕು' ಅಥವಾ ಧ್ವನಿವಿಕಾರದಿಂದ ಬೇರೆ ಅರ್ಥವು ತೋರುವುದುಂಟಷ್ಟೆ (ಧ್ವನ್ಯಾಲೋ. ೩೦೬). ೨. [ಭಾಷಾಶಾ] ಮಾತಿನ ವರ್ಣಗಳು ತೇದು ಹೋಗುವಿಕೆ ; ವರ್ಣಕ್ಷಯ : ಎತ್ವಕ್ಕೆ ಇತ್ವ, ದ್ವಿತ್ವಕ್ಕೆ ಲೋಪ – ಎಂಬೀ ಧ್ವನಿವಿಕಾರಗಳು ಸೇರಿವೆ (ಸಂಶೋಧ. ೮೬). [ಧ್ವನಿ+ ವಿಕಾರ]

ಧ್ವನಿವಿಜ್ಞಾನ (ನಾ). ಕಿವಿಗೆ ಕೇಳುವ ಸ್ವನಗಳನ್ನು ಕುರಿತಾದ ಶಾಸ್ತ್ರ.– ಸಿದ್ಧಾಂತ : ಧ್ವನಿವಿಜ್ಞಾನ (Acoustics. ಇಂಳಿ); ಇಂಗ್ಲಿಷಿನಲ್ಲಿ ಬರೆಯುವಾಗ ಧ್ವನಿವಿಜ್ಞಾನದ ವಿವರಣೆ ನೀಡುವ ಸಂದರ್ಭದಲ್ಲಿ ಕೆಲವು ನಿಯಮಗಳನ್ನು . . . ಬರೆಯುವರು (ಡ್ರಾವಿ. X, ಮೊದಲಮಾತು).

[ಧ್ವನಿ + ವಿಜ್ಞಾನ]

ಧ್ವನಿಶಾಸ್ತ್ರ (ನಾ). = ಧ್ವನಿವಿಜ್ಞಾನ : "ಶ್ರವಣವಿದ್ಯೆ, ಧ್ವನಿಶಾಸ್ತ್ರ" (Acoustics. ಶಾಶಿನಿ. ೩). [ಧ್ವನಿ + ಶಾಸ್ತ್ರ]

ಧ್ವನಿಸಂಕೇತ (ನಾ). ಧ್ವನಿಯನ್ನು ಗುರುತಿಸುವ ಸಂಕೇತ : ವ್ಯವಹಾರ ಕ್ರಮಪರಂಪರೆಯಲ್ಲಿ ಮಾನವನು ಮುಟ್ಟಿದ ಮುಖ್ಯಘಟ್ಟವೆಂದರೆ ಧ್ವನಿ ಸಂಕೇತವುಳ್ಳ ವರ್ಣಮಾಲೆಯನ್ನು ಆಚರಣೆಗೆ ತಂದದ್ದು (ಮುದ್ರಣ. ೪).

[ಧ್ವನಿ + ಸಂಕೇತ]

ಧ್ವನಿಸಂಪತ್ತು (ನಾ). ಉತ್ತಮವಾದ ಶಾರೀರ ; ಸಮೃದ್ಧವಾದ ಶಾರೀರ ; ಕಂಠದ ಉತ್ಕೃಷ್ಟತೆ : ಮಹಾವೈದ್ಯನಾಥ ಅಯ್ಯರ್ ಅವರ ಶಾರೀರವು ಧ್ವನಿಸಂಪತ್ತಿನಿಂದ ಕೂಡಿತ್ತು (ಸಂಗೀತ. ೩).

[ಧ್ವನಿ + ಸಂಪತ್ತು]

ಧ್ವನಿಸಾಂಗತ್ಯ (ನಾ). ಧ್ವನಿಗಳ ಹೊಂದಾಣಿಕೆ.– ಹೊಂದಿಕೆ ; ಸ್ವರ ಮೈತ್ರಿ : ಈ ಇಂಟಿಗೆ ಅವುಗಳ ಧ್ವನಿಸಾಂಗತ್ಯವೇ (Concordance) ಕಾರಣ (ಸಂಗೀಪಂ. ೦೩).– [ಧ್ವನಿ + ಸಾಂಗತ್ಯ]

ಧ್ವನಿಸು, ಧ್ವನಿಯಿಸು (ಕ್ರಿ). ೧. ಧ್ವನಿಯನ್ನು ಹೊರಡಿಸು ; ಶಬ್ದ ಮಾಡು. ೨. ಸೂಚ್ಯವಾಗಿ ; ಹೊರಬೀಳು ; ಸೂಚಿತವಾಗು : ಅಶೇಷವಾಗಿ ಆದ್ಯಂತವಾಗಿ ವಿಮರ್ಶಿಸಿ ನಿನಗೆ ತಿಳಿದಂತೆ ಮಾಡು ಎಂದಾಗ ತಿಳಿದು ಮಾಡು ಎಂಬ ಅರ್ಥವೇ ಧ್ವನಿಸುತ್ತದೆ (ಭಾರದ. ೧೧೯). ೩. ಸೂಚ್ಯವಾಗಿ ಹೇಳು ; ಸೂಚಿಸು : ಇಲ್ಲಿ ಕಾಮಿಯೊಬ್ಬನ ವ್ಯೇಯಸೀ ಚುಂಬನೇಚ್ಛೆಯನ್ನು ಇದು ಚಾಟುರೂಪವಾಗಿ ಧ್ವನಿಸುತ್ತದೆ (ಧ್ವನ್ಯಾಲೋ. ೪೦ ಅಡಿಟಿ). **ಧ್ವನಿಯಿಸು** : ೧. ವಂಶಂ . . . ಬೆದಿರಿವಡಿಳಿವಾದ ಗಾಳಿಯ ಪುದುವಿಂ ಧ್ವನಿಯಿಸುವ ವೇಣು ಕೀಚಕಮಕ್ಕುಂ (ವಸ್ತು.ಕೋ. ೩೬-೦೮). ೩. ಇದನ್ನು ನಮ್ಮ ಕವಿಗಳು ಧ್ವನಿಯಿಸದೆ ಇಲ್ಲ (ಸಾಹಿವಿ. ೩೦). ೪. ವ್ಯಂಗ್ಯಾರ್ಥವನ್ನು ಕೊಡು,–ಸೂಚಿಸು : ಧ್ವನಿಯೆಂಬುದಳಂಕಾರಂ ಧ್ವನಿಯಿಸುಗುಂ ಶಬ್ದದಿಂದಮರ್ಥದ ದೂಷ್ಯಂ (ಕವಿಕಾ. ೩-೩೦೯).

[ಧ್ವನಿ + – ಇಸು]

ಧ್ವನ್ಯಂತರ (ನಾ). ಬೇರೆ ಬೇರೆ ಧ್ವನಿ,–ಸ್ವರ,–ನಾದ : ಇಂದೂ ಸಾಮ ಗಾನವನ್ನು ಕೇಳಿದಲ್ಲಿ ಏಳು ಧ್ವನ್ಯಂತರಗಳಿರುವುದೂ ಪ್ರಮಾಣದಲ್ಲಿ ಸ್ವಲ್ಪ ವ್ಯತ್ಯಾಸ ವಿದ್ದರೂ . . . ಸ್ಥೂಲವಾಗಿ ಅವು ನಮ್ಮ ವಿರಹರಪ್ರಿಯ ರಾಗವನ್ನು ಹೋಲುವುದೂ ಗಮನಾರ್ಹವಾದುವು (ಭಾರದ. ೩೩೭).

[ಧ್ವನಿ + ಅಂತರ]

ಧ್ವನ್ಯಕ್ಷರ (ನಾ). ಧ್ವನಿಸಂಪನಗಳಂ ಮಾರ್ಪಾಟುಗೊಂಡು ಆದ ಅಕ್ಷರ ; ಟೈಪು : "ಧ್ವನ್ಯಕ್ಷರ (ಮುದ್ರಣ)" (Phonotype. ಇಂಳಿ).

[ಧ್ವನಿ + ಅಕ್ಷರ]

ಧ್ವನ್ಯನುರೂಪತೆ (ನಾ). ಸ್ವರಗಳ ಸಮಾನತೆ.– ಸಾದೃಶ್ಯ : ದ್ರಾವಿಡ ಭಾಷೆಗಳಲ್ಲಿ ಕಾಣುವ ಧ್ವನ್ಯನುರೂಪತೆ (Phonetic-Correspondence)ಯಂ ನಕ್ಷೆಯಲ್ಲಿ ಆದಷ್ಟೂ ಕನ್ನಡಲಿಪಿಯಲ್ಲೇ ಬಳಸಿದೆ (ದ್ರಾವಿವಿ. ೩೧೩).

[ಧ್ವನಿ + ಅನುರೂಪತೆ]

ಧ್ವನ್ಯರ್ಥ (ನಾ). [ಕಾವ್ಯವಿಾ] ಸೂಚ್ಯವಾದ ಅರ್ಥ; ಸಾಂಕೇತಿಕವಾದ ಅರ್ಥ: ಧರೆಯ ಮೇಲಣ ವೈರಿನೃಪರ ದಂಡಿಸಿ ತಂದ ವರವಸ್ತುಚಯವೆಸೆದಿರಲು ಮೆಲ್ಲಿವುದು ಮೈಸೂರೆಂದೆಂಬ ನಾಮವೊಂದುರುತರ ಧ್ವನ್ಯರ್ಥವಾಗ (ಕಂವವಿ. ೨-೩೬). [ಧ್ವನಿ + ಅರ್ಥ]

ಧ್ವನ್ಯಾತ್ಮಕ (ಗು). ೧. ಧ್ವನಿಯಿಂದ ಕೂಡಿದ. (ನಾ). ೨. ಸೂಚ್ಯವಾದಂದು ; ವ್ಯಂಗ್ಯಾರ್ಥದಿಂದ ಕೂಡಿದಂದು : ಹೇಳಬೇಕಾದ ವಿಷಯ ಎಂಬುದು ಧ್ವನ್ಯಾತ್ಮಕವಾದ ರಸಕ್ಕೆ ಇಲ್ಲವೆ ರಸಾಭಾಸಕ್ಕೆ ಅಂಗವಾಗಬಹುದು (ಧ್ವನ್ಯಾಲೋ. ೧೬೯). [ಸಂ.]

ಧ್ವಸ್ತ (ಗು). ೧. ಬಿದ್ದ ; ಪತನಹೊಂದಿದ. ೨. ನಾಶಹೊಂದಿದ ; ಹಾಳಾದ. ೩. ನಾಶಪಡಿಸಿದ; ಭಂಗಪಡಿಸಿದ : ಕಮಲಾನಂದಕರಂ . . . ಧ್ವಸ್ತತಮಸ್ತಮಂ ಹೃತನಿಶಾಟೋಪನೊಲ್ದೀಗೆ ಗೌತಮಗೋತ್ರಾಂಬುಜ ಷಂಡಚಂಡಕಿರಣಂಗಾದಿತ್ಯನುತ್ಸಾಹಮಂ (ಪಂಚತಂ. ೨-೧೨); ಧ್ವಸ್ತದುರಸುರ ಸುರಶಿರಸ್ತಟೋಪರಿಪರಿವ್ಯಸ್ತಪದ ಪದನಖಗಭಸ್ತಿವೃತಲೋಕ . . . ಸಮಸ್ತ ಶುಭ ಶುಭದಾಯಕ (ಪದ್ಮರಾ. ೨-೦) ; ಧ್ವಸ್ತಕರಾಲಜಲಂಧರ ಶರ್ವ ಸಮಸ್ತ ಕವಿಸ್ತವಲೋಲ (ಉದ್ಭಟೇ. ೨-೭೦). ೪. ಕಳೆದುಹೋದ. (ನಾ). ೫. ಕೆಟ್ಟ ಮಾತು ; ನಿಂದೆ : "ಕೆಟ್ಟ ನುಡಿ ಧ್ವಸ್ತಮೆಂಬುದು" (ಹಲಾಯು. ೨೩-೧೪೦) ; "ಕೆಟ್ಟ ಮಾತು ಧ್ವಸ್ತಮಕ್ಕು" (ಮಂಗರಾ. ೨೬-೨). ೬. ಜಾರಿ ಬಿದ್ದುದು ; ಪತನ ಹೊಂದಿದುದು : "ಸ್ರಸ್ತಂ, ಧ್ವಸ್ತಂ, ಭ್ರಷ್ಟಂ, ಸ್ಕನ್ನಂ, ಪನ್ನಂ, ಚ್ಯುತಂ, ಗಳಿತಂ – ೭ ಜಾರಿಬಿದ್ದದ್ದು, ಕಳಚಿಕೊಂಬುವದು, ತಪ್ಪಿಹೋಗಿರುವದು" (ಸಿದ್ಧಾಂತಿ. ೩೫೧). [ಸಂ.]

ಧ್ವಸ್ತದಿತಿಜ (ನಾ). ರಾಕ್ಷಸನನ್ನು ನಾಶಮಾಡಿದವನು ; ಅಸುರನನ್ನು ಸಂಹಾರಗೊಳಿಸಿದವನು : ಧ್ವಸ್ತದಿತಿಜಂ ನತಸಮಸ್ತವಿಬುಧಂ ಭುವನ ವಿಸ್ತರಣಪಾದನೆಸೆದಂ ಘಣಪತಲ್ಪಂ (ಜಗವಿ. ೧-೫೦). [ಧ್ವಸ್ತ + ದಿತಿಜ]

ಧ್ವಾಂಕ್ಷ (ನಾ) ೧. ಕಾಗೆ ; ವಾಯಸ : "ಅರಿಷ್ಟಃ, ಕರಟಃ. . .ಧ್ವಾಂಕ್ಷಃ, ಚಿರಂಜೀವೀ, ವಾಯಸಃ – ಈ ೧೦ ಕಾಗೆ" (ಹಲಾಯು. ೪೧-೯೨) ; "ಕಾಕಂ ಚಿರಾಯು . . . ಧ್ವಾಂಕ್ಷಂ . . . ಕರಟಮೆನೆ ಕಾಗೆ" (ಮಂಗರಾ. ೫೦-೪) ; ನೀಂ ಧ್ವಾಂಕ್ಷನೆಯಪ್ಪುದಱಿಂದತ್ಯಂತ ಮಾಂಸಭಕ್ಷಣಕಾಂಕ್ಷಿತನುಂ ಸ್ವಭಾವ ಚಪಲನುಮಾಗಿರ್ಪೆ (ಪಂಚತಂ. ೨೯೫-೧೦). ೨. ಬಕಪಕ್ಷಿ: "ಬಕಕಾಕಯುಗಂ ಧ್ವಾಂಕ್ಷಂ" (ವಸ್ತುಕೋ. ೧೨೦-೧೮) ; "ಬಕದಲ್ಲಿಯುಂ ಧ್ವಾಂಕ್ಷಮೆಂಬುದು" (ಹಲಾಯು. ೧೩೪-೨೦) ; "ಧ್ವಾಂಕ್ಷಃ – ಕಾಗೆ, ಮಿಾನು ತಿನ್ನುವ ಕೊಕ್ಕರೆ" (ಸಿದ್ಧಾಂತಿ. ೪೨೩). ೩. [ವಾಸ್ತು] ಕಟ್ಟಡದ ನಿರ್ಮಾಣ ಕ್ರಮದಲ್ಲಿ ಅನುಸರಿಸಬೇಕಾದ ಎಂಟು ಬಗೆಯ ಆಯ ಪ್ರಕಾರಗಳಲ್ಲಿ ಒಂದು ; ವಾಯಸಾಯ : ಪಸರಿಸೆ ತರದಿಂ ಧ್ವಜ ಧೂಮ ಸಿಂಹ ಶುನಕೋಕ್ಷಖರಗಜ ಧ್ವಾಂಕ್ಷಂಗಳ್ ದೆಸೆಯಿಂದೆ ಮೂಡನಾಳ್ಗುಂ ದೆಸೆಯಾಯಂ ಶುಭದಮಲ್ಲಿ ಪೆಱವಶುಭಂಗಳ್ (ಲೋಕೋಪ. ೩-೧೯). 'ಧೂಮಾಯಂ' ಪರಾ. [ಸಂ.]

ಧ್ವಾಂಕ್ಷಧ್ವಜ (ನಾ). ೧. ಕಾಗೆಯ ಚಿಹ್ನೆಯುಳ್ಳ ಪತಾಕೆ ; ಕಾಕಧ್ವಜ : ಅಂತು ಯುಗಾಂತ ವಾತಹತ ಕುಲಗಿರಿಯೆ ನೆಲೆಯಿಂ ತಳರ್ವಂತೆ ತಳರ್ದು ಧ್ವಾಂ[ಪಾಕಾಂ. ದೋ]ಕ್ಷಧ್ವಜಮಂಬರತಳದೊಳ್ ಮಿಳಿರೆ ತನಗಿದಿರಂ ಬರ್ಪ ರಥಕ್ಕೆ ತನ್ನ ಥಮನಾಸನ್ನಮಾಗೆ ಪರಿಯಿಸಿ (ಪಂಪಭಾ. ೧೨-೧೩೬). ೨. ಕಾಕಧ್ವಜವನ್ನುಳ್ಳವನು ; ಕರ್ಣ. [ಧ್ವಾಂಕ್ಷ + ಧ್ವಜ]

ಧ್ವಾಂಕ್ಷಬಲ (ನಾ). = ಧ್ವಾಂಕ್ಷಸಂದೋಹ : ಧ್ವಾಂಕ್ಷಬಲಂ ಬೆರಸರಿಜಯ ಕಾಂಕ್ಷೆಯಿಂ (ಪಂಚತಂ. ೨೩೮-೧೬). [ಧ್ವಾಂಕ್ಷ + ಬಲ$_2$]

ಧ್ವಾಂಕ್ಷಶತ್ರು (ನಾ). ಕಾಗೆಯ ವೈರಿ ; ಗೂಬೆ : ಧ್ವಾಂಕ್ಷಶತ್ರುವೇ ನಿನ್ನಯ ದಯೆಯಿಂ ಗಾಣಬಿಜ್ಜೆಯೊಳಿನಿತಂ ಬಲ್ಲಿದನಾದೆಂ (ಅದ್ಭುತ. ೨೫-೧೦).

[ಧ್ವಾಂಕ್ಷ + ಶತ್ರು]

ಧ್ವಾಂಕ್ಷಸಂದೋಹ (ನಾ). ಕಾಗೆಗಳ ಗುಂಪು,–ಸಮೂಹ : ಕುಸುರಿಗರುಳಿಂದುದಿರುವಡಗಿನ ಬಸೆಗೆ ಬಂದೆಱಗಿದವುಲೂಕಧ್ವಾಂಕ್ಷಸಂದೋಹ (ಕುಪ್ಯಾಭೀ. ೪-೪೫). [ಧ್ವಾಂಕ್ಷ + ಸಂದೋಹ]

ಧ್ವಾಂಕ್ಷಾರಾತಿ (ನಾ). = ಧ್ವಾಂಕ್ಷಶತ್ರು : "ಉಲೂಕಃ, ಕೌಶಿಕಃ, ಧ್ವಾಂಕ್ಷಾರಾತಿಃ, ನಿಶಾಟನಃ – ಈ ೪ ಗೂಗೆ" (ಹಲಾಯು. ೪೧-೯೩).

[ಧ್ವಾಂಕ್ಷ + ಆರಾತಿ]

ಧ್ವಾಂತ (ನಾ). ೧. ಕತ್ತಲೆ ; ಅಂಧಕಾರ : "ತಿಮಿರಂ ಸಂತಮಸಂ ಧ್ವಾಂತಮಂಧಕಾರಂ ತಮಂ ತಮಿಸ್ರಮದಕ್ಕುಂ" (ವಸ್ತುಕೋ. ೧೧-೬೩) ; "ತಿಮಿರಮವನಿಚ್ಛಾಯೆಯಂಧಕಾರಂ ಧ್ವಾಂತವಮರ್ದ ಕತ್ತಲೆಯೆನಿಕು" (ಮಂಗರಾ. ೨೦-೮) ; ಪಸರಿಸಿದ ಕುತೀರ್ಥ ಧ್ವಾಂತಮಂ ತೂಳ್ದಿ ಭವ್ಯಪ್ರಸರಕಮಲ ಬೋಧಾವಾಪ್ತಿಯಂ ತಾಳ್ದಿ (ಅಜಿಪು. ೧-೧೬) ; ಪೊಕ್ಕಳಾ ಕನ್ನೆಯುಮವ ನಿತಲಾಲಿಂಗಿತಾನೇಕಶಾಖಾಜನಿತಧ್ವಾಂತಾಂತರಾಲ ಪ್ರಬಲವಟಮನೇಗೆಯ್ಯ ದುದ್ವೇಗವೇಗಂ (ಪಂರಾಮಾ. ೮-೭) ; ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂಭಾರಚ್ಛೇದವಿನೋದಿ ಕೃಷ್ಣನೆಮಗೀಗಾನಂದಸಂದೋಹಮಂ (ಜಗವಿ. ೧-೧) ; ಪರಮತಧ್ವಾಂತ ಪ್ರಚಂಡಭಾಸ್ಕರಂ (ಪದ್ಮರಾ. ೧-೨೦) ; ಬಳಿಗುಂ ತತ್ಕ್ಷಣ ಶಾಂತಸಾಂಧ್ಯರುಚಿವಹ್ನಿಜ್ವಾಲಧೂಮ್ಯಂ ಸಮುಜ್ಜ್ವಳ ಸಂಧ್ಯಾಂಶುರಸಾಲಪಲ್ಲವನವಗ್ರಾಸಾತಿ ಮೇದಸ್ವಿ ಕೋಕಿಳಬ್ಬಂದಂ ರಜನೀಮುಖಾರುಣನವಾಸೃಕ್ಪಾನದೃಪ್ತಾಸುರಾವಳಿ ತಾನೆಂಬಿನಮುರ್ಬಿ ಜರ್ಬಿ ಜಗಮಂ ಧ್ವಾಂತಂ ಸಮಂತನ್ನೆಗಂ (ಚಿಕವಿ. ೬-೦೦). ೨. ಒಂದು ನರಕದ ಹೆಸರು : ರೌರವ ಧ್ವಾಂತ ಶೀತ . . . ಕಾಲಸೂತ್ರಗಳೆಂಬವೇ ಎಂಟು ನರಕಂಗಳು (ವಿವೇಕ. ೧೭೯). [ಸಂ.]

ಧ್ವಾಂತಧ್ವಂಸಿ (ನಾ). ಕತ್ತಲೆಯನ್ನು ನಾಶ ಮಾಡುವವನು ; ಸೂರ್ಯ.

[ಸಂ. ಧ್ವಾಂತಧ್ವಂಸಿನ್]

ಧ್ವಾಂತಬಂಧ (ನಾ). ಕತ್ತಲೆಯ ಕಟ್ಟು : ದಿನಕರಕರನಿಕರಂಗಳ್ ಘನವಿವರ ಪ್ರಸರಮಾಗಿಯುಂ ತಮ್ಮಂ ಕಂಡನಿತಱೊಳೆ ತೆರಳ್ದೆನ್ನಾ ಮನೋಗತಧ್ವಾಂತ ಬಂಧಮಳಱಿತ್ತೆಲ್ಲಂ (ಕವಿರಾ. ೨-೬೫). [ಧ್ವಾಂತ + ಬಂಧ]

ಧ್ವಾಂತವಿಧ್ವಂಸನ (ಗು). ೧. ಕತ್ತಲೆಯನ್ನು ನಾಶಮಾಡುವ : ರಿಪುದುರ್ಗ ಧ್ವಾಂತವಿಧ್ವಂಸನಖರಕರನೀ ಬಂದನೀ ಬಂದನನ್ಯೋರ್ವಿಗರ್ವೋರ್ವೀಧ್ರ ಸಂಭೇದನಪವಿಧರನೀಬಂದನೀಬಂದನು (ರಾಜಶೇ. ೬-೧೭). (ನಾ). ೨. ಕತ್ತಲೆಯನ್ನು ನಾಶಮಾಡುವವನು. ೩. ಸೂರ್ಯ. ೪. ಚಂದ್ರ.

[ಧ್ವಾಂತ + ವಿಧ್ವಂಸನ]

ಧ್ವಾಂತಹರ (ನಾ). ೧. ಕತ್ತಲೆಯನ್ನು ನಾಶಮಾಡುವವನು ; ಸೂರ್ಯ. ೨. ಚಂದ್ರ : "ಧ್ವಾಂತಹರಂ ದ್ವಿಜರಾಜನರ್ಣವಪ್ರಿಯತನಯಂ" (ವಸ್ತುಕೋ. ೧೨-೬೮). [ಧ್ವಾಂತ + ಹರ$_2$]

ಧ್ವಾನ (ನಾ). ಧ್ವನಿ ; ಶಬ್ದ ; ನಾದ : "ಹ್ರಾದಃ, ನಾದಃ . . . ಧ್ವಾನಃ . . . ಘೋಷಃ–ಈ ೮ ಧ್ವನಿ" (ಹಲಾಯು. ೨೩-೧೩೭); ರೋದೋಂತರ್ಭಾಗದೊಳ್ ದುಂದುಭಿಗಳೆಸೆಯೆ ಮಾಂಗಲ್ಯಗೀತಪ್ರಣಾದಂ ವಾದಿತ್ರಧ್ವಾನದೊಳ್ . . . ತಳರ್ದಂ ರಾಗದಿಂ ಸಾರ್ವಭೌಮಂ (ಆದಿಪು. ೧೧-೧೪) ; ಚಕಿತೋದ್ಯತ್ಪಕ್ಷಿಪಕ್ಷಸ್ವನದೊಳಮರ್ದ ಕೋಳಾಹಳಧ್ವಾನದಿಂ . . . ವಿಂಧ್ಯಂ ನಡುಗೆ (ಕಾದಂಪೂ. ೧೫೩); ಆಗಳಖಿಳ ಜಯಜಯಧ್ವಾನಮೊದವೆ (ಪಂರಾಮಾ. ೧೦-೩೪ ವ) ; ಅತಿಧ್ವಾನದಿಂದೆಬ್ಬಿಸಿದಳಬ್ಬರಿಸಿ ಗಂಡನಂ ಮನೆಯೊಳೊಱಗಿರ್ದವರನು (ಸಿದ್ಧರಾ. ೨-೧) ; ಉಲಿವುತಿರ್ದುದು ಜಯಜಯಧ್ವಾನದಲಿ ಸುರಕಟಕ (ಕುಪ್ಯಾಕ. ೬-೨೦೦) ; ಓ ಲಕ್ಷ್ಮಣಾ ಓ ! ಎಂಬಾ ಮಹಾಧ್ವಾನಮಸುರನುಸಿರಿಂದುರ್ಕಿ ರೋದಿಸಿತು (ಶ್ರೀರಾಮಾ. ೨೩೮-೨೬೭).

[ಸಂ.]

ಧ್ವಾನಿತ (ಗು). ಸದ್ದುಮಾಡಿದ ; ಶಬ್ದವನ್ನುಂಟುಮಾಡಿದ : ಧ್ವಾನಿತ ದೇವದುಂದುಭಿರವಂ . . . ಒಪ್ಪಿದುದು ರಾಜಿತ ರಾಜಗ್ರಹಾಂತರಾಳದೊಳ್ (ಶಾಂತಿಪು. ೬-೭೪). [ಸಂ.]

ನ

ನ (ನಾ). ೧. ಕನ್ನಡ ವರ್ಣಮಾಲೆಯ ನಲವತ್ತನೆಯ ಅಕ್ಷರ: ವ್ಯಂಜನಗಳು :–ವರ್ಗೀಯ : ಕ ಖ ಗ ಘ ಙ . . . ತ ಥ ದ ಧ ನ (ಕೈಪಿಡಿ. ೩). ೨. ಶೂನ್ಯದ ಸಂಕೇತ ; ಸೊನ್ನೆ : "ನಿರುತದಿಂ ಕಟಪ[ಯ] ಮೆನಲ್ಕೊಂದು . . . ಅಱಿ ಝು ಧ ಳಮೊಂಬತ್ತು ನಂ ಸೊನ್ನೆಯಿಂತಿ ವಕ್ಷರಸಂಜ್ಞೆಯಕ್ಕು" (ಮಂಗರಾ. ೦೦೪-೦೦). ೩. [ಛಂದ] ಅಕ್ಷರಗಣಗಳಲ್ಲಿ ಒಂದು ; ಮೂರು ಲಘುಗಳುಳ್ಳ ಗಣ ; ನಗಣ (ಲ ಲ ಲ) : ಮಯರಸತಜಭನಲಗವಿನಿಚಯಮೆಂಬಿವು ನಿಯಮದಿಂ ಗಣಾಕ್ಷರಮಕ್ಕುಂ (ಛಂದೋಂಬು. ೧-೩೬) ; "ಯಮಾತಾರಾಜಭಾನಸಲಗಂ" ಎಂಬ ಸೂತ್ರದಲ್ಲಿ, ಕ್ರಮವಾಗಿ ಮೂರು ಮೂರಕ್ಷರಗಳನ್ನು ತೆಗೆದುಕೊಂಡರೆ ಮೊದಲನೆಯಕ್ಷರವು ಗಣದ ಹೆಸರನ್ನು ಸೂಚಿಸುವುದು (ಕೈಪಿಡಿ. ೭೦).

ನಂಗಮ್ಮ (ನಾ). ಒಬ್ಬಾತನ ಹೆಸರು : ಗೆದೆಯ ಪನ್ನೆರಡಱ ನಾಟ್ಯಾಗ್ರವುಣ್ಡ ಸೀಬಳ್ಳಿಯೆಱೆಹಯ್ಯನ ಜೇಷ್ಠಪುತ್ರ ನಂಗಮ್ಮನ ಮಗ ಜೋಗಯ್ಯಂಗೆ ದಯಗೆಯ್ದು ಕೊಟ್ಟ ಸ್ಥಿತಿ (ಎಕ. VIII, ಸೊರಬ. ೪೭೭-೦೮ ; 991).

[? + ಅಮ್ಮ$_1$]

ನಂಗರಿ 'ನಾಂಗರು$_1$' ನೋ.

ನಂಗರು 'ಲಂಗರು' ನೋ.

ನಂಗಲಿ (ನಾ). ಒಂದು ಊರಿನ ಹೆಸರು : ನಙ್ಗಲಿಯ ಸೆಟ್ಟಿಯು ಪೆತ್ತದ ಕೆಱೆಯ × × × ಳಗೆ ಮಾತೆಗೆ ದೇವಭೋಗಮ್ ಪದಿಕ್ಕೊಳ ಕಳನ್ ಇಱಿಸಿದೊಮ್ (ಮೈಆರಿ. ೧೯೨೩, ೫೩-೪ ; 788) ; ವಿಷ್ಣುವರ್ಧನ ಹೊಯ್ಸಲದೇವರು ಮೂಡಲ ನಂಗಲಿಯ ಪಡಿಯಗಟ್ಟಂ . . . ಸುಖಸಂಕಥಾವಿನೋದದಿಂ ರಾಜ್ಯಂಗೆಯುತ್ತಲಿರ್ದ್ದು (ಎಕ. V, ಹಾಸನ. ೧೦೨-೧೨ ; 1128) ; ತಳಕಾಡು ಗಂಗವಾಡಿ ನೊಳಂಬವಾಡಿ ಕೊಂಗು ನಂಗಲಿ ಕೊಯತೂರ್ತ್ತೆರೆಯೂರುಚ್ಚಂಗಿ . . . ಎಂದಿವು ಮೊದಲಾಗೆ ಪಲವು ದುರ್ಗಗಳಂ ಕೊಂಡು (ಎಕ. II, ೩೮೪-೦೨; 1128) ; ಕೊಂಗು ನಂಗಲಿ ಬನವಸೆ . . . ಯಿಂತೀ ಸಮಸ್ತದುರ್ಗಂಗಳ . . . ಕೊಂಡು (ಎಕ. VII, ಶಿವಮೊ. ೪೦-೫೩ ; 1180). [?]

ನಂಗಲ್ಲು 'ಲಂಗರು' ನೋ.

ನಂಗಿಲು (ನಾ). ಅಂಗುಳಿನ ಹಿಂಭಾಗದಲ್ಲಿ ಇಳಿಬಿದ್ದಿರುವ ಮಾಂಸದ ತುಂಡು ; ಕಿರುನಾಲಗೆ : ಮೆತು ಅಂಗುಳಿನ ಹಿಂದಕ್ಕೆ ಸಡಿಲವಾಗಿ ನಡುವೆ ಚಾಚಿಕೊಂಡಿರುವುದು ನಂಗಿಲು (ಕಿರ್ನಾಲಗೆ) . . . ಗೊರಕೆಯ ಸದ್ದಾಗುವಾಗ ನಂಗಿಲು ಕಂಪಿಸುತ್ತದೆ (ಕವಿಕೋ. I, ೬೦). [?]

ನಂಚು$_1$ 'ನಂಜು$_1$' ನೋ.

ನಂಚು$_2$ (ಕ್ರಿ). (ಕರಾ) ನಂದಿಸು ; ಆರಿಸು : ದೀಪ ನಂಚಿ ಮಲಗಿರಿ, ಮಧ್ಯರಾತ್ರಿಯಾಯಿತು (ರೂಢಿ). [<ನಂದಿಸು$_1$]

ನಂಜ$_1$ (ನಾ). ೧. ನಂಜುಳ್ಳವನು ; ವಿಷವನ್ನುಂಡವನು ; ನಂಜುಂಡ ಶಿವ. ೨. ಒಬ್ಬಾತನ ಹೆಸರು. 'ನಂಜಯ್ಯ' ಪರಾ.

ನಂಜನ ಗೂಡು, ನಂಜಲುಗೂಡು = ಮೈಸೂರು ಜಿಲ್ಲೆಯ ಕಪಿಲಾ ನದಿಯ ತೀರದಲ್ಲಿರುವ ಒಂದು ಪವಿತ್ರ ಕ್ಷೇತ್ರ : ನಂಜನಗೂಡ್ಹಾದೀಲಿ ಕಲ್ಲಿಲ್ಲ ಮುಳ್ಳಿಲ್ಲ (ನಾಡಪ. ೧೦೧) ; ನಂಜಲುಗೂಡ ನಂಜುಂಡೇಶ್ವರ ದೇವರ ಸಮೀಪದಲಿ ನೆಲಸಿದ ವೀರಭದ್ರದೇವರ ಕಲ್ಲುಮಂಟಪದಲ್ಲಿ ನಿವಾಸಿ ಮಠದ ಧರ್ಮಕ್ಕೆ ನಡದುಬಹ ಮಹತ್ತಿನ ಆರೋಗಣೆಯ ಸಯಿದಾನಂ ಮಾಡಿ ಕೊಟ್ಟ ಗ್ರಾಮದ ದರ್ಮಶಾಸನದ ಕ್ರಮವೆಂತೆಂದರೆ (ಎಕ. III (R), ಗುಂಡ್ಲುಪೇ. ೭೭-೬ ; 1476); ಪ್ರಧಾನ ದೇವರಾಜಯಗಳ ನಂಜಲುಗೂಡಲು ಮಾ × ಸಿ × × ×ಯ ನಂಜರಾಯಗಳು ಕೊಟ ಗ್ರಾಮ (ಎಕ. III (R), ನಂಜನ. ೨೮೩-೩೦ ; 1488). [ನಂಜು$_2$ + – ಅ$_7$]

ನಂಜ$_2$ 'ನಂಜೆ' ನೋ.

ನಂಜನೆಲ 'ನಂಜೆನೆಲ' ನೋ.

ನಂಜಪ್ಪ (ನಾ). = ನಂಜ$_1$ ೧ : ನಂಜಪ್ಪ ಬೆಳೆದನೆ ನಂಜುಬಟ್ಟಲ ಹೂವ (ನಾಡಪ. ೦೦೦). [ನಂಜ$_1$ + ಅಪ್ಪ$_1$]

ನಂಜಯ 'ನಂಜಯ್ಯ' ನೋ.

ನಂಜಯ್ಯ, ನಂಜಯ (ನಾ). ೧. = ನಂಜ$_1$ ೧ : ನಂಜಯ್ಯ ಸೋತನು ಚಾಮುಂಡಿ ಗೆದ್ದಳು (ನಾಡಪ. ೦೦೨). ೨. ಒಬ್ಬಾತನ ಹೆಸರು : ನಂಜಯ್ಯನು ಬಸವರಾಜದೇವರನು ಪ್ರತಿಷ್ಠೆಯನು ಮಾಡ್ಸಿ (ಎಕ. IV (R), ಜಾಮರಾ. ೩೯೨-೬ ; 1487). ನಂಜಯ : ೨. ನಂಜಯ ಧರ್ಮವ ಬರಿಸಿದ (ಎಕ. III (R), ನಂಜನ. ೯೦-೨ ; 1432) ; ಸಾಲಿಗಾಮಿಯ ಪಂಡಿತ ಮಾದಿರಾಜರು ಬರೆದ ಶಾಸನ ಕಲುಕುಟಿಗ ದೇವೋಜ ಮಾಡಿದ ರೂವಾರಿ ನಂಜಯ (ಮೈಆರಿ. ೦೯೨೬, ೪೯-೧೩ ; ?). [ನಂಜ$_1$ + ಅಯ್ಯ$_1$]

ನಂಜವಟ್ಟಲು 'ನಂದಿಬಟ್ಟಲು' ನೋ.

ನಂಜಾರೆ (ನಾ). ಒಂದು ಬಗೆಯ ಗಿಡ ; ಸುರಸೆ : "ನಾಕುಲೀ, ಸುರಸಾ . . . ಹಾವುಕಣ್ಣಿನ ಗಿಡ, ನಂಜಾರೇಗಿಡ, ಮುಂಗೀಮೇವುಗಿಡ" (ಸಿದ್ಧಾಂತಿ. ೦೩೮). [?]

ನಂಜಿಡಿ (ಕ್ರಿ). ೧. ವಿಷದಿಂದ ಕೂಡಿರು, – ತುಂಬಿರು : ನೀನೆಲಗೆ ! ನಂಜಿಡಿದ ಪಾವಂತೆ ಮೋಸದಿನಡಂಗಿರ್ದು ಮನೆಯೊಳ್, ಗುಟ್ಟಿನೊಳೆ ನೆತ್ತರನ್ ಪೀರ್ದಳೇ ! (ಅಂತಿಗೊ. ೨೪-೫೦೭). ೨. (ಆಲಂ) ದ್ವೇಷದಿಂದ ತುಂಬಿರು ; ಮತ್ಸರದಿಂದ ಕೂಡಿರು : ಮೆಱೆವ ದಂಪತಿಗಳಭಿನಮಿಸೆ ಮಂಜರಂ ಮಱಿಗಿಳಿಗಳಂ ನಿರೀಕ್ಷಿಸುವಂತೆ ನಂಜಿಡಿದ ಮನದಮಾತ್ಯಂ ನೋಡಿ ತನ್ನ ಸುತನಂ ಬೈಯುತಿಂತೆಂದನು (ಚೈಮಿಭಾ. ೩೧-೩೨).

[ನಂಜು$_2$ + ಇಡಿ$_2$]

ನಂಜಿಡು (ಕ್ರಿ). ವಿಷವನ್ನು ಬೆರಸು,–ಸೇರಿಸು : ಸಲ್ಲಲಿತವಹ ಪುಣ್ಯಕಾವ್ಯ ಕಥನದೊಳು ಮುನ್ನಿಲ್ಲದುದ ನುಡಿದುಳ್ಳುದಂ ಪೂಳ್ದು ಹುಲ್ಲುಹೊಲನೆಲ್ಲವಂ ಪೊಗಳೆ ಸುಧೆಯೊಳಗೆ ನಂಜಿಡುವಂತೆ ಮೇಳವಿಸಿ ಪೇಳೆ (ಸಿದ್ಧರಾ. ೧-೫).

[ನಂಜು$_2$ + ಇಡು$_1$]

ನಂಜಿನಕೊರಡು (ನಾ). ವಿಷಫಲಗಳನ್ನು ಕೊಡುವ ಒಂದು ಬಗೆಯ ಮರ ; ವಿಷವೃಕ್ಷ ; ಕಾಸರ್ಕ : ನಂಜಿನಕೊರಡು, ಕಾಸರ್ಕನ ಮರ, ವಿಷಮುಷ್ಟಿ, ಇಟ್ಟಿ (ಮೈಜಿಗಿ. ೭೩-೧೪೮೩), ಹಂಬುಕಳ್ಳಿ. ನಂಜಿನಕೊರಡು, ಸಮುದ್ರಪಾಲ, ಕಾಚಿ, ಬದನೆ, ಉರುಳಗಡ್ಡೆ (ನಮ್ಮನು. ೨೩೮).

[ನಂಜು$_2$ + ಕೊರಡು?]

ನಂಜಿಲಿ (ನಾ). ವಿಷಯುಕ್ತವಾದ ಒಂದು ಬಗೆಯ ಇಲಿ : ಧರೆಯೊಳ್ ನಂಜಿಲಿ ನಲ್ಲಿಱುಂಪೆ ಮೊದಲಾದೆಲ್ಲಂ ವಿಷಗ್ರಾಹಿಗಳ್ (ಖಮದ. ೧-೬೯).

[ನಂಜು$_2$ + ಇಲಿ$_1$]

ನಂಜು$_1$, ನಂಚು$_1$, ನೆಂಚು, ನೆಂಜು (ಕ್ರಿ). (ಊಟದೊಂದಿಗೆ ರುಚಿಗಾಗಿ ಉಪ್ಪಿನಕಾಯಿ, ಪಲ್ಯ, ಗೊಜ್ಜು, ಚಟ್ನಿ ಮುಂತಾದುವನ್ನು) ಸ್ವಲ್ಪ ಸ್ವಲ್ಪ ತಿನ್ನು, – ನೆಕ್ಕು, – ಬಾಡಿಸಿಕೊಳ್ಳು: "ನಂಜು–ಈಷಲ್ಲೇಹನೇ (ನಂಚಿಕೊ), ವಿಷೇ ಚ" (ಶಮಧಾ); ಸವಿವ ವಸ್ತುವನುಂಬ ವಸ್ತುವ ಕುಡಿವ ನಂಜುವ ಸುರಿವಮಳವಸ್ತುಗಳ ಅವನೀಶಗರಸಿಯರಿಗೆ ಬಡಿಸಿದರು (ಭರಜ. ೪-೮೦); ಮಂಜುಮಳೆ ಬರ ಲೇಸು ಪಂಜು ಇರುಳಲಿ ಲೇಸು ನಂಜುತ್ತ ಲುಣುವ ಹಾದರದ ಕಳ್ಳಂಗೆ ಬಂಜೆ ಲೇಸು (ಸರ್ವಜ್ಞ. ೧೭೮೦); ಎಲ್ಲರೂ ... ಉಪ್ಪಿನಕಾಯಿ ತರಿಸಿಕೊಂಡು, ನಂಜುತ್ತಾ ಹಿಗ್ಗಿನಿಂದ ಊಟ ಮಾಡಿದರು (ಕುಡಿಕೂ. ೩೩೭). ನಂಚು$_1$: ನಂಚುವುದಕ್ಕೆ ಹುಚ್ಚೆಳ್ಳಿನ ಚೆಟ್ನಿ ಬಿಟ್ಟು ಇನ್ನೊಂದನ್ನು ಕಾಣ (ದಾನಚಿಂ. ೮೪). ನೆಂಚು: ನಿಂಬೆಯ ಹಣ್ಣಿನ ಹುರಿಹಣ್ಣ ನೆಂಚುತ (ಜ್ಞಾನಚ. ೩೯-೧೪೩). ನೆಂಜು.

ನಂಜಿಕೊಳ್ಳು, ನಂಚಿಕೊಳ್ಳು, ನೆಂಜಿಕೊಳ್ಳು = (ಊಟದೊಂದಿಗೆ ವ್ಯಂಜನಸಾಮಗ್ರಿಯನ್ನು) ಸ್ವಲ್ಪ ಸ್ವಲ್ಪ ತಿನ್ನು; ಬಾಡಿಸಿಕೊಳ್ಳು: ಊಟದಲ್ಲಿ ನಡುನಡುವೆ ಉಪ್ಪಿನಕಾಯಿಯನ್ನು ನಂಜಿಕೊಂಡರೆ ಅದೆಂತಹ ಸ್ವಾರಸ್ಯ! (ನಾಡ್ಯುಡಿ. ೨೮); ಅದರೊಡನೆ ನಂಜಿಕೊಳ್ಳಲು ವ್ಯಂಜನ ಸಾಮಗ್ರಿ ಬೇಡವೇ? (ನಂಟರು. ೧೧೯); ನಂಜಿಕೊಳ್ಳಲು ಮಧ್ಯಾಹ್ನದ ಪಲ್ಯವಿತ್ತು (ಧೂಮಮ. ೦೦೦); "ಅವದಂಶಃ, ಉಪದಂಶಃ ... ಭೋಜನದಲ್ಲಿ ಬಾಡಿಸಿಕ್ಕೊಂಬುವ ಉಪ್ಪಿನಕಾಯಿ ಮೊದಲಾದವುಗಳು, ನಂಚಿಕೊಳ್ಳತಕ್ಕದ್ದು" (ಸಿದ್ಧಾಂತಿ. ೨೭೪); ನೆಂಜಿಕೊಳ್ಳುವುದಕ್ಕೆ ತಾಳದ ಆದರೆ ಆಗಬಹುದು (ನನ್ನೂರು. ೫೭). [ದೇ.॥ ತೆಲು. ನಂಜು, ನಂಚು]

ನಂಜು$_2$ (ನಾ). ೧. ವಿಷ; ಗರಳ: "ಗರಲಂ ನಂಜು ವಿಷಂ" (ವಸ್ತುಕೋ. ೧೯-೮); "ಬಿಸದೊಳೀಷಲ್ಲೇಹನದೊಳು ನಂಜೆಂದೆಂಬ ಶಬ್ದ ಸಲ್ಗುಂ ಸತತಂ" (ಶಬ್ದಮಂ. ೮೮); ಬಾಯ್ವೆಣ್ಣೆಯೊಡನೆ ಕಿಱಿಕಿಱಿದೆ ನಂಜನೂಡಿ ಬಟಿಕೆ ಬಳೆದೊಡಾಹಾರದೊಳೂಡಲ್ ತಗುಳ್ದೊಂ (ಪಡ್ಯಾರಾ. ೧೮೬-೨೪); ಇನಿಯವು ಮೊದಲೊಳ್ ನಂಜಿನ ಪನಿವೊಲ್ ಬಟಿಕೆಯ್ದೆ ಮುಳಿದು ಕೊಂದಿಕ್ಕುವುವು (ಆದಿಪು. ೧೪-೧೨೫); ಸುಯೋಧನಂ ... ಮನದೊಳಾ ದೇವದಿಂ ದೇವಕೀನಂದನನ ಮೇಲೆವಾಯ್ವುದುಂ ನಂಜಿನ ಮೇಲೆವಾಯ್ವ ನೊಟವಿನಂತುರುಳ್ತರೆ ಪಾಯ್ದು (ಸಂಪಭಾ ೯-೫೯ ಪ); ಯದುಕುಲ ಜಲನಿಧಿಯೊಳ್ಪುಟ್ಟಿದೆಯಮರ್ದುಂ ನಂಜುಮೊಡನೆ ಪುಟ್ಟುವವೋಲ್ (ಗದಾಯು. ೭-೫೬); ಅವಳ ವಚನ ಬೆಲ್ಲದಂತೆ ಹೃದಯದಲ್ಲಿಪ್ಪುದು ನಂಜು ಕಂಡಯ್ಯಾ (ಬಸವ. ೧೧೦); ಗಾಳಿಯಳ್ಳೆಯನಿಱಿಯಲಗ್ನಿಜ್ವಾಲೆಯಲಿ ತಟ್ಟಿಯವೆ ಕಡುಹಿನ ಕಾಳಕೂಟದ ನದಿಗೆ ನಂಜಿನ ಹೊನಲು ಬೆರೆಸಿದರೆ ವಾಳೆಯವೆ (ಕುಪ್ಯಾಸ. ೧೪-೬೧); ನಂಜಿಗೆ ಮದ್ದಿಲ್ಲ, ಬಂಜೆಗೆ ಮಕ್ಕಳಿಲ್ಲ (ಗಾದೆ). ೨. ವಿಷವನ್ನುಳ್ಳುದು; ಹಾವು; ಸರ್ಪ: ಕಂಜಸಂಭವಪಿತನು ಬಂದನು ನಂಜಿನಲಿ ಪವಡಿಸುವ ಬಂದನು (ಕುಪ್ಯಾಉ. ೮-೫೦). ೩. ರಕ್ತವು ವಿಷಪೂರಿತವಾಗಿರುವಿಕೆ, – ಕಲ್ಮಷಯುಕ್ತವಾಗಿರುವಿಕೆ: (ಕ). ೪. ಕಷ್ಟ; ಹಿಂಸೆ; ತೊಂದರೆ: ನಂಜು ನಿನಗದು ಲಿಂಗಮುದ್ರೆ ಸುರಂಜಿಸುವ ಕುಲ ಬೇಡ ನಾನಿದಕಂಜುವವನಲ್ಲ (ಬಸಪು. ೨೭-೨೬). ೫. ಮಾನಸಿಕವಾದ ಅಶಕ್ತತೆ, – ನಿಸ್ಸತ್ವ: (ಕ). ೬. (ಮಾತಿನಲ್ಲಿಯ) ಕೊಂಕು; ಅಸೂಯೆ; ಅಹಿತ: ಅವಳ ಮಾತಿನಲ್ಲಿ ಬರೀ ನಂಜೇ ತುಂಬಿದೆ (ರೂಢಿ).

ನಂಜಾಗು = ೧. ವಿಷಪ್ರಾಯವಾಗು; ವಿಷವಾಗು: ನೆಲನೆ ಬಾಯ್ದೆಱಿದಪ್ಪುದು ಆಕಾಶಂ ಮೇಗೆ ಕವಿದಪ್ಪುದು ಗಾಳಿಯೆ ನಂಜಾದುದು (ಶಾಂತಿಪು. ೭-೯೪ ಪ); ನಾರಿ ತನ್ನ ಮನೆಯಲ್ಲಿ ಕಳುವೊಡೆ ತಾಯ ಮೊಲೆವಾಲು ನಂಜಾಗಿ ಕೊಲುವೊಡೆ ಇನ್ನಾರಿಗೆ ದೂಱುವೆನಯ್ಯಾ (ಬಸವ. ೨೬); ಮೊಲೆವಾಲು ನಂಜಾದೊಡೇನಂ ವಿಚಾರಿಪೆಂ (ವಾಗೀರ. ದೇ. ೨೭೦-೭). ೨. ವಿರೋಧವಾಗು; ಪ್ರತಿಕೂಲವಾಗು; ವಿಷಮಿಸು: ಸ್ವರವು ಕೋಗಿಲೆಯೆಂದು ಮೌನವ ಧರಿಸಿ ... ಕುರುಳು ಮಧುಕರಗಳೆಂದಳವಳಿದು ಹೆದಱುವಳರಸಿಗಾದುದು ತನ್ನ ತನು ನಂಜಾಗಿ ವಿರಹದಲಿ (ಜೀವಂಚ. ೦೦-೩೪); ಹೆಚ್ಚು ಅಳಬೇಡ ನಂಜಾದೀತು (ಕುಸುಸಂ. ೨೩೩); ಇಂದಿನ ಇಂದುವಿನ ಮೇಲೆ ಹಿಂದಿನ ಕರಿನೆರಳು ಮುಂದಿನ ಭಯ ನಂಜಾಗಿರೆ ಇಂದು ಕಂದುಗೊರಳು! (ಕಲ್ಲೋಲ. ೭೦-೩); ತೆಂಗಿನ ಮರದ ಹಸಿಗೊದವುಟ್ಟೆಗಳನ್ನು ಕಡಿದರೆ ಗಿಡಕ್ಕೆ ನಂಜಾಗುತ್ತದೆ (ರೂಢಿ). ೩. (ಗಾಯ ಮೊದಲಾದುವುಗಳು ಕೊಳೆತು ಕೀವು ತುಂಬಿ) ವಿಷಪ್ರಾಯವಾಗು: ಗಾಯ ನಂಜಾಗಿ ಊದಿಕೊಂಡಿದೆ (ರೂಢಿ). 'ನಂಜುರೋಧಕ' ಪರಾ. ನಂಜಿನ ಸುಳಿ = ವಿಷವೃತ್ತ; ವಿಷಚಕ್ರ; ಅನ್ಯೋನ್ಯಾಶ್ರಯವುಳ್ಳ ದೋಷ; ಒಂದನ್ನೊಂದು ತೀವ್ರಗೊಳಿಸುವ ಕ್ರಿಯೆಪ್ರತಿಕ್ರಿಯೆಗಳ ವ್ಯೂಹ: ಉತ್ಪನ್ನ ಹೆಚ್ಚಾದಂತೆ ಕೆಲಸಗಾರರ ನಿರುದ್ಯೋಗತನ ಇನ್ನೂ ಬೆಳೆಯುವದು ... ಇದರಿಂದ ಉತ್ಪಾದನೆಯ ಗತಿಯು ಇನ್ನೂ ಮಂದವಾಗಿ ನಿರುದ್ಯೋಗಿತನ ಇನ್ನೂ ಬೆಳೆಯುತ್ತದೆ. ಇದೊಂದು ನಂಜಿನ ಸುಳಿ (ಮಾಪಾದ. ೧೩೨). P ಇದು ಇಂಗ್ಲಿಷಿನ Vicious circle ಎಂಬುದರ ಅನುವಾದ. ನಂಜಿನುರುಳಿ = ವಿಷದ ಗುಳಿಗೆ: ಕಾಂತೆಯರ ಮೆಲ್ನುಡಿಯಂ ನಂಜಿನುರುಳಿಯೆನ್ನದೆ ಮುದ್ದುನುಡಿಯೆಂದೊಡಂ ... ತನ್ನ ಕೇಡಂ ಬಗೆವನಲ್ಲದೆ ಸುಖಮಂ ಬಗೆಯಂ (ಧರ್ಮಾಮೃ. ೭-೧೫೫). ನಂಜಿನೊಡೆಯ = ಹಾವುಗಳ ಒಡೆಯ; ಆದಿಶೇಷ: ನಂಜಿನೊಡೆಯನ ಮೇಲೆ ಮಲಗಿ ತಮದೊಳ್ ಪರಂಜ್ಯೋತಿ ಮಯನಾಗಿ ಬೆಳಗುವನ ಚರಣಕಂಜವ ಭಜಿಸು ಕಂಡ್ಯ ಮನವೆ (ಪುರಂದ. ೫-೦೦೭-೨). ನಂಜು ಕಾರು = ಕರುಬು; ಹೊಟ್ಟೆಕಿಚ್ಚು ಪಡು: ನೆರೆಹೊರೆಯವರನ್ನು ನೋಡಿ ನಂಜುಕಾರೋದೇ ಅವರ ಸ್ವಭಾವ (ರೂಢಿ). ನಂಜುನುಡಿ = ಚುಚ್ಚುಮಾತು; ಕರುಬಿನ ಮಾತು; ಮಾತ್ಸರ್ಯದ ಮಾತು: ಕೆಲವರು ನಂಜುನುಡಿಗಳನ್ನಾಡಿ ಬೇರೆಯವರ ಮನಸ್ಸನ್ನು ನೋಯಿಸುವುದರಲ್ಲಿ ಸಂತೋಷಪಡುತ್ತಾರೆ (ರೂಢಿ).

[ದೇ.॥ ತಮಿ. ನಞ್ಚು; ಮಲ. ನಞ್ಚು; ತುಳು. ನಂಜು, ನಂಜಿ; ಪರ್ಜಿ. ನೆಂಜಿ]

ನಂಜುಂಡ (ನಾ). ೧. ವಿಷವನ್ನು ಕುಡಿದವನು; ವಿಷಕಂಠ; ಶಿವ; P ಸಾಮಾನ್ಯವಾಗಿ ಮೈಸೂರುಜಿಲ್ಲೆಯ ಕಪಿಲಾನದಿಯ ದಡದಲ್ಲಿರುವ ನಂಜನಗೂಡಿನಲ್ಲಿ ನೆಲಸಿರುವ ದೇವರು: ಶ್ರೀನಂಜುಂಡ ದೇವರಿಗೆ ... ಸಲುವ ಪುರ (ಎಕ. III, ನಂಜನ. ೧೦-೪; 1517); ಪಿಂಜರಿಯ ನಗಮೊ ... ಸುಧೆಯಾ ರಂಜಿಪ ರಾಶಿಯೊ ತಾನೆನೆ ನಂಜುಂಡನ ಸದನವೊಂದು ಸಲೆ ಶೋಭಿಸುಗುಂ (ಹಮ್ಮೀರ. ೮-೩೪); ಬಿಡದೆ ಭಕ್ತರ ಸಲಹುವ ಚೆನ್ನ ನಂಜುಂಡನಡಿದಾವರೆಗೆಱಗುವೆನು (ಕಂನವಿ. ೦-೭); ನಂಜುದಿಸಲೇನು ಗತಿ? ಅಂಜುವರೆ ಹ್ರಸ್ವಮತಿ? ಅವನಿರುವುದದೆ ಕೆಲಸಕಾಗಿ; ನಂಜುಂಡನನು ಕರೆದು ಕೂಗು! (ಪಾಂಚಜ. ೪೪-೬). 'ಅಮರ್ದುಂಡ' ಪರಾ. ೨. 'ರಾಮನಾಥಚರಿತ' ವೆಂಬ ಕಾವ್ಯವನ್ನು ಬರೆದ ಕನ್ನಡದ ಒಬ್ಬ ಕವಿಯ ಹೆಸರು: ಮಾಧವನಾತ್ಮಜ ನಂಜುಂಡನಾನೊದವಿ ಪೇಳಿದೆನೀ ಕೃತಿಯ (ಕುರಾಸಾಂ. ೧-೭೨).

[ನಂಜು$_2$ + <ಉಣ್ + – ಅ$_7$]

ನಂಜುಂಡೀಸ್ವರ 'ನಂಜುಂಡೇಸ್ವರ' ನೋ.

ನಂಜುಂಡೇಶ್ವರ (ನಾ). = ನಂಜುಂಡ ೧: ಶ್ರೀಕಪಿಲಾಕೌಂಡಿಲ್ಯ ಸಂಗಮದ ನಂಜುಂಡೇಶ್ವರದೇವರಿಗೆ ಅಂಗರಂಗಭೋಗವಿನಿಯೋಗಕ್ಕೆ; ... ನಡಸುಮತಾಗಿ (ಎಕ. III (R), ನಂಜನ. ೧೩೫-೫; 1399); ಕಪಿಲಾಕೌಂಡ್ಯಂನ್ಯಸಂಗಮದಲಿ ಪ್ರಸಂನರಾದ ಶ್ರೀನಂಜುಂಡೇಶ್ವರ ದೇವರಿಗೆ ... ಸಮರ್ಪಿಸಿದರು (ಎಕ. III (R), ಗುಂಡ್ಲುಪೇ. ೨೪-೬; 1480)

ಶ್ರೀನಂಜುಂಡೇಶ್ವರಸ್ವಾಮಿಯವರ ಸಂನಿಧಿಗೆ (ಎಕ. III, ನಂಜನ. ೦-೦; 1945); ಭೂಕೈಲಾಸಪತಿಯಾದ ನಂಜುಂಡೇಶ್ವರಸ್ವಾಮಿಗೂ ಜಗಜ್ಜನನಿಯಾದ ಪಾರ್ವತೀದೇವಿಗೂ . . . ಸಮರ್ಪಣೆ ಮಾಡಿರುವ ವಸ್ತುಗಳು (ಮಹಾವಂ. II, ೧೨೭). [ನಂಜುಂಡ + ಈಶ್ವರ]

ನಂಜುಂಡೇಸ್ವರ, ನಂಜುಂಡೀಸ್ವರ (ನಾ). = ನಂಜುಂಡ ೧ : ಶ್ರೀ ನಂಜುಂಡೇಸ್ವರದೇವರ ಅಮ್ರಿತಪಡಿಗೆ . . . ಸರ್ವಮಾನ್ಯವಾಗಿ ಕೊಟೆಉ (ಎಕ. III (R), ಗುಂಡ್ಲುಪೇ. ೨೯-೩; 1546). **ನಂಜುಂಡೀಸ್ವರ** : ಕಿಳ್ಕೆ ನಾಡಾಳ್ವರ್ ನಂಜುಣ್ಡೀಸ್ವರವೊಡೆಯರ್ಗ್ಗೆ . . . ಬಯಲುಮಂ ಬಿಟ್ಟು (ಎಕ. III (R), ಹೆಗ್ಗಡ. ೦೦೪-೦೧; 1087).

[> ನಂಜುಂಡೇಶ್ವರ]

ನಂಜುಗಣ್ಣು (ನಾ). ದೃಷ್ಟಿದೋಷವಿರುವ ಕಣ್ಣು; ಸರಿಯಾಗಿ ಕಾಣದ ಕಣ್ಣು : ಚಟವುಡಲದ ಹರಳ . . . ತಿರುಳಂ ನಿಂಬೇಹುಳಿಯಲ್ಲಿ ತಳಿಗೆಯ ಮೇಲೆ ತೇದು ಹಚ್ಚಲು ನಂಜುಗಣ್ಣು ಮಾಣ್ಗುಂ (ವಿವೈವಿ. ೬೩).

[ನಂಜು$_2$ + ಕಣ್ಣು (<ಕಣ್)]

ನಂಜುಗುಡಿ (ಕ್ರಿ). ವಿಷವನ್ನು ಕುಡಿ,- ಪಾನಮಾಡು: ಸರೋಜಷಂಡಮನಾನತರಿಪು ಪೊಕ್ಕು ದಿವ್ಯವಚನಮನದನಂತೇನುಂ ಬಗೆಯದೆ ಕುಡಿದಜ್ಞಾನತೆಯಿಂ ನಂಜುಗುಡಿದರಂತಿರೆ ಕೆಡೆದಂ (ಪಂಪಭಾ. ೮-೪೦).

[ನಂಜು$_2$ + ಕುಡಿ$_1$]

ನಂಜುಗೂಳು (ನಾ). ೧. ವಿಷಮಿಶ್ರಿತವಾದ ಆಹಾರ : ನಂಜುಗೂಳುತಿಂದ ನಾಯಿ ಸತ್ತುಹೋಯಿತು (ರೂಢಿ). ೨. "ಸತ್ತ ಸುದ್ದಿ ಕೇಳಿ ಉಣ್ಣುವುದು" (ಜಾನಕೋ. ೯). [ನಂಜು$_2$ + ಕೂಳು$_2$ (<ಕೂಟ್$_1$)]

ನಂಜುಗೊರಲ, ನಂಜುಗೊರಳ (ನಾ). ಕೊರಳಲ್ಲಿ ನಿಂತ ವಿಷವುಳ್ಳವನು; ಕರೆಗೊರಲ ; ವಿಷಕಂಠ ; ಶಿವ : ನಂಜುಗೊರಲನ ಗಾಡಿಯಂ ನೋಡಿ ಬಗೆಯೊಳಚ್ಚರಿವಡುತುಂ (ಕಬ್ಬಿಕಾ. ೦೬೯); ಆ ಭೃಂಗಂ ಜಿನುಗಲ್ ಬಲ್ಲವರಂ ಬಗೆಗೊಳಿಸಿತು ನಂದನವನಿತೆ ನಂಜುಗೊರಲನಳಿಕದ ಲೋಚನದ ಧನಂಜಯನುಗ್ರತೆಯಂ ನೆಱೆ ನಂದಿಪ ಕಂಜಾಸ್ತ್ರನ ಮುಂದೂದುವ ಶಂಖಧ್ವನಿಯೆಂಬಂದದೊಳು (ಜಯಕಾ. ೦೦-೮). **ನಂಜುಗೊರಳ** : ಜಂಗಮಪ್ರಾಸಾದದೂಷಕರ ಭಂಜಿಸುತ ಯಮನಧಿಕನಾರಕಪುಂಜದಲಿ ಕೆಡಹುವ ನೆನುತಮಿಹ ನಂಜುಗೊರಳನ ವಾಕ್ಯವಂ ಕೇಳ್ದಱಿಯಿರೇ ಮುನ್ನ (ಬಸಪು. ೫೪-೨೨); ಕುಂಜರ ಕೊಲಲಟ್ಟಿ ಬರೆ ರಾಜಬೀದಿಯೊಳಂಜಿ ನಿಮ್ಮಯ ಬಸತಿಯನು ನಂಜುಗೊರಳ ಶಿವಶರಣರು ಹೊಕ್ಕರೆ ಎಂಜಲ ನೊಣವಹರು (ಅಬ್ಬಲೂ. ೪-೨೭). [ನಂಜುಗೊರಲು + -ಅ$_7$]

ನಂಜುಗೊರಲು, ನಂಜುಗೊರಳು (ನಾ). ವಿಷವು ನಿಂತಿರುವ ಕೊರಳು ; ವಿಷಯುಕ್ತವಾದ ಕಂಠ : ಕಂಜೆಡೆಗಳ ಮುಕುಟದ ನಂಜುಗೊರಲಿನ ಕಂಜೋದ್ಭವತಿರಕರನು (ಅಬ್ಬಲೂ. ೨-೬೩). **ನಂಜುಗೊರಳು** : ರಂಜಿಪ ರವಿಕೋಟಿತೇಜದಿಂದುರವಣಿಪಂ ಕಂಜಪದಯುಗಳ ಪೊಳೆವಾ ನಂಜುಗೊರಳಭವ . . . ರಕ್ಷಿಸೆನ್ನುವಂ (ಸಿದ್ಧೇವ. ೨-೪); ರಂಜಿಸಿಯೆ ಹೊಳೆ ಹೊಳೆವ ಮೊಗಗಳ ನಂಜುಗೊರಳಿನ ದಶಭುಜದ ಬಲು ಕುಂಜರಾಜಿನ ಭವಸಲಹೈ ಕಳಸನಾಥ ಶಿವಾ (ದೇವೀಮ. ೮-೩೭).

[ನಂಜು$_2$ + ಕೊರಲು (<ಕೊರಲ್)]

ನಂಜುಗೊರಳ 'ನಂಜುಗೊರಲ' ನೋ.

ನಂಜುಗೊರಳು 'ನಂಜುಗೊರಲು' ನೋ.

ನಂಜುಜೋಗಿ (ನಾ). ವಿಷವನ್ನು ಹೋಗಲಾಡಿಸುವ ವೈದ್ಯ ; ವಿಷವೈದ್ಯ ; ಜಾಂಗಲಿಕ : "ವಿಷವೈದ್ಯಃ, ಜಾಂಗಲಿಕಃ – ೨ ವಿಷವನ್ನು ಇಳಿಸುವ ವೈದ್ಯನ ಹೆಸರು, ಅಂದರೆ ನಂಜುಜೋಗಿ, ಪಂಡಿತ" (ಸಿದ್ಧಾಂತಿ. ೭೪).

[ನಂಜು$_2$ + ಜೋಗಿ$_1$]

ನಂಜುಜ್ವರ (ನಾ). (ಹೆರಿಗೆಯ ನಂತರ ಬರುವ) ಜ್ವರ; ಸನ್ನಿ : (ಕಿಸಂಗ್ಲಾ. ೧೦೪). [ನಂಜು$_2$ + ಜ್ವರ]

ನಂಜುಣ್ (ಕ್ರಿ). ವಿಷವನ್ನು ಸೇವಿಸು, - ಕುಡಿ : ನಂಜುಂಡ ಜೀವದ ಬಂಜೆತನವಳಿಯಿತು ಕೆಂಜೆಡೆಯವನ ದಯದಿಂದ (ಸಿದ್ಧಪು. ೩-೧೦).

[ನಂಜು$_2$ + ಉಣ್]

ನಂಜುದಿನ್ (ಕ್ರಿ). = ನಂಜುಣ್ : ಇನ್ನವಪ್ಪ ಬನ್ನವನವರಾರೊ ಸೈರಿಸುವರಿನ್ನೆವರಂ ಪೆಱತಾದೊಡಾಗಳೇ ತವೆ ಜವದಿಂದೆ ಕಿಚ್ಚುವೊಗಲಣ್ಮದೆ ನಂಜುದಿನಲ್ಕೊಡರ್ಚದಿರ್ಕುವೆ (ಕಾದಂಉ. ೭೦). [ನಂಜು$_2$ + ತಿನ್]

ನಂಜುನೀರ್, ನಂಜುನೀರು (ನಾ). ವಿಷಪೂರಿತವಾದ ನೀರು; ವಿಷಜಲ: ಸುಡುವುದು ನಂಜುನೀರ್ ಪಿಡಿದು ನುಂಗುವುವಲ್ಲಿಯ ಮೀಂಗಳ್ . . . ಮೈಯೊಳರ್ದಿಡುವುವು ಪತ್ರಪುಷ್ಪಫಲಸಂಕುಲದಂದದ ಶಸ್ತ್ರಕೋಟಿಗಳ್ (ಆದಿಪು. ೫-೮೮). **ನಂಜುನೀರು** : "ವಿಷತೃಣೋದಕ = ನಂಜುಪುಲ್ಲುಂ, ನಂಜುನೀರುಂ" (ನೀತಿವಾ. ೧೮-೯). [ನಂಜು$_2$ + ನೀರ್$_1$]

ನಂಜುನೀರು 'ನಂಜುನೀರ್' ನೋ.

ನಂಜುನೆತ್ತರ್ (ನಾ). ವಿಷಪೂರಿತವಾದ ರಕ್ತ; ವಿಷರಕ್ತ : ಎಲೆ ಮಡದಿ, ಇದೆ ಕೊಳ್ ಕೊಡು ರಿಸಿಗಳ ನಂಜುನೆತ್ತರಿಂ ತುಂಬಿರ್ಕುಂ (ಅದ್ಭುತ. ೩೦-೧೭). [ನಂಜು$_2$ + ನೆತ್ತರ್]

ನಂಜುಪುಲ್ಲು, ನಂಜ್ಹುಲ್ಲು (ನಾ). ಒಂದು ಬಗೆಯ ಹುಲ್ಲು; ವಿಷದಿಂದ ಕೂಡಿದ ಹುಲ್ಲು ; ವಿಷತೃಣ : "ವಿಷತೃಣೋದಕ – ನಂಜುಪುಲ್ಲುಂ, ನಂಜುನೀರುಂ" (ನೀತಿವಾ. ೧೮-೯). **ನಂಜ್ಹುಲ್ಲು** : ಕಾಸಿಹುಲ್ಲು, ಕುಂತಿಹುಲ್ಲು, ಅಂಜೇಹುಲ್ಲು, ನಂಜ್‌ಹುಲ್ಲು, ಬಿಳೀದೊಡ್ಡ ಕಾಚಿಹುಲ್ಲು (ಮೃಜಿಗಿ. ೨೭-೫೦೭). [ನಂಜು$_2$ + ಪುಲ್ಲು (<ಪುಲ್)]

ನಂಜುಬಟ್ಟಲು 'ನಂದಿಬಟ್ಟಲು' ನೋ.

ನಂಜುಮುಳ್ಳು (ನಾ). ವಿಷಪೂರಿತವಾದ ಮುಳ್ಳು : ಮರನೇಱಿ ಬಿದ್ದನೋ ನೀರೊಳದ್ದನೊ ನಂಜುಮುಳ್ಳಡಿಯನು ನಟ್ಟು ನಡೆಗೆಟ್ಟನೋ (ಸಿದ್ಧರಾ. ೨-೪೫). [ನಂಜು$_2$ + ಮುಳ್ಳು (<ಮುಳ್)]

ನಂಜುರುಂಜಿಕೆ (ನಾ). ಒಂದು ಬಗೆಯ ಸಸ್ಯ : "ತ್ವಗ್ಜೀವಿ ಸೇಗುಡಿತೆ ನಂಜುರಂ[ಪಾಠಾಂ. ಅಂ]ಜಿಕೆ" (ಮಂಗರಕ. ೪೨-೩೭). [?]

ನಂಜುರುಳಿ (ನಾ). ವಿಷದ ಉಂಡೆ, – ಗುಳಿಗೆ : ಇರುಳುರಗಂ ಪುತ್ತಿಂದಂ ತ್ವರಿತದೆ ಪೊಱಮಟ್ಟು ಕಾಱ್ ವಿಷಮಂ ಪಿಟ್ಟಂ ಪರಿದಂಜಲಿಸಲ್ವಿಷದುಬ್ಬರದಿಂ ನಂಜುರುಳಿಯೆನಿಸಿ ಮೆಱೆವಾ ಪಿಟ್ಟಂ ಮೆಲ್ದು (ಧರ್ಮಾಮೃ. ೨-೧೯೨); ಇನನಸ್ತಂಗತನಾಗೆ . . . ಜೀವನಮೆಂಬುಬ್ಬೆಗದಿಂದೆ ನಂಜುರುಳಿಯಂ ಪೋ ನುಂಗಿದಳ್ ಪೇಟದಬ್ಜಿನಿಯೆಂಬಂತೆವೊಲಾಯ್ತು ಕುಟ್ಮಳಿತ ಕಂಜಾತೋದರೇಂದಿಂದಿರಂ (ಚಂದ್ರಪು. ೮-೦೫). [ನಂಜು$_2$ + ಉರುಳಿ$_1$]

ನಂಜುರುಳೆ (ನಾ). ಒಂದು ಬಗೆಯ ವಿಷದ ಹುಳು : "ವಿಷಃ – ನಂಜುರುಳೆ" (ಕಾಶಕ್ಯ. ೫೯). [ನಂಜು$_2$ + ಉರುಳೆ ?]

ನಂಜುರೋಧಕ (ನಾ). ಗಾಯ ಮೊದಲಾದುವು ಕೊಳೆತು ರಕ್ತವು ವಿಷವಾಗುವುದನ್ನು ತಡೆಗಟ್ಟುವುದು ; ಪೂತಿನಾಶಕ: ಜೋಸೆಫ್ ಲಿಸ್ಟರನ ನಂಜುರೋಧಕ(ಆಂಟಿಸೆಪ್ಟಿಕ್)ಚಳವಳಿಯ ಅನಂತರ, ನಿರಪಾಯಕರವಾಗಿ. ಕೊಳೆಯದೆ ಇರುವಂತೆ, ಹೆಣಗಳ ರಕ್ತನಾಳಗಳೊಳಕ್ಕೆ . . . ದ್ರಾವಣಗಳಂಥ ನಂಜುರೋಧಕಗಳನ್ನು ಚುಚ್ಚೆ ಹೋಗಿಸುವುದು ಜಾರಿಗೆ ಬಂದಿತು (ಕವಿಕೋ. I, ೨೨). [ನಂಜು$_2$ + ರೋಧಕ]

ನಂಜುಹಿಡಿ (ಕ್ರಿ). ೧. ವಿಷಪೀಡಿತವಾಗು. ೨. (ಆಲಂ) ಕೆಟ್ಟುಹೋಗು; ಅಹಿತವಾಗು : ತನ್ನ ಗಂಡನ ಜೀವನ ನಂಜುಹಿಡಿದು ಹಾಳಾಗುತ್ತಿದ್ದರೂ ಅವಳು ಆ ಜೀವನವನ್ನೆ ಪಟ್ಟುಹಿಡಿದು ಮುಂದುವರಿಸುತ್ತಿದ್ದಳು (ಪುನರು ೩೭೦). [ನಂಜು$_2$ + ಹಿಡಿ$_1$ (<ಪಿಡಿ$_1$)]

ನಂಜೂಡು (ಕ್ರಿ). ೧. ವಿಷವನ್ನು ಉಣ್ಣಿಸು.–ಕುಡಿಸು : ನೆಱೆ ನಂಜೂಡಿ ಕೊಲಬಂದ ಭಾವದುಷ್ಟೆಗೆ ಹಿತದ ಮುಕುತಿಯನೀವೆನೆಂಬುದನಱುಹುವಂತಿರೆ . . . ಉಂಡನು ಮೊಲೆಯನುಱೆ ಹಿಡಿದು (ನಿಭಾಗ. ೧೦-೫-೩೮). ೨. ವಿಷವನ್ನು ಲೇಪಿಸು. – ಸವರು : ನಂಜೂಡಿದಂಬಿನಂತೆ ಬಸಿಱೊಳಿರ್ದಲಗಿನಂತೆ ಮಮ್ಮಲ ಮಱುಗಿಸುವ ಮಕ್ಕಳುಮಂ . . . ನಂಬಿ (ಧರ್ಮಾಮೃ. ೯-೨೩); ಬಾಡಿದಲರಱಿಪೆ ನೆಱೆ ನಂಜೂಡಿದ ಸೂಜಿಗಳನುಳಿಪಿ ತುಂಬಿಯೊಲವನೇನಾಡಿದಳೊ ಸೂಜಿಗಳ ಕೂರ್ಪೊಡೆದ ಮೊನೆಯಲರ ಮೇಲೆ ನಾನಾವಿಧದಿಂ (ಅರ್ಧನೇ. ೩-೧೦೦). [ನಂಜು$_2$ + ಊಡು$_1$]

ನಂಜೂಱು (ಕ್ರಿ). ವಿಷವು ಸೇರು. – ಅಂಟು : ಉಗ್ರಾಗ್ನಿ ಪತ್ತಿದೊಡಂ ಬೇಯದ ಕಂಟಕಾಮಯಸಮೂಹಂ ತೋಱದೊಂಭತ್ತು ಭೇದದ ನಂಜೂಱದ ಮುಪ್ಪು ಬಾರದ ಯುವತ್ವಂ ತೀರದುತ್ಕರ್ಷಣಂ (ಅನಂಪು. ೬-೦೭). [ನಂಜು$_2$ + ಊಱು$_1$]

ನಂಜೆ, ನಂಜ$_2$ (ನಾ). ನೀರಾವರಿ ಭೂಮಿ ; ಗದ್ದೆ : ಯಾ ಗ್ರಾಮದ ಚತುಸ್ಸೀಮೆಗೆ ಸಲುವ ನಂಜೆ ಪುಂಜೆ ವಾಸ್‌ಪಯಿರು . . . ಹಲ ಉಪಾಧಿಗಳೂ ಸಹ ಸೇರ್ಸಿ ಕೊಟ್ಟೆವಾಗಿ (ಸೌಇಇ. IX-ii, ೪೬೩-೭; 1470) ; ಈ ಗ್ರಾಮದ ಚತುಸ್ಸೀಮೆಗೆ ಸಲುವ ನಂಜೆ ಪುಂಜೆ . . . ಅಷ್ಟಭೋಗ ತೇಜಸಾಮ್ಯಗಳನು ಸರ್ವಮಾನ್ಯವಾಗಿ ಆಚಂದ್ರಾರ್ಕ್ಕಸ್ಥಾಯಿಯಾಗಿ ಅನುಭವಿಸಿಕೊಂಡು (ಸೌಇಇ. IX-ii, ೪೬೬-೫; 1472). 'ನಂಜೆನೆಲ' ಪರಾ. ನಂಜ$_2$: ಎಲ್ಲ ನಂಜವಾ? ಪುಂಜವಾ ? ಬೈಲುಗದ್ದೆ, ಬೆಟ್ಟುಗದ್ದೆ, ಕಾಡುಬೀಡು ಎಲ್ಲ ಕೂಡಿ ಅಷ್ಟಾಗುತ್ತದೆಯಾ ? (ಬಾಳಿಗಿ. ೩೯). 'ನಂಜನೆಲ' ಪರಾ. [ದೇ.॥ ತಮಿ. ನನ್ಜೆ ; ಮಲ. ನಞ್ಜ]

ನಂಜೆನೆಲ, ನಂಜನೆಲ (ನಾ). = ನಂಜೆ : ಸತ್ಯಾಭರಣನಲೂರ ನಂಜೆನೆಲನು ಮಾ ೨ ಉಭಯಂ ನೆಲ × × × ಯಾಗಿ ಅನುಭವಿಸಿಕೊಂಡು (ಸೌಇಇ. IX-ii, ೪೬೩-೦೩ ; 1470). ನಂಜನೆಲ : ನಂಜನೆಲದಲೂ [ಮರ] ಹೊಱತಾಗಿ ಆ ಪೂರ ಅಳತೆಯಲಿ ಸುಂಣಾಊರಲಿ ಮಾ ೨ ಸತ್ಯಾಭರಣ ನಲೂರ ನಂಜೆನೆಲನು ಮಾ ೨ (ಸೌಇಇ. IX-ii, ೪೬೩-೦೨; 1470).

[ನಂಜೆ + ನೆಲ]

ನಂಜೊಱೆವಾಯ್ (ನಾ). ವಿಷವನ್ನು ಸಂರಿಸುವ ಬಾಯಿ ; ವಿಷವು ಸ್ರವಿಸುವ ಬಾಯಿ : ಜುಂಜುಱುದಲೆಯೂರ್ಧ್ವರೋಮ ಕೆಮ್ಮೊಸೆ ಕೈಪಂಜುಗಳೆನೆ ಬೆಂಕಿಗಣ್ಣು ನಂಜೊಱೆವಾಯ ಗೋದಣೆವಲ್ಲ ಭೂತಗಳ್ ಮಂಜುಳವೆನೆ ನೆಗಹಿದುವು (ಮೋಚಿತ. ೨೯-೧೧).

[ನಂಜು$_2$ + ಒಱೆ$_1$ + ಬಾಯ್]

ನಂಜ್ಹುಲ್ಲು 'ನಂಜುಪುಲ್ಲು' ನೋ.

ನಂಟ, ನೆಂಟ (ನಾ). ೧. ಕೊಳ್ಳೊಡೆಯಿಂದಾದ ಸಂಬಂಧವುಳ್ಳ ವ್ಯಕ್ತಿ ; ಬಂಧು ; ಸಂಬಂಧಿ : "ಆತ್ಮೀಯಃ, ಸ್ವಜನಃ, ಬಂಧುಃ, ಆಪ್ತಃ, ಜ್ಞಾತಿಃ, ಬಾಂಧವಃ–ಈ ೬ ನಂಟರ್" (ಹಲಾಯು. ೮೪-೩೫೫) ; "ಸಜ್ಜನ ನಾಪ್ತನಾ ಜ್ಞಾತಿ ಬಾಂಧವಂ ಬಂಧುವೆಂದೆನೆ ನಂಟನಕ್ಕು" (ಮಂಗರಾ. ೯೨-೧೧) ; ತಾಯ್ ಕಟಿದೊಡೆ ಬಂದ ನಂಟರ್ ನಡಪೆ ಬಳೆದೊಡಾ ನಂಟರುಂ ಕಟಿದುಳ್ಳರೆಲ್ಲಂ ಸತ್ತು (ಪಡ್ಕೋರ. ೬೬-೧೭) ; ನಮ್ಮೊವಜರ್ ಜಸಂಬಡೆದ ಭಾರ್ಗವರಪ್ಪುದಱಿಂದಂ ನಂಟರುಮಂಗಮಹೀಪತೀ (ಪಂಪಭಾ. ೧೨-೫೬); ಸಾವೆಡೆಗೆ ನಂಟರಿಲ್ಲೆಂದಱಿ ನೀಂ (ವರ್ಧಪು. ೯-೬೪); ಎಡರಿಗಂ ತಾನಾಗದು ನಂಟನೇ (ಸೋಮೇಶ. ೨೨) ; ಅವಸರದಲಾಪವನೆ ನಂಟನು (ಕೌಶಿರಾ. ೧೯-೩೨) ; ಅಣ್ಣತಮ್ಮಂದಿರನ್ನು ನಂಟರೆನ್ನಬಹುದೆ . . . ಅಣ್ಣತಮ್ಮಂದಿರು ಗ್ರಹಚಾರ ತಪ್ಪಿದರೆ ದಾಯಾದಿಗಳಾಗುವರೇ ಹೊರತು ನಂಟರು ಮಾತ್ರ ಎಂದಿಗೂ ಆಗುವುದಿಲ್ಲ (ನಂಟರು. ೪) ; ಅಕ್ಕಿ ಮೇಲೆ ಆಸೆ, ನಂಟರ ಮೇಲೆ ಪ್ರೀತಿ (ಗಾದೆ) ; ಕೆಟ್ಟು ನಂಟರ ಸೇರಬೇಡ, ಕೊಟ್ಟ ಧರ್ಮ ತಿರುಗಿ ಕೇಳಬೇಡ (ಗಾದೆ). ೨. ಆಪ್ತವ್ಯಕ್ತಿ; ಸ್ನೇಹವುಳ್ಳ ವ್ಯಕ್ತಿ : ನಂಟರಂ ಬಿಟ್ಟು ಪಗೆಯಂ ಕೂಡುವ . . . ಮರುಳಂ ಪೋಲ್ಕುಂ (ಧರ್ಮಾಮೃ. ೧೦-೮೩); ಆರಿಗಾರೂ ಇಲ್ಲಾ ಕೆಟ್ಟವಂಗೆ ಕೆಳೆಯಿಲ್ಲಾ ಜಗದ ನಂಟ ನೀನೆ ಅಯ್ಯಾ ಕೂಡಲಸಂಗಮದೇವಾ (ಬಸವ. ೨೫) ; ಈ ಕಡುನಂಟನ ಸತಿಯ ರೂಪು ಸೋಲಿಸಿತೆನ್ನಂ (ಅನಂಪು. ೧೧-೩೦) ; ಹೋಹ ನಂಟನನಿನಿತು ದೂರಕ್ಕೆ ಕಳುಹಿ ಬರಲವನೊಡನೆ ನಡೆವ ಮನೆ ಮಂದಿಯೆನೆ,ನೆಗೆದ ಹನುಮನ ಕೂಡೆ ಬಂಡೆ ಗಿಡು ಮರ ಬಳ್ಳಿಗಳ್ ಪಾರಿದು ವಿನಿತು ಗೆಂಟರ್ಗೆ (ಶ್ರೀರಾಮಾ. ೪೦೭-೧೧೫); ಆಪತ್ತಿಗಾದವನೆ ನಂಟ (ಗಾದೆ). **ನೆಂಟ :** ೧. ಗಂಟನೊಬ್ಬರ ಕೈಯಲಿಡುವಾತ ಮೂರ್ಖ ನೆಂಟರಿಗೆ ಸಾಲವನು ಕೊಡುವಾತ ಮೂರ್ಖ (ಪುರಂದ. ೧-೬೨-೦) ; ಬಂಟನಲ್ಲವೆ ನಾನು ದೀನರ ನೆಂಟನಲ್ಲವೆ ನೀನು ನಿನ್ನೊಳಗುಂಟೆ ನಿರ್ದಯ (ಹರಿಸಾ. ೭೧); ಗೋವಳಂಗರಸುತನಮಾದ ಬಳಿಕ ಪೊಡವಿಯಂ ಕಂಡು ನಡೆವನೆ ಮುಳಿದು ಮಾವನಂ ಬಡಿದವಂ ನೆಂಟರನಱಿವನೆ (ಚೈಮಿಭಾ. ೬-೫೨) ; ಸ್ವಂತ ನೆಂಟಳಿಗೆ ಜ್ಞಾತಿಯನ್ನು ಹೋಗಲಾಡಿಸಿದ್ದನು (ದೇವೀಜೌ. ೧೧೧). ೨. ಬಸವ ಬಸವಾಯೆಂದಡೆಯ್ದದೆ ಪಲವುಸುರಲೇನು ಮಸೆದ ಹಗೆಗಳು ನೆಂ [ಪಾಠಾಂ. ನಂ] ಟರಪ್ಪರು (ಬಸಪು. ೭-೨೫).

ನಂಟರ ತೊಟ್ಟು = ಆಪ್ತರ ಕೆಲಸಗಳಿಗೆ ಒದಗುವವನು ; ಒಂದು ಬಿರುದು : ಪರನಾರೀಪುತ್ರಕ ನಣ್ಟರ ತೊಟ್ಟು ಕೆಳೆಗೆ ಕುರ್ಪ್ಪಾತ ಪಿಸುಣ ಗಡಸರ್ಪ್ಪ ತೊದಟ್ಟರ ಬೀವ ಬಾವನ ಬಣ್ಟ ಗುಣ್ಡಚಕ್ರಜೆಡ್ಡುಗಂ (ಎಳ. II, ೩೧೭; ಸು. 950). ನಂಟರ ಮಾರಿ = ಸಂಬಂಧಿಗಳಿಗೆ ಕೇಡು ಬಗೆಯುವವನು ; ವಿಶ್ವಾಸಘಾತುಕ : ಲೋಕದೊಳದನಾಡದಿರ್ಕರುಳ ಕತ್ತರಿ ನಂಟರ ಮಾರಿ ತುತ್ತುಮಿಂಚಿದೊಡೊಡನುಂಡು ಮತ್ತೆ ತೊಡೆ ಮಿಂಚಿದೊಡಾ ಖಳನಿಂತು ಮಾಡಿದು (ಅನಂಪು. ೧೧-೪೪). ನಂಟರಿಷ್ಟರು, ನೆಂಟರಿಷ್ಟರು = ಬಾಂಧವರು ಮತ್ತು ಸ್ನೇಹಿತರು ; ಆಪ್ತೇಷ್ಟರು ; ಬಂಧುಮಿತ್ರರು: ಗರುಡನನೊಳ್ಳೆ ತುಡುಕುವುದುಂಟಲೇ ಲೋಕದಲಿ ರಾಯನ ನಂಟರಿಷ್ಟರೊಳಧಿಕನಲ್ಲಾ ಕರ್ಣ ಕಿಱುಕುಳನೆ (ಕುಮ್ಕದ್ರೋ. ೧೫-೭) ; ಪದವಿ ತಪ್ಪಿದ ಮೇಲೆ ನಂಟರಿಷ್ಟರೆ ನಮಗೆ ಕಟ್ಟಿಟ್ಟ ಹಗೆ ಕಾಣ ಕೊನೆಗೆ (ಇಂಜಾಪ. ೯೨-೫೦) ; ನೆಂಟರಿಷ್ಟರು ಉಂಟು ನೆರೆಹೊರೆ ಎನಗುಂಟು . . . ಒಂಟಿಯಾಗಿ ಪೋಗುವಾಗ ಸಂಗಡ ಒಬ್ಬರಕಾಣೆ(ಪುರಂದ. ೩-೨-೨) ; ನಿನಗೋಸ್ಕರ ಹಿಂದೆ ನೆಂಟರಿಷ್ಟರನ್ನು ಬಿಟ್ಟೆ (ಪಡಥಾ. ೪೩) ; ನೆಂಟರಿಷ್ಟರೆಲ್ಲ ಧೈರ್ಯ ಹೊಂದಿದರು (ಕಾಲೂರ. ೧೪, ಕಥಾಸಾರ).

[ನಂಟು$_2$ + – ಅ$_7$./ತಮಿ. ನಟ್ಟ, ನಣ್ಟು ; ತುಳು. ನಂಟೆ, ನೆಂಟೆ ; ತೆಲು. ನಂಟು]

ನಂಟತನ, ನೆಂಟತನ (ನಾ). ಸಂಬಂಧ ; ಬಾಂಧವ್ಯ : ಸುಣ್ಣದ ತುಯ್ಯಲ ಬಣ್ಣವೊಂದೆ ಎಂದರೆ ನಂಟತನಕ್ಕೆ ಉಣ್ಣಬಹುದೆ (ಬಸವ. ೧೫೦); ದೊಡ್ಡವರ ನಂಟತನ ಬಡವನಿಗೆ ಭಂಡಾಟ (ಗಾದೆ). ನೆಂಟತನ: "ಜ್ಞಾತೇಯವೆಂದರೆ ಜ್ಞಾತಿತನ, ಬಂಧುತಾ ಅಂದರೆ ನೆಂಟರ ಗುಂಪು, ನೆಂಟತನಕ್ಕೂ ಹೆಸರೆಂದು ಕೆಲವರೆನ್ನುವರು" (ಸಿದ್ಧಾಂತಿ. ೦೫೪). [ನಂಟ + –ತನ]

ನಂಟರ್ತನ (ನಾ). ಬಾಂಧವ್ಯ ; ಸಂಬಂಧ ; ನಂಟು : ಮಹಾಶ್ವಾಪದ ಪ್ರಕರಾಮಾತ್ಯರೊಳಂ ಗಜಾಧಿಪರೊಳಂ ನಂಟರ್ತನಂ [ಪಾಠಾಂ. ತಾಂ ನರ್ತನಂ]ಗೊಂಡನಪ್ರಕಟಂ ನೀತಿವಿರುದ್ಧಮಾದೆಡೆಯೊಳಂ ತಾನೆಂಬ ಸನ್ಮಂತ್ರಿಯಿಂ ವಿಕಳಂ ಮಾಡುವಂ (ಪಂಚತಂ. ೯೭-೮) ; ಪೆಸಿದ ಕೃತಾಂತಂ ಗೆತ್ತಿದ ಚೋನಂ ತನುವೆಂದುತ್ತಮರಱಿದುಟಿದರದಱ ನಂಟರ್ತನಮಂ (ಮಲ್ಲಿಪು. ೯-೬೬) ; ಕಳ್ಳರ ನಂಟರ್ತನಮುಂ ಕಳ್ಳರ ದೆಸೆಯಿಂದೆ ಧನಮನ ರ್ಜಿಸುವದುಮಾ ಕಳ್ಳರ್ಗೆಡೆಗುಡುವುದುಮದು ಕಳ್ಳತನಂ ಬ್ರುತದ ಹಾನಿ ಯೆಂಬಂ ಜೈನಂ (ಸಮಪ. ೫-೪೫). [< ನಂಟ + – ತನ]

ನಂಟಸ್ತ, ನೆಂಟಸ್ತ (ನಾ). ಬಾಂಧವ್ಯವುಳ್ಳವನು; ಬಂಧಂ. 'ನಂಟಸ್ತಿಕೆ' ಪರಾ. **ನೆಂಟಸ್ತ**. 'ನೆಂಟಸ್ತಿಕೆ' ಪರಾ. [<ನಂಟು$_2$ + – ಸ್ತ]

ನಂಟಸ್ತನ, ನೆಂಟಸ್ತನ (ನಾ). = ನಂಟತನ : ಸಮುದ್ರದ ನಂಟಸ್ತನ ಉಪ್ಪಿಗೆ ಬಂಡಾಟ (ಹುಬ್ಬಹ. ೬೯); ಯೋಗ್ಯರಾದವರೊಂದಿಗೆ ನಂಟಸ್ತನ ಮಾಡಬೇಕು (ಕೂಡಿ). **ನೆಂಟಸ್ತನ :** ಈ ಗೆದ್ದಲಿರಾಯನ ನೆಂಟಸ್ತನ ಸಾಹಿತ್ಯದೊಡನೆ ಅಷ್ಟೇ ಅಲ್ಲ, ಕಂಬಳಿಯೊಡನೆಯೂ ಇದೆಯೋ–ಎಂದು ಕೊಂಡೆ (ಮಾಂಗಾಪು. ೦೬). 'ದೊಡ್ಡಸ್ತನ' ಪರಾ.

[< ನಂಟಸ್ತ + – ತನ]

ನಂಟಸ್ತಿಕೆ, ನೆಂಟಸ್ತಿಕೆ (ನಾ). = ನಂಟತನ : ಆ ಎರಡು ಮನೆತನಗಳ ನಡುವೆ ಮದುವೆಯ ನಂಟಸ್ತಿಕೆ ಕೂಡ ಬೆಳೆದಿತ್ತು (ನೂಳಂಬ. ೬೨); ಈಗಿನ ಕಾಲದಲ್ಲಿ ನಂಟಸ್ತಿಕೆ ಹೆಚ್ಚಿದಷ್ಟೂ ಸಂಸಾರ ನಿಭಾಯಿಸುವುದು ಕಷ್ಟ (ಕೂಡಿ). **ನೆಂಟಸ್ತಿಕೆ :** ನಂಟಸ್ತಿಕೆ ಬೆಳೆಸುವುದಕ್ಕಾಗಿ ನೀವೆ ಬಿಟ್ಟೂರಿಗೆ ಹೋಗ ಬೇಕಾಗುವುದು (ಕುಣಾಚಿ. ೫೩); ಹೋಗಲೇಬೇಕೆಂದು ಯೋಚಿಸಿ ಕೂಡಲೇ ಹೋಗಲು ಇಲ್ಲಿ ಚಿನ್ನದ ಕೊಪ್ಪರಿಗೆಯಿದೆಯೇ ಅಥವಾ ಕುಬೇರನ ನೆಂಟಸ್ತಿಕೆಯಿದೆಯೇ ? (ಚಾತ್ಕಲ್ಯ. ೨೪). 'ದೊಡ್ಡಸ್ತಿಕೆ' ಪರಾ.

[ನಂಟಸ್ತ + – ಇಕೆ]

ನಂಟಿಕೆ (ನಾ). = ನಂಟತನ : ತಂಟಿಯವನ ನಂಟಿಕೆ ಸಲ್ಲ, ಒಂಟಿಯಾಗಿ ಹೋಗಸಲ್ಲ (ಗಾಡಿ). [ನಂಟ + – ಇಕೆ]

ನಂಟಿತಿ, ನೆಂಟಿತಿ, ನೆಂಟಿತ್ತಿ (ನಾ). ನಂಟರವಳು ; ಸಂಬಂಧಿಯಾದವಳು: (ಕ). **ನೆಂಟಿತಿ :** ಮನೆಗೆ ಬಂದ ನೆಂಟಿತಿಯರಿಗೆ ಉಡುಗೊರೆಯಾಗಿ ಕೊಡಲು ತಂದಿದ್ದ ಸೀರೆಗಳ ವಿಚಾರ ಸಲಹೆ ಕೊಡುವ ನೆವದಿಂದ . . . ತಿಳಿಯಲು ಪ್ರಯತ್ನಿಸುತ್ತಿದ್ದನು (ಪಾಲಿಮ. ೩೩೦). **ನೆಂಟಿತ್ತಿ :** ಮನೆಯ ಮಗಳೂ ನೆಂಟಿತ್ತಿಯ ಹಾಗೆ ಮದುವೆಯ ದಿನವೇ ಬಂದಿದ್ದಾಳೆ (ಕೂಡಿ).

[ನಂಟ + – ಇತಿ$_1$ (< – ಇತ್ತಿ)]

ನಂಟು$_1$ (ಕ್ರಿ). ತಾಗು ; ಕೂಡು : ಸೇರು: ಅವ್ವ ಕಾರ್ಮುಟ್ಟನೊಳೊರ್ಮೆ ಕಂಡು ಕಿಡಿಯಂ ಕೆಂಡಂಗಳಂ ಸೂಸೆ ನಂಟುವ [ಪಾಕಾಂ. ಗಂಟುವ, ಕಾಗುವ, ನಂಟದ]ವೊಲ್ ಬೆಟ್ಟನೊಳೊಂದು ಬೆಟ್ಟು ಭವಬದ್ಧಕ್ರೋಧದಿಂ ಕಾಯ್ದು ತಾಗಿರುವುದುಂ (ಅರ್ಧನೇ. ೪-೩೦).

[ದೇ.॥ ತಮಿ. ನಣ್ಣು, ನಣುಜ್ಜು, ನಣುಕು]

ನಂಟು$_2$, ನೆಂಟು (ನಾ). ೧. ಸಂಬಂಧ ; ಬಾಂಧವ್ಯ : "ನಂಟಣ್ಪನಿಕ್ಕುಂ" (ಕಬ್ಬಿಕೈ. ೬೯) ; ಜವನೆಂಬವುಟ್ಟು ಮಾರಿಯೊಡನಾಡಿ ಲಯಾಗ್ನಿಯ ನಂಟು . . . ಸಿಡಿಲ ಸಂಗಡವಿಶನ ಬೆಂಕೆಗಣ್ಣ ದಾಂಧವನೆನೆ ಶೌರಿ ಮರ್ದಿಸಿದ ನಪ್ರತಿಮಲ್ಲರೆನಿಪ್ಪ ಮಲ್ಲರಂ (ಜಗವಿ. ೬-೭೩) ; ಕೆಳೆತನದ ನಂಟು [ಪಾಕಾಂ. ಬಂಧು] ವಿಷಯದ ಬಂಧುವಾತುಗಳ ಬಲದೊಳಾಂ ಕವಿಯೆಂದು ಕವಿರಾಯನೆಂದು ವೆಗ್ಗಳಿಸಿ . . . ನಂಟನೀಡಾಡಿ ಮುರಿತು (ಹಡಕಾ. ೧-೩೦) ; ಕರಕಷ್ಟರೊಳು ನಂಟದೇತಕಂಳಿ ಶುಭವನೆನಿಸು (ವಂಕಾರಾ. ೫-೯-೬) ; ಹಳಗನ್ನಡಕ್ಕೂ ತಮಿಳಿಗೂ ಇರುವ ನಿಕಟವಾದ ನಂಟು ನೋಡದೇಕಾದುದು (ದ್ರಾವಿವಿ. ೦೦೨) ; ಸಮುದ್ರದ ನಂಟು ಉಪ್ಪಿಗೆ ಬಡತನ (ಗಾಡಿ). 'ನಂಟು ಗಾಣಿಸಂ' ಪರಾ. ೨. ಪ್ರೀತಿ ; ಪ್ರೇಮ : ನಂಟಂ ಬಯಸುತ್ತಿನಿಯನ ನಂಟಿ ಮಹಾತುರದಿನಪ್ಪಿ ಏಗೆ ಪುಳುಕಿಸುತುಂ . . . ಜೋಡೆಯರ್ನೆರೆಯುತಂದೆಸೆದರ್ (ಅಂಕ್ಯಟ. ೦೦-೦೦೩) ; ನನಗೂ ನಿನಗೂ ಆಂಟಿದ ನಂಟನ ಕೊನೆ ಬಲ್ಲವರಾರು ಕಾವಾಕ್ಷಿಯೆ! (ಸಖೀಗೀ. ೪೬-೯೬೦). **ನೆಂಟು :** ೧. ಸ್ತುತಿಯಿಲ್ಲ ನಿಂದೆಯಿಲ್ಲ ನೆಂಟಿಲ್ಲ [ಪಾಕಾಂ. ನಂಟಿಲ್ಲ, ನೆಂಟರಿಲ್ಲ] ಹಗೆಯಿಲ್ಲ ಅಜುಹಿಲ್ಲ ಮಜಹಿಲ್ಲ ತಾನೆಂಬ ನೆನಹಿಲ್ಲವಾಗಿ (ಆದಪ. ೧೬೦-೩೮೫) ; ರಾವಣ್ಣನ ನೆಂಟೂ ನಮಗೆ ಗಂಟುಬೀಳುತ್ತದೊ ಏನೋ (ಮಹಾಗ. ೪೩೦) ; ಅಕ್ಕನ ಹಗೆ ಭಾವನ ನೆಂಟು (ಗಾಡಿ).

ನಂಟು ಮಾಡು, ನೆಂಟು ಮಾಡು=ಸಂಬಂಧವನ್ನು ಮಾಡು; ಬಾಂಧವ್ಯವನ್ನು ಬೆಳೆಸಂ : ವಧುವಂ ತಂದೀಯೆ ಮುನ್ನೆನ್ನ ಚಿತ್ತದೊಳಿರ್ದಂದದೆ ನಂಟು ಮಾಡಿ ಸಿರಿಯಿಂದೆನ್ನೊಳ್ ಸಮಂ ವಾಟ್ಸಿಂ (ವರ್ಧಪು. ೭-೩೪) ; ನೀರೆಱಿದೋವಿದವರ ಕಾಲ ಕುಂಟು ಮಾಡುವ ಬೇಲದಂತೆ ಕಂಟಕವನು ಕಾಣವರು ಕೆಲಂಬರು ನಂಟು ಮಾಡುವ ವಾನ್ಯರಿಗೆ (ಪ್ರಭಂಜ. ೧-೩೨) ; ಒಂದೇ ಗಂಡುದೇವರ ಒಕ್ಕಲಾಗಿದ್ದರೂ ಹೆಣ್ಣುದೇವರು ಬೇರೆ ಬೇರೆಯಾಗಿದ್ದರೆ ನೆಂಟು ಮಾಡುವುದುಂಟು (ಹುಬ್ಬಹ. ೭೩).

[<ನಂಟು$_1$./ತಮಿ. ನಟ್ಪು, ನಣ್ಪು ; ತುಳು. ತೆಲು. ನಂಟು]

ನಂಟುಗಾಣಿಸು (ಕ್ರಿ). ಹೊಂದಾಣಿಕೆಯನ್ನುಂಟುಮಾಡು; ಹೊಂದಿಸಂ: ಒಂಟದಂಡಿಗೆಯೊಳು ಹಲವು ದಂಡಿಗೆಯೊಳು ನಂಟುಗಾಣಿಸಿ ಶ್ರುತಿಮುಟ್ಟಿ ಮುಂಟಪ ಗುಮುಗುಮುಗುಮ್ಮೆನೆ ಕೊರಳಿದೆಗುಂಟಾಗಿ ಠಾಯೆದೋಱಿದರು (ಭರಕ. ೦೮-೦೩೬). [ನಂಟು$_2$ + ಕಾಣಿಸು]

ನಂಟುಗೊಳುಹ (ನಾ). ಹೊಂದಾಣಿಕೆಯನ್ನುಂಟುಮಾಡಿಕೊಳ್ಳುವಿಕೆ ; ಸಂಬಂಧವನ್ನು ಸ್ವೀಕರಿಸುವಿಕೆ ; ಸಮನ್ವಯಂ ಮಾಡಿಕೊಳ್ಳುವಿಕೆ : "ಸಾಮ ಎಂದೊಡೆ ವಿನಯದಿಂ ನಂಟುಗೊಳುಹ" (ನಾಆಂಶಾ. ೬).

[ನಂಟು$_2$ + ಕೊಳುಹ]

ನಂಟುತನ, ನೆಂಟುತನ (ನಾ). = ನಂಟತನ : ಹರಿ ಕರಿಕಳಭದುರುಬಂಧುತ್ವ ಫಣಿ ಮುಂಗುಲಿಯ ನಂಟುತನ . . . ಇರ್ದುದು ಬನದೊಳಾ ಮುನಿಯ (ತೊರಣಾ. ೦-೫-೪೩) ; ಕೂಳ ಬೆಮೆಯಲಿ ನಂಟುತನ ದಾಕ್ಷಿಣ್ಯಪರನಾಗಿ (ಕುಡಿಪ. ೨೩) ; ಎಂದುಪಾಯದಿ ಮಮತೆ ನಂಟುತನ ತೋರಿ ಮುಂದುವರಿಯಲು ; ಮನದಿ ಸಂದೇಹ ವಿೂರಿ (ಕಎಪು. ೦೨-೦೫) ; ಆ ಕನ್ಯೆಯರ ಪಾಣಿಗ್ರಹಣ ಮಾಡುವುದರಿಂದ . . . ಆ ಸಾಮಂತರಿಗೂ ದೊಡ್ಡವರೊಡನೆ ನಂಟುತನ ಬೆಳೆಸಿದೆವೆಂಬ ಮಾನಗೌರವಗಳೂ ಉಂಟಾಗುತ್ತಿದ್ದುವು (ಶಾಂತಲಾ. ೯೭). **ನೆಂಟುತನ :** ನೆಂಟುತನ ಹೊಸೆವ ಕಾಲೂರ್ಮದುವೆ ಪಿರಿದು (ಕಾಲೂರ. ೩೯-೪೩). [ನಂಟು$_2$ + – ತನ]

ನಂಟುಭಕ್ತಿ (ನಾ). ಬಾಂಧವರ ಮೇಲಿರುವ ಮೋಹ : ಸಂಸಾರಬಂಧುಗಳೆನ್ನವರೆಂದೊಡೆ ನಂಟು[ಪಾಕಾಂ. ಟ]ಭಕ್ತಿ ನಾಯಕನರಕ ಇಂತೆಂದುದು ಕೂಡಲಸಂಗನ ವಚನ (ಬಸವ. ೮೯) ; ಅಣ್ಣತಮ್ಮ ಹೆತ್ತಣ್ಣ ಗೋತ್ರ ವಾದರೇನು ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ ನಂಟುಭಕ್ತಿ ನಾಯಕನರಕ (ಬಸವ. ೭೦೩). [ನಂಟು$_2$ + ಭಕ್ತಿ]

ನಂಟುವೊಱಿ (ನಾ). ನೆಂಟತನದ ಸಂಬಂಧ, – ಬಾಂಧವ್ಯ : ಈ ಅಪದೆಸೆಯಂ ಕಂಡೊಂದು ಬಕಂ ಬೆಳರ್ತು ಮುಂ ಗಾಣದೆ ತನ್ನ ನಂಟು ವೊಱಿಯ ಮಿಾಂಗಳ್ಗೆ ಮುಂತೆ ಬಟ್ಟೆ ಯಾವುದೆಂದಾವಗಮಗಲದೆ ಚಿಂತಾಪರನಾಗಿರ್ಕುಂ (ರಾಮಾಶ್ವ. ೫೧-೨೫). [ನಂಟು$_2$ + ಮೊಱಿ$_3$]

ನಂಟುವಳಿ (ನಾ). ಬಾಂಧವ್ಯ ; ನಂಟತನ : ನಂಟುವಳಿ ಜನ್ನಿಪುದು ತತ್ಪತಿಯ ದೆಸೆಯಿಂ (ಅಂಬಿಕಾ. ೩೩-೩೩). [ನಂಟು$_2$ + – ವಳಿ$_1$]

ನಂಡುಲಿ (ನಾ). (ಕರಾ) ಮಳೆ ಬಿದ್ದು ಮಣ್ಣು ಸ್ವಲ್ಪ ಹಸಿಯಾಗಿರುವಾಗ ಬಿತ್ತುವುದಂ : ಇಷ್ಟು ಬೇಗನೆ ಮಳೆ ಬರುತ್ತದೆಯೆಂದು ಯಾರಿಗೆ ಗೊತ್ತು ಕಡುಲಿಯಂತೂ ತಪ್ಪಿತು. ಇನ್ನು ನಂಡುಲಿಗಾದರೂ ಬಿತ್ತಬೇಕು (ಕೂಡಿ). 'ಕಡುಲಿ' ಪರಾ. [?]

ನಂತರ$_1$ (ನಾ). ತರುವಾಯದ ಕಾಲ : ಹರನ ಪಾದಂಗಳಿಗೆ ವಂದಿಸಿ ಸುರರು ನಂತರದಲ್ಲಿ ಗಿರಿಜೆಯ ಚರಣಸರಸಿಜಗಳನು ನಮಿಸುವರು (ಪಾರ್ವಕ. ೩೦).

[< ಅನಂತರ$_1$]

ನಂತರ$_2$ (ಅ). ತರುವಾಯ ; ಆಮೇಲೆ : ಕಲ್ಲು ಕಾಮಗಾರಿ ಕರ್ಚ ೨೦ ಪರಹ ಕೊಟ್ಟುಯಿಧಾಳೆ ಬಾವಿ ತೀರಿದಲಿ ನಂತ್ರರ ಬೋವಿಗಳಿಗೆ ವುಡುಗರೆ ೧೦ ಹ ಕೊಟ್ಟುಯಿಧಾಳೆ (ಮೈಆರಿ. ೧೯೩೯, ೯೭-೯; ಸು. 1764);

ಈ ವೆನೇಸಿಯನರು . . . ಪುನಃ ತನ್ನ ಆಸ್ಥಾನಕ್ಕೆ ಹಿಂದಿರುಗಿ ಬರುವ ಭರವಸೆಯನ್ನು ಅವರಿಂದ ಪಡೆದ ನಂತರವೇ . . . ಏರ್ಪಾಡು ಮಾಡಿಸಿದನು (ಪ್ರವಾಇ. II, ೮). [< ಅನಂತರ$_2$]

ನಂದ (ನಾ). ೧. ಸಂತೋಷ ; ಆನಂದ ; ಸಂಖ. 'ನಂದವಿಡಂ' ಪರಾ. ೨. ಕೃಷ್ಣನ ಸಾಕುತಂದೆ ; ನಂದಗೋಪ : ನಂದಾದಿಗೋಪರಿಂದು ಪುರಂದರಮಹಮೆಂದು ಹರ್ಷದಿಂ ಸಂಭ್ರಮಿಸಲ್ (ಜಗವಿ. ೪-೭೬) ; ನಂದ ನಿತ್ತಲು ಕೇಳ್ದು ವಸುದೇವನ ತದುಕ್ತಿಗಳ ನೊಂದು ಶಂಕಿಸಿ ಚಿತ್ತದೊಳಗೆ ಮುಕುಂದನನು ಮಱೆವೊಕ್ಕು ಮರಳಿದು ಬಂದನಾ ಮುಮ್ಮಾರ್ಗದಿಂದ ನಿಜಾಲಯಕ್ಕೊಲಿದು (ನಿಧಾಗ. ೧೦-೫-೨೭); ಮಂದಗಮನೆ ಇವನಾರೆ ಬೇಳಮ್ಮ . . . ನಂದನ ಕಂದ ಮುಕುಂದ ಕಾಣಮ್ಮ (ಪುರಂದ. ೨-೭೦-೧). 'ನಂದನಂದನ' ಪರಾ. ೩. ಚಾಣಕ್ಯನಿಂದ ರಾಜ್ಯವನ್ನು ಕಳೆದುಕೊಂಡ ಪಾಟಲೀಪುತ್ರದ ಒಬ್ಬ ರಾಜ ಮತ್ತು ಅವನ ವಂಶದ ಹೆಸರು : ಪಾಟಳೀಪುತ್ರಮೆಂಬುದು ಪೊಱಲದನಾಳ್ವಂ ನಂದವಂಶದೊಂ ಪದ್ಮನೆಂಬೊಂ (ವಡ್ಡಾರಾ. ೧೮೦-೧೩) ; ನಂದರಿಗೆ ಮಂತ್ರಿಯಾದ ರಾಕ್ಷಸನು ಚಂದ್ರಗುಪ್ತನ ದೆಶೆಯಿಂದ ಭೀತನಾಗಿ ಆ ರಾಜ್ಯದಲ್ಲಿ ನಿಲ್ಲಲಶಕ್ಯವಾದ ಕಾರಣ ಇಲ್ಲಿಗೆ ಬಂದನೋ ! (ಮುದ್ರಾಕುಂ. ೨೭೦). ೪. ಕುಬೇರನ ನವ ನಿಧಿಗಳಲ್ಲಿ ಒಂದು. ೫. [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ : ನವ, ಪದಾರ್ಥ, ರಂಧ್ರ, ನಂದ . . . ನಾಟ್ಯಾಂಗ ಇಂತಿನಿತುಂ ೯ಕ್ಕೆ ಪೆಸರು (ವೃಷಹಾ. ೧೦-೩). ೬. [ಛಂದ] ಒಂದು ವರ್ಣವೃತ್ತದ ಹೆಸರು : ದಿನೇಶನಿಂದತ್ತ ನೀಲಕಂಠರ್ ತನೂದರೀ ನಿಲ್ಕೆ ನಂದ[ಪಾಠಾಂ. ನಿಲ್ಕನಂಗ]ಮಕ್ಕುಂ(ಛಂದೋಂಬು. ೨-೭೦). [ಸಂ.]

ನಂದಕ (ನಾ). ೧. ಸಂತೋಷಗೊಳಿಸುವಿಕೆ ; ಆನಂದಗೊಳಿಸುವಿಕೆ. ೨. ಸಂತೋಷ ; ಆನಂದ. ೩. ಕತ್ತಿ ; ಖಡ್ಗ. ೪. ವಿಷ್ಣುವಿನ ಕತ್ತಿ,-ಖಡ್ಗ : ನಂದಕಮಂ ದಿವಿಜಗಣಾನಂದಕಮಂ ಕೊಂಡು ಬೇದಿಪತಿಯೊಳ್ ಪೊಣರ್ದಂ ಮಂದರಧರಂ (ಜಗವಿ. ೭-೯೭) ; ಘನಕರಿಗಿಕ್ಕಿದಂಕುಶಮಿದಬ್ದ ಮುಕುಂದನ ನಂದಕಾಯುಧಂ (ರಾಜಶೇ. ೯-೦೦೦) ; ಓಹೋ, ಈ ನಂದ ಕಾಸಿಯು ಬಂದಿತು (ಭಾಸನಾ. ೫೧). ೫. ಕಪ್ಪೆ. ೬. ಕೃಷ್ಣನ ಸಾಕುತಂದೆ. ೭. [ಛಂದ] ಒಂದು ವರ್ಣವೃತ್ತದ ಹೆಸರು : ಬಂದು ವಹ್ನಿಯೊಳ್ ನಿಂದೊಡಾಲಗಂ ಸುಂದರಾಂಗಿ ಕೇಳ್ ಸಂದ ನಂದಕಂ (ಛಂದೋಂಬು. ೨-೭೭). [ಸಂ.]

ನಂದಕೆ (ನಾ). = ನಂದಕ ೪ : ಭವನ ಶೂಲದ ಗಾಯದಿಂದವೆ ಕವಲುದಲೆಯಾದವರು ಬಲು ಮಾಧವನ ನಂದಕೆಯಿಂದ ಮೂಳೆಗಳೆದ್ದ ಬೆನ್ನವರು (ಕಾಶಿರಾ. ೨೦-೧೫). [ಸಂ. ನಂದಕ]

ನಂದಗಿರಿ (ನಾ). ಒಂದು ನಾಡಿನ ಹೆಸರು ; P ಈಗಿನ ಕೋಲಾರ ಜಿಲ್ಲೆಯ ನಂದಿಬೆಟ್ಟದ ಸುತ್ತುಮುತ್ತಲಿರುವ ಪ್ರದೇಶವಿರಬಹುದು : ಮಹಾರಾಜಾಧಿರಾಜ ಕೊಳಾಲಪುರವರೇಶ್ವರ ನನ್ದಗಿರಿನಾಥಂ (ಎಳ. III, ನಂಜನ. ೧೫೫-೩; ಸು. 970) ; ಮಹಾರಾಜಾಧಿರಾಜಂ ಕೋಳಾಳಪುರ ವರೇಶ್ವರಂ ನನ್ದಗಿರಿನಾಥಂ ಜಯದುತ್ತರಂಗಂ ಗಂಗಚೂಡಾಮಣಿ . . . ವಿಕ್ರಮಾದಿತ್ಯದೇವರ್ (ಸೌಇಇ. XX, ೫೫-೩; 1055) ; ಮಹಾರಾಜಾಧಿರಾಜ ಪರಮೇಶ್ವರಂ ಕೋಳಾಲಪುರವರೇಶ್ವರಂ ನಂದಗಿರಿನಾಥಂ ಪದಗಜೇಂದ್ರಲಾಂಛನಂ (ಎಳ. VII, ಶಿವಮೊ. ೪-೮೬; 1122).

[ನಂದ + ಗಿರಿ$_1$]

ನಂದಗೋಕುಲ (ನಾ). ೧. ಯಮುನಾನದೀತೀರದಲ್ಲಿರುವ ಒಂದು ಸ್ಥಳದ ಹೆಸರು ; ಕೃಷ್ಣನ ಸಾಕುತಂದೆಯಾದ ನಂದಗೋಪನು ಇದ್ದ ಸ್ಥಳ : ಉತ್ತರಿಸಿ ಯಮುನೆಯನು ಹರಿಯನು ಹೊತ್ತುಕೊಂಡುರದೊಳಗೆ ಹೋಗಿ ಯದೂತ್ತಮನು ನಟ್ಟಿರುಳು ಹೊಕ್ಕನು ನಂದಗೋಕುಲವ (ನಿಧಾಗ. ೧೦-೪-೧೬). ೨. (ಆಲಂ) (ಮಕ್ಕಳಿಂದ ತುಂಬಿ) ಆನಂದ ಮಯವಾದ ಸಂಸಾರ, – ಕುಟುಂಬ : ಪಂತರವಾಡೇ ನಂದಗೋಕುಲ ವಾಗಬಹುದು (ದೀಪಹ. II, ೨೦೯) ; ಅವರ ಸಂಸಾರ ನಂದಗೋಕುಲ ವಾಗಿದೆ (ರೂಢಿ). [ನಂದ + ಗೋಕುಲ]

ನಂದದೀವಿಗೆ 'ನಂದಂ' ಪರಾ.

ನಂದನ (ನಾ). ೧. ಸಂತೋಷಗೊಳಿಸುವಿಕೆ ; ಆನಂದಗೊಳಿಸುವಿಕೆ. ೨. ಆನಂದ ; ಸಂತೋಷ : ನಂದನನಾಮದ ನಂದನನಂತಪ್ಪ ನಂದನಂ ಜನಿಕೆ ತಮಗೆಂದು ಧರೆಯೊಳಾನಂದದಿಂ ಬಯಸದವರಿಲ್ಲಾ (ವರ್ಧಪು. ೧೩-೧೦೪) ; ಶಂಕರ ನಿಮ್ಮ ಶ್ರೀಪದವ ಸಂದು ನಿಜದಿಂ ಧ್ಯಾನಿಸುವುದೇ ನಂದನಂ ವ್ಯಾಮೋಹದಿಂ ಘನವೆಂದು ಶಂಕರದಾಸಿ ಬೇಳಿದ ಜಡೆಯ ಶಂಕರಗೆ (ಶಂಕಚಾ. ೧೬-೦೦). 'ಚೇತೋನಂದನ' ಪರಾ. ೩. ಮಗ ; ತನಯಂ ; ಪುತ್ರ : "ತನಯಂ ಸ್ವನಂಧಯಂ ತೋಕಂ ಸುತಂ ಸೂನು ತನುಜನಾತ್ಮಜನಪತ್ಯಂ ತುಕ್ ಪ್ರಸೂತಿ ನಂದನನೆನಲು ಪುತ್ರನೆನಿಸಿಕ್ಕು" (ಮಂಗರಾ. ೯೦-೯) ; ನಿನಗೆ ಭರತಾವನೀತಲಮನಿತನಿತುಮನಾಳ್ವನೊರ್ವ ನಾದಪ್ಪಂ ನಂದನಂ (ಆದಿಪು. ೮-೨೮) ; ನಿಜನಂದನರಂ ನೀನಿರೆ ನೃಪೇಂದ್ರ ಕೊಲ್ದರುವೊಳರೇ (ಅಜಿಪು. ೧೦-೩೮) ; ನಂದನಜನ್ಮೋತ್ಸವದೊದವಿಂದಂ ಪರಿತಂದು ಪೂರ್ಣಪಾತ್ರಮ ತ್ಯಾನಂದಮೊದವಲ್ಕೆ ಪರಿಜನಮೆಂದೆಳಿಕುಳಿ ಗೊಳ್ದ ಸೈಪು ಸಮನಿಸಿದಪುದೋ (ಕಾದಂಪೂ. ೩೫೩) ; ಆ ಕನಸುಗಳನನು ಕ್ರಮದಿಂ ಕೇಳ್ದು . . . ತತ್ಫಲಮನಱಪಲಂದಿಂತೆಂದಂ . . . ಮೃಗ ರಾಜನಿಂ ಪುರುಷಸಿಂಹಂ ಪುಟ್ಟುಗುಂ ನಂದನಂ (ಜಗವಿ. ೨-೮೩) ; ನಂದನನಕ್ಕುಂ ನಮಗಿನ್ನೆಂದಧಿವನವೋಘವಚನದಿಂ ವನಿತೆ ಮಹಾನಂದಮ ನಾಂತಂಬುದರವದಿಂದಾನಂದಿಪ ಮಯೂರವನಿತೆಪೊಲಾದಳ್ (ಚಂದ್ರಪು. ೧೩-೨೦) ; ಆ ಜಂಪತಿಗಳ್ಗೆ ಕಳಾರಾಜಿತಮತಿಗಳ್ಗೆ ತತ್ಸಹಸ್ರಾರದ ವಿಖ್ಯಾಜಿತಸುರವರನುರುತರತೇಜಂ ನಂದನಸಮಾಖ್ಯನಂದನನಾದಂ(ವರ್ಧಪು. ೧೩-೧೦೩ ; ನಂದನನೆಳಮೆಯ ಕೈಮೆಯನಂದಿಂಗಾ ನಂದಗೋಪನಾಲಿಸಿ ನಲಿದಂ (ಚಿಸಿವಿ. ೪-೧೪೯). 'ನಂದನಂದನ' ಪರಾ. ೪. ಇಂದ್ರನ ತೋಟ, – ಉದ್ಯಾನವನ : ಸಾರಸಹಂಸಕೋಕಿಳಕುಳಧ್ವಾನೋತ್ಕರಂ ಚೆಲ್ದನಾಯ್ತು ಕರಂ ಸ [ಕ್ತ] ನಿಳಂಪದಂಪತಿಗಳಿಂದಾ ನಂದನಂ ನಂದನಂ (ಪಂಪಭಾ. ೫-೮೦) ; ನಂದನದಂದದಿಂದೆಸೆವಿನಂ ಬನವಂ ಮನದಟ್ಟಱಿಂದೆ ಸಂಕ್ರಂದನಸನ್ನಿಭಂ . . . ವಿಶ್ವನಂದಿವಿಭು ಮಾಡಿಸಿದಂ (ವರ್ಧಪು. ೩-೨) : ವನ ಇಂದ್ರನ ನಂದನದಂತಿದೆ (ಶಾಂತಲಾ. ೪೦) ; ಇನ್ನು ಎಲ್ಲಿಗೋಟ ನಂದನದ ತೋಟ! (ಗರಿ. ೯೯-೧೩). 'ನಂದನವನ' ಪರಾ. ೫. ತೋಟ; ಉದ್ಯಾನ ವನ : ಚಾಗದ ಭೋಗದಕ್ಕರದ ಗೇಯದ ಗೊಟ್ಟಯಲಂಪಿನಿಂಪುಗಳ್ಗಾಗರ ಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇನಾಗಿಯುಮೇನೊ ತೀರ್ದಪು[ದೆ] ತೀರದೊಡಂ ಮಱೆದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿದೇಶದೊಳ್ (ಪಂಪಭಾ. ೪-೨೯) ; ಸುಳಿವಂಚೆಗಳಿಲ್ಲದುದಿಲ್ಲ ನಂದನಂ (ಜಗವಿ. ೨-೦೦) ; ಪ್ರಚುರಚಂದನನಂದನ ಗಂಧದಿಂ ದಿಶಾಪರಿಧಿಯನೆಯ್ದೆ ಬಾಸಣಿಸುತಿರ್ಪುದು ಸುಗಂಧಮಂಡಲ ಮಿಳಾರಮಣೀರಮಣೀಯಕುಂಡಲಂ (ಚಂದ್ರಪು. ೩-೦೦) ; ಮರುಭೂಮಿ ನಗುವ ನಂದನವಪ್ಪುದಿದನೀಂಟೆ (ಶ್ರೀರಾಮಾ. ೧೪-೩೫೭). ೧, ೫ : ರಾಜ ಕೀರಚ್ಛದಾನಿಳಲೋಲತ್ಕಣಿಶಾಳಿಶಾಳಿ ಜನಚೇತೋನಂದನಂ ನಂದನಂ (ಜಗವಿ. ೨-೨) ; ಘನತರಭದ್ರಶಾಳದಿನಿನಿತ್ತೆಡೆಮಾಡದೆ ನಂದನಕ್ಕೆ ನಂದನದಿನದೊಂದು ಬೇಗದೊಳೆ ಸೌಮನಸಕ್ಕೆ ತಗುಳ್ದು ಮತ್ತೆ ಸೌಮನಸದಿನೆಯ್ದೆ ಪಾಂಡುಕವನಕ್ಕಡರ್ದತ್ತು ಸುರೇಂದ್ರವಾರಣಂ (ಚಂದ್ರಪು. ೧೩-೧೦೪). ೬. ಅರುವತ್ತು ಸಂವತ್ಸರಗಳಲ್ಲಿ ಇಪ್ಪತ್ತಾರನೆ ಯದಂ : ಮತ್ತಮಾ ವರುಷವೇ ಪ್ರಭವ ವಿಭವ . . . ನಂದನ . . .

ಅಕ್ಷಯವೆಂದಱವತ್ತು ತೆಱನಾಗಿಹುದು (ವಿವೇಕ. ೩೨೦) ; ನಂದನಸಂವತ್ಸರದ ಪಾಲ್ಗುಣ ಶು ೧ ಲು . . . ಗುಡಿಯ ಜಿರ್ನಉದರ ಮಾಡಿದ ವಿವಾರ (ಎಕ. III (R), ನಂಜನ. ೩೩೨-೨; 1653). ೭. ಶಿವ. ೮. ವಿಷ್ಣು. ೯. [ಜೈನ] ರುಚಕಾಚಲದ ಜಿನನಿಲಯದ ಎಂಟು ಶಿಖರಗಳಲ್ಲಿ ಒಂದು : ಜಿನನಿಲಯರುಚಿರರುಚಕಾಚಲದ ಪೂರ್ವದಿಗ್ಭಾಗದ ವೈಡೂರ್ಯ ಕಾಂಚನಕನಕಾರಿಷ್ಟದಿಕ್ಸ್ವಸ್ತಿಕನಂದನಾಂಜನಮೂಲಕಂಗಳೆಂಬೆಂಟುಂ ಕೂಟಂಗಳೊಳ್ (ಆದಿಪು. ೭-೩ ವ). ೧೦. [ಸಂಗೀತ] ಒಂದು ರಾಗದ ಹೆಸರು.

[ಸಂ.]

ನಂದನಂದನ (ನಾ). ನಂದಗೋಪನ ಮಗ ; ನಂದಕುಮಾರ ; ಕೃಷ್ಣ : ಅಂತು ವಿಜಯಮಂಗಳಂ ನೆಗೞೆ ಗೋಕುಲಮಂ ಪೊಕ್ಕು ನಂದನಂದನಂ ಗೋಪಾಲವಿನೋದಮೆ ನಿತ್ಯೋತ್ಸವಮಾಗೆ ಸುಖದಿಂದಿರ್ಪನ್ನೆಗಂ (ಜಗವಿ. ೪-೫೮ ವ) ; ನಂದನಂದನಸನ್ನಿಭನು ಸಾನಂದದಿಂದಲೆ ನಮ್ಮುವನು ಕೃಪೆಯಿಂದ ಸಲಹಂಗೆ ದೇವ ಜಗದಾರಾಧ್ಯ ಗುರುರಾಯ (ಕುಮ್ಮಾಅ. ೧-೧೨).

[ನಂದ + ನಂದನ]

ನಂದನಚರ (ನಾ). [ಜೈನ] ಹಿಂದಿನ ಜನ್ಮದಲ್ಲಿ ಮಗನಾಗಿದ್ದು ಸಂಸಾರ ಚಕ್ರದಲ್ಲಿ ಸುತ್ತುತ್ತಿರುವವನು : ಅರಸನುಮಾಗಳ್ ನೆತ್ತದ ಭರದಿಂ ಕೊಳ್ಳೆನುತುಮಿಕ್ಕೆ ನವಿಲಂ ಕೊಳ್ಳೆಂದರೆನುತ್ತೆ ಪಿಡಿದುದಂಬಾಚರಿ ಕುರ್ಕುರಿನೊಂದು ಬೀಟ್ವ ನಂದನಚರನಂ (ಯಶೋಚ. ೩-೪೨). [ಸಂ.]

ನಂದನಬನ (ನಾ). = ನಂದನವನ ೨ : ಕಾಗೆ ನಂದನಬನದೊಳಗಿರ್ದರೇನು ಕೋಗಿಲೆಯಾಗಬಲ್ಲುದೇ ಹೇಳಾ (ಬಸವ. ೯೮) ; ಹಿರಿಯ ಜಕ್ಕಿಯಂವೆಯ ಕೆಱೆಯ ಹಿಂದಣ ನಂದನಬನದೊಳಗೆ ಗದೆ ಸಲಗೆ ಖ ೨ (ಎಕ. II (R), ೫೩೫-೮; 1250). [ನಂದನ + ಬನ]

ನಂದನವನ (ನಾ). ೧.ಇಂದ್ರನ ವನ,-ಉದ್ಯಾನವನ : ನಂದನವನದೊಳಗೇನೇಂ ಬಂದವೊ ಮರನೆಂದು ಕಂತು ಬೆಸಗೊಳೆ ಮಾವಿಂ ಬಂದಿರ್ದುವೆಂದು ಬಿನ್ನವಿಪಂದದೆ ಕೋಗಿಲೆಗಳುಲಿದುವಾಮ್ರದ್ರುಮದೊಳ್ (ಅಜಿಪು. ೬-೧೩) ; ನಂದನವನಮಧ್ಯದ ಕೊಳದಿಂದಗಲದ ಹಂಸವಿಂಥುನಮೆನೆ . . . ನಲಿಯುತಿರ್ದರಾ ದಂಪತಿಗಳ್ (ಜಗವಿ. ೨-೫೨) ; ನಂದನವನಸಂಭವಹರಿಚಂದನ ಸಂತಾನ . . . ಕುಸುಮಕೋಟಿಯಂ (ಪುಷ್ಪಪು. ೧೧-೪೪) ; ನಮ್ಮ ದೊರೆ ನಂದನವನಕ್ಕೆ ಬೇಂಟೆವೋಗಿ ತಂದಿರ್ಪನೀ ಕಂದರ್ಪನಂದನನನ್ ! (ಚಂದ್ರಸ. ೩೯-೦). ೨. (ಸುಂದರವಾದ) ತೋಟ ; ಉದ್ಯಾನವನ : ಬರಿಸುವೆನಿಂದು ನಂದನವನಾಂತರದಲ್ಲಿಗೆ ಕಾಂತನಂ ಸಮಂತಿರಿಸುವೆನಂತ ನಂತಸುಖಸಂಗತಮಂಗಳಕಾರಣಂಗಳಂ (ಕವಿರಾ. ೨-೧೦೪) ; ನೀನುವಹನುಂ ಕಿಱಿಯಂದೊರ್ವರುಪಾಧ್ಯಾಯರ ಪಕ್ಕದೊಳೋದುವಂದು ನಂದನವನದೊಳಗೆ ನೀನೆನ್ನ ಪೂಣ್ದ ಪ್ರತಿಜ್ಞೆಯಂ ನೆನೆದಾ (ವಡ್ಡಾರಾ. ೧೨೫-೫) ; ನಂದನವನಪವನಂ ಬಱಿವಂದೊಡಗೊಂಡೊಯ್ದು ಪುಗಿಸೆ ಬನಮಂ ಪುಗಲೆಂಬೊಂದನ್ಯಭೃತಕ್ಕಾಣತಿವಂದಂತಾಯ್ತತನು ಬೆಸಸೆ ಕುಸುಮಾಮೋದಂ (ಶಾಂತಿಪು. ೮-೩) ; ತ್ರಿಕಾಳಂ ದೇವತಾರ್ಚ್ಚನಂಗೆಯ್ವುದಕ್ಕಂ ದೇವರ್ಗ್ಗೆ ನಂನ್ದನವನಂ ಮಾಟ್ಪುದಕ್ಕಂ . . . ಬ್ರಹ್ಮಲಿಂಗಿಭಟರ್ಗ್ಗೆ ಕೊಟ್ಟುದು (ಮೃಅರಿ. ೧೯೪೬, ೨೮-೧೭ ; 1032) ; ಆ ದ್ವಿತೀಯ ಮುನೀಶ್ವರ ನಗ್ರಮುನೀಶ್ವರಾದೇಶದಿಂ ನಂದನವನೋದ್ದೇಶದೊಳಿರ್ದ ಜನ್ಮಾಂಧಕಿಯಲ್ಲಿಗೆ ಬಂದು ಮುಂದೆ ನಿಂದು (ಸುಕುಮಾ. ೫-೨೩ ವ) ; ನಂದನವನಂಗಳಿಂ ಮಾಕಂದಮಹೀಜಾತರಂಜಿತೋದ್ಯಾನಗಳಿಂ ಸೌಂದರತೆವಡೆದು ತೋಱುವ ನಂದಿಗ್ರಾಮಕ್ಕೆ ಬಂದನಾ ನೃಪತೆನಯಂ (ಪುಷ್ಪಾಸ್ರ. ೩-೯).

[ನಂದನ + ವನ]

ನಂದನವಿಮಾನ (ನಾ). [ಜೈನ] ಸ್ವರ್ಗಲೋಕದಲ್ಲಿರುವ ಒಂದು ಸ್ಥಳದ ಹೆಸರು : ವರಾಹಾರ್ಯನುಂ ನಂದನವಿಮಾನದೊಳ್ ಮಣಿಮಕುಟಕೇಯೂರಮಣಿಕುಂಡಲವಿಭೂಷಣನಾಗಿ ಮಣಿಕುಂಡಲನೆಂಬೊಂ ದಿವಿಜನಾದಂ (ಆದಿಪು. ೫-೭೦ ವ). 'ವಿಮಾನ' ಪರಾ.

[ನಂದನ + ವಿಮಾನ]

ನಂದನಾವಲಿ, ನಂದನಾವಳಿ (ನಾ). ವನಗಳ ಗುಂಪು,-ಸಮೂಹ : ಊರ್ಜಿತವಸಂತಂ ಸಂತತಂ ನಂದನಾವಲಿಗೆಲ್ಲಂ ರತಕೇಳಿರಾಗವನಿಶಂ ಸ್ತ್ರೀಪುಂವ್ರಜಕ್ಕೆಲ್ಲಮುಜ್ಜ್ವಲಚಂದ್ರಾತಪಮೊರ್ಮೆಯುಂ ರಜನಿಜಾತಕ್ಕೆಲ್ಲಮಾ ದೇಶದೊಳ್ (ಜಗವಿ. ೨-೩). ನಂದನಾವಳಿ : ಕರಜಳಧರ ಕಳಧೌತೋತ್ಕರವರ್ಷದೆ ವಂದಿ ನಂದ[ನಾ]ವಳಿಗಳ ವಿಸ್ತರಿಪುವೆನೆ ದಾನಮಖಿಳೋರ್ವ್ವರೆಗೆ ವಿಚಿತ್ರೋಕ್ತಿ ರೂಪವಿದ್ಯಾಧರಿಯ (ಸೌಇಇ. XX, ೪೯-೩೭ ; 1076 ?). [ನಂದನ + ಆವಲಿ]

ನಂದನಾವಳಿ 'ನಂದನಾವಲಿ' ನೋ.

ನಂದನೆ (ನಾ). ಮಗಳು ; ತನುಜೆ : "ವೆಣ್ ದುಹಿತೆ ನಂದನೆ ಪುತ್ರಿ ಸುತೆಯೆನಿಕ್ಕುಂ" (ಮಂಗರಾ. ೯೧-೯) ; ಈ ಭುಜಾದಂಡಮುಂ . . . ಈ ಧನುರ್ದಂಡಮುಮುಳ್ಳಿನಂ ದ್ರುಪದನಂದನೆ ಸಂಧಿಯನಾಗಲೀವೆನೇ (ಗದಾಯು. ೦-೭೩) ; ಕಮಲಭವ ಜಗವಱಿಯೆ ನಂದನೆಯ ಐದೆಯನು ನೆಱೆ ಮಾಡಿಯರೆವೆಣ್ಣಾದನೀಶ್ವರನಿಂದ್ರಗಿಂದ್ರರ ಹಾದಿಯದು ನಗೆಯಿತ್ತಣವರನು ಹೇಳಲೀನೆಂದ (ತೂರರಾ. ೧-೫-೩೭) ; ನಂದನೆ ನೊಂದಪಳೆಂ ದೊಲ್ದಿಂದುಧರಂ ಪಿಡಿದು ನೆಗಪಿ ನಿಜಕರದಿನವಳ್ತಂದಣ್ಣೆವಾಲನೀಂಟಿದಂ (ವೃಷವಿ. ೯-೮೨). [ಸಂ. ನಂದನಾ]

ನಂದನೋತ್ಕರ (ನಾ). = ನಂದನಾವಲಿ : ಶರತ್ತಪನತಾಪದಿಂ ಕೊರಗಿ ಕೂಡೆ ಕೋರೈಸಿದಾ ನರೇಶ್ವರವಧೂಕದಂಬಕಮನಾಱಿಸಲ್ಕಾಗಳಬ್ಜರೇಣುಗಳನೆತ್ತಿಬಂದುದಿದಿರ್ವರ್ಪವೋಲ್ ನಂದನೋತ್ಕರಂಬಿಡಿದು ಮಾರುತಂ ಚಳತರಂಗೆಯಿಂ ಗಂಗೆಯಿಂ (ಆದಿಪು. ೧೧-೫೩). [ನಂದನ + ಉತ್ಕರ]

ನಂದಯಂತಿ (ನಾ). [ಸಂಗೀತ] ಒಂದು ರಾಗದ ಹೆಸರು : ಗಾಂಧಾರಿ ರಕ್ಷೋಗಾಂಧಾರಿ . . . ನಂದಯಂತಿ ಕರ್ಮವ್ಯಭಚಾರಿಣಿ ಕೌಶಿಕಿಯೆಂಬ ಹತ್ತು ರಾಗಂಗಳು ಮಧ್ಯಮಗ್ರಾಮದಿಂ ಪುಟ್ಟಿದವು (ವಿವೇಕ. ೨೩೩).

[ಸಂ. ನಂದಯಂತೀ]

ನಂದವರ್ತಿ (ನಾ). = ನಂದಿಬಟ್ಟಲು : ನಂದವರ್ತಿಯನೊಲಿವನೆಮ್ಮ ಶಂಕರನೆಂಬ ಮಂದೈಪ ಕಂಪೆ ಸಾಲ್ವುದು ಶಶಿಧರಂಗೆಂಬ (ಬಸರ. ೬-೫೩).

[<ಸಂ. ನಂದ್ಯಾವರ್ತ]

ನಂದವಾಡಿಗೆ (ನಾ). ಒಂದು ಊರಿನ ಹೆಸರು: ನವಿಲೆಯ [ಜಟೆ]ಯ ಸಂಕರದೇವಾಲಯಮುಮಂ ನನ್ದವಾಡಿಗೆಯೊಳ್ ಶ್ರೀನಾಗಲೇಶ್ವರಮು(ಂ) ನಲ್ಲಿಯ ಮಟಮುಮಂ (ಸೌಇಇ. XI-1, ೧೦೩-೨೭; ?). [?]

ನಂದವಿಡು (ಕ್ರಿ). ಸಂತೋಷಗೊಳಿಸು ; ಆನಂದಪಡಿಸು : ಅಂದು ಗುರುಮನವೊಲಿದು ಪಾರ್ಥನ ನಂದವಿಟ್ಟನು ತನ್ನ ವಿದ್ಯಾವೃಂದವನು ತಾನೀವೆನೆನುತಲಿ ದ್ರೋಣ ಹರುಷಿಸಿದ (ಸಂಭವ. ೧೮-೧೯).

[ನಂದ + ಇಡು$_1$]

ನಂದವಿಲ್ಮುಡಿ (ನಾ). ಒಬ್ಬಾತನ ಹೆಸರು : ನನ್ದವಿಲ್ಮುಡಿಯರಾ ಮಗನೆ ಪಲಿಪಱೆ (ಎಇ. IX, ೨೦-೬ ; 600). [?]

ನಂದಳಕ 'ನಂದು' ಪರಾ.

ನಂದಾಉಳ 'ನಂದು' ಪರಾ.

ನಂದಾತ್ಮಜ (ನಾ). = ನಂದನಂದನ : ನಾರಾಯಣ ನಾಗಶಯನ ನಂದಾತ್ಮಜ ಮಾರಜನಕ ಮಂಜುಳಾಂಗ ಸಾರಸನಯನ ಸಕಲಲೋಕೇಶ್ವರ ಸಾರಿದೆ ಸಲಹೆನ್ನನೊಲಿದು (ಶತಸಾಂ. ೬೧-೩). [ನಂದ + ಆತ್ಮಜ]

ನಂದಾದೀಪ 'ನಂದು' ಪರಾ.

ನಂದಾದೀಪ್ತಿ 'ನಂದು' ಪರಾ.

ನಂದಾದೀವಿಗೆ 'ನಂದು' ಪರಾ.

ನಂದಾದ್ಯುತಿ 'ನಂದು' ಪರಾ.

ನಂದಾಪುರ (ನಾ). ಒಂದು ಊರಿನ ಹೆಸರು ; P ಈಗಿನ ಮಂಗಳೂರಿನ ಸಮೀಪದ ಒಂದು ಹಳ್ಳಿ. ಹಿಂದೆ ಇದು ನಂದಅರಸರ ರಾಜಧಾನಿಯಾಗಿತ್ತು : ನನ್ದಾಪುರದೊಳ್ ಕೇತೇಶ್ವರಮುಮಂ ಕೋಹಳ್ಳಿಯೊಳ್ ದಾನವಿನೋದತ್ರೈಪುರುಷದೇವರ ಸಾಲೆಯುಂ . . . ಮಾಡಿಸಿ (ಸೌಇಇ. XI-1, ೧೦೩-೨೦ ; ?). [ನಂದ + ಪುರ$_2$]

ನಂದಾಬೆಂಕಿ 'ನಂದು' ಪರಾ.

ನಂದಾಬೆಳಕು 'ನಂದು' ಪರಾ.

ನಂದಾವನ 'ನಂದು' ಪರಾ.

ನಂದಾವಳ 'ನಂದು' ಪರಾ.

ನಂದಾವುಳ 'ನಂದು' ಪರಾ.

ನಂದಾವೆಳಕು 'ನಂದು' ಪರಾ.

ನಂದಿ (ನಾ). ೧. ಸಂತೋಷಗೊಳಿಸುವವನು ; ಮಗ. ೨. ಸಂತೋಷಪಡುವವನು : ಅಂತು ದುಶ್ಶೀಲ ದುರಾಚಾರ ದುರ್ಯಶೋನಂದಿಯಾದ ವಿಶಾಖನಂದಿ . . . ಪರಿಭ್ರಮಣಪರಿಣತನಾಗಿ ತೊಟಲ್ವೊಂ (ವರ್ಧಪು. ೨-೩೬ ವ). ೩. ಶಿವನ (ವಾಹನವಾದ) ಒಬ್ಬ ಅನುಚರ ; ಬಸವ : "ನಂದಿ ತಂಡುವಕ್ಕುಂ" (ಮಂಗರಾ. ೩-೧೯) ; ಏಱ್[ಯೆ] ನಂದಿ[ಯನಾ] . . . ಭೂತನಾಥಂ ಬಂದಂ (ಪಂಪಭಾ. ೧೨-೦೩೯) ; ನಾದಪ್ರಿಯ ನಂದಿಯ ನೇಱಿಕೊಂಡು ಅತೀತನ ಮೇಲೆ ಆನಂದಸಿಂಹಾಸನವಿಕ್ಕಿ ಕುಳ್ಳಿತ್ತ ಕೂಡಲಸಂಗಮದೇವರ ದೇವತ್ವ ಕೆಟ್ಟಿತ್ತು (ಬಸವ. ೯೩೦) ; ಆ ರಜತಗಿರಿ ಶಿಖರದೊಳ್ ಮದನಾರಿಯುಂ ಗೌರಿಯುಮುಚಿತಲೀಲಾರಚಿತಸುಖ ಸಂಕಾಪ್ರಭುಕೌತುಕದೊಳಿರಲಂ ವೀರ ವೀರಕ ನಂದಿರೇಣುಕ . . . ಪ್ರಮಥರೋಲೈಪ ಸಮಯದೊಳು (ಬಸಪು. ೦-೩೨) ; ನಂದಿಯನು ಏಱಿದನ ಚುದಿರನ ಸೂಡಿದನ ಕಂದನ ಬೇಡಿ ನಲಿದಾನು ನೆಗವುತ್ತ ಮುಂದೆ ಪೇಳುವೆನು (ಸರ್ವಜ್ಞ. ೦) ; ಶಂಕರನ ಮುಂದೆ ನಂದಿಯೂ ಅಷ್ಟು ವಿಧೇಯತೆಯಿಂದ ನಮ್ರತೆಯಿಂದ ನಿಲ್ಲುತ್ತಾನೋ ಇಲ್ಲವೋ (ಸುವಸಂ. ೮೦) ; ಕೆಂದಬಣ್ಣದ ಬಲು ಚಂದ ಚಂದ ಹೋರಿಗಳು ನಂದಿಯ ಹಂಗ ಮೈಮಾಟ ಹಂಡ ಬಂಡ ಮೊಂದಿ ನಡೆದವು ಸಾಲುಗೊಂಡು (ಸಿದ್ಧಪು. ೦೭-೨೦). 'ನಂದಿವಾಹನ' ಪರಾ. ೪. ಬಸವನ ವಿಗ್ರಹ,-ಮೂರ್ತಿ : ನಂದಿಗಳು ಗಾತ್ರದಲ್ಲಿ ದೊಡ್ಡದಾಗಿವೆ (ಮೈವಾಸ್ತು. ೧೦೦). ೫. ಒಂದು ಬಗೆಯ ಮರ : "ಪುಂಗವಮೆನಲ್ ನಂದಿ" (ಮಂಗರಾ. ೩೭-೦೯) ; ನಂದಿ, ಬೋಳಂದರು, ಬೆಲ್ಲತ್ತಿ (ಮೈಱಿಗಿ. ೪೯-೯೭೪) ; ಮರಗಳು : ಹೆಸವ, ಹೆಬ್ಬಲಸು . . . ತಡಸಲು, ತಪಸಿ, ನಂದಿ, ಕುಂಕುಮ, ಸಂಪಿಗೆ (ನಮ್ಮನು. ೨೩೬). 'ನಂದಿಮರ', 'ನಂದಿವೃಕ್ಷ' ಪರಾ. ೬. [ಜೈನ] ಸಂಘಗಳಲ್ಲಿ ಒಂದು ಬಗೆ : ಸಂಘಗಳು : ಮೂಲ, ನಂದಿ, ಯಾಪನೀಯ, ಯಾಪನೀಯ ನಂದಿ, ದ್ರಾವಿಡ, ಶ್ರೀಸಂಘ, ಕಿತ್ತೂರು (ಕಶಾಅ. ೮೬). 'ನಂದಿಸಂಘ' ಪರಾ. ೭. ಜೈನಮುನಿಗಳ ಗಣಗಳಲ್ಲಿ ಒಂದು ಬಗೆ : ಗಣಗಳು ದೇವ, ಸೇನ . . . ನಂದಿ, ಗ(ಕ)ವಾಟ . . . ಆಜಿ (ಕಶಾಅ. ೮೬). ೮. ಒಬ್ಬ ಜೈನಯತಿಯ ಹೆಸರು : × × × ಪೌತ್ರ ನನ್ದಿಮುನಿಪ × × × ಮಾರ್ಯ್ಯನ × × × (ಎಕ. II, ೧೦೦-೩; ಸು. 700). ೯. ಗ್ರಾಮಾಧಿಕಾರಿ (?) : ಸೀಮಾಂತರಸ್ಯ ಸಾಕ್ಷಿಣಾಂ ಕೊತ್ತಮಙ್ಗಲದ ನಂದಿಯರು ಹಡದ ನಡೆದು ವುಡೆಯರು ಗಣಿಗನೂರ ಅನದಕರು ತಲಕಾಡಹನ್ನುವರು ಮದ್ದೂರ ಗಣೆಯರುಂ (ಎಕ. III (R), ನಂಜನ. ೨೬೨-೨೬ ; 969). ೧೦. (?) : ನನ್ದಿಯ ಸ್ಥಾನ ಮುಮೆನಾಯಗ ×× ಮಂನಿಱಿಪೆನಂದಱ್ದಿಗೆ ವನ್ದಿಟ್ಟು ತುರುವನಿಕ್ಕಿಸಿ ಸತ್ತಂ (ಎಕ. IX, ದೇವನ. ೪೨-೯ ; 900 ?).

ನಂದಿ ಬಿಡು = ಸತ್ತವರಿಗಾಗಿ ಮಾಡುವ ಅಪರಕರ್ಮದ ಸಂಬಂಧದಲ್ಲಿ ಒಂದು ಮರಿಯೆತ್ತನ್ನು ಸ್ವತಂತ್ರವಾಗಿ ಓಡಾಡಲು ಬಿಡು : ಸತ್ತಾತನು ವಂಶದ ಹಿರಿಯನಾದುದರಿಂದ ಉತ್ತರಕ್ರಿಯೆ ಮಾಡುವಾಗ ಯಾವುದಕ್ಕೂ ಕಡಮೆ ಮಾಡದೆ, ನಂದಿ ಬಿಡುವುದಕ್ಕೂ ಕೈಹಿಡಿಯಲಿಲ್ಲ (ರೂಢಿ). ನಂದಿಯ ಕುಣಿತ = ನಂದಿಕೋಲನ್ನು ಹಿಡಿದು ಮಾಡುವ ಕುಣಿತ : ಆ ದಿನದ ಉತ್ಸವದಲ್ಲಿ ನಂದಿಯ ಕುಣಿತ ಬಹಳ ಆಕರ್ಷಣೆಯುಳ್ಳದಾಗಿತ್ತು (ರೂಢಿ). ನಂದಿಯ ಕೋಲು = ನಂದಿಚಿಹ್ನೆಯ ಧ್ವಜವನ್ನುಳ್ಳ ಕೋಲು ; ನಂದಿಕಂಬ : ಆಕೆ ಕುರೂಪಿ ; ನಂದಿಯ ಕೋಲಿನಂತೆ ಉದ್ದವಾದ ಸೊರಗಿದ ದೇಹ (ಭೂಮಿತಾ. ೬೨). ನಂದಿಯ ಧ್ವಜ = ನಂದಿಧ್ವಜ ೩ : ನಂದಿಯ ಧ್ವಜವನ್ನು 'ನಂದೀಕೋಲು' 'ನಂದೀಕಂಬ' ಎಂದೂ ಕರೆಯುತ್ತಾರೆ (ರೂಢಿ). ನಂದಿಯ ಪಳವಿಗೆ, ನಂದಿಯ ಹಳವಿಗೆ = ನಂದಿಧ್ವಜ ೧ : ನಂದಿಯ ಪಳವಿಗೆ ಮಿಳಿರುತೆ ದುಂದುಭಿರವದೊಳಗೆ . . . ಪೊಕ್ಕಂ (ತ್ರಿಪುವಿ. ೩೨-೭೯ ; ಇಂದುಚೂಡನು ಸುತ್ತಿದೋಲೆಯನೊಂದು ನಂದಿಯ ಹಳವಿಗೆಯನಾಗಳು ಹಿಡಿದುಕೊಂಡು . . . ಕಣಜಂಗಳಿಗೆ ಹರಿತಂದು (ಬಸಪು. ೫೨-೦೬). ನಂದಿಯುಂಗುರ=ಶಿವಭಕ್ತರು ಧರಿಸುವ ಬಸವನ ಕೆತ್ತನೆಯುಳ್ಳ ಉಂಗುರ.

[ಸಂ. ನಂದಿನ್]

ನಂದಿಕ (ನಾ). ಶಿವನ ವಾಹನ ; ನಂದಿ ; ಬಸವ. 'ನಂದಿಕೇಶ' ಪರಾ.

[ಸಂ.]

ನಂದಿಕಂಬ (ನಾ). ನಂದಿಯ ವಿಗ್ರಹವಿರುವ, ಅಲಂಕೃತವಾದ ಉದ್ದವಾದ ಕಂಬ : (ಕಿ). 'ನಂದಿಕೋಲು' ಪರಾ.

[ನಂದಿ + ಕಂಬ$_1$ (<ಕಂಭ)]

ನಂದಿಕಲ್ಲುಸೊಪ್ಪು (ನಾ). ಒಂದು ಬಗೆಯ ಸೊಪ್ಪು : (ಮೈಱಿಗಿ. ೦೨-೨೨೦). [? + ಸೊಪ್ಪು$_3$]

ನಂದಿಕಾಡ (ನಾ). ಒಬ್ಬಾತನ ಹೆಸರು : ಕೂಡಲೂರ್ಪ್ಪಾಡಿ ಒಡೆಯ ನನ್ದಿಕಾಡನಾ ಎಱನಾಗನಾ ವ್ಯವಹಾರದನ್ತರಂ ಸಾಲಮಿಲ್ಲಾಮ್ (ಎಕ. X, ಕೋಲಾರ ; ೭-೩ ಸು. 760). [?]

ನಂದಿಕೆ (ನಾ). (ದೀಪ ಮೊದಲಾದುವು) ನಂದುವಿಕೆ; ಆರಿಹೋಗುವಿಕೆ: ಒಂದಿಕೆ, ಒಂದಿಕೆಗಳ್; ನಂದಿಕೆ, ನಂದಿಕೆಗಳ್ (ಶಬ್ದಾನು. ೫೬೮ ಪ್ರಯೋ).

[ನಂದು + – ಇಕೆ]

ನಂದಿಕೇಶ (ನಾ). ೧. = ನಂದಿಕೇಶ್ವರ ೧ : ಶ್ರೀಸದಾಶಿವನೊಡನೆ ಗರ್ವಿಸಿ . . . ವ್ಯಾಸದೇವಂ ಕೈಯನೆತ್ತಿದೊಡಾ ಸಮಯದಲಿ ನಂದಿಕೇಶನು ಕೀಸಿ ಮುಱಿಯನೆ ಆತನೆರಡು ಕರಂಗಳಂ ಮುನಿದು (ಬಸಪು. ೫೪-೪೯) ; ಎಲೆಗುರುವೆಯಾ ಶುಕ್ರಗಾ ಮಂತ್ರವೇತೆಱದೆ ನೆಲೆಯಾಯ್ತುದಂ ಪೇಳ್ವುದೈ ನಂದಿಕೇಶ (ವೀಶೈಪು. ೨-೦೩-೨೦). ೨. ಈಶ್ವರ ; ಶಿವ. ೧, ೨ : ಶ್ರೀಶೈವಶ್ರೇಯಮಂ ಮಾಳ್ಕೆಮಗನವರತಂ ನಂದಿಕೇಶಂ ಮಹೇಶಂ (ರಾಜಶೇ. ೦-೦). [ನಂದಿಕ + ಈಶ]

ನಂದಿಕೇಶ್ವರ (ನಾ). ೧. ಈಶ್ವರನ ಪ್ರಮಥಗಣದಲ್ಲಿ ಪ್ರಮುಖನಾದವನು ; ಬಸವ : ನಂದಿಕೇಶ್ವರ ಭೃಂಗಿನಾಟ್ಯ ನಮ್ಮ ಲಿಂಗನ ಮುಂದೆ (ಬಸವ. ೫೬೫) ; ಮೃಡ ಮೃಡಾಣಿ ಕುಮಾರ ಗಣಪತಿ ಮೃಡಸಮಾನದ ನಂದಿಕೇಶ್ವರ (ಸಾನುಜ. ೯-೯) ; ಮನ್ಮತದಿಂದಯೋನಿಜನಾಗಿಯೊಗೆದನು ನಂದಿಕೇಶ್ವರನೆಂಬ ಪೆಸರಿಂದಾ ಶಿಲಾದಂಗೆ (ಬಸಪು. ೨-೧೦) ; ಚಂದಯ್ಯ ಪ್ರೀತಿಯ ನಂದಿಕೇಶ್ವರನ ಮುನ್ನ ಕಂದ ಗಣಪದೇವಯ್ಯ ಅಂದದ ಶಿವಶರಣರುಯಿರುತಿರೆ ಚಂದವನೇನ ಬಣ್ಣಿಸುವೆ (ಕಪೂತ. ೬-೦೬). ೨. ಈಗಿನ ಬಿಜಾಪುರಜಿಲ್ಲೆಯ ಬಾದಾಮಿ ಹತ್ತಿರದ ಒಂದು ಗ್ರಾಮದ ಹೆಸರು. [ನಂದಿಕ + ಈಶ್ವರ]

ನಂದಿಕೇಶ್ವರಶೈವ (ನಾ). [ಶೈವ] ಶೈವಮತದ ಎಂಟು ಪ್ರಭೇದಗಳಲ್ಲಿ ಒಂದಂ : ಶೈವಮತದಲ್ಲಿ ನಾವು ಎಂಟು ಪ್ರಭೇದಗಳನ್ನು ಕಾಣಬಹುದು. (೧) ದ್ವೈತ ಪಾಶುಪತ, (೨) ದ್ವೈತಶೈವಸಿದ್ಧಾಂತ, (೩) ದ್ವೈತಾದ್ವೈತಕುಲೀಶ ಪಾಶುಪತ, (೪) ವಿಶಿಷ್ಟಾದ್ವೈತಶೈವ, (೫) ವಿಶೇಷಾದ್ವೈತ (ವೀರಶೈವ), (೬) ನಂದಿಕೇಶ್ವರಶೈವ, (೭) ರಸೇಶ್ವರಶೈವ, (೮) ಕಾಶ್ಮೀರ ಶೈವ (ಧಾಕಥ. ೨೧೦). [ನಂದಿಕೇಶ್ವರ + ಶೈವ]

ನಂದಿಕೇಶ್ವರಸಂಹಿತೆ (ನಾ). [ಶೈವ] ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಗಳಲ್ಲಿ ಒಂದಂ : ಸ್ಥಿರಸಂಹಿತೆ ಸ್ಥಾಣುಸಂಹಿತೆ ಮಹತ್ಸಂಹಿತೆ ನಂದಿಸಂಹಿತೆ ನಂದಿಕೇಶ್ವರಸಂಹಿತೆ ಏಕಪಾದಪುರಾಣ ಶಂಕರಾಗಮ ನೀಲಧ್ವಜತಂತ್ರ ಶಿವಭದ್ರಾಗಮ ಕಾಲಭೇದಾಗಮ ಶ್ರೀಮುಖಾಗಮ ಶಿವಶಾಸನಾಗಮ ಶಿವರೇಖಾಗಮ ದೇವೀಮತವೆಂದು ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಂಗಳು (ವಿಚೇಕ. ೭೧). 'ನಂದಿಸಂಹಿತೆ' ಪರಾ. [ನಂದಿಕೇಶ್ವರ + ಸಂಹಿತೆ]

ನಂದಿಕೋಲು (ನಾ). =ನಂದಿಕಂಬ : ಅನ್ಯಜ ಸುಲದಿ ಕಂಬಕಂ ಕುಲಿಶಾವನ ಶಕ್ತಾ ನಂದಿಕೋಲು ಸಂಗಮೇಶ್ವರನ ನುಡಿಗೆ ಸಬಳ ಶಾಶ್ವಿಕಸಯಲ್ಲಿ ಕತ್ತಿ ತೆಡಾಯ ಖಡಲ್ಲಿಡಯಲ್ಲಿ ಬಿಲ್ಲು ನಾರಾಚ ಗದೆ ಸೂಲ್ಲಿ ಚಿಕ್ಕ ವಂಕ್ಕಿ ಚೂರ್ರಿ ಜಯ ಬಾಡಿಶ್ರುಂಗಾರ ತೊಡಪೂ ಸಂಣ ಚಂದ್ರಾಯುಧಾ ಚಲುತಲಿ ಮೊದಲಾದಾ ಬತ್ತೀಶಾಯುಧಾ (ಎಕ. XVI, ಗುಬ್ಬಿ. ೭೪-೫೦; ಸು. 1672) ಒಂದು ನಂದಿಕೋಲಿನಷ್ಟು ಆಳ ಅವ (ದೀಪಹ. I, ೪೯); ಗಣೆ ಅಥವಾ ನಂದಿಕೋಲನ್ನು ಮೆರೆಸುತ್ತ ಒಯ್ಯುವುದು (ಕರ್ಣಪೂ. II, ೬೯).

ನಂದಿಕೋಲು ಕುಣಿತ=ನಂದಿಕಂಬವನ್ನು ಹಿಡಿದಂ ಮಾಡುವ ನೃತ್ಯ : ನಂದಿಕೋಲು ಕುಣಿತದಲ್ಲಿ ಆ ಕಂಬಕ್ಕೆ ಕಟ್ಟರುವ ತಾಳಗಳು, ಕುಚ್ಚುಗಳು, ತಾಳಹಾಕಿದಂತೆ ಶಬ್ದಮಾಡುತ್ತವೆ (ಕೂಥ). ನಂದಿಕೋಲು ಕುಣಿಸು = ನಂದಿಕಂಬವನ್ನು ಹಿಡಿದು ಕುಣಿ: ನಂದಿಕೋಲು ಕುಣಿಸ್ತಾ ಇದ್ದೀಯಾ? (ತುಂಗಭ. ೩). [ನಂದಿ + ಕೋಲು$_1$ (<ಕೋಲ್$_1$)]

ನಂದಿಗುಂದ (ನಾ). ೧. ಒಬ್ಬಾತನ ಹೆಸರು : ನಂದಿಗುನ್ದರ್ಗೆ ದಾನಂ ಗೊಟ್ಟದು ಕೆಸುಗೊಳದ ಮಾಜನಂ ಒನ್ದಡುವ ಮರ್ದೂರೊಳ್ (ಎಕ. IV, ಹಿಗ್ಗಡ. ೪-೩೬; ಸು. 750). ೨. ಒಂದು ಊರಿನ ಹೆಸರು : ನನ್ದಿಗುನ್ದದ ಪುಮ್ಪೊನ್ನವೊಪ್ಪಿಯಿಂ × × × ಗಾಣಗಾವ್ಣುನಾಡೆಲ್ಲ ಪಾಱಿದೊಡಂ (ಎಕ. IX, ದೇವನ. ೪೨-೬; ಸು. 900 ?). [?]

ನಂದಿಗೊಳಿ (ನಾ). ಒಂದಂ ಊರಿನ ಹೆಸರು : ಶ್ರೀಮದಜಿತಸೇನ ಮ್ಮಾಧಿರಾಜರ ನನ್ದಿಗೊಳಿಯಂ ಗವ್ಣುನ್ದ × × ಮಿಯಾ ಭಸ್ಪಕೆ . . . ದೇವ ಭೋಗ×××ಎಲ್ಲ ಸಲ್ಸುದು(ಎಕ. IX, ಹೊಸಕೋ. ೩೭-೧೨;ಸು. 950). [?]

ನಂದಿಣಿಗೆ (ನಾ). ಒಂದು ಊರಿನ ಹೆಸರು : ನನ್ದಿಣಿಗೆ ನಾಮಗ್ರಾಮ (ಮೇ)ಪೂರ್ವಸ್ಯಾಂದಿಶಿ (ಇಆ. VII, ೪೪-೯೨; 10ನೆಯ ಶತ). [?]

ನಂದಿತ (ಗು). ಸಂತೋಷಗೊಂಡ ; ಸಂತುಷ್ಟವಾದ : ನಂದಿತಾಮಳ ಭಕ್ತಿರಸ ಸಾನಂದವುಳಕಂಗಳು ತನುವಿನೊಳ್ ಸಂದಣಿಸೆ ದಂಡಪ್ರಣಾಮ ವನಿಕ್ಕಿ ವಂದಿಸುತ (ಬಸಪು. ೨-೨೦). [ಸಂ.]

ನಂದಿದೇವ (ನಾ). ಒಬ್ಬಾತನ ಹೆಸರಂ : ಆಚಾರ್ಯಪುರುಷ ಇಱಿದು ಬಸವಱಿಯದೆ ಬೇಟ್ಟೊರನ್ ತೆಱಿನ ವೆಚ್ಚದೊಂ ಪಸುಣರ ಪೊಸವೊ ಕುಱಿಲಂ ಪೊ × × ವ ಈಯದೆ ಈಱಿಯದೆ ನನ್ನಿ ಸುಡಿಯದೆ ನಂದ್ದೆದೇವಂ ಗಟಿಸ್ಸಿಮುಯ್ವಪ್ಪಡೆ ದೊಂಗರ ಅಲೆದೊಂ ಮೂದಲಿಪೊಂ (ಎಇ. XXIV, ೩೬-೦೩; ಸು. 885). [ನಂದಿ + ದೇವ]

ನಂದಿದ್ರುಮ (ನಾ). ನಂದಿಮರ ; ನಂದಿವೃಕ್ಷ : ಅಲ್ಲಿ ಸೌಧರ್ಮೇಂದ್ರಂ ನಂದಿದ್ರುಮದೊಳ್ ಮಣಿಮಯಶಿಬಿಕಾಯಾನಮನಿಟ್ಟಿಪುವುದುಂ (ಶಾಂಪು. ೧೦-೧೦೩ವ). [ನಂದಿ + ದ್ರುಮ]

ನಂದಿಧ್ವಜ (ನಾ). ೧. ನಂದಿಯು ಚಿಹ್ನೆಯಂಳ್ಳ ಧ್ವಜ.–ಬಾವುಟ : ಎತ್ತಿಸಿದ ನಂದಿಧ್ವಜಂಗಳ ಪೊತ್ತದ ಪತಾಕೆಗಳ ಪಲ್ಲವಸಕ್ತಿಗೆಯು ಸಾಲು ಗಳನೇಕವ್ಯಾಸಹಸ್ರಗಳಿಂ . . . ದೇವಾ ಪೃಥ್ವಿ ಬಂದೆಸೆಯೆ (ಬಸಪು. ೩೬-೩೩) ; ಬಿರುದ ಬಿರಂದಿನ ನಂದಿಧ್ವಜವಿತತಿ ಪುರದೊಳಿರ್ದುದು ಚೆಲ್ವಿಂ (ಹಮ್ಮೀರ. ೧-೬೫) ; ಶ್ರೀವೃಷಭರಾಜನನುಯಾರೋಹಣಂಗೈಯೆ . . . ಬಿರುದ ಕೊಂಡಾಡಿ ಕೈವಾರಿಸುವ ಚಂಡಕೀರ್ತಿಗಳು ಮುಂವಿಡಿದ ಶ್ರೀನಂದಿ ಧ್ವಜವೂ (ನವಮೋ. ೨೨-೩೦). ೨. ನಂದಿಯು ಚಿಹ್ನೆಯಂಳ್ಳ ಧ್ವಜವನ್ನು ಹೊಂದಿದವನಂ ; ಶೈವ : ದೇವಾಂಗರು 'ನಂದಿಧ್ವಜ' ರೆಂದು ಹೇಳಿದೆ (ಕರ್ಣಪೂ. II, ೨೦). ೩. ನಂದಿಯಂ ಚಿಹ್ನೆಯುಳ್ಳ ಧ್ವಜವನ್ನು ಹೊಂದಿರುವ ಕೋಲು ; ನಂದಿಕಂಬ ; ನಂದಿಕೋಲಂ : (ಕ). [ನಂದಿ + ಧ್ವಜ]

ನಂದಿನಾಗರಿ (ನಾ). ಒಂದಂ ಬಗೆಯ ಲಿಪಿ : ನಂದಿನಾಗರಿ ಕನ್ನಡ ಮತ್ತು ಗ್ರಂಥಲಿಪಿಗಳನ್ನು ಉವಾಧ್ಯಾಯರು ಬಾಲಕರಿಗೆ ಹೇಳಿಕೊಡುತ್ತಿದ್ದರಬೇಕು. ಆ ಕಾಲದ ಶಾಸನಗಳೂ ಕೂಡ ಕನ್ನಡ, ಗ್ರಂಥ ಮತ್ತು ನಂದಿನಾಗರಿಲಿಪಿ ಗಳಲ್ಲಿರುವುದು ಗಮನಾರ್ಹ (ಕಣಲಿ. ೨೪೨) ; ಅದರ ಕೆಳಗೆ ನಂದಿನಾಗರಿ ಅಕ್ಷರಗಳಲ್ಲಿ "ಷಣ್ಮುಖದಾಸ" ಎಂದಿದೆ (ಹೊಯ್ಸಣಾ. ೦೫೦). [ಸಂ. ನಂದಿನಾಗರೀ]

ನಂದಿನಾಥ (ನಾ). = ನಂದಿಕೇಶ್ವರ ೧ : ಇಂದುಧರನನುಮತದೊಳಾದಿಯು ನಂದಿನಾಥನು ಬಸವನಾಮದಿ ಬಂದಪಂ ಶಿವಭಕ್ತಿಯಂ ಮುಮುತಿಗೆ ಪಸರಿಸಲು (ಬಸಪು. ೨ ಸೂಚನೆ) ; ನಂದಿನಾಥನಂ ಭೃಂಗವೀರೇಶ ಷಣ್ಮುಖ ಸಂದಿಹ ವಿಘ್ನೇಶ್ವರನು ಇಂದುಧರನ ಎಡಬಲದಲ್ಲಿ ಸೂರಿಯ ಚಂದ್ರರು ಮೆರೆದು ರಾಜಿಪರು (ಕಪೂತ. ೫-೦೩). [ನಂದಿ + ನಾಥ]

ನಂದಿನಿ (ನಾ). ೧. ಸಂತೋಷವನ್ನುಂಟುಮಾಡುವವಳು; ಆನಂದವನ್ನು ಕೊಡುವವಳು ; ಮಗಳು. ೨. ಕಾಮಧೇನುವಿನ ಪಂಗಳು ; ವಸಿಷ್ಠ ಮಹರ್ಷಿಯ ಹೋವಂಧೇನು : ಸರಸಚರಿತನೆ ನಂದಿನಿಯ ಪರಿಚರಿಯೆಯನು ಹಗಲಿರುಳು ತಪ್ಪದೆ ವರಪ ಪಡೆಯುವವರೆಗೆ ಮಾಡುವದೆಂದು ಮುನಿಯುಸುರಿ ಪರಸಿದನು (ರಘುವಂ. ೧-೯೦). ೩. ಒಂದು ಬಗೆಯ ವೃಕ್ಷ ; ನಂದಿವರ : "ನಂದಿನೀ – ಹರೇಣುಕ, ಹಸು, ನಂದಿಯ ವಂರ, ಎತ್ತುನಾಲಗೆ" (ಓಷಧಿ. ೮೩). ೪. ಒಂದು ನಾಡಿಯ ಹೆಸರು : ಪೂರ್ವ ದಿಕ್ಕಿನ ನಂದಿನೀ ಎಂಬ ನಾಮಾಂತರವುಳ್ಳ ಧಾರಿಣೀನಾಡಿಯಲ್ಲಿ ಶುಕ್ಲ ವರ್ಣನಾಗಿ ವಾಸುದೇವ, ದಕ್ಷಿಣದಲ್ಲಿ ಪಿಂಗಳಾನಾಡಿಯಲ್ಲಿ ಪಿಂಗಳವರ್ಣ ನಾಗಿ ಸಂಕರ್ಷಣ, ಮಧ್ಯದಲ್ಲಿ ಸುಷುಮ್ನಾನಾಡಿಯಲ್ಲಿ ರಕ್ತವರ್ಣನಾಗಿ ನಾರಾಯಣ–ಹೀಗೆ ೫ ರೂಪಗಳಿಂದ ಭಗವಂತನಿರುವನು (ಹಸಾಸ. ೪೭೬). ೫. ನಾದಿನಿ : "ಸ್ವಸೃತನಯಂ ಸ್ವಸ್ರೀಯಂ ಪೆಸರಿಂ ನಾದುನಿ ನನಾಂದ್ಯ ನಂದಿನಿಯೆನಿಕುಂ" (ಪಸು.ಕೋ.೫೬-೩೪). P ಇದು 'ನಾದಿನಿ' ಎಂಬುದರ ಅಪಲಿಖಿತವಿರಬಹುದಂ. [ಸಂ. ನಂದಿನೀ]

ನಂದಿನೆಲಬೇವು (ನಾ). ಒಂದಂ ಬಗೆಯ ಸಸ್ಯ : (ಕ್ಯುಕಿಗಿ. ೪೮-೯೫). [?]

ನಂದಿಪತಾಕ (ನಾ). = ನಂದಿಧ್ವಜ ೧ : ನಂದಿಪತಾಕಮುದಬ್ಧಿಸದಾವಂದರ ಮಂದಿರ ಚಂದ್ರಕಲಾ . . . ಸುಬಂಧು ಜಯಾ (ಹಾಲಾಸ್ಯ. ೧-೪-೦೬). [ನಂದಿ + ಪತಾಕ]

ನಂದಿಪತಾಕೆ (ನಾ). = ನಂದಿಧ್ವಜ ೧ : ಕಣಯಂ ಕುಣಿಕಿಲ ಬಂಡಿಯಂ ಬಚ್ಚಣಿಸಿ ನಂ[ಪಾಕಾಂ. ವಂ]ದಿಪತಾಕೆಗಳ ತೋರಣವನದಱಿಂಳಲಂಕರಿಸಿ (ಬಸಪು. ೫೫-೩). [ನಂದಿ + ಪತಾಕೆ]

ನಂದಿಪುರಾಣ (ನಾ). ಹದಿನೆಂಟು ಉಪಪುರಾಣಗಳಲ್ಲಿ ಒಂದಂ : ಸನತ್ಕುಮಾರಪುರಾಣ ನಾರಸಿಂಹಪುರಾಣ ನಂದಿಪುರಾಣ ಶಿವಧರ್ಮಪುರಾಣ

ದೂರ್ವಾಸ ಪುರಾಣ ನಾರದೀಯಪುರಾಣ ಕಪಿಲಪುರಾಣ ಮಾನವಪುರಾಣ ಉಶನಃಪುರಾಣ ಬ್ರಹ್ಮಾಂಡಪುರಾಣ ವಾರುಣಪುರಾಣ ಕಾಳೀಪುರಾಣ ವಾಸಿಷ್ಠಲೈಂಗಪುರಾಣ ಸಾಂಬಪುರಾಣ ಸೌರಪುರಾಣ ಪರಾಶರಪುರಾಣ ಮರೀಚಿಪುರಾಣ ಭಾರ್ಗವಪುರಾಣವೆಂಬವೇ ಆಯಾ ನಾಮಧೇಯಮುಳ್ಳವರಿಂ ನಿರೂಪಿತಮಾದ ಹದಿನೆಂಟು ಉಪಪುರಾಣಂಗಳು (ವಿವೇಕ. ೮).

[ನಂದಿ + ಪುರಾಣ]

ನಂದಿಬಟ್ಟಲು, ನಂಜವಟ್ಟಲು, ನಂಜುಬಟ್ಟಲಂ, ನಂದಿವಟ್ಟ, ನಂದಿವಟ್ಟಲಂ (ನಾ). ಸುವಾಸನೆಯಾದ ಬಿಳಿಯಂ ಹೂವುಗಳನ್ನು ಬಿಡುವ ಒಂದಂ ಬಗೆಯ ಗಿಡ; ತಗರ; ನಂದ್ಯಾವರ್ತ; ಮಂಜಟಿ: "ನಂದ್ಯಾವರ್ತ . . . ನಂದಿಬಟ್ಟಲ ಹೂವು" (ಗಂಗಾಮ. ೧೭೭); ಮನೆಯ ಮುಂದೆ ಚಮನ್, ರೋಜಾ, ಡೇರಾ, ನಂದಿಬಟ್ಟಲು ಗಿಡಗಳ ಮಧ್ಯೆ ಪನ್ನೇರಿಳೆ ಹಣ್ಣಿನ ಮರ (ಹೊಸಕ್ಷಿ. ೦೨೩). **ನಂಜವಟ್ಟಲು:** ನಂಜವಟ್ಟಲಿನ ಗಿಡದ ತುಂಬ ಹೂವು ಅರಳಿದೆ (ರೂಢಿ). **ನಂಜುಬಟ್ಟಲು:** ನಂಜಪ್ಪ ಬೆಳೆದನೆ ನಂಜುಬಟ್ಟಲ ಹೂವ ಮಲ್ಲಯ್ಯೆಳದನೆ ಮರುಗವ (ನಾಪದ. ೧೦೦). **ನಂದಿವಟ್ಟ:** "ನಂದಿವಟ್ಟಮದು ತಗರಸಂಜ್ಞಿಕಂ ತಾನಕ್ಕುಂ" (ವಸ್ತುಕೋ. ೩೮-೩೫); ಪೊಕ್ಕುಟು ನಂದಿವಟ್ಟದರಲಂ ಚೆಲ್ವಿಂದು ಗುರ್ಕೂಡೆ ಕೇದಗೆಯಂ . . . ಕೈಮಿಗೆ ಪುಷ್ಪಾಸ್ತ್ರನ ಪಂಚಬಾಣ ಮಿವಳೆಂಬಾಶಂಕೆಯಂ ಮಾಡಿದಳ್ (ಧರ್ಮಾಮ್ಯ. ೭-೨೦೭); ನಂದಿವಟ್ಟದ ಪಾಯವಟ್ಟಮುಮಂ ಕಾಂಚಿವಾರದ ಕಾಂಚಿಯುಮಂ . . . ವಿವಿಧ ಕಿಸಲಯದ ಕಿಸಲಯಮುಮಂ ಮನೋಹರಮೆನೆ ಸಮೆದು ತಮತಮಗೆ ಪಸದನಂಗೊಂಡು (ಚಂದ್ರಪು. ೭-೧೦೪ ವ); ಪಾದರಿ ಪಾರಿಜಾತವು ನಂದಿವಟ್ಟವು ಹಾದರಿ ತುಂಬುರ ಜಾಲಿ (ದೇವಾಂಪು. ೬-೨೭೦). **ನಂದಿವಟ್ಟಲು:** "ನಂದ್ಯಾವರ್ತಃ–ನಂದಿವಟ್ಟಲು, ಮಿಾನಿನ ಭೇದ" (ಓಷಧಿ ೮೪); ಗುಲಾಬಿ, ನಂದಿವಟ್ಟಲು . . . ಮೊಲ್ಲೆ, ಮಲ್ಲಿಗೆ, ಇರವಂತಿಗೆ ಇವುಗಳಲ್ಲಿ ಕೆಲವು ಕೊಲ್ಲೆಗಳನ್ನು ಕೆಲವು ಅಂಟ ಗಳನ್ನು ಮಾಡಿ ಹಚ್ಚಬೇಕು (ಕೃಷಿಪ್ರ. ೨೦೦).

[ದೇ.॥ ತಮಿ. ನನ್ತಿಯಾವಟ್ಟ; ತುಳು. ನಂದಿಬಟ್ಟಲ್]

ನಂದಿಮರ, ನಂದಿಯ ಮರ (ನಾ). ಒಂದಂ ಬಗೆಯ ಮರ; ನಂದಿವೃಕ್ಷ: "ಕಚ್ಛಃ –ನಂದಿಮರ" (ಓಷಧಿ. ೨೦); ಅದೂರದಿಂದಾಲಾಪನೆಗೆ ಮೊದಲ್ ಗೆಯ್ದುದೊರ್ ಖಂಜನಂ, ಹಿಂಬಾಲಿಸಿದುವದಂ . . . ಇಲ್ಲಿ ಬಿದಿರ ತುದಿಯಿಂದಲ್ಲಿ ನಂದಿಮರದಿಂದಿತ್ತ . . . ಎತ್ತ ಕಿವಿಯಿತ್ತೊಡತ್ತಣಿಂದೆ (ಶ್ರೀರಾಮಾ. ೪೮೦-೧೭೦). **ನಂದಿಯ ಮರ:** "ಜಟಾವೃಕ್ಷಃ–ನಂದಿಯ ಮರ" (ಓಷಧಿ. ೬೧); ಹೊಳೆಯ ದಡದ ಮೇಲಣ ನಂದಿಯ ಮರನ ಒತ್ತಿನಲು (ಎಕ. VIII, ತೀರ್ಥಹ. ೧೯೦-೩೬; 1407). [ನಂದಿ + ಮರ$_1$]

ನಂದಿಮುಖ (ನಾ). ನಂದಿಯಂ ಎದುರು,–ಸಮಕ್ಷ (?): ಹಾರುವರೆಲ್ಲರೂ ನೆರೆದು ಶೂದ್ರನ ಹಾರುವನ ಮಾಡುವಲ್ಲಿ ನಂದಿಮುಖವಲ್ಲದೆ ಮಾಡಲಾಗದು ವಿಭೂತಿಯಲ್ಲದೆ ಮತ್ತೇನನೂ ಮಾಡಲಾಗದು (ಬಸವ. ೬೧೪).

[ನಂದಿ + ಮುಖ]

ನಂದಿಮುದ್ರೆ (ನಾ). ನಂದಿಯ ಗುರುತು; ವೃಷಭನ ಚಿಹ್ನೆ: ವಂದಿಸುತ ಮುಂದೆಸೆಯೊಳಿರಲಂತವರ ಹಣೆಗಳಲಿ ನಂದಿಮುದ್ರೆಯನೊತ್ತಿ (ಬಸಪು. ೫೦-೪೭). [ನಂದಿ + ಮುದ್ರೆ]

ನಂದಿಮೆಟ್ಟಲು (ನಾ). ಬಸವನ ವಿಗ್ರಹಗಳನ್ನು ಎರಡು ಕಡೆಗಳಲ್ಲೂ ಹೊಂದಿರುವ ಮೆಟ್ಟಲು; ದೇವಾಲಯಗಳ ಶಿಲ್ಪರಚನೆಯ ಒಂದು ಭಾಗ: ಮೊದಲು ನಾಲ್ಕು ಗರ್ಭಗುಡಿಗಳು . . . ಒಂದೇ ಸಾಲಿನಲ್ಲಿದ್ದವೆಂದು, ಅನಂತರ ಐದನೆಯ ಗರ್ಭಗುಡಿಯನ್ನು ಸೇರಿಸಲಾಯಿತೆಂದು ಅಂತರಾಳಗಳಿಂದಲೂ ನಂದಿಮೆಟ್ಟಲುಗಳಿಂದಲೂ . . . ಸ್ಪಷ್ಟವಾಗಿದೆ)ಹೊಯ್ಸಾವಾ. ೧೩೫). [ನಂದಿ + ಮೆಟ್ಟಲು]

ನಂದಿಯಮರ 'ನಂದಿಮರ' ನೋ.

ನಂದಿಯಾಲ, ನಂದ್ಯಾಲ (ನಾ). ಒಂದು ಊರಿನ ಹೆಸರು: ಶ್ರೀನಿರ್ವ್ವಿನೀತರಾ ಕಿಱಿಯಾ ಮಗನ್ದಿರ್ಕಾಡುವಟ್ಟಿಯರಿನ್ದಮ್ ವಲ್ಲವರಸರಿನ್ದಂ ಕೊಱ್ಗೊಣ್ಡಿಪಟಂ ಸೂಡಿದೊರಾ ಅನುಜೊಇನ್ದುಕನಲ್ಗೊಳಿ ನನ್ದಿಯಾಲ ರಾವಿಟ್ಟದುಪಡೆವೈಲಾಮುಅಮಸಪಾಲುಮ್ (ಎಕ. VI, ಚಿಕ್ಕಮ. ೫೦-೩; ಸು. 430); ಮಣಿಯಡೆಗುರೆಯ ನಂದಿಯಾಲ ಸೀಮ್ಪಾಲ ನಾಣ್ಡಱಿಯ ಮದಣ್ಡ (ಮೈಆರಿ. ೧೯೨೪, ೭೮-೨೬; ?). **ನಂದ್ಯಾಲ:** ಮಣಿಗ್ರಾಮಶ್ರೇಣಿ ಚತುಃಸಾಮನ್ತ ಟೆಗುರೆ ಅಮಣಿಯ ನಂದ್ಯಾಲ ಸೀಂಬಾಲದೇಶ ಪ್ರಕೃತ್ಯಾಧ್ಯಕ್ಷಾಣಾಂ (ಮೈಆರಿ. ೧೯೩೦, ೩-೨೦; ಸು. 500); ಶೀಯವಲ್ಲವರಸರು ಟೆಗುರೆಯರುಂ ಮಣಿಯರುನ್ನಂದ್ಯಾಲರುಂ ಶೀಮ್ಬಾಲರುಂ ಚಾತುರ್ವ್ವೈದ್ಯಮುಮಱಿಯೆಂ ಪೆತ್ತಾ ಎಲ್ಲಾ ಸಾಮನ್ತರು ಮತ್ತಾಣಿಉಂ ಸಾಕ್ಷಿ (ಮೈಆರಿ. ೧೯೪೦, ೦-೩೪; ಸು. 788); ಶ್ರೀಮನ್ಮಹಾಮಂಡಲೇಶ್ವರ ನಂದ್ಯಾಲದ ವೀರರಾಜ ಶ್ರೀರಂಗರಾಜಗಳ ಮಕ್ಕಳು (ಎಕ. X, ಮುಳಬಾ. ೪-೧೨; 1547). [?]

ನಂದಿಯುಂಡಿಗೆ (ನಾ). ನಂದಿಯ ಚಿಹ್ನೆ,–ಮುದ್ರೆ; ವೃಷಭನ ಮೊಹರು: ತಾಮ್ರಪರ್ಣಿಯ ಮುತ್ತುಗಳುಂ ನಂದಿಯುಂಡಿಗೆಯ ಮಿಸುನಿಯ ಪೊಂಗಳುಂ . . . ಬಸವನ ಮನೆಯ ಮುಂದೆ ಸುರಿದು ರಾಸಿಯಾಗಿರೆ (ಬಸರ. ೦೨-೬೪); ಪಡಿವೊನ್ನ ಜಾಳಿಗೆಯನಂತದಂ ಸೌಂದರಂ ಕೈಕೊಂಡು . . . ನಂದಿಯುಂಡಿಗೆಯ ರಾಯಸವಿರಲು ಕಂಡದಕೆ ವಂದಿಸಿ ನಿಜೋತ್ತಮಾಂಗದೊಳಿಟ್ಟು (ಸೌಂದಪು. ೧೯-೧೦). [ನಂದಿ + ಉಂಡಿಗೆ$_3$]

ನಂದಿಲಿಪಿ (ನಾ). ಒಂದಂ ಬಗೆಯ ರಹಸ್ಯ ಲಿಪಿ: ದೇವಲಿಪಿ ನಂದಿಲಿಪಿಯಾ ಅಗಣಿತ ಲಿಪಿಗಳ ನೋಡಲಱಿಯದೆ ಬಿಜ್ಜಳರಾಯನ ಸಭೆಯೊಳು ಕಳಕಳಗೊಳುತಿದ್ದರು ವಿದ್ವಾಂಸರುಗಳೆಲ್ಲಾ (ಭಾಸ್ಕರ. ೭೭-೭).

[ನಂದಿ + ಲಿಪಿ]

ನಂದಿವಟ್ಟ 'ನಂದಿಬಟ್ಟಲು' ನೋ.

ನಂದಿವಟ್ಟಲು 'ನಂದಿಬಟ್ಟಲು' ನೋ.

ನಂದಿವರ್ಧನ (ನಾ). ೧. ಈಶ್ವರ; ಶಿವ. ೨. ಮಗ; ತನಯ. ೩. ಸ್ನೇಹಿತ; ಮಿತ್ರ. ೪. ನಂದಿಮರ ಮತ್ತು ಅದರ ಹೂವು: "ತುನ್ನಃ, ಕುಬೇರಃ, ಕುಣಃ, ಕಚ್ಛಃ, ಕಾಂತಕಲಃ, ನಂದಿವೃಕ್ಷಃ–೬ ನಂದೀಯಂಬುವ ಮರದ ಹೆಸರು. ಬಸವನ ಗಿಡ, ನಂದಿವರ್ಧನಹುವ್ವ ಪ್ರಸಿದ್ಧ" (ಸಿದ್ಧಾಂತಿ. ೧೪೧). ೫. ಒಂದು ಬಗೆಯ ದೇವಸ್ಥಾನದ ರಚನೆ. ೬. [ಜ್ಯೋತಿ] ಹಂಣ್ಣಿಮೆಯಂ ಅಥವಾ ಅಮಾವಾಸ್ಯೆಯ ಹೆಸರು; ಪಕ್ಷದ ಕೊನೆಯ ದಿವಸ. [ಸಂ.]

ನಂದಿವಳ್ಳಿ (ನಾ). ಒಂದಂ ಊರಿನ ಹೆಸರು: ಕಿಱುವಳ್ಳಿ ಬಾಳವುರು ಇತ್ಯೇಶಾಂತೇಗ್ರಾಮಾನಾಂ ಮಧ್ಯೇ ನೆಱ್ಗಿಯೂರ್ನ್ನನ್ದಿವಳ್ಳಿ ಸಹಿತಸ್ಸುಳ್ಳಿಯೂರ್ನ್ನಾಮಗ್ರಾಮೋದತ್ತಃ (ಎಕ. X, ಕೋಲಾರ. ೬೩-೬೮; 757).

[ನಂದಿ + ಪಳ್ಳಿ$_1$]

ನಂದಿವಾಹ (ನಾ. = ನಂದಿವಾಹನ. [ನಂದಿ + ವಾಹ]

ನಂದಿವಾಹನ (ನಾ). ವೃಷಭನನ್ನು ವಾಹನವಾಗಿ ಉಳ್ಳವನಂ; ಶಿವ: ಮುಕ್ಕಣ್ಣ ಅಂದದಹಿಕುಂಡಲ ಚತುರ್ಭುಜ ನಂದಿವಾಹನ ಗೌರಿಸಹಿತಂ ಮುಂದೆ ನಿಂದು ಮಹೇಶನೀಶನು ಪಾಶಧರಕರನು (ಬಸಪು. ೨೭-೨೬).

[ನಂದಿ + ವಾಹನ]

ನಂದಿವಾಳ (ನಾ). ಒಂದಂ ಬಗೆಯ ಹೂವು: ಮಲ್ಲಿಗೆಯಂ . . . ನಂದಿವಾಳ ಮುಡಿವಾಳ ಸೌಗಂಧಿ ಕಣಗಿಲು ಚಂಪಕಾ ಸಲ್ಲಲಿತ ಪಾರಿಜಾತಾದಿ ಬಹುಪುಷ್ಪಗಳ ನಲ್ಲೆಯರುಯತಿಜಶನದಿಂ ತಿರಿತಂದು (ನವಮೋ. ೨೪-೫೯). [?]

ನಂದಿವೃಕ್ಷ (ನಾ). = ನಂದಿವಂರ; "ನಂದಿವೃಕ್ಷಃ–ನಂದಿಮರ" (ಓಪಧಿ. ೮೪); ಅಶ್ವತ್ಥಾಕಾರಮಪ್ಪ ನಂದಿವೃಕ್ಷ (ನಾಚಿರಾ. ೬); ಕೆಂಪುಗಂಧಗಿರಿ, ನಂದಿವೃಕ್ಷ . . . ಗಂಧಗರಿಗೆ (ಪ್ಯುಜಿಗಿ. ೦೯-೩೪೮). [ನಂದಿ + ವೃಕ್ಷ]

ನಂದಿಸಂಘ (ನಾ). [ಜೈನ] ಜೈನಸಂಘದ ಪ್ರಭೇದಗಳಲ್ಲಿ ಒಂದು: ನಂದಿಸಂಘದರುಂಗಳಾನ್ವಯದ ಗುಣಸೇನಪಣ್ಡಿತದೇವರ್ಗ್ಗೆ . . . ಕೊಟ್ಟರು (ಎಕ. I, ೭೨-೪೩; 1059); ಸ್ವಸ್ತಿಶ್ರೀ ರಾಜಾಧಿರಾಜ ಕೊಂಗಾಳ್ವನಬ್ಬೆ ಪೋಚಬ್ಬರಸಿಯರ್ದ್ರವಿಬಗಣದ ನನ್ದಿಸಂಘದರುಙ್ಗಳನ್ವಯದ ಗುಣಸೇನಪಣ್ಡಿತದೇವರ ಗುಡ್ಡಿ ಮಾಡಿಸಿದ ಬಸದಿ (ಎಕ. I, ೬೮-೦; ?); ಈ ಸಂಪ್ರದಾಯದಲ್ಲಿ . . . ಚೌದ್ಧರ ಮಹಾಸಾಂಘಿಕರಂತೆ ನಂದಿಸಂಘ ಗಣಸಂಘ ದೇವಸಂಘ ಮೊದಲಾದ ಸಂಘಪ್ರಭೇದಗಳಿದ್ದರೂ ಈ ಗ್ರಂಥಗಳು ಸರ್ವಸಮ್ಮತಗಳಾಗಿರುವುವು (ಹಿಂದಸಾ. ೭೪).

[ನಂದಿ + ಸಂಘ]

ನಂದಿಸಂಹಿತೆ (ನಾ). [ಶೈವ] ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಗಳಲ್ಲಿ ಒಂದು: ಸ್ಥಿರಸಂಹಿತೆ ಸ್ಥಾಣುಸಂಹಿತೆ ಮಹತ್ಸಂಹಿತೆ ನಂದಿಸಂಹಿತೆ ನಂದಿಕೇಶ್ವರಸಂಹಿತೆ . . . ದೇವೀಮತವೆಂದು ಚಂದ್ರಜ್ಞಾನಾಗಮದ ಹದಿನಾಲ್ಕು ಭೇದಂಗಳು (ವಿವೇಕ. ೭೦). 'ನಂದಿಕೇಶ್ವರ ಸಂಹಿತೆ' ಪರಾ. [ನಂದಿ + ಸಂಹಿತೆ]

ನಂದಿಸು$_1$, ನೊಂದಿಸು (ಕ್ರಿ). ೧. (ದೀಪ, ಉರಿ, ಬೆಳಕು ಮೊದಲಾದುವನ್ನು) ಆರಿಸು; ಇಲ್ಲದಂತೆ ಮಾಡು: ಕಪ್ಪಂಗವಿಯಾಗಿ ಕವಿವ ದ್ರುಪದವಿಳಯಾನಳನಂ ದ್ರೋಣಂ ಮಹಾದ್ರೋಣ ಪುಷ್ಕಳಾವರ್ತಕಂಗಳೆಂಬ ವಿಳಯಕಾಳನೀಳಜಳಧರವರ್ಷಂಗಳಿಂ ನಂದಿಸೆಯುಂ ನಂದದೆ ಮುಟ್ಟಿವರೆ (ಪಂಪಭಾ. ೧೩-೨೦ವ); ತಮ್ಮೆಱಂಕೆಯ ಗಾಳಿಯಿಂ ಪೊಗೆಯಂ ನಂದಿಸಲೀಯದೆ ಹೋಮಾನಲಪ್ರಜ್ವಲನಮನೆಸಗುವ ಸೋಗೆನವಿಲ್ಗಳಿಂ ಸೊಗಯಿಸುವುದು (ಕಾದಂಪೂ. ೨೨೩); ಜಿನಧರ್ಮಮೆಂಬ ನೀರಿಂ ಕರ್ಮಮೆಂಬ ಕಿರ್ಚಂ ನಂದಿಸದೆ ... ಇರ್ದೊಡೆ ಶಾಶ್ವತಸುಖಂ ದೊರೆಕೊಳ್ಳದು (ಧರ್ಮಾಮೃ. ೭-೯೭); ತಳ್ಳೊಯ್ದ ವಾರಾಸಿಯಿಂ ತದ್ಗಿರಿ ವಹ್ನಿಜ್ವಾಲೆಯಂ ನಂದಿಸಿ ಬಟಿಕ ಜರಾಸಂಧಸೇನಾಸಮೂಹಾಂತರಮಂ ಕಾಲಾಗ್ನಿರುದ್ರಂ ಪುಗುವ ತೆಱದೆ ದೈತ್ಯಾಂತಕಂ ಬಂದು ಪೊಕ್ಕಂ (ಜಗವಿ. ೮-೪೭); ಶಿಶಿರೋಪಚಾರಮಂ ಲಲನೆಗೆ ಮಾಳ್ಪಂದಂ ಘೃತದಿಂ ಕಿರ್ಚಂ ನಂದಿಪ ತೆಱವಾಗಿ ತೋಱುತಿದೆ (ಗಿರಿಕ. ೪-೦೧೫); ತರುಣಿ ಪಾಶುಪತಾಸ್ತ್ರವಾದಿಯ ದಿವ್ಯಮಾರ್ಗಣಪ ಪುರಹರನ ಕೃಪೆಯಿಂದ ಪಡೆದಂತರಿಗಳನು ಸಂಹರಿಸಿ ನಿನ್ನಯ ಪರಿಭವಾಗ್ನಿಯ ನಂದಿಸುವೆ (ಕುವ್ಯಾಅ. ೪-೩೦). ೨. ನಾಶ ಮಾಡು; ಕೊನೆಗಾಣಿಸು; ಕೊಲ್ಲು: ಉರಃಪ್ರದೇಶಮನಿಸೆ ನೆತ್ತರೊಕ್ಕು . . . ಜೋಲ್ದೊಡಾದಮೆ ನಸುನೊಂದು ನಂದಿಸದೆ ತನ್ನನೆ ನಿಂದಿಸಿದಂ ದಿನೇಶಜಂ (ಪಂಪಭಾ. ೧೩-೧೧೭). ೩. ನಿವಾರಿಸು; ಕಳೆ: ರವಿಚಂದ್ರರ್ ನಿಲೆ ಸಿಂಹಲಗ್ನದೊಳಿಳಾಜಾತಾರ್ಕಜರ್ ನೋಡೆ ನೇತ್ರವಿಹೀನಂ . . . ಆ ದುರಿತಮಂ ನಿಶ್ಶೇಷವಾರ್ ನಂದಿಪರ್ (ಜಾತತಿ. ೫೦-೩೮); ತತ್ಪುರದೊಳಿರ್ದ ವಿಶಾಖಿನಂದಿ ಪಸಿವಂ ನಂದಿಸಲೆಂದು ಲಂದಣಿಗರ ಮಂದಿರಕ್ಕೆ ಪೋಪವಂ ಮುಂದೆ ಸಂದಣಿಸಿ ನಿಂದ ನೆರವಿಯಂ ಭೋಂಕೆನೆ ಕಂಡು (ವರ್ಧಪು. ೩-೧೩ವ); ತಂದೆಯ ಮನದಾಗ್ರಹಮಂ ನಂದಿಸುವೆನೆನುತ್ತ ಮುಗಿದ ಕೈವೆರಸಾಗಳ್ ತಂದೆಯೊಡನೆಂದಳಂದರವಿಂದಾನನೆ ಮಧುರವಚನ ರಚನೆಗಳಿಂದಂ (ಪುಣ್ಯಾಸ್ರ. ೬-೭). ನೊಂದಿಸು: ೧. ಭೀಮನಂ ತಿಳುಪಿ ನಾನಾಪರಿಯಲಿ ನೊಂದಿಸಿದ ಶೋಕಶಿಖಿಯನ್ನಾಗ ಬಳಿಕ ಯಮನಂದನನು (ತುರಂಗ. ೯೫-೩೨); ಅಡವಿಯಲ್ಲಿ ಅಡಿಗೆ ಮಾಡಿಕೊಂಡು ನೊಂದಿಸದೆ ಹೊರಟು ಹೋಗುತ್ತಾರೆ (ಮುಂಬಯಿ. ೫-೩); ಬಂಡಾಯದ ಬೇಗೆಯನ್ನು ಕಾಲಲ್ಲಿ ತುಳಿದು ನೊಂದಿಸಿಬಿಟ್ಟಿತು (ಇಪ್ಪಳ. ೦೯೪). [ನಂದು + – ಇಸ್ಸು$_3$]

ನಂದಿಸು$_2$ (ಕ್ರಿ). ಸಂತೋಷಗೊಳಿಸು; ಆನಂದಪಡಿಸು: ಒಂದು ದಾರಿಯಲೀಗ ಕ್ಷಣದಲ್ಲಿ ಸಾಗಿ ವಂದಿಸುವೆ ನಂದಿಸುವೆ ಮಾತಿನನುರಾಗಿ (ಕಎಪು. ೧೨-೪). [ನಂದನ + – ಇಸ್ಸು$_3$]

ನಂದಿಸೇನ (ನಾ). ಒಬ್ಬ ಜೈನಯತಿಯ ಹೆಸರು: ಉರುಸತ್ವನ್ನನ್ದಿಸೇನ ಪ್ರವರಮುನಿವರನ್ದೇವಲೋಕಕ್ಕೆ ಸನ್ದಾರ್ (ಎಕ. II, ೮೮-೪; ಸು. 700).

[ನಂದಿ + ಸೇನ]

ನಂದಿಸೋಪಾನ (ನಾ). = ನಂದಿಮೆಟ್ಟಲು: ತಂಗಿಯವ್ವಾ ಹೋಗಿ ತಗತಾರ ಭಾಸಿಂಗ ನಂದಿಸೋಪಾನದ ನಸಲೀಗಿ (ಮಲ್ಲಿಗೆ. ೭೯). [ನಂದಿ+ಸೋಪಾನ]

ನಂದಿಹಾಳ (ನಾ). ಒಂದು ಬಗೆಯ ಜೋಳ: ಮೂರ ತಿಂಗಳ ಜೋಳ, ದೊಡ್ಡಜೋಳ . . . ನಂದೀಹಾಳ ಈ ಆರು ಜಾತಿಗಳನ್ನು ಮುಖ್ಯ ಪೈರುಗಳಾಗಿ ಬಿತ್ತುವರು (ಕಭಾಗೆ. ೨೭೦). [?]

ನಂದೀಮುಖಿ (ನಾ). ಒಂದು ಬಗೆಯ ಗೋದಿ: ನಂದೀಮುಖಿಯೆಂಬ ಸಣ್ಣವಾಗಿಯೂ ಉದ್ದವಾಗಿಯೂ ಇರುವ ಗೋದಿಯು ಶೀತ ಒಗರು (ಅಷ್ಟಾಂಗ. ೦೦೫). [?]

ನಂದೀಶ (ನಾ). = ನಂದಿಕೇಶ್ವರ ೧: ನಂದೀಶಂ ವೀರಭದ್ರಂ ಘನರವನಚಲಂ (ಗಿರಿಕ. ೦೦-೭೫); ನಂದೀಶ ವೀರಭದ್ರ ಸ್ಕಂದ ಗಜಾನನಮುಖಾಖಿಲ ಪ್ರಮಥಗಣಂ . . . ಎಸೆದಿರ್ಕುಂ (ಉದ್ಭಟ. ೧೨-೧೩೫); ನಿರುತದಿಂ ದತಿವೀರಘೋರಾಪರಿಮಿತೋತ್ಕಟಪಟುತಪವನಾಚರಿಸಿದನು ನಂದೀಶನತಿಶಯವತಿಶಯವಿದೆನಲು (ಬಸಪು. ೨-೧೫). [ನಂದಿ + ಈಶ]

ನಂದೀಶ್ವರ (ನಾ). ೧. = ನಂದಿಕೇಶ್ವರ ೧: ಆದಿಶಿವಲಿಂಗಕ್ಕೆ ವಾಹನವಾದ ನಂದೀಶ್ವರನೆ ಮತ್ತೆ ಶಿಲಾದಮುನಿಗುದಯಿಸಿದ ಪರಿಯಂ ಪೇಳ್ವೆನು (ಬಸಪು. ೧ ಸೂಚನೆ); ನಂದೀಶ್ವರವಂಶಜನಿವನೆಂದಱಿಪುವ ತೆಱದೊಳಮಳ ಗಗನಾಂಗಣದೊಳ್ ಸ್ಪಂದದ ಬಿಂಕದ ಬಿರುದಿನ ನಂದೀಧ್ವಜವಿತತಿ ಪುರದೊಳಿರ್ದುದು ಚೆಲ್ವಿಂ (ಹಮ್ಮೀರ. ೧-೬೫); ಬೇಗದಿಂದೈದಿ ನಂದೀಶ್ವರಂ ಗರುಡನಂ ಪೋಗದಿರ್ತಲೆಯನಾಭರಣಕ್ಕೆ ತಾರೆಂದು ನಾಗಭೂಷಣನಟ್ಟಿದಂ ತನ್ನನೀಯದೊಡೆ ನಿನಗೆ ಬಹುದುಪಹತಿಯೆನೆ (ಚೈಮಿಭಾ. ೦೪-೨೦). ೨. [ಜೈನ] ಮಧ್ಯಮಲೋಕದ ಎಂಟನೆಯ ದ್ವೀಪ. ೩. ಜೈನರ ಒಂದು ವ್ರತ್ಯ–ಹಬ್ಬ; P ಕಾರ್ತೀಕ, ಫಾಲ್ಗುಣ, ಆಷಾಢ–ಈ ಮೂರು ತಿಂಗಳುಗಳ ಕಡೆಯ ಎಂಟುದಿನಗಳಲ್ಲಿ ನಂದೀಶ್ವರವೆಂಬ ದ್ವೀಪದಲ್ಲಿ ಸೌಧರ್ಮಾದಿ ಇಂದ್ರರು ಅದೇ ಸಮಯದಲ್ಲಿ ಲೋಕದ ಜನರೂ ಈ ರೀತಿ ಪೂಜಿಸುತ್ತಾರೆ. ಇದಕ್ಕೆ ನಂದೀಶ್ವರ ಎಂದು ಹೆಸರು: ಇತ್ತ ದಾದಿಯುಂ . . . ನಂದೀಶ್ವರದೆಂಟುದಿವಸಮಭಿಷೇಕ ಮುಮರ್ಚನೆಯುಮಷ್ಟೋಪವಾಸಮುಮಂ ಮಾಡಿ (ವಡ್ಡಾರಾ. ೦೦೭-೫); ಶಕವರ್ಷಮೆಂಟುನೂಱಕೆ ಕಡೆಯೊಳಱುವತ್ತುಮೂಱು ಸಂದಂದು ಜಗತ್ಪ್ರಕಟ ಪ್ಲವಸಂವತ್ಸರದ ಕಾರ್ತಿಕಂ ಮುದಮನೀಯೆ ನಂದೀಶ್ವರದೊಳ್ (ಆದಿಪು. ೦೬-೭೬); ಶಕವರ್ಷಂ ಪಂಚದಶಾಧಿಕ ನವಶತಮಾಗೆ ವಿಜಯ ಸಂವತ್ಸರ ಕಾರ್ತಿಕ ನಂದೀಶ್ವರದಿನದೊಳ್ ಪ್ರಕಟಿಸಿದುದು ರತ್ನನಿಂದಜಿತ ಪುರಾಣಂ (ಅಜಿಪು. ೧೨-೫೪); ಭವಭವದೊಳ್ ಕಟ್ಟಿದನೇಕವಿಧದ ದುಷ್ಕರ್ಮಮಂ ಕಟಲ್ಚಲ್ ಪುಣ್ಯಾಸ್ರವದೊಳ್ ನೆರೆಯಲ್ ಭವ್ಯರ್ಗಿವೆ ದಿವಸಮೆನಲ್ಕೆ ಬಂದ ನಂದೀಶ್ವರದೊಳ್ (ಪುಷ್ಕಪು. ೩-೧೨೪); ಚಂದಣ ವರ್ಣಿಯ ನಂದೀಶ್ವರದ ನೋಂಪಿಯ ಕಥೆ ಒಂದು ಚಂಪೂಗ್ರಂಥ (ಯಶೋಸಂ. ೬೭ ಪೀಠಿಕೆ). 'ತಿಱುನಂದೀಶ್ವರ' ಪರಾ. ೪. ಬಾಹುಬಲಿ ವಿಗ್ರಹದ ಮುಂದಿರುವ ಮಂದರವೆಂಬ ತೇರಿನ ಭೇದಗಳಲ್ಲೊಂದು: ಬಾಹುಬಲಿವಿಗ್ರಹ . . . ಇದರ ಮುಂದಿರುವ "ತೇರಿ"ಗೆ ಮಂದರವೆಂಬ ಹೆಸರು. ಮಂದರಗಳಲ್ಲಿ ನಂದೀಶ್ವರ ಮತ್ತು ಮೇರು ಎಂಬ ಭೇದಗಳಿವೆ (ಹೊಯ್ಸವಾ. ೨೦೭).

ನಂದೀಶ್ವರದಷ್ಟಮಿ = ನಂದೀಶ್ವರವ್ರತವನ್ನು ಆಚರಿಸುವ ಅಷ್ಟಮಿ: ಜೈನಶಾಸನಗಳಲ್ಲಿ ಮುಖ್ಯವಾಗಿ ಎಕಡು ಹಬ್ಬಗಳ ಅಥವಾ ವ್ರತಗಳ ಪ್ರಸಕ್ತಿ ವಿಶೇಷವಾಗಿ ಬರುತ್ತದೆ. 'ಜೀವದಯಾಷ್ಟಮಿ' ಎಂಬ 'ಪರ್ವ' ಒಂದು; ಮತ್ತೊಂದು 'ನಂದೀಶ್ವರದಷ್ಟಮಿ'; ಎರಡನೆಯ ಪರ್ವಕ್ಕೆ 'ತಿಱುನಂದೀಶ್ವರ' ಎಂಬ ಹೆಸರೂ ಉಂಟು (ಕಶಾಅ. ೧೯). ನಂದೀಶ್ವರದ್ವೀಪ = ಜೈನರು ನಂದೀಶ್ವರನೋಂಪಿಯಂ ಕಾಲದಲ್ಲಿ ಜಿನನನ್ನು ಪೂಜಿಸಲಂ ಹೋಗುವ ದ್ವೀಪ: ನಂದೀಶ್ವರದ್ವೀಪಮಹಾಚೈತ್ಯಾಳಿಯೊಳ್ ಪಾವನತರನವಸಂಗೀತಕಕ್ರೀಡೆಯಂಮಾಡಿ ಮನಃಪ್ರಹ್ಲಾದವಂ ತಾಳ್ದುವನನವರತಂ ಶ್ರೀಧರಂ ಕೇಳಿಶೀಳಂ (ಚಂದ್ರಪು. ೪-೭೬). ನಂದೀಶ್ವರನೋಂಪಿ = ನಂದೀಶ್ವರ ೩: ನಂದೀಶ್ವರನೋಂಪಿಯ ಸಮಯದಲ್ಲಿ ದಾನ ಮಾಡುವುದು ಶ್ರೇಷ್ಠವೆಂದು ಶಾಸನವೊಂದು ಹೇಳುತ್ತದೆ (ಕಶಾಅ. ೧೯). [ಸಂ.]

ನಂದೀಶ್ವರಂಗೆಯ್ (ಕ್ರಿ). ನಂದೀಶ್ವರವ್ರತವನ್ನು ಮಾಡು,–ಆಚರಿಸು: ಫಾಲ್ಗುಣಮಾಸದ ನಂದೀಶ್ವರದಂದಱುವರುಂ ಕೊಡಗೂಸುಗಳುವ ವಾಸಂಗೆಯ್ದು ಬಸದಿಗರ್ಚನೆಯಂ ಕೊಂಡು ಪೋಗಿ ದೇವರನರ್ಚಿಸಿ ನಂದೀಶ್ವರಂಗೆಯ್ದು ಬಂದಿಸಿ (ವಡ್ಡಾರಾ. ೧೦೩-೦೫).

[ನಂದೀಶ್ವರ + ಕೆಯ್$_1$]

ನಂದು, ನೊಂದು$_1$ (ಕ್ರಿ). ೧. (ಬೆಂಕಿ, ಬೆಳಕು ಮೊದಲಾದುವು) ಆರಿ ಹೋಗು; ಇಲ್ಲವಾಗು: "ನಂದು – ವಿನಾಶೇ, ಗತತೇಜಸಿ ಚ (ಬೆಳಕು ತಪ್ಪಿಹೋಗು)" (ಶಮಧಾ); ಇಂದುಕಿರಣಂಗಳಿಂದಂ ಚಂದನರಸದಿಂದೆ ಮಾಗಿಯಾ ನೀರಿಂದಂ ನಂದದು ಪರಿತಾಪಾನಳನಿಂದಱಿದೆಂ ನಿನ್ನ ಮೆಯ್ಯ ಕಾಮಜ್ವರಮಂ (ಕವಿಕಾ. ೩-೦೬೪); ಹೋಮಾಗ್ನಿಯನೆಱಂಕೆಯ ಗಾಳಿಯಿಂ ನಂದಲೀಯದುರಿವುವ ರಾಜಹಂಸೆಗಳುಮಂ (ಪಂಪಭಾ. ೦-೦೦೩ ಪ); ಕಿಚ್ಚು ನಂದಿದೊಡೆ ಮತ್ತಮಿಂಧನಮನಿಕ್ಕಲೇಂದು ಕೊಡಲಿಗೊಂಡು ಪುಳ್ಳಿಯಂ ಪೋಟ್ಟಾಗಳ್ (ಜಾಪುಂಪು. ೩೭೪); ಮನಬೀಸರವೆಂಬ ಗಾಳಿ ಬೀಸಿತ್ತು ವಿದ್ಯಾಮುಖದ ಜ್ಯೋತಿ ನಂದಿತ್ತು (ಅಪಚಂ. ೪೦-೦೭೦); ಮರೀಚಿ ನಂದುವ ಸೊಡರ ಕುಡಿವೆಳಗಿನಂತೆ (ಪರ್ಧಪು. ೧೦-೪೯೫); ಕಿಚ್ಚು ನೀರಿಂದ ನಂದುವುದದು ನೆಯ್ಯಿಂದ ಹೆಚ್ಚುವುದಂತೆ ಕಾಮಾಗ್ನಿ ಸಚ್ಚಿದಾನಂದಾತ್ಮರಸದಿ ನಂದುವುದದು ಹೆಚ್ಚುವುದಬಲೆಯರಿಂದ (ಧರಕ. ೬೫-೪೦). ೨. ಶವಂನವಾಗು; ಕುಂದು; ನಾಶವಾಗು: ಎರ್ದೆಗೆಟ್ಟಿನೀಗಳೀ ದಿಟ್ಟಿ ಮರಳ್ದು ನಂದಿದವುದು (ಶಾದಂಪು. ೦೧೯); ತಂದೆಯನಗಲ್ದ ವಿರಹಂ ನಂದದೆ ಕಾರ್ಪಾಸಶಿಖಿಯೊಲೊಳಗೊಳಗಟಲಂ ಸಂಧಿಸೆ ನಿಲಲಾಱದೆ ನಿಜಮಂದಿರದೊಳ್ ರಾಜ್ಯಸುಖಪರಾಙ್ಮುಖನಾದಂ (ಅನಂಪು. ೦೦-೫೩); ಹೆಚ್ಚಿತು ಧರ್ಮ ಧರೆಯೊಳು ದುರ್ಮಾರ್ಗದ ಕಿಚ್ಚಿನೇಳಿಗೆ ನಂದಿತು (ಕಂನವಿ. ೩-೦೦); ನಂದಿದರು ದುಸ್ಸತ್ವದ ಮನಸತ್ತೋನ್ನತರು ರಾಮಕೃಷ್ಣಾದಿಗಳು ದಿವ್ಯಭೂತಿಗಳು (ಮಲಿದೇ. ೪೦-೦). 'ನಂದಿಸು$_1$' ಪರಾ. ೩. ಕಳೆಗುಂದು; ತೇಜೋಹೀನವಾಗು; ಮಂಕಾಗು: ಕಡುನಂದಿ ಕುಂದಿ ಸಮ್ಮಕ್ಕುಲ ದೀಪಕಂಗೆ ಮಗುಟ್ಟಂದುಸಿರ್ದರ್ ಸಚಿವರ್ವಿಷಾದದಿಂ (ಅಂಧಟ. ೦೦-೪೦). ನೊಂದು$_1$: ೧. ಸವತಿಮತ್ಸರವು ಪುಪಂಚದಲ್ಲಿ ಹೆಣ್ಣಿನ ಪಾಲಿಗೆ ಬಂದ ನೊಂದದ ಕಿಚ್ಚು (ಕನ್ನಜಾ. ೦೦೩). ೨. ಅಪ್ರಿಯ ಸುತನೆ ನಿನ್ನಯ ಕಳೆಯುಂ ನೊಂದುಗುಮೆಂದು ಸುರಗುರು ನಳನವೈರಿಗೆ ಶಾಪವಿತ್ತನು (ಸಂಭಪ. ೦೨-೩); ಎಂದಿಗಾನುಂ ನಿನ್ನ ಪೂರ್ವಋಣಗಳ ಲೆಕ್ಕ ನೊಂದಬೇಕೆಂದಿರ್ದೊಡಿಂದೆ ಮೊದಲನಿಡು (ಮಂಕುಳಿ. ೭೩೭).

ನಂದದೀವಿಗೆ, ನಂದಾದೀವಿಗೆ = ಆರದೆ ಇರುವ ದೀಪ; (ದೇವರ ಮುಂದೆ) ನಿರಂತರವಾಗಿ ಉರಿಯುವ ದೀಪ,–ಜ್ಯೋತಿಃ: ಜಿನಚಂದ್ರ ಕುಮಾರಂ. . . ಪೋಲ್ತು ಕನಕರುಚಿಯಿಂದಮಾ ಪಳಿಕಿನ ಕೊಡನೊಳಗಿರ್ದ ನಂದದೀವಿಗೆಯಿರವಂ (ಶಾಂತಿಪು. ೦೦-೪೨); ಮೂಲಸ್ಥಾನಕಲಿದೇವ ಶ್ಯಾಮಿಗೆ ವಿಷ್ಣುದೇವರ್ಗ್ಗೆ ನನ್ದದೀವಿಗೆಗಂ ನಿವೇದ್ಯಕ್ಕಂ ಶ್ರೀಖಣ್ಡಕ್ಕಂ ಧೂಪಕ್ಕಂ ಮೊದಲ್ಗೊಟ್ಟ ಗದ್ಯಾಣಂ ಪದಿನೈಯ್ದು (ಸೌಇಇ. XI-1, ೧೨-೩೩; 1054); ಈ ಪೊನ್ನ ವೃದ್ಧಿಯೊಳಂ ಕೆಯ್ಯ ಗುತ್ತಗೆಯೊಳಂ ಗಂಧಧೂಪ ನಿವೇದ್ಯ ನಂದದೀವಿಗೆಗಂ ಅಱ್ಟೆಸುವ ಮಾಣಿಯ ಜೀವಿತಕ್ಕಂ ಕುಡುವುದು (ಕಇ. II, ೯-೨೮; 1075); ಶ್ರೀಮಾದವಯದೇವಗೆ ಸ್ನಾನಕ್ಕೆ ಆ ಕವಿಲೆಯ ಬಿಟ್ಟ ನನ್ದನವನ ಮಾಡಿಸಿ ನಂದಾದೀವಿಗೆಯುಂ ಮಾಲೆ ಪೂವ ನದಿಯ ಸಿಲ × × × ಬ್ರಹ್ಮಚಾರಿಯ × × × ನದೊಳು (ಎಕ. IV, ಗುಂಡ್ಲುಪೇ. ೮೯-೬; 1000?); ಮತ್ತಂ ದೇವರ್ಗ್ಗೆ ನನ್ದಾದೀವಿಗೆಗಿತ್ತ ಗಾಣವೊನ್ದದಕೆ ಕರವಂದ ತಳಭೋಗಮಸತು ಮೊದಲಾಗೆ ಸರ್ವಬಾಧಾಪರಿಹಾರಂ (ಸೌಇಇ. XI-1, ೩೨-೭೯; 1007); ದೇವರ್ಗ್ಗೆ ಒನ್ದು ನನ್ದಾದೀವಿಗೆ ಚನ್ದ್ರಸೂರ್ಯ್ಯಕೃತಂ ಕುನ್ದದೆ ನಡೆವನ್ತಾಗೆ (ಎಕ. XIV, ಮಳವ. ೦೨೪-೦; 1014); ನಂದಾದೀವಿಗೆಯ ನಡೆಸಿಹೆವೆಂಬವರ ಮುಖವ ನೋಡಲಾಗದು (ಬಸವ. ೨೨೩); ಶಂಕರೆ, ಮಧ್ವ, ರಾಮಾನುಜರಂಥ ಆಚಾರ್ಯರು . . . ಭಗವದ್ಗೀತೆಯಿಂದ ಸ್ಫೂರ್ತಿ ಪಡೆದಿದ್ದಾರೆ; ತಮ್ಮ ಬಾಳ ನಂದಾದೀವಿಗೆಯನ್ನು ಹೊತ್ತಿಸಿಕೊಂಡಿದ್ದಾರೆ (ಧರ್ಮಸಾ. ೦೨೬). ನಂದಳಕ = ನಂದದೀವಿಗೆ (?): ನಯಿವೇದ್ಯ ನಂದಳಕ ನಿತ್ಯಚಿತ್ರ (ಸೌಇಎ. ೦೦೩೨. ಉಡುಪಿ. ೩೪೦-೮; ?). ☞ ಇದು 'ನಂದಾವೆಳಕು' ಎಂಬುದರ ಅಪಲಿಖಿತವಿರಬಹುದು. ನಂದಾಉಳ, ನಂದಾವಳ, ನಂದಾವುಳ=ನಂದದೀವಿಗೆ: ಶ್ರೀಬಿಕ್ಕಿದೇವಯ್ಯಗಳ ಕಯ್ಯಲು ಶ್ರೀಮಧುಕನಾಥದೇವರಿಗೆ ಮೂಱುನಂದಾಉಳವನೂ ಆಚಂದ್ರಾರ್ಕ್ಕಸ್ಥಾಯಿಯಾಗಿ ನಡಸುವಂತಾಗಿ ಕೊಟ್ಟುದು (ಸೌಇಇ. XX, ೩೬೭-೯; ಸು.14ನೆಯ ಶತ); ನೈವೇದ್ಯ ನಂದಾವಳ ಪೂಜಾರಿಯು [ಜಿ]ತಸತ್ರ (ಸೌಇಇ. XX, ೨೨೯-೨೬; 1369 ?); ನಂದಾವುಳಕೆ ಪೊಂದು ಗಾಣದ ಮಾನೆಗ್ಗೆ ಸಲುವದು (ಎಕ. VIII, ಶಿವಮೊ. ೬೯-೨೬; 1320). ನಂದಾದೀಪ = ನಂದದೀವಿಗೆ: ಹೊಂದಿ ನಿದ್ರೆಯ ದೇವ ನಂದಾದೀಪವ ಅಂದು ಪ್ರಜ್ವಳಿಸುತಮಿಂದುಟ್ಟು ಪೊಂದಟ್ಟೆಯ ಮಣಿವೃಂದದ ಭೂಷಣ ಸಿಂಧೂರಸೀಮಂತದಲಿಟ್ಟು (ಪ್ರಸಭಾ. ೦೯-೦); ವಿಜ್ಞಾನಮಂದಿರದಲ್ಲಿ ಒಂದು ಪ್ರಕಾಶವಾದ ನಂದಾದೀಪ ನಂದಿದಂತೆ ಅಯಿತು (ಸತ್ಯಳ. ೭೬); ಅರ್ಚಕ ಜನ್ನಯ್ಯ . . . ನಂದಾದೀಪಕ್ಕೆ ಎಣ್ಣೆ ಸುರಿದು . . . ಧ್ವಜಮರದ ಕಟ್ಟೆಯ ಹತ್ತಿರ ಬಂದಿದ್ದರು (ಪರ್ಮಸ. ೨೨೭). ನಂದಾದೀಪ್ತಿ = ನಂದದೀವಿಗೆ: ಆ ಪುರದಲ್ಲಿ ಪುಟ್ಟಿದ ದ್ರವ್ಯದಲ್ಲಿ ರುದ್ರಾಭಿಷೇಕ ಅಮ್ಮುತ್ತಪಡಿ ನಂದಾದೀಪ್ತಿ . . . ಮುಂತಾಗಿ ನಡೆಯಬೇಕೆಂದು ಆ ಪುರವನೊ . . . ಕೊಟೆಉ (ಎಕ. XV^{I} ಚಿಕ್ಕನಾ. ೦೩-೦೯; 1529); ದೇವಸ್ಥಾನ ೩ಕ್ಕೆ ಅಮೃತಪಡಿ ನಂದಾದೀಪ್ತಿ ಮುಂತಾದ ದೇವಶಾವೆಚ್ಚಕ್ಕೆ . . . ಉಂಡಿಗೆ ವಿವರ (ಎಕ. VII, ಶಿವಮೊ. ೨-೦೩; 1641); ಬಿನ್ನಹ ಸ್ಥಾನಿಕ ತಂಮಣನು ಗಣಾಚಾರದ ಕಟ್ಟುಗೆಯ ತೆರ್ದುವ ಹಣವನು ಸಿವರಾತ್ರಿ ಪುಣ್ಯಕಾಲದಲೂ ಧಾರಾಪೂರ್ವಕವಾಗಿ ನಂದಾದೀಪ್ತಿಗೆಂ . . . ನಂದಾದೀಪ್ತಿಯನು ನಡಸುದು (ಎಕ. VII, ಶಿವಮೊ. ೨೦-೦೦; ?). ನಂದಾದ್ಯುತಿ = ನಂದದೀವಿಗೆ: ಕಡವೂರ ವೀರೇಶ್ವರದೇವರಿಗೆ ಅಮೃತಪಡಿ ನಂದಾದ್ಯುತಿ ಅಂಗರಂಗವಯಿಭೋಗಕ್ಕೆ . . . ಸಮರ್ಪಿಸ್ತೆವು (ಎಕ. XI, ಹೊಳೆಕೆ. ೮೦-೮; 1540). ನಂದಾಬೆಂಕಿ = ಆರದೆ ಇರುವ ಬೆಂಕಿ; ನಿರಂತರವಾಗಿ ಉರಿಯುವ ಅಗ್ನಿ: ಆ ಬೆಂಕಿ ನಿನ್ನೆ ಮೊನ್ನೆಯದಾಗಿರಲಿಲ್ಲ; ಅನೇಕ ದಿನಗಳಿಂದ ಇಪ್ಪತ್ತುನಾಲ್ಕು ಗಂಟೆಯೂ ಆರದೆ ಸಜೀವವಾಗಿದ್ದ 'ನಂದಾಬೆಂಕಿ'ಯಾಗಿತ್ತು (ಮಲಮ. ೬೭೪). ನಂದಾಬೆಳಕು, ನಂದಾವೆಳಕು = ನಂದದೀವಿಗೆ: ಆ ಕಿಮಿಸೆಟಯರು . . . ಸಂಕ[ರ] ನಾರಾಯಣ (೦) ದೇವರಿಗೆ ಕಟಕಂಡ ತೆಱು ಒಂದು ನಂದಾಬೆಳಕು ವರ್ಷ ೧ದಕಂ ಯೆಂಣೆ ಹಾನೆ ೩೬ನು ನಡಸುವರು

(ಸೌಇಇ. IX-11, ೪೦೯-೨೩; 1380); ನೂಱು ಬತ್ತದ ಮಣ್ಣು ಯಾಱು ಪಸುವಂ ಮಾದೇವರ್ಗ್ಗಮಾ ಪಳ್ಳಿಗೊಣ್ಡ ದೇವಗಂ ನನ್ದಾವೆಳಕಿಂಗೆ ಕೊಟ್ಟಂ (ಎಕ.IV, ಗುಂಡ್ಲುಪೇ. ೯೩-೨೭; 1049); ಅಡಿಗನಂ ಭಾಗವ ಹಿತ್ತಿಲ ಮೇಲೆ ವೊಂದು ನಂದಾವೆಳಕು . . . ಮೂ[ಲ] ಗಡಿಯಿಂದಲುವೊಂದು ನಂದಾವೆಳಕು . . . ಗುಡಿಯ ಹಿತಿಲ ಮೇಲೆ ಒಂದು ನಂದಾವೆಳಕು (ಕಇ. III, ೪-೧೭; 1339); ಸಂಖರನಾರಾಯಣದೇವರ ಅಮೃತಪಡಿಗೆ × × × ಪ್ರತಿ ದಿನ ೧ ಕಂ ನಾಡಹಾನೆ ೩ ನಂದಾವೆಳಕಿಂಗೆ . . . ನಡೆಸುವ ಯೆಂಣೆ ವರುಷ ೧ ಕಂ ಹಾನೆ ೨ಡನೂ ನಡೆಸುವಂತಾಗಿ (ಸೌಇಇ. IX-11, ೪೦೫-೧೦; 1357). ನಂದಾವನ = ಸದಾಕಾಲವು ಹೂವು ಬಿಡುವ ತೋಟ: ಪ್ರತಿ ದಿನವೂ ತಿರುಪಡಿವಾಳ ಸಮರ್ಪಿಸುವ ನಂದಾವನ ಮಾಡುವ ಸಂಬಳ ೬ ವರಹ (ಎಕ. XIV, ಶ್ರೀರಂಗ. ೯೫-೩; 1535); ದೇವರ ನಂದಾದೀವಿಗೆ ಕೆಱೆಯ ಕೆಳಗಣ ನಂದಾವನೆಯಿಷ್ಟನು ಸರ್ವ್ವಮಾನ್ಯವಾಗಿ ನಡಸಿ ಬಹಾಂಗೆ ಬಿಟ್ಟ ಮಗ್ಗ ತೋಟ (ಎಕ. XIV, ತಿರುಮ. ೨೪೩-೫; ?). ನಂದಿ ಪೋಗು, ನಂದಿ ಹೋಗು, ನೊಂದಿ ಹೋಗು = ೧. ಇಲ್ಲವಾಗು; ನಾಶವಾಗು; ಶಮನವಾಗು: ವಾಮನಪದಹತಿವಿದಳಿತ ಜೀಮೂತವಿಮುಕ್ತಬಹಳಜಲಧಾರೆಗಳಿಂದಾ ಮುನಿಜನಾಪಕಾರಕ ಧೂಮಧ್ವಜನೆಯ್ದೆ ನಂದಿ ಪೋದತ್ತಾಗಳ್ (ಅರ್ಧನೇ. ೬-೩೫); ನಾನೆಂಬ ಜೀವರು ನಂದಿಹೋಗುವರೈಸೆಯವದಿರಿಗಹುದೆ ಶಿವಪದವು (ಸಂಭಪ. ೧೩-೫೦). ೨. ಆರಿಹೋಗು; ಬೆಳಕನ್ನು ಕಳೆದುಕೊಳ್ಳು: ಕಪಾಲಕುಂಡಲೆಯು . . . ಕೊಠಡಿಯನ್ನು ಬಿಟ್ಟು ಹೊರಗೆ ಹೊರಬಿದ್ದದ್ದೇ ತಡ ಮನೆಯ ದೀಪವು ನೊಂದಿಹೋಯಿತು (ಕಪಾಕುಂ. ೦೨೯). ನಂದೆವೊಯ್ = ನಂದುವಂತೆ ಹೊಡೆ; ನಾಶವಾಗುವಂತೆ ಮಾಡು: ಧೂರ್ಜಟಿಯ ನೊಸಲ ಕಣ್ಣಂ ಸ್ಮರು ನಂದೆವೊಯ್ದಂ (ಮಲ್ಲಿಪು. ೨-೫೬); ಉರಿಲಿಂಗಮನಾಲಿಂಗಿಸಲುಂ ಯುಗಾಂತಹುತವಹನಂ ನಂದೆವೊಯ್ಯಲುಂ (ಜಗವಿ. ೭-೮೪ವ); ತಳ್ತು ಚುಂಬನಮನೆಹರ್ಚೆ ತತ್ತದುಚಿತ ಕ್ರಿಯೆಯಿಂದಮೆ ನಂದೆವೊಯ್ದು (ಚಂದ್ರಪು. ೮-೯೪); ಮನಸ್ತಾಪಮಂ ಧೃತಿ ಸಾಂದ್ರಚಂದ್ರಿಕೆಯಿಂ ನಂದೆವೊಯ್ದು (ರಾಜಶೇ. ೧೩-೯೭ವ).

[ದೇ.ಕ ತಮಿ. ನನ್ತು, ನತು, ನುತು, ನೊನ್ತು, ನೊತು]

ನಂದುರಿ (ನಾ). ಒಂದು ಬಗೆಯ ಮರ: ಕೊಪ್ಪುಗಂಧಗಿರಿ, ನಂದಿವೃಕ್ಷ, ಟೂನಮರ, ನೊಗೆ, ನಂದುರಿ, ಬೆಳಂದಿ, ಗಂಧಗರಿಗೆ (ಮೃಜಿಗಿ. ೧೯-೩೪೮).

[?]

ನಂದುವ (ನಾ). ಒಂದು ವಂಶದ ಹೆಸರು (?): ಜಕ್ಕಿಯಬ್ಬೆ ನಾಟ್ಗೌ ವುಣ್ಡುಗೆಯ್ಯುತ್ತಿರೆ ನಣ್ದುವರ ಕಲಿಗಂ ಪರ್ಗ್ಗಡತನಂ ಗೆಯ್ಯೆ (ಎಕ. VII, ಶಿಕಾರಿ. ೨೦೯-೧೨; 918). [?]

ನಂದೆ (ನಾ). ೧. ಶಕ್ತಿದೇವತೆ; ದುರ್ಗೆ; ಪಾರ್ವತಿ. ೨. [ಜ್ಯೋತಿ] ಎರಡೂ ಪಕ್ಷಗಳ ಪಾಡ್ಯಮಿ, ಷಷ್ಠಿ ಮತ್ತು ಏಕಾದಶಿ ತಿಥಿಗಳು: ಅಭಿಧಾನಕ್ರಮದಿಂ ನಂದೆ ಭದ್ರೆ ಜಯೆ ರಿಕ್ತೆ ಪೂರ್ಣೆಯಿನಿತುಂ ಪ್ರತಿಪತ್ಪ ಭೃತಿದಿನಂಗಳುಂ (ಲೋಕೋಪ. ೦-೨); ನಂದಾ ಭದ್ರಾ ಜಯಾ ರಿಕ್ತಾ ಪೂರ್ಣೆಯೆಂದು ಪಾಡಿವಾದಿಯಾಗಿ ತಿಥಿಪಂಚಕಂಗಳಕ್ಕುಂ (ಪಸಾರ. ೬೭); ನಂದೆಯನು ಭದ್ರೆಯನು ಒಂದಾಗಿ ಅರ್ಧಿಸಲು ಆಂದಿನ ತಿಥಿಗೆ ಸವನಾಗೆ ಗ್ರಹಣ ತಾ ಮುಂದೆ ಬಂದಿಕ್ಕು (ಸರ್ವಜ್ಞ. ೧೫೭೦); ಇಲ ತಿಥಿಗಳಲ್ಲಿ ನಂದಾ, ಭದ್ರಾ, ಜಯಾ, ರಿಕ್ತಾ, ಪೂರ್ಣಾಯುಂ ಸಂಕೇತವು ಪಾಡ್ಯ ಮೊದಲು ಪಂಚಮಿವರೆಗೂ ಆಗುವುವು. ಹೀಗೆ . . . ಅಮಾವಾಸ್ಯೆ ಪರ್ಯಂತ ೬ ಸಲ ಸುತ್ತಿಬರುವವು (ಹಸಾರ. ೩೯೮ ಪದ್ಯಾರ್ಥ). [ಸಂ. ನಂದಾ]

ನಂದ್ಯಾಮ್ಲ (ನಾ). ಒಂದು ಬಗೆಯ ಸಸ್ಯ: "ಕೋಶಾಮ್ರಃ-ನಂದ್ಯಾಮ್ಲ" (ಓಷಧಿ. ೪೧). [?]

ನಂದ್ಯಾಲ 'ನಂದಿಯಾಲ' ನೋ.

ನಂದ್ಯಾವರ್ತ (ನಾ.) ೧. = ನಂದಿಬಟ್ಟಲು: "ಗಂಧರಾಜಃ - ಶ್ರೀಗಂಧ, ನಂದ್ಯಾವರ್ತ, ಜವಾದಿ" (ಓಷಧಿ. ೪೬); ಕುಂದ ಮುಚುಕುಂದ ಮಂದಾರೇಂದೀವರನಂದ್ಯಾವರ್ತ . . . ಮಲ್ಲಿಕಾದ್ಯನೇಕ ಸುರಭಿಕುಸುಮಂಗಳಂ ಸಜ್ಜುಕಮಪ್ಪುವಂ ಪುಟ್ಟಿಯೊಳ್ ತೀವಿಕೊಂಡು (ಪಂಚತಂ. ೧೧೭-೩); ನಂದ್ಯಾವರ್ತದ ಪೂವಂ ತಂದುಱೆ ನೊಣವೂಱಿದೆಡೆಗೆ ಪೂಸುಗೆ (ಐಮದ. ೧೩-೧೧೬); ನಂದ್ಯಾವರ್ತದ ಹೊವನ್ನು ಧರಿಸಿದರೆ - ನೇತ್ರದಲ್ಲಿ ಹುಟ್ಟಿದ ಹೂವು, ಕಾಯಿ ಮುಂತಾದ ರೋಗಗಳಂ ಪರಿಹರಿಸಿ . . . ವಿರಹವೇದನೆಯನ್ನು ಪರಿಹರಿಸುವುದು (ಸಕವೈ. ೪೪); ಪಾರಿಜಾತ, ನಂದ್ಯಾವರ್ತ . . . ಮೊದಲಾದ ಹೂಗಳೂ ಅಲ್ಲಿ ಬೇಕಾದಷ್ಟು ಇದ್ದವು (ಕರ್ಣಾಜ. ೧೫೫). ೨. ಪಶ್ಚಿಮದ ಬಾಗಿಲಿಲ್ಲದ ಒಂದು ಬಗೆಯ (ವರ್ತುಲಾಕಾರದ) ವಿಶಿಷ್ಟಾಕೃತಿಯ ಕಟ್ಟಡ: ದಿಕ್ಸ್ವಸ್ತಿಕಮೆಂಬ ಸಭಾಭೂಮಿಯುಂ ನಂದ್ಯಾವರ್ತಮೆಂಬ ಶಿಬಿರನಿವೇಶಮುಂ (ಆದಿಪು. ೧೫-೩ವ); ಸರ್ವತೋಭದ್ರಾಹ್ವಯವಿಶೇಷದಿಂ ನೋಂಪಿಯ ವಿಶೇಷಮಂ ನಂದ್ಯಾವರ್ತ ರಮಣೀಯತೆಯಿಂ ನಂದನವನಾಂತರಾಳಮಂ ಸ್ವಸ್ತಿಕವಿಸ್ತಾರದಿಂ ವಿವಾಹಮುಮನನುಕರಿಸಿ ಶೋಭಿಸುವುದು (ಸುಕುಮಾ. ೧೦-೫೦ವ); ಮಣಿಸತ್ತಿಗೆಯ ಮೊಗಮಂಟಪದ ಬಣ್ಣವಟ್ಟಿಗೆಯ ಅಮಳಗುಳಿಯ ನಂದ್ಯಾವರ್ತದ ತೋರಣದೋರಣದ ಲೋವೆಯ ಮದನಗೈಯ ಬಾಗಿಲ್ವಾಡದ ಸಿಂಗರದೊಂದು ದೇಗುಲಂ ಕಣ್ಗೆಡ್ಡಮಾಗಿ ರಂಜಿಕುಂ (ರಾಮಾಶ್ವ. ೫೪-೨೫). ೩. ಒಂದು ಬಗೆಯ ದೊಡ್ಡ ಮೀನು: "ನಂದ್ಯಾವರ್ತಃ-ನಂದಿವಟ್ಟಲು, ಮೀನಿನ ಭೇದ" (ಓಷಧಿ. ೮೪). ೪. [ಅಶ್ವಶಾ] ಒಂದು ಬಗೆಯ ಚಿಹ್ನೆ,-ಗುರುತು: ಶ್ರೀವತ್ಸಂ ಕನ್ನಡಿ ನಂದ್ಯಾವರ್ತಂ ವರ್ಧಮಾನಕಂ ಸ್ವಸ್ತಿಕಮೆಂಬೀ ವಿವಿಧಲಾಂಛನಂಗಳನಾವರಿಸಿದ ವಾಜಿಗಾಯು ತ್ರಿಂಶದ್ವರ್ಷಂ (ಅಶ್ವಶಾ. ೫-೩೬). ೫. ದೇಹದ ಮೇಲೆ ಇರುವ ಒಂದು ಗುರುತು (?): ನಾಭಿರಾಜಾಂಗಸಂಗತಮಪ್ಪ ನಂದ್ಯಾವರ್ತದಂತೆ ಸೊಗಯಿಸುವ ನಂದ್ಯಾವರ್ತಂಗಳೊಳಂ (ಆದಿಪು. ೬-೧೦೬ ವ). P ಇದು ವಕ್ಷಸ್ಥಳದಲ್ಲಿರುವ ಶ್ರೀವತ್ಸಲಾಂಛನವಿರಬಹುದು: (ಚಾವುಂಪು. ೩೭೧ ನೋ).

[ಸಂ.]

ನಂದ್ಯಾವರ್ತವಿಮಾನ (ನಾ). [ಜೈನ] ಒಂದು ಸ್ವರ್ಗದ ಹೆಸರು: ವಾನರಾರ್ಯನುಂ ನಂದ್ಯಾವರ್ತವಿಮಾನದೊಳ್ ಸುರನಾರೀಮನೋಹರಂ ಮನೋಹರನೆಂಬನಿಮಿಷನಾದಂ (ಆದಿಪು. ೫-೭೦ ವ).

[ನಂದ್ಯಾವರ್ತ + ವಿಮಾನ]

ನಂಬರು (ನಾ). ೧. ಅಂಕೆ; ಸಂಖ್ಯೆ: ನಿನ್ನದು ಎಷ್ಟನೆಯ ನಂಬರು? (ರೂಢಿ). ೨. ಪರೀಕ್ಷೆ ಮುಂತಾದ ಮೌಲ್ಯಮಾಪನದಲ್ಲಿ ಕೊಡುವ ಗುಣಾಂಕ: ನೀವು ರಷ್ಯನ್ ಮತ್ತು ಲೆಖ್ಖದಲ್ಲಿ ಹೆಚ್ಚು ನಂಬರುಗಳನ್ನು ತೆಗೆದುಕೊಳ್ಳುವವರೆಗೆ ನಿಮ್ಮನ್ನು ಅದಲ್ಲಿ ಸೇರಿಸಿಕೊಳ್ಳುವುದಿಲ್ಲ (ಶಾಲೆಮ. ೭೫); ಎಲ್ಲದರಲ್ಲೂ ಹೆಚ್ಚು ನಂಬರು ಗಳಿಸಿ ತರಗತಿಗೇ ಅವನು ಮೊದಲಿಗನಾಗಿದ್ದಾನೆ (ರೂಢಿ). ೩. ಸರಕಾರಿದಾಖಲೆಯಲ್ಲಿ ಒಂದು ಅಂಕೆಯನ್ನು ಪಡೆದಿರುವ ಜಮೀನು: ನೂರಿಪ್ಪತ್ತು ನಂಬರುಗಳು ಖಾಸಗಿ ಜಮೀನು ಎಂಬ ಆಧಾರ ಸಿಕ್ಕಿತು (ಗ್ರಾಮಾಯ. ೪); ದೂರದಿಂದಲೇ ಒಂದು ನಿಟ್ಟಿನಿಂದ ಮತ್ತೊಂದು ನಿಟ್ಟಿಗೆ ಕೈಮಾಡಿ ಅವೆಲ್ಲ ತನ್ನ ನಂಬರುಗಳೇ ಎಂದು ಇದ್ದು ಬಿದ್ದ ಹೊಲಗಳನ್ನು ತೋರಿಸಿದಾಗ ರಾಧಕ್ಕನ ತಂದೆ ಹಿರಿಹಿರಿಹಿಗ್ಗಿದರು (ಗಂಗಾಸಾ. ೪೫); ಖಾತೆ ಇಲ್ಲ, ಎಕರೆ ಇಲ್ಲ, ನಂಬರಿಲ್ಲ, ಇದೇನ್ಬುದ್ಧಿ ನೀವೆ ಹಿಂಗ್ಮಾಡ್ತೀರಿ (ಹುಟ್ಟಿಹ. ೧೩೮).

ನಂಬರ ಮನೆ = (ಉಕ) ಊಟದ ಮನೆ; ಖಾನಾವಳಿ: ರಾಮಣ್ಣನಿಗೆ ಎರಡಾಣೆ ಕೊಟ್ಟು ನೇರವಾಗಿ ನಂಬರ ಮನೆಯಲ್ಲಿ ಊಟಮಾಡಿ ಬಂದ (ಜೀದಾನ. ೩೫); ಊಟ ಮಾಡುವ ನಂಬರ ಮನೆಗೆ ಹೋದರೆ ತನ್ನ ಹೆಸರು

"ಅ–ಬ" ಎಂದು ಹೇಳುತ್ತಾನೆ! (ಪೋಹಿನೀ. ೧೨೭); ನಂಬರ ಮನೀಕಿಂತಾ ಸೋವಿ ಮಾಡಿ ತೋರಿಸತೀನಿ (ವೈನಿ. ೨೮೭).

[←ಇಂ. Number]

ನಂಬಿ (ನಾ). ೧. ಭಕ್ತ. ೨. ದೇವಾಲಯದ ಅಧಿಕಾರಿ.–ಸ್ಥಾನಿಕ: ಗೋಪಾಲದೇವರ ಸ್ಥಾನೀಕ ನಂಬಿಯರು ಗಡಬಡೆಯರು ಯಿಾ ಧರ್ಮ್ಮಕೆ ಸಹಾಯಿ ಖಡೆಯದಲ್ಲಪ್ಪನವರು (ಎಕ. XI, ಚಿತ್ರದು. ೬–೩೭; 1338); ಆ ದೇವರ ನಂಬಿಗಳು ತೆಱುವ ವಿಭೂತಿ (ಎಕ. X (8), ಮಾಲೂರು. ೯೪–೦೮; 1406); ನಿರೂಪದಿಂದ ನಂಬಿಗಳು ಅಪಚಿ ಅನತಪಗಳಿಗೆ (ಸೌಇಎ. ೧೯೩೪, ಪುಂಗನೂರು. ೧೫೬–೪; 1419); ಗೋವಿಂದರಾಜದೇವರ ನೈವೇದ್ಯ ಪ್ರಸಾದವನೂ ತಿರುಪತಿಯವರಿಗೆ ಕಾಣಿಪರಾಗಿ ನಾಲ್ಕು ಹರಿವಾಣಊ ನಂಬಿಗಳಿಗೆ ಒಂದು ಹರಿವಾಣವೂ . . . ಕೊಟ್ಟು (ಸೌಇಇ. IX–11, ೪೬೨–೨; 1407); ಪುರೋಹಿತವರ್ಗ (Priests) (ಬ್ರಾಹ್ಮಣರೂ, ಇತರರೂ) ಆಚಾರ್ಯ . . . ನಂಬಿ, ನಂಬಿದಿ, ಪಾಡಿಯ (ತುಳುನಾ. ೧೭೧). ೨. ತಮಿಳುನಾಡಿನ ಅರುವತ್ತುಮೂವರು ಪುರಾತನರಲ್ಲಿ ಒಬ್ಬ; ನಂಬಿಯಣ್ಣ: ನಂಬಿ ಕರೆದೊಡೋ ಎಂದೆ ತೆಲುಗ ಜೊಮ್ಮಯ್ಯಂಗೆ ಒಲಿದೆ ದೇವಾ (ಬಸವ. ೫೦೯); ಹರ ತಾಂ ಕುಂಟಣಿಯಾಗೆ ನಂಬಿಯೊರೆದಂ (ಸೋಮೇಶ. ೭೪); ಪುಷ್ಪದತ್ತಾಖ್ಯನನಿಳೆಯಱಿಯಲ್ ನಂಬಿಯೆಂದಿಟ್ಟು ಮತ್ತಂ ಹರ ನೀನೊಲ್ದಾ ಕಥಾಸಾರವನವಧರಿಸೈ ಶ್ರೀವಿರೂಪಾಕ್ಷಲಿಂಗಾ (ನಂಬಿರ. ೧ ಸೂಚನೆ); ಕುಂಬಾಱ ಗುಂಡಯ್ಯ ನಂಬಿ ತ್ರಿಯಂಬಕಂ ನಿಂಬವ್ವೆ ನಿಂಬಂ ಕಂಬಿಯಲಿ ಭೈರಯ್ಯನುದ್ಭಟದೇವರ್ (ಸಾನಂಚ. ೯–೮೦); ಹಲವು ಸೂಳೋರಂತೆ ನಂಬಿಯ ಬಳಿಗೆಲಸಮಂ ಮಾಡಲಾಱದೆ ಬಳಲಿಕೆಯನಾಱಿಸಿ ಕೊಳಲು ಬಂದಡವಿಯೊಳಗಿರ್ದೈ (ಬಸಪು. ೦೮–೧೨).

[ದೇ.॥ ತಮಿ. ನಮ್ಬಿ; ಮಲ. ನಮ್ಬಿ; ತುಳು. ಕೊಡ. ತೆಲು. ನಂಬಿ]

ನಂಬಿಕಸ್ತ (ನಾ). ನಂಬಿಕೆಗೆ ಅರ್ಹನಾದವನು; ವಿಶ್ವಾಸಕ್ಕೆ ಯೋಗ್ಯನಾದವನು: ಅವನೊಬ್ಬ ನಂಬಿಕಸ್ತನಾದ ಸೇವಕ (ರೂಢಿ).

[< ನಂಬಿಕೆ + – ಸ್ತ]

ನಂಬಿಕಸ್ತಿಕೆ (ನಾ). = ನಂಬಿಕೆ: ಅವನ ನಂಬಿಕಸ್ತಿಕೆ ಯಾರಾದರೂ ಮೆಚ್ಚವಂಥದು (ರೂಢಿ). [ನಂಬಿಕಸ್ತ + –ಇಕೆ]

ನಂಬಿಕೆ (ನಾ). ಶ್ರದ್ಧೆ; ವಿಶ್ವಾಸ: ಬೆಳ್ಳಿ, ಬಂಗಾರ ಕೈಯಲ್ಲಿದ್ದರೆ . . . ಬೇಕಾದ ವಸ್ತುಗಳನ್ನು ಕೊಳ್ಳುವ ಶಕ್ತಿ ಬರುವುದೆಂದು ಜನರಿಗೆ ದೃಢವಾದ ನಂಬಿಕೆ (ಹಡಪ್ರ. ೧೬); ಇಂದು ನನ್ನ ನಂಬಿಕೆ ಸಡಿಲವಾದಂತೆ ಭಾಸವಾಗುತ್ತಿದೆ (ಬಾಡಅ. ೩೮೦).

ನಂಬಿಕೆ ಮೂಡಿಸು=ವಿಶ್ವಾಸವನ್ನು ಹುಟ್ಟಿಸು; ಭರವಸೆಯನ್ನುಂಟುಮಾಡು ವಿಷಯವನ್ನು ಒಳಹೊಕ್ಕು ನೋಡಿದರೆ ತಾನವಳಿಗೆ ಕಟ್ಟುಗೊಂಡಿದ್ದುದಾಗಿಯೂ ಅಲ್ಲಿ ನಂಬಿಕೆ ಮೂಡಿಸಿದ್ದುದಾಗಿಯೂ ಅವನು ತಿಳಿದುಕೊಂಡಿದ್ದನು (ಪುನರು. ೧೨೮). ನಂಬಿಕೆ ಹುಟ್ಟಿಸು=ವಿಶ್ವಾಸವುಂಟಾಗುವಂತೆ ಮಾಡು; ನಂಬಿಸು: ನನ್ನ ಮಾತಿನಲ್ಲಿ ಅವರಿಗೆ ನಂಬಿಕೆ ಹುಟ್ಟಿಸಲು ಬಹಳ ಶ್ರಮಪಡಬೇಕಾಯಿತು (ರೂಢಿ). ನಂಬಿಕೆ ಹುಟ್ಟು = ವಿಶ್ವಾಸವುಂಟಾಗು; ನಂಬು: ಅವರ ಮಾತಿನಲ್ಲಿ ನನಗೆ ಎಳ್ಳಷ್ಟೂ ನಂಬಿಕೆ ಹುಟ್ಟಲಿಲ್ಲ (ರೂಢಿ).

[ನಂಬು + – ಇಕೆ./ತಮಿ. ನಮ್ಬಿಕ್ಕೈ, ನಮ್ಬಕ; ಮಲ. ನಮ್ಬಿಕ್ಕ; ತುಳು. ನಂಬಿಗೆ; ತೆಲು. ನಮ್ಮಕ, ನಮ್ಮಿಕೆ, ನಮ್ಮಿಗ]

ನಂಬಿಕೆದ್ರೋಹ (ನಾ). ವಿಶ್ವಾಸವುಳ್ಳವರಿಗೆ ಕೆಡುಕುಮಾಡುವಿಕೆ; ವಿಶ್ವಾಸಘಾತುಕತನ "ನಂಬಿಕೆದ್ರೋಹ, ವಿಶ್ವಾಸಘಾತುಕತೆ" (Breach of trust. ಪಾರಿನಿ. ೧೦); ಪಾಲುದಾರ ನಂಬಿಕೆದ್ರೋಹ ಮಾಡಿದ್ದರಿಂದ ಕೋರ್ಟಿಗೆ ಹೋಗಬೇಕಾಯಿತು (ರೂಢಿ). [ನಂಬಿಕೆ + ದ್ರೋಹ]

ನಂಬಿಕೆದ್ರೋಹಿ (ನಾ). ನಂಬಿಸಿ ಮೋಸಮಾಡುವವನು; ವಿಶ್ವಾಸಘಾತುಕ. [ನಂಬಿಕೆ + ದ್ರೋಹಿ]

ನಂಬಿಗ (ನಾ). ನಂಬಲು ಯೋಗ್ಯನಾದವನು; ವಿಶ್ವಾಸಯೋಗ್ಯ: ಇದೆ ಸಮಯವಣ್ಣ ಇದೆ ಸಮಯ ತಮ್ಮ ನಮ್ ನಿಮ್ಮ ಆತ್ಮಗಳಿಗೆ. ಅಂಬಿಗನು ಬಂದ ನಂಬಿಗನು ಬಂದ ಬಂದದ ದಿವ್ಯಗಳಿಗೆ (ಹೃದಸ. ೧–೮).

[ನಂಬಿಗೆ (<ನಂಬುಗೆ) + – ಅ$_7$]

ನಂಬಿಗಸ್ತ (ನಾ). = ನಂಬಿಕಸ್ತ: (ಕಿ). [<ನಂಬುಗೆ + – ಸ್ತ]

ನಂಬಿಗಸ್ತಿಕೆ (ನಾ). = ನಂಬಿಕಸ್ತಿಕೆ: (ಕಿ). [ನಂಬಿಗಸ್ತ + – ಇಕೆ]

ನಂಬಿಗೆ 'ನಂಬುಗೆ' ನೋ.

ನಂಬಿರ (ನಾ). (?): ಇವೆಲ್ಲವನು ದೇವರ ಅಮೃತಪಡಿ ನಂದಾದೀಪ ಪಡಿದೀಪ ಗಂಧ ವಸ್ತ್ರವಯಿಭೋಗ ಪರ್ವತಿಥಿ ನಂಬಿರ ಹೂವಡಿಗ ವೊಗಬುರಜ ಮತ್ತಾವ ವಿನಿಯೋಗವನು ನಡಸಿ ಬಹರುಯೆಂದು ಸಮರ್ಪಿಸಿದ್ದು (ಎಕ. III, ತಿರುಮ. ೩೭–೧೬; 1513).

[P ಇದು 'ನಂಬಿ' ಎಂಬುದರ ಅಪಲಿಖಿತವಿರಬಹುದು]

ನಂಬಿಸು(ಕ್ರಿ). ೧. (ಸ್ನೇಹ, ಆಪ್ತತೆ, ಧರ್ಮ ಮುಂತಾದುವುಗಳ ವಿಷಯದಲ್ಲಿ) ನಂಬಿಕೆಯನ್ನುಂಟುಮಾಡು; ವಿಶ್ವಾಸವನ್ನುಂಟುಮಾಡು; ಭರವಸೆ ಮೂಡಿಸು; ಶ್ರದ್ಧೆಯನ್ನುಂಟುಮಾಡು: "ನಂಬಿಸು – ಅನುಮೋದನೇ" (ಶಮಧಾ); ಈ ರೂಪಂ ತೋಱಿ ನಂಬಿಸಿ ನಿಮ್ಮ ಪ್ರಾಣಕ್ಕಪಾಯಮಂ ಮಾಡಲ್ ಬಗೆದು (ವಡ್ಡಾರಾ. ೧೭೬–೧೯); ನಂಬಿದ ಬರವುಮಂ ನಂಬದ ಬರವುಮನಱಿದು . . . ನಂಬದುದಂ ನಂಬಿಸಲುಂ ನಂಬಿದುದಂ ಬಿಡಿಸಲುಂ .... ನಿಮ್ಮಡಿಯ ಕೆಲದೊಳಾನೆ ಬಲ್ಲೆಂ (ಪಂಪಭಾ. ೫–೪೩ ವ); ತನಗಲ್ಲದೊಡಲ್ಗೊಡಮೆಗೆ ಮನಮಿಟ್ಟಪವರ್ಗಮಾರ್ಗಮಂ ಪೊರ್ದದೆ ತನ್ನನೆ ತಾನೆ ನಂಬಿಸುವೊಡಾತ್ಮನಂತು ಪೇಟಾತ್ಮವಂಚಕರ್ ಪೆಱರೊಳರೇ (ಅಜಿಪು. ೨–೫೫); ಮಕ್ಕಳ ಕೈಯ ಮಾಣಿಕಮಂ ಗುಗ್ಗುರಿಯಂ ತೋಱಿ ನಂಬಿಸಿ ಕೊಳ್ವಂತೆ (ಧರ್ಮಾಮೃ. ೧೦–೮೩); ಎಂತಕ್ಕೆ ನಾ ನಿಮ್ಮ ದೇವರೆಂದಱಿದೆನು ಇಂತಾಗಿ ನೀವೆನ್ನನಾರೆಂದಱಿಯಿರಿ ನಂಬಲಱಿಯೆ ನಂಬಿಸಲಱಿಯೆ (ಬಸವ. ೨೬೮); ಹಿಂದೆ ನಂಬಿಸಿ ಭೀಷ್ಮ ಗುರುವನು ಕೊಂದ ಗೆಲುವಿನಲುಬ್ಬಬೇಡ (ಕುಮ್ಯಾಕ. ೨–೫). ೨. ಹಾಲುಣಿಸು; ಹಾಲುಕೊಡು: ಕಂಬನಿಯನೊಗುತಾ ಮಱಿಯ ಮಯ್ಯಂಬನದು ನಕ್ಕುತ್ತ ಮೋಹದಿ ನಂಬಿಸುತ್ತಸುವುಳಿವುಳಿದುದಯ್ಯೋ ವಿಮೋಹ ಕಷ್ಟವಲ (ಸಾಳ್ವಭಾ. ೫–೨೮).

[ನಂಬು + – ಇಸ್ಸು. / ತೆಲು. ನಮ್ಮಿಂಚು]

ನಂಬಿಸುಹ (ನಾ). ನಂಬಿಸುವಿಕೆ; ಭರವಸೆಯನ್ನುಂಟುಮಾಡುವಿಕೆ: "ಸ್ವಾಂತಮೆನೆ ಸಾಮವೆನೆ ನಂಬಿಸುಹಮಕ್ಕು" (ಮಂಗರಾ. ೧೩೫–೩೭).

[ನಂಬಿಸು + – ಹ$_2$]

ನಂಬು (ಕ್ರಿ). ೧. (ಸ್ನೇಹ, ಆಪ್ತತೆ, ಧರ್ಮ ಮುಂತಾದುವುಗಳ ವಿಷಯದಲ್ಲಿ) ನಂಬಿಕೆಯಿಡು; ವಿಶ್ವಾಸವಿಡು; ಭರವಸೆಯನ್ನು ಹೊಂದು: "ನಂಬು–ವಿಶ್ವಾಸೇ" (ಶಮಧಾ); ಆ ಲಘುಗಳಲ್ಲದ ತಾಣದೊಳಂ ಲಘಾಪಾಗಮಕ್ರಮದೆ ನಂಬುಗೆ ಲಾಘವದೋಷಮಂ (ಕವಿರಾ. ೧–೧೨೭); ಧರ್ಮಮಂ ಕೇಳ್ದು ಮೆಚ್ಚಿ ನಂಬಿ ಶ್ರಾವಕಬ್ರತಂಗಳಂ ಕೈಕೊಂಡು ಶ್ರಾವಕನಾಗಿ (ವಡ್ಡಾರಾ. ೧೭೬–೯); ನಂಬು ನಂಬೆನ್ನ ಕಣ್ಣಿಂ ಕಿಡಿಯುಂ ಕೆಂಡಂಗಳುಂ ಸೂಸಿದಪುವಹಿತರಂ ನೋಡಿ ಪಂಕೇಜವಕ್ತ್ರೇ (ಪಂಪಭಾ. ೭–೧೩); ತುಟಿ ಲಾಳ್ಗಳನಿರ್ವರುಮಂ ಕಟಿಪಿ ಸುಯೋಧನನ ಬಾಟ್ವುದಂ ನಂಬಿದಿರೇ (ಗದಾಯು. ೩–೬೮); ಅಂಬುವನೆಱಿವಾಗಳ್ ಪ್ರತಿಬಿಂಬಿಸೆ ಕೆಯ್ನಾರೊಳವಳವದನಂ ಪಥಿಕಂ ನಂಬಿ ನಲಿದೀಂಟಿದಂ (ಗಿರಿಕ. ೨–೨೬); ಅವನಿಪಾಲರು ಕಂಗಳಿಂದವೆ ಕಿವಿಗೆ ಕರವೊಳ್ಳಿವರು ಕಂಡುದನವರು ನಂಬರು ಕೊಂಡೆಯದ ನುಡಿಗೇಳ್ದು ನಂಬುವರು (ಕುಮ್ಯಾದ್ರೋ. ೧೮–೨); ತಾ ಕಳ್ಳ ಪರರನ್ನು

ನಂಬ (ಗಾದೆ). ೨. ನೆಮ್ಮು ; ಆಧರಿಸು ; ಆಶ್ರಯಿಸು : ನಯಮಂ ನಂಬುವೊಡೆನ್ನ ಪೇಟ್ವ ಸತಿಯಂ ಕೈಕೊಂಡಂ (ಪಂಪಭಾ. ೦-೭೭) ; ಅಧರ್ಮಯುದ್ಧದೆ ನರಂ ಕೊಲ್ವಲ್ಲಿ ಕಂಡಿಂತುಪೇಕ್ಷಿಸಿ ನೀಮುಂ ನಡೆ ನೋಡುತಿರ್ದಿರೆನೆ ಮತ್ತಿನ್ನಾರನಾಂ ನಂಬುವೆಂ (ಪಂಪಭಾ. ೧೧-೮೩) ; ಜ್ಞಾನಕ್ಕೆ ಲೇಪವಾದವನಿರವು ತುಪ್ಪವ ನಂಬಿದ ಬತ್ತಿಯಂತೆ ಕಾದ ಲೋಹದ ಜಲದಿರವಿನಂತೆ (ಮೋಳಿಮಾ. ೪-೦೦) ; ನಂಬದಿರು ಈ ದೇಹ ನಿತ್ಯವಲ್ಲ ಅಂಬುಜಾಕ್ಷನ ಭಜಿಸಿ ಸುಖಿಯಾಗು ಮನವೆ (ಪುರಂದ. ೦-೨೭ ಪಲ್ಲವಿ).

ನಂಬೆ ನುಡಿ = ನಂಬಿಸು ; ವಿಶ್ವಾಸವನ್ನುಂಟುಮಾಡು: ಆನಲ್ಲಿಗೆ ವರ್ಪೆನೆಂ[ದಾ ಪಾಣ್ಬ]ನಂ ನಂಬೆ ನುಡಿದು (ಪಂಪಭಾ. ೮-೭೨ಪ). ನಂಬೆ ಪಡು = ನಂಬಲ್ಪಡು : ಕೊಲ್ಲದ ಪುರುಷಂ ಎಲ್ಲರಿಂ ನಂಬೆ ಪಡುವನುಂ ಪೂಜ್ಯನುಂ ಅಕ್ಕುಂ (ತತ್ತ್ವಪ್ರ. ೨೭೧).

[ದೇ.॥ ತಮಿ. ನಮ್ಬು ; ಮಲ. ನಮ್ಬು ; ತುಳು. ನಂಬು, ನಮ್ಮು ; ಕೊಡ. ನಂಬ್ ; ತೆಲು. ನಮ್ಮು]

ನಂಬುಗೆ, ನಂಬಿಗೆ (ನಾ). ೧. ನಂಬಿಕೆ ; ಶ್ರದ್ಧೆ ; ವಿಶ್ವಾಸ : "ವಿಸ್ರಂಭಃ, ವಿಶ್ವಾಸಃ – ಈ ೨ ನಂಬುಗೆ" (ಹಲಾಯು. ೦೨೭-೮೪) ; ಕನಸುಗಂಡುದಂ ತಮಗೆ ನೇಸರ್ಮೂಡೆ ಪೇಟ್ಟೊಡೆ ನಂಬುಗೆಯಾಗಿ ಉಬ್ಬೆಗಂಬಟ್ಟು (ಪಡ್ಕಾರಾ. ೧೦೦-೦೯) ; ಆರ್ ಕೆಲಂಬರರಸನನೋಲೈಸುವರ್ ಅವರೈಶ್ವರ್ಯಂ ಪರಾಧೀನವಾಗಿಹುದು . . . ಜೀವಿಸುಹವುಂ ನಂಬುಗೆಯಿಲ್ಲದುದು (ಪಂಚತಂ. ೧೩೩-೪) ; ತಳ್ಪಿಲ್ಲದೆ ಪಿರಿದಾದರದಿಂ ಕೊಲ್ಲದ ಧರ್ಮಮನೆ ಪಿಡಿಗೆ ನಂಬುಗೆಯಿಂದಂ (ಧರ್ಮಾಮ್ಯ. ೦-೦೯೬) ; ಶಂಭುಪದಭಕ್ತಿ ನಂಬುಗೆಯ ಹಂಬಲು ಬೇಕು (ದೀಕ್ಷಾಬೋ. ೮೯-೦೦) ; ಗುರುಗಳಲಿ ನಂಬುಗೆ ನಿರರ್ಥಕವಾಯ್ತೆನುತ ಕುರುರಾಯ ಬಿಸುಸುಯ್ದ (ಕುಮಾದ್ರೋ. ೪-೫). ೨. ಭಾಷೆ ; ಮಾತುಕೊಡುವಿಕೆ ; ಆಣೆ. 'ನಂಬುಗೆಗೊಳ್ಳು' ಪರಾ. ನಂಬಿಗೆ : ೧. ಜಂಗಮದೊಳಗೆ ಲಿಂಗಯ್ಯನಿದ್ದಾನೆಂದು ನಂಬಿಗೆಯುಳ್ಳರೆ ತೋಱುವ ಕೂಡಲಸಂಗಯ್ಯ (ಬಸವ. ೦೮೬) ; ಭಾಷೆಗೆಡುಕನಿಗೆ ನಂಬಿಗೆ [ಪಾಠಾಂ. ಟುಗೆ] ಯೇತಕೆ (ಪುರಂದ. ೨-೬೪-೫) ; ನಿಂಬೆಗಿಂ ಹುಳಿಯಿಲ್ಲ ತುಂಬೆಗಿಂ ಕರಿದಿಲ್ಲ ನಂಬಿಗೆಯಿಂದಧಿಕ ಗುಣವಿಲ್ಲ (ಸರ್ವಜ್ಞ. ೨೩೫) ; ನನ್ನ ಬೆಂಬಲದ ನಂಬಿಗೆಯ ಮಂದಿರ ನೀನು (ಉಯ್ಯಾಲೆ. ೯೦-೦೭) ; ಗೊಂಬೆಗೆ ಕೈಮುಗಿದರೂ ನಂಬಿಗೆ ಇರಬೇಕು (ಗಾದೆ). [ನಂಬು + – ಗೆ]

ನಂಬುಗೆಗೆಡು (ಕ್ರಿ). ವಿಶ್ವಾಸವನ್ನು ಕಳೆದುಕೊಳ್ಳು ; ಭರವಸೆಯನ್ನು ಕಳೆದುಕೊಳ್ಳು: ತಂಬುಲಿಗರ್ ನಂಬುಗೆಗೆಟ್ಟವರಂತೆ ಪೆಱಸಾರೆ(ಧರ್ಮಾಮ್ಯ. ೨-೬೯). [ನಂಬುಗೆ + ಕೆಡು$_1$]

ನಂಬುಗೆಗೆಯ್ (ಕ್ರಿ). ನಂಬು ; ವಿಶ್ವಾಸವಿಡು : ಬಗೆ ನಿಲುಕದತುಳ ಕೈವಲ್ಯಪರಿವೃತರಜತನಗವೃಷಭವಾಯ್ತೊ ಹೇಳೆಂಬ ಸಂಶಯಕೆ ನಂಬುಗೆಗೆಯ್ದ ಪುಂಗವನ ನುತದೇವಪುಂಗವಂ ನಲಿದೇಱಿ ಕಣ್ಗೆಸೆದನು (ಸೋಮಜ. ೪-೮೦). [ನಂಬುಗೆ + ಕೆಯ್$_1$]

ನಂಬುಗೆಗೇಡು (ನಾ). ನಂಬಿದವರಿಗೆ ಮೋಸಮಾಡುವಿಕೆ ; ವಿಶ್ವಾಸದ್ರೋಹ : ಈ ಉಪ್ಪಿಗೆ ನಂಬುಗೆಗೇಡನ್ನು ಅಹಿತವನ್ನು ಮನಸ್ಸಿನಲ್ಲಿಯೇ ನಡೆಯಿಸಿದಿರಾದರೂ, ನಿಮ್ಮ ಗತಿಯೇನು (ಪಟ್ಟಅ. ೫೫-೧).

[ನಂಬುಗೆ + ಕೇಡು]

ನಂಬುಗೆಗೇಳು (ಕ್ರಿ). ನಂಬಿಕೆಯ ಮಾತನ್ನು ಒಪ್ಪು ; ವಿಶ್ವಾಸವಿಡು ; ಭರವಸೆಯಿಡು : ಹೇಳಿದೀ ಕುಱುಹುಗಳು ತಪ್ಪವು ಕೇಳಿದೈ ಹನುಮಂತ ನಂಬುಗೆಗೇಳದಿದೆ ಮನವೇನಮಾಡುವೆನೆಂದಳಾ ಸೀತೆ (ತೊರರಾ. ೫-೩-೮೯).

[ನಂಬುಗೆ + ಕೇಳು (<ಕೇಳ್)]

ನಂಬುಗೆಗೊಡು (ಕ್ರಿ). ನಂಬಿಕೆಯನ್ನುಂಟುಮಾಡು ; ಭರವಸೆಯನ್ನು ಕೊಡು; ವಿಶ್ವಾಸವನ್ನುಂಟುಮಾಡು: ನುಡಿದೊಡವೆಯಂ ಕೊಡುವೆನೆಂದು ನುಡಿದಂದದಿಂ ನಡೆವೆನೆಂದೊಬ್ಬರೊಬ್ಬರಿಗೆ ನಂಬುಗೆಗೊಟ್ಟು [ಪಾಠಾಂ. ಯಿತ್ತು] (ಹಡಕಾ. ೦೦-೨೬) ; ಸುದತಿ ತಪ್ಪದುಯೆಂದು ನಂಬುಗೆಗೊಡಲಾ ವಿಧುಮುಖಿ ನಲಿದಿರುತಿರ್ದಳ್ (ಜೀವಂಸಾಂ. ೧೬-೫೨) ; ಇವನ ಪ್ರಾಣಗಳಿಗೆ ತಪ್ಪಿದೆನಾದರೆ ಶಿವನ ಪಾದಗಳಾಣೆಯೆನುತೆ ಧವಳಸರೋಜಾಕ್ಷಿಗೆ ನಂಬುಗೆಗೊಟ್ಟು ಕುವರನನೊಡಗೊಂಡು ಬಂದ (ಮೋಹತ. ೩೫-೫೩) ; ಶರಣು ಹೊಕ್ಕರಿಗೆ ನಂಬುಗೆಗೊಟ್ಟು ಮುಂದಕ್ಕೆ ತೆರಳಿದನಾ ಖಾನನಾಗ (ಕಂನವಿ. ೧೦-೫೬). [ನಂಬುಗೆ + ಕೊಡು$_1$]

ನಂಬುಗೆಗೊಳ್, ನಂಬುಗೆಗೊಳ್ಳು (ಕ್ರಿ). ೧. ನಂಬಿಕೆಯನ್ನು ಹೊಂದು; ವಿಶ್ವಾಸವನ್ನು ಪಡೆ ; ಭರವಸೆಯನ್ನು ಹೊಂದು : ಬೇಹಡೆಮ್ಮೊಡನೆ ದಾ ತೋರ್ಪೆವೆನೆ ಹೈ ಬಂದವೆಂ ತೋಱಿ ಕೊಡಿರಯ್ಯ ಎಂದು ಪೊಡಮಟ್ಟು ನಂಬುಗೆಗೊಂಡು ಹೋದನಾ ಪರುಷೆಯೊಡನೆ (ಸಿದ್ಧರಾ. ೨-೪೨). ನಂಬುಗೆಗೊಳ್ಳು : ೨. ಪ್ರಮಾಣವನ್ನು ಪಡೆ ; ಭಾಷೆಯನ್ನು ಪಡೆ : ಕೃಶಾನು ನಂಬುಗೆಗೊಂಡನಾ ನೃಪನ [ಪಾಠಾಂ. ವರವನು ಕೊಟ್ಟನಾ ನೃಪಗೆ] (ಕುಮಾಸ. ೫-೦೫) ; ರಾಗದೆ ಮದನನ ಕೈಯ ನಂಬುಗೆಗೊಂಚ ಭೋಗದ ರತಿದೇವಿಯಂತೆ ಭೂಗಧೀಶ್ವರ ಕಂಠೀರವೇಂದ್ರಗೆ ಕೈಲಾಗಿತ್ತಳೊರ್ವಬ್ಬ ನೇತ್ರೆ (ಕಂನವಿ. ೨೪-೭೬) ; ಇಂತೆಂದು ಪೇಳಿ ನಂಬುಗೆಗೊಂಡು ಗುರುವರ್ಯ ಕಂತುವಿಂ ಬೀಳ್ಕೊಂಡು ಪೂರಮಡಲು (ನವಮೋ. ೫-೧೯).

[ನಂಬುಗೆ + ಕೊಳ್$_1$]

ನಂಬುಗೆಗೊಳ್ಳು 'ನಂಬುಗೆಗೊಳ್' ನೋ.

ನಂಬುಗೆದಾಳು (ಕ್ರಿ). ನಂಬಿಕೆಯನ್ನು ಹೊಂದು ; ವಿಶ್ವಾಸವನ್ನು ಇಡು: ಪೇಳಿದತಿಗುಹ್ಯದಲಿ ನಂಬುಗೆದಾಳಿ ವಾಙ್ಮನಕಾಯಗಳಲದ್ವೈತವನೆ ಬಳಸಿ (ಗಗತಾ. ೦೭-೩೦). [ನಂಬುಗೆ + ತಾಳು$_1$ (<ತಾಳ್$_1$)]

ನಂಬುಗೆದೋಱು (ಕ್ರಿ). ವಿಶ್ವಾಸವುಂಟಾಗು ; ಒಪ್ಪು : ಮೂಱುಭಾಗದ ಸಂಶಯವು ಕೆಲಸಾರಿತವನೀಸುತೆಗೆ ನಂಬುಗೆದೋಱದಿರೆ ತುದಿಯಂಶದಲಿ ಹನುಮಂತನಾ ಹದನ ಮಾಱುನುಡಿಯಿರದಿರಲು (ತೊರರಾ. ೫-೩-೯೦).

[ನಂಬುಗೆ + ತೋಱು]

ನಂಬುಗೆಯಿಾ (ಕ್ರಿ). ಭಾಷೆಯನ್ನು ನೀಡು; ವಚನ ಕೊಡು: ಅರ್ಧರಾತ್ರಿಯ ಹೊತ್ತಿನೊಳಗಾಗಿ ಸುಗುಣಾನಿರುದ್ಧನ ತಹೆನೆಂದು ನಗುತ ನಿರ್ಧರವಾಗಿ ನಂಬುಗೆಯಿತ್ತು ಬೀಳುಕೊಂಡೆದ್ದಳು (ಮೋಹತ. ೩೦-೦೦).

[ನಂಬುಗೆ + ಈ$_2$]

ನಂಬುಗೆವಂತ (ನಾ). ನಂಬಿಕೆಗೆ ಪಾತ್ರನಾದವನು ; ಭರವಸೆಯಿಡಲು ಅರ್ಹನಾದವನು : ಸಾಷ್ಟಾಂಗವೆಱಗಿ ನಂಬುಗೆವಂತರೆದ್ದು ಸಂತುಷ್ಟದಿ ಬೀಳ್ಕೊಂಡರು (ಭರಜ. ೩೮-೧೩೩) ; ಅರಮನೆಗಾಗಿ ನಂಬುಗೆವಂತರತ್ತ ತಮ್ಮರಸಿಯರ್ಕಳನೊಯ್ಯಲಿತ್ತ ಅರುಹನಾಲಯಕೆಯ್ದಿ ತಂದೆಯ ಬಳಿಗಾಗಿ ಬರುತಿರ್ದನಾ ಯುವರಾಜ (ಭರಜ. ೫೮-೩೮). [ನಂಬುಗೆ + – ವಂತ]

ನಂಬುಗೆವಡೆ (ಕ್ರಿ). = ನಂಬುಗೆದಾಳು : ಅಂಬುಜಭವ ಭವೇಂದ್ರಾದಿ ದೇವತೆಗಳ ನಂಬುಗೆವಡೆದ ರಕ್ಕಸರ ಕಂಬುಚಕ್ರಾಂಕಿತ ನಿಮ್ಮೊಳು ಮಥನಿಸಿ ಮುಂಬರಿದರು ಯಮಪುರಿಗೆ (ಮೋಹತ. ೩೬-೩೪). [ನಂಬುಗೆ + ಪಡೆ$_1$]

ನಂಬುಗೆವಿಡಿ (ಕ್ರಿ). = ನಂಬುಗೆದಾಳು : ಶಂಭುಪದಭಕ್ತಿ ನಂಬುಗೆವಿಡಿದು ಅಗಲದೆ ಇರಬಲ್ಲರೆ ಶರಣ (ಸಿದ್ಧೇವ. ೯೪-೨೮೬) ; ಪ್ರಮಿತವಚನದಲುದಿಸಿದೊಡೆ ವಿಕ್ರಮದ ಬಗೆ ಬಳಿಕಱಿಯಬಹುದೆಂಬಮರರಿಪುವಿನ ನುಡಿಗೆ ನಂಬುಗೆವಿಡಿದನರುಣಸುತ (ತೊರರಾ. ೩-೦೦-೨೪). [ನಂಬುಗೆ + ಪಿಡಿ$_1$]

ನಂಬುಗೆವೆರೆ (ಕ್ರಿ). ವಿಶ್ವಾಸ ಹೊಂದು ; ಭರವಸೆ ಪಡೆ ; ನಂಬು : ಕರಿಯಿದಿರೊಳಗಿರ್ಪಂದದು ಕರಿಯಲ್ಲೆಂದೈದಿದಂದು ಸಂಶಯಿಸುತ್ತುಂ ನಿರುಕಿಸಿ ಪಜ್ಜೆಯ ನಂಬುಗೆವೆರೆದಂತಾಯ್ತೆನ್ನ ಮನದೊಳಾದ ವಿಕಾರಂ (ಶಾಕುಂತ. ೧೧೩-೧೯೪). [ನಂಬುಗೆ + ಬೆರೆ$_1$]

ನಂಬುಗೆವೆಱು (ಕ್ರಿ). ಶ್ರದ್ಧೆಯನ್ನು ಹೊಂದು; ನಂಬಿಕೆಯಿಂದ ಕೂಡಿರು : ನಂಬುಗೆವೆತ್ತ ಭಕ್ತಜನದಿಂದತಿರಂಜಿಪ ಚೋಳದೇಶದೊಳ್ . . . ಇರ್ಪುದು ಪೆಂಪನಾಂತು ಪೊನ್ನಾಂಬಲವೆಂಬ ನಾಮದ ಮಹಾಪುರಂ (ಶ್ರೀಪುವಿ. ೭-೨). [ನಂಬುಗೆ + ವೆಱು$_1$]

ನಂಬುಗೈ (ನಾ). ಪ್ರತಿಜ್ಞೆಗಾಗಿ ನೀಡುವ ಕೈ : ಇವೆ, ಪಿಡಿ ನಂಬುಗೈಯಂ ನಿನ್ನಾಣೆ, ಕುಲದೈವದಾಣೆ ! ಎಂದುಂ ಪೆಱವರೊಳೊರೆಯೆಂ (ರಾಮಾಶ್ವ. ೧೧೮-೧೩). [ನಂಬು + ಕೈ$_2$ (<ಕೆಯ್$_2$)]

ನಂಬುಗೊಳ್ (ಕ್ರಿ). ನಂಬಿಕೆಯುಂಟಾಗು : ದಾಸರ ಗಂಗಮ × × ದ ಕೆಲಸದ ಶಸ್ತ್ರವನೊತ್ತೆಯಿಟ್ಟು ಹೋದಡೆ ಆ ಸ್ಥಳದಲು ಇರಬೇಕೆಂದು ತಮ್ಮ ಹೆಸರನಿಕ್ಕಿಯೆಂದಡೆ ಚಿಂಚಯ್ಯನು ಕೊಟ್ಟು ನಂಬುಗೊಳೆ ಹೆಸರನಿಕ್ಕಿ ಶಸ್ತ್ರವಂ ಹೊಸಿದನು (ಎಕ. VII, ಚನ್ನಗಿ. ೩೨-೨೪೪; 1050 ?).

[<ನಂಬುಗೆ + ಕೊಳ್$_1$]

ನಂಬ್ರಾನ್ (ನಾ). ದೇವರು ; ಒಡೆಯ : ನಮ್ಬ್ರಾನ್ಗೋವದೋರಾ (ಎಇ.IX, ೧೮-೭; ಸು. 800). [←ತಮಿ. ನಮ್ಬಿರಾನ್]

ನಕ (ನಾ). ಉಗುರು ; ನಖ : ನಖ – ನಕ ; ಪರಿಖೆ – ಪರಿಕೆ (ಶಮದ. ೨೫೫ ಪ್ರಯೋ). [<ಸಂ. ನಖ]

ನಕಮಕ (ನಾ). ಮೋಸ ; ತಟವಟ : ಕೌರವಾನುಜರೂ ನಕಮಕದ ವಿದ್ಯಗಳ ಸಾಧಿಸಿ ದಿಕುವಿಗಂನ್ನುತ ಭಾರರಾದರು (ಜಿನಭಾ. ೯-೨೪) ; ಶಸ್ತ್ರಗಳನು ಹಾಯೆಂದು ಬಾಯ್ದೆರೆದು ನುಂಗುಹಳರಿದು ನಕಮಕದಿ ತೀಡಿದವಲಂಘ್ಯದಿಂ ಗ್ರಹಿಸಿಕೋಯೆಂದು ಕೂಗುತಲು . . . ಖಡ್ಗಮಂ ಝಳಪಿಸುತ ಬಹಳರಿದು (ಜಿನಮು. ೩೪-೧೭). [?]

ನಕರ, ನಖರ$_1$, ನಗರ$_2$ (ನಾ). ವರ್ತಕರ ಒಂದು ಸಂಘ ; ವ್ಯಾಪಾರಿಗಳ ಒಂದು ಪಂಗಡ; ಕೊತ್ತಳಿ : ದೇವಾಳ್ಗೆವಿಷಯೇ ಕಿಱುಮುಂಡನೀರಿಣಾಂ ನಕರಸ್ಯ ದಶಮೋಭಾಗಃ (ಮೈಆರಿ. ೧೯೩೦, ೩-೧೯ ; ಸು. 500) ; ಆ ಎರಮ್ಮನುಂ ಅಯ್ವದಿಂಬರುಂ ನಕರಮುಂ ಸೇಣಿಯುಂ ಬಟಸುವಿಟ್ಟು ಗೆಲ್ವಲ್ಲಿ ಮೂಲವ್ವೆಡಿಯಕ್ಕೆ ಒರ್ವ್ವಳ್ಳನೆಯ್ನಿಱಸಿದಾ (ಎಕ. VI, ಕಡೂರು. ೧೪೫-೬; ಸು. 750) ; ಇದಕ್ಕೆ ಸಾಕ್ಷಿ ನಾಲ್ಕು ಸಮಯಿಗಳು ನಾಡುನ್ನಕರಮುನ್ನರ ಸಾಸನಮುಮಿವರೇ (ಎಇ. X, ೬೬-೫೪ ; 892) ; ಎಡೆನಾಡಟ್ಟಿತ್ತಱ ಗಾವುಣ್ಡುಗಳು ಪದಿ ಎಳರ ಗಾವುಣ್ಡು × × × ನಕರಮುಂ ಏಳುಪುರಮುಂ ಪಾದಮೂಲಮುಂ ಸಾಕ್ಷಿ (ಎಕ. IV, ಜಾಮರಾ. ೧೮-೨೦ ; 1000 ?) ; ಪದಿನಱುವಱುಂ ನಕರಮುಮಿನ್ತೀ ಧರ್ಮಮಂ ಪ್ರತಿಪಾಲಿಸುವುದು (ಎಇ. XIII, ೧೭೩-೩೭; 1055) ; ಶ್ರೀಮತ್ ನಕರೇಸ್ವರದೇವರ್ಗ್ಗೆ ನಕರಂ ಕೊಟ್ಟ ಸೊಂಟಿಗೆಯೊನ್ದು (ಸೌಇಇ. XI-1, ೧೧೨-೧೧; 1072) ; ಪುಲಿನಾಡ ಕೊಳತೂರಂ ಪಲ್ಲವಾದಿತ್ಯ ಪೂರವಾಗೆ ನಕರಂ ಮಾಡಿ . . . ಕೊಟ್ಟಂ (ಸೌಇಇ. IX-1, ೪೦-೧೬; 11ನೆಯ ಶತ) ; ತಿಂಮಣಗೆ ಕೊಟ್ಟ ನಕರ ಕೊಡಗೆ ಹೊಲ (ಎಕ. X (8), ಕೋಲಾರ. ೩೦೮-೪; 16ನೆಯ ಶತ) ; ಉದಯಾಪುರದ ನಕರಸಹಿತಂ ಪೊನ್ನುಟ್ಟದ ನಕರಕ್ಕೆ (ಎಇ. IX, ೨೩-೭; ?). ನಖರ$_1$: ಸಿಂಗಗಾಮುಂಡನು . . . ಮಹಾಜನ ನಖರ[ವಱ]ಯಲೆ [ಆ] ಚಂದ್ರಾರ್ಕ್ಕ ತಾರಂ ಸಲಲೆಂದು (ಸಾಂದೇಡ್. ೧೮-೧೫; 1115) ; ಹೊಸಪಟ್ಟಣ ಬಸುರೆ ಪುರದ ನಖರೇಶ್ವರದೇವರ ಸನ್ನಿಧಾನದಲು ಸಮಸ್ತ ನಖರಮುಂ × × × ಮೆಯು ಅಲ್ಲಿಯ ನೆಲನುಂ ಕೂಡಿರಲು (ಸೌಇಇ. IX-1, ೩೯೩-೧೦; 1155) ತಳಕಾಡ ಸಮಸ್ತ ನಖರವು (ಮೈಆರಿ. ೧೯೩೩; ೬೦-೩; 1173); ಹುಲುಂಗೂರ ಹಂನಿರ್ವ್ವರು ಗಾವುಣ್ಡು ಸಮಸ್ತ ಪ್ರಜೆ ನಖರ ಮುಮ್ಮುರಿ ದಂಡಂಗಳಿಗೆ ಆ ಸ್ತಳದ ದಸಬಳವನು ಸರ್ವನಮಸ್ಯವಾಗಿ ಬಿಟ್ಟರು (ಎಇ. XVI, ೩೩೬-೩೨ ; 1255) ; ನಾಂಡುಗ್ರಾಮ ನಖರ ಹಂಜಮಾನ ಆಚರ ಮುಂತಾಗಿ (ಸೌಇಎ. ೧೯೨೯, ಮಂಗಳೂರು. ೪೬೦-೨೫ ; 1297) ; ಯೆಳುನೂಱ ಯೆಪ್ಪತ್ತೇಳುಮೆ ವೊಳಗಾದ ನಖರ ಹಂಜಮಾನದ ಸಮಸ್ತ ಹಲರು ಮುಂದಿಟ್ಟು (ಸೌಇಎ. ೧೯೩೦, ಉಡುಪಿ. ೫೭೯-೯; 1397). ನಗರ$_2$: ಮತ್ಕಲಸೆಟ್ಟಿಯ ಮಗ ದೆಸಮಾಣಿಕಸೆಟ್ಟಿಯೊಟಗಾದ ಮಣಲಿಯ ಸಮಸ್ತ ನಗರೆಯುಂ ಆ ಪಟ್ಟಣದ ಸಮಸ್ತ ಸಥವ (?) ಮಾಡಿಸಿ ಕೊಟ್ಟ (ಮೈಆರಿ. ೧೯೩೬, ೪೭-೨೦; 1278). 'ನಗರ್ತ' ಪರಾ. [<ಸಂ. ನಗರ]

ನಕರ$_3$ 'ನಗಾರ್$_2$' ನೋ.

ನಕಲಿ 'ನಕಲು' ನೋ.

ನಕಲಿಗಾರ (ನಾ). ಹಾಸ್ಯಕ್ಕಾಗಿ ಅನುಕರಣೆ ಮಾಡುವವನು ; ಅಣಕ ಮಾಡುವವನು ; ವಿನೋದಪಡಿಸುವವನು ; ಹಾಸ್ಯಗಾರ : ಸ್ವಭಾವವಾಗಿ ನಕಲಿಗಾರರಾಗಿರುವವರು ಎಲ್ಲರನ್ನೂ ಗಟ್ಟಿಯಾಗಿ ನಗಿಸುತ್ತಿದ್ದರು (ಹುಟ್ಟಹ. ೨೨) ; ರಾಜಾಸ್ಥಾನದ ನಕಲಿಗಾರನ ಅನುಕರಣ ಮಾಡಿ ಮೃಗಗಳಂತೆ ಪಕ್ಷಿಗಳಂತೆ ಕೂಗುವದೂ ಬಾಲಕನ ಮತ್ತೊಂದು ವಿದ್ಯೆಯಾಯಿತು (ಕಥವಿ, II, ೩೨೩).

[ನಕಲಿ (<ನಕಲು) + – ಗಾರ (< – ಕಾಱ)]

ನಕಲು, ನಕಲಿ (ಗು). ೧. ನೈಜವಲ್ಲದ ; ಅನುಕರಣೆಯ ; ಕೃತಕವಾದ : ಪಡುವಲದ ಗಾಳಿ ಆಡಿದರೆ ತೂಗುವುದಟ್ಟಿ—ಎಂಥ ಮಾರ್ದನಿ, ಎಂಥ ನಕಲು ಕುಣಿತ ! (ನಡಬಂ. ೧೦೪-೧೮); (ನಾ). ೨. (ಬರವಣಿಗೆ, ಚಿತ್ರ ಮೊದಲಾದುವುಗಳ) ಮೂಲದ ಪ್ರತಿಕೃತಿ ; ಎರಡನೆಯ ಪ್ರತಿ ; ದ್ವಿಪ್ರತಿ : ಮಲಿಗೆಹೂವುಪನ್ನು ಮುಡಿಯುವದುಯಿಲವೆಂದು ಕಂಚಿಯಲಿ ಕರಾರು ಬರದು ಕೊಟ್ಟು ಬಂದುಯಿರುತ್ತಾರೆ ಯಿದರ ನಕಲನ್ನು ನಮ್ಮ ಕುಲಸ್ತರಿಗೆ ಕಳಿಶಿರುತ್ತೇವೆ (ಎಕ. IX, ಕಾನಕಾ. ೯೦-೭೩ ; 1700) ; ಯಾ ಸನದಿ ನಕಲಂನೂ ಶಿರಸ್ತೇದಾರರ ದಪ್ತರಕೆ ಬರಸಿಕೊಂಡು ಅಸಲ ಸನದಂನು ಹೆಚೆ ತಿಂಮಯನ ವತಕೆ ಕೊಡುವದು (ಎಕ. VI, ಕೊಪ್ಪ. ೪೮-೫೧; 1811); ಆ ಪ್ರತಿಯ ನೇರವಾದ ನಕಲುಗಳೇ ಇವು . . . ಅಥವಾ ಆ ಪ್ರತಿಯ ನಕಲಿನ ಮರುನಕಲಿನ ಬಳಿನಕಲುಗಳೇ ಇವು ? (ಕನ್ನಸ. ೫೯) ; ಆ ಪ್ರಶ್ನೆಯ ಸಂಬಂಧದಲ್ಲಿ ತಾವು ಮಾಡಿರತಕ್ಕ ತೀರ್ಮಾನದ ಒಂದು ನಕಲಿನ ಸಹಿತವಾಗಿ ವಾಪಸು ಕಳುಹಿಸಿಕೊಡಬಹುದು (ಭಾಧಾನ. ೧೨೫) ; ಮೊದಲೆರಡು ಕಾಗದಗಳ ನಕಲನ್ನು ಒಳಗಿಡು (ರಂಗಕ. ೧೦೭). ೩. ಅನುಕರಣೆ ; ಅನುಕರಿಸಿದಂದು : ಕಾವ್ಯವು ಲೋಕಸ್ಥಿತಿಯ ನಕಲಾಗಬೇಕಾಗಿಲ್ಲ (ಭಾರಮಿ. ೧೮೫) ; ಛಾಯಾವಾದೀ ಕವಿತೆಯನ್ನು ರವೀಂದ್ರಕಾವ್ಯದ ನಕಲು ಮಾತ್ರವೆಂದು ಭಾವಿಸುವ ಪ್ರವೃತ್ತಿ ಪ್ರಬಲವಾಗಿದ್ದ ಆ ಕಾಲದಲ್ಲಿ . . . ಆರೋಪವನ್ನು ಹೊರಿಸುತ್ತಿದ್ದರು (ಶ್ರೀಷ್ಠಪ್ರ. ೧೯೦). ನಕಲಿ : ೧. ಅವಳು ಹೋದನಂತರ . . . ಸೇವಕರು ನಕಲಿ ಕೈಯೊಂದರಿಂದ ಕೈಪೆಟ್ಟಿಗೆಯನ್ನೇಕೆ ತೆರೆದಿರಬಾರದು ? (ಪುನರು. ೧೦೪) ; ನಕಲಿ ಮಾತಲ್ಲ ಅಯ್ಯಯ್ಯೋ ತಂದೆಯೇ (ಕನ್ನಜಾ. ೨೮೫). ೪. ಅನುಕರಣೆಯಿಂದ ಕೂಡಿರುವುದು ; ಅಣಕ; ಹಾಸ್ಯ ; ತಮಾಷೆ; ವಿನೋದ : ನಕಲಿಗಳಲ್ಲಿ ಗ್ರಾಮದೋಷಗಳನ್ನು ಮುಖಂಡರ ರೀತಿನೀತಿಗಳನ್ನೂ ಅವರಂತಹ ನಡೆನುಡಿಗಳಿಂದ ಜನರ ಮುಂದಿಡುತ್ತಿದ್ದರು (ಹುಟ್ಟಹ. ೨೮). ೫. ಹಾಸ್ಯಗಾರ: ಮೆರವಣಿಗೆಯ ಮುಂದೆ ಅನೇಕ ನಕಲಿಗಳು ಹೋಗುತ್ತಿರುತ್ತಾರೆ (ಪ್ರಜಾಇ.II, ೩೧೦); ರಂಗಸ್ಥಳದಲ್ಲಿ ಬಗೆಬಗೆಯ ನಕಲಿಗಳು, ಯಕ್ಷಗಾನ . . . ದಾಸಯ್ಯಗಳ ವೇಷಗಳೆಲ್ಲಾ ಬಂದು ಜನರನ್ನು ವಿನೋದಗೊಳಿಸುತ್ತವೆ (ಹಳ್ಳಿಬಾ. ೮); ಲೋಬ್ಸಿಕ್‌ಗೆ ನಕಲಿಯವರ ಟೋಪಿ ಹಾಕಿದರೆ ಅದು ವಿಚಿತ್ರವಾಗಿ ಕಾಣುತ್ತದೆ (ಶಾಲೆಮ. ೨೦೨).

ನಕಲಿಶ್ಯಾಮ = ಹಾಸ್ಯಗಾರ ; ಬಫೂನಂ : ಸರ್ಕಸ್ಸಿನಲ್ಲಿದ್ದ ನಕಲಿ ಶ್ಯಾಮ ಮಕ್ಕಳನ್ನೆಲ್ಲಾ ನಕ್ಕು ನಲಿಯುವಂತೆ ಮಾಡಿದನು (ರೂಢಿ). ನಕಲು ತೆಗೆ = ಮೂಲದಂತೆ ಪ್ರತಿಯನ್ನು ತಯಾರಿಸು : ಹಿಂದೀಚಿತ್ರ

ಕಾರರು ಪ್ರಕೃತಿಯೊಳಗಣ ರೂಪಸನ್ನು ಯಾಂತ್ರಿಕರೀತಿಯಿಂದ ನಕಲು ತೆಗೆಯಲು ಯತ್ನಿಸಲಿಲ್ಲ (ಭಾಚಿತ್ರ. ೧೨). ನಕಲು ಮಾಡು, ನಕಲಿಮಾಡು= ೧. ಮೂಲದಂತೆ ಪ್ರತಿಮಾಡು; ಪ್ರತಿಕೃತಿಯನ್ನು ತೆಗೆ; ಪ್ರತಿಯನ್ನು ತಯಾರಿಸು : ಕೆಟ್ಟುಹೋದ ಚಿತ್ರವನ್ನು ನಕಲು ಮಾಡಿದಾಗ ಅದು ಕೆಟ್ಟ ದಾಗಿ ಬರೆದ ಚಿತ್ರದಂತೆಯೇ ಇರುವುದು ಸ್ವಾಭಾವಿಕ (ಧಾರದ. ೩೨೩); ಪಸ್ತುವಿಗೆ ಸಮಾನವಾದ್ದರ ಸೃಜನೆಯೇ ಸಾದೃಶ್ಯ. ಕಂಡ ದೃಶ್ಯವನ್ನು ನಕಲು ಮಾಡುವುದಲ್ಲ (ಸಾಂದಸ. ೦೩೦). ೨. (ಇನ್ನೊಬ್ಬರಂತೆ) ಮಾತನಾಡಿ, ನಡೆದಾಡಿ ಅಣಕ ಮಾಡು,–ತಮಾಷೆ ಮಾಡು,–ಹಾಸ್ಯ ಮಾಡು : ತರುವಾಯ ಹದಿನೈದು ನಿಮಿಷಗಳ ಕಾಲ ಉಪಾಧ್ಯಾಯ ರೊಬ್ಬರು ನಕಲಿ ಮಾಡಿದರು (ರಂಗಳ. ೯೩).

[←ಹಾರ. ಅರ. ನಕ್ಲ್, ನಕ್ಲೀ; ಹಿಂ. ಮರಾ. ನಕಲ್, ನಕಲೀ]

ನಕಾರ (ನಾ). ೧. 'ನ' ಎಂಬ ಅಕ್ಷರ : ಪ್ರಥಮವಾದದಲ್ಲಿ ಓಂಕಾರಕ್ಕೆ ನಕಾರ ಬೀಜಾಕ್ಷರ ಆ ನಕಾರ ಉಳಿಯು ಕೂಡಿದ ಮತ್ತೆ ಮಕಾರ ಬೀಜಾಕ್ಷರ (ಸರ್ವಜ್ಞ. ೧೩೩–೬೬೬); ಅಸಮಾಸದೊಳಂ ದೊರೆವೆತ್ತ ಸಮಾಸದೊಳಂ ಣಕಾರದಿಂ ಪರದೊಳ್ ಸಂದಿಸಿದ ನಕಾರಂ ಣತ್ವಂ ಪ್ರಸಿದ್ಧಮುಚ್ಚರಿಸುವರ್ಗೆ ದುಷ್ಕರಮಾದುವೆಂ (ಶಮುದ. ೧೩೮). ೨. ನಿರಾಕರಣವನ್ನು ಸೂಚಿಸುವಿಕೆ ; ಆಗುವುದಿಲ್ಲವೆಂದು ಹೇಳುವಿಕೆ : ಪ್ರಸ್ತುತ ಪರಿಸ್ಥಿತಿಯಲ್ಲಿ ನಕಾರವಲ್ಲದೆ ಬೇರೊಂದು ಉತ್ತರವಿದ್ದಿಲ್ಲ (ರಾಸಹು. ೭೫) ; ಅವಳಿಂದ ನಿನಗೆ ನಕಾರ ಬರದು (ದೀಪಹ. II, ೦೭೯). [ಸಂ.]

ನಕಾರಾತ್ಮಕ (ಗು). ನಿಷೇಧರೂಪವಾದ ; ನಿರಾಕೃತವಾದ ; ತಿರಸ್ಕೃತವಾದ : ಅದು ಈಗ ಸಂಪೂರ್ಣವಾಗಿಯೂ ಸಾರವನ್ನು ಕಳೆದುಕೊಂಡ ನಕಾರಾತ್ಮಕ ಬಾಳುವೆಯಾಗಿ ಉಳಿದಿತ್ತು (ಪೂರಕಸ. ೩೯೦). [ಸಂ.]

ನಕಾರಿಸು (ಕ್ರಿ). ಬೇಡವೆನ್ನು ; ಒಪ್ಪದಿರು : ಇಂಥ ಮನೆಯವರಿಗೆ ಸಮ್ಮತಿಯನ್ನ ನಕಾರಿಸುವ ಹಕ್ಕು ಅರಸನಿಗೆ ಇದ್ದಾಗ್ಯೂ (ಮುಂಬಯಿ. ೬-೦೩೪).

[ನಕಾರ + – ಇಸು]

ನಕಾಶ 'ನಕ್ಷೆ' ನೋ.

ನಕಾಶತೆಗೆ (ಕ್ರಿ). ೧. (ಚಿತ್ರ, ಭೂಪಟ ಮೊದಲಾದುವನ್ನು) ಚಿತ್ರಿಸು,–ರೇಖಿಸು,–ಬರೆ : (ಈ). ೨. ಪ್ರತಿಮಾಡು ; ಪ್ರತಿಕೃತಿಯನ್ನು ತಯಾರಿಸು : (ಈ). [ನಕಾಶ (<ನಕ್ಷೆ) + ತೆಗೆ]

ನಕಾಶೆ 'ನಕ್ಷೆ' ನೋ.

ನಕಾಸು 'ನಕ್ಷೆ' ನೋ.

ನಕಾಸುಕೆಲಸ 'ನಕಾಸೆಕೆಲಸ' ನೋ.

ನಕಾಸೆ 'ನಕ್ಷೆ' ನೋ.

ನಕಾಸೆಕೆಲಸ, ನಕಾಸುಕೆಲಸ (ನಾ). ಕುಸುರಿಗೆಲಸ ; ಮರ, ಲೋಹ, ದಂತ ಮುಂತಾದುವುಗಳಲ್ಲಿ ಚಿತ್ರವನ್ನು ಬಿಡಿಸುವ ಕೆಲಸ; ಚಿತ್ತಾರ: ನಕಾಸೆಕೆಲಸದ ಅಲಂಕಾರದ ವಸ್ತ್ರಗಳು ಈಗ ತುಂಬಾ ಬೆಲೆಬಾಳುತ್ತವೆ (ಜೂಡಿ). **ನಕಾಸುಕೆಲಸ** : ಕಾಶಿಯಿಂದ ಬಹು ಬೆಲೆಯುಳ್ಳ ನಕಾಸುಕೆಲಸ ಮಾಡಿದ ಮೇನೆಯೊಂದನ್ನು ತರಿಸಿದನು (ಭೂರಾಶ. ೭೬).

[ನಕಾಸೆ (<ನಕ್ಷೆ) + ಕೆಲಸ]

ನಕೀಬ (ನಾ). ಸ್ತುತಿಪಾಠಕ ; ಹೊಗಳುಭಟ್ಟ ; ಚಾರಣ : ಚೋಪದಾರ ಘಮಲದಾರ ನಕೀಬ . . . ಇವರೇ ಮೊದಲಾದವರು ಅಲಾಹಿದ ಪಾಗಿರ್ದವೇಷಾ ಕಚೇರಿಗೆ ಸೇರಿದವರು (ಕಾಮವಂ. ೨೨೬).

[←ಅರ. ಹಿಂ. ನಕೀಬ್]

ನಕುಲ$_1$, **ನಕುಳ** (ನಾ). ೧. ಕೀರ ; ಮುಂಗುಸಿ ; ಮುಂಗುರಿ : "ಏಷ ಜದಂ ಬಭ್ರು ನಕುಲಂ ಮುಂಗುರಿಯೆನಿಕ್ಕುಂ" (ಮುಂಗರಾ. ೪೯–೦೪) ; ಇತೀ ಶಾರ್ದೂಲ ವರಾಹ ಗೋಲಾಂಗೂಲ ನಕುಲಂಗಳ್ ನಾಲ್ಕುಂ ಭವದ್ದಾನಾನುಮೋದದಿಂ ಜಾತಿಸ್ಮರಂಗಳಾಗಿ ಭೋಗಭೂಮಿಗೆ ಬದ್ದಾಯುಷ್ಕಂಗಳಾದುವು (ಆದಿಪು. ೫-೩೦ವ) ; ಅಹಿನಕುಲಂಗಳ್ ಹರಿಣ ಚಮೂರಂಗಳ್ ಶಾಂತರೂಪದಿಂದಿರ್ದುವಜಿತನಾಥನ ಕೆಲದೊಳ್ (ಅಜಿಪು. ೭-೬) ; ಪಾವಿನ ಬಾಯಿಂ ಬರ್ದುಂಕಿದ ತಕ್ಕಿಗಳಂ ನಕುಲಂಗಳ್ ತಿಂದುವು (ಪಂಡಕಂ. ೧೭೪-೦೫) ; ಉಳಿದ ಬೆಳೆಯಂ ನಕುಲಹೆಗ್ಗಣಂಗಳು . . . ತಿಂದು ತಳಪಟಂ ಮಾಡಿ ನಾಡೆಲ್ಲಮಂ ಗೋಳಿಡಿಸುತಿರ್ದುವು (ಹಕಕಾ. ೩-೭೩) : ಗಿರಿಜೆಸಹಿತಾ ಶಿವಂ ಪಲವು ರೂಪಂ ತಳೆದು ಕರಿ ಶರಭ . . . ಉರಗ ನಕುಲಂ ಮೀಸಳೆ ಮತ್ಸ್ಯ . . ಚಕ್ರವಾಕರೂಪಜೀವವರ ಚರಣಾಂಬುಜಕ್ಕೆ ಶರಣು (ರತಿಚಿಂ. ೦೬-೩) ; ವಿವೇಕವಿಲ್ಲದೆ ವನಿತೆ ನಕುಲನ ಕೊಂದ ಗಾದೆಯು ಹನಮ ಮಾಡಿದನೆನಿಸಬಾರದು (ಕಾತಿಂತಾ. ೧೦-೪೩); ಶರಭನಿಭಾರಿ...ಪೂತಿವೆಕ್ಕು ನಕುಲಂ ಮರವಾವುಗಳೆಂಬಿವಾಗಳುಂ ಕರಮೆಸೆದಿರ್ಪನು ವೇಷಿದುದಾ ವಿಷಿನು ವಿಷಿನದ್ದ ಕಂದರಂ (ಶಬಕಂ. ೩-೩೪). ೨. ಪಂಚಪಾಂಡವರಲ್ಲಿ ನಾಲ್ಕನೆಯವನು ; ಮಾದ್ರೀಸುತರಲ್ಲಿ ಒಬ್ಬ : "ನರಬಾಂಧವನೆನಲ್ಕೆ ನಕುಲನೆನಿಕ್ಕುಂ" (ಮುಂಗರಾ. ೭೮–೩) ; ನಕುಲಂ ಕುಂತಶಸ್ತ್ರದೊಳತಿಪ್ರವೀಣನುಮಾಗಿ (ಪಂಪಭಾ. ೨-೩೬ವ); ಈತನೇ ಧರ್ಮಜನುಯೆರಡನೆಯಾತ ಭೀಮನು ಬಳಿಕ ಮೂಱನೆಯಾತನರ್ಜುನ ನಕುಲನೈದನೆಯಾತ ಸಹದೇವ (ಕುಚಾಆ. ೪-೭೦) ; ಗುಣದೊಳಾಯೌವನಾಶ್ವಕ್ಷಿತಿಪನೆಱಗಿ . . . ನರನ ಸದ್ಗುಣವನುಱಿ ಕೊಂಡಾಡಿ ಬಳಿಕ ಸಹದೇವನಕುಲಾದ್ಯರಂ ವರ್ಣಿಸಿದನು (ಕೃಮಿಭಾ. ೫-೦೮). ೧, ೨ : ಮತ್ತಮಾ ಮಹಾವನಂ . . . ಪಾಂಡವಪ್ರಕರದಂತಾತ್ಮಭೀಮನಕುಲದ್ರುಪದಮುಂ ಅರ್ಜುನೋರ್ಜಿತಮುಂ . . . ಸ್ಥಾಣುನಿವಸನಮಾಗಿಯುಂ ಅಪರ್ಣಾನ್ವಿತಮಲ್ತು (ಹಂದ್ರಪು. ೫-೩೨); ಸಹದೇವನಾಗಿ ಸಮುದಿತ ನಕುಲನಾಗಿ . . . ಹರಿಯೊಡನೆ ಬಹ ಪಾರ್ಥಸಂ ಕರೆದು ಮೂದಲಿಪ ತೆಱದಿಂದೆ ಎಂಧ್ಯಾದ್ರಿ ಮುಂದೆಸೆದುದು (ಕೃಮಿಭಾ.೧೦-೨); ಮತ್ತಮಾ ವನಂ . . . ಯುಧಿಷ್ಠಿರಸದ್ಮದಂತೆ ವೃಕೋದರನಕುಲಾಧಿಷ್ಠಿತಮುಂ . . . ಎನಿಸಿ (ರಾಜಶೇ. ೫-೭೪ವ). ೩. ಒಂದು ಬಗೆಯ ವೀಣೆ; ಎರಡು ತಂತಿಗಳುಳ್ಳ ವೀಣೆ : ನೂರುತಂತಿಗಳನ್ನು ಮೊಟ್ಟಮೊದಲಾಗಿ ಹೊಂದಿದ್ದ ವೀಣೆ, ತಂತಿಗಳ ಸುಖ್ಯೆಯಲ್ಲಿ ಇಳುವರಿ ಹೊಂದುತ್ತಾ ಬಂದು, ಎರಡು ತಂತಿಗಳ 'ನಕುಲ' . . . ಒಂಭತ್ತು ತಂತಿಗಳ 'ವಿಪಂಚಿ' ಎಂಬ ಹೆಸರುಗಳಿಂದ ತಂತಿಗಳ ಸುಖ್ಯೆಯಲ್ಲಿ ಏರುವೇರು ತೋರುತ್ತದೆ (ಸಂಗೀಪಂ. ೩೧೧). **ನಕುಳ** : ೧. ತದ್ವೃತ್ತಾಂತವೆಲ್ಲಮನಱಿದು ತತ್ಪುರಾಧೀಶಂ ದಂಡಿಸೆ ಗತಜೀವಿತನಾಗಿ ಬಾದಿಲ್ಲಿ ನಕುಳನಾದಂ (ಆದಿಪು. ೫-೨೦ವ) ; ಪಸುರ್ವರ್ಣಂ ಕರಿದಪ್ಪ ವರ್ಣಂ ಕರಂ ಕಡುವಿಳಿದಪ್ಪ ವರ್ಣಂ ನಕುಳವೆಂಬಿವನುಕ್ರಮದಿಂದೆ ತೋಱುಗುಂ (ಕೋಕಶಾ. ೫-೨೫). [ಸಂ.]

ನಕುಲ$_2$ 'ನಗಲಂ' ನೋ.

ನಕುಲಾರಿ (ನಾ). ವಂಗಿಗುಸಿಯ ಶತ್ರು ; ಹಾವು : "ನಕುಲಾರಿ – ಮುಂಗಲಿಯ ವೈರಿ. ಹಾವು" (ಗಂಗಾಮ. ೦೭೭). [ನಕುಲ$_1$ + ಅರಿ$_6$]

ನಕುಲೇಷ್ಟೆ (ನಾ). (ವಂಗಿಗುಸಿಯು ಸೇವಿಸುವುದೆಂದಂ ನಂಬಲಾದ) ಒಂದು ಬಗೆಯ ಸಸ್ಯ; ಗಂಧನಾಕುಲಿ; ಭುಜಂಗಾಕ್ಷಿ: "ನಾಕುಲೀ. . . . ಗಂಧನಾಕುಲೀ. ನಕುಲೇಷ್ಟಾ. ಭುಜಂಗಾಕ್ಷೀ. ಫತ್ರಾಕೀ. ಸುವಹಾ – ರ ಸರ್ಪಾಕ್ಷಿಗಿಡದ ಹೆಸರುಗಳು" (ಸಿದ್ಧಾಂತಿ. ೦೩೧). [ಸಂ. ನಕುಲೇಷ್ಟಾ]

ನಕುಳ 'ನಕುಲ' ನೋ

ನಕ್ಕಬಡಿ, ನಕ್ಕಬಳಿ (ಕ್ರಿ). ಬಹಳ ಸಂಕಟಪಡು ; ದುಃಖಿಪಡು : ಪಾವ. ಅವರು ಮಕ್ಕಳಿಲ್ಲದೆ ನಕ್ಕಬಡೀತಿದಾರೆ (ಮಲವ. ೩೧). **ನಕ್ಕಬಳಿ** : ನನ್ನ ಸೊಸೆ ಗೋಳೋ ಹೇಳಬಾರದು . . . ಅಂತರಾಳದಲ್ಲಿ ಸಿಕ್ಕಿ ನಕ್ಕಬಳೀತಾ ಅದೆ (ಮಲವ. ೩೬೪). [?]

ನಕ್ಕಬಳಿ 'ನಕ್ಕಬಡಿ' ನೋ.

ನಕ್ಕರವದ್ದಿ (ನಾ) (?): ತುಱುಗೆಮೆ ನೀಳ್ದ ಪುರ್ವು ನಿಡುಗಣ್ ಪೊಱೆ ಯಲ್ಲದೆ ಬಟ್ಟತಪ್ಪ ಬಾಯ್ದೆಱೆ ತನುರೇಖೆಗೊಂಡ ಕೊರಲೊಡ್ಡಿದ ಪೆರ್ಮೊಲೆ ತೆಳ್ವಸಿಱ್ ಕರಂ ನೆಱೆದ ನಿತಂಬದಿಂಬುವಡೆದೊಳ್ದೊಡೆ ನಕ್ಕರ ವದ್ದಿ (?) [ಪಾಶಾಂ. ನಕ್ಕರವದ್ದಿ, ನೆರ್ಕೂರೆವೊದ್ದಿ] ತಾನೆ ಪೋ ಕಿಱುದೊಡೆ ಯೆಂದು ಧಾತ್ರಿ ಪೊಗಟ್ಗುಂ ಪೊಗಟ್ವನ್ನರೆ ಕುಂತಿ ಮಾದ್ರಿಗಳ್ (ಪಂಪಭಾ. ೧-೧೦೮). 'ನೆಕ್ಕೊರವಟ್ಟೆ' ಪರಾ. [?]

ನಕ್ಕರೀಗಿಡ (ನಾ). ಒಂದು ಬಗೆಯ ಗಿಡ: ನಾಗರೀಗಿಡ, ನಕ್ಕರೀಗಿಡ, ಕಂದರಕ್ಕರೆ (ಮೃಜಿಗಿ. ೭೯-೧೬೦೭). [? + ಗಿಡ (<ಗಿಡು)]

ನಕ್ಕಲು$_1$ (ನಾ). ಮೊರಸು ಒಕ್ಕಲು ಜನಾಂಗದಲ್ಲಿ ಒಂದು ಪಂಗಡ: (ಎಸಮ್ಮ. XV, ೪೫). [?]

ನಕ್ಕಲು$_2$ (ನಾ). ರತ್ನಕ್ಕೆ ದೋಷವನ್ನುಂಟು ಮಾಡುವ ಒಂದು ಬಗೆಯ ಬಣ್ಣ (?): ಕರ್ಕರು ಕೋಮಲಂ ಮಂದ ದೀಪಿಂ ಹೊಗೆಯಂ ನಕ್ಕಲಿನ ಬಣ್ಣಮದು ಮೂರು ರತ್ನಂಗಳೊಳು ಪೊಕ್ಕು ಮಿಶ್ರಿತಮಾಗಿ ದೋಷಮಮ್ಮೆಸಗಿ ತಾ ಮೂರೊಳ್ಬೆರೆಬೇರೆ (ರತ್ನಶಾ. ೯-೫). [?]

ನಕ್ಕಿ$_1$ (ನಾ). ೧. ಬಟ್ಟೆ, ಕಸೂತಿ, ಹಾರ ಮೊದಲಾದುವುಗಳಿಗೆ ಸೇರಿಸುವ ಹೊಳೆಯುವ ಬಣ್ಣಬಣ್ಣದ ಬಿಲ್ಲೆ: ಆ ಮಗುವಿನ ಕೆಂಪು ಲಂಗಕ್ಕೆ ನಕ್ಕಿ ಗಳನ್ನು ಇಟ್ಟು ಕಸೂತಿ ಮಾಡಿರುವುದು ತುಂಬಾ ಚೆನ್ನಾಗಿದೆ (ರೂಢಿ). 'ನಕ್ಕಿಕೆಲಸ' ಪರಾ. ೨. ಥಳಥಳಿಸಿ ಹೊಳೆಯುವ ಒಂದು ಬಗೆಯ ಪುಡಿ; ಚಮಕಿ: ರಂಗೋಲಿಯ ಮೇಲೆ ನಕ್ಕಿ ಉದುರಿಸಿದರೆ ಚೆನ್ನಾಗಿ ಕಾಣುತ್ತದೆ (ರೂಢಿ). [← ಅರ. ನಕ್ಕೇ; ಮರಾ. ನಕ್ಕೇ, ನಕ್ಷೀ]

ನಕ್ಕಿ$_2$ (ನಾ). ಪಾತರಿ; ಖಂಡಿತ: ಪ್ರೆಸಿಡೆಂಟ ಗಾಯಕವಾಡರ ಮನೆಗೆ ಹೋಗಿ ಕೆಲಸ ನಕ್ಕಿ ಮಾಡಿಸಿಕೊಂಡು ಬಂದಿದ್ದಳು (ಕ್ಷತಿಕ. ೬೨).

[← ಅರ. ನಕೀ; ಮರಾ. ನಕ್ಕೀ; ನಕೀ]

ನಕ್ಕಿ$_3$ (ನಾ). [ಸಂಗೀತ] ತಂತೀವಾದ್ಯಗಳನ್ನು ಮೀಟುವಾಗ ಬೆರಳಿನ ತುದಿಗೆ ಹಾಕಿಕೊಳ್ಳುವ, ಉಂಗುರದಂತಹ ಸಾಧನ; ಕೃತಕವಾದ ಉಗುರು: ರಾಗಕ್ಕೆ ತಕ್ಕಂತೆ ಮೆಟ್ಟಲುಗಳನ್ನು ವಾದ್ಯದಲ್ಲಿ ಅಳವಡಿಸಿ ಕೊಳ್ಳುವ ಸೌಲಭ್ಯವಿದ್ದು, ನಕ್ಕಿಗಳ (Plectra) ಉಪಯೋಗವೂ ಇತ್ತೆಂದು ನಿಜಗುಣರ ಈ ರಚನೆಯಿಂದ ವ್ಯಕ್ತವಾಗುತ್ತದೆ (ಸಂಗೀಕಂ. ೩೧೪).

[← ಮರಾ. ನಖೀ./ಹಿಂ. ನಖ]

ನಕ್ಕಿಕಾಂಟೆ (ನಾ). ಒಂದು ಕೊಳದ ಹೆಸರು: ಹಾಲದಿನ್ದೆ ಬೆಳೆದ ನೆಪ ಪುಣಸೆಯಿನ್ದೆ ನಕ್ಕಿಕಾಣ್ಪೆಯಿಂದೆ ಒ × × ಈಶಾನ್ಯದ ಕಿಸುವಾಲಿಯಿನ್ದೆ ನಿನ್ದ ಕಲ್ಲಿನ್ದೆ (ಮೃಅಶಿ. ೧೯೦೪,೧೩-೬೯; ೫೦೬). [ನಕ್ಕಿ ? + ಕಾಂಟೆ$_2$]

ನಕ್ಕಿಕೆಲಸ (ನಾ). ಹೊಳೆಯುವ ಬಿಲ್ಲೆಗಳಿಂದ ಮಾಡಿದ ಚಿತ್ತಾರದ ಕೆಲಸ: ನಕ್ಕಿಕೆಲಸದ ಚಪ್ಪಲಿಯ ಮೆಟ್ಟಿ ಜರತಾರಿ ಚಿಮ್ಮಲಿಲ್ಲ (ನಡಿಚಾ. I, ೩೬೭). [ನಕ್ಕಿ$_1$ + ಕೆಲಸ]

ನಕ್ಕಿಸು, ನೆಕ್ಕಿಸು (ಕ್ರಿ). ನಾಲಗೆಯಿಂದ ಸವರುವಂತೆ ಮಾಡು. – ನೆಕ್ಕು ವಂತೆ ಮಾಡು, – ನೇವರಿಸುವಂತೆ ಮಾಡು: ಪೆಣ್ಗೋಡಗ . . . ತಿನ್ನುವ ಪಣ್ಣನಣುಗಂಗೆ ಕನಿಕರದೆ ಕೊಟ್ಟು ಗಂಡನಿಗೆ ತನ್ನಯ ಹಸ್ತವನು ನಕ್ಕಿಸಿದುದು (ಮಹಾಂತೇ. ೨೨-೩೫). ನೆಕ್ಕಿಸು: ವಜ್ರಕಂಟಕಾನ್ವಿತನಪ್ಪ ಜಿಹ್ವೆಯ ಗೋವಂ ಪುಟ್ಟಿಸಿಯಾ ಗೋವಿಂ ನೆಕ್ಕಿಸಿ ಕೊಲಲ್ ಆ ಶಿರಸ್ಸಿನಸ್ಥಿ ಯೊಳ್ ಅರ್ಧಂ ಶಕ್ರಂಗೆ ವಜ್ರಾಯುಧಮಾಯ್ತು (ಧರ್ಮಶ. ೪-೧೪ ವ).

[ನಕ್ಕು$_1$ + – ಇಸು$_3$]

ನಕ್ಕಿಱೆ (ಕ್ರಿ). ದನಗಳನ್ನು ಓಡಿಸಲು ಬಾಯಲ್ಲಿ ಶಬ್ದಮಾಡು: ಕೋ ಬಾಯೆಂದಲ್ಲಿ ಆತ್ಮಭೇದ ಅಂಬೆಯೆಂದಲ್ಲಿ ಅಱಿವಿನ ಭೇದ ಹೊಲದೋ ಎಂದು ನಕ್ಕಿಱೆವಲ್ಲಿ ಚಿದಾತ್ಮನ ಭೇದ ಇಂತೀ ಗುಣದ ಪಶು ಅಸುವಿನ ಬಲೆಯ ಕಾಯ್ದೊಟ್ಟಿಸಬೇಕು ಗೋಪತಿನಾಥ ವಿಶ್ವೇಶ್ವರಲಿಂಗಕ್ಕೆ (ತುಱುಗಾ. ೩-೧೪). [ನಕ್ಕು$_1$ + ಇಱೆ$_1$]

ನಕ್ಕು$_1$, **ನೆಕ್ಕು**$_1$ (ಕ್ರಿ). ೧. (ರಸವನ್ನು ಹೀರಲು) ನಾಲಗೆಯಿಂದ ಉಜ್ಜು, – ತೀಡು. – ಸವರು: "ನಕ್ಕು (ನೆಕ್ಕು) – ಲೀಹನೇ" (ಶಮಧಾ); ನರಭೋಗ ಮೆಂಬೀ ಪನಿಪುಲ್ಲಂ ನಕ್ಕೆ ತೃಷ್ಣೆ ಪೇಟ್ಱ್ ಪೋದಪುದೇ (ಆದಿಪು. ೯-೫೭); ಅಂಜನಶಿಲಾವೆ ದಿಕೆಯೊಳ್ ನೆತ್ತರಿಂ ಪೊರೆದ ಕಯ್ಗಳಿಂ ಜವನಪ್ಪಳಿಸಿದಂ ತಿರ್ದ ರಕ್ತಚಂದನಚರ್ಚೆಗಳಂ ನೆತ್ತರೆ ಗೆತ್ತು ನಕ್ಕುವ ಬಳ್ಳುಗಳುಮಂ . . . ಅವಲೋಕಿಸುತ್ತುಂ ಪೋಗೆಪೋಗೆ (ಕಾದಂಉ. ೨೬೯); ಸಿಂಧೂರ[ದ] ಸಕಳಂಗಳಂ ತುರಗರಾಜಿ ನಕ್ಕಿದವು ತಗುಳೆ ಮೂರಿವಿಡುತ್ತುಂ (ಪರ್ಧಮಾ. ೯-೯೮); ಖಡ್ಗಧಾರೆಯ ಜೇನೆಯ್ಯಂ ನಕ್ಕುವಂತೆ ಸಂಸಾರಸುಖಕ್ಕಾನಳಿವೆ (ಪಂರಾಮಾ. ೨-೧೮); ಕಂಬನಿಯನೊಗುತಾ ಮಱೆಯ ಮಯ್ಯಂಬನದು ನಕ್ಕುತ್ತ ಮೋಹದಿ ನಂಬಿಸುತ್ತಸುವುಳಿದುದಯ್ಯೋ ವಿಮೋಹ ಕಷ್ಟವಲಾ (ಸಾಳ್ವಭಾ. ೩-೨೮); ಅರುಣೋದಯದರುಣದ್ಯುತಿ ಗಿರಿಕಟಕದ ಪಳಿಕಿನಲ್ಲಿ ಬಿಂಬಿಸೆ ಕಾಣುತ್ತರ ಣಜಲಂಗತ್ತಲ್ಲಿಯ ಹರಿಣಾರಿಯ ಮಱೆಗಳೆಯ್ದೆ ನಕ್ಕು ತ್ತಿರ್ಕುಂ (ಶಬಶಂ. ೨-೩೦). ನೆಕ್ಕು$_1$: ೧. ಬೆಲ್ಲದ ಮೋಹಕ್ಕೆ ಸುರಗಿಯ ಬಾಯ ಧಾರೆಯಂ ನೆಕ್ಕುವಂತೆ (ಧರ್ಮಮ್ಮ. ೬-೦೭೫); ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ (ಬಸವ. ೩೫); ಕೆಳೆಯುಂ ಪಗೆಯುಂ ದುರ್ಜನನೊಳನುತ್ತಮಂ ನೋಡೆ ದಲ್ ಶುನಕಂ ಕೂರ್ತು ಮುಳಿದುಮಾಪ ಕಾರವಂ ಮೊಕ್ಕಳವಾಗಿರೆ ನೆಕ್ಕಿ ಕರ್ಚಿ ಮಾಡದುದುಂಟೇ (ಪಾರ್ಶ್ವಪು. ೪-೪೭); ಬೋಳೆಯಂಬಿನ ಗಾಯದ ಬಾಯ್ದೆಱೆಯಿಂದ ಬೀಳುತ ಗೋಣ್ಮುರಿ ಗೊಂಡು ಬೇಳುಗಳ ಹಸುಳೆಯ ನೆಕ್ಕುವ ಹುಲ್ಲೆಯೋಳಿಯಳಿದವಪ ಱೊಳಗೆ (ಪಂಮಿಸಂ. ೨-೩೫); ಆ ಉರಿನಾಲಗೆ ನನ್ನ ಬಹಿರಂಗವ ನೆಕ್ಕಿ ತೊಳೆ ಯಿತು (ಅಂಚಶಾ. ೭); ನೆಕ್ಕೋ ನಾಯಿಗೆ ಲಿಂಗವೇನು ಪಾಣಿಪೀಠವೇನು? (ಗಾದೆ). ೨. (ಆಲಾ) ಸ್ಪರ್ಶಿಸು; ಮುಟ್ಟು; ಆವರಿಸು: ಮೂರ್ತಿ ಸಾಗರದ ತೆರೆಗಳಲ್ಲಿ ಕಲ್ಲೋಲಮಾಲೆಯಾಗಿ ನೆಕ್ಕ ಬರುತಿಹುದು ನಯನ ತೇಜವೇ ರೂಪಜ್ವಾಲೆಯಾಗಿ (ಅಳಗು. ೪೫೫-೨೦); ನಮ್ಮೊಳವ ನೆಕ್ಕುಗುಂ ನಲವು (ಕಾಲೂರ. ೩೭-೪೦). ೩. ನುಂಗು; ನಾಶಮಾಡು; ಕಬಳಿಸು: ಸಾವಿರ ಹೆಡೆಯ ಅಜಗರ ಇಡೀ ಮೌಖರೀವಂಶವನ್ನೇ ನೆಕ್ಕಿದುದನ್ನು ನಾನು ನೋಡಿದ್ದೇನೆ (ಬಾಡಜ. ೩೮೫).

[ದೇ.ಪ್ರ ತಮಿ. ಮಲ. ತುಳು. ನಕ್ಕು; ಕೊಡ. ನಕ್ಕ್; ತೆಲು. ನಾಕು; ನಾಯ್ಕಿ. ಗದಬ. ನಾಕ್; ಪರ್ಜಿ. ನೇಕ್]

ನಕ್ಕು$_2$ 'ನಗು$_1$' ಪರಾ.

ನಕ್ಕುಳ (ನಾ). (ಕರಾ) ಎರೆಹುಳು; ಮಣ್ಣುಹುಳು.

[← ತುಳು. ನಕ್ಕು, ನಕ್ಕುರು]

ನಕ್ಕೆ (ನಾ). ನರಿ. 'ನಕ್ಕೆಚಿಕ್ಕನಾಕು' ಪರಾ.

[ದೇ.ಪ್ರ ತಮಿ. ನಕ್ಕನ್; ತೆಲು. ನಕ್ಕ]

ನಕ್ಕೆಚಿಕ್ಕನಾಕು (ನಾ). ಒಂದು ಬಗೆಯ ಸಸ್ಯ; ನರಿಹೊನ್ನೇಗಿಡ: "ಪೃಶ್ನಿಪರ್ಣೀ, ಪೃಥಕ್ಪರ್ಣೀ, ಚಿತ್ರಪರ್ಣೀ, ಅಂಶ್ರುಪರ್ಣಕಾ...೪ ಕೋಲ ಪೊನ್ನ ಎಂಬುವದು, ನರಿಹೊನ್ನೇಗಿಡ, ನಕ್ಕೆಚಿಕ್ಕನಾಕು" (ಸಿದ್ಧಾಂತಿ. ೧೧೭)

[ನಕ್ಕೆ + ಚಿಕ್ಕನಾಕು ?]

ನಕ್ತ (ನಾ). ೧. ರಾತ್ರಿ; ಇರುಳು; ನಿಶೆ: "ತಮಿಶ್ರಾ . . . ನಕ್ತಂ . . . ಶ್ಯಾಮಾ, ರಾತ್ರಿಃ – ಈ ೧೯ ಇರುಳಿನ ಪೆಸರ್" (ಹಲಾಯು. ೧೮-೦೦೭); "ಇರುಳು ತಮಿ ಯಾಮಿನೀವಸತಿರ್ನಿಶಾ ವಿಭಾವರಿ ತಮಸ್ವಿನಿ ವಾಸತೇಯಿ ನಕ್ತಮುಷೆ ಶರ್ವರಿ ದೋಷೆ ರಜನಿ ಕ್ಷಪೆ ಕ್ಷಣದೆ ಶ್ಯಾಮೆಯೆನೆ ರಾತ್ರಿಗಭಿ ಧಾನಮಕ್ಕುಂ" (ಮಂಗರಾ. ೨೦-೬); ಕೊಂಕಿಸಿ ನಕ್ತಸಮಯದಿ ನೋಡಿ ಮುಕ್ತಾ ಫಳವ ಹಳಿವ ಭುಕ್ತಗೆಯ್ಯದೆ ದೂರದಿಂ ರಸಾನ್ನವ ಹಳಿವ (ಲಿಂಗಪು. ೦-೨೬);

ಬೋಧಿಸಿದಡ ವನೀಶಗಹುದದು ವಿಪರ್ಯಾಯವಾದುದಾಯಿತಿನ್ನೇನು ನಕ್ತ ಬರಲಾಗ ಸಂಮುಕ್ತನಂಗೊಳಿಸದಿರಲು (ಜಿನಮು. ೧೦-೩). 'ನಕ್ತಜೀವ' ಪರಾ. ೨. = ನಕ್ತಭೋಜನ. [ಸಂ.]

ನಕ್ತಂಚರ (ನಾ). ೧. ರಾತ್ರಿಯಲ್ಲಿ ಸಂಚರಿಸುವಂಥದು; ನಿಶಾಚರ. ೨. ಕಳ್ಳ; ಚೋರ. ೩. ಗೂಬೆ. ೪. ಬೆಕ್ಕು. ೫. ಭೂತ; ಪಿಶಾಚಿ. ೬. ರಾಕ್ಷಸ: ಚತುಸ್ತ್ರಿಂಶತ್ಸಹಸ್ರನಕ್ತಂಚರಪರಿವೃತ ಹಳಂಭೂಷಮು ಸಲಾಯುಧ ಕಾಳನೀಳವಿದ್ಯುನ್ಮಾಲ್ಯಾದಿಗಳುಂ ಬಂದು ಕೂಡೆ (ಪಂಪಭಾ. ೧೦-೨೭ ಪ); ಒಡಲೊಳಗುಡಿದ ಸರಲ್ ಪೊಱಮಡುವುದಯಸ್ಕಾಂತ ಸನ್ನಿಧಾನದೊಳೆಂತಂತೊಡಲಿಂಪೋದುದು ಮುನಿಸಿನ ಪೊಡರ್ಪು ನಕ್ತಂಚರಂಗೆ ಶಿಶುಸನ್ನಿಧಿಯೊಳ್ (ಪಂರಾಮಾ. ೪-೧೯); ನಕ್ತಂಚರನ ಮಸ್ತಕಮಂ ಮುಷ್ಟಿಯಿಂ ತಿವಿದು (ಜಗವಿ. ೪-೫೬ಪ); ನಕ್ತಂಚರರ ರುಧಿರಪಾನಕ್ಕೆ ಬೀಭತ್ಸ . . . ಚಕೋರ ವ್ರಜಕೆ ಶಾಂತಿಸದ ಪ್ರವಾಹಪೂರವೆನೆ ನವರಸೋದಯಮಯವೆನಿಸಿದ ಹಿಮಕರನೆಸೆದಿರುತಿರ್ದನು (ಹಡಕಾ. ೩-೪೫). [ಸಂ.] ೭. ನೈಋತಿ: "ಯಾತು . . . ನಕ್ತಂಚರಃ, ನೈಋತಃ, ಕೋಣಪಕಃ, ಕೈಕಸೇಯಃ – ಈ ೯ ನೈಋತಿಯ ಪೆಸರ್" (ಹಲಾಯು. ೧೩-೭೩);

ನಕ್ತಂಚರಿ (ನಾ). ರಾತ್ರಿಯಲ್ಲಿ ಸಂಚರಿಸುವವಳು; ರಾಕ್ಷಸಿ: ನಿಜರಕ್ತಂ ರಿಪುಕುಕ್ಷಿಯೊಳ್ನಿಜಶಿರಂ ನಕ್ತಂಚರೀಹಸ್ತದೊಳ್ (ಗದಾಯು. ೫-೫); ನವರಕ್ತಾಸಕ್ತನಕ್ತಂಚರೀಮುಖದೊಳ್ ತೂಂತುವುದಾಂತರಂ ದಶಮುಖೋತ್ಪಾತಾಸಿಧಾರಾಮುಖಂ (ಪಂರಾಮಾ. ೧೦-೨೨೩).

[ಸಂ. ನಕ್ತಂಚರೀ]

ನಕ್ತಕ (ನಾ). ಕೊಳಕಾದ ಅಥವಾ ಹರಿದ ಬಟ್ಟೆ: "ನಕ್ತಕಃ, ಕರ್ಪಟಃ – ೨ ಹರುಕುಬಟ್ಟೆ, ಚಿಂದಿಬಟ್ಟೆ, ಇದು ಕೊಳೆಯುಳ್ಳ ಬಟ್ಟೆಗೂ ಹೆಸರು" (ಸಿದ್ಧಾಂತಿ. ೨೦೩). [ಸಂ.]

ನಕ್ತಕರಜೂಟ (ನಾ). ತಲೆಯಲ್ಲಿ ಚಂದ್ರನನ್ನು ಧರಿಸಿದವನು; ಶಿವ: ವ್ಯಕ್ತದಿಂ ದವಳಾರಮಂ ಪಾಡಿ ಸಂತತಂ ನಕ್ತಕರಜೂಟಶರಣರ ಸೇವೆಯಂ ಮಾಡಿ (ಪ್ರಭುಪು. ೯-೧೩೩). ℙ ಇದು ಛಂದಸ್ಸಿಗೋಸ್ಕರ ಮಾಡಿಕೊಂಡ ರೂಪ. [<ಸಂ. ನಕ್ತಂಕರಜೂಟ]

ನಕ್ತಜೀವ (ನಾ).=ನಕ್ತಂಚರ ೬: ಕುಲದಿಂ ಮಾತ್ರಮಲ್ತಿವರ್ ಸ್ವಗುಣದಿಂ ರಾಕ್ಷಸರ್ ಭಯಕ್ಕಲ್ಲದೆ ನಯಕೆ ಸೋಲರೀ ನಕ್ತಜೀವರ್ (ಶ್ರೀರಾಮಾ. ೬೦೮-೧೯೬). [ನಕ್ತ + ಜೀವ]

ನಕ್ತಭೋಜನ (ನಾ). ಹಗಲೆಲ್ಲ ಉಪವಾಸವಿದ್ದು, ರಾತ್ರಿ ಪೂಜೆ ಮಾಡಿ ಪ್ರಸಾದವನ್ನು ಸ್ವೀಕರಿಸುವ ಒಂದು ವ್ರತ; ನಕ್ತವ್ರತ: ಪ್ರತಿ ಸೋಮವಾರವೂ ನಕ್ತಭೋಜನ, ಪಕ್ಷಪ್ರದೋಷ . . . ಈ ಪ್ರಕಾರ ನಡೆಸುತ್ತಿದ್ದನು (ಚಿತ್ರಪಾ. ೫೮). [ನಕ್ತ + ಭೋಜನ]

ನಕ್ತಮಾಲ (ನಾ). ಒಂದು ಬಗೆಯ ಮರ; ಹುಲಿಗಿಲು; ಹೊಂಗೆ: "ಚಿರಿಬಿಲ್ವಃ, ನಕ್ತಮಾಲಃ, ಕರಜಃ, ಕರಂಜಃ – ೪ ಹುಲಿಗಿಲಮರದ ಹೆಸರು, ಇದಕ್ಕೆ ಹೊಂಗೇಮರವೆಂದು ಕೆಲವರು ಅರ್ಥ ಹೇಳುವರು" (ಸಿದ್ಧಾಂತಿ. ೧೦೭). [ಸಂ.]

ನಕ್ತವ್ರತ (ನಾ). = ನಕ್ತಭೋಜನ: ಯಾರು ಈ ತೀರ್ಥದಲ್ಲಿ ಸ್ನಾನಮಂ ಮಾಡಿ ಉಪವಾಸವನಾದರೂ ನಕ್ತವ್ರತವನಾದರೂ ಭಕ್ತಿವ್ರತವನಾದರೂ ಮಾಡುವರೊ ಅವರೆಲ್ಲರು ಯೆನ್ನಲಿ ಸಾಯುಜ್ಯಮುಕ್ತಿಯನೈದುವರು (ಗರಮ. ೭-೪೪-೨). [ನಕ್ತ + ವ್ರತ]

ನಕ್ತಿಸು (ಕ್ರಿ). ರಾತ್ರಿಯಾಗುವಂತೆ ಮಾಡು; ಕತ್ತಲೆಯಾಗುವಂತೆ ಮಾಡು: (?)ಶಕ್ತಿಯಾರಂ ಸದಾಖ್ಯನಾರನಾವಗಂ ವ್ಯಕ್ತಿಸುತೆ ಕರಣವಾರಂ ವಿಶೇಷಣವಿಡಿದನುಕ್ತಿಸುತ ಲಿಂಗವಾರಂ ವಿನಮ್ಮತೆಪಡೆದು ನಕ್ತಿಸುತ ಭವನಂಗಳಾ (ಲಿಂಗಪು. ೯-೧೭). [ನಕ್ತ + –ಇಸ್ಸು]

ನಕ್ತೇಕಭುಕ್ತ (ನಾ). = ನಕ್ತಭೋಜನ: ನಿತ್ಯಪುಪವಾಸಿಗಳು ನಕ್ತೇಕಭುಕ್ತ ಪುನರುಕ್ತಿಯಿಂ ಧಾರಣೆಯ ಪಾರಣಾನೇಮಕರು (ಲಶಿಚಂ. ೩೧-೨೩). ℙ ಸಂಸ್ಕೃತ ವ್ಯಾಕರಣದ ಪ್ರಕಾರ ಇದು ಅಶುದ್ಧ ಪದ.

[ನಕ್ತ + ಏಕಭುಕ್ತ]

ನಕ್ತೋಪವಾಸ (ನಾ). = ನಕ್ತಭೋಜನ: ನಕ್ತೋಪವಾಸ ಚಾಂದ್ರಾಯಣಂ ಮೊದಲಾದ ನಿತ್ಯನಿಯಮಂಗಳು . . . ಕೊಳಲು (ಲಶಿಚಂ. ೪೬-೬).

[ನಕ್ತ + ಉಪವಾಸ]

ನಕ್ರ (ನಾ). ೧. ಒಂದು ಬಗೆಯ ಜಲಚರ ಪ್ರಾಣಿ; ಮೊಸಳೆ; ನೆಗಳು: "ನಕ್ರಮೆನೆ ಕುಂಭೀರಮೆನೆ ಮೊಸಳೆ ಗ್ರಾಹಮಾ ನಕ್ರ ಅವಹಾರಮೆನೆ ನೆಗಟಕ್ಕು" (ಮಂಗರಾ. ೧೨೦-೭); ನಿಜದೇಶಪ್ರಸ್ಥಾನಾಭಿಮುಖರ್ ಅಂತಸ್ಥಕೋಪಾವಲೇಪರ್ ಬಹಿಃಪ್ರಮೋದಂಗಳಿಂ ಸಂವೃತಾಕಾರರ್ ಗೂಢನಕ್ರಪ್ರಸನ್ನಹ್ರದಗಳಂತೆ ಪಯಣಂಬೋದರ್ (ಶಾಂತಿಪು. ೬-೩ಪ); ಜಡಸ್ಥಿತಿ ನಕ್ರದೊಳ್ ಪ್ರಹರಣಶ್ರಮಂ ಖುರಳಿಯೊಳ್ . . . ಮಹಾಮಾತ್ರವರ್ತನಂ ಸೃಣಿಯೊಳಲ್ಲದಿಲ್ಲಮೆಲ್ಲಿಯುಂ (ಚಂದ್ರಪು. ೩-೯ ಪ); ಕರಿಮಕರ ನಕ್ರಶೈವಾಳ . . . ತಿಮಿತಿಮಿಂಗಿಳೋತ್ಕರಜಳೂಕವ್ಯಾಳಕೋಳಾಹಳ ಧ್ವಾನವೆರಸಿ ಜಲನಿಧಿ ಮೆಱೆದುದು (ಹಡಕಾ. ೦-೩೩); ಆತನ ಮಗಳ್ . . . ನಂದನವನದ ಹೊಂದಾವರೆಯ ಕೊಳದೊಳ್ ಕಾಲಂ ತೊಳೆಯಲ್ಪುಗೆ ಅಲ್ಲಿರ್ದ ನಕ್ರಂ ಚೆಕ್ಕನೆ ಚರಣಮಂ ಪಿಡಿಯಲ್ (ಪುಣ್ಯಾಸ್ತ. ೬-೧೪ ಪ); ವಾರಿಕೇಳಿಯ ಸುರನಾರಿಯರ್ಗಳ ಕಂಡು ಬೀರುಶರ್ಮರು ಸೋತು ಪಿಡಿಯೆ ಪಾರಿ ಶಪಿಸಲೇಳು ದಾರುವಾದರು ನಕ್ರಾಕಾರವನ್ನಾಂತರಂತಲ್ಲಾ (ಭೈರವೇ. ೨-೩೦); ಕ್ರೂರನಕ್ರಾಕುಲದೊಳಿಡಿದಿರ್ದ ಪೆರ್ಮಡು ಗಭೀರ ನಿರ್ಮಲಜಲದೊಳೆಸೆವಂತೆ ಮನದೊಳ್ ಕಠೋರತರಭಾವಮಂ ತಳೆದು ಬಹಿರಂಗದೊಳ್ ವಿನಯಮುಳ್ಳಾತನಾಗಿ (ಚೈಮಿಭಾ. ೨೮-೨೮); ಜಲದೇವಿಯರೆ, ಮಕರನಕ್ರಗಳಿಂದೆ ರಕ್ಷಿಸಿಂ (ಶ್ರೀರಾಮಾ. ೮೫-೨೦೫). ೨. ಮೀನು. 'ನಕ್ರಕೇತನ' ಪರಾ. ೩. ಒಂದು ನರಕದ ಹೆಸರು: ನೆರದೀ ವೃಕಾನನಮುಮಿರದೆಯಿವೆ ಗ್ರಾಹಕುಂಭೀರಂಗಳುಂ ನೆರದ ನಕ್ರಾಖ್ಯಮಿವು ನರಕಪ್ರಧಾನವರರಿರವೆ ಪ್ರಚಂಡಭೂಪಂಗಿವೈದುಂ (ಸಾಪಂಚ. ೫-೫೦); ಉಗ್ರ ವೃಕಾಸ್ಯ ಗ್ರಾಹ ಕುಂಭಿ ನಕ್ರವೆಂಬೈದುಮಂತ್ರಿನರಕಂಗಳಿಂದೊಡಗೂಡಿಪ್ರಚಂಡವೆಂಬರಸುನರಕವಿಹುದು (ವಿವೇಶ. ೧೮೦). [ಸಂ.]

ನಕ್ರಕೇತನ (ನಾ). ೧. ಮೀನಿನ ಗುರುತುಳ್ಳ ಧ್ವಜ,–ಬಾವುಟ. ೨. ಮೀನಿನ ಗುರುತನ್ನು ಧ್ವಜದಲ್ಲಿ ಉಳ್ಳವನು; ಮನ್ಮಥ: ಕರಶೂಲ ನಕ್ರಕೇತನನಾಶ . . . ತನುಭವಾಂಬೋಧಿ ಬಾಡಬ ಸಂಗಮೇಶ (ಪ್ರೌಢರಾ. ೮-೧); ನಕ್ರಕೇತನ ವಳಿವ ಕರ್ಣಾಯತೇಕ್ಷಣೆಯೆ . . . ಸಲಹು ಮೂಲೋಕಮಾತೇ (ನವಮೋ. ೦೦-೨). [ನಕ್ರ + ಕೇತನ]

ನಕ್ರಚಕ್ರ (ನಾ). ಮೊಸಳೆಗಳ ಗುಂಪು,–ಸಮೂಹ: ಪರಿಧಾವಂ ನಕ್ರಚಕ್ರ ಕ್ರಮಣರಮಣಸಂಜಾತಕಲ್ಲೋಳಮಾಳಾಸ್ಫುರದುದ್ಯತ್ಸೀಕರೌಘಸ್ಥಗಿತಗಗನದಿಗ್ಮಂಡಳಂ (ಎಕ. XI, ದಾವಡ. ೪೩-೩; 1164). [ನಕ್ರ + ಚಕ್ರ$_1$]

ನಕ್ರಧ್ವಜ (ನಾ). ೧. = ನಕ್ರಕೇತನ ೧: ಶಕ್ರತನಯನ ಸಂಭವಂ ಬಳಿಕರೋಷದಿಂ ಚಕ್ರಾಯುಧನ ಸುತನ ಸೂತನು ಕುದುರೆಯಂ ನಕ್ರಧ್ವಜವನತುಲ ಚಾಪಮಂ ಕತ್ತರಿಸಿ ವಿರಥನಂ ಮಾಡೆ (ಚೈಮಿಭಾ. ೨೨-೨೭). ೨. = ನಕ್ರಕೇತನ ೨. [ನಕ್ರ + ಧ್ವಜ]

ನಕ್ರನಿದ್ರೆ (ನಾ). ೧. ಮೊಸಳೆಯಂತೆ ನಿಶ್ಚಲವಾಗಿ ಮಾಡುವ ನಿದ್ರೆ; ಗಾಢವಾದ ನಿದ್ರೆ. ೨. (ಆಲಂ) ಮನದಲ್ಲಿ ಕ್ರೌರ್ಯವನ್ನು ತುಂಬಿಟ್ಟುಕೊಂಡಿರುವ ತೋರಿಕೆಯ ನಿದ್ರೆ: ರಾಕ್ಷಸರಾಜನರಮನೆಯ ಶಬ್ದಶೂನ್ಯತೆಯ ನಕ್ರನಿದ್ರೆಗೆ ತರಲ್ ಭಂಗಮಂ (ಶ್ರೀರಾಮಾ. ೫೭೬-೨೭).

[ನಕ್ರ + ನಿದ್ರೆ]

ನಕ್ರಪದ (ನಾ). = ನಕ್ರಕೇತನ ೨ : ತ್ರಿಪುರಹರ ನಕ್ರಪದಗಾತ್ರವನಶುಕ್ರ ನಗವುತ್ರಿಪತಿ . . . ಭೂಚಕ್ರನುತ ನಂಜೇಶ್ವರಾ (ಗುರುಚಾ. ೦೬-೫೭).

[ನಕ್ರ + ಪದ$_2$]

ನಕ್ರಹರ (ನಾ). ಮೊಸಳೆಯನ್ನು ಸಂಹರಿಸಿದವನು ; ವಿಷ್ಣು : ನಕ್ರಹರನು ಬಂದ ಚಕ್ರಧರನು ಬಂದ (ಪುರಂದ. ೧-೪೮-೪). [ನಕ್ರ + ಹರ]

ನಕ್ಷತ್ರ$_1$ (ನಾ). ೧. ತಾರೆ ; ಉಡು ; ಚುಕ್ಕೆ : "ಭಂ, ನಕ್ಷತ್ರಂ . . . ಉಡು-ಈ ೯ ನಕ್ಷತ್ರದ ಪೆಸರ್" (ಹಲಾಯು. ೧೦-೫೦) ; "ಅಱಿಲೆಂದು ಮಿನೆಂದು ನಕ್ಷತ್ರಮಕ್ಕುಂ" (ಕ್ರಿಕ್ಕ. ೭೯) ; ಮೂನ್ನೂಱುವತ್ತು ನಕ್ಷತ್ರಕ್ಕೆ ಬಾಯಿಬಿಟ್ಟುಕೊಂಡಿಪ್ಪುದೆ ಸಿಂಪು ಅದು ಸ್ವಾತಿಗಲ್ಲದೆ ಬಾಯ್ಮೆಱೆಯದು (ಬಸವ. ೮೦೯) ; ನಕ್ಷತ್ರವೆಪ್ಪಾದೊಡಂ ದೊರೆಯೇ ಚಂದ್ರಗೆ (ಸೋಮೇಶ. ೦೦) ; ಗಗನಪಾವಕ ಸಮಿಧಿ ರವಿರಶ್ಮಿಗಳೆ ಧೂಮವು ವರ್ಚಿಯೆನಿಪುದೆ ಹಗಲು ನಕ್ಷತ್ರಗಳೆ ಕಿಡಿಗಳು (ಹಸಾರ. ೬-೨) ; ಸ್ವಯಂಪ್ರಕಾಶವಾಗಿ ಆಕಾಶದಲ್ಲಿ ಮಿನುಗುತ್ತಿರುವುವೇ ನಕ್ಷತ್ರಗಳು (ಆಕಾಶ. ೪೯) ; ಮಿಂಚಿನಂಚಿನ ದೇವತಾಚರಣಸಂಚಾರದಾ ಪದಚಿಹ್ನೆಗಳ್ ಪೊಳೆದುವಮಿತನಕ್ಷತ್ರಗಳ ಪೋಲ್ (ಶ್ರೀಧರಾಮ. ೦೮-೪೭೪) ; ನಿದ್ರಾಂಗನೆಯ ಪರಮಸಖಿ, ಸ್ವಪ್ನ ಸುಂದರಿ, ವಿಭಾವರಿಯ ನಕ್ಷತ್ರಖಚಿತಾಂಬರವನುಟ್ಟು . . . ಭೂಯಾತ್ರೆ ಗೈಯುತಿರೆ (ಚಿತ್ರಾಂಗ. ೨-೪೪) ; ನಕ್ಷತ್ರಗಳು ವಿವಿಧ ಕಾಂತಿಗಳಿಂದ ಬೆಳಗುತ್ತಿರುವುದರಿಂದ ಕಾಂತಿಗಳಿಗನುಗುಣವಾಗಿ ನಕ್ಷತ್ರಗಳನ್ನು ಗುರುತಿಸಿದೆ (ನಕ್ಷತ್ರ. ೦೨). ೨. [ಜ್ಯೋತಿ] ಚಾಂದ್ರಮಾನಗತಿಯಲ್ಲಿ ಗಣನೆ ಮಾಡುವ ಇಪ್ಪತ್ತೇಳು ನಕ್ಷತ್ರಗಳಲ್ಲಿ ಒಂದು ; P ಅಶ್ವಿನಿ, ಭರಣಿ, ಕೃತ್ತಿಕೆ, ರೋಹಿಣಿ, ಮೃಗಶಿರೆ, ಆರ್ದ್ರೆ, ಪುನರ್ವಸು, ಪುಷ್ಯ, ಆಶ್ಲೇಷೆ, ಮಖೆ, ಪುಬ್ಬೆ, ಉತ್ತರೆ, ಹಸ್ತ, ಚಿತ್ತೆ, ಸ್ವಾತಿ, ವಿಶಾಖ, ಅನೂರಾಧ, ಜ್ಯೇಷ್ಠ, ಮೂಲ, ಪೂರ್ವಾಷಾಢ, ಉತ್ತರಾಷಾಢ, ಶ್ರವಣ, ಧನಿಷ್ಠೆ, ಶತಭಿಷೆ, ಪೂರ್ವಾಭಾದ್ರ, ಉತ್ತರಾಭಾದ್ರೆ, ರೇವತಿ ಎಂಬ ಇಪ್ಪತ್ತೇಳು ನಕ್ಷತ್ರಗಳಲ್ಲಿ ಚಂದ್ರನು ಸಂಚರಿಸುತ್ತಾನೆ. ಇದು ನಕ್ಷತ್ರಮಾನದಲ್ಲಿ ಒಂದು ತಿಂಗಳಾಗುತ್ತದೆ: ಪ್ರಶಸ್ತದಿವಸವಾರ ನಕ್ಷತ್ರಮುಹೂರ್ತದೊಳ್ ಮುಂಜಿಬಂಧನಕ್ರಿಯೆಯಂ ಮಾಡಿದ ಬಟ್ಟೆಕ್ಕೆ (ವಡ್ಡಾರಾ. ೭೩-೨೦) ; ಅಶ್ವಿನಿ ಮೊದಲಾಗೆ ಅಭಿಜಿತ್ತು ಸಹಿತಮಾಗಿ ಇರ್ಪತ್ತೆಂಟು ನಕ್ಷತ್ರಂಗಳ್ (ಲೋಕೋಪ. ೦-೬ ಟೀಕೆ) ; ನಕ್ಷತ್ರ ತಿಳಿದವನ ಸಾವು ಕ್ಷಣ ಹೊತ್ತಾದರೂ ನಿಂತೀತೇ (ಗಾಡಿ). ೩. [ಗಣಿತ] ಇಪ್ಪತ್ತೇಳು ಎಂಬ ಸಂಖ್ಯೆಯ ಸಂಕೇತ : "ನಕ್ಷತ್ರಮಿಪ್ಪತ್ತೇಱೆನಿಕುಂ" (ಮಂಗರಾ. ೧೦೪-೯). ೪. [ಜೈನ] ಜ್ಯೋತಿಷ್ಕ ದೇವತೆಗಳಲ್ಲಿ ಒಂದು ಭೇದ : ಯಕ್ಷರು ಗರುಡರು ಸುರರು ನಕ್ಷತ್ರರಮರರು ನರರು ಆ ಕ್ಷಣದೊಳು ಬಂದು ನಮಿಸಿ ಬೀಳ್ಕೊಂಡರು ದೀಕ್ಷಿತರಾದ ಯೋಗಿಗಳ (ಧರಶ. ೭೦-೧೦೭).

[ಸಂ.]

ನಕ್ಷತ್ರ$_2$, ನಕ್ಷತ್ರಿಕ, ನಕ್ಷತ್ರೀಕ (ನಾ). ೧. = ನಕ್ಷತ್ರಕ ೧ : ಇಂತು ನಕ್ಷತ್ರನ ಕೂಡಾಗ ನಡೆಯುತ ಚಿಂತೆಯೊಳಗೆ ಧೂಪಾಲ (ಹರಿಸಾಂ. ೩-೩೯). ನಕ್ಷತ್ರಿಕ : ೨. = ನಕ್ಷತ್ರಕ ೨ : ಆ ನಕ್ಷತ್ರಿಕ ಬಂದರೆ ತನ್ನ ಕೆಲಸ ಆಗೋವರೆಗೂ ಕುಳಿತ ಜಾಗ ಬಿಟ್ಟು ಕದಲುವುದಿಲ್ಲ (ರೂಢಿ). ನಕ್ಷತ್ರೀಕ : ೨. ಈ ನಕ್ಷತ್ರೀಕ ಬಂದರೆ ನನ್ನ ಕೆಲಸವೆಲ್ಲಾ ಹಾಳು (ರೂಢಿ).

[<ಸಂ. ನಕ್ಷತ್ರಕ]

ನಕ್ಷತ್ರಕ (ನಾ). ೧. ಹರಿಶ್ಚಂದ್ರನನ್ನು ಪೀಡಿಸಲು ನಿಯಮಿತನಾದ ವಿಶ್ವಾಮಿತ್ರನ ಒಬ್ಬ ಶಿಷ್ಯ : ತನ್ನ ಶಿಷ್ಯಾಳಿಯೊಳು ನೋಡಿ ಹುಸಿಯ ಸೂಯಾನೀಚವೃತ್ತಿನಿರ್ದಾಕ್ಷಿಣ್ಯನಿಷ್ಠುರಾಣನೀತಿಗಳಲಿ ಹೆಸರುಳ್ಳ ಹರಿಯ ನಕ್ಷತ್ರಕನೆನಿಪ್ಪ ಮಾನಸನನೆಕ್ಕಟಿಗರೆದು ಕೈವಿಡಿದು ಕಿವಿಯೊಡ್ಡಿ ವಸುಧಾಧಿಪತಿಯ ಬಳಿವಿಡಿದು ಕಳುಹಲು ಬುದ್ಧಿಗಲಿಸಿದನು (ಹಪಶಾ. ೯-೦೫) ; ಸತಿಸುತನಕ್ಷತ್ರಕರನ್ನೊಡಗೂಡಿ . . . ಪೋಗುತ (ಹಮಚ. ೮೯). ೨. (ಆಲಂ) ಅತಿಯಾಗಿ ಉಪದ್ರವ ಕೊಡುವ ವ್ಯಕ್ತಿ : ತಗಾದೆ ಮಾಡುವವನು ; ತಗಾದೆಗಾರ ; ಬೆಂಬಿಡದೆ ಕಾಡುವವನು: ಆ ನಕ್ಷತ್ರಕನ ಸಹವಾಸ ಬಹಳ ಕಷ್ಟಕರವಾದುದು (ರೂಢಿ). [ಸಂ.]

ನಕ್ಷತ್ರಕೂಟ (ನಾ).=ನಕ್ಷತ್ರಪುಂಜ : ಆಕಾಶದಲ್ಲಿ ಅಲ್ಲಲ್ಲಿ ಬಿಡುನಕ್ಷತ್ರಗಳನ್ನು ಕಾಣುವಂತೆ, ನಕ್ಷತ್ರಕೂಟ(Clusters)ಗಳನ್ನು ಕಾಣಬಹುದು (ಬಾಲಪ್ರ. I, ೨೮೨). [ನಕ್ಷತ್ರ$_1$ + ಕೂಟ$_3$]

ನಕ್ಷತ್ರಗುಚ್ಛ (ನಾ). = ನಕ್ಷತ್ರಪುಂಜ : ಆಕಾಶಗಂಗೆಯ ನಕ್ಷತ್ರ ಮಹಾನಗರದಲ್ಲಿ ಒತ್ತಾಗಿ ಸೇರಿಕೊಂಡಿರುವ ಹಲವು ನಕ್ಷತ್ರಗುಚ್ಛಗಳಿವೆ (ನಕ್ಷತ್ರ. ೧೧೮). [ನಕ್ಷತ್ರ$_1$ + ಗುಚ್ಛ]

ನಕ್ಷತ್ರಚಿಹ್ನೆ (ನಾ). ನಕ್ಷತ್ರಾಕಾರದ ಗುರುತು,-ಸಂಕೇತ : (ಪಟ್ಟಿಯಲ್ಲಿ ಹೆಸರು, ಮೊ. ಕೈ) ನಕ್ಷತ್ರಚಿಹ್ನೆ ಹಾಕು, ಚುಕ್ಕೆಗುರುತು ಹಾಕು (Star. ಇಂಗಸಿ) ; ಆ ಪುಸ್ತಕದಲ್ಲಿ ವಿಶೇಷಾಂಶಗಳನ್ನು ನಕ್ಷತ್ರಚಿಹ್ನೆಯಿಂದ ಸೂಚಿಸಿದೆ (ರೂಢಿ). P ವಿಶೇಷ ವಿಷಯಗಳನ್ನು ಸೂಚಿಸಲು ಪಕ್ಕದಲ್ಲಿ ನಕ್ಷತ್ರಾಕಾರದ ಗುರುತು ಹಾಕಿ ಅಡಿಟಿಪ್ಪಣಿಯಲ್ಲಿ ವಿವರಣೆ ನೀಡುವುದು ಲೇಖಕರ ಪದ್ಧತಿ. [ನಕ್ಷತ್ರ$_1$ + ಚಿಹ್ನೆ]

ನಕ್ಷತ್ರಜ್ಯೋತಿ (ನಾ). ನಕ್ಷತ್ರದ ಬೆಳಕು,-ಪ್ರಕಾಶ : ನಕ್ಷತ್ರಜ್ಯೋತಿಯನೈದೆ ತೂಳ್ದಿ ಹಿಮವಚ್ಛೈಳಾಂಶುವಂ ಮಿಾಱಿ ದಿಗ್ಧಾತ್ರಿಯ್ಯೋಮವಿಭಾಗಗಾಮಿಯೆನಿಸಿತ್ತುಚ್ಛೃಂಖಳಂ ದಾಮನಂದಿ ತ್ರೈವಿದ್ಯಮುನೀಂದ್ರ ನಿರ್ಮಳಯಶಶ್ರೀ ಶುಭ್ರತಾವಿಭ್ರಮಂ (ಚಂದ್ರಪು. ೧-೩೩).

[ನಕ್ಷತ್ರ$_1$ + ಜ್ಯೋತಿ]

ನಕ್ಷತ್ರಪಾಠಕ (ನಾ). ನಕ್ಷತ್ರಗಳ ಆಧಾರದ ಮೇಲೆ ಕಾಲಗಣನೆ ಮಾಡುವವನು ; ಜ್ಯೋತಿಷಿ : ಗಳಿಗೆವಟ್ಟಲಂ ಪರಿವೇಷ್ಟಿಸಿರ್ದ ನಕ್ಷತ್ರಪಾಠಕರಿಂ (ಗಿರಿಕ. ೦೦-೨೮೮). [ನಕ್ಷತ್ರ$_1$ + ಪಾಠಕ]

ನಕ್ಷತ್ರಪಾದ (ನಾ). [ಜ್ಯೋತಿ] ಒಂದು ನಕ್ಷತ್ರವು ಪ್ರಭಾವವನ್ನು ಬೀರುವ ಕಾಲದ ೧/೪ ಭಾಗ : ಒಂದು ನಕ್ಷತ್ರವನ್ನು ನಾಲ್ಕು ಸಮಭಾಗಗಳನ್ನಾಗಿ ಮಾಡಿದರೆ, ಒಂದೊಂದು ಭಾಗವೂ ನಕ್ಷತ್ರದ ಒಂದು ಪಾದವಾಗುತ್ತದೆ. ಒಂದು ನಕ್ಷತ್ರಪಾದಕ್ಕೆ ೩೧/೪ ಡಿಗ್ರಿಗಳು (ನಕ್ಷತ್ರ. ೪೭). P ಸಾಮಾನ್ಯವಾಗಿ ಜಾತಕನ ನಕ್ಷತ್ರದ ಕಾಲವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಜಾತಕದಲ್ಲಿ ಪ್ರಥಮ, ದ್ವಿತೀಯ, ತೃತೀಯ, ಮತ್ತು ಚತುರ್ಥಪಾದವೆಂದು ಗುರುತಿಸುತ್ತಾರೆ.

[ನಕ್ಷತ್ರ$_1$ + ಪಾದ]

ನಕ್ಷತ್ರಪುಂಜ (ನಾ). ನಕ್ಷತ್ರಗಳ ಗುಂಪು,-ಸಮೂಹ : "ನಕ್ಷತ್ರಪುಂಜ ತಾರಾಪುಂಜ" (Cluster of Stars. ಪಾರಿನಿ. ೦೬) ; ಕ್ರಾಂತಿಪಥ ಮತ್ತು ನಕ್ಷತ್ರಪುಂಜ (ಆಕಾಶ. ೮೩) ; ಕೆಲವು ಗುಂಪುಗುಂಪಾಗಿ ಮೈದೋರಿ ನಕ್ಷತ್ರಪುಂಜಗಳಾಗಿ ಮೆರೆಯುವುವು (ಸಾಹಿಸ. ೦೦೩). [ನಕ್ಷತ್ರ$_1$ + ಪುಂಜ$_4$]

ನಕ್ಷತ್ರಬಾಣ (ನಾ). ಬಾಣಬಿರುಸುಗಳಲ್ಲಿ ಒಂದು ಬಗೆ ; ಆಕಾಶಬಾಣ ; ಆಕಾಶಕ್ಕೆ ಹಾರಿ ನಕ್ಷತ್ರದಂತೆ ಮಿನುಗುವ ಒಂದು ಬಗೆಯ ಸುಡುವಂದ್ರು,-ಪಟಾಕಿ: ಈ ಜಾನಸಾಲೆಯಲ್ಲಿ ಹಗಲುಬತ್ತಿ, ಹೂಬಾಣ, ಆಕಾಶಕೊಳವಿ, ಚಕ್ರಬಾಣ, ನಕ್ಷತ್ರಬಾಣ . . . ಈ ಬಾಣಗಳನ್ನು ನವರಾತ್ರ್ಯುತ್ಸವ, ದೇವತಾಉತ್ಸವ ಮುಂತಾದ ಉತ್ಸವಕಾಲಗಳಲ್ಲಿ ಹತ್ತಿಸುವಂತೆ ಕಟ್ಟಲೆ ಮಾಡಿಸಿದರು (ಜಾಮವಂ. ೦೩೬).

[ನಕ್ಷತ್ರ$_1$ + ಬಾಣ]

ನಕ್ಷತ್ರಮಂಡಲ (ನಾ). ನಕ್ಷತ್ರಗಳ ಗುಂಪು,-ಸಮೂಹ : ನಕ್ಷತ್ರಮಂಡಲದಲ್ಲಿ ೯೭ ಗೋಳಗುಚ್ಛಗಳಿವೆ (ನಕ್ಷತ್ರ. ೧೨೦) ; ನಕ್ಷತ್ರಮಂಡಲಗಳಲ್ಲಿ ಕೆಲವನ್ನಾದರೂ ಪರಿಚಯಮಾಡಿಕೊಳ್ಳಬೇಕು (ಆಕಾಶ. ೫೯) :

ನಕ್ಷತ್ರಮಂಡಲದಿನಾಚೆಯಿಂದೊಂದು ದನಿ ವಕ್ಷೋಗುಹಾಂತರದಿನೊಂದು ದನಿಯಿಂತೀ ಸಾಕ್ಷಿದ್ವಯವು ನಿನ್ನೊಳೊಂದುಗೂಡಿದೊಡದೇ ಪ್ರೇಕ್ಷೆ ಪರಬೊಮ್ಮನದು (ಮಂಕುಳ. ೬೦). [ನಕ್ಷತ್ರ$_1$ + ಮಂಡಲ]

ನಕ್ಷತ್ರಮಾನ (ನಾ). ನಕ್ಷತ್ರಗಳ ಚಲನೆಯಿಂದ ಗಣನೆ ಮಾಡುವ ಕಾಲಪ್ರಮಾಣ : ಈ ರೀತಿಯ ನಕ್ಷತ್ರಮಾನ ಕಾಲನಿರ್ಣಯದಲ್ಲಿ ಮೂರು ನಾಲ್ಕು ನಿಮಿಷಗಳಷ್ಟು ತಪ್ಪು ಕೂಡಿಬರಬಹುದು (ನಕ್ಷತ್ರ. ೬೦) ; ಸಾಯನ ಸೌರಮಾನ (ಟ್ರಾಪಿಕಲ್) ಮತ್ತು ನಕ್ಷತ್ರಮಾನ (ಸೈಡೀರಿಯಲ್) ಮೇಷ ಸಂಕ್ರಮಣಗಳು ಒಟ್ಟಾಗಿ ಸೇರಿದ್ದವೆಂದು ಅಂದಾಜು ಮಾಡಲಾಗಿತ್ತು (ಕವಿಕೋ. I, ೪೪೪). ೯ ನಕ್ಷತ್ರಮಾನದಿಂದ ಮಾಡುವ ಕಾಲಗಣನೆಯಲ್ಲಿ ಅರುವತ್ತು ಘಳಿಗೆಗೆ ಒಂದು ದಿವಸ, ಮೂವತ್ತು ದಿನಗಳಿಗೆ ಒಂದು ತಿಂಗಳು, ಮುನ್ನೂರಅರುವತ್ತು ದಿನಗಳಿಗೆ ಒಂದು ವರ್ಷ. ಇದನ್ನು ಆಯುರ್ಗಣನೆಯಲ್ಲಿ ಉಪಯೋಗಿಸಬೇಕು ಎಂದು ಸೂರ್ಯಸಿದ್ಧಾಂತದಲ್ಲಿ ಹೇಳಿದೆ. [ನಕ್ಷತ್ರ$_1$ + ಮಾನ]

ನಕ್ಷತ್ರಮಾಲಿಕೆ (ನಾ). ೧. = ನಕ್ಷತ್ರಮಾಲೆ ೨ : (ಕಿ). ೨. [ಛಂದ] ಇಪ್ಪತ್ತೇಳು ವೃತ್ತಗಳಿರುವ ಒಂದು ಬಗೆಯ ಕಾವ್ಯಜಾತಿ : ತಾರಾವಳಿ : ನಿರ್ವಾಣಲಕ್ಷ್ಮೀಪತಿ ನಕ್ಷತ್ರಮಾಲಿಕೆ : ಇದರಲ್ಲಿ ೨೭ ವೃತ್ತಗಳವೆ (ಕವಿಚ. I, ೩೦೦). [ನಕ್ಷತ್ರ$_1$ + ಮಾಲಿಕೆ]

ನಕ್ಷತ್ರಮಾಲೆ (ನಾ). ೧. = ನಕ್ಷತ್ರಪುಂಜ : ಚರಣನಖಚಂದ್ರಮಾಲೆಗೆ ನಕ್ಷತ್ರಮಾಲೆಯನೋಲಗಿಸುವಂತೆ ಮುಕ್ತಾಫಲನೂಪುರಮಂ ತುಡಿಸಿಯುಂ (ಪಂರಾಮಾ. ೫-೪೨ವ); ಕಗ್ಗತ್ತಲೆಯ ರಾತ್ರಿ ನಕ್ಷತ್ರಮಾಲೆಯಿಂ ಮೆರೆವಂತೆ, ಮೇಣುಷೆಯ ಭಾಳದಲಿ 'ಬೆಳ್ಳಿ'ಯೊಂದೆಯೆ ಮಿರುಗುವಂದದಲಿ, ಕುಂತಲವನಲರಿಂದಲಂಕರಿಸಿ . . . ಮೆರೆದಳಾ ಪಾರ್ಥಿವಕುಮಾರಿ (ಚಿತ್ರಾಂಗ. ೧೯-೫೧೧). ೨. ಇಪ್ಪತ್ತೇಳು ಮುತ್ತುಗಳಿರುವ ಕಂಠಹಾರ : "ಇಪ್ಪತ್ತೇಟು ಮುತ್ತಿನ ಸರಮಂ ನಕ್ಷತ್ರಮಾಲೆಯೆಂಬುದು" (ಹಲಾಯು. ೯೨-೪೦೯) ; ವಿಜಯಚ್ಛಂದಹಾರ ದೇವಚ್ಛಂದಾರ್ಧಹಾರ ರಶ್ಮಿಕಲಾಪಗುಚ್ಛ ನಕ್ಷತ್ರಮಾಲಾರ್ಧಗುಚ್ಛಮಾಣವಕಾರ್ಧಮಾಣವಕಂಗಳೆಂಬ . . . ಹಾರಂಗಳುಮಂ (ಆದಿಪು. ೬-೫೪ವ) ; ಉಗಿಯಲ್ಕಂಕುಶದಿಂ ತೊಡಂಕಿ ಪಱಿದೆತ್ತಂ ಸೋರ್ವ ನಕ್ಷತ್ರಮಾಲೆಗಡರ್ಪಾದ ಮನೋಜಸಾಮಜಲಸತ್ಕುಂಭಂಗಳ್ (ಪುಷ್ಪಪು. ೫-೨೭) ; ಅಮಳ ನಕ್ಷತ್ರಮಾಲೆಯನು ಕೊರಳ್ಗಮರಿಸಿದರು (ನವಮೋ. ೨೩-೩೮). ೧, ೨ : ಕಮನೀಯಾಕಾಶಗಜಕ್ಕೆ ಮಾಡಿದವದಾತಕರ್ಣ ಚಮರರುಹಸಮಂ ಹಿಮಕರಕರಮೆನೆ ನಕ್ಷತ್ರಮಾಲೆ[ನಕ್ಷತ್ರಮಾಲೆ]ಯೆನಿಸಿದುವಾಗಳ್ (ಶಾಂತಿಪು. ೮-೭೦). ೩.=ನಕ್ಷತ್ರಮಾಲಿಕೆ ೨.

[ನಕ್ಷತ್ರ$_1$ + ಮಾಲೆ]

ನಕ್ಷತ್ರಮೀನು (ನಾ). "ಐದು (ಅಥವಾ ಹೆಚ್ಚು) ತ್ರಿಜ್ಯಾಕಾರದ ಚಾಚುಗಳನ್ನುಳ್ಳ ಒಂದು ಕಂಟಕಚರ್ಮಿ ಸಮುದ್ರಪ್ರಾಣಿ" (Star-fish. ಇಂಕನಿ) : ನಕ್ಷತ್ರಮೀನುಗಳ ತಟ್ಟೆಯಂತಿರುವ ಮಧ್ಯಭಾಗದಿಂದ ಕಿರಣಗಳಂತೆ ಚಾಚಿರುವ ಐದು ತೋಳುಗಳಿರುತ್ತವೆ (ಪ್ರಾಣಿಶಾ. ೨೬೫) ; ನಕ್ಷತ್ರಮೀನು (Star-Fish) ಕಣ್ಣುಗುಳಿಹೊಂದಿದ ಮೊದಲ ಜೀವಿ (ನಿಮ್ಮದ್ಯ. ೨). [ನಕ್ಷತ್ರ$_1$ + ಮೀನು$_2$ (< ಮೀನ್$_3$)]

ನಕ್ಷತ್ರರಾಶಿ (ನಾ). = ನಕ್ಷತ್ರಪುಂಜ : ನಕ್ಷತ್ರರಾಶಿಗಳಿಗೆ ಇಟ್ಟಿರುವ ಪಾಶ್ಚಾತ್ಯಹೆಸರುಗಳೆಲ್ಲ ಗ್ರೀಕ್ ಹೆಸರುಗಳು (ನಕ್ಷತ್ರ. ೨೭) ; ನಕ್ಷತ್ರರಾಶಿಗಳಲ್ಲಿ ಒಂದೊಂದೂ ಒಂದೊಂದು ಪ್ರಾಣಿಯನ್ನು ಹೋಲುವುದು (ಆಕಾಶ. ೮೧). [ನಕ್ಷತ್ರ$_1$ + ರಾಶಿ]

ನಕ್ಷತ್ರಲೋಕ (ನಾ). ಆಕಾಶ ; ಅಂತರಿಕ್ಷ ; ಗಗನಮಂಡಲ : ಇಂಥ ತಾರಾಯುಗ್ಮಗಳು ನಕ್ಷತ್ರಲೋಕದಲ್ಲಿ ಕಂಡುಬಂದಿವೆ (ನಕ್ಷತ್ರ. ೧೩೫).

[ನಕ್ಷತ್ರ$_1$ + ಲೋಕ]

ನಕ್ಷತ್ರವೀಕ್ಷಕ (ನಾ). ನಕ್ಷತ್ರಗಳ ಗಣನೆ ಮಾಡುವವನು ; ಜ್ಯೋತಿಷಿ : "ನಕ್ಷತ್ರವೀಕ್ಷಕ ; ಜ್ಯೋತಿಷಿ" (Star-gazer. ಇಂಕನಿ). [ನಕ್ಷತ್ರ$_1$ + ವೀಕ್ಷಕ]

ನಕ್ಷತ್ರವೀಧಿ (ನಾ). ೧. ನಕ್ಷತ್ರಗಳ ಮಾರ್ಗ ; ಆಕಾಶಮಾರ್ಗ ; ಗಗನಮಾರ್ಗ : ಆ ಕನ್ಯಾರತ್ನಂಗಳಂ ಪ್ರಭಾಮಂಡಲದ ವಿಮಾನಾರೂಢರ್ಮಾಡಿ ನಕ್ಷತ್ರವೀಧಿಯಿಂ ಕ್ಷಣಮಾತ್ರದೊಳ್ ರಣಭೂಮಿಯನೆಯ್ದಿ (ಪಂರಾಮಾ. ೧೧-೬೫ವ). ೨. ಅಸಂಖ್ಯಾತ ನಕ್ಷತ್ರಗಳು ಬಹು ಒತ್ತಾಗಿರುವುದರಿಂದ ಆಕಾಶದಲ್ಲಿ ಹಾಲು ಚೆಲ್ಲಿದಂತೆ ಸುತ್ತುವರಿದು ಕಾಣುವ ತೇಜಃಪುಂಜ ; ಕ್ಷೀರಪಥ ; ಆಕಾಶಗಂಗೆ : 'ರಾಜಹಂಸ' (Swan or Swan cross) ಎಂಬ ಹೆಸರನ್ನುಳ್ಳ ತಾರಾಗಣಕ್ಕೆ ನಾತಿದೂರದಲ್ಲಿಯೂ 'ನಕ್ಷತ್ರವೀಧಿ' (Milky way)ಗೆ ಸಮೀಪದಲ್ಲಿಯೂ ಈ ಅಭಿಜಿತ್ತು ಶ್ವೇತಕಾಂತಿಯಿಂದ ಉರಿಯುತ್ತಿರುವುದು (ಜ್ಯೋತಿರ್ವಿ. ೩೫) ; ನೂರು ತೇಜದ ಗೋಲ ತಿರುಗುತಿವೆ ಪರಿಘದಲಿ ಊರುಗೋಲಿಗೆ ಸಾಕ್ಷಿ ನಕ್ಷತ್ರವೀಧಿ (ನೆಲಮು. ೨೦-೨೪). [ನಕ್ಷತ್ರ$_1$ + ವೀಧಿ (< ಬೀದಿ)]

ನಕ್ಷತ್ರವ್ಯೂಹ (ನಾ). ಸದಾ ಒಂದು ಆಕಾರದಲ್ಲಿರುವಂತೆ ಕಾಣುವ ನಕ್ಷತ್ರಗಳ ಗುಂಪು,-ಸಮೂಹ : ಧ್ರುವನಕ್ಷತ್ರದಿಂದ ಮೇಲೆ ಸ್ವಲ್ಪ ಎಡಗಡೆಗೆ ನಕ್ಷತ್ರದಿಂದ ಸುಮಾರು ೩೦ ಡಿಗ್ರಿಗಳ ಅಂತರದಲ್ಲಿ M ಆಕಾರದ ನಕ್ಷತ್ರವ್ಯೂಹವೊಂದು ಕಾಣುತ್ತದೆ (ನಕ್ಷತ್ರ. ೨೭). [ನಕ್ಷತ್ರ$_1$ + ವ್ಯೂಹ]

ನಕ್ಷತ್ರಾಕಾರ (ನಾ). ನಕ್ಷತ್ರದ ಆಕಾರ,-ಆಕೃತಿ : ಇಡೀ ದೇಗುಲ ನಕ್ಷತ್ರಾಕಾರದ ಶ್ರೀ ಜಗಲಿಯ ಮೇಲೆ ನಿಲ್ಲುತ್ತದೆ (ಸವತಿ. ೪೫) ; ಒಂದು ಸಮಚತುರಸ್ರವನ್ನು ಅಕ್ಷದ ಮೇಲೆ ತಿರುಗಿಸುತ್ತ ಬಂದರೆ . . . ಹನ್ನೆರಡು, ಹದಿನಾರು ಶಾಖೆಗಳುಳ್ಳ ನಕ್ಷತ್ರಾಕಾರದ ತಲವಿನ್ಯಾಸಗಳು ಕಂಡುಬರುತ್ತವೆ (ಹೊಯ್ಸಪಾ. ೧೫). [ನಕ್ಷತ್ರ$_1$ + ಆಕಾರ$_2$]

ನಕ್ಷತ್ರಾಧಿಪ (ನಾ). ತಾರೆಗಳಿಗೆ ರಾಜನಾದವನು ; ಚಂದ್ರ : ನಿರುತ ನಕ್ಷತ್ರಾಧಿಪ ಗ್ರಹವರನಯನನಿಧಿ ತನ್ನಯುತಃಕರಣಯೋಗದೊಳಿರೆ . . . ಬಸವರಾಜಂಗರಿದಿದೆನಲೆಲ್ಲಾ ದಿನಂಗಳು ಶುಭದಿನಂಗಳಲಾ(ಬಸಪು. ೪-೪೪).

[ನಕ್ಷತ್ರ$_1$ + ಅಧಿಪ]

ನಕ್ಷತ್ರಾನುಕೂಲ (ನಾ). (ವಧೂವರರ) ನಕ್ಷತ್ರಗಳಿಗೆ ಹೊಂದಾಣಿಕೆಯಿರುವಿಕೆ; ೯ ಈ ಹೊಂದಾಣಿಕೆಯನ್ನು ಗೊತ್ತುಪಡಿಸಲು ಜ್ಯೋತಿಶ್ಶಾಸ್ತ್ರದಲ್ಲಿ ಹನ್ನೆರಡು ಕೂಟಗಳನ್ನು ಹೇಳಿ ಮೂವತ್ತಾರು ಗುಣಗಳನ್ನು ಕಲ್ಪಿಸಿದ್ದಾರೆ. ನಿರ್ದಿಷ್ಟವಾದ ಗಣನೆಯಿಂದ ನಕ್ಷತ್ರಾನುಕೂಲವನ್ನು ಜೋಯಿಸರು ಗೊತ್ತುಪಡಿಸುತ್ತಾರೆ : ಮದುವೆಗೆ ನಕ್ಷತ್ರಾನುಕೂಲ ಕೂಡಿ ಬರಬೇಕು (ರೂಢಿ). [ನಕ್ಷತ್ರ$_1$ + ಅನುಕೂಲ]

ನಕ್ಷತ್ರಿಕ 'ನಕ್ಷತ್ರ$_2$' ನೋ.

ನಕ್ಷತ್ರೀಕ 'ನಕ್ಷತ್ರ$_2$' ನೋ.

ನಕ್ಷತ್ರೇಶ (ನಾ). = ನಕ್ಷತ್ರಾಧಿಪಃ "ಹಿಮಾಂಶುಃ . . . ನಕ್ಷತ್ರೇಶಃ, ಕ್ಷಪಾಕರಃ-೨೦ ಚಂದ್ರನ ಹೆಸರುಗಳು" (ಸಿದ್ಧಾಂತಿ. ೨೯). [ನಕ್ಷತ್ರ$_1$ + ಈಶ]

ನಕ್ಷತ್ರೇಷ್ಟಿ (ನಾ). ಒಂದು ಬಗೆಯ ಯಾಗ,-ಯಜ್ಞ : ರಾಜಸೂಯ ಅಶ್ವಮೇಧಾದಿಗಳಂ ಆಯುಷ್ಟೋಮೇಷ್ಟಿ ಕುಂಡಲೇಷ್ಟಿ ಪುತ್ರಕಾಮೇಷ್ಟಿ ನಕ್ಷತ್ರೇಷ್ಟ್ಯಾದಿಗಳಂ ಯಥಾಲಾಭಮಾಗಿ ಮಾಳ್ಪಲ್ಲಿ (ವಿವೇಕ. ೦೩೪) ; ನಕ್ಷತ್ರೇಷ್ಟಿವಿಧಿಯಲ್ಲಿ ಯಾವ ಅಗ್ನಿಯು ಒಪ್ಪಿಸಿದನೋ ಮತ್ತು ಯಾವ ಅಗ್ನಿಗೆ ಒಪ್ಪಿಸಿದನೋ ಅವರಿಬ್ಬರಿಗೂ ಸಮಾನ ನಾಮ ರೂಪಗಳನ್ನೇ ಹೇಳಿರುತ್ತದೆ (ಬೃಹ್ಮಭಾ. ೪೮೮). [ನಕ್ಷತ್ರ$_1$ + ಇಷ್ಟಿ]

ನಕ್ಷತ್ರೋದಯ (ನಾ). ನಕ್ಷತ್ರವು ಕಾಣಿಸಿಕೊಳ್ಳುವುದು : ತ್ವದ್ವಚನ ಮಹೋದಧಿಯೊಳ್ ಕಿಱಿದನಱಿವುದಂ ನುಡಿವೆಂ ಚಂದ್ರೋದಯದ ಕೆಲದ ನಕ್ಷತ್ರೋದಯಮೆಸೆಯದವೊಲೆನ್ನ ನುಡಿಯೆಸೆದಪುದೇ (ಶಾಂತಿಪು. ೨-೩೭).

[ನಕ್ಷತ್ರ$_1$ + ಉದಯ]

ನಕ್ಷತ್ರೋಪಜೀವಿ (ನಾ). ನಕ್ಷತ್ರಗಳ ಬಗೆಗಿರುವ ತಿಳಿವಳಿಕೆಯಿಂದ ಜೀವನ ಸಾಗಿಸುವವನು : ಜ್ಯೋತಿಷಿ : ನಕ್ಷತ್ರೋಪಜೀವಿಗಳಾಗಿಯುಂ ಗ್ರಾಮಪುರೋಹಿತರಾಗಿಯುಂ . . . ವರ್ತಿಸುವಂಥಾ ಪಾರ್ವರೆಲ್ಲರುಂ ಚಂಡಾಲರಿಗೆ ಸಮಾನರಾಗಿರ್ಪರು (ಧಾರಣಾ. ೬೮-೩೦೩).

[ಸಂ. ನಕ್ಷತ್ರೋಪಜೀವಿನ್]

ನಕ್ಷುದ್ರು (ನಾ). ಚಿಕ್ಕಮೂಗುಳ್ಳವನು : "ನಕ್ಷುದ್ರನೆಂಬವಂ ಚಿಕ್ಕಮೂಗಿನವಂ" (ಹರಿಶ. ೯೯-೪೫೩). [ಸಂ.]

ನಕ್ಷೆ, ನಕಾಶ, ನಕಾಶೆ, ನಕಾಸು, ನಕಾಸೆ (ನಾ). ೧. (ಭೂಮಿಯ) ಸ್ಥಾನ, ಅಳತೆ, ಆಕಾರ, ಪ್ರಮಾಣಗಳನ್ನು ಗುರುತಿಸಿದ ರೇಖಾಚಿತ್ರ ; ಭೂಪಟ : ಓದುವುದಕ್ಕೆ ಅನುಕೂಲವಾಗಿರುವ ಹಾಗೆ ನಕ್ಷೆಯ ಕಾಗದವನ್ನು ಕೈಲಿ ಹಿಡಿದು . . . ತಿಳಿಯತಕ್ಕದ್ದು (ಭೂಮಿಳ. ೦೩) ; ನಕ್ಷೆಗೂ ಭೂಮಿಯ ಆಕೃತಿಗೂ ವ್ಯತ್ಯಾಸವಿರಬಾರದು. ನಕ್ಷೆಯೆನಲಾಗಿ ಭೂಮಿಯ ಸ್ಥಿತಿಯನ್ನು ಕಾಗದದಲ್ಲಿ ತೋರಿಸುವಿಕೆಗೆ ಹೆಸರು. ಇದು ವಿಸ್ತಾರವಾದ ಭೂಪ್ರದೇಶವನ್ನು ಸ್ವಲ್ಪವಾದ ಕಾಗದದಲ್ಲಿ ಅಡಗಿಸಲ್ಪಡುವುದು (ಭೂಮಿಳ. ೩೯) ; ನಿಮಗೆ ಕೊಟ್ಟಿರುವ ನಕ್ಷೆಯಲ್ಲಿ ಭಾರತದ ನದಿಗಳನ್ನು ಗುರುತುಮಾಡಿ (ಕೂಡಿ). ೨. ಕಟ್ಟಡದ ಸ್ಥಾನ, ಅಳತೆ, ಆಕಾರ ಮೊದಲಾದುವನ್ನು ಸೂಚಿಸುವ ರೇಖಾಚಿತ್ರ : ನಕ್ಷೆಯ ಕಾಗದದ ಮೇಲೆ ಮನೆ ಬೆಳೆಯುತ್ತ ಬಂದ ಹಾಗೆಲ್ಲಾ ಬ್ಲಾಂಡಿಂಗ್ಸರು ಅದನ್ನು ನೋಡಿ ಹಿಗ್ಗಿದ್ದೂ ಹಿಗ್ಗಿದ್ದೇ (ಯೋಧಪು. ೩೯). ೩. (ಆಕಾರದ) ವಿವರಗಳನ್ನೊಳಗೊಂಡ ಸ್ವರೂಪ ; ನೀಲಿನಕಾಶೆ : ಪೂರ್ವದ್ರಾವಿಡ ಧ್ವನಿಪಾಗಳು ಇಂದಿನ ದ್ರಾವಿಡಭಾಷೆಗಳಲ್ಲಿ ಇರುಪಕ್ರಮವನ್ನು ಮುಂದೆ ಪಟ್ಟಮಾಡಿ ನಕ್ಷೆಯಂತೆ ಸಿದ್ಧಗೊಳಿಸಿಕೊಟ್ಟರೆ(ದ್ರಾವಿವಿ. ೩೦೩). ೪. ಚಿತ್ರ ; ಆಕೃತಿ : ಶಾಸನದ ಮೇಲ್ಗಡೆಯಲ್ಲಿ ಸುರುಳಿ ಹಾಕಿ ಕೂತು ಹೆಡೆಯನ್ನು ಬಿಚ್ಚಿದ ಹಾವಿನ ನಕ್ಷೆಯು ಇದೆ (ಶುಳುನಾ. ೬೬). **ನಕಾಶ** : ೧. ನಾನು ಆ ಪ್ರದೇಶದ ನಕಾಶವನ್ನು ಮಾಡಿಟ್ಟುಕೊಂಡಿದ್ದೇನೆ (ತೊಳಿಮು. ೩೬೨) ; ಈ ಹೊಟೆಲ್ಲಿನ ಸ್ಥಾನ ಲಂಡನ್ನಿನ ನಕಾಶದಲ್ಲಿ ಬಲು ಪೂರ್ಮಿಕವಾದುದು (ಸಮುಜೀ. ೯೬೮). ೩. ಧೂಳಿ ಜಾಡಿಸಿ ಸುರುಳಿ ಬಿಚ್ಚಿದ ನಕಾಶದಲಿ ಮೂಡಿಬರಿ ಹೊಸಬಾಳ ಸಂಚಿಕೆಯನು (ನಿಲಮು. ೩೦-೦೩) ; ಮೂಲಲೇಖಿಯಾವ ಲಿಪಿಯಲ್ಲಿರುವುದೊ ಆ ಲಿಪಿಯ ನಕಾಶವನ್ನು ಎದುರಿಗಿಟ್ಟುಕೊಂಡೊಡನೆ ಆ ಲೇಖದ ರಹಸ್ಯವೆಲ್ಲ ಬಯಲಾಗುವಂತಿತ್ತು. ಆ ನಕಾಶದಿಂದ (ರತ್ನಗೋ. ೦೦). **ನಕಾಶೆ** : ೧. ಎರ್ಯೂಟಸ್ಸನೀಸ್ . . . ಭೂಮಿಯ ಸುತ್ತಳತೆಯನ್ನು ಲೆಕ್ಕಹಾಕಿ ಅಕ್ಷಾಂಶ ರೇಖಾಂಶಗಳನ್ನು ನಕಾಶೆಯ ಮೇಲೆ ಗುರುತು ಮಾಡಿದವನು (ಶಿಲ್ಪಾ. ೮೯). ೩. ಸುಬೇದಾರರು ನಕಾಶೆಯನ್ನು ನೋಡುತ್ತ . . . ಒಂದು ಕೊನೆಯಲ್ಲಿ ತಮ್ಮ ರುಜುವನ್ನು ಮಾಡಿದರು (ಸಾವಿತ್ರಿ. ೬೦) ; ಪುಟವಿಂಗಡಣೆಗೆ ಆರಂಭಿಸುವುದಕ್ಕೆ ಮೊದಲು . . . ಪುಟಗಳ ನಕಾಶೆಯೊಂದನ್ನು ತಯಾರಿಸಿ, ಅದನ್ನು ಅನುಸರಿಸುವುದು ಕೆಲಸವನ್ನು ತ್ವರಿತಗೊಳಿಸುತ್ತದೆ (ಮುದ್ರಕ. ೩೩) ; ಪಟೇಲರು ಪೇಟ ಸರಿಪಡಿಸಿ . . . ಕೈಯಲ್ಲಿ ನಕಾಶೆಯ ಕೊಳವೆ ಹಿಡಿದರು (ನನ್ನೂರು. ೦೪೭). ೫. (ಕಲ್ಲು, ದಂತ, ಮರ, ಲೋಹ ಮೊದಲಾದುವುಗಳ ಮೇಲೆ ಮಾಡುವ) ಕೆತ್ತನೆಯ ಕೆಲಸ, –ಕಂಸುರಿಗೆಲಸ : ಆ ದ್ವಾರವು ಬಿಳ್ಳಿಯ ನಕಾಶೆಯ ಕೆಲಸದಿಂದ ಚಿತ್ರಿತವಾಗಿದ್ದಿತು (ಶ್ರೀಕಾಯು. ೪೪). **ನಕಾಸು** : ೫. ತಂಬೂರಿ, ವೀಣೆಗಳಿಗೆ ದಂತದ ಚಿನ್ನೆ ಬಿಳ್ಳಿಗಳ ನಕಾಸಿನ 'ಕಂಗೂರಿ' ಕಟ್ಟಿರಬೇಕು (ಸಾಹಿಜೀ. ೦೦). **ನಕಾಸೆ** : ೨. ಇದು ಸದ್ಯದ ಕರಡು ನಕಾಸೆ ಮಾತ್ರ (ಸವತಿ. ೪೫). ೫. ಕಂಬಗಳು . . . ಒಂದರಂತೆ ಮತ್ತೊಂದು ಇರುವಂತೆ ಕಂಡರೂ ಇವುಗಳ ಮಾದರಿಯಲ್ಲಿಯೂ ನಕಾಸೆಯಲ್ಲಿಯೂ ಬೇಕಾದಷ್ಟು ವೈವಿಧ್ಯವಿರುತ್ತದೆ (ಮೃಚಾಸು. ೦೦).

ನಕ್ಷೆ ತಯಾರಿಸು = ನಕ್ಷೆಯನ್ನು ಸಿದ್ಧಮಾಡು: ಮನಸ್ಸಿಗೆ ಒಪ್ಪುವಂತೆ ಅವರು ಮನೆಯ ನಕ್ಷೆ ತಯಾರಿಸಿದರು (ಕೂಡಿ).

[← ಅರ. ನಕ್ಕಾಹ್ ; ಹಿಂ. ನಕ್ಷಾ, ನಕಾಶೀ, ನಕ್ಕಾಶೀ ; ಮರಾ. ನಕಾಶಾ, ನಕಶೀ]

ನಖ (ನಾ). ೧. ಉಗುರು: "ಪಾಣಿಜಂ ಕಾಮಾಂಕುಶಂ ನಖಮೆನಲ್ಕುಗುರು" (ಮಂಗರಾ. ೯೫-೮) ; ಕರತಲದೊಳೆಸವ ಮಣಿಬಂಧದೊಳಿಂಗುಲಿಯೊಳ್ ನಖದೊಳ್ ನರ್ತನವಿಲಾಸಮಂ ಮೆಱೆದಿರಿಂದ್ರಸೌಂದರಿಯರ್ಕಳ್ (ಅಜಪು. ೫-೩೦); ಅಂಗದೊಳಗಣ ಸವಿ ಸಂಗದೊಳಗಣ ರುಚಿ ಅಂಗನೆಯ ನಖದೊಳಗೆ ಒಂದು ಮೂರುತಿಯಾಯಿತ್ತು . . . ಗುಹೇಶ್ವರನೆಂಬ ನಿಲವ ನಖದ ಮುಖ ನುಂಗಿತ್ತು (ಅವಚಂ. ೧೩೦-೬೯) ; ಮುಖ ಮುಕುರ ಕರತಳ ತಳಿರು ನಖ ಕುಸುಮ ತೊಡಿಗೆಗಳ ಮುತ್ತು ನನೆಯಕ್ಕಿ ವುರ್ಬಕ್ಷುದಂಡ (ಹಡಕಾ. ೪-೭); ನಖದಿಂ ಕೆರಂಕುದುರಿಸುವ ಸುಖಮುಂ ಬಟ್ಟೆಕೊ(ಲ್ಲ)ನುರಿವ ದುಃಖಮುಮೆಂತಂತಖಿಳವಿಷಯೋಪಭೋಗದ ಸುಖಲವಮನುದುಃಖಿಮನಳಿನೀಜಿಯದುದೇ (ಪುಪ್ಪಪು. ೦೩-೬೮) ; ಕಳಿಲೆಯ ನಖದಲಿ ಬಿವ್ವುಟಲಹುದು ಮುಂದೆ ಲಳಿಗೆ ಕೂರುಗುರಿಗಂಜುವುದೇ (ಕೋಹತ. ೧೦-೦೩). 'ನಖಿಕ್ಷತ' ಪರಂ. ೨. ಪ್ರಾಣಿಗಳ ಮೊನೆಯುಗುರು; ಪಂಜ: ಆನೆ ಅಂಕುಶಕ್ಕಂಜುವುದೆ ಅಯ್ಯಾ ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ (ಬಸವ. ೭೬). ೩. ಗೊರಸು; ಖುರ. 'ನಖಿಪುಟ' ಪರಂ. ೪. ಒಂದು ಬಗೆಯ ಗಂಧದ್ರವ್ಯ : ನಖ (ನಖಿಲ)(ಮುಂಬಣ್ಣಾ. ೦೬೨). ೫. ಒಂದು ಬಗೆಯ ಸಸ್ಯ : "ಶರಳ–ಬೆಲ್ಲವತ್ತ, ನಖ, ಲೊಕ್ಕಿ, ತಾಳಮರ" (೬೫ಧಿ. ೦೫೯). ೬. [ಗಣಿತ] ಇಪ್ಪತ್ತು ಎಂಬ ಸಂಖ್ಯೆಯ ಸಂಕೇತ : "ನಖಮದಿಪ್ಪತ್ತು" (ಮಂಗರಾ. ೦೦೪-೯).

ನಖಬಣ್ಣವ ಕಾಣು = ಖುತು ಮತಿಯಾಗು; ಬಹಿಷ್ಮತಿಯಾಗು : ಭೀಷ್ಮಕರಾಯನಾತ್ಮಸಂಜಾತೆ ನಖಬಣ್ಣವ ಕಂಡು ನಾಲ್ದಿನಗಂಡು ವೈದಿಕದಲ್ಲಿ ಮಿಂದಳುತ್ಸವದಿ (ಕೋಹತ. ೪-೩೭). **ನಖಮಾಂಸಪ್ರೀತಿ** = ಉಗುರಿಗೂ ಮಾಂಸಕ್ಕೂ ಇರುವ ಸಂಬಂಧದಷ್ಟು ಹತ್ತಿರದ ಪ್ರೀತಿ, ಅನ್ಯೋನ್ಯತೆ : ಆತನೊಡವೋಯ್ತು, ಪಗೆ ನಮಗಾತನಿನಗ್ಗಳದ ಮಗನೆ ನಾಂ ನಖಮಾಂಸಪ್ರೀತಿಯೊಳೆ ನೆಗಟ್ಟಿಂ (ಪಂಪಭಾ. ೦೪-೭) ; ಸುಖ ಸಂಕಥಾವಿನೋದದಿನಖಿಳಸುಖೋಪಭೋಗಮಂ ಭೋಗಿಸುತಂ ನಿಖಿಳ ಬಳ ಸಬಳನೃಪತಿಗೆ ನಖಮಾಂಸಪ್ರೀತಿಯಿಂದೊಡಂಬಡೆ ನೆಗಟ್ದಂ (ಸುಳುಮಾ. ೩-೪೦). **ನಖಮಾಂಸಸ್ಥಿತಿ** = ನಖಿಮಾಂಸಪ್ರೀತಿ : ಪಜ್ರಾಯುಧಂಗಂ ಹಸನ್ಮುಖಿ ಲಕ್ಷ್ಮೀವತಿಗಂ ಪುರಾತನಭವಸ್ನೇಹಕ್ಕೆ ಪೂರ್ಣಂ ಮಹಾಸಖಮಾಗುತ್ತಿರೆ ಬಂದು ಪುಟ್ಟ ಗುರುವುಂ ತಾನುಂ ಮನಂಗೊಂಡರಾ ನಖಮಾಂಸಸ್ಥಿತಿಯವ್ವ ಪತ್ತುಗೆಗಳಂ ಕ್ಷೇಮಂಕರಾಧೀಶನಂ (ಶಾಂತಿಪು. ೬-೦೩೦). [ಸಂ.]

ನಖಿಂಪಚ (ಗು). ೧. ಉಗುರುಬೆಚ್ಚಗಿರುವ. (ನಾ). ೨. ಉಗುರು ಬೆಚ್ಚಗಾದುದು : ಮದನದವಾಗ್ನಿತಪ್ತೆಯರ ಸುಯ್ಯ ನಖಿಂಪಚವಾಗಿ ಬರ್ಪ ತಣ್ಗಾದಿರನೆಲರ್ಬೆ (ಅನಂಪು. ೬-೮೧). [ಸಂ.]

ನಖಿಕ್ಷತ (ನಾ). [ಕಾಮಶಾ] ಉಗುರಿನಿಂದಾದ ಗೀರು, –ಗುರುತು ; P "ನಖಿಕ್ಷತ –ಲ : ಆಚ್ಛುರಿತಕ, ಅರ್ಧಚಂದ್ರ, ಮಂಡಲ, ರೇಖಾ, ವ್ಯಾಘ್ರನಖಿ, ವಂಯೂರಪದಕ, ಶಶಪ್ಲುತಕ, ಉತ್ಪಲಪತ್ರಕ(ಕಾಮ. ೪೪)" (ಶ್ರೀವತ್ಸ. ೩೩೮). ನಖಿಕ್ಷತದ ಎಂಟು ಬಗೆಗಳನ್ನು ಹೀಗೆ ವಿವರಿಸುತ್ತಾರೆ. ೧. ಆಚ್ಛುರಿತಕ = ಗುರುತಾದರೂ ನೋವಾಗದಂತೆ ಜಿಗುಟುವಿಕೆ. ೨. ಅರ್ಧಚಂದ್ರ = ಅರ್ಧಚಂದ್ರಾಕಾರದ ಗುರುತು ಬೀಳುವಂತೆ ಜಿಗುಟುವಿಕೆ. ೩. ಮಂಡಲ = ವೃತ್ತಾಕಾರದ ಗುರುತು ಬೀಳುವಂತೆ ಜಿಗುಟುವಿಕೆ. ೪. ರೇಖಾ = ಒಂದು ಗೆರೆಯಾಕಾರದಲ್ಲಿ

ಗುರುತು ಬೀಳುವಂತೆ ಜಿಗುಟುವಿಕೆ. ೫. ವ್ಯಾಘ್ರನಖ = ಹುಲಿಯ ಉಗುರಿನ ಆಕಾರದ ಗುರುತು ಬೀಳುವಂತೆ ಜಿಗುಟುವಿಕೆ. ೬. ಮಯೂರಪದಕ = ನವಿಲ ಕಾಲಿನ ಗುರುತಿನಂತೆ ಗುರುತು ಬೀಳುವ ಹಾಗೆ ಜಿಗುಟುವಿಕೆ. ೭. ಶಶಪ್ಲುತಕ = ಮೊಲದ ನೆಗೆತದಲ್ಲಿ ನೆಲದ ಮೇಲೆ ನಾಲ್ಕು ಕಾಲುಗಳ ಗುರುತು ಬೀಳುವಂತೆ ನಾಲ್ಕು ಕಡೆ ಗುರುತು ಬೀಳುವಂತೆ ಜಿಗುಟುವಿಕೆ. ೮. ಉತ್ಪಲಪತ್ರಕ = ಕಮಲದ ಎಲೆಯಾಕಾರದ ಗುರುತು ಮಾಡುವಿಕೆ. ಈ ಗುರುತುಗಳ ಬಗ್ಗೆ ವಾತ್ಸ್ಯಾಯನನ ಕಾಮಸೂತ್ರದಲ್ಲಿ ವಿವರಣೆಗಳು ಸಿಕ್ಕುತ್ತವೆ: ಹಾರಗಳನ್ಮೌಕ್ತಿಕದಿಂ ನಖಕ್ಷತಯುತಂ ವಕ್ಷೋಜಯುಗ್ಮಂ ಮನಂಬುಗೆ ರಾಗಂ ಮಿಗೆ ಮೇಲುದಂ ಮೆಱೆದು ನೋಟ್ಟಬ್ಜಾಕ್ಷಿ ಕಣ್ಗೊಪ್ಪಿದಳ್ (ಪುಷ್ಪಪು. ೫-೨೭); ತೊಡೆ ನಡು ಕಂಠತಟಂ ಬೆಂಗಡೆ ಹೃತ್ಕಟಿ ಕಕ್ಷಪಾರ್ಶ್ವ ಜಘನಂ ಗುಹ್ಯಂ ಪೆಡತಲೆ ಮೊಲೆ ಮುಂಗೈ ಪಣೆ ನಿಡುದೋಳ್ ಕರ ಪೃಷ್ಠಮಿವು ನಖಕ್ಷತದೆಡೆಗಳ್ (ಮನ್ಮವಿ. ೧೩-೪); ಇದು ನಖಕ್ಷತಮ ನಿಡುವೆಡೆ ದಂತಹತಿಯ ನೆಲೆಯಿದುವೆ (ನವಮೋ. ೧೭-೮೩).

[ನಖ + ಕ್ಷತ]

ನಖಗಂದೆ (ನಾ). = ನಖಕ್ಷತ: ಉಸುರನೊಳದೆಗೆವುತ್ತಾ ಬಾಗಿ ತೋಳ್ತೊಡೆಯ ನಖಗಂದೆಗಳನೊರಸಿಕೊಳುತ (ಹಡಳಾ. ೪-೩೨). [ನಖ+ಗಂದೆ]

ನಖಘಾತ (ನಾ). ೧. ಉಗುರಿನಿಂದ ಗಾಯಗೊಳಿಸುವಿಕೆ. ೨. = ನಖಕ್ಷತ: ಪುಲಿಯುಗುರೋಳಿ ವಕ್ರಗತಿ ಕೋಮಲವಪ್ರಘನತ್ರಿರೇಖೆ ಮಂಡಲಕ ಶಶಪ್ಲುತಾರ್ಧಶಶಿ ತದ್ಗ್ರಹಣಂ ಶಿಖಿಭೇಕಪಾದವುತ್ಪಲಸರಸೀಜಪುಷ್ಪ ಯುಗಳಾಕೃತಿಸಪ್ತಮಕಂ ದ್ವಿಸಪ್ತಕಾಖಿಲನಖಘಾತಮಿಂತು ಪೆಸರ್ವೆತ್ತುಪು ಷೋಡಶರೂಪಭೇದದಿಂ (ಮನ್ಮವಿ. ೧೩-೩). [ನಖ + ಘಾತ2]

ನಖದೀಧಿತಿ (ನಾ). ಉಗುರಿನ ಹೊಳಪು,-ಕಾಂತಿ: ಬಿಳಿದು ಕರಿದೆಂಬಾಱು ವರ್ಣದ ಹೊಲಬು ಹೊದ್ದದ ಸೂರ್ಯಕೋಟಿಯ ಹೊಳಹು ನಖದೀಧಿತಿಯ (ಕುವ್ಯಾಧೀ. ೩-೬೫). [ನಖ + ದೀಧಿತಿ]

ನಖದೀಪ್ತಿ (ನಾ). = ನಖದೀಧಿತಿ: ನಖದೀಪ್ತಿಮುಖೇಂದುಮಯೂಖಮಾನತೋಪಾಸಕಪಾಣಿಪದ್ಮವನಮು ಮುಗಿಸುತ್ತಿರೆ (ಪುಷ್ಪಪು. ೧೩-೧೦೯).

[ನಖ + ದೀಪ್ತಿ]

ನಖನಿಕರ (ನಾ). = ನಖಪಂಕ್ತಿ: ಉರಿದವರಸನ ನಖನಿಕರ ಹೊಗೆವೆರಸಿ ಕೌರಿಡಲೋಡಿ ಹೊಕ್ಕರು ನರವೃಕೋದರರಸುರರಿಪುವಿನ ಪಶ್ಚಿಮಾಂಗದಲಿ (ಕುವ್ಯಾಗ. ೧೦-೬೭). [ನಖ + ನಿಕರ1]

ನಖನಿಕಾಯ (ನಾ). = ನಖಪಂಕ್ತಿ: ನಖನಿಕಾಯದಿನುಣ್ಮುವ ಕಾಂತಿಜಾಳ ಮಂಜರಿ ಲುಳಿತಾಂಗುಳಿಪ್ರಕರದಿಂ ಪೊಱಪೊಣ್ಮುವ ವಾರಿಧಾರೆಯಂತಿರೆ (ಕಾದಂಪೂ. ೬೫). [ನಖ + ನಿಕಾಯ]

ನಖಪಂಕ್ತಿ (ನಾ). ಉಗುರುಗಳ ಸಾಲು,-ಸಮೂಹ: ರಾಜಸದ ಸಂಜನಿತ ಶಾಮಸ ಬೀಜಶೇಷದ ವಪಜಮುಖಿ ನೋಡಿದಳು ನಖಪಂಕ್ತಿಗಳನವನಿಪನ (ಕುವ್ಯಾಗ. ೧೦-೬೬). [ನಖ + ಪಂಕ್ತಿ]

ನಖಪಂಜರ (ನಾ). = ನಖ ೨: ಹುಲಿಯು . . . ತನ್ನ ನಖಪಂಜರದ ಒಂದೇ ಹೊಡೆತದಿಂದ ದೊಡ್ಡದೊಡ್ಡ ಮಿಕಗಳ ಹೊಟ್ಟೆಯನ್ನು ಹರಿಯುತ್ತದೆ (ಮುಂಬಯಿ. ೪-೩೬).

[ನಖ + ಪಂಜರ2 (<ಪಂಜಾ)]

ನಖಪುಟ (ನಾ). ಗೊರಸು; ಕೊಳಗು; ಖುರ: ಆರುಣಾಕ್ಷಂ . . . ದೀರ್ಘವಾಲಂ ಕಠಿಣ ನಖ[ಪಾಠಾಂ. ಖುರ]ಪುಟಂ ರೇಣುಭಾಳಸ್ಥಳಂ ಕರ್ಬುರ ನಾದಂ ವೃತ್ತಕಾರಂ ಕುಸುಮಧವಳಮಂ ತೋಱಿ ಫೇನಂ ಕರಂ ಭೀಕರ ಮಾಗಲೊಪ್ಪುಗುಂ ಕಾನನದೊಳಿಭಸಮಾನಂ ಲುಲಾಯಪ್ರತಾನಂ (ಮಲ್ಲಿಕಾ. ೩-೦೭೯); (ದಶಕು. ೪-೫೯ ನೋ.). [ನಖ + ಪುಟ3]

ನಖಪ್ರಹಾರ (ನಾ). ಪಂಜದ ಹೊಡೆತ: ಉದಿತಕ್ರೂರನಖಪ್ರಹಾರಭರದಿಂದೈದಾಱು ದಂಷ್ಟ್ರೋಗ್ರಪಾತದಿನೇಟಿಂಟು ಸುರುಳ್ದುರುಳ್ವಿನೆಗಮೇಣ ಶ್ರೇಣಿಯಂ ಪಾಯ್ದು ಕೊಂದುದನೇವೇಟ್ವುದೊ ಶತ್ರುಸಂಹರಣಕೇಳೀ ಶೀಘ್ರಮಂ ವ್ಯಾಘ್ರಮಂ (ಪುಷ್ಪಪು. ೫-೭೧).

[ನಖ + ಪ್ರಹಾರ]

ನಖಭಾಗ (ನಾ). ೧. ಉಗುರಿನ ಭಾಗ. ೨. ಆಕಾಶವಲ್ಲದುದು. ೧, ೨: ಆವುವು ಕತ್ತಲೆಮೊತ್ತವನೋಡಿಸಿ ಖಭಾಗಶೋಭೆಯ ಪಸರಿಸುತ ನಖಭಾಗದಿ ಮೇಣಿತ್ತಲು ತೋರುತ ಪದುಮದ ಸಿರಿಯನು ದೊರೆಕೊಳುತ (ಧ್ವನ್ಯಾಲೋ. ೯೬). [ಸಂ. (ನಖ + ಭಾಗ; ನ + ಖ + ಭಾಗ)]

ನಖಮಯೂಖ (ನಾ). = ನಖದೀಧಿತಿ: ಶ್ರೀಪತಿಗೆ ಯುದ್ಧಮಲ್ಲ ಮಹೀಪತಿಗೆ ನೆಗಟ್ತಿ ಪುಟ್ಟಿ ಪುಟ್ಟಿದನಖಿಳಕ್ಷ್ಮಾಪಾಲಮೌಳಿಮಣಿಕಿರಣಾಪಾಳಿತನಖಮಯೂಖ ರಂಜಿತಚರಣಂ (ಪಂಪಭಾ. ೧-೦೮); ಸುರಗಣಸ್ತೋಮಮಣಿ ಮಕುಟಮಂಡಿತ ನಖಮಯೂಖಪದತಾಮರಸಯುಗಳ ಪರಮಾರಾಧ್ಯ ಮರುಳುಸಿದ್ದೇಶ ಸಲಹು (ಗುಭಡ. ೦-೧). [ನಖ + ಮಯೂಖ]

ನಖಮರೀಚಿ (ನಾ). = ನಖದೀಧಿತಿ: ಕೃತಕಭೀಮನ ಕೊಂಡು ಮುಳುಗಿತು ಕ್ಷಿತಿಪತಿಯ ರೋಷಾಗ್ನಿಯಾತನ ಸತಿಯ ಖತಿ ಮಗ್ಗಿತು ಮಹೀಶನ ನಖಮರೀಚಿಯಲಿ (ಕುವ್ಯಾಗ. ೧೧-೬೮). [ನಖ + ಮರೀಚಿ]

ನಖಮಿತ್ತೆಲ್ಲ (?) (ನಾ). ಒಂದು ಬಗೆಯ ಖಾದ್ಯ (?): ತಱಗು ಚಕ್ಕುಲಿ ಹೂಸಣಂಬ ಹೂರಿಗೆಗಳಂ ಅಱುಬೋನ ಫೇಣಿ ಗಾರಿಗೆ ಇಡ್ಡಲಿಗೆ ಅವುಗು ತಿಱಿಸೇವಗೆಯನು ಸರವಳಿಗೆ ಪರಡಿಗೆಯ ನಖಮಿತ್ತೆಲ್ಲ[ಪಾಠಾಂ. ನಖಮಲ್ಲತ್ತಿ, ನಖವಿಮುಲ್ಲಕ್ತಿ] ಅಡ್ಡುಗೆಯನು . . . ಗಡಣಿಸುತ್ತ ಗುಡ್ಡರುಗಳಿಗೆ (ಸಿದ್ಧರಾ. ೮-೮೫). [?]

ನಖರ1 'ನಕರ' ನೋ.

ನಖರ2 (ನಾ). ೧. ಉಗುರು; ನಖ: "ಕಾಮಾಂಕುಶಾಃ, ಕರರುಹಾಃ, (ಪುನರ್ನವಾಃ) ಪಾಣಿಜಾಃ, ನಖಾಃ, ನಖರಾಃ – ಈ ೫ (೬ ?) ಉಗುರ್" (ಹಲಾಯು. ೮೪-೩೫೭); ಭುಜಯುಗವಿಶಾಲವ ಕರತಲರಸಾಲವ ನಖರ ಮಲ್ಲಿಕಾಲವ (ಕಥವಿ. II, ೧೮೨). ೨. ಸಿಂಹ, ಹುಲಿ ಮೊದಲಾದ ಪ್ರಾಣಿಗಳ ಮೊನಚಾದ ಉಗುರು,-ಪಂಜ: ಮೃಗರಾಜನ[ಪಾಠಾಂ. ಕ, ವ]ಖರ ಬಾಣಾಳಿಗಳಿಂ ತೆಗೆನೆಱೆದು ಶಲ್ಯನುಱದಿಸೆ ಬಿದುವಂ ಮೃಗರಾಜಂಗಳೆ ಪೋಟ್ವಪೊಲಗಲ್ವಿನಂ ಪೋಟ್ದುವುಗ್ರಬಾಣಾವಳಿಗಳ್ (ಪಂಪಭಾ. ೦೦-೧೦೯); ಕಿರಣಂ ತೀಕ್ಷ್ಣಕರಂಗೆ ತೀಕ್ಷ್ಣನಖರಂ ಸಿಂಗಕ್ಕೆ ವಜ್ರಾಯುಧಂ ಪುರುಹೂತಂಗೆ (ಪಂಠಾಮಾ. ೧೧-೩೫). [ಸಂ.]

ನಖರಂಜಿನಿ (ನಾ). ಉಗುರು ತೆಗೆಯುವ ಸಾಧನ; ಚಾಣ: ಶಿವನಂ ಪ್ರಮಥರಂ ತನ್ನ ಗುರುವನಾನಂದದಿಂ ನುತಿಗೆಯ್ದು ವಂದಿಸುತೆ ಮನದೊಳಗೆ ಮುಂದಿರ್ದ ಯಾಮಿಕರ ಕರದೊಳೆ ಸೇರಿರ್ದ ನಖರಂಜಿನಿಯ ಮೇಲೆ ಮುದದಿಂ ಚೆಂದಮಪ್ಪಂತೆ ಕಳಿಯುತೆ ಮೂಲಮಂತ್ರದಿಂದೊಂದಿ ಮಂತ್ರಿಸೆ ಪಟ್ಟ ಭೂತಿಯಂ ಬಳಿಕ ತಱಿಸಂದ ತನ್ನಖರಂಜಿನಿಯನೊಸೆದು ಕಳಕೊಂಡು ಲಿಂಗಜಲದಿಂದ ಕರ್ಚಿ (ಆರಾಜ. ೪-೨-೩೨).

[< ಸಂ. ನಖರಂಜನೀ]

ನಖರಚ್ಛಾಯೆ (ನಾ). = ನಖದೀಧಿತಿ: ಚತುರಂತಕ್ಷಿತಿಭಾರಮಂ ತಳೆಯಲಾಂ ಸಾರ್ದಿರ್ದೊಡಂ ರಾಜ್ಯಮೋಹಿತನಾಗಿರ್ದಪನಿಂದುಮೆಂದು ನಖರಚ್ಛಾಯಾ ಕದಂಬಂಗಳಿಂ ಸುತಬಾಹಾಪರಿಘಂ ಸಮಂತು ನಗುವಂತಿರ್ದಪ್ಪುದು (ಚಂದ್ರಪು. ೪-೦೩). [ನಖರ2 + ಛಾಯೆ]

ನಖರಾ (ನಾ). ಬೆಡಗು; ಒಯ್ಯಾರ; ಬಿನ್ನಾಣ; ಒನಪು: ಅವಳು ನಖರಾ ಮಾಡುವ ಸುಂದರಯುವತಿಯಾಗಿದ್ದಳು (ಇತಿಶ್ರೀ. ೦೫೯).

[← ಅರ. ಪಾರ. ನಖರಹ್; ಹಿಂ. ಮರಾ. ನಖರಾ.]

ನಖರಾಯುಧ (ನಾ). ೧. ಮೊನಚಾದ ಉಗುರುಗಳನ್ನು ಆಯುಧವಾಗಿ ಉಳ್ಳುದು; ಸಿಂಹ: "ಹರಿಃ, ಮೃಗಪತಿಃ . . . ನಖರಾಯುಧಃ, ಮೃಗರಿಪುಃ, ಸಿಂಹಃ, ಕಂಠೀರವಃ– ಈ ೯ ಸಿಂಹದ ಪೆಸರ್" (ಹಲಾಯು. ೩೬-೬೦); ಕರಿ ನಖರಾಯುಧಂ ಮುಳಿಯದನ್ನೆಗಮುಗ್ರನಿಶಾಟರಚ್ಯುತಂ ಪರಿಯಿಡದನ್ನೆಗಂ . . . ಮರ್ದಿಸಿದಂ ವೃಷನಂ ಜನಾರ್ದನಂ (ಜಗವಿ. ೫-೩೮). ೨. ಹುಲಿ. ೩. ಹುಂಜ. [ನಖರ$_2$ + ಆಯುಧ]

ನಖರುಚಿ (ನಾ). = ನಖದೀಧಿತಿ: ಮಾಣದೆ ಪಾದವೆ ತೊಟ್ಟಿಲ್ ರೇಣುವೆ ಬಾಯ್ವೆಣ್ಣೆ ನಖರುಚಿಯೆ ಮೊಲೆವಾಲ್ ಮತ್ಪ್ರಾಣವೆ ನಿಮ್ಮಯ ಕರುಣಂ ಕ್ಷೋಣಿಯೊಳೆನಗಾಗೆ ಬಸವನಾದೆಂ ಬಳಿಕಂ (ಬಸರ. ೮-೬ ಪದ್ಯ); ನೆಱೆವೆಱೆ ಮೊಗದ ಮೃಗಾಕ್ಷಿಯ ಮಿಱುಗುವ ನಖರುಚಿಗೆ ಸೋಲ್ತು (ರಾಜಶೇ. ೭-೪೪).
[ನಖ + ರುಚಿ]

ನಖರೇಖೆ (ನಾ). = ನಖಕ್ಷತ: ಈ ನಿಲವೆ ಹರನನೊಲಿಸುವ ರೂಪು ಶಿವಶಿವನೆ ಪೊರೆದರಿಸಿನದ ಕಂಪು ನಖರೇಖೆ ನಗೆಮೊಗಂ ಹರಪೂಜೆಯೇಕಿದೇಕ [ಕ್ಕ] ಟಾ ಸೋಜಿಗಂ ಎನುತೆ ಕುಳ್ಳಿರ್ದು (ನಂಬಿರ. ೦೭-೯); ಚಂದ್ರಮುಖಿಗೆ ಚಕ್ರಿ ನಖರೇಖೆಯೆಂಬರ್ಧಚಂದ್ರಾಭರಣವ ತೊಡಿಸಿ (ಭರಜ. ೪೨-೧೦).
[ನಖ + ರೇಖೆ]

ನಖಲು (ನಾ). ಜೀರ್ಣವಾದುದು; ಖಿಲವಾದುದು: ಆ ಮಠ ನಖಲಾಗಿ ಅರಮನೇ ಸಿಸ್ತಿಗೆ ಕೂಡಿಬರುತಿದ್ದಲ್ಲಿ ಯಾ ಮಠಧರ್ಮಕೆ ಬಿಟ್ಟದು (ಎಳ. VIII, ತೀರ್ಥಹ. ೯೬-೦೫; 1664). [?]

ನಖವ್ರಣ (ನಾ). = ನಖಕ್ಷತ: ತೋಳ ನಖವ್ರಣಕೆಱಗಿದ ಬಾಳೆಗಳಂ ನೋಟ್ಟ ಬಾಳೆ ಕಣ್ಮೇನೆಂಬಾಳೋಳಮನೊಡರಿಸೆ ಸಲೆ ನೃಪಮಾಳೆಗೆ ಪಡೆದಳ್ ಮೃಗಾಕ್ಷಿ ಪರಿಸಂಭ್ರಮಮಂ (ಶಾಂತಿಪು. ೮-೪೩); ಮೃದುತರ ಕಲುಷಾರ್ಜನವರ್ಣನಂ ನಖವ್ರಣಮೆಸೆಗುಂ (ಮನ್ಮವಿ. ೦೩-೨).
[ನಖ + ವ್ರಣ]

ನಖಶಿಖಾಂತ (ಅ). ಕಾಲುಗುರಿನಿಂದ ತಲೆಯ ಮುಡಿಯವರೆಗೆ; ಆಮೂಲಾಗ್ರ; ಮೈಯೆಲ್ಲ; ಪೂರ್ಣವಾಗಿ: ತುಂಗಕ್ಕ ಅದಾಗಲೇ ನಖಶಿಖಾಂತ ಹೊತ್ತಿಕೊಂಡಿದ್ದಳು (ಮೂರುದಾ. ೦೪೫); ರತ್ನ ಬಾಗಿಲಲ್ಲಿ ನಿಂತಿದ್ದ ಸರಸಮ್ಮನನ್ನು ಒಮ್ಮೆ ನಖಶಿಖಾಂತ ನೋಡಿದಳು (ಕುಸುಸಂ. ೩೯).
[<ಸಂ. ನಖಶಿಖಾಂತಂ]

ನಖಹತಿ (ನಾ). ೧. = ನಖಕ್ಷತ: ಕಳಂಬೊಕ್ಕು ನಿರಿಸುಗೆಯ್ದು ನಖಹತಿ ದಶನಹತಿ ಪಾದಪಾತಂ ಮುಷ್ಟಿಪಾತಮೆಂಬ ದೋಷಂಗಳಂ ಪೊರ್ದದ ನಾಲ್ಕುಂ ಸ್ಥಾನದೊಳಂ . . . ನೆಱೆದು (ಚಂದ್ರಪು. ೫-೭೭ವ). ೨. ಪಂಜದ ಹೊಡೆತ: ನರಹರಿಯ ನಖಹತಿಗೆ ಬಿಕ್ಕನೆ ಬಿರಿದ ನೆತ್ತಿಯ ಭಟರು (ಕೌಶಿರಾ. ೨೧-೦೬). [ನಖ + ಹತಿ]

ನಖಾಂಕ (ನಾ). ಉಗುರಿನಿಂದಾದ ಗುರುತು,–ಚಿಹ್ನೆ: ವಿಲಾಸದೆ ನಿಂದು ನಿರ್ಜರಸ್ತ್ರೀ ಪದೆದೊತ್ತಿ ಮೇಲುದನಭೀಕ್ಷಿಪಳುತ್ಕುಚದೊಳ್ ನಖಾಂಕಮಂ (ರಾಜಶೇ. ೨-೮೯). [ನಖ + ಅಂಕ$_2$]

ನಖಾಂಶು (ನಾ). ಉಗುರಿನ ಕಾಂತಿ: ರಂಜಿಸುವ ವಸಂತಲಕ್ಷ್ಮಿಯ ಕಠಾಗ್ರದೊಳಿಕ್ಕಿ ನಖಾಂಶುಜಾಲಮಂ ಪಸರಿಸುತಿರ್ಪ ತನ್ನ ಕರೆಮಂ ವನದೇವತೆ ಪಾರಿಜಾತದೊಂದೆಸೆವಲರ್ಗೊಂಚಲಂ ಪಿಡಿದು ನಂದನದೊಳ್ ಬರುತೊರ್ವಳೊಪ್ಪಿದಳ್ (ಕಾದಂಪು. ೭೬೭). [ನಖ + ಅಂಶು]

ನಖಾಕ್ಷಿಪ್ತ (ಗು). ಉಗುರಿನಿಂದ ಚಿಮ್ಮಿದ,–ಮಿಡಿದ: ಬಾಲಿಕೆ ಗದ್ಗದ ಕಂಠೆ ವಾಮಕರಪಲ್ಲವಾಂಗುಳಿನಖಾಕ್ಷಿಪ್ತಾಶ್ರುಸ್ರವೆ . . . ಬಿನ್ನವಿಕಂ (ಶಾಂತಿಪು. ೬-೬೨ವ). [ನಖ + ಆಕ್ಷಿಪ್ತ]

ನಖಾಗ್ರ (ನಾ). ಉಗುರಿನ ತುದಿ,–ಮೊನೆ: ದೇವರ್ಕಳ್ ಸನತ್ಕುಮಾರ ಚಕ್ರವರ್ತಿಯ ರೂಪಂ ವಾಳಾಗ್ರದಿಂ ತೊಟ್ಟು ನಖಾಗ್ರಂಬರೆಗಂ ನಖಾಗ್ರದಿಂ ತೊಟ್ಟು ವಾಳಾಗ್ರಂಬರೆಗಂ ಏಱೆಯುಮಿಱೆಯೆಯುಂ ನೀಡುಂ ಭಾವಿಸಿ ನೋಡಿ ಚೋದ್ಯಂಬಟ್ಟು (ವಡ್ಡಾರಾ. ೬೭-೨).
[ನಖ + ಅಗ್ರ$_1$]

ನಖಾನಖಿ (ನಾ). ಪರಸ್ಪರ ಉಗುರುಗಳಿಂದ ಮಾಡುವ ಕಾದಾಟ,–ಜಗಳ: ಮಲ್ಲಾಮಲ್ಲಿ ನಖಾನಖಿಗಳ ಮಾಡಿದಲ್ಲದಿವಳು ಬಿಡಳೆನ್ನ (ಕುರಾಸಾಂ. ೩೨-೧೨೧); ಸ್ಮರಸಂಗ್ರಾಮದ ಭೋಗರಾಜರೆದಟಿಂ . . . ತದ್ರಾಜಮಂದಿರಮಂ ಘಾತಿಸಿ ರಾಜಮಂಡಲದ ಭಂಡಾರಂಗಳಂ ಸೂಱೆಗೆಯ್ದರೆಬರ್ ಕಾದೆ ನಖಾನಖಿ ಪ್ರಬಳದಂತಾದಂತಿಯಿಂ ಕಾದಿದರ್ (ಹಮ್ಮೀರ. ೨-೮೭); ಒರ್ವರೊಳೊರ್ವರ್ ಮುಷ್ಟಾಮುಷ್ಟಿ ರಣಂ ನೆಗಳ್ದುದು ನಖಾನಖೀಸ್ಫುಟಿಯುದ್ದಂ (ರಾಜಶೇ. ೬-೫೫). 'ಹಣಾಹಣಿ' ಪರಾ. [ಸಂ.]

ನಖಾಯುಧ (ನಾ). ಉಗುರೇ ಆಯುಧವಾಗುಳ್ಳುದು; ಸಿಂಹ: "ಹರಿ ಮೃಗೇಂದ್ರಂ ಪಂಚವಕ್ತ್ರಂ ನಖಾಯುಧಂ . . . ಕೇಸರಿಯೆನಲ್ ಸಿಂಹಮೆನಿಸಿಕ್ಕು" (ಮಂಗರಾ. ೪೭-೭). [ನಖ + ಆಯುಧ]

ನಖಾಯುಧವೈರಿ (ನಾ). ಸಿಂಹದ ವೈರಿ; ಆನೆ: ವಾರಣಾಗ್ರಣಿಯಂ ಮಹಾಸ್ತಂಬೇರಮೋತ್ತಮನಂ ನಖಾಯುಧವೈರಿಯಂ ದುರ್ಧಾರಕುಂಜರ ರಾಜನಂ ತನ್ನಿ (ಬಸಪು. ೫೭-೩೨). [ನಖಾಯುಧ + ವೈರಿ]

ನಖಾವನೇಜನವಾರಿ (ನಾ). ಕಾಲುತೊಳೆದ ನೀರು; ಪಾದತೀರ್ಥ: ಆವನೊಬ್ಬನ ವಾಮಪಾದನಖಾವನೇಜನವಾರಿಯನು ಭಸ್ಮಾವಶೇಷದ ಲೊಂದಿ ಸಂದರು ಸಾಧು ಸದ್ಗತಿಗೆ (ನಿಭಾಗ. ೦-೮-೩೨); ಆವನೊಬ್ಬನ ವಾಮಚರಣನಖಾವನೇಜನವಾರಿಯನು ಗೌರೀವರನು ನೆಱೆ ಧರಿಸಿ ಪಾವನನಾದನೀ ಜಗಕೆ (ನಿಭಾಗ. ೦೦-೭೪-೦೪). [ಸಂ.]

ನಖಾವಳಿ (ನಾ). = ನಖಪಂಕ್ತಿ: ತೊಳಗುವ ತಿಳಿವೆಳಗಿಂ ಶಶಿಕಳೆಯನಿಱಿಕೆಗೈದ ಭಕ್ತರೆಲ್ಲರ ಮಿಡುಕಂ ಕಳೆಯಲ್ ಸಲೆ ನೆಱೆವ ನಖಾವಳಿಯೆಮ್ಮಂ ಪೊರೆಗುದಾತ್ತನರಕೇಸರಿಯಾ (ಧ್ವನ್ಯಾಲೋ. ೩).
[ನಖ + ಆವಳಿ$_1$ (= ಆವಲಿ)]

ನಗ$_1$ (ನಾ). ೧. ಒಡವೆ; ಆಭರಣ: ಹೊಸದಾಗಿ ಒಂದು ಬೆಳ್ಳಿ ಬಂಗಾರದ ಅಂಗಡಿಯನ್ನು ಆರಂಭಿಸಲು ಸಾಕಾಗುವಷ್ಟು ನಗಗಳನ್ನು ಹೇರಿಕೊಂಡಿದ್ದಾಳೆ (ನಾಡಿಗೇ. ೨೮೫); ಮೈತುಂಬ ನಗ ಹಾಕಿಕೊಳ್ಳಬೇಕು (ಕಾಮಿಕಾಂ. ೬೬); ಅವಳ ಮೈಮೇಲೆ ಸಾವಿರಾರು ರೂಪಾಯಿ ಬೆಲೆಬಾಳುವ ನಗಗಳಿದ್ದವು (ಗರುದಾ. ೨೫); ಒಂದು ಮಹಾಸಂಕಟ ಮಾತ್ರ ಅವನನ್ನು ಬಿಟ್ಟಿರಲಿಲ್ಲ: ತನ್ನ ಮಗಳ ಮೈಮೇಲೆ ಹಾಕಿದ್ದ 'ನಗ' ಮಗಳ ಜೊತೆ ಹಿಂದಿರುಗುತ್ತದೆಯೋ ಇಲ್ಲವೋ ಎಂದು (ಮಲೆಮ. ೨೪೭). 'ನಗನಟ್ಟು', 'ನಗನಾಣ್ಯ' ಪರಾ. ೨. ಸರಕುಗಳ ಕಟ್ಟು,–ಹೊರೆ: ಮಲೆನಾಡ ಕೊಡಲಿಪೇಟೆಯೊಳಿಟ್ಟ ಜವಳಿಗಳ ಬಲುನಗಗಳ್ಮಾರಿತೋ ಮೇಣಿಲ್ಲವೋ ಸುದ್ದಿ ಬರಲಿಲ್ಲ (ಅರ್ಜಾವಿ. ೩೦-೩೭); ಒಂದು ಕೂರಿಗೆ ಹೊಲಕ್ಕೆ ನಾಲ್ವತ್ತು ನಗ ಒಣಮೆಣಸಿನಕಾಯಿಗಳಾಗುವವು (ಕೃಷಿಪ್ರ. ೭೧); ಆಮೇಲೆ ನಗಗಳನ್ನು ಕಟ್ಟಿ ಮಾರಾಟಕ್ಕೆ ಕಳಿಸುವರು (ಮುಂಬಯಿ. ೩-೨೯); ಗ್ರೋಸಿನಲ್ಲಿ ನಗಗಳು ೧೪೪ ಇರುತ್ತವೆ. ೫೦ ಗ್ರೋಸ ಅಂದರೆ ೭೨೦೦ ನಗ ಕಟ್ಟಿ ಪೆಟ್ಟಿಗೆಗಳು ಆಕಬಂದ ಪೆಟ್ಟಿಗೆಯಲ್ಲಿರುತ್ತವೆ. (ಮುಂಬಪ್ಯಾ. ೦೪೦); ಮಾಲು ಖರೀದಿ ಮಾಡತಕ್ಕ ವೇಳೆಯಲ್ಲಿ ಗಿರಾಕಿಯರಿಗೆ ಒಂದೊಂದು ನಗ (ಡಾಗು) ತಿರುವಿಸಿ ತೋರಿಸಬೇಕಾಗುತ್ತದೆ (ಮುಂಬಪ್ಯಾ. ೨೦೦); ಇಂಥಾ ೧೨ ಮಣದ ಒಂದು ನಗಕ್ಕೆ ಸೂರ್ತಿ ರೂಪಾಯಿಗಳ ಮೇಲೆ ಧಾರಣೆ ಇದ್ದು ಇದಕ್ಕೆ ಕರೋಡಗಿರಿ ದರ ರಾಶಿಗೆ ಮೂರು ರೂಪಾಯಿ ಪ್ರಕಾರ ಇರುತ್ತದೆ (ಮುಂಬಪ್ಯಾ. ೨೮೭).
[ದೇ.॥ ತಮಿ. ನಕೈ; ತುಳು. ತೆಲು. ನಗ./ಪಾರ. ಮರಾ. ನಗ್]

ನಗ₂ (ನಾ). ಹಡಗು: ಕಳೆದ ವರ್ಷ ಹೊನ್ನಾವರದಲ್ಲಿ ಬಂದರದ ಎದುರಿಗೆನೇ ಮಾಲು ತುಂಬಿದ ಮೂರು ನಗಗಳು ಮುಳುಗಿದುವು . . . ಇಲ್ಲವಾಗಿದ್ದರೆ ನಮ್ಮ ನಗ. ಇಲ್ಲಿಂದ ಅಕ್ಕಿ ಸಾಗಿಸಿಕೊಂಡು ರತ್ನಾಗಿರಿಯಿಂದ ಸ್ವಲ್ಪ ಮ್ಹಾಲು ತೆಗೆದುಕೊಂಡು ಮುಂದೆ ಹೋಗಬೇಕಿತ್ತು (ಜಾರುದಾ. ೪೮); ನಡುಮುರಿಯುತ ನಗನಾವೆಗೆ, ಕೂವೆಗೆ ಉಡಿಸಿದ ಹಾಯಿಯ ಹರಿಯುತ ಬಿರಿಯುತ ಹಡಗನು ಕೀಲಿಸಿ, ತುಮುರನು ತೇಲಿಸಿ, ದಡದಲಿ ಝಾಡಿಸಿ, ದೋಣಿಯನಾಡಿಸಿ (ಕಎಪು. ೨೬-೩). [ತುಳು. ನಗ./ಸಂ. ನೌಕಾ]

ನಗ₃ (ನಾ). ಒಂದು ಬಗೆಯ ಸುಗಂಧದ್ರವ್ಯ; ನಖ: ಮೃಗಮದ ಶ್ರೀಖಂಡಮಂ ಶಿರವಚ್ಚಿ ನಗ ಜವಾದಿ ಕಯಿರಗುಳಿಗೆಯಂ ತಂದಿಟ್ಟು (ಲಿಂಗಪು. ೧೬-೪೪). [<ಸಂ. ನಖ]

ನಗ₄ (ನಾ). ೧. ಚಲಿಸದೆ ಇರುವುದು; ಸ್ಥಾವರ; ಪರ್ವತ; ಬೆಟ್ಟ: "ಅಚಳಃ . . . ನಗಃ, ಶಿಖರೀ, ಸಾನುಮಾನ್, ಧರಃ, ಅದ್ರಿಃ, ಕುಧ್ರಃ–ಈ ೧೪ ಬೆಟ್ಟು" (ಹಲಾಯು. ೨೬-೦೧); "ಧರಮದ್ರಿ ಕುಧರಮದಹಾರ್ಯಂ ನಗಂ ಶಿಖರಿ . . . ಗೋತ್ರಮೆನಲು ಬೆಟ್ಟಕ್ಕೆ ನಾಮಂ" (ಮಂಗರಾ. ೨೯-೦); ಚಾತುರ್ಬಲಯುತನಾ ನಗವ ಬಳಸಿ ಬೀಡಂ ಬಿಟ್ಟಂ (ಆದಿಪು. ೫-೫); ಆ ವಿಂಧ್ಯನಗದೊಳಾ ನಾಯ್ ಪಾವಾಯ್ತಾ ನವಿಲೆಯೆಯ್ಯಮಿಗ ಮಾಯ್ತು (ಯಶೋಚ. ೩-೪೫); ದೆಸೆದೆಸೆಗೆ ಹರಿಹರಿದು ಕಪಿಗಳು ವಸುಧೆಯೊಳಗಣ ನಗವ ತರುತಿರೆ (ಕೌಶಿರಾ. ೧೬-೫); ಮಿಗೆ ಶಾರದಾಭ್ರದಿಂ ಚಂದ್ರಮಂ ರೋಹಣದ ನಗದಿಂದ ಚೆಲ್ವ ರನ್ನಂ . . . ಪೂರ್ವಾದ್ರಿಯಿಂ ಝಗಝಗಿಪ ಬಾಲಾರ್ಕನುದಯಿಸಿದನು (ಭಾವಚಿಂ. ೪-೧೪); ನಗವೆತ್ತಿದ ಕೂರ್ಮನಿಗೇಂ ತಗಲಿದ ಜಲಕಣವು ಭಾರವೇ (ಪಂಚಶ. ೬-೨೩); ಇಲ್ಲಿಗೀರೈದು ಹರಿದಾರಿ ದೂರದೊಳೊಂದು ತಾನಿರ್ಪುದು ನಗಂ (ಶ್ರೀರಾಮಾ. ೦೩೮-೩೬೦). 'ನಗಜಾತೆ', 'ನಗಧರ' ಪರಾ. ೨. ಮರ; ವೃಕ್ಷ: "ವೃಕ್ಷಃ, ಅಂಘ್ರಿಪಃ . . . ನಗಃ, ದ್ರುಮಃ, ಪಾದಪಃ–ಈ ೧೯ ಮರಂ" (ಹಲಾಯು. ೨೯-೨೩); "ತರುವನಸ್ಪತಿ ಸಾಲಮಂಘ್ರಿಪಂ ದ್ರು ದ್ರುಮಂ ಧರಣಿಜಂ ಶಾಖಿ ಶಿಖಿ ನಗವದ್ರಿ ... ಕುಜಮೆನಲು ವೃಕ್ಷಕ್ಕೆ ನಾಮವಕ್ಕುಂ" (ಮಂಗರಾ. ೩೦-೧); ಪೂತಲರ್ದೊಪ್ಪುವ ಕರ್ಣಿಕಾರಭಾಸುರನಗದಂತೆ ಕಣ್ಗಿನಿದನಾಳ್ದುದು ಭೂರಿಸುವರ್ಣಭೂಧರಂ (ಶಬಶಂ. ೧-೩೫). ೩. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ: "ಋಷಿ ನಗ ಹಯಸ್ವರಮದೇಟು" (ಮಂಗರಾ. ೦೦೩-೮); ಯುಗ ಋತು ಗಜ ನಾಗಾಂಬರ ಮೃಗಧರ ನಗ ಷಟ್ಕಮೆನಿಪ ವೃತ್ತದ ಲೆಕ್ಕಂ ಸೊಗಯಿಸಿ ತೋರ್ಕುಂ ಗಣಿಯಿಪುದಗಣಿತ ಗುಣನಿಲಯ ನಾಗವರ್ಮನ ಮತದಿಂ (ಛಂದೋಂಬು. ೨-೨೦೧); ಸಪ್ತ ಭಯ . . . ನಗ . . . ದ್ವೀಪ ಅಶ್ವ ಇಂತಿನಿತುಂ ಒಕ್ಕೆ ಹೆಸರು (ವ್ಯವಹಾ. ೦೦-೩೦). ೪. ಇಪ್ಪತ್ತೇಳು ಅಂಕೆಗಳುಳ್ಳ ಸಂಖ್ಯೆ: ಸ್ಥಾನಸಂಜ್ಞೆಯ ನಱಿಪುದಕ್ಕೆ ಸೂತ್ರಂ: –ಏಕಂತು ಪ್ರಥಮಂ ಸ್ಥಾನಂ ದ್ವಿತೀಯಂ ದಶಸಂಜ್ಞಿಕಂ . . . ಸಪ್ತವಿಂಶ ನಗಚ್ಚೈವ ಅಷ್ಟವಿಂಶ ಮಹಾನಗಃ (ವ್ಯವಹಾ. ೮-೧೪). [ಸಂ.]

ನಗಕುಲ, ನಗಕುಳ (ನಾ). ಬೆಟ್ಟಗಳ ಸಮೂಹ; ಪರ್ವತಗಳ ಗುಂಪು: ಇರ್ದುದು ಮಹೇಂದ್ರಾಚಲಂ . . . ಮುಡಿಯಿಂ ಮುಗಿಲ್ಮುಟ್ಟಿ ನಗಕುಲ ಜಗದ ಜಟ್ಟಿ (ಶ್ರೀರಾಮಾ. ೩೬೩-೩೧). **ನಗಕುಳ**: ನಗಕುಳಕುಂಜರಂ ಜಳಧಿಕಾನನಮುರ್ವರೆಯೆಂಬಿವೆಲ್ಲಮಾವಗಮೊಳಗಾದುದೊ ಕುಳಿಶವಹ್ನಿಗೆ (ಪುಷ್ಕಪು. ೮-೭೩). [ನಗ₄ + ಕುಲ]

ನಗಕುಳ 'ನಗಕುಲ' ನೋ.

ನಗಚೂಳ (ನಾ). ಬೆಟ್ಟದ ತಂದಿ,–ಶಿಖರ: ಆ ನಗಚೂಳದೊಳ್ ಶಬರ ಬಾಲಕಿಯರ್ ವಿಧುಬಿಂಬದಲ್ಲಿ ತಮ್ಮಾನನಮಂ ನಿರೀಕ್ಷಿಸಿ (ಪಂದ್ರಪು. ೧೦-೩೨).

[ನಗ₄ + ಚೂಳ₂ (= ಚೂಲ)]

ನಗಜ (ನಾ). ಪರ್ವತದಲ್ಲಿ ಹುಟ್ಟಿದುದು; ಆನೆ. [ಸಂ.]

ನಗಜವಮ್ಮ (ನಾ). ಒಬ್ಬಾತನ ಹೆಸರು: ಅಪ್ಪಿಯ ಸೆಟ್ಟಿಯ ಮಕ ನಗಜವಮ್ಮನ ಪಲೆಗ ಬೀರನೊಟಂಬನ ರಾಜ್ಯದೊಳೆ ತುಱುಗೊಳೆ ಕಾದಿ ಸತ್ತ (ಎಕ. X, ಗೋರೀಬಿ. ೮೫-೩; ಸು. 920). [?]

ನಗಜಾತೆ (ನಾ). ಪರ್ವತದಲ್ಲಿ ಹುಟ್ಟಿದವಳು; ಗಿರಿಜೆ; ಪಾರ್ವತಿ: ಬೆಟ್ಟುಗಳ ರಟ್ಟೆಯಂ ಕುಟ್ಟಿದಮರಾಪತಿಯ ದಿಟ್ಟತನವಂ ನೋಳ್ಪೆನೆಂದು ನಗಜಾತೆಗೆಡೆಗೊಟ್ಟ ಗಿರಿ ಮೃಗರೂಪತಾಳಿ ಸುರಪನ ಕುಱುಹ ಕಾಣದಱಸುತ ಬಂದುದೋ (ಹಚಕಾ. ೨೦೪ ಪರಿ); ಮಗನಂ ತುಱುಂಬಿನೊಳಗಿಟ್ಟು ಕೊಂಡಿರ್ದಳಾ ನಗಜಾತೆ (ವೀಕೈಪು. ೪-೮-೨೯); ಪುರಹರನೆ ಇರಿಸಿಕೊಂಡಳಿದವರ ಕಂಡು ಮನ ಮಱುಗದೇ ಅವರ ಗೊಡವೇತಕೆಂಬುದ ನನಗೆ ಅಱುಹಿಕೊಡಬೇಕೆಂದು ನಗಜಾತೆ ಬಿನ್ನವಿಸೆ (ಪ್ರೌಢರಾ. ೬-೪೬); ನಗಜಾತೆ ಕೇಳೆಂದು ನಂದಿ ಸುಪ್ರಮಥರಿಗೆ ಗಗನಾಪಗಾಜೂಟನುಸುರುತಿರಲು (ದುರಪು. ೩-೨). [ಸಂ. ನಗಜಾತಾ]

ನಗಜಾರಮಣ (ನಾ). ಪಾರ್ವತಿಯ ಪತಿ; ಶಿವ: ನಗಜಾರಮಣ ನಾಗಾಸುರಚರ್ಮಾಂಬರನಿಗೆ ಮಿಗಿಲಾದ ದೈವಯಿನ್ನುಂಟೆ (ಅಜ್ಞಲೂ. ೪-೨೦). [ಸಂ.]

ನಗಜೆ (ನಾ). = ನಗಜಾತೆ: ನಿನಗಱಿಪಲ್ ಬಂದೆಂ ಶರ್ವನ ವಧು ಶರ್ವಾಣಿಯೆಂದು ನಗಜೆಯ (ಗಿರಿಕ. ೪-೬೦). [ಸಂ. ನಗಜಾ]

ನಗಣ (ನಾ). [ಛಂದ] ಮೂರು ಲಘುಗಳುಳ್ಳ ಒಂದು ಅಕ್ಷರಗಣ (ಲಲಲ): ಮೂಱು ಲಘುವಾಗೆ ನಗಣಂ (ಛಂದೋಂಬು. ೦೩-೦೦); ಗುರು ಲಘು ಮೂರಿರೆ ಮ–ನ–ಗಣ (ಕೈಪಿಡಿ. ೭೦). [ಸಂ.]

ನಗಣ್ಯ (ನಾ). ೧. ಗಣನೆಗೆ ಬಾರದುದು; ಗಣನೆಗೆ ಯೋಗ್ಯವಲ್ಲದುದು; ಕ್ಷುಲ್ಲಕ: ಆ ಹೆಬ್ಬುಲಿಯ ಕೂಗಿನ ಮತ್ತು ದೊಡ್ಡುಗಳ ಭಯಂಕರ ರಾವದ ಇದಿರು ನಾಯಿಯ ಬೊಗಳು ನಗಣ್ಯವಾಗಿ ಬಿಟ್ಟಿತು (ಮಲಿಮ. ೨೫೦). ೨. ಗಣನೆಗೆ ಯೋಗ್ಯವಲ್ಲದವನು; ಕ್ಷುಲ್ಲಕವ್ಯಕ್ತಿ: ಯಾರನ್ನು ಪಾಪಿಗಳು, ಹೇಯರೂ ಎಂದೂ ನಗಣ್ಯರು ಎಂದೂ ಅವರು ತ್ಯಾಗಮಾಡಿ ಬಂದಿರುವರೋ ಆ ಸಂಸಾರೀ ವ್ಯಕ್ತಿಗಳೇ ಇವರಿಗೆ ಅನ್ನವನ್ನು ಒದಗಿಸುವರು (ನಿಬಂಧ. I, ೬೦). [ಸಂ.]

ನಗತ್ತೆ (ನಾ). ಒಂದು ಬಗೆಯ ಸಸ್ಯ: ಮಲರಗ, ನಗತ್ತೆ (ಮೃಜಿಗಿ. ೪೦-೭೮೮). [?]

ನಗದಿ 'ನಗದು' ನೋ.

ನಗದಿಗುಮಾಸ್ತ, ನಗದಿಗುಮಾಸ್ತೆ (ನಾ). (ಕಚೇರಿ ಮೊದಲಾದೆಡೆಗಳಲ್ಲಿ) ಹಣದ ವ್ಯವಹಾರ ನಡೆಸುವ ಗುಮಾಸ್ತ,–ಕಾರಕೂನ,–ಸರಾಫ: ನಗದಿಗುಮಾಸ್ತರೆ, ನಿಮ್ಮ ಲೆಕ್ಕಕ್ಕೂ ಎರಡುಕಾಸು ಸೇರಿತು! (ನಂಟರು. ೨೫). **ನಗದಿಗುಮಾಸ್ತೆ**: "ಬ್ಯಾಂಕಿನ ಅಥವಾ ವರ್ತಕನ ಹಣದ ಜವಾದ್ದಾರಿಯುಳ್ಳವನು; ನಗದಿಗುಮಾಸ್ತೆ" (Cashier. ಇಂಕನಿ).

[ನಗದಿ (<ನಗದು) + ಗುಮಾಸ್ತ]

ನಗದಿಗುಮಾಸ್ತೆ 'ನಗದಿಗುಮಾಸ್ತ' ನೋ.

ನಗದಿಪುಸ್ತಕ 'ನಗದುಪುಸ್ತಕ' ನೋ.

ನಗದಿಬುಕ್ಕು (ನಾ). = ನಗದುಪುಸ್ತಕ: ಹಣಕಾಸಿನ ಲೆಕ್ಕಾಚಾರವನ್ನು ನಗದಿಬುಕ್ಕಿನಲ್ಲಿ ಬರೆದಿಡಲಾಗುತ್ತಿದೆ (ರೂಢಿ). [ನಗದಿ (<ನಗದು) + ಬುಕ್ಕು]

ನಗದಿಮಾಡು (ಕ್ರಿ). ಹಣವನ್ನು ಕೊಡು,–ಪಾವತಿಮಾಡು: ಈ ಕುಪುಟೂರ ಸೀಮೆಗೆ ಮೊಗಲರ ಬಗೆ ಹಣ ಸೀಮೆಗೆ ನಗದಿಮಾಡಿದು ಗ ೯೦೦೦ ॥ ವರಹ ॥ ಸೇನಬೋವರಿಗೆ ಗ ೨೦೦೦ ॥ ವರಹ (ಎಕ. VIII, ಸೊರಬ. ೨೬೬-೦೫; 1629). [ನಗದಿ (<ನಗದು) + ಮಾಡು₁]

ನಗದಿಲೆಕ್ಕ 'ನಗದುಲೆಕ್ಕ' ನೋ.

ನಗದಿವ್ಯವಹಾರ (ನಾ). = ನಗದಂವ್ಯಾಪಾರ.
[ನಗದಿ (<ನಗದು) + ವ್ಯವಹಾರ]

ನಗದಿವ್ಯಾಪಾರ 'ನಗದಂವ್ಯಾಪಾರ' ನೋ.

ನಗದು, ನಗದಿ (ನಾ). ೧. ಹಣ; ರೊಕ್ಕ; ರೋಖು; ಹಣಕಾಸು: ವೇಟಿಯಲ್ಲಿ ಯಾವುದನ್ನು ಮಾರಿದ ತಕ್ಷಣ ನಗದು ಕೈಗೆ ಬರುವುದೊ, ಅಂಥ ನಗದಿಗೆ ಸಮಾನವಾದ ಹಣಪತ್ರಗಳನ್ನು (Liquid Assets) ಕೊಂಡಿಟ್ಟುಕೊಳ್ಳುತ್ತಾರೆ (ಹಣಪ್ರ. ೬೯); ಏನಾದರೂ ಮನೆಗೆ ಬಂದರೆ ಅವನಿಗೆ ಕೊಡುವುದಕ್ಕೆ ಎರಡುಸಾವಿರ ರೂಪಾಯಿಗಳನ್ನು ನಗದು ಇಟ್ಟಿದ್ದೇನೆ (ರಂಗಳ. ೦೨೩); ಹೆಂಡತಿಯು ಕೈಗೆ ೧,೫೦೦ ಪೌಂಡುಗಳನ್ನು ಕೊಟ್ಟು . . . ಉಳಿದ ನಗದು, ಸಾಮಾನ ಕೈಲಿಟ್ಟುಕೊಂಡ (ಗಂಪ್ರ. ೦೦೪); ಇಂದು ನಗದು ನಾಳೆ ಸಾಲ (ಡಿಥಿ). 'ನಗದಂವ್ಯಾಪಾರ', 'ನಗದುಹಣ' ಪರಾ. **ನಗದಿ**: ೧. ಹಣ ನಗದಿ ಕೊಟ್ಟು ಸಾಮಾನುಗಳನ್ನು ಕೊಂಡುಕೊಳ್ಳುವುದು ಯಾವಾಗಲೂ ಒಳ್ಳೆಯದು (ಅಡುಸಾ.೦೨೫). 'ನಗದಿವ್ಯಾಪಾರ' ಪರಾ. ೨. = ನಗದಿಗಂಮಾಸ್ತ: (Cashier. ಪಾರಿಸಿ: ೦೨).
[←ಅರ. ನಕದ್, ನಕ್ದ್; ಮಿರಾ. ನಕ್ಕದ್, ನಗದ್, ನಗದೀ; ಹಿಂ. ನಕದ್, ನಕ್ದ್, ನಗದ್, ನಗದೀ]

ನಗದುಗುತ್ತ 'ನಗದುಗುತ್ತೆ' ನೋ.

ನಗದುಗುತ್ತೆ, ನಗದುಗುತ್ತ (ನಾ). ಧನರೂಪದಲ್ಲಿ ಕೊಡುವ ಕಂದಾಯ: (ಕಸಂಗ್ಲಾ. ೧೪೯). **ನಗದುಗುತ್ತ**: (ಮೈಗಜೆ. IV, ೭೮೦).
[ನಗದು + ಗುತ್ತೆ]

ನಗದುಗೇಣಿ (ನಾ). ಧನರೂಪದಲ್ಲಿ ಕೊಡುವ ಗೇಣಿ.–ಗಂತ್ತಿಗೆ: ಕೆಲವು ತೋಟಗಳು . . . ಬತ್ತದ ಗದ್ದೆಗಳು ನಿಗದಿಯಾದ ತಾಂಗ (ಟಂಕ ? : ಒಂದು ತರ ಹಣ) ನಗದುಗೇಣಿ ಕೊಡಬೇಕು (ಪ್ರಪಾತಿ. II, ೪೭೫).
[ನಗದು + ಗೇಣಿ (<ಕೇಣ್)]

ನಗದುದಾನ (ನಾ). ಹಣದ ರೂಪದಲ್ಲಿ ಕೊಡುವಿಕೆ; ಹಣದ ರೂಪದ ಕೊಡುಗೆ: ಮಧ್ಯಸ್ಥಗಾರಿಕೆ ರುಸುವುವನ್ನು ಮುಂಗಡವಾಗಿ ಕೊಡುವುದಿಲ್ಲವೆ? ನಗದುದಾನದಲ್ಲಿ ಬಹುಗುಣವಿದೆ (ಕಮುಳ. ೮೦).
[ನಗದು + ದಾನ]

ನಗದುನಾರಾಯಣ (ನಾ). ಐಶ್ವರ್ಯವಂತ; ಲಕ್ಷಾಧೀಶ್ವರ: ವ್ಯಾಪಾರದಲ್ಲಿ ಚಿನ್ನಾಗಿ ಮುಂದುವರಿದು, ಕೇವಲ ಎರಡು ಮೂರು ವರ್ಷಗಳಲ್ಲಿಯೇ ಅವರು ನಗದುನಾರಾಯಣರಾದರು (ಡಿಥಿ). [ನಗದು + ನಾರಾಯಣ]

ನಗದುಪುಸ್ತಕ, ನಗದಿಪುಸ್ತಕ (ನಾ). ಹಣಕಾಸಿನ ಲೆಕ್ಕಾಚಾರವನ್ನು ಬರೆದಿಡುವ ಪುಸ್ತಕ; ಖಾತೆಕಿರ್ದಿ: (Cash register. ಇಂಳಿನಿ). **ನಗದಿ ಪುಸ್ತಕ**: "ನಗದುಲೆಕ್ಕದ ಪುಸ್ತಕ; ನಗದಿಪುಸ್ತಕ; ರೊಕ್ಕದ ಪುಸ್ತಕ" (Cash-book. ಇಂಳಿನಿ). [ನಗದು + ಪುಸ್ತಕ]

ನಗದುಬಹುಮಾನ (ನಾ). ಧನರೂಪದಲ್ಲಿ ಕೊಡುವ ಬಹುಮಾನ: ಉತ್ತಮಜಾತಿಗಳಿಗೆ ಅವನು ನಗದು ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದನು (ಬಂಕಿಮ. ೧೨). [ನಗದು + ಬಹುಮಾನ]

ನಗದುಬೆಲೆ (ನಾ). ಹಣದ ರೂಪದ ಬೆಲೆ; ಹಣ ಕೊಟ್ಟು ಕೊಳ್ಳುವ ಬೆಲೆ · ಧನಪೌಲ್ಯ; ಸಾಲವಾಗಿ ಕೊಳ್ಳುವ ಬೆಲೆಗೆ ಬೇರೆಯಾದುದಂ.–ವಿರುದ್ಧವಾದುದಂ (Cash price. ಇಂಳಿನಿ).
[ನಗದು + ಬೆಲೆ]

ನಗದುಲಾಭ (ನಾ). ಹಣದ ರೂಪದಲ್ಲಿ ಬರುವ ಆದಾಯ: ಪ್ರದರ್ಶನಗಳಿಂದ ಪ್ರದರ್ಶಕರಿಗೆ ಆಗುವ ನಗದುಲಾಭ ಬಹಳ ಕಡಿಮೆ (ರಾಪುಶಾ. ೯೦).
[ನಗದು + ಲಾಭ]

ನಗದುಲೆಕ್ಕ, ನಗದಿಲೆಕ್ಕ (ನಾ). ಹಣಕಾಸಿನ ಲೆಕ್ಕಾಚಾರ.–ಖಾತೆ: "ನಗದು ಲೆಕ್ಕ; ನಗದು ಲೇವಾದೇವಿ; ರೊಕ್ಕದ ಖಾತೆ" (Cash account. ಇಂಳಿನಿ). **ನಗದಿಲೆಕ್ಕ**: (Cash account ಪಾರಿಸಿ. ೦೨).
[ನಗದು + ಲೆಕ್ಕ]

ನಗದುಲೇವಾದೇವಿ (ನಾ). = ನಗದಂಲೆಕ್ಕ: "ನಗದು ಲೆಕ್ಕ; ನಗದುಲೇವಾದೇವಿ; ರೊಕ್ಕದ ಖಾತೆ" (Cash account. ಇಂಳಿನಿ).
[ನಗದು + ಲೇವಾದೇವಿ]

ನಗದುವ್ಯಾಪಾರ; ನಗದಿವ್ಯಾಪಾರ (ನಾ). ಕೈಮೇಲೆ ಹಣ ಕೊಟ್ಟು ನಡೆಸುವ ವ್ಯಾಪಾರ ರೋಖುವ್ಯಾಪಾರ: (Terms Cash. ಪತ್ರಿನಿ: ೭೭); ನಗದುವ್ಯಾಪಾರ ತೀರೇ ನೀರಿನ ಹಾಗೆ (ಗಾದೆ). **ನಗದಿವ್ಯಾಪಾರ**: ಹಗಲು ಕೊಡು ರಾತ್ರಿ ಪಡೆ ಇಲ್ಲಿ ನಗದಿವ್ಯಾಪಾರ (ಉರ್ದುಪಾ. ೦೦೩).
[ನಗದು + ವ್ಯಾಪಾರ]

ನಗದುಸಂಬಳ (ನಾ). ಹಣದ ರೂಪದಲ್ಲಿ ಕೊಡುವ ವೇತನ: "ಆದಾಯಗಳು" ಎಂದರೆ . . . ನಗದುಸಂಬಳ ಮತ್ತು ಇತರ ಎಲ್ಲಾತರದ ವೇತನ (ಗ್ರಾಮಾಳ. ೦೫). [ನಗದು + ಸಂಬಳ$_1$]

ನಗದುಸಾಲ (ನಾ). ಹಣದ ರೂಪದಲ್ಲಿ ಕೊಡುವ ಸಾಲ: ಈಗೀಗ ಗ್ರಾಮಸ್ಥರಿಗೆ ಸರಕಾರದಿಂದ ನಗದುಸಾಲ ದೊರೆಯುವ ಸೌಲಭ್ಯವಿದೆ (ಡಿಥಿ). [ನಗದು + ಸಾಲ$_1$]

ನಗದುಸಿಲ್ಕು (ನಾ). ಕೈಯಲ್ಲಿ ಉಳಿದಿರುವ ಹಣ; ವಿಂಕ್ಯ ಹಣ: ಸರಕಾರದ (Cash Balance) ನಗದುಸಿಲ್ಕನ್ನು ರಿಸರ್ವ್‌ಬ್ಯಾಂಕು ತನ್ನ ಕೈಯಲ್ಲಿಟ್ಟುಕೊಳ್ಳುವುದು (ಹಣಪ್ರ. ೩೦೭). [ನಗದು + ಸಿಲ್ಕು$_4$]

ನಗದುಹಣ (ನಾ). ಸಿದ್ಧವಾಗಿರುವ ಹಣ.–ರೊಕ್ಕ; ರೋಖು: ಆಕೆ ತನ್ನ ಹಶ್ತಿರವಿದ್ದ ನಗದುಹಣವನ್ನೆಲ್ಲಾ ಅದಕ್ಕಾಗಿ ತೆಗೆಬೇಕಾಯಿತು (ಬಂಕಿಮ. ೦೩೨); ಅಷ್ಟಿಷ್ಟು ನಗದುಹಣವೂ ಇತ್ತು (ಅಲ್ಪವಿ. ೦೧೦); ಬ್ಯಾಂಕಿಗೆ ಹೋಗಿ ಚೆಕ್ ಕೊಟ್ಟು ನಗದುಹಣ ತೆಗೆದುಕೊಳ್ಳಬೇಕಾದರೆ ಅರ್ಧಗಂಟೆ ಕಳೆದುಹೋಯಿತು (ರತ್ನಗೋ. ೬೭). [ನಗದು + ಹಣ]

ನಗಧರ (ನಾ). ೧. ಬೆಟ್ಟವನ್ನು ಎತ್ತಿ ಹಿಡಿದವನು; ಗೋವರ್ಧನಧರ; ಕೃಷ್ಣ: ನಗಧರನೆತ್ತನೇ ಧನುವನೇಱಿಸನೇ . . . ವುರ್ಬನೇಱಿಸುವ ಮಾಟ್ಕಿಯಿನಶ್ರಮದಿಂ ಪೊಡರ್ಪು ಕೈಮಿಗೆ ರಿವುಮರ್ದನಂ ಧನುವನೆತ್ತಿದ ನೇಱಿಸದಂ ಜನಾರ್ದನಂ (ಪಂಪಾಮಾ. ೫-೦೦೦); ನಗಧರನ ನಿಶಿತನಾರಾಚಗಣಂ ನಡೆ ಪಾಯ್ದ ರಿಪುಭಟಾರುಣಜಲಧಾರೆಗಳಂ . . . ಪೂತನಿಯು ರಾಂತು ಕುಡಿದಿರ್ ಧುರದೊಳ್ ಜಗವಿ. ೬-೮೨); ಮುರಹರ ನಗಧರ ಮುಸುಂದ ಮಾಧವ ಗರುಡಗಮನ ಪಂಕಜನಾಭ . . . ನಮೋ ನಮೋ (ಪುರಂದ. ೩-೪೦-೧); ರುಕ್ಮಿಣಿ ಗಂಡುಮಗನಾಗಬೇಕೆನಲೊಡನೆ ನಗಧರ [ಪಾಠಾಂ. ಅಗಧರ, ಅಘಹರ] ಕೊಟ್ಟನಿವಳ್ಗೊಂದು ವರವನು (ಮೋಹತ. ೧೦-೦೨); ನಗುತಲೆಂದನು ವೈಷ್ಣವನು ಕೃತಯುಗದಿ ಹರಿ ಶ್ವೇತಾಂಗ . . . ದ್ವಾಪರದೆಸಗೆ ರಕ್ತಾಂಗ ನಗಧರಂ ಕೃಷ್ಣಾಂಗನೀ ಕಲಿಯುಗದೊಳಾಗಿಹ ನೆಂದು ವೇದಂ ಪೊಗಳುತಿರ್ಪುವು (ಕಂಳದಾ. ೧೦-೫೫). ೨. [ಜೈನ] ಲಕ್ಷ್ಮಣ: ಗಗನೇಚರಸೈನ್ಯಮಿಸುವ ಪೊಸ ಮಸೆಯ ಸರಲ್ ನಗಧರನ ಮೇಲೆ ಪಾಯ್ದುವು ನೆಗೆವಗ್ನಿಮುಖಕ್ಕೆ ಪಾಯ್ದ ಶಲಭಂಗಳವೋಲ್ (ಪಂಪಾಮಾ. ೯-೬೦). 'ಅಗಧರ' ಪರಾ. [ಸಂ.]

ನಗಧರೆ (ನಾ). ಪೃಥ್ವಿ; ಭೂಮಿ: "ಧರಣಿ ಧಾರಿಣಿ . . . ನಗಧರೆ ರತ್ನಗರ್ಭೆ ಬಂಧನಿ ವಿಪುಳೆ ಸರ್ವಂಸಹಾಖ್ಯೆಯೆನೆ ನೆಲಕೆ ನಾಮಂ" (ಹುಂಗರಾ. ೩೮-೦).

ನಗಧ್ವನಿ (ನಾ). ಬೆಟ್ಟದ ಬಳೆಯಲ್ಲಿ ಉಂಟಾಗುವ ಮೊರಂಕೂಗು.–ಮಾರ್ದನಿ.–ಹೊಳಲು: ಜನಮಱಿಯದನ್ನೆಗಂ ಮುನ್ನಂ ನಯಮಱಿ

ದಱಿಪಲಾರ್ಪೊಡದು ಮಂತ್ರಿಗುಣಂ ಜನವಾದಂ ನೆಗೞ್ ನಗಧ್ವನಿವೋಲನು ಕರಣವಾರ್ತೆ ಮಂತ್ರಿಯ ಗುಣಮೇ (ಕವಿರಾ. ೩-೦೪೩). [ನಗ$_4$ + ಧ್ವನಿ]

ನಗನಂದನ (ನಾ). ಬೆಟ್ಟದ ಮೇಲಿರುವ ವನ,–ಉದ್ಯಾನ : ಆ ಗಿರಿ ತಟದಿಂದವನಂ ಪೋಗಿಸಿ ತದ್ವನನಿವಾಸಮಂ ಕರುಣಿಪುದಂತಾಗದೊಡೆ ಮಗೀವುದು ನೀಡಾಗದೆ ಪೆಱತೊಂದನುಚಿತ ನಗನಂದನಮಂ (ಕಬಶಂ. ೨-೦೦೨). [ನಗ$_4$ + ನಂದನ]

ನಗನಟ್ಟು (ನಾ). = ನಗನಾಣ್ಯ : ಸುಬ್ಬಣ್ಣ ಹೆಗ್ಗಡೆಯವರಿಗೆ ಬೇಕಾದಷ್ಟು ಆಸ್ತಿಪಾಸ್ತಿ ನಗನಟ್ಟುಗಳಿದ್ದರೂ ತಿಮ್ಮಪ್ಪಹೆಗ್ಗಡೆಗೆ ಹೆಣ್ಣುಕೊಡುವುದಕ್ಕೆ ಹೆದರುತ್ತಿದ್ದರು ಹಡೆದ ತಂದೆ ತಾಯಿಗಳು (ಮಲೆಮ. ೩೬); ತೊಡುವುದಕ್ಕೆ ನಗನಟ್ಟು ಆಯಿತು (ದೇವೀಚೌ. ೩೦).

[ದೇ.II ತಮಿ. ನಗೈನಟ್ಟು; P ತಮಿಳಿನಲ್ಲಿ ಇದನ್ನು ದ್ವಿರುಕ್ತಿಯೆಂದು ಗಣಿಸಲಾಗಿದೆ]

ನಗನಾಣ್ಯ (ನಾ). ಒಡವೆ, ಹಣ, ಮುಂತಾದವು; ಆಭರಣ, ಐಶ್ವರ್ಯ ಮುಂತಾದುವು : ಆ ಬಗೆ ನಗನಾಣ್ಯದಲ್ಲಿ ಒಳ್ಳೆ ಒಳ್ಳೆ ಅನರ್ಘ್ಯವಾದ ಕೆಲವು ನಗಗಳನ್ನು ಆ ಟಿಂಕಮುತ್ತನು ತೆಗೆದುಕೊಂಡು, ಉಳಿದ ನಗನಾಣ್ಯ ಯಾವತ್ತೂ ಕೋಟೆ ಅರಸುಗಳಿಗೆ ಕೊಟ್ಟನು (ರಾಷೇಂದ್ರ. ೪೮); ಇಂದು ಕಂಡುಬರುವ ಸರಕಾರೀ ಯಂತ್ರದ ಅಂಗೋಪಾಂಗಗಳೆಲ್ಲ . . . ಹಳೇ ನಗನಾಣ್ಯಗಳಂತೆ ಕೇವಲ ಐತಿಹಾಸಿಕ ಕುತೂಹಲದ ವಿಷಯವಾಗಿ ಉಳಿಯುವುವು (ಮಾವಾದ. ೦೬೯); ಅಪರಿಮಿತ ನಗನಾಣ್ಯಗಳನ್ನು ಬೇರೆ ಅಮಿತಾನಂದ ಪೂರಿತವಾದ ದಾನದಿಂದ ತೃಪ್ತನಾದನು (ಮಡಿಭ. ೯೩).

[ನಗ$_1$ + ನಾಣ್ಯ (<ನಾಣೆಯ)]

ನಗಪ (ನಾ). = ನಗಪತಿ : ನಗಪಾ[ಪಾತಾಂ. ಪ್ರಾ]ಗ್ರದೊಳಂ ಕುಜಪ್ರತತಿಯೊಳ್ ಸರಸೀಕುಳದೊಳ್ ವಿರಾಜಿಸುತ್ತುಗ್ರನನೀಶನಂ . . . ತಂದವೆಂ (ಗಿರಿಕ. ೮-೮೬). [ಸಂ.]

ನಗಪಗೆ (ನಾ). ಪರ್ವತಗಳ ಶತ್ರು ; ನಗಾರಿ ; ಇಂದ್ರ.

ನಗಪಗೆ ಮಗ = ಇಂದ್ರನ ಮಗ ; ಅರ್ಜುನ : ನಗಪಗೆ ಮಗನನು ಮೃಗನೆವನದಿ ಕಾಳಗ ಮಾಡಿ ಮೆಚ್ಚಿದೆ (ವಿದಾಕ್ಕ.೬೬-೦). [ನಗ$_4$ + ಪಗೆ$_2$]

ನಗಪತಿ (ನಾ). ೧. ಪರ್ವತಗಳಿಗೆ ಒಡೆಯನಾದವನು; ಪರ್ವತರಾಜ ; ಹಿಮವಂತ : ನಗಪತಿಯೆಂದುದಂ ಸಲಿಸಿ ನಾರದನಾತನ ಕೂಡೆ ರುದ್ರನಂ ಮೃಗಧರಚೂಡನಂ ಶಿವನನರ್ಚಿಸಿ (ಗಿರಿಕ. ೪-೬೪). ೨. ಮೇರುಪರ್ವತ ; ಮೇರುಗಿರಿ : ನಗಪತಿಗಿದೆ ಪೆಱ್ನೊಸಲೆನೆ ಸೊಗಯಿಪ ಪಾಂಡುಕ ವಿಶಾಲ ಶಿಳೆಯೊಳದೇಂ ದಿಟ್ಟಿಗೆ ವಂದುದೊ (ಚಂದ್ರಪು. ೦೩-೧೧೦). ೩. ಚಂದ್ರ.

[ನಗ$_4$ + ಪತಿ$_2$]

ನಗಮನೆ (ನಾ). ಆಭರಣಗಳನ್ನಿಟ್ಟಿರುವ ಮನೆ ; ಖಜಾನೆ (?) : ಈ ಗ್ರಾಮಕ್ಕೆ ಉಂಟಾದ ಚತುಃಸೀಮೆಯೊಳಗುಳ್ಳ . . . ತೋಟ ತುಡುಕಿ ನಗಮನೆ ವಣಸುಂಕ ಸುವರ್ಣಾದಾಯ ಕಲಕೊಶಾರ ಕಾಲೋಣಿ ನಿರೋಣಿಯೇನುಂಟಾದ ಸಕಲಾಯ ಸ್ವಾಮ್ಯವನು ಸರ್ವಮಾನ್ಯವಾಗಿ ಸ್ವರುಚಿಯಿಂದ ಒಡಂಬಟ್ಟು ಕೊಟ್ಟ ದಾನಶಾಸನ (ಬೆಟ್ಟಅ. ೨೪೦).

[ನಗ$_1$ + ಮನೆ]

ನಗಯಜ್ಞ (ನಾ). ಪರ್ವತಕ್ಕೆ ಮಾಡುವ ಒಂದು ಬಗೆಯ ಪೂಜೆ : ಮುಕುಂದಂ ನಗಯಜ್ಞೋಪಯೋಗದ್ರವ್ಯಂಗಳಂ ತಂದು ಮುಂದೆ ನಿಂದಿರ್ದ ನಂದಗೋಪಪುರೋಗಮರನನುರಾಗದಿಂ ನೋಡಿ (ಜಗವಿ. ೪-೮೦ ವ). [ನಗ$_4$ + ಯಜ್ಞ]

ನಗರ (ನಾ). ೧. ಮುಖ್ಯಪಟ್ಟಣ ; ಪುರ : "ಪತ್ತನಂ . . . ನಗರಂ, ನಗರೀ . . . ಪುರೀ – ಈ ೧೧ ಪಟ್ಟಣಂ" (ಹಲಾಯು. ೪೮-೧೩೦) ; "ನಗರಿಪುಟಭೇದನಂ ಪೂಃ ಪುರಂ ಪತ್ತನಂ . . . ನಗರಮೆನೆ ಪಟ್ಟಣಂ" (ಮಂಗರಾ. ೫೬-೩) ; ಗ್ರಾಮ? ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ (ವಡ್ಡಾರಾ. ೬-೨); ಅಳಕಾನಗರೀಶಂ ಬರ್ಕುಮೆ ತನ್ನಗರದ ಕಡೆಪಟ್ಟ ಪರದರೊರೆಗಂ ದೊರೆಗಂ(ಜಗವಿ. ೯-೦೦೬) ; ನಗರದ ಮನೆಮನೆದಪ್ಪದೆ ಸೊಗಯಿಸೆ ಬಹುವರ್ಣ ವಿವಿಧಪಟದೊಳ್ಗುಡಿಗಳ್ ನೆಗೞ್ದಿರೆ ಬಹುಪ್ರಕಾರದ ಮುಗಿಲೊಗೆದಪುವೆನಿಸಿತಾಗಳಾಕಾಶತಳಂ (ಪುಷ್ಪಪು. ೦೩-೧೬) ; ಕರೆಸಿದನು . . . ನಗರದನುಪಮ ವಾರನಾರಿಯರ (ತೊರರಾ. ೦-೫-೨೬) ; ನೋಡದೋ : ನನ್ನ ಪದತಲದಿ ಎಂಬಂತೆ ನಗರ ನಾಗರಿಕತೆಯ ಜೀವನಂ (ಚಕ್ಕಿಕಾ. ೨೯-೩೬) ; ಕನ್ನಡಿ ಹೇಗೆ ನಾಗರಿಕತೆಯ ಚಿಹ್ನವೋ ಹಾಗೆ ನಗರಕ್ಕೆ ಪ್ರಾಣಿಶಾಲೆ (ಈಚಕ. ೧೧೮). ೨. ವರ್ತಕರ ಸಂಘ ; ವ್ಯಾಪಾರಿಗಳ ಸಂಸ್ಥೆ ; ಕೊತ್ತಳಿ : ಶ್ರೀರಾಮಪುಣ್ಯವಲ್ಲಭೇನ ಲಿಖಿತವಿದಂ ಶಾಸನಂ ಭವಗಮುಣ್ಡನು ಚನ್ದಗಮುಣ್ಡನು ಎಡೆವೊಟಲ್ನಾಡು ಬನವಸಿಯ ನಗರಮುಂ ಸಕ್ಷಿ (ಎಕ. VIII, ಸೊರಬ. ೫೭೦-೩೮ ; 692) ; ಅಲಂದೆಯ ನಗರಂ ದೇವರಿಗೆ ಮಾಱಿದ ಪೇಱಿಂಗಯ್ಯತ್ತೆಲೆಯಂ ಬೆಟ್ಟರಿಂತಿ ನಿತುಮಂ ನಗರಮಹಾಜನ ಪಂಚಮಠಸ್ಥಾನಮಾಚಂದ್ರಾರ್ಕ್ಕ ಸ್ಥಾಯಿವರಂ ನಡಯಿಸುವರು (ಎಇ. XXVIII, ೩೫-೫೮ ; 1032) ; ಉಱುವತ್ತು ಕೊತ್ತಳಿಯುಂ ನಗರದ ವಶವರ್ತ್ತಿಗಳುಮಿಱ್ದು (ಇಆ. V, ೩೪೩-೧೮ ; 1093). ೩. ವರ್ತಕಸಂಘದ ಸದಸ್ಯ : ಸುರಪತಿಯಂತೆ ಸರ್ವವಿಬುಧಾಶ್ರಯರ್ . . . ಅಹಿರಾಜನನ್ತೆ ನಿಖಿಳಕ್ಷಮೆಗಾಸ್ಪದರೆ ನ್ದೊಡೀಗಳಾರ್ದ್ದೊರೆಯರೊ ಬಳ್ಳಿಗಾವೆಯ ಮಹಾನಗರಂಗಳೊಳೀ ಧರಿತ್ರಿಯೊಳ್ (ಎಕ. VII, ಶಿಕಾರಿ. ೧೦೦-೪೩ ; 1129) ; ಶ್ರೀಮತು ಕುಬೇರ ವಂಶಾನ್ವಯರಪ್ಪ ಶ್ರೀಮದಶೇಷ ನಗರಂಗಳು ವರ್ಷಂಪ್ರತಿ ಕೊಡುವನ್ತಾಗಿ (ಸೌಇಇ. IX-1, ೨೯೫-೩೦ ; 1172). [ಸಂ.]

ನಗರಂಜಿತ (ನಾ). [ಛಂದ] ಕೃತಿ ಛಂದಸ್ಸಿಗೆ ಸೇರಿದ ಪಾದದಲ್ಲಿ ಇಪ್ಪತ್ತು ಅಕ್ಷರಗಳನ್ನುಳ್ಳ ಒಂದು ವೃತ್ತ : ರಾಜಚತುಷ್ಟಯವೋಳಿಯೊಳ್ಳಿತರೆ ಪಾವಕಾನಿಲರಲ್ಲಿ ಮತ್ತೋಜೆಯೊಳೊಂದಿ ಹರೀಶ್ವರರಾಗಿರೆ ಮಿಶ್ರಮಂ ದಿನನಾಥರೊಳ್ ರಾಜಿಸುತುಂ ನಿಲೆ ನಾಕಿಗನಿಂದುರು ರೂಢಿವೆತ್ತಿರೆ ಸಂದುದಿಂತೀ ಜಗದೊಳ್ನಗರಂಜಿತಮೆಂಬುದು (ಛಂದೋಂಬು. ೨-೦೭೮).

[ಸಂ.]

ನಗರಕ (ನಾ). = ನಗರಪಾಲಕ : ನಗರರಕ್ಷಣೆಯು ನಗರಪಾಲಕ ಅಥವಾ ನಗರಕನೆಂಬ ಅಧಿಕಾರಿಯ ಕರ್ತವ್ಯವಾಗಿತ್ತು (ಭಾಇಪ್ರ. ೬೬).

[<ಸಂ. ನಾಗರಕ]

ನಗರಜೀವನ (ನಾ). ಪಟ್ಟಣದಲ್ಲಿ ವಾಸಿಸುವಿಕೆ ; ಪಟ್ಟಣದ ಬದುಕು : ಹಳ್ಳಿಯಜೀವನ ನಗರಜೀವನಕ್ಕಿಂತ ಸರಳವಾದುದು (ರೂಢಿ).

[ನಗರ + ಜೀವನ]

ನಗರತ್ತ, ನಗರ್ತ (ನಾ). ಪಟ್ಟಣಗಳಲ್ಲಿ ವ್ಯಾಪಾರಮಾಡುವವನು ; ಒಂದು ವೈಶ್ಯ ಪಂಗಡದವನು ; ನಾಡಸೆಟ್ಟಿ : ಉಗ್ರಕಾಮೇಶ್ವರಕ್ಕ . . . ನಿರಟ್ಟೂರಾಪನ್ನಿರ್ಪ್ಪಳ್ಳಿಯ × × × ಎಲ್ಲಂ ಕಣ್ಡುಗಮಾನಮುಂ ನಗರತ್ತೊರು ಪೆಱ್ಕಿಗದೇಉಗೆ ಕೊಟ್ಟರ್ (ಎಕ. IX, ಹೊಸಕೋ ೮೨-೫ ; ಸು. ೬೫೦); ಉತ್ತನೂರ ಮಡವಳದ ಗಉರಿದೇವಿಯ ಸ್ಥಾನಿಕ ಕೂರಇಕೊಳ ಅಡಪುಗಳೂ ನಗರತ್ತರೂ ಮಂಗರಸಗೆ ಕೊಟ್ಟ ಕೆಱ್ಯ ಕಟ್ಟು ಕೊಡಗಿಯ ಮಾನ್ಯದ ಗದ್ದೆಯ ಶಾಸನ (ಎಕ. X, ಮುಳಬಾ. ೧೩೧-೩ ; 1407). **ನಗರ್ತ** : ಪೈರುಗಳಂ ತಂದು ತುಂಬಿ ಬ್ಯಾರವಂ ಮಾಡುವ ಬೆರಿಯರು ಬಣಜಿಗರು ನಗರ್ತರು (ಸೌಗಂಧಿ. ೦೩೫-೪) ; ತಮಿಳಿನಲ್ಲಿ ನಗರತ್ತಾರ್ ಎಂದು ಒಂದು ಜನಸಮುದಾಯಕ್ಕೆ ಹೆಸರು, ಎಂದರೆ ನಗರದವರು. ಇದು ಕನ್ನಡದಲ್ಲಿ ನಗರ್ತರು ಎಂದು ವಾಡಿಕೆಗೆ ಬಂದಿದೆ. ನಿಜದಲ್ಲಿ ಇದರ ಅರ್ಥ ನಗರದ ಎಂದು. ಆದರೆ ಈಗ ಈ ಪದ ಒಂದು ಅಂಕಿತನಾಮವಾಗಿದೆ(ನಮ್ಮನು. ೧೦೬).

ನಗರ್ತಪೇಟೆ, ನಗರ್ತರ ಪೇಟೆ = ನಗರ್ತರ ಪೇಟೆ ವ್ಯಾಪಾರಿಗಳು ಇರುವ, ಪಟ್ಟಣದ ಒಂದು ಭಾಗ; ವ್ಯಾಪಾರ ನಡೆಯುವ ಸ್ಥಳ; ಪೇಟೆ ಬೀದಿ : ಬೆಂಗಳೂರಿನಲ್ಲಿ ನಗರ್ತಪೇಟೆಯಿದೆ (ರೂಢಿ) ; ಬೆಂಗಳೂರಿನ ನಗರ್ತರ ಪೇಟೆಯಲ್ಲಿ ಸರಾಫ್ ಅಂಗಡಿಗಳವೆ (ರೂಢಿ).

[←ತಮಿ. ನಕರತ್ತ, ನಕರತ್ತು./ಸಂ. ನಗರ]

ನಗರನಿವಾಸಿ (ನಾ). ನಗರದಲ್ಲಿ ವಾಸ ಮಾಡುವವನು ; ಪೌರ : ನಗರವು ಶುಚಿಯಾಗಿರಬೇಕಾದರೆ, ನಗರನಿವಾಸಿಗಳೇ ಹೊಣೆಗಾರರಾಗಬೇಕು (ರೂಢಿ).

[ನಗರ + ನಿವಾಸಿ]

ನಗರನೈರ್ಮಲ್ಯ (ನಾ). ಪಟ್ಟಣದ ಶುಭ್ರತೆ,-ಸ್ವಚ್ಛತೆ : ನಗರನೈರ್ಮಲ್ಯದ ಕೆಲಸವನ್ನು ಮುನಿಸಿಪಾಲಿಟಿಯು ವಹಿಸುತ್ತದೆ (ರೂಢಿ).

[ನಗರ + ನೈರ್ಮಲ್ಯ]

ನಗರಪಾಲಕ (ನಾ). ಪಟ್ಟಣವನ್ನು ಪಾಲಿಸುವವನು ; ಪುರಸಭೆಯ ಸದಸ್ಯ ; ಮುನಿಸಿಪಾಲಿಟಿಯ ಸದಸ್ಯ ; ನಗರರಕ್ಷಕ : ನಗರಪಾಲಕರು ಇತ್ತ ಕಡೆ ಗಮನವನ್ನೇ ಕೊಡುತ್ತಿಲ್ಲ (ನಂಟರು. ೪೪).

[ನಗರ + ಪಾಲಕ]

ನಗರಪಾಲಿಕೆ (ನಾ). ಸ್ಥಳೀಯ ಆಡಳಿತಾಧಿಕಾರವುಳ್ಳ ಪುರಸಭೆ,-ಪೌರಸಂಸ್ಥೆ ; ಮುನಿಸಿಪಾಲಿಟಿ : ಯಥಾಶಕ್ಯವಾಗಿ ಮೂರನೆಯ ಒಂದು ಭಾಗದ ಸದಸ್ಯರು, ಆ ರಾಜ್ಯದಲ್ಲಿಯ ನಗರಪಾಲಿಕೆಗಳ ಜಿಲ್ಲಾಮಂಡಲಿಗಳ . . . ನಿರ್ವಾಚಕಮಂಡಲಗಳಿಂದ ನಿರ್ವಾಚಿತರಾಗತಕ್ಕುದು (ಭಾಧಾನ. ೯೦).

[ನಗರ + ಪಾಲಿಕೆ$_3$]

ನಗರಪಿತೃ (ನಾ). ಪಟ್ಟಣಕ್ಕೆ ತಂದೆಯಂತಿರುವವನು ; ಮುನಿಸಿಪಾಲಿಟಿಯ ಮುಖ್ಯಾಧಿಕಾರಿ : ಪಟ್ಟಣದಲ್ಲಿ ಹರಡುವ ಕಾಲರಾ ಮುಂತಾದ ಸಾಂಕ್ರಾಮಿಕರೋಗಗಳ ಪ್ರತಿಬಂಧಕೋಪಾಯವನ್ನು ನಗರಪಿತೃಗಳು ಮಾಡಿಯೇ ಮಾಡುತ್ತಾರೆ (ರೂಢಿ). [ನಗರ + ಪಿತೃ]

ನಗರಮಹಾಸಭೆ (ನಾ). = ನಗರಪಾಲಿಕೆ : "ಪೌರಸಂಸ್ಥೆ, ನಗರಮಹಾಸಭೆ" (Municipal Corporation. ಪತ್ರಿನಿ. ೨೫). [ನಗರ + ಮಹಾಸಭೆ]

ನಗರಮುಸ್ತೆ (ನಾ). ಒಂದು ಬಗೆಯ ಸಸ್ಯ : (ಪ್ರಾಔಗಿ. ೨೮-೫೩೭).

[ಸಂ. ನಗರಮುಸ್ತಾ]

ನಗರರಾಜ್ಯ (ನಾ). ಒಂದೊಂದು ಪಟ್ಟಣವೇ ಪ್ರತ್ಯೇಕ ರಾಜ್ಯವಾಗಿರುವುದು,-ಸ್ವತಂತ್ರ ಆಡಳಿತವನ್ನು ಹೊಂದಿರುವುದು : ಕ್ರಿ.ಪೂ. ಏಳನೆಯ ಶತಮಾನದ ಹೊತ್ತಿಗೆ ಗ್ರೀಸ್‌ನಲ್ಲಿ . . . ನಗರರಾಜ್ಯಗಳು (City States) ಕಾಣಿಸಿಕೊಳ್ಳಲಾರಂಭಿಸಿದುವು (ಅರಿಕಾ. ೨೦೮).

[ನಗರ + ರಾಜ್ಯ]

ನಗರಲ (ನಾ). ಒಂದು ಊರಿನ ಹೆಸರು ; P ಮೈಸೂರುಜಿಲ್ಲೆಯ ನಂಜನಗೂಡು ತಾಲ್ಲೂಕಿನ ಈಗಿನ ನಗರ್ಲೆ : ಶ್ರೀಮತ್ವೆರ್ಮ್ಮನಂಗಳ್ಗೆ ವಿದ್ಯಾಧರಯ್ಯಂ ಬಿನ್ನಪಂಗೆಯ್ದು ನಗರಲ ನನ್ನಯ್ಯನ ದೇಗುಲಕ್ಕೆ ಮುತ್ತೆರೆಯಂ ಪಡೆದುಕೊಟ್ಟಂ (ಎಕ. III, ನಂಜನ. ೧೬೩-೩ ; 9707). [?]

ನಗರವರ್ಧಕಿ (ನಾ). ಪಟ್ಟಣವನ್ನು ನಿರ್ಮಾಣ ಮಾಡುವವನು ; ಶಿಲ್ಪಿ : ನಗರವನ್ನು ಕಟ್ಟಲು ಬಯಸುವ ನಗರವರ್ಧಕಿಯು ಮೊದಲು ನಗರದ ಸ್ಥಾನವನ್ನು ಶೋಧಿಸುವನು (ಬುದ್ಧಚ. ೪೩). [ನಗರ + ವರ್ಧಕಿ]

ನಗರವಾಸ (ನಾ). ಪಟ್ಟಣದಲ್ಲಿ ವಾಸಿಸುವಿಕೆ,-ಜೀವನ ನಡೆಸುವಿಕೆ : ನಗರವಾಸಕ್ಕಿಂತ ಗ್ರಾಮವಾಸ ಸರಳತರವಾಗಿರುತ್ತದೆ (ರೂಢಿ).

[ನಗರ + ವಾಸ$_3$]

ನಗರವಾಸಿ (ನಾ). ಪಟ್ಟಣದಲ್ಲಿ ವಾಸಿಸುವವನು ; ಪಟ್ಟಣಿಗ : ನಗರವಾಸಿಗಳಿಗಿಂತ ಗ್ರಾಮಿಣರು ಹೆಚ್ಚು ಆರೋಗ್ಯಶಾಲಿಗಳು (ರೂಢಿ).

[ಸಂ. ನಗರವಾಸಿನ್]

ನಗರಶೋಧಕ (ನಾ). ಪಟ್ಟಣದ ಕಾವಲುಗಾರ, - ಪಹರೆಯವನು.

[ನಗರ + ಶೋಧಕ]

ನಗರಶೋಧನ (ನಾ). = ನಗರಶೋಧನೆ. [ನಗರ + ಶೋಧನ]

ನಗರಶೋಧನೆ (ನಾ). ಪಟ್ಟಣದ ಪಹರೆ : ಪಾದರಿಯನಱಸಿ ಪಿಡಿದುರುವಣಿಸಿದರ್ನಗರಶೋಧನೆಯ ತಳವಾಱರಂತೆ ಬನದೊಳ್ಪೆಣ್ಗಳು (ಚೈಮಿಧಾ. ೮-೨೨).

[ನಗರ + ಶೋಧನೆ]

ನಗರಶೋಭನೆ (ನಾ). ಪಟ್ಟಣಕ್ಕೆ ಅಲಂಕಾರವಾಗಿರುವವಳು; ವಾರಸ್ತ್ರೀ; ಗಣಿಕೆ ; P ಈ ಅಭಿಧಾನಕ್ಕೆ ಪಾತ್ರರಾದವರು ಅಸಾಮಾನ್ಯ ರೂಪವತಿಯರಾದುದರಿಂದ ನಗರದಲ್ಲಿ ಯಾರೊಬ್ಬರ ವಿಶಿಷ್ಟ ಸ್ವತ್ತೂ ಆಗದೆ, ಸಾರ್ವಜನಿಕರ ಸ್ವತ್ತಾದವರು. ಹೀಗೆಂದು ಜನಪದ ತೀರ್ಮಾನಿಸುತ್ತಿತ್ತು. ಆದುದರಿಂದ ಇವರಿಗೆ 'ನಾಗರಸ್ತ್ರೀ' ಎಂದೂ ಹೆಸರು. ಈ ವರ್ಗದ 'ಗಣಿಕೆ'ಯರು ಎಲ್ಲರಿಗೂ ಸುಲಭವಾಗಿ ಲಭಿಸುತ್ತಿರಲಿಲ್ಲ. ಇವರು ಬೆಲೆವೆಣ್ಣುಗಳಾದರೂ ಇವರ ಬೆಲೆ ತುಂಬಾ ದುಬಾರಿ, ಉದಾಹರಣೆಗೆ 'ಅಡ್ಡಕಾಸೀ' (ಅರ್ಧಕಾಶೀ) ಎಂಬ ನಗರಶೋಭನೆಗೆ ಒಂದು ರಾತ್ರಿಗೆ ಕಾಶೀನಗರದ ಹುಟ್ಟುವಳಿಯಲ್ಲಿ ಅರ್ಧದಷ್ಟು ತೆರಬೇಕಾಗಿತ್ತು. ಆಮ್ರಪಾಲಿ ಈ ವರ್ಗಕ್ಕೆ ಸೇರಿದವಳು : ತನ್ನ ರಾಜಧಾನಿಯಲ್ಲಿ ಅವಳಂತಹ ನಗರಶೋಭನೆಯಿಲ್ಲವಲ್ಲಾ, ಎಂದು ಬಿಂಬಸಾರನು ಖಿನ್ನನಾದನು (ಹತ್ತುಮು. ೯೯). 'ನಾಗರಸ್ತ್ರೀ' ಪರಾ. [ನಗರ + ಶೋಭನೆ]

ನಗರಶ್ರೇಷ್ಠಿ (ನಾ). ಪಟ್ಟಣದ ಪ್ರಧಾನವ್ಯಕ್ತಿ : ಚಂದ್ರಗುಪ್ತನು ಸಂತುಷ್ಟನಾಗಿ ಚಂದನದಾಸಸೆಟ್ಟಿಗೆ ಸರ್ವನಗರಶ್ರೇಷ್ಠಿಪದವಿಯನ್ನು ಕೊಟ್ಟಿದ್ದಾನೆ (ರಾಜಮು. ೧೦೮). [ನಗರ + ಶ್ರೇಷ್ಠಿ]

ನಗರಸಭೆ (ನಾ). ಸ್ಥಳೀಯ ಆಡಳಿತಾಧಿಕಾರವುಳ್ಳ ಪುರಸಭೆ,-ಪೌರಸಂಸ್ಥೆ ; ಮುನಿಸಿಪಾಲಿಟಿ : ಎಲ್ಲಿಯಾದರು ಕಸರು ಕಡ್ಡಿಯ ಹುಡುಕಿ ತೆಗೆಯಿರಿ ನೋಡುವ ಕೆಸರೂ ಬೇಕಾದಷ್ಟು ನಡೆಯಿರಿ ನಗರಸಭೆಗೇ ತೂರುವ (ನೆಂಮು. ೦೨-೧೮) ; ನಗರಸಭೆ ಮತ್ತು ಕೆಲಸಗಾರರು ಶೀಘ್ರದಲ್ಲಿ ಒಂದು ತಳಹದಿಯ ಮೇಲೆ ಒಪ್ಪಂದಕ್ಕೆ ಒಪ್ಪುವಂತಾಗಲಿ (ಅಪನಾ. ೧೩೪).

[ನಗರ + ಸಭೆ]

ನಗರಸೌಂದರ್ಯ (ನಾ). ಪಟ್ಟಣದ ಅಂದ,-ಶೋಭೆ : ನಗರಸೌಂದರ್ಯವನ್ನೂ ನಾಗರಿಕರು ಇದ್ದ ರೀತಿಯನ್ನೂ ಪ್ರವಾಸಿಗಳು ಬರೆದಿಟ್ಟಿದ್ದಾರೆ (ರೂಢಿ). [ನಗರ + ಸೌಂದರ್ಯ]

ನಗರಾಖ್ಯಾನ (ನಾ). ಪಟ್ಟಣದ ವರ್ಣನೆ : ನಗರಾಖ್ಯಾನಮೆಂಬುದು ನಗರವ್ಯಾವರ್ಣನಂ (ಜಾಪುಂಪು. ೧೨). [ಸಂ.]

ನಗರಾಜ (ನಾ). = ನಗಪತಿ ೧ : ಮಾನಿತನಗರಾಜನತುಳಪುನಹಿಮತೇಜಂ (ಹಮ್ಮೀರ. ೧-೪೩); ಕರೆತಾರೆ ಕಾಮಿನಿ ಕಮಲಜಟಿತನ . . . ನಗರಾಜವೈರಿಯ ಮಗನ ಬೀಗನ (ಕನಕ. ೧೩-೨). [ನಗ$_4$ + ರಾಜ]

ನಗರಾಡಳಿತ (ನಾ). ಪಟ್ಟಣದ ಮೇಲ್ವಿಚಾರಣೆ,-ಆಳ್ವಿಕೆ : ನಗರಾಡಳಿತವು ನಗರಸಭೆಗೆ ಸೇರಿದುದಾಗಿದೆ (ರೂಢಿ). [ನಗರ + ಆಡಳಿತ]

ನಗರಾಧಿಕಾರಿ (ನಾ). ಪಟ್ಟಣದ ಉಸ್ತುವಾರಿ ಮಾಡುವವನು ; ಪುರದ ಮೇಲ್ವಿಚಾರಣೆಯನ್ನು ಮಾಡುವವನು : ಅನಂತರದಲ್ಲಿ ನಗರಾಧಿಕಾರಿಭಾವನೂ, ಆತನ ಹಿಂದೆ ಹಿಂಗಟ್ಟುಮುರಿಯುಳ್ಳ ಪುರುಷನನ್ನು ಹಿಡಿದುಕೊಂಡು ಇಬ್ಬರು ಕಾವಲುಗಾರರೂ ಬರುವರು (ಶಾಕುಂತ. ೭೩-೧).

[ನಗರ + ಅಧಿಕಾರಿ]

ನಗರಿ (ನಾ). = ನಗರ ೧: "ನಗರಿ ಪುಟಭೇದನಂ ಪೂಃ ಪುರಂ ಪತ್ತನಂ ನಿಗಮಂ ಪುರೀ ಪ್ರಜಾಸ್ಥಾನಮಾ ದುರ್ಗಮೆನೆ ನಗರಮೆನೆ ಪಟ್ಟಣಂ" (ಮಂಗರಾ. ೫೬-೩) : ಚರಿಸುವುದು ರಥವೊಂದು ವಾಗೀಶ್ವರನ ಪುರಿಗೆ . . . ಉರಗರಾಜನ

ನಗರಿಗದಱಿಂ ಧರೆಯೊಳಗೆ ಹೆಸರಾದುದಾ ಭೂವ ಶಿರೋರತ್ನಂಗೆ ದಶರಥ ನೆಂಬ ಗುಣನಾಮ (ತೊರರಾ. ೦-೩-೩೦); ನಾಗವೇಣಿ ನಗರಿಗೆ ನಾಂ ಪೋಗಿ ಬರುವೆನೆ (ಶಾಕುಂತ. ೪೪ ಅಡಿಟಿ). [ಸಂ. ನಗರೀ]

ನಗರಿಗ (ನಾ). ಪಟ್ಟಣದಲ್ಲಿ ವಾಸಮಾಡುವವನು; ನಾಗರಿಕ: ನಗರದಿ ಗೂಢದಲ್ಲಿ ನಡೆವ ವೇಳೆಯಲಿ ನಗರಿಗರ ಬಾಳುವೆಯ ಕೆಲವೆರಡು ಅವಸರವ ಕಂಡು (ಸವರಾ. ೫-೨). [ನಗರ + – ಇಗ]

ನಗರಿಪು (ನಾ). = ನಗಪಗೆ: ನಗರಿಪುಗೆ ಚಿಂತೆ ಸಂತಸಮೊಗೆದುದು ರವಿ ರಾಗವಳಿದಂ (ರಾಜಶೇ. ೧೩-೮೦). [ನಗ್ಯ + ರಿಪು]

ನಗರೀಕರಣ (ನಾ). ಪಟ್ಟಣವಾಗಿ ಮಾರ್ಪಡಿಸುವುದು; ಪಟ್ಟಣ ಜೀವನದ ಪ್ರಭಾವವನ್ನು ಬೀರುವುದು: ಜನಪದಜೀವನದ ಮೇಲೆ ನಗರೀಕರಣದ ಪ್ರಭಾವ ಬಿದ್ದಷ್ಟೂ, ಆಧುನಿಕ ವಿದ್ಯಾಭಾಸ್ಯದ ಪರಿಚಯ ಹೆಚ್ಚಿದಷ್ಟೂ ಜನಪದದ ಮೂಲಸೊಗಸು, ದೇಸೀಸೊಗಡು ಕಡಿಮೆ ಯಾಗುತ್ತಾ ಹೋಗುತ್ತದೆ (ಸುವರ್ಣ. ೩೩). [ಸಂ.]

ನಗರು (ಕ್ರಿ). ಏದುಸಿರು ಬಿಡು; ಏದು; ತೇಕು: ಬಿಸಿಲಿನಲ್ಲಿ ಕಟ್ಟಿದ ಎಮ್ಮೆ ನಗರುತ್ತಿದೆ (ರೂಢಿ). [?]

ನಗರೂರ್ (ನಾ). ಒಂದು ಊರಿನ ಹೆಸರು: ನಗರೂರ ಬೆಳ್ಳಿಯರುಂ ಮರವೂರ ವಣ್ಣಾಕರುಂ (ಮೈಆರಿ. ೧೯೨೭, ೦೦೮-೪೪; 726).

[ನಗರ + ಊರ್]

ನಗರೆ$_1$ (ನಾ) ೧. ಒಂದು ಬಗೆಯ ಸುವಾಸನೆಯುಳ್ಳ ಬೇರು,–ಗಡ್ಡೆ; ಭದ್ರಮುಸ್ತೆ; ಕೊನ್ನಾರಿ: ಮೇಲು ಚಂದನಮುಂ ನಗರೆಯುಂ ಹೋಲಿ ಸುವಡೆ ಸಮಾನವಹುದೇ (ಬಸಪು. ೪೯-೩೫); ಅಗರು ಚಂದನ ಪಟ್ಟೆ ರುಲ್ಲಿ ಬಪ್ಪಂಬುಧಿ ನಗರವಾಳುವ ನರಪತಿಗೆ ನಗರೆ ಕಂಬಳಿ ಪೀಲಿಗಳನುಳ್ಳ ನಾಡಿನ ವಿಗಡಮನ್ನೆಯರು ವಾಸಟಿಯೆ (ಕುರಾಸಾಂ. ೦೦-೨೦). ೨. ಒಂದು ಬಗೆಯ ಮರ ಮತ್ತು ಅದರ ಬೀಜ, ಕಾಯಿ, ಹಣ್ಣು: ನಗರೆ[ಪಾಠಾಂ. ರಿ]ಯ ಗೊಟ್ಟೆಯನರೆದಾಖುಗಳಿಕ್ಕಿದ ಹಿಕ್ಕೆ ಸಹಿತಮೆಣ್ಣೆಯೊಳೊಂದಲ್ ಬಗೆದೆಡೆಯೊಳ್ ಧೂಪಮನಿಕ್ಕುಗೆ ತದ್ಗೃಹದಿಂದೆ ಮೂಷಕಂ ಪೊಱಮಡುಗುಂ (ಪಮದ. ೧೬-೮೪); ನಗರೆಯೆಲೆ ಕನಕಪತ್ರಮುಮೊಗನಿಯ ತಿಗುಡಿಂತಿವೆಲ್ಲಮಂ ಕೊಟ್ಟದೊಳಿಕ್ಕುಗೆ ವಾಜಿಗೆ (ಅಶ್ವಶಾ. ೦೦-೪೪); ಹಾಲೆ ಬಿದಿರಿಪ್ಪೆ ಹುಣಿಸಂಕೋಲೆಲಚಿಯ ಬಾಗೆ ನಗರೆ . . . ಬನ್ನಿ ಹೊನ್ನೆಯ ತರುಗಳ್ (ಹಮ್ಮೀರ. ೪-೬೯); ಬೆಳಲು ಬಿಲ್ವತ್ತ . . . ತುಂಬುರ ನಗರೆ ಮುಂತಾದ ಪಣ್ಗಳ ತಂದರಾಳ್ದನ ಬಳಿಗೆ (ಮೋಹತ. ೧೯-೫೬); ಹಾವುವೆ ಕೈಯ ಬೇರು, ನಗರೆಯ ಬೀಜ ಇವಂ ಎಣ್ಣೆಯಲ್ಲಿ ಅಟ್ಟು ಪೂಸಲು ಗಂಡಮಾಲೆಯು ಮಾಣ್ಗುಂ (ವಿವೃವಿ. ೮೦); ನಗರೆ, ದೊಡ್ಡಕಾರೆ, . . . ಒಳ್ಳೆಕಾರೆ (ಮೃಜಿಗಿ. ೬೬-೦೩೩೯). [ದೇ. ೩ ತೆಲು. ನಗಿರ]

ನಗರೆ$_2$ 'ನಕರ$_1$' ನೋ.

ನಗರೆ$_3$ (ನಾ). ಒಂದು ಸಂಖ್ಯೆಯ ಸಂಕೇತ (?): "ವೇಟುವೊಡೆ ಕೇಮಿ ಆರಯೆ ಮುದ್ದಣಂ . . . ಹತ್ತು ದಶಕಂಸ ಕಾರತಯಿ ನಗರೆಯಾಗಿ ತೇಯುಂ . . . ಬೆಟ್ಟು ಪಣವೆನಲು ನೀರಿದೆಯೆನಿಕ್ಕುಂ" (ಮಂಗರಾ. ೦೦೨-೪). [?]

ನಗರೆವಳ್ಳ (ನಾ). (ನಗರ್ಲೆಯಲ್ಲಿ ಹರಿಯುವ) ಒಂದು ಹಳ್ಳದ ಹೆಸರು: ಅನ್ತೆ ಬಂದು ಪಾಲಕೆಱಿಗನೆ ಬಂ ಪುಣಿಸೆಯಿಂ ಅನ್ತೆ ಬನ್ದು ನಗರೆವಳ್ಳದಿ ಮೂಡಣಬೇಲಿಯಿಂ (ಎಕ. III, ನಂಜನ. ೦೩೯-೦೬; 915 ?). 'ನಗರಲ' ಪರಾ. [ನಗರೆ ? + ಪಳ್ಳ]

ನಗರೋಪಕಂಠ (ನಾ). ಪಟ್ಟಣದ ಸಮೀಪ; ಪಟ್ಟಣದ ಹತ್ತಿರದ ಪ್ರದೇಶ.–ನೆರೆಹೊರೆ: ಜೀಯ ಬಲೆಗಳ ತೆಗೆಸು ನಡೆ ನಿರ್ದಾಯದಲಿ ನಿಮ್ಮಡಿಯ ಬೇಟೆಗೆ ರಾಯ ಮೃಗವೈತಂದವಿವೆ ನಗರೋಪಕಂಠದಲಿ (ಕುಪ್ಯಾಅ. ೦೨-೦೫). [ನಗರ + ಉಪಕಂಠ]

ನಗರ್ತ 'ನಗರತ್ತ' ನೋ.

ನಗಲಿಕ (ನಾ) ಮೀನು ಹಿಡಿಯುವವನು; ಬೆಸ್ತ (?): ಅಟಕರಿ, ಬಣ್ಣಗಾರ, ಬಿಳಿಮಗ್ಗ, ದೇವಾಂಗ, ಜಾಡ, ನಗಲಿಕ, ಪಟ್ಟೆಗಾರ, ಸಾಲೆ, ಸೇಣಿಯ (ತುಳುನಾ. ೦೭೩). [< ನಗಲು ? + – ಇಕ]

ನಗಲು, ನಕುಲ$_2$ (ನಾ). ಒಂದು ಬಗೆಯ ಮೀನು: ಬಿಳಿಚ ಚಿಪ್ಪಲು . . . ನಗಲು[ಪಾಠಾಂ. ನರಗ, ನಲಗು] ಹೆಲ್ಲರಂ ಬಂಕುರುಂ ಹಳಲೆ ಕಪ್ಪೆ ಗಳೊಱಲೆ ಬೋಟೆ ಗಿಱಿಲುಗಳೆಂಬ ಹೊಳೆವಳಿಯ ಮೀನ್ಗಳಂ ತವಿಸುತಿಹ ಬೇಡರಂ ನೋಡಿದಂ ಭೂಪಾಲನು (ಹಡಕಾ. ೫-೪೬). ನಕುಲ$_2$: ಬಾಣಾ ವಳಿಯ ತಡಿಕೆಯಲಿ ಹೊಯ್ವೆವು ನಕುಲಜಾತಿಯನು (ಕುಪ್ಯಾಕ. ೨೨-೨೯).

[?]

ನಗವರ (ನಾ). ಶ್ರೇಷ್ಠವಾದ ಪರ್ವತ: ಹಾ ನೃಪಕುಲವಿದಿತಸುವೃತ್ತರಿರಾ ಹಾ ನಗವರಸನ್ನಿಭಚಿತ್ತರಿರಾ (ಜೀವಸಂ. ೨೪-೪೬ ರಗಳೆ). [ನಗ$_4$ + ವರ$_3$]

ನಗವಾಯ್ (ನಾ). ಮೇಲಕ್ಕೆ ಎದ್ದಿರುವ ಪೀಠ: ನಗವಾಯಿಂ ಕುಮುದಂ ಗಳಿಂ ನೆಗೆದ ಜಂಘಾಕಾಂಡದಿಂ ರನ್ನವಟ್ಟಿಗೆಯಿಂ ದಂಡಲತಾವಿಚಿತ್ರ ಮಯ ಪತ್ರಬ್ರಾತದಿಂ ಘಂಟೆಯಿಂ ಬಗೆಯಂ ಬಲ್ಸೆಱಿಗೆಯ್ವ ಪುತ್ತಳಿಗಳಿಂರಂಗ ಸ್ಥಳೀಸ್ತಂಭಮಾವಗಮೊಪ್ಪುತ್ತಿರೆ ರಂಜಿಕುಂ ಹರಿಹರಶ್ರೀದೇವತಾ ಮಂದಿರಂ (ಎಕ. XI, ದಾವಣ. ೨೫-೭೬; 1224); "ನಗವಾಯ್ ಇತ್ಯಾದಿ ಕಟ್ಟಡಕ್ಕೆ ಸಂಬಂಧಿಸಿದ ಸಂಕೇತ ಶಬ್ದಗಳು" (ಶಾಪಮಂ. ೨೯೫ ಟಿಪ್ಪಣಿ). [?]

ನಗವೃಂದ (ನಾ). ಪರ್ವತಗಳ ಸಮೂಹ,–ಗುಂಪು. 'ನಗವೃಂದಾಧಿಪ' ಪರಾ. [ನಗ$_4$ + ವೃಂದ]

ನಗವೃಂದಾಧಿಪ (ನಾ). = ನಗಪತಿ ೧: ನಗವೃಂದಾಧಿಪ ಕನ್ಯಕಾಧಿಪತಿಗಾದಾ ತುತ್ತುತುತ್ತಿಂಗೆ ಮೆಲ್ಲಗೆ ಕೂರ್ತರ್ಪಿಸುತಿರ್ದದೊಂದು ದಿವಸಂ (ಉದ್ಭಟ. ೦೨-೦೯). [ನಗವೃಂದ + ಅಧಿಪ]

ನಗವೆಣ್ಣಿ 'ನಗೆವೆಣ್' ನೋ.

ನಗವೈರಿ (ನಾ). ಪರ್ವತಗಳಿಗೆ ಶತ್ರುವಾದವನು,–ಇಂದ್ರ: ಭೂರುಹ ಮಿದು ದಿವ್ಯಂ ಬಿಡಬಾರದೆನಲ್ ದೇವ ರಾಜ್ಯಕಂಠಿಕೆ ತನಗಿಂ ಬಾರದು ಬರ್ಕುಂ ತನ್ನಗವೈರಿಯ ಕಂಠಕ್ಕೆ ಮತ್ಸುದರ್ಶನಚಕ್ರಂ (ಜಗವಿ. ೦೩-೩೨).

[ನಗ$_4$ + ವೈರಿ]

ನಗಶರ (ನಾ). ಬೆಟ್ಟಗಳನ್ನು ಸುರಿಸುವ ಬಾಣ: ನಗಶರವನ್ನು ಕವಿಸಿದ ಚಿನುಮಯಾತ್ಮಕಳಾದ ದೇವಿಯ ತನುವಿನ ಮೇಲುರುಳಿದವು ಮಹಪರ್ವತ ಗಳು (ದೇವೀಮ. ೦೬೦-೦೦). [ಸಂ.]

ನಗಶಿಖರ (ನಾ). ಬೆಟ್ಟದ ಅಗ್ರಭಾಗ,–ತುದಿ: ನಗಶಿಖರಾಗ್ರದಿಂ ಸರಭಸಂ ನೆಗೆವಚ್ಚರಿಯುನ್ನತಸ್ತನಂ ಮಿಗೆ ಮುಗಿಲಂ ಪಳಂಚಲೆದು ಪೊಯ್ಯೆ . . . ಮೇಣದು ಶೋಕರಾವಮಂ ನೆಗಳ್ದುದೊ ತಳ್ವದೆಂಬಿನಮಳುಂಬಮದೊಪ್ಪುಗು ಮಂಬುದಸ್ವನಂ (ಶಬಶಂ. ೦-೪೭). [ನಗ$_4$ + ಶಿಖರ]

ನಗಸಾನು (ನಾ). ಬೆಟ್ಟದ ತಪ್ಪಲು,–ಇಳಿಜಾರು ಪ್ರದೇಶ: ನಗಸಾನು ತಲಂ ಮನುಜರ್ಗಗೋಚರಂ ಕಟ್ಟಿ ಗುಡಿಯನಿರ್ದಪರಾರ್ (ಪಂರಾಮಾ. ೦೦-೫೦); ಬಗಿದು ಪುಗಲ್ಕರಿದೆಲ್ಲಿಯುಮೊಗೆದ ಮರಂ ಪೊದಱು ಬಳ್ಳಿ ಗಿಡು ವೆಂಬಿವಱಿಂ ಮಿಗಿಲೆನಿಪ ಬಲ್ಲೆ ನಗಸಾನುಗಳೊಳದಂತಾವ ಮೆಯ್ಯೊಳಂ ಪುದಿದಿರ್ಕುಂ (ಕಾಪ್ಯಾವ. ೯೭). [ನಗ$_4$ + ಸಾನು]

ನಗಸಾರ 'ನಗುಸಾರ' ನೋ.

ನಗಸುತಾವರ (ನಾ). ಪಾರ್ವತಿಯ ಪತಿ; ಈಶ್ವರ; ಶಿವ: ನಗಸುತಾವರ ನೊಲುಮೆ ನೆಟ್ಟನೆ ಸೊಗಸಿಹುದು ನಿನ್ನಗ್ರಜಗೆ (ತೊರರಾ. ೬-೩-೩೦). [ಸಂ.]

ನಗಸುತೆ (ನಾ). ಪರ್ವತರಾಜನ ಮಗಳು; ಪಾರ್ವತಿ: ಕರೆತಾರೆ ಕಾಮಿನಿ ಕಮಲಜಪಿತನ, . . ನಗಸುತಾಪತಿಕಾಯದೊಳು ಮೂಡಿಹನ (ಕನಕ. ೯೩-೨). [ನಗ$_4$ + ಸುತೆ]

ನಗಹರ (ನಾ). ೧. = ನಗವೈರಿ : ನಗಹರನ ಗಣಿಕಾಶಿರೋಮಣಿ ಮಿಗೆ ದಯಾಮತಿಯಿಂದೆ ಬೋಧಿಸ ಬಗೆದು ತಾನಿಂತೆಂದಳು (ಬಸಪು. ೪೦-೫). ೨. [ಛಂದ] ಇಂದ್ರಗಣ; ನಗಣ : ನಗಹರೇಂದುಗಣತ್ರಿತಯಂಗಳ ಮುಂದಗಲದೀಶ್ವರನಿರ್ದೊಡೆ . . . ಅಭ್ಯುದಯಂ (ಛಂದೋಂಬು. ೨-೦೪೦).

[ನಗ$_4$ + ಹರ]

ನಗಾಗ್ರ (ನಾ). ಬೆಟ್ಟದ ತುದಿ,-ಶಿಖರ : ಕ್ಷಿತಿಜಂ ಹತ್ತಱೊಳಿನಜಂ ಚತುರ್ಥದೊಳ್ . . . ಇರೆ ನಗಾಗ್ರದೆ ಮಡಿಗುಂ (ಜಾತಕ. ೨೩-೪); ಬಂದು ತಪೋನಿವೇಶನಮನೀಕ್ಷಿಸಿ ಬರ್ಪ ನಿದಾಘಕಾಲದೊಳ್ ಸಂದ ನಗಾಗ್ರದಲಿ ನಿಲವೇಳ್ಕುಮೆನುತ್ತಮೆ ನಿಂದು (ಗಿರಿಕ. ೯-೨)

[ನಗ$_4$ + ಅಗ್ರ$_1$]

ನಗಾಗ್ರಣಿ (ನಾ). ಪರ್ವತಗಳಲ್ಲಿ ಶ್ರೇಷ್ಠವಾದುದಂ : ಆಗ್ರಹಮಂ ಬಿಸುಟಿದುವೆ ನಗಾಗ್ರಣಿಯೊಂದಿದನೆ ನೋಡೆ ಬಲಗೊಳ್ವುವು ನಿರ್ವ್ಯಗ್ರತೆಯಿಂ ಚಂದ್ರಾದಿತ್ಯಗ್ರಹನಕ್ಷತ್ರತಾರಕಾನಿಕರಂಗಳ್ (ಆದಿಪು. ೨-೩೦).

[ನಗ$_4$ + ಅಗ್ರಣಿ]

ನಗಾಟ (ನಾ). ಅತಿಶಯಂವಾಗಿ ನಗುವಿಕೆ : ಅವರ ನಗಾಟದ ಗದ್ದಲವನ್ನು ಕೇಳಿ ಮಗು ಎದ್ದುಬಿಟ್ಟಿತು (ರೂಢಿ). 'ಕೂಗಾಟ' ಪರಾ.

[ನಗು$_1$ + ಆಟ]

ನಗಾಡು (ಕ್ರಿ). ಅತಿಶಯಂವಾಗಿ ನಗು,-ನಗೆಯಾಡು : ಮಗುವು ತಟ್ಟೆಯೊಳಗೆ ತನ್ನ ಪ್ರತಿಬಿಂಬವನ್ನು ನೋಡಿ . . . ಚಪ್ಪಾಳೆ ಹೊಡೆಯುತ್ತಾ ನಗಾಡಿತು (ಕೂಗ್ಲು. ೩೭); ಚಂದ್ರಾಪೀಡನು . . . ಆಡಿದ ಮಾತುಗಳನ್ನು ಕೇಳಿ ಅಲ್ಲಿ ನೆರದಿದ್ದ ಹೆಮ್ಮಕ್ಕಳೆಲ್ಲರು ಗೊಳ್ಳನೆ ನಗಾಡಿದರು (ನಾಗಶಾ. ೪೫); ಶೀಲೆ ನಗಾಡಿದಳು (ದೇಪಶಾ. ೯೭); ಎಳೆಯನೂ ನಗಾಡುತ್ತಾ . . . ಕಾದು ನಿಂತನು (ಒಡ್ಡಿಯು. ೫). 'ಕೂಗಾಡು' ಪರಾ. [ನಗು$_1$ + ಆಡು$_1$]

ನಗಾತ್ಮಜೆ (ನಾ). = ನಗಜಾತೆ. 'ನಗಾತ್ಮಜೇಶ್ವರ' ಪರಾ.

[ನಗ$_4$ + ಆತ್ಮಜೆ]

ನಗಾತ್ಮಜೇಶ್ವರ (ನಾ). ಪಾರ್ವತಿಗೆ ಪತಿಯಾದವನು; ಶಿವ : ದೇವ ಮಹೇಶ . . . ಸದ್ದೇವ ಮದೀಶದೇವ ಗರಳಾಶನದೇವ ನಗಾತ್ಮಜೇಶ್ವರಾ (ಕಬಶಂ. ೫-೨೦). [ಸಂ.]

ನಗಾಧೀಶ್ವರ (ನಾ). ಪರ್ವತಗಳಿಗೆ ಒಡೆಯನಾದವನು ; ಪರ್ವತರಾಜ; ಹಿಮವಂತ : ಪರಭೂಪಾಲವಿಶಾಲಮೌಳಿಮಣಿಸಂಘಾತಪ್ರಭಾಪುಂಜ ವಿಸ್ತರಪಾದಂ . . . ಪ್ರಚಂಡಭುಜನೊಪ್ಪರ್ವಂ ನಗಾಧೀಶ್ವರಂ (ಗಿರಿಕ. ೨-೦೦೩). [ನಗ$_4$ + ಅಧೀಶ್ವರ]

ನಗಾಯತ (ನಾ). ಪರ್ವತದಂತೆ ಎತ್ತರನಾದವನು ; ಪರ್ವತಸದೃಶನಾದವನು : ಆಯುಧವ ತನ್ನವರಿಗಿತ್ತು ನಗಾಯ [ಪಾಶಾಂ. ಗಾಯಿ, ಗಾಯು, ಘಾಯ, ಘಾಯಿ]ತನು ಮಣಿಖಚಿತಕನಕದ ಸಾಯಕವನಂಘ್ರಿಗೆ ಸಮರ್ಪಿಸಿ ಜಾಡಿದನು ಶಿರವ (ತೊರವಿ. ೬-೩-೨೨). [ನಗ$_4$ + ಆಯತ$_4$]

ನಗಾರಖಾನೆ 'ನಗಾರ್ಖಾನೆ' ನೋ.

ನಗಾರಿ$_1$ (ನಾ).=ನಗವೈರಿ : ತ್ರಿದಶಪತಿ ಪಾರಿಜಾತಪ್ರದನಾಗದೊಡಾಧಿಪತ್ಯ ಸವನಮದಿನ್ನಾಗದು ತನ್ನಗಾರಿಗಾಗಿಪ್ಪುದು ಧಾರಾಖಡ್ಗಸವನಮಂ ಮತ್ಪಡ್ಗಂ (ಜಗವಿ. ೦೩-೩೦). [ನಗ$_4$ + ಅರಿ$_6$]

ನಗಾರಿ$_2$, ನಕರ$_2$, ನಗಾರೆ (ನಾ). ಒಂದು ಬಗೆಯ ದೊಡ್ಡ ಚರ್ಮವಾದ್ಯ ; ಭೇರಿ: ಹೂಡೀ ನಗಾರಿ ಮೇಲೆ ಕೈಯ ಘಡಘಡ ಹೊಡೀ ನಗಾರಿ ಮೇಲೆ ಕೈಯ (ಪುರಂದ. ೨-೦೦೪ ಪಲ್ಲವಿ); ನಗಾರಿಯಂತೆಯು ಧ್ವನಿಯುಳ್ಳ ಕರ್ಣಗಳು (ಸಾಗಂಧಿ. ೨೬೯); ಅಧಿಕವಾಗಿ ತಮ್ಮ ಸಂಸ್ಥಾನದ ಪದ್ಧತಿ ಮೇರೆಗೆ ನಗಾರಿ ನವಪತ್ತುಗಳನ್ನು ಸಹ ಕೊಟ್ಟು . . . ಕಳುಹಿಸಿ ಕೊಟ್ಟರು (ಜಾಮವಂ. ೦೩೬); ತಮ್ಮ ಸೀಮೆಯ ಪದ್ಧತಿಯ ಮೇರೆಗೆ ನಗಾರಿ ನೌಬತ್ತುಗಳನ್ನೂ ಇವರು ಕಳುಹಿಸಿಕೊಟ್ಟದ್ದು (ಮುಜಾವಂ. I, ೦೪೪); ಎನ್ನೆದೆಯೂ ಮೊರೆವ ನಗಾರಿ ! (ಶ್ರೀಂಧಪ್ರ. ೫೬-೬); ಹೂಣರು ಮಕ್ಕಳ ಚೆಂಡಾಟ ಮಾಡಿ. ಹೆಂಗಸರ ಬೆನ್ನಿನ ಮೇಲೆ ನಗಾರಿ ಬಾರಿಸಿದಾಗ ಭಾರತೀಯರು ಎಚ್ಚರಾದರು (ಭಾರತಿ. ೧೩೮); ಅವರು ಯುದ್ಧಕ್ಕೆ ಹೋಗುವಾಗ ನಗಾರಿಗಳನ್ನು ಬಾರಿಸುತ್ತ ಹೋಗುವರು (ಕರ್ಣಾಅ. ೬೦); ನಗಾರಿಯ ಧ್ವನಿ ಮೊಳಗಿತು (ಭಾಗಅ. ೧೮). **ನಕರ$_2$:** ಬುಂದಿಯ ಅರಸರಿಗೆ ತಮ್ಮ ನಕರವನ್ನು ರಾಜಧಾನಿಯ ಬೀದಿಗಳಲ್ಲಿ ಲಾಲ್‌ದರವಾಜನವರೆಗೆ ಹೊಡಿಸಲು ಅಡ್ಡಿಯಿರಬಾರದು (ಅಕ್ಬರ. ೬೦). **ನಗಾರೆ:** ಹೊಟ್ಟೆಯೂದಿಕೊಂಡು ನಗಾರೆಯಂತಾಗಿದೆ (ಪುನರ್ಮಿ. ೧೫೬).

ನಗಾರಿಯ ಬಸವ=ನಗಾರಿಗಳನ್ನು ಹೇರುವ ಬಸವ,-ಹೊರುವ ಎತ್ತು : ಸಾಲ್ಗುಡಿಗಳು, ಧ್ವಜಗಳು, ನಗಾರಿಯ ಬಸವಗಳು (ಬಿರುಗಂ. ೨೬-೦೩).

[← ಅರ. ನಕಾರಾ, ನಕ್ಕಾರಹ್; ಪಾರ. ನಕ್ಕಾರಾ; ಹಿಂ. ನಕಾರಾ, ನಕ್ಕಾರಾ; ಮರಾ. ನಗಾರಾ]

ನಗಾರೆ 'ನಗರಿ$_2$' ನೋ.

ನಗಾರ್ಖಾನೆ, ನಗಾರಖಾನೆ (ನಾ). ನಗಾರಿ, ನೌಬತ್ತು ಮೊದಲಾದ ವಾದ್ಯಗಳನ್ನು ಇಡುವ ಸ್ಥಳ ; ನಗಾರಿ ಮೊದಲಾದ ವಾದ್ಯಗಳನ್ನು ಬಾಜಿಸುವ ಸ್ಥಳ : ತೇರ ಬಯಲಲ್ಲಿ ಎದುರು-ಬದುರಾಗಿ ಕಟ್ಟಿದ ನಗಾರ್‌ಖಾನೆಗಳ ಮೇಲ್ನೆಲೆಗಳಲ್ಲಿದ್ದ ಪಾರ್ವತಿ-ಪರಮೇಶ್ವರರ ಬಣ್ಣದ ಪ್ರತಿಮೆಗಳು, ನೋಡುವವರನ್ನು ನಿಂತಲ್ಲಿಯೆ ನಿಲ್ಲಿಸುತ್ತಿವೆ (ಜನಜೀ. ೦೪೨). **ನಗಾರಖಾನೆ:** ಈ ಇಮಾರತಿಯು ಸ್ವತಂತ್ರವಾಗಿರದೆ ಬೀಳುವ ಸ್ಥಿತಿಯಲ್ಲಿರುವ ಒಂದು ನಗಾರಖಾನೆಯಾಗಿ ಇರುತ್ತದೆ (ವಿರ್ಮ. ೨೨).

[← ಮರಾ. ನಗಾರ್‌ಖಾನಾ; ಹಿಂ. ನಕ್ಕಾರ್‌ಖಾನಾ]

ನಗಾರ್ಚನೆ (ನಾ). = ನಗಯಜ್ಞ : ತನತನಗೊಲವಿಂ ಕೈಗೆಯ್ವ ನಗಾರ್ಚನ ಪರಿಕರಂಗಳಂ ನೆರವುವ ಗೋಧನಮನಲಂಕರಿಸುವ ಘೋಷನಿವಾಸಿಗಳಿಂದ ಮಾಯ್ತು ಕಳಕಳನಿನದಂ (ಜಗವಿ. ೪-೮೦). [ನಗ$_4$ + ಅರ್ಚನೆ]

ನಗಾರ್ಯ (ನಾ). ಗೌರವಾರ್ಹನಾದ ವ್ಯಕ್ತಿ : "ಠಕ್ಕುರ = ನಗಾರ್ಯರುಂ (ಠಕ್ಕುರರು)" (ನೀತಿವಾ. ೨೬-೪೨). [ನಗ ? + ಆರ್ಯ]

ನಗಾಹಿತ (ನಾ). = ನಗವೈರಿ : ನಿಡುಗಳಿಲೆಯ ಮೊನೆಯುರ್ಚಿದ ಜಡಧರ ಮೆಸೆದುದು ನಗಾಹಿತ ಪ್ರಣಧಿಯಿದೆಂದರ್ದತಿರೋಷದಿನಾ ಗಿರಿ ತೊಡರ್ಚಿ ಪಿಡಿದುಗ್ರಶೂಲದೊಳ್ ತೋಱುವವೋಲ್ (ಶಬಶಂ. ೩-೩೭).

[ನಗ$_4$ + ಅಹಿತ]

ನಗಿಸು (ಕ್ರಿ). ೧. ನಗುವಂತೆ ಮಾಡು ; ಹರ್ಷಗೊಳ್ಳುವಂತೆ ಮಾಡು ; ವಿನೋದಗೊಳಿಸು : ಪಗರಣದೊಳುಟಿದ ಮೂಱುಂ ನಗಿಸುಗುಮಪ್ಪುದಱಿನಲ್ಲಿಗಂತವದೋಷಂ (ಶವಿರಾ. ೦-೬೮); ಆಡಿಯುಂ ಪಾಡಿಯುಂ ನಗಿಸಿಯುಂ (ಪಡ್ಯಾರಾ. ೦೦೮-೦೫); ಬೇಡದುದಂ ಬೇಡುವ ಪುಡಿಯಾಡುವ ತೊದಳೊದವೆ ನುಡಿವ ನಗಿಸುವ ಬಾಲಕ್ರೀಡೆ ಮುರಾರಿಯ ಬಾಲಕ್ರೀಡೆಯನನುಕರಿಪುದಾದುದರಿಕೇಸರಿಯಾ (ಪಂಪಭಾ. ೨-೭); ನಗಿಸಲ್ ನುಡಿಸಲು ಮಜಿತನ ನಗೆಗಣ್ಗಳ ಚೆಲ್ವನೊಸೆದು ನೋಡಲ್ ಪಡೆಯಲ್ ನಗೆಮೊಗದ ನೀಱೊಯರ್ [ನಗು]ಮೊಗದಿಂದಂ ಪಕ್ಕುಗಾಣದಗಲಗಲಿರ್ವರ್ (ಅಜಪು. ೫-೧೨); ದೇವನೊಳ್ಳಿದನೆಂದು ಮುಯ್ಯಾನಲು ಬೇಡಾ . . . ಅಳಿಸುವ ನಗಿಸುವನೊಳ್ಳಿದನೆ (ಬಸವ. ೦೪೮); ಸಂಪಗೆಯ ನನೆಗೆಯ್ದು ಬಟಿಕೊಯ್ಯಗೆ ಜಾಱುವ ತುಂಬಿ ನಗಿಸಿದುದು ಮಲ್ಲಿಗೆಯಂ (ಕಬ್ಬಿಳಾ. ೫೮); ಅಳುವವರ ನಗಿಸುವುದು ನಗುವರನಳಿಸುವುದು ಗೆಲಿದವರ ಸೋಲಿಸಿ ಗೆಲಿಸುವುದು ಸೋತವರನೀ ವಿಪರೀತಗತಿ ವಿಧಿಗೆ (ಕುಮಾಕ. ೦೨-೩); ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ಮಿಗೆ ನೀನು ಬೇಡಿಕೊಳ್ಳೊ (ಪುಂಕುಕ. ೯೦೭). ೨. ಪರಿಹಾಸ ಮಾಡಿಸು ; ಅಪಹಾಸ್ಯ ಮಾಡಿಸು ; ಅವಮಾನ

ಗೊಳಿಸು : ನಿನಗೊರ್ವಂಗಲ್ಲವಸ್ಥಾಂತರಮಮರಜನಕ್ಕೆಲ್ಲಮಿಾ ಪಾಂಗೆ ಕಾರುಣ್ಯನಿನಾದಂ ನಿನ್ನನಾದಂ ನಗಿಸುಗುಂ (ಆದಿಪು. ೩-೬) ; ಎನ್ನಂ ಲೆಕ್ಕಿಸದಿರ್ದುಂ ಕಡೆಗಿನ್ನೂ ಮಗಳೇ ನಿನ್ನಾತಂ ಸರ್ವೇಶನೇ ಜಗದೊಳ್ ನಗಿಸದೆ ಬಿಟ್ಟೊಡೆ ದಕ್ಷನೆ ನಾನೆಂದತಿ ಘೂರ್ಮಿಸಿದನು (ವೀರೇಶ. ೦-೬೪). ೩. ಪರಿಹಾಸ ಮಾಡಿಸಿಕೊಳ್ಳು ; ನಗೆಗೀಡಾಗು : ವಿನಯಮುಮೆಂಕ ಮುಮಪ್ಪುದು ಸನಾಭಿಗಳ್ ಸಂಗತಂಗಳಪ್ಪೊಡೆ ಪೆಸರ್ಗೊಂಡನಿತಱೊಳೆನ್ನಂ ಸೈರಿಸನೆನೆ ಭರತಂಗೆಱಗಿ ಲೋಕದಿಂ ನಗಿಸುವೆನೇ (ಆದಿಪು. ೧೪-೭೭).

ನಗಿಸಿಕೊಳ್, ನಗಿಸಿಕೊಳ್ಳು=ಅಪಹಾಸ್ಯಮಾಡಿಸಿಕೊಳ್ಳು; ಅವಮಾನ ಮಾಡಿಸಿಕೊಳ್ಳು : ಗುರುಗಳಂ ಕುಲವೃದ್ಧರನಾಜಿಗುಯ್ದು ಕೆಮ್ಮಗೆ ಪಗೆ ವಾಡಿಯೊಳ್ ನಗಿಸಿಕೊಂಡೊಡೆ ಬಂದವುದೇಂ ಸುಯೋಧನಾ (ಪಂಪಭಾ. ೧೦-೧೬) ; ಜೋವದ ದೇವತೆಗಳುಮಂ ಸೇವಿಪನೆಂದಂದು ನಗಿಸಿಕೊಳ್ಳನೆ ತನ್ನಂ (ಸಮಪ. ೯-೯೭) ; ಕಯ್ಯಲುಂಡುಂ ಬತ್ತಲಿರ್ದುಂ ನಗಿಸಿಕೊಂಡೆ ಅಯ್ಯಲಾನಿಂತು ನಾಯುಣ್ಣದ ವಿಧಿಯನುಂಡೆ ಏನೆಂಬೆನೀಶ್ವರಾ ಕಾವುದೆನ್ನಂ ದೇವ (ವಾಗೀರ. ದೇ. ೨೬೦-೩) ; ನಾಲ್ಕುಜನರಿಂದ ನಗಿಸಿಕೊಳ್ಳುವಂತೆ ಬಾಳಬಾರದು (ರೂಢಿ). ನಗಿಸುವ ವಾಯು = ನಗುವನ್ನುಂಟುಮಾಡುವ ಗುಣವುಳ್ಳ ಒಂದು ಬಗೆಯ ವಾಯು : ಸಾರಜನಕ, ಆಮ್ಲಜನಕಗಳ ಸಂಯೋಗದಿಂದ 'ನಗಿಸುವ ವಾಯು' (Laughing gas-Nitrous oxide) ಉತ್ಪನ್ನವಾಗುವುದು (ವಿಜ್ಞಾಕೋ. ೬೮). ನಗಿಸುವ ಹೊಗೆ = ನಗಿಸುವ ವಾಯು : ನಗಿಸುವ ಹೊಗೆ (ಲಾಘಿಂಗಗ್ಯಾಸವು) – ಇದು ನಿರ್ಗಂಧ ವಾಯುವಿನ ಒಂದು ಬಗೆಯ ಆಮ್ಲಜವಿಕಾರವು (ಮುಂಬಯಿ. ೬-೪೧).

[ನಗು$_1$ + – ಇಸು$_3$]

ನಗು$_1$ (ಕ್ರಿ). ನಕ್ಕು$_2$ (ಭೂತನ್ನೂ) ೧. ಸಂತೋಷ, ಹಾಸ್ಯ ಅಥವಾ ಅಪಹಾಸ್ಯ ಮುಂತಾದುವುಗಳನ್ನು ಸಶಬ್ದವಾಗಿ ಮುಖವಿಕಾರದೊಡನೆ ತೋರ್ಪಡಿಸು, – ವ್ಯಕ್ತಮಾಡು : "ನಗು – ಹಸನೇ" (ಶಮಭಾ) ; ಕಾಣದಾ ರೂಪಂ ಕಂಡು ನಕ್ಕು ದುಃಖಮಂ ಮಱೆದೊಳ್ (ವಡ್ಡಾರಾ. ೧೧೯-೨೦) ; ದಿವಿಜಾಶ್ವತ್ಥಾಮದೊಳೀ ಭುವನಂಗಳ್ ನಡುಗೆ ಶಿಶು ಸರಂಗೆಯ್ದೊಡೆ ನಕ್ಕವಯವದೆ ಕುಂಭಸಂಭವನಿವನಶ್ವತ್ಥಾಮನೆಂದು ಪೆಸರಿಡೆ ನೆಗೆದ್ದಂ (ಪಂಪಭಾ. ೨-೪೪) ; ವಿದೂಷಕನಟುತ್ತುಂ ಬಂದ ತನ್ನಂ ನಗುತ್ತುಂ ಪೋಪಂತೆ ಸಂತೋಷಂ ಮಾಡಿಸಿದುದರ್ಕೊಡಂಬಟ್ಟು ಚಾರುಹಾಸಿನಿ ನಿಜ ನಿವಾಸಕ್ಕೆ ಪೋದಳ್ (ಗದಾಯು. ೨-೦೦ ಪ) ; ದಯಾಮಿತ್ರಸೆಟ್ಟಿ ಬಾಯ ತಂಬುಲಂ ಸೂಸೆ ಕಳಕಳಿಸಿ ನಕ್ಕು (ಧರ್ಮಾಮೃ. ೧-೧೭೨) ; ತರುಣಿಯ ಮುಖ ಚಂದ್ರಮನಂ ತಳ್ವದೆ ನೋಡಿ ನಕ್ಕನುದ್ಭಟದೇವಂ (ಉದ್ಭಟ. ೧೧-೨೦) ; ಉಂಡು ನಗದಿಹ ಮೋಱೆ ಅದು ಕಹಿಯ ಸೋರೆ (ಕನಕ.ಪಂ-೪). ೨. ತಿರಸ್ಕಾರವನ್ನು ಸೂಚಿಸು ; ಅಪಹಾಸ್ಯಮಾಡು ; ಅವಮಾನಗೊಳಿಸು : ನಾನುಮೆರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ (ಪಂಪಭಾ. ೧-೮೨) ; ಮುಂ ತೊಟ್ಟಂಬನದನುಗಿದು ಕುಂದಿಸಿದಂ ಭಯದಿಂ ಕರ್ಣನೆಂದು ಲೋಕಂ ನಗದೇ (ಪಂಪಭಾ. ೧೨-೦೯೯) ; ಮತ್ತಿದಱರ್ಕಲದೊಳ್ ಸೆಣಸುತ್ತುಂ ದಿವಮಂ ನಗತ್ತುಮಪಹಾಸ್ಯಂಗೆಯ್ಯುತ್ತುಂ ಸೊಗಯಿಪುವು . . . ಪೇಚರೇಂದ್ರಪುರುಂಗಳ್ (ಶಾಂತಿಪು. ೩-೨) ; ನಗದಂತು ಜಗಂ ಗುರುಗಳ್ ಪೊಗಟ್ಟುಂತನುಜೀವಿಗಳ್ಗೆ ಶುಭಮಪ್ಪಂತು . . ಆಗಣಿತಗುಣನೆನಿಸಿ ನಿಲ್ವುದಾಕಲ್ಪಾಂತಂ (ಕಾಂಪು. ೫೭೬) ; ಲೋಕಪಾವನವೆನಿಸಿ ಹರಿವ ಕಾವೇರಿಯಿಂ ನಾಕಮಂ ನಗುವ ನಗರಂಗಳಿಪ್ಪೋಜೆಯಿಂ (ತಿರುಕ. ದೇ. ೨-೪) ; ಲೋಕಂ ನಗುವ ಮಾತನಾಡದಿರಿ (ಸಿದ್ಧರಾ. ೧-೪೦) ; ಕುಣಿಸಿ ನಗನೇ ಕವಿ ಕುಮಾರವ್ಯಾಸನುಳಿದವರ (ಕುವ್ಯಾಆ. ೧-೦೬) ; ಕರಿಗಳನು ಮುಱಿದಿಡುವ ಸಿಂಹಕೆ ನರಿಗಳಿದಿರೇ ತಾನು ನಿಮಗಂ ತರವೆ ಸಾಕಂತಿರಲಿ ಕಂಡವರೆಲ್ಲ ನಗದಿಹರೆ (ನಳಚ. ೨-೦೮). ೩. (ಅಲಂ) (ಹೂವಿಗೆ ಸಂಬಂಧಿಸಿದಂತೆ) ತೆರೆದುಕೊಳ್ಳು; ಅರಳು: ಮಿಕ್ಕು ಮಾಸುವ ಬೆಳಗು ಕೆಂಪಡರ್ದ ಮುಗಿಲು ತಲೆಯಿಕ್ಕುವಬುಜಂ ನಗುವ ಕುಮುದ . . . ನಲಿವ ಜಾರೆಯರು ಸುಜೆಯಲಿ ರಂಜಿಸಿದರು (ಸೋಮಚಿ. ೨-೦೦) ; ಮಲ್ಲಿಗೆ ಬಾಯ್ಬಿಟ್ಟು ನಗುತಾವೆ (ಜಗೀತ. ೦೨೯).

ನಗು ನಗು (ದ್ವಿರುಕ್ತಿ) : ನಗುನಗುವ ಕಣ್ಗಳಿಗೆ ಹೊಗೆಯನೂದಲು ಬೇಡ (ಮಂಕುಶ. ೯೫೩) ; ಯಾವಾಗಲೂ ನಗುನಗುತ್ತಿದ್ದ ಹುಡುಗಿ ಯಾಕೋ ಮಂಕಾದಳು (ರೂಢಿ). ನಕ್ಕಾಡು = ಹಾಸ್ಯದಿಂದ ವಿಶೇಷವಾಗಿ ನಗು : ಸಿಕ್ಕೆಲ್ಲ ತೀರ್ದುದಿನ್ನೆಮ್ಮ ಪಟ್ಟಣ ಸಮೀಪಕ್ಕೆ ತೋಱುತು ಕಾಣ್ಬೆವೆಂದು ನಕ್ಕಾಡಿ ಕೈಹೊಯ್ದು ಸರಸವಾಡುತ ಕಾಲನಿಕ್ಕುತಿದ್ದುದು ರಾಜಕಟಕ (ಧರಶ. ೫೩-೨೦) ; ಸೋಗಿಲೊಳ್ ನಕ್ಕಾಡುತುಂ ಮುದ್ದು ಗರೆವುತುಂ ಲೀಲೆಯಿಂ ಮಕ್ಕಳಾಟಕೆಯೊಳೆಸೆದಂ ಜಗವನಾಡಿಸುವ ಸೂತ್ರಧಾರಂ ಕ್ರಮದೊಳು (ಚಿಪು. ೫-೩೬).

[ದೇ. ೫ ತಮಿ. ನಕು ; ಮಲ. ನಗೆ ; ತೆಲು. ನಗು, ನವ್ವು]

ನಗು$_2$ (ನಾ). ೧. ನಗುವಿಕೆ : ನಗುವೊಂದು ರಸಪಾಕ ಅಳುವೊಂದು ರಸಪಾಕ (ಮಂಕುಶ. ೪೩೪) ; ಅಂತರಾಳದಲ್ಲಿ ನಗು ಕೇಳಬಂದಿತು (ಯುಕ್ತಪ್ರ. ೩) ; ಅವನ ತುಟಿಯ ಮೇಲೆ ಒಂದು ಸಣ್ಣನಗು ಸುಳಿಯಿತು (ರೂಪಸ. ೩). ೨. ಅಪಹಾಸ್ಯ : ಪರಿಹಾಸ : (ಕ). ೩. (ಹೂವು ಮೊದಲಾದವು) ಅರಳುವಿಕೆ : ವಿಕಾಸವಾಗುವಿಕೆ.

ನಗುಬರಿಸು = ನಗುವನ್ನುಂಟು ಮಾಡು : ಆಗ ನಡೆದ ಘಟನೆಯು ತುಂಬಾ ನಗುಬರಿಸುವಂತಹದು (ರೂಢಿ). ನಗುಬರು = ನಗುವುಂಟಾಗು ; ಮೋಜೆನಿಸು : ಪ್ರಸಂಗವನ್ನು ನೆನೆಸಿಕೊಂಡಾಗೆಲ್ಲ ನಗುಬರುತ್ತೆ (ನಾಡಿಗೇ. ೧೮೨) ; ಇವರು ನಗಿಸುವುದಕ್ಕೆ ಪಡುವ ಪಡಿಪಾಟ, ಅಂಗಚೇಷ್ಟೆಗಳು ಮುಂತಾದವನ್ನು ನೋಡಿದರೆ ನಿಜವಾಗಿಯೂ ನಗುಬರುತ್ತೆ (ನಾಡಿಗೇ. ೧೮೩).

[<ನಗು$_1$]

ನಗುಗೇಡು (ನಾ). = ನಗೆಗೇಡಂ : (ಕ). [ನಗು$_2$ + ಕೇಡು]

ನಗುತ (ನಾ). ಅಪಹಾಸ್ಯ ; ಹಾಸ್ಯದ ಮಾತು : ನೀನೆಲ್ಲಿ ಜನಿಸಿದೆಯದಾರ್ ತಂದೆತಾಯ್ಗಳ್ ನಿಧಾನವೆಮ್ಮೊಡನುಸುರಿಮೆಂದಜಂ ನುಡಿದನಿಂದಾ ನಗುತಮೇ ಸ್ತೋತ್ರಮಾಯ್ತು ಸರ್ವೇಶರಸ ಮಹಿಮೆಯೆಂತೋ ಜಗದೊಳು (ಚಿಪು. ೧೯-೧೨). [ನಗು$_1$ + – ತ$_2$]

ನಗುಪಾಟಲು (ನಾ). ಅಪಹಾಸ್ಯ ; ಹಾಸ್ಯಾಸ್ಪದವಾದಂದು : ಈ ಆದರ್ಶವಾದ ಅನೇಕವೇಳೆ ನಗುಪಾಟಲಾಗುವಷ್ಟು ಮಿತಿಮೀರಿತ್ತೆಂದರೂ ಅತಿಶಯೋಕ್ತಿಯಲ್ಲ (ಭಾರದ. ೪೭೦) ; ಪ್ರಸಿದ್ಧರಾಜರು ಬಗ್ಗಿಸಲಾರದ ಬಿಲ್ಲನ್ನು ಅಸ್ತ್ರವಿದ್ಯೆಯನ್ನರಿಯದ ಈ ಕೈಲಾಗದ ಬ್ರಾಹ್ಮಣ ಬಗ್ಗಿಸಿಯಾನೇ ? ರಾಜರಲ್ಲಿ ಬ್ರಾಹ್ಮಣರಿಗೆ ನಗುಪಾಟಲು (ವಚಭಾ. ೩೨) ; ಪ್ರಯತ್ನವು ಸಾಗದ ವಿಫಲವಾದರೆ ಉಪಹಾಸಕ್ಕೆ ಕಾರಣವಾಗಿ ಹೆಂಗಸರಲ್ಲಿ ನಗುಪಾಟಲಿಗೆ ಗುರಿಯಾಗಬೇಕಾಗುವುದು (ಕೋಹಿನೂ. ೪೭) ; ಅವರ ಮಧ್ಯೆ ರಂಗಣ್ಣನ ಇರವು ನಗುಪಾಟಲು (ದುಂಬಿಕ. ೬೪). 'ನಗೆಪಾಟಲು' ಪರಾ.

[ನಗುಪಾಟು (<ನಗುವಾಡು) + – ಅಲು (< – ಅಲ್$_2$)]

ನಗುಪಾಟು 'ನಗುಪಾಡು' ನೋ.

ನಗುಪಾಡು,ನಗುಪಾಟು (ನಾ). = ನಗುಪಾಟಲು : ಈ ಕೆಲಸ ಸರಿಯಾಗಿ ಆಗದಿದ್ದರೆ ನಗುಪಾಡೇ ಸರಿ (ರೂಢಿ). ನಗುಪಾಟು : ಅವರ ಜೀವನ ನಗುಪಾಟಿಗೆ ಗುರಿಯಾಯಿತು (ರೂಢಿ).

[ನಗು+ಪಾಡ್ಯು./ತೆಲು.ನಗುಬಾಟು]

ನಗುಮುಖ (ನಾ), ನಗುವ ಮುಖ ; ನಗುವಿನಿಂದ ಕೂಡಿದ ಮುಖ ; ಹಸನ್ಮುಖ : ಅವರ ಕಣ್ಣು ಕೂಡಿದಾಗ ಅವಳು ನಗುಮುಖವನ್ನು ತೋರುತ್ತಿದ್ದಳು (ರಂಗರೂ. ೨೬). [ನಗು$_1$ + ಮುಖ]

ನಗುವೊಗ (ನಾ). = ನಗುವಂಂಖ : ನಗಿಸಲ್ ನುಡಿಸಲುಮಜಿತನ ನಗೆಗಣ್ಗಳ ಚೆಲ್ವನೊಸೆದು ನೋಡಲ್ ಪಡೆಯಲ್ ನಗೆಮೊಗದ ನೀರೆಯರ್ [ನಗು] ಮೊಗದಿಂದಂ ಪಕ್ಕುಗಾಣದಗಲಗಲಿರ್ಪರ್ (ಅಜಿಪು. ೫-೧೨) ; ಬಡತನದ ನಿಕೃಷ್ಟಾವಸ್ಥೆಯಲ್ಲಿಯೂ ರಾಜೀವಿ ಅನಂತನನ್ನು ನಗುವೊಗದಿಂದಲೇ ಹುರಿದುಂಬಿಸಿದಳು (ಒಡ್ಡಿಉ. ೧೪೨) ; ನಗುವೊಗದರಸಿಯಾದ ಕವಿತಾ ಸುಂದರಿಯ ವರವನ್ನು ಪಡೆಯಲು ಬಗೆಮಿಗೆ ಜಟಿಸುವ ಹಂಬಲ ಈ ಕವಿಗಿದೆ (ಸಾಸಮಾ. ೧೫೦). [ನಗು$_1$ + ಮೊಗ]

ನಗುಮೋರೆ (ನಾ). = ನಗಂಮುಖ : ಬೆರಗುಕಣ್ಣಿನ, ಬೆರಳಮೊಸೆಯ ಬೆರಸಿದಾ ನಗುಮೋರೆಯಾ ಅರಸನಿದ್ದನು (ಕಏಪು. ೩೭-೧) ; ಹೈಮವತಿ ನಗುಮೋರೆಯಿಂದ ಮುಗ್ಧದೃಷ್ಟಿಯಿಂದ ನೋಡುತ್ತ . . . ಎಂದಳು (ಎರಸೆ. ೧೧). [ನಗು$_1$ + ಮೋರೆ (<ಮೋಱ^3)]

ನಗುಸಾರ, ನಗಸಾರ (ನಾ). = ನಗೆಚಾಟಿಕೆ ೧ : ಇದು ಹಗೆಸಾರವಲ್ಲ ನಗುಸಾರವೆಂದು ತಿಳಿದುಕೊ (ಕಥಾಪಂ. IV, ೧೩೫). **ನಗಸಾರ** : ಹೊಗಳು ಭಟ್ಟರನ್ನು ನಿರ್ಮಿಸಲು ಈಶ್ವರನು ಸ್ತೋತ್ರಪ್ರಿಯನೋ ? ಕೀರ್ತಿ ಕಾಮುಕನೋ ? ತನ್ನ ಪ್ರತಾಪಪ್ರದರ್ಶನಕ್ಕಾಗಿ ರಚಿಸಿದನೆಂಬುದು ಒಂದು ನಗಸಾರದ ಮಾತು (ಜೀವಾತ್ಮ. ೨೯೬) ; ಸಂಘಾನ ನಗಸಾರ ಮಾಡ್ದೆ (ಇಡನೋ. ೪೦) ; ಮತ್ತೇನು ನಗಸಾರಕ್ಕೆ ಹೇಳ್ತೀನಾ ? (ಕಂದತೋ. ೨೮೦). 'ನಗೆಸಾರ' ಪರಾ.

ನಗುಸಾರಗಾರ = ನಗಿಸುವವನು : ಹಾಸ್ಯಗಾರ : ಅವನು ಒಳ್ಳೆಯ ನಗುಸಾರಗಾರ (ರೂಢಿ). [ನಗು$_2$ + – ಸರ$_6$?]

ನಗೆ (ನಾ). ೧. ನಗುವಿಕೆ : "ಚಲ್ಲೆ ನಗೆ" (ಶಬ್ದಮಂ. ೬೭) ; ಮೊಗಮೆಂಬಂ ಬುಜದರಲಾ ನಗೆಯೆಂಬ ವಿಕಾಸಮೊಪ್ಪುವದಱೊಳ್ಸುಟಿಗುಂ ಮಿಗೆ . . . ಸುಯುಂಕ್ತರೂಪಕಮಕ್ಕುಂ(ಕವಿರಾ.೩-೨೫);ನಗೆ ಸಬ್ಬವಂ ಬಿನದಮೆಂಬಿವಱಂ ಲಲಿತಾಂಗನಂ ಮನಂಗೊಳಿಸುವರಿಚ್ಚೆಕಾರ್ತನದ ಲಲ್ಲೆಯ ಸಗ್ಗದ ದೇಸೆ ಕಾರ್ತಿಯರ್ (ಆದಿಪು. ೨-೭೦) ; ನಗೆಯೊಳ್ ಬಿರಿವಂತಿರೆ ಬಿರಿವುವಲ್ಲಿ ಪೊಸಮಲ್ಲಿಗೆಗಳ್ (ಶಾಂತಿಪು. ೨-೯೭) ; ಪುರಜನಂಗಳ್ ಕೇಳ್ದು ಕರುಳಂ ಪಿಡಿದು ನಗೆಯೊಳ್ ಪೊರಟ್ಟರ್ (ಪಂಡತಂ. ೧೪೭-೨೨) ; ಶಾಂತರೂಪಂ ಬಿಟ್ಟು ಕ್ರೂರರೂಪಂ ಕೈಕೊಂಡು ನಗೆಯಂ ಬಿಟ್ಟು ಮುಳಿಸನೊಳಕೊಂಡು (ಧರ್ಮಾಮೃ. ೭-೬೩) ; ನಗೆಗೆ ನಗೆ ಕುಂಟಣ ವಿವೇಕದ ಹೊಗೆಗೆ ಹೊಗೆ ಸಪಿಯಾದುದು (ಕುಮಾಸ. ೧೨-೪೨) ; ನಗೆಯು ಬರುತಿದೆ ಎನಗೆ ನಗೆಯು ಬರುತಿದೆ ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದ ಕಂಡು (ಪುರಂದ. ೧-೨೨ ಪಲ್ಲವಿ) ; ನಗೆ ತಡೆಯಲಾರದೆಯೆ ಹೊರಗೆ ಬಂದಳ್ಳಿ ಬಿರಿವಿರಿಯೆ ನಗೆ ತೊಡಗಿದನ್ . . . ನಗೆಗೆ ಮೀರ್ದುದಾ ಧೂಮದೃಶ್ಯಂ (ಶ್ರೀರಾಮಾ. ೦೪೯-೧೯೦). ೨. ಅಪಹಾಸ್ಯ ; ಪರಿಹಾಸ ; ಕುಚೋದ್ಯ : ಮನುಮಾರ್ಗನಿಪುಣನೆನಿಸಿದ ನಿನಗಾಮಿ ರಾಜಮಾರ್ಗಮಂ ತೋಱ ಜಗಜ್ಜನಕೆ ನಗೆಯಲ್ತೆ (ಆದಿಪು. ೮-೧೨) ; ಎಲೆ ಧನಂಜಯ ಧರ್ಮಪುತ್ರನ ಕೊಲುವೆನುಳುಹುವದಿಲ್ಲವೆಂಬಗ್ಗಳಿಕೆಯಿದು ನಗೆಯಲ್ಲವೇ(ಕುಮಾಸ.೧೭-೧೨). ೩. (ಹೂವು ಮೊದಲಾದವು) ಅರಳುವಿಕೆ ; ವಿಕಸಿಸುವಿಕೆ : ಕುಮುದಂಗಳ ನಗೆ ಬತ್ತಿದುವು ಪಾಯ್ದ ನೇಸಱೊನಾಗಳ್ [ಪಾಕಾಂ. ನೆಗೆಯಗೆಯತ್ತಿ ಪೋಯ್ತು ಮುನ್ನೇಸಱೊನೊಳ್] (ಲೀಲಾವ. ೩-೩). ೪. ಸಂತೋಷ ; ಆನಂದ : ನಗೆ ಹೋಗಿ ಹೊಗೆಯಾಯ್ತು (ರೂಢಿ). ೫. ವಿನೋದ ; ತಮಾಷೆ ; ಹಾಸ್ಯ : ನಗೆಯೊಳಮಪ್ಪೊಡಮಿಂತೀ ತೆಗಟ ದುರುಕ್ತಿಗಳನೆ ಪ್ಮೊಳಿಂ ನುಡಿಯಲ್ ನೀಂ ಬಗೆಯೊಳ್ ಬೇಱೊಂದನಣಾ ಬಗೆಯಲ್ ಗಡ ನಿನಗೆ ಸುಮತಿ ಬೇಱಾಂ ಬೇಱೇ (ಕಾಮ್ಯಪ. ೪೧೩). ೬. ಕಾಂತಿ ; ವಿಲಾಸ. 'ನಗೆಗಣ್' ಪರಾ.

ನಗೆಗೀಡಾಗು = ನಗೆಗೆ ಗುರಿಯಾಗು ; ಅಪಹಾಸ್ಯಕ್ಕೆ ಒಳಗಾಗು : ನೀನಿಂತು ನಗೆಗೀಡಾದ ನುಡಿಗಳಂ ನುಡಿಯುತ್ತಮೆನಗೆ ಮುಳಿಸನಾದೊಡಂ ಪುಟ್ಟಸಲಿಲ್ಲಂ (ಕಾದಂಉ. ೩೭೬) ; ತನ್ನೆಲ್ಲ ಸಂದೇಹಗಳು ಬರೇ ಸಂದೇಹಗಳಾದರೆ, ತಾನು ನಗೆಗೀಡಾಗಬಹುದು ಎಂಬ ಭಾವನೆ ಆಕೆ ಉತ್ತರಿಸದಂತೆ ತಡೆಯಿತು (ಪಾತ್ರಲ್ಕ. ೧೪೯). **ನಗೆಗೆಡೆ** = ಅಪಹಾಸ್ಯಕ್ಕೆ ಈಡಾದುದು ; ವಿಡಂಬನೆಗೆ ಗುರಿಯಾದುದು : ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಯ ಕೊಂದು ನಲಿನಲಿದಾಡುವ ತನ್ನ ಮನೆಯ ಲೊಂದು ಶಿಶು ಸತ್ತರೆ ಅದಕೆ ಮಱುಗುವಂತೆ ಅವಕೇಕೆ ಮಱುಗನು . . . ಎಂಬುದಾಗಿ ಜಾಲಗಾಱನ ದುಃಖ ಜಗಕೆಲ್ಲ ನಗೆಗೆಡೆ (ಮಹಾದೇ. ಬ. ೪೬-೧೦೯) ; ಬಗೆಯಲಱಿಯದು ನಿನಗೆ ಪುರುಷಾಮೃಗ ಮನೋವೇಗದಲಿ ನಡೆವುದು ನಗೆಗೆಡೆಯ ಮಾಡಿದೆಯಲಾ ಕಲಿಭೀಮ ನೀನಿಂದು (ಕುಮಾಸ. ೬೧೩. ೭-೧೬) ; ಗಾಳಿಯುಱುಬೆಗೆ ಮಲೆತ ಮೇಘದ ತೋಳುವಲ ನಗೆಗೆಡೆಯಲಾ ಕಾರುಪಾಲನೆತ್ತಲು ಭೀಮನೆತ್ತಲು ಶಿವಶಿವಾ ಎನುತ (ಕುಮಾಭೀ. ೫-೧೪) ; ಮಗಳೆ ನೀ ನಿನಗಲ್ಲದಿರ್ದೋಜೆಗಳ ನಡೆವರೆ ರಾಜಕುಲದಲಿ ನಗೆಗೆಡೆಯ ಮಾಡುವರೆ . . . ನೆಗಳಲಹುದೇ ಪುರುಷಸಂಗವನೆಂದಳಾ ಜನನಿ (ಪ್ರಭುಲೀ. ೫-೫೬). **ನಗೆಗೆಡೆಮಾಡು** = ಅಪಹಾಸ್ಯಕ್ಕೆ ಗುರಿಮಾಡು ; ವಿಡಂಬನೆಗೆ ಒಳಗುಮಾಡು : ಎರೆಯ ಕಡೆಗಣಿಸಿರುವ ಆಳ್ಮನೆಯ ಗೆಯ್ಮೆಯೆನೆ ಮರವೆ ನಗೆಗೆಡೆಮಾಡೆ ಮಾರೊಡ್ಡಿ ಮುನಿವಂ (ಕಾಲೂರ. ೫೦-೭೬). **ನಗೆಗೆಡೆಯಾಗು** = ಅಪಹಾಸ್ಯಕ್ಕೆ ಗುರಿಯಾಗು ; ಪರಿಹಾಸಕ್ಕೊಳಗಾಗು : ನಗೆಗೆಡೆಯಾಗೆ ದೈವವೆನಗೇನೆನೊಡರ್ಚಿಸಿತೀಗಳ್ (ಕಾದಂಪೂ. ೮೧೯) ; ನೀಂ ಶಬ್ದಮಾತ್ರಕ್ಕೆ ಬೆರ್ಚಿದೊಡಿಂತಪ್ಪ ನಗೆಗೆಡೆಯಪ್ಪಿರ್ (ಪಂಡತಂ. ೪೨-೧) ; ಹಗರಣ ನಗೆಗೆಡೆಯಾಯಿತ್ತು (ಬಸವ. ೩೦೦) ; ಮುನಿವರರಿಗೆ ನಗೆಗೆಡೆಯಾಗಿ ನಿಷ್ಕಾರಣಂ ಮಡಿವರೇ ಕಂದ (ಹಡಕಾ. ೦೩-೫೦) ; ನೆರವಿ ನಗೆಗೆಡೆಯಾಗೆ ಮುಸುಕಿನ ಮುರುವಿನಲಿ ಪಾಳಯವ ಹೊಕ್ಕರು (ಕುಮ್ಮಾಕ್ರೂ. ೮-೪೮). **ನಗೆಯೊಡಲಾತಂ** = ಇಂದ್ರ : ನಗೆಯೊಡಲಾತನಂ ಹರಣಗೊಂಬವನಂ . . . ಒಳ್ಳಿದನೆಂಬರೆ ಭೂಪ ಕೂರ್ಮೆಯಿಂ (ನಳಚಂ. ೨೮೭). [ದೇ. ॥ ತಮಿ. ನಕೈ]

ನಗೆಕಾರ 'ನಗೆಗಾಱ' ನೋ.

ನಗೆಕಾರ್ತಿ 'ನಗೆಗಾರ್ತಿ' ನೋ.

ನಗೆಕಾಱ 'ನಗೆಗಾಱ' ನೋ.

ನಗೆಕುಂಟೆ (ನಾ). ಒಂದು ಸ್ಥಳದ ಹೆಸರು : ಪುಲಿನಾಡ ನಗೆಕುಂಟೆಯಂ ಪಲ್ಲವಾದಿತ್ಯ ನೊಟಂಬ ಗಾವುಣ್ಡಂಗೆ ಕೊಡಂಗೆಯಾಗಿ ಕೊಟ್ಟಂ (ಮೃಅರಿ. ೧೯೩೨ . ೪೮-೧೬ ; ೪೦). [ನಗೆ$_9$ + ಕುಂಟೆ$_3$]

ನಗೆಗಡಲ್, ನಗೆಗಡಲು (ನಾ). ತುಂಬು ಹಾಸ್ಯ ; ಅತಿಯಾದ ನಗು,–ವಿನೋದ : ಕೌಶಿಕನೃಪ ನಗೆಗಡಲೊಳಾಳುತ . . . ಅಱುಹೆ (ಪಾರೇಪು. ೨೫-೨೯) ; ಬೋಡುವಾಯಂ ತೆಱೆದೇಡಿಪ ಕೋಡಗಂಗಳಂ ನೀಡುಂನೋಡಿ ನಗೆಗಡಲೊಳೋಲಾಡುವ ಬೇಡವೆಣ್ಗಳಿಂ . . . ವಿಜೃಂಭಿಸಿ ಕಣ್ಗೆ ಕೌತುಕಾವಹಮಾಗಿರ್ದುದಲ್ಲಿ (ರಾಜಶೇ. ೫-೫೫ ಪ). **ನಗೆಗಡಲು** : "ನಗೆಗಡಲು" ಎಂಬ ಹೆಸರನ್ನಿಟ್ಟು ಈ ಕಥೆಯನ್ನು ಬರೆದಿದ್ದೇನೆ (ನಗೆಗ. ಸೂಚನೆ).

[ನಗೆ + ಕಡಲ್$_2$]

ನಗೆಗಡಲು 'ನಗೆಗಡಲ್' ನೋ.

ನಗೆಗಣ್, ನಗೆಗಣ್ಣು (ನಾ). ಕಾಂತಿಯುಕ್ತವಾದ ಕಣ್ಣು ; ಪ್ರೀತಿ, ಸಂತೋಷ, ವಿನೋದಗಳನ್ನು ಸೂಚಿಸುವ ಕಣ್ಣು : ವಹೀಲಲನೆಯ ನಗೆಮೊಗದಂತೆ: ತಿಳಿದ ಕೊಳಂಗಳುಮಾತನಂತಃಪುರಕಾಂತೆಯರ ನಗೆಮೊಗದ ನಗೆಗಣ್ಗಳ ಬೆಡಂಗನೆ ಕಿಱುನಗೆ ನಗುವಂತೆ (ಆದಿಪು. ೧೧-೫ ಪ) ; ನಗೆಗಣ್ ಸೋರ್ವ ಕದುಪ್ಪನಾರಿಚಯದಿಂ ಬಿಂಬಾಧರಾ ಸುಯ್ಯ ಬೇಂಕೆಗಳಿಂ ನಾಡೆ ಬೆಡಂಗುಗೆಟ್ಟರವಿದಿಂತೇ ಕಾರಣಂ (ಪಂಪಭಾ. ೪-೬೩) ; ನಗಿಸಲ್ ನುಡಿಸಲು

ಮಜಿತನ ನಗೆಗಣ್ಗಳ ಚೆಲ್ವನೊಸೆದು ನೋಡಲ್ ಪಡೆಯಲ್ ನಗೆಮೊಗದ ನೀರೆಯರ್ [ನಗು]ಮೊಗದಿಂದು ಪಕ್ಕುಗಾಣದಗಲಗಲಿರ್ಪರ್ (ಅಜಿಪು. ೩-೯೨); ಆ ಸತಿಗೆ ಪುಟ್ಟೆ ಹರ್ಷವಿಲಾಸಂ ಮಧುಬಿಂದುಮಾಳೆ ನೀಲೋತ್ಪಲದಿಂ ಸೂಸುವೊಲ್ನಗೆಗಣ್ಣಿಂ ಸೂಸಿದುವಾನಂದಬಾಷ್ಪಬಿಂದುವಿತಾನಂ (ಮಲ್ಲಿಪು. ೪-೩೦); ಬಂದರ್ ನಗೆಗಣ್ಗಳ ಚೆಲ್ಲೆಗಣ್ಗಳಲರ್ಗಣ್ಗಳ ನಿಡುಗಣ್ಗಳ ಬೆಡಂಗಿಯರ್ ಕೋಮಲೆಯರ್ (ಜಗವಿ. ೪-೧೨೪); ನಗೆಗಣ್ಗಳ ಕಾಂತಿಯ ಸೆಳ್ಳುಗುರ್ಗಳ ಕಾಂತಿಯ ಕರದ್ವಯದ ಕಾಂತಿಯ ಮಾಲೆಗಳಂ ಹೊಸ ಹೂವಿನ ಮಾಲೆಗೆತ್ತು ಬೆಲೆಗೊಟ್ಟುಕೊಂಡು ನಗಿಸಿದನೊರ್ವಂ (ಗಿರಿಕ. ೨-೮೭); ನಗೆಗಣ್ಗಳ್ ನೈದಿಲಂ ಸಾಲಿಡೆ ಬಿಗಿದ ಕುಚಂ ಬಿಂಕವಂ ಬೀಱ್ ಕಾಲಂದುಗೆ ಬಂಡುಂಡೆರ್ದ ಪೆಣ್ಡಂಬಿಗಳ ರವಮನೊಟ್ಟೈಸೆ . . . ಬಂದರೀರ್ವರ್ ಸುಲಲಿತ ಚತುರಾಪಾಂಗೆಯರ್ ಕಾಂತೆಯರ್ಕಳ್ (ಪುಷ್ಕಾಸ್ತ್ರ. ೧-೪೨). **ನಗೆಗಣ್ಣು :** ಎಳೆಯಳ ಮುಖಸರಸಿಯೊಳೆಯ್ದೆ ತುಂಬಿದ ಕಳೆಯೆನಿಪಮಲಾಂಬುವಿನೊಳು ಪೊಳೆವ ತರಳಪಾಠೀನಗಳಂತೆ ಕಂಗೊಳಿಸಿದುವಾ ಪೆಣ್ಣ ನಗೆಗಣ್ಣು (ತ್ರಿಭುತಿ. ೨೦-೬೩); ಓ ತಾಯೆ, ಕನ್ನಡದ ಪೆರ್‌ತಾಯೆ ... ಸುಳಿಗುರುಳು, ನಗೆಗಣ್ಣು ಏನು ಕಪ್ಪೆ ನಿನಗೆ-ಮುತ್ತಿಡುವ ಕಪ್ಪು ! (ಹೊಂಗಳು. ೧೫-೧೯); ಒಬ್ಬರ ಕಣ್ಣು ಮತ್ತೊಬ್ಬರ ಕೈಯಲ್ಲಿರುತ್ತದೆ ಎಂದು ನಗೆಗಣ್ಣಿನ ಮುದುಕ ನುಡಿದನು (ಪುನರು. ೩೦೪). [ನಗೆ + ಕಣ್]

ನಗೆಗಣ್ಣು 'ನಗೆಗಣ್' ನೋ.

ನಗೆಗಣ್ಣೋಟ (ನಾ). ಕಾಂತಿ ಅಥವಾ ವಿಲಾಸಯುಕ್ತವಾದ ಕಣ್ಣಿನ ನೋಟ,-ದೃಷ್ಟಿ: ಸೊಗಯಿಪ ನಗೆಗಣ್ಣೋಟ [ಪಾಠಾಂ. ಕಡೆಗೂಣ್ಣೊಪ್ಪ] ವಿಂತಾಗವೇಡಾ ಕೊಳದಿಂದಂ ಬಂದ ಲಕ್ಷ್ಮೀವಧುವೆನಿಸುವ ಪೆಣ್ಬಾವ ವಿಂತಾಗವೇಡಾ (ಗದಾಯು. ೮-೬೦). [ನಗೆಗಣ್ + ನೋಟ]

ನಗೆಗಣ್ವೆಳಗು (ನಾ). ನಗೆಗಣ್ಣಿನ ಕಾಂತಿ,-ಹೊಳಪು: ಪಾಲ್ಗಡಲ ಮೂಲಸ್ಥಾನವೊ ಬನದ ಸಿರಿಯ ನಗೆಗಣ್ವೆ [ಪಾಠಾಂ. ಣ್ಬೆ]ಳಗು ನಿಂದುದೊ ಪಿರಿಯ ಮುತ್ತಿನ ಬಿತ್ತೊ (ಸಾಳ್ವಭಾ. ೧೬-೮). [ನಗೆಗಣ್ + ಬೆಳಗು$_2$]

ನಗೆಗಾರ 'ನಗೆಗಾಱ' ನೋ.

ನಗೆಗಾರ್ತಿ, ನಗೆಕಾರ್ತಿ (ನಾ). ೧. ನಗೆಯನ್ನುಂಟುಮಾಡುವವಳು; ವಿನೋದವನ್ನುಂಟುಮಾಡುವವಳು. ೨. ನಗೆಯನ್ನು ಉಳ್ಳವಳು; ವಿಲಾಸವತಿ : ಸೊಬಗಿನ ಸೋನೆಯ ನಗೆವೆತ್ತ ನಲ್ಲಳ ಮುಗುಳ ಮೊಲೆಯ ಮೋಹಿನಿಯ ಬಗಸೆಗಂಗಳ ಬಾಲೆಯಂ ರಂಗಾಯೆಂಬ ನಗೆಗಾರ್ತಿಯನೆಂದು ಸಂಧಿಪೆನೊ (ಶತಸಾಂ. ೨೭-೪೦). **ನಗೆಕಾರ್ತಿ :** ೧. ನಗೆಕಾರ್ತಿ, ನುಡಿಕಾರ್ತಿ (ಶಬ್ದಾನು. ೨೦೧ ಪ್ರಯೋ); ಹಸತಿ = ನಕ್ಕಪಂ . . . ಹಸಂತೀ = ನಗೆಕಾರ್ತಿಯುಂ, ಕುಂಪಟಿಯುಂ (ಕಾಶಕ್ಕ. ೬೨).

[ನಗೆಗಾಱ + -ತಿ$_1$ (< -ಇತ್ತಿ)]

ನಗೆಗಾಱ, ನಗೆಕಾರ, ನಗೆಕಾಱ, ನಗೆಗಾರ (ನಾ). ೧. ನಗೆಯನ್ನುಂಟುಮಾಡುವವನು; ನಗಿಸುವವನು; ನಗೆಗಾಱನಂತೆ ಕಾಡೆನುತ್ತುಂ[ಪಾಠಾಂ. ಕಮ್ಮಾರನಂತಡೆಯೆನುತ್ತುಂ] ಪಗೆಗಾಱನಂತೆ ಪಾಡೆನುತ್ತುಂ (ಧರ್ಮಾಮೃ. ೨-೭೧). ೨. ನಗುವವನು; ನಗೆಯನ್ನುಳ್ಳವನು : ತೋಱಿಸಿದ ದೀವಿಗೆಗೆ ಕರುಣವ ತೋಱುತಿತ್ತನು ಬಾಲವನು ನಗೆಗಾಱರಿಗೆ ನಾಟಕವ ನಟಿಸುತ ವೀರ ಹನುಮಂತ (ತೊರರಾ. ೫-೭-೪೫). ೩. ವಿದೂಷಕ; ಹಾಸ್ಯಗಾರ: ಅಂತು ಬಂದ ಬಸಂತದೊಳೊರ್ಮೆ ನನೆಯಂಬಂ ತನ್ನ ಮೇಳದ ಕೆಳೆಯನಪ್ಪ ನಗೆಗಾಱನಂ ಬಱಿಯಟ್ಟಿ ಬರಿಸಿ (ಕಬ್ಬಿಕಾ. ೭೨). **ನಗೆಕಾರ :** ೧. ಹಸತಿ= ನಕ್ಕಪಂ, ಹಾಸಕಃ = ನಗೆಕಾರಂ' (ಕಾಶಕ್ಕ. ೬೨); ದೇಶವಿದೇಶಗಳ ಗಾಯಕರು, ನಗೆಗಾರರು, ನರ್ತಕಿಯರು . . . ತಂತಮ್ಮ ವಿದ್ಯಾಪರಿಶ್ರಮದ ಕಲಾಪರಿಣತಿಯ ಸಾಧಕಗಳಿಂದ ಆಸ್ಥಾಯಿಕೆಯ ಮನೋರಂಜನವನ್ನು ಸಿದ್ಧಿಗೊಳ್ಳತೊಡಗುವರು (ಬೆಟ್ಟಅ. ೩೨-೬). **ನಗೆಕಾಱ :** ೧. ನಗೆಯೊಳ್ ಪ್ರವಣಂ ವ್ಯಾಪೃತಂ ಮೇಣ್ ನಗೆಕಾಱಂ (ಶಬ್ದಾನು. ೪೨೩ ಪ್ರಯೋ); ಅಱಿಯೆಯಾ ನೀನಿದ ನಗೆಕಾಱ ಬಗೆಕಾಱ ಮಱ್ಕಾಱ ಬಲು ಟೌಳಿಕಾಱ ಅಱಿಯದಂದದೊಳೆನ್ನ ಕೇಳ್ವೆಯೆಂದವಳೊಳಗಱಿದೊತ್ತಿ ನುಡಿದಳು ನೃಪನ (ಭರಜ. ೮-೨೫). ೨. ಜಗತೀಶಂ ನೋಟ್ಟ ಕಣ್ಗಂ ನುಡಿವ ದನಿಗಮಿಂಬಾಗಿ ಕುಳ್ಳಿರ್ದರಂದೋಳಿಗಳಿಂ ದಂಡಾಧಿಪರ್ ಮಾಂಡಳಿಕ ರಥಿಕ ಸಾಮಂತ ರಂತರ್ನಿಯುಕ್ತರ್ . . . ನಗೆಕಾಱರ್ ವಾದ್ಯಕರ್ ಚಿತ್ರಕರಣುಗಿ ನವರ್ ಸೂಳೆವಾಳರ್ ಪಯಾಳರ್ (ಅನಂಪು. ೨-೨೬); **ನಗೆಗಾರ :** ೧. ನಗೆಗಾರರು, ಕವಿಗಳು ಆದ ಬೇಂದ್ರೆಯವರು ಎಷ್ಟೋ ನಗೆಹಾಡುಗಳನ್ನು ಬರೆದಿರುವದು ಸ್ವಾಭಾವಿಕವಾಗಿದೆ (ನಿರಾಭ. ೬ ಮುನ್ನುಡಿ); ಮಿಗಿಲಾದವನ ಹತ್ತಿ ಹಗೆ ಸಲ್ಲ, ನಗೆಗಾರನ ಹತ್ತಿರ ಮೈತ್ರಿ ಸಲ್ಲ (ಗಾದೆ). ೩. ಪರದರ ಕರಣಿಕರ . . . ನಗೆಗಾರರ . . . ನಿಡುಗೇರಿಗಳು ಆ ದುರ್ಗದಲ್ಲಿ ವ್ಯವಸ್ಥೆಗೊಂಡಿವೆ (ನಂಚುಂಡ. ೧೨೬). [ನಗೆ + -ಕಾಱ]

ನಗೆಗುಂದು (ಕ್ರಿ). ನಗೆಯನ್ನು ಕಳೆದುಕೊಳ್ಳು; ಕಾಂತಿಹೀನವಾಗು; ಸೊರಗು : ಪಗೆಯ ಕೆಳೆಗೊಂಡ ಪದ್ಮಿನಿ ನಗೆಗುಂದಿದಳ್ (ವೃಷವಿ. ೮-೪೪).

[ನಗೆ + ಕುಂದು$_1$]

ನಗೆಗೂಡು (ಕ್ರಿ). ನಗುವನ್ನು ಹೊಂದು; ಸಂತೋಷಗೊಳ್ಳು : ಕಾವ್ಯಮಿದು ಭುವನದೊಳ್ಸಕಲಜನರಿಂದೆ ಸುಶ್ರಾವ್ಯಮಪ್ಪಂತೆನ್ನ ವದನಾಬ್ಜದಲ್ಲಿ ನೀನೇ ವ್ಯಾಪಿಸಿರ್ದಮಲಸುಮತಿಯಂ ತಾಯೆನಗೆ ತಾಯೆ ನಗೆಗೂಡಿ ನೋಡಿ (ಜೈಮಿಭಾ. ೧-೪). [ನಗೆ + ಕೂಡು$_1$]

ನಗೆಗೆಡು (ಕ್ರಿ). ಆನಂದ ಕುಗ್ಗು,-ಕಡಮೆಯಾಗು : ಜಗವ ಮಾಡುವ ಗುಣಿ[ಣ]ಗಳಿಂ ತಾ ನಗೆಗೆಡನು (ನಿಭಾಗ. ೧೦-೩೪-೧೯). [ನಗೆ + ಕೆಡು$_1$]

ನಗೆಗೇಡಿ (ನಾ). ನಗೆಗೆ ಈಡಾದವನು; ಅಪಹಾಸ್ಯಕ್ಕೆ ಒಳಗಾದವನು : ಕುಲಜರಾವ್ ರಘುವಂಶದಲಿ ನಿಷ್ಕಲುಷರಾವ್ ಮಾರ್ಗದಲಿ ಲೋಕದ ಹಳಿವಿಗೊಳಗಿಹರಲ್ಲ ನಗೆಗೇಡಿಯಹರು ನಾವಲ್ಲ (ತೊರರಾ. ೬-೫೩-೦೦೮).

[ನಗೆ + ಕೇಡಿ$_1$]

ನಗೆಗೇಡು (ನಾ). ಹಾಸ್ಯಾಸ್ಪದವಾದುದು; ಅವಮಾನಕರವಾದುದು : ಮೊದಲು ಜನನವನಱಿಯೆ ಮರಣದ ಹದನ ಕಡೆಯಲಿ ತಿಳಿಯೆ ನಾ ಮಧ್ಯದಲಿ ನೆಱ್ ನಾ ನಿಪುಣನೆಂಬುದು ಬಳಿಕ ನಗೆಗೇಡು (ಹರಿಸಾ. ೯೫); 'ನಾ ಬಲ್ಲೆ', 'ಗೊತ್ತಿಲ್ಲ' ಎಂಬ ವಾದದ ಹಾದಿ ಬಗೆಗೇಡು ನಗೆಗೇಡು ಹತಮತಿಯು (ಅರಳು. ೯೬-೦).

ನಗೆಗೇಡಾಗು = ಹಾಸ್ಯಾಸ್ಪದವಾಗು; ಅಪಹಾಸ್ಯಕ್ಕೆ ಒಳಗಾಗು ಅಱಿವು ತಲೆಕೆಳಗಾಯ್ತು ಧೈರ್ಯದ ನಿಱಿಗೆ ನಗೆಗೇಡಾಯ್ತು [ಪಾಠಾಂ. ನಗೆಗೆಡೆಯಾಯ್ತು] (ಕುವ್ಯಾವಿ. ೨-೧೨); ಕಾನನಕೆ ಬರಲೇಕೆ ರಕ್ಕಸ ಜಾನಕಿಯ ಸೆಱ್‌ವೊಯ್ಯಲೇತಕೆ ಭಾನುಕುಲಜನ ಬದುಕು ನಗೆಗೇಡಾಯ್ತಲಾಯೆಂದ (ಕೌಶಿರಾ. ೨೨-೬೦). [ನಗೆ + ಕೇಡು]

ನಗೆಗೇಡುಗೂಡು (ಕ್ರಿ). ನಗೆಗೀಡಾಗು; ಅಪಹಾಸ್ಯಕ್ಕೆ ಗುರಿಯಾಗು : ಒಂದುಗೆಡಿಸಲ್ಕಿದು ವೇಳೆಯೆನುತ್ತೆ ಪತ್ತೆಸಾರ್ದೆಸಗಿದನಿಕ್ಕಿ ಪಟ್ಟಣಕೆ ಮುತ್ತಿಗೆಯಂ ನಗೆಗೇಡುಗೂಡಿದಂ (ಚಿಕವಿ. ೫-೧೯).

[ನಗೆಗೇಡು + ಕೂಡು$_1$]

ನಗೆಚಾಟ (ನಾ). ವಿನೋದ; ಹಾಸ್ಯ; ಕುಚೋದ್ಯ : ಇಂದೇಕೆ ನನ್ನ ಮೇಲೆ ಇಷ್ಟೊಂದು ದಯೆ ಇವಳಿಗೆ ? . . . ಅವಳ ನಗೆಚಾಟವೇ ಆಗಿದ್ದರೆ ಸುಮ್ಮನೆ ನಾಚಿಕೆಗೇಡಾದೀತು (ಪ್ರೇಮಾಶ್ರ. ೨೩೭).

[ನಗೆ + -ಚು$_1$ + ಆಟ]

ನಗೆಚಾಟಕೆ (ನಾ). ೧. ನಗೆಚೇಷ್ಟೆ: ವಿನೋದ; ಹಾಸ್ಯ; ತಮಾಷೆ : ಆತ ತನ್ನ ನಗೆಚಾಟಕೆಯ ಮಾತನ್ನು ಕೇಳಿ ಮುಗಿಸಿಕೊಳ್ಳದೆ . . . ಮಾತನಾಡಿದುದನ್ನು ಕಂಡು ಅಷ್ಟೇ ಆಶ್ಚರ್ಯವಾಯಿತು (ಬೆತಂಬಾ. ೩೯);

ಅವನ ಸ್ವಭಾವಸಹಜವಾದ ನಗೆಚಾಟಿಕೆಯ ಮಾತುಗಳಿಗೆ ಆಗೀಗ ಹೊಟ್ಟೆ ತುಂಬ ನಗಲಿಲ್ಲವೆ ? (ಮೂರುದಾ. ೨೦೪); ನಗೆಚಾಟಿಕೆ ಮಾಡುವುದನ್ನಂತೂ ಮನಸ್ಸಿನಲ್ಲಿ ತರಲೇಬೇಡಿರಿ (ಬ್ರಹ್ಮಜೀ. ೯೫); ಅವನ ನಗೆಚಾಟಿಕೆಯಿಂದ ಜೀವವನ್ನು ಹಗುರ ಮಾಡಿದರು (ಕನಕ. ೧೬). ೨. ಅಪಹಾಸ್ಯ; ನಗೆಗೇಡು : ಅವಳ ತವರಿನ ಬಳಗದಲ್ಲಿ ಇದೊಂದು ನಗೆಚಾಟಿಕೆಯ ವಿಷಯವಾಗಬಾರದಲ್ಲ ಎಂದು ಕಾಳಜಿಯಾಯಿತು (ಕಾಗಿಕ. ೧೦೫).

[ನಗೆಚಾಟ + -ಇಕೆ]

ನಗೆಚೇಷ್ಟೆ (ನಾ). ಹಾಸ್ಯ ; ವಿನೋದ ; ತಮಾಷೆ : ಎಲ್ಲದರ ಬೆಲೆ ತಪ್ಪಿ ಹೋದ ಸಮಾಜಕ್ರಾಂತಿಯ ಈ ಕಾಲದಲ್ಲಿ ನಗೇಚೇಷ್ಟೆ ಯಾವುದು, ಕುಚೇಷ್ಟೆ ಯಾವುದು ಎಂಬುದನ್ನು ಹೇಳುವುದು ಬಿಗಿಯಾಗಿದೆ (ಸಾಹಿವಿ. ೦೦೪).

[ನಗೆ+ ಚೇಷ್ಟೆ]

ನಗೆದೋಱು (ಕ್ರಿ). ೧. ನಗುವನ್ನು ತೋರಿಸು ; ನಗು ; ಹರ್ಷವನ್ನು ಸೂಚಿಸು : ಹೇಱಿದವು ಹರುಷವನು ತನು ನಗೆದೋಱಿದವು ಮುಖಕಮಲ ಕಾಂತಿಯ ಬೀಱಿದವು ಭುಜಲತೆಗಳು (ತೊರದಾ. ೦-೮-೨). ೨. ಅರಳು; ವಿಕಾಸವಾಗು : ಒಸರಿದುದು ಶಶಿಕಾಂತಶಿಲೆ ಧವಳಿಸಿದುದಂಬರ ವಂಬುನಿಧಿ ಲಳಿ ಮಸಗಿದುದು ನಗೆದೋಱಿದವು ನೈದಿಲು (ತೊರದಾ. ೫-೩-೪).

[ನಗೆ + ತೋಱು]

ನಗೆನಗು (ಕ್ರಿ). ನಗೆಯನ್ನು ನಗು ; ನಗುವನ್ನು ತೋರು : ನಗೆನಗುತ ಕಲಕೇತಬೊಮ್ಮಣ್ಣಗಳು ಅಱ್ಱಮಣ್ಣಂ ಪಿಡಿಯೆ ಪೊನ್ನುಗಳ ಮಯವಾಗಿಸೆಯಲು (ಬಸಪು. ೨೮-೩೨). [ನಗೆ + ನಗು$_1$]

ನಗೆನಯನ (ನಾ). = ನಗೆಗಣ್ : ನಗೆನಯನಮಡಿಗಳರುಣಂ ಮೊಗಸಸಿಯಿಗೆ ನೀಳ್ದ ಕೇಶಪಟ್ಟದಿಗಳ್ತಾನುಗುರ್ದೀಧಿತಿ ನಡೆಯಿಭಗತಿ ಸೊಗಯಿಸುವು ಪೊರ್ವಳ್ಗೆನಲ್ಕಮದು ನಿರ್ದೋಷಂ (ಕವಿಜಿ. ೯-೦೦). [ನಗೆ + ನಯನ]

ನಗೆನಾಟಕ (ನಾ). ನಗು ಹುಟ್ಟಿಸುವುದಕ್ಕಾಗಿಯೇ ಇರುವ ನಾಟಕ ; ಹಾಸ್ಯನಾಟಕ ; ಪ್ರಹಸನ ಹಾಸ್ಯನಾಟಕ, ಪ್ರಹಸನ ಎಂಬುದಕ್ಕೆ ಸಾಮಾನ್ಯವಾಗಿ ನಗೆನಾಟಕವೆಂದೂ ಹೇಳುತ್ತಾರೆ (ಕೂಡಿ). [ನಗೆ+ನಾಟಕ]

ನಗೆನುಡಿ (ನಾ). ನಗುವಿನಿಂದ ಕೂಡಿದ ಮಾತು ; ಸರಸವಾದ ಮಾತು ; ಹಾಸ್ಯೋಕ್ತಿ : ದ್ರೌಪದಿಗೆ ಹರಿಯರಸಿ ನುಡಿದಳು ಸತ್ಯಭಾಮಾ ಸರಸಿ ಜಾನನೆ ನಗೆನುಡಿಯ ಸಮ್ಮೇಳಪೀಳದಲಿ (ಕುಪ್ಪಾಅ. ೦೫-೨೦); ಮಾತಿನಿಂ ನಗೆನುಡಿಯುಂ, ಮಾತಿನಿಂ ಹಗೆ ಕೊಲೆಯುಂ . . . ಲೋಕಕ್ಕೆ ಮಾತೆ ಮಾಣಿಕವು (ಸರ್ವಜ್ಞ. ೦೨೪); ನಗೆನುಡಿಯೊಳುಪಚರಿಸಿ ಚದುರಿನ ಬಗೆಯೊಲಿಸುವುದೆನುತ ಸೀತಾಮೃಗವಿಲೋಚನೆಗರಸುಗಳ ತೋರಿದನು ಸನ್ನೆಯಲಿ (ಅಸಂರಾ. ೦-೨೩-೨೭); ಅದೊ ಅವನ ನೇಹಿಗನ ನಗೆನುಡಿ–ಅಗಲಿದರು–ಬಹನಿತ್ತೆಡೆ ! (ಗಜೇಶ. ೪೯-೦). [ನಗೆ + ನುಡಿ$_2$]

ನಗೆನೋಟ (ನಾ). ವಿಲಾಸದಿಂದ ಕೂಡಿದ ನೋಟ ; ಹಾಸ್ಯ, ಪ್ರೀತಿ, ಸಂತೋಷಗಳನ್ನು ಸೂಚಿಸುವ ನೋಟ : ನಗೆನೋಟ ಮೆಲ್ವಾತು ಮುನಿಸು ಮೋಹನಗಳಿಂ ಬಗೆಯ ಬಂದವರೊಳೊಳಗೂಡಿ ಮೋಹಿಪಳ್ಕುಗುಳಂಬನರಸಿಗೆಣೆಯಲ್ಲು (ಉದ್ಭಟ. ೦೦-೯೬); ಲಲ್ಲೆಗಣ್ಣವರ್ ನಗೆನೋಟದ ತೋರ ಧಮ್ಮಿಲ್ಲೆಯರೆಯ್ದಿತೊಗ್ಗಿನಲಿ (ಮೋಹತ. ೨೪-೧೨); ನಗೆನೋಟಂ ಪೊಸಮಾತು ರೀತಿ ಗಮಕಂ . . . ಎಲ್ಲಮವರ್ಗೇಂ ಮೈಸಂದು ಮಚ್ಚಿರ್ದುದೋ (ರಾಜಶೇ. ೧೦-೮೩). [ನಗೆ + ನೋಟ]

ನಗೆಪಾಟಲು (ನಾ). = ನಗುಪಾಟಲು : ಇನ್ನೂ ನಾಟಕವಾಗುತ್ತಿರುವಾಗಲೇ ಹೀಗಾದರೆ ನಾಲ್ಕು ಜನರಲ್ಲಿ ನಗೆಪಾಟಲಲ್ಲವೇ ? (ಪಾಡಿಲ. ೦೩೪). 'ನಗುಪಾಟಲು' ಪರಾ.

ನಗೆಪಾಟಲಾಗು = ನಗೆಗೀಡಾಗು; ಅಪಹಾಸ್ಯಕ್ಕೊಳಗಾಗು : ತಾನು ದೀಪಾಲೆಗೆ ಇಂದು ಬಂದದ್ದು ಎಂಥ ನಗೆಪಾಟಲಾಯಿತು ಎನ್ನಿಸಿತು (ಅವತಂ. ೪೫) : ಮಹನ್ಮಹಾದೇವತೆಗಳನ್ನು ಇಷ್ಟು ನಗೆಪಾಟಲಾಗಿ ಚಿತ್ರಿಸುವ ನಮ್ಮ ದಿಗ್ದರ್ಶಕರ ದಾಷ್ಟಿಕವೆಷ್ಟೆಂದು ಹೇಳಲಿ (ನಾಡಿಗೇ. ೧೦೩). ನಗೆಪಾಟಲು ಮಾಡು=ಅಪಹಾಸ್ಯಕ್ಕೀಡುಮಾಡು ; ನಗೆಗೀಡುಮಾಡು: ಸಾಮ್ರಾಜ್ಯದ ಕಾರ್ಯವನ್ನು ಬಡ ಹೊಗಸಾದ ನಾನು ಮಾಡಲಾದೀತೇ ? ಸುಮ್ಮನೆ ಹೂಗುಟ್ಟಿ ನಗೆಪಾಟಲುಮಾಡಲೇ ? (ದಾನಚಿಂ. ೧೬೮).

[ನಗೆ + ಪಾಟು$_3$ (< ಪಾಡು$_3$) + – ಅಲು (< – ಅಲ್$_1$)]

ನಗೆಬಗೆ (ನಾ). ಹಾಸ್ಯದ ರೀತಿ,–ಕ್ರಮ,–ಸೊಗಸು; ನಿನ್ನ ನಗೆಬಗೆ–ಎಂಥಲಗುಬಗೆಯಿಂದ ಕಣ್ಮರೆ ಸಂದೆಯೋ (ಹಾಡುಪಾ. ೪೯-೮); ಅಪ್ಸರೆಯರನ್ನು ನಗೆಬಗೆಯಿಂದ ನೋಡಿ ಅವರ ಹೃದಯವನ್ನು ಅರಿತಂತೆ (ಅಹಶ್ಯ. ೭೪-೦೩).

[ನಗೆ + ಬಗೆ$_3$]

ನಗೆಬರಹ (ನಾ). ನಗುವನ್ನುಂಟುಮಾಡುವ ಲೇಖನ : ಶ್ರೀ ನಾಡಿಗೇರ ಕೃಷ್ಣರಾಯರ ಉತ್ತಮ ನಗೆಬರಹಗಳನ್ನು ಸಂಗ್ರಹಿಸಿ 'ನಾಡಿಗೇರರ ನಗೆಬರಹಗಳು' ಎಂಬ ಶೀರ್ಷಿಕೆಯಲ್ಲಿ ಪ್ರಥಮ ಸಂಕಲನ ೧೯೫೧ರಲ್ಲಿ ಪ್ರಕಟವಾಯಿತು (ನಾಡಿಗೇ. ಪ್ರಕಾಶಕರ ಪುಟ).

[ನಗೆ + ಬರಹ (< ಬರೆಪ)]

ನಗೆಬೀರು 'ನಗೆವೀಱು' ನೋ.

ನಗೆಮಚ್ಚರ (ನಾ). ಹುಸಿಮಾತ್ಸರ್ಯ ; ಹುಸಿಯಾದ ಅಸೂಯೆ,–ಹುರುಡು: ಮಾಯಾಕಾರನು ಕೃಷ್ಣನೆಲ್ಲಿ ಪೋದನುಯೆನುತ್ತ ನಲ್ಲೆಯರು . . . ಘಳಿಲನೆ ಸೋಪಾನವಿಳಿದು ನಗೆಮಚ್ಚರದಿ ಜಲಜಂಗಳಂ ನಾಳ ಸಹ ಕೀಳ್ತು ಪಿಡಿದ (ನವಮೋ. ೦೦-೫೪). [ನಗೆ + ಮಚ್ಚರ (< ಮಚ್ಚರ)]

ನಗೆಮಾಡು (ಕ್ರಿ). ಹಾಸ್ಯಮಾಡು ; ಗೇಲಿಮಾಡು : ತಮ್ಮ ಭಾವನಂ ಧನದೇವನಂ ಕರೆದಿ ನೆಗಱಂ ಬಿಡಿಸೆಂಬುದುಮಾಕೆ ತನಗೆ ನಾದುನಿಯುಪ್ಪುದಱಿಂ ನಗೆಮಾಡಿ . . . ಬಿಡಿಸಿದಂ (ಸುಕುಮಾ. ೭-೦೬ ವ); ಯಾದವರ ಬಡಕರುವೆ ಬಾ ಬಾ ಎಂದು ಚಿಟಿಕಿಸಿ ಕರೆದು ಗುರುಸುತ ಸಾತ್ಯಕಿಯ ತಾಗಿದನು ನಗೆಮಾಡಿ (ಕುಪ್ಪಾಳ. ೩-೦೭). [ನಗೆ + ಮಾಡು$_1$]

ನಗೆಮಾತು 'ನಗೆವಾತು' ನೋ.

ನಗೆಮುಖ (ನಾ). ನಗುವಿನಿಂದ ಕೂಡಿದ ಮುಖ ; ಹಸನ್ಮುಖ ; ನಗುಮುಖ : ನಕ್ಕರೆ ನಗಲೆವ್ವಾ ನಗೆಮುಖದ ಪ್ಯಾದೀಗಿ ನಾ ಮುಚ್ಚಿ ಮುಡಿವ ಪರಿಮಳದಾ ಹೂವ ಅವಳೊಂದು ಘಳಿಗೆ ಮುಡಿಯಲೆ (ಗರತಿ. ೦೦೬).

[ನಗೆ + ಮುಖ]

ನಗೆಮೊಗ (ನಾ) ಸಂತೋಷವನ್ನು ಸೂಸುವ ಮುಖ ; ನಗುಮುಖ : ನಗೆಮೊಗ[ದಿ]ಮ್ [ಶ]ಮ್[ಭು]ವನೆ ಸಂಬು ನೆನೆಯುತ್ತಿಟ್ಟಮ್ (ಇಆ. XX, ೭೦-೯ ; ೨ನೆಯ ಕತ); ಆತನ ಬರವಿನುತ್ಸವಕ್ಕೆ ಸಂತಸಂಬಟ್ಟು ಮಹೀಲಲನೆಯ ನಗೆಮೊಗದಂತೆ ತಿಳಿದ ಕೊಳಂಗಳುಂ (ಆದಿಪು. ೦೦-೫ ವ); ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ . . . ನೋಟಿಪ್ಪೊಡಾವ ಬೆಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿದೇಶದೊಳ್ (ಪಂಪಭಾ: ೪-೨೮); ನಗೆಮೊಗದರಸಾ ಅವಧಾರು ಕೂಡಲಸಂಗಮದೇವಾ ಬಗಿದು ಹೊಗುವೆ ನಾ ನಿಮ್ಮ ಮನವನು (ಬಸವ. ೪೮೮); ನಗೆಮೊಗಮಚ್ಚಮಾಗೆ ಬಾಯ್ದೆಱೆ ಬಂದುಗೆಯಾಗೆ ಮೂಗು ಸಂಪಗೆಮುಗುಳಾಗೆ . . . ಚೆಲ್ವೊಗೆವಿನೆಗಂ ವಿನಿರ್ಮಿಸಿದ ಪೆಂಡಿರ ಜಾತಿ ಕರಂ ಮನೋಹರಂ (ಲೀಲಾವ. ೦೦-೬೦); ವರಕಸ್ತೂರೀತಿಲಕಮನರಸಿಯ ಕಡುಚೆಲ್ವ ನೊಸಲೊಳಿಟ್ಟಳ್ ಸುರಸೌಂದರಿಯೊರ್ವಳ್ ನಗೆಮೊಗಮೆಂಬುರುಚಂದ್ರಮನಲ್ಲಿ ಮೆಱೆವ ಕಱೆಯೆಂಬಿನೆಗಂ (ಭಾಗಪು. ೬-೭೮); ನಗೆಮೊಗವು ಬಾಡಿದವು ಮನದೊಳು ದುಗುಡಮೇಳಿಸೆ ಭೀಷ್ಮಜಗೆ (ಸ್ಕಾಂಪು. ೩೦-೦೨). [ನಗೆ + ಮೊಗ]

ನಗೆಮೋರೆ (ನಾ).=ನಗೆಮುಖ : (ಕ). [ನಗೆ + ಮೋರೆ (<ಮೋಱ್)]

ನಗೆಯಾಟ (ನಾ). ೧. ಹಾಸ್ಯ ; ತಮಾಷೆ ; ಹುಡುಗಾಟಿಕೆ ; ವಿನೋದ:

ಈ ಧಗೆಯಲಿ ನಗೆಯಾಟದ ಹಗೆ ಹೊಡಿದರಾರು ? (ಸೂರ್ಯಪಾ. ೭-೭). ೨. ಹಾಸ್ಯ, ವಿನೋದಗಳಿಂದ ಕೂಡಿದ ನಾಟಕ ; ಪ್ರಹಸನ : "ಲಘುವಾಗಿಯೂ . . . ಹರ್ಷಾಂತವಾಗಿಯೂ ಇರುವ ನಾಟಕ, ಹರ್ಷನಾಟಕ, ಪ್ರಹಸನ; ನಗೆಯಾಟ (Comedy. ಇಂಕನಿ). [ನಗೆ + ಆಟ]

ನಗೆಯಾಡು (ಕ್ರಿ). ೧. ನಗು ; ಹರ್ಷಸೂಚನೆ ಮಾಡು : ನೋಡದಿರ್ದವೆನೆಂಬೆ ಕಣ್ ನೋಡದಿರವು . . . ನಗೆಯಾಡದಿರ್ದವೆನೆಂಬೆ ಮುಸುಡು ನಗದಿರದು (ಸೋಮಜ. ೨-೬೨). ೨. ಗೇಲಿಮಾಡು ; ಪರಿಹಾಸಮಾಡು; ಅಪಹಾಸ್ಯಮಾಡು ; ಕಂಚೋದ್ಯಮಾಡು : ಬರಿಗೈಯಿಂದ ಮರಳಿದ ಭೃಂಗಿಯ ಪರಿಯನ್ನು ಕಂಡು ಪಾರ್ವತಿ ನಕ್ಕಳು . . . ಅವನನ್ನು ಬಹುವಾಗಿ ಜರಿದು ನಗೆಯಾಡಿದಳು (ಬಿದುರಿ. ೬೯) ; ನಗೆಯಾಡದಿರು ನನ್ನ ನಲುಮೆ ಒಲುಮೆಯ ಕುರಿತು (ಉಯ್ಯಾಲೆ. ೨೪-೦) ; ಬೇಲದ ಗಾತ್ರದ ತಮ್ಮುಡೆ ಹರಕನು ನೋಡದೆ ಮುಚ್ಚದೆ ಖಳರು ಸಾಸಿವೆಕಾಳಿನ ಹೆರರುಡೆ ಹರಕನು ನೆರೆ ನೋಡಿ ನಗೆಯಾಡಿದಪರು (ಇಂಜಾಪ. ೬೫-೧೩). ೩. ವಿನೋದದಿಂದ ನಗು ; ವಿನೋದಮಾಡು ; ಹಾಸ್ಯಮಾಡು ; ತಮಾಷೆಮಾಡು : ಈ ನನ್ನ ತೊದಲ್ನುಡಿಯ ಸಾಹಿತ್ಯವನ್ನು ಕಂಡು ತಾವು ನಗಬಹುದು; ತಾವು ಯಾವುದೇ ರೀತಿಯಿಂದಾ ನಗೆಯಾಡಿದರೂ ನನಗೆ ಸಂತೋಷವೇ ಸರಿ (ಅಮುಗಾಂ. III, ಪ್ರಸ್ತಾವನೆ) ; ಆಯುಷ್ಯದಲ್ಲಿ ಇಷ್ಟು ಬೇಗನೆ ನೀವು ಯೋಗಿಗಳೊಡನೆ ಸಂಬಂಧ ಬೆಳೆಸಿದ್ದೀರಾ ? ಎಂದು ಆ ತರುಣಿಯು ನಗೆಯಾಡಿದಳು (ಸಮಜೀ. ೩೧೯) ; "ಅಹುದು ನಾನು ಮಾತಿನ ಮಲ್ಲ" ಎಂದು ಮಲ್ಲಪ್ಪ ನಗೆಯಾಡಿದನು (ದಾನಜಿಂ. ೪೦) ; ನಂಬದಿದ್ದ ಮಾತ್ರಕ್ಕೇನೇ ನಾನೇನೂ ನಾಸ್ತಿಕನಾಗುವುದಿಲ್ಲ ಎಂದು ತಂದೆಯು ನಗೆಯಾಡುತ್ತಾ ಹೇಳಿದನು (ಮೊಪಾಸಾ. ೪೦) ; ಇವರ ಮಾಮೂಲಿಯ ಮಾತುಗಾರಿಕೆಯು, ಕತೆಗಾರನ ಸರಸತೆಯನ್ನು ನಗೆಯಾಡುವಂತೆ . . . ಶುಭ್ರತೆಯನ್ನು ಸೇರುವುದು (ವಿಜಾಮಂ. ೯೯). [ನಗೆ + ಆಡು$_1$]

ನಗೆಯಾನ್ (ಕ್ರಿ). ನಗುವನ್ನು ಹೊಂದು,–ಪಡೆ: ಜೊಲ್ಲು ಸುರಿವ ಮುದ್ದು ಮೊಗದಲ್ಲಿ ನಗೆಯಾಂತು ಸೊಲ್ಲಿಸುವನು ತೊದಳ್ನುಡಿಯ (ಮೋಹತ. ೧೭-೬೯). [ನಗೆ + ಆನ್$_1$]

ನಗೆಯುಡುಗು (ಕ್ರಿ). ೧. ಸಂತೋಷ ಕಡಮೆಯಾಗು,–ಕುಗ್ಗು. ೨. ಮುಚ್ಚಿಕೊಳ್ಳು ; ಸಂಕೋಚವಾಗು : ತಲೆದೋಱಿದನು ದಿನಪ ನಗೆಯುಡುಗಿ ನಾಚಿದವು ಕುಮುದಾಳಿಗಳು ಮುಂಗಾಣಿಕೆಯ ಹರುಷದೊಳಗಿದು ವಿರಹವ ಬೀಳುಕೊಟ್ಟುವು ಜಕ್ಕವಕ್ಕಿಗಳು (ಕುವ್ಯಾಭೀ. ೧-೨೮). [ನಗೆ + ಉಡುಗು$_1$]

ನಗೆಯೆಳ್ಳು, ನೆಗೆಳ್ಳು (ನಾ). (ಕರಾ) ಮಕರಸಂಕ್ರಾಂತಿಯಂದು ಸ್ತ್ರೀಯರು ಎಲ್ಲರ ಮನೆಗೆ ಸಂತೋಷದಿಂದ ಬೀರುವ ಎಳ್ಳು: ಸಂಕ್ರಾಂತಿ ಹತ್ತಿರ ಬರುತ್ತಿರುವುದರಿಂದ ಈಗಲೇ ನಗೆಯೆಳ್ಳನ್ನು ಸಿದ್ಧಪಡಿಸಿಕೊಳ್ಳಬೇಕು (ರೂಢಿ). **ನೆಗೆಳ್ಳು** : ಹೆಣ್ಣುಮಕ್ಕಳಿಗೆ ನೆಗೆಳ್ಳು ಬೀರುವುದೊಂದು ಬಹಳ ಆಸಕ್ತಿಯ ಕೆಲಸ (ರೂಢಿ). [ನಗೆ + ಎಳ್ಳು (< ಎಳ್)]

ನಗೆವಡಿಕಾಱ (ನಾ). ನಗುವನ್ನುಂಟುಮಾಡುವವನು ; ಹಾಸ್ಯಗಾರ ; ವಿದೂಷಕ : ನಗೆವಡಿಕಾಱಂ ನೀಱಂ ಬಗೆಕಾಱಂ ಪಾಟಕಾಱನೊಳ್ನುಡಿಕಾಱಂ (ಕಾವ್ಯಾವ. ೩೨೫); ಕಾಱಕ್ಕೆ— ನಡೆವಳಿಕಾಱಂ . . . ನಗೆವಡಿಕಾಱಂ, ಬಗೆಕಾಱಂ (ಶಮದ. ೧೯೯ ಪ್ರಯೋ). [ನಗೆವಡಿ$_0$ + – ಕಾಱ]

ನಗೆವಾತು, ನಗೆಮಾತು (ನಾ). ನಗುವಿನಿಂದ ಕೂಡಿದ ಮಾತು; ಹಾಸ್ಯದ ನಂಡಿ: ಅವರ ಸರಳತನದ ನಡತೆ, ತೀಕ್ಷ್ಣಬುದ್ಧಿಯ ಹರಿತವಾದ ನೋಟ, ನಗೆವಾತುಗಳು ಇವೆಲ್ಲ ನನಗೆ ಒಗ್ಗಿದುವು (ಕಾಲಯಾ. ೪). **ನಗೆಮಾತು** : ತಂಗಿಗೆ ಮನೆಯ ನೋವು ಮರೆಸಲೆಂದು ಏನಾದರೂ ನಗೆಮಾತು ಆಡುತ್ತಿದ್ದ (ವಾತ್ಸಲ್ಯ. ೨೦೧) ; ದೊಡ್ಡವನು ಹುಡುಗಿಯರನ್ನು ನೋಡಿ ನಗೆಮಾತನ್ನಾಡಿದಾಗ ಚಿಕ್ಕವನು ನಕ್ಕನೇ ಹೊರತು, ತಾನು ಸ್ವತಃ ಯಾವ ಮಾತನ್ನೂ ಆಡಲಿಲ್ಲ (ರಂಗವ. ೨೧೩) ; ನನ್ನ ನಗೆಮಾತಿಗೆ ಮರುಳಾಗಿ ಮೃತ್ಯುವು ಕೂಡ ಮೈಮರೆಯಿತೊ ಹೇಗೆ (ಇಂಜಾಪ. ೪೦-೮೬) ; ಇದೇನೋ ನಗೆಮಾತು ಎಂದು ನಾನನ್ನುವದರ ಸತ್ಯತೆಯ ಮನವರಿಕೆಯು ಎಷ್ಟೋ ಜನರಿಗೆ ಆಗದಿದ್ದರೆ ನಾನಿನ್ನೂ ಅನೇಕ ಉದಾಹರಣೆಗಳನ್ನು ಕೊಡಬಹುದು (ನಿರಾಭ. ೧೭೨). [ನಗೆ + ಮಾತು$_1$]

ನಗೆವೀಱು, ನಗೆಬೀರು (ಕ್ರಿ). ನಗುವನ್ನು ಸೂಸು : ನಗು ಹೊಮ್ಮಿಸು ಕೃಷ್ಣನ ಮೇಲೆ ಬಾಲೆ ಕಣ್ಸೋಲದಿನಂದು ಬಿತ್ತರಿಸಿದಳ್ ನಗೆವೀಱುವ ಮುದ್ದುವೀಱುವಾಲೋಲತೆವೀಱುವುಜ್ವಲತೆವೀಱುವ ಮುಗ್ಧ ಕಟಾಕ್ಷ ಮಾಲೆಯಂ (ಜಗವಿ. ೧೦-೭೯). **ನಗೆಬೀರು** : ಅವನು ನನ್ನನ್ನು ನೋಡಿ ನಗೆಬೀರಿದನು (ರೂಢಿ). [ನಗೆ + ಬೀಱು$_1$]

ನಗೆವೆಣ್, ನಗವೆಣ, ನಗೆವೆಣ್ಣು, ನಗೆಹೆಣ್ಣು, ನಗೆಹೆಣ್ಣೆ, ನೆಗೆಣ್ಣ, ನೆಗೆಣ್ಣು, ನೆಗೆವೆಣ್ಣೆ, ನೆಗೆಹೆಣ್ಣು, ನೆಗೆಹೆಣ್ಣೆ(ನಾ).೧. ಗಂಡನ ಅಣ್ಣ ಅಥವಾ ತಮ್ಮನ ಹೆಂಡತಿ; ಓರಗಿತ್ತಿ: "ಯಾತೃಗಳೆನಲ್ಕೆ ನಗೆವೆಣ್ಣಳಕ್ಕು" (ಮಂಗರಾ. ೯೨-೧೨) ; ದೂಱತ್ತೆ ಮಾವ ಮೈದುನ ನಗೆವೆಣ್ಣಾನು ಗಾಱು ಗತ್ತಲೆಮಾಡಿಯಳುತ ಮೂಱು ದಿನಕೆ ನೀನು ಬೇಱಾಗು ಹೋಗೆಂದು ಸಾಱಿ ಹೇಳಿದೊ ಮಗಳೊಡನೆ (ಅಮುಸಾಂ. ೩-೧೩೩). **ನಗವೆಣ್ಣ** : ೧. ವಿನಯಾನ್ವಿತೆಯಾದ ಮಲ್ಲಮ್ಮನು ಮಹದಪ್ಪಣೆ ಎಂದು ನುಡಿದು ನಗವೆಣ್ಣಿಯರನ್ನು ಹಿಂಬಾಲಿಸಿ, ಗೃಹಕೃತ್ಯಗಳ ಸಲುವಾಗಿ ಒಳಗೆ ಹೊರಟುಹೋದಳು (ಮಲ್ಲಮ್ಮ. ೬). **ನಗೆವೆಣ್ಣು** : ೧. "ಯಾ(ತಾ)ತೃವೆಂಬುದು ನಗೆವೆಣ್ಣು (ನೆಗಣ್ಣ ಎಂದಿರಬಹುದು)" (ಹಲಾಯು. ೮೪-೩೫೪); ಮುವ್ವರು ಮೈದುನರು ಹುಲಿಯಂಥಾ ಅವದಿರು ನಾಲುವರು ನಗೆವೆಣ್ಣು ಕೇಳು ಕೆಳದಿ (ಮಹಾದೇ. ಬ. ೧೪೩-೩೨೮) ; ಅಯ್ವರು ಭಾವದಿರಯ್ವರು ನಗೆವೆಣ್ಣು [ಪಾಕಾಂ. ನಗೆಣ್ಣು] ಅಯ್ವರಯ್ವರು ಕೂಡಿ ಕಾಡುವರು (ಶಿವಗೀ. ೧೩೮-೬೯೩). ೨. ಗಂಡನ ಅಥವಾ ಹೆಂಡತಿಯ ಸಹೋದರಿ ; ನಾದಿನಿ : ನಾ ನಿಮ್ಮ ಭಾವನಲ್ಲಯ್ಯನು ನೀನೆನಗೆ ನಗೆವೆಣ್ಣು (ಅವಜಂ. ೨೦೦-೯೪೩). **ನಗೆಹೆಣ್ಣು** : ೧. ನಗೆಹೆಣ್ಣು [ಪಾಕಾಂ. ನೆಗಣ್ಣ]ಯೆಂಬೋಳು ಮುಂಗೋಪಿ (ಪುರಂದ. ೪-೦೬-೪). **ನಗೆಹೆಣ್ಣೆ** : ೧. ಹೊನ್ನಮ್ಮ . . . ಗಂಡನ ಅಗಲಿಕೆಯ ದುಃಖವನ್ನು ಮರೆತು ಇದೀಗ ನಗೆಹೆಣ್ಣೆಯ ಕೆಲಸದಲ್ಲಿ ಸಹಕಾರಿಣಿಯಾಗುತ್ತಿದ್ದಳು (ಜನಜೀ. ೩೮). **ನೆಗೆಣ್ಣ** : ೧. ಅಲ್ಲದಂತತ್ತೀಗೆ ಬೆಲ್ಲದಂತ ನಾದೂನಿ ನೆಲ್ಲಿಕಾಯಂತ ನೆಗೆಣ್ಣ ಕೂಡಾಡಿ ಕಲ್ಯಾಣ ತವರ ಮರತೇನ (ಜನಗೀ. ೫೮) ; ಎಡಮನೆಯ ಬಾಗಿಲದ ಒಡತಿ ನೀ ನೆಗೆಣ್ಣ ಬಡಿವಾರ ಬ್ಯಾಡ ಮನೆ ಜೋಕೆ (ಜನಗೀ. ೮೧) ; ನವಿಲುಗುಂದಕ್ಕೆ . . . ನೆಗೆಣ್ಣಿಯ ಬಾಣಂತಿತನಕ್ಕೆ ಹೋಗಿದ್ದಳು (ಸಾವಿಉ. ೧೮) ; ನೆಗೆಣ್ಣಿಯಾದಂತೆ, ಒಮ್ಮೆ ಅತ್ತೆಯಾಗಿಯೂ ಅಜ್ಜಿಯಾಗಿಯೂ ಅನ್ನಿಸಿಕೊಳ್ಳುವಳು (ಗರಜಾ. ೨). **ನೆಗೆಣ್ಣು** : (ಕಿ). **ನೆಗೆವೆಣ್ಣೆ** : ೧. ನೆಗೆವೆಣ್ಣೆಯರು ದುರುಳಮನದೆ ಮತ್ಸರಗೊಂಡು (ಮಲ್ಲಜ. ೨-೧೯). **ನೆಗೆಹೆಣ್ಣು** : ೧. "ನೆಗೆಹೆಣ್ಣು = ಅಣ್ಣತಮ್ಮರ ಹೆಂಡಂದಿರು" (ಜಾನಕೋ. ೧೨) ; ಕಾಮವೆಂಬೊ ನೆಗೆಹೆಣ್ಣು ಎನ್ನ ಕಟ್ಟಿ ಆಳುತಾಳೆ ಕ್ರೋಧವೆಂಬೊ ಸವತಿ ಕೊಲ್ಲುತಾಳೆ (ಪುರಂದ. ೫-೧೧೨-೦). **ನೆಗೆಹೆಣ್ಣೆ** : ೧. ಅತ್ತಿಗೆ ನೆಗೆಹೆಣ್ಣೆ ಹೊತ್ತುಹೊತ್ತಿನೊಳೆನ್ನ . . . ಸೆಣಸುವರಮ್ಮ (ಪುರಂದ. ೨-೪೩-೨). [ನಗೆ ? + ಪೆಣ್]

ನಗೆವೆಣ್ಣು 'ನಗೆವೆಣ್' ನೋ.

ನಗೆವೆಳಗು (ನಾ). ನಗೆಯ ಬೆಳಕು,–ಕಾಂತಿ : ನಗೆವೆಳಗಿಂ ಕೈರವಮಂ ಸೊಗಯಿಪ ಕರತಳದ ಕಾಂತಿಯಿಂ ಜಳರುಹಮಂ ನಗಿಸಿ ನಱುಸುಯ್ಯ ಕಂಪಿಂ ಮಿಗೆ ಪೊರೆದವನಲ್ಲಿ ಮಾಱುವರ್ ಮಾನಿನಿಯರ್ (ವೃಷವಿ. ೪-೮೫) ; ನಗೆವೆಳಗು ಮಲರಿದುದು ಮೊಗಕೆ (ಶ್ರೀರಾಮಾ. ೫೩೬-೨೨೨) ; ಚಿನ್ನದ

ನಗೆವೆಳಗನೆ ಚಿಮುಟಿಸುವಾಕಾಶವಟಕ್ಕೆ . . . ದೀರ್ಘದಿಗಂತದ ಘಣಸಮ ರೇಖೆ ಹರಿ ಹರಿಹರಿಯಿತು ತೆರೆತೆರೆತೆರೆವೋಗಿ (ಕೋಗಿಲೆ. ೮೯-೩).

[ನಗೆ + ಬೆಳಗು]

ನಗೆವೆಳ್ಪು (ನಾ). ನಗುವಾಗ ಕಾಣುವ ಹಲ್ಲಿನ ಬಿಳಿಯ ಬಣ್ಣದ ಕಾಂತಿ ; ದಂತಕಾಂತಿ: ಸೊಗಯಿಸಿ ಗೊಟ್ಟಯೊಳ್ ಪಿರಿದು ಸದ್ಗುಣಮನಿತ್ತು . . . ಮೆಲ್ಪು ಮನಂಬುಗ ಗಂಡನೆಂಬ ತುಂಬಿಗೆ ನಗೆವೆಳ್ಪನೋಲಗಿಸುತಿರ್ಪುದು ವಲ್ಲಿಗೆಯಂತೆ . . . ಬುದ್ಧಿವಂತೆಯರ್ (ಲೀಲಾವ. ೦೪-೪೩) ; ಮೇಗೆ ಬಗೆಬಗೆವಣ್ಣದಲರ್ಗಳಿಂದವರಧರರಾಗ ನಗೆವೆಳ್ಪಿನಿಂ ಪಲ್ಲಟಿಸಿದುವು (ಕಲಪು. ೪೫-೪೦) ; ನಗೆವೆಳ್ಪಂಬಿಳಿಜೊನ್ನಮುಂ ಪರಪಿ ಕಾಂತಾಸ್ಯಾಂಬುಜಾತಂಗಳಂ ನಗಿಪರ್ (ಶಾಜಶೇ. ೦೧-೬೦). [ನಗೆ + ಬೆಳ್ಪು]

ನಗೆವೆಱು (ಕ್ರಿ). ನಗುವನ್ನು ಪಡೆ ; ಹಸನ್ಮುಖಿಯಾಗು : ಸೊಬಗಿನ ಸೋನೆಯ ನಗೆವೆತ್ತ ನಲ್ಲಳ . . . ಎಂದು ಸಂದಿವೆನೊ (ಶತಸಾಂ. ೨೭-೪೦).

[ನಗೆ + ಪೆಱು$_1$]

ನಗೆಸಾರ (ನಾ). = ನಗಂಸಾರ : ಇದು ಒಂದು ನಗೆಸಾರದ ಮಾತಾದರೂ ಇದರಲ್ಲೊಂದು ಗೂಢಸತ್ಯವಡಗಿದೆ (ಚೀಪಾತ್ಯ. ೦೫). [ನಗೆ + – ಸರ$_5$?]

ನಗೆಹನಿ (ನಾ). (ಆಲಂ) ನಗುವನ್ನುಂಟು ಮಾಡುವ ಚಿಕ್ಕಮಾತು ; ಚುಟಕ : ರಾಜನ ಆ ಒಂದು ನಗೆಹನಿ ದಾಸೋಜನಲ್ಲಿ ಹೊಸಶಕ್ತಿಯನ್ನು ಆವಾಹಿಸಿತು (ಸವತಿ. ೪೫). [ನಗೆ + ಹನಿ$_3$ (<ಪನಿ$_3$)]

ನಗೆಹಾಡು (ನಾ). ಹಾಸ್ಯದಿಂದ ಕೂಡಿದ ಹಾಡಂ ; ವಿನೋದದಿಂದ ಕೂಡಿದ ಕವನ: ಬೇಂದ್ರೆಯವರ ನಗೆ-ಹಾಡುಗಳಲ್ಲಿ ಕೆಲವು ಅಣಕವಾಡು (parody) ಇವೆ (ನಿಠಾಧ. ೦೦ ಮುನ್ನುಡಿ). [ನಗೆ + ಹಾಡು$_2$(<ಪಾಡು$_2$)]

ನಗೆಹಾಯಿಸು (ಕ್ರಿ). ನಗುವನ್ನು ಹೊಮ್ಮಿಸು ; ನಗು : ಒಂದನ್ನೊಂದು ಸಂಧಿಸುವಾಗ ಚಂಚಲದಳವು ನಗೆಹಾಯಿಸಿ ಕೇಳಿತು-'ಮಿತ್ರರೇ ! ಚೆನ್ನಾಗಿ ಸರಸವಾಡಿದಿರಾ?' (ಮುಸಕೊ. ೨೨). [ನಗೆ + ಹಾಯಿಸು (<ಪಾಯಿಸು)]

ನಗೆಹೆಣ್ಣು 'ನಗೆವೆಣ್' ನೋ.

ನಗೆಹೆಣ್ಣೆ 'ನಗೆವೆಣ್' ನೋ.

ನಗೇಂದ್ರ (ನಾ). ದೊಡ್ಡ ಬೆಟ್ಟ : ವನಸ್ಥಲದೊಳಿಂದಿಭವಿರ್ದುದು . . . ಮದಗಜವಲ್ಲಿದಿಂದ್ರನೊಳಿರ್ದಿದ ನೀಲನಗೇಂದ್ರಮೆಂದಿನಂ (ಪಂಪಾಮಾ. ೦೦-೧೫೯). [ನಗ$_4$ + ಇಂದ್ರ]

ನಗೇಂದ್ರಮೂಲ (ನಾ). ಪರ್ವತದ ಬುಡ,-ತಪ್ಪಲು : ತಾವರೆಯಲ್ಲಿ ತಾರೆ ಜನನಂಬಡೆದಂದು ನಗೇಂದ್ರಮೂಲದೊಳ್ಬಾವಿಸೆ ಬಾಳಿಗಂಬ ವೊಗೆದಂದಂ . . . ಸತಿಯಂಗಮನಾಂ ಪೊಗಳ್ಕೆ ಸಾಲ್ದಪೆಂ (ಶಾಜಶೇ. ೭-೨೬). [ನಗೇಂದ್ರ + ಮೂಲ]

ನಗೇಂದ್ರಯಜ್ಞ (ನಾ). = ನಗಯಜ್ಞ : ನಗೇಂದ್ರಯಜ್ಞಮಂ ನಿಗಟ್ಟು ಗೋವಸಮಾಜಂ ವಿರಾಜಿಸೆ (ಜಗವಿ. ೪-೮೨ ವ). [ನಗೇಂದ್ರ + ಯಜ್ಞ]

ನಗೇಶ್ವರಜೆ (ನಾ). ಪರ್ವತರಾಜನ ಮಂಗಳಂ ; ಪಾರ್ವತಿ ; ಗಿರಿಜೆ : ನಗೇಶ್ವರಜಾನನ ಜಂಬಾಲಜಾತಹಂಸ . . . ಪೊರೆಯಾಧವಾ (ಹಮ್ಮೀರ. ೨-೨). [ಸಂ. ನಗೇಶ್ವರಜಾ]

ನಗೋತ್ಸಂಗ (ನಾ). ಪರ್ವತದ ಪಕ್ಕ,-ಸಾನುಂ : ಉತ್ತುಂಗನಗೋತ್ಸಂಗ ಮಾನೇಱುವ ಮೃಗರಾಜನಂ ಪೋಲ್ತು (ಶಾಂತಿಪು. ೫-೪೪ ವ).

[ನಗ$_4$ + ಉತ್ಸಂಗ]

ನಗೋಪಕಂಠ (ನಾ). ಪರ್ವತದ ಹತ್ತಿರದ ಸ್ಥಾನ : ಪಾಲ ಪೊನಲ್ ಪೊದಟ್ಟಿಂದವಿ . . . ಶೈಲದವೀಗೃಹಂಗಳುಮನೊರ್ಮೆಯೆ ತೆಕ್ಕನೆ ತೀವಿ ತತ್ಸ್ಥಳಸ್ಥೂಲಭುಜಂಗವಿಶ್ವಸಿಶವಮಾನಗದಿಂ ಪೊಱಪೊಣ್ಮಿ ಲೋಲಕಲೋಲ್ಲೋಲ ಪರಂಪರಾಪರಿಗತಂ ಪರಿದತ್ತು ನಗೋಪಕಂಠದೊಳ್ (ಅಜಪು. ೪-೬೩); [ನಗ$_4$ + ಉಪಕಂಠ]

ನಗೋಪತ್ಯಕ (ನಾ). ಪರ್ವತದ ಬುಡದ ಭೂಮಿ,-ತಪ್ಪಲು : ಬೆಳದೋರಂತೊಱಗಿರ್ದ ಶಾಳಿವನದಿಂ ಸೇವ್ಯಂ ನಗೋಪತ್ಯಕಂ (ಆದಿಪು. ೦-೬೪) ; ಪ್ರತ್ಯಂತದೇಶ ಭೂಭೃದವತ್ಯರನೆಬ್ಬಟ್ಟಿ ಪುಗಿಸಿ. ಕಾಂತಾರ ನಗೋಪತ್ಯಕಮುಂ ಕೌಸಲ್ಯಾವತ್ಯಂಗೋಲಗಿಪನವರ ಹರಿವಿಷ್ಪರಮುಂ (ಪಂಪಾಮಾ. ೬-೦೩೪). [ನಗ$_4$ + ಉಪತ್ಯಕ]

ನಗೋಪರಿಮತಲ (ನಾ). ಪರ್ವತದ ಮೇಲ್ಭಾಗದ ಪ್ರದೇಶ; ಶಿಖರ : ವಂಶಸ್ಥಲ ನಗೋಪರಿಮತಲದೊಳ್ ವಿಚಿತ್ರಚೈತ್ಯಭವನಂಗಳಂ . . . ಪೊಟಲಂ ಮಾಡಿಸಿ (ಪಂಪಾಮಾ. ೪-೬೬ ವ). [ನಗ$_4$ + ಉಪರಿಮ + ತಲ]

ನಗೌಕಸ (ನಾ). ೧. ಬೆಟ್ಟ ಅಥವಾ ಪರ್ವತದಲ್ಲಿ ವಾಸಿಸುವಂಥದು ; ಪಕ್ಷಿ : "ಶಕುನಿ ವಿಹಗಂ ವಿಹಂಗಂ ಪತ್ರಿ ವಿಷ್ಕಿರಂ ವಿಕಿರಂ ನಗೌಕಸಂ . . . ಶಕುಂತಂ ಶಕುಂತಿಯೆನೆ ಪಕ್ಷಿ" (ಪುಂಗಣಾ. ೫೦-೦). ೨. ಸಿಂಹ. ೩. ಕಾಗೆ. ೪. ಶರಭ. [ಸಂ. ನಗೌಕಸ್]

ನಗ್ಗಲು 'ನೆಗ್ಗಿಲ್' ನೋ.

ನಗ್ಗಿ (ನಾ). ತಗ್ಗಿಹೋದುದು ; ಚಪ್ಪಟೆಯಾದುದು ; ಸೊಪ್ಪಾದುದು: ಬೆನ್ನೊಳು ತೊ ೀ ಳೊ ಳು ವೊನೆಗಾಯವಿದೆ ತೊಡೆಯಿನ್ನೆಂತೊ ಕಟಗಳಿಂತೊ ನನ್ನ ನಗ್ಗಿಗಳಾದುವೀ ಮೊಲೆಗಳು ಮರ್ಧು ಚೆನ್ನಾಗಿ ತಾಳಿದೌ ಧೀರೆ (ಭರಡ. ೪೨-೭). [ನಗ್ಗು$_1$ (<ನಜುಂಕು) + – ಇ$_3$]

ನಗ್ಗಿಲು 'ನೆಗ್ಗಿಲ್' ನೋ.

ನಗ್ಗಿಸು 'ನೆಗ್ಗಿಸು' ನೋ.

ನಗ್ಗು$_1$ 'ನಜುಂಕು' ನೋ.

ನಗ್ಗು$_2$ 'ನೆಗ್ಗು$_2$' ನೋ.

ನಗ್ಗೆತ್ತಿಸು (ಕ್ರಿ). (ಪಾತ್ರೆ ಮೊದಲಾದುವುಗಳ) ತಗ್ಗನ್ನು ಎತ್ತಿಸು,-. ಸರಿಮಾಡಿಸು ; ತಗ್ಗೆತ್ತಿಸು : ಕಾಚುಗಾರನಿಂದ ಹಳೆಯ ಪಾತ್ರೆಗಳನ್ನು ನಗ್ಗೆತ್ತಿಸಬೇಕು (ಕೂಡಿ). [ನಗ್ಗೆತ್ತು + – ಇಸು$_5$]

ನಗ್ಗೆತ್ತು (ಕ್ರಿ). (ಪಾತ್ರೆ ಮೊದಲಾದುವುಗಳ) ತಗ್ಗನ್ನು ಸರಿಮಾಡು : ತಗ್ಗೆತ್ತು : ಕಾಚುಗಾರ ಪಾತ್ರೆಗಳನ್ನು ನಗ್ಗೆತ್ತುತ್ತಾನೆ(ಕೂಡಿ). 'ನಗ್ಗೆತ್ತಿಸು' ಪರಾ. [ನಗ್ಗು$_2$ (<ನೆಗ್ಗು$_2$) + ಎತ್ತು$_1$]

ನಗ್ನ (ಗು). ೧. ಬತ್ತಲೆಯಾಗಿರುವ ; ಬತ್ತಲೆಯಂ : ವಸ್ತ್ರಾನ, ಶೂನ್ಯ, ದೀರ್ಘ, ನಗ್ನ, ರಿಕ್ತ, ಋಜು ದಿಗಂತದಿ ಗಗನಕೆದುರು ನಿಂತಿದೆ ತರು ಮುನಿಯ ಚಿತ್ತಿನಂದದಿ (ಅನಿಕೇ. ೦೪-೦). ೨. ಸಾಗುವಳಿಯಿಲ್ಲದಿರುವ ; ಬೀಳಾದ. ೩. ಮುಚ್ಚುವಂರೆಯಿಲ್ಲದ ; ಸ್ಪಷ್ಟವಾದ. 'ನಗ್ನಸತ್ಯ' ಪರಾ. (ನಾ). ೪. ಮೈಮೇಲೆ ಹೊದಿಕೆ, ಬಟ್ಟೆಗಳಿಲ್ಲದಿರುವುದು ; ದಿಗಂಬರವಾಗಿರುವುದಂ ; ಬತ್ತಲೆ ; ನಿರ್ವಾಣ : ಕೆಲವು ಪುರುಷ ಮತ್ತು ಸ್ತ್ರೀ ವಿಗ್ರಹಗಳು ನಗ್ನವಾಗಿಯೇ ನೃತ್ಯಭಂಗಿಯಮ್ಮ ಕೋರಿಸುತ್ತಿರುವುದರಿಂದ ದೇವತಾಪೂಜೆಯಕಾಲದಲ್ಲಿ ನಗ್ನತ್ವ ಆವಶ್ಯಕವೆಂಬ ಭಾವನೆ ಹೊಂದಿದ್ದಿರಬಹುದು (ಭಾರದ. ೧೩). 'ನಗ್ನ ನೃತ್ಯ' ಪರಾ. ೫. ಬತ್ತಲೆಯಾಗಿರುವವನು ; ದಿಗಂಬರ : "ನಗ್ನಃ, ಅವಾಸಾಃ, ದಿಗಂಬರಃ – ೩ ದಿಗಂಬರನ ಹೆಸರು, ಬೆತ್ತಲೆಯಾಗಿರುವವನು" (ಸಿದ್ಧಾಂತಿ. ೩೩೩). ೬. ದಿಗಂಬರ ಸಂನ್ಯಾಸಿ ; ಜೈನಭಿಕ್ಷುಂ. ೭. ಶಿವ ; ಈಶ್ವರ. ೮. ಬರಿದಾಗಿರುವುದಂ ; ರಿಕ್ತವಾದುದಂ ; ಶೂನ್ಯ : ಮಾಂಡವಿಯ ಮನದನ್ನನ್ . . . ಪತಿವಿಪತ್ಪ್ರಹೀನೆಯಂ ದುಃಪಾತಿದೀನೆಯಂ, ಕೌಸಲ್ಯೆಯಂ ಕಂಡನಂತಃಪುರದ ನೆಲದ ನಗ್ನದಲಿ (ಶ್ರೀರಾಮಾ. ೧೦೩-೧೦೬). ೯. ನಿರ್ವಾಣ ಸ್ಥಿತಿಯನ್ನು ಪಡೆದವನು ; ಬುದ್ಧ : ಎವೆಯಿಕ್ಕದೆ ನೋಡಿದ . . . ಭೂಭುಜರ ಕಡಿದ ಶಿವನ ಬಿಲ್ಲನು. ಮುಱಿದ ದೇವಕಿಕುವರ ನಗ್ನನು[ಪಾಠಾಂ. ಪೆಗ್ಗಳ]ಹಯವನೇಱಿದ (ಕನಕ. ೭೩-೨). P ದಾಸರ ಕೀರ್ತನೆಗಳಲ್ಲಿ 'ನಗ್ನ' ಎಂಬುದನ್ನು ಬುದ್ಧನಿಗೆ ಅನ್ವಯಿಸಿ

ಹೇಳಿದ್ದಾರೆ. ಬಹುಶಃ ಇದನ್ನು 'ನಿರ್ವಾಣ' ಎಂಬುದಕ್ಕೆ ಸಂವಾದಿಯಾಗಿ ಹೇಳಿರಬಹುದೇ ? ೧೦. ವಂದಿ; ಮಾಗಧ; ಹೊಗಳಂಭಟ; ಸ್ತುತಿಪಾಠಕ: ನಟ ನಗ್ನ ಭಗ್ನಗಾಯಕ ವಟು ಪಾಠಕ ಪಂಡಿತರ್ಕಳಭಿವರ್ಣನದುತ್ಕಟನಾದಮೆಯ್ದಿದುದು ದಿಕ್ತಟಮಂ (ಮಹಾನೇ. ೧೧-೧೪೩). [ಸಂ.]

ನಗ್ನಕ (ನಾ). ೧. ನಗ್ನನಾಗಿರುವವನು; ಬತ್ತಲೆಯಾಗಿರುವವನು. ೨. ಜೈನಸಂನ್ಯಾಸಿ. ೩. ಸ್ತುತಿಪಾಠಕ. [ಸಂ.]

ನಗ್ನಖಡ್ಗ (ನಾ). ಒರೆಯಿರದ ಖಡ್ಗ; ಮುಚ್ಚಿರದ ಕತ್ತಿ: ಸೊಂಟದಿಂ ಜೋಲ್ದುದು ಮಹಾಭೀಳ ನಗ್ನಖಡ್ಗಂ (ಶ್ರೀರಾಮಾ. ೬೪೩-೩೫).
[ನಗ್ನ + ಖಡ್ಗ]

ನಗ್ನತೆ (ನಾ). ೧. ಬತ್ತಲೆಯಾಗಿರುವಿಕೆ; ದಿಗಂಬರನಾಗಿರುವಿಕೆ: ಸಹಜ ನಗ್ನತೆ ನಮಗೆ, ಸಹಜ ನಖದಾಡಿಗಳು ಬಹುಯುಗದ ಸಂಸ್ಕಾರ ವಸ್ತ್ರ ಸಿಂಗಾರ (ಮಂಕುಳ. ೨೦೪). ೨. ಅನನ್ಯತೆ; ಲೀನವಾಗಿರುವಿಕೆ: ಭೀಮಕಾಯಂ ಕಠಿನಗಂಭೀರನಾ ಯೋಗಿ ಕೌತುಕಂಬಟ್ಟರುಂ ವಿಸ್ಮಯ ಕ್ಕೆಡೆಗೊಡದೆ, ಮಗ್ನನಾದಂ ಧ್ಯಾನದದ್ವೈತ ನಗ್ನತೆಗೆ! (ಶ್ರೀರಾಮಾ.೧೪೩-೪೦).
[ಸಂ. ನಗ್ನತಾ]

ನಗ್ನತ್ವ (ನಾ). = ನಗ್ನತೆ ೧: ಕೆಲವು ಪುರುಷ ಮತ್ತು ಸ್ತ್ರೀ ವಿಗ್ರಹಗಳು ನಗ್ನವಾಗಿಯೇ ನೃತ್ಯಭಂಗಿಯನ್ನು ತೋರಿಸುತ್ತಿರುವುದರಿಂದ ದೇವತಾ ಪೂಜೆಯ ಕಾಲದಲ್ಲಿ ನಗ್ನತ್ವ ಅವಶ್ಯಕವೆಂಬ ಭಾವನೆ ಹೊಂದಿದ್ದಿರಬಹುದು (ಭಾರದ. ೧೩). [ಸಂ.]

ನಗ್ನನೃತ್ಯ (ನಾ). ಬತ್ತಲೆಯಾಗಿ ಮಾಡುವ ನೃತ್ಯ; ಬತ್ತಲೆ ಕುಣಿತ: ಈ ಆದಿವಾಸಿ ಮಾನವರ ನಗ್ನರೂಪ, ನಗ್ನನೃತ್ಯಗಳು ಅವನಿಗೆ ಬೇಸರ ವನ್ನುಂಟುಮಾಡಿದ್ದುವು (ಸ್ವಪ್ನಹೊ. ೨೪೬). [ನಗ್ನ + ನೃತ್ಯ]

ನಗ್ನರೂಪ (ನಾ).೧. ಬತ್ತಲೆಯ ರೂಪ; ದಿಗಂಬರತೆ: ಈತನು ಮೌನ ವಾಗಿರುತ್ತಿದ್ದನು. ನಗ್ನರೂಪದಲ್ಲಿ ವಿಹರಿಸುತ್ತಿದ್ದನು (ಭಾರದ. ೦೬೮); ಈ ಆದಿವಾಸಿ ಮಾನವರ ನಗ್ನರೂಪ, ನಗ್ನನೃತ್ಯಗಳು ಅವನಿಗೆ ಬೇಸರ ವನ್ನುಂಟುಮಾಡಿದ್ದುವು (ಸ್ವಪ್ನಹೊ. ೨೪೬). ೨. ಮುಚ್ಚುಮರೆಯಿಲ್ಲದ ಸ್ವರೂಪ; ಸ್ಪಷ್ಟಚಿತ್ರ; ಬಹಿರಂಗ ರೂಪ: ಸೊಸೈಟಿಯ ವ್ಯವಹಾರ ದಲ್ಲಿ ನಡೆಯುತ್ತಿದ್ದ ಅನ್ಯಾಯಗಳ ನಗ್ನರೂಪ ಗೋಚರವಾಗತೊಡಗಿತು (ಮರಳಿ. ೦೦೮). [ನಗ್ನ + ರೂಪ]

ನಗ್ನಸತ್ಯ (ನಾ). ಯಾವ ಮುಚ್ಚುಮರೆಯೂ ಇಲ್ಲದ ನಿಜಸ್ಥಿತಿ, ಮಾತು ಮುಂತಾದುದು; ಸ್ಪಷ್ಟವಾದುದು: ನಗ್ನಸತ್ಯ ಯಾರಿಗೂ ಸೇರದು (ದಾಬುತ್ತಿ. ೨೨). [ನಗ್ನ + ಸತ್ಯ]

ನಗ್ನಹು (ನಾ). ೧. ಮದ್ಯದ ತಯಾರಿಕೆಯಲ್ಲಿ ಹುಳಿ ಹಿಡಿಸುವುದಕ್ಕಾಗಿ ಬಳಸುವ ಒಂದು ಬಗೆಯ ಮಾದಕದ್ರವ್ಯ; ಕಿಣ್ವ. ೨. ಮದ್ಯದ ಮೇಲೆ ಹಿಡಿಯುವ ಮಷ್ಟು. ೩. ಮದ್ಯವನ್ನು ತಯಾರಿಸುವ ಪಾತ್ರೆ,-ಮಡಕೆ: "ಕಿಣ್ವಂ, ನಗ್ನಹುಃ – ೨ ಮದ್ಯದ ಹಿಪ್ಪಿಯಲ್ಲೂ ಮದ್ಯವ ಮಾಡುವ ದೋಣಿಯಲ್ಲೂ ವರ್ತಿಸುವದು" (ಸಿದ್ಧಾಂತಿ. ೨೬೪).
[ಸಂ. ನಗ್ನಹು, ನಗ್ನಹೂ]

ನಗ್ನಾಂಗ (ನಾ). ೧. ಬರಿಯ ಮೈ; ಹೊದಿಕೆಯಿಲ್ಲದ ದೇಹ; ಬತ್ತಲೆಯಾದ ಶರೀರ. ೨. ಬತ್ತಲೆಯಾಗಿರುವವನು; ನಿರ್ವಾಣದಲ್ಲಿ ರುವವನು; ದಿಗಂಬರ. [ನಗ್ನ + ಅಂಗ$_2$]

ನಗ್ನಾಂಗಿ (ನಾ). ಬತ್ತಲೆಯಾಗಿರುವವಳು; ವಿವಸ್ತ್ರಳಾಗಿರುವ ಸ್ತ್ರೀ: ಕೊಳದೊಳ್ನಿಂದು ತರತ್ತರಂಗಜಳವಮಂ ಮಿಂದಲ್ಲಿ ನಗ್ನಾಂಗಿ ಪೊಕ್ಕಳಿ ನಾದಚ್ಛಲದಿಂ ಕುಮಂತ್ರಜಪಮಂ ತದ್ವೇಷದಿಂ ಮಾಡೆ... ಮೈಗಂದಿ ಬಿಳ್ದಳಿದಂ... ಭಾಸ್ಕರಂ (ಶಾಖಶೇ. ೧೩-೩೨). [ನಗ್ನಾಂಗ + – ಇ$_2$]

ನಗ್ನಾಟ (ನಾ). ೧. ಬರಿಮೈಯಲ್ಲಿ ತಿರುಗುವವನು; ಬತ್ತಲಿಗ. ೨. ಜೈನ ಸಂನ್ಯಾಸಿ; ದಿಗಂಬರ: "ನಗ್ನಾಟಃ, ದಿಗ್ವಾಸಾಃ, ಕ್ಷಪಣಃ... ನಿರ್ಗ್ರಂಥಃ, ಸಾಧುಃ – ಈ ೧೦ ಸವಣರ ಪೆಸರ್" (ಹಲಾಯು. ೫೭-೧೮೯); "ಸಾಧು ನಿರ್ಗ್ರಂಥರಾ ನಗ್ನಾಟರು" (ಮಂಗೆರಾ. ೬೬-೦). [ಸಂ.]

ನಗ್ನಾವಸ್ಥೆ (ನಾ). ೧. ವಿವಸ್ತ್ರವಾಗಿರುವ ಸ್ಥಿತಿ; ಬತ್ತಲೆ. ೨. ಹೊದಿಕೆ ಯಿಲ್ಲದಿರುವಿಕೆ; ಆವರಣಗಳಿಲ್ಲದಿರುವಿಕೆ: ನಗ್ನಬೀಜಗಳು (Gymnosperms)... ಬೀಜಗಳ ಸುತ್ತಲೂ ಇವುಗಳಲ್ಲಿ ಫಲಕೋಶದ ಕವಚವಿರುವುದಿಲ್ಲ. ಆದ್ದರಿಂದ ಬೀಜಗಳು ನಗ್ನಾವಸ್ಥೆಯಲ್ಲಿರುತ್ತವೆ (ಸಸ್ಯಶಾ. ೪). [ನಗ್ನ + ಅವಸ್ಥೆ]

ನಗ್ನಿಕೆ (ನಾ). ೧. ಬತ್ತಲೆಯಾಗಿರುವವಳು; ವಿವಸ್ತ್ರಳಾದ ಸ್ತ್ರೀ: "ನಗ್ನಿಕಾ, ಕೋಟವೀ – ೨ ಬಟ್ಟೆಯುಡದೇ ಬೆತ್ತಲೇ ಇರುವವಳ ಹೆಸರು ಗಳು" (ಸಿದ್ಧಾಂತಿ. ೧೫೦). ೨. ಋತುಮತಿಯಾಗದ ಹುಡುಗಿ; ಮೈ ನೆರೆಯದವಳು: "ಮೆಯ್ನೆಱೆಯಲಾದವಳಂ ನಗ್ನಿಕಾಯೆಂಬುದು" (ಹಲಾಯು. ೭೯-೩೩೦); "ಗೌರಿ, ನಗ್ನಿಕಾ, ಅನಾಗತಾರ್ತವಾ – ೩ ಮೈನೆರೆಯದೆ ಇರುವ ಪ್ರಾಯದ ಹುಡುಗಿ ಹೆಸರುಗಳು" (ಸಿದ್ಧಾಂತಿ. ೦೪೭).
[ಸಂ. ನಗ್ನಿಕಾ]

ನಗ್ನೆ (ನಾ). ೧. = ನಗ್ನಿಕೆ ೧: "ನಗ್ನಾ, ಕೋಟವೀ – ಈ ೨ ನಗ್ನೆ" (ಹಲಾಯು. ೭೯-೩೨೯). ೨. = ನಗ್ನಿಕೆ ೨. [ಸಂ. ನನಗ್ನಾ]

ನಚ್ಚಣ, ನಚ್ಚಣೆ, ನಚ್ಚನೆ (ನಾ). ನರ್ತನ; ನಾಟ್ಯ; ಕುಣಿತ: "ನಚ್ಚಣ ಮೆಂದು ನರ್ತನಂ" (ಕಶಸಾ. ೨೫-೫೨೦); "ನೆನಸು ನಚ್ಚಣಮೆ ನರ್ತನಂ" (ಕವಿಕಂ. ೨೦೬); ನಚ್ಚಣಂಗಳನೊಲ್ದಾಗಿಪ ನರ್ತಕೀಸಮುದಯಂ... ತಾವಿತ್ತುವುಜ್ಜ್ವಳ ಮೋದಂಬಡೆದೀಕ್ಷಿಪಾ ಪುರಜನಕ್ಕುತ್ಸಾಹಸಂದೋ ಹಮಂ (ಉದ್ಯಟ. ೮-೫೩); ನಚ್ಚಣದ ಆ ಸಂಭ್ರಮ ಮುಗಿದ ಮೇಲೆ ಸಭೆ ಹರಿಯಿತು (ಸವತಿ. ೬); ಇನ್ನು ಈ ರತಿಗಳು – ಮೋಹನಾಂಗಿಯರಿ ಬ್ಬರಿಗೂ ಆವ ಓಲಗದಲ್ಲಿಯಾದರೂ, ನಚ್ಚಣದ ಹಸೆಯ ಮೇಲೆ ಹೊರ ತಾಗಿ ಅವಸರವಿಲ್ಲ (ಬೆಟ್ಟಅ. ೨೦೯-೮) ನಚ್ಚಣೆ: ನಚ್ಚಣೆಯ ಬಾಜಣೆಯ ... ಬಿಜ್ಜಣಿಗೆಯ ದೇವಾಂಗನೆಯರ ಗೊಂದಣಂ (ರಾಮಾಶ್ವ. ೭೬-೨೮). ನಚ್ಚನೆ: ಮಚ್ಚರದಾಯಮಂ ಮಱೆದು ಕೈದುಗಳಂ ತೊಱೆದುಟ್ಟು ತೊಟ್ಟ ಪೆಣ್ಬಚ್ಚಮೊಡಂಬಡಂ ಪಡೆಯ ಮೈಲೆಯನಚ್ಚನೆಯಂತೆ ಸೂಲಮಂ ಬಚ್ಚಿಸಿ (ಅನಂಪು. ೦೩-೪೭). [< ಪ್ರಾ. ಣಚ್ಚಣ./ ಸಂ. ನರ್ತನ]

ನಚ್ಚಣವಕ್ಕಿ (ನಾ). ನರ್ತನ ಮಾಡುವ ಹಕ್ಕಿ; ನವಿಲು: ನುಡಿವಕ್ಕಿ ನಚ್ಚಣ ವಕ್ಕಿಯಮಳ್ವಕ್ಕಿ ನಡೆವಕ್ಕಿಗಳಿವು ನಿಮ್ಮ ನುಡಿ ಮುಡಿ ಮೊಲೆಗೆಣೆ ಯೆಂದೆಂಬವಿವ ನೋಡು ಮಡದಿಯೆನುತಲೈದಿದನು (ರಾಮವಿ. ೪-೦೨೬).
[ನಚ್ಚಣ + ಪಕ್ಕಿ$_1$]

ನಚ್ಚಣಿ (ನಾ). ನಾಟ್ಯ ಮಾಡುವವಳು; ನರ್ತಕಿ: ಆರುಂ ಮೆಚ್ಚಿ ಪೊಗಟ್ವೆ ನೆಗಮೊರ್ವಳ್ ನಚ್ಚಣಿ ನರ್ತಿಸಿದಳಿಚ್ಚೆಯಱಿದಚ್ಚರೆವೋಲ್ (ಸುಕುಮಾ. ೧೦-೨೨); ಹಸನಿಸುವೆನೆ ಭೃಂಗಿಯೂರುವಸಿ ತಿಲೋತ್ತಮಾದಿ ದಿವಿಜ ಕುಸುಮಗಂಧಿನಿಯರೆ ನಚ್ಚಣಿಯರು (ಮಹಾದೇ. ಬ. ೧೧೫-೩೪೦); ಕೆಲಕೆ ನಸುಬಾಗುವಂಚಿತವಲೆಗುಂ ಮನವೊಲೆವ ಲೋಳಿತಂ ನಚ್ಚಣಿಯಾ (ಲೀಲಾವ. ೪-೦೨೩); ಎಳಲತೆಯೆಂಬ ನಚ್ಚಣಿಯನಾಡಿಸಿ ತುಂಬಿಗಳೆಂಬ ಗಾಯಕಾವಳಿಯನಱಂಸಿನಿಂ ತಗುಳೆ ಪಾಡಿಸಿ (ಅನಂಪು. ೦-೯೨); ನಚ್ಚಣಿಯ ಕಾಲು ಮಾನಕ್ಕೆ ಕಣ್ಣೆನಲು ವಿದ್ವಚ್ಚಯಕೆ ಪರಿತೋಷವಾಗೆ ಸಮ್ಮೋಹನ ವನಚ್ಚೊತ್ತಿದರು ತಾಳದಡಿಗಳಗಣಿತ ಶಬ್ದದುಚ್ಚರಣೆ ಸೊಗಸಾಗಲು (ಸೌಂದಪು. ೮-೩); ಹೊಲೆಯರೀ ಮೇಳದ ನಡುವೆ ಮಿಗೆ ನಲಿವ ಚೆಲು ನಚ್ಚಣಿಯನಕಟೀ ಕುಲದೊಳಗೆ ಪುಟ್ಟಿಸಿದನಜನು (ಸಾಳ್ಯಭಾ. ೧೮-೪೨). 'ನರ್ತಿಣಿ' ಪರಾ. [< ಪ್ರಾ. ಣಚ್ಚಣೀ./ ಸಂ. ನರ್ತನೀ]

ನಚ್ಚಣಿಗ (ನಾ). ನರ್ತನ ಮಾಡುವವನು ; ನರ್ತಕ : ನಚ್ಚಣಿಗರ ಬಿಚ್ಚಣಿಗೆಯಿಂ ಗಾಣರ ಗಮಕದಿಂ . . . ಓಲಗಂ ವಿರಾಜಿಸುತಿರ್ದುದು (ಉದ್ಯಟ. ೨-೦೬ ಪ) ; ನಚ್ಚಣಿಗರ ನಟನೆಗೆ ಮೋಹಿಸಿದೊಡೆ ಪುಚ್ಚಣಿಯಹುದೆನು ತೊರ್ವಳ್ ಮುಗ್ಧೆಗೆಯುಸುರಿದಳು ವಿದಗ್ಧೆ (ಅಯಾಶಾ. ೧೪-೫೦) ; ವೀರ ಭಟರ ವಿದ್ವಾಂಸರಕ್ಕರಿಗರ ನೇರಣಿಗರ ನಚ್ಚಣಿಗರ ವಾರವನಿತೆಯರ ವೈದ್ಯರ ಬಚ್ಚರ ಕೇರಿಯಿಂದೆಸೆಯಿತಾ ನಗರ (ನೇಮಿಸಂ. ೦-೭೯); ನಚ್ಚಣಿಗರ ನಗೆಗಾಱರ ಬಗೆಯ ಬಲ್ಲಿಚ್ಚೆಗಾಱರ . . ಕೇರಿಗಳಚ್ಚರಿಮಿಗೆ ಕಣ್ಗೆಸೆದವು (ಶಾಂತಾಂ. ೪-೧೦೩) ; ಯಾವುದೇ ಕುಣಿತದಲ್ಲಿಯಾದರೂ ನಚ್ಚಣಿಗರು ಔಚಿತ್ಯದ ಎಲ್ಲೆಯನ್ನು ಮೀರಿದುದು ಕಾಣಲಿಲ್ಲ (ಸಚಿ. ೪).

[ನಚ್ಚಣ + – ಇಗ]

ನಚ್ಚಣಿಗೆ (ನಾ). = ನಚ್ಚಣಿ : ನಚ್ಚಣಿಗೆಯರ ಪೆಚ್ಚುಗೆಯಿಂ ಗಾಯನಿಯರಾಯತಿಯಿಂ ಮನಂಗೊಳಿಪ ತದ್ವಿವಾಹಮಂಟಪಂ (ಉದ್ಯಟ. ೮-೯ ಪ).

[ನಚ್ಚಣಿಗ + – ಎ₂]

ನಚ್ಚಣಿಸು (ಕ್ರಿ). ಕುಣಿ; ನೃತ್ಯ ಮಾಡು; ನರ್ತಿಸು : ಅಂದುಗೆ ಘುಲಘುಲರೆನೆ ನಚ್ಚಣಿಸಿ ಮುಡಿ ಬೆನ್ನೊಳುದಿಸೆ ಕಂಕಣನಿನದ ಪೊಚ್ಚಪೊಸಡವ್ವನೆಯರಾಡಿದರು ಹೊಡೆಚೆಂಡ (ರಾಘವ. ೭-೩೩); ಲಯಕಾಲದಲ್ಲಸಮನಯನಾಗ್ನಿಕಣದಿಂ ಚುರ್ಚಿ ಪೆರ್ಚಿ ನಚ್ಚಣಿಪಂ ಪಿಶಾಚರೊಡನೆ (ಕೊಟ್ಟೂಪು. ೩-೩೯) ; ಇದರೊಳ್ ರಾಯನಡಾಯುಧದಿಂದರಿದ ಪಗೆದಲೆಗಳರಿಲ್ವಟ್ಟೆಯೊಳ್ನಚ್ಚಣಿಸುತ್ತಿರ್ಪಿನಂ ಆ ಕಾಲದೊಳ್. . .ಬಣ್ಣಿಸಿರ್ಪುದರಿಂ ಸಾಮಾನ್ಯಾಲಂಕಾರಂ (ನರಕ. ೦೦೪-೨೬೮ ಪ). [ನಚ್ಚಣ + – ಇಸು₃]

ನಚ್ಚಣಿ 'ನಚ್ಚಣ' ನೋ.

ನಚ್ಚನಿ 'ನಚ್ಚಣ' ನೋ.

ನಚ್ಚಯ (ನಾ). ಒಬ್ಬಾತನ ಹೆಸರು : ಶ್ರೀರಾಮರಾ ರಾಮಡಿನಾಡು ಮೂನೂಱಱ ನಾಣ್ಣರಸಾ ಆಳೆ ಅವರ ಮಗನ್ದೊನ್ನಮಾರನ್ ಚೊಱದ ನಚ್ಚಯನ್ನೊಳ್ಪಟ್ಟು (ಎಕ. X, ಗೋರೀಪಿ. ೭೭-೩ ; ಸು. 750).

[<ನರಸ + ಅಯ್ಯ₁ (<ಅಯ್ಯ₁)]

ನಚ್ಚಿಕೆ, ನೆಚ್ಚಿಕೆ (ನಾ). ನಂಬಿಕೆ ; ಭರವಸೆ ; ವಿಶ್ವಾಸ : ಚೋಳನ ದರ್ಪಮಂ ಮುಱಿಯಲ್. . .ನೆಗೞ್ದ ಗೂರ್ಜ್ಜರನಂ ತುಳಿಯಲ್ಕೆ ಪಾಂಡ್ಯ ಭೂಪಾಳನೆ ಸಾಲ್ಕುಮೆಂಬಿನಿತು ನಚ್ಚಿಕೆ ವಿಕ್ರಮಚಕ್ರವರ್ತ್ತಿಗೆ (ಎಕ. XI, ದಾವಣ. ೩-೨೦; 1121) ; ಶತ್ರುಮಂಡಲಕೆಲ್ಲ ಕಗ್ಗಪ್ಪು ಕವಿಸಿದನು ಸಚಿವರಲಿ ಆತನೇ ನಚ್ಚಿಕೆಗೆ ಮೆಚ್ಚಿಕೆಗೆ ಹೆಸರಾಗಿ ಗುಹೆಗೆ ಕತ್ತಲೆಯಂತೆ ಮೆರೆದನಯ್ಯ (ಕವಿಸೋ. ೯೦-೨೧). ನೆಚ್ಚಿಕೆ : ಅವಳ ನೆಚ್ಚಿಕೆಗೆ ವಜ್ರಕರ್ಕಶವಾದ ಫಲವು ದೊರೆಯಿತು (ಶಾವ್ಯಸ. ೨೬) ; ನಂಬಿಕೆ ನೆಚ್ಚಿಕೆ ಇಲ್ಲದ ದೇಶವು ಪ್ರಜಾಪ್ರಭುತ್ವಕ್ಕೆ ಎಂದೂ ತಕ್ಕುದಾಗಲಾರದು (ಯುಕ್ಷಪ್ರ. ೬೩) ; ಎಷ್ಟು ದೂರ ಹೋಗುವೆನೆಂಬ ನೆಚ್ಚಿಕೆಯಿಲ್ಲ (ನಿರಾತಿ. ೯೦) ; ಬ್ಯಾಂಕ್ ಕೆಲಸ ಯಾವ ನೆಚ್ಚಿಕೆ ವೆಂಕಮ್ಮನವರೇ ? (ಶಾಯಿಳ. ೨೨).

[ನಚ್ಚು₁ + – ಇಕೆ]

ನಚ್ಚಿಗೆ 'ನಚ್ಚುಗೆ' ನೋ.

ನಚ್ಚಿಸು₁, ನೆಚ್ಚಿಸು (ಕ್ರಿ). ೧. ನಂಬುವಂತೆ ಮಾಡು ; ವಿಶ್ವಾಸವಿಡುವಂತೆ ಮಾಡು : ನಿಮ್ಮಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು ಮಚ್ಚಿಸು ಕೂಡಲಸಂಗಮದೇವಾ (ಬಸವ. ೨೬೫). ೨. ಪ್ರೀತಿಸು : ನೌಲೀಕದಂಬ ಕುಜದೊಳ್ ನಲಿಗುಂ ಪ್ರವಂತ್ತಂ ಮೇಲಾದ ಸಂತಸದೆ ನಲ್ಲಳ ನಚ್ಚಿಸುತ್ತಂ (ಉರಾಪ. ೩-೨೨). ನೆಚ್ಚಿಸು : (ಕ). [ನಚ್ಚು₁ + – ಇಸು₂]

ನಚ್ಚಿಸು₂ (ಕ್ರಿ). ಕಂಣಿ ; ನರ್ತನ ಮಾಡು ; ನರ್ತಿಸು : ಇಚ್ಚಿಸುವರಚ್ಚಿಗಳ ಮೋಹದ ಮಚ್ಚುಮದ್ದೊಡಲಿಟ್ಟುದೆನೆ ಸತಿ ಮೆಚ್ಚಿ ಸಭೆಯಿಚ್ಛೈಸೆ ನಚ್ಚಿಸಿದಳು ಮನೋಹರದಿ (ಶಾಳ್ಳಳಾ. ೩೨-೩೦). [< ನಚ್ಚಣಿಸು]

ನಚ್ಚು₁, ನರ್ಚು₁, ನೆಚ್ಚು₁ (ಕ್ರಿ). ೧. ನಂಬು; ವಿಶ್ವಾಸವಿಡು ; ಭರವಸೆಯಿಡು : "ನಚ್ಚು – ವಿಶ್ವಾಸೇ (ನಂಬು)" (ಕಮಾಧಾ) ; ಆಳ್ದನುಮೆನ್ನನೆ ನಚ್ಚಿ ಪೆರ್ಚಿ ಮುಂ ಪೊರೆದನಿದರ್ಚಿ ಕಾದುವರುಮೆನ್ನಯ ಸೋದರರ್ (ಪಂಪಭಾ. ೯-೭೦) ; ನಿನ್ನನೆ ನಚ್ಚಿದಂ ಕಂರುವಂಹೀಪತಿ (ಪಂಪಭಾ. ೧೨-೫೭) ; ಮುಗಿಲ ನೀರಂ ನಚ್ಚಿ ಡೊಣೆಯ ನೀರಂ ತುಳುಂಕಿದ ಕೋಡಗದಂದಂ ನಿನಗಕ್ಕುಂ (ಪಂಪತಿ. ೬೮-೭) ; ನಚ್ಚಿದೆಮ್ಮ ಕೋಣನ ನೀದತ್ತೆಂಬಂತೆ (ಧರ್ಮಾಮೃ. ೨-೦೦೩) ; ನಂಬರು ನೆಚ್ಚರು ಬಱಿದೆ ಕರೆವರು . . . ನಂಬದೆ ನಚ್ಚದೆ ಬಱಿದೆ ಕರೆವರ ಕೊಂಬ ಮೆಟ್ಟಿ ಕೂಗೆಂದ (ಬಸವ. ೦೦೬) ; ನಚ್ಚುಗೆ ಮನ ನಿಮ್ಮಲ್ಲಿ ಮಚ್ಚುಗೆ ಮನ ನಿಮ್ಮಲ್ಲಿ (ಮಹಾದೇ. ಬ. ೩೦-೬೬); ಕೆಡುವ ಕಾಯುವ ನಚ್ಚಿ ಬಂಧುಗಳೊಡನೆ ವೈರವ ಮಸೆದು ನರಕಕ್ಕೆ ಕೆಡೆವೆನೇ ತಾನೆನುತ ರಥದೊಳು ಬಲ್ಲನಿಳುಹಿದನು (ಕುಮಾಧೀ. ೩-೩೦). ೨. ಮೆಚ್ಚು; ಬಯಸು ; ಪ್ರೀತಿಸು : ಸೌಧರ್ಮ ಕಲ್ಪದೊಳ್ ದೇವರ್ಕಳ ಸಭೆಯ ನಡುವೆ ಸೌಧರ್ಮೇಂದ್ರಂ ನಿಮ್ಮ ರೂಪ ನಾದಮಾನುಂ ನಚ್ಚಿ ಬಣ್ಣಿಸಿದೊಡಿಂದ್ರನ ಮಾತಂ ನಂಬದೆ ನಿಮ್ಮಂ ನೋಡಲ್ ಬಂದೆಂ (ವಡ್ಡಾರಾ. ೬೬-೮) ; ನಿನ್ನ ರೂಪನೆ ನೋಡಿ ಬಾಟುವೆನಾಗಳುಂ ಮನದರ್ತಿಯಿಂ ನಿನ್ನ ಮುದ್ದನೆ ನಚ್ಚಿ ಮೆಚ್ಚುವೆನಾಗಳುಂ (ಧರ್ಮಾಮೃ. ೩-೨೨೦). 'ನಚ್ಚಿಸು₁' ಪರಾ. △ ನರ್ಚು₁: ೧. ರಣಮುಖದೊಳ್ ಭೀಕರಂ ಕೊಲ್ಲೆ ನಾನೆಂಬಿನಿತಂ ತಾಂ ನರ್ಚಿ [ಪಾಶಾಂ. ಚ್ಛ] ಮೆಯ್ವರ್ಚಿದನೊ (ಚಂದ್ರಪು. ೬-೨೫ ಪ) ; ಎನಸುಮೀ ಮಲ್ಲನಡಿ ನರ್ಚಲಪವರ್ಗಮೇನನುಗೊಳ್ಗುಮೇ (ಅರಾಪ. ೨-೯). ನೆಚ್ಚು₁ : ೧. ನಿನ್ನನೆ ನೆ[ಪಾಶಾಂ. ನ] ಚ್ಚಿ ನಿನ್ನರಲ ಬಾಣಮನರ್ಚಿಪ ಪುಷ್ಪಬಾಣನಂ ತನ್ನ ವಿಲಾಸದಿಂ ಪರಿಭವಕ್ಕೆಡೆಮಾಡಿದನೆನ್ನ ನಲ್ಲಂ (ಮಲ್ಲಿಪು. ೩-೩೭) ; ನಂಬಿ ನೆಚ್ಚಿದೆನೆಂದ ಮನವನಿಂಬುಗೊಡದಿರಿ (ದೇವಾವ. ೨೦-೫೫) ; ಇನ್ನವನ ನಂಬದಿರು ನೆಚ್ಚ[ಪಾಶಾಂ. ಕೂಡ]ದಿರು ಬೇಡೆಂದಡೆನ್ನ ಮಾತಂ ಬಗೆಯೆ ಕೈಕೊಳ್ಳೆಯೆಂದೊರ್ವ ಮುದಿಸೂಳೆ ತರುವಲಿಗೆ ಹಲಂಮೊರೆದಳು (ಸೋಮಚ. ೨-೪೦) ; ನೆಚ್ಚದಿರು ಸಿರಿಯನು ವೃಥಾ ಮದಗಿಚ್ಚಿನುರಿಯಲಿ ಬೇಯದಿರು (ಕುಮಾಸ. ೦-೫೫) ; ನೆಚ್ಚದಿರೀ ಭಾಗ್ಯ ಯಾರಿಗೂ ಸ್ಥಿರವಲ್ಲ ನಿಶ್ಚಯವೆಚ್ಚಱಿಕೆ (ಪುರಂದ. ೨-೪೫-೦) ; ಈಯುತುಲಭೂಷಣವ ತೊಡು ಸುರರಾಯನಿಗೆ ಸತಿಯಾಗು ಮರ್ತ್ಯದ ರಾಯರಸ್ಥಿರರವರ ನೆಚ್ಚದಿರೆಂದರಾ ಸತಿಗೆ (ಸಳಕ. ೩-೩೦) ; ನೆಚ್ಚದ ಎಮ್ಮೆ ಕೋಣನನೀಯಿತು (ಗಾದೆ).

[ದೇ.ಕ ತಮಿ. ನಚ್ಚು, ನಚ್ಚು; ತೆಲು. ನಚ್ಚು]

ನಚ್ಚು₂, ನರ್ಚು₂, ನೆಚ್ಚು₂ (ನಾ). ೧. ನಂಬಿಕೆ ; ವಿಶ್ವಾಸ ; ಭರವಸೆ : ಆನೆ ರಿಪುಸೇನೆಗೆ ಸಾಲ್ವೆನವುಂಕಿ ಪೇಡಿ ಪಾಡಿಗಟ್ಟಱಿವೆಡೆಗೈಯ [ಡಗಯ್ಯ] ಕೈಯುಗುರೆ ಸಾಲದೆ ನಚ್ಚಿನ ಕೈದುವೇಟ್ಟುದೇ (ಶಾವ್ಯಸಾ. ೪೦೦ ಶೂದ್ರಕ) ; ಚಕ್ರೇಶನ ಬೆಸನಂ ಪೂಣ್ದು ರಾಗದಿಂದೇಱಿ ಜಗದ್ವಿನುತಾಶ್ವರತ್ನಮಂ ಪಿರಿದು ನಚ್ಚಿನೊಳ್ ಪಿಡಿದು ದಂಡರತ್ನಮನಾಗಳ್ (ಆದಿಪು. ೦೩-೩೪) ; ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋಳ್ಬಲದ ಪೊಡವ್ವು ಕಣ್ ನಿನಗುಳ್ಳನಿತೇನೆನಗುಂಟೆ (ಪಂಪಭಾ. ೦೦-೨೩) ; ನಚ್ಚಿನ ಸೇನಾಪತಿ ಕೀರ್ತಿವರ್ಮಂ . . . ಜಗಜ್ಜನರಕ್ಷಾಮಣಿಗಾಗಳೋಲಗಿಸಿದಂ ದಂಡೇಶದಿಕ್ಕುಂಜರಂ (ಪುಪ್ಪಪು. ೬-೨೦) ; ಬೇಡಿದುದನೀವನೀಶ್ವರನೆಂಬ ನಚ್ಚಿಲ್ಲ (ಮಾಂಕುಳ. ೧೪೩). ೨. ಪ್ರೀತಿ ; ಮೆಚ್ಚು ; ಅಕ್ಕರೆ ; ಮೋಹ : ಒಲವಿಂದಮಾ ಮಹಾಶ್ವೇತೆಯೆ ಬೇಗಮೊಯ್ಯೆ ಪುಗದಿರ್ಪೆವೆ ನಚ್ಚಿನ ಹೇಮಕೂಟಮಂ (ಕಾದಂಬ. ೫೦೩) ; ನಿನ್ನ ನಚ್ಚಿನ ರಾಮನ ದೆಸೆಯಂ ಬಿಟ್ಟೆನಗೊಡಂಬಟ್ಟು ಸಾಮ್ರಾಜ್ಯಸುಖಮನನುಭವಿಸೆನೆ ಸೀತೆ ವಿಹ್ವಲೀಭೂತ ಚಿತ್ತೆಯಾಗಿ (ಪಂರಾಮಾ. ೧೪-೦೦೯ ಪ) ; ಕಿಚ್ಚಿಲ್ಲದಡುಗೆಯುಂ ನಚ್ಚಿಲ್ಲದ ಪೆಂಡತಿಯುಂ . . . ಒಪ್ಪಲಾರ್ಕುಮೆ (ಧರ್ಮಾಮೃ. ೦-೭೫) ; ದೊರೆ

ಕೊಳೆ ಸಮಾಧಿಮರಣಂ ಚರಣಾಯುಧಯುಗಳಮಟಿದು ಕುಸುಮಾವಳಿಯೆಂಬರಸಿಯ ಬಸಿಱೊಳ್ ಬಂದುವು ನರಯುಗಳಕಮಾಗಿ ನಚ್ಚನಚ್ಚೊತ್ತಿದವೋಲ್ (ಯಶೋಚ. ೪-೩೯); ನಚ್ಚಿನಣುಗಂ ಸೌಂದರಂ (ಸೌಂದಪು ೧೩-೧೮); ರುದ್ರಟನಿಗೆ ಲಂಕಾರಗಳ ನಚ್ಚು ಹೆಚ್ಚಾಗಿಯೇ ಇದೆ (ಧಾರವಿಾ. ೩೧). ೩. ಇಚ್ಛೆ; ಬಯಕೆ; ಅಪೇಕ್ಷೆ: ಅಂತಲ್ಲಿ ಪದಿನಾಲ್ಸಾಸಿರ್ವರ್ ಗಂಧರ್ವರಂ ಕೊಂದೊಡೆ ಚಿತ್ರಾಂಗದಂ ಬೆರ್ಚಿಕೊಳೆ ನಿನ್ನ ನಚ್ಚಿನ ಸೆಱೆಯನೆಂದು ಬಿಸುಟ್ಟೊಡೆ (ಪಂಪಭಾ. ೭-೩೮ ವ); ಕೊಳ್ ನಿನ್ನ ನಚ್ಚಿನ ಪಾಂಡವರ ತಲೆಗಳಿವೆಯೆಂದು ದುರ್ಯೋಧನನ ಮುಂದಿಕ್ಕಿದೊಡೆ (ಗದಾಯು. ೯-೩೨ ವ); ಅವನ ಹಾಡನ್ನು ಕೇಳಿದವರಿಗೆಲ್ಲಾ ಸನ್ಯಾಸಿಯು ತಮ್ಮ ಸುಖದುಃಖ ಆಸೆ ನಚ್ಚುಗಳನ್ನು ಹಾಡುತ್ತಿರುವಂತೆ ತೋರಿ ಅವರಲ್ಲಿ ಅವ್ಯಾಜವಾದ ಪ್ರೇಮವುಂಟಾಗುತ್ತಿದ್ದಿತು (ಶಿವರಾ. ೯೭). ೪. ಹಂಬಲ; ಗೀಳು: ಅವರಿಗೆ ಸಂಗೀತದ ನಚ್ಚು ಬಹಳ (ರೂಢಿ). ೫. (ಆಲಂ) ಸಂಶಯ; ಅನುಮಾನ; ಅವಿಶ್ವಾಸ; ಅಪನಂಬಿಕೆ: ವೈದ್ಯನಾಥ ಯಾರೊಬ್ಬರಿಗೂ ಆಸ್ಪದ ಕೊಟ್ಟರಲಿಲ್ಲ. ಚೌಕಸಿ ವ್ಯಾಪಾರ ಮಾಡುವ ನಚ್ಚು ನಚ್ಚು ಹುಡುಗನ ಹಾಗಲ್ಲ, ತನ್ನದೇ ಆದ ಒಂದು ರೀತಿಯ ವಿನಯ ನಿಶ್ಚಯದಿಂದ (ಸುಖವಿ. ೬). 'ನಚ್ಚುಜ್ವರ', 'ನಚ್ಚುಮಾತು' ಪರಾ. ೬. ಸೇಡು; ಅಂತರಂಗದಲ್ಲಿಟ್ಟಿರುವ ಅಸಮಾಧಾನ: ಕ್ಯಾಷಿಯಸ್‌ಗೆ ಸೀಸರನ ಮೇಲಿರುವ ನಚ್ಚನ್ನು ತೀರಿಸಿಕೊಳ್ಳುವುದೇ ಗುರಿ (ಷೇಕ್ಸ್‌ಪಿ. ೩೦೬). △ ನರ್ಚು₂: ೧. ನೆನೆಯದೆ ಕಲುಷವಶಂ ನರ್ಚಿ[ಪಾಕಾಂ. ಚ್ಚಿ]ನ ವಿದ್ಯೆಗಳಂ ಕಡಂಗಿ ಕಾದುವ ಪದದೊಳ್ (ಪಂರಾಮಾ. ೦೦-೨೦೯); ಹಯನಯನಾಂಬುಗಳ್ ಸುರಿಯೆ ಹರ್ಷದಿನುಣ್ಮೆದುವೆಂದು ನರ್ಚಿ[ಪಾಕಾಂ. ಚ್ಚಿ]ನಾನೆಯ ಮದವೆತ್ತಿ ಕಟ್ಟೆ ವಿಕಳತ್ವಮನೊಕ್ಕುವು (ಚಂದ್ರಪು. ೧೦-೩೬); ಮನದೊಳ್ ನೀಂ ಮುಳಿದರನಟಿವನೊಸೆದರಂ ಕಾವನೆಂಬ ನರ್ಚಿ[ಪಾಕಾಂ. ಚ್ಚಿ]ನ ಜವನುಂ ನಿನಗಮಸಿಯೇಱಿನವನಾದನೆ ತಮ್ಮನೆ ಪಿಡಿವ ಕೆಯ್ದುವುಂ ಪಾವಾಯ್ತೇ (ಪರ್ಧಪು. ೯-೬೨). ನೆಚ್ಚು₂: ೧. ಬಟಿಕ ನೀನೆ ಪೆಸರ್ಗೆ ತಕ್ಕಂತೆ ಉಗ್ರಮೇ ಆದ, ಕಾಲ್ನಡೆಯಿಂದೆ ಪಾಯಲ್ಕೆ ನೆಚ್ಚಲ್ಲಮಾದ, ಹಿಂಸಾನದಿಗೆ ಬರ್ಪಯ್ (ಬದ್ಧಪ್ರ. ೩೮-೮೨೧); ನಿಮ್ಮ ನೆಚ್ಚು ನನಗೆ ದೊರೆತಿದೆ (ಕನಕಿ. ೪); ಬೆಚ್ಚ ಬಿಡು. ನೆಚ್ಚ ನೆಡು ಕೆಚ್ಚೆದೆಯ ಗುಡಿಯಲ್ಲಿ (ಪಾಂಚಜ. ೩-೩). 'ನೆಚ್ಚುಮೆಚ್ಚು' ಪರಾ.

ನಚ್ಚಿನಾಳ್, ನಚ್ಚಿನಾಳು, ನೆಚ್ಚಿನಾಳು = ವಿಶ್ವಾಸಕ್ಕೆ ಪಾತ್ರನಾದ ಭಟ; ನಂಬುಗೆಯ ಸೇವಕ; ಆಪ್ತಸೇವಕ: ಕೈಗಳ ಮುಚ್ಚುಳಲಿ ನೆಗಹಿದಳು ರಾಮನ ನ[ಪಾಕಾಂ. ಮ]ಚ್ಚಿನಾಳ್ಗಳನಿಳಿಗದೇನು ಸಮರ್ಥೆಯೋ ಜಗಕೆ (ತೊರರಾ. ೪-೧೦-೩೦); ಪರಿವಾರದ ಹಿಂದೆ ಅಷ್ಟು ದೂರದಲ್ಲಿ ಬೆಂಗಾವಲಾಗಿ ಕುವರವಿಷ್ಣುವು ತನ್ನ ನಚ್ಚಿನಾಳ್ಗಳೊಡನೆ ನಡೆದಿದ್ದನು (ಸವತಿ. ೨೯೮); ನಚ್ಚಿನಾ[ಪಾಕಾಂ. ದಾ]ಳಿನ ಬಿನ್ನಹಕೆ ಹರಿ ಮೆಚ್ಚಿ ಮನದಲಿ ನಾಚಿ ಚಕ್ರವ ಮುಚ್ಚಿದನು ಮುರಿದನು ಕಿರೀಟಿಯ ರಥದ ಹೊರೆಗಾಗಿ (ಕುವ್ಯಾಭೀ. ೬-೪೬); ಅವನೊಬ್ಬ ಒಳ್ಳೆಯ ನೆಚ್ಚಿನಾಳು (ರೂಢಿ).

[<ನಚ್ಚು₁./ತಮಿ. ತೆಲು. ನಚ್ಚು]

ನಚ್ಚುಗಿಡಿಸು (ಕ್ರಿ). ನಂಬಿಕೆಯಿಲ್ಲದಂತೆ ಮಾಡು; ಭರವಸೆ ಕೆಡಿಸು; ಆತ್ಮವಿಶ್ವಾಸವನ್ನು ಕೆಡಿಸು: ದಿತಿಜನೆಚ್ಚ ಸಿಡಿಲ ಶರಮುನದಕ ಬಾಣದಿಂದೆಚ್ಚು ದನುತನೂಜನೆಚ್ಚ ವಾರ್ಧಿಗನಲಬಾಣದಿಂದೆಚ್ಚು ನಚ್ಚುಗಿಡಿಸೆ (ಪಂಪಭಾ. ೧೨-೧೩). [ನಚ್ಚುಗಿಡು (<ನಚ್ಚುಗೆಡು) +– ಇಸು₃]

ನಚ್ಚುಗಿಡು 'ನಚ್ಚುಗೆಡು' ನೋ.

ನಚ್ಚುಗೆ, ನಚ್ಚಿಗೆ, ನೆಚ್ಚಿಗೆ, ನೆಚ್ಚುಗೆ (ನಾ). ನಂಬಿಕೆ; ವಿಶ್ವಾಸ; ಭರವಸೆ: ಮೆಚ್ಚಿದನು ಕರೆಕಂಠ ಧನದನ ನಚ್ಚುಗೆಗೆ ಮೈದೋರಿ (ಅಧ್ಯಾರಾ. ೨-೨೩); ಪೊಱಗವನ್ ಪೋಗಿರ್ದೊಡುಟಿವ ನಚ್ಚುಗೆ ಇಲ್ಲ (ಅಶ್ವತ್ಥಾ. ೩೨-೬೨೧). **ನಚ್ಚಿಗೆ**: ಚನ್ನಮಲ್ಲಿಕಾರ್ಜುನನ ನಚ್ಚಿಗೆಗಾಗಿ ನಗ್ನಳಾದಳು (ಕನ್ನನು. ೧-೨೮೧); ನುಚ್ಚಿಗೆ ಬೆಚ್ಚುವವ ನೊಚ್ಚಗೆ ಮಾತಾಡಿದರೂ ನಚ್ಚಿಗೆ ಸಾಲದು (ಗಾದೆ). **ನೆಚ್ಚಿಗೆ**: ನೆಚ್ಚಿಗಿಲ್ಲದಳ ಮನೆವಾರ್ತೆ ಶ್ರಾವಣದ ಕಿಚ್ಚು ಕಾದಂತೆ (ಸರ್ವಜ್ಞ. ೧೭೩೨); ಹೊಲೆಯಾನ ಮಾತು ನೆಚ್ಚಿಗೆ ಮೊದಲು ನಮಗಿಲ್ಲ (ಕಜಾಗೀ. ೫೭). **ನೆಚ್ಚುಗೆ**: ಇನ್ನೂ ನೂರು ರಸಗಳನ್ನು ಹರಿಯಿಸಬಲ್ಲಳು . . . ಎಂಬ ನೆಚ್ಚುಗೆ ಎಲ್ಲರಲ್ಲಿಯೂ ಅಚ್ಚಳಿಯದಂತಿತ್ತು (ಸವತಿ. ೫).

[ನಚ್ಚು₁ +– ಗೆ]

ನಚ್ಚುಗೆಡು, ನಚ್ಚುಗಿಡು, ನೆಚ್ಚುಗೆಡು (ಕ್ರಿ). ನಂಬಿಕೆಯನ್ನು ಕಳೆದುಕೊಳ್ಳು; ಭರವಸೆಯಿಲ್ಲದಾಗು; ಅವಿಶ್ವಾಸವನ್ನು ಹೊಂದು: ನಚ್ಚುಗೆಟ್ಟ ಬಡವನಂತೆ ಬೆಂಬರ್ದು ದೆಸೆಗೆಟ್ಟರಂತೆ ಚಿಂತಿಸಿ (ಧರ್ಮಾಮ್ಯ. ೧-೧೬೮); ಕಮಳದ ಸೊಕ್ಕು ಸೋರೆ ಪೊಣರ್ವಕ್ಕಿಗಳಿಚ್ಚೆಯ ಮೆಚ್ಚು ನಚ್ಚುಗೆಟ್ಟವುಳಿನ ಬೇಂಟವೋರ್ಗುಡಿಸೆ ನೈದಿಲನೈದೆ ವಿಕಾಸಲಕ್ಷ್ಮಿ ಸೈಪವರ್ದಿರೆ ಜೊನ್ನ ವಕ್ಕಿಯಪರಾಸೆಗೆ ಪೂರ್ವದ ರಾಗದುತ್ಸವಂ ಸಮನಿಸೆ ಭಾನು ಪಶ್ಚಿಮ ಪಯೋಧಿಯೊಳೊಯ್ಯನೆ ಮೆಯ್ಯನಿಕ್ಕಿದಂ (ಪುಣ್ಯಾಸ್ರ. ೧-೧೧೫). **ನಚ್ಚುಗಿಡು**: 'ನಚ್ಚುಗಿಡಿಸು' ಪರಾ. **ನೆಚ್ಚುಗೆಡು**: ನೆಚ್ಚುಗೆಡಬೇಡ ನಡೆ, ಕೆಚ್ಚೆದೆಯ ಕಲಿಯೆ ! (ಪಾಂಚಜ. ೬-೩). [ನಚ್ಚು₂ + ಕೆಡು₁]

ನಚ್ಚುಜ್ವರ (ನಾ). ನಿರ್ದಿಷ್ಟವಾಗಿ ಗುರುತಿಸಲಾಗದಂಥ ಜ್ವರ; ಸಂಶಯವನ್ನುಂಟುಮಾಡುವ ಜ್ವರ: (ಕಿ). [ನಚ್ಚು₂ + ಜ್ವರ]

ನಚ್ಚುಮಚ್ಚು 'ನಚ್ಚುಮೆಚ್ಚು' ನೋ.

ನಚ್ಚುಮಾತು (ನಾ). ಭರವಸೆಯಿಲ್ಲದ ಮಾತು; ನಂಬಲರ್ಹವಲ್ಲದ ಮಾತು; ಸಂಶಯದ ನುಡಿ: (ಕಿ). [ನಚ್ಚು₂ + ಮಾತು₁]

ನಚ್ಚುಮೆಚ್ಚು, ನಚ್ಚುಮಚ್ಚು, ನೆಚ್ಚುಮೆಚ್ಚು (ನಾ). ಅಚ್ಚುಮೆಚ್ಚು; ಅತಿಯಾದ ವಿಶ್ವಾಸ ಮತ್ತು ಪ್ರೀತಿ; ನಂಬಿಕೆ ಮತ್ತು ಮೆಚ್ಚುಗೆ: ನಚ್ಚುಮೆಚ್ಚಿನ ಶರಣರೆನ್ನ ಕಣ್ಣ ಮುಂದೆ ಬಂದು ನಿಂದಿರಲು ಎನ್ನ ತನುವ ಬಗಿದು ತನುವಿನೊಳಗೆ ಇಟ್ಟುಕೊಂಬೆನು ಎನ್ನ ಮನವ ಬಗಿದು ಮನದೊಳಗೆ ಇಟ್ಟುಕೊಂಬೆನು (ವಚಸಂ. ೨೪೦-೬೪); ಇಂದಿನಿತಿಂತೇಂ ಚೆಲ್ವಿನೊಂದು ಬಿತ್ತರದ ಭಂಗಿಯ ಪೊಸ ಬಣ್ಣನೆ ಮಿಣ್ಣನೆ ನಿನ್ನ ನಚ್ಚುಮೆಚ್ಚಿನ ಕಾಮನೊಂದು ಜಾನದೊಳೆ ಬೆರೆತುದು ? (ರಾಮಾಶ್ವ. ೧೩೪-೪). **ನಚ್ಚುಮಚ್ಚು**: ಸಂಯೋಗದ ಸುಖ ಮೈಯುಂಡವಂಗೆ ಲೋಕದ ನಚ್ಚುಮಚ್ಚಿನ ಬಲೆ ದೊಡಕು ತಪ್ಪದು (ಪುದೇವ. ೨೮೭-೬೮); ಆ ಕಮಲದ ನೆಲೆಯ ಕಾಣಲಱಿಯದೆ ತೊಳಲಿ ಬಳಲಿ ಜಗದೊಳಗೆ ನಚ್ಚುಮಚ್ಚಿಗೊಳಗಾಗಿ ... ನಾಚಿತ್ತೆನ್ನ ಮನವು (ಲಿಂಗವ. ೨೦-೭೯); ನಚ್ಚುಮಚ್ಚಿನ ಲಿಂಗವ ಗ್ರಹಿಸಿ ಮಚ್ಚು ಒಳಕೊಂಡಿತ್ತಯ್ಯ ಕರ್ಪುರದ ಕರಡಗೆಯ ಘಾಸಿಮಾಡಿದಂತಾಯಿತ್ತು (ಅವಚಂ. ೨೩-೯೪); ನಿಚ್ಚದಲಿ ತೂಪಿಱಿದು ತೂಗುವ ನಚ್ಚುಮಚ್ಚಿನ ದಾದಿಗಾಗಳು ಮೆಚ್ಚನೀವುತ ಹೆಚ್ಚುತಿರ್ದಳು ಮೋಹಿನೀದೇವಿ (ಪ್ರಭುಲೀ. ೩-೨೬); ಸೌಂದರೇಂದ್ರಂ ನಚ್ಚುಮಚ್ಚಿನಿಂ ಪರವೆನಾಚಿಯರೊಳಾಸನ್ನನಾಗೊಪ್ಪಿರ್ದನು (ಸೌಂದಪು. ೧೨-೨). **ನೆಚ್ಚುಮೆಚ್ಚು**: ಅಲ್ಲಿಯೆ ಕಣ್ ಪಳಂಚಿ ಮನವಲ್ಲಿಯೆ ಕೀಲಿಸೆ ನೆಚ್ಚುಮೆಚ್ಚು ತಳ್ತಲ್ಲಿಯೆ ಸೋಲ್ತು ಪತ್ತೆ (ಆದಿಪು. ೨-೪೨). [ನಚ್ಚು₂ + ಮೆಚ್ಚು₂]

ನಚ್ಚುವೋಗು (ಕ್ರಿ). ನಂಬಿಕೆಗೆ ಪಾತ್ರವಾಗು; ವಿಶ್ವಾಸಕ್ಕೆ ಆಶ್ರಯವಾಗು: ದನುಜಾಂತಕನೆಂಬೀ ನಿನ್ನ ನಚ್ಚುವೋದಂಕಮೆಲವೊ ಮುನ್ನೆನ್ನನ್ನಂ ದನುಜಂ ಪುಟ್ಟದೆ ಸಂದುದು ನಿನಗೀ ಪೆಸರೆನ್ನ ಮುಂದೆಯುಂ ಸಂದಪುದೇ (ಪಂಪಭಾ. ೬-೫೪). [ನಚ್ಚು₂ + ವೋಗು₁]

ನಚ್ಚುಹಾಕು (ಕ್ರಿ). ನಂಬಿಕೆಯನ್ನುಂಟುಮಾಡು; ನಂಬಿಸು: ಹುಸಿಯ ವರ್ತಮಾನಮಂ ಪುಟ್ಟಿಸಿ ನಚ್ಚುಹಾಕಿ ರಾಯರಂ ಮೈಮರೆಸಿ ಸಮಯ ಸಾಧನೆಯಂ ರಚಿಸಿ (ಕೆಳನ್ಕ. ೪-೮). [ನಚ್ಚು₂ + ಹಾಕು (<ಪಾಯ್ಕು₁)]

ನಜರ್ 'ನಜರಂ' ನೋ.

ನಜರಚೂಕ್ (ನಾ). ಕಣ್ತಪ್ಪು : ನಮ್ಮ ಭಾಷೆಯಲ್ಲಿ ತೀರ ಹೊಂದಿಕೊಂಡು ಹೋದ ಮತ್ತು ಅನ್ಯದೇಶೀಯವೆಂದು ಗುರುತಿಸಲಾಗದ ಶಬ್ದಗಳೆಂದರೆ– ಕಚೇರಿ . . . ನಜರಚೂಕ್, ಜಾಮು, ಜಾಹೀರ್ . . . ಶಕ್ಯ, ಇತ್ಯಾದಿ (ಭಾಷಾಶಾ. ೦೬೬). [←ಮರಾ. ನಜರ್‌ಚೂಕ್]

ನಜರಾಣ 'ನಜರಾಣೆ' ನೋ.

ನಜರಾಣೆ, ನಜರಾಣ, ನಜರಾಣೆ, ನಜರಾನ, ನಜರಾನೆ (ನಾ). ೧. ಕಾಣಿಕೆ; ಉಪಾಯನ; ಉಡುಗೊರೆ : ಅಳಿಯನಿಗೇನು ನಜರಾಣೆ ಸಿಕ್ಕಿದೆ ಎಂದರು (ಪಶಾಸ್ತ್ರ. ೩೦) ; ರಾಯರು ರಾಮದುರ್ಗ ದರಬಾರಕ್ಕೆ ಹೋದಾಗ ಅಲ್ಲಿಯ ಯಜಮಾನರಿಂದ ನಜರಾಣೆಯಾಗಿ ಸಿಕ್ಕಿದ್ದಿತು (ಹೂಲಮ. ೩). ೨. ರಾಜ, ಪಾಳೆಯಗಾರರಂ ಮೊದಲಾದವರಿಗೆ ಒಪ್ಪಿಸಬೇಕಾಗಿದ್ದ ಕಪ್ಪಕಾಣಿಕೆ ; P ಬ್ರಿಟಿಷರ ಕಾಲಕ್ಕೆ ಕೆಲವು ರಾಜರ ದರ್ಬಾರಿನಲ್ಲಿ ಇದಂ ಬಲವಂತದ ಕಾಣಿಕೆಯಾಗಿತ್ತು : ಈ ಪೊಲಗಿನ ಜೊತೆಗೆ ಸಮಯ ಬಿದ್ದಾಗ ನಜರಾಣೆ ಎಂಬ ಹೆಸರಿನಿಂದ ಬೇಕಾದ್ದನ್ನು ದೋಚಿ ಕೊಳ್ಳುತಾ ಇದ್ದರು (ಪಾಳಿಗಾ. ೦೪) ; ಈ ಕಾಪುದೆಯಿಂದ ಪಾರ್ಸಿ ಮೆಂಟದ ಸಮ್ಮತಿಯ ಹೊರತು ತೆರಿಗೆಯನ್ನು ಕೂಡ್ರಿಸಬಾರದೆಂದೂ ನಜರಾಣೆಯನ್ನು ತೆಗೆದುಕೊಳ್ಳಬಾರದೆಂದೂ . . . ಗೊತ್ತಾಯಿತು (ಇಂಗ್ಲೆ. ೦೯೦) ; ಆತನು ತನ್ನ ಊರೊಳಗೆ ಜಾಗೀರದಾರರಂತೆ ಇರುತ್ತಿದ್ದ. ಎಮ್ಮೋ ಸಾವಿರರೂಪಾಯಿ ನಜರಾಣೆ ಸಲ್ಲಿಸುತ್ತಿದ್ದ (ಜವಿಜಾ. ೦೬). **ನಜರಾಣ** : ೧. (ಕ್ಯಗೆಜಿ. IV, ೬೮೦). ೨. (ರೈಸ್‌ಗ. ೫೫೭) ; ಪ್ರಸಕ್ತಿ ಬಂದಾಗ ನವಾಬನಿಗೆ ನಜರಾಣವನ್ನು ಜನರಿಂದ ವಸೂಲ್ಮಾಡಿ ಕೊಡುವ ಕಠಿಣಮನಸ್ಸು ಕುಲಕರಣಿಗಿರಬೇಕು (ಕಥವಿ. II, ೧೫೦). **ನಜರಾಣೆ** : ೧. ಗೋವೆಯ ಕದಂಬರು ಇವನಿಗೆ ನಜರಾಣೆಯನ್ನು ತಂದೊಪ್ಪಿಸಿದರೆ (ಕರ್ನಾಇ. ೩೭) ; ಯಾವನಾದರೂ ಒಬ್ಬ ಯೋಗ್ಯ ಅಧಿಕಾರಿಯನ್ನು ನಿಯಮಿಸಿ, ಮಾನಸಿಂಹನ ಯೋಗಕ್ಷೇಮವನ್ನು ತಕ್ಕೊಂಡರಾಯಿತು. ನಜರಾಣೆಯನ್ನು ಮಾತ್ರ ಕಳಿಸುವುದಿಲ್ಲ (ತಿರೋಮ. ೬೦) ; ತರುವಾಯ ಮುಖ್ಯಾಧಿಕಾರಿಗಳನ್ನೂ ನೆಮ್ಮದಿವಂತರಾದ ಪ್ರಜೆಗಳನ್ನೂ ಕರೆಕಳುಹಿಸಿ ನಯಭಯಗಳಿಂದ ಅವರಿಂದ ನಜರಾಣೆಯನ್ನು ತೆಗೆದುಕೊಂಡು ಹಣವನ್ನು ಕೂಡಿಸಿದನು (ಒಡಕ. ೬೨). **ನಜರಾನ** : ೨. ಮಹಾರಾಜನು ನಜರಾಸ ಸ್ವೀಕರಿಸುವದನ್ನು ತನ್ನ ವರಮಾನದ ಒಂದು ಮಾರ್ಗವೆಂದು ತಿಳಿದಿದ್ದನು (ದಾಡಾನ. ೬೭). **ನಜರಾನೆ** : ೧. ಜನರಿಗೆ ನಜರಾನೆಗಳ ಮಾಡಿ (ಹೈದರ. ೭೨).

[←ಅರ. ನಜರಾನಹ್; ಹಿಂ. ನಜರಾನಾ; ಮರಾ. ನಜರಾಣಾ.]

ನಜರಾಣೆಕೆ (ನಾ). = ನಜರಾಣೆ : (೬). [<ನಜರಾಣೆ]

ನಜರಾಣೆ 'ನಜರಾಣೆ' ನೋ.

ನಜರಾನ 'ನಜರಾಣೆ' ನೋ.

ನಜರಾನೆ 'ನಜರಾಣೆ' ನೋ.

ನಜರಿರು (ಕ್ರಿ). ಲಕ್ಷ್ಯದಿಂದಿರಂ ; ಎಚ್ಚರಿಕೆಯಿಂದಿರು : ಚಿಲುವ ನಸ ತಮ್ಮ ಸೆರಗಲಿ ಮೊಕ ತೊಳೆಯೊ ಉಗುರಲ್ಲಿ ಗಂಧ ಹದಮಾಡೊ ಚದುರೇರು ಬರ್ತಾರೆ ನಜರೀರೊ (ಹಳ್ಳಿಪ. ೦೦೮). [ನಜರಂ + ಇರು$_1$(<ಇರ್$_1$)]

ನಜರೀಯು (ಕ್ರಿ). ಕಾಣಿಕೆಯನ್ನು ಕೊಡು,–ಒಪ್ಪಿಸು : ಶೋಭನಾಕ್ಷತೆ ಕುಸುಮಫಲಗಳಂ ಕೊಡುವರಂ ನಜರಿತ್ತು ನಮಿಸುವರನೂ . . . ಶೋಭನಸ್ತುತಿಗಳಿಂ ಜಯಃಶಬ್ದಗಳ ವೇಳ್ವ ಜನರ ಸಂಭ್ರಮವ ನೋಡು (ಅರ್ಜಾವಿ. ೨೪-೩೨). [ನಜರು + ಈಯು$_1$ (<ಈ$_1$)]

ನಜರು, ನಜರ್, ನಜುರು, ನಜ್ರು, ನದರಂ$_1$, ನದುರು, ನಸರ್, ನಸರಂ, ನೆಜರು, ನೆದರು$_1$ (ನಾ). ೧. ದೃಷ್ಟಿ ; ನೋಟ ; ಲಕ್ಷ್ಯ ; ಗಮನ : ಈ ಜನರ ಸಹಾಯದಿಂದ ದೇರೆ ಪುಂಡರೂ ಹಾವಳಿ ಎಬ್ಬಿಸ ತೊಡಗಿದ್ದು ಪೋಲೀಸಖಾತೆಯ ನಜರಿಗೆ ಬಂದಿತು (ಕವರಿ. ೦೦೩) : ಗಾಡಿ ಹತ್ತಿದ ಕೂಡಲೇ ಸ್ಕೌಟ್‌ಮಾಸ್ತರರ ನಜರು ನನ್ನ ಮೇಲೆ ಬಿತ್ತು (ವ್ಯನಿ. ೬೪) ; ನಮ್ಮ ಅಂಥ ಯಾವ ತಪ್ಪು ನಿಮ್ಮ ನಜರಿಗೆ ಬಿದ್ದಿತೆಂದು ನೀವು ಹೀಗೆ ಅನ್ನುತ್ತಿರುವಿರಿ ? (ಅಂಬಿಕ. ೧೫೭) ; ಕಂಡ ಕೂಡಲೇ ಗುರುತಿಸುವ 'ನಜರು' ಅವನಿಗೆ ಮಿಸಲಾಗಿತ್ತು (ಗ್ರಾಮಾಡು. ೬೦). ೨. ಕಾಣಿಕೆ ; ಉಪಾಯನ: ವಿಕ್ರಮಸಿಂಹನು ರಾಜಸಿಂಹನನ್ನು ಶಿಬಿರದಲ್ಲಿ ನೋಡಿ ಅವನಿಗೆ ನಜರು ಒಪ್ಪಿಸಿದನು (ಬಂಕಿಮ. ೨೨೩) ; ಸುಲ್ತಾನನ ಆಸ್ಥಾನಕ್ಕೆ ಹೋಗುವ ಪ್ರತಿಯೊಬ್ಬನೂ ಆತನ ಮನ ಒಲಿಸಿಕೊಳ್ಳಲು ಏನಾದರೊಂದು ನಜರನ್ನು ಒಪ್ಪಿಸಲು ತಯಾರಿರಬೇಕು (ಪ್ರಪಾಇ. II, ೬) ; ಶ್ರೀದೇವಿಯನ್ನು ಸಾಮ್ರಾಟನಿಗೆ ವಿವಾಹ ಮಾಡಿಕೊಡುವುದಲ್ಲ. ನಜರಾಗಿ ಅವಳನ್ನು ಒಪ್ಪಿಸಬೇಕು (ಶ್ರೀರಾಯು. ೧೧೩) ; ನಗರದಿಂದ ಬಂದ ನಜರುಗಳೆಲ್ಲ ಶ್ರೇಷ್ಠವಾದುವುಗಳು (ದಾಂತ್. ೬೨). ೩. ಅಂದಾಜು; ಊಹೆ: ಮುತ್ತಿನ ಕಿಮ್ಮತ್ತು ಕೇವಲ ನಜರ ಮೇಲೆ ಇರುತ್ತದೆ (ಮುಂಬಪ್ರಾ. ೦೯೪). **ನಜರ್** : ೨. (ರೈಸ್‌ಗ. ೫೫೭) ; (ಕ್ಯಗೆಜಿ. IV, ೬೮೦). **ನಜುರು** : ೨. ಬೇರೆಬೇರೊರ್ವರಿಂ ನಜುರಂಗಳ ಪಡಿಸಿ ತೀರರಿದು ದೇಶಾಧಿಪರ ನೃಪಾಲಾಗ್ರಣಿಗೆ ತೋರಿಪುತ್ತುಡುಗರೆಗಳಂ ಮಾಡಿಸಿದ (ಕೃಷ್ಣವಿ. ೫ ಪಲ್ಲವಿ). 'ನಜುರುಮಂಜರೆ' ಪರಾ. **ನಜ್ರು** : ೧. ಈಗಿನ ಕಾಲದ ಹುಡುಗರಿಗೆ ಆಶಾನಾದರೂ ಎಷ್ಟೂ ಅಂತೀನಿ, ಐದ.ರೂಪಾಯಿ ಅಂದ್ರ ನಜ್ರೇ ಇಲ್ಲ ! (ದಾಕೂಬ. ೨೩). 'ನಜ್ರಿಸು' ಪರಾ. **ನದರು$_1$** : ೧. ಎಮ್ಮ ಗರುಡಿಯೊಳ್ ಸಾಧಕಮುಂ ನದರಿಂದಂ ಮೂಳ್ಪದು (ಹಾಲಾಸ್ಯ. ೩-೧೦-೮) ; ಅದು ನಮ್ಮ ನರಸಿಂಹಯ್ಯನ ನದರಿಗೆ ಬಿತ್ತೇ ಬಿತ್ತು (ಹಹಸ. ೬೭) ; ಏನು ಶಿಕಾರಿಯ ನದರಿದೆಯೆ ? (ಹುಗಿಯು. ೨೩೧) : ನಿಮ್ಮ ನದರಿನೊಳಗೆ ಒಂದು ನಾಲ್ಕು ಸಿದ್ದೆ ಹಾಲು ಕೊಡುವ ಎಮ್ಮೆ ಎಲ್ಲಾದರೂ ಇದೆಯೇ ? (ಸ್ವಪ್ನಹೂ. ೯೨) ; ನಿನ್ನ ನದರ ಬಿತ್ತಲೇ ದಾದಲ್ಯಾ ಬಸವಂತೇ ಮ್ಯಾಲ (ದೀಪಹ. II, ೨೫೯). ೨. 'ನದರುಗಾಣಿಕೆ' ಪರಾ. ೩. ಅವರು ಹಾಕಿದ ನದರಿಗೂ, ಆದ ಮದುವೆಗೂ ಒಳ್ಳೇ ಲಗ್ನ ಬಿತ್ತು (ಮಠಮು. ೩); ಅಯ್ಯಾ ನನಗೆ ಬೈಲಿನ ನದರು ಅಷ್ಟು ಚೆನ್ನಾಗಿ ಆಗುವುದಿಲ್ಲ (ಜಿದಾಉ. ೦೬೧). ೪. ಕೆಟ್ಟ ದೃಷ್ಟಿ; ಕಣ್ಣಿಂಜಲು : ಎಂದಿಗಿಲ್ಲದ ಕಂದ ಇಂದು ನುಡಿದನೆಂದು ಭಂದ ಬಂದವರಿಗೆ ಹೇಳಿದಿರು ಸುಗಲವ್ವೆ ಸುಂದರಾಂಗನಿಗೆ ನದರ ಆದೀತು (ಸಿರ್ಕಪು. ೪-೦೭). **ನದುರು** : ೨. 'ನದುರುಗಾಣಿಕೆ' ಪರಾ. ೩. ನಮಗೆ ಇವತ್ತು 'ಕಾಯಿಸು' ಇರಬಹುದು ಅಂತ ನನ್ನ 'ನದುರು' (ಹೂಸಕ್ಷ. ೪೮). **ನಸರ್**: 'ನಸರ್ಬಂದಿ' ಪರಾ. **ನಸರು**: 'ನಸರುಬಂದಿ' ಪರಾ. **ನೆಜರು** : 'ನೆಜರಿಡಂ' ಪರಾ. **ನೆದರು$_1$** : ೧. ನಮ್ಮ ಗೌರಪ್ಪ ... ಓಣ್ಯಾಗ ಹೊಂಟತ ಅತ್ತ ಇತ್ತ ನೆದರ ಹಾಯಾಣಲ್ಲ ಅವರದು (ನಡದಾ. I, ೨೯೧) ; ನಾ ಲಡಾಯಿಗೆ ಹೋಗ್ತೀನಿ, ಬರೋ ಮಟ ನಂ ಭರವ್ಸಾನ ವ್ಯಾಗ ನೆದರ ಇರ್ಲಿ (ಪುಕುಚ. ೦೬೧). 'ನೆದರಿಡಂ' ಪರಾ.

ನಜರ ತಪ್ಪು = ಲಕ್ಷ್ಯವಿಲ್ಲದಾಗು ; ಗಮನಕ್ಕೆ ಬಾರದಿರಂ : ಕುದುರೆ ಹೋಯಿತೆ ಭಾವದ ಕುದುರೆಯೋಯಿತೆ ಕುದುರೆ ಹೋಯಿತೆ ಚದುರಮಣ ಎನ್ನ ನಜರ ತಪ್ಪಿ ನಿಜಮಂದಿರದೊಳಗಿನ (ಶರೀಪ. ೭೩, ಕವಿಕಾವ್ಯಪರಿಚಯ). **ನಜರು ಹಾಕು, ನಜರ್ ಹಾಕು** = ದೃಷ್ಟಿಹಾಯಿಸು ; ಲಕ್ಷಿಸು ; ಗಮನಿಸು ; ಗುರಿಯಿಡು : ಶ್ರೀಮಂತರಾದರೆ ಆಥವಾ ಐಶ್ವರ್ಯವುಳ್ಳವರಾದರೆ ಅಂಥವರು ಆ ಕೆಲಸದ ಮೇಲೆ ತಾವು ಸ್ವತಃ ನಜರು ಹಾಕಬೇಕು (ಕೃಷಿಪ್ರ. ೨೨) ; ಸುಲ್ತಾನ್, ರಾಣಿ, ಎರಡೂ ಭೀಪಾದ ಕುಮರೆ ಖಾವಂದ್ ! ಆದರೆ ರಾಣಿ ನೋಡಿ ಮಹಾರಾಜಾಸಾಹೇಬ್‌ರು ನಜರ್ ಹಾಕಿದರೆ, ಖಾವಂದ್‌ರಿಗೆ ಹೆಂಗಾಗ್ತದೋ ? (ಮಲ್ಲಿ. ೫೧).

ನಜರೊಪ್ಪಿಸು = ಕಾಣಿಕೆಯನ್ನು ಒಪ್ಪಿಸು.–ಸ ಲ್ಲಿ ಸು : ಸು ಲ್ತಾ ನ ನಜರೊಪ್ಪಿಸಲು ದರ್ಬಾರಿಗೆ ಬರಲೇ ಇಲ್ಲವಂತೆ (ಕೃಷ್ಣಕೂ. ೩೬). ನಜರ್ಮಾಡು, ನದರಮ್ಮಾಡು, ನದರುಮಾಡು = ೧. ನಜರೊಪ್ಪಿಸಂ : ಆ ಸರದಾರರು ರತ್ನಖಚಿತವಾದ ಹಿಡಿಯುಳ್ಳ ಒಂದು ಪಟ್ಟಾಕತ್ತಿಯನ್ನು ನಜರ್ಮಾಡಲು (ಮಹಾಪಂ. II, ೩೬). ೨. ದೃಷ್ಟಿಯನ್ನು ಹಾಯಿಸಂ ; ಲಕ್ಷಿಸು; ಗವಂನಿಸು : ಅದನಾಲಿಸಿ ಧರಣೀಪತಿ ಮುದದಿಂ ಚರಲಿಂಗರೂಪದಿಂದ ಮಹೇಶಂ ನದರಮ್ಮಾಡುತ್ತಿನ್ನೆಯ ಹೃದಯದೊಳಿಸೆದಿರ್ದುದಕ್ಕೆ ಫಲಮಾಯ್ತೆನುತಂ (ಹಾಲಾಸ್ಯ. ೧-೪-೫೫) ; ಮದನತಿಲಕವಿಟ್ಟು ಮಧುರ ಮಾತಾಡಿ ನುಚ್ಚಿಸುತ್ತಾ ನದರುಮಾಡಿದಳು ನವಕುಶಲಕೋವಿದರನ್ನು ಸುದತಿ ಸುವ್ವಾಣಿಯಾಡಿದಳು (ಸೌಂದರಾ. ೩-೧೨). ೩. ಅಂದಾಜಂ ಮಾಡಂ ; ಊಹಿಸು : ಐತಾಳರ ಪಾಣಪಂಚಿಯಿಂದ ನದರು ಮಾಡಿದ ರಾಗದು (ಪುರಪು. ೧೮೩).

[←ಅರ. ಹಾರ. ಹಿಂ. ನಜರ್ ; ಮರಾ. ನಜರ್, ನದರ್]

ನಜರುಕೈದಿ (ನಾ). ಸ್ಥಾನಬಂಧನಕ್ಕೊಳಗಾದ ಕೈದಿ.–ಬಂದಿ: ನಜರಕೈದಿ. ನಿಮ್ಮ ತಾಬೇ ಮಾಡೇನ್ರಿ. ಮುಂಡಾನೆದ್ದು ಇವನ್ನ ಚಾವಡೀಗೆ ಮುಟ್ಸಸೂ ಜವಾಬ್ದಾರೀ ನಿಮ್ಮದರಿ (ಗ್ರಾಮಾಯ. ೦೬೬). [ನಜರು + ಕೈದಿ]

ನಜರುಕೈದು (ನಾ). ನಿರ್ದಿಷ್ಟಸ್ಥಾನ ಅಥವಾ ಸರಹದ್ದಿನಿಂದ ಹೊರಗೆ ಹೋಗದಂತೆ ಲಕ್ಷ್ಯದಲ್ಲಿಡುವ ಬಂಧನ ; ಸ್ಥಾನಬದ್ಧತೆ ; ಯಾವಾಗಲೂ ಕಣ್ಣಿಗೆ ಬೀಳುವಂತೆ ಮಾಡಿರಂವ ಬಂಧನ : ಕಣ ಬರಗಿಯಲ್ಲಿ ಶಿಬಿರಗಳನ್ನು ಕಟ್ಟಿಸಿ ನಮ್ಮನ್ನು ಅವರು ನಜರುಕೈದಿನಲ್ಲಿಟ್ಟ ೨ (ಕಳ್ಳಕೃ. ೩೭೦). 'ನಸರುಬಂದಿ' ಪರಾ. [ನಜರು + ಕೈದು೨]

ನಜರುಗಾಣಿಕೆ, ನದರಂಕಾಣಿಕೆ, ನದರಂಗಾಣಿಕೆ, ನದುರುಂಗಾಣಿಕೆ (ನಾ). ೧. = ನಜರಾಣಿ ೧ : ಅಕಬರಪಾತುಶಾಹನಂ ರಾಣಾರಾಯಂ ಕೈವಿಡಿದು ಸಿಂಹಾಸನದೊಳ್ಕುಳ್ಳಿರಿಸಿ ಆ ಚಿತ್ತೋಡಗಡಮಂ ನಜರು ಗಾಣಿಕೆಯಂ ಮಾಡಿ (ಕಳಕೃ. ೯-೧೮). **ನದರುಕಾಣಿಕೆ** : ೧. ಮದುವೆಯ ಕಾಲದಲ್ಲಿ ಮನೆಗೆ ಎಷ್ಟು ನದರುಕಾಣಿಕೆಗಳು ಬಂದಿದ್ದುವು ! (ಮುಗಿಯು. ೨೯೬). **ನದರುಗಾಣಿಕೆ** : ೩. = ನಜರಾಣಿ ೨ : ನದರುಗಾಣಿಕೆ ಕಪ್ಪವ ಕೊಟ್ಟು ಮಂತ್ರಿಯ ಇದಿರುಗೊಂಡರು ಹರುಷದಲಿ (ಹಂದ್ರಹಾ. ೨-೪೬). **ನದುರುಗಾಣಿಕೆ**: ೧. ಒಕ್ಕಲು, ಗೇಣಿ, ತೀರ್ವೆ ನದುರುಗಾಣಿಕೆ ಎಲ್ಲವುಗಳ ವಿಷಯದಲ್ಲಿಯೂ ಅಮ್ಮ ಖಚಿತವಾದ, ನಿಕಟವಾದ ಜ್ಞಾನ (ಕಠುಳಿ. ೬).

[ನಜರು + ಕಾಣಿಕೆ (<ಕಾಣ್)]

ನಜರುಮುಜರೆ, ನಜುರುಂವುಜುರೆ (ನಾ). ಕಾಣಿಕೆಗಳನ್ನು ಒಪ್ಪಿಸಿ ಮಾಡಂವ ಸಲಾವಂ,–ವಂದನೆ: ಪಾಡ್ಯದ ದಿನ ಸಿಂಹಾಸನಾರೋಹಣ ಕಾಲದಲ್ಲಿ ನಡದಂತೆ ನಜರುಮುಜರೆಗಳನ್ನು ಒಪ್ಪಿಸಿಕೊಂಡು ಮುಹೂರ್ತ ಮಾಡಿಕೊಂಡರು (ಕಾಮುವಂ. ೪೧) ; ವಿವಾಹದ ಶುಭಸಮಾಪ್ತಿಯ ವ್ಯಯುಕ್ಕ ಒಂದು ರಾಜಸಭೆಯು ನಡೆಯಿತು. ನಜರುಮುಜರೆಗಳಾದವು (ಶೂರಾಡ. ೬೯) ; ಸಭಾಸದರೆಲ್ಲರೂ ಆತನಿಗೆ ನಜರುಮುಜರೆಗಳನ್ನು ಒಪ್ಪಿಸಿದರು (ರಾವಿಜ. ೭೩) ; ನಜರುಮುಜರೆಗಳಾದ ನಂತರ ಔಪ್ತುದಾರರು ಪರಾಕು ಹೇಳಿದರು (ದಾಂತ್. ೨೩). **ನಜುರುಮುಜುರೆ** : ನಜುರು ಮುಜುರೆಗಳಲ್ಲದೇ ಎಲ್ಲರೂ ನವಾಬರಿಗೆ ತಲೆಬಾಗಿಸಿ ಸಭೆಯಿಂದ ಹೊರಟರು (ದಾಂತ್. ೦೬). [ನಜರು + ಮುಜರೆ]

ನಜುಗು (ಕ್ರಿ). ೧. ನೆಗ್ಗು ; ಜಜ್ಜು : ಜುಣುಗು, ನಜುಗು, ನೆಗ್ಗು, ಪೆಣಗು (ಕಸಾಪ. ೧-೩೯೦). ೨. ಜಜ್ಜಿಹೋಗು; ನಜ್ಜುಗುಜ್ಜಾಗು: ಬುಟ್ಟಿಯ ಹಣ್ಣುಗಳೆಲ್ಲ ನಜುಗಿ ಹೋಗಿವೆ (ಕೂಡಿ). 'ನಗ್ಗು೧', 'ನೆಗ್ಗು೧' ಪರಾ.

[ದೇ.॥ ತಮಿ. ನಚುಕ್ಕು, ನಚುಙ್ಕು]

ನಜುರು 'ನಜರು' ನೋ.

ನಜುರುಮುಜುರೆ 'ನಜರುಮಂಜರೆ' ನೋ.

ನಜ್ಜು೧ (ಕ್ರಿ). ಜಜ್ಜು ; ಚೂರಂಮಾಡು : ನಜ್ಜಿದ ಮೂಲಂಗಿಯನ್ನು ಚಟ್ನಿಯಲ್ಲಿ ಬೆರಸಿ ಒಗ್ಗರಣೆ ಹಾಕಿದರೆ ಚೆನ್ನಾಗಿರುತ್ತದೆ (ಕೂಡಿ).

[ದೇ.॥ ತಮಿ. ನಚೆ ; ತುಳು. ನೆಸಿವು ; ಕೂಗಿ. ನಸ, ನಸಿ]

ನಜ್ಜುಗುಜ್ಜು, ನುಜ್ಜುಗುಜ್ಜು (ನಾ). ನಜ್ಜಿಹೋಗಿರಂವಿಕೆ ; ಜಜ್ಜಿಹೋಗಿರಂವಿಕೆ ; ತಗ್ಗಿಹೋಗಿರಂವಿಕೆ.

ನಜ್ಜುಗುಜ್ಜು, ನುಜ್ಜುಗುಜ್ಜು = ಪೂರ್ಣವಾಗಿ ಜಜ್ಜಿಹೋಗಿರಂವಿಕೆ ; ಹೆಚ್ಚಾಗಿ ನಗ್ಗಿಹೋಗಿರಂವಿಕೆ : ಅದರ ಚುಕ್ಕಾಣಿ ಮಾತ್ರ ಬಂಡೆಗಳ ಇರುಕಿಗೆ ಸಿಕ್ಕುಬಿಟ್ಟು ನಜ್ಜುಗುಜ್ಜಾಯಿತು (ಮುಚಸ. ೮೦) ; ಕೃಷ್ಣನು . . . ಧೃತರಾಷ್ಟ್ರನ ಮುಂದೆ ಒಂದು ಕಬ್ಬಿಣದ ವಿಗ್ರಹವನ್ನು ತಳ್ಳಿದನು . . . ವಿಗ್ರಹವು ನಜ್ಜುಗುಜ್ಜಾಗಿ ಹೋಯಿತು (ವಚಭಾ. ೬೫) ; ಅವರಲ್ಲಿ ಹಲವರು... ಕೋಟೆಯ ಮೇಲಿನಿಂದ ಉರುಳಿಸಿದ ಗುಂಡುಕಲ್ಲುಂಗಳಿಗೆ ಸಿಕ್ಕಿ ನಜ್ಜುಗುಜ್ಜಾಗಿ ಸತ್ತುಹೋಗುತ್ತಿದ್ದರು (ಛಾಚವೀ. ೦೬) ; ಪ್ರತಿಯೊಬ್ಬನ ಭುಜಗಳ ಮೇಲೆಯೂ ಸುಮಾರು ೧೬ ಟನ್ನುಗಳ ಭಾರವು ಒತ್ತುತ್ತಿರುವುದು, ಹಾಗಾದರೆ, ಇಷ್ಟು ಭಾರದಿಂದ ನಾವೇತಕ್ಕೆ ನುಜ್ಜುಗುಜ್ಜಾಗುವುದಿಲ್ಲವೆಂದು ಯಾರಾದರೂ ಪ್ರಶ್ನೆ ಮಾಡಬಹುದು (ಕ್ಯೂತವಿ. ೦೯೦) ; ಕೆಲ ತಾಸುಗಳ ತರುವಾಯ, ಈ ಬಾಡಿದ ಎಲೆಗಳನ್ನು ಒಂದು ಯಂತ್ರಕ್ಕೆ ಕೊಟ್ಟು, ನುಜ್ಜುಗುಜ್ಜುಮಾಡಿ, ಕತ್ತಲೆಕೋಣೆಗಳಲ್ಲಿ ಹರಡುವರು (ಶಾಂಶ್ರ. II, ೦೬೮). ನಜ್ಜುನಜ್ಜುಗೆಯ್ = ಚೆನ್ನಾಗಿ ಅದುಮಂ,–ಒತ್ತು,–ಹಿಸುಕು : ಕಲಸಲೊಡನೊಲ್ದು ನಲವಿಂ ನಲಿನಲಿಯಿಸಿ ನಜ್ಜು ನಜ್ಜುಗೆಯ್ದಾ ಸೊಗದೊಳ್ ಬೆಲೆವೆಣ್ತನಮನೆ ಬಿಡಿಸುವ ನೆಲೆಗಂಡನೆ ನೆಗಟ್ಟಿಂಡವನೆ ಗಡ ಕಂದರ್ಪಂ (ಚಿಳವಿ. ೬-೦೩೨). [<ನಜ್ಜು೧]

ನಜ್ಜಿಸು, ನದರಿಸು (ಕ್ರಿ). ಲಕ್ಷಿಸು ; ಗವಂನಿಸಂ : ಮಜ್ಜೀವಿತೇಶ ರೇವಣ ನಿಪ್ಪ ಠಾವುಮಂ ನಜ್ಜಿಸುತ ಕಲ್ಯಾಣಪುರದೊಳಱಸಲ್ಕೇಳ್ಕು (ರಂಗಪು. ೨೪-೪೪). **ನದರಿಸು** : ಒದರೂತ ವುಳ್‌ಯೆಂದು ಮುದದೊಳಗಮರಾರು ಮದನೇಶ ಭಕ್ತರ ಮೇಲೆ ವದಗಿರುತಿಹ ದಿವ್ಯಕುಂದವುಪ್ಪಗಳನ್ನು ನದರಿಸಿ ಸುರಿದಾಗೆ ಬುಧರು (ಪಮಚಿ. ೭೦). [ನಜ್ಜು (<ನಜರು) + – ಇಸು೩]

ನಜ್ರು 'ನಜರು' ನೋ.

ನಟ್ (ನಾ). ಒಂದಂ ಅನುಕರಣಶಬ್ದ ; ನೆಟಿಕೆಮುರಿಯುವಾಗ, ಮರದ ರೆಂಬೆಮುರಿಯುವಾಗ ಮಂಂತಾದ ಸಮಯಂಗಳಲ್ಲಿ ಉಂಟಾಗುವ ಶಬ್ದ : ನಟ್ಟಿಂದು ನೆಟಿಗೆ ಮುರಿ (ಕೂಡಿ).

ನಟ (ನಾ). ೧. ನಾಟ್ಯಮಾಡುವವನು ; ಕುಣಿಯುವವನು ; ನರ್ತಕ ; ನಾಟ್ಯಗಾರ : "ನಟಃ, ನಟಕಃ, ನಾಟಕಃ, ನಟನ್–ಈ ೪ ಕುಣಿವಂ" (ಕಾಗಕೃ. ೦೩೮) ; ಸೂತ ನಟ . . . ವ್ಯುತ್ಪಾತಕವಿಪ್ರೋದ್ಭೂತರಮೆಸೆಯೆ ಜಯಜಯ ಗೀತಿಗಳೊರ್ವೊದಲಿ ತಡೆಯದೆರಡುಂ ಪಡೆಯೊಳ್ (ಪಂಸಧಾ. ೦೨-೦೦೬) ; ನಟ ನಗ್ನ ಭಗ್ನ ಗಾಯಕ . . . ಪಂಡಿತರ್ಕಳಭಿವರ್ಣನದುತ್ಕಟನಾದಮೆಯ್ದಿದುದು ದಿಕ್ತಟಮಂ (ಮುಕಾನೇ. ೦೦-೦೪೩) ; ನಟವಿಟಹೀನದೀನವರಯಾಚಕ . . . ನಿತ್ಯನಿಕೃಷ್ಟಭಾವಲಂಪಟ ಕಟಕಕ್ಷ ಮಾನಧನವಂ ಕುಡುವಂ ಗಡನಿಪ್ಪವಂ ಪ್ರಿಯೇ (ಮುರಚಿ. ೬-೮) ; ಸಂಗೀತಾನ್ವಿತ ಶಾಸ್ತ್ರಭಿಜ್ಞನೆನಿಪವಂ ನಟನಕ್ಕುಂ (ಶಾಸ್ಯಕಂ. ೦-೪೦). ೨. ನಟಿಸುವವನು ; ಅಭಿನಯಿಸುವವನು ; ನಾಟಕದಲ್ಲಿ ಪಾತ್ರ ವಹಿಸುವವನು : "ಶೈಲಾಲೀ, ಶೈಲೂಷಃ . . . ಭರತಃ, ನಟಃ – ಈ ೮ ನಟ್ಟುವಿಗಂ" (ಹಲಾಯು. ೯೬-೯೩೮) ; "ಶೈಲಾಲೀ, ಶೈಲೂಷಃ, ಜಾಯಾಜೀವಃ, ಕೃಶಾಶ್ವಿ, ಭಾರತಃ, ನಟಃ – ೬ ನಟ್ಟುವನ ಪೆಸರು" (ಸಿದ್ಧಾಂತಿ. ೨೬೬) ; ರಂಗಂಬೊಕ್ಕಭಿನಯಿಪ ನಟಂಗೆಣೆಯೆನಿಸುವುದು ಕಣ್ಗೆ ಲೋಕಾಕಾರಂ (ಅಜಿಪು. ೧೧-೪) ; ರಸವು ಅನುಕರ್ತನಾದ ನಟನಲ್ಲಿಯೂ ಕಾಣಿಸಿ

ಕೊಳ್ಳುತ್ತದೆ (ಭಾರಮಿ ; ೩೬೦). ಜನರನ್ನು ರಸಿಕರನ್ನಾಗಿ ಮಾಡುವುದು, ಮಾಡಪ್ರಯತ್ನಿಸುವುದು ರಸೋಪಾಸಕರಾದ ಕವಿ ನಟ ಸಭ್ಯರ ಧರ್ಮ (ಸಾಹಿಜೀ. ೭೮). ೩. ತಾಂಡವೇಶ್ವರ; ಶಿವ; ಈಶ್ವರ : ಅಪಗತಕಪಟದೆ ನಟನದನುಪದೇಶಂಗೆಯ್ದು ಪರಸಿ ಪೋಗೆನೆ ಪೊಡೆಮಟ್ಟು ಪಸಾದಮೆಂ [ದ]ಹರಿಗನನುಪೇಂದ್ರನಾ ದರ್ಭಶಯನ ತಳಕಿಟಿಪುವುದುಂ (ಪಂಪಭಾ. ೦೦-೧೩೦) ; ಬೆಳೆದ ಮಹಾಶಾಖೆಗಳ್ ತಾಂಡವಾಡಂಬರದೊಳ್ ನಾನಾ ವಿಧಂ ನರ್ತಿಪ ನಟನ ಭುಜಾದಂಡಮೋ ಪೇಟಿಮೆಂಬಂತಿರಮೇಯ ಸ್ಕಂಧಮುಂ ಸಂಧಿಸೆ ಜರಠಮಹಾಶಾಲ್ಮಲೀವೃಕ್ಷಮಿರ್ಕುಂ (ಕಾದಂಪೂ. ೦೨೦). ೪. ಒಂದು ಜಾತಿಯ ಹೆಸರು. ೫. ಕುಲಗೆಟ್ಟ ಕ್ಷತ್ರಿಯನಿಗೆ ಹುಟ್ಟಿದ ಮಗ ; ವರ್ಣಸಂಕರದಿಂದ ಕ್ಷತ್ರಿಯನಿಗೆ ಹುಟ್ಟಿದ ಮಗ. ೬. ಒಂದು ಬಗೆಯ ಸಸ್ಯ ; ಲಾಳದ ಕಡ್ಡಿ ; ಜೊಂಡು. ೭. ಅಶೋಕವೃಕ್ಷ ;"ಅಂಗನಾಪ್ರಿಯ" (ಪಂಡಿತ. ೨೫೯). [ಸಂ.]

ನಟಕ (ನಾ). ೧. ನಾಟ್ಯಗಾರ ; ನರ್ತಕ : "ನಟಃ, ನಟಕಃ, ನಾಟಕಃ, ನಟನ್—ಈ ೪ ಕುಣಿವಂ" (ಕಾಶಕ. ೧೩೮); ಮಾನಿಗಳು ಮೌನಿಗಳು ಸ್ವಚ್ಛ ಶಿವಾನುಭಾವೇಚ್ಛಾತ್ಮಸುಖಿಗಳು ದಾನಿಗಳು ಗಾಯಕರು ನಟಕರು [ಪಾಠಾಂ. ನಟರ್ಗಳ್, ನಟಿಕರು] ನವರಸಾಯತರು (ಬಸಪು. ೬-೦೭). ೨. ಅಭಿನಯಿಸುವವನು ; ನಟಿಸುವವನು. ೩. ಕುಣಿಯುವ ಪಕ್ಷಿ ; ನವಿಲು ; ಮಯೂರ : ಚಟಕ ಚಾಟಣಕ . . . ಟಿಟ್ಟಿಭ ತಾಮ್ರಚೂಡ ಶುಕ ನಟಕ ಕುಕ್ಕುಭ ಲಗಡ ಸಲೆ ಕೂಕಂಟಿಗ ಕರ್ಪುರವಾಣಿ ಹಸುಬಂ ಚಿಟು ಚಟಕ ಕಬ್ಬಕ್ಕಿ ಹೆಬ್ಬಕ್ಕಿಗಳ ನೋಡಿದವು (ಮದೇಪು. ೩-೯). ೪. ಶಿವ ; ಈಶ್ವರ : ನಟ[ಟ]ಕನ ಪೆಸರೆಂದು ವಟತರು ಗರ್ವಿಸೆ ವಟವೃಕ್ಷವಾಗಿ ಭುವನದಲಿ (ಕರಜಾ. ೩-೨೩). [ಸಂ.]

ನಟಕು$_1$ 'ನೆಟ್ಟಿಕೆ' ನೋ.

ನಟಕು$_2$ (ನಾ). ನಟನೆ ; ಬೆಡಗು ; ಒನಪು ; ಒಯ್ಯಾರ : ವಿಟಪುರುಷರನು ನೋಡಿ ನಟಕುಗಳ ತೋರುತಲಿ ನೆಟಿಗೆಯನು ಮುರಿಯುತಲಿ ಚಟುಲೆ ನೋಡುತಿರೆ (ಹಮಚ. ೨೪೫). [ನಟಕ + – ಉ$_4$]

ನಟಣೆ, ನಟ್ಟಣೆ (ನಾ). ೧. ಕುಣಿತ ; ನರ್ತನ : ಸಲಿಲದ ಮೇಲೊಂದು ನಿಳೆಯ ನಿಳೆಯದೊಳಗೊಬ್ಬ ಸೂಳೆ. . . ನಟಣೆಯಲಾಡುತ್ತಿರಲಾಗಿ ನೋಡಿದವ ಮನಸೋತು ಕೂಡಿಹೆನೆಂದಡೆ ಕೂಡಬಾರದು (ಕಲ್ಯಾಶಾಂ. ೨೦-೦೦೦) ; ನಿಟಲಾಕ್ಷನ ನಟಣೆಗೆ ನೆಲನಪ್ಪುದು (ಕುಂಬಜಿ.ಹ. ೨೫೧-೦೪) ; ಬೀಱೆ ನವರಸಮಂ ಸಭೆಗೆ ನಲವೇಱೆ ತನ್ನಭಿನವನಟನೆಯಂ ತೋಱೆಯಾಡುವ ಭೃಂಗಿಗೊಲಿದು ಪಿನಾಕಿ ಸಾಕೆನುತ (ಬಸಪು. ೦-೫೦) ; ನಟಣೆಯಲಿ ಬಳುಕಿದುದು ಕೊರಳುತ್ಕಟ ನಿತಂಬ ಸಘಾಡತರದುಬ್ಬಟೆಗೆ ದಡದಡಿಸಿದವು ಪದಯುಗವಾ ನಿತಂಬಿನಿಯ (ತೊರರಾ. ೩-೪-೬) ; ಕಳಹಂಸೆಗಳ ಕಾಲ್ಗೆ ನಟಣೆಯನೊದವಿಸಿ. . . ಎತ್ತೆತ್ತಲುಂ ಕಾಮದೂತನಂತೆಳೆಗಾಳಿ ತೆಂಕಣಿಂ ಸುಳಿದುದು ವಸಂತಾಗಮದ ಮೊದಲೊಳು (ಜಿಬಪು. ೪೫-೦೨) ; ಪರಿಪರಿಯ ನಟಣೆಗಳ ಚಂದದಿಂದಂದದಿಂ ಸ್ಫುರಿಸುತಿಹ ಮೌಕ್ತಿಕದ ಮಣಿಗಳಿಂ ಗಣಿಗಳಿಂ . . . ಪಯೋನಿಧಿಯೆಸೆದುದು (ಘೋರಾಸು. ೨೮-೪೦). ೨. ನಟಿಸುವಿಕೆ ; ಅಭಿನಯ. ೩. ತೋರಿಕೆ ; ಸೋಗು ; ಕಪಟ : ಲಲನೆಯರ ನಟಣೆ ಎಂಬ ಕುಟಿಲಕ್ಕೆ ಸಿಲ್ಕಿ ಕೋಟಲೆಗೊಳ್ಳದಿರಾ ಮರುಳು ಮಾನವಾ (ಸಿದ್ಧೇವ. ೪೧-೦೦೦) ; ನಟಣೆಯಂದರಿದನಂತರದಿ ಶ್ರೀಕೃಷ್ಣನೊಲುಮೆಸಾರಥಿಯಾದ ದಾರುಕಂ ಶ್ರೀಹರಿಯ ನೆಲೆಗಾಣದರಸುತಲೆ ಶ್ರೀತುಳಸಿವನಮಾಲೆ ಪರಿಮಳದ ಮಾರ್ಗವಿಡಿದು ಬರುತಲಿ (ತುರಂಗ. ೮೯-೦೬). ನಟ್ಟಣೆ : ೩.ನಟ್ಟಣೆ ಬೇಡ ನಮ್ಮರಸುಗಳ್ನಿನಗೊಲ್ದು ಕೊಟ್ಟ ಮೇಲಹುದು ನಿನ್ನೊಡವೆ (ಭರಜ. ೪೩-೦೨). P ಇದು ಪ್ರಾಸಕ್ಕಾಗಿ ಮಾಡಿಕೊಂಡ ರೂಪ. [<ನಟನೆ]

ನಟಣೆಗೊಳ್ (ಕ್ರಿ). ನರ್ತನವನ್ನಾರಂಭಿಸು ; ಕುಣಿಯಲು ತೊಡಗು ; ನಾಟ್ಯಮಾಡು : ಕಡವಿನ ಸೊವಡಿಂದೊಂದೆರಡಡಿಯಿಡುತಿರ್ದಪುದು ಗಾಳಿನಲಿದು ನವಿಲ್ಗಳ್ ನಡೆನಟಣೆಗೊಳುತ್ತಿರ್ದಪುವೆಡೆಯಱಸುತ್ತಿರ್ಪುವಂಚೆ ಸುಳಿದುವು ಮುಗಿಲ್ಗಳ್ (ಗಿರಿಕ. ೯-೩೨). [ನಟಣೆ + ಕೊಳ್$_1$]

ನಟನ (ನಾ). ೧. ಕುಣಿತ ; ನಾಟ್ಯ ; ನರ್ತನ : "ತಾಂಡವಂ, ನಟನಂ, ನಾಟ್ಯಂ, ಲಾಸ್ಯಂ, ನೃತ್ಯಂ, ನರ್ತನಂ – ೬ ಭರತಶಾಸ್ತ್ರ ಪ್ರಕಾರ ಕುಣಿಯುವುದಕ್ಕೆ ಹೆಸರುಗಳು" (ಸಿದ್ಧಾಂತಿ. ೬೦) ; ಪೇಡನ ನರ್ತನ ಹಾಸ್ಯವನಾಡಂಬರ ನಟನ ವೇಣುವಾದನ ಗೇಯಕ್ರೀಡೆಗಳಿಂ ಗೋವುಗಳೊಡನಾಡುತ್ತುಂ ರಾಮಕೃಷ್ಣರಿರ್ದವಸರದೊಳ್ (ಜಗವಿ. ೪-೪೮) ; ಮದನಂ ಗಂಜುವ ಯೋಗಿಯೇ . . . ನಟನದೊಳ್ ಸೋತೋಡುವಳ್ ಸೂಳೆಯೇ (ಸೋಮೇಶ. ೭೮). ೨. ಅಭಿನಯ ; ನಟನೆ. 'ನಟನಕಲೆ' ಪರಾ. [ಸಂ.]

ನಟನಕಲೆ (ನಾ). ಅಭಿನಯಿಸುವ ಕಲೆ ; ಪಾತ್ರವಹಿಸುವ ಕೌಶಲ : ನಟನಕಲೆ ಎಲ್ಲರಿಗೂ ಸಿದ್ಧಿಸುವುದಿಲ್ಲ (ರೂಢಿ). [ನಟನ + ಕಲೆ$_3$]

ನಟನಾರಾಯಣಿ (ನಾ). [ಸಂಗೀತ] ಒಂದು ಮಿಶ್ರರಾಗದ ಹೆಸರು : ಶ್ರೀರಾಗದೊಳ್ ನಟನಾರಾಯಣಿ ಯೋಗಾವತಿಯಾಗಿರ್ಕುಂ (ಹಮ್ಮೀರ. ೨-೯೦ ವ). [ಸಂ. ನಟನಾರಾಯಣೀ]

ನಟನೆ (ನಾ). ೧. =ನಟನ ೧ : ನಟನೆಯಿಂ ಕೊಂಕುತಂ ಬಳುಕಿ ಮೆಲ್ಲಡಿಯಿಡುತೆ ವಿಟವೇಷದಿಂ ವಿಳಾಸಂ ಸೂಸಲಡಿಯಿಡುತೆ (ಇಹರ. ದೇ. ೩೨-೨೩); ನನಗೇನೋ ನಾಟಕ, ನಟನೆ ಎಂದರೆ ಮೊದಲಿನಿಂದ ಹುಚ್ಚು (ರಾಯಕ. ೬೫). ೨. ತೋರಿಕೆ ; ಸೋಗು ; ವೇಷ : ಪಾಲುಗಡಲಲಿ ಫಣಿಯ ಮಂಚದ ಮೇಲೆ ಪವಡಿಸಿ ಪರಮನೆನಿಸಿದ ಲೀಲೆಯೆತ್ತಲು ಮನುಜಭಾವದ ನಟನೆ ತಾನೆತ್ತ (ಕೌಶಿರಾ. ೪೩-೪೫). ೩. ರೀತಿ ; ಕ್ರಮ ; ವಿನ್ಯಾಸ : ಉತ್ಕಟದ ಮಂದಿರದ ವೈವಾಹಮಂಟಪವೆಸೆವ ಪಟಿಕದಿಂ ಸವೆದ ನೆಲ ಕಟ್ಟಲ್ಲಿ ರನ್ನಗಂಭಂ ಸಾಸಿರಂಗಳಿರ್ಪ ನಟನೆಯಂತೆನೆ ಫಣೀಶನ ಪೆಡೆವರಲ್ಗದಿರು ತಟವಾಯ್ದು ಮೇಲೆ ತೋರ್ಪಂತೆ (ಜೀರಮ. ೩-೧೧). [ಸಂ. ನಟನ]

ನಟನೆಗೆಡಿಸು (ಕ್ರಿ). (ಆಲಂ) ಆಟ ನಡೆಯದಂತೆ ಮಾಡು ; ಸ್ತಬ್ಧಗೊಳಿಸು ; ಚಟುವಟಿಕೆಗೆ ವಿಘ್ನವನ್ನುಂಟುಮಾಡು : ಆದಿಭೈರವನ ನಟನೆ[ಪಾಠಾಂ. ಣೆ]ಗೆಡಿಸುವ ನಗದ ರಾಯರ ಭಟರನನುಪಮಸಮರಜಯ ಸಂಘಟರನೈದರ್ಬುದವನಗ್ನಿಕುಮಾರ ತೋಱಿಸಿದ (ತೊರರಾ. ೪-೭-೦೮). [ನಟನೆ + ಕೆಡಿಸು$_1$]

ನಟಮಂಡನ (ನಾ). ೧.ನಟನ ಅಲಂಕಾರಸಾಮಗ್ರಿ ; ಅಭಿನಯಕಾರನ ಆಭರಣ. ೨. ಹಳದಿಬಣ್ಣದ ಒಂದು ಬಗೆಯ ಖನಿಜ ; ಹರಿದಳ. [ಸಂ.]

ನಟಮಂದಿರ (ನಾ). ದೇವಾಲಯದಲ್ಲಿ ಒಂದು ಭಾಗ ; ರಂಗಮಂಟಪ : ಚೆನ್ನಾಗಿ ಅಭಿವೃದ್ಧಿ ಹೊಂದಿದ ಒರಿಸ್ಸಾದೇವಾಲಯಗಳಲ್ಲಿ ಗರ್ಭಗೃಹ ಜಗಮೋಹನ್ ನಟಮಂದಿರ ಮತ್ತು ಭೋಗಮಂದಿರಗಳೆಂಬ ನಾಲ್ಕು ಭಾಗಗಳಿವೆ (ಭಾರದ. ೪೯೮). [ನಟ + ಮಂದಿರ]

ನಟಯ್ಸು 'ನಟಿಸು' ನೋ.

ನಟರಾಜ (ನಾ). ನಾಟ್ಯದ ಅಧಿದೇವತೆ ; ತಾಂಡವೇಶ್ವರ ; ಶಿವ : ಶಿವನು ಆದಿನಟ . . ಅವನನ್ನು 'ನಾಟ್ಯಾಚಾರ್ಯ' 'ನಟರಾಜ' ಎಂದೂ ಕರೆಯುತ್ತಾರೆ (ಲಾಸ್ಕರಂ. XIV, ಪೀಠಿಕೆ) ; ಭಾರತೀಯಸಂಸ್ಕೃತಿಯ ಆವಿಷ್ಕಾರಗಳಾದ ನಟರಾಜನ ನಾಟ್ಯ, ಶ್ರಿಮೂರ್ತಿಯ ವೈವಿಧ್ಯ ಪ್ರಕಾಶ, ಸಾಮಾದಿಗಾನ ಇತ್ಯಾದಿ ಕಲಾಭಿವ್ಯಕ್ತಿಗಳೂ ಆತ್ಮಸಂಸ್ಕೃತಿಯನ್ನು ಪ್ರಕಾಶಪಡಿಸುತ್ತವೆ (ಋಕ್ಸಾರ. ೧೨೪, ಪೀಠಿಕೆ). [ನಟ + ರಾಜ]

ನಟರುದ್ರ (ನಾ).=ನಟರಾಜ: ಇದು ಸಂಧ್ಯಾನಟರುದ್ರನ ವಿದಿತ ಜಟಾಕ್ಷುಬ್ಧ ಫಣಿ ಮಹಾಬಲಮಂ ತಳ್ವದೆ ವುಗಲೊಗಿರೆ ಪೊಳೆವಗ್ಗದ ಫಣಿಮಣಿಯೆನಿಸಿ ತರುಣರುಚಿರವಿಬಿಂಬ (ರಾಜಶೇ. ೧೧-೪). [ನಟ + ರುದ್ರ]

ನಟವ 'ನಟ್ಟವ' ನೋ.

ನಟವರ (ನಾ). ೧. ಮುಖ್ಯನಟ; ಸೂತ್ರಧಾರ: ಮದ್ದಳೆಯ ನುಡಿಸಿ ನಟವರ ಕಾಯಕವ ಮಾಡಿ ದೊರೆದರ್ಥದಿಂ ಚರಕೆ ಭಕ್ತಿಯಂ ನಡೆಸುತಿರಲು (ಪ್ರಾಹರಾ. ೩-೬). ೨. ಶ್ರೇಷ್ಠನಾದ ನಟ; ಉತ್ತಮ ನಾಟ್ಯಕಾರ: ಒಂದೆ ಒಂದು ಕಾಲಕ್ಕೆ ಅವನು ನಟವರನೆನಿಸಿಕೊಂಡಿದ್ದನು (ರೂಢಿ).

[ನಟ + ವರ್ಯ]

ನಟವಿಗ 'ನಟ್ಟವಿಗ' ನೋ.

ನಟಸೂತ್ರ (ನಾ). [ನಾಟ್ಯ] ನಾಟ್ಯಶಾಸ್ತ್ರಕ್ಕೆ ಸಂಬಂಧಿಸಿದ ಸೂತ್ರ,-ನಿಯಮ: ಪಾಣಿನಿಯ ಕಾಲಕ್ಕಾಗಲೇ (ಕ್ರಿ. ಪೂ. ಸು. ೫ನೆಯ ಶತಮಾನ) ಶಿಲಾಲಿ ಕೃಶಾಶ್ವ ಎಂಬವರ ನಟಸೂತ್ರಗಳಿದ್ದುವು. ಆದರೆ ಈ ನಟಸೂತ್ರಗಳು ಮಾತುಗಾರಿಕೆಯನ್ನೊಳಕೊಳ್ಳದ ಕೇವಲ ನೃತ್ಯಕ್ಕೆ ಅನ್ವಯಿಸುತ್ತಿದ್ದುವೋ ಏನೋ ಎಂಬ ಸಂದೇಹವೂ ಇದೆ (ಧಾರಮಿ. ೧೦). [ಸಂ.]

ನಟಿ (ನಾ). ೧. ಕುಣಿಯುವವಳು; ನಾಟ್ಯಮಾಡುವವಳು; ನೃತ್ಯಗಾತಿ: "ನಟೀ, ಕ್ಷುದ್ರಾ – ಈ ೨ ನಟವಿಗಿತ್ತಿ" (ಹಲಾಯು. ೯೭-೪೮). ೨. ನಾಟಕ, ಚಲನಚಿತ್ರಗಳಲ್ಲಿ ಅಭಿನಯ ಮಾಡುವವಳು,—ಪಾತ್ರ ವಹಿಸುವವಳು: ಅವಳ ತಾಯಿ ಮಂಜೂಬಾಯಿ ಆ ಕಾಲದ ಪ್ರಸಿದ್ಧ ನಟಿಯೆನಿಸಿಕೊಂಡಿದ್ದಳು (ಅಭಿಮಾ. ೪). ೩. ಮುಖ್ಯ ಅಭಿನಯಕಾರ್ತಿ; ಸೂತ್ರಧಾರನ ಹೆಂಡತಿ: ರಂಗಭೂಮಿಯ ಮೇಲೆ ನಾಟಕ ನಡೆಯುತ್ತಿರುವಾಗ . . . ನಟಿ ಸ್ವಸ್ವರೂಪದಲ್ಲಿ ಅಲ್ಲಿಗೆ ಬರುವುದಿಲ್ಲ (ಧಾರಮಿ. ೩೭); ಸೂತ್ರಧಾರನು ಈ ಮಂಗಳಶ್ಲೋಕವನ್ನು ಹೇಳಿ ನಟಿ, ವಿದೂಷಕ, ಪಾರಿಪಾರ್ಶ್ವಕ ಮುಂತಾದವರಲ್ಲಿ ಒಬ್ಬರು ಅಥವಾ ಅನೇಕರೊಡನೆ ಮಾತನ್ನು ಆಡುತ್ತ . . . ವಸ್ತುವಿನ ಅಥವಾ ಪಾತ್ರಗಳ ಸೂಚನೆ ಮುಂತಾದವುಗಳನ್ನು ಮಾಡಿ ಹೊರಟುಹೋಗುವನು (ಕೃಬಡಿ. ೨೧೨). ೪. ಬೆಲೆವೆಣ್ಣು; ವೇಶ್ಯೆ. ೫. ಒಂದು ಬಗೆಯ ಪರಿವಂಳದ್ರವ್ಯ; ಗೂವಗುತ್ತಿಗೆ: "ಸುಷಿರಾ, ವಿದ್ರುಮಲತಾ, ಕಪೋತಾಂಘ್ರಿಃ, ನಟೀ, ನಲೀ, ಧಮನೀ, ಅಂಜನಕೇಶೀ – ೭ ನಳಿ ಎಂಬುವ ಗ್ರಂದ್ಯದ್ರವ್ಯದ ಹೆಸರುಗಳು, ಗೂವಗುತ್ತಿಗೆ" (ಸಿದ್ಧಾಂಶಿ. ೧೨೪). [ಸಂ. ನಟೀ]

ನಟಿಕೆ 'ನೆಟ್ಟಿಕೆ' ನೋ.

ನಟಿಕೆತೆಗೆ 'ನೆಟಗೆತೆಗೆ' ನೋ.

ನಟಿಕೆಮುರಿ 'ನೆಟ್ಟಿಗೆಮುರಿ' ನೋ.

ನಟಿಗೆ$_1$ 'ನೆಟ್ಟಿಕೆ' ನೋ.

ನಟಿಗೆ$_2$ (ನಾ). ನೆಟ್ಟುದ್ದು; ನಾಟಿದುದು: ನಾರಣಗವಡನ ಮಮಗ ದೇವಪ್ಪನ ಬಳಿಯ ಕಂಠದ ಹೈವಣ ವೈದ್ಯರ ಈ ಸ್ಥಳದೊಳಗೆ ತಾನು ನೆಟ್ಟ ನಟಿಗೆಯ ತಂಗ ಪೊಪ್ಪಸಲೊಳಗೆ ತನ್ನ ಹೆಸರ ಹಾಲಧಾರೆಗೆ ಬಿಟ್ಟ ಪರಹ (ಕಇ. III, ೧೫-೬೯; 1533). [< ನಡು$_1$]

ನಟನಳಿಲು (ನಾ). ಒಂದು ಅನುಕರಣ ಶಬ್ದ. 'ನಟನಳಿಲೆನ್' ಪರಾ.

ನಟನಳಿಲೆನ್ (ಕ್ರಿ). ನಟನಳಿಲೆಂದು ಶಬ್ದಮಾಡು: ಕಟಸೂತ್ರ ಕಂಕಣ . . . ತಾಟಂಕಪದಕವ ನಟನಳಿಲೆ [ಪಾಣಾಂ. ಲ]ನೆ ಮುಜ್ಜಿದಿಟ್ಟು ಮಾಯಾನೃತ್ಯನಟಿಯಾದಳು (ಕುಶಾಸಾಂ. ೩೩-೩೬). [ನಟನಳಿಲು + ಎನ್$_1$]

ನಟಿಯಿಸು 'ನಟಿಸು' ನೋ.

ನಟಿಸು, ನಟಿಯಿಸು, ನಟಿಯಿಸು (ಕ್ರಿ). ೧. ಕುಣಿ; ನರ್ತಿಸು; ನಾಟ್ಯ ಮಾಡು: ಕಿನ್ನರರು ನವರಸದಿ ಪಾಡಲ್ಯಾಗನಂತರಂ ಭೃಂಗೀಶ ನರ್ತನಕೆ ನಿಂದಾಗ ಹೊಸವರಿಯ ಗತಿಗಳಂ ನಟಿಸಿ ತೋಜುತ್ತಮಿರೆ (ಬಸರ. ೧-೨೫); ಅವಳ ಕರುಣಾಮೃತವನೀಂಟಿಯಾ ಸದುಜ್ವಳ ಪ್ಯದೂಕ್ಷಿಗಳನೋಲಗಿಸಿ ಯಾಕೆಯ ಕಟಾಕ್ಷವಿಲಾಸದೊಡನೆ ನಟಿಸಿ (ಪದ್ಮರಾ. ೧-೩೨); ಅಂಗನೆಯರ ಸೋರ್ಮುಡಿಯ ವಿಲಸಿತ ಕಾರ್ಗಾಲದ ಮುಗಿಲೆಂದಾಗ ಸಲೆ ನಟಿಸುವುವು ಸೋಗೆಗಳು (ಕಂನವಿ. ೭-೭). ೨. ಅಭಿನಯ ಮಾಡು: ತೋಟಿಸಿದ ದೀವಿಗೆಗೆ ಕರುಣವ ತೋಟುತಿತ್ತನು ಬಾಲವನು ನಗೆಗಾಱರಿಗೆ ನಾಟಕವ ನಟಿಸುತ ವೀರ ಹನುಮಂತ (ತೊರರಾ. ೫-೭-೪೫); ಚಲನಚಿತ್ರದಲ್ಲಿ ನಟಿಸಬಹುದು (ಪಿಂದಜೀ. ೧೦೮). ೩. ಸೋಗುಹಾಕು; ತೋರಿಕೆಯಂ ನಟನೆ ಮಾಡು: ರಾಜಮಹಾರಾಜರು ಜನಮೆಚ್ಚಗೆಗೆ ಅಷ್ಟೋ ಇಷ್ಟೋ ಧಾರ್ಮಿಕ ಚಟುವಟಿಕೆಯಲ್ಲಿ ಭಾಗವಹಿಸಿದಂತೆ ನಟಿಸುವರಷ್ಟೇ (ದಾಶಜಿಂ. ೦೬೫); ಸೇರನ್ನು ಕೆಳಗಿಟ್ಟವನಂತೆ ನಟಿಸಿ ಸೇರಿನೊಳಗಿದ್ದ ತುಪ್ಪವನ್ನೆಲ್ಲಾ ಗೋರಿ ಹಾಕಿದ (ಚಂಗಾಳ್ಳ. ೫೯) ; ಮಲ್ಲಿ ಒಳಗೆ ಏನೋ ಕೆಲಸ ಮಾಡುವಂತೆ ನಟಿಸಿದಳು (ಚೀಪರಂ. ೨೩); ಹುಡುಗರು . . . ದಿಗಿಲುಬಿದ್ದವರಂತೆಯೂ ನಟಿಸುವರು (ಳಳಹು. ೬೧); ತರಗತಿಯಲ್ಲಿ ಪಾಠದ ಕಡೆ ಆಸಕ್ತಿಯಿಂದಿರುವಂತೆ ನಟಿಸುವುದು (ಶಿಕ್ಷದ. ೨೧೬). ೪. ವ್ಯಕ್ತವಾಡು; ಪ್ರಕಟವಾಡು; ತೋ ಪ್ ರ್ ದಿ ಸು: ನಿಜಜನಕಜನಿತಸ್ನೇಹರಸಾರ್ದ್ರಮಧುರಾಕ್ಷರಸಮ್ಮಿಳಿತ ಸಾತ್ವಿಕಸರಸಂ ಕೇಳ್ದು ಪುತ್ರೀಭಾವವಮಂ ನಟಿಸಲೆಂದು ಶಿವಲಿಂಗವಮಂ ಬೀಳ್ಕೊಂಡು ತಿರುಗಿ ನೋಡಿ (ಗಿರಿಕ. ೩-೧೦೫ ವ); ಬಾಲಲೀಲೆಯಂ ನಟಿಸಲೆಂದಳವರಾ ಮಾತೆಪಿತರು (ಸಿದ್ಧರಾ. ೨-೦೦); ನಿಟಿಲಾಕ್ಷ ನೀನಾಡಿದ ಮಾತು ಹೃದಯಸಂಘಟತವೆ ಬಾಣನಿಗೆನಲು ಕುಟಲಬುದ್ಧಿಯ ಬಿಟ್ಟು ಬಲಿ ಸೂನು ಸತ್ಯವ ನಟಿಸಿ ಬನ್ನಹವ ಮಾಡಿದನು (ಮೋಹತ. ೪೦-೬೯). ೫. ಚಲಿಸು: ಚಟುಂವಟಿಕೆಗೊಳ್ಳು; ಕಾರ್ಯಪ್ರವೃತ್ತವಾಗು: ಕೆದಱಿದುದು ಕುಡಿನೋಟ ಕರಣದ ಕದಡು ಹರಿದುದು ಇಂದ್ರಿಯಾವಳಿ ತುದಿಗೊಳಿಸಿದುದು ಪವನ ನಟಿಸಿತು [ಪಾಣಾಂ. ನರಸಿದ, ನಱಸಿತು] ನಾಭಿ ಪರಿಯಂತ (ಕುಪ್ಪಾಗ. ೦೦-೪). ೬. ಚಲಿಸುವಂತೆ ಮಾಡು; ಕಾರ್ಯಪ್ರವೃತ್ತಗೊಳಿಸು: ತ್ರಿದೋಷಾದಿಗಳು ಪ್ರವರ್ತಿಸಲೀಯದೆ . . . ಮೂಲಿಕಾಬಂಧದಿಂ ಬಂಧಿಸಿ ಘಟಮಂ ನಟಿಸುವುದು ಹಠಯೋಗ (ಅದವ. ೨೯-೪೬). **ನಟಿಯಿಸು**: ೧. ಮೆಱದಿದಿರಾಗಿ ತಾಗಿದ ಗಜಾಸುರನಂ ಪಿಡಿದೆತ್ತಿ ಚರ್ಮವಂ ಸಜಸಱಿಸಲಿನೆ ಸೀಳ್ದು ಬಿದಿರ್ಚಿಯಾಡುತ ಪುಟುಟಹ ಕಾಟಹ ಕುನಟಿ ಕಿಜಟಕಿಜಟವೆಂಬ ವಾದ್ಯದಿಂ ನಟಯಿಸಿ ನಾಟ್ಯವಾಡಿದ ಮಹೇಶ್ವ[ರ] ನೀಗೆಮಗಿಷ್ಟಸಿದಿಯಂ (ಎಕ. XVI, ತಿಕ್ಕನಾ. ೭೦-೨೪; 1235). **ನಟಿಯಿಸು**: ೧. ಗಂಡಮಂಡಲತಟದೊಳ್ ನಟಿಯಿಸೆ ಮಣಿಕುಂಡಲ ರಾಜಿವಪಟಲಂ (ಪಂರಾಮಾ. ೨-೦೦); ಸೊಗಸಾಗಿ ಲೋಕಪ್ರಳಯತಾಂಡವಾಡಂಬರವನಳ್ಕಿಯಂ ನಟ[ಪಾಣಾಂ. ಟ]ಯಿಸಿದನು (ಪಲಪು. ೧೨-೨೦). ೨. ಅಂಗಜನೆ ಸೂತ್ರಧಾರಂ ಶೃಂಗಾರಮೆ ನಾಟಕಂ ತದಂಕಂಗಳ್ ನಾಲ್ಕಂ ಗಂಗಳಾಗೆ ಕಾಮಿಜನಂಗಳ್ ವರ್ಗಿಗರ ತೆಱದೆ ನಟಿಯಿಸುತಿರ್ದರ್ (ಚಂದ್ರಪು. ೪-೯೨). ೩. ಪಟುಮಾಡಿದರ್ಬಿಂಕಿಯಂ ಶಿವನ ಬಳಿಗೆಂದು ನಟಿಯಿಸುತ್ತಿರ್ದ ನೀಶಂ ಶೀತಮುಮನೆಂದು (ಇಳಿರ. ದೇ. ೫೩-೧೦); ಕಣಿಯನು ತೊಡಬೇಡ ತೊಡುವಂತೆ ನಟಿಯಿಸು ಹಗೆಯನು ಹಾಗೆಯೆ ಕಳಿಸು (ಇಂದಾಪ. ೨೧೪-೩೬).

[ನಟನ + -ಇಸು$_3$]

ನಟುಕು 'ನೆಟ್ಟಿಕೆ' ನೋ.

ನಟುವ 'ನಟ್ಟವ' ನೋ.

ನಟುವಾಂಗ (ನಾ). ತಾಳ, ರಾಗಗಳನ್ನು ಹೊಂದಿಸಿಕೊಟ್ಟು ನರ್ತಕಿಯ ಮೂಲಕ ಸರಿಯಾಗಿ ನೃತ್ಯ ಮಾಡಿಸುವುದು: ಈ ನರ್ತಕಿಯ ನರ್ತನದಲ್ಲಿ ನಟುವಾಂಗದ ಭಾಗವು ತುಂಬಾ ಉಚ್ಚುಕಟ್ಟಾಗಿತ್ತು (ರೂಢಿ).

[ನಟುವ (< ನಟ್ಟವ) + ಅಂಗ$_2$]

ನಟುವಿಗ 'ನಟ್ಟವಿಗ' ನೋ.

ನಟ್ಟ1 'ನಡು1' ಪರಾ.

ನಟ್ಟ2, ನಟ್ಟೆ2 (ನಾ). 'ನಡು' ಎಂಬುದಕ್ಕೆ ಸಮಾಸಗಳಲ್ಲಿ ಬರುವ ಆದೇಶರೂಪ. 'ನಟ್ಟಡವಿ', 'ನಟ್ಟೆರುಳ್1' ಪರಾ. **ನಟ್ಟೆ2** : 'ನಟ್ಟೆಗೊಂಬು', 'ನಟ್ಟೆವಗಲ್' ಪರಾ. [< ನಡು2]

ನಟ್ಟ3 (ನಾ). = ನಟ್ಟವ ೧ : ಸುಗಂಧರಾಯನು ತನ್ನ ಪ್ರಿಯಮಿತ್ರರಾದ ಅಂತರಂಗದ ಜನರಿಂದಲು ಭರತಶಾಸ್ತ್ರಮಂ ಕೂಲಂಕಷವಾಗಿ ತಿಳಿದು ಸುಗಂಧಮಹಾರಾಯನನ್ನೋಲೈಸದೆ ಇರುವರ ಜನ್ಮವಂದಿಗೆಂದು ನುಡಿವಂತೆ ಉಪ್ಪುಳಿಸುತಿರುವ ನಟ್ಟರಿಂದಲುಂ (ಸೌಗಂಧಿ. ೬೭೭-೧).

[< ಪ್ರಾ. ಣಟ್ಟ./ ಸಂ. ನಟ]

ನಟ್ಟ4 (ನಾ). ನಷ್ಟ ; ಹಾನಿ. 'ನಟ್ಟೆ2' ಪರಾ. [< ಸಂ. ನಷ್ಟ]

ನಟ್ಟಗಾರ (ನಾ). ನಾಟ್ಯಮಾಡುವವನು; ನೃತ್ಯಗಾರ ; ನರ್ತಕ : ನರ್ತಕಿಯರು ನಟ್ಟಗಾರರು ಗಾನರು [ಪಾಠಾಂ. ನಾಟ್ಯಶಿಕ್ಷಕ ಗಾಯಕ] ಭರ್ತದೆಣಿಕೆ ತಾಳದೆಸಕ ಅರ್ತಿಗಾರರ ಕೇರಿಗಳೆದು ರಾಮಯ್ಯನು ಕರ್ತೃ ಬಂದನು ಶಿವಾಲಯಕೆ (ಅಬ್ಬಲೂ. ೩-೧೩೬). [ನಟ್ಟ3 + – ಗಾರ (< – ಕಾಱ)]

ನಟ್ಟಗೊಂಬು, ನಟ್ಟೆಗೊಂಬು (ನಾ). ಮರದ ಮಧ್ಯದ ಕೊಂಬೆ,–ಶಾಖೆ: "ನಟ್ಟಗೊಂಬೆಂದು ನಡುಗೊಂಬು" (ಕಬ್ಬಿಕ್ಕೆ. ೧೮) ; "ನಡುಗೊಂಬೆಂದು ನಾಡೆ ತಾ ನಟ್ಟಗೊಂಬಕ್ಕು" (ಶಬ್ದಮಂ. ೨೫) ; "ನಟ್ಟಗೊಂಬೆನಲ್ ನಡುಗೊಂಬೆಯು" (ಕಶರ. ೫೩) ; ಒಂದೊಂದೆಡೆಯೊಳೊಗೆವ ದಾವಶಿಖಿಯ ಪೊಗೆಗೆ ಬೆಗಡುಗೊಂಡು ಪುಟುಗಳ್ ಬಿಟ್ಟುಪೋದ ನಟ್ಟಗೊಂಬಿನ ಜೇನ ಪುಟ್ಟೆಯುಂ ಸಾರ್ದು ಪೀರ್ವ ಜತುಕನಿಕರಂಗಳುಂ (ಚಂದ್ರಪು. ೫-೬೫ ವ). **ನಟ್ಟೆಗೊಂಬು** : ಪೆರ್ಮರದ ನಟ್ಟೆಗೊಂಬಿನ ಕವಲ್ದಲೆಯೊಳಿಟ್ಟ ಗೂಡುಗಳೊಳ್ ಗೂಡುಗೊಂಡಿರ್ದ ಕುಱುಳೆವಱಿಗಳ್ಗೆ ಕುಟುಂಕನಿಕ್ಕಿ (ಚಂದ್ರಪು. ೮-೪ ವ) ; ಲೋಪಮಿಲ್ಲದುಚಿತಾಕ್ಷರಾಗಮಕ್ಕೆ–ನಟ್ಟೆವಾನ್, ನಟ್ಟೆವನೆ, ನಟ್ಟೆಗೊಂಬು, ನಟ್ಟೆವನಿ. ಇಲ್ಲಿ ಎಕಾರಮುಚಿತವರ್ಣಾಗಮಂ (ಶಮದ. ೧೭೬ ಪ್ರಯೋ) ; ನಸುಗಾಳಿಗೊಲೆದಾಡುವೆಳೆಗೊಂಬೆ ಸೊಂಡಿಲಾಗಸಕೆದ್ದ ನಟ್ಟೆಗೊಂಬೆಸೆವ ಠಕ್ಕೆಯಮಾಗಲಸಮಶರನೆಡಬಲದೊಳಿಟ್ಟಣಿಸಿ ನಡೆದ ಮಾಮರದಾನೆಗಳ್ ಮೆಱೆದುವು (ಜಿಬಪು. ೩೫-೮) ; ವನಾಬ್ಧಿಯಲ್ಲಿ ಕಣ್ಗೊಳಿಪ ಪಡಂಗು ಮಾಮರಮದಾಗಿರೆ ಕೋಗಿಲೆ ನಟ್ಟೆಗೊಂಬಿನೊಳ್ ತಳೆದುದು ಕೂವಕಂಬದುದಿವತ್ತಿದ ನಾವಿಕನೊಂದು ಲೀಲೆಯಂ (ಶಬಶಂ. ೨-೪೪).

[ನಟ್ಟ2 (< ನಡು2) + ಕೊಂಬು1]

ನಟ್ಟಡವಿ (ನಾ). ಕಾಡಿನ ಮಧ್ಯಭಾಗ ; ಅರಣ್ಯದ ನಡುಭಾಗ ; ದಟ್ಟವಾದ ಕಾಡು : ನಟ್ಟಡವಿಯ ನಡುವೆ ಪಸಿವುಂ ನೀರಟ್ಕೆಯುಂ ತಿಣ್ಣಮಾಗೆ (ಧರ್ಮಾಮೃ. ೨-೧೯೧); ನಟ್ಟಡವಿಯಲ್ಲಿ ಕೆಂಡದ ಮಳೆಗಱೆದು ಊರಡವಿಯನೊಂದಾಗಿ ಸುಟ್ಟಿತ್ತು ನೋಡಾ (ಅದಪ. ೪೦-೧೦೬) ; ಮಗಳೆ ಮಾತೆ ಕರಂ ನಟ್ಟಡವಿ ಗುಹೆ ಗಹ್ವರಂ ಮಡುಗಿಡುವವಱೊಳ್ ಪದುಳಮರ್ಚಿಸೆನುತುಂ ನುಡಿದಂ (ಗಿರಿಕ. ೫-೪೫) ; ನಟ್ಟಡವಿಯೊಳಗೆ ತೊಱೆಯೊಳ್ ಬೆಟ್ಟುಗಳೊಳ್ ತೊಟ್ಟನೊಗೆದು ಮಱೆಯಂ ಕಱೆಗುಂ (ಅಟ್ಟಮ. ೮-೮) ; ಒಟ್ಟಿದವು ಕೈದುಗಳು ಸತ್ತಿಗೆ ಬೆಟ್ಟವಾಡವು ಸಿಂಧಸೆಳೆಗಳು ನಟ್ಟಡವಿ ಪವಡಿಸಿದ ತೆಱನಾದುದು ರಣಾಗ್ರದಲಿ (ಕಂಪ್ಯಾಭೀ. ೮-೬೪); ಬಿಟ್ಟುಬಂದೈ ನಂದನರನಿಳು ಹಿಟ್ಟು ಬಂದೈ ರಾಜಪುತ್ರರ ನಟ್ಟಡವಿಯಲಿ ನಿರ್ಜನಾರಣ್ಯಪ್ರದೇಶದಲಿ (ತೊರರಾ. ೨-೫-೪) ; ನಟ್ಟಡವಿಯ ಮನೆಯು ಕುಷ್ಟ ಕ್ಷಯ ಬಡತನವು ದುಷ್ಟರ ನೆರೆಯು ಇವು ಅಯ್ದು ಜಗದೊಳಗೆ ನಷ್ಟ ಕಾಣಯ್ಯ (ಸರ್ವಜ್ಞ. ೮೧೯) ; ನಟ್ಟಡವಿಯಲ್ಲಿದ್ದು ಕಟ್ಟಿಗೆ ತರುವವರು ಯಾರು ಅಂದ ಹಾಗೆ (ಗಾಣಿ). [ನಟ್ಟ2 (< ನಡು2) + ಅಡವಿ]

ನಟ್ಟಣೆ 'ನಟಣೆ' ನೋ.

ನಟ್ಟನಡು, ನಟ್ಟನಡುವು (ನಾ). ೧. ಮಧ್ಯಕ್ಕೆ ಸರಿಯಾಗಿರುವ ಭಾಗ ; ಎರಡು ಕಡೆಯ ಅರ್ಧಭಾಗ ; ಸರಿಯಾಗಿರುವ ಮಧ್ಯಸ್ಥಳ : ನಟ್ಟನಡು ಕಟ್ಟಕಡೆ ಪೆರ್ಬಟ್ಟೆ ಕರಂ ಗೊಂಟು ದೇವತಾಲಯದ ನೆಟಲ್ಮುಟ್ಟುವೆಡೆ ನೀರ ತಡಿ ಮನೆಗಟ್ಟುವೊಡಶುಭಂ ದ್ವಿಜಾತಿವರ್ಗಕ್ಕೆಲ್ಲಂ (ಲೋಕೋಪ. ೩-೧೨) ; ಜಡೆಗಳೊ ಹೊಸಹೊಸ ಹವಳದ ಕುಡಿಗಳೊ . . . ಸುಕೃತದ ಗುಡಿಗಳೊ ಮಹಿಮೆಗಳ ನಟ್ಟನಡುಗಳೊ ಶಿವನಾ (ಗಿರಿಕ. ೧೦-೪೭) ; ಅತ್ವಂ ಬೆರಸು ಟಕಾರಕ್ಕೆ–ನಟ್ಟನಡು, ಕಟ್ಟಕಡೆ (ಶಮದ. ೧೯೩ ಪ್ರಯೋ) ; ಹುಟ್ಟುವಾಗಾಪತ್ತಿಗಾರು ಚಿಂತಿಸಿದವರು ಕಟ್ಟಕಡೆಯಲಿ ಲಯಕೆ ಯಾರ ಚಿಂತೆ ನಟ್ಟನಡುವಿನ ಬಾಳಿಗೇಕೆ ಚಿಂತಿಸುತಿರುವೆ ಹುಟ್ಟಿದವರಿಗೆ ವಂಹಿಱು ಬಟ್ಟಿಲ್ಲವೆ ಮರುಳೆ (ಪುರಂದ. ೨-೪೭-೧); ಕಟ್ಟಕಡೆ, ತುಟ್ಟತುದಿ, ನಟ್ಟನಡು, ಬಟ್ಟಬಯಲು (ಮಧ್ಯಮ. ೧೯೨) ; ಕಟ್ಟಕಡೆಯ ಪೊಂದನೀಕ್ಷಿಸುತಲಿ ತಾ ನಟ್ಟನಡುವಿನೊಳಡಿಯಿಟ್ಟು ಆಡುವ ತಾಂಡವದಾನಂದ ! (ವಿಸೀಗೀ. ೩-೧೦). 'ಕಟ್ಟಕಡೆ' ಪರಾ. **ನಟ್ಟನಡುವು** : ೨. ಕಟಿಪ್ರದೇಶ ; ಸೊಂಟ : ನಟ್ಟನಡುವಿನೊಳೊಂದು ಪಣ್ಣಿಕವನಿಟ್ಟು (ಕಾಲೂರ. ೧೫೦-೩೨೮) ; ಶ್ರೇಷ್ಠವಾದ ಸರಿಗೆ ನಾಗಮುರಿಗೆ ನಟ್ಟನಡುವಿನಲಿ ಇಟ್ಟಳು ಒಡ್ಯಾಣ (ಕರ್ನಾಕ. ೨೫೭).

ನಟ್ಟನಡುವಣ = ತೀರ ಮಧ್ಯಭಾಗದ : ಸಂದುತ್ತರಭರತ ಮಧ್ಯಮಖಂಡದ ನಟ್ಟನಡುವಣೆಡೆಯೊಳ್ ಅತಿಕ್ರಾಂತಾನೇಕಚಕ್ರವರ್ತಿಗಳ ವಿಶದಯಶಃಪುಂಜಮುಮಂ (ಅದಿಪು. ೧೩-೬೯ ವ) ; ಕೈಲಾಸಮಧ್ಯಸ್ಥಿತ ಮಹಾಮೇರುವಿನ ನಟ್ಟನಡುವಣ ಮಾಣಿಕ್ಯಮಯಜ್ಯೋತಿಷ್ಕಂಭಶಿಖರ ಸಿಂಹಾಸನದೊಳಿರ್ಪ . . . ಶಿವತೀರ್ಥಸನ್ನಿಧಾನದೊಳ್ (ಹಾಲಾಸ್ಯ. ೧-೧-೨೦ ವ). [ನಟ್ಟ2 (< ನಡು2) + ನಡು2]

ನಟ್ಟನಡುತಲೆ 'ನಟ್ಟನಡುದಲೆ' ನೋ.

ನಟ್ಟನಡುದಲೆ, ನಟ್ಟನಡುತಲೆ (ನಾ). ೧. ತಲೆಯ ಮಧ್ಯಭಾಗ ; ಬೈತಲೆಯಿರುವ ಭಾಗ: ಬೆಟ್ಟಣುಗಿಯೆಡಮೆಯ್ಯನಡಸಿರಲ್ ನೀರ್ವೆಣ್ಣು ನಟ್ಟನಡುದಲೆಯೊಳಿರೆ (ಭಾವಜಿಂ. ೭-೧). ೨. (ಬ್ರಹ್ಮನಿಗಿದ್ದ ಐದು ತಲೆಗಳಲ್ಲಿ) ನಡುವಿನ ತಲೆ ; ಮಧ್ಯದ ತಲೆ : ಜಳಜಭವನೈದುತಲೆಯೊಳಗೊಂದು ನಟ್ಟನಡುದಲೆಯೂರ್ಧ್ವಮುಖವಾಗಿ (ಭಿಕ್ಷಾಚ. ೧-೭). **ನಟ್ಟನಡುತಲೆ** : ೨. ಕಾಮಾರಿ ರೋಷಾವೇಶದಲ್ಲಿ ಕಡುಮುಳಿದಜನ ಶಿರವೈದರೊಳಗೊಂದು ತಲೆ ನಟ್ಟನಡುತಲೆಯನು ಮುಳಿದೆಡದ ಕೈಯುಗುರಿನಿಂ ಚಿವುಟಿದು (ತುರಂಗ. ೭-೧೩).

[ನಟ್ಟನಡು + ತಲೆ1]

ನಟ್ಟನಡುನೀರು (ನಾ). ನೀರಿನ ತೀರ ಮಧ್ಯಭಾಗ ; ಹರಡಿದ ನೀರಿನ ನಡುವಿನ ಭಾಗ : ನಟ್ಟನಡು [ಪಾಠಾಂ. ನಟ್ಟ] ನೀರೊಳಗೆ ಈಸಲಾಱೆ (ಪುರಂದ. ೧-೩೬-೩). [ನಟ್ಟನಡು + ನೀರು1 (< ನೀರ್1)]

ನಟ್ಟನಡುಬೀದಿ (ನಾ). ಬೀದಿಯ ಮಧ್ಯಭಾಗ ; ನಡುಬೀದಿ: ನಟ್ಟನಡು ಬೀದಿಯೊಳು ನೆರವಿ ನೋಡಲು ಪಿಡಿದು ಹರನ ಪೂಜಾಕುಸುಮವಂ ಬೀದಿಯೊಳು ಚೆಲ್ಲೆ (ಇಚಿರ. ದೇ. ೧೧೧-೦೮); [ನಟ್ಟನಡು + ಬೀದಿ]

ನಟ್ಟನಡುವಗಲ್, ನಟ್ಟನಡುಹಗಲ್ (ನಾ). ತೀರ ಹಗಲು ; ನಡುಹಗಲು ; ಮಧ್ಯಾಹ್ನ : ನಟ್ಟನಡುವಗಲ ಬಿಸಿಲುರಿಯಿಟ್ಟೊಡೆ ಸುಟ್ಟಪ್ಪುದೆಂಬವೊಲ್ ಪಸರಿಪುದಂ ಬಿಟ್ಟುಡುಗಿಯೊಂದೆ ಮೆಯ್ಯಂ ಮೆಟ್ಟಿರ್ಪವೊಲಿರ್ಪುವಂದು ತಾಟ ನೆಟಲ್ಗಳ್ (ಸೂಕ್ತಿಸು. ೧೮-೯೯) ; ಬಂದು ಬಂದು ನಟ್ಟನಡುವಗಲೊಳೋಕುಳಿಯಾಡುವೆಳವೆಂಡಿರ ಮೆಯ್ಯ ಕುಂಕುವದಿಂದೊಂದಿದ ಕೆಂದಾವರೆವೂಗಳಂ ತಳೆದು . . . ಬಸಂತಂಗೆ ನೆಲೆವೀಡಾಗಿರ್ದುದು (ಕಬ್ಬಿಕಾ. ೩೦). **ನಟ್ಟನಡುಹಗಲ್** : ನಟ್ಟನಡು ಹ[ಪಾಠಾಂ. ವ]ಗಲೊಳಗೆ ನೆರೆಯಿತ್ತು ನೆರೆಯಿತ್ತು ಭೂಮಿ ಬೆಸಲಾದಂತಿರೆ (ಸೋಮಪ. ೪-೫೦); [ನಟ್ಟನಡು + ಪಗಲ್]

ನಟ್ಟನಡುವಿರುಳ್ (ನಾ). =ನಟ್ಟಿರುಳ್$_1$: ಸದಮಳಮಣಿಭೂಷಿತೆ ನೀನೀ ನಟ್ಟನಡುವಿರುಳ್ ಕುದುಗುಳಿತನದಿನೀಯೆಡೆಗೆ ಪೊಲ್ಲದು ವಂದೆ ಎಂಬುದುಂ (ಸುಳುಪಾ. ೬-೨೨). [ನಟ್ಟನಡು + ಇರುಳ್]

ನಟ್ಟನಡುವು 'ನಟ್ಟನಡು' ನೋ.

ನಟ್ಟನಡುವೆ (ಅ). (ಸರಿಯಾಗಿ) ಮಧ್ಯಭಾಗದಲ್ಲಿ; ಕೇಂದ್ರದಲ್ಲಿ: ಆ ತಿರ್ಯಗ್‌ಲೋಕದ ನಟ್ಟನಡುವೆ ಲವಣಜಲಧಿಪರಿವೃತಮಾಗಿ . . . ನೆಗಳ್ದುದಿಳೆಗೆ ಜಂಬೂದ್ವೀಪಂ (ಆದಿಪು. ೧-೪೮ ಪ); ಕಿಡಿಗುಟ್ಟಿದಂತೆ ವಿದ್ಯಾದೇವತಾಧಿಷ್ಠಿತಮಪ್ಪಂಬಿನೊಳ್ ಪಳಂಚಿ ಪುಟ್ಟಿದ ಕಿಟ್ಟಿನ ನಟ್ಟನಡುವೆ ನಿಂದುರಿವನುವರಮಂ ಪಾರಿಸಲೆಂದೆಡೆವೊಕ್ಕಗ್ನಿಕುಮಾರನಂತಿರೆ (ಶಾಂತಿಪು. ೪-೩೦ ಪ); ಮುನ್ನಮೆ ಸಮಕಟ್ಟಿದ ಮಣಿಕುಟ್ಟಿಮದ ನಟ್ಟನಡುವೆ ಪೊಳೆವ ಪಟ್ಟವಣೆಯ ನಾಲ್ದೆಸೆಯೊಳೆಸೆವ ರತ್ನಭೃಂಗಾರುಘಟಂಗಳಿಂ . . . ಎಸೆವಭಿಷೇಕಮಂಟಪದೊಳ್ (ಶಾಂಪು. ೩೭೭); ಇಟ್ಟ ಭಾರಕೆ ಸಿಡಿದು ತರುಣಿಯ ತಟ್ಟೆ ಬಿದ್ದುದು ಖಳನ ತೇರಿನ ನಟ್ಟನಡುವೆ ಸುರೇಂದ್ರಚಿತು ಪಡಿರಥಕೆ ಲಂಘಿಸಲು ಹಿಟ್ಟುದೋಱುತು ತೇರು (ಶೂರರಾ. ೫-೬-೨೬); ಆಶ್ರಮದ ನಟ್ಟನಡುವೆ ಎಳವಳ್ಳಿಯ ಮೊಗವಾಡಂ (ರಾಮಾಶ್ವ. ೧೫೯-೯); ಕಟ್ಟಕಡೆಯಲಿ ಮೇಯದೀರು ಬೆಟ್ಟದೊತ್ತಿಗೆ ಹೋಗದೀರು . . . ನಟ್ಟನಡುವೆ ಬಾರಯ್ಯನೆ (ಗೋಪಾಡು. ೧೨-೭೦).

[ನಟ್ಟ$_2$ (<ನಡು$_2$) + ನಡುವೆ$_2$]

ನಟ್ಟನಡುಹಗಲ್ 'ನಟ್ಟನಡುವಗಲ್' ನೋ.

ನಟ್ಟವ, ನಟವ, ನಟುವ, ನಟ್ಟುವ (ನಾ). ೧. ನರ್ತಕ; ನೃತ್ಯವೃತ್ತಿಯವನು: ರೂವಾರಿ ಮುಚ್ಚೋಜಂಗೆ ಮತ್ತರ್ಪ್ಪನ್ನೆರಡು ನಟ್ಟವಂಗೆ ಮತ್ತರ್ಪ್ಪನ್ನೆರಡು (ಸಾಇಇ. IX-1, ೦೦೦-೫೫ : 1045). ೨. ನಾಟ್ಯವನ್ನು ಕಲಿಸುವ ಗುರು; ನಾಟ್ಯಾಚಾರ್ಯ; ನಾಟ್ಯಗುರು: ಎಳಲತೆ ಪೆಕ್ಕಣಕ್ಕೆ ತಳರಂ ತೆಗೆದಂಟ್ಟಳದಕ್ಕೆ ನಟ್ಟವಂ ಮಾಳಯಸಮಾರಣಂ (ಅನಂಪು. ೩-೧೧). **ನಟವ**: 'ನಟವಿಗ' ಪರಾ. **ನಟುವ**: ೧. ಅಲ್ಲೆ ನಾಟೆ ಅರಂಗದೇವಿ ನಟುವ ನಾಯನಾರು ಮಗಳು ಚಿಕನಾಟೆ (ಎಕ. X (S), ಮಾಲೂರು. ೩-೨೯ ; 1430); ಕವಿ ಗಮಕಿಗಳು ಗಾಯಕರು ನಟುವರ್ಗಳು ಪವನವಿದ್ಯೆಯನಾಡುವರು (ಜೈಸಿಪ. ೩-೮); ನಾನೆಷ್ಟು ಹೇಳಿದರೂ ಕೇಳದೆ ಈ ಸಭಾಸ್ಥಳದಲ್ಲಿ ನಾಚಿಕೆಯಿಲ್ಲದೆ ನುಡಿಯುವುದಕ್ಕೆ ನೀನು ನಟುವನ ಹೆಂಡತಿಯೆ (ಕೃಷ್ಣಾವಿ. ೩೨); ಸ್ವಾಮಿ, ನನ್ನ ಹೆಸರು ವೆಂಕಟರಮಣ. ನಾವು ನಟುವರು (ಸುಬ್ರಹ್ಮ. ೬೯). ೨. ಭರತಶಾಸ್ತ್ರಪರಿಣತಿಯಿಂದರ್ಜುನಂ ಭಾರತಿಕರ ದೆಸೆಯಿಂದರಮನೆಯ ನಟು[ಪಾಠಾಂ. ಟ್ಟ]ವನಾದಂ (ಮಹಾನೇ. ೧೦-೮೮ ಪ). **ನಟ್ಟುವ**: ೧. "ಶೈಲೂಷನಂಗನಾಜೀವಿ ಭರತಂ ನಟ ಶಿಲಾಲಿಯೆನೆ ನಟ್ಟುವಂ" (ಪಂಗರಾ. ೧೦೦-೩); ಉಟ್ಟರೆ ತೊಟ್ಟರೇನಯ್ಯ ನಟ್ಟುವರಂತೆ ಕೊಟ್ಟರೆ ಕೊಂಡರೇನಯ್ಯ ವೇಶಿಯರಂತೆ (ವಚನಂ. ೨೩೯-೫೯); ಗಗನಂ ನಾಟ್ಯನಿಕೇತನಂ ದಿವಿಜರೆಲ್ಲರ್ ನೋಟಕರ್ ದೇವ ನೀನೆ ಗಡಂ ನಟ್ಟುವನಾಗೆ (ಜಗವಿ. ೧೧-೭೭); ನೃತ್ಯವಿದ್ಯಾಧರನೆಂಬ ನಟ್ಟುವ ಬಂದನತ್ಯಂತಸುಖಿಯ ಸಮ್ಮುಖಕೆ (ಧರಣ. ೧೨-೫೦). ೨. ಪದವು ಮನಕ್ಕೆ ಸೊರ್ಕು ನಯನಕ್ಕೆಸೆಯುತ್ತಿರೆ . . . ಮಾಣದಾಡಿಸಿದನಾತನನಂಗಜನೆಂಬ ನಟ್ಟುವಂ (ಆದಿಪು. ೪-೧೫); ಆತನ ಸಭೆಯೊಳ್ ನಟ್ಟುವನ ಮಗಳ್ ನಾಟ್ಯಮಾಲೆ ಸಾಧಿನಯದಿನಾಡುತಿರ್ದೊಡರಸಂ ಮೆಚ್ಚಿ ಚೋದ್ಯಂಬಡೆ (ಜಾಪುಂಪು. ೯೭-೧೦). 'ನಟ್ಟುವಗಾರ', 'ನಟ್ಟುವಿಗ' ಪರಾ.

ನಟ್ಟುವವಿದ್ಯ = ನಾಟ್ಯಕಲೆ: ಅರ್ಜುನನ ಹೆಸರು ಭರತತಂತ್ರಿ ನಟ್ಟುವವಿದ್ಯವ ಬಲ್ಲನು (ಕೃಕಸೂ. ೧೦೪). [<ಪ್ರಾ. ಣಟ್ಟಅ./ಸಂ. ನರ್ತಕ]

ನಟ್ಟವಗಲ್, ನಟ್ಟೆವಗಲ್, ನಟ್ಟೆವಗಲು (ನಾ). ಹಗಲಿನ ಮಧ್ಯಭಾಗ; ಮಧ್ಯಾಹ್ನ: "ನಡುವಗಲಲ್ಲಿ ವಿವರಿಸಲ್ ನಟ್ಟವಗಲಕ್ಕುಂ" (ಕಬ್ಬಮಂ. ೧೯); **ನಟ್ಟೆವಗಲ್**: ನಟ್ಟೆವಗಲುರಿವಿಸಿಲ್ ಮಾಯ್ದನ್ನ ಬಗೆಯ ಕರಗಿಸಿ ಪೀರ್ದುಮುನ್ಮಾದಮಂ ಕರುಣಿಪನಿತರೊಳೆ...ನಿಟ್ಟಿಸಿದೆನತ್ತ (ಸಂಸಪ. ೨೦-೬). **ನಟ್ಟೆವಗಲು**: ನಟ್ಟೆವಗಲಿಗೆ ಬಂತು . . . ಶಿಬಿರದತ್ತಕೆ ನಡೆವ (ಹೆಚ್ಚಿರ. ೪೧-೬). [ನಟ್ಟ$_3$ (<ನಡು$_2$) + ಪಗಲ್]

ನಟ್ಟವನೆ, ನಟ್ಟೆವನೆ (ನಾ). ಮನೆಯ ಮಧ್ಯಭಾಗ; ನಡುಮನೆ: "ನಡುವನೆ ನಟ್ಟವನೆಯುಮಕ್ಕುಂ" (ಕವಿಕಂ. ೧೫೪); ಪಸುರೆಲೆಯ ನಟ್ಟವನೆ . . . ಅಲರ್ಜೊಂಪದ ಮೇಲ್ಕಟ್ಟು ಚೆಲ್ವಾಗೆ ಕಣ್ಗಂ ಮನಕಮಿಂಬಾದ ಪರ್ಣಕುಟಿಯನೇರ್ಪಡಿಸಿ (ರಾಮಾಶ್ವ. ೧೫೯-೧೦). **ನಟ್ಟೆವನೆ**: "ನಟ್ಟವನೆಯೆಂದು ನಡುಮನೆ" (ಕಶಸಾ. ೧೬-೩೦೭); ಲೋಪವಿಲ್ಲದುಚಿತಾಕ್ಷರಾಗಮಕ್ಕೆ –ನಟ್ಟೆವಾನ್, ನಟ್ಟೆವನೆ, ನಟ್ಟೆಗೊಂಬು, ನಟ್ಟೆವನಿ (ಶಮಚ. ೧೭೬ ಪ್ರಯೋ).

[ನಟ್ಟ$_2$ (<ನಡು$_2$) + ಮನೆ]

ನಟ್ಟವಳ (ನಾ). ನಾಟ್ಯಗಾರ; ನೃತ್ಯಕಾರ; ಅಭಿನಯಂಕಾರ: ಅಂತಾ ರಾಜಭವನಾಂಗಣಮೆ ರಂಗಮಾಗೆಯುಂ ಆ ದಿವಿಜತತವಿತತಾದಿ ಮಂಗಳವಾದ್ಯಂಗಳೆ ಸಂಗೀತವಾದ್ಯಮಾಗೆಯುಂ . . . ತದಮರಧಾರಿಕ ತತಿಯೆ ನೆಟ್ಟನೆ ನಟ್ಟವಳರಾಗೆಯುಂ (ನೇಮಿಪು. ೮-೧೬೦ ಪ).

[ನಟ್ಟ$_3$ + – ವಳ (< – ವಾಳ$_1$)]

ನಟ್ಟವಿ (ನಾ). ನೃತ್ಯಗಾತಿ; ನಾಟ್ಯಗಾತಿ: ಗುರುವರೇ ನೀವೆಲವೊ ಸುರಪನ ಪುರದ ನಟ್ಟವಿಗರು ಸುಯೋಧನನರಮನೆಯ ನಟ್ಟವಿಗಳಿಗೆ ಪಾಡಹರೆ (ಕುಪ್ಪಾಅ. ೦೯-೫೩). P 'ನಟ್ಟವಿಗಳಿಗೆ' ಎನ್ನುವ ಶಬ್ದವು 'ನಟ್ಟವಿಗರಿಗೆ' ಎಂದಿರಬಹ ದೆ? [< ಪ್ರಾ. ನಟ್ಟಈ./ಸಂ. ನರ್ತಕೀ]

ನಟ್ಟವಿಗ, ನಟವಿಗ, ನಟುವಿಗ, ನಟ್ಟುವಿಗ (ನಾ). ೧. ನರ್ತಕ; ನಾಟ್ಯಗಾರ; ನಟ: "ಶೈಲಾಲೀ, ಶೈಲೂಷಃ . . . ಭರತಃ, ನಟಃ–ಈ ರ ನಟ್ಟವಿಗಂ" (ಹಲಾಯು. ೯೭-೪೩೮); ಸ್ವಸ್ತಿಶ್ರೀಮತ್ತ್ರಿಪುರಾನ್ತಕದೇವರ ನಟ್ಟವಿಗಮಮ್ಮಲೋಜ ಅವರ ಮುಖಮುದ್ರೆ (ಎಕ. VII (S), ಶಿಕಾರಿ. ೩೪೧-೦ ; 1100); ಗುರುವರೇ ನೀವೆಲವೊ ಸುರಪನ ಪುರದ ನಟ್ಟವಿಗರು ಸುಯೋಧನನರಮನೆಯ ನಟ್ಟವಿಗಳಿಗೆ ಪಾಡಹರೆ (ಕುಪ್ಪಾಅ. ೦೯-೫೩); ನವರಸೋದಯಕೆ ಪಡಿವೆತ್ತಾಡುವ ನಟ್ಟವಿಗರ ಕೂಟದಿಂ (ರಾಮಾಶ್ವ. ೨೩-೦೯). ೨. ನಾಟ್ಯವನ್ನು ಕಲಿಸುವವನು; ನಾಟ್ಯಾಚಾರ್ಯ; ನಾಟ್ಯಗುರು: ಅರ್ಜುನನುಮಲ್ಲಿಯೆ ನಟ್ಟವಿಗನಾದಂ (ನೇಮಿಪು. ೦೦-೧೫೪ ಪ); ವಂದಾನಿಳನೆಂಬ ನಟ್ಟವಿಗನ ಪ್ರೇರಣೆಯಿಂದ ಬಾಳತಾಳಂಗಳ ಮೇಳದೊಡಗೂಡಿ ಪ್ರವಾಳವಿಳಸಿತಲತೆಗಳ್ ತಾಂಡವಾಡಂಬರವಂ ವಿಡಂಬಿಸುವಂತಿರ್ದುವು (ಪಾಧಪು. ೩-೩೫ ಪ). **ನಟವಿಗ**: ೧. ವೈತಾಳಿಕನುಂ ನಟವಿಗನುಂ . . . ಎಂದಿವರು ಯೋಗ್ಯರು (ಶ್ರಾವಕಾ. ೦೪೮-೨೩). **ನಟುವಿಗ**: ೧. ತಾಳಧಾರಿಗ ನಟುವಿಗ ಗಾಯಕರು ನೆಱೆ ಮೇಳವಡೆದ ವಾದ್ಯದವರು ಸೂಳೆಯರುಗಳು ಸುಮ್ಮಾನಿಗಳ್ ಪಣ್ಬಲಜಾಲದೆ ದೆಸೆದರಾಕ್ಷಣದೆ (ಕಂನವಿ. ೨೬-೨೭); ತಾಳಧಾರಿಗರು . . . ನಟುವಿಗರು . . . ಇವರೆಲ್ಲರ ಮನೆಗಳು ಸಾಲುಸಾಲಾಗಿ ಒಪ್ಪುತ್ತಿದ್ದುವು (ಕರ್ಣಾಜ. ೦೫೮). **ನಟ್ಟುವಿಗ**: ೧. ವೇದಶಾಸ್ತ್ರದವರೆ ಹಿರಿಯರೆನ್ನೆ . . . ಇವರು ಹಿರಿಯರುಗಳೇ ಯಾಗ ನಟ್ಟುವಿಗ ಪಾಣರು (ಬಸವ. ೬೧೩).

[ನಟ್ಟವ + – ಇಗ]

ನಟ್ಟವಿಗಿತ್ತಿ (ನಾ). = ನಟ್ಟುವಗಿತ್ತಿ: "ನಟೇ, ಕ್ಷುದ್ರಾ–ಈ ೨ ನಟ್ಟವಿಗಿತ್ತಿ" (ಹಲಾಯು. ೯೭-೪೩೮). [ನಟ್ಟವಿಗ + – ಇತ್ತಿ]

ನಟ್ಟವಿಸಿಲ್ (ನಾ). ಮಧ್ಯಾಹ್ನದ ಬಿಸಿಲು; ಪ್ರಖರವಾದ ಬಿಸಿಲು: ಪರಮತಪೋನಿಧಿಗಳ್ ಸಂಚರಿಸುವ ಬಟ್ಟೆಯನಗಲ್ದು ನಟ್ಟವಿಸಿಲಾಯ್ದು ರಗಂ ಪುಡಿಯೊಳ್ ಪೊರಳುತ್ತಿರೆ ಸೋಗೆಯನೆತ್ತಿ ಸೋಗೆ ಪಿಡಿದುದು ನೆಟಲಂ (ಅನಂಪು. ೩-೩೮). [ನಟ್ಟ$_2$ + (<ನಡು$_2$) ಬಿಸಿಲ್]

ನಟ್ಟಾಟ (ನಾ). (ನೀರ ಹರಹಿನ) ಮಧ್ಯದ ಆಳ; ಅತಿಯಾದ ಆಳ; ಹೆಚ್ಚು ಆಳ: ಟಕಾರಕ್ಕೆ—ಕಟ್ಟಾಳ್, ಕಟ್ಟುಬ್ಬಸಂ . . . ನಟ್ಟಡವಿ, ನಟ್ಟಾಟಂ, ನಟ್ಟರುಳ್ (ಕಮುದ. ೧೮೦ ಪ್ರಯೋ).

[ನಟ್ಟ$_2$ (<ನಡು$_2$) + ಆಟ$_1$]

ನಟ್ಟ$_1$ 'ನಾಟಿ$_1$' ನೋ.

ನಟ್ಟ$_2$ (ನಾ). ನಷ್ಟ ಹೊಂದಿದವನು; ನಾಶ ಹೊಂದಿದವನು; ನಾಶವಾದವನು: ಆ ಪಕಾರಕ್ಕೆ—ಟತ್ವಂ . . . ನಷ್ಟಿ—ನಟ್ಟಿ; ನಿಷ್ಠಾ—ನಿಟ್ಟೆ (ಕಮುದ. ೨೮೩ ಪ್ರಯೋ). [ನಟ್ಟ$_4$ + – ಇ$_3$./ಸಂ. ನಷ್ಟಿನ್]

ನಟ್ಟ$_3$ 'ನಟ್ಟು$_4$' ನೋ.

ನಟ್ಟ$_4$ 'ನಟ್ಟು$_5$' ನೋ.

ನಟ್ಟಿಗಂಪು (ನಾ). (ನಾಟಿ ಹಾಕಿರುವ) ಸಣ್ಣಸಸಿಯ ಕಂಪು,–ಸುವಾಸನೆ: ಪೊಂದಾಟ್ಟಿಯ ನಟ್ಟಿ [ಪಾಠಾಂ. ಟ್ಟಿ]ಗಂಪುಗೆಡಲೊಳ್ ಚುಳ್ಕಾಡಿ ಚುಳ್ಕಾಡಿ (ಅನಂಪು. ೩-೦೦). [ನಟ್ಟ$_1$ (<ನಾಟಿ$_1$) + ಕಂಪು]

ನಟ್ಟಿಗೊಳ್ (ಕ್ರಿ). ಮನೋಹರವಾಗು; ಆಹ್ಲಾದಕರವಾಗು; ಸುಂದರವಾಗು: ಸಂಪನ್ನತೆವೆತ್ತು ನಟ್ಟಿಗೊಳೆ ಚೊಕ್ಕಣಮಾದೆಣಗಂಟು (ಕಮುಪು. ೫-೩೯). [<ನೆಟ್ಟಿತು+ ಕೊಳ್$_1$]

ನಟ್ಟಿರುಳ್$_1$, ನಟ್ಟಿರುಳು$_1$ (ನಾ). ಮಧ್ಯರಾತ್ರಿ; ಸರಿರಾತ್ರಿ; ನಡುರಾತ್ರಿ: ಕಿಂಬರಲ ಕಿಂದಳಿರಂ ಬಿಸಿಲೆಂದು ನಟ್ಟಿರುಳ್ ಮೇಳಿಸುಗುಂ ರಥಾಂಗಂ (ಮಲ್ಲಿಪು. ೨-೨೭); ಪ್ರತಿದಿವಸಂ ದಶದಶಘಟಿಮಿತಿಯಿಂ ಋತುವಾಱುಮುದಯದಿಂದುಂಟೆಂಬರ್ ಸತತಮಿವು ನಟ್ಟಿರುಳ್ವರ ಋತುಗಳ್ ಒಂದೊಂದೆ ಜಾವಮನಾಳ್ಗುಂ (ಶಿಲಾಶಾ. ೨-೬). **ನಟ್ಟಿರುಳು$_1$**: ಎಮ್ಮಾಶ್ರಮಾಂತರಕೆ ನಟ್ಟಿರುಳೊಳೇಂ ಕಾರಣಂ ಬಂದೆ (ಪದ್ಮಕಾ. ೫-೩೨); ನಟ್ಟಿರುಳಿನೋಳ್ ಮನೋಹರಿಯ ಮೋಸಂಗೆಯ್ದು (ಶಾಂದಪು. ೧೮-೮); ನಟ್ಟಿರುಳಲ್ಲಿ ಕೊತವಾಲನನ್ನು ಕಾಜಿ ಬಂದು ಕಾಣುವುದು ಅಚ್ಚರಿಯ ಮಾತಾಗಿತ್ತು (ಕೊತಕಾ. ೨೬); ನಟ್ಟಿರುಳಿನಲ್ಲಿ ಆತನ ಸಾಮ್ರಾಜ್ಯವು ಅಪ್ರತಿರೂಪವಾದುದು (ಕ್ಷೇತ್ರವಿಜ್ಞ. ೧೩೭). [ನಟ್ಟ$_2$ (<ನಡು$_2$) +ಇರುಳ್]

ನಟ್ಟಿರುಳ್$_2$, ನಟ್ಟಿರುಳು$_2$ (ಅ). ಮಧ್ಯರಾತ್ರಿಯಲ್ಲಿ; ಸರಿರಾತ್ರಿಯಲ್ಲಿ: ಮೋಹಮಯಂ ನಿಗಳಂ ಕಳತ್ರಮೆಂದಱಿಪದೆ ನಟ್ಟಿರುಳ್ ಮಱೆದು ಸಾರ್ಚಿದ ನಲ್ಲಳ ತಳ್ತ ತೋಳ್ಗಳಂ ಮೆಲ್ಲಮೆಲ್ಲನೆ ಪತ್ತುವಿಡಿಸಿ (ಹಂಪಶಾ. ೪-೦೨); ಪಾಂಡವರ್ ನಿಜಜನನಿಸಮೇತಮಾ ಸುರಂಗದ್ವಾರದಿಂ ಪೊಱಮಟ್ಟು ನಟ್ಟಿರುಳ್ ಪೋಪಲ್ಲಿ (ಸೇಮಿಪು. ೯-೩೬ ಪ). **ನಟ್ಟಿರುಳು$_2$**: ಸೂಳೆಭಕ್ತರ ಮನಂ ನೋಡಲ್ಕನಂ ಮಿಕ್ಕು ಇಳೆಯಾಂಡಗುಡಿಯ ಹತ್ತಿರೆ ನಟ್ಟಿರುಳು ಬಂದು (ಇಳೆರ. ಪೇ. ೫೦-೦೯); ನಟ್ಟಡವಿಯಲ್ಲಿ ಬೀಡಂ ಬಿಟ್ಟಿರಲಾ ಬಂಧುದತ್ತನಾತನ ಬೀಡಂ ನಟ್ಟಿರುಳು ಬಂದು ಬೇಡರ್ ದಟ್ಟಿಸಿ ಕೂಕಿಱಿದು ಸುತ್ತಿಮುತ್ತಿದರಾಗಳ್ (ಪುಷ್ಪಾಸ್ರ. ೮-೮); ಯದೂತ್ತಮನು ನಟ್ಟಿರುಳು ಹೊಕ್ಕನು ನಂದಗೋಕುಲವ (ನಿಘಾಗ. ೦೦-೪-೦೬).

[<ನಟ್ಟಿರುಳ್$_1$]

ನಟ್ಟಿರುಳು$_2$ 'ನಟ್ಟಿರುಳ್$_1$' ನೋ.

ನಟ್ಟಿರುಳು$_3$ 'ನಟ್ಟಿರುಳ್$_2$' ನೋ.

ನಟ್ಟಿಲ್ಲು (ನಾ). ೧. ಮನೆಯ ಮಧ್ಯಭಾಗ; ನಡುಮನೆ. ೨. "ಬಿಲ್ಲವರಿರುವ ಸ್ಥಳವಿಶೇಷ" (ಕೋಟಿಚೆ. ಕೋಶ): ದೇವಬಲ್ಲಾಳನು "ಬಂಟರೇ, ನಿಮಗೆ ನಮ್ಮ ರಾಜ್ಯದಲ್ಲಿ ಯಾವ ಸ್ಥಳ ಬೇಕು? ಬಿಲ್ಲರ ನಟ್ಟಿಲ್ಲು ಆದೀತೆ?" ಎಂದು ಕೇಳಿದನು (ಕೋಟಿಚೆ. ೪೭).

[ನಟ್ಟ$_2$ (<ನಡು$_2$) + ಇಲ್ಲು$_0$ (<ಇಲ್)./ತೆಲು. ನಟ್ಟಿಲ್ಲು]

ನಟ್ಟಿಸಮಯ 'ನಾಟಿಸಮಯಂ' ನೋ.

ನಟ್ಟಿಹಿತ್ತಲು 'ನಟ್ಟಿಹಿತ್ತಿಲು' ನೋ.

ನಟ್ಟಿಹಿತ್ತಿಲು, ನಟಿ ಹಿತ್ತಲು (ನಾ). ನಾಟಿ ಹಾಕಿರುವ ಹಿತ್ತಿಲು; ಗಿಡ; ಸಸಿಗಳನ್ನು ನಟ್ಟಿರುವ ಹಿತ್ತಿಲು: ನಟ್ಟಿಹಿತ್ತಿಲಿಗೆ ನುಗ್ಗಿ ಮಿಡಿಗಳನ್ನೆಲ್ಲಾ ಕೊಯ್ಯುವನು (ಈಶಕ. ೫೦). **ನಟ್ಟಿಹಿತ್ತಲು**: ಅಂದಿನಿಂದ ಇಂದಿಗೂ ನೆಲ್ಲ ಹೊಲ . . . ನಟ್ಟಿಹಿತ್ತಲು, ಎಲೆಬಳ್ಳಿ ಹಿತ್ತಲು–ಇವುಗಳ ನಡುವೆ ಬದುಕಿದರು (ಕಾಪಾಶಾ. ೨೫೬).

[ನಟ್ಟಿ$_1$ (<ನಾಟಿ$_1$) + ಹಿತ್ತಿಲು (<ಪಿಂತಿಲ್)]

ನಟ್ಟು$_1$ 'ನಡು$_1$' ಪರಾ.

ನಟ್ಟು$_2$ 'ನೆಟ್ಟಿ$_1$' ನೋ.

ನಟ್ಟು$_3$ 'ನಾಟಿ$_1$' ನೋ.

ನಟ್ಟು$_4$, ನಟ್ಟಿ$_3$ (ನಾ). ೧. ನಾಟುವಿಕೆ; ನೆಲೆ ನಿಲ್ಲುವಿಕೆ: ದಿಟ್ಟ ಹರಿಣನ ಮೇಲೆ ನೇಹದ ನಟ್ಟು ಹರಿಣನ ಮೇಲೆ ಹೆಜ್ಜೆಗಳಿಟ್ಟಣಿಸಲ್ಕೆದಿದಳು ನಗೆಮೊಗದಲಿ ನಿಜೇಶ್ವರನ (ತೊರಕಾ. ೩-೮-೩೦). **ನಟ್ಟಿ$_3$**: ೨. ಎದಂರು ಪಕ್ಷದ ಕಾಯನ್ನು ಹೊಡೆಯಲು ಸರಿಯಾದ ಗರ; ನಾಟುವ ಗರ: ವೀರಭದ್ರಶರಣ್ಯವೆನುತಂ ವೀರಭಕ್ತನು ಭದ್ರದಾಯುವು ಸೇರಿತೆನುತಾಡುವನು ಚಿತ್ತಂ ನಟ್ಟು ನಟ್ಟಿ[ಪಾಠಾಂ. ಟ್ಟಿ]ಯನು ಸಾರಲಿಟ್ಟಾಡುವನು ಜಿತಸಂಸಾರಿ ಮತ್ತೀ ವಂಚನೆಯನುಳಿಹಾರಯಿದು ತೀವಂಚದಾಯಂ ಬಿದ್ದಡಾಡುವನು (ಐಸಪು. ೪೩-೭); ಚೌಕ ದುಗ ನಟ್ಟಿ ಭದ್ರ ತಿವಂಚದೊಚ್ಚೌಕ . . . ಇನಿತುಮಂ ಜೋಗದಿಂ ಹಾಯಿಕು, (ಕುರಾಪ. ೦೩-೫೯). [<ನಡು$_1$]

ನಟ್ಟು$_5$, ನಟ್ಟಿ$_4$ (ನಾ). ಒಂದಂ ಬಗೆಯ ಸಂಕ,–ತೆರಿಗೆ (?): ಆ ಭೂಮಿಯನು ಪಂಡರಿದೇವಂಗಳು ಆ ಮೂಲಿಗರೇ [ತ]ಱು ಸಿದ್ಧಾಯ ನಟ್ಟು ಬೆಡ ಯೆಸೆ ಒಸಗೆ ಹೋಡಿಯಿವನೆಲ್ಲವನೂ ಆ ಮೂಲಿಗರೇ ನಡಸಿ ದೇವರಿಗೆನಡಸಿ ಬಹ ಭತ್ತಂ ಮಾಡೆ(ಡೆ) ೧೦೦ (ಸೌಇಇ. IX-11, ೪೦೬-೦೦; 1877); ಇಂಾ ಕ್ಷೇತ್ರಕ್ಕೆ ತೆಱು ದೇವಸ್ವ ಅನಾಯ ನಟ್ಟು ಬೇಡು ಉದೂ ಆಯಿಲ್ಲಾ (ಸೌಇಇ. IX-11, ೪೩೬-೨೭; 1402). **ನಟ್ಟಿ$_4$**: ಆ ಭೂಮಿಯ ಕುಳಕ್ಕೆ ಬಂದ ಹೊಂಬಳಿಯ ನಟ್ಟಿ ಗಂ ೧ ಸುಂಕ ಕಾರುಕ ಗ್ರಾಮ ಗದ್ಯಾಣ ಗಂ ೧ ಅಂತು ಗ ೧೪೮೩ (ಎಇ. VIII, ಕೀರ್ತಿ ೦೯೬-೩೨; 1404). [?]

ನಟ್ಟುಕಡಿ (ಕ್ರಿ). ಭೂಮಿಯಲ್ಲಿ ಆಳವಾಗಿ ಬೇರು ಬಿಟ್ಟ ಕರಿಕೆಯನ್ನು ಅಗೆದು ತೆಗೆ; ಹಳೆಯ ಪೈರಿನ ಕಳೆಯನ್ನು ತೆಗೆ; ಬೇರನ್ನು ಕತ್ತರಿಸು: ನಟ್ಟುಕಡಿದು, ಕಸತೆಗೆದು, ಏಡೆಹೊಡೆದ ಕೈಯಲ್ಲಿ ಯಾವ ಕೈಲಾಸ ಹೊಳೆಯುತ್ತದೆ? (ಪಚಸಂ. xcvi, ೬೪೧ ಪ್ರಪೀಠ); ನಟ್ಟುಕಡಿದು ಹಸನು ಮಾಡಿದ ಹೊಲವು ಎರಿಯ ಭೂಮಿಯಾಗಿದ್ದರೆ . . . ಕಡಲಿಯನ್ನು ಬಿತ್ತಬೇಕು (ಕೃಷಿಪ್ರ. ೨೬); ನಟ್ಟುಕಡಿಯಾಕ ಹೊಂಟಾವೆನಾ (ಅಮಾನಿ. ೪).

[ನಟ್ಟು$_3$ (<ನಾಟಿ$_1$) + ಕಡಿ$_3$]

ನಟ್ಟುಕಡಿಸು (ಕ್ರಿ). ಬೇರನ್ನು ತೆಗೆಸು; ಕಳೆಯನ್ನು ಕೀಳಿಸು: ನಟ್ಟುಕಡಿಸಿದ ಮಸಾರಿ ಕೇಸರಿಯ ಜಮೀನುಗಳಾದರೂ ಅಂಥ ಹೊಲಗಳಿಗೆ ನಟ್ಟುಕಡಿಸಿದ ವರ್ಷ ಕಳೆಯ ಎಳ್ಳು ಬಿತ್ತಬೇಕು (ಕೃಷಿಪ್ರ. ೨೬).

[ನಟ್ಟು$_3$ (<ನಾಟಿ$_1$) + ಕಡಿಸು (<ಕಡಿಯಿಸು$_2$)]

ನಟ್ಟುಮುರಿ 'ನೆಟ್ಟಿಮುರಿ' ನೋ.

ನಟ್ಟುವ 'ನಟ್ಟವ' ನೋ.

ನಟ್ಟುವಗರುಡಿ (ನಾ). ನಾಟ್ಯವನ್ನು ಕಲಿಸುವ ಶಾಲೆ; ನರ್ತನಶಾಲೆ; ನಾಟ್ಯಶಾಲೆ: ಜಟ್ಟಿಗರುಡಿಗಳೊಳಂ ನಟ್ಟುವಗರುಡಿಗಳೊಳಂ ಕಂಡುದಲ್ತು (ಚಿಕಸಂ. ೦೬೪-೨). [ನಟ್ಟುವ (<ನಟ್ಟವ) + ಗರುಡಿ]

ನಟ್ಟುವಗಾತಿ (ನಾ). ೧. ನೃತ್ಯಮಾಡುವವಳು; ನಾಟ್ಯಗಾತಿ: ಅವಳೊಬ್ಬಳು ನಟ್ಟುವಗಾತಿ (ರೂಢಿ). ೨. ನಾಟ್ಯಗುರುವಿನ ಹೆಂಡತಿ: (ಕ). [ನಟ್ಟುವ (<ನಟ್ಟವ) + – ಕಾತಿ$_3$]

ನಟ್ಟುವಗಾರ (ನಾ). ನೃತ್ಯಮಾಡುವವನು ; ನಾಟ್ಯಗಾರ : ಅವನೊಬ್ಬ ನಟ್ಟುವಗಾರ (ರೂಢಿ). [ನಟ್ಟುವ (<ನಟ್ಟವ) + – ಗಾರ (– ಕಾಱ)]

ನಟ್ಟುವಗಿತ್ತಿ (ನಾ). = ನಟ್ಟುವಗಾತಿ : (ಕ).

[ನಟ್ಟುವ (<ನಟ್ಟವ) + – ಗಿತ್ತಿ]

ನಟ್ಟುವರ (ನಾ). ನಟಶ್ರೇಷ್ಠ ; ಉತ್ತಮನಾದ ನಾಟ್ಯಗಾರ ; ನಟವರ : ಅಣಿಯಾದುದೇ, ಮತ್ಕುವರಿ ಸಿಂಗಾರ ಗಾಯಕರು, ವಾದಕರು, ಆಚಾರ್ಯ ನಟ್ಟುವರ ? (ನಡದಾ. I, ೪೦೨) ; ಕ್ಷೇಮವೆ ನಟ್ಟುವರ ಪಿನಿಲ್ಲಿ ಕಾದಿಂರಿ ! ಆರ ಬರವ ? (ನಡದಾ. I, ೪೦೯). [<ಸಂ. ನಟವರ]

ನಟ್ಟುವಿಗ 'ನಟ್ಟವಿಗ' ನೋ.

ನಟ್ಟುವಿಗತನ (ನಾ). ನಾಟ್ಯವನ್ನು ಕಲಿಸುವಿಕೆ ; ನಾಟ್ಯಾಚಾರ್ಯನಾಗಿರುವಿಕೆ : ತನ್ನೊಳಗೆ ಸಾಕಿ ನುತ ನಟ್ಟುವಿಗತನವನು[ಪಾಣಾಂ. ನಟ್ಟುವತನವನದ] ನೂಕುತಲಿ ಮದ್ದಳೆಯ ತಾನೊಡಹಾಕಿ ನಗುತಲಿ ಹೋದನಲ್ಲಮನಖಿಳ ಜಗವಱಿಯೆ (ಪ್ರಭುಲೀ. ೬-೩೭).

[ನಟ್ಟುವಿಗ (<ನಟ್ಟವಿಗ) + – ತನ]

ನಟ್ಟುವಿತಿ (ನಾ). = ನಟ್ಟುವಗಾತಿ : "ನಟ ಕ್ಷುದ್ರೆಯನೆ ನಟ್ಟುವಿತಿಗಕ್ಕು ನಾವಂ" (ಮಂಗರಾ. ೦೧೧-೩).

[ನಟ್ಟುವ (<ನಟ್ಟವ) + – ಇತಿ$_1$ (< – ಇತ್ತಿ)]

ನಟ್ಟೆ$_1$ 'ನಾಟಿ$_1$' ನೋ.

ನಟ್ಟೆ$_2$ 'ನಟ್ಟ$_2$' ನೋ.

ನಟ್ಟೆಗೊಂಬು 'ನಟ್ಟಗೊಂಬು' ನೋ.

ನಟ್ಟೆಡೆ (ನಾ). ಮಧ್ಯಭಾಗ ; ನಡುಭಾಗ : ನಳನ ಕಲ್ಹಾರ ಕುಮುದೇಂದೀವರಂಗಳಿಂದಳಿಕುಲದ ಝಂಕಾರದಿಂ ಮನಂಗೊಳಿಪೊಂದು ಕೊಳನದೇನಾದ ಮಾವುಪವನದ ನಟ್ಟೆಡೆಯೊಳೊಪ್ಪಿತೊ ವಿಶಾಲವಾಗಿ (ಶೇಷರಾ. ೭-೦೩).

[ನಟ್ಟ$_2$ + ಎಡೆ$_3$]

ನಟ್ಟೆಲಬು 'ನಟ್ಟೆಲ್ವು' ನೋ.

ನಟ್ಟೆಲು 'ನಟ್ಟೆಲ್ವು' ನೋ.

ನಟ್ಟೆಲ್ವು, ನಟ್ಟೆಲಬು, ನಟ್ಟೆಲು (ನಾ). ಬೆನ್ನಿನ ಮಧ್ಯದಲ್ಲಿರುವ ಎಲುಬು ; ಬೆನ್ನೆಲುಬು ; ಬೆನ್ನುಮೂಳೆ : "ಕಶೇರುವೆಂಬುದು ನಟ್ಟೆಲ್ವು" (ಜಲಾಯು. ೦೦೪-೦೨). **ನಟ್ಟೆಲಬು** : "ನಟ್ಟೆಲಬು = ಬೆನ್ನೆಲಬು" (ಜಾಕಕೋ. ೯). **ನಟ್ಟೆಲು** : ನಿಮ್ಮ ತ್ರಿವಿಕ್ರಮನ ನಟ್ಟೆಲು(ಬು) ಖಟ್ವಾಂಗವಾಗಿ ಕೈಯಲಿದೆ ಕೇಶವನ ಕಣ್ಣು ಸೋಮೇಶ್ವರವಾದದಲಿದೆ (ಸರ್ವಜ. ೦೬೬-೭೮೬). 'ನಿಟ್ಟೆಲುವು', 'ನೆಟ್ಟೆಲುವು' ಪರಾ. [ನಟ್ಟ$_2$ + ಎಲ್ವು]

ನಟ್ಟೆವಗಲ್ 'ನಟ್ಟವಗಲ್' ನೋ.

ನಟ್ಟೆವಗಲು 'ನಟ್ಟವಗಲ್' ನೋ.

ನಟ್ಟೆವನೆ 'ನಟ್ಟವನೆ' ನೋ.

ನಟ್ಟೆವಾನ್ (ನಾ). ಆಕಾಶದ ಮಧ್ಯಭಾಗ.–ನಡುಭಾಗ : ಲೋಪವಿಲ್ಲದುಚಿತಾಕ್ಷರಾಗಮಕ್ಕೆ—ನಟ್ಟೆವಾನ್, ನಟ್ಟೆವನೆ, ನಟ್ಟೆಗೊಂಬು, ನಟ್ಟೆವನಿ (ಕಮಾದ. ೧೭೬ ಪ್ರಯೋ). [ನಟ್ಟ$_2$ (<ನಟ್ಟ$_2$) + ಪಾನ್$_3$]

ನಟ್ಟೆವಾಱು (ಕ್ರಿ). (?) : ತೆಗೆಯದೆ ಕಾಯ್ದು ಚಮ್ಮಟಿಗೆಯಂ ದನಿ ದನಿ ಕೈಕಡುಪಾಗೆ ರಾಳೆಯಂ ಬಿಗಿಯದೆ ನಟ್ಟು ಬೀಸಿದೊಡೆ ಪಟ್ಟುಪೊರ್ಲ್ದಡಿ ನಟ್ಟೆವಾಱೆ ಮೈದೆಗೆದೊಡೆ ತಿಟ್ಟವಿಟ್ಟವೊಲೊಡಂಬಡೆ ತೋಱಿಸಿ ಮೆಚ್ಚಿ ದಾರಕರ್ ಬಗೆ ಹಯಮಾದವೊಲ್ ಬಱಿಕೆ ಮೆಚ್ಚಿಸುವರ್ ಲುಳಿಯೊಳ್ ಕುಮಾರನಂ (ಆನಂಪು. ೬-೦೩). [?]

ನಡ (ನಾ). ಒಂದು ಬಗೆಯಂಹುಲ್ಲು ; ನೀರಿನಲ್ಲಿ ಬೆಳೆಯುವ ಜೊಂಡು ; ದೇವನಾಳ : "ನಡಃ ಧಮನಃ, ಪೋಟಗಳಃ – ೩ ದೇವನಾಳದ ಹೆಸರುಗಳು, ದೇವನಾಲೀ ಕಡ್ಡಿಗಳಿಗೂ ಹೆಸರುಗಳು" (ಸಿದ್ಧಾಂತಿ. ೧೩೦). [ಸಂ.]

ನಡಕ (ನಾ). = ನಡತೆ ೨. 'ಒಳ್ಳಡಕ' ಪರಾ. [<ನಡತೆ]

ನಡಗೆ, ನಡಿಕೆ, ನಡಿಗೆ$_1$ (ನಾ). ೧. ನಡೆಯುವಿಕೆ ; ಚಲಿಸುವಿಕೆ : ನಿನ್ನ ಕಂಡು ಪಕ್ಷಿಗಳು ನಿಂತು ಹೌಹಾರಿ ನಿನ್ನ ನಡಗಿ ನೋಡಿ ನವಲ ಕುಣಿವುದ ಮರೆತಿತರಿ (ಕನ್ನಶಾ. ೯೧) ; ನಡೆದು ಬಾ ಕಂದಯ್ಯ ನಡಗೀಯ ನೋಡೇನ ! (ಭಾವಗೀ. ೨೦೩) ; ಕುದುರೆಯ ನಡಗೆ ತುಂಬ ಚುರುಕಾಗಿದೆ (ರೂಢಿ). 'ನಡಗೆದಾರ' ಪರಾ. ೨. ಎತ್ತುಗಳ ಒಂದು ಬಗೆಯ ಓಟ ; ಸಾಮಾನ್ಯವಾದ ನಡಗೆ : ಹೋರಿಗಳನ್ನು ಕುಕ್ಕಲು ಬಿಡದೇಡ, ನಡಗೆಯಲ್ಲಿರಲಿ (ರೂಢಿ) ; ನಡಗೆಯಲ್ಲೇ ಗಾಡಿ ಬಿಡು (ರೂಢಿ). **ನಡಿಕೆ** : ೧. ದಂಡಿಗೆಯನೇರಿ ಬರೆ ಸಪ್ತಋಷಿಗಳ್ ನಡಿಕೆ ಚಂಡಿಸಲು (ತುರಂಗ. ೩೦-೩೦) ; ನಾಲ್ವತ್ತರ ಮೇಲೆ ನಡಿಕೆ, ಎಂಬತ್ತರ ಮೇಲೆ ಬಡಿಕೆ, ತೊಂಬತ್ತಕ್ಕೆ ಶಯನ, ನೂರಕ್ಕೆ ಪಯಣ (ಗಾದೆ). **ನಡಿಗೆ$_1$** : ೧. "ಗಮ, ಗಮನ–ನಡಿಗೆ" (ಗಂಗಾಮ. ೧೦೨) ; ಗುಡುಗುಡು ನಡಿಗೆಯ ಸದ್ದು (ಪದ್ಮಸ; ೨೬೨) ; ಹಾವುಗಳ ನಡಿಗೆ ಬಹಳ ಮಂದವಾಗುತ್ತದೆ (ಮುಂಬಯಿ. ೨-೨೭).

[<ನಡೆ$_1$ + – ಗೆ./ತಮಿ. ನಟಕ್ಕೈ ; ತುಳು. ನಡಕೆ; ತೆಲು. ನಡಕ]

ನಡಗೆದಾರ (ನಾ). "(ಹಿಂದೆ) ಮಕ್ಕಳಿಗೆ ನಡಗೆ ಕಲಿಸಲು ಉಪಯೋಗಿಸುತ್ತಿದ್ದ ದಾರ ; ನಡಗೆದಾರ" (Lead-Strings. ಇಂಳಿನಿ).

[ನಡಗೆ + ದಾರ$_1$]

ನಡತರ (ನಾ). ಕಡಮೆಯ ಮಟ್ಟ ; ಕೀಳುದರ್ಜೆ ; ಅತಿಸಾಧಾರಣ ಪಾಗಿರುವಿಕೆ : ಅರಸ ಚಿತ್ತೈಸುಧಯಬಲದುಬ್ಬರದ ಬಹುವಿಧವಾದ್ಯ ರವದುಬ್ಬರವ ಮುಕ್ಕಳಿಸಿತು ಪಾಠಕನಿಕರನಿರ್ಘೋಷ ಸಂಭರ ಕಳಕಳವೀಧ್ವನಿಯನುತ್ತರಿಸಿತೀ ಬಲುಗಜಬಜವ ನಡತರದೊಳಿಕ್ಕಿತು ಕರ್ಣ ಪಾರ್ಥರ ಚಾಪಠಂಕಾರ (ಕುಮಾಕ. ೨೨-೦೩). [< ನಡು$_3$ + ತರ$_6$]

ನಡತೆ (ನಾ). ೧. ನಡೆಯುವಿಕೆ ; ಚಲಿಸುವಿಕೆ : ನಡತೆಯಿಂ ಗಿರಿದುರ್ಗ ಕುಡಿತೆಯಿಂ ಜಲದುರ್ಗ ಕಡುಗಲಿಗಳ ಕೋಪಗಳ ಕಿಡಿಯೊಳು ವನದುರ್ಗ ಪಡಗಿತು ಬತ್ತಿತು ಬಿಡವಾಗ ಬೆಂದುದೇವೆಳ್ವೆ (ಕಂನವಿ. ೧೦-೦೨). ೨. ನಡವಳಿಕೆ ; ವರ್ತನೆ : ಲೋಕದೊಳಗುಳ್ಳಯೆಲ್ಲಾ ಲೌಕಿಕದಿ ನಡೆವ ನಡತೆಯಂ ತಾ ಪೂರ್ದದೆ ಏಕಾಕಿಯಾಗಿ ಕ್ಷಮೆಯಂ ಕೈಕೊಂಡು ನಿಜಾತ್ಮನೊಳಗೆ ಕಾಣ್ಬುದು ಭವ್ಯಂ (ಭಾಮಾಸ್ತ. ೨೨) ; ಮೊನೆಗೊಡ್ಡಿ ಬಂದು ನೀವಾರೆಂದು ಬೆಸಗೊಳ್ವುದಿದಾವ ನಡತೆ ? (ರಾಮಾಶ್ವ. ೧೫೯-೭) ; ನಡತೆ ಮೇಲ್ಮೆಯ ನೀಡುವುದಱಿಂದ ಆ ನಡತೆ ಪ್ರಾಣಕೂ ಮಿಗಿಲೆಂದು ಕಾವಾಡಿಕೊಳ್ಳಲಹುದು (ಕುಱಳ್. ೦-೧೪-೦). ೩. ಶೀಲ ; ಗುಣ : ಪುಲ್ಲಮಣಿಯ ನಡತೆ ಚೆನ್ನಾಗಿರಲಿಲ್ಲ (ಬಂಕಿಮ. ೨೭೬). 'ನಡತೆಗೆಡು' ಪರಾ. ೪. ಆಚಾರ–ವ್ಯವಹಾರ ; ವೃತ್ತಿ ; ಸಂಪ್ರದಾಯ : ನಮ್ಮ ಜನರಲ್ಲಿ ಬಹು ಪುರಾತನದ ನಡತೆಗಳೆಷ್ಟೋ ಉಂಟು . . . ಈ ನಡತೆಗಳು ಇಂದಿನವಲ್ಲ (ಮುಂಬಯಿ. ೪-೧೦೩).

ನಡತೆ ನುಡಿತೆ, ನಡತೆ ನುಡುತೆ = ನಡವಳಿಕೆ ಮತ್ತು ನುಡಿಯುವಿಕೆ ; ನಡೆನುಡಿ ; ಆಚಾರ–ವ್ಯವಹಾರ : ಹಿಡಿತಬಿಡಿತೆಯ ಹೆಚ್ಚುಕುಂದಿನ ನಡತೆ ನುಡಿತೆಯ . . . ಏಕತೆಯಲೆಡೆಗೊಡುವ ಸಹಜ ಸಮಷ್ಟಿಕೆಯನುಸರುವೆನು (ಗಗತಾ. ೧೭-೭) ; ಮೊದಲವರಂತೆ ಹೆಣ್ಣು ಗಂಡು ಮೊದಲಿಷ್ಟಂತೆ ಚಿನ್ನ ಬಣ್ಣ ಮೊದಲಾದಂತೆ ನಡತೆ ನುಡಿತೆ ಬದಲಾಗಿನೊಂದು ನೀನೈದದು (ಪಕ್ಷಿಸ. IV, ೪-೨) ; ತಮ್ಮ ಕಡೆ ವಕೀಲರ ನಡತೆ ನುಡುತೆ ಬೇಕಾದ ಹಾಗೆ ಒಳ್ಳೇದು (ರಾಚೀಂದ್ರ. ೮೮).

[< ನಡೆ$_1$ + – ತೆ$_2$./ತಮಿ. ನಟತ್ತೈ ; ಮಲ. ನಡತ್ತೈ ; ತುಳು. ಕೊಡ. ನಡತೆ ; ತೆಲು. ನಡತ]

ನಡತೆಕಾಱ (ನಾ). ಆಚಾರವಂತ ; ಸಂಪ್ರದಾಯವನ್ನು ಪಾಲಿಸುವವನು ; ವ್ಯವಹಾರವನ್ನು ನಡೆಸುವವನು ; ಉದ್ಯೋಗಸ್ಥ : ತುರಗಗಜರಥಗಳಿಂ

. . . ವರಿವರಿಯ ಊಳಿಗದ ನಡತೆಕಾಱರುಗಳಂ ಪುರರಕ್ಷಕರ ಮಣಿಹ ಗಾಱರೆಡೆಯಾಟದಿಂದೊಪ್ಪಿತಾ ರಾಜವೀಧಿ (ಗುರುಚಾ. ೧-೩೫).

[ನಡತೆ + – ಕಾಱ]

ನಡತೆಗೆಡು (ಕ್ರಿ). ೧. ಸರಿಯಾದ ನಡತೆಯಿಲ್ಲದಿರು ; ನಡವಳಿಕೆಯನ್ನು ಕೆಡಿಸಿಕೊಳ್ಳು ; ಸಂಪ್ರದಾಯವನ್ನು ಬಿಡು : ನಡತೆಗೆಟ್ಟ ವ್ಯಕ್ತಿಗೆ ಎಲ್ಲೂ ಬೆಲೆ ದೊರಕದು (ಕೂಗ). ೨. ಶೀಲವನ್ನು ಕೆಡಿಸಿಕೊಳ್ಳು ; ನೀತಿಗೆಡು : ಅಯ್ಯೋ ಕೆಟ್ಟ ಹುಡುಗಿ ! ನೀನು ನಡತೆಗೆಟ್ಟರಲೇಬೇಕು (ನಿಕೆಉ. ೫೩). [ನಡತೆ + ಕೆಡು$_1$]

ನಡತೆವಂತ (ನಾ). ಒಳ್ಳೆಯ ನಡವಳಿಕೆಯುಳ್ಳವನು,–ನಡೆನುಡಿಯುಳ್ಳವನು : ನೀನು ವಿದ್ಯಾವಂತ ನಡತೆವಂತ ಗುಣವಂತ ; ಇಂಥವನು ಅಸತ್ಕುಲಪ್ರಸೂತರೂ ದುರಾತ್ಮರೂ ಘಾತುಕರೂ ನಾಚಿಕೆಕೆಟ್ಟವರೂ ನಡೆಯುವಂತೆ ನಡೆಯಬಾರದು (ವಕಥಾ. ೨೫೪). [ನಡತೆ + – ವಂತ]

ನಡನಡ (ನಾ). ಒಂದು ಅನುಕರಣ ಶಬ್ದ. 'ನಡನಡನೆ' ಪರಾ.

ನಡನಡನೆ (ಅ). ನಡನಡ ಎಂದು : ಪಾಱಲಳವಲ್ಲದೆ ನಡನಡನೆ [ಪಾಠಾಂ. ಗಡಗಡನೆ] ನಡುಗಿ ಸಿಡಿಮಿಡಿಗೊಂಡೆಱಕೆಗಳೆಳೆಲೆ ಕೊರಲ್ಕುಸಿಯೆ ಜೋಲ್ದು ನೇಲ್ವ ಪೆರ್ಬಕ್ಕಿಗಳಿಂ (ರಾಜಶೇ. ೫-೫೫ ವ). [ನಡನಡ + – ಅನೆ$_1$]

ನಡಪತಿ (ನಾ). ವಿವಾಹವಾಗದೆ ಗಂಡನಂತೆ ನಡೆದುಕೊಳ್ಳುವವನು : ಕಲ್ಯಾಣದಲ್ಲಿ ಮಾಳಾದೇವಿಯೆಂಬ ವಾರಾಂಗನೆಯು . . . ಜಂಗಮದೇವರಿಂದಾ ಲಿಂಗವು ಸಾಧ್ಯಮಪ್ಪುದೆಂಬುದ ತನ್ನ ನಡಪತಿಯಾದ ಭಕ್ತರಿಂದ ತಿಳಿದು (ಭೈರಸೂ. ೧೪೭). [ನಡವು$_1$ + ಪತಿ$_3$]

ನಡಪಾಡಿಸು (ಕ್ರಿ). ಅಲೆ ; ಚದರಿಹೋಗು ; ಓಡು : ಗುರುಸಂಭವನ ಮಂತ್ರದ ಪಾಡಿ ನಡಪಾಡಿಸಿತು ಪಾಂಡವರ (ಕುಮಾಗ. ೧೦-೨೨).

[ನಡಪು$_3$ + ಆಡಿಸು]

ನಡಪಾಡು, ನಡೆಪಾಡು (ಕ್ರಿ). ನಡೆದಾಡು ; ಸಂಚರಿಸು ; ಓಡಾಡು ; ಅಡ್ಡಾಡು : ದಾದಿಯುಂ ಸಖೀಜನಂಗಳ್ ಬೆರಸು ನಡಪಾಡುತ್ತಿರ್ದಳ ಮುಂದಾ ಕೆಯ್ಯಂ ಪರ್ದು ತಂದಿಕ್ಕಿದೊಡೆ (ವರ್ಧಾಚಾ. ೧೪೮-೦೩) ; ಪಾಡುವ ತುಂಬಿ ಕೋಡುವ ಪುಟಿಲ್ ನಡಪಾಡುವ ರಾಜಹಂಸೆ (ಪಂಪಭಾ. ೩-೩೭) ; ಆ ಚಂದ್ರಿಕೆಯೊಳ್ ನೃಪರೂಪಚಂದ್ರಂ ಕೇಳೀಶೈಲದ ತಪ್ಪಲೊಳ್ನಡಪಾಡುತಿರ್ಪುದುಂ (ಶಾಕಂಅು. ೧೪೭) ; ಪುಡಿಯ ತಡವಿಡಿದು ಮೆಲ್ಲನೆ ನಡಪಾಡುವ ಕಳಮಗಾಟಕಾಜನದ ಬೆಡಂಬಿಡಿದ ವಿಕಚಾಕ್ಷಿಬಿಂಬಂ ಪಡೆಗುಂ ಪಗಲೊಳಮರಲ್ದ ಕುಮುದಶ್ರೀಯಂ (ವರ್ಧಮಾ. ೧೦-೧೪) ; ನಡಪಾಡುವ ವನದೇವಿಯರಡಿಯೂಡಿದಲಕ್ತಕದ್ರವಂ ಪತ್ತಿದವೋಲ್ ಕಡುಗೆಂಪನಾಳ್ದುವೊಂದೊಂದೆಡೆ ವನಚರವಿದ್ಧ ಮೃಗಗಣಾರುಣಜಳದಿಂ (ಕಂದ್ರಪು. ೫-೪೯) ; ಶಾರಕಾತ್ಮಜಂ ನೋಡುತಿರ್ದನ್ ಬೆರಗುಬಡಿದು ನಡಪಾಡುತಿರ್ದೀ ದೈತ್ಯನೃಪನಂ (ಶ್ರೀರಾಮಾ. ೨೨೪-೩೫೬). **ನಡೆಪಾಡು** : ಸಮದಗಜಗಮನೆಯರ್ ಮುಗಿಲ ಮೇಲೆ ನಡೆಪಾಡುವೀವಾಕೆಗಳ್ ತಮಗೆ ಧರಾಗಮನಂ ಪೊಸತಪ್ಪುದಱಿಂದಮರ್ದಿರೆ ನಡೆನಡದು ನಡೆಯಲಾಱದೆ ಸುಱಿದರ್ (ಪಂಪಭಾ. ೭-೮೪) ; ನಡೆಪಾಡುತಿರ್ದೆಡಪಿ ಕೆಡೆವ ಜರತ್ತಾವಸರ ಕೆಯ್ಯಂ ಪಿಡಿದೊಯ್ಯನೆತ್ತುವ ಗೋಲಾಂಗೂಲಜಾಲಮುಮಂ (ಪಂಚತಂ. ೧೧೮-೦೭) ; ಗಿಳಿ ಪಣ್ಗಳನೀಂಟುವ ಭಂಗಿಯಿಂ ವಿನೋದದೆ ನಡೆ[ಪಾಡಿ] ಚುಂಬನದ [ಚೀತ್ಕೃತಿಯಂ] ಕಲಲಾ ಬನಕ್ಕೆ ಬರ್ಪುದು ಪಿರಿದುಂ ನುಮತ್ಪಚರಕಿನ್ನರಪನ್ನಗಕನ್ಯಕಾಜನಂ (ಶಾಂತೀಶ್ವ. ೧೫-೧೪೮).

[ನಡಪು$_2$ + ಆಡು$_1$./ತೆಲು. ನಡಪಾಡು, ನಡುಪಾಡು]

ನಡಪಾಡುಹ (ನಾ). ನಡೆದಾಡುವಿಕೆ ; ಓಡಾಡುವಿಕೆ ; ಸಂಚರಿಸುವಿಕೆ : "ವಿಹಾರ, ಪರಿಕ್ರಮ = ನಡಪಾಡುಹ" (ನಾಚಿರಾ. ೫).

[ನಡಪಾಡು + – ಹ$_2$]

ನಡಪು$_1$, ನಡಹು$_1$, ನಡೆಪು$_1$ (ಕ್ರಿ). ೧. ನಡೆಯುವಂತೆ ಮಾಡು ; ನಡೆಸು ; ಗಮಿಸುವಂತೆ ಮಾಡು : ನಡುವಗಲಲ್ಲಿ ತಾಂ ನಡಪಿ ದಂತಿಗಳಂ ರವಿತಪ್ತಮೂಥಪಂ ಬಿಡದತಿಶೀತಲಸ್ಥಲವ ಸೇವಿಸುವಂತೆವೋಲೀ ನರೇಶ್ವರಂ ಇಡಿದನುರಾಗದಿಂ ಪ್ರಜೆಗಳಂ ನಿಜಪುತ್ರರ ಪೋಪಿವಂದದಿಂ ನಡಪಿ ವಿವಿಕ್ತಮಾದೆಡೆಯ ಸೇವಿಸುವಂ ಸಲೆ ಶಾಂತಮಾನಸಂ (ಶಾಕುಂತ. ೬೨-೦೦೫). ೨. ಸಲಹು ; ಪೋಷಿಸು ; ಪಾಲಿಸು ; ಕಾಪಾಡು : ಎರಟ್ಟೂಱು ತಿಂಗಳಿಂಗೆ ತಾಯ್ ಕಟಿದೊಡೆ ಬಂದ ನಂಟರ್ ನಡವೆ ಬಳೆದೊಡಾ ನಂಟರುಂ ಕಟಿದುಳ್ಳರೆಲ್ಲಂ ಸಸ್ತ ಕುಲಕ್ಷಯಮಾದೊಡೆ (ವಡ್ಡಾರಾ. ೭೬-೦೭) ; ಮುನ್ನ ವೃಷಭನಾಥನ ನಡಪಿದುದುಮಂ ತಮ್ಮ ನಣ್ಪುಮಂ ಬಳೆದು ಕುರುರಾಜಾದಿಮೂರ್ಧಾಭಿಷಿಕ್ತ ಪಾರ್ಥಿವರ್ . . . ಭರತೇಶ್ವರ ಚಕ್ರವರ್ತಿಯನಾಸ್ಥಾನದೊಳ್ ಬಂದು ಕಂಡು (ಆದಿಪು. ೦೩-೨೦೮) ; ನಡಪಿದನಜ್ಜನೆಂದು ವಿಜಯಂ ಕಡುಕೆಯ್ದುಸನೆನ್ನ ಮಮ್ಮನಾಂ ನಡಪಿದನೆಂದು ಸಿಂಧುತನಯಂ ಕಡುಕೆಯ್ದಿಸಂ (ಪಂಪಭಾ. ೧೧-೧೮) ; ಪುಡಿಯೊಳ್ ಪೊರಳುತ್ತುಂ ಕಂಠಗತಪ್ರಾಣನಾಗಿರ್ದುದನೀ ಗಿಳಿಯುಂ ಕಂಡು ಕರುಣಿಸಿ ತಂದೆಂ ನಡಪಿ ಗಱಿಮೂಡಿದ ಬಟಿಕ್ಕಂ ಪಾಱ ಪೋಕುಂ (ಕಾದಂಪು. ೨೬೫) ; ವರ್ಷ ೯[೨೭] ನೆಯ ವಿಶ್ವಾವಸು ಸಂವತ್ಸರದ ಫಾಲ್ಗುಣ ದಮಾವಾಸ್ಯೆಯಾದಿತ್ಯವಾರ[ದ]ನ್ದು ನಡಪಿದ ಸತ್ತಿಗಂ ಬೆಸಸೆ (ಸೌಇಇ. XI-1, ೫೦-೨ ;1006) ; ತಜ್ಜಗಮನೆ ಪುಟ್ಟಿಪೆಂ ನಡಪುವೆಂ ನಡಯಿಪೆಂ ಕಿಡಿಪೆಂ ಕ್ರಮದಿಂದವಾನೆ (ಸಮಪ. ೧೦-೧೬೪) ; ಬೇವಿನ ಗಿಡುವಂ ತಂದಿಟ್ಟಾವಿನ ನೊಱೆವಾಲನೆಱೆದು ನಡಪಿದೊಡಂ ಕೇಳ್ ಬೇವಿಂನೆ ಕೈವಿಡಿಂಗದು (ಧರ್ಮಾಮೃ. ೫-೦೫೬) ; ಆಕೆಯ ನಡಪಿದ ದಾದಿಯ ಮಗಳು ಕಾಮಲತೆಯೆಂಬಳಾಕೆ ರೂಪಸಿ (ಪುಷ್ಪಾಸ್ರ. ೭-೬೪ವ). **ನಡಹು$_1$** : ೨. ಹೊಸ್ಸದೇವರು ಬೆಸಸಲು ಕಾದಿ ಸುರಲೋಕಪ್ರಾಪ್ತನಾದ ಹಿಂನ್ದಾದನ್ತಹವರಂ ಲೇಸಾಗಿ ನಡಹುವರು (ಮೃಅರಿ. ೧೯೬೨, ೩೦-೪ ; 1125). **ನಡೆಪು$_1$** : ೨. ಕರಿ ಪೋಗವು ಹರಿ ಪೋಗವು ಪರಿವಾರಂ ಪೋಗಪ್ಪುಡನೆ ನಡೆಪಿದ ನಾಲ್ವರ್ ನೆರವಾಗಿ ಪೋಗರಂತಕಪುರಕ್ಕೆ ಪೋಪೆಡೆಯೊಳ ರಸರೊರ್ವರೆ ಪೋಪರ್ (ಅಜಿಪು. ೨-೦೦೪) ; ನೆಗಳ್ದ ಭಾವಶಿವದೇವರ್ಕಿಱಿಯ ಮಾಣಿಯಂ ಕೈಕೊಣ್ಡು ಪೋಪಿಸಿ ಮದುವಿಯಂ ಮಾಡಿ ನಡೆಪಿದ ಧರ್ಮಸನ್ತತಿಯ ಬ್ರಾಹ್ಮಣ ಸರ್ವ್ವ ಧರ್ಮ್ಮಾಧಿಕಾರಿ ಬ್ರಹ್ಮಪುರಿ ಮುಂಬ್ಬಂ (ಸೌಇಇ. XI-1, ೬೪-೦೭ ; 1028) ; ಮತ್ತಲ್ಲಿ ಜಲಕೇಳಿಯಾಡುವ ಗಾಡಿಕಾರ್ತಿಯರುಂ ಕಾಡಲೆಂದೊಳ್ಳೆಗಳಂ ತಂದು ಬಿಡಿಸಿಯವರ್ಕ ಪಾಲನೆಱೆದು ನಡೆಪುತಿರ್ಪನ್ನೆಗಂ (ಪಂಚತಂ. ೧೩೩-೫೦) ; ಮಗನಂ ನಡೆಪಿ ಬಾವಿಯೊಳ್ ನೂಂಕುವಂತೆ (ಧರ್ಮಾಮೃ. ೯-೦೫೭) ; ಎನ್ನ ಮಗಳ್ಗಾದ ತನುಜರಂ ಪಿಡಿದು ರಾಜ್ಯದೊಳ್ ನಡೆಪುಪುದೆಂದು ನಿಲೆ ನುಡಿಯಿಸಿ (ನೇಮಿಪು. ೩-೨೭ ವ).

[ನಡೆ$_1$+–ಪು$_1$./ತಮಿ. ನಟಪು; ತುಳು. ನಡಪು; ತೆಲು. ನಡಪು, ನಡುಪು]

ನಡಪು$_2$, ನಡಹು$_2$, ನಡೆಪು$_2$ (ನಾ). ನಡೆಯುವಿಕೆ ; ಚಲಿಸುವಿಕೆ ; ಓಡಾಟ ; ಸಂಚಾರ. 'ನಡಪಾಡು' ಪರಾ. **ನಡಹು$_2$** : ಕಡಿತಲೆಯ ಮಿಂಚುಗಳ ಹೊಯ್ಲಿನ ಸಿಡಿಲುಗಳ . . . ಬಿಡುಮಿದುಳ ಹೊರಳಿಗಳ ಹಂಸೆಯ ನಡಹುಗಳ ನವಖಂಡದೊಳು ಹೆಣನಡವಿ ತಳಿತಿರೆ ಮೆಱೆದುದೈ ಸಂಗ್ರಾಮ ಕಾರ್ಗಾಲ (ಕುಮಾಭೀ. ೪-೩೬). **ನಡೆಪು$_2$** : 'ನಡೆಪಾಡು' ಪರಾ.

[ನಡೆ$_1$ + – ಪು$_2$./ತಮಿ. ನಟಪು; ಮಲ. ನಡಪ್ಪು ; ತುಳು. ನಡಪು ; ತೆಲು. ನಡಪು, ನಡುಪು]

ನಡಪ್ಪಳ್ಳಿ 'ನಡುಪಳ್ಳಿ' ನೋ.

ನಡಪ್ರಾಯ (ನಾ). ಹುಲ್ಲು, ಜೊಂಡುಗಳಿಂದ ತುಂಬಿರುವಿಕೆ. [ಸಂ.]

ನಡಬಾವಿ 'ನಡೆಬಾವಿ' ನೋ.

ನಡಭಾವಿ 'ನಡೆಬಾವಿ' ನೋ.

ನಡಮಣ್ಣಿ (ನಾ). ಒಂದು ಬಗೆಯ ಜಮೀನು ; ಸಾಗುವಳಿ ಜಮೀನು (?) : ಆತಂಗಂ ನಡಮಣ್ಣಿ-ಪನ್ನಿಮ್ಮತ್ತರ್ನೆಲ್ಲ ಮಣ್ಣಿ ಖ × × × ವಕ ಸೂಳೆವಳ್ಳ (ಎಕ. XI, ದಾವಣ. ೧೧೯-೭ ; 980). [?]

ನಡಮೀನ (ನಾ). ಒಂದು ಬಗೆಯ ಮೀನು. [ಸಂ.]

ನಡಮುರುಕನಬಳ್ಳಿ (ನಾ). ಒಂದು ಬಗೆಯ ಬಳ್ಳಿ : (ಕೃ).
[? + ಬಳ್ಳಿ]

ನಡಯಿಸು 'ನಡೆಯಿಸು' ನೋ.

ನಡಲು (ನಾ). ಒಂದು ಸ್ಥಳದ ಹೆಸರು : ನೇಱಲೆಯಂ ಮೂಯೊತ್ತಿಂ ನಡಪ್ಪಳ್ಳಿ ಮೂಱಾಣಂ ನಡಲು ಎಪ್ಪತ್ತಳ್ಳಿದತ್ತಿಱ್ ಕಱಿಯ ಒರಲ್ಗೋಡು (ಎಕ. VI, ಚಿಕ್ಕಮ. ೯೫-೧೬ ; ಸು. 1025 ?). [?]

ನಡವಣ 'ನಡವಳಿ$_1$' ನೋ.

ನಡವಳಿ 'ನಡವಳಿ$_1$' ನೋ.

ನಡವಳಿಕಸ್ತ (ನಾ). ಒಳ್ಳೆಯ ನಡವಳಿಕೆಯುಳ್ಳವನು,-ನಡತೆಯುಳ್ಳವನು : ಈಶ್ವರರಾಯರು ಒಳ್ಳೆಯ ನಡವಳಿಕಸ್ತರಾದುದರಿಂದ ನೃತ್ಯಕಲೆಗಳಲ್ಲಿ ಅಪ್ಪಕೃಷ್ಟೆ (ಶಲಾಸಾ. ೫). [ನಡವಳಿಕೆ (<ನಡವಳಿಕೆ) + – ಸ್ತ]

ನಡವಳಿಕಾರ 'ನಡವಳಿಕಾಱ' ನೋ.

ನಡವಳಿಕಾಱ 'ನಡವಳಿಕಾಱ' ನೋ.

ನಡವಳಿಕೆ 'ನಡವಳಿಕೆ' ನೋ.

ನಡವಳಿತ (ನಾ). ೧. ಸಡತೆ; ನಡವಳಿಕೆ; ವರ್ತನೆ: "ನಡವಳಿತ = ನಡತೆ" (ಗಂಗಾಮ. ೧೭೭) ; ನುಡಿದೊಡೇನೈ ಶ್ರುತಿಸ್ಮೃತಿಗಳಂ ನಡವಳಿತದೊಳು ಶುದ್ಧಮಿಲ್ಲದೆ (ಶಂಕದಾ. ೧೨-೧೦). ೨. = ನಡವಳಿಕೆ ೩ : ಘೂಟು ನಡವಳಿತವನ್ನು ಕುರಿತ ಸಿವಿಲ್ ಪ್ರೊಸೀಜರ್ ಕೋಡಿನ . . . ಪ್ರಕರಣದ ಮೇರೆಗೆ ಆರು ತಿಂಗಳು (ಗ್ರಾಮಾಳ. ೧೬೦). [ನಡವಳಿ (< ನಡವಳಿ$_1$) + – ತ$_2$]

ನಡವೆ 'ನಡುವೆ$_1$' ನೋ.

ನಡಸಂಹತಿ (ನಾ). ಹುಲ್ಲು, ಜೊಂಡುಗಳ ಸಮೂಹ,–ಗುಂಪು. [ಸಂ.]

ನಡಸು$_1$ 'ನಡೆಯಿಸು' ನೋ.

ನಡಸು$_2$ 'ನಡಿಸು$_2$' ನೋ.

ನಡಹ 'ನಡೆಹ' ನೋ.

ನಡಹು 'ನಡಪು$_1$' ನೋ.

ನಡಹು$_2$ 'ನಡಪು$_2$' ನೋ.

ನಡಾವಳಿ 'ನಡವಳಿ$_1$' ನೋ.

ನಡಾವಳಿಕೆ 'ನಡವಳಿಕೆ' ನೋ.

ನಡಾಳ (ನಾ). ಒಂದು ಬಗೆಯ ಹಗ್ಗ,–ಮಿಣಿ. 'ನಡಾಳಮಿಣಿ' ಪಠಾ. [←ಮರಾ. ನಾಡಾ]

ನಡಾಳಮಿಣಿ (ನಾ). ನೊಗವನ್ನು ಮೂಕಿಗೆ ಬಂಧಿಸುವ ಹಗ್ಗ : (ಕೃ).
[ನಡಾಳ + ಮಿಣಿ (<ಮಿಳಿ$_2$)]

ನಡಿ 'ನಡೆ$_1$' ನೋ.

ನಡಿಕೆ 'ನಡಗೆ' ನೋ.

ನಡಿಗೆ$_1$ 'ನಡಗೆ' ನೋ.

ನಡಿಗೆ$_2$, ನೆಡುಗೆ(ನಾ). ೧. ನಡುವಿಕೆ ; ನಾಟುವಿಕೆ ; ಸ್ಥಿರಗೊಳಿಸುವಿಕೆ. ೨. ನಾಟಿ ; ನೇಜಿ. ನೆಡುಗೆ: ೧. "ತಲ-ಪ್ರತಿಷ್ಠಾಯಾಂ, ನೆಡುಗೆಯೊಳ್" (ಶಾಶಕ್ಷ. ೨೬೧).

ನಡಿಗೆಯ ಹಿತ್ತಿಲು = ನಾಟಿ ಹಾಕಿರುವ ಹಿತ್ತಿಲು ; ಸಸಿಗಳನ್ನು ನಟ್ಟಿರುವ ಸ್ಥಳ : ಬಸವಂತನ ನಡಿಗೆಯ ಹಿತ್ತಿಲು ತೋಟದಲೂ (ಶಾಇಇ. IX-II, ೪೭೬-೩೦ ; 1506). [<ನಡು$_1$ + – ಗೆ]

ನಡಿಸು$_1$ 'ನಡೆಯಿಸು' ನೋ.

ನಡಿಸು$_2$, ನಡಸು$_2$, ನೆಟಿಸು, ನೆಡಿಸು (ಕ್ರಿ). ೧. (ಗಿಡ, ಸಸಿ ಮೊದಲಾದುವನ್ನು ನೆಲದಲ್ಲಿ) ನಡುವಂತೆ ಮಾಡು : ನಾಟುವಂತೆ ಮಾಡು : "ಪೀಲತೀತಿ ನಡಿ(ಟ್ಟ)ಸಿದವುದೆಂಬುದು" (ಕಾಶಕ್ಷ. ೪೩) ; ದಿವ್ಯಶಕ್ತಿಪ್ರಭಾವದಿಂದ ಮಾನುಷಾರಣ್ಯಂಗಳ ಮಹಾದ್ರುಮಂಗಳಂ ತರಿಸಿ ನಡಿಸಿ (ಆದಿಪು. ೦೩-೩೨ ಪ). ೨. (ಕಲ್ಲು, ಕಂಭ ಮೊದಲಾದುವನ್ನು ನೆಲದಲ್ಲಿ) ಹುಗಿಸು ; ಹೂಳಿಸು ; ಸ್ಥಾಪಿಸು : ಯಾತುಕೂರೊಳ್ ಚಲ್ಲೇಶ್ವರದ ಮುಂದೆ ಕಲ್ಲನ್ನಡಿಸಿ ಪಿರಿಯ ಕೆಱೆಯ ಕೆಱಗೆ ಮಟ್ಟಿಕಾಲುಣ್ಗಳೊಳಿಕ್ಕಿಂಡುಗಂ ಮಣ್ಣು ಕೊಟ್ಟರ್ (ಎಕ. III, ಮಂಡ್ಯ. ೪೦-೦೨ ; 950); ಕಡಲ ತಡದಡಿಯೊಳಾತಂ ನಡಿಸಿದ ಕಾಂಚನಜಗಜ್ಜಯಸ್ತಂಭಗಳ್ ಕುಡಿನಿಮಿರ್ದು ನಾಕಿನಿಳಯಮನಡರ್ವ ಯಶೋಲತೆಗಡರ್ಪನಿಟ್ಟವೊಲೆಸೆಗುಂ (ಚಂದ್ರಪು. ೭-೩೦). ೩. (ಕತ್ತಿ ಮೊದಲಾದುವನ್ನು ಮೈಯೊಳಗೆ) ನಾಟಿಸು ; ಚುಚ್ಚುವಂತೆ ಮಾಡು : ತನ್ನ ಕಠಾರಿಯನ್ನು ಪೂರ್ತಿಯಾಗಿ ಅದರ ದೇಹದಲ್ಲಿ ನಡಿಸಿದಳು (ಮೋದಿಮ. ೦೦೪); ಆಡವೀಬೆಕ್ಕುಗಳು ಬೇಟೆಯ ಮೆಯ್ಯೊಳಗೆ ಹಲ್ಲು ನಡಿಸಿ, ಅದನ್ನು ಕೊಲ್ಲುತ್ತವೆ (ಮುಂಬಯಿ. ೫-೩೦). **ನಡಸು$_2$** : ೩. ಘಡಘಡೆನುತ ಬಕಾಸುರನ ಮಗ ನಡಸಿದನು ಕೂರಂಬನು (ಕುಮಾರ್ಯೂ. ೦೫-೬೬). **ನೆಟಿಸು** : ೨. ಗುರಪನಾಯಂ ಕೊಟು ಕಲ್ಲ ನೆಟಿಸಿದನ್ (ಎಕ. VIII, ಸಾಗರ. ೦೦೦-೦೫ ; 986 ?). **ನೆಡಿಸು** : ೧. ತಡೆಯದ್ದೈದಂಗುಲಕೆ ರಥವನು ನೆ[ಪಾಠಾಂ. ನ] ಡಿಸಿದನು ಹರಿ ಧರೆಗೆ ಪಾರ್ಥನ ಮುಡಿಯ ಸರಿಸಕೆ ಬಾಣ ಬಂದುದು ಕೊಲುವ ತವಕದಲಿ (ಕುಮಾಕ. ೨೫-೨೮). ೨. ಮುಂದೆಸೆಯೊಳುಱ್ ಬಸಿದ ಶೂಲವನೊಂದನಾಗಳೆ ತರಿಸಿ ನೆಡಿ[ಪಾಠಾಂ. ನಡಿ]ಸಿಂತೆಂದನು (ಬಸಪು. ೩೮-೪೬) ; ತೊಡೆವೆನೀ ತೋರ್ಪೀ ನಿಶಾಚರವಡೆಯ ಭಾಗ್ಯದ ಭಾಳಲಿಪಿಯನು ನೆಡಿಸುವೆನು ನೈಶಾಟವಿಜಯಸ್ತಂಭದಂಬರವ (ಶೂರರಾ. ೩-೬-೪) ; ನೆ [ಪಾಠಾಂ. ನ] ಡಿಸಿದನೆರಡು ಕಂಬಮಂ (ಕೃಮಿಭಾ. ೨೬-೩೦).

ನಡನಡಿಸು(ದ್ವಿರುಕ್ತಿ) : ಸಿಡಿಲ ಬೊಬ್ಬೆಯ ಧಾಳಿಯಲಿ ನಡನಡಿಸಿ ತಾಗಿ ನಿದಾಳಭೂಪನ ಹಿಡಿದು ಹೆಕ್ಕಳಿಸಿದನು ಮೇಘಾಗಮ ಮಹೀಪಾಲ (ಶೂರರಾ. ೪-೬-೪). [ನಡು$_1$ + – ಇಸು$_2$]

ನಡು$_1$, ನೆಟ್ಟು$_1$, ನೆಡು (ಕ್ರಿ). ನಟ್ಟ$_1$, ನೆಟ್ಟ (ಭೂತಕೃ), ನಟ್ಟು$_1$, ನಾಟ್ಟು, ನೆಟ್ಟು$_2$ (ಭೂತನ್ನೂ) ೧. (ಕಲ್ಲು, ಕಂಬ ಮೊದಲಾದುವುಗಳ ಕೆಳಭಾಗವನ್ನು ನೆಲದಲ್ಲಿ) ಹೂಳು ; ನಿಲ್ಲಿಸು ; ಸ್ಥಾಪಿಸು ; ಸ್ಥಿರಗೊಳಿಸು : "ನಡು–ಸಂಸ್ಥಾಪನೇ, ಮಧ್ಯೇ ಚ" (ಶಮಧಾ) ; "ಸ್ಥಾಪನ – ಮಧ್ಯದ ಸ್ಥಾನಂಗಳೊಳ್ ನಡು" (ಶಬ್ದಮಂ. ೧೪) ; ಅಜವರ್ಮ್ಮನ ಕಲ್ಲನೊಟವ್ಮುರ್ಸ್ಸುಟ್ಟೊಡೆ ಇವ್ವರ್ಗ್ಗೆ ಈ ಕಲ್ಲು ನಟ್ಟುದು (ಎಕ. XI, ಜಗಳೂ. ೦೯-೬ ; 907) ; ಮಹಾದ್ರುಮಂಗಳಂ ತರಿಸಿ ನಡಿಸಿ ನಟ್ಟ ಕಂಭಂಗಳ ಮೇಗೆ ಸಾರದಾರುಗಳನೆಡೆಗಿಱಿದಿರೆ ಪಾಸಿ ಪಸರಿಸಿ (ಆದಿಪು. ೧೩-೩೨ ಪ) ; ಮಟ್ಟಿ ಕೆಱೆಯ ತೆಂಕಣ ಕಡೆಯಂ ಪಿರಿಯಯ್ಯ ಪುಣುಸೆವರು ನಟ್ಟ ಓಳಗಲ್ಲಿನ್ದಂ ಪಡುವಣ ತೆವರಿಂದೊಳಗೆ ಅಯ್ದು ಕೊಳಗ ಬೆದೆ ಪೂಂಬೊಲನುಂ . . . ಸಲ್ದುದು (ಎಕ. IV, ಹೆಗ್ಗಡ. ೦೬-೩೦ ; 1021) ; ಕಮ್ಮನೂರ ಬಳವಿಯೊಳು ಅಯ್ಗಣ್ಣುಗಂ ಬೆಟ್ಟಲೆ ಅಯಂಗಳು ಕಲ್ಲು ನಾಟ್ಟು ಸೊಭೆ ಕೆಯ್ದಂ (ಎಕ. XIV, ಎಡತೊ. ೯೮-೧೧ ; 1078) ; ಮತ್ತುಟಿದವರಂ ದೇವರೆನವೇಡ ಧರೆಯೊಳ್ ದೇವರೆ ನಟ್ಟರ್ದ ಕಲ್ಲುಮೊಟ್ಟಿದ ಮಣ್ಣುಂ (ಧರ್ಮಾಮೃ. ೮-೩೦) ; ಇದು ವೈರಾಗ್ಯದ ಕೊತ್ತಳದ ಮೇಲೆ ಮನ್ಮಥನು ನಟ್ಟ ವಿಜಯ ಪತಾಕೆಯಂತೆ ಕಾಣಿಸುತ್ತದೆ (ಕಾವ್ಯಸ. ೫೮). ೨. (ಗಿಡ, ಸಸಿ, ಬೀಜ ಮೊದಲಾದುವನ್ನು ನೆಲದಲ್ಲಿ) ಊರು ; ಹಚ್ಚು ; ನಾಟಿಹಾಕು : ತೆಂಗಿನೆಳನೀರುಮಂ ಕೊಳಲಿಂಬಪ್ಪಂತಿರೆ ಮಾಡಿ ನಟ್ಟ ಕೌಂಗಿನ ತೆಂಗಿನ

ಮರಂಗಳುಮಂ (ಪಂಪಭಾ. ೫-೪೭ ವ) ; ಒಂದು ದೆಸೆಯೊಳಿರ್ತಡಿವಿಡಿದು ನಟ್ಟ ತಮಾಲದ ತಳಿರ್ಗೊಂಬುಗಳಿಂ ಸಮೆದ ವನಲೇಖೆಗಳುಮಂ (ಕಾದಂಉ. ೨೦೪) ; ಪೂಗಿಡುವೆಂಬ ಪೆಸರಿಂಗೆ ಕೊಳವಳ್ಳಿಯ ಗಿಡುಗಳಂ ನಟ್ಟು ನೀರೆಱೆದು ನಡೆವೆ ಮಲ್ಲಿಗೆಯ ಪೂವಿನಂತಾಗಲಱಿಯದಂತೆ (ಧರ್ಮಾಮ್ಯ. ೭-೭೯) ; ನೀ ನಟ್ಟ ಸಸಿ ಸುರಕುಜವಲೇ ಕೊಡದೇ ಮನೋರಥವ (ಕುಪ್ಯಾಅ. ೧೨-೫೪) ; ನಟ್ಟು ಧರ್ಮಭಯವನೆದೆಗೆ ಹುಟ್ಟಿಗೊಂದು ಅರ್ಥವಿತ್ತರು (ರಾಮಾನಿ. ೨ ನಿಪೇದನೆ). ೩. (ಬಾಣ, ಕತ್ತಿ, ಮಂಳ್ಳು ಮೊದಲಾದಂವು) ಚುಚ್ಚು; ನಾಟು; ಒಳಹೊಗು; ಇರಿ; ಭೇದಿಸು : ನಟ್ಟ ಸರಲ್ಗಳಿಂದಿದಕರಂಕ × ಯಿಂ ಕಿಡಿಕೆಯ್ದು (ಎಕ. II, ೧೩೮-೧೫ ; ಸು. 940) ; ತಡದಡಿಸುತ್ತುಮಿಱಿಯಲ್ ಪರಿವಾತಂ ವಾಪೀಸೋಪಾನ ಮನಡರುತ್ತುಂ ಜಾಱೆವಱಿದು ಕೆಡೆದುರದೊಳ್ ನಟ್ಟ ಸುರಿಗೆ ಬೆನ್ನೊಳ್ಮೂಡೆ (ಆದಿಪು. ೨-೦೪ ವ) ; ತಡೆಯದೆ ರಾಜರಾಜನಿದಿರಂ ಬರೆ ಭೋರ್ಗರೆದೆಚ್ಚೊಡಂಬುಗಳ್ ನಡದೆ ಸಿಡಿಲ್ವುದುಂ (ಪಂಪಭಾ. ೧೦-೧೩೯); ವಾಮನನು ದರ್ಭೆಯೊಳೋವದೆ ಕುತ್ತೆ ನಟ್ಟು[ಪಾಠಾಂ. ದರ್ಭೆಯೊಳಾಸಿದೊಡಾರೆ ನಾಂಟಿ] ಶುಕ್ರನ ಬಲಗಣ್ಣುಮಾಗಳೊಡೆದತ್ತು (ಸಮಪ. ೧೦-೯೭) ; ಬಾಲಾಭ್ಯಾಸವ ಮಾಡಹೋದರೆ ಎನ್ನ ಸುರಿಗೆ ಎನ್ನ ನಟ್ಟಿತ್ತು (ಬಸವ. ೭೨೪) ; ನಂಜುಮುಳ್ಳಡಿಯನು ನಟ್ಟು ನಡೆಗೆಟ್ಟನೋ (ಸಿದ್ಧರಾ. ೨-೪೫) ; ರೋಮಗಳೆಲ್ಲ ಬಾಣಮಯವಾಗೆ ನಟ್ಟವು ಕಣೆಗಳು (ಸಂಭಪ. ೧೬-೦೨) ; ಎಡೆಬಿಡದಿಡುವ ತುಪಾಕಿಯ ಗುಂಡಿನ ಕಡುಹಿಂದ ನಡುವ ಬಾಣಗಳ ಗಡಣದಬ್ಬರದಿಂದ ಕೂಡಿದ ರಿಪುಬಲ ಕಡಿಖಂಡವಡೆದುದು (ಕಂನವಿ. ೩-೭೬). ೪. ನೆಲೆಗೊಳ್ಳು ; ಸ್ಥಿರವಾಗು ; ಕೀಲಿಸು ; ಅಲಂಗದೆ ನಿಲ್ಲು ; ಕೂಡು : ದಿಟ್ಟಿ ಮನಮೆಂಬಿವು ತೊಟ್ಟನೆ ನಟ್ಟು ನಟ್ಟವೋಲ್ ಘಟಿಯಿಸೆ (ಆದಿಪು. ೩-೯೦) ; ಆತನ ವಿಷಮಶರಶಲಾಕೆಗಳಿಂ ಕೀಲಿತಮಾದಂತವಯವಂಗಳ್ ನಟ್ಟು ನಿಂದುವು (ಕಾದಂಉ. ೭೬೮) ; ಆಲಿ ನಿಮ್ಮಲ್ಲಿ ನಟ್ಟವು ನೋಡಯ್ಯ (ಮಹಾದೇ. ಬ. ೩೮-೮೦) ; ತನ್ನಯ ಸುಭೋಗಸಮಾಶ್ರಯಭಂಗಶಂಕೆಯಿಂದುನ್ನತ ಚಿಂತೆ ನಟ್ಟು ನಿಲೆ (ಬಾಧಪು. ೩-೮) ; ಕುಮಂತ್ರಿಗಳ ವಚನವತಿಗಾಢದಲಿ ನಟ್ಟುದು (ಕುಪ್ಯಾಭೀ. ೧-೨೫). ನೆಟ್ಟು$_1$: ೧. ಸಿವಾರಗಾವುಣ್ಡರ ಮಗ ಪೊನ್ನಯ್ಯನ ದಣ್ಡಿಗೆ ನೆಟ್ಟಿದ ಕಮ್ಬ (ಎಕ. VI, ಕಡೂರು. ೧೦-೨೩ ; 1125?). 'ಕಿತ್ತು$_1$' ಪರಾ. ನೆಡು : ೧. ಆತನ ತಮ್ಮ ರಾಯನು ಅಳಿಯ ಮಾದೆಯ್ಯನುಮಿಾ ಕಲ್ಲ ನೆಟ್ಟರ್ (ಎಕ. VIII, ಸೊರಬ. ೨೩೪-೧೨ ; 999) ; ಹುಟ್ಟಿದ ಮರ ನೆಟ್ಟ ಕಲ್ಲು ಮತ್ತೇತರ ಇಷ್ಟದಲ್ಲಿ ಒತ್ತಿದ ಲಿಂಗಮುದ್ರೆ ಇರಲಿಕೆ ಕಿತ್ತುಕೊಂಡವ ದ್ರೋಹಿ ಎಂಬರು (ಕೂನ್ಯಸಂ. ೨೬೫-೧೫) ; ಜಂಬೂದ್ವೀಪದ ನಡುವೆ ನಿತಂಬದ ಮಣಿಕಾಂತಿ ನಿಮಿರೆ ದೆಸೆದೆಸೆಗೆ ದಿಶಾಸ್ತಂಬೇರಮಕ್ಕೆ ಬಿದಿ ನೆಟ್ಟಂಬಿನ [ಪಾಠಾಂ. ಬಿರುದಿನದೆಂಬಿನ]ಪೊಂಗಂಭಮೆನಿಸಿ ಮಂದರಮೆಸೆಗುಂ (ಪಾರ್ಶ್ವಪು. ೧-೧೦೮) ; ಜಗದ ಜಾಣರು ಸೀಮೆಯಲಿ ಹಳವಿಗೆಯ ನೆಟ್ಟರು (ಕುಪ್ಯಾದ್ರೋ. ಪರಿ. ೨೭೫) ; ೬೦ ವರಹದ ಭೂಮಿಯಂನು ಕಲ್ಲು ನೆಟ್ಟು ಫಲಿಸಿಕೊಟ್ಟುದರಿಂದ (ಎಕ. VII, ಶಿವಮೊ. ೧೦೮-೨೦ ; 1558). ೨. ವರ್ಷದ ಯಾವ ಸಮಯದಲ್ಲಿಯೂ ಮೆಣಸಿನ ಗಿಡ ನೆಡಬಹುದು (ಅಡುಸೌ. ೧೨೮) ; ಒಂದು ದಿನ ಹಿತ್ತಿಲ ಕಡೆ ಒಂದು ತೆಂಗಿನ ಸಸಿಯನ್ನು ನೆಡುವುದಕ್ಕಾಗಿ ಗುದ್ದಲಿಯಿಂದ ಅಗೆಯುತ್ತಿದ್ದೆ (ಪ್ರತಾಪ. ೪೮). ೩. ನಗುತಲಿಱಿದುಕೊಂಡರೆ ಅಲಗು ನೆಡದಿಹುದೆ (ಬಸವ. ೬೬೧) ; ಅನ್ಯವಿಮಲಾಂಭೋಜಾತಪತ್ರಾಕ್ಷಿ ಮಾಟ್ಟುರು ಬಿಬ್ಬೋಕದಲಂಪಿನಿಂಪು ಮನಮಂ ತಾಂ ನೆಟ್ಟುದೋ(ಉದ್ಯಟ.೧೧-೨೪); ಇಂತಂಗಾಲ ನೆಟ್ಟು ಕಟ್ಟುಗಿಯಲಾ ನೋವಿನಿಂ ನಡೆಯುಡುಗುತಂದು ನೊಂದು . . . ಈ ಬಲ್ಹಸಿಯಂ ತೆಗೆದಪೆನೆಂದೊಡೆ (ಉದ್ಯಟ. ೧೧-೦೦೩ ವ) ; ಬಿರಿಯೆ ಬಲುವಜ್ರಾಂಗಿ ಹಾಯ್ದವು ಗಱಿಸಹಿತಲುಚ್ಚಳಿಸಿ ನೆಲದಲಿ ಸರಳು ನೆಟ್ಟವು ಕರ್ಣ ನೆನೆದನು ರುಧಿರಧಾರೆಯಲಿ (ಕುಪ್ಯಾಕ. ೧೧-೨೯) ; ಇಟ್ಟಡೆ ಸೆಲ್ಲೆಹ ಕಂಗಲ ಜೋಡನು ತಟ್ಟುರ್ಚಿ ಮೆಯ್ಯನುಚ್ಚಳಿಸಿ ನೆ[ಪಾಠಾಂ. ನ]ಟ್ಟಿಹುದವನಿಯನೆನೆ ರಾಮನೀಡಿನ ಘಟ್ಟಿವಾಳಿಕೆಯನೇನೆಂಬೆ (ಕುರಾಸಾಂ.೧೩-೧೧೭). ೪. ಅಷ್ಟಭೋಗಂಗಳು ಲಿಂಗದಲ್ಲಿ ಮನಮುಟ್ಟಿ ನೆ[ಪಾಠಾಂ. ನ]ಟ್ಟರಲು ಅದೇ ಅರ್ಪಿತ ಅಂಗ ಲಿಂಗಾರ್ಪಿತವಾಗಿ (ಅದವ. ೨೩-೬೨) ; ನೆಟ್ಟ ನೇಹದಲವಳು ನುಡಿಗೊಡಬಟ್ಟಳ್ಳೆ (ತೊರರಾ. ೨-೧-೩೭) ; ಪರರಾಯರ ನಿಯೋಗಿಗಳಿಗೆ ಭಯಾನಕರಸವು ನೆಡುವಂತೆ (ಸೌಗಂಧಿ. ೬-೧೭).

ನಟ್ಟ ಕಂಭ=ಸ್ಥಿರವಾಗಿ ನಿಲ್ಲಿಸಿದ ಸ್ತಂಭ: ಮಹಾದ್ರುಮಂಗಳಂ ತರಿಸಿ ನಡಿಸಿ ನಟ್ಟ ಕಂಭಂಗಳ ಮೇಗೆ ಸಾರದಾರುಗಳನೆಡೆಗಿಱಿದಿರೆ ಪಾಸಿ ಪಸರಿಸಿ (ಆದಿಪು. ೧೩-೫೨ವ) ; ನಟ್ಟ ಕಂಭದ ಹಾಗೆ ದಿಟ್ಟವೀರನು ಇರಬೇಕು (ಗಾದೆ). ನಟ್ಟ ಕಲ್ಲು,ನೆಟ್ಟ ಕಲ್ಲು=(ಗಡಿಯನ್ನು ಸೂಚಿಸಲು, ಶಾಸನವನ್ನು ಕೆತ್ತಲು ಅಥವಾ ಸ್ಮಾರಕಕ್ಕಾಗಲಿ) ನೆಟ್ಟಿರುವ ಕಲ್ಲು ; ಸ್ಥಾಪಿಸಿರುವ ಕಲ್ಲು : ಪ್ರಥಮಂ ದುಗ್ಗನ್ಕೆಱೆ ಮೂಡ್ಯೆಕಡೆ ಗೋಡೆಎ ಸಂಗ ವೋಯರಾ ಕೆಱೆಯಿನ್ತೆಂಕೈ ನಟ್ಟ ಕಲ್ಲೆ ಪೆರ್ಗ್ಗಟನಿಯಿನ್ ಬಡಗೈ ನಟ್ಟ ಕಲ್ಲೆ (ಎಕ. X (8), ಚಿಕ್ಕಬ. ೬೬-೧೭ ; 850) ; ಸರ್ವರಱಿಯಲು ನಟ್ಟಕಲ್ಲೆ ನಿಸದಿಳೆಯೊಳಗೆ ಸುಳಿವ ಶಾಸನವೆನಿಸಿ ಪೇಳ್ವೆನೀ ಸತ್ಯತಿಯನು (ಸಿದ್ಧರಾ. ೦-೫) ; ಸಿಂಹ ಪೋತನ ಮಗಳು . . . ಮಹಾದೇವಿಯ ಆಳು ಬಿಸಮನ್ ಎಂಬುವನು ನೆಟ್ಟ ಕಲ್ಲಿಗೆ ಕೆಲವು ದಾನಗಳನ್ನು ಮಾಡಿದ್ದರೆಂದು ತಿಳಿದು ಬರುತ್ತದೆ (ನೊಳಂಬ. ೨೭). ನಟ್ಟಕ್ಷಿ, ನೆಟ್ಟಕ್ಷಿ = ಚಲಿಸದೆ ಇರುವ ಕಣ್ಣು ; ಒಂದೇ ಕಡೆಗೆ ಸ್ಥಿರವಾಗಿ ದೃಷ್ಟಿಯಿಟ್ಟ ಕಣ್ಣು ; ಅಚಲವಾದ ನೋಟ : ಆತನಿಗೆ ನಟ್ಟಕ್ಷಿಯಾಗಿ (ಬೆಟ್ಟಅ. ೧೩೯-೧೨) ; ಚೆಲುವ ಕೃಷ್ಣನ ಮೂರ್ತಿಯನು ಭೂವಳಯದಂಗನೆಯರು ನಿರೀಕ್ಷಿಸಿ ಬಲಿದು ನೆಟ್ಟಕ್ಷಿಗಳ ತೆಗೆಯದೆ ಯೋಗಿಗಳವೋಲು ಸಲೆ ಸುಖಾಬ್ಧಿಯಲಾಳುವರು (ನಿಭಾಗ. ೧೧-೩೬-೩). ನಟ್ಟಗಣ್ಣು, ನೆಟ್ಟಗಣ್ಣು = ನಟ್ಟಕ್ಷಿ : ಸ್ವಾಮಿಗೆ ಜರುಗುವ ವಿಶೇಷಪೂಜೆಗಳನ್ನು ಶಾಂತಲಾದೇವಿ ನಿಂತೇ ನಟ್ಟಗಣ್ಣಿನಿಂದ ನೋಡಿದಳು (ಸವತಿ. ೨೮೮); ನೆಟ್ಟಗಣ್ಣಿನಿಂದ ನೋಡಬೇಡ (ರೂಢಿ). ನಟ್ಟಚ್ಚ = ನಟ್ಟಕ್ಷಿ : ನಟ್ಟಚ್ಚಿಯಿಂದೆ ನಿರ್ಘೃಣಮೀಕ್ಷಿಸುತ್ತುಂ (ಸಂಸಪ. ೨೨-೨). ನಟ್ಟ ದಿಟ್ಟಿ, ನೆಟ್ಟ ದಿಟ್ಟಿ = ನಟ್ಟಕ್ಷಿ : ತಾಂ ಪಿಂಗದೆ ನಟ್ಟ ದಿಟ್ಟಿಯನವಂ ಕಿಟಲೆಂದನುಗೆಯ್ದು ತೂಗಿದಂ (ಆದಿಪು. ೧೨-೧೩) ; ಬಗೆ ಬೆಚ್ಚು ನಟ್ಟ ದಿಟ್ಟಿಯನುಗಿಯಲ್ಕಂ ಬಗೆಯ ತಾಱದೆ (ಶಾಂತಿಪು. ೫-೫) ; ಕಿವಿಯಂ ಕತ್ತರಿಸಿ ಶರೀರವಂ ಸಂಕೋಚಿಸಿ ನಟ್ಟ ದಿಟ್ಟಿ[ಪಾಠಾಂ. ದಿಟಿ]ಗಳ್ವೆರಸು ನಿನ್ನನೆ ನೋಡುತ್ತುಮಿರ್ಕುಂ (ಪಂಚತಂ. ೧೬೬-೧೨) ; ಮಿಡುಕದೆ ಮೆಯ್ಯಿಕ್ಕದೆ ವನಿತಾರತ್ನವಂ ವಜ್ರಲೇಪದೊಳ್ಪತ್ತಿದಂತೆ ನಟ್ಟ ದಿಟ್ಟಿಯಂ ತೆಗೆಯಲಾಱದೆ ನೋಡಿ ನೋಡಿ (ಧರ್ಮಾಮ್ಯ. ೩-೧೩೮ ಅಡಿಪದ್ಯ); ಕದಪಿನಲಿ ನೆಲಸಿದ ಕೈ ನೆಟ್ಟ ದಿಟ್ಟಿಯ ಕಾಮುಕರಲಸದೀಕ್ಷಿಸಿದರಂದವಳ (ಕಂನವಿ. ೯-೯೪). ನಟ್ಟ ದೃಷ್ಟಿ=ನಟ್ಟಕ್ಷಿ : ನೋಡುತಿರ್ದನು ನಟ್ಟದೃಷ್ಟಿಯೊಳೊಗುವ ಜಲದಲಿ ರೋಮಪುಳಕದಲಿ (ಕುಪ್ಯಾಅ. ೬-೭೮). ನಟ್ಟ ಬಡಪ = ನಿರಂತರವಾಗಿ ಸುರಿಯುವ ಮಳೆ ; ಜಡಿಮಳೆ : ತುಂತುರ್ ತುಷಾರವಿಡುಕುಂಬನಿ ತಂದಲ್ಲೋನೆ ನಟ್ಟ ಬಡಪಮೆನಲ್ ಸುರಿದುವು ಬಿಡದೆ ಮಱೆಗಳಿರುಳುಂ ಪಗಲುಂ (ಜಗವಿ. ೪-೩೨). ನಟ್ಟವನಿ, ನಟ್ಟೆವನಿ = ನಟ್ಟಬಡಪ: ಅಡಸರಿ ಬಲ್ಸರಿಯಱೆವಳೆಯಿಡುಕುಬನಟ್ಟೆವನಿ ತುಷಾರಂ . . . ತುಂತುರ್ ಬಿಡದಡಿಯಿಡಗೊಡದೆ ಕಱೆದುವಿರುಳುಂ ಪಗಲುಂ(ತ್ರಿಪುವಿ. ೮-೩೯); ಲೋಪಮಿಲ್ಲದುಚಿತಾಕ್ಷರಾಗಮಕ್ಕೆ—ನಟ್ಟೆವಾನ್, ನಟ್ಟೆವನೆ, ನಟ್ಟೆಗೊಂಬು, ನಟ್ಟೆವನಿ. ಇಲ್ಲಿ ಎಕಾರಮುಚಿತವರ್ಣಾಗಮಂ (ಶಮದ. ೧೭೬ ಪ್ರಯೋ). ನಟ್ಟಾಲಿ, ನೆಟ್ಟಾಲಿ = ನೋಟ ಬದಲಾಯಿಸದ ಕಣ್ಣುಗುಡ್ಡೆ ; ನೇರವಾಗಿ ನೋಡುವ ಕಣ್ಣು ; ನಿಡುನೋಟದ ದೃಷ್ಟಿ : ಪದೆದಾಂ ನೋಡಿದೆನಾತನಿರ್ದ ದೆಸೆಯಂ ನಟ್ಟಾಲಿ ಬೀಳ್ವನ್ನೆಗಂ

(ಕಾದಂಪು. ೭೮೯); ಬಹುಕದನಮನೊಡರ್ಚಲೆಂದು ನಟ್ಟಾಲಿಗೊಂಡು ಮುಟ್ಟೆವರ್ಪನಂ ಕಂಡು (ಜಗವಿ. ೯-೩೯ ವ); ನೋಡಿದಳಬ್ಬಾನನೆ ನಿನ್ನ ಚಿತ್ರಪಟಮಂ ನಟ್ಟಾಲಿ ಬೀಳ್ವನ್ನೆಗಂ (ದಶಕು. ೧೦-೫೨); ಮಲೆಯಂ ಸಾರ್ದೋಡಿ ಬಾಲಂ ತೊನೆಯೆ ಕುಸಿದ ಗೋಣೆತ್ತಿ ನಟ್ಟಾಲಿಯಿಂ ಹವ್ವಳಿಸುತ್ತಂ ನೋಡಿ (ತ್ರಿಪುವಿ. ೨೭-೭೦); ಬಟ್ಟಲೊಳ್‌ವಿಡಿದ ಮಧುರಸವನಾ ಪೇಕ್ಷೆಯಿಂ ನಟ್ಟಾಲಿಯಿಂದೀಕ್ಷಿಸಲ್ (ಜಿಬಪು. ೧೦-೭೨); ಕಟ್ಟಿದಿರೊಳೊಂದು ಚಟಕೆ ನೀಡದೊಳಿರ್ದುಂ ಕಿಱುಮಱಿಯಂ ಕುಟುಂಕಿತ್ತು . . . ಲಲ್ಲೆಗೆಯ್ದುದಂ ನಟ್ಟಾಲಿಯೊಳಭೀಕ್ಷಿಸಿ ಮಕ್ಕಳ ಬಯಕೆಯಿಂ ಜಾನಕಿ ಸಖಿಗಿಂತೆಂದಳ್ (ರಾಮಾಶ್ವ. ೧೮-೩); ನೆತ್ತಿ ಮುಸುಕಿನ ಕೈಯ ಗಲ್ಲದ ಕುತ್ತದಲೆ ನೆಟ್ಟಾಲಿಗಳ ಚಲಚಿತ್ತರಿದ್ದುದು ಸಕಲ ನಾಯಕವಾಡಿ ದುಗುಡದಲಿ (ಕುಮಾಕ್ರೋ. ೪-೪). ನಟ್ಟು ನಿಲ್ = ಸ್ಥಿರವಾಗಿ ನಿಲ್ಲು: ಅಚಲವಾಗಿ ನಿಲ್ಲು: ಆವೆಡೆಯೊಳಂ ವಿಕ್ರಮಂ ಕ್ರಮಮೆನಿಸಿದುದಱಿಂ ಪರಾಕ್ರಮಧವಳನುಂ ಎಂತಪ್ಪ ಸಂಗ್ರಾಮದೊಳಂ ಪೋಗದೆ ನಟ್ಟು ನಿಲ್ವುದಱಿಂ ಸಮರೈಕ ಪೋರುವುಂ (ಪಂಪಭಾ. ೧೪-೩೭ವ). ನಡೆ ದಿಟ್ಟಿಸು = ನೆಟ್ಟನೋಟದಿಂದ ನೋಡು; ದುರುಗುಟ್ಟಿಕೊಂಡು ನೋಡು: ಪರಸ್ಪರರನ್ನು ನುಂಗಿಕೊಳ್ಳಲೆಂಬಂತೆ ಕೆಂಡಗಣ್ಗಳಿಂದಿವರಂ ನಡೆ ದಿಟ್ಟಿಸುತ್ತಿರುವುದು ಇವಂಗುಳ್ಳ ಪೂರ್ವಪರಿಚಯವನ್ನು ಬಿಟ್ಟಾಡಿ ಕುಡುತ್ತಿದೆ (ಮಂತ್ರಶ. ೨೨-೬). ನೆಟ್ಟಗಣ್ಣು ಬೀಳು = ಗುಡ್ಡೆ ಅಲುಗಾಡದಿರು; ಸಾವು ಸಮೀಪಿಸು.

[ದೇ.॥ ತಮಿ. ನಟು; ಮಲ. ನಡು; ಕೊಡ. ನಡಿ]

ನಡು₂ (ನಾ). ೧. ಮಧ್ಯಭಾಗ; ಕೇಂದ್ರ: "ನಡು–ಸಂಸ್ಥಾಪನೇ, ಮಧ್ಯೇಚ" (ಶಮಧಾ); "ಮಧ್ಯಮಿಯಮೆನೆ ಮಧ್ಯಮೆನೆ ನಡುವಕ್ಕು" (ಮಂಗರಾ. ೧೩೫-೩೮); ಪೂವಿನ ಪಿಪ್ಪರಗೆ[ಯ ನಾಲ್ಕುದೆಸೆಯ ಪೊಲೆಮೇರೆಯಂ ನ]ಡು ಸರಿಯಾಗಿ ನಡದು[ಂ]ಕೊಟ್ಟರ್ (ಸೌಇಇ. XI-i, ೯-೨೪; 862); ಕಡೆವಿಡಿದು ಬಳಸಿ ನೀರಿರೆ ನಡು ಬತ್ತಿದ ಕೆಱೆಯನಿಂತು ಕಂಡುದಱಿಂದಂ ನಡು ನಾಡೊಳಱಂ ನೆಲಸದೆ ಕಡೆಯೊಳ್ ನೆಲೆಗೊಳ್ಗುಂ (ಅದಿಪು. ೧೫-೪೦); ಎತ್ತೆತ್ತಂ ನೋಟ್ಟಡೆಂತುಂ ಕಡೆ ನಡು ಮೊದಲೆಂಬೀ ವಿಭೇದಂಗಳಂ ತೋಱುತ್ತಿಲ್ಲಂತೆಂದೆನಿಪ್ಪಾಗಸದೊಳ್ (ಬಾಧಪು. ೧-೬೦); ಕರಗಸದ ನಡು ಬಡವಾದರೆಯು ಕೊಱೆದಿಕ್ಕದೇ ತರುವ (ಸಂಭಪ. ೨೦-೨೯); ತುದಿ ಮೊದಲು ನಡುವೆಂಬ ಲಯದಭ್ಯುದಯವೆಂಬ ವಿಕಾರಗಳು ಸೋಂಕದ ಸನಾತನಗಾಯ್ತು ಲೀಲೆ ಮನುಷ್ಯರೂಪಿನಲಿ (ತೊರರಾ. ೧-೮-೭೨). ೨. ಶರೀರದ ಮಧ್ಯಭಾಗ; ಸೊಂಟ; ಟೊಂಕ: "ಅವಲಗ್ನಂ, (ವಿ)ಲಗ್ನಂ, ಮಧ್ಯಂ, ಮಧ್ಯಮಂ – ಈ ೪ ನಡು" (ಹಲಾಯು. ೮೫-೩೬೩); ಬಡಿ ಕೊಲ್ ಕಟ್ಟಿಱಿ ಮುಱಿ ಕಡಿ ನಡುವಂ ಕೊಱೆ . . . ನುಂಗೆಂದು ಮುಸುಱಿ ನ್ಹಾರಕರಾಗಳ್ (ಮಡ್ಯಾರಾ. ೧೨೭-೧೦); ಆಕೆಯ ನಡುವಿನ ಬಡತನಮುಂ ಪಗೆವರ ಸಿರಿಯು ಮೊಡನೊಡನೆ ಕೆಟ್ಟುವು (ಪಂಪಭಾ. ೧-೧೪೧ ವ); ನಡುವುಡಿವನ್ನಮೇಱಿ ಬರಿಯೆಲ್ಬುಡಿವನ್ನಗಮೊತ್ತಿ . . . ಉರಮನಿರ್ಬಗಿಯಾಗಿರೆ ಪೋಟ್ದು (ಗದಾಯು. ೫-೪); ತಡೆಯದೆ ಮಗಳೆಂದಳಿಯನ ನಡುವಂ ತಟ್ಕೈಸಿಕೊಂಡು ಹಿತ್ತಲ ದೆಸೆಯೊಳ್ ಬಿಡದೋಡುವಾಕೆ ಕಾಣದೆ ಕೆಡೆದಳ್ತಲ್ಲಣದಿನಾಗಳೆಂಜಲ ಕುಟಿಯೊಳ್ (ಧರ್ಮಾಮ್ಯ. ೨-೪೪); ಸಿಂಗದ ನಡು ಮುಱಿಯಲಾ ಸಿಂಗವೇನು ಬಾತೆ (ಬಸವ. ೬೩೪); ಸಡಿಲೆ ಮುಡಿ ಬಳ್ಕೆ ನಡು ದಡದಡಿಸುತ್ತಿರೆ ತೊಡೆಗಳುಣ್ಮೆ ನೂಪುರನಿನದಂ (ಕುಸುಮಾ. ೮-೯); ಕಾಲು ಖಂಡಿಸಿ ಬೀಳೆ ಕರುಳಿನ ಮಾಲೆಯೊಳು ತೊಡಕಿದುವು ಹಣೆದದ ಬಾಳೆಯಂದದೊಳುಡಿಯೆ ತೊಡೆ ನಡು ಮುಱಿಯೆ ಕಟಿ ಕೆದಱೆ (ಕುಮಾಭೀ. ೪-೩೦); ಬೈಗಿನ ಕೆಂಬಿಸಿಲ ಬೆಳಗಿಂಗೆ ದೊರೆವರ್ಪ ಪೀತಾಂಬರದುಡೆ ನಡುವಿನೊಳ್ ವಿರಾಜಿಸೆ (ರಾಮಾಶ್ವ. ೬೯-೨೧).

ನಡುಕಲ = ಮಧ್ಯದ; ನಡುವೆಯ: ನಡುಕಲ ಹೆಂಡತಿಯಾದ ಕೈಕೆಯ ಹೊಟ್ಟೆಯಲ್ಲಿ ಭರತ ಹುಟ್ಟಿದನು (ನೀತಿಚಿಂ. I, ೧೩); ನಾನು ಇನ್ನೂ ಮಗುವಾಗಿದ್ದಾಗ, ನನ್ನ ನಡುಕಲ ಅಣ್ಣ ಸಿವಿಲಿಯನ್ ಆಗಿ ನಮ್ಮ ದೇಶಕ್ಕೆ ಹಿಂತಿರುಗಿ ಬಂದಿದ್ದನು (ನಿಬಂಧ. II, ೩೪); ಹಿರಿಯವನು ಒಂಬತ್ತು, ನಡುಕಲವನು ಆರು, ಕಿರಿಯವನು ಎರಡು ಆನೆಗಳನ್ನು ಹಂಚಿಕೊಂಡರು (ಕಸಾಪ. ೧-೧೨೯). ನಡುವಣ = ಮಧ್ಯಭಾಗಕ್ಕೆ ಸಂಬಂಧಿಸಿದ; ಮಧ್ಯದಲ್ಲಿರುವ: "ಮಧ್ಯಮಂ, ಮಧ್ಯಮಿಯಂ, ಮಧ್ಯಂದಿನಂ – ಈ ೩ ನಡುವಣದು" (ಹಲಾಯು. ೧೩೭-೯೦); ಸದಭಿಸ್ತುತಮಪ್ಪೊಂಕುಂದದ ನಡುವಣ ನಾಡೆ ನಾಡೆ ಕನ್ನಡದ ತಿಱಳ್ (ಕವಿರಾ. ೧-೩೭); ಕೌರವರ್ ಕಡಲ ನಡುವಣ ಪರ್ವತದಂತಳ್ಳಾಡೆ (ಪಂಪಭಾ. ೭-೧೫ ವ); ಎರಡುಂ ಕೆಲದೊಳು ಮಿರ್ವರು ಮರಸಿಯರಿರೆ ಸೊಗಯಿಸಿರ್ದನವನಿಪನೆರಡುಂ ಕರಿಣಿಗಳ ನಡುವಣೆಡೆಯೊಳ್ ಕರೀಂದ್ರನೊಪ್ಪುವವೊಲ್ (ಶಾಂತಿಪು. ೧-೭೫); ಪೊಸವಂದರ ನಡುವಣ ಪೂವಿನೆಸಟ ಪಾಸಿನೊಳಿರ್ದಳ್ (ಕಾದಂಉ. ೨೨೩); ಕಡೆಯ ದಳಂಗಳೆ ವಜ್ರಂ ನಡುವಣ ಕರ್ಣಿಕೆಯೆ ಕೇವಣಂ (ಗದಾಯು. ೬-೪೩); ನಕ್ಷತ್ರಗಣಂಗಳ ನಡುವಣ ಚಂದ್ರಬಿಂಬದಂತಿರ್ದ ನಂಬಿಯಣ್ಣನಂ ಕಂಡು (ನಂಬಿರ. ೨-೪೮); ದಿಗ್ವಾಚಿಯ ಅಣ್ಗೆ . . . ನಡುವಣಂ, ಕಡೆಯಣಂ . . . 'ನಡು' ಎಂಬುದು ಶರೀರಮಧ್ಯಮಂ ಕುಱಿತು ದಿಗ್ವಾಚಕಮಲ್ತು, ಮಧ್ಯಮಂ ಕುಱಿತು ದಿಗ್ವಾಚಕಂ (ಶಮದ. ೧೧೦ ಪ್ರಯೋ); ಸುಳಿಯ ಬಹುದಂಬುಧಿಯ ನಡುವಣ ಸುಳಿಯೊಳಗೆ . . . ಕಾಣೆನು ಗೆಲುವ ಹದನನು ಮಗನೆ ಪದ್ಮವ್ಯೂಹದೊಡ್ಡಣೆಯ (ಕುಮಾಕ್ರೋ. ೪-೩೭). ನಡುವಣಂ = ನಡುವೆ ಇರುವವನು; ಮಧ್ಯದವನು: ಪುದಿದೀ ಶ್ವೇತಾತಪತ್ರೋತ್ಕರದ ನಡುವಣಂ ವಜ್ರದಂತಂ ಸಮಂತೆತ್ತಿದ ಪಿಂಭಚ್ಛತ್ರಪಂಡಂಗಳ ನಡುವೆಸೆವಂ ವಜ್ರಬಾಹುಕ್ಷಿತೀಶಂ (ಅದಿಪು. ೪-೨೫); ಮೇಗಣಂ, ಕೆಟಗಣಂ, ನಡುವಣು (ಶಮದ. ೧೧೦ ಪ್ರಯೋ). ನಡುವಣಕ್ಕರ = [ಛಂದ] ಅಂಶಗಣದ ಒಂದು ಪದ್ಯಜಾತಿಯ ಹೆಸರು; ಐದು ಬಗೆಯ ಅಕ್ಕರಗಳಲ್ಲಿ ಒಂದು.– ನಡುವಿನದು: ಜಳಜಸಂಭವಗಣಮಕ್ಕೆ ಮೊದಲೊಳೆ . . . ಕಾಮಬಾಣಾವಳಿಯ ಪಾಂಗೆಯ್ದೆ ಗಣಮಕ್ಕೆ ನಡುವಣಕ್ಕರಕೆ ಸಖೀ (ಛಂದೋಂಬು. ೫-೨೪೪); ನಾಗವರ್ಮನು ೫ ಅಕ್ಕರಗಳನ್ನು ಹೇಳಿರುವನು:– ಪಿರಿಯಕ್ಕರ, ದೊರೆಯಕ್ಕರ, ನಡುವಣಕ್ಕರ, ಎಡೆಯಕ್ಕರ, ಕಿರಿಯಕ್ಕರ (ಕೈಪಿಡಿ. ೧೨೫); ನಡಂವಣಕ್ಕರದ ಗಣಯೋಜನೆ . . . ಮೊದಲು ಒಂದು ಬ್ರಹ್ಮ, ನಡುವೆ ಮೂರು ವಿಷ್ಣು, ಕೊನೆಯಲ್ಲಿ ಒಂದು ರುದ್ರಗಣ (ಛಂದೋವಿ. ೧೩೯). ನಡುವಲ, ನಡುವಳ=ಮಧ್ಯದ; ನಡುಕಲ: ನಡುವಲವನು ಮಾರಯ್ಯ ಮನೆಯಲ್ಲಿದ್ದಾನೆ (ದಾನಚಿಂ. ೮೩); ಹಿರಿಯ ಮಗನ ಕಾಲ ಮುಱಿದು ನಡುವಳ ಮಗನ ಕಯ್ಯ ಮುಱಿದು ಕಿಱಿಯ ಮಗನ ಬಾಯ ಮುಚ್ಚಿ (ಅಱಿಮಾ. ೧೪೬-೫೫೯).

[ದೇ.॥ ತಮಿ. ನಟು; ಮಲ. ಕೊಡ. ತುಳು. ನಡು; ತೆಲು. ನಡು, ನಡಿ; ಕೊಲಾ. ನಡುಮ್; ನಾಯ್ಕಿ. ನಱುಮ್; ಪರ್ಜಿ. ನಱುಬ್]

△ ನಡುಂಗು 'ನಡುಗು₁' ನೋ.

ನಡುಕ (ನಾ). ೧. (ಚಳಿ, ಭಯ, ಜ್ವರ ಮುಂತಾದ ಕಾರಣಗಳಿಂದ) ಕಂಪಿಸುವಿಕೆ; ಅದಿರುವಿಕೆ; ನಡುಗುವಿಕೆ; ಕಂಪನ: "ವೇಪಥುಃ, ಕಂಪಃ – ಈ ೨ ನಡುಕಂ" (ಹಲಾಯು. ೯೮-೪೪೩); "ವೇಪಥು ಕಂಪಮೆನೆ ನಡುಕಮಕ್ಕುಂ" (ಮಂಗರಾ. ೧೦೩-೨); ಆಗಳಾದಿತ್ಯನಾಕೆಯ ಮನದ ಶಂಕೆಯುಮಂ ನಡುಗುವ ಮೆಯ್ಯ ನಡುಕಮುಮಂ ಕಿಡೆ ನುಡಿದಿಂತೆಂದಂ (ಪಂಪಭಾ. ೧-೯೨ ವ); ಶೀತಂ ನಡುಕಂ ಬೆಮರುದ್ಭೂತಂ ತಲೆಬೇನೆ . . . ವಾತಜ್ವರಚೇಷ್ಟೆ ನೋಯೆ ಕಿವಿದೋಳುಗೆಗಳ್ (ಕಲ್ಯಾಕಾ. ೩-೭); ಕಾಲೊಳ್ ನಡುಕಂ ಮೆಯ್ವರ್ಚೆ ಗಂಟಲ್ ಕುಸಿದು ಕಿವಿಯೆಬಲ್ತಂದು ನಿಂದಿರ್ದುದೋರೊಂದೆಡೆಯೊಳ್ ತಾಱಲ್ಗಳೊತ್ತಂಬಿಡಿದು ಮೃಗಮೃಗೀವೃಂದಮೋರಂದ

ದಿಂದಂ (ಚಂದ್ರಪು. ೪-೪೭) ; ಭಾವದೊಳ್ ಕ ಪ್ರತ್ಯಯಮುಂಟು–ಉಡುಕಂ, ನಡುಕಂ – ಎಂಬಂತೆ (ಶಮದ. ೨೦೨ ಪ್ರಯೋ) ; ಶಿರದ ಗಂಗೆಯ ತೂಱಿ ತುಹಿನಾಕರನನಂಬರಕಿಟ್ಟು ಹಣೆಗಣ್ಣುರಿಯನೆಬ್ಬಿಸಿ ತನುವನೊಡ್ಡಿದನಭವ ನಡುಕದಲಿ (ತೊರರಾ. ೩-೨-೩) ; ನಡುಕಂ ಕೈಮೀಱಿ ದಂತಚ್ಛದಮೊಡೆ ದುಹುಹುಧ್ವಾನಮುಂ ಪೊಣ್ಮೆ . . . ಪಾಂಥರ್ತೊಡೆ ತೋಳ್ಗಳ್ಕೂಡೆ ಜಾನು ಪ್ರಹಿತಶಿರರದೇನಿರ್ದರೋ ಶೀತಭೀತರ್ (ರಾಜಶೇ. ೯-೨೨). ೨. ಆಂಜಿಕೆ ; ಭಯಂ ತಲ್ಲಣ ; ಭೀತಿ : ಮೆಲ್ಲೆರ್ದೆಯ ನಡುಕಮಂ ಮಾಣಿ ಸಲ್ಸಂಭ್ರಮಿಸುವಂತಿರಾ ಕಂಪಿಪವಯವಂಗಳುಂ (ವರ್ಧಪು. ೬-೧೨ ವ) ; ತುರಗಾಕಾರದ ಶೈಳಮನಿರದಡರ್ದೇಱಿದೊಡೆ ಬೆಚ್ಚಿ ನಡುಕದಿನಾಗಳ್ ತುರಗಾಶ್ರಮನುಚ್ಚೈಶ್ರವತುರಗೋಪಮನಿತ್ತು [ತ್ತ] ದೊಂದು ತುರಗಮನಿತ್ತಂ (ಬಂಹರಿ. ೮-೩೮) ; ಸೌಂದರನುಂ ತುಂಬುರನುಂ ಬೆಗಡುಗೊಂಡು ಬೆಬ್ಬಳೆವೋಗಿ ನಡುಕದ ಮಳೆ ಕಱಿದು . . . ಕೌತುಕರಸದೊಳವಗಾಹಮಿರ್ದು (ನಂಬಿರ. ೦೮-೪೩) ; ಶ್ರೀಮಂತರ ಮನೆ ಅಂದರೇನೇ ನನಗೆ ನಡುಕ ಬರುತ್ತದೆ (ಪತಿ. ೪) ; ಈ ಮಾಧರಿಯ ಬೈಗುಳಗಳನ್ನು ಎಂದೂ ಕೇಳದ ಜ್ಞಾನಾಂಬೆಗೆ ನಡುಕವುಂಟಾಗಿ ಜ್ವರವೂ ಬಂದು ಗರ್ಭಕ್ಕೆ ಧಕ್ಕೆ ಬರುವಂತಾಗಿ ಬಿಟ್ಟಿತು (ಪ್ರತಾಪ. ೪೧). ೩. (ಆಲಂ) ಚಂಚಲವಾದುದು ; ಸ್ಥಿರವಲ್ಲದುದು : ಪೊಲಸಿನಂತಶುಚಿಯಪ್ಪ ವಾತದಂತೆ ನಡುಕಮಪ್ಪ . . . ಕೊಡದ ನೀರಂತೆ ಪೆರ್ಚಿಸಲರಿದಪ್ಪ ಸಂಸಾರಮಂ ನಂಬಿ ದರ್ಶನಮುಮಂ ವ್ರತಮುಮಂ ಕೆಡಿಸುವುದೆಗ್ಗಿಕೆ (ಧರ್ಮಾಮ್ಯ. ೩-೧೮೬). ೨. ೩ : ನಡುಕಮುಮಾಱಡಿಯುಂ ಚೂತ ಮಂಜರಿಯೊಳ್ (ಎಇ. XIII, ೩೩೨-೪೩ ; 929).

[< ನಡುಗು$_1$./ತಮಿ. ನಟುಕ್ಕ]

ನಡುಕಂಗಿಡು (ಕ್ರಿ). ಕಂಪನ ನಿಲ್ಲು ; ನಡುಗುವಿಕೆ ಇಲ್ಲದಾಗು : ಪದುಳಿಸ ದಂಗಮೆಟ್ಟಱದ ಕಣ್ಮಲರ್ . . . ನಡುಕಂಗಿಡದೂರು ಗಂದೆಯೇಟದ ಕರಘಾತಮೊಪ್ಪೆ ಸುಸಿಲಿಂ ತಣಿದೊಯ್ಯನೆ ಜಾರೆ ಜಾಱಿದಳ್ (ಲೀಲಾವ. ೩-೦೩). [ನಡುಕ + ಕಿಡು (< ಕೆಡು$_1$)]

ನಡುಕಂಗೊಳ್ (ಕ್ರಿ). ೧. ಕಂಪಿಸು ; ನಡುಗು. ೨. ಭಯವನ್ನು ಹೊಂದು ; ಹೆದರು : "ಸೆಡೆದನೆಂದುಂ. ನಡುಕಂಗೊಂಡನೆಂದುಂ . . . ತೆಮರ್ತನೆಂದುಂ–ಈ ರ ಭಯಂಗೊಂಡಮ" (ಕಶಸಾ. ೫೬-೨೨೫) ; ಇಂದ್ರಂ ವಹ್ನಿ ಧರ್ಮಂ ನಿರುತಿ ಜಲಧಿಪಂ ವಾಯು ವಿತ್ತೇಶನೀಶಂ ನಡುಕಂಗೊಳ್ದಂ ಸುರುಳ್ವಂ ಸುಗಿವನಗಿವನುಳ್ಳಳ್ಕುವಂ ಬಳ್ಕುವಂ ಪಾವಡರ್ದಂತಿರ್ವಂ ಬೆಮರ್ವಂ ಜಯವೊಡೆದ ರವಕ್ಕದ್ಭುತಂ ಕಂಸಚಾಪಂ (ಜಗವಿ. ೬-೩೦).

[ನಡುಕ + ಕೊಳ್$_1$]

ನಡುಕಂಬೆರು, ನಡುಕವೆರು (ಕ್ರಿ). ೧. ನಡುಕವನ್ನು ಹೊಂದು ; ಕಂಪಿಸು ; ನಡುಗು. ೨. ಭೀತಿಯನ್ನು ಹೊಂದು ; ಹೆದರು ; ಭಯಗೊಳ್ಳು : ನಡುಕಂಬೆತ್ತಿರ್ಪಳಂ ಸೋಂಕುವೆಯಡಿಗಡಿಗಂ (ಶಾಕುಂತ. ೦೦-೨೪). **ನಡುಕವೆರು** :೧. ನಡುಕವೆತ್ತಿದ ಅವಳ ಕೈಬೆರಳುಗಳು . . . ಬಳೆಗಳನ್ನು ತೆಗೆಯಲೊಲ್ಲದೆ ಹೋದುವು (ಭಾರವೀ. ೩).

[ನಡುಕ + ಪೆರು$_1$ (< ಪೆಱು$_1$)]

ನಡುಕಟ್ಟು$_1$ 'ನಡುಗಟ್ಟು$_1$' ನೋ.

ನಡುಕಟ್ಟು$_2$ 'ನಡುಗಟ್ಟು$_2$' ನೋ.

ನಡುಕಡಲು 'ನಡುಗಡಲ್' ನೋ.

ನಡುಕವೆರು 'ನಡುಕಂಬೆರು' ನೋ.

ನಡುಕಾನನ (ನಾ). ಅರಣ್ಯದ ಮಧ್ಯಭಾಗ ; ನಟ್ಟಡವಿ : ನಡೆದರು ಪುಣ್ಯದ ನಿಜಪುತ್ತಳಿಯಂತೆ . . ನಡುಕಾನನವ ಹೊಕ್ಕರು ಉಗ್ರದಡವಿಯ ಮೃಡ ಬಲ್ಲನವರ ದುಃಖಗಳ (ಹರಿಸಾಂ. ೩-೩೮). [ನಡು$_2$ + ಕಾನನ]

ನಡುಕೇರಿ 'ನಡುಗೇರಿ' ನೋ.

ನಡುಕೋಣೆ (ನಾ). ಮನೆಯ ನಡುವಿನಲ್ಲಿರುವ ಕೋಣೆ ; ನಡುಮನೆ : ನರ್ಸಿಗೆ ಹೊರಗಿನಿಂದ ಉತ್ತರ ಬಾರದಿರಲು, ಅವಳಾಗಿಯೇ ನಡುಕೋಣೆಗೆ ಬಂದು ನೋಡಿದಳು (ಒಡ್ಡಿಉ. ೪೯). [ನಡು$_2$ + ಕೋಣೆ$_2$ (< ಕೋಣ್)]

ನಡುಕೋಲ್ 'ನಡುಗೋಲ್' ನೋ.

ನಡುಗಂತಿ (ನಾ). ಎಳಗಂದಿಯಾಗಿರುವ ಸ್ಥಿತಿಯನ್ನು ದಾಟಿದ ಹಸು ; ಕರಾವಿನ ಮಧ್ಯಕಾಲದಲ್ಲಿರುವ ಹಸು : ನಡುಗಂತಿಯಾದ ಹಸತಿಗೆಯ ಹಸುವಿನ ಮೊಸರು ಕಡೆದ ಹೊಸ ಬೆಣ್ಣೆಯಂ ಸೋದಿಸಿಯೊಲೆಯೊಳೆತ್ತಿ... ತುಪ್ಪಮಂ ಹಸಮಾಳ್ಪುದು (ಸೂಪಶಾ. ೨-೧೭). 'ಎಳೆಗಂತಿ' ಪರಾ.

[ನಡು$_2$ + ಕಂತಿ$_1$ (< ಕಂದಿ$_1$)]

ನಡುಗಂಬ 'ನಡುಗಂಭ' ನೋ.

ನಡುಗಂಭ, ನಡುಗಂಬ (ನಾ). ಮಧ್ಯಭಾಗದಲ್ಲಿರುವ ಕಂಭ,–ಸ್ತಂಭ : ಅವಳ ವಿಪರೀತವೇಷಂ ತನಗೆ ರೋಷಮನೀಯೆ ಸಾಯೆ ಸದೆಬಡಿದು ಮನೆಯ ನಡುಗಂಭದೊಳಡಸಿ ಕಟ್ಟಿ ಕಳ್ಳಸೊರ್ಕಿನೊಳಮವಳ ಪೊರ್ಕುಳಿಯೊಳಂ ಬಟಲ್ದು ನಿದ್ರಿತನಪ್ಪುದುಂ (ಪಂಚತಂ. ೭೪-೨೧). **ನಡುಗಂಬ** : ಸುತ್ತುಮೆಟ್ಟಲು ಹಂತದ ನಡುಗಂಬ (Newel. ಇಂಕನಿ).

[ನಡು$_2$ + ಕಂಭ]

ನಡುಗಟ್ಟು$_1$, ನಡುಕಟ್ಟು$_1$ (ಕ್ರಿ). ೧. ಸೊಂಟಕ್ಕೆ ಬಟ್ಟೆ ಮುಂತಾದುವನ್ನು ಸುತ್ತು.–ಕಟ್ಟು : ಎಲೆ ಮರುಳೆ, ನಡುಗಟ್ಟಿ ವೀರಮಂಡಿಯನಿಕ್ಕಿ ಬಲಗೆಯ್ಯನೆಳೆದು ಕಿವಿಗಾನಿಸುವೆ ಸರಳಂ ! (ಗಿಳಿವಿಂ. ೨೮-೦೭). ೨. (ಆಲಂ) ಟೊಂಕಕಟ್ಟು ; ಸಿದ್ಧವಾಗು ; ಸಜ್ಜಾಗು : ರಣದಲ್ಲಿ ನಡುಗಟ್ಟಿ ಹಿಮ್ಮೆಟ್ಟದೊಡಲೊಡ್ಡಿ ಯತ್ನದಲಿ ಬಲುಬಳಲಿ (ವಿಸೀಗೀ. ೫೩-೦೭). **ನಡುಕಟ್ಟು** : ೨. ಹೆಜ್ಜೆಹೆಜ್ಜೆಗೆ ನಿಧಿಯ ಕೊಪ್ಪರಿಗೆ ಕಾದಿಹುದು ... ಎಡವಿಬೀಳುವದೊಂದೆ, ಹಿಡಿಡು ಅಗೆದವರಿಲ್ಲ ನಡುಕಟ್ಟಿ ನಿಂತವ ು ಪಡೆಯಬಹುದು (ನೆಲಮು. ೨೦-೨೦).

ನಡುಗಟ್ಟಿ ನಿಲ್ಲು, ನಡುಕಟ್ಟಿ ನಿಲ್ಲು = ಟೊಂಕ ಕಟ್ಟಿ ನಿಲ್ಲು ; ಸಿದ್ಧವಾಗಿ ನಿಲ್ಲು ; ಸಜ್ಜಾಗು : ನಾವೀಗ ನಡುಗಟ್ಟಿ ನಿಲ್ಲಬೇಕಾದುದು ನಮ್ಮ ಧರ್ಮ (ಸಿವತಿ. ೬೩) ; ಅವುಗಳ ಪಕ್ಕದಲ್ಲಿ ನಂಜರಾಜಯ್ಯನ ನಚ್ಚಿನ ಜ್ಯೋತಿಷಿ ಉಪಾಧ್ಯಾಯ ನಡುಕಟ್ಟಿ ನಿಂತಿದ್ದ (ಚಿದೇವ. ೦೩೨).

[ನಡು$_2$ + ಕಟ್ಟು$_1$]

ನಡುಗಟ್ಟು$_2$, ನಡುಕಟ್ಟು$_2$ (ನಾ). ಸೊಂಟಕ್ಕೆ ಕಟ್ಟುವ ಬಟ್ಟೆ ಮುಂತಾದ ಪಟ್ಟಿ ; ಸೊಂಟಪಟ್ಟಿ : ತೊಟ್ಟಿಸೆವಾ ಕರಿಯ ನಡುಗ [ಪಾಠಾಂ. ಕ]ಟ್ಟಿನಂಗಿಗೆವೆರಸಿದ ತಲ್ಲೇಖವಾಹನುನ್ನತದೇಹಂ (ವರ್ಧಪು. ೩-೧೩). **ನಡುಕಟ್ಟು$_2$** : ಬೆಳ್ಳಿಯ ನಡುಕಟ್ಟು–ನೀಲಿಯ ಮೇಲಂಗಿ (ಆರ್ಯಕ. ೦) ; ಪ್ರತಿಯೊಬ್ಬನೂ ತನ್ನ ನಡುಕಟ್ಟಿನಲ್ಲಿ ಆವಾಗಲೂ ಒಂದು ಚೂರಿಯನ್ನೋ, ಕಠಾರಿಯನ್ನೋ ಇಟ್ಟೇ ಇರುತ್ತಿದ್ದನು (ರಾಜಾಮ. ೨೦) ; ಕಾಡುಕೋಳಿಗಳನ್ನೂ, ಕೆಲವು ವೇಳೆ ಬೇರೆ ಪ್ರಾಣಿಗಳನ್ನೂ ಕೊಂದು ನಡುಕಟ್ಟಿನಲ್ಲಿಟ್ಟುಕೊಂಡು ಬರುತ್ತಿದ್ದನು (ಮಲೆನಾ. ೦೨೮) ; ಆಗದೋನೆ ಭೋಗದೋನೆ ನಾಗರಾ ನಡುಕಟ್ಟಿನೋನೆ (ಹಳ್ಳಿಬಾ. ೩೭). [ನಡು$_2$ + ಕಟ್ಟು$_3$]

ನಡುಗಡಲ್, ನಡುಕಡಲು, ನಡುಗಡಲು (ನಾ). ಸಮುದ್ರದ ಮಧ್ಯಭಾಗ ; ನಡುನೀರು : ನಡುಗಡಲೊಳ್ ಪಱುಗೋಲಂ ನಡೆಯಿಸುವಂಬಿಗನಂತೆ (ಧರ್ಮಾಮ್ಯ. ೬-೨೦೯); ಇಂತು ನಡುಗಡಲೊಳಾಳುವಂಗೆ ತೆಪ್ಪವಾಗುತ್ತೆ ಪಿಂಗುವರೆ (ಬಸರ. ೪-೩೦). **ನಡುಕಡಲು** : ನಡುಕಡಲಿನಲ್ಲಿ ಮುಳುಗುತ್ತಿದ್ದವನಿಗೆ ತೆಪ್ಪವಾಗಿ, ಕೈಬಿಡುವಿರಾ ? (ತುಂಗಭ. ೪೧). **ನಡುಗಡಲು** : ಎಲೆ ವಿಧಾತನೆ ವೃಥಾ ಹೊಳೆಯ ನಡುಗಡಲೊಳಗೆ ಸಾವೆಯಂ ಮುಳುಗಿಸಿದೆಲೈ (ತುರಂಗ. ೨-೨೭). [ನಡು$_2$ + ಕಡಲ್$_2$]

ನಡುಗಡಲು 'ನಡುಗಡಲ್' ನೋ.

ನಡುಗಡ್ಡೆ (ನಾ). ಸುತ್ತಲೂ ನೀರಿನಿಂದ ಸುತ್ತುವರಿದ ಭೂಪ್ರದೇಶ; ದ್ವೀಪ: "ಅಂತರೀಪ – ನಡುಗಡ್ಡೆ, ದ್ವೀಪ" (ಗಂಗಾಮಾ. ೨); ದಕ್ಷಿಣ ಮಹಾಸಾಗರದಲ್ಲಿ ಹಲವು ನಡುಗಡ್ಡೆಗಳುಂಟು (ಮುಂಬಯಿ. ೪-೧೦೩); ಆ ನಡುಗಡ್ಡೆಯ ಅಧಿರಾಣಿಯಿರಬೇಕು ಆ ಅಪೂರ್ವ ವಿಚಿತ್ರರೂಪಸಿ (ಸಿಡಿಲು. ೩೬); ಒಂದು ಕಾಲಕ್ಕೆ ಹಿಂದೀಉಪಸಾಗರದಲ್ಲಿದ್ದು, ಈಗ ಮುಳುಗಿಹೋದ 'ಲೆಮೂರಿಯಾ' ಎಂಬ ನಡುಗಡ್ಡೆಯಿಂದ ಇವರು ಬಂದವರು (ಧಾಪಾಶಾ.೬೬); ದೋಣಿಯು . . . ರಘಾಂಖಿಯೋಬಾರ ನಡುಗಡ್ಡೆಯ ದಂಡೆಗೆ ಸ್ವಲ್ಪ ಹೊತ್ತಿನ ಮೇಲೆ ಬಂದು ತಲುಪಿತು (ಮೇದಿಮ. ೧೦೦).

[ನಡು$_೨$ + ಗಡ್ಡೆ]

ನಡುಗಣ್ (ನಾ). ೧. ಕಣ್ಣಿನ ಮಧ್ಯಭಾಗ. 'ನಡುಗಣ್ಣಿಳಗು' ಪರಾ. ೨. (ಹಣೆಯ) ಮಧ್ಯದಲ್ಲಿರುವ ಕಣ್ಣು; ಹಣೆಗಣ್ಣು: ಸುರನದಿಯ ಕುಂಡಲದ ನಡುಗಣ್ಣ ಪಂಚಾಸ್ಯದೀರ್ಘದುಭುಜದ . . . ನಿಜದ ಮೂರ್ತಿಯಂ ತೋಱಿಸಿದನು (ಸಿದ್ಧರಾ. ೨-೩೬); ಏಕಿಲ್ಲಂಜಿ ನಂಜುಂಡಂ . . . ಪಣೆಯ ನಡುಗಣ್ಣ ಕಿಚ್ಚನುಜ್ಜಳಿಸಿ ಸಜ್ಜನ ಬೆಂಬೂದಿಯಂ ಮೆಯ್ಗೆ ಪೂಸಿ ದಟ್ಟಪೊವಲಂ ಪೊದೆದಗಜೆವೆರಸು ಬೆರೆವೊಡಲೊಳಿರ್ದಂ (ರಾಮಾಶ್ವ. ೦೦೩-೩). [ನಡು$_೨$ + ಕಣ್]

ನಡುಗಣ್ಣು, ನೆಡುಗಣ್ಣು (ನಾ). ಅತ್ತಿತ್ತ ಚಲಿಸದ ಕಣ್ಣು; ಒಂದೇ ಕಡೆಗೆ ಸ್ಥಿರವಾದ ದೃಷ್ಟಿಯುಳ್ಳ ಕಣ್ಣು; ಅಚಲವಾದ ನೋಟ: ನಿಟ್ಟಿಡಿಯಿಂದ ಹೋಗಿ, ಚೆನ್ನನಿಗೆ ನಿಂತು, ಆತನಿಗೆ ನಡುಗಣ್ಣಾಗಿದ್ದು (ಪುಂತ್ರಕ. ೮೨-೬). **ನೆಡುಗಣ್ಣು**: ನರಸಣ್ಣನು ನೆಡುಗಣ್ಣಾಗಿ ನೋಡುತ್ತ ನಿಂತುಬಿಟ್ಟನು (ನಡದಾ. I, ೪೩೬). [ನಡು$_1$ + ಕಣ್ಣು (< ಕಣ್)]

ನಡುಗಣ್ಣಿಳಗು (ನಾ). ಕಣ್ಣಿನ ಗುಡ್ಡೆಯ ಕಾಂತಿ; ಅಲಿಯಂ ಹೊಳಪು: ಸರಿಮೊಗಮಂ ನಸುಬಾಗಿ ಕರಂ ಭೂವರನಂ ಪೂರ್ದೇಱಿಸಿ ನಡೆ ನೋಡುವ ತರುಣಿಯ ನಡುಗಣ್ಣಿಳಗಾ ಯೆವೆಯಾ ಪೂರ್ಬನಡರಿ ಪರಿಯೆ (ಜಯಾಕಾ. ೯-೦೩). [ನಡುಗಣ್ + ಬೆಳಗು$_೨$]

ನಡುಗನ್ನಡ (ನಾ). ಮಧ್ಯಕಾಲದ ಕನ್ನಡ; ಹಳಗನ್ನಡ ಮತ್ತು ಹೊಸಗನ್ನಡಗಳ ನಡುವಿನ ಕಾಲದ ಕನ್ನಡ: ಈಗ ನಾವು ಬಳಸುತ್ತಿರುವ ಭಾಷೆ "ಹೊಸಗನ್ನಡ". ಇದಕ್ಕೆ ಹಿಂದೆ ಇದ್ದ ರೂಪವನ್ನು "ನಡುಗನ್ನಡ" ವೆನ್ನುತ್ತಾರೆ (ಕೃಟಿಪ. ೦); ಅನೇಕ ದೃಷ್ಟಿಗಳಿಂದ ಹನ್ನೆರಡನೆಯ ಶತಮಾನದ ಮಧ್ಯಭಾಗವನ್ನು ಒಂದು ಪರ್ವಕಾಲವೆಂದು ಕರೆಯಬಹುದು . . . ಭಾಷೆಯ ದೃಷ್ಟಿಯಿಂದ ನೋಡಿದರೆ ಹಳಗನ್ನಡವು ನಡುಗನ್ನಡವಾಗಿ ಸಂಕ್ರಮಣವಾಗುತ್ತಿದ್ದುದು ಆ ಕಾಲದಲ್ಲಿಯೇ (ಕಶಾಇ. ೭); ನಡುಗನ್ನಡ –ಹೊಸಗನ್ನಡ ಕವಿತೆಗಳಲ್ಲಿ ಮತ್ತು ಆಡುನುಡಿಯಲ್ಲಿ ನೀನು, ನಾನು, ತಾನು ಎಂದಿರುವಕ್ಕೆ ನೀ, ನಾ, ತಾ ಎಂಬಿವೂ ಸ್ವಾನುಗಳಾಗುತ್ತವೆ (ಸಂಕೋಧ. ೬೫). [ನಡು$_೨$ + ಕನ್ನಡ$_1$]

ನಡುಗಲ್ (ನಾ). ನಟ್ಟಿರುವ ಕಲ್ಲು; ನಿಲ್ಲಿಸಿರುವ ಕಲ್ಲು: ಮುಚ್ಚನ್ದಿನ್ನಡುಗಲ್ಲ ಪಡುವಯಾಲೆ ತಾಯನ್ದೆಕೆಱೆಯೆ ವಡಗಾಯ್ನಡುಗಲ್ಲ ಕೊತ್ತನ್ದೆಱೆಯೆ (ಎಕ. X (S), ಚಿಕ್ಕಲ. ೧೦೬-೬೪; ೪೬೦). [ನಡು$_೨$ + ಕಲ್$_3$]

ನಡುಗಾಡು (ನಾ). ಕಾಡಿನ ಮಧ್ಯಭಾಗ; ಅರಣ್ಯದ ಮಧ್ಯಪ್ರದೇಶ; ಕಾಡಿನ ಒಳಗಿನ ಪ್ರದೇಶ: ಹೊತ್ತಿಹ ಹೊಱಿಯಂ ನಡುಗಾಡಿನಲ್ಲಿ ಮಡುಗುತ್ತೊಡೆಯರೆ ಬರಲಮ್ಮೆವೆಂದು ನುಡಿದರ್ಭಯದಿಂ (ನನ್ನಬಾ. ೨-೯೧); ಪರಮಕೃಪಾಕರನೆಂಬೀ ಬಿರುದಂ ಬಿಸುಟಕಟ ಶಂಕರಾ ಶಂಕರನಂ ಹರಸಿ ನಡಗಾಡೊಳಂಧೆಯಾ ಕರದುಂಡವನೆಳೆದುಕೊಂಡವೋಲ್ಮಾಡಿದೆಯ್ಯೆ (ರಾಜಶೇ. ೦೩-೦೨೯). [ನಡು$_೨$ + ಕಾಡು$_೨$]

ನಡುಗಾನಲ್ (ನಾ). = ನಡುಗಾಡು: ಮಿಕ್ಕ ಸರುವಿಂಗೆ ದರುವಿಂಗೆ . . . ನಡುಗಾನಲಿಂಗೆ [ಪಾಕಾಂ. ನಡುವಾನಲಿಂಗೆ, ನಳುನಾನಂಲಿಂಗೆ] ತೆಕ್ಕೆಗತ್ತಲೆಗೆ . . . ಇಕ್ಕೆವನೆಯಾನೆಂದು ಬೊಬ್ಬಿಟ್ಟು ವೇಳ್ವಂತೆ ಘೀಡಿಡುಕ್ಕುಲಿದುದವಿ (ಸೋಮಚ. ೩-೩). [ನಡು$_೨$ + ಕಾನಲ್]

ನಡುಗಾಲ (ನಾ). ೧. ಮಧ್ಯಕಾಲ; ವಂಧ್ಯಕಾಲ ಮತ್ತು ವಂಧ್ಯಂತರ ಕಾಲ. ೨. ಸ್ಥಿರವಾದ ತೀರ್ಮಾನ ಕೈಕೊಳ್ಳುವ ಮುಂಚಿನ ಕಾಲ, –ಸಮಯ; ತಾತ್ಕಾಲಿಕವಾಗಿ ನಿರ್ಣಯ ತೆಗೆದುಕೊಳ್ಳುವ ಕಾಲ.

ನಡುಗಾಲದ ವರದಿ=ತಾತ್ಕಾಲಿಕವಾದ ವರದಿ; ಸ್ಥಿರವಲ್ಲದ ಸಂದ್ದಿ: (Interim report. ಪತ್ರಿವಿ. ೪೭). ನಡುಗಾಲದ ಸರಕಾರ=ಮಧ್ಯಕಾಲದ ಸರಕಾರ; ತಾತ್ಕಾಲಿಕವಾದ ಆಡಳಿತ: ರಾಜ್ಯದ ಮಂತ್ರಿಮಂಡಲವು ಬಹುಮತವನ್ನು ಕಳೆದುಕೊಂಡಾಗ ರಾಜ್ಯಪಾಲರು ನಡುಗಾಲದ ಸರಕಾರವನ್ನು ನೋಡಿಕೊಳ್ಳುತ್ತಿದ್ದರು (ಕೂಗಿ). [ನಡು$_೨$ + ಕಾಲ]

ನಡುಗಿಸು (ಕ್ರಿ). ೧. ನಡುಗುವಂತೆ ಮಾಡು; ಅಲುಗುವಂತೆ ಮಾಡು; ಅಲ್ಲಾಡಿಸು: ಅಂಗವಂ ನಡುಗಿಸುತ ಬಸುಱಿಂ ಪೊಂಗಿಸುತವಕ್ಕಳಿಸುತಂ ವಾದ್ಯಂಗಳಿಗೆ ಬೆಚ್ಚುತ ಬೆದಱುತಂ (ಬಸಪು. ೧-೪೯); ಮೂಲೋಕಮಂ ಮಾಗಿ ನಡುಗಿಸಿತು ಮೇಣುಡುಗಿಸಿತು ಪೆರ್ಚಿದ್ಯೆಕಿಲಿಂದೆ (ಕೃಮಿಧಾ. ೨೯-೩); ಕಾಶೀಮ ಕೈ ನಡುಗಿಸುತ್ತ ಟೀಟೆ ಬರೆಯಹತ್ತಿದ (ಜೀವಕಂ. ೩); ಒಳ್ಳಿದರ ನೆಚ್ಚರಿಸೆ ಪಿಡಿದು ನಡುಗಿಸುಗುಂ (ಕಾಲೂಕ. ೭೭-೦೪೧). ೨. ಭಯ ಗೊಳಿಸು; ತಲ್ಲಣಗೊಳಿಸು: ಧುರದೊಳರಿಗಳಂ ನಡುಗಿಸುವುದುಗಿ ಚತುರಂಗಬಲವೆನಿಸೀ ಧಾತ್ರವು (ಹಚಕಾ. ೭-೦೪); ಸಹದೇವ ನಕುಲರ ನಡುಗಿಸಿದನುಡುಗಿಸಿದನಾಟೋಪವನು ಪವನಜನ (ಕುವ್ಯಾಕ. ೩-೦೩).

ನಡನಡುಗಿಸು (ದ್ವಿರುಕ್ತಿ): ನಡನಡುಗಿಸಿ ನಲ್ಲನೆದೆಯ ಧೈರ್ಯವ . . . ಪೊಂಗೊಡವೊಲೆವೆಂಗಳು ಮುಸುಕಿತು ಮೃಡತವಧ್ವಂಸಿಯ ಪಿತನ (ಮೋಡಚ. ೦೪-೩೦). [ನಡುಗು$_1$ + – ಇಸು$_೨$]

ನಡುಗು$_1$, ನಡುಂಗು (ಕ್ರಿ). ೧. ಅದುರು; ಅಲ್ಲಾಡು; ಕಂಪಿಸು: "ನಡುಗು (ನಡಗು)—ಕಂಪನೇ" (ಕವಮಧಾ); "ಕಂಪಿಸಿದುದೆನಲ್ಕೆ ನಡುಗಿದುದು" (ಕರ್ಣಾನಿ. ೨೪); ತೆಂಕಣಗಾಳಿಯೊಳಾದ ಸೋಂಕಿನೊಳೆ ನಡುಗುವ ವಶೋಕವಲ್ಲರಿಯ ಪಲ್ಲವದೊಳೆ ನವಚೂತಪಲ್ಲವಂ ತೊಡರ್ದವೊಲಾಗೆ (ಪಂಪಭಾ. ೩-೭೩); ಎಲರಲೆವದಿಂ ನಡುಂಗುವೆಲೆದುಱುಗಲಿಂ ಕದಳೀವನಂಗಳು ಮೈಕಿಲಡರ್ದು ನಡುಗಿದಪ್ಪುವೆಂಬಂತೆಯುಂ (ಕಾದಂಉ. ೫೧೯); ಭಯದಿಂದಂ ನೋಡಿ ನಾಡೆ ನಡುಗುತ್ತಿರ್ದಳ್ (ಧರ್ಮಾಮೃ. ೩-೮೩); ನಡುಗುವ ನರೆದಲೆಯಿಂ ನರೆತು ಸಡಿಲ್ದ ಸರ್ವಾಂಗದಿಂ (ಸಂಪಿರ. ೬-೩೫); ಸವನಿಸೆ ಹಮ್ಮದಂ ನಡುವ ಕಾಲ್ ಬೆಮರಂ ಬಿಡುತಿರ್ಪ ಗಲ್ಲಮುಣ್ಮುವ ನವಿರ್ . . . ಇವರೊಳೊಪ್ಪೆ ನೋಡಿದರ್ (ಕಬ್ಬಿಕಾ. ೩೩); ಕರ ನಡುಗೆ ಮೈ ಬಲಿಯೆ ಹುಬ್ಬುಗಳಾಜಿ ಬಿಗಿಯೆ (ಕುವ್ಯಾಕ. ೦೫-೦೦). ೨. ಹೆದರು; ಭಯಪಡು; ಭೀತಿಗೊಳ್ಳು: ನಡುಗುವುದುಂತೆ ಪಾಂಡವಬಲಂ ನಿನಗರ್ಜುನ ನೆಂಬನೆಂದುಮುರ್ಕಾಡುಗಿ ಸುರುಳ್ವನೀಯೆಡೆಗೆ ವೇಟ್ ವೆಱರಾರ್ ದೊರೆ . . . ಅಂಗಮಹೀತಳಾಧಿಪಾ (ಪಂಪಭಾ. ೦೨-೩೧); ಮುಳಿದು ಕೊಲಲಿರ್ದ ಕುಂಭನೆಂಬ ರಕ್ಕಸಂಗೆ ನಡುಗಿ ಚಂಡಕೌಶಿಕಂ ಮುಂಡಕೌಶಿಕ ನನೊಯ್ದುದ್ರಿಗುಹಾಂತರದೊಳ್ ಪ್ರಯತ್ನಂ ಬೆರಸಿರಿಸಿ ಕಾವುದುಂ (ಶಾಂತಿಪು. ೬-೩೩೮); ನಡುಗಿ ಮೊಡವಡುವುದುಂ ವೊಱಿಯಿಡುವುದುಮೇಕಣ್ಣ (ಸಮಪ. ೯-೮೦); ಕಳ್ಳರ ಕೊಟ್ಟಮಿದೆಂದೊಡೆ ಬಲ್ಲಿದರುಂ ನಡುಗುತಿರ್ಪರ್ (ಧರ್ಮಾಮೃ. ೦೨-೨೩೬); ಒಡೆಯರಾಡುವ ಮಾತ ಕಡೆವರೆಯಂತರ ಕೇಳಿ ಇದಿರುವೋಗಿ ಕಿಂಕರನಾಗಿ ನಡುಗುತ್ತ ಬಿನ್ನಹವ ಮಾಡುವ ಸದ್ಭಕ್ತರ ತೋಱಿಯ್ಯಾ (ಬಸವ. ಕ. ೦೭೬-೪೪೯); ಸುರನಗರಿ ವಡುಗಿತ್ತು ಸುರಪತಿ ಹರನ ನೆನೆದನು . . . ಎನೆ ನರನ ಕಡುದುಮ್ಮಾನ ನೆಱಿ ಹೆದಱಿಸಿತು ಮೂಜಗವ (ಕುವ್ಯಾಡ್ರೋ. ೪-೦೦). △ **ನಡುಂಗು**: ೧. "ರೆಂಂಪಿಸಿದನೆನೆ ನಡುಂಗಿದನಕ್ಕುಂ" (ಕವಿಕಂ. ೦೪೦).

ನಡಂನಡುಗು, ನಡನಡುಗು, ನಡುನಡುಗು (ದ್ವಿರುಕ್ತಿ) : ಕೆಡೆಯೆ ಕೃಪಂ ನಡಂನಡುಗಿ ಶಲ್ಯನುರುಳ್ತರೆ . . . ಗಗನೇಚರರ್ ಪಿಡಿದು ಕಟ್ಟಿದರಾ ಧೃತರಾಷ್ಟ್ರಪುತ್ರರಂ (ಮಹಾನೇ. ೦೦-೪೬); ಪರಿಭವಾ[ನಿ]ಲನಿಂ ಶೋಕಾ ನಲನಿರ್ಮಡಿಸೆ ನಡುನಡುಗಿ ಕಾಯ್ಬಿನೊಳ್[ಪಿ]ಡುಗಿ . . . ಇಂತೆಂದಳ್ (ಪಂಪಭಾ. ೮-೭೦ವ); ಬಂದ ಜಂಗಮದ ಇಂಗಿತಾಕಾರವನಱಿತು ಇದಿರೆದ್ದು ವಂದಿಸಿ ಕೈಮುಗಿದು ನಡ[ಪಾಠಾಂ. ಡು]ನಡುಗಿ ಕಿಂಕರನಾಗಿ . . . ಇರಬಲ್ಲರೆ ಅದು ವರ್ಮ (ಅವಚಂ. ೨೨೩-೧೦೧೦); ನುಡಿಯಲಾಱಿನು ಮಕ್ಕಳಿರ ನೀರಡಿಸಿದೆನು ಹಿರಿದಾಗಿಯೆನೆ ನಡನಡುಗಿ ದುರ್ಯೋಧನನು ದೂತರ ಕರೆದು ನೇಮಿಸಿದ (ಕುಪ್ಯಾಭೀ. ೧೦-೨೪); ನೆಲ ಬಿರಿವಂತೆ ನಾನಾ ವಾದ್ಯರಭಸದಿ ಕುಲಗಿರಿ ನಡನಡುಗಿದುವು (ಮೋಹತ. ೧೯-೮೭); ಅಂತು ಶಾಪಂಗುಡಲಾಂ ನಡುನಡುಗಿ ಕಯ್ಗಳಂ ಮುಗಿದು . . . ಏನಾದೊಡ ಮೆನಗೆ ಶಾಪಾಂತಕಾರಣಮಂ ಬೆಸಸೆಂಬುದುಂ (ಕಾದಂಉ. ೬೧೪); ಪಲವು ನಾಯ್ಗಳ ನಡುವಣ ಪುಲ್ಲೆಯಂತೆ ನಡುನಡುಗಿ (ಧರ್ಮಾಮೃ. ೬-೯೨); ವೇದ ವೇಧಿಸಲಱಿಯದೆ ಅಭೇದ್ಯಲಿಂಗವೆಂದು ನಡುನಡುಗಿತ್ತು (ಬಸವ. ೯೩೨); ಮಡದಿ ತನ್ನಯ ಪತಿಗೆ ತೋಱಲು ನಡುನಡುಗಿಯಾ ವರಕುಮಾರನ ಪೊಡವಿಪತಿಗವನೀಯೆ(ಸಂಭಪ. ೧೩-೬). ನಡನಡಂ ನಡುಗು,ನಡನಡ ನಡುಗು= ನಡಂನಡಂಗಂ: ಲುಬ್ಧಕಂ . . . ಬರ್ಪುದಂ ತಡೆಯದೆ ಕಂಡು ನಡನಡಂ ನಡುಗಿ ತಲ್ಲಣಿಸಿ . . . ಪಾಱಲನುವಾಗಿ ತೂಱಲ್ಗೊಂಬಿನೊಳಿರ್ಪ ವಿಹಂಗ ಸಂಕುಳದಿಂ (ಗಿರಿಕ. ೧-೧೨೮ವ); ನಡನಡ ನಡುಗುವಿನಮಡಸಿ ತಡೆಯದೆ ಖಳನಂ ಪಿಡಿದುಡಿಯೆ ಕಟ್ಟು (ವಡ್ಡಾರಾ. ೧೨೬-೬); ಗಾಳಿಗೊಡ್ಡಿದ ಸೊಡರಂತೆ ನಡನಡ ನಡುಗುವ ಕುರುಧ್ವಜನಿಯಂ ಕಂಡು . . . ಇಂತೆಂದಂ (ಪಂಪಭಾ. ೮-೦೦೧ವ); ನಡನಡ ನಡುಗಿ ಮಿಡುಮಿಡು ಮಿಡುಕಿ . . . ಪುಯ್ಯಲಿಡುತ್ತುಂ (ಅಜಿಪು. ೧೧-೦೦ವ).

[ದೇ.ಕ ತಮಿ. ನಟುಕ್ಕು, ನಟುಙ್ಕು ; ಮಲ. ನಡುಣ್ಣು ; ತುಳು. ನಡುಗು ; ತೆಲು. ನಡುಂಗು, ನಡುಂಕು]

ನಡುಗು$_2$ (ನಾ). ೧. (ಚಳಿ ಮುಂತಾದುವುಗಳಿಂದ) ಅದಿರುವಿಕೆ ; ಕಂಪಿಸುವಿಕೆ; ನಡುಕ; ಕಂಪನ : "ನಡುಕ=ನಡುಗು" (ಗಂಗಾಮ. ೦೭೭) ; ಪದಾರ್ಥಗಳ ಕಂಪನವೆಂದರೆ ನಡುಗು (ಮುಂಬಯಿ. ೫-೧೦೦) : ಅದಕ್ಕೆ ನಾವು ಕಂಪ ಅಥವಾ ನಡುಗು ಎನ್ನುತ್ತೇವೆ (ಮುಂಬಯಿ. ೫-೦೦೨). ೨. ಹೆದರುವಿಕೆ ; ಭಯಗೊಳ್ಳುವಿಕೆ ; ಅಂಜಿಕೆ : ಈತನನ್ನು ನೋಡಿದರೆ ನನಗೆ ನಡುಗು ಬರುತ್ತದೆ (ಉರಾಚ. ೧೦) ; ತಿಳಿಯದ ಮಂತ್ರ ಹೇಳಲಾರಂಭಿಸಿದರೆ ನನಗೆ ನಡುಗು ಬರುತ್ತದೆ (ಹುಚ್ಚಾಟ. ೧೨); ನೀನು ಹೇಳೋದು ಕೇಳಿ ನನಗೆ ನಡುಗು ಹುಟ್ಟಿತು (ಚಂದುಟ. ೬೮).

[<ನಡುಗು$_1$./ತಮಿ. ನಟುಕ್ಕು ; ಮಲ ; ನಡುಣ್ಣು; ತೆಲು. ನಡುಂಗು, ನಡುಂಕು]

ನಡುಗುಂಪೆಣ (ನಾ). ಅತ್ಯಂತ ಭಯಗೊಂಡ ವ್ಯಕ್ತಿ : ನಡುಗುಂಪೆಣನಾಗಿ, ತನ್ನವರ್ಗೆ ಕಯ್ಯಾಣತಿದೋರುವನು (ಮಂತ್ರಶ. ೮೩-೬).

[ನಡುಗು$_1$ + ಪೆಣ]

ನಡುಗುಡ್ಡ (ನಾ). ಗುಡ್ಡದ ಬುಡಕ್ಕೂ ತುದಿಗೂ ಮಧ್ಯವಿರುವ ಪ್ರದೇಶ : (ಕಿ). [ನಡು$_2$ + ಗುಡ್ಡ$_2$]

ನಡುಗುಹೆ (ನಾ). ಗುಹೆಯ ಮಧ್ಯಭಾಗ ; ಗವಿಯ ನಡುಭಾಗ ; ಗುಹಾಮಧ್ಯ : ಕಡುಗೆರಳಿದ ಮೃಗಾಧಿಪನ ನಡುಗುಹೆಯೊಳಿಹ ಸುಧೆಯ ಘಟವೀ ಪೊಡವಿಯೊಡೆತನ ಸದರವೇ ಕಡುಬಡವರಿಗೆ ದೊರೆಕೊಂಬುದೇ (ಕುಪ್ಯಾಸ. ೧-೬೬). [ನಡು$_2$ + ಗುಹೆ]

ನಡುಗುಱುವ (ನಾ). = ನಡುಗಡ್ಡೆ : "ಅಂತರೀಪಂ ನೀರ ನಡುಗುಱುವಮೆನಿಸಿಕ್ಕುಂ" (ಮಂಗರಾ. ೦೨೩-೧೩). [ನಡು$_2$ + ಕುಱುವ$_1$]

ನಡುಗೆರೆ (ನಾ). ಕೆರೆಯ ನಡುಭಾಗ ; ಮಧ್ಯದ ಕೆರೆ : ಕೆರೆಯಲ್ಲಿ ಈಜಲು ಹೋಗುತ್ತಿದ್ದೆ . . . ನಡುಗೆರೆಯನ್ನೂ ಮೀರಿ ಹೋಗುತ್ತಿದ್ದೆ (ಧರ್ಮಶ್ರೀ. ೨೦). [ನಡು$_2$ + ಕೆರೆ$_2$ (<ಕೆಱೆ)]

ನಡುಗೇರಿ, ನಡುಕೇರಿ (ನಾ). ಕೇರಿಯ ಮಧ್ಯಭಾಗ ; ಬೀದಿಯ ಮಧ್ಯಭಾಗ : ನಡುಗೇರಿ ಉರಿದು ನಾನಾ ಭಟರು ಮಡಿದಾರು (ಶಿವಗೀ. ೮೦೭) ; ಮಾರನ ಚಾಪಾಗಮವಿಸ್ತಾರಮನೀಕ್ಷಿಪ ತವಂಗಮಂಗನೆಯರ ಶೃಂಗಾರರಸಂ ತೀವಿದ ನಡು[ಪಾಠಾಂ. ಡೆ]ಗೇರಿಯಿದೆನೆ ಸೂಳೆಗೇರಿ ಮಿಗೆ ಸೊಗಯಿಸುಗುಂ (ಪಾರ್ಶ್ವಪು. ೭-೩೬). ನಡುಕೇರಿ : ಪೆಡಗಯ್ಯ ಕಟ್ಟಿಸಿ ಪುರವರದ . . . ನಡುಕೇರಿಯೊಳೆಲ್ಲರು ನೋಡುವಂದದಿ ನಡೆಯಿಸಿದನು ಮಂತ್ರಿಯವರ (ಕುರಾಸಾಂ. ೩೬-೬೨); ಕಾಣಿಕೆಯನಿತ್ತಾನೆಯ ಸಜ್ಜಾರ ನಡುಕೇರಿಯೊಳಗೊಪ್ಪುತಿಹುದು (ಕಂನವಿ. ೬-೩೨). [ನಡು + ಕೇರಿ]

ನಡುಗೊಂಬು (ನಾ).=ನಟ್ಟಗೊಂಬು: "ನಟ್ಟಗೊಂಬೆಂದು ನಡುಗೊಂಬು" (ಕಬ್ಬಿಕ್ಕೆ. ೧೮) : "ನಡುಗೊಂಬೆಂದು ನಾಡೆ ತಾ ನಟ್ಟಗೊಂಬಕ್ಕು" (ಶಬ್ದಮಂ. ೨೫). [ನಡು$_2$ + ಕೊಂಬು$_1$]

ನಡುಗೊಣ 'ನಡುಗೊಳ' ನೋ.

ನಡುಗೊರಲು, ನಡುಗೊರಳು (ನಾ). ಕೊರಳಿನ ಮಧ್ಯಭಾಗ ; ಕುತ್ತಿಗೆಯ ಮಧ್ಯಭಾಗ : ನಡುಗೊರಲ ಸುಟಿ ದೇವಮಣಿ (ಮಂಗರಾ. ೮೩-೨೦). ನಡುಗೊರಳು : ಬರುತಿಹ ಬಾಣವನು ಖಳ ಕಂಡು . . . ಬಲುಹುಶಕ್ತಿಯೊಳಟ್ಟೊಡನಿತನು ಮುಳಿದು ನುಂಗಿತು ಕಡಿದುದಮಮಾ ಖಳನ ನಡುಗೊರಳ (ಕೌಶಿರಾ. ೨೭-೫೫).

[ನಡು$_2$ + ಕೊರಲು (<ಕೊರಲ್)]

ನಡುಗೊರಳು 'ನಡುಗೊರಲು' ನೋ.

ನಡುಗೊಳ, ನಡುಗೊಣ (ನಾ). ಪುಷ್ಕರಿಣಿಯ ಮಧ್ಯಭಾಗ ; ಸರೋವರದ ಮಧ್ಯಭಾಗ : ತೊಳೆದು ಚರಣಾನನವ ನಡುಗೊಳದೊಳಗೆ ಹೊಕ್ಕು . . . ಶೀತಳಜಲವ ಕುಡಿದು (ಕುಪ್ಯಾಅ. ೧೦-೫೬). ನಡುಗೊಣ : ಗುರುತನುಜಂ ಕೃಪನ ಕೃತವರ್ಮನ ನುಡಿಗಳಂ ನಡುಗೊಣದಿ ನುಡಿವ ನಮ್ಮಿವರ ಮರೆನುಡಿಗಳಮ್ಮರೆಯ ಗಡಬಡೆಗಳಿಂ ಧ್ವನಿಯ ಕಡುಬೆಡಗಿ ನಿಂದರಿದು (ಶುರಂಗ. ೭೪-೩೧). [ನಡು$_2$ + ಕೊಳ್$_2$]

ನಡುಗೋಲ್, ನಡುಕೋಲ್ (ನಾ). ಸರಳಿನ ಮಧ್ಯಭಾಗ : ಬಾಣದ ಮಧ್ಯಭಾಗ : ನಡೆ ನಡುಗೋಲ್ವರಂ ದಶಮುಖಂ ಮನಮಂ ಸುಮನ ಶ್ಶಿಲೀಮುಖಂ . . . ಸತ್ಯಶೌಚಗುಣಸಂಪದವೇಳಿದನಾದಂ (ಪಂರಾಮಾ. ೯-೮೫). ನಡುಕೋಲ್ : ಭೋರೆಂದು ಕವಿವ ಬಿಸುನೆತ್ತರ್ ಕಣ್ಣಂ ಕವಿಯೆ ಸೀಂಟಿ ಕಳೆದು ನಡುಕೋ[ಪಾಠಾಂ. ಕಾ]ಲ್ವರಂ ನಟ್ಟ ಕೂರ್ಗಣೆಗಳಂ ಗಱುವೆರಸು ತೊಱೆದು ಕಳೆದು (ಪಂಪಭಾ. ೧೨-೭೪ ವ); ಸ್ಮರನ ಸರಲ್ಗಳ್ ನಡುಕೋಲ್ವರೆಗಂ ನಡೆ (ಧರ್ಮಾಮೃ. ೮-೧೬೮). [ನಡು$_2$ + ಕೋಲ್$_1$]

ನಡುಚವುಕಿಗೆ (ನಾ). ಮೊಗಸಾಲೆಯ ಮಧ್ಯಭಾಗ : ನಡುಚವುಕಿಗೆಗೆ ಬಿಗಿದ ತೊಲೆಯ ಪೊಱವಳಸಿನುಗ್ಗಡದ ನಾನಾ ವರ್ಣಚಿತ್ರಪತ್ರಿಕೆಗಳಂ...ಪೊಗಳಲಳವೆ (ಚೇರಮ. ೫-೧೨). [ನಡು$_2$ + ಚವುಕಿಗೆ (<ಚೌಕಿಗೆ)]

ನಡುಜವ್ವನ (ನಾ). ತುಂಬುಜವ್ವನ ; ಏರುಯೌವನ : ಪಿಡಿದ ತುಂಬು ನೀರ ಪೊಂಗೊಡಮನಿಟಿಪಿ ಪಡಿಮೊಗದ ನೆರೆವೀಡ ನಡುಜವ್ವನದ ಕೆಳದಿ ಯೊರ್ವಳಂ ಸನ್ನೆಯಿಂ . . . ಎನೆ (ರಾಮಾಶ್ವ. ೫೦-೧೬).

[ನಡು$_2$ + ಜವ್ವನ]

ನಡುತರ (ನಾ). ಮಧ್ಯಮ ಮಟ್ಟ,-ರೀತಿ : ಒಂದು ಅಳಕ ಹಿಟ್ಟು . . . ನಡುತರದ ಚಮಚದಲ್ಲಿ ಒಂದು ಚಮಚ ಸಕ್ಕರೆ (ಅಡುಸೌ. ೯೬).

[ನಡು$_2$ + ತರ$_6$ (<ತರಹ)]

ನಡುತಲೆ 'ನಡುದಲೆ' ನೋ.

ನಡುತೂತು (ನಾ). ಮಧ್ಯದಲ್ಲಿರುವ ತೂತಂ,-ರಂಧ್ರ ನಾಭಿ-ರಥದ ಗಾಲಿಯ ನಡುತೂತು (ಗಂಗಾಮಾ. ೧೮೧).

[ನಡು$_2$ + ತೂತು$_2$ (<ತೂಂತು$_2$)]

ನಡುತೂಬು (ನಾ). = ನಡುತೂತು : "ಪಿಂಡಿಕಾ, ನಾಭಿ-೨ ಬಂಡಿಯ ಕಣ್ಣಿನ ನಡುತೂಬಿಗೆ ಹೆಸರು" (ಸಿದ್ಧಾಂತಿ. ೨೫೩).

[ನಡು$_2$ + ತೂಬು (<ತೂಂಬು)]

ನಡುತೊಟ್ಟಿ (ನಾ). = ನಡುಂಚವುಕಿಗೆ : "ಕಕ್ಷ್ಯಾ-ಉಪ್ಪರಿಗೆ, ಮನೆಗಳ ನಡುತೊಟ್ಟಿ" (ಸಿದ್ಧಾಂತಿ. ೪೧೧). [ನಡು$_2$ + ತೊಟ್ಟಿ$_1$]

ನಡುದಟ್ಟಿ (ನಾ). ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ,-ವಸ್ತ್ರ : ನಡುಪಟ್ಟಿ : (ಕ). [ನಡು$_2$ + ದಟ್ಟಿ$_1$]

ನಡುದಲೆ, ನಡುಂತಲೆ (ನಾ). ತಲೆಯಂ ಮೇಲಿನ ಮಧ್ಯಭಾಗ ; ನೆತ್ತಿ : ತುಡೆ ಧನ್ವಿ ಸರಲನೊರ್ವಂಗೆಡವುಗೆ ಮತ್ತೊರ್ವನವನದು ತಱುವವೊಲೊಳ್ಪುಡುಗದೆ ಯಕ್ಷಪ್ರತಿಮೆಯ ನಡುದಲೆಯೊಳ್ ಬಿಟ್ಟುದಶನಿ ನುರ್ಗಪ್ಪಿ ನೆಗಂ (ಶಾಂತಿಪು. ೬-೨೯) ; ನಡುದಲೆ ಗೋಣ್ ನೊಸಲ್ . . . ಪುರ್ಬುಗಳಂಬೆಡೆಯಂ ಮಹಾಹಿ ಕೊಂಡೊಡೆ ಗರುಡಂಗಮೆತ್ತಲರಿದೆಂದೊಡೆ ಪೇಟುಱಿದಂಗೆ ಸಾಧ್ಯಮೇ (ಲೋಕೋಪ. ೧೦-೪). **ನಡುತಲೆ :** ಪಾರ್ವನ ಕಾಲ್ ಮೋದೆ ನಡುತಲೆಯಲಿರ್ಪುದುಮಾದುದು ನಿಮಗೆಂದು ನುಡಿದು ಕಾಯ್ದಿನೊಳೊದೆದಂ (ಪಂಪಭಾ. ೨-೬೪). [ನಡು$_2$ + ತಲೆ$_1$]

ನಡುದಾರ (ನಾ). ಸೊಂಟಕ್ಕೆ ಕಟ್ಟುವ ನೂಲಿನ ಅಥವಾ ಚಿನ್ನ, ಬೆಳ್ಳಿಯ ಎಳೆ ; ಉಡಿದಾರ : (ಕ). [ನಡು$_2$ + ದಾರ$_1$]

ನಡುದಾರಿ (ನಾ). ಮಾರ್ಗದ ಮಧ್ಯ ; ದಾರಿಯ ಮಧ್ಯ ; ನಡುಮಾರ್ಗ : ಹುಲಿ . . . ಕುದುರೆಯ ಮೇಲೆ ಬೀಳಲು ಸಿದ್ಧವಾಗಿ ನಡುದಾರಿಯಲ್ಲಿ ಕುಳಿತುಬಿಟ್ಟಿತು (ಕಳಹು. ೬). [ನಡು$_2$ + ದಾರಿ]

ನಡುದೆರಪು (ನಾ). ನಡುವಿನ ಸ್ಥಳ,-ಅಂತರ : ಎರಡುಂ ಸಗ್ಗಂಗಳ ನಡುದೆರಪಿನೊಳಧಿಯಾದ್ಯಮನ್ತ್ಯಮಲ್ಲದ ಮಧ್ಯಾಜಿರದೊಳ್ ಧರ್ಮಗ್ಲಾನಿಯ ನರಕದೊಳಳಲ್ವರುಮಾನಕಟ ! ನೆನೆಗಮ ! ಕೃಷ್ಣಂ (ಬೆಟ್ಟಅ. ೯-೬). [ನಡು$_2$ + ತೆರಪು (<ತೆಱಪು)]

ನಡುದೊಱೆ (ನಾ). ನದಿಯ ಮಧ್ಯಭಾಗ ; ನಡುನೀರು : ನಡುದೊಱೆಯಲ್ಲಿ ಹುಟ್ಟುಹಾಕಿದಡೆ ಹಱುಗೋಲು ಮುಳುಗದೆ ಏಱಿದವರು ಸತ್ತರು (ಅವಕಂ. ೮೦-೩೬೦) ; ನಡುದೊ[ಪಾಣಾಂ. ತೊ]ಱೆಯೊಳಗೆ ಹಱುಗೋಲನಿಳಿದುತಾಯಿತ್ತೆನ್ನ ಭಕ್ತಿ (ಬಸಹಿ. ೯೮-೨೯೩).

[ನಡು$_2$ + ತೊಱೆ$_2$]

ನಡುನಾಡು (ನಾ). ೧. (ದೇಶದ) ಮಧ್ಯಭಾಗ ; (ರಾಜ್ಯದ) ಮಧ್ಯಪ್ರದೇಶ : ಕಡೆವಿಡಿದು ಬಳಸಿ ನೀರಿರೆ ನಡು ಬತ್ತಿದ ಕೆಱೆಯನಿಂತು ಕಂಡುದಱಿಂದಂ ನಡುನಾಡೊಳಱಂ ನೆಲಸದೆ ಕಡೆಯೊಳ್ ನೆಲೆಗೊಳ್ಗುಂ (ಅದಿಪು. ೧೫-೪೦) ; ಕಡೆನಾಡ ಲಿಂಗವ ನಡುನಾಡಿಗೆ ತಂದೆನೆಂಬ ಆಹಂಕಾರವ ಮುಂದುಗೊಂಡಿದ್ದೆಯಲ್ಲಾ . . . ಗೊಹೇಶ್ವರಲಿಂಗವು ನಿನ್ನ ತಪ್ಪಿಸಿ ಹೋದುದ ಮಱೆದೆಯಲ್ಲಾ (ಅವಕಂ. ೨೦೯-೯೯೨) ; ಊರೂರ್ದಪ್ಪದೆ ದೇವತಾನಿಳಯದಿಂ ಸದ್ಭಕ್ತರಿಂ ಚೆಲ್ವುವೆತ್ತೂರೂರ್ದಪ್ಪದೆ ಬಲ್ಲಕುಂದೆ ನಡುನಾಟ್ ಸಂತಂ ಬಸಂತಂ ಕರಂ (ಶಾಪಮಂ. ೯೬೪) ; (ಎಇ. XIV, ೨೭೦-೧೯ ; 1181 ನೋ). ೨. (ಮೂರು ಲೋಕಗಳಲ್ಲಿ) ಮಧ್ಯದಲ್ಲಿರುವ ಲೋಕ ; ಭೂಲೋಕ ; ಮರ್ತ್ಯಲೋಕ : ನಡುನಾಡ ರಸದ ಪೆರ್ದ್ದೋಟ ನಡುಪಳ್ಳಿಯ ಕಾಮಧೇನು[ಮಾಂ]ಗಣದೊಳೆನಿಪ್ಪದೆ ಪಣ್ತ ಕಲ್ಪತರುವೆಂದಡದೇವಣ್ಣೆಪುದೊ ರೂಪ ವಿದ್ಯಾಧರಿಯ (ಶಾಇಇ. XX, ೪೯-೩೫ ; ಸು. 1076 ?) ; ನಡುನಾಡು ಮೇಲ್ನಾಡು ಕೀಳುನಾಡೆಂಬ ಮುಪ್ಪೊಡವಿಯೊಡೆಯನ ಹೆಮ್ಮಗಗೆ ತಡೆಯುಂಟೆ (ಧರಪ. ೪೪-೬೬).

ನಡುನಾಡ ತೀರ್ಥ = ೧. ಭೂಲೋಕಕ್ಕೆ ಪೂಜ್ಯವಾದ ಸ್ಥಳ,-ಶ್ರೇಷ್ಠವಾದ ಪ್ರದೇಶ : ನಡುನಾಡ ತೀರ್ಥಮೆನಿಸಲ್ಪಡೆದಿಂದ್ರಪ್ರಣಯಮೆಂಬ ಪರ್ವತಕಟಕಂಬಿಡಿದು ನಿಜಕಟಕಮಂ ತಾಂ ಬಿಡಿಸಿ ಮಗಂಗಿತ್ತು ಕೊಡೆಯುಮಂ ಪಟ್ಟಮುಮಂ (ಅನಂಪು. ೧೨-೨೯). ೨. ಭೂಲೋಕಕ್ಕೆ ಪೂಜ್ಯನಾದವನಂ ; ಒಂದಂ ಬಿರಂದಂ : ಸಕಳಗುಣಸಂಪೂರ್ಣ್ಣಂ ಕಲಿಕಾಲಕರ್ಣ್ಣನಮಳಚರಿತ್ರಂ ನಡುನಾಡ ತೀರ್ತ್ಥಂ ಶ್ರೀಮತ್ಸೂಸವೂರಾಯ್ಯ ಗಾವುಣ್ಡಂ (ಸೌಇಇ. XI-1, ೬೫-೨೯ ; 1028) ; ಬಮ್ಮ[ಂ]ಗಣ್ಡ ಎಲರ್ಪ್ಪೊಗಳೆ ನೆಗೞ್ದನವನೀತಳದೊಳ್ . . . ಕುನ್ದಿಗನೊಳ್ಪಡೆದಂ ನಡು[ನಾ] [ಡ] ತೀರ್ತ್ಥವೀ ಮಹಿಮಗಳಂ (ಸೌಇಇ. XX, ೨೯ ೧೪ ; 1034).

[ನಡು$_2$ + ನಾಡು]

ನಡುನಿದ್ದೆ (ನಾ). ನಿದ್ರೆಯ ಮಧ್ಯಕಾಲ ; ಗಾಢನಿದ್ರೆ : ಇದು ಬೇರೊಂದು ಕಾಲ ; ನಡುನಿದ್ದೆಯಲ್ಲಿ ಕನಸು ಬಿದ್ದ ಹಾಗೆ ತಣಿವಿಗಾಗಿ ಈ ನಾಡನ್ನು ತೆರೆದಂತಿದೆ (ಕುಸುಸಂ. ೧೫೮). [ನಡು$_2$ + ನಿದ್ದೆ]

ನಡುನಿಲ್ (ಕ್ರಿ). (ಆಲಂ) ನಿಷ್ಪಕ್ಷಪಾತದಿಂದಿರು : ಎರಡುಂ ಪಕ್ಕಮುಮೊಂದೇ ಸರಿಯೆನೆ ನಡುನಿಂದು ನೆಗೞೆಯಾ ದ್ವಿಜವರನೊಳ್ ಕರವೊಸೆದು ತನ್ನ ಭಾರಮನಿರಿಸಿದವೊಲ್ ಪೆಂಪುಗೊಳಿಪನುತ್ತಮಪುರುಷಂ (ಜಕವಿ. ೧-೪೨). [ನಡು$_2$ + ನಿಲ್]

ನಡುನೀರ್, ನಡುನೀರು (ನಾ). (ಸರೋವರ, ನದಿ ಮುಂತಾದುವುಗಳ) ನೀರಿನ ಮಧ್ಯಭಾಗ,-ಜಲಮಧ್ಯ : ಅಂಜದೆ ಪೊಕ್ಕು ನಡುನೀರೊಳಾಡುವ ವನದೇವಿಯರ ಸೋರ್ಮುಡಿಯಿಂ ಪರೆದರಲ ಬೆರಕೆಗಂಪಿನ ಪೊಂಪುಱಿಯೊಳಂ (ಕಾದಂಪು. ೧೦೭) ; ಅನ್ಯಾಯದೊಳ್ಪಡೆದರ್ಥಂ ನಡುನೀರಿನೊಳಿಕ್ಕಿದೊಡಂ ಕಿಡುಗುಂ (ಧರ್ಮಾಮೃ. ೬-೧೨೮) ; ಹಿಡಿದುದ ಬಿಡದಿದ್ದರೆ ಕಡೆಗೆ ಚಾಚುವ ಅಲ್ಲದಿದ್ದರೆ ನಡುನೀರಲ್ಲದ್ದುವ ನಮ್ಮ ಕೂಡಲ ಸಂಗಮದೇವ (ಬಸವ. ೨೨೦) ; ಎಲೆ ಭಕ್ತ ನೀನೇಕೆ ನಡುನೀರೊಳಿರ್ದಪ್ಪೆ (ರುದ್ರರ. ದೇ. ೨೧೦-೯) ; ನಡುನೀರೊಳೊಗೆದ ನಳಿನಮಂ ಮುಱಿಯಲೆಳಸಿ ಮಗುಳ್ದು ತೆರೆವಿಡಿದೀಸುವೆಳೆವೇಡಿತಿ (ರಾಜಶೇ. ೬-೨೪೮). **ನಡುನೀರು :** ಕೃಪ ಗುರುಸುತರ ನುಡಿಗಳನು ನಡುನೀರಲಿ ನೃಪಧ್ವನಿಯ ಅಱಿದರಿವರಾಲಿಸಿದರು (ಕುಮಾಗ. ೯-೪೩).

ನಡುನೀರಲ್ಲಿ ಕೈಬಿಡು, ನಡುನೀರಲಿ ಕೈಬಿಡು = ೧. ಪ್ರವಾಹದ ಮಧ್ಯದಲ್ಲಿ ಹಿಡಿತದ ಸಹಾಯವನ್ನು ತಪ್ಪಿಸು : ನಡುನೀರಲ್ಲಿ ಕೈಬಿಟ್ಟ ಹಾಗೆ (ಗಾದೆ). ೨. ನಂಬಿಕೊಂಡವರಿಗೆ ಅತ್ಯಗತ್ಯವಾದ ಸಮಯದಲ್ಲಿ ಉದ್ದೇಶಪೂರ್ವಕವಾಗಿ ಸಹಾಯ ನಿಲ್ಲಿಸು ; ಕೈಕೊಡು : ಆಕೆಯ ಅಂತಸ್ತಿನ ಭವಿಷ್ಯವೆಲ್ಲ ನನ್ನ ಕೈಯೊಳಗಿರುವಾಗ್ಗೆ ನಾನೀಗ ಆಕೆಯನ್ನು ನಡುನೀರಲಿ ಕೈಬಿಡುವುದೆ ? (ನಡಗೆ. II, ೬೭೦). [ನಡು$_2$ + ನೀರ್$_1$]

ನಡುನೀರು 'ನಡುನೀರ್' ನೋ.

ನಡುನೆತ್ತಿ (ನಾ). ತಲೆಯ ಮೇಲಿನ ಮಧ್ಯಭಾಗ ; ನಡುದಲೆ : ಮುಡುಪಂ ಬೆನ್ನಂ ಕೊರಲಂ ನಡುನೆತ್ತಿಯನೆತ್ತಿಪೊಯ್ದರೊರ್ವರನೊರ್ವರ್ (ಗದಾಯು. ೮-೧೩) ; ಎರಡುಂ ಬಾಳಕ ಪದ್ಮಕಮೆರಡುಂ ಚಂದನಮೆನಿಪ್ಪುವಂ ತೆಳ್ಗಱಿಯಿಂದರೆದು ನಡುನೆತ್ತಿಯೊಳ್ ಪೂಸೆ ರುಜಾರ್ತನ ತೃಷೆಯ ದಾಹ ದೊಡವಂ ಕಳೆಗುಂ (ಲೋಕೋಪ. ೯-೨೮) ; ಆಧಾರ ಸ್ವಾಧಿಷ್ಠಾನ . . . ಆಜ್ಞೆ ಎಂಬ ಷಡಾಧಾರದ ಬಳಿವಿಡಿದು ನೆತ್ತಿಯಿಂದುತ್ತರಕ್ಕೆ ಉಚ್ಚಳಿಸಿ ಹಾಯ್ದು ನಡುನೆತ್ತಿ ತೂತಾದರೂ ಲಿಂಗಸಾಹಿತ್ಯವಿಲ್ಲ (ಅದವ. ೧೧-೨೧) ; ನಿರವಧಿಯಿಂ ಕುಳಿರ್ವುದಕಮಂ ನಡುನೆತ್ತಿಯೊಳಾಂತು ತನ್ನ ಕಣ್ಣುರಿಗುಪ ಶಾಂತಿಯಂ ಪಡೆದನಿಲ್ಲಭವಂ (ದಶಕು. ೧-೩೩) ; ಒಡೆದು ನಡುನೆತ್ತಿಯನುಝಳಿಪಿಸಿ ಕಡುವೆಳಗು ಥಳಥಳಿಸಿ ತರಣಿಯ ತುಡುಕಿ ಹಾಯ್ದುದು ರಶ್ಮಿ ರಂಜಿಸತಖಿಳದಿಗುತಟವ (ಕುಮಾರ್ಯೋ. ೧೮-೭೧) ; ನಡುನೆತ್ತಿ ಬಿರಿದು

ಮುತ್ತುಗಳೊಡೆದುಚ್ಚಳಿಸುತ್ತೆ ಪಾಱ್ (ರಾಜಶೇ. ೫-೪೦). [ನಡು$_2$+ನೆತ್ತಿ]

ನಡುನೆಲ (ನಾ). ಮಧ್ಯದ ಪ್ರದೇಶ,-ಸ್ಥಳ : ಸನ್ನೆಯ ಭೇರಿಕಾಱರು ನಡುನೆಲದಲ್ಲಿ ಸನ್ನದ್ಧರಾಗಿ ನೆರೆದರು (ಭರಕ. ೫೦-೨೯). [ನಡು$_2$ + ನೆಲ]

ನಡುನೆಲೆ (ನಾ). ಮಧ್ಯಸ್ತಿಕೆ ; ನಿಷ್ಪಕ್ಷಪಾತತೆ : ನಡುನೆಲೆಯುಳ್ಳವನ ಬದುಕು ಅಱಿವಿಲ್ಲದೆ ಸಂತತಿಗಂ ಕಾಪುಳ್ಳುದಕ್ಕುಂ (ಕುಱಳ್. ೧-೧೨-೨).

[ನಡು$_2$ + ನೆಲೆ]

ನಡುನೇಸಱ್, ನಡುನೇಸಱು (ನಾ). ನಡುಹಗಲು ; ಮಧ್ಯಾಹ್ನ : ಒಡಲಾಂತ ತನುವೀತನ ನೆವದಿಂದೆಂದು ಕಡುಗಳಲ್ದಾಕಾಶಮೆಂಬ ಮೃಡ ನುರಿಗಣ್ಣ ತೆಱೆದವೊಲು ನಡುನೇಸಱಡಸಿದುದಂದು ಬಲ್ಬಿಸುವ (ಶ್ರೀಪಾಲ. ೪-೫೪). **ನಡುನೇಸಱು** : ನಡುನೇಸಱಲಿ ತಮ ನಿಲಬಲ್ಲದೇ ಜನನಾಥ (ನಿಭಾಗ. ೫-೧೨-೨೭). [ನಡು$_2$ + ನೇಸಱ್]

ನಡುನೇಸಱು 'ನಡುನೇಸಱ್' ನೋ.

ನಡುನೊಸಲು (ನಾ). ಹಣೆಯ ಮಧ್ಯಭಾಗ : ಜಡೆಮುಡಿಯನಳವಡಿಸಿ . . . ಭಸಿತಲೇಪನದೊಡಲು ನಡುನೊಸಲೊಳು ತ್ರಿಪುಂಡ್ರದ ರೇಖೆಗಳು ಮೆಱೆಯೆ (ಬಸಪು. ೩-೨೬). [ನಡು$_2$ + ನೊಸಲು (<ನೊಸಲ್)]

ನಡುನೋಟ (ನಾ). ಸ್ಥಿರವಾದ ನೋಟ ; ನೆಟ್ಟ ದೃಷ್ಟಿ : ಪಸುಳೆಗುವರಂ ತನ್ನ ಕಟ್ಟಿದಿರ ಪುರುಷೋತ್ತಮಮೂರ್ತಿಯನೆಮೆಯಿಕ್ಕದ ನಡುನೋಟದಿಂ ದಿಟ್ಟಿಸುತೆ ಕುಳ್ಳಿರಲ್ (ರಾಮಾಶ್ವ. ೭೭-೪). [ನಡು$_1$ + ನೋಟ]

ನಡುಪಗಲ್ 'ನಡುವಗಲ್' ನೋ.

ನಡುಪಟ್ಟ ? (ನಾ). (?) : ತೊಡೆಯಿಂ ಕಡುಗುದುರೆಗಳು ಮಡದಿಂ ನಡು [ಪಟ್ಟಂ. ಪೆ]ಪಟ್ಟ ದಂತಿಯಂ ನಿಡುದೋಳಿಂ ಕಡುವಾಳಂ ಕೂರಸಿಯಿಂ ಕಡುಂಗಿದಣಿಯಂ ಸಮಂತು ಬಸವಾಗಿಸುವಂ (ಕಾಪ್ಯಾವ. ೨೩೧) ; ಚಿತ್ತಭವ ಚಕ್ರವರ್ತಿಯ ನಡುಪಟ್ಟ ಪಟ್ಟದಾನೆಯಂತೆ ಮಾಗಮಗಿಸುವ ಮದಮದದ ಸೊನೆಸೊನೆಯಂ ಬಿಡುವ ಬಾಳರಸಾಳಂಗಳಿಂ ಕಾಮದೇವನ ದೀವದ ಪಿಂಡಿನಂತಿರ್ಪ ಕಳಹಂಸೆಗಳಿಂ . . . ಮನಂಗೊಳಿಸಿ (ಅರ್ಧನೇ. ೪-೬೮ ವ).

[?]

ನಡುಪಟ್ಟಿ (ನಾ). ೧. ಸೊಂಟಕ್ಕೆ ಕಟ್ಟಿಕೊಳ್ಳುವ ಚರ್ಮ, ವಸ್ತ್ರ, ಲೋಹ ಮುಂತಾದುವುಗಳ ಪಟ್ಟಿ ; ಬೆಲ್ಟು : ಅವಳು ಬಿರುಬಿರನೆ ಕೈಚಾಚಿ, ನೋಟನ್ನು ಕಸಿದುಕೊಂಡು ತನ್ನ ನಡುಪಟ್ಟಿಯ ಕೆಳಗೆ ಬಚ್ಚಿಟ್ಟು ಕೊಂಡಳು (ಪುನರು. ೧೯೫) ; ಕಯ್ಯ ಪಟ್ಟದ ಖಡ್ಗವನ್ನು ನಡುಪಟ್ಟಿಯ ಒರೆಯೊಳಕ್ಕೆ ಸಶಬ್ದವಾಗಿ ನೂಂಕಿಬಿಡುವನು (ಬಿರುಗಂ. ೩೧-೬). ೨. ಸೊಂಟದಲ್ಲಿ ಧರಿಸುವ ಒಂದು ಬಗೆಯ ಆಭರಣ ; ಒಡ್ಯಾಣ ; ಡಾಬು. [ನಡು$_2$ + ಪಟ್ಟಿ$_2$]

ನಡುಪಳ್ಳಿ, ನಡಪ್ಪಳ್ಳಿ (ನಾ). ಒಂದು ಸ್ಥಳದ ಹೆಸರು : ನಡುನಾಡ ರಸದ ಪೆರ್ದ್ದೊಟ ನಡುಪಳ್ಳಿಯ ಕಾಮಧೇನು[ಮಂ] ಗಣದೊಳೆನಿಪ್ಪದೆ ಪಣ್ತ ಕಲ್ಪತರುವೆಂದಡದೇವಣ್ಣಿಪುದೊ ರೂಪವಿದ್ಯಾಧರಿಯ (ಸೌಇಇ. XX, ೪೮-೩೫ ; ಸು. 1076 ?). **ನಡಪ್ಪಳ್ಳಿ** : ನೇಱಿಲೆಯಂ ಮಾಯೊತ್ತಿಂ ನಡಪ್ಪಳ್ಳಿಮೂಟೊಣಂ ನಡಲು ಎಪ್ಪಳ್ಳಿ (ಎಕ. VI, ಚಿಕ್ಕಮ. ೯೫-೧೫ ; ಸು. 1025 ?). [ನಡು$_2$ + ಪಳ್ಳಿ$_1$]

ನಡುಪಾಯ್ 'ನಡುವಾಯ್' ನೋ.

ನಡುಪ್ರಾಯ (ನಾ). ಮಧ್ಯವಯಸ್ಸು : ಅವರು ನಡುಪ್ರಾಯದಲ್ಲಿ ತೀರಿ ಹೋದುದರಿಂದ ಸಂಸಾರಕ್ಕೆ ಬಹಳ ಕಷ್ಟವಾಗಿದೆ (ರೂಢಿ).

[ನಡು$_2$ + ಪ್ರಾಯ]

ನಡುಬನ (ನಾ). ಕಾಡಿನ ಮಧ್ಯಭಾಗ ; ಅರಣ್ಯದ ಒಳಭಾಗ : ಸ್ವರ್ಗಸ್ಥರಾದರು ತಂದೆ ತನ್ನಣುಗನ ನಡುಬನದೊಳು ಬಿಟ್ಟ ಹಾಗೆ (ಇಂಬಾಪ. ೨೦-೪೫). [ನಡು$_2$ + ಬನ]

ನಡುಬಾನು (ನಾ). ಆಕಾಶದ ಮಧ್ಯಭಾಗ : ನಡುಬಾನೇಱಿದುಷ್ಣಾಂಶು ಮಂಡಲವಲ್ಲಿ ಕಡು ಸೊಗಸಿತು (ಶ್ರೀಪಾಲ. ೪-೪೮).

[ನಡು$_2$ + ಬಾನು$_3$ (<ಬಾನ್$_3$)]

ನಡುಬಾವಿ (ನಾ). ಬಾವಿಯ ಮಧ್ಯಭಾಗ : ಶ್ರೀವಿಜಯಮುನಿ ಹೋಗಿ ತಾ ನಡುಬಾವಿಯಲಿ ಬಿದ್ದನು (ಬಸಪು. ೫೦-೧೭). [ನಡು$_2$ + ಬಾವಿ]

ನಡುಬೀಡು (ನಾ). ಸ್ವಲ್ಪ ಬೆಳೆ ಬೆಳೆಯುವ ಹೊಲ ಮುಂತಾದುವು : ಕೀಳು ಮೇಲು ನಡುಬೀಡುಬೀಡು ಬಿಯ ತಪುವೊಪ್ಪು (ಸೌಇಎ. ೧೯೩೬, ಪುತ್ತೂರು. ೧೦೪-೯ ; 1282). [ನಡು$_2$ + ಬೀಡು$_2$]

ನಡುಬೀದಿ 'ನಡುವೀದಿ' ನೋ.

ನಡುಬೆಟ್ಟ (ನಾ). ಬೆಟ್ಟದ ಮಧ್ಯಭಾಗ : ನಡುಬೆಟ್ಟಕ್ಕೆ ಹತ್ತುವ ವೇಳೆಗೆ ಬಿಸಿಲೇರಿಬಿಟ್ಟಿತು (ರೂಢಿ). [ನಡು$_2$ + ಬೆಟ್ಟ (<ಬೆಟ್ಟು$_2$)]

ನಡುಬೆಟ್ಟು (ನಾ). = ನಡುಬೆರಳು : (*).

[ನಡು$_2$ + ಬೆಟ್ಟು$_3$ (<ಬೊಟ್ಟು$_1$)]

ನಡುಬೆನ್, ನಡುಬೆನ್ನು (ನಾ). ಬೆನ್ನಿನ ಮಧ್ಯಭಾಗ : ಇಱಿದು ಮರದಿಂದಮಾಗಳ್ ಕೆಟಗೆಲ್ಲಂ ಪರೆದು ಬಿರ್ದ ಶುಕಸಂತತಿಯಂ ಗಟಗಟಿಸಿ ಕಟ್ಟಿ ನಡುಬೆನ್ನಿಱಿವಿನೆಗಂ ಪೊತ್ತು ಪೋದನಾ ಮುದುವೇಢಂ (ಕಾದಂಪೂ. ೧೮೭) ; ನಡುಬೆನ್ನಂ ಸಱ್ಱನೆ ಸೀಟೆಯುಂ (ಅಚಿಪು. ೧೦-೧೦ ವ). **ನಡುಬೆನ್ನು** : ಮೂಟೆ ಹೊತ್ತು ನಡುಬೆನ್ನು ಮುರಿದುಹೋಯಿತು (ರೂಢಿ).

[ನಡು$_2$ + ಬೆನ್]

ನಡುಬೆನ್ನು 'ನಡುಬೆನ್' ನೋ.

ನಡುಬೆರಳು (ನಾ). (ಹಸ್ತದ ಅಥವಾ ಪಾದದ ಐದು ಬೆರಳುಗಳಲ್ಲಿ) ಮಧ್ಯದ ಬೆಟ್ಟು, – ಬೆರಳು : ಮಗುವಿನ ನಡುಬೆರಳಿನಲ್ಲಿ ಉಂಗುರವಿದೆ (ರೂಢಿ). [ನಡು$_2$ + ಬೆರಳು (< ಬೆರಲ್)]

ನಡುಬೊತ್ತು, ನಡುಹೊತ್ತು (ನಾ). = ನಡುನೇಸಱ್ : ಮತ್ತದಂ ಪೊಗೆ ಹೋದ ತಱಿಗೆಂಡದೊಳಗೆ ನಡುಬೊತ್ತಾಗುವನ್ನೆವರ ಮುಚ್ಚಳಂ ಮುಚ್ಚಿರಿಸಿ (ಸೂಪಶಾ. ೩-೧). ಅಂಬರಮೆಂಬವನಿಯ ಹೊತ್ತ ಭೂಧರ ಮೆಂಬ ಶೇಷನ ಮಸ್ತಕದ ಕೆಂಬೆರಲೆನೆ ನಡುಬೊತ್ತಿನೊಳೆಸೆದುದು ಬಿಂಬ ಮಂಭೋರುಹಸಖನ (ಶ್ರೀಪಾಲ. ೪-೪೯). **ನಡುಹೊತ್ತು** : ದೂರದ ಪೊಳಲಿಗೆ ಯಾತ್ರೆ ಹೊರಟಿದ್ದೇನೆ. ನಡುಹೊತ್ತಿನಲ್ಲಿ ಆಸರೆ ಸಿಕ್ಕೀತೆಂದು ಇಲ್ಲಿಗೆ ನುಗ್ಗಿದೆವು (ಹಾಹುತ್ತ. ೯೦).

[ನಡು$_2$ + ಪೊತ್ತು$_3$ (< ಪೊಟ್ಟು)]

ನಡುಭವಗಾವುಂಡ (ನಾ). ಒಬ್ಬಾತನ ಹೆಸರು: ಅಂಕಗವುಣ್ಡಗೆ ಪಲರ್ಮ್ಮೆಚೆ ಗಾವಣ್ಡಂ ನಡುಭವಗಾ[ವು]ಣ್ಡಂಗೆ ತೆಲುಗರ ಮಾರಿಗಾವುಣ್ಡನೊಳ್ಪಙ್ಗಟ (ಎಕ. IV, ಹೆಗ್ಗಡ, ೧೦೪-೧೮ ; 1037).

[? + ಗಾವುಂಡ (< ಗಾಮುಂಡ)]

ನಡುಭಾಗ (ನಾ). ಮಧ್ಯಭಾಗ : ನದಿಯ ನಡುಭಾಗದಲ್ಲಿ ಬಹಳ ಆಳವಿದೆ (ರೂಢಿ). [ನಡು$_2$ + ಭಾಗ]

ನಡುಮಂಡೆ (ನಾ). = ನಡುದಲೆ : ಭಂಡರಾದೆವಲಾಯೆನುತ ನಡುಮಂಡೆಯನು ತುಡುಕಿದನು ಮೆಱೆವುದ್ದಂಡಜಡೆಯನು ಕಿತ್ತು ಬೀಸಾಡಿದನು ಭೂತಳಕೆ (ನಿಭಾಗ. ೪-೨-೪) ; ದಂಡೆ ಕಾಣದು ನಮ್ಮೂರು ನಡುಮಂಡೆ ಸ್ಥಳವೆ ನಮ್ಮೂರು (ಪುರಂದ. ೫-೭೧-೦). [ನಡು$_2$ + ಮಂಡೆ$_1$]

ನಡುಮಟ್ಟ$_1$ (ನಾ). ನಡುವಿನ ಮಟ್ಟ ; ಸೊಂಟದ ಸಮ : ಅವನು ನಡುಮಟ್ಟದ ನೀರಿನಲ್ಲಿ ನಿಂತಿದ್ದಾನೆ (ರೂಢಿ). [ನಡು$_2$ + ಮಟ್ಟ$_1$]

ನಡುಮಟ್ಟ$_2$ (ಅ). ಸೊಂಟದ ವರೆಗೆ ; ಸೊಂಟದ ತನಕ : ಆ ಕೆರೆಯಲ್ಲಿ ಒಬ್ಬ ಮನುಷ್ಯನ ನಡುಮಟ್ಟ ಬರುವಷ್ಟು ಮಾತ್ರ ನೀರಿದೆ (ರೂಢಿ).

[ನಡು$_2$ + ಮಟ್ಟ$_5$]

ನಡುಮಣ್ಣು (ನಾ). (ತಕ್ಕಮಟ್ಟಿಗೆ ಚೆನ್ನಾಗಿರುವ) ಮಧ್ಯವಯಸ್ಸಿನ ಭೂಮಿ: (ಕಸಂಗ್ರಾ. ೧೬). [ನಡು$_{3}$ + ಮಣ್ಣು (<ಮಣ್)]

ನಡುಮಧ್ಯ$_{1}$ (ನಾ). ನಡುಭಾಗ; ಮಧ್ಯಭಾಗ; ನಟ್ಟನಡು: ನಡುಮಧ್ಯದಲ್ಲಿ ನಕ್ಷತ್ರ ಉದಯವಾಗಲಂ . . . ಕಾಳಲಾದೇವಿ ಕೆಡೆಮಾಱಿ ದೋಡಿದಳು ನೋಡಾ (ಸಿದ್ಧೇಶ್ವ. ೪೯-೦೩); ಸುತ್ತ ಮೆರದಿಹ ಸೇನೆ ನಡುಮಧ್ಯದೊಳು ಹಿಮಕರನಾ ಚತ್ರಧವನವೊಯೆನಲು ರಂದನೆವೆತ್ತ ನಿಜಬೀಡಿನಲಿ . . . ಎಸೆದನು ಕೇಳು ಕೌರವನು (ಜಿವಧಾ. ೩೭-೨); ಬಿಡಾರವಿರುವವನಿಗೆ ನಡುಮಧ್ಯವಾದರೇನು? (ಗಾಪರ).

[ನಡು$_{3}$ + ಮಧ್ಯ$_{1}$]

ನಡುಮಧ್ಯ$_{2}$ (ಅ). ಮಧ್ಯಭಾಗದಲ್ಲಿ; ನಟ್ಟನಡುವೆ: ನಡುಮಧ್ಯ ಇರು ವಂಥ ಸೀಮೆಯನ್ನು ಕಟ್ಟಿಕೊಂಡು (ರಾಜೇಂದ್ರ. ೫೭).

[ನಡು$_{3}$ + ಮಧ್ಯ$_{2}$]

ನಡುಮಧ್ಯೆ (ಅ). ಮಧ್ಯಭಾಗದಲ್ಲಿ; ನಟ್ಟನಡುವೆ: ಇಬ್ಬರು ದುಷ್ಪರಿಗೆ ಜಗಳವಾಗುತ್ತಿರುವಾಗ ನಡುಮಧ್ಯೆ ಪ್ರವೇಶಿಸುವುದು ಅಪಾಯಕರ (ಕೂಧಿ); ನಡುಮಧ್ಯೆ ಇವರ ಕಿತಾಪತಿ ಬೇರೆ (ಕೂಧಿ). [ನಡು$_{3}$ + ಮಧ್ಯ$_{2}$]

ನಡುಮನೆ 'ನಡಂವನೆ' ನೋ.

ನಡುಮರ (ನಾ). ವೃಕ್ಷದ ಮಧ್ಯಭಾಗ: ನಡುಮರ ಹತ್ತಿ ಬಾಡ ಕಡಿದ (ಗಾಪರ). [ನಡು$_{2}$ + ಮರ$_{1}$]

ನಡುಮಾಳ (ನಾ). ಮೈದಾನದ ಮಧ್ಯಭಾಗ; ನಡುಬಯಲು; "ನಟ್ಟನಡು" (ಸಂಪುಟ ೫, ಪುಟ ೬೦೫) ಅರ್ಥದಲ್ಲಿ: ಕಡುಗುಮುತೆ, ಕಪ್ಪು ಗಾಗ . . . ನಡುಮಾಳದಲ್ಲು, ನಡುಮಾಳಂ, ನಿಲ್ಲಂ. ನಿಜಾಮಾಬಾದು ಮುಂಗೆ ನೀರಿಲ್ಲಾಮೆ ಮೆಗುಬ್ಬೊದುಂ ಪಿಂದುಬ್ಬೂರ್ಗೆಂಟು (ಪಜಾಪ. ೫. ೦೪೩ ಪ್ರಯೋ). 'ನಿಡುಮಾಳ' ಪರಾ. [ನಡು$_{3}$ + ಮಾಳ$_{4}$]

ನಡುಮುರಿ$_{1}$ (ಕ್ರಿ). ೧. ಸೊಂಟ ಬಾಗಿ, – ಬಗ್ಗು: ನಡುಮುಱಿ[ರಿ]ದು ಗುಡುಗೂಱಿ ತಲೆ ನಡುಗಿ . . . ಒಂದನಾಡಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ (ಕನ್ನವ. ೪. ೦೫೯-೫೫೬). ೨. (ಆಲಂ) ಸಂಪೂರ್ಣ ಶಕ್ತಿಗುಂದಿ. [ನಡು$_{3}$ + ಮುರಿ$_{1}$]

ನಡುಮುರಿ$_{2}$ (ಕ್ರಿ). ೧. ಸೊಂಟವನ್ನು ಮುರಿದಂಹಾಕು. ೨. (ಆಲಂ) ನಾಶಮಾಡು; ಹಾಳುಮಾಡು: ಬರುತದೆ! ಮೈಕೋರದೆ ಒರುತದೆ! ಅದೆ – ನಡುಮುರಿಯುತ ನಗನಾವೆಗೆ, ಕೂವೆಗೆ (ಕಎಪು. ೨೬-೩). [ನಡು$_{3}$ + ಮುರಿ$_{2}$ (<ಮುಱಿ$_{1}$)]

ನಡುಮೂಗು (ನಾ). ಮೂಗಿನ ಮಧ್ಯಭಾಗ; ನಾಸಿಕದ ನಡುಭಾಗ: ನಡುಮೂಗು, ನಾಸಾಸೇತು (Bridge of the nose. ಪಾರಿನಿ. ೧೦).

[ನಡು$_{3}$ + ಮೂಗು$_{1}$]

ನಡುರಂಗ (ನಾ). (ದೇವಸ್ಥಾನದ) ಮಧ್ಯಭಾಗದಲ್ಲಿರುವ ರಂಗ ಮಂಟಪ, -ಸಭಾಮಂಟಪ; ನವರಂಗ: ಗುಡಿಯ ಬೋದಿಗೆ ಕಲ್ಲು ನಡು ರಂಗ ತಾ ಕಲ್ಲು ಕಡೆಮೂಲೆ ಸೆಜಗು ತಾ ಕಲ್ಲು ವರವನು ಕೊಡುವಾತ ಬೇಱೆ (ಸರ್ವಜ್ಞ. ೩೦೩). [ನಡು$_{2}$ + ರಂಗ$_{3}$]

ನಡುರಾತ್ರಿ (ನಾ). ಮಧ್ಯರಾತ್ರಿ; ಸಮರಾತ್ರಿ: ನಡುರಾತ್ರಿಯಿಂದ ಮುಂದಾನೆ ನಾಲ್ಕು ಗಂಟೆಯ ತನಕ ವಿಶ್ರಾಂತಿ ತೆಗೆದುಕೊಳ್ಳುವರು (ರಾಜಪ. ೭೮). [ನಡು$_{3}$ + ರಾತ್ರಿ]

ನಡುರಾತ್ರೆ (ನಾ). = ನಡುರಾತ್ರಿ: ಆತನಿಗೆ ಈಗ ನಡುರಾತ್ರೆಗೆ ತನ್ನನ್ನು ಕರೆದು ಪಸೆ ತುಂಬಿದ ಕಣ್ಣುಗಳಿಂದ 'ನನ್ನನ್ನು ರಕ್ಷಿಸು' ಎನ್ನುತ್ತಿದ್ದ ತಂಗಿ ಯನ್ನು ಇದಿರಿಸುವುದು ಸಾಧ್ಯವಾಗಲಿಲ್ಲ (ವಾತ್ಸಲ್ಯ. ೫೫೭); ಈ ನಡುರಾತ್ರೆ ಯಲ್ಲಿ ಭೀತಿಯಿಲ್ಲದೆ ನನ್ನ ಬೆಂಬತ್ತಿ ಬಂದವನು ನೀನು ಯಾರು? (ಬತ್ರೀಸ. ೩೦). [ನಡು$_{2}$ + ರಾತ್ರೆ]

ನಡುವಂತರ (ನಾ). ೧. ನಡಂವೆ ಇರುವ ಸ್ಥಳ. ೨. ಮಧ್ಯದ ಅವಸ್ಥೆ, -ಕಾಲ: ಹೀಗೆ ನಡುವಂತರದಲ್ಲಿ ಕೈಬಿಟ್ಟುಬಿಟ್ಟರೆ ಯಾರು ಗತಿ? (ಕೂಧಿ). [ನಡು$_{3}$ + ಅಂತರ]

ನಡುವಗಲ್, ನಡಂಪಗಲ್, ನಡುವಗಲು, ನಡಂಹಗಲಂ (ನಾ). ಹಗಲಿನ ಮಧ್ಯಭಾಗ; ಮಧ್ಯಾಹ್ನ; ನಡಂಹೊತ್ತು: "ಮುಂಬಗಲ್, ನಡುವಗಲ್, ನಡೆವಗಲ್ – ಇವು ೩ ತ್ರಿಕಾಲಂಗಳ್" (ಕಶಸಾ. ೫೭-೨೬೦); ನಡುವಗಲ ಬಿಸಿಲ್ನಂ ಶುಡೆ ವನಕರಿ ಕಮಳಬಂಧುವೊಳ್ದಿನಕರನೊಳ್ ಕಡುಗಾಯ್ದುನೆ ಸರಸಿಜವಂ ಕಿಡಿಸಲ್ತಾಂ ಪೊಕ್ಕುದಾಗ ಬಗೆಗಾ ಕೊಳನಂ (ಕವಿತಾ. ೩-೦೧೪); ನರೇಂದ್ರ ನೋಡೀ ನಡುವಗಲೊಳ್ ಚಕ್ರವಾಕವದು ವಿರಹಿಸುವಳ್ (ಆದಿಪು. ೧೦-೬೩); ಕಡುಪೊತ್ತಾದುದು ರವಿಯುಂ ನಡುವಗಲೊಳ್ನಿಂದು ಕೆದಱಿದಂ ಕರತತಿಯಿಂ ಕಿಡಿಗಳನೆನೆ ಬಿಱುವಿಸಿಲುಂ ಸುಡುತಿರೆ ನೀರಡಿಕೆ ತಿಣ್ಣಮಾದತ್ತಾಗಳ್ (ಕಾದಂಪು. ೧೪೬); ನಡುವಗಲಾದಿತ್ಯಸಂಕೆ ನೋಡ ಲಂದು (ಧರ್ಮಾಮೃ. ೩-೦೭೬); ಸೊಲ್ಲಿಸಲು ಬಾರದಾನಂದದಿಂದಾಡಿ ವಾಡಿ ದನು ನಡುವಗಲ ತನಕ (ಸಿದ್ಧರಾ. ೨-೦೩); ನಡುವಗಲೊಳ್ ಕಡುನೀರ ನೊಳೊಡವೆರೆದ ಬಳಲ್ಕೈಗಳಿಯಲೆಳಸಿ ಫಳಿಲನೊಳಪೊಕ್ಕು ಮೈದೊಳಿದು (ರಾಜಕೀ. ೬-೩೪೮); ನಡುವಗಲ ಭಾಸ್ಕರಂ ನಿಶ್ಚಲಂ ಪೊಳೆಯುತಿರ್ದಂ (ರಾಮಾಶ್ವ. ೩೧-೦೩). **ನಡುಹಗಲ್**: ಮರುಸ್ಥಳದ ಮಾಳದೊಳ್ ನಡು ಹಗಲ್ವರಂ ಗ್ರೀಷ್ಮದೊಳ್ ಸುರುಳ್ವಿನೆಗಮಟ್ಟಿ ಬೇವವರ್ಗೆ ಜೋಂಪ ಮಿಮ್ಮಾವ ನಿರ್ಜ್ಜರಾಂಬು ದೊರೆಕೊಳ್ವವೊರ್ (ಆದಿಪು. ೧೩-೫೬); ಸಡೆಯ ಲ್ವೀಜೆಂದು ವೇಗಿ ಬಾಲ್ಗೆಜಗಿದೋಲಜಿವೊದಲಂ ಸಾರ್ದ ನೆಬಲ್ ನಡು ಹಗಲಂ ನಿಗಿಸಿತ್ತು ನುಂಬಿನಿಗಳ್ (ಪರ್ಶಪು. ೩-೨). **ನಡುಹಗಲು**: ನಡುಹಗಲಿನ ಸನ್ನೆಯೊಪುದು ಪಾದಕರೆದುಬಲಕೊಲೆದು ಸಾಗಿದರು (ಪರಿಕ. ೧೬-೦೩೪); ನಡುವಗಲಿನ ಬೇಸಗೆಯ ಮಾರ್ತಂಡನ ಕಡುಝಳದುಬ್ಬರಕಾಗ ಅಡಗುವ ಹಿಮದೊಲಿಪ್ಪತ್ತುಸಾವಿರಬಲ ಮಡಿದುದು (ಕಂನವಿ. ೦೫-೬೯); ನಡುವಗಲಲ್ಲಿ ತಾಂ ನಡಪಿ ದಂತಿಗಳಂ ರವಿತಪ್ತಯೂಥಪಂ ಬಿಡದತಿ ಶೀತಲಸ್ಥಲವ ಸೇವಿಸುವಂತೆಪೋಲ್ (ಶಾಕುಂತ. ೬೨-೧೦೫); ಬೆಳಗು ಬೈಗನು ದುಃಖ ಸುಖದ ಸಮಶೀತೋಷ್ಣದೊಳಗದ್ದಿ, ನಡುವಗಲು ಕುದಿಸಿ ಒಣಗಿಸಿ (ನಲಮು. ೬೪-೫). **ನಡುಹಗಲು**: ಕಂಡಿರೇ ಮುರವೈರಿ ದಳವತಿ ಚಂಡ ಬಳನಹ ನಡುಹಗಲ ಮಾರ್ತಾಂಡನಂತಿರೆ ತೋಱುತೈದನೆ ರಥವ ತಿರುಹೆಂದ (ಕುಮ್ಮಾಳ. ೧೪-೩೬); ನಡುಹಗಲ ಸೂರ್ಯನನಳುಕಿಸುವುದೇ ಮಂಜು (ನಿಧಾಗ. ೧೦-೫೬-೪೮); ನಡುಹಗಲ ಸಿರಿಹೊತ್ತು, ಭಾಸ್ಕರನ ಸುಳುವಿಲ್ಲ (ಗೊಲ್ಲೂಕಾ. ೧೦-೨೬೫); ನಡುಹಗಲಿನ ಆಕಾಶವನ್ನು ನೀವು ನೋಡಿರ ಬಹುದು (ರಾಮಾನ. ೧೦೬); ನಡುಹಗಲಲ್ಲಿ ಸೂರ್ಯನ ಸೆಕೆಯಿಂದ ಪಾರಾ ಗಲು, ತಂಪಾದ ನೆರಳಲ್ಲಿ ಮಲಗಿ ವಿಶ್ರಾಂತಿ ಪಡೆದರು (ಪಾತಸ. ೬೯). [ನಡು$_{3}$ + ಪಗಲ್]

ನಡುವಗಲು 'ನಡುವಗಲ್' ನೋ.

ನಡುವಗಲ್ಪಂಜು (ನಾ). (ದೇವರ ಅಥವಾ ಹಿರಿಯ ವ್ಯಕ್ತಿಗಳ ಗೌರವಾರ್ಥವಾಗಿ) ಮಧ್ಯಾಹ್ನದಲ್ಲಿ ಉರಿಸಂವ ಪಂಜು; ಹಗಲು ದೀವಟಿಗೆ: ಪಿಡಿದೆರಳ್ ಸತ್ತಿಗೆಗಳಿರಡೆರಳ್ ಚವರಗಳ ನಡುವಗಲ್ಪಂಜುಗಳ . . . ಗದಾದಿಯಾಯುಧಮನುಱಿ ಜಡಿವುತ್ತ ಸಿಡಿಲ ಬಳಗಂಗಳೆನೆ ಬಂದುದು ಪದಾತಿಬಲಮೇನೆಂಬೆನು (ತಿಬಪು. ೪೭-೩೮). [ನಡುವಗಲ್ + ಪಂಜು]

ನಡುವಟ್ಟು (ನಾ). ಬಿಂಬದ ಮಧ್ಯಭಾಗ; ಮಂಡಲದ ನಡುಭಾಗ: ಒಡಲೊಳ್ ಪೊತ್ತ್ಪನಾವ ವಸ್ತುವನಹೀಂದ್ರಂ ಕಂದದೊಳ್ ಶಾರ್ಙ್ಗನುಂ ನಡುವಟ್ಟೊಳ್ ಪಗಲಾಣ್ಮಂ . . . ತೊಡರ್ದಿರ್ಕಾ ವರವಸ್ತ್ರ ವೀರ ಚಿಕದೇವೇಂದ್ರಕ್ಷಮಾಪಾಲನಂ (ಚಿಕವಿ. ೫-೨); ಅಚ್ಚಪೊಚ್ಚವೊಸ ಸೇವಂತಿಗೆ ಯೆಸಟ್ಟರದ ಸುತ್ತಿನಿಂದಿನಿಸುಂ ನಡುವಟ್ಟನುಬ್ಬಿದು ತಲೆಯೆಡೆಯುಂ

ಬೆಳರ್ತಿಸುವೋರೆಸಿಕ್ಕಿ ತನ್ನ ಕುಲದೇಟ್ಗಿಯಂ ನಿಟ್ಟಸಲ್ಕಿಟ್ಟಿಂದ ಚಂದಿರನೆಂಬ ಸಂದೆಯಮಂ ಸಮನಿಸುತ್ತಿದೆ (ಚಳವಂ. ೮೧-೩೧).

[ನಡು$_{೩}$ + ಬಟ್ಟು$_{1}$]

ನಡುವಟ್ಟೆ (ನಾ). ಮಧ್ಯದಾರಿ ; ಮಾರ್ಗಮಧ್ಯ : ವಿಸರ್ವೆತ್ತ ತೀರ್ಥ ಕ್ಷೇತ್ರಂಗಳೊಳ್ ಸಂಚರಿಸುತಿಪ್ಪನ್ನಂ ನಡುವಟ್ಟೆಯೊಳ್ ಪಲಂಬರಂ ಕರ್ವೇಡರಂ ಕಂಡೆಂ (ಶಾಮಶಾಕ್ಷ. ೭೬-೧೩). [ನಡು$_{೩}$ + ಬಟ್ಟೆ$_{1}$]

ನಡುವನ (ನಾ). ಕಾಡಿನ ಮಧ್ಯಭಾಗ; ಅರಣ್ಯದ ಮಧ್ಯಭಾಗ: ನೆರಹಿದರದಟಗಂಧರ್ವರು ಭಟವ್ರಜವ ಬಂದುದದು ನಡುವನಕೆ ಕೌರವ ವ್ಯೂಹವನು ಕರೆದರು ವಿನೋದಕೆ ಬಂದಿರೈ ನಾರಾಚಸಲಿಲಕ್ರೀಡೆಯಿದೆ ಯೆನುತ (ಕುವ್ಯಾಅ. ೧೮-೩೩). [ನಡು$_{೩}$ + ವನ]

ನಡುವನೆ, ನಡುವಂನೆ (ನಾ). ಮನೆಯ ಮಧ್ಯಭಾಗ : "ನೆಱಿ ನಡುವನೆ ನಟ್ಟವನೆಯುಮಕ್ಕುಂ ಬುಧರಿಂ" (ಕವಿಕಂ. ೧೪೪). ನಡುಮನೆ : "ನಟ್ಟವನೆಯೆನೆ ನಡುಮನೆಯುಮಕ್ಕುಂ" (ಕಲ್ಕಿಕ್ಕಿ. ೪೩); ಅಸುವೆಱೆರಲೊನೆಕೆ ಗೂಟಂ ಪೊಸತಿಲು ನಡು[ಙಾಙಾಂ. ಮನೆ]ಮನೆಯ ಕಂಭವೊಲೆ ಪಡಿ ಪಾಲುಂ . . . ಸಮಸ್ತಂ ದೆಯ್ವಮಿಂತಿವೆಂಬಮೂರ್ಧರ್ (ಸಮುಹ. ೯-೪೨) ; ನಡುಮನೆಯೊಳಿರ್ದವನ ಕೋಣೆಗೊಡಗೊಂಡೊಯ್ದು ಪಡಿಗದವನಿಕ್ಕಿ ಉಮ್ಮಳಿಸಿ ಸುಜ್ಜನೆ ಸುಯ್ದು ಬಂದ ಭಕ್ತರ್ಗೆ ನೆಱಿ ಬೋನವಂ ಮಾಡುತಿರೆ (ಕಲಿಙಾ. ೭೬-೭೬) ; ತನ್ನ ಧಾತ್ರನಪ್ಪ ಯಜ್ಞನಂ ನಡುಮನೆಯ ಜಗಲಿಯಂ ತೆರಳಲಾಗದೆಂದು ನಿಯಮಾಜ್ಞೆಯಂ ಕೊಟ್ಟು ಪೋಗೆ (ಧರ್ಮಾಪ. ೩-೧೩೮); ನಡುಮನೆಯೊಳಗೊಂದು ನಾಲ್ಕು ತೆಂಗಿನ ಮರ . . . ತಲೆ ಮೊದಲಿಲ್ಲದೆ ಬೆಳದು ಹಣ್ಣಾಯಿತು (ಪುರಂದ. ೨-೧೯೦ ಪದ್ಯವಿ) ; ಊಟವಾದ ಮೇಲೆ ನಡುಮನೆಯಲ್ಲಿ ಕುಳಿತುಕೊಂಡು ಮೂವರೂ ಲೆಕ್ಕದ ಪರಿಶೀಲನೆ ಮಾಡತೊಡಗಿದರು (ಮುರಳಿ. ೦೫೮) ; ವೆಂಕಮ್ಮನವರು ನಡುಮನೆಗೆ ಬಂದು ಹುಡುಗರ ಗುಂಪನ್ನು ನೋಡಿ ಸ್ವಲ್ಪ ದಿಗಿಲು ಬಿದ್ದರು (ಳಳಹು. ೦೦).

ನಡುಮನೆ ಕಂಬ = ಮನೆಗೆ ಆಧಾರಸ್ತಂಭದಂತಿರುವವನು ; ಮನೆಯಂ ಹಿರಿಯ,—ಮುಂಖ್ಯಸ್ಥ. [ನಡು$_{೩}$ + ಮನೆ]

ನಡುವರಿ (ನಾ). [ನಾಟ್ಯ] ಕರಣಗಳಲ್ಲಿ ಒಂದು ಬಗೆ: ನಡುವರಿ ಮೊಸಳೆವರಿ ಜಲಶಯನಚ್ಯುತಂ ಮತ್ಸ್ಯಪುಟಂ ಲಂಕಾದಹನಮೆಂಬ ಪಲವುಂ ತೆಱದ ಕರಣಂಗಳಿಂ . . . ಎರಡುಂ ತೆಱದ ನೃತ್ಯಭೇದದಿಂದಾಡಿ (ಧರ್ಮಾಪ. ೨-೨೬೮). [?]

ನಡುವಲೆ (ನಾ). ಬಲೆಯ ಎರಡು ಬೇರೆ ಬೇರೆ ಕೊನೆಗಳನ್ನು ಭೂವಿಯಲ್ಲಿ ನಾಟಿರುವ ಒಂದು ಬಗೆಯ ಬಲೆ (?) : ತಡಿಕವಲೆ ಕಣ್ಣಿವಲೆ . . . ನಡುವಲೆ ತಡವಲೆ ಸಿಡಿವಲೆ ನಿಡುವಲೆಗಳೊಪ್ಪಿದವು ಲುಬ್ಧಕರೊಳ್ (ಗಿರಿಕ. ೧-೬೦). 'ನಡೆವಲೆ' ಪರಾ. [ನಡು$_{1}$ + ಬಲೆ$_{1}$]

ನಡುವಳಿ (ನಾ). ಮಧ್ಯಭಾಗ : ನೀರುಳ್ಳಿ ಹಸಿಯಲ್ಲದ ಹುಡಿಯು ತುಪ್ಪದಿ ಹುರಿದು ಮತ್ತವಾ ಹೋಳುಗಳ ನಡುವಳಿಯ ಕತ್ತಿಯೊಳು ಸೀಳಿಕೊಂಡು . . . ನಾರಿಂದಮಂ ಬಿಗಿವುದು (ಸೂಪಶಾ. ೫-೧೩) : ಆ ಮಧ್ಯದ್ವೀಪದ ನಡುವಳಿಯ ಮಹಾಮೇರುಮಹೀಧರಮೆಸದತ್ತು (ಜಯಾ. ೧-೩೨).

[ನಡು$_{೩}$ + ಬಳಿ$_{3}$ (< ಬಟ್ಟಿ)]

ನಡುವಾಯ್, ನಡುವಾಯ್ (ಕ್ರಿ). ೧. ನಡುವೆ ಹಾಯಂ ; ವಂಧ್ಯೆ ಪ್ರವೇಶಿಸು. 'ನಡುವಾಯಿ' ಪರಾ. ನಡುಪಾಯ್ : ೨. ಕಾಲಕ್ಕೆ ವಯಂಚಿತವಾಗಿ ಹೊರಬೀಳು ; ವಂಧ್ಯಕಾಲದಲ್ಲಿ ನೆಗೆ : ಈಂಬ ಸಿಂಹಿಕಿಶೋರಂ ನಡುಸೂಲೊಳ್ಳಿರ್ಕೆ ಕಣ್ಣಂ ತೆಱೆದಿ ಭವತಿಯಂ ತಾಱಲೊಳ್ಕಂಡು ಕಾಯ್ದಿಂ ನಡುವಾಯ್ದಾ ತಾಯ್ಗೆ ದುಃಖಪ್ರಸವಸಮಯದೊಳ್ತಂದುದಂತೊಂದಲಂಪಂ (ಅನಂಪು. ೦೨-೬೨).

[ನಡು$_{೩}$ + ಪಾಯ್$_{1}$]

ನಡುವಾಯಿ (ನಾ). ವಂಧ್ಯೆ ಪ್ರವೇಶಿಸುವವನು ; ನಡುವೆ ತಲೆಹಾಕುವವನಂ : ಬಣಗುಗಳು ಭೀಮಾರ್ಜುನರು ಕಾರಣಕ ನೀ ನಡುವಾಯಿ ಧರ್ಮದ ಕಣಿ ಯುಧಿಷ್ಠಿರನೆತ್ತ ಬಲ್ಲನು ನಿನ್ನ ಮಾಯೆಗಳ (ಕುವ್ಯಾಗ. ೬-೩೯). [ನಡುವಾಯ್ + — ಇ]

ನಡುವಾಯು (ನಾ). ಸೊಂಟದಲ್ಲಿ ಬರುವ ವಾಯುರೋಗ, —ಸಂಧಿವಾತಃ (ಕಸಂಗ್ಲಾ. ೦೨೪). 'ಕಟಿವಾತ' ಪರಾ. [ನಡು$_{೩}$ + ವಾಯು]

ನಡುವಿಡಿ (ಕ್ರಿ). ನಡುವನ್ನು ಹಿಡಿ ; ಸೊಂಟವನ್ನು ಬಳಸು : ಉರ್ವಿಪರ್ವೆ ಬೆಳ್ದಿಂಬಂ ಸುತ್ತಿ ನಡುವಿಡಿದ ಕಟ್ಟಣ್ಮಗೇಂ ನೇವಳಂ ಬಿಗಿವುದಲ್ತೆ (ಕಾಲೂರ. ೧೪೮-೬೨೩). [ನಡು$_{೩}$ + ಪಿಡಿ$_{1}$]

ನಡುವಿರುಳ್$_{1}$, ನಡುವಿರಂಳು$_{1}$ (ನಾ). = ನಡುರಾತ್ರಿ : "ನಿಶೀಥಃ, ಮಹಾನಿಶಾ — ಈ ೨ ನಡುವಿರುಳ್" (ಹಲಾಯು. ೧೮-೧೦೯) ; ಜಿನಮಂದಿರದೊಳ್ ನಡುವಿರುಳಿನಂ ಪೂಜಾವೈಭವಮಂ ನೋಡುತ್ತಿರ್ದು (ಧರ್ಮಾಮೃ. ೨-೨೦೬) ; ನಡುವಿರುಳೊಳಿದ್ದ ಕುರುಡಂಗೆ ಅಗಸೆಯಲ್ಲಿ ಬೆಳಗಾದಂತೆ (ಬಸವ. ೨೪೭). ನಡುವಿರುಳು$_{1}$: ನಡುವಿರುಳಲ್ಲಿ ಹೊರಟವರಿಗೆ ಹೆಬ್ಬಾಗಿಲಲ್ಲಿ ಬೆಳಗಾಯಿತು (ಗಾಡ). [ನಡು$_{೩}$ + ಇರುಳ್]

ನಡುವಿರುಳ್$_{೩}$, ನಡುವಿರಂಳು$_{೩}$ (ಅ). ವಂಧ್ಯರಾತ್ರಿಯಲ್ಲಿ; ನಡುರಾತ್ರಿಯಂ ಸವಯದಲ್ಲಿ : ನಡುವಿರುಳ್ ಕರ್ಪಟಮಂ ಪಱಿದುಟ್ಟು ನಾಗವುರಕ್ಕೆ ಪೋಗಿ (ಶಾಂತಿಪು. ೯-೪೦೮) ; ನಡುವಿರುಳವರ್ ನಾಟಕಂ ನಲಿದು ಮಱೆದೊಱಗಿರ್ದ ಸಮಯದೊಳ್ (ಪಂಡತಂ. ೨೭೪-೧) ; ನಡುವಿರುಳಾರುಮಿಲ್ಲದೆಡೆಯೊಳ್ ಕೊರಲೊಳ್ ವಧು ಕೋದು ಬಳ್ಳಿಯಂ ಮಡಿಯಲೊಡರ್ಚಿ (ಪಂರಾಮಾ. ೮-೦೫) ; ತರುಣಿ ನಡುವಿರುಳ್ದಿ ಕರ್ಣನ ಹೊರೆಯೊಳಾ ವಿರ್ಭವಿಸಲು (ಕುವ್ಯಾಅ. ೬೦೫. ೨೩-೪). ನಡುವಿರುಳು$_{೩}$: ನೆಲಮಟ್ಟಣಕ್ಕೆ ಬರೆ ನಡುವಿರುಳು ನಡೆತಂದು ಊರ ಹೊಱಗಣ ಮಸಣವಟ್ಟಗೆಯೊಳಿರಲಂದು (ನಂದಿರ. ೭-೫೪) ; ನಡುವಿರುಳು ಕಲಿವಾರ್ಥನರ್ಚಿಸಿದನು ನಿಜಾಯುಧವ (ಕುವ್ಯಾಕ್ರೋ. ೯-೩) ; ಪೊಡವಿಪತಿಯೆಡೆಗೊಯ್ವೆಯಾತನ ಬಿಡಲಿ ಮೇಣಲ್ಲದೊಡೆ ಕೊಲಿಸಲಿ ನಡುವಿರುಳು ರಣದೊಳಗೆ ಕೊಂದುದ ಮಜ್ಜಿದುದಿಲ್ಲಿಂದ (ಕಾತಿಕಾ. ೪೪-೪೭) ; ದೀವಿಗೆಯು ಕಡುಬೆಳದು ಸುಟ್ಟುದೆನಿಪ ಶಂಕೆಯ ಬೆಳಸಿ ಕಡುನಡುವಿರುಳದಕೆ ಕಿಚ್ಚಿಕ್ಕಿ ಹೊಱವಂಟ (ಸಾಳ್ವಭಾ. ೩೫-೫) ; ಬೇಗೆಯೊಳು ಹೋಗದಿರು ಮೂಗರೊಳು ಸುಡಿಯದಿರು ಆಗದರ ನಂಬಿ ಕೆಡದಿರು ನಡುವಿರುಳು ಹೋಗದಿರು ಪಯಣ (ಸರ್ವಜ್ಞ. ೦೫೪೫). [< ನಡುವಿರುಳ್$_{1}$]

ನಡುವಿರುಳು$_{1}$ 'ನಡುವಿರುಳ್$_{1}$' ನೋ.

ನಡುವಿರುಳು$_{೩}$ 'ನಡುವಿರುಳ್$_{೩}$' ನೋ.

ನಡುವೀದಿ, ನಡುಬೀದಿ (ನಾ). ಬೀದಿಯ ನಡುಭಾಗ ; ದಾರಿಯ ಮಧ್ಯಭಾಗ : ನಿಜಜನನಿ ನೀರ್ಗೆ ಪೋದ ಪೊಳ್ತಿನೊಳಾ ಕಳಕಳಮಂ ಕೇಳ್ದು ನೋಡಲೆಳಸಿ ಸಡಗರಂ ಮಿಗೆ ನಡುವೀದಿಗೆ ತಡೆಯದೆ ಬಂದು (ರಾಜಶೇ. ೧೩-೯೫೮). ನಡುಬೀದಿ : ಪಶು ಮಡುವಿನ ಅಗ್ಗಣಿಯ ಕುಡಿದು ನಡುಬೀದಿಯಲ್ಲಿ ಬರುತಿರಲು (ಸಿದ್ಧೇವ. ೪೮-೧೩೬) ; ಅವಳನ್ನು ಕುರಿತು ಯೋಚಿಸಲು ನಡುಬೀದಿ ತಕ್ಕ ಸ್ಥಳವಲ್ಲ (ದುಂಡಿಳ. ೬) ; ಏನಿಲ್ಲಿ ನಿಂತುಬಿಟ್ಟಿರಿ ಮೂಟೆಗಳ ನಿಳಂಹಿ ನಡುಬೀದಿಯಲ್ಲಿ ? (ಕಂದ್ರಸ. ೪೨).

[ನಡು$_{೩}$ + ಬೀದಿ]

ನಡುವು (ನಾ). ನಡು ; ವಂಧ್ಯಭಾಗ : ವಿಾನಂಬುಬುವುವುಮಂ ನೀರಿಲ್ಲದ ಕೆಱಿಯ ನಡುವುಮಂ . . . ಇಂತೀ ಪದಿನಾಱುಂ ಕನಸುಗಳಂ . . . ಕಂಡೆನೆಂದಂಜೆ (ವಡ್ಡಾರಾ. ೮೫-೩೭) ; ನಡುವಿನಲ್ಲಿ ಅಧಿಕಾರ ಬಂದರೆ ಅವನನ್ನು ಹಿಡಿಯ ಸಲ್ಲ, ನಡುವಿನಲ್ಲಿ ಸೀರೆ ಹರಿದರೆ ಉಡ ಸಲ್ಲ (ಗಾಡ).

[ದೇ.ಪ ತಮಿ. ನಟುವು ; ತುಳು. ನಡುಪುಲು ; ತೆಲು. ನಡುಮು.]

ನಡುವೂರು (ನಾ). ಊರಿನ ಮಧ್ಯಭಾಗ ; ಪಟ್ಟಣದ ಮಧ್ಯಸ್ಥಳ,-ಕೇಂದ್ರಪ್ರದೇಶ : ದುರಾಸೆ ಮುಂದುಗೊಂಡು ನಾನಾ ದೇಶವ ತಿರುಗಿ ಹುಸಿಯ ಬೊಗಳಿ ವ್ಯಾಪಾರದ ಮಱಿಯಿಂದ ನಡುವೂರ ಬೀದಿ ನಡುವೆ ಕುಳಿತು (ಮಡಿಮಾ. ೪೭-೬೪). [ನಡು$_2$ + ಊರು$_3$ (< ಊರ್)]

ನಡುವೆ$_1$, ನಡವೆ (ನಾ). ಮನೆಯ ಮಧ್ಯದ ಭಾಗ ; ನಡುಮನೆ : ಇಷ್ಟರಲ್ಲಿಯೇ ಪುನಃ ನಡುವೆಯ ಬಾಗಿಲಲ್ಲಿ ಅಮ್ಮೈಯ್ಯ ಬಂದು ನಿಂತಿದ್ದರು (ಶಂಗಾಳ್ಳ. ೪); ನಡುವೆಯ ಕಡೆಗೆ ಬಾಗಿಲು ತೆರೆದ ಕೋಣೆಯಿಂದ ತಂಬಾಕು ಹೊಗೆಯನ್ನು . . . ಕುಡಿಯುತ್ತಿದ್ದಂತೆ ಅವಳ ಬಯಕೆ ಕಾವೇರುತ್ತಿತ್ತು (ಪುನರು. ೦೩೬). **ನಡವೆ** : ಒಡನಾ ಪೂಧತ್ತಾಟ್ವಾರ್ ನಡವೆಯೊಳಿನಿತೆಡೆಯುನೀವುದೆನೆ (ದಿವ್ಯಕ. ೨-೯) ; ಗಣಕಾವನಿತಾಲಯಂ ಮೆರೆಗುಮವುಗಳೊಂದರ ಮುಂಬಾಗಿಲ ನಡವೆಯ ಜಗುಲಿಯ ರತ್ನಪಂಜರದಲ್ಲಿ (ಅರ್ಜುನವಿ. ೨೦-೩೮೫) ; ಒಬ್ಬ ಬ್ರಾಹ್ಮಣನ ಮನೇ ನಡವೆಯಲ್ಲಿ ಇಳುಕೊಂಡರು (ಕಥಾಮಂ.IV, ೨೮); ಅಂದಣಾವನೇರಿ ಬಂದಳಣ್ಣನ ಮನೆಗೆ ನಿಂದೀರು ಅಕ್ಕ ನಡವೇಲಿ ಒಳಗೀರೊ ರಂಭೇಯ ಕೇಳಿ ಬರತೀನಿ (ಹಳ್ಳಿಪ. ೦೧೨). [<ನಡು$_2$./ ತೆಲು. ನಡುವ, ನಡವ]

ನಡುವೆ$_2$ (ಅ). ಮಧ್ಯೆ ; ಮಧ್ಯಭಾಗದಲ್ಲಿ : ಇತ್ತರಸನುಮಾ ಇರುಳೊಳ್ ಶ್ವೇತವೃಷಭನಂ ಕನಸಿನೊಳ್ ಕಂಡು ಪೊಟ್ಟಱೊನೋಲಗದೊಳ್ ಆಸ್ಥಾನದ ನಡುವೆ ಸಿಂಹಾಸನಮಸ್ತಕಸ್ಥಿತನಾಗಿ ತನ್ನ ಕಂಡ ಕನಸಂ ಮಂತ್ರಿಗೆ ಪೇಳ್ದೊಡೆ (ಪಡ್ಕಾಕಾ. ೦೦೨-೦೦) ; ರಮಣೀಯಮಪ್ಪ ಗಂಧಿಲವಿಷಯದ ನಡುವೆ . . . ನೂಱ ಪತ್ತಂ ಪೊಟಲ್ಗಳನೊಳಕೊಂಡು (ಆದಿಪು. ೦-೯೫ಅ); ಅಂತು ಮೇರೆದಪ್ಪಲ್ ಬಗೆದ ಮಹಾಸಮುದ್ರಂಗಳೆರಡಱ ನಡುವೆ ಕುಲಗಿರಿಯರ್ಪಂತಿರ್ದಶ್ವತ್ಥಾಮನಂ ಕಂಡು (ಪಂಪಭಾ. ೨-೭೩ಅ) ; ಮೂಱುಂ ಬೆಳ್ಗೊಡೆಯ ನಡುವಿರ್ಪ ನೀನಿರ್ದೆಡೆಯುಮನೆಮಗಱಿಯ ದಂತಾಟಾದುದೆ ಮಗನೇ (ಗದಾಯು. ೩-೭೪) ; ದುಷ್ಟರ ನಡುವಿರ್ದ ಶಿಷ್ಟಂಗೇಗೆಯ್ದುಂ ಸುಖಮಾಗಲಱಿಯದು (ಪಂಚತಂ. ೧೪೬-೦) ; ಕೂಡಲ ಸಂಗಮದೇವ ಭಕ್ತನ ನುಡಿಯ ನಡುವೆ ರಾಶಿಯಾಗಿರ್ಪನು (ಬಸವ. ೧೪೩) ; ಬಿಡದೆ ಬೆಂಡೆದ್ದೇಳ್ವ ತಲೆಗಳ ಗಡಣ ನೀರ್ವಕ್ಕಿಗಳ ಸರಸಿಯ ನಡುವೆ ನಲಿನಲಿದಾಡುತಿರ್ದುದು ಭೀಮವನದಂತಿ (ಕುಪ್ಪಾಕ್ರೋ. ೦೨-೨೩) ; ನನ್ನ ಅವರ ನಡುವೆ ಮೊದಲಿನ ಸೌಜನ್ಯವಿರಲಿಲ್ಲ (ಸಾಗಿಗೀ. ೦೭).

ನಡುನಡುವೆ, ನಡನಡುವೆ (ದ್ವಿರುಕ್ತಿ) : ನಡುನಡುವೆ ಯಮನ ಪಟ್ಟಣವು ಎನ್ನೊಡೆಯ ಪಂಚೇಂದ್ರಿಯ ದೈವಕರು ತಡೆಯದಂತೆ ನೀ ದಯಮಾಡೊ (ಪುರಂದ. ೩-೧೭೭-೩) ; ಈ ವನದ ನಡುನಡುವೆ ತೊಳ ತೊಳಗುತಿರುತಿಹ ಸರೋವರದೊಳೆ . . . ಮೊರೆಮೊರೆವ ಭೃಂಗಾವಳಿಯ ಗಾವಳಿಯ ಕಳಕಳಂಗಳ ನೋಡು ನೋಡು ರವಿತನಯತನಯ (ಶ್ರೀಮಿಥಾ. ೩-೩೭); ತಿಂಗಳಿಗೊಮ್ಮೆ ತರುವ ಮತ್ತು ನಡುನಡುವೆ ತರಬೇಕಾಗುವ ಸಾಮಾನುಗಳನ್ನು ಪಟ್ಟಿಮಾಡಿಟ್ಟುಕೊಳ್ಳಬೇಕು (ಅಡುಸಾ. ೫೩) ; ನಡ ನಡುವೆ "ಚಾಯ್‌ಗರಮ್" ದವರ ಬಾಯಿ-ಗರಮು ಗದಗಮಿಸುತ್ತಿತ್ತು (ದೀಪಹ. II, ೩೮೮). [<ನಡುವೆ$_1$./ತಮಿ. ನಟುವೆ ; ತುಳು. ನಡುವೆ]

ನಡುವೆಟ್ಟು (ನಾ). ಬೆಟ್ಟದ ನಡು,-ಮಧ್ಯಭಾಗ : ಸಿಡಿಲಾಳ್ ತಡೆಯದೆಡೆಯ ನಡುವೆಟ್ಟುಗಳ್ಗೆ ಕಟ್ಟುಬ್ಬರದಿಂ ಬಂದೆಱಗುಗುಂ (ರಾಮಾಶ್ವ. ೦-೬). [ನಡು$_2$ + ಬೆಟ್ಟು$_2$]

ನಡುವೊಗು (ಕ್ರಿ). ನಡುವೆ ಪ್ರವೇಶಿಸು ; ಮಧ್ಯೆ ತಲೆಹಾಕು : ತಗರ್ ಕಾದುವಲ್ಲಿ ನಡುವೊಕ್ಕು ನರಿ ಸತ್ತುದು (ಪಂಚತಂ. ೭೯-೦೮).

[ನಡು$_2$ + ಪೊಗು(<ಪುಗು)]

ನಡುಸಂತೆ (ನಾ). ೧. ಸಂತೆ ಸೇರಿರುವ ಸ್ಥಳದ ಮಧ್ಯಭಾಗ. ೨. ಸಂತೆಯಲ್ಲಿ ವ್ಯಾಪಾರ ಭರಾಟೆಯಿಂದ ನಡೆಯುವ ಸಮಯ,-ವ್ಯಾಪಾರದ ಸಮಯದ ಮಧ್ಯಕಾಲ : ಈಗ ನಡುಸಂತೆಯ ಹೊತ್ತು. ಜನ ನುಗ್ಗುತ್ತಿದ್ದಾರೆ (ಕೂಥಿ). ೩. ಹೇರಳವಾಗಿರುವಿಕೆ ; ಆಧಿಕ್ಯ ; ಯಥೇಚ್ಛವಾಗಿರುವುದು : ಎಡಬಲದೊಳಗೋಲೈಪ ಕೋಮಲೆಯರು ತೊಡೆದ ಲೇಪನವುಟ್ಟ ದುಗುಲ ಮುಡಿಹೂದಂಬುಲಗಂಪಿನ ಕಂಪಿನ ನಡುಸಂತೆಯಾದುದಾಸ್ಥಾನ (ಶ್ರೀಪಾಲಾ. ೩-೬) ; ತೆಂಗಿನ ನಡುಸಂತೆಯಲ್ಲಿ ಕಾಯಿಗೆ ಬರವೇ ? (ಕೂಥಿ). [ನಡು$_2$ + ಸಂತೆ$_1$]

ನಡುಸರಕು (ನಾ). ವ್ಯವಹಾರದಲ್ಲಿ ವಿನಿಮಯಕ್ಕಾಗಿ ಇಬ್ಬರ ನಡುವೆ ಬಳಸುವ ಸರಕು,-ಪದಾರ್ಥ : ಅಕ್ಕಿ, ಜೋಳ ಒಂದು ಉಪಯುಕ್ತ ಧಾನ್ಯವಿನಿಮಯದ "ನಡು-ಸರಕು" ಆಗಬಹುದು (ಪೂಪಾದ. ೦೦೪).

[ನಡು$_2$ + ಸರಕು$_3$]

ನಡುಸರು (ನಾ). ನಡುವಿನ ಉಸಿರು ; ಮಧ್ಯೆ ಮಧ್ಯೆ ತೆಗೆದುಕೊಳ್ಳುವ ಉಸಿರು (?) : ಕಿಡಿನಯನ ಘರ್ಷಣೆಯೊಳುದುರ್ವಾರಿಕಲ್ಲಳಂತೊಡನೆ ಸುರನದಿಯು ನಡುಸರು ಬಿರ್ದವಂತಾಗ ಮೃಡ ಪೊಡವಿಡಣೆದಮೃತಫಲ ಬತ್ತದಂತಾಗ ಕೊಡುತಿರ್ದ ಶರಣಜನಕೆ (ಮರುಚಾ. ೦-೯).

[ನಡು$_2$ + ಉಸರು$_3$ (< ಉಸಿರ್$_3$)]

ನಡುಸಾಲೆ (ನಾ).=ನಡುವನೆ : ಬಾಗಿಲು ದಾಟಿದ ಕೂಡಲೆ ಒಂದು ವಿಶಾಲವಾದ ನಡುಸಾಲೆ ಕಾಣುತ್ತದೆ (ಶಿವಿಕೋ. I, ೦೯೮) ; ಪಡಸಾಲೇ ಊಟ, ನಡುಸಾಲೇ ನಿದ್ರೆ (ಗಾಡಿ). [ನಡು$_2$ + ಸಾಲೆ$_3$]

ನಡುಸುಳಿ (ನಾ). ನಡುವೆ ಇರುವ ಸುಳಿ, - ಆವರ್ತ, - ಗರ್ತ : ಹೋಲಿಸುವಡಿದು ಮೃತ್ಯುವಿನ ಗೋನಾಳಿ ಹೊಗುವಡೆ ಕಡಲ ನಡುಸುಳಿ ಕಾಳಮೇಘದ ಮೊತ್ತವೆನೆ ರಂಜಿಸಿದುದಾ ವ್ಯೂಹ (ಕುಪ್ಪಾಕ್ರೋ. ೬೦೩. ಪರಿ. ೨೭೬). [ನಡು$_2$ + ಸುಳಿ$_2$ (< ಸುಟ್ಟಿ$_2$)]

ನಡುಸೂಲ್ (ನಾ). ಪ್ರಸವದ ಮಧ್ಯಸಮಯ ; ಹೆರಿಗೆಯ ಮಧ್ಯಭಾಗ : ಬೇನೆಯಿಂ ಧೂಳಿಡುತುಂ ಶೈಲಾಗ್ರದೊಳ್ಕುಱುಸಿ ಮಱುಕದಿಂದೀಂಬ ಸಿಂಹಕಿಶೋರಂ ನಡುಸೂಲೊಳ್ಸಿರ್ಕ ಕಣ್ಣಂ ತೆಱೆದಿಭಪತಿಯಂ ತಾಱಲೊಳ್ಕಂಡು ಕಾಯ್ದುಂ ನಡುಪಾಯ್ದಾ ತಾಯ್ಗೆ ದುಃಖಪ್ರಸವಸಮಯದೊಳ್ಕಂದುದಂತೊಂದಲಂಪಂ (ಅನಂಪು. ೦೨-೬೨).

[ನಡು$_2$ + ಸೂಲ್]

ನಡುಸೆಱಂಗು (ನಾ). ಸೆರಗಿನ ಮಧ್ಯಭಾಗ ; ಉಡಿ ; ಮಡಿಲು : ಉಕಾರಕ್ಕೆ . . . ನಿಡುದೋಳ್, ನಿಡುವಯಣಂ, ನಡುಸೆಱಂಗಂ (ಕಮಾದ. ೧೯೦ ಪ್ರಯೋ). [ನಡು$_2$ +ಸೆಱಂಗು]

ನಡುಹಗಲು 'ನಡುವಗಲ್' ನೋ.

ನಡುಹಣೆ (ನಾ).=ನಡುನೊಸಲು : ಕೊರಳೊಳು ವಿಷವುಂಟು ತಲೆಯೊಳು ಹಾವುಂಟು ನಡುಹಣೆಯೊಳು ಬೆಂಕಿಯುಂಟು (ಇಂಚಾಪ. ೭೩-೬೦).

[ನಡು$_2$ + ಹಣೆ$_1$ (< ಪಣೆ$_2$)]

ನಡುಹರೆಯ (ನಾ). ಮಧ್ಯವಯಸ್ಸು ; ಪ್ರಾಯದ ಮಧ್ಯಾವಸ್ಥೆ : ನಡುಹರೆಯದವಳು ಕಾತ್ಯಾಯನಿಕೆಯಕ್ಕು (ಮಂಗರಾ. ೮೯-೨).

[ನಡು$_2$ + ಹರೆಯ (< ಪರಯ)]

ನಡುಹಾದಿ (ನಾ).=ನಡುದಾರಿ : ನಡುಹಾದಿಯಲ್ಲಿ ವಿಮಾನದ ಪಾಡು ಕೆಟ್ಟುಹೋಯಿತು (ರಾಜವ. ೫೦) ; ಹೊರಬಂದ ಗುಂಡಣ್ಣನಿಗೆ, ಕತ್ತಲೆಯ ನಡುಹಾದಿಯ ಆಚೆ ಅಂಗಳಕ್ಕಿಳಿಯುತ್ತಿದ್ದ ಸಾಮಾನುಗಳು ಗೋಚರಿಸಿದುವು (ರಂಗವ. ೮೦). [ನಡು$_2$ + ಹಾದಿ (< ಪಾದಿ$_1$)]

ನಡುಹಾಳೆ (ನಾ). "ಪುಸ್ತಕದ ಹಾಳೆಗಳ ನಡುವೆ ಸೇರಿಸಿದ (ಸಾ., ಬರಿಯ) ಹೆಚ್ಚುಹಾಳೆ, ನಡುಹಾಳೆ" (Interleaf. ಇಂಇನಿ).

[ನಡು$_2$ + ಹಾಳೆ$_1$ (< ಪಾಳೆ$_1$)]

ನಡುಹೊತ್ತು 'ನಡುಬೊತ್ತು' ನೋ.

ನಡುಹೊಳೆ (ನಾ). ೧. ನದಿಯ ಮಧ್ಯಭಾಗ ; ನಡುನೀರು : ಇಂದು ನಾನು ಹಱಗೋಲಲ್ಲಿ ಕುಳ್ಳಿರ್ದು ನಡುಹೊಳೆಯಲ್ಲಿ ಹೋಗಲಿಕೆ ಕಾಮವೆಂಬ ಕೊಱಡು ಆಡ್ಡಬಿದ್ದಿತ್ತು (ವಡಸಂ. ೨೪೯-೨೩) ; ನಡುಹೊಳೆಯ ಹಱಗೋಲ ಮೂಲೆಯ ಕಡಿದಿರಾದರೆ ನಮ್ಮ ಪುಣ್ಯದ ಬಿಡುಗಡೆಯ ಕಾಲವು ಶಿವಾಯೆಂದರಸ ಬಿಸುಸುಯಿದ (ಕುಮಾರ್ಯ. ೯-೩). ೨. ಒಂದು ಊರಿನ ಹೆಸರು : ನಂಜೇಗವಡ ವಿರಕ್ತಗವಡಯಿವರ ಕುಲದೇವರು ನಡುಹೊಳೆಬ್ಸವೇಸ್ವರ (ಎಳ. III, (R), ಗುಂಡ್ಲುಪೇ. ೬೧-೩೨; 1027).

ನಡುಹೊಳೆಯಲ್ಲಿ ಕೈಬಿಡು = ೧. ಹೊಳೆಯ ಮಧ್ಯದಲ್ಲಿ ಹಿಡಿತದ ಸಹಾಯವನ್ನು ತಪ್ಪಿಸು : ನಡುಹೊಳೆಯಲ್ಲಿ ಕೈಬಿಟ್ಟ ಹಾಗೆ (ಗಾದೆ). ೨. ನಂಬಿಕೊಂಡವರಿಗೆ ಅತ್ಯಗತ್ಯವಾದ ಸಮಯದಲ್ಲಿ ಉದ್ದೇಶಪೂರ್ವಕವಾಗಿ ಸಹಾಯ ನಿಲ್ಲಿಸು ; ನಡುನೀರಲ್ಲಿ ಕೈಬಿಡು : ನನ್ನನ್ನು ನಡುಹೊಳೆಯಲ್ಲಿ ಕೈಬಿಡಬೇಡ (ಮಸಕೂ. ೬೮).

[ನಡು$_3$ + ಹೊಳೆ$_1$ (< ಪೊಱೆ$_1$)]

ನಡೆ$_1$, ನಡಿ, ನೆಡೆ (ಕ್ರಿ). ೧. (ಕಾಲುಗಳಿಂದ) ಚಲಿಸು ; ಹೋಗು ; ಗಮಿಸು : "ನಡೆ-ಗಮನೇ" (ಶಮಧಾ) ; ಜಯದ್ರಥನಂ ಕೋಡಗಗಟ್ಟುಗಟ್ಟಿ ಬೆನ್ನಂ ಬಿಲ್ಲ ಕೊಪ್ಪಿನೊಳಿಱಿದು ನಡೆಯೆಂದು ನಡೆಯಿಸಿ (ಪಂಪಭಾ. ೭-೩೦೫) ; ಆ ಧರಿತ್ರೀನಾಥನತ್ಯಂತಹರುಷಾಂತರಂಗನಾಗಿ ಸಿಂಹಾಸನದಿಂದಿಱಿದು ಮುಂದನೇಱಡಿಯಂ ನಡೆದು (ಸುಕುಮಾ. ೮-೧೬೮) ; ನಡೆದೊಡೆ ಕಾಲ್ನೊಂದವುದು (ಧರ್ಮಾಮೃ. ೩-೫೫) ; ತಲೆಯಿಲ್ಲದ ಕಾಗೆ ನೆಲದಲ್ಲಿ ನಡೆಯಿತ್ತು (ಆದಪ. ೦೫-೩೨) ; ನಡೆಯುತ್ತ ನಡೆಯುತ್ತ ಬಳಲುವರಲ್ಲದೆ ಬಟ್ಟೆ ಬಳಲುವುದೆ (ಬಸವ. ೦೦೩) ; ತಲೆ ಮೇಲಣಿಗೆ ಚಿಗಿದುದು ಮುಂಡ ನಡೆದುದು ನೂಱು ಹೆಜ್ಜೆಯನು (ಕುಮಾಸೆ. ೨-೨೦) ; ಭೂತಳದೊಳಗಂಬೆಗಾಲಿಟ್ಟು ನಡವಂತೆ ಚೇತನವಾದುದಂಗಜಗೆ (ಮೋಹತ. ೦೦-೫೯) ; ಪಾದಗಳಿಂದ ಹೆಚ್ಚು ದೂರ ಮತ್ತು ಹಾಗ್ರತೆಯಾಗಿ ನಡೆಯುವುದು ಕಷ್ಟ (ನಾಡಿಗೇ. ೪೪) ; ನಡೆಯೋದು ಕಾಲ್ನಡೆ ಆಡೋದು ಪಾಲ್ಕಿ ಮೇಲೆ (ಗಾದೆ). ೨. ಮುಂದುವರಿ ; ಮುಂದೆ ಸಾಗು ; ಸಾರೋದ್ಧಾರವಾಗು : ತೊಱೆಯ ತಡಿಯೊಳೋಡಮಂ ನಡೆಯಿಸುವ ಮತ್ಸ್ಯಗಂಧಿಯಂ ಕಂಡೆಮ್ಮನೀ ತೊಱೆಯಂ ಪಾಯಿಸೆಂಬುದುಂ ಸಾಸಿರ್ವರೇಱಿದೊಡಲ್ಲದೀಯೋಡಂ ನಡೆಯದೆಂಬುದುಂ (ಪಂಪಭಾ. ೧-೬೮೮) ; ಪನ್ನೆರಡು ಪಳ್ಳಿಗವೀಸ್ಥಿತಿಯೊಳ್ ಸಲ್ವುದು ಚನ್ದ್ರಾದಿತ್ಯರ್ಕ್ಕಳ್ ಉಳ್ಳನ್ನಮ್ಬರಂ ನಡೆವುದು (ಎಳ. IV, ಜಾಮರಾ. ೪೯-೦೩ ; 965) ; ಪಿರಿಯಂ ಜಯಕುಮಾರಂಗೆ ಕುಡುವುದು ಕೊಟ್ಟಂದು ಕುರುಕುಲಸಂಬಂಧಮವಿಚ್ಛಿನ್ನಮಾಗಿ ನಡೆಗುಂ (ಜಾಪುಂಪು. ೭೯-೨೬); ಸಮರಾಭಿಮುಖನಾಗಿ ನಡೆವ ಫಣಿರಾಜಕೇತನನಂ ಸಂಜಯನಂಜದೆ ಮಾರ್ಕೊಂಡು (ಗದಾಯು. ೩-೪೯ ವ) ; ವೆಜ್ಜುಂಕದದಿಗೆಯನ್ದವ ಕೋಲಮುಮಕ್ಷೋಣಿಯಾಗಿ ನಡೆವ ಗದ್ಯಾಣ ಆ ಮಾರ್ಗ್ಗದೆ ಪನ್ನಾಯದಿಂದಕ್ಷೋಣಿಯಾಗಿ ನಡೆವ ಗದ್ಯಾ ೧ (ಸೌಇಇ. XX, ೪೫-೨೯ ; 1071) ; ಕೂಡಲಸಂಗನ ಶರಣರು ನಡೆದ [ಪಾಕಾಂ. ಹೋದ] ದಾರಿ ಭಯ ಕಾಣರಣ್ಣಾ (ಬಸವ. ೦೪೭) ; ಖಟೆಲೆ ನುಡಿದಟಲೆ ಬಗ್ಗಿಸಿ ಘಟೆಲನೆ ನಡೆಯೆಂದು ಜಡಿದು ಸಾರಥಿಯಂ (ಶಮದ. ೧೯ ಪ್ರಯೋ) ; ಅದ್ದುದತಳಕೆ ಅವನಿಯೆನೆ ಹೊದಱಿದ್ದು ನಡೆದುದು ದಂಶಿಘಟೆ ಬರುತಿದ್ದುದಗಣಿತ ರಥಪದಾತಿಗಳಾಹವಾಂಗಣಕೆ (ಕುಮಾರ್ಯ. ೯-೦೩) ; ಈಸುದಿನ ನಮ್ಮಗ್ನಿಹೋತ್ರಕೆ ವಿಾಸಲಳಿಯದೆ ನಡೆದುದೀಗ ವಿನಾಶಕರವಾಯ್ತುದಱಿನಾದುದು ಬರವು ನಮಗೆನಲು (ಕೊರಕಾ. ೦-೯-೨೫) ; ಲಿಪಿರಹಿತಭಾಷೆಯನ್ನು ಆಡುವವರ ವ್ಯವಹಾರವೆಲ್ಲಾ ಹೆಚ್ಚಾಗಿ ಸಂಭಾಷಣೆಯಲ್ಲೇ ನಡೆಯುತ್ತದೆ (ದ್ರಾವಿವಿ. ೪೫) ; ಧರ್ಮಾತ್ಮರಾದ ಮಹೀಶೂರಮನೆತನದಲ್ಲಿ ಹುಟ್ಟಿದ . . . ದೇವರಾಜಮ್ಮಣ್ಣಿಯವರಿಗೆ ಪುತ್ರನ ವಂಶವು ನಡೆಯಲಿ (ಒಚಳ. ೨೦). ೩. ತೆರಳು ; ಹೊರಡು : ಅಂತೆರಡುಂ ಪಡೆಗಳುಂ ಪಣ್ಣಪಣ್ಣನೆ ಪಣ್ಣೆ ಕಾಳಗಕ್ಕೆ ನಡೆಯಲೊಡರಿಸಿದಾಗಳ್ (ಪಂಪಭಾ. ೧೦-೫೦೨) ; ಬೇಡಿದರ್ಗೆ ಬೇಡಿತಂ ಕೊಟ್ಟು ಬಂದಿಱಿವ ಶಸವರಗಲಿಗಳುಮಂ ಮತ್ತಮಣ್ಣೆ ನಡೆದಿಱಿವ ನಡೆಗಲಿಗಳುಮಂ ನೋಡಿ (ಗದಾಯು. ೯-೩೪೨) ; ನಡೆವೆ ನಾನಿರಲೊಲ್ಲೆ ಕೈಲಾಸಪುರಕೆನುತೆ . . . ಪೊಱಮಟ್ಟಳಮ್ಮವ್ವ ಪುರಜನಂ ನೋಡುತಿರೆ (ಶಾರಿರ. ದೇ. ೨೮೮-೩) ; ಒಡಲನೊಡೆದಾ ಜ್ಯೋತಿ ಗಗನಕೆ ನಡೆದುದಿತ್ತಲಿ ಸುರರು ಮರ್ತ್ಯರು ಸುಡುಸುಡೆಂದುದು ಸಾತ್ಯಕಿಯ ದುಷ್ಕರ್ಮವಾಸನೆಗೆ (ಕುಮಾರ್ಯ. ೧೪-೨೪) ; ದಶದಿಕ್ಕಿನ ಪುರಾಧಿಪರೆಡೆಗೆ ನಡೆದುದು ದಂಡು ಬಳಿಕಂದ (ತೊರಕಾ. ೦-೮-೩೦) ; ನಡೆ ಮಜ್ಜನ ಭೋಜನಕೆ ಶೃಂಗಾರದ ತೊಡವುಗಳಿಡು ನೀ ಬೇಗ (ಕಂನವಿ. ೯-೦೩೩). ೪. ತೊಲಗು ; ದೂರ ಸರಿ : ಉಂಬ ಜಂಗಮ ಬಂದರೆ ನಡೆಯೆಂಬರು ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರೆಯ್ಯಾ (ಬಸವ. ೦೯೪). ೫. ಆಚರಿಸು ; ಆಚರಣೆ ಮಾಡು : ಶ್ರೀಬಾಳಾ ಮೇಲ್ಸಿಖಿ ಮೇಲೆ ಸರ್ವ್ವದ ಮಹಾದನ್ತಾಗ್ರದುಳ್ಳಲ್ಮವೊಲ್ ಸಾಲಾಮ್ಬಾಲ ತಪೋಗ್ರದಿನ್ತು ನಡದೊಂ ನೂಱೆಣ್ಬುಸಂವತ್ಸರಂ (ಎಳ.II, ೨೨-೨ ; ಸು. 700) ; ನಡೆಯಿಂ ಧರ್ಮದ ಬಟ್ಟೆಯೊಳ್ ಬಿಸುಡಿಯಾದು ಪ್ಪಾಪದುರ್ಮಾರ್ಗಮಂ (ಸುಕುಮಾ. ೦-೪) ; ಪೊಲ್ಲದಂ ಬಿಸುಟ್ಟನುಪಮಮೈನಮಾರ್ಗದೊಳೆ ತಾಂ ನಡೆಗುಂ ಪರಮೋಕ್ಷಕಾಂಕ್ಷೆಯಿಂ (ಸಮಪ. ೧-೦೮) ; ಜೈನಾಗಮದೋಜೆಯಿಂ ನಡೆ ಬಾಧವ್ರಾತಕೆ ಲೇಸಾಗು (ಧರ್ಮಾಮೃ. ೪-೨೬೦) ; ನುಡಿದಂತೆ ನಡೆಯಲು ಬಾರದಯ್ಯಾ ಕೂಡಲಸಂಗನ ಶರಣರ ಭಕ್ತಿ ಬಾಳ ಬಾಯ ಧಾರೆ (ಬಸವ. ೨೦೦). ೬. ವರ್ತಿಸು ; ನಡೆದುಕೊಳ್ಳು ; ವ್ಯವಹರಿಸು : ಕಡುಗಲಿತನಮುಂ ಚಾಗದ ಪಡೆಮಾತುಂ ವಿದ್ಯೆಯುರ್ಕುಮೊರ್ವನೊಳೆಂತುಂ ನಡೆಯವು ಭುವನಾಂತರದೊಳ್ (ಆದಿಪು. ೦೨-೦೦೪) ; ದಯೆಗೆಯ್ಯೇಂ ಪ್ರಸಾದಮೆಂಬವು ಪೆಱರೊಳ್ ನಡೆಗೆಮ್ಮ ನಿನ್ನಯೆಡೆಯೊಳ್ ನಡೆಯಲ್ವೇಡೆನಗೆ ಕೆಯನೈ ರಾಧೇಯಾ (ಪಂಪಭಾ. ೨-೮೫) ; ನಿಮಗೆ ಕರಿಗಳ್ ದೊರೆಕೊಳ್ವನ್ನಂ ನಿಚ್ಚಲೊಂದೊಂದು ಮೃಗವನಟ್ಟುವೆವದು ಕೈಕೊಂಡಿಂತು ನಡೆವಿರಪ್ಪೊಡೆ ನಿರ್ವಹಿಪೆವಾಗದೊಡೋಡಿಪೋಪೆವೆನೆ (ಪಂಚತಂ. ೮೯-೦೦) ; ಒಡೆಯಂಗುತ್ಸವಮಾಗೆ . . . ಗಡಿದುರ್ಗಂಗಳು ಭದ್ರಮಾಗೆ ಧನಧಾನ್ಯಂ ತೀವೆ ಭಂಡಾರದೊಳ್ ನಡೆವಂ ಮಂತ್ರಿವರೇಣ್ಯನೈ (ಸೋಮೇಶ. ೬೫) ; ಪೊಡವಿವನೊಲುಮೆಯ ಕಡುನೆಚ್ಚಿ ಗರ್ವದಿ ನಡೆಯದಿರೆಚ್ಚಱಿಕೆ (ಪುರಂಜ. ೨-೪೫-೧) ; ನೃಪ ಹಿಂದಣಳಲನು ನೆನೆಯದೆನ್ನವರೆಂದು ನಡೆ ಕಾಮಂಗೆ ಕೊಡದಾರ್ಗಿತ್ತಪಿರಿಸುತೆಯಂ (ಸಾಳ್ವಭಾ. ೩೧-೧೦) ; ನಿನಗಿಂತ ಹಿರಿಯರಾದವರು ಹೇಳಿದ ಮೇರೆಗೆ ನಡೆ (ಮುಂಬಯಿ. ೪-೩೯). ೭. ಕೆಲಸ ಮಾಡು ; ಕಾರ್ಯ ಮಾಡು : ಈ ಗಡಿಯಾರ ಸರಿಯಾಗಿ ನಡೆಯುತ್ತಿಲ್ಲ (ರೂಢಿ); ರಜಾದಿನಗಳಲ್ಲಿ ಶಾಲೆಗಳು ನಡೆಯುವುದಿಲ್ಲ (ರೂಢಿ). ೮. ಜರುಗು ; ಘಟಿಸು ; ಉಂಟಾಗು : ದೇಶದ ಮೇಲೆ ನಡೆದ ಸುದ್ದೀ ತಿಳುಕೊಳ್ಳುವುದಕ್ಕಾಗಿ ವರ್ತಮಾನಪತ್ರಗಳನ್ನು ತರಿಸುತ್ತಾರೆ (ಮುಂಬಯಿ. ೪-೦೭೭) ; ಆ ಊರಿನಲ್ಲಿ ಜಾತ್ರೆ ನಡೆಯುತ್ತದೆ (ರೂಢಿ) ; ಅವರ ಮನೆಯಲ್ಲಿ ಹಬ್ಬ ಹುಣ್ಣಿಮೆಗಳು ವಿಜೃಂಭಣೆಯಿಂದ ನಡೆಯುತ್ತವೆ (ರೂಢಿ). ೯. ಈಡೇರು ; ನೆರವೇರು ; ಪಾಲನೆಯಾಗು : ಲೇಸೆನಿಪ ಮಹಿಷಾಕ್ಷಿಧೂಪದ ಭಾಷೆ ನಡೆಯಲು . . . ಅರ್ಥವನೋಸರಿಸದಿಂತರ್ಪಿಸುತ್ತಿರೆ (ಬಸಪು. ೨೭-೯). ೧೦. ಚಲಾವಣೆಯಾಗು ; ಚಾಲತಿಯನ್ನು ಹೊಂದಿರು ; ಬಳಕೆಯಾಗು : ಸವಕಳಿ ನಾಣ್ಯ ನಡೆಯುವುದಿಲ್ಲ (ರೂಢಿ) ; ಈಗ ಅವನಿಗೆ ಹದಿನಾಲ್ಕನೆಯ ವರ್ಷ ನಡೆಯುತ್ತಿದೆ (ರೂಢಿ). ೧೧. ಆಕ್ರಮಣ ನಡೆಸು ; ಮುತ್ತು ; ಮೇಲೆ ನುಗ್ಗು : ನಿನಗುತ್ತರಾರ್ಧಮೊಂದರ್ಧನಿಮೇಷಮುಹೂರ್ತಮಾತ್ರದಿಂ ಬಾರದೆ ಕೈಗಿನಿತುವರಂ ದೇವರ್ ನಡೆವನಿತುಂ ಮಾಣ್ಬನಿತುಮಂತದಾವುದು ಗಹನಂ (ಆದಿಪು. ೦೩-೨೨).

೧೨. ಸಲ್ಲು ; ಒಳಪಡು : ತುರಗಮೇಧಾಧ್ವರದ ಮೇಲಾರೈಕೆ ನಡೆದುದು ಪರಮಪುಷಿಜಾಬಾಲಿಗವನೀಶ್ವರರ ಮಾನ್ಯತೆಯ ಪರುಟವಣೆ ವಿಜಯಂಗೆ ಸೇರಿತು (ತೊರಣಾ. ೦-೭-೨೪). ೧೩. ಪ್ರವರ್ತಿಸು ; ತೊಡಗು : ಎನ್ನವರಾದರೆ ಜನ್ನಕ್ಕೆ ನಡೆವರೆ ಎನ್ನವರಲ್ಲ ಕೂಡಲಸಂಗಾ ನಿಮ್ಮಾಣೆ (ಬಸವ. ೭೧೨). ೧೪. ಗದ್ಯ ಅಥವಾ ಪದ್ಯದ ಲಯಕ್ಕೆ ಹೊಂದಿಕೊಳ್ಳು : ಪಟ್ಟದಿ ಈಗ ಮಾತ್ರೆಗಳಿಂದ "ನಡೆ"ದರೂ ಒಮ್ಮೆ ಅಂಶಗಳಿಂದ "ನಡೆ" ಯುತ್ತಿದ್ದಿತೆಂಬುದನ್ನೂ . . . ಮರೆಯದಾರದು (ಕೈಪಡಿ. ೧೪೭). ೧೫. ಪ್ರಭಾವಶಾಲಿಯಾಗು ; ಯಶಸ್ವಿಯಾಗು : ನನ್ನ ಮುಂದೆ ನಿನ್ನ ಯಾವ ಆಟವೂ ನಡೆಯುವುದಿಲ್ಲ (ರೂಢಿ). 'ಕೈನಡೆ' ಪರಾ. ೧೬. ನಡಗೆಯಿಂದ ಅಳತೆ ಮಾಡು ; ಹೆಜ್ಜೆಯಿಂದ ಅಳೆ (?): ರಣಾವಳೋಕ ಶ್ರೀಕಮ್ಬಯ್ಯನ್ ಪೃಥುವೀರಾಜ್ಯಂಗೆಯೆ ಬ × × × ರಸರ್ಕ್ಕಟ್ಟಪ್ಪು × × × ಳ ಪೆರ್ಗ್ಗಟ್ಟಪ್ಪನಾ ಪೊಲದಿನ್ನಡದು ಕೊಟ್ಟದು (ಎಕ. II, ೩೩-೪ ; ಸು. 800). P ಇದು ಅನೇಕ ಕಡೆ ನಾಮಪದದೊಡನೆ ಸೇರಿದಾಗ ಬೇರೆ ಬೇರೆ ಅರ್ಥವನ್ನು ಕೊಡುತ್ತದೆ. ಉದಾಹರಣೆಗೆ-'ಆಟನಡೆ', 'ಜೀವನ ನಡೆ', 'ಮಾತು ನಡೆ', 'ವ್ಯಾಪಾರ ನಡೆ' ಇತ್ಯಾದಿ. ನಡಿ : ೧೦. ಸವಿಗೊಂಡನಹಳ್ಳಿಯೆಂದು ಹೆಸರು ನಡಿಯಬೇಕು (ಎಕ. VII, ಶಿವಮೊ. ೯೩-೩೩ ;?). ನೆಡೆ : ೨. ಸುರ್ರಚೆಂದರುಯಿರೊ ಪರಿಯಂತ್ರ ನೆಡೆಯಬೇಕುಯೆಂದು ಆ ಗ್ರಮವನು ಹುಗಿನು ಹೊಯಿಸಿ ಪಲಿಸಿಕೊಟರು (ಎಕ. VII, ಶಿವಮೊ. ೦೦೮-೩೪ ; 1558). ೧೭. ಬಾಳು; ಬದುಕು : ಜನರು ಕೂಡಿ ನೆಡೆಯಬೇಕುಯೆಂದು ನಗಸಮುದ್ರದಮೆಂಬೊ ಗ್ರಾಮವಂನು ಹೆಸರಗಿ ಕಟಿಸಿ (ಎಕ. VII, ಶಿವಮೊ. ೦೦೮-೩೨ ; 1558).

ನಡೆನಡೆ₁ (ದ್ವಿರುಕ್ತಿ) : ಸಮದ ಗಜಗಮನೆಯರ್ ಮುಗಿಲ ಮೇಲೆ ನಡೆಪಾಡುವಾಕೆಗಳ್ ತಮಗೆ ಧರಾಗಮನಂ ಪೊಸತಪ್ಪುದಱಿಂದಮರ್ದಿರೆ ನಡೆನಡೆದು ನಡೆಯಲಾಱದೆ ಸುಟಿದರ್ (ಪಂಪಭಾ. ೭-೮೪) ; ನಡೆನಡೆ ಡೊಂಬುವೇಡ ನಿನಗೇಕೆ. ತಪಸ್ಸಿನ ಕುತ್ತಮೆಂದು ನೇರ್ಪಡೆ ಜಡಿದಟ್ಟಿ (ಧರ್ಮಾಮೃ. ೯-೮೮) ; ನಡೆನಡೆದು ನಿಂದಡಿಗಡಿಗೆ ನೆನೆದು (ಸಿದ್ಧರಾ. ೦-೩೬) ; ಕ್ರಿಯಾಸಮಭಿಹಾರಕ್ಕೆ – ನಡೆನಡೆಯೆಂದು; ಇದರ್ಚಿದರ್ಚೆನೆ ಜಟಾಯು (ಶಮದ. ೧೯೩ ಪ್ರಯೋ) ; ಸಕಳೇಶನ ನಿರೂಪವಿದಕ್ಕೆ ನಡೆನಡೆ ಮಗನೆ ಹೋಹವೆನುತ್ತ (ಬಸಪು. ೪೭-೩೦) ; ತಿರುಹಿ ಗಾಲಿಯ ತೆಗೆದು ಮುಂಗೈಗೊಂಡು ನಡೆನಡೆದು ಅರಿಬಲವನಿಡೆ (ಕುಪ್ಪಾದ್ರೋ. ೬-೩೩). ನಡೆದಾಟ = ಓಡಾಟ; ಅಲೆತ; ಸಂಜಾರ : ಅತಿಯಾದ ನಡೆದಾಟದಿಂದ ಮೈಗೆ ಅಲಸ್ಯವಾಗಿದೆ (ರೂಢಿ). ನಡೆದಾಡಿಸು=೧. ನಡೆಯುವಂತೆ ಮಾಡು; ಓಡಾಡಿಸು : ಸಣ್ಣ ಮಗುವನ್ನು ಹೆಚ್ಚು ನಡೆದಾಡಿಸಬೇಡ (ರೂಢಿ). ೨. ನಡೆದುಕೊಳ್ಳುವಂತೆ ಮಾಡು : ವ್ಯವಹರಿಸುವಂತೆ ಮಾಡು : ಹುಡುಗರು ಅಸ್ತಿಗೆ ಅಧಿಕಾರಿಗಳಾಗಿ ಬಂದಾಗ ತಾವೇ ತಾವಾಗಿ ಸರ್ವಾಧಿಕಾರವನ್ನೂ ಸ್ವಾಧೀನಪಡಿಸಿಕೊಂಡು ಆ ಹುಡುಗರನ್ನು ಸ್ವೇಚ್ಛೆಯಂತೆ ನಡೆದಾಡಿಸಿಕೊಂಡದ್ದುಂಟು (ಇಪ್ಪಳ. ೩೦೩). ನಡೆದಾಡು = ಓಡಾಡು ; ಆಡ್ಡಾಡು : ಅರಸಂದೆಮಱ ನಡೆದಾಡುತವೆ ತಾಯೊಡನೆ (ಸಾಳ್ಕಭಾ. ೩-೯) ; ಮೇರು ನಡೆದಾಡೆ . . . ದಿನಕರ ಕಾರಿರುಳಾಗೆಸೆಯೆ ಸತಿಯರಂ ನಂಬುವರೇ (ನನ್ನಚ. ೩-೪೨) ; ಕುಡಿತೆಗಂಗಳ ಭಾವಿನಿಯರು ನಡೆದಾಡು ತಿರ್ದರು (ಅಬ್ಬಲೂ. ೩-೦೦೮) ; ಹೆಚ್ಚು ನಡೆದಾಡಿ ಆಯಾಸ ಮಾಡಿಕೊಳ್ಳಬೇಡ (ರೂಢಿ). ನಡೆದುಕೊಳ್ಳು, ನಡಕೊಳ್ಳು = ೧. ವರ್ತಿಸು; ವ್ಯವಹರಿಸು : ರಾಮನು ಯಾವಾಗಲೂ ಗುರುಹಿರಿಯರಲ್ಲಿ ವಿಧೇಯನಾಗಿಯೆ ನಡೆದುಕೊಳ್ಳುತ್ತಿದ್ದನು (ಪಾರಾಕ್ಯ. ೩೬) ; ಎಲ್ಲ ಪ್ರಜೆಗಳೂ ಇವರ ಅಪ್ಪಣೆಯ ಮೇರೆಗೆ ನಡಕೊಳ್ಳತಕ್ಕದ್ದು (ಮುಂಬಯಿ. ೯-೩). ೨. ವ್ರತ, ಪೂಜೆ ಮುಂತಾದುವನ್ನು ಆಚರಿಸಿ ಭಕ್ತಿಯನ್ನು ತೋರಿಸು : ಇವರು ಯಾವತ್ತು ಹಿಂದೂದೇವತೆಗಳಿಗೆ ನಡಕೊಳ್ಳುವರು (ಕಭಾಗ. ೧೦೮) ; ಪಥ್ಯ–ಉಪಚಾರವನ್ನು ಮಾಡಿದ್ದಾಯಿತು. ದೇವರು–ದಿಂಡರಿಗೆ ನಡಕೊಂಡದ್ದಾಯಿತು. ಏನೂ ಉಪಯೋಗವಾಗಲಿಲ್ಲ (ಹೊಸಕ್ಷಿ. ೧೮೪). ನಡೆದು ಬರು= ಮುಂದುವರಿ; ಮುಂದೆ ಸಾಗು : ನಾನು ಸ್ಥಾಪಿಸಿರುವ ಧರ್ಮದಾರ್ಢ್ಯವು ಬಹುಕಾಲದವರೆಗೂ ನಡೆದುಬರುವುದು (ಕಗದ್ಯ. II, ೧೦). ನಡೆದೊವಲ ಪಾಪೆ = ಚಲಿಸುವ ತೊಗಲ ಬೊಂಬೆ ; ಶರೀರ ; ದೇಹ : ನಡೆದೊವ[ಪಾಠಾಂ. ಗ]ಲ ಪಾಪೆ...ಘನರೋಗದಾಗರಂ ತಾನೆನಿಪೀಯೊಡಲಿದು ಕಾಲನ ತಿಂಗುಱ ಜಡವನುಜರ್ ನಿತ್ಯಮೆಂದು ಮೆಯ್ಮಱದಿರ್ಪರ್ (ತ್ರಿಪುವಿ. ೩೩-೦೧೨).

[ದೇ.೩ ತಮಿ. ನಟ; ಮಲ. ಕೊಡ. ನಡ; ತೆಲು. ನಡಚು, ನಡುಚು; ಕೊಲಾ. ಅಡ್ಗ್; ನಾಯ್ಕಿ. ಅರ್ಗ್]

ನಡೆ₂ (ನಾ). ೧. (ಕಾಲಿನಿಂದ) ನಡೆಯುವಿಕೆ ; ನಡಗೆ ; ಚಲನೆ ; ಗಮನ : "ಪರಿಕ್ರಮಂ ಪರಿಸರ್ಪಮೆನೆ ನಡೆ" (ಮಂಗರಾ. ೧೩೦-೧೬) ; ಒರ್ವ[ನೊರ್ವ]ಳ ನಡೆಯ ನುಡಿಯ ಮುಡಿಯ ಗಾಂಪಿಂಗೆ ಮುಗುಳ್ನಗೆ ನಕ್ಕು ತನ್ನ ಕೆಳೆಯಂಗೆ ತೋಱ (ಪಂಪಭಾ. ೪-೯೩ವ) ; ಬಾಳ ಮೊನೆಯಂಬಿನ ತಿಂತಿಣಿಯೊಳ್ ತಗುಳ್ದು ಕಿಕ್ಕಿಱಿಗಿಱಿದಿರ್ದ ಕೊಳ್ಗುಳದೊಳಂ ನಡೆವೀ ನಡೆಗೆಂತು ನೋಂತೆಯೋ (ಪಂಪಭಾ. ೧೩-೩೨) ; ಕಡುಗೂರ್ಪಿಲ್ಲದ ಕರವಾಳ್ . . . ನಡೆಯಿಲ್ಲದ ಕರ್ತೆ ಮನಕ್ಕೆಡಂಬಡಂ ಮಾಟ್ಕುಮರ್ತಿಯಂ ಮಾಡುಗುಮೇ (ಅಜಿಪು. ೬-೯೬) ; ಆವೆಡೆ ಹಂಸಗೀ ನಡೆಯ ಚೆಲ್ವೆನೆ ನೂಪುರದಿಂಚರಂ ಸ್ಮರಂ ಜೇವೊಡೆದಂದಮಾಗೆ . . . ಬಂದಳದೊಂದು ಲೀಲೆಯಿಂ (ಮಲ್ಲಿಪು. ೪-೭೩) ; ಮರಾಳಂ ನಡೆಯೊಳುರುಪಿಕಂ ನಾದದೊಳ್ . . . ಭೃಂಗಂ ವಿಚಲನ್ನೀಲಾಳಕಾನೀಕದೊಳಮರ್ದೆಸೆಯಲ್ ಶೋಭಿಕುಂ ವಾರನಾರೀನಿಚಯಂ (ಉದ್ಯಟಿ. ೧೦-೪೩) ; ಬನದೊಳೆಡೆಯಾಡುವ ಸಬರಿಯರ ನಡೆಯನೇಡಿಸುವಂತೆ ಮೆಲ್ಲಡಿಯಿಡುವ ಪೆಣ್ಣಂಚೆಗಳ ಬಳಗಂಗಳ (ಕಬ್ಬಿಕಾ. ೧೮) ; ಮಾಯೆ ತನ್ನಂತೆ ನಡೆಯ ಕಲಿಸಿದಳಂಚೆ ವಿಂಡಿಗೆ ನುಡಿಯ ಕಲಿಸಿದಳರಗಿಳಿಗೆ (ಪ್ರಭುಲೀ. ೩-೩೨) ; ಅಂಚೆಯ ನಡೆಯನಿದಂ ತನತೆನುತುಂ ಮಂಚಲ್ಪಿಡಿವೊಳ್ನಡ (ಜಯಕಾ. ೨-೨) ; ನಡೆ ಮಂದವಾಯ್ತು ನಡುಗಡಸಿತ್ತು ಬಡತನಂ ನುಡಿ ಮೆಲ್ಲನಾಯ್ತು ಕೆಳವೆಯ ಮಡಿಗಳಂ ಕಾವ ಮಡದಿಯರ್ಗೆ (ಭಾವಜಿಂ. ೨-೯). ೨. ಆಚರಣೆ ; ನಡವಳಿಕೆ ; ಆಚಾರ ; ಚರ್ಯೆ ; ಸಂಪ್ರದಾಯ ಎನ್ನ ನಡೆಯೊಂದು ಪರಿ ಎನ್ನ ನುಡಿಯೊಂದು ಪರಿ . . . ನುಡಿಯ ತಕ್ಕ ನಡೆಯ ಕಂಡೊಡೆ ಕೂಡಲಸಂಗಮದೇವನೊಳಗಿರ್ಪನಯ್ಯಾ (ಬಸವ. ೩೦); ಪೊಡವಿಗಚ್ಚರಿ ನಿಮ್ಮ ಭಕ್ತಿಯ ನಡೆ ಸೊಗಸದೆಮಗೀ ಹಿರಿಯತನಗೆಡದೆ ಹೊಱವಡಿ ಸಾಕು (ಬಸಪು. ೩೩-೧೯) ; ಸಂತೋಷ ಪರಿಣಾಮ ನುಡಿ(ನಡೆ) ತತ್ವ ನಡೆ(ನುಡಿ) ಪಾವನ ಆತನ ಸುಳುಹು ವಸಂತಗಾಳಿ (ಸಿದ್ಧೇವ. ೧೩೩-೪೬೩) ; ನಿನ್ನ ನಡೆಯ ನಿನ್ನ ನುಡಿಯ ನಿನ್ನೊಳೆ ಕಂಡು ನಿನ್ನ ಮುಂದೋದಿದೆನರಸಾ (ಭರಚ. ೨-೩೭) ; ನಡೆಯೊಳಗೆ ನುಡಿ ತುಂಬಿ ನುಡಿಯೊಳಗೆ ನಡೆ ತುಂಬಿ . . . ಲಿಂಗವ ಕೂಡಬಲ್ಲಾತನೇ ಶರಣನೋಡಾ (ಅಖಂಡೇ. ೧೪೭-೧೩೯) ; ಸತ್ಯರ ನುಡಿ ತೀರ್ಥ ನಿತ್ಯರ ನಡೆ ತೀರ್ಥ ಉತ್ತಮರ ಸಂಗವದು ತೀರ್ಥ ಹರಿವ ನೀರೆತ್ತಣದು ತೀರ್ಥ (ಸರ್ವಜ್ಞ. ೮೦೦) ; ಪೆತ್ತರಂ ಸೋಲಿಪಂ ನಲ್ಲಮಗನೊಳ್ಪುಗುಣಂಗಳಿಂ ಮುಂಗಿಲ್ವೊಲ್ ನಡೆಯಿಂ ನೀರಿಂ ಲೋಗರಂ ನಲವೇರಿಪಂ (ಸೌನಂದ. ೨-೩೦); ಅವರ ಕಡೇಲಿ ಏನು ನಡೆ ಇದೆಯೋ ಹಾಗೆಯೇ ಮಾಡಲಿ (ಬೆಳುಮ. ೨೦೬) ; ನುಡಿ ಪುರಾತನದು ನಡೆ ಕಿರಾತನದು (ಗಾದೆ). ೩. ಶೀಲ ; ನಡತೆ : ಎನ್ನಲ್ಲಿ ನಡೆಯಿಲ್ಲಾಗಿ ನಾನು ಭಕ್ತನೆಂತಪ್ಪೆನಯ್ಯಾ (ಬಸವ. ೨೯೦) ; ಹುಡುಗಿಯ ಗುಣವನು ಜನರು ನಿರ್ಣಯಿಪರು ತಾಯಿಯ ನಡೆಯನು

ನೋಡಿ (ಇಂಡಾಪ. ೨೦೨-೨೯). ೪. ಮುಂದುವರಿಕೆ; ಮುನ್ನಡೆ; ಪ್ರಗತಿ : ಜ್ಞಾನವಿಜ್ಞಾನಕ್ಷೇತ್ರಗಳಲ್ಲಿ ಹಲವು ಪ್ರಯೋಗಗಳನ್ನು ನಡೆಸಿ ಪಾಶ್ಚಾತ್ಯ ಜಗತ್ತು ಅಣುಬಾಂಬನ್ನು ಕಂಡುಹಿಡಿದಿದೆ. ಇಲ್ಲಿಗೆ ಪಾಶ್ಚಾತ್ಯಜಗತ್ತಿನ ನಡೆ ನಿಂತಿತು (ಧಾಸದ. ೫೦೦) ; ನಮ್ಮ ಸಯ್ಯಿನ ಬಿದಿಯ ನಡೆಗೆ ತೊಡರೊದಗದೊಲ್ ಸರ್ವಮಂ ಪುರುಷಪ್ರಯತ್ನಮಂ ಮಾಳ್ಪೆ ನಾವ್ ! (ಚಂದ್ರಶ.೧೩-೩೧). ೫. ಪ್ರಯಾಣ; ಸಂಚಾರ: "ನಡೆಸಿದ್ಧಯಾತ್ರೆಯಕ್ಕುಂ" (ಜುಂಗಂಗಾ. ೦೫೦-೩). ೬. ಎತ್ತುಗಳು ಒಂದು ಸಲ ಒಟ್ಟಿಗೆ (ಒಂದು ರಾತ್ರಿಯಲ್ಲಿ) ನಡೆಯುವಷ್ಟು ದಾರಿ; ಸುಮಾರು ಮೂವತ್ತು ಮೈಲಿ: ಈ ಊರಿನಿಂದ ಹೊರಟರೆ ನಮ್ಮ ಎತ್ತಿನ ಗಾಡಿಯು ಎರಡು ನಡೆಯಲ್ಲಿ ತುಮಕೂರು ಸೇರಬಹುದು (ಕೂಡಿ). ೭. ದಾರಿ; ಹಾದಿ. 'ನಡೆದುಳಿ' ಪರಾ. ೮. ದನಕರು, ಕಾಲ್ನಡೆ ಇತ್ಯಾದಿ : ಮತದ ಧರ್ಮಕ್ಕೆ ಹೇರುವ ಮಾನ್ಯದ ಎತ್ತು ನಡೆಸಿ೦ ಅಯಿವತ್ತುಯೆತ್ತಿನ ಮಾನ್ಯವನೂ ಶಿವಾರ್ಪಿತವಾಗಿ ಬಿಟ್ಟಧೇವೆ (ಎಳ. VII, ಶಿವಮೊ. ೨೮-೧೬ ; 1670) ; ಧಾರಾವಾರ್ಗದ ಪೈರ್ಗಿಗೆ ಅರವನೆ ಕಟ್ಟಿಲಿ ನಿಂತ್ತ ನಡೆ ೧ ವಂದಕ್ಕೆ ಹಂ (ಎಳ. X (8), ಕೋಲಾರ. ೨೫೯-೧೬ ; 1761) ; ಯಿ ಹುಳಿಯಾರ ಸುಂಕದಲ್ಲಿ ನಾನಾ ದಿನಶಿನ ನಡೆಗಳಿಗೆ ಬದ್ದನೆ ಪ್ರಕಾರಾ ಲೆಕ್ಕಾ ಹಾಕಿಕೊಳುತ್ತಯಿದ್ದಾರೊ ಅದೆ ಪ್ರಕಾರಕ್ಕೆ ಬದ್ದವೆ ನಿಂತ್ತ ನಡೆ ೧ಕ್ಕೆ ಕಂಟರಾಯಿ ೮೦೦೦೦ (ಎಳ. XVI, ಚಿಕ್ಕನಾ. ೪೦-೦೬ ; 1802) ; ಒಡಕು ಕೊಟ್ಟಿಗೆ ಹಿಡಿಯಲಾರದು, ನಡೆಗಳಿವ್ಪತ್ತಾ ದವು (ಕಎಪು. ೦೮-೦೦). 'ಕಾಲ್ನಡೆ' ಪರಾ. ೯. (ಕೆಲವು ವಿಶೇಷ ಸಂದರ್ಭಗಳಲ್ಲಿ) ನಡೆಯುವ ದಾರಿಗೆ ಹಾಕುವ ಹಾಸು: ನಡೆವಂಡಿ ; ಹಡದಿ (ಉಕ) : ಎಳಸತ್ಯಾಂತಂ ವಸಂತಂ ತಳರದಿರ್ಪೆ ವನಶ್ರೀ ಮುದಂಬೆತ್ತು ಮುಕ್ತಾಕುಳದಿಂ ನೀಳ್ಗೊಳಿಂದಿಂಕ್ಕಿದ ನಡೆಗಳೂ ವೇಲಿಂತಿ ವೆಂಬಂದದಿಂ ಕಣ್ಗೊಳಿಸುತ್ತಿರ್ದಪ್ಪವಂತಾ ವನದೊಳಗೆಲರ್ವೊಯ್ಲಿಂದ ಮಲ್ಲೊಕ್ಕ ನವ್ಯಾಮಳವುಷ್ಪಂಗಳ್ ಜನುಂಗುತ್ತಿಱಿದ [ಮದ]ಭೃಂಗಾವಳೀ ಸಂಗದಿಂದಂ (ಕುಸುಪಾ. ೦-೦೦೩). ೧೦. ಗದ್ಯ ಅಥವಾ ಪದ್ಯದ ಲಯ.–ಓಟ : ಅವರ ಕಾವ್ಯದ ನಡೆ ಇತರರ ಕಾವ್ಯದ ರೀತಿಗಿಂತ ಭಿನ್ನವಾಗಿದೆ (ಕೂಡಿ). ೧೧. ಒಂದು ಬಾರಿ ಹೊರುವಷ್ಟು ಪ್ರಮಾಣ; ಒಂದು ಹೊರೆ.–ಹೇರು ; ಸಾರಿಗೆ (ಉಕ) : ಕಲಿನಾಥ ದೇವರ ಗಂಧ ಕಸ್ತೂರಿಗೆ ಎಲೆಯ ನಡೆಗೆ ತಾರ ೧ನು ಬಿಟ್ಟರು (ಸಾಇಇ. IX-1, ೪೫೫-೪೭ ; 1292) ; ಎತ್ತಿನ ಮಾನ್ಯ ಹದಿನೈದು ನಡೆಲು ಅಡಕೆ ಮೇಣಸು (ಎಳ. VIII, ತೀರ್ಥಹ. ೭೫-೩೨ ; 1674). ತೆಂಗಿನಕಾಯಿ. ನಡೆ ೧೧೦೦ಕ್ಕೆ ಪಕ್ಯಾ ಸಾವಿರ ಅಂತ ತೀರ್ಮಾನ ಆಗಿದು ಅದರ ಮೇಲೆ ಧಾರಣೆ ಇರುತ್ತದೆ (ಮುಂಬವ್ಯಾ. ೩೧೩) ; ರೈತ ಬೆಳಗಿನಿಂದ ಐದು ನಡೆ ಗೊಬ್ಬರ ಹೇರಿದ್ದಾನೆ. (ಕೂಡಿ). ೧೨. [ನಾಟ್ಯ] ತಟ್ಟು, ಮೆಟ್ಟು, ನಾಟ್ಯ, ತಟ್ಟುಮೆಟ್ಟು, ಕುದಿತ ಮೆಟ್ಟು, ಮೈ, ಮುಡಿ, ಜಾತಿ, ಅರುಧಿ ಮತ್ತು ನಡೆ ಎಂಬ ಹತ್ತು ವಿಧವಾದ ಅಡವುಗಳಲ್ಲಿ ಒಂದು : ಮೊಗದೊಳಿಳನಗೆದೋಱೆ ಬಿನ್ನಣದ ನಡೆ ಸೋಲಪುಡಿಗಾಯುಧರು ಕಾಲರವೆಯ ಚೆಲ್ವಡರೆ ದೇಶಿಯವಾಡು ತಿರ್ದಳು ವಿಲಾಸವಿಭ್ರಮಹಾವಭಾವಮೆಸೆಯೆ (ರಾಘವ. ೩೫-೨೯).

ನಡೆನಡೆ (ದ್ವಿರುಕ್ತಿ) : ನಡೆನಡೆಗೆ ಬಾವುಲಿಯ ಪೆಂಡೆಯ ಕೊಡರುಗಳು ಫಲಫಲನೆ ಮೊರೆಯಲು ಬಿಡದೆ ತಾಟಪ ಹಲಗೆ ಘಂಘಂಘಲಿಗು ಘಲಿಲಿನಲು.(ಭಸಪು. ೦೬-೦೭). ನಡೆನುಡಿ = ೧. ನಡಗೆ ಮತ್ತು ಮಾತು : ಕೈಕಾಲ್ ನಡೆನುಡಿಯುಳ್ಳ ಮನುಷ್ಯನಿಂದೆಂತುಂ ಕಾರ್ಯಮುಂಟು (ಪಂಚತಂ. ೩೪-೦೫) ; ನಡೆನುಡಿ ಬಳಲ್ಕೆ ಮುನ್ನಂ ಕಡುಚೆಲ್ವೆಯ ರೂಪುಗಂಡ ಬಳಿಕಂ ನಡೆಯರ್ ನುಡಿಯರ್ ನೀರಂ ಕುಡಿಯರ್ ನಡೆ ನೋಡುತಿರ್ಪರತನುಶಿಥಿಲರ್ ಪಥಿಕರ್ (೧೫೪. ೨-೨೩). ಪಾಲಿಸಿದಳಂತು ನಡೆನುಡಿಗಳಂ ಕಲಿಪಲ್ಲಿ ಪರಿಯಂತಮಾ ಶಿಶುವನು (ಜೈಮಿಭಾ. ೨೬-೦೯). ೨. ನಡತೆ; ನಡವಳಿಕೆ : ಆಚಾರ : ಸಂಪ್ರದಾಯ ; ನಡೆನುಡಿ ಹುಸಿಯುಂಟಾ ದರೆ ಕೂಡಲಸಂಗನ ತೋಱದ ಬೆನ್ನಬಸವಣ್ಣನಾಣೆ (ಬಸವ. ೬೦೪) ; ; ಶುಕ್ಲಶೋಣಿತದಿಂದ ತನುಮನ ಜನಿಸಿತ್ತು, ತನುಮನದಿಂದ ನಡೆನುಡಿ ಜನಿಸಿತ್ತು, (ಆದಪ. ೨೭-೩೦) ; ನಡೆನುಡಿಯೊಳಭವನೆಂದೆನಿಸಿರ್ದನಾ ಪುರಕೆ (ತಿಮರ. ದೀ. ೪-೩) : ದೃಢಭಾವವೆಳೆ ತಕ್ಕವೆದೆಗುಡದೆ ಬಲಿತವನ ನಡೆನುಡಿದು ಬಗೆದ ಸಂನೂಲಿಮಂತೆ ಮೃಡನೊಳು ತೊಡಂಕಿ ಬಿಡದಡರ್ದುದೆನಲಾಹ ಸಡಿಳಡ ಶರಣನಿರವನಾವಂ ಬಣ್ಣಿಪೆಂ (ಸಾವಂಚ. ೧-೭೯) ; ನಡೆನುಡಿ ಭಕ್ತಿ ಮಸ್ಕಾಗಳ ಕೊಳ್ವಿಡುವಂಜಕೆ ಕಾಯಶುದ್ಧಿ ಮಾಟ್ಟುಡುಮೆನಿಸಿರ್ದ ವಂಚಸಮಿತಿಸ್ಥಿತಿಯಂ ತಳೆದಂ (ಆಸಂಪು. ೪-೦೩) ; ವ್ಯಕ್ತಿಯ ನಡೆನುಡಿಗಳು, ವಿಚಾರೋಭಾವಗಳು, ದೃಷ್ಟಿಧ್ಯೇಯಗಳು . . . ಇವೆಲ್ಲದರ ಮೇಲೂ ಬುದ್ಧಿಶಕ್ತಿ ತನ್ನ ನಿರ್ದಿಷ್ಟ ಪ್ರಭಾವವನ್ನು ಬೀರುತ್ತದೆ (ಶಿಕ್ಷದ. ೬೦೩). ನಡೆನುಡಿಮುಗ್ಗ = ಆಚಾರ, ವಿಚಾರಗಳಲ್ಲಿ ಮುಗ್ಗನಾದವನು.–ನಿಷ್ಕಪಟಿಯಾದವನು; ಶುದ್ಧವಾದ ಚಾರಿತ್ರ್ಯವುಳ್ಳವನು: ಕಂಗಳ ನೋಟ ಲಿಂಗಕ್ಕೆ ಧಾರ ಅಂಗಹೇವಿಗಳ ಕೂಡೆ ಕುಡಿವನೆ ಶರಣನು ನಡೆನುಡಿಮುಗ್ಗ ಗುಹೇಶ್ವರ ನಿಮ್ಮ ಶರಣನು (ಅವಕಂ. : ೮೦-೩೬). ನಡೆಮಾಡು = ೧. ಚಲಿಸು ; ಸುತ್ತಾಡು ; ಸುತ್ತಲೂ ಹಾಯು : ಕೈತಪವೆ ಕಣ್ ನಡೆಯಾಡೆ ಲತಾಂಗಿ ಕಂಡಳುಜ್ಜ್ವಳಕಳಶಂಗಳಂ ಘನರಸಾ ಕಳಿತಂಗಳನುನ್ನತಗಳಂ (ಆಪಂಪು. ೪-೦೦೫). ೨. ನಡೆದುಕೊಳ್ಳು ; ಆಚರಿಸು ; ವ್ಯವಹರಿಸು : ಮದನಕದೀವನಕುತಾವರಮಂ . . . ಪಾವಾಟವೀಪಾವಕರುಮಪ್ಪ ಶ್ರೀವದ್ಮಪ್ರಭಮಲಧಾರಿದೇವರು ತಪೋನಿಷ್ಠೆ ನಡೆಯಾಡಿ (ಸೌಇಇ. IX-1, ೨೭೮-೨೯ ; 1155).

[<ನಡೆ್/ತಮಿ. ನಟ್ಟಿ ; ಮಲ. ನಡ ; ತುಳು. ನಡೆ, ನಡಿ ; ತೆಲು. ನಡ]

ನಡೆ್ (ಅ). ಚೆನ್ನಾಗಿ ; ವಿಶೇಷವಾಗಿ ; ಅತಿಶಯವಾಗಿ : ಎಡೆಯಱಿದು ತೊಳಗುವಂತಿರೆ ಸಿಡಿಲ್ದ ಪೋಯ್ತುಟ್ಟುವಾಗಳಂಗಜಕಲೆಯೊಳ್ನಡೆ ವೊಗಮಿಕ್ಕಿ ಲಯಂಗಿಡದೊಡನುಲಿದುವ ಬೆರಲ ಕೊರಲ ನಾಲಗೆಯುಲಿಗಳ್ (ಕಾವ್ಯಸಾ. ೬೫೮ ಕೂರ್ಗಳ); ತೀಡೆ ತುಷಾರವಾಯು ನಡೆ ಕೋಡಿ ಕಡಂಗಿ ಜಲಕ್ರೀಡೆಯೊಳಂತೆ ಸೇಡುವಡೆದೊಪ್ಪಿದವೊಲ್ (ಲೀಲಾವ. ೦೪-೦೬) ; ತದವಸರದೊಳ್ ನೆಲದ ಪತಿ ಪೊಸವೆಣ್ಣಂ ನಡೆ ಬಗ್ಗಿಸುತಂ . . . ಅತಿಶಯ ಚತುರೆಯನಿರದಾರೋಹಣಮಂ ವಿಗೆ ಮಾಡುತಿರಲ್ (ಹಾರಾಸ್ಕ. ೬-೦೨-೬೬); ನಡೆ ವಿಡುಕದ ಚಮರದ ನೀಳ್ದೊಡರೆತ್ತಿದ ಕಿವಿಯ ತಮ್ಮ ಪದರಜಮುಂ ಪ್ರಾಯ್ದೊಡೆ ಸಿಲ್ಕದಶ್ವಗಳ್ ಧೀರಕಿಡುವುವು (ಶಾಳುಂಕ. ೪-೮). 'ನಾಡೆ' ಪರಾ

ನಡೆ ನೋಟ = ಚೆನ್ನಾದ ನೋಟ ; ಅತಿಶಯವಾದ ದೃಷ್ಟಿ: ನಡೆನೋಟದಿಂದೆ ಬೆಮರ್ತು ಪಡೆದು ಮನೋಭವನ ಮಸಮುಮಂ ನನೆವಿಲ್ಲಂ ಪಿಡಿದಿಸುವ ಕೆಯ್ಯುಮಂ ಕೇಳ್ ನಡುಗಿಸದೊಡೆ ನಿನ್ನ ಕೆಳದಿಯಲ್ಲೆಂ ಕೆಳದೀ (ಲೀಲಾವ. ೦೧-೮೪). ನಡೆ ನೋಡು = ಚೆನ್ನಾಗಿ ನೋಡು ; ನಟ್ಟ ದೃಷ್ಟಿಯಿಂದ ನೋಡು : ನಿಡಿಯಲರ್ಗಣ್ಗಳ ಬಿಡಂಗಿಯರ್ಚಲಿನರ್ಕಂ ನಡೆ ನೋಡಿ ಪೋಗಲಾಜಪೆ ತಡೆಯೆ ಪಗಲ್ ಬರಿಯವಪ್ಪವಾ ಪುರವರದೊಳ್ (ಕಾವ್ಯಸಾ. ೦೬೮ ಕೂರ್ಗಳ); ಮೆಲ್ಲನೆ ಮೃಗಮೆಂದು ಸಾರ್ದು ನೆಱನಂ ನಡೆ ನೋಡಿ ನರೇಂದ್ರನೆಚ್ಚು ಭೋಂಕನೆ ಮೃಗಚಾರಿಯಂ ತನಗೆ ಮಾಣದೆ ತಂದನದೋದು ಮಾರಿಯುಂ (ಕಂಚಕಾ. ೦-೦೦೦) ; ಎಳೆವೆಂದಿರ್ನೆಲೆವಾಡ ದೊಳೆಳಸಿರೆ ನಡೆ ನೋಡಿ ಸೋಲ್ತವೋಲ್ಚಂದ್ರಂ ಮಾರ್ಪೊಳೆನ ನೆವದಿಂ ಪೊರಳ್ದಂ ಕುಳಯದರಸಹೃತ್ಕಳಂಕಮಿಟ್ಟಿವತಳದೊಳ್ (ಕಾದಂಪು. ೩೦೪) ; ನಡೆ ನೋಟ್ಟರ ಕಡೆಗಣ್ಣಂ ಕಡುನಲ್ಲರ ಮನವುಮೊಡನೆ ಪೊತ್ತುವು ಪುರದೊಳ್ ಮಡದಿಯರ ಮೊಲೆಯನಲ್ಲದೊಡುಡಿಯುವೆ ಬಳುವಳಿಕವಡೆದ ಬಡನಡು ಭರದಿಂ (ಆರ್ಜುನ. ೪-೨೨); ಕೃತಕಗಿರಿಯೊಳ್ ನವಿಲೆಬ್ಬಿಸುವುದೂ

ಪಥಿಕರ್ ನಡೆ ನೋಡುವರರ್ದೆ ಢಕ್ಕೆವಾಜಿಸುತ್ತಿರ್ಪಿನೆಗಂ (ವರ್ಧಪು. ೨-೨೨) ; ತೊವಲನುಗಿದು ಕರುಳ ತೊಡಂಕಂ ಬಿಡಿಸಿ ನಡೆ ನೋಟ್ಟೆನೊಳಗೆಲು ವಡಗಿರ್ಪುದು ಜೀವನಿರ್ಪೊಡಲ್ಲಿಗೆವೋದು (ಯಶೋಧ. ೪-೧೯) ; ಕುಸುಮ ಮಾಲೆಯ ತಿರುಹುತೆತ್ತಿದ ಮುಸುಡಿನರೆನೋಟದಲಿ ಲಜ್ಜೆಯ ಚಿಸುಗೆಯಲಿ ನಡೆ[ಪಾಣಾಂ. ನೆಱ್, ಮಿಗೆ]ನೋಡುತಿರ್ದಳು ಸೀತೆ ರಘುಪತಿಯ (ತೊರರಾ. ೧-೦೫-೩೯) ; ನಡೆ ನೋಡಿ ನಲವಿಂದ ಹರಸಿದವರು ಮತ್ತೊಡನೆ ಲಾಳಿಸಿದರಂಬರಕೆ (ಧರಚ. ೩-೧೨೯) ; ಜನಪತಿಯ ವದನಮಂ ಕಣ್ಗೊನೆಯಿಂ ನಡೆ ನೋಡಿ ನಾಡೆ ಮುದಮಂ ತಳೆದಳ್ (ರಾಜಶೇ. ೪-೬).

ನಡೆಕೆಯ್? (ಕ್ರಿ). (?) : ಎಡೆಪಱಿಗೀ ನಡೆಕೆಯ್ದು ತಪಂ ಸಯ್ಯಮ ಮಾನ್ಕೊಳತ್ತೂರ ಸಂಘ × × ವಡೆ ಕೊಱಿದಿನ್ತು ವಾಟ್ಟುದರಿದು (ಎಕ. II, ೧೩-೧ ; ಸು. 700). [?]

ನಡೆಕೋಲು 'ನಡೆಗೋಲು' ನೋ.

ನಡೆಗ (ನಾ). ೧. ನಡೆಯುವವನು ; ನಡೆಗಾರ : "ಕಸನ್, ಕಸಕಃ, ಈ ೨ ನಡೆಗಂ" (ಕಾಶಕ್ಕ. ೦೫೦). ೨. ಒಳ್ಳೆಯ ನಡೆಗೆಯುಳ್ಳ ಒಂದು ಬಗೆಯ ಕುದುರೆ ; ನಡೆಗ ನಾಗರ ಮಱಿ ಮಿಡಿವ ಚಿನ್ನಿಗರ ಮುಂಗುಡಿಯಲೇಱುವ ಮುದ್ದುಮೊಗದ ಕಡುರಭಸದ ಕಾಡಿಗೆಗಣ್ಣ ತೇಜಿಯ ಪೊಡವಿವರಿಗೆ ತೋಱಿದರು (ಅಂಜಚ. ೬-೧೪) ; ನಡೆಗನನೇಱಿ ಮೇಳದವಳಂ ಪೆಱಗೇಱಿಸಿ ಕೊಂಡು ಪಕ್ಕದೊಳ್ ಗಡಣಿಸಿ ಮೇಳದೊಳ್ ನಗಿಸುತಂ ಬರೆವಾದಿಗೆ ಗೆಂಟುವೋಗಿ (ಸೂಕ್ತಿಸು. ೧೮-೩೭). [ನಡೆ$_1$ + -ಗ$_2$]

ನಡೆಗಲ್, ನಡೆಗಲಿ$_1$ (ಕ್ರಿ). ನಡೆಗೆಯನ್ನು ಕಲಿ ; ಓಡಾಡಲು ಕಲಿತುಕೊಳ್ಳು : ಆ ಬಾಲಕಂ ಬಾಲದುಡಿಗೆಗಳಂ ತೊಟ್ಟು ನಡೆಗಲ್ತೊಂದು ದಿವಸಂ ಗೋವ್ರಜಂಗಳೊಳ್ ಸೋಂಕುವುದನಾಂ ಕಂಡು (ಪಂಚತಂ.೦೮೭-೯); ನಡೆಗಲ್ವಂದುಂ ಬಿಣ್ಪಂ ಕೊಡೆನೆಗೆದಪುದುರ್ವಿಯೆಂದು ವಾಸುಗಿ ಪಲವುಂ ಪೆಡೆಯಂ ಶಿಶುನಡೆವೆಡೆಯೊಳ್ ಪಡೆದಾಂತು ಸಹಸ್ರಫಣನೆನಲ್ ಪೆಸರ್ವಡೆದಂ (ಪಂರಾಪಾ. ೩-೦೨೯) ; ದೃಢಚಿತ್ತಂ ಗುಣನಿಳಯಂ ಕಡುಗಲಿ ಕಿಱಿಯೆಂದು ದಿವ್ಯಜಿನಮುನಿಗಳ ಮೆಲ್ಲಡಿಯಂ ಪಿಡಿದು ತಳರ್ನಡೆ ನಡೆಗಲ್ತಂ ಧವ್ಯವನಜ ವನಕಳಹಂಸಂ (ಧರ್ಮಾಮೃ.೭-೦೩); ನಡೆಗಲ್ವಲ್ಲಿಯೆ ಧರ್ಮದಲ್ಲಿ ನಡೆಯಲ್ ಕಲ್ತಂ (ಎಕ. V, ಹಾಸನ. ೭೨-೩೩ ; 1160) ; (ಶಾಪಮಂ. ೬೦೦ ಸೂ.) ; ನಡೆಗಲ್ವಂದೆ ತಳರ್ನಡೆ ನಡೆಯಿಸಿದಂ ನೃಪಕುಮಾರನೆಳೆಯಂ ಬಿಣ್ಪಂ ನುಡಿಗಲಂದೆ ತೊಡಳ್ನುಡಿ ನುಡಿಯಿಸಿದಂ ತನಗೆ ಸೋಲ್ತ ವಾಕ್ಯನ್ನಿಕೆಯಂ (ಅರ್ಧನೇ. ೨-೩೦) ; ವಿಚಾರಿಪಂತಿದು ನಡೆಗಲ್ತು ಸಂಚರಿಪ ಮೇಚಕಶೈಲಮೊ . . . ಪೇಳೆನೆ ತೋಱುದುದಾ ವರಾಹಕಂ (ಶಬಕಂ. ೪-೩). **ನಡೆಗಲಿ$_1$** : ಅಂಬೆಗಾಲಿಟ್ಟು ನಡೆಗಲಿತನು ಶ್ರಾವಕರ ಗಡಣಮಾರಣ್ಯದಾವಾನಲ ಮೃಡಭಕ್ತ ಪಡೆದರ್ಗರ್ತಿಯನೀವುತಿರ್ದ (ಅಲ್ಲಲಿಂ. ೨-೫೩).

[ನಡೆ$_2$ + ಕಲ್$_1$]

ನಡೆಗಲಿ$_1$ 'ನಡೆಗಲ್' ನೋ.

ನಡೆಗಲಿ$_2$ (ನಾ). ಆಕ್ರಮಣ ನಡೆಸುವ ಶೂರ ; ಮುನ್ನುಗ್ಗುವ ವೀರ : ಬೇಡಿದರ್ಗೆ ಬೇಡಿತಂ ಕೊಟ್ಟು ಬಂದಿಱುವ ಕಸವರಗಲಿಗಳುಮಂ ಮತ್ತಮಣ್ಣೆ ನಡೆದಿಱುವ ನಡೆಗಲಿಗಳುಮಂ ನೋಡಿ (ಗದಾಯು. ೯-೩೪ ಪ).

[ನಡೆ$_1$ + ಕಲಿ$_2$]

ನಡೆಗಲಿಸು (ಕ್ರಿ). ನಡೆಗೆಯನ್ನು ಕಲಿಸು ; ನಡೆಯುವುದನ್ನು ಹೇಳಿ ಕೊಡು : ನಡೆಗಲಿಸುತ್ತುಮಂಬೆಗಳನೋದಿಸುತುಂ ಗಿಳಿಯಂ ಪಿಕಕ್ಕೆ ಮಾವಿಡಿಗಳನಿಕ್ಕುತುಂ . . . ನಿರಂತರಂ ತೊಲಗದಿರ್ಪುದು ಪೌರವಿಲಾಸಿನೀ ಜನಂ (ಮಲ್ಲಿಪು. ೨-೩೯). [ನಡೆ$_2$ + ಕಲಿಸು$_1$]

ನಡೆಗಟ್ಟೆ (ನಾ). ಹೇರನ್ನು ಹೊರುವ ಕತ್ತೆ ; ಭಾರವನ್ನು ಹೊತ್ತು ನಡೆಯುವ ಕತ್ತೆ : ನಡೆಗಟ್ಟೆಗಳನ್ಬರ್ಗಮೇಱಲ್ ಕೊಟ್ಟು ಪಿರಿದಾಳಂ ನೆರಂಬೇಟ್ಟು ಕಿಱಿದಂತರಂ ಕಟಿಪುತ್ತುಂ ಬಂದು (ಸುಳುಮಾ. ೨-೫೯ ವ).

[ನಡೆ$_1$ + ಕಟ್ಟೆ$_2$]

ನಡೆಗಾಣ್ (ಕ್ರಿ). ೧. ನಡೆಗೆಯನ್ನು ನೋಡು : ನಡೆಗಂಡು ಕವಿವ ಕಳಹಂಸೆಯುಂ ಜಡಿವ ಸವಿನುಡಿಗೇಳ್ದು ಮುತ್ತುವರಗಿಳಗಳಂ ಕೊಡಹಿ (ಹಡಕಾ. ೪-೩೦). ೨. ನಡವಳಿಕೆಯನ್ನು ತಿಳಿ ; ಆಚಾರ ವ್ಯವಹಾರ ಗಳನ್ನು ತಿಳಿದುಕೊಳ್ಳು ; ಸಂಪ್ರದಾಯವನ್ನು ಅರಿತುಕೊಳ್ಳು : ಕಡೆಯ ದಿನದೊಳು ಮೂಱನೆಯ ಜಾವದೊಳೆಲ್ಲ ಕಡೆಯಿಂದ ಕೂಡಿದ ಪ್ರದೆಗೆ ನಡೆಗಂಡು ಸಂಘಪೂಜೆಯ ಮಾಡಲಾ ಚಕ್ರಿ ತೊಡಗಿದನೇನ ಬಣ್ಣಿಪೆನು (ಧರಚ. ೭೦-೧೦೦). [ನಡೆ$_2$ + ಕಾಣ್]

ನಡೆಗಿಡು 'ನಡೆಗೆಡು' ನೋ.

ನಡೆಗುಱಿ (ನಾ). (ಗುಂಟಿನಲ್ಲಿ) ಮುಂದಕ್ಕೆ ಹೋಗುವ ಕುರಿ : ಕೊಱಿದು ತೊಡೆಯೊಳ್ ಕಾಯ್ದು ಕೋದ ಸಂಕಲೆಯಿಂದೆ ಕೊಱಿದು ಕಿವಿಯೊಳ್ ಕೊಱಿದು ಚಿಬುಕದೊಳ್ ನೇಣಂದೆ ನಡೆಗುಱಿಗಳಂ ಮಾಡಿ ಕೈಯನೆಚ್ಚು ವರಿರದೆ ನಡೆಯಿಸೆಚ್ಚಾರ್ದು ಕಾಲ್ಗಳನರಿದು ಬಿಡದಿರದೆ ತಲೆಗಳಂ ತುದಿ ಮೂಗನೆಚ್ಚು ಕೆಡಪುವರಹೋ (ಶಾನಂಚ. ೪-೦೧೯ ರಗಳೆ).

[ನಡೆ$_1$ + ಕುಱಿ$_2$]

ನಡೆಗೆಡಿಸು (ಕ್ರಿ). ನಡಗೆಯನ್ನು ನಿಲ್ಲಿಸು ; ಚಲನೆಯನ್ನು ತಪ್ಪಿಸು,- ಅಡ್ಡಿಪಡಿಸು ; ನಿಲ್ಲುವಂತೆ ಮಾಡು : ವಿಟರ ಮೇಳಂಗಳಂ ಬೇಟೆಯರ ಗಡಣದಿಂ . . . ವಾರನಾರೀಜನಂ ಕಟಕದೊಳ್ಕಾಮುಕರ ನಡೆಗೆಡಿಸು ತೊಗ್ಗಿನಿಂ ಪೂಜಮಟ್ಟು ಬರುತಿರ್ದುದು (ಶೃಮಿಭಾ. ೭-೬).

[ನಡೆ$_2$ + ಕೆಡಿಸು$_1$]

ನಡೆಗೆಡು, ನಡೆಗಿಡು (ಕ್ರಿ). ೧. ನಡೆಯಲಾರದಾಗು ; ಚಲನೆ ಇಲ್ಲ ವಾಗು; ಮುಂದು ಹೋಗಲು ಆಗದಿರು : ತೊಡೆ ದಡದಡಿಸೆ ನಡೆಗೆಟ್ಟು ಕಟಲುಲಿಗೆ ಬಟ್ಟಿಸಲ್ವ ಕಳಹಂಸಮಂಡಲಕ್ಕಯಶಮಂ ಮಾಡಿಸಿಯುಂ. . . ತತ್ಕಾಂತೆ ಒಂದೆರಡಡಿಯನಿಡುವಲ್ಲಿ (ಕಾದಂಬಾ. ೫೬) ; ನಭವೆತ್ತವೋದಂದೆ ನಿಸಲ್ಪಡೆಗೆಟ್ಟುದು ಗಾಳಿ ರೂಪುಗೆಟ್ಟುದು ದೆಸೆ (ಜಗವಿ. ೬-೦೦) ; ಕಳಹಂಸ ಮಾಲೆ ಕಾಸಾರದೊಳಂಜಿ ಪೊಕ್ಕುವು ರಥಾಂಗರಥಂ ನಡೆಗೆಟ್ಟುವದ್ಭುತಂ (ಗಿರಿಕ. ೮-೦೦) ; ನಂಜುಮುಳ್ಳಡಿಯನು ನಟ್ಟು ನಡೆಗೆಟ್ಟನೋ (ಸಿದ್ಧರಾ. ೨-೪೩) ; ಮೆಲ್ಲಡಿಯ ಇಡಲಱಿಯದಿನ್ನೆನಿತು ಕಾನನದೆಡೆಯೆನುತ ದೆಸ ಗೊಂಬಳೀ ಪರಿ ನಡೆನಡೆದು ನಡೆಗೆಟ್ಟು ನೆಮ್ಮಿದಳಾತ್ಮವಲ್ಲಭನ (ತೊರರಾ. ೨-೪-೦೭) ; ಆರು ಕರುಣಿಸುವವರು ನಡೆಗೆಟ್ಟಡವಿಯಲಿ ಬೀಳೆ (ಸಿಳಾಗ. ೩-೦೯-೦೨) ; ಜಡೆಗನ ತಪಗೇಡಿಯ ಸೂನು ತನ್ನಯ ಪೊಡೆಯೊಳಗಿರಲು ಬಾಲಕನ ನಿಡಿದೋಳ ಮೊದಲ ಭೂಭಾರವ ನೆಲೆದಾಳ್ದು ನಡೆಗೆಟ್ಟು ಬಿಸುಸುಯ್ದುಪಳು (ಪೂಜಕ. ೦೭-೯) ; ೨. ಕ್ರಮಂ ತಪ್ಪು ; ರೀತಿ ತಪ್ಪು : ನಾವು . . . ಮಿತಿಮೀರಿ ಅತಿರೇಕದಿಂದ ಸೊಕ್ಕಿನಿಂದ (Hubris) ನಡೆಯುತ್ತೇವೆ. ಹೀಗೆ ನಡೆಗೆಟ್ಟ ತಪ್ಪಿಗೆ ತಕ್ಕ ಶಿಕ್ಷೆ ನಮ್ಮನ್ನು ಬಡಿಯುತ್ತದೆ (ಬಧ್ಯಪ್ರ. XXXV ಅಧಿಕ) ; ನಡೆಗೆಟ್ಟ ಕಟ್ಟಳೆಯೊಳಳಿ ಯಚ್ಚು ಪೆರ್ಚಿನಿಂ ಸುಡುವ ನನ್ನಿಯನುಳಿಸೆ ತಿಳಿಯದೆಡೆಗೆಟ್ಟಂ (ಕಾಲೂರ. ೦೬೧-೩೫೭). ೩. (ಸಾಮಾನ್ಯವಾದ) ಆಚರಣೆಗೆ ಅಸಾಧ್ಯವಾಗು ; (ಸಾಧಾರಣವಾದ) ವ್ಯವಹಾರಕ್ಕೆ ಒಳಪಡದಿರು : ತಾ ನಡೆವಡೆ ನಡೆಗೆಟ್ಟ ನಡೆಯ ನಡೆಯಬೇಕು ತಾ ನುಡಿವಡೆ ನುಡಿಗೆಟ್ಟ ನುಡಿಯ ನುಡಿಯಬೇಕು (ಅವಕಂ. ೯೯-೪೪೮). **ನಡೆಗಿಡು** : ೧. ನಡೆಗಿಡೆ ಗಾಳಿ ಪೂಱ್ ಗಗನಸ್ಥಳಿ ಕೆಕ್ಕನೆ ತೀವೆ ದಿಙ್ಮುಖಂ . . . ದೇವರುಂ ದಿವಿಜಕಾಂತೆ ಯರುಂ ಬೆಱಗಾಗೆ ಪೂಣೆವೊಕ್ಕೊಡನೊಡನಾರ್ದೆರಟ್ಟಡೆಯ ಬಿಲ್ವಡೆ ಬೀಱುದುದಸ್ತ್ರವಿದ್ಯೆಯಂ (ಪಂರಾಮಾ. ೦೩-೪೪) ; ನಡೆಗಿಡೆ ಗಾಳಿ . . . ಘನಾಘನಂ ಕಱಿಯೆ ಪೆರ್ಮಱ್ ಕೊಂಡವು ಸರ್ವಸತ್ವವೋಗಡಿಸೆ ತದಭ್ರ

ಕಾಲಮವನೀವಳಯಕೃತಿಚೋದ್ಯಮಟ್ಟಿನಂ (ಮಹಾಪೂ. ೭-೫೪); ನಡೆಗಿ [ಪಾಠಾಂ ಗೆ]ಡೆ ಚಿತ್ತಂ ಧೃತಿಲತೆ ಕುಡಿಗಿಡೆ ಮಾನಸಿಜ ವಿಕಾರತತಿ ಮಾನಸ್ತ ದೊಳ್ಪಡೆಗಿಡೆ . . . ವಿರಹವಿಹ್ವಳನಾದಂ (ವೃಷವಿ. ೯-೨೧); ಕಾಲಿಡಲ್ಕಾ ತಿಲೆಯೊಳಾ ತುರಂಗದ ಖುರಂ ಕೀಲಿಸಿತು ಭಿನ್ನಿಸದೆ ಕೂಡೆ ಬೆಚ್ಚಂದದಿಂ ಮೇಲೆ ನಡೆಗೆಟ್ಟು ನಿಂದುದು (ಕೃಷ್ಣಾ. ೧೦-೦೦). [ನಡೆ$_2$ + ಕೆಡು$_1$]

ನಡೆಗೇಡು (ನಾ). ನಡೆಗೆಗೆ ಒದಗುವ ಅಡ್ಡಿ,–ತೊಂದರೆ : ಕೆಲಕೊಱಗಿರ್ದ ಬಲ್ವರವಿಯಂ ಬಲಗೈ ಜಡಿದೊಟ್ಟಿ ತೂಗೆ ನೀಳ್ದಲೆದೆಡೆಗೈಯೊಳಾವರೆಯ ಪಂದಳಿರ್ಗಳ್ನಡೆಗೇಡು ಮಾಡೆ . . . ಒಟ್ಟಿದರ್ ಕೆಲಬಲದೂರ್ಗೆ ಪೋಗಿಯಳೆ ಮಾಱಿ ಮಗುಚ್ಚಿರುತಿರ್ಪ ಗೋಪಿಯರ್ (ಲೀಲಾವ. ೫-೧೦೦).

[ನಡೆ$_2$ + ಕೇಡು]

ನಡೆಗೊಳ್, ನಡೆಗೊಳು (ಕ್ರಿ). ೧. ಚಲಿಸು ; ಹೋಗು ; ಸಾಗು ; ತೆರಳು : ಆಗಳಶ್ವತ್ಥಾಮನುಂ ಕೃಪನುಂ ಸಿಗ್ಗಾಗಿ ಹಮವತ್ಪರ್ವತಕ್ಕೆ ನಡೆಗೊಂಡರ್ (ಪಂಪಭಾ. ೧೩-೧೦೭ವ); ನಡೆಗೊಂಡತ್ತು ಮದೇಭದಾನ ಜಲಧಾರಾಸಾರದಿಂ ಮಾರುತಂ ನಡೆಗೆಟ್ಟರ್ಬಿನಂ. . .ರಘುತನೂಜಾಖರ್ವ ಚಾತುರ್ಬಲಂ (ಪಂರಾಮಾ. ೧೨-೩೨); ಒಡನೆಯ್ದುದುವರ್ಗಣ್ಣಗ್ಳ್ ಬಿಡದೆ ಮನಂ ಪೋಯ್ತು ಮನದ ಪಿಂತನೆ ಧೈರ್ಯಂ ನಡೆಗೊಂಡುದು ಧೈರ್ಯದ ಬೆಂಬಿಡದೊರ್ವಳ ಜೀವಮಿರದೆ ಪೋದತ್ತಾಗಳ್ (ಜಗವಿ. ೫-೯೯). ೨. ನಡೆಯಲು ಸಮರ್ಥವಾಗು ; ಗತಿಯನ್ನು ಪಡೆ : ಆಗಳಾಗಳೆ ಪೆಬವಂ ನಡೆಗೊಂಡಂತುಂ ಕುರುಡಂ ಕಣ್ಬಡೆದಂತುಂ ಷಂಡಂ ಪುರುಷನಾದಂತುಂ ಪೆರ್ಚಿದೊಂದು ಸಂತಸದಿಂ . . .ಕರ್ಮೆಟ್ಟಮನೇಱಿ ಪೋದರ್ (ರಾಪಾಶ್ವ. ೮೨-೧೨). ೩. ಹೊರಡು ; ಹೊರಬೀಳು : ಪಡೆಯಂ ನಡೆಯಲ್ಕೆ ಬೇಱಿ ಭೋರೆಂದು ಗಭೀರನಾದದಿನದೇಂ ನಡೆಗೊಂಡುದೊ ಚಕ್ರವರ್ತಿಯಾ (ಶಾಂತಿಪು. ೧೧-೪೬); ಅಂತು ನಡೆಗೊಂಡು ಕುಂಡಿನೀಪುರಾಭಿಮುಖನಾಗಿ ಪೋಗುತ್ತುಮಾತ್ಮಗತದೊಳ್ ಗರುತ್ಮನನಾಮಂತ್ರಣಂಗೆಯ್ದ (ಜಗವಿ. ೯-೭೯ವ). ೪. ಬಿಟ್ಟುಹೋಗು ; ತೊಲಗು ; ದೂರಸರಿ : ನಾಣ್ ನುಣ್ಪೆ ಸೋಲದೊದವಿಂ ಕಣ್ ನಸುಮುಗುಳ್ದೆಸೆಯ ನಸೆಯನೆಸಗುವ ಪಲವುಂ ನುಣ್ನುಡಿ ಪಸರಿಸೆ ಮನದಿಂ ಜಾಣ್ ನಡೆಗೊಳೆ ತೊಡರ್ದರಿನಿಯಕೂಟ ದೊಳಿನಿಯರ್ (ಚಂದ್ರಪು. ೯-೭೯). ೫. ಮೇಲೆ ನುಗ್ಗು ; ಆಕ್ರಮಣ ನಡೆಸು : ಬಲದಲ್ಮಹೇಶ್ವರನನ್ನರುಪಾಯದಲ್ವಿಷ್ಣುವಿನನ್ನರ್ವ್ವಿಜ್ಞಾನದಲ್ ಬ್ರಹ್ಮನನ್ನರ್ಯ್ಯಮ ವರುಣ ವಾಯವ್ಯ ಚೇರ ಚೋಳ ಪಾಣ್ಡ್ಯರ್ಕಳನ್ನಡೆ ಗೊಂಡು ಕನ್ನರದೇವನ ಕರುಮಾಂ (ಎಕ. IV, ಹೆಗ್ಗಡ, ೧೭-೧೫; 1033). **ನಡೆಗೊಳು** : ೧. ಪೊಳೆವ ಬೆಳ್ಗೊಡೆ ಚಾಮರಂ. . .ಮುಂತಾದ ಸಕಲವಿನಿಯೋಗಸಹಿತಂ ಸೌಂದರಾಧೀಶನು ಒಲಿದು ತಿರುವಾರೂರ್ಗೆ ನಡೆಗೊಂಡ (ಸೌಂದಪು. ೫-೩೪); ಜೋಡಿಸಿದ ಕರಿತುರಗರಥವೆಡೆಯಾಡಿದವು ಗುಡಿಮಂಡವಿಗೆಗಳ ಹೂಡಿದತ್ತಿನ ಬಂಡಿಗಳು ನಡೆಗೊಂಡವಗಲದಲಿ (ತೊರರಾ. ೨-೬-೯); ರಾಜಮರಾಳ ಮತ್ತೇಭಸಂಕುಲಕೆ ಸರೋಜಾಂಘ್ರಿ ಯುಗದ ಸದ್ಗತಿಯ ಮಾಜದೆ ಮನಗೊಳಿಸುವವೊಲು ನಡೆಗೊಂಡುದಾ ಜಾಣೆಯ ಸಖೀನಿವಹ (ಮೋಹತ. ೪೦-೩೬); ಎಣ್ಣೆಸೆಯ ಮೆಟ್ಟಿದುದು ಸಕಲ ವಾದ್ಯಂಗಳ ನಿನದಮಳ್ತಿವಟ್ಟರಚ್ಚರಿಯರುತ್ಸವವನೀಕ್ಷಿಸಲೆಂದು ಪುರಜನಂ ನಡೆಗೊಂಡುದು (ಚಿಬಪು. ೬-೫೨); ಶರಣ್ಗೊಂಡು ಮುನಿಪ ಅತ್ತ ನಡೆಗೊಳಲಿತ್ತ ದನುಜೇಂದ್ರ ತನ್ಮನದಿ ಚಿತ್ತಭವನುದಿಪ ದಿನಮಂ ಶಂಕಿ ಸುತ್ತಿರಲು (ನವಮೋ. ೧೧-೦೯). [ನಡೆ$_2$ + ಕೊಳ್$_1$]

ನಡೆಗೊಳಿಸು(ಕ್ರಿ). ೧. ನಡೆಯುವಂತೆ ಮಾಡು ; ನಡೆಸು : ಪಸುರ್ವುಲ್ಲಂ ಮೇವುತಿರ್ದ ಪೊಸವಾಣತಿವುಲ್ಲೆ . . . ಪಟ್ಟಿರ್ದ ಕೊಣಸುಮಂ ಬಿಟ್ಟು ಬರಲಾಱದೆ . . . ತೊರೆದ ಮೊಲೆಯಂ ಸಾರ್ಚಿ ತಣಿಯೂಡದೆ ನಡೆ ಗೊಳಿಸಿ ತವಕದಿಂ ಬರುತ್ತುಂ (ಪುಷ್ಪಪು. ೩-೬೬ವ). ೨. ಹೋಗುವಂತೆ ಮಾಡು; ತಳ್ಳು; ಅಟ್ಟು: ಭೂಪನ ಸೈನ್ಯಸಾಗರವ ಸಂದಿಸಿಯೆ ನಿಮಿಷಾ ರ್ಧದಲಿ ಯಮಮಂದಿರಕೆ ನಡೆಗೊಳಿಸಿ ಮುಖಜರ ಮಂದಿಗಿತ್ತನು ಸಕಲ ಭೂಮಿಯ ಜಾಮದಗ್ನಿಕನು (ಸಂಭವ. ೨೬-೪೭); ರಿಪುಪರಿವಾರವನು ನಡೆಗೊಳಿಸಿದನು ಯಮರಾಜನಾಲಯಕೆ (ಕುಮಾರವ್ಯಾ. ೫-೧೦).

[ನಡೆಗೊಳ್ + – ಇಸು$_3$]

ನಡೆಗೊಳು 'ನಡೆಗೊಳ್' ನೋ.

ನಡೆಗೊಳ್ಳಿ (ನಾ). ನಡೆದಾಡುವ ಕೊಳ್ಳಿ ; ಚಲಿಸುವ ಕೊಳ್ಳಿ : ಅಡ ವೊತ್ತುವ ಬೇಸಗೆಯೊಳ್ ಪೆಡೆವಣಿ ಬಿಡೆ ಕಾಯ್ದು ನೆತ್ತಿ ಧಿಟಧಿಟಲೆನುತುಂ ನಡೆಗೊಳ್ಳಿಯಂತೆ ನಡೆದುದು ಗಿಡುಗಳ ನೆಟಲಾಸೆಗಹಿವನಸುವಿಡುತುಸಿರಂ (ಸೂಕ್ತಿಸು. ೦೦-೧೧೦). [ನಡೆ$_1$ + ಕೊಳ್ಳಿ$_1$]

ನಡೆಗೋಂಟೆ, ನಡೆಗೋಟೆ (ನಾ). ೧. ಯುದ್ಧದಲ್ಲಿ ಶತ್ರುಗಳಿಂದ ರಕ್ಷಿಸಿಕೊಳ್ಳಲು ಉಪಯೋಗಿಸುವ (ಸೈನ್ಯದಿಂದ ರಚಿಸಿರುವ) ರಕ್ಷಣೆಯ ವ್ಯೂಹ : "ಜಂಗಮಃ 'ಪ್ರಾಕಾರಃ – ನಡೆಗೋಂಟೆ" (ನೀತಿವಾ. ೨೦-೭); ಸಂಗರಭೂಮಿಯೊಳೊಡ್ಡಿ ನಿಂದೆಡ್ಡಮಾಗಿ ಬಗ್ಗಿಸಿ ಮೊಗ್ಗರಿ ಸುತ್ತೊಗ್ಗುಗೆಡದೆ ನಡೆಗೋಂಟೆಯಂತೆ ನೆಲೆವರ್ಚಿ ನಿಂದು (ಗಿರಿಕ. ೬-೫೫ವ); ಕಟ್ಟಿದಲಗಿನ ಕನ್ನಡಿಯ ತೊಲಗದ ಕಂಬದ ಮೀರಘಂಟೆಯ ನಡೆಗೋಂಟೆಯ ಜಾಯಿಲದ ಪೊಂಬಟ್ಟೆಯ . . . ಬೆಳಗುಗಳ್ ಮಾರ್ತಂಡಂಗೆ ಮಾರ್ಪೊ ಳೆಯೆ (ಮಹಾನೇ. ೧೨-೦೯ವ); ಬಿಡದ ನಡೆಗೋಂಟೆಗಳ ಮೊಗ್ಗರಂ ನೂಂಕಿ ದವು ಪುರದ ಪೊಱಬಳಿಸಿನೊಳ್ ಪಡಿಯಟ್ಟಣಿಗಳೆದ್ದುವು (ಚಿಬಪು. ೪೨-೨೪). ೨. ರಕ್ಷಣೆಯ ಸಾಧನ : ಮಂಟಪದೊಳು ಸುತ್ತಿ ಸುಳಿದರೊಲ್ಮೆಯ ನಡೆಗೋಂಟೆಯೊಯೆಂಬ ರೀತಿಯೊಳು (ಧರಚ. ೧೬-೭೯). **ನಡೆಗೋಟೆ** : ೧. ತಾಟಿಸಿದರೊಡನೊಡನೆ ಕುಲಗಿರಿ ದೂಟ ಬಿದ್ದವು ಚಿತ್ರದಲಿ ನಡೆಗೋಟೆ ಯೆನೆ ಮಂಡಳಿಸಿ ಬಲಿದರು ತೆಕ್ಕೆವರಿಗೆಗಳ (ಕುಮಾಧೀ. ೪-೨೫); ಈ 'ನಡೆಗೋಟೆ'ಗಳು 'ತಳೆ' 'ಮುಳುವೇಲಿ'ಗಳಂತೆ ಪಾಳೆಯದ ಸಂರಕ್ಷಣೆ ಗಾಗಿಯೂ ಇದ್ದಿರಬಹುದು (ಕರ್ಣಾಜ. ೨೯).

ನಡೆಗೋಂಟೆಮಲ್ಲ, ನಡೆಗೋಟೆಮಲ್ಲ = ನಡೆಗೋಟೆಯಂತೆ ರಕ್ಷಿಸುವ ವನು; ಏಕಾಂಗವೀರ; ಮಹಾ ಪರಾಕ್ರಮಿ; ಒಂದು ಬಿರುದು: ಮಾರ್ಬಲಕ್ಕೆ ನಿಜಸೇನೆಗೆ ವಜ್ರದ ಕೋಂಟೆಯಾಗಿ ತೋಱುಗು ನಡೆಗೋಂಟೆ ಮಲ್ಲನ ಭುಜಾಬಳವೀ ಅವನೀತಳಾಗ್ರದೊಳೂ (ಎಕ XI, ಚಿತ್ರದು. ೨-೧೬; 1355); ಸುಭಟರಾಚಾರ್ಯ (ಂ) ಸತ್ಯರತ್ನಾಕರಂ ನಡೆಗೋಟೆಮಲ್ಲಂ ಗ (ಂ) ಣ್ಡರಗೋವಂ ಮಣ್ಡಳೀಕ ನಾರಾಯಣಂ (ಸಾಇಇ. XI-1. ೫೭-೩೦; 1019); ಶ್ರೀಮತು ಮಹಾಮಂಡಳೇಶ್ವರಂ ಉಭಯದ[ಳ]ಪತಾಮಹ ನಡೆಗೋಟೆ ಮಲ್ಲ ಸೆಟ್ಟಿ ಸಾ[ಹಸ]ಧೀಮ ಗುಂಡರಸನು ತಂನಾಳ್ಕೆಯೊಳು ಕಾ[ಳ್ದು] ಗೆಯಲ್ಲಿ ಕೊಟ್ಟ ಮ ೧೨ ಮನೆ ೧ (ಸಾಇಇ. XX, ೨೨೬-೨೪; 1306).

[ನಡೆ$_1$ + ಕೋಂಟೆ]

ನಡೆಗೋಟೆ 'ನಡೆಗೋಂಟೆ' ನೋ.

ನಡೆಗೋಟೆಕಾಱ (ನಾ). ಸೈನ್ಯದಿಂದ ರಚಿಸಿರುವ ರಕ್ಷಣೆಯ ವ್ಯೂಹದ ಲ್ಲಿರುವ ಮುಂದಾಳು,–ಪರಾಕ್ರಮಿ : ನಡೆಗೋಟೆಕಾಱರು ಕೆಣಕಿದರು ಕಟರಾಜಸೈನಿಕವ (ತೊರರಾ. ೬ ೫೫-೨).

[ನಡೆಗೋಟೆ (<ನಡೆಗೋಂಟೆ) + – ಕಾಱ]

ನಡೆಗೋಲು, ನಡೆಕೋಲು (ನಾ). ನಡೆಯುವಾಗ ಊರಿಕೊಳ್ಳಲು ಹಿಡಿದುಕೊಳ್ಳುವ ಕೋಲು; ಊರುಗೋಲು ; ಬೆತ್ತ : ಆ ವ್ಯಕ್ತಿ ಮಿರುಮಿರನೆ ಮಿಂಚುತ್ತಿದ್ದ ಹಿಡಿಕೆಯನ್ನುಳ್ಳ ನಡೆಗೋಲನ್ನು . . . ನೆಲದ ಮೇಲೂರುತ್ತ ಹಳ್ಳಿಯ ಬೀದಿಯಲ್ಲಿ ನಡೆದು ಬರುತ್ತಿದ್ದನು (ಪುನರು. ೨೭೬); ಕಡೆಗೆ ಬಾದೇ ಬಂದ ಒಬ್ಬ ಮುದುಕ, ನಡೆಗೋಲು ಅವನೆತ್ತರ (ಶಿಶಾಲಿ. ೮೭-೧೭). ಏ, ನನ್ನ ನಡೆಗೋಲು ಎಲ್ಲಿ ? (ಉದವೃ. ೫೯). **ನಡೆಕೋಲು** :

ವ್ಯಾಸಸ್ಫೂರ್ತಿಗೆ ನಡೆಕೋಲಾದನೆ ಮರುಳ್ಗಳ ಹುರುಳೇ ಎಡರಾಳುವನೇ ಏ ಬಿನದಕೆ ನನ್ನೆಡೆಗೈತಂದೆ (ಗಜೇಶ. ೨-೪೭).

[ನಡೆ$_1$ + ಕೋಲು$_1$ (<ಕೋಲ್$_1$)]

ನಡೆಗೋಳ (ನಾ). (ಅಲಂ) (ಆತ್ಮನಿಗೆ) ನಡೆದಾಡುವ ಬಂಧನ; ದೇಹ: ಕೂಳು ನೀರನ್ನು ಕೊಂಡು ತನುವಿದು ಮೇಲೆಮೇಲುಬ್ಬರಿಸಿ ಬೆಳೆವುದು . . . ಬೀಳುವುದು ಕೊಡದಿರ್ದಡೀ ನಡೆಗೋಳದಲ್ಲಿ ನಾ ಸಿಲುಕಿ ಬಱಿದೇ ಬೀಳುಗೊಳ್ಳದಿರು (ನಿಭಾಗ. ೯-೧೮-೦೨). [ನಡೆ$_1$ + ಕೋಳ್$_1$]

ನಡಗೌಡ (ನಾ). (?): ಮುನಿಭದ್ರಗೌಡರ ಮಕ್ಕಳು . . . ರೇಗರೇವಂತ ನಡಗೌಡ ಸುರಿತಂಣ ಪಿರಿಯತಮ್ಮಗೌಡರು ಮುಖ್ಯವಾದ ಆತನ ಅನುಜ ಪದ್ಮಯನು (ಎಳ. VII, ಶಿವಮೊ. ೧೦೪-೧೫ ; 950 ?).

[P ಇದು 'ನಾಡಗೌಡ' ಎಂಬುದರ ಅಪಲಿಖಿತವಿರಬಹುದೆ ?]

ನಡೆಚಪ್ಪರ (ನಾ). ೧. ದಾರಿಯುದ್ದಕ್ಕೂ ಹಾಕಿರುವ ಚಪ್ಪರ: ಅಂಬರ ಸ್ಥಳವಂ ಮುಸುಕಿದಾಡಂಬರದ ನಡೆಚಪ್ಪರಂಗಳು ಬಿಂಬಿಸುವ ಧವಳಾತ ಪತ್ರಪು ಚಾಮರಾದಿಗಳು (ಬಿಸಪು. ೬-೨೨). ೨. ಕೆಲವು ವಿಶೇಷ ಸಂದರ್ಭಗಳಲ್ಲಿ, ಮರ್ಯಾದೆಗಾಗಿ ಜನರು ಹಿಡಿದಂ ತರುವ ನಾಲ್ಕು ಕೋಲುಗಳುಳ್ಳ ಚಪ್ಪರದಾಕಾರದ ವಿತಾನ; ಸಿಂಧೂಪ: ನೃಪತಿಲಕರ ಪಲವು ಕೂಡೆಯಾಗಸವಂ ಪಂದಲಿಸುತ್ತಂ ಪಡೆತರೆ ನನೆವಿಲ್ಲಂ ರಿಪುದುರ್ಗಕೆ ನಡೆಯಿಪ ಗಡಣದ ನಡೆಚಪ್ಪರಮೆನಲೆಸಕವಡೆದುದಾಗ (ಜಯಭಾ. ೮-೨೭); ಪಟ್ಟಾವಳಿಯ ನಡೆಚಪ್ಪರದ . . . ಚಾಮರದ ಘನಸಂಕುಳದಲವನಿಯನಂ ಬರವನೆಡಗಲಸಿ ನೆಡೆದುದು ಕೂಡೆ ಯಮುನಾನದಿಗೆ ಜನನಿವಹ (ನಿಭಾಗ. ೦೦-೧೦೦-೧೧); ರಾಜಮರ್ಯಾದೆಗಳಾದ ರಾಜದಂಡ ಛತ್ರಿ ಚಾಮರ . . . ನಡೆಚಪ್ಪರ-ಇತ್ಯಾದಿ ಬಿರುದುಗಳು ಬಂದ ಮೇಲೆ . . . ಅತ್ಯಂತ ಗೌರವದಿಂದ ಕರೆದುಕೊಂಡು ಬರುತ್ತಾನೆ (ತುಂಗಳ. ೭೦). ೩. ಯುದ್ಧ ಕಾಲದಲ್ಲಿ ಉಪಯೋಗಿಸುತ್ತಿದ್ದ ಒಂದು ಬಗೆಯ ರಕ್ಷಣೆಯ ಸಾಧನ: ಡೆಂಕಣಿಗಳಂ ಮೇಳೈಸಿ ನಡೆಚಪ್ಪರವನ್ನು ನಡೆಯಿಸಿ . . . ದೂಳಿ ಗೋಂಟೆಯ ಕೊಳ್ಳಬೇಕೆಂಬ ಪಡಿಯಱಿಂದ ಕಲಕಲಂ ಕರಮೊಪ್ಪಿತು (ಸಮ್ಮಳಾ. ೯-೩೦); ನಡೆಚಪ್ಪರದ ಮರ ಬದ್ದರ ಡೆಂಕಣಿ ಸುಡುವ ಪೆಟಲು ಕೋಟೆಯನು ಕೆಡವುವ ಡೆಗ್ಗೆ ಹತ್ತುವ ನಿಚ್ಚಣಿಗೆಗಳಂದೊಡನೈದಿದ ವಸಂಖ್ಯಾತ (ಶುಕಾಸಾಂ. ೩೭-೬೭). [ನಡೆ$_1$ + ಚಪ್ಪರ]

ನಡೆಜಂತ್ರ (ನಾ). ಚಲಿಸುವ ಯಂತ್ರ; ನಡೆದಾಡುವ ಯಂತ್ರ: ಆದಿತ್ಯ ವಿರಹದೊಳಮಕ್ಷೋದಕಮಂ ಪರ್ವುವಂತೆ ಜಗಮಂ ಜೀವಂ ಪೋದೊಡ ಮದಂಗರುಚಿ ಬೇಱಾದುದು ನಡೆಜಂತ್ರಮಲ್ತೆ ನರರ ಶರೀರಂ (ಶಾಂತಿಪು. ೬-೪೭); ಕುಸುಮಾವಳಿದೇವಿ ಬರುತ್ತುಮಿರ್ದಳಾ ಮನಸಿಜನಾಡಿಪೊಂದು ನಡೆಜಂತ್ರದ ಪುತ್ರಿಕೆಯೆಂಬ ಭಂಗಿಯಂ (ಶುಸುಮಾ. ೦೨-೦೨೫).

[ನಡೆ$_1$ + ಜಂತ್ರ]

ನಡೆಜಾಣ (ನಾ). ನಡವಳಿಕೆಯನ್ನು ಚೆನ್ನಾಗಿ ತಿಳಿದವನು; ರೀತಿನೀತಿಗಳನ್ನು ಬಲ್ಲವನು: ನುಡಿಜಾಣ ನಡೆಜಾಣ ನೆಱೆಜಾಣ ಕಡುಜಾಣ ಜಗಕೆ ಸುಜಾಣ ಎಡೆಬಿಡದೆನ್ನಂತರಂಗದೊಳಿರು ಜಾಣರೊಡೆಯ ಚಿದಂಬರ ಪುರುಷಾ (ಧರಕ. ೬-೭೬). 'ನುಡಿಜಾಣ' ಪರಾ. [ನಡೆ$_2$ + ಜಾಣ]

ನಡೆಜಾಣ್ಮೆ (ನಾ). ವ್ಯವಹಾರದಲ್ಲಿ ಜಾಣತನ,-ಬುದ್ಧಿವಂತಿಕೆ: ನುಡಿ ಜಾಣ್ಮೆ ನಡೆಜಾಣ್ಮೆ ನನಗೊ ದೇವರಿಗೊ ಸಂಗಡದ ಭೂಪರು ಮೇಳ ಲೆಂದ (ಧರಕ. ೩೯-೦೦೭). 'ನುಡಿಜಾಣ್ಮೆ' ಪರಾ.

[ನಡೆ$_2$ + ಜಾಣ್ಮೆ]

ನಡೆಜೋಡು (ನಾ). ನಡಿಗೆಗೆ ಹೊಂದಿಕೊಳ್ಳುವ ಜೋಡಿ,-ಜೊತೆ: ಕೂಡೆ ಸಂಜಯನಱಸಿದನು ನಡೆಜೋಡಿನವು [ಜಾಕಾಂ.ಪಯಪಾಡಿನಲಿ] ವಾನೂಱು ಕುದುರೆಯ ಕೂಡಿ ಕೌರವನ್ಪನ ಕಾಣದೆ ಕಳವ ಚೌಕದಲಿ (ಕುಪ್ಪಾಗ. ೨-೩). [ನಡೆ$_2$ + ಜೋಡು]

ನಡೆಡೆಂಕಣಿ (ನಾ). ಕೋಟೆಯ ಬುರುಜಿನ ಮೇಲೆ ಚಲಿಸುವಂತೆ ಏರ್ಪಡಿಸಿರುವ ಒಂದು ಬಗೆಯ ಆಯುಧ; ಚಲಿಸುವ ಡೆಂಕಣಿ: ನಡೆಡೆಂಕಣಿ ಸೂಸುಡೆಂಕಣಿ ಬಲುಗುಂಡನಿಡುವ ಡೆಂಕಣಿ ತೋಱೆದೆಗೆ ಸಿಡಿವ ಡೆಂಕಣಿ ರಾಯಡೆಂಕಣಿಗಳ ಸಾಲು ಬಿಡದೊಪ್ಪಿದವು ದುರ್ಗದೊಳು (ಕುರಾಸಾಂ. ೪೨-೩೯). 'ಡೆಂಕಣಿ' ಪರಾ. [ನಡೆ$_1$ + ಡೆಂಕಣಿ]

ನಡೆತ (ನಾ). ನಡೆಯುವಿಕೆ; ನಡಗೆ. [ನಡೆ$_1$ +-ತ$_3$]

ನಡೆತರ್, ನಡೆತರು (ಕ್ರಿ). ಬರು; ಆಗಮಿಸು: ಕೆಯ್ಮಿಕ್ಕು ಕಾದಲ್ ನಡೆತರ್ಪಾವೇಗದೊಳ್ ಮುಮ್ಮಱಿಸಿದ ಪಲವುಂ ರಾಜಚಿಹ್ನಂಗಳಂ ಬೆಳ್ಗೊಡೆಗಳ್ ತಳ್ಪೊಯ್ದದೇಂ ಕಣ್ಗೊಳಿಸಿದುದೊ ಚಳಚ್ಚಂದ್ರಕಚ್ಛತ್ರ ಪಿಂಡಂ (ಪಂಪಭಾ. ೦೩-೩೮); ಚೆಲ್ವನಾಳ್ದು ಮೆಲ್ಲನೆ ನಡೆತರ್ಪ ನೀಲಮಣಿ ಪುತ್ರಿಕೆಯಂದದಿನಾದವೊಪ್ಪಿದಳ್ (ಕಾದಂಪೂ. ೩೮); ಸಾಯಂಕಾಲ ಶೃಂಗಾರಸಮಯಮೊಂದು ಮಧುರಾಪುರಾಧೀಶ್ವರನಲ್ಲಿಗೆ ಪೋಪ ಬಗೆಯಿಂ ಕುಬ್ಜೆಯೆಂಬ ಸೈರಂಧ್ರಿ ನಡೆತರೆ (ಜಗವಿ. ೬-೦೮ವ); ಉರವಣಿಸಿ ನಡೆತರುತ್ತುಂ ಗಿರಿಶಿಖರಮನೇಱಲಾಱದೆರಡುಂ ದೆಸೆಯೊಳ್ ಬರಲನುವಂ ಕಂಡು ದಿವಾಕರನಂದಿ ದಕ್ಷಿಣೋತ್ತರಾಯಣನಾದಂ (ಗಿರಿಕಾ. ೧-೫೩); ಕಡುಸೊರ್ಕಿಂದಲರಂಬನಾನೆಯೆನಿಪೀ ತೆಂಗಾಳಿ ತನ್ನಿಚ್ಛೆಯಿಂ ನಡೆ ತಂದಪ್ಪುದು ಬೇಗದಿಂ ಬಿರಯಿ ನೀಂ ಪೋ ಪೋಗು (ಕಬ್ಬಿಕಾ. ೫೫). **ನಡೆತರು**: ಕಪ್ಪಡಿಯ ಸಂಗಮವಂ ಪೊಕ್ಕು ಕೇರಿ ಕೇರಿಯೊಳು ನಡೆ ತಪ್ಪಾಗಳು ಶಂಕರಾಲಯಮಂ ಭೋಂಕನೆ ಕಂಡು (ಲಸರ. ೨-೫೦); ಆ ಸಮಯದಲ್ಲಿ ರಾಯವೇದವ್ಯಾಸಮುನಿ ನಡೆತಂದು ಗತಪರಿತೋಷನನು ಸಂತೈಸಿ ಕರಸಿದನಂದು ಸಂಜಯನ (ಕುವ್ಯಾಭೀ. ೧-೫೫); ತೆಗೆದ ತೊಱೆ ಕಾಲುವೆಗಳುದ್ಯಾನಗಳ ಕಳಮೆ ದ್ರಾಕ್ಷೆ ಧವಳೇಕ್ಷುಗಳ ವನವೀಥಿಗಳನೀಕ್ಷಿ ಸುತರಸ ನಡೆತಂದ [ಪಾಕಾಂ. ನೈತಂದ] (ತೊರರಾ. ೧-೬-೧೦); ಸತಿಯರ ಗಡಣದಲಿ ನಡೆತಂದಳಿಂದುಮುಖಿ (ನಳಚ. ೩-೫೫); ಪರಿಪರಿ ಪಾತ್ರವೆಗಳು ಸಿಂಗರಿಸಿಯೆ ಹರುಷದೊಳಗೆ ನಡೆತಂದು (ಕಂಸವಿ. ೭-೦೦೭).

[ನಡೆ$_1$ + ತರ್]

ನಡೆತರು 'ನಡೆತರ್' ನೋ.

ನಡೆತೋರಣ 'ನಡೆದೋರಣ' ನೋ.

ನಡೆದಾಣ (ನಾ). ನಡೆದಾಡುವ ಸ್ಥಳ; ಓಡಾಡುವ ಜಾಗ; ದಾರಿ: ಪೊಂಬೆಟ್ಟಂ ಪೊಂಬಸಿರಂಗಿಂಬುವಸದಿಯುಮಲರ್ದೊಡೆಯಂಗೆ ನಡೆ ದಾಣಮುಂ . . . ಬೋಱೆಯರ್ಗೆ ಮೇಳದೆಡೆಯುಮೆನಿಸಿ ಕಣ್ಗೊಳಿಕುಂ (ರಾಮಾಶ್ವ. ೭-೫). [ನಡೆ$_1$ + ತಾಣ]

ನಡೆದಾರಿ (ನಾ). ನಡೆದಾಡುವ ದಾರಿ; ಓಡಾಡುವ ಮಾರ್ಗ: ಆಚೇಚೆ ಹುಡುಕುತ್ತ ಜಾನೂ ಅಮ್ಮನ ಕೋಣೆಯ ಪಾರ್ಶ್ವಭಾಗದ ಇಕ್ಕಟ್ಟಾ ದೊಂದು ನಡೆದಾರಿಯನ್ನು ಸೇರಿದನು (ಕಾಬಭೂ. ೨೫); ತೋಟಗಳು ಸಾಮಾನ್ಯವಾಗಿ ಚೌಕ ಇಲ್ಲ, ನಿಡುಚೌಕ ಇದ್ದು . . . ಒಳಗೆ ತಿರುಗಾಡಲು ನಡೆದಾರಿಗಳು ಇದ್ದವು (ಇಸ್ಲಾಂಸಂ. ೦೮೯). [ನಡೆ$_1$ + ದಾರಿ]

ನಡೆದುಳಿ (ಕ್ರಿ). ದಾರಿಯನ್ನು ತುಳಿ; ದಾರಿ ಸವೆಸು: ಅಡಿಯ ನೆಲದೊಳ್ ಬಿಸಿಲ್ ಕಡೆಸಾಲ ಬರೆಯುತಿರೆ ನಡೆದುಳಿದು ನೆಲ್ಲೂರ ಮನೆಗೆ ನಡೆತಂದಂ (ಕಾಲೂರ. ೧೦೨-೨೩೦). [ನಡೆ$_2$ + ತುಳಿ$_1$ (< ತುಟಿ$_1$)]

ನಡೆದೇಗುಲ (ನಾ). ಚಲಿಸುವ ದೇವಸ್ಥಾನ; (ಒಂದೆಡೆ ಸ್ಥಿರವಾಗಿರದೆ) ಉತ್ಸವದಲ್ಲಿ ಎಳೆಯುವ ದೇವರ ವಿಗ್ರಹವಿರುವ ಮಂಟಪ, ತೇರು,-ರಥ: ಪಲರಂ ರಕ್ಷಿಸಿ ಮತ್ತಂ ಪಲವಂ ನಡೆದೇಗುಲಂಗಳಂ ಮಾಡಿಸಿದಂ ನೆಲನೆಲ್ಲಮಱಿಯೆ ಚಟ್ಟಂ ನೆಲೆದೇಗುಲಮುಮನಿದೊಂದನೊಲ್ದೆತ್ತಿಸಿದಂ (ಎಳ. V, ಬೇಲೂರು. ೧೯೩-೯೪ ; 1160). [ನಡೆ$_1$ + ದೇಗುಲ]

ನಡೆದೋರಣ, ನಡೆತೋರಣ (ನಾ). ಎರಡು ಕಡೆ ಹಿಡಿದಿರುವ ಕೋಲುಂಗಳ ತುದಿಗಳಿಗೆ ಕಟ್ಟಿ, ಉತ್ಸವಾದಿಗಳ ಮುಂದೆ ಹಿಡಿದುಕೊಂಡು ಹೋಗುವ ತೋರಣ; ಚಲಿಸುವ ತೋರಣ; ಮಕರ ತೋರಣ: ಸಿರಿವೆತ್ತ ಕನಕದಂಡದ ಚಾಮರ ಸೀಗುರಿ ನಡೆದೋರಣನಿಚಯ ಪರುಠವಿಸರ್ದ ನಾನಾವಿಧ ಟಿಕ್ಕೆಯ ತೆರಳಿತು ನಭವನಳ್ಳಿಱಿದು (ಮೋಹತ. ೧೩-೩೧). **ನಡೆತೋರಣ**: ನುಡಿವ ನಾನಾವಾದ್ಯಘೋಷಣೆ ಕಲಶ ಕನ್ನಡಿಯ ಪೆಣ್ಗಳ ರಾಗರಚನೆ ಇಡಿಕಿಱಿದುದು ಸೆಟ್ಟಿಸಮುಯರುಗಳ ಕೆಯ್ಯ ಗುಡಿ ನಡೆತೋರಣನಿಚಯ (ಮೋಹತ. ೪೦-೩೮); ರಾಜವೀಥಿಯೊಳೆತ್ತಿರ ಪತಾಕೆಗಳ ಸೂಸುವ ಸೀಗುರಿಗಳ ಭೀಸುವ ಚಾಮರಂಗಳ ಸೊಗಯಿಪ ಧವಳ ಪತ್ರಂಗಳ ನವರತ್ನದ-ನಡೆತೋರಣಂಗಳ . . . ಸಿರಿ ಕಂಗೊಳಿಸೆ (ಪ್ರಭುವಿ. ೩-೪೪ವ). [ನಡೆ$_1$ + ತೋರಣ]

ನಡೆನಿಱಿಗೆ (ನಾ). ಓಡಾಟದ ರೀತಿ,-ಸೊಗಸು; ನಡಗೆಯ ಸೊಬಗು: ನೆರೆವನೆಯಂ ಪೋಪ ಬರ್ಪ ಜವ್ವನಿಗರ ನಡೆನಿಱಿಗೆಯುನಿಡಿಕಿಱಿದ ಪಂತಿಯಿಂ (ರಾಮಾಶ್ವ. ೨೩-೭). [ನಡೆ$_2$ + ನಿಱಿಗೆ]

ನಡೆಪಾಡಿಸು (ಕ್ರಿ). ನಡೆದಾಡಿಸು; ನಡೆಯುವಂತೆ ಮಾಡು; ಚಲಿಸುವಂತೆ ಮಾಡು; ಓಡಾಡಿಸು: ಹಂಸಾವಳಿಯುಂ ನಡೆಪಾಡಿಸು ಕೋಕಿಳ ನಾದಮನಾಲಿಸುಸಿರದಿರ್ಪರೆ ಮದನಾ (ಗಿರಿಕ. ೯-೭೦); ವಾರುವಮಂ ನಡೆಪಾಡಿಸಲ್ಕೆ ನೋಡುವ ಮಱಿಗಳ್ಗೆ ಪಾಲನೆಱಿವುಜ್ಜುಗವಂ. ತಳೆದಿರ್ಪ ನಾವಗಂ (ನಳಚಂ. ೭೮೯). [ನಡೆಪಾಡು (<ನಡವಾಡು) + – ಇಸು$_3$]

ನಡೆಪಾಡು 'ನಡಪಾಡು' ನೋ.

ನಡೆಪ್ಪು$_1$ 'ನಡಪ್ಪು$_1$' ನೋ.

ನಡೆಪ್ಪು$_2$ 'ನಡಪ್ಪು$_2$' ನೋ.

ನಡೆಬಾವಿ, ನಡಬಾವಿ, ನಡಭಾವಿ, ನಡೆಭಾವಿ (ನಾ). ಇಳಿದು ನೀರು ತುಂಬಿಕೊಳ್ಳುವಂತೆ ಸೋಪಾನಗಳಿರುವ ಬಾವಿ,-ಮೆಟ್ಟಿಲುಗಳುಳ್ಳ ಬಾವಿ,-ಕೊಳ: ಪೊಸದುರ್ಗವಂ ಪಾಟಿಸಿ ಪಿರಿಯ ನಡೆ [ಪಾಠಾಂ. ಡ] ಬಾವಿಗಳನಗುಳಿಸಿದನದಱೊಳಗೆ (ಬಸಪು. ೧೫-೦೦). **ನಡಬಾವಿ**: ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. **ನಡಭಾವಿ**: ಅಮೃತರಸ ಪರಿಪೂರ್ಣವಾದಮೃತಸಂಜೀವಿನಿ ಎಂಬ ಹೆಸರುಳ್ಳ ಒಂದು ನಡಭಾವಿಯು ಉಂಟಾಗಬೇಕೆಂದು ದೇವರನ್ನು ಬೇಡಿ (ಕೃಪಾಕ. ೩೪). **ನಡೆಭಾವಿ**: ನೂರು ಸೇದೋ ಭಾವಿ ಕಟ್ಟಿಸುವುದಕ್ಕಿಂತಲೂ ಒಂದು ನಡೆಭಾವಿ ಕಟ್ಟಿಸುವುದುತ್ತಮ (ಕೃಪಾಅ. ೧೭೦).

[ನಡೆ$_1$+ ಬಾವಿ. / ತಮಿ. ನಟೈವಾವಿ, ನಟೈಪಾವಿ, ನಟಪಾವಿ; ತೆಲು. ನಡಬಾವಿ]

ನಡೆಬೆಡಗು (ನಾ). ನಡಗೆಯ ಸೊಗಸು,-ಒಯ್ಯಾರ: ನಡೆಬೆಡಗೋ ನಿಲುಬಗೆಯೋ ನಗುವೊಗವೋ ತಹ ಸೊಗವೋ ಕನಸಿಗು ಇಂಥವ ಸುಳಿವೊಲ್ಲ (ಗೋಕುನಿ. ೧೩-೧೧). [ನಡೆ$_2$ + ಬೆಡಗು (<ಬೆಡಂಗು)]

ನಡೆಭಾವಿ 'ನಡೆಬಾವಿ' ನೋ.

ನಡೆಮಂದಸ (ನಾ). ಚಲಿಸುವ ಪೆಟ್ಟಿಗೆ: ರಿಪುವೆಚ್ಚಱಿದಿಟ್ಟ ಕೈದುವೆನ್ನುದರದೊಳೆಯ್ದೆ ತಳ್ತಿಡಿದಿರಲ್ ಯಮರಾಜನ ಶಸ್ತ್ರಕೋಟಿ ತೀವಿದ ನಡೆಮಂದಸಂಬಿನಗಮಿರ್ಪೆನದೆಂದೊ ಮಹಾಜಿರಂಗದೊಳ್ (ಜಗವಿ. ೧೭-೮೭). [ನಡೆ$_1$ + ಮಂದಸ]

ನಡೆಮಡಿ, ನಡೆಮುಡಿ (ನಾ). ದೇವರ ಕಾರ್ಯ ಮುಂತಾದ ಶುಭ ಸಂದರ್ಭದಲ್ಲಿ ಉತ್ಸವಗಳು ನಡೆಯುವಾಗ ಉತ್ಸವದ ದಾರಿಯಲ್ಲಿ ಗೌರವಾರ್ಥವಾಗಿ ಹಾಸುವ ಮಡಿಯಾದ ವಸ್ತ್ರ,-ಬಟ್ಟೆ; ಹಡದಿ: ದೇವಾಂಗಮೌಕ್ತಿಕದ ಸೆಱಗಿನ ಸೆರೆಯಂ ನಡೆಮಡಿಯ ಹಾಸಿ . . . ಧೂಪಾರತಿ ಘಂಟೆ ಸಹವಾಗಿ ಪ್ರಭುದೇವರ ಕರೆಯ ಬಹ ಸಂಭ್ರಮದಿಂದಿರುತ್ತಿರಲು (ಶೂನ್ಯಸಂ. ೯೯-೨೨); ನಡೆಮಡಿ ಗಂಧದಕ್ಷತೆ ಫಲಾವಲಿ ಪೂವಿನ ಮಾಲೆ ಮುತ್ತು ಕನ್ನಡಿ ಕಳಸಂ . . . ಚಾಮರಮೆಂಬಿವೊಪ್ಪುವಂ ಕುಡೆ ಜಿನದತ್ತೆಯೇಂ ನಡೆದಳೋ (ಅರ್ಧನೇ. ೧-೮೯); ಆ ನಗೆಗಣ್ಗಳ ಕಡೆಯ ಬೆಳಂತಿಗೆವೆಳಗು ಹರಿದು ಮುಂಗುಡಿಯೊಳ್ ಪಸರಿಸಲೆಸೆದುದು ನಡೆಮಡಿಯಂ ಪಾಸಿದ ತೆಱದಿ (ಜಯಶಾ. ೩-೩೬); ಕಟ್ಟಿದ ಗುಡಿ ತೋರಣ ನಡೆಮಡಿ ಮೇಲ್ಗಟ್ಟು ಮೌಕ್ತಿಕರಂಗವಲ್ಲಿಯುಂ ಅಲಂಕೃತವಾದ ನಿಡಾಲಯದೊಳು . . . ಕುಳ್ಳಿರಿಸಿ (ಶಾಂತೀಶ. ೯-೨೨); ನಡೆಮಡಿಗಳ ಪಾಸುತ್ತುಂ ಸಡಗರದಿಂ ಶೋಭನಂಗಳಂ ಪಾಡುತ್ತುಂ ಮಡದಿಯರಿದಿರ್ಗೊಂಡರಲ್ಲಿ ವಿಶ್ವೇಶ್ವರನಂ (ವೀರವಿ ೯-೬೫); ನಡೆಮಡಿ ನಾಲ್ಕೆಂಟುಮಾರೈದಲಲ್ಲಲ್ಲಿಗೊಡ ನೆತ್ತುವಾರತಿ ಸೇಸೆ ಇಡುವ ನಿವಾಳಿ ಧಾಳಿಸುವ ಚಾಮರಗಳಿಂದಡಿಯಿಡಿಸಿದರು ಯೋಗಿಗಳ (ಧರಶ. ೩-೮೦); ಸುರರು ಸಮಂತು ಪೊರೆದ ಭವಂಗೀ ಧರೆ ಪಾಸಿದ ನಡೆಮಡಿಯೆನೆ ಕರಮೆಸೆದುದು ವಿಮಳಗುಣದಿನಾ ನದಿ ಪದಪಿಂ (ಅಜಿಪು. ೨-೫); ಹರಿಹರದೇವರು ನಡೆದು ಬರುವ ಹಾದಿಯುದ್ದಕ್ಕೂ ನಡೆಮಡಿಯನ್ನು ಹಾಸಿ ಹೂವುಗಳನ್ನು ಚೆಲ್ಲುತ್ತಿರುವರು (ತುಂಗಭ. ೭೦). **ನಡೆಮುಡಿ**: ಬಿಳಿಯ ಚತ್ರಿ ನಡೆಮುಡಿ ಕಲಶ ಕನ್ನಡಿಗಳು ಇಲ್ಲದ ಮೆರವಣಿಗೆಯೇ ಇಲ್ಲ (ಶಿವೇಪ. ೧೯೩); ಯಾವ ಮೋತೀಬಾಯಿಗಾಗಿ ರಾಜನು ನಡೆಮುಡಿಯನ್ನು ಹಾಸುತ್ತಿದ್ದನೋ ಅವಳು ಪಾಪ, ಬೀದಿ ಬೀದಿ ಅಲೆಯುತ್ತಿದ್ದಾಳೆ (ಭೂಪಾಶ. ೦೦೩); ಊರಿನ ಅಗಸ "ನಡೆಮುಡಿ" ಹಾಸಿಕೊಂಡು (ದಾರಿಯುದ್ದಕ್ಕೂ ಬಟ್ಟೆ ಹಾಸಿಕೊಂಡು) ಅವರನ್ನು ನಡೆಸಿಕೊಂಡು ಬರುತ್ತಾವೆ (ಸವಕಮಾ. ೧೯೨). [ನಡೆ$_1$ + ಮಡಿ$_5$]

ನಡೆಮಾಡ (ನಾ). ಚಲಿಸುವಂತೆ ರಚಿಸಿರುವ ಒಂದು ಬಗೆಯ ಮನೆ; ವಿಮಾನ; ವ್ಯೋಮಯಾನ: "ನಡೆಮಾಡಮೆಂದುಂ ವಿಮಾನಂ" (ಕಶಾಂ. ೨೮-೩೫೫); ನಡೆಮಾಡ [ಪಾಠಾಂ. ಡು] ಪಾಱೆನೆ ವ್ಯೋಮಯಾನನಾಮಂ (ಕಲ್ಯಮಂ. ೦೦); "ನಡೆಮಾಡಮೆನೆ ಸುರವಿಮಾನಂ" (ಕಶರ. ೩೨); ಗಜೇಂದ್ರಂ ತುರಂಗಂ ನಡೆಮಾಡಂ ದಣ್ಡನಾಥೋತ್ತಮಪದವಿ ಮಹಾತೂರ್ಯಮೆಂಬಿಂತಿವಂತುಂ ಪಡೆದಂ ಚೆಲ್ವಿಂದೆ ವೀರೇಶ್ವರವಿದಿತಧರಾದೇವನಿಷ್ಟಪ್ರಭಾವಂ (ಎಇ. XIII, ೩೩೦-೦೩; 929); ಅವಱ ಮುಂದೆ ಸಾಹಣೌಘದೊಳಗಿರಿಸುವ ಪಂಚಕಲ್ಯಾಣದ ಸೂಚೀಯಾನೆಗಳ್ಗೆಂದು ನಿಱಿಸಿದ ನಡೆಮಾಡಸಾಲೆಗಳಿಂದು (ಶಾಂತಿಪು. ೦೦-೦೪೭ವ); ನಡೆಮಾಡಂ ನಡೆಗೊಪ್ಪುವಶ್ವತತಿ ಚೆಂಬೊನ್ನಂದಣಂ ವಾಜಿ ಪೆರ್ವಿಡಿ ವೇರಾನೆ ಸುಖಾಸನಂ ತುಱುಗೆ ಬಂದರ್ಗಾಯಕರ್ವಾದಕರ್ (ಪುಲ್ಲಿಪು. ೩-೭೭); ತನತು ವಿಚಿತ್ರಮಪ್ಪ ನಡೆಮಾಡದ ಗಾಡಿಯ ಸದ್ವಿಮಾನಮಂ ತನತು ಸುರರಮ್ಮಹರ್ಮ್ಯದ ವಿಳಾಸದ ರುಂದ್ರಫಣೀಂದ್ರಗೇಹಮಂ . . . ಇಂತು ಕನಸು ಪದಿನಾಱು ಮನಂಬಾಜವದನೆ ಕಂಡಳ್ (ಪುಷ್ಪಪು. ೯-೦೦೧); ನಡೆಮಾಡದೊಳಗಿರ್ದ ರಾತ್ರಿಂಚರರ್ನೋಡಿ ಮಿಡಿದು ತಂತಮ್ಮ ಬಿಲ್ಗಳನೈದೆ ಗರ್ಜಿಸುತೆ (ಶೇಷಾಂ. ೧೪-೩೪); ಪಡೆವಳರೆಲ್ಲರ್ . . . ನಡೆಮಾಡಮನಡರ್ದು ಹಯಮನುಯ್ದು ಮರ್ಬಿಗನಂ ತಱುಬಿ ಅಱಿವಡೆಯಂ ಬಱಿಕೆಯ್ದು ಪವಣಾಯನ ಕಟ್ಟಾಣತಿಯಂ ಪಾಱುತಿರ್ಪುದು (ರಾಮಾಶ್ವ. ೦೦೦-೦೭); ಆಕಾಶದೊಳಗಿಂದ ಅಥವಾ ಹವೆಯೊಳಗಿಂದ ಹೋಗುವ ವಾಹನಕ್ಕೆ ವಿಮಾನ ಅಥವಾ ನಡೆಮಾಡೆಂದೆನ್ನುತ್ತಾರೆ (ಮುಂಬಯಿ. ೩-೯೨). [ನಡೆ$_1$ + ಮಾಡ$_2$]

ನಡೆಮುಡಿ 'ನಡೆಮಡಿ' ನೋ.

ನಡೆಯಡಿ (ನಾ). ನಡೆಯುವ ಕಾಲು; ಚಲಿಸುವ ಪಾದ: ಕಂದರ್ಪನಂಗನೆಯು . ಪ್ರಳಾಪಿಸುತ ನಡೆಯಡಿಗಳಿಂದ ಬರವರಲ್ (ನಷಮೋ. ೭-೩). [ನಡೆ$_1$ + ಅಡಿ$_1$]

ನಡೆಯಿಸು, ನಡಯಿಸು, ನಡಸು$_1$, ನಡಿಸು$_1$, ನಡೆಸು. (ಕ್ರಿ). ೧. ನಡೆಯುವಂತೆ ಮಾಡು; ಚಲಿಸುವಂತೆ ಮಾಡು: ಜಯದ್ರಥನಂ

ಕೋಡಗಗಟ್ಟುಗಟ್ಟಿ ಬೆನ್ನಂ ಬಿಲ್ಲ ಕೊಪ್ಪನೊಳಿಱಿದು ನಡೆಯೆಂದು ನಡೆಯಿಸಿ (ಪಂಪಭಾ. ೭-೩೦ ಪ) ; ಮ್ಲೇಚ್ಛಖಂಡಮಂ ದಾಯ್ಕೇಳಿಸಿ ಚಕ್ರಪೂಜೆಗೆಯ್ದು ಕಟಕಮಂ ನಡೆಯಿಸಿ (ಕಾವುಂಪು. ೪೧) ; ನಡೆನಡೆಯೆಂದು ನಡೆಯಿಸಿದರ್, ಕೊಯ್ ಕೊಯ್ ಎಂದು ಕೊಯಿಸಿದರ್ (ಧಾಪಾಭಾ. ೨೧೭ ಉದಾ) ; ಪುರವರದ ನಡುಕೇರಿಯೊಳೆಲ್ಲರು ನೋಡುವಂದದಿ ನಡೆಯಿಸಿದನು ಮಂತ್ರಿಯವರ (ಕುರಾಸಾಂ. ೩೬-೬೨). ೨. ಮುಂದುವರಿಸು ; ಮುಂದೆ ಸಾಗಿಸು ; ಸಾಗಿಸಿಕೊಂಡು ಹೋಗು : ನೆಗೞ್ದೀ ಕ್ರಿಯಾವಿಶೇಷಂಗಳನಿಲ್ಲಿಂದಿತ್ತೆಡೆಯುಡುಗದೆ ನಡೆಯಿಸುವುದು (ಆದಿಪು. ೧೫-೧೬ವ); ಇದನ್ ತಪ್ಪದೆ ನಡೆಯಿಸಿದಾತಮ್ ಸಾಸಿರಮ್ ಕವಿಲೆಯ ಕೋಡುಮ್ . . . ಸಹಶ್ರ(ಸ್ರ)ಭೋಜನಮ್ ಮಾಡಿದ ಫಲಮ್ ಅಕ್ಕುಂ (ಇಅ. XII, ೨೫೭-೧೬ ; 951) ; ಇದು ಕಯ್ಯೊಂಡ್ಡು ನಡೆಯಿಸಿದಾತಂಗೆ ಅನಂತ ಪುಣ್ಯ (ಎಕ. IV, ನಾಗಮಂ. ೫೦-೨೪ ; 972) ; ಇನ್ತೀ ಧರ್ಮ್ಮಮುಂ ಕಾದು ನಡೆಯಿಸಿದಂಗೆ ವಾರಣಾಸಿ ಕುರುಕ್ಷೇತ್ರ ಪ್ರಯಾಗೆಯರ್ಘ್ಯತೀರ್ತ್ಥಗಂಗೆ ಗಂಗಾಸಾಗರದೊಳ್ ಸಾಸಿರ ಕವಿಲೆಯುಂ . . . ಕೊಟ್ಟ ಫಲವಕ್ಕು (ಸೌಇಇ. XI-1, ೪೭-೦೯ ; 994). ೩. ಹೋಗುವಂತೆ ಮಾಡು; ಕಳಿಸು: ಅಡಿದಳಿರ್ಗೆ ಧರಾವಲಯಂ ಕಡುವೆಟ್ಟತ್ತಾಗೆ ನಡೆಯಲಱಿಯದೆ ಮನುಜರ್ ಸೆಡೆಯ ಹಯಾದಿಗಳಿಂದಂ ನಡೆಯಿಸಿದುಂ ಕಲಿಸಿ ವಾಹನಾರೋಹಣಮುಂ (ಪಂಚಾಮೃ. ೦-೭೬). ೪. (ರಥ ಮೊದಲಾದುವನ್ನು) ಚೋದಿಸು ; ಹೊಡೆ : ದೇವಕೀನಂದನಂ ಸ್ಯಂದನಮುಂ ಕಿಱಿದು ನಡೆಯಿಸೆ (ಜಗವಿ. ೪-೪೦ವ). ೫. ಆಚರಿಸು ; ನಿರ್ವಹಿಸು ; ಜರುಗಿಸು ; ಮಾಡು : ಆವರಿಬ್ಬರೂ ನಡೆಯಿಸಿದ ಜೀವನದ ಅದ್ಭುತರಸಾಯನದ ಪ್ರಯೋಜನವು ಕನ್ನಡನಾಡಿಗೆ ಇನ್ನೂ ಆಗಬೇಕಾಗಿದೆ (ನನಗ್ಗ. ೬ ಕವಿಪರಿಚಯ). ೬. ಈಡೇರಿಸು ; ನೆರವೇರಿಸು ; ಪಾಲಿಸು: ಚಕ್ರವರ್ತಿಯೇ ತಮ್ಮ ಅಪ್ಪಣೆಯನ್ನು ನಡೆಯಿಸಿರುವೆನು (ಪಾಚಿಸ. ೫೬) ; ದಂದುಗದ ಬಿಡುಗಡೆಗೆ ಮನೆಯೊಡವೆಗಳ ತೆತ್ತು ಪೊಂದಿದೊಸಗೆಯ ನಡೆಯಿಪುದು ಕೊರಗನೆಣೆಕೆ (ಕಾಲೂರ. ೦೬೯-೩೭೬). ೭. ಪಾಲನೆ ಮಾಡು ; ರಕ್ಷಿಸು ; ಕಾಪಾಡು : ಎಮ್ಮ ಕಾರಣದಿನಿತ್ತಣ ಪಂಬಲನೀಕೆ ಮಾಡದಂತಿನ್ನಡೆಯಿಪ್ಪುದೊಂದೆ ತೆಱನಪ್ಪುದಿದಂ ಸೆಱಗೊಡ್ಡಿ ಬೇಡಿದೆಂ (ಚಂದ್ರಪು. ೬-೫೬). ೮. (ಆಸಕ್ತಿ ಮುಂತಾದುವನ್ನು) ಉಂಟುಮಾಡು ; ಒದಗಿಸು ; ದೊರಕುವಂತೆ ಮಾಡು : ಕುಡಿದೊಡೆ ಸೊರ್ಕಿಸದವು ನಾಣ್ಗೆಡಿಸದವು ಮನಕ್ಕಲಂಪನೀವುವು ರತಮಂ ನಡೆಯಿಪುವೆನಿಸುವ ಮಧುಗಳನೆಡೆಯುಡುಗದೆ ಕುಡುಗುಮುಚಿತಮದ್ಯಾಂಗಕುಜಂ (ಆದಿಪು. ೫-೩೨) ; ಪ್ರಸಾದಪರಿಮಳಮಂ ಘ್ರಾಣಕ್ಕೆ ನಡೆಯಿಸುವ ಸಂಪಗೆಯ ಮುಗುಳ ನಾವೆಯಂತೊಪ್ಪುವ ನಾಸಿಕದ . . ರೂಪು ಸೌಂದರ್ಯದಿಂ (ಬಸಕ. ೨-೨೬). ನಡೆಯಿಸು : ೧. ಮುಂದಕೆ ನಡೆಯಿಸು ಪುಲಿಮೊಗವಿಕ್ಕುವ ಬಂದರ ಕೂಡೆ ದೂರದೊಳು ನಿಂದಿಱಿದಾಡುವ ಬಲುಭದ್ರವೆಸಗುವರಿಂದ ಕಣ್ಗೆಸೆದುದಾ ದುರ್ಗ (ಕುರಾಸಾಂ. ೩೬-೬೩). ೨. ಧರ್ಮ್ಮಂಗಳಂ ನಮಸ್ಕಂ ನಡೆಯಿಸಿ ಬಱಿಯವೊನ್ದು ವರ್ಷಂ ರಾಜ್ಯಮಂ ಪತ್ತುವಿಟ್ಟು (ಎಕ. II, ೫೯-೧೦೯ ; 974). ೯. ವ್ಯವಹರಿಸುವಂತೆ ಮಾಡು ; ವರ್ತಿಸುವಂತೆ ಮಾಡು. ೧, ೯ : ದೇವನಂ ತನಗೆ ಕುಂಟಣಿ ಪಾಡಿ ನಡಯಿಸುವ ತೆಱನೀ ತೆಱನೆಂಬುದಂ ತೋಱುವಂತೆ ಮೆಲ್ಲಮೆಲ್ಲನೆ ದಟ್ಟಡಿಯಿಡುತ್ತುಂ (ಸಂಬಿರ. ೨-೭). ನಡಸು$_1$: ೧. ಭೈತ್ರಮನೇಱಿಸಿ ನಡಸೆ ಕೆಲವು ದಿನಕ್ಕೆ ತಿಳಕದ್ವೀಪಮನೆಯ್ದಿ (ಪುಷ್ಪಾಸ್ರ. ೮-೮ವ) ; ಹಿಡಿವ ಬಿಡುವೊಬ್ಬುಳಿಗೆ ತಹ ಬಲನೆಡಕೆ ಹಾಯ್ಕುವ ಸುತ್ತಲೊತ್ತುವ ತಡೆವ ನಡಸುವ ಸೆಳೆವ ತಿರುಹವ ಹದಿರ ಜೋಕೆಯಲಿ ಗಡಣಿಸಿದನು (ಕುವ್ಯಾಪ್ರೋ. ೩-೧೧); ಮೊಗಕೆ ಮುತ್ತುಗದೆಲೆಯ ಮಱೆ ಎಡಿದಗಲಿದುಮ್ಮಹದಿಂದ ಜನಕನ ಮಗಳ ನಡಸುತ ತಂದರೊಂದು ಮಹಾಸರೋವರಕೆ (ತೊರರಾ. ೨-೪-೧೯) ; ಕರುಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬನಲಿ, ಕೈಹಿಡಿದು ನಡಸೆನ್ನನು (ಇಂಗೀತ. ೯೭-೨). ೨. ಧರ್ಮ್ಮವಱಿವವರೆಲ್ಲರು ಪೊಡೆಯರಾಗಿ ಪರಿರಕ್ಷೆಗೆಯ್ದು ಸ್ವಧರ್ಮ್ಮದಿಮ್ ನಡಸುವುದು (ಇಅ. XVIII, ೩೯-೨೬ ; 999) ; ಇದಮ್ ನಡಸಿದರ್ಗ್ಗೆ ಅನನ್ತಪುಣ್ಯ[ಂ] (ಇಅ. XII, ೨೨೫-೦೭ ; ಸು.12ನೆಯ ಶತ) ; ಆಚಂದ್ರಾರ್ಕ ನಿತ್ಯಪಡಿಸಿ ಯಮಾನ ಹಲ ನಡಸುವುದು (ಎಕ. II, ೨೪೪-೨೫ ; ಸು.1274) ; ಶಿವಾರ್ಪಿತವಾಗಿ ನಡಸುವ ಅಗ್ರಹಾರದ ಧರ್ಮಕೆ ಉತ್ತಾರವ ಮಾಡಿಸಿಕೊಟ್ಟ ಕಾಶೀನಾಥಪುರದ ಗ್ರಾಮಕ್ಕೆ ಶಿಲಾಸ್ಥಾಪಿತ ಮಾಡಿಸಿ ಅದೆ (ಎಕ. VII, ಶಿವಮೊ. ೦೯-೧೦ ; 1714). ೫. ಸಂಪದಾದಿಗಳು ಭರಿತವಾಗಿಹವಾ ಮುನಿಪನಿಹ ಧರಣಿಯಲಿ ನೀನಾ ಮುನೀಂದ್ರನ ಬರಸಿ ಕ್ರತುವನು ನಡಸಿದರೆ ಸುತರಹರು ನಿನಗೆಂದ (ತೊರರಾ. ೧-೫-೫೯) ; ಎಮ್ಮ ಲಿಂಗವು ಕೊಟ್ಟ ಕಾಯಕವ ನಡುಸುತಿಹೆವಂತಾಗಿಯುಂ ಭವಿಯೊಡನೆ ಮಾತಾಡೆವು (ಬಸಪು. ೪೦-೩೭) ; ನಾನೀಗ ನಡಸಿರುವುದರಲ್ಲಿ ಅವಸರವೇನಾದರೂ ಕಾಣುತ್ತದೆಯೇ ? (ಅಕ್ಕಮ. ೧೨) ; ನಮ್ಮ ಪ್ರಾಚೀನ ಕಾವ್ಯಗಳ ಅಭ್ಯಾಸವನ್ನು ಸೂಕ್ಷ್ಮವಾಗಿ ನಡಸಿ ಸರಿಯಾಗಿ ಅವಲೋಕಿಸಿದರೆ ನಮ್ಮ ಹಿಂದಿನ ಕವಿಗಳಿಗೂ ಲಾಕ್ಷಣಿಕರಿಗೂ ಭಾಷೆಯನ್ನು ಕುರಿತು ಪ್ರತ್ಯೇಕವಾಗಿ ವಿಚಾರ ಮಾಡುವ ಪುಜೆ ಇತ್ತೆಂಬುದು ಓದುಗರಿಗೆ ಮನದಟ್ಟಾಗುತ್ತದೆ (ದ್ರಾವಿವಿ. ೧೧ ಹಿನ್ನಲೆ). ೬. ಫಡಫಡರ್ಜುನ ಹೋಗುಹೋಗಳವಡದು ಸೈಂಧವನಳಿವು ಭಾಷೆಯ ನಡಸಬಲ್ಲರೆ ಬೇಗ ಬೆಳಗಿಸು ಹವ್ಯವಾಹನನ (ಕುವ್ಯಾಪ್ರೋ. ೧೯-೩೦). ೯. ದುರ್ಜನಸ್ವಭಾವಮಂ ಕಂಡು ಯತ್ನದಿಂ ನಡಸುವೊಡಂ ನೈಜಗುಣಂ ಬಿಡದು (ಪಂಡತಂ. ೧೦೫-೧) ; ಮುನ್ನ ಪರಸತಿ ಪಾರ್ವತಿಯೆಂದು ನಡಸಿತ್ತು ನುಡಿಸಿತ್ತು ಗುರುವಚನ (ಸರ್ವಜ. ೫೬-೪೦೦). ೧೦. ಪ್ರಯೋಗಿಸು ; ಬಳಸು ; ಉಪಯೋಗಿಸು : ಮಡದಿ ಪಕ್ಷದಿಯರಿಯದಲೆ ಮದದೊಡಗಿ ಕಾಣನು ಇನ್ನು ಬುದ್ಧಿಯ ನಡಸು ಸ್ವಾಮಿದ್ರೋಹಿ ಬಸವನೆಯೆಂದನಾ ಮಂತ್ರಿ (ಬಿಜ್ಜಪು. ೬೩-೫೮). ೧೧. ರೂಪಿಸು ; ಹೊಂದಿಸು ; ಸಾಧಿಸು ; ಅಳವಡಿಸು ; ಸಿದ್ಧಪಡಿಸು: ಋಕಾರಾಂತಗಳಾದ 'ಕರ್ತೃ' ಮೊದಲಾದುವನ್ನು 'ಗುರು' ಎಂಬುದರಂತೆ ನಡಸಬಹುದು (ಮಧ್ಯಮ. ೬೮) ನಡಿಸು$_1$: ೬. ಯಿನ್ತು ತಂನ ಮಾತು ನಡಿಸಬೇಕು (ಎಕ. VII, ಶಿವಮೊ. ೧೦೮-೨೫ ; 1558). ೯. ನಾರಿ ಕೇಳ್ನಿನ್ನ ಮನೋರಥ ನೆಱೆ ಕೈಸಾರಿತು ಚೆಲುವರೆಱೆಯನ ಮೇರೆಯಱಿತು ನಡಿಸೆಂದಾಗ ಸಖಿಯು ಪಚಾರವ ಪೇಳ್ದಳಂಗನೆಗೆ (ಕಂನವಿ. ೦೦-೫೬). ನಡೆಸು : ೧. ಹುಟ್ಟುಗುರುಡನ ಕೈಯ ಕೋಲ ಕೊಟ್ಟು ನಡೆಸುವಂತೆ ನಡೆಸಯ್ಯಾ ಎನ್ನ (ಬಸಹ. ೨೬೫) ; ಪೊಡವಿಯಲಿ ಕೈಗೊಟ್ಟು ಭೋಗಂ ನಡೆಸಲಡಿಯಡ ಕಲಿತೆನು (ಬಸಪು. ೨೫-೮) ; ಕಾಲಿಲ್ಲದೆ ನಡೆಸುವ ಕೈಯಿಲ್ಲದೆ ಹಿಡಿಸುವ ಹಲ್ಲಿಲ್ಲದೆ ವೆಲಿಸುವ (ಪುರಂದ. ೩-೦೦೯-೧) ; ದಿವಿಜರು ಪೆತ್ತ ರತ್ನವಿಮಾನಕೋಟಿಯ ಸೂತ್ರಿಸಿದವೊಲು ನಡೆಸಿದರು ಸುರವೇತ್ರಪಾಣಿಗಳು (ಸಾಳ್ವಭಾ. ೩೩-೩೮) ; ಪೊಡೆಸು ಭೇರಿಯನಿಂದೆ ನಡೆಸು ಮತ್ಸ್ಯೇನ್ಯಮಂ (ಚಲಪು. ೪೭-೨೨) ; ಆ ಕುದುರೆ . . . ಲೋಕಮಂ ತಣಿಸುತೈತರಲಖಿಳದೆಸೆಯೊಳದನಾಕೆವಾಳರ್ತಡೆಯೆ ಬಿಡಿಸಬೇಕನಿಬರಿಂ ನೂಕದೊಡೆ ಕರ್ತೃ ತಾನಾದೊಡಂ ಪೋಗಿ ನಡೆಸುವುದು ಬಳಿಕಾ ಹಯವನು (ಕೃಮಿಭಾ. ೨-೨೯). ೨. ಈ ಧರ್ಮಮ[ಂ] ನಡೆಸಿದವರಿಗಕ್ಷೆ(ಕ್ಷ)ಯಪುಣ್ಯ[ಂ] (ಇಅ. XII, ೨೨೫-೦೯ ; ಸು. 11ನೆಯ ಶತ) ; ಹತ್ತುಮತ್ತರದ ಭೂಮಿ ಬತ್ತುವ ಹಯನು ನಂದಾದೀವಿಗೆಯ ನಡೆಸಿಹೆಂಬವರ ಮುಖವ ನೋಡಲಾಗದು (ಬಸಪ. ೨೨೫) ; ಪೊಡೆಯರು ನಡಸಿ ××× ನಡೆಸುವ ಯೆಂಣೆ ವರುಶ ೧ ಕಂ ಹಾನೆ ೨ ಡನೂ ನಡೆಸುವಂತಾಗಿ (ಸೌಇಇ. IX-II, ೪೦೫-೧೦ ; 1357) ; ಅಲ್ಲಿ ಇಂಗ್ಲಿಷ್‌ನಲ್ಲಿ ಪ್ರೌಢವಿದ್ಯಾಭ್ಯಾಸ ಮಾಡಿದವರೂ ಕೂಡ ಮಾತೃಭಾಷೆಯಲ್ಲಿ ಸಂಭಾಷಣೆಯನ್ನು ನಡೆಸುತ್ತಿದ್ದುದನು

ನೋಡಿದೆ (ಜಂಗಾಳ. ೨ ಮುನ್ನುಡಿ). ೫. ಸಕಳಮಂ ಕೌತುಕದಿ ನಡೆಸುತ ಸಕಳ ದೊಳು ನಡೆಯದ ಸುಜಾಣನು ಸಕಳವಳಿಯಲು ಸಕಳದೊಳು ತಾನಳಿಯದಿಹ ನಿತ್ಯ (ಬಸಪು. ೫೦-೪೪); ತೊಡಿಗೆಯಂದಿರ್ವರು ದೇವಪೂಜೆಯ ಮಾಡಿ ನಡೆಸಿದರಾಗಮೋಕ್ತಿಯಲಿ (ಪೋಕತ. ೩೦-೪); ದೇವರನ್ನು ಮೂಲ ದೇವರ ಗುಡಿಯ ಮುಂದೆ ಬೀಳಬಟ್ಟೆಯ ಮೇಲೆ ಕುಳ್ಳಿರಿಸಿ ಗುಡಿಯೊಳಗೆ ಪೂಜೆ ನಡೆಸುತ್ತಾರೆ (ನನ್ನೂರು. ೫೧). ೬. ನುಡಿದ ಭಾಷೆಯನಿಂತು ನಡೆಸಲು ಬಸವನೇ ಬಲ್ಲ (ಬಸಪು. ೩೭-೨೬); ನಮ್ಮ ಕರ್ತವ್ಯ ಒಡೆಯನ ಅಪ್ಪಣೆಯನ್ನು ತಲೆಬಾಗಿ ನಡೆಸುವುದು (ಜಂಗಾಳ. ೪೭). ೭. ಸಟೆಯಿಲ್ಲದಂತೆ ಪ್ರಪಂಚುವಿಲ್ಲದಂತೆ ವೈಶಿಕವಿಲ್ಲದಂತೆ ನಡೆಸಯ್ಯಾ (ಬಸವ. ೬೧); ನಿಮ್ಮ ನೆಂದೂ ಅಗಲದಂತೆಮಾಡಿ ನಡೆಸಯ್ಯ (ಪುಜಾದೇ. ಬ. ೧೫-೧೯); ನಿಚ್ಚಂ ಪ್ರಿಯದಿಂದಂ ನೋಡುವರ್ ಮನ್ನಿಸಿ ನಡೆಸುವರೆಮ್ಮತ್ತಿರ್ ದೇವಕೀ ದೇವಿಯರ್ (ಜಗವಿ. ೧೨-೧೦೬); ಅರಸೊಲಿದು ನಡೆಸಿದರೆ ಸಿರಿಯಕ್ಕು ಜಸವಕ್ಕು ಕರಿತುರಗ ಬಲವು ಪಿರಿದಕ್ಕು ಮುನಿದರೆ ಕರ ನಾಶವಕ್ಕು (ಸರ್ವಜ್ಞ. ೭೩೨). ೮. ಘಡ ತೊಲಗು ಕೌರವಕೃತಾಂತನ ಪಡೆಗೆ ಪಾರಣೆ ಯೊಗಳೀಗಳೆ ನಡೆಸುವೆನು (ಕುಪ್ಪಾಕ್ರೋ. ಪರಿ. ೨೮೮). ೯. ಸಾಧುತ್ವಮಂ ಕೆಡಿಸಿ ನಡೆ[ಪಾಠಾಂ. ಡ]ಸುವ ದುರಾಚಾರೆ ಕಪಟನಾಟಕತತಿಗೆ ತಾನೆ ನೆಲೆಯೆನಿಸುವಳ್ (ಕಾದಂಪು. ೫೫೩); ಇನಿತುಂ ಮೋಹಂ ಕೇಳೀತನಮೇಲಿ ಪಿರಿದುಮೆನ್ನೊಳುಂಟಪ್ಪುದಱಿಂದನಿಯತಿಕೆಯಿಂದೆ ನಡೆಸಲ್ಕಿನಿತಾದುದು ಶಿಕ್ಷೆಗೆಟ್ಟ ಕಾರಣದಿಂದಂ (ಧರ್ಮಾಮೃ. ೨-೮೧). ೧೨. ಅಟ್ಟು; ತಳ್ಳು: ಹೊಡೆದು ಹೊಡೆಬೆಂಡಾಡಿ ರಿಪುಗಳ ಗಡಣವನು ಯಮರಾಜಧಾನಿಗೆ ನಡೆಸುವೆನು (ಕುಪ್ಪಾಅ. ೮-೮). P ಈ ಧಾತು ಅನೇಕ ಕಡೆ ನಾಮ ಪದದೊಡನೆ ಸೇರಿ ವಿಶಿಷ್ಟವಾದ ಧಾತುವಾಗಿ ಬೇರೆಬೇರೆ ಅರ್ಥ ಗಳಲ್ಲಿ ಬಳಕೆಯಾಗುತ್ತದೆ. ಉದಾಹರಣೆಗೆ 'ಉತ್ಸವ ನಡೆಸಂ', 'ಶಾಲೆ ನಡೆಸು' ಇತ್ಯಾದಿ.

ನಡೆಸಿಕೊಡು, ನಡಸಿಕೊಡು = ೧. ಮಾಡಿಕೊಡು; ಮಾಡು: ನೀನು ಸೂಚಿಸಿದಂತೆಯೇ ನಡೆಸಿಕೊಡುತ್ತೇನೆ (ವಚಕಾ. ೪). ೨. ಪಾಲಿಸು; ಈಡೇರಿಸು: ನಿನ್ನಲ್ಲಿ ಭರವಸೆಯಿಟ್ಟು ಒಂದು ಮಾತು ಹೇಳುತ್ತೇನೆ. ಅದನ್ನು ನೀನು ನಡಸಿಕೊಡಬೇಕು (ವಚಕಾ. ೬). [ನಡೆ$_1$ + – ಇಸು$_3$]

ನಡೆಯುಡುಗು (ಕ್ರಿ). ನಡೆಯಲಾರದಾಗು; ಚಲನೆ ಇಲ್ಲದಂತಾಗು: ನಡೆಯುಡುಗಿ ಮುಪ್ಪಾಗಿ ಕಾಂತಿ ಮಸುಳಿಸಿ . . . ಬೇಱೊಂದೆಸೆಯ ಕಡೆಯೊಳಳಿವಂತಾದುದೀಗ (ಹಡಕಾ. ೩-೭೪); ಭಕ್ತಿ ಚಿತ್ತಮನೋವೆ ಕಂಪಿಸುತೆ ನಡೆಯುಡುಗೆ ಮನವಕ್ಕಱಿಂ ಕರಗೆ (ಬಸಕ. ೩-೧೧೧); ನಡೆನಡೆದು ಕಡೆಕಡೆಗೆ ನುಡಿಯುಡಗೆ ನಡೆಯುಡುಗೆ (ಶಾಲೂರ. ೧೫೦-೩೩೦).

[ನಡೆ$_2$ + ಉಡುಗು$_1$]

ನಡೆಯೂಡು (ಕ್ರಿ). ಚೆನ್ನಾಗಿ ತಿನ್ನಿಸು: ನಡೆಯೂಡ ಮದ್ದು ವಿಷವೂಡಲಿಂಗೆ ಹಿತವೆಂಬ ನುಡಿಯಂತೆ ಸುಖವಿಲ್ಲ ಪುಕ್ಕಿವುಂಟುಳಿದ ಹಲವೆಡೆಯ ಸುಕ್ಷೇತ್ರಂಗಳೊಳಗೆ (ಹಡಕಾ. ೦೦-೩೫). [ನಡೆ$_3$ + ಊಡು$_1$]

ನಡೆಲಿಂಗ (ನಾ). [ವೀಶೈ] ಚಲಿಸುವ ಲಿಂಗವೆಂದು ಭಾವಿಸಲಾದವನು; ಜಂಗಮ: ಬಡವರೆಂದೆನಬೇಡಾ ಲಾಂಛನಧಾರಿಯನು ಕಂಡು ಸ್ನೇಹ ದಿಂದವರ ಪೂಜೆಯ ಮಾಡುವುದು ನಿಜವಡಗಿದ ರೂಪು ನಿರ್ವಯಲ ಸ್ಥಾನ ನಡೆಲಿಂಗ ಜಂಗಮ (ಬಸವ. ೪೧೫). [ನಡೆ$_1$ + ಲಿಂಗ]

ನಡೆವಕ್ಕಿ (ನಾ). (ಚಿತ್ರಾಕರ್ಷಕವಾಗಿ) ನಡೆಯುವ ಹಕ್ಕಿ; (ಮನೋಹರವಾಗಿ) ಚಲಿಸುವ ಪಕ್ಷಿ; ಹಂಸೆ: ನಡೆವಕ್ಕಿಯ ನಲ್ಮೆಯ ಪೊಣರ್ವಕ್ಕಿಯ ನುಡಿವಕ್ಕಿಯ . . . ಬಳಗಂ ಬಳಸಿದುದಾ ನೃಪಸತಿಯಾ (ಜಯಾಭಾ. ೨-೧೮); ನಡೆವಕ್ಕಿ ನುಡಿವಕ್ಕಿ ... ಗಱಿಗಣ್ಣಕ್ಕಿಗಳಾ ನೆಲದೆಡೆಯ ಬನದೊಳಿರುತಿಹವು (ಕುರಾಸಾಂ. ೨-೩೦); ಆ ವನದ ಮಧ್ಯದೊಳು ನಡೆವಕ್ಕಿ ನುಡಿವಕ್ಕಿ ಪಾವನತ್ವವನೈದಿ ಜೀವಿಪುವು ಭಯವನುಳಿದು (ಪ್ರಭುಪು. ೩-೧೪). 'ನುಡಿವಕ್ಕಿ' ಪರಾ. [ನಡೆ$_1$ + ಹಕ್ಕಿ$_1$ (<ಪಕ್ಕಿ$_1$)]

ನಡೆವಡು (ಕ್ರಿ). ಹೋಗು; ಚಲಿಸು; ಗಮಿಸು: ತಾಂ ತನಗೆ ಹಯಂ ತಡೆವಿಟ್ಟ ಪಾವೆಂತಂತು ನಡೆವಟ್ಟು ತನ್ನಿಚ್ಛೆಯಿಂ ಪೋಗೆ (ಶಾಮಾಶ್ವ. ೧೩೯-೦೩). [ನಡೆ$_2$ + ಪಡು$_1$]

ನಡೆವಣಿಗ (ನಾ). ಪಾದಚಾರಿ; ಕಾಲಾಳು: ನಡೆವಣಿಗ ಘೋಳಾಯ್ಲ ಸೂಳಾಯ್ತಡವವಳ ಬಳಿಗಾಱ ಕಮ್ಮಱ ನುಡಿಗ ಕುಂಬಱ ಕಂಚುಗಾಱರ ಕೇರಿ ಮೆಱೆದಿಹವು (ಶಾಳ್ಕಥಾ. ೨-೮). [ನಡೆ$_1$ + – ವಣಿಗ]

ನಡೆವಲೆ (ನಾ). ಒಂದು ಬಗೆಯ ಬಲೆ: ಇಡುವಲೆ ಸಿಡಿವಲೆ ಕೆಱುವಲೆ ನಡೆವಲೆ . . . ಬಿಡುವಲೆಗಳೆನಿಪ್ಪುವೆಸೆದುವಾ ಬೇಂಟೆಗರೊಳ್ (ಶಬಕಂ. ೩-೨೪). [ನಡೆ ? + ಬಲೆ$_1$].

ನಡೆವಳಿ$_1$, ನಡವಣಿ, ನಡವಳಿ, ನಡಾವಳಿ (ನಾ). ೧. ನಡೆಯುವಿಕೆ; ನಡಿಗೆ: ನಡೆವಳಿಗಳಿಂದೆ ಪೂಡವಿಯನು ನಗ್ಗಿಪ ಹಸ್ತಿಗಡಣ (ನವಪೋ. ೩೦-೨೬). ೨. ನಡವಳಿಕೆ; ವ್ಯವಹಾರ; ನಡತೆ; ವರ್ತನೆ: ಬಿಕ್ಕೆಯಂ ಬೇರುಮನುಂಡಡವಿಯೊಳಗಿರ್ಪ ಮುನಿಗಳ ನಡೆವಳಿಯೆತ್ತೆತ್ತ ಯುವತಿ ಜನದನುರಾಗಂ (ಶಾದಂಪು. ೮೧೮); ಪಟಿಯಂ ಕೇಳ್ದೆನೊ ಮೇಣ್ದಡವ ಟಿ[ಳಿ]ಯಂ ತಪ್ಪಿದೆನೊ ಕಾಣೆ ಕಣ್ಣಿಂದಂ ಕೂರ್ತಬಲ್ದಿವರಂ ಬಗೆದೆನೊ ಪಚ್ಚಟಿದೆನೊ ಪೇಟ್ಟೂಡಿ ನಿನ್ನೊಳಂಗಾಧಿಪತೀ (ಗದಾಯು. ೫-೧೪); P ಇದನ್ನು ಪ್ರಾಸಕ್ಕಾಗಿ 'ಟ' ವನ್ನಾಗಿ ತಿದ್ದಿಕೊಂಡಿರಬಹುದು; ಹಗಲಿರುಳು ಉದಯ ಬೈಗುಗಳು ಧರ್ಮವು ಎಂಬಿವು ಮನುಷ್ಯರ ನಡೆವಳಿಯನಱಿವುವು (ಪಂಕತಂ. ೧೭೨-೧೦); ಪರವಧುಗಳಿವುವುದುಮಿಹಂ ಪರವಟಿಗುಂ ನಿನ್ನ ಮಹಿಮೆಗಿದು ನಡೆವಳಿಯೇ (ಪಂರಾಮಾ. ೯. ೦೪೫); ನಡೆವಳಿಯೊಳ್ ತನ್ನ ಸಮಂಬಡೆದಾರುಂ ನಡೆದರಿಲ್ಲ (ಪುಷ್ಪಪು. ೧-೨೯); ಹರಿಯ ಚಕ್ರವ ತುಡುಕಿಸುವೆ ವಾನರಪತಾಕನ ರಥವ ಹಿಂದಕೆ ಮುರಿಯಲಿಸುವೆನು ಮಹಿಮರಿಬ್ಬರ ನಡೆವಳಿಯ ಕೆಡಿಸಿ (ಕುಪ್ಪಾಭೀ. ೧-೪೧); ನಡೆವಳಿಯ ನೋಡಿದಿರೆ ಲೋಗರ ಮಡದಿಯರು ತನ್ನವರು ಠಕ್ಕಿನ ಕಡಲು ಕೃಷ್ಣನ ನಂಬಲಿಹಪರವಿಲ್ಲ (ಕುಪ್ಪಾಕ್ರೋ. ೧೯-೦೮); ನುಡಿಗೆ ನಾಚಿದನರಸ ಹಂಸದ ನಡೆ[ಪಾಠಾಂ. ಡ]ವಳಿಗೆ ಮೆಚ್ಚಿದನು (ಸಗಕ. ೨-೨೦). ೩. ಸಂಪ್ರದಾಯ; ಪದ್ಧತಿ; ರೂಢಿ: ಪಿರಿಯರೆಲ್ಲರ್ನಡೆದ ನಡೆ[ಪಾಠಾ. ಡ]ವಳಿಯನೊಲ್ಲೆನೆಂಬುದು ಬಲ್ಲತನಮಲ್ತು (ವೃಷವಿ. ೩-೩೨ಪ.) ೪. (ಸಂಘ, ಸಂಸ್ಥೆ ಮುಂತಾದುವುಗಳ ಆಧಿವೇಶನಗಳಲ್ಲಿ ನಡೆದ) ಕಾರ್ಯಕಲಾಪ, – ಕಾರ್ಯಕ್ರಮ ಮತ್ತು ಅದರ ವರದಿ: "ಕಾರ್ಯ; ವರ್ತನೆ; ನಡವಳಿ" (Proceeding. ಇಂಇನಿ). **ನಡವಣಿ**: ೨. ಧರ್ಮದ ನಡವಣಿಗೆ ಮೆಚ್ಚಿದೆನು ಸತ್ಯವ ಕೆಡದವೊಲು ರಕ್ಷಿಸಿದೆ (ತಿಮ್ಮಅ. ೧-೩೪). **ನಡವಳಿ**: ೨. ಅವರವರ ದಯ್ವದಂದಮನವರ ವರಾಗಮದೊಳವರ ನಡವಳಿಗಳ [ಪಾಠಾಂ. ಕಥೆಗಳೊಳಂ] ನೋಡುವಡವೆ ದೂಷಿಸಿದವುವಿನ್ನವರನ್ನರ್ನುಡಿಯೆ ಮುಳಿವರಾ ಸಮಯದವರ್ (ಸಮಪ ೯-೨೦೭); ಅಳವಟ್ಟ ಪಿರಿಯ ಸಿರಿ ನಲ್ಲಳ ನಡ [ಪಾಠಾಂ. ಡ] ವಳಿಯೊಳ್ಪು . . . ಮನಂಗೊಳ್ಳುತಿರೆ ಪಲಕಾಲಮಂರಸುಗೆಯ್ಯುತ್ತಿರ್ದೈ (ವರ್ಧಪು. ೧೦-೬೯); ಕುಲವಧುವಿನ ನಡವಳಿಯೊಳ್ ಕುಲಮುಮ್ ಚಲಮುಮ್ ಪತಿಬ್ರತಾಗುಣದಿಂದಂ ನೆಲಸಿಕ್ಕುಮ್ (ಪೌಇಇ. XX, ೨೪೯-೪೯; 1228); ವನಧಿಪನ ಗಾಂಭೀರ್ಯ ರವಿನಂದನನ ನಡವಳಿ ಧರೆಯ ಸೈರಣೆಯಿನಿತು ದಶರಥಸಾರ್ವಭೌಮಂಗಲ್ಲದಿಲ್ಲೆಂದ (ತೊರಾ. ೧-೩-೨೬). **ನಡಾವಳಿ**: ೨. ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಷ್ಟವಯ್ಯ (ಸಿದ್ಧವ. ಕ. ೨೬೦-೦೫೭); ಜಗತ್ತಿನ ರೀತಿನೀತಿ ನಡತೆ ನಡಾವಳಿಯ ಅನುಭವ ನನಗೆ ಸಾಕಷ್ಟಾಗಿದೆ (ಪರಿಚೇ. ೪೫); ಇದೆಲ್ಲಕ್ಕಿಂತಲೂ ಪ್ರಭಾಕರನ ಮನಸ್ಸನ್ನು

ಗಾಸಿ ಮಾಡಿದುದು ನಿರ್ಮಲೆಯ ನಡಾವಳಿ (ತೇಮೋಡ. ೧೦೦) ; ಅವರಿಗೆ ಒಳ್ಳೇ ನಡಾವಳಿಯ ಬಯಕೆಯು ಹೆಚ್ಚಾಗುವ ಹಾಗೆ ತಕ್ಕ ಕಾರಣವನ್ನೇ ನೋಡಿ ಕೊಡಬೇಕು (ಪುಸಂಧಿ. ೩-೧೩) ; ಕೃಷ್ಣದ್ವೈಪಾಯನರೇ ಮೊದಲಾದ ಪೂರ್ವಜರು ಇಂಥ ನಡಾವಳಿಗಳಿಗೆ ಮೊರೆಯಿಟ್ಟಿದ್ದಾರೆ (ಕಪ್ರಬೃ. ೬-೧೨೧) ; ೩. ಕುಮ್ರಿ ಕಡಿಯುವ ನಡಾವಳಿಯು ಧಾರವಾಡಜಿಲ್ಲೆಯಲ್ಲಿಲ್ಲ (ಕಧಾಗ. ೩೪) ; ಬೈಲುಸೀಮೆಯಲ್ಲಿ ಮಳೆ ಕಡಿಮೆ ಬೀಳುವದರಿಂದ ಮಾಳಿಗೇಮನೆಗಳನ್ನು ಕಟ್ಟುವ ನಡಾವಳಿ ವಿಶೇಷವುಂಟು (ಮುಂಬಡಿ. ೯-೧೧೬). ೫. ಧರ್ಮಸ್ಥಳದಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಒಂದು ಉತ್ಸವ,-ಹಬ್ಬ : ಉಡುಪಿಯಲ್ಲಿ ಎರಡು ವರ್ಷಗಳಿಗೊಮ್ಮೆ ನಡೆವ ವರ್ಯಾಯ, ಪಡುಬಿದ್ರೆಯಲ್ಲಿ ಜರಗುವ ಡಕ್ಕೆಬಲಿ, ಧರ್ಮಸ್ಥಳದಲ್ಲಿ ಹದಿನೆರಡುವರ್ಷಗಳಿಗೊಮ್ಮೆ ನಡೆವ 'ನಡಾವಳಿ' ಎಂಬ ಉತ್ಸವ . . . ಇವುಗಳು ಘ್ರಾಮುಖ್ಯವಾದುವುಗಳಾಗಿವೆ (ತುಳುನಾ. ೩೩೩).

[ನಡೆ₁ + – ವಳಿ₁. / ತಮಿ. ನಟವಟಿ, ನಟ್ಪೆವಟಿ; ಮಲ. ತೆಲು. ನಡವಡಿ; ತುಳು. ನಡಾವಳಿ, ನಡುವಡಿ]

ನಡೆವಳಿ₂ (ನಾ). ನಡೆಮಂಡಿ; ನಡೆಯುವ ದಾರಿಗೆ ಹಾಸುವ ಮಂಡಿಬಟ್ಟೆ : ಸುಗ್ಗಿಯೊಳ್ ಮದುವೆಯನೆ ಕುಳರಗಸ ನಡವಳಿಯ ಹಿಗ್ಗಿನಿಂ ಬಿಡಿಸುವನು ತೊಳೆದಡೆಯ ಕೊಳೆಯಂ (ಕಾಂಡೂರ. ೬೪-೧೩೪) ; "ನಡೆವಳಿ=ನಡೆಬಟ್ಟೆ (ಮದುಮೆಯಲ್ಲಿ ಮಂಟಪದ ಸುತ್ತು ಹಾಕುವ ಬಟ್ಟೆ)" (ಕಾಂಡೂರ. ಅಡಿಟಿ).

[ನಡೆ₁ + ವಳಿ₂ (<ಪಟ್ಟಿ)]

ನಡೆವಳಿಕಾರ 'ನಡೆವಳಿಕಾಱ' ನೋ.

ನಡೆವಳಿಕಾರಿಕೆ (ನಾ). ನಡತೆ ; ನಡವಳಿಕೆ ; ಸಂಪ್ರದಾಯ : ಶ್ರೀರಾಜ ಒಡೆಯರವರ ಸನ್ನಿಧಾನವು ಒಡ್ಡೋಲಗಕ್ಕೆ ಬಿಜಯಮಾಡಿದೊಡನೆಯೇ ಆಸ್ಥಾನಿಕರೆಲ್ಲ ಇದಿರಿದ್ದು ತಮ್ಮ ತಮ್ಮ ಮಾನಾನುಗುಣವಾಗಿ ನಮಸ್ಕರಿಸಿ ಗೌರವಿಸಿಕೊಳ್ಳಬೇಡವ ? ಓಲಗದ ನಡೆವಳಿಕಾರತನವಿದು (ಕಬೃಅ.೩೮-೦೭).

[ನಡೆವಳಿಕಾರ (<ನಡೆವಳಿಕಾಱ) + – ತನ]

ನಡೆವಳಿಕಾರ್ತಿ (ನಾ). ನಡವಳಿಕೆಯನ್ನು ತಿಳಿದವಳು ; ಆಚಾರ ವಿಚಾರಗಳನ್ನು ಬಲ್ಲವಳು : "ನರೀ, ನಾರೀ, ಈ ೨ ನಡೆವಳಿಕಾರ್ತಿ" (ಕಾಶಕ್ಕ. ೩೮೭). [ನಡೆವಳಿಕಾರ (<ನಡೆವಳಿಕಾಱ) + – ತಿ₁ (<– ಇತ್ತಿ)]

ನಡೆವಳಿಕಾಱ, ನಡವಳಿಕಾರ, ನಡವಳಿಕಾಱ, ನಡೆವಳಿಕಾರ (ನಾ). ೧. ನಡವಳಿಕೆಯನ್ನು ತಿಳಿದವನು ; ಆಚಾರ, ವ್ಯವಹಾರಗಳನ್ನು ಬಲ್ಲವನು ; ನಡತೆಯುಳ್ಳವನು : ಕಾಱಕ್ಕೆ–ನಡೆವಳಿಕಾಱಂ, ನುಡಿವಳಿಕಾಱಂ . . . ಪಗೆಕಾಱಂ, ಬಗೆಕಾಱಂ (ಕಮಾದ. ೦೯೯ ಪ್ರಯೋ). **ನಡವಳಿಕಾರ** : ೧. "ನರನ್, ನರ್ತಾ, ನೃತಿ, ನರಃ, ಈ ೪ ನಡವಳಿಕಾರಂ" (ಕಾಶಕ್ಕ. ೩೮೭). **ನಡವಳಿಕಾಱ** : ೨. (ದೇವಸ್ಥಾನ, ಮನೆ ಮೊದಲಾದುವುಗಳ) ವ್ಯವಹಾರಗಳನ್ನು ನೋಡಿಕೊಳ್ಳುವವನು,–ಮೇಲ್ವಿಚಾರಣೆ ನಡೆಸುವವನು : ಪೂಜಾರಿಗ ತರಿಚಾರಕರಿಕಳಗಾದ ನಡವಳಿಕಾಱರ ಜೀವಿತಕ್ಕಂ . . . ಮಹಾಜನಂಗಳು ಬಿಟ್ಟ ದತ್ತಿ (ಕ್ಯುಶಿ. ೦೯೩೩, ೪೬-೩೫ ; 1181) ; ರಾಜಾರ್ತ್ವನೂ ತೀರ್ಪಿಸಿಕೊಡುವರು ಪಡವಳಿಕಾಱ ಪ್ರಭುಗಳು (ಸೌಇ. IX-11, ೪೩೩-೩೩ ; 1408) : ತಿಂಮಣರಾಯರ ಮನೆಯ ನಡವಳಿಕಾಱಂ ಹೊಂನಪ್ಪನಾಯಕರು (ಮ್ಯುಶಿ. ೦೯೩೩, ೨೩-೨ ; 1616). **ನಡೆವಳಿಕಾರ** : ೧. "ಸರ್ತಾ, ಸರಕಃ, ಈ ೨ ನಡೆವಳಿಕಾರಂ" (ಕಾಶಕ್ಕ. ೩೩).

[ನಡೆವಳಿ₁ + – ಕಾಱ]

ನಡೆವಳಿಕೆ, ನಡವಳಿಕೆ, ನಡಾವಳಿಕೆ (ನಾ). ೧. ನಡತೆ ; ನಡೆನುಡಿ ; ಆಚಾರ, ವ್ಯವಹಾರ ; ವರ್ತನೆ : ಅದರೆ ಕೃತಿಯು ಏನಾದರೂ ನುಡಿವಳಿಕೆ; ಚಾರಿತ್ರ್ಯವು ನಡೆವಳಿಕೆ. ನುಡಿವಳಿಕೆಯು ಅತ್ಯುಚ್ಚವಾಗಿ ನಡೆವಳಿಕೆಯು ಅದರ ಕನ್ನಡಿಯಂತಿದ್ದರೆ, ಆ ಮನುಷ್ಯನು ಸಾಧುವೆಂದೆನಿಸಿಕೊಳ್ಳುವನು (ಸಾಹಸಂ. ೫) ; ಅಂದೆ ನೆಲವು ಪಡೆದೀತು ಅಮರಜೀವಂತಶಾಂತಿಯನ್ನು ಎಂದು ನಾಡ ನಡೆವಳಿಕೆಯಲ್ಲಿ ನೆಲೆಗೊಂಬುದೊಂದೆ ನಿಜವು (ಅರಳು.೧೮೫-೩) ; ನಡೆವಳಿಕೆಗಳು ಮತ್ತೂ ಉತ್ತಮಗೊಂಡು (ಮುನಿಮಾ. ೬೯). ೨. ರೂಢಿ ; ಪದ್ಧತಿ ; ಸಂಪ್ರದಾಯ : ನಮ್ಮ ಸೀಮೆಯಲ್ಲಿ ನಡೆವಳಿಕೆಗೆ ಬಂದಿರುವ ಅಳತೆಯು ಯಾವುದನ್ನು ಅನುಸರಿಸಿರುವುದು (ಕೂಮಿಅ. ೦). ೩. (ಸಂಘ, ಸಂಸ್ಥೆ, ಸಭೆ ಮೊದಲಾದುವುಗಳ ಅಧಿವೇಶನಗಳಲ್ಲಿ ನಡೆವ) ಕಾರ್ಯಕಲಾಪ,–ಕಾರ್ಯಕ್ರಮ ಮತ್ತು ಅದರ ವರದಿ : ರಾಯಲ್ ಸೊಸೈಟಿಯ ನಡೆವಳಿಕೆಗಳು (Proceedings of Royal Society. ೧೦೪೨). **ನಡವಳಿಕೆ** : ೧. ಅಂದಿನ ತನ್ನ ನಡವಳಿಕೆಯಲ್ಲೇನೋ ಕಳಂಕವಿದೆಯೆಂದು ಮನಸ್ಸು ಹೇಳುತ್ತಿತ್ತು (ಮುರುಳು. ೩೭) ; ಆದರೆ ನಿಮ್ಮ ನಡವಳಿಕೆಗಳು ಅರ್ಥವಾಗದೆ ಹೋದರೆ ಅವು ತಪ್ಪುಮಾಡುತ್ತವೆ (ಜಾಕಮ. ೧೮೫) ; ಅರ್ಥವಾಗದ ನಡವಳಿಕೆಯು ಕೆಟ್ಟ (ವಾತ್ಸಲ್ಯ. ೪೮) ; ವಿದ್ಯಾರ್ಥಿಗಳು ತಮ್ಮ ನಡವಳಿಕೆಯನ್ನು ಉತ್ತಮಪಡಿಸಿಕೊಳ್ಳಬೇಕೆಂಬ ಹುರುಪಿನಲ್ಲಿರುವಾಗ ಅವರನ್ನು ತಿದ್ದುವುದೂ ಶಿಕ್ಷಕನ ಕರ್ತವ್ಯ (ಕ್ರಿಯಶಿ. ೩೮). ೩. ನಡವಳಿಕೆಗಳು (Proceedings. ಪತ್ರಿನಿ. ೬೪). **ನಡಾವಳಿಕೆ** : ೨. ವ್ಯವಸಾಯದಲ್ಲಿ ಹಿಂದಿನ ನಡಾವಳಿಕೆ ಹೋಗಿಲ್ಲ (ರೂಢಿ).

[ನಡೆವಳಿ₁ + – ಕೆ./ತಮಿ.ನಟವಟಿಕ್ಕೈ ; ತೆಲು. ನಡವಡಿಕ]

ಪಡೆವಳಿಗ (ನಾ). (ಅರಮನೆ, ದೇವಸ್ಥಾನ ಮೊದಲಾದುವುಗಳ) ವ್ಯವಹಾರಗಳನ್ನು ನೋಡಿಕೊಳ್ಳುವವನು,–ಮೇಲ್ವಿಚಾರಣೆ ನಡೆಸುವವನು ; ಪಾರುಪತ್ತೆಗಾರ : ಪಡವಳ್ಳರ ಪರದೇಶಾಧೀಶರ ನಡೆವಳಿಗರ ನಲ್ಮೆಯ ಸಚಿವರ . . . ಪೊಸಪೂವಲಿಗುಡುವ ಮಡದಿಯರ ಮೊತ್ತಂ ಕಣ್ಗೊಪ್ಪಿದುದಾವುದಯದೊಳು (ಜಯಕಾ. ೦೩-೦೭). [ನಡೆವಳಿ₁ + – ಗ₂]

ನಡೆವಳಿದಪ್ಪು (ನಾ). ನಡೆವಳಿಕೆಯ ತಪ್ಪು ; ನಡತೆ, ಆಚಾರ, ವ್ಯವಹಾರಗಳಲ್ಲಿಯ ದೋಷ : ನಡೆವಳಿದಪ್ಪು ಪ್ರಾಪಂಚಿಕರಿಗಿಲ್ಲದೆ ಜ್ಞಾನಮಯರಿಗದು (ಗಗಣಾ. ೦೬-೪೬). [ನಡೆವಳಿ₁ + ತಪ್ಪು₂] .

ನಡೆವೆಣ (ನಾ). ನಡೆಯುವ ಹೆಣದಂಥವನು ; ಸತ್ತಂತೆ ಇರುವವನು ; ನಿರ್ವೀರ್ಯ ; ಜೀವಚ್ಛವ : ನಡೆವೆಣನ ನುಡಿವೆಣನ ಸಂಸಾರವೇನವನ (ಬಸವ. ೧೫೭) ; ಸಂಸಾರವೆಂಬ ಮಹಾವ್ಯಾಧಿ ಬಾಧಿಸಿ ನಡೆವೆಣನ ಮಾಡಿ ಕಾಡುತ್ತಿದೆ ನೋಡಯ್ಯಾ (ಪಡಕ. ೪೩-೦೬೧) ; ಕೇಳು ನಡೆವೆಣನೇ ಧರಿಣ್ರನು ಸಾಲದೆನಿಸಿದ ದಕ್ಷಿಣೆಯ ಯಜ್ಞಾಗ್ನಿ ನಿಷ್ಫಲವೆಂದು ನುಡಿದನು ರಾಯ ಕೌಂತೇಯ (ಕುವ್ಯಾಅ. ೫೩-೪೩) ; ತೊಡೆಯುನೇಜಿಲು ಬಂದ ಮಗನನು ಮಡದಿ ವಾತ್ಸಕಿ ದೈದು ಭಂಗಿಸಿ ಜಡಿದು ನೂಕಲು ನೋಡುತ್ತಿದ್ದನು ಕಾಣದವನಂತೆ ನಡೆವೆಣನಪನ್ನೇನ ಕೇಳುವೆ (ನಿಭಾಗ. ೪-೭-೫೧) ; ಸತ್ತೆಡೆಯಾಡುವ ನಡೆವೆಣನೊಲು ಕೈಹೊಕ್ಕುಕೊಂಡಿದೆ ತೆರಳಿದನು (ಮೋಹಕ. ೪-೨೬) ; ಗುಣ ಜಪ್ತನ ಕುಲ ರೂಪುಗುಂದಿದ ನಡೆವೆಣಕೀಯಲಾಗದು ವೆಣ್ಣು (ಹರಿಚ. ೩-೦೭). 'ನುಡಿವೆಣ' ಪರಾ. [ನಡೆ₂ + ವೆಣ]

ನಡೆವೆಱು (ಕ್ರಿ). ನಡಗೆಯನ್ನು ಹೊಂದು ; ಚಲನೆಯನ್ನು ಪಡೆ : ಪ್ರಾಯಂ ಕೂಸಾದೊಡೇನೀ ಸಾಯಕಂ ಕೂಸಕ್ಕುಮೆ ! ಜಗದೆ ನೀವೆ ಬಲ್ಮಾಳ್ಕರ್ ! ಈ ನಡೆವೆತ್ತ ಸೀರ್ಪುಟಾಗೆವೆ ! (ರಾಮಾಶ್ವ. ೧೩೪-೩೧).

[ನಡೆ₂ + ವೆಱು₁]

ನಡೆಸರ 'ನಡೆಸಾರ' ನೋ.

ನಡೆಸಾರ, ನಡೆಸರ (ನಾ). ೧. (ನದಿ, ಕಂದಕ ಮೊದಲಾದುವನ್ನು ದಾಟಲು ಕಟ್ಟುವ) ಕೃತಕವಾದ ಮರ, ಬೊಂಬು ಮುಂತಾದುವುಗಳಿಂದ ಕಟ್ಟುವ ಸೇತುವೆ : ಕೋಟೆಯನ್ನು ಹತ್ತುವುದಕ್ಕೆ ಈ 'ಸಾರ'ಗಳನ್ನು ಕಟ್ಟುತ್ತಿದ್ದರು . . . ಸಾರ ಕಟ್ಟುವುದನ್ನು ಅನೇಕರು ನೋಡಿರಬಹುದು. 'ನಡೆಸಾರ' ಎಂಬುವ ಅಗಳನ್ನು ದಾಟಿಹೋಗುವುದಕ್ಕಾಗಿ ಉಪಯೋಗವಾಗು

ತ್ತಿದ್ದವು (ಕರ್ಣಾಜ. ೫೮). ೨. ಕೋಟೆ ಮೊದಲಾದುವನ್ನು ಏರಲು ತಯಾರಿಸಿದ ಒಂದು ಸಾಧನ : ದುರ್ಗಕ್ಕೆ ನಿಚ್ಚಣಿ ಸಾರ್ಚುಂದೊಲೆ ವೀರಸೇತು ನಡೆಸಾರಂ ಬದ್ದರಂ . . . ಪಡಿಗೋಂಟೆಯೆಂಬ ಬಹುಕೋಟಾಯಂತ್ರಸಾಮಗ್ರಿ ತಿಂತಿಣಿಗೊಂಡಾಂತಿರೆ (ಅನಂಪು. ೧೧-೮೩); ನಡೆಸಾರಂ ನೆಲವಾಳಿಗೆ ಪೆಡಕೆಡಪುವ ಡೆಗ್ಗೆ ಬದ್ದಿರಂಗಳಿನಾರ್ದಂದೆಡೆಗುಡದಧಟಿಂ ಕೋಂಟೆಯನಡರ್ದಾ ರಿಪುಭಟರನಿಕ್ಕಿದಂ ಕಲಿಕಾವಂ (ತ್ರಿಪುವಿ. ೫-೧೧). ನಡೆಸರ : ೨. ಭೈರವ ಬದ್ದರದ ನಡೆಸ [ಪಾಠಾಂ. ನ]ರದ ಡಬ್ಬುಕ ಡೆಂಕಣಿಗಳನು ತೂಱಿದರು ನಭಕೆ (ತೊರರಾ. ೬-೦೦-೦೪). 'ನಡೆಸೇತು', 'ಸಾರಮಾರಿ' ಪರಾ. [ನಡೆ$_1$ + ಸಾರ$_1$]

ನಡೆಸು 'ನಡೆಯಿಸು' ನೋ.

ನಡೆಸೇತು (ನಾ). ನಡೆಯುವ ಸೇತುವೆ; ಚಲಿಸುವ ಸೇತುವೆ : ಕೇತನಾವಳಿಯೆತ್ತೆ ವಾದ್ಯ ಘೂರ್ಣಿಸೆ ನಡೆಸೇತುಗಳಂತಾನೆ ನಡೆಯೆ ಭೂತಳತುಂಬಿ ಪಾಯ್ದಳ ಬರೆ ಬಂದು ವಿನೀತಪುರದೊಳಾಗ ಹೊಕ್ಕ (ಭರಣ. ೫೮-೩೭). 'ನಡೆಸಾರ' ಪರಾ. [ನಡೆ$_1$ + ಸೇತು]

ನಡೆಸೊಡರು (ನಾ). (ಯಾರಾದರೂ ಓಡಾಡುವಾಗ ಕೈಯಲ್ಲಿ ಹಿಡಿದು ಮುಂದೆ ದಾರಿ ತೋರಿಸಲು ಉಪಯೋಗಿಸುವ) ದೀವಟಿಗೆ : ನಿನ್ನಂಗಣದಲ್ಲಿ ಬೊಗಳುವ ಶ್ವಾನನಯ್ಯಾ ನಿನ್ನ ಮನೆಯ ನಡೆಸೊಡರಯ್ಯಾ (ಪಚಸಂ. ೧೯೬-೪೮). [ನಡೆ$_1$ + ಸೊಡರು (<ಸೊಡರ್)]

ನಡೆಹ, ನಡಹ (ನಾ). ೧. ನಡೆಯುವಿಕೆ; ಚಲಿಸುವಿಕೆ : "ಗತಿಃ, ವಿಂಖಃ, ವಿಹಾರಃ, ಪರಿಸರ್ಪಃ, ಪರಿಕ್ರಮಃ—ಈ ೫ ನಡೆಹ" (ಹಲಾಯು. ೦೨೦-೪೦). ನಡಹ : ೨. ನಡೆದುಕೊಳ್ಳುವಿಕೆ; ವ್ಯವಹರಿಸುವಿಕೆ : ಸ್ವತಂತ್ರವ್ಯುತ್ಥಾನಂ ವಿವೃತ್ತಿಯೆನಲೊಲಿದಂತೆ ನಡಹಮಕ್ಕುಂ (ಮಂಗರಾ. ೦೩೩-೩೦).

[ನಡೆ$_1$ + – ಹ$_2$]

ನಡ್ಡಿಮೂಗು (ನಾ). ಚಪ್ಪಟೆಯಾದ ಮೂಗು; ತೆಗ್ಗಿದ ನಾಸಿಕ : "ಅವಟೀಟಃ, ಅವನಾಟಃ, ಅವಬ್ರಟಃ, ನತನಾಸಿಕಃ —೪ ಕುಳಿಮೂಗಿನವನ ಹೆಸರುಗಳು, ಚಿಕ್ಕಮೂಗುಳ್ಳವನು, ನಡ್ಡಿಮೂಗುಳ್ಳವನು" (ಸಿದ್ಧಾಂತಿ. ೦೫೭). [←ತೆಲು. ನಡ್ಡಿಮುಕ್ಕು]

ನಡ್ಯೆ (ನಾ). ಜೊಂಡು ಹುಲ್ಲಿನ ರಾಶಿ : "ನಡ್ಯಾ, ನಡಸಂಹತಿಃ – ಹೊಲಗದ್ದೆಗಳ ಬದುವುಗಳಲ್ಲಿಯೂ, ತೋಟದ ಸಾರಿಗೇ ಬದುವುಗಳಲ್ಲಿಯೂ ಗುಂಪಾಗಿ ಬೆಳೆದಿರುವ ಹುಲ್ಲುಗಳ ಸಮೂಹ" (ಸಿದ್ಧಾಂತಿ. ೦೩೩).

[ಸಂ. ನಡ್ಯಾ]

ನಡ್ವಲ, ನಡ್ವಳ (ನಾ). ಜೊಂಡುಹುಲ್ಲು ಹೆಚ್ಚಾಗಿ ಬೆಳೆದ ಭೂಮಿ : "ನಡ್ವಾ, ನಡ್ವಲಃ, ನಡಪ್ರಾಯೆ,—ಶತ್ತಹುಲ್ಲು ಬಹಳವಾಗಿರುವ ದೇಶದ ಹೆಸರು, ಹುಲ್ಲುನೆಲದ ಪ್ರಾಂತ್ಯವು" (ಸಿದ್ಧಾಂತಿ. ೮೪). ನಡ್ವಳ : "ನಡ್ವಳಂ, ನಳಸಂಯುತಂ—ಈ ೨ ನಾ(ಣ)ನಲುಳ್ಳ ಭೂಮಿ" (ಹಲಾಯು. ೨೬-೪); "ನಡ್ವಳಂ ನಳಯುತಂ ನಳ್ಳುನೆಲನಕ್ಕು" (ಮಂಗರಾ. ೨೮-೨). [ಸಂ.]

ನಡ್ವಳ 'ನಡ್ವಲ' ನೋ.

ನಣ್ಕೆ (ನಾ). ನಂಟತನ; ಬಾಂಧವ್ಯ : ಸಂಸಾರದಪಾಯಮುಮಂ ನಿನ್ನಱಿವಿನ ಬಲ್ಮೆಯುಮಂ ಧೈರ್ಯದೊಳಾದ ನಣ್ಕೆಯುಮಂ ಕಂಡೆಂ (ಜೀವಸಂ. ೨೬-೪೭ಪ). [<ನಣ್ಪು ?]

ನಣ್ಪು (ನಾ). ೧. ನಂಟು; ಬಾಂಧವ್ಯ; ಸಂಬಂಧ : "ನಣ್ಪು ನಂಟು" (ಕರ್ಣಾನಿ. ೨೩); ಕುಲಜನುಮಲ್ಲಂ ನಣ್ಪಿನ ಬಲಮುಂ ತನಗಿಲ್ಲ ಕಣ್ಗಮೇಳಿದನಾರೊಳ್ ನೆಲಸಿರನೆಲ್ಲಿಯುಮ[ವಪ]ಂ ಚಲವೆಂದುಂ ಪತ್ತುವಿಡದದೊಂದುಂಟು ಗುಣಂ (ಶಿವಿರಾ. ೩-೦೭೨) : ಬೆಳ್ಗಚ್ಚಿಯ ನರಸರ್ಕಳೇಱುವುದಂ ಕಂಡುದಱಿಂದುತ್ತಮಕುಲದವರ್ಗಳ್ಗೆ ಕುಲಜರಲ್ಲದವರೊಡನೆ ಮದುವೆಯೊಳ್ ತೊಟ್ಟ ನಣ್ಪುಗಳಕ್ಕುಂ (ಪಡ್ಮಾರಾ. ೮೭-೦೩); ಸುಯೋಧನನೆನಗೊಳ್ಳಿಕೆಯ್ದ ಕೃತಮಂ ಪೆಱಗಿಕ್ಕಿ ನೆಗಟ್ತಿ ಮಾಸೆ ನಣ್ಪಿನ ನೆವದಿಂದೆ ಪಾಂಡವರನಾನೊಳವೊಕ್ಕೊಡೆ ನೀಮೆ ಪೇಸಿರೇ (ಪಂಪಭಾ. ೯-೬೮) : ರಾಗದಿಂದಿನ್ನಿವರ್ಗೆ ಮದುವೆಯುಂ ಮಾಟ್ಟುದೆಂದಟ್ಟಿದಂ ನಿಮ್ಮನುಜನ್ಮಂ ನಿಮ್ಮ ನಣ್ಪಂ ಬಯಸಿ ಪದೆಪಿನಿಂದೆಮ್ಮ ವಿದ್ಯಾಧರೇಂದ್ರಂ (ಪಂರಾಮಾ. ೧೦-೧೦೪); ಎನ್ನವರೆಂದು ಪುತ್ರಪಿತೃಮಿತ್ರ ಕಳತ್ರದ ನಣ್ಪು ನಾಡೆ ನೋವಂ ನಿನಗುಂಟುಮಾಡೆ (ಜೀವಸಂ ೬೮-೦೨); ಪೆಂಪಿನ ಸೊಂಪಿನ ನಣ್ಪನಾಳ್ದು ಪೊಂಗೊಡನನಮರ್ಚಿದಂತೆಸೆವುವಾ ಲಲಿತಾಂಗಿಯ ಪೀವರಸ್ತನಂ (ಕಾವ್ಯಸಾ. ೩೦೫); ನಿನ್ನಯ ಮಱುಕಕೆ ಒಡಮಱುಗಿದೆನಾನ್ ಎಮ್ಮಯ ನಣ್ಪಿಂದಾನ್ ಸೆಳೆಗೊಂಡೆನ್ (ಬದ್ಧಪ್ರ. ೦೭-೩೪೦). ೨. ಸ್ನೇಹ; ಕೆಳೆ : ನೋಡು ನಣ್ಪಿಂ ನಿಮಗಮೆಮಗಮಾಮ್ನಾಯದಿಂ ಬಂದುದಿಂತೀ ಜಿನಧರ್ಮಂ (ಆದಿಪು. ೨-೨೦); ಪಗೆಗೆ ಕಣಿಯೊಂದುಂಟೇ ನಣ್ಪಿಂಗಮಾಗರ ಮುಂಟೆ ನೀಂ ಬಗೆಯ ಪಗೆಯುಂ ನಣ್ಪುಂ ಕೆಯ್ಕೊಂಡ ಕಜ್ಜದಿನಲ್ತೆ ಪುಟ್ಟುಗುಮರಸುಗಳ್ಗೆ (ಪಂಪಭಾ. ೧೩-೧೦); ಒರ್ಮೆ ಬಂದೆನಗೆ ಮಾಟ್ಟುದು ಪೆರ್ಮೆಯ ನಿಮ್ಮ ನಣ್ಪಿನಿಂ ಜವಿಯಿಸಿದೀ ಕದರ್ಥನೆಗೆ ಸೈರಿಪುದು (ಕಾದಂಉ. ೧೯೩); ಪಲಕಾಲದ ರಾಕ್ಷಸವಾನರವಂಶದ ನಣ್ಪೆನ್ನಿಂದಮಱಿದುದೆಂಬುದು ಲೋಕಂ (ಪಂರಾಮಾ. ೦೦-೦೭೨); ಮತ್ತೊರ್ವಂ ನೀನೀಗಳಾಕೆಯ ನಣ್ಪನೇಕೆ ಮಾಣ್ದೆಯೆಂದಾ ಕೆಳೆಯಂಗಿಂತೆಂದಂ (ಲೀಲಾವ. ೨-೦೦೦ಪ). ೩. ನಂಬಿಕೆ; ವಿಶ್ವಾಸ : ಆಗಳಾ ಮಾನವೇಂದ್ರನ ಮದಗಜಮಂ ಸದೆವಂತೆ ಮದಗಜಮಂ ಮಾಚಿದೇವನಾರ್ಪಿಂ ಸದೆಯೆ ಭಕ್ತವ್ರಜಂ ಕಂಡು ನಣ್ಪನೊಳಕೊಂಡು ಕೊಂಡಾಡುತ್ತುಮಿರೆ (ವೃಷವಿ. ೦೨-೩೮ಪ). ೪. ಪ್ರೀತಿ; ಅನುರಾಗ: "ನಣ್ಪಿನಲ್ಲಿಯುಂ ಪ್ರಸರವೆಂಬುದು" (ಹಲಾಯು. ೦೩೫-೨೪) : ಪಾಂಡುರ ಕೀರ್ತಿಯೆ ನೆಗಟ್ಗುಂ ಪಾಂಡುತನೂಭವರ ನಣ್ಪುಂ ನೆಗಟ್ಗುಮೆ ಬಟಿಯಂ (ಜಗವಿ. ೦೫-೫೩) ; ಪಡೆಯದೆ ಬರ್ಕುಮೇ ಸುತನ ವಕ್ತ್ರಮನೀಕ್ಷಿಪ ಲಲ್ಲೆಗೈವ ನಣ್ಪೆಡಿದನುರಾಗದಿಂ ನಗಿಸುವಳ್ಕಱೊಳಪ್ಪುವ . . . ಅಡಿಗಡಿಗಂ ತೊದಳ್ನುಡಿಯನಾಲಿಪ ಸೈಪು ಸರೋರುಹೇಕ್ಷಣೇ (ವೃಷವಿ. ೨-೩೩) ; ತಾರೇಶಂ ನಣ್ಪಂ ಮು[ಮ]ತ್ತಾ ರೋಹಿಣಿಯಲ್ಲಿ ಕೂರ್ಪನವಳೇ ಧನ್ಯಳ್ (ಸರಣ. ೫೨-೦೨೦).

[ನಂಟು$_1$ + – ಪ್ಪು$_2$/ತಮಿ. ನಣ್ಪು; ತೆಲು. ನನ್ಪು, ನನುಪು, ನನುವು]

ನಣ್ಪುಗೆ ? (ಕ್ರಿ). (?) : ಅನ್ನೆಗಂ ಮುಂಬಯ್ತರಿರ್ವರುಂ ಬಂದದಂ ಕಾಣದೆ ಮಾಣದೆ ತಮ್ಮೊಳೋರೊರ್ವರುಂ ನಣ್ಪುಗೆ ಕಣ್ಬರಿಗೆಟ್ಟು ಇಱಿಯಿಱಿದು ತಮ್ಮೊಳಿರ್ವರುಮಱಿಯಮೆಯಿಂ ಬಿಟ್ಟಿರಲ್ಕೆ (ಸೇಮಿಪು. ೨-೭೦ಪ). [P ಇದು 'ನಣ್ಪುಗೆಟ್ಟು' ಎಂಬುದರ ಸ್ಖಲಿತ ರೂಪವಿರಬಹುದು]

ನಣ್ಪುಗೆಯ್ (ಕ್ರಿ). ಸಂಬಂಧವನ್ನುಂಟುಮಾಡು,—ಅಳವಡಿಸು : ಕಳೆಯಂ ಪತ್ತಿಸಿ ರಾಗಮಂ ನಿಲಿಸಿ ನುಣ್ಪಂ ನಣ್ಪುಗೆಯ್ದಿಂಪನಿರ್ಕುಳಿಗೊಂಡೊಟ್ಟಡೆಯಂ ನಿಮಿರ್ಚಿ . . . ಗೋವಳರಾಯಂ ಕೊಟಲೂದಿದಂ ನೆಗಟ್ವಿನಂ ಮಾಧುರ್ಯತೂರ್ಯಸ್ವನಂ (ಜಗವಿ. ೫-೨).

[ನಣ್ಪು + ಕೆಯ್$_1$]

ನಣ್ಪುನೆತ್ತರ್ (ನಾ). ನಂಟಿನ ರಕ್ತ; ಸಂಬಂಧಿಗಳ ನೆತ್ತರು : ನೆನೆಯೆಮ್ಮ ದುರ್‌ವಿಧಿಯ ಅಣ್ಣಂದಿರಿರ್ವರನ್ ಸಮಸಾವು ಸತ್ತರ್ ನಣ್ಪುನೆತ್ತರನಾಗದು, ಓರೊರ್ವರಾ ಕಯ್ಯಿನೊರ್‌ಪಗಲ್ ಕೊಲೆಯಿನ್ (ಅಂತಿಗೊ. ೩-೪೭).

[ನಣ್ಪು + ನೆತ್ತರ್]

ನಣ್ಪುವೆಱು (ಕ್ರಿ). ವಿಶ್ವಾಸವನ್ನು ಹೊಂದು; ನಂಬಿಕೆಯನ್ನು ಪಡೆ : ಕುಸುಮ ವಿಲೇಪನಾದಿ ಬಹುವಸ್ತುಗಳಂ ಮಿಗೆ ಕೊಟ್ಟು ನಣ್ಪುವೆತ್ತೆಸೆವನನೊರ್ವನಂ ಚರನನೊಲ್ದನುಯಾಯಿಯನಿತ್ತು . . . ಕಳುಪಿದಂ (ವೃಷವಿ. ೯-೫). [ನಣ್ಪು + ಪೆಱು$_1$]

ನತ (ಗು.) ೧. ಬಾಗಿದ ; ಬಗ್ಗಿದ ; ವಕ್ರವಾದ. 'ನತಚಂಚು' ಪರಾ. ೨. ಎರಗಿದ ; ನಮಸ್ಕರಿಸಿದ ; ವಂಣಿದ : ಅತಿವಿಶದಯಶೋವೃತ್ತಂ ವತಸಕಳಾರಾತಿಜನವಿತಾನಂ ಮತ್ತಂ ವಿತತಶ್ರೀಸಂಪತ್ತಂ ಶತಮಖಸದೃಶಾನುಭಾವನೊಲವಿಂ ಪೆತ್ತಂ (ಕವಿರಾ. ೨-೪೪) ; ನತನಾನಾಮರಮೌಳಿರತ್ನಕಿರಣಂ ನಾನಾಪ್ಸರಃಕೇಕರದ್ಯುತಿ ನಾನಾಚಮರೀಜವಾಯು ಸಭೆಯಂ ತಳ್ಪೊಯ್ಯಲಿರ್ದಂ ಜಗತ್ಪತಿಯೊಡ್ಡೋಲಗದೊಳ್ (ಜಗವಿ. ೧-೨೬) ; ನತನಾನಾವನಿಪಾಲಮೌಳಿಮಣಿಮಾಲಾಸಂಘಸಂಘಟ್ಟನೋದ್ಧತರೇಣುವ್ರಜವರ್ಣಪೂರಚಿತಂ ರಾಜಾಲಯಪ್ರಾಂಗಣಕ್ಷಿತಿಯಾಗುತ್ತಿರೆ ನಿಚ್ಚಮಿಂತರಸುಗೆಯ್ಯುತ್ತಿರ್ಪಂ . . . ತತ್ಪೇಚರಾಧೀಶ್ವರಂ (ಶಾಂತೀಶ್ವ. ೭-೫) ; ನತಸಂತತಿಚಿಂತಾಮಣಿ ಭುವನಸ್ತುತಲಿಂಗಂ ತಾನಿದೆಂದು ಪೊಗಳ್ದಂ ಭೂಪಂ (ರಾಜಶೇ. ೧೩-೫೧). ೩. ಕಂಗ್ಗಿದ ; ತಗ್ಗಿದ. 'ನತನಾಸಿಕ' ಪರಾ. ೪. ಶರಣಾದ. 'ನತಜನ' ಪರಾ. (ನಾ). ೫. ಬಾಗಿದುದು ; ವಕ್ರವಾದುದು : "ವಕ್ರಂ, ವೃಜಿನಂ, ಭಂಗುರಂ, ಅವಿದ್ಧಂ, ವೇಲ್ಲಿತಂ, ನತಂ, ಜಿಹ್ಮಂ . . . ಊರ್ಮಿಮತ್–ಈ ೧೨ ಕೊಂಕಿದುದು" (ಹಲಾಯು. ೦೦೬-೧೧) ; "ನತಂ, ನಮ್ರಂ, ಬಂಧುರಂ–ಈ ೩ ಎಱಗಿರ್ದುದು" (ಹಲಾಯು. ೦೨೫-೭೫) ; "ನಮ್ರಮೆನೆ ನತಮೆನಲ್ಕೆಱಗುವುದು" (ಮಂಗರಾ. ೦೩೪-೩೨). ೬. ನಮಸ್ಕರಿಸಿದವನು ; ನಮಸ್ಕಾರ ಮಾಡಿದವನು : ನತನಾಗಿ ಕೃಷ್ಣನಿರೆ ಕುರುಪತಿಯೆಂದು (ನೇಮಿಪು. ೧೧-೨೩) ; ನತನಾದನಲ್ತೆ ಕಾಣುತ್ತತಿರಾಗದೆ ಚಂದ್ರಭೂತಿ ಕಂದರ್ಪಮಹೀಪತಿಗೆ (ಕುಸುಮಾ. ೮-೩) ; ಬೇಡಿದುದನಿತ್ತು ಸಲಹುವೆನಂಜಲೇವುದೆನೆ ಕೃತಕೃತ್ಯನಾಗುತುಂ ನಂಬಿಯಣ್ಣಂ ನಿಂದು ನತನಾಗಿ ಶಂಭುವಂ ಹಾಡತೊಡಗಿದನಂದು (ನಂಬಿರ. ೭-೧೪೬) ; ಮಂದರಗಿರಿ ಧೈರ್ಯನೆಂದೆನಿಪ ಪ್ರಭೇಂದುಮುನಿಪಗೆ ನತನಹೆನೂ (ಧನ್ಯಕ. ೮) ; ಹರುಷದಿಂ ಮುಳುಗೆ ಗರ್ಭಂ ಜಾಱಿ ಪುರುಷತ್ವ ತ್ವರಿತದಿಂದ ವರನಾವರಿಸೆ ಸುರಜಾಲತ್ರ್ಯಂಬಕೆ ನತರಾದರು (ಬಕೋಪು. ೧೩-೫೭). ೭. ಒಂದು ಗ್ರಹಕ್ಕೂ ಮತ್ತು ಖಗೋಳ ಮಧ್ಯರೇಖೆಗೂ ಇರುವ ಅಂತರ. 'ನತಕೋನ' ಪರಾ. [ಸಂ.]

ನತಕೋನ (ನಾ). "(ನಕ್ಷತ್ರ ಮೊ.ಗಳ) ಕ್ಷಿತಿಜದ ಕೆಳಗಿನ ಕೋನದೂರ : ನತಿ ; ಅವನತಿ . . . ನತಕೋನ" (Depression. ಇಂಕನಿ).

[ನತ + ಕೋನ (<ಕೋಣ್)]

ನತಚಂಚು (ನಾ). ೧. ಬಾಗಿದ ಕೊಕ್ಕು. ೨. ಬಾಗಿದ ಕೊಕ್ಕನ್ನುಳ್ಳುದು: ಕುಡಿದಳಿರನುಗುರ ಮೊನೆಯೊಳ್ ಪಿಡಿದುದು ನತಚಂಚು ನೀಡಿಗಳಕಂದಳಮಂ ಮಡಗೆದಱಿ ನವಾಮ್ರದ ಪೂಮಿಡಿಯಂ ಕರ್ದುಕಿದುದು ಪರಭೃತಂ ಪರಭೃತದಿಂ (ಮಲ್ಲಿಪು. ೫-೩೮). [ನತ + ಚಂಚು$_2$]

ನತಜನ (ನಾ). ೧. ನಮಸ್ಕರಿಸಿದ ಜನ : ನತಜನಕಭಿಮತವೀವಪ್ರತಿಮನೆನಿಪ್ಪಭವಸುತನೆ ಚಿತ್ತೈಸು (ತ್ರಿಪುವಿ. ೩೨-೪೭) ; ನತಜನವರದಂ ಶ್ರುತಿನುತಶುಭಗಂ . . . ರತಿಪತಿಹರಣಂ ಜಿತಭವಮರಣಂ ಕ್ಷಿತಿವರನಿದಿರೊಳೆನಿಂದಂ (ಹಮ್ಮೀರ. ೨-೦೦). ೨. ಶರಣಾದವನು : ನತಜನಾಶ್ರಯಧೇನು ಭಕ್ತವತ್ಸಲ ಕೃಪಾಕರ ಮಹಾಭಯನಿವಾರಣ ನೃಸಿಂಹ ತ್ರಾಹಿಯೆನುತಿರ್ದನಾಸುಧನ್ವಂ ಮಱೆಯದೆ (ಕೃಪಿಧಾ. ೧೧-೩೭). [ನತ + ಜನ]

ನತದೃಷ್ಟ (ನಾ). ಅದೃಷ್ಟಹೀನ ವ್ಯಕ್ತಿ; ದುರ್ದೈವಿ; ದುರದೃಷ್ಟಶಾಲಿ: ಒಟ್ಟಿನಲ್ಲಿ ನಾವು ಮೂವರು ಅವರ ಕುಟುಂಬದಲ್ಲಿಯ ಮೂರು ನತದೃಷ್ಟ ವ್ಯಕ್ತಿಗಳೆಂದು ಪರಿಗಣಿಸಲ್ಪಟ್ಟೆವು (ಸ್ಮೃತಿಚಿ. ೩೩); ನನ್ನಂತಹ ನತದೃಷ್ಟಳನ್ನು ಬಿಟ್ಟು ಅವರು ಬೇರೆ ಯಾರನ್ನಾದರೂ ಪ್ರೀತಿಸಿದ್ದರೆ ಎಷ್ಟು ಸುಖವಾಗಿರುತ್ತಿದ್ದರು ! (ದೂರಸ. ೨೯೦) ; ನೀನು ಎಂದೂ ನತದೃಷ್ಟರ ಕೈಹಿಡಿಯುವುದಿಲ್ಲ (ವಚಭಾ. ೭೭) ; ನಾನು ನತದೃಷ್ಟ (ದೀಪದ. ೧೫೨).

[<ಸಂ. ನತಾದೃಷ್ಟ (ನತ + ಅದೃಷ್ಟ)]

ನತದೃಷ್ಟೆ (ನಾ). ಭಾಗ್ಯಹೀನಳಾದವಳು ; ದುರ್ದೈವಿ : ಆಕೆ ನತದೃಷ್ಟೆಯಾದ್ದರಿಂದಲೇ ಎಲ್ಲವನ್ನೂ ಕಳೆದುಕೊಂಡಳು (ರೂಢಿ).

[ನತದೃಷ್ಟ + – ಎ$_2$]

ನತದೇಹ (ನಾ). ಬಾಗಿರುವ ದೇಹ ; ಬಗ್ಗಿರುವ ಶರೀರ : ನತದೇಹಮಂ ಸೀಳಿ ಭಿನ್ನಭಿನ್ನಂ ಮಾಡಿದೊಡೆಯಾತ್ಮರೂಪಿರ್ಪುದೇ (ವೀಶೈಪು. ೪-೭-೩).

[ನತ + ದೇಹ]

ನತನಾಸಿಕ (ನಾ). ತಗ್ಗಾದ ಮೂಗುಳ್ಳವನು ; ಚಪ್ಪಟೆಯಾದ ನಾಸಿಕವುಳ್ಳವನು ; ನಡ್ಡಿಮೂಗುಳ್ಳವನು : "ಅವಟೀಟಃ, ಅವನಾಟಃ, ಅವಭುಟಃ, ನತನಾಸಿಕಃ–ಳಿ ಕುಳಿಮೂಗಿನವನ ಹೆಸರುಗಳು, ಚಿಕ್ಕಮೂಗುಳ್ಳವನು, ನಡ್ಡಿಮೂಗುಳ್ಳವನು" (ಸಿದ್ಧಾಂತಿ. ೧೫೭). [ನತ + ನಾಸಿಕ]

ನತಬಂಧು (ನಾ). ಶರಣು ಬಂದವರಿಗೆ ನಂಟನಾಗಿರುವವನು : ಬಂಧುರದ ವಿದ್ಯೆಯನು ಕಲಿಸಿ ಮದಾಂಧನ ಕೊಲಿಸಿದನಲಾ ನತಬಂಧುವನು ನಾವಗಲಿದುಳಿವೆವದೆಂತು (ನಿಧಾಗ. ೧-೧೦-೫೨).

[ನತ + ಬಂಧು]

ನತಭುವನತ್ರಯ (ನಾ). ಮೂರುಲೋಕದವರಿಂದಲೂ ನಮಸ್ಕರಿಸಲ್ಪಡುವವನು,–ವಂದಿಸಲ್ಪಡುವವನು ; ತ್ರಿಲೋಕಪೂಜ್ಯ : ನತಭುವನತ್ರಯನೀಶ್ವರಸುತನವಿರಳದಾನನಧಿಕಸಿದ್ಧಿನಿಧಾನಂ ಧೃತಪರಶುಗಣಪನಸ್ಮತ್ಕೃತಿಯಂ ಕೆಯ್ಕೊಂಡು ಮಾಟ್ಕೆ ನಿರ್ವಿಘ್ನತೆಯಂ (ಲೋಕೋಪ. ಪೀಠಿಕೆ ೨). [ನತ + ಭುವನತ್ರಯ]

ನತಮುಖಿ (ನಾ). ಮುಖವನ್ನು ಬಾಗಿಸಿದವಳು ; ತಲೆಯನ್ನು ತಗ್ಗಿಸಿದವಳು : ನನ್ನ ದೃಷ್ಟಿ ಮತ್ತು ಅವಳ ದೃಷ್ಟಿಗಳು ಒಂದು ಕ್ಷಣ ತಾಕಲಾಡಿದವು. ಅವಳು ಪುನಃ ನತಮುಖಿಯಾದಳು (ಹೇಮಂತ. ೧೯೪).

[ಸಂ. ನತಮುಖೀ (ನತ+ಮುಖ+–)]

ನತರಕ್ಷಾಚತುರ (ನಾ). ನಮಸ್ಕರಿಸಿದವರನ್ನು ಕಾಪಾಡುವುದರಲ್ಲಿ ಜಾಣನಾದವನು ; ಶರಣು ಬಂದವರನ್ನು ರಕ್ಷಿಸುವುದರಲ್ಲಿ ಕುಶಲನಾದವನು : ಶ್ರೀಚಂಡಿಕಾಮುಖೇಂದುವಿಲೋಚನರುಚಿಚಂದ್ರಿಕಾಚಕೋರಂ ನತರಕ್ಷಾಚತುರಂ ಭವಪಾಶವಿಮೋಚಕನೆಮಗೀಗೆ ಸೌಖ್ಯಮಂ ಶಿವಲಿಂಗಂ (ರಾಜಶೇ. ೧೧-೦). [ಸಂ.]

ನತವಾಣಿ (ನಾ). ಸರಸ್ವತಿಯಿಂದ ನಮಸ್ಕೃತಳಾದವಳು; ವಾಣಿಯಿಂದ ಪೂಜ್ಯಳಾದವಳು : ನತವಾಣಿ ಕನಕಾಚಲಶ್ರೋಣಿ ಕಾಳಾಹಿವೇಣಿ (ಕರ್ನಾಕ. ೨೨೪). [ನತ + ವಾಣಿ$_1$]

ನತಾಸ್ಯ (ನಾ). ಮುಖವನ್ನು ಬಾಗಿಸಿದವನು ; ತಲೆಯನ್ನು ತಗ್ಗಿಸಿದವನು : ನಯದಿಂದೆಳ್ದು ನತಾಸ್ಯನಾಗಿ . . . ದಿಟ್ಟವಾರಿಯ ಧೀರಂ ವೃಷಭೇಂದ್ರನಪ್ರತಿಮಕಾಯಂ ಮುಂದೆ ನಿಂದಿರ್ಪುದುಂ (ಗಿರಿಕ. ೧೦-೭೮).

[ನತ + ಆಸ್ಯ]

ನತಿ (ನಾ). ೧. ಬಾಗಿರುವಿಕೆ ; ವಕ್ರವಾಗಿರುವಿಕೆ. ೨. ನಮಸ್ಕಾರ ; ವಂದನೆ : ಜಿನಚರಣದೊಳಿರೆ ನತಿ ಮತಿ ಜಿನಗುಣಸಂಪತ್ತಿಯೊಳ್ ಪೊದಟ್ಟಿರೆ (ಶಾಂತಿಪು. ೭-೮೦) ; ನಿರ್ಮಳಮೌಕ್ತಿಕಾಕ್ಷತೋತ್ಕರಮನುವೇಂದ್ರಪಾದದುಪಭೂಮಿಗೆ ಸೂಸಿದನುತ್ಸಹಂ ಪೊದಟ್ಟಿರೆ ವನಪಾಳಕಂ ನತಿಚಳಾಳಕ[ಪಾಠಾಂ. ವಿನತಜಾಲಕ]ನುದ್ಗತರೋಮಜಾಳಕಂ (ಜಗವಿ. ೧೪-೪೩) ; ನತಿ ನುತಿಪೂಜೆಗಳಂ ಸನ್ಮತಿ ಜಿನಪತಿಗಿಂತು ಭಕ್ತಿಯಿಂ ಮೊದಲೊಳ್ ಗೋಪತಿ ಮಾಡಿ ನೋಡಿದಂ ದಶಶತನಯನದೆ ಸಮವಸೃತಿಯ ಶೋಭೋನ್ನತಿಯಂ (ವರ್ಧಪು. ೧೫-೮೬) ; ನತಿಯಂ ನುತಿಯಂ ಸತ್ಸಂಗತಿಯಂ ಸಂಸೃತಿಯನತಿಶಯಾಸ್ಪದ ಪೂಜಾತತಿಯಂ ಜಿನೇಂದ್ರಪದದೊಳ್ ಮತಿವಂತಂ ಮಾಟ್ಟುದರ್ಥಿಯಿಂ ಸ್ವಾರ್ಥವರಂ (ಉಸಾರ. ೫೧) ; ಶ್ರೀಗುರುವಿಗಾಗಿ ತನುಧಾರಿಯಾಗಿ ಬಂದಂಥ ಸದಾಶಿವಗೆ ಅನಂತಾನಂತ

ನತಿಯ ಉಪಕೃತಿಯ ಒಪ್ಪಿಸುವೆವು ಇವಗೆ (ಅರಳು. ೨೪೩-೨). ೩. "(ನಕ್ಷತ್ರ. ಮೊ. ಗಳ) ಕ್ಷಿತಿಜದ ಕೆಳಗಿನ ಕೋನದೂರ: ನತಿ; ಅವನತಿ . . ನತಕೋನ" (Depression. ಇಂಕನಿ). [ಸಂ.]

ನತಿಗೆಯ್, ನತಿಗೈ (ಕ್ರಿ). ನಮಸ್ಕರಿಸು; ಪೊಡಮಡು; ಕೈಮುಗಿ: ಭಯಭಕ್ತಿಯಿಂದಡಿಗಳ್ಗೆ ಲೀಲೆಯಿಂ ದಂಡವನ್ನತಿಗೆಯ್ದು ಮಗುಳ್ದೆಳ್ದು ನಿಂದು ಕರಯುಗವ ಮುಗಿದು (ಶುಮಾಪು. ೨-೫೦). ನತಿಗೈ: ಪ್ರತಿಮೆಯ ರೂಪದ ಪಂಕಜನಾಭಗೆ ನತಿಗೈದು ನಲವೇಱುವಂತೆ ಪತಿಯ ರೂಪಡೆ ತನ್ನ ಪಾಲಿಗೆ ಬಂದ ಶ್ರೀಪತಿಯ ಪಾಡವ ಭಜಿಸುವುದು (ಹದಬ. ೩-೭).

[ನತಿ + ಕೆಯ್$_1$]

ನತಿಗೈ 'ನತಿಗೆಯ್' ನೋ.

ನತೆ (ನಾ). ನಮಸ್ಕಾರ ಮಾಡಿದವಳು: ನತೆಯಾಗಿ ತತ್ತಪಶ್ರುತ ಯುತೆಯರ ಪಕ್ಕದೊಳ್ ಪರಮನಿಷ್ಠ ಯಿನರ್ಹನ್ನತಕಥಿತಸಿಂಹ ನಿಃಕ್ರೀಡಿತಾ ದಿನೋಂಪಿಗಳನಾಂತು ನೋನುತ್ತುಮಿರಲ್ (ಪಾಶಾನೇ. ೦೬-೦೩).

[ಸಂ. ನತಾ]

ನತೋನ್ನತ (ಗು). ಏರು ತಗ್ಗುಗಳುಳ್ಳ; ಹಳ್ಳತಿಟ್ಟುಗಳಿಂದ ಕೂಡಿದ ಇಳಿದೇರಿ ಮರ ಪೊದೆಯ ಚೆಲ್ವಿನ ನತೋನ್ನತವನಾದ್ರಿಸೀಮೆಯನಾ ವಿಭೀಷಣಂ ಮರೆಯಾಗೆ (ಶ್ರೀರಾಮಾ. ೮೦೭-೧೮೨). 'ನಿಮ್ನೋನ್ನತ' ಪರಾ. [ನತ + ಉನ್ನತ]

ನತ್ಯುಟಕ (ನಾ). [ಛಂದ] ಪ್ರತಿಯೊಂದು ಚರಣದಲ್ಲಿಯೂ ಹದಿನೇಳು ಅಕ್ಷರಗಳಿರುವ ಒಂದು ಸಮವೃತ್ತದ ಹೆಸರು; ಸುಮಂಗಲಿ: ನಜಭಜಜಂಲಗಂ ಬರೆ ಸುಮಂಗಲಿಯೆಂಬರದಂ ಇದಕ್ಕೆ ನತ್ಯುಟಕ ಎಂದು ಮತ್ತೊಂದು ಹೆಸರು (ಕೈಷಿಡಿ. ೮೫). 'ನರ್ಕುಟಕ' ಪರಾ. [?]

ನತ್ತ (ನಾ). (?): ಪೂರು ನತ್ತದ ಸುತ್ತಲೂ ಮತ್ತು ಇತರ ಕಿಷ್ಕಿಂಧವಾದ ಕುರುಮಂದೆ ಹಿತ್ತಲುಗಳು ಮುಂತಾದ ಸ್ಥಳದಲ್ಲಿ ಬಾಂದುಗಳಿಗೆ ಬದಲು ಕಲ್ಲುಗಳನ್ನು ಹೂಳಬಹುದು (ಭೂಮಿಅ. ೨೪). [?]

ನತ್ತಿ 'ನತ್ತು$_2$' ನೋ.

ನತ್ತು$_1$ (ಕ್ರಿ). (ಸ್ವಾಭಾವಿಕವಾಗಿ ಅಥವಾ ಉದ್ರೇಕದಿಂದ) ಬಿಕ್ಕುತ್ತ ಮಾತನಾಡು; ಉಗ್ಗು; ತೊದಲು.

ನತ್ತಿ ಮಾತಾಡು = "(ಸ್ವಾಭಾವಿಕವಾಗಿ ಅಥವಾ ಉದ್ರೇಕದಿಂದ) ಬಿಕ್ಕುತ್ತ, ಉಗ್ಗುತ್ತ, ನತ್ತಿ,-ಮಾತಾಡು, ಹೇಳು" (Stammer. ಇಂಕನಿ); ನತ್ತಿ ಮಾತಾಡುವವನ ಮಾತು ಸುತ್ತಿ ತೊಳಲಿದರೆ ಪಟ್ಟು ಆದೀತೇ? (ಗಾದ). [ದೇ. ॥ ಮಲ. ತೆಲು. ನತ್ತು]

ನತ್ತು$_2$, ನತ್ತಿ (ನಾ). ಉಗ್ಗುವಿಕೆ; ಬಿಕ್ಕುತ್ತ ಮಾತನಾಡುವಿಕೆ; ಬಿಕ್ಕಲು: "ಉಗ್ಗು, ಬಿಕ್ಕಲು, ನತ್ತು" (Stammer. ಇಂಕನಿ). ನತ್ತಿ: "ಉಗ್ಗು, ಬಿಕ್ಕಲು, ತೊದಲು, ನತ್ತಿ" (Impediment in one s speech. ಇಂಕನಿ); ಶಾಸ್ತ್ರಿಗಳ . . . ನಾಲಿಗೆಯಲ್ಲಿ ನತ್ತಿ ಇಲ್ಲದೆ ಇದ್ದಿದ್ದರೂ ಬಹುಶಃ ಅವರು ಅದೇ ಶಿಕ್ಷಣಕ್ರಮವನ್ನು ಅನುಸರಿಸುತ್ತಿದ್ದರೆಂದು ತೋರುತ್ತದೆ (ಶ್ಯಾಪಕ. ೦೩೮); ಪಾರಾಯಣಕಾಲದಲ್ಲಿ ಅವರನ್ನು ನೋಡಿದವರು ಅವರಿಗೆ ನತ್ತಿ ಇತ್ತೆಂಬುದನ್ನು ನಂಬುತ್ತಿರಲಿಲ್ಲ (ಶ್ಯಾಪಕ. ೦೪೨).

[<ನತ್ತು$_1$./ತೆಲು. ನತ್ತಿ]

ನತ್ತು$_3$ (ನಾ). ಮೂಗಿನಲ್ಲಿ ಧರಿಸುವ ಆಭರಣ: ಹರಳೋಲೆ ಹೊನ್ನ ಪೂ ಮಾಣಿಕದ ಪೊಸನತ್ತು ವೋಹನದ ವಾಲೆ ಬಹುಭೂಷಣಂಗಳ ನಿಡುತ್ತೆ (ಕಡುಪು. ೧-೬-೯); ರಜಪೂತ ಹೆಂಗಸಿನ ಮುಖ್ಯ ಕುರುಹು ಆಕೆಯ ನತ್ತು (ಕಥಾಗ. ೦೦೪); ಮುತ್ತೈದೆರೆಲ್ಲರು ನತ್ತಿಟ್ಟು ನಲಿಯೂತ ಮುತ್ತಿನಾರುತಿ ಬೆಳಗೂತ ಹಾಡಿದರು (ಸಿದ್ಧಪು. ೦-೬೮); ಮನವು ಮುತ್ತಾಗಿಹುದು ನತ್ತಾಗಿ ಧರಿಸಿ ಕೋ ಸೀವು ತೆರೆಯುವ ಮುನ್ನ (ಕಲ್ಲೋಲ. ೯-೬); ಮೊಗಕ್ಕೊಪ್ಪುವ ಮಾಟಾದ ಮೂಗಿನಲ್ಲಿ ಅಂದವಾದ ನತ್ತು (ಕರಿಹಾ. ೧); ನತ್ತಿಗೆ ಯೋಗ್ಯಳಾದವಳು ಮುತ್ತು ಬಯಸಿದ ಹಾಗೆ (ಗಾದ).

ನತ್ತಿನೋರು = ಸೂಳೆಯರು; ವೇಶ್ಯೆಯರು; P ಕೆಲವು ಪ್ರದೇಶಗಳಲ್ಲಿ ವೇಶ್ಯಾವೃತ್ತಿಯ ಜನ ಪುರುಷನನ್ನು ತನ್ನವನನ್ನಾಗಿ ಒಪ್ಪಿಕೊಳ್ಳುವುದಕ್ಕೆ ಮುಂಚೆ ಅವನಿಂದ ಒಂದು ಮೂಗಿನ ಬಟ್ಟು ಎಂಬ ಒಡವೆಯನ್ನೋ ಅಥವಾ ಒಂದು ಸೀರೆಯನ್ನೋ ಪಡೆದು ಹಿಂದಿನಿಂದ ಬಂದ ಸಂಪ್ರದಾಯವನ್ನು ಅನುಸರಿಸುವ ಕ್ರಮವಿದೆ: ಈ ಊರಿನ 'ನತ್ತಿನೋರೆಲ್ಲಾ' ಅವನ ಮನೆಯವರೇ. 'ನತ್ತಿನೋರು ಅಂದರೆ' . . . ಸೂಳೇರು (ಗುಲಾಬಿ. ೧೯).

[←ಅರ. ನತ್ಥ್; ಹಿಂ. ನತ್ಥ್, ನಥ್, ನಾಥ್; ಮರಾ. ನಥ್./ಪ್ರಾ. ಣತ್ಥಾ]

ನತ್ತು$_4$ (ನಾ). ೧. ಹೇನಿನ ಸಣ್ಣ ಮರಿ; ಸಣ್ಣಹೇನು: ಸೀರು ಸಿರವನು ತಿಂತು ನತ್ತು ನರವನು ತಿಂತು ಚಿಂತೆಯು ಜನುಮವ ತಿಂತು (ಇಂಶಾಪ. ೧೭೦-೪೪); ಅವಳ ತಲೆಯಲ್ಲಿ ತುಂಬ ನತ್ತು, ಹೇನುಗಳಿವೆ (ರೂಢಿ). ೨. ಕೀಟ; ಹುಳು. [ದೇ. ॥ ತಮಿ. ನತ್ತು, ನತ್ತೈ = ಶಂಖದ ಹುಳು; ಮಲ. ನನ್ನಿ; ತೆಲು. ನತ್ತ = ಶಂಖದ ಹುಳು]

ನತ್ವ (ನಾ). ನ ಎಂಬ ಅಕ್ಷರ: ಪರದೊಳ್ ಸ್ವರಮಿರೆ ಬಿಂದುಗೆ ದೊರೆ ಕೊಳ್ಗುಂ ನತ್ವಮತ್ವಂ (ಶಮದ. ೦೦೪). [ಸಂ.]

ನದ (ನಾ). ೧. ಶಬ್ದ ಮಾಡುವಿಕೆ; ಗದ್ದಲ ಮಾಡುವಿಕೆ; ಸಪ್ಪಳ; ಶಬ್ದ. ೨. (ಶಬ್ದದೊಂದಿಗೆ ರಭಸವಾಗಿ ಹರಿಯುವ) ದೊಡ್ಡ ನದಿ; ಗಂಡುತೊರೆ; ಗಂಡುನದಿ; P ಪ್ರಸಿದ್ಧ ಸಂಸ್ಕೃತ ಟೀಕಾಕಾರ ಮಲ್ಲಿನಾಥನ ಅಭಿಪ್ರಾಯದಂತೆ ಪಶ್ಚಿಮಕ್ಕೆ ಹರಿಯುವ ನದಿ: "ಭದ್ರಃ, ಉದ್ರಃ, ನದಃ – ಈ ೩ ಗಂಡುದೊಱೆ" (ಹಲಾಯು. ೦೦೦-೪೪); "ನದಮುದ್ರಮೆನೆ ಭದ್ರಮೆನೆ ಗಂಡುದೊಱೆಯದು" (ಪಂಗರಾ. ೦೨೨-೦೦); ಪುಣ್ಯನದೀನದನಗ[ಲಾ]ವಣ್ಯವಿಭೂಷಣೆಯನೊಲ್ದು ನೋಡುತ್ತುಮಿಳಾಪುಣ್ಯಸ್ತ್ರೀಯಂ ಸಂಚಿತಪುಣ್ಯರ್ ಪಾಂಚಾಲದೇಶಮಂ ಪುಗುತಂದರ್ (ಪಂಪಭಾ. ೩-೩೬); ಪೊಱಮಟ್ಟಿಭಂ ಬಿನದದಿಂ ನದದಿಂ ನದದಿಂದ್ರವಜ್ರನಿಷ್ಠುರವೆಱಗಿತ್ತಿಭಾಪಘನವಂ ಘನವಂ ಘನವಂಶ ಜಾಲವಂ (ಜಗವಿ. ೦೬-೯); ಮದವದಿಭೇಂದ್ರದಾನಸಲಿಲಂ ನದರೂಪಮನೆಯ್ದಿ . . . ರಾಗದೆಯ್ದಿದನಿರದಾ. ಸುಧರ್ಮಮುನಿಪೋತ್ತಮನಾಶ್ರಮಂ ನೃಪೋತ್ತಮಂ (ಕುಸುಮಾ. ೪-೯೪); ಅಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂದಾ ದೇಶವೊಪ್ಪಿರ್ದುದು (ಚಿಂಪು. ೦೦-೪). ೩. ಸಮುದ್ರ; ಸಾಗರ. ೪. ಮೋಡ; ಮೇಘ.

ನದನದಿ = ಗಂಡು ಮತ್ತು ಹೆಣ್ಣು ಹೊಳೆಗಳು: ನದ[ನ]ದ್ಯುದ್ಭೂತವಾರಿಪ್ರಸರವೆಸ[ರ]ನೀರಂದದಿಂ ಕಾಯ್ದುದಾಕಾಶದಿಶ್ಶೌಂ . . . ಎಂಬ ವೈಶಾಖದೊಳಾ ಯೋಗೀಶ್ವರು ಕಲ್ಲೆಲೆ ನೆಲಸಿ ಹಿಮಾದ್ರೀಂದ್ರ ವಿರ್ವಂತಿರಿರ್ದಂ (ಸುಕುಮಾ. ೪-೧೩); ನದನದೀಕುಳದೊಳ್ ಪರಿವರ್ಧಿಕುಂ ಜಗಜ್ಜೀವನಜೀವನಂ ಮಟಿಗಳಿಂ ಮಟಿಯುಂ ಕಱಿವಂ ಹಿತಾರ್ಥಮಿಾ ಭೂವಳಯಕ್ಕೆ ಶಕ್ರನದು ಕಾರಣಮರ್ಚಿಪುದಿಂದ್ರವಂ ಜನಂ (ಜಗವಿ. ೪-೬೬); ನದನದ್ಯೌಘಾಂಬುವಂ ಪೀರ್ದೆಳೆ ನೆಱಿಯದೆ ಬಾಯ್ದೆಱ್ಚಿ ವೊಲ್ ಬೀಡೆಗಳ್ ಪರ್ವಿದುವು (ಹಂದ್ರಪು. ೯-೬೬). [ಸಂ.]

ನದನಿಕಟ (ನಾ). ಹೊಳೆಯ ತೀರದ ಪ್ರದೇಶ: ವಿದಲಿತ ನಲಿನೀಸುಖದಂ ನದನಿಕಟಂ ವಿವಿಧವರ್ಣಮಣಿಗಣಶೋಭಾಸದನಂ ಪರ್ವತನಿಕಟಂ ಮದಗಜ ಮದಸಲಿಲಸದನಮಟವೀನಿಕಟಂ (ಮಲ್ಲಿಪು. ೨-೦೦). [ನದ + ನಿಕಟ]

ನದರಿಡು, ನೆಜರಿಡು, ನೆದರಿಡು (ಕ್ರಿ). ೧. ಲಕ್ಷಿಸು; ಗಮನವಿಡು

ರಾತ್ರೆವುದಯ ಸಾಯಂಕಾಲ ನದರಿಟ್ಟು ಹೆಸು ನಿದ್ರೆದೊಳದು ಪದವಿರ್ದ ಲಿಂಗ ಪೂಜಿಸುವಾರುಯನ್ನಂತ ಮುದಿಮೂರ್ತಿಗಾರು ಮನ್ನಿಪರು (ದೀಪಕಾ. ೪-೦೫) ; ಸದಮಲಜ್ಞಾನದ ಕುದಿ ಉಕ್ಕಿ ಬರುವಾಗ ನದರಿಟ್ಟು ನಿನ್ನೊಳು ಸದಮಲ ತತ್ವವಿ ತಿಳಕೋ ಬರಕೋ (ಶರೀಪ. ೭೭ ಕವಿಕಾವ್ಯ ಪರಿಚಯ). ನೆಜರಿಡು : ೧. ಒಂದೀಟು ನೆಜರಿಟ್ಟು ನಡಿ. ನಮ್ಮ ಬಿಚ್ಚು ನಾಥಪ್ಪ . . . ಕೂದಲೆಳೀಲೆ ಉರುಲು ಹಾಕಾಂವ (ಪತಿಕೋ. ೬೭). ನೆದರಿಡು : ೧. ಸದ್ಯ ನೆದರಿಟ್ಟು ನೋಡಿಕೋ ಉದಿಸಿದ್ಯಾವಲ್ಲೆ (ಶರೀಪ. ೩೫-೦೦). ೨. ಬಯಸು ; ಕಾಮಿಸು ; ಅಪೇಕ್ಷೆಪಡು : ಮಾವೀನ ಹಣ್ಣು ಮನಿಯಾಗ ಇಟಗೊಂಡು ನೀರಲಕ್ಕಾಕ ನೆದರಿಟ್ಟ (ಗರಕಿ. ೦೨೮).

[ನದರು (<ನಜರು) + ಇಡು$_1$]

ನದರಿಸು 'ನಜ್ರಿಸು' ನೋ.

ನದರು 'ನಜರು' ನೋ.

ನದರುಕಾಣಿಕೆ 'ನಜರುಗಾಣಿಕೆ' ನೋ.

ನದರುಗಾಣಿಕೆ 'ನಜರುಗಾಣಿಕೆ' ನೋ.

ನದರುಗೆಡು (ಕ್ರಿ). ಕಂಗೆಡು ; ದಿಗ್ಭ್ರಮೆಗೊಳ್ಳು : ಮದನಗಂಜುತ ಮೂಂದಳಿಗೆದೆದೆದರುತಳಿವಂಡುಗಳ ರಭಸಕೆ ನದರುಗೆಡುತ . . . ಚಂಡ ರಕ್ಕಸ ಬೆದರುತ್ತೆದಿದ ಬನದೊಳಗಜೆಯ ಕಾಬ ತವಕದಲಿ (ಅಂಬಿಕಾ. ೦೮-೮). [ನದರು (<ನಜರು) + ಕೆಡು$_1$]

ನದಿ (ನಾ). ಹೊಳೆ ; ತೊರೆ ; ೯ ಎಂಟು ಸಾವಿರ ಧನುಃಪ್ರಮಾಣಕ್ಕೆ ಕಡಮೆಯಿಲ್ಲದಷ್ಟು ದೀರ್ಘವಾಗಿಯೂ ಆಗಲವಾಗಿಯೂ ಹರಿಯುವ ಜಲಪ್ರವಾಹಕ್ಕೆ 'ನದಿ' ಎಂದು ಟೀಕಾಕಾರರು ಸೂಚಿಸುತ್ತಾರೆ : "ಸಿಂಧುಃ, ಸ್ರವಂತೀ, ತಟಿನೀ, ತರಂಗಿಣೀ, ನದೀ, ಧುನೀ . . . ರೋಧೋವಕ್ರಾ – ಈ ೨೧ ತೊಱೆ" (ಹಲಾಯು. ೦೦೦-೪೩) ; "ನದಿ ತರಂಗಿಣಿ ತಟಿನಿ ಧುನಿ ಸಿಂಧು . . . ದ್ವೀಪವತಿಯಾಪಗೆಯೆನೆ ತೊಱೆಗೆ ನಾಮಂ" (ಪಂಗರಾ. ೦೨೨-೦೦) ; ಜಂಬೂದ್ವೀಪದ ಮೇರುವಿನ ಮೂಡಣ ವಿದೇಹದ ಸೀತಾನದಿಯ ಬಡಗಣ ತಡಿಯೊಳ್ (ಆದಿಪು ೩-೮೮) ; ಹರಿವ ನದಿಗೆ ಮೈಯೆಲ್ಲ ಕಾಲು ಉರಿವ ಕಿಚ್ಚಿಗೆ ಮೈಯೆಲ್ಲ ದಾಯಿ (ಅಪಚಂ. ೦೭೨-೭೭೩) ; ನದಿಯಂ ನಾವಿಕನಂತೆ ಪೊಕ್ಕು ಗುಱಿಯಂ ಧಾನುಷ್ಕನೆಂಬಂತೆ ತವ್ವದಿದಂ ಕಂಬಮನೆಚ್ಚುದು (ಪಾರ್ಶ್ವಪು. ೦೦-೦೨೦) ; ನದಿ ಕಣ್ಡೆಱೆದಂತೆ ಪೊಳಂಕಿದ ಮಿನಂ ಮೊಸಳೆ ಪಾಯ್ದು ನರಪತಿಯ ವಿನೋದದ ಗುಜ್ಜಸಿಕ್ಕೆ ಪಿಡಿದತ್ತದನಧಿಪತಿ ಜಾಲಗಾಱರಿಂ ತೆಗೆಯಿಸಿದಂ (ಯಶೋಧ. ೩-೪೮) ; ಮಱುದಿವಸ ವೇದಾವತಿಯ ಸಾರ್ದರು ಬಳಿಕ್ಕವಳ್ಗಿ ರಜನಿಯ ಪರಿಹರಿಸಿ ದಾಂಟಿದರು ನದಿಯನು ಮೂಱನೆಯ ದಿವಸ (ತೊರರಾ. ೨-೪-೯) ; ನದೀ ದಾಟ ಬದೀಲಿ ಬಿದ್ದ ಹಾಗೆ (ಗಾದೆ).

ನದಿನದ, ನದೀನದ = ಹೆಣ್ಣು ಮತ್ತು ಗಂಡು ಹೊಳೆಗಳಂ : ಮೂಱೆಱೆದ ಗಾಳಂಗಳಿಂ . . . ಸೊಗಡುಗೊಳುಗಳ ಮದ್ದುಗಳ ಮಸಕದಿಂದಂ ನದಿನದಾಳಿಯೊಳು ಘಿನ್ನಗಳಂ ತಮಿಸುತಿಹ ಬೇಡರಂ ನೋಡಿದಂ ಭೂನಾಥನು (ಪಚಕಾ. ೩-೪೪) ; ಅಂತವರಿರ್ವರುಂ ತಾನಾನದೀನದಾಂತರಾಳಸಂಪಜ್ಜನಪದಂಗಳಂ ಕಳೆದು ಕತಿಪಯಪ್ರಯಾಣಂಗಳಿಂ . . . ಬಂದು (ಸುಳುಮಾ. ೨-೨೫೮) ; ನದೀನದೌಘಮಾಗಳೆ ಬಱುಗಂಪಲಾಯ್ದು ಕುಱಿಯುಂ ತೆವರುಂ ಸಮನಾಯ್ತುದೆತ್ತಲುಂ (ಪುಷ್ಪಪು. ೩-೪೬) ; ಕಾಮಿತಾರ್ಥವನೀವವಂದಿನ ಭೂಮಿಃಬಿತ್ತದೆ ಜನಿಪ ವಸ್ತುಸ್ತೋಮವನು ತಂದೀವುದದ್ರಿನದೀನದಾದಿಗಳು (ನಿಶಾಗ. ೦-೬-೪) ; ಅಕ್ಷಯವಾದ ಸರೋವರವೊಂದರಿಂದ ಅನೇಕ ದಿಕ್ಕುಗಳಲ್ಲಿ ಸಹಸ್ರಾಧಿಕ ನದೀನದಗಳು ಹೊರ ಹೊರಟು ಬರುವಂತೆ (ತತ್ವಪ್ರಾ. ೦೨೯). ನದಿಯ ಮಕ = (ಗಂಗಾ) ನದಿಯ ಸುತ ; ಗಾಂಗೇಯಂ ; ಭೀಷ್ಮ : "ನಾದೇಯಃ, ನದೀಸುತಃ– ಈ ೨ ನದಿಯ ಮಗಂ" (ಹಲಾಯು. ೮೨-೩೪೭) ; ಇದು ಮಹಾಮಖವಿಲ್ಲಿ ಪೂಜ್ಯನು ಯದುಗಳರಸನು ಭಟ್ಟನಿಲ್ಲಿಗೆ ನದಿಯ ಮಗನಿಲ್ಲಿಗೆ ಸದಸ್ಯರು ನಾರದಾದಿಗಳು (ಶಾಪ್ರಾಸ. ೦೦-೩೯) ; ನದಿಯ ಮಗ ಗುರು ಗುರುತನೂಜನು ವಿದುರಭಾರದ್ವಾಜಮುಖ್ಯರು . . . ಬಹಳಾಭ್ಯುದಿತಬಲ ನೆರೆದೆದ್ದು ನಡೆದುದು ಭರದ ಪಯಣದಲಿ (ಶಾಪ್ರಾಅ. ೬೦೩. ೨೫-೬). ನದಿ ಹಾಯು = ಹೊಳೆಯನ್ನು ದಾಟು,–ಕ್ರಮಿಸು : ನದಿ ಹಾಯೋನಿಗೆ ತಿದಿ ಯಾಕೆ ? (ದುರಂಸಾ. ೯೪). [ಸಂ. ನದೀ]

ನದಿಗವುಂಡ (ನಾ). ಒಬ್ಬಾತನ ಹೆಸರು : ಸದೆಯನೂರ ನದಿಗವುಣ್ಡನು ತಿರ್ಬೂರ ಮಾರಗವುಣ್ಡ (ಕ್ಷೃಅರಿ. ೦೯೦೯, ೦೦-೭೩ ; ೪೦೦).

[ನದಿ + ಗವುಂಡ (<ಗಾಮುಂಡ)]

ನದಿಜ (ನಾ). = ನದೀಜ ೩ : ಇದಿರುಗೊಂಡರು ಹಿರಿದು ಮನ್ನಿಸಿ ವಿದುರನನು ಕೊಂಡಾಡಿ ಗುರು ನೃಪ ನದಿಜ ಧೃತರಾಷ್ಟ್ರಾದಿಗಳ ಸುಕ್ಷೇಮ ಕುಶಲಗಳ ವಿದುರನಾಗಮನಪ್ರಪಂಚದ ಹದನನೆಲ್ಲವ ಕೇಳಿದರು (ಶಾಪ್ರಾಅ. ೦-೦೮).

[<ಸಂ. ನದೀಜ]

ನದಿಪು (ಕ್ರಿ). (ಬೆಂಕಿ, ದೀಪ, ಉರಿ, ಬೆಳಕು, ತಾಪ ಮೊದಲಾದುವನ್ನು) ನಂದಿಸು ; ಆರಿಸು : ಭರತನ ಮೊಗದೊಳ್ ಪರ್ವಿದ ಖರ ಕೋಪಾನಲನನೆಯ್ದೆ ನದಿಪುವವೊಲ್ [ಶಾಕಾಂ. ನಂದಿಪವೋಲ್] ತನ್ಮರಕತ ಮಣಿವರ್ಣಂ ಕರಪರಿಘದಿನೊಡನೊಡನೆ ತುಳ್ಕಿದಂ ತಿಳಿನೀರಂ (ಆದಿಪು. ೦೪-೦೦೩) ; ಬಲದೇವನ ಮನದೊಳಾದ ಮುಳಿಸೆಂಬ ಕಿಚ್ಚಂ ತನ್ನ ಮೃದು ಮಧುರವಚನರಚನಾಜಲಂಗಳಂ ತಳಿದು ನದಿಪಿದಂ (ಪಂಪಭಾ. ೩-೨೨೮) ; ಮದನಧಾವಾಗ್ನಿಯಂ ನದಿಪೆ ಮಾಡಿದ ಕಾಮನದಿಯೆನಿಸುವುವು ದಿವಿಜ ದಂಪತಿಶತದೊದವಿದ ರತದ ಪದನಲ್ಲಿ (ಶಾಂತಿಪು. ೨-೯೩) ; ದವರೌದ್ರಜ್ವಲನಾದ್ಭುತಂ ಹೃದಯದೊಳ್ ಶೋಕಾಗ್ನಿ ಕೈಗಣ್ಕೆ ಪೊಣ್ಮುವ ಕಿಚ್ಚಂ ನದಿಪಲ್ಕೆ ಬರ್ಪ ತೆಱದಿಂದಂ ಕಣ್ಗಳಿಂದುಣ್ಕೆ ಪೊಣ್ಮುವ ನೇತ್ರಾಂಜನಮಿಶ್ರ ಬಾಷ್ಪಜಲಧಾರಾಬಿಂದುಗಳ್ ಕೂಡೆ (ಅಜಿಪು. ೦೦-೪೩) ; ಅಳವಿಗಱಿದಳುರ್ವ ಮದನಾನಳನಂ ನದಿಪಲ್ಕೆ ಪಲವುಮಮೃತದ ಪನಿಯಂ ತಳಿವಂತೆ ಧಂಪರುಬಿಗಳ್ ತುಳುಂಕೆ ನೃಪಸುತನನಾರ್ಯಸುತನಿಂತೆಂದು (ಲೀಲಾವ. ೪-೩೫) ; ಉಂತೆ ಜಗಂಗಳಂ ತಿಗುರಿಗಂ ತರುತಿರ್ಪ ಮನೋಜನೀ ವಸಂತಂ ತಲೆದೋಱುತಿಂ ಹರನ ಕಣ್ಣುರಿಯಂ ನದಿಪಲ್ ಸಮರ್ಥನೋ (ಚಂದ್ರಪ್ರ. ೭-೪೬).

ನದನದಿಪು (ದ್ವಿರುಕ್ತಿ) : ನಿಚ್ಚಂ ಪಗಲಿನಕಾಂತದ ಕಿಚ್ಚನಿರುಳ್ ಚಂದ್ರಕಾಂತದೊಱೆಪಂ ಪಡೆದಾ ಕಿಚ್ಚ ನದೆ [ದ] ನದಿಪೆ [ಶಾಕಾಂ. ನದನದಿಸೆ, ಸದನಡಿಸೆ] ಮಾಡುಗುಮಚ್ಚರಿಯಂ ಪಗಲುಮಿರುಳುಮಿಾ ವಿಜಯಾರ್ಧಂ (ಅಜಿಪು. ೯-೨೨). [<ನಂದು ?]

ನದಿಮೊಗ (ನಾ). ಹೊಳೆಯಂಪಾತ್ರ,–ಪ್ರವಾಹ: ಮೂರು ಖಂಡಗಳೇಳು ಸಾಗರಂಗಳನು ಹದಿಮೂರು ನದಿಮೊಗಗಳನು ದಾಟಿ ಬಂದೆಲ್ಲಿ ಭಾರತೇಯರ ಹೃದಯ ದೈವಸಮ್ರಾಜ ದರಬಾರ ನಡೆಸಿದನೆಲ್ಲಿ–ನೋಡಿದುವೆ ಧಿಲ್ಲಿ ! (ಕಏಪು. ೫೫). [ನದಿ + ಮೊಗ]

ನದಿಯಮರ (ನಾ). ಒಂದು ಬಗೆಯ ಮರ : "ಬೃಹತ್ಪತಿಃ, ಬೃಹಸ್ಪತಿಃ ಈಯೆರಡು ನದಿಯಮರ, ನೇಱುಲ್" (ಓಷಧಿ. ೦೦೯).

[ನದಿ + ಮರ$_1$]

ನದಿವಾಸಿ (ನಾ). ಹೊಳೆಯ ಬಳಿ ವಾಸಿಸುವವನು : ನದಿವಾಸಿಗಳು ವನವಾಸಿಗಳು ಗಿರಿವಾಸಿಗಳು ಗುಹ್ಯ ಗುಹೆವಾಸಿಗಳು ಇಂದ್ರಿಯಭಯಂಗಳಿಗೆ ಅಂಜಿ ಕಂದಮೂಲಾದಿಗಳ ಭಕ್ಷಿಸುವ ಕಾನನದ ದುರುಳುಗಳೆಲ್ಲಾ ಲಿಂಗ ಪ್ರಾಣಿಗಳಿಗೆ ಪ್ರಾಣಲಿಂಗ ಸಂಬಂಧಿಗಳಾದ ಪರಮಶಿವಯೋಗಿಗಳಿಗೆ ಸರಿಯೇ ಈ ಭ್ರಾಂತರೆಲ್ಲಾ (ಸಿದೇಪ. ೦೦೬-೩೫೯). [ನದಿ + ವಾಸಿ$_1$]

ನದೀಚರ (ನಾ). ಹೊಳೆಯಲ್ಲಿ ಸಂಚರಿಸುವುದು : ಪಿರಿದು ಪೊಟ್ಟಂ ವನಪ್ರಚಾರದೊಳಲಸಿದ ನದೀಚರನಪ್ಪ ಯೂಥಪತಿಯಂತೆ ವನವಿಹಾರದೊಳಲಸಿ ಬಂದು ಕಾವಣಮಂ ಪುಗೆ (ಶಾಂತಿಪು. ೮-೨೩ಪ). [ಸಂ.]

ನದೀಜ (ಗು). ೧. ಹೊಳೆಯಲ್ಲಿ ಹುಟ್ಟಿದ. (ನಾ). ೨. ಹೊಳೆಯಲ್ಲಿ ಹುಟ್ಟಿದುದು ; ನೀರಿನಲ್ಲಿ ಹುಟ್ಟಿದುದು. ೩. (ಗಂಗಾ) ನದಿಯ ಮಗ ; ಗಾಂಗೇಯ ; ಭೀಷ್ಮ : ಬಿಲ್ಲೋಳ್ ಮುನ್ನಂ ಪಿನಾಕಾಯುಧನೆ ಸಕಲಚಕ್ರಾಯುಧಂ ಜಾಮದಗ್ನ್ಯಂ ಬಲ್ಲಂ ರಾಮಂ ನದೀಜಂ (ಎಳ. VI, ಶಿಶುಪಾ. ೭೭-೩೪ ; 1180) ; ತತ್ಸೇನೆ ದಾವಾಗ್ನಿಯಂ ನೆಲೆಬೆರ್ಚಿರ್ದಟವೀ ಪ್ರತಾನಮುರಿಯುತ್ತಿರ್ದಪ್ಪುದೆಂಬಂದಮಂ ಗೆಲೆ ಮಾಡಿತ್ತು ನದೀಜನುಗ್ರಶರ ಪಾತೋದ್ಧೂತಚಾತಾದ್ಭುತಂ (ಮಹಾನೇ. ೦೨-೦೬೬) ; ಮುರಹರ ಗುರು ನದೀಜರ ಬೀಳುಕೊಟ್ಟನು ಕೃಪನ ಮನ್ನಿಸಿ ಮನೆಗೆ ಕಳುಹಿದನು (ಕುಮಾಭಾ. ೮-೦). ೪. ಅರ್ಜುನವೃಕ್ಷ ; ನೀರುಹಲಸಿನ ಮರ ; ಕದಂಬವೃಕ್ಷ : ಕವಿಗಳ ಕೊಂಡಾಟ ವಿವಿಧರೂಪಗಳನ್ನು ತಾಳಿತು. ಮರಕ್ಕೆ ಅವರು ಕೊಟ್ಟಿರುವ ವಿಶೇಷಣಗಳನ್ನು ನೋಡಿ. ಷಟ್ಪದೇಷ್ಟ . . ನದೀಜ, ದಾಸವೃಕ್ಷ (ಹಸುಹೂ. ೪೬). [ಸಂ.]

ನದೀಜಾತ (ನಾ). = ನದೀಜ ೩ : ವೈರಾಗ್ಯಂ ಭೋಂಕೆನೆ ಕೆಯ್ಯಾರೆ ಮನಕ್ಕಾಗಳಾ ನದೀಜಾತಂ ಸಂಸಾರಕ್ಕೇವೈಸಿ ದಯಾಧಾರು ಪರಮಾತ್ಮ ತತ್ತ್ವನಿಷ್ಠಿತನಾದಂ (ಮಹಾನೇ. ೦೨-೦೬೩). [ಸಂ.]

ನದೀತನೂಜ (ನಾ). = ನದೀಜ ೩ : ಆಗಳ್ ನದೀತನೂಜಭಾರದ್ವಾಜ ಕೃಪರವಿರಳ ಬಾಷ್ಪವಾರಿ ದುರ್ದಿನ ದೀನಾನನರಾಗಿರೆ ವಿದುರಂ ತಾನಟಿದುಮಟಿಯದಂತೆ ಶೋಕಾಕ್ರಾಂತನಾಗಿ (ಪಂಪಭಾ. ೩-೮ ಪ). [ಸಂ.]

ನದೀತರಣ (ನಾ). ಹೊಳೆಯನ್ನು ದಾಟುವಿಕೆ : ಹಯಶಾಸ್ತ್ರಂ ಸೂಪಶಾಸ್ತ್ರಂ ನದೀತರಣಂ ತಾಪನಮಿಂದ್ರಜಾಲಮೆಱಂ ... ಅಖಿಲಪ್ಪೂಹೋತ್ಕರಮೆಂಬಿನತಱೊಳಂ ಬಲ್ಲರೆಲ್ಲರುಂ ಮೆಚ್ಚೆ ಪಡೆದನತಿಕೌಶಲಮಂ (ಪುಷ್ಪಪು. ೪-೫೯). [ಸಂ.]

ನದೀತೀರ (ನಾ). ಹೊಳೆಯ ದಂಡೆ,-ತೀರ : ಬಾಳೆಯ ಗರ್ಭದೊಳಿರ್ದ ಬಾಳೆಯಂ ಬಾಳನುಮಂ ಕಂಡೆತ್ತಿಕೊಂಡು ಮತ್ಸ್ಯಗಂಧಿಯುಂ ಮತ್ಸ್ಯಗಂಧನುಮೆಂದು ವೆಸರನಿಟ್ಟು ನಡಪಿ ಯಮುನಾನದೀತೀರದೊಳಿರ್ಪನ್ನೆಗಂ (ಪಂಪಭಾ. ೦-೬೮ ಪ) ; ಆ ನದೀತೀರಕ್ಕೆ ಸಮಾಧಿಗುಪ್ತರೆಂಬ ದಿವ್ಯಮುನೀಶ್ವರರ್ ಬಂದಸ್ತಮಯಸಮಯದೊಳ್ ರಾತ್ರಿಪ್ರತಿಮೆಯೊಳಿರೆ (ಮಹಾನೇ. ೦೬-೧೦ ಪ) ; ನದೀತೀರದ ರಮ್ಯಸ್ಥಾನ (ಯಶಸ್ತಿ. ೬೨). [ಸಂ.]

ನದೀನಂದನ (ನಾ). = ನದೀಜ ೩ : ನದೀನಂದನೆ ವಾರಣಾಸಿಯಂ ಪೊಱಮಟ್ಟೆಕೆ ಬಂದಿರೆಲ್ಲರ್ದಿರೆಂದುಂ ಬೆಸಗೊಳ್ವುದುಂ (ಮಹಾನೇ. ೯-೧೦೦ ಪ) : ಈ ನದೀನಂದನನ ಬಲದಲಿ ಸೇನೆ ಶಿಸಗಂಜುವುದೆ (ಕುಮಾಭೀ. ೦-೩೩). [ಸಂ.]

ನದೀನಾಥ (ನಾ). ೧. ಹೊಳೆಗಳ ಒಡೆಯ ; ಸಾಗರ ; ಸಮುದ್ರ. ೨. [ಜೈನ] ಒಂದು ಕಾಲಪ್ರಮಾಣ : ಶೈಕ್ಷಲ್ಪ ಷೋಡಶ ನದಿ[ದೀ]. ನಾಥೋಪಮಾಯುಷ್ಮಂಬರಂ ದಿವ್ಯಸುಖಮಾನಂಡು (ಮಹಾನೇ. ೧೩-೦೪೬ಪ). [ಸಂ.]

ನದೀನಿಕಟ (ನಾ). ತೊರೆಯ ತೀರದ ಪ್ರದೇಶ ; ಹೊಳೆಯ ತೀರ : ವಿದಳಿತ ಕಂಜವಿಲ್ಲದೆ ಕೊಳಂ ಗಜವಿಲ್ಲದ ಕಾಡು ಚೂತವಿಲ್ಲದ ಬನಮಂಚೆಯಿಲ್ಲದ ನದೀನಿಕಟಂ ... ಅತ್ಯುದಾತ್ತಗುಣವಿಲ್ಲದ ಮಾನವರಿಲ್ಲದೆಲ್ಲಯುಂ (ಪುಷ್ಪಪು. ೨೬೦೦). [ಸಂ.]

ನದೀಪೂರ (ನಾ). ಹೊಳೆಯ ಪೂರ್ಣಪ್ರವಾಹ ; ತುಂಬುಹೊಳೆ : ಘನಶೋಕ ಘನಾಗಮಜಳಜನಿತೋತ್ಕರ್ಷಮನನೂನಬಾಂಧವಜನಿತಾಶ್ರು ನದೀಪೂರಮನುಡುಗಿಪುದಿನತೇಜವಸಂತದಂತೆ ಬಂದೀ ಕ್ಷಣದೊಳ್ (ಚಂದ್ರಪು. ೩-೦೪). [ಸಂ.]

ನದೀಪ್ರವಾಹ (ನಾ). ಹೊಳೆಯ ಪ್ರವಾಹ,-ಹರಿವು : "ಒಟ್ಟು-ನದೀಪ್ರವಾಹಂ" (ಕಮಲ. ಪರಿ. ೦) : ತೊಲಗಿರೈ ಮುನಿವರರು- ಒಟ್ಟೆ ಹೊಳೆಯೊಳಗೆ ಹೋಗದಿರಿ ದಿವದಿಂದಿಳಿದ ದಿವ್ಯನದೀಪ್ರವಾಹದ ಸತ್ಯತಮವೆನಲು ಅಲಳುಮತಿ ಕೇಳುತ್ತ ಘಳುಘಳುಘಳುಘಳು ಮಿಗಲು ಬಹ ನದಿಯನೀಕ್ಷಿಸಿ ತೊಲಗದಾಪೋಶನವ ಕೊಂಡನು ಜನ್ಹುಮುನಿ ನಗುತ (ನಿಧಾಗ. ೯-೮-೪೬). [ಸಂ.]

ನದೀಬೂಡು (ಗು). ನದಿಯಲ್ಲಿ ನೆರೆ ಬಂದಾಗ ನೀರಿನಲ್ಲಿ ಮುಳುಗುವ ; ಹೊಳೆ ಸಾಲಿನ : ದೇಸಾಯರ 'ನದೀಬೂಡು' ಜಮೀನು. ನಾಡಗೌಡರ 'ಮಡಿಗದ್ದೆ', ಕೇಶವರಾಯನ ಮಾವಿನ ಗಿಡಗಳು ನಿನ್ನ ಕಣ್ಣು ತುಂಬಲಾರವೆ? (ಹಬ್ಬಲ. ೩೩). [←ಮರಾ. ನದೀಬುಡ]

ನದೀಮಾತೃಕ (ನಾ). ೧. ಹೊಳೆಯ ನೀರಿನಿಂದ ಬೆಳೆ ಬೆಳೆಯುವ ಭೂಮಿ ; ನೀರಾವರಿ ಭೂಮಿ : "ತೊಱೆಯ ನೀರಿಂ ಬೆಳೆವ ಭೂಮಿ ನದೀಮಾತೃಕವೆಂಬುದು" (ಹಲಾಯು. ೨೭-೬) ; "ಹೊಳೆಯ ನೀರಿಂ ಬೆಳೆವ ಮಹಿ ನದೀಮಾತೃಕಂ" (ಮಂಗರಾ. ೨೯-೪) ; ಭೂತಲವರ್ತಿಯಪ್ಪ ವಿಷಯಾಳಿ ವಿಚಾರಿಪೊಡಾವಗಂ ನದೀಮಾತೃಕ ದೇವಮಾತೃಕಮೆಂ (ಚಂದ್ರಪು. ೦-೯೦) ; ಅದಲ್ಲದೆಯದೆ ನದೀಮಾತೃಕಮುಂ ದೇವಮಾತೃಕಮುಮೆಂಬ ಭೇದಮಂ ಬೇರ್ಪಡಿಸಿ (ಪುಷ್ಪಪು. ೨-೦೪೫); ನೂತನ ನಾರಿಕೇಳಜಲದಿಂ ಫಲಕೇಕ್ಷುಗಳಾವಗಂ ನದೀಮಾತೃಕ ದೇವಮಾತೃಕದ ಪಂಗುಳಿದೊಳ್ಪೆಳಸಾಗಿ ರಂಜಿಸುಂ (ತ್ರಿಪುವಿ. ೨-೩೭); ಬೆಳೆವುವೆ ಶಾಲಿ ಪಾಮರಿಯರ ಮೊಗಸಸಿ ವೆಳಗಿಗೊಸರುವಿಂದುಕಾಂತದ ಜಲದಿಂದೆ ದೇವಮಾತೃಕ ನದೀಮಾತೃಕಗಳ ಬಗೆಗೊಳದಾ ನಾಡೊಳು (ತ್ರಿಪುತಿ. ೨-೦೪). ೨. ಗದ್ದೆ ; ತರೀ ಜಮೀನು. 'ದೇವಮಾತೃಕ' ಪರಾ. [ಸಂ.]

ನದೀಮಾತೃಕೆ (ನಾ). = ನದೀಮಾತೃಕ ೧ : ದೇವಮಾತೃಕೆ ನದೀಮಾತೃಕೆಯಾದ ನಾನಾವಿಧ ಬೆಳೆಯ ಭೂಮಿಗಳು ಅವಾಗ ಬೆಳೆದೊಱಗುವ ಧಾನ್ಯ ಸಂದೋಹಕಾವಾಸವಾಗಿರುತಿಹುದು (ನಾಗಳು. ೨-೦೮). [ಸಂ. ನದೀಮಾತೃಕಾ]

ನದೀಮುಖ (ನಾ). ಹೊಳೆಯು ಸಮುದ್ರಕ್ಕೆ ಸೇರುವ ಸ್ಥಳ; ಅಳುವೆ: ಸ್ವಯಂಭೂರಮಣ ಸಮುದ್ರದ ಮಹಾಮತ್ಸ್ಯಂಗಳ್ಸಾಸಿರಯೋಜನದೀರ್ಘಂ ನದೀಮುಖದೊಳು ಏನೂಱು ಯೋಜನ ನೀಳಂ (ಜ್ಞಾಪಕಾ. ೦೨೩) : ನದೀಮುಖ (The mouth) ಅಂದರೆ ನದಿಯು ಸಮುದ್ರಕ್ಕೆ ಸೇರುವ ಸ್ಥಳ (ಭೂಗೋಳ. ೦೨) ; ಗಂಗಾನದಿಯಲ್ಲಿ ನದೀಮುಖದಿಂದ ಎಪ್ಪತ್ತುಮೈಲಿಗಳವರೆಗೂ ಜಹಜುಗಳು ಹೋಗುತ್ತವೆ (ಸಸದಿ. ೨೦) ; ಈ ವಲಯದಲ್ಲಿ ನದೀಮುಖಗಳಲ್ಲಿರುವ ಮೆಕ್ಕಲುಮಣ್ಣು ನೀರಾವರಿಗೆ ಅನುಕೂಲವಾಗಿದೆ (ಶಿಲ್ಪಸಾ. ೩೬೧). [ಸಂ.]

ನದೀಮುಖಖಂಡ (ನಾ). = ನದೀಮುಖಜಭೂಮಿ: "ನದೀಮುಖಖಂಡ ಅಥವ ಡೆಲ್ಟ (Delta)" ಅಂದರೆ ಒಂದು ನದಿಯ ಮುಖಭಾಗದಲ್ಲಿರುವ ತ್ರಿಕೋಣಾಕಾರವಾದ ಭೂಮಿ (ಭೂಗೋಳ. ೦೩). [ನದೀಮುಖ + ಖಂಡ]

ನದೀಮುಖಜಭೂಮಿ (ನಾ). ನದಿಯು ಸಮುದ್ರಕ್ಕೆ ಸೇರುವಲ್ಲಿ ನಿರ್ಮಾಣವಾಗುವ, ಮೆಕ್ಕಲುಮಣ್ಣಿನಿಂದ ಕೂಡಿದ ನೆಲ; ಮೆಕ್ಕಲು ಭೂಮಿ; ಜಲಾನಯನ ಭೂಮಿ: "ನದೀಮುಖದಲ್ಲಿ ಇಂತಹ ತ್ರಿಕೋನಾಕಾರವಾಗಿ ಏರ್ಪಟ್ಟ ಮೆಕ್ಕಲುಭೂಮಿ : ನದೀಮುಖಜಭೂಮಿ; ಕುದುರು" (Delta. ಇಂಗಿ) ; ನದಿಗಳು ತಮ್ಮ ಗತಿಗಳನ್ನು ಬದಲಾಯಿಸುವುದು, ನದೀಮುಖಜಭೂಮಿಗಳೆಂದು ಹೊಸ ಪ್ರದೇಶಗಳು ಸಿದ್ಧವಾಗುವುದು . . . ಮುಂತಾದುವು ಪ್ರಕೃತಿಯಲ್ಲಿ ಯೇ ನಡೆದಿರುವ ಘಟನೆಗಳು

(ಭಾಇಪ್ರ. ೬) ; ದಕ್ಷಿಣ ಭಾರತದ ನದಿಗಳು . . . ಸಮುದ್ರ ಸೇರುವ ನದೀಮುಖಜಭೂಮಿಯಲ್ಲಿ ಮಾತ್ರ ಅವು ಭೂಮಟ್ಟದಲ್ಲಿ ಹರಿಯುತ್ತವೆ (ನನದಿ. ೨೨). [ಸಂ.]

ನದೀಮೂಲ (ನಾ). ನದಿಯ ಉಗಮಸ್ಥಾನ ; ನದಿಯು ಹುಟ್ಟುವ ಸ್ಥಳ : "ನದೀಮೂಲ" (Source) ಅಥವ "ಉಗಮ" ಅಂದರೆ ನದಿಯು ಹುಟ್ಟುವ ಸ್ಥಳ (ಭೂಗೋಳ. ೦೨) ; ಋಷಿಮೂಲವನ್ನೂ ನದೀಮೂಲವನ್ನೂ ಗುರುಮೂಲವನ್ನೂ ಹುಡುಕಬಾರದು (ರೂಢಿ). P ಈ ರೀತಿಯಲ್ಲಿ ಮೂಲಗಳನ್ನು ಬೆದಕುತ್ತಾ ಹೋದರೆ ಅಪ್ರಿಯವಾದ ವಿಷಯಗಳು, ಅಪಾಯ ಪ್ರಸಂಗಗಳು ಉಂಟಾಗುತ ವೆ ಎಂಬುದು ರೂಢಿವಾಕ್ಯದ ತಾತ್ಪರ್ಯ. [ಸಂ.]

ನದೀಯೋಜನೆ (ನಾ). ನದಿಗಳಿಂದ ಉಪಯೋಗ ಪಡೆಯಲು ಅಣೆಕಟ್ಟು ಕಟ್ಟುವ ವ್ಯವಸ್ಥೆ,-ಏರ್ಪಾಡು : ನದೀಯೋಜನೆಗಳು ನಮ್ಮ ದೇಶದ ಇಂಜಿನಿಯರ್‌ಗಳ . . . ಕೆಲಸಗಾರರ ಪ್ರತಿಭೆಯ ಪ್ರತೀಕಗಳು (ನನದಿ. ೩೪). [ಸಂ. ನದೀಯೋಜನಾ]

ನದೀಸರ್ಜ (ನಾ). ಒಂದು ಬಗೆಯ ಮರ ; ಅರ್ಜುನವೃಕ್ಷ ; ಮತ್ತಿ ಮರ : "ನದೀಸರ್ಜಃ, ವೀರತರುಃ, ಇಂದ್ರದ್ರುಃ, ಕಕುಭಃ, ಅರ್ಜುನಃ-ಇ ತೋರಮತ್ತೀಗಿಡ, ಕೆಂಪುಮತ್ತೀಗಿಡ, ರಕ್ತಾರ್ಜುನವೃಕ್ಷ" (ಸಿದ್ಧಾಂತಿ. ೦೨೨). [ಸಂ.]

ನದೀಸುತ (ನಾ). = ನದೀಜ ೩ : "ನಾದೇಯಃ, ನದೀಸುತಃ-ಈ ೨ ನದಿಯ ಮಗಂ" (ಹಲಾಯು. ೮೨-೩೪೭) ; ಗುರು ಗುರುಪುತ್ರ ಶಲ್ಯ ಭಗದತ್ತ ನದೀಸುತರೆಂಬ ಸಂದ ಬೀರರೆ ಮಱುವಕ್ಕಂ (ಪಂಪಭಾ. ೦೦-೧೨); ತ್ರಿದಶನದೀಸುತನಿಂ ತೀರದ ಕಜ್ಜಂ ಮುನ್ನಂ ಕಳಶಸಂಭವನಿಂ ತೀರದ ಕಜ್ಜಮಿನಜನಿಂ ತೀರದ ಕಜ್ಜಂ ದ್ರೋಣಪುತ್ರನಿಂ ತೀರ್ದಪುದೇ (ಗದಾಯು. ೩-೬೦) ; ಆ ನದೀಸುತನಡಿಗೆಱಗಿ ರವಿಸೂನು ಕಳುಹಿಸಿಕೊಂಡು ಬಹಳ ಮನೋನುರಾಗದಲ್ಲೈದಿದನು ಕುರುರಾಯನೋಲಗವ (ಕುಮ್ಯಾದ್ರೋ. ೦-೩೨). [ಸಂ.]

ನದೀಸೂನು (ನಾ). = ನದೀಜ ೩ : ಕಾನೀನಂ ದ್ರೋಣ ನದೀಸೂನುಗಳ ಟಿದಿಂಬಟಿಕ್ಕೆ ಪೆಱರೆನಗಿಲ್ಲೆಂದಾನೆ ಗಳಿತಾಶ್ರುಜಲದಿಂ ಸೇನಾಪತ್ಯಾಭಿಷೇಕಮಂ ಮಾಡಿದಪೆಂ (ಗದಾಯು. ೩-೬೬). [ಸಂ.]

ನದೀಹ್ರದ (ನಾ). ನದಿಯ ಆಳವಾದ ಭಾಗ ; ಮಡುವು : ಜಳಾವಗಾಹಾಸೆಯಿಂ ವೈತರಣಿಯ ಪಿರಿಯ ದರಿಯಂ ಮೆಟ್ಟಿ ನುಣ್ಮಣಲಂ ಮಣಲ್ದೀಂಟೆಗೆತ್ತದಱ ಪರಿತಪ್ತಲೋಹರಜಸ್ಸಿಕತಿಳತಳದೊಳ್ ಮೆಯ್ಯ ನೀಡಾಡುವುದುಂ . . . ಅಂತಲ್ಲಿಯುಂ ಸೈರಿಸದೆ ನದೀಹ್ರದಮಂ ಪುಗುವುದುಂ (ಶಾಂತಿಪು. ೭-೯೨ಪ). [ಸಂ.]

ನದುಗು$_1$ (ಕ್ರಿ). ಪರಾಙ್ಮುಖವಾಗು ; ಮುಖ ತಿರುಗಿಸು : ಒದವಿದ ಪುರುಡಿಂದಂ ನೋಡದು ನುಡಿಯದು ಪೊರ್ದದೆನಿತು ಕಾಲ್ಪಿಡಿದೊಡ ಮೊಲ್ಲದು ಕಿನಿಸಿ ಕಡುಪಿನಿಂದಂ ನದುಗಿದಪುದು ತಿಳಿಯದೆಂತುಮಾರ್ ತಿಳುಪಿದೊಡಂ (ಕಾದಂಕಾ. ೬೬). [?]

ನದುಗು$_2$ (ನಾ). ಗುನುಗು : ಮಾವನ ಕಡೆಯಿಂದವಿ ಲ್ಲಾ ಬಂದಿದೆ ಅವನಿಗೇನು ನದುಗು ? (ರೂಢಿ). [?]

ನದುರು 'ನಜರು' ನೋ.

ನದರುಗಾಣಿಕೆ 'ನಜರುಗಾಣಿಕೆ' ನೋ.

ನದುಳು (ಗು). ೧. ಒಳಗಿರುವ ; ಹುದುಗಿರುವ ; ಮುಚ್ಚಿಟ್ಟಿರುವ : ಕೆದರಿದಾಲಿಯ ಕಿಡಿಯ ಮಾಲೆಯ ವದನದೆಗಹಿನ ದೌಂಷ್ಟ್ರ ಬಿಗುಹಿನ ನದುಳು ಜಿಹ್ವೆಯ ಗಳದ ಹೃಂಹೆಯ ಸುಯ್ಲು ಹೊಯ್ಲುಗಳ ಎದೆಯ ನಾಮದ ಬದಿಯ ರೋಮದ ತ್ರಿದಳ ಕರ್ನದ ಕದಳಿವರ್ನದ ಮದದ ಕೇಸರಿಯುದಿಸಿ ರೋಷದಿ ಕವಿದವರಿಭಟನ (ಅಂಬಿಕಾ. ೩೨-೩೮). (ನಾ). ೨. ಮುಚ್ಚಿಟ್ಟಿರುವಿಕೆ ; ಹುದುಗಿರುವಿಕೆ : ವಿಷದ ಲಹರಿಯ ಲಳಿಯ ನದುಳಿನ [ಪಾಠಾಂ. ಉಸುರಿನ] ಹಸರಿಕೆಯ ಚೂರಿಸುವ ಜಿಹ್ವಾ ಪ್ರಸರದುರುಪೂತ್ಕಾರದಹಿಪಂಜರದ ಮಧ್ಯದಲಿ ಎಸೆದನೈ ಲವ (ತೊರರಾ. ೬-೦೬-೯). 'ನದುಳುನಗೆ' ಪರಾ. [?]

ನದುಳುನಗೆ (ನಾ). ಹೊರತೋರದ ನಗೆ ; ಹತ್ತಿಕ್ಕಿದ ನಗೆ ; ಆಂತರಂಗಿಕವಾದ ನಗೆ : ನೋಡಿದುದಖಿಳಖಳನಿಕರ ನದುಳು [ಪಾಠಾಂ. ಪುದಿದ]ನಗೆಗಳ ಮೊಗದ ಮುರುಹಿನ ವದನದರೆಮುಸುಕುಗಳಲಿದ್ದುದು (ತೊರರಾ. ೩-೭-೦೩) ; ನ[ಪಾಠಾಂ. ನು] ದುಳುನಗೆಗಳಲಿವರು ಮೂವರು ಪುದಿದ ಪರಿತೋಷದಲಿ ರಾಮನ ಪದಪಯೋಜವ ಸಾರಿದರು ಕಪಿಕಟಕ ನಲಿದಾಡೆ (ತೊರರಾ. ೬-೨೭-೬೨). [ನದುಳು + ನಗೆ]

ನದ್ಧ (ಗು). ೧. ಸೇರಿರುವ; ಕೂಡಿಕೊಂಡಿರುವ ; ಕಟ್ಟಿದ. (ನಾ). ೨. ಬದ್ಧನಾದವನು ; ಒಳಪಟ್ಟವನು ; ಸೇರಿದವನು : "ಬದ್ಧಃ, ನದ್ಧಃ, ಸಂಯತಃ-ಈ ೩ ಕಟ್ಟುಪಟ್ಟವಂ" (ಹಲಾಯು. ೫೬-೦೮೫) ; ಕರಿಸೇನಾಸಾರಿನದ್ಧೋತ್ತರಳಕದಳಿಕಾಕಾನನೋಚ್ಚುಂಬ್ಯಮಾನಾಂಬರಚಕ್ರಂ (ಆದಿಪು. ೪-೨೪). [ಸಂ.]

ನದ್ಧ್ರಿ (ನಾ). ಚರ್ಮದ ಪಟ್ಟಿ ; ತೊಗಲಿನ ಹಗ್ಗ : "ನದ್ಧ್ರೀ ವದ್ಧ್ರೀ ಸಂಜ್ಞೆಯದು ವರತ್ರೆಯೆನಿಕ್ಕುಂ" (ವಸ್ತುಕೋ. ೫೦-೩೭) ; ನದ್ಧ್ರೀ, ವದ್ಧ್ರೀ, ವರತ್ರಾ-೩ ತೊಗಲ ಮಿಣಿಯ ಪೆಸರು, ತೊಗಲ ಹಗ್ಗ" (ಸಿದ್ಧಾಂತಿ. ೨೬೯). [ಸಂ. ನದ್ಧ್ರೀ]

ನದ್ಯಂಬು (ನಾ). ನದಿಯ ನೀರಿನ ಆಶ್ರಯ. [ಸಂ.]

ನದ್ಯಾಮ್ಲ (ನಾ). ಒಂದು ಬಗೆಯ ಸಸ್ಯ : "ಉಪಕರದಂತಿ-ನದ್ಯಾಮ್ಲ" (ಓಷಧಿ. ೦೬). [<ಸಂ. ನದ್ಯಾಮ್ರ]

ನದ್ಯುತ್ತರಣ (ನಾ). ನದಿಯನ್ನು ಹಾಯುವಿಕೆ,-ದಾಟುವಿಕೆ ಅಂತುಭಯನದಿಯ ವೈಷಮ್ಯಮುಮನಾಶ್ಚರ್ಯಂಬಟ್ಟು ನೋಡಿ ನದ್ಯುತ್ತರಣೋಪಾಯಮಾವುದೆಂದು ಬಗೆದು (ಆದಿಪು. ೦೩-೫೦ಪ). [ಸಂ.]

ನನವತಿ (ನಾ). ಒಂದು ಸ್ಥಳದ ಹೆಸರು : ನೆಲ್ಲಿ ಕುಡಿಕ್ಕಿಱುವಳೆ ನನವತಿ ಸಾಗಲ ತಟಾಕಸ್ಯಾತ್ (ಮ್ಯುಅರಿ. ೦೯೩೯, ೩೦-೨೯ ; 670). [?]

ನನವರಿಕೆ 'ನೆನವರಿಕೆ' ನೋ.

ನನಸು, ನೆನಸು$_3$ (ನಾ). ನಿಜಸ್ಥಿತಿ ; ವಾಸ್ತವಸ್ಥಿತಿ ; ಸತ್ಯ ; ದಿಟ ; ನಿಶ್ಚಯ : "ನನಸು = ದಿಟಂ" (ಶಮದ. ಪರಿ. ೨) ; "ನನ್ನಿ, ನಿಕ್ಕುವಂ, ನಿಸದಂ, ಸಾಜಂ, ನ.[ಪಾಠಾಂ. ನೆ]ನಸು, ದಿಟಂ-ಈ ೬ ಸತ್ಯಂ" (ಕಶಸಾ. ೦೩-೨೫೪) ; ಪುಳಿನಕರಿಸರಪ್ರದೇಶದೋಳ್ ಮಱೆದೊಱಗುವೈರಾವತದಂತೆ ಪವಡಿಸಿ ಕಿಱುದಾನುಂ ಬೇಗದೊಳ್ ಸುಭದ್ರೆಯಂ ಕನಸಿನೊಳ್ ಕಂಡು ನನಸೆಂದು ಬಗೆದು (ಪುಪಭಾ. ೪-೧೦೦ಪ) ; ಭೀತಿಯಂಬಟ್ಟದನೆ ಕನಸುಗಂಡುಮ್ಮಳಂಗೊಂಡು ಚೋದ್ಯಂ ನನಸೆಂದೆಚ್ಚತ್ತಿರುತ ತಂನೆಯ ತಲೆಯನತಿಭ್ರಾನ್ತನಂದಿಂದು ನೋಳ್ಕುಂ (ಎಕ. VII, ಶಿವಮೊ. ೬೪-೩ ; 1112) ; ಕನಸೆಂದೊಡಂ ನನಸಿದೆಂದಾಳ್ದಳ್ [ಪಾಠಾಂ. ನೆನಸೆನುತ್ತಾಂತಳ್] ಮಹಾಚಿಂತೆಯಂ (ಜಗವಿ. ೦೭-೦೦೭) ; ತಮ್ಮ ಕಲ್ಪನೆಯ ಕನಸನೆ ನನಸಿನ ನನ್ನಿ ಎಂಬಂತೆ ಏನೇನೊ ಕಣವೇಳುತಿಹುದವರ ಚಾಳಿ (ಚಂದ್ರಸ. ೦೨-೨೨); ಅವಳು ಕನಸಿನಲ್ಲಿ ಮೈತೋರಿ, ನನಸಿನಲ್ಲಿ ನಿಧಿಯನ್ನು ತೋರಿಸಿಕೊಟ್ಟಳು! (ರಾಜ್ಯೋದ. ೧೮೬). **ನೆನಸು**$_3$: "ನೆನಸೆಂದು ದಿಟಂ" (ಚತುನಿ. ೦೯೧) ; "ನನ್ನಿ ಸಾಜ ನೆನಸುಂ ದಿಟಮೊಂದುಸಿರಲ್ಕೆ ಸತ್ಯಮಕ್ಕುಂ" (ಕವಿಕಂ. ೧೨೦); "ನೆನಸೆನಲ್ ನಿಶ್ಚಯಂ" (ಕಚ. ೫೭) ; ಕನಸಂ ಧನದತ್ತಂ ನೆನಸೆಂದು ಭೋಂಕನೆಟ್ಟತ್ತು (ಪಂಚತಂ. ೯೧-೦೦) ; ಕನಸಿಂದಂ ನೆರೆದವನಂ ನೆನಸಿಂ ನೆರೆದಪ್ಪೆನೆಂದು ತರವೇಟ್ಟವೆ ಕುಂತನಂ ((ಜಗವಿ. ೦೭-೦೧೨); ಧನುಜರಟ್ಟಿದ

ಕನಸ ಕಂಡರೆ ನೆನಸಿನಲಿ ನರರಂಜುತಿಪ್ಪರು (ಕೌಶಿರಾ. ೩೩-೮); ಮಱುವಗಲುದಯದೊಳರಸಂ ತುಱುಗಿರೆ ಕಡುಹರಿಸಮಿರುಳ ಕನಸಂ ನೆನಸಂದಱಿಪಲಳಸಿಂಗ ರಾ ರ್ಯ ರ ನು ಱ ದಿ ಂ ದ ಂ ಕರೆಯಲಟ್ಟಿದಂ ಪಡಿಯಱರಂ (ಚಿಕವಿ. ೩-೦೧೦).

ನನಸಾಗು, ನೆನಸಾಗು = ಪ್ರತ್ಯಕ್ಷವಾಗಿ ಕಾಣುವಂತಾಗು; ವಾಸ್ತವವಾಗು: ನುಡಿದೊಡಂ ಬರೆಯಿಸಿದೊಡಂ ಕಳಿಪಿದೊಡಂ ನನಸಾಗಿ ತೋಱಲಕ್ಕುಮೆ (ಪದ್ಮರಾ. ೧೦-೦೮೮); ಅವನು ಕಾಣುತ್ತಿದ್ದ ಕನಸುಗಳೆಲ್ಲಾ ನನಸಾದವು (ರೂಢಿ); ಅಂತುದಾರಮಹೇಶ್ವರನೀಶ್ವರವರಪ್ರಸಾದವೆಲ್ಲಂ ತನಗೆ ನೆನಸಾಗೆಯುಂ ಕನಸಿನಂದಮಾಗಿ ತೋಱೆ (ಪಂಪಭಾ. ೧೦-೦೩೦ ಪ).

[ದೇ.॥ ತಮಿ. ನನವು, ನನಾ]

ನನಸುಗಿರು (ಕ್ರಿ). ದಿಟವೆಂದು ಭಾವಿಸು; ನಿಜವೆಂದು ಭ್ರಮಿಸು: ಅಹುದೆ! ಬರಿದೆ ಬೆದರಿದೆ, ಅಜ್ಜಿ, ಕನಸಂ ನನಸುಗೆತ್ತು! (ಚಂದ್ರಸೆ. ೨೬-೨೩).

[ನನಸು + ಗಿರು (< ಗಿಱು)]

ನನಾಂದೃ (ನಾ). ಗಂಡನ ಸೋದರಿ; ನಾದಿನಿ ಅಥವಾ ಅತ್ತಿಗೆ: "ನಾದುನಿ ನನಾಂದೃ ನಂ [ನಾ] ದಿನಿಯೆನಿಕುಂ" (ವಸ್ತುಕೋ. ೫೬-೨೪); ಋಕಾರಾಂತಕ್ಕೆ-ಪಿತೃ, ಸವಿತೃ . . . ನನಾಂದೃ, ಯಾತೃ, ಮಾತೃ, ಧಾತೃ (ಶಮದ. ೮೪ ಪ್ರಯೋ). [ಸಂ.]

ನನೂರು 'ನಾಲ್ನೂಱು' ನೋ.

ನನೆ$_1$, ನೆನೆ$_2$ (ಕ್ರಿ). ನನೆತು, ನನೆದು, ನೆಂದು, ನೆನೆದು (ಭೂತನ್ಯೂ). ೧. ಆರ್ದ್ರವಾಗು; ಒದ್ದೆಯಾಗು; ತೋಯು: "ನನೆ-ಆರ್ದ್ರಭಾವೇ, ಪುಷ್ಪಕುಟ್ಮಲೇ ಚ (ಮೊಗ್ಗು)" (ಶಮಧಾ); ಅಂತೆಟ್ಟತ್ತು ನೆತ್ತರ ಪೊನಲೊಳ್ ನಾಂದು ನನೆದ ಮೆಯ್ಯುಮಂ ತೊಯ್ದು ತಳ್ಪೊಯ್ದ ಜಡೆಯುಮಂ ಕಂಡು (ಪಂಪಭಾ. ೧-೦೦೫ಪ); ನಿರವಧಿಪ್ರೇಯಪ್ರೀತಿವಚನಂ ಪುಳಕದೊಳ್ ನನೆತು ಹರ್ಷದೊಳರಲ್ದು ಆನಂದಾಶ್ರುಭರದೊಳ್ ತುಳುಂಕಿ (ಅನಂಪು. ೩-೫೩ಪ); ಮೊಮ್ಮಂದಿರುಗಳಳಲಿನ ಘನತೆಯನು ಕಿವಿಗೊಟ್ಟು ಕೇಳಿದು ನನೆಡುದಂತಃಕರಣ ಕಂಬನಿದುಂಬಿದನು ಭೀಷ್ಮ (ಕುಪ್ಯಾಭೀ. ೭-೨೪); ಎಲೆ ವನಜಾಕ್ಷ ಬೆಟ್ಟಮಂ ಕೊಡೆವಿಡಿದು ಪಟ್ಟಿಯಂ ನನೆಯಲೀಯದವೋಲೀ ಪಾರ್ಥನಂ ರಕ್ಷಿಸುವೆ ನೀಂ ಕೃಪೆಯೊಳು (ಜೈಮಿಭಾ. ೦೩-೩೪). ೨. ನೀರನ್ನು ಹೀರಿ ಮೃದುವಾಗು,-ಮೆತ್ತಗಾಗು: ಕಲ್ಲೆಂತುಂ ನನೆಯದವೋಲ್ ಪೊಲ್ಲಮೆಯೊಳ್ ಕೂಡಿ ರೌರವಕ್ಕಿಟಿವವರುಂ ಸಲ್ಲಲಿತಮಪ್ಪ ಧರ್ಮಕ್ಕೆಲ್ಲಿಯುಮೋರಂತೆ ಬಾರರಘವಶದಿಂದಂ (ಧರ್ಮಾಮೃ. ೧೦-೧೬೬); ಉತ್ತಮದ ಸೊಜ್ಜಿಗೆಯ ಬಟ್ಟವಾಲೊಳು ನನೆಹಿ ಮತ್ತೆ ನನೆ [ಪಾಠಾಂ. ಮೆತ್ತನಾ]ದಾಗ ತೆಗೆದದನು ಪಿಟ್ಟೆಯ ಹಿಟ್ಟನೊತ್ತಿ (ಸೂಪಶಾ. ೧-೧೧). ನೆನೆ$_2$: ೧. ಎಱೆದರೆ ನೆನೆಯದು ಮಱೆದರೆ ಬಾಡದು ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ (ಬಸವ. ೧೯೬); ಚಿತ್ತಜಾಂತಕನೊಂದುದಿನವುದ್ಯತ್‌ತಪೋಧನ ವೇಷದಿಂ ನೆನೆವುತ್ತ ಮಳೆಯೊಳು ನಡುಗುತಂ ನಡುವಿರುಳು ನಡೆತರಲು (ಬಸಪು. ೨೭-೪೭); ಸೂಕ್ತಿಸುಧಾರಸದಿ ನೆಱೆ ನೆನೆದುದಾತನ ಮೈ ವಿಲೋಚನವಾರಿಪೂರದಲಿ (ಕುಪ್ಯಾಕ. ೧೭-೨೩); ಮೊದಲೇ ಸೀಮೆಎಣ್ಣೆಯಲ್ಲಿ ನೆಂದ ಚಂಡು ಉರಿಯತೊಡಗಿತು (ಗೋಪುರ. ೪೪); ನೆನೆದ ಕಲ್ಲು ಮೆತ್ತಗೆ ಆದೀತೇ? (ಗಾದೆ). ೨. ಕೂಡಲಸಂಗಮದೇವ ಬಱಿಯುದಕದಲ್ಲಿ ನೆನೆವನೆ (ಬಸವ. ೦೮೪); ಧರಣಿ ನೆನೆದುದು ಗಂಧರಸಕತ್ತುರಿಯ ಪನ್ನೀರುಗಳ ಹೊಸಲೊಡೆವರಸಿ (ಕುಪ್ಯಾವಿ. ೧೦-೮೩). 'ನೆನೆಗಡಲೆ', 'ನೆನೆಯಕ್ಕಿ$_1$' ಪರಾ. [ದೇ.॥ ತಮಿ. ನನೈ; ಮಲ. ನನ, ನನೆ; ತುಳು. ನನೆ; ಕೊಡ; ನೆಲೆ, ನೆಲ]

ನನೆ$_3$ (ಕ್ರಿ). ೧. ಹೂವು ಬಿಡು; ಮೊಗ್ಗಾಗು; ಮುಗುಳಾಗು: "ನನೆತುದೆಂದು ನನೆವೆತ್ತುದು" (ಕಶಸಾ. ೯-೦೮೯); "ನನೆತುದು ನನೆಯೇಱಿದುದು" (ಕವಿಕಂ. ೭೭); "ನನೆತುದೆನೆ ಮೊಗ್ಗೇರಿದುದು" (ಕಶರ. ೫೩); ತಳೆತೊಱಗುವಶೋಕೆಗಳುಂ ನನೆತೆಟಲ್ವ ಜಾದಿಗಳುಂ ಮುಗುಳ್ತು ಮಂಱಿವ ಮೊಲ್ಲೆಗಳುಂ (ಲೀಲಾವ. ೬-೬೦ ಪ); ಬೆಳಕು ಚೆಂಕಿ ಬೆರೆತುಕೊಂಡು ಭಾವವು ಹೊರದೊಡಿರೆ ಬಾಳು ಮೊಳೆತು ಸುಗ್ಗಿ ನನೆತು ಹೂವಿನಂತೆ ಮಾಡಿರೆ (ಗಂಗಾಕ. ೨೩-೭). ೨. ಚಿಗುರು ಬಿಡು; ಅಂಕುರಿಸು. 'ನನೆವೊಯ್' ಪರಾ. [ದೇ.॥ತಮಿ. ನನೈ; ತೆಲು. ನನಯು, ನನಚು, ನನುಚು]

ನನೆ$_3$ (ನಾ). ೧. ಅರಳದ ಹೂವು; ಮೊಗ್ಗು; ಕುಟ್ಮಲ: "ನನೆ-ಆರ್ದ್ರಭಾವೇ, ಪುಷ್ಪಕುಟ್ಮಲೇ ಚ" (ಶಮಧಾ); "ನನೆ ಕುಟ್ಮಲಂ" (ಕಶಸಾ. ೯-೦೮೫); "ನನೆಯೆನಲು ಕುಟ್ಮಳಮಕ್ಕು" (ಕಶರ. ೫೩); ನನೆಯ ಕೊನೆಯ ತಳಿರ ಮುಗುಳ ವನಲತಾನಿಕುಂಜದಿಂ ಪ್ರಸೂನರಜದ ಪುಂಜದಿಂ (ಪಂಪಭಾ. ೧-೫೮ ರಗಳೆ); ಬನದಿಂ ಬನಕ್ಕೆ ನನೆಯಿಂ ನನೆಗಲರಿಂದಲರ್ಗೆ ಮೊರೆದು ಬಿರಯಿಗಳೆರ್ದೆ ಪೌವನೆ ಪಾಱೆ ಪಾಱುಗುಂ ಕಾಮನಿಕಾಮಶಿಲೀಮುಖಂ ಶಿಲೀಮುಖನಿವಹಂ (ಮಲ್ಲಿಪು. ೨-೪೧); ತುಱುಗಿದ ತಳಿರಿಂ ನನೆಯಿಂ ಕಿಱು ಮಿಡಿಯಿಂದೆಸೆದುದಸದಳಂ ಮಾಕಂದಂ (ಕಾಪ್ಯಾವ. ೨೩೨); ಸಣ್ಣ ನನೆಯೊಳಗಣ ಪರಿಮಳವ ಹೊಱಸೂಸಿ ಇದಿರಿಂಗಱುಹಿಸಬಲ್ಲುದೇ ವಾಯು (ದೇವಾಪ. ೬೩-೧೨೮); ಸಂಪಗೆಯ ನನೆಗೆಯ್ದು ಬಟಿಕೊಯ್ಯಗೆ ಜಾಱುವ ತುಂಬಿ ನಗಿಸಿದುದು ಮಲ್ಲಿಗೆಯಂ (ಕಬ್ಬಿಕಾ. ೫೮); ತನುಪುಳಕ ತಲೆದೋಱೆ ರೋಮಾಂಚನದ ಬಿಗುಹಡಗಿತ್ತು ಕಂಗಳ ನನೆಗಳರಳಿದವಾಯ್ತು ಭೀಷ್ಮಂ ಗಿತ್ತಣವಧಾನ (ಕುಪ್ಯಾದ್ರೋ. ೧-೨೨); ಪೂವಳ್ಳಿಗಳ್ ನನೆಕೊನೆ ಮುಗುಳರೆ ಮುಗುಳ್ ಬಿರಿಮುಗುಳುಳ್ಳಲರ್ದ ಪೊಸಮಲರ್ಗಳಿಂದೆ ಸೊಗಯಿಸೆಯುಂ, ಮನೋಹರಮಾಯ್ತು ಪೊಸಸುಗ್ಗಿ (ರಾಮಾಶ್ವ. ೧೭-೧). ೨. ಹೂವು; ಪುಷ್ಪ; ಕಂಸುಮ: ನನೆಯನೆ ಪೇಱೆ ಕೆಂದಳಿರೊಳೆಯ್ದೆ ಬಬಲ್ದೆಳಮಾವು (ಅದಿಪು. ೧-೬೪). 'ನನೆಗಣೆ', 'ನನೆವಾಸ್ಸು$_2$' ಪರಾ.

ನನೆಯ ಕೋಲ್=ಹೂಬಾಣ; ಪುಷ್ಪಬಾಣ ನೀಂ ನಾಲ್ಕೆರಡು ಪಗಲೊಳೆಮ್ಮೊಡೆಯನ ಕೈಯ ನನೆಯ ಕೋಲ ಕಾಲಾಟಮಂ ಕಾಣ್ಬೆರೆನುತೋಲಗ ಸಾಲೆಯಂ ಪೊಱಮಟ್ಟು (ಕಬ್ಬಿಕಾ. ೧೮೮). ನನೆಯ ಶಿಶು = ಮೊಗ್ಗು; ಮುಗುಳು: ಜ್ಞಾನಿಯ ಸಂಗ ನನೆಯ ಶಿಶುವಿನಂತಿರಬೇಕು ಜ್ಞಾನಿಯ ಸಂಗ ಭಾನುವಿನ ಠಾವಿನಂತಿರಬೇಕು (ಮೋಳಿಮಾ. ೯೭-೩೮೫). ನನೆಯ ಸರ = ಪುಷ್ಪಬಾಣವನ್ನುಳ್ಳವನು; ಕಾಮ; ಮನ್ಮಥ: ನನೆಯ ಸರಂಗೆ ಚಿತ್ತದೆಡೆಯುಂ ಕುಡದಿರ್ದನ ಪೆಂಪು ಜಾಣ್ ಜಸಂ . . . ಕೂರ್ಪು ಪೊಡರ್ಪೆಸೆದಿರ್ಪುದು (ಶಾಂತೀಶ್ವ. ೬-೬೨). ನನೆಯ ಸರಲ್=ನನೆಯ ಕೋಲ್: ನನೆಯ ಸರಲ್ಗಳುಮಂ ಕರ್ಬಿನ ಬಿಲ್ಲುಮನೊಲ್ಲದಿಲ್ಲಿಗವತರಿಸಿದನಂಗನನೆಯ್ದೆ ಕಾಣ್ಬವೋಲ್ ಕಂಡು ನೃಪಕುಮಾರರ್ ಸ್ವಯಂವರಾಸೆಯನುಟಿದರ್ (ಶಾಂತಿಪು. ೫-೯೪); ನನೆಯ ಸರಲ್ಗಳಂತೆ ನೆಱೆದಿಂಗಳ ತಣ್ಗದಿರಂತೆ . . . ಲೋಲ ಲೋಚನರುಚಿ ಸುತ್ತಿಮುತ್ತಿದುದಶೇಷನೃಪಾಲಸಭಾಂತರಾಳಮಂ (ಪಂಠಾಮಾ. ೫-೭೦); ಕೃತ್ರಿಮ ವಿಹಗಾವಳಿ ಶುಕಪಿಕಮೆನಲಾ ಮಂಡಪಮತಿ ಶೋಭಿಸಿದುದು ನನೆಯ ಸರಲ ನೀಱನ ಕೇಳೀವನದಂದಮನನುಕರಿಸಿ (ಆಯಕಾ. ೪-೫೦).

[<ನನೆ$_2$./ತಮಿ. ನನೈ, ನಕೈ; ಕೊಡ. ತೊದ. ನನ್; ತೆಲು. ನನ]

ನನೆಕೇರ್ (ನಾ). ಮೊಗ್ಗಿನಿಂದ ನಿರ್ಮಿಸಿದ ಗೋಡೆ: ನನೆಕೇರಿಂ ಕಂಪಿನಣ್ಪಂ ಕುಸುಮಿತ ಲತಿಕಾದಂಡಸಂದೋಹದಿಂ . . . ಒಪ್ಪುವ ನವಸುಮನೋ ಮಂಡಪಕ್ಕೆಯ್ದೆವಂದಳ್ (ಲೀಲಾವ. ೧೦-೫೯). [ನನೆ$_3$ + ಕೇರ್$_1$]

ನನೆಕೊನೆ (ನಾ). ೧. ಚಿಗುರಿದ ಕುಡಿ; ಅಂಕುರ; ಮೊಳಕೆ: ನನೆಕೊನೆಯ ತಳಿರ ಪೂವಿನ ಬನಮನಿತುಂ ಶಿಖೆಗಳಳುರೆ ಬೆಂಕೆಯ ಪೊಂಕ್ದುರ್ವಿನೊಳೆ ಕೊರಗಿರ್ದ ಲತೆಗಳ ಕೊನೆಗೊನೆಯನೆ ದಹನನಳುರ್ದು ಕೊನೆಗೊನೆಗೊಂಡಂ (ಪಂಪಭಾ. ೫-೮೭); ಇಂದೊ ನಾಳೆಯೊ ಮತ್ತೆ ಮೈಯೆಲ್ಲ ನನೆಕೊನೆಯು

ಎಳೆಯುಂದುರಿ ನಿಂತರೂ ಒಣಗಿಲ್ಲ ವನವು (ಶಕುಶ್ರಾ. ೪೦-೨೩). ೨. (ಆಲಂ) ಹಿಗ್ಗು ; ಸಂತೋಷ ; ಆನಂದ : ನೆನಹು ನೆಮ್ಮಿತು ಶಿವನಿತರದ ನನೆಕೊನೆಯ ತೆರಳಿಕೆಯ ತೊಡಚೆಯ ಮನದ ಸಂಚಲವೀಚುವೋದುದು ಕಲಿಧನಂಜಯನ (ಕುಪ್ಪಾಅ. ೪-೪೨) ; ಒಂದರಿಂದಿನ್ನೊಂದು ಮನೆಗಿಲ್ಲಿ ನಡೆದರೇನೆ ವಿಜಯಯಾತ್ರೆಯ ನನೆಕೊನೆ ! (ಚಿಂತನ. ೬೭-೪). 'ನನೆಕೊನೆ ವೋಗು' ಪರಾ.

ನನೆಕೊನೆಯಾಗು = ವಿಕಸಿತವಾಗು ; ಅರಳು : ನಲ್ಲನೆ ನಗೆನುಡಿಗಾಱನೆ ಪೆಣ್ಗಲರ್ವಿಲ್ಲನೆ ನುಡಿ ಬಸಂತದೊಳು ಪಲ್ಲವಿಸುತೆ ನನೆಕೊನೆಯಾಯ್ತು ಚಿತ್ತಸುಘ{ವು}ಲ್ಲವಲ್ಲರಿ ಬಗೆಗಾಱ (ಪರ್ಧಶ. ೯-೨) ; ಭರತೇಶ – ಕುಸುಮಾಜಿಯರ ದಿವ್ಯಪ್ರಣಯವು ಸುರತದಲ್ಲಿ ನನೆಕೊನೆಯಾಗುತ್ತದೆ (ಶಶಾಪ. ೩೭೦). [ನನೆ$_3$ + ಕೊನೆ$_3$]

ನನೆಕೊನೆಯೇರು 'ನನೆಕೊನೆಯೇಱು' ನೋ.

ನನೆಕೊನೆಯೇಱು, ನನೆಕೊನೆಯೇರು (ಕ್ರಿ). ಚಿಗುರು ; ಕೊನರು ; ಮೊಳೆ ; ಅಂಕುರಿಸು : ಜನಕಜೆ ವತ್ಸದೀಪಕಲಿಕಾಕೃತಿಯಿಂ ಪುಗೆ . . . ನರೇಂದ್ರನಂದನರ್ಗೆ ಮನೋವಿಕಾರದೊಡನಂಗವಿಕಾರಮಂದೇಂ ಪೊದಟ್ಟುದೋ ನನೆಕೊನೆಯೇಱುವಂತೆ ವನರಾಜಿ ಮಂಥಪ್ರಥಮಪ್ರವೇಶ ದೊಳ್ (ಹಂಪಾಮ. ೩-೩೦). ನನೆಕೊನೆಯೇರು : ಇಂತಹರ ನೆನಹು ನನೆ ಕೊನೆಯೇರಿ ದ್ವಾರಶಿಲ್ಪದಿ ಚಿತ್ತವರಳುತಿರೆ, ಎತ್ತ ಹೊರಳಿದರು ನೂತನ ಸೃಷ್ಟಿ (ಸಿಲಮು. ೭೦-೯). [ನನೆಕೊನೆ + ಏಱು$_1$ (<ಏಱ್$_1$)]

ನನೆಕೊನೆವೋಗಿಸು (ಕ್ರಿ). ೧. ಚಿಗುರು ಮತ್ತು ಹೂವುಗಳಿಂದ ತುಂಬಿರುವಂತೆ ಮಾಡು. ೨. ಸಂತೋಷಗೊಳಿಸು ; ಹರ್ಷಪಡಿಸು : ವನದೊಳು ಚರಿಸಿ ವಸಂತನಾ ವನವ ಭೋಂಕನೆ ಚಿಗುರೇಱಿಸುವಂತೆ ವನಧಿಮಧ್ಯದ ಧರಣಿಯ ನಿನ್ನ ಸುಳುಹಿಂದ ನನೆಕೊನೆವೋಗಿಸು ನೃಪತಿ (ಧರಚ. ೨೦-೧೩). ೧, ೨ : ಮನಸಿಜಕಲ್ಪಲತಾನಂದನಮೆನೆ ಬಿಂಕಕ್ಕೆ ಕೊಂಕಿದಬಳಾಜನಮಂ ನನೆಕೊನೆವೋಗಿಸುತಿರ್ಪುದು ಮನುಜಮನೋಭವ ಭವದ್ವಿಲಾಸಮಂತಂ (ಯಶೋಧ. ೩-೩). [ನನೆಕೊನೆವೋಗು + – ಇಸು$_3$]

ನನೆಕೊನೆವೋಗು (ಕ್ರಿ). ೧. ಚಿಗುರು ; ಪಲ್ಲವಿಸು ; ಅಂಕುರಿಸು : ನನೆ ಕೊನೆವೋಯ್ತು ತನ್ನ ನನೆಯಿಂ ಮುದಮರ್ವಿಗೆ ತನ್ನ ಪುಷ್ಪದಿಂ ಮನಸಿ ಶಯಂಗೆ ಪುಷ್ಪಶರನೆಂಬ ಪೆಸರ್ ಬೆಳಗಿತ್ತು (ಜಗವಿ. ೧೪-೭೨) : ಮನಸಿಜ ಮತ್ತವಾರಣಮೊ ಕಾಮನ ಕಾರ್ಮುಕಗೇಹವೋ . . . ನನೆಕೊನೆವೋದ ಮಾಮರನೊ ಬೇಟೆನೆ ರಂಜಿಸುವತ್ತು ಮಾಮರಂ (ರತಕಾಂ. ೪-೮೬) ; ಬೀದಿ ವರಿದುದು ಬಿಂಕ ನನೆಕೊನೆವೋದುದಾಶಾಬೀಜ ಲಕ್ಷ್ಮಿಯ ಹೋದ ಮೂಗಿಗೆ ಕದಪ ಹೊಯ್ದನು (ಶಾಪ್ರಾಕ. ೦-೨೫) ; ನನೆಕೊನೆವೋದ ನವಾಮ್ರದ ನೆಳಲೊಳ್ ಮನವಂ ತನುವಂ ಬೇರ್ಕೆಯ್ದೊರ್ವಂ ಮುನಿಕುಲತಿಲಕಂ ಯೋಗದೊಳಿರೆ ಕಂಡಂ ಜಯಭೂಪವರನು (ಜಯಾಕಾ. ೯-೪೦). ೨. ಉಬ್ಬು ; ಉತ್ಸಾಹಿಸು ; ಹಿಗ್ಗು ; ಸಂತೋಷಗೊಳ್ಳು : ಅಂತು ಮೂರ್ಧಾ ಪ್ರಸಂಗನಾದ ವನ್ನಗವಶಾಕಂಗೆ ಶಿಶಿರೋಪಚಾರಕ್ರಿಯೆಗಳಂ ಮಾಟ್ಟು ಸಂಜಯನಿರವಂ ತತ್ಪರಿಜನಂ ಕಂಡು ಪೇಟ್ ಗಾಂಧಾರಿ ಮನದೊಳಗ್ಗೆ ಬಳ್ಳಿ ನನೆಕೊನೆವೋಗಿ (ಗಜಾಯು. ೩-೭೭ ಪ) ; ಪುತ್ರದೋಹಳದಿಂ ಸಮ ನಿಸಿದುದ್ದೀಪನಧಾರ{ವ}ಂಬವರ್ದಿನ ಮಟ್ಟಿಯಿಂ ಮಡಲ್ತು ನನೆ ಕೊನೆವೋಗೆ (ಅರ್ಧನೇ. ೧-೯೨ ಪ) ; ತನತನಗರ್ವ್ವತುಂ ಬಿಡದೆ ಕೊರ್ವುತೆ ಪರ್ವ್ವತುಮುರ್ವಿಯೊಳ್ ಕರಂ ನನೆಕೊನೆವೋಗಿ ಮಾಯೆ ಕೊಱಚಾಡದೆ ಮಾಣ್ಬುದೆ ಹಂಪೆಯಾಳ್ದನೇ (ಹಂಪಾಶ.೭೭); ಅನುಪಮಸಿದ್ಧನಾರ್ಯರುಗಳ್ ಪಿರಿದುತ್ಸವದಿಂದೆ ಬಂದು ತಜ್ಞನವಶಿಪುತ್ರನಂ ಸಚಿವಪುತ್ರನುಮಂ ನಡೆ ನೋಡಿ ಚಿತ್ತದೊಳ್ ನನೆಕೊನೆವೋಗಿ (ರಾಜಶೇ. ೯-೮೩) ; ನುಡಿಗಬ್ಬದ ಗಬ್ಬ ದುಬ್ಬರದಿಂ ನನೆಕೊನೆವೋಗಿ (ರಾಮಾಶ್ವ. ೧೫೫-೬).

[ನನೆಕೊನೆ + ವೋಗು$_1$]

ನನೆಗಣೆ (ನಾ). ಹೂವಿನ ಬಾಣ ; ಪುಷ್ಪಬಾಣ ; ಹೂಬಾಣ : ಅಂತು ತಿರುವಿಂ ಬರ್ದುಂಕಿದ ಕಂತುವ ನನೆಗಣೆಗಳಂತೆವೋಲ್ ನಡತಂದರ್ ಸಂತಸದೆ (ಪಂಪಭಾ. ೯-೧೦೧) ; ಬಾಲೆಯ ಕಡೆಗಣ್ಣೋಟಮೆ ಸಾಲದೆ ನನೆಗಣೆಗಳೇವುವೆಂದು ಮನೋಜಂ ಶೂಲಿಯ ನೊಸಲುರಿಗಣ್ಣಂ ಪೀಲಿಯ ಕಣ್ಣೆಂಬಂ (ಹಂಪಾಮಾ. ೩-೪೪) ; ನನೆಗಣೆಯಂ ಸ್ಮರಂ ಪಡೆದ [ಪೂಗೊ]ಳ ದಂತೆವೊಲಿರ್ದುದಚ್ಚಮಿಂಜಿನ ಸುಲಿವಲ್ಗಳ್ (ಅರ್ಧನೇ. ೨-೧೪) ; ನನೆಗಣೆ ನಡುಗುಂ ಕಾಮಿಗಳನೆಂಬ ಮಾತಿಲ್ಲಿ ಪುಸಿ ಪರಸ್ತ್ರೀರತರಂ ನನೆಯ ಮೊನೆ ಯುಂಬು ಮಲರಲಗಿನಂಬುಮಾ ಬನದೊಳಂರ್ಚಿ ನೋಯಿಪುದು ದಿಟಂ (ಪರ್ಧಪು. ೧೧-೨೬) ; ವಸಂತಂ ವಸಂತನಂ ಕಾಮಂ ಕಾಮನಂ ಇಕ್ಷುಚಾಪಂ ಇಕ್ಷುಚಾಪಮಂ ನನೆಗಣೆ ಸಾರ್ವಂತೆ ಪಾರ್ವತಿಯಂ ನವಯೌವನಂ ಸಾರ್ವಲ್ಲಿ (ಗಿರಿಕ. ೯-೭ ವ) ; ಜಕ್ಕುಲಿಪ ಮನದ ನನೆಗಣೆಯನರಸಿಗೆ ನೋಡೆ ಸಕ್ಕ ಸ್ಮವವೆನಿವ ರೂಹಿನ ಮೋಹನಂ ಜನಿಪ ಚಿಕ್ಕಹರೆಯದ ಬೆಟ್ಟದೆರಳೆಗಣ್ಮರಲ ಪೆಣ್ಮಕ್ಕಳೆಯ್ತಂದರೊಸೆದು (ಪದ್ಮರಾ. ೩-೭೭). [ನನೆ$_3$ + ಕಣೆ$_1$]

ನನೆಗಣೆಗೊನೆ (ನಾ). ಹೂಬಾಣಗಳ ತುಂದಿ ; ಪುಷ್ಪಬಾಣಗಳ ಮೊನೆ : ಆ ನನೆಗಣೆಗೊನೆಯಿಂದುದಯಿಸಿದುಗ್ರಾನಲನೊಳ್ಬುರಿಯೊಳು ತದ್ವಿರಹದ ಮಾನಿನಿ ಕಣ್ಗೆ ವಿರಾಜಿಸಿದಳ್ ಸ್ವಾಹಾವಧುವೆಂಬಂತೆ (ಜಯಾಕಾ. ೯-೪೨).

[ನನೆಗಣೆ + ಕೊನೆ$_3$]

ನನೆಗಣೆದೊಡು (ಕ್ರಿ). ಪುಷ್ಪಬಾಣವನ್ನು ತೊಡು ; ಹೂಬಾಣವನ್ನು ಹೊಡು : ಕವಿದೆನ್ನನಿಸಲೆಂದು ತಿರುವಿನೊಳು ನನೆಗಣೆದೊಟ್ಟು ಹದಿವಟ್ಟು ಕಂದರ್ಪನು ಸನ್ನದ್ಧನಾಗಿ ನಿಂದು (ಸೌಂದಪು. ೧೭-೪೩).

[ನನೆಗಣೆ + ತೊಡು$_1$]

ನನೆಗಣೆಯ (ನಾ). ಹೂವಿನ ಬಾಣಗಳನ್ನು ಹೊಂದಿದವನು ; ಕಾಮ ; ಮನ್ಮಥ : ನನೆಗಣೆಯನ ಕಣೆಗಳವೊಲು ಗೋಪರಂಗನೆಯರ ನಯನ ಮರೀಚಿ ತನುವಿನೊಳಗೆ ಪಸರಿಸಲಾ ತಾಪಸ ಮನವನಿತ್ತನು ಮನಸಿಜಗೆ (ಅಂಜಚ. ೨-೭೩); ಕಡುಚೆಲ್ವಂ ಪಡೆದನಾವಗಂ ನನೆಗಣೆಯಂ (ಶಬ್ದಿಕಾ. ೦೩೭) ; ನನೆಗಣೆಯನೊಲಿದರ್ಚಿಸುವ ಮೋಹನದ ಸಿರಿಯೋ ಕಬ್ಬುವಿಲು ಗಾಱನೆ ನಲವಿನಾರಾಧಿಸುವ ಮಂತ್ರಾಧಿದೇವತೆಯೋ (ಸಾಳ್ವಭಾ. ೨-೨೫) ; ನನೆಗಣೆಯನ ನೇಹದ ಜಾಳವೊ ಪೇಳೆನೆ ಗಣಕಾಜನವೆಸೆದುದು ಸೌವರ್ಣದ ಸೌಧದ ಮುಂಬಿನೊಳು (ಉದ್ಯಕೇ. ೪-೧೯). [ನನೆಗಣೆ + – ಅ$_7$]

ನನೆಗಪ್ಪಡ (ನಾ). ತೊಯ್ದ ವಸ್ತ್ರ ; ಒದ್ದೆಯಾದ ಬಟ್ಟೆ : ಮನಂದಣಿಯೆ ಚೊಕ್ಕಳದಿಂ ನೀರೊಳಾಡಿ ಮಿಂದು ಬಂದು ತಡಿಯನಡರ್ದು ನನೆಗಪ್ಪಡ ಮನುಟ್ಟಿದು ಪೊಸಸೀರೆಯಂ ನಿಱಿವಿಡಿದಿಟ್ಟು (ರಾಮಾಶ್ವ. ೦೨೪-೨).

[ನನೆ$_1$ + ಕಪ್ಪಡ]

ನನೆಗುದಿ, ನೆನೆಗುದಿ (ನಾ). ೧. ಅರ್ಧ ಬೇಯುವುದು ; ಹೆಚ್ಚಾಗಿ ನೆನೆದು ಪೂರ್ತಿ ಬೇಯದಿರುವುದು : ಹೊತ್ತುವುದು ಸರಿಯಹುದು ನನೆಗುದಿಯಹುದು . . . ಒಣಗಿಹುದು ದೋಷವಶನಕ್ಕೆಂಟು ತೆಱನಪ್ಪುದು (ಸೂಪಶಾ. ೩-೧). 'ನೆನೆಗುದಿಗೊಳ್' ಪರಾ. ನೆನೆಗುದಿ: ೨. (ಆಲಂ) ಪೇಚು ; ತಳವಳ : ಆತ ಈ ಕೆಲಸ ಮಾಡಬೇಕೋ ಬೇಡವೋ ಎಂದು ನೆನೆಗುದಿಯಿಂದ ಒದ್ದಾಡುತ್ತಿದ್ದ (ರೂಢಿ).

ನೆನೆಗುದಿಗೆ ಬೀಳು = ಅನಿಶ್ಚಿತವಾಗಿರು; ಅನಿರ್ಧಾರವಾಗಿರು; ಬಗೆ ಹರಿಯದಿರು : ಹೀಗೆ ಪ್ರಣಯ ನೆನೆಗುದಿಗೆ ಬಿದ್ದ ಮೂಲಕ ಕಿಟ್ಟಿ ಕಂಗಾ ಲಾದನು (ಗಂಮಾಯಿ. ೯೯) : ಸದ್ಯದ ಮಟ್ಟಿಗಂತು ಆ ವಿಲಾಸಭವನದ ನಿರ್ಮಾಣಕಾರ್ಯವು ನೆನೆಗುದಿಗೆ ಬಿದ್ದಿತು (ಸ್ಕೂಲಮಿ. ೩೯) ; ಅಮೇಲೆ ಮತ್ತೆ ಆಂದೋಲನವು ನೆನೆಗುದಿಗೆ ಬಿದ್ದ ಮೇಲೆ ತಂದೆಯ ಒತ್ತಾಯದ ಮೂಲಕ ಕಾಲೇಜು ಸೇರಿದ್ದು (ದಾಸಹು. ೮೯).

[ನನೆ$_1$ + ಕುದಿ$_3$]

ನನೆಗುದಿಗೊಳ್ (ಕ್ರಿ). ತಳಮಳ ಹೊಂದು : ಮನಸಿಜಕರೀಂದ್ರಕಟದೊಳ್ ಸೊನೆ ತೊಟ್ಟನೆ ಪುಟ್ಟುವಂತೆ ವಕಳಕ್ಕೆ ಪಸರ್ನನೆ ಪುಟ್ಟೆ ಬಿರಯಿಯೆರ್ದೆಗಳ್ ನನೆಗುದಿ[ಪಾಠಾಂ, ಡಿ]ಗೊಂಡವು ಬಸಂತಮಾಸದ ಪುಗಿಲೊಳ್ (ಮಲ್ಲಿಪು. ೫-೧೬). [ನನೆಗುಂದಿ + ಕೊಳ್$_1$]

ನನೆಗೈದುಗಾಱ (ನಾ). ನನೆಯೆಂಬ ಆಯುಂಧವನ್ನು ಹಿಡಿದವನು ; ಪರ್ಯಾಯ : ನನೆಗೈದುಗಾಱನೆಂದೆನಿಪ ಧೀವರ ದಿವಿಜ ದನುಜ ಮಾನುಜರ ಧೈರ್ಯವೆಂಬ ಮತ್ಸ್ಯಂಗಳಂ ತನಗೆ ವಸವಾಡಿಕೊಳಲು (ಸೌಂದಪು. ೦೨-೩೨). [ನನೆ$_3$ + ಕೈದುಗಾಱ (<ಕೆಯ್ದುಕಾಱ)]

ನನೆಗೊಂಬು (ನಾ). ಹೂವುಗಳಿಂದ ತುಂಬಿದ ರೆಂಬೆ,-ಕೊಂಬೆ : ಬಂಡನುಂಡು ನನೆಗೊಂಬುಗಳಂ ಮೊರೆದೇಱ್ಪ ಭೃಂಗಝಂಕಾರಮೆ ಪಾಟ್ಟುದಾರ ಭಟಗಂ . . . ಹರ್ಷಭಾರಮಂ (ಪಂರಾಮಾ. ೦-೧೦೮) ; ನನೆಗೊಂಬಂ ನೀಳ್ಳಿ ಚಂದ್ರಾತಪಮ ಪುದಿದುದೆಂಬನ್ನೆಗಂ ನೋಡಿ ಚಂದ್ರಾನನೆ ಪೂವಂ ಲೀಲೆಯಿಂದಂ ತಿಱಿಯೆ (ಮಲ್ಲಿಪು. ೬-೭೬) ; ನನೆಗೊಂಬಾಣತಿಮಾಡಿ ಪಾಡುವವೊಲಿರ್ದತ್ತು ಭೃಂಗಾಂಗನಾಧ್ವನಿಯಿಂದಂ (ಸೂಕ್ತಿಸು. ೦೦-೩೦).

[ನನೆ$_3$ + ಕೊಂಬು$_1$]

ನನೆಗೊಯ್ (ಕ್ರಿ). ಹೂವುಗಳನ್ನು ಕೀಳು,-ಬಿಡಿಸು,-ತಿರಿ : ತೆಗೆದು ನನೆಗೊಯ್ದು ಬಿಡೆ ಮೇಲೊಗೆವೆಳೆದಳಿರ್ಗೊಂಬು ಪೋಲ್ತುದಾ ಪೂವಿನ ಸೂಱೆಗೆ ತೊವಲಂ ಪಿಡಿದು ಮದಾಳಿಗಳುಲಿಯಂ ಪುಯ್ಯಲಿಡುವಶೋಕೆಯ ಶೈಯಂ (ಪಂದ್ರಪು. ೭-೦೦೦). [ನನೆ$_3$ + ಕೊಯ್]

ನನೆಗೋಲ್ (ನಾ). =ನನೆಗಣೆ : ನನೆಗೋಲ್ ನಟ್ಟು ಕೊನರ್ತವೊಲ್ಬುಳಕ ಮುಳ್ಮೆತ್ತಲ್ಲಿ ರಕ್ತಾಂಬುಗಳ್ ಪನಿವಂತೆರ್ದುವು ಘರ್ಮವಾರಿ (ಲೀಲಾವ. ೩೬೪) ; ಮಿಸುವೆನ್ನಯ ಪುರ್ವಿನ ಕರ್ವವಿಲ್ಲ ನೋಟದ ನನೆಗೋಲ ಲೀಲೆಯೊಳ್ ಸೋಲಿಸುವೆಂ ಜಿತಕಾಲಶೂಲಿಯಂ (ಗಿರಿಕ. ೭-೭೭) ; ನನೆಗೋಲ್ಮಬ್ಬಿನಬಿಲ್ಮದಾಳಿಕಾಳಲೇಶಾಮೌರ್ವಿಯೆಂಬರ್ಪುನೋಜನ ಬಿಲ್ಲಂ (ಅನಂಪು. ೯-೦೦) ; ಡೊನ್ನೊಡಲಂ ನಿಮಿರ್ಚಿದವಸಗ್ನಿಯ ತಣ್ಣಿದಿರಿಂದ ಮೋಹೊ ನೀನುನ್ನನೆಗೋಲ್ಗಳಂ ಸಿಡಿಲ್ಗೆ ಸಾಟಿಯನಾಗಿಪೆ ಪಂಚಸಾಯಕಾ (ಶಾಕುಂತ. ೩೨-೩೬). [ನನೆ$_3$ + ಕೋಲ್$_1$]

ನನೆಗೋಲ (ನಾ). =ನನೆಗಣೆಯಂ : ನನೆಗೋಲನಂಪಟಳದಲಿ ಭ್ರಾಂತಿಗೊಂಡಿರ್ದ ವನಚರ ಪೂತ ಸುಪಗೆಯ ಕೊನೆಗಳ ಮುಱಿದಿಡಲಂಜಿ ತಾಪಸರೆಲವನೆಗಾತಿಯರನಟ್ಟಿದರು (ಮೋಹತ. ೭-೦೫) ; ವಿನಯದಿ ಮಾತಾಡು ಮಳರಾಯ ನಿನ್ನಯ ತನಯಳಿಗೋಸುಗ ಬಂದ ಮನೆಯಳಿಯನ ಕೂಡೆ ಮಾಟ್ಟವೇಕೆಂದು ನನೆಗೋಲನಾತ್ಮಜ ನುಡಿದ (ಮೋಹತ. ೩೫-೨೮).

[ನನೆಗೋಲ್ + – ಅ$_7$]

ನನೆದಂಡೆ (ನಾ). ಹೂವಿನ ದಿಂಡು,-ಮಾಲೆ : ಗಂಡನಿಂದಲೇ ಗಂಳದಾಳಿ, ಅರಿಷಣ, ಕುಂಕುಮ, ಮಲ್ಲಿಗೆಯ ನನೆದಂಡೆ (ಕನ್ನಕಾ. ೦೨೨).

[ನನೆ$_3$ + ದಂಡೆ$_1$]

ನನೆದುಱುಗಲ್ (ನಾ). ಹೂವಿನ ಗೊಂಚಲು,-ಗುಚ್ಛ : ನೆಱೆ ಬಸಂತನ ಮದನಶರಕೆಂದೆಱಕಡೋವಿದ ಚೆಂದಳಿರ ನನೆದುಱುಗಲೊದವಿದಶೋಕೆಗಳು ಬನದೊಳು ವಿರಾಜಿಪವು (ಸಾಳ್ವಭಾ. ೨-೩).

[ನನೆ$_3$ + ತುಱುಗಲ್ (<ತುಱುಂಗಲ್)]

ನನೆದೊಡಿಗೆ (ನಾ). ಹೂವಿನ ಆಭರಣ,-ಅಲಂಕಾರ : ಇಂತು ಜಲಕ್ರೀಡೆಗೆಂದು ಕೊಳನಂ ಪೊಕ್ಕಲ್ಲಿ ನನೆದೊಡಿಗೆಯ ನಾಯಕಿಯರುಂ ತಿಲಕದ ಲಲನೆಯರುಂ . . . ಗಿರಿಜೆಯ ಚರಣಕಮಲಕ್ಕೆ ಭರದಿಂದೆಱಗುತ್ತುಂ (ಗಿರಿಕ. ೪-೨೦ ವ). [ನನೆ$_3$ + ತೊಡಿಗೆ (<ತೊಡುಗೆ)]

ನನೆದೋಱು (ಕ್ರಿ). ಮೊಗ್ಗನ್ನು ಹೊಂದು; ಮಯಂಗಳು ಬಿಡು: ಇದಿರೊಳ್ ನನೆದೋಱೆ ವಸಂತದೂತಿಯೆನೆ ತಾನೆ . . ನೆಗೞ್ದ ಮಾಧವಿಯೆನೆ ಸಂದದಿರ್ಮುತ್ತೆಯ ಪೂಗೊಂಚಲ ಪುದುವಿನೊಳೆಱಗಿದ ಮದಾಳಿಗಳ್ ಮಱೆದವುವೇ (ಆದಿಪು. ೧೦-೦೦೮) ; ದೇವಿ ನೀಂ ನಡಪಿದೆಳಲತೆ ನನೆದೋಱೆತೆಂದು ಬಿನ್ನವಿಸಿದ ಬಾಲಕಿಯರನಾಭರಣಪ್ರದಾನಾತಿ ಸನ್ಮಾನಂಗಳಂ ಸಂತೋಷಂಬಡಿಸುತಿರ್ದಳ್ (ಕಾಧಂಬಾ. ೨೫) ; ನನೆದೋಱುತ್ತು ವಸಂತದೂತಿ (ಮಲ್ಲಿಪು. ೫-೭) ; ಕಡವಲರ್ವೊತ್ತು ಮೊಲ್ಲೆ ಮುಗುಳ್ತೆತ್ತು ಪೊದಟ್ಟು ಪೊಲಂ ಪಸುರ್ತುವಾಸದಿ ಕುಡಿಯೋಱೆ ಮುತ್ತೆ ನನೆದೋಱೆ (ಕುಸುಮಾ. ೬-೦೩) ; ಮರುಗ ಮೊನೆ ನನೆದೋಱೆ ಸುರಗಿ ಜಾಜಿಯ ನನೆಗಳರಳಿ ಪರಿಮಳದಲೆಸೆಯಲ್ಕೆ (ಹಡಕಾ. ೩-೩೨) ; ಎಲೆ ಸುಲಿದೆಡೆಗಳ [ಕಣ್]ಕಣ್ಗಲೆಯೆಡೆ ಗಂಟೊಡೆದು ಮೊನೆಸಿ ನನೆದೋಱೆ[ಪಾಠಾಂ. ಕೊನೆದು] ಮುಗುಳ್ತಲರ್ದು ಮಱೆದುಂಬಿಗಂ ತೆಂಬೆಲರ್ಗಂ ಮುದ್ದಾದುವಲ್ಲಿ ಪೂಸ ಮಲ್ಲಿಗೆಗಳ್ (ಯಶೋಧ. ೪-೩). [ನನೆ$_3$ + ತೋಱು]

ನನೆನಾಱು (ಕ್ರಿ). ಹೂವಿನಿಂದ ಗಮಗಮಿಸು,-ಸುವಾಸನೆ ಬೀರು : ನನೆಯೆಳಗಂಪನೆತ್ತಿಯುಮಣಂ ನನೆನಾಱದರಲ್ದನೇಕಕೋಕನದ ವನಂಗಳೊಳ್ ಸುಱಿದು ತಣ್ಣಸಮಾಗದೆ . . . ತೀಡಿದುದು ತೆಂಕಣಗಾಳಿ ವಸಂತಮಾಸದೊಳ್ (ಪಂಪಭಾ. ೫-೩೪), [ನನೆ$_3$ + ನಾಱು$_1$]

ನನೆಬಿಜ್ಜಣಿಗೆ (ನಾ). ಹೂವಿನಿಂದ ಮಾಡಿದ ಬೀಸಣಿಗೆ: ನನೆಬಿಜ್ಜಣಿಗೆಯ ತಣ್ಣೆಲರಿನಾಱದುಯೆನ್ನ ತನುತಾಪ (ಹಡಕಾ. ಪರಿ. ೨೧೦).

[ನನೆ$_3$ + ಬಿಜ್ಜಣಿಗೆ]

ನನೆಮುಗುಳ್ (ನಾ). ಎಳೆಯ ಮೊಗ್ಗು ; ಹೊಸ ಮೊಗ್ಗು : ನನೆಮುಗು [ಪಾಠಾಂ. ಗ]ಳ್ ಕೊನೆಮುಗಳ್ಬಿರಿದಿರ್ ಮುಗುಳ್ಗಳಂ ತನಗಂಪು ತೀವಿರ್ದ ಪೊಚ್ಚಪೊಸಪೂಗಳಂ ಕೊಂಡು ಕುಕಿಲಿಱಿವುತಂ ನಡೆತಂದು (ಪುಷ್ಪರ. ಹ. ೫೨-೨೭) ; ನನೆಮುಗುಳ್ ನನೆಕುಸುಮ ವಸುಗಾಯ್ . . . ತೊನೆದು ತೂಗುವ ಫಲಭರಂಗಳ ಘನತರದ ಸಹಕಾರ ಸಹ ಸುರವನಕದಂಬಕ ವೆಸೆದುದಿದಿರಲಿ ಕಪಿಕುಲೇಶ್ವರನ (ತೂರಕಾ. ೫-೩ ೧೯).

[ನನೆ$_3$ + ಮುಗುಳ್$_2$]

ನನೆಮೊನೆ (ನಾ). ಮೊಗ್ಗಿನ ತುಂಡು,-ಅಗ್ರಭಾಗ : ತೋಳಿನೊಳೊಱಗಿದಿನಿಯಳ ಕರ್ಣಪೂರದೊಳೆಱೆಯ ಕತ್ತುರಿರಸವ ನನೆಮೊನೆಯಿಂದ ಲೇಖಿಸಿದ (ಸಾಳ್ವಭಾ. ೦೬-೦).

ನನೆಮೊನೆಯಾಗು = ಚಿಗುರು : ನನೆಮೊನೆಯಾಗಿ ಬಂದುವೆಳಮಾವೆಳ ಮಾವಿನ ಮುಂಚಿ ಬಂದ ಪೂವಿನ ಪೊಸಗೊಂಚಲೊಪ್ಪಿದುವು (ಶಾಂತಿಪು. ೭-೦೨೫). [ನನೆ$_3$ + ಮೊನೆ$_1$]

ನನೆಯಂಬ (ನಾ). = ನನೆಗಣೆಯಂ : ನನೆಯಂಬಂ ತಾವರೆಪೂವಿನ ಕೈಪೊಡೆಯಿಂ ಮನೋಭವಂ ತೊಡೆವವೊಲಾ ವನಿತೆಯ ಸಬಾಷ್ಪಲೋಚನ ಮನವನಿವಿಡಿ ಶೋಣಪಾಣಿತಳದಿಂ ತೊಡೆದುಂ (ಮಲ್ಲಿಪು. ೯-೦೬) ; ಹೂವಿನ ಬಿಲ್ಲನೊಚ್ಚತಂಗೊಂಡರ್ಚಿಸುತ್ತಿರ್ಪ ನಿಡುವುರ್ವಿನ ನೀಱೆಯರಿಂ ನನೆಯಂಬಂ ಕೆಯ್ಗೊಯ್ದ ಸವಿನೋಟದ ಸಾಧಾರಣೆಯರಿಂ (ಗಿರಿಕ. ೭-೦೦ ವ) ; ನೀನೀ ಪೂವಿನ ಪೊಱಲೊಳ್ ನನೆಯಂಬನೆಂಬರಸಾದೆ (ಕಬ್ಬಿಗಾ. ೩೦೯) ; ಸೊಕೆವೆಮ್ಮರಾಂತು ಕತ್ತುರಿಗಂಧಿ ಬರೆದಳು ನನೆಯಂಬನ ಚಿತ್ರಪಠವ ವಿನಯದೆ ಕೈಕೊಂಡು ಬಂದಳು ಸ್ಮರವರತನಯನ ಶಯನ ಸ್ಥಳಕೆ (ಮೋಹತ. ೫೯-೫೩). [ನನೆಯಂಬು + – ಅ$_7$]

ನನೆಯಂಬು (ನಾ). = ನನೆಗಣೆ : ಮೊನೆಯಂಬುಗಳೊಳೆ ಪುಣ್ಣಪಸನಿಬರುವಂಂ ಕಿಱಿದು ಬೇಗದಿಂ ಹರಿಗನದರ್ಕನಗೆಡೆವೇಟ್ಟುವೆಂ ಎಂಬವೊಲನಿಬರುವಂಂ ಪುಣ್ಣಾನ[ತಪಂ] ನನೆಯಂಬುಗಳಿಂ (ಪಂಪಭಾ. ೫-೫೨) ; ನನೆಯಂಬಂ ಮಿಗೆ ಕಣ್ಬಳಿಲ್ ಮಕರವ್ಯಂ ಕ್ರೋಡಧ್ವಜಂ ಪೋಲೆ (ಗದಾಯು. ೦-೬) ; ಮನೋಜಂ ನನೆಯಂಬನಿಂದಿಸೆ ತದಸ್ತ್ರಾಘಾತಜಾತಾನಿಲಂ ನಿಮಿರ್ದೋರಂತಳುರಲ್ಕೆ ಹೃತ್ಕುಟಿಯ ನಾ ಕಂದರ್ಪರಾಜೇಂದ್ರನಾ

(ಕುಸುಮಾ. ೧೧-೧೧೦); ಧೈರ್ಯದ ಜೋಡ ತೊಟ್ಟಿದಿರಾಗಿ ನಿಲೆ ನನೆಯಂಬು ನಾಟುವುವೆ (ಕುವಾ೩ಅ. ೮-೩೫); ಎನ್ನ ನನೆಯಂದಿನ ಮೊನೆಗೆ ಸುಗಿದಹಲ್ಕೆಯಂ ನೀವೆ ಶರಣ್ಮೊಕ್ಕುದೇನಜಿಯದುದೇ ! (ರಾಮಾಶ್ವ. ೫೬-೦೦). [ನನೆ೩ + ಅಂಬು೩]

ನನೆಯಕ್ಕೆ, ನೆನೆಯಕ್ಕೆ೧ (ನಾ). ೧. ನೆನೆಯಿಸಿದ ಅಕ್ಕೆ ; ನೀರಿನಿಂದ ಒದ್ದೆ ಮಾಡಿದ ಅಕ್ಕೆ : ಮನೆಯ ಸಾರಿಸಿ ರಂಗವಲ್ಲಿಯನಿಕ್ಕಿ . . . ನನೆಯಕ್ಕಿ ಕಡಲೆ ಪಣ್ಯಾರದಿ[ಪಾಣಾಂ. ನನೆಯರಳ್ದರಳಂಬ ಪುಣ್ಯಹರು] ನಿಖಿಲಾರ್ಚನೆಯ ವಸ್ತುಗಳ ಸಾರ್ದಿರು (ಕೋಚಕ. ೧೮-೮೨). ೨. ಶುಭಕಾರ್ಯಗಳಲ್ಲಿ ಆಶೀರ್ವಾದಕ್ಕಾಗಿ ಉಪಯೋಗಿಸುವ ಅಕ್ಷತೆ : ತೀರ ತೊಟ್ಟಿಲೊಳಿಟ್ಟು ಪಣ್ಣ ನನಗೆ ನನೆಯಕ್ಕಿಯನಿಕ್ಕಿ ಪಣ್ಣ ದಾಯಿನವನಣ್ಣವಳಿಯದೆ ಕೊಟ್ಟು ಚೂತವಲ್ಲಭನೆಂಬ ವೆಸರಿಟ್ಟು (ಗಿರಿಕ. ೨-೭೧ ಪ). **ನೆನೆಯಕ್ಕೆ**೧ : ೧. ನೆನೆಯಕ್ಕೆ ನೆನಗಡಲಿ ಗೊನೆಯ ಬಾಳೀಹಣ್ಣು . . . ತಗೊಂಡು ಗಂಗವ್ವ ಪೂಜೆಗೈದಾರ (ಕೋಳಗೀ. ೦೩೨). 'ನೆನಗಡಲೆ' ಪರಾ.

[ನನೆ೧ + ಅಕ್ಕಿ೧]

ನನೆಯಿಕ್ಕು, ನೆನೆಯಿಕ್ಕು (ಕ್ರಿ). ತೋಯಿಸು; ಒದ್ದೆಮಾಡು; ನೆನೆಹಾಕು : ನನೆಯಿಕ್ಕಿದ ಕಡಲೆಯ ತುರಗನಿಕಾಯಕ್ಕೆಱಿದು ಕಟ್ಟುವುದು (ಅಶ್ವಶಾ. ೬-೫೭). **ನೆನೆಯಿಕ್ಕು** : ಗರುಗದ ಸೊಪ್ಪಿನ ರಸದಲ್ಲಿ ಎರಡು ವರಹ ತೂಕ ಚೂರ್ಣವ ನೆನೆಯಿಕ್ಕಿ ಬೆಲ್ಲವ ದೆರೆಸಿ ಕೊಡಲು ಪಾಂಡುರೋಗ, ಕ್ಷಯರೋಗ ತರಿಹರ (ಪ್ರಥ್ವಸಾ. I, ೩೩೬). [ನನೆ೧ + ಇಕ್ಕು]

ನನೆಯೆಸಟ್ (ನಾ). ೧. ಹೂವಿನ ಎಸಳು, -ದಳ. ೨. ಹೂವಿನ ಚಿತ್ರ, -ಕಸೂತಿ,-ನಕ್ಷೆ : ನನೆಯೆಸಟಂದಮಾದ ಗುಟಮುಂ ಪೊಳೆಯುತ್ತಿರೆ ನೀಳ್ದುವೆಶ್ಮ ಪೂವಿನ ಪೊಸಟಿಕ್ಕೆದುಂ ವಿಳಿರೆ . . . ಮೆಲ್ಲನೆ ನಡೆತಂದು ವಂದು ಪೊಸಮಾವೆನಿವ್ವುಗ್ಗಡದಗ್ಗದಾನೆಗಳ್ (ಕಬ್ಬಿಕಾ. ೩೦೨).

[ನನೆ೩ + ಎಸಟ್]

ನನೆಯೇಱು (ಕ್ರಿ). ಹೂವು ಬಿಡು ; ಹೂವು ತಂಬು : "ನನೆತುದೆನೆ ನನೆಯೇಱಿದುದು" (ಶಬ್ದಮಂ. ೩೨); "ನನೆತೂದು ನನೆಯೇಱಿದುದಂದೆನುತಂ" (ಕವಿಕಂ. ೭೭) ; ನನೆಯೇಱಿದ ಮಲ್ಲಿಗೆಯಂತೆ ಪೂರ್ಣಚಂದ್ರನ ಸಿರಿಯಂತೆ ... ರುದ್ರಭಟ್ಟನ ಕವಿತಾರಸಂ ಮನಮನಿರ್ಕುಬಿಗೊಳ್ವುದು ಸಜ್ಜನರ್ಕಳಾ (ಜಗವಿ. ೧-೧೩) ; ಎಮಱೆ ಮುಗಿಲಿದಿರೇಱಿ ನಿಶಿ ಹರುಷವೇಱೆ ನನೆಯೇಱಿ ಕುಂದವ್ರಜಕೆ ಕಡಲರ ಸಿರಿಯ ಸೊಂಪೇಱೆ (ಸಾಳ್ವಭಾ. ೩೭-೦೫); ಪಳೆಯೆಲೆಯಿಕ್ಕಿ ಸಣ್ಣನನೆಯೇಱಿದ ಪಾಟಲಿವೂವನಾಂತು ಕಂಗೊಳಿಸುವ ಕರ್ಣಿಕಾರ ಮಲರ್ದೀವಿದ ಮುತ್ತಮದೆತ್ತ ನೋಳ್ಪೊಡಂ (ರಾಜಶೇ. ೯-೪೭) ; ಬನಂ . . . ನನೆಯೇಱಿದ ಸುರಯಿಯಿಂ, ಬಕುಳದಿಂ, ಸಿರಿಸದಿಂ, ಪುನ್ನಾಗದಿಂ, ಸೊಗಯಿಸಿ ತೋರ್ಕುಂ (ರಾಮಾಶ್ವ. ೫೬-೨೨).

[ನನೆ೩ + ಏಱು೩ (< ಏಱ್೩)]

ನನೆಯೊತ್ತು (ಕ್ರಿ). ೧. ಅರಳು ; ವಿಕಾಸವಾಗು ; ಮೊಗ್ಗು ಹೊರಬರು : ಶಿವಾಚಾರಲತೆ ನನೆಯೊ[ಪಾಣಾಂ. ವ]ತ್ತೆ (ಸೋಮಕ. ೧-೭೩) ; ನನೆಯೊತ್ತೆ ವಿಸುಪ ಮಲ್ಲಿಗೆ ನನೆಯೊತ್ತುವುದತನುಸತಿಯು ಲಾವಣ್ಯರಸಾಧಿನವನದಿ ಸುರಭಿಗಂಧದಿನೆನಸುಂ ಶೀವಿದೊಡೆ ಶೀವುವುದು ತೊದಳ್ಂಟೇ (ಪಾಶ್ವ೯ಪು. ೯-೫೬). ೨. (ಆಲಂ) ಸಂತಸಗೊಳ್ಳು : ಧರ್ಮಜನು ಸುರಮುನಿ ಸೂಕ್ತಿಸುಧಯಂಭಪೇಕದಲಿ ನವೆಯೊಶ್ತಿದಂತಃಕರಣನಾಗಿ ನಡೆತಂದು (ನಿಭಾಗ. ೧ ೯-೪೩). [ನನೆ೩ + ಒತ್ತು೩]

ನನೆಲತೆ (ನಾ). ಹೂವು ಬಿಟ್ಟ ಬಳ್ಳಿ ; ಹೂಬಳ್ಳಿ : ಚಾಮರದಿಂ ಬೀಸುವ ಬೀಸುಗಾಳಿಯ ತಣ್ಪಿನಿಂ ತೊಯ್ದು ನನೆಲತೆಗಳ ಮೇಳದ ಮನ್ನೆಯ ಕನ್ನೆಯರ ಲತಾಂಗಂಗಳೊಳ್ ಲಾವಣ್ಯರಸವಿಸರದ ಬಿಂದುಗಳ್ ತಳೆದೋಱುವುವು (ಲೀಲಾವ. ೪-೦೭ ಪ). [ನನೆ೩ + ಲತೆ]

ನನೆವಾಸು೩ (ನಾ). ತೊಯ್ದ ಹಾಸಿಗೆ ; ಆರ್ದ್ರವಾದ, ತಂಪಾದ ಹಾಸಿಗೆ : ತನುವಲ್ಲದತನುತಾವಂ ತನುವಂ ಸಂಡೆ ನಿಲಿಸಲೆಂತುಮಾಱದೆ ತನುವಂ ತನುವುಧ್ಮೆಯರಲರ್ವಾಸಿನ ನನೆವಾಸಿನ ಮೇಲೆ ಪಾಸಿದರ್ ತನುತನುವಂ (ಮಲ್ಲಿಪು. ೩-೩೩). [ನನೆ೩ + ವಾಸು೩]

ನನೆವಾಸು೩ (ನಾ). ಹೂವಿನ ಹಾಸಿಗೆ; ಪುಷ್ಪಶಯ್ಯೆ : ನನೆವಾಸೆನೆ ಮುಕ್ತಿನ ಪಸೆ ಮನಸಿಜನೆನೆ ಕುವರನಲ್ಲಿ ನೆಲಸಿರೆ ಲಜ್ಜಾವನತಾಂಗಿ ಕೆಲದೊಳಿಳುಪಿದ ನನೆವಿಲ್ಲಿನೆ ಸುಗುಣವತಿ ಕರಂ ಮೆಜಿದಿರ್ದಳ್ (ರಾಜಶೇ. ೩-೭೧). [ನನೆ೩ + ವಾಸು೩]

ನನೆವಿಲ್ (ನಾ). ಹೂವಿನ ಬಿಲ್ಲು ; ಹೂಬಿಲ್ಲು ; ಪುಷ್ಪಚಾಪ : ಪುರಿಂತಾದುವು ಪೂವಿನಂಬು ನನೆವಿಲ್ ನಿಸ್ಸಾರವಾದತ್ತು (ಪುಷ್ಪಪು. ೧-೦೯) : ನನೆವಿಲ್ಲನೆತ್ತುವಂತೆ ನನೆಯ ನಿಡಿಯ ದಂಡೆಗಳಂ . . . ಎತ್ತುವ ಮಾಲೆಗಾರ್ತಿಯರ ಕಟಾಕ್ಷಕುಸುಮವಾಲೆಗಳಂ ಸೌಂದರ್ಯಧನದಿಂ ಮಾಱುಗೊಳುತ್ತಿರಸಂ ಬರೆವರೆ ಪೂವಿನ ಸಂತೆಯಿಂ ಪೊಱಗೆ (ಲೀಲಾವ. ೪-೩೬ ಪ); ನನೆವಿಲ್ಲಂ ಬಿಟ್ಟು ವಿದ್ಯುಲ್ಲತೆಯ ತಿಱುವುಳಿಯಿಂದ್ರ ಕೋದಂಡಮಂ ಕೊಂಡು . . . ಮೊಲ್ಲೆಯ ನನೆಗಣೆಯುಂ ತೂಗುತುಂ ಕಂತುವೀಬಂದಂ (ಜಗವಿ. ೪-೩೦) ; ನನೆವಿಲ್ಲಿನ್ನಣೆಯೋವಳಿರ್ವ ವಧುವಾ ಕಾಂತಾಕಚಶ್ರೀಣಿಗೊಯ್ಯನೆ ಮುಂದಿಕ್ಕಿದ ಚಂದನಾಂಬುವನಲಂಪಂದೆತ್ತು ತಾಂ ಪಿಂಡಿದಳ್ (ಕಾದ೬ಪ. ೯-೩೦) ; ನನೆವಿಲ್ಗಾಹಿಡಿವೆದೆಯೇಱುವ ಪೋಲ್ವ ನಿತಾಮಣಿಯಂತೊಪ್ಪುವ ರೂಪಿಗೆ ವಿನಂಗುವ ವಿಾಱುಂದೌವನವೇಱಿ ವಿರಾಜಿಸುತಿರೆ (ಜಯಕಾ. ೩-೪೪) : ನನೆವಾಸೆನೆ ಮುಕ್ತಿನ ಪಸೆ ಮನಸಿಜನೆನೆ ಕುವರನಲ್ಲಿ ನೆಲಸಿರೆ ಲಜ್ಜಾವನತಾಂಗಿ ಕೆಲದೊಳಿಳುಪಿದ ನನೆವಿಲ್ಲಿನೆ ಸುಗುಣವತಿ ಕರಂ ಮೆಜಿದಿರ್ದಳ್ (ರಾಜಶೇ. ೩-೭೧). 'ನನೆವಿಲ್ಲಿ' ಪರಾ.

ನನೆವಿಲ್ಲ ಬಲ್ಲಹ = ಹೂಬಿಲ್ಲಿಗೆ ಒಡೆಯನಾದವನು ; ಪುಷ್ಪಬಾಣ ಪ್ರಯೋಗದಲ್ಲಿ ಶೂರನಾದವನು ; ಕಾಮ ; ಮನ್ಮಥ : "ನನೆವಿಲ್ಲ ಬಲ್ಲಹನೆನಲ್ ಪೂವಿಲ್ಲ ಕಾವಂ" (ಕರ್ಣಾನಿ. ೪) ; ಅವನ ಪಜ್ಜಳಿವ್ಪ ಜಸವೆಣ್ಣೆಸೆಯೊಳ್ ನೆಲಸಿರ್ಪುದಾತನೀಗಾವಗಮೆನ್ನ ಜಾಣ್ಮುಡಿಗೆ ಮೆಯ್ಸಿರಿಯಂ ನನೆವಿಲ್ಲ ಬಲ್ಲಹಂ (ಕಬ್ಬಿಕಾ.೦) ; ಜಗದ್ವಳಯುವನದಟಲೆದು ನುರಿದು ಕೋಟಲೆಗೊಳಿಸುವ ನನೆವಿಲ್ಲ ಬಲ್ಲಹನ ದಿಗ್ವಿಜಯಕ್ಕಾಗಿ . . . ಬೆಳಗುವಚ್ಚ ಬೆಳ್ದಿಂಗಳ್ ಪಿರಿದುಂ ಪೆರ್ಚಿ ಬಿಚ್ಚದೆ ನಿಬಿಡವಾಗಿ ಬಿಡದಡರ್ದು ಕೆದಱಿ ನಾಂದು ಪೊದಱುಗಟ್ಟಿ ವರಕಲಿಸಿ ಪಸರಿಸುತ್ತುಮಿರೆ (ಕಾಧಪು. ೧೫-೩೦ ಪ) ; ಇದು ಕುಸುಮಾಸ್ತ್ರನಸ್ತ್ರವಿದು ದರ್ಪಕನಾರ್ಪು ಮನೋಜ ನೋಡಿ ನೋಡಿದು ನನೆವಿಲ್ಲ ಬಲ್ಲಹನ ಬೆಲ್ವಿದು . . . ಎಂದೆನಿಸಿರ್ದುದು ರೂಪು ನೀಱಿಯಾ (ರಾಜಶೇ. ೬-೬೬). **ನನೆವಿಲ್ಲ ಬೀರ** = ನನೆವಿಲ್ಲ ಬಲ್ಲಹ : ಬಂದು ಬಸಂತನೊಲ್ದು ಸಂವರಣೆಯನೆಯ್ದೆ ತೋಱಿ ತಲೆದೂಗಿಪುದಂ ನನೆವಿಲ್ಲ ಬೀರನಾ (ಕಬ್ಬಿಕಾ. ೩೦೦). **ನನೆವಿಲ್ಲಾತ** = ಪುಷ್ಪಧನುಸ್ಸನ್ನುಳ್ಳವನು ; ಕಾಮ ; ಮನ್ಮಥ : ನನೆವಿಲ್ಲಾತನ ಮುಕ್ಕಣ್ಣನ ತಕ್ಕಂ ನೋಡ ವೇಟ್ಟುಮೆಂದೊಲವಿಂದು ತನತನಗೆ ಬಂದು ಮುಗಿಲೊಡ್ಡಿನ ಕೆಲದೊಳ್ ಸಗ್ಗದವರ್ಗಳೆಲ್ಲರ್ ನಿಂದರ್ (ಕಬ್ಬಿಕಾ. ೩೮೯). [ನನೆ೩ + ಬಿಲ್೩]

ನನೆವಿಲ್ಲ (ನಾ). ೧. ಹೂವಿನ ಬಿಲ್ಲುಳ್ಳವನು ; ಕಾಮ ; ಮನ್ಮಥ : ನನೆವಿಲ್ಲನೆಸೆವ ಬಿರಿದಿನ ನಾಟಕವ ಬಿಂಕವನೆ ಕಂಡನೆಂದು ಕಳವಳಿಸಿ ಮುಂಗಳಿ ತನ್ನ ತನುಜೆಯುಂ ಪಲ್ಲಕಿಯೊಳಿರಿಸಿ ಶಂಭುವನು ಬೀಳ್ಕೊಂಡು ಮನೆಗೆಯ್ತಂದಳು (ಸೌಂದಪು. ೮-೦೮) ; ಪೊಸ ಕವ್ಮಂಗಳವೆಯ ತೆನೆಯ ತುದಿಯ ತನಗೆಂವಂ ಭುಂಜಿಸಲೆನುತನುರಾಗದಿನವಱೊಳ್ಕುಳ್ಕಿರ್ದಾಅತಿ ವಸುಳಿಗಳು ಅನುವಂ ಪಡೆದುವು . . . ನನೆವಿಲ್ಲನ ವಸುರ್ಗಾವಿನ ವಿಗಸೊಕ್ಕಿನ ಪೊಸಮಿಂಟೆಯೆನೆ (ಜಯಕಾ. ೦-೩೯) ; ಖಳನೀ ನನೆವಿಲ್ಲಂ . . . ನಲ್ಲಂ ತೊಲಗಿದ ಪದದೊಳಗೆನ್ನೊಡಲಲ್ಲಿ ನಡುವವೊಲೆರಳ್ಕಯ್ಯುಣಿಸಿ

ನಿಲ್ಲದೆ ಮನವನೆಸುತ್ತಿರ್ದವನೆಂದಳ್ವಿರಹಿಣಿ ಸಖಿಯೊಳ್ (ಉದ್ಯಕೀ. ೪-೩೫). ೨. [ಜೈನ] ಬಾಹುಬಲಿ; ಕಾಮ: ಎತ್ತಿ ನೀನಣ್ಣನೊಡನೆ ಕಾದಿದಾಗ ತೊಂಭತ್ತಾಱುಸಾವಿರ ಹೆಣ್ಣ ಚಿತ್ತ ನೋಯದೆ ನಮಗೆಂಟುಸಾವಿರಕಳ ಲೊತ್ತದಿಹುದೆ ನನೆವಿಲ್ಲಾ (ಭರತ. ೫೦-೪೫). [ನನೆವಿಲ್ + – ಅ$_7$]

ನನೆವೂ (ನಾ). ಬಿರಿದ ಹೂವು; ವಿಕಸಿತ ಕುಸುಮ: ತೋಳ ಮೊದಲ್ನನೆ ಪೂವನೆತ್ತುವಂತಿರೆ ನನೆಯಂಬುಗಳ್ಗೆ ಬೆರಲೆತ್ತುವರಲ್ಲಿಯ ಮಾಲೆಗಾರ್ತಿಯರ್ (ಪಟ್ಟಿಪು. ೨-೫೯). [ನನೆ$_2$ + ಪೂ$_2$]

ನನೆವೂದುಱುಗಲ್ (ನಾ). ಅರಳಿದ ಹೂವುಗಳ ಗೊಂಚಲು,–ಗುಚ್ಛ: ತಳರ್ಗಳನೊಂದು ಕೊಂಬು ನನೆವೂದುಱುಗಲ್ಗಳನೊಂದು ಕೊಂಬು . . . ತಳೆದಿಂತು ಮನೋಹರಮಾಯ್ತು ಮಾಮರಂ (ಕುಸುಮಾ. ೧೦-೧೫೫).

[ನನೆವೂ + ತುಱುಗಲ್ (< ತುಱುಂಗಲ್)]

ನನೆವೆರಸು$_1$ (ಕ್ರಿ). ಮೊಗ್ಗುಗಳಿಂದ ಕೂಡಿರು; ಪುಷ್ಪಭರಿತವಾಗಿರು: ನನೆವೆರಸಿದಸುಗೆದಳಿರುಳ್ಬಡೆಯ ವೇಣುವಿಂ ಜನಿಸಿದ ನವೀನಮುಕ್ತಾಫಲದ ಮೂಗುತಿಯ . . . ನಿತಂಬಿನಿಯರತಿಹರುಷದಿಂ ರಂಜಿಸಿದರು (ಸೌಂದಪು. ೦೯-೦೯). [ನನೆ$_3$ + ಬೆರಸು$_1$]

ನನೆವೆರಸು$_2$ (ಅ). ಹೂವುಗಳಿಂದ ಕೂಡಿಕೊಂಡು; ಪುಷ್ಪಸಹಿತವಾಗಿ: ನನೆವೆರಸು ಗುಜ್ಜಮಾವಿನ ಕೊನಗರ್ಗಳನುಡಿದುಡಿದು ನೀಡೆ ಬೇಟದ ಪಿಡಿಯೋಂ ಮನವೊಸೆದು ಮೇವುತಿರ್ದುದೊ ವನಕರಿ ಪರಿದಂತೆ ದಂತಹಸಿತ ಕಟಾಕ್ಷಂ (ಅರ್ಧನೇ. ೫-೯೪); ನನೆವೆರಸುಟ್ಟು ಮಾಂದಳಿರನೊಪ್ಪಿರೆ . . . ಓಪನಿಗೆ ಪುಳಿಂದಿ ಪಾಡಿದಳೊಱಲ್ದು ಗುಣಪ್ರಿಯನಂಕಮಾಲೆಯಂ (ಲೀಲಾವ. ೮-೩೦). [ನನೆ$_3$ + ಬೆರಸು$_2$]

ನನೆವೆಱು (ಕ್ರಿ). ಮೊಗ್ಗುಗಳನ್ನು ಪಡೆ; ಮುಂಗುಳು ಬಿಡು: "ನನೆತುದೆಂದು ನನೆವೆತ್ತುದು" (ಕಶಾ. ೯-೦೮೯); ತನಯಂ ಬಂದಾ ವಾರ್ತೆಗೆ ತನುಪುಳಕದ ತೆಕ್ಕೆವೆತ್ತು ಶಿಶಿರದ ಸೋಂಕಿಂ ನನೆವೆತ್ತೊಪ್ಪುವ ಮಾಲತಿಯನೆ ವಿಜಯಾವತಿ ಸಮಂತು ಪೋಲ್ಪೆಸೆದಿರ್ದಳ್ (ಕುಸುಮಾ. ೧೫-೯೮). [ನನೆ$_3$ + ಪೆಱು$_1$]

ನನೆವೊಯ್ (ಕ್ರಿ). ೧. ಚಿಗುರು; ಪಲ್ಲವಿಸು: ತನಿಗರ್ಬನ ಸೋರ್ವ ರಸಪ್ರವಾಹದಿಂದವೆ ನನೆವೊಯ್ದು ಕಾಯ್ತುಱುಗಿ ಪಣ್ತುದು ಮಾಮರಂ (ಲೀಲಾವ. ೬-೧೩೮). ೨. ಉಂಟುಮಾಡು; ಹೊಮ್ಮಿಸು: ಪನಿಪುಲ್ಲಂಬು ಕಣಂಗಳಂ ಕೆದಱುತುಂ ಕೋಕಂಗಳೊಳ್ ರಾಗಮಂ ನನೆವೊಯ್ದುಣ್ಮಿಸುತುಂ . . . ತಣ್ಣನೆ ತೀಡಿತ್ತೆನಸುಂ ಪ್ರಭಾತಸಮಯಪ್ರೋದ್ಭೂತಶೀತಾನಿಲಂ (ಕುಸುಮಾ. ೧-೫೨). [ನನೆ$_3$ + ಪೊಯ್$_2$]

ನನೆವೊಱ್ (ನಾ). ಹೂವುಗಳ ಭಾರ; ಪುಷ್ಪಭಾರ: ನನೆವೊಱ್ಯಿಂ ಬಳ್ಕಿದ ಮಾವಿನ ಕೊಂಬಿನೊಳಳಿಯ ಮಾಲೆ ಮೊರೆಯುತ್ತಂ ಪೂವಿನ ಬಿಲ್ಲನತನು ಜೇವೊಡೆದನುಗೆಯ್ದೇಱಿಸುವ ಚೆಲ್ವನೇಂ ಬೀಱಿದುದೋ (ಪಾರ್ಶ್ವಪು. ೯-೫೩). [ನನೆ$_3$ + ಪೊಱ್]

ನನೆವೋಗು (ಕ್ರಿ). ಮೊಗ್ಗು ಬಿಡು; ಮೊಗ್ಗಾಗು: ಅಧೀಶವಚನಕದಂಬಕಮಂಬೊಂದು ತೆಂಕಣೆಲರೊಳ್ ನನೆವೋಯ್ತಂಬಿನವಾಕೆಯ ತನುಲತೆ ತುಂಬಿದುದತಿಬಹಳಪುಲಕವಿವುಲಶ್ರೀಯಿಂ (ಆದಿಪು. ೬-೩೦).

[ನನೆ$_3$ + ಪೋಗು$_1$]

ನನೆಸು, ನೆನಸು$_1$, ನೆನೆಸು$_2$ (ಕ್ರಿ). ಒದ್ದೆಯಾಗುವಂತೆ ಮಾಡು; ತೋಯಿಸು; ಆರ್ದ್ರಗೊಳಿಸು: ನಾರದ ಕಲಹತಾತ್ಪರ್ಯದೆ ತರಳ ಕುಮಾರನ ಕೊಂದೆ ನೀನೆನುತೆ ಮಾರಮಾತೃಕೆ ರುಕ್ಮಿಣಿ ಸತ್ಯಭಾಮೆ ಕಣ್ಣೀರಿಂದ ನನೆಸಿದರೊಡಲ (ಮೋಹತ. ೩೬-೨೦). **ನೆನಸು$_1$**: ಆಪ್ಲಾವಃ, ಅಪ್ಲವಃ, ಸ್ನಾನಂ–ಸ್ನಾನದ ಹೆಸರು. ತಲೆ ಮುಂತಾದ ಸರ್ವಾಂಗವನ್ನು ನೀರಿನಲ್ಲಿ ನೆನಸಿ ತೊಳೆಯುವಿಕೆ (ಸಿದ್ಧಾಂತಿ. ೨೦೬). **ನೆನೆಸು$_2$**: ಭಟ್ಟಿನಿಯ ಕಣ್ಣುಗಳಲ್ಲಿ ನಾನು ಒಂದು ಅಪೂರ್ವಮಾಧುರಿಯನ್ನು ಕಂಡೆ . . . ಆ ದೃಷ್ಟಿ ನನ್ನನ್ನು ಅಭಿನವರಸದಲ್ಲಿ ನೆನೆಸುತ್ತಾ, . . . ಒಂದು ಅನನುಭೂತ ಜಗತ್ತಿಗೆ ಎಳೆದೊಯ್ಯಿತು (ಭಾಗಿಅ. ೩೦೯). [ನನೆ$_1$ + – ಸು$_1$]

ನನೆಹ (ನಾ). ನೆನೆಯಂವಿಕೆ; ಒದ್ದೆಯಾಗುವಿಕೆ; ತೇವಗೊಳ್ಳುವಿಕೆ: "ತೇಮ ಸ್ತೇಮ ಸಮುಂದನ ಈ ಮೂಱು ನನೆಹದ ಹೆಸರು" (ನಾಕೋಶಾ. ೪).

[ನನೆ$_1$ + – ಹ$_3$]

ನನ್ನಗ (ನಾ). ಒಬ್ಬಾತನ ಹೆಸರು: ನ × ಗರಮಪ್ಪ ವಯಚಯನ್ ತುರಗಗೊಳ್ಳಾಗಿ ದುಗ್ಗದರಸನುಂ ತೊದಳ್ದು ವೇಳೆಯವನಾಳು × ವಱಿಯುತ್ತಂ ಬಪ್ಪುದ ನನ್ನಗನ್ನಾದೆ (ಸೌಇಇ. IX-1, ೨೨-೬ : 928). [?]

ನನ್ನಪ (ನಾ). ಒಬ್ಬಾತನ ಹೆಸರು: ಆಹವಶೌಂಡವೀರನುದಾರಂ ಕಣ್ಣವ ಭಾರದ ನನ್ನಪನೃಪಂ ಮಹಸಾಮಂತಂ (ಎಇ. IX, ಚನ್ನಪ. ೧೪೧-೦೮ ; 900?). [<ನನ್ನಿ ? + ಅಪ (<ಅಪ್ಪ$_1$)]

ನನ್ನಯ್ಯ (ನಾ). ಒಬ್ಬಾತನ ಹೆಸರು: ಶ್ರಿಮತ್ಪೆರ್ಮ್ಮನಂಗೆಗ್ಗೆ ವಿದ್ಯಾಧರಯ್ಯಂ ಬಿನ್ನವಂಗೆಯ್ದು ನಗರಲ ನನ್ನಯ್ಯನ ದೇಗುಲಕ್ಕೆ ಮುಕ್ತೆರೆಯು ಪಡೆದು ಕೊಟ್ಟಂ (ಎಇ. III, ನಂಜನ. ೧೫೫-೫ ; 970).

[<ನನ್ನಿ ? + ಅಯ್ಯ$_1$]

ನನ್ನಾನನ್ನಿ, ನನ್ನಾನಿನ್ನಿ (ನಾ). ಸಣ್ಣಸಣ್ಣದುಂ; ಚೂರುಚೂರಾದುದುಂ; ಪುಡಿಪುಡಿ: ಸನ್ನಾಹಭೀರಿಗಳುನ್ನಾದದಿಂ ದೆಸೆ ನನ್ನಾನನ್ನಿಯಾಗೊಡೆಯ ತನ್ನ ಮೋಹರಗೂಡಿ ಚೆನ್ನರಾಮುಗ ಶೌರ್ಯದುನ್ನತಿಕೆಯೊಳೆಯ್ದುದನು (ಕುರಾಸಾಂ. ೧೨-೨೬); ಚೆನ್ನೆಯ ನಿಟ್ಟಿಸಿ ಕಾವನಂಬಿಂ ನನ್ನಾನನ್ನಿಯಾದರು ನೋಟಕರು (ರಾಮವಿ. ೬-೧೪೨). **ನನ್ನಾನಿನ್ನಿ**: ಬಿನ್ನಣದಿಂದೆಚ್ಚರು ರಿಪುಭಟರೆರ್ದೆ ನನ್ನಾನಿನ್ನಿಯಪ್ಪಂತೆ (ಕಂಪ್ರಸಾಂ. ೯-೫೩).

[←ಹಿಂ. ನನ್ನಾ, ನನ್ನಾ]

ನನ್ನಾನಿನ್ನಿ 'ನನ್ನಾನನ್ನಿ' ನೋ.

ನನ್ನಾರಿ (ನಾ). ಒಂದು ಬಗೆಯ ಸಸ್ಯ; ಸೊಗದೆ: ಸುಗಂಧೀದೇರು, ಸೊಗದೇಬೇರು, ನಾಮದ ಬೇರು, ನನ್ನಾರೀಬೇರು (ಮೃಜಿಗಿ. ೪೨-೮೪೦).

[ದೇ.॥ ತಮಿ. ಮಲ. ನನ್ನಾರಿ]

ನನ್ನಿ (ನಾ). ೧. ಸಹಜವಾದುದುಂ; ವಾಸ್ತವವಾದುದುಂ; ಸತ್ಯ; ದಿಟ; ನಿಜ; ನಿಶ್ಚಯಂ: "ಸತ್ಯದೊಳ್ ನನ್ನಿಯಕ್ಕುಂ" (ಕರ್ಣಾನಿ. ೫೧); "ನನ್ನಿ ಸಾಜ ನೆನಸುಂ ದಿಟಮೆಂದುಸಿರಲ್ಕೆ ಸತ್ಯಮಕ್ಕುಂ" (ಕವಿಕಂ. ೦೨೦); "ನಿಶ್ಚಯದೊಳಂ ನನ್ನಿಯೊಂದಕ್ಕು" (ಕಕರ. ೫೩) ; ನನ್ನಿಯನೀ ಪಲ್ಲವಮೆನೆ ಸನ್ನುತರೂಪಿಂ ವಿಪರ್ಯಯೋಪಮಮಕ್ಕುಂ (ಕವಿರಾ. ೩-೬೨); ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ (ಪಂಪಭಾ. ೧೪-೬೪); ಅನೃತಂ ಲೋಭಂ ಭಯಮೆಂಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂದನ ನನ್ನಿ ಚಾಗಮಣ್ಮೆಂಬಿನಿತರ್ಕಂ ನೀನೆ ಮೊತ್ತಮೊದಲಿಗನಾದೆ (ಗದಾಯು. ೫-೧೭) ; ಇನ್ನರ ನುಡಿ ಕನಸಿನೊಳಂ ನನ್ನಿಯೆನಲ್ ಕೇಳ ದಿವ್ಯಪುರುಷಂ ಪ್ರತ್ಯಕ್ಷಂ ನಿನ್ನ ಮುಂದೆ ನುಡಿಯಲ್ಕಿನ್ನುಮದೇನೆಂಬೆ ಸಂದೆಗಕ್ಕೆಡೆಯುಂಟೇ (ಕಾದಂಪೂ. ೯೪೫) ; ಅನ್ನವನು ಇಕ್ಕುವದು ನನ್ನಿಯನು ನುಡಿಯುವದು ತನ್ನಂತೆ ಪರರ ಬಗೆದಡೆ ಕೈಲಾಸ ಬಿನ್ನಾಣವಕ್ಕು (ಸರ್ವಜ್ಞ. ೬೦೩) ; ಏವಣ್ಣೆಪೆನ್ನ ಮನದ ನನ್ನಿಯ ನೆಲೆಯಂ (ಚಿಕವಿ. ೩-೯೬). ೨. ಸತ್ಯವಂತಿಕೆ; ಸತ್ಯಸಂಧತೆ: ನೆನೆಯದಿರೆಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ . . . ಕರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನವಾಲ್ತೆ ಭಾರತಂ (ಪಂಪಭಾ. ೧೨-೨೧೭) ; ನನ್ನಿ ವಿನಯಂ ನಯಂ ಜಯಮುನ್ನತಧೃತಿ ಸತ್ವಮೆಂಬ ರಾಜಗುಣಂಗಳ್ ನಿನ್ನೊಳ್ ನೆಲಸಿದುವಿನ್ನುಂ ಮುನ್ನಂ ನಿನ್ನನ್ನರೊಳರೆ ರಾಜಕುಮಾರಾ (ಲೀಲಾವ. ೪-೩೭) ; ದಿಟಂ ನನ್ನಿಯುಳ್ಳವನೆಂದು ಬಗೆದು ಬೇಡಿದೆನುತ್ತಮದ್ವಿಜರು

ಕೊಂಬುದೆಂದು (ಹಡಕಾ. ೧೦-೨೦). ೩. ಅಕ್ಕರೆ; ಪ್ರೀತಿ; ವಿಶ್ವಾಸ: ಎನ್ನ ಭವತಿಮಿರಭಾನುವೇ . . . ಎನ್ನ ನನ್ನಿಯೆಯೆನ್ನ ಚೆನ್ನಿಗನೆಯೆನ್ನ ಗತಿಯೇ ಮತಿಯೇ ಧೈತಿಯೇ ಪತಿಯೇ (ಪದ್ಮಕಾ. ೭-೩೯); ತನ್ನರಸಿ ವರಚಂದ್ರಮತಿಗೆ ವಿಭಿನ್ನ ನಾಲಕು ಜಂಬುಫಲವನು ನನ್ನಿಯಿಂದಿತ್ತಾಗ ಸುರಸೆಗೆ ಕೊಟ್ಟನೊಂದುವನು (ಸಂಭವ. ೧೯-೫೦); ನಿನ್ನಂಗಸಂಗಮನ ಗಲ್ದಾಯ್ತು . . . ಎಂತು ಸೈರಿಪರೊ ಕಾಂತನೊಳ್ನನ್ನಿಯುಳ್ಳರಸಿಯರ್ ದ್ರೌಪದಿ ಸುಭದ್ರೆಯಂರದೆಂತುಳಿವರಕಟೆಂದರು (ಜೈಮಿಭಾ. ೨೩-೫೯); ಬಲ್ಗಾಲಂಬಿಡಿದು ನೀನೆ ಗತಿಯೆಂದು ನನ್ನಿಯಿಂ ನಂಬಿದಳಂ ಮಱಿದು ಸವತಿಯೊಂದು ಪಿಸುಣ್ಗೆ ಎಱೆಯಂ ಮಾಱುವೋದಂ (ರಾಮಾಶ್ವ. ೨೨-೮); ೪. ಕೊಟ್ಟಮಾತು; ಭಾಷೆ; ವಚನ; ಪ್ರತಿಜ್ಞೆ: ಕಿಡುಗುಮೆ ರಾಜ್ಯಂ ರಾಜ್ಯದ ತೊಡರ್ಪದೇವಾಟ್ಟೆ ಬಾಟ್ಟೆ ನನ್ನಿಯ ನುಡಿಯಂ ಕಿಡೆ ನೆಗಟೆ ನಾನು ಮೆರಡಂ ನುಡಿದೊಡೆ ಹರಿಹರಹಿರಣ್ಯಗರ್ಭರ್ ನಗರೇ (ಪಂಪಭಾ. ೧-೮೨); ಮದುವಯ ದಿವಸದಂದು ಬರವೇಟ್ಟುದು ನೀನೆಂದೆನ್ನನಂದು ನೀಂ ಚದುರ್ಗಿಡೆ ನುಡಿದೊಡಾಂ ನುಡಿದ ನನ್ನಿಗೆ ವಂದೆಂ (ಸುಕುಮಾ. ೭-೨೨); ನಿನ್ನಂ ಬಿಡಿಸಿದಪೆಂ ನಂಬೆನ್ನಂ ಸಂದೇಹಮಿಲ್ಲವೆಂದೊಲವಿಂದಂ ನನ್ನಿಯನೀಯೆ (ದಶಕು. ೮-೨೮೪); ಪುಸಿ ಪೊಂದದ ಪೊಸನುಡಿಯಂ ವಸುಮತಿಯೊಳ್ ನುಡಿಯಲಕ್ಕುಮಿಾ ನೃಪಸುತನಂತಸುವಳಿಗುಮೆಂಬ ಬಗೆಯೊಳುಮುಸುರುವ ನನ್ನಿಗಳ ನಾಯಕರ್ಪೆಱರೊಳರೇ (ರಾಜಶೇ. ೧೪-೨೧). ೫. ಒಳ್ಳೆಯದಂ; ಸರಿಯಾದಂದಂ; ಸಮಂಜಸವಾದಂದಂ: ನಿನ್ನಂ ತನ್ನೊಳ್ ಭೇದಂ ಮಾಡದೆ ನಲ್ಮೆಯನೆಸಗದ ನೀಱನೊಳು ಕೆನ್ನಮಿದಿರನಱಿಯದೆ ಹೋರುವುದಿದು ನನ್ನಿಯೆ (ಜಯಕಾ. ೭-೫೦). ೬. ಚೆಲುವು; ಅಂದ; ಸೌಂದರ್ಯ.

ನನ್ನಿ ಕಂದರ್ಪ = ಚೆಲುವಿನಲ್ಲಿ ಮನ್ಮಥನಂತಿರುವವನಂ; ಒಂದಂ ಬಿರುದು: ಸ್ವಸ್ತಿಶ್ರೀ ಸಾಮನ್ತರಾಮನ್ನಣ್ಣಿಕನ್ದರ್ಪ ಸಿರಿವುರದೊ ಅಣ್ಣಿಗನೊಳ್ ಕಾದಿ ಸತ್ತ ಅರಕೆಲ್ಲನ ಮಗ (ಮೈಆರಿ. ೧೯೩೨, ೩೭-೨; ಸು. 950). ನನ್ನಿಗಾಶ್ರಯಂ = ಸತ್ಯಕ್ಕೆ ಆಶ್ರಯನಾದವನಂ; ಒಂದು ಬಿರುದು: ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಪಲ್ಮವಾತ್ಮಯಂ ನನ್ನಿಗಾಶ್ರಯಂ ಶ್ರೀಮತು ಅಯ್ಯಪದೇವಂ ರಾಜ್ಯಂಗೆಯ್ಯೆ (ಎಕ. XI, ಚಿತ್ರದು. ೬೨-೫; 918). ನನ್ನಿ ಚಳುಕಿ = ಸತ್ಯವಂತನಾದ ಚಾಲುಕ್ಯ; ಒಂದು ಬಿರುದು: ಚಾಳುಕ್ಯಕರ್ಣ್ಣಮಹಾರಾಜಂ ಧರಣೀಲೋಕಾಶ್ರಯನಭಿಮಾನಗಳ್ಳನಹಿತರ ಗಣ್ಡಂ ಮಾವನ ಗನ್ಧವಾರಣಂ ನನ್ನಿಚಳುಕಿ ಶ್ರೀಮತ್ ರಾಜಾದಿತ್ಯ (ಮೈಆರಿ. ೧೯೩೫, ೪೦-೫೧; 950?). ನನ್ನಿನಾರಾಯಣ = ಸತ್ಯಕ್ಕೆ ನಾರಾಯಣನಂತಿರುವವನು; ಸತ್ಯರಕ್ಷಕ; ಸತ್ಯಪಾಲಕ; ಒಂದು ಬಿರುದು: ಇನ್ತು ನನ್ನಿನಾರಾಯಣಂ ಸಮ್ಯಕ್ತ್ವರತ್ನಾಕರಂ . . . ಎನಿಸಿ ಶ್ರೀಮತ್ತ್ವಡೆವಳ್ಳ ತೈಲಪಯ್ಯಂ ಮಾಸವಾಡಿನೂಱನಾಲ್ವತ್ತುಮಂ ಬೀಳವೃತ್ತಿಯಿನಾಳುತ್ತುಮಿರೆ (ಸೌಇಇ. XI-1, ೫೨-೩೫; 1007). ನನ್ನಿಮಹಾರ್ಣವ = ಸತ್ಯಕ್ಕೆ ಸಾಗರದಂತಿರುವವನಂ; ಒಂದು ಬಿರುದು: ವೀರಶ್ರಿಣೇತ್ರನುಂ ನನ್ನಿಮಹಾರ್ಣ್ಣವನುಂ ಕನ್ದುಕಪುರನ್ದರನುಮೆನಿಸುವ ವೀರಾಗ್ರಣಿಯ ಪರಾಕ್ರಮಮೇದೊರೆ (ಸೌಇಇ. XI-1, ೫೨-೦೪; 1008). ನನ್ನಿ ಮಾಡು = ದಿಟ ಮಾಡು; ಸತ್ಯವನ್ನಾಗಿಸು; ಸಾಬೀತುಗೊಳಿಸು: ಪೆಣನನಿಱಿದು ಪಗೆಗೊಂಡರೆಂಬ ನಾಣ್ಣುಡಿಯಂ ನನ್ನಿ ಮಾಡಿ (ಪಂಪಭಾ. ೦೨-೨೯ವ); ಅಂತು ಪವಡಿಸಿದ ಪರಮೇಶ್ವರಂಗೆ ಮನೋಗತಮಲ್ಲದ ಕಾಮಿನಿಯಂತೆ ಯಾಮಿನಿ ತನ್ನ ಕ್ಷಣದಾಭಿಧಾನಮಂ ನನ್ನಿ ಮಾಡಿ (ಶಾಂತಿಪು. ೦೦-೧೫೫ ಪ); ಕಳ್ಳಂಗೆ ಬೆಳ್ದಿಂಗಳ್ ಸೊಗಸದೆಂಬ ನಾಣ್ಣುಡಿಯಂ ನನ್ನಿ ಮಾಡಿ (ಧರ್ಮಾಮ್ಯ. ೨-೧೨೪); ಪ್ರಾರಬ್ಧಸ್ಯಾಂತಗಮನಂ ಮಹಾಪುರುಷಸ್ಯ ಲಕ್ಷಣವೆಂಬ ನಾಳ್ನುಡಿಯಂ ನನ್ನಿ ಮಾಡಿ (ಸೌಇಇ. IX-;, ೨೭೩-೮೭; 1179); ಪರಮಾತ್ಮನಂ ಧ್ಯಾನಿಸುವೊಡಂತರಾತ್ಮನೊ ಪರಮಾತ ನಕ್ಕುಮೊಯೆಂಬ ಸಮಯತ್ವಮಂ ನನ್ನಿ ಮಾಟ್ಟೆನೆಂಬಂತೆ ಪಗಲುಮಿರುಳುಂ ವಸುದೇವನನೇ ಧ್ಯಾನಿಸುತ್ತಿರೆ (ಬಂಹರಿ. ೧-೫೬ ವ). ನನ್ನಿಮಾರ್ತಂಡ = ಸತ್ಯವನ್ನು ಪ್ರಕಾಶಪಡಿಸುವ ಸೂರ್ಯನಂತಿರುವವನಂ; ಒಂದು ಬಿರುದು: ಶ್ರೀನನ್ನಿಮಾರ್ತ್ತಣ್ಡ ಪಟ್ಟಳಿಗೆಯ ಎಱೆಯಂಗರಸನ ಮಗ ಚಿಣ್ಣಮ್ಮರಸ (ಮೈಆರಿ. ೧೯೪೩, ೨೭-೦; 1080). ನನ್ನಿಯ ಗಂಗ = ಒಬ್ಬಾತನ ಹೆಸರು: ಸತ್ಯವಾಕ್ಯ ರಾಚಮಲ್ಲಪೆರ್ಮ್ಮಾನಡಿ ಪ್ರಿಥುವೀರಾಜ್ಯಂಗೆಯ್ಯುತ್ತಂ × × × ನನ್ನಿಯ ಗಂಗನ ಪರಿ ಬನ್ದು ಬೆಳ್ಗೆಱೆಯಂ ಕುನ್ದೂರುಮನಿಱಿದು ಹೋಗೆ (ಎಕ. XII, ತಿಪಟೂ. ೫೫-೦; ಸು. 880); ಶ್ರೀಮತ್ ಪಿಟ್ಟುವಿಪತಿಯ ಮಗ ನನ್ನಿಯ ಗಂಗನಣ್ಣಿಯೆಂಬ ಗಣ್ಡ ಬೀರನೊಟಮ್ಬಂ ತಾಗಿ ಶಾನ್ತರ ನೆಱೆಯರಟ್ಟಿದೊಡೆ (ಎಕ. X, ಗೋರೀಬಿ. ೪-೧೦, ಸು. 920); [ನ] ನ್ನಿಯ ಗಂಗಂ ಬೂತಯ್ಯಂ ಪುರಿಗೆಱೆ ಮೂನೂಱುಂ ಬೆಳ್ವೊಲ ಮೂನೂಱು ಮನಾಳುತ್ತಿರೆ (ಸೌಇಇ. XI-1, ೩೭-೫; 946); ಜಯಲಿಕ್ಷ್ಮೀಪತಿ ಮಾರಸಿಂಗನನುಜಂ ಸತ್ಯಪ್ರಿಯಂ ಸನ್ದ ನನ್ನಿಯ ಗಂಗ ಕ್ಷಿತಿಪಾಳಕಂ (ಎಕ. VII, ಶಿವಮೊ. ೪-೭೧; 1122). ನನ್ನಿಯ ಮೇರು = ಒಂದು ಬಿರುದು: ಸ್ವಸ್ತಿ ಶ್ರೀಮನ್ಮಹಾಪ್ರಭು ನಂನಿಯ ಮೇರು ಕಲಿಕಾಲ ಧರ್ಮ್ಮರಾಜ ಕಬಾಹು ನಾಡಾಳುವ . . . ಬಾಚೆಯ ಹಳ್ಳಿಯ ಗಂಡನಾರಾಯಣಸೆಟ್ಟಿಯರು (ಎಕ. VI(B), ಕೃಷ್ಣರಾ. ೭೭-೩; 1179). ನನ್ನಿವೆಡಂಗ = ಸತ್ಯದ ಬೆಡಗುಳ್ಳವನಂ; ಒಂದು ಬಿರುದು: ನನ್ನಿವೆಡಂಗಂ ತನ್ನಟ್ಟಿಯೆ ಕೊಟ್ಟು ಕೆಱೆಗೆ ಯಶಮಂ ಪಡೆದಂ (ಕಇ. II, ೪-೫; 918).

[ದೇ.ಕ ತಮಿ. ನನ್ಱಿ, ನನ್ಱು; ಮಲ. ತೆಲು. ನನ್ನಿ]

ನನಿ ಕರ್ತಾರ, ನನ್ನಿಕಾರ್ತರ (ನಾ). ಒಬ್ಬಾತನ ಹೆಸರು. ಬಾಧಪರಿಹಾರಮ್ ನನ್ನಿಕರ್ತಾರ ಭಟರರ್ಗೆ ಧಾರೆ ಎಱೆದು ಕೊಟ್ಟಮ್ (ಮೈಆರಿ. ೧೯೦೬, ೦೩-೧೮; 900). ನನ್ನಿಕಾರ್ತರ: ಸರ್ವ್ವಬಾದಾಪರಿಹಾರ ನನ್ನಿಕಾರ್ತ್ತರ ಭಟರರ್ಗೆ ಎ × × × ಱೆದು ಕೊಟ್ಟ (ಎಕ. III, ಮೈಸೂರು. ೩೭-೫; ಸು. 990 ?). [ನನ್ನಿ + ಕರ್ತಾರ]

ನನ್ನಿಕಾರ್ತರ 'ನನ್ನಿಕರ್ತಾರ' ನೋ.

ನನ್ನಿಕಾಱ (ನಾ). ಸತ್ಯವಂತ; ದಿಟವಂತ; ಸತ್ಯನಿಷ್ಠ; ದಿಟಗಾರ: ಕಾಯಕ್ಲೇಶದಿನಡವಿಯ ಕಾಯಂ ಪಣ್ಣುಮನುದಿರ್ಪಿ ತಿಂದಗಲದೆ ನಿಂದೀಯಮಳರಾವ ತೆಱದಿಂ ನೋಯಿಸರೈ ನಿನ್ನ ನನ್ನಿಕಾಱನ ಮನಮಂ (ಪಂಪಭಾ. ೭-೪೮); ಹುಸಿಯಂ ಹುಸಿಮಾತಂ ಸೈರಿಸನೆಂದುಂ ನಂನಿಕಾಱ ನಂನಿಗೆ ಸಂತಸವೆಯ್ದುವನಿಂತಿದು ಭಾವಿಸೆ ಹಬ್ಬೆಯನಾಯಕಂಗೆ ಸಲೆ ಸಹಜಗುಣಂ (ಕಇ. I, ೨೫-೪೮; 1186); ಮುನ್ನೆಲ್ಲರಂ ಸಾಡುವ ಕಾಡಾವುದೆಂದು ನೋಳ್ಪನ್ನೆಗಂ ಹಲವು ಕೆಲವುರಿಯ ಬಳಗಂ ಕಂಡು ನನ್ನಿಕಾಱಂ ಕಾವ ಕಾಡತ್ತ ನಡೆವಾಗ (ಹಡಕಾ. ೧೨-೩೧); ನನ್ನಿಕಾಱರ ದೇವ ಕೇಳ್ಸಾಕಿನ್ನೆನಗೆ ಸಾಮ್ರಾಜ್ಯಸುಖಸಂಪನ್ನತೆಯ ಸೌಭಾಗ್ಯ (ತೊರರಾ. ೧-೫-೦೭).

[ನನ್ನಿ + – ಕಾಱ]

ನನ್ನಿಗ (ನಾ). = ನನ್ನಿಕಾಱ: ನಿನ್ನನ್ನೆನೆದಾವೊನ್ನನ್ನಿಗ ಜಱುಚಿಲ್ಲದ ಜಾಗಿಗಳಾಣ್ಮ ಎನ್ನಯ ಮೊಗ ಮುಂದೇ ಬನ್ನಂದೆತ್ತೆನ್ನಯ ಬಿನ್ನಪಮಂ ಮನ್ನಿಸು (ಉದ್ಯದೇ. ೩-೨೯); ನನ್ನಿಗರಿಂಪುಗಾಱರಿನಿವಾತುಗರ್ . . . ತನ್ನೊಡನಾಡೆ ನಾಡೆ ನಲಿಗುಂ ಚಿಕದೇವನೃಪಂ ಕೃಪಾಕರಂ (ಟಿಕವಿ. ೫-೧೧೦); ಇಂತೊಂದು ಮಾಟ್ಕೆಯಿಂ ಪೊಱನಲ್ಮೆಯಂ ಕವಡುಗಾರ್ತಿಯ ಕಲ್ಲೆರ್ದೆಯೊಳ್ ನಾಂಟದ ನಾಡಾಡಿ ನನ್ನಿಗ ಚೆನ್ನಿಗನ ಮನೋರಥದೊಂದು ಹಯದ ಕಾಲ್ಗಳಂತಿರೆ ಕಲ್ಲೊಳ್ ಕೀಲಿಸಿರ್ಪುದುಂ ಕಂಡು (ರಾಮಾಶ್ವ. ೧೩೭-೫); ನಿಮ್ಮವರ ನನ್ನಿಗರ ಹಿಂದು ಸಿಖ್ ಮುಸಲ ಹರಿಜನರ, ನಿಮ್ಮೊಲವು ಧೀರ ಮಾನವತೆಯೇ ಅಡಿಗಡಿಗೆ ಕಾಡಿತ್ತು, ಬೆನ್ನಟ್ಟಿ ಬೇಟೆಯಾಡಿತ್ತು (ಆಮತಂ. ೨೧-೬).

[ನನ್ನಿ + – ಗ್ಯ]

ನನ್ನಿಗೆಡು (ಕ್ರಿ). ಮಾತು ತಪ್ಪು ; ಭಾಷೆ ತಪ್ಪು ; ಸುಳ್ಳಾಡು : ನಾಣ್ದೊಱೆದು ನನ್ನಿಗೆಟ್ಟೊಗಡಿಸದೆ ನಾನಾವರ್ಣದೆಂಜಲ ಶಿಂಡು ಬಾಳುವ ಗನ್ನಗತಕದ ವೇಶ್ಯೆಯರ ಸುಡಲಿ (ಜೀವಂಜ. ೬-೩೬) ; ನನ್ನಿಗೆಟ್ಟೆಂತು ನುಡಿವರೆ ಸಲ್ಲದಿದು ನೀನು ಖಿನ್ನನಾಗಿರದೆ ಭಜಿಸೈ ಪಾರ್ವತೀಶ್ವರನ (ಸೌಂದಪು. ೬-೫) ; ಎನ್ನ ರಾಜತೇಜಕರಸ ನನ್ನಿಗೆಡಲು ಮೂಱು ತಪ್ಪಿನಿಂ ನರೇಶನೆಡೆಯ ಬಿಡುವೆನೊಪ್ಪಿದಡೆ ಗಡ (ಮದೇಪು. ೨೨-೫೭). [ನನ್ನಿ + ಕೆಡು$_1$]

ನನ್ನಿಗೆಯ್ (ಕ್ರಿ). ನಿಜಗೊಳಿಸು ; ಸಾಬೀತುಗೊಳಿಸು ; ಸತ್ಯವನ್ನಾಗಿಸು : ಬಿಸಿಯೆಲ್ಲಮಂ ಕೆದರೆ ಚಳಿಯದಂ ಕುದುರೆ ಮೇಣ್ ಬೆಸುಗೆಯೊಳ್ ನೆಲೆ ನಿಲ್ವದಂ ನನ್ನಿಗೆಯ್ದಂ (ಕಾಲೂರ. ೧೩೭-೨೬೮). [ನನ್ನಿ + ಕೆಯ್$_1$]

ನನ್ನಿಗೊಡು (ಕ್ರಿ). ಭಾಷೆ ಕೊಡು ; ಮಾತು ಕೊಡು : ಪಿರಿಯದೊಂದು ಮನೆವಾಟ್ತೆಯುಂಟೀಗಳೆ ಪೋಗಿ ಬಂದಪ್ಪೆಂ ಬಂದ ಬಟಿಕ್ಕೆನ್ನಂ ಮೆಚ್ಚಿದಂತೆ ಮಾಡೆಂದು ನನ್ನಿಗೊಟ್ಟು ನಂಬಿಸಿ ಪೋದೊಡೆ (ವಡ್ಡಾರಾ. ೧೬-೯).

[ನನ್ನಿ + ಕೊಡು$_1$]

ನನ್ನಿಗೊಳ್ (ಕ್ರಿ). ಪ್ರತಿಜ್ಞೆಯನ್ನು ಪಡೆ ; ಭಾಷೆಯನ್ನು ಕೊಡುವಂತೆ ಮಾಡು ; ಮಾತು ಪಡೆ : ಚಾಣಾಕ್ಯಂ ಕೇಳ್ದು ಅರಸನಂ ಕಂಡಾನರಸಿಯ ಬಯಕೆಯಂ ನೆಱಪುವೆನಾಯರಸಿಗೆ ಪುಟ್ಟಿದ ಕೂಸನೆನಗೀಯಲಾರ್ಪೊಡೆಂ ದೊಡರಸನೀವೆನೆಂದೊಡರಸಿಯುಮಂ ನನ್ನಿಗೊಂಡಾರುಮಱಿಯದಂತಿರೆ (ವಡ್ಡಾರಾ. ೧೮೬-೦೩). [ನನ್ನಿ + ಕೊಳ್$_1$]

ನನ್ನಿದಪ್ಪು (ಕ್ರಿ). ಭಾಷೆ ತಪ್ಪು ; ಮಾತು ತಪ್ಪು : ನನ್ನಿಯಹುದೆ ನಿಮ್ಮ ವಾಕ್ಯ ನನ್ನಿದಪ್ಪದಮ್ಮಯೆಂದೊಡೆನ್ನದೊಂದು ನುಡಿಯನಾಲಿಸುವುದು (ಮದೇಪು. ೨೨-೫೭). [ನನ್ನಿ + ತಪ್ಪು$_1$]

ನನಿ ನುಡಿ (ಕ್ರಿ). ದಿಟವನ್ನು ನುಡಿ ; ಸತ್ಯವನ್ನು ಹೇಳು : ಈಯದೆ ಈಱಿಯದೆ ನನ್ನಿ ನುಡಿಯದೆ ನಣ್ದೆ ದೇವಂಗಟ್ಗಿಸ್ಸಿ ಮುಯ್ವುಮ್ಪಡೆದೊಂಗರ ಅಲೆದೊಂ ಮೂದಲಿಪೊಂ (ಎಇ. XXIV, ೨೬-೧೩ ; 885).

[ನನ್ನಿ + ನುಡಿ$_1$]

ನನ್ನಿನೊಟಂಬ (ನಾ). ಒಬ್ಬಾತನ ಹೆಸರು : ಆತನ ಮಗಂ ನನ್ನಿನೊಟಂಬನ್ (ಮೈಎರಿ. ೧೯೬೨, ೪೮-೪ ; ಸು. 960) ; ಶ್ರೀಪೃಥ್ವೀವಲ್ಲಭ ಪಲ್ಲವಕುಲತಿಲಕ ಏಕವಾಕ್ಯಮಿಱಿವನೊಟಂಬ ಶ್ರೀಮದೆಲಿಪಯ್ಯನ ಮಗ ನನ್ನಿನೊಟಂಬನ ಬಿಟ್ಟ ಬ್ರಹ್ಮಾದೇಯಂ (ಎಕ. XI, ಹಿರಿಯೂ.೧-೩ ; 975).

[ನನ್ನಿ + ನೊಟಂಬ]

ನನಿ ಮಟಲೂರ್ (ನಾ). ಒಂದು ಊರಿನ ಹೆಸರು (?) : ಶೌಚಮಣಲೆಯರುಂ ನನ್ನಿಮಟಲೂರುಂ ಸನ್ತೊನಮಾಳ ಕಿಱುವೆಟ್ಟಗರಾ ಪನ್ನಿರ್ವ್ವರ್ಗ್ಗಂ ರಣಪಾರರಾ ಮಣಲೆಯರಸರಾ ಸಮಾಧಿಯೆ ಸಮಾಧಿ (ಎಕ. XIV, ತಿರುಮ. ೨೫೩-೨ ; ಸು. 800). [? + ಊರ್]

ನನ್ನಿವಂತ (ನಾ). ಸತ್ಯವಂತ ; ಧರ್ಮಿಷ್ಟ : ನನ್ನಿವಂತರ ದೇವ ಬಾರೈ ಮನ್ನಣೆಯ ಮದಗಜವೆ ಬಾರೈ (ಕಾಶಿರಾ. ೩೮-೬೦) ; ಯತಿಯ ರತಿಕನೆನಿಸಿ ಪತಿವ್ರತೆಯ ಸಿತಗೆಯೆನಿಸಿ ದಿವ್ಯವ್ರತಿಯ ಗತಿವಿಹೀನವೆನಿಸಿ ನನ್ನಿವಂತರ ಮತಿಗೆ ಸಟೆಯ ಬಿತ್ತಿದಾಗಿ (ಮದೇಪು. ೨೨-೨೭). [ನನ್ನಿ + – ವಂತ]

ನನ್ನಿವಾತು (ನಾ). ಪ್ರತಿಜ್ಞೆಯ ಮಾತು ; ಶಪಥದ ನುಡಿ : ಮಱು ಮಾತಿಂಗೆಡೆಯಿಲ್ಲದಂತಿರೆ ನುಡಿದ ಪಡೆಮೆಚ್ಚೆಗಂಡನ ಗಂಡವಾತುಮಂ ನನ್ನಿವಾತುಮಂ ಮುರಾಂತಕಂ ಮೆಚ್ಚಿ (ಪಂಪಭಾ. ೫-೭೫ ವ).

[ನನ್ನಿ + ಮಾತು$_1$]

ನನ್ನಿವೇಟ್ (ಕ್ರಿ). ಸತ್ಯವನ್ನು ನುಡಿ ; ನಿಜವನ್ನು ಹೇಳು : ತನ್ನರಸಿಯ ಉಱುಗಿಲ್ಲದ ನಡೆಗೆ ದೇವರ್ಕಳಂ ಸಾಕ್ಷಿಗೊಟ್ಟು ಆಗಳೆ ತನ್ನತನ್ನೆಯಮಂ ಮನ್ನಿಸೆಂದು ನನ್ನಿವೇಟ್ದು ಸಂತಮಿಟ್ಟು (ರಾಮಾಶ್ವ. ೧೬೩-೯).

[ನನ್ನಿ + ವೇಟ್]

ನನ್ನು (ನಾ). ಅರಿಸಿನ, ಕುಂಕುಮ ಮೊದಲಾದುವನ್ನು ತೂಗುವ ಒಂದು ಬಗೆಯ ತೂಕ : ಸುಗಂಧಂಗಳಿಗೆ ಪಚ್ಚಕಪ್ಪುರ ಕೂರು ಒಂದಕ್ಕೆ ಹಾಗ ಪನ್ನೆಕುರು ಒಂದಕ್ಕೆ ಬೇಳೆ ಕಸ್ತುರಿ ತೊಲೆ ಒಂದಕ್ಕೆ ಬೇಳೆ ಕುಂಕುಮ ನನ್ನು ಒಂದಕ್ಕೆ ಹಾಗ ಅಗಿಲು ತೊಲೆ ಒಂದಕ್ಕೆ ಅಡ್ಡ (ಎಕ. V, ಬೇಲೂರು. ೭೫-೮೨ ; 1382). [?]

ನನ್ನೂಱು 'ನಾಲ್ನೂಱು' ನೋ.

ನಪತ್ತು 'ನೌಬತ್ತು' ನೋ.

ನಪರ 'ನಫರ' ನೋ.

ನಪಾಸು 'ನಾಪಾಸು' ನೋ.

ನಪಿರಿ, ನಪೂರಿ, ನೌಪೂರಿ (ನಾ). ಒಂದು ಬಗೆಯ ವಾದ್ಯ ; ತುತ್ತೂರಿ : ಚಂಬಕ ಡವುಡೆ ನಪಿರಿ ಬುರುಗುಗಳುಱ್ ಕೊಂಬಿನ ಕಾಳೆ ಮವುರಿಯ ಬೊಂಬುಳಿ ಡೋಳು ನಿಸ್ಸಾಳಗಳಬ್ಬರ ತುಂಬಿತಾಕಾಶಮಂಡಲವ (ಕಂನವಿ. ೧೪-೨) ; ಚಂಬಕ ; ಡವುಡೆ ; ನಪಿರಿ ; ದುಂದುಭಿ . . . ಜಬರುಜಂಗಿ ಇತ್ಯಾದಿ (ಭಾಷಾಶಾ. ೫). **ನಪೂರಿ** : ನಿರ್ಜೀವಿ ಯಾವವೆಂದೊಡೆ... ಲೋಹವಿಡಿದ ಶಬ್ದ ತಾಳ ಕಂಸಾಳ ಗಂಟೆ ಕಹಳೆ ಕರ್ನೆ ನಪೂರಿ ಸ್ವನಾಯಿ (ವಜಸಂ. ೪೦೫-೮೯) ; ನುಡಿವ ಮದ್ದಳೆ ಜೋಡುಶಂಖ ನಪೂರಿಯು ಬಡಿವ ತುಡುಮು ಡಮಾಮಿಗಳು ಹೊಡೆವ ಭೇರಿಯು ದೇವದುಂದುಭಿ ಮೊದಲಾದ ಗಡಣವೆಣ್ದೆಸೆಯ ವ್ಯಾಪಿಸಿತು (ಅಬ್ಬಲೂ. ೪-೮೨) ; ಭೇರಿ ಹೆಗ್ಗಾಳೆ ನಪೂರಿ ನಾಗರ ಡೋಳು ಬಾರಿಸುತಿರಲು (ದೀದಕಾ. ೯-೩) ; ಭೇರಿ, ಕಹಳೆ, ಕರ್ನೆ, ನಪೂರಿ, ನಗಾರಿ, ಜಾಗಟೆ, ಕರಡಿ ಸಮ್ಮೇಳ (ಗುರುದ. ೦೦). **ನೌಪೂರಿ** : ಕಹಳಾ ಭೇರಿ ನಗಾರಿ ತಮ್ಮಟೆ ತುತೂರೀ ಮೌರಿ ನೌಪೂರಿಗಳ್ ಬಹು ವಾದ್ಯಾದುರು ತಾಂ ಧಳಂಧಳರವಂ ಪರ್ಬುತ್ತಿರಲ್ಕೆತ್ತಲುಂ (ಬೀಳವಂ. ೨-೨೭೦).

[←ಪಾರ. ನಫೀರೀ, ನಫೀರೂ ; ಹಿಂ. ನಫೀರ್, ನಫೀರೀ, ನಫೇರೀ, ನಪ್ಫೇರೀ ; ಮರಾ. ನಫೇರೀ]

ನಪುಂಸ (ನಾ). = ನಪುಂಸಕ ೧ : ಈರ್ವರಿಗೆ ಸೂರ್ಯಸ್ವರ ನಡೆಯಲ ನಪುಂಸನಹನೂ (ನವಮೋ. ೦೪-೪೫). [ಸಂ.]

ನಪುಂಸಕ (ನಾ). ೧. ಪುರುಷನೂ ಅಲ್ಲದ ಸ್ತ್ರೀಯೂ ಅಲ್ಲದ ವ್ಯಕ್ತಿ ; ಗಂಡೂ, ಹೆಣ್ಣೂ ಅಲ್ಲದ ಮನುಷ್ಯ ; ಷಂಡ. ೨. ಖೋಜ ; ಕೊಜ್ಜೆ : "ಕ್ಲೀಬಃ, ವರ್ಷಧರಃ, ಷಂಡಃ, ಷಂಡಕಃ, ನಪುಂಸಕಃ – ಈ ೫ ನಪುಂಸಕಂ" (ಹಲಾಯು. ೭೦-೨೭೬) ; "ಷಂಡಂ ಕ್ಲೀಬನೆನೆ ನಪುಂಸಕನೆನಿಕ್ಕುಂ" (ಮಂಗರಾ. ೮೦-೮) ; ಮತ್ತಮಾ ನಾರಕರೆಲ್ಲಂ ಹುಂಡಮುಂಡಸಂಸ್ಥಾನರುಮತಿವಿರೂಕ್ಷ ಕೃಷ್ಣವರ್ಣರುಮತಿದುರ್ಗಂಧರುಂ ನಪುಂಸಕರುಂ (ಸುಕುಮಾ. ೦೦-೪೮ ವ) ; ನಪುಂಸಕ ವ್ಯವಹರಿಸಬಲ್ಲನೇ ಅಯ್ಯ (ಸಿದ್ಧೇಪ. ೦೭೨-೫೨೩) ; ಅರ್ಜುನಂಗೀ ಸೂತತನವೆತ್ತಲು ನಪುಂಸಕವೇಷ ವೀಕ್ಷಿಸಲು (ಕುಪ್ಯಾವಿ. ೬-೦೫). ೩. = ನಪುಂಸಕತ್ವ ೧ : ವರುಷ ತನಕ ನಪುಂಸಕದಲಾಚರಿಸಬಲ್ಲೆನೆ ಸಾಕು ದೇಹಾಂತರವನಂಗೀಕರಿಸುವೆನಲಾ ತನ್ನ ಸುಡಲೆಂದ (ಕುಪ್ಯಾಅ. ೮-೪೫). ೪. (ಆಲಂ) ನಿರ್ವೀರ್ಯನಾದವನು ; ದುರ್ಬಲ ; ಬಲಹೀನ : ಈ ನಪುಂಸಕರುಗಳ ನಂಬಿದ ನಾನು ನೀತಿಜ್ಞನೆ ಮಹಾದೇವೇನ ಹೇಳುವೆನೆನುತ ಭೀಷ್ಮನ ಹೊರೆಗೆ ನಡೆತಂದ (ಕುಪ್ಯಾಭೀ. ೮-೬೭) ; ನಾನು ದುರ್ಯೋಧನನಿಗೆ ಧನಾಧೀನನಾಗಿ ನಪುಂಸಕನಾದ್ದರಿಂದ (ಕೃಪಾಭೀ. ೨೬). ೫. [ವ್ಯಾಕ] ಮೂರು ಲಿಂಗಗಳಲ್ಲಿ ಒಂದು ; ಪುಲ್ಲಿಂಗ, ಸ್ತ್ರೀಲಿಂಗಗಳಲ್ಲದ ಲಿಂಗ ಮತ್ತು ಅದಕ್ಕೆ ಅಳವಡದ ಶಬ್ದ : ಸ್ವರಮಿದಿರೊಳಕಾರಾಂತಕ್ಕಿರೆ . . . ನಪುಂಸಕಕ್ಕೆ ದಾಗಮಮಕ್ಕುಂ (ಕಾಪ್ಯಾವ. ೦೦೪) ; ಕರ್ಣಾಟಕದೊಳ್ ಪೀನಂ ಸ್ತ್ರೀಪುಂ ನಪುಂಸಕೋಭಯ ಪುಂಸ್ತ್ರೀ ಸ್ತ್ರೀ ನಪ್ಸಮಸ್ತ ವಾಚ್ಯಾನ್ಯೂನಾವ್ಯಯ ಮೆಂದು ಲಿಂಗಮೊಂಬತ್ತು ತೆಱಂ (ಶಮದ. ೮೮) ; ಕೆಲವು ಹಲವು ಎಂಬುವು

ನಪುಂಸಕ ಬಹುವಚನದ ರೂಪಗಳು (ಮಧ್ಯಮ. ೪೪). ೧, ೫ : ಮನವ ನಪುಂಸಕವೆಂದೆ ನಾನವಳನು ಕರೆತರಲಟ್ಟಿದೆ ಮನವು ರಮಿಸಿತದಲ್ಲಿಯೆ ವಂಚಿತ ನಾದೆನು ಪಾಣಿನಿಯೆಂತಹ ಕಿತವ (ಇಂಡಾಪ. ೮೬-೧೭).

ನಪುಂಸಕಪಕ್ಷಿಗ್ರಹ = ಒಂದು ಬಗೆಯ ಹಕ್ಕಿರೋಗ : ಮುಡುಹುಗಳಲ್ಲಿಯೂ ಬೆನ್ನಿನಲ್ಲಿಯೂ ಕುಳಿ ಬಿದ್ದಿಹುದು. ಮೈ ಉರಿತ, ಕಾರುವಣ, ಉಚ್ಚುವಣ, ಬಾಯಾಱಿಕೆ, ಇವಿಷ್ಟು ಉಂಟಾಗಿದ್ದರೆ ನಪುಂಸಕಪಕ್ಷಿಗ್ರಹ ಪಿಡಿದಿದೆ ಎಂದಱಿವುದು (ಪೈದ್ಯಸಾ. II, ೧೩). [ಸಂ.]

ನಪುಂಸಕತನ (ನಾ).=ನಪುಂಸಕತ್ವ ೧ : ಉತ್ತರಗೋಗ್ರಹಣದ ಸಮಯಕ್ಕೆ ಅರ್ಜುನನ ನಪುಂಸಕತನ ಕೊನೆಗೊಂಡಿತು (ರೂಢಿ).

[ನಪುಂಸಕ + – ತನ]

ನಪುಂಸಕತ್ವ (ನಾ). ೧. ಪುರುಷನೂ ಸ್ತ್ರೀಯೂ ಅಲ್ಲದಿರುವ ಸ್ಥಿತಿ; ಕ್ಲೀಬತ್ವ; ಷಂಡತನ : ಅರ್ಜುನನು ಊರ್ವಶಿಯ ಶಾಪದಂತೆ ಒಂದು ವರ್ಷಕಾಲ ನಪುಂಸಕತ್ವವನ್ನು ಹೊಂದಿದ್ದನು (ರೂಢಿ). ೨. [ವ್ಯಾಕ] ಪುಂ, ಸ್ತ್ರೀಲಿಂಗಗಳಿಗೆ ಸೇರದಿರುವಿಕೆ; ನಪುಂಸಕಲಿಂಗವಾಗಿರುವಿಕೆ : ನಿತ್ಯಂ ನಪುಂಸಕತ್ವಮಪತ್ಯಕಲತ್ರಾದಿ ಶಬ್ದದೊಳ್ ಸ್ತ್ರೀಪುಂಸವ್ಯತ್ಯಯಮಕ್ಕುಂ ಕರುಣೋಪತ್ಯಕೆಗಳೊಳಂ ವಧಾಭಿಲಾಷಾದಿಯೊಳಂ (ಕಾವ್ಯಾವ. ೧೬೦).

[ಸಂ.]

ನಪುಂಸಕಲಿಂಗ (ನಾ). = ನಪುಂಸಕ ೫ : ಪುರುಷರಂ ಪೇಟ ಶಬ್ದಂಗಳ್ ಪುಲ್ಲಿಂಗಂಗಳ್; ಸ್ತ್ರೀಯರಂ ಪೇಟ್ವ ಶಬ್ದಂಗಳ್ ಸ್ತ್ರೀಲಿಂಗಂಗಳ್; ಉಟಿದುವೆಲ್ಲಂ ನಪುಂಸಕಲಿಂಗಂಗಳ್ (ಕಮದ. ೯೧ ವ್ಯತ್ತಿ); ಪುಲ್ಲಿಂಗವೆಂತಲೂ ಸ್ತ್ರೀಲಿಂಗವೆಂತಲೂ ನಪುಂಸಕಲಿಂಗವೆಂತಲೂ ಮೂರು ವಿಧವಾಗಿರುವುದು (ಹೊನುಗ. ೩೫); ಪುಲ್ಲಿಂಗವೂ ಸ್ತ್ರೀಲಿಂಗವೂ ಅಲ್ಲದ ಪದಗಳೆಲ್ಲಾ ನಪುಂಸಕಲಿಂಗ (ಮಧ್ಯಮ. ೩೦). [ನಪುಂಸಕ + ಲಿಂಗ]

ನಪುಂಸಕವೇದ (ನಾ). [ಜೈನ] ಒಂದು ಬಗೆಯ ನೋಕಷಾಯ; ಚಾರಿತ್ರಮೋಹನೀಯದ ಭೇದಗಳಾದ ಮೂರು ಬಗೆಯ ವೇದಗಳಲ್ಲಿ ಒಂದು; P ಆತ್ಮನಿಗೆ ಚೈತನ್ಯರೂಪ ಪರ್ಯಾಯದಲ್ಲಿ ಮೈಥುನರೂಪವಾದ ಚಿತ್ತವಿಕ್ಷೇಪವುಂಟಾಗುತ್ತದೆ. ಇದಕ್ಕೆ ವೇದವೆಂದು ಹೆಸರು. ಇದರಲ್ಲಿ ಪುರುಷವೇದ, ಸ್ತ್ರೀವೇದ, ನಪುಂಸಕವೇದವೆಂದು ಮೂರು ಬಗೆಗಳಿವೆ. ಪುರುಷವೇದದ ಉದಯದಿಂದ ಸ್ತ್ರೀವಿಷಯಕವಾದ ಕಾಮವುಂಟಾಗುತ್ತದೆ. ಸ್ತ್ರೀವೇದದ ಉದಯದಿಂದ ಪುರುಷವಿಷಯಕವಾದ ಕಾಮವುಂಟಾಗುತ್ತದೆ. ನಪುಂಸಕವೇದದ ಉದಯದಿಂದ ಸ್ತ್ರೀಪುರುಷೋಭಯಾತ್ಮಕವಾದ ಕಾಮವುಂಟಾಗುತ್ತದೆ. ನಪುಂಸಕವೇದದಿಂದ ಉಂಟಾಗುವ ಭಾವವು ಆವಿಗೆಯಲ್ಲಿರುವ ಬೆಂಕಿಯಂತೆ ದೀರ್ಘಕಾಲವಿರುತ್ತದೆ. ಆ ಕಾರಣದಿಂದ ವ್ಯಕ್ತಿಯು ಪುರುಷಶಕ್ತಿ, ಸ್ತ್ರೀಶಕ್ತಿ ಎರಡೂ ಇಲ್ಲದವನಾಗುತ್ತಾನೆ. ಹೀಗೆ ಬೇರೆ ಬೇರೆ ವಿವರಣೆಗಳು ಜೈನಗ್ರಂಥಗಳಲ್ಲಿ ನಿರೂಪಿತವಾಗಿವೆ : ಮತ್ತಂ ಕಿಱಿದು ಬೇಗದಿಂ ಕ್ರಮಕ್ರಮದೊಳೆ ನಪುಂಸಕವೇದಮುಮಂ ಸ್ತ್ರೀವೇದಮುಮಂ ಪುಂವೇದಮುಮಂ... ಘಾತಿಸಿ (ಆದಿಪು. ೧೦-೦೪ ವ); ಅಭಿಭವಿಸಿ ನಪುಂಸಕವೇದ ಭಾಮಿನೀವೇದಯುಗಳದೊಡನೊಡನೆ ಜಗದ್ವಿಭು ಹಾಸ್ಯರತ್ಯರತಿಶೋಕಭಯಜುಗುಪ್ಸೆಗಳನಾಱುಮಂ ಬೆಂಕೊಂಡಂ (ಮಲ್ಲಿಪು. ೧೪-೮೪) ; ಮತ್ತಂ ಕತಿಪಯಸಮಯದೊಳನು ಕ್ರಮದಿಂ ನಪುಂಸಕವೇದಂ ಸ್ತ್ರೀವೇದವೆಂಬ ಎರಡುಮನದಿರ್ಪಿ (ಚಂದ್ರಪು. ೧೪-೬೯ ವ); ಸ್ತ್ರೀವೇದಂ ಪುರುಷಾಭಿಲಾಷೆಯಂ ಮಾಟ್ಟುದು ಪುರುಷವೇದಂ ಸ್ತ್ರೀಯಭಿಲಾಷೆಯಂ ಮಾಟ್ಟುದು ನಪುಸಂಕವೇದಮುಭಯಾಭಿಲಾಷೆಯಂ ಮಾಟ್ಟುದು (ಪಸಾರ. ೧೨); ನಪುಂಸಕವೇದಮನಡಿಯಿಟ್ಟ ಹಾಸ್ಯಾದಿಯಾಱ (ವರ್ಧಪ. ೧೨-೫೦). 'ನೋಕಷಾಯ' ಪರಾ. [ಸಂ.]

ನಪುಂಸಕಶಿಲೆ (ನಾ). ಮೂರ್ತಿಶಿಲ್ಪಕ್ಕೆ ನಿರುಪಯುಕ್ತವಾದ ಶಿಲೆ; ಮೂರ್ತಿ ಶಿಲ್ಪಕ್ಕೆ ಉಪಯೋಗವಾಗದ ಶಿಲೆ : ಶಿಲೆಯಲ್ಲಿ ಪುಂಶಿಲೆ, ಸ್ತ್ರೀಶಿಲೆ, ನಪುಂಸಕಶಿಲೆಯೆಂದು ಮೂರು ವಿಧ. ಕಂಚಿನ ತಾಳದ ನಾದದಂತೆ ಧ್ವನಿಕೊಡುವ ಶಿಲೆಯು 'ಪುಂಶಿಲೆ' ಯೆಂದೂ, ಘಂಟಾನಾದದಂತೆ ಧ್ವನಿತವಾಗುವ ಶಿಲೆಯು 'ಸ್ತ್ರೀಶಿಲೆ' ಯೆಂದೂ, ತಾಳವಿಹೀನವಾದ ಶಿಲೆಯು 'ನಪುಂಸಕಶಿಲೆ' ಯೆಂದೂ ಉಕ್ತಿ ಇದೆ . .. ಸ್ತ್ರೀದೇವತಾವಿಗ್ರಹಗಳನ್ನು ಸ್ತ್ರೀಶಿಲೆಯಿಂದಲೂ, ಆಧಾರಪೀಠಾದಿಗಳನ್ನು ನಪುಂಸಕಶಿಲೆಯಿಂದಲೂ ಮಾಡಬೇಕೆಂದು ವಿಧಿಸಿದೆ (ಭಾರದ. ೭೭). [ನಪುಂಸಕ + ಶಿಲೆ]

ನಪುಂಸಕಿ (ನಾ). ಸ್ವರೂಪದಲ್ಲಿ ಹೆಣ್ಣಾಗಿ ಕಂಡರೂ ಹೆಣ್ಣುತನವಿಲ್ಲದ ವ್ಯಕ್ತಿ : ಪರವಧುವಂ ನಪುಂಸಕಿಯರಂ ಗುರುಭಾರ್ಯೆಯರಂ ಮುನೀಂದ್ರೆ ಸೌಂದರಿಯರನಂತ್ಯ ಜಾತಿಯವಳಂ ವ್ರತಮುಳ್ಳಳನಂಗಹೀನೆಯಂ ತಿರಿವವಳಂ ಕುಲಕ್ಷಯೆಯನಾ ಕೊಡಗೂಸುಗಳಂ ವಿದಗ್ಧನಾದರದೊಳೆ ಕೂಡಲುಂ ಬಯಸಿನೋಡಲು ಮಾಗದು ಕೂರ್ತು ಬಂದೊಡಂ (ಮದತಿ. ೯-೨).

[ನಪುಂಸಕ + – ಇ$_2$]

ನಪೂರಿ 'ನಪಿರಿ' ನೋ.

ನಪೆ 'ನಫೆ' ನೋ.

ನಪ್ತಾರ (ನಾ). ಮೊಮ್ಮಗ; ನಪ್ತೃ : ಪಿತೃ ಮೊದಲಾದ ಶಬ್ದಗಳನ್ನುಳಿದ ಋಕಾರಾಂತ ಶಬ್ದಗಳ ಋಕಾರಕ್ಕೆ ಆರಾದೇಶ ಬರುತ್ತದೆ . . . ಸ್ವಸೃ – ಸ್ವಸಾರನು ; ನಪ್ತೃ – ನಪ್ತಾರನು ಇತ್ಯಾದಿ (ಹೊನುಗ. ೧೦೬).

[ಸಂ. ನಪ್ತೃ]

ನಪ್ತೃ (ನಾ). ಮಗನ ಅಥವಾ ಮಗಳ ಮಗ; ಮೊಮ್ಮಗ : "ದೌಹಿತ್ರಃ, ನಪ್ತಾ–ಈ ೨ (ಮ)ಗಳ ಮಗಂ; ಪೌತ್ರನುಂ ಅಹಂ" (ಹಲಾಯು. ೮೩-೩೫೧); "ಮಗನ ಮಗಂ ನಪ್ತೃ ಪೌತ್ರನೆನಿಕುಂ" (ವಸ್ತುಕೋ. ೫೫-೨೨); ಋಕಾರಾಂತಕ್ಕೆ–ಪಿತೃ, ಸವಿತೃ, ನಪ್ತೃ. . . ಧಾತೃ (ಕಮದ. ೮೯ ಪ್ರಯೋ); ಮಡದಿಯರಂ ಮಕ್ಕಳಂ ಮುಮ್ಮಕ್ಕಳಂ ನಪ್ತೃಗಳಂ ನಿಗ್ರಹಾನುಗ್ರಹಪೂರ್ವಕಮಾಗಿ ಸಂರಕ್ಷಣೆಯನೆಸಗು (ಭಾರಶಾಂ. ೬೭-೪೧೩).

[ಸಂ.]

ನಪ್ತ್ರಿ (ನಾ). ಮಗನ ಅಥವಾ ಮಗಳ ಮಗಳು; ಮೊಮ್ಮಗಳು : "ನಪ್ತ್ರೀ,–ಪೌತ್ರೀ, ಸುತಾತ್ಮಜಾ – ಮಗನ ಮಗಳ ಹೆಸರುಗಳು, ಮಗಳ ಮಗಳಿಗೂ ಹೆಸರು, ಮೊಮ್ಮಗಳು" (ಸಿದ್ಧಾಂತಿ. ೧೫೨). [ಸಂ. ನಪ್ತ್ರೀ]

ನಪ್ಪು (ನಾ). [ವ್ಯಾಕ] ನಪುಂಸಕಲಿಂಗ ಎಂಬುದರ ಸಂಕೇತ : ಪುರುಷರ ಪುಲ್ಲಿಂಗಂ ಸ್ತ್ರೀಯರೆ ತಾಂ ಸ್ತ್ರೀಲಿಂಗಮುಟಿದುವೆಲ್ಲಂ ನಪ್ಪಾಗಿರೆ ಸಲ್ಗುಂ ಕನ್ನಡದೊಳ್ ಪರಿವರ್ತಿಸವುಟಿದ ಲಿಂಗವೊಳವಾಗಿರ್ದುಂ (ಕಮದ. ೯೦); ನಪ್ಪಾಗಿರೆ = ನಪುಂಸಕಲಿಂಗವಾಗಿರೆ (ಕಮದ. ೯೦ ಟೀಕೆ).

[ಸಂ. ನಪ್]

ನಪ್ಪುರಿ$_1$ (ಕ್ರಿ). ಗಾಡಿ, ನೇಗಿಲು ಮುಂತಾದುವುಗಳ ಚಲಿಸುವ ಎತ್ತುಗಳನ್ನು ನಿಲ್ಲಿಸಲು, ಬಾಯಲ್ಲಿಯ ಶಬ್ದದಿಂದ ಸೂಚನೆ ಕೊಡು : ಎತ್ತುಗಳನ್ನು ಗೌಡರು ನಪ್ಪುರಿದು, ಗಾಡಿಯನ್ನು ಮನೆಯ ಮುಂದೆ ನಿಲ್ಲಿಸಿ, ಮುಖದಲ್ಲಿ ಆ ಗೆಲುವಿನ ನಗೆಯನ್ನು ಸೂಚಿಸಿದಾಗ ಆತನಿಗೆ ಪೂರ್ತಿ ಜೀವ ಬಂತು (ನನ್ನೂರು. ೧೩೪). 'ನಕ್ಕಿಱಿ', 'ಮುಪ್ಪುರಿ' ಪರಾ.

ನಪ್ಪುರಿ$_2$ (ನಾ). "ನೇಗಿಲಿಗೆ ಅಥವಾ ಗಾಡಿಗೆ ಕಟ್ಟಿದ ಎತ್ತುಗಳನ್ನು ನಿಲ್ಲಿಸಲು ಬಾಯಲ್ಲಿ ಮಾಡುವ ಒಂದು ರೀತಿಯ ಶಬ್ದದ ಸನ್ನೆ" (ನನ್ನೂರು. ಕೋಶ). [<ನಪ್ಪುರಿ$_1$]

ನಫರ್ 'ನಫರ' ನೋ.

ನಫರ್‌ಜಾಮಿನು 'ನಫರಜಾಮಿನು' ನೋ.

ನಫರ, ನಪರ, ನಫರ್ (ನಾ). ೧. (ಕೀಳು ತರಗತಿಯ) ಆಳು; ದಾಸ; ಸೇವಕ. ೨. ವ್ಯಕ್ತಿ; ಮನುಷ್ಯ; ಇಸಮಂ: ನಿಜ, ಅಹುದು! ಆದರೆ ಈ ಹಳೇ ನಫರನಾದ [ಮನುಷ್ಯನಾದ] ನನ್ನ ದೆಸೆಯೇನಾಗಬೇಕು? (ಶಕಾಳಿಂ. ೮೦). 'ನಫರಜಾಮಿನು' ಪರಾ. **ನಪರ**: ೧. ನಪರನ ಹೆಂಡತಿಗೆ ಹರನ ಕಾವಲು (ಗಾದೆ). **ನಫರ್**: ೧. 'ನಫರ್‌ಜಾಮಿನ್' ಪರಾ. [←ಅರ. ಹಿಂ. ನಫರ್ : ಮರಾ. ನಫರ್, ನಪ್ಪರ್]

ನಫರಜಾಮಿನು, ನಫರ್‌ಜಾಮಿನ್ (ನಾ). ಒಬ್ಬ ವ್ಯಕ್ತಿಯು ಒಂದು ಪರತ್ತನ್ನು ಪಾಲಿಸುವುದಕ್ಕೆ ಬದ್ಧನಾಗಿ ನ್ಯಾಯಾಸ್ಥಾನದ ಎದುರಿಗೆ ಒಪ್ಪಿಕೊಳ್ಳುವಿಕೆ; ಸ್ವಂತಜಾಮಿನು: (ಕಿ). **ನಫರ್‌ಜಾಮಿನ್**: ನಫರ್‌ಜಾಮಿನ್ ಖತ್ತಿನ (recognisance) ಮೇಲೆ. ಹನ್ನೆರಡು ವರ್ಷಗಳು (ಗ್ರಾಮಾಳ. ೧೭೦). [ನಫರ + ಜಾಮಿನು]

ನಫಾ 'ನಫೆ' ನೋ.

ನಫೆ, ನಪೆ, ನಫಾ (ನಾ). ವ್ಯಾಪಾರದಲ್ಲಿ ಬರುವ ಆದಾಯ; ಲಾಭ; ಫಾಯದೆ; ಕಿಫಾಯಿತ್ತು: ಈಚೆಗೆ ಒಂದಕ್ಕೆ ಎರಡರಷ್ಟು ನಫೆ, ವ್ಯಾಪಾರದಲ್ಲಿ ಬಂದದ್ದರಿಂದ ಕಾಮಗಾರಿ ಪ್ರಯತ್ನ ಮಾಡಿದೆವು (ಇಕೆ. XVI, ಮುದ್ರಗಿ. ೧೦೬-೯; 1612); ಉತ್ತಮವಾದ ರತ್ನಗಳನ್ನು ಹನುಮಂತರಾಯನು ಅಂದಾಜು ನೋಡಿ ತಾನೇ ಕ್ರಯಕ್ಕೆ ತೆಗೆದುಕೊಂಡು ಅವುಗಳನ್ನು ನಫೆಗೆ ಮಾರುತ್ತಿದ್ದನು (ಮುಸುಗ. ೬೨); ವಾಸ್ತವವಾಗಿ ಬಂದ ನಫೆಯ ಮೇಲೆ ಸೇಕಡ ಹತ್ತರಂತೆ ದಳ್ಳಾಳಿಯನ್ನು ಕೊಡುವ ಪದ್ಧತಿ (ಭಾಗ್ಯತಿ. ೨೭); ಅಂತೂ ಲುಕ್ಸಾನಿಲ್ಲ. ನಫೆಯಾಗಿದೆ (ಭೀಮಕಾ. ೬). **ನಪೆ**: ಈ ದಿನದ ವ್ಯಾಪಾರದಲ್ಲಿ ಆತನಿಗೆ ಹೆಚ್ಚು ನಪೆಯಾಯಿತು (ರೂಢಿ). **ನಫಾ**: ಯಾರಿಗೆ ಹ್ಯಾಗೆ ಖರೀದಿ ಮಾಡಲ್ಪಟ್ಟಿದೆಯೋ ಅದರ ಹಾಗೆ ಅವರು ನಫಾ ಕಿಮ್ಮತ್ತಿನಲ್ಲಿ ಸಾಮಾಲಮಾಡಿ ಹೇಳುತ್ತಾರೆ (ಮುಂಬಪ್ರಾ. ೧೯೪).

[←ಅರ. ನಫ್‌ಅ; ಹಿಂ. ನಫಾ : ಮರಾ. ನಫಾ, ನಪ್ಪಾ]

ನಬಾಬ 'ನವಾಬ' ನೋ.

ನಬೀ (ನಾ). ದೈವಪ್ರೇರಿತವಾದ ಧರ್ಮೋಪದೇಶಕ; ಪೈಗಂಬರ; ಪ್ರವಾದಿ; ದೇವದೂತ; "ಧರ್ಮಸ್ಥಾಪಕ" (ಜಾನಕೀಹ. ೯).

[←ಪಾರ. ಅರ. ಹಿಂ. ಮರಾ. ನಬೀ]

ನಬ್ಮ (ನಾ). ಹೊಸತು; ನವ್ಯ: "ನಬ್ಮ-ನವ್ಯ = ಹೊಸತು" (ಕರ್ಣಕೋಹ. ೨೦); ತರಿಸಿಯೊಟ್ಟಿಸಿ ನಬ್ಮ[ಪಾಠಾಂ. ವ್ಯ]ದಿವ್ಯಾಂಬರ ನಿಕರಮಂ (ಜಸಪು. ೩೭-೧೮). [<ಸಂ. ನವ್ಯ]

ನಭ (ನಾ). ೧. ಬಾನು; ಆಗಸ; ವ್ಯೋಮ; ಆಕಾಶ; ಗಗನ: "ನಭಃ . . . ಗಗನಂ, ದ್ಯುಃ-ಈ ೧೫ ಆಕಾಶಂ" (ಹಲಾಯು. ೨೨-೧೩೬); "ತಾರಾಪಥಂ ವ್ಯೋಮಮಂತರಿಕ್ಷಂ ನಭಂ . . . ಅಂಬರಂ ವಿಷ್ಣುಪದಮೆನಲು ಗಗನಮಕ್ಕುಂ" (ಮಂಗರಾ. ೯-೩೦); ಒತ್ತಿ ತಜುಂಬಿ ನಿಂದ ರಿವುಭೂಜ ಸಮಾಜದ ಬೀರ್ಗಳಂ ನಭಕ್ಕೆತ್ತದೆ ಬಂದು ತನ್ನ ಮಾಱಿಪೊಕ್ಕೊಡೆ ಕಾಯದೆ ಚಾಗದೊಳ್ಬಿನಚ್ಚೊತ್ತದೆ ಮಾಣ್ದು ಬಾಟ್ಟ ಪುಟುವಾನಸನೆಂಬನಜಾಂಡ ಮೆಂಬುದೊಂದತ್ತಿಯ ಪಣ್ಣೊಳಿಪ್ಪ ಪುಟುವಲ್ಲದೆ ಮಾನಸನೇ ಮುರಾಂತಕಾ (ಪಂಪಭಾ. ೩-೭೫); ನಭದಿಂದಮಿಱಿದವಂ ರಾಜಭವನಮಂ ಪೊಕ್ಕು ಪವನಸುತ ವಾದನಖಪ್ರಭೆ ಪಸರಿಸಿ ತನಗೆ ಶಿರೋವಿಭೂಷಣಶ್ರೀಯನೀಯೆ ವಿನಮಿತ ನಾದಂ (ಪಂಪಾಮಾ. ೧೧-೨೭); ಭೋರೆನೆ ತೂರ್ಯವಂಚೆಯನಜಂ ಗಜಮಂ ಬಳವೈರಿ . . . ವಿಮಾನಮಂ ಮಾರಹರಪ್ರಿಯಂ ವೃಷಭನಂ ಹರನೇಱಿ ನಭಕ್ಕೆ ಸಲ್ವುದುಂ (ಜಗವಿ. ೧-೩೬); ಗ ಗ ನ ರಂ ಧ್ರ ವೊ ಅಲುಗಗುಡದಂತೆ ಕೀಲಿಸಿದ ವಜ್ರಮೊಳಗಿಲೊ ನಭದ ಲತೆ ಹಬ್ಬಿಯೊಗೆದ ನನೆಯೊ ಕಡು ಹಸಿದವೆಂದು ಶಶಿಯೆಲ್ಲಾ ಚಕೋರಕ್ಕೆ ಕೊಡುವ ಸವಿದುತ್ತುಗಳೊ . . . ಎನೆ ತಾರಾಳಿಯೆಸೆದುವಾ ಜಗದ ಜನ ನಲಿಯುತಿರಲು(ಹಪಚಾ. ೩-೮೯); ತೊಳಗುವ ನಭದೊಳ್ ಚಿತ್ರಾವಿಳದೃಷ್ಟಿಗವಿದ್ಯಮಾನಮೇಚಕರುಚಿಯೊಂದೆಳಸಿ ಮಿಗೆ ತೋರ್ಪ ತೆಱದಿಂ ಖಳಂಗೆ ಪೊಲನಲ್ತೆ ಕೃತಿಯೆಳಿಲ್ಲದೂ ದೋಷಂ (ಪುಷ್ಪಪು. ೧-೪೮); ನಭವಿಂದಿಳಿವ ಗಂಗೆಯ ಧಾರೆ ಮೆಱೆದುದ ಪುರದ ಬಾಹೆಯಲಿ (ಶುಷ್ಕಾಅ. ೭-೩೨); ಶುದ್ಧಿಸದೆ ನಭ ಧರೆಯ ಮರ ಮರಳಿ ಮಳೆಯಿಂ? (ಮಂಕುಳಿ. ೪೭೪). ೨. ಮುಗಿಲು; ಮೋಡ. 'ನಭಪ್ರಸೃತಿ', 'ನಭೋಂಗ' ಪರಾ. ೩. ಚಾಂದ್ರಮಾನ ವರ್ಷದಲ್ಲಿ ಒಂದು ತಿಂಗಳ ಹೆಸರು; ಶ್ರಾವಣಮಾಸ: "ಶ್ರಾವಣಮಾಸಮಂ ನಭ ಮೆಂಬುದು" (ಹಲಾಯು. ೧೯-೧೧೪); "ಶ್ರಾವಣಃ, ನಭಾಃ, ಶ್ರಾವಣಕಃ-೩ ಶ್ರಾವಣಮಾಸದ ಹೆಸರುಗಳು" (ಸಿದ್ಧಾಂತಿ. ೩೮). ೪. ಸೊನ್ನೆ; ಶೂನ್ಯ: "ನಭ ಸೊನ್ನೆ" (ಮಂಗರಾ. ೧೦೪-೮). ೫. [ಛಂದ] ಅಕ್ಷರಗಣಗಳಲ್ಲಿ ಒಂದು; ಆದಿಯಲ್ಲಿ ಎರಡು ಗುರುವಿರುವ ಗಣ; ತಗಣ; (– – ∪): "ಆದಿಗುರುವೆರಡಿರಲು ನಭಮಕ್ಕುಂ" (ಮಂಗರಾ. ೧೦೭-೨೦); "ಇಂದು ನಭಂ ಗಳ್ಸುರಪುರವವನೇಂದುದ್ವಯಮಾಗಿರೆ . . . ಧರೆಗಿದು ಪೆಸರಾಯ್ತಲ್ಲಿಯು ಮುದ್ಧವಕರಮೆನೆ ತನ್ನಿಂ (ಛಂದೋಂಬು. ೨-೧೯೦). ೬. [ಜ್ಯೋತಿ] "ಲಗ್ನದಿಂದ ಹತ್ತನೆಯ ಸ್ಥಾನ" (ಜಾತಕ. ಪರಿ. ೩). [ಸಂ.]

ನಭಃಪಯೋಜ (ನಾ). (ಆಲಂ) ಅತ್ಯಂತ ಅಸಂಭವವಾದುದು; ಗಗನಕುಸುಮ: ಅದಱಿಂದೆ ನಂಬಿ ಜಟಿಸಿದೊಡಿದಱಿಂ ದೊರೆಕೊಳ್ಗುಮಮಳ ಶಿವಪದವಿಂತಲ್ಲದೆ ಪೆಱತು ಮಾರ್ಗದಿಂದವ್ವುದು ತಾನೆಂಬುದು ನಭಃಪಯೋಜಪ್ರಾಯಂ (ರಾಜಶೇ. ೪-೯೫). [ಸಂ.]

ನಭಃಪ್ರಸೃತಿ (ನಾ). ಮೋಡಗಳ ಗುಂಪು.-ಸಮೂಹ: ಏಱಿ ವಿಮಾನಮಂ ಕೃತಕ ಗಾಯಿಕೆಯರ್ . . . ಯಾನಮೇಂ ಕೀಱಿದುದೋ ನಭಃಪ್ರಸೃತಿಗಿಟ್ಟೆಡೆಯಿಟ್ಟಡೆಯಾದುದೆಂಬಿನಂ(ಶಾಂತಿಪು. ೨-೮೨). [ಸಂ.]

ನಭಃಫಲ (ನಾ). (ಆಲಂ) (ಗಗನಕುಸುಮದಂತೆ) ಅತ್ಯಂತ ಅಸಂಭವ ವಾದುದು: ಅದಱ ಕಾಂಕ್ಷಣಮೆಂಬುದು ಗಾವಿಲಂ ನಭಃಫಲದುಪ ಭೋಗಮಂ ಬಯಸಿ ಬಾಯ್ವಿಡುವಂದಮನುಂಟುಮಾಡುಗುಂ (ಜಾಧಪು. ೫-೬೩). [ಸಂ.]

ನಭಶ್ಚರ (ನಾ). ಆಕಾಶದಲ್ಲಿ ಸಂಚರಿಸುವವನು; ಖೇಚರ; ವಿದ್ಯಾಧರ: ಸದ್ವಸ್ತುಭಾಜನನಪ್ಪೆನ್ನೊಳೆ ಮಾಱ್ಪುದಾಕೆಗೆ ವಿವಾಹೋದ್ಯೋಗಮಂ ರಾಗದಿಂ ಎಂದವನಲ್ತೆ ನಭಶ್ಚರವೃಂದಾರಕಂ (ಚಂದ್ರಪು. ೬-೨೨); ಕರಮೆಸೆದತ್ತು ದೇವನಗದಿಂ ಬನದಿಂ ಬಿನದಂಬಡುತ್ತೆ ಸಂಚರಿಪ ನಭಶ್ಚರ ಪ್ರಕರದಿಂ . . . ಖಗದಿಂ ಮೃಗದಿಂ ನಗದಿಂದೆ ಕಂದರಂ (ಶಕಾಂ. ೨-೩೬). 'ಖಚರ' ಪರಾ. [ಸಂ.]

ನಭಶ್ಚರಪತಿ (ನಾ). ಆಕಾಶದಲ್ಲಿ ವಿಮಾನದಲ್ಲಿ ಸಂಚರಿಸುವ ವಿದ್ಯಾಧರರೇ ಮುಂತಾದವರ ರಾಜ; ಖೇಚರರಾಜ: ಅನುಕೂಲ ಮಿತ್ರನನುರಕ್ತ ನಾಯಿಕಾನೀಕನನುಗತ ಪ್ರಕೃತಿ ಚಿರಂತನರೆನಿಪ ಚಕ್ರವರ್ತಿಗಳ ನೆಗೞ್ದ ನೆಗೞ್ತೆ ತನ್ನಭಶ್ಚರಪತಿಯಾ (ಶಾಂತಿಪು. ೨-೫೦).

[ನಭಶ್ಚರ × ಪತಿ$_2$]

ನಭಶ್ಚರಾನ್ವಯ (ನಾ). ಖೇಚರರ ವಂಶ: ನಿಜದಿಂ ಗೂಢಂಗಳ್ ಗುಲ್ಮಜಾನುಗಳ್ ಮಂತ್ರದಂತೆ ರಕ್ತತರಂಗಳ್ ನಿಜಕರವಾದತಲಂ ಪ್ರಪ್ರಜೆ ಯಂತೆ ನಭಶ್ಚರಾನ್ವಯಾಂಬರರವಿಯಾ (ಶಾಂತಿಪು. ೩-೪೫).

[ನಭಶ್ಚರ + ಅನ್ವಯ]

ನಭಶ್ಚರೇಂದ್ರ (ನಾ). = ನಭಶ್ಚರಪತಿ: ನೆಗೞ್ತೆಯೊಳ್ ತೊಡರ್ದಿರೆ ವೃದ್ಧರಾಜ್ಯಮುಮದೇನೆಸೆದತ್ತೋ ನಭಶ್ಚರೇಂದ್ರನಾ (ಆದಿಪು. ೨-೨೪); ವೈರಿಜಯಶ್ರೀ ಸೆಱೆಯಿರೆ ಭೂರಿಭುಜಾಂತರದೊಳಾಕೆ ಕಟ್ಟಿದ ಮುಕ್ತಾಹಾರಮನೆ ಪೋಲ್ತು ನವಕೇಯೂರಂ ಸೊಗಸಿತು ನಭಶ್ಚರೇಂದ್ರನ ತೋಳೊಳ್ (ಶಾಂತಿಪು. ೩-೩೫). [ನಭಶ್ಚರ + ಇಂದ್ರ]

ನಭಶ್ಚಲಿ (ನಾ).=ನಭಶ್ಚರ ; ತಾಣಮಂ ತಿಳಿವುದೆ ತಡಂ ಮಹಾವೀರರಿಂ, ಪರ್ವತೋಪಮಧೀರರಿಂ ನಭಶ್ಚಲಿಗಳಿಂ . . . ಲಂಕೆಯನಿದಂ ದಹಿಸದೇ ನಿರ್ಪುದೆ ಧರಾತ್ಮಜಾವಲ್ಲಭನ ರೌದ್ರರೋಷಂ ? (ಶ್ರೀರಾಮಾ. ೫೧೩-೩೬೨). [ಸಂ. ನಭಶ್ಚಲಿನ್]

ನಭಶ್ಚುಂಬಿ (ನಾ). ಗಗನವನ್ನು ಮುಟ್ಟುವಂಥದಂ ; ಅತ್ಯಂತ ಎತ್ತರವಾದುದು ; ಗಗನಚುಂಬಿ : ಜನಮನೋಮಂದಿರದ ಸುಸ್ವಪ್ನ ಗೋಪುರದ ಕಲಶಂ ನಭಶ್ಚುಂಬಿಯಾಗದಿರೆ . . . . ಏನಿರ್ದುಮೇನ್ ಅನಾಗರಿಕತಾ ಶ್ರೀ ದಿಟಂ ಮಸಣಮಾ ಪತ್ತನಮಯೋಧ್ಯೆ ತಾನಾದೊಡಂ। (ಶ್ರೀರಾಮಾ. ೦೭೫-೬೨೬). [ಸಂ. ನಭಶ್ಚುಂಬಿನ್]

ನಭಸ (ಗು). ೧. ಮಂಜುಮುಸುಕಿದ; ಮಸುಕಾದ. (ನಾ). ೨. ಆಕಾಶ; ಆಗಸ ; ಬಾಂದಳ. ೩. ಮಳೆಗಾಲ. ೪. ಸಾಗರ ; ಸಮುದ್ರ ; ಕಡಲು. [ಸಂ.]

ನಭಸಂಗಮ (ನಾ). ಆಕಾಶದಲ್ಲಿ ಸಂಚರಿಸುವುದು ; ಖಗ ; ಪಕ್ಷಿ : "ಖಗಃ, ವಿಹಂಗಃ, ವಿಹಗಃ, ವಿಹಂಗಮಃ . . . ನಭಸಂಗಮಃ-೧೭ ಸಾಮಾನ್ಯವಾಗಿ ನಾನಾ ಬಗೆ ಪಕ್ಷಿಗಳೆಲ್ಲಕ್ಕೂ ಹೆಸರುಗಳು" (ಸಿದ್ಧಾಂತಿ. ೧೪೨). [ಸಂ.]

ನಭಸ್ಥಲ, ನಭಸ್ಥಳ (ನಾ). ೧. ಬಾಂದಳ ; ಆಕಾಶಭಾಗ ; ಗಗನತಳ : ವಿಸ್ತೀರ್ಣಮೆನಿಪ ನೀಲಪ್ರಸ್ತರದೊಳ್ ಮುನಿಪನಿರ್ದನಪಗತ ಜೀಮೂತ ಸ್ತೋಮಮಾಗಿ ವಿಮಳನಭಸ್ಥಲ [ಪಾಠಾಂ. ೪]ದೊಳ್ ತೊಳಪ ಚಂದ್ರ ನಂದದಿನಾಗಳ್ (ಚಂದ್ರಪು. ೩-೨) ; ಬಲದೇವಂ ಬರೆ ಕಂಡು ತದ್ವೃಷಭ ಸೇನೋರ್ವೀಶನಿತ್ತಿತ್ತಲಿತ್ತಲೆನುತ್ತುಂ ಪರಿತಂದು ತಾಗಿ ಕಱೆದಂ ಕೂರಂಬಿನಾಸಾರಮಂ . . . ನಭಸ್ಥಲಮೆತ್ತಲ್ ದೆಸೆಯೆತ್ತಲೆಂದೆನಿಸೆ ಬಾಣವ್ರಾತಜಾತಂ ತಮಂ (ಮಹಾನೇ. ೧೩-೩೬). ೨. ಶಿವನ ಒಂದು ಹೆಸರು. ನಭಸ್ಥಳ : ೧. ತಳರೆ ಮಹೀರಜದಿಂ ಘನವಿಳಾಸ ಗಜಘಟೆ ಯಿನವನಿಯಂ ನಭಕೆ ನಭಸ್ಥಳಮಂ ನೆಲಕ್ಕೆ ತಂದಂತಳುಂಬಮಾದುದು ತದೀಯ ಚತುರಂಗಬಳಂ (ಶಾಂತಿಪು. ೧೦-೧೪೭) ; ಶರನಿಕರಂ ಕರಂ ಬಿಡದೆ ಪಾಱೆ ನಭಸ್ಥಳದೊಳ್ ನಿರಂತರಂ ಬಱಿನೆಟಲಾಯ್ತು ಮುನ್ನಮದಱಿಂದೆ . . . ರಣಾಗ್ರಭೂತಳಂ (ಬಂಜರಿ. ೧೧-೧೦೯) ; ಮುಸುಕಿ ನಭಸ್ಥಳಂ ನೆಱೆಯೆ ತೀವೆ ದಿಶಾತತಿಯರ್ಕಮಂಡಲಂ ಮಸುಳೆ . . . ತೀವಿದುದಾ ಬಲಪಾದಘಾತದಿಂ ಪಸರಿಪ ಧೂಳಿ (ಮಹಾನೇ. ೧೦-೭೫). [ಸಂ.]

ನಭಸ್ಥಳ 'ನಭಸ್ಥಲ' ನೋ.

ನಭಸ್ಫಟಿಕ (ನಾ). ಪಾರದರ್ಶಕವಾದ ಸ್ಫಟಿಕ ; ಗಗನಸ್ಫಟಿಕ : ಅದಱಿಂದೊಳಗೆ ನಭಸ್ಫಟಿಕದ ವೇದಿವಿರಾಜಮಾನ ಮರಕತ ಮಾಣಿಕ್ಯದ ಗೋಪುರಂಗಳವಱಗ್ರದೊಳಂ ಪೂರ್ವೋಕ್ತ ರಚನೆಗಳ್ ವುದಿದಿರ್ಕುಂ (ಮಹಾನೇ. ೧೫-೬೬); ಮಕರತೋರಣಾದ್ಯಲಂಕಾರಗಳಿಂದಲೂ ದ್ವಾರಸ್ಥಿತ ಶಂಖಾದಿ ನವನಿಧಿಗಳಂ ರಕ್ಷಿಸುತ್ತಿರುವ ದೇವರ್ಕಳಿಂದಲೂ ಪೊಳೆಯುತ್ತಿರುವ ನಭಸ್ಫಟಿಕಮಯ ಪ್ರಾಕಾರವಂ ನಿರ್ಮಿಸೆಂದಾಜ್ಞಾಪಿಸಿದನು (ಪುರುಚ ೧೨೪). [ಸಂ.]

ನಭಸ್ಯ (ನಾ). ಚಾಂದ್ರಮಾನ ವರ್ಷದ ಆರನೆಯ ತಿಂಗಳಿನ ಹೆಸರು ; ಭಾದ್ರಪದಮಾಸ : "ಭಾದ್ರಪದಮಾಸಮಂ ನಭಸ್ಯವೆಂಬುದು" (ಹಲಾಯು. ೧೯-೧೧೪); "ನಭಸ್ಯಃ, ಪ್ರೌಷ್ಠಪದಃ, ಭಾದ್ರಃ, ಭಾದ್ರಪದಃ-೪ ಭಾದ್ರಪದಮಾಸದ ಹೆಸರುಗಳು" (ಸಿದ್ಧಾಂತಿ. ೩೮). [ಸಂ.]

ನಭಸ್ಸು (ನಾ). ಆಕಾಶ ; ಆಗಸ ; ಬಾಂದಳ : "ತಾರಕಿತಂ-ನಭಸ್ಸು" (ಕಾಶಕ್ಕ. ೭೮); ಪಯಸ್ಸು, ನಭಸ್ಸು, ರಜಸ್ಸು (ಶಬ್ದಾನು. ೬೯ ಪ್ರಯೋ). [ಸಂ. ನಭಸ್]

ನಭಿ (ನಾ). ಚಕ್ರ ; "ಗಾಲಿ" (ಗಂಗಾಮ. ೧೭೮). [ಸಂ.]

ನಭೋಂಗ (ನಾ). ಮೋಡದಂತೆ ಶರೀರವುಳ್ಳವನು ; ನೀಲವರ್ಣ ; ವಿಷ್ಣು : ಜಯತು ಜನಾರ್ದನ ಜಯ ಮುರಮರ್ದನ ಜಯಶ್ರೀ ವರಾಂಗ ನಭೋಂಗ (ಶತಸಾಂ. ೬೪-೨೨). [ಸಂ.]

ನಭೋಂಗಣ (ನಾ).=ನಭಸ್ಥಲ ೧ : ದೊಣೆಗಳಿನುರ್ಚುವ ತಿರುವಾಯ್ವೊ ಣರ್ಚಿ ತೆಗೆನೆಱೆವ ಬೇಗಮಂ ಕಾಣದೆ ಕೂರ್ಗಣೆಗಳ ಪಂದರನೆ ನಭೋಂಗಣದೊಳ್ ಕಂಡತ್ತು ದೇವಗಣಮಿನಸುತನಾ (ಪಂಪಭಾ. ೧೨-೧೮೪) ; ಇಂದ್ರದಿಗ್ದೇವಿ ನವಾರ್ಕಮಂಡಲಮನಾಂತಿರೆ ತತ್ಪ್ರಭೆಯಂ ನಭೋಂಗಣ ಶ್ರೀವಧುವೊಂದೆ ಕಾಲದೊಳೆ ತಾಳ್ದಿ ವಿರಾಜಿಸುವೊಂದು ಮಾಟ್ಕೆಯಿಂ (ಜಗವಿ. ೨-೮೭). [ಸಂ.]

ನಭೋಗ (ನಾ). ಆಕಾಶದಲ್ಲಿ ಸಂಚರಿಸುವವನು ; ದೇವತೆ ; ಸುರ ; ಅಮರ : ಮಂಜುಮಹಿಮಾಸ್ಪದಂ ಚಾರುವೃತ್ತಂ ಕಲಾಪುಂಜಂ ಸದಾ ನಭೋಗಂ (ಚೈಮಿಭಾ. ೨೮-೬೨) ; ಸದಾನ ಭೋಗಂ . . . ಸದಾ ನಭೋಗಂ (ಚಂದ್ರಸ. ೪೪). 'ನಭೋಗಪುರ' ಪರಾ. [ಸಂ.]

ನಭೋಗತಿ (ನಾ). ೧. ಗಗನದಲ್ಲಿ ಸಂಚರಿಸುವಿಕೆ ; ಆಕಾಶಗಮನ : ನಭೋಗತಿಯಂ ಸಾಧಿಸಲಕ್ಕು ಬೆಟ್ಟಗಳ ಚೂರ್ಣಂ ಮಾಡಲಕ್ಕೀಕ್ಷಿಸಲ್ ಸತಿಯಾ ಚಿತ್ತವಭೇದ್ಯವೈ (ಸೋಮೇಶ. ೮೦). ೨. ಆಕಾಶದಲ್ಲಿ ಸಂಚರಿಸುವವನು ; ಆಕಾಶಗಾಮಿ ; ಖೇಚರ : ಬೇಗಮುಸಿರ್ ಮುಟ್ಟಿಗವರೆ ಮೇಗುಸಿರ್ಗೊಂಡೊಮ್ಮೆಗೊಮ್ಮೆಗಗಿಮೊ[ಮ]ಟ್ಗದೆ ಬಂದಾಗಳೆಱಗಿರ್ದನಂದು ನಭೋಗತಿಯೊರ್ವಂ ನೃಪೇಂದ್ರಪದಸರಸಿಜದೊಳ್ (ಶಾಂತಿಪು. ೯-೮೩). ೩. ಹಕ್ಕಿ ; ಪಕ್ಷಿ. [ಸಂ.]

ನಭೋಗಪುರ (ನಾ). ಆಕಾಶದಲ್ಲಿ ಸಂಚರಿಸುವ ಪಟ್ಟಣ ; ತ್ರಿಪುರ : ಹರಿಯಿಂದಂ ಹರನಿಂದೆ ಶಕ್ತಿಧರನಿಂ ನೀರಿಂದೆ ಪಾಳಾದ ದುಷ್ಕರ ಲಂಕಾಪುರಮಂ ನಭೋಗಪುರವಂ . . . ಸುಸ್ಥಿರೆ ಹಮ್ಮೀರಪುರಕ್ಕೆ ತೋಡಿಸಲೊಡಂ ಮೂಢೋಕ್ತಿ ಮೂಲೋಕದೊಳ್ (ಹಮ್ಮೀರ. ೦-೬೪). [ನಭೋಗ + ಪುರ್$_2$]

ನಭೋಗಮನ (ನಾ). ೧.=ನಭೋಗತಿ ೧ : ನಾರದಂ ನಭೋಗಮನ [ಪಾಠಾಂ. ಮಾರ್ಗ]ದಿಂದಿಱಿದು ಬಂದು ಜನಾರ್ದನನ ವದನಾರವಿಂದಮಂ ನೋಟ್ಪುದುಂ (ಮಹಾನೇ. ೭-೧೪೧ವ). ೨. = ನಭೋಮಾರ್ಗ : ಆಗಳಾ ದೇಶಪುರುಷಂ ಬಂದನೆಂದು ಅಷ್ಟಶೋಭೆಗೆಯ್ದಿದಿರ್ಗೊಳೆ ಮತ್ತಮಂತೆ ನಭೋಗಮನದೊಳು ಬರೆ (ಜಾವುಂಪು. ೭೭). [ಸಂ.]

ನಭೋಜನ (ನಾ). ಆಕಾಶದಲ್ಲಿರುವವರು ; ದೇವತೆಗಳು : ಎಲ್ಲರುಂ ಭೋಗಿಗಳ್ವಾ ತಾಳಗತರೆನಿಸರೆಲ್ಲರುಂ ವಿದ್ಯಾಧರರ್ನಭೋಜನರೆನಿಸರ್ (ಚೈಮಿಭಾ. ೨-೧೦). [ಸಂ.]

ನಭೋದೇಶ (ನಾ).=ನಭಸ್ಥಲ ೧: ತುಂಬಿದತ್ತಶರೀರ ಗಂಧರ್ವಗಾಯನಂ ನೀರವನಿಶಾನಭೋದೇಶಮಂ (ಶ್ರೀರಾಮಾ. ೦೬-೪೨೫). [ಸಂ.]

ನಭೋನಗರ (ನಾ).=ನಭೋಗಪುರ. 'ನಭೋನಗರ ಹರಣ' ಹರಾ. [ಸಂ.]

ನಭೋನಗರಹರಣ (ನಾ). (ಆಕಾಶದಲ್ಲಿದ್ದ) ತ್ರಿಪುರಗಳನ್ನು ನಾಶಗೊಳಿಸಿದವನು ; ತ್ರಿಪುರಾರಿ ; ಶಿವ : ಜಯಜಯ ನಭೋನಗರಹರಣ ಪಟುನಿಟಿಲಾಕ್ಷ ಜಯಜಯ ಜಲಂಧರಮದಾಂಧಗಜಹರ್ಯಕ್ಷ (ರಾಜಶೇ. ೧೪-೧೬೯ ರಗಳೆ). [ನಭೋನಗರ + ಹರಣ$_2$]

ನಭೋನಿನದ (ನಾ). ಆಕಾಶದಿಂದ ಹೊಮ್ಮುವ ಮಾತು ; ಆಕಾಶವಾಣಿ ; ಅಶರೀರವಾಣಿ : ಇಲ್ಲಿ ನಿಲ್ಲರ್ಜುನ ತಪೋವನಕಿಲ್ಲಿ ನೆಲೆ ಶ್ರುತಿಯುವತಿ ಸೂಸುವ ಚೆಲ್ಲೆಗಂಗಳಮೊನೆಗೆ ಮೀಸಲುಗುಡದ ಮೈಸಿರಿಯ . . . ಶಿವನ ಕ್ಷೇತ್ರವಿದೆಯೆಂದುದು ನಭೋನಿನದ (ಕುವ್ಯಾಅ. ೪-೪೦). [ಸಂ.]

ನಭೋನೌಕೆ (ನಾ). ಅಂತರಿಕ್ಷ ವಿಮಾನ; ಪುಷ್ಪಕ ವಿಮಾನ: ಮತ್ತೆ ಮತ್ತಪ್ಪಳಿಸಿದನು ಆ ನಭೋನೌಕೆ ಪಕ್ಷಸಂಜಾತಝಂಝಾವಾತಗರ್ತಕ್ಕೆ ಸಿಲ್ಕಿ ತಿರ್ಪನೆ ಪುರ್ಬುತಿರುಗಂ ತಿರುಗುವಂತೆ (ಶ್ರೀರಾಮಾ. ೧೨೯-೫೬೩).
[ಸಂ. ನಭೋನೌಕಾ]

ನಭೋಭಾಗ (ನಾ).=ನಭಸ್ಥಲ: ೧ ಅಂತು ನಭೋಭಾಗದಿಂ ಭೂಮಿ ಭಾಗಕ್ಕೆಟೆದು ತನ್ನ ಮುಂದೆ ನಿಂದರವಿಂದಬಾಂಧವನಂ ನೋಡಿ (ಪಂಪಭಾ. ೦-೯೦ ಪ); ಇಂದ್ರಂ ಬರ್ಪಂತೆ ಬಂದು ಕಂಡೊಡವರೆ ನಭೋಭಾಗದೊಳ್ ಪಯಣಂಬಂದು ಚಂಪಾಪುರಮನೆಯ್ದಿ ಪುರಬಹಿರಂಗೆಯೊಳ್ ಬೀಡಂ ಬಿಟ್ಟರ್ದು (ಬಂಹರಿ. ೪-೪೦ ಪ). [ಸಂ.]

ನಭೋಮಂಡಲ (ನಾ).=ನಭಸ್ಥಲ ೧: ಆ ನಾರದಂ ನಭೋಮಂಡಲದಿಂ ಸಭಾಮಂಡಲಕ್ಕವತರಿಸೆ (ಪಂಪಾಮಾ. ೩-೧೯ ಪ); ಕೊಂಡುಬಂದೆಳನೀರ್ಗಳಂ ಸುರಿಯಲುರಿ ನಭೋಮಂಡಲವನಪ್ಪಳಿಸೆ (ಕೃಷ್ಣಾಭಾ. ೧೦-೩೮); ಇನ್ನು ಬರಲಿರುವ ಆರನೆಯ ಕಾಲವಂತೂ ಹಿಂಸೆಯ ಪತಾಕೆಯನ್ನು ನಭೋಮಂಡಲಕ್ಕೆ ಹಾರಿಸುವುದೆಂದು ಸರ್ವಜ್ಞರ ವಾಣಿ (ಧಾರವಿ. ೧೭೩). [ಸಂ.]

ನಭೋಮಣಿ (ನಾ). ಸೂರ್ಯ; ಗಗನಮಣಿ; ಭಾನು: ಆ ಮಣಿ ಮೆಱೆದುದು ತರುಣನಭೋಮಣಿ ನಿಜಸುಪ್ರತಾಪವಿಜಿತಂ ಪರಿತಂದಾ ಮಹಿತರಾಜಶೇಖರ ಭೂಮೀಶ್ವರನಂಘ್ರಿಕಮಳಮಂ ಸೇವಿಪವೋಲ್ (ರಾಜಶೇ. ೩-೨೬). [ಸಂ.]

ನಭೋಮಾರ್ಗ (ನಾ). ವೋಘಮಾರ್ಗ; ಆಕಾಶ: ಭೋಗಭೂಮಿಜರ ಕಣ್ಣಾಗಳ್ ನಭೋಮಾರ್ಗಪರ್ಯಟನಂ ಶಿಕ್ಷಿಸಿ. ಪೋದರಾತ್ಮನಿಯಮಕ್ಕ ತ್ಯಾರ್ಯರಿತ್ತನ್ನೆಗಂ (ಕಾಂತಿಪು. ೭-೯); ತಾನೈರಾವತಸ್ಕಂಧದೇಶನಿಷಣ್ಣಂ ಸುರರಾಜನಾತ್ಮಶಚಿದೇವೀ ಸಂಯುತಂ... ಮೃದುಮೃದಂಗಧ್ವಾನಮುಂ ಗಾಯಕೀಜನತಾಮಂಗಲಗೇಯಮುಂ ಸೊಗಯಿಸಲ್ ಬಂದಂ ನಭೋಮಾರ್ಗದೊಳ್ (ಮಹಾನೇ. ೯-೮೮). [ಸಂ.]

ನಭೋಮಾಸ (ನಾ). ಚಾಂದ್ರಮಾನದ ಪ್ರಕಾರ ಬರುವ ಶ್ರಾವಣ ಮಾಸ: "ಮಧು ಮಾಧವಂ ಶುಕ್ರಮಾ ಶುಚಿ ನಭೋಮಾಸಮುದು ನಭಸ್ಯಮಿಷಂಪೂರ್ಜಂ ಸಹಂದದಮುಂದದು ಸ ಹ ಸ್ಯಂ ತಪಮದಾ ತಪಸ್ಯಾಖ್ಯಮೆನೆ ಚೈತ್ರಾದಿ ನಾಮಮಂಕ್ಕುಂ" (ಮಂಗರಾ. ೨೦-೧೦).
[ಸಂ.]

ನಭೋಯಾನ (ನಾ). ಆಕಾಶಗಮನ; ಬಾನಿನಲ್ಲಿ ಹೋಗುವುದು: ಮತ್ತಂ ನಭೋಯಾನದೊಳ್ ಕಿಱಿದು ಪೊಱ್ಮುಗೆಯುಂ . . . ಧರ್ಮೋಪದೇಶಂಗೆಯುತ್ತುಮುತ್ತಮತೀರ್ಥೇಶ್ವರಂ ವಿಹಾರಿಸೆ (ಶಾಂತಿಪು. ೦೨-೨೩ ಪ); ನಭೋಯಾನದೆ ಕಾಲಶಂಬರ ಖಗೇಂದ್ರಂ ಬಂದು (ಮಹಾನೇ. ೯-೦೭). [ಸಂ.]

ನಭೋವಚನ (ನಾ). = ನಭೋನಿನದ: ಮರುಳೆ ನೀ ಕೌಂತೇಯ ಮಾದ್ರೇಯರನು ನೋಡುವುದಿತ್ತ ನನಗುತ್ತರವನಿತ್ತುದಕವನು ಕುಡಿಯೆಂದುದು ನಭೋವಚನ (ಕುಮಾಅ. ೨೩-೨೪); ನೊಂದ ನೋವೆಲ್ಲಡಗಿ ರಣದಲಿ ಹೊಂದಿದವರೇಳುವರು ಮಾರುತಿಯಿಂದ ಚಿಂತಿಸದೇಡ ಕೇಳೆಂದುದು ನಭೋವಚನ (ಕಾಶಿಕಾ. ೨೯-೨೨). [ಸಂ.]

ನಭೋವಳಯ (ನಾ). = ನಭಸ್ಥಲ ೧: ಬಂದು ಭವತ್ಪುರಾಗ್ರಿಮ ನಭೋವಳಯಾಂತರದಲ್ಲಿ ನಿಂದು ಪೋಗೆಂದೊಡೆ ಬಂದೆನಾಂ (ಚಂದ್ರಪು. ೬-೨೦). [ಸಂ. ನಭೋವಲಯ]

ನಭೋವಾಣಿ (ನಾ). ಅಶರೀರವಾಣಿ. [ಸಂ.]

ನಭೋವೀಥಿ (ನಾ).=ನಭೋಮಾರ್ಗ: ನಭೋವೀಥಿ[ಪಾಕಾಂ. ಧಿ] ಯೊಳುಮಾಕಾಂತೆಯುಂ ಮಹೇಶ್ವರನು ಮಾನಿತೋನ್ನತದಿವ್ಯರತ್ನವಿಮಾನ ರೂಢಿತಯಾನರಾಗಿ ಸುಮಾನದಿಂ ಗಮಂನಿಸುತ (ಭಸ. ೩೦-೨). [ಸಂ.]

ನಮ (ನಾ). ವಂದನೆ; ನಮಸ್ಕಾರ: "ನಮಂ [ಪಾಕಾಂ. ತಂ] ವಂದನಂ ಪೊಂಗಿ ಪೊಡಮಡುಹ" (ಮಂಗರಾ. ೦೩೬-೩೯); ನಮ ಸ್ವಸ್ತಿ (ಎಕ. II, ೨೩-೧ ; 700); ಎಲ್ಲರಿಗಮಿಾಗ ನಮೊ–ಬಂಧುಗಳೆ, ಭಾಗಿಗಳೆ . . . ಕೊಳ್ಳಿರೀ ನಮವನೆನು (ಮಂಕುಶಿ. ೯೨೨). [ಸಂ. ನಮಸ್]

ನಮಃಶಿವಾಯ (ನಾ). ೧. ಶಿವನಿಗೆ ನಮಸ್ಕಾರ; P ವೀರಶೈವರು ಭಜನೆಯಂತೆ ಈ ಶಬ್ದಗಳನ್ನು ಉಚ್ಚರಿಸುತ್ತಾರೆ. 'ನಮಃಶಿವಾಯ' ಪಂಚಾಕ್ಷರಿಮಂತ್ರವೆಂದು, 'ಓಂ ನಮಃಶಿವಾಯ' ಎಂಬುದು ಷಡಕ್ಷರಿಮಂತ್ರವೆಂದು ತಿಳಿಯಲಾಗಿದೆ: ನಮಃಶಿವಾಯ ನಮಃ ಶಿವಾಯ ಶರಣೆಂದಿತ್ತು ಲಲಾಟಲಿಖಿತ ಬರೆದ ಬಳಿಕ ಪಲ್ಲಟವ ಮಾಡಬಾರದು (ಬಸವ. ೦೬). ಶಿಥಿಲಾಕ್ಷರಂಗಳಿಂ ನಮಃಶಿವಾಯ ನಮಃಶಿವಾಯಯೆನುತ್ತೆ (ನಂಬಿರ. ೬-೨೭); ಎನ್ನ ರೇಚಕವೇ ನಮಃಶಿವಾಯ ನಮಃಶಿವಾಯ ನಮಃ ಶಿವಾಯ ಎನ್ನುತಿಪ್ಪುದು ನೋಡಾ (ಸಿದ್ಧೇಶ್ವ. ೭೨-೨೦೮); ನಮಃ ಶಿವಾಯಾದ್ರಿಸುತಾಪ್ರಿಯಾಯ ತೇ (ವೃಷವಿ. ೬-೦೦). ೨. ಶಿವನಿಗೆ ಅರ್ಪಿತವಾದುದು; ಶಿವಾರ್ಪಣ: ಲೋಗರೇನನೆಂದೊಡಂ ನಮಃ ಶಿವಾಯವಾಗೆ ತನಗೆ ತಾಗಿದಚ್ಚಪರಿಮಳಂ ನಮಃಶಿವಾಯವಾಗೆ (ನಮರ. ಧೇ. ೧೯೯-೧೩). [P ಸಂಸ್ಕೃತದಲ್ಲಿ ಇವು ಭಿನ್ನಪದಗಳು]

ನಮಃಶಿವಾಯವಿಡಿ (ಕ್ರಿ). ನಮಃಶಿವಾಯ ಎಂಬ ಮಂತ್ರವನ್ನು ಬಿಡದೆ ಜಪಿಸು: ಇಂತು ಪಂಚವರ್ಣದಿಂ ಶರೀರವಾಗಿ ಬೀಗಿ ಬೆಳೆದು ಸಂತತಂ ನಮಃಶಿವಾಯವಿಡಿದು ತೀವಿ ತುಳುಕಿ ತಳೆದು (ಪಮರ. ಧೇ. ೧೯೯-೧೦). [ನಮಃಶಿವಾಯ + ಬಿಡಿ$_1$]

ನಮಕ್‌ಹರಾಮ್ 'ನಮ್ಮಕ್‌ಹರಾಮ್' ನೋ.

ನಮಕ (ನಾ). ರುದ್ರವೆಂಬ ಮಂತ್ರ; P ಯಜುರ್ವೇದದ ಒಂದು ಭಾಗ. ನಮಂ ಎಂದು ಮುಗಿಯುವ ರುದ್ರಮಂತ್ರ: ಚಮಕದಿಂದಖಿಲಾಧಿಪತ್ಯವ ನಮಕದಿಂದಖಿಲಾತ್ಮಭಾವವನಮರ ಮನುಜ ಭುಜಂಗ ಮುಖದೊಳ್ಬಿತ್ತರಿಸುತಿರಲು (ವಿವೇಕ. ೦೩-೯೯); ಪರಮಭಕ್ತಿಲಿ ಹಿಡಿದು ಗದ್ದುಗೆ ಮೇಲೆ ಕುಳ್ಳಿರಿಸಿ ನಮಕಚಮಕಗಳಿಂದ . . . ಸ್ನಾಮಿಗಭಿಷೇಕವನು ಮಾಡಿಸಿ (ಕೊಲ್ಲಿಮಾ. ೬೦-೪). [ಸಂ.]

ನಮಕಾನುವಾಕ (ನಾ). ನಮಃ ಶಬ್ದದ ಆವೃತ್ತಿಯಿಂದ ಕೂಡಿದ ಯಜುರ್ವೇದದ ಒಂದು ಭಾಗ; ರುದ್ರಾಧ್ಯಾಯ: ವೇದಾಂತ ವಾಕ್ಯಗಳ ನಮಕಾನುವಾಕಗಳ . . . ನೀನುತ್ಕ್ರಮಿಸೆ ಸಾಧನವೊ ಮುಕ್ತಿಗದು (ಮಂಕುಶಿ. ೯೭೦). [ನಮಕ + ಅನುವಾಕ]

ನಮತ (ನಾ). ಒಡೆಯ; ಯಜಮಾನ: ನಮತಂ ಚಾತುರ್ವಲಮಂ ಸಮರಕ್ಕೆನುವಾಗಲೊಡ್ಡಿ ಸೇನೆ ಮುರರಿವು ದೇವ ಮಹಾಪ್ರಸಾದ ಮೆನುತುಂ . . . ಆಕರ್ಷಿಸಿದಂ (ಮಹಾನೇ. ೧೨-೦೬). [ಸಂ.]

ನಮನ (ನಾ). ೧. ಬಾಗಿಸುವಿಕೆ; ವಂಗಿಸುವಿಕೆ. ೨. ಬಾಗುವುದು; ವಂಗಿಯುವುದು; ನಮಸ್ಕರಿಸುವುದು; ನಮಸ್ಕಾರ; ವಂದನೆ: "ಬಳ್ಕು – ನಮನೇ" (ಕಮಧಾ); "ಮೊಟ್ಟು – ನಮನೇ" (ಕಮಧಾ); ದಾರಿದ್ರ್ಯಲಕ್ಷ್ಮಿಯೆ ನೀ ಕೊಟ್ಟ ಅಂಜನವದ್ಭುತ ಕೋ ಲಕ್ಷ ನಮನೆ ನಾ ಕಂಡೆನೆಲ್ಲರನಾರು ಕಾಣರು ನನ್ನ ಪರಿಚಯವಿದ್ದರು ಮುನ್ನ (ಇಂಜಾಪ. ೧೦೩-೫೫); ಈ ಗುರುವೃಂದಕ್ಕೆ ಅನಂತ ನಮನಗಳು (ಡ್ರಾವಿವಿ. XII ಮೊದಲ ಮಾತು); ಆ ಮರದ ಬದಿಗೊಮ್ಮೆ ಸುಳಿದೆಯಾದೊಡೆ, ಪಥಿಕ! ಹೇ! ದೇವಿ! ನಿನಗೊಂದು ನಮವನೆನ್ನು! (ಚಂತನ. ೦೨-೨೦). ೩. [ಭೌತವಿ] ಬಾಗುವಿಕೆ; ಬಾಗುವ ಕ್ರಿಯೆ; ವಕ್ರನಿಯೋಜನ: ಬೆಳಕಿನ ಅಥವಾ ಇತರ ಅಲೆಗಳು ತಡೆಗಳನ್ನು ಸುತ್ತಿಕೊಂಡು ಬಂದು ಪ್ರತಿಯೋಗ ಹೊಂದುವುದರಿಂದ ಉಂಟಾದ ಘಟನೆಗೆ ನಮನ (Diffraction) ವೆಂದು ಹೆಸರು (ಭೌತವಿ. ೨೦೦). [ಸಂ.]

ನಮಲು$_1$, ನೆವರು$_2$ (ಕ್ರಿ). ೧. ದವಡೆಹಲ್ಲುಗಳಿಂದ ಆಹಾರವನ್ನು ನುಣ್ಣಗೆ, ಸಣ್ಣಗೆ ಮಾಡಿ ತಿನ್ನು; ಅಗಿದಗಿದು ತಿನ್ನು; ಅಗಿ; ಚರ್ವಣಮಾಡು; ನುರಿಸು: ರಕ್ಕಸಿಯು ಮೀನುಗಳನ್ನು ನಮಲುತ್ತ ಆವಾಗಲಾದರೊಮ್ಮೆ ಸುರೆಯನ್ನು ಸ್ವಲ್ಪ ಸ್ವಲ್ಪ ಕುಡಿಯುತ್ತಿದ್ದಳು (ಶ್ರೀರಾಪ. ೧೦೭). ೨. ಮೆಲುಕುಹಾಕು; ಮೆಲುಕಾಡಿಸು: (ಕ). **ನೆವರು$_2$**: ೧. ನೆವರಿಕೊಂಡು ಹೋಗುವವ ಬವರಕ್ಕೆ ಬಂದಾನೆ? (ಗಾದೆ).

[ದೇ. ॥ ತುಳು. ನವುಂತು, ನವುಂಪು, ನೌಂತು, ನೌಂಪು; ತೆಲು. ನಮಲು, ನವುಲು, ನವ್ಲು, ನೆಮರು]

ನಮಲು$_2$, ನೆಮರು (ನಾ). ೧. ಅಗಿಯುವಿಕೆ; ತಿನ್ನುವಿಕೆ. 'ನಮಲುಗರೆ' ಪರಾ. ೨. ಮೆಲುಕುಹಾಕುವಿಕೆ; ಮೆಲುಕಾಡಿಸುವಿಕೆ. ನೆಮರು.

ನಮಲು ಹಾಕು, ನೆಮರು ಹಾಕು = ಮೆಲುಕುಹಾಕು; ಮೆಲುಕಾಡಿಸು: (ಕ); ದನಕರುಗಳು ನೆಮರುಹಾಕುವುದು ನಿನ್ನೆ ಮೊನ್ನೆ ಕಲಿತ ಅಭ್ಯಾಸವಲ್ಲ (ಪ್ರಾಚಿಪ್ರ. ೨೫). [<ನಮಲು$_1$]

ನಮಲುಗರೆ (ಕ್ರಿ). ಕಚ್ಚಿ ತಿನ್ನು; ಅಗಿದು ತಿನ್ನು: ಮೀನುಗಳನ್ನು ನಮಲುಗರೆಯುತ್ತ ಅಮ್ಮ, ಅಯೋಧ್ಯೆಗೆ ಹೋಗುವುದು ಯಾವಾಗ? ಎಂದನು (ಶ್ರೀರಾಪ. ೧೦೭). [ನಮಲು$_2$ + ಕರೆ ?]

ನಮಶ್ಶಿವಾಯ (ನಾ). ≡ ನಮಃಶಿವಾಯ: ನಮಶಿವಯ ನಮಶ್ಶಿವಾಯಂ ನಮಶಿವಯಂ ನಮಶ್ಶಿವಾಯ ನಮಶಿವಯೆನುತಂ ಮಮತೆಯಲಿ ನೆನೆವುದೆಂದೀಕ್ರಮದಿಂದುಪದೇಶವೇಳ್ದ ಸಾನಂದೇಶಂ (ನನ್ನಜಾ. ೫-೧೫೫). [ಸಂ.]

ನಮಸಿತ (ಗು). ೧. ಪೂಜಿಸಿದ; ಸಮ್ಮಾನಿತ; ನಮಸ್ಕರಿಸಿದ. (ನಾ). ೨. ನಮಸ್ಕರಿಸಿದುದು: "ಅರ್ಹಿತಂ, ನಮಸ್ಕಿತಂ, ನಮಸಿತಂ, ಅಪಚಾಯಿತಂ, ಅರ್ಚಿತಂ, ಅಪಚಿತಂ – ೬ ಪೂಜಿಸಲ್ಪಟ್ಟದ್ದು, ನಮಸ್ಕರಿಸಲ್ಪಟ್ಟದ್ದು" (ಸಿದ್ಧಾಂತಿ. ೩೦೩). [ಸಂ.]

ನಮಸ್ಕರಣ (ನಾ). ನಮಸ್ಕಾರ; ವಂದನೆ. 'ನಮಸ್ಕರಣಂಗೆಯ್' ಪರಾ. [ಸಂ.]

ನಮಸ್ಕರಣಂಗೆಯ್ (ಕ್ರಿ). ನಮಸ್ಕಾರ ಮಾಡು; ವಂದಿಸು: ಶರಣರಂ ಕಂಡಾಕ್ಷಣಂ ತನ್ನಮಸ್ಕರಣಂಗೆಯ್ಯದೆ ಪೋದೆನೋ (ವೃಷವಿ. ೩೦-೨೦). [ನಮಸ್ಕರಣ + ಕೆಯ್$_1$]

ನಮಸ್ಕರಿಸು (ಕ್ರಿ). ನಮಸ್ಕಾರ ಮಾಡು; ವಂದಿಸು: ವಿಮಲಸ್ವರೂಪೆಗೆ ಭುವನಸ್ತುತ್ಯೆಗೆ ಯಿಾ ಶಾಸ್ತ್ರಪ್ರಾರಂಭದಲ್ಲಿ ನಮಸ್ಕರಿಸುವಾತನವೆಂ (ಶಮದ. ೦ ವೃತ್ತಿ, ಪೀಠಿಕೆ): ಧಿಕ್ಕನೆ ಭೂಮಿಯೊಳು ಸಾಷ್ಟಾಂಗವೆಱಗಿ ನಮಸ್ಕರಿಸುತಿರಲು (ಬಸಪು. ೪೬-೬೭); ತಾಯಿಗೂ ದ್ರೌಪದಿಗೂ ನಮಸ್ಕರಿಸಿ (ಜಂಗಾಳ್ಯ. ೨೦). [ನಮಸ್ಕರಣ + – ಇಸು$_3$]

ನಮಸ್ಕಾರ (ನಾ). ೧. (ದೇವರು, ಗುರು ಹಿರಿಯರು ಮೊದಲಾದವರಿಗೆ ಗೌರವವನ್ನು ಸೂಚಿಸುವುದಕ್ಕಾಗಿ) ಬಾಗುವಿಕೆ; ವಂದನೆ; ಪ್ರಣಾಮ: "ಪಾದಗ್ರಹಣಂ, ಅಭಿವಾದನಂ ಈ ೨ ನಮಸ್ಕಾರ ಮಾಡುವುದು" (ನಾಚರಾ. ೦೨೯); "ತುಳಿಲೆಱಗು ಮೊಟ್ಗು ಮಣಿ ಕುಂಬಿ ಪೊಡಮಡಿಕೆಯು ನಮಸ್ಕಾರಕೆ ತವೆ ಸಂದ ನಾಮ" (ಶಬ್ದಮಂ. ೩೫); ಒಳ್ಳಿತಪ್ಪ ಮುಹೂರ್ತದೊಳ್ ದೀಕ್ಷೆಯಂ ಕೊಟ್ಟು ಪಂಚಮಹಾವ್ರತಂಗಳನೇಱಿಸಿ ಪಡಿಕಮಣಂ ಪೇಟ್ದ ತದನಂತರಮಿಂ ಕಲ್ಪಿಸಿಮೆಂದೊಡೆ ನಮಸ್ಕಾರಂಗಳುಮಾಳೋಚನೆಗಳಂ ನಿಯಮಮುಮನೋದಿದೊಡಲ್ಲದೆ ಪೇಟಲಾಗದೆಂದೊಡೆ (ವಡ್ಡಾರಾ. ೬-೪); ಹಾಗದ ಕೆರಹ ಹೊಱಗೆ ಕಳೆದು ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವನಂತೆ ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲಾ (ಬಸವ. ೦೯೬); "ನಮಸ್ಕಾರ"! ಎಂದೆದ್ದು ನಡೆದಿರೆ ವಿಭೀಷಣಂ, ಮೇಲೆಳ್ದಳನಲೆ (ಶ್ರೀರಾಮಾ. ೫೮೨-೨೦೦); ಗುರುತಿನವರನ್ನು ಕಂಡರೆ . . . ಅವರಿಗೆ ನಮಸ್ಕಾರ ಮಾಡಬೇಕು (ಮುಂಬಯಿ. ೪-೩೪). ೨. ನಮಸ್ಕರಿಸುತ್ತೇನೆ ಎಂದು ಆದರ ಸೂಚಿಸುವುದಕ್ಕಾಗಿ ಹೇಳುವ ಮಾತು: ನಮಸ್ಕಾರ, ಬನ್ನಿ ಕುಳಿತುಕೊಳ್ಳಿ (ರೂಢಿ). ೩. ಗ್ರಂಥಗಳ ಆದಿಯಲ್ಲಿ ಬರುವ ದೇವತಾಪ್ರಾರ್ಥನೆ ಎಂಬ ನಾಂದಿಯಲ್ಲಿ ಒಂದು ವಿಧ,–ಬಗೆ.

ನಮಸ್ಕಾರ ಹಾಕು = ೧. ಪ್ರಣಾಮ ಮಾಡು; ವಂದಿಸು: ದೇವರಿಗೆ ನಮಸ್ಕಾರ ಹಾಕಿ ಬರುತ್ತೇನೆ (ರೂಢಿ). ೨. ವಿದಾಯ ಹೇಳು: ಆತ ಈ ಕೆಲಸಕ್ಕೆ ನಮಸ್ಕಾರ ಹಾಕಿ ಹೊರನಡೆದ (ರೂಢಿ). ನಮಸ್ಕಾರ ಹೊಡೆ = ೧. ನಮಸ್ಕರಿಸು; ವಂದಿಸು: ಅವನು ಅವರನ್ನು ನೋಡಿದಾಗಲೆಲ್ಲಾ ನಮಸ್ಕಾರ ಹೊಡೆದು ತನ್ನ ಬಡ್ತಿಯ ಬಗ್ಗೆ ಕೇಳುತ್ತಾನೆ (ರೂಢಿ). ೨. = ನಮಸ್ಕಾರ ಹಾಕು: ೨: ಕೆಲಸ ಮಾಡಲಾರದೆ ಆ ಕೆಲಸಕ್ಕೆ ನಮಸ್ಕಾರ ಹೊಡೆದ ಆತ (ರೂಢಿ). [ಸಂ.]

ನಮಸ್ಕಾರಂಗೆಯ್ (ಕ್ರಿ). ನಮಿಸು; ವಂದಿಸು: ಅರಸಂ . . . ದೇವರ್ಗೆ ನಮಸ್ಕಾರಂಗೆಯ್ದು ಋಷಿಯರಂ ಬಂದಿಸಿ ತನ್ನ ಮನೆಗೆವೋದಂ (ವಡ್ಡಾರಾ. ೩೩-೦೨); ನಾರದಂಗೆ ನಮಸ್ಕಾರಂಗೆಯ್ದು ಚಿತಾಸನದೊಳಿರಿಸುವುದುಂ (ಮಹಾನೇ. ೦೦-೯೦ ವ). [ನಮಸ್ಕಾರ + ಕೆಯ್$_1$]

ನಮಸ್ಕಾರಮಂತ್ರ (ನಾ). [ಜೈನ] ಣಮೋ ಅರುಹಂತಾಣಂ ಇತ್ಯಾದಿ ಮಂತ್ರ; ಜೈನಧರ್ಮದ ಪಂಚಗುರುಗಳಿಗೆ ಸಲ್ಲುವ ನಮಸ್ಕಾರ: ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಯಾರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಳೋಏ ಸಬ್ಬ ಸಾಹೂಣಂ (ಅರ್ಹಂತರಿಗೆ ನಮಸ್ಕಾರ, ಸಿದ್ಧರಿಗೆ ನಮಸ್ಕಾರ, ಆಚಾರ್ಯರಿಗೆ ನಮಸ್ಕಾರ, ಉಪಾಧ್ಯಾಯರಿಗೆ ನಮಸ್ಕಾರ, ಲೋಕದಲ್ಲಿರುವ ಸರ್ವಸಾಧುಗಳಿಗೂ ನಮಸ್ಕಾರ) – ಇದು ಪಂಚ(ಪರಮೇಷ್ಠಿಗಳ)ನಮಸ್ಕಾರ ಮಂತ್ರ . . . ಈ ನಮಸ್ಕಾರಮಂತ್ರ ಜೈನರ ಗಾಯತ್ರಿ ಎನ್ನಬಹುದು (ಅದಿಸಂ. XI ಪೀಠಿಕೆ). [ನಮಸ್ಕಾರ + ಮಂತ್ರ]

ನಮಸ್ಕಾರಮುದ್ರೆ (ನಾ). ಪೂಜೆ ಮೊದಲಾದ ಸಂದರ್ಭಗಳಲ್ಲಿ ಮಾಡುವ ಒಂದು ಮುದ್ರೆ; ಹಸ್ತದ ಬೆರಳುಗಳನ್ನು ಹೊಂದಿಸುವ ರೀತಿ: ಗಾಯತ್ರೀಮುದ್ರೆ ಕಾಲಕಂಠಮುದ್ರೆ ಶೂಲಮುದ್ರೆ ನಮಸ್ಕಾರಮುದ್ರೆ . . . ಸಂಹಾರಮುದ್ರೆಯೆಂಬಾದಿಯಾಗಿ ಸಕಲಮುದ್ರೋಪಮುದ್ರಾಬಂಧಲಕ್ಷಣಗಳಂ ಗುರುಮುಖದಿಂದಱಿತು (ವಿವೇಕ. ೧೦೩). [ನಮಸ್ಕಾರ + ಮುದ್ರೆ]

ನಮಸ್ಕಾರಿ (ನಾ). ಮುಟ್ಟಿದರೆ ಎಲೆಗಳನ್ನು ಮುದುರಿಕೊಳ್ಳುವ ಒಂದು ಬಗೆಯ ಸಸ್ಯ; ಮುಟ್ಟಿದರೆ ಮುನಿ; ಮುಟ್ಟಲ ಮುರುಕ; "ನಮಸ್ಕಾರೀ, ಗುಂಧಕಾರೀ, ಸಮುಂಗಾ, ಖದಿರಾ – ೪ ಮುಟ್ಟಿದರೇ ಮುನಿವನ ಹೆಸರುಗಳು. ಮುಟ್ಟುಮುಡುಗಿಡ" (ಸಿದ್ಧಾಂತಿ. ೦೪೪). [ಸಂ. ನಮಸ್ಕಾರೀ]

ನಮಸ್ಕಾರ್ಯ (ನಾ). ನಮಸ್ಕರಿಸಲು ಯೋಗ್ಯನಾದವನು; ಪೂಜ್ಯ: ಆರ್ಯವಾರ್ಯಂ . . . ಸಜ್ಜನಂ ಶಿವಕಾರ್ಯಧೂರ್ಯಂ ಭೂಜನ ನಮಸ್ಕಾರ್ಯನೆನಲೆಸೆದ (ಬಸಪು. ೨೨-೨೪). [ಸಂ.]

ನಮಸ್ಕೃತಿ (ನಾ). ನಮಸ್ಕಾರ ಮಾಡುವಿಕೆ; ವಂದನೆ: ನಮಸ್ಕೃತಿಗಗ್ರಭಾಗದೊಳ್ ಕೂಡುತುಮಿರ್ಪ ಕೆಯ್ಗಳುಮನಿತ್ತೆ (ಚಂದ್ರಪು. ೧೨-೧೫೩). [ಸಂ.]

ನಮಸ್ಕ್ರಿಯಾವಿಧಿ (ನಾ). ನಮಸ್ಕಾರದ ನಿಯಮ, – ಕಟ್ಟಳೆ: ನಂದೀಶ್ವರಾದ್ಯುದಿತದ್ವೀಪ ನಮಸ್ಕ್ರಿಯಾವಿಧಿಗಳಂ ನೀಂ ಮಾಡು ದೇವಾಧಿಪಾ (ಶಾಂತಿಪು. ೭-೨೫). [ಸಂ.]

ನಮಸ್ತೇ (ನಾ). ೧. ನಿನಗೆ ನಮಸ್ಕಾರ : ಶ್ರಿಮದಜಿತಭಟ್ಟಾರಕಜಿನ ನಮಸ್ತೇ ನಮಸ್ತೇ (ಅಜಿಪು. ೪-೭೯ ಗದ್ಯ); ಭವಿತನವ ಕಳೆದು ಭಕ್ತನ ಮಾಡಿ . . . ತ್ರಿವಿಧ ಸುಖಸಮರತಿಯನವಿರತಂ ದಯೆಗೆಯ್ದು ಧವಗೇಡಿಯೆನಿಸದವರ ಅವಿರಳನೇ ಗುರು ನಮಸ್ತೇ (ಮೈಲಾರ. ೦೮೮-೧) ;ಅನಿಚ್ಛನ್ನಪಿಕೈ ಮುಗಿದೆಂದೆ ಗುಲಾಬಿಗೆ : "ನಮಸ್‌ತೇ!" (ಅನಿಕೇ. ೩೨-೦೭). ೨. = ನಮಸ್ಕಾರ ೨ : ಹೋಗಿ ಬರುತ್ತೇನೆ ನಮಸ್ತೇ (ರೂಢಿ).

[P ಇದು ಸಂಸ್ಕೃತದಲ್ಲಿ ನಮಃ ಮತ್ತು ತೇ ಇವು ಸೇರಿ ಆದ ಒಂದು ವಾಕ್ಯ]

ನಮಸ್ಯ (ಗು). ೧. ಪೂಜಿಸಬೇಕಾದ; ಪೂಜ್ಯವಾದ. (ನಾ). ೨. ನಮಸ್ಕಾರವನ್ನು ಪಡೆಯುವವನು : ಪೂಜ್ಯನಾದವನು : ಚತುರಾಸ್ಯನುಮಹಮಿಂದ್ರ ನಮಸ್ಯನುಂ . . . ಆಗಿ (ಶಾಂತಿಪು. ೦೨-೧ ವ) ; ವರಬುಧೋಪಾಸ್ಯನಂ ಭೂತಳನಮಸ್ಯನಂ ಹರಶರಣಸಿಂಹನಂ (ಆರಾಜ. ೦-೩೩). ೩. ತೆರಿಗೆ ವಿನಾಯಿತಿ : ನೂಱಯ್ವತ್ತು ಮ[ತ್ತ]ರ್ಕ್ಕೆಯ್ಯಂ ನಮಸ್ಯಮಾಗಿ ಬಿಟ್ಟಳ್ (ಸೌಇಇ. XX, ೦೮-೪೨ ; 980) : ನಂದಾದೀವಿಗೆಗಂ ಏಕಾದೆಸಿಯಭ್ಯಂಗದೆಣ್ಣೆಗಂ ನಮಸ್ಯಪಾಗಿ ಬಿಟ್ಟ ಗಾಣ ೨ (ಸೌಇಇ. XV, ೦೨-೩೪ ; 1128). 'ಸರ್ವನಮಸ್ಯ' ಪರಾ.

ನಮಸ್ಯಂ ಬಿಡು = ತೆರಿಗೆ ವಿನಾಯಿತಿಯೊಂದಿಗೆ ಭೂಮಿಂ ಮೊದಲಾದಂವನ್ನು ಕೊಡು,-ದಾನಮಾಡು : ಶ್ರೀಮತ್ಕಿಸುವೊಳಲ ಮೂಲಸ್ತಾನದ ಮಹಾದೇವರುಪಭೋಗಕ್ಕೆ ಸರ್ವ್ವಬಾಧಾ ಪರಿಹಾರಮಾಗೆ ನಮಸ್ಯಂಬಿಟ್ಟ ಸೆಣ್ಣಿನ ವಾಹಾಳಿಯ ಕೆಯಿ ಮತ್ತ ೧೨ (ಕೊಲ್ಲಾಶಾ. ೨-೧೪ ; 1069). [ಸಂ.]

ನಮಸ್ಯಿತ (ಗು). ೧. ಪೂಜಿಸಿದ ; ಗೌರವಿಸಿದ. (ನಾ). ೨. ನಮಸ್ಕರಿಸಿದುದು : "ಅರ್ಹಿತಂ, ನಮಸ್ಯಿತಂ, ನಮಸಿತಂ, ಅಪಚಾಯಿತಂ, ಅರ್ಚಿತಂ, ಅಪಚಿತಂ – ೬ ಪೂಜಿಸಲ್ಪಟ್ಟದ್ದು, ನಮಸ್ಕರಿಸಲ್ಪಟ್ಟದ್ದು" (ಸಿದ್ಧಾಂತಿ. ೩೦೩). 'ನಮಸಿತ' ಪರಾ. [ಸಂ.]

ನಮಸ್ಯೆ (ನಾ). ನಮಸ್ಕಾರ ; ವಂದನೆ : "ನಮಸ್ಯಾ, ವಂದನಾ – ಈ ೨ ಪೊಡವಡಿಕೆ" (ಹಲಾಯು. ೧೨೮-೯೦). [ಸಂ. ನಮಸ್ಯಾ]

ನಮಾಜು, ನಿಮಾಜು (ನಾ). ಮುಸಲ್ಮಾನರ ದೇವತಾಪ್ರಾರ್ಥನೆ : ನಮಾಜು ಮಾಡಲು ಮಸೀದಿಗೆ ಹೋಪನು (ಪೈಗಂಬ. ೧೩೩) ; ಇಲ್ಲಿಯವರು ಬಹುಬೇಗ ಪೂಜೆ, ನಮಾಜುಗಳಲ್ಲಿ ಆಸಕ್ತರಾಗುವರು (ಝಾರಾಣಿ. ೦೧೯) ; ಮಹಮ್ಮದಪೈಗಂಬರರು ಪ್ರತಿನಿತ್ಯ ನಮಾಜು ಮಾಡುವುದೊಂದು ಸ್ಥಳವಿತ್ತಂತೆ (ಮಾಧವ. ೭); ನಮಾಜು ಮಾಡುವುದಕ್ಕೆ ಹೋದಾಗ ಮಸೀದಿ ಮೇಲೆ ಬಿತ್ತು (ಗಾಲೆ). ನಿಮಾಜು : ಜಾತಿದೇವರ ಧ್ಯಾನಕೆಸಗಿ ನಿಮಾಜು ವೆಂದ್ಮಸೂತಿಯನು ಗೈಸಿ (ಕದಂಪು. ೮೪).

[← ಪಾರನ. ಮಾಝ್ ; ಹಿಂ. ಮರಾ. ನಮಾಜ್, ನಿಮಾಜ್]

ನಮಿ (ನಾ). [ಜೈನ] ಇಪ್ಪತ್ತನಾಲ್ಕು ಜನ ತೀರ್ಥಂಕರರಲ್ಲಿ ಒಬ್ಬ : ಇಪ್ಪತ್ತೊಂದನೆಯ ತೀರ್ಥಂಕರ : ವಿನಮಿಯುಂ ನಮಿಯುಂ ನಯದಾಳ್ದರ್ (ಶಾಂತಿಪು. ೫-೧೪೯) ; ಶ್ರೀಪಂಚಮಹಾಕಲ್ಯಾಣೋಪೇತಂ ಕರ್ಮಗಹನದಹನಂ ಮುಕ್ತಿಶ್ರೀಪತಿಸಂಸಾರೋಗ್ರಭ(ಯೊ)ಯೋಪಹರಂ ವರದನಕ್ಕೆ ನಮಿ ತೀರ್ಥಜಿನಂ(ಕರಂ) (ಜಾವುಂಪು. ೩೦೯); ಮುಚುಕುಂದಂ ತಾಂ ನಮಿಸ್ವಾಮಿಗಳ್ಗೊಲವಿಂಗಾಬ್ಜಕೆ ಸೇವ್ಯಮಾನಮೆನಲುಂ ಪೂಜಾವಿಧಾನೋತ್ಕರಂ (ಪುಣ್ಯಾಸ್ರ. ೧-೧೦೩). [ಸಂ.]

ನಮಿತ (ಗು). ೧. ಬಗ್ಗಿದ ; ಮಣಿದ : ನಮಿತೋದ್ಯತ್ಕಣಿಶಪ್ರಕೀರ್ಣಕಳಮಪ್ರಖ್ಯಾತಕೇದಾರಜಾಲಮಯಂ (ಕುಸುಮಾ. ೧೦-೧೫೪) ; ನಮಿತಕದಳೀಫಲಸ್ತಬಕಂಗಳಂ ತೂಗಿ (ಉದ್ಕಟ. ೧೦-೧೨೩); ಪಾರ್ಥನ ನಮಿತಮಕುಟವ ನೆಗಹಿ ಪುಳಕಾಶ್ರುಗಳ ಪೂರದಲಿ . . . ಬಿಜಯಂಗೈದನಸುರಾರಿ (ಕುಪ್ಕಾಗ. ೧೩-೧೪). ೨. ನಮಸ್ಕರಿಸಿದ ; ವಂದಿಸಿದ : ನಮಿತಲೋಕವೆನಿಪ್ಪವಂ ಸಕಳೇಶ ಮಾದರಸ (ಬಸಪು. ೧೯-೩) ; ನಮಿತಜನ ದುರ್ಮಾರ್ಗತತ್ಪ್ರಯಾಣಕ್ಕೆ ವಿಘ್ನಮನೆಸಪ . . . ಶಾಂತಮಲ್ಲೇಶ್ವರಾ (ವೀಕೈಪು. ೬-೩-೧). ೩. [ಭೌತವಿ] ಬಾಗಿದ. 'ನಮಿತಪ್ರತಿಬಿಂಬ' ಪರಾ. (ನಾ). ೪. ನಮಸ್ಕರಿಸಲ್ಪಟ್ಟವನು : ಗುರುದೇವೇಂದ್ರ ಮುನೀಂದ್ರನಿಂದ್ರನಮಿತಂ ದೇವಂ ಕಥಾನಾಯಕಂ ಪುರುದೇವಂ (ಆದಿಪು. ೧-೨೫) ; ನಮಿತಂ ಖಚರಾನುಚರಂ ಕ್ರಮದಿಂ ತಿಳಿವಂತು ತನಗೆ ತನಯನ ವೃತ್ತಾಂತ ಮನಱಿಪೆ . . . ಪಲವು ಸೂಟ್ಟಿಸಗೊಂಡಂ (ಪಂರಾಮಾ. ೬-೪೪). [ಸಂ.]

ನಮಿತಪರ್ವ (ನಾ). ಗೆಣ್ಣುಗಳಲ್ಲಿ ಬಾಗನ್ನುಳ್ಳುದು : ಸುರಪುಠಕಂಟಕರೆನಿಸಿದ ಸುರರಿಪುಗಳನಿರದೆ ತೂಳ್ದುವಿವೆರಡೆ ಧರಣೀಶ್ವರ ನಿನ್ನ ಶಿಲೀಮುಖಮುಂ ನರಸಿಂಹನ ನಮಿತಪರ್ವವೆನಿಸಿದ ನಖಮುಂ (ಶಾಕುಂತ. ೯೯-೧೬೬). [ನಮಿತ + ಪರ್ವ]

ನಮಿತಪ್ರತಿಬಿಂಬ (ನಾ). [ಭೌತವಿ] ನಮನಹೊಂದಿದ ಪ್ರತಿಬಿಂಬ : ಕೋನವನ್ನು ಮಾಡುವ ನೇರದಲ್ಲಿ ಕಿರಣಗಳೆಲ್ಲಾ ಒಂದೇ ದಶೆಯಲ್ಲಿ ಸೇರುವುದರಿಂದ ಮೊದಲನೆಯ ನಮಿತಪ್ರತಿಬಿಂಬವು (Diffracted image) ಉಂಟಾಗುವುದು (ಭೌತವಿ. ೨೦೨). [ನಮಿತ + ಪ್ರತಿಬಿಂಬ]

ನಮಿತಶಿರಸ್ಕೆ (ನಾ). ತಲೆಯನ್ನು ಬಾಗಿಸಿದವಳು; ನಮಸ್ಕರಿಸಿದವಳು: ನಮಿತಶಿರಸ್ಕೆಯಾಗಿ ನಸಂದೂರದೊಳಂಜಲಿಹಸ್ತದಿಂ ಸಸಂಭ್ರಮೆಯಿರೆಯಾಕೆಯಂ ದಯೆಯಿನೀಕ್ಷಿಸಿ (ದಿವ್ಯಜ. ೭-೨೮).

[ಸಂ. ನಮಿತಶಿರಸ್ಕಾ]

ನಮಿತಾನನೆ (ನಾ). ಮುಖವನ್ನು ತಗ್ಗಿಸಿದವಳು: ನಮಿತಾನನೆ ಲಜ್ಜಾನಿಷ್ಠೆ ಮೋಹಪರವಶತೆಯಿಂದೆ ಮಾಱುತ್ತರಮಂ ಸಮನಿಸದಿರಲ್ (ದಿವ್ಯಜ. ೬-೪೬). [ಸಂ. ನಮಿತಾನನಾ]

ನಮಿತಾರಿ (ನಾ). ಶರಣಾಗತರಾದ ಶತ್ರುಗಳುಳ್ಳವನು ; ಶತ್ರುಗಳನ್ನು ಶರಣಾಗಿಸಿಕೊಂಡವನು : ನಮಿತಾರಿಗೆ ದಮಿತಾರಿಗೆ ಸಮಸ್ತ ಧಾತ್ರೀವಿಭಾಗದೊಳ್ ಭಾವಿಸೆ . . . ಪೋಲ್ಕೆಗಾವಂ ಬರ್ಪಂ (ಕಾವ್ಯಾವ. ೩೪೬).

[ನಮಿತ + ಅರಿ$_6$]

ನಮಿಯಿಸು 'ನಮಿಸಂ' ನೋ.

ನಮಿಸು, ನಮಿಯಿಸು (ಕ್ರಿ). ಬಾಗು ; ನಮಸ್ಕರಿಸು ; ವಂದಿಸು : ನಮಿಸುತಂ ಕಂಪಿಸುತೆ ಮನವೊಲಿದು ಹೊಗಳುತಂ (ಬಸರ. ೩-೧೦೮) ; ನಮಿಸಿದ ಕಾದಲರಂ ತನ್ನಮಳಕರದೊಳೆತ್ತಿ ಪರಸಿ . . . ಬೀಟ್ಕೊಂಡಂ (ಉದ್ಕಟ. ೮-೭೭); ಕಿನ್ನರಯ್ಯನ ಪಾದಪಂಕಜಕಂ ನಮಿಸುತಾ ಬಸವರಾಜನು (ಬಸಪು. ೨೮-೪೬) ; ಗುರುವಿನ ದಳವ ಹೊಕ್ಕನು ನಮಿಸಿ ಬಿನ ಹ ಮಾಡಿದನು ನಗುತ (ಕುಪ್ಕಾಪ್ರೋ. ೧೦-೪೨) ; ನಮಿಸುತೆ ಪೂಜ್ಯಋಷಿಪದಕೆ ಬೀಳುಕೊಂಡರು ಮೂವರುಂ ಪಂಚವಟಿಗಾಗಿ (ಶ್ರೀರಾಮಾ. ೧೯೩-೪೭೮). ನಮಿಯಿಸು : ನಮನಮಂ ಮಾಡುವಂ–ನಮಿಸುವಂ, ನಮಿಯಿಸುವಂ (ಶಬ್ದಾನು. ೫೩೪ ಪ್ರಯೋ). [ನಮನ + – ಇಸು$_3$]

ನಮೀಕೃತ (ಗು). ಬಾಗಿಸಿದ; ಮಣಿಸಿದ; ಶರಣಾಗತರನ್ನಾಗಿ ಮಾಡಿದ: ದೃಢೀಕೃತತಳವರ್ಗನುಂ ನಮೀಕೃತಸಾಮಂತವರ್ಗನುಮಾಗಿ (ಚಂದ್ರಪು. ೪-೨೮ ವ). [ಸಂ.]

ನಮೂದಿಸು (ಕ್ರಿ). ಉಲ್ಲೇಖಿಸು ; ದಾಖಲೆಮಾಡು ; ಬರೆದಿಡು ಏಜೆಂಟ್ ಅಥವಾ ಮುತಾಲಿಕನ ಹೆಸರನ್ನೂ ನಮೂದಿಸಬೇಕು (ಗ್ರಾಮಾಕ. ೬); ಪೋಲೀಸಿನವರು ಸಾಕ್ಷಿಪಟ್ಟಿಯಲ್ಲಿ ಅವನ ಹೆಸರನ್ನು ನಮೂದಿಸಿರಲಿಲ್ಲ (ಪಂಜಪಂ. ೧೦೩) ; ಈ ವಿಷಯ ಕಾಜಿಗಳಿಗೂ ಗೊತ್ತಿಲ್ಲ ; ಗೊತ್ತಿದ್ದರೆ: ಕುರಾನಿನಲ್ಲಿ ನಮೂದಿಸದೆ ಬಿಡುತ್ತಿರಲಿಲ್ಲ (ತತ್ವಪ್ರಾ. ೫೬೬).

[ನಮೂದು + –ಇಸು$_3$]

ನಮೂದು (ನಾ). ಉಲ್ಲೇಖ ; ದಾಖಲೆ ; ನೋಂದಣಿ.

ನಮೂದಾಗು=ನೋಂದಣಿ ಆಗು ; ದಾಖಲು ಆಗು : 'ವುಯಿಲ್ಲು' ಬರೆದು ಸಿದ್ಧವಾಯಿತು. ಇಷ್ಟರಲ್ಲಿ ನಮೂದಾಗುವದಿತ್ತು (ಸಮಜೀ. ೦೨೧). ನಮೂದುಮಾಡು = ಉಲ್ಲೇಖಿಸು ; ಬರೆದು ತಿಳಿಸು : 'ಡಿನ್ನರ್' ಇಷ್ಟು ಹೊತ್ತಿಗೆ ಎಂದು ಲಗ್ನಪತ್ರಿಕೆಯಲ್ಲಿ ನಮೂದುಮಾಡಿದ್ದರು (ನಾಡಿಗೇ. ೦೩೬) ; ಜ್ವರ ಬಂದ ಕಾರಣ ನಮೂದುಮಾಡಿ, ಪರೀಕ್ಷೆಯ ಕತ್ತರಿಯಿಂದ ನುಸುಳಿ (ದೀಪಹ. II, ೦೮).

[←ಪಾರ. ಹಿಂ. ನಮೂದ್ ; ಮರಾ. ನಮೂದ್, ನಮೋದ್]

ನಮೂನಿಸುಳಿ (ನಾ). ದನದ ಮೈವೇಲಿನ ಸುಳಿಗಳಲ್ಲಿ ಒಂದು ಬಗೆ : ದನಾ ಪರೀಕ್ಷೆ ಮಾಡೋವಾಗ ಹೀನಸುಳಿ, ಪಾತಾಳಸುಳಿ, ದಾವಣಿಸುಳಿ, ಪರಕಲಸುಳಿ, ನಮೂನಿಸುಳಿ, ಸಿಡಕ್ಕಾಲು, ಕೋರಬಗ್ರಿ, ಕ್ಹೊವಹಲ್ಲು ಇವೆಲ್ಲಾನೂ ಚಂದಾಗಿ ನೋಡಿ ಒಳ್ಳೆಸುಳಿ ಇರೋದ ತತ್ತಾಲಾ (ಹುಟ್ಟಹ. ೦೬೫). [<ನಮೂನೆ + ಸುಳಿ$_2$ (<ಸುಟ್ಟಿ$_2$)]

ನಮೂನೆ (ನಾ). ೧. ಮಾದರಿ ; ತೆರ ; ಕ್ರಮ ; ಪ್ರಕಾರ ; ರೀತಿ ; ವಿಧ ; ಬಗೆ : ನೋಟದಲ್ಲಿ ಒಂದು ನಮೂನೆಯ ಬಿಂಕ (ಅಲಹೂ. ೦೮) ; ಆ ಮಾಸ್ತರ ಹೇಳಿದ ನಮೂನೆ ನೋಡಿದರೆ ಈಗಾಗಲೆ ಏನು ಮಾಡಿ ಕುಳಿತಾಳೊ (ಮೂರುವಾ, ೩೮) ; ಚೊಕ್ಕ ಬಂಗಾರವೇ ಬೇಕೆಂಬ ಹಟವೇಕೆ ನಿನಗೆ ಈ ಲೋಕದಲ್ಲಿ ನಾನಾ ನಮೂನೆ ಲೋಹವಿರುವಾಗ ? (ನೆಲಮು. ೨೭-೬) ; ಪಾಚಿಯ ವಿವಿಧ ನಮೂನೆಗಳನ್ನು ಬೆಳೆಸಲು ಉದ್ಯುಕ್ತನಾದನು (ಸಸ್ಯಕ. ೮೬). ೨. ರಚನಾಕ್ರಮ ; ನಕ್ಷೆಯ ವಿನ್ಯಾಸ : ಆ ಕೋಟೆ ನಮೂನೆಯಾವ ಮೇರೆ ಇದೆ (ರಾಜೇಂದ್ರ. ೨೪). ೩. ಚಿತ್ರಾಕೃತಿಯ ಮಾದರಿ : ಎಲ್ಲಿ ಅವನಿಗೆ ಚಿತ್ರಕಲೆಯ ಸುಂದರವಾದ ನಮೂನೆಗಳು ದೊರೆಯುತ್ತಿದ್ದವೋ ಅಲ್ಲಿಗೆ ಅವನು ಹೋಗಿಯೇ ಹೋಗುತ್ತಿದ್ದನು (ಮ್ಯಾಜಲ. ೧೮) ; ಅವನ ಚೌಕಳಿ . . . ಮಾಟ ಬೆಂಡೋಲೆಗಳ ನಮೂನೆ ಕಂಡಿತು ನನಗೆ (ಪ್ರನಿ. ೮) ; ಈಗಿನ ದಿನಗಳಲ್ಲಿ ಸುಂದರವಾದ ಹಾಗೂ ಆಕರ್ಷಕವಾದ ಅನೇಕ ನಮೂನೆಯ ಮನೆಕೆಲಸದ ಸಲಕರಣೆಗಳು ಸಿಗುತ್ತವೆ (ಅಡುಸೌ. ೩೨). ೪. ಅರ್ಜಿ, ದಾಖಲೆ ಮೊದಲಾದುವುಗಳಲ್ಲಿ ಉಲ್ಲೇಖಿಸಬೇಕಾದ ಅಂಶಗಳನ್ನೊಳಗೊಂಡ ಪತ್ರ,-ಕಾಗದ : ಆ ಸರ್ಕಾರದವರಿಂದ ವಿಧಾಯಕವಾಗಿರುವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಕೊಟ್ಟಂಥ ಆವೇದನಪತ್ರದ ಮೇಲೆ (ಭಾಧಾನ. ೫) ; ಈಗಿದ್ದ ಮರಾಟಿ ನಮೂನೆಗಳು ತೀರಿದ ಬಳಿಕ ಕನ್ನಡ ನಮೂನೆಗಳನ್ನು ಮುದ್ರಿಸಬೇಕು (ಕನ್ನಸು. I, ೨೬). ೫. ಮಾದರಿಗಾಗಿ ಕೊಟ್ಟುದು ; ಮಾಸಲೆ (ಉಕ) : ನಮೂನೆಗೆ ಸ್ವಲ್ಪ ತೆಗೆದುಕೊಂಡು ಬಾ (ರೂಢಿ) ; ೬. (ಆಲಂ) ವಿಚಿತ್ರವಾದುದು ; ಅಸಮಾಧಾನಕರವಾದುದು : ಅವರ ಮುಖ ಒಂದು ನಮೂನೆಯಾಗಿತ್ತು (ರೂಢಿ).

[←ಪಾರ. ನಮೂನಾ, ನಮೂನಹ್ ; ಹಿಂ. ನಮೂನಾ ; ಮರಾ. ನಮೂನಾ, ನಮೋನಾ]

ನಮ್ಮೆ$_1$, ನಮ್ಮೆ$_1$ (ಕ್ರಿ). ೧. ದುಃಖಿಸು ; ನರಳು ; ಕೊರಗು : ಬಳಿಕ ಪಣ್ಟಾವಟದೊಳ್ಪುಳುವಾಗಿ ನಮೆಗುಂ (ಎಕ. VIII, ನಗರ. ೬೦-೧೦ ; 870) ; ಚಕ್ರದಿಂ ನಾಲ್ಕು ಕಾಲುಮನೊರ್ಮೊದಲೆ ಪಱಿಯಿಟ್ಟೊಡೆ . . . ಆ ಇರುಳೊಳಾಮೆ ಫಿರಿದು ವೇದನೆಯಿಂದಂ ನಮೆದಂ ಸತ್ತು (ಪಡ್ಮರಾ. ೦೨೦-೨೦) ; ಕೂರದರ್ ನೆಲನನೊಟ್ಟಜೆಯಿಂ ಕೊಳೆ ಕೊಟ್ಟು ಮುಟ್ಟುಗೆಟ್ಟಿನ್ನುಮರಣ್ಯದೊಳ್ ನಮೆದಪಂ ಯಮನಂದನಂ (ಪಂಪಭಾ. ೭-೫೫) ; ಎನಿತುಂ ದ್ರೌಪದಿ ಮುಕ್ತಕೇಶಿ ನಮೆವಳ್ (ಗದಾಯು. ೬-೨೪). ಎನ್ನ ಮಕ್ಕಳುಮಾನುಂ ದುಃಖಾಗ್ನಿಯೊಳ್ ಪುಡುಪುಡನೆ ಪುರ್ಗಿ ನಮೆವ ಪಾಪದ ಫಲಮಂ ನೀನಮೋಘಮುಣ್ಟೆಯೆಂದು ಮೂದಲಿಸಿ (ಸುಳುಮಾ. ೫-೭೮) ; ಮೊಂಟಾಗಿ ಕೈಗಳೆರಡುಂ ಗೆಂಟಾಗಿರೆ ತನಗೆ ಸಿರಿಯು ಕೂಟುಂ ಕಾಲುಂ ಕುಂಟಾಗಿ ನಮೆಯುತಿರ್ಪರ್ಟೆಂಟಣಿಸಿ ಮಹಾತಪಂಗಳಂ ಕಿಡಿಸಿದವರ್ (ಧರ್ಮಾಮೃ. ೬-೧೮೦) ; ಅಳಿಯಾಸೆಯಿಂ ನಮೆಯದಿರ್ಬೇಡಾಗ್ರಹಂ (ಅನಂಪು. ೧೦-೯೨) ; ಬಂದರೇನಪರಾಧವೇ ಇನ್ನೆಂದುಪರಿಯಂತವರು ನಮೆವರು (ಕುಪ್ಯಾಭೀ. ೧-೨೦) ; ನಮೆವ ದೀನಾಂಧಬಧಿರರಂ ದಾನ ಧರ್ಮಂಗಳಿಂ ಪಾಲಿಸುತುಂ (ರಾಮಾಶ್ವ. ೦೫-೧೯) ; ಆಗದುದಕೆ ಹೋಗದುದಕೆ ಆಸೆಪಟ್ಟು ಭಂಗವಡುತೆ ನಮೆವುದೇತಕೆ ? (ವಿಸೀಗೀ. ೮೫-೦೦). ೨. ಸೊರಗು ; ಕೃಶವಾಗು ; ಬಡವಾಗು : "ನಮೆ-ಗುರುಯಾಪ್ಯೇ (ಬಡವಾಗು) ದಾರಿದ್ರ್ಯೇ ಚ" (ಶಮಧಾ) ; ಅಬೋಧಬೋಧಿತ ತಪೋದಾನವಿಧಾನದಿಂ ಮುಧಾಕ್ಲೇಶಾಯಾಸನಿರತರಾಗಿ ನಮೆವರ್ (ಆದಿಪು. ೨-೯೫) ; ಉಪವಾಸದೊಳ್ ನಮೆದು ನೋಂಪಿಗಳೊಳ್ ನಿಯಮಕ್ರಮಂಗಳಂ ಸಲಿಸಿದರ್ (ಪಂಪಭಾ. ೦-೦೩೬) ; ತೆರ್ಪತ್ತು ಬಿಟ್ಟು ನಮೆಯುತ್ತಿರ್ಪರ್ ನಾರಕರ್ (ಶಾಂತಿಪು. ೭-೯೯) ; ಲೋಕದೊಳಾಂ ಕಾಣದಿರಿಲ್ಲೀ ಕುತ್ತಂ ಪೊರ್ದಿ ನಮೆವ ಮಾನಿಸರಂ ಕೇಳೀ ಕಷ್ಟನಂದದಿಂ ಮೆಯ್ಯಾಕಾರಂಗೆಟ್ಟು ನಮೆವರಂ ಕಂಡಱಿಯೆಂ (ಧರ್ಮಾಮೃ. ೪-೯೦). ೩. ಬಡವನಾಗು : "ನಮೆ-ಗುರುಯಾಪ್ಯೇ (ಬಡವಾಗು), ದಾರಿದ್ರ್ಯೇ ಚ" (ಶಮಧಾ). ೪. ಮಹತ್ವವನ್ನು ಕಳೆದುಕೊಳ್ಳು : (ಕಿ). ನಮ್ಮೆ$_1$: ೧. ಮಹಾನರಕದೊಳ್ ದುಃಖಾಗ್ನಿಯಿಂ ಬೆಯ್ವೊಡಂ ನಮೆಯುತ್ತಿರ್ಪೊಡಂ (ಧರ್ಮಾಮೃ. ೩-೬೦) ; ಹಲಕಾಲ ನಮೆವುತಲ್ಲಿರ್ದ ಹೆಳವಂಗೆ ಕಾಲ್ . . . ಬರಲ್ (ಸೋಮಜ. ೪-೬) ; ಕಟಕಟಾ ಪೇರಡವಿಯೊಳಗೆಕ್ಕಟಿಯಿದೇತಕೆ ನಮೆವುತಿರ್ದಪೆ (ಬಸಪು. ೦೮-೯) ; ಸತ್ಯವ ಕಾದು ಹದಿಮೂಱಬುದ ನಮೆದಿರಿ ಮುಂದೆ ಲೇಸಹುದು (ಕುಪ್ಯಾಕಾ. ೨-೦೫) ; ಪಾಪದಿ ನಮೆದಜಾಮಿಳಗೊಲಿದು (ಹರಿಸು. ೪೫) ; ನಮೆವುತ್ತಿದೇನೆ ಭವರೋಗವ ನಿಲಿಸಯ್ಯಾ (ಶಂಕಳಂ. ೪೫) ; ತನ್ನ ಗಂಡನು ಎಷ್ಟು ರೀತಿಯಿಂದ ನಮೆಯಬೇಕಾಗುತ್ತದಲ್ಲಾ ಎಂದು ಮನಸ್ಸು ಕರಗಿ ಕಂಬನಿ ಹರಿಯತೊಡಗಿದವು (ಗಂಮಾಯಿ. ೨೨೮). ೨. ನಮೆದೆ ರೋಗಂಗಳಿಂದಂ (ರಕ್ಷಾಶ. ೨೪) ; ಕಡುಜರದಿಂ ಕರಂ ನಮೆದು (ದಶಕು. ೮-೩೦೩) ; ದಾರಿದ್ರ್ಯದಿಂದಂ ನಮೆದ ನಡುವನಾಶ್ರೈಸಿದೆಂ . . . ಎಂದೈತರ್ಪ ಬಾಸೆಯಂ (ಭಾವಜಿಂ. ೩-೪೨). ೫. ಕ್ಷಯಿಸು ; ನಾಶವಾಗು : ಶ್ರವಣದಿಂ ಪಾತಕ ಕುಲಂಗಳು ನಮೆದು ಪೋಪುವು (ಗಗಶಾ. ೦೭-೫೦).

ನಮೆದು ನಾರುಗಿ = ದೇಹದ ಸೆರೆಗಳು ಎದ್ದುಕಾಣು ; ಸೊರಗಿ ಜರ್ಜರಿತವಾಗು,-ಶಿಥಿಲವಾಗು : ಉಣ್ಣದ ಮೀಯದಂಗ ನಿರ್ಜೀವತೆವೆತ್ತು ದೆತ್ತ ವಿಫಲದ್ವಯದಾನವಿಧಾನಮೆತ್ತ ನಾನಾ ವಿಧದಿಂದಮೇಂ ನಮೆದು ನಾರುಗಿದಿರ್ಪರೊ ಜೈನದೀಕ್ಷಿತರ್ (ಶಾಂತಿಪು. ೮-೧೨೯) ; ಅವಿವಿರಿದು ದುಃಖದೊಳ್ ನಮೆದು ನಾರುಗಿದು ಪೊಗೆದು ಸತ್ತಲ್ಲಿ ನಿಷಾದನ ಮನೆಯೊಳ್ಪೆಣ್ಣಾಯಾಯ್ತು ನೆನೆದೊಡಾಶ್ಚರ್ಯಮಲ್ತೆ ಸಂಸೃತಿಚಕ್ರಂ (ಸುಳುಮಾ. ೫-೧೯).

[ದೇ. ॥ ತುಳು. ನಮೆ ; ತೆಲು. ನವಯು, ನವಿಯು]

ನಮ್ಮೆ$_2$, ನಮ್ಮೆ$_2$ (ನಾ). ೧. ಕಾಟ ; ಪೀಡೆ ; ತೊಂದರೆ ; ಕಿರುಕುಳ : ಕಣ್ಣಿನ್ ಚೆದಱಿತು ಕಟ್ಟಲೆ ಪಾರಯ್ ! ನಮೆಯಾ ಭ್ರಮೆಯಾ ಕಟ್ಟಲೆ ಪಾರಯ್ ! (ಅಶ್ವತ್ಥಾ. ೨೯-೫೬೨). ನಮ್ಮೆ$_2$: ೨. ತುರಿಕೆ ; ತಿನಿಸು ; ಕೆರೆತ : ತೆಕ್ಕು – ತಿರ್ಯಕ್ಕಂಡೂತಿಲೇಹನೇ (ನಮೆಗೆ ನೆಕ್ಕು) (ಶಮಧಾ) ; ಆಗವನು ಲೈಲಾಕ್‌ಪೊದೆಯ ಹಿಂದೆ ಬಿದ್ದಿಷ್ಟುದರಿಂದ ತುರುಚಿ ಗಿಡ ಅವನ ಕೈ ಕಚ್ಚಿ ನಮೆಹತ್ತಿಕೊಂಡಿತ್ತು (ಪುನರು. ೨೭೩). ೩. ಚಪಲ ; ತವಕ : ಸುನಂದೆಯನ್ನು ಗಂಡ ಬಿಟ್ಟಿರುವನೆಂಬುದು ತಿಳಿದಿತ್ತು. ನಾಲಿಗೆಗೆ ನಮೆ, ಮೂದಲಿಸಿ ಲೇವಡಿ ಮಾಡುವ ತವಕ (ಖಕಾಂಗಿ. ೨೦೦). 'ನಮೆತ್ತ' ಪರಾ.

[ದೇ. ॥ ತಮಿ. ನಮ್ಮೆ, ನಮ್ಮೆಪ್ಪು, ನಮ್ಮೆಚ್ಚಲ್ ; ತುಳು. ನವುಂಟ ; ತೆಲು. ನವ]

ನಮೆಯಿಸು, ನವಸು, ನವೆಸು (ಕ್ರಿ). ೧. ಕೊರಗಿಸು ; ಕಷ್ಟಕ್ಕೆ ಗುರಿಪಡಿಸು : ಪಲಕಾಲಂ ನಮೆಯಿಸಿದ ಪಗೆಯುಮಂ ನೆನೆದು (ವಡ್ಡಾರಾ. ೨೯೦-೨೦); ಲೋಗರೊಡವೆಯಂ ಝಾಳೆಯಂಗೊಂಡನಿವನಂ ಪಲವು ದಿವಸಂ ನಮಯಿಸಿ ಕೊಲ್ಲಿಂ (ಸುಕುಮಾ. ೭-೩೬ ಪ). ೨. ಸೊರಗಿಸು ; ಕೃಶಗೊಳಿಸು : ತಪದೊಳ್ ನಮೆದು ತಮ್ಮ ಶಿಷ್ಯರ್ಕಳುಮಂ ತಾಂ ತಿರಿವ ಗೊರವಿ ಬೆನಕನುಮಂ ತಿರಿಯಿಪಳೆಂಬ ತೆಱದೆ ನೆಱೆ ನಮೆಯಿಸುವರ್ (ಶಾಂತಿಪು. ೮-೧೩೦) ; ಬಸಿಱ ಕುತ್ತದಂತೆ ನಮೆಯಿಸುವುದು (ಧರ್ಮಾಮೃ. ೪-೦೭೫). ನವಸು : ೩. ನಾಶವಾಗುವಂತೆ ಮಾಡು ; ಕೆಡಿಸು ; ಹಾಳುಮಾಡು : ವಿವಿಧ ರಕ್ಕಸರು . . . ಎನ್ನ ಕಾರ್ಯಮಂ ನವಸಿದಲ್ಲದೆ ಮಾಣರೆಂತಿದಕುಪಾಯಮೇನೆಂದು ಯೋಚನೆಗೈದನು (ಪಂಕಾರಾ. ೫-೨-೪೩). 'ನವಸಿಗ' ಪರಾ. ನವೆಸು : ೧. ಈ ಶಿಶುವೆ ಶಿವಕುಮಾರಂ ತಿಳಿಯಲು ಮುಂದೆ ಮಜ್ಜನಭೋಜನಾದಿ ನಾನಾಕ್ರಿಯೆಗಳೊಂದಱೊಳ್ ನರವೇಷ ಕಾಯಮಂ ನವೆಸಬೇಡೆಂದು ಕೈವೆಡೆಗೊಟ್ಟಳ್ (ಜಿಬಪು. ೫-೩೦) ; ಕುವಲಯ ಪ್ರಿಯಕಾಂತ ನಮ್ಮನೇಂ ಕಾರಣದಿ ನವೆಸುವೆ ಜಗನ್ಮೋಹನನೆ (ಪಂಕಾರಾ. ೫-೪-೨೦). [ನಮೆ$_1$ + – ಇಸು$_3$]

ನಮೇರು (ನಾ). ೧. ಒಂದು ಬಗೆಯ ಮರ ಮತ್ತು ಅದರ ಹೂವು ; ಸುರಹೊನ್ನೆ; ಸುರಗಿ: ನಮೇರು ಮಂದಾರ ಸಂತಾನಕ ಪಾರಿಜಾತಂಗಳೆಂಬ ಪೂಗಳಂ ಸುರಿಯುತ್ತಂ (ವಡ್ಡಾರಾ. ೮೪-೭) ; ಸೂಡಿದ ಪಾರಿಜಾತದ ನಮೇರುವ ಬಾಸಿಗಮೊಯ್ಯನೊಯ್ಯನಿರ್ಪ್ಪೋಡಿದುದು (ಆದಿಪು. ೩-೩) ; ಎಱಗದೆ ಪೂತ ಚಂಪಕವನಕ್ಕೆ ನಮೇರುಮಹೀರುಹಕ್ಕೆ ಬಂಡೆಱಗುವ ಚಂಚರೀಕದವೊಲಾಕೆಯ ಕೇಕರಮನ್ಯರಾಜಕಕ್ಕೆಱಗದೆ ರಾಘವಂಗೆಱಗೆ (ಪಂರಾಮಾ. ೫-೭೦) ; ನಿನಗೆ ಶುಭವೆಂದ ವಂದಿಯ ಮನೆಯಂಗಣದೊಳಗೆ ಪಣ್ಣು ಪರ್ವಿದ ಮಂದಾರ ನಮೇರು ಪಾರಿಜಾತದ ಬನದೊಳ್ಸಿರಿ ಮೆಱೆವುದಲ್ತೆ ವನಕೇಳಿಗಳಂ (ಯಶೋಚ. ೩-೨) ; ನಮೇರುಸುಮನೋವರ್ಷಂ ಸ್ಫುಟಂ (ಎಳ. II (B), ೩೩೬-೩೦ ; 12ನೆಯ ಶತ); ವನಪ್ರದೇಶದೊಳಗಿರ್ಪ ನಮೇರುಪಿನಂತೆ (ಪುಷ್ಪಪು. ೯-೨೮) ; ಉದ್ಯಾನದಲ್ಲಿದ್ದ ನಮೇರುವೃಕ್ಷದಡಿಯನ್ನು ಸೇರಿದ (ಧೂಮಮ. ೬೧). ೨. ಒಂದು ಬಗೆಯ ಮರ; ರುದ್ರಾಕ್ಷಿ ಮರ. [ಸಂ.]

ನಮೇರುಕುಜ (ನಾ). = ನಮೇರು ೧ : ಪಂಕಜಮೇ ನಮೇರುಕುಜಮೇ . . . ಗಿಳಿಯೇ ಕಂಡಿರೆ ಪೇಱಿಮೆಮ್ಮ ಪತಿಯಂ (ಸುಕುಮಾ. ೧೨-೨೧).

[ನಮೇರು + ಕುಜ]

ನಮೇರುಕುಸುಮ (ನಾ). ಸುರಗಿಹೂವು ; ಸುರಹೊನ್ನೆಯ ಹೂವು : ಕಿವಿ ಸಾರ್ದು ಜಿನುಂಗೆ ಸೌರಭಕ್ಕಾಡುವ ತುಂಬಿಗಳ್ದಿ ವಿಜನಾಥನವರ್ಕೆ ಕನಲ್ದು ಮಾಣದೀಡಾಡುವನಾ ನಮೇರುಕುಸುಮಸ್ತಬಕಂಗಳ ಕರ್ಣಪೂರಮಂ (ಪಂರಾಮಾ. ೩-೧೬) ; ಸುರಿದುದು ನಮೇರುಕುಸುಮದ ಸರಿ ಮೊಱಗಿದುದಮರಪಟಹಂ (ಪುಷ್ಪಪು. ೦೪-೪೧) ; ತಾನೆಳಸದಿರ್ದೊಡಂ ಪರಮಾನಿನಿ ಮೇಲ್ವಾಯ್ದೊಡಳಿಪಿ ಮಂದರಶೈಲಂ ಸ್ಥಾನನಿವನೆನಿಸಿ ನಿಂದಭಿಮಾನಿಗೆ ಸುರಿಯದೆ ನಮೇರುಕುಸುಮಾಸಾರಂ (ಉಸಾರ. ೯೮).

[ನಮೇರು + ಕುಸುಮ]

ನಮೇರುಭೂಜ (ನಾ). = ನಮೇರು ೨ : ನಮೇರುಭೂಜಮಂ ತಳೆದ ಸುಮೇರುಮೇಖಳೆ (ಚಂದ್ರಪು. ೦೨-೨೮). [ನಮೇರು + ಭೂಜ]

ನಮೋ (ನಾ). ೧. ನಮಸ್ಕಾರ ಮಾಡುತ್ತೇನೆ ಎಂಬರ್ಥದ ಮಾತು.– ಶಬ್ದ : ಪರಮರೂಪನೇ ನಮೋ ಪರತತ್ತ್ವನೇ ನಮೋ ಆದಿಯಾರೂಢ ಭಯಂಕರನೇ ನಮೋ . . . ಎಂದು ಶ್ರುತಿಯು ಸಾರುತ್ತಿರಲು (ಬಸವ. ೫೩೭); ಹರಿ ನಮೋ ಜಯ ಭಕ್ತರಘಸಂಹರ ನಮೋ ಜಯಸಕಲ ಭುವನೇಶ್ವರ ನಮೋ ಜಯಕೃಷ್ಣ ಕೇಶವ ವಿಷ್ಣುವಾಮನನೆ(ಕುಮ್ಯಾಅ. ೨೩-೫೩); ಎಲ್ಲರಿಗಮಿಾಗ ನಮೋ–ಬಂಧುಗಳೆ, ಭಾಗಿಗಳೆ (ಮಂಕುಳ. ೯೨೨). ೨. ಸಾಕು; ಸಾಕು, ಇನ್ನು ಇದರ ಗೊಡವೆ ಬೇಡ ಎಂಬರ್ಥದಲ್ಲಿ ಹೇಳುವ ಮಾತು : ಪೊಡವಿಯಿಾದುದೊ ಮೋಹರವನಿದಱೊಡನೆ ಕಾದುವನಾವನಾತನೆ ಮೃಡನು ಶಿವಶಿವ ಕಾದಿ ಗೆಲಿದೆವು ಬಲಕೆ ನಮೊಯೆಂದ (ಕುಮ್ಯಾವಿ. ೬-೬) ; P ಇಲ್ಲಿ 'ನಮೊ' ಎಂಬ ಹ್ರಸ್ವರೂಪ ಛಂದಸ್ಸಿಗಾಗಿ ಮಾಡಿಕೊಂಡುದಂ; ಇದು 'ಲುಂಚ' ವಾದರೆ ನಮೋ ಎನುತ್ತೇನೆ (ಗಾಳಿಪ. ೮೦).

ನಮೋನಮೋ (ದ್ವಿರುಕ್ತಿ) : ಕೂಡಲಸಂಗಮದೇವಾ ನಿಮ್ಮ ಸದೃಕ್ತರಿಗೆ ನಮೋ ನಮೋ ಎಂಬೆನು (ಬಸವ. ೪೬೯) ; ನಾರಾಯಣ ತೇ ನಮೋ ನಮೋ ಭವ ನಾರದಸನ್ನುತ ನಮೋ ನಮೋ (ಪುರಂದ. ೩-೪೦ ಪಣ್ಣವಿ) ; ಎಷ್ಟು ದುಡಿದೆ ನೀನೆಷ್ಟು ಪಡೆದೆ ಹೇ ನಮೋ ನಮೋ ನಿನಗೆ (ಅರಳು. ೨೪೩-೩) ; ಅವನು ನಮೋ ನಮೋ ಎಂದು ದಂಡತೆತ್ತು ದೈವ ಕೂಡುವನು (ಕನ್ನಜಾ. ೧೯). [< ಪ್ರಾ. ಣಮೋ. / ಸಂ. ನಮಸ್]

ನಮೋಸ್ತು (ನಾ). ೧. ನಮಸ್ಕಾರ; ವಂದನೆ: ಅತ್ಯಂತ ರೂಪವತಿಯಪ್ಪ ಬಾಲಕಿಯು ಬರುತ್ತಿಪ್ಪುದಂ ಯತೀಂದ್ರಂ ಕಂಡು ನೋಡುತ್ತಿಪ್ಪಿನಮಾಕೆ ಬಂದು ನಮೋಸ್ತು ಎಂದು ನಿಲಿಸಲು (ಕಗವಿ. ೯೭; ರಾಜಾವಳೀ ಕಥೆ). 'ನಮೋಸ್ತುಗೆಯ್' ಪರಾ. ೨. [ಜೈನ] ಸಂನ್ಯಾಸಿ; ಸವಣ : ಅರಸಿ ಮಂಚದಿಂದಿಱಿದು ಕೈಗಳಂ ಮುಗಿದು ನಮೋಸ್ತಿದೇನೆಂದು ನುಡಿದೊಡೆ (ವಡ್ಡಾರಾ. ೦೭೭-೨೨) ; ನಮೋಸ್ತುಗಳಿರ್ಪಂದದಿನಿರ್ದಂ(ನಮೋಸ್ತುಗಳೆಂದು ಸವಣರ್ಗೆ ಪೆಸರಾಯ್ತು) (ಶಮದ. ೭೫ ಪ್ರಯೋ) ; ಜಿನಮುಖಕಮಲದೊಳುದಿಸಿ ನಮೋಸ್ತುಗಳಿನಿದಪ್ಪ ನುಡಿಯೊಳು ಬಳೆದು ಜನನುತೆ ಮುಕ್ತಿಗೆ ಸಖಿಯಾದ ಶಾರದೆಗನುನಯದಿಂ ವಂದಿಸುವೆನು (ಶ್ರೀಪಾಲ. ೧-೧೦) ; ನೆಟ್ಟ ನೋರ್ದನೆ ಬೈಗಿನಿಂ ರವಿ ಪುಟ್ಟುವನ್ನೆಗ ಜಾನ ಜಪವಳವಟ್ಟು ನಿಲುವಾ ಪಾಲಕೀರ್ತಿ ನಮೋಸ್ತು[ಗೆ]ಱಗುವೆನು (ಸಾಳ್ಕಥಾ. ೦-೨೨). P ಇದು ಸಂಸ್ಕೃತದಲ್ಲಿ ಒಂದು ಶಬ್ದವಲ್ಲ ವಾಕ್ಯ.

ನಮೋಸ್ತುಗೆಯ್, ನಮೋಸ್ತುಗೈ (ಕ್ರಿ). ನಮಸ್ಕಾರ ಮಾಡು ; ವಂದಿಸು: ತಾನೊಂದು ಬಟ್ಟೆಯೊಳ್ಪೋಗಿ ಯತೀಂದ್ರನಂ ಕಂಡು ನಮೋಸ್ತುಗೆಯ್ದು (ಪುಷ್ಯಾಸ್ರ ೩-೭೨ ಪ) ; ವಿಭವದಿಂ ಗುಹೆಯನೆಯ್ದಿ ನಮೋಸ್ತುಗೆಯ್ದು ಬಾವಲಿಯಂ ಪ್ರಾರ್ಥಿಸೆ (ಕಗವಿ. ೯೨ ರಾಜಾವಳೀ ಕಥೆ). ನಮೋಸ್ತುಗೈ : ಶುದ್ಧಚಿತ್ತದೊಳು ನಮೋಸ್ತುಗೈದರೆ ಧರ್ಮವೃದ್ಧಿಯೆಂದುಱೆ ಹರಸಿದರು (ಭರಣ. ೭೦-೦೦೬). [ನಮೋಸ್ತು + ಕೆಯ್$_1$]

ನಮೋಸ್ತುಗೈ 'ನಮೋಸ್ತುಗೆಯ್' ನೋ.

ನಮ್ಮಕ್‌ಹರಾಮ್ 'ನಮ್ಮಕ್‌ಹರಾಮ' ನೋ.

ನಮ್ಮಕ್‌ಹರಾಮ, ನಮಕ್‌ಹರಾಮ್, ನಮ್ಮಕ್‌ಹರಾಮ್, ನಿಮಕ್‌ಹರಾಮ, ನಿಮ್ಮಕ್‌ಹರಾಮ (ನಾ). ಉಪ್ಪಿಟ್ಟವನಿಗೆ ಎರಡು ಬಗೆಯುವವನು; ಉಂಡಮನೆಗೆ ಎರಡು ಬಗೆಯುವವನು; ಸ್ವಾಮಿದ್ರೋಹಿ ; ಕೃತಘ್ನ : ನಾನು ನಮ್ಮಕ್‌ಹರಾಮನೆನಿಸಿಕೊಳ್ಳದೆ, ಇದುವರೆಗೂ ಸ್ವಾಮಿಭಕ್ತಿಯಿಂದಲೇ ಚಾಕರಿಮಾಡಿಕೊಂಡು ಇರುತ್ತಿದ್ದೆನು (ಮಹಾವಂ. I, ೨೩೨) ; ಬುದ್ದೀ ಬುದ್ದೀ ನಮ್ಮಕ್‌ಹರಾಮಾ ಬುದ್ದಿ, ಸುಳ್ಳು ಹೇಳುತ್ತಾನೆ ನನ್ನೊಡೆಯ (ನಮ್ಮಳ್ಳಿ. ೪೬). ನಮಕ್‌ಹರಾಮ್ : (ಕಿ). ನಮ್ಮಕ್‌ಹರಾಮ್ : ಸರ್ಕಾರದ ಉಪ್ಪುತಿಂದು ಸರ್ಕಾರ ಬಯ್ಯುವವರಿಗೆ 'ನಮ್ಮಕ್‌ಹರಾಮ್' ಅಂತಾರೆ (ಪಂಜಪಂ. ೦೭೦). ನಿಮಕ್‌ಹರಾಮ : ನಮ್ಮ ಇಸ್ಲಾಂಮತವು ನಿಮಕ್‌ಹರಾಮರನ್ನು ಎಂದೂ ಹೆರುವುದಿಲ್ಲ ಮಹಾರಾಜ (ರಾಜಯೋ. ೧೩೩). ನಿಮ್ಮಕ್‌ಹರಾಮ: ಆ ನಿಮ್ಮಕ್‌ಹರಾಮ ಹೇಳಿದ್ದು (ರಾಜೇಂದ್ರ. ೪).

[← ಪಾರ. ನಮಕ್‌ಹರಾಮ್ ; ಹಿಂ. ನಮಕ್‌ಹರಾಮ್, ನಿಮಕ್‌ಹರಾಮ್ ; ಮರಾ. ನಿಮಕ್‌ಹರಾಮ್]

ನಮ್ಮಕ್‌ಹಲಾಲ್, ನಿಮ್ಮಕುಹಲಾಲು (ನಾ). ಉಪ್ಪಿಟ್ಟವನನ್ನು ನೆನೆಯುವವನು ; ಸ್ವಾಮಿಭಕ್ತ ; ಸ್ವಾಮಿನಿಷ್ಠ. ನಿಮ್ಮಕುಹಲಾಲು: ಅವರಿಗೆ ದೂರಮಾಡಿ, ಬದಲು ಅಮಲುದಾರರ ನಿಮ್ಮಕುಹಲಾಲಾಗಿ ಇರು ಮಂಥವರ ನೋಡಿ ನಿಲ್ಲಿಸ್ಯಾರು ಎಂಬುದಾಗಿ ನಾವು ತಿಳಿದು ಇದ್ದೆವು (ರಾಜೇಂದ್ರ. ೧೦೪).

[← ಹಿಂ. ನಮಕ್‌ಹಲಾಲ್ ; ಮರಾ. ನಿಮಕ್‌ಹಲಾಲ್]

ನಮ್ಮು 'ನೆಮ್ಮು1'ನೋ.

ನಮ್ಮೆ (ನಾ). "ಹಬ್ಬ" (ಹುಲಿಹಾ. ಕೋಶ) : ಮನಯವರೆಲ್ಲ ಸಾಲಾಗಿ ಕುಳಿತು ಪುತ್ತರಿ ನಮ್ಮೆಯ ಬಿರ್ದೂಟದನ್ನು ಮಾಡಿದರು (ಹುಲಿಹಾ. ೧೮೯).

[← ಕೊಡ. ನಮ್ಮೆ]

ನಮ್ಯ (ಗು). "ಬಾಗುವ ; ಬಳಂಕುವ ; ನಮ್ಯ" (Lithe. ಇಂಕನಿ).

[ಸಂ.]

ನಮ್ಯತೆ (ನಾ). ಬಾಗುವಿಕೆ ; ಮಣಿಯುವಿಕೆ : ಇಂಗ್ಲಿಷ್ ಮೊದಲಾದ ಯೂರೋಪಿಯ ಭಾಷೆಗಳು ಭಾಷಾಂತರಸಾಹಿತ್ಯವಿಲ್ಲದಿದ್ದರೆ ಇಂದಿನ ಪ್ರಬುದ್ಧಾವಸ್ಥೆಗೇರುತ್ತಿರಲಿಲ್ಲ. ಸುಲಭ ನಮ್ಯತೆಯನ್ನಾಗಲೀ ಹಿಗ್ಗು ಕುಗ್ಗುಗಳನ್ನಾಗಲೀ ಪಡೆಯುತ್ತಿರಲಿಲ್ಲ (ಸುವರ್ಣ. ೨೫೬). [ಸಂ. ನಮ್ಯತಾ]

ನಮ್ರ (ಗು). ೧. ಬಾಗಿದ ; ಮಣಿದ. ೨. ಬಗ್ಗಿಸಿದ ; ತಗ್ಗಿಸಿದ. 'ನಮ್ರಶಿರೋಧರೆ' ಪರಾ. ೩. ವಿಧೇಯ ; ವಿನಯಶೀಲ ; ವಿನಯ ಪೂರ್ವಕವಾದ : ಒಮ್ಮೆಯಾದರೂ ತಣಿಯಿರೆಂದು ನಮ್ರ ಬಿನ್ನಹ (ಕನ್ನಜಾ. ೪೨). 'ನಮ್ರವಚನ' ಪರಾ. ೪. (ನಾ). ನಮಸ್ಕರಿಸಿದುದು ; ವಂದಿಸಿದುದು. ೫. ಬಾಗಿದುದು : "ನತಂ, ನಮ್ರಂ, ಬಂಧುರಂ-ಈ ೩ ಎಱಗಿರ್ದುದು" (ಹಲಾಯು. ೦೨೫-೭೫). ೬. [ನಾಟ್ಯ] ತೋಳಂಗಳಿಂದ ಮಾಡುವ ಹದಿನಾರು ಬಗೆಯ ಅಭಿನಯಂಗಳಲ್ಲಿ ಒಂದು ; "ತೋಳನ್ನು ಸ್ವಲ್ಪ ಬಗ್ಗಿಸುವುದು" (ಲಾಸರಂ. ೨೬೧ ಗದ್ಯಾನುವಾದ) ; ಬಗೆಗೊಂಬೂರ್ಧ್ವದ ತಿರ್ಯಕ್ . . . ಕುಂಚಿತಮುರುತ [ರ]ನಮ್ರಾಖ್ಯ ಸರಳಮಾಂದೋಳಂಗಳ್ ತರುಣಿ ಪದಿನಾಱು ಭೇದದಿ ನೆರೆವುದು ಕೇಳ್ ಬಾಹುವಿಂತು ಭರತಾಗಮದೊಳ್ (ಲಾಸ್ಕರಂ. ೨-೧೨೨) : ಊರ್ಧ್ವ, ಅಧೋಮುಖ, ತಿರ್ಯಕ್, ಅಪವಿದ್ಧ, ಪ್ರಸಾರಿತ, ಅಂಚಿತ, ಮಂಡಲಗತಿ, ಸ್ವಸ್ತಿಕ, ಉದ್ವೇಷ್ಟಿತ, ಪೃಷ್ಠಾನುಸಾರಿ, ಆವಿದ್ಧ, ಕುಂಚಿತ, ನಮ್ರ, ಸರಳ, ಅಂದೋಲಿತ, ಉತ್ಸಾರಿತ - ಈ ಹದಿನಾಱು ತೋಳ ಭೇದಂಗಳ್ (ಲಾಸ್ಕರಂ. ೨-೧೨೨ವ). [ಸಂ.]

ನಮ್ರತೆ (ನಾ). ೧. ಹೆಮ್ಮೆಯಿಲ್ಲದಿರುವಿಕೆ ; ಅಹಂಕಾರವಿಲ್ಲದಿರುವಿಕೆ ; ವಿನಯಶೀಲತೆ : ಧರ್ಮಪುತ್ರನ ನಮ್ರತೆ ಭೀಮನಿಗೆ ಹಿಡಿಸಲಿಲ್ಲ (ವ್ಯಾಸಜಿ. ೯೮) : ನೆಕ್ಲುದೋವ್ ನಮ್ರತೆಯಿಂದ ಮಾರುತ್ತರವಿತ್ತನು (ಪುನರು. ೧೮೭). ೨. ನಮಸ್ಕಾರ ಮಾಡುವಿಕೆ ; ನಮನ : ಜಿನಾಂಬಿ ಕಾನುಪಮಪದಾಬ್ಜಯುಗ್ಮದೊಳು ನಮ್ರತೆಯಂ ನಲವಿಂದೆ ಮಾಡಿದರ್ (ಮಹಾನೇ. ೮-೪೩). [ಸಂ. ನಮ್ರತಾ]

ನಮ್ರತ್ವ (ನಾ). ೧. ಬಾಗಿರುವಿಕೆ ; ಮಣಿದಿರುವಿಕೆ. ೨. ಬಾಗುವುದು: "ಬಾಗು - ನಮ್ರತ್ವೇ" (ಶಮಧಾ). ೩. = ನಮ್ರತೆ. [ಸಂ.]

ನಮ್ರಭಾವ (ನಾ). = ನಮ್ರತೆ ೧ : ಅವರ ನಮ್ರಭಾವ ಎಂಥವರ ಮನಸ್ಸನ್ನಾದರೂ ಸೆಳೆಯಬಲ್ಲುದು (ರೂಢಿ). [ನಮ್ರ + ಭಾವ2]

ನಮ್ರಮೂರ್ತಿ (ನಾ). ವಿನಯಶೀಲನಾದವನು ; ಅಹಂಕಾರವಿಲ್ಲದವನು ; ಹೆಮ್ಮೆಯಿಲ್ಲದವನು : ಪಡೆವಳ್ಳಂಗೆ ರಥಾಂಗಹೇತಿ ನಡೆಯಲ್ವೇಟ್ ಬೇಗಮಿಾ ನಿನ್ನ ಪೆರ್ವಡೆಯಂ ನೀನೆನೆ ನಮ್ರಮೂರ್ತಿ ಬೆಸವೆತ್ತಾ ಬೀರವಟ್ಟಕ್ಕೆ ಮೆಟ್ಟಡೆ . . . ಪಡೆಯಂ ಕೈಸನ್ನೆಗೆಯ್ದುದ್ಧತಂ ನಡೆಯಲ್ವೇಟ್ದೊಡೆ (ಶಾಂತಿಪು. ೧-೧೦೭). [ನಮ್ರ + ಮೂರ್ತಿ]

ನಮ್ರವಚನ (ನಾ). ವಿನಯದಿಂದ ಕೂಡಿದ ಮಾತು : ಅಮಿತ ನಮ್ರವಚನಗಳಿಂದಲುಪಚರಿಸಲು (ವಂಕಾರಾ. ೨-೮-೭). [ನಮ್ರ + ವಚನ]

ನಮ್ರಶಿರೋಧರೆ (ನಾ). ಕತ್ತನ್ನು ಬಾಗಿಸಿದವಳು ; ಕೊರಳನ್ನು ತಗ್ಗಿಸಿದವಳು : ನಮ್ರಶಿರೋಧರೆ ಸೀತೆ ಲೋಕಸಂತ್ರಾಸಿಯ ರೂಪು ಪಾದನಖದರ್ಪಣದೊಳ್ ಪಲವಾಗಿ ತೋಱೆ ಕಂಡಾ ಸತಿ ಬೆರ್ಚಿ ಮುಂಚ್ಚಿದಳೆರಟ್ಕರದಿಂತರಲೇಕ್ಷಣಂಗಳಂ (ಪಂರಾಮಾ. ೯-೧೦೨).

[ಸಂ. ನಮ್ರಶಿರೋಧರಾ]

ನಮ್ರಸ್ತ (ನಾ). ವಿನೀತನಾದವನು ; ವಿನಯಶೀಲ : ಹಸ್ತವೆರಡರಲಾತು ಊಳಿಗರ್ಹಸ್ತಕಿತ್ಪರಿಯಾಣಗಳ ನಮ್ರಸ್ತರಾಗೆಲ್ಲೆದ್ದು ನಿಂದರ ನೋಡಿ ಭೂಭುಜನು (ಬಿಜ್ಜಪು. ೮೦-೨೬). [ನಮ್ರ + - ಸ್ತ]

ನಯ್ಯ1 (ನಾ). ೧. ಮೃದುವಾಗಿರುವಿಕೆ ; ನುಣುಪು ; ಸ್ನಿಗ್ಧತೆ ; ಕೋಮಲತೆ ; ಸೌಕುಮಾರ್ಯ : ತುಂಬಿ ಕುರುಳ್ ತಳಿರ್ ತಳಂ . . . ಕೊನೆ ಸೆಳ್ಳುಗುರ್ಗಳ್ ಕುಡಿ ತೋಳ್ ನಯಂ ನಯಂ ನೆಲೆ ನೆಲೆ ಭಂಗಿ ಭಂಗಿ ಪದವೆಣ್ ಬೆಳವಾರ್ಯ್ ಪೆಱತಲ್ಲಿದೆಂತೊ ಕೋಮಲಲತೆ ಪೇಟುಮೆನ್ನಿನಿಯಳಂ ಮಱೆಗೊಂಡುದೊ ಸೂಱೆಗೊಂಡುದೋ (ಪಂಪಭಾ. ೫-೧೨) ; ತ್ರಿದಶನದೀಸಲಿಲದ ಪೂರದಿನಂಗನೆ ನಯದೊಳಭಿಷವೋತ್ಸವಮನೊಡರ್ಚಿದಳೆನೆ ಜಿನಜನನಿಗೆ ರಾಗದಿನಿಕ್ಕಿದಳೊರ್ವಳಮರಿ ಚಮರೀರುಹಮಂ (ಶಾಂತಿಪು. ೯-೦೭೯) ; ಸಂದಣಿಪ ತೋಳ್ಗಳಗ್ಗಳಿಪ ನಯಮಂ ಕಱೆಯೆ (ಇಹರ. ದೇ. ೩೨-೧೬) : ತೈಲಲೇಪದ ನಯದ ಹೊಗರಿನ . . . ಕಾಳೋರಗನ ಕಂಡಿನಾಲಗೆಯವೊಲೆಸೆದುದಂಕುಶ ಭಟನ ಮುಷ್ಟಿಯಲಿ (ಕುಮಾಕ್ರೋ. ೩-೫೬) ; ನಯವಿರಬೇಕು ನುಡಿಗಡಣದಲ್ಲಿ (ಅಖಂಡೇ. ೧೩೧-೦೦೦). ೨. ಮೆಲುಂಪು ; ಸೌಮ್ಯತೆ : ಮೇಲುದಱ ಸೆಱಂಗಿನಿಂ ನಯದೆ ಬೀಸಿದನಾ ಮನುಹೇಂದ್ರಚಂದ್ರಮಂ (ಕಾದಂಪೂ. ೯೨೯) ; ನಯದಿಂದೆ ಕೊಗ್ಗಿ ಪಿಟಿಗೆಣ್ಣೆಯನುಪ್ಪಂ ಬೆರಸು ಕರ್ಣತೂಲವ್ಯಥೆಗೆ . . . ಮದವಸಲೆಗಳ ದಳದೊಳೊಂದಂ ಕಿವಿಯೊಳ್ (ಲೋಕೋಪ. ೯-೬೫) ; ನಯದಿಂ ಕೋಕಿಳನಾದೆ ನಿಮ್ಮರಸರಿಂತೇಕಾರಣಂ ಬಂದರ್ (ಅನಂಪು. ೧೧-೩೪). ೩. ಸೊಗಸು ; ಅಂದ ; ಕಳೆ ; ಮನೋಜ್ಞತೆ : ನಯದಿಂ ರಾಜೇಂದ್ರಚಂದ್ರಂಗಭಿಷವವಿಧಿಯಂ ಮಾಡುವೆಂ ಚಂದ್ರಿಕಾವಾರಿಯಿನೆಂಬಂತೆತ್ತಲುಂ ತಣ್ಬೆಳಗಿನ ಬಳಗಂ ಸಿಂಪಿಸಲ್. . .ಉದಯಿಸಿತುದಯಾದ್ರೀಂದ್ರದೊಳ್ ಚಂದ್ರಬಿಂಬಂ (ಕಾದಂಕಾ. ೩೭೬) ; ನಯಮಂ ಬೀಱುವ ಚಿತ್ರಪತ್ರ ನಿಧಿಂಬಿಟಸ್ತಂಭಧಿತ್ತಿಚ್ಛದಾಶ್ರಯದಾಲಕ್ಷಣಮಾನಮೇಯ ಗುಣರೇಖಾಶುದ್ಧಿ ಸರ್ವಾರ್ಥಸಿದ್ಧಿಯ ತದ್ರಶ್ನವಿಮಾನವಲ್ಲಿಯುಮಿವಿಲ್ಲೆಂಬೀ ಜಸಕ್ಕಾದುದಾಶ್ರಯಂ (ಹಂದ್ರಪು. ೧೫-೯೩) ; ನಯದ ಹರಿನೀಳಕುಟ್ಟಿಮಮಯದ ವಿಮಾನಂಗಳಲ್ಲಿ (ಶಾಂತೀಶ್ವ. ೧೩-೧೧೭) : ನಯಮಳವಟ್ಟ ಜವ್ವನದ ರೂಢಿಯ ಗಾಡಿಯ ಪೆಂಡಿರೆಲ್ಲಮಲ್ಲಿಯೆ . . . ಪೆಸರಾದ ಸಮಸ್ತವಸ್ತುವಲ್ಲಿಯೆ ಪೆಱತೊಂದು ಪಟ್ಟಣದೊಳಿಲ್ಲೆನೆ ಪಟ್ಟಣಮೊಪ್ಪಿ ತೋಱುಗುಂ (ಸೂಕ್ತಿಸು. ೪-೧೦೩). ೪. ಪ್ರೀತಿ ; ಅನುರಾಗ : ಪುತ್ರವರಾರ್ಥಿಗಳಾಗಿ ತನ್ನ ಕಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಪೊದಳ್ದುದಾ ಸತಿಯರಿರ್ವರೊಳಂ ನವಗರ್ಭವಿಶ್ರಮಂ (ಪಂಪಭಾ. ೧-೮೫) ; ನಯದಿಂ ಮುನಿಪತಿ ಜಿನದೀಕ್ಷೆಯನಂಬರಚರತನೂಭವಂಗನುನಯದಿಂದಯೆಗೆಯ್ಯೆ (ಧರ್ಮಾಮ್ಯ. ೮-೧೫೩). ೫. ನವಿರು ; ನಾಜೂಕು ; ಸೂಕ್ಷ್ಮತೆ ; ಕಲಾತ್ಮಕತೆ : ನಯದಿಂದಂ ಬರೆದಂತೆಯುಂ ಕಡೆದು ತಂದಿಟ್ಟಂತೆಯುಂ . . . ಇರ್ಕುಂ ಜಿನಬಾಲರೂಪಮೆರ್ದೆಯೊಳ್ ಮುಂ ಕಂಡಗಲ್ದಿರ್ದರಾ (ಶಾಂತಿಪು. ೧೦-೮೫); ನಯದಿಂ ಪಂಪನೊಱಲ್ದು ವಿರ್ಮಿಸಿದ ಪೊನ್ನಂ ಪ್ರೀತಿಯಿಂ ಪೇಟ್ದ . . .ತತ್ಕಾವ್ಯತ್ರಯಕ್ಕಂ ಜಗತ್ತ್ರಯಮುಂ ಮುಂ ಬೆಲೆಯಾಗಿ ಪೋಯ್ತೆನೆ (ಹಂದ್ರಪು. ೧-೬೬). ೬. [ಕಾವ್ಯಮಿಾ] ಕಾವ್ಯದ

ಹತ್ತು ಗುಣಗಳಲ್ಲಿ ಒಂದು; ಸೌಕುಮಾರ್ಯ; ಮೃದುವರ್ಣಗಳಿಂದ ಕೂಡಿರುವಿಕೆ: ಇನಿತುಮವಿರ್ಕೆ ಮತ್ಯತಿಯೊಳೀ ಧರೆ ಬಣ್ಣಿಸೆ ಸಂದ ಶಂಖವರ್ಮನ ಬಗೆ ಶಾಂತಿವರ್ಮನ ನಯಂ (ಜಗವಿ. ೦-೦೦). ೭. [ಸಂಗೀತ] ಮಾರ್ದವ; P ೧. ವೀಣೆಯ ತಂತಿಗೆ ಅನ್ವಯಿಸಿದಾಗ: ವೀಣೆಯ ಕಕುಭ (ಇಂದಿನ 'ಕುದುರೆ', 'ಬ್ರಿಡ್ಜ್')ದ ಮೇಲೆ ಲಾಕ್ಷಾರಸದಿಂದ ಅಂಟಿಸಿದ ಲೋಹದ ಪತ್ರಿಕಾ. ಇಂದಿನ 'ರೇಕು' ಎಂಬ ಭಾಗ. ವೀಣಾತಂತಿಯಲ್ಲಿ ನಾದಸಮೃದ್ಧಿಯನ್ನೂ ಸ್ವರಕ್ಕೆ ನುಣುಪನ್ನೂ ಜೀವವನ್ನೂ ಕೊಡುವ ಜೀವಾ (ಇಂದಿನ 'ಜೀವಾಳ') ಎಂಬ ರೇಷ್ಮೆ, ಹತ್ತಿ ಅಥವಾ ಬಿದಿರಿನ ನೂಲು. ಇದಕ್ಕೂ ತಂತಿಗೂ ಸುಶ್ಲಿಷ್ಟವಾಗಿರುತ್ತದೆ. ೨. ಸ್ವರಕ್ಕೆ ಅನ್ವಯಿಸಿದಾಗ: ಸ್ವರದಲ್ಲಿ ಸ್ವನಿಷ್ಠವಾಗಿರುವ ನಾದಸಮೃದ್ಧಿಗೂ ರಂಜನೆಗೂ ಆಸ್ಪದವಾಗಿರುವ ಆವರ್ತಕಧ್ವನಿಗಳ ವ್ಯೂಹದಲ್ಲಿ ಪರಸ್ಪರ ಸಂಘರ್ಷವೂ ವಿರೋಧವೂ ಇಲ್ಲದಿರುವುದು; ಇದರಿಂದಾಗಿ ಸ್ವರವು ಒರಟಾಗಿರದೆ ನುಣುಪಾಗಿರುತ್ತದೆ. ೩. ಗಾನವ್ಯವಹಾರಕ್ಕೆ ಅನ್ವಯಿಸಿದಾಗ: ಒಂದು ಸ್ವರಶ್ರೇಣಿಯಲ್ಲಿರುವ ರಾಗಭಾವವನ್ನು ಮುಂದಿನ ಸ್ವರಶ್ರೇಣಿಯಲ್ಲಿರುವ ರಾಗಭಾವಕ್ಕೆ ಒಯ್ಯುವ ಅಗ್ರಸ್ವರ. ಹೀಗೆ ನಯಶಬ್ದವು ಸಂಗೀತ ವರ್ಣನಾಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥಗಳಲ್ಲಿ ಪ್ರಯುಕ್ತವಾಗಿರುವುದು ಕಂಡುಬರುತ್ತದೆ: ಪದ ಕೊರಲಿಂಪನಪ್ಪುಕೆಯೆ [ಕೊಂಕು ನ]ಯಂ ಗಮಕಂಗಳಿಂ ಪೊದರ್ಕೊದಳೆಟ್ ದಿಕ್ಕಿದಂತೆ ಸುತಿಯೊಳ್ ಸಮವಾಗಿರೆ ಜಾಣನಾಂತು ಮೆಚ್ಚಿದ ತೆಱದಾಸೆ ವಟ್ಟಸದೆಶ್ಶಿನವೋಲ್ ದೊರೆವೆತ್ತು ದೂಱಿದಾಱಿದ ದನಿ ಮುಟ್ಟೆ ಮೇನಕೆ ಸರಸ್ವತಿ ಬಾಯ್ದೆಱೆದಂತೆ ಪಾಡಿದಳ್ (ಪಂಪಭಾ. ೭-೮೮); "ನುಣುಪು" (ಪಂಪದೀ. ೨೬೬); ಘನ, ನಯ ಮತ್ತು ದೇಶ್ಯಗಳನ್ನು ಹಾಡುವುದರಲ್ಲಿ ಅವರು ಚೆನ್ನಾಗಿ ನುರಿತವರು (ಸಂಗೀತ. ೪೫).

ನಯನಾಜೂಕು, ನಯನಾಜೋಕು = ಕೋಮಲತೆ; ಸೂಕ್ಷ್ಮತೆ: ಸೂಕ್ಷ್ಮರೇಖಾವಿನ್ಯಾಸಗಳೊಂದಿಗೆ ಜಯಪುರ ಕೃತಿಗಳು ನಯನಾಜೂಕಿನ ಕೃತಿಗಳಾಗಿದ್ದವು (ಭಾರದ. ೫೩೦): ಅವಳು ಸ್ವಲ್ಪ ನಯ – ನಾಜೋಕು (ಫ್ಯಾಷನ್)ಗಳಿಂದ ಇರಲೆಂದು ನನ್ನ ಆಸೆ (ಗಂಸಮು. ೨೨). ನಯ ಮಾಡು= ನುಣುಪುಗೊಳಿಸು: ಅವರು ತೋಪರ ಹಾಕಿ ಮರಗಳನ್ನು ನಯ ಮಾಡಿದರು (ಗಲಿಪ್ರ. ೯೯). ನಯವಾಗು = ೧. ನುಣ್ಣಗಾಗು; ಮೆತ್ತಗಾಗು: ಹಿಟ್ಟು ಬಹಳ ನಯವಾಗಬೇಕೆಂದಿಲ್ಲ (ಜಯಸೌ. ೯೬). ೨. ಕಲಾತ್ಮಕತೆಯಿಂದ ಕೂಡಿರು; ನಾಜೂಕಾಗಿರು: ಹೆಣಗೆ ಮತ್ತು ಕಸೂತಿ ಕೆಲಸಗಳನ್ನು ನಯವಾಗಿ ಮಾಡಿಕೊಡುತ್ತಾಳೆ (ಮಹಾತ್ಯ. ೮೬).

[ದೇ.॥ ತಮಿ. ಮಲ. ತುಳು. ತೆಲು. ನಯ]

ನಯ್ಯ (ನಾ). ೧. ಒಯ್ಯುವಿಕೆ; ತಲುಪಿಸುವಿಕೆ. ೨. ನಿರ್ವಹಿಸುವಿಕೆ. ೩. ನಡವಳಿಕೆ; ವರ್ತನೆ; ಗುಣ. ೪. ವಿವೇಕಯುತವಾದ ನಡವಳಿಕೆ; ಯೋಗ್ಯವಾದ ವರ್ತನೆ; ವಿವೇಕ; ಸದ್ಗುಣ; ದೂರದೃಷ್ಟಿ: ಜಿನ ನಿನ್ನ ಮೂರ್ತಿ ಜಿನ ನಿನ್ನ ನಯಂ ಜಿನ ನಿನ್ನ ಸಮತೆ . . . ಜಿನ ನಿನ್ನ ಕಾಣ್ಕೆ ವರ್ಣಸಲಳವೇ (ಪುಷ್ಪಪು. ೦೧-೫೭); ಕಲಿತರ್ಕೆ ಬಲ್ಬಿಜ್ಜೆಯಂ, ವೇದಮಂ ನೀತಿ ನಯ ವಿನಯ ನಿಯತಿಯಂ (ಶ್ರೀರಾಮಾ. ೨೫-೬೭೦); ಸತ್ಯಭಕ್ತಿಯ ಸೇವೆಗೆಯ್ದವಂ ಭರತಂ ನಿತ್ಯ ಜೀವನದಿ ನೀನಾ ನಯವನನು ಸರಿಸೊ (ಮಂಕುಶ. ೭೦೦). ೫. ಒಳ್ಳೆಯತನ; ವಿನಯ; ಸೌಜನ್ಯ; ಸಭ್ಯತೆ: ನಯದಿಂದಮಿ ಸರೋರುಹನಯನೆಯನಳವಡಿಸಲಾರ್ತೆನಿಲ್ಲಳವಡಿಪೆಂ ಭಯದಿಂದಂ (ಪಂರಾಮಾ. ೯-೦೮೭); ನಯದಿಂ ಗಂಧರ್ವವಿದ್ಯಾ ಪ್ರಮುಖನತಿನುತಂ ಬಂದು (ನೇಮಿಪು. ೩-೦೭೮); ನಯದಿಂದೆಳ್ದು ನತಾಸ್ಯನಾಗಿ (ಗಿರಿಕ. ೧೦-೭೮); ನಯದಿಂ ನಿನ್ನೊಳೊಡಂಬಡಂ ಪಡೆಯದಿಂ ದೌತ್ಸುಕ್ಯದಿಂ ತಂದ ಸಲ್ಗೆಯ ನೀಂ ಮನ್ನಿಸು (ಶಾಪಂಪು. ೧೦-೮೮); ನಯವಿಲ್ಲದರೊಳ್ ನಯಮಂ ಬಯಸಲ್ಕೇಂ ಬಪ್ಪುದುಂಟೆ (ನಳಚಂ. ೨೦೩); ನಯವಿದ್ದಲ್ಲಿ ಭಯವಿಲ್ಲ (ಗಾಜಿ). ೬. ಭಕ್ತಿ; ಪೂಜ್ಯಭಾವ: ನಯದಿಂ ಜಿನೇಂದ್ರ ಚರಣದ್ವಯಮಂ ಚಿತ್ತದೊಳೆ ನಿಲಿಸಿ (ಧರ್ಮಾಮೃ. ೩-೪೫). ೭. ಚಿತ್ತ; ನ್ಯಾಯ; ನೀತಿ: ನಯಮಂ ನಂಬುವೊಡೆನ್ನ ಪೇಟ್ವ ಸತಿಯಂ ಕೈಕೊಂಡಂ (ಪಂಪಭಾ. ೦-೭೭); ಸನ್ಮಾರ್ಗಕ್ಕೆ ಮಯ್ದಾರದಂ ನಯಮಂ ಸಾರದನಾವ ಕಾಳೆಗದೊಳಂ ಕಣ್ಣಾರದಂ ನಾರದಂ (ಪಂರಾಮಾ. ೩-೦೮); ನಯವಿದು ಶೂರಂ ಭೇದೇನ ಯೋಜಯೇತ್ತೆಂಬ ನೀತಿಯಿದನಱಿದು ನಯಾನಯವಿದ್ಧರ್ಮಜ ನಮ್ಮೊಳ್ ಪ್ರಯೋಗಿಸಲ್ ಬಲ್ಲ ಸಚಿವನಾವಂ ದೇವಾ (ಮಹಾನೇ. ೧೨-೦೭೨). ೮. ಸರಿಯಾದ ರೀತಿ; ಯೋಗ್ಯವಾದ ವಿಧಾನ. ೯. ರಾಜನೀತಿ; ರಾಜ್ಯಭಾರಕ್ರಮ; ಮುತ್ಸದ್ದಿತನ: ಇರ್ಪುದಲ್ತು ನಯಮಿನ್ನೀ ಪೊಟ್ತೆ ಪೊಟ್ತಾಗೆ ನೀನೊಡಗೊಂಡುಯ್ವುದು ಕನ್ನೆಯಂ ತಡೆಯದಿರ್ (ಪಂಪಭಾ. ೫-೨೦); ನಯಮಂ ಪೇಟ್ವೊಡೆ ಸಂಧಿಮಾಡಿ ಱಿಯದಿರ್ಕೊಂತೇಯರೊಳ್ (ಗವಾಯು. ೪-೬೫); ಕೀರ್ತಿ ದಿಗ್ವಳಯಾಂತಂ ನುಡಿ ಮೇರುಶೈಲಲಿಖಿತಂ ಧರ್ಮ್ಮಂ ಜಗನ್ಮುದ್ರೆ ಭೂತಳವುದ್ಯಂ ಚರಿತಂ ನಯಂ ಜನನುತಂ ಶ್ರೀಸಿಂಹಭೂಪಾಳನಾ (ಎಕ. VIII, ಸೊರಬ. ೦೮೪-೦೮; 1088); ಅಮಳಗುಣನಮಳಕುಳನತ್ಯಮಳಚರಿತ್ರೈಕನಿಳಯನಮಳ ನಯಪ್ರಕ್ರಮನಮಳಯಶೋರೋಚಿಸ್ಸಮಾವೃತಾಶಾಳಿಯೆನಿಸಿದಂ ರೇಚರಸಂ (ಎಕ. VII, ಶಿಕಾರಿ. ೦೨೩-೩೭; 1159); "ನೀತಿ" (ಶಾಪಮಂ. ೨೭೪ ಕೋಶ): ನಯದಿಂ ಜನಕ್ಕೆ ಪುಣ್ಯೋದಯದಿಂ ಪಾರ್ಥಿವಜನಕ್ಕೆ . . . ದಯೆಮಾಡುವೆ ನೀನೆ ದಲ್ ಚಮತ್ಕೃತಿಯೊದವಂ (ಚಂದ್ರಪು. ೯-೩೪). ೧೦. ಯೋಜನೆ; ಉಪಾಯ; ಹಂಚಿಕೆ; P ಸಾಮ, ದಾನ, ಭೇದ ಮತ್ತು ದಂಡ ಎಂಬ ನಾಲ್ಕು ಬಗೆಯ ಚತುರೋಪಾಯಗಳು: ಸಾಮಭೇದಮುಪಪ್ರದಾನದಂಡಮೆಂಬ ನಾಲ್ಕುಂ ನಯಂಗಳನಱಿದು (ಬಂಹರಿ. ೭-೦ ವ). 'ನಯವಿವೇಕ' ಪರಾ. ೧೧. ಶಾಸ್ತ್ರ; ತತ್ವ; ಸೂತ್ರ; ನಿಯಮ; ಸಿದ್ಧಾಂತ: ಪೂರ್ವಮೀಮಾಂಸೆಯು ಸಂಶಯಗ್ರಸ್ತವಾದ ಅಥವಾ ಅನೇಕಾರ್ಥಗರ್ಭಿತವಾದ ವೇದವಾಕ್ಯಗಳನ್ನು ಸರಿಯಾಗಿ ಅರ್ಥಮಾಡುವುದಕ್ಕೆ ಉಪಯುಕ್ತವಾದ ರೀತಿ ನಯಗಳನ್ನು ಉದಾಹರಿಸುತ್ತ, ಧರ್ಮ, ಸ್ವರೂಪವಿವೇಚನೆಯಲ್ಲಿ ತೊಡಗಿರುವ ದರ್ಶನವಾಗಿ ಏರ್ಪಟ್ಟಿದೆ (ತತ್ತ್ವಪ್ರಾ. ೨೮೫). ೧೨. ತಿದ್ದುವಿಕೆ. 'ನಯನಿಪುಣ' ಪರಾ. ೧೩. [ನಾಟ್ಯ] ಲಯಬದ್ಧವಾದ ಗತಿ; ಭಾವಸೂಚಕವಾದ ಗಮನ: "ಅನುಕರಣೆ ನಯಮೆನಿಕು" (ಮಂಗರಾ. ೨೪-೬); ರಸಭಾವಾಭಿನಯಂಗಳ್ ಪೊಸವೆ . . . ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ (ಅದಿಪು. ೯-೨೫); ಪಯಗತಿ ಹಸ್ತಂಗಳ ಚಾಲಯಮತಿ ಶಯಿಪಂಗಹಾರದುಲ್ಲಾಸಂ ದೃಷ್ಟಿಯ ಭೇದಂ ಕರಣಂಗಳ ನಯಂ ನಯಂ ಬಡೆಯೆ ನರ್ತಿಪಮರಿಯರಿಂದಂ (ಮಹಾನೇ. ೧೫-೫೯). ೧೪. [ಜೈನ] (ತಿಳಿಯುವವನ ಅಭಿಪ್ರಾಯಕ್ಕೆ ವಿಷಯವಾದ) ವಸ್ತುವಿನ ಏಕದೇಶ ಜ್ಞಾನ; P ಜೈನಸಿದ್ಧಾಂತದಲ್ಲಿ ಸಪ್ತಭಂಗಿಯನ್ನು ಅಂಗೀಕರಿಸಿರುವುದರಿಂದ ಯಾವುದರಲ್ಲೂ ನಿರ್ಣಯವಿಲ್ಲದಿರುವುದಾಗಿ ಲೋಕವ್ಯವಹಾರವು ನಡೆಯುವುದು ಕಷ್ಟವಾಗುತ್ತದೆ. ಹೀಗಾಗಿ, ನಯವನ್ನು ಅಂಗೀಕರಿಸುತ್ತಾರೆ. ಹೇಗೆಂದರೆ ಉದಾಹರಣೆಗೆ ಗಡಿಗೆ ಇಡೆಯೆ ಎಂದು ಕೇಳಿದರೆ ಗಡಿಗೆಯು ಇರುವುದೂ ಸಂಭವಿಸಬಹುದು ಎಂದು ಜೈನಸಿದ್ಧಾಂತದಂತೆ ಹೇಳಬೇಕು. ಇಲ್ಲಿ ನಿರ್ಣಯವಾಗುವುದಿಲ್ಲ. ಆದರೆ ಇದು ಪ್ರಮಾಣವಾಗಿದೆ. ಇದರಲ್ಲಿ ಗಡಿಗೆಯಿರುವುದು ಎಂಬ ಒಂದು ಅಂಶವನ್ನು (ಇರಬಹುದು ಎಂಬುದನ್ನು ಬಿಟ್ಟು) ಗ್ರಹಿಸಿದರೆ ಆಗ ಗಡಿಗೆ ಇದೆಎಂದು ಅರ್ಥವಾಗುತ್ತದೆ.

ಹೀಗೆ ಒಂದಂಶವನ್ನು ಗ್ರಹಿಸುವುದು ನಯ. ಒಟ್ಟಿನಲ್ಲಿ ಸ್ಯಾದ್ವಾದದಲ್ಲಿ ಪ್ರಮಾಣವು ಸಂಶಯದಂತಿದ್ದರೂ ವ್ಯವಹಾರಕ್ಕೆ ನಯವು ಬೇಕೇಬೇಕು. ಆದುದರಿಂದಲೇ ಜೈನಸಿದ್ಧಾಂತವು ಸಂಶಯ ಸಿದ್ಧಾಂತವಲ್ಲ. ಒಂದಂಶವನ್ನು ಪರಿಗ್ರಹಿಸಿ ಲೋಕವ್ಯವಹಾರವನ್ನು ನಡೆಸಬಹುದು. "ನಯ- ೨ : ದ್ರವ್ಯಾರ್ಥಿಕ, ಪರ್ಯಾಯಾರ್ಥಿಕ (ತತ್ತ್ವಪ್ರ. ೧-೬ ವ್ಯಾ-೧೧); ನಯ-೪ : ಭಿನ್ನವೇದನಯ, ಅಚ್ಛಿನ್ನಭೇದ-, ತ್ರಿಕ-, ಚತುರ್-(ಜೈಧ. ೧೫೭). ನಯ-೭ : ನೈಗಮ, ಸಂಗ್ರಹ, ವ್ಯವಹಾರ, ಋಜುಸೂತ್ರ, ಶಬ್ದ, ಸಮಭಿರೂಢ, ಏವಂಭೂತ (ರತ್ನಕ. ೬೨೮); ನಯ-೯ : ನಯ-೨ +ನಯ-೭. ಅಂತರ್ಭೇದಗಳು (i) ದ್ರವ್ಯಾರ್ಥಿಕನಯದಲ್ಲಿ-ಕರ್ಮೋಪಾಧಿ ನಿರಪೇಕ್ಷ, ಸತ್ತಾಗ್ರಾಹಕ, ಭೇದವಿಕಲ್ಪನಿರಪೇಕ್ಷ ಕರ್ಮೋಪಾಧಿ ಸಾಪೇಕ್ಷ, ಉತ್ಪಾದವ್ಯಯಸಾಪೇಕ್ಷ, ಭೇದಕಲ್ಪನಾಸಾಪೇಕ್ಷ, ಅನ್ವಯ, ಸ್ವದ್ರವ್ಯಾದಿ ಗ್ರಾಹಕ, ಪರದ್ರವ್ಯಾದಿ ಗ್ರಾಹಕ, ಪರಮ ಭಾವಗ್ರಾಹಕ (೧೦), (ii) ಪರ್ಯಾಯಾರ್ಥಿಕನಯದಲ್ಲಿ - ಅನಾದಿ ನಿತ್ಯ, ಸಾದಿ ನಿತ್ಯ, ಅನಿತ್ಯಶುದ್ಧ, ಅನಿತ್ಯ ಅಶುದ್ಧ, ಅನಿತ್ಯ-ಶುದ್ಧ, ವಿಭಾವ-ಅನಿತ್ಯ-ಅಶುದ್ಧ (೬), (iii) ನೈಗಮನಯದಲ್ಲಿ-ಭೂತ, ವರ್ತಮಾನ, ಭಾವಿ, (iv) ಸಂಗ್ರಹನಯದಲ್ಲಿ-ಶುದ್ಧ, ಅಶುದ್ಧ (v) ವ್ಯವಹಾರನಯದಲ್ಲಿ-ಶುದ್ಧಾರ್ಥಭೇದಕ, ಅಶುದ್ಧಾರ್ಥ ಭೇದಕ (vi) ಋಜುಸೂತ್ರನಯದಲ್ಲಿ-ಸೂಕ್ಷ್ಮ, ಸ್ಥೂಲ (ದೇವಸೇನಕೃತ ನಯಚಕ್ರ-ಕನ್ನಡ ರತ್ನಕರಂಡಕ, ೬೨೮)." (ಶ್ರೀವಪ್ರ. ೨೨೯): ಪ್ರಮಾಣನಯನಿಕ್ಷೇಪಾನುಯೋಗಸದಾದಿಗಳಿಂ ನಿಶ್ಚಯಿಸಿದ ಸಪ್ತತತ್ವಂಗಳೊಳಗೆ ಜೀವತನಾಲಕ್ಷಣವುಪ್ಪುದು ಜೀವತತ್ವಮಾದೇವ ತತ್ವಮುಂ ಸಂಸಾರಮುಕ್ತಿಭೇದದಿಂ ದ್ವಿವಿಧವಕ್ಕುಂ (ಆದಿಪು. ೧೦-೬೩ ವ); ನಯನಿಕ್ಷೇಪಪ್ರಮಾಣಂಗಳೊಳೆ ಪಡೆದನೈಕಾಂತಸಿದ್ಧಿವ್ರತಿಜ್ಞಾಜಯಮುಂ (ಕಂದ್ರಪು. ೧-೪); ಅಧಿಗಮೋಪಾಯಮುಂ ನ್ಯಾಸಮೆಂಬುದು ಅದನಱಿವಭಿಪ್ರಾಯಮುಂ ನಯಮೆಂಬುದು (ತಸೂವೃ. ೩೦); ದ್ರವ್ಯಾರ್ಥಿಕಮುಂ ಪರ್ಯಾಯಾರ್ಥಿಕಮುಂ ನೈಗಮಮುಂ ಸಂಗ್ರಹಮುಂ ವ್ಯವಹಾರಮುಂ ಋಜುಸೂತ್ರಮುಂ ಶಬ್ದಮುಂ ಸಮಭಿರೂಢಮುಂ ಏವಂಭೂತನಯಮುಮೆಂದು ನಯಮೊಂಭತ್ತುಭೇದಮಕ್ಕುಂ (ಪಸಾರ. ೮೨); ಸಮಗ್ರ ಪದಾರ್ಥವನ್ನು ತಿಳಿಯುವುದು ಪ್ರಮಾಣ; ಏಕದೇಶವನ್ನು ತಿಳಿಯುವುದು ನಯ ಎಂದು ಪರಿಭಾಷೆ (ಹಿಂದಣ. ೭೬); ಪ್ರಮಾತೃವಿನ ಅಭಿಪ್ರಾಯಕ್ಕೆ ವಿಷಯವಾದ ಯಾವುದೊಂದೇ ಭಾವವನ್ನು ಅನುಲಕ್ಷಿಸಿ ವಿಷಯವನ್ನು ನಿರೂಪಿಸುವುದು ನಯವೆನಿಸುವುದು (ಜೈನಧ. IX. ಉಪೋದ್ಘಾತ); ವಸ್ತುವಿನ ಅಂಶವನ್ನು ಗ್ರಹಿಸುವ ಜ್ಞಾತೃವಿನ ಅಭಿಪ್ರಾಯವು ನಯವು. ವಸ್ತುವನ್ನು ನಾನಾ ಸ್ವಭಾವಗಳಿಂದ ವ್ಯಾವರ್ತನ ಮಾಡಿ ಒಂದು ಸ್ವಭಾವದಲ್ಲಿ ತಂದು ನಿಲ್ಲಿಸುವುದು (ನಯತೀತಿ ನಯಃ) ನಯವು (ಜೈನಧ. ೪). 'ನಯಮಾರ್ಗ' ಪರಾ.

ನಯದ ಘಟ್ಟಿ = ಸೌಜನ್ಯದ ಪುಂಜ; ವಿನಯದ ಕಣಿ; ಒಂದು ಬಿರುದು: ವನಧಿವರೀತ ಧಾತ್ರಿ ನೆಲೆ ಬಣ್ಣಿಸುಗುಂ . . . ಗುಣ ರತ್ನರಾಸಿಯುಂ ಮನಸಿಜರೂಪನಂ ನಯದ ಘಟ್ಟಿಯನಗ್ಗದ ಕಾಮಿಸೆಟ್ಟಿಯುಂ (ಕಇ. IV, ೦-೪೭ : 1204). **ನಯಧೀರ** = ಒಂದು ಬಿರುದು: ಶ್ರೀಕಲಿನೆಽಟಮ್ಮಾಧಿರಾಜ ಶ್ರೀಕೊಲ್ಲಿಯರಸರಾ ತತ್ಪುತ್ರಃ ನಿಜ ರಾಮ [ನುಂ] ನಯಧೀರನುಂ ಒಡನುಟ್ಟು ತಿಪ್ಪೆರುರಾನ್ ಬ್ರಹ್ಮದೇಯ ಕೊಟ್ಟಮ್ (ಎಕ. VI(B), ಶ್ರೀರಂಗ. ೬೬-೦೩; ?). **ನಯಮಾಗು** = ತಕ್ಕುದಾಗು; ಉಚಿತವಾಗು:. ಯೋಗ್ಯವಾಗು: ನಯವಾದಂ ನಯಮಾಗಿ ಕೂಡೆ ಪೊಳೆಯಲ್ ನಿಕ್ಷೇಪಮಾಕ್ಷೇಪಮಾತಯಮಿಲ್ಲೆಂದೆನಿಸಲ್ (ಪುಷ್ಪಪು. ೦-೪). [ಸಂ.]

ನಯಂಗುಂದು, ನಯಗುಂದಂ (ಕ್ರಿ). ಕಾಂತಿಗುಂದಂ; ಕಳೆಗುಂದಂ: ಬೇಸಗೆಯ ಬಿಸಿಲ ಸೋಂಕಿಂ ಮಾಸಂತೀವಲ್ಲಿ ಸರಡುವಿರ್ದಂತಿರೆ ನಿನ್ನೀ ಸುಕುಮಾರಲತಾತಿವಿಳಾಸಮಿದೇಕಾರಣಂ ನಯಂಗುಂದಿದುದೋ (ಮಲ್ಲಿಪು. ೪-೭). **ನಯಗುಂದು**: ತನ್ನೆರೆಯನತಿಚಿಂತೆಯಿಂ ಜಲಧಿ ಮುಳುಗಿದನು ಯಿನ್ನೆಂದು ಕಾಣ್ಬೆನೋಯೆನುತಲತಿತಾಪದಿಂದ ನಯಗುಂದಿ ತಲೆವಾಗಿ ಮುರುಟಿದವೊಲು ಕುಮುದಾಳಿ ಮುಗಿಯಲೊಡನೆ (ನವಕೋ. ೧೧-೪೦). [ನಯ$_1$ + ಕುಂದು$_1$]

ನಯಂಗೆಡು (ಕ್ರಿ). ಅಂದಗೆಡು; ಕಳೆಗೆಡು: ಕಿಚ್ಚು ತಗುಳ್ದ ಮರದಂತೆ ನಯಂಗೆಟ್ಟು (ಧರ್ಮಾಮೃ. ೦-೧೬೪). [ನಯ$_1$ + ಕೆಡು$_1$]

ನಯಂಬಡೆ, ನಯವಡೆ (ಕ್ರಿ). ೧. ಮೃದುಂತ್ವವನ್ನು ಪಡೆ; ನುಣುಪನ್ನು ತಳೆ: ಓದಿನೊಳ್ ಮಾಧುರ್ಯಂಬಡೆದು ಪಾಡಿನೊಳ್ ಪರಿವಡೆದು ನೀಡಿಯೊಳ್ ನಯಂಬಡೆದು (ಗಿರಿಕ. ೨-೧೦೫ ವ). ೨. ಆನಂದವನ್ನು ಪಡೆ; ಚೆಲುವನ್ನು ತಳೆ; ಸೊಗಸಾಗಿರು: ವೊಗ ರಾಗಮಂ ಪಡೆಯೆ ನೋಟಮನಂಗನ ಬಿಲ್ಲ ಬಲ್ಮೆಯಂ ಪಡೆಯೆ ನಯಂ ನಯಂಬಡೆಯೆ (ಆದಿಪು. ೨-೪); ದಿಟ್ಟಿಗೆ ನಯಂಬಡೆದ ಪೊಚ್ಚಪೊಸ ದೇಸೆಯಂ (ಅಜಿಪು. ೪-೭ ಠಗಳ); ಮೆಲ್ಲಿದುವಾಗಿ ನಯಂಬಡೆದೆಲ್ಲಿಯುಮಾ ತಾವ್ರುಭಾವಮೆಸೆದಿರೆ ಪಲವುಂ ಸಲ್ಲಕ್ಷಣಂಗಳಿಂದುತ್ಫುಲ್ಲಾಂಬುಜವದನೆಯಂತಿದಳಿರ್ ಸೊಗಯಿಸುಗುಂ (ಬಂಹರಿ ೬-೩೧); ಪಯಗತಿ ಹಸ್ತಂಗಳ ಚಾಲಯಮತಿಶಯಿ ಪಂಗಹಾರದುಲ್ಲಾಸಂ ದೃಷ್ಟಿಯ ಭೇದಂ ಕರಣಂಗಳ ನಯಂ ನಯಂಬಡೆಯೆ ನರ್ತಿಪಮರಿಯರಿಂದಂ (ಮುಹಾನೇ. ೦೫-೫೯). **ನಯವಡೆ**: ೨. ಪಳುಕಿಂದ ನಯವಡೆದ ನೆಲಗಟ್ಟು (ಕೋಮಚ. ೨-೦೯). ೩. ಸೌಮ್ಯತೆಯನ್ನು ಪಡೆ; ಶಾಂತವಾಗಿರು: ಕಂಗಳ ಕಡಲಿಡುವ ಕರುಣಾವ್ಯತಿಕ ನಯವಡೆದ ನೆಯನಾಂಬುಜದ ವ್ಯಸನನು ಕಂಡು (ನಿಧಾಗ. ೪-೩-೨೭). [ನಯ$_1$ + ಪಡೆ$_1$]

ನಯಂಬೆಱು (ಕ್ರಿ). ೧. = ನಯಂಬಡೆ ೨: ಪಗೆವನೊಳ್ ತಡೆಯದೆ ತಾಗುವೆಮ್ಮ ರಥಸಮಂ ಕೇಳ್ದು ವಿಮಾನಾಜರದೊಳಿರ್ದ ನಿಮ್ಮ ಸೊಸೆ ಬಾಡಿದ ಸಸಿ ಮಬ್ಬಿಯಂ ಪೆತ್ತಂತೆ ರಾಗಿಸಿ ನಯಂಬೆತ್ತಿಂತೆಂದಳ್ (ಶಾಂತಿಪು. ೬-೩೩ ವ). ೨. ಇಂಪನ್ನು ತಳೆ; ಮಧುರವಾಗಿರು: ಎರಡುಂ ಬಂಚಂಗಳಿಂದಿಂಚರಮೊಸರ್ವಿನೆಗಂ ಕಿನ್ನರದ್ವಂದ್ವವೊತ್ತುತ್ತಿರೆ ನಾನಾ ಭಂಗಿಯಿಂ ನಾರದತನಯೆ ನಯಂಬೆತ್ತುದೆಂಬಂತೆ ಪಾಡುತ್ತಿರೆ (ಕಾದಂಕಾ. ೧೬೮). [ನಯ$_1$ + ಪೆಱು$_1$]

ನಯಕಾರ (ನಾ). ಪಳಗಿಸುವವನು; ತರಬೇತಿಗೊಳಿಸುವವನು; ಶಿಕ್ಷಕ: ಮೂಮತ್ತಿರ್ವರ್ ನಯಕಾರರೀತನ ಗಜವ್ರಾತಂಗಳಂ ತಿರ್ದುವರ್ (ಶಾಂತಿಪು. ೫-೦೦೩). [ಸಂ.]

ನಯಕಾರಿಣಿ (ನಾ). (ಔಚಿತ್ಯದಿಂದ) ಸುಖವನ್ನುಂಟುಮಾಡುವವಳು; (ಉಚಿತ ವರ್ತನೆಯಿಂದ) ಸಂತೋಷವನ್ನುಂಟುಮಾಡುವವಳು: ಎಣೆಯಿಲ್ಲೆನಿಸಿವ ಸಲ್ಲಕ್ಷಣಯುತ ಕಾಲಜನಿತವಿನುತವನಿತೆಯನಗಧಾರಿಣಿಯಂ ನಯನಮನೋಹಾರಿಣಿಯಂ ರುಗ್ಮಿಣಿಯನಖಿಳ ನಯಕಾರಿಣಿಯಂ ಕಂಡು (ಬಂಹರಿ. ೭-೨೦). [ಸಂ. ನಯಕಾರಿಣೀ]

ನಯಕ್ರಮ (ನಾ). ರಾಜ್ಯವ್ಯವಹಾರದ ನೀತಿ (?): ಪರಹಿತದೊಳ್ ನಯಕ್ರಮದೊಳಾಯತಿಯೊಳ್ ಸುಚರಿತ್ರದೊಳ್ ದಯಾಪರಿಣತಿಯೊಳ್ . . . ಸುಜನಾಗ್ರಣಿ ಶಾಂತಿವರ್ಮ . . . ನಿನಗಾರ್ ದೊರೆ (ಪುಷ್ಪಪು.೧-೮೦). [ನಯ$_1$ + ಕ್ರಮ]

ನಯಗಂಬಳಿ (ನಾ). ನುಣುಪಾದ ಕಂಬಳಿ; ನಯವಾದ ಉಣ್ಣೆಯ ಕಂಬಳಿ: ಅವರ ಮನೆಯ ಹಜಾರದಲ್ಲಿ ನಯಗಂಬಳಿಯನ್ನು ಹಾಸಿದ್ದಾರೆ (ಡೂಡಿ). [ನಯ$_1$ + ಕಂಬಳಿ]

ನಯಗಾತಿ (ನಾ). ಉಪಾಯಗಾತಿ; ಚೂಪುಗಾರಿಕೆಯುಳ್ಳವಳು : ಆಕೆ ತುಂಬಾ ನಯಗಾತಿಯಾದ್ದರಿಂದ ಕೆಲಸವನ್ನು ಸುಲಭವಾಗಿ ಸಾಧಿಸಿದಳು (ಕೂಥಿ). [ನಯ$_1$ + – ಕಾತಿ$_5$]

ನಯಗಾರ 'ನಯಗಾಱ' ನೋ.

ನಯಗಾರಿ (ನಾ). ನುಣುಪಾಗಿ ಅರೆದ ಗಚ್ಚು.–ಗಾರೆ : ನಯಗಾರಿ : ಮೆತ್ತಿಗೆ; ಅಂಟುಪುಡಿ; ಅಂಟಾಲೇವ (Compo. ಇಂಳಿ).

[ನಯ$_1$ + ಗಾರಿ$_1$]

ನಯಗಾಱ, ನಯಗಾರ (ನಾ). ೧. ಸೌಜನ್ಯಶೀಲ; ವಿನಯಶಾಲಿ : ಸತ್ತ ಗೆ ಪಾದಪೂಜೆಯನೆಸಪ ನಯಗಾಱನ್ (ಅಕ್ಕಾ. ೪೦-೬೧೩). **ನಯಗಾರ : ೨.** ಉಪಾಯಗಾರ; ಚೂಪುಗಾರಿಕೆಯುಳ್ಳವನು : ಆತ ಬಹಳ ನಯಗಾರ (ಕೂಥಿ). [ನಯ$_1$ + – ಕಾಱ]

ನಯಗುಂದು 'ನಯಂಗುಂದು' ನೋ.

ನಯಗುಣ (ನಾ). ಒಳ್ಳೆಯ ಗುಣ; ಯೋಗ್ಯವಾದ ಗುಣ : (ಳ).

[ನಯ$_3$ + ಗುಣ]

ನಯಗೆಡು (ಕ್ರಿ). ಔಚಿತ್ಯ ಕೆಡು; ನೀತಿ ತಪ್ಪು : ದೃಷ್ಟಿವೋಹನ ಮೂರ್ತಿಗಳು ನಯಗೆಟ್ಟ ನಾಲ್ವರು ಸಿದ್ಧರೆಮ್ಮನು ಬಿಟ್ಟ ಕಂಗಳಲೀಕ್ಷಿಸಿ ದಯುಜಿ ಜಱೆದು ಸುಡುವಂತೆ (ನಿಧಾಗ. ೬-೩-೧೦); ಬಯಲು ರೂಪಿನ ವಸ್ತು ಜೀವವದಕೆ ಗುಣ ನಿಯತದಿಂದಱಿವೃ ಕಾಣ್ಕೆಗಳು ನಯಗೆಟ್ಟ ನರಸುರರಾದಿಯಾದಾಕಾರಚಯಗಳದಱ ಪರಿಯಾಯ (ಧರಣ. ೬೭-೦೨೩). [ನಯ$_3$ + ಕೆಡು$_1$]

ನಯಚಿತ್ತ (ನಾ). ಯೋಗ್ಯವಾದ ನಡತೆಯುಳ್ಳವನು; ವ್ಯವಹಾರವನ್ನು ಬಲ್ಲವನು. 'ನಯಚಿತ್ತೆ.' ಪರಾ. [ನಯ$_3$ + ಚಿತ್ತ]

ನಯಚಿತ್ತೆ (ನಾ). ಯೋಗ್ಯವಾದ ನಡತೆಯುಳ್ಳವಳು; ವ್ಯವಹಾರವನ್ನು ಬಲ್ಲವಳು; ವ್ಯವಹಾರ ಚತುರೆ : ನಯಚಿತ್ತೆ ಚಿತ್ರವತಿದೇವಿಯನಾ ವಿಜಯಾವತೀಮಹಾದೇವಿ ಮನಃಪ್ರಿಯದಿಂದೆ ಬರಿಸಿ ಕೊರಲಪ್ಪಿಯೆ ಪರಿದುಂ ಮೆಱೆದಳಾತ್ಮಮಹಿಮೋನ್ನತಿಯಂ (ಕುಮು. ೦೫-೦೪೦). [ನಯಚಿತ್ತ + – ಎ$_3$]

ನಯಜ್ಞ (ನಾ). ರಾಜನೀತಿನಿಪುಣ : ಜಯಂವಧುಗಾಣ್ಮನಾಗಿಯು ಮಸೌಮ್ಯನೆ . . . ಮಹಿತನಾಗಿಯುಮುದ್ರುತನೇನ ಯಂಜ್ಞನಾಗಿಯು ಮಕೃತಜ್ಞನೇ (ಶಾಂತಿಪು. ೧೧-೬೬); ದಶದಿಶೆಯೊಳಿಂದುಕರರುಚಿ ಯಶಮಂ ಪರೆವಲ್ ಪರನ್ಯಪರುಮನೊತ್ತರಿವಲ್ ಸಾಲ್ವುದಂ ನಯಜ್ಞಹಿತಮಿತ ವಚನಂ (ರಾಜಶೇ. ೧೩-೦೫); ಗೋಳಿಡುವ ದ್ರೌಪದಿಯ ಕುದಿನೋಟದಲಿ ನೋಡಿ ಈ ನಯಜ್ಞನು, ನೆಲದಲೇನನೋ ಬರೆಯುತಿಹನು (ಭಾಸಸಾ. ೩೮). [ಸಂ.]

ನಯಣ (ನಾ). [ಜೈನ] ಗಿರಿಯ ತಪ್ಪಲಿನಲ್ಲಿ ವಿಶ್ರಾಂತಿಗಾಗಿ ಕಟ್ಟಿಸಿದ ಶಿಲಾಮಂಟಪ.–ಕಲ್ಲಿನ ಗೃಹ : ಬೊಪ್ಪದೇವನ ತಾಯಿ ಜಕ್ಕವಂವ್ವೆ ಮೋಕ್ಷತಿಳಕಮಂ ನೋಂತು ನೋಂಬರೆ ನಯಣದ ದೇವರ ಮಾಡಿಸಿ ಪ್ರತಿಷ್ಠೆಯ ಮಾಡಿಸಿದರು (ಎಳ. II, ೩೭೭-೪ ; 1120) : ಶುಭಚಂದ್ರದೇವರ ಗುಡ್ಡಿ ಜಕ್ಕಿವವ್ವೆ ಕೆಱೆಯ ಕಟ್ಟಿಸಿ ನಯಣದ ದೇವರ ಮಾಡಿಸಿದರು (ಎಳ. II, ೩೭೮-೨ ; 1120); ತಳಿರ ನೆಲಗಟ್ಟು ಪೊಸದಳಿರ್ಗಳ ಕಂಬಂ ತಳಿರ ಭಿತ್ತಿ ತಳಿರ ಲೋವೆ ಕಿಂದಳಿರ್ಗಳ ಜಂತೆಗಳೊಪ್ಪಿರೆ ತಳಿರೋವರಿ ತಳಿರ ನಯಣ[ಹಾಣಂ. ತಳಿರಾವಳಿ ತಳಿರ ಸದನ]ಮೆನೆ ಕಣ್ಗೊಳಿಕುಂ (ಪಾರ್ಶ್ವಪು. ೯-೨೯); ಅನುನಾಸಿಕ ಯಕಾರಕ್ಕೆ–ಮೇಯಿಸಿದುಂ, ನೋಯಿಸಿದುಂ, ಮಯಣಂ, ನಯಣಂ, ಮಾಯಂ (ಕವಿರ. ೧೬ ಪ್ರಯೋ) : ಪೂರ್ವ ನಯಣದ ಮೇಲೆ ಮತ್ತೊಂದು ನಯಣಮಂ ರಚಿಸಲ್ಬೇಕೆಂದು ಪ್ರತಿಮೆ ಯೂಚಿಸಿದ ಕಾರಣವಂಲ್ಲಿ ನೆಲಸಿಕ್ಕೆನೆ . . . ಕರಕಂಡುಮುಹಾರಾಜಂ ತನ್ನ ವೆಸರೊಳಂ ಶನ್ನ ತಾಯಿ ವದ್ಮಾವತಿಯ ವೆಸರೊಳಂ ತನ್ನಂ ಸಲಹಿದ ಬಾಲದೇವನ ವೆಸರೊಳಂ ಮೂಱು ನಯಣಮಂ ಮಾಡಿಸಿ ಜಿನಪ್ರತಿಷ್ಠೆಗಳಂ ಮಾಡಿ (ಪುಣ್ಯಾಸ್ರ ೨-೬೯ ಪ).

[<ಪ್ರಾ. ಲಯಣ, ಲೇಣ; ಪಾಲಿ. ಲೇಣ./ಸಂ. ಲಯನ]

ನಯದಪ್ಪು (ಕ್ರಿ). ನೀತಿಯನ್ನು ಮೀರು; ಅನ್ಯಾಯ ಮಾಡು : ಮಱಿ ಹೊಡೆ ಹಿಂಡಾಕಳೆನು ಗೋವರನು ಬಿಡು . . . ನಮ್ಮರಸ ನಯದಪ್ಪಿದನು ತುಱುಸೆಱೆವಿಡಿವರೇ ನೃಪರು (ಕುಪ್ಪಾವಿ. ೬-೩೩). [ನಯ$_3$ + ತಪ್ಪು$_1$]

ನಯದಾಳ್ (ಕ್ರಿ). ಔಚಿತ್ಯವನ್ನು ಪಡೆ.–ಹೊಂದು : ಕ್ಷೋಣಿಗೆ ಹಾರಮಲ್ತೆ ರಜತಾದ್ರಿ ತದದ್ರಿಗೆಱಿಂಕೆ ನೋಡುಭಶ್ರೇಣಿಗಳಂತವಂ ವಿನಮಿಯುಂ ನಮಿಯುಂ ನಯದಾಳ್ದರ್ (ಶಾಂತಿಪು. ೩-೦೪೯). [ನಯ$_3$ + ತಾಳ್$_1$]

ನಯದೃಷ್ಟಿ (ನಾ). [ಜೈನ] ವಸ್ತುವಿನ ಒಂದಂ ಗುಣ, ಧರ್ಮಕ್ಕೆ ಪ್ರಾಧಾನ್ಯ ಕೊಟ್ಟು ಉಳಿದ ಗುಣ, ಧರ್ಮಗಳನ್ನು ಗೌಣವೆಂದು ಪರಿಗಣಿಸುವುದು : ಎಲ್ಲಿ ಒಂದು ಧರ್ಮಕ್ಕೆ ಪ್ರಾಧಾನ್ಯತೆ ಕೊಟ್ಟು, ಉಳಿದ ಧರ್ಮಗಳನ್ನು ಗೌಣವೆಂದು ತಿಳಿದುಕೊಳ್ಳಲಾಗುವುದೋ. ಅದಕ್ಕೆ ವಿಕಲಾದೇಶ–ಅಪೂರ್ಣದೃಷ್ಟಿಯೆಂದು ಹೇಳಲಾಗುವುದು. ಸಕಲಾದೇಶಕ್ಕೆ ಪ್ರಮಾಣದೃಷ್ಟಿಯೆಂದೂ ವಿಕಲಾದೇಶಕ್ಕೆ ನಯದೃಷ್ಟಿಯೆಂದೂ ಹೇಳಲಾಗಿದೆ (ಜೈನಪ. ೩೦೯). [ನಯ$_3$ + ದೃಷ್ಟಿ]

ನಯನ (ನಾ). ೧. ಕರೆದೊಯ್ಯುವುದು; ಸಾಗಿಸುವುದು; ತೆಗೆದುಕೊಂಡುಹೋಗುವುದು : ಪದಾರ್ಥ ಸಾಗಿಸುವಿಕೆಗೆ ನಯನ. ಅನಯನ ಎಂದೂ, ಇಂಗ್ಲಿಷಿನಲ್ಲಿ ಟ್ರಾನ್ಸ್‌ಪೋರ್ಟ್ ಎಂದೂ ಹೆಸರು (ಭೂವಿವ. ೩೦೦). ೨. ಚಲಿಸುವುದು; ಗಮನ. ೩. ಕಣ್ಣು : "ದೃಕ್, ದೃಷ್ಟಿಃ, ನೇತ್ರಂ, ಲೋಚನಂ ಚಕ್ಷುಃ, ನಯನಂ, ಅಂಬಕಂ, ಈಕ್ಷಣಂ, ಅಕ್ಷಿ – ಈ ೯ ಕಣ್" (ಹಲಾಯು. ೬೭-೬೭೩) : ಅಳಕಾನನ ನಯನಂಗಳೊಳಿ ವಳಿನೋತ್ಪಳವಿಕಾಶಮಂ ಗೆಲ್ದುದಱಿಂ ತಿಳಿಗೊಳನಂ ಪೋಲ್ದಿರ್ದುಂ ತಿಳಿಯದಿದೇನೆಂಬುದುಂ ತದನ್ವಯಮದಱೊಳ್ (ಕವಿಗಾ. ೧-೪೪) : ಗಳಿತಶರಮಾಯ್ತು ಹಸ್ತಂ ಗಳಿತರಣೋತ್ಸಾಹಮಾಯ್ತು ಹೃದಯಂ ನಯನಂ ಗಳಿತಾಶ್ರುವಾಯ್ತು ಕೌರವಕುಲತಿಲಕಂಗಾ ಕುಮಾರನೆಂ ಕಾಣಲೊಡಂ (ಗದಾಯು. ೪-೬೦) : ನಯನಂ ನೀಲಸರೋಜಮಂ ಸೆಣಸುಗುಂ (ಪಂರಾಮಾ. ೦-೪೫) : ನಯನದಲ್ಲಿ ಮೂರುತಿ ತುಂಬಿ . . . ನಿಮ್ಮ ಚರಣ ಕಮಲದಲಾನು ತುಂಬಿ (ಬಸವ. ೪೯೨) : ನಯನ ಬುದ್ಧಿಯೊಳಗೊ ಬುದ್ಧಿ ನಯನದೊಳಗೊ ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ (ಕನಕ. ೬೪-೧). ೪. ವಾಹನ. ೧, ೩, ೪ : ಜನನುತ ರಾಜಹಂಸನಯನಂ ಕಮಳಾವಸಥಂ ಕಳಾನಿಕೇತನೆನಿಸಿರ್ದ ಪೆಂಪುಪಮೆತ್ತೊಡಮೇನೊ . . . ರಜವೊಂದದ ಸತ್ತ್ವನಿಧಾನನೆಂಬ ಪೆಂವನನುಗುಣಮಾದ ಲೋಕಪಿತನೊಲ್ದು ಚತುರ್ಮುಖನೀಗೆ ರಾಗಮಂ (ಜಗವಿ. ೦-೨). ೫. ಅನ್ವಯ : ಮೂಲದಲ್ಲಿ 'ಆಕ್ಷೇಪಕ್ಕೆ' ಬೇರೆ ಉದಾಹರಣೆಯೇ ಇಲ್ಲವಾದ್ದರಿಂದ ಇದನ್ನೇ ಹೇಗಾದರೂ ನಯನ ಮಾಡುವ ಉದ್ದೇಶದಿಂದಲೋ ಎಂಬಂತೆ (ದೃಷ್ಟಾಲೋ. ೩೦ ಅಡಿಟಿ). ೬. ಪೋಷಿಸುವುದು; ಪೋಷಣೆ : "ನಯಃ, ನಯಿಃ, ನಯಂಃ, ನಾಯಃ, ನಯನಂ, ನಯನೀಯಂ, ಈ ೬ ಹೊರತಂ" (ಕಾಶೆಳ್ಳ. ೦೦೦). ೭. ಎರಡು ಎಂಬ ಸಂಖ್ಯೆಯ ಸಂಕೇತ : ಅಮರೇಜ್ಯಂ ಕೇಂದ್ರ ಲಾಭಾಪ್ಯಮಸಹಜಧನಸ್ಥಾನದೊಳ್ . . . ಧಾತ್ರೀಜನಿಂ ಕೇಂದ್ರನಿಧನ ನಯನಾಯಂಗಳೊಳ್ ಪೂಜ್ಯನಕ್ಕುಂ (ಕಾಚಿ. ೧೦-೦೦); ಯಮ ನಯನ ಕರ್ಣ ಕರ ಪದ . . . ಸಮ ಉಭಯಂ ಬಾಹು ಕವಿಗಳೆರಡಱ ನಾಮಂ (ಸ್ಯವಹಾ. ೯-೨); ಉಡುದೇವ ನಿಧಿ ನಯನೇಂದು ಸಂಖ್ಯೆಗಳೋವಿ ಶಕವರುಷಂಗಳಾಗಲು . . . ಬಸವಚರಿತೆ ಸಮಾಪ್ತವಾಯಿತ್ತು (ಬಸಪು. ೬೦-೯೨). [ಸಂ.]

ನಯನಕರ್ಣ (ನಾ). ಕಣ್ಣೇ ಕಿವಿಯಾಗಿರುವುದು ; ಹಾವು ; ಸರ್ಪ. ನಯನಕರ್ಣವಿಪಕ್ಷ = ಹಾವುಗಳ ಹಗೆ ; ನವಿಲು. ನಯನಕರ್ಣವಿಪಕ್ಷಲಕ್ಷಣ = ಧ್ವಜದಲ್ಲಿ ನವಿಲಿನ ಗುರುತನ್ನುಳ್ಳವನು ; ಮಯೂರಧ್ವಜ ; ಷಣ್ಮುಖ : ನಯನಕರ್ಣವಿಪಕ್ಷಲಕ್ಷಣ ಜಯತು ಸಿದ್ಧೇಶ (ಬಸಪು. ೨೦-೩೭). ನಯನಕರ್ಣಾಶನ = ೧. ನವಿಲು ; ಮಯೂರ. ೨. ಗರುಡ. ನಯನಕರ್ಣಾಶನವರಧ್ವಜ = ಗರುಡಧ್ವಜ ; ವಿಷ್ಣು : ನಯನಕರ್ಣಾಶನವರಧ್ವಜನಯನ ಭುವನೇಜಾರ್ಚಿತಕ್ರಮ (ಬಸಪು. ೨೦-೩೭). ನಯನಕರ್ಣಾಹಾರ = ೧. ನವಿಲು ; ಮಯೂರ. ೨. ಗರುಡ. ನಯನಕರ್ಣಾಹಾರವಾಹನ = ಗರುಡವಾಹನ ; ವಿಷ್ಣು. ನಯನಕರ್ಣಾಹಾರವಾಹನನಯನ = ಶಿವ : ನಯನಕರ್ಣಾಹಾರವಾಹನನಯನ ಭುವನೇಶಯನ ನಯನಾನಯನ ಭುವನತ್ರಯನಯನ ಕರ್ಣಾಕಲಿತಕರ್ಣ (ಬಸಪು. ೨೦-೩೭).

[ಸಂ.]

ನಯನಚ್ಛದ (ನಾ). ಕಣ್ಣಿನ ರೆಪ್ಪೆ. [ಸಂ.]

ನಯನಜಲ, ನಯನಜಳ (ನಾ). ಕಣ್ಣೇರು ; ಕಂಬನಿ ; ಬಾಷ್ಪ : ಬಳೆದ ಸುತಶೋಕದಿಂದೀಗಳೆ ಸುರಿಗುಮೆ ಸುರಿಯುಹಾ ಜಯದ್ರಥನ ಜಿತಾನಳನಿಂದಮೊಗೆದ ಪೊಗೆಗಳ್ ಕೊಳೆ ಸುರಿವೊಡೆ ಸುರಿವುವೆನ್ನ ನಯನಜಲಂಗಳ್ (ಪಂಪಭಾ. ೦೦-೧೧೯) ; ಕರುಣಂ ಕೈಮಿಗೆ . . . ಮನ್ಯು ಮಿಕ್ಕು ನಯನಜಲಂಗಳ್ ಸುರಿದು (ಸುಕುಮಾ ೫-೩) ; ಪರಮಸುಖದಲಿ ತನುವ ಮಱೆದನು ನಯನಜಲವೊಗಲು (ಕುಮ್ಯಾಲು. ೮-೬). ನಯನಜಳ : "ಅಶ್ರು, ಬಾ(ಷ್ಪಂ)ರ್ಪಂ, ರೋದನಂ, ನಯನಜಳಂ, ಅಸ್ರಂ – ಈ ೫ ಕಣ್ಣ ನೀರ್" (ಹಲಾಯು. ೮೬-೩೬೫). [ನಯನ+ಜಲ$_2$]

ನಯನಜಳ 'ನಯನಜಲ' ನೋ.

ನಯನತ್ರಯ (ನಾ). ೧. ಮೂರು ಕಣ್ಣುಗಳು : ಲೋಕವಿಸ್ತರಣ ಪ್ರಭಾವನಯನತ್ರಯಂ ದೇವ ಗಂಗಾಧರಂ ಬಿಡದೆ ಸಲಹುಗೆ ನಮ್ಮನು (ಕೈಮಿಭಾ. ೧-೨). ೨. ಮುಕ್ಕಣ್ಣ ; ಶಿವ : ಭುವನೇಶಯವನಭುವನ ನಯನ ನಯನತ್ರಯ ನಯನಕರ್ಣಾಕಲಿತಕರ್ಣ (ಬಸಪು. ೬೧-೫೦). ೩. (?) : ನಯನತ್ರಯಯುತರತ್ನತ್ರಯನಿಧಿ ಲೋಕತ್ರಯಂ ಸಲೋಕಿತ ತಾಳತ್ರಯ ಪಾಂಡುರಾತಪತ್ರತ್ರಯಮಿವು ನಿನಗಲ್ಲದಜಿತ ಪೆಱರ್ಗೊಪ್ಪುಗುಮೆ (ಆಜಿಪು. ೮-೯). [ನಯನ + ತ್ರಯ]

ನಯನತ್ರಿಭಾಗ (ನಾ). ಕಣ್ಣಿನ ಕೊನೆ ; ಕಡೆಗಣ್ಣು ; ಕೇಕರ : ಕುಸುಮಶರಾಸ್ತ್ರಪುಷ್ಪರಜದಿಂ ಪೊರೆದಂತಿರೆ ಬಾಷ್ಪವಾರಿಗಳ್ ಪಸರಿಸೆ ರಾಗವಗ್ಗಲಿಸೆ ಚಾರುಚಲನ್ನಯನತ್ರಿಭಾಗದಿಂ ಕುಸಿಕುಸಿದೆನ್ನನೀಕ್ಷಿಸುವಳ್ (ಕಾದಂಬಾ. ೮೯) ; ಜೀವಿತೇಶಮ್ಮಿಗೆ ತೆನ್ನನಾಗ್ರಹಿಸೆ ಸೊಲ್ಲಿಸಲೊಲ್ಲದೆ ನಾಣ್ಚಿ ನೋಡಿದಳ್ ತಾಮ್ಮನದನ್ನಳಪ್ಪ ಕಳಭಾಷಿಣಿಯಂ ನಯನತ್ರಿಭಾಗದಿಂ (ಪಂದ್ರಪು. ೩-೬೨) ; ನಯನತ್ರಿಭಾಗದಿಂದೆನ್ನಯ ಮೊಗಮಂ ನೋಡಿ ಮಗುಟ್ಟು ಮಱವಟ್ಟಂತಾ ತ್ರಯಮಿಲ್ಲದ ಲತೆ ತೆಂಗಾಳಿಯೊಳಲ್ಲಾಡುವವೊಲಾಕೆ ಕಣ್ಗೆಸೆದಿರ್ದಳ್ (ದಶಕು. ೪-೯೧). [ನಯನ + ತ್ರಿಭಾಗ]

ನಯನಪಕ್ಷ್ಮ (ನಾ). ಕಣ್ಣಿನ ರೆಪ್ಪೆ ; ಎಮೆ : ವಿಷದ ಪೂತನಿ ನಯನಪಕ್ಷ್ಮದೊಳಗಿರಳೆ ? (ಮಂಶುಕ. ೪೦೬). [ನಯನ + ಪಕ್ಷ್ಮ]

ನಯನಪಾವಕ (ನಾ). ಕಣ್ಣಿನ ಬೆಂಕಿ ; ನೇತ್ರಾಗ್ನಿ : ಹರಿ ಸರೋಜಾಸನರು ಶೂಲಿಯ ಹೊರೆಗೆ ಬಂದರು ದೇವದೈತ್ಯರ ಪುರವಧರ್ಮದ ಪೇಟೆಯಾದುದು ನಯನಪಾವಕನ ಕರೆದು ಬೆಸಸುವಡಿದು ಸಮಯ . . . ಎಂದರು ಪಾರ್ವತೀಪತಿಗೆ (ಕುಮ್ಯಾಕ. ೭-೩೪). [ನಯನ + ಪಾವಕ]

ನಯನಪುತ್ರಿಕೆ (ನಾ). ಕಣ್ಣಿನ ಗೊಂಬೆ ; ಪಾಪೆ : ಜಾನಕಿ . . . ಧಾರಾನಿಳಯ ಜಲಯಂತ್ರಪುತ್ರಿಕೆಯಂತೆ ನಯನಪುತ್ರಿಕೆಗೆ ಮಣಿಭೂಷಣಮೆನಿಸಿ (ಪಂರಾಮಾ. ೫-೪೦ ವ). [ನಯನ + ಪುತ್ರಿಕೆ]

ನಯನಪ್ರಭೆ (ನಾ). ಕಣ್ಣಿನ ಕಾಂತಿ : ನಯನಪ್ರಭೋಜ್ಜ್ವಲ ಜ್ಯೋತ್ಸ್ನೆಯಿನಾದಂ ಕನ್ನೆ ಮುನ್ನ ಧವಳಿಸಿ ಭೂಪಾಚಯಮಣಿಗಣನಿಚಯದೆ ತಾಂಬಯಲಂ ಚಿತ್ರಿಸಿದಳೆಯ್ದೆ ಗಮನೋತ್ಸವದೊಳ್ (ಪಂದ್ರಪು. ೫-೦೦೫).

[ನಯನ + ಪ್ರಭೆ]

ನಯನಮಧ್ಯ (ನಾ). ಕಣ್ಣಿನ ಕರಿಯ ಗುಡ್ಡೆ,–ಆಲಿ : "ಕನೀನಿಕಾ, ನಯನಮಧ್ಯಂ, ತಾರಾ – ಈ ೩ ಕರಿಯಾಲಿ" (ಹಲಾಯು. ೮೬-೩೬೬).

[ನಯನ + ಮಧ್ಯ]

ನಯನಮನೋಹರ (ಗು). ೧. ಚೆಲುವಾದ ; ಸುಂದರವಾದ ; ನೋಟಕ್ಕೆ ಆಪ್ಯಾಯಮಾನವಾದ : ಹಾ ನಯನಮನೋಹರ ರೂಪರಿರಾ ಹಾ ನರಪಕುಲೋಜ್ಜ್ವಲಧೀಪರಿರಾ (ಜೀವಸಂ. ೨೪-೪೫ ರಗಳೆ). (ನಾ). ೨. ಚೆಲುವಾದುದು ; ಸುಂದರವಾದುದು : ನಯನಮನೋಹರಂ ಮನುಜನಿರ್ಮಿತಮಲ್ಲದು . . . ಎಂಬ ನಿಶ್ಚಯಮನೊಡರ್ಚಿ ವಿಸ್ಮಯರಸಾಕರಮಾ ಕರುಮಾಡಮೊಪ್ಪುಗುಂ (ಮಲ್ಲಿಪು. ೨-೬೫) ; ಶಾಂತವಾಗಿರುವ ತನುವಿನಿಂದ ನಯನಮನೋಹರವಾಗಿರುವ ರುದ್ರಮೂರ್ತಿ (ಮಹಾಡ. ೩೮). [ಸಂ.]

ನಯನಮನೋಹರಿ (ನಾ). ಅಂದವಾಗಿರುವವಳು ; ನೋಟಕ್ಕೆ ಆಪ್ಯಾಯಮಾನವಾಗಿರುವವಳು : ನಯನಮನೋಹರಿ ಹೃದಯಾಶ್ರಯನ ಸತೀ ಸದೃಶೆ ನೃಪವಧೂಮುಖತಿಳಕಂ ಪ್ರಿಯಕಾರಿಣಿಯಾ ಭೂಪಪ್ರಿಯೆಯವರ್ಗಳ್ ಸುಖದಿನಾಳುತಿರೆ ತತ್ಪುರಮಂ (ಮಹಾನೇ. ೨-೩೩).

[ಸಂ. ನಯನಮನೋಹರೀ]

ನಯನಮರೀಚಿ (ನಾ). ಕಣ್ಣಿನ ಕಿರಣ,–ಕಾಂತಿ : ನನೆಗಣೆಯನ ಕಣಿಗಳವೊಲು ಗೋಪತಂಗನೆಯರ ನಯನಮರೀಚಿ ತನುವಿನೊಳಗೆ ಪಸರಿಸಲಾ ತಾಪಸ ಮನವನಿತ್ತನು ಮನಸಿಜಗೆ (ಅಂಜಜ. ೨-೭೩) ; ನಯನಮರೀಚಿಯುಂ ಕಬರಿಕಾಂತಿಯುಮಿರ್ದೆಸೆಗಿಂದ್ರನೀಲಮಾಲೆಯ ವರಮೌಕ್ತಿಕಾವಳಿಯ ರಜ್ಜುಗಳಂತಿರೆ (ಸೂಕ್ತಿಸು. ೮-೩೩೩) ; ನಯನಮರೀಚಿಗಳ್ ಪುದಿಯೆ ನೀಲದ ಮಾಲೆಗಳಂತೆ . . . ಅಚ್ಚಜಾದಿಯ ಪೊಸಮಾಲೆಗಳ್ಪಿಡಿದು ಮಾಱುವ ನೀಱೆಯನಲ್ಲಿ ಮಾಲೆಗಾರ್ತಿಯೋ ಮಣಿಗಾರ್ತಿಯೋ ಎನುತೆ ನೋಟ್ಪುದು ವಿಸ್ಮಯಭಾಜನಂ ಜನಂ (ಧರ್ಮನಾ. ೨-೭೯).

[ನಯನ + ಮರೀಚಿ]

ನಯನಯುಗ (ನಾ). ಕಣ್ಣುಗಳ ಜೊತೆ ; ಎರಡು ಕಣ್ಣುಗಳು : ನಯನಯುಗಂ ನಾಸಾಗ್ರಪ್ರಯುಕ್ತಮವ್ಯಕ್ತವರ್ತನಂ ಪ್ರಾಣಾಪಾನಾಯುಗಂ (ಪರ್ಧಪು. ೧೫-೬೨) ; ನಯನಯುಗಂ ತಳತ್ತಳಿಸೆ ದಂತಮರೀಚಿ ಲಸತ್ಕಪೋಳಭಿತ್ತಿಯನವಳಂಬಿಸಲ್ . . . ರಂಜಿಸಿದಂ ನಿಷಧಾಧಿನಾಯಕಂ (ನಳಚಂ. ೦೨೯) ; ನಯನಯುಗದಿಂ ಜಗವ ಪೊರೆದು, ನಿಟಿಲಾಕ್ಷಿಯಿಂ ಲಯವಡಿಸುವುದದೇನು ಶಿವಯೋಗಲೀಲೆ ? (ಮುಕುಕ. ೬೦೩).

[ನಯನ + ಯುಗ]

ನಯನಯುಗಳ (ನಾ). = ನಯನಯುಗ : ಅಳಿ ನಳಿನೋತ್ಪಳರುಚಿಗಳ ನಳಕಾನನ ನಯನಯುಗಳದಿಂ ಗೆಲ್ದಿರ್ದುಂ ಕೊಳದೊಳಗೇನಂ ನೋಟ್ಪೆಗ ವಿಳಾಸಿನೀ ನಿನ್ನವೋಲದೇನತಿಶಯಮೋ (ಕವಿರಾ. ೦-೮೭).

[ನಯನ + ಯುಗಳ (= ಯುಗಲ)]

ನಯನರೋಗ (ನಾ). ಕಣ್ಣಿನ ಬೇನೆ,–ರೋಗ : ಹಿತ್ತಾಳೆಯೊಳು ನಯನರೋಗದೊಳು ಬಾಣಲೆಯೊಳು . . . ವಿಮಾನದೊಳು ಪುಷ್ಪಕಮೆನಿಕ್ಕು (ಮಂಗರಾ. ೦೫೩-೬೩) ; ನಯನರೋಗದೊಳು ಛೇದನದೊಳರಿಯೆಂಬ ಶಬ್ದಂ (ಶಬ್ದಮಂ. ೦೦೫). [ನಯನ + ರೋಗ]

ನಯನರೋಮ (ನಾ). = ನಯನಪಕ್ಷ್ಮ : "ನಯನರೋಮಂ ಪಕ್ಷ್ಮಂ" (ವಸ್ತುಕೋ. ೭೦-೩೨). [ನಯನ + ರೋಮ].

ನಯನವಾರಿ (ನಾ). = ನಯನಜಲ : ಗಳಿಯಿಸುತಿರೆ ಕಬರಿಭರಂ ಗಳಿಯಿಸುತಿರೆ ನಯನವಾರಿ ನಿನ್ನಾನವದಿಂ (ಗದಾಯು. ೦-೬೩) ; ಇವರುಬ್ಬರಿಸಿದರು ಹರುಷದಲಿ ನೆನೆದರು ನಯನವಾರಿಯಲಿ (ಕುಪ್ಯಾಅ. ೨೦-೨೦) ; ಕೃಷ್ಣನ ವರಸುಧಾಮಯಪಚನವನು ಪಂಕರುಹಮುಖಿ ಕೇಳುತ್ತೆ ನನೆದಳು ನಯನವಾರಿಯಲಿ (ಕುಪ್ಯಾಅ. ೮-೨೪). [ನಯನ + ವಾರಿ$_2$]

ನಯನವಿಹ್ವಲ (ನಾ). ಕಂಗೆಟ್ಟವನು ; ದಿಗ್ಭ್ರಮೆಗೊಳಗಾದವನು : ನಯನದ್ವಯದಿಂ ತವೆ ನೋಡಲ್ ನೆಱೆಯದೆ ನಯನವಿಹ್ವಲಂ ಹರಿ ಸಹಸ್ರಲೋಚನನಾದಂ (ಶಾಂತಿಪು. ೧೦-೬೦).

[ನಯನ + ವಿಹ್ವಲ]

ನಯನವೀಧಿ (ನಾ). ಕಣ್ಣಿನ ನೋಟದ ಪರಿಧಿ,-ಹರವು: ಸರಸಿಜದ ಮಧು ಮಧುಕರನನನುಕರಿಸಿದೊಡೆ ಚಂದ್ರಿಕೆ ಚಕೋರನ ವರಿಸಿದರೆ ನಿಧಿ ಲಕ್ಷ್ಮಿ ಸುಳಿದರೆ ನಯನವೀಧಿಯಲಿ ಗರುವೆಯರು ಮೇಲಿಕ್ಕಿ ಪುರುಷನ ನಱಸಿದರೆ ಜಾಱುವರೆ ಸುಡಲಾ ಸರಸಿಜವನಾ ಚಂದ್ರಿಕೆಯನಾ ನಿಧಿಯನಾ ವಧುವ (ಕುಪ್ಯಾಅ. ೮-೩೩). [ನಯನ + ವೀಧಿ (<ಬೀದಿ)]

ನಯನಶಿಖಿ (ನಾ). ಕಣ್ಣಿನ ಬೆಂಕಿ : ನಿಟಲನೇತ್ರನ ನಯನಶಿಖಿಯುಬ್ಬಟೆಗೆ ಸಮ ಜೋಡಿಸಿತು ಕರ್ಣನ ಚಟುಳವಿಕ್ರಮಪವನಪರಿಗತಜಾಣಶಿಖಿನಿಕರ (ಕುಪ್ಯಾಕ. ೧೩-೩೯). [ನಯನ + ಶಿಖಿ]

ನಯನಶ್ರವಣ (ನಾ). = ನಯನಕರ್ಣ. 'ನಯನಶ್ರವಣವೇಣಿ' ಪರಾ.

[ನಯನ + ಶ್ರವಣ$_2$]

ನಯನಶ್ರವಣವೇಣಿ (ನಾ). ಹಾವಿನಂಥ ಜಡೆಯುಳ್ಳವಳು ; ನಾಗವೇಣಿ : ಭಯಪಾಪತಾಪದೂರೆ ಜಯಜಯ ಗುಣಸಾರೆ . . . ನಯನಶ್ರವಣವೇಣಿ (ತೀರ್ಥಮ. ೧೦). [ನಯನಶ್ರವಣ + ವೇಣಿ]

ನಯನಸಂಪ್ರೀತಿ (ನಾ). ನೋಟ ಮಾತ್ರದಿಂದಲೇ ಉಂಟಾಗುವ ಪ್ರೀತಿ ; ಚಕ್ಷೂರಾಗ : ನಸುನಗುತ ಕಡೆಗಣ್ಣಲಂಗನೆಯೆಸೆವ ಮುಖವನು ನೋಳ್ಪನು . . . ಶಶಿವದನೆ ಯತಿಯಲಿ ಕಟಾಕ್ಷವ ಹಸರಿಸಿದಳಿಂತಿಬ್ಬರಿಗೆ ಮನ ಬೆಸುಗೆವಡೆದುದು ನಯನಸಂಪ್ರೀತಿಯಲಿ ತಮ್ಮೊಳಗೆ (ನಿಭಾಗ. ೦೦-೬೨-೨೫). [ನಯನ + ಸಂಪ್ರೀತಿ]

ನಯನಸಲಿಲ (ನಾ). = ನಯನಜಲ : ಪ್ರೇಮಪುಳಕದ ನಯನಸಲಿಲದ ರೋಮಹರ್ಷದ ಸತ್ಯಭಾವದ ಭೂಮಿಪತಿ ಮೈಯಿಕ್ಕಿದನು ಮುನಿವರನ ಚರಣದಲಿ (ಕುಪ್ಯಾಅ. ೪-೮). [ನಯನ + ಸಲಿಲ]

ನಯನಸುಂದರತೆ (ನಾ). ನೋಟಕ್ಕೆ ಅಂದವಾಗಿರುವಿಕೆ ; ನಯನ ಮನೋಹರತೆ: ಆಳೋಕಪ್ರಿಯಜನನ ನಯನಸುಂದರತೆಯುಂ (ಶಾಂತಿಪು. ೧೨-೦೯ ಪ). [ಸಂ. ನಯನಸುಂದರತಾ]

ನಯನಾಂಚಲ, ನಯನಾಂಚಳ (ನಾ). ಕಣ್ಣಿನ ಕೊನೆ ; ಕಡೆಗಣ್ಣು ; ಕಟಾಕ್ಷ : ತಮ್ಮ ನಯನಾಂಚಲಚಂದ್ರಿಕೆಯಿಂ ನವೆಂದುಕಾಂತದ ಗಿಳಿಯಂತೆ ಕೌತುಕಮನಾ ಕ್ಷಣದೊಳ್ ಕುಡೆ (ಪಂರಾಮಾ. ೧-೦೧೮) ; ವಲ್ಲಭವಾಜಿವಾರಣಂಗಳ ನಯನಾಂಚಲಂಗಳಿಂ ಗಳಿತಾಶ್ರುಬಿಂದುಗಳನಾನಂದಾಶ್ರುಬಿಂದುಗಳೆಂದುಂ (ಮಹಾನೇ. ೦೩-೪೪ ಪ) ; ನಲಿಯುತೆ ನಯನಾಂಚಲವ ಕವಿಸಿ ನಿನಗೊಲಿವನು ಸಂದೆಗಮಿಲ್ಲ (ಕರ್ನಾಕ. ೨೨೬). **ನಯನಾಂಚಳ** : ತಳರ್ವೆಳವೆಣ್ಗಳ ನಯನಾಂಚಳರುಚಿಚಂದ್ರಿಕೆಯನಾಂತು . . . ಅಲ್ಲಿಯ ಸೋಮಸೂರ್ಯವೀಧಿಗಳೆಸೆಗುಂ (ರಾಜಶೇ. ೨-೯೦) ; ಸರಾಗನಯನಾಂಚಳ ಮೊಪ್ಪಿರೆ . . . ಎಳೆಯಳೊಱಲ್ಲು ಬಂದು ಮಣಿವಾಗಿಲೊಳೀಕ್ಷಿಸಿದಳ್ ಮಹೀಶನಂ (ರಾಜಶೇ. ೭-೯) ; ಸೊಂಪೊದವಿದೊಡಲ ರಾಗನಯನಾಂಚಳ ಮೊಪ್ಪಿರೆ ನೋಡಿದಳ್ ಮನೋಮುದದಿನರಾತಿಭೂಪಚಯಮೌಳಿವಿರಾಜಿತ ಪಾದಪದ್ಮನಂ (ಯಾದಜೆಂ. ೩-೭). [ನಯನ + ಅಂಚಲ]

ನಯನಾಂಚಳ 'ನಯನಾಂಚಲ' ನೋ.

ನಯನಾಂಜನ (ನಾ). ೧. ಕಣ್ಣಿಗೆ ಲೇಪಿಸುವ ಕಾಡಿಗೆ ; ಕಣ್ಕಪ್ಪು : ನಯನಾಂಜನಮಂಜನಮೆನೆ ನಯದಿಂ ಮುಸುಕಿದ ದುಕೂಲಮುಮರ್ದಿರೆ ಮೊಗದೊಳ್ ಪ್ರಿಯನಿಧಿಯಂ ಶೈತ್ಯಕುಶೇಶಯಲೋಚನೆ ನೋಡುವಂತೆ ಸೊಗಯಿಸೆ (ಲೀಲಾವ. ೭-೭೮) ; ಖಳರ ಹೃದಯದ ಗರುಡಿ ಘೂಕಾವಳಿಯ ನಯನಾಂಜನ . . . ಅದನೇವೊಗಳುವೆನು ಮಸಗಿತು ತಮಸ್ತೋಮ (ಕುಪ್ಯಾದ್ರೋ. ೦೫-೨೮). ೨. ನಿಧಿ, ನಿಕ್ಷೇಪಗಳನ್ನು ಕಾಣುವ ಶಕ್ತಿಯನ್ನು ಕೊಡುವುದೆಂದು ನಂಬಲಾದ ಅಂಜನ ; ಸಿದ್ಧಾಂಜನ. [ನಯನ + ಅಂಜನ]

ನಯನಾಂಬು (ನಾ). ಕಣ್ಣೀರು ; ಕಂಬನಿ : ಪೊಳೆವಲರ್ಗಂಗಳಿಂ ಮಿಳಿರ್ವ ಬೆಳ್ಪು ರಸಾತ್ಮಕಮಾಗಿ ಗಂಡಮಂಡಳತಳದಿಂದಮಂದಿಟಿಯುತಿರ್ದುದೆನಲ್ ನಯನಾಂಬುಲೋಚನಂಗಳಿನಿರದುಣ್ಮೆ (ಕಾದಂಪೂ. ೬೯೯) ; ಸುರಿವನಯನಾಂಬುಗಳ ಮೂಗಿನ ಬೆರಳ ತೂಗುವ ಮಕುಟದವನೀಶ್ವರನು ಮೌನದೊಳಿದ್ದನೊಂದು ವಿಗಳಿಗೆ ಮಾತ್ರದಲಿ (ಕುಪ್ಯಾಸ. ೦೨-೫೫).

[ನಯನ + ಅಂಬು$_3$]

ನಯನಾಂಶು (ನಾ). = ನಯನಮರೀಚಿ : ಶಿಶುಗೆ ನಯನಾಂಶು ದುಗ್ಧಪ್ರಸರದೆ ಜನ್ಮಾಭಿಷೇಕಮಂ ಮುನ್ನೊಂದಂ ಪೊಸೆಯಿಸಿ . . . ಇಂದ್ರಾಣಿ ನೆಗಪಿದಳ್ ಕೆಂದಳದಿಂ (ಪಂದ್ರಪು. ೧೨-೫೫) ; ಪೊಣ್ಮೆ ನಯನಾಂಶು ಗಗನಕೆ ತಟಿಲ್ಲತೆಯ ಪರ್ಬಂ ಪಡೆಯಲು ಬರುತಿರ್ದರಖಿಳಸ್ತ್ರೀಯರು (ಜೀಪು. ೫-೧೨). [ನಯನ + ಅಂಶು]

ನಯನಾಕರ್ಷಣವಿದ್ಯೆ (ನಾ). (ಬೇರೆಯವರ) ನೋಟವನ್ನು ತನ್ನ ಕಡೆಗೆ ಸೆಳೆಯುವ ಕಲೆ,-ಸೆಳೆಯುವಿಕೆ : ನಯನಾಕರ್ಷಣವಿದ್ಯೆ ಗಂಡುವರಿಜಂ ಕೈಕೊಂಡುದೋ . . . ಪೇಟಿಂಬಿನಂ . . . ಪೊಕ್ಕಂ ಸಭಾಸದ್ಮವಂ (ಪಂರಾಮಾ. ೩-೩೮). [ನಯನ + ಆಕರ್ಷಣ + ವಿದ್ಯೆ]

ನಯನಾಗ್ನಿ (ನಾ). (ಶಿವನ) ಕಣ್ಣಿನ ಬೆಂಕಿ : ಕಂಡನಾ ಸಮಯದೊಳ್ ಕಮಲಜಂ ಹರಕರೆದೆ ಖಂಡಿಸಿದ ತನ್ನುತ್ತಮಾಂಗಮಂ ರುಧಿರಜಲಮುಂಡು ಪೋಳಿಸಿದ ನಯನಾಗ್ನಿಯಂ ಪೊಗಳುತಿಹ ಸಕಲವೃಂದಾರಕರನು (ಜೀಪು. ೧೮-೦೬). [ನಯನ + ಅಗ್ನಿ]

ನಯನಾತಿಥಿ (ನಾ). ನೋಟಕ್ಕೆ ವಸ್ತುವಾದ ವ್ಯಕ್ತಿ ; ಕಣ್ಣಿಗೆ ಕಾಣಿಸುವ ವ್ಯಕ್ತಿ : ಅಂತಾ ಮಹಾತಿಥಿ ನಯನಾತಿಥಿಯಾಗಿರ್ಪುದುಂ (ಪಂರಾಮಾ. ೨-೧೪ ಪ) ; ಬಟ್ಟೆಗರಱವಟ್ಟಿಗೆಯ ಬಾಲೆಯರ ನಯನಾತಿಥಿಗಳಾದರ್ (ರಾಮಾಶ್ವ. ೫೨-೧೧). [ನಯನ + ಅತಿಥಿ]

ನಯನಾನಂದ (ಗು). ೧. ಕಣ್ಣಿಗೆ ಸುಖಕರವಾದ ; ಅಂದವಾದ ; ಮನೋಹರವಾದ: ನಯನಾನಂದವಿಳಾಸರೂಪನಮರೀನೀಲಾಲಕಾಲೀಢಪಾದಯುಗಂ ಅದೇಂ ನಲಿದನೋ (ಅಹಿಪು. ೫-೭೧) ; ನಯನಾನಂದ ಮೃಗಾಂಕಬಿಂಬಮುದಯಂಗೆಯ್ವರ್ಕಜಿಂಬಂ . . . ಪ್ರಿಯಗಳ್ಳಂಗೊಸೆದೀಗೆ ಮಂಗಳಮಹಾಶ್ರೀಯಂ ಜಯಶ್ರೀಯುಮಂ (ಪಂಪಭಾ. ೧೪-೩೫). ೨. ಕಣ್ಣಿಗೆ ಉಂಟಾಗುವ ಆನಂದ ; ನೋಟದ ಸುಖ : ನಯನಾನಂದಮನುಂಟುಮಾಡಿ ಮಧುವಿಂ ಕೈವಂದುದು . . . ಉದ್ಯಾನಮಾಲೆಯನಾವಂ ರಸಚಿತ್ರಮಾಗೆ ಬರೆವಂ (ಮಲ್ಲಿಪು. ೫-೪೪) ; ನಯನಾನಂದ ಮನಿತ್ತುದಿಂದ್ರನಟನವ್ರಾಗಲ್ಯದಿಂ . . . ದೇವಕಾಂತೆಯರಲ್ಲಾಡದೆ ಸಂದ ಸೆಳ್ಳುಗುರ ಸೂಚೀನರ್ತನಂ (ಅನಂಪು. ೫-೯೭).

[ನಯನ + ಆನಂದ]

ನಯನಾನಂದಕರ (ನಾ). ಕಣ್ಣಿಗೆ ಸಂತೋಷವನ್ನುಂಟುಮಾಡುವುದು ; ಅಂದವಾದುದು ; ಸೊಗಸಾಗಿರುವುದು: ನಯನಾನಂದಕರಂ ಸುಖಚಯಸಹಿತಂ . . . ಸಜ್ಜನಚಿತ್ತಪ್ರಿಯಮೆನಲೆಸೆದಿರ್ಪುದಧಿಯೆಮೆನೆ ಕುಸುಮಪುರಂ (ದಶಕು. ೧-೨೪). [ಸಂ.]

ನಯನಾನಂದನ (ಗು). ಕಣ್ಣಿಗೆ ಸುಖಕರವಾದ,-ಆಪ್ಯಾಯನವಾದ; ಆಂದವಾದ: ನಯನಾನಂದನದಾಮಮಂ ಹಿಮಕರಾಂಶೂದ್ದಾಮಮಂ ಕನ್ನೆ ತನ್ನಯ ಕೆಯ್ಕೊಳ್ ಕಾಡೆ (ಶಾಂತಿಪು. ೫-೦೬೧). [ನಯನ+ಆನಂದನ]

ನಯನಾಭಿರಾಮ (ಗು). (ಂ.). ಕಣ್ಣಿಗೆ ಸುಂದರವಾದ; ಮನೋಹರವಾದ: ನಯನಾಭಿರಾಮದೇಹಂ . . . ನಯವಿನಯನಿತ್ಯಶೀಲಂ ಜಯಕಾಂತಾಕಾಂತನಲ್ತೆ ನಳಭೂಕಾಂತಂ (ನಳಚಂ. ೧೫೨). (ನಾ). ೨. ಕಣ್ಣಿಗೆ ಮನೋಹರನಾದವನು; ಸುಂದರ; ಒಂದು ಬಿರುದು: ಬವ್ವನಂಕಕಾಱಂ [ಕುಮರ]ಂಕಭೀಮಂ ನಯನಾಭಿರಾಮಂ . . . ಶ್ರೀಮದ್ಭುವರಾಜಂ ಮಲ್ಲಿಕಾರ್ಜುನದೇವರು (ಸೌಇ. XX, ೭೧-೧೦; 1106). ೩. ಕಣ್ಣಿಗೆ ಸುಂದರವಾದುದು; ಮನೋಹರವಾದುದು: ನಯನಾಭಿರಾಮಮೆಂಬುದುಮಿದು ಕೃಷ್ಣನಿರ್ವ ಪುರಂ (ಮುಹಾನೇ. ೭-೦೩೦).

[ನಯನ + ಅಭಿರಾಮ]

ನಯನಾಮೃತ (ನಾ). ಕಣ್ಣಿಗೆ ಅಮೃತಪ್ರಾಯವಾದುದು,-ಆಪ್ಯಾಯಮಾನವಾದುದು; ನೋಟಕ್ಕೆ ಸುಖಕರವಾದುದು: ನಯನಾಮೃತಕ್ಕೆ ಮತ್ತಾರಯೆ ಕರ್ಣರಸಾಯನಕ್ಕೆ ಸುರನರಜನತಾಶಯಸೌಖ್ಯಕ್ಕಾದ್ಯವ ಭೂಮಿಯಿವೆನೆ ಸಂಗೀತಭೂತಳಂ ಸೊಗಯಿಸುಗುಂ (ಕಂದ್ರಪು. ೦೫-೭೦).

[ನಯನ + ಅಮೃತ]

ನಯನಾಶ (ನಾ). [ಕಾವ್ಯಮಿಮಾ] ಕಾವ್ಯದ ಹದಿನೆಂಟು ಬಗೆಯ ದೋಷಗಳಲ್ಲಿ ಒಂದು; ಕವಿಸಂಪ್ರದಾಯಕ್ಕೆ ವಿರುದ್ಧವಾದುದು: ಅಸದರ್ಥಂ ವಿಪರೀತ ಕಲ್ಪನೆಯಧ್ವಂ ದುಷ್ಕರಂ . . ನಷ್ಟಸಮಾಸಂ ನಯನಾಶರೀತಿವಿಫಲಂ ದುರ್ಲಕ್ಷಣಂ ಹಾಸ್ಯವಾಗ್ವಿಷಮಾಸೌಮ್ಯಮ ನೋಜೆಯೆಂಬವಿನಿತುಂ ದೋಷಂಗಳಷ್ಟಾದಶಂ (ಧಂದೋಂಬು. ೧-೪೬ ಅಡಿಬರ್ಕ). 'ಅಷ್ಟಾದಶದೋಷ', 'ದುರ್ಲಕ್ಷಣ' ಪರಾ.

[ನಯ + ನಾಶ]

ನಯನಾಶ್ರು (ನಾ). ಕಣ್ಣೀರು; ಕಂಬನಿ: ಅಲ್ಲಲ್ಲಿ ಶಿವಪುರಾಣಂಗಳಂ ಕೇಳುತಂ ಸಲ್ಲೀಲೆವೆರ್ಚಿ ನಯನಾಶ್ರುವಂ ಸೂಸುತಂ (ತಿಪುರ. ದೇ. ೪-೧೫).

[ನಯನ + ಅಶ್ರು]

ನಯನಾಸ್ಪಂದ (ನಾ). ಕಣ್ಣುಗಳನ್ನು ಅಲಾಗಾಡಿಸುವಿಕೆ (?): ವಂದಿಸಿದರಿವರ್ಗೆವರವರಾನಂದಜಲಪರಿಲುಳಿತ ನಯನಾಸ್ಪಂದ ಪರಿತೋಷದರಿ ತೆಗೆದಪ್ಪಿದರು ಪಾಂಡವರ (ಕುವಾ೪. ೧೬-೩೦). [ಸಂ.]

ನಯನಿಪುಣ (ನಾ). ೧. ರಾಜನೀತಿಯಲ್ಲಿ ನುರಿತವನು; ರಾಜನೀತಿ ಕುಶಲ; ಕೋವಿದ: ನಯನಿಪುಣರುಪಾಯಚತುಷ್ಟಯದೊಳ್ ಸಾಮ ಮನಗಣ್ಮಾಡ್ಗುಣ್ಮದೊಳಾರಯೆ ಸಂಧಿಯಂ ಮೊದಲ್ ಮಾಡಿಯೆ ಪೇಟ್ದರ್ (ಪಾರ್ಶ್ವಪು. ೨-೩೯). ೨. (ಪ್ರಾಣಿಗಳನ್ನು) ತಿದ್ದಿ ಪಳಗಿಸುವ ವಿದ್ಯೆಯಲ್ಲಿ ನಿಷ್ಣಾತನಾದವನು; ಶಿಕ್ಷಾವಿಧಾನದಲ್ಲಿ ನಂಬಿತವನು: ನಯನಿಪುಣ ಸೂತ್ರಧಾರರ್ ನಿಯಮಿಸುವರ್ ಭದ್ರಮಂದವ್ಯಗ ಸಂಕೀರ್ಣಾವ್ಯಯದ ನೃಪಕರಿಗಳಂ ಪ್ರಣಿಧಿಯೊಡಂಬಡೆ ಸಕಳಶಿಕ್ಷೆ ಕಣ್ಣೋಜುವಿನಂ (ಪುಪ್ಪಪು. ೨-೩೬). [ನಯ + ನಿಪುಣ]

ನಯನುಡಿ (ನಾ). ಮೃದುವಾದ ಮಾತು; ಹಿತವಾದ ಮಾತು: ರಾವನ ಮುವ ನಯನುಡಿಯಿಂದ ತಿಳುಹಿದನು (ಕುವಾಗ. ೯-೩೫); ಬದ್ಧವಾದ ನಯನುಡಿಯು ಇಲ್ಲದಾಶನೆ ಹೊಲೆಯ (ಪುರಂದ. ೧-೦೭೮-೩).

[ನಯ + ನುಡಿ]

ನಯನೋತ್ಸವ (ನಾ). = ನಯನಾನಂದ ೨: ನಯನೋತ್ಸವಮಂ ನವಕಳಿಕೆಯನ್ನುದ್ಭತ್ಪಳದಿನೀವ ಸಂತಾನದ ಲೀಲೆಯನಾಂತು ಖಚರರಾಜಂ ಸ್ವಯಂಪ್ರಭೆಯುಮರ್ಕಕೀರ್ತಿಯುಂಬೆರಸಿರ್ದಂ (ವರ್ಧಪು. ೫-೪೨).

[ನಯನ + ಉತ್ಸವ]

ನಯನೋತ್ಸವಕರಿ (ನಾ). ಕಣ್ಣಿಗೆ ಆನಂದವನ್ನುಂಟುಮಾಡುವವಳು: ನಯನೋತ್ಸವಕರಿ ರತಿವತಿ ಜಯಲಕ್ಷ್ಮೀಸಮಸ್ತಸತ್ಕಳಾಕೋವಿದೆ ಪುಣ್ಯಯಶೋರ್ಥಿನಿ ಪೆಸರ್ವೆತ್ತಳ್ ಸ್ವಯಂಪ್ರಭಾದೇವಿಯಾತನನುಜಾತೆ ವಲಂ (ವರ್ಧಪು. ೫-೬೫). [ಸಂ. ನಯನೋತ್ಸವಕರೀ]

ನಯನೋತ್ಸಾಹ (ನಾ). ಮಂತ್ತೆ ಮತ್ತೆ ನೋಡಬೇಕೆಂಬ ಆಸೆ; ನೋಟದ ಆಕರ್ಷಣೆ: ನಯನೋತ್ಸಾಹಮನಿತ್ತು ದೇಹರುಚಿಯಿಂದೆಯ್ದಂಬನಾಕಾಶಗಂಗೆಯು ನೀರ್ಮಾನಿಸನೆಂಬಿನಂ. . . . ನಾರದಂ (ಪಂಪಾಮಾ. ೩-೦೮). [ನಯನ + ಉತ್ಸಾಹ]

ನಯನೋದಕ (ನಾ). ಕಣ್ಣೀರು; ಕಂಬನಿ: ನಾದಿದಳು ನೃಪನಂಘ್ರಿಯನು ನಯನೋದಕದ ಧಾರೆಯಲಿ (ಕುವಾಆ. ೫೦-೬); ಕೊರಗಿದಾನನದೊಸರ್ವ ನಯನೋದಕದ ಸುಯ್ಲಿನ ಹಸರಿಕೆಯಾಲ್ಕೆತಂದರಿರುಳು ದಶಾಸ್ಯನಿದ್ದೆಡೆಗೆ (ಕೊರಾರಾ. ೬-೦೨-೦). [ನಯನ + ಉದಕ]

ನಯನೋದ್ಗತ (ಗು). ಕಣ್ಣಿನಲ್ಲಿ ಹುಟ್ಟಿದ,-ಉಂಟಾದ: ನಯನೋದ್ಗತ ಕುಸುಮಗ್ರಂಥಿಯೆಲ್ಲಮೊರ್ಮೆಯೆ ತೆರಳ್ದು ಕಿಡುವುದು (ಕೊಕೋಪ. ೯-೭೬). [ನಯನ + ಉದ್ಗತ]

ನಯನೋದ್ಗಳಿತ (ಗು). ಕಣ್ಣಿನಿಂದ ಹೊಮ್ಮಿದ,-ಸೂಸಿದ: ನಯನೋದ್ಗಳಿತಜಲಧಾರೆಯಲಿ ನೆನೆದುದು ಸಭೆ ವಿಷಾದದಲಿ (ಕುವಾಸ. ೧೪-೭೩). [ಸಂ. ನಯನೋದ್ಗಲಿತ]

ನಯನೋನ್ಮಾದ (ನಾ). ಕಣ್ಣುಗಳಿಗೆ ನೋಟದಿಂದ ಉಂಟಾಗುವ ಆನಂದಾತಿಶಯ: ನಯನೋನ್ಮಾದಮನೀಯೆ ನುಣ್ಪರಿಜಾಗಳ್ ಕಣ್ಬೇಟದಿಂ (ಅವಂಪು. ೩-೦೭). [ನಯನ + ಉನ್ಮಾದ]

ನಯನೋನ್ಮೀಲನ (ನಾ). ಕಣ್ಣು ತೆರೆಯುವಿಕೆ: ರತಿದೇವಿ ಲೀಲೆಯಿಂ ಪೊಸಪತ್ತಳಿ ತಿರ್ದಿ ನಯನೋನ್ಮೀಲನ ಮಾಡಿದಂತಾಯ್ತು (ಶ್ರೀಪಾಂ. ೪-೦೫೪). [ನಯನ + ಉನ್ಮೀಲನ]

ನಯನೋಪಾಂತ (ನಾ). ಕಣ್ಣಿನ ಕೊನೆ: ಕಡೆಗಣ್ಣು; ಕಟಾಕ್ಷ: "ನಯನೋಪಾಂತಃ ಅಪಾಂಗಃ-ಈ ೨ ಕಡೆಗಣ್" (ಹಲಾಯು. ೪೬-೩೬೬).

[ನಯನ + ಉಪಾಂತ]

ನಯಪಂಡಿತ (ನಾ). ನೀತಿವಿದ; ವಿವೇಕಿ: ನೀಂ ಪ್ರಾಣಜಂ. ದೇಶಕಾಲಾನುವೃತ್ತಿಯ ನಯದಿ ನಯಪಂಡಿತಂ (ಶ್ರೀಪಾಮಾ. ೩೭೦-೫೯೯).

[ನಯ + ಪಂಡಿತ]

ನಯಮಂತ (ನಾ). ವಿವೇಕಿ; ಗುಣವಂತ: ಧಾತ್ರಿಗೆಲ್ಲವಿಶ್ವಾಸನಾದಂ ಭಯಮುಂ ಲೋಭಮುಮಿಲ್ಲದ ನಯಮನ್ತಂ ಪ್ರಜೆಗೆ ನಲ್ಲನಾಹವ ವಲ್ಲ[ಂ] (ಕೊಪ್ರಾಶಾ. ೯-೦೦: 1147).

[P ಇದು 'ನಯವಂತ' ಎಂಬುದರ ಅಪಲಿಖಿತವಿರಬಹುದು]

ನಯಮಱಿ (ಕ್ರಿ). ರಾಜನೀತಿಯನ್ನು ತಿಳಿ; ನೀತಿನಿಪುಣನಾಗಿರು: ಅಡಪವಳಂ ಪಡೆವಳ್ಕಂ ಮಡಿವಳ್ಕಂ ಸೆಜ್ಜೆವಳ್ಕನಜ್ಜಂ ಬಿಜ್ಜಂ ಅಡವಳನೆಂದಿಂತಿವರಂ ಕಡಂಗಿ ಬಿಡೆ ಜಡಿಯದಿರ್ಕಿ ನಯಮಱಿವರಸಂ (ಕಾವ್ಯಾವ. ೪೫೬). [ನಯ + ಅಱಿ]

ನಯಮಾತು (ನಾ). =ನಯನುಡಿ: (ಶ). [ನಡು + ಮಾತು]

ನಯಮಾರ್ಗ (ನಾ). [ಜೈನ] ವಸ್ತುವಿನ ಒಂದಂಶವನ್ನು ಮಾತ್ರ ಪರಿಗ್ರಹಿಸಿ ವ್ಯವಹರಿಸುವುದು: ಒಂದಂಶವನ್ನು ಮಾತ್ರ ಪರಿಗ್ರಹಿಸಿ ವ್ಯವಹರಿಸುವುದು ನಯಮಾರ್ಗವು (ಹಿಂದಸಾ. ೭೮). 'ನಯ' ಪರಾ.

[ನಯ + ಮಾರ್ಗ]

ನಯಮೂರ್ತಿ (ನಾ). ರಾಜನೀತಿಯೇ ಮನುಷ್ಯಸ್ವರೂಪವನ್ನು ತಾಳಿದಂತಿರುವವನು: ಪ್ರಿಯೆಯು ಬರವಾರ್ವಪೊಲಪ್ರಿಯು ಗಗನಚರೇಂದ್ರ

ರುಂದ್ರಸೇನೆಯ ಬರಪಾರ್ವಯಮೂರ್ತಿಯುಮಂ ನಯಮೂರ್ತಿಯುಮಂ ಪೋಲ್ವರನಪಾರಪೌರುಷಪರರಂ . . . ಅಪರಾಜಿತಾನಂತವೀರ್ಯರಂ ಕಂಡು (ಶಾಂತಿಪು. ೩-೭೫). [ನಯ$_2$ + ಮೂರ್ತಿ]

ನಯಯುಕ್ತ (ನಾ). ನಯಜ್ಞ; ನೀತಿವಂತ; ವಿವೇಕಿ : ನಯಯುಕ್ತರಗ್ನಿ ವತ್ಸ್ವಾಶ್ರಯಮೇವ ದಹಂತಿ ದುರ್ಜನಾ ಎಂಬುದನಾರಯದಿರಿಸಿದಂದು ನಮ್ಮನ್ವಯಕಂ ಕೇಡಕ್ಕುಮಿವನನೀಗಳೆ ಕಳೆವೊಂ (ಪಾರ್ಶ್ವಪು. ೪-೬೦).

[ನಯ$_2$ + ಯುಕ್ತ]

ನಯವಂಚಕ (ನಾ). ಒಳ್ಳೆಯಂತನವ ಸೋಗಿನಲ್ಲಿ ಮೋಸ ಮಾಡುವವನು : ಅವನೊಬ್ಬ ನಯವಂಚಕ (ರೂಢಿ). [ನಯ$_2$ + ವಂಚಕ]

ನಯವಂತ (ನಾ). ೧. ರಾಜನೀತಿನಿಪುಣ; ನೀತಿವಿಶಾರದ : ನಯವಂತನಾದೊಡಂ ಕೇಳ್ವುದತಿಹಿತವಚನಮಂ (ಮಹಾವಿ. ೮-೫೦). ೨. ಗುಣವಂತ. 'ನಯವಂತೆ' ಪರಾ. [ಸಂ. ನಯವತ್]

ನಯವಂತಿಕೆ (ನಾ). ನಯ; ಕೋಮಲತೆ; ಸೌಕುಮಾರ್ಯ; ಮಾರ್ದವ : ಅವರ ಗಾಯನದಲ್ಲಿ ಬಾಯಿಹಾಡುಗಾರಿಕೆಯ ಎಲ್ಲ ನಯವಂತಿಕೆ, ಚಾತುರ್ಯ ಮತ್ತು ಸೊಗಸುಗಳನ್ನು ಕೇಳಬಹುದಾಗಿತ್ತು (ಸಂಗೀತ. ೬೦). [ನಯ$_1$ + – ವಂತ + – ಇಕೆ]

ನಯವಂತೆ (ನಾ). ವಿನಯವತಿ; ಸೌಜನ್ಯಶೀಲೆ; ಗುಣವಂತೆ : ಆಚಭೂಪನ ಕಾನ್ತೆ ದಯಾವಂತೆ ಭಾಗ್ಯವಂತೆ ನಿತಾಂತಂ ಶಾನ್ತೆ ನಯವಂತೆ ಸತ್ಕುಳವಂತೆ ಮಹಾದೇವಿಯೆಂಬ ಪೆಸರಿಂದೆಸೆದಳ್ (ಎಇ. XX, ೧೨-೧೫; 1167). [ನಯವಂತ + – ಎ$_2$]

ನಯವಡೆ 'ನಯಂಬಡೆ' ನೋ.

ನಯವರ್ತನೆ (ನಾ). ಸೌಜನ್ಯದಿಂದ ಕೂಡಿದ ನಡವಳಿಕೆ : ನಿನ್ನ ನುಡಿನುಣ್ಪಿಂಗೆ, ನಿನ್ನ ನಯವರ್ತನೆಗೆ, ನಾಣ್ಚುತಿಹೆನಾಂ (ಶ್ರೀರಾಮಾ. ೪೩೦-೨೬೮). [ನಯ$_1$ + ವರ್ತನೆ]

ನಯವಾದ (ನಾ). [ಜೈನ] ಲೋಕವ್ಯವಹಾರಕ್ಕಾಗಿ ವಸ್ತುವಿನ ಒಂದು ಅಂಶವನ್ನು ಪರಿಗ್ರಹಿಸಬೇಕೆಂಬ ವಾದ; ಸಮಗ್ರಜ್ಞಾನವನ್ನು ಪಡೆಯಲು ವಸ್ತುವಿನ ಒಂದೊಂದು ಅಂಶವನ್ನು ಕ್ರಮವಾಗಿ ಗ್ರಹಿಸುವುದು : ನಯವಾದಂ ನಯಮಾಗಿ ಕೂಡೆ ಪೊಳೆಯಲ್ . . . ಪೇಟ್ವರೀಗೆಮಗುಪಾಧ್ಯಾಯರ್ ಸುಖೋಪಾಯಮಂ (ಪುಷ್ಪಪು. ೦-೪) ; ವಸ್ತುವಿನ ಒಂದೊಂದು ಭಾಗ (ಧರ್ಮ)ವನ್ನು ಗ್ರಹಿಸುವ ಜ್ಞಾನವು ಸಂಪೂರ್ಣವಾಗಿ ಪ್ರಮಾಣವಾಗಲಾರದು. ಈ ವಾದಕ್ಕೆ ನಯವಾದವೆಂದು ಹೆಸರು (ಧಾತತ್ತ್ವ. ೨೨೮). 'ನಯ$_2$' ಪರಾ. [ನಯ$_2$ + ವಾದ$_3$]

ನಯವಿದ (ನಾ). ೧. ರಾಜನೀತಿನಿಪುಣ; ನಯಜ್ಞ : ಸದುದಿತಗುಣನದಱಿಂ ನಯವಿದನಪ್ಪಂ ಕಾಲಮಂ ನೆರಂ ತೋರ್ಕೆ ನೃಪಂ (ಕವಿರಾ. ೩-೧೪೭) ; ಕಾವುದು ನೀನೆಮ್ಮನ್ನಯವಿದ ಧರ್ಮಮಾರ್ಗದಿಂ ಗಜವೈರೀ (ಪಂಚತಂ. ೮೮-೬) ; ನಯವಿದನಂ ಸಾಮದಿನಪನಯನಂ ದಂಡದೊಳೆ ಗೆಲುವುದು (ಪಾರ್ಶ್ವಪು. ೨-೪೨) ; ನಯವಿದರೆಲ್ಲಮಲ್ಲಿಯೆ ಕಳಾನ್ವಿತರಲ್ಲಿಯೆ (ಪುಷ್ಪಪು. ೯-೧೭); ನಯವಿದನು ಹೊಂಬಟ್ಟಲಲಿ ವೀಳೆಯವನನಿಬರಿಗಿತ್ತು . . . ಪಾಳೆಯಕೆ ನೇಮವ ಕೊಟ್ಟನು (ಕುಮ್ಯಾದ್ರೋ. ೨-೦೨). ೨. ಒಳ್ಳೆಯ ನಡತೆಯಿಂದ ಕೂಡಿದವನು; ಸದಾಚಾರಸಂಪನ್ನ : ನಯವಿದನಪ್ಪುದಱಿಂ ದುರ್ನಯಮಂ ಬಿಸುಟೇಕಚಿತ್ತದಿಂ ನಂಬಿರ್ದಂ ... ಜಿನಪತಿಯಂ (ಧರ್ಮಾಮ್ಯ. ೧೨-೨೫). ೩. ಸೌಜನ್ಯವುಳ್ಳವನು; ಮಾರ್ದವದಿಂದ ಕೂಡಿದ ನಡವಳಿಕೆಯುಳ್ಳವನು: ನಯವಿದನೊಪ್ಪುವ ಬಿಯಕಾಱನೊಳ್ಳಿದ ಪ್ರಿಯತಮನಾಗೆ ತನ್ನ ಮುನ್ನೋಂತ ನೋಂಪಿಯ ಫಲವೈಸೆ ಬೆಲೆವೆಣ್ಣೆ (ಲೀಲಾವ. ೨-೩೪) ; (ಸೂಕ್ತಿಸು. ೮-೩೪೪ ನೋ) ; ನಯವಿದರಱಿವುದು ರತಿವಿಸ್ಮಯಂಕೋಪೋತ್ಸಾಹಶೋಕಹಾಸ್ಯಜಂಗುಪ್ಸಾಭಯಮೆಂಬೆಂಟುಂ ಭಾವಪ್ರಯೋಗದೊಳ್ ಸ್ಥಾಯಿಭಾವಮೆನೆ ಪೆಸರ್ವಡೆಗುಂ (ಶೃಂಗಾರ. ೨-೪). ೪. ವಿವೇಚನೆಯುಳ್ಳವನು; ವಿವೇಕಿ: ನಯವಿದನೆ ಲವ ಕೇಳು ಬಾದಳು ಮಯನ ಸುತೆ . . . ಕರ್ಪುರದಾರತಿಯ ಕೆಂಜೊಡರ ಸೊಂಪಿನಲಿ (ತೂರರಾ. ೬-೪೬-೩೦).

[ಸಂ. ನಯವಿದ್]

ನಯವಿದೂರ (ನಾ). ಒಳ್ಳೆಯ ನಡವಳಿಕೆಯನ್ನು ಬಿಟ್ಟವನು : ಚಿತ್ರಾಂಗದ ವಿಕರ್ಣನ ನಯವಿದೂರರ ತಂದರಿಪ್ಪತ್ತೈದು ಸಹಭವರ (ಕುಮ್ಯಾಅ. ೧೯-೫೨). [ನಯ$_2$ + ವಿದೂರ]

ನಯವಿದ್ಯಾವಿದ (ನಾ). ನೀತಿಶಾಸ್ತ್ರವನ್ನು ಬಲ್ಲವನು : ನಯವಿದ್ಯಾವಿದರಿಂ ಕವಿಪ್ರಕರದಿಂ ತರ್ಕಜ್ಞರಿಂ . . . ದೇವತಾಲಯದಿಂದೊಪ್ಪುವ ಗುಪ್ತವಂಶವಸುಧಾಧೀಶಾವಳೀರಾಜಧಾನಿಯನುಜ್ಜೈನಿಯನೆಯ್ದಿ ಬಂದನಜಿತಂ (ಪಂಚತಂ. ೧೯೩-೧೫). [ಸಂ. ನಯವಿದ್ಯಾವಿದ್]

ನಯವಿನಿಮಯ (ನಾ). ರಾಜರು ಪರಸ್ಪರ ನೀತಿಗಳನ್ನು ತಿಳಿದುಕೊಳ್ಳುವುದು,-ಪರಸ್ಪರ ರಾಜ್ಯಸಂಬಂಧದ ವಿಚಾರವನ್ನು ಅರಿಯುವುದು: ನಯವಿನಿಮಯ ನಾನಾಮಂತ್ರದೂತಪ್ರಯಾಣಾಕ್ಷಯ ಸಮಯವಿಳಾಸೋಲ್ಲಾಸಿ ಸಂಗ್ರಾಮಿತಾಂಗಂ (ಕವಿರಾ. ೩-೨೦೩). ; "ನೀತಿವಿನಿಮಯ" (ಕವಿರಾ. ಟಿಪ್ಪಣಿ). [ನಯ$_2$ + ವಿನಿಮಯ]

ನಯವಿವೇಕ (ನಾ). ಯೋಜನೆಯ ಕುಶಲತೆ : ಮಯನ ಮತದಲಿ ವಿಶ್ವಕರ್ಮನ ನಯವಿವೇಕದಲಮಲ ಮಖಶಾಲೆಯನು ನಿರ್ಮಿಸಿದನು ಸುಲಕ್ಷಣ ಶಾಸ್ತ್ರಸೂತ್ರದಲಿ (ಕುಮ್ಯಾಸ. ೬-೨೪). [ನಯ$_2$ + ವಿವೇಕ]

ನಯವಿಹೀನೆ (ನಾ). ಔಚಿತ್ಯವನ್ನು ತಿಳಿಯದವಳು : ಪಾಂಚಾಲಿಯನು ಕರಸಿದಳು ನಯವಿಹೀನೆ ಸುದೇಷ್ಣೆ (ಕುಮ್ಯಾವಿ. ೩-೦).

[ಸಂ. ನಯವಿಹೀನಾ]

ನಯವೇಱು (ಕ್ರಿ). ಕಳೆಯೇರು; ಅಂದ ಹೆಚ್ಚಾಗು; ಸೊಗಸಾಗು : ಉದಯಗಿರೀಂದ್ರಮನಿನನೇಱಿ ಸರೋಜಸಮಿತಿ ನಯವೇಱುವವೊಲ್ (ಚಂದ್ರಪು. ೭-೨) ; ಅಂತರಂಗದ ಗರ್ಭವೊಡನೊಡನೆ ಬೆಳೆವುತಿರೆ ಅಂಗಲತೆ ನಯವೇಱಿ ಬೇಱೊಂದು ಚೆಲುವಾಗೆ (ಬಸರ. ೦-೦೦೭).

[ನಯ$_1$ + ಏಱು$_1$ (< ಏಱು$_1$)]

ನಯಶಟ್ಕು (ನಾ). ಒಂದು ಊರಿನ ಹೆಸರು : ಶ್ರೀ[ಪ್ರಥುವೀವಲ್ಲಭ] ಮಹಾರಾಜಾಧಿರಾಜಪರಮೇ[ಶ್ವರ] ಪರಮಭಟ್ಟಾರಕಂ ನಯಶಟ್ಕು ಪುರವರೇಶ್ವರಂ (ಸೌಇಇ. XX, ೧೯-೭; 1015). [?]

ನಯಶಾಲಿ (ನಾ) ೧. ನೀತಿನಿಪುಣ; ನಯಜ್ಞ : ವೀರನುದಾರಂ ಶುಚಿ ಗಂಭೀರಂ ನಯಶಾಲಿ ಕೈದುವೊತ್ತಂ ದೇವಂಗಾರೆಱಗರ್ ನೃಪತುಂಗಂಗೆ (ಕಮದ್ನ. ೧೪೦ ಪ್ರಯೋ). ೨. ಒಳ್ಳೆಯ ನಡತೆಯುಳ್ಳವನು; ಸದಾಚಾರಿ: ನಯಶಾಲಿ ವತ್ಸಗೋತ್ರೆಶ್ರಯಣೀಯನನೇಕಸಕಳಶಾಸ್ತ್ರಾರ್ಥವಿನಿಶ್ಚಯ ಮತಿಕೃತಿ ಮಾಧವಸೋಮಯಾಜಿ ಸಲೆ ನೆಗಟ್ದ (ಪಂಪಧಾ. ೧೪-೪೨). ೩. ವಿನಯಶಾಲಿ; ಸೌಜನ್ಯಶೀಲ : ನಯಶಾಲಿಯಾದವ ಜಯಶಾಲಿಯಾದಾನು (ಗಾದೆ). [ಸಂ. ನಯಶಾಲಿನ್]

ನಯಶಾಸ್ತ್ರ (ನಾ). ರಾಜನೀತಿ; ರಾಜ್ಯಭಾರದ ಕ್ರಮವನ್ನು ಕುರಿತ ಶಾಸ್ತ್ರ : ನಯಶಾಸ್ತ್ರಕ್ರಮದಿಂ ವಿರೋಧಿನೃಪರಂ ಗೆಲ್ದು (ಪಂಚತಂ. ೧೬-೨೦); ನಯಶಾಸ್ತ್ರಂ ಧರ್ಮಶಾಸ್ತ್ರಂ ಕರತಳಕಳಿತವ್ಯಕ್ತಮುಕ್ತಾಫಳಂ . . . ಮದೀಯಾನ್ವಯರಾಜ್ಯಶ್ರೀಲತಾಲಂಬನಮೆನೆ ನೆಗಟ್ದೈ ಪುತ್ರ ನಿನ್ನನ್ನನಾವಂ (ಮಲ್ಲಿಪು. ೯-೮೬) ; ನಯಶಾಸ್ತ್ರಾನೀಕಮಾಕಾರಮನೆ ಪಡೆದುದೆಂಬಂತೆ ಸನ್ಮಂತ್ರಿವಿಖ್ಯಾತಿಯನಾದಂ ತಾಳ್ದ ಮಂತ್ರೀಶ್ವರತತಿ (ಶಾಂತೀಶ್ವ. ೧೫-೮೭) ; ಸಂಸ್ಥಾನವನ್ನು ನೀತಿಯುಕ್ತ ಮಾಡಲಿಕ್ಕೆ ನಯಶಾಸ್ತ್ರವಾಯಿತು (ವಿಜಾಮಂ. ೪೫). [ನಯ$_2$ + ಶಾಸ್ತ್ರ]

ನಯಸಂಪನ್ನ (ನಾ). ನೀತಿವಂತ ; ನಯವಿದ : ನಯಸಂಪನ್ನನತೀವ ಯವ್ವನಯುತಂ ರೂಪಾನ್ವಿತಂ . . . ಸಂಭೋಗಸಂಪ್ರಿಯನುತ್ಸಾಹಿ ಯೆನಿಪ್ಪನೊಳ್ನೆರೆವ ವೆಣ್ಗಾ ರಂಭೆಯೇಂ ಸಾಟಿಯೇ (ರಾಜಶೇ. ೧೧-೧೫೦) ; ನಯಸಂಪನ್ನನಧೀತಶಾಸ್ತ್ರನಿಚಯಂ ನಾನಾಕಲಾಶಾಲಿ . . . ಬಲದೇವ ನೆಂಬನನಘಂ ಗಾಂಭೀರ್ಯರತ್ನಾಕರಂ (ವೃಷವಿ. ೪-೯೭).

[ನಯ$_2$ + ಸಂಪನ್ನ]

ನಯಸಪ್ತಭಂಗಿ (ನಾ). [ಜೈನ] ಏಳು ಬಗೆಯಾಗಿ ನಿರೂಪಿಸಬಹುದಾದ ವಸ್ತುವಿನ ಒಂದು ಧರ್ಮವನ್ನು ಮಾತ್ರ ಹೇಳುವುದು : ನಯಸಪ್ತ ಭಂಗಿಯೊಳೇವಕಾರವಿಶೇಷಮಕ್ಕುಮೆಂದಱಿದುಕೊಂಬುದು (ಪಸಾರ. ೧೦೦) ; ಸಪ್ತಭಂಗಿಯು ಪ್ರಮಾಣಸಪ್ತಭಂಗಿಯೆಂದೂ ನಯಸಪ್ತಭಂಗಿಯೆಂದೂ ಎರಡು ವಿಧ . . . ನಯಸಪ್ತಭಂಗಿಯೆಂದರೆ ವಸ್ತುವಿನ ಒಂದು ಧರ್ಮವನ್ನು ಬೋಧಿಸುವ ವಾಕ್ಯ ಎಂದರ್ಥ (ಧಾತತ್ತ್ವ. ೨೪೬).

[ನಯ$_2$ + ಸಪ್ತಭಂಗಿ]

ನಯಸರ (ನಾ). ಮೃದುವಾದ ದನಿ ; ಇಂಪಾದ ಸ್ವರ ; ಮಧುರವಾದ ಧ್ವನಿ : ಮೊರೆವ ತುಂಬಿಯ ಗಾಯಕರ ನಯಸರದ ಕೋಕಿಲಪಾಠಕರ . . . ಜಾತುರ ವಸಂತನೃಪಾಲ ನಡೆದನು ಪಾಂಡುವಿನ ಮೇಲೆ (ಕುಪ್ಪಾಅ. ೫-೭) ; ಬೀಱುತಿರ್ದವು ನಯಸರವ ಮದವೇಱಿದೆಳೆಗೋಗಿಲೆಗಳೊಳು ನುಡಿದೋಱುತಿರ್ದವು ರಾಜಕೀರ (ಶೂರರಾ. ೫-೧-೩೯).

[ನಯ$_1$ + ಸರ$_2$]

ನಯಸಾಣೆ (ನಾ). ನಂಣುಪಾಗುವಂತೆ ಮಾಡುವುದಕ್ಕಾಗಿ ಉಜ್ಜುವಿಕೆ ; ಸಾಣೆಕಲ್ಲಿನಿಂದ ನಯ ಮಾಡಿದ ಸ್ಥಿತಿ : ಬೆಳ್ಳಕ್ಕದ ತುಂಬುವೆಱೆ ಗಳನೊಟ್ಟಿಸಿ ಮೂಸೆಯೊಳಿಟ್ಟು ತಿದಿಯೊತ್ತಿ ಕರಗಿಸಿಯುಂ . . . ನಯಸಾಣೆ ವಿಡಿದುಂ ಸಮೆದುದೆಂಬಂತಿರೆ ತಟತಟನೆ ಪೊಳೆದು ಬಿತ್ತರಂಬಡೆದ ಬಿದುಗಲ್ಲ ಸುತ್ತಣ ಮೆಟ್ಟಡಿಯಿರ (ರಾಮಾಶ್ವ. ೫೨-೧೭). [ನಯ$_1$ + ಸಾಣೆ]

ನಯಸಾಧ್ಯ (ನಾ). ಒಳ್ಳೆಯ ಮಾತಿನಿಂದ ವಶನಾಗುವವನು ; ಸಾಮೋಪಾಯಕ್ಕೆ ವಶನಾಗುವವನು : ವನಜಲಕೇಳಿ ಯರ್ಥಿಯೊಡೆಯಂ ನಯಸಾಧ್ಯನಧೋವಲೋಕನಂ . . . ಕುಬ್ಜತರೀರಿ ಕುಳೀರಸಂಭವಂ (ಜಾತತಿ. ೧೭-೪). [ನಯ$_2$ + ಸಾಧ್ಯ]

ನಯಹೀನ (ನಾ). ೧. ವಿವೇಕಶೂನ್ಯನಾದವನು ; ಅವಿವೇಕಿ : ನಯಹೀನನಾದ ನರನಾಥನಾಳುವ ನಾಡು ದಯೆಯಿಲ್ಲದಾ ತಪಸಿ ಮಾಡುವ ತಪಂ . . . ಲಯಮಾಗದೇ (ಸಮ್ಯಕ್ತ್ವ. ೪-೦೪). ೨. ಸೌಜನ್ಯವಿಲ್ಲದವನು ; ಸಭ್ಯತೆಯಿಲ್ಲದವನು : ನಯಹೀನರ್ಪಡಿದೊತ್ತಿ ಕೆನ್ನೆವರೆಗಂ ಕರ್ಣಂಗಳಂ ಕೊಯ್ದು ನಿರ್ದಯದಿಂ ಪೀಡಿಸಿ (ಸುಕುಮಾ. ೬-೨೯).

[ನಯ$_2$ + ಹೀನ]

ನಯಾಂಕವಚಸ್ಕ (ನಾ). ರಾಜನೀತಿಯನ್ನು ಅರಿತ ಮಾತುಗಾರ : ಸಮದರ್ಶಿ ಸದ್ಗುಣಯುತಂ ಸತ್ಕೀರ್ತಿಯುಕ್ತಂ ನಯಾಂಕವಚಸ್ಕಂ ಪತಿಮೋಹಿನಾಮದಿನಲಂಪಿಂ ಮಂತ್ರಿಪಂ ರಂಜಿಪಂ (ರಾಜಶೇ. ೬-೨೨).

[ಸಂ.]

ನಯಾಗಮ (ನಾ). ನೀತಿಶಾಸ್ತ್ರ : ಮತಿಹೀನರಪ್ಪ ಮನುಜರ್ ಪತಂಗ ವೃತ್ತಿಯನೆ ಕೊಂಡು ಕೊನೆಯುತ್ತಿರ್ಪರ್ ಸತತಮದೆಂತುಂ ವಿಬುಧ ಪ್ರತತಿಗನಿಷ್ಟಂ ನಯಾಗಮಕ್ಕೆ ವಿರುದ್ಧಂ (ಪಂಚತಂ. ೨೦೭-೪).

[ನಯ$_2$ + ಆಗಮ]

ನಯಾನುಗಾಮಿ (ನಾ). ರಾಜನೀತಿಗೆ ಅನುಗುಣವಾಗಿ ನಡೆಯುವವನು, ವರ್ತಿಸುವವನು : ನಯಾನುಗಾಮಿಗಳು ದೇಶ ಕಾಲಾವಸ್ಥೆಗಳನ್ನು ನೋಡಿ ತಾನೇ ಕಾರ್ಯವನ್ನು ತೋರಿಸುವುದು (ಭಾಸನಾ. ೪೩).

[ಸಂ. ನಯಾನುಗಾಮಿನ್]

ನಯಾನ್ವಿತ (ನಾ). ನೀತಿಯಿಂದ ಕೂಡಿರುವವನು : ರಾಜನೀತಿನಿಪುಣ : ನಯಮೆಸೆಯೆ ನೆಗೆಟ್ಟ ಶಕ್ತಿತ್ರಯದೊಳ್ ಪ್ರಭುಶಕ್ತಿ ಎಸೆವವೋಲೆಸೆದಂ ತತ್ಪ್ರಿಯತನಯ[ಮ್ಮೂರ್]ವರೊಳಂ ನಯಾನ್ವಿತಂ ಕಾಳಿದಾಸದಣ್ಣಾ ಧೀಶ[ಂ] (ಕಇಅ. ೩-೨-೭೦ ; 1058). [ನಯ$_2$ + ಅನ್ವಿತ]

ನಯಿಂದ 'ನಾವಿದ$_1$' ನೋ.

ನಯಿಸು (ಕ್ರಿ). ಮಾಡು ; ಯೋಜಿಸು (?) : ಜಾಯೆ ನಿಜವಲ್ಲಭನಂ ರತಿಕೇಳಿಯೊಳ್ ಮನಂಬಯಸಿದ ಹಾಗೆ ತರ್ಜನ ವಿಡಂಬನ ಗರ್ಹಣ ತಾಡನಾದಿಯಂ ನಯಿಸಲ್ ಅದೇಂ ವಿರೋಧವೋ (ಶತಕ. ೬೮).

[ನಯ$_2$ + – ಇಸು$_3$]

ನಯೀತಾಲೀಂ (ನಾ). ಹೊಸ ಶಿಕ್ಷಣ ಪದ್ಧತಿ ; ಕ್ರಿಯಾತ್ಮಕಶಿಕ್ಷಣ ; ಮೂಲಶಿಕ್ಷಣ : ಮಹಾತ್ಮಾಗಾಂಧಿಯವರು ಕ್ರಿಯಾತ್ಮಕಶಿಕ್ಷಣಪದ್ಧತಿ ಯನ್ನು (Basic Education) ಏರ್ಪಡಿಸಿದರು . . . ಅದನ್ನು "ನಯೀತಾಲೀಂ" ಎಂದು ಕರೆದರು (ಕ್ರಿಯಾಶಿ. ೧೫೫).

[←ಹಿಂ. ನಯೀತಾಲೀಮ್]

ನಯುತ (ನಾ). [ಜೈನ] ಕಾಲಗಣನೆಯ ಅಪರಿಮಿತವಾದ ಒಂದು ಪರಿಮಾಣ,–ಅವಧಿ : ಹದಿನೈದು ದಿನಗಳಿಂದ ಒಂದು ಪಕ್ಷವು, ಎರಡು ಪಕ್ಷಗಳಿಂದ ಒಂದು ಮಾಸವು, ಎರಡು ಮಾಸಗಳಿಂದ ಒಂದು ಋತುವು, ಮೂರು ಋತುಗಳಿಂದ ಒಂದು ಅಯನವು, ಎರಡು ಅಯನಗಳಿಂದ ವರುಷವು, ಇದು ವರುಷಗಳಿಂದ ಯುಗವು, ಎಂಬತ್ತುನಾಲ್ಕುಲಕ್ಷ ವರುಷಗಳಿಂದ ಪೂರ್ವಾಂಗವು, ಎಂಬತ್ತುನಾಲ್ಕುಲಕ್ಷ ಪೂರ್ವಾಂಗಗಳಿಂದ ಒಂದು ಪೂರ್ವವು, ಎಂಬತ್ತುನಾಲ್ಕು ಪೂರ್ವಗಳಿಂದ ನಯುತಾಂಗವು, ಎಂಬತ್ತುನಾಲ್ಕುಲಕ್ಷ ನಯುತಾಂಗಗಳಿಂದ ನಯುತವು (ಜೈನಪ. ೩೦೬).

[ಸಂ.]

ನಯುತಾಂಗ (ನಾ). [ಜೈನ] ಕಾಲಗಣನೆಯ ಅಪರಿಮಿತವಾದ ಒಂದು ಅವಧಿ : ಎಂಬತ್ತುನಾಲ್ಕುಲಕ್ಷ ವರುಷಗಳಿಂದ ಪೂರ್ವಾಂಗವು, ಎಂಬತ್ತು ನಾಲ್ಕು ಲಕ್ಷ ಪೂರ್ವಾಂಗಗಳಿಂದ ಒಂದು ಪೂರ್ವವು, ಎಂಬತ್ತುನಾಲ್ಕು ಪೂರ್ವಗಳಿಂದ ನಯುತಾಂಗವು, ಎಂಬತ್ತುನಾಲ್ಕುಲಕ್ಷ ನಯುತಾಂಗಗಳಿಂದ ನಯುತವು (ಜೈನಪ. ೩೦೬). 'ನಯುತ' ಪರಾ. [ನಯುತ + ಅಂಗ$_2$]

ನಯೋಕ್ತಿ (ನಾ). ವಿನಯದಿಂದ ಕೂಡಿದ ನುಡಿ : ಹಗಲು ಕತ್ತಲೆ ಯಹುದು ಕತ್ತಲೆ ಹಗಲಹುದು ತಾನಿದುವೆ ಸಲೆ ಸೋಜಿಗವಲಾ ನೀ ನೋಡಿಕೋಯೆಂದರು ನಯೋಕ್ತಿಯಲಿ (ಶೂರರಾ. ೬-೧೨-೩).

[ನಯ$_2$ + ಉಕ್ತಿ]

ನಯೋದಯ (ನಾ). ರಾಜನೀತಿಯ ಏಳಿಗೆ,–ವೃದ್ಧಿ : ಜಯಮೊಡ ವುಟ್ಟಿದುದು ನಯೋದಯಮೊಡವಳೆದುದು ವಿಳಾಸಮೊಡನಾಡಿದುದನ್ವಯ ದೊದವು ತಾಯುಮಂ ತಂದೆಯುಮಂ ತಣ್ಪಿದುದು (ಶಾಂತಿಪು. ೧-೭೮).

[ನಯ$_2$ + ಉದಯ]

ನರ$_1$ 'ನರವು' ನೋ.

ನರ$_2$ (ನಾ). ೧. ಮನುಷ್ಯ ; ಮಾನವ ; ಪುರುಷ : "ಮನುಷ್ಯಃ, ಮಾನುಷಃ, ಮರ್ತ್ಯಃ . . . ಪೂರುಷಃ, ವಿಟ್ – ಈ ೧೨ ಮಾನಸರ್" (ಹಲಾಯು. ೫೫-೧೭೬) ; ನರಖಚರನಿಶಾಚರರಾದರದಿಂ ಬೆಸಕೆಯ್ಯೆ (ನೇಮಿಪು. ೧೪-೮೨) ; ವ್ಯಾಧನೊಂದು ಮೊಲನ ತಂದರೆ ಸಲಂದ ಹಾಗಕ್ಕೆ ಬಿಲಿವರಯ್ಯಾ . . . ಮೊಲನಿಂದ ಕರಕಷ್ಟ ನರನ ಬಾಳುವೆ (ಬಸವ. ೧೫೮) ; ದುಗ್ಧೋದಧಿತಲ್ಪನಂ ನರನಭಿಷ್ಟುತಿಗೆಯ್ವುದು ಧಾರ್ಷ್ಟ್ಯಮಲ್ಲವೇ (ಜಗವಿ. ೧-೨೦); ನರಕರಿತುರಗವರೂಥೋತ್ಕರ ಸರಭಸಗಮನದಿನೊಗೆವ ರೇಣುವ್ರಜ ಮಂಬರದತ್ತಭಿಮುಖಮಾಗುತ್ತಿರೆ (ಕುಸುಮಾ. ೪-೦೦೩) ; ನರರನ್ಯರಿಲ್ಲಾ ಮತ್ತು ಮಂಥರೆಯ ಲೋಕಕ್ಕೆ (ಶ್ರೀರಾಮಾ. ೨೭-೭೦೭). ೨. ಅರ್ಜುನನ

ಹೆಸರುಗಳಲ್ಲಿ ಒಂದು : ನರನಂ ಮುಂ ಕೊಲ್ವೆನಾಂ ಕರ್ಣನನಟ್ಟಿದುದಱಿಂ ಕೊಲ್ವೆನಾ ಭೀಮನಂ ಸಂಗರದೊಳ್ / ನೀಳ್ದೊಟ್ಟ ದುಶ್ಶಾಸನನಟಲನದಂ ನೀಗುವೆಂ (ಪಂಪಭಾ. ೦೩-೨೧) ; ನರನುಂ ನಾರಾಯಣನುಂ ಪರಿಸಿ ಲೆಂದೆನುತುಮಿರ್ವುದೀ ಧರೆ (ನೇಮಿಪು. ೧೧-೦೩೮) ; ನರ ಕೂರಂಬಿನಲೆಚ್ಚ ಅವಂಗೊಲಿದೆಯಯ್ಯಾ (ಬಸವ. ೬೩). ೫. ಒಬ್ಬ ಋಷಿಯ ಹೆಸರು ; P ಸ್ವಾಯಂಭುವ ಮನ್ವಂತರದಲ್ಲಿ ಧರ್ಮಮುನಿಯ ಇಬ್ಬರು ಪುತ್ರರಲ್ಲಿ ಹಿರಿಯವ. ವಿಷ್ಣು ಹಿರಣ್ಯಕಶಿಪುವನ್ನು ಸಂಹರಿಸಿದ ಬಳಿಕ ಆತನ ಸಿಂಹರೂಪ ನಾರಾಯಣನಾಗಲು,ವಂನಂಷ್ಯರೂಪ ನರನೆಂದು ಪ್ರಖ್ಯಾತಿಗೊಂಡಿತಂ. 'ನರನಾರಾಯಣಾಶ್ರಮ' ಪರಾ. ೪. ಒಬ್ಬ ಮನುಷ್ಯನ ಅಳತೆ; ಒಬ್ಬ ಪುರುಷನ ಎತ್ತರ. ೫. (?) : ನರನಾಗ ಶೈಲಸಪ್ತಂ ಪಡುರುತು ಕರಟಾಣ ಕರಧಿವಾರುಧಿ ಮತ್ತಾ ಅನಲಾಗ್ನಿ ನಯನರೋಚನ ಹಿಮಕರ ಶಶಿಯನ್ನು ನಿಧಿಯೊಳುಳಿವದು ಮತ್ತಾ (ಧಾಸ್ಕರ. ೪೪-೩). [ಸಂ.]

ನರಂ 'ನರಮ್' ನೋ.

ನರಂಜಿಬಳ್ಳಿ (ನಾ). ಒಂದು ಬಗೆಯ ಬಳ್ಳಿ : ನರಂಜಿಬಳ್ಳಿ, ಹಸಾರಾಣಿ ಬಳ್ಳಿ, ಭೂಚಕ್ರ ಬಳ್ಳಿ (ಕ್ಯುಕಿಗಿ. ೪೪-೪೪೪). [ನರಂಜಿ + ಬಳ್ಳಿ]

ನರಕ (ನಾ) ೧. ಪಾಪ ಮಾಡಿದವರನ್ನು ಮರಣಾನಂತರ ಯಮಲೋಕದಲ್ಲಿ ಶಿಕ್ಷೆಗೆ ಗುರಿಪಡಿಸುವ ಸ್ಥಳವೆಂದು ಭಾವಿಸಲಾದ ಲೋಕ; ಯಮಧರ್ಮರಾಯನ ಆಳ್ವಿಕೆಗೊಳಗಾಗಿದೆಯೆಂದು ನಂಬಲಾದ ಲೋಕ; ಅಧೋಲೋಕ ; P ಸ್ವರ್ಗ ಭೂಮಿಯಂ ಮೇಲ್ಭಾಗದಲ್ಲೂ ನರಕ ಭೂಮಿಯಂ ಕೆಳಭಾಗದಲ್ಲೂ ಇದೆ ಎಂಬ ನಂಬಿಕೆ ಇದೆ. ಇಲ್ಲಿ ಕೊಡುವ ಶಿಕ್ಷೆಗಳ ವಿವರದಿಂದ ಜನರು ಪಾಪಕ್ಕೆ ಹೆದರುತ್ತಾರೆಂದು ಜನಸಾಮಾನ್ಯರ ನಂಬಿಕೆ. ವಂಖ್ಯವಾದ ೨೮ ನರಕಗಳನ್ನು ಇಲ್ಲಿ ಹೆಸರಿಸಿದೆ. ಇವುಗಳ ಹೆಸರು ವಂತ್ತು ಸಂಖ್ಯೆಗಳ ವಿಷಯದಲ್ಲಿ ಆಕರ ಗ್ರಂಥಗಳಲ್ಲಿ ವ್ಯತ್ಯಾಸವು ಕಂಡುಬರಂತ್ತದೆ. ೧. ತಾಮಿಸ್ರ. ೨. ಅಂಧ ತಾಮಿಸ್ರ. ೩. ರೌರವ. ೪. ವಂಹಾರೌರವ. ೫. ಕುಂಭಿಪಾಕ. ೬. ಕಾಲಸೂತ್ರ. ೭.ಅಸಿಪತ್ರವನ. ೮. ಸೂಕರವದಂಖ. ೯. ಅಂಧ ಕೂಪ. ೧೦. ಕೃಮಿಭೋಜನ. ೧೧. ಸಂದಂಶ. ೧೨. ತಪ್ತ ನೂರ್ಮಿ ೧೩. ವಜ್ರಕಂಟಕ. ೧೪. ಶಾಲ್ಮಲಿ. ೧೫. ವೈತರಣಿ. ೧೬. ಪೂಯೋದ ೧೭.ಪ್ರಾಣರೋದ. ೧೮.ವಿಶಸನ. ೧೯.ಲಾಲಾಭಕ್ಷ್ಯ. ೨೦.ಸಾರಮೇಯಾದನ. ೨೧. ಅವೀಚಿ. ೨೨. ಅಯಃಪಾನ. ೨೩. ಕ್ಷಾರಕರ್ದಮ. ೨೪. ರಕ್ಷೋಗಣಭೋಜನ. ೨೫. ಶೂಲಪ್ರೋತ. ೨೬. ದಂಶಶೂಕ. ೨೭. ಪರ್ಯಾವರ್ತನ. ೨೮. ಸೂಚೀಮುಖ: "ನಿರಯಃ, ದುರ್ಗತಿಃ–ಈ ೨ ನರಕಂ" (ಹಲಾಯು. ೦೦೩-೩) ; ನರಕವ್ಯಾವರ್ಣನೆಯನಾ ಭಾರರಿಂತೆಂದು ಪೇಟ್ದುದಂ ಕೇಳ್ದೆಂ (ವಡ್ಡಾ. ೦೫೬-೦೨) ; ನರಕದೊಳೆಯ್ದಿದ ದುಃಖಾಂತರಮಂತದು ಬಗೆವೊಡಾರ್ಗಗುರ್ವಲ್ತೆ (ಅದಿಪು. ೯-೪೭) ; ನರಕ ದೊಳಡಿಗಡಿಗೆ ಮಹಾದುರಿತದ ಫಲದಿಂದೆ ಬರ್ದು ನವೆವರ್ (ಧರ್ಮಾಮೃ. ೧೪-೦೩೮) ; ಅಚಾರವೆ ಸ್ವರ್ಗ ಅನಾಚಾರವೇ ನರಕ (ಬಸವ. ೩೩೯) ; ನರಕದ ವಿಚಿತ್ರದುಃಖೋತ್ಕರಮಂ ತಾವುಣುತುಮಿದಿರುಮಂ ಬಾಧಿಸುವರ್ (ಅರ್ಧಪು. ೧೧-೩೩)' ; ಹಿಂಸಾವರನ ಹಿಸುಣನ ತಣನ ಕೃಪಣನ ನರಕವಾಗಲಿ ಕೊಲ್ಲದಿದ್ದರೆ ನಾಳೆ ಸೈಂಧವನ (ಕಾಪ್ಕಾಮ್ಕೂ. ೪-೩೭); ರಾಜರಾದವರೆಲ್ಲರೂ ನರಕವನ್ನು ನೋಡಲೇಬೇಕು (ವಡಭಾ. ೩೯೦). ೨. ಪಾಪ ಮಾಡಿದವರಂ ಮರಣಾನಂತರ ವರಕಲೋಕದಲ್ಲಿ ಅನುಭವಿಸುವ ದಂಡನೆ.–ಶಿಕ್ಷೆ : ನರಕವ ಮುನ್ನಲುಂಡು ಬರಿದಾಗಿಹ ಧರ್ಮವನೆಯ್ದಿರ್ವ ಭೂಸುರರುಂ (ನನ್ನಭಾ. ೬-೦೯೩). ೩. ಒಬ್ಬ ರಾಕ್ಷಸನ ಹೆಸರು ; P ವರಾಹಾವತಾರ ಮಾಡಿದ ವಿಷ್ಣುವಿನ ಬೆವರಂ ಭೂಮಿಯಂ ಮೇಲೆ ಬೀಳಲು ಅಲ್ಲಿ ಜನಿಸಿ, ಪ್ರಾಗ್ಜ್ಯೋತಿಷ ಪಟ್ಟಣದಲ್ಲಿ ರಾಜನಾಗಿದ್ದನು. ಕೊನೆಗೆ ಕೃಷ್ಣನಿಂದ ಸಂಹಾರವಾದನಂ : ನರಕನಾತಂ . . . ದಶಾಸ್ಯಾದಿಗಳಂ ಬಲಾಧಿಕಂ (ಜಗವಿ. ೧-೬೯). 'ನರಕವಂದನೆ' ಪರಾ. ೪. [ಜೈನ] ನರಕ, ತಿರ್ಯಂಚ, ವಂನಂಷ್ಯ ಮತ್ತು ದೇವ ಎಂಬ ಚತುರ್ಗತಿಗಳಲ್ಲಿ ಒಂದು : ನರಕಾದಿ ಚತುರ್ಗತಿಯೊಳ್ ಬಿರಸಿದ ಜೀವಸ್ವರೂಪ ಭೇದಮನಾ ಜನವರಂ . . . ವೇಟುತ್ತಿರ್ದಂ (ಜಕಥಪು. ೧೬-೩೭೭). ೫. [ಜೈನ] ರತ್ನಪ್ರಭೆ, ಶರ್ಕರಾಪ್ರಭೆ, ವಾಲುಕಾಪ್ರಭೆ, ಪಂಕಪ್ರಭೆ, ಧೂಮಪ್ರಭೆ, ತಮಃಪ್ರಭೆ ಮತ್ತು ಮಹಾತಮಃಪ್ರಭೆ ಎಂಬ ಏಳು ನರಕಗಳು : ಏಬನೆಯಾ ನರಕದಾ ಪುಟು ಅಕು(ಕ್ಕು)ಮ್ (ಇಆ. X, ೭೦-೪ : ೮೭೩) ; ಏಬೆಂಬ ನರಕಮಾವುದೊ ವೇಱೆಂಬ ದುರಂತದುಃಖದೊಳ್ ಕೇಳಿಸಿ ನಿಂದೇಟುಂ ಶರೀರಧಾತುಗಳೇಟಾಂ ನರಕಂಗಳವೞ್ಗೊಳೇ ಗುಂದದವೋಲ್ (ಅಜಿಪು. ೨-೫೪) ; ನರಕಗತಿಯಲ್ಲಿ ರತ್ನಪ್ರಭೆ . . . ಮಹಾತಮಪ್ರಭೆಯೆಂದೇಟುಂ ನರಕಂಗಳ್ಕುಂ (ಪಸಾಕ. ೧೪೭). ೬. (ಆಲಂ) ಅವೇಧ್ಯ : ನರಕದ ನೆಲೆ ವೇಸಿಕೆಗಳ ಕರು ಮಸಣದ ಪುಟ್ಟು ಪಾಪದೆಜ್ಜೆ ಪಾತಕದಾಗರಮದು ನೆನೆವರ್ಗೆ ಭಯಂಕರವತಿಪಾಪಕರ ಮಾದುದುದ್ವೇಗಕರಂ (ಶಾದಂಗ. ೭೪೬). ೭. ದುಃಖ ; ಯಾತನೆ ; ಕ್ಲೇಶ : ನಾಲ್ಕುಗೋಡೆಗಳ ಮಧ್ಯದಲ್ಲಿ ನಾನು ಕಂಡ ನರಕದ ಅರಿವು ಈ ಬಾಹ್ಯ ಪ್ರಪಂಚಕ್ಕಿದೆಯೇ ? (ಶಾವೀರ. ೧೯೩). [ಸಂ.]

ನರಕಂಬಾಗು, ನರಕಂಬೊಗು (ಕ್ರಿ). ನರಕವನ್ನು ಪ್ರವೇಶಿಸು ; ನರಕಕ್ಕೆ ಹೋಗು.–ಸೇರು : ದೀಗಂ ನರಕಂಬಾಗಲ್ವೇಡಿರ್ದ ಜೀವಮುಮಂ ಅಭವ್ಯನಪ್ಪ ಜೀವನುಮಂ ಪರಮಾಗಮಮೆನಿತು ಲೇಸಾಗಿಯುಂ ಸೋಲಿಸಲಾಜದು (ಧರ್ಮಾಮೃ. ೭-೬೭) ; ಎನಗಱ್ [ವಂತಿರೆ ಧರ್ಮಮನಱ್] ಪಸಮುದ್ಧರಿಸದರಲ್ಲದೊಡೆ ಮಗುಬೆ ನರಕಂಬಾಗೆನೇ (ಪರ್ಧಪು. ೧೨-೨೮) ; ನರಕಂಬಾಗಲ್ಕೆ ತಡೆಯೈ ಮಾಯಾವಿಯುವ್ಪಾತ್ಮನೇ (ಜೀವಸಂ. ೦೪೭-೭೮). ನರಕಂಬೊಗು : ಸ್ಕಂದಕುಮಾರನೆಂಬ ರಿಸಿ . . . ತನ್ನ ಶರೀರಮುಮಂ ಭಸ್ಮಂ ಮಾಡಿ ಸುಟ್ಟು ಸತ್ತೇಬನೆಯ ನರಕಂಬೊಕ್ಕಂ (ವಡ್ಡಾ. ೧೪೦-೧೪) : ನರಕಂಬೊಕ್ಕ ಪಂಚಮಹಾಪಾತಕನಕ್ಕು (ನೌಇಇ. XX, ೪೯-೫೦ ; 1044) : ದುರಿತೋದಯದಿಂ ನರಕಂಬೊಗಲಿರ್ದವರುಂ ಪರಕ್ರಿಯಂ ಕಾಣರ್ (ಧರ್ಮಾಮೃ. ೪-೪೩೪). [ನರಕ + ಪುಗು]

ನರಕಂಬೊಗು 'ನರಕಂಬಾಗು' ನೋ.

ನರಕಕರ್ಮ (ನಾ). ದುರ್ಗತಿಯನ್ನುಂಟುಮಾಡುವ ಕೆಲಸ ; ನರಕವಾಸವನು ತರುವ ಕೃತ್ಯ.– ಕಾರ್ಯ ; ಪಾಪಕೃತ್ಯ : ನರಕಕರ್ಮವ ಮಾಡಿ ಇಹದೊಳು ದುರಿತಭಾಜನನಾಗಿ ಕಡೆಯೊಳು ನರಕ ಬಾಹಿರನಾಗಿ (ಕುವಾಳೀ. ೩-೪೯). [ನರಕ + ಕರ್ಮ]

ನರಕಕುಂಡ (ನಾ). ನರಕದಲ್ಲಿ ಪಾಪಿಗಳನ್ನು ಶಿಕ್ಷಿಸುವುದಕ್ಕಾಗಿ ಇರುವು ದೆಂದು ಭಾವಿಸಲಾದ ಕುಣಿ,– ಕಂಡಿ.–ಘೋರವಾದ ಯಾತನೆಯ ಸ್ಥಳ ; P ಇವು ಅನೇಕವಾಗಿವೆ. ಬೇರೆ ಬೇರೆ ಪುರಾಣಗಳಲ್ಲಿ ಬೇರೆ ಬೇರೆ, ಹೆಸರುಗಳಿಂದ ವರ್ಣಿತವಾಗಿವೆ. ಕಾಲಕಾಲಕ್ಕೆ ನರಕಸಂಖ್ಯೆಗಳೂ ಅವುಗಳ ವಿವರಗಳೂ ಬೆಳೆಯುತ್ತ ಹೋಗಿರ ಬಹುದಂ ಮತ್ತು ಇವಕ್ಕೆ ಚಾರಿತ್ರಿಕ ಹಿನ್ನೆಲೆಯಿರಬಹುದಂ. ಬ್ರಹ್ಮಕೈವರ್ತಪುರಾಣದಲ್ಲಿ ಎಂಬತ್ತಾರಂ ಕುಂಡಗಳ ಹೆಸರುಗಳು ವಂತ್ತು ಯಾವ ಯಾವ ಪಾಪಿಯು ಯಾವ ಯಾವ ಕುಂಡದಲ್ಲಿ ದಂಡನೆಯನ್ನನುಭವಿಸುವನೆಂಬುದಂ ನಿರೂಪಿತವಾಗಿದೆ. ೧. ವಹ್ನಿಕುಂಡ–ಕೆಟ್ಟ ಮಾತುಗಳನ್ನಾಡುತ್ತಾ ನೆಂಟರಿಷ್ಟರ ಹೊಟ್ಟೆ ಯುರಿಸುವವನು. ೨. ತಪ್ತಕುಂಡ–ಬ್ರಾಹ್ಮಣರಿಗೂ ಅತಿಥಿಗಳಿಗೂ ಅನ್ನ ಹಾಕದವನು. ೩. ಕ್ಷಾರಕುಂಡ–ನಿಷಿದ್ಧ ದಿನಗಳಲ್ಲಿ ಬಟ್ಟೆಗೆ ಚೌಳಂಪ್ಪು

ಹಾಕಿ ಒಗೆಯುವವನು. ೪. ವಿಟ್ಕುಂಡ-ಹಿಂದಿನವರು ಬ್ರಾಹ್ಮಣರಿಗೆ ಕೊಟ್ಟಿದ್ದ ವೃತ್ತಿಗಳನ್ನು ಅಪಹರಿಸುವವನು. ೫. ಮೂತ್ರಕುಂಡ-ಬೇರೆಯವರು ಕಟ್ಟಿಸಿದ ಕೆರೆಗಳನ್ನು ಒಡೆದುಹಾಕುವವನು. ೬. ಶ್ಲೇಷ್ಮಕುಂಡ-ಒಬ್ಬನೇ ಮೃಷ್ಟಾನ್ನ ಭೋಜನ ಮಾಡುವವನು. ೭. ಗರಕುಂಡ-ತಾಯಿ-ತಂದೆ, ಹೆಂಡತಿ-ಮಕ್ಕಳನ್ನು ಸಾಕದಿರುವವನು. ೮. ದೂಷಿಕಾಕುಂಡ-ಅತಿಥಿಗಳನ್ನು ವಕ್ರದೃಷ್ಟಿಯಿಂದ ನೋಡುವವನು. ೯. ವಸಾಕುಂಡ-ಒಬ್ಬನಿಗೆ ದಾನವಮಾಡಿ ಅದನ್ನೇ ಮತ್ತೊಬ್ಬರಿಗೂ ದಾನಮಾಡುವವನು. ೧೦. ಶುಕ್ರಕುಂಡ-ಜಾರ ಮತ್ತು ಜಾರಿಣಿ. ೧೧. ಅಸೃಕ್ಕುಂಡ-ಗುರುಹಿರಿಯರನ್ನು ಹೊಡೆದು ರಕ್ತಬರಿಸುವವನು. ೧೨. ಅಶ್ರುಕುಂಡ-ಭಗವಂತನ ಸ್ತೋತ್ರಗಳನ್ನು ಹಾಡುತ್ತ ಬಾಷ್ಪಗದ್ಗದಕಂಠನಾಗುವ ಭಕ್ತನನ್ನು ಗೇಲಿಮಾಡುವವನು. ೧೩. ಗಾತ್ರಮಲಕುಂಡ-ಕೊಳಕು ಮನಸ್ಸಿನವನು. ೧೪. ಕರ್ಣವಿಟ್ಕುಂಡ-ಕಿವುಡರನ್ನು ಲೇವಡಿ ಮಾಡುವವನು. ೧೫. ವಂಜ್ಯಕುಂಡ-ತನ್ನ ಹೊಟ್ಟೆಗಾಗಿ ಪ್ರಾಣಿಹಿಂಸೆ ಮಾಡುವವನು. ೧೬. ಮಾಂಸಕುಂಡ-ಹಣಕ್ಕಾಗಿ ಹೆಂಗಸನ್ನು ಮಾರುವವನು. ೧೭. ನಖಿಕುಂಡ ಮತ್ತು ೧೮. ಲೋಮಕುಂಡ-ಶ್ರಾದ್ಧ ಮತ್ತು ಉಪವಾಸ ದಿನಗಳಲ್ಲಿ ಜಿತೇಂದ್ರಿಯನಾಗದಿರುವವನು. ೧೯. ಕೇಶಕುಂಡ-ಕೂದಲು ಸೇರಿರುವ ಮಣ್ಣಿನಿಂದ ಮಾಡಿದ ಪಾರ್ಥಿವ ಲಿಂಗವನು ಪೂಜಿಸುವವನು. ೨೦.ಅಸ್ಥಿಕುಂಡ-ಗಯೆಯಲ್ಲಿ ವಿಷ್ಣುಪಾದದಲ್ಲಿ ಪಿತೃಗಳಿಗೆ ಪಿಂಡಹಾಕದವನು. ೨೧. ತಾಮ್ರಕುಂಡ-ಗರ್ಭಿಣಿಯೊಂದಿಗೆ ಬೆರೆಯುವವನು. ೨೨. ಲೌಹಕುಂಡ-ಮಂಟ್ಟುನೀರು ಹಾಕಿಕೊಂಡ ದಿನ ಆ ಹೆಂಗಸಿನ ಮತ್ತು ಪತಿ-ಪುತ್ರರಿಲ್ಲದ ಹೆಂಗಸಿನ ಕೈಯ್ಯಲ್ಲಿ ಊಟಮಾಡುವವನು. ೨೩. ತೀಕ್ಷ್ಣಕಂಟಕಕುಂಡ-ಕಠೋರವಾದ ಮಾತುಗಳಿಂದ ಗಂಡನನ್ನು ಮೂದಲಿಸುವವಳು. ೨೪. ವಿಷಕುಂಡ-ವಿಷ ಕೊಟ್ಟು ಜನರನ್ನು ಕೊಲ್ಲುವವನು. ೨೫. ಧರ್ಮಕುಂಡ-ಬೆವರುಕೈಯ್ಯಿಂದ ದೇವರ ವಸ್ತುಗಳನ್ನು ಮುಟ್ಟುವವನು; ೨೬. ತಪ್ತಸಂರಾಕುಂಡ-ಶೂದ್ರಾನ್ನಭಕ್ಷಕ. ೨೭. ಪ್ರತಪ್ತತೈಲಕುಂಡ-ಕೋಲಿನಿಂದ ಎತ್ತುಗಳನ್ನು ಹೊಡೆಯುವವನು. ೨೮. ಕುಂತಕುಂಡ-ಈಟಿ, ಕಬ್ಬಿಣದ ಆಯುಧ, ಗಾಳ ಮೊದಲಾದುವುಗಳಿಂದ ಪ್ರಾಣಿವಧೆ ಮಾಡುವವನು. ೨೯. ಕ್ರಿಮಿಕುಂಡ-ವಿಷಾನ್ನ ತಿನ್ನುವ ಬ್ರಾಹ್ಮಣ; ಮಾಂಸವನ್ನು ತಿನ್ನುವವನು; ದೇವರಿಗೆ ನೈವೇದ್ಯಮಾಡದೆ ತಿನ್ನುವವನು. ೩೦. ಪೂಯಕುಂಡ-ಶೂದ್ರ ಪೌರೋಹಿತ್ಯ, ಶೂದ್ರಶ್ರಾದ್ಧ, ಶೂದ್ರಾಂತ್ಯಸಂಸ್ಕಾರಗಳಿಂದ ಹೊಟ್ಟೆ ಹೊರೆಯುವವನು. ೩೧. ಸರ್ಪಕುಂಡ-ಕೃಷ್ಣನ ಪಾದ ಚಿಹ್ನೆಯುಳ್ಳ (ನಾಗರ) ಹಾವನ್ನು ಕೊಲ್ಲುವವನು. ೩೨. ಮಷಕಕುಂಡ-ಶಾಸ್ತ್ರನಿಯಮಕ್ಕೆ ವ್ಯತಿರಿಕ್ತವಾಗಿ ಕ್ಷುದ್ರಜಂತುಗಳನ್ನು ಕೊಲ್ಲುವವನು. ೩೩.ದಂಶಕುಂಡ-ಶಾಸ್ತ್ರನಿಯಮಕ್ಕೆ ವ್ಯತಿರಿಕ್ತವಾಗಿ ಪ್ರಾಣಿವಧೆ ಮಾಡುವವನು. ೩೪. ಗರಲಕುಂಡ-ಜೀನುನೊಣಗಳನ್ನು ಕೊಂದು ಜೇನುತುಪ್ಪವನ್ನು ತೆಗೆದುಕೊಳ್ಳುವವನು. ೩೫. ವಜ್ರದಂಷ್ಟ್ರಕುಂಡ-ನಿರಪರಾಧಿಗಳನ್ನೂ ಶ್ರೋತ್ರಿಯರನ್ನೂ ದಂಡಿಸುವವನು. ೩೬. ವೃಶ್ಚಿಕಕುಂಡ-ಹಣದ ಮೇಲಿನ ದುರಾಸೆಯಿಂದ ಪ್ರಜೆಗಳನ್ನು ದಂಡಿಸುವವನು. ೩೭. ಶರಕುಂಡ ಮತ್ತು ೩೮. ಶೂಲಕುಂಡ ಮತ್ತು ೩೯. ಖಡ್ಗಕುಂಡ-ಆಯುಧವನ್ನು ಹಿಡಿಯುವ ಅಗಸ ಹಾಗು ಸಂಧ್ಯಾವಂದನೆ ಮತ್ತು ವಿಷ್ಣುಭಕ್ತಿಗಳಿಲ್ಲದ ಬ್ರಾಹ್ಮಣ. ೪೦. ಗೋಲಕುಂಡ-ಸಣ್ಣ ಪುಟ್ಟ ತಪ್ಪಿಗಾಗಿ ಪ್ರಜೆಗಳನ್ನು ಬಂಧಿಸಿ ಸೆರೆಯಿಡುವ ರಾಜ. ೪೧. ನಕ್ರಕುಂಡ-ನೀರಿನಿಂದ ಮೇಲಕ್ಕೆದ್ದ ಮೊಸಳೆ ಮೊದಲಾದ ನೀರುಪ್ರಾಣಿಗಳನ್ನು ಕೊಲ್ಲುವವನು. ೪೨. ಕಾಕಕುಂಡ-ಕಾಪಂದಿಂದ ಹೆಂಗಸಿನ ಎದೆ, ನಿತಂಬ, ಮುಖಗಳ ಮೇಲೆ ಕಣ್ಣಿಡುವವನು. ೪೩. ಸಂಚಾಲಕಕುಂಡ-ಚಿನ್ನವನ್ನು ಕದಿಯುವವನು. ೪೪. ವಾಜಕುಂಡ-ತಾಮ್ರ, ಕಬ್ಬಿಣ ಮತ್ತು ಉಕ್ಕುಗಳ ಕಳ್ಳ. ೪೫. ವಜ್ರಕುಂಡ-ದೇವತಾಮೂರ್ತಿಗಳ ಮತ್ತು ದೇವರ ಸ್ವತ್ತಿನ ಕಳ್ಳ. ೪೬. ತಪ್ತಪಾಷಾಣಕುಂಡ-ದೇವಬ್ರಾಹ್ಮಣರ ಬೆಳ್ಳಿ, ಗೋವು, ಬಟ್ಟೆಬರೆಗಳ ಕಳ್ಳ. ೪೭. ತೀಕ್ಷ್ಣಪಾಷಾಣ ಕುಂಡ-ದೇವಬ್ರಾಹ್ಮಣರ ಹಿತ್ತಾಳೆ, ಕಂಚು ಪಾತ್ರೆಗಳ ಕಳ್ಳ. ೪೮. ಲಾಲಾಕುಂಡ-ಸೂಳೆಗಾರಿಕೆಗೆ ಅವಕಾಶ ಮಾಡಿಕೊಟ್ಟು ಹೊಟ್ಟೆಹೊರೆಯುವವನು. ೪೯. ಮಸೀಕುಂಡ-ವ್ಲೇಚ್ಛರ ಸೇವೆಯಿಂದ ಜೀವಿಸುವವನು ಮತ್ತು ಬರಹದಲ್ಲಿ ಮೋಸಮಾಡಿ ಜೀವಿಸುವವನು. ೫೦. ಚೂರ್ಣಕುಂಡ-ದೇವ ಬ್ರಾಹ್ಮಣರ ದವಸಧಾನ್ಯ, ತಾಂಬೂಲ, ಆಸನಗಳನ್ನು ಕದಿಯುವವನು. ೫೧. ಚಕ್ರಕುಂಡ-ಬ್ರಾಹ್ಮಣರ ಹಣವನ್ನು ಕದಿಯುವವನು. ೫೨. ವಕ್ರಕುಂಡ-ಬ್ರಾಹ್ಮಣರಿಗೂ ನಂಟರಿಷ್ಟರಿಗೂ ಪ್ರತಿಕೂಲವನ್ನು ಮಾಡುವವನು. ೫೩. ಕೂರ್ಮಕುಂಡ-ಶ್ರೀವಿಂಹಾವಿಷ್ಣು ಪಂಲಗಿರುವಾಗ ಅಂದರೆ ಆಷಾಢಶುದ್ಧ ಏಕಾದಶಿಯಿಂದ ಕಾರ್ತಿಕಶುದ್ಧ ದ್ವಾದಶಿಯವರೆಗೆ ನಾಲ್ಕು ತಿಂಗಳು ಚಾತುರ್ಮಾಸದಲ್ಲಿ ಆವೆಯ ಮಾಂಸವನ್ನು ತಿನ್ನುವ ಬ್ರಾಹ್ಮಣ. ೫೪. ಜ್ವಾಲಾಕುಂಡ ಮತ್ತು ೫೫. ಭಸ್ಮಕುಂಡ-ದೇವ ಬ್ರಾಹ್ಮಣರಿಗೆ ಸೇರಿದ ತುಪ್ಪ, ಎಣ್ಣೆ ಮೊದಲಾದುವನ್ನು ಕದಿಯುವವನು. ೫೬. ದಗ್ಧಕುಂಡ-ದೇವಬ್ರಾಹ್ಮಣರ ನೆಲ್ಲೀಚಟ್ಟು, ಗಂಧ, ಎಣ್ಣೆ ಮೊದಲಾದುವನ್ನು ಕದಿಯುವವನು. ೫೭. ತಪ್ತಶೂರ್ಮಾಕುಂಡ-ಬಲಾತ್ಕಾರದಿಂದ ಇತರರ ಭೂಮಿಯನ್ನು ಆಕ್ರಮಿಸಿಕೊಳ್ಳುವವನು. ೫೮. ಅಸಿಪತ್ರಕುಂಡ-ಹಣದ ದುರಾಸೆಯ ಪರಿಣಾಮವಾಗಿ ಕತ್ತಿ ಮೊದಲಾದ ಆಯುಧಗಳಿಂದ ಜನರ ಪ್ರಾಣವನ್ನು ತೆಗೆಯುವವನು. ೫೯. ಕ್ಷುರಧಾರಕುಂಡ-ಊರು, ಪಟ್ಟಣಗಳನ್ನು ಸುಟ್ಟು ಹಾಕುವವನು. ೬೦. ಸೂಚೀಮುಖಕುಂಡ-ಇತರರ ಕಿವಿಯಲ್ಲಿ ಪಿಸುಗುಟ್ಟಿ ಪರನಿಂದೆ ಮಾಡುವವನು, ಇತರರ ದೋಷಗಳನ್ನು ಎತ್ತಾಡುವವನು. ೬೧. ಗೋಧಾಮುಖಕುಂಡ-ಮನೆಯನ್ನು ಒಡೆದು ಪಾತ್ರೆ ಪರಟಿ, ದನಕರುಗಳು, ಆಡುಕುರಿಗಳನ್ನು ಕದಿಯುವವನು. ೬೨. ನಕ್ರಮುಖಕುಂಡ-ಸಾಮಾನ್ಯವಸ್ತುಗಳನ್ನು ಕದಿಯುವವನು. ೬೩. ಗಜದಂಶಕುಂಡ-ಆನೆ, ಕುದುರೆ, ಆಳುಕಾಳುಗಳ ಕಳ್ಳ. ೬೪. ಗೋಮುಖಕುಂಡ-ಹಸು ನೀರುಕುಡಿಯುವುದನ್ನು ತಪ್ಪಿಸುವವನು. ೬೫. ಕುಂಭೀಪಾಕಕುಂಡ-ಗೋಹತ್ಯೆ, ಸ್ತ್ರೀಹತ್ಯೆ, ಯತಿಹತ್ಯೆ, ಭ್ರೂಣಹತ್ಯೆ, ಬ್ರಹ್ಮಹತ್ಯೆಗಳನ್ನು ಮಾಡಿದವನು; ತಾನು ಬೆರೆಯಲು ಉಚಿತವಲ್ಲದ ಸ್ತ್ರೀಯರೊಂದಿಗೆ ಬೆರೆಯುವವನು; ವ್ರತ, ಸಂಧ್ಯಾವಂದನೆಗಳನ್ನು ಬಿಟ್ಟವನು; ಪುಣ್ಯಕ್ಷೇತ್ರಗಳಲ್ಲಿ ದಾನ ತೆಗೆದುಕೊಳ್ಳುವವನು; ಗ್ರಾಮಪುರೋಹಿತ, ಪೂಜಾರಿ, ಶೂದ್ರರಿಗೆ ಅಡಿಗೆ ಮಾಡಿ ಜೀವಿಸುವವನು; ಋತುಮತೀವಿವಾಹವನ್ನು ಮಾಡಿಕೊಂಡಿರುವವನು. ೬೬. ಕಾಲಸೂತ್ರಕುಂಡ-ಸೂಳೆಯೊಂದಿಗೆ ಬೆರೆಯುವವನು; ಸೂಳೆಯ ಅನ್ನವನ್ನು ತಿನ್ನುವವನು. ೬೭. ಅವಟೋದಕಕುಂಡ-ಕುಲಟೆ ಮೊದಲಾದ ಆರು ಬಗೆಯ ಸೂಳೆಯರನ್ನು ಅನುಭವಿಸುವವನು. ೬೮. ಅರುಂತುದ ಕುಂಡ-ಚಂದ್ರ ಸೂರ್ಯಗ್ರಹಣದಲ್ಲಿ, ನಿಷಿದ್ಧಕಾಲದಲ್ಲಿ ಊಟಮಾಡುವವನು;

೬೯. ಪಾಂಶುಭೋಜಕುಂಡ–ಒಬ್ಬನಿಗೆ ಮಗಳನ್ನು ಕೊಡುವುದಾಗಿ ಮಾತುಕೊಟ್ಟು ಬೇರೊಬ್ಬನಿಗೆ ಮದುವೆ ಮಾಡುವವನು. ೭೦. ಪಾಶವೇಷ್ಟಕುಂಡ–ದತ್ತಾಪಹಾರಿ. ೭೧. ಶೂಲಪೋತಕುಂಡ–ಭಕ್ತಿಯಿಲ್ಲದೆ ಶಿವಲಿಂಗವನ್ನು ಪೂಜಿಸುವವನು. ೭೨. ಪ್ರಕಂಪನ ಕುಂಡ–ಬ್ರಾಹ್ಮಣರನ್ನು ದಂಡಿಸುವವನು, ಅವರಿಗೆ ಭಯವನ್ನುಂಟು ಮಾಡುವವನು. ೭೩. ಉಲ್ಕಾಮುಖಕುಂಡ–ಗಂಡನ ವಿಷಯದಲ್ಲಿ ಮುಖವನ್ನು ಗಂಟುಹಾಕಿಕೊಂಡು ಕಟುವಾಗಿ ಮಾತನಾಡುವವಳು. ೭೪. ಅಕೂಪಕುಂಡ–ಶೂದ್ರನೊಂದಿಗೆ ಬೆರೆಯುವ ಬ್ರಾಹ್ಮಣಿ. ೭೫. ವೇಧನಕುಂಡ–ಐದಾರು ಮಂದಿಯೊಂದಿಗೆ ಸಂಪರ್ಕವಿಟ್ಟುಕೊಂಡಿರುವವಳು; ವೇಶ್ಯೆ; ಸೂಳೆ. ೭೬. ದಂಡತಾಡನಕುಂಡ–ಏಳೆಂಟು ಮಂದಿಯೊಂದಿಗೆ ಸಂಪರ್ಕವಿಟ್ಟು ಕೊಂಡಿರುವವಳು; ರಂಡೆ. ೭೭. ಜಾಲಬದ್ಧಕುಂಡ–ಎಂಟಕ್ಕಿಂತಲೂ ಹೆಚ್ಚು ಜನರೊಂದಿಗೆ ಸಂಪರ್ಕವಿಟ್ಟುಕೊಂಡಿರುವವಳು; ಮಹಾವೇಶ್ಯೆ. ೭೮. ದೇಹಚೂರ್ಣಕುಂಡ–ಇಬ್ಬರೊಂದಿಗೆ ಸಂಪರ್ಕವಿಟ್ಟುಕೊಂಡಿರುವವಳು; ಕುಲಟೆ. ೭೯. ದಲನಕುಂಡ–ನಾಲ್ವರೊಂದಿಗೆ ಸಂಪರ್ಕವಿಟ್ಟುಕೊಂಡಿರುವವಳು; ಸ್ವೈರಿಣಿ. ೮೦. ಶೋಷಣಕುಂಡ–ಮೂವರೊಂದಿಗೆ ಸಂಪರ್ಕವಿಟ್ಟುಕೊಂಡಿರುವವಳು; ಧೃಷ್ಟೆ; ಪುಂಶ್ಚಲಿ. ೮೧. ಕಕ್ಷಕುಂಡ–ತನ್ನ ಜಾತಿಯ ಪರಸ್ತ್ರೀಯೊಂದಿಗೆ ಬೆರೆಯುವವನು. ೮೨. ಸೂರ್ಪಕುಂಡ–ಬ್ರಾಹ್ಮಣಸ್ತ್ರೀಯೊಂದಿಗೆ ಬೆರೆಯುವ ಕ್ಷತ್ರಿಯ ಮತ್ತು ವೈಶ್ಯ. ೮೩. ಜಾಲಾಮುಖಕುಂಡ–ಕೈಯಲ್ಲಿ ತುಲಸಿ, ಗಂಗಾಜಲ, ಸಾಲಿಗ್ರಾಮ ಮೊದಲಾದುವನ್ನು ಹಿಡಿದುಕೊಂಡು ಪ್ರಮಾಣಮಾಡಿ ಅದನ್ನು ನಡೆಸದಿರುವ ಸುಳ್ಳ,-ವಿಶ್ವಾಸಘಾತಕ; ಸುಳ್ಳುಸಾಕ್ಷ್ಯವನ್ನು ಹೇಳುವವನು. ೮೪. ಜಿಹ್ಮಕುಂಡ–ಅವರವರ ಸಂಪ್ರದಾಯದಂತೆ ನಿತ್ಯಕರ್ಮಗಳನ್ನು ಮಾಡದೆ, ದೇವರಸೇವೆಯಲ್ಲಿ ಆಸ್ಥೆಯಿಲ್ಲದೆ ಹುಸಿನಗೆ ನಗುತ್ತಾ ಕಾಲಕಳೆಯುವವನು. ೮೫. ಧೂಮಾಂಧಕುಂಡ–ದೇವಬ್ರಾಹ್ಮಣರ ಹಣವನ್ನು ಕದಿಯುವವನು,–ಕಸಿದುಕೊಳ್ಳುವವನು. ೮೬. ನಾಗವೇಷ್ಟನಕುಂಡ–ವೈದ್ಯರ ಮತ್ತು ಜೋಯಿಸರ ವೃತ್ತಿಯನ್ನು ಕಸಿದುಕೊಳ್ಳುವವನು; ಅರಗು, ಲೋಹ, ಎಣ್ಣೆ ಮೊದಲಾದುವುಗಳನ್ನು ಮಾರಾಟಮಾಡುವ ಬ್ರಾಹ್ಮಣ: ತನ್ನಿಂದಾಗಿ ಮೇರಿ ನರಕಕುಂಡಕ್ಕೆ ಬೀಳುವುದು ಮಾಸ್ತರಿಗೆ ಬೇಡವಾಗಿತ್ತು (ಕಾವೇರಿ. ೧೬೯).

[ನರಕ + ಕುಂಡ$_1$]

ನರಕಕೂಪ (ನಾ). ೧. = ನರಕಕುಂಡ: ಆಗಮ ತಿಳಿಯದೆ ನರಕಕೂಪದಲ್ಲಿ ಬೀಳುವಿರಲ್ಲ (ಪುರಂದ. ೪-೭೦-೨). ೨. (ಆಲಂ) ಹೊಲಸಿನ ಕುಳಿ; ಅಸಹ್ಯದ ಬಿಲ: ಶುಕ್ಲರಕ್ತೋತ್ಕರ ಕರಂಡಂಗಳು ಸದಾ ಪ್ರತ್ಯಕ್ಷಮಾಗಿರ್ದ ನರಕಕೂಪಂಗಳು (ಬಸಪು. ೪೦-೭೦). [ನರಕ + ಕೂಪ$_2$]

ನರಕಕೊಂಡ (ನಾ). = ನರಕಕುಂಡ: ಕಡೆಗೆ ಯಮನ ಕೈಯಲ್ಲಿ ಸಿಲ್ಕಿ ನರಕಕೊಂಡದಲ್ಲಿ ಮುಳುಗೇಳುವುದೇ ನಿಶ್ಚಯ (ವಚಸಂ. ೨೦೮-೬೦).

[< ನರಕಕುಂಡ]

ನರಕಗತಿ (ನಾ). ೧. ನರಕದಲ್ಲಿರುವುದು; ನರಕಕ್ಕೆ ಹೋಗುವುದು; ನರಕಲೋಕವಾಸ: ರವಿಸುತ ವಿಧುಸುತರಲ್ತೆ ನರಕಗತಿಯಂ ಕುಡುವರ್ (ಜಾತತಿ. ೨೬-೨೪); ಆ ಪಾತಕಂ ನರಕಗತಿಗೆಯ್ದುವ ಧೂರ್ತತನದಿಂ ಕುಟಿಲಮಾರ್ಗಾಂತರ್ಗತನಾಗಿ ಪೋಗೆ (ಪಂಚತಂ. ೭೦-೧೯); ರಾಮನಿರ್ಪೀ ಕ್ಷೇಮಭೂಮಿಯನುಳಿಯೆ ಕುಂಭಕರ್ಣನ ಬಾಯ್ಗೆ ಮಿಗಿಲಲಾ ನರಕಗತಿ ನಮಗೆ? (ಶ್ರೀರಾಮಾ. ೬೮೪-೧೬೪). ೨. = ನರಕ ೪: ತೊಡರ್ಪಂ ತೊಡರಿಸುವ ನರಕಗತಿಯೊಳ್ ತೊಡರ್ಪುದೆ ತೊಡರದೆ ಜಿನೇಂದ್ರಮತದೊಳ್ ಹಿತದೊಳ್ (ಅಜಿಪು. ೨-೭೦); ನರಕಗತಿಗಿಟಿವೊಡಂ ನಿರ್ಜರ ನಿಳಯಮನೆಯ್ದಿ ಸುಖಮನುಣ್ಬೊಡಮನ್ಯರ್ ನೆರಮಲ್ಲರ್ (ಧರ್ಮಾಮ್ಯ. ೯-೧೫೮); ನರಕಗತಿ ಸಮಮೆ ತಿರ್ಯಙ್ನರಸುರಗತಿಗಳುಮದಂತೆ ದಲ್ (ಪಾರ್ಶ್ವಪು. ೦೫-೬೨). ೩. [ಜೈನ] ನಿದ್ರಾನಿದ್ರಾ, ಪ್ರಚಲಾಪ್ರಚಲಾ, ಸ್ತ್ಯಾನಗೃದ್ಧಿ, ನರಕಗತಿ, ತಿರ್ಯಗ್ಗತಿ, ಏಕೇಂದ್ರಿಯಜಾತಿ, ದ್ವೀಂದ್ರಿಯಜಾತಿ, ತ್ರೀಂದ್ರಿಯಜಾತಿ, ಚತುರಿಂದ್ರಿಯಜಾತಿ, ನರಕಗತಿ ಪ್ರಾಯೋಗಾನುಪೂರ್ವಿ, ತಿರ್ಯಗ್ಗತಿಪ್ರಾಯೋಗಾನುಪೂರ್ವಿ, ಆತಪ, ಉದ್ಯೋತ, ಸ್ಥಾವರ, ಸೂಕ್ಷ್ಮ ಮತ್ತು ಸಾಧಾರಣ ಎಂಬ ಹದಿನಾರು ಕರ್ಮಪ್ರಕೃತಿಗಳಲ್ಲಿ ಒಂದು; ಇದರ ಉದಯವಾದಾಗ ನರಕರ್ಮ ಹೋಗಿ ನಾರಕೀಯಅವಸ್ಥೆ ಪ್ರಾಪ್ತವಾಗುತ್ತದೆ: ಅಂತರ್ಮುಹೂರ್ತದಿಂ ನಿದ್ರಾನಿದ್ರಾಪ್ರಚಳಾಪ ಚಳಾಸ್ತ್ಯಾನಗೃದ್ಧಿನರಕಗತಿ ತತ್ಪ್ರಾಯೋಗ್ಯಾನುಪೂರ್ವತಿರ್ಯಗ್ಗತಿ ತತ್ಪ್ರಾಯೋಗ್ಯಾನುಪೂರ್ವೇ ಕೇಂದ್ರಿಯ ವಿಕಳೇಂದ್ರಿಯ ಜಾತ್ಯಾ ತಪೋದ್ಯೋತ ಸ್ಥಾವರ ಸಾಧಾರಣ ಸೂಕ್ಷ್ಮಂಗಳೆಂಬ ಪದಿನಾಱುಂ ಕರ್ಮ ಪ್ರಕೃತಿಗಳಂ ನಿರವಶೇಷಂ ಕಿಡಿಸಿ (ಅಜಿಪು. ೧೦-೦೪ ವ); ನರಕಗತಿ ತತ್ಪ್ರಾಯೋಗ್ಯಾನುಪೂರ್ವಿತಿರ್ಯಗ್ಗತಿ . . . ಸ್ಥಾವರ ಸಾಧಾರಣಸೂಕ್ಷ್ಮಂ[ಗಳೆಂಬ] ಷೋಡಶಕರ್ಮಪ್ರಕೃತಿಗೆ ವಿಳಯಂ ಮಾಡಿ (ಶಾಂತಿಪು. ೧೧-೧೧೦ ವ). [ನರಕ + ಗತಿ]

ನರಕಗಾಮಿ (ನಾ). ನರಕಕ್ಕೆ ಹೋಗುವವನು; ನರಕಕ್ಕೆ ಪಾತ್ರನಾಗವವನು: ಈ ಧರ್ಮ್ಮಮನಳಿದ ಮಹಾಪಾತ ××× ನರಕಗಾಮಿಯಕ್ಕು (ಸೌಇಇ. XX, ೩೮-೩೩ : 1058). [ಸಂ. ನರಕಗಾಮಿನ್]

ನರಕಚತುರ್ದಶಿ (ನಾ) ಆಶ್ವಯುಜ ಮಾಸದ ಕೃಷ್ಣಪಕ್ಷದ ಚತುರ್ದಶಿ; P ಶ್ರೀ ಕೃಷ್ಣನು ನರಕಾಸುರನನ್ನು ಕೊಂದುದರ ನೆನಪಿಗಾಗಿ ಆ ದಿನ ಆಚರಿಸುವ ಹಬ್ಬವೆಂದು ಸಾಮಾನ್ಯವಾಗಿ ನಂಬಲಾಗಿದೆ. ಆದರೆ ಇದಕ್ಕೆ ಪುರಾಣಗಳಲ್ಲಿ ಆಧಾರವಿದ್ದಂತಿಲ್ಲ. ನರಕಚತುರ್ದಶಿಯ ದಿನ ಮಾಡುವ ವ್ರತ ಪೂಜಾಕರ್ಮದಲ್ಲಿ ನರಕಕ್ಕೆ ಬೀಳದಿರುವಂತೆ ಆಗಲೆಂದು ಹಾರೈಕೆಯನ್ನು ಹೇಳುವ ಮಂತ್ರವಿದೆ: ಆಶ ಯುಜ ಬಹುಳ ಹದಿನಾಲ್ಕನೆಯ ತಿಥಿ ನರಕಚತುರ್ದಶಿ (ಭಾಹಬ್ಯ. ೧೪೫). [ನರಕ + ಚತುರ್ದಶಿ]

ನರಕಚೋರ (ನಾ). ಒಂದು ಬಗೆಯ ಸುಗಂಧ ದ್ರವ್ಯ,–ಕಚೋರ: ನರಕಚೋರ, ನವಸಾಗರ, ನಾಗರ ಮೋಥೆ (ಮುಂಬಮ್ಯಾ. ೧೨೬).

[ನರ$_0$ + ಕಚೋರ]

ನರಕಜೀವಿ (ನಾ). ನರಕದಲ್ಲಿ ತೊಳಲುವವನು; ಪಾಪಿ: ಆಕಾರವಿಲ್ಲದ ನಿರಾಕಾರಲಿಂಗವ ಕೈಯಲ್ಲಿ ಹಿಡಿದು ಕೊರಳಲ್ಲಿ ಕಟ್ಟಿದೆವೆಂಬರು ನರಕ [ಪಾಠಾಂ. ಕಿ]ಜೀವಿಗಳು (ಮಹಾದೇ. ಬ.೧೩೧-೨೯೮).

[ನರಕ + ಜೀವಿ$_1$]

ನರಕದರ್ಶನ (ನಾ). ನರಕವನ್ನು ನೋಡುವಿಕೆ; ನರಕದ ನೋಟ: ದ್ರೋಣನು ನಿನ್ನ ಮಾತಿನಿಂದ ಮೋಸಹೋದನು. ಆ ತಪ್ಪಿನ ಫಲದಿಂದ ನಿನಗೆ ನರಕದರ್ಶನವಾಯಿತು (ನೀತಿಚಿಂ. IV, ೩೨); ನರಕ ತಪ್ಪಿತು ಧರ್ಮಜಂಗೆ, ದಿಟ, ಆದೊಡೇಂ? ನರಕದರ್ಶನದುಃಖ ತಪ್ಪದಾಯಿತಲ? (ಮಂಕುಳ. ೫೧೧); ಅದಕೆ ತಕಂತೆ ನಿನಗೆ ಮತ್ತೊಬ್ಬರ ನೆಪದಿಂದ ನರಕದರ್ಶನವಾಯಿತು (ವಚಭಾ. ೩೯೦). [ನರಕ + ದರ್ಶನ]

ನರಕದುಃಖ (ನಾ). ನರಕದ ಶಿಕ್ಷೆಯಿಂದುಂಟಾಗುವ ದುಃಖ,-ಸಂತಾಪ: ಕೇವಲಮೆ ನರಕದುಃಖಂ ಕೇವಲವಿಜ್ಞಾನವಿಷಯಮಲ್ಪಶ್ರುತದೊಳ್ ಭಾವಿಪೊಡಾರ್ ನೆಱೆ ನುಡಿವರೊ ದೇವಂ ಸರ್ವಜ್ಞನೊರ್ವನೇ ನೆಱೆ ನುಡಿಗುಂ (ಅಜಿಪು. ೧೧-೧೨); ನರಕದುಃಖವ ಮತ್ತೆ ಭೋಗಿಸಬೇಕು ದೇಹಿಗಳು (ತಿಮ್ಮಸ್ವ. ೧-೩೦). [ನರಕ + ದುಃಖ]

ನರಕನಿಳಯ (ನಾ).=ನರಕ ೧ : ಆ ಪಾಪ್ಕೆ. . . ನರಕನಿಳಯಕ್ಕಾ ಪೊತ್ತುಂ ಪೋಪೆನೆಂದು ಮನದಂದಾಗಳ್ (ಪುಣ್ಯಾಸ್ರ. ೫-೩೭).

[ನರಕ + ನಿಳಯ (= ನಿಲಯ)]

ನರಕಪಾತ (ನಾ). ನರಕದಲ್ಲಿ ಬೀಳುವುದು : (Damnation. ಪಾರಿನಿ. ೩೬).

[ನರಕ + ಪಾತ$_1$]

ನರಕಪಾಲ (ನಾ). ಮನುಷ್ಯನ ತಲೆಬುರುಡೆ : ನರಕಪಾಲದೊಳು ತೀವಿದ ಹಸಿಯ ಗೋವಮಾಂಸವ ಮೆಲುತ (ಹಡಕಾ. ೧೧-೩೧) ; ನರಕಪಾಲದ ಪಾತ್ರೆಗಳ ತಿಲದೊರಳಿಗಳ ಕೇಶೌಘದರ್ಭಾಂಕುರದಲಾಹವಯಜ್ಞದೀಕ್ಷಿತ ನಹೆನು ತಾನೆಂದ (ಕುಪ್ಯಾಉ. ೧೧-೧೯) ; ನರಕಪಾಲದಲ್ಲಿ ಅಸವವು . . . ತುಂಬಿದ್ದಿತು (ಕಪಾಳು. ೨೫). [ನರ$_3$ + ಕಪಾಲ$_3$]

ನರಕಬಾಧೆ (ನಾ). ೧. ನರಕದಲ್ಲಿ ಅನುಭವಿಸುವ ನೋವು ; ನರಕದ ದುಃಖ : ಮುರಹರ ನಗಧರ ಮುಕುಂದ ಎನ್ನದೆ ನರಕಬಾಧೆಗೆ ಗುರಿಯಾಗುತಿ (ಪುರಂದ. ೪-೦೨೩-೪) ; ನರಸಮಿತಿ ಕೊಂದರೆಂದಡೆ ವೆರವಾಗದೆ ನೋಡದೋಡಿದರು ನಿನ್ನವರೆಂದರೆ ನರಕಬಾಧೆಗವರೇಂ ವೆರವಪ್ಪರೆ (ಸನ್ನಜಾ. ೫-೪೪) ; ಪರಲೋಕಸಾಧನಗಳು ಚರಿಸುವ ಚತುರರಿಗೆ ನರಕ ಬಾಧೆಗಳಿಲ್ಲ (ವಿಜಾಸು. ೮೪-೭). ೨. (ಆಲಂ) ತೀಪ್ರವಾದ ಯಾತನೆ.

[ನರಕ + ಬಾಧೆ]

ನರಕಬಿಲ (ನಾ). [ಜೈನ] ನರಕ : ಅಲ್ಲಿಂದಶ್ರಮೇಕರಜ್ಜುಪ್ರಮಾಣಾಂತರದೊಳಮರಿಷ್ಟೆಯೆಂಬವೆಸರನುಳ್ಳ ಧೂಮಪ್ರಭೆಯೆಂಬಯ್ದನೆಯ ನರಕ ಬಿಲಂಗಳೆಲ್ಲಂ ಮೂಜುಲಕ್ಕಮಕ್ಕುಂ (ಅಜಿಪು. ೦೧-೬ ಪ).

[ನರಕ + ಬಿಲ]

ನರಕಭಯ (ನಾ). ೧. ನರಕಲೋಕಕ್ಕೆ ಹೋಗುವ ಹೆದರಿಕೆ ; ನರಕಗತಿಯುಂಟಾಗುವ ಭಯ,-ಅಂಜಿಕೆ : ನಾಮಕೀರ್ತನೆ ಅನುದಿನ ವಾಳ್ವಗೆ ವರಕಭಯಗಳುಂಟೆ (ಪುರಂದ. ೨-೦೦೬ ಪಲ್ಲವಿ). ೨. ನರಕಾಸುರನ ಭಯ. ೧, ೨: ನರಕಭಯಂ ಹರಿಕಥೆಯೊಳ್ . . . ಪಿರಿದುಂ ಮುಖಭಂಗತ್ವಂ ಜರೆಯೊಳ್ಕೆಯ್ದೊರ್ಪುವಲ್ಲದಿಲ್ಲಾ ವಾಡೊಳ್ (ತ್ರಿಪುವಿ. ೨-೩೧).

[ನರಕ + ಭಯಂ]

ನರಕಭಾಜನ (ನಾ). ೧. ನರಕಕ್ಕೆ ಪಾತ್ರನಾದವನು ; ದುಷ್ಕರ್ಮಿ : ಪುರಹರನ ಪ್ರತಿಬಿಂಬವೆನಿಸಿದ ಶರಣರಂ ಧಿಕ್ಕರಿಸಿ ನಿಂದಿಸಿ ನರಕಭಾಜನರಾದಿರೀಶ್ವರದೂಷಕರು ನೀವು (ಬಸಪು. ೫೭-೪೦); ಹಿಗ್ಗುವೆಯಾಕೋ . . . ಪರರ ಸೇವೆಯ ಮಾಡಿ ನರಕಭಾಜನನಾಗಿ ಮರಳಿ ಮರಳಿ ಬಿದ್ದು ಉರುಳುವ ದೇಹಕ್ಕೆ (ಪುರಂದ. ೦-೦೨೨-೩). ೨. ನರಕಕ್ಕೆ ಸಮಾನವಾದಂದಂ ; ಪುಣ್ಯಾಸ್ಪದವಲ್ಲದಂದಂ: ಹರಹರ ತ್ರಾಯಸ್ವ ಕರುಣಾಕರ ಮಹಾದೇವೀ ದುರಂತದ ನರಕಭಾಜನವಮುಚಿತವೇ ನಿಮ್ಮಂಘ್ರಿದರ್ಶನಕೆ (ಕುಪ್ಯಾಉ. ೧೬-೫೭) ; ಶಿರುಕರಿಲ್ಲದ ಊರು ನರಕಭಾಜನಮಕ್ಕು (ಸರ್ವಜ್ಞ. ೫೦೯).

[ನರಕ + ಭಾಜನ]

ನರಕಭೂತಾಳಿ (ನಾ). ಒಂದಂ ಬಗೆಯಂ ಗಿಡ : ಗಬ್ಬುಚಿಕ್ಕೆ. ನರಕಭೂತಾಳಿ (ಮೃಕಿಗಿ. ೪೯-೨೭೦). [ನರಕ + ಭೂತಾಳಿ]

ನರಕಭೂಮಿ (ನಾ). = ನರಕ ೧: ಅಂತು ರತ್ನಪ್ರಭೆಯಿಂ ತೊಟ್ಟು ನಾಲ್ಕುವರೆ ನರಕಭೂಮಿವಲಯಂ ಉಷ್ಣಶೈತ್ಯಮುಷ್ಣಮುಂ ಅಲ್ಲಿಂದತ್ತಲಿರ್ದುವರೆ ಭೂಮಿವರಮತಿಶೀತಮಕ್ಕುಂ (ಅಜಿಪು. ೦೧-೬೪).

[ನರಕ + ಭೂಮಿ]

ನರಕಮರ್ದನ (ನಾ). ನರಕಾಸುರನನ್ನು ಸಂಹಾರ ಮಾಡಿದವನು ; ಕೃಷ್ಣ : ನರಕಮರ್ದನ ಕೇಳು ಕೌರವನರಿಗಳಿದಿರೆ . . . ತೊಡೆವೆನು ಕೃತಾಂತನ ಧಾಳದಕ್ಕರವ (ಕುಪ್ಯಾಉ. ೬-೨೮).

[ನರಕ + ಮರ್ದನ]

ನರಕಯಾತನೆ (ನಾ). ೧. ನರಕಬಾಧೆ ೧ : (ಪ). ೨. (ಆಲಂ) ಅತಿಯಾದ ನೋವು ; ಅಸಹನೀಯವಾದ ದುಃಖ : ವಾಸಂತಿಯ ಹೃದಯ ನರಕ ಯಾತನೆಯನ್ನನುಭವಿಸಿತು (ತೇವೋಡ. ೯೨) ; ಸಹಸ್ರಾರು ಮಂದಿ, ಕೇವಲ ಭ್ರಮೆಯಿಂದಲೇ–ಸಂಶಯದಿಂದಲೇ ನರಕಯಾತನೆ ಅನುಭವಿಸುತ್ತಿದ್ದಾರೆ (ವೀರಹೋ. ೪೯). [ನರಕ + ಯಾತನೆ]

ನರಕರೋಟಿ (ನಾ). = ನರಕಪಾಲ : ಮೃತಭಸಿತಸಂ ಪಶಿತವನು ನರಕರೋಟಿಯೊಳು ಕೃತಕರ್ಮಭೇದನದಿ ತೀವಿ (ಸಿಂಗಿರಾ. ೦೬-೭).

[ನರ$_3$ + ಕರೋಟಿ$_3$]

ನರಕಲೋಕ (ನಾ). = ನರಕ ೧ : ವೈರಿವರ್ಗವ್ಯಾಡಿಯೊಳಿಟ್ಟಂತೆ ನರಕ ಲೋಕಮಾಡಿಯೊಳರ್ದುದು (ಜೀವಸಂ. ೩೩-೧). [ನರಕ + ಲೋಕ]

ನರಕವಾಸ (ನಾ). ೧. ನರಕದಲ್ಲಿ ಇರುವಿಕೆ. ೨. (ಆಲಂ) ಘೋರ ಯಾತನೆ : ಬೇರೆ ನರಕವಿದೆಯೇ ? . . . ನಿತ್ಯ ನರಕವಾಸ ಅನುಭವಿಸುತ್ತಿರುವೆನು (ಕಾವೇರಿ. ೦೦೦). [ನರಕ + ವಾಸ$_2$]

ನರಕವಾಸಿ (ನಾ). ನರಕದಲ್ಲಿ ವಾಸಿಸುವವನು : ಹರಿಭಕ್ತರಿ ಉಳ್ಳವರ ಶರೀರವೆ ಕುರುಕ್ಷೇತ್ರ ಅವರು ನರರೆಂದು ಬಗೆವವರೆ ನರಕವಾಸಿಗಳಂ (ಪುರಂದ. ೧-೦೦೮ ಅನುಪಲ್ಲವಿ). [ಸಂ. ನರಕವಾಸಿನ್]

ನರಕವಿ (ನಾ). (ದೈವದತ್ತ ಪ್ರತಿಭೆ ಇಲ್ಲದ) ಸಾಮಾನ್ಯಕವಿ: ವರಕವಿಗಳ ಮುಂದೆ ನರಕವಿಗಳ ವಿದ್ಯೆ ತೋಱಬಾರದು (ಳನಿಳ. ೩೩ ಪಲ್ಲವಿ).

[ನರ$_3$ + ಕವಿ$_3$]

ನರಕವೇದನೆ (ನಾ). = ನರಕಬಾಧೆ ೧: ಅವರು ತಾವು ಮಾಡಿದ ತಪ್ಪಿಗೆ ಬದುಕಿದ್ದಾಗಲೇ ನರಕವೇದನೆ ಅನುಭವಿಸಿದರು (ಕೂಡಿ).

[ನರಕ + ವೇದನೆ]

ನರಕಸ್ಥಾನ (ನಾ). ೧. ನರಕದ ನೆಲೆ; ನರಕಲೋಕ: ನರಕಸ್ಥಾನದೊಳಂದು ತಾನೆನಗೆ ಬಂದಾ ದುರ್ಧರಾವಸ್ಥೆಯಿಂ ಪಿರಿದೇಂ (ಶಾಂತೀಶ್ವ. ೯-೦೪೪). ೨. ಹೇಸಿಗೆಯಂ ನೆಲೆ : ಕ್ರಿಮಿ ಮೇಣ್ ಭಸ್ಮಂ ಮೇಣ್ಪೆಪ್ಪಿ ಮೇಣ್ ಶರೀರಕ್ಕೆ ನಿಚ್ಚಿಯಾ ದೊರೆಯಿದಟ್ಟೊಳ್ ಕಮನೀಯವೊಂದುಮಿಲ್ಲಶುಚಿ ಮಲಾಧಿಷ್ಠಾನಮಿದುವೆ ನರಕಸ್ಥಾನಂ (ಅಜಿಪು. ೩-೫೩).

[ನರಕ + ಸ್ಥಾನ]

ನರಕಾಂತಕ (ನಾ). ೧. = ನರಕಮರ್ದನ : ಆ ನರಕಾಂತಕನೀಕೆಗಂಡು ತೊಟ್ಟನೆ ನಿಜಲಕ್ಷ್ಮಿಯಂ ಮಱೆದಂ (ಪಂಪಭಾ. ೪-೮೩). ೨. [ಜೈನ] ವಾಸುದೇವ : ಆಂತಾ ವಿದ್ಯೆಗಳಂ ನರಕಾಂತಕನಲಸದೆ ವಿಷಂ ವಿಷಸ್ಫೋಷಧ ಮೆಂಬಂತಿರೆ ವಿದ್ಯೆಗಳಿಂ ಗೆಲ್ದಂ (ಶಾಂಪು. ೫-೬೨). [ನರಕ + ಅಂತಕ]

ನರಕಾಗ್ನಿ (ನಾ). ನರಕದಲ್ಲಿ ಶಿಕ್ಷೆ ಕೊಡಲಿಂ ಉಪಯೋಗಿಸುವ ಬೆಂಕಿ : ನರಕಾಗ್ನಿಗಳ್ಕೆ ನಿನ್ನೊಳ್ಕೆರೆಯದೊಡೀ ಕಾಮವಹ್ನಿ ಸುಟ್ಟವುದು (ವೃಸವಿ. ೫೮-೦೦೦). [ನರಕ + ಅಗ್ನಿ]

ನರಕಾಧಿಪತಿ (ನಾ). ನರಕಲೋಕದ ಒಡೆಯಂ ; ಯಮ.

[ನರಕ + ಅಧಿಪತಿ]

ನರಕಾಯುಷ್ಯ (ನಾ). [ಜೈನ] ಹದಿನಾರು ಕರ್ಮಪ್ರಕೃತಿಗಳಲ್ಲಿ ಒಂದು; ನರಕದಲ್ಲಿ ವಾಸಮಾಡುವ ಕಾಲ,— ಅವಧಿ ; ಧನ-ಧಾನ್ಯ ಪರಿಗ್ರಹ ಮೊದಲಾದುವುಗಳಲ್ಲಿ ಅತಿಯಾದ ಮೋಹ, ಹಿಂಸೆ ಮೊದಲಾದ ಪಾಪಕರ್ಮಗಳಲ್ಲಿ ಆಸಕ್ತಿ-ಇವುಗಳಿಂದ ಉಂಟಾಗುವ ಕರ್ಮಬಂಧ : ನಿವತನೂಜರೊಡನೆ ಪೇಚಿರ ಗೋಚಿರ ವಿಭವಮನನುಭವಿಸಿ ಬಹ್ವಾರಂಭ ಸಂರಂಭರೌದ್ರಧ್ಯಾನಪರಿಣತನಂಪಾರ್ಜಿತ ನರಕಾಯುಷ್ಯಂ ಪ್ರತ್ಯಾಸನ್ನ ಮೃತ್ಯುವಾಗಿ (ಆದಿಪು. ೩-೦೧ ಪ); ಆ ಸಮಯದೊಳಾತಂಗೇಬನೆಯ ನರಕಾಯಂಷ್ಯಂ ನೆಟ್ಟಿಯೆ (ಪುಣ್ಯಾಸ್ರ. ೩-೫೪ ಪ). ' ನರಕಗತಿ ' ಪರಾ.

[ನರಕ + ಆಯುಷ್ಯ]

ನರಕಾರಿ (ನಾ). ೧. = ನರಕಮರ್ದನ : "ಶ್ರೀವತ್ಸಂ ನರಕಾರ್ಯಧೋಕ್ಷಜ ನಜಂ ಪೀತಾಂಬರಂ . . . ಹೃಷೀಕೇಶಂ ಸುಪರ್ಣಧ್ವಜಂ" (ವಸ್ತುಕೋ. ೪-೨೨). ೨. [ಛಂದ] ವಿಷ್ಣುಗಣದ ಒಂದು ಬಗೆ : ವಿಷ್ಣುಗಣಮೆಂತೆಂ ದೊಡೆ:-೧. ಗೋವಿಂದಂ . . . ೫. ಕಂಸಾರಿ ೬. ನರಕಾರಿ (ಛಂದೋಂಬು. ೩-೨೪೦ ಪ). [ನರಕ + ಅರಿ$_3$]

ನರಕಾವಸ್ಥೆ (ನಾ). ನರಕಕ್ಕೆ ಬಿದ್ದಿರುವ ಸ್ಥಿತಿ ; ನರಕವಾಸ : ನರಕಾವಸ್ಥೆಯೊಳಿರ್ದುದಂ ನೆನೆ ಬಟಿಕ್ಕಂ ಧರ್ಮದಿಂದೀ ವಿಯಚ್ಚರಸಂಪತ್ತಿಗೆ ಬಂದುದಂ ನೆನೆ (ಶಾಂತೀಶ್ವ. ೯-೧೩೦). [ನರಕ + ಅವಸ್ಥೆ]

ನರಕಾಸುರ (ನಾ).=ನರಕ ೩ : ನರಕಾಸುರ ಮದಕರಿಪಂಚವದನ ಕುಸುಮಾಯುಧಮಂಗಳಜನ್ಮಸದನ (ಪಂಚತಂ. ೦೬೨-೫); ಕಾಳಗದಲಿ ನರಕಾಸುರನ ಸೀಳಿ ಬಿಸಾಡಿ . . . ಸುದತಿಯರೆಲ್ಲರ ಆಳಿದ ವಸುದೇವಾತ್ಮಜಗೆ (ಪುರಂದ. ೦-೨೬೨-೨) ; ಆಹಾ ನಿಶಾಚರಿಯರಲ್ಲವೇ ನರಕಾಸುರನಮನೆಯ ಬಾಲಕಿಯರು (ಶೈಮಿಧಾ. ೨-೫೯) ; ಶ್ರೀಕೃಷ್ಣ. . . ಸತ್ಯಭಾಮೆಯ ಕಡೆಯಿಂದಲೇ ನರಕಾಸುರನನ್ನು ಕೊಲ್ಲಿಸಿದ (ಭಾಹಬ್ಯ. ೧೪೫). [ನರಕ + ಅಸುರ]

ನರಕಿ (ನಾ). = ನರಕಭಾಜನ ೧ : ನರಕಿಗಳನೆನಗೊಮ್ಮೆ ತೋಱದಿರಾ ರಾಮನಾಥಾ (ದೇದಾವ. ೩೩-೫೯) ; ಒಡಲ ಗುಣಧರ್ಮಂಗಳು ಬಿಡದೆ ನಡೆವನ್ನಕ್ಕ ಎಡವಱಿಯದ ಪೂಜೆಯ ಮಾಡಿಹೆನೆಂಬ ನರಕಿಗಳವರೆತ್ತ ಬಲ್ಲರೋ (ಚಿನ್ನಪ. ಕ. ೫೪೫-೦೦೮೨) ; ಕೃತಘ್ನನೆ ನರಕಿ ವಿದ್ಯಾಧಮ ಮದಾಂಧನೆ ಬಾಹಿರನು (ಕುಮ್ಯಾಆ. ೨೩-೪೫) ; ನರಕಿಗಳು ನಾವವ್ವ ಜಗದೊಳು ಧರೆಗೆ ಭಾರಕರು (ಕೌಶಿರಾ. ೪-೦೫). [ಸಂ. ನರಕಿನ್]

ನರಕೀಟ (ನಾ). ಕೀಟದಂತಿರುವ ಮನುಷ್ಯ ; ಕ್ಷುದ್ರವಾದ ಮನುಷ್ಯ ; ದುರ್ಬಲಮನುಷ್ಯ : ನರಕೀಟದ್ವಯಸಂಗರಕ್ಕೆ ಖಚರೇಂದ್ರಾಧೀಶನಿಂತೇಕೆ ಕಾತರನಪ್ಪೊಂ ಗಡಂ (ಶಾಂತಿಪು. ೩-೯೮) ; ಕಲಿಕಾಲದ . . ನರಕೀಟಂಗಳು ಜಿನರೂಪಂ ಧರಿಯಿಸುವುದರಿದೆಂದು ಮನದೊಳ್ಳಗೆವುದೆಂತೆನೆ (ಪಸಾರ.೩೨೨). [ನರ$_2$ + ಕೀಟ$_2$]

ನರಕೀಟಕ (ನಾ). = ನರಕೀಟ : ಈ ನರಕೀಟಕರ ಮಾತುಗಳವೇತಕೆ ಕೋಟಿಯೇಕೋ ರುದ್ರ ನ ದ್ವಿತಿಯೆಂದು ಶ್ರುತಿ ಮೊರೆಯೆ (ಬಸಪು. ೫೪-೦೭). [ನರ$_2$ + ಕೀಟಕ$_2$]

ನರಕು, ನೆರಕು (ಕ್ರಿ). ಅವ್ಯಕ್ತವಾದ ಧ್ವನಿಯಿಂದ ನೋವನ್ನು ವ್ಯಕ್ತಪಡಿಸು,-ನಿಶ್ಶಕ್ತಿಯನ್ನು ಸೂಚಿಸು; ನರಳು: ಎಂಟು ಸಾರಿಯುಂಬಳು ಕುಂಟಿಯಾಗಿರುವಳು ನಂಟರು ಬಂದರೆ ನರಕುವಳು ಶಿವಶಿವ ನಂಟರು ಬಂದರೆ ನರಕುವ ಪೋರಿಯ ಸೊಂಟವ ಮುರಿ (ಹಾಸ್ಯಮಂ. ೫) ; ದೊರಕಿದ ಬಟ್ಟೆ ಹರಕು ಆದರೆ ನರಕೋದು ಯಾಕೆ ? (ಗಾದೆ). **ನೆರಕು** : ಕಾಲಾಳ್ಗಳು ನೆರಕುತಿರ್ದವು ಕಾಲು ಕೈ ಪರಿದು ಘಾಯದಿಂ ಸುರಿವುತಿರ್ದವು ರಕ್ತ (ತುರಂಗ. ೫೫-೨೦).

[ದೇ. ॥ ಮಲ. ನರಣ್ಣು, ಞರಣ್ಣು, ನರಕ್ಕ = ನರಳುವಿಕೆ ; ತುಳು ನರಕು, ನರ್ಕು; ಕೊಡ. ನೆರಕ್; ಮಲ್ತೊ. ನಿರೆ]

ನರಕುಱಿ 'ನರಗುಱಿ' ನೋ.

ನರಕೇಸರಿ (ನಾ). = ನರಸಿಂಹ ೧ : ಮುಳಿದ ನರಕೇಸರಿಯ ದಾಡೆಯ ಥಳಥಳತ್ಕಾರವೊ ಮಹಾಸ್ತ್ರದ ಬೆಳಗೊ (ಕುಮ್ಯಾದ್ರೋ. ೦೯-೦೫). [ಸಂ. ನರಕೇಸರಿನ್]

ನರಗ$_1$ (ನಾ).=ನರಕ ೧ : ಪಞ್ಚಮಹಾಪಾತಕಸಂಯುಕ್ತನಾಗಿ ಪೂತಿ ಎನ್ವ ನರಗಕ್ಕೆ ಸಲ್ಗೆ (ಎಕ. VI, ಕೊಪ್ಪ. ೩೭-೮ ; ಸು. 675). [< ಸಂ. ನರಕ]

ನರಗ$_2$ (ನಾ). ೧. ಒಬ್ಬಾತನ ಹೆಸರು : ನರಗನಿಱಿಯೆ ತನ್ನಱಿಯನುಂ ತನ್ನ ಮಕ್ಕಳುಂ ತನ್ನೊಕ್ಕಲುಂ . . . ಪೆರ್ಮ್ಮಾಡಿಯ ಬೆಸದೊಳಿಱಿದು (ಎಕ. I, ಕಡೂರು. ೦೪೭-೫ ; 972) ; ಕಾಳನೋ ರಾವಣನೋ ಶಿಶುಪಾಳನೋ ತಾನೆನಿಸಿ ನೆಗಟ್ಟ ನರಗನ ತಲೆ ತನ್ನಾಳಾಳ ಕಯ್ಗೆವನ್ದುದು (ಎಕ. II, ೫೯-೯೫; 974). ೨. ಒಬ್ಬಾತನ ಹೆಸರು ; ಚಾಳುಕ್ಯ ವಂಶದ ಅರಿಕೇಸರಿಯ ತಂದೆ : ಏಟುಂ ಮಾಳಮುಮಂ ಪಾಱೇಟಿ ತಗುಳ್ದಿಱಿದು ನರಗನುರಿಪಿದೊಡೆ ಕರಿಂಕೇಟಿಸಿದಾತನ ತೇಜದ ಬೀಟಲವನುಕರಿಪುವಾದುವೊಗೆದುರಿವುರಿಗಳ್ (ಪಂಪಭಾ. ೧-೩೫). [< ಸಂ. ನರಸಿಂಹ ?]

ನರಗ$_3$ (ನಾ). [ಛಂದ] ಪ್ರತಿಸಾಲಿನಲ್ಲಿಯೂ ಏಳು ಅಕ್ಷರಗಳಿರುವ ಉಷ್ಣಿಕ್ ಎಂಬ ನಾಲ್ಕು ಸಾಲಿನ ವರ್ಣಛಂದಸ್ಸಿನ ಒಂದು ವೃತ್ತ ; ಪ್ರತಿಸಾಲಿನಲ್ಲಿಯೂ ೮೮೮, -೮-, -ಹೀಗೆ ಗಣನಿಯಮವುಳ್ಳ ವೃತ್ತ : ನರಗಮೆಂಬ ವೃತ್ತಾಕ್ಷರಮೆ ಪಾದಮಾಗುತ್ತಿರೆ ಶಶಾಂಕವಕ್ತ್ರೇ ನರಗನಾಮವೃತ್ತಂ (ಛಂದೋಂಬು. ೨-೯೦). P ನಗಣ, ರಗಣ ಮತ್ತು ಒಂದು ಗುರು ಇದು ಈ ವೃತ್ತದ ಲಕ್ಷಣ. ಈ ಲಕ್ಷಣಸಂಕೇತವೇ ಇದರ ಹೆಸರಾಗಿದೆ. [ಸಂ.]

ನರಗಂಡಮಾಲೆ (ನಾ). ಕೊರಳ ನರಗಳ ಮೇಲೆ ಗಂಟುಗಂಟಾಗಿ ಕಾಣಿಸಿ ಕೊಳ್ಳುವ ಒಂದು ಬಗೆಯ ರೋಗ : ಮಾವು, ಮಾವಿನ ಒಳನಾರು, ಎಳ್ಳಎಣ್ಣೆ, ಮೆಣಸು ಇವು ನಾಲ್ಕು ಸಹವಾಗಿ ಕೊಳ್ಳಲು ಗಂಡಮಾಲೆ, ನರಗಂಡಮಾಲೆ ಮಾಣ್ಗುಂ (ವಿಷ್ಯವಿ. ೭೯). [ನರ$_1$ (<ನರವು) + ಗಂಡಮಾಲೆ]

ನರಗಟ್ಟು (ನಾ). ನರಮಂಡಲ ; ನರವ್ಯೂಹ : ನರಗಟ್ಟು, ನೆರವಾನಿಸಂ, ಬರವಟ್ಟೆ, ತೆಱವೊನ್, ಬಡನಡು (ಶಬ್ದಾನು. ೩೩೨ ವ್ಯಾಖ್ಯಾ). [ನರ$_1$ (<ನರವು) + ಕಟ್ಟು$_2$]

ನರಗತಿ (ನಾ). ಮನುಷ್ಯ ಜನ್ಮ : ನರಗತಿಯನಿಂದು ಭೃಗುಜರ್ ತಿರ್ಯಗ್ಗತಿಯಂ ಕುಜರವಿಗಳ್ . . . ಕುಡುವರ್ (ಜಾತತಿ. ೨೩-೨೪). [ನರ$_2$ + ಗತಿ]

ನರಗಬ್ಬಿಗ (ನಾ). = ನರಕವಿ : ಜಾಣರಿಗೆ ಸುಕವಿಗಳಿಗುಱುವ ನರಗಬ್ಬಿಗರ ಕುಕವಿಗಳ ಸಂಗಮಂ ಸಂತತಂ ತೊಱಿದು ಮೆಱಿವಾ ಅಱಿತ ಸೋಮೇಶನೊಲಿದಿತ್ತನಾಹತಮತಿಯ ಕುಱುಹಿನಭಿನವಮಂಗನುಸುರ್ದ ಸತ್ಕೃತಿಯನಿದ ಜಱಿವರಾರ್ (ಮಂಗರಾ. ೩-೭). [ನರ$_3$ + ಕಬ್ಬಿಗ]

ನರಗು (ನಾ). ಇಕ್ಕಟ್ಟು ; ಸ್ಥಳ ಸಾಲದಿರುವಿಕೆ (?) : ಹೊರಗಿನ ಕೋಟೆಗೆ ಒಳಗಿನ ಜನ ಸಾಲಲಿಲ್ಲ. ಆ ಕೋಟೆ ನರಗಾಯಿತು, ಪಟ್ಟಣದ ಜನ ಹೊಂಡದ ನೀರಿಗೆ ಹೋಗಲು ಸಾಧ್ಯವಾಗಲಿಲ್ಲ (ಚಿತ್ರಪಾ. ೯೬). [<ನರಕು ?]

ನರಗುಂಜಿ (ನಾ). ಒಂದು ಬಗೆಯ ಸಸ್ಯ : ನರಗುಂಜಿಸೊಪ್ಪು ತಂದು ನೀರ ಬಿಟ್ಟುಕೊಂಡು ತುಳಿದು ಸೊಲ್ಲಗೆ ರಸವ ತೆಗೆದು ಅದನ್ನು ಹಸುವಿನ ಮಜ್ಜಿಗೆ ಬೆರಸಿ ಕೊಳ್ಳೆ ನೀರಕೊಂಬಿನ ವ್ಯಾಧಿ ಮಾಣ್ಗುಂ (ವಿಷ್ಯವಿ. ೭೦). 'ನಱುವಂಜಿ' ಪರಾ. [?]

ನರಗುರಿ 'ನರಗುಱಿ' ನೋ.

ನರಗುರಿಗ (ನಾ).=ನರಗುಱಿ: ನರಗುರಿಗನು ನಾನು ಪರಿಪರಿ ವಿಧದಿಂದಾಂತರಿಯಲಿ ಧ್ಯಾನವಾಚರಿಸಲು ಪುಣ್ಯವೆಂದರಿಯಲು ಮನಸು ನಿಂದಿರದೆ . . . ಪಾಪದ ಕಡಿಗೆ ಪರಮಪ್ರೀತಿಬಡುವುದು (ಮೋಕ್ಷದೀ. ೨೨೨-೨೨) : ನರಗುರಿಗ ನಾನು ಎನ್ನ ಎತ್ನವಲ್ಲಾ ಗುರುಗಳ ದಯವೆಂತೊ ಅವರಿಗರಹೊ (ವಿಸಾಸು. ೮೪-೫). [ನರಗುರಿ (<ನರಗುಱಿ) + -ಗ$_3$]

ನರಗುಱಿ, ನರಕುಱಿ, ನರಗುರಿ (ನಾ). ಕುರಿಯಂತಹ ಮನುಷ್ಯ ; ಕ್ಷುಲ್ಲಕನಾದ ಮನುಷ್ಯ ; ವಿವೇಕವಿಲ್ಲದವನು : ನಿಮ್ಮ ಪಾಡೇನೋ ನರಗುಱಿಗಳಿರಾ (ವಚಸಂ. ೦೪೪-೩೩) : ಇದಱ ನೆಲೆಯನಱಿಯದೆ ಈ ಮನವ ಬೆಂಬಳಿಗೊಂಡಾಡಿದವರೆಲ್ಲ ನರಗುಱಿಗಳಾದರಯ್ಯ (ಲಿಂಗವ. ೨೩-೯೩) : ನರಗುಱಿಗಳಿಗೆ ರೋಗ ದಾರಿದ್ರ್ಯ ಅಪಜಯಂಗಳು ಬರುತ್ತಿರಲು

. . . ಎಲ್ಲಿಯದೊ ಶಿವಭಕ್ತಿ (ಚನ್ನವ. ಕ. ೨೨೧-೪೯೩) ; ನರಗುಱಿಯೆ ನಡೆ ಕಾಳಗಕೆನುತ ಹಿಡಿದೆಳೆದನುತ್ತರನ (ಕುಮ್ಮಾವಿ. ೬-೨೧) ; ಅಱಿಯನದ ನೇನುವನು ಬಾಲಕ ನರಗುಱಿಗಳುಪಚಾರವನು ಮೈಮಱೆದು ಮುನಿ ವಂದಿತನ ಚರಣವನೊಪ್ಪಿ ಮನದೊಳಗೆ . . . ಹರಿಯ ಸ್ತುತಿಸುತ (ನಿಧಾಗ. ೪-೭.೪೬). **ನರಕುಱಿ** : ನರಕುರಿ[ಱಿ]ಗಳನೆಲ್ಲ ಭರದಿ ರಕ್ಷಿಪುದಕೆ ಪರಮ ಪಾವನನಾಮ ಇದು ಸಾಲದೆ (ಪುರಂದ. ೨-೭೬-೧೩) ; ಆ ಮಹಾತ್ಮನ ನರಕುಱಿಗಳೆಂತಱಿವರೈ ಶ್ರೀಗಿರಿಯಧೀಶ್ವರನ (ಅಮೃತ. ೨ ೦). **ನರಗುರಿ** : ವಿರಸವಿಲ್ಲದೆ ನಗೆನುಡಿಯುಳ್ಳ ಸತಿಯಳ ಹರಸದವನು ನರಗುರಿಯು (ಕಪೋತ. ೧೯-೭೧) ; ಓ ಮಂಕು ನರಗುರಿಯೆ, ಭೂಮಿ ಬರಿ ದೋಣಿ ಕಣೊ! (ಪಾಂಡಜ. ೩೦-೧೪). 'ಕುಱಿವಾನಿಸ' ಪರಾ. [ನರ$_2$+ಕುಱಿ$_3$]

ನರಗೊರಲ್ (ನಾ). ನರಗಳು ಉಬ್ಬಿ ಹೊರಗೆ ಕಾಣುವಂತಿರುವ ಕೊರಳು : ನರಗೊರಲ[ಪಾಕಾಂ. ನರೆಗೊರಳ] ನೊರೆವಾಯ ಹಾವಸೆವರಿದ ಪಲ್ಗಳ ಜೋಲ್ದುಟಿಯ . . . ಕುಱುಬನು (ಬಸಪು. ೨೦-೧೧).

[ನರ$_1$ (<ನರವು) + ಕೊರಲ್]

ನರಚಲು, ನರುಚಲು (ನಾ). ಸರಿಯಾದ ಬೆಳವಣಿಗೆ ಇಲ್ಲದುದು ; ನರಟಾದುದು ; ಪೀಚು : ಬಿಸಿಲು, ನೀರು ಇಲ್ಲದೆ ಗಿಡ ನರಚಲಾಗಿದೆ (ರೂಢಿ). **ನರುಚಲು** : ಅವನು ನೀಲದುಟಿಯ ಕಂದು ಹಳದಿ ಮೋರೆಯ ನರುಚಲಾದ ಪಡ್ಡೆಹುಡುಗ (ಪುನರು. ೪೮೦). 'ನರಟು$_2$' ಪರಾ.

[ದೇ.॥ ತಮಿ. ನರೈಚ್ಚಲ್]

ನರಜಂತು (ನಾ). ಮನುಷ್ಯಜೀವಿ ; ಮನುಷ್ಯ : ಪುಣ್ಯಪಾಪದ ಮಿಶ್ರ ನರಜಂತುವು (ಮಂಕುಕ ೩೧೭). [ನರ$_2$ + ಜಂತು]

ನರಜನ್ಮ (ನಾ). ಮನುಷ್ಯನ ಹುಟ್ಟು ; ಮಾನವಜನ್ಮ : ನರಜನ್ಮದಲ್ಲಿ ಹುಟ್ಟಿ ಲಿಂಗಮುಖವನಱಿಯದೆ ಉದಮದ ಸೊಕ್ಕಿ ತಲೆಗೇಱಿತ್ತೆ (ಬಸವ. ೫೮೫) ; ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವೇ (ಮಹಾದೇ. ಬ. ೨೩-೪೩) ; ಎನ್ನ ನರಜನ್ಮಮಂ ಪಿಂಗಿಸಲ್ ಬಂದಿರೋ (ಲಶಿಜಿಂ. ೩೬-೦೪) ; ನರಜನ್ಮ ಬಂದಾಗ ನಾಲಿಗೆ ಇರುಪಾಗ ಕೃಷ್ಣ ಎನಬಾರದೆ (ಪುರಂದ. ೧-೭೦ ಅನುಪಲ್ಲವಿ). [ನರ$_2$ + ಜನ್ಮ]

ನರಜೀವ (ನಾ). ಮನುಷ್ಯ : ಮೆರುಗನೊಂದುವುದು ಪೊನ್ ಪುಟಕಾದ ಬಳಿಕ ನರಜೀವವಂತು ಶುಚಿಯಹುದು ದುಃಖಾಶ್ರುವಿಂ (ಮಂಕುಕ. ೮೬೫).

[ನರ$_2$ + ಜೀವ]

ನರಜೀವಿ (ನಾ). ಮನುಷ್ಯಜನ್ಮ ಪಡೆದವನು ; ಮಾನವ ; ಮಾಯೆಗೆ ಮರುಳಾದ ನರಜೀವಿಗಳ ಬಹಿರಂಗದ ಬಱಿಯ ಸಂಸ್ಕಾರಮಾತ್ರದಿಂದ ಭವಿ ಭಕ್ತನಪ್ಪನೆ (ಚನ್ನವ. ಕ. ೨೦೯-೪೬೭); ಯಾವತ್ತು ಪ್ರಕಾರದಅಪರಾಧಗಳಿಗೆ ಪಾತ್ರರಾದ ನರಜೀವಿಗಳು ನಾವು ಒಬ್ಬರನ್ನೊಬ್ಬರು ಕ್ಷಮಿಸದೆ ಇರುವುದು ಕೇವಲ ನೀಚತನವು (ಮುಂಬಯಿ. ೪-೮೬). [ನರ$_2$ + ಜೀವಿ$_1$]

ನರಟಿಸು (ಕ್ರಿ). ೧. ಬೆಳವಣಿಗೆ ನಿಂತುಹೋಗುವಂತೆ ಮಾಡು ; ಬೆಳವಣಿಗೆಯನ್ನು ಕುಂಠಿತಗೊಳಿಸು. ೨. ಹೆಚ್ಚದಂತೆ ತಡೆ ; ಮೊಟಕುಗೊಳಿಸು : ಯತಿಜನರ ಧೈರ್ಯಮಂ ಮುರುಟಿಪರ್ಸುರುಟಿಪರ್ನರಟಿಪರ್ ಸತಿಯರನಘಾ (ಷತಿಲ. ೨-೬೯). [ನರಟು$_1$ + – ಇಸು$_3$]

ನರಟು$_1$ (ಕ್ರಿ). ಬೆಳವಣಿಗೆ ಹೊಂದದಿರು ; ಪೀಚಾಗು : ಕೇಶವನ ಧಾತು ಪಾಠದಲ್ಲಿ ಮಾತ್ರವಲ್ಲ, ದರ್ಪಣದ ಇತರ ಭಾಗಗಳಲ್ಲಿಯೂ ಇಲ್ಲವೆಂದು ಕಿಟ್ಟೆಲ್‌ರ ನಿಘಂಟಿನಿಂದ ಎಣಿಸಬಹುದಾದ ಕೆಲವು ಸಿದ್ಧಧಾತುಗಳನ್ನು ಕೆಳಗೆ ಕಾಣಿಸಿದ್ದೇನೆ – ಇಣಿಕು, ಕುಲಕು, ಬೆದಕು . . . ಜಜ್ಜು, ಪುಟಿ, ನರಟು, ಗಿಟ್ಟು, ಅಂಟು (ಕಸಾಪ. I, ೨೯೦).

[ದೇ.॥ ತಮಿ. ನೆರುಟು=ಒರಟಾಗಿರುವುದು ; ತುಳು. ನರಡ್= ಬೆಳವಣಿಗೆ ಕುಂಠಿತವಾಗಿರುವಿಕೆ, ಒರಟುತನ]

ನರಟು$_2$, ನರುಟು, ನರಡು$_1$ (ನಾ). ೧. (ಮಕ್ಕಳು, ಗಿಡಗಳು, ಹಣ್ಣು ಮೊದಲಾದುವುಗಳ ವಿಷಯದಲ್ಲಿ) ಸರಿಯಾಗಿ ಬೆಳವಣಿಗೆ ಹೊಂದದಿರುವಿಕೆ ; ಪೀಚುಪೀಚಾಗಿರುವಿಕೆ : ಹುಡುಗೆ ನರಟು, ಹತ್ತುವರ್ಷದವನಾದರೂ ಐದುವರ್ಷದ ಹುಡುಗನಷ್ಟೇ ಕಾಣುತ್ತಾನೆ (ರೂಢಿ). **ನರುಟು** : ೧. "ಹ್ಲಸಿತಂ, ಹ್ಲಸಃ, ಹ್ಲಸಿಃ, ಹ್ಲಸುಃ, ಹ್ಲಸ್ ಈ ೫ ನರಟು" (ಕಾಶಕ್ಕ. ೬೨). 'ನರುಟುಗೊಳ್' ಪರಾ. **ನರಡು$_1$** : ೨. ಒರಟುತನ ; ಹುಂಬತನ. 'ನರಡ' ಪರಾ. [< ನರಟು$_1$]

ನರಟು$_3$ (ನಾ). ಗೊಣಗುಟ್ಟುವಿಕೆ ; ಗೊಣಗಾಟ. 'ನರಟುಗಾರ' ಪರಾ. [ದೇ.॥ ತುಳು. ನರಟು = ಗೊಣಗು]

ನರಟುಗಾರ (ನಾ). ಗೊಣಗುವವನು ; ತೃಪ್ತಿಯಿಲ್ಲದವನು : ನರಟುಗಾರ ಒರಟಾಡುತ್ತಾನೆ (ಗಾದೆ). [ನರಟು$_3$ + – ಕಾರ$_1$ (< – ಕಾಱ)]

ನರಡ (ನಾ). ಒರಟ; ಹುಂಬ ; ಅನಾಗರಿಕ : ನರಡನಿಗೆ ಕೊರಡು ಕುರುಡನಿಗೆ ಕೋಲು (ಗಾದೆ). [ನರಡು$_1$ (<ನರಟು$_2$) + – ಅ$_7$]

ನರಡಿ 'ನರಡು$_2$' ನೋ.

ನರಡಿರೋಗ 'ನರಡುರೋಗ' ನೋ.

ನರಡು$_1$ 'ನರಟು$_2$' ನೋ.

ನರಡು$_2$, ನರಡಿ, ನೆರಡಿ (ನಾ). ದನ, ಆಡು, ಕುರಿ ಮೊದಲಾದುವುಗಳಿಗೆ ಬರುವ ಒಂದು ಬಗೆಯ ರೋಗ : ನರಡುರೋಗಕ್ಕೆ – ಭರದಿಂ ಸುಱ್ಱನೆ ಸುಯ್ಯೆ ಸೂಗುರಿಸೆ ಕಣ್ದಕ್ಕಾಲಿಗಳ್ ಬೀಟ್ ಮೆಯ್ ಮರ ವಟ್ಟಂತಿರೆ ನೋ(ಡಿ)ಡೆ ಪೇಟ್ ನರಡಿ[ಪಾಕಾಂ. ಪೇಟ್‌ರಡಿ]ದಾಯ್ತೆಂದಂದು ನಿಶ್ಚೈಸಿ (ಲೋಕೋಪ. ೯-೨೦೭) ; ನರಡಾದೆತ್ತಿನಂತೆ ನಾಲಗೆಯನುರ್ಚುವ ಪರಿಜನಮುಮಂ (ಧರ್ಮಾಮೃ. ೩-೨೦೬). **ನರಡಿ** : ದನಕರುಗಳಿಗೆ ದೊಡ್ಡ ಜಾಡ್ಯ ಚೆಪ್ಪೆಜಾಡ್ಯ ನರಡಿ ಶಿಲೆ ವಗೈರೆ ಅಂಟುಜಾಡ್ಯಗಳು ವ್ಯಾಪಿಸಿರುವದುಂಟು (ಗ್ರಾಮಾಕ. ೧೦೫) ; ಹುಚ್ಚನಾಯಿಯ ಹುಚ್ಚು ; ಕೋಳಿ ಜಡ್ಡು ; ದನಗಳ ನರಡಿ . . . ಇತ್ಯಾದಿ (ವಿಕಾಸ. I, ನಿವೇದನ). **ನೆರಡಿ** : ದನ, ಕುರಿ, ಮೇಕೆ, ಕುದುರೆಗಳಿಗೆ ಬರುವ ರೋಗ ನೆರಡಿ. ಈ ರೋಗದ ಪ್ರಾಣಿಯ ಜೊಲ್ಲು, ಸಗಣಿಗಳಲ್ಲಿ ರೋಗಾಣುಗಳು ಇರುವುವು. ಕಟುಕರು, ಚರ್ಮಹದ ಕಾರರು, ತೊಗಲು ತುಪ್ಪಟಗಳನ್ನು ಕೂಡಹಾಕಿ ಕೆಲಸಮಾಡುವವರಿಗೂ ನೆರಡಿ ಅಂಟಬಹುದು (ಕವಿಕೋ. I, ೩೬೫). [ದೇ.॥ ತೆಲು. ನರಿಡಿ]

ನರಡುರೋಗ, ನರಡಿರೋಗ (ನಾ). = ನರಡು$_2$: ನರಡುರೋಗಕ್ಕೆ . . . ಸಿಂಧುರುಹಂ ಸಾಸಿವೆ . . . ಎಂಬಿವಂ ಕುಡುಗೆ ಸೈತಕ್ಕುಂ ಮನೋವೇಗದಿಂ (ಲೋಕೋಪ. ೯-೨೦೭). **ನರಡಿರೋಗ** : ಆಡುಗಳಿಗೆ ಬರುವ ಅಂಟುರೋಗಗಳಲ್ಲಿ ಬೊಬ್ಬೆರೋಗ, ದೊಡ್ಡರೋಗ, ನರಡಿರೋಗ ಮೊದಲಾದುವು ಮುಖ್ಯವಾದುವು (ಕವಿಕೋ. I, ೭೨೯). [ನರಡು$_2$ + ರೋಗ]

ನರತತಿ (ನಾ). ಜನರ ಗುಂಪು ; ಜನಸ್ತೋಮ ; ಜನಸಮೂಹ : ನರ[ಪಾಕಾಂ. ಸುರ]ತತಿ ನೊಂದಳಲ್ದು ಮೊಱೆಯೋ ಮೊಱೆಯೋ . . . ಎನುತುಂ ಸುರುಳ್ದು ಸೂಗುರಿಸಿ (ಗಿರಿಕ. ೬-೬). [ನರ$_2$ + ತತಿ$_2$]

ನರತಿ (ನಾ). ೧. ಕೂದಲು ನರೆತವಳು ; ಮುಂದುಕಿ : ಪೊಲತಿ, ನರತಿ, ಎಡತಿ – ಎಂಬ ಮೂಱು ಶಬ್ದದೆತ್ವಕ್ಕೆ ಸಮಾಸದಂತಿರತ್ವಂ (ಶಮದ. ೨೦೮ ಪ್ರಯೋ). ೨. ಬಿಳಿಯ ಚುಕ್ಕೆಗಳಿರುವ ಹಸು: ಆವನಾದೊಡಂ ಅಳಿಹಿದವನು ಗಂಗೆಯ ತಡಿಯಲು ಕವಿಲೆಯ ಕೊಂದ ಪಾಪದಲು ಹೋಹನು ನರತಿಯ ಕೊಂದ ಪಾಪದಲು ಹೋಹನು (ಸೌಇಇ. IX-1, ೩೬೬-೨೨; 1225). [<ನರ$_2$ + – ತಿ$_1$ (<–ಇತ್ತಿ)./ತುಳು. ನರತಿ]

ನರತೆ (ನಾ). ಗಂಡಸಿನ ಸ್ವಭಾವ ; ಪುರುಷಸ್ವಭಾವ : ನರತೆಯಣು ನಾರಿಯಲಿ ನಾರೀತ್ವ ನರನೊಳಣು ತಿರಿಚುತಿರುವುದು ಮನವ (ಮಂಕುಕ. ೪೦೩). [ನರ$_2$ + – ತೆ$_3$]

ನರತ್ವ (ನಾ). ಮನುಷ್ಯನಾಗಿರುವಿಕೆ : ನಿರ್ಜರನಾಗಿದ್ದು ನ[ಪಾಠಾಂ. ರ್ದಮ]ರತ್ವಮಂ ಪಡೆದು [ತಾಂ] ಸುಗ್ರೀವನಾಯ್ತಾ ವಸುಂಧರೆಯೊಳ್ತಾನೆನೆ (ಪುಣ್ಯಾಸ್ರ. ೪-೨). [ಸಂ.]

ನರದೇವ (ನಾ). ಅರಸ ; ರಾಜ : "ರಾಜಾ, ರಾಜನ್ಯಃ, ರಾಟ್ . . . ಪಾರ್ಥಿವಃ, ನರದೇವಃ, ಲೋಕಪಾಲಃ – ಈ ೧೨ ಅರಸು" (ಹಲಾಯು. ೬೯-೨೬೭) : ನರದೇವಕುರುಪತಿ ಮತ್ತೆ ನುಡಿದನು ನಗುತ ಸೈಂಧವಗೆ (ಕುಪ್ಯಾಡ್ರೋ. ೮-೫೩). [ನರ2 + ದೇವ]

ನರಧರ್ಮ (ನಾ). ಮನುಷ್ಯಧರ್ಮ ; ಮಾನವಸ್ವಭಾವ : ಪರಿತಪಿಸುವುದು ಜೀವ ಜೀವಸರಸವನೆಳಸಿ ನರಧರ್ಮಸೂಕ್ಷ್ಮವಿದು (ಮಂಕುಶ. ೪೨೫).

[ನರ2 + ಧರ್ಮ]

ನರನಂದನ (ನಾ). ಅರ್ಜುನನ ಮಗ; ಅಭಿಮನ್ಯು : ನರನುಂ ನರನಂದನನುಂ ಗುರುವುಂ ಗುರುಸುತನ ಮಾರ್ಯಭೂರಿಶ್ರವನುಂ ಸುರಸಿಂಧುಸುತನು ಮಿಂತಱುವರುಮತಿರಥರಲ್ತೆ (ಗದಾಯು. ೩-೫೦); ನರನಂದನನಾ ಸರಲಂ ಸರಭಸ[ದಿನೆ]ಚ್ಚು ನಿಜಶರದಿಂ ಭೀಕರಮಪ್ಪ ರಾಶಿಯಾದವು ಸರಲ್ಗಳಿಕ್ಕಡಿಸಿ ಬಿಟ್ಟು ಧುರಧಾರಿಣಿಯೊಳ್ (ಮಹಾನೇ. ೧೨-೧೨೦) ; ನರನಂದನನ ರಥವನು ತಱುಬಿ ನಿನ್ನಯ ತನಯನಡ್ಡೈಸಿದನು ಕೌರವರಾಯ ಖಾತಿಯಲಿ (ಕುಪ್ಯಾಡ್ರೋ. ೫-೦೯). [ನರ2 + ನಂದನ]

ನರನರ (ನಾ). ಒಂದು ಅನುಕರಣಶಬ್ದ : ತರುಗಳನು ಕೀಳುತ್ತೆ ಬುಡದೊಡನುರುಳಿಸುತ್ತಪ್ಪಳಿಸಿ ನೆಲದೊಳು ನರನರೆನ್ನಲು ರೆಂಬೆಗಳ ಮುರಿ ಮುರಿಯುತೆಸೆಯುತ್ತೆ (ರಾಮಾಸಂ. ೫-೩-೩೦).

ನರನಾಟಕ (ನಾ). ಮನುಷ್ಯನ ನಡೆವಳಿಕೆ : ನರನಾಟಕದ ಸಂಪಾದನೆಗೆ ಕಂಡನಿತ ದೇವರ ಪಾದಕುಸುರುವೆನು (ಶೊರರಾ. ೬-೪-೦೭).

[ನರ2 + ನಾಟಕ]

ನರನಾಥ (ನಾ). ಅರಸ ; ರಾಜ : ಘನರಥ ನರನಾಥನ ಬವಣೆಯೊಳ್ ತಾಮ್ರಚೂಳಂಗಳಾಗಿ ಪೋರುತ್ತುಮಾಮಿರೆ (ಶಾಂತಿಪು. ೯-೭೦ ವ) : ನರನಾಥಂಗಿತ್ತು ತನ್ನಂ ನೆನೆದ ಸಮಯದೊಳ್ ಬರ್ಪೆನಾನೆಂದು ಮೆಚ್ಚಂ ಚರಿತಾರ್ಥಂ ಭಕ್ತಿಭಾರಾನತಮಣಿಮಕುಟಂ ಹರ್ಷಬಾಷ್ಪಾಂಬುವರ್ಷಂ ಗರುಡಂ . . . ತನ್ನ ಲೋಕಕ್ಕೆ ಪೋದಂ (ಪಂರಾಮಾ. ೮-೬೬) ; ನರನಾಥರ್ ಬೆಸಕೆಯ್ವ ಪೆಂಡಿರೆಳಸಿರ್ಪ ರೂಢಿಯುಂ ಗಾಡಿಯುಂ . . . ಈ ಶೌರ್ಯಮುಂ ಧೈರ್ಯಮುಂ ಹರಿಯೊಳ್ ಕಾದಿ ಕೃತಾರ್ಥಮಕ್ಕುಂ (ಜಗವಿ. ೭-೩೮). [ನರ2 + ನಾಥ]

ನರನಾಥಾಗ್ರಣಿ (ನಾ). ರಾಜರಲ್ಲಿ ಶ್ರೇಷ್ಠನಾದವನು : ನರನಾಥಾಗ್ರಣಿ ನೀಂ ಮೊಗಕ್ಕೆ ಮುಳಿಸಂ ತರ್ಪನ್ನಮೇನುಂಟೆ ಸಂಗರಂ (ಜಗವಿ. ೭-೪೬) : ನರನಾಥಾಗ್ರಣಿ ತನ್ಮಧುಪ್ರಭುನುತಂ ತೀವ್ರಪ್ರತಾಪಂ ವಸುಂಧರೆಯಂ ರಕ್ಷಿಸುತಿರ್ಪಿನಂ (ನೇಮಿಪು. ೮-೨೮). [ನರನಾಥ + ಅಗ್ರಣಿ]

ನರನಾಯಕ (ನಾ).=ನರದೇವ: ನರನಾಯಕನಂ ನಿಂದಾನಿರದೀಗಳೆ ಕಾಂತನಂ ನೆರೆದೇನದಱಿಂದಿಲ್ಲಾ ನೆರೆದಿರ್ದಾಗೆನಾಗೆನೆ (ಕವಿರಾ. ೨-೦೨೩).

[ನರ2+ ನಾಯಕ]

ನರನಾರಾಯಣಾಶ್ರಮ (ನಾ). ಹಿಮಾಲಯಪ್ರದೇಶದಲ್ಲಿ ನರ ನಾರಾಯಣರು ತಪಸ್ಸು ಮಾಡಿದ ಆಶ್ರಮ, – ಪುಣ್ಯಕ್ಷೇತ್ರ; ಬದರಿಕಾಶ್ರಮ ; P ಸಹಸ್ರಕವಚನೆಂಬ ರಾಕ್ಷಸನು ಲೋಕಕಂಟಕನಾಗಿರಲು, ಅವನ ಸಂಹಾರಕ್ಕಾಗಿ ವಿಷ್ಣು, ನರ ಮತ್ತು ನಾರಾಯಣ ಎಂಬ ಇಬ್ಬರು ಋಷಿಗಳಾಗಿ ಅವತರಿಸಿದನು. ಆ ರಾಕ್ಷಸನು ಪಡೆದುಕೊಂಡಿದ್ದ ವರಕ್ಕೆ ಅನುಸಾರವಾಗಿಯೇ ಇಬ್ಬರು ಋಷಿಗಳೂ ಸಾವಿರ ಸಾವಿರ ವರ್ಷಗಳು ತಪಸ್ಸು ಮಾಡುತ್ತಾ ಒಂದೊಂದಾಗಿ ಅವನ ಕವಚಗಳನ್ನು ಭೇದಿಸುತ್ತಿದ್ದರು. ಕೊನೆಗೆ ಇನ್ನೊಂದು ಕವಚ ಉಳಿದಿದ್ದಾಗ ಅವನು ಕಾರಣಾಂತರದಿಂದ ಸತ್ತು ಕವಚದೊಂದಿಗೆ ಕರ್ಣನಾಗಿ ಹುಟ್ಟಿದನು. ವಿಷ್ಣುವಿನ ಅಂಶವಾದ ನರನು ಅರ್ಜುನನಾಗಿ ಹುಟ್ಟಿ ಕರ್ಣನನ್ನು ಕೊಂದನು. ನಾರಾಯಣನ ಅಂಶವಾದ ಕೃಷ್ಣನು ಅವನಿಗೆ ಸಹಾಯ ಮಾಡಿದನು ಎಂಬ ಕಥೆ ಪ್ರಚಾರದಲ್ಲಿದೆ. 'ನರ2' ಪರಾ. [ನರ2 + ನಾರಾಯಣ + ಆಶ್ರಮ]

ನರಪ (ನಾ). ದೊರೆ ; ರಾಜ : ಅರಿನರಪಶಿರೋದಳನಪರಿಣತೋಗ್ರಾಸಿ ಭಯಂಕರಕರರ್ (ಪಂಪಭಾ. ೦-೨೨) ; ನರಪ ನೀಂ ಮುನಿದುಂದು ಕೊಂದಪೆಯೆಲ್ಲರಂ (ಧರ್ಮಾಮ್ಯ. ೯-೨೦೪) : ನರಪರೊಳಗೊಂದು ಕೋಟಿಯುಮರೆ ಚಾಪಬಲಕ್ಕಧೀಶನಂ ದುಂದುಭಿಯಂ ಬರಿಸಿ (ಶಾಪ್ಯಾಪ. ೧೪೨). [ಸಂ.]

ನರಪತಿ (ನಾ).=ನರಪ : ನರಪತಿಯಂ ಕಪಿಪೃತನಾಪರಿವೃತನಂ ಜಲಧಿತಟದೊಳಣುವಂ ಕಂಡಂ (ಕವಿರಾ. ೨-೮೯) : ನರಪತಿ ಬೆನ್ನೊಳಿಟ್ಟೊನಿದಿರಾನ್ತುದು ವೈರಿಸಮೂಹಮಿಲ್ಲಿ ಮಚ್ಚರಿಸುವರೆಲ್ಲರು (ಎಕ. III, ಮಂಡ್ಯ. ೪೦-೦೭ ; 950) ; ನರಪತಿ ತೈಲಪಂ ಬೆಸಸೆ ಘೂರ್ಜರಸೇನೆಗೆ ಸೂಚಿಯಾನೆಯಂ ಪರಿಯಿಸಿ ಗೆಲ್ದಂ (ಗದಾಯು. ೨-೪೭) : ಗಜಪತಿ ಹಯಪತಿ ನರಪತಿಯೆನಿಪ ಮಹೀಪಾಲರಾಸ್ತಾನದಲ್ (ಎಇ. VI, ೨೦೬-೯ ; 1057) ; ನರಪತಿ ಬರ್ದಿನನೆಂದಾದರದಿಂ ಗೃಹಲಕ್ಷ್ಮಿ ಬೋನಮೆತ್ತಿದುದೆಂಬಂತಿರೆ ಚೋದ್ಯಮಪ್ಪಿನಂ ಬಿತ್ತರದೆತ್ತಿದ ಬೋನದಿರವು ಚೆಲ್ವಾಯ್ತಾಗಳ್ (ಸುಕುಮಾ. ೧೦-೨೩) ; ನರಪತಿ ತಾನೆ ತನ್ನ ಚತುರಂಗಬಲಂ ಬೆರಸೆತ್ತಿ ಬರ್ಪುದಂ . . . ಕಂಡು (ಪುಣ್ಯಾಸ್ರ. ೫-೩೨). [ನರ2 + ಪತಿ2]

ನರಪತಿತನಯ (ನಾ). ಅರಸನ ಮಗ ; ರಾಜಕುಮಾರ : ನರಪತಿತನಯನಾಯತತರಳಾಪಾಂಗದೊಳೆ ನೋಡಿ (ಕವಿರಾ. ೧-೬೦).

[ನರಪತಿ + ತನಯ]

ನರಪತಿಸೇನೆ (ನಾ). ಅರಸನ ಸೈನ್ಯ : ನರಪತಿಸೇನೆಯೊಳೆ ಪಲಂಬರೊಳಂ ಮುಖ್ಯಂಗೆ ಗುಣದೊಳತ್ಯಧಿಕಂಗೊರ್ವರೊಳಾನುಮಿಲ್ಲದೊರ್ವನೆ ಬರೆ ತನಗೆಂದಱಿತುಕೊಳ್ಗೆ ಶಕುನದ ಮತಮಂ (ಲೋಕೋಪ. ೧೨-೨).

[ನರಪತಿ + ಸೇನೆ]

ನರಪಶು (ನಾ) ಪಶುವಿಗೆ ಸಮಾನವಾದ ಮನುಷ್ಯ ; ಪಶುವಿನಂತೆ ವರ್ತಿಸುವವನು; ಅವಿವೇಕಿ: ವಿದ್ಯೆಯಿಲ್ಲದ ನರನು ನರಪಶುವವನ ಜನ್ಮ ನಿರರ್ಥಕರ (ಕುಪ್ಯಾಉ. ೩-೦೧೫) ; ಇರುಳು ಹಗಲು ನರಹರಿಯನು ತುತಿಸದೆ ನರಪಶುಗಳ ಕೊಂಡಾಡುತಿ (ಪುರಂದ. ೪-೧೨೫-೪) ; ಅವನ ಮಾತೆತ್ತಬೇಡಿರಿ ನನ್ನೆದುರು ! ನರಪಶು (ಕಮನೆ. ೧೧). [ನರ2 + ಪಶು]

ನರಪಾಲ, ನರಪಾಳ (ನಾ). = ನರಪ : ನರಪಾಲವ್ರಜವರ್ಮಜಾಲವಿಲಸನ್ಮಾಣಿಕ್ಯಮಾಲಾಂಶುಪಿಂಜರಿತಂ (ಆದಿಪು. ೧೪-೯೨) : ನರಪಾಲಂ ಮೇಘರಥಂ ಪರಿಪಾಲಿಸುತಿರ್ಪಂ (ಮಹಾನೇ. ೧೬-೪). **ನರಪಾಳ:** ನರಪಾಳ ಮೌಳಿಮಾಳಾಪರಸ್ಪರಪ್ರೋತರತ್ನರುಗ್ಜಾಳದಿನಂಬರಮಿದಪೂರ್ವಂ ದಿವ್ಯಾಂಬರಮಾದುದು ಭವನಲಕ್ಷ್ಮಿಗೇವೊಗಟ್ವೆನಿದಂ (ವರ್ಧಪು. ೫-೩) ; ನರಪಾಳ ಪುತ್ರಿಯೊರ್ವಳ್ ಸುರಪತಿಗಂ ರಮಣಿಯಾಗಿ ಸುಖದಿಂದಿರ್ದಳ್ (ಪುಣ್ಯಾಸ್ರ. ೩-೮). [ಸಂ.]

ನರಪಾಳ 'ನರಪಾಲ' ನೋ.

ನರಪಿಶಾಚಿ (ನಾ). ಮನುಷ್ಯಸ್ವರೂಪದಲ್ಲಿರುವ ಪಿಶಾಚಿ,–ದೆವ್ವ : ಎಲೆ ನರಪಿಶಾಚಿ! ನನ್ನನ್ನು ನನ್ನಿದಿರಿನಲ್ಲಿಯೇ ನಾಯಿಯೆಂದು ಕರೆಯುವಷ್ಟು ದಿಟ್ಟತನವು ನಿನಗುಂಟಾದುದೇ ? (ಪಿಶಾಪ. ೨೭). [ನರ2 + ಪಿಶಾಚಿ]

ನರಪಿಳ್ಳೆ (ನಾ). ೧. ಚಿಕ್ಕ ಹುಡುಗ. ೨. (ಆಲಂ) ಸಾಧಾರಣ ವ್ಯಕ್ತಿ ; ಮನುಷ್ಯ ಮಾತ್ರ; ಸಾಮಾನ್ಯ ಮನುಷ್ಯ: ಅವರು ಅಲ್ಲಿಗೆ ಬಂದಿದ್ದದ್ದು ಒಂದು ನರಪಿಳ್ಳೆಗೂ ಗೊತ್ತಾಗಲಿಲ್ಲ (ವಚಭಾ. ೫೦) : ಒಂದು ನರಪಿಳ್ಳೆಯ ಧ್ವನಿಯೂ ಎಲ್ಲಿಯೂ ಕೇಳಿಸುತ್ತಿಲ್ಲ (ಪಾರಾಕ್ಯ. ೪೩) ; ನಾರಣಪ್ಪನ

ಸಾವನ್ನು ಕೇಳಿ . . . ಅಗ್ರಹಾರದ ಒಂದು ನರಪಿಳ್ಳೆಗೂ ವ್ಯಥೆಯಾಗದಿದ್ದರೂ ಕೂಡ ಎಲ್ಲರ ಹೃದಯದಲ್ಲು . . . ಕಳವಳ ಹುಟ್ಟಿತು (ಸಂಸ್ಕಾರ. ೩). [ನರ$_2$+ಪಿಳ್ಳೆ]

ನರಪುಂಗವ (ನಾ). ಮನುಷ್ಯರಲ್ಲಿ ಶ್ರೇಷ್ಠನಾದವನು; ಉತ್ತಮ. [ನರ$_2$ + ಪುಂಗವ]

ನರಪೇತ, ನರಪೇತು (ನಾ). ಬದುಕಿದ್ದೂ ಹೆಣದಂತಿರುವವನು; ತೀರ ಕೃಶನಾದವನು; ಜೀವಚ್ಛವ; ಕೈಲಾಗದವನು; ಅಶಕ್ತ; ದುರ್ಬಲ: ನರಪೇತರ ನರಕದಲ್ಲಿ ಹೊಸೆಯದಿರೀ ಕಗ್ಗ (ಅರಳು. ೪೧೨-೦೩); ಬರಿಯ ಎಮಕೆ; ನರಪೇತ ಕದಿರುಕಡ್ಡಿ (Bag of Bones. ಇಂಕನಿ). **ನರಪೇತು**: ಬೀತ ನರಪೇತುಗಳಿರಾ! ಬಾತಂಥ ಪ್ರೇತಗಳಿರಾ! (ಗರಿ. ೩೦-೪). [ನರ$_2$ + ಪೇತ]

ನರಪೇತಲ, ನರಪೇತಲು (ನಾ). ೧.=ನರಪೇತ: ಹಲವಾರು ರೋಗಿಗಳು ನರಪೇತಲರಾಗಿರುತ್ತಾರೆ (ಮನೋನಂ. ೩೦೧); ಕಾಲಬಲವಿಲ್ಲದ ಶಿಖಂಡಿ ನರಪೇತಲ ಗೊರಸುತುಳಿತಕ್ಕೆ ಸಿಕ್ಕಿಬಿದ್ದ (ಪಂಡಮ. ೨೦-೦೩); ಅವನು ಮೂಳೆ ಚಕ್ಕಳಗಳ ಉದ್ದನೆಯ ನರಪೇತಲ (ಪುನರು. ೪೦೩); ಬಿಸಿಲು ಮತ್ತು ಹೆಸಿವಿನಿಂದ ಇನ್ನಷ್ಟು ನರಪೇತಲನಾಗಿ ಮನೆಗೆ ಬಂದು (ಸಂಸ್ಕಾರ. ೩೩). ೨. ಕೃಶವಾದುದು; ಸೊರಗಿದುದು: ಹಸಿರಿನ ಹೆಸರು ನೆನಪಿಗೂ ಬಾರದ ಹಾಗೆ ಬತ್ತಲೆ ನಿಂತ ನರಪೇತಲ ಮರಗಳು (ಹೊಸಕ್ಷಿ. ೨೭೪). **ನರಪೇತಲು**: ೧. ಹೆಸರು ಭೀಮಸೇನ. ನೋಡುವುದಕ್ಕೆ ನರಪೇತಲು (ಹೊಸಬೆ. ೧೪).

ನರಪೇತಲ ನಾರಾಯಣ = ಕೃಶನಾಗಿರುವವನು; ನರಪೇತ: ಎಷ್ಟೇ ತಿಂದರೂ ಅವನು ನರಪೇತಲ ನಾರಾಯಣನಾಗಿದ್ದಾನೆ (ರೂಢಿ). [<ನರಪೇತ]

ನರಪೇತಲು 'ನರಪೇತಲ' ನೋ.

ನರಪೇತು 'ನರಪೇತ' ನೋ.

ನರಪೋತ (ನಾ). ಅಲ್ಪನಾದ ಮನುಷ್ಯ: ಆ ನರಪೋತಂಗಳ್ಗೆಲ್ಲ ನಾನಂಜಲುಂಟೆ (ಪಾರ್ತಿಸು. ೬೨). [ನರ$_2$ + ಪೋತ$_2$]

ನರಪ್ರಾಣಿ (ನಾ). = ನರಜಂತು: ಸೊಗಸು ಬೇಡದ ನರಪ್ರಾಣಿಯೆಲ್ಲಿ ಹುದಯ್ಯ? (ಪುಂಕುಳ. ೪೪೨). [ನರ$_2$ + ಪ್ರಾಣಿ]

ನರಪ್ರೇತ (ನಾ). ೧. ಮನುಷ್ಯನ ಹೆಣ. ೨. (ಆಲಂ) ಜೀವಚ್ಛವ; ಹೇಡಿ: ಉದಾರಹೃದಯಿಗಳಾಗಿರಬೇಕಾದಂಥ ತರುಣರು ಕೂಡ ನರಪ್ರೇತರೇ ಆಗಿದ್ದಾರೆ (ಶ್ಯಾಮಹಾ. ೨೩). [ನರ$_2$ + ಪ್ರೇತ]

ನರಬಲ (ನಾ). ಪದಾತಿ ಸೈನ್ಯ; ಕಾಲಾಳುಗಳ ಪಡೆ: ನರಬಲದೊಳ್ ತುರಂಗಬಲದೊಳ್ ರಥಸಂಕುಲದೊಳ್ ಮದಾಂಧಕುಂಜರಕುಲದೊಳ್ ಸಿರಂ ಸಿಡಿಯೆ ಸೀಳೆ ಬಸುರ್ಕಡಿಯೋಗಿ ನಾಳಿ ಕೀಲ್ ಸುರಿತರೆ ಮಸ್ತಕಸ್ಥಾನದ ಮೌಕ್ತಿಕಮುಣ್ಮುವಸೃಗ್ಜಲಂಗಳೊಳ್ ಬೆರಸಿ ಸರಲ್ ಸವತ್ರಮೆನೆ ಸಂದುವು ಸಂಗರರಂಗಭೂಮಿಯೊಳ್ (ಮಹಾನೇ. ೭-೧೯). [ನರ$_2$ + ಬಲ$_2$]

ನರಬಲಿ (ನಾ). ಭೂತ, ಪ್ರೇತಗಳ ಅಥವಾ ದೇವತೆಗಳ ಪ್ರೀತ್ಯರ್ಥವಾಗಿ ಕೊಡುವ ಮನುಷ್ಯನ ಬಲಿ; ಮನುಷ್ಯನನ್ನು ಕ್ಷುದ್ರದೇವತೆಗಳ ಮುಂದೆ ಪ್ರಾಣಿಗಳನ್ನು ಕೊಲ್ಲುವಂತೆ ಕೊಲ್ಲುವುದು: ನರಬಲಿಯನಿತ್ತ ಬಳಿಕಾ ಬಿಸಿಯ ನೆತ್ತರಿಂ ಪೊರೆದ ಮಣ್ಣಿಂದಲ್ಲದೀ ಕೋಂಟೆ ನಿಲ್ಲದೆನೆ (ಸಮ್ಯಕೌ. ೨-೫೪); ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು ನರಬಲಿಯೇ ಬೇಕು! (ಗರಿ.೬೬-೦೩); ಖಾಂಡರು – ಎಂಬ ಜನರು ಪೂರ್ವದಲ್ಲಿ ನರಬಲಿ ಕೊಡುತ್ತಿದ್ದರು (ಭೂಗೋಳ. ೮೧); ನಿನ್ನ ಮಕ್ಕಳಲ್ಲಿ ಒಬ್ಬನನ್ನು ನರಬಲಿ ಗೋಸ್ಕರ ಕೊಡು (ನೀತಿಚಿಂ. XIV, ೦೩). [ನರ$_2$ + ಬಲಿ$_2$]

ನರಭಕ್ಷಕ (ನಾ). ೧. ಮನುಷ್ಯನನ್ನು ತಿನ್ನುವ ಪ್ರಾಣಿ; ಹುಲಿ, ಸಿಂಹ ಇತ್ಯಾದಿ: ಒಂದು ಸಿಂಹವು ಮನೆ ಮಾಡಿಕೊಂಡು. ಗಂಡಾತರವನ್ನುಂಟು ಮಾಡುತ್ತಿದೆ . . . ಆ ನರಭಕ್ಷಕನ ಹಾವಳಿಯನ್ನು ತಡೆಗಟ್ಟು (ಮಹಿಸ.೮೮). ೨. ಮನುಷ್ಯನ ಮಾಂಸವನ್ನು ತಿನ್ನುವ ವ್ಯಕ್ತಿ. ೩. ರಾಕ್ಷಸ: (ಕಿ). [ನರ$_2$ + ಭಕ್ಷಕ]

ನರಭಕ್ಷಕಿ (ನಾ). ಮನುಷ್ಯರ ಮಾಂಸವನ್ನು ತಿನ್ನುವ ಹೆಂಗಸು: ನನ್ನನ್ನೇಕೆ ತಿಂದುಬಿಡುವಂತೆ ನೋಡುತ್ತೀಯ. ನೀನೇನು ನರಭಕ್ಷಕಿಯಾ? (ಹಸುಹೊ. ೨೦೩). [ನರಭಕ್ಷಕ+ –ಇ$_2$]

ನರಭಕ್ಷಣ (ನಾ). ೧. ಮನುಷ್ಯನನ್ನು ತಿನ್ನುವುದು: ಮನುಷ್ಯನನ್ನು ತಿನ್ನುವಿಕೆ: ನರಭಕ್ಷಣ (Anthropophagy. ಇಂಕನಿ). ೨. (ಆಲಂ) ಜನರಿಗೆ ಮೋಸ ಮಾಡುವುದು: ಮಂತ್ರಿಮಂಡಲ ಮತ್ತು ಸರ್ಕಾರದ ಇಲಾಖೆಗಳಲ್ಲಿ ನರಭಕ್ಷಣಪ್ರವೃತ್ತಿಯ ಅಂಕುರಾರ್ಪಣೆಯಾಗುತ್ತಿತ್ತೇ ಹೊರತು, ಸೈಬೀರಿಯಾದ ಪೌಗುನೆಲದಲ್ಲಲ್ಲ (ಪುನರು. ೩೩೪). [ನರ$_2$ + ಭಕ್ಷಣ]

ನರಭಾಲಪಟ್ಟ (ನಾ). ಮನುಷ್ಯನ ಹಣೆ: ಸಾಧ್ಯಪಡದಾರಿಗಂ ನರಭಾಲಪಟ್ಟವನು ಶುದ್ಧಪಡಿಸಲು ತೊಡೆದು ಪೂರ್ವದೆಲ್ಲವನು (ಮಂಕುಳ. ೬೩೩). [ನರ$_2$ + ಭಾಲಪಟ್ಟ]

ನರಭೋಗ (ನಾ). ಮಾನವನಾಗಿ ಪಡೆಯುವ ಅನುಭವ: ಚರಮವೃತ್ತಿಯೊಳಗಾವ ಭಾವವು ಸ್ಫುರಿಸುವುದೋ ಅಂತಾ ಜನ್ಮಪ್ರಾಪ್ತಿಯಹುದೆಂದು ನರಭೋಗ ಶಿಲಾಭೋಗ ಪ್ರತಿಮಾಭೋಗ ದ್ರವ್ಯಭೋಗಾದಿಗಳ ವೈಚಿತ್ರ್ಯಮುಳ್ಳ ಲೋಕದ ಷ್ಟಾಂತಂಗಳಂ ನಂದಿ ನಾರದ ಭರತ ದೇವಲಾದಿ ಪುರಾವೃತ್ತಗಳಂ ಸಮನ್ವಯಗೊಂಡು (ವಿವೇಕ. ೧೯೮). [ನರ$_2$ + ಭೋಗ]

ನರಮ್, ನರಂ, ನರಮು, ನರ್ಮ$_2$ (ಗು). ೧. ಕೋಪ ಮೊದಲಾದುವುಗಳ ಆವೇಶ ಇಳಿದ; ಮೆತ್ತಗಾದ; ತಣ್ಣಗಾದ: ತನಗ ಪ್ರತಿಕಾರನ ಇಲ್ಲಾ ಅಂತ ತ್ಯಾಮರಾಯಗ ಅನಿಸಿದರ ತಾನ ನರಮ್ ಆಗತಾನ (ದೀಪಹ. II, ೧೦೭). **ನರಂ**: ೧. ಗರುಡಮರಿಯನ್ನು ಕಂಡ ಹಾವಿನಂತೆ "ನರಂ" (ಮೆತ್ತಗೆ) ಆಗುತ್ತಾನೆ (ಬೆಸ್ತಳ. ೦೮); ಮರುಮಾತಾಡದೆ ನರಂ ಆದ ನರಿಯಂತೆ ಈ ನರೋತ್ತಮ ತೊಲಗಿದ (ಮಾಮನೆ. ೦೧೬). **ನರಮು**: ೨. ಮೃದುವಾದ; ಕೋಮಲವಾದ; ಮೆತ್ತನೆಯ: "ನರಮು = ಮೆತ್ತನ್ನ" (ಜಾನಕೋ. ೯). ೩. ನಮ್ರನಾದ; ವಿಧೇಯನಾದ. **ನರ್ಮ$_2$**: ೨."ನರ್ಮ = ಮೆತ್ತನ್ನ" (ಜಾನಕೋ. ೯). (ನಾ). ೪. ದುರ್ಬಲತೆ; ನಿಶ್ಶಕ್ತಿ: ಅಧರ್ಮಿಗಳ . . . ಮೋಹಿಸುವ ಕಾಮಾಂಧರಟ್ಟುಳಿಯನು ಒರ್ಮೆಯಾಂ ಪೊರಲಾರೆನೆಂದಿಳಾಭಾಮಿನಿಯು ನರ್ಮದಿಂ ಕರಗಿ ಕಂದುತ್ತ ಮಿಡುಕುವಳು (ದುರಪು. ೨-೦೮).

ನರಮುಗೊಳಿಸು = ಮೆತ್ತಗೆಮಾಡು; ಬಗ್ಗುಬಡಿ: ಸತ್ಯಪ್ರತಿಜ್ಞರಾದ ರಜಪೂತರನ್ನು ಕುಟಿಲನೀತಿಯಿಂದ . . . ಸ್ವಾಧೀನಪಡಿಸಿಕೊಂಡು ನರಮುಗೊಳಿಸುತ್ತ ತನ್ನ ನೇತೃತ್ವದ ಕೆಳಗೆ ಇಟ್ಟುಕೊಳ್ಳಲುಪಕ್ರಮಿಸಿದನು (ಮಾತ್ಯಭೂ. ೩). [←ಹಿಂ. ಮರಾ. ಗುಜ. ನರಮ್; ಪಾರ. ನರ್ಮ್]

ನರಮಂಡಲ (ನಾ). = ನರವ್ಯೂಹ: ಯಾವುದೋ ಒಂದು ತೇಜೋವಾಹಿಯು ನರಮಂಡಲವನ್ನೆಲ್ಲಾ ಆಕ್ರಮಿಸಿ ಕೌಶಿಕನೆನ್ನುವ ತನ್ನನ್ನು ಕಬಳಿಸುವಂತೆ ತೋರುತ್ತಿದೆ (ಮಹಾಣ. ೩೬); 'ಥಿಯಾಮಿನ್' ಮನಸ್ಥಿತಿಯ ಜೀವಾತು. ನರಮಂಡಲದ ಮತ್ತು ಹೃದಯದ ಕ್ರಿಯೆಗಳು ನಡೆಯಬೇಕಾದರೆ ಇದು ಅಗತ್ಯ (ಅಡುಸೌ. ೬೦); ಶರ್ಕರಪಿಷ್ಟಾದಿಗಳಿಂದ ದೇಹಕ್ಕುಂಟಾಗುವ ಪ್ರಯೋಜನಗಳು . . . ಹೃದಯ, ನರಮಂಡಲ ಮತ್ತು ಪಿತ್ತಜನಕಾಂಗಗಳ ಆರೋಗ್ಯಕ್ಕೆ ನೆರವಾಗುವುದು (ಗೃಹವಿ. ೧೮). [ನರ$_1$ (<ನರವು) + ಮಂಡಲ]

ನರಮನುಷ್ಯ (ನಾ). ಸಾಮಾನ್ಯಮನುಷ್ಯ ; ಮನುಷ್ಯಮಾತ್ರ : ನೀರು ಜಲಚರದೆಂಜಲು ಮೃಗಪಕ್ಷಿಗಳೆಂಜಲು ಬಳಸಹೋದಲ್ಲಿ ಕೈಕಾಲ ತೊಳೆದು ಬಾಯ ಮುಕ್ಕುಳಿಸುವಲ್ಲಿ ನರಮನುಷ್ಯರೆಂಜಲು (ವಚಸಂ. ೩೭೯-೪೨). [ನರ$_2$ + ಮನುಷ್ಯ]

ನರಮಹಿತ (ನಾ). ಜನರಿಂದ ಗೌರವಿಸಲ್ಪಟ್ಟವನು ; ಜನರ ಆದರಕ್ಕೆ ಪಾತ್ರನಾದವನು : ನರಮಹಿತಾ [ಪಾಠಾಂ. ಪಾ] ನಿನಗೇನಹಿತರು ಮೊಳರೇ ಸತತ ಪರಹಿತಾಚಾರಪರಾ (ಕವಿರಾ. ೧-೮೦).

[ನರ$_2$ + ಮಹಿತ]

ನರಮಾಂಸ (ನಾ). ಮನುಷ್ಯನ ಮಾಂಸ : ಹಿರಿಯರು ನರಮಾಂಸವ ಭುಂಜಿಸುವರೆ (ಬಸವ. ೨೩೦) ; ಕುಂಭಂ ನರಮಾಂಸದ ಸವಿಯಿಂ ಮನುಜ ರೆಲ್ಲರಂ ಗುಪ್ತದೆ ಕೊಲ್ವುದನಱಿದು (ಶಾಂತೀಶ್ವ. ೫-೬೮) ; ಮಾಂಸವಾಗಲೆ ವೇಳ್ಕವಶ್ಯಂ ಮಾಂಸಮುಂ ನರಮಾಂಸಂ (ಬಸಪು. ೨೪-೭) ; ರಕ್ತದ ಜಲಪಾತ ! ನರಮಾಂಸದ ನಾತ ! (ಪಾಂಡಬ. ೬೯-೯). [ನರ$_2$ + ಮಾಂಸ]

ನರಮಾಂಸಭಕ್ಷಕ (ನಾ). ಮನುಷ್ಯನ ಮಾಂಸವನ್ನು ತಿನ್ನುವವನು ; ನರಭಕ್ಷಕ: ಈ ಮರ್ಮವನಱಿಯದ ಹಿರಿಯರು ನರಮಾಂಸಭಕ್ಷಕರಯ್ಯಾ (ಚನ್ನವ. ಕ. ೩೪೦-೭೦೬). [ನರಮಾಂಸ + ಭಕ್ಷಕ]

ನರಮಾಂಸಭುಂಜಕ (ನಾ). = ನರಮಾಂಸಭಕ್ಷಕ : ಅವನು ಗುರುದ್ರೋಹಿ ಆಚಾರಭ್ರಷ್ಟ ವ್ರತಗೇಡಿ ನರಮಾಂಸಭುಂಜಕ (ಚನ್ನವ. ಕ. ೨೨೬-೫೦೦).

[ನರಮಾಂಸ +ಭುಂಜಕ]

ನರಮಾಲೆ (ನಾ). ಒಂದು ಬಗೆಯ ರೋಗ : ಯವಕ್ಷಾರವನ್ನು, ಇಂಗನ್ನು, ಸುಣ್ಣವನ್ನೂ ಲೇಪಮಾಡೆ ನರಮಾಲೆ ಕರಗಿಹೋಗುವುದು . . . ಪುಣುಗನ್ನೂ ಬೆಣ್ಣೆಯನ್ನೂ ಕೊಡಲು ಗಂಡಮಾಲೆ ಹೋಗುವುದು. ನರಮಾಲೆ ಕರಗಿಹೋಗುವುದು (ವಿವೈವಿ. ೭೯). 'ನರವುಲಿ' ಪರಾ. [?]

ನರಮು 'ನರಮ್' ನೋ.

ನರಮೃಗ (ನಾ). ೧. = ನರಪಶು : ದ್ಯೂತ ಮೃಗಯಾ ಸ್ತ್ರೀವ್ಯಸನ ನೃಪ ಜಾತಿಗೋಸುಗರಾದವಿದಱ ರಸಾತಿಶಯವಱಿಯದವ ನರಮೃಗ (ಕುಪ್ಯಾಸ. ೦೩-೩೮) ; ನರಮೃಗಾಧಮನೆತ್ತಲುನ್ನತಪರಮತತ್ತ್ವವಿದೆತ್ತಲು (ಕುಪ್ಯಾಭೀ. ೩-೭೦). ೨. = ನರಸಿಂಹ ೧ : ಗಿರಿಯ ನೆಗಹಿ ಧರಣಿಯ ತಂದು ನರಮೃಗ ಬಲಿಬಂಧ . . . ಪುರಂದರವಿಠಲ ಮನೆಗೆ ತಾ ಬಂದ (ಪುರಂದ. ೦-೮೫-೩).

ನರಮೃಗರೂಪ = ಮನುಷ್ಯನ ದೇಹ ಹಾಗು ಸಿಂಹದ ಮುಖವುಳ್ಳ ರೂಪ ; ನರಸಿಂಹ : ತರಳ ಕರೆಯಲು ನೀ ತ್ವರಿತದಿ ಕಂಭದಿ ಬಂದು ನರಮೃಗರೂಪದಿಂದವನ ಕಾಯ್ದೆ (ಪುರಂದ. ೩-೦೭೦-೫). ನರಮೃಗಶರೀರ= ನರಮೃಗರೂಪ : ಪರಮಪುರುಷ ಭವಭುಜನಕೇಶವ ನರಮೃಗಶರೀರ ನಮೋ ನಮೋ (ಪುರಂದ. ೩-೪೧-೦). [ನರ$_2$ + ಮೃಗ]

ನರಮೇಧ (ನಾ). ೧. ಮನುಷ್ಯರನ್ನು ಬಲಿಕೊಡುವ ಯಜ್ಞ : ರಾಕ್ಷಸೋತ್ತಮರೊಳಾರ್ಪಿಂತೆ ನರಮೇಧಮಖದೀಕ್ಷೆಯಂ ಕೈಕೊಂಡರಿದಕೆ ಋತ್ವಿಜರಾರು (ಜೈಮಿಭಾ. ೦೬-೨೭) ; ನಿನ್ನ ನರಮೇಧಕಾರ್ತ್ವಿಜ್ಯವಂ ಮಾಳ್ಪರಿದಕೆನ್ನನಾಚಾರ್ಯನಾಗಿಯೆ ವರಿಸು ತದ್ಯಾಗಮಂ ನೆಗಳ್ಚು (ಜೈಮಿಭಾ. ೦೬-೨೯) ; ನರಬಲಿ ನರಮೇಧವು ಕೇಳು ಅಶ್ವಮೇಧಕೂ ಸರಿಮೇಲು (ಗಿರಿ. ೬೯-೦೬). ೨. (ಆಲಂ) (ಹಿಂದೆ ಮುಂದೆ ನೋಡದೆ) ಮನುಷ್ಯರನ್ನು ಕೊಲ್ಲುವುದು : ಎಲ್ಲೆಲ್ಲೂ ಗೋಳಿಬಾರ್, ಮಕ್ಕಳು ಮರಿಗಳೆನ್ನದೆ ಗುಂಡಿಕ್ಕಿ ಕೊಲ್ಲುವ ನರಮೇಧ (ವಿದ್ಯಾರ. ೧೨೭) ; ಕತ್ತಿ ಹಿರಿದಾಗ ಎಲ್ಲವನ್ನೂ ಮರೆತು ನರಮೇಧವನ್ನಾಚರಿಸುವೆನು (ದಾನಚಿಂ. ೦೪೫) ; ಅವನೆಸಗಿದ ಕ್ರೂರ ನರಮೇಧದ ಪ್ರತಿಫಲವಾಗಿ ಪಡೆದಿದ್ದ ಬಿಳಿಯ ಕ್ರೂಜೆ (ಪುನರು. ೩೫೬). [ನರ$_2$ + ಮೇಧ]

ನರಯಜ್ಞ (ನಾ).=ನರಮೇಧ ೨ : ಈ ನರಯಜ್ಞ ಎಂಥಾ ಔತನ ಅವರಿಗೆ ! (ವೀರಯೋ. ೩೦). [ನರ$_2$ + ಯಜ್ಞ]

ನರಯಣ 'ನಾರಯಣ' ನೋ.

ನರಯುಗ್ಮ (ನಾ). ೧. ಇಬ್ಬರು ಮನುಷ್ಯರು. ೨. [ಜ್ಯೋತಿ] ಮಿಥುನ ರಾಶಿ : ಶನಿ ಮಕರಲಗ್ನದೊಳ್ . . . ದನುಜೇಜ್ಯಂ ತೊಲೆಯೊಳ್ ಸೌಮ್ಯನಿರಲ್ ನರಯುಗ್ಮದೊಳ್ ನರಾಧಿಪನಕ್ಕುಂ (ಜಾತತಿ. ೦೨-೫).

[ನರ$_2$ + ಯುಗ್ಮ]

ನರರಾಕ್ಷಸ (ನಾ). ರಾಕ್ಷಸನಂತೆ ನಿರ್ದಯನಾದ ಮನುಷ್ಯ : ಆ ನಿಸರ್ಗವನ್ನು ನರರಾಕ್ಷಸನಂಥ ಅಧಮ ಅಧಿಕಾರಿಗಳು ಹೇಗೆ ಕಲುಷಿತಪಡಿಸಿದುರಂತಕ್ಕೆ ಬಡಜನರನ್ನು ದೂಡುವರೆಂಬುದು . . . ವರ್ಣಿತವಾಗಿದೆ (ಕಾಲೂರ. ೧ ಮುನ್ನುಡಿ) ; ಹೆಂಡತಿಯ ವಿಕೃತಕೋಪವು ಅವರನ್ನು ನರರಾಕ್ಷಸನನ್ನಾಗಿ ಮಾಡಿಸಿತ್ತು (ಕಾವೇರಿ. ೮೪). [ನರ$_2$ + ರಾಕ್ಷಸ]

ನರರಾಶಿ (ನಾ). = ನರಲಗ್ನ : ಕನ್ಯಾ ತುಲಾ ಮಿಥುನ ಧನುಸ್ಸು (ಪೂರ್ವಾರ್ಧ) ಕುಂಭ ಇವು ನರರಾಶಿಗಳು (ಜಾತತಿ. ೧-೩೦ ಟೀಕೆ) ; ಮಿಥುನ ಕನ್ಯಾ ತುಲಾ ಧನುಸ್ಸಿನ ಪೂರ್ವಾರ್ಧ ಕುಂಭ ಇವು ನರರಾಶಿಗಳು (ಜಾತತಿ. ೪-೧೯ ಟೀಕೆ). [ನರ$_2$ + ರಾಶಿ]

ನರರೋಗ (ನಾ). ನರಗಳ ದೌರ್ಬಲ್ಯದಿಂದ ಉಂಟಾಗುವ ಒಂದು ಬಗೆಯ ರೋಗ ; ನರವ್ಯೂಹದ ಅಸ್ವಸ್ಥತೆಯಿಂದ ಉಂಟಾಗುವ ಮನೋವೈಕಲ್ಯ : ಇವೆರಡೂ ಲಕ್ಷಣಗಳು ಮಂದ ಅಥವಾ ತೀರ ಕಡಿಮೆ ಪ್ರಮಾಣದಲ್ಲಿದ್ದರೆ, ಸಾಮಾನ್ಯವಾಗಿ ಅಂತಹ ಮನೋವೈಕಲ್ಯಗಳನ್ನು ನರರೋಗ(Neurosis)ಗಳೆಂದು ಕರೆಯುತ್ತಾರೆ (ಮನೋರೋ. ೨೧) ; ನರರೋಗ ಪ್ರವೃತ್ತಿಗೂ (ನ್ಯೂರೋಟಿಸಿಸಂ) ಶರಣಾಗತಿಗೂ ನೇರವಾದ ಸಹಸಂಬಂಧವಿದೆಯೆಂದು . . . ಸಿದ್ಧಪಡಿಸಿದ್ದಾನೆ (ಕವಿಕೋ. I, ೭೩೫).

[ನರ$_1$ (<ನರವು) + ರೋಗ]

ನರರೋಗಿ (ನಾ). ನರರೋಗವುಳ್ಳವನು ; ಸೌಮ್ಯರೂಪದ ಮನೋವೈಕಲ್ಯದಿಂದ ಕೂಡಿದವನು: ನರವ್ಯಾಧಿಯುಳ್ಳ(ವನು) ; ನರರೋಗಿ: ವಿಪರೀತಸೂಕ್ಷ್ಮವೇದಿಯಾದ (Neurotic. ಇಂಕನಿ) ; ನರರೋಗಿಯಲ್ಲಿ ಸಮಾಜಭಾವನೆಯು ಚೆನ್ನಾಗಿಯೇ ಇರುತ್ತದೆ (ಮನೋರೋ. ೨೦).

[ನರ$_1$ (< ನರವು) + ರೋಗಿ]

ನರಲ್$_1$, ನರಲು, ನರಳ್, ನರಳು$_1$, ನೆರಳ್$_1$, ನೆರಳು$_1$ (ಕ್ರಿ). ೧. ನೋವಿನಿಂದ ಧ್ವನಿಮಾಡು ; ಮುಲುಕು ; ಒರಲು : "ನರಲ್ – ವೇದನಧ್ವನೌ" (ಶಮಧಾ) ; ಸೂಲದೊಳ್ ನೊಂದು ನರಳ್ವ [ಲ್ವ] ಕಳ್ಳರಿಂ (ಕಾವ್ಯಸಾ. ೫೨೯ ಕೂದ್ರಕ) ; ಎನ್ನ ಭಯಂಕರದುಡರತ್ನಹತಿಯಿಂ ಗಿರಿ ನೊಂದು ನರಲ್ವ [ಪಾಠಾಂ. ಳ್ವ] ಮಾಟ್ಕಿಯಂತಾಯ್ತಾಗಳ್ (ಆದಿಪು. ೧೩-೩೭) ; ಸುರಿವ ಸರಲ್ ನರಲ್ವ ಭಟರೆತ್ತಮುರುಳ್ವ ದಟು (ಪಂಪಭಾ. ೯-೫೭) ; ಸೂತಸುತನೊಂದುಗ್ರೇಷುವಿಂ ತಿಣ್ಣವೆಂಚ್ಚೊಡನಾರ್ದಂ ನಸು ಮೂರ್ಛೆವೋಗಿ ರಥದೊಳ್ ಭೀಮಂ ನರಲ್ವನ್ನೆಗಂ (ಪಂಪಭಾ. ೦೦-೦೪೩); ಕುರುರಾಜಂ ತೊಡೆವೇನೆಗೆ ನರಳ [ಲ] ನೆ ಕುಱುವಾದ ತೊಡೆಯ ಬೇನೆಗೆ ಕಂಡರ್ ನರಳ್ವಂತೆ (ಗದಾಯು. ೯-೧೯) ; ಬೆರಲೆರಲೊರಲ್ಕೊರಲ್ಸರಲ್ . . . ನರಲುಂ ಮುಂಗೈ ಸರಲುಂ ಲಾಂತಮಿವಂ ಗ್ರಾಮ್ಯರಱಿಯದುಚ್ಚರಿಸುವರ್ ಕುಳಾಂತಭ್ರಮೆಯಿಂ (ಶಮದ. ೨೮) ; ಅದೊ ಕೇಳಿಂ, ಆ ನರಲ್ವ ನರಲ್ಗಳನ್ ! (ಅಶ್ವತ್ಥಾ. ೧೪-೨೪). ನರಲು : ೧. ಅರೆನುಡಿವ ಸರಸವಾಡುವ ನರಲುವ ಪ್ರಯ್ಯಲಿಡುವ . . . ಪಲುಂಬುವ ನುಡಿ ವಿರಸಮುಪಶ್ರುತಿಯೊಳೀಯವೆಂತುಂ ಫಲಮಂ (ಲೋಕೋಪ. ೦೨-೫೪). ನರಳ್ : ೧. ನರಳುತ್ತುಂ ಸುಯ್ಯುತ್ತುಂ . . . ಸೇದೆಯ ನೇಣಂ ಕರಗಮನೊಲ್ದಿತ್ತು ಸೇದಿ ನೀರ್ಗುಡಿಯೆಂದಳ್ (ದಶಕು. ೦೦-೮೧) ; ನರಳ್ವ ಮಹಾಸ್ತ್ರಜಾಳ

ಹತಿಯಿಂ ತಲೆ ತುಂಡಿಸಿ ಬರ್ದು ಧಾತ್ರಿಯೊಳ್ ಪೊರಳ್ದ . . . ಅತಿಭೀತರಂ ಜಱದು ಝಂಕಿಸುತಿರ್ದುವು ಭೂತಸಂಕುಳಂ (ತ್ರಿಪುವಿ. ೨೪-೩೫); ನಿಲ್ಲದೆ ನರಳ್ದ ಪಸುಳೆಯ ನಿರ್ಮಲಾಸ್ಯಮಂ ಪುಲ್ಲಿಗಳ್ಕಂಡು (ಕ್ರಮಿಥಾ. ೨೮-೩೭).

ನರಳು₁ : ೧. ರುಜೆ ರೋಗಂಗಳು ಲಿಂಗದೇಹಿಗಳಿಂಬವರ ಸೋಂಕಿದಲ್ಲಿ ರೋಗದ ಇಚ್ಛೆಯನಱದು ನರಳಿದಲ್ಲಿ ಲಿಂಗದ ಚಿತ್ತವೃತ್ತಹೋಯಿತ್ತು (ಸರ್ವಜ್ಞ. ೧೩೦-೭೧೯); ಕಾಲು ನೊಂದಂತೆ ನೀಡಿ ನರಳುತುಂ (ಸಂಬಿರ. ೬-೧೦೪); ಬಿದ್ದು ಹೊರಳುತ್ತ ನರಳುತೊಱಲುತ್ತ ಬಾಯ್ವುಟ್ಟಳಿಸುತ್ತಿರಲು (ಬಸಪು. ೪೫-೫೦); ನರಳುವಾರೋಹಕರ ರಾವ್ತರ . . . ಭಂಗವ ನೇನನೆಂಬೆನು ವೈರಿಸೇನೆಯಲಿ (ಕುಚ್ಯಾಪ್ರ.ಕ. ೧೮-೫೪); ನರಳುತ್ತಂ ತನುತಾಪದಿವೇರಳುತ್ತಂ . . . ಪಾಂಡ್ಯಾವನಿಪಂ ಕರಕರಿ ವೈದ್ಯರನೆನುತ್ತ ಲೊಜಲುತ್ತಿರ್ದಂ (ತ್ರಿಪುವಿ. ೪೪-೪೪); ಹಾಡುವ ಸಭೆಯಲ್ಲಿ ನರಳುವದುಂಟೆ? (ಗರ. ೬೦-೧೦); ಒಡಲ ತೀವುಬೇಹುದಿಲ್ಲ . . . ನರಳುವವರ ಮಧ್ಯದಲ್ಲಿ (ವಿಸೀಗೀ.೪೨-೪). ೨. ಪರಿತಪಿಸು ; ಸಂಕಟಪಡು : ಪ್ರಜೆಗಳು ತೆರಿಗೆಯ ಭಾರದಿಂದ ನರಳುತ್ತಿದ್ದಾರೆ (ಕೂಡಿ). **ನೆರಳ್₁** : ೧. ದಿಂಡುರುಳ್ವ ಪೊರಳ್ವ ನೆರಳ್ವಾ ಪರಾಕ್ರಮಿಗಳಿಂ . . . ತದ್ರಣಾಂಕಣಮೆಸೆದುದು (ಚಿಬಪು. ೧೬-೨೧). **ನೆರಳು₁** : ೧. ನೆರಳುವ ಕರಿತುರಗದಾಲಿಗಳ ಚುಚುಗಳಿಂದಲಿಂದಿದು ಹರಿದು ತಿಂದವು ಘೂಕಚಯ (ಕೋಗಪು. ೨೩-೬).

ನರನರಳು (ದ್ವಿರುಕ್ತಿ) : ಹೊಟ್ಟೆನೋವಿನಿಂದ ನರನರಳಿ ಬೇಸತ್ತನು (ಮುಧಪು. ೦೯೩).

[ದೇ. ತಮಿ. ನರಲ್; ಮಲ. ನರಣ್ಣು, ಞರಣ್ಣು; ತುಳು. ನರಲು, ನರೆಲು, ನಲ್ರು ; ಕುರುಖ್. ನರ್ಯಾನಾ = ಅಳು; ಮಲ್ತೊ. ನಿರೆ]

ನರಲ್₂, ನರಳು₂ (ನಾ). ನರಳುವಿಕೆ ; ಸಂಕಟದ ಧ್ವನಿ ; ನರಳಾಟ : ಅದೊ ಕೇಳಿಂ, ಆ ನರಲ್ವ ನರಲ್ಗಳನ್ (ಅಕ್ಕತ್ತಾ. ೦೪-೩೭೪); ಒಂದೆ ಕೊರಲ ನರಲನೆತ್ತಿ ಅಬ್ಬುದೆಲ್ಲ ನೆಲನ್ ತಾನ್ (ಜಕ್ಕಪ್ರ. ೩೨-೪೬೭). **ನರಳು₂** : ಖಂಡಿಸಿದ ಕೊರಳಿನಿಂ ಕೊರೆವೆಣದ ನರಳಿನಿಂ (ಪರಪು. ೩೪-೨೮).

[< ನರಲ್₁]

ನರಲಗ್ನ (ನಾ). [ಜ್ಯೋತಿ] ನಿರ್ದಿಷ್ಟವಾದ ಕೆಲವು ಲಗ್ನ(ರಾಶಿ)ಗಳಿಗೆ ಜ್ಯೋತಿಶಾಸ್ತ್ರದಲ್ಲಿ ಹೇಳಿರುವ ಒಂದು ಸಂಜ್ಞೆ : ನರಲಗ್ನ ಮನೀಕ್ಷಿಸೆ ರವಿ ಸುರ ನೃಪ ಗೋಗೃಹದೊಳಗ್ನಿಹೋತ್ರಾಲಯದೊಳ್ ಗುರು ವೀಕ್ಷಿಸೆ ಶಿಲ್ಪಗೃಹಾಂತರದೊಳ್ ವೀಕ್ಷಿಸೆ ಬುಧಂ ನರಂ ಜನಿಯಿಸುಗುಂ (ಜಾತಕ. ೪-೦೯); "ವಿಥುನ ಕನ್ಯಾ ತುಲಾ ಧನುಸ್ಸಿನ ಪೂರ್ವಾರ್ಧ ಕುಂಭ ಇವು ನರರಾಶಿಗಳು. ಈ ರಾಶಿಗಳಲ್ಲೊಂದು ಲಗ್ನವಾದರೆ ನರಲಗ್ನವೆನಿಸಿಕೊಳ್ಳುತ್ತದೆ" (ಜಾತಕ.೪-೦೯ ಟೀಕೆ). ℙ ಮೇಲಿನ 'ಜಾತಕ' ಪ್ರಯೋಗವು ಬೃಹಜ್ಜಾತಕದ ವ್ಯಾಖ್ಯಾನಕ್ಕೆ ಅನುಸಾರವಾಗಿದೆ. ಆದರೆ ಇದರಲ್ಲಿ ಭಿನ್ನಾಭಿಪ್ರಾಯಗಳಿವೆ. ಉದಾಹರಣೆಗೆ 'ಜಾತಕ ತಿಲಕದ ೧-೨೨'ರಲ್ಲಿ ಪುರುಷರಾಶಿಗಳು ಮೇಷ, ವಿಥುನ, ಸಿಂಹ ತುಲಾ, ಧನುಸ್ಸು ಪೂರ್ವ ಕುಂಭ ಎಂದಿದೆ. ಇದು ಎಲ್ಲಾ ಗ್ರಂಥಗಳಲ್ಲಿಯೂ ಹೇಳಿರುವ ಸಂಜ್ಞೆ. ಆದರೆ ಭಟ್ಟೋತ್ಪಲನು ತುಲಾ, ಕನ್ಯಾ, ವಿಥುನ ಪೂರ್ವ ಕುಂಭ ಈ ನಾಲ್ಕು ಪುರುಷಲಗ್ನವೆಂದು ಹೇಳಿದ್ದಾನೆ. [ನರ + ಲಗ್ನ]

ನರಲಿಸು, ನರಳಿಸು (ಕ್ರಿ). ನರಳುವಂತೆ ಮಾಡು ; ಸಂಕಟಕ್ಕೆ ಗುರಿಪಡಿಸು : (ಕ). **ನರಳಿಸು** : ಉರಗ ವರ ಕಿಂಪುರುಷ ಕಿನ್ನರ ತರುಣಿಯರ ವ್ರತಗೆಡಿಸಿ ಭೋಗಿಸಿ ನರಳಿಸುವರು (ಅಂಬಿಕಾ. ೩೪-೩೭); ಸಾಯೋತನಕ 'ಕರಿಸಳ್ಳಿ' ನರಳಿಸಿ ಬಿಟ್ಟೀನು (ಬಳುಮ. ೦೪೭).

[ನರಲ್₁ + ಪ್ರೇ.ಪ್ರ.ಸ್ಯ₃]

ನರಲು 'ನರಲ್₁' ನೋ.

ನರಲುಲಿ (ನಾ). ನರಳುವ ಸದ್ದು ; ನರಳಾಟ : ಪರಿಪಥಿಯೂ ನರಲುಲಿಯೋಳ್ ಪಾರ್ಸಿಕರಾ ಪಾಂಗಿನೊಳೇ ಪ್ರಾರ್ಥನೆಯುನ್ ಕೂಗಿ (ಪಾರಸಿ. ೨೪-೪). [ನರಲ್₁ + ಉಲಿ₂]

ನರಲೇಬಳ್ಳಿ (ನಾ). ಒಂದು ಬಗೆಯ ಬಳ್ಳಿ : (ಮೃಜಿಗಿ. ೦೯-೩೪೭) 'ನರಳೆ' ಪರಾ. [ನರಳ್₂ + ಬಳ್ಳಿ]

ನರಲೋಕ (ನಾ). ೧. ಮನುಷ್ಯರು ವಾಸಿಸುವ ಲೋಕ ; ಮರ್ತ್ಯಲೋಕ : ನರಲೋಕಮನಲ್ಪೀಟಿಸಿ ನರಲೋಕದ ಸುಖಮನಾತ್ಮವಿಭವದೆ ಪೊಕ್ಕಂ ಕುರುಪತಿ ವೈಶಂಪಾಯನಸಕಮಂ ಪುಗುವಂತೆ ನಾಗಲೋಕಮನಾಗಳ್ (ಗದಾಯು. ೬-೦೪); ನರಲೋಕದಲ್ಪಸೌಖ್ಯಂ ಸ್ಥಿರಮಲ್ಲದು (ಧರ್ಮಪ್ಯ. ೬-೩೩೬); ನರಲೋಕದ ನರಗುಱಿಗಳೆಲ್ಲ ನರಸಂಸಾರಕ್ಕೊಳಗಾದರು (ಅವಪಂ. ೩೭೬-೦೩೭೩); ಪುಷ್ಪದತ್ತಂ ನರಲೋಕದೊಳ್ ಪುಟ್ಟಿ . . . ಕೆಟ್ಟು ಪೋಗಲಸುಮಾಗಿರ್ದಪಂ (ಸಂಬಿರ. ೬-೩ ವ); ನರಲೋಕಂ ನಡೆ ನೋಡಲಾತ್ಮಪುರಮಂ ಕೊಂಡಿಶಲೋಕಕ್ಕೆ ಬಂಧುವರೋದಂ ಬಡೆದಂದು ಪರ್ ನೆಗಟ್ದುದ್ಧರ್ಜ್ಜರಾಧೀಶನಂ ಪರಿದಾಲೋಕಿಸಿ (ಉರ್ಕಟ.೦೨-೦೩೩); ಪರಲೋಕಕ್ಕೆ ಹೋದವಗೆ ನರಲೋಕದ ಗೊಡವೆಯೇ? (ಗಾಡ). ೨. ಮರ್ತ್ಯಸಮೂಹ ; ಮನುಷ್ಯಕೋಟಿ ; ಮಾನವಕುಲ : ನರಲೋಕವೊಂದೆ ಮುನ್ನಿನ ಚರಣಾಬ್ಜಕ್ಕೆಱಗೆ ನೆಗಬ್ದ ಕೇವಲಬೋಧಂ ದೊರೆಕೊಳೆ ಸುರನರಲೋಕಂ ಚರಣಾಬ್ಜಕ್ಕೆಱಗೆ ಭರತಯತಿವತಿ ನೆಗಟ್ದಂ (ಆದಿಪು. ೦೬-೭೪); ವೆಣವೊಗೆಸುತ್ತಿ ನರಲೋಕಮೆಲ್ಲಮಂತಕಡಾಮರದೊಳ್ ಬೆಂದು ಧೂಮಮಯಮಾದ ದಿಶಾಧೂಮಂ ಕವಿದಂತಾಭೀಳಮಾಗೆ (ಶಾಂತಿಪು. ೭-೯೪೪); ನರಲೋಕಶ್ರೀಕಾಂತಾವಿರಕ್ತಮಾದತ್ತು ಪರಮ ನಿರ್ವೇಗವಶಂವದೆ ನೆಗಟ್ ಮುಕ್ತಿಕಾಂತಾನುರಕ್ತಮಾದತ್ತು ವಿಮಲ ವಾಹನನ ಮನಂ (ಅಜಿಪು. ೨-೦೦೫).

ನರಲೋಕದಲ್ಲಱ, ನರಲೋಕದಲ್ಲಣ = ಮನುಷ್ಯರಿಗೆ ಹೆದರಿಕೆಯನ್ನುಂಟು ಮಾಡುವವನು ; ಒಂದು ಬಿರುದು : ಬರುದಿಂಗೆ – ಗಜದುಳಿ, ಗಜಪಾಱು, ನರಲೋಕದಲ್ಲಱಂ[ಪಾಣಾಂ.ಣಂ] (ಶಮದ. ೦೭೪ ಪ್ರಯೋ); ನರಲೋಕದಲ್ಲಣಾ, ಗಜವೇಂಟೆಕಾಱಂ, ರಾಯಕೋಲಾಹಲಂ (ಶಶ್ಯಾನು. ೨೯೩ ಪ್ರಯೋ). [ನರ₂ + ಲೋಕ]

ನರಲೋಕಚಂದ್ರ (ನಾ). ಭೂಲೋಕಕ್ಕೆ ಚಂದ್ರನಂತೆ ಆಹ್ಲಾದಕಾರಿಯಾದವನು : ಪರಚಕ್ರಭೂಪರಟ್ಟಿದ ಕರಿಗಳ್ ಬಿಡುತಪ್ಪ ಮದದ ಪೊನಲಿಂದೆತ್ತಂ ನರಲೋಕಚಂದ್ರನಾ ಮಂದಿರದೊಳಗೊಳಗಿಲ್ಲ ಕಾಲಮುಂ ಕೆಸಱಕ್ಕುಂ (ಕವಿತಾ. ೩-೦೭೦). [ನರಲೋಕ + ಚಂದ್ರ₂]

ನರಲೋಕಚರ (ನಾ). ಮನುಷ್ಯಲೋಕದಲ್ಲಿರುವವನು ; ಭೂಲೋಕವಾಸಿ : ನೀ ನರಲೋಕಚರನಿನ್ನುಸುರಲೇಂ ಹರಲೋಕಚರನೋಹಿಲನು (ಬಸಪು. ೪೪-೪೩). [ನರಲೋಕ + ಚರ]

ನರವಂಟಿಗೆ (ನಾ). ಒಂದು ಬಗೆಯ ಸಸ್ಯ : ನರವಂಟಿಗೆಯ ಬೇರುಂ ಗೋರೋಚನಮುಂ ಸಮನಾಗಿ ಕೂಡಿ ಅರದು (ಕಾಮಚಿ. ೧೦-೩೭೭).

[?./ತೆಲು. ನರವಂಡು]

ನರವಕ್ಕ (ನಾ). ಮನುಷ್ಯನ ಮುಂಖವುಳ್ಳ, ಶಿವಪ್ರಮಥರಲ್ಲಿ ಒಬ್ಬ : ಹಂವಕ್ಕಂ ಕರಿವಕ್ಕನಶ್ವವರವಕ್ಕಂ ಮೇಷವಕ್ಕಂ ಘಣೇಶ್ವರವಕ್ಕಂ ನರವಕ್ಕನುಷ್ಟವಪಿವಕ್ಕಂ . . . ಎಂಬಿವೆಸವರ್ವಿಶ್ವೇಶ್ವರಾಸ್ಥಾನದೊಳ್ (ರಾಚಶೇ. ೦೪-೦೩೪). [ನರ₂ + ವಕ್ಕ]

ನರವರ (ನಾ). ಮನುಷ್ಯರಲ್ಲಿ ಉತ್ತಮನಾದವನು ; ಅರಸ : ಕ್ರಮದಿನೊರ್ವರೊಳೊರ್ವರೆ ಕಾದುವಂ ಎಂದು ರಣಧೀರನರವರಸಂದೋಹಂ ನುಡಿದು ನಿದ್ರೆಯ ತಳೆದಿರಲ್ (ನೇಮಿಪು. ೦೨-೩) ; ನರವರರು [ಪಾಣಾಂ. ರವರು]ರ್ವಿಯೊಳ್ ಧರೆ ಜಗತ್ತ್ರಯದೊಳ್ ಜಗಮಂ ಶಿವಾಯುಗಳ್

ಧರಿಯಿಸಿ ನಿಂದುವು (ಜೀವಸಂ. ೦೪೬-೭೪) ; ವಾನರ ಕುಲಂ. ನರವರಂ. ವಾಲಿಯ ಸಹೋದರಂ ಸುಗ್ರೀವನಲ್ತೆ ಆ ಓಜೋನ್ವಿತಂ ? (ಶ್ರೀರಾಮಾ. ೪೭೪-೦೧). [ನರ$_3$ + ವರ$_3$]

ನರವರ್ಯ (ನಾ). ಶ್ರೇಷ್ಠನಾದ ಮನುಷ್ಯ ; ಉತ್ತಮಮಾನವ : ನರವರ್ಯ ಭೀಮಸೇನ ನಾಂಗೆ ಕುಸುಮ ತರುವೆನೆನುತ ಬೇಗ ತೆರಳಿದನು (ಪುರಂದ. ೩-೩೧೦-೦). [ಸಂ.]

ನರವಲಿ 'ನರವುಲಿ' ನೋ.

ನರವಲು 'ನಱುವಲ್' ನೋ.

ನರವಾನರ (ನಾ). ಮನುಷ್ಯನ ಆಕಾರವನ್ನು ಹೋಲುವ ಒಂದು ಬಗೆಯ ವಾನರ : ಪಾಮರ ಹರಿದಾಸನು ಅವನಲ್ಲ ನರವಾನರ ಕಾಣೊ (ಪುರಂದ. ಧಾ. ೨-೭೨-೪); ಉದ್ದತೋಳುಗಳ, ದೊಡ್ಡ ನರವಾನರ ; ಒರಾಂಗೊಟಾಂಗ್ (= ಕಾಡುಮನುಷ್ಯ) (Orang-outang. ಇಂಳಿ). [ನರ$_3$ + ವಾನರ]

ನರವಾಹ (ನಾ). ಮನುಷ್ಯನನ್ನು ವಾಹನವನ್ನಾಗಿ ಉಳ್ಳವನು ; ಕುಬೇರ : ನರವಾಹಂ ಬಳ್ಕೆ ಶಕ್ರಂ ಸೆಡೆಯೆ ಹುತವಹಂ ಕಂದೆ ಕಾಲಂ ಕರಂ ಕುಂದೆ (ಶಬಶಂ. ೨-೦೧). [ನರ$_3$ + ವಾಹ]

ನರವಾಹನ (ನಾ). ೧. = ನರವಾಹ : ಏಳಬಿಳಃ . . . ಕುಬೇರಃ, ನರವಾಹನಃ, ಗುಹ್ಯಕಃ : . . . ಈ ೧೭ ಕುಬೇರನ ವೆಸರ್" (ಹಶಾಯು. ೦೪-೭೪). ೨. (ಮನುಷ್ಯರು ಹೊರುವ) ದಂಡಿಗೆಯಲ್ಲಿ ಪ್ರಯಾಣ ಮಾಡುವವನು : "ದಂಡಿಗೆಯನೇಱುವಂ ನರವಾಹನಂ" (ಮಂಗರಾ. ೭೩-೩೬). [ನರ$_3$ + ವಾಹನ]

ನರವಿಂಡು (ನಾ). ಮನುಷ್ಯರ ಗುಂಪು ; ಜನಸಮೂಹ : ಆ ಪರಿಯಿಂದ ಕೂಡಿದ ಇಂದ್ರಿಯವಿಕಾರದ ನರವಿಂಡುಗಳು ಕೂಡಿರ್ದು ಫಲವೇಸು (ದಶಸಂ. ೪೨೪-೦೩೫). [ನರ$_3$ + ಪಿಂಡು$_3$]

ನರವಿಂಧ್ಯ (ನಾ). "(ಪಶುಗಳಂತಹ) ಜನರು ವಾಸಿಸುವ (ಗುಡ್ಡ ಗಾಡಿನಂತಹ ವಾಸಕ್ಕೆ ಕಷ್ಟಕರವಾದ) ಸ್ಥಾನ" (ಬಸವ. ಕೋಶ) : ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ ಸಲಹುತ್ತ ಶಿವಶಿವಾ ಎಂದೋದಿಸಯ್ಯಾ (ಬಸವ. ೫೮) ; ಓಡಿಲುವ ಬಳ್ಳುವಿನಂತಿಪ್ಪರಯ್ಯಾ ಮನುಜರು ನರವಿಂಧ್ಯದೊಳಗೆ (ಬಸವ. ೫೦೭). [ನರ$_3$ + ವಿಂಧ್ಯ]

ನರವು, ನರ$_1$ (ನಾ). ೧. ಶರೀರದಲ್ಲಿ ಸ್ನಾಯುವನ್ನು ಎಲುಬಿಗೆ ಸೇರಿಸುವ ಗಟ್ಟಿಯಾದ, ತಂತುಮಯವಾದ ಅಂಗಾಂಶ ; ಸ್ನಾಯು ರಜ್ಜು : ನರವುಮಂ ಬರಿಯುಮಂ ಪಕ್ಕಿ ತೆಗೆದು ಪೆಡಸಾರ್ವ ನರಿಗಳುಮಂ ತಾನೆ ಸೋದು (ಪಂಪಭಾ. ೦೩-೫೬ಪ). ೨. ಅವಯವಗಳಿಂದ ಮೆದುಳಿಗೆ ಸಂವೇದನೆಗಳನ್ನೂ ಮೆದುಳಿನಿಂದ ಅವಯವಗಳಿಗೆ ಸೂಚನೆಗಳನ್ನೂ ಒಯ್ಯುವ ತಂತು,-ಸೆರೆ: ತಾನುಂ ಹಿಡಿಂಬೆಯುಮವನ ಬರಿಯ ನರವಿನಡಗಿನಿತುವಿನೆಡೆಯ ಕೆನ್ನೆತ್ತರೊಳೊರ್ವರೊರ್ವರಂ ತಳ್ಕಿಱಿದುಂ ಬೊಬ್ಬಿಱಿದುಂ . . . ಅಡುವಾಗಳ್ (ಪಂಪಭಾ. ೦೩-೦೫೮ ಪ) ; ನರವಿನ ಪುತ್ರಮೇಧ್ಮದ ತವರ್ಮನೆ . . . ಕಡುಗೆಪ್ಪವೆನಿವ್ವ ದುಃಕಳೀವರ ವಿಮದನೊಳ್ಕಿತೆಂಬರಱಿವಿಲ್ಲದವರ್ (ಪಮಭ. ೬-೭೪) ; ನರವುಗಳ್ ತೆಗೆದು ಕೋಳ್ ತನಗೆ ತಾನೆ ನೆಗೆವುದುಂ (ಧರ್ಮಾಮೃ. ೦೨-೪೦೪) ; ನರವುಂ ನೆರವುಂ ದೇವರ ಬರವುಂ ತೆರವುಂ . . . ತಾವರೆಬರ ಮಶದಿಂದಂತ್ಯ ವರ್ಣಲೋಪಮನಾಳ್ದುಂ (ಶಮುದ. ೪೬) ; ಕೆಸಱಾಡುವ ರಕುತಾಂಬುಗಳ ನೆರವಿನ ನಾಳದೇಳಿಗೆಯ ಕಡುವಾದದ ಕಾಡಾನೆ ಹೊಕ್ಕೊಡನೊಡನೆ ಕಲಕೆದ ಕೊಳನವೊಲು ಭಯವಡಸುತಿದೆ ಪವನಜನ ರಣಪಥವು (ಕುಪಾಡ್ರೋ. ೦೭-೪) ; ಮಾಂಸದ ಗೋಡೆ ಚರ್ಮದ ಹೊದಿಕೆ ನರವಿನ ಕೂಡೆ ಹೆಂಡಿಗೆ ಸಿಗಿದ ಮನೆಯೊಳಗಾತ್ಮನಿರುತಿರಲು (ಹರಿಸಾ. ೦೫).

ನರ$_1$: ೨ : "ಎಸ್ನಸಾ. ಸ್ನಾಯುಃ – ಇವು ನರದ ಪೆಸರು" (ವಾಚಹಾ. ೦೩೦) : ನರವನುಗಿವ ನರಿಗಳುಮಂ (ಗದಾಯು. ೫-೩ ಪ) ; ಸಂದುಗಳುಬ್ಬಿದೊಡೆ ನರವೊಂದು ದೆಸೆಗೆ ತಱಿಸಂದೊಡೆ ಶೀತಳಜಳವಿಶ್ರಿತ ವಸ್ತ್ರವನಳವಟ್ಟರೆ ಸುತ್ತಲಿನಸು ಬೇನೆಗಳಟ್ಟಿಗುಂ (ಕೋಕೋಪ. ೯-೦೬೬); ಎನ್ನ ಕಾಯವ ದಂಡಿಗೆಯ ಮಾಡಯ್ಯಾ . . . ಎನ್ನ ನರವ ತಂತಿಯ ಮಾಡಯ್ಯಾ (ಬಸವ. ೫೦೦) ; ತನುವೆಂಬ ಮನೆಗೆ ಅಸ್ಥಿಗಳು ಚರ್ಮದ ಹಂಜರ ನರದ ಭೀಮಗಟ್ಟು (ಅದವ. ೦೫-೫೫) ; ಒಂದು ದಸಿಯಂಗಿನಲ ನಟ್ಟಡೆ ನೊಂದು ನರಗಳು ಸಾಕ್ಕ ತೆಗೆಯಲು (ಬಸಪು. ೪೫-೭೪) ; ನರಗಳೆಲ್ಲವೂ ನಿರಾನರನೆ ಎದ್ದುನಿಂತವು (ಕಾಡಿಪ. ೦೫೧). ೩. ತಂತಿ : ಬೀಣೆಯಂತೆ ನರದೊಳ್ ಕೂಡಿದುದು (ಧರ್ಮಾಮೃ. ೪-೦೭೫). ೪. ಶಕ್ತಿ ; ಸಾಮರ್ಥ್ಯ. ೫. (ಆಲಂ) ಧೈರ್ಯ.

[ದೇ. ತಮಿ. ನರಮ್ಬು, ಮಲ. ನರಮ್ಬು, ಗಾರಮ್ಬು ; ತುಳು. ನರ, ನರಂಬು ; ತೆಲು. ನರಮು; ಕೊಲಾ. ನರಮ್ ; ಪರ್ಜಿ. ನೆರುಬ್ ; ಕೂಡ್ರಾಂಬು ; ಕುವಿ. ನರೊಮಿ ; ಕುರುಖ್. ನರೀ ; ಮಲ್ತೊ. ನಾರು]

ನರವುಲಿ, ನರವಲಿ, ನರಹಲಿ, ನರುಲಿ, ನರುಳ್ಳಿ, ನರೂಲಿ (ನಾ). ಚರ್ಮದ ಮೇಲೆ ಏಳುವ ಸಣ್ಣಗಂಟು,-ಗಂತಿ : ಇನವಾರದಂದು ಬಸುರಿಯು ಕೊನೆಯಂ ಕೊಂಡೆಡದೆ ಬಬಿದು(ಳಸಿ) ಕೆಸಜಾಳದಂ ಪೂಬ್ದನಿತಜಾಳಾ ನರವುಲಿಯೆನಿತನಿತಾಮವಿರ್ದೆಡೆಯನಜಾಯದಂತಿರೆ ಪೋಕುಂ (ಕೋಕೋಪ. ೯-೦೩೦) ; ಬಿಡದೆ ಭಗಂದರಮಂಸೆ ಕುಷ್ಠ ತರ್ದುಂ ನರವುಲಿ ದುಷ್ಟವ್ರಣಂಗಳೆಂದಱಿವುದಿವಂ (ಅಶ್ವಶಾ. ೦೩-೦) ; ನರವು [ಹಾಹಾಂ. ವ] ಲಿ ಮೊಡವಿ ಬಂಗು ನೆರೆದಾನನದ ಚಿಬ್ಬುವೆರಸಿರ್ದ ಕಂಕುಳಿನ ನಡಿಯೊಡಲಿನ . . . ಪೆಣ್ಗಳಂ ತರಲಾಗದು (ಜನವ. ೦೧-೦೦). **ನರವಲಿ :** ನರವಲಿ ಉದುರಿ ಕೋಯಿತು (ಕೂಥಿ). **ನರಹುಲಿ :** (ಕ). **ನರುಲಿ :** "ನರುಲಿ = ಸಣ್ಣಸಣ್ಣ ವಾಳ" (ಹಾನಳೋ. ೯). **ನರುಳ್ಳಿ :** ಕೈಮೇಲೆ ಒಂದು ನರುಳ್ಳಿ ಎದ್ದಿದೆ (ಕೂಥಿ). **ನರೂಲಿ :** "ನರೂಲಿ ; ಗಂಟು ; ತಂತಿ" (Pustle. ಇಂಳಿ). [< ನರವು ?]

ನರವೆ (ನಾ). ಒಂದಂ ಬಗೆಯ ಗಿಡ : ನರುವಲು, ನಾರಲೆ, ನರವೆ, ಮುನ್ನು, ಮಾಡಿಕೆ (ಪ್ಯುಡಿಗಿ. ೬೪-೦೩೦). [?]

ನರವೆಣ್ (ನಾ). ಮನುಷ್ಯಲೋಕದ ಹೆಣ್ಣು ; ಮಾನವ ಸ್ತ್ರೀ : ನಿಖಿಳಾಪ್ಸರವಧು ನರವೆಣ್ಗಳೆಸೆಯೆ ದೇವಕಿಯ ನಂದನನೆಡಬಲದಿ (ಕೋಹತ. ೦೯-೦೪). [ನರ$_3$ + ವೆಣ್]

ನರವೇಷ (ನಾ). ಮನುಷ್ಯನ ವೇಷ ; ಮಾನವ ರೂಪ : ಮಜ್ಜನ ಭೋಜನಾದಿ ನಾನಾಕ್ರಿಯೆಗಳೊಂದರೊಳ್ ನರವೇಷಕಾಯವುಂ ಸವೆಸ ಬೇಡೆಂದು ಕೈವೆಡೆಗೊಟ್ಟಳೀಂ ವಿಶೇಷವೊ ಪುತ್ರಮೋಹಮಿಾ ಲೋಕ ದೊಳಗೆ (ಪಪು. ೫-೩೦). [ನರ$_3$ + ವೇಷ]

ನರವೈದ್ಯ (ನಾ). ಮಾನವರಿಗೆ ಮಾಡುವ ರೋಗಚಿಕಿತ್ಸೆ ; ಮನುಷ್ಯರಿಗೆ ಸಂಬಂಧಿಸಿದ ವೈದ್ಯಶಾಸ್ತ್ರ : ಚಾಣಕ್ಯಂ ಸಾಮುದ್ರಿಕಂ ಶಾಲಿಹೋತ್ರಂ . . . ಕ್ಷಾರವಾನೀಯಂ ಮೊದಲಾಗೊಡೆಯ ನರವೈದ್ಯಂಗಳುಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊಡೆಯ ಶಾಸ್ತ್ರಂಗಳೆಲ್ಲವುಂ ನೆಱಿಯೆ ಕಲ್ಪಿಸಿ ಯೋಗ್ಯರ್ ಮಾಡಿದೊಡೆ (ಪಡ್ಡಾರಾ. ೪-೨).

[ನರ$_3$ + ವೈದ್ಯ]

ನರವ್ಯಾಧಿ (ನಾ). "ನರವ್ಯೂಹದ ಅಸ್ವಸ್ಥತೆಯಿಂದ ದೇಹಸ್ಥಿತಿ ಕೆಟ್ಟು ಹೋಗಿರುವುದು : ನರವ್ಯಾಧಿ (Neurosis. ಇಂಳಿ)" : ಪ್ರಬಲ ಮನೋರೋಗ (ಸೈಕೋಸಿಸ್), ನರವ್ಯಾಧಿ (ನ್ಯೂರೋಸಿಸ್) ಮುಂತಾದ ವಿಕಾರಗಳು ದುರ್ನಡತೆಗೆ ಕಾರಣಗಳೆಂಬ ಬಹುಜನರ ನಂಬಿಕೆಗೆ ಯಾವ ಆಧಾರವೂ ಇಲ್ಲ (ಕವಿಕೋ. I, ೩೫೮). [ನರ$_1$ (< ನರವು) + ವ್ಯಾಧಿ]

ನರವ್ಯೂಹ (ನಾ). ದೇಹದೊಳಗಿನ ನರಗಳ ರಚನೆ,-ನರಮಂಡಲ: ಮುಖ್ಯವಾಗಿ ಮಿದುಳಿನ ಅಥವಾ ನರವ್ಯೂಹದ ರಚನೆಯೊಳಗೆ ಯಾವುದಾದರೂ ತೊಂದರೆಯುಂಟಾದೊಡನೆ ಅದನ್ನು ನಾವು ಮನೋರೋಗವೆಂದು ಹೇಳುತ್ತೇವೆ (ಮನೋರೋ. ೮); ಮೆದುಳು ಗಾತ್ರದಲ್ಲಿ ದೊಡ್ಡದಾಗುವಂತಿದ್ದು, ನರವ್ಯೂಹದ ರಚನೆ ಕ್ರಮಕ್ರಮವಾಗಿ ಸಂಕೀರ್ಣತೆಗೇರುವಂತಿದ್ದು ಸಂಕೀರ್ಣಸಮಾಜಕ್ಕೆ ಅನುಗೊಳಿಸುವ ಸಂಸ್ಕರಣವನ್ನು ಪಡೆಯಲು ಅನುಕೂಲಿಸುವಂತಿವೆ (ಶಿಕ್ಷದ. ೮೬).

[ನರ$_1$ (< ನರವು) + ವ್ಯೂಹ]

ನರಶಾರ್ದೂಲ (ನಾ). ಮನುಷ್ಯರಲ್ಲಿ (ಹುಲಿಯಂತೆ) ಪರಾಕ್ರಮಿಯಾದವನು; ಶೂರ: (ಕಿ). [ನರ$_2$ + ಶಾರ್ದೂಲ]

ನರಶಾಸನ (ನಾ). ಜೀವಂತವಾಗಿ ಮನುಷ್ಯರೂಪವಾಗಿರುವ ಶಾಸನ,-ಸನದು; ಪ್ರತ್ಯಕ್ಷಸಾಕ್ಷಿ: ಬಿರುದಿನ ಬೀರದ ಪೆಸರಕ್ಕರಮಂ ಪರನೃಪರ ಮೆಯ್ಯ ಪುಣ್ಗಲೆಗಳ್ ಪೋಲ್ತಿರೆ ತೋಳ್ವಲಕ್ಕೆ ಪಡೆದಂ ನರಶಾಸನಮಂ ನರೇಂದ್ರಚೂಡಾರತ್ನಂ (ಮಲ್ಲಿಪು. ೩-೧೪); ಕವಿತತಿ ಬಲ್ಮೆಗೋಲಗಿಸೆ ಕಾಮಿನಿಯರ್ಸ್ಸೊಬಗಿಂಗೆ ಸೋಲೆ ಬೇಟ್ಟವರ್ಗಳುದಾರವೃತ್ತಿಗೊಲವಿಂ ನರಶಾಸನವಾಗೆ ರಾಜ್ಯಮುದ್ಭವದಿನೊಡರ್ಚ್ಚಿ ರೇಚಿರಾಜನೆಸೆದಂ ಜಸದಿಂ ವಸುಧೈಕಬಾನ್ಧವಂ (ಎಕ. VII, ಶಿಕಾರಿ. ೧೯೭-೩೨; 1182); ಕರದಿಂ ಮೆಯ್ಯೊಳ್ ಪನಿತಕ್ಕರದಂತಿರೆ ಸಾಂಜನಾಂಬುಕಣತತಿ ಕಾಮಂ ಬರೆದ ನೃಪಸುತನ ಸೊಬಗಿನ ನರಶಾಸನದಂತೆ ವಿರಹವಿಹ್ವಲೆಯಿರ್ಪಳ್ (ಪಂದ್ರಪು. ೫-೦೨೬). [ನರ$_2$ + ಶಾಸನ]

ನರಶಿರಮಾಲೆ (ನಾ). ಮನುಷ್ಯನ ತಲೆಬುರುಡೆಗಳ ಸರ; ಕರೋಟಿಮಾಲೆ: ಕಂಠದೊಳಂಜಿಪ ನರಶಿರಮಾಲೆ (ಪಾಂಡಜ. ೧೯-೭).

[ನರ$_2$ + ಶಿರ$_2$ + ಮಾಲೆ]

ನರಶೂಲೆ (ನಾ). ದೇಹದ ನರಗಳಲ್ಲಿ ಉಂಟಾಗುವ ನೋವು: ಆವಾವ ಠಾವಿನ ನರಶೂಲೆಗೆ, ಕಪಾಲಶೂಲೆಯ ಠಾವಿಗೆ ಶ[illegible]ಕ್ಕಿಸಿ ಆ ಔಷಧಿಯ ನಿಕ್ಕಲು ಶೂಲೆ ಮಾಣ್ಗುಂ (ವಿವೈವಿ. ೫೦). [ನರ$_1$ (< [illegible] + ಶೂಲೆ$_1$]

ನರಸ (ನಾ). = ನರಸಿಂಹ ೧. 'ನರಸಯ್ಯ' ಪರಾ. [< ನರಸಿಂಹ]

ನರಸಣ್ಣ (ನಾ). (ಕರಾ) ಬುಡುಬುಡಿಕೆಯವನು; ಶಕುನ ಹೇಳುವವನು: ನಸುಬೆಳಕು ಹರಿಯುತ್ತಿತ್ತು . . . ಹಗಲ್ವಾಡಿಯ ಹಂಗನಕೇರಿಯಲ್ಲಿ ನರಸಣ್ಣರಿಬ್ಬರು ಹರಿಯುತ್ತಿದ್ದರು (ನಡದಾ. I, ೪೩೩); ಹಾಡುವ ಪಲ್ಲವಿಗೂಡಿಸುವ ನರಸಣ್ಣರಿಬ್ಬರೂ ಹಾಲುಮನೆಯ ಅಂಗಳದೊಳಗಾದರು (ನಡದಾ. I, ೪೩೪); ನರಸಣ್ಣ ಬಂದರೆ ನಮಗೆ ಹೆದರಿಕೆಯಾಗುತ್ತದೆ (ಪರಾವ. ೨೬). [ನರಸ$_3$ + ಅಣ್ಣ$_1$]

ನರಸತ್ವ (ನಾ). [ಕಾಮಶಾ] ಹನ್ನೆರಡು ಬಗೆಯ ಸ್ತ್ರೀಸತ್ತ್ವಗಳಲ್ಲಿ ಒಂದು: ದೇವಸತ್ವ ಯಕ್ಷಸತ್ವ ಗಂಧರ್ವಸತ್ವ ನರಸತ್ವ ನಾಗಸತ್ವ ಕಾಕಸತ್ವ ವಾನರಸತ್ವ ಮುನಿಸತ್ವ ಪಿಶಾಚಸತ್ವ ರಾಕ್ಷಸಸತ್ವ ಕಿನ್ನರಸತ್ವ ಖರಸತ್ವವೆಂಬ ದ್ವಾದಶಸತ್ವದ ಸತಿಯರಿಂ (ವಿವೇಕ. ೨೨೯).

ನರಸತ್ವದವಳು=ನರಸತ್ವದ ಸ್ತ್ರೀ: ಋಜುಚಿತ್ತದಿಷ್ಟರ್ಗೆ ನಿಜದೊಳೊಲಿದಿರ್ಪ ನೀರಜನೇತ್ರೆಯವಳ್ ನರಸತ್ವದವಳು (ಜನವ. ೫-೨೯). ನರಸತ್ವದ ಸ್ತ್ರೀ="ಋಜುವಾದ ಚಿತ್ತದವಳು ಸಮರ್ಥಳು ಅವುತಣ ಪ್ರೀತಿಯುಳ್ಳವಳು ಉಪವಾಸದಿಂದಂಜಳು ಸ್ವಲ್ಪ ಉಂಬುವಳು ಇವಳು ನರಸತ್ವದ ಸ್ತ್ರೀ" (ಕಾಮಶಾ. ೪-೬೦). [ನರ$_2$ + ಸತ್ವ$_1$]

ನರಸಮಿತಿ (ನಾ). ಜನಸಮೂಹ; ಮಾನವಕೋಟಿ: ನರಸಮಿತಿಗೆ ಬೇಡಿದುದಂ ನಿರಂತರಂ ಕೊಟ್ಟು ಕಲ್ಪವೃಕ್ಷಂ ಪೋಗಲ್ (ಆದಿಪು. ೧೬-೪೩); ನರಸಮಿತಿ ಕೊಂದರೆಂದಡೆ ನೆರವಾಗದೆ ನೋಡದೋಡಿದರು ನಿನ್ನವರು (ನನ್ನಜಾ. ೫-೪೪). [ನರ$_2$ + ಸಮಿತಿ]

ನರಸಮ್ಮ (ನಾ). ರೋಗಿಗಳಿಗೆ ಆರೈಕೆಮಾಡುವ ದಾದಿ; ನರ್ಸು: ಬೇಯುತಲಿರುವೆನು ಬಳಿ ಬಾರೆ ನರಸಮ್ಮ ವೈದ್ಯರ ಕರೆಸದಿರಮ್ಮ (ಪಂದ್ರವೀ. ೫೨-೬). [ನರಸು (<ನರ್ಸ್) + ಅಮ್ಮ$_2$]

ನರಸಯ್ಯ (ನಾ). ಒಬ್ಬಾತನ ಹೆಸರು: ಪ್ರತಿಮೆಗಳೆಲ್ಲಮಂ ನರಸಯ್ಯ ಮೈಸಗೆಯ್ದಮ್ (ಎಕ. VI, ಚಿಕ್ಕಮ. ೧೩೩-೦೦; 893 ?). 'ನಚ್ಚಯ' ಪರಾ. [ನರಸ + ಅಯ್ಯ$_1$]

ನರಸಿಂಗ (ನಾ). ೧. = ನರಸಿಂಹ ೧: ಇದು ಏನಂಗ ಮೋಹನಾಂಗ ಮದನಜನಕ ತೊರವೆಯ ನರಸಿಂಗ (ಪುರಂದ. ೧-೯೯ ಅನುಪಲ್ಲವಿ); ಕೆಂಗಿಡಿ ಗಣ್ಣ ಕೇಸರಿಯ ಮಸ್ತಕವ ಬಾಣಂಗಳಿಂದಿಳುಹಿ ತಾಳ್ದವರು ಕಂಗೊಳಿಸಿದರು ಕಾಂತಾರದೆ ಸಿರಿನರಸಿಂಗನ ಲೆಂಕರೆಂಬಂತೆ (ಮೋಹತ. ೧೯-೩೦). ೨. ವೇಮುಲವಾಡದ ಚಾಳುಕ್ಯರ ಒಬ್ಬ ರಾಜನ ಹೆಸರು; P ಅರಿಕೇಸರಿಯ ತಂದೆ: ನರಸಿಂಗಂಗಂ ಜಾಕಬ್ಬರಸಿಗಮಳವೊದವೆ ಪುಟ್ಟಿ ಪುಟ್ಟಿಯುಮರಿಕೇಸರಿಯೆನೆ ನೆಗಟ್ಟುಮರಾತಿಯ ಸರಿದೊರೆಗಂ ಬಂದೆನ ಪ್ಪೊಡಾಗಳ್ ನಗರೇ (ಪಂಪಭಾ. ೧೨-೧೩೨). ೩. ಒಬ್ಬಾತನ ಹೆಸರು: ಬೆಳ್ಮಣಿಯ ಪದುಮಣ್ಣನ್ ಕರ್ಬುರ ಸೋಮದಿ ಮಿಟ್ಟಿಸೆಯ ನರಸಿಂಗನ್ ಸಿಮ್ಮನೂರ ಕಿಳ್ಳುಮ್ಮನ್ (ಎಕ. VIII, ಸೊರಬ. ೦೦-೧೨; 800).

[<ಸಂ. ನರಸಿಂಹ]

ನರಸಿಂಗಪಟ್ಟಸು (ನಾ). ಜಟ್ಟಿಕಾಳಗದಲ್ಲಿ ಒಂದು ವರಸೆ: ಅಂತರಿಪ ನರಸಿಂಗಪಟ್ಟಸು ಮುಂತಡರೆ ತಳಹತ್ತ ಗಳಹತ್ತಂ ತುಳಿಲ ವಿಂದಾಣದಲಿ ಹರಿ ಕಾದಿ ಬಳಲಿಸಿದ (ಸಾಳ್ವಭಾ. ೨೨-೭೩).

[ನರಸಿಂಗ + ಪಟ್ಟಸು (<ಪಟ್ಟಸ$_1$)]

ನರಸಿಂಗಯ್ಯ (ನಾ). ಒಬ್ಬಾತನ ಹೆಸರು: ಜನ್ನಯ್ಯ × × × ಮಗ ನರಸಿಂಗಯ್ಯಜ್ಗೆ ಕೊಟ್ಟ ಸಾಶನ (ಎಕ. IV, ಗುಂಡ್ಲುಪೇ. ೫೭-೬; ಸು. 900); ಅಕಳಂಕ ಮಹೇಶ್ವರಂ ದಣ್ಡಂ ಮುತ್ತಿಱಿವೊಂ ಶ್ರೀಮತ್ ನರಸಿಂಗಯ್ಯ ನರಸಿಂಗೇಸ್ವರಮ್ಮಾಡಿಸಿ ಮಣಲೆವಾಡಿಯನಭ್ಯನ್ತರಸಿದ್ಧಿಯಾಗೆ ಬಿಟ್ಟಂ (ಎಕ. XIV, ಮೈಸೂರು. ೦೨೭-೫; ಸು. 900).

[ನರಸಿಂಗ + ಅಯ್ಯ$_1$]

ನರಸಿಂಹ (ನಾ). ೧. ಮನುಷ್ಯನ ದೇಹ ಹಾಗು ಸಿಂಹದ ಮುಖವುಳ್ಳ ರೂಪವನ್ನು ಹೊಂದಿದ ವಿಷ್ಣುವಿನ ಹತ್ತುಅವತಾರಗಳಲ್ಲಿ ನಾಲ್ಕನೆಯದು; P ಹಿರಣ್ಯಕಶಿಪುವೆಂಬ ರಾಕ್ಷಸನನ್ನು ಕೊಲ್ಲಲು ಈ ರೂಪ ತಾಳಿ ಕಂಭದಿಂದ ಉದ್ಭವಿಸಿದ ಅವತಾರವೆಂದು ನಂಬಲಾಗಿದೆ: ಬಲಿಯಂ ಕಟ್ಟಿದನಾವನೀ ಧರಣಿಯಂ ವಿಕ್ರಾಂತದಿಂದಂ ರಸಾತಲದಿಂದೆತ್ತಿದನಾವನಂದು ನರಸಿಂಹಾಕಾರದಿಂ ದೈತ್ಯನಂ ಚಲದಿಂ ಸೀಳ್ದವನಾವನಬ್ಧಿಮಥನಪ್ರಾರಂಭದೊಳ್ ಮಂದರಾಚಲಮಂ ತಂದವನಾವನಾತನೆ ವಲಂ ತಕ್ಕಂ ಪೆಱರ್ ತಕ್ಕರೇ (ಪಂಪಭಾ. ೬-೪೦); ಆಗಳಲ್ಲಿಂ ಮಗುಳೆ ನೆಲಸಿದ ಬೇಗದಲು ಸಿರಿವೊಳಲ ನರಹರಿ ಬೇಗ ಮನುಜರ ಪ್ರಾರ್ಥನಂಗಳ ಕೊಂಬ ನರಸಿಂಹ (ಸಂಭಪ. ೮-೦೨೮); ಗಾನವಿನೋದಿ ನಮ್ಮ ತೊರವೆಯ ನರಸಿಂಹ (ಪುರಂದ. ೦-೦೨೩ ಅನುಪಲ್ಲವಿ); ನಿಂದಲ್ಲಿ ನಿಲ್ಲದಾ ನರಸಿಂಹನಿದಿರೊಳ್ಳೆ ತಂದು ನಿಂದು... ಇಂತೆಂದನು (ಜಿಬಪು. ೩೩-೯). ೨.=ನರಸಿಂಗ ೨: ಚಲದ ಬಲದ ಕಲಿ ನರಸಿಂಹಂ (ಪಂಪಭಾ. ೦-೩೩). ೩. ಹೊಯ್ಸಳ ರಾಜನಾದ ಒಂದನೆಯ ನಾರಸಿಂಹನ ಹೆಸರು: ನರಸಿಂಹಭೂಮಿಪಾಳನ ಕರಾಸಿ ಮಚ್ಚರಿಪರೆದೆಯ ಗೂಂಟಂ ವಿದ್ಯಾಭರಣಂ ತಾನೆನೆ ರಂಜಿಪಂ . . . ಗಳಗಂ (ಎಕ. V, ಬೇಲೂರು. ೧೦೪-೪೮; 1173). ೧, ೩: ನರಸಿಂಹಂ ನರಸಿಂಹನನ್ತೆ ಮುನಿಸಿಂ ಮಾಱಾಂತ ವೀರಾರಿ ಭೂಪರನಣ್ಮುಟ್ಟಿನೊಳಿಂತು ಕಂಡೊಡೆ ಬಳಿಕ್ಕಮ್ಮಮ್ಮ ಪೋಟ್ದಿಕ್ಕಿ (ಎಕ. VI, ತರೀಕೆ. ೪೨-೦೮; 1206).

[ನರ$_2$ + ಸಿಂಹ]

ನರಸಿಂಹಕ್ಷೇತ್ರ (ನಾ). ನರಸಿಂಹದೇವರು ನೆಲೆಸಿರುವ ಪುಣ್ಯಸ್ಥಳ : ಪರಮಭಕ್ತಪ್ರಹ್ಲಾದಗೊಲಿದು ಬಂದು ನರಸಿಂಹಕ್ಷೇತ್ರವೆಂದೆನಿಸಿ ಮೆಱೆದೆ (ಪುರಂದ. ೪-೪೦-೩) ; ಮಹಾನರಸಿಂಹಕ್ಷೇತ್ರಮನಾ ಹಿರಣ್ಯಕಸುತ ಪ್ರತಿಷ್ಠಿತಮನೀಕ್ಷಿಸಿದಂ (ಯಾದಚಂ. ೦೬-೧೬೬).

[ನರಸಿಂಹ + ಕ್ಷೇತ್ರ]

ನರಸಿಂಹಜಯಂತಿ (ನಾ). ನರಸಿಂಹನು ಅವತಾರಮಾಡಿದ ದಿನ ; ವೈಶಾಖಶುದ್ಧಚತುರ್ದಶಿಯಂದು ಆಚರಿಸುವ ಹಬ್ಬ : ನೃಸಿಂಹ ಅಥವಾ ನರಸಿಂಹಜಯಂತಿಯನ್ನು ವೈಶಾಖಶುಕ್ಲ ೧೪ನೆಯ ದಿನದಂದು ಆಚರಿಸುತ್ತಾರೆ (ಭಾಹಬ್ಬ ೮೪). [ನರಸಿಂಹ + ಜಯಂತಿ]

ನರಸಿಂಹಾಡಂಬರ (ನಾ). ನರಸಿಂಹನ ಆಟೋಪ,-ಅಬ್ಬರ : ಅರಿಗಳ್ ಪೆಸರ್ಗೇಳ್ದೆರ್ದೆವೊಡೆವರೆಂಬ ಶೂದ್ರಕನ ವಿಕ್ರಮಾಡಂಬರಮಂದರೆವಾನಿಸಿಕೆಯೊಳೊಂದಿದ ನರಸಿಂಹಾಡಂಬರಕ್ಕೆ ನಸುನಗುತಿರ್ಕುಂ (ಕಾದಂಪೂ. ೧೦).

[ನರಸಿಂಹ + ಆಡಂಬರ]

ನರಸಿಂಹಾವತಾರ (ನಾ). ೧. ನರಸಿಂಹನ ಅವತಾರ. ೨. (ಆಲಂ) (ನರಸಿಂಹನಂತೆ) ಕೋಪಾವೇಶದಿಂದ ಕೂಡಿದ ಉಗ್ರರೂಪ : ಅವರ ನರಸಿಂಹಾವತಾರವೆಲ್ಲಾ ಇಳಿದು, ಒಮ್ಮೆ ಹೋಗಿ ಬಿದ್ದುಕೊಂಡರೆ ಸಾಕು ಎಂದೆನಿಸಿತ್ತು (ಮರಮ. ೬೬) ; ಅವರು ನರಸಿಂಹಾವತಾರ ತಾಳಿಬಿಟ್ಟಿದ್ದರು, ನಾನು ಮಾತಾಡದೆ ಬಂದುಬಿಟ್ಟೆ (ರೂಢಿ). [ನರಸಿಂಹ + ಅವತಾರ]

ನರಸಿಕ್ಕು (ನಾ). ದೇಹದಲ್ಲಿ ನರಗಳು ತೊಡಕಿಕೊಂಡಿರುವಿಕೆ: ನರಸಿಕ್ಕು, ಕಪಾಲಶೂಲೆಗೆ-ಕಡಲನಾಲಿಗೆ, ತುತ್ತ, ಸೈಂಧವಲವಣ . . . ಇವೆಲ್ಲವಂ ಕೂಡಿ ವೇದನೆಯಾದ ಠಾವಿಗೆ ಶಸ್ತ್ರವನ್ನಿಕ್ಕಿ ಆ ಔಷಧಿಯಂ ಲೇಪಂ ಮಾಡೆ ವೇದನೆ ತೀರ್ಗುಂ (ವಿವೈವಿ. ೦೬೨).

[ನರ$_1$ (<ನರವು) + ಸಿಕ್ಕು$_3$ (<ಸಿಲ್ಕು$_2$)]

ನರಸಿಗಮಂಗಲ (ನಾ). ಒಂದು ಊರಿನ ಹೆಸರು: ಪೊಙ್ಕುನ್ದ ಬೆಳ್ಮಾದಙ್ಗಂ ಶ್ರೀಕಣ್ಟೇಶಾಯಿ ನರಸಿಗಮಙ್ಗಲದ ತೊಱುಗೊಳೊಳ್ ಸತ್ತಂ (ಎಳ. X, ಬೌರಿಂಗ್. ೪೨-೪ ; ಸು. 920).

[P ಇದು 'ನರಸಿಂಗಮಂಗಲ' ಎಂಬುದರ ಅಪಲಿಖಿತವಿರಬಹುದು.]

ನರಸೀಗೆಱೆ (ನಾ). ಒಂದು ಊರಿನ ಹೆಸರು.

ನರಸೀಗೆಱೆ ಅಪ್ಪೊರ್ =ನರಸೀಗೆರೆಯೆಂಬ ಊರಿನವರು: ಸ್ವಸ್ತಿಶ್ರೀ ನರಸೀಗೆಱೆ ಅಪ್ಪೊರ್ ದುಗ್ಗಮಾರ ಕೊಯಿಲ್ವಸದಿಗೆ ಅಱುಗಣ್ಡುಗಬ್ಬೆದೆ ಮಣ್ಕೊಟ್ಟರ್ (ಮೃಅರಿ. ೦೯೩೨, ೩೮-೦ ; ಸು. 825). [?]

ನರಸು 'ನರ್ಸ್' ನೋ.

ನರಸುಕ್ಕು (ನಾ). ನರ ಉಡುಗುವಿಕೆ ; ನರ ಮುದುರಿಕೊಳ್ಳುವಿಕೆ (?): ಇಕ್ಕಡಿಯ ಬಸುಱುಚ್ಚುಗಳ ನರಸು[ಪಾಠಾಂ. ಸೊ]ಕ್ಕು ದೊಳ್ಳಾಸದ ಮಹಾಭಯವೆಕ್ಕಸರದಲಿ ಕಾಣಲಾದುದು ವೈರಿಬಲದೊಳಗೆ (ಕುವ್ಯಾಬ್ರೋ. ೦೭-೨೬) ; ಇಕ್ಕಡಿಯ ಬಸುಱುಚ್ಚುಗಳ ನರಸುಕ್ಕುಗಳ ನಾಟಕದವೊಲು ಕೈಯಿಕ್ಕಿದಾನೆಯ ಹಿಂಡು ಮುಱಿದುದು ನಿಮಿಷಮಾತ್ರದಲಿ (ಕುವ್ಯಾಗ. ೨-೨೪).

ನರಸುಕ್ಕನಿಕ್ಕು=ನರಗಳು ಮುದುರಿಕೊಳ್ಳುವಂತೆ ಮಾಡು; ನರಗಳು ಉಡುಗಿಹೋಗುವಂತೆ ಮಾಡು : ಬಾಳ ಚಾಚಿದಳಿವಳಿನಗೆ ಗೋನಾಳಿಗೊಡ್ಡಿದ ಬಂದಿಯಲಿ ತುದಿನಾಲಗೆಗೆ ನರಸುಕ್ಕನಿಕ್ಕಿದಳಿವಳು ತನಗೆಂದ (ತೊರರಾ. ೨-೨-೩೮). [ನರ$_1$ (<ನರವು) + ಸುಕ್ಕು$_2$ (<ಸುರ್ಕು$_2$)]

ನರಸುತ (ನಾ). = ನರನಂದನ : ರಣಾಜಿರದೊಳರಿನೃಪರನಿಕ್ಕಿದ ನರಸುತನಿನ್ನೊರೆಗೆ ದೊರೆಗೆ ಗಂಡರುಮೊಳರೇ (ಗದಾಯು. ೪-೩೩) ; ಸೈಂಧವನೆಟಂದು ತಾಗಿದಂ ನರಸುತನೊಳ್ (ಬಂಹರಿ. ೦೨-೨೨).

[ನರ$_2$ + ಸುತ]

ನರಸೇನೆ (ನಾ). ಮಾನವ ಸೈನ್ಯ : ನರಸೇನೆಗರಿದು ಲಂಕಾಪುರದ ಬಹಿರ್ಜಲಧಿ ದಾಂಟಲಿಂತಿದು ದೇವಾಸುರರ್ಗಮರಿದೆನಿಸಿ ನರಕನ ಪುರಮಂ ಬಳಸಿರ್ದುದೊಂದು ಮೌರವಪಾಶಂ (ಜಗವಿ. ೦೨-೩). [ನರ$_2$ + ಸೇನೆ]

ನರಸೊಬ್ಬ (ನಾ). ಒಬ್ಬಾತನ ಹೆಸರು : ಸ್ವಸ್ತಿಜಂಬೂದ್ವೀಪಾಂತರೇ ಕಶ್ಚಿತ್ ವಾಸ್ತು ಪ್ರಾಸಾದ ತದ್ಗತಃ ನರಸೊಬ್ಬಸಮೋ ವಿದ್ವಾನ್ ನ ಭೂತೋ ನ ಭವಿಷ್ಯತಿ (ಇಅ. IX, ೭೪-೩ ; ಸು. 7-8ನೆಯ ಶತ).

[<ನರಸ ?]

ನರಸ್ಫೋಟ (ನಾ). "ನರದ ಮೇಲಿನ ಅಥವಾ ನರಪದಾರ್ಥದ ಮೇಲಿನ ಗಂತಿ" (Neuroma. ಇಂಕನಿ). [ನರ$_1$ (<ನರವು) + ಸ್ಫೋಟ]

ನರಹತಿ (ನಾ). = ನರಹತ್ಯ : ದೇಶ ದೇಶಗಳ ನಡುವೆ ಆಗುವ ಯುದ್ಧದಲ್ಲಿ ನರಹತಿ ಅಪಾರವಾಗಿರುತ್ತದೆ (ರೂಢಿ). [ನರ$_2$ + ಹತಿ]

ನರಹತ್ಯ (ನಾ). ಮನುಷ್ಯನ್ನು ಕೊಲ್ಲುವುದು ; ಕೊಲೆ : ನರಹತ್ಯಕ್ಕೆ ಹೆದರದವ ಕುರಿಹತ್ಯಕ್ಕೆ ಹೆದರ್ಯಾನೆ? (ಗಾದೆ). [ನರ$_2$ + ಹತ್ಯ]

ನರಹತ್ಯೆ (ನಾ).=ನರಹತ್ಯ : "ಮನುಷ್ಯನನ್ನು ಕೊಲ್ಲುವದು ; ನರಹತ್ಯೆ" (Homicide. ಇಂಕನಿ) ; ನರಹತ್ಯೆ ನಡೆದರೆ . . . ಅವನಿಗೆ ಗಲ್ಲಾಗುವುದೇ ಖಂಡಿತ ! (ಮಲೆಮ. ೮೧೯). [ನರ$_2$ + ಹತ್ಯೆ]

ನರಹರಿ (ನಾ).= ನರಸಿಂಹ ೧ : ಹಿರಣ್ಯಕ ಕೇಡುಗಾಲಕೆ ಮಗನ ಕೊಲಲಿರೆ ಗೂಢ ನಖದಲಿ ಸೀಳ್ದ ನರಹರಿಯಾಗಿ ದಾನವನ (ಕೌಶಿರಾ. ೧೪-೨೮) ; ಹರಿಯನ್ನು . . . ಹರಿಯೆನ್ನದಿದ್ದರೆ ನರಹರಿಯಾಣೆ (ಪುರಂದ. ೩-೧೩೩ ಅನುಪಲ್ಲವಿ) ; ಕೂಗಿದರು ಧ್ವನಿ ಕೇಳಲಿಲ್ಲವೇ ನರಹರಿಯೆ (ಕನಕ. ೦೩೬ ಅನುಪಲ್ಲವಿ). [ನರ$_2$ + ಹರಿ$_7$]

ನರಹರ್ಯಕ್ಷ (ನಾ).=ನರಸಿಂಹ ೧ : ನರಹರ್ಯಕ್ಷ ಪಾಲಿಸು ಮೋಕ್ಷಪದದಕ್ಷ (ಉತ್ತರಾ. ೨೦-೨೩) ; ಹರನುತ ಹಲಧರನನುಜ ನರಹರ್ಯಕ್ಷ ಹರುಷದಿ ಸಲಹೆನ್ನನೊಲಿದು (ಶತಸಾಂ. ೭೪-೭೩). [ನರ$_2$ + ಹರ್ಯಕ್ಷ]

ನರಹುರಿ (ನಾ). ಹೊಸೆದುಕೊಂಡಿರುವ ನರ : Nerve Cord ನರಹುರಿ (ಕೀಟಬೆ. ೨೬). [ನರ$_1$ (<ನರವು) + ಹುರಿ$_3$ (<ಪುರಿ$_3$)]

ನರಹುಲಿ 'ನರವುಲಿ' ನೋ.

ನರಹುಳು (ನಾ). ೧. ನರಪಿಳ್ಳೆ ; ಮನುಷ್ಯ : ಆದರೆ ರಜಿಸ್ತ್ರಿಯಾಗುವ ತನಕ ಸುದ್ದಿ ನರಹುಳುವಿಗೆ ಸಿಗಕೂಡದು (ಮರಮ. ೧೬೦). ೨. (ಆಲಂ) ಕೈಲಾಗದವನು ; ದುರ್ಬಲ : ಎಲೆ ಯುಧಿಷ್ಠಿರ ಬಿಲ್ಲ ಹಿಡಿ ನರಹುಳುಗಳಿವದಿರ ಕವಿಸಿ ಕಾಲವ ಕೊಲುವುದೇ (ಕುವ್ಯಾಬ್ರೋ. ೨-೪೩).

[ನರ$_2$ + ಹುಳು (<ಪುಱು)]

ನರಳ್ 'ನರಲ್$_1$' ನೋ.

ನರಳಾಟ (ನಾ). ನರಳುವಿಕೆ ; ಸಂಕಟಪಡುವಿಕೆ ; ವೇದನೆಯ ಧ್ವನಿ : ಅದರಿಂದುಂಟಾಗುವ ನರಳಾಟವೂ ಆಶಾಭಂಗವೂ ತಿಳಿದು ಬರುತ್ತವೆ (ತತ್ವಪ್ರಾ. ೩೯೦) ; ಈ ನರಳಾಟದಲ್ಲಿಯೇ ಮರುದಿನ ನಸುಕಿನಲ್ಲಿ ಅವನ ಆಯುಷ್ಯವು ಮುಗಿದುಹೋಯಿತು (ಸಮಜೀ. ೪೪೨).

[ನರಳು$_1$ (<ನರಲ್$_1$) + ಆಟ]

ನರಳಾಡು (ಕ್ರಿ). ನರಳು ; ಸಂಕಟಪಡು : ಮಗು ನೋವಿನಿಂದ ನರಳಾಡುತ್ತಿದೆ (ರೂಢಿ). [ನರಳು$_1$ (<ನರಲ್$_1$) + ಆಡು$_1$]

ನರಳಿಕೆ (ನಾ). = ನರಳಾಟ : ನಿಶಿತಖಡ್ಗನಿಘಾತವೇದನೆಯ ನರಳಿಕೆಯ ರಘುರಾಮ ನಾಮಸ್ಮರಣೆಯರುಣಕುಮಾರಕನ . . . ಕಂಡನು (ತೊರರಾ. ೩-೧೨-೪) ; ಆ ನರಳಿಕೆ, ಆ ಸಂಕಟದ ಕೂಗು ಮತ್ತಾರದೂ ಅಲ್ಲ (ಬನಸಿ. ೩೩) ; ನನ್ನ ಧ್ವನಿ ನೆಗಡಿಯ ಹಿಡಿತದಿಂದ ತುಸ ಬಿಡಿಸಿಕೊಂಡು . . . ಗುಹೆಯೊಳಗಿನ ನರಳಿಕೆಯಂತೆ ಹೊರಕ್ಕೆ ಬಂದಿತ್ತು (ನಂಟರು. ೩೯).

[ನರಳು$_1$ (<ನರಲ್$_1$) + – ಇಕೆ]

ನರಳಿಸು 'ನರಲಿಸು' ನೋ.

ನರಳು$_1$ 'ನರಲ್$_1$' ನೋ.

ನರಳು$_2$ 'ನರಲ್$_2$' ನೋ.

ನರಳುದನಿ (ನಾ). ನರಳುವ ಧ್ವನಿ ; ನರಳಾಟ : "ಓ ಓ, ಅಯ್ಯೋ . . ." ಎಂಬ ಹೆಂಗಸಿನ ನರಳುದನಿ ಅವನ ಕಿವಿದೆರೆಯನ್ನು ಮೀಟಿತು (ಪುನರು. ೪೫೪). [ನರಳು$_2$ (<ನರಲ್$_2$) + ದನಿ$_1$]

ನರಳೆ (ನಾ). ಒಂದು ಬಗೆಯ ಬಳ್ಳಿ ; ಮಂಗರವಳ್ಳಿ : ಈ ದಿನ ನಮ್ಮ ಮನೆಯಲ್ಲಿ ನರಳೆ ಚಟ್ನಿ ಮಾಡಿದ್ದರು (ರೂಢಿ). 'ನರಲೇಬಳ್ಳಿ' ಪರಾ. [ದೇ.॥ ತಮಿ. ನರಳ್ಳಿ]

ನರಾಂಗ (ನಾ). ೧. ಮನುಷ್ಯದೇಹ : ಉಜ್ಜ್ವಲ ಬಡಬಾಬ್ಧಿವಹ್ನಿ ಯುಗಮಾಂತು ನರಾಂಗಮನಣ್ಮಿ ಕಾದುವಂತೆ (ಶಬಶಂ. ೪-೭೨). ೨. ಪುರುಷನ ಜನನೇಂದ್ರಿಯಂ. [ನರ$_2$ + ಅಂಗ$_2$]

ನರಾಕೃತಿ (ನಾ). ಮನುಷ್ಯನ ಆಕಾರ,-ರೂಪ : ಆಗಳ್ ನರಾಕೃತಿ ಗಕ್ಕನೆ ಪೋಗಿ ರಾಜಕೀರಾಂಚಿತಜನ್ಮವನ್ನಮರ್ದಪ್ಪಿದುದು (ಉದ್ಕಟ. ೬-೧೧೫) ; ನರಾಕೃತಿಯ ಪರಬೊಮ್ಮರೂಪನು ತಿರುಹಿದನು ರಥವ (ಕುಮಾಕ್ರೋ. ೧೮-೩೧). [ನರ$_2$ + ಆಕೃತಿ]

ನರಾದಿ (ನಾ). ಒಂದು ಬಗೆಯ ಆಯುಧ : ಬಲ್ಲೆಹ ಬಂಕು ಬಾಣನೆದೆ ನರಾದಿ ಶೂಲ ಶಿರಾದಿ ಚೂರಿ ಚಿಕ್ಕಠಾರಿ . . . ಜವದಾಡೆಗಳೆಂಬ ಬತ್ತೀಸಾಯುಧಗಳಿಂ (ವಿವೇಕ. ೨೬೨). [?]

ನರಾಧಮ (ನಾ). ಕೀಳುಮನುಷ್ಯ ; ನೀಚ ; ಹೀನ ಮಾನವ : ನರಾಧಮರೆಮಗೆ ಪಾಡೇ ಪಥವ ಬಿಡು ಬೇಡೆನುತ ತೆಗೆದೆಚ್ಚ (ತೊರರಾ. ೬-೨೦-೩೨) ; 'ನೀನು ಹೇಡಿ' ಎಂದು ಹೇಳಿದರೆ ಕೋಪಿಸಿಕೊಳ್ಳದ ನರಾಧಮನೂ 'ನೀನು ಧೀರ' ಎಂದರೆ ಹಿಗ್ಗದ ನರನೂ ಈ ಪ್ರಪಂಚದಲ್ಲಿ ಇಲ್ಲವೆಂದೇ ನನ್ನ ಅಭಿಪ್ರಾಯ (ಪಂಯಾತ್ರೆ. ೪೨) ; ಏಳ್, ಸರ್ವಶಕ್ತಿ ಸ್ವರೂಪಿಣಿಯೆ . . . ನರಾಧಮ ಕಪಿಪ್ರಾಣಾಪಹಾರಕ್ಕೆ ! (ಶ್ರೀರಾಮಾ. ೭೮೪-೯೦) ; ಈ ನರಾಧಮನ ಬೆದರಿಕೆಗೆ ಅಷ್ಟು ಹೆದರಿದಿರಾ ? (ಹಂಗೀತ. ೨೦೨). [ನರ$_2$ + ಅಧಮ]

ನರಾಧಿಪ (ನಾ). ಅರಸ ; ರಾಜ : ಶನಿ ಮಕರಲಗ್ನದೊಳ್ . . . ದಸುಜೇಜ್ಯಂ ತೊಲೆಯೊಳ್ ಸೌಮ್ಯನಿರಲ್ ನರಯುಗ್ಮದೊಳ್ ನರಾಧಿಪನಕ್ಕುಂ (ಜಾತತಿ. ೧೨-೫) ; ಪೊಲ್ಲವಪ್ಪ ಕನಸಂ ಪರಿವೀಕ್ಷಿಸಿದಂ ನರಾಧಿಪಂ (ಬಂಹರಿ. ೬-೮) ; ಉನ್ನತಚಿತ್ತನಾದನನಿತೊಂದುಪಸರ್ಗ ದೊಳಾ(ಳಂ) ನರಾಧಿಪಂ (ಜೀವಸಂ. ೫೭-೩೭) ; ಖಳತನೂಭವನಿಳೆಯ ನಾಡಾಡಿಯ ನರಾಧಿಪನೈಸಲೇಯೆಂಬ ಬಳಕೆಯಲಿ ಬೊಬ್ಬಿಱಿದು . . . ನಿಡುದನಿದೋಱಲೆಚ್ಚನು ರಾಘವೇಶ್ವರನ (ತೊರರಾ. ೬-೪೧-೩೫). [ನರ$_2$ + ಅಧಿಪ]

ನರಾಧೀಶ (ನಾ). = ನರಾಧಿಪ : ತ್ರಿದಶಲೋಕಕ್ಕೇಱುತಿರ್ದಾ ತ್ರಿಶಂಕು ನರಾಧೀಶನ ಲಕ್ಷ್ಮಿ ಶಕ್ರನ ಮಹಾ ಹುಂಕಾರದಿಂ ಬಿರ್ದಳೆಂಬಿನೆಗಂ . . . ಒರ್ವಳ್ ಕನ್ನೆ ಚಂಡಾಲೆ ದರ್ಶನತಾತ್ಪರ್ಯದೆ ರಾಜಕೀರಸಹಿತಂ ಬಂದಿರ್ದಪಳ್ ಬಾಗಿಲೊಳ್ (ಕಾದಂಪೂ. ೨೪). [ನರ$_2$ + ಅಧೀಶ]

ನರಾಮರ (ನಾ). = ನರಾಧಿಪ : "ನೃಪತಿ ರಾಟ್ ರಾಜಂ ನರಾಮರಂ ಪಾರ್ಥಿಮಂ. . .ಎನಲ್ಕರಸಕ್ಕು" (ಮಂಗರಾ. ೭೮-೧). [ನರ$_2$+ಅಮರ$_3$]

ನರಾಯುಷ್ಯ (ನಾ). ಮನುಷ್ಯನ ಆಯುಸ್ಸು ; ನೂರು ವರ್ಷ: ಜನನಂ ಸಂಭವಿಸಿರ್ದ ಲಗ್ನಗೃಹದೊಳ್ ಪಾಪಗ್ರಹಂ ನಿಂದೊಡರ್ಧ ನವಾಂಶಂ ಗಳಿನಾಯುವನ್ನಱಿದು ಭಾಗಂಗೊಂಡು ನೂಱಿಂಟಱಿಂದೆ ನರಾಯುಷ್ಯ ದೊಳಲ್ತೆ ಕುಂದಿಪುದು ಪೆತ್ತಾ ಲಬ್ಧಮಂ (ಜಾತತಿ. ೮-೮). [ನರ$_2$ + ಆಯುಷ್ಯ]

ನರಾವರಣ (ನಾ). ನರಗಳ ಆವರಣ,-ಆಚ್ಛಾದನ : ನಶ್ವರಪಕ್ಷೀಯಗಳಲ್ಲಿ ನರಗಳ ಹುರಿಯ ಮೇಲೆ, ನರಾವರಣದ (Perineural Sinus) ಕೆಳಕುಹರ ವಾಗಿದೆ (ಕೀಟಬೆ. ೩೨). [ನರ$_1$ (<ನರವು) + ಆವರಣ]

ನರಾಶ್ವ (ನಾ). ಕುದುರೆಯ ತಲೆ ಹಾಗು ಮನುಷ್ಯನ ಶರೀರ ಅಥವಾ ಮನುಷ್ಯನ ಮುಖ ಹಾಗು ಕುದುರೆಯ ಶರೀರವುಳ್ಳ ಒಂದು ವಿಧದ ದೇವತೆ ; ಕಿನ್ನರ ; ಕಿಂಪುರುಷ : ಹಲವು ಅಸಮಂಜಸ ಭಾಗಗಳು ಸೇರಿ ಆದ ಯಾವುದಾದರೂ ಕಾಲ್ಪನಿಕ ಪ್ರಾಣಿ (ನರಾಶ್ವ, ಕಿಂಪುರುಷ, ಮೊ. ವು) (Monster. ಇಂಕನಿ). [ನರ$_2$ + ಅಶ್ವ]

ನರಿ (ನಾ). ೧. ಉದ್ದವಾದ ಮೂತಿ ಮತ್ತು ಕುಚ್ಚಾಗಿರುವ ಬಾಲ ವನ್ನುಳ್ಳ (ನಾಯಿ ಜಾತಿಗೆ ಸೇರಿದ) ಮಾಂಸಾಹಾರಿಯಾದ ಒಂದು ಬಗೆಯ ಕಾಡುಪ್ರಾಣಿ ; ಜಂಬುಕ ; P ಇದು ಬಹಳ ತಂತ್ರಗಾರ ಎಂದು ನಂಬಲಾಗಿದೆ : ಆಕಾಶಕ್ಕೆ ಬಾಯಂ ತೆಱೆದೂಳ್ವ ಬಳ್ಳುಗಳುಮಂ ನರವುಮಂ ಬರಿಯುಮಂ ಪತ್ತಿ ತೆಗೆದು ಪೆಡಸಾರ್ವ ನರಿಗಳುಮಂ (ಪಂಪಭಾ. ೧೩-೫೬ ವ); ಹರಿ ಕರಿಗೆ ಮುಳಿಗುಮಲ್ಲದೆ ನರಿಗಂ ಕೋಱಿಗಮೇಂ ಮುಳಿಗುಮೆ (ಶಾಂತಿಪು. ೩-೬೨) ; ಉತ್ತುಂಗಮತ್ತಮಾತಂಗಮಂ ಕೊಂದು ತಿಂಬ ಸಿಂಹನೊಂದು ನರಿಯಂ ತಿಂದುದೆಂದು ಲೋಕಮಪಹಾಸ್ಯಂಗೆಯ್ಗುಂ (ಪಂಚತಂ. ೧೪೫-೯) ; ಕಬ್ಬಿನ ತೋಂಟಮಂ ನರಿ ಪೊಕ್ಕಂತೆ (ಧರ್ಮಾಮೃ. ೨-೭೦) ; ಇಟ್ಟಿಯ ಹಣ್ಣು ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ (ಬಸವ. ೫೭೮) ; ಕೊಬ್ಬಿ ನರಿ ಹೆಬ್ಬುಲಿಯ ಕೂಸನು ಬೇಡುವಂದದಿ ಅಳವನಱಿಯದೆ ಅಧಮ ರಥಿಕರ ಕೂಡೆ ತೊಡಕುವರೆ (ಕುಮಾಕ್ರೋ. ೫-೪೨) ; ಕರಿಗಳನು ಮುಱಿದಿಡುವ ಸಿಂಹಕೆ ನರಿಗಳಿದಿರೇ ತಾನು ನಿನ ಗಂ ತರವೆ (ನಳಚ. ೨-೧೮). 'ಕರಟಕ' ಪರಾ. ೨. ಹುಲಿ. 'ನರಿಬೇಂಟೆ', 'ನರಿಮಂಗಲ' ಪರಾ. ೩. (ಆಲಂ) ವಂಚಕ ; ಮೋಸಮಾಡು ವವನು ; ತನ್ನ ಠಕ್ಕುತನವನ್ನು ಸುಳಿವು ಕೊಡದವನು : ತಾನು ಮಾಡುತ್ತಿರುವುದು ಕೇವಲ ಮುಖ್ಯವಾಗಿ ಸ್ವಾರ್ಥ ; ಅದರೊಡನೆ ಸ್ವಲ್ಪ ಪರೋಪಕಾರವೂ ಘಟಿಸುವುದಲ್ಲ, ಅಷ್ಟಾದರೂ ಕಡಿಮೆಯೆ ? ಎಂಬ ನರಿಗಳುಂಟು (ಯಕ್ಷಪ್ರ. ೧೭೧).

ನರಿಕೂಗು = ಅಲ್ಪರ ಪ್ರಾರ್ಥನೆ, - ಅಹವಾಲು, - ಕೂಗು : ನರಿಕೂಗು ಗಿರಿ ಮುಟ್ಟೀತೆ ? (ಗಾದೆ). ನರಿಮದುವೆ : ಬಿಸಿಲಿದ್ದೂ ಮಳೆ ಬೀಳುವಿಕೆ ; P ಬಿಸಿಲಿದ್ದು ಮಳೆ ಬೀಳುವಾಗ ನರಿಗೂ ನಾಯಿಗೂ ಮದುವೆ ನಡೆಯುತ್ತದೆಂದು ಜನಸಾಮಾನ್ಯರು ಹೇಳುವ ವಾಡಿಕೆ : ನರಿಮದುವೆಯಲ್ಲಿ ಕತ್ತೆಪೌರೋಹಿತ್ಯ (ಗಾದೆ). ನರಿಯ ಬುದ್ಧಿ = ಮೋಸಮಾಡುವ ಬುದ್ಧಿ ; ವಂಚಕತನ : ನನ್ನ ರಾಯಭಾರ ಅಯಶಸ್ವಿಯಾದುದನ್ನು ಕಂಡು ರಾಜ ನನ್ನ ಮೇಲೆ ಮುನಿದು ಕೊಳ್ಳುವನೆಂದೇ ಈ ನರಿಯ ಬುದ್ಧಿಯ ಮುರಾರಿ ನನ್ನನ್ನು ಕಳಿಸಿರಲು ಸಾಕು (ಗಿರಿನ. ೧೦೯). ನರಿಯ ಮುಖ ನೋಡು = ಒಳ್ಳೆಯ ಶಕುನವನ್ನು ಹೊಂದು ; ಅದೃಷ್ಟವಂತನಾಗು : ಬೆಳಿಗ್ಗೆ ಎದ್ದು ನರಿಯ ಮುಖ ನೋಡಿದ್ದ ಅಂತ ಕಾಣುತ್ತೆ, ಬಡ್ತಿ ಸಿಕ್ಕಿತು (ರೂಢಿ).

[ದೇ.॥ ತಮಿ. ಮಲ. ತುಳು. ಕೊಡ. ನರಿ ; ತೆಲು. ಕೊಲಾ. ಕುವಿ.ನಕ್ಕ]

ನರಿಕು 'ನಱಂಕು' ನೋ.

ನರಿಕೊಂತ (ನಾ). ಒಂದು ಬಗೆಯ ಆಟ : ನರಿಕೊಂತನ ಆಟ : ಇಲ್ಲಿಯೂ ಕೈತಾಳ ಹಾಕುವುದರ ಮೂಲಕ ಪಕ್ಷ ನಿರ್ಧಾರವಾಗುತ್ತದೆ. ನೆಲಕ್ಕೆ ಸಂಮಾರು ಕಡ್ಡಿಗಳನ್ನು ನೆಟ್ಟಿರುತ್ತಾರೆ. ಅವುಗಳನ್ನು ಕಾಯುವವನು ಒಬ್ಬ, ಉಳಿದವರೆಲ್ಲ ಕಡ್ಡಿಗಳನ್ನು ಕೀಳಲಿಕ್ಕೆ ಪ್ರಯತ್ನಿಸುವರು. ಹೀಗೆ ಕಡ್ಡಿಗಳನ್ನು ಕೀಳಲು ಬಂದಾಗ, ಕಾಯುವವನು ಅವರನ್ನು ಹಿಡಿಸಿಕೊಂಡ ವರೇ ಕಡ್ಡಿಗಳನ್ನೂ ಕಾಯಬೇಕಾಗುತ್ತದೆ. ಕಾಯುವವನು ಹಿಡಿಯಲು

ಹೋದಾಗ, ಉಳಿದವರು ಸುಮ್ಮನಿರದೆ ಬೇರೆಕಡೆಯಿಂದ ಬಂದು ಕಡ್ಡಿಯನ್ನು ಕೀಳುವರು. ಅಷ್ಟು ಜನರನ್ನೂ ಹೆದರಿಸಿ ಕಡ್ಡಿಗಳನ್ನು ಕಾಯಬೇಕಾಗುತ್ತದೆ (ಕವಿಕೋ. I, ೭೧೯). [?]

ನರಿಕೊಂಬು 'ನರಿಗೊಂಬು' ನೋ.

ನರಿಗಣ್ಣು (ನಾ). (ಆಲಂ) ತೀಕ್ಷ್ಣವಾದ ಕಣ್ಣು ; ಚುರುಕುಗಣ್ಣು : ನರ್ಸಿಯ ಕೊರಳಲ್ಲಿ ಎರಡೆಳೆಯ ಸರ ಹೇಗೆ ಬಂದುವು ಎಂಬುದೇ ಕೆಲವು ನರಿಗಣ್ಣಿನ ಕುಹಕಿಗಳ ಪ್ರಶ್ನೆಯಾಗಿತ್ತು (ಒಡ್ಡಿಉ. ೪೭).

[ನರಿ + ಕಣ್ಣು (<ಕಣ್)]

ನರಿಗನಗಟ್ಟ (ನಾ). ಒಂದು ಪ್ರದೇಶದ ಹೆಸರು : ಹೊಂನ್ನೆದೆಱ ಅಳಗನಹಳ್ಳ ಎತ್ತುರುಳಿ ನರಿಗನಗಟ್ಟ ಮತ್ತರನಱ ನಿಱಿಯಿಂಗಲು ಎರೆಯುವು × ಡಿಗರ ಪಳ್ಳ ಪೆಂಪುಳಿಯ ಕೆಱ (ಎಕ. VI, ತರೀಕೆ. ೬೭-೧೨ ; 898). [?]

ನರಿಗೊಂಬು, ನರಿಕೊಂಬು (ನಾ). (ಆಲಂ) ಅಪರೂಪದ ವಸ್ತು : P ನರಿಯ ತಲೆಯ ಮೇಲೆ ಅತ್ಯಂತ ಅಪರೂಪವಾಗಿ ಕೆಲವು ವೇಳೆ ಕೊಂಬು ಮೂಡುವುದೆಂದು ನಂಬಿಕೆಯಿದೆ : ಕರಿಯ ಝುಲ್ಲರಿಗಳು ಬೆಳ್ಳವ್ವಾದಿ ಕತ್ತುರಿಯೇಣ ಪುಣುಗಿನ ಚೆಟ್ಟು ಹರಿಣ ಗೋರೋಚನ ಕೃಷ್ಣಾಜಿನ ಪುಲಿಚರ್ಮ ನರಿಗೊಂಬುಗಳನಿತ್ತರೊಲಿದು (ಮೋಹತ. ೧೯-೭೫). **ನರಿಕೊಂಬು** : ನರಿಕೊಂಬಿದ್ದರೂ ನರರಿಗೆ ಹೆದರಬೇಕು (ಗಾದೆ) ; ನರಿಕೊಂಬಿದ್ದರೂ ಹುರಿಯೋದು ತಪ್ಪೀತೆ ? (ಗಾದೆ).

[ನರಿ + ಕೊಂಬು$_1$]

ನರಿಚೆಂಡು (ನಾ). ಒಂದು ಬಗೆಯ ಸಸ್ಯ : (ಕ).

[ನರಿ + ಚೆಂಡು (<ಸೆಂಡು)]

ನರಿದಾವಿಳೆನಾಡು (ನಾ). ಒಂದು ಪ್ರಾಂತದ ಹೆಸರು : ಕಲಭೋರ [ನಾ] ಅರಿ ಕಕುಸ್ಥಭಟ್ಟೋರನಾಳೆ ನರಿದಾವಿ[ಳೆ]ನಾಡುಳ್ (ಮೈಅರಿ. ೧೯೩೬, ೧೬-೩ ; ಸು. 450). [ನರಿದಾವಿಳೆ$_0$ + ನಾಡು]

ನರಿಬಲೆ (ನಾ). ಒಂದು ಬಗೆಯ ಬಲೆ (?) : ಊರ ಹೊಱಗೊಂದು ಗಿಡುವುರ. ಅದಱೊಳಗೆ ಅಡಗಿಪರೈವರು ಕಳ್ಳರು ಒಬ್ಬ ನರಿಬಲೆಯವ ಒಬ್ಬ ಹುಲಿಬಲೆಯವ (ಕಲ್ಯಾಶಾಂ. ೧೭-೧೦೯). [ನರಿ + ಬಲೆ$_1$]

ನರಿಬಾಲ 'ನರಿವಾಲ' ನೋ.

ನರಿಬಾಲದಗಂಡುಹುಲ್ಲು (ನಾ). ಒಂದು ಬಗೆಯ ಸಸ್ಯ : ನರಿಬಾಲದ ಗಂಡುಹುಲ್ಲು, ನರಿಬಾಲಹುಲ್ಲು (ಮೈಜಿಗಿ. ೩೦-೫೯೦).

[ನರಿಬಾಲ (<ನರಿವಾಲ) + ಗಂಡು + ಹುಲ್ಲು (<ಪುಲ್)]

ನರಿಬಾಲದಹುಲ್ಲು (ನಾ). ೧. ಒಂದು ಬಗೆಯ ಸಸ್ಯ : "ಕ್ರೋಷ್ಟುವಿನ್ನಾ, ಸಿಂಹಪುಚ್ಛೀ, ಕಲಶೀ, ಧಾವನೀ, ಗುಹಾ – ೫ ನರಿಬಾಲದ ಹುಲ್ಲು, ನರಿಬಾಲದ ಹೊನ್ನೆ" (ಸಿದ್ಧಾಂತಿ. ೦೦೭). ೨. ಬಿಳಿ ಕೊರ್ಲೆ ಹುಲ್ಲು : (ಕ). [ನರಿಬಾಲ (<ನರಿವಾಲ) + ಹುಲ್ಲು (<ಪುಲ್)]

ನರಿಬಾಲದಹೆಣ್ಣುಹುಲ್ಲು (ನಾ). ಒಂದು ಬಗೆಯ ಸಸ್ಯ : (ಮೈಜಿಗಿ. ೭೨-೧೪೬೮).

[ನರಿಬಾಲ (<ನರಿವಾಲ) + ಹೆಣ್ಣು (<ಪೆಣ್) + ಹುಲ್ಲು (<ಪುಲ್)]

ನರಿಬಾಲದಹೊನ್ನೆ (ನಾ). = ನರಿಬಾಲದಹುಲ್ಲು ೧ : ಕ್ರೋಷ್ಟುವಿನ್ನಾ, ಸಿಂಹಪುಚ್ಛೀ, ಕಲಶೀ, ಧಾವನೀ, ಗುಹಾ – ೫ ನರಿಬಾಲದ ಹುಲ್ಲು, ನರಿಬಾಲದ ಹೊನ್ನೆ (ಸಿದ್ಧಾಂತಿ. ೧೧೭).

[ನರಿಬಾಲ (<ನರಿವಾಲ) + ಹೊನ್ನೆ (<ಪೊನ್ನೆ)].

ನರಿಬಾಲಹುಲ್ಲು (ನಾ). = ನರಿಬಾಲದ ಗಂಡುಹುಲ್ಲು : "ನರಿಬಾಲದ ಗಂಡುಹುಲ್ಲು, ನರಿಬಾಲಹುಲ್ಲು" (ಮೈಜಿಗಿ. ೩೦-೫೯೦).

[ನರಿಬಾಲ + ಹುಲ್ಲು (<ಪುಲ್)]

ನರಿಬಿಕ್ಕಿ (ನಾ). ಒಂದು ಬಗೆಯ ಬಿಕ್ಕೆಯ ಮರ : ಕಲ್‌ಬಿಕ್ಕಿ, ನರಿಬಿಕ್ಕಿ (ಮೈಜಿಗಿ. ೩೩-೬೩೬). [ನರಿ + ಬಿಕ್ಕಿ$_1$ (<ಬಿಚ್ಕೆ)]

ನರಿಬೇಂಟೆ, ನರಿಬೇಟೆ (ನಾ). ಹುಲಿಯ ಶಿಕಾರಿ. 'ನರಿಬೇಂಟೆಗಾರ' ಪರಾ. **ನರಿಬೇಟೆ** : ನೀನೊಬ್ಬನೇ ನರಿಬೇಟೆಗೆ ಹೋಗುವುದು ಬೇಡ (ಹುಲಿಹಾ. ೧೭).

ನರಿಬೇಟೆಯಾಡು = ಹುಲಿಯ ಶಿಕಾರಿಯನ್ನು ಮಾಡು : ಗ್ರಾಮತಕ್ಕ ನರಿಬೇಟೆಯಾಡಲು ಬರಬೇಕೆಂದು ಮಾದಪ್ಪನಿಗೆ ಹೇಳಿ ಕಳುಹಿದ (ಹುಲಿಹಾ. ೧೭). [ನರಿ + ಬೇಂಟೆ]

ನರಿಬೇಂಟೆಗಾರ, ನರಿಬೇಟೆಗಾರ (ನಾ). ಹುಲಿಯ ಶಿಕಾರಿಯನ್ನು ಮಾಡುವವನು : ಸ್ನೇಹಿತರು ನರಿಬೇಂಟೆಗಾರನನ್ನು ಎಚ್ಚರಿಸಿದರು (ಹುಲಿಹಾ. ೧೭). **ನರಿಬೇಟೆಗಾರ** : ನಾಡವರು ಅವನಿಗೆ ನರಿಬೇಟೆಗಾರ ಮಾದಪ್ಪ ಎಂದು ಗೌರವಸಂಬೋಧನೆಯನ್ನು ಬಳಸುತ್ತಿದ್ದರು (ಹುಲಿಹಾ. ೧೭). [ನರಿಬೇಂಟೆ + – ಗಾರ (< –ಕಾಱ)]

ನರಿಬೇಟೆ 'ನರಿಬೇಂಟೆ' ನೋ.

ನರಿಬೇಟೆಗಾರ 'ನರಿಬೇಂಟೆಗಾರ' ನೋ.

ನರಿಮಂಗಲ (ನಾ). "ಹುಲಿಮದುವೆ ; ಬೇಟೆಗಾರನು ಹುಲಿಯನ್ನು ಹೊಡೆದ ವಿಜಯಸಮಾರಂಭದ ಉತ್ಸವ" (ಹುಲಿಹಾ. ಕೋಶ) : P ಕೊಡಗರಲ್ಲಿ ರೂಢಿಯಲ್ಲಿರುವ ಒಂದು ಪದ್ಧತಿ.–ಸಮಾರಂಭ : ಚೆಂಗುಮಣಿ ಮೂರು ಸಲ ನರಿಮಂಗಲ ಮಾಡಿಸಿಕೊಂಡ ಕೆಚ್ಚೆದೆಯ ಕಲಿಯ ಮಗ (ಹುಲಿಹಾ. ೧೭). [ನರಿ + ಮಂಗಲ]

ನರಿಮಾನಿ (ನಾ). (?) : ನಾವಿಲರಿಗೆ ಖಂ ೬೦ ದನವ ಕಾವ × × × ೪೦ ಅಂತೂ ಖಂ ೨೨೦ ಕೆ ಕಂಮುಗಾಳಿ ಖಂ ೧೨೦ ನರಿಮಾನಿ ಖಂ ೫ ಯೇಗೀಯದಿಂದ ಖಂ ೧೦ ಹಾರುವ ಬಳ್ಳಿ ಖಂ ೪೫ (ಎಕ. VIII, ತೀರ್ಥಹ. ೧೯-೧೦೯ ; 1578). [?]

ನರಿಮೀಸೆಹುಲ್ಲು (ನಾ). ಒಂದು ಬಗೆಯ ಸಸ್ಯ : ನರಿಮೀಸೆಹುಲ್ಲು, ಜಬ್ಬುರುಕೊರ್ಲೆ ಹುಲ್ಲು (ಮೈಜಿಗಿ. ೬೦-೧೨೦೮).

[ನರಿ + ಮೀಸೆ + ಹುಲ್ಲು (<ಪುಲ್)]

ನರಿಮೊಗ (ನಾ). ೧. ನರಿಯ ಮುಖ. ೨. (ಆಲಂ) ಮೋಸದ ಸುಳಿವನ್ನು ತೋರಗೊಡದ ಮುಖ : ನರಿಮೊಗದ ನಗೆಯ ಕುಡುಗೋಲ್ ಕೊಂಕು ನೆರಮಿರಿದು ತುಟಿಗಳಿರ್ಕೆಲದಲ್ಲಿ ಸುಳಿಯುತಿರ್ದುದನಿರುಳ್ ಮರೆಸಿದುದು ಜೊನ್ನಾಯೆಯಿಂ (ಶ್ರೀರಾಮಾ. ೩೭೨-೨೮೯).

[ನರಿ + ಮೊಗ]

ನರಿಯುಂಬೊಳೆ (ನಾ). ಒಂದು ಊರಿನ ಹೆಸರು : ಶ್ರೀಮತ್ ಜ್ಞಾನರಾಶಿ ಪಂಡಿತರ್ಗ್ಗೆ ಧಾರಾಪೂರ್ವ್ವಕಂ ಮಾಡಿಕೊಟ್ಟ ನರಿಯುಂಬೊಳೆಯೆರ್ಪ್ಪತ್ತಱ (ಇಅ. VIII, ೫೦-೧ ; 1077) ; ನರಿಯುಂಬೊಳೆಯೆಬ್ಬತ್ತಱ ಬಳಿಯ ಕಿಱಿಯ ಬೆಳ್ಳುಂಬಟ್ಟಿಯ ಪೊಲದೊಳಗೆ (ಎಇ. XII, ೨೮೩-೨೨೯ ; 1077).

[?]

ನರಿಯುಳ್ಳಿಗೆಡ್ಡೆ (ನಾ). ಒಂದು ಬಗೆಯ ಉಳ್ಳಿಗಡ್ಡೆ,–ಈರುಳ್ಳಿ.

[ನರಿ + ಉಳ್ಳಿಗೆಡ್ಡೆ]

ನರಿವಾಲ, ನರಿಬಾಲ (ನಾ). ಒಂದು ಬಗೆಯ ಸಸ್ಯ ; ನರಿಹೊನ್ನೆಗಿಡ : "ಪೃಶ್ನಿಪರ್ಣೀ – ನರಿವಾಲ" (ಬಾಹಟೀ. ೨-೨-೬೦ ವ) ; "ಪೃಥಕ್ಪರ್ಣೀ – ನರಿವಾಲ, ಹೊನ್ನೆ, ಹೆಗ್ಗುರುಟಿಗೆ, ಒಂದೆಲೆಹೊನ್ನೆ, ಮೂಱೆಲೆಹೊನ್ನೆ" (ಓಷಧಿ. ೧೦೨). **ನರಿಬಾಲ** : ಆನೆಜೊಂಡು, ಆಪು, ನರಿಬಾಲ (ಮೈಜಿಗಿ. ೭೬-೧೫೫೭). [ನರಿ + ಬಾಲ$_1$]

ನರಿವಾಲವೊನ್ನೆ, ನರಿವಾಲಹೊನ್ನೆ (ನಾ). = ನರಿವಾಲ : "ಪೃಶ್ನಿಪರ್ಣೀ, ಪೃಥಕ್ಪರ್ಣೀ, ಚಿತ್ರಪರ್ಣೀ, ಅಂಘ್ರಿಪರ್ಣಿಕಾ, ಕ್ರೋಷ್ಟುವಿನ್ನಾ, ಸಿಂಹ

ಪುಚ್ಛೀ, ಕಲಶೀ, ಧಾವನೀ, ಗುಹಾ–ಈ ೯ ನರಿವಾಲವೊನ್ನೆ" (ನಾಚರಾ. ೦೦೯); "ಕ್ರೋಷ್ಟುವಿನ್ನಾ–ನರಿವಾಲವೊನ್ನೆ" (ಓಷಧಿ. ೪೨). **ನರಿವಾಲಹೊನ್ನೆ**: "ಕ್ರೋಷ್ಟುವಿನ್ನೆ, ಸಿಂಹಪುಚ್ಛೆ, ಕಲಶಿ, ಧಾವನಿ, ಗುಹೆ" (ನಾಚರಾ. ೬); "ದೀರ್ಘವಾಲಾ–ನರಿವಾಲಹೊನ್ನೆ" (ಓಷಧಿ. ೭೭).

[ನರಿವಾಲ + ಪೊನ್ನೆ]

ನರಿವಾಲಹೊನ್ನೆ 'ನರಿವಾಲವೊನ್ನೆ' ನೋ.

ನರಿಹೆಸರು (ನಾ). ಒಂದು ಬಗೆಯ ಸಸ್ಯ: ನರಿಹೆಸರು, ಪಿಲ್ಲಿಪೆಸರ (ಮೃಜಿಗಿ. ೬೦-೦೨೨೬). [ನರಿ + ಹೆಸರು$_2$ (<ಪೆಸಱ್)]

ನರಿಹೊನ್ನೆ (ನಾ). = ನರಿವಾಲ: "ಪೃಶ್ನಿಪರ್ಣೀ, ಪೃಥಕ್ಪರ್ಣೀ, ಚಿತ್ರಪರ್ಣೀ, ಅಂಘ್ರಿಪರ್ಣಿಕಾ . . . ೪ ಕೋಲಪೊನ್ನ ಎಂಬುವದು, ನರಿಹೊನ್ನೇ ಗಿಡ, ನಕ್ಕಚಿಕ್ಕನಾಕು" (ಸಿದ್ಧಾಂತಿ. ೧೩೩). [ನರಿ + ಹೊನ್ನೆ (<ಪೊನ್ನೆ)]

ನರು 'ನಱು' ನೋ.

ನರುಕು 'ನಱುಂಕು' ನೋ.

ನರುಗಂಪು 'ನಱುಗಂಪು' ನೋ.

ನರುಗಳ್ಳು (ನಾ). ಕಮ್ಮನೆಯ ಹೆಂಡ; ಕಂಪುಳ್ಳ ಮದ್ಯ: ಸೇಸನಾಯ್ಕನ ಹುಳಿಗಂಪಿನ ನರುಗಳ್ಳನ್ನು ಕರಟ ತುಳುಕುವಷ್ಟರ ಮಟ್ಟಿಗೆ ಬೊಗ್ಗಿಸಿ (ಪುಲಿಮ. ೦೩). [ನರು (<ನಱು) + ಕಳ್ಳು (<ಕಳ್$_2$)]

ನರುಗಾಳಿ (ನಾ). ಕಂಪುಳ್ಳ ಗಾಳಿ; ಪರಿಮಳ ಭರಿತವಾದ ವಾಯು: ಸಂದರ್ಭಾನುಸಾರವಾಗಿ ಸೂಸುವ ಕಾವ್ಯದ ನರುಗಾಳಿಯನ್ನು ವಾಚಕರು ಸೇವಿಸಬಹುದು (ನಾಡೋಜ. ೩೪೪); ಕೆಚ್ಚೆದೆಯ ದಂಡಾಳುಗಳೇ, ನಮ್ಮ ದಾಳಿಯ ನರುಗಾಳಿಯಿಂದ ಕಂಪಣ್ಣನನ್ನು ಮುತ್ತಿ ಮುಸುರಿಸಿದ ಚೆಂದುಂಬಿಗಳೇ ಕಿವಿಗೊಟ್ಟು ಕೇಳಿರಿ (ನಡಿದಾ. I, ೪೪೦).

[ನರು (<ನಱು) + ಗಾಳಿ$_1$]

ನರುಗು (ನಾ). ಕಂಪು; ಸುವಾಸನೆ: ಇಂಪು, ಸೊಂಪು, ಕಂಪು, ಸೌಸವ, ಅಲಂಪು, ನರುಗು, ಸೊವಡು, ಮಗಮಗ (ಘಮಘಮ) (ಕಂನುಹು. ೭೯).

[<ನಱು]

ನರುಗುಗಂಬಳಿ (ನಾ). ಕಪ್ಪು ಮತ್ತು ಬಿಳಿ ಪಟ್ಟೆಗಳನ್ನುಳ್ಳ ಕಂಬಳಿ: (ಕಿ). [ನರುಗು$_0$ + ಕಂಬಳಿ]

ನರುಚಲು 'ನರಚಲು' ನೋ.

ನರುಟು 'ನರಟು$_2$' ನೋ.

ನರುಟುಗೊಳ್ (ಕ್ರಿ). ಬೆಳೆವಣಿಗೆ ಕುಂಠಿತವಾಗು; ನರಚಲಾಗು; ಪೀಚಾಗು: "ಹ್ಲಸತಿ–ನರುಟುಗೊಂಡಪುದು" (ಕಾಶಕ್ಯ. ೬೨).

[ನರುಟು (<ನರಟು$_2$) + ಕೊಳ್$_1$]

ನರುನೆಯ್ಯಿ 'ನಱುನೆಯ್' ನೋ.

ನರುಮಲ್ಲಿಗೆ (ನಾ). ಸುವಾಸನೆಯಿಂದ ಕೂಡಿರುವ ಮಲ್ಲಿಗೆ: ಇದು ಮಣ್ಣಿನ ನರುಮಲ್ಲಿಗೆ, ಇದು ನೆಲದ ನಿಧಾನ (ಅರಳು. ೨೫೦-೫).

[ನರು (<ನಱು) + ಮಲ್ಲಿಗೆ]

ನರುಲಿ 'ನರವುಲಿ' ನೋ.

ನರುವಂಜಿ 'ನಱುವಂಜಿ' ನೋ.

ನರುವಲ 'ನಱುವಲ್' ನೋ.

ನರುವಲು 'ನಱುವಲ್' ನೋ.

ನರುವಾಯ (ನಾ). ಒಂದು ಬಗೆಯ ಬಾಣ (?): ನೆಱೆದು ನಿರ್ವಾಯಂ ನರುವಾಯಂ ಮುಂ ಮೊನೆ ನೆರಕೆ ನಾರಾಚಂ . . . ಕಣಕನೆ ವೋಪಂ[ಬು] ಕವಲ[ಂಬುವೆಂ]ಬಾಕದಂಬೆತ್ತ[ಲುಂ] ತುಱುಗಿ ನಡುವಿನಂ ಸಾರ್ದು ಸಾರ್ದೆ ಚ್ಚೆಚ್ಚು ಕಾದಿದರತಿರಥರೊಂದು ಜಾವಂ (ಪಂಪಭಾ. ೦೩-೩೯). [?]

ನರುಳ್ಳೆ 'ನರವುಲಿ' ನೋ.

ನರೂಲಿ 'ನರವುಲಿ' ನೋ.

ನರೆ$_1$, ನೆರೆ$_4$ (ಕ್ರಿ). ೧. ಕೂದಲು ಬೆಳ್ಳಗಾಗು; ಪಲಿತವಾಗು: ತೊಗಲು ಸಡಿಲಿದ ಗಲ್ಲ ಬತ್ತಿದ ಹೆಗಲು ನರುಕಿದ ನರೆತ ಮೀಸೆಯ . . . ಮುಪ್ಪಿನ ಮುಗುದನೀತನು (ಕುಪ್ಯಾಭೀ. ೦-೩೫); ನರೆತ ಮಂಡೆಯು ನೀರೊಗುವ ಕಂಗಳು . . . ಪತ್ತಿದ ಗಲ್ಲದ ನೆಱೆ ವೃದ್ಧನಡಿಯಿಟ್ಟನೊಲಿದು (ಜೀವಂಸಾಂ. ೧೬-೩೦); ನ[ಪಾಠಾಂ. ನೆ]ರೆತ ಮಂಡೆಯ ಕುಸಿದ ತೊಗಲಿನ ಜೋಲ್ವ ಹುಬ್ಬಿನ . . . ಶಬರಿಯ ಸುಪ್ರಸಿದ್ಧೆಯ ಸಾರ್ದರೊಲವಿನಲಿ (ತೊರರಾ. ೩-೦೨-೨೯); ನಮಗೇನು ನರೆತ ಹುಬ್ಬುಗಳಿವೆಯೆ? (ಕವಿಸೋ. ೮೯-೨೦). ೨. ಮುಪ್ಪಾಗು; ವೃದ್ಧಾಪ್ಯವನ್ನು ಹೊಂದು: "ಜರಯತಿ–ನರೆತಪಂ" (ಕಾಶಕ್ಯ. ೦೪೩); ಬೆಳುಗಡ್ಡದಿಂ ನಡುಗುವ ನರೆದಲೆಯಿಂ ನರೆತು ಸಡಿಲ್ವ ಸರ್ವಾಂಗದಿಂ . . . ಮೆಲ್ಲಮೆಲ್ಲನೆ ಚಪ್ಪರದ ಬಾಗಿಲ್ಗೆ ಬಂದೊಡೆ (ನಂಬಿರ. ೬-೨೫); ಅಂದಿನೀಶ್ವರನಿಂದು ನರೆತನೆಯಂದಿನ ಚಳಿತಭಕ್ತಿಮಹಿಮೆಯದಿಂದು ನವೆಯಿತೆ (ಬಸಪು. ೫೨-೩೦); ತನ್ನ ನರೆತ ಅಜ್ಞಾನದಲ್ಲಿ ತಾ ನೆರೆತ ಒಂದು ಪ್ರಾಣಿ ನೆರಳು ಬೆಳಕು ಅರ್ಧಾರ್ಧವಿರುವ ಮನ; ಬದುಕಿನೊಂದು ಕಾಣಿ (ಅರಳು. ೦೯೫-೫). **ನೆರೆ$_4$**: ೧. ಪಲಿತಂ . . . ಕೂದಲು ನೆರೆತುಹೋಗುವಿಕೆ (ಸಿದ್ಧಾಂತಿ. ೦೫೬); ಅವರ ಗಡ್ಡ ಮೀಸೆಗಳು ನೆರೆತು ಹೋಗಿದ್ದವು (ಕಳಹು. ೧).

[ದೇ. ॥ ತಮಿ. ನರೈ; ಮಲ. ನರೆ; ತುಳು. ನರೆವು, ನರೆ; ತೆಲು. ನರಯು, ನರಿಯು]

ನರೆ$_2$, ನೆರೆ$_3$ (ನಾ). ೧. ಬೆಳ್ಳಗಾದ ಕೂದಲು; ನೆರೆಗೂದಲು: "ಪಳಿತಮೆಂಬುದು ನರೆ" (ಹಲಾಯು. ೮೮-೩೭೮); ಕಚ್ಚು–ಕೆರಕುಂ, ಜರ–ನರೆಯುಂ, ಖಾಸ–ಕೆಮ್ಮುಂ (ಪಡ್ಡಾರಾ. ೫೩-೪); ತೀವಿದ ನರೆಯುಂ ಡೊಳ್ಳುಂ ದೇವವ್ರತನೆನಿಸಿ ನೆಗಬ್ದ ಯಶಮುಂ ಬೆರಸಿನ್ನೀವುದು ಹರಿ ಗರ್ಘ್ಯಮನೆಂದಾವನುಮೀ ಭೀಷ್ಮರೆಂತು ನುಡಿದರುಮೊಳರೇ (ಪಂಪಭಾ. ೬-೪೩); ಎನ್ನಟ್ಟಡುಗೆಯನುಂಡೊಡೆ ಬಿನ್ನಣಮೇನರಸ ನರೆಗಳಾಗವು (ಪಂಪಭಾ. ೮-೫೪); ನರಪತಿ ನಿನ್ನಂಗಾಲೊಳ್ ನರೆ ಬರ್ಪಿನಮುತ್ತರೋತ್ತರಂ ಪುದುವಾಟಾ (ಶಾಂತಿಪು. ೯-೫೨); ಅಂಜಿಸಿದುವು ಜವನಾಳ್ಗಳ ತೆಱದಿನೆನ್ನ ಕೆನ್ನೆಯ ನರೆಗಳ್ (ಅಜಿಪು. ೨-೬೯); ನರೆ ಬಂದನಿತಱೊಳ್ ನರರ್ ಪಿರಿಯರೆ (ಧರ್ಮಾಮೃ. ೩-೦೯೮); ನಿಮ್ಮ ನಿಜವನಱಿಯದ ಮನುಜಂಗೆ ನರೆ ಹಿರಿದಾದಡೇನು ಮನದವಗುಣ ಬಿಡದು (ಸಮಾವ. ೫-೧೭); ನರೆಯೆಂಬ ಹೊಱಸು ಮೊಗಮೆಂಬರಮನೆಯಂ ಪೊಕ್ಕೊಡೆ (ಯಶೋಚ. ೨-೦೨); ಮನದ ಶುದ್ಧತಿಕೆ ತಲೆದೋರ್ಪವೊಲು ನರೆ ಮೊಳೆತುದು (ಸಿದ್ಧರಾ. ೧-೩೪); ಪಟಪು (ಪಟವು)–ನರೆಗಿಕ್ಕುವ ಕರ್ಪು (ಶಮದ. ಪರಿ. ೦); ನರೆ ಶಿರದೊಳೊಗೆದುವು (ಕುಮುರಾ. ೫-೦೯); ನಾಯಿಗೆ ನರೆ ಬಂದರೆ ಅಜ್ಜಿ ಅನಿಸಿಕೊಂಡೀತೇ? (ಗಾದೆ). ೨. ಮುಪ್ಪು; ವಾರ್ಧಕ್ಯ: "ಜರೆಯಕ್ಕು ನರೆ" (ಪುಂಗರಾ. ೯೦-೧೦); "ನರೆಯೆನಲ್ ಜರೆ" (ಕಶರ. ೫೩). **ನೆರೆ$_3$**: ೧. ಭರತಂ ಕಂಡಂ ಕೆನ್ನೆಯ ನೆ[ಪಾಠಾಂ. ನ]ರೆಯಂ ದಳದಳಿಸಿ ಪೊಳೆವ ಮಣಿದರ್ಪಣದೊಳ್ (ಆದಿಪು. ೦೬-೬೦); ನೆ[ಪಾಠಾಂ. ನ]ರೆ ಕೆನ್ನೆಗೆ ತೆರೆ ಗಲ್ಲಕೆ ಶರೀರ ಗೂಡು ವೋಗದ ಮುನ್ನ . . . ಪೂಜಿಸು ನಮ್ಮ ಕೂಡಲಸಂಗಮದೇವನ (ಬಸವ. ೦೬೦); ಎಡೆಗೊಂಡೀ ಮುಪ್ಪುದೋಱಲ್ ನೆರೆ ನೆಗೆದು ಸಿರಂದೂಗಿ ಬೆನ್ ಬಾಗಿ (ರಕ್ಷಾಶ. ೩೮); ತೆರೆಯಿಲ್ಲದೆ ನೆರೆಯಿಲ್ಲದೆ ಸೆರೆಯಿಲ್ಲದೆ ಕಿಱಿದು ಮಾಗಿ ತೆಳ್ಳಗೆ ಮೊನೆಯಾಗಿರೆ ಕಿವಿಗಳೊಳಂ ನುಣ್ಪಾಗಿರೆ ಕಟಮುಂ ವಿಕಟ ಮಾಗದಿರೆ [ಹರಿ] ಶುಭದಂ (ಅಶ್ವಶಾ. ೦-೨೮); ಬಾಧಿಸುವುದೀ ದೇಹಮಂ ನೆ[ಪಾಠಾಂ. ನ]ರೆ ತೆರೆಗಳಿನ್ನು ಸಾಧಿಸುವುದೇನು (ಜೈಮಿಭಾ. ೦೦-೩೮); ತಲೆಯೊಳೊಂದು ನೆರೆಯಿಲ್ಲ (ಸೌಂದಕಾ. ೩-೫೨).

[<ನರೆ$_1$./ತಮಿ. ನರೈ; ಮಲ. ನರ; ಕೊಡ. ನೆರೆ; ತುಳು. ನರೆ; ತೆಲು. ನರೆ]

ನರೆಕೂದಲ್ 'ನರೆಗೂದಲ್' ನೋ.

ನರೆಕೂದಲು 'ನರೆಗೂದಲ್' ನೋ.

ನರೆಗಡ್ಡ (ನಾ). ನೆರೆತ ಗಡ್ಡ ; ಬಿಳಿಯ ಗಡ್ಡ : ತೋರದ ದೇಹ ಕುಂಡಲವೆದೆ ನರೆಗಡ್ಡ ಸೇರಿದ ಚಿಂದಿ ಕುಲ್ಲಾಯಿ . . . ರತ್ನಹಾರ ದೊಳಿದ್ದನಾ ಮಂತ್ರಿ (ಭರಣ. ೧೩-೯) ; ನರೆಗಡ್ಡ ನೆಲಕೆಳಲುವ ಧೋತ್ರ ಭಸಿತಾಂಗ ಧರಿಸಿದ ರುದ್ರಾಕ್ಷಿಗಳಿಂದೆ . . . ವಿಪ್ರರ ಮಧ್ಯಕೆಳ್ತಂದ (ತ್ರಿಭುತಿ. ೯-೨೪) ; ನರೆಗಡ್ಡದ ಮೀಸೆಯ ಮೇಲೆ ಕೈಯನಂತೋರಣದಿಂದೆ ಪಾಯುತೆ ಪರಾಕ್ರಮಮಂ ಸಲೆ ತೋರ್ದಂ (ಹಾಲಾಸ್ಯ. ೨-೧೧-೦೯).

[ನರೆ$_2$ + ಗಡ್ಡ$_1$]

ನರೆಗೂದಲ್, ನರೆಕೂದಲ್, ನರೆಕೂದಲು, ನರೆಗೂದಲು (ನಾ). ನೆರೆತ ಕೂದಲು ; ಬಿಳಿಕೂದಲು : ನರೆಗೂದಲ್ಗಿಕ್ಕಿ ನುಣ್ಪಂ ಮುಡಿಯನಳ ವಡಲ್ಸೆಕ್ಕಿ . . . ಮುಸುಕನಿಟ್ಟೈದಿದಳ್ ವೃದ್ಧೆ (ದಶಕು. ೮-೦೯೭) ; ಒಂದು ನರೆಗೂದಲಂ ಪಱಿದು ತೋಱಿದಾಗಳೆ ವೈರಾಗ್ಯಂ ಪುಟ್ಟಿ (ಪುಣ್ಯಾಸ್ರ. ೧೦-೦೦ ವ). **ನರೆಕೂದಲ್** : ಹೊತ್ತ ಬೆಳ್ನರೆಕೂದಲಾ ಮುದಿ ಸೂಳೆಯರ ಮೊತ್ತವೊಪ್ಪಿದುದಾಗಲ್ಲಿ (ಕಂನವಿ. ೬-೧೯೦) **ನರೆಕೂದಲು** : ಇಂದಿರೆಯು ಯಜಮಾನಿಯ ತಲೆಯ ನರೆಕೂದಲು ತೆಗೆಯುವುದೇ ಮುಂತಾದ ಕೆಲಸಗಳಿಂದ ಅವಳಿಗೂ ಅಚ್ಚುಮೆಚ್ಚಾದಳು (ಬಂಕಿಮ. ೦೦೯). **ನರೆಗೂದಲು** : ಪಲಿಕ್ನಿ–ನರೆಗೂದಲುಳ್ಳ ಮುದುಕಿ (ಗಂಗಾಮ. ೨೦೧) ; ನರೆಗೂದಲ ತಲೆಯನ್ನು ಬೋಳಿಸಿಕೊಂಡಿದ್ದ ಮನುಷ್ಯನನ್ನವಳು ಅದೆ ತಾನೆ ಮೊದಲ ಬಾರಿಗೆ ಕಂಡಿದ್ದಳು (ಪುನರು. ೧೮೬).

[ನರೆ$_2$ + ಕೂದಲ್ (<ಕೂಂದಲ್)]

ನರೆಗೂದಲು 'ನರೆಗೂದಲ್' ನೋ.

ನರೆತನ (ನಾ). ಮುದಿತನ; ಮುಪ್ಪು. ಎಳೆತನಕ್ಕೂ ನರೆತನಕ್ಕೂ ಸಂಬಂಧವೇ ಇಲ್ಲ . . . ನರೆತನದ ಎಲೆಗಳ ಅಂಚು ನೀಟಾಗಿರುತ್ತದೆ (ಹಸುಹೊ. ೨೭).

[ನರೆ$_2$ + – ತನ]

ನರೆದಲೆ, ನೆರೆದಲೆ (ನಾ). ೧. ಕೂದಲು ನರೆತ ತಲೆ : ನಡುಗುವ ನರೆದಲೆಯಿಂ ನರೆತು ಸಡಿಲ್ವ ಸರ್ವಾಂಗದಿಂ . . . ಮೆಲ್ಲಮೆಲ್ಲನೆ ಚಪ್ಪರದ ಬಾಗಿಲ್ಗೆ ಬಂದೊಡೆ (ನಂಬಿರ. ೬-೨೫) ; ನರೆದಲೆ ಬೇರ್ಬಟಲ್ದ ಪಟವಲ್ . . . ಮಹೋದರಮೆಸೆಯಲ್ಕೆ ಶೋಕಿಸುತೆ ಪಿಂದನೆ ಬಂದಳ್ (ದಶಕು. ೮-೧೨) ; ನರೆದಲೆ ಜೋಲ್ದ ಪುರ್ಬು ಕುಳಿದಕ್ಷಿಯುಗಂ (ಧರ್ಮಪ. ೩-೨೬) ; ಸರಡುಪತ್ರದಲಾಳುಗೊಂಬ ಗಡ ನಮ್ಮನೀ ನರೆದಲೆಯ ಚಾಳಕನೆನುತ್ತ ಕೋಪಿಸಿದ ಸೌಂದರಕುವರನಾ ವಿಪ್ರನ (ಸೌಂದಪು. ೫-೯). ೨. ಮುಪ್ಪಾದವಳು ; ಮುದುಕಿ : ತಾಯಿಲ್ಲದನನ್ ಸಾಕಿದ ಮುದಿಯಳ್, ಕಂದನ ಕೇಡನ್ ನೋಡಲೊ ಬಟ್ಟಳ್ ? ನರೆದಲೆ, ದುಃಖದ ಮಡುವೊಳ್ ಬಿಟ್ಟಳ್ (ಅಶ್ವತ್ಥಾ. ೨೫-೫೦೩). **ನೆರೆದಲೆ** : ೧. ನೆರೆದಲೆಗೆ ಮಸಿದೊಡೆದು . . . ಬಾ ಜಾಣಯೆಂಬಾ ಹಣ್ಣುಮುದುಕಿ ಸೂಳೆಯರೆಸೆದರೇನೆಂಬೆನು (ಜೆಬಪು. ೧೦-೭೬). [ನರೆ$_1$ + ತಲೆ$_1$]

ನರೆದಲೆಗ (ನಾ). ೧. ಕೂದಲು ಬೆಳ್ಳಗಾದವನು ; ನರೆತ ಮಂಡೆಯವನು. ೨. ರಾಗಿ : ನರೆದಲೆಗನಿದು ನೆಲ್ಲು ಹಾರಕ ಬರಗು ಜೋಳವು ಕಂಬು ಉರುತರದ ರವೆ ಯವೆ ನವಣೆಯಿದೂ ನವಧಾನ್ಯವೆಂದೆನಲು (ರಾಮಚ. ೧೧-೩೨) ; ಕೆಲರು ಗೋಧಿಯ ಸಾಮೆಯನು ಕೆಲಕೆಲರು ನವಣೆಯ . . . ಕೆಲರು ನರೆದಲೆಗನನು ಪತಿಕರಿಸಿರಲು (ರಾಮಚ. ೧೦-೩೩); ನರೆದಲೆಗ (ರಾಗಿ), ನೆಲ್ಲು, ಹಾರಕ, ಬರಗು, ಜೋಳ, ಕಂಬು, ಸಾಮೆ, ನವಣೆ, ಗೋಧಿ ಈ ನವಧಾನ್ಯಗಳನ್ನು ತಂದು ಸುರಿದರು (ನಾಣ್ಮುಡಿ. ೩೧); ರೀಹಿ (ವ್ರೀಹಿ–ಬತ್ತ) ಹೆಚ್ಚೋ ನರೆದಲೆಗ (ರಾಗಿ) ಹೆಚ್ಚೋ ಎಂಬ ವಾದ ಹುಟ್ಟಿತು (ನನ್ನೂರು. ೫೫). [ನರೆದಲೆ + – ಗ$_2$]

ನರೆದೊಡು (ಕ್ರಿ). ಬಿಳಿಯ ಕೂದಲನ್ನು ಹೊಂದು,–ಪಡೆ ; ಕೂದಲು ಬೆಳ್ಳಗಾಗು : ಕೆನ್ನೆ ನರೆದೊಟ್ಟು ಶಿಥಿಲತ್ವವಳವಟ್ಟು ನೆಱೆ ಮುನ್ನಿನಂಗ ವಿಕಾರಮಂ ಬಿಟ್ಟು ಹೋಗಿ ಧಾತುಂಗಳು ಪಲ್ಲಟವಾದವು (ಸಿದ್ಧಶಾ. ೦-೪೦).

[ನರೆ$_2$ + ತೊಡು$_1$]

ನರೆದೋಱು (ಕ್ರಿ). ೧. ಬಿಳಿಕೂದಲು ಕಾಣಿಸಿಕೊಳ್ಳು. ೨. ಮುಪ್ಪಾಗು; ವೃದ್ಧಾಪ್ಯವನ್ನು ಹೊಂದು.

ನರೆದೋಱದರ್ = ಮುಪ್ಪಿಲ್ಲದವರು ; ದೇವತೆಗಳು : "ಅಮರ್ದುಣಿಸುಗಳ್, ಕನಸಿಲ್ಲದರ್, ನರೆದೋಱದರ್, ಎವೆಯಿಕ್ಕದರ್ . . . ಅಚ್ಚರರ್ (ಬೋಳೆಯರ್)–ಈ ೯ ದೇವರ್ಕಳ ಪೆಸರ್" (ಕಶಸಾ. ೨-೧೯). [ನರೆ$_2$ + ತೋಱು]

ನರೆನವಿರ್ (ನಾ). ನರೆತ ಕೂದಲು ; ಬೆಳ್ಳಗಾದ ಕೂದಲು; ಬಿಳಿಯ ಕೂದಲು : ನರೆನವಿರ ಹೊತ್ತು ನಡುಗುವ ಮಂಡೆ ಬಿಳ್ದ ಮೊಲೆ ತೆರೆ ಮುಸುಂಕಿದ ಮುಖಂ . . . ಜೋಲ್ವ ಗಲ್ಲಂ ಮಿಸುಪ ವೃದ್ಧವನಚರಿ ಯೊರ್ವಳಾಪಣ್ಗಗಳಂ ಸವಿದು . . . ಏಱುಂಜವ್ವನಂಬಡೆದಳು (ಸಮ್ಯಕ್ಕಾ. ೦೦-೪೩). [ನರೆ$_2$ + ನವಿರ್]

ನರೆಪ (ನಾ). ಕೂದಲು ನರೆತವನು,–ಬೆಳ್ಳಗಾದವನು ; ಮುದುಕ : ಕೆಮ್ಮಿ ಕುಮ್ಮಿದೊಡೆ ತೋಳೊಳೆ ಜೀವವಿಯೋಗಮಪ್ಪುದೆಂದಿರದೆರ್ದೆಗಪ್ಪು ದತ್ತಳಗಮಾ ನರೆಪಂ ನೆರೆವಂದು [ಪಾಠಾಂ. ನರೆಬಂದ] ಪೊಂಗಳಂ ಸುರಿವೊಡ ಮಾರೊ ಸೈರಿಸುವರಾತನ ಪಲ್ಲಿಲಿವಾಯ ನಾತಮಂ (ಪಂಪಭಾ. ೪-೦೦೦).

[ನರೆಪು + –ಅ$_7$]

ನರೆಪು (ನಾ). ಕೂದಲು ನರೆಯುವಿಕೆ,–ಬೆಳ್ಳಗಾಗುವಿಕೆ. 'ನರೆಪ' ಪರಾ. [ನರೆ$_1$ + – ಪು$_2$./ತಮಿ. ನರೈಪ್ಪು; ತೆಲು. ನರಪು]

ನರೆಯಂಗಲ್ (ನಾ). ಒಂದು ಊರಿನ ಹೆಸರು; ℙ ಈಗಿನ ಧಾರವಾಡ ಜಿಲ್ಲೆಯ ನರೇಗಲ್ಲು: ಸ್ವಸ್ತಿ ವಿಕ್ರ(ಕ್ರ)ಮಾದಿತ್ಯ ಪ್ರಿಥು(ಥಿ)ವಿವಲ್ಲಭ ಲೋಕಮಹಾದೇವಿಯರಾ ಲೋಕೇಶ್ವರದಾ ನರೆಯಂಗ್ಗಲ್ಲ ಪನ್ನಾಸುಗಳಾನಿತ್ತ (ಇಆ. X, ೦೬೭-೨ ; 7ನೆಯ ಶತ) ; ನರೆಯಂಗಲ್ಲ ಸಾಸಿರ್ವ್ವರ ತುಱುಪಿನ ಪುಯ್ಯಲೊಳ್ (ಎಇ. VI, ೧೬೩-೨ ; 780) ; ಆಚಾರ್ಯ ರಾಜಗುರು ವಿರ್ಮಶಕ್ತಿದೇವರುಂ ನರೆಯಂಗಲ್ಲ ಮಹಾಜನಂಗಳುಂ . . . ಇನ್ನಿವರ ಸಮಕ್ಷದಲ್ಲಿ (ಕಕುಲ. ೧೭-೦೦ ; 10ನೆಯ ಶತ).

ನರೆಯಂಗಲ್ ಪನ್ನೆರಡು=ಒಂದು ಪ್ರಾಂತದ ಹೆಸರು : ನರೆಯಂಗಲ್ ಪನ್ನೆರಡಱೊಳಗಣ ಉಮ್ಮಚಿಗೆಯಂ ಸರ್ವ್ವಾಭ್ಯಂತರಸಿದ್ಧಿಯಾಗಿ . . . ಕುಡೆ (ಎಇ. XX, ೬-೧೧ ; 1012).

ನರೆಯೇಱು (ಕ್ರಿ). ೧. ಕೂದಲು ಬೆಳ್ಳಗಾಗು. ೨. ಮುಪ್ಪಾಗು ; ಮುದಿಯಾಗು. ೧, ೨ : ವಾರ್ಧಿಯಂತೆ ತೆರೆಯೇಱದೆ ಕೋಡಗದಂತೆ ಶಾಖೆಯೊಳ್ ನಡೆಯದೆ ಪೊಟ್ಟೆ [ಪಾಠಾಂ. ಪೋದೆ]ವೋದ ಮರದಂತೆ ಕರಂ ನರೆಯೇಱದಿಟ್ಟು ಮುಪ್ಪಡಸದ ಮುನ್ನಮೇಕೆ ಮನುಜರ್ಮುಱಿದಿಕ್ಕರೊ ಮೋಹಮಲ್ಲನಂ (ಪುಲ್ಲಿಪು. ೧೩-೯೪) ; (ಶಾವ್ಯಸಾ. ೦೦೩೧ ನೋ).

[ನರೆ$_2$ + ಏಱು$_1$ (< ಏಱು$'_1$)]

ನರೆವೆಣ್ (ನಾ). ಕೂದಲು ನರೆತ ಹೆಣ್ಣು ; ಮುದುಕಿ : ನರೆವೆಣ್ಗಳೊಡ ನಾಡೆ ಮುಪ್ಪಹುದೈಸೆ (ಭರಣ. ೭೬-೧೨). [ನರೆ$_1$ + ಪೆಣ್]

ನರೇಂದ್ರ (ನಾ). ೧. ಅರಸ ; ದೊರೆ : ರುಂದ್ರಾಂಭೋಧಿಪರೀತ ಮಹೀಂದ್ರರದಾರಿನ್ನರೀ ನರೇಂದ್ರಂ ಸಾಕ್ಷಾದಿಂದ್ರಂ ತಾನೆನೆ ಸಲೆ ನೆಗಟ್ಟಿಂ ದ್ರೇಂದ್ರನ ತೋಳೆ ತೊಟ್ಟಿಲಾಗಿರೆ ಬಳೆದಂ (ಪಂಪಭಾ. ೦-೪೪) ; ಉದ್ವೃತ್ತ ನರೇಂದ್ರಕಂಠಕದಳೀಚ್ಛೇದೈಕದಕ್ಷಾಸಿ (ಶಾಂತಿಪು. ೨-೨೦) ; ಚತುಷ್ಪಾದಿ ತದ್ಭೇದದೊಳ್ ತಾನಿದು ಶುಂಡಾಳಂ ನರೇಂದ್ರಂ ನಿಮಗೆ ಕುಡುವ ನಾಗಿರ್ದಪಂ ನೋಡೆ ದೃಷ್ಟಂ (ಸುಕುಮಾ. ೩-೭). ೨. ವಿಷಚಿಕಿತ್ಸಕ ;

ವಿಷವೈದ್ಯ; ಗಾರುಡಿಗ. ೩. ಮಾಂತ್ರಿಕ; ಮಂತ್ರವಾದಿ: "ನರೇಂದ್ರ [ನೆನಲಾಹಿತುಂಡಿಕಂ] ಪಾರ್ಥಿವನುಂ" (ವಸ್ತುಕೋ. ೧೨೦-೦೭); "ನೃಪನಲ್ಲಿ ವಾದಿಯಲಿ ನರೇಂದ್ರನೆಂದೆನಿಕು" (ಪಂಗರಾ. ೧೪೪-೨೬).

[ನರ$_2$ + ಇಂದ್ರ]

ನರೇಂದ್ರಚಂದ್ರ (ನಾ). ರಾಜರಲ್ಲಿ ಚಂದ್ರನಂತೆ ಹೊಳೆಯುವವನು; ಶ್ರೇಷ್ಠನಾದ ರಾಜ: ಕೃತಿಪತಿ ನರೇಂದ್ರಚಂದ್ರಂ ಕೃತಿಯಂ ಪೇಟ್ಟಂ ಬುಧಾಬ್ಜವನಕಳಹಂಸಂ (ಕಾದಂಪೂ. ೭); ರವಿಕುಲನರೇಂದ್ರಚಂದ್ರಂ, ತನ್ನ ಕಿರುವೆಂಡಿತಿಯ ಮನಮನೆಂತಾದೊಡಂ ತನ್ನಾಸೆಗೇಳಲ್ಕೆ ತರಿಸಂದು ಹೊರಟನವಳೆಡೆಗೆ (ಶ್ರೀರಾಮಾ. ೬೬-೩೩೬). [ನರೇಂದ್ರ + ಚಂದ್ರ$_2$]

ನರೇಂದ್ರನಿಕಾಯ (ನಾ). ರಾಜರ ಸಮೂಹ, -ಗುಂಪು: ಶಿವ ಎನುತಾ ನರೇಂದ್ರನಿಕಾಯ ನಡುಗಿತು (ಕುಮ್ಯಾದ್ರೋ. ೮-೪೨).

[ನರೇಂದ್ರ + ನಿಕಾಯ]

ನರೇಂದ್ರವಧು (ನಾ). ಅರಸಿ; ರಾಣಿ: ಬಾಣಸಿಗಂ ಮಾಡಮನಾ ನರೇಂದ್ರ ವಧುವಂ ತಕ್ಕಯ್ಸಿಕೊಂಡೇಱಿದಂ (ಬಂಹರಿ. ೯-೩೦).

[ನರೇಂದ್ರ + ವಧು]

ನರೇಂದ್ರಾಸನ (ನಾ). ರಾಜನ ಪೀಠ; ಸಿಂಹಾಸನ: "ಗದ್ದುಗೆ ಪಟ್ಟವಣೆ ನರೇಂದ್ರಾಸನಂ" (ಚತುನಿ. ೫೦). [ನರೇಂದ್ರ + ಆಸನ]

ನರೇಯಣ 'ನಾರಯಣ' ನೋ.

ನರೇಶ್ವರ (ನಾ). ಅರಸ; ದೊರೆ: ಸ್ವಸ್ತಿಸಮಸ್ತನರೇಶ್ವರಮಸ್ತಕವಿನ್ಯಸ್ತ ಶಾಸನಂ (ಆದಿಪು. ೦೩-೭೨); ಸಕಲಮೇದಿನೀತಳವನೇಕಚ್ಛತ್ರದಿಂ ಪಾಲಿಸುವ ನರೇಶ್ವರನವಂಗಚ್ಛಿದ್ರಮಾಗಿ ನಡೆವುದು (ಚೈಮಿಭಾ. ೨-೨೬).

[ನರ$_2$ + ಈಶ್ವರ]

ನರ್ಕುಟಕ (ನಾ). [ಛಂದ] ಪ್ರತಿಯೊಂದು ಪಾದದಲ್ಲಿಯೂ ಹದಿನೇಳು ಅಕ್ಷರಗಳಿರುವ ಒಂದು ವೃತ್ತ; P ನಜಭಜಜಲಗ-ಹೀಗೆ ಗಣ ನಿಯಮವಿರುವ ವೃತ್ತ. ಇದಕ್ಕೆ 'ಕನಕಾಬ್ಜನೀಯ' ಎಂಬ ಹೆಸರೂ ಇದೆ. 'ಕನಕಾಬ್ಜನೀಯ', 'ನತ್ಕುಟಕ' ಪರಾ. [ಸಂ.]

△ **ನರ್ಚು$_1$** 'ನಚ್ಚು$_1$' ನೋ.

△ **ನರ್ಚು$_2$** 'ನಚ್ಚು$_2$' ನೋ.

ನರ್ತಕ (ನಾ). ೧. ನೃತ್ಯ ಮಾಡುವವನು; ರಂಗದ ಮೇಲೆ ಕುಣಿಯುವವನು; ನಟ: ಧರೆ ರಂಗಂ ಗಗನಂ ಮನೋಹರತರಂ ನಾಟ್ಯಾಲಯಂ ನರ್ತಕಂ ಸುರರಾಜಂ ಸಭೆ ದೇವಮರ್ತ್ಯಸಭೆ (ಆದಿಪು. ೭-೧೨೭); ಪಾಣಿನಿಯು ತನ್ನ ಅಷ್ಟಾಧ್ಯಾಯಿಯಲ್ಲಿ . . . ನಾಟ್ಯಗಾರನಿಗೆ ನರ್ತಕ ಎಂಬ ಹೆಸರಿದ್ದುದನ್ನು ತಿಳಿಸುತ್ತಾನೆ (ಭಾರದ. ೫೫೦). ೨. [ಜೈನ] ಸೈನ್ಯದ ಏಳು ವಿಭಾಗಗಳಲ್ಲಿ ಒಂದು. 'ನರ್ತಕಿ' ಪರಾ. [ಸಂ.]

ನರ್ತಕಾಳಿ (ನಾ). ನರ್ತಕರ ತುಡ್ಡ,-ಸಮೂಹ: ಪ್ರಕಟಿಸಿದತ್ತು ಪದ್ಮಜನ ಪಕ್ಕದೊಳ್ . . . ಗಾಯಕಪ್ರತತಿ ವಾದಕಮಂಡಳಿ ನರ್ತಕಾಳಿ (ಪುಷ್ಪಪು. ೫-೨೦). [ನರ್ತಕ + ಆಳಿ$_4$ (= ಆಲಿ$_4$)]

ನರ್ತಕಿ (ನಾ). ೧. ನೃತ್ಯ ಮಾಡುವವಳು; ನಟಿ: ಕುಡುಪುಂ ಕಯ್ಯುಂ ಜತಿಯೊಳ್ ತಡತಡವರೆ ವಾದಕಂಗೆ ಪುರ್ವಿಂ ಜತಿಯಂ ತೊಡರದೆ ನಡೆಯಿಸಿ ಪುರ್ವದೆ ಕುಡುಪೆನೆ ನರ್ತಕಿಯೆ ಸಭೆಗೆ ವಾದಕಿಯಾದಳ್ (ಆದಿಪು. ೯-೩೨); ನರ್ತಕಿಯರಾಟಗಳ ನೋಡಲು ಮುತ್ತುತಿಹ ವೆಂತರರ ಜಡಿಕೈದತ್ತ ತೊಲಗಿಸಿ . . . ಓಜೆಗೊಳಿಸಿದರಮರಪಡಿಯಱರು (ಸಾಳ್ವಭಾ. ೩೩-೩೭); ಕಡುತೋರಮಲ್ಲದಗ್ಗದ ನಿಡಿದಲ್ಲದ ಕಿಱಿದುಮಲ್ಲದತಿ ಬಡವಲ್ಲದ ಮುಡುಬಲ್ಲ ದವಯವಂಗಳನೊಡರಿಸುವಂಗನೆಯ ಲಲಿತನರ್ತಕಿಯೆನಿಪಳ್ (ಲಾಸ್ಕರಂ. ೧-೪೪); ರಂಭೆ ಮೊದಲಾದ ಅಪ್ಸರಸ್ತ್ರೀಯರೇ ಇವನ ನರ್ತಕಿಯರು (ನೀತಿಬಿಂ. IV, ೮). ೨. [ಜೈನ] ಸೌಧರ್ಮೇಂದ್ರನ ಏಳು ಬಗೆಯ ಸೇನಾಂಗಗಳಲ್ಲಿ ಒಂದು; P ಮರ್ತ್ಯಲೋಕದಲ್ಲಿರುವಂತೆ ದೇವ ಲೋಕದಲ್ಲೂ ರಾಜ್ಯಾಂಗವ್ಯವಸ್ಥೆ ಇದೆ. ಸೌಧರ್ಮೇಂದ್ರಾದಿ ಇಂದ್ರರಿಗೂ ಸೈನ್ಯವಿದೆ. ಆ ಸೈನ್ಯವನ್ನು ಅನೀಕವೆಂದು ಕರೆಯುತ್ತಾರೆ. ಆ ಸೈನಿಕರಿಗೆ ಅನೀಕದೇವತೆಗಳೆಂದು ಹೆಸರು. ಇವರಿಗೆ ವೈಕ್ರಯಿಕ (ನಾನಾರೂಪವನ್ನು ತಾಳಬಲ್ಲ) ಶಕ್ತಿಯಿದೆ. ಇವರು ಏಳು ಬಗೆಯ ರೂಪವನ್ನು ತಾಳಿ ಇಂದ್ರನನ್ನು ಸೇವಿಸುವ ಸೇನಾಂಗವೆನಿಸುತ್ತಾರೆ. ಅವು ಯಾವುವೆಂದರೆ ೧. ವೃಷಭ = ಎತ್ತು. ೨. ರಥ = ತೇರು. ೩. ತುರಗ = ಕುದುರೆ. ೪. ಮದಗಜ = ಆನೆ. ೫. ಪದಾತಿ ಅಥವಾ ಭೃತ್ಯವರ್ಗ=ಕಾಲುಬಲ. ೬. ನರ್ತಕ ಅಥವಾ ನರ್ತಕಿ = ನಾಟ್ಯವಾಡುವವರು. ೭. ಗಂಧರ್ವ = ಸಂಗೀತಗಾರರು. ಈ ವಿವರಗಳು ಸರ್ವಾರ್ಥಸಿದ್ಧಿ ಮೊದಲಾದ ಜೈನಗ್ರಂಥಗಳಲ್ಲಿ ದೊರಕುತ್ತದೆ: ಹಸ್ತ್ಯಶ್ವರಥಪದಾತಿವೃಷಭಗಂಧರ್ವನರ್ತಕೀಪ್ರಮುಖ ಸಪ್ತಾನೀಕಸಮೇತನುಂ (ಆದಿಪು. ೬-೧೩ ವ); ಗಜತುರಗಸ್ಯಂದನಪದಾತಿ ಗವೇಂದ್ರ ಗಂಧರ್ವ ನರ್ತಕೀಪ್ರಮುಖ ಪ್ರಥಿತಸಪ್ತಾನೀಕಸಂಯುತನುಂ (ನೇಮಿಪು. ೨-೩೨ವ); ಗಜತುರಗಪದಾತಿರಥಗಂಧರ್ವನರ್ತಕೀವೃಷಭವಿಕಲ್ಪದಿಂ ಸಪ್ತವಿಧಮಂಗರಕ್ಷಕರ್ ಪದಿನಾಱುಸಾಸಿರಂ (ತತ್ತ್ವಪ್ರ. ೧೯೪); ಸಿಂಧುರಘಟಾಸಂದೋಹದಿಂ . . . ನವನರ್ತಕೀನಿವಹದಿಂ ಗಂಧರ್ವ ಸಂದೋಹದಿಂದಿದು ಸಪ್ತಾಬ್ಧಿಯೆನಲ್ಕೆ ಸಪ್ತವಿಧಸೇನಾಚಕ್ರಮೇನೊಪ್ಪಿತೋ (ಪುಷ್ಪಪು. ೧೪-೪೬). ೩. [ಸಂಗೀತ] ಒಂದು ರಾಗದ ಹೆಸರು: ನರ್ತಕಿ ಕಕುಭ ಷಡ್ಜ ಕೌಶಿಕಿ ಭ್ರಮಾಳ ಪಂಚಮಭ್ರಮಾಳ ಪಂಚಮಗಾಂಧಾರ ರೂಪಸಾಧಾರಣವೆಂಬೇಳುರಾಗಂಗಳಿಂ ಸಪ್ತಸಾಧಾರಣಜಾತೀಯಂಗಳು (ವಿವೇಕ. ೨೩೩). [ಸಂ. ನರ್ತಕೀ]

ನರ್ತನ (ನಾ). ರಂಗದ ಮೇಲೆ ನಡೆಯುವ ನಾಟ್ಯಾಭಿನಯ; ನೃತ್ಯ; ನಾಟ್ಯವಾಡುವುದು; ಕುಣಿತ: ಖೇಡನನರ್ತನ ಹಾಸ್ಯವನಾಡಂಬರ ನಟನವೇಣುವಾದನಗೇಯಕ್ರೀಡೆಗಳಿಂ. . . ರಾಮಕೃಷ್ಣರಿರ್ದವಸರದೊಳ್ (ಜಗವಿ. ೪-೪೮); ಗಣನಾಥವಕ್ತ್ರಸರಸೀರುಹಕೇಳಿನಿವಾಸದಲ್ಲಿ ನರ್ತನಮ ನೊಡರ್ಚಿ . . . ಇನಿಸು ಬಟಲ್ದ ವಾಗ್ವನಿತೆ ವಿಶ್ರಮಿಸಿರ್ಕೆ ಮದಾನನಾಬ್ಜ ದೊಳ್ (ಪುಷ್ಪಪು. ೧-೭); ನರ್ತನದಿಂ ನವಶಕ್ತಿಯು ಹೊಮ್ಮಿ . . . ತೋರ್ಪುದು ಸುಖದುಃಖಗಳನು! (ಪಾಂಚಜ. ೧೯-೧೫); ಸರಳಳು ವೈದ್ಯನಾಥರಲ್ಲಿ ನರ್ತನವನ್ನು ಕಲಿಯುತ್ತಿದ್ದಳು (ಕಲಾಸ. ೨೦). [ಸಂ.]

ನರ್ತನಗಾತಿ 'ನರ್ತನಗಾರ್ತಿ' ನೋ.

ನರ್ತನಗಾರ್ತಿ, ನರ್ತನಗಾತಿ (ನಾ). ನೃತ್ಯಮಾಡುವವಳು; ನರ್ತಕಿ: ಸುರನರ್ತಕಿಯರೊಳು ಮತ್ಸರವಾಂತರೀ ನರನರ್ತನಗಾರ್ತಿಯರ ಪರ ಮೋತ್ಸವದೆ ನೋಡುತ ಬಂದ (ಮೋಹತ. ೪೨ ೩೪). ನರ್ತನಗಾತಿ: ಗುಡಿಗುಡಿಗಳ ನರ್ತನಗಾತಿಯರೊಳು ಪೆರ್ಬಡಿಸುವ ಗೀತಶಬ್ದಗಳ ವಡಿ ತಪ್ಪದೆ ಕೋಲಚಾರಿಗಳಿಂದ ಜಕ್ಕುಡಿ ಮೆಱೆದುವು ದೇವಾಲಯದಿ (ಮೋಹತ. ೧೮-೭); ತಾಳಮದ್ದಳೆಗೀತ ನರ್ತನಗಾತಿಯ ಮೇಳ ವಿದ್ವತ್ಸಭೆ ಸುರರ ಜಾಲಕ್ಕೆ ಹಸೆಯಿತ್ತು ಬೀಳ್ಕೊಟ್ಟು (ಮೋಹತ. ೪೨ ೩೭).

[ನರ್ತನಗಾಱ + - ತಿ$_1$ (< ಇತ್ತಿ)]

ನರ್ತನಗಾಱ (ನಾ). ನೃತ್ಯ ಮಾಡುವವನು; ನರ್ತಕ. 'ನರ್ತನಗಾರ್ತಿ', ಪರಾ. [ನರ್ತನ + - ಗಾಱ (< - ಕಾಱ)].

ನರ್ತನಗೃಹ (ನಾ). ನೃತ್ಯಮಂದಿರ; ನಾಟ್ಯಶಾಲೆ: ಜಗದೊಳ್ ನಾಟ್ಯಭು ಶಾಂತಿವರ್ಮನೆಸೆವಂ . . . ಸಾಹಿತ್ಯಲೀಲಾಗೃಹಂ ಭಗವಜ್ಜೈನಮತೋಕ್ತಿ ನರ್ತನಗೃಹಂ (ಪುಷ್ಪಪು. ೧-೭೬). [ನರ್ತನ + ಗೃಹ]

ನರ್ತನವಿದ್ಯೆ (ನಾ). ನಾಟ್ಯ; ನೃತ್ಯಕಲೆ: ಮಕ್ಕಳು ನರ್ತನವಿದ್ಯೆಯ ಕಲಿತರು (ಇಂದಾಪ. ೪೭ ೨೦). [ನರ್ತನ + ವಿದ್ಯೆ]

ನರ್ತನಶಾಲೆ (ನಾ). = ನರ್ತನಗೃಹ : ಮತ್ತಮಾ ವನಂಗಳಲ್ಲಿ ಚಿತ್ರಶಾಲೆ . . . ನರ್ತನಶಾಲೆ ಗಾನಶಾಲೆ ಕ್ರೀಡಾಶಾಲೆ . . . ತರುವಾಟಿಗಳ ತಣ್ಣೆಳಲ್ಗಳೊಳಗೆಯುಂ (ವಿವೇಕ. ೨೨೮). [ನರ್ತನ + ಶಾಲೆ$_3$]

ನರ್ತನಸ್ಥಳ (ನಾ). = ನರ್ತನಸ್ಥಾನ : ರಂಗಃ – ನರ್ತನಸ್ಥಳವುಂ, ರಂಗವಲ್ಲಿಯುಂ (ಕಾಶಕ್ಯ. ೨೦೪). [ನರ್ತನ + ಸ್ಥಳ (= ಸ್ಥಲ)]

ನರ್ತನಸ್ಥಾನ (ನಾ). ರಂಗಮಂಟಪ ; ರಂಗಸ್ಥಳ : "ನರ್ತನಸ್ಥಾನಮದು ರಂಗಮಕ್ಕು" (ಮಂಗರಾ. ೨೪-೬). [ನರ್ತನ + ಸ್ಥಾನ]

ನರ್ತನೋತ್ಸವ (ನಾ). (ಒಂದು ದಿನ ಅಥವಾ ಅನೇಕ ದಿನಗಳು ನಡೆಯುವ) ನಾಟ್ಯಕ್ಕೆ ಸಂಬಂಧಿಸಿದ ಸಂತೋಷಸಮಾರಂಭ,–ಉತ್ಸವ: ೮೬ನೆಯ ಪ್ರಕರಣದ ನರ್ತನೋತ್ಸವದಲ್ಲಿ ಎಲ್ಲ ನವೀನ ಪಾತ್ರಗಳು ಸಾಮುದಾಯಿಕವಾಗಿ ನಮ್ಮ ಚಿತ್ತದಲ್ಲಿ ನೆಲಸುತ್ತವೆ (ಸಮಜೀ. ೨೪ ಟೀಂಕೆ). [ನರ್ತನ + ಉತ್ಸವ]

ನರ್ತಿಣಿ (ನಾ). ನರ್ತಕಿ : ನಾಟ್ಯ ಮಾಡುವವಳು : ನರ್ತಿಣಿಯ ತೆರದೊಳಗೆ ಲೋಕವಿದೊರ್ತಿಪುದು ತ್ರೈವಾಯು ಬಿಗಿಯೊಳು ಸುತ್ತಿಹುವು (ಪಶುಧಾ. ೧-೦೪) ; ಸಿಡಿಲ ಮುರಜಂಬರವೆ ತೆರೆ ಅರಲ್ಪಿಡಿವ ಪುಷ್ಪಾಂಜಲಿಯ ಮಳೆ ಬೆಮರೊಡೆದ ತೆರದಿಂ ನಟಿಸೆ ಕುಡಿಮಿಂಚೆಂಬ ನರ್ತಿಣಿಯು (ಜಿರಾಮಾ. ೧೧೦-೪೬). 'ನಚ್ಚಣಿ' ಪರಾ. [< ಸಂ. ನರ್ತಿನೀ]

ನರ್ತಿಸು (ಕ್ರಿ). ೧. ಕುಣಿ ; ನಾಟ್ಯಮಾಡು : ಕುಡುಮಿಂಚಿನಂತೆ ಮೇಗೊಗೆದು ನಾರದಂ ನರ್ತಿಸಿದಂ (ಪಂಪಭಾ. ೧೨-೧೮೯) ; ಭೂತಗಣಂ ಪೇರಾನೆಯ ನೆಣನಂ ತಿಂದೆರ್ದ್ದಾನಂದದೆ ಕೂಡೆ ನಲಿದು ನರ್ತ್ತಿಸುತಿರ್ಕ್ಕುಂ (ಎಕ. VIII, ಸಾಗರ. ೧೦೯-೩೯ ; 1042) ; ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ (ಕುವ್ಯಾಅ. ೧-೩) ; ನರ್ತಿಸು, ತಾಯೆ, ಅಜಜಾಯೆ, ಮಮ ಮಸ್ತಕ ನೀರೇಜದಲಿ ! (ಅನಿಕೇ. ೧-೧). ೨. ಆಡು ; ಚಲಿಸು : ಭೂಭೃತ್ತಿಲಕನ ಸಿತಾತಪತ್ರದ ಕೆಲದೊಳ್ ನರ್ತಿಸಿತು ಧವಳಚಾಮರಯುಗಳಂ (ಕಾದಂಪೂ. ೪೭೨). [ನರ್ತನ + – ಇಸು$_3$]

ನರ್ದನ (ನಾ). (ದನಗಳ) ಗುಟುರು : ಗರ್ಜನೆ : ಜನಾರ್ದನ ನಾಡುತ್ತುಮಿರ್ದ ಪದದೊಳ್ ದೆಸೆಗಳ್ ಪಾರ್ದನಿವಿಡಲದ್ಭುತವೃಷನರ್ದನ ವುಣ್ಮೆದುದದೊಂದು ವಜ್ರಾಶನಿವೊಲ್ (ಜಗವಿ. ೫-೩೪). [ಸಂ.]

ನರ್ಮ$_1$ (ನಾ). ೧. ಆಟ ; ಲೀಲೆ ; ಕ್ರೀಡೆ ; ವಿನೋದ. ೨. (ಶೃಂಗಾರದಲ್ಲಿನ) ಪರಿಹಾಸ; ನಗೆ: "ಸ್ತ್ರೀ ಪುರುಷರ ಪರಿಹಾಸ" (ಅಮರ. ಟೀಕೆ). ೩. ಚೆಲುವು ; ಸೊಗಸು : ಕೂರ್ಮೋನ್ನತಮೆನಿಸಿರ್ದ ಪದಂಗಳ್ ನರ್ಮಮನಾದರಿಸಿದವು ಮಡಂಗಳ್ (ಸುಕುಮಾ. ೫-೫೦ ರಗಳೆ). ೪. ಸಂತೋಷ : ಉಲ್ಲಾಸ : ಧರ್ಮಮೆ ದೇಹಿಗ(ಮಿ)ಹಪರ ಶರ್ಮಕ್ಕೆ ನಿದಾನಂ . . . ನರ್ಮದಿನೆಸೆಗುತ್ಕಟಸತ್ಕರ್ಮಂ ಪ್ರತ್ಯಕ್ಷಫಲಮನೀವುದು ಪುಸಿಯೇ (ಪುಷ್ಪಪು. ೩-೧೦೮). [ಸಂ. ನರ್ಮನ್]

ನರ್ಮ$_2$ 'ನರಮ್' ನೋ.

ನರ್ಮಕಥೆ (ನಾ). ವಿನೋದದ ಪ್ರಸಂಗ,–ಘಟನೆ : ಈ ನರ್ಮಕಥೆಯನ್ನು ತನ್ನ ಚಿತ್ತದಲ್ಲಿ ಬಚ್ಚಿಟ್ಟು ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದಳು (ಕಾವ್ಯಸ. ೪೯). [ನರ್ಮ$_1$ + ಕಥೆ]

ನರ್ಮಕುಂಜ (ನಾ). ವಿನೋದವಾಗಿ ಕ್ರೀಡಿಸುವ ಲತಾಮಂಟಪ ; ಕ್ರೀಡಾಸ್ಥಾನ ; ಕೇಳೀಸದನ : ಕವಿಯ ಹೃದಯವೆ ನರ್ಮಕುಂಜ ಕವಿತಾಸತಿಗೆ (ಗಿಳಿವಿಂ. ೨೧-೧೮). [ನರ್ಮ$_1$ + ಕುಂಜ]

ನರ್ಮಗೋಷ್ಠಿ (ನಾ). ವಿನೋದದ ಗೋಷ್ಠಿ ; ಸಂತೋಷಕೂಟ : ನಯಸಂಪನ್ನನತೀವಯವ್ವನಯುತಂ ರೂಪಾನ್ವಿತಂ ನರ್ಮಗೋಷ್ಠಿಯ ನಾಳ್ವಂ . . . ಉತ್ಸಾಹಿಯೆನಿಪ್ಪನೊಳ್ನೆರವ ಪೆಣ್ಗಾ ರಂಭೆಯೇಂ ಸಾಟಿಯೇ (ರಾಜಶೇ. ೧೧-೧೫೦). [ನರ್ಮ$_1$ + ಗೋಷ್ಠಿ]

ನರ್ಮದೆ (ನಾ). ೧. ಸಂತೋಷಪಡಿಸುವವಳು ; ನಗಿಸುವವಳು. ೨. ಒಂದು ನದಿಯ ಹೆಸರು ; P ಭರತಖಂಡದಲ್ಲಿ ಬಹಳ ಪವಿತ್ರವಾದುದೆಂದು ಭಾವಿಸುವ ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದೆ, ಸಿಂಧು ಮತ್ತು ಕಾವೇರಿ ಎಂಬ ಏಳು ಮಹಾನದಿಗಳಲ್ಲಿ ಒಂದು : "ಮೇಖಳಕನ್ಯಾ, ನರ್ಮದಾ, ರೇವಾ – ಈ ೩ ನರ್ಮದೆ" (ಹಲಾಯು. ೧೧೧-೫೨) ; ನರ್ಮದೆಗೆ ಹೋದರೆ ಕರ್ಮ ತಪ್ಪೀತೇ? (ಗಾದೆ). [ಸಂ. ನರ್ಮದಾ]

ನರ್ಮದ್ಯುತಿ (ನಾ). ೧. ಸಂತೋಷಕರವಾದ ಬೆಳಕು : ನಿರ್ಮಲಜಲಕಲನಾದಾಹ್ಲಾದಿನಿ ನವಶಶಿನರ್ಮದ್ಯುತಿಸಂವಾದಿನಿ ಗಂಗೆ ತರಂಗಿಣಿ ಮಂಗಳ ವೆರೆಯೆ (ಗಡೇಶ. ೧೫-೩೮೦). ೨. [ಕಾವ್ಯಮೀ] ನಾಟಕವೇ ಮೊದಲಾದ ರೂಪಕಗಳಲ್ಲಿ ಇರಬೇಕಾದ ಅರುವತ್ತುನಾಲ್ಕು ಸಂಧ್ಯಂಗಗಳಲ್ಲಿ ಒಂದು ; ಪ್ರತಿಮುಖಸಂಧಿಯಲ್ಲಿ ಆರನೆಯ ಅಂಗ ; ಪರಿಹಾಸದಿಂದ ಹುಟ್ಟಿದ ಧೈರ್ಯ ಅಥವಾ ಸಮಾಧಾನ, ದೋಷವನ್ನು ಮುಚ್ಚಲು ಬಳಸುವ ಹಾಸ್ಯ. [ಸಂ.]

ನರ್ಮಲಿ (ನಾ). ಒಂದು ಬಗೆಯ ಗಿಡ : ಇಬ್ಬದಿಯ ಆಡಸೋಗೆ, ನರ್ಮಲೀ ಗಿಡಗಳ ಬೇಲಿಗಳಿಂದ ಬೆಲ್ಲಗೆಡ್ಡೆಯ ಬಾಳಕ ಸುಟ್ಟ ವಾಸನೆ ಮೂಗಿಗೆ ಬಡಿಯಿತು (ಮೂರುದಾ. ೯೦). [?]

ನರ್ಮವಚನ (ನಾ). ವಿನೋದದ ಮಾತು,–ನುಡಿ : ನಾರಿಯರ ನರ್ಮವಚನಕ್ಕೆ ನುದನದ ಮುದಾರದಂದದಿ ಕಾಡ ದೇವು ಹೂವಪ್ಪುದೇ (ಸಮ್ಯಕೌ. ೫-೬೬). [ನರ್ಮ$_1$ + ವಚನ]

ನರ್ಮಸಖ (ನಾ).=ನರ್ಮಸಚಿವ : (ಕಿ). [ಸಂ. (ನರ್ಮ + ಸಖ + –)]

ನರ್ಮಸಚಿವ (ನಾ). ಅರಸನ ಶೃಂಗಾರ ಮತ್ತು ವಿನೋದದ ಕ್ರೀಡೆಗಳಲ್ಲಿ ಜೊತೆಯಲ್ಲಿರುವವನು,–ಸಹಾಯಕ; ವಿದೂಷಕ ಮೊದಲಾದವರು ; ಆಪ್ತಸಚಿವ ; ಅಂತರಂಗದ ಸಹಾಯಕ : ಭೀಮಸೇನನುಮತದೊಳ್ ನರ್ಮಸಚಿವನುಂ ಪರಿಹಾಸಕೇಳೀಶೀಲನುಮೆನಿಸಿದ ವಿದೂಷಕನೆಂದಂ (ಗದಾಯು. ೨-೮ ವ); ಅವನಿಪತಿ ದಿನಪ್ರಥಮಯಾಮದೊಳ್ ನರ್ಮಸಚಿವ ಸಮನ್ವಿತಂ . . . ಮಂಗಳಗಾಯಿನೀಮಧುರಗೀತಮನಾಲಿಸುತ್ತುಮಿರ್ಪಿನಂ (ಪುಲ್ಲಿಪು. ೫-೨೮) ; ಅಂತವರ್ ನರ್ಮಸಚಿವರಂತಿಚ್ಛೆಯಂ ಪ್ರತಿಪಾಲಿಸಿ ನುಡಿವುದುಂ (ಪಂರಾಮಾ. ೧೨-೫೦ ವ) ; ನರ್ಮಸಚಿವ ಪ್ರಕೋಷ್ಠನಿವೇಶಿತ ಸವ್ಯಪಾಣಿಪಲ್ಲವನುಂ (ಪಂದ್ರಪು. ೭-೮೩ ವ) ; ನರ್ಮಸಚಿವಪ್ರಸಾರಿತ ಕರಪಲ್ಲವನ್ಯಸ್ತಹಸ್ತಕಮಳನುಂ . . . ಆಗಿ ನಡೆತರ್ಪಾಗಳ್ (ರಾಜಶೇ. ೧೦-೧೫ ವ) : ಅವನು ನಯಾಬನ ಅಂತರಂಗದ ಮಿತ್ರನೂ ನರ್ಮಸಚಿವನೂ ಆಗಿದ್ದನು (ರಾಜ್ಯೋದ. ೧೪೩) ; ಗೋವಿಂದಭಟ್ಟ, ಗೌಡರ ನರ್ಮಸಚಿವ, ಗೌಡರ ಯೋಜನೆ – ಹಂಚಿಕೆಯ ಅಲಿಖಿತ ರೆಕಾರ್ಡಕೀಪರ್ (ದೀಪಹ II, ೪೫). [ಸಂ.]

ನರ್ಮಸಹಾಯ (ನಾ).=ನರ್ಮಸಚಿವ : ಅತನುವನತಿಶಯದಿಂ ಋತುತತಿಗಳ್ ಬಳಸುವವೊಲೆಳಸಿ ಬಳಸಿದರಂತಾ ಕ್ಷಿತಿಪತಿಸುತನಂ ವಿಟಪಂಡಿತ ನಟಪರಿಹಾಸಕಾದಿ ನರ್ಮಸಹಾಯರ್ (ಅರ್ಧನೇ. ೪-೦೩೩). [ನರ್ಮ$_1$ + ಸಹಾಯ]

ನರ್ಮಾಲಾಪ (ನಾ). ವಿನೋದದ ಮಾತು ; ನಗೆನುಡಿ : ಪಲವುಂ ನರ್ಮಾಲಾಪಂಗಳಿಂದವೆ ಸುಖಾಯಮಾನಸ್ವಾಂತನಾಗಿ ರಾಜಾಧಿರಾಜಂ . . . ಪೋಪುದುಂ (ಕಾದಂಬ. ೪೧೭). [ಸಂ.]

ನರ್ಮೋಕ್ತಿ (ನಾ).=ನರ್ಮಾಲಾಪ: ಪರಿಪರಿಯ ನರ್ಮೋಕ್ತಿಗಳ ಬಂಧುರ ವಿಹಾರಂಗಳನು ನೆನೆದಂಬುರುಹಮುಖಿಯರು ತಾಳಿದರು ಕೃಷ್ಣಾತ್ಮ ಭಾವನೆಯ (ನಿಭಾಗ. ೧೦-೨೬-೨೪). [ಸಂ.]

ನರ್ವಲ್ 'ನಱುವಲ್' ನೋ.

ನರ್ವಾಳಿ (ನಾ). ಒಂದು ಬಗೆಯ ಗಿಡ : ನರ್ವಾಳಿ, ಕಿರಿಚಳ್ಳಿ (ಮೃಜಿಗಿ. ೨೪-೪೫೪). [?]

ನರ್ಸ್, ನರಸು, ನರ್ಸು (ನಾ). ರೋಗಿಗಳಿಗೆ ಆರೈಕೆಮಾಡುವ ದಾದಿ ; ದಾಯಿ : ನಮ್ಮ ಆಫೀಸಿನಲ್ಲಿ ಕಂಪೌಂಡರ್, ಅಕೌಂಟೆಂಟ್ . . . ನರ್ಸ್ ಕೂಡಾ ನಾನೇ ನಾನು (ಸೀತಾರ. ೯೨) ; ಗುಲಾಬಿಯಂಥ ಚಂದದ ನರ್ಸ್ ಇದ್ದಾಳಾದರೆ ಅವಳನ್ನಾದರೂ ನೋಡಿ ಕಾಯಿಲೆಯ ಜನ ಬಂದಾರಲ್ಲ ? (ಹಾರುದಾ. ೧೮೦). ನರಸು: 'ನರಸಮ್ಮ' ಪರಾ. ನರ್ಸು: ಓರ್ವ ನರ್ಸಿನ ಸಹಾಯದಿಂದ ಪರೀಕ್ಷೆ ನಡೆಯಿಸಿದ ಡಾಕ್ಟರು .... ಗಾಬರಿಯ ಧ್ವನಿಯಲ್ಲಿಯೇ ಹೇಳಿದರು (ಸಮಜೀ. ೧೦೦೯). [← ಇಂ. Nurse]

ನರ್ಸು 'ನರ್ಸ್' ನೋ.

ನಲ್ (ಗು). ೧. ಒಳ್ಳೆಯ ; ಉತ್ತಮವಾದ ; ಶ್ರೇಷ್ಠವಾದ : "ನಲ್ಲೆಂದೊಳ್ಳಿತು"(ಚತುನಿ. ೦೦೦). 'ನಲ್ಗುಣ', 'ನಲ್ಗುದುರೆ', 'ನಲ್ತಪ' ಪರಾ. ೨. ಅಂದವಾದ ; ಸೊಗಸಾದ ; ಮನಸೆಳೆಯುವ : "ನಲ್ ನಯಕ್ಕೆಸಕಮದು" (ಕಶರ. ೧೨೫). 'ನಲ್ಗಾಡಿ', ನಲ್ಜವ್ವನೆ', 'ನಲ್ವೆಱ್ಕೆ' ಪರಾ. ೩. ಹಿತವಾದ ; ಪ್ರಿಯವಾದ ; ಪ್ರೀತಿಯ. 'ನಲ್ನುಡಿ$_2$', 'ನಲ್ವರಕೆ', 'ನಲ್ವಾತು' ಪರಾ. ೪. ಸವಿಯಾದ ; ಮಧುರವಾದ. 'ನಲ್ಗಂಪು', 'ನಲ್ಗಳಲ್', 'ನಲ್ಗುಟುಕು', 'ನಲ್ದಂಬುಲ', 'ನಲ್ಲುಣಿಸು' ಪರಾ. ೫. ಹರಿತವಾದ ; ತೀಕ್ಷ್ಣವಾದ. 'ನಲ್ಲಂಬು' ಪರಾ. ೬. ಅತಿಶಯವಾದ ; ಹೆಚ್ಚಾದ. 'ನಲ್ಸೊಗ' ಪರಾ.

ನಲ್ಲದು = ಒಳ್ಳೆಯದು : ನಲ್ಲದು ನನ್ನುಮನ್ ನನ್ನೆಗ್ಗತನಮುಮನ್ ಬಿಟ್ಟು ಕಳೆಯೀಗಳ್ (ಅಂತಿಗೊ. ೫-೮೦). ನಲ್ಲವರ್ = ಒಲಿದವರು ; ನಲ್ಲರು : ಅಂತೆ ಮಾತಾಡುವ ರಾಜಕೀರ ಒಲವಟ್ಟಿಸಲಾಱದಗಲ್ದು ಪೂವಿನಂಬಾಡೆ ಲತಾವನಂಬುಗುವ ನಲ್ಲವರಲ್ಲಿಯ ನಂದನಂಗಳೊಳ್ (ಎಇ. XIII, ೪೪-೪೬ ; 1112 ; ಶಾಪಮಂ. ೨೦೬ ನೋ). ನಲ್ಲವಳ್ = ಪ್ರಿಯೆ ; ನಲ್ಲೆ : ಅಳುರ್ವತನುಸಂತಾಪಕ್ಕುಳ್ಳಳ್ಳಿ ನಲ್ಲವಳಿಂಬುಕೆಯ್ವೆಳವಸಲೆಯಂ ಕೇಳೀಶೈಳಂಗಳಂ . . . ಸೆಱೆಗೆಯ್ದನಾಕುಳಮೆನೆ ಕುಳಿರ್ಕೋಡಿತ್ತಾಗಳ್ ಮನಂ ಮನುಜೇಂದ್ರನಾ (ಪರ್ಧಪು. ೪-೭೨). ನಲ್ಲಾತ = ಸ್ವಾಮಿ; ಒಡೆಯ: ನಲ್ಲಾತಂ ಶ್ರೀಮತ್ ಸೋಮಯ್ಯ (ಎಕ. XI, ಚಿತ್ರದು. ೪೯-೭೦ ; 947); ಆನೆವೆಡೆ(ಡ)ಙ್ಗಂ ಮದಗಜಮಲ್ಲಂ ಧಾಲಕೆ ನಲ್ಲಾತಂ ಶ್ರೀ ಕನ್ನರದೇವನ ರಾಜ್ಯಂ (ಇಆ. XII, ೨೫೭-೨; 951); ಯಸಕ್ಕೆ ನಲ್ಲಾತಂ ಶ್ರೀಕೊಟ್ಟಿಗದೇವನ ರಾಜ್ಯಂ (ಸೌಇಇ. XI-I, ೪೩-೪; 970) ; ಪರಬಳಧೂರ್ತ್ತಂ ಕೃತಯುಗ ಚರಿತನಾಳ್ಗೆ ನಲ್ಲಾತಂ (ಸೌಇಇ. XI-I, ೯೨-೭ ; 1054).

[ದೇ.॥ ತಮಿ. ಮಲ. ನಲ್; ತುಳು. ನಲ್, ನಲು ; ಕೊಡ. ನಲ್ಲೆ; ಗೊಂಡಿ. ನೆಲಾ]

ನಲ$_1$ (ನಾ). ೧. ನಲಿವು ; ಸಂತೋಷ. 'ನಲಂದಳೆ', 'ನಲವೆಚ್ಚು' ಪರಾ. ೨. ಪ್ರೀತಿ ; ಮಮತೆ. 'ನಲವರಕೆ' ಪರಾ.

[ದೇ.॥ ತಮಿ. ನಲ; ಮಲ. ನಲ = ಒಳ್ಳೆಯತನ, ಸೌಂದರ್ಯ; ತುಳು. ನಲ = ಒಳ್ಳೆಯ]

ನಲ$_2$, ನಳ$_1$ (ನಾ). ೧. ಒಂದು ಬಗೆಯ ಜೊಂಡು,-ಹುಲ್ಲು ; ಲಾಳದ ಕಡ್ಡಿ ಹುಲ್ಲು. ೨. ಕಂಪು; ವಾಸನೆ. ೩. ನಿಷಧದೇಶದ ಒಬ್ಬ ಪ್ರಸಿದ್ಧ ರಾಜ; ವೀರಸೇನನ ಮಗ; ದಮಯಂತಿಯ ಗಂಡ. ೪. ರಾಮಾಯಣದಲ್ಲಿ ಒಬ್ಬ ಕಪಿನಾಯಕನ ಹೆಸರು ; ಸುಗ್ರೀವನ ಸೇನಾಪತಿ. ೫. ಅರುವತ್ತು ಸಂವತ್ಸರಗಳಲ್ಲಿ ಐವತ್ತನೆಯದು. ನಳ$_1$: ೩. ಹರಿಶ್ಚಂದ್ರ ನಳ ಪುರು . . . ಚಕ್ರವರ್ತಿಗಳಕ್ಕವರ್ಗೆ ಪುಣ್ಯಶ್ಲೋಕರೆಂಬ ನಾಮಂ (ಮಂಗರಾ. ೭೮-೨); ನಳನ ನಹುಷನ ಶಾಲಿಹೋತ್ರನ ಬಲುಮೆಗಳು ಕಿಱಿದೆಂಬ . . . ಹಯಪ್ರೌಢಪ್ರತಾಪರು ಹೊಳೆವ ಮಕುಟದ ಸಾಲುಗಳ ಲೊಪ್ಪಿದರು ರಾವುತರು (ಕುಪ್ಯಾಉ. ೮-೪೧) ; ಏತಱಾಯಾಸವಿವು ಜಗದ್ವಿಖ್ಯಾತನಲ್ಲಾ ರಾಯರಲ್ಲಿ ನಳನಾತಗಾದಾಪತ್ತ ಬಲ್ಲೈ ಕೇಳಿ ಪೂರ್ವದಲಿ (ತೊರರಾ. ೩-೨-೧೩). ೪. ಒದೆದ ಕೆಡಹಿದ ನಳನ ಮೈಂದನ ಸದೆದ ನೀಲನ ತುಳಿದ (ಕೌಶಿರಾ. ೨೫-೨೨); ಇಟ್ಟ ಗಿರಿಗಳ ಹಿಡಿಹಿಡಿದು ನಳನೊಟ್ಟಿದನು ಮೆಟ್ಟದನು ಕಟ್ಟಿದನಿಟ್ಟಣಿಸಿ ಬಹ ಗಿರಿಯನಾ ಬಳಿಸಲಿಸಿ ಬಹ ಗಿರಿಯ (ತೊರರಾ. ೬-೫-೨೨) ; ನಳ ನೀಲ ಅಂಗದ ಜಾಂಬವಂತ ದಳಪತಿಯಧಿಕ ಸುಗ್ರೀವ ಬಲವಂತ (ಪುರಂದ. ೩-೮೭-೫). ೫. ಮತ್ತಮಾ ವರುಷವೇ ಪ್ರಭವ . . . ನಳ . . . ಅಕ್ಷಯವೆಂದಱುವತ್ತು ತೆಱನಾಗಿಹುದು (ವಿವೇಕ. ೩೨೧). ೬. ಒಂದು ಬಗೆಯ ಮೀನು ; ಕಿರುಮೀನು : ಬಕ ಮರಾಳ ರಥಾಂಗ ಸಾರಸನಿಕರ ಪುಳಿನಸ್ಥಳದೊಳಿರೆ ನಳಮಕರನಕ್ರಜಳೂಕ ಮಡುಗಡಲೊಳಗೆ ಸಂಚರಿಸೆ (ಅಕ್ರೂಚ. ೫-೨೬). 'ನಳಮೀನ' ಪರಾ. ೭. [ಜ್ಯೋತಿ] ಒಂದು ಬಗೆಯ ಯೋಗ. 'ನಳಯೋಗ' ಪರಾ. [ಸಂ.]

ನಲಂದಳೆ (ಕ್ರಿ). ಸಂತೋಷಪಡು ; ಸಡಗರಿಸು ; ಸಂಭ್ರಮಿಸು : ಆಕಂಪನೃಪಂ ಅಲಘುಪ್ರಿಯದಿಂದಿದಿರ್ವಂದು ನಲಂದಳೆದು ಪೊಳಲನೆಯ್ದಿಸಿ . . . ಸಕಲಸನ್ಮಾನಂ ಮಾಡಿದನು (ಜಯಕಾ. ೪-೪೬). [ನಲ$_1$ + ತಳೆ$_1$]

ನಲಕ, ನಳಕ (ನಾ). ೧. ದೇಹದ ಉದ್ದವಾದ ಎಲುಬು,-ಮೂಳೆ. ೨. ಕೈಯ ಅಥವಾ ಕಾಲಿನ ಎಲುಬು ; ಶಾಖಾಸ್ಥಿ. ನಳಕ : ೨. "ಕೆಯ್ಯ ಕಾಲ ಎಲ್ವು ನಳಕಯೆಂಬುದು" (ಹಲಾಯು. ೦೦೪-೦೨) ; "ನಳಕಮೆನೆ ಶಾಖಾಸ್ಥಿಯೆಂದೆನಲು ಕೈಕಾಲ ಯೆಲುವು" (ಮಂಗರಾ. ೦೦೭-೬). [ಸಂ.]

ನಲಕುಪ್ಪು (ನಾ). (?) : ಮೃಗಶಿರೆ ನಲಕುಪ್ಪಿನ ಹಾಗೆ ೩ ಆದ್ರೆ ಹವಳದ ಹಾಗೆ ೧ (ಭಾಸ್ಕರ. ೬೦-೩). [?]

ನಲಕೂಬರ, ನಳಕೂಬರ (ನಾ). ಕುಬೇರನ ಮಗ. ನಳಕೂಬರ: ಪೆಱತೇನುಮಂ ಬಗೆಯದೆ ನಳಕೂಬರೆನೊಳ್ ಕೂಡಿ ಸುಖಮಿರೆಂದಾಕೆಯ ದುಷ್ಪರಿಣಾಮಮಂ ಪತ್ತುವಿಡಿಸಿ (ಪಂರಾಮಾ. ೧೦-೧೯೫ ವ) ; ಸುರರಮಣ ನಳಕೂಬರಾಧಿಕಸರಸಕಾಮುಕರಂ ಸಮಸ್ತಾಮರರನೆಲ್ಲರ ಬಗೆಯದನಿಮಿಷ ಸತಿಯರು ಸಹಸ್ರ ನೆರೆದು ನಿನ್ನಂ . . . ಮನಸಿಜಸುಖಾಮೃತಶರನಿಧಿಯೊಳೋಲಾಡಿಸುತ್ತಿರಲ್ (ಬಸಪು. ೪೧-೧೮) ; ಉರ್ವ ನಳಕೂಬರ ಜಯಂತಾದಿ ಸುರತನುಜರುರ್ವರೆಗದೇಕೆ ಬಹರು (ಜೈಮಿಭಾ. ೩೦-೨೧).

[ಸಂ.]

ನಲಕೆ (ನಾ). ಒಂದು ಬಗೆಯ ಸುಗಂಧದ್ರವ್ಯ: (ಕಿ). [<ಸಂ. ನಲಿಕಾ]

ನಲಗು 'ನಲುಗು$_1$' ನೋ.

ನಲದ (ನಾ). ಲಾಮಂಚ ; ಉಶೀರ. [ಸಂ.]

ನಲಭರಿತ (ನಾ). ನಲಿವಿನಿಂದ ಕೂಡಿದುದು ; ಸಂತೋಷಭರಿತವಾದುದು ; ಸುಖಮಯವಾದುದು : ಅರರೆ ನೆಲ ನಲಭರಿತವಮೃತದ ಶರಧಿ ಸಾವಿರವಪ್ಪುವಂಗಡಿ ಮೆಱೆವ ಗಣಿಕಾಭವನ ಕೋಟೆಯ ಸುತ್ತಲುದ್ಯಾನ (ಕೌಶಿರಾ. ೦-೨೩). [ನಲ$_1$ + ಭರಿತ]

ನಲಮೀನ, ನಳಮೀನ (ನಾ). ಒಂದು ಬಗೆಯ ಮೀನು ; ಚಿಲಿಚಿಮ : "ನಲಮೀನ ಚಿಲಿಚಿಮ ಎಂದೊಡೆ ಸಿಸಿಲು, ಚಿಳಿಯ ಮೀನೆಂದು ಎಂಬರು" (ನಾಚಿರಾ. ಕಿ). ನಳಮೀನ: "ನಳಮೀನಃ, ಚಿಳಿಚಿಮಃ-ಈ ೨ ಕಿಱುಮೀನ್" (ಹಲಾಯು. ೧೦೮-೩೬) ; "ಚಿಳಿಚಿಮವೆನಲು ನಳಮೀನವೆನೆ ಕಿಱುಮೀನ ಪೆಸರೆನಿಕ್ಕುಂ" (ಮಂಗರಾ. ೦೨೦-೬). [ಸಂ.]

ನಲವತ್ತು 'ನಾಲ್ವತ್ತು' ನೋ.

ನಲವರಕೆ (ನಾ). ಪ್ರೀತಿಯಿಂದ ಮಾಡಿದ ಆಶೀರ್ವಾದ : ಅರಸಿ ನಲವರಕೆಯಿಂದಂ ಪರಸುತ್ತಿಂದೆನ್ನ ತಂದೆ ಬಂದನೆನುತ್ತಂ (ಕಾದಂಪೂ. ೪೯೯೫ ; ಕುಮಾರನನಜಿತಸೇನಮಹಾದೇವಿ ನಲವ[ಪಾಠಾಂ. ನಲ್ವ]ರಕೆಯಂ ಪರಸಿ

ಮೋಹರಸಪರವಶತೆಯಿಂ . . . ಅಪ್ಪಿ (ಚಂದ್ರಪು. ೬-೯೦ ಪ) ; ನಿಜಾಂಘ್ರಿಗಳನರ್ಚಿಸುವ ಕನ್ಯಾರತ್ನಮಾ ನಿಜಕುಲಕ್ಕಿದುವೆ ಚೂಡಾರತ್ನಮೆಂದು ನೋಡಿ ಪಾರಯ್ಸಿ ಪಲವುಂ ನಲವ[ಪಾಠಾಂ. ಪಲವಂ ನಲ್ವ]ರಕೆಯಂ ಪರಸಿ (ವರ್ಧಪು. ೫-೪೭ಪ) ; ನಿಜಜನನೀಜನಕರಿರ್ಪೆಡೆಗೆ ರಮಣಿವೆರಸೇಳ್ತಂದು ಪೊಡಮಟ್ಟು ನಿಂದಾಗಳ್ . . . ಇರ್ವರುಂ ನಲವರಕೆಯಿತ್ತು ಪರಿತೋಷದಿಂ ಬರಿಸಿ ಕುಳ್ಳಿರಿಸಿ (ರಾಜಶೇ. ೯-೪೨ ಪ) ; ನಲವರಕೆಯಿತ್ತು ಸಂತೋಷದಿಂ ನಡೆ ನೋಡಿ ನಲಿದು (ಕುಮಾಪು. ೭-೨೦೪). [ನಲ$_1$ + ಪರಕೆ$_1$]

ನಲವರಿ (ಕ್ರಿ). ಸಂತೋಷಗೊಳ್ಳು ; ಆನಂದಿಸು : ಭರದಿಂ ತಲೆಯೆತ್ತಿ ಯುರ್ಬಿ ನಭಮಂ ನುಂಗಲೊಡರ್ಚಿದಂತೆ ಮೇಘಮಂ ನೋಡಿ ದೆಸೆ ದೆಸೆಯಂ ವಾಸಿಸಿ ನಲವರಿದು ಪ್ರಾಣಿಗಳೊಳ್ ತನಗದಿರದಿದಿರಾಂಪ ರೊರ್ವರುಮಂ ಕಾಣದೆ (ಪಂಚತಂ. ೪೬-೭). 'ನಲಿವರಿ' ಪರಾ.

[ನಲ$_1$ + ಪರಿ$_2$]

ನಲವರಿಕೆ (ನಾ). ಅಭಿನಂದನೆ : "ಅಭಿನಂದಿಸುವುದು . . . ನಲವರಿಕೆ" (Congratulation. ಇಂಕನಿ) ; ಈಗೆಲ್ಲರೂ ನಲವರಿಕೆ ಸಲ್ಲಿಪರು (ಮೂರುನಾ. ೧೧೮-೬೫೦). [ನಲವು + ಅರಿಕೆ (<ಅಱಿಕೆ)]

ನಲವಾನ್ (ಕ್ರಿ). ಸಂತೋಷವನ್ನು ತಳೆ ; ಆನಂದಿಸು ; ಪ್ರಸನ್ನಚಿತ್ತನಾಗು : ಏಂ ತಾಳ್ದುದೋ ಚೆಲ್ವನೀ ದೇಶಮೆಂದು ನಲವಾಂತು ಮುಂದಳೆಯುತಿರೆ (ಚೈಮಿಭಾ. ೩-೧೩). [ನಲವು + ಆನ್$_1$]

ನಲವು (ನಾ). ೧. ಹಿಗ್ಗು ; ಸಂತೋಷ ; ಸಡಗರ : "ನಲವೆಂದೆನೆ ಸಂತೋಷಂ" (ಧಾರನಿ. ೩೩); ನಲವಿಂ ಕೃತಾರ್ಥಭಾವವನೆಯ್ದುತಿರೆ ಕಂಡು ಚಲಿಸದದಿರದೆ ಬೆನ್ನನೊಡ್ಡಿಕೊಂಡಿರೆ ಕಂಡು (ಸೇದಿರ. ದೇ. ೬೪-೧೩) ; ಕೊಬ್ಬಿ ನಲವಿಂದೆ ಮಡಲಿಱಿದಡಸಿ ಬೆಳೆದು (ಸಿದ್ಧರಾ. ೨-೨೩) ; ನಲವಿಂ ಪಂದಿಯ ಬೇಂಟೆಯಾಡಿ (ಉದ್ಯಟ. ೨-೬೯) ; ನೆರೆದೋಲಗಂ ನಲವು ಕೈಮಿಗೆ ತನ್ನನೆ ನೋಡುತಿರ್ಪಿನಂ (ಕಬ್ಬಿಕಾ. ೮೨) ; ಫಲವ ತಲೆಯಲಿ ಹೊತ್ತು ಬೇಗದಿ ನಲವು ಮಿಗೆ ನಡೆತಂದು (ಕುಮ್ಯಾಅ. ಓರಿಇ. ೪-೧೬) ; ಪರಿಮಳ ದಲರ ಪನ್ನೀರಿನಲಿ ತವಕದಿ ನಲವು ಇಂಗಿದ ಸತಿಯನುಪಚರಿಸಿದರು ಪಲತೆಱದಿ (ನಳಚ. ೦-೩೯) ; ಅರ್ಥಲಾಲಿತ್ಯವೆನುವ ಸತೀತ್ವವಿರದೊಡನು ಗೊಳಿಸುವಳೆ ಕವಿತಾರವಣಿ ರಸಿಕನಿಗೆ ನಲವು ? (ಗಿಳಿವಿಂ. ೨೨-೨೪). ೨. ಪ್ರೀತಿ ; ಆದರ : ಸಿರಿ ನಲವಿಂದಮಿರ್ಪ ನೆಲೆ ಕಣ್ಗಳ ಪರ್ವಮೆನಿಪ್ಪ ಪಂಕಜೋತ್ಕರಮುಮನಿಂದುಮಂಡಲಮುಮಾ ಮೊದಲೊಳ್ ಸಮೆದ ಬ್ಜಜಂ ಮನೋಹರಮೆನೆ ಮಾಡಿದೀ ಮೊಗದ ಪೋಲ್ವೆಗೆ ಮುನ್ನೆಗಟಲ್ ತಗುಳ್ಚಿ ಬಿತ್ತರಿಸಿದು (ಕಾದಂಪೂ. ೭೪೩) ; ಸಕಲಬುಧಸಮಿತಿ ನೆಱೆ ಕೊಂಡುಕೊನೆದು ನಲವಿಂದೆ ಕೀರ್ತಿಸುತ್ತಿರೆ ಮುದದಿಂ . . . ಕಾವ್ಯಾವಲೋಕಮಂ ವಿರಚಿಸುವೆಂ (ಕಾವ್ಯಾವ. ೩) ; ಯತಿಪಸಮಂತಭದ್ರನನಿಳಾ (ವಳಯಂ) ನಲವಿಂದೆ ಕೀರ್ತಿಕುಂ (ವರ್ಧಪು. ೧-೧೨) ; ನಲ್ಲನ ನಲವಿಂ ನಡೆ ನೋಡಿ (ಉದ್ಯಟ. ೨-೭೭) ; ಕಂದುಮೋಱೆಯ ರಾಯನನು . . . ಆಲಿಂಗಿಸುತ ನಲವಿಂದ ಮನ್ನಿಸಿ ತಂದನರಮನೆಗುಚಿತವಚನದಲಿ(ಕುಮ್ಯಾಭೀ. ೧-೦೭). ೩. ಚೆಲುವು; ಸೌಂದರ್ಯ ; ಮನೋಹರತೆ : ಸುಲಲಿತವಹ ನಾನಾವರ್ಣಜ್ಞರ ಪಲವಿಧವಾಂತ ಕೇರಿಗಳು ನಲವಿಂದ ಮೆಱೆದಿಹುವು (ಕಂನವಿ. ೨-೭೪). [ನಲ$_1$ + – ವು./ತಮಿ. ನಲವು; ತೆಲು. ನಲುವು]

ನಲವುಗೆಡು (ಕ್ರಿ). ಸಂತೋಷಗುಂದು ; ಹಿಗ್ಗು ಇಲ್ಲವಾಗು : ಎನ್ನೋಪಳಾ ಕಂದಿದೊಂದಿರವಾ ಚಿಂತಿಸುವಂದವಾ ನಲವುಗೆಟ್ಟಾಕಾರವಾ ಬಾಷ್ಪದೊಳ್ ಪೊರೆದಾಲೋಕನವಾ ಬಟಲ್ವಧರವಾ ಸುಯ್ವೊಂದು ಪಾಂಗಾಸ್ಮರಾತುರಮಂ ತಾಳ್ದುವ ಭಂಗಿ ಪಿಂಗಿರದದೇಂ ಬೆಚ್ಚತ್ತೊ ಮಚ್ಚಿತ್ತದೊಳ್ (ಜಗವಿ. ೦೬-೧೩೦) ; ಮುಂದುಗೆಟ್ಟೆರ್ದೆಯ ಗುಂಡಿಗೆಗಳೊಡೆದರೆಬರಾಚರಿಸಿದರ್ ನಡುಗಿದರ್ ನಲವುಗೆಟ್ಟನಿಬರು (ಜಿಬಪು. ೩೦-೩೭). [ನಲವು+ಕೆಡು$_1$]

ನಲವುದಾಳು (ಕ್ರಿ). ಸಂತೋಷವನ್ನು ತಾಳು ; ಪ್ರಸನ್ನತೆಯನ್ನು ಹೊಂದು : ಭೂಸುರರಿಗೆ ನಿತ್ಯದಾನವ ಮಾಡಿ ನಲವುದಾಳಿದ ಭೂಮಿಪಾಲ (ಕಂನವಿ. ೨೨-೬೭). [ನಲವು + ತಾಳು$_1$ (<ತಾಳ್$_1$)]

ನಲವುಮತ್ತು (ನಾ). ಆನಂದದ ಅಮಲು ; ಸಂತೋಷದ ಗುಂಗು : ವರವನಿತ್ತು ನಲವುಮತ್ತು ನಮಗೆಂದಿಗು ಇರೆ ಹರಸೈ ಗೋಕುಲಾನಂದನಾ (ಗೋಕುನಿ. ೩೨). [ನಲವು + ಮತ್ತು$_1$]

ನಲವೆ (ನಾ). ಸಂತೋಷಚಿತ್ತೆ ; ಹರ್ಷಿತೆ : ನುಣ್ದನಿಯ ನೂತನೆ ಭಾಳದ ಭಾಮಿನಿ . . . ನಗೆಗಣ್ಗಳ ನಲವೆ ನಾಸಿಕದ ನೀಱೆ (ಉದ್ಯಟ. ೫-೫೩ ಪ).

[ನಲವು + – ಎ$_2$]

ನಲವೆಚ್ಚು (ಕ್ರಿ). ಹಿಗ್ಗು ಹೆಚ್ಚು ; ಸಂತೋಷವು ಅಧಿಕವಾಗು : ಶಬರಿ ಮುದದಿಂ ಗಾಢಪರಿರಂಭಣಂಗೆಯ್ದು . . . ಬೇಂಟೆಯಂ ನೋಡುತ್ತ ನಲವೆಚ್ಚುತಂ ಪೋದಳು (ರಾಘಚ. ೦೭-೭೧).

[ನಲ$_1$ + ಪೆಚ್ಚು$_1$ (<ಪೆರ್ಚು$_1$)]

ನಲವೆರೆ (ಕ್ರಿ). ಪ್ರೀತಿಯನ್ನು ಸುರಿಸು ; ಮಮತೆಯನ್ನು ತೋರು : ಶಿವದ ನೆಲೆಯನು ಬಲ್ಲ ವಿಪುಲಮತಿಗಳ ತಡೆದ ಧ್ಯಾನಬಿಂಬ, ನೆನೆದೊಡನೆ ಕೊಳೆ ತೊಳೆದು ನಲವೆರೆದು ನಿಲ್ಲೆನ್ನ ಮನದ ತುಂಬ (ಮಲೆದೇ. ೪೦-೧೦).

[ನಲವು + ಎರೆ$_1$ (<ಎಱೆ$_1$)]

ನಲವೇರು 'ನಲವೇಱು' ನೋ.

ನಲವೇಱಿಸು (ಕ್ರಿ). ಸಂತೋಷವನ್ನು ಹೆಚ್ಚಿಸು ; ಹರ್ಷಗೊಳಿಸು : ಕೆಂದಾವರೆಗಳ ಮುಗಿಸುತ ಚಾಳಕವೃಂದವ ನಲವೇರಿ{ಱಿ}ಸುತ ಚಂದ್ರಕಾಂತವ ಕರಗಿಸುತಾಗ ಪರಿಪೂರ್ಣೇಂದುವದನೆಯರೈದಿದರು (ಕಂನವಿ. ೨೦-೭೭). [ನಲವು + ಏಱಿಸು]

ನಲವೇಱು, ನಲವೇರು(ಕ್ರಿ). ಅಧಿಕವಾದ ಸಂತೋಷವನ್ನು ಹೊಂದು : ಉದಯಗಿರೀಂದ್ರಮನಿನನೇಱೆ ಸರೋಜಸಮಿತಿ ನಲ[ಪಾಠಾಂ. ಯ]ವೇಱುವ ವೊಲ್ (ಚಂದ್ರಪು. ೭-೨) ; ಹೊಸಪರಿಯ ಬಿರಿಮುಗುಳ್ಗಳಿರೆ ಬೀಗಿ ನಲವೇಱಿ ಮಲ್ಲಿಗೆಯರಳ್ಗಳಂ ಮನವಾರೆ ತಿಱಿಯುತಂ (ಪುಷ್ಪರ. ಹ. ೫೨೪-೧೮); ಅಗಲದೆ ನೋಡಿನೋಡಿ ನಲವೇಱುವ ದೇವಿಯ ಭೂಪಚಕ್ರಿಯಾ ಸೊಗಯಿಪ ದೃಕ್ಚಕೋರಚಯಸೇವೆಗೆ ಮೆಚ್ಚಿ (ಕುಸುಮಾ. ೬-೧೨೩) ; ದೇಗುಲಕೆ ನಲವೇಱಿ ನಡೆತಪ್ಪಾಗ (ಬಸಪು. ೨೬-೬) ; ದಶರಥನಂದನರ ನಿರೀಕ್ಷಿಸುತ ನಲವೇಱಿದನು ಕಲಿಹನುಮ (ತೊರರಾ. ೬-೩೦-೧೬). **ನಲವೇರು** : ತೆಂಗಿನ ಗರಿ ತಲೆದೂಗಲಿ ಬಾಗಲಿ ಗಿಡಮರಗಳು ಸಹ ನಲವೇರಿ (ಕಪಪು. ೬-೦೪೯). [ನಲವು + ಏಱು$_1$ (<ಏಱ್$_1$)]

ನಲಾವು 'ನಲ್ಲಾವು' ನೋ.

ನಲಿ$_1$ (ಕ್ರಿ). ೧. ಕುಣಿ ; ನೃತ್ಯ ಮಾಡು : ಸುತ್ತಲುಂ ಪರಿವ ಜರಿವೊನಲ್ಗಳಿಂದೆತ್ತಲುಂ ನಲಿವ ಪೊಸನವಿಲ್ಗಳಿಂ (ಪಂಪಭಾ. ೩-೨೨) ; ನಡುವಿರುಳವರ್ ನಾಟಕಂ ನಲಿದು ಮಱೆದೊಱಗಿರ್ದ ಸಮಯದೊಳ್ (ಪಂಚತಂ. ೨೭೪-೦) ; ಸರ್ವಾಂಗಸುಂದರಿ ವಿದ್ಯಾನಟಿ ನಾಟಕಂ ನಲಿಗೆ ಮತ್ಕಾವ್ಯಸ್ಥಲೀರಂಗದೊಳ್ (ಪಂರಾಮಾ. ೧-೬). ೨. ಹಿಗ್ಗು ; ಸಂತೋಷಪಡು ; ಆನಂದಿಸು ; ಉಲ್ಲಾಸಗೊಳ್ಳು : ತಾಮರೆಯರಲೊಳ್ ಸರಸನಿಜಾಮೋದದೊಳೊಂದಿ ನಲಿದು ಮಕರಂದರಜೋವ್ಯಾಮಂಗ್ಧದೊಳೀ ಮಂಗುಳೊಳಮಾ ಮಾಟ್ಕೆಯನಱಸಿ ಸುಟುವುದಳಿ ಕೆಲಕೆಲದೊಳ್ (ಕವಿರಾ. ೩-೧೨೭) ; ಮೆಯ್ವೆರ್ಚಿ ತನ್ನಿನಿಯಂ ಬಂದೊಡೆ ನಲ್ಲಳೇಂ ನಲಿದಳೊ ನಾನಾವಿಳಾಸಂಗಳಿಂ (ಆದಿಪು. ೧೨-೪೩) ; ಗಗನತಳಮೆ ಪಱಿದು ಬಿಟ್ಟುದೆನಿಪ ಬಹುತಟಾಕದಿಂ ಕುಕಿಲ್ವ ನಲಿವ ಕೋಕದಿಂ (ಪಂಪಭಾ. ೧-೫೮); ದೀನದೃದ್ಧದ್ವಿಜನಟಭಟಸಚ್ಚಕ್ರಯುಗ್ಮಂ ಸರುಗ್ಮಂ ನಲಿಯುತ್ತಂ ನೋಡೆ ತನ್ನಂ ಬೆಳಗುವನೆಳೆಯೊಳ್ಬೆಳ್ವಲಾದಿತ್ಯದೇವಂ (ಸೌಇಇ. XI-i, ೪೫-೦೭ ; 980) ; ಅರರೆ ಇಂದ್ರಾಣಿಯರು ನಲಿದು

ಸೀಗುರಿಯಿಕ್ಕೆ (ಬಸರ. ೧-೧೨) ; ನಗುತ ನಲಿಯುತ್ತ ಹಾಡುತ್ತಾಡುತಾನಂದ ವೊಗೆಯುತಿರಲು (ಹಚಕಾ. ೬-೪೪) ; ಮರುಳ್ಗಳ ತಂಡಂ ನಲಿವಂತೆ ಕೊಂದಂ (ಉದ್ಯಟ. ೪-೮೪) ; ದುಶ್ಶಾಸನಂಗುಬ್ಬರಿಸೆ ರೋಮಾವಳಿ ವಿಕರ್ಣಾದಿಗಳ ಮನ ನಲಿಯೆ (ಕುಮ್ಮಾಕ. ೧-೩೦). ೩. ಸಂತೋಷದಿಂದ ಸುಳಿದಾಡು ; ಲೀಲೆಯಿಂದ ಓಡಾಡು : ಖಚರೀಜನಾನನ ನವಾಂ ಭೋಜಂಗಳೊಳ್ ಕಂಪನೀಟ್ಕೊಳುತುಂ ನಂದನರಾಜಿಯೊಳ್ನಲಿಯುತುಂ ತದ್ರಾಜಹಂಸಂ ನಿರಾಕುಳವಿಮಾ ಮಾಟ್ಕೆಗಳಿಂದೆ ಪೊಟ್ಟುಗಳೆವಂ ಸಂಸಾರ ಸಾರೋದಯಂ (ಆದಿಪು. ೧-೮೪) ; ಪೊಸಕೊಳಂಗಳೊಳೊಲಿದು ನಲಿವಂಚೆ ಯಿಕ್ಕೆಯಿಂ (ತಿರುರ. ದೇ. ೧-೧೪) ; ಶಾರದೆಯೆ ನರ್ತಿಸುಗೆ ನಲಿದೊಲಿದೆನ್ನ ಜಿಹ್ವೆಯಲಿ (ಕುಮ್ಮಾಅ. ೧-೫) ; ಹೊಱವೊಳಲ ರಮ್ಯೋದ್ಯಾನವೆಸೆದುದು . . . ನಲಿವ ಕಿನ್ನರಮಿಥುನದಲಿ ಮಿಗೆ ಗಳಹುವರಗಿಳಿವಿಂಡಿನಲಿ ಹೆಕ್ಕಳಿಪ ಕೋಗಿಲೆಗಳಲಿ (ತೊರರಾ. ೦-೯-೧೧) ; ತಾಯೆ . . . ನಲಿದೊಲಿದು ನರ್ತನಂಗೈಯೆನ್ನ ಜಿಹ್ವೆಯಲಿ (ಚಿತ್ರಾಂಗ. ೧-೯). ೪. ಮೆಚ್ಚು ; ಇಷ್ಟಪಡು ; ಒಲಿ : ದರ್ಪ್ಪ ವಿಷಯಂಗಳನೇಳಿಸಿ ಕಾಡಿಯಾಡಿ ಕಾಮಾರಿ ಯನರ್ಚ್ಚಿಸಲ್ಕೆ ನಲಿದಿರ್ಪ್ಪ ಮುನೀಶ್ವರನೀ ಧ್ರುವೇಶ್ವರ (ಸೌಇಇ. XI-1, ೯೭-೩೪ ; 1062) ; ಸಕಲಸೂರಿಗಳ ಪಾದಾರವಿಂದವ ನೆನೆದೀ ಕೃತಿಯನು ಮೇದಿನಿ ನಲಿಯೆ ಪೇಳುವೆನು (ಕಂನವಿ. ೧-೧೨) ; ಪೊಲುನೆಯ್ಕೆಸಿನ ಪೆಣಮನ್ ಮಣ್ ಮಾಡದಿರ್ಕ್ಕಾರುಮ್, ಅಟದಿರ್ಕೆ, ಅಟದೆ, ಪೂಟದೆ, ಬಯಸಿ ಪಾರ್ದು, ನಲಿದೆಱಪ ಪರ್ದಿಂಗೆ ಸವಿಯೆರೆಯ ನಿಧಿಯಾಗೆ ಬಿಸುಟರ್ಕೆ ಬಯಲೊಳ್ (ಅಂತಿಗೂ. ೨-೨೩). ೫. ತೂಗು ; ಅಲ್ಲಾಡು ; ಸಂಚಲ ವಾಗು : ಅಲರ್ಗಣ್ಗಳಮರ್ದುಗಂ ತೊದಳ್ನುಡಿಯ ತವಕಿಗಂ ನಲಿವ ಮಾಗಾಯ ನವನರ್ತನದ ಹಸನಿಗಂ (ಬಸರ. ೧-೧೫೦) ; ಶ್ರೀವಧು ಮುತ್ತಿ ನೆಕ್ಕಸರದಂತುರದೊಳ್ ನಲಿವಂತು ವಿಕ್ರಮಶ್ರೀವಧು ಬಾಹುಪೂರಕದ ವೊಲ್ ಭುಜದೊಳ್ ನಲಿವಂತು . . . ಪಾಳಿಸಿದನುರ್ವ್ವರೆಯಂ ನರಸಿಂಹ ಭೂಭಜಂ (ಎಕ. III, ಮಂಡ್ಯ. ೧೨೦-೦ ; 1235). ೬. ಸಂತೋಷದಿಂದ ಕೂಗು ; ಕುಕಿಲು : ಘಣಿಯುಂ ನವಿಲ್ಗಳುಂ ಪುರುಡಿಪ ಕಾಗೆಯುಂ ನಲಿವ ಕೋಗಿಲೆಯುಂ ತೊಱೆದೆಯ್ದೆ ವೈರಮಂ ನೆರೆದೊಡನಿರ್ದವು (ಧರ್ಮಾಮ್ಯ. ೩-೯೦).

ನಲಿನಲಿ (ದ್ವಿರುಕ್ತಿ) : ಪಲರಂ ನಲಿನಲಿದಾಟಂದು ಕೊಂದವಂ ಯಮ ರಾಜಂ (ಅಜಿಪು. ೩೦-೨೬); ಕೆಲದ ಕೇರಿಯ ಸಕ್ಕಜದ ಮಕ್ಕಳೊಡನೊಕ್ಕಲಿಕ್ಕಿ ನಲಿನಲಿದು ನರ್ತಿಸುತ್ತಿರಲ್ (ನಂಬಿರ. ೨-೧೪) ; ನಲಿನಲಿದು ಹೆಚ್ಚಿ ಮೆಚ್ಚುತ್ತ . . . ಲಲನೆಯರು ನೃಪನ ಪದಯುಗಜಲರುಹದೊಳ್ ಮೆಯ್ಯನಿಕ್ಕೆ (ನನ್ನಜಾ. ೪-೨೧೫). ನಲಿದಾಟ = ಹಿಗ್ಗುವಿಕೆ ; ಸಂತೋಷ ಪಡುವಿಕೆ. ನಲಿದಾಡಿಸು = ಸಂತೋಷದಿಂದ ಕುಣಿದಾಡುವಂತೆಮಾಡು : ನಿಮ್ಮವರ ಮಾರ್ಗಣೆಗಳುಬ್ಬರಿಸಿದವು ಗಗನಾಂಗಣವ. . . ನಲಿದಾಡಿಸಿದವಾ ನಾರದಾದಿಗಳ (ತೊರರಾ. ೧-೧೧-೧೦) ; ಸೊಗಯಿಸುವ ವರಶಿಶುವ ನಲಿ ದಾಡಿಸುವ ರೂಢಿಯಿಲ್ಲೆಂದು ನೆಱೆ ನೊಂದು ಮಱುಗುವಳಜಸ್ರಮವಳು (ಜೈಮಿಭಾ. ೨೮-೦೮). ನಲಿದಾಡು = ೧. ಸಂತೋಷದಿಂದ ಆಟವಾಡು : ತಮ್ಮೊಡನೆ ನಲಿದಾಡುವ ಕಿಶೋರಕೇಸರಿಗಳಂ ಪಿಡಿದು ತೆಗೆವ ಕರಿಕಳಭಂ ಗಳುಮಂ (ಪಂಪಭಾ. ೧-೧೧೫ ಪ) ; ಹರಿಣಂಗಳ್ ನಲಿದಾಡುತಿರ್ದುವು ಕರಂ ವ್ಯಾಘ್ರಂಗಳಂ ಪೊರ್ದಿ (ಸುಕುಮಾ. ೮-೬೦) ; ಜಳನಿಧಿಯಲ್ಲಿ ಪುಟ್ಟಿ ಜಲ ಜಾಕ್ಷನ ಪೇರುರಮೆಂಬ ತೊಟ್ಟಿಲೊಳ್ ಬಳೆದು ವಿಲಾಸದಿಂ ಜಲಜದೊಳ್ ನಲಿದಾಡಿ ಬಟಿಕ್ಕ ಯೌವನಂ ಮೊಳೆವುದುಮಾರುಮಂ ಬಗೆಯದಾ ನೃಪ ನೊಳ್ ಸಿರಿ ಕೂರ್ತು ಬಂದು ಕೋಮಳೆ ನೆರೆದಿರ್ದಳ್ (ಕಾಪ್ಯಸಾ. ೨೦೭). ೨. ಬಹಳ ಹಿಗ್ಗು ; ತುಂಬ ಸಂತೋಷಪಡು : ನೆರೆ ಶುದ್ಧಾಂತ ಕಾಂತೆಯರ್ ನೆರೆದೊಸಗೆಯಂ ಮಾಡೆ ವೃದ್ಧಕಂಚುಕಿಗಳಂದವರೊಡನೆ ನಲಿ ದಾಡೆ (ಅಜಿಪು. ೪-೭೮ಗಳ) ; ತಿರಿಕಂ ನಿಧಿವಡೆದೊಡೆಂತು ನಲಿದಾಡುಗುಮಂತಿರೆ ಜಿನಪದಾಬ್ಜಸೇವನೆ ದೊರೆಕೊಳೆ ಸಂಸಾರಿ ನಲಿವುದೊಲುವಡೆ ಸುಖವಂ (ಸಮಪ. ೧-೧೦೨) ; ಶರಣರ ಸಂಗದಲ್ಲಿ ನಲಿದಾಡು ಕಂಡೆಯಾ ಎಲೆ ಮನವೇ (ಮಹಾದೇ. ಬ. ೭೯-೧೯೨) ; ಭೋಯೆಂದಾಗಲರಸಂಚೆಗಳುಮಳಿವಿಂಡುಗಳು ನಲಿದಾಡೆ (ನಳಪ. ೧-೩೭). ೩. ಸಂತೋಷದಿಂದ ಕುಣಿದಾಡು,–ನೃತ್ಯ ಮಾಡು : ನಭದೊಳ್ ನಲಿದಾಡುವ ಸೋಗೆನವಿಲ್ಗಳ ಪಿಂಡುಗಳುಮಂ (ಪಂಪತಂ. ೦೧೮-೧೦) ; ಆಡುವ ನಲಿದಾಡುವ ನಡೆ ನೋಡುವ ಕೊರಲಪ್ಪಿ ಕೊಳ್ವ . . . ಬಾಳಕ್ರೀಡೆಗಳಂ ನೋಡುತಿರ್ಪುದೊಂದಿರವಲ್ತೆ (ಸುಕುಮಾ. ೯-೧೦೦) ; ಹುಲಿ ನಲಿದು ನಿಲುಗಿಸಿ ಗೆಜ್ಜೆಗಟ್ಟಿ ನಲಿದಾಡಿತ್ತು (ಅದವ. ೧೫-೩೨) ; ನಾರದನು ನಲಿದಾಡಿದನು ಗಗನದಲಿ (ತೊರರಾ. ೪-೧೨-೩೬) ; ನಲಿದಾಡೆ ಎನ್ನ ನಾಲಿಗೆ ಮೇಲೆ ಸರಸ್ವತಿದೇವಿ (ಪುರಂದ. ೧-೧೯೧ ಪಲ್ಲವಿ) ; ಲಕ್ಷ್ಮಿ ನನ್ನ ಮನೆಯಲ್ಲಿ ನಲಿದಾಡುತ್ತಿದ್ದಾಳೆ (ಕಂಬಹು. ೧೩೪); ಅವಳ ತಲೆಯಲ್ಲಿ ಹಿಂದಿನ ಎಷ್ಟೋ ಘಟನೆಗಳು ನಲಿದಾಡಿದವು (ಹಳ್ಳಹಾ. ೧೧೬). ನಲಿನಲಿದಾಡು = ೧. ಚಲಿಸಿ ಸುತ್ತು : ಆತನ ಮನೆಯ ಮುಂದೆ ನಭದೊಳ್ ನಲಿನಲಿದಾಡುವ ಜಂತ್ರದ ಮಿಾನನೆಚ್ಚನುಮಾಕೆಗೆ ಗಂಡನಕ್ಕುಂ (ಪಂಪಭಾ. ೩-೩೨ ಪ). ೨. ಬಹಳ ಸಂತೋಷಪಡು, –ಹಿಗ್ಗು : ಜಾಲಗಾಱನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಯ ಕೊಂದು ನಲಿನಲಿದಾಡುವ (ಮಹಾದೇ. ಬ. ೪೬-೧೦೯) ; ಆನಂದದಿಂದ ನಲಿನಲಿದಾಡುವೆ (ಬಸವ. ೩೭೭).

[ದೇ.ಕಿ ತುಳು. ಕೊಡ. ನಲಿ; ಕುರುಖ್. ನಲ್ನಾ]

ನಲಿ₂, ನಳಿ₄ (ನಾ). ಒಂದು ಬಗೆಯ ಸುಗಂಧ ದ್ರವ್ಯ : "ನಳಿಯೆಂಬ ಗಂಧ-ನಟಿ, ನಲಿ" (ನಾಚಿರಾ. ಕಿ) ; "ಸುಷಿರಾ, ವಿದ್ರುಮಲತಾ, ಕಪೋ ತಾಂಘ್ರಿಃ, ನಟಿಃ, ನಲೀ, ಧಮನೀ, ಅಂಜನಕೇಶೀ – ೭ ನಳಿ ಎಂಬುವ ಗಂಧದ್ರವ್ಯದ ಹೆಸರುಗಳು ; ಗೂಪಗುತ್ತಿಗೆ" (ಸಿದ್ಧಾಂತಿ. ೧೨೪). ನಳಿ₄ : ಮೇಲಿನ ಪ್ರಯೋಗಗಳನ್ನು ನೋಡಿ. [ಸಂ. ನಲೀ]

ನಲಿಗಚ್ಚು 'ನಲಿಗರ್ಚು₂' ನೋ.

ನಲಿಗರ್ಚು₁ (ಕ್ರಿ). ಪ್ರೀತಿಯಿಂದ ಕಚ್ಚು : ಆ ಶುಕಶಿಶುಪ್ರಕರಚಂಚೂಪುಟ ಸಂಚಯಮಂ ಚೂತಕಳಿಕಾಕುಳಮೆಂದು ನಲಿಗರ್ಚಲೆಂದವ್ವಳಿಪ ಕಲ ಕಂಠಜಾಲಕಂಗಳುಂ (ಕುಸುಮಾ. ೨-೭೧ ಪ) ; ಕಳಿಕೆಗಳಂ ಪಿಕಾಳಿ ನಲವಿಂ ನಲಿಗರ್ಚುತುಮುನ್ಮದಾಳಸಂಕುಳಮಲರ್ಗೊಂಚಲಂ ತುಡುಕುತಂ ತನಿವಣ್ಗಳ ಸಾರಮಂ ಶುಕಾವಳಿ . . . ಪೀರುತುಂ ವಿಳಸಿತ ಚುಂಬ ನಾಭಿನಯಮಂ ನೆಱೆ ತೋರ್ಪವೊಲಿರ್ದುದಾಮ್ರದೊಳ್ (ಕುಸುಮಾ. ೫-೮೯). [ನಲಿ₁ + ಕರ್ಚು₁]

ನಲಿಗರ್ಚು₂, ನಲಿಗಚ್ಚು (ನಾ). ಪ್ರೀತಿಯಿಂದ ಕಚ್ಚಿದುದು ; ದಂತಕ್ಷತ : ನಲಿಗರ್ಚುಂ ನಖರೇಖೆಯುಂ . . . ಮೆಯ್ದೋಱೆ ರತಾಲಯಾಂಗಣದೊ ಳೊರ್ವಳ್ ನೀಱೆ . . . ನಿಂದಿರ್ದಳ್ (ಸೂಕ್ತಿಸು. ೧೪-೭೪). ನಲಿಗಚ್ಚು : ನಲಿಗಚ್ಚು ಕಚ್ಚಿ ಕುಡಿಯಾಗಡೆಯಾಳನೆ ಸೀಳ್ದು ಸಿಱುಂಬಳಾಡದಂಟದೆ ನೆಱನೆಂದು ಭಾವದೊಳೆ ಬಳ್ಕುವ ಸೋಂಬೆಯನಿಕ್ಕು ಕಿಚ್ಚಿನೊಳ್ (ಸೂಕ್ತಿಸು. ೮-೪೩೪). [< ನಲಿಗರ್ಚು₁]

ನಲಿಗಱೆ (ನಾ). ಪ್ರೀತಿಯಿಂದ ಕಚ್ಚಿದುದರ ಕಲೆ ; ದಂತಕ್ಷತದ ಗುರುತು : ನುಂಗಿಯುಗುಟ್ಟಬಲೆಯರ ದಶನಂಗಳ ನಲಿಗಱೆಗಳಲ್ಲದೆಳ್ಳಿ ಕ್ಕಲ್ಕಿಲ್ಲಂಗಮೆನೆ ಸಂದ ಸೊಬಗಿನ ಜಂಗಮಶಾಸನಮೆನಿಷ್ಟ ಸುರತವಿಳಾಸಂ (ಅನಂಪು. ೧-೫೯). 'ನಲಿಗರ್ಚು₂' ಪರಾ. [ನಲಿ₁ + ಕಱೆ₂]

ನಲಿಗೆದಱು (ಕ್ರಿ). ಸಂತೋಷದಿಂದ ಕೆದಕು,–ಬೆದಕು : ಕದಲೆಗದಿರನುರ ದಿನುರವಣಿಸಿ ನೆತ್ತಿಯಿಂ ಪೊತ್ತು ನೆಗೆದು ಚಂಚುವಿಂ ಚಲ್ಲೆವೊಯ್ದು ನಖದಿಂ ನಲಿಗೆದಱೆ ಕೋಡಗಱೆಯನಿಡಿಱೆದು (ಅನಂಪು. ೭-೮೦ ಪ).

[ನಲಿ₁ + ಕೆದಱು₁ (< ಕೆದಱ್₁)]

ನಲಿತ (ನಾ). ನಲಿಯುವಿಕೆ ; ಕುಣಿದಾಟ : ಒಲೆತ, ಅಲೆತ, ನಲಿತವೊ ! ಎಲ್ಲಿ ಇದನು ಕಲಿತವೊ ? (ಸೂರ್ಯಪಾ. ೧೧೨-೧೧). [ನಲಿ$_1$ + – ತ$_2$]

ನಲಿನ, ನಳಿನ (ನಾ). ೧. ತಾವರೆ; ಕಮಲ. ೨. ನೀರು ಹೂವು ; ಆವಲು. ೩. [ಜೈನ] ಕಾಲವನ್ನು ಅಳೆಯುವ ಒಂದು ಪ್ರಮಾಣ : ಇದೇ ರೀತಿ ಎಂಬತ್ತುನಾಲ್ಕು ಮತ್ತು ಎಂಬತ್ತುನಾಲ್ಕುಲಕ್ಷ ಗುಣಿತ ಕ್ರಮದಿಂದ ಕುಮುದಾಂಗ ಮತ್ತು ಕುಮುದ, ಪದ್ಮಾಂಗ ಮತ್ತು ಪದ್ಮ, ನಲಿನಾಂಗ ಮತ್ತು ನಲಿನ . . . ಎಂಬಿವು ಕ್ರಮದಿಂದ ಆಗುತ್ತವೆ (ಜೈನಪ. ೩೦೬). **ನಳಿನ :** ೧. "ಸಹಸ್ರಪತ್ರಂ, ಶತಪತ್ರಂ . . . ಅಬ್ಜಂ, ನಳಿನಂ, ಪುಷ್ಕರಂ, ರಾಜೀಪಂ, ಅರವಿಂದಂ, ಪದ್ಮಂ, ಪಂಕಜಂ–ಈ ೧೭ ತಾವರೆ" (ಹಲಾಯು. ೧೧೨-೫೭) ; ವಿಜೃಂಭಮಾಣ ನವನಳಿನಪರಿಕರಾಕೃಷ್ಟಮಧುಕರ ರಮಣೀಯ. . . ಧರಾತಳಮನುತ್ಫುಲ್ಲ ಪಲ್ಲವ ಲೀಲಾಯಮಾನ ಮತ್ತ ಕೋಕಿಲೋಲ್ಲಾಸಿತ ಶೀಕರೋದ್ದಾಮ ದುರ್ದಿನ ವನಮನೆಯ್ದೆವಂದು (ಪಂಪಭಾ. ೫-೧೦ ವ) ; ಅವನತಾರಾತಿನೃಪ ಮಣಿಮಯ ಕಿರೀಟಪ್ರಭಾಲೀಢ ಚಳನನಳಿನಯುಗ್ಮಂ (ಸುಕುಮಾ. ೧-೬೯ ವ) ; ನಳಿನದ ಕರ್ಣಿಕೆಯೊತ್ತಿನೊಳ ಳವಡೆ ಕಣ್ಮುಚ್ಚಿ . . . ನಿದ್ರಾಸುಖದಿಂ ಕಳಹಂಸೆಯ ಮಱಿಗಳಿರ್ಪುವು (ಗಿರಿಕ. ೨-೫೫) ; ನಳಿನಂ ಕುಂದೆ . . . ಮೂಡಿದುದು ತೇಜೋಮಂದಿರಂ ಚಂದಿರಂ (ರಾಜಶೇ. ೧೧-೪೩). [ಸಂ.]

ನಲಿನಗರ್ಭ, ನಳಿನಗರ್ಭ (ನಾ). ಕಮಲದಲ್ಲಿ ಹುಟ್ಟಿದವನು ; ಬ್ರಹ್ಮ. 'ನಲಿನಗರ್ಭಾಂಡ' ಪರಾ **ನಳಿನಗರ್ಭ :** 'ನಳಿನಗರ್ಭಾಂಡ' ಪರಾ.

[ನಲಿನ + ಗರ್ಭ]

ನಲಿನಗರ್ಭಾಂಡ, ನಳಿನಗರ್ಭಾಂಡ (ನಾ). ಬ್ರಹ್ಮಾಂಡ ; ವಿಶ್ವ : ನಲಿ[ಪಾಠಾಂ. ೪]ನಗರ್ಭಾಂಡಂಗಳೆಂಬಗ್ಗಳದ ಘಟಸಳಶಾದಿಗಳೊಳಗೆಪಲತೆಱದ ಪಕ್ವಾನ್ನ ದಿವ್ಯಾನ್ನಂಗಳಂ ತೀವಿ (ಬಸಪು. ೮-೩೭). **ನಳಿನಗರ್ಭಾಂಡ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ನಲಿನಗರ್ಭ + ಅಂಡ$_2$]

ನಲಿನಜ, ನಳಿನಜ (ನಾ). = ನಲಿನಗರ್ಭ. **ನಳಿನಜ :** ನಳಿನಜ ಹರಿ ವಾಸವ ನತಪದಪಂಕರುಹ ನವಿ ತ ಶುಭವಾಸಂ . . . ಗಳಿಲನೆ ಜಗಮಂ ಸಲಹುಗೆ ಸಲೆ ತೋಂಟದ ಗುರು ನಿರುತವಿಲಾಸಂ (ಹಾಲಾಸ್ಯ. ೨-೧-೨). [ಸಂ.]

ನಲಿನದಲ, ನಳಿನದಳ (ನಾ). ೧. ತಾವರೆಯ ಎಸಳು ; ಕಮಲದ ದಳ. 'ನಲಿನದಲಲೋಚನ' ಪರಾ. **ನಳಿನದಳ :** ೧. 'ನಳಿನದಳಲೋಚನ' ಪರಾ. ೨. ಕಮಲದ ಎಲೆ : ನಳಿನದಳದೊಳ್ ತೀವಿರ್ದಚ್ಛಾಂಬು ತಳ್ತಲರ್ವಾಸು . . . ಪೂಗಂಪು ರಾಗದಲಂಪನಗ್ಗಳಿಸೆ (ಪುಷ್ಪಪು. ೨-೪೩). 'ನಳಿನದಳಪುಟ' ಪರಾ. [ನಲಿನ + ದಲ]

ನಲಿನದಲಲೋಚನ, ನಳಿನದಳಲೋಚನ (ನಾ). ತಾವರೆಯ ಎಸಳಿನಾಕಾರದ ಕಣ್ಣುಳ್ಳವನು ; ವಿಶಾಲಾಕ್ಷ ; ಕೃಷ್ಣ : ಸುಧನ್ವನ ಶಿರವ ನೆರಡುಕೈಗಳಿಂ ನಲಿನದಲ[ಪಾಠಾಂ. ನಳಿನದಳ]ಲೋಚನಂ ಪಿಡಿದೆತ್ತಿಕೊಂಡು ನೋಡಿದು (ಜೈಮಿಭಾ. ೧೩-೫೧). **ನಳಿನದಳಲೋಚನ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ನಲಿನದಲ + ಲೋಚನ]

ನಲಿನನಾಭ, ನಳಿನನಾಭ (ನಾ). ಹೊಕ್ಕುಳಲ್ಲಿ ತಾವರೆಯುಳ್ಳವನು ; ಪದ್ಮನಾಭ ; ವಿಷ್ಣು : ನಲಿ[ಪಾಠಾಂ. ೪]ನನಾಭನ ಮಗನ ಕೂರ್ಗಣೆಗಳ ನನುಂಬಿ ತೊಳತೊಳಗುವವು . . ವಿಶಾಲವಿಲೋಚನದ್ವಯವು (ಬಸಪು. ೪-೨೬) **ನಳಿನನಾಭ :** ನಳಿನನಾಭನ ಮಧುರವಾಣೀಲುಳಿತಪರ ಮಾಶೀರ್ವಚನಪರಿಕಲಿತ ಕವಚಿತಕಾಯ ಪಾಂಡವರಾಯ ಹೊಱಪಂಟ (ಕುಮಾಭೀ. ೮-೩) ; ನಳಿನನಾಭನ ನೀನು ಪಾಡೊ ಬೇಗ ಒಳಕಣ್ಣಿಂದ ಅವನ ಕಂಡು ನಲಿದಾಡೊ (ಪುರಂದ. ೨-೨೦೯ ಪಲ್ಲವಿ).

[ಸಂ. (ನಲಿನ + ನಾಭಿ + –)]

ನಲಿನಬಾಂಧವ (ನಾ). ತಾವರೆಯ ಮಿತ್ರ ; ಸೂರ್ಯ.

[ನಲಿನ + ಬಾಂಧವ]

ನಲಿನಭವ, ನಳಿನಭವ (ನಾ). = ನಲಿನಗರ್ಭ. 'ನಲಿನಭವಾಂಡ' ಪರಾ. **ನಳಿನಭವ:** ಆಕ್ಷಣ ನಳಿನಭವ ತಾನಂದು ಕೊಟ್ಟನು ಕಶ್ಯಪಾತ್ಮಜನೆಂದ ವರಗಳ (ಸಂಭಪ. ೮-೧೦) ; ಆ ನಳಿನಭವ ಶಂಕರರ ಸುಯ್ದಾನವಾಯ್ತಾ ಸಕಲ ವಾನರಸೇನೆಗಿಂದ್ರಾದಿಗಳು ಸೇವಕರಾಯ್ತು ಪಯಣದಲಿ (ತೊರರಾ. ೬-೬-೯) ; ಹರಿಹರ ನಳಿನಭವರಾರಾಜ್ಞೆಯಿಂ ಲಯ ಸೃಷ್ಟಿಗೈಯುವರು (ಗಗತಾ. ೧೨-೬೯). [ಸಂ.]

ನಲಿನಭವಾಂಡ, ನಳಿನಭವಾಂಡ (ನಾ). = ನಲಿನಗರ್ಭಾಂಡ : ಅವಿರ್ಭವಿಸಿ ನಲಿ[ಪಾಠಾಂ. ೪]ನಭವಾಂಡನಿಚಯಮನುರುಪುತುರವಣಿಸಿ ಕವಿದ ವಿಷಮಂ ನುಂಗಿದನು ಮಾಪ್ರವರನೆನಲು (ಬಸಪು. ೧೩-೨). **ನಳಿನಭವಾಂಡ :** ರಾಘವನನುಜನಗ್ಗದ ಜಾಪಮೌರ್ವೀನಿನದವನು ನೆಗಹಿದನು ನಳಿನಭವಾಂಡ ಗುಮ್ಮಿಡಲು (ತೊರರಾ. ೬-೪೩-೯). [ನಲಿನಭವ + ಅಂಡ$_2$]

ನಲಿನಮಿತ್ರ (ನಾ). = ನಲಿನಬಾಂಧವ. [ನಲಿನ + ಮಿತ್ರ]

ನಲಿನಮುಖಿ, ನಳಿನಮುಖಿ (ನಾ). ಕಮಲದಂತೆ ಮುಖವುಳ್ಳವಳು ; ಚೆಲುವೆ : ತನ್ನಿನಿಯನಂ ನೋಡಿ ನಲಿ[ಪಾಠಾಂ. ೪]ನಮುಖಿ ನಗುತಂ (ಬಸಪು. ೪೭-೨೩). **ನಳಿನಮುಖಿ :** ನಳಿನಮುಖಿಯರ ಸಕಲ ಸೃಷ್ಟಿಗೆ ಕಳಸವಿದು (ಕುಮಾಅ. ೧೩-೨೩) ; ಚೆಲುವೆಯೋರ್ವಳು ಬಂದು ಹೊಳೆಯೊಳಗೆ ಈಜಾಡಿ ನಲಿವುದನು ನೋಡಿ ನಳಿನಮುಖಿಯನು ಮೇಲೆ ಕರೆಸಲು (ಪುರಂದ. ೩-೧೫೦-೩). [ಸಂ. ನಲಿನಮುಖೀ]

ನಲಿನಲೋಚನೆ, ನಳಿನಲೋಚನೆ (ನಾ). ತಾವರೆಯೆಸಳಿನಂತೆ ಕಣ್ಣುಳ್ಳವಳು ; ಸುಂದರಿ : ನಲಿ[ಪಾಠಾಂ. ೪]ನಲೋಚನೆಯನೊರ್ವಳನೊಸೆದು ಮಿಗೆ ಕೊಟ್ಟ (ಬಸಪು. ೨೫-೯). **ನಳಿನಲೋಚನೆ:** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ. ನಲಿನಲೋಚನಾ]

ನಲಿನವೈರಿ, ನಳಿನವೈರಿ (ನಾ). ತಾವರೆಯ ಶತ್ರು ; ಚಂದ್ರ : (ಕಿ). **ನಳಿನವೈರಿ :** ನಳಿನವೈರಿಯ ಸುಳಿವು ತನ್ನಯ ಕೊಲೆಗೆ ಒಂದುದು (ಕುಮಾವಿ. ೨-೫೨). [ನಲಿನ + ವೈರಿ]

ನಲಿನಸಂಭವ, ನಳಿನಸಂಭವ (ನಾ). = ನಲಿನಗರ್ಭ : ನಲಿ[ಪಾಠಾಂ. ೪]ನ ಸಂಭವಲಿಖಿತದುರ್ಲಿಪಿಗಳನೊರಸಿ (ಬಸಪು. ೪೯-೩೨). **ನಳಿನಸಂಭವ :** ಕೃಪಾಳುವನೊಲಿದು ಹೊಗಳಿದನಜನು ವೇದಸಹಸ್ರಸೂಕ್ತದಲಿ ಬಳಿಕ ಕಾರುಣ್ಯದಲಿ ನಾಭೀನಳಿನದಲಿ ತೆಗೆದನು ವಿರಿಂಚಿಗೆ ನಳಿನಸಂಭವನೆಂಬ ಹೆಸರಾಯ್ತಂದು ಮೊದಲಾಗಿ (ಕುಮಾಅ. ೦೪-೩೦). [ನಲಿನ + ಸಂಭವ]

ನಲಿನಸಖಿ, ನಳಿನಸಖಿ (ನಾ). = ನಲಿನಬಾಂಧವ : ಘನಜಿನಭವನವದು ನಲಿ[ಪಾಠಾಂ. ೪]ನಸಖನುದಯಕ್ಕೆ ಮುನ್ನವೆ ಗೋಡೆಗಳುವೆರಸಿ ನೆಲನ ಸರಿಸಕೆ ಬಿದ್ದು (ಬಸಪು. ೫೨-೩೨). **ನಳಿನಸಖಿ :** ನಳಿನಸಖಕೋಟಿತೇಜವ ಮಿಱಿತೆಂಬವನ ಚರಣಾಂಬುಜಕ್ಕೆ ಶರಣು (ಲಶಿಚಿಂ. ೧೦-೭) ; ನಳಿನಸಖ ನಪರಾಂಬುರಾಸಿಯ ನಿಲುಕುತ್ತೈದನೆ ಹಸಿದುದೀ ಮುನಿಬಳಗವಾರೋಗಣೆಗೆ ಚಿತ್ತವಿಸೆಂದ ಯಮಸೂನು (ಕುಮಾಅ. ೦೬-೪೭).

[ಸಂ. (ನಲಿನ + ಸಖಿ + –)]

ನಲಿನಾಂಗ (ನಾ). [ಜೈನ] ಕಾಲವನ್ನು ಅಳೆಯುವ ಒಂದು ಪ್ರಮಾಣ : ಇದೇ ರೀತಿ ಎಂಬತ್ತುನಾಲ್ಕು ಮತ್ತು ಎಂಬತ್ತುನಾಲ್ಕುಲಕ್ಷ ಗುಣಿತ ಕ್ರಮದಿಂದ ಕುಮುದಾಂಗ ಮತ್ತು ಕುಮುದ, ಪದ್ಮಾಂಗ ಮತ್ತು ಪದ್ಮ, ನಲಿನಾಂಗ ಮತ್ತು ನಲಿನ . . . ಎಂಬಿವು ಕ್ರಮದಿಂದ ಆಗುತ್ತವೆ (ಜೈನಪ. ೩೦೬). [ನಲಿನ + ಅಂಗ$_2$]

ನಲಿನಾಕ್ಷ, ನಳಿನಾಕ್ಷ (ನಾ). ೧. ತಾವರೆಯ ಎಸಳಿನಂಥ ಕಣ್ಣುಳ್ಳವನು ; ಚೆಲುವ ; ಸುಂದರ. ೨. ವಿಷ್ಣು ; ಕೃಷ್ಣ : (ಕಿ). **ನಳಿನಾಕ್ಷ :**

೨. ನಳಿನಾಕ್ಷನ ಪದಪದ್ಧತಿಗಳ ಬಟಿಯೊಳಲಕ್ತಕಾಂಕ ಪದಪದ್ಧತಿಗಳ್ ಪೊಳೆವುವು (ಜಗವಿ. ೫-೨೬) ; ನಳಿನಾಕ್ಷ ನಿನ್ನ ಮಱೆಯ ಹೊಕ್ಕು ತಪಿಸಲು ಒಲಿದು ಧ್ರುವಗೆ ನಿಜಲೋಕವಿತ್ತವನು (ಪುರಂದ. ೨-೦೦೯-೩) ; ನಳಿನಾಕ್ಷನಿಲ್ಲದಧ್ವರಕುಪಕ್ರಮಿಸೆ ನಡೆಯದು (ಕೃಮಿಭಾ. ೨-೪೫).

[ಸಂ. (ನಲಿನ + ಅಕ್ಷಿ + –)]

ನಲಿನಿ, ನಳಿನಿ (ನಾ). ೧. ತಾವರೆ ; ಕಮಲ. ೨. ತಾವರೆಗಳಿಂದ ತುಂಬಿರುವ ಕೊಳ ; ಕಮಲಗಳು ಹೆಚ್ಚಾಗಿ ಇರುವ ಸ್ಥಳ. ೩. ತಾವರೆಯದಂಟು, –ನಾಳ. **ನಳಿನಿ :** ೧. ನಳಿನಿಯ ಬಿರಿಮುಗುಳೊಳ್ಪಾಯ್ದಳಿಕಳಭಂಬೆಂಡು ನೆಗೆದು ಬಂಡುಣ್ಬವೊಲ್ . . . ಯಶೋದೆಯ ಮೊಲೆಯುಂಡಂ ನವತಮಾಲಕೃಷ್ಣಂ ಕೃಷ್ಣಂ (ಅರ್ಧನೇ. ೬-೫೫); ನಳಿನಿಯನಪ್ಪಿ ತುಂಬಿಗುರುಳಂ ನೆಱೆ ನೇರ್ಪಡೆ ತಿರ್ದಿ . . . ಅದೇಂ ಸುಳಿದುದೊ ಮೆಲ್ಲನಾಳ್ದವೊಲತಿಶ್ರಮಮಂ ವನಮಂದಮಾರುತಂ (ಶಬಶಂ. ೦-೫೩). ೨. ನಳಿನೀತೀರಲತಾಗೃಹಂಗಳ ನೆಟಲ್ ನೇರ್ಪಟ್ಟಿರಲ್ ಪಟ್ಟು . . ಪಥಾರ್ತರಿರ್ಪರ್ (ಜಗವಿ. ೯-೮೮). ೩. ನಳಿನಿಯ ನಳಿನಮನಿನನಾಕಳಿಪಂತಿರೆ ಕರದೆ ವಧುವ ಕರಮಂ ಕರದಿಂ ತಳೆದಂ ಕುಮಾರನಾರ್ದ್ರಾಂಗುಳಿದಳಕಂಟಕಿತಬಾಹುನಾಳಾನ್ವಿತಮಂ (ಚಂದ್ರಪು. ೬-೭೪). ೪. ತಾವರೆಯ ಗಡ್ಡೆ : "ಕಂದಃ, ಬಿಸಿನೀ, ನಳಿನೀ – ಈ ೩ ಅವಱ ಗೆಡ್ಡೆ" (ಹೆಲಾಯು. ೦೦೨-೬೦).

[ಸಂ. ನಲಿನೀ]

ನಲಿನೀಮಿತ್ರ, ನಳಿನೀಮಿತ್ರ (ನಾ). =ನಲಿನಬಾಂಧವ: ಸರೋಜಾಸನಂ ನಲಿ [ಬಾಣಾಂ. ೪]ನೀಮಿತ್ರ ಸುಪರ್ವರೆಂಬಿವು ವಿವಸ್ವಂತಾಹ್ವಯಂ (ಸಾನಾರ. ೦೧೦) . **ನಳಿನೀಮಿತ್ರ :** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ಸಂ.]

ನಲಿಪ (ನಾ). ಸಂತೋಷ ; ಆನಂದ ; ಉಲ್ಲಾಸ : ಕುಟುಕಿನಿಂದಾಹಾರಮಂ ಸ್ಥಾನದಿಂ ನೆಲೆಯಂ ಕೂಟಮಂ ನಲಿಪದಿಂದಂ ನಲ್ಮೆಯಂ ಗೆಲ್ಲದಿಂ ಗೆಲವಂ . . . ಪೇಟಿಲ್ಲಿಯುಂ ತದ್ವಿದಂ (ಲೋಕೋಪ. ೦೨-೭). [ನಲಿ$_1$ + –ಪ$_2$]

ನಲಿಬಾಳು (ನಾ). ಸುಖಮಯವಾದ ಜೀವನ ; ಸಂತೋಷದ ಬದಂಕು : ಕಂಡೊರೆ ನುಂಗುವ ಜವನನ್ ಕಂಡರ್, ಈ ನಲಿಬಾಳನ್ ಕಡೆ ಬೀಳ್ಕೊಂಡರ್, ಬಯಲಾದರ್ (ಪಾರಸಿ. ೩೭-೮೫೪).

[ನಲಿ$_2$ + ಬಾಳು$_2$ (<ಬಾಟ್$_2$)]

ನಲಿಯಿಸು, ನಲಿಸು (ಕ್ರಿ). ೧. ಸಂತೋಷಗೊಳಿಸು ; ಉಲ್ಲಾಸಗೊಳಿಸು : ಆ ವಿಶ್ವೇಶ್ವರನ ಮನೋಮಧುಕರಮಂ ತಮ್ಮ ಮುಖಾರವಿಂದದೊಳ್ ನಲಿಯಿಸಿಯುಂ (ಅದಿಪು. ೮-೨೪ ವ) ; ಶ್ರೀಯೆರ್ದೆಗೊಂಡಿರೆ ಮುನ್ನಿಟಿದಾಯೆಳೆಯ ನೆಗಪಿ ದಾಡೆಯಿಂ ನಲಿಯಿಸಿದಾ ಮಾಯಾವರಾಹನಖಿಲಶ್ರೀಯಮನೊಲ್ದೀಗೆ ವೀರನರಪತಿಗೀಗಳ್ (ಚಿಳವಿ. ೪-೦) ; ಈ ವರದ ಕರಮೆ . . . ನಸುಮಲರ್ದ ಲಸಜ್ಜೀವನಜಾತದ ಗರ್ಭದ ಭಾವನೆಯಂ ಬಗೆಗೆ ತಂದು ನಲಿಯಿಕುಮೆಮ್ಮಂ (ಪಸ್ತವಂ. ೮). ೨. ಅರಳಿಸು ; ಪ್ರಫುಲ್ಲಗೊಳಿಸು : ನಲಿಯಿಸುಗೆಯ್ದೆ ಮತ್ಯತಿಕುಮುದ್ವತಿಯಂ ಕಳೆಗುಂದದಾವಗಂ ನಲುಗದೆ . . . ಕಂದನಾನದೀ ಬಲಮುರಿಸುಕುಮೆಯ್ಯಮರೆ ಮೈಮೆಯನಾಂತ ನವೀನಚಂದ್ರಮಂ (ಚಿಳವಿ. ೦-೭). **ನಲಿಸು :** ೧. ಮಿತ್ರಂ ಮದಯತಿಗೆಳೆಯನಂ ನಲಿಸಿದಪಂ(ಕಾಶಕ್ಕ. ೧-೫೩). [ನಲಿ$_1$ + – ಇಸು$_3$]

ನಲಿವರಿ (ಕ್ರಿ). ಹಿಗ್ಗಿನಿಂದ ಓಡಾಡು ; ಸಂತೋಷದಿಂದ ಓಡಾಡು ; ಸಡಗರಿಸು : ಪಲದಿವಸಕ್ಕೆಂತಾನುಂ ಕಲಹಂ ದೊರೆಕೊಂಡುದೆಂದು ಕೆಲಬರ್ ಬಿಲ್ಲಂ ಗೊಲೆಗೊತ್ತಿ ತೀವಿ ತೆಗೆದೇಂ ನಲಿವರಿದುದೊ ಜವನದೂತರೆನಿಸಿ ಕಿರಾತರ್ (ಪಂರಾಮಾ. ೪-೫೭) ; ಸಿರಿಸದ ಬಾಸಿಗದೊಳ್ ನಲಿವರಿದಾಡುವ ತುಂಬಿಯಂತೆ ಪಾಣ್ಬನ ಕಣ್ಗಳ್ ಪರಿಮಱಿಯಾಡಿದುವು ತನೂದರಿಯ . . . ದೋರ್ವಲ್ಲರಿಯೊಳ್ (ಪಂರಾಮಾ. ೯-೮೦) ; ನಲಿವರಿದು ನವೀನಮೆನಲ್ ಜಲಜಾಕ್ಷನ ಮುಂದೆ ಕುಣಿದು (ಮಜಾನೇ. ೬-೬೪) ; ಮೆಲ್ಪು(ಳ್ಪು)ವಡೆದತಿವ್ಯಾಲತೆಯಿಂದೊಂದಿ ನಲಿವರಿದು ಬಲವರ್ಪಂದಾ ಮಱಿಗೆರಡು ತಿಂಗಳ್ (ಅಕ್ಕಶಾ. ೫-೪). 'ನಲವರಿ' ಪರಾ.

[ನಲಿ$_1$ + ಪರಿ$_2$]

ನಲಿವಾಱಿಸು (ಕ್ರಿ). ಸಂತೋಷದಿಂದ ಹಾರಾಡುವಂತೆ ಮಾಡು : ಮದನದವಾಗ್ನಿತಪ್ತೆಯರ ಸುಯ್ಯ ನಖಂಪಚಮಾಗಿ ಬರ್ಪ ತಣ್ಗದಿರನೆಲರ್ಚಿ ಚಂಚುವಿನೊಳ್. . . ಉತ್ಪಲಾಗ್ರಪತ್ರದ ಮೊಗೆದೂಡಿಪಾಡಿ ನಲಿವಾಱಿಸಿ ತೋಱಿಸಿ ಸೋಂಕಿ ನೂಂಕಿ ಕೌಮುದಿಯೊಳದೇಂ ಚಕೋರಿ ಹಿಳ ಗಾಡಿಸಿದತ್ತೊ ನಿಜಾಗ್ರಶಾಬಮಂ (ಅನಂಪು. ೭-೮೧).

[ನಲಿವಾಱು$_1$ + – ಇಸು$_3$]

ನಲಿವಾಱು$_1$ (ಕ್ರಿ). ಹಿಗ್ಗಿನಿಂದ ಮೇಲಕ್ಕೆ ಹಾರು ; ಸಂತೋಷದಿಂದ ಹಾರಾಡು ; ಆನಂದದಿಂದ ಏರು : ಇರ್ಪೋಡಿದ ಚಂಚುವಂ ತೆಱೆದೆಱಂಕೆ ನೆಱಲ್ದಿರೆ ಕಂಠನಾಳಮಂ ನೀಡಿ ವಿಯತ್ತಲಕ್ಕೊಗೆದು ಕಾರಮುಗಿಲ್ವನಿಯಂ ಮನಂ ಕುಳಿರ್ಗೋಡುವಿನಂ ಕರ್ದುಂಕಿ ನಲಿವಾಱಿದುವಾಱಿದುವಂದುಚಾತಕಂ (ಪಂರಾಮಾ. ೬-೧೪೭) : ಇಂತಿದು ಗಗನಕ್ಕೆ ನಾಡೆ ನಲಿವಾಱಿದದೊಂದು ಕಪೋತಮಂತುಮಲ್ತಿದು ಪರಿದಿರ್ದ ಪಾವಸೆ ಮುಗಿಲ್ಮುಱಿಯೆಂಬಿನಮಿಂಬುಗೆಟ್ಟು ಕಂದಿದ ಪಟಗಂಚುಗನ್ನಡಿವೊಲೇನಿಟಿದಾದುದೊ ಚಂದ್ರಮಂಡಲಂ (ಚಂದ್ರಪು. ೯-೫) ; ಚಕೋರಮಯೂರ ರಥಾಂಗ ಭೃಂಗಮಂಡಳಿ ನಲಿವಾಱಿದಪ್ಪುವು ತರಂತರದಿಂದೆನಿಸಿತ್ತು ಕಣ್ಗೆ (ವರ್ಧಪು. ೫-೨೮). [ನಲಿ$_1$ + ಪಾಱು$_1$]

ನಲಿವಾಱು$_2$ (ನಾ). (ಹಕ್ಕಿಗಳ) ಸಂತೋಷದ ಹಾರಾಟ ; ಸಂಭ್ರಮದ ಹಾರಾಟ. 'ನಲಿವಾಱುವಾಱು' ಪರಾ. [ನಲಿ$_1$ + ಪಾಱು$_2$]

ನಲಿವಾಱುವಾಱು (ಕ್ರಿ). ಸಂತೋಷದಿಂದ ಹಾರಾಡು ; ಉಲ್ಲಾಸದಿಂದ ಹಾರಾಡು: ಒಸಗೆಗಳಂದು ಬಿಟ್ಟ ಶುಕಶಾರಿಕೆಗಳ್ ನಲಿವಾಱುವಾಱಿ ರಾಗಿಸಿದವಿ ತಾರಿನಾಮ ಪರಿಪಾಱಿಯನೋಳಿಯಿನೋದೆ ಕೇಳ್ದು (ಶಾಂತಿಪು. ೨-೪೮). [ನಲಿವಾಱು$_2$ + ಪಾಱು$_1$]

ನಲಿವು (ನಾ). ಹಿಗ್ಗು ; ಸಂತೋಷ ; ಆನಂದ : ನಿನ್ನ ಸುಖವೇ ಸುಖಂ ನಿನ್ನ ನಲಿವೇ ನಲಿವು (ಪಂಬಿರ. ೦-೭೧); ಮೃಗೀಬಾಳಕಜಾಲದೊಳ್ ನಲಿವಿನಿಂ ನೆಗೆದಾಡುತುಂ (ಪುಷ್ಪಪು. ೩-೯೭) ; ಪಲವುದಿನಂ ಮನಂ ಬಯಸಿ ಕಯ್ವಿಡಿದಂಗನೆಯಂಗಸಂಗದಿಂ ನಲಿವನನಾರತಂ ಪಡೆದು ರಾಜ್ಯಸುಖಂ ಸತತಂ ಸಲುತ್ತಿರಲ್ (ನಳಚಂ. ೪೮೮) ; ನಲಿವು ಮಿಗೆ ತಾನವರಡಿಗಳಂ ತೊಳೆದು ಮಂದಿಸುವೆಡೆಯೊಳು (ಬಸಪು. ೫೭-೩೩); ನಲಿವು ಹಿಂಗಿದ ತಾಯ ಕಂಗಳ ಜಲವ ಸೆಱಗಿನೊಳೊರಸಿದನು (ಕುಮ್ಯಾಧ್ರೋ. ಓರಿಇ. ಪರಿ. ೨೭೮) ; ನೋವು, ನಲಿವುಗಳು ಪರಮಾತ್ಮನ ಇಷ್ಟವೆಂದು ತಿಳಿಯುತ್ತದೆ (ಧರ್ಮಸಾ. ೮೬). 'ನಲವು' ಪರಾ. [ನಲಿ$_1$ + – ವು]

ನಲಿಸು 'ನಲಿಯಿಸು' ನೋ.

ನಲುಗಂಟಿ (ನಾ). ಜಾನುವಾರಂಗಳ ಮೇಲೆ ಹಾಕುವ ಒಂದಂ ಬಗೆಯ ಸಣ್ಣ ತೆರಿಗೆ : ಉಗ್ರಾಣ ಪರಿಧಾನ ಬೆಡುಂಗೊಳು ಚಳಾಯ ದಾಯದೆಱೆ ಹಡುವರ ಬೀರವಣ ನಲ್ಲೆತ್ತು ನಲುಗಂಟಿ ನಲ್ಲಾವು ದಣ್ಣಾಯ ತವುಡೆಯೊಳಗಾದ ಸಮಸ್ತ ಕಿಱುಕುಡುವೆಲ್ಲವಂ . . . ಧಾರಾಪೂರ್ವ್ವಕಂ ಮಾಡಿ (ಎಕ. V, ಬೇಲೂರು. ೫೯-೮೭ ; 1117). [<ನಲ್ + ಗಂಟಿ$_1$]

ನಲುಗಿಡು (ಕ್ರಿ). ಅರಿಸಿನ, ಕುಂಕುಮ ಮುಂತಾದುವುಗಳಿಂದ ಪಾದದ ಮೇಲೆ ಚಿತ್ರವನ್ನು ರೇಖಿಸು : ದಿನಾಂತದಲಿ ನದಿಯ ದಂಡೆಯನ್ನು ನಾವ್ ಸೇರಿ ಬಿಳಿಮಳಲಮಧ್ಯದಲಿ ನಲುಗಿಟ್ಟುದನ್ನು ತಿಳಿನೀರ ವಾಹಿನಿಯು ಹರಿವುದೊ ನಿಂದಿಹುದೊ ಬಳಿ ಸೇರಿ ಪರಿಕಿಸುವೆವೆಂದು ಹೋದುದನು (ವಿಸೀಗೀ. ೭೯-೦೨). [←ತಮಿ. ನಲಙ್ಕಿಟು]

ನಲುಗಿಸು (ಕ್ರಿ). ೧. ಸುಕ್ಕುಗೊಳಿಸು; ಮುದುರಿಸು; ಮುದುಡು: ಹೂವನ್ನು ಅಷ್ಟು ಗಟ್ಟಿಯಾಗಿ ಹಿಡಿದು ನಲುಗಿಸಬೇಡ (ರೂಢಿ). ೨. ಸೊರಗುವಂತೆ ಮಾಡು; ಕೊರಗಿಸು; ಶೋಷಿಸು: ಈ ರೀತಿಯಲಿ ಮಱುಗುತಲನುದಿನವು ತತ್ಪಾಂಡುನೃಪನಂದನರು ದುಃಖದಿ ರಾಜಭೋಗಂಗಳನು ನೆಱೆ ಬಿಟ್ಟು ತನುವ ನಲ[ಲು]ಗಿಸಿಕೊಂಬರು (ತಿಮ್ಮಕ್ರ. ೩-೧೯); ಒಕ್ಕಲನು ನಲುಗಿಸದೆ ಲೆಕ್ಕವನು ಸಿಕ್ಕಿಸದೆ ಕಕ್ಕುಲತೆಯಿಂದ ನಡೆಯಿಸುವ ಅರಸು ತಾ ಚಕ್ಕಂದವಿರುವ (ಸರ್ವಜ್ಞ. ೭೨೭); ಹೊಟ್ಟೆಗೆ ಹಾಕದೆ ನಲುಗಿಸಿದ್ದಾಳೆ ಅಂತಾ ಸಾರಿಕೊಂಡು ಬಂದಾರು! (ನಿಂದನೆ. ೪೮).

[ನಲುಗು$_1$ + -ಇಸು$_3$]

ನಲುಗು$_1$ (ಕ್ರಿ). ೧. ಸುಕ್ಕುಸುಕ್ಕಾಗು; ಮುದುರು: ಬಟ್ಟೆಯ ಮಡಿ ನಲುಗದಂತೆ ತೆಗೆದುಕೊಂಡು ಬಾ (ರೂಢಿ). ೨. ಅಲ್ಲಾಡು; ಅಲುಗು; ಸ್ಪಂದಿಸು: ಆವೇಶ ಅಂಗಾಂಗ ತುಂಬಿ ನರನರ ನಲುಗಿ ಅಲುಗಿ ಗೊಂದಣ ತಾಂಡವಲಾಸ್ಯ ನೃತ್ಯದಲ್ಲೀ (ಸೂರ್ಯಪಾ. ೪-೦); ಬೇಗ ಬೇಗ ಹೆಜ್ಜೆಹಾಕಿದಾಗ ಎದೆ ನಲುಗಿ ನಲುಗಿ ಕುಬುಸದ ಮಧ್ಯೆಯ ಗುಬ್ಬಿ ಕಳಚಿಹೋಗಿದ್ದಕ್ಕೆ . . . 'ಪಿನ್ನ'ನ್ನು ಹಾಕಿ 'ಫಿಟ್' ಮಾಡಿದಳು (ಹೊಸಕ್ಷಿ. ೪೭). ೩. ಒಯ್ಯಾರ ಮಾಡು; ಬಳುಕು: ಕುಟ್ಟುವ ನೆವದಿಂದ ರಟ್ಟೆಯನು ತಿರುಹುವಳು ನಿಟ್ಟಿಸಿ ನಲುಗಿ ಹಾಡುವಳು ಹಾದರದ ಮೊಟ್ಟೆ ಕಾಣಯ್ಯ (ಸರ್ವಜ್ಞ. ೦೮೪೦); ರತ್ನಾ ಮತ್ತೆ ನಾಚುತ್ತ ನಲುಗುತ್ತ ಎರಡು ವಿಡಾ ತಂದಿಟ್ಟು ಹೋದಳು (ಗಂಮಾಯಿ. ೫೭). ೪. ಕಷ್ಟಕ್ಕೆ ಗುರಿಯಾಗು; ಬಾಡು; ಕಂದು: ಕಾಕಸಂಘಾತದೊಳ್ ಸಿಕ್ಕಿರ್ದ ಕೋಗಿಲೆಯ ಮಱಿಯಂತೆ ನಲುಗಿ ಕತ್ತಲೆಯೊಳಿರ್ದ ಶೀತಳಮರೀಚಿಲಾಂಛನದಂತೆ . . . ಬಾಲಕನಿರ್ದನವರೆಡೆಯೊಳಂಜುತಳುತೆ (ಜೈಮಿಭಾ. ೨೮-೩೧); ಕಳೆಗುಂದದಾವಗಂ ನಲುಗದೆ ವಾಮದೇವನುರಿಗಣ್ಣೆಡೆವಾವುಗಳಿಂ . . . ಕಂದನಾನದೀ ಬಲಮುರಿಸಂಕು ಮೆಯ್ಯಮರೆ ಮೈಮೆಯನಾಂತ ನವೀನಚಂದ್ರಮಂ (ಚಿಕವಿ. ೦-೭); ಒಡೆದ ಕೊಳಲ ಪಾಡ ನೋಡು ಇನ್ನೆಲ್ಲಿದೆ ಸುಗ್ಗಿ ಎಂದು . . . ಮುಗ್ಗಿ ಮುರುಟಿ ನಲುಗಿತು (ನಡಬಂ. ೩೭-೮); ಕಾಯಿ, ತಾಯಿ . . . ನಲುಗಿ, ನಿನ್ನ ನೆರಳ ಸೇರಿ ನಲಿವ ಹೆಣ್ಣನು (ಹೊಂಗಳು. ೦೨-೫). ೫. ಸೊರಗು; ಕೊರಗು; ಕೃಶವಾಗು: ನಲುಗಿದಿರಿ ಹಿರಿದಾಗಿ ಜಡೆ ವಲ್ಕಲ ಫಲಾಶನದಿಂದ . . . ತನ್ನಿಂದಾದುದೀಯಾಪತ್ತು ನಿಮಗೆ (ತೊರರಾ. ೭-೫೫-೬); ನಿರ್ಬಂಧಕಿಕ್ಕಲುರೆ ತಿರಿದುಂಡು ನಲುಗಿದಂ (ಪರಶು. ೧೪-೨೩); ಒಲಿದವರು ಬೇರಾಗಿ . . . ಕೆಲಕಾಲ ನೂಕುವರು, ನಲುಗದೆಯೆ ಕಾಣುವರು (ಇಂಗೀತ. ೫೦-೧೭); ಬಡತನದ ಬವಣೆಯಿಂದ ನಲುಗಿದ್ದ ಬಳಗದ ಗೆಳೆಯರಾರೂ ಹಣ ಕೊಡುವ ಸ್ಥಿತಿಯಲ್ಲಿರಲಿಲ್ಲ (ಜೀವನ. ೨ ಅರಿಕೆ). ೬. ಬಾಗು; ನಮಸ್ಕರಿಸು: ನಾನೇನಾಡಿದೆ ನಾ ನಿನ್ನ ಪಾಡಿದೆ ನಾ ನಿನ್ನ ನೋಡಿ ನಲುಗಿದೆ ಭೈರೂವಾ ಸ್ವಾಮಿಾ ದೊಡ್ಡವನೆಂದು ಮಾರೀ ಬಿದ್ದೆ (ಹುಟ್ಟಿಹ. ೦೧೦).

[ದೇ.॥ ತಮಿ. ನಲಙ್ಕು, ನಲಕ್ಕು =ಮುದುಡಿಸು; ತುಳು. ನಲಗು; ತೆಲು. ನಲುಗು, ನಲಗು, ನಲಿಯು,]

ನಲುಗು$_2$ (ನಾ). ಹಾಡುವಾಗ ಧ್ವನಿಯನ್ನು ನಡುಗಿಸುವುದು; ಕಂಪನ; ಪಲುಕು: ಚಿಕ್ಕಪುಟ್ಟ ಕಲಹಗಳು ಬಾಳಿನ ಏಕತಾನಕ್ಕೆ ನಡುನಡುವೆ ನಲುಗಾಗಿ ಬಂದು ಸೊಗಸನ್ನು ಹೆಚ್ಚಿಸುತ್ತಿದ್ದವು (ಗಂಮಾಯಿ. ೭).

[<ನಲುಗು$_1$]

ನಲುಮೆ 'ನಲ್ಮೆ' ನೋ.

ನಲುಮೆಕೂಟ (ನಾ). ಪ್ರೀತಿಯ ಮೇಳ; ಸ್ನೇಹದ ಗೋಷ್ಠಿ: ಮಧುರೆ ಹೆಣ್ಣ ಬೇಟವುಳಿದು ಮರಳಿ ಬರುವೆಯಾ ನಲುಮೆಕೂಟ ಕುಣಿತಗಳಲಿ ನಮ್ಮನರಿವೆಯಾ (ಗೋಕುನಿ. ೫೪-೨).

[ನಲುಮೆ (<ನಲ್ಮೆ) + ಕೂಟ$_1$]

ನಲುಮೆಯೋಲೆ (ನಾ). ಪ್ರೇಮಪತ್ರ: ನೀಳವಾದ ನಲುಮೆಯೋಲೆಗಳನ್ನು ಅವನು ಸುಶೀಲಾನಿಗೆ ಬರೆಯುತ್ತಿದ್ದ (ಸಮಜೀ. ೬೬೪).

[ನಲುಮೆ (<ನಲ್ಮೆ) + ಓಲೆ]

ನಲುವು (ನಾ). ಬಲಹೀನತೆ; ಅಶಕ್ತತೆ: (ಕಿ).

[<ನಲುಗು$_1$./ತಮಿ. ನಲಿವು=ತೊಂದರೆ, ನಾಶ]

ನಲ್ಕಳೆ (ನಾ). ಒಳ್ಳೆಯ ಶೋಭೆ,-ಚೆಲುವು,-ಸೊಗಸು: ಕವಿ ಗುಣಾತೀತನ ಸ್ತರಕ್ಕೆ ಏರಿದಾಗ ಮಾತ್ರ ಆತನ ಕೃತಿ ನಲ್ಕಳೆಯಿಂದ ಮೆರೆಯುತ್ತದೆ (ಕಾವ್ಯಕು. ೨೦). [ನಲ್ + ಕಳೆ$_6$ (=ಕಲೆ$_3$)]

ನಲ್ಕುಂಚ (ನಾ). ಸುಂದರವಾದ ಚವರ,-ಚಾಮರ: ನೆಗಳ ಸೊಂಡಿಲ ಚಿನ್ನದಣಸಿನ ಪಲ್ಲಕ್ಕಿ ಸೊಗಯಿಪ ರತ್ನವಿಮಾನ ಮಿಗೆ ನಲ್ಕುಂಚ ಕಾಳಾಂಜಿ ಮುಂತಾದ ವಸ್ತುಗಳನಿತ್ತನು ಕೃಷ್ಣ ಮಗಗೆ (ಮೋಹತ. ೦೫-೨೦).

[ನಲ್ + ಕುಂಚ]

ನಲ್ಕೆ (ನಾ). ನಲ್ಮೆ; ಅನುರಾಗ: ಮನ ಮೆಚ್ಚಿ ನಚ್ಚಿನ ನಲ್ಕೆಯಲಿ ಮನದನ್ನಳೆನಿಸಿದಳು (ಸಾಳ್ವಭಾ. ೦೮-೩೬). [ನಲ್ + -ಕೆ]

ನಲ್ಗಂಪು (ನಾ). ಸುವಾಸನೆ; ನರುಗಂಪು: ಧೂಪಮಂ ನಲ್ಗಂಪುಣ್ಕು ತಿರಲಾಗಳರ್ಪಿಸಿದನಾ ಗಂಗಾಧರಂಗಬ್ಕಱಿಂ (ಉದ್ಭಟ. ೦೦-೭೯); ಚಂದನಂಗಳ ಧೂಪಧೂಮದಾಮೋದಮುಂ ಮೂಗಿಂಗೆ ನಲ್ಗಂಪನೀಯದಿಹುದಿತ್ತಣ್ಗೆ (ಶ್ರೀರಾಮಾ. ೦೦೫-೦೫೭). [ನಲ್ + ಕಂಪು]

ನಲ್ಗಂಪುವೀಱು (ಕ್ರಿ). ಸುವಾಸನೆಯನ್ನು ಬೀರು; ನರುಗಂಪು ಸೂಸು: ನಲ್ಗಂಪುವೀಱೆ ಮೋಹಿಸುವ ಚೆಂಗಣಿಗಿಲೆಯರಲ್ಗೊಳಂ . . . ತಣ್ಗೊಳಂ ಮೆಱೆದುವು (ಪದ್ಮರಾ. ೮-೩೮). [ನಲ್ಗಂಪು + ಬೀಱು]

ನಲ್ಗಡಲು (ನಾ). ಸಿಹಿಯಾದ ಕಡಲು; ಇಂಗಡಲು: ಈ ಹಿಗ್ಗು ನನ್ನೆದೆಯ ನಲ್ಗಡಲನ್ನು ತುಂಬಿ ತುಳುಕುತ್ತಿದೆ (ಫಲಸಂ. ೪೮).

[ನಲ್ + ಕಡಲು (<ಕಡಲ್$_2$)]

ನಲ್ಗತೆ (ನಾ). ಒಳ್ಳೆಯ ಕಥೆ; ಸ್ವಾರಸ್ಯವಾದ ಕಥೆ: ಏನಾನುಮೊಂದು ನಲ್ಗತೆಯಂ ಪೇಟ? (ರಾಮಾಶ್ವ. ೪-೦೬). ಮೇಣಾವ ನಲ್ಗತೆಯಂ ಪೇಟ್ವೆನೋ (ರಾಮಾಶ್ವ. ೫-೧). [ನಲ್ + ಕತೆ]

ನಲ್ಗಬ್ಬಿಗ (ನಾ). ಒಳ್ಳೆಯ ಕವಿ; ಸತ್ಕವಿ: ಅನಿಬರ್ನಲ್ಗಬ್ಬಿಗರೊಳಮನಿತರ ಸಾಧಾರಣಾಭಿಮಾನಂ . . . ಬಳೆಯಿಕುಂ (ಅಪ್ರತಿ. ೩-೩).

[ನಲ್ + ಕಬ್ಬಿಗ]

ನಲ್ಗಳಲ್ (ನಾ). ರುಚಿಕರವಾದ ಮಜ್ಜಿಗೆ: ಎಳೆನೀರ್ಗಳ ತನಿಗರ್ಬಿನ ತಿಳಿರಸದ ರಸಾಲಪಕ್ವ ಫಳಸಾರದ ನಲ್ಗಳಲ ಬಹುವಿಧದ ಪಾನಂಗಳನಲ್ಲಲ್ಲೆಱೆ ವರಾ ಪ್ರಪಾಪಾಲಿಕೆಯರ್ (ವೃಷವಿ. ೪-೩೦).

[ನಲ್ + ಕಳಲ್$_0$ (<ಕಟಲ್$_3$)]

ನಲ್ಗಳವು (ನಾ). ಲಾಭ ತರುವ ಕಳ್ಳತನ; ಹೆಚ್ಚು ಧನ ಸಿಗುವ ಚೌರ್ಯ: ತಾನುಂ ತತ್ಸಖನುಂ ಭೃತ್ಯಾನೀಕಂಬೆರಸು ಪೋಗಿ ನಲ್ಗಳವಿಂದಂ ತಾನಧಿಕ ಲಾಭಮಾದೊಡನೂನಗುಣರ್ ಮಗುಟ್ಟು ಲಾಭದಿಂದಂ ಬರುತುಂ (ಧರ್ಮಾಮೃ. ೨-೧೯೦). [ನಲ್ + ಕಳವು]

ನಲ್ಗಾಡಿ (ನಾ). ಮನಸೆಳೆವ ಚೆಲುವು; ಮೋಹಕವಾದ ಸೌಂದರ್ಯ: ತಾಟಂಕಂಗಳ್ಕಪೋಲಸ್ಥಲಮನಲೆಯೆ ಮಧ್ಯಂ ಕರಂ ಬಳ್ಕೆ ತೋರ್ಪೊಳ್ನೋಟಂ ನಲ್ಗಾಡಿಯಂ ಪುಟ್ಟಿಸೆ . . . ಕಾಂತಾಮಣಿಯುಗುರಿಸಿದಳ್ ತೈಲಮಂ ಬಾಲೆಗಾಗಳ್ (ಉದ್ಭಟ. ೮-೧೫). [ನಲ್ + ಗಾಡಿ$_1$]

ನಲ್ಗಾದೆ (ನಾ). ಉತ್ತಮವಾದ ನಾಣ್ಣುಡಿ,-ಜಾಣ್ಣುಡಿ. 'ನಲ್ಗಾದೆಗಾಱ' ಪರಾ. [ನಲ್ + ಗಾದೆ]

ನಲ್ಗಾದೆಗಾಱ (ನಾ). ಉತ್ತಮವಾದ ನಾಣ್ಣುಡಿಗಳನ್ನು ಬಲ್ಲವನು,-ಕಟ್ಟಬಲ್ಲವನು: (ಚತುನಿ. ಕಿ. I, ೪೩). [ನಲ್ಗಾದೆ + -ಕಾಱ]

ನಲ್ಗಾಪು (ನಾ). ಉತ್ತಮವಾದ ರಕ್ಷಣೆ ; ಭದ್ರವಾದ ಕಾವಲು: ಅಗುಟ್ ಮದಿಲ್ ಬಾಗಿಲ್ ಬಿಯ್ಯಗಮೆಂಬಿವಱಿಂದೆ ಕಾವ ಕಾಪೇವುದೊ ಪೆಣ್ ಮಿಗೆ ಪಾತಿವ್ರತ್ಯದೆ ನೆಟ್ಟಗೆ ತನ್ನಂ ಕಾವ ಕಾಪೆ ನಲ್ಗಾಪಕ್ಕು (ನೀತಿಮಂ. II, ೨೭). [ನಲ್ + ಕಾಪು]

ನಲ್ಗಿರಿ (ನಾ). ಶ್ರೇಷ್ಠವಾದ ಪರ್ವತ ; ಪವಿತ್ರವಾದ ಗಿರಿ : ವಿಪುಲ ಶ್ರೀಕಟವಪ್ರ ನಲ್ಗಿರಿಯ ಮೇಲ್ನೋನ್ತೊಂದು ಸನ್ಮಾರ್ಗ್ಗದಿನ್ ಉಪ ಮಿಲ್ಯಾ ಸುರಲೋಕಸೌಖ್ಯದೆಡೆಯಾನ್ತಾಮೆಯ್ದಿ ಇಟ್ಟಾಳ್ ಮನಮ್ (ಎಕ. II, ೯೮-೩ ; ಸು. 700). [ನಲ್ + ಗಿರಿ₁]

ನಲ್ಗುಟುಕು (ನಾ). ಸವಿಯಾದ ಗುಟುಕು ; ರುಚಿಯಾದ ತುತ್ತು : ಸುಂದರಿ ಬಾರ ಸಾರಸಕಳಾಯತಲೋಚನೆ ನೋಡದಿರ್ಪುದೇ ನಿಂದೆಲೆ ರಾಜಪತ್ನಿ ಪೊಸಪಣ್ಗಳ ನಲ್ಗುಟು[ಪಾಠಾಂ. ಟ]ಕಿಕ್ಕು . . . ಎಂದು ಸಾರಿಕಾಬ್ಯಂದಮರಾತಿಮಂದಿರದೊಳೆಂಬುದು ಬಂದ ಪುಳಿಂದಿಯರ್ಕಳಂ (ರಾಜಶೇ. ೫-೧೨). [ನಲ್ + ಕುಟ ಕು₂]

ನಲ್ಗುಣ (ನಾ). ಒಳ್ಳೆಯ ಗುಣ ; ಸದ್ಗುಣ : ಕೃತಿಪತಿಯ ನಲ್ಗುಣಂಗಳ್ ಕೃತಿವೇಟ್ವನ ಮನಮನಲೆದು ನಲಿಯಸೆ ಪೇಟ್ವಾ ಕೃತಿಯೆ ಕೃತಿ (ಚಿಕವಿ. ೧-೫೧). [ನಲ್ + ಗುಣ]

ನಲ್ಗುದುರೆ (ನಾ). ಒಳ್ಳೆಯ (ಲಕ್ಷಣಗಳಿಂದ ಕೂಡಿದ) ಕುದುರೆ ; ಶ್ರೇಷ್ಠವಾದ ಅಶ್ವ : ಅಧ್ವರದ ನಲ್ಗುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು . . . ಪೊಕ್ಕೊಡೆ (ಕೃಮಿಭಾ. ೨೦-೫). [ನಲ್ + ಕುದುರೆ]

ನಲ್ಗುನಿಗುಂಜಿ (ನಾ). ಒಳ್ಳೆಯ ಗುಲಗಂಜಿ : ನಲ್ಗುನಿಗುಂಜಿಯೊರ್ಚರ ಮನೊಯ್ಯನೆ ನೇರ್ಪಡಿಸುತ್ತುಮೆತ್ತಲುಂ ಪಲ್ಗಳ ಕಾಂತಿಯಂ ಪರಪುತುಂ ನಗುತುಂ ನಡೆದರ್ ಪುಳಿಂದಿಯರ್ (ಉದ್ಯಟ. ೨-೬೦).

[ನಲ್ + ಗುನಿಗುಂಜಿ (< ಗುರುಗುಂಜಿ)]

ನಲ್ಗೆಯ್ (ಕ್ರಿ). ಶುದ್ಧಗೊಳಿಸು ; ಶುಭ್ರಗೊಳಿಸು : ಪಾಲ್ಗಡಲ ಚೆಲ್ವ ಬಂಬಲ್ದೆರೆಯನೀಳ್ಕೊಂಡು ನಲ್ಗೆಯ್ದು ತವರಾಜದೊಡವೆರಸಿದಿನಿದದೇಂ ಸಾಲ್ಗೆ ಜೇನೆಯ್ಯ ಕಂದಲ್ ಸೊಗಸು ಸಾಟಿಯೇ (ಭಾವಚಂ. ೭-೮) : "ಒಳ್ಳೆಯದನ್ನು ಮಾಡು. ಉತ್ತಮವಾಗಿ ತಯಾರಿಸು, ಹಿತವನ್ನು ಮಾಡು" (ಪ್ರಭಡ್ಯ). [ನಲ್ + ಕೆಯ್₁]

ನಲ್ಗೆಳದಿ (ನಾ). ಪ್ರೀತಿಯ ಗೆಳತಿ ; ಪ್ರಿಯಸಖಿ : ಹಾ ನಲ್ಗೆಳದಿ . . . ಮಗುಟ್ ನಿನ್ನನಾವೆಡೆಯೊಳ್ ಕಾಣ್ಬೆಂ (ಮಿತ್ರಗೋ. ೫೦) : ತಾನುಂ ನಲ್ಗೆಳದಿ ಚಂದ್ರಮತಿಯುಂ ಸಲ್ಲಾಪಂಗೊಳುತಿರೆಯಿರೆ (ರಾಮಾಶ್ವ. ೧೭-೩೦).

[ನಲ್ + ಕೆಳದಿ]

ನಲ್ಗೆಳೆಯ (ನಾ). ಪ್ರೀತಿಯ ಗೆಳೆಯ ; ಪ್ರಿಯಸಖಿ : ಸಿರಿಯಾಳ್ವನ ಸೂನುವಿಂಗೆ ನಲ್ಗೆಳೆಯನೊ ಸೌಂದರಾಧಿಪನ ದೂತನೊ (ಪ್ರಷವಿ. ೩೨-೩೬).

[ನಲ್ + ಕೆಳೆಯ]

ನಲ್ಗೆಱ್ (ನಾ). (ಕೈಗಳಲ್ಲಿರುವ) ಒಳ್ಳೆಯ ಲಕ್ಷಣವನ್ನು ಸೂಚಿಸುವ ರೇಖೆ ; ಶುಭರೇಖೆ : ನೀಳ್ದೆಸೆವೆಳಗೈ ಕಾಲ್ಗಳ್ ತಾಳ್ದಿರ್ಪುವು ಕೆಂದಳಂಗಳೊಳ್ ನಲ್ಗೆಱ್ಯಂ (ಚಿಕವಿ. ೪-೭೨). [ನಲ್ + ಗೆಱ್]

ನಲ್ಗೊಣಸು (ನಾ). ಮುದ್ದಾದ ಮರಿಹುಲ್ಲೆ,- ಜಿಂಕೆಯ ಮರಿ : ನಸು ಮುಗುಳ್ಳಿದ ಕಣ್ ಕಡೆವಾಯ ದೂರ್ವೆ . . . ನೆಱೆಯೊಪ್ಪೆ ನಲ್ಗೊಣಸು ಪಟ್ಟೆಸೆದಿರ್ದುದದೊಂದು ತಾಣದೊಳ್ (ಶಬಶಂ. ೨-೪೦).

[ನಲ್ + ಕೊಣಸು₁]

ನಲ್ಜವ್ವನೆ (ನಾ). ಚೆಲುವೆಯಾದ ಯುವತಿ ; ಸುಂದರ ತರುಣಿ : ಬಂದರಂದು ಬಲ್ಜೋಕೆವಡೆದು . . . ನಲ್ಜವ್ವನೆಯರ ಮಿಗ್ಗಣ್ಣ ಬೆಳ್ವಣ್ಣ ಮೂವಣ್ಣಗೊಳಿಸಲ್ಚತಿಗಳ (ಉದ್ಯಟೇ. ೫-೨೬). [ನಲ್ + ಜವ್ವನೆ]

ನಲ್ಜೋಡು (ನಾ). ಒಳ್ಳೆಯ ಜೊತೆ : ಇದು ಕಣಾ ಧರ್ಮಜನ ಸತಾಭ್ಯುದಯಕೋಸುಗವೂರ್ವಶಿಯ ಶಾಪದಲಿ ಬಂದುದು ಹೊತ್ತು ನೂಕಿದೆನೊಂದುವತ್ಸರವ ಇದಕೆ ನಲ್ಜೋಡಾಯ್ತು ನಿರ್ವಿಘ್ನದಲಿ ದಾಂಟಿದೆ ವವಧಿಯನು (ಕುಮ್ಯಾವಿ. ಓರಿಇ. ೭-೫೩). [ನಲ್ + ಜೋಡು]

ನಲ್ತದ (ನಾ). (?) : ನಮಿಲೂರಾ ಸಿರಿಸಂಘದಾಜಿಗಣದಾ ರಾಜ್ಞೀಮತೀ ಗನ್ತಿಯಾರ್ ಅಮಲಂ ನಲ್ತದ ಶೀಲದಿಂ ಗುಣದಿನಾಮಿಕ್ಕೋತ್ತಮ ರ್ಮ್ಮಿಳೆದೊರ್ ನಮಗಿನ್ದೊಟ್ಟುದುಯೆನ್ದು ಏಱಿ ಗಿರಿಯಾನ್ಸನ್ಯಾಸನಂ ಯೋಗದೊಳ್ (ಎಕ. II, ೯೭-೨ ; ಸು. 700).

[P ಇದು 'ನಲ್ತಪ' ಎಂಬುದರ ಅಪಲಿಖಿತ]

ನಲ್ತಪ (ನಾ). ಉತ್ತಮವಾದ ತಪ ; ಶ್ರೇಷ್ಠವಾದ ತಪಸ್ಸು : ನೆಱೆದಾದ ವ್ರತಶೀಲ ನೋನ್ಪಿ ಗುಣದಿಂ ಸ್ವಾಧ್ಯಾಯಸಮ್ಪತ್ತಿನಿಮ್ ಕಱೆ ಇಲ್ನಲ್ತಪ ಧರ್ಮ್ಮದಾ ಸಸಿಮತಿ ಶ್ರೀಗನ್ತಿಯರ್ (ಎಕ. II, ೭೬-೨ ; ಸು. 700). [ನಲ್ + ತಪ₃]

ನಲ್ತೆತ್ತು (ನಾ). ಒಂದು ಬಗೆಯ ಸಣ್ಣ ತೆರಿಗೆ : ಉಗ್ರಾಣ ಪರಿಧಾನ ಬೆಡುಂಗೊಳು ಚಳಾಯ ದಾಯದೆಱೆ ಹಡುವರ ಬೀರವಣ ನಲ್ತೆತ್ತು ನಲುಗಂಟಿ ನಲ್ಲಾವು ದಣ್ಡಾಯ ತವುಡೆಯೊಳಗಾದ ಸಮಸ್ತ ಕಿಱುಕುಡವೆಲ್ಲವಂ . . . ಧಾರಾಪೂರ್ವ್ವಕಂ ಮಾಡಿ (ಎಕ. V, ಬೇಲೂರು. ೫೯-೮೭ ; 1117). [P ಇದು 'ನಲ್ಲೆತ್ತು' ಎಂಬುದರ ಅಪಲಿಖಿತವಿರಬಹುದೆ ?]

ನಲ್ದಂಬುಲ (ನಾ). ಸವಿಯಾದ ವೀಳೆಯ ; ರುಚಿಯಾದ ತಾಂಬೂಲ ; ನರುದಂಬುಲ : ಪೆರ್ಚುತೊಯ್ಯಗೆ ನಲ್ದಂಬುಲಮಿಾವಳೊತ್ತಿ ಸೊಗಸುಣ್ಮಲ್ಚುಂಬಿವಳ್ . . . ಕಾತರು ಮಿಗೆ ತಾಂ ಕೂಡುವಳಂದು ಸೌಂದರಿ ಲಸತ್ಪುಂಭಾವದಿಂ ಕಾಂತನಂ (ಉದ್ಯಟ. ೮-೧೨೩). [ನಲ್ + ತಂಬುಲ]

ನಲ್ದಾಣ (ನಾ). ಒಳ್ಳೆಯ ನೆಲೆ,- ಆಶ್ರಯಂ : ಮುಂದಣವಧಿಯ ವನವ ವಾಸಮಂ ಕಳೆಯೆ ನೆಮ್ಮದಿಯ ನಲ್ದಾಣಮೊಂದು ಕೃಪೆಯಿಂ ಬೆಸಸಿಂ (ಶ್ರೀರಾಮಾ ೧೯೨-೪೪೭). [ನಲ್ + ತಾಣ]

ನಲ್ದಾಯಿ (ನಾ). ಅಕ್ಕರೆಯ ತಾಯಿ ; ಪ್ರೀತಿಯ ಜನನಿ : ಶ್ರೀಯೆ ವಾಗ್ದೇವಿಯೆ ಸೌಭಾಗ್ಯದಾಯಿಯೆ . . . ಅಕ್ಕರೆಯ ನಲ್ದಾಯಿಯೆ ಕೃತಿಗೆ ಉನ್ನತಿಯನು ಈಯೆ (ಇಂಜಾಪ. ೩-೧).

[ನಲ್ + ತಾಯಿ (<ತಾಯ್)]

ನಲ್ದೊಟ್ಟಲು (ನಾ). ಅಂದವಾದ ತೊಟ್ಟಲು : ತಾಯ್‌ವಸಿರ್ ನೀನಾದೆ ಪುಟ್ಟುವಾಗಳ್ ಮತ್ತೆ ನಲ್ದೊಟ್ಟಲಾದೆ. ಜೋಗುಳವಾದೆಯೆಳೆಯಂಗೆ (ಶ್ರೀರಾಮಾ. ೩೦೬-೪೧೦). [ನಲ್ + ತೊಟ್ಟಲು₁ (<ತೊಟ್ಟಲ್₁)]

ನಲ್ದೊಡವು (ನಾ). ಅಂದವಾದ ಆಭರಣ : ಮುಡಿಯಿಂದಡಿವರೆಗಂ ನಲ್ದೊಡವುಗಳಂ ತುಡಿಸಲೆಂದು ದಾದಿ . . . ನುಡಿದಳಿಂತಚ್ಯುತನಂ (ಗೀತಗೋ. ೭-೧೭). [ನಲ್ + ತೊಡವು]

ನಲ್ನಯ (ನಾ). ಒಳ್ಳೆಯ ರೀತಿ ; ಸರಿಯಾದ ಕ್ರಮ : ಕರಂ ರಸಿಕರಿನೆಯ್ದೆ ತಿರ್ದಿಸಿದೊಡಲ್ಲದೆ ನಿಲ್ಲದು ಚಿತ್ತಮಂತೆ ತಿರ್ದಿಸುವುದೆ ನಲ್ನಯಂ (ಜಗವಿ. ೧-೧೫). [ನಲ್ + ನಯ₂]

ನಲ್ನಿಶೆ (ನಾ). ಸರಿರಾತ್ರಿ ; ಮಧ್ಯರಾತ್ರಿ : ನಲ್ನಿಶೆಯೊಳ್, ಆಱ ತಿರೆ ಸಂಜೆಯುರಿ. ಇರ್ಬಾಯ, ಖಡ್ಗಮನ್ ತುಡುಕಿ ಗುಱಿಯಿಲ್ಲದೆತ್ತಲೋ ತೆರಳ್ವನನ್ ನಾನ್ ತಡೆದು (ಅಶ್ವತ್ಥಾ. ೧೨-೨೪೯). [ನಲ್ + ನಿಶೆ₁]

ನಲ್ನುಡಿ₁ (ಕ್ರಿ). ಹಿತವಾದುದನ್ನು ಹೇಳು ; ಹಿತವನ್ನು ನುಡಿ : ಆಗಳಾನ್ ನೆಲ ಮುಗಿಲ ಮಕ್ಕಳಾ ದೈತ್ಯರನ್ ನಲ್‌ನುಡಿದು ನಡಪಲ್ಕೆ ನೆಗಟ್ಟೆನ್ (ಬದ್ಧಪ್ರ. ೧೨-೨೩೭). [ನಲ್ + ನುಡಿ₁]

ನಲ್ನುಡಿ₂ (ನಾ). ೧. ಹಿತವಾದ ಮಾತು ; ಸವಿನುಡಿ : ಸುಧರ್ಮ ಭೂಮಿಪನಂ ನಲ್ನುಡಿಯಿಂ ಬೀಳ್ಕೊಂಡು (ಉದ್ಯಟ. ೭-೭೮) ; ಅವನ

ನಲ್ನುಡಿ ತಾನುಪದೇಶಮಾಗೆ (ರಾಜಶೇ. ೧೪-೫೯) : ಕಾಲವಶದಿಂ ಪಲತೆಱನಾದ ದುಃಖಂಗಳ್ಗೆ ಭಾಜನರಾಗಿರ್ಪ ಸೋದರರ್ಗೆ ನಲ್ನುಡಿಗಳಂ ನುಡಿದು (ಭಾರಶಾಂ. ೧೪) ; ನಲ್ನುಡಿ. ಅದಂತರ್ಕಿ ಊಡಿದೆಯ–ಪೇಟೆನಗೆ ಪಾಂಡವರ ದಟದ ಬಿಸುನೆತ್ತರಿನ್ ಖಡ್ಗಮನ್ ? (ಅಶ್ವತ್ಥಾ. ೫-೮೦) ; ಒಂದುದಿನ ವಾದರೂ ಪ್ರೀತಿಯಿಂದ ನಲ್ನುಡಿಗಳನ್ನಾಡಿದವನು ನಾನಲ್ಲ (ಕುರುಕಾ. ೧೦೩). ೨. ಅಂದವಾದ ಮಾತಂ ; ಚೆಲುವಾದ ನುಡಿ : ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ (ರಾಮಾಶ್ವ. ೬-೧೭) ; ನಲ್ನುಡಿಗಳನ್ನು ಛಂದಸ್ಸಿನ ನೂಲಿನಲ್ಲಿ ಸುರಿದು ಮಾಲೆಗೊಳಿಸಬಲ್ಲವನೇ . . . 'ಜಾಣ'ನು (ನಾಡೋಜ. ೩೪೭) ; ಕನ್ನಡದ ನಲ್ನುಡಿಗಳು ಮೂಲೆಪಾಲಾಗುತ್ತಿರುವ ಈ ದಿನಗಳಲ್ಲಿ . . . ಕನ್ನಡಿಗರ ತಿಳಿನುಡಿಯಾಗಿ ಬೆಳೆಯಿಸಲು ಈ ಕೃತಿಯು ಸಹಾಯಕ (ಕಾಲೂರ. ೦೦ ಮುನ್ನುಡಿ). [ನಲ್ + ನುಡಿ$_2$]

ನಲ್ನೆಟಲ್ (ನಾ). ೧. ಹಿತವಾದ ನೆರಳು ; ತಂಪಾದ ಛಾಯೆ. ೨. (ಆಲಂ) ಪ್ರೀತಿಯ ಆಶ್ರಯ. ೧, ೨ : ಎಸೆವೈ ಕಲ್ಪಮಹೀಜದಂತೆ . . . ಬಣ್ಣಿಸೆ ಪುಷ್ಪಸ್ತಬಕಂಗಳಂ ನಖರುಚಿವ್ರಾತಂ ನತರ್ಗೊಲ್ದು ಸರ್ವಸಮಂ ನಲ್ನೆಟಲಿತ್ತು ಕಾವೆ (ವಸ್ತುವಂ. ೮೫). [ನಲ್ + ನೆಟಲ್$_1$]

ನಲ್ನೋಟ (ನಾ). ಪ್ರೀತಿಯ ನೋಟ : ಕೋಟಿ ಮೂಱೆನಿಪ್ಪ ಲೆಕ್ಕದರ್ಥ ದಾಣ್ಮನಾಗಿ ನಲ್ನೋಟಕೊಳ್ಪನೀವ ಯೌವನಾತಿರೇಕ ಮಲ್ಲಣಂ (ಉದ್ಯಟ. ೧೨-೩೫). [ನಲ್ + ನೋಟ]

ನಲ್ಪರಕೆ 'ನಲ್ವರಕೆ' ನೋ.

ನಲ್ಪರಕೆವೆಱು (ಕ್ರಿ). ಪ್ರೀತಿಯ ಆಶೀರ್ವಾದವನ್ನು ಪಡೆ : ಭೂದಿವಿಜರ ನಲ್ಪರಕೆವೆತ್ತು ಜೀರಿಗೆಬೆಲ್ಲದೊಪ್ಪಮೆಸೆಯಲ್ . . . ಅವನ ಕೈಗೆ ಧಾರೆಯನೆಱೆದನು (ಚೈಮಿಭಾ. ೩೧-೧೬).

[ನಲ್ಪರಕೆ (< ನಲ್ವರಕೆ) + ಪೆಱು$_1$]

ನಲ್ಪು (ನಾ). ಸುಂದರವಾದುದು ; ಅಂದವಾದುದು : ಇವರ ನಲ್ಪಿನ ದೇಹ ಉತ್ತಮರ ದಾಹ (ವೀಶೈಪು. ೨-೩-೨೬). [ನಲ್ + – ಪು$_2$]

ನಲ್ಬರ 'ನಲ್ಬರವು' ನೋ.

ನಲ್ಬರವು, ನಲ್ಬರ (ನಾ). ಸುಖಾಗಮನ ; ಸುಸ್ವಾಗತ : ಬಾ, ಕೃಷ್ಣ, ನಲ್ಬರವು, ನಮ್ಮೊಳಗೆ ಸೇರು (ಹೊಂಗಳು. ೩೨-೦). ನಲ್ಬರ : ನಮ್ಮ ಶೌರೀ ಮಲೆಗೆ ನಿಮಗಕ್ಕೆ ನಲ್ಬರಂ (ಶ್ರೀರಾಮಾ. ೨೮೯-೧೦೦).

[ನಲ್ + ಬರವು]

ನಲ್ಮಗು (ನಾ). ಸುಂದರವಾದ ಮಗು ; ಅಂದವಾದ ಶಿಶು. ನಲ್ಮಕ್ಕಳು (ಬಹುವ) : ಅಯೋಧ್ಯೆ . . . ಕೊರಳಿಂಚರದಿ ಪಕ್ಕಿಗಳನಣ ಕಿಸುವ ನಲ್ಮಕ್ಕಳಿಂದಮಾ ಸಗ್ಗದೂರನೆ ಸೂರೆಗೊಂಡಂತೆ ಮೆರೆದುದಯ್ (ಶ್ರೀರಾಮಾ. ೭-೧೭೪). [ನಲ್ + ಮಗು]

ನಲ್ಮಿಸುನಿ (ನಾ). ಒಳ್ಳೆಯ ಬಂಗಾರ ; ಅಪ್ಪಟ ಚಿನ್ನ : ವಿಶ್ವಕಧೀಶ ನೊರ್ವನೆನಿಸಿದನುಮೇಶನೆಂದು ಬಿದಿ ಶಾಸನಮಂ ಬರೆದಿಟ್ಟು ನಟ್ಟ ನಲ್ಮಿಸುನಿಯ ಕಂಬದಂತೆಸೆದುದಾ ಗಿರಿ (ಶಬಶಂ. ೧-೩೬).

[ನಲ್ + ಮಿಸುನಿ]

ನಲ್ಮೆ, ನಲುಮೆ (ನಾ). ೧. ಪ್ರೀತಿ ; ಅನುರಾಗ ; ಒಲುಮೆ : "ತಕ್ಕು, ಅಟ್ಕಱು, ಒಱಲ್, ಕಾದಲ್ಮೆ, ನಲ್ಮೆ, ಕೂರ್ಮೆ, ಎಱಕಂ, ಓಪು – ಈ ೮ ಸ್ನೇಹಕ್ಕೆ ಪೆಸರ್" (ಕಶಸಾ. ೧೯-೩೯೦) ; ಚಲಂಗಳಾದಂ ವಿಲಾಸಿನೀಜನದ ನಲ್ಮೆಯುಂ ಸಂಗಮಮುಂ (ಕವಿರಾ. ೩ ೯೭) ; ತೆತ್ತುತನಕ್ಕೆ ತೆತ್ತುತನಮಂ ಪುಸಿನಲ್ಮೆಗೆ ಮೋದಿ ನಲ್ಮೆಯಂ . . . ಉಕ್ಕೆವಕುಕ್ಕೆವಗೆಯ್ತಮಂ ಪೊಣರ್ಚುತ್ತುಮುಪಾಯದಿಂ ಕಳಿಯೆ ಕೂಡುವನಂ ವಿಭು ಕಂಡು ಮೆಚ್ಚಿದಂ (ಕಾವ್ಯಸಾ. ೯೮೫ ಕೂದ್ರಳ) : ಬೆಂಬೆನ್ನನೆ ಬಾರದಂದು ಲಲಿತಾಂಗಿಯ ನಲ್ಮೆಗೆ ಬನ್ನಮಾಗದೇ (ಅದಿಪು. ೩-೧೭) ; ಕೈದವಮಿಲ್ಲದ ನಲ್ಮೆಯಿಂ ನಾಲಗೆಯ ತುದಿಗೆ ತಂದು ನುಡಿದಳ್ ಮತ್ತೊರ್ವಳ್ ತನ್ನಾಣ್ಮನ ದೋರ್ವಲದಗುರ್ವಂ ನಚ್ಚಿ (ಪಂಪಭಾ. ೦೦-೪೫ ಪ) : ಆತ್ಮಭವಂಗೆ ನಲ್ಮೆಯಿಂದುಟಿಪೆ ನಿಜಾತಪತ್ರ ಹರಿವಿಷ್ಟರ ಚಾಮರಮೆಂಬಿವಂ ಬಟಿಕ್ಕುಟಿದುದನಿತ್ತುಂ (ಚಂದ್ರಪು. ೩-೧೦೨) ; ಕಡುಪಿಂದಾತನೊಳಾಂತರೋಡಿ ಬನಮಂ ಪೊಕ್ಕುಂ ಪೊಡರ್ವಾರ್ದು ಕಾಲ್ವಿಡಿದುಂ . . . ನಲ್ಮೆಯಂ ನುಡಿದುಂ ಮೆಯ್ಸಿರಿಗೆಟ್ಟುಮಿಂತು ನೆಲದೊಳ್ ನಾಣ್ಗುಂದಿ ನಿಂದಿರ್ವರ್ (ಕಬ್ಬಿಕಾ. ೦೭೨) ; ತಳುವದಡವಿಯೊಳು ತನ್ನ ತಪ್ಪಿಸಿ ಪೋದ ನಳನೊಳು ನಲ್ಮೆಯನೆಸಗಿ . . . ಕೀರ್ತಿಯ ತಳೆದೆಸೆದಳು ದಮಯಂತಿ (ಹದಿಬ. ೩-೪೬). ೨. ಅನುಗ್ರಹ ; ಕೃಪೆ ; ದಯೆ : ವಿಶ ನಾಥಂ ಕುಡುಗಖಿಳಜನಾನಂದಮಂ ನಲ್ಮೆಯಿಂದಂ (ಕುಸುಮಾ. ೦-೦) ; ಪುತ್ರನನೀಶನಿಂ ನಲ್ಮೆಯಿಂ ಪಡೆದುಂ ಮಹೀಪತಿ ರಾಜ್ಯಮಾಳುತಮಿರ್ಪಿನಂ (ಹಾಲಾಸ್ಯ. ೪-೧೩-೪೩) : ಆವಳ ನಲ್ಮೆಯಿಂ ಪಡೆವನಾಯ್ಕುಳಿಯುಂ ತ್ರಿಜಗತ್ಪ್ರಭುತ್ವಮಂ . . . ಆ ಮಾದೇವಿ ನಿರೀಕ್ಷಿಕೆನ್ನನತಿವೇಲದಯಾ ರಸಪೂರ್ಣದೃಷ್ಟಿಯಿಂ (ಮರಾಚ. ೧-೨). ೩. ಒಳ್ಳೆಯತನ ; ಒಳಿತಂ ; ಒಳ್ಳೆಯದಂ ; ಒಳ್ಪು : "ನಲ್ಮೆಯೆ ಶುಭಮೊಳ್ಪು ಲೇಸು" (ಚತುನಿ. ೮೫) ; ಉಮೆ ಸೌಭಾಗ್ಯದೊಳೊಳ್ಪುವೆತ್ತ ರತಿ ರೂಪಾಶ್ಚರ್ಯದೊಳು ಲಕ್ಷ್ಮಿವಕ್ಷಮ ನಂಗೀಕರಿಸಿ × × ನಲ್ಮೆಯೊಳತಿಪ್ರಾಗಲ್ಭ್ಯದೊಳು ಸೂಕ್ತಿಲಕ್ಷ್ಮಿ (ಎಳ. VIII, ಸೊರಲ. ೦೩೮-೪೫ ; ಸು. 1145) : ಮಗನೆಂದು ನಿಮ್ಮನಾಂ ಪೊರೆದ ಪೊಲ್ಲಮೆಯ ನಲ್ಮೆಯ ಮಾಡಿ ಕೈಕೊಂಡು ರಕ್ಷಿಸೆನೆ (ಸೌಂದಪು. ೫-೪೪) ; ಕಿಱಿದಾಸೆಯಿಂದೆ ಜನರು ನಲ್ಮೆ ಪೊಲ್ಮೆಯನಱಿಂದುದೆ ನೆನೆದುದನೆಸಗಿ ಬಱಿದೆ ಯೌವನವನೆಲ್ಲವನು ಕಳಿವರು (ಕರ್ಣವ್ಯ. ೧೦-೩೦) ; ಈ ಜಾಣ್ಮೆಯಾ ನಲ್ಮೆಯಾ ಗಾಡಿಯಾ ಮೋಡಿ . . . ಆರಿಗಳವಡದು ಕೇಳೀ ಜಗತ್ರಯ ದೊಳೀ ಚೆಲುವ ವ್ಯರ್ಥಂಗೈಯದಿರು (ವೆಂಕಾರಾ. ೫-೯-೦೦) ; ನುಣ್ಣನಪ್ಪ ಜಾಣ್ಮೆಯಿನ್ ಕೆಡಕಿಗೊರ್ಮೆ ನಡೆದಪನ್ ನಲ್ಮೆಗೊರ್ಮೆ ನಡೆದಪನ್ (ಅಂತಿಗೊ. ೦೭-೩೫೨). ನಲುಮೆ : ೧. ಆ ಪುರಕೆ ಬಂದನೊರ್ವಂ ಭಕ್ತನೊಲುಮೆಯಿಂ ಕಾಪಾಲಿವೊಲಿವ ಶರಣಂ ತನ್ನ ನಲುಮೆಯಿಂ (ಖಣಾರ. ದೇ. ೦೦೫-೦೦) ; ನಿನ್ನ ಸಸಿನೆದೆಯೊಳೋರೆಮೆಯ ನಲುಮೆಯ ನೀಡ ! (ಗಿಳಿವಿಂ. ೨೮-೨೭) ; ಏಳುನೆಲೆಯಲ್ಲಿ ನೆಲಸಿಹುದು ನಿಲುವಿನ ನಲುಮೆ (ಅರಳು. ೪೦೦-೧೭). ೪. ಸಂತೋಷ : ನಲುಮೆಯಲಿ ಮಾಡಿ ದಾಸೋಹ ಹರಸೇವೆ (ಕನ್ನಜಾ. ೨೦೭).

ನಲ್ಮೆಗೆ ದಿಬ್ಯಂಬಿಡಿ, ನಲ್ಮೆಗೆ ದಿವ್ಯಂಬಿಡಿ = ಪ್ರೇಮಕ್ಕೆ ಸಾಕ್ಷಿಯಾಗಿ ದಿವ್ಯವೆಂಬ ಪರೀಕ್ಷೆಗೆ ಒಳಗಾಗು : ಶಂತನು . . . ತನ್ಮೃಗಶಾಬಾಕ್ಷಿಯ ಕಂಪು ತಟ್ಟಿ ಮಧುಪಂಬೋಲ್ ಸೋಲ್ತು ಕಂಡೊಲ್ದು ನಲ್ಮೆಗೆ ದಿಬ್ಯಂಬಿಡಿ ವಂತೆವೋಲ್ ಪಿಡಿದು (ಪಂಪಭಾ. ೧-೭೦) ; ಅಂಬುಜದ[ಲ]ಮನಮರ್ಚಿ ನಿತಂಬಿನಿ ಪಿಡಿದಿರ್ದ ಕುಚಮೆ ತಪ್ತಾಯಃಪಿಂಡಂಬೋಲ್ತಿರೆ ನಲ್ಮೆಗೆ ದಿವ್ಯಂ ಬಿಡಿದಳೋ ಪೇಟೆಮೆನಿಪಳಾ ವ್ಯತಿಕರದೊಳ್ (ಚಂದ್ರಪು. ೫-೧೩೧).

[ನಲ್ + – ಮೆ$_1$./ತಮಿ. ನನ್ಮೈ, ನಱುಮೈ]

ನಲ್ಮೆಕಾಱ 'ನಲ್ಮೆಗಾಱ' ನೋ.

ನಲ್ಮೆಕಾಱಿಕೆ (ನಾ). ನಲ್ಮೆಗಾರನ ಭಾವ ; ಪ್ರೀತಿ ; ಒಲುಮೆ : ಬೇಱರ ಮನೆಯಿತ್ತು ತಂಗಿಯರನು ನಲ್ಮೆಕಾಱಿಕೆವೆತ್ತ ಮೈದುನರಾ ಮೂಱು ಹೊತ್ತಾರಯ್ದುತೊಲಿದು ಮನ್ನಿಸಿದನು (ಭರಚ. ೬೨-೮೫).

[ನಲ್ಮೆಕಾಱ (< ನಲ್ಮೆಗಾಱ) + – ಇಕೆ]

ನಲ್ಮೆಗಾರ್ತಿ (ನಾ). ಪ್ರೀತಿಯನ್ನು ಹೊಂದಿರುವವಳಂ ; ಒಲವಿನವಳು ; ನಲ್ಲೆ ; ಪ್ರಿಯೆ : ಇದು ಮನಂಬಂದೊಡೆ ಕುರುಳಂ ಬೆರಲಂ ಬೇಡಿತ್ತವೆಂ ತೊದಳಿಲ್ಲೆಂದು ನುಡಿದ ನಲ್ಮೆಗಾರ್ತಿಯ ನುಣ್ಮಾತಂ ಕೇಳ್ದು ಹರ್ಷಂದಾಳ್ದು (ರಾಜಶೇ. ೧೦-೧೫೭ ಪ). [ನಲ್ಮೆಗಾಱ + – $_1$ (< –ಇತ್ತಿ)]

ನಲ್ಮೆಗಾಱ, ನಲ್ಮೆಕಾಱ (ನಾ). ಪ್ರೀತಿಯನ್ನು ಹೊಂದಿರುವವನು; ನಲ್ಲ; ಪ್ರಿಯ; ಕಾದಲ; ಓಪ. 'ನಲ್ಮೆಗಾರ್ತಿ' ಪರಾ. **ನಲ್ಮೆಕಾಱ**: 'ನಲ್ಮೆಕಾಱಿಕೆ' ಪರಾ. [ನಲ್ಮೆ + – ಕಾಱ]

ನಲ್ಮೆವಾತು (ನಾ). ಪ್ರೀತಿಯ ಮಾತು: ಏನು ಕಲಿತರೇನು ಫಲವು . . . ಕಲಿಯಲಿಲ್ಲ ನಲ್ಮೆವಾತು ದೇವಯಾನಿ ಕಲಿವಳು (ಕವಿಸೋ. ೨೫-೧೦).

[ನಲ್ಮೆ + ಮಾತು$_1$]

ನಲ್ಮೊಗ (ನಾ). ಅಂದವಾದ ಮುಖ: ಅವರ ನಲ್ಮೊಗಗಳನ್ನು ಅಂಗಡಿಯೊಳಗಿನ ಹೊಗೆಯು 'ಪಾಲಿಸ್' ಮಾಡಿಬಿಟ್ಟಿತ್ತು (ಪುಂಗಾಪು. ೫೪).

[ನಲ್ + ಮೊಗ]

ನಲ್ಮೊರೆ (ನಾ). ಒಳ್ಳೆಯ ಪ್ರಾರ್ಥನೆ: ಮಾನವ ಮಡಿಯಾಗಿಡಲು ದಮ್ಮಡಿಯ ತಮಡಿ ನಮಗೆ ಬೇಕೇತನಿಗೊ ನಲ್ಮೊರೆಯ ತಮಡಿ (ಗಱೇಶ. ೭೦-೬). [ನಲ್ + ಮೊ ೪]

ನಲ್ಲ$_1$ (ನಾ). ೧. ಪ್ರೀತಿಗೆ ಪಾತ್ರನಾದವನು; ಪ್ರಿಯ: "ಕಾದಲಂ, ನಲ್ಲಂ, ಇನಿಯಂ, ಓವಂ, ಮನದನ್ನಂ – ಈ ೫ ಪ್ರಿಯಂಗೆ ಪೆಸರ್" (ಕಶಾ. ೦೯-೩೯೯); ಅನುಪಮನಂ ಬರಿಪ್ಪೆನನುಂಗಾಗದೆ ನಲ್ಲನಿಂದು (ಕವಿರಾ. ೨-೦೦೬); ನಿನ್ನ ನಾನನುವಿಪೆನೆನ್ನ ಮೆಯ್ಯಡವೊ ನಲ್ಲನ ಮೆಯ್ಯಡವೋ ನಿಶಾಕರಾ (ಆದಿಪು. ೦೨-೪೦); ನಲ್ಲಳ್ ನಲ್ಲನಂ ವ್ಯವಹಾರಿ ಪಡಪಂ . . . ನೆನೆಪಂತು (ಧರ್ಮಾಮೃ. ೩-೦೯೦); ಒಡಲಿಲ್ಲದ ನುಡಿಯಿಲ್ಲದ ಕಡೆಯಿಲ್ಲದ ನಲ್ಲನ ಒಡಗೂಡಿ ಸುಖಿಯಾದೆ ಕೇಳಿರಯ್ಯ (ಮುಹಾದೇ. ಬ. ೩೧-೩೭); ಎಲ್ಲರ ವರ್ಣಿಸಬಹುದು ಎನ್ನ ನಲ್ಲ ಗುರುದೇವನ ವರ್ಣಿಸಬಾರದು (ಸಿದ್ಧವ. ೧೦೩-೬೭೮); ಬಿಡದೆ ಸಿಂಗರಿಸಿ ನಲ್ಲರ ಗೋಷ್ಠಿಯೊಳಗಿಪ್ಪ ಮಾದರಿಯರನೀಕ್ಷಿಸುತ (ಹಡಕಾ. ೪-೯); ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್ (ಜುಪೋಪ. ೨-೪೨); ಕೆಳದೀ ನೀಂ ಬಲ್ಲೆಯೆಂತೆಂದನುವಿಸಿದಪೆ ಬೇಸತ್ತೆ ನಾಂ ನಲ್ಲನೇಕಿನ್ನೊಳಗವ್ವಂ ನೀನುಮಾನುಂ ಸುಟಿವ ಮದನನುಂ ಬಲ್ಲಿರಾವೆತ್ತ ಬಲ್ಲಂ (ಆಪಂಪು. ೬-೦೩); ನಲ್ಲರ ಕಂಡು ನಗುವಳ ತನ್ನ ಬಲ್ಲಿದ ಗಂಡನ ಬೈದು ಕರೆವಳ . . . ಜಿಹ್ವೆ ಸೀಳಬೇಕು (ಪುಕಂದ. ೩-೦೪-೪); ನಲ್ಲನಗಲಿಕೆಯೂಗ ಮನಕೆ ಕುಗ್ಗು (ನನಗ್ಗ. ೪-೦೦); ನಲ್ಲ ಮುಟ್ಟಿದ ಗಲ್ಲ, ನಲ್ಲೆಯ ಮೈಯೆಲ್ಲ ಹಿಗ್ಗಿನ ಮುಳ್ಳಿಗೆ ಸಿಕ್ಕ್ಯಾಂಗ (ಸಖೀಗೀ. ೫೦-೦೧). ೨. ಗಂಡ; ಪತಿ: "ಕಾದಲನುಂ ನಲ್ಲನುಮೆಂದೀ ಧರೆಯೊಳಗಿನಿಯ ನೋಪನಾ ಮನದನ್ನಂ ಸಾದರದೆ ಪತಿಯ ಪೆಸರುಗಳ್" (ಕವಿಕಂ. ೦೭೦); ಎಲ್ಲರ ಗಂಡರ ಪರಿಯಂತಲ್ಲ ನೋಡವ್ವಾ ನಮ್ಮ ನಲ್ಲ ಸುಳಿಯಲಿಲ್ಲಿ ಸುಳಿದು ಸಿಂಗಾರವ ಮಾಡಲಿಲ್ಲ (ಅಸವ. ೬೮೯). ೩. ಒಡೆಯ; ಸ್ವಾಮಿ: ಧಾತ್ರೀಶ್ವರ ಚೂಡಾಮಣಿ ವಿಜಯಕ್ಕೆ ನಲ್ಲನಾಹವಮಲ್ಲ ಅವನೀವಂಣ್ಣಳಮಂ . . . ಪಾಳಿಸಿದಂ (ಸಿಇಇ. IX-1, ೦೨೬-೦; 1064); ದಕ್ಷಿಣದಿಶಾವಿಷಯ ಗಡಿಯಂಕಮಲ್ಲಂ ವಿಬುಧಸಂದೋಹಕ್ಕೆ ನಲ್ಲಂ (ಎಕ. XI, ಚಿಕ್ಕದು. ೪೯-೦೩; 1123); ವೀರದ ಬಾಗದ ಕಾವ ವೆರ್ಮೆಗಾವಂ ತೊಣೆಯೆಂದು ಬಣ್ಣಿಪರು ಮಲ್ಲನನುದಳಯಶಕೆ ನಲ್ಲನಾ (ಎಕ. VI, ಕಡೂರು. ೩೦-೩೭ : 1170); ಗುಣಕ್ಕೆ ನಲ್ಲ ಗಣೇಶಂ (ಕಮದ. ೭೫ ಪ್ರಯೋ). ೪. ಒಳ್ಳೆಯವನು: (೫). ೫. ಒಳ್ಳೆಯತನ; ಶ್ರೇಷ್ಠತೆ: "ಒಳಿತು, ನಲ್ಲ, ಲೇಸು, ಚೆನ್ನ" (ಕಂಸುಹು. ೮೦). ೬. ಅಂದ; ಚೆಲುವು: (೫).

ನಲ್ಲರ್ (ಬಹುವ) ೧. ಪ್ರೀತಿಗೆ ಪಾತ್ರರಾದವರು: ಎರೆದರ್ ಸಂತುಷ್ಟರಾದರ್ . . . ಬರ್ದುಗೊಂಡಾಡುವ ಮದನಮದೋನ್ಮತ್ತೆಯರ್ ನಲ್ಲರಾದರ್ ನರರಾರ್ ನಿನ್ನನ್ನರಿನ್ನೀ ಭುವನಭವನದೊಳ್ ಗಂಗಚಕ್ರಾಯು ಧಾಂಕಾ (ಕಾಕ್ಕಸಾ. ೫೧೫ ಕೂದ್ರಳ). ೨. ಹಿತವರು: ಪೊಡೆವಡುವಪ್ಪಿಕೊಳ್ವ ನೆನೆಯುತ್ತಿರಿಮೆಂಬ . . . ಕೈಯಿಡೆ ನಿವಂಗೆಂದೊಡಂಬಡಿಪ ನಲ್ಲರಗಲ್ಕೆಗೆ ಕಣ್ಣ ನೀರ್ಗಳಂ ಮಿಡಿವ ಬಹುಪ್ರಕಾರಜನಸಂಕಟವೊಪ್ಪಿದುದಾ ಪ್ರಯಾಣದೊಳ್ (ಆದಿಪು. ೪-೫೭): ನಂಟರುಂ ಶಂಭುವೇ ನಲ್ಲರುಂ ಶಂಭುವೇ (ಆರಿರ. ದೇ. ೦೭೬-೦೫). ೩. ಪ್ರಿಯಪ್ರೇಯಂಸಿಯರಂ; ಪರಸ್ಪರ ಒಲಿದವರು: ಮಲ್ಲಿಗೆಗಳ್ ವಸಂತದೊಳ್ ಬಿರಿದೊಡೆ ನಲ್ಲರಂ ನೆನೆದು ನಲ್ಲರ ಮೆಲ್ಲ್ದೆರ್ದಗಳ್ ನಿರಂತರಂ ಬಿರಿವುವದೆಂತೊ ಮಲ್ಲಿಗೆಗೆ ನಲ್ಲರ ಮೆಲ್ಲಿರ್ದ ವೇಳೆಗೊಂದುದೋ (ಆದಿಪು. ೦೦-೦೦೦); ನಲ್ಲರೊಳ್ಕೊಗಂ ನಗೆವೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಟ್ಕೊಡಾವ ಬೆಟ್ಟುಗಳಿಂಳಮಾವ ನಂದನವನಂಗಳೊಳಂ ಬನವಾಸಿದೇಶದೊಳ್ (ಪಂಪಭಾ. ೪-೨೮); ನಲ್ಲರ ಕೂಡುವಾಸೆಯೆ ಬರ್ದುಂಕುವುದರ್ಕೆ ನಿಮಿತ್ತವಾಗದೇ (ಕಾದಂಬಾ. ೩೨೮); ಬೇಱೂರ್ಗೆ ಪೋದ ನಲ್ಲರ ನೆನೆದು ದೂಱಿಸುವ ನೀಱಿಯರ ನಿಡುಸುಯ್ಯ ಗಡಣದಿಂ ಜೌವನ ವೇಱಿಯುಂ (ಕಬ್ಬಿಕಾ. ೫೪). ನಲ್ಲರ ಮರುಳ = ಒಂದಂ ಬಿರಿಂದಂ: ಮಹಾರಾಡಾ[ಧಿ]ರಾ[ಜನೆ (ನ)]ಲ್ಲರ ಮರುಳನಾನೆ[ಪೆಡೆ]ಜ್ಜಂ (ಎಇ. XIX, ೨೮೯-೪ : ೧೮೩). ನಲ್ಲಳ್ = ೧. ಪ್ರಿಯೆ; ಪ್ರೇಯಂಸಿ: "ಮನದನ್ನಳ್ ಕಾದಲೆಯೆಂದಿನಿಯಳ್ ತಾನೋವಳೆಂದು ನಲ್ಲಳೆನಲ್ಕಂದನುನಯದಿಂ ಪ್ರಿಯೆ ತಾಂ" (ಕವಿಕಂ. ೦೬೨); ಕೆಲದೊಳ್ ನಿಲೆಯುಂ ಜ್ಯೋತ್ಸ್ನಾವಿಲಾಸದೊಳ್ ಬಗೆದನಿಲ್ಲ ನಲ್ಲಳನಿನಿಸಂ (ಕವಿರಾ. ೩-೯೪); ಅಗಲ್ಕೆ ಮುಳಿಸೆಂಬೆರಡುಂ ಗಡ ಕಾಳಕೂಟಮಾಗಮರ್ದಿನ ಕಾಳಕೂಟದೊಡವುಟ್ಟಿದಳಿಂದವೆನೆನ್ನ ನಲ್ಲಳಂ (ಆದಿಪು. ೦೨-೨೮); ನಲ್ಲಳೊಲುಮೆಗಾಗಿ ಸಖಿ ಸಖಿ ದೂತಿಯರೆಲ್ಲರ ಮನ್ನಿವನಂತೆ (ಧರಪ. ೨-೪೫). ೨. ಹೆಂಡತಿ; ಪತ್ನಿ: ಎನ್ನ ನಲ್ಲಳೆಯೆಂದು ಪ್ರಳಾವಂಗೆಯ್ದು (ವಡ್ಡಾ. ೦೯೦-೫); ಅಂತು ಕಂಡು ಮನಂಗೊಂಡೆತ್ತಿ ಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸ ನಿಟ್ಟೊಡೆ (ಪಂಪಭಾ. ೦-೪೬ ಪ). ನಲ್ಲಿರ್ = (ಸಂಬೋಧನಾ ರೂಪದಲ್ಲಿ) ಒಳ್ಳೆಯವರೂ: ನಲ್ಲದಿರಿಂ, ಅಣ್ಣಂದಿರ್, ಓಡಿಂ. ತಡೆಯ ಪೊಟ್ಟಲ್ತು, ಓ ನಲ್ಲಿರ್ (ಅಶ್ವತ್ಥಾ. ೩೩-೬೩೭). ℙ ತಮಿಳಿನಲ್ಲಿ ವಂಧ್ಯವಂಪುರುಷವಾಚಕ ಪ್ರತ್ಯಯವು ಗುಣವಚನಾದಿಗಳಿಗೆ ಹತ್ತಿ ಸಂಬೋಧನಾರ್ಥವನ್ನೂ ಕೊಡುತ್ತದೆ. ಉದಾ–"ನಲ್ಲೀರ್=ಒಳ್ಳೆಯವರೇ!" "ಪೆರಿಯಾಯ್= ಹಿರಿಯಂವನೇ (ಳೇ)!" (ಸಮಾಲೋ. ೨೫೨). [ನಲ್ + – ಅ$_7$]

ನಲ್ಲ$_2$ (ಗು). ೧. ಒಳ್ಳೆಯ; ಚೆನ್ನಾದ; ಶ್ರೇಷ್ಠವಾದ. 'ನಲ್ಲಗುಣ', 'ನಲ್ಲಪಾಲ್' ಪರಾ. ೨. ಅಂದವಾದ; ಸುಂದರವಾದ. 'ನಲ್ಲವೆಣ್' ಪರಾ. ೩. ಶುದ್ಧವಾದ; ನಿರ್ಮಲವಾದ. 'ನಲ್ಲತೈಲ', 'ನಲ್ಲಭಕ್ತಿ' ಪರಾ. ೪. ಶುಭಕರವಾದ; ಮಂಗಳಕರವಾದ. 'ನಲ್ಲವರಕೆ' ಪರಾ.

[ದೇ.ತ ತಮಿ. ಮಲ. ನಲ್ಲ, ತುಳು. ನಲ್, ನಲ; ಕೊಡ.ನಲ್ಲೇ; ತೆಲು. ನಲುವು; ಗೊಂಡಿ. ನೆಲಾ]

ನಲ್ಲ$_3$ 'ನೆಲ್ಲ' ನೋ.

ನಲ್ಲಂಬು (ನಾ). ೧. ಮೋಹವನ್ನುಂಟುಮಾಡುವ ಬಾಣ: ನಲ್ಲಂಬಿಂದಿಸೆ ಪುಷ್ಪಬಾಣನೆರ್ದೆಯಂ ಬೆಂಬಿಟ್ಟು ಬೆಳ್ಳಾಗಿ ತಕ್ಕೆಲ್ಲಂ ಕೆಟ್ಟಿರ್ದೆಗೆಟ್ಟು (ಕಾಕ್ಕಸಾ. ೫೬೦ ಕೂದ್ರಳ); ಪುಲ್ಲಶರಂಗಿಸುವೆಡೆಗಿವೆ ನಲ್ಲಂಬುಗಳಿನಿಸು ತುಱುಗಿ ಮಲರ್ದಲರ್ದೆಸೆವೀ ಮೊಲ್ಲೆಯುಮೊಲಿಸಿದ ನಲ್ಲರ ಲಲ್ಲಿಯುಂ ಮಾರಾರ ಮನಮುಮಂ ಸೋಲಿಸದೇ (ಆದಿಪು. ೦೧-೦೦೪); ಅಂಗಜಂ ಪೆಲ್ಲಗೆ ಪಾರ್ದಾರ್ದಾಗಳುಂ ಕಿನ್ನರಯುವತಿ ಮೃಗೀವ್ಯಾತೆಮಂ ತನ್ನ ನಲ್ಲಂಬುಗಳಿಂದೆಚ್ಚೆಚ್ಚು ಮೆಚ್ಚಂ ಸಲಿಸುವಂ (ಪಂಪಭಾ. ೪-೨೩). ೨. ತೀಕ್ಷ್ಣವಾದ ಬಾಣ; ಹರಿತವಾದ ಬಾಣ: ತನ್ನ ನಲ್ಲಂಬುಗಳಿಂದಮಾರ್ದಿರದಡಂತಿರೆ ಭೂಭುಜರೆಲ್ಲಮಲ್ಲಿ ಬಿಲ್ಲುಂಬೆಱಗಾಗೆ (ಪಂಪಭಾ. ೦೦-೪೨); ಅವರ ಪಿಡಿವ ಬಿಲ್ ಬಿಲ್ಲೆಮ್ಮಂಬುಗಳುಮವರಿತ್ತ ನಲ್ಲಂಬುಗಳೆನೆ ಬಟಿಗಾಯದಂತು ಚಲಮನೆ ಕಾಮೆಂ (ಪಂಪಭಾ. ೦೨-೪೯). [ನಲ್ + ಅಂಬು$_3$]

ನಲ್ಲಗನ್ನೆ (ನಾ). ಒಂದಂ ಬಗೆಯಂ ಗಿಡ: ಕೊರ್ಮೆ, ಗನಿಜೆಲೆ, ಈಜಿಮುಳ್ಳು, ಕೊಂಬೆ, ನಲ್ಲಗನ್ನೆ (ಮೃಪಿಗಿ. ೦೫-೨೭೦). [?]

ನಲ್ಲಗುಣ (ನಾ). ಒಳ್ಳೆಯ ಗುಣ ; ಸದ್ಗುಣ : ಬಳಿಯಂ ಬೆಳಗಿಪ್ಪಂ ತಾಂ ತನ್ನ ನಲ್ಲಗುಣಂಗಳಿಂ (ಸೌನಂದ. ೨-೩೪). [ನಲ್ಲ2 + ಗುಣ]

ನಲ್ಲತನ (ನಾ). ಒಳ್ಳೆಯತನ ; ಸಜ್ಜನಿಕೆ : ನಲ್ಲತನಕೆ ಬಲ್ಲತನಕೆ ಲೋಕದೊಳು ನೀನಲ್ಲದುಂಟೆ ನಿನ್ನ ನಡೆಗೆ ನಲ್ಲರು ನಾರಿಯರೊಲಿವರು (ಭರತ. ೭೬-೩೯).

[ನಲ್ಲ2 + – ತನ]

ನಲ್ಲತೈಲ (ನಾ). ಒಳ್ಳೆಣ್ಣೆ ; ಶುದ್ಧವಾದ ಎಣ್ಣೆ ; ಅಚ್ಚಎಣ್ಣೆ : ನಲ್ಲತೈಲ ದೊಳಡರ್ವ ಸೊಡರಾ ಎಳ್ಳಿನಿಂದಲರುವುದೆ (ಬಸವು. ೫೦-೩೭).

[ನಲ್ಲ2 + ತೈಲ1]

ನಲ್ಲತ್ತೂರ್ (ನಾ). ಒಂದು ಊರಿನ ಹೆಸರು : ಪುತ್ತೂರುಡೆ ಶಿವಮಾರಮ್ಮಂ ದುಣ್ಡಗೆರ್ಗ್ಗಂ ನಲ್ಲತ್ತೂರೊಡೆ ಬಗ್ಗಮನೆ ಬಳೆಗಮುಂ ಅಯ್ದೂಮ್ಬು . . . ಕೊಟ್ಟೂದು (ಎಕ. X, ಕೋಲಾರ. ೨೩೧-೩ ; ಸು. 800 ?).

[? + ಊರ್]

ನಲ್ಲಪಾಲ್ (ನಾ). "ಒಳ್ಳೆಯ ಅದೃಷ್ಟ, ಸೌಭಾಗ್ಯ" (ಅಂತಿಗೊ. ಕೋಶ) : ಈಯೊಂದು ನಲ್ಲಪಾಲೆನಗೆ ತಾನ್ ಬಂದತ್ತು (ಅಂತಿಗೊ. ೧೯-೩೮೪).

[ನಲ್ಲ2 + ಪಾಲ್2]

ನಲ್ಲಭಕ್ತಿ (ನಾ). ಶುದ್ಧವಾದ ಭಕ್ತಿ : ನಲ್ಲಭಕ್ತಿಯೊಳಿರ್ದು ಏಣಾದಿನಾಥ ಭೂವಲ್ಲಭನ ಭಕ್ತಿಗಾನಂದಿಸಿ (ಗುರುಪಾ. ೩-೪೫). [ನಲ್ಲ2 + ಭಕ್ತಿ]

ನಲ್ಲಮನ (ನಾ). ೧. ಒಳ್ಳೆಯ ಮನಸ್ಸು. ೨. ಅನುರಾಗದಿಂದ ಕೂಡಿದ ಮನಸ್ಸು. 'ನಲ್ಲಮನಂದೋಱು' ಪರಾ. [ನಲ್ಲ2 + ಮನ1]

ನಲ್ಲಮನಂದೋಱು (ಕ್ರಿ). ೧. ಒಳ್ಳೆಯ ಮನಸ್ಸನ್ನು ತೋರಿಸು. ೨. ಒಲವನ್ನು ತೋರಿಸು ; ಅನುರಾಗವನ್ನು ವ್ಯಕ್ತಪಡಿಸು : ಈಕೆಯು ಮೆನಗೆರಡಱಿಯದ ನಲ್ಲಮನಂದೋಱುವುದು ಸಲ್ಗೆದೋಱುವುದುಮಾವುದು ದೋಸಂ (ಪಂಪಭಾ. ೫-೦೭ ವ). [ನಲ್ಲಮನ + ತೋಱು]

ನಲ್ಲಮುದ್ದು (ನಾ). ಪ್ರೀತಿಯ ಮುದ್ದು,-ಲಲ್ಲೆ : ನಲ್ಲಮುದ್ದಿಗೆ ಬಯಸುವಂ ಮನದಲ್ಲಿ ಕೇಳ್ವನು ನಸುತೊದಲಿಸುವ (ಬಸವು. ೪೭-೩೨).

[ನಲ್ಲ2 + ಮುದ್ದು]

ನಲ್ಲಯ್ಯ (ನಾ). ಒಬ್ಬಾತನ ಹೆಸರು : ದಾತಾರಂ ದೇಯಿಮಯ್ಯಸೆಟ್ಟಿಯರಗಂ ಮುಟ್ಟಿಂ [ನ]ಲ್ಲಯ್ಯನುಂ ಮರಳಯ್ಯನುಂ (ಸೌಇಇ. XX, ೧೯-೭೦ ; 1015). [ನಲ್ಲ2 + ಅಯ್ಯ1]

ನಲ್ಲರಿವು (ನಾ). ಒಳಿತು ಕೆಡುಕುಗಳ ತಿಳಿವಳಿಕೆ ; ಸದಸದ್ವಿವೇಕ : "ಒಪ್ಪುತಪ್ಪುಗಳ ಪ್ರಜ್ಞೆ ; ಸದಸದ್ವಿವೇಚನೆ . . . ಒಳುಪಿನರಿವು ; ನಲ್ಲರಿವು" (Conscience. ಇಂಕನಿ). [ನಲ್ + ಅರಿವು (<ಅಱಿವು)]

ಲ್ಲರೂಪು (ನಾ). ಅಂದವಾದ ರೂಪ ; ಸುಂದರವಾದ ರೂಪ: ನಲ್ಲರೂಪಿಲ್ಲೆಂದೊಡೀಕ್ಷಿಸು ಚೆಲ್ಲೆಗಂಗಳಿಂ (ಬಸವು. ೪೦-೧೪).

[ನಲ್ಲ2 + ರೂಪು]

ನಲ್ಲಲರ್ (ನಾ). ಅಂದವಾದ ಹೂವು ; ಸುಗಂಧಭರಿತವಾದ ಪುಷ್ಪ : ನಲ್ಲಲರ ಕಂಪು ಪೀನಸದಲ್ಲೊಂದಿದವಂಗೆ ಸೊಗಸದಿರೆ ಕೆಟ್ಟಪುದೇ (ಉದ್ಯಟ. ೦-೧೭). [ನಲ್ + ಅಲರ್2]

ನಲ್ಲಲೋಹ (ನಾ). ಉತ್ತಮವಾದ ಧಾತು,-ಲೋಹ ; ಚಿನ್ನ : ಬೆಳ್ಳಿ ಮೂಕುತಿ ಮುರುಹು ತಾಂಬ್ರಂ ನಲ್ಲಲೋಹಂ ಕಂಚು ಮೊದಲಾದೆಲ್ಲವಂ ಒಟ್ಟೈಸಿ ತರಿಸಿ (ಬಸವು. ೧೬-೮). [ನಲ್ಲ2 + ಲೋಹ]

ನಲ್ಲವರಕೆ (ನಾ). ಮಂಗಳಕರವಾದ ಹರಕೆ ; ಶುಭಾಶೀರ್ವಾದ : ಅವರ್ ನಲ್ಲವರಕೆಯಂ ಪರಸುವುದುಂ (ನೇಮಿಪು. ೯-೮೬ ವ). 'ನಲ್ವರಕೆ' ಪರಾ. [ನಲ್ಲ2 + ಪರಕೆ1]

ನಲ್ಲವಸ್ತು (ನಾ). ಪ್ರಿಯವಾದ ವಸ್ತು : ಗೌರೀವಲ್ಲಭಂ . . . ನಲ್ಲವಸ್ತುಗಳಂ ಬಯಸುವಂ (ಬಸವು. ೨೫-೧೮). [ನಲ್ಲ2 + ವಸ್ತು]

ನಲ್ಲವೂ (ನಾ). = ನಲ್ಲಲರ್ : ಅವಿರಳಮಾಗಿ ಝಂಕರಿಸುತುಂ ವನವಲ್ಲಿಯ ನಲ್ಲವೂಗೆ ಪಾಱುವ ಮದಭೃಂಗಸಂಚಯ (ಕುಸುಮಾ. ೧೪-೨೩).

[ನಲ್ಲ2 + ಪೂ2]

ನಲ್ಲವೆಣ್ (ನಾ). ಅಂದವಾದ ಹೆಣ್ಣು ; ಸುಂದರಸ್ತ್ರೀ : ನಲ್ಲವೆಂಗಳ ಪೆತ್ತವರು ಪೆಣ್ಣ ತಂದರದಿಲ್ಲದಿದ್ದವರು ಭೂಷಣವ ಝಲ್ಲಿಪಟ್ಟೆಗಳು ಮುಂತಾದವ ತಂದಿದ್ದರೆಲ್ಲರ ಕರೆಸಬೇಕೆಂದ (ಭರತ. ೩೧-೦೬). [ನಲ್ಲ2+ ಪೆಣ್]

ನಲ್ಲವೊಣರ್ (ನಾ). ನಲ್ಲರ ಜೋಡಿ ; ಪ್ರಿಯ ಪ್ರೇಯಸಿಯರ ಜೊತೆ : ಕಂದದೊಳ್ ಭುಜಲತಾವಳಿ ತಳ್ತಿರೆ ಬಾಯೊಳಗೊಂದಿ ಬಾಯ್ ತೊಡರ್ದಿರೆ ಕೂಡೆ ನಿದ್ದೆತಿಳಿದೆರ್ದುವು ನಲ್ಲವೊಣರ್ ನಿಶಾಂತ್ಯದೊಳ್ (ಸೂಕ್ತಿಸು. ೯-೬೦). [ನಲ್ಲ2 + ಪೊಣರ್2]

ನಲ್ಲವೋಗಂಡಿಕೆ (ನಾ). ತನ್ನ ಸಮಾನರಿಲ್ಲವೆಂದು ಭಾವಿಸುವಿಕೆ : ಅತಿಶಯವಾದ ಒಣಜಂಬ ; ಅಧಿಕವಾದ ದುರಹಂಕಾರ : "ಆಹೋ ಪುರುಷಿಕಾ ಎಂಬುದು ನಲ್ಲವೋಗಂಡಿಕೆ[ಒಣಜಂಬ, ವೃಥಾದರ್ಪ]" (ಹಲಾಯು. ೧೨೯-೯೯). [ನಲ್ಲ2 + ಪೋಗಂಡಿಕೆ]

ನಲ್ಲಳಿ (ನಾ). (?) : ಮಿಸುಗುತುಮಿರ್ಪ ಬಲ್ಲೊನೆಯ ಸನ್ನೆಗೆ ಕಾಂಚನಕೇತಕೀ ದಳಪ್ರಸವದಳಂಗಳೋಲೆಗೊಡೆ ನಲ್ಲಳಿಗಪ್ಪುವು ನಂದನಂಗಳೊಳ್ (ಸೂಕ್ತಿಸು. ೪-೩೪). [?]

ನಲ್ಲಾಉ 'ನಲ್ಲಾವು' ನೋ.

ನಲ್ಲಾಟ (ನಾ). ಉಲ್ಲಾಸಕರವಾದ ಆಟ ; ಚೆಲ್ಲಾಟ ; ವಿನೋದ : "ಆಟ, ಕೇಳಿ, ಚಿಣ್ಣಾಟ (ಕೂಸಾಟ), ಹುಡುಗಾಟ, ನಲ್ಲಾಟ" (ಕಂನುಹು. ೭೮) ; ಪುಲ್ಲೆಗಂಗಳೆ[ಳೆಳೆ]ಯರ ಚಲ್ವಿಕೆಗಳ ಕಂಡು ನಲ್ಲಾಟ ವಾಡುವೆ ಖಲ್ಲಮನವೆ (ಮೈಲಾರ. ೧೯೮-೮). [ನಲ್ + ಆಟ]

ನಲ್ಲಾಮ (ನಾ). ಒಂದು ಬಗೆಯ ತೆರಿಗೆ : ಚಳಾಯ ದಾಯದೆಱ ಹಡುವರ ಬೀರವಣ ನಲ್ತೆತ್ತು ನಲುಗಂಟಿ ನಲ್ಲಾಮ ದಣ್ಡಾಯ ತವುಡೆ ಯೊಳಗಾದ ಸಮಸ್ತ ಕಿಱುಕುಡವೆಲ್ಲವಂ (ಎಕ. V, ಬೇಲೂರು. ೫೯-೮೭ ; 1117). 'ನಲ್ಲಾವು' ಪರಾ.

[P ಇದು 'ನಲ್ಲಾವು' ಎಂಬುದರ ಅಪಲಿಖಿತವಿರಬಹುದು]

ನಲ್ಲಾಲ (ನಾ). ಒಂದು ಊರಿನ ಹೆಸರು : ಕೊಱಿಕುಂದವಿಷಯೇ ನಲ್ಲಾಲನ್ನಾಮಗ್ರಾಮಃ (ಮೈಆರಿ. ೧೯೨೪, ೭೯-೩೪ ; ಸು. 6ನೆಯ ಶತ).

[?]

ನಲ್ಲಾವು,ನಲಾವು, ನಲ್ಲಾಉ, ನಾಲ್ಲಾವು (ನಾ). ಒಳ್ಳೆಯ ಹಸುಗಳ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ : ಎಳ್ಳು ಜೋಳ ನಲ್ಲಾವು ನಲ್ಲೆತ್ತು ಕಳುಕು ಕಂಡಿಕೆವಣ . . . ಆಗಾನ್ತುಕವೊಳಗಾಗಿ ಸರ್ವಾಯ ಶುದ್ಧಿ (ಎಕ. VI, ತರೀಕೆ. ೨೦-೨೮ ; 1186); ಪುನಿರ್ಬ್ಬರು ಮಹಾಜನಂಗಳ ಭೋಜನಕ್ಕಂ ಬಿಟ್ಟ ನಲ್ಲೆಂಮೆ ನಲ್ಲಾವು . . . ಧಾರಾಪೂರ್ವ್ವಕಂ ಮಾಡಿ ಕೊಟ್ಟರು (ಸೌಇಇ. IX-1, ೩೪೯-೭ ; 1282). **ನಲಾವು** : ಶ್ರೀಕರಣ ಸುಂಕ ಪಂನಾಯ ಅಡಕೆಯ ಸುಂಕ ಹಣವೊಂದಱ ಸೇಸೆ ವೀರಸೇಸೆ ತೊಡರು ನಲಾವು ನಲ್ಲೆತ್ತು ಕಳಕು ಕಂಡಿಕೆವಣ . . . ಧಾರಾಪೂರ್ವಕಂ ಮಾಡಿ ತಾಂಮ್ರಶಾಸನಮಂ ಕೊಟ್ಟರು (ಮೈಆರಿ. ೧೯೪೦, ೩-೨೫ ; 1215). **ನಲ್ಲಾಉ** : ಗ್ರಾಮಗದ್ಯಾಣ ನಲ್ಲಾಉ ಸುಂಕ ತಳವಾರಿಕೆ (ಎಕ. VIII, ತೀರ್ಥಹ. ೧೬೮-೨೬ ; 1420). **ನಾಲ್ಲಾವು** : ನಾಲ್ಲಾವು ನಲ್ಲೆತ್ತು ರ್ಗವ೨ (ಎಕ. V, ಹಾಸನ. ೮೪-೬೩ ; 1230). 'ನಲ್ಲೆತ್ತು' ಪರಾ. P ಇಲ್ಲಿ ಮುಖ್ಯೋಲ್ಲೇಖವನ್ನುಳಿದು ಮಿಕ್ಕುವು ಅಪಲಿಖಿತ.

[ನಲ್ + ಆವು]

ನಲ್ಲಿ1, ನಳ್ಳಿ3, ನಳ್ಳಿ2 (ನಾ). ೧. ನಾಳ ; ಕೊಳವೆ : "ನಲ್ಲಿ – ನಾಲೀ = ನಳ್ಳಿ" (ತದ್ಭಕೋ. ೨೦). ೨. ನೀರನ್ನು ಪೂರೈಸುವ ಕೊಳವೆ ;

ಕೊಳಾಯಿ ; ನಳ : ನನ್ನ ವಾಗ್ವಾಹಿನಿ ಬೇಸಗೆ ದಿನದ ನಲ್ಲಿಯ ನೀರಿನಂತೆ ತೊಟತೊಟ ಎಂದು ಕ್ಷೀಣವಾಗಿ ಜಿನುಗುತ್ತಿತ್ತು (ನಂಟರು. ೬೯) : ಎಲ್ಲಿ ತಿರುಗಿದರಲ್ಲಿ ಅಮೃತ ಸೂಸುವ ನಲ್ಲಿ (ಚಂಡಮ. ೮-೧೧೦) ; ಬೆಳಗ್ಗೆ ಆಕೆ ಎಂದಿನಂತೆ ನೀರಿನ ನಲ್ಲಿಯನ್ನು ತೆರೆದಿದ್ದು ಕೇಳಿಸಿತು (ಒಂಟಿದ. ೬೯). ನಳ್ಳಿ₃ : ೨. ಶರೀರದಲ್ಲಿರುವ ಯಾವುದೇ ನಾಳ,-ತಂತು : ಬೆನ್ನ ನಳಿಯಱಿದಂಗೆ ಮನ್ನಣೆಯು ಪಿರಿದಕ್ಕು ಉನ್ನತವಕ್ಕು ಸಿರಿಯಕ್ಕು (ಸರ್ವಜ್ಞ. ೫೪೭). ೩. ಕೊಳವೆ ಅಥವಾ ನಾಳದಂಥ ಸಾಧನ : ಅವನು ಟೆಲಿಫೋನಿನ ನಳಿಗಳನ್ನು ಕೆಳಗಿಟ್ಟು, ಕಳ್ಳನ ಈ ಕಿವಿಮಾತುಗಳನ್ನು ಯೋಚಿಸುತ್ತ ಕುಳಿತುಕೊಂಡನು (ಕಳ್ಳಕಾ. ೧೮) ; ರಾವಜೀಕಾಕಾನ ಜೋಡುನಳಿಯ ಬಂದೂಕಿನಿಂದ ಅಗ್ನಿಕಿಡಿ ಸಿಡಿಯಬೇಕು (ದೀಪಹ. II, ೨೨೨). ನಳ್ಳಿ₂ : ೧. ಕೆಲವು ಮನೆಗಳಲ್ಲಿ ಕೊಳಚೆ ನೀರು ಹೋಗಲು ನಳ್ಳಿಗಳಿರುತ್ತವೆ (ಅಡುಸೌ. ೪೦).

ನಲ್ಲಿ ನಿಲ್ಲು = ನೀರು (ಕೊಳಾಯಿಯಲ್ಲಿ) ನಿಂತುಹೋಗು : ನೀರು ತುಂಬಿಟ್ಟುಕೊಳ್ಳುವಷ್ಟರಲ್ಲಿ ನಲ್ಲಿ ನಿಂತುಹೋಯಿತು (ರೂಢಿ). ನಲ್ಲಿ ಬರು = (ಕೊಳಾಯಿಯಲ್ಲಿ) ನೀರು ಬರು : ಕಾಲಕ್ಕೆ ಸರಿಯಾಗಿ ಈಚೀಚೆಗೆ ನಲ್ಲಿ ಬರದೆ ತುಂಬಾ ಕಷ್ಟವಾಗಿದೆ (ರೂಢಿ). [< ಸಂ. ನಾಲಿ, ನಾಲೀ]

ನಲ್ಲಿ₂ (ನಾ). ಒಂದು ಬಗೆಯ ಭೂಮಿ (?) : ಮೂವತ್ತೆರಡು ಹೊಂನಿಗೆ ಕ್ರಯವ ಕೊಂಡ ಮಾನಿಯ ಬೈಲ ಒಳಗೆ ನಲ್ಲಿ ಹುಲ್ಲಿ ಸಹ ಬೀಜವರಿ ಖಂ ರಕ್ಕಂ(ಎಕ. VI, ಕೊಪ್ಪ. ೩೨-೧೬ : 1448). [?]

ನಲ್ಲಿತಿರುಪು (ನಾ). ಕೊಳಾಯಿಯಿಂದ ಬೇಕಾದಾಗ ನೀರನ್ನು ಹರಿಬಿಡಲೂ ಬೇಡವಾದಾಗ ತಡೆಯಲೂ ಅನುಕೂಲವಾಗುವಂತೆ ಅಳವಡಿಸಿರುವ ತಿರುಪು : ನಲ್ಲಿತಿರುಪು ಸಡಿಲವಾಗಿ ನೀರು ವ್ಯರ್ಥವಾಗಿ ಸುರಿಯುತ್ತಿದೆ (ರೂಢಿ). [ನಲ್ಲಿ₁ + ತಿರುಪು₂ (< ತಿರಿಪು₂)]

ನಲ್ಲಿಱುಂಪೆ (ನಾ). ೧. ಇರುವೆಗಳಲ್ಲಿ ಒಂದು ಬಗೆ. ೨. ಕರಿ ಇರುವೆ ; ಕಟ್ಟಿರುವೆ : ಧರೆಯೊಳ್ ನಂಜಿಲಿ ನಲ್ಲಿಱುಂಪೆ ಮೊದಲಾದೆಲ್ಲಂ ವಿಷಗ್ರಾಹಿಗಳ್ (ಖಪುದ. ೧-೬೯).

[ನಲ್ಲ₀ + ಇಱುಂಪೆ. / ತಮಿ. ತೆಲು. ನಲ್ಲ = ಕಪ್ಪು]

ನಲ್ಲುಗುಳು (ನಾ). (ಮಕ್ಕಳ) ಆಕರ್ಷಕವಾಗಿರುವ ಉಗುಳು : ಉಸುರಿನಿಂದುಣ್ಮುತಿಹ ಸೊಲ್ಲುಗಳ ಗಲ್ಲುಗಳ ವಿಸರದಿಱುಬಿನೊಳಿಳಿವ ಜೊಲ್ಲುಗಳ ನಲ್ಲುಗ{ಗು}ಳ ಪಸರಿಸುವ ಕೂಸಾಟದಾಟಗಳ ನೋಟಗಳ ಪಸುಳೆ ಪರಿಶೋಭಿಸಿದಳು (ಪುದೇಪು. ೧೭-೧೦).

[ನಲ್ + ಉಗುಳು₂ (<ಉಗುಟ್ಟು₂)]

ನಲ್ಲುಣಿಸಿಕ್ಕು (ಕ್ರಿ). ಸವಿಯಾದ ಊಟವನ್ನು ಬಡಿಸು ; ರುಚಿಯಾದ ತಿನಿಸುಗಳನ್ನು ನೀಡು : ಪರಿಮಳವಾರಿಯಿಂ ಜಳಕಮಾಗಿಪ ನಲ್ಲುಣಿಸಿಕ್ಕುವ . . . ಬೆಳ್ಳೆಲೆಯಂ ಮಡಿದೀವ ದಿವ್ಯಚಾಮರಮನೆ ಬೀಸುವಗ್ಗದ ಎದಗ್ದೆ ಯರೊಪ್ಪಿರೆ ದೇವಿ ರಂಜಿಪಳ್ (ರಾಜಶೀ. ೪-೪೧).

[ನಲ್ಲುಣಿಸು + ಇಕ್ಕು]

ನಲ್ಲುಣಿಸು (ನಾ). ಸವಿಯಾದ ಊಟ ; ರುಚಿಕರವಾದ ಆಹಾರ : ಒಳ್ಳೆಯ ತಿನಿಸು : ಅಱುತೆರ್ದೆಯಾಱ್ ಪೀರ್ದುಂ . . . ಗೆಳೆವಕ್ಕಿಯೆಲ್ಲಮಂ ನೆಱ್ ಬಱಿಯಟ್ಟಿ ನಲ್ಲುಣಿಸನೂಡಿಯುಮಾಮ್ರದ ತೋರವಣ್ಣೊಳೊಂದಱ ರಸದಂತುಗಾಣದೆ ದಲೊಂದು ಶುಕಂ ಮಧುಸಮ್ಮದೋತ್ಸುಕಂ (ಚಂದ್ರಪು. ೭-೪೭) ; ನಸು ಬಿಸಿಯಪ್ಪ ನಲ್ಲುಣಿಸಿನಿಂ . . . ಏಸಕದ ಶೋಣ ವರ್ಣವಸನಾವೃತದಿ ಜನಮಾಗಳಿಂತು ಜೀವಿಸಿತಿನಿತಲ್ಲದಂದುಱಿವುದೇ ಹಿಮದಾಗರಮಾದ ಮಾಗೆಯೊಳ್ (ಕುಸುಮಾ. ೭-೨೩) ; ಮಜ್ಜನವ ಮಾಡಿಸಿ ನಲ್ಲುಣಿಸನಿಟ್ಟನುಪಮಸ್ನೇಹದಲಿ ಸಂತುಷ್ಟತೆಯ ಮಾಡಿದಳು (ಸಾಳ್ವಭಾ. ೧೭-೩೬) ; ನಲ್ಲುಣಿಸುಗಳನಿಟ್ಟು ತಂದಿಹನ್ (ಶ್ರೀರಾಮಾ. ೧೫೫-೮೫). [ನಲ್ + ಉಣಿಸು₂]

ನಲ್ಲುಲಿ (ನಾ). ೧. ಹಿತವಾದ ಮಾತು; ಒಳ್ಳೆಯ ನುಡಿ: ಗಾನದ ಮೆಲ್ಲುಲಿ ಶ್ರುತಿಶಾಸ್ತ್ರವ್ಯಾಖ್ಯಾನದ ನಲ್ಲುಲಿ . . . . ಎಸೆಗಾ ಹುರದೆಲ್ಲೆಡೆಯರ ಬೀದಿಯೊಳು (ಉದ್ಯದೇ. ೨-೩೭). ೨. ಮಧುರವಾದ ಧ್ವನಿ ; ಇಂಪಾದ ಉಲಿ : ಹೆಲನರಿನ್ ಮೊದಲೆದ್ದುದೊಂದಾರ್ಪು - ಬಲ್ಲುಲಿಯ, ನಲ್ಲುಲಿಯ ಪಾಡು, ದೀವಿಕರೆಯರೆಗಳಿನ್ ಮೊಳಗೆ ಮಾರುಲಿಗಳ್ (ಪಾರಸಿ. ೧೫-೩೫೩).

[ನಲ್ + ಉಲಿ₂]

ನಲ್ಲೂರ್, ನಲ್ಲೂರು (ನಾ). ಒಂದು ಊರಿನ ಹೆಸರು : ತತಃ ಗ್ರಾಮತ್ರಯ ಸೀಮಾ ಅಶ(ಶ್ವ)ತ್ಥ ತತ ನಲ್ಲೂರ್ತಟಾಕಸ್ಯ ದಕ್ಷಿಣಾನ್ತಭಾಗ (ಮೈಅರಿ. ೧೯೪೨, ೭೫-೧೧೮ : 819). ನಲ್ಲೂರು : ಪೂವಿನ ಪುಲ್ಲಿಮಙ್ಗಲ ಕೂತನಿಡುನಲ್ಲೂರು ನಲ್ಲೂರು ಕೊಮರಙ್ಗುನ್ದು ಇಗ್ಗಲೂರು (ಎಕ. IX, ಬೆಂಗಳೂ. ೮೩-೬ ; ಸು. 890) ; ಇದಕ್ಕೆ ಸಾಕ್ಷಿ . . . ಕಿಱಿಯ ಮುಗುಳಿ ಮುಟ್ಟಿವಳ್ಳಿ ನಲ್ಲೂರು ಮಾಗಣ್ಡ ತೇಗುರು (ಎಕ. VI, ಚಿಕ್ಕಮ. ೪೨-೨೨ ; 959) ; × × × ಚ ಗಾವುಣ್ಡನುಂ ನಲ್ಲೂರೆಱಿಯಂಗ ಗಾವುಣ್ಡ × × × (ಎಕ. I (R), ೬೫-೧೨ ; IIನೆಯ ಶತ). [ನಲ್ಲ₂ + ಊರ್]

ನಲ್ಲೂರು 'ನಲ್ಲೂರ್' ನೋ.

ನಲ್ಲೆ (ನಾ). ೧. ಪ್ರಿಯೆ ; ಕಾದಲೆ : ನಕ್ಕನು ಕೃಷ್ಣ ನಲ್ಲೆಯ ಮಾತ ಕೇಳ್ದು (ಮೋಹತ. ೪-೨೨) ; ನಲ್ಲೆಯಂ ನೆನೆಯುತ್ತ ಬಿಕ್ಕಿದಂ (ಸೌನಂದ. ೭-೩) ; ಬದುಕಿನೊಳವಂ ಕಡೆಗಣ್ಣ ಕೂಡಲಿಂದರಿವಂತೆ ನಲ್ಲೆ, ನಿನ್ನೊಳವನೇತರಿಂ ನಾನರಿಯ ಬಲ್ಲೆ? (ಗಿಳಿವಿಂ. ೨೮-೩೫); ನಲ್ಲೆ ವರಿಸಿದಳೆನ್ನ (ಅನಿಕೇ. ೯-೭). ೨. ಹೆಂಡತಿ : ನಲ್ಲೆ ಲಕ್ಷ್ಮೀಮತಿಯು ಸಹ ತಾನುಲ್ಲಸದಿ ಕುಳ್ಳಿರಲು (ನಾಗಷ. ೩೦-೫೪). [ನಲ್ಲ₁ + - ಎ₂]

ನಲ್ಲೆಣ್ಣೆ (ನಾ). ಅಡುಗೆಗೆ ಉಪಯೋಗಿಸುವ ಎಣ್ಣೆ ; ಒಳ್ಳೆಯ ಎಣ್ಣೆ : ಎಳೆಯ ಬಾಳೆಯ ಹೂವಿನೆಸಳ ಕಾಯ್ಗಳನು ಸಂಬಳಿಸಿದಾ ಹುಡಿಗೆ ನಲ್ಲೆಣ್ಣೆ ಸುಣ್ಣವನಿಕ್ಕಿ ತಿಳಿಯಕ್ಕಿಗಚ್ಚಿನಿಂದುಕ್ಕರಿಸಿ (ಸೂಪಶಾ. ೪-೬೪).

[ನಲ್ + ಎಣ್ಣೆ]

ನಲ್ಲೆತ್ತು (ನಾ). ೧. ಒಳ್ಳೆಯ ಎತ್ತು ; ಉತ್ತಮವಾದ ವೃಷಭ : ನಲ್ಲೆತ್ತುವಿಡಿದು ನಾಡೊಳಗೆಲ್ಲಂ ಪೆಸರ್ವೆತ್ತ ಜೀವದನವಂ ಕೊಂಡೊಯ್ದಲ್ಲಲ್ಲಿ ವೀರಪೂರ್ಣಂ ನಿಲ್ಲದೆ (ಪುಷ್ಯಾಸ್ತ್ರ. ೬-೧೮) ; ನಲ್ಲೆತ್ತು ಬಂಡಿ ಬಲವಿಲ್ಲದ ಆರಂಬ ಕಲ್ಲು ಕಸಗಳನು ಬಿಟ್ಟಾತ ಹೊಲದೊಳಗೆ ಹುಲ್ಲನೇ ಬೆಳೆವ (ಸರ್ವಜ್ಞ. ೦೩೬೦). ೨. ಒಳ್ಳೆಯ ಎತ್ತುಗಳ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ : ನಲ್ಲಾವು ನಲ್ಲೆತ್ತು ಕಳುಕು (ಎಕ. VI, ತರೀಕೆ. ೨೦-೨೮ : 1185) ; ನಲಾವು ನಲ್ಲೆತ್ತು ಕಳುಕು ಕಂಡಿಕೆವಣ (ಮೈಅರಿ. ೧೯೪೦, ೩-೨೫ ; 1215) ; ನಲ್ಲೆತ್ತು ನಲ್ಲಖಡ್ಡಾಯಗೋಣಿ ಕವಡಿಯಿಲ್ಲ (ಎಕ. IV (R), ಕೊಳ್ಳೇಗಾ. ೬೨-೩೦ ; 1354) ; ಕ್ರಯ ಕಡ್ಡಾಯ ನಲ್ಲೆತ್ತು ನಲ್ಲೆಮ್ಮೆ ವೊಂಬಳಿ × × × (ಮೈಅರಿ. ೧೯೩೪. ೫೩-೧೧ ; 1405) ; ಕ್ರಯ ಕಡಾಯ ಭಿಟ್ಟಿ ಕೊಟ್ಟ ನಲ್ಲೆತ್ತು ನಲ್ಲೆಮ್ಮೆ (ಮೈಅರಿ. ೧೯೩೪, ೨೭-೨೦ : 1430).

[ನಲ್ + ಎತ್ತು₂ (< ಎಟ್ಟು₁)]

ನಲ್ಲೆಮ್ಮೆ (ನಾ). ೧. ಒಳ್ಳೆಯ ಜಾತಿಯ ಎಮ್ಮೆ. ೨. ಒಳ್ಳೆಯ ಎಮ್ಮೆಗಳ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ : ಈಂತಿ ಅಧಿಕಾರವ ಅವನಗಿ ಹಡದು ಬಂದಾತ ತಂನ ಧರ್ಮ್ಮವಾಗಿಯೆ ಪ್ರತಿಪಾಳಿಸುದು ನಲ್ಲೆಂಮೆಯ [ವ]ರಣಪ್ಪ ಶ್ರೀಮತು ಮಾರ್ಕಂಡೇಸರ (ಸೌಇಇ. IX-1, ೩೨೪-೧೪ ; 1197) ; ನಲ್ಲೆಂಮೆಯ ಉಗ್ರಾಣಿ ನಾರಣವೆಗ್ಗಡೆಯ ಗಿರಿಪಯ್ಯ ಪಿರಿಯಂಣಂಗಳು (ಸೌಇಇ. IX-1, ೩೪೯. ೪ ; 1282) ; ಗಡುಗೆ ನಿವೇದ್ಯ ನಂದಾದೀವಿಗೆ ಪುನಿರ್ಬ್ಬರು ಮಹಾಜನಂಗಳ ಭೋಜನಕ್ಕಂ ಬಿಟ್ಟ ನಲ್ಲೆಂಮೆ ನಲ್ಲಾವು . . . ಧಾರಾಪೂರ್ವ್ವಕಂ ಮಾಡಿಕೊಟ್ಟರು ನಲ್ಲೆಮ್ಮೆಯ ಹದಿಕೆಯನೆತ್ತುವ ಹೆಗ್ಗಡೆಗಳಾರು ಬಂದಡಂ ತಂಮ ಧರ್ಮವಾಗಿ ಪ್ರತಿ

ಪಾಳಿಸುವರು (ಸೌಇಇ. IX-I, ೪೪೯-೬ ; 1285) ; ತುಪ್ಪ ನಲ್ಲೇರು ನಲ್ಲೆಮ್ಮೆ ಹೊಡಕೆ ತಿರುಪು ಮಗ್ಗ ಮುದ್ರೆ ಕ್ರಯ . . . ೇಧಿಕಮಾಸ ಮುಂತಾಗಿ ಯೇನುಳ ಸರ್ವಸ್ವಾಮ್ಯವನೂ ನೀಲು ಆಗುಮಾಡಿಕೊಂಡು . . . ಭೋಗಿಸಿ ಬಹುದು (ಸೌಇಇ. IX-II, ೪೪೦-೨೫ ; 1419) ; ಕ್ರಯ ಕಡಾಯಭಟ್ಟಿಕೊಟ್ಟ ನಲ್ತತ್ತು ನಲ್ಲೆಮ್ಮೆ ಪಾವಿನ ಬಟ್ಟ . . . ನಿಮಗೆ ಧಾರೆಯೆರೆದು ಕೊಟ್ಟು (ಮೈಆರಿ. ೧೯೩೪, ೩೭-೩೧ ; 1430).

[ನಲ್ + ಎಮ್ಮೆ (<ಎರ್ಮೆ)]

ನಲ್ಲೆವೆಣ್ (ನಾ). ಪ್ರೀತಿಯಂ ಹೆಣ್ಣು ; ಪ್ರಿಯೆ : ಒಳ್ಳಿತಾಯ್ತದ ಪೇಳ್ವೆ ವೆಮ್ಮಣ್ಣಗೆಂದರು ನಲ್ಲೆವೆಣ್ಣೆದೆ ನಾಟಿ ಬಿದಜಿ (ಧರಚ. ೪೦-೭೭).

[ನಲ್ಲೆ + ಪೆಣ್]

ನಲ್ಲೇರು (ನಾ). ಒಳ್ಳೆಯ ನೇಗಿಲಿನ ಮೇಲೆ ಹಾಕುತ್ತಿದ್ದ ಒಂದು ಬಗೆಯ ತೆರಿಗೆ : ತುಪ್ಪ ನಲ್ಲೇರು ನಲ್ಲೆಮ್ಮೆ ಹೊಡಕೆ ತಿರುಪು ಮಗ್ಗ ಮುದ್ರೆ ಕ್ರಯ ಕಡ್ಡಾಯ . . . ಮುಂತಾಗಿ ಯೇನುಳ ಸರ್ವಸ್ವಾಮ್ಯವನೂ ನೀಲು ಆಗುಮಾಡಿಕೊಂಡು . . . ಭೋಗಿಸಿ ಬಹುದು (ಸೌಇಇ. IX-II, ೪೪೦-೨೫ ; 1419). [ನಲ್ + ಏರ್ಮ್ (<ಏರ್)]

ನಲ್ಲ್ಯವರು (?) (ನಾ). (?) : ತಗೂಡರ ಕುರುಳ ಕೊಗೂಣ್ಣೆ ಎಡತಲೆಯ ಕೊತದ ಪುಳ್ಳಿಗನುಂ ಕಿಂನೆಲ್ಯೆಯ ಬದ್ರಮೆ ಐಯಃನೂಂ ನಿಟ್ಟರೆಯ ಬೋರೆ ಅಚ್ಚಗಣ್ಣನುಂ ನಲ್ಯವರು ಸಕ್ಷಿ (ಎಳ. III, ನಂಜನ. ೦೯೯-೦೯ ; 972 ?).

[P ಇದು 'ನಾಲ್ವರು' ಎಂಬುದರ ಅವಲಿಖಿತವಿರಬಹುದೆ?]

ನಲ್ವ (ನಾ). ದೂರವನ್ನು ಅಳೆಯುವ ಒಂದು ಪ್ರಮಾಣ; ನಾನೂರು ಹಸ್ತಗಳ ಅಳತೆ; ಫರ್ಲಾಂಗು: ಆ ಸುಧನ್ವಂ ಬಳಿಕ ಮೇದಿನಿಯದಿರ್ವಿನಂ ತೆಗೆದಚ್ಚನರ್ಜುನನ ತೇರೊಂದು ನಲ್ವಮಾತ್ರಂ ತೊಲಗಲು (ಕ್ಷಮಿಛಾ. ೧೩-೩೧). [ಸಂ.]

ನಲ್ವಗಲ್ (ನಾ). ೧. ಒಳ್ಳೆಯ ಹಗಲು. ೨. ಒಳ್ಳೆಯ ದಿವಸ ; ಶುಭ ದಿನ : ಬಟ್ಕ ಮೌಹೂರ್ತಿಕರ್ ಕೂರ್ತು ವೇಟ್ಟ ನಲ್ವಗಲೊಳ್ . . . ನಾಮಕರಣಮಂ ನಿರ್ವರ್ತಿಸುತ್ತ (ಚಳವಿ. ೪-೩೩). [ನಲ್ + ಪಗಲ್]

ನಲ್ವಗೆ (ನಾ). ೧. ಒಳ್ಳೆಯ ಮನಸ್ಸು ; ಸ್ನೇಹಪರವಾದ ಪಂನಸ್ಸು. 'ನಲ್ವಗೆಗೊಳ್' ಪರಾ. ೨. ಉಸಲ್ಲಾದಿಂದ ಕೂಡಿದ ಮನಸ್ಸು ; ಪ್ರಸನ್ನಚಿತ್ತ. 'ನಲ್ವಗೆವೆಱು' ಪರಾ. [ನಲ್ + ಬಗೆ]

ನಲ್ವಗೆಗೊಳ್ (ಕ್ರಿ). ಒಳ್ಳೆಯ ಮನಸ್ಸನ್ನು ಹೊಂದು; ಪ್ರಸನ್ನವಾಗು: ನಿನ್ನಯ ಚಾಗಮುಂ ಸಿರಿಯುಂ . . . ನನ್ನಿಯುಮಾರ್ಗಮಚ್ಚರಿಯನಿತ್ತ ಪುವೆಮ್ಮೊಡೆಯಂಗಮಾ ತೆಱಂ ಪೊಸ್ಮದು ಕಮ್ಮಿತಾದ ತೆಱನಲ್ಲವೆ ನಲ್ವಗೆಗೊಂಡೊಡಿರ್ವರುಂ (ಕಬ್ಕಾ. ೦೭೩) [ನಲ್ವಗೆ + ಕೊಳ್]

ನಲ್ವಗೆವೆಱು (ಕ್ರಿ). ಸಂತೋಷಗೊಳ್ಳು ; ಉಲ್ಲಾಸದಿಂದ ಕೂಡು : ತಾವರೆಮೊಗದಪರ್ಮುದ್ದುಮೊಗದ ಏಗೆ ಚಿಲುವಿನ ಬಟ್ಟಮೊಗದವರು ನಲ್ವಗೆವೆತ್ತು ನಡೆದರೊಗ್ಗಿನಲಿ (ಮೋಹಶ. ೨೪-೦೩). [ನಲ್ವಗೆ + ಪೆಱು]

ನಲ್ವಚ್ಚ (ನಾ). ಅಂದವಾದ ಒಡವೆ,-ಆಭರಣ : ಚಲಧಮ್ಮಿಲ್ಲಕ್ಕೆ ಚಾಂಪೇಯದ ಬಿರಿಮುಗುಳಂ . . . ಉರುಕುಚಂಗಳ್ಗೆ ಸನ್ನಾಧವೀ ಕುಟ್ಮಲಮುಂ ನಲ್ವಚ್ಚಮುಂ ಗೈದುಜಿ ತೊಡಿಸಿದರಾ ಕಾಂತೆಯರ್ಕಾಂತೆಗಾಗಳ್ (ಶಾಪ್ರ. ೪ ೭೩). [ನಲ್ + ಪಚ್ಚ]

ನಲ್ವಡಿಗ (ನಾ). ಸುಂದರವಾದ ಪೀಕದಾನಿ : ಒಮ್ಮೆ ವೀಳೆಯವೀಯು ತೊಮ್ಮೆ ಪನ್ನೀರ್ಗುಡುತೊಮ್ಮೆ ನಲ್ವಡಿಗವನೊದಪಸ ತ ಒಮ್ಮೆ . . . ನಡಪೈ (ಗೀತಗೋ. ೩೭-೨). [ನಲ್ + ಪಡಿಗ]

ನಲ್ವಣ್ಣ (ನಾ). ಅಂದವಾದ ಬಣ್ಣ ; ಸುಂದರವಾದ ವರ್ಣ : ನಸುಜೋಲ್ವ ಮೇಲುದಸಿಸು ಮುಸುಕ ತಲರ್ಗಣ್ಣ ಬಂಬಲ್ವೆಳಗುಗಳ ಸೂಸುತೆ ನಲ್ವಣ್ಣದಿಸ್ಸಳಿ [ಪಾಣಂ. ಗಿನ್ನ೦]ಯಸುಜಿ ಮೇಳಯಿಸಿಕೊಂಡು . . . ಕಾಂತೆಯೊರ್ವಳ್ ವಿಲಾಸದಿಂ ಚೆಲ್ವಮರೆ ಪದ್ಮರಾಜಾಂಕಮಾಲೆಯ ಬಾಜಿಸುತ್ತಿಸೆದಳ್ (ಪದ್ಮರಾ. ೮-೩೦). [ನಲ್ + ಬಣ್ಣ]

ನಲ್ವತ್ತ (ನಾ). ಒಳ್ಳೆಯಂ ಬತ್ತ ; ಶ್ರೇಷ್ಠ ದರ್ಜೆಯ ನೆಲ್ಲು (?) : ಸ್ವಸ್ತಿಶ್ರೀ ಅವ್ವೋರಯ್ಯದಿವಕ್ಕ್ಕೆ ಪದಿಕ್ಕಣ್ಣುಗ ನಲ್ವತ್ತ × × × ಪರಮಸುಕೆಯೆ (ಎಳ. VI, ಚಿಕ್ಕಮ. ೫೦-೬ ; ಸು. 490 ?).

[ನಲ್ + ಬತ್ತ]

ನಲ್ವಯಕೆ (ನಾ). ಪ್ರಿಯವಾದ ಬಯಕೆ ; ಹಾರೈಕೆ : ಸ್ಕೂಸ್ ಅಧಿಕಾರ ಪದದಿಂದ ಊರುಳಬೇಕೆನ್ನುವುದು ಅವಳ ನಲ್ವಯಕೆ (ಬದ್ಮಪ್ರ. II ೬೧೪).

[ನಲ್ + ಬಯಕೆ]

ನಲ್ವರಕೆ, ನಲ್ವರಕೆ (ನಾ). ಪ್ರೀತಿಯ ಆಶೀರ್ವಾದ; ಶುಭಾಶೀರ್ವಾದ : ಅಮಳರುಮುಟ್ಕಜಿನೊಜಿಲ್ದು ತೆಗೆದಪ್ಪ ಪರ[ಸೆ] ನಲ್ವರಕೆಗಳಿಂ (ಪಂಪಭಾ. ೯-೩) ; ಕಾರ್ಯಸಿದ್ಧಿಯಕ್ಕೆಂದು ಪರಸೆ ನಲ್ವರಕೆಗಳಿಂ (ಸುಳುಮಾ. ೩-೪೫) ; ಮಾತುಳಂಗಂ ಮಾತುಳಾನಿಗಂ ತುಟ್ಲಿಯ್ವುದುಮವರನೇಕ ನಲ್ವರಕೆಗಳ್ವೆರಸು ಪರಮೋತ್ಸವವರಂಪರೆಯನೆಯ್ದಿ (ಪುಷ್ಕಪು. ೪-೪೯ ಪ) ; ಪುರೋಹಿತರ್ ನಾಮಕರಣಂಗೆಯ್ದು, ನುಡಿದು ನಲ್ವರಕೆಯಂ (ಶ್ರೀರಾಮಾ. ೦೬-೪೦). **ನಲ್ವರಕೆ** : 'ನಲ್ವರಕೆವೆಱು' ಪರಾ. [ನಲ್ + ಪರಕೆ]

ನಲ್ವಳಿ (ನಾ). ೧. ಒಳ್ಳೆಯ ದಾರಿ; ಸನ್ಮಾರ್ಗ: ಅರ್ಗೆ ನಲ್ವಳಿ ತಪ್ಪಿತ್ತೋ ತಪ್ಪಿತ್ತಾತಂಗೆ ಮುಕ್ತಿಯುಂ (ಸಾನಂದ. ೦೪-೪೪). ೨. ಒಳ್ಳೆಯ ವಂಶ ; ಸತ್ಕುಲ. 'ನಲ್ವಳಿಗೆ' ಪರಾ. [ನಲ್ + ಬಳಿ (<ಬಟ್ಟಿ)]

ನಲ್ವಳಿಗ (ನಾ). ಒಳ್ಳೆಯ ವಂಶದಲ್ಲಿ ಹುಟ್ಟಿದವನು ; ಸತ್ಕುಲಪ್ರಸೂತ; ಕುಲೀನ : ಜವ ನಿಗನುಂ ಸೊಬಗನುಂ ನಲ್ವಳಿಗನುಮೆಸಿಂವಂತನುಂ ಚೆಲ್ವನುಮವನಾಗಿರ್ದೊಡಂ ವಿಚಾರನೆಂದುಂ ನಿನ್ನಂ (ಸಾನಂದ. ೬-೩೦).

[ನಲ್ವಳಿ + – ಗ]

ನಲ್ವಾಡು (ನಾ). ಪ್ರೇಮಗೀತೆ ; ಪ್ರಣಯಗೀತೆ : ತರುಣವರ್ಗದ ನಲ್ವಾಡುಗಳನ್ನು ಕೇಳಬೇಕು : ತಾಳವಿಲ್ಲ ; ತಂತಿಯಿಲ್ಲ (ಹಲುವಿ. ೩೪) : ನೀವು ಇಷ್ಟೊಂದು ನಲ್ವಾಡುಗಳನ್ನು ಬರೆದಿದ್ದೀರಿ. ಈ ಸ್ಫೂರ್ತಿಯ ನೆಲೆ ಯಾವುದು ಹೇಳಬಲ್ಲಿರಾ ? (ಸಮಜೀ. ೩೩೪). [ನಲ್ + ಪಾಡು]

ನಲ್ವಾತು (ನಾ). ಒಳ್ಳೆಯ ಮಾತಂ ; ಹಿತವಾದ ನಂಡಿ. 'ನಲ್ವಾತಂಗಂಟ್ಟು' ಪರಾ. [ನಲ್ + ಮಾತ್]

ನಲ್ವಾತುಗ (ನಾ). ಹಿತವಾದ ಮಾತುಗಳನ್ನಾಡುವವನು ; ಸವಿಮಾತುಗಳನ್ನಾಡುವವನು : ಪ್ರಜೆಗಳ್ ವೀರರೆನಿಸಿಯುಂ ವಿನಯವಂತರುಂ ನಲ್ವಾತುಗರಾಗಿಯುಂ ಸನ್ನಿಗರುಂ (ಚಳವಂ. ೦೪೩-೦೭).

[ನಲ್ವಾತು + – ಗ]

ನಲ್ವಾತುಗುಟ್ಟು (ಕ್ರಿ). ಒಳ್ಳೆಯ ಮಾತುಗಳನ್ನಾಡು : ಮುದದಿಂದೋ ಸಜ್ಜುಗೇಳಲಿಂದು ನಿಲೆ ವೋನಂಗೊಂಡು ನಲ್ವಾತುಗುಟ್ಟದೆ ಮೂಡ್ದೆರ್ದೊಡೆ ಸಿಪ್ಪಲಂ (ಕೋಕೋಪ. ೦೨-೩೭). [ನಲ್ವಾತು + ಕುಟ್ಟು]

ನಲ್ವಾಸು (ನಾ). ಮೃದುವಾದ ಶಯ್ಯೆ ; ಮೆತ್ತನೆಯ ಹಾಸುಗೆ : ಆ ಚಂದ್ರಸುಖಿ . . . ದಶರಥನ ಸೊಸೆಯನಿರಿಸಿದಳಂಚೆತಿಪ್ಪುಳಿಂ ಸಮೆದ ನಲ್ವಾಸಿನೊಳ್ (ಶ್ರೀರಾಮಾ. ೩೩೦ ೪೪). [ನಲ್ + ಪಾಸು]

ನಲ್ವಾಟಿವಣ್ (ನಾ). ಸವಿಯಾದ ಬಾಳೆಯ ಹಣ್ಣು ; ರಂಚಿಯಾದ ಬಾಳೆಹಣ್ಣು : ಉರುಕರ್ಪೂರದಲರಂ ನಲ್ವಾಟಿವಣ್ಣಂ ಪುಟೀಶಂಗಿತ್ತಳ್ವನಪಾಲಿಕಾಂಗನೆ (ಕಾಮ್ಕಟ. ೪ ೦೩) ; ನಲ್ವಾಟಿವಣ್ಣಂ . . . ತೋಂಟಿಗಂ ಕೊಟ್ಪನೊರ್ವಂ (ಕಬ್ಕಾ. ೦೮). [ನಲ್ + ಬಾಟಿವಣ್]

ನಲ್ವಡಿ (ನಾ). ಒಂದು ಊರಿನ ಹೆಸರು ; P ಈಗಿನ ಬಳ್ಳಾರಿಜಿಲ್ಲೆಯ ಕುರುಗೋಡು ತಾಲ್ಲೂಕಿನ ನಲವಡಿ : ನೊಳಂಬಾಮಹಾದೇವಿಯ ರಂಗಮುಂ ಗಂಗೆಯೊಳಿಕ್ಕಿ ಬಂದ ಬ್ರಾಹ್ಮಣ ಪಾಧ್ಯವಸಿಂಗಿಯರ್ಗೆ

ಕೃಷ್ಣಯ್ಯಂಗಂ ತುಪ್ಪದ ದೇವಯ್ಯಂಗಂ ನಲ್ವಿಡಿ ೧೨ ಱ ಕಂಪಣಂ ಒರ್ವಾಯಂ ಕುಡೆ (ಸೌಇಇ. IX-1, ೯೨-೦೬ ; 1036). [?]

ನಲ್ವು (ನಾ). ನಲಿವು ; ಸಂತೋಷ : ಬಿಲ್ವಪತ್ರೆಯನೆಯ್ದೆ ಕೊಯ್ದುತಿ ನಲ್ವಿನಿಂ ಶಿವಲಿಂಗಪೂಜೆಗೆ ಸಲ್ವ ವಸ್ತುವಿದೆಂದು ಶೋಧಿಸಿ ಸೆಜ್ಜೆಯೊಳು ತುಂಬಿ (ಬಸಪು. ೪೩-೨೬). 'ನಲವ್ವು$_1$', 'ನಲಿವು' ಪರಾ.

[ನಲ್ + – ವು]

ನಲ್ವೆಣ್ (ನಾ). ಒಳ್ಳೆಯ ಹೆಂಗಸು ; ಪತಿವ್ರತೆ.

ನಲ್ವೆಂಡಿರ್ (ಬಹುವ) : ಪಲನೀರ ಮುಳುಗಿ ಮುಂಗೆಡದೆ ನಲಿದೆಸಗುವ ನಲ್ವೆಂಡಿರ ನಡತೆಗೆ ಪಲನೇಮಗಳು ಪಾಸಟಿಯೆ (ಹದಿಬ. ೨-೨೩) ; ಮೂವರಂ ನಲ್ವೆಂಡಿರು ಕಾಮದಿಂ ಪ್ರೇಮದಿಂ ಮದುವೆನಿಂದಿರ್ದೊಡಂ (ಶ್ರೀರಾಮಾ. ೮-೧೯೦). [ನಲ್ + ಪೆಣ್]

ನಲ್ವೆಸ (ನಾ). ಒಳ್ಳೆಯ ಕೆಲಸ ; ಉತ್ತಮ ಕಾರ್ಯ,-ಕರ್ತವ್ಯ : ಈ ಎಡರಿನೊಳ್ ನಿಮ್ಮ ನಲ್ವೆಸನ್, ಜನಮಂಜದಂತೊಳ್ಪು ನುಡಿದು, ನಂಬುಗೆಯನುಳಿಸುವುದು (ಪಾಕಸಿ. ೦೯-೪೪೦). [ನಲ್ + ಬೆಸ$_1$]

ನಲ್ವೆಸರ್ (ನಾ). ಉತ್ತಮವಾದ ಹೆಸರು ; ಚೆನ್ನಾದ ಹೆಸರು : ದೇವರಾಜರಸರೆಂದುಂ ಚೆನ್ನರಾಜರಸರೆಂದುಮನ್ವರ್ಥಂಗಳಾದ ನಲ್ವೆಸರ್ಗಳನಿಟ್ಟು (ಚಿಕವಿ. ೨-೨೪). [ನಲ್ + ಪೆಸರ್]

ನಲ್ವೆಱ^3 (ನಾ). ಸುಂದರವಾದ ಚಂದ್ರ : ಸುರನಿಮ್ನಗೆ ನಲ್ವೆಱ^3 ಕೆಂಜೆಡೆ ತಳ್ತುರಿಗಣ್ತಿಸುಳಂ ಗರಳಂ ಭಸಿತಂ . . . ಫಣಾಧರನೊಪ್ಪಿರೆ ರಂಜಿಸಿದಂ ಗಿರಿಶಂ (ವೃಷವಿ. ೪೨-೩೪). [ನಲ್ + ಪೆಱ^3]

ನಲ್ವೊಟ್ತು (ನಾ). ಒಳ್ಳೆಯ ಗಳಿಗೆ ; ಶುಭಮುಹೂರ್ತ : ಬಟಿಕ್ಕೆ ರಾಜನೃಪಂ . . . ಜೋಯಿಸಿಗನಿತ್ತ ನಲ್ವೊಟ್ತಿನೊಳೋಲಗಮಿರ್ದು . . . ಅರಸುಗೆಯ್ಯುತ್ತಿರೆ (ಚಿಕವಂ. ೪೯-೦೭). [ನಲ್ + ಪೊಟ್ತು]

ನಲ್ಸೊಗ (ನಾ). ಅತಿ ಸುಖ ; ಅತ್ಯಾನಂದ : ಒಡರ್ಚಿ ನಲ್ಸೊಗಮನಗ್ಗಿ ಮೊಗರ್ಗೆ ಸಮಂತು ಬೆಳ್ಚಸಂದಳೆದೆಸೆದಿರ್ದ ಬಾನ್ನವಿರನೊಳ್ವರಿಜಂ ತಳೆದೊಪ್ಪಿ ತೋಱಿದಂ (ಶಬಶಂ. ೫-೯). [ನಲ್ + ಸೊಗ]

ನವ$_1$ (ನಾ). ಒಂದು ಸಂಖ್ಯಾವಾಚಕ ; ಒಂಬತ್ತು : "ನವ, ಪದಾರ್ಥ, ರಂಧ್ರ . . . ನಾಟ್ಯಾಂಗ, ಇಂತಿನಿತುರ್ಂಕ್ಕೆ ಪೆಸರು" (ವ್ಯವಹಾ. ೦೦-೩) ; ನವ ನಿಧಿ ಶರ ಶಶಿ ಸಂಖ್ಯಾಪ್ರವಿಲಸಿತಂ ಶಾಲಿವಾಹನ ಶಕಾಬ್ದಂಗಳ್ (ಯಾದಜಂ. ೦೬-೦೮೬). 'ನವನಿಧಿ', 'ನವರತ್ನ' ಪರಾ. [ಸಂ. ನವನ್]

ನವ$_2$ (ಗು). ೧. ಹೊಸತಾದ ; ನವೀನವಾದ : "ನವಮಭಿನವಂ ನವೀನಂ ನೂತನಂ ನವ್ಯಮಿವು ಪೊಸತೆನಿಕು" (ಮಂಗರಾ. ೦೨೯-೦೩) ; ಅದೊರ್ಮೆ ನವಕಾವ್ಯಬಂಧರಚನಾವಿಶೇಷಂಗಳಿಂದಂ . . . ಕಳೆವನಿಂತು ಪೊಟ್ಟಂ ನೃಪಂ (ಕಾದಂಪೂ. ೨೨) ; ತನ್ನ ಬಾಟ್ಕಿಯನ್ನೇತಱದೆಂಬ ಮೆಯ್ಮಱುಕದಿಂ ನವಚಿತ್ರಪಟಂಬೊಲಿರ್ಪನಾ ಭೂತಳವಲ್ಲಭಂ (ನಳಚಂ. ೬೩) ; ಐತಂದುವೆಡೆ ಬಿಡದೆ ಕ್ರೌಂಚಸಾರಸಪಂಕ್ತಿ . . . ನವವರ್ಷಹರ್ಷದುನ್ಮಾದಕಲನಾದದಿಂ (ಶ್ರೀರಾಮಾ. ೦೫-೩೯೯). ೨. ಎಳೆಯ ; ತರುಣ ; ತಾಜಾ : ನವಕಂಕೇಲುದ್ಗಮಮಂ ತವೆ ಕೊಯ್ಯಲ್ಕೈಯ್ಯನಿಕ್ಕಿ (ಉದ್ಕಟ. ೯-೬೬) ; ತೋಳ ನವಗುಂಜಿಯಿಂ ಕಿಸಲಯದ ನಿಱಿಗಳಿಂ ಭಾಳತಟದೆಡೆಯ ಕತ್ತುರಿಯ ನವತಿಲಕದಿಂ (ಲಿಂಗಪು. ೬-೨೦). 'ನವಕನ್ನೆ', 'ನವಪಲ್ಲವ' ಪರಾ. ℙ 'ನವ' ಎಂಬುದನ್ನು ಇತರ ಅನೇಕ ನಾಮಪದಗಳೊಡನೆ ಸೇರಿಸಿ ಸಮಾಸ ಗಳನ್ನು ಮಾಡುತ್ತಾರೆ.

ನವನವ (ದ್ವಿರುಕ್ತಿ) : ಮತಿಯು ತಾಂ ಸತ್ಯಶುಭಗಳ ನವನವಾಂಶಗಳ ಗತಿಯನರಸುತ ನಡೆಯೆ ಪೌರುಷಪ್ರಗತಿ ಮತನೀತಿ ಶಾಸ್ತ್ರಗಳು ರಾಜ್ಯ ಸಂಧಾನಗಳು ಮತಿಯ ಕಿಂಚಿದ್ವಿಜಯ (ಮಂಕುಕ. ೨೨೮).

[ಸಂ.]

ನವಕ$_1$ (ಗು). ೧. ಒಂಬತ್ತರಿಂದ ಕೂಡಿದ. (ನಾ). ೨. ಒಂಬತ್ತರ ಗುಂಪು : ಬಟಿಯಂ ಸಂಜ್ವಳನಕಷಾಯಚತುಷ್ಕನೋಕಷಾಯ ನವಕ ನಾಮ ತ್ರಯೋದಶಪ್ರಕೃತಿಗಳನರೆದು (ಶಾಂತಿಪು. ೦೦-೦೦೦ ಪ) ; ಇಂತು ಸೂತ್ರ ನವಕದಿಂ . . . ಪೀಠಿಕಾಕಥನಂ ಸಮಾಪ್ತಂ (ತತ್ತ್ವಪ್ರ. ೦೮೩) ; ಬಳಿಕ್ಕಂ ದ್ವೈವಿಧಪೂರ್ವದಶಂಗಳ್ ತಾವಿರೆ ಸದ್ದಿವಸಂಗಳ್ ಕೋವಿದ ಕೇಳ್ ನವಕಂಗಳ್ (ಹಾಲಾಸ್ಯ. ೪-೦೦-೯೯), ಕ್ರಮದಿ ಮೂಱಂ ಬಿಟ್ಟುದು ಪರಿದುತ್ತಮವನ್ನೆದಂ ಮೇಲೆ ನವಕವ ಸುಮುಖನಾಗಿಯೆ ನಡಿಸುವವನಾವವನಿವಂ ಧನ್ಯ (ವಿವೇಭ. ೮-೨೪). [ಸಂ.]

ನವಕ$_2$ (ನಾ). ೧. ಹೊಸತನ ; ನವೀನತೆ ; ಅಪೂರ್ವತೆ : ಗುಲ್ಪಂಗಳೆಸೆವವು ವೃತ್ತವೆತ್ತತಿ ನವಕದಲಿ ಸತಿಯ (ಬಸಪು. ೪-೦೭) ; ನವಕವಿಲ್ಲದ ಕಳಿದ ಮುನ್ನಿನ ದಿವದ ತೊಟ್ಟಂ ಕಳೆಯದರಳಂ ವಿವರದಲಿ ಶೋಧಿಸದೆ (ಬಸಪು. ೪೭-೦೫). ೨. ಹೊಸಬ ; ಅಪರಿಚಿತ : ನವಕನಿವಂ ಬಂದಂ ಮಾಣವಕಂ ತಾನೆತ್ತಣಿಂದಮೆಂದಾ ವಿಪ್ರಪ್ರವರನ ಸಭೆ . . . ಇನಿತು ಬೇಗಮಿಕ್ಷಿಸುತಾಗಳ್ (ವರ್ಧಪು. ೦೬-೬). [ಸಂ.]

ನವಕಂಟಕ (ನಾ). ಹೊಸದಾಗಿರುವ ಮುಳ್ಳು ; ಎಳೆಯ ಮುಳ್ಳು : ನವಕಂಟಕಮಡಿಯಂ ನಡೆ ಸವತಿಯನಪ್ಪಿದುದನಱಿದು ಪತಿ ಪೆಗಲಿಂ ಪೊತ್ತವಳಗಿದಳ್ (ಲೀಲಾವ. ೦೩-೯೦). [ನವ$_2$ + ಕಂಟಕ]

ನವಕಂಡ (ನಾ). (?) : ಅ[ಸು]ಪಟ್ಟಿಗಮೊನ್ದು ದೇಗುಲಕ್ಕೆ ನವಕಣ್ಡದ ಪಲಗೆಯುವ ಕೊಳನುಂ ಬೀಕೆಸ್ವರಕೆ ಕೊಟ್ಟ (ಸೌಇಇ. XI-1, ೩೫-೦೨ ; 993). [?]

ನವಕಂಬಡೆ (ಕ್ರಿ). ಹೊಸತನವನ್ನು ಪಡೆ ; ನವೀನವಾಗು : ಛವಿವಡೆದು ನವಕಂಬಡೆದ ನವ್ಯಸಹಸ್ರದಳಶತದಳಮನರ್ಪಿಸುತ (ಬಸಪು. ೩೫-೦೩).

[ನವಕ$_2$ + ಪಡೆ$_1$]

ನವಕನ್ನೆ (ನಾ). ಎಳೆಹರಯದ ಕನ್ಯೆ ; ಹೊಸಪ್ರಾಯದ ಹಂಡುಗಿ : ಎಸಳೆಸಳಿನ ಸಿರಸಲ ಚವುರಿಸುವದು ಮೈಯನ್ನೆ ಬೀಸಲು ಮೈನವಿರೇರಿದ ನೇರಿಳೆ ನವಕನ್ನೆ (ಮುಕ್ತಕಂ. ೪೪-೮). [ನವ$_2$ + ಕನ್ನೆ$_1$]

ನವಕಮಲ, ನವಕಮಳ (ನಾ). ಆಗ ತಾನೇ ಅರಳಿದ ತಾವರೆ ; ಹೊಸದಾಗಿ ಅರಳಿದ ಕಮಲ : ನವಕಮಲೋದ್ಗಮದಿಂದುತ್ಸವಮಂ ತಾಂ ಗಂಧಗಜಕೆ ಕಮಲಿನಿ ಮಾಟ್ಪಂತೆವೊಲರಸ ನಿನಗೆ ಪರಮೋತ್ಸವಮಂ ಮಾದೇವಿ ಮಾಟ್ಕುಮಿಾ ಕನಸಿಂದಂ (ಕಾದಂಪೂ. ೩೭೫). ನವಕಮಳ : ನವಕಮಳದಳಂಗಳ್ ಭೀಕರಂ ಬಲ್ಪುಮಾಗಿರ್ಪುವೆ ತಳಕೆ ತಳಂಗಳ್ ನೋಯವೇ ಮೆಟ್ಟಿದಂದೆಂದವಱಿಸಟನವಳ್ದಿರ್ ಮೆಟ್ಟಿದರ್ ಮೆಟ್ಟರೆಂಬಂತ ವಯವದೊಳೆ ಲೀಲಾನೃತ್ಯದಿಂ ಕಣ್ಗೆವಂದರ್ (ಆದಿಪು. ೭-೫೫).

[ನವ$_2$ + ಕಮಲ]

ನವಕಮಳ 'ನವಕಮಲ' ನೋ.

ನವಕರಿ 'ನೌಕರಿ' ನೋ.

ನವಕರ್ಮ (ನಾ). ೧. ಜೀರ್ಣೋದ್ಧಾರದ ಕೆಲಸ ; ಮುರಿದುದನ್ನು ಅಥವಾ ಜೀರ್ಣವಾದುದನ್ನು ಮತ್ತೆ ಕಟ್ಟುವ ಕೆಲಸ : ತಪೋಧನರ ವಿದ್ಯಾರ್ಥಿಮಾಣಿಗಳಾಹಾರದಾನಕ್ಕಂ ಪಾವುಳಪರಿವಾರದ ಜೀವಿತಕ್ಕಂ ದೇಗುಲದ ಖಣ್ಡಸ್ಫುಟಿತ ನವಕರ್ಮ್ಮಕ್ಕವೆಂದು ಕೊಟ್ಟ ಅಲ್ಲಿಯ ಫಳೆಯ ಮತ್ತರು ೫೦ (ನಾಂದೇಡ್. ೩-೨೨ ವ ; 1047). ೨. ನವೀನವಾಗಿ ಮಾಡಿದುದು ; ಹೊಸರಚನೆ : ವಿಶ್ವಕರ್ಮನಿರ್ಮಿತ ನವಕರ್ಮಜಾಳಾಂತರಂಗಳೊಳ್ . . . ಅಕಳಂಕಾಚಾರಸಾರನನೆ ಲಕ್ಷ್ಯಂ ಮಾಡಿ ನೋಡುವಲ್ಲಿ (ಶಾಂತಿಪು. ೬-೫ ಪ). [ನವ$_2$ + ಕರ್ಮ]

ನವಕರ್ಮಿಕ (ನಾ). (?) : ನವಕರ್ಮಿಕ ಮಾಡಿರಿಪುತ ಸಿರಿವೀರ ಪುರಿಸದತ (ಮೈಎರಿ. ೦೯೩೪ ; ೨೯). [?]

ನವಕವಿ (ನಾ). ಹೊಸಕವಿ ; ಆಧುನಿಕ ಕವಿ : ಕನ್ನಡಿಸುವ ನವಕವಿಯವ ನಾವನು ವಿರಹಿಣಿಯರ ಬಪಣೆಯನು (ಇಂಜಾಪ. ೨೦೦-೮೭).

[ನವ$_2$ + ಕವಿ$_5$]

ನವಕವಿತ್ವ (ನಾ). ಹೊಸಕಾವ್ಯ ; ನೂತನ ಕಾವ್ಯ : ಈ ನುಡಿಯ ಪಾಯಂಗಳನೆನಗೆ ಪೇಟ್ಟುದುಂ ನಿನ್ನೆಯ್ದಿದ ನವಕವಿತ್ವಮಂ ನೀನಭಿನಯಿಸಿ ದಂತಾಗಿರ್ದಪುದು (ಶಾಂತಿಪು. ೩-೯೩ ಪ). [ನವ$_2$ + ಕವಿತ್ವ]

ನವಕಳೆ (ನಾ). ಒಂಬತ್ತು ಅಂಶಗಳು : ಬಿಂದುವೆ ಶಿವಾಂಶಿಕಂ ರಕ್ತ ಶಕ್ತ್ಯಾಂಶಿಕವು ಚಂದ್ರಾಂಶು ಶುಕ್ಲಶೋಣಿತಮೆ ಸೂರ್ಯಾಂಶುವಿವು ದ್ವಂದ್ವ ಸಮ್ಮಿಳಿತದಿಂ ಪಿಂಡವೆನಿಸಿತ್ತು ರುಧಿರಮ್ಮಾಂಸ ಚರ್ಮತ್ರಿವಿಧಾ ಸಂದು ಮಾತಾಂಶ್ಸಸ್ಥಿ ನಾಡಿ ರೋಮಮ್ಮೂರು ತಂದೆಯಂಶಗ್ನಿ ವಾಯುವು ಯಾತ್ಮಯಿ ತ್ರಿತಯ ಬಂಧುರ ಶಿವಾಂಶುಗಳಿಂದೆ ನವಕಳೆಯು ಸಂಯೋಗ್ಯದಿಂ ಪಿಂಡವಹುದು (ನವಮೋ. ೧೪-೪೦).

[ನವ$_1$ + ಕಳೆ$_6$ (= ಕಲೆ$_3$)]

ನವಕಾಂಡ (ನಾ). (?) : ನವರತ್ನದ ಸೌಧಂಗಳ ಸವಿವೆಳಗಾ ಪುರಮನೆಲ್ಲ ಮಾವರಿಸೆ ಜನರ್ ನವರತ್ನಪುತ್ಥಳಿಗಳೆನೆ ನವಕಾಂಡದರೆಯ್ದೆ ನೋಡ ಬಂದಂತಪ್ಪರ್ (ಜಾಲಾಸ್ಯ. ೧-೪-೭೨). [?]

ನವಕಾರಮಂತ್ರ (ನಾ). [ಜೈನ] ಶಾಸ್ತ್ರದಲ್ಲಿ ಪ್ರಸಿದ್ಧವಾದ ಒಂದು ಸೂತ್ರ,-ಮಂತ್ರ ವಿಶೇಷ : ಜೈನಸಾಧುಗಳು ಘನಗಂಭೀರವಾಗಿ ನವ ಕಾರಮಂತ್ರವನ್ನು ಹಾಡಿದರು (ಸವತಿ. ೨೨೮).

[ನವಕಾರ್ಯ (P← ಪ್ರಾ. ಣವಕಾರ) + ಮಂತ್ರ]

ನವಕುರುಜು (ನಾ). ಹೊಸದಾಗಿ ನಿರ್ಮಿಸಿದ ಮಂಟಪ : ರಂಗವಾಲಿ ಯಿಂದನುಪಮದ ಕಸ್ತುರಿ ಚಳೆಯ ನವಕುರುಜಿನಿಂ ಜನಿತ ಹರುಷದೊಳಿಸಗಿ ಶರಣ ಸಹ ಬರುತಿರ್ದ ಘನಮಹಿಮ ನಂದೀಶನು (ಲಿಂಗಪು. ೭-೪೦).

[ನವ$_2$ + ಕುರುಜು]

ನವಕೇಶವ (ನಾ).=ನವನಾರಾಯಣ ೨: ನವಕೇಶವರುರ್ವರೆಯೊಳಗವರುಂ ಮುನ್ನಾಗಿ ಪೋದರ್ (ಧರ್ಮಾಮೃ. ೫-೨೨೨). [ನವ$_1$ + ಕೇಶವ]

ನವಕೋಟಿ (ನಾ). ಒಂದು ಸಂಖ್ಯೆ ; ಒಂಬತ್ತು ಕೋಟಿ : ನಿಮ್ಮ ದೇವರೆಂದು ನಂಬಿ ಪೂಜಿಸಲಾಗದಯ್ಯಾ ನವಕೋಟಿಬ್ರಹ್ಮರಿಗೆ ಪ್ರಳಯವ ಮಾಡುವದ ನಾ ಬಲ್ಲೆನಾಗಿ (ಬಸವ. ೩೯೦). [ನವ$_1$ + ಕೋಟಿ$_1$]

ನವಕೋಟಿನಾರಾಯಣ (ನಾ). ೧. ನವಕೋಟಿಹೊನ್ನಿಗೆ ಒಡೆಯ ನಾದವನು ; ಒಂದು ಬಿರುದು ; P ಚಿಕ್ಕದೇವರಾಜರ ಬಿರುದು ೦ ತಮ್ಮಲ್ಲಿದ್ದ ವಸ್ತ್ರಾಭರಣ ದ್ರವ್ಯಗಳನ್ನು ಲೆಕ್ಕಮಾಡಿಸಿ ನೋಡಲು, ನವ ಕೋಟಿ ದ್ರವ್ಯವಾಗಿದ್ದುದರಿಂದ . . . ಉತ್ಸವಕಾಲದಲ್ಲಿ ನವಕೋಟಿ ನಾರಾಯಣ ಎಂಬದಾಗಿ ಹೊಗಳಿಸಿಕೊಳ್ಳುತ್ತ (ಮಹಾವಂ. I, ೧೫೦). ೨. ಪುರಂದರದಾಸರ (ಶ್ರೀನಿವಾಸನಾಯಕನಾಗಿದ್ದಾಗ ಇದ್ದ) ಬಿರುದು : ಬೆಳ್ಳಿ ಭಂಗಾರ ರತ್ನಪಡಿ ವ್ಯಾಪಾರಗಳಿಂದ ಕೋಟ್ಯಾವಧಿ ಧನಾರ್ಜನೆ ಮಾಡಿ ನವಕೋಟಿನಾರಾಯಣನೆಂದು ಹೊಗಳಿಸಿಕೊಂಡನು (ಕಥವಿ. ೧೭೯). ೩. ತುಂಬ ಶ್ರೀಮಂತ,-ಧನಿಕ : ನಮ್ಮ ಶೀನು ನವ ಕೋಟಿನಾರಾಯಣನಾಗ್ತಾನೆ, ನೋಡ್ತಿರಿ (ಹೇಮಕೂ. ೧೦). ೪. (ಆಲಂ) ಒಂಬತ್ತುಕೋಟಿ ಮಕ್ಕಳನ್ನುಳ್ಳವನು ; ಕೃಷ್ಣ : (ಕಿ). ೫. ಹೆಚ್ಚು ಮಕ್ಕಳಿರುವವನು : (ಕಿ). [ನವಕೋಟಿ + ನಾರಾಯಣ]

ನವಖಂಡ$_1$ (ನಾ). ೧. ಭೂಮಿಯ ಒಂಬತ್ತು ವಿಭಾಗಗಳು : ಜಂಬೂ ದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯ ಎರಡಾಳಿನ ಭಾಷೆಯ (ಬಸವ. ೬೭೭) ; ನವಖಂಡ ಪೃಥ್ವಿ ಚತುರ್ದಶಭುವನ ಗ್ರಾಮದಿಂದತ್ತತ್ತ ಮುನ್ನ ಅನಾದಿಯಲ್ಲಿ ಜಂಗಮವೆ ಲಿಂಗವೆಂಬಿರಿ (ಅವಚಂ. ಕ. ೩೨೩-೮೮೩). ೨. ಒಂಬತ್ತು ಚೂರು ; ಚೂರು ಚೂರು ; ಛಿದ್ರಛಿದ್ರ : ಭವ ಬದ್ಧವೈರಮಂ ತಿಳಿದು ವಿಭಂಗಜ್ಞಾನದಿಂದೆ ಪರಿಕ್ರುದ್ಧಮನರ್ ನವಖಂಡ ಮಾಗೆ ಮಾಟ್ಟರ್ ನವನಾರಕರಂ ಪುರಾಣನಾರಕರಾಗಳ್ (ಮಲ್ಲಿಪು. ೧೩-೧೩೫); ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ (ಬಸವ. ೭೦೬). ೩. [ಜೈನ] ಇಂದ್ರಖಂಡ, ಶ್ವೇತಖಂಡ, ತಾಮ್ರಖಂಡ, ಗಭಸ್ತಿ ಖಂಡ, ನಾಗಖಂಡ, ಸೌಮ್ಯಖಂಡ, ಗಂಧರ್ವಖಂಡ, ಚಾರಣ ಖಂಡ ಮತ್ತು ಭರತಖಂಡ ಎಂಬ ಭೂಮಿಯ ಒಂಬತ್ತು ಭಾಗ ಗಳು : ನವಖಂಡಾವನಿಯೊಳಗಿರ್ಪವನೀಶರ ಹೃದಯಮೆಯ್ದೆ ಶತಖಂಡ ಮೆನಿಪ್ಪವೊಲೊಡೆಯೆ ಭೂರಿಭೇರೀರವವೊಗೆದುದು ಚಕ್ರಿವಿಜಯಯಾತ್ರೋ ತ್ಸವದೊಳ್ (ಪಾರ್ಶ್ವಪು. ೮-೩೦). [ನವ$_1$ + ಖಂಡ]

ನವಖಂಡ$_2$ (ನಾ). ಹೊಸ ಮಾಂಸ : ಕರುಳ ಹೂಗೊಂಚಲಿನ ಮೂಳೆಯ ಬಿರಿಮುಗುಳ ನವಖಂಡದಿಂಡೆಯ ಕರತಳದ ತಳಿರೆಲೆಯ ಕಡಿದೋಳುಗಳ ಕೊಂಬುಗಳ . . . ರಣವನವೆಸೆದುದೀತನ ಖಡ್ಗಚೈತ್ರದಲಿ (ಕುಪ್ಯಾಡ್ರೋ. ೬-೪೨). [ನವ$_2$ + ಖಂಡ]

ನವಗರ (ನಾ). = ನವಗ್ರಹ : ಕುಟಿಲತೆ ಬಾಲಕೀವ್ರಜದ ಕುಂತಳದಲ್ಲಿ . . . ಪಟುತರವಕ್ರಮಾ ನವಗರಂಗಳೊಳಲ್ಲದೆಯಿಲ್ಲ ನಾಡಿನೊಳ್ (ದಶಾವ. ೫-೧೨). [ನವ$_1$ + ಗರ$_2$]

ನವಗಾಯ (ನಾ).(ಆಲಂ) ದೇಹದ ಒಂಬತ್ತು ದ್ವಾರಗಳು; ನವದ್ವಾರ: ಓಹೊ ಎನ ಜೀವಾ ಮೈಯೆಲ್ಲಾ ನವಗಾಯ (ಕನಕ. ೨೨೦ ಅನುಪಲ್ಲವಿ).

[ನವ$_1$ + ಗಾಯ]

ನವಗುಣ (ನಾ). ಸುಖ, ದುಃಖ, ರಾಗ, ದ್ವೇಷ, ಬುದ್ಧಿ, ಭಾವನೆ, ಪ್ರಯತ್ನ, ಧರ್ಮ ಮತ್ತು ಅಧರ್ಮ ಎಂಬ ಆತ್ಮನ ಒಂಬತ್ತು ಗುಣಗಳು : ತೇಜದ ಮಱೆಯ ನವಗುಣದ ಹೊಳಹಿನಂತೆ ವಾಯುವಿನ ಮಱೆಯ ನಾನಾ ಸುಳುಹಿನಂತೆ . . . ಇಂತಿಹ ತದ್ರೂಪು ತದ್ರೂಪಂಗಳ ಹೊದ್ದಿಹವಾದ ಕಾರಣ ಇಂತೀ ಆತ್ಮತತ್ತ್ವಭೇದದಲ್ಲಿ ಆಗುಚೇಗೆಯನಱಿಯ ಬೇಕು (ಮೋಳಿಮಾ. ೧೦-೪೦) ; ಬುದ್ಧಿ ಸುಖ ದುಃಖ ರಾಗ ದ್ವೇಷ ಪ್ರಯತ್ನ ಧರ್ಮ ಅಧರ್ಮ ಭಾವನೆಯೆಂಬ ನವಗುಣಗಳಿಂ ವ್ಯವಹರಿಸಿ (ವಿವೇಕ. ೨೪೬). P 'ಬ್ರಹ್ಮಸೂತ್ರಭಾಷ್ಯ'ದ ಪ್ರಕಾರ : ಜ್ಞಾನ, ಸುಖ, ದುಃಖ, ಇಚ್ಛೆ, ದೋಷ, ಪ್ರಯತ್ನ, ಧರ್ಮ, ಅಧರ್ಮ, ಸಂಸ್ಕಾರ ಎಂಬುವು ಆತ್ಮನ ನವಗುಣಗಳು. [ನವ$_1$ + ಗುಣ]

ನವಗ್ರಹ (ನಾ). (ಭಾರತೀಯ ಸಂಪ್ರದಾಯದಂತೆ) ಸೂರ್ಯ, ಸೋಮ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು ಮತ್ತು ಕೇತು ಎಂಬ ಒಂಬತ್ತು ಗ್ರಹಗಳು : ಇಪ್ಪತ್ತೇಳು ನಕ್ಷತ್ರ . . . ರಾಹು ಕೇತು ನವಗ್ರಹ ಇಂತಿವರೆಲ್ಲರು ಆ ಮೇರುಮಂದಿರದ ಹೊಱ ಪ್ರದಕ್ಷಿಣವ ದಿವರಾತ್ರಿಯಲ್ಲಿ ತಿರುಗುತ್ತಿಹರು (ಚನ್ನವ. ಕ. ೫೯೨-೧೩೨೮) ; ನವಗ್ರಹದ ನಡುವೆ ಚಂದ್ರಾದಿತ್ಯರ್ . . . ಎಸೆವ ತೆಱದಿ . . . ಮುನಿ ಕುಲದ ನಡುವಿರ್ದರಧಿಕ ವಿಶ್ವಾಮಿತ್ರ ವಾಸಿಷ್ಠರು (ಹಚಕಾ. ೨-೫) ; ಮಂಗಳ ಬುಧ ಬೃಹಸ್ಪತ್ಯಾದಿ ನವಗ್ರಹಂಗಳೆಲ್ಲಂ ಪುಂ ನಪುಂಸಕಲಿಂಗಂಗಳ್ (ಶಮದ. ೮೮ ಪ್ರಯೋ). [ನವ$_1$ + ಗ್ರಹ]

ನವಗ್ರಹಜಪ (ನಾ). ಸೂರ್ಯನೇ ಮೊದಲಾದ ಗ್ರಹಗಳ ಅನುಗ್ರಹ ಕ್ಕಾಗಿ ಶಾಸ್ತ್ರೋಕ್ತವಾದ ವಿಧಾನದಿಂದ ಮಾಡುವ ಆಯಾಯ ಗ್ರಹಗಳ ಮಂತ್ರ ಪುರಶ್ಚರಣೆ : ನವಗ್ರಹಜಪ ಮಾಡಿ, ಪೀಡೆ ಪರಿಹಾರ ವಾಗುತ್ತದೆ (ರೂಢಿ). [ನವಗ್ರಹ + ಜಪ]

ನವಗ್ರಹದಾನ (ನಾ). ನವಗ್ರಹಗಳನ್ನು ಪ್ರಸನ್ನಗೊಳಿಸುವುದಕ್ಕಾಗಿ ಮಾಡುವ ನವಧಾನ್ಯಗಳ ದಾನ : (ಕಿ). P ಸೂರ್ಯನ ಪ್ರೀತ್ಯರ್ಥ ವಾಗಿ ಗೋದಿ, ಚಂದ್ರನಿಗೆ ಬತ್ತ, ಕುಜನಿಗೆ ತೊಗರಿ, ಬುಧನಿಗೆ ಹೆಸರು, ಗುರುವಿಗೆ ಕಡಲೆ, ಶುಕ್ರನಿಗೆ ಅವರೆ, ಶನಿಗೆ ಎಳ್ಳು,

ರಾಹುವಿಗೆ ಉದ್ದು ಮತ್ತು ಕೇತುವಿಗೆ ಹುರುಳಿಯನ್ನು ದಾನ ಮಾಡಬೇಕೆಂಬ ವಿಧಿಯಿದೆ. [ನವಗ್ರಹ + ದಾನ]

ನವಗ್ರಹಶಾಂತಿ (ನಾ). ಜಪ, ದಾನ, ಹೋಮಗಳಿಂದ ನವಗ್ರಹಗಳನ್ನು ಪ್ರಸನ್ನಗೊಳಿಸುವ ಪುಣ್ಯಕರ್ಮ : (ಕಿ). [ನವಗ್ರಹ+ ಶಾಂತಿ]

ನವಗ್ರಹಹೋಮ (ನಾ). ನವಗ್ರಹಗಳ ಸಂಪ್ರೀತಿಗಾಗಿ ಸಮಿತ್ತು, ಚರು, ಆಜ್ಯಗಳಿಂದ ಯಥೋಕ್ತಸಂಖ್ಯೆಯಿಂದ ವಿಧಿಪೂರ್ವಕವಾಗಿ ಮಾಡುವ ಮಂತ್ರಪೂರ್ವಕವಾದ ಹೋಮ: (ಕಿ).

[ನವಗ್ರಹ + ಹೋಮ]

ನವಗ್ರಾಹಕರಿಣಿ (ನಾ). ಹೊಸದಾಗಿ ಹಿಡಿದ ಹೆಣ್ಣಾನೆ : ಗೆಂಟನೊಳೆ ಬರುತಿರ್ದ ಯುವರಾಜನಂ ಭೋಂಕನೆ ಕಂಡು ನವಗ್ರಾಹಕರಿಣಿಯಂದದಿ ನೂರುಸ್ತಂಭವಿಧೃತೆಯಾಗಿ (ಕಾದಂಉ. ೨೩೨). [ಸಂ. ನವಗ್ರಾಹಕರಿಣೀ]

ನವಗ್ರೈವೇಯಕ (ನಾ). [ಜೈನ] ಹದಿನಾರು ಸ್ವರ್ಗಗಳ ಮೇಲೆ ಇರುವ ಸುದರ್ಶನ, ಅಮೋಘ, ಸುಪ್ರಬುದ್ಧ, ಯಶೋಧರ, ಸುಭದ್ರ, ಸುವಿಶಾಳ, ಸುಮನಸ, ಸೌಮನಸ ಮತ್ತು ಪ್ರೀತಿಂಕರ ಎಂಬ ಒಂಬತ್ತು ಕಲಾತೀತವಾದ ಸ್ವರ್ಗಗಳು : ಆ ಪದಿನಾಱು ಕಲ್ಪಂಗಳ ಮೇಲೆ ನವಗ್ರೈವೇಯಕಂಗಳಿರ್ದುವು (ಅಜಿಪು. ೧೦-೨೯ ವ) ; ಬಳಿಯ ಮಗ್ರಿಮನವಗ್ರೈವೇಯಕಮಧ್ಯನಾಯಕನಾದಂ (ಪಂರಾಮಾ. ೬-೫೭ ವ) ; ಇರ್ಪತುಮೂಱಬ್ಧಿ ಮೊದಲೆನಲ್ಮೂವತ್ತೊಂದುವರಮಾಯುಃಕ್ರಮದ ನವಗ್ರೈವೇಯಕದಮರರುಮಂ ನೊಣೆವನೇಂ ಜವಂ ನಿರ್ಗುಣನೋ (ಮಲ್ಲಿಪು. ೧೩-೧೦೮). [ನವ$_1$ + ಗ್ರೈವೇಯಕ]

ನವಚಕೋರಿ (ನಾ). ಎಳೆಯ ಪ್ರಾಯದ ಹೆಣ್ಣುಚಕೋರಪಕ್ಷಿ: ಹೊನ್ನ ಪೆಟ್ಟಿಗೆಗಳಂ ನಲವಿಂದೆ ಬಗೆವೆಚ್ಚಿಕೊಂಡು ಬರುತಿರ್ದನುತ್ಸವದಿಂದೆ ನವ ಚಕೋರಿಗೆ ಚಂದ್ರಿಕೆಯ ಕುಟುಕುದಪ್ಪಂತೆ (ನಂಬಿರ. ೦೦-೦೨೫).

[ನವ$_2$ + ಚಕೋರಿ]

ನವಚಕ್ರ (ನಾ). [ಯೋಗ] ಕುಂಡಲಿನಿಯು ಏರುವ ಒಂಬತ್ತು ಬೇರೆ ಬೇರೆ ಸ್ಥಾನಗಳು ; ಆಧಾರಚಕ್ರ, ಸ್ವಾಧಿಷ್ಠಾನಚಕ್ರ, ಮಣಿಪೂರಕ ಚಕ್ರ, ಅನಾಹತಚಕ , ವಿಶುದ್ಧಿಚಕ್ರ, ಆಜ್ಞಾಚಕ್ರ, ಬ್ರಹ್ಮ ಚಕ್ರ, ಶಿಖಾಚಕ್ರ ಮತ್ತು ಪಶ್ಚಿಮಚಕ್ರ ಎಂಬ ಒಂಬತ್ತು ಚಕ್ರಗಳು : ಕರಣಾದಿ ಗುಣಂಗಳಳಿದು ನವಚಕ್ರಂಗಳು ಭಿನ್ನವಾದ ಬಳಿಕ ಇನ್ನೇನೋ ಇನ್ನೇನೋ (ಅವಚಂ. ೮೭-೩೮೮) ; ನವಚಕ್ರಾಂಬುಜಂಗಳ ದಳ ಕುಳವರ್ಣಾದಿ ದೇವತೆಗಳ ತೋಱಿಕೆ ಏನೇನೂ ಇಲ್ಲದ ನಿತ್ಯನಿರಂಜನ ನಿರಾಮಯನಾದ ಶರಣಂಗೆ ನಮೋ ನಮೋ ಎಂದೆನು (ಸಿದ್ಧೇವ. ೦೫೯-೪೭೮) ; ನವಚಕ್ರಂಗಳಲ್ಲಿ ನವಬ್ರಹ್ಮಂಗಳ ಮೂರ್ತಿಗೊಳಿಸಿ ಕಾಯದ ಕಣ್ಣಿಂದ ಕರತಲಾಮಲಕವ ನೋಡುವಂತೆ ಮನದ ಕಣ್ಣಿಂದ ನವಬ್ರಹ್ಮಸ್ವರೂಪವ ಮನದಣಿವಂತೆ ನೋಡಿ (ಘನವ. ೨೩-೦೯). 'ಷಟ್ಚಕ್ರ' ಪರಾ. [ನವ$_1$ + ಚಕ್ರ$_1$]

ನವಚೂಟಿ (ನಾ). ಅಪೂರ್ವವಾದ ಚುರುಕುತನ,-ಚಟುವಟಿಕೆ : ನವ ಚೂಟಿಯಲಿ ಕಾಯ ನಡಸಿ ಹಳದಿ ಜೋಡ ಬವರಕ್ಕೆ ನಿಲಿಸಿಯಾಡಿದರು (ಸೌಂದಕಾ. ೪-೪೯). [ನವ$_2$ + ಚೂಟಿ$_1$ (<ಸೂಟಿ$_1$)]

ನವಜವಾನ (ನಾ). ತುಂಬುಹರೆಯದವನು ; ನವಯುವಕ ; ತರುಣ : ಅವರಿಗೆ ೬೫ ವರ್ಷ ಪ್ರಾಯ, ಮುದುಕರು. ಹುರುವು ಮಾತ್ರ ನವ ಜವಾನರದು (ಕರವೀ. ೦೦೫) ; ಹರಕು ಅಂಗಿಯ ಒಬ್ಬ ದೃಢಕಾಯನಾದ ನವಜವಾನನು ಶೀಳು ಹಾಕುತ್ತಿದ್ದನು (ರಕ್ತಧ್ವ. ೧೭೨).

[←ಪಾರ. ಹಿಂ. ನೌಜವಾನ್]

ನವಜ್ವರ (ನಾ). ಒಂದು ಬಗೆಯ ಜ್ವರ ; ಒಂಬತ್ತು ದಿನಗಳವರೆಗೆ ತೀಕ್ಷ್ಣವಾಗಿ ಕಾಡುವ ಜ್ವರ : ತಿಗಡೆ, ರಸ, ಗಂಧಕ . . . ಇವಂ ಕಲ್ಪದಲ್ಲಿ ಕಳ್ಳಿಯ ಹಾಲಲ್ಲೂ ಎರಡುಜಾವ ಮರ್ದಿಸಿ ರಸಶುದ್ಧಿ ಮಾಡಿ ಕೊಂಡು ಎರಡು ಗುಂಜಿಯ ತೂಕವನ್ನು ಅಲ್ಲದ ರಸ ಸಕ್ಕರೆ ಬೆರಸಿಕೊಡಲು ನವಜ್ವರ ಹರ (ವಿವೈವಿ. ೩೩) ; ನವಜ್ವರದಲ್ಲಿಯೂ, ಸನ್ನಿಪಾತದಲ್ಲಿಯೂ, ಗರ್ಭಿಣಿಯರಲ್ಲಿಯೂ . . . ವಿರೇಚನ ಮಾಡಲಾಗದು (ಸಕವೈ. ೨೬) ; ಸೌಭಾಗ್ಯವತಿ ನವಜ್ವರದಿಂದ ತೀರಿಕೊಂಡಳೆಂದು ತಿಳಿದುಬಂತು (ಸ್ಕೃತಿಚಿ. ೩೦). [ನವ$_1$ + ಜ್ವರ]

ನವಟಾಕು (ನಾ). ತೂಕದಲ್ಲಿ ಒಂದು ಸೇರಿನ ಎಂಟನೆಯ ಭಾಗ ; ತೂಕ ದಲ್ಲಿ ಎಂಟನೆಯ ಒಂದು ಭಾಗ ; ಅರಪಾವು : ನನ್ನವಳು ಒಂದು ಸಿಂಗಲ್ ಅಥವಾ ಒಂದು ನವಟಾಕು ಸಜ್ಜಿಗೆ ಮಾಡಿದರೆ ಸೇರುತುಪ್ಪ ಅಚ್ಚೇರು ದೀಪದ್ರಾಕ್ಷೆ ಖರ್ಚುಮಾಡುತ್ತಾಳೆ (ಮುಂಗಾಪು.೫೭). 'ಚಟಾಕು' ಪರಾ. [←ಮರಾ. ನವಟಾಂಕ]

ನವಠಾಣ (ನಾ). [ಸಂಗೀತ] ಒಂಬತ್ತು ಸ್ವರಗಳು (?) : ಗಾನಮೊಪ್ಪುವ ದಂಡಿಗೆಯನವಧಾನಿಸುತ ಮಿಗೆ ಮೇಘಚಾಳವನೊಡನೆ ಯೌಠಾಣಮಾನಿತಂ ನವಠಾಣಮುಂ . . . ಅನೂನಪತ್ರಂ ಪೊಟ್ಟವಣಿ ಸಾರಣಮಲರ್ದಿರಲು (ಲಸಪು. ೦೯-೮). [ನವ$_1$ + ಠಾಣ ?]

ನವಣಕ್ಕಿ 'ನವಣೆಯಕ್ಕಿ' ನೋ.

ನವಣಿ 'ಲವಣಿ' ನೋ.

ನವಣಿವಡೆ (ಕ್ರಿ). ಸೊಗಸಾಗು ; ಅಂದವನ್ನು ಪಡೆ : ಬಿಂಕಂ ಲುಳಿವಡೆಯೆ ಲುಳಿ ನವಣಿವಡೆಯೆ ನವಣಿ ಬಹುವಿಕೆವಡೆಯೆ ಬಹುವಿಧದ ವಹಣಿಯ ಮಾರ ಚಿತ್ರದ ಗತಿಗಳೊಳ್ ಮೆಱೆದು (ಅನಂಪು. ೨-೨೮ ವ).

[ನವಣಿ (<ಲವಣಿ) + ಪಡೆ$_1$]

ನವಣೆ (ನಾ). ಒಂದು ಬಗೆಯ ಧಾನ್ಯ ; ಕಂಗು : "ಪ್ರಿಯಂಗುಃ, ಕಂಗುಃ– ಈ ೨ ನವಣೆ" (ಹಲಾಯು. ೯೫-೪೨೮) ; ನವಣೆಯ ಪಿಟ್ಟಂ ನೆಲದಾಱುವ ನೊಡವೊಯ್ದಟ್ಟು ಘೃತಸಮೇತಂ ಮೇಣ್ ದುಗ್ಧವಿಮಿಶ್ರಂ ಸೇವಿಸೆ ವೀರ್ಯವೃದ್ಧಿಯುಂ ಮೆಯ್ಯ ಪುಷ್ಪಿಯುಂ ಸವನಿಸುಗುಂ (ಲೋಕೋಪ. ೯-೪೫) ; ಮರ್ದಂ ನವಣೆಯ ಪಿಟ್ಟಿನೊಳ್ ಕೂಡಿ ಕಿಱಿಯವಪ್ಪುಂಡೆಗಳಂ ಮಾಡಿ (ಧರ್ಮಾಮೃ. ೧೨-೮೮) ; ನವಣೆ ಹಾರಕ ಬರಗು ಸಾವೆ ಮಾಸಿಗಳೆಂಬ ಧಾನ್ಯ ಐವತ್ತುಲಕ್ಷ ಖಂಡುಗ (ಶೂನ್ಯಸಂ. ೩೩೪-೦೪) ; ನವಣೆಯ ಹಾಳಲು ಬೆದ್ದತಿ ಮತ್ತರೊಂದು (ಎಕ. VI, ಕಡೂರು. ೩೭-೭೩ ; 1187 ?) ; ಬಾಗಿ ಬಳುಕುವ ತೆನೆಗಳಿಂದೆಸೆವ ತಮ್ಮ ನವಣೆಯ ಕೆಯ್ಯ ಬಳಿಯೊಳ್ (ಸಿದ್ಧರಾ. ೨-೨೩) ; ಬಲು ರಾಯರೊಲ್ಮೆ ಗಡಯುಂಬುದಲ್ಲಂ ನವಣೆಯೊಳು ಗಂಜಿ (ಜಿಬಪು. ೦೦-೭೦) ; ನವಣೆಯ ಬೋನಕ್ಕೆ ಹವಣಾದ ತೊಗೆಯಾಗಿ ಕವಣೆಗಲ್ಲಷ್ಟು ಬೆಣ್ಣೆಯಿಡಲೂಟದ ಹವಣ ನೋಡು (ಸರ್ವಜ್ಞ. ೧೬೦೮).

ನವಣೆಯ ಪಾಯಸ = ನವಣೆ ಅಕ್ಕಿಯನ್ನು ತುಪ್ಪದಲ್ಲಿ ಹುರಿದು, ಬೇಯಿಸಿ ಮಾಡುವ ಪಾಯಸ : ಅವರು ಮಾಡಿದ ನವಣೆಯ ಪಾಯಸ ಬಹಳ ರುಚಿಯಾಗಿತ್ತು (ರೂಢಿ).

[ದೇ.॥ ತಮಿ. ನವರೈ = ಒಂದು ಬಗೆಯ ಬತ್ತ ; ಮಲ. ನವಿರ, ನವಿರಿ = ಒಂದು ಬಗೆಯ ಅಕ್ಕಿ ; ತುಳು. ನವರ, ನವರೆ ; ತೆಲು. ನಿವರಿ]

ನವಣೆಅಕ್ಕಿ 'ನವಣೆಯಕ್ಕಿ' ನೋ.

ನವಣೆಯಕ್ಕಿ, ನವಣಕ್ಕಿ, ನವಣೆಅಕ್ಕಿ (ನಾ). ಹೊಟ್ಟು ತೆಗೆದ ನವಣೆ : ಚಾಬೇಸೊಪ್ಪನು ನವಣೆಯಕ್ಕಿಯನ್ನು ಕೂಡ ಕುಟ್ಟಿ ಹಿಟ್ಟು ತೊಳಸಿ . . . ಸಪ್ಪೆ ತುಪ್ಪದಿಂ ಮೆಲ್ಲಲು ಹೆನ್ನೆತ್ತರು ಮಾಣ್ಗುಂ (ಸಕವೈ. ೦೯೫). ನವಣಕ್ಕಿ: ನವಣಕ್ಕಿಯ ಹಿಟ್ಟುಕುಟ್ಟಿ ತುಪ್ಪದಲ್ಲಿ ಮೆಲ್ಲೆ ಗರ್ಭವಕ್ಕುಂ (ವಿವೈವಿ. ೮). ನವಣೆಅಕ್ಕಿ : ಹೊನ್ನುಗೊನ್ನೆಸೊಪ್ಪು ಸಹಮೂಲವನ್ನು ನವಣೆಅಕ್ಕಿ ಗಂಜಿಯಲ್ಲಿ ಅರೆದು ಮೂರುದಿನ ಕೊಟ್ಟರೆ ಕಲ್ಲುಕರಗಿ ಬೀಳುವುದು (ಸಕವೈ. ಪರಿ. ೪೯೬). [ನವಣೆ + ಅಕ್ಕಿ$_1$]

ನವತ (ನಾ). ೧. ಹೊದಿಕೆ ; ಅಚ್ಛಾದನೆ. ೨. ಉಣ್ಣೆಯ ಹೊದಿಕೆ ; ಕಂಬಳಿ : ಸ್ನಾನಂಗೆಯ್ವೆಡೆಯೋ ಮೇಣ್ ದಾನಂ ಕೊಳ್ವೆಡೆಯೊ ನವತಮಂ ಪೋಲ್ದೆಡೆಯೋ ನೀನೀ ಸಂಗ್ರಾಮಾವನಿಗೇನೆಂದೆಟ್ಟಪ್ಪೆ ವಿಪ್ರ ಪೆರ್ಮೆಟ್ಟೆ ನುತುಂ (ಮಹಾನೇ. ೧೨-೨೦೦). [ಸಂ.]

ನವತಯಾರುಮಾಡಿಸು (ಕ್ರಿ). ಹೊಸದಾಗಿ ಸಿದ್ಧಪಡಿಸು : ಒಂದು ಹೂವನ್ನು ಅರ್ಧಚಂದ್ರನೋಪಾದಿ ಚಿನ್ನದಲ್ಲು ಮಾಡಿಸಿ, ಅದಕ್ಕೆ ವಜ್ರಕೆತ್ತಿಸಿ, ಹೊಳೆಯುವಂಥಾದ್ದು ಒಂದು ನವತಯಾರುಮಾಡಿಸಿ, ತಮ್ಮ ಬಳಿಯ ಮಡಗಿದ್ದರು (ರಾಜೇಂದ್ರ. ೨೨೫). [ನವ$_2$ + ತಯಾರು + ಮಾಡಿಸು]

ನವತರುಣ (ನಾ).=ನವಯೌವನ ೨ : ಈಗ ಮಾತ್ರ ನಾನೊಬ್ಬ ನವತರುಣನಂತೆ ಹುರುಪಿನಿಂದ ಆಕಾಶಕ್ಕೇರುವಷ್ಟು ಪ್ರಫುಲ್ಲನಾಗಿದ್ದೆ (ಗಂಗಾವ. ೧೦೧). [ನವ$_2$ + ತರುಣ]

ನವತರುಣಿ (ನಾ). = ನವಯವ್ವನೆ : ಈಗಿನ ನವತರುಣರಿಗಿಂತ ನವತರುಣಿಯರಲ್ಲಿ ಓದಿನ ಬಗೆಗೆ ಒಲವು ಹೆಚ್ಚು (ರೂಢಿ). [ನವ$_2$ + ತರುಣಿ]

ನವತಾರುಣ್ಯ (ನಾ). ಹೊಸಹರೆಯ ; ನವಯೌವನ : ಮಕ್ಕಳು ನವತಾರುಣ್ಯವನ್ನು ಹತ್ತುವಾಗ ಆರಂಭವಾಗುವ ಪ್ರೌಢಶಿಕ್ಷಣ ಉತ್ತಮವೆಂದು ಹಲವರು ಭಾವಿಸುವರು (ಶಿಕ್ಷದ. ೯೦). [ನವ$_2$ + ತಾರುಣ್ಯ]

ನವತಾಲ (ನಾ). [ಶಿಲ್ಪಶಾ] ಮೂರ್ತಿಶಿಲ್ಪದಲ್ಲಿ ಬಳಸುವ ಒಂಬತ್ತು ತಾಳಪ್ರಮಾಣದ ಒಂದಂ ಅಳತೆ : ಮಾನಾಂಗುಲ, ಮಾತ್ರಾಂಗುಲ, ದೇಹಲಬ್ಧಾಂಗುಲವೆಂಬ ಅಳತೆಗಳಿಂದ ಪಂಚತಾಲ, ನವತಾಲಾದಿ ವಿವೇಚನೆಯಿಂದ ಮೂರ್ತಿಗಳನ್ನು ರಚಿಸುವ ವಿಧಾನಗಳನ್ನೂ . . . ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರಗಳು ತಿಳಿಸುತ್ತವೆ (ಭಾರದ. ೮೦). [ನವ$_1$ + ತಾಲ]

ನವತಿ (ನಾ). ಒಂದಂ ಸಂಖ್ಯೆ ; ತೊಂಬತ್ತು : ಭರತಕ್ಷೇತ್ರದ ವಿಷ್ಕಂಭಂ ಜಂಬೂದ್ವೀಪದ ನವತಿಶತಭಾಗಪ್ರಮಾಣಮಕ್ಕುಂ (ಸುಕುಮಾ. ೧೧-೫೦ವ); ಬಾಹುಕ್ಷೇಪದಿಂದಂ ನವತಿ ನಯನಭೇದಂಗಳಿಂ ರಂಜಿಸುತ್ತಿರ್ದುದು ಸರ್ವಾಶಾಪ್ರದೇಶಂ ಸುರಪತಿನಟನಂ ವಿಸ್ಮಯಂಬೆತ್ತುದಾದಂ (ಬಾಧಪು. ೯-೧೪). [ಸಂ.]

ನವತುಷ್ಟಿ (ನಾ). [ಸಾಂಖ್ಯ] ಅಂಭಸ್ಸು, ಸಲಿಲ, ಓಘ, ವೃಷ್ಟಿ, ಪಾರ, ಸುಪಾರ, ಪಾರಾಪಾರ, ಅನಂತ್ತಮಾಂಭ ಮತ್ತು ಉತ್ತಮಾಂಭ ಎಂಬ ಬುದ್ಧಿಗೆ ಸೇರಿದ ಒಂಬತ್ತು ಬಗೆಯ ತುಷ್ಟಿಗಳು : ನವತುಷ್ಟಿಗಳು–ವಿವೇಕಸಾಕ್ಷಾತ್ಕಾರವನ್ನು ಪ್ರಕೃತಿಯೇ ಮಾಡುತ್ತದೆ. ನಾವೇಕೆ ಶ್ರಮಪಡಬೇಕೆಂಬ ತೃಪ್ತಿಯೊಂದು. ಇದಕ್ಕೆ ಅಂಭಸ್ಸೆಂದು ಹೆಸರು . . . ಉತ್ತಮಾಂಭ ಎಂದರೆ ಪ್ರಾಣಹಿಂಸೆಯಿಲ್ಲದೆ ಸುಖವಿಲ್ಲವೆಂದು ತಿಳಿದು ವೈರಾಗ್ಯವನ್ನು ಪಡೆಯುವುದು ಒಂಬತ್ತನೆಯದು. ಈ ನವತುಷ್ಟಿಗಳು ಬುದ್ಧಿಗೆ ಸೇರಿದುವು (ಹಿಂದಸಾ. ೬೪). [ನವ$_1$ + ತುಷ್ಟಿ]

ನವತೆ (ನಾ). ಹೊಸತನ ; ನವೀನತೆ : ಮುಡುಕತೊರೆಗೆ ಹೋಗಬೇಕಾದರೆ ದೋಣಿಯಲ್ಲೇ ಪ್ರಯಾಣಮಾಡುತ್ತಿದ್ದೆವು. ಅದರ ನವತೆ ಸಮೆದರೂ ನರ್ಮಜನಕತ್ವ ಸಮೆಯಲಿಲ್ಲ (ಕಲಿಸಿ. ೩೩೪) ; ಹಳೆಯ ಕರ್ಮವ ಹೊಸದು ಕೊಚ್ಚಿ ಪೌರುಷನದಿಯ ಬೆಳೆಯಿಪುದು ನವತೆಯಲಿ (ಮಂಕುಕ. ೧೬೪).

[ಸಂ. ನವತಾ]

ನವತೇಜ (ನಾ). ಹೊಸಕಾಂತಿ ; ನವೀನಶೋಭೆ : ನನ್ನಂತೆ ಲಾಂಗೂಲ ಯಜ್ಞದಿಂ ನವತೇಜಪುಣ್ಯಗಳ ಗಳಿಸಿ ಜೀವನ್ಮುಕ್ತರಾಗಿ ! (ಕಎಪು. ೪೩-೧೦).

[ನವ$_2$ + ತೇಜ$_1$]

ನವತ್ವ (ನಾ). = ನವತೆ : ಮಾತೂ ಕೂಡ ನವತ್ವವನ್ನು ಪಡೆಯುತ್ತದೆ (ಧ್ವನ್ಯಾಲೋ. ೨೪೦). [ಸಂ.]

ನವದಂಪತಿ (ನಾ). ನೂತನ ದಂಪತಿ ; ಅದೇ ತಾನೇ ಮದುವೆಯಾದ ಗಂಡಹೆಂಡಿರು: ತಾನುಂ ಪತಿಯುಂ ಮಹಾ[ವಿಭವ]ತೀಕರಮೊಪ್ಪಿರೆ ಮಾಡೆ ಕಾಮದೇವಂ ಪಸೆಯೊಳ್ ಸುರೇಂದ್ರ ನವದಂಪತಿಯಿರ್ದವೊಲಿರ್ದರ್ (ಬಂಹರಿ. ೯-೮೬) ; ಅಮ್ಮ ಅಪ್ಪ ನವದಂಪತಿಗಳಂತೆ ಇನ್ನೂ ಸುಖವನ್ನು ಅರಸಿ ಹೊರಟುಂತಿದೆ (ನಡದಾ. II. ೯೬೫). [ನವ$_2$ + ದಂಪತಿ]

ನವದರ್ಶನಾವರಣ (ನಾ). [ಜೈನ] ಚಕ್ಷುಸ್ಸು, ಅಚಕ್ಷುಸ್ಸು, ಅವಧಿ, ಕೇವಲ, ನಿದ್ರಾ, ನಿದ್ರಾನಿದ್ರಾ, ಪ್ರಚಲಾ, ಪ್ರಚಲಾಪ್ರಚಲಾ ಮತ್ತು ಸ್ತ್ಯಾನವೃದ್ಧಿ ಎಂಬ ಒಂಬತ್ತು ಬಗೆಯ ದರ್ಶನಜ್ಞಾನಾವರಣೀಯ ಕರ್ಮಪ್ರಕೃತಿಗಳು : ಪಂಚಜ್ಞಾನಾವರಣಂಗಳುಂ ನವದರ್ಶನಾವರಣಂಗಳುಂ ದ್ವಿವೇದನೀಯಂಗಳುಮಷ್ಟಾವಿಂಶತಿಮೋಹನೀಯಂಗಳುಮೇಕೆಂದೊಡೆ (ಗೊಮ್ಮಸಾ. ೬-೪) [ನವ$_1$ + ದರ್ಶನಾವರಣ]

ನವದುರ್ಗಿ (ನಾ). ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯನೀ, ಕಾಲರಾತ್ರೀ, ಮಹಾಗೌರೀ ಮತ್ತು ಸಿದ್ಧಿಧಾತ್ರೀಎಂಬ ದುರ್ಗಾದೇವಿಯ ಒಂಬತ್ತು ರೂಪಗಳು : ಸಪ್ತಮಾತೃಕೆಯರುಂ ಉರಗಿಯರ್ ನವದುರ್ಗಿಯಂಬಿಕೆಯರನಿಬರುಂ ಧರಿಸಿದರು ಶಾಬರವನು (ಲಶಿಚಂ. ೨೩-೧೩); ವಿಷ್ಣುವಿನ ದಶಾವತಾರ . . . ಶಕ್ತಿಯ ನವದುರ್ಗಿಯರು, ಸಪ್ತಮಾತೃಕೆಯರು (ಭಾರದ. ೮೦). [ನವ$_1$ + ದುರ್ಗಿ]

ನವದ್ವಾರ (ನಾ). ೧. ಒಂಬತ್ತು ಬಾಗಿಲುಗಳು : ನರಕಕ್ಕೆ ನವದ್ವಾರ, ನಾಕಕ್ಕೆ ಒಂದೇ ದ್ವಾರ (ಗಾದೆ). ೨. ಕಣ್ಣುಗಳು, ಕಿವಿಗಳು, ಮೂಗಿನ ಹೊಳ್ಳೆಗಳು, ಬಾಯಿ, ಮೂತ್ರದ್ವಾರ ಮತ್ತು ಗುದದ್ವಾರ ಎಂಬ ದೇಹದ ಒಂಬತ್ತು ದ್ವಾರಗಳು : ಪರಿಮಳದಿಂಡೆಯ ಕಟ್ಟಿ ಪೂಜಿಸುತ್ತಿರ್ದುದೋ ನವದ್ವಾರ ಶಿವಾಲಯದಾದಿ ಮಧ್ಯಸ್ಥಾನದಲ್ಲಿ (ಅವಚಂ. ೪೫-೧೯೩) ; ಬಿಸುಗುದಿಯ ನವರುಧಿರಜಲ ಜಾಳಿಸೆ ನವದ್ವಾರದಲಿ ದೈತ್ಯನ ಕುಸುಕಿಱಿದು ತಿವಿತಿವಿದು ಕೊಂದನು ಕಲಿ ಜಟಾಸುರನ (ಕುಮ್ಮಾಅ. ೧೦-೧೧); ನೆಲೆಗೊಂಡ ನವದ್ವಾರದ ಹೊಲೆಯೊಳು ನರಳುತ ನೀ ಬಿದ್ದೆ ಬಿಕನಾಸಿ (ಪುರಂದ. ೦-೧೦೫-೦) ; ಐದುತಿಂಗಳಿಗೆ ಕಿವಿ ಮೂಗು ಕಂಗಳುಂ ಜನಿಸಿ ನವದ್ವಾರಂಗಳಂ ತೋರ್ಪವು (ನವಮೋ. ೧೪-೫೧); ಸುರಲೋಕಕ್ಕೆ ತೆರಳುವ ತವಕದಿಂದ ಅವಳು ನವದ್ವಾರಗಳ ವಾಯುವನ್ನು ಬಲಿದು, ಪ್ರಾಣತ್ಯಾಗ ಮಾಡಿದಳು (ನಂಜುಂಡ. ೫೦). [ನವ$_1$ + ದ್ವಾರ]

ನವದ್ವೀಪ (ನಾ). = ನವಚಕ್ರ : ಚಿದ್ಬ್ರಹ್ಮಾಂಡದೊಳಗಣ ಏಳುತಾವರೆಯ ಮೇಲಿಪ್ಪ ನಿಷ್ಕಲಚಿದ್ಬಿಂದುಲಿಂಗಕ್ಕೆ ಪ್ರಾಣಪೂಜೆಯಂ[ಮಾಡೆ] ಮಹಾಜ್ಞಾನ ಬಲದಿಂದ ನವದ್ವೀಪಂಗಳ ಲಿಂಗಂಗಳ ಬೆಳಗು ಪಿಂಡಾಂಡದಲ್ಲಿ ಪ್ರಭಾವಿಸಿ ತೋಱುತಿರ್ಪುದಾಗಿ ನಾನು ಸರ್ವಾಂಗಲಿಂಗಿಯಾದೆನಯ್ಯ (ಘನವ. ೩೯-೩೨); "ಆಚಾರಾದಿಯಾಗಿ ನಿರಂಜನಲಿಂಗಾಂತ್ಯವಾದ ಒಂಬತ್ತು ಲಿಂಗಗಳಿರುವ ಆಧಾರಾದಿಯಾಗಿ ಪಶ್ಚಿಮಾಂತ್ಯವಾದ ಒಂಬತ್ತು ಚಕ್ರಗಳು" (ಘನವ. ಕೋಶ). P ಇಲ್ಲಿ 'ಚಕ್ರ'ವೆಂಬ ಸ್ಥಾನವನ್ನು 'ದ್ವೀಪ'ವೆಂದು ರೂಪಕ ಮಾಡಿದೆ. [ನವ$_1$ + ದ್ವೀಪ]

ನವಧಾನ್ಯ (ನಾ). ಗೋದಿ, ಭತ್ತ, ಉದ್ದು, ಹೆಸರು, ಕಡಲೆ, ತೊಗರಿ, ಹುರುಳಿ, ಅವರೆ ಮತ್ತು ಎಳ್ಳು ಎಂಬ ಒಂಬತ್ತು ಬಗೆಯ ಧಾನ್ಯಗಳು : ನವಧಾನ್ಯ ಬೆಳೆದವನಿಗೆ ವ್ಯವಧಾನವಿಲ್ಲ (ಗಾದೆ). P ಪಿತೃಶ್ರಾದ್ಧದಲ್ಲಿ ಉಪಯೋಗಿಸಲು ಪ್ರಶಸ್ತವಾದುವು : ಭತ್ತ, ಯವೆ, ಎಳ್ಳು, ಉದ್ದು, ಗೋದಿ, ಸಾವೆ, ನವಣೆ, ಹೆಸರು ಮತ್ತು ಸಾಸುವೆ.

[ನವ$_1$ + ಧಾನ್ಯ]

ನವಧಾಭಕ್ತಿ (ನಾ). [ಜೈನ] ಶ್ರಾವಕನು ಸಾಧುಗಳ ಬಗ್ಗೆ ಭಕ್ತಿಯನ್ನು ತೋರಿಸುವ ಸಂಗ್ರಹ, ಉಚ್ಚಸ್ಥಾನ, ಪಾದಪ್ರಕ್ಷಾಲನ, ಪೂಜನ, ಪ್ರಣಾಮ, ಮನಃಶುದ್ಧಿ, ವಚನಶುದ್ಧಿ, ಕಾಯಶುದ್ಧಿ ಹಾಗು ಆಹಾರಶುದ್ಧಿಗಳೆಂಬ ಒಂಬತ್ತು ವಿಧಾನಗಳು : ನಿಜವಾದ ಶ್ರಾವಕ ಊಟದ ಹೊತ್ತಿನಲ್ಲಿ ಬಾಗಿಲದೊಳಗೆ ನಿಂತು ಸಾಧುಗಳ ಬರವನ್ನು

ಹಾರೈಸುತ್ತಲೇ ಇರುವನು. ಸಾಧುಗಳು ಅವನ ದೃಷ್ಟಿಗೆ ಬಿದ್ದೊಡನೆಯೇ ನಿಲ್ಲಲು ಪ್ರಾರ್ಥಿಸುವನು. ನಿಂತ ಮೇಲೆ ಸಾಧುಗಳನ್ನು ಕರೆದುಕೊಂಡು ತನ್ನ ಮನೆಯೊಳಗೆ ಹೋಗುವನು. ಉಚ್ಚಾಸನದಲ್ಲಿ ಕೂಡಿಸುವನು, ಪಾದಗಳನ್ನು ತೊಳೆಯುವನು, ಪೂಜಿಸುವನು, ನಮಸ್ಕರಿಸುವನು. ಮನ ವಚನ ಕಾಯ ಹಾಗೂ ಅನ್ನಗಳು ಶುದ್ಧವಾಗಿರುವುವೆಂದು ಮನಃಪೂರ್ವಕ ವಾಗಿ ಹೇಳುವನು. ಈ ಎಲ್ಲ ಕಾರ್ಯಗಳಿಗೆ 'ನವಧಾಭಕ್ತಿ' ಎಂದು ಹೇಳುವರು (ಜೈನಪ. ೪೭೮). 'ನವವಿಧಪುಣ್ಯ' ಪರಾ. [ಸಂ.]

ನವನಲಿನ, ನವನಳಿನ (ನಾ). [ಛಂದ] ಒಂದು ಸಾಲಿನಲ್ಲಿ ನಜಜಭರ ಎಂಬ ಗಣಗಳು ಬರುವ ಒಂದು ಬಗೆಯ ಅಕ್ಷರವೃತ್ತ : ದಿವಿಜ ದಿನಾಧಿಪ ಭಾನು ಶೀತಕರಾಗ್ನಿಯೆಂದಿವು ನೆರೆದಿಂಬೆನೆ ಬಂದೊಡಾ ಯತಿ ಹತ್ತಱತ್ತವತರಿಸಿರ್ದೊಡಮಂಬುಜಾಯತಲೋಚನೇ ನವನಲಿನಂ ಕವಿರಾಜ ಹಂಸವಿನಿರ್ಮಿತಂ (ಛಂದೋಂಬು. ೨-೧೫೭). **ನವನಳಿನ** : ನವನಳಿನಂ ಮೆಱೆಗುಂ ನಜಂಜಭರಂ ಬರಲ್ (ಕೈಪಿಡಿ. ೮೩). [ಸಂ.]

ನವನವತಿ (ನಾ). ಒಂದು ಸಂಖ್ಯೆ ; ತೊಂಬತ್ತೊಂಬತ್ತು : ನವನವತಿ ಯೋಜನ ಸಹಸ್ರಾಧ್ವವನು ನೀರ್ನೆಳಲಶನವಿನಿತಿಲ್ಲವನಿಯಿಂ ಕೆಳಗೊಯ್ದು ಯಮನವರಿಕ್ಕಿ ನರಕದಲಿ ತಿವಿದು ಯಾತನೆಬಡಿಸುವರು(ನಿಭಾಗ. ೩-೧೪-೧೩).

[ನವ$_1$ + ನವತಿ]

ನವನವೋದಿತ (ಗು). ಹೊಸಹೊಸದಾಗಿ ಹುಟ್ಟಿದ ; ನಿತ್ಯನೂತನವಾಗಿ ಉದಿಸಿದ : ಅವಳ ಚೇಷ್ಟೆ, ಪ್ರೀತಿ, ಸೌಜನ್ಯ, ತಾಳ್ಮೆಗಳ ಪ್ರಸಂಗಗಳು ನವನವೋದಿತವಾಗಿ ಜಾಗ್ರತಗೊಂಡು ಸ್ವಪ್ನಚಿತ್ರವನ್ನಾಡುತ್ತಿದ್ದುವು (ಜಯಂತ. ೨೭೪). [ಸಂ.]

ನವನವೋನ್ಮೇಷಶಾಲಿನಿ (ನಾ). ಹೊಸಹೊಸ ಅರ್ಥಗಳನ್ನು ಹೊಳೆಯು ವಂತೆ ಮಾಡುವಂಥದು ; ನಿತ್ಯನೂತನವಾಗಿ ಜಾಗ್ರತಗೊಳಿಸು ವಂಥದು : ನವನವೋನ್ಮೇಷಶಾಲಿನಿಯಾದ ಪ್ರಜ್ಞೆ ಎಂಬುದು ಅದರ ಅತ್ಯಂತ ಸಮೀಚೀನವಾದ ವರ್ಣನೆ ಎನ್ನಬಹುದು (ಕಾವ್ಯಕು. ೦೪) ; ಬೋಧಿಧರ್ಮನ ಧ್ಯಾನಪಂಥ ನವನವೋನ್ಮೇಷಶಾಲಿನಿಯಾದ ಪ್ರತಿಭೆಯನ್ನು ಕೊಟ್ಟಿತು (ಭಾರದ. ೩೪೮) ; ಮಿಂಚಿತಯ್ ಕಾವ್ಯದಿವ್ಯಪ್ರಜ್ಞೆ, ನವನವೋ ನ್ಮೇಷಶಾಲಿನಿ, ನಿತ್ಯತಾಪ್ರತಿಭೆ (ಶ್ರೀರಾಮಾ. ೨-೫೦).

[ಸಂ. ನವನವೋನ್ಮೇಷಶಾಲಿನೀ]

ನವನವೋನ್ಮೇಷಿತ (ಗು). ೧. ಹೊಸಹೊಸದಾಗಿ ವಿಕಾಸಗೊಳ್ಳುವ ; ನಿತ್ಯನೂತನವಾಗಿ ಜಾಗ್ರತೆಗೊಳ್ಳುವ. (ನಾ). ೨. ಹೊಸಹೊಸದಾಗಿ ವಿಕಾಸಗೊಳ್ಳುವಂಥದು : ನವನವೋನ್ಮೇಷಿತಂ ನಿತ್ಯ ಚಿರನೂತನಂ ರಸದರ್ಶನಾಸ್ವಾದನಂಗೈವ ಸಹಜಕವಿ (ಶ್ರೀರಾಮಾ. ೫೭-೦೦೦). [ಸಂ.]

ನವನಳಿನ 'ನವನಲಿನ' ನೋ.

ನವನಾಗ (ನಾ). ಅನಂತ, ವಾಸುಕಿ, ಶೇಷ, ಪದ್ಮನಾಭ, ಕಂಬಲ, ಶಂಖಪಾಲ, ಧೃತರಾಷ್ಟ್ರ, ತಕ್ಷಕ ಮತ್ತು ಕಾಲಿಯ ಎಂಬ ಒಂಬತ್ತು ಸರ್ಪಗಳು : ನವನಾಗ ಶೈಲಸಪ್ತಕ ಷಡುರುತು ಶರಬಾಣ ಶರಧಿ ವಾರುಧಿ ಮತ್ತಾ ಅನಲಾಗ್ನಿ ನಯನಲೋಚನಾ ಹಿಮಕರ ಶಶಿ ನವಪ್ರಕಾರದಿಂ (ಭಾಸ್ಕರ. ೪-೨). [ನವ$_1$ + ನಾಗ]

ನವನಾಥಸಿದ್ಧ (ನಾ). ವ್ಯಾಳಿ, ಚರ್ಪಟಿ, ಕೋರಾಂಟ, ರತ್ನಘೋಷ, ಭೂತನಾಥ, ನಾಗಾರ್ಜುನ, ಮಚ್ಛೇಂದ್ರ, ಗೋರಕ್ಷ, ಮಂಜುನಾಥ ಎಂಬ ಒಂಬತ್ತು ಜನ ಸಿದ್ಧರು: ನವನಾಥಸಿದ್ಧರನಪಹರಿಸಿತ್ತೀಮಾಯೆ (ಆದವ. ೬-೧೨). P 'ವಿವೇಕಚಿಂತಾಮಣಿ'ಯ ಮೇರೆಗೆ : ಸತ್ಯ, ಸತೋಕ, ಆದಿ, ಅನಾದಿ, ಅಕಂಳಿತ, ಮಾತಂಗ, ಮಚ್ಛೇಂದ್ರ, ಘಟಿಯಂತ್ರ ಮತ್ತು ಗೋರಕ್ಷ ಎಂಬುವು ಇವರ ಹೆಸರುಗಳು.

[ನವ$_1$ + ನಾಥ + ಸಿದ್ಧ]

ನವನಾರಕ (ನಾ). ಹೊಸದಾಗಿ ನರಕವನ್ನು ಪ್ರವೇಶ ಮಾಡಿದವನು : ಸೇದೆವಟ್ಟ ನವನಾರಕರಂ ಪುರಾಣನಾರಕರ್ಕಂಡು (ಸುಕುಮಾ. ೧೧-೪೧ ವ) ; ಇಱಿಇಱಿ ಕಡಿಕಡಿ ಸುಡುಸುಡು . . . ಸೀಳ್ಸೀಳೆನುತ್ತೆ ನಾರಕರೈತಂದಿಱಿ ವರ್ಕಡಿವರ್ಸುಡುವರ್ಕೊಱೆವರ್ಸೀಳ್ವರ್ತಗುಳ್ದು ನವನಾರಕರಂ (ಸುಕುಮಾ. ೧೧-೪೨). [ನವ$_1$ + ನಾರಕ]

ನವನಾರದ (ನಾ). [ಜೈನ] ಒಂಬತ್ತು ಜನ ನಾರದರು : ಭೀಮನುಂ ಮಹಾಭೀಮನುಂ ರುದ್ರನುಂ ಮಹಾರುದ್ರನುಂ ಕಾಳನುಂ ಮಹಾಕಾಳನುಂ ದುರ್ಮುಖನುಂ ಅಧೋಮುಖನುಂ ನರಕಮುಖನುಂ ಎಂದು ವರ್ತಮಾನ ನವನಾರದರಕ್ಕುಂ (ಪಸಾರ. ೪೩೬) ; ನವನಾರದರು,–ಭೀಮ, ಮಹಾಭೀಮ, ರುದ್ರ, ಮಹಾರುದ್ರ, ಕಾಳ, ಮಹಾಕಾಳ, ದುರ್ಮುಖ, ನರಕರೋರು, ಅಧೋಮುಖ (ಜೈನಧ. ೧೨೯). [ನವ$_1$ + ನಾರದ]

ನವನಾರಾಯಣ (ನಾ). ೧. ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಅವಿರ್ಹೋತ್ರ, ದ್ರಮಿಳ, ಚಮಸ ಮತ್ತು ಕರಭಾಜನ ಎಂಬ ಒಂಬತ್ತು ಜನ ಮಹಾಮುನಿಗಳು. ೨. [ಜೈನ] ತ್ರಿಪೃಷ್ಠ, ದ್ವಿಪೃಷ್ಠ, ಸ್ವಯಂಭು, ಪುರುಷೋತ್ತಮ, ನರಸಿಂಹ, ಪುಂಡರೀಕ, ದತ್ತದೇವ, ಲಕ್ಷ್ಮಣ ಮತ್ತು ಕೃಷ್ಣ ಎಂಬ ಒಂಬತ್ತು ಜನ ಅರ್ಧಚಕ್ರಿಗಳು,–ವಾಸುದೇವರು : ನವನಾರಾಯಣರು–ನಾರಾಯಣರ ಸಂಪತ್ತಿ ಮೊದಲಾದುವು ಚಕ್ರವರ್ತಿಗಳ ಅರ್ಧದಷ್ಟು. ಆದುದರಿಂದ ನಾರಾಯಣರನ್ನು ಅರ್ಧಚಕ್ರಿಗಳೆಂದೂ ಹೇಳುವರು. ಇವರು ಒಂಬಯ್ವರು (ಜೈನಧ. ೧೨೮). 'ವಾಸುದೇವ', 'ಪ್ರತಿವಾಸುದೇವ' ಪರಾ.

[ನವ$_2$ + ನಾರಾಯಣ]

ನವನಾಳ (ನಾ). = ನವಚಕ್ರ : ಕಾಯದೊಳಗೆ ಕರಣವಿಲ್ಲ ಪ್ರಾಣದೊಳಗೆ ಭಾವವಿಲ್ಲ ಭಾವದೊಳಗೆ ಭ್ರಮೆಯಿಲ್ಲ ನವನಾಳದೊಳಗೆ ಸುಳಿಹು ಮುನ್ನಿಲ್ಲ (ಅವಚಂ. ೨೦೭-೯೮೪) ; ನವನಾಳದ ಸುಳುಹ ತೊಡೆದು ಸುನಾಳವ ಶುದ್ಧವ ಮಾಡುವೆ (ಸಿದ್ಧವ. ಕ. ೩೨೬-೦೦೫೪) ; ನವನಾಳಗಳ ಮುಂಬಾಗಿಲಲ್ಲಿ ನವ ಲಿಂಗಂಗಳ ಸಿಂಗರಿಸಿ (ಘನವ. ೨೪-೨೦) ; ಎನ್ನ ನವನಾಳಂಗಳಲ್ಲಿ ಹೊಳೆದು ಸುಳಿವ ಪರವಸ್ತುವು ನೀನೆ ಅಯ್ಯಾ (ಅಖಂಡೇ. ೨೨೯-೮೦) ; ತನುವಿನೊಳು ಕರಣಿಲ್ಲ ಪ್ರಾಣದೊಳು ಭಾವವಿಲ್ಲ . . . ಸಿದ್ಧನಲಿ ಮುನ್ನಿಲ್ಲ ನವನಾಳ ದೊಳು ಸುಳುಹು (ಸಿದ್ಧಪು. ೨೪-೨೪). [ನವ$_1$ + ನಾಳ (= ನಾಲ$_1$)]

ನವನಿಧಿ (ನಾ). ೧. ಪದ್ಮ, ಮಹಾಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ, ನೀಲ ಮತ್ತು ಖರ್ವ ಎಂಬ ಕುಬೇರನ ಒಂಬತ್ತು ನಿಧಿಗಳು : ಪರಸೇನೆಗೆ ವಿಳಯಕಾಳಜಳನಿಧಿಯಂ ಬಂದರೆದತಿಗೆ ನವನಿಧಿಯ ಕರೆದಂ ಕೆಲ್ಕೆಱೆಯ ನಾಭಿಸೆಟ್ಟಿಯನಾಗಳ್ (ಸೌಇಇ. XX, ೪೯-೫೫ ; 1076 ?) ; ಐರಾವತಂ ಕರಿ ವಜ್ರವಾಯುಧಂ ನವನಿಧಿಯೆ ಭಂಡಾರ (ಹದಕಾ. ೨-೧) ; ನವನಿಧಿಯೊಳ್ ಸಮುದ್ಭವಿಸಿದಾ ಕರಮಾಳಿಕೆ ಯೆಂಬಗುರ್ಬಿನಿಂದವಿರಳಮಾಗೆ ಸನ್ನುತಸಮಸ್ತಸುವಸ್ತುಸಮೃದ್ಧಿಯಿಂದ ಮೊಪ್ಪುವ ವಿಪಣಿವ್ರಜಂ (ಕುಸುಮಾ. ೨-೧೦೧) ; ನವನಿಧಿ ದೊರಕಲ್ಕೆಡೆ ನೂಂಕುವರೊಳರೆ (ದಶಕು. ೮-೦೭೮). ೨. [ಜೈನ] ಚಕ್ರವರ್ತಿಯ ಬಳಿ ಇರುವ ಕಾಳ, ಮಹಾಕಾಳ, ನೈಸರ್ಪ, ಪಾಂಡುಕ, ಪದ್ಮ, ಪಿಂಗಳ, ಮಾಣವಕ, ಶಂಖ ಮತ್ತು ಸರ್ವರತ್ನ ಎಂಬ ಒಂಬತ್ತು ನಿಧಿಗಳು : ಶ್ರೀಗೃಹದೊಳ್ ಪುಟ್ಟಿದ ಕಾಳ ಮಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬ ನವನಿಧಿಗಳುಂ (ಆದಿಪು. ೧೫-೩ ವ) ; ನವನಿಧಿಯಿನಷ್ಟಮಂಗಳನಿವಹಂಗಳಿನೆಸೆವ ನಾಲ್ಕು ಬಾಗಿಲ್ಗಳುಮಂ ದಿವಿಜರ್ ದೌವಾರಿಕವೃತ್ತಿವೆತ್ತು ಕಾವರ್ ಬೃಹದ್ಗದಾ ದಂಡಧರರ್ (ಮಲ್ಲಿಪು. ೧೪-೦೭೫) ; ನವನಿಧಿಯೊಂದೊಂದನೆ ಕುಡುವುವ ವಿರ್ಕೆಮ ಭವ್ಯಸಮಿತಿಗಿಷ್ಟಮನಿತ್ತೊಪ್ಪುವ ನವನವನಿಧಿ ನೋಡುವೊಡಿ

ವೆನಿಪ್ಪುವು ಕೂಡೆ ನವನವಸ್ತೂಪಂಗಳ್ (ಚಂದ್ರಪು. ೧೫-೭೬); ಕಾಳ ಮಹಾ ಕಾಳ ಪಾಂಡುಕ ಮಾಣವಕ ಶಂಖ ನೈಸರ್ಪ ಪದ್ಮ ಪಿಂಗಳ ನಾನಾರತ್ನಮೆಂಬ ನವನಿಧಿಗಳುಮಂ . . . ದಶಾಂಗಭೋಗಮನನುಭವಿಸುವುದು (ಪಸಾರ. ೫೫೮); ನವನಿಧಿಗಳ್ ಮಂಗಳತತಿ ನವರತ್ನದ ತೋರಣಂಗಳಾ ದ್ವಾರಂಗಳ್ (ಪುಷ್ಯಾಸ್ರ. ೦೫-೪೯). ೩. [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ: "ನವ, ಪದಾರ್ಥ . . . ನವನಿಧಿ . . . ನಾಟ್ಯಾಂಗ, ಇಂತಿನಿತುಂ ೯ಕ್ಕೆ ಪೆಸರು" (ವ್ಯವಹಾ. ೦೦). P "ನಿಧಿ-೯: ಕುಬೇರನ: ಮಹಾಪದ್ಮ, ಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ (ಅಥವಾ ನಂದಕ), ನೀಲ, ವರ (ಅಥವಾ ಖರ್ವ), (ಅಮರ. ೧-೧-೮೧; ಮಾರ್ಕಂಪು. ೬೫). (ಆ) ಚಕ್ರವರ್ತಿಯ: ಕಾಳ, ಮಹಾಕಾಳ, ನೈಸರ್ಪ, ಪಾಂಡುಕ, ಪದ್ಮ, ಪಿಂಗಳ; ಮಾಣವಕ, ಶಂಖ, ಸರ್ವರತ್ನ (ಆದಿಪು. ೧೫-೩ವ). (ಇ) ಹಯ, ಗಜ, ರಥ, ದುರ್ಗ, ಭಾಂಡಾರ, ಅಗ್ನಿ, ರತ್ನ, ಧ್ಯಾನ, ಪ್ರಮದಾ (ಸಂ. ೧೬೫)" (ಶ್ರೀವಶ್ವ. ೨೪೯). [ನವ$_1$ + ನಿಧಿ]

ನವನಿಧಿವಲ್ಲಭ (ನಾ). [ಜೈನ] ನವನಿಧಿಗಳಿಗೆ ಒಡೆಯ; ಚಕ್ರವರ್ತಿ: ನವನಿಧಿವಲ್ಲಭನಾನತದಿವಿಜಗಣಂ ನೆಗಟ್ಟ ನಾಭಿರಾಜನ ಮೊಮ್ಮಂ (ಆದಿಪು. ೦೩-೭೩). [ನವನಿಧಿ + ವಲ್ಲಭ]

ನವನಿಧಿಸನಾಥ (ನಾ). ನವನಿಧಿಗಳನ್ನುಳ್ಳವನು: ಅಷ್ಟದಿಗ್ಜಯೋಪಾರ್ಜಿತ ಯಶನುಂ ನವನಿಧಿಸನಾಥ ಶ್ರೀನಿವಾಸನುಂ . . . ಆಗಿ (ಚಂದ್ರಪು. ೭-೩೫ ವ).
[ನವನಿಧಿ + ಸನಾಥ]

ನವನಿರ್ಮಿತಿ (ನಾ). ಹೊಸದಾಗಿ ನಿರ್ಮಾಣ ಮಾಡಿದುದು; ನವಕೃತಿ: ಏಕಸ್ವಗಳು; ನವನಿರ್ಮಿತಿಗಳು ಮತ್ತು ನಕ್ಷೆಗಳು, ಕೃತಿಸ್ವಾಮ್ಯ; ವ್ಯಾಪಾರಚಿಹ್ನೆಗಳು ಮತ್ತು ಪುಣ್ಯಚಿಹ್ನೆಗಳು (ಭಾಧಾನ. ೨೮೨).
[ನವ$_2$ + ನಿರ್ಮಿತಿ]

ನವನೀತ (ನಾ). ಕೆನೆ ಕಡೆದು ಹೊಸದಾಗಿ ತೆಗೆದ ಬೆಣ್ಣೆ: "ದಧಿಸಾರಂ, ನವನೀತಂ-ಈ ೨ ಬೆಣ್ಣೆ" (ಹಲಾಯು. ೪೬-೧೦೯); ನವನೀತಮುಮಂ ಶುಕತುಂಡವುಮಂ . . . ಸೇವಿಸುಗೆ ಪಿಂಗುಗುಂ ಕೆಯ್ಮಸಕಂ (ಲೋಕೋಪ. ೯-೩೬); ನವನೀತಮನಾಣಂಬೆಯನನಾರತಂ ಬೆಳ್ಗುಂಬಳಮಂ ಗಿಣ್ಣನುಣ್ಣ ದಿರ್ಪುದಮೋಘಂ (ಸುಕುಮಾ. ೬-೪೩); ಹಸುವಿಂಗೆ ಮೇವು ಶಿಶುವಿಂಗೆ ನವನೀತಮಂ . . . ಬೆಸಗೊಂಬುದಕ್ಕಿದೇ ಕುಱುಹೆಂದು (ಹಡಕಾ. ೪-೪೦); ಆ ದಧಿಯ ಮಥನವ ಮಾಡಿ ಬೆಣ್ಣೆಯ ತೆಗೆದು ಆ ನವನೀತವ ತುಪ್ಪುವ ಕಾಸಿ ಆ ಗೋವಿಗೆ ಕುಡಿಯಿಸಲಾಗಿ ದಿನದಿನಕ್ಕೆ ಪುಷ್ಟಿಯುಪ್ಪುದು ತಪ್ಪದಯ್ಯ (ಸಿದ್ಧೇವ. ೮೩-೨೪೯); ಕೆನೆವಾಲ ಕಡೆದು ನವನೀತಮಂ ತೆಗೆದು ಬಾಯ್ಗಿನಿದಾಗಿ ಸವಿಯದದಱೊಳಗೆ ಪುಳಿವಿಳಿದು ರಸವನೆ ಕಿಡಿಸಿದೊಡೆ ಕಱೆದ ಸುರಭಿಗಪ್ಪುದೆ ಕೊಱತೆ (ಕೃಮಿಭಾ. ೦-೭); ಎನ್ನೆವರಮಶ್ವಮಿಳೆಯೊಳ್ ಸಂಚರಿಕುಮನ್ನೆವರಂ ಯಜಮಾನಂ ಮೃಗಶೃಂಗಧರಂ ನವನೀತ ವಿಲಿಪ್ತಸುಗಾತ್ರಂ, ಬ್ರಹ್ಮಚರ್ಯವ್ರತಮನಪ್ಪುಕೆಯ್ದು . . . ಕಾಲಮಂ ಸಮೆಯಲಕ್ಕುಂ (ರಾಮಾಶ್ವ. ೦೫-೧೮); ಮಾತು ಮಾತು ಮಥಿಸಿ ಬಂದ ನಾದದ ನವನೀತಾ (ನಾದಲೀ. ೮೫-೯). [ಸಂ.]

ನವನೀತಕ (ನಾ). ೧. ತುಪ್ಪ. ೨. ಬೆಣ್ಣೆ. 'ಅಬ್ಧಿನವನೀತಕ' ಪರಾ. [ಸಂ.]

ನವನೀತಚೋರ (ನಾ). ಬೆಣ್ಣೆ ಕದಿಯುವವನು; ಬೆಣ್ಣೆಗಳ್ಳ; ಕೃಷ್ಣ: ನವನೀತಚೋರನಕುಲೀನವಧೂಸ್ತನದುಗ್ಧಪೃಥುಶರೀರಂ . . . ಪೂಜ್ಯನಾಗೆ ನಿನಗೆ ನಿಕಾರಂ (ಜಗವಿ. ೦೭-೨೩); ಇವಗೇಕೆ ಪರಿಮಳ ಇವಗೇಕೆ ಶೃಂಗಾರ ನವನೀತಚೋರ ನಾಱುವ ಗೊಲ್ಲಗೆ (ಪುರಂದ. ೧-೧೦೦ ಪಲ್ಲವಿ); ನವಿಲುಗರಿಯ ನವನೀತಚೋರನಾಬಾಲವೃದ್ಧಪ್ರೀತ (ನೆಲಮು. ೩೯-೮).
[ನವನೀತ + ಚೋರ]

ನವನೀತಚೋರಕ (ನಾ). = ನವನೀತಚೋರ: ಕ್ಷೀರಲಂಪಟನಾಡಿದಂ ನವನೀತಚೋರಕನಾಡಿದಂ (ಜಗವಿ. ೩-೫೪). [ಸಂ.]

ನವನೀತಹೃದಯ (ನಾ). ೧. ಬೆಣ್ಣೆಯಂತೆ ಮೃದುವಾದ ಹೃದಯ. ೨. (ಬೆಣ್ಣೆಯಂತೆ) ಬೇಗನೆ ಕರಗುವ ಹೃದಯವುಳ್ಳ ವ್ಯಕ್ತಿ; ಮೃದುಹೃದಯಿ: ಸುಂದರಿ! ನೀನು ಭಯಸ್ವಭಾವದವಳು, ನವನೀತ ಹೃದಯಳು (ರಾವಿಜ. ೪೭). [ನವನೀತ + ಹೃದಯ]

ನವನೀರದ (ನಾ). ಹೊಸ ಮೋಡ; ಮಳೆ ಮೋಡ: ಬಿರುಗಾಳಿ ಬೀಸುತ್ತದೆ. ಅದು ನವನೀರದವನ್ನು ತರುವ ಗಾಳಿ (ಹಂಸದ. ೦೫೭ ಅವತರಣಿಕೆ)
[ನವ$_2$ + ನೀರದ$_1$]

ನವನೀಲೋತ್ಪಲ (ನಾ). ಆಗ ತಾನೇ ಅರಳಿದ ಕನ್ನೈದಿಲೆ: ನವನೀಲೋತ್ಪಲಸನ್ನಿಭಾಂಗರುಚಿಯಿಂ ಸತ್ಕಿಂಕಿರಾತೋದ್ಗಮಚ್ಛವಿ ಪೀತಾಂಬರ ಕಾಂತಿಯಿಂ . . . ಚೆಲ್ವಾದನಬ್ಜೋದರಂ (ಜಗವಿ. ೦-೪೯).
[ನವ$_2$ + ನೀಲೋತ್ಪಲ]

ನವನೂತನ (ನಾ). ಹೊಚ್ಚಹೊಸದು; ಅತ್ಯಂತ ನೂತನವಾದುದು: ಮನೆಮನೆಯ ನಾರಿಯರು ನವನೂತನದ ರಜತ ಪೊಂದಳಿಗೆಯಾರತಿಗಳಿಂ . . . ಸೊಡರೆತ್ತಿತು (ತುರಂಗ. ೮೦-೪೭). [ನವ$_2$ + ನೂತನ]

ನವನೋಕಷಾಯ (ನಾ). [ಜೈನ] (ಸುಖದುಃಖಗಳನ್ನುಂಟುಮಾಡುವ) ಒಂಬತ್ತು ಕಿಂಚಿತ್ ಕಷಾಯಗಳು: "ಹಾಸ್ಯ, ರತಿ, ಅರತಿ, ಶೋಕ, ಭಯ, ಜಿಗುಪ್ಸಾ, ಸ್ತ್ರೀವೇದ, ಪುಂವೇದ ಮತ್ತು ನಪುಂಸಕವೇದ" (ಆದಿಪು. ಕೋಶ): ಲೋಭಂಗಳೆಂಬೆಂಟು ಕಷಾಯಂಗಳಂ ಕಿಡಿಸಿ ಮತ್ತಂ ಕಿಱಿಕಿಱಿದು ಬೇಗದಿಂ ತನ್ನ ಪರಿಣಾಮವಿಶೇಷದಿಂ ಚತುಸ್ಸಂಜ್ವಲನ ನವನೋಕಷಾಯಂಗಳೆಂಬ ಪದಿಮೂಱುಂ ಪ್ರಕೃತಿಗಳಮಂತರಾಯಕರಣಂ ಮಾಡಿ (ಆದಿಪು. ೦೦-೦೪ ವ); ಕ್ರೋಧಮಾನಮಾಲೋಭಮೆಂಬೆಂಟುಂ ಕಷಾಯಮುಮಂ ನವನೋಕಷಾಯಮುಮಂ ... ಎಡೆಯುಡುಗದೆ ಕಿಡಿಸಿ (ಸುಕುಮಾ. ೮-೬೨ ವ). 'ನೋಕಷಾಯ' ಪರಾ. [ನವ$_1$+ನೋಕಷಾಯ]

ನವನ್ಯಾಸ (ನಾ). ಹೊಸ ಕಾದಂಬರಿ; ನೂತನ ಕಾದಂಬರಿ: ದೇವೇಂದ್ರ ವಿಜಯನೆಂಬುವನು ಅದ್ಭುತವಾದುದೊಂದು ನವನ್ಯಾಸವನ್ನು ಓದುತ್ತಾ ಕುಳಿತಿದ್ದನು (ಪಿಶಾಪ. ೧); ಈ ನವನ್ಯಾಸವು "ದಿ ಕೌಂಟ್ ಆಫ್ ಮಾಂಟಿ ಕ್ರಿಸ್ಟೊ" . . . ಗ್ರಂಥದ ಕರ್ನಾಟಕ ಗದ್ಯಾನುವಾದವಾಗಿದೆ (ರಾಜಾಮ. ೨ ಪೀಠಿಕೆ). [ನವ$_2$ + ನ್ಯಾಸ]

ನವಪಟವಾಸ (ನಾ). ಹೊಸ ಸುಗಂಧದ ಹುಡಿ: ಸೂಸುವ ನವಪಟವಾಸದ ಚೂರ್ಣಂ ಮೂಸರಮಾದುದು ದಿಕ್ಪರಿಪೂರ್ಣಂ (ಚಂದ್ರಪು. ೪-೬೨ ರಗಳೆ).
[ನವ$_2$ + ಪಟವಾಸ]

ನವಪತ್ 'ನೌಬತ್ತು' ನೋ.

ನವಪತ್ತು 'ನೌಬತ್ತು' ನೋ.

ನವಪತ್ತುಖಾನೆ (ನಾ). ನೌಬತ್ತು ಎಂಬ ವಾದ್ಯವನ್ನು ಬಾರಿಸುವುದಕ್ಕಾಗಿ ಮೀಸಲಾದ (ಮಹಡಿಯ) ಸ್ಥಳ: ಹೊಗಳುವ ಭಟ್ಟರು, ನವಪತ್ತುಖಾನೆಯವರು, ಬೆಸ್ತರು, ದೀವಟಿಗೆಯವರು, ದೀಪದ ಕಂಭದವರು (ಮಹಾವಂ. I, ೦೨೮). [←ಪಾರ. ಮರಾ. ನೌಬತ್‌ಖಾನಾ]

ನವಪದಾರ್ಥ (ನಾ). [ಜೈನ] ಜೀವ, ಅಜೀವ, ಪುಣ್ಯ, ಪಾಪ, ಆಸ್ರವ, ಸಂವರ, ನಿರ್ಜರ, ಬಂಧ ಮತ್ತು ಮೋಕ್ಷ ಎಂಬ ಒಂಬತ್ತು ತತ್ತ್ವಗಳು: ಜೀವಾಜೀವ ಪುಣ್ಯಪಾಪಾಸ್ರವ ಸಂವರ ನಿರ್ಜರ ಬಂಧ ಮೋಕ್ಷಮೆಂದಿಂತು ನವಪದಾರ್ಥಂಗಳುಂ . . ಎಂಬಿವಱೊಳಾನಮಾನು ಮಱಿತಮುಂ ಕುಶಲಿಕೆಯುಂ ನಂಬುಗೆಯುಮಾಗಿ (ವಡ್ಡಾರಾ. ೬-೦೯); ಪಂಚಾಸ್ತಿಕಾಯ ಷಡ್ದ್ರವ್ಯ ಸಪ್ತತತ್ವ ನವಪದಾರ್ಥಸ್ವರೂಪಮಂ ನಿರೂಪಿಸುವುದುಂ (ಪುಷ್ಕಪು. ೯-೬ ವ). [ನವ$_1$ + ಪದಾರ್ಥ]

ನವಪಯೋದ (ನಾ). ವಂಳಿಗಾಲದ ಪ್ರಾರಂಭದ ಮೋಡ : ಅಂಬುವೀಡಿ ನಳವಿಗಗ್ಗಳಮವ್ವುದಱೊನೆಡೆಯೊಳ್ ಧನುರ್ಧರನ ಶರವರ್ಷಂ ನವಪಯೋದ ಪ್ರವೋದಬಂದುವರ್ಷದಂತೆ ಕಳೆಯೆ (ಶಾಂತಿಪು. ೪-೪ ವ).

[ನವ$_{2}$ + ಪಯೋದ]

ನವಪರಿ (ನಾ). ಒಂಬತ್ತು ಬಗೆ ; ನವಪ ಕಾರ : ಆ ಸಭಾಮಧ್ಯದೊಳು ನವಪರಿಯ ಮಣಿಗಿರಣಭಾಸಾಯಮಾನದಿಂ ರುಗರುಗಿಸಿವೊಪ್ಪುತಿಹ ಕೇಸರಿಯ ಪೀಠದೊಳು...ಒಪ್ಪಿದನು (ನವಮೋ. ೩೭-೪೧). [ನವ$_{1}$ + ಪರಿ$_{3}$]

ನವಪಲ್ಲವ (ನಾ). ಎಳೆಯ ಚಿಗುರಂ : ವಲ್ಲಕಿಯೊಳಲಿವ ಬಾಲದೊಳು ಕೇಶದೊಳು ನವಪಲ್ಲವದೊಳಿಳಿಯ ಪವಳದೊಳು ಪ್ರವಾಳವಕ್ಕು (ಮಂಗರಾ. ೦೪೯-೪೧). [ನವ$_{2}$ + ಪಲ್ಲವ]

ನವಪಿಷ್ಟಚರ್ಚಿಕೆ (ನಾ). ಹೊಸದಾಗಿ ಮಾಡಿದ ಹಿಟ್ಟಿನ ಲೇಪ : ಸ್ವಸ್ತಿಕಲಕ್ಷ್ಮಲಕ್ಷಮನಿದರ್ವಣಮಂಡಿತಮುಲ್ಲಸತ್ಪವಾಳಸ್ತಬಕಂ ಪ ವಿ ತ್ರ ಬಿಸಸೂತ್ರವೃತಂ ನವಪಿಷ್ಟಚರ್ಚಿಕಾಶಸ್ತಮುಪಾತ್ತದರ್ಭರಚನಂ . . . ಪೂರ್ಣ ಕಲಶಂ ತಳಿದತ್ರತುಳಂ ವಿಳಾಸಮಂ (ಹಂದ್ರಪು. ೬-೫೬).

[ಸಂ. ನವಪಿಷ್ಟಚರ್ಚಿಕಾ]

ನವಪುಷ್ಪಿತೆ (ನಾ). ೧. ಹೊಸದಾಗಿ ಹೂವು ಬಿಟ್ಟುದಂ. ೨. ಅದೇ ತಾನೇ ವೈನೆರೆದವಳು. ೧, ೨: ನವಪುಷ್ಪಿತೆಯಾಗಿರಲೊಪ್ಪುವ ವಾದಿರಿ ಗೊಲ್ದೆಱಪ ಮಧುಪಾವಳಿಯುತ್ಸವಮಂ ನಿಚ್ಚಿಸುತುಂ ನಗುವವೊಲಿರವಿರಿ ವಣ್ಣಳವರ್ದ ದ. ದಿವಮೆಸೆಗುಂ (ಅಧ್ಯಟ. ೯-೦೬). [ನವ$_{2}$ + ಪುಷ್ಪಿತೆ]

ನವಪೇಟಕ (ನಾ). ಹೊಸ ಪರಿವಾರ: ನವಯಸದಿವಿಜಪೇಟಕ ನವಪೇಟಕ ನಿಕರಮಗಲದಿರಲಬ್ಧಿಯು ಮೇರುವ ಕೆಲದ ಗಿರಿಕದಂಬಕದವಜ್ಜಿಯುಂ ಪೋಲ್ತುದಾ ಕುವರನ ಕೆಲದೊಳ್ (ಶಾಂತಿಪು. ೧೦-೪೧).

[ನವ$_{2}$ + ಪೇಟಕ]

ನವಪ್ರಜೇಶ (ನಾ). ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ, ವಸಿಷ್ಠ ಮತ್ತು ಭೃಗು ಎಂಬ ಒಂಬತ್ತು ಜನ ಪ್ರಜಾಪತಿಗಳುಂ : ವಸುಗಳೆಂಟು ನವಪ್ರಜೇಶರು ಶ್ವಸನಗಣರೈವತ್ತು ಏಕಾದಶ ದಿವಾಕರರು (ಹಸಾಂ. ೬-೨೭). 'ನವಬ್ರಹ್ಮ' ಪರಾ.

[ನವ$_{1}$ + ಪ್ರಜೇಶ]

ನವಪ್ರತಿನಾರಾಯಣ (ನಾ). [ಜೈನ] ಆಯಾ ಕಾಲದಲ್ಲಿ ಆಯಾ ನಾರಾಯಣರಿಗೆ ವಿರೋಧಿಗಳಾದ ಒಂಬತ್ತು ಜನ ಪ್ರತಿವಾಸು ದೇವರು : ನವಪ್ರತಿನಾರಾಯಣರು . . . ಅವರ ಹೆಸರುಗಳು : – ೧. ಅಶ್ವಗ್ರೀವ. ೨. ತಾರಕ. ೩. ಮೇರಕ. ೪. ನಿಶುಂಭ. ೫. ಮಧುಕೈಟಭ. ೬. ಪ್ರಹ್ಲಾದ. ೭. ಬಲಿಸೇನ. ೮. ರಾವಣ. ೯. ಜರಾಸಂಧ (ಜೈನಧ. ೦೫೮).

[ನವ$_{1}$ + ಪ್ರತಿನಾರಾಯಣ]

ನವಪ್ರಸೂತೆ (ನಾ). ೧. ಹೊಸತಾಗಿ ಹೆರಿಗೆಯಾದವಳು; ಹಸಿಬಾಣಂತಿ. ೨. ಹೊಸದಾಗಿ ಕರು ಹಾಕಿದ ಹಸಂ ಅಥವಾ ಎಮ್ಮೆ ; ಎಳಗಂದಿ : "ಧೇನುಃ, ನವಪ್ರಸೂತಾ – ಈ ೨ ಎಳಗಂದಿ" (ಹಲಾಯು. ೪೩-೦೦೪).

[ಸಂ. ನವಪ್ರಸೂತಾ]

ನವಪ್ರಸೂನ (ನಾ). ಆಗ ತಾನೇ ಅರಳಿದ ಹೂವು: ನಾರಾಯಣನೊಂದ ನವಪ್ರಸೂನಪರಿಮಳಕ್ಕಿಳಸುವೆಳದುಂಬಿಪು ಬಂಬಲಿಂ ಬಳಸ:ವಡೆದು (ಮಹಾನೇ. ೧೪-೧೬ ವ) ; ಚಿತ್ರತಮಾಲಪತ್ರವಲ್ಲಿಗಳನಳಂಕವೆತ್ತವಯವಂಗಳೊಳಾಂತು ನವಪ್ರಸೂನಸಮಂ ಮಗಮಗಿಪಂದದಿಂ ತುಱುಬಿ ಬಂದಳ್ (ನಳಚಂ. ೬೪೪).

[ನವ$_{2}$ + ಪ್ರಸೂನ]

ನವಬಂಧ (ನಾ). = ನವನೋಕಷಾಯ : ನವನೋಕಷಾಯ ಷಟ್ಕರ್ಮ ಮುಮಂ ಘಾತಿಸಿ ಪುಂವೇದಾದಿ ನವಬಂಧಮುಮಂ . . . ಕೆಡಿಸಿ (ಆದಿಪು. ೦೦-೦೪ ವ). [ನವ$_{1}$ + ಬಂಧ]

ನವಬತ್ತು 'ನೌಬತ್ತು' ನೋ.

ನವಬ್ರಹ್ಮ (ನಾ). ಭೃಗು, ಪುಲಸ್ತ್ಯ, ಪುಲಹ, ಕ್ರತು, ಅಂಗಿರಸ, ಮರೀಚಿ, ದಕ್ಷ, ಅತ್ರಿ ಮತ್ತು ವಸಿಷ್ಠರೆಂಬ ಒಂಬತ್ತು ಜನ ಬ್ರಹ್ಮನ ಮಾನಸಪುತ್ರರು ; P ಬ್ರಹ್ಮನ ಮಕ್ಕಳಾದ ಇವರಿಗೂ ಬ್ರಹ್ಮನಂತೆ ಸೃಷ್ಟಿ ಶಕ್ತಿಯಿತ್ತು : ಈ ನವಬ್ರಹ್ಮರೊಳಗಭವ್ಯಕ್ರಮವಾದ ಪರಮೇಶ್ವರ ಸೃಷ್ಟಿಶಕ್ತಿಯೇ ಪ್ರಪಂಚಕಲ್ಪನೆಗೆ ಕಾರಣಮಾದುದೆಂದು ತಿಳಿಯಲ್ವೇಳ್ಕುಂ (ವಿವೇಕ. ೩೦೩) : ನವಬ್ರಹ್ಮಾದಿಗಳಲ್ಲಿ ಮುಖ್ಯನೆನಿಪಾ ದಕ್ಷಂ . . . ಮಾಡುವುದೊಂದುತ್ಕಟ ಧರ್ಮಯಾಗದೂದವಂ ಕೊಂಡಾಡಲೇಂ ಸಾಧ್ಯಮೇ (ನಸ್ಸಾ. ೬-೯೪) ; ಆ ಬ್ರಹ್ಮನಿಂದ ಭೃಗು ಮೊದಲಾದ ನವಬ್ರಹ್ಮರೂ ಅಷ್ಟದಿಕ್ಪಾಲಕರೂ . . . ಒಗೆದರು (ನಳವ್ಯ. ೬).

[ನವ$_{1}$ + ಬ್ರಹ್ಮ]

ನವಭಾಗ (ನಾ). ಒಂಬತ್ತು ಭಾಗ.–ಜೋರು : ಕುವರರ ಮದುವೆಯೊಳ್ಯಾಗಿಲುದಡೆದಾಗ ಕುವರಿಯರ್ಗಿತ್ತ ಭೂತಳವ ಹವಣಿಸಿ ಮಧ್ಯಖಂಡದ ಹತ್ತುಭಾಗದೊಳ್ನವಭಾಗವುಳಿದೊಂದು ಪೋಯ್ತು (ಧರಚ. ೪೪-೩೮).

[ನವ$_{1}$ + ಭಾಗ]

ನವಭಾರತ (ನಾ). ಹೊಸ ಸ್ವರೂಪ ಪಡೆದ ಭಾರತದೇಶ ; ಸ್ವತಂತ್ರ ಭಾರತ : ನಾನಳವೆ, ನೀನಳವೆ, ನಮ್ಮೆಲುಬುಗಳ ಮೇಲೆ ಮೂಡುವುದು, ಮೂಡುವುದು ನವಭಾರತದ ಲೀಲೆ! (ಪಾಂಡಜ. ೩-೦೨). P ಅನೇಕ ವರ್ಷಗಳು ದಾಸ್ಯವನ್ನು ಅನುಭವಿಸಿದ್ದು, ಸ್ವಾತಂತ್ರ್ಯವನ್ನು ಅಪೇಕ್ಷಿಸಿದ್ದಂಥ ಕವಿಯ ಕಲ್ಪನೆಯ ಭಾರತ. [ನವ$_{2}$ + ಭಾರತ]

ನವಭೂತಭಾಷೆ (ನಾ). ೧. ನವೀನವಾದ ಪೈಶಾಚಿಕ ಭಾಷೆ. ೨. (ಸಾಮಾನ್ಯರಿಗೆ ತಿಳಿಯದ) ಭೂತಗಳ ಭಾಷೆ. ೧, ೨ : ನವಭೂತಭಾಷೆಯಿಂ ಕುಱುಪುವೇಟು ತಾಮದ್ದಗವಿತೆಯುಂ ಮಾಡಿ ಮಹಾವ್ಯವಸಾಯಂಗೆಯ್ದ ಮರುಳ್ಗವಿಗಳ್ತಾವೇಂ ಗುಣಾಢ್ಯರಂ ಮಸುಳಿಸರೇ (ಗದಾಯು. ೪-೪೦). [ನವ$_{2}$ + ಭೂತ + ಭಾಷೆ]

ನವಮ (ಗು). ಒಂಬತ್ತನೆಯ : ಅಮರಾಧಿರಾಜ ಹುತವಹ ಯಮ ನೈಋತ ವರುಣ ವಾಯು ಯಕ್ಷೇಶಾನ ಕ್ರಮದಿನವರೆಣ್ಬರಂತುತ್ತಮನೈನೀಂ ನವಮಲೋಕಪಾಳನೆ ಅವರೊಳ್ (ಕವಿಕಾ. ೩-೪೬) ; ನವಮ ಜಿನಾಧೀಶ್ವರನಂ . . . ಅಭಿವರ್ಣಿಸುವೆಂ (ದಾಧಪು. ೧೬-೩೯೦) ; ಸಪ್ತಕ, ಅಷ್ಟಕ, ನವಮ, ದಶಮ – ಎಂದು ಪ್ರತ್ಯಯಂ ಪತ್ತಲೊಡಂ – ಎಲ್ಲಕ್ಕಂ ವಿಭಕ್ತಿಯಂ ಪತ್ತಿಸುವುದು (ಶಬ್ದಮ. ೮೩ ಪ್ರಹೋ). [ಸಂ.]

ನವಮಂಡನ (ನಾ). ಹೊಸ ಆಭರಣ ; ಹೊಸ ಬಗೆಯ ಅಲಂಕಾರ : ಭವನತನು ಭಾಳಮಂಡದ ನವಮಂಡನದಿಂದವೊಪ್ಪೆ ನಯನದ್ವಯದಿಂ ತವೆ ನೋಡಲ್ ನೆಟಿಯದೆ ನಯನವಿಹ್ವಲಂ ಹರಿ ಸಹಸ್ರಲೋಚನನಾದಂ (ಶಾಂತಿಪು. ೦೦-೬೦). [ನವ$_{2}$ + ಮಂಡನ]

ನವಮಣಿ (ನಾ). = ನವರತ್ನ ೧ : ನವಮಣಿಗಣರುಚಿಯಿಂ ಮಿಱುಗುವ ಕೂಟಾಟೋಪಮಂ ವಿಮಾನವನವರುತ್ನವದಿಂದಂದೇಱಿಮೆನಲ್ ದಿವಿಜ ಕುಮಾರಾಭನೇಱಿ ನಭದಿಂ ಬಂದರ್ (ನೇಮಿಪು. ೩-೦೯೪) ; ನವಮಣಿ ಮರೀಚಿಮಂಜರಿ ಕವಿದು ಪೊನಲ್ವರಿದುದೆಂಬಿನಂ . . . ಜಲಜಲಿಸಿ ಪರಿವ ಬರಿವೊನಲೆಸೆಗುಂ (ವರ್ಧಪು. ೧೦-೦೪) ; ನವಮಣಿಮೇಖಲಾನ್ವಿತ ಸುಮೇರುವೊ ತಾನನೆ ದೇವತಾಕೃತಿಪ್ರವಿದಿತನಂದಿಮುದ್ರೆಯದು ಶೋಭಿಸೆ (ಹಾಲಾಸ್ಯ. ೪-೦೬-೫೫). [ನವ$_{1}$ + ಮಣಿ]

ನವಮತಿ (ನಾ). ಹೊಸದಾಗಿ ಅಲೋಚಿಸುವ ಬುದ್ಧಿ ; ಪ್ರತಿಭೆ : ನವಮತಿಯಿಲ್ಲದ ಕುಕವಿಯ ಕವಿತೆಯವೋಲ್ ಮಾಂದ್ಯಮಾಯ್ತು ವದ ವಿನ್ಯಾಸಂ ಯುವತಿಗೆ ಮಹಿಮೋನ್ನತಿ ಮೇರುವೆನಿಪ್ಪಾ ಗರ್ಭದರ್ಭಕನ ಗೌರವದಿಂ (ಉಸುಮಾ. ೩-೦೬). [ನವ$_{2}$ + ಮತಿ]

ನವಮರ್ಕ್ಷ (ನಾ). ೧. [ಜ್ಯೋತಿ] ಒಂಬತ್ತನೆಯ ರಾಶಿ. ೨. ಒಂಬತ್ತನೆಯ ಸ್ಥಾನ : ರವಿ ಲಗ್ನಾವಸಥಕ್ಕೆ ಷಷ್ಠಗೃಹದೊಳ್ ನಿಂದಂದಖಲ್ಯಂ . . . ನವಮರ್ಕ್ಷಸ್ಥಿತನಾಗೆ ಪುತ್ರ ಸುಖವಿತ್ತೋಪೇತನಕ್ಕುಂ ನರಂ (ಜಾತತಿ. ೧೮-೩). [ನವಮ + ಋಕ್ಷ]

ನವಮಲ್ಲಿಕೆ (ನಾ). ಒಂದು ಬಗೆಯ ಮಲ್ಲಿಗೆ ಬಳ್ಳಿ ಮತ್ತು ಅದರ ಹೂವು : ನವಮಲ್ಲಿಕಾಚಯಕರಲ್ಲೊಂಪಂ ಲಸತ್ಪಾಟಲಾವನಿಜಕ್ಕಾಗೆ ಪಿಕಾಳಿರಾವಮುದಿತಂ ಬಂದೊಪ್ಪುಗುಂ ಮಾಧವಂ (ಯಾದಚಂ. ೪-೮೦).
[ಸಂ. ನವಮಲ್ಲಿಕಾ]

ನವಮಲ್ಲಿಗೆ (ನಾ). = ನವಮಲ್ಲಿಕೆ : ನವಮಲ್ಲಿಗೆ, ಹಂಬುಮಲ್ಲಿಗೆ (ಪ್ರಾಕಿಗಿ. ೪೭-೯೩೨). [< ಸಂ. ನವಮಲ್ಲಿಕಾ]

ನವಮಾಂಕ (ನಾ). ಒಂಬತ್ತರ ಅಂಕಿ: ಆಲೆನ್‌ರಾಸ್ ಹರಪ್ಪ ಮೂಲಭಾಷೆ ಪುರಾತನ ದ್ರಾವಿಡ ಅಥವಾ ಮುಂಡ ಅಥವಾ ಬುರುಷಸ್ಕಿ ಆಗಿರಲಾರದೆಂದು, ನವಮಾಂಕ ಪ್ರಧಾನವಾಗಿರುವದರಿಂದ ಬಹುಶಃ ಪುರಾತನ ಇಂಡೋನೀಷಿಯನ್ನೆಂದು ಊಹಿಸಿರುವರು (ಧಾರದ. ೧೬).
[ನವಮ + ಅಂಕ್ಷ]

ನವಮಾಲಿಕಾಲತೆ (ನಾ). ಇರುವಂತಿಯ ಬಳ್ಳಿ ; ನವಮಲ್ಲಿಕೆಯ ಬಳ್ಳಿ : ರತಿಯ ಮದನನ ಮದುವೆಯೊಳ್ ಪೊಸಯಿಸಿದ ಪಸುರ್ವಂದರಂತೆ ಮಿಸುಪ ಮೃದ್ವೀಕಾಲತೆಯ ನಾಗಲತೆಯ ನವಮಾಲಿಕಾಲತೆಯ ... ವಿಚಕಿಳಲತೆಯ ಮಂಡವಂಗಳುಂ ಮನೋಹರಂಗಳೆನಿಸಿರ್ದುವು (ಚಂದ್ರಪು. ೦-೧೦೬).
[ಸಂ. ನವಮಾಲಿಕಾಲತಾ]

ನವಮಾಲಿಕೆ (ನಾ). ಮಲ್ಲಿಗೆಯಲ್ಲಿ ಒಂದು ಬಗೆ; ಇರುವಂತಿಗೆ : "ಸಪ್ತಳಾ, ನವಮಾಲಿಕಾ – ಈ ೨ ಇರುವಂತಿ" (ಹಲಾಯು. ೩೮-೫೪) ; ನಾಗವಲ್ಲಿ ನವಮಾಲಿಕೆಯುಂ ರಂಜಿಪ ಕುಂದ ಕದಂಬಂ ಮಂಜುಳದುದ್ಯಾನವನದೊಳಿರ್ಪವು ಪೆಂಪಿಂ (ಹಮ್ಮೀರ. ೪-೧೫). [ಸಂ. ನವಮಾಲಿಕಾ]

ನವಮಾಸ (ನಾ). ಒಂಬತ್ತು ತಿಂಗಳು: ನವಮಾಸ ವಿರಾಮದೊಳಬ್ಜವದನೆ . . . ಪಡೆದಳ್ಸುರೂಪವತಿಯಂ ಸುತೆಯಂ (ಸುಕುಮಾ. ೫-೪೯); ನವಮಾಸಂ ತೀವಿ ದೇವಕಿ ಬೆಸಲೆಯಪ್ಪುದನಱಿದುಂ (ಜಗವಿ. ೨-೫೩ ವ) ; ನವಮಾಸಂ ನೆಱೆ ತೀವೆ ದೇವಿ ಪಡೆದಳ್ ಪೂರ್ವಾಶೆಯಾದಿತ್ಯನಂ (ಪುಷ್ಯಾಸ್ತ. ೮-೮೧) ; ಹೊತ್ತು ನವಮಾಸ ಪರ್ಯಂತ ಗರ್ಭದಲಿ . . . ಸಲಹಿದಾ ತಾಯ್ತಂದೆ ಹೊತ್ತುಗಳೆವರಲ್ಲದೆ ಬೆನ್ಹತ್ತಿ ಬಹರೆ (ಕನಕ. ೭೦-೧) ; ಬಸಿರು ತುಂಬಲು ಹಸುರುಡಿಗೆಯನುಟ್ಟೆಂದು ವನವಾಸ ನವಮಾಸ ತೀರಿಸುವೆ (ನಾದಲೀ. ೪೦-೨೨). [ನವ$_1$ + ಮಾಸ$_2$]

ನವಮಿ (ನಾ). ೧. ಚಾಂದ್ರಮಾನ ಪಕ್ಷದ ಒಂಬತ್ತನೆಯ ದಿನ : ಬರೆ ಚೈತ್ರಕೃಷ್ಣಪಕ್ಷಂ ದೊರೆಕೊಳೆ ನವಮಿಯೊಳಮುತ್ತರಾಷಾಢಂ (ಆದಿಪು. ೯-೭೯); ಅಷ್ಟಮಿ ನವಮಿ ಎಂಬ ಕಲ್ಪಿತವೇಕೋ ಶರಣಂಗೆ (ಬಸವ. ೬೨೦); ಆ ಪಕ್ಷಂಗಳೊಳಗೆ ಅಗ್ನಿಯೇ ದೇವತೆಯಾಗುಳ್ಳ ಪಾಡ್ಯ . . . ದುರ್ಗಿಯಧಿದೇವತೆಯಾದ ನವಮಿ (ವಿವೇಕ. ೩೪೦). ೨. ಒಂದು ಸಂಖ್ಯೆ; ಒಂಬತ್ತು: ಒಬ್ಬನಿಂಗೆಂಟು ಮತ್ತೊಬ್ಬಗಂ ನವಮಿ ಮತ್ತೊಬ್ಬಗಂ ಪತ್ತರಿಂದ ಬಿಲ್ಲುಗಳ್ ಝೇಂಕರಿಸಿ (ತುರಂಗ. ೫೦-೪೮). [ಸಂ. ನವಮೀ]

ನವಮೀವಾಸರ (ನಾ). ನವಮಿಯ ದಿನ,-ತಿಥಿ : ಬರೆ ಚೈತ್ರಂ ಕೃಷ್ಣಪಕ್ಷಂ ದೊರೆಕೊಳೆ ನವಮೀವಾಸರಂ ಪೊರ್ದೆ . . . ಪುತ್ರನಂ ಪೆತ್ತಳಾಗಳ್ (ಆದಿಪು. ೭-೩೬). [ಸಂ.]

ನವಮೇಘ (ನಾ). ಹೊಸ ಮೋಡ : ನವಮೇಘಧ್ವನಿ ಪುಷ್ಕರಧ್ವನಿ ತರತ್ತಾರಾಳಿ ಪುಷ್ಪೋಪಹಾರವಿಳಾಸಂ ರುಚಿರಾಂಬುದಂ ಯವನಿಕಾವಿನ್ಯಾಸಮಾದಲ್ಲಿ . . . ವಿಯದ್ರಂಗದೊಳಂದದೇಂ ನಲಿದುದೋ ವಿದ್ಯುನ್ನಟೀನರ್ತನಂ (ಆದಿಪು. ೬-೭೨) ; ನವಮೇಘಧ್ವನಿ ಧೀರತೂರ್ಯನಿನದಂ ಭೋರೆಂಬಿನಂ . . . ರಾಜಸೂಯಮಖಮಂ ಬೇಳ್ದಂ ಮಹೀಪಾಲಕಂ (ಜಗವಿ. ೧೭-೧೨). [ನವ$_2$ + ಮೇಘ]

ನವಮೇಘಮಾಲಿಕೆ (ನಾ). ಮಳೆಗಾಲದ ಮೊದಲಲ್ಲಿ ಕಾಣಿಸಿಕೊಳ್ಳುವ ಮೋಡಗಳ ಸಾಲು : ಬಾನೊಳು ಕವಿದಿದೆ ನವಮೇಘಮಾಲಿಕೆ ದೂರದೊಳಿರುವಳು ಕಾಂತೆ (ಇಂಜಾಪ. ೧೬೦-೮೮). [ನವಮೇಘ + ಮಾಲಿಕೆ]

ನವಯವ್ವನ (ನಾ). = ನವಯೌವನ ೧: ಅಂತು ಸುದರ್ಶನಂ ನವಯವ್ವನ ಪ್ರಾಪ್ತನಾಗಿ (ಪುಷ್ಯಾಸ್ತ. ೫-೧೬ ವ). [ನವ$_2$ + ಯವ್ವನ]

ನವಯವ್ವನೆ (ನಾ). ಹೊಸ ಪ್ರಾಯದವಳು; ತುಂಬುಹರೆಯದವಳು : "ಏಱುಂಜವ್ವನೆಯೆಂದು ನವಯ [ಪಾಠಾಂ. ಯೌ]ವ್ವನೆ" (ಕಶಸಾ. ೧೮-೩೭೩).
[ನವ$_2$ + ಯವ್ವನೆ (<ಜವ್ವನೆ)]

ನವಯುವ (ನಾ). ಹೊಸ ಹರೆಯದವನು ; ನವಯುವಕ : ನವಯುವನೀತನೊಳ್ ನೆರೆದುವಂದುಪವಾಂತಲವಂಗಪುಷ್ಪವತ್ಪವನವಿದಾರ್ಯಘರ್ಮಲವೆಯಾಗಿ ವಿಹಾರಿಸು ವಾರ್ಧಿತೀರದೊಳ್ (ಶಾಂತಿಪು. ೫-೧೩೫) ; ನವಯುವನಾದನೀಸಮಯದೊಳ್ಜನನಂ ವಶವರ್ತಿಯಾಗಿ ಮಾಡುವೆಂ . . . ಎಂದು ಮನ್ಮಥನೃಪಂ ನಿಜಮೋಹನಮಂತ್ರದೇವತಾನಿವಹಮನಟ್ಟಿದಂದದೊಳೆ ಕಣ್ಗೆಸೆದರ್ ನರಪಾಳಪುತ್ರಿಯರ್ (ಪಾರ್ಶ್ವಪು. ೧೫-೩೯).
[ಸಂ. ನವಯುವನ್]

ನವಯುವಕ (ನಾ). = ನವಯೌವನ ೨ : ಚೀಣದ ನವಯುವಕರು ನಮ್ಮವರಂತೆಯೆ ಪಾಶ್ಚಾತ್ಯಶಿಕ್ಷಣವನ್ನು ಹೊಂದಿದ್ದರು (ಜಗಸಂ. II, ೧೦).
[ನವ$_2$ + ಯುವಕ]

ನವಯುವತಿ (ನಾ). = ನವಯವ್ವನೆ : ನವಯುವತೀಲೋಚನದ್ಯುತಿ ಧವಳಿಸೆ (ಪಾರ್ಶ್ವಪು. ೨-೭). [ನವ$_2$ + ಯುವತಿ]

ನವಯೌವನ (ನಾ). ೧. ಹೊಸ ಹರೆಯ; ನವತಾರುಣ್ಯ : ಮಗಳ್ ಶ್ರೀಮತಿಯೆಂಬಳಾಗಿ ನವಯೌವನಲಕ್ಷ್ಮಿಯನೆಯ್ದೆ ತಾಳ್ದಿದಳ್ (ಆದಿಪು. ೩-೧೮); ನವಯೌವನದೊಳ್ ಗುಣದೋಷವಿಚಾರಮನಿಂತು ಮಾಡಲೀಯದ ಭಾವೋದ್ಭವನಿಂ ಪರವಶೆಯಾದೆಂ (ಕಾದಂಪೂ. ೭೪೫) ; ಶಿವಪೂಜೆಗೆ ನವಯೌವನಮಾದಂತುನ್ಮತ್ತಪಂಚವಿಂಶತಿಪ್ರಾಯಮಾಗಿ (ನಂಬಿರ. ೧೦-೫). ೨. ಪ್ರಾಯಕ್ಕೆ ಬಂದವನು ; ನವಯುವಕ : ನವಯೌವನನಾದಂದು ಮಗಂಗೆ ಮದುವೆಯಂ ಮಾಡುವಮೆಂದು . . . ಪಾರ್ವನ ಕೂಸಂ ಬೇಡಿ ಪಡೆದು (ಜೀವಸಂ. ೩೭-೨೨ ವ) ; ನವಯೌವನನಾದ ತನೂಭವನಂ ಕಂಡಶ್ವಸೇನನರಪತಿ ಪರಮೋತ್ಸವದಿಂ ವಿವಾಹಮಂ ಮಾಡುವೆನೆಂದು ನಿರೀಕ್ಷಿಸಲ್ಕೆ ನೃಪಕನ್ನೆಯರಂ (ಪಾರ್ಶ್ವಪು. ೧೫-೩೨). [ನವ$_2$ + ಯೌವನ]

ನವಯೌವನಾಂಕ (ನಾ). = ನವಯೌವನ ೨: ನವಯೌವನಾಂಕನತಿ ಸೌಂದರ್ಯಾನ್ವಿತಂ ರಾಜಸಂಕುಳದೊಳ್ಮೀಱಿದ ನೀಱನೈತರುತಮಿರ್ಪಂ ನೋಡಲೇಳ್ (ರಾಜಶೇ. ೭-೧೫) ; ನವಯೌವನಾಂಕನಂ ಮಾನವನೂತನ ಕಾಮನಂ . . ಈಗಳ್ ತಂದೊಡಗೂಡಿಸದಿರ್ದೊಡೆ ಮುಂದೇವೆಮ್ಮದಸುಗಳ್ ಶರೀರದೊಳಿರದು (ಯಾದಚಂ. ೩-೩೦). [ನವಯೌವನ + ಅಂಕ್ಷ]

ನವಯೌವನೆ (ನಾ). = ನವಯವ್ವನೆ : ನವಯೌವನೆಯರ್ ಲಾವಣ್ಯವತಿಯರಱಿದದ್ರಿಧರನ ಮನಮಂ (ಜಗವಿ. ೫-೧೨) ; ಯಕ್ಷದೇವತೆ ವರಾಂಗನ ಪುರುಷವ್ರತದಳವನಾರಯ್ವೆನೆಂದ, ನವಯೌವನೆಯಪ್ಪ ಕುಮಾರಿಯಾಗಿ ಬಂದಿದಿರೊಳ್ ನಿಂತು (ಜೀವಸಂ. ೫೫-೩೩ ವ). [ಸಂ. ನವಯೌವನಾ]

ನವರಂಗ (ನಾ). [ಶಿಲ್ಪಶಾ] ದೇವಸ್ಥಾನದಲ್ಲಿ ಗರ್ಭಗುಡಿಯ ಎದುರಿನಲ್ಲಿ ಸುಕನಾಸಿಯ ಮುಂಭಾಗದಲ್ಲಿ ನೃತ್ಯಗೀತಾದಿ ರಂಗಭೋಗಕ್ಕಾಗಿ ಕಟ್ಟುವ ಒಂಬತ್ತು ಅಂಕಣದ ಮಂಟಪ : ಕೂಡಿದ ಸುರತರುಣೀಜನಮಾಡುವ ನವರಂಗನರ್ತನಂಗಳಿಂ (ಮಹಾನೇ. ೧೫-೩೨) ; ನಾನಾ ರತುನಕಾಂತಿ ನವರಂಗ ಬಲಿಯಾಗಿ (ವಾದಿಕೀ. ೪೪-೧) ; ನವರಂಗ;

ಇದು ಸುಕನಾಸಿಯ ಮುಂಭಾಗದಲ್ಲಿ ಸಾಧಾರಣವಾಗಿ ಒಂಭತ್ತು ಅಂಕಣದ ಮಂಟಪ (ಮೃವಾಸ್ತು. ೩೪) : ಚಂದ್ರಪ್ರಭಾ ಬಸದಿಯು ಒಂದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮಂಟಪ—ಇವುಗಳಿಂದ ಕೂಡಿ . . . ಚಂದ್ರಪ್ರಭನ ವಿಗ್ರಹವನ್ನು ಹೊಂದಿದೆ (ಧಾರವ. ೫೦೪).

[ನವ$_1$ + ರಂಗ]

ನವರಂಗಮಂಡಪ (ನಾ). = ನವರಂಗ : ಗರ್ಭಗುಡಿಯ ಮುಂದೆ ನವರಂಗ ಮಂಡಪಕ್ಕೆ ಬರುವಂತೆ ವಿಧಾಗಿಸದೆ ಇದ್ದ ಸುಕನಾಸಿಯು ಇದ್ದಿತು (ಹೊಯ್ಸಶಿ. ೨೦).

[ನವರಂಗ + ಮಂಡಪ]

ನವರಂಧ್ರ (ನಾ). = ನವದ್ವಾರ ೨ : ನವರಂಧ್ರಮೆಂಬ ಕನ್ನಂ ಸವೆದಿರಲ್ . . . ಜವನೆಂಬಾಪಿಡಿಗಳ್ಗಂ ತವಕದಿನಸುವೆಂಬ ವಸುವನೊಯ್ಯದೆ ಮಾಣಾ (ಧರ್ಮನಾ. ೫-೮೭) ; ಮಾಸವೈದಾಱಿಲಿ ನಖರೋಮ ಸವರಂಧ್ರ (ಪುರಂದ. ೦-೦೫೨-೩). [ನವ$_1$ + ರಂಧ್ರ]

ನವರಕ್ತ (ನಾ). = ನವಲೋಹಿತ : ನವರಕ್ತರಕ್ತವಸ್ತ್ರಂ ನವಾಂತ್ರ ಯಜ್ಞೋಪವೀತಮೆಸೆಯೆ ಪಿಶಾಚಾನಿವಹಮನಡಗುಗುಣಿಮೆಂದು ನವ ವೇದಮಂ ಪೇಳ್ವರಲ್ಲಿ ರಕ್ಕಸಪಾರ್ವರ್ (ಗದಾಯು. ೪-೬೯).[ನವ$_1$ + ರಕ್ತ]

ನವರಕ್ತತೆ (ನಾ). ಆಗ ತಾನೇ ಮೂಡಿದ ಕೆಂಬಣ್ಣ : ಹೊಸ ಕೆಂಪು : ಹಲಚಕ್ರಾಂಕುಶರೇಖಾವಿಲಸಿತಪದತಳಕೆ ಮಾಡೆ ನವರ[ಪಾಠಾಂ. ಪುನರು] ಕ್ತತೆಯಂ ಹಲಚಕ್ರಾಂಕುಶ ಕುರುಕುಲತಿಲಕಂ ಕುಸಿಕುಸಿದು ಮೆಲ್ಲಮೆಲ್ಲನೆ ನಡೆದಂ (ಗದಾಯು. ೪-೦೬). [ಸಂ. ನವರಕ್ತತಾ]

ನವರತುನ (ನಾ). = ನವರತ್ನ ೧ : ಅಡರಿದನು ನವರತುನಮಯ ರಥವ (ಕುವಾಕ್ರೋ. ೪-೫೦) . [<ನವರತ್ನ]

ನವರತ್ನ (ನಾ). ೧. ವಜ್ರ, ವೈಡೂರ್ಯ, ಗೋಮೇಧಕ, ಪುಷ್ಯ ರಾಗ, ನೀಲ, ಮರಕತ, ಮಾಣಿಕ್ಯ, ಹವಳ ಮತ್ತು ಮುತ್ತು ಎಂಬ ಒಂಬತ್ತು ಬೆಲೆಬಾಳುವ ಮಣಿಗಳು : ನವರತ್ನಂ ಕರಿ ವಾಜಿ ಕಲ್ಪತರು ದೇವಸ್ತ್ರೀಜನಂ ಲಕ್ಷ್ಮಿಯೆಂಬವಱುತ್ಪತ್ತಿಗೆ ಮುಖ್ಯಮಾದುದು . . . ದೇವದಾನವರಿಂದಾದ ಮಹಾಸಮುದ್ರಮಥನಂ (ಪಂಪಭಾ. ೦೪-೦೫೫) ; ನವರತ್ನದ ಪಂಜರದೊಳ್ ದಿವಿಜಶರಾಸನದ ಮಱಿಯನಿರಿಸಿದವೊಲ್ ಸುತ್ತುವ ಸೋಗೆಯ ಸುತ್ತಿನೊಳಾಡುವ ಕೇಕಿಯ ಭಂಗಿ ಲೋಕಮಂ ಸೋಲಿಸುಗುಂ (ಹುಕೋಡಿ. ೩-೩೭) ; ನವರತ್ನದ ಮನೆಯಂ ಕನ್ನವಿಕ್ಕಿ ಮಾಣಿಕವನುಯ್ವ ಪದದೊಳ್ ಕಾದಿರ್ದವರಱಿದು ಪಿಡಿದು (ದಶಕು. ೩-೩೦) ; ಮುತ್ತು ಮಾಣಿಕ ನವರತ್ನದ ಕಿರಣಂಗಳ ಪ್ರಭೆಯು ಪ್ರಕಾಶವನುಳ್ಳುದು (ಸಿದ್ಧೇಪ. ೩೨-೮೨) ; ನವರತ್ನ ಕೆತ್ತಿಸಿದ ಸ್ವಾಮಿ ಎನ್ನ ಹೃದಯಮಂಟಪದಲ್ಲಿ ಸರ್ವಾಭರಣದಿಂದ ಪುರಂದರವಿಠಲನ ಕೂಡಿದೇನೆ (ಪುರಂದ. ೫-೩೨-೫) ; ನವರತ್ನದ ಸೌಧಂಗಳ ಸವಿವೆಳಗಾ ಪುರಮನೆಲ್ಲಮಾವರಿಸೆ (ಹಾಲಾಸ್ಯ. ೦-೪-೭೨). ೨. ವಿಕ್ರಮಾದಿತ್ಯಚಕ್ರವರ್ತಿಯ ಆಸ್ಥಾನದಲ್ಲಿದ್ದ ಒಂಬತ್ತು ಜನ ಪಂಡಿತರು ; "ವಿಕ್ರಮಾದಿತ್ಯ ಚಕ್ರವರ್ತಿಯಂ ಆಸ್ಥಾನದಲ್ಲಿ ಇದ್ದರೆಂದು ಹೇಳಲಾಗುವ : ಧನ್ವಂತರಿ (ವೈದ್ಯ), ಕ್ಷಪಣಕ (ಫಲಜ್ಯೋತಿಷಿ), ಅಮರಸಿಂಹ (ಕೋಶಕಾರ), ಶಂಕು (ಭೂಮೂಪನಶಾಸ್ತ್ರಜ್ಞ), ವೇತಾಲಭಟ್ಟ (ಮಂತ್ರಶಾಸ್ತ್ರಜ್ಞ), ಘಟಕರ್ಪರ (ಶಿಲ್ಪಶಾಸ್ತ್ರಜ್ಞ), ಕಾಲಿದಾಸ (ಕವಿ), ವರಾಹಮಿಹಿರ (ಜ್ಯೋತಿಷಿ), ವರರುಂಚಿ (ವೈಯಾಕರಣ) (ಜ್ಯೋತಿರ್ವಿಧಾಭರಣ ; ಆಪ್ಟೆ ; ಜಾತಿ. XV)" (ಶ್ರೀವಶ್ರ. ೩೭೭). [ನವ$_1$ + ರತ್ನ].

ನವರತ್ನಕೂಟ (ನಾ). ನವರತ್ನಗಳನ್ನು ಕಂದಣಿಸಿದ ಶಿಖರ: ಮುನ್ನಮೆ ಬಿಡೌಜನೆ ನಿರ್ಮಿಸುಪೋಜೆಗೋಜನಾದುದನಱಿಪುತ್ತುಮಿರ್ದುದಿಶಂ ಕರುಮಾಡಮಮಾನುಷಕ್ರಿಯಾಸ್ಪದ ನವರತ್ನಕೂಟವಿಘಟದ್ರಸಚಿತ್ರ ವಿಚಿತ್ರ ಲೇಪೆಯಿಂ (ಪಂದ್ರಪು. ೦೦-೭೫). [ನವರತ್ನ + ಕೂಟ$_3$]

ನವರತ್ನಗಾಸೆ (ನಾ). ನವರತ್ನಗಳನ್ನು ಪೋಣಿಸಿದ ನಡುಕಟ್ಟು ; ನವರತ್ನಖಚಿತವಾದ ಒಡ್ಯಾಣ,–ಡಾಬು : ತೊಳಗುವ ನವರತ್ನ ಗಾಸೆಯ ಸರ್ವಾಂಗಕಳವಟ್ಟ ಮಣಿಭೂಷಣದ . . . ಮುದ್ದುಮೊಗದ ನರ್ತಕಿಯರು ಫಳಿಲನೆ ನಡೆತಂದರಾಗ (ಕಂಸವಿ. ೯-೫೬).

[ನವರತ್ನ + ಕಾಸೆ$_1$]

ನವರತ್ನಮಾಲಿಕೆ (ನಾ). = ನವರತ್ನಮಾಲೆ ೨ : ಶ್ರದ್ಧೆಯಿಂದಿದನು ಈ ನವರತ್ನಮಾಲಿಕೆಯ ಶುದ್ಧಾತ್ಮರಾಗಿ ಪ್ರತಿದಿನದಲಿ ಕಂಧರದ ಮಧ್ಯದಲ್ಲಿರಿಸಿ (ಪುರಂದ. ಧಾ. ೩-೪೪-೯). [ನವರತ್ನ + ಮಾಲಿಕೆ]

ನವರತ್ನಮಾಲೆ (ನಾ). ೧. ನವರತ್ನಗಳಿಂದ ಕೂಡಿದ ಹಾರ : ಕೊರಲೊಳ್ ನವರತ್ನಮಾಲೆಯಂ ಬಾಲಕಿಯಿಕ್ಕಿದಳ್ ನೃಪನ ನಲ್ಮೆಗೆ ತಾಂ ಮುಡಿಯಿಕ್ಕುವಂದದಿಂ (ಮಹಾನೇ. ೩-೦೩) ; ನವರತ್ನಮಾಲಾಗುಣ–ಇವು ಸಕಲಪಾಪಸಮೂಹಗಳನ್ನೂ ಹೋಗಲಾಡಿಸುತ್ತ . . . ಪಾಸರೋಗ, ವಾತರೋಗ ಮುಂತಾದವುಗಳನ್ನೂ ಪರಿಹರಿಸುವ ಔಷಧವಾಗಿದೆ (ಸಳವ್ಯ. ೩೮). ೨. ಒಂಬತ್ತು ಪದ್ಯಗಳ ಸಂಕಲನ,–ಗುಂಪು. ೧, ೨ : ಪವಮಾನದೇವರ ಮಹಾತ್ಮೆಯಂ ವರ್ಣಿಸಿದ ನವರತ್ನಮಾಲೆ ಕಂಠದಲಿ ಸಂತತ ಧರಿಸಿದವರಿಗೆ ಸುಸೌಖ್ಯವನ್ನು ತವಕದಿಂದಿತ್ತು (ಪುರಂದ. ೦-೪೦೩-೯).

[ಸಂ. ನವರತ್ನಮಾಲಾ]

ನವರತ್ನವಡೆ (ಕ್ರಿ). ನವರತ್ನಗಳಿಂದ ಕೂಡಿರು ; ನವರತ್ನಖಚಿತವಾಗಿರು : ಬಿಜುಗಾಳಿ ಬೀಸಲು ಮೃಡನಾಸ್ಥಾನದಿಂ ಸುರರು ಹೊಡೆ ಮಗ್ಗಿದರು ಗದ್ದುಗೆಯಿಂದೆ ನವರತ್ನವಡೆದ ಕಿರೀಟಗಳ್ ಮುಱಿಯೆ (ಕೋಹತ. ೩೭-೫೮). [ನವರತ್ನ + ಪಡೆ$_1$]

ನವರತ್ನವರ್ಣಪೂರ (ನಾ). ನವರತ್ನಗಳನ್ನು ಪೋಣಿಸಿದ ಕಂಬಳಿ : ನವರತ್ನ ವರ್ಣಪೂರಮನವಿರಳ ಕರ್ಪೂರಚೂರ್ಣಸಂಪಾದಿತರಂಗವಲಿ ವಿರಾಜಿತಮಂ . . . ಪಟಮಂಡಪಮಂ (ಪಂದ್ರಪು. ೦೩-೦೦೩). P "ಬಣ್ಣವುರ <(ಸಂ) ವರ್ಣಪೂರ ಎನ್ನುತ್ತಾನೆ ಕೇಶಿರಾಜ ; ಆರ್ಥ ಅನಿರ್ದಿಷ್ಟ ; ಬಣ್ಣಬಣ್ಣದ ಜಮಖಾನೆ, ನೆಲಕ್ಕೆ ಹಾಸುವ ಬಟ್ಟೆ ಎಂಬರ್ಥವಿರಬಹುದೆಂ" (ಪಂಪದೀ. ೨೪೬). [ನವರತ್ನ + ವರ್ಣಪೂರ]

ನವರತ್ನವಿಲಾಸ (ನಾ). [ಸಂಗೀತ] ಒಂದು ರಾಗದ ಹೆಸರು : ನವರತ್ನ ವಿಲಾಸವು . . . ಸಾಯಂಕಾಲದಲ್ಲಿ ಹಾಡಲ್ಪಡುತ್ತದೆ (ಚತುಪ್ರ. ೦೩೭).

[ಸಂ.]

ನವರತ್ನವೃಷ್ಟಿ (ನಾ). ನವರತ್ನಗಳ ಮಳೆ : ಮಾಣಿಕದ ಮಳೆ ಮುತ್ತಿನ ಮಳೆ ಮೊದಲಾದ ನವರತ್ನವೃಷ್ಟಿಯಂ [ಶಿವಂ] ಕಱಿದನೆಂಬಂತೆ (ಬಸಕ. ೦೨-೬೨). [ನವರತ್ನ + ವೃಷ್ಟಿ]

ನವರತ್ನಾಭರಣ (ನಾ). ನವರತ್ನಗಳನ್ನು ಕುಂದಣಿಸಿದ ಒಡವೆ; ರತ್ನ ಖಚಿತವಾದ ಆಭರಣ : ನವರತ್ನಾಭರಣಪ್ರಭಾವಟಳದೊಳ್ಪೆರ್ಮಲ್ಕ ಬೀಜಂ ತನುಚ್ಛವಿ ಸಂಪೂರ್ಣಸುಧಾಂಶುವಂ ಸುರಧನುಶ್ರೀಯಪ್ಪಿದಂತಾಗೆ (ಅನಂಪು. ೪-೪೨). [ನವರತ್ನ + ಆಭರಣ]

ನವರತ್ನೋಜ್ಜ್ವಲ (ಗು). ನವರತ್ನಗಳಿಂದ ಹೊಳೆಯುವ : ನವರತ್ನೋಜ್ಜ್ವಲ ನೂಪುರಕ್ವಣಿತ ವಾಮಾವಾಮವಾಮಾಂಘ್ರಿಪಲ್ಲವಸಂಘಟ್ಟನದಿಂ ತಳರ್ತಲರ್ದು . . . ಮೂವಡಿಗೆಂಪುವೀಱುದುದಶೋಕಾನೋಕಹಂ ಚೈತ್ರದೊಳ್ (ಜಗವಿ. ೦೪-೫೮). [ನವರತ್ನ + ಉಜ್ವಲ]

ನವರಸ (ನಾ). [ಕಾವ್ಯಮಿಮಾ] ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ ಮತ್ತು ಶಾಂತ ಎಂಬ ಒಂಬತ್ತು ರಸಗಳು : "ಶೃಂಗಾರಂ ಭಯಂ ಶಾಂತಮದ್ಭುತಂ ಬೀಭತ್ಸವಾ ಹಾಸ್ಯರೌದ್ರಮೆನಲು ವೀರಮೆನೆ ಕರುಣಮೆನೆ ನವರಸಮೆನಿಕ್ಕುಂ" (ಕುಂಗರಾ. ೨೭-೨) : ನಿರುಪಮನ ವರಸರಸಿಕತೆ ದೊರೆವೆತ್ತಿರೆ(ಸುಳುಮಾ. ೦-೩೮) ;

ನವರಸಂಗಳೆಂದಭನವರಸಂಗಳಾಗಿ ನೆಗಟುತ್ತುಮಿರೆ (ಜಗವಿ. ೨-೬೯ ಪ); ನವರಸಮತಿಭಾವಾರ್ಥಂ ನವೀನಪದಭರಿತಮಿಂತಿದೆನೆ ಸತ್ಯತಿಯಂ ತವೆ ವೇಳ್ದುದು (ಗಿರಿಕ. ೧-೩೨) ; ನವರಸರೀತಿಯಂ ತಿಳಿವ . . . ಮಹಾವಿಗಳ ಪಾದಕಾನಿಜಗಿ ಬೇಳ್ಪಿನನಾರತಮಿಷ್ಟಸಿದ್ಧಿಯಂ (ಯಶರಕಂ. ೧-೨೦). P ಕೆಲವು ವೇಳೆ 'ರಸ' ಎಂಬ ಪದದ ಬೇರೆ ಬೇರೆ ಅರ್ಥಗಳನ್ನು ಬಳಸಿಕೊಂಡು ಶ್ಲೇಷಾರ್ಥದ ಪದ್ಯಗಳನ್ನು ಕವಿಗಳು ರಚಿಸಿರುವುದುಂಟು. ಉದಾ : ಮಧುರತರ ನವರಸೋದರಭರಿತದಿಂದೆ ವಿಲಸಿತಮಾಗಿ ಸುಮನೋನುರಾಗದಿಂ ಪ್ರಚುರವಾಗಿ . . ಚರಿಸುವ ಸುಲಲಿತ ಪಟ್ಟದಿ ಗಳಿಡಿವಿಡದೆ ರ್ಪುಂಕರಿಸದಿರ್ಪವೆ (ಕೃಮಿಧಾ. ೧-೩೨). [ನವ + ರಸ]

ನವರಸಕನ್ನಡ (ನಾ). [ಸಂಗೀತ] ಒಂದು ರಾಗದ ಹೆಸರು ; ವಿಲೆನೆಯ ಮೇಳಕರ್ತ ಹರಿಕಾಂಬೋಧಿಯಲ್ಲಿ ಜನ್ಯ; ನವರಸಕನ್ನಡದ 'ನಿನ್ನುವಿನಾ' ಎಂಬ ಕೀರ್ತನೆಯನ್ನು ಅವಳು ವೀಣೆಯಲ್ಲಿ ಸೊಗಸಾಗಿ ನುಡಿಸಿದಳು (ಕೂಢಿ). [ಸಂ.]

ನವರಸಗಾನ (ನಾ). ಶೃಂಗಾರಾದಿ ನವರಸಗಳಿಂದ ಕೂಡಿದ ಹಾಡು,– ಸಂಗೀತ : ನವರಸಗಾನವನಾಲಿಸಿ ಶಿವಮಣಿ ಕಪಿಲಾಜ್ಯಭಾಂಡಮಂ ತರದಿಂದಂದವನಿಪನೀಕ್ಷಿಸಿ (ಹವಿಸ್ಮಾರ. ೨-೯೬). [ನವರಸ + ಗಾನ]

ನವರಸದಂಬುಲ (ನಾ). ಹೊಸದಾದ ಹಾಗು ರಸಭರಿತವಾದ ತಾಂಬೂಲ : ಮನವೊಲ್ದೊಂಗುವೆನೆಂಬರ ಬಾಯ್ದೆಱಿನಿಯಃಳ್ತುಂಬಿದ ನವರಸದಂಬುಲವೆಃನೆ . . . ಸತ್ಯವಿತೆಯ ಸವಿವಾತು (ಜಯಭಾ. ೦-೨೫). [ನವ + ರಸದಂಬುಲ]

ನವರಾತ್ರಿ (ನಾ). ಆಶ್ವೀಜಮಾಸ ಶುಕ್ಲಪಕ್ಷದ ಪಾಡ್ಯದಿಂದ ನವಮಿಯವರೆಗಿನ ಒಂಬತ್ತು ದಿನಗಳು ಮತ್ತು ಆ ದಿನಗಳಲ್ಲಿ ಆಚರಿಸುವ (ವಿಜಯದಶಮಿಯಂದು ಕೊನೆಗೊಳ್ಳುವ) ಉತ್ಸವ, – ಹಬ್ಬ : ನವರಾತ್ರಿ ಜಿನಮಹಿಮೆಯ ಮಾಡಿ ದಶಮಿಯ ದಿವಸದೊಳ್ ಪಯಣವಪ್ಪುದಕೆ ಹವಣಿಸಿ (ಭರತ. ೫೦-೦೬); ಈ ಪರಿಯಾಗಿ ನವರಾತ್ರಿಯ ಉತ್ಸವವು ಬೆಳೆಯಲು . . . ಪೃಥ್ವೀಸಾಮ್ರಾಜ್ಯವಂಗೈಯುತ್ತಿರ್ದರು (ಕುಹಾವಂ. I, ೨೬೧); ಕನ್ನಡದ ರಾಜ್ಯಲಕ್ಷ್ಮಿಯನು ಪೂಜಿಸುವ ನವರಾತ್ರಿ ಹಬ್ಬುದಲಿ (ನವರಾ. ೫೦-೦೯). P "ಶರನ್ನವರಾತ್ರಿ : ಆಶ್ವಯುಜಶುಕ್ಲ ಪ್ರತಿಪದ್ದಿನದಿಂದ ನವಮಿಯಾ ತಿಥಿಯವರೆಗಿನ ಉತ್ಸವವ ಒಂಬತ್ತು ರಾತ್ರಿಗಳು. ಮೊದಲ ಮೂರುರಾತ್ರಿ ಮಹಾಕಾಳಿಗೂ ಮಧ್ಯದ ಮೂರುರಾತ್ರಿ ಮಹಾಲಕ್ಷ್ಮಿಗೂ ಕೊನೆಯ ಮೂರುರಾತ್ರಿ ಮಹಾ ಸರಸ್ವತಿಗೂ ವಿಶೇಷಪೂಜಾರಾಧನೆ ಸಲ್ಲುತ್ತದೆ (ಸಾಂಖ್ಯ. ೭೧)" (ಶ್ರೀವಕ್ಕ. ೩೭೬). [ನವ + ರಾತ್ರಿ]

ನವರಾತ್ರೆ (ನಾ). = ನವರಾತ್ರಿ : ತಿರುವೆಂಗಳನಾಥಸ್ವಾಮಿಯುಃರಿಗೆ ಮಹಾನವಮಿ ನವರಾತ್ರೆಸೇವೆಗೆ. . . ಕೊಟ್ಟ ಪುದಿವಟು (ಎಳ. IV (R), ಎಳಂದೂ. ೦೯೬-೧೧ ; 1667) ; ನವರಾತ್ರೆಯ ಪುಧ್ಧ ಶಿವರಾತ್ರೆ ಬಂದೀತೆ? (ಗಾಡಿ); ನವವಾಸ ತುಂಬಿದ ಮೇಲೆ ನವರಃತ್ರೆ ಆಗಲಿ ಅಂದರೆ ನಿಂತೀತೆ ? (ಗಾಡಿ). [ಸಂ. ನವರಾತ್ರ]

ನವರಾಶಿಕ (ನಾ). [ಗಣಿತ] ಒಂಬತ್ತು ರಾಶಿಗಳಿಂದ ಲೆಕ್ಕಮಾಡುವ ಒಂದು ವಿಧಾನ : ರಾಜಾದಿತ್ಯದ ಗಣಿತದಲ್ಲಿ ತ್ರಯರಾಶಿಕ. ಬಿಸ್ತ ತ್ರಯರಾಶಿಕ, ಪಂಚರಾಶಿಕ, ಬಿಸ್ತಪಂಚರಾಶಿಕ, [ಸಪ್ತರಾಶಿಕ, ಬಿಸ್ತಸಪ್ತರಾಶಿಕ, ನವರಾ]ಶಿಕ, ಬಿಸ್ತನವರಾಶಿಕ (ಕ್ಷತ್ರಹಾ. ಅನುಬಂ. I, ೧೧). [ಸಂ.]

ನವರುಂಜು (ನಾ). (?) : ಮಿಸಃಣಿಯು ಮುಂಡಾಸು ಪೊಸರವಿಯಂತಿರೆ ಶಶಿಯು ಪ್ರಭೆಯಂತೆ ಪಸರಿಸಲಂಗಿಯು ಹಸನಾದ ನವರುಂಜು ವಶದಲ್ಲಿ ತುಂಬಿರೆ ಕುಸುಮನಂದದಿ ಧೋತ್ರದಿವೆಟ್ಟು (ಪಾಡಿಕೀ. ೦೫೦-೪). [?]

ನವರುಧಿರಜಲ (ನಾ).=ನವಲೋಹಿತ : ಬಿಸುಗುದಿಯ ನವರುಧಿರಜಲ ಜಾಳಿಸೆ ನವದ್ಯಾರದಲಿ ದೈತ್ಯನ ಕುಸುಕಿಜಿದು ಶಿವಿತಿವಿದು ಕೊಂದನು ಕಲಿಜಟಾಸುರನ (ಕುವ್ಯಾಅ. ೦೧-೦೧). [ನವ್ಯ + ರುಧಿರ + ಜಲ್ಯ]

ನವರೋಜು (ನಾ). [ಸಂಗೀತ] ಒಂದು ರಾಗದ ಹೆಸರು: ನವರೋಜು (೧೪) ಪೂರ್ಣರಾಗ, ಷಡ್ಜಗ್ರಹವನ್ನು ಸೇರಿಕೊಂಡಿದೆ (ಕಶುಪ್ರ. ೧೪೧) : ಯಮುನಾಕಲ್ಯಾಣಿ, ಹುಸೇನಿ . . . ನವರೋಜು ಮುಂತಾದ ರಾಗಗಳು (ಗಾನಕ. ೩೫) : ಕೆಲವು ಜೋಗುಳದ ಹಾಡುಗಳಲ್ಲಿ ನಾವು 'ನವರೋಜು' ರಾಗವನ್ನು ಗುರುತಿಸಬಹುದು (ಜಾನಗೀ. ೧೦೬). [ಸಂ.]

ನವಲಗುಂದಿ (ನಾ). ಒಂದು ನಾಣ್ಯದ ಹೆಸರು ; ಹದಿನೆಂಟು ಬಗೆಯ ವರಹಗಳಲ್ಲಿ ಒಂದು : ನವಲಗುಂದಿ : ಕಿಮ್ಮತ್ತು ರೂ. ೩, ಆ. ೮ (ಕಧಾಗ. ೨೬೦). [<ನವಿಲ್ಗುಂದ]

ನವಲತೆ (ನಾ). ಎಳೆಯ ಬಳ್ಳಿ : ಎಳಲತೆ, ನವಲತೆ, ಲತೆವನೆ, ಲತೆವಳ್ಳಿ (ಕಮುವ. ೨೯೮ ಪ್ರಹೋ). [ನವ್ಯ + ಲತೆ]

ನವಲಾಯಿ (ನಾ). ಅಪೂರ್ವವಾದುದು ; ಆಶ್ಚರ್ಯಕರವಾದುದು :(ಕ). [←ಮರಾ. ನವಲಾವ, ನವಲಾವಾ]

ನವಲಿಂಗ (ನಾ). [ವೀಶೈ] ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ನಿಷ್ಕಲಲಿಂಗ, ನಿಶ್ಶೂನ್ಯಲಿಂಗ ಮತ್ತು ನಿರಂಜನಲಿಂಗ ಎಂಬ ಒಂಬತ್ತು ಲಿಂಗಗಳು: ನವನಾಳಿಂಗಳ ಮುಂಬಾಗಿಲಲ್ಲಿ ನವಲಿಂಗಂಗಳ ಸಿಂಗರಿಸಿ ... ಆಯಾಯಾ ಲಿಂಗಂಗಳಿಗೆ ತೃಪ್ತಿಯಂ ಮಾಡಿ (ಶಿನಪ. ೨೪-೩೦) ; ಪರಶಿವನಲ್ಲಿ ತಾದಾತ್ಮ್ಯ ಹೊಂದಲು ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಪ್ರಸಾದ ಪರಿಚಯ, ನವಲಿಂಗಸಕೀಲ, ಏಕೋತ್ತರ ಶತಸ್ಥಲಗಳು ಅನಿವಾರ್ಯ (ಚೀದಾಸ. ೧೧೪). [ನವ + ಲಿಂಗ]

ನವಲೆನಾಡು 'ನವಿಲೆನಾಡು' ನೋ.

ನವಲೋಹಿತ (ನಾ). ೧. ಹೊಸರಕ್ತ ; ಆಗ ತಾನೇ ಚಿಮ್ಮಿದ ರಕ್ತ : ಎಚ್ಚನಂತವೀರ್ಯನ ಶರವೃಷ್ಟಿಯೊಳ್ ಗಗನದಿಂ ನವಲೋಹಿತವೃಷ್ಟಿಗಳ್ ವಲಃಮ್ಮೆನೆ ಕೊಳಿ ನಾಂದು ಕೆಂಪೆಸೆದು ತೊಟ್ಟನೆ ಬಿಳ್ಪಿಯ ಬೆಟ್ಟಮಲ್ಲು ಜಾದಿನ ನಗಮೆಂಬ ಶಂಕೆಯನೆ ಮಾಡಿದುದಾ ವಿಜಯಾರ್ಧಪರ್ವತಂ (ಕಾಂತಿಪು. ೪-೩೩) ; ಅನ್ಯಶರಪ್ರಹಾರ ಜರ್ಜರಿತಶರೀರನಾಗಿ ನವಲೋಹಿತ ವಾರ್ಧಿಯೊಳಟ್ಟು ಬಿಟ್ಟನಂ ಕುರುಪತಿ ನೋಡಿ (ಗದಾಯು. ೪-೩೩). ೨. ಅಗ್ನಿ : ಅಗ್ನಿಯಂ ಪೊಗಳ್ವೆಂ ಪಾವಕಂ ಪಾವನಂ ಪಾವಮಾನಿ ಪಾವಕಂ ಹವ್ಯವಾಹನಂ ಹವ್ಯಭುಗ್ ಹವ್ಯಾಶನಂ ಹವ್ಯವಾಟ್ ಹವ್ಯಭುಕ್ ಹವ್ಯಭೋಜಿ ಹವ್ಯಪಂ ಹವ್ಯಪಾಕಂ ಹವ್ಯಕವ್ಯವಾಹನಂ ಹವ್ಯಕವ್ಯಭುಕ್ ಹವ್ಯಕವ್ಯಭೋಜಿ ಹವ್ಯಕವ್ಯಪಂ ಹವ್ಯಕವ್ಯಪಾಕಂ ಹವ್ಯಕವ್ಯಾಶನಂ ಹವ್ಯಕವ್ಯಾಶಿ ಹವ್ಯಕವ್ಯಾಶಿಯೆಂದೆಂಬ ನವಲೋಹಿತಂ ಪೆಸರಿಂ ಪೆಱಂ ಪೆಸರಿಂ ಪೆಸರಾಗಿ

ನವವರ (ನಾ). = ಮಂದುವಣಿಗ ; ಮಂದುಮಗ : ನಡೆಯೆ ಚಟುಳತೆಗೆ ಕಣೆಯಂ ಸಡಿಲ್ದೊಡವನೆಡದ ಕೆಯ್ಯೊಳೋಸರಿಸುತ್ತುಂ ನಡೆದು ಗವಾಕ್ಷಂಬರ ಮೋಗಡಿಸದೆ ನವವರನನಬಲೆ ನೋಡಿದಳೊರ್ವಳ್ (ಶಾಂತಿಪು. ೬-೯).

[ನವ$_2$ + ವರ$_3$]

ನವವರ್ಷ$_1$ (ನಾ) ನವಖಂಡ$_1$. ೩: P "ವರ್ಷ-೯: ನಾಭಿವರ್ಷ (ಅಜನಾಭವರ್ಷ), ಕಿಂಪುರುಷವರ್ಷ, ಹರಿವರ್ಷವರ್ಷ, ಇಲಾವೃತವರ್ಷ, ರಮ್ಯಕವರ್ಷ, ಹಿರಣ್ಮಯವರ್ಷ, ಕುರುವರ್ಷ, ಭದ್ರಾಶ್ವವರ್ಷ, ಕೇತುಮಾಲವರ್ಷ (ಭಾಗ. ೫-೨-೨೦ ; ಮಹಾಭಾ. ಸಭಾ. ೨೮). ಹಿಮವತ್ಪರ್ವತದ ದಕ್ಷಿಣದಿಕ್ಕಿನ ವರ್ಷ (ನಾಭಿ), ಹೇಮಕೂಟವರ್ಷ (ಕಿಂಪುರುಷ), ನೈಷಧವರ್ಷ (ಹರಿವರ್ಷ), ಇಳಾವೃತವರ್ಷ (ಇಳಾವೃತ), ರಮ್ಯವರ್ಷ (ರಮ್ಯ), ಶ್ವೇತವರ್ಷ (ಹಿರಣ್ವಂತ), ಕುರುವರ್ಷ (ಕುರು), ಭದ್ರಾಶ್ವವರ್ಷ (ಭದ್ರಾಶ್ವ), ಗಂಧಮಾದನವರ್ಷ (ಕೇತುಮಾಲ) (ವಿಷ್ಣುಪು. ೨-೧-೧೭-೨೩). ಭಾರತೀ, ಕಿಂಪುರುಷ, ಹರೀ, ಇಳಾವೃತ, ಕುರು, ಭದ್ರ (ಭದ್ರಾಶ್ವ), ಕೇತುಮಾಲಾ, ಹಿರಣ್ಯ, ಪಾಂಚಜನ್ಯ (ಯಾಪೂರ. ೪೮೬ ; ಯಾಪ್ರಪಾ. ೧೦೪)." (ಶ್ರೀಪಶ್ವ. ೩೯೬). [ನವ$_1$ + ವರ್ಷ]

ನವವರ್ಷ$_2$ (ನಾ). ಹೊಸದಾಗಿ ಸುರಿಯುವ ಮಳೆ ; ಮುಂಗಾರು : ಹಿಮಗಿರಿಯ ದೂರದಿಂದೈತಂದುವೆಡೆಬಿಡದೆ ಕ್ರೌಂಚಸಾರಸಪಂಕ್ತಿ . . . ನವವರ್ಷಹರ್ಷದುನ್ಮಾದ ಕಲನಾದದಿಂ (ಶ್ರೀರಾಮಾ. ೧೫-೩೯೯). [ನವ$_2$+ವರ್ಷ]

ನವವಾರಿದ (ನಾ). ಹೊಸ ಮೋಡ : ಆ ರಾಜಪರಂಪರೆಯ ಶರೀರಂಗಳೊಳುರ್ವರಾಸ್ಯತಿಲಕನ ತೇಜಂ ರಾರಾಜಿಸಿ ಪೋಲ್ತುದು ನವವಾರಿದ ನಿಕುರುಂಬದೊಳಗೆ ಪೊಳೆವೆಳಮಿಂಚಂ (ಶಾಂತಿಪು. ೫-೯೫).

[ನವ$_2$ + ವಾರಿದ]

ನವವಾಸರ (ನಾ). ಒಂಬತ್ತು ದಿವಸ : ಆತ್ಮವರಂ ಮನ್ನಿಸಿ ಮಾಟ್ಟಲಂಪು ಮುದಮಂ ತಂದೀಯೆ ತನ್ವಂಗಿಯೊಳ್ ನವಮಾಸಂ ನವವಾಸರಕ್ಕೆ ದೊರೆಯಾಯ್ತುತ್ಯುತ್ಸವೋತ್ಸಾಹದಿಂ (ಅನಂಪು. ೪-೧೩೪).

[ನವ$_1$ + ವಾಸರ]

ನವವಾಸುದೇವ (ನಾ). = ನವನಾರಾಯಣ ೨ : ಶ್ರಿಪೃಷ್ಠ ದ್ವಿಪೃಷ್ಠ ಸ್ವಯಂಭು ಪುರುಷೋತ್ತಮ ಪುರುಷಸಿಂಹ ಪುರುಷವರ ಪುಂಡರೀಕ ದತ್ತ ನಾರಾಯಣ ಕೃಷ್ಣ ಎಂದು ವರ್ತಮಾನ ನವವಾಸುದೇವರಕ್ಕುಂ (ಪಸಾರ. ೪೩೭). [ನವ$_1$ + ವಾಸುದೇವ]

ನವವಿದ್ರವಣ (ನಾ). ಗದಾಯುದ್ಧದ ಒಂದು ವರಸೆ,-ಪಟ್ಟು : ಲವಣಿ ಲಹರಿಯುದಂಚ ನವವಿದ್ರವಣ ಲಘುವಿನ್ಯಸ್ತವೆಂಬೀ ವಿವರದಲಿ ಕಾದಿದರು ಕೌತುಕವೆನಲು ಸುರನಿಕರ (ಕುಪ್ಯಾಗೆ. ೬-೨೫). [ನವ$_2$ + ವಿದ್ರವಣ]

ನವವಿಧ$_1$ (ನಾ). ಒಂಬತ್ತು ಬಗೆ: ನವವಿಧ ನವ್ಯಭಕ್ತಿ ಮಿಗೆ ಶಂಭುಸಮರ್ಚನೆಗೈದು ದಿವ್ಯಶಾಂಭವಪರಮಂತ್ರಮಂ ಜಪಿಸಿ (ರಾಜಶೇ. ೧೩-೪೧).

[ನವ$_1$ + ವಿಧ]

ನವವಿಧ$_2$ (ನಾ). ಹೊಸ ರೀತಿ,-ಬಗೆ : ನವವಿಧಮಪ್ಪ ಕಣ್ಪೊಳೆಪು ರಂಜಿಸೆ ಸಂಚಳಿತಾಂಗಹಾರದಿಂ ವಿವಿಧಘನಸ್ವನಕ್ಕೆ ನವಿಲಾಡೆ ಘನಾಘನಲಕ್ಷ್ಮಿ . . . ಕೊಟ್ಟಳಚಿರಪ್ರಭೆಯೆಂಬ ಸುವರ್ಣಮಾಲೆಯಂ (ಪಂಠಾಮಾ. ೭-೧೫೪).

[ನವ$_2$ + ವಿಧ]

ನವವಿಧಗುಣ (ನಾ). [ವೇದಾಂತ] (ವೈಶೇಷಿಕರು ಹೇಳುವಂತೆ) ಬುದ್ಧಿ, ಸುಖ, ದುಃಖ, ಇಚ್ಛೆ, ದ್ವೇಷ, ಪ್ರಯತ್ನ, ಧರ್ಮ, ಅಧರ್ಮ ಮತ್ತು ಸಂಸ್ಕಾರ ಎಂಬ ಒಂಬತ್ತು ಬಗೆಯ ಆತ್ಮನ ಗುಣಗಳು : ಬುದ್ಧಿಸುಖದುಃಖೇಚ್ಛೆ ಮೊದಲಾಗಿರ್ದ ನವವಿಧಗುಣಗಳಲಿ ಮೆಱೆದಿರ್ದು ಗುಣಿಯೆಂದೆನಿಸಿ (ಅಮ್ಮಶ. ೩-೪೯). [ನವವಿಧ$_1$ + ಗುಣ]

ನವವಿಧದ್ವೇಷ (ನಾ). [ದ್ವೈತ] ಪರಮಾತ್ಮನನ್ನು ಕುರಿತು ಒಂಬತ್ತು ಬಗೆಯ ತಪ್ಪುಕಲ್ಪನೆಗಳನ್ನು ಹೊಂದಿರುವುದು ; P ಜೀವನಿಗೂ ಪರಮಾತ್ಮನಿಗೂ ಅಭೇದವನ್ನು ಹೇಳುವುದು, ಪರಮಾತ್ಮನನ್ನು ನಿರ್ಗುಣನೆಂದು ಚಿಂತನೆ ಮಾಡುವುದು, ಅಪೂರ್ಣನೆಂದು ತಿಳಿಯುವುದು, ಲಕ್ಷ್ಮಿದೇವಿ, ಬ್ರಹ್ಮದೇವರು, ದೇವತೆಗಳು ಮತ್ತು ಬ್ರಾಹ್ಮಣರು ಇವರುಗಳನ್ನು ಸಮಾನರನ್ನಾಗಿ ತಿಳಿಯುವುದು, ವಿಷ್ಣುವಿಗಿಂತಲೂ ಬ್ರಹ್ಮ ರುದ್ರಾದಿಗಳು ಉತ್ತಮರೆಂದು ಚಿಂತಿಸುವುದು, ಪರಮಾತ್ಮನ ಅವಯವಗಳಿಗೆ ಭೇದವನ್ನು ಚಿಂತಿಸುವುದು, ಪರಮಾತ್ಮನ ಅವತಾರಗಳಲ್ಲಿ ಪರಸ್ಪರ ಭೇದವನ್ನು ಹೇಳುವುದು, ಬಾಣಾದಿಗಳಿಂದ ಪರಮಾತ್ಮನ ಶರೀರ ಛಿನ್ನಭಿನ್ನವಾಯಿತೆಂದು ತಿಳಿಯುವುದು, ಪರಮಾತ್ಮನಿಗೆ ಜನನ, ಮರಣಗಳುಂಟೆಂದು ಚಿಂತಿಸುವುದು, ಪರಮಾತ್ಮನ ಭಕ್ತರನ್ನೂ ಆತನ ವಾಕ್ಯವನ್ನೂ ದ್ವೇಷಿಸುವುದು: ಇವನ ಪೋಲುವ ಪಾಪಿಜೀವರು ಭುವನ ಮೂಱೊಳಗಿಲ್ಲ ನೋಡಲು ನವವಿಧದ್ವೇಷಗಳಿಗಾಕರನೆನಿಸಿಕೊಳುತಿಪ್ಪ (ಹ ಸಾ ರ. ೨೦-೨೦). [ನವವಿಧ$_1$ + ದ್ವೇಷ]

ನವವಿಧಪುಣ್ಯ (ನಾ). [ಜೈನ] ಮುನಿಗಳು ಚರಿಗೆಗೆ ಬಂದಾಗ ಅವರಿಗೆ ದಾನ ಮಾಡುವಲ್ಲಿ ಅನುಸರಿಸುವ ಮೂರು ಸಲ ಪ್ರದಕ್ಷಿಣೆ, ಉಚ್ಚಸ್ಥಾನ ನೀಡುವುದು, ಪಾದಗಳನ್ನು ತೊಳೆಯುವುದು, ಅರ್ಚನೆ, ಪ್ರಣಾಮ, ವಚನಶುದ್ಧಿ, ಕಾಯಶುದ್ಧಿ, ಮನಶ್ಶುದ್ಧಿ ಮತ್ತು ಏಷಣಾಶುದ್ಧಿಗಳೆಂಬ ಒಂಬತ್ತುಬಗೆಯ ಕ್ರಮಗಳು: ಇದಿರ್ಗೊಳ್ವುದು ಕಾಲ್ಗರ್ಚುವುದುದಾತ್ತಮಪ್ಪೆಡೆಯೊಳಿರಿಪುದರ್ಚಿಪುದೆಱಗಿರ್ಪುದು ಕರಣಶುದ್ಧಿವಡೆವುದು ಪದೆದನ್ನಮನೀವುದೆಂಬ ನವವಿಧಪುಣ್ಯಂ (ಆದಿಪು. ೪-೯೬) ; ನವವಿಧಪುಣ್ಯದಿಂ ಕುಡುವುದುಂ ಮುನಿಗನ್ನಮನಂದು (ಧರ್ಮಾಮ್ಯ. ೧೨-೨೦೩) ; ಇದಿರ್ಗೊಳ್ವುದುಂ ಉಚ್ಚಸ್ಥಾನದೊಳಿರಿಸುವುದುಂ . . . ಮನೋವಾಕ್ಕಾಯಶುದ್ಧಿಯುಮೆಂಬ ನವವಿಧಪುಣ್ಯದೊಳ್ಕೂಡಿ (ತತ್ತ್ವಪ್ರ. ೨-೭೮) ; ಅವನಿಪತಿ ನಿಲಿಸಿದಂ ಸುವಿಧಿಮುನೀಶ್ವರನನಂದು ಸಮಸಂದಿರೆ . . . ನವವಿಧಪುಣ್ಯಂ ಪ್ರತಿಗ್ರಹಾದ್ಯಂ ತನ್ನೊಳ್ (ಪುಷ್ಪಪು. ೧೩-೧೨೧). 'ನವಧಾಭಕ್ತಿ' ಪರಾ. [ನವವಿಧ$_1$ + ಪುಣ್ಯ]

ನವವಿಧಬ್ರಹ್ಮಚರ್ಯ (ನಾ). [ಜೈನ] ಒಂಬತ್ತುಬಗೆಯ ಬ್ರಹ್ಮಚರ್ಯವ್ರತ ; P ಮನವಚನಕಾಯಗಳಲ್ಲಿ ಪ್ರತಿಯೊಂದಕ್ಕೂ ಕೃತ ಕಾರಿತ ಅನುಮೋದನ ಎಂಬ ಭೇದದಿಂದ ಒಂಬತ್ತು ಬಗೆಯಾದ ಬ್ರಹ್ಮಚರ್ಯೆ: ನವವಿಧಬ್ರಹ್ಮಚರ್ಯಾರ್ಜಿತನುಂ ಪರಿಗೃಹೀತದಶವಿಧ ಶ್ರವಣಧರ್ಮನುಂ . . . ಅಕ್ಕುಂ (ಜಾವುಂಪು. ೬) ; ಅಷ್ಟಮಲವ್ಯಪೇತನುಂ ನವವಿಧಬ್ರಹ್ಮಚರ್ಯೋಪೇತನುಂ ... ಆಗಿ(ಅಜಿಪು. ೩-೦ ವ); ನವವಿಧ ಬ್ರಹ್ಮಚರ್ಯನಿಷ್ಠಿತನುಂ (ವರ್ಧಮಾ. ೧೦-೫೬ ವ). [ನವವಿಧ$_1$ + ಬ್ರಹ್ಮಚರ್ಯ]

ನವವಿಧಭಕುತಿ (ನಾ). = ನವವಿಧಭಕ್ತಿ : ಹನುಮಂತನ ಬಲಗೊಂಡರೆ ನವವಿಧಭಕುತಿಯು ದೊರಕೊಂಬುದು (ಪುರಂದ. ಧಾ. ೧-೨೨-೧).

[ನವವಿಧ$_1$ + ಭಕುತಿ (< ಬಕುತಿ)]

ನವವಿಧಭಕ್ತಿ (ನಾ). ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ ಸಖ್ಯ, ಮತ್ತು ಆತ್ಮನಿವೇದನ ಎಂಬ ಒಂಬತ್ತು ಬಗೆಯಾದ ಭಕ್ತಿ : ನೆಲೆಯ ಕಾಣೆನು ನಿಗಮಶಾಸ್ತ್ರ ನವವಿಧಭಕ್ತಿಯೊಳಗೊಂದು ಬಗೆಯಾದರು (ಕನಕ. ೧೬೪-೫) ; ಸವೆಯದೆ ಮಾಡಿ ಮಾಡಿ ತಣಿವೈದದು ಪಾಣಿ ತದಂಘ್ರಿಸೇವೆಯಂ ನವವಿಧಭಕ್ತಿಯುಕ್ತ ಶರಣಾವಳಿಗೆಂದೆನೆ ಸೈಪದೆಂತುಟೊ (ರಾಜಶೇ. ೧೪-೧೬೮) ; ಶ್ರವಣಂ ಕೀರ್ತನಂ ಸ್ಮರಣಂ ಪಾದಸೇವನಂ ಅರ್ಚನಂ ವಂದನಂ ಧ್ಯಾನಂ ಸಖ್ಯಂ ಆತ್ಮನಿವೇದನಂಗಳೆಂಬುದು ನವವಿಧಭಕ್ತಿ (ನಿಗಮ. ೩). [ನವವಿಧ$_1$ + ಭಕ್ತಿ]

ನವವಿಧಹರಿದ್ವೇಷ (ನಾ). [ದ್ವೈತ] ವಿಷ್ಣುವನ್ನು ಕುರಿತು ಒಂಬತ್ತು ರೀತಿಯಲ್ಲಿ ದ್ವೇಷಭಾವವನ್ನು ತಳೆದಿರುವುದು: ℙ "ಜೀವಾಭೇದ, ನಿರ್ಗುಣತ್ವ, ಅಪೂರ್ಣಗುಣತ್ವ, ಇತರ ಸಾಮ್ಯ, ಇತರಾಧಿಕ್ಯ, ಬ್ರಹ್ಮನಾನಾತ್ವ, ಅವತಾರನಿಂದೆ, ಭಕ್ತನಿಂದೆ, ತತ್ಪ್ರಮಾಣನಿಂದ–ಈ ಒಂಬತ್ತೂ ಹರಿದ್ವೇಷಗಳು" (ಹಿಂದಣ. ೨೯೩): ದ್ವೇಷ ಪರಿಪಾಸ ಸಾಧನಗಳು . . . ತ್ರಿವಿಧಗುರುದ್ವೇಷ, ನವವಿಧಹರಿದ್ವೇಷ ಮೊದಲಾದುವು (ಹಿಂದಣ. ೨೯೩). 'ನವವಿಧದ್ವೇಷ' ಪರಾ.

[ನವವಿಧ$_1$ + ಹರಿ$_7$ + ದ್ವೇಷ]

ನವವಿಧಾನ$_1$ (ನಾ). (ಭಕ್ತಿಯ) ಒಂಬತ್ತು ತೆರ,–ರೀತಿ: ದಿವರಾತ್ರಿಯು ನೀನೆ ನವವಿಧಾನವು ನೀನೆ (ಪುರಂದ. ೩-೩೬-೧). [ನವ$_1$ + ವಿಧಾನ]

ನವವಿಧಾನ$_2$ (ನಾ). ಹೊಸ ಬಗೆ; ನವೀನ ಕ್ರಮ ಕನ್ನಡವಿಮರ್ಶೆ ಎಂಬುದು ಒಂದು ನವವಿಧಾನವಾಗಿ, ಜಗತ್ತಿನ ಕಾವ್ಯವಿಮರ್ಶೆಗೆ ವಿಶಿಷ್ಟವಾದ ಒಂದುಕಾಣಿಕೆಯನ್ನು ಸಲ್ಲಿಸುವಂತಾಗಬೇಕು (ಬಂಕಿಮ. ೦೦, ಮುನ್ನುಡಿ).

[ನವ$_2$ + ವಿಧಾನ]

ನವವಿವರ (ನಾ). = ನವದ್ವಾರ ೨: ನವವಿವರಾವೃತ ಪೂ[ತಿ]ದ್ರವತ್ವಗಾವೃತ ವಿಮಿಶ್ರ ಮಾಂಸೋಪಚಿತಂ . . . ಮೆಯ್ ಬಗೆವೆಂಡಿಂತು ಕಿಸುಗುಳಮಾದಂ (ಕವಿಹಾ. ೩-೧೯೩). [ನವ$_1$ + ವಿವರ]

ನವವಿಷಾಣ (ನಾ). ಹೊಸದಾಗಿ ಮೂಡಿದ ಕೊಂಬು (?): ಸಿಂಗ ವೇಂಟೆಯನಾಡಿ ತಿರುಗಿ ರಿವುಮಾತಂಗಸಿಂಗನೆಯ್ತಪ್ಪಾಗ ಸಿಂಗರದ ನವವಿಷಾಣಂಗಳುಗ್ರಂ ಕ್ರೋಡರೌದ್ರತರಮದಱ ಮದದನಿಯಿಂದರ್ದ ರುಚಿಯ ಅಂಗರುಚಿ ಶರಭಬಲಮಂ . . . ಲೋಹಿತಾಕ್ಷಿಗಳತುಳ ಭೂಧರಶೃಂಗಮಂ ಪೃಥುಳಕಂಧರ ಮೃಗಲುಲಾಯರಿತುಮಹಿಷಗಳ ನಡುವಿರ್ದುದು (ಹಡಕಾ. ೩-೩೮). [ನವ$_2$ + ವಿಷಾಣ]

ನವವೈಜಯಂತಿ (ನಾ). ಹೊಸ ಪತಾಕೆ,–ಧ್ವಜ: ಪ್ರಚುರನವವೈಜಯಂತೀ ವಿಚಿತ್ರಮಂ ಸು ವಿಮಾನಮಂ . . . ರಜನೀಚರಮದೊಳ್ ಜಿನಾಂಬಿಕೆ ಕಂಡಳ್ (ಶಾಂತಿಪು. ೯-೨೦೭). [ನವ$_2$ + ವೈಜಯಂತಿ]

ನವವೈಯಾಕರಣ (ನಾ). ೧. ನವವ್ಯಾಕರಣವನ್ನು ಬಲ್ಲವನು. ೨. ಭಾಷೆಗೆ ಸಂಬಂಧಿಸಿದಂತೆ ಹೊಸ ಸೂತ್ರಗಳನ್ನು ಅಳವಡಿಸುವ ವ್ಯಾಕರಣಕಾರ: ನವವೈಯಾಕರಣಂ ತರ್ಕವಿನೋದಂ ಭರತಸುರತಶಾಸ್ತ್ರವಿಳಾಸಂ ಕವಿರಾಜಶೇಖರಂ ಯಾದವರಾಜಚ್ಛತ್ರನಖಿಳಬುಧಜನಮಿತ್ರಂ (ಪುಟೋಕ. ೧-೦೯). [ನವ$_2$ + ವೈಯಾಕರಣ]

ನವವೈಯಾಕರಣಿ (ನಾ). ೧. ಹೊಸವ್ಯಾಕರಣಕಾರ. ೨. ಹತ್ತೊಂಬತ್ತನೆಯ ಶತಮಾನದಲ್ಲಿದ್ದ ಯೂರೋಪಿನ ಭಾಷಾವಿಜ್ಞಾನದ ಒಂದು ಪಂಥಕ್ಕೆ ಸೇರಿದವನು: ನವವೈಯಾಕರಣಿಗಳೆಂದು ಖ್ಯಾತನಾಮರಾದ ಬ್ರುಗ್‌ಮನ್ ಮತ್ತು ಓಸ್ತಾಫ್ (೧೮೭೬) ಧ್ವನಿಸಿದ್ಧಾಂತವನ್ನು ಪ್ರಕಟಿಸಿದಾಗ ಭಾಷಾಶಾಸ್ತ್ರಚರಿತ್ರೆಯಲ್ಲಿ ದ್ವಿತೀಯಯುಗ ಪ್ರಾರಂಭವಾಯಿತೆನ್ನಬಹುದು (ಪ್ರಾವಿವಿ. III, ಮುನ್ನುಡಿ). ೩. ಹೊಸ ವ್ಯಾಕರಣಕಾರ್ತಿ.

[ನವ$_2$ + ವೈಯಾಕರಣಿ]

ನವಶಶಿ (ನಾ). ಶುಕ್ಲಪಕ್ಷದ ಪ್ರಾರಂಭಕಾಲದ ಚಂದ್ರ: ಬಾಲಚಂದ್ರ. 'ಧೃತನವಶಶಿ', 'ನವಶಶಿಕಳೆ' ಪರಾ. [ನವ$_2$ + ಶಶಿ]

ನವಶಶಿಕಳೆ (ನಾ). ಶುಕ್ಲಪಕ್ಷದ ಪ್ರಾರಂಭಕಾಲದ ಚಂದ್ರನ ಕಾಂತಿ: ನವಶಶಿಕಳೆಗಳನಮೃತದ್ರವಂಗಳೊಳ್ ತೀವಿತೀವಿ ನಿಜಿಸಿದರೆನೆ ತದ್ಭವಳೀಕ್ಷುಲಕ್ಷ್ಮಿನಡೆ ನೋಡುವ ಜನವದಜನದ ಮನಮನುಜಿ ಸೆಜಿವಿಡಿಗುಂ (ಶಾಂತಿಪು. ೦-೬೨). [ನವಶಶಿ + ಕಳೆ$_6$ (= ಕಲೆ$_3$)]

ನವಶಶಿಲೇಪೆ (ನಾ).=ನವಶಶಿಕಳೆ: ನವಶಶಿಲೇಪೆಯುಂ ನವದಿನೇಶನುಮಿಲ್ಲಿಗೆ ರಾಹುಗಳ್ಕಿ ಬಂದುವೊ (ಪಂಡಾಮಾ. ೧೦-೭೯). [ನವಶಶಿ + ಲೇಪೆ]

ನವಶಿಶು (ನಾ). ಆಗ ತಾನೇ ಹುಟ್ಟಿದ ಮಗು; ಎಳೆಯ ಮಗು: ಮಲಗಿದ ನವಶಿಶು ತೊಟ್ಟಿಲಲಿ! (ಕೋಗಿರ. ೫೬-೪); ನಾಯಿತಿಮ್ಮು . . . ನವಶಿಶುವಿಗೆ ಇದು ಕೂಡಲೇ ತಗಲುತ್ತದೆ (ಕಿಂಕರೋ. ೨೮).

[ನವ$_2$ + ಶಿಶು]

ನವಸಂಗ (ನಾ). ಹೊಸ ಕೂಟ: ನವಸಂಗಕ್ಕೆನೆ ಲಜ್ಜೆಯೋಗಿ ನೃಪನಂ ತದ್ದೇಹದೊಳ್ ಕೂಡುವಂದವಳುಂ ಪಿಂದೊಳವೊಕ್ಕಳೆಂದೆನೆ ಮನಂಬೊಕ್ಕರ್ದಳಂ . . . ಇಳೇಶಮನ್ಮಥನಣಂ ತಾನಲ್ಲಿ ಕೂಡಲ್ಕೆ ಸಾರ್ದವೋಲ್ . . . ಜೋಲ್ದೆಯ್ದಿದಂ ಮೂರ್ಛೆಯಂ (ಕುಸುಮಾ. ೯-೭೦).

[ನವ$_2$ + ಸಂಗ]

ನವಸಂಧ್ಯಾರಾಗ (ನಾ). ಹೊಸ ಸಂಜೆಗೆಂಪು; ಮುಚ್ಚಂಜೆಯ ಕೆಂಪು: ನವಸಂಧ್ಯಾರಾಗಂ ಪಿಂಗುವುದುಂ ಮದನಂಗೆ ವಜ್ರಪೀಟಕಮುಂ ಕಿಂಗವಸನಕ್ಕೆ ಗಳೆದು ರತಿ ನೀಡುವಂತೆ ತಳತಳಿಸಿದತ್ತು ಹಿಮಕರಬಿಂಬಂ (ಮಲ್ಲಿಕ್ಷ. ೭-೩೨).

[ನವ$_2$ + ಸಂಧ್ಯಾರಾಗ]

ನವಸಂಧ್ಯೆ (ನಾ). ಆಗ ತಾನೆ ಆರಂಭವಾದ ಸಂಜೆ; ಮುಚ್ಚಂಜೆಯ ಆರಂಭ: ನವಸಂಧ್ಯಾವಧು ಕೂರ್ತಾಡುವ ಮಣಿಯಂ ಮಾಲೆಯೆರಡಱೊಳ್ ಜಗುಟ್ಟುಱಿ ಬಿಟ್ಟಿವೊಲಂದಬ್ಜಿಯೊಳಿಟ್ಟಿದುದು ರವಿಬಿಂಬಂ ಮೇಲಕಡರ್ದುದಿಂದುವಬಿಂಬಂ (ಉದ್ಭಟ. ೧೦-೩೧); ನವಸಂಧ್ಯಾವ್ಯಾಗನುಷ್ಠಾನದ ಪರಿ ಹೊಸತು (ಅಸಂಪು. ೯-೩೯). [ನವ$_2$ + ಸಂಧ್ಯೆ]

ನವಸಹಕಾರ (ನಾ). ಹೊಸದಾಗಿ ಚಿಗುರಿದ ಮಾವಿನ ಮರ: ನವಸಹಕಾರದಲ್ಲಿ ನಡೆ ನೋಡಿದ ತತ್ಪಟಚಿತ್ರರೂಪದೊಪ್ಪುವ ಕುಸುಮಾವಳೀ ಸತಿಯ ಸಂಗಸುಖಾಮೃತಪೂರದಿಂದೆ ನಂದುವುದಿನಿತಲ್ಲದೀ ನೃಪಮನೋಭವನಂಗದ ಮನ್ಮಥಾಗ್ನಿ ನಂದುವುದೆ ಲತಾಂತವೀಜನದ ಮಾರುತನಿಂ (ಕುಸುಮಾ. ೦೦-೪೩); ನವಸಹಕಾರನೊಳ್ ಸರೆದ ಮಲ್ಲಿಗೆ ಸಲ್ಲಳ ತಾರಹಾರದಂತೆವೊಲಿರೆ (ಅಸಂಪು. ೭-೯). [ನವ$_2$ + ಸಹಕಾರ]

ನವಸಾಂಧ್ಯಜಳದ (ನಾ). ಹೊಸ ಸಂಜೆಗೆಂಪಿನಿಂದ ಕೂಡಿದ ಮೋಡ: ಚೆಂಬೊನ್ನ ಕಳಶಮಿಂದ್ರಧನುಃ ಶ್ರೀನಿಚಿತಂ ನವಸಾಂಧ್ಯಜಳದರುಚಿಯಂ ಕೆಯ್ಕೊಂಡುದಮರಕರಪಲ್ಲವದೊಳ್ (ಶಾಂತಿಪು. ೦೦-೪೯).

[ಸಂ. ನವಸಾಂಧ್ಯಜಲದ]

ನವಸಾಂಧ್ಯರಾಗ (ನಾ). ಹೊಸ ಸಂಜೆಗೆಂಪು: ರೂಪಿನ ಮನಂಗೊಂಡಿರ್ವ ಲಾವಣ್ಯದೊಪ್ಪುವ ನೇಪಥ್ಯದಮರ್ಕೆ ನಿಲ್ಲವನಿಮೇಷೇಂದ್ರಾದಿಗಳ್ಗಿಂದೊಡಾಗಿರ್ವು ನಿಲ್ಕುಂ ನವಸಾಂಧ್ಯರಾಗ ಹಿಮರುಂದ್ರೇಂದ್ರಾಯುಧಾಭಾಸಿಗಳ್ (ಶಾಂತಿಪು. ೬-೮); ಕರತಲಕಾಂತಿಯಿಂ ವದನಚಂದ್ರಮನೊಳ್ ನವಸಾಂಧ್ಯರಾಗಮಂ ಸುರಿವ ನಿರಂಜನಾಶ್ರಯಣದಿಂ ಕುಚದೊಳ್ ಪೊಸಮುತ್ತಿನಾರಮಂ . . . ನಿಟ್ಟೋಜೆಪ ನೆಗಟ್ಟಿಗೆ ಕಾರಣಮೇನೊ ಕಾಮಿನೀ (ಜಂಬೂಪು. ೩-೩೪). [ನವ$_2$ + ಸಾಂಧ್ಯ + ರಾಗ]

ನವಸಾಗರ, ನವಾಸಾಗರ (ನಾ). (ಕಲಾಯಿ ಮಾಡುವಾಗ ಬಳಸುವ) ಅಮೋನಿಯಾ ಮತ್ತು ಕ್ಲೋರಿನ್‌ಗಳ ಸಂಯೋಗದಿಂದಾದ ಒಂದು ಬಗೆಯ ಕ್ಷಾರ: ನೆಲದೊಳಗೆ . . . ನವಸಾಗರ, ಸೋರುವ್ಪು, ಗಂಧಕ ಮುಂತಾದ ವಿಷರೂಪ ಕ್ಷಾರಾದಿಗಳಿರುತ್ತವೆ (ಮುಂಬಹು. ೫-೦೫೭); ನವಸಾಗರವು ಆ ಅಮೋನಿಯದ ವಿಶ್ರಾಣದಿಂದುಟಾದ ಕ್ಷಾರವಿರುತ್ತದೆ (ಮುಂಬಹು. ೬-೫೬). **ನವಾಸಾಗರ**: ಅಮೋನಿಯವೂ ಕ್ಲೋರೀನ್ ಎಂಬ ಪೀತಾನಿಲವೂ ಸಂಯೋಗ ಹೊಂದಿ ಆಗಿರುವ ಲವಣ: ನವಾಸಾಗರ (Sal ammoniac. ಇಂಗ್ಲಿ); ಗಾಜಿನ ಸೀಸೆಯಲ್ಲಿ ನವಾಸಾಗರದ (Ammon umichloride) ದ್ರಾವಣವನ್ನು ತುಂಬಿ ಅದರಲ್ಲಿ ಒಂದು ಸತುವಿನ (Zinc) ಫಲಕವನ್ನಿಡುತ್ತಾರೆ (ಶಿಲ್ಪಿನಾ. ೨೨೬).

[← ಮರಾ. ನವಸಾಗರ; ಆರ. ಹಿಂ. ನವಸಾದರ; ಗುಜ. ನವಸಾರ]

ನವಸಾರ (ನಾ).[ವೀಶೈ] (?) : ನವಸಾರ ಅಷ್ಟಸಾರ ದಶಸಾರ ಪಂಚಸಾರ ಚತುಸ್ಸಾರಯೇಕಸಾರಯಿಂತಿವನತಿಗಳಿದ ಮಹಾಮಹಿಮನ ನಿಲವು ಲಿಂಗದಲ್ಲಿ ಸಂಪೂರ್ಣ (ಪಡಗೋ. ೧೩-೧೭೩). [?]

ನವಸಿಗ (ನಾ). ಪರರನ್ನು ಪೀಡಿಸುವವನು : " ನವಸಿಗನೆಂದು ಪರರಂ ಪೀಡಿಪಾತಂ " (ಕಶಾ. ೦೮-೩೫೨) ; ಗ ಪ್ರತ್ಯಯಕ್ಕೆ –ಮಾತುಗಂ, ಬೂತುಗಂ . . . ಸಟೆಗಂ, ನವಸಿಗಂ, ಎಡಗಂ (ಕಪುದ. ೨೦೦ ಪ್ರಹೊಗೆ) : ನಿನ್ನ ನಂಡಲೆವ ನವಸಿಗರದಾರಿದಂ ಅಗ್ಗಳಿಸುವೊಡಾರ್ವೆನೇ ? (ಸಂಸಪ. ೩೪-೪).

[ನವಸು (< ನಮೆಯಿಸು) + – ಿಗ]

ನವಸು 'ನಮೆಯಿಸು' ನೋ.

ನವಸುಂದರ (ನಾ). ನೂತನಶೋಭೆಯುಳ್ಳದು : ದಿನದಿನದಂತಲ್ಲೀದಿನ – ನವಸುಂದರವೆಲ್ಲಂ ; ಹೊಸಸೃಷ್ಟಿಯ ಕನಸೊಂದನು ಬಗೆಗೊಂಡನೊ ನಲ್ಲಂ (ಮೂಂದಿ. ೪೩-೬). [ನವ$_2$ + ಸುಂದರ]

ನವಸುಕುಮಾರತೆ (ನಾ). ನವೀನವಾದ ಮಾರ್ದವ ; ಅಪೂರ್ವವಾದ ಕೋಮಲತೆ : ನವಸುಕುಮಾರತೆ ನಿನಗೆನ್ನವೊಲೆತ್ತಣದೆಂದು ನಖಮಯೂಖದೆ ನಗುತೊಪ್ಪುವ ನಳತೋಳ್ಗಳಿನಿರದೆತ್ತಿ ವಧೂಟ ಶಿರೀಷಕುಸುಮ ಕುಲಮಂ ಕೊಯ್ದಂಗೆ (ಶಾಂತೀಶ್ವ. ೦೦-೦೪೦). [ನವ$_2$ + ಸುಕುಮಾರತೆ]

ನವಸುಧೆ (ನಾ). ಹೊಸದಾಗಿರುವ ಅಮೃತ : ನವಸುಧೆಯಂ ಕ್ಷಾಲಿಸು ವಿಂದುವದೆಳೆಯಂತಿರ್ದ ತರುಣಿಯಂ ಕೈಗೊಟ್ಟು ಯುವತೀವ್ರಜಮೊಡಗೊಂಡುತ್ಸವದಿಂ ಪೊಕ್ಕುದು ವಿಚಿತ್ರಭೂಷಾಗೃಹಮಂ (ಶಾಂತೀಶ್ವ. ೪-೨೨೬). [ನವ$_2$ + ಸುಧೆ]

ನವಸುರಭಿ (ನಾ). ಹೊಸದಾದ ಸುಗಂಧ : ಮಾನನಿದಾನೆಯ ಮುಂದ ಶ್ವಾಸಮನೇ ನವಸುರಭಿಸಮಿರಂಗೆತ್ತು ನಿದಾನಿಸಿಯಂಗಜನೆಂಬ ಮಹಾ ಕಾಳೋರಗನೆಯ್ತರುತ (ಜಯಚಾ. ೩-೫೧). [ನವ$_2$ + ಸುರಭಿ]

ನವಸೂತಿ (ನಾ). ಹೊಸದಾಗಿ ಕರು ಹಾಕಿದ ಹಸು ; ಎಳಗಂದಿ : "ಧೇನು ನವಸೂತಿ" (ಪಸ್ತು.ಕೋ. ೪೦-೬). [ಸಂ.]

ನವಸೂತಿಕೆ (ನಾ). ೧.=ನವಸೂತಿ. ೨. ಅದೇತಾನೇ ಹೆರಿಗೆಯಾದವಳು: ಬಾಣಂತಿ. [ಸಂ. ನವಸೂತಿಕಾ]

ನವಸೌರಭ್ಯ (ನಾ). ಹೊಸ ಪರಿವಳ ; ನವೀನ ಸುಗಂಧ ; ಹೊಸ ಗಂಪು : ನವಸೌರಭ್ಯದ ಚಂದನಾರ್ದ್ರತಿಲಕೋದಂಚದ್ವನಶ್ರೀಗೆ . . . ಮುಕ್ತಾಹಾರಮಂ ಸಾರ್ದು ನೀಡುವ ಸೇವಾಂಗನೆ ತಾನಿದೆಂದೆನೆ ಕರಂ ಬೆಲ್ವಾಯ್ತು ತೆಂಗಾಳಿ (ಕಸುಬಾ. ೯-೨೦). [ನವ$_2$ + ಸೌರಭ್ಯ]

ನವಹಾಟಕ (ನಾ). ಅಪ್ಪಟ ಚಿನ್ನ ; ಉತ್ತಮವಾದ ಬಂಗಾರ : ಬಿಲ್ವಸಪ್ಪ ನವಹಾಟಕ ನಿರ್ಮಿತಮಪ್ಪ ಕೋಟಿ ವಂಟ್ಟರೆ ಮುಂಗಿಲಂ (ಪಂದ್ರಪು. ೦-೦೦೪). [ನವ$_2$ + ಹಾಟಕ]

ನವಹಾರಿದ್ರಕ (ನಾ). ಉತ್ತಮವಾದ ಅರಿಸಿನ : ಜೀರಕೋದ್ರವ ನವಹಾರಿದ್ರಕ ವಾಟೋತ್ಕರ ಮುನ್ನಿದ್ರಿತ ಕಮಲಾಕರಂಗಳಿಂ ಸೊಗಯಿಸುಗುಂ (ಪುಧ್ಗಿಪು. ೨-೪೭). [ನವ$_2$ + ಹಾರಿದ್ರಕ]

ನವಾಂಕುರ (ನಾ). ಹೊಸ ಚಿಗುರು. –ಮೊಳಕೆ : ನವಾಂಕುರದಂಬವಂ ಕುರವತದೊಳ್ ಪೊಳೆವೆಳಮಿಂಚಂ ಪಾಲೊಳ್ ತೊಳೆದುತವೊಲ್ (ಪುಧ್ಗಿಪು. ೫-೫೨). [ನವ$_2$ + ಅಂಕುರ]

ನವಾಂಗಿ (ನಾ). ಹೊಸ ಹರೆಯದವಳು ; ಜವ್ವನೆ ; ಯುವತಿ : ಶಂಕೆಯಿಂದಿಟ್ಟಿಸಿದನಾಪಾದಮಸ್ತಕಂ, ಕುಡುದಿಂಗಳಂತೆವೋ ನಿಂದಾ ನವಾಂಗಿಯಂ (ಶ್ರೀರಾಮಾ. ೨೦೮-೪೪೮). [ಸಂ. ನವಾಂಗೀ]

ನವಾಂಬುಜ (ನಾ). ಅದೇ ತಾನೇ ಅರಳಿದ ಕಮಲ : ತುಂಬ ನವಾಂಬುಜದಲರೊಳ್ ತುಂಬಿದ ಮಕರಂದಕೆಳಸುತಾಸ್ವಾದಿಪವೋಲ್ (ಶಾಕುಂತ. ೪೨-೭೫). [ನವ$_2$ + ಅಂಬುಜ]

ನವಾಂಶ (ನಾ). ೧. ಒಂಬತ್ತನೆಯ ಒಂದು ಭಾಗ. ೨. [ಜ್ಯೋತಿ] ಲಗ್ನದ ಒಂಬತ್ತನೆಯ ಒಂದು ಭಾಗ : ಸೂರ್ಯಾದಿ ಗ್ರಹಗಳು ತಮ್ಮ ಉಚ್ಚಸ್ಥಾನದಿಂದ ಹನ್ನೆರಡನೆಯ ರಾಶಿಯಲ್ಲಿ ಒಂಬತ್ತನೆಯ ನವಾಂಶದಲ್ಲಿ ಇರುವಾಗ ಉಚ್ಚಾಭಲಾಷಿ ಎಂದು ಕರೆಯಲ್ಪಡುತ್ತವೆ (ಜಾತಕ. ೯-೪ ಟೀಕೆ). ☞ ಇದರ ಗಣನೆಯಲ್ಲಿ ವಿಶೇಷ ಪ್ರಕಾರವಿದೆ. ಸಿಂಹ, ಮೇಷ, ಧನುಸ್ಸು ಈ ರಾಶಿಗಳಿಗೆ ಮೇಷದಿಂದಲೂ ಕನ್ಯಾ, ಮಕರ, ವೃಷಭ ಈ ರಾಶಿಗಳಿಗೆ ಮಕರದಿಂದಲೂ ಮಿಥುನ, ಕನ್ಯಾ, ತುಲಾರಾಶಿಗಳಿಗೆ ತುಲಾದಿಂದಲೂ ಕರ್ಕಾಟಕ, ವಿಾನ, ವೃಶ್ಚಿಕರಾಶಿಗಳಿಗೆ ಕರ್ಕಾಟದಿಂದಲೂ ಕ್ರಮವಾಗಿ ನವಾಂಶವನ್ನು ಎಣಿಸಲು ಆರಂಭಿಸಬೇಕು. ನವಾಂಶರಾಶಿಯ ಅಧಿಪತಿಯೇ ನವಾಂಶಕ್ಕೆ ಅಧಿಪತಿ.

[ನವ$_1$ + ಅಂಶ]

ನವಾಂಶಕ (ನಾ). = ನವಾಂಶ ೨ : ದಿನಪಾದಿ ಗ್ರಹಪಾತ್ಕೋಚ್ಚನಿಳಯದಿಂ ದ್ವಾದಶಾಲಯಂಗಳ ನವಸಂಖ್ಯೆ ನವಾಂಶಂದೊಳು ತಾಂ ನೆಲಸಿ ನೀದು ದುಚ್ಚಾಭಲಾಷಿತದ್ದೆಸೆ ಶುಭದಂ (ಜಾತಕ. ೯-೪). [ನವ$_1$ + ಅಂಶಕ]

ನವಾಂಶದೃಷ್ಟಿಫಲ (ನಾ). [ಜ್ಯೋತಿ] ನವಾಂಶದಲ್ಲಿರುವ, ಬೇರೆ ಗ್ರಹಗಳ ದೃಷ್ಟಿಯಿಂದಾಗುವ ಫಲ : ಚಂದ್ರನಿರುವ ನವಾಂಶರಾಶ್ಯಧಿಪತಿ ಬಲಿಷ್ಠನಾಗಿದ್ದರೆ ನವಾಂಶದೃಷ್ಟಿಫಲ ಅಧಿಕವಾಗಿಯೂ ರಾಶ್ಯಧಿಪತಿ ಬಲಿಷ್ಠನಾಗಿದ್ದರೆ ರಾಶಿದೃಷ್ಟಿಫಲ ಅಧಿಕವಾಗಿಯೂ ಉಂಟಾಗುತ್ತದೆ (ಜಾತಕ. ೩೦-೩೪ ಟೀಕೆ). [ನವಾಂಶ + ದೃಷ್ಟಿ + ಫಲ$_1$]

ನವಾಗತ (ಗು). ಹೊಸದಾಗಿ ಬಂದ : ಈ ನವಾಗತ ವ್ಯಾಣಿಯ ಆಚಾರ ವ್ಯವಹಾರಗಳ ವಿಷಯಕ್ಕೆ . . . ವರ್ಣನೆಗೆ ತೊಡಗುವಳು (ಇಪ್ಪಕ. ೫೭).

[ನವ$_2$ + ಆಗತ]

ನವಾತು, ನಾಬತ್ತು (ನಾ). ಒಂದು ಬಗೆಯ ಕಲ್ಲುಸಕ್ಕರೆ ; ಗಡಿಗೆಕಲ್ಲು ಸಕ್ಕರೆ : ರೊಟ್ಟಿ ಸಕ್ಕರೆ ಬೆಲ್ಲ ಬಳಿಮುಂ ತವರಾಜ ಘಟ್ಟಿ ನವಾತು[ಶಾಕಾಂ. ಘಟ್ಟಿಗೆಯಾಂತು]ಗೋಧುವೆಯ ಹಿಟ್ಟು . . . ಸಾಲಿಟ್ಟಿವ್ಪು ಕೊಟ್ಟಿಗೆಯೊಳಗೆ (ಕುರಾಸಾಂ. ೪೦-೫೫). ನಾಬತ್ತು : ಬಿಳಿಸಕ್ಕರೆ, ಹುರಿಸಕ್ಕರೆ . . . ನಾಬತ್ತು ಮೊದಲಾದ ಸಕ್ಕರೆಗಳನ್ನು ಮಾಡುವುದಕ್ಕೆ ಸ್ವಲ್ಪ ಶ್ರಮ (ಕೃಷಿಪ್ರ. ೦೮೬).

[←ಮರಾ. ನಾಬದ್]

ನವಾನ್ನ (ನಾ). "ಬಳಿಗಾಲದ ಬತ್ತದ ಕೊಯಿಲಾದ ಮೇಲೆ, ಹಿಂದೂಗಳಲ್ಲಿ ರೂಢಿಯಾಗಿ ಮಾರ್ಗಶಿರಮಾಸದಲ್ಲಿ ನಡಸುವ ಹೊಸ ಅಕ್ಕಿ ಊಟ ಮಾಡುವ ಉತ್ಸವ ವಿಶೇಷ" (ನಿಬಂಧ. II, ೩೧೨ ಅಡಿಟಿ).

ನವಾನ್ನದ ಉತ್ಸವ = "ನವಾನ್ನದ ಉತ್ಸವವೆಂದರೆ ಬಂಗಾಲದಲ್ಲಿ ಮಾರ್ಗಶೀರ್ಷದ ಕೊನೆಕೊನೆಗೆ ಹಾಲು, ಬೆಲ್ಲ, ತೆಂಗು ಇತ್ಯಾದಿ ಬೆರೆಯಿಸಿ ಹೊಸ ಅಕ್ಕಿಯನ್ನು ಬೇಯಿಸಿ ಪಾಯಸ ಮಾಡಿ ನೈವೇದ್ಯ ಮಾಡಿ ಉಣ್ಣುತ್ತಾರೆ. ಇದು ದಕ್ಷಿಣದ ಪೊಂಗಲ್ ಅಥವಾ ಉತ್ತರ ಕರ್ನಾಟಕದ ಹಿಂಗಾರಿಯ ಚರಗ ಚೆಲ್ಲುವ ಹಬ್ಬ ಇದ್ದ ಹಾಗೆ" (ಇಪ್ಪಕ. ೨೦೭ ಅಡಿಟಿ) : ಮಾರ್ಗಶೀರ್ಷಮಾಸದಲ್ಲಿ ಜರಗುವ ನವಾನ್ನದ ಉತ್ಸವವು ಚಳಿಯ ಇಬ್ಬನಿಗಳಿಂದ ಜಳಕ ಮಾಡಿದಂತಿದ್ದ ಮುಂಗಿಲ್ಲಿ ಪುತ್ತಿ ಸಜೀವವಾಗಿ ಎದ್ದು ನಿಂತಿತು (ಇಪ್ಪಕ. ೨೦೭). [ನವ$_2$ + ಅನ್ನ$_3$]

ನವಾನ್ನೋತ್ಸವ (ನಾ). = ನವಾನ್ನ : ವ್ಯವಸಾಯದ ಸುದಿನ ಬಂದಾಗ ಪುಷ್ಯಮಾಸದಲ್ಲಿ ನವಾನ್ನೋತ್ಸವ ನಡೆಯುತ್ತದೆ (ನಿಬಂಧ. II. ೩೧೨).

[ನವಾನ್ನ + ಉತ್ಸವ]

ನವಾಬ, ನಬಾಬ, ನವಾಬು (ನಾ). ೧. ಮೊಗಲ್‌ಸಾಮ್ರಾಟನ ಪರವಾಗಿ ಸಣ್ಣ ರಾಜ್ಯ ಅಥವಾ ಸಂಸ್ಥಾನಗಳ ಆಡಳಿತ ನಿರ್ವಹಿಸಲು ನಿಯುಕ್ತನಾದ ಮುಸಲ್ಮಾನಅಧಿಕಾರಿ : ನವಾಬ ಟೀಪುಸುಲತಾನ್ ಬಾಧಾಯಿ ಅದಿಲ್ ಆನೆ ೨ ಹೆಣ್ಣಾನೆ ೧೦ . . . ಮುಂದಿಟ್ಟು ವಜಿತಿಯಿಧೆ

(ಎಕ. VI (R), ಪಾಂಡವ. ೧೯೭-೮ ; 1785) ; ನವಾಬ ದಿಲದೇರುಖಾನರು ಕರಸಿದ್ದರಿಂದ ಫತ್ತಾಹುಲ್ಲಾಸಾಬರು ಶೀರ್ಯಕೆ ಬಂದು (ಹೈದರ. ೨೯) ; ದೊಡ್ಡನವಾಬರು ಅರಮನೇ ಕಟ್ಟಲು ಪಾಯ ಮೆಟ್ಟಿ ನೆಲಕ್ಕೆಲ್ಲಾ ಗಾರೇ ಗಚ್ಚು ಹಾಕಿಸಿರುವರು (ಹುಬ್ಬಿಹ. ೭೮) : ನನ್ನ ಅಜ್ಜಂದಿರಾದ ಏಕಾಂಬರ ಮುದಲಿಯಾರರು ಈ ಪ್ರಾಂತ್ಯವನ್ನು ಆಳುತಿದ್ದ ನವಾಬರಲ್ಲಿ, ದಿವಾನಗಿರಿ ನಡೆಸಿ ತುಂಬಾ ಆಸ್ತಿ ಮಾಡಿದರು (ಪ್ರತಾಪ. ೧). ೨. ದೊಡ್ಡಶ್ರೀಮಂತ ; ಆಢ್ಯ : ನೂರಾರು ಆಂಗ್ಲ 'ನವಾಬ' ರು ಅವನಿಗೆ ಆಶ್ರಯವೀಯಹತ್ತಿದರು (ಸಮಜೀ. ೮೭೮). ನಬಾಬ : ೧. ನೆಗಳ್ತೆವೆತ್ತ ಸವಣೂರ ನಬಾಬನ ವಂಶ ಸಂಜಾತರೊಳ್ . . . ಪರಮಪ್ರಖ್ಯಾತಿಯಂ ಪಡೆದಂ (ಕೆಳನ್ನ. ೦೦-೨೬ ವ); ನಾನು ಈಗಲೇ ಹೋಗಿ ನಿಮ್ಮ ನಬಾಬರಿಗೆ ಸುದ್ದಿಯನ್ನು ಕೊಡುವೆನು (ಕೋಹಿನೂ. ೬೪). ನವಾಬು : ೧. ನವಾಬು ಹೈದರಲಿಬಹದರವರು (ಎಕ. IX, ಚನ್ನಪ. ೧೪೬-೪ ; 1763); ನವಾಬು ಹೈದರಲಿಖಾನ್‌ಬಾದರವರು (ಎಕ. IX, ಚನ್ನಪ. ೧೮-೫ ; 1767).

[←ಅರ. ನವ್ವಾಬ್ ; ಪಾರ. ಸಾವಾಬ್; ಹಿಂ. ನವಾಬ್ ; ಮರಾ. ನವಾಬ್, ನಬಾಬ್]

ನವಾಬನಂದಿನಿ (ನಾ). ನವಾಬನ ಮಗಳು : ಅವಳು . . . ರೂಪರಾಶಿ ನವಾಬನಂದಿನಿ ಆಯೇಷೆಯಂತೆ ತೋರಿದಳೆನ್ನಲೆ ? (ಪ್ರಣಸ. ೦).

[ನವಾಬ + ನಂದಿನಿ]

ನವಾಬಿ (ಗು). ೧. ನವಾಬನಿಗೆ ಸಂಬಂಧಿಸಿದ. ೨. ಶ್ರೀಮಂತಿಕೆಯ ; ಸುಖಲೋಲುಪತೆಯ : ಒಂದು ಬಾರಿ ಹೊರಬಿದ್ದುಬಿಟ್ಟರೆ ಒಂದಿಲ್ಲ ಒಂದು ಗಮ್ಯಪಥ ಇದ್ದೇ ಇರುತ್ತದೆ. ಆ ಪಥ ನವಾಬೀಪಥವಲ್ಲ (ಇಪ್ಪಕ. ೧೯೩). [←ಪಾರ. ನೌವಾಬೀ ; ಮರಾ. ನವಾಬೀ, ನಬಾಬೀ]

ನವಾಬು 'ನವಾಬ' ನೋ.

ನವಾಯತ್ 'ನವಾಯತ' ನೋ.

ನವಾಯತ, ನವಾಯತ್, ನವಾಯಿತ (ನಾ). (ಹೆಚ್ಚಾಗಿ ಭಟ್ಕಳಕ್ಕೆ ಸೇರಿದ ಕೊಂಕಣಿ ಮಾತನಾಡುವ) ಮುಸಲ್ಮಾನರ ಒಂದು ಪಂಗಡ : ನವಾಯತರು, ಅಂದರೆ ಹೊಸದಾಗಿ ಬಂದವರು.– ಇವರು ಕಾನಡಾಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿ ಇರುತ್ತಾರೆ (ಕಭಾಗೆ. ೨೩೭). ನವಾಯತ್ : ವ್ಯಾಪಾರಸ್ಥರು ಬಜಿಲ, ಬಣಜಿಗ, ಬನಿಯ . . . ಮೀಮಾನ್, ನವಾಯತ್, ನಿಮಿಸ್ಕಾರ, ವೈಶ್ಯ, ವಾಣಿ (ತುಳುನಾ. ೧೭೨). ನವಾಯಿತ : ಇವರಲ್ಲಿ ನವಾಯಿತರ (ಹೊಸದಾಗಿ ಬಂದವರ) ಸಂಖ್ಯೆಯು ವಿಶೇಷವಾಗಿರುವದು (ಕೌರವ. ೪೯) ; ಮಳಿಗೆಯಲ್ಲಿ ಬಿದ್ದಿರುವ ಊಚುಸೀರೆಗಳನ್ನು . . ರೇಶ್ಮೆ ಚೌಕದಲ್ಲಿ ಕಟ್ಟಿ ನವಾಯಿತರು ಮಠಕ್ಕೆ ಬರುವವರಾದರು (ವಾಗ್ಗೇವಿ. ೪೮).

[←ತುಳು. ನವಾಯತೆ]

ನವಾಯಿ (ನಾ). ೧. ಹೊಸತನ ; ನಾವೀನ್ಯ ; ಅಪೂರ್ವತೆ : ಜೀಯ ಬಿನ್ನಹವಿಂದು ದೇಹಚ್ಛಾಯೆಗುಂಟೇ ಬೇಱೆ ಚೇಷ್ಟೆ ನವಾಯಿಯೇ ನಮ್ಮಿನಿ ಬರಿಗೆ ರಾಜಾಭಿಮಾನದಲಿ (ಕುಮ್ಯಾಸ. ೦೨-೯೪) ; ಗಾಯದಲಿ ಮೇಣ್ ಚೊಕ್ಕೆಯದಲಡುಪಾಯಿಗಳಲುಪಕಾಯದೊಳಗೆ ನವಾಯಿಗಳ ಬಿನ್ನಾಣದಲಿ ಬಳಿಸಂದು . . . ನಾನಾವಿನೋದದ ದಾಯವಱಿವವನವನೆ ಮಲ್ಲನು (ಕುಮ್ಯಾಉ. ೩-೯೭) ; ಆ ನವಾಯಿಯನ್ನು ಕಾಂಬಾತನಿಗೆ ಕವಿತಾದೃಷ್ಟಿ ಬೇಕು (ಚಿತ್ರಸ್ಯ. ೧ ಮುನ್ನುಡಿ). ೨. ಅಪೂರ್ವವಾದ ಚೆಲುವು,—ಸೊಗಸು,—ವಿಲಾಸ : "ನವಾಯಿಯೆನಲ್ ಠೀವಿ" (ಭಾರನಿ. ೬) : ಮುಖಚಂದ್ರಗೆ ಚಕೋರಗಳು ಅಡಸಿದುವು ತಾ ಸೌರಭಕೆ ಬಂದಿಡಿದ ಮಧುಪವ್ರಜದ ಘನ ರಾಯತಿಗೆ ಕಾಂತೆಯರಳವಳಿದು ನಡೆದರು ನವಾಯಿಯ[ಪಾಠಾಂ. ಯದ]ಲಿ (ಜೀವಂಚ. ೮-೩೯) ; ಏಕವಿಧದ ನವಾಯಿಯೇ[ಪಾಠಾಂ. ಯಲಿ] ಮೂಲೋಕ ದತಿಶಯವಸ್ತುರಚನಾಸೌಕುಮಾರಿಯ ಸೇವೆಗಿದು ಸಾಕಾರವಾದುದಲ (ಕುಮ್ಯಾಆ. ೧೨-೧೮) ; ನವಾಯಿ ಹೆಚ್ಚಿತು ಮತ್ತೆ ಬೇಟ ವರಾಯತಾಕ್ಷಿಯ ಕೂಟಕೆಳಸುವ ಚದುರಭೂಮಿಪರ (ಕುಮ್ಯಾಆ. ೦೩-೪೫) ; ರಾಯನರಮನೆ ಮೌಕ್ತಿಕದ ಕಳಶಾಯತದ ಬೆಳಗಿನಲಿ ಪಾಂಡವರಾಯನೆಲೆವನೆಗಳನು ನಗು ತಿದ್ದುದು ನವಾಯಿಯಲಿ (ಕುಮ್ಯಾಅ. ೧೮-೨) ; ವಾಯುತನುಜನ ಸುತನು ತನ್ನ ಪಸಾಯತರು ಸಹಿತೊಳಗೆ ಹೊಕ್ಕು ನವಾಯಿ[ಪಾಠಾಂ. ಯೆ]ಯಲಿ ನಡೆತಂದು ಕಾಣಿಕೆ ಕೊಟ್ಟು ಪೊಡವಂಟ (ಕುಮ್ಯಾಸ. ೫-೨೮); ತಾಯ ಬರವನು ಹಾರಿ ಹರಿದಂಬೇಯೆನುತೆ ಹಟ್ಟಿಗಳ ಸುತ್ತ ನವಾಯಿಯಲಿ ಪರಿದಾಡಿ ಮಿಗೆ ಪುಟನೆಗೆದು ಮೇಳಿಸುತೆ (ಅಕ್ರೂಚ. ೨-೪೮). ೩. ದರ್ಪ ; ಗರ್ವ ; ಠೀವಿ ; ಹೆಮ್ಮೆ : ಕಾಯಲಳವೇ ಕರ್ಣ ಬಱಿಯ ನವಾಯಿಯಲಿ ಫಲವಿಲ್ಲ ದೇಹದ ಬೀಯಕಿದು ಹೊತ್ತಲ್ಲ ಸಾಧಕವಿದಕೆ ಬೇಱುಂಟು (ಕುಮ್ಯಾಕ. ೦೨-೦೬) ; ಒಳಗೆ ಢಗೆ ನಗೆ ಹೊಱಗೆ ಕಳವಳವೊಳಗೆ ಹೊಱಗೆ ನವಾಯಿ ಡಿಳ್ಳಸವೊಳಗೆ ಹೊಱಗೆ ಸಘಾಡಮದ . . . ಮಹೀಶ ಹದನಿದು ನಿನ್ನ ನಂದನನ (ಕುಮ್ಯಾಶ. ೨-೧). ೪. ಅಬ್ಬರ ; ಆರ್ಭಟ : ರಾಯಮೋಹರ ತೆಗೆದವೆರಡು ವಿಡಾಯಿಯಲಿ ಬಹುವಿಧದ ವಾದ್ಯ ನವಾಯಿ ಮಿಗೆ ನಲವಿನಲಿ ಬಂದರು ಪಾಳೆಯಂಗಳಿಗೆ (ಕುಮ್ಯಾಕ. ೪-೩೯). ೫. ವೇಗ ; ಶೀಘ್ರತೆ : ಕಾಯಸೌಖ್ಯಕೆ ಕಾಮಸುಖದ ವಿಡಾಯತತುವಕೆ ವೇಡೆಗೊಂಡು ನವಾಯಿಯಲಿ ದುರ್ಗತಿಗೆ ದುವ್ವಾಳಿಸುವನಲ್ಲೆಂದ (ಕುಮ್ಯಾಅ. ೮-೩೧). ೬. ಹೆಚ್ಚಳ ; ಆಧಿಕ್ಯ ; ಅತಿಶಯ : ಸುರವಂದಿಗಳು ಹೊಗಳಿದರುದಧಿಘೋಷದಲಿ . . . ಯಮ ವಜ್ರಾಯುಧಾದ್ಯರು ಮನದ ಮುದದ ನವಾಯಿಯಲಿ ಸೂಸಿದರು ಸುರನಂದನದ ಕುಸುಮಗಳ (ತೊರರಾ. ೨-೩-೨೩). ೭. ಆಕ್ರಮಣ ಶೀಲತೆ : ಕುನ್ನಿಗಳ ಬಿಡಿ ಹರಿಯಲಿ ನವಾಯಿಯಲಿ (ಪ್ರಹ್ಲಾಚ. ೩-೨೯). ೮. ಉತ್ಸಾಹ ; ಹುರುಪು. 'ನವಾಯಿಗೆಡು' ಪರಾ.

[←ಪಾರ. ನೌಆಈನ್ ; ಮರಾ. ನವಾಈ, ನವಾಯಿ]

ನವಾಯಿಕಾಱ (ನಾ). ೧. ಸೊಗಸುಗಾರ ; ವಿಲಾಸಿ : ದಾಯ ತಪ್ಪಿತು ಗರುವರಾಟ ವಿಡಾಯಗೆಟ್ಟಿತು ವಿಟರ ನೋಟ ನವಾಯಿಕಾಱರ ಕೂಟ ಕುಸಿದುದು ಮಾರಶರಹತಿಗೆ (ಕುಮ್ಯಾಅ. ೦೩-೪೫). ೨. ಘನತೆಯುಳ್ಳವನು; ಠೀವಿಯಿಂದ ಕೂಡಿದವನು : (ಕಿ). [ನವಾಯಿ + – ಕಾಱ]

ನವಾಯಿಗೆಡು (ಕ್ರಿ). ಹುರುಪುಗೆಡು; ಉತ್ಸಾಹ ಕುಂದು; ಮಂಕಾಗು; ಮ್ಲಾನವಾಗು : ತಾಯೆ ನೀಂ ನಮ್ಮಿಂದ ಬಂಧನದಾಯಸವನನುಭವಿಸಿ . . . ಗಾಯವಡೆದ ಕುರಂಗಿಯಂತೆ ನವಾಯಿಗೆಡದುಳಿದಿರ್ದ ನಮ್ಮನು ಕಾಯಿದಿರಿಯೆಂದಸುರರಿಪು ದೇವಕಿಯೊಡನೆ ನುಡಿದ (ಅಕ್ರೂಚ. ೯-೧೦).

[ನವಾಯಿ + ಕೆಡು$_1$]

ನವಾಯಿತ 'ನವಾಯತ' ನೋ.

ನವಾಯಿಸು (ಕ್ರಿ). ೧. ಹೊಸದಾಗಿಸು ; ನವೀಕರಿಸು : ಇಲ್ಲಿಗೂ ಹೊಂದುವಂಥದನ್ನು ಇಲ್ಲಿನದೇ ಆಗುವಂತೆ ನವಾಯಿಸುವ ಇವರ ಮನೋಗುಣ ಹವಣು ತಿಳಿದದ್ದು (ವೀರಯೋ. vii ಮುನ್ನುಡಿ). ೨. ಹೊಸದಾಗಿ ಸೃಷ್ಟಿಸು,–ರೂಪಿಸು : ನಿನ್ನ ಹಿಂಗಬ್ಬಿಗರಿಗೂಡಿದ ಕನ್ನಡದ ನುಡಿವೆಣ್ಣ ಮೊಲೆ ನಿನಗಿನ್ನು ಸಾಲದೆನುತ್ತ ವಿಧಿ ಮುಂಬಗೆದು ನಿನ್ನುದಯಂ ಚನ್ನೆಯಿವಳಿಗೆ ಮೂರನೆಯ ಮೊಲೆಯನ್ನವಾಯಿಸಲು (ಗಿಳಿವಿಂ. ೯೭-೫).

[ನವಾಯಿ + – ಇಸು$_3$]

ನವಾರ, ನವಾರು (ನಾ). ೧. (ಮಂಚಕ್ಕೆ ಹೆಣೆಯಲು ಉಪಯೋಗಿಸುವ) ಮೂರು ಅಥವಾ ನಾಲ್ಕು ಬೆರಳಿನಷ್ಟು ಅಗಲವಾದ, ದಪ್ಪನೆಯ ನೂಲಿನ ಪಟ್ಟಿ : ಆ ಕೋಣೆಯಲ್ಲಿ ಒಂದು ನವಾರದ ಹೊರಸು . . . ಒಡವೆಗಳು ಇದ್ದವು (ಕನ್ನಡಿ. ೧೨೦). ೨. (ನಂದೀಧ್ವಜವನ್ನು ಹಿಡಿದು ಕೊಳ್ಳುವವರು) ನಡುವಿಗೆ ಕಟ್ಟುವ ಪಟ್ಟಿ : ಕುಣಿಯುವಾತ ಸೊಂಟದ ಸಮೀಪಕ್ಕೆ ಬರುವಂತೆ ಒಂದು ಪಟ್ಟಿ ಚೀಲವನ್ನು ಹೆಗಲಿನಿಂದ ಇಳಿ ಬಿಟ್ಟು

ಕೊಳ್ಳುತ್ತಾನೆ. ಇದರ ಹೆಸರು 'ನವಾರ' (ಕಜಕ. ೦೦೧). **ನವಾರು** : ಷಿ. ಲಾಡಿ : ಲಂಗಕ್ಕೆ ನವಾರು ಹಾಕಿಕೊಡು (ಕೂಡಿ).

[←ಪಾರ. ಮರಾ. ನವಾರ್, ನುವಾರ್]

ನವಾರಮಂಚ (ನಾ). ಬಟ್ಟೆಯ ಪಟ್ಟಿಯಿಂದ ಹೆಣೆದ ಮಂಚ; ಹೊರಸು. [ನವಾರ + ಮಂಚ]

ನವಾರು 'ನವಾರ' ನೋ.

ನವಾಷಾಗರ 'ನವಸಾಗರ' ನೋ.

ನವಾಸಾರ (ನಾ).=ನವಮರ್ಷ : ಮೇಘನಿಕಾಯಂಗಳನೇಂಬಲ್ದೆಱಗಿತೋ ರೂಪ್ಯಾದ್ರಿಯೊಳ್ಪುಪ್ಪನೀರನವಾಸಾರದಿನಿಂದು ಸಾನುತರುಗಳ್ಗೆೀಂಕಾಡು ಶಿರ್ವನ್ನೆಗಂ (ಅರ್ಧನೇ. ೩-೦೨). [ನವ್ಯ + ಆಸಾರ]

ನವಿ (ನಾ). "ಸಣ್ಣನವಿವು" (ಮುತಂಒ. ಕೋಶ : ಸಣ್ಣಸಣ್ಣ ನವಿಗಳು ಹುಟ್ಟಾದಿ ಸುತ್ತ ಹಾಯಿಗಳೊಂದಿಗೆ ಪಶ್ಚಿಮಸಮುದ್ರವನ್ನು ದಾಟುತ್ತಿರುವುದನ್ನು ಮನಸ್ಸಿನಲ್ಲಿ ಯೋಚಿಸು (ಮುತಂಒ. ೮೪). 'ನಾವೆ' ಪರಾ.

[?]

ನವಿಯ (ಗು). ಹೊಸತಾದ; ನವೀನವಾದ : ಭಾವೆಂದಿನಿಪ ಹಯಾರೂಢತ್ವ ನವನವಿಯ ಚಾಪಾಗಮತ್ವ ಸೌಂದರತೆ . . . ಇನತೇಜದಿಂದೆಸೆದಿರ್ದನು (ಸೋಪಚ. ೦-೧೦೬). [<ಹಾ. ಣವಿಅ-/ಸಂ. ನವ್ಯ]

ನವಿರ್, ನವಿರು೩ (ನಾ). ೧. ಕೂದಲು; ಕೇಶ; ರೋಮ: "ತಲೆರೋಮಂ ಬಿಕುರಿಂ ಕಚಂ ಶಿರಸಿಜಂ ಕೇಶಂ ಶಿರೋಜಂ ನವಿರ್" (ವಸ್ತುಕೋ. ೭೦-೩೦); "ನವಿರೆನಲ್ ದೇಹೇರುಹಂ" (ಕರ್ಣಾನಿ. ೬) ; ಆಗಳಾ ಪರಾಕ್ರಮಧವಳನ ಶರವರಿಣತಿಯಂ ಕಂಡು ದುರ್ಯೋಧನನ ಮೊಗಂ ತಲೆನವಿರ ಗಂಟಿಂ ಕಿಱಿದಾಗೆ (ಪಂಚಭಾ. ೩-೭೭ ವ) ; ಪೊಣ್ಮೆ ನವಿರಂಗೋಪಾಂಗದೊಳ್ ಕಣ್ಗಳಿಂ ಪರಿಕಾಲ್ಯಾಯೆ ಸುಪಾಶ್ರ (ಚಳವಿ. ೦-೮) ; ಕಯ್ದುವನ್ ನೆಱಿ ತೊಟ್ಟು, ಕುದುರೆ ನವಿರ್ ಮುಡಿಯಿಟ್ಟು (ಅಂತಿಗೊ. ೭-೯೯). ೨. ರೋಮಾಂಚ : ಪುಳಕ. 'ನವಿರೇಱು', 'ನವಿರ್ಗೆದಱು' ಪರಾ. ೩. ತುಪ್ಪುಳು; ಗರಿ: ಸರಳತೆವೆತ್ತು ಬರ್ಬಿದ ನವಿರ್ ಪರಿರಂಜಿಸಲೀಂಟು ತಿರ್ದುದುಬ್ಬರಿಸಿದ ಚಂದ್ರಿಕಾರಸಮನಂಚಿತ ಚಾರುಚಕೋರಸಂಚಯಂ (ಕುಸುಮಾ. ೪-೫೪). ೪. ಉಣ್ಣೆ ; ತುಪ್ಪಟ. 'ನವಿರುಡೆ' ಪರಾ. **ನವಿರು**: ೧. ಕವಲ್ತುವ ಬಳಲ್ಮುಡಿಯ ನವಿರಾಗುಳಿಕೆ ನಿದ್ರೆಯಲಸಿಕೆಯಶನ ದೆಡೆಯೊಳಪ್ರಿಯವೊದವಿದುವು ಗರ್ಭಚಿಹ್ನೆಮೆಸೆದುದು ಲತಾತನ್ವಿಗಂದು (ಪದ್ಮಕಾ. ೪-೨೯) ; ನಡುಗುವ ತಲೆಯ ತರಳಿದ ಮೈಯ ಬೆಳುಪಿನ ತಲೆನವಿರ ತಗ್ಗಿದ ಶರೀರದ ನೆಗ್ಗಿದವಯವದ . . . ವೃದ್ಧರನು ತೋಱಿದನು (ಕುಪಾಅ.೦೩-೧೦); ನಡು ಬೆಳದು ತಲೆಯು ನವಿರೊಸೆದುದ್ದವಾದುದಾ ಸತಿಗೆ (ಶ್ರೀಪಾಂ. ೨-೭೧) ; ನಿಟ್ಟಸಲಕ್ಷಿಯುಂ ಬೆಂಡೆದ್ದು ನವಿರ್ಗುಡಿಗಟ್ಟಿತು . . . ಱುಮ್ಮುಱುಮ್ಮೆಂದು ತಟ್ಟಿತು ಮನಮೂರ್ಛೆ ರತಿಗೆ (ಪೋಹತ. ೦೧-೪೨) ; ನವಿರು ಶೈವಲದಂತೆ ನಯನವ್ವ ವಿಸಾನಂತೆ ಕಾಂತೆ ಸರೋವಕದಂತೆ (ಇಂಚಾಕ. ೧೪೭-೨೫); ಹಾಡುವವರ ಭಾವ-ಭಂಗಿಗಳನ್ನು ನೋಡಿಯೆ ನಮ್ಮ ಮೈಯ ನವಿರು ನಿಮಿರಿ ನಿಲ್ಲಬಹುದು (ಕರ್ಣಾಜ. ೦೦೯). ೨. ಮಗಮಗಿಸುತ್ತೆ ಪಾಯ್ವ ರಸದಿಂಚರಿಯಂ ಸವಿವನ್ನೆಗಂ ಕರಂ ಮೊಗಸಿರಿದೋಱಿ ವಿಸಾಱಿ ನವಿರುಂ ಸೆರೆಗಳ್ಚಿಗುವೇಱಿ ಗದ್ಗದಂ ವಿಗೆ ... ಸೊಗಂಬತೆಗುಂ ಚಿಕದೇವಭೂವರಂ (ಅಪ್ರತಿ. ೦೧-೮); ಮುದದೊಳು ಮುರಿದೇಳುವ ನವಿರಿಂದೊಡನಿದಿರುಗೊಳುವಳಿನಿಯನನು (ಹರಿಚ. ೭-೪೯); ಅದೇ ಗಳಿಗೆ ಮೈಯ ತುಂಬ ನನಗೆ ನವಿರುಬಟ್ಟೆ (ನಾದಲೀ. ೪೯-೦೨).

[ದೇ.ಕ ತಮಿ. ನವಿರ್]

ನವಿರು೧ (ಕ್ರಿ). = ನವಿರೇಱು : ನರಿನರಿ ಚಿಮ್ಮಿಸಿ ನಡದು ಬರೆ ನೀ . . . ಮೆಯ್ ನವಿರಲು ನೆಲ ನಡುಗಿತು (ಹೂಹಾದಿ. ೦೨-೩). [<ನವಿರ್]

ನವಿರು೨ 'ನವಿರ್' ನೋ.

ನವಿರು೩, ನವುರು, ನೌರು (ನಾ). ೧. ಮೃದುವಾದುದು ; ಕೋಮಲವಾದುದು : ನಾಜೂಕಾದುದು : ತರತರವಾದವೂ ನವಿರುನವಿರಾದವೂ ಆದ ಆ ಬಟ್ಟೆಗಳನ್ನು ನೋಡಿ ಉತ್ಸರೆಗೆ ತುಂಬ ಹರ್ಷವಾಯಿತು (ವಡಹಾ. ೩೩೩) ; ನವಿರಾದ ಪಟ್ಟೆಅರಿವೆಯನ್ನು ಕೂಸಿಗೆ ಹೊದೆಸಿದಳು (ಹಾತುತ್ರ. ೪೧). ೨. ತೆಳುವಾದುದು. 'ನವಿರೆಳೆ' ಪರಾ. ೩. ಸೂಕ್ಷ್ಮವಾದುದು : ಇವುಗಳಿಗಿರುವ ವ್ಯತ್ಯಾಸದ ರೇಖೆ ತೀರ ನವಿರಾದುದು (ಭಾವಗೀ. ೦೪). ೪. ಸುಕುಮಾರತೆ ; ಮಾರ್ದವ ; ಮೃದುತ್ವ : ರಾಧಮ್ಮನ ಪ್ರೀತಿ ತುಂಬಿದ ಕರೆಯಿಂದ ಕ್ಷಣಕಾಲ ನಿರ್ಮಲೆಯ ಅಂತಃಕರಣ ನವಿರಿಗೊಳಗಾಯಿತು (ಮೂಕುಜಾ. ೩೩೩). **ನವುರು** : ೧. ಅಂಚೆಯ ತುಪ್ಪಳಕ್ಕಿಂತ ನವುರಾದ ಆಕಾಶವರ್ಣದ ಕಿಂಕಾಬುವಸ್ತ್ರ (ಸುವಸಂ. ೪) ; "ಮಸ್ಲಿನ್‌ಗಳು" ಎಂಬ ನವುರಾದ ವಸ್ತ್ರಗಳೂ . . . ಹಿಂದೂದೇಶದಲ್ಲಿ ಬಹುಕಾಲದಿಂದ ತಯಾರಾಗುತ್ತಲಿವೆ (ಭೂಗೋಳ. ೪೯). ೨. ಯವಕರ ವಿವಿಧ ಸಂವೇದನೆಗಳ ತರಂಗಗಳು ಆ ಕಾಲದಲ್ಲಿ ತುಂಬ ನವುರಾಗಿಯೂ ವೇಗವಾಗಿಯೂ ಮೊಳಗುತ್ತಿರುತ್ತವೆ (ಶಿಕ್ಷಣ. ೦೦೪). (ಗು). ೫. ಮೃದುವಾದ: ರಾಜನ ಈ ನವುರು ಮನಸ್ಸನ್ನು ಅಲ್ಲಿದ್ದವರು ಬಲ್ಲರು (ಸವತಿ. ೦೪೭). **ನೌರು** : ಷಿ. ಅದು ಬಲು ದೊಡ್ಡದಾಗಿಯೂ ಅತ್ಯಂತ ನೌರಾಗಿಯೂ ಇರುವ ಒಂದು ಬಗೆಯ ಅನಿಲಮಂಡಲ (ಜ್ಯೋತಿರ್ವಿ. ೯೬).

ನವುರು ಮಾಡು = ಮೃದುವಾದ ಮಾತುಗಳಿಂದ ಒಲಿಸಿಕೊಳ್ಳು : ಸಾಹೇಬರು ಕೇಳಲಿಲ್ಲ. ನಿಮ್ಮ ಮಾತು ಸರಿ, ಅಂದರು ; ನಕ್ಕರು, ನವುರು ಮಾಡಿದರು ; ತಮ್ಮ ಇಚ್ಛೆ ನಡಸಿಬಿಟ್ಟರು (ಚಳಕಾ. ೫೦೦).

[ದೇ.ಕ ತೆಲು. ನವ್ತರು, ನೌರು]

ನವಿರುಗಣ್ಣು (ನಾ). ಕೋಮಲವಾದ ದೃಷ್ಟಿ ; ಮಾರ್ದವವಾದ ನೋಟ : ಹಿರಣ್ಯಗರ್ಭನ ತೇಜಃಪುಂಜವ್ವ ಹುಂಜವು ತಾನೆನೆ ಕೂಗಲಿ ನವಿರುಗಣ್ಣಿನಲಿ ನವಿಲುಬಣ್ಣದಲಿ ಹೆಣ್ಣಿನ ನಯ ತಲೆದೂಗಲಿ (ಅರಳು. ೩೦೦-೩). [ನವಿರು೩ + ಕಣ್ಣು (<ಕಣ್)]

ನವಿರುಗೂಡು (ಕ್ರಿ). ಸೂಕ್ಷ್ಮತೆಯನ್ನು ಒಳಗೊಳ್ಳು : ತನ್ನ ಆಳದ ಒಳನೋವಿನ ನವಿರುಗೂಡಿದ ನುಡಿಯ ಬರೆಹಗಳನ್ನೆಲ್ಲ ಹೀಗೆ ನೆಲೆದಪ್ಪಿಸಿ ಬಿಟ್ಟದ್ದಕ್ಕೆ . . . ಸಿಡಿಮಿಡಿಗೊಂಡನು (ಇಪ್ಪಳ. ೩೪೧).

[ನವಿರು೩ + ಕೂಡು೧]

ನವಿರುಡೆ (ನಾ). ಉಣ್ಣೆಯಂ ಬಟ್ಟೆ ; ಕಂಬಳಿ : ಪೆರ್ಚಿದುದು ಕುಳಿರಳವ್ವ ಆಳ್ ಗೈಮೆಯುಳಿದಿರರ್ ಕಿಚ್ಚು ನವಿರುಡೆಗಳಂ ಕಾವಲ್ಗೆ ನಿಲಿಸಿ (ಕಾಲೂಕ. ೭೬-೧೪೦) ; ತಂದನೊಬ್ಬಂ ಪೇಳ್ದ ಬೆಲೆಗೊಟ್ಟು ನವಿರುಡೆಯು (ಕಾಲೂಕ. ೭೪-೦೪೪). [ನವಿರು೩ (< ನವಿರ್) + ಉಡೆ]

ನವಿರುಮೆಯ್ (ನಾ). ತೆಳುವಾದ ಮೈ ; ಕೋಮಲಾಂಗ : ಅವನ ಕಣ್ಣು . . . ಸೂಕ್ಷ್ಮಪ್ರಕೃತಿಯ ನವಿರುಮೆಯ್ಯ ಮಹಿಳೆಯನ್ನೆ ಹಿಂಬಾಲಿಸುತ್ತಿದ್ದುವು (ಪುನರು. ೩೩೬). [ನವಿರು೩ + ಮೆಯ್]

ನವಿರುಹಾಸ್ಯ (ನಾ). ಮೃದುವಾದ ಹಾಸ್ಯ ; ಸೂಕ್ಷ್ಮವಾದ ವಿನೋದ : ಇಂಗ್ಲಿಷ್ ಸಾಹಿತ್ಯದ. . .ನವಿರುಹಾಸ್ಯವನ್ನು ತನ್ನ ಕಾದಂಬರಿಗಳಲ್ಲಿಯೂ ಪ್ರಬಂಧಗಳಲ್ಲಿಯೂ ತರಲು ಪ್ರಯತ್ನಪಟ್ಟನು (ಬಂಕಿಮ. ೩೪೯).

[ನವಿರು೩ + ಹಾಸ್ಯ]

ನವಿರೆಳೆ೧ (ನಾ). (ಕೂದಲೆಳೆಯಷ್ಟು) ಅತ್ಯಲ್ಪವಾದ ಅಂತರ : ಆಗ ಬಹುದಾಗಿದ್ದ ಅಪಘಾತ ಒಂದೇ ಒಂದು ನವಿರೆಳೆಯಲ್ಲಿ ತಪ್ಪಿತು (ಕೂಡಿ).

[ನವಿರು೨ (<ನವಿರ್) + ಎಳೆ೨ (<ಎಟ್೨)]

ನವಿರೆಳೆ೨ (ನಾ). ತೆಳುವಾದ ಎಳೆ: ಕತ್ತಿಗೆ ನವಿರೆಳೆಯ ಚಿನ್ನದ ಸರವೊಂದು (ರಾಮಾನ. ೦೦೦). [ನವಿರು೩ + ಎಳೆ೨ (<ಎಟ್೨)]

ನವಿರೇರು 'ನವಿರೇಱು' ನೋ.

ನವಿರೇಱು, ನವಿರೇರು (ಕ್ರಿ). ಕೂದಲು ಎದ್ದು ನಿಲ್ಲು ; ರೋಮಾಂಚನವಾಗು ; ಪುಳಕಗೊಳ್ಳು : ರತ್ನಶೇಖರನಾಗಳ್ ನವಿರೇಱಿದ ತನುವಂಕದ ಬವರಮನೊಳಕೊಳ್ವ ಮಾಸವಳನಂ ಪೋಲ್ತಂ (ಪುಷ್ಯಾಸ್ರ. ೧-೬೭) ; ಗಟ್ಕನೆ ನವಿರೇಱಿಯಾಲಿನೀರೊಱಿವಿನೆಗಂ ತಟ್ಕೈಸಿ ಬಿಗಿದು ಮುದ್ದಿಸಿ (ಚಿಕವಿ. ೬-೧೦೨). ನವಿರೇರು : ಹಿಗ್ಗು, ಉಬ್ಬು, ಗುಡಿಗಟ್ಟು, ನವಿರೇರು, ಜುಮ್ಮೆನ್ನು (ಕಂನುಹು. ೯೧). [ನವಿರ್ + ಏಱು$_1$ (<ಏಱ್$_1$)]

ನವಿರೇಱ್ (ಕ್ರಿ). = ನವಿರೇಱು : ಏನದು! ನವಿರೆಟ್ಟು ನಡುಗಿದವೆನೇ ನಿನ್ನ ಬಾಯ್ಗೆ ! (ಅಂತಿಗೊ. ೪೪-೯೨೦). [ನವಿರ್ + ಏಱ್$_1$]

ನವಿರೊಳ್ಪು (ನಾ). ಕೇಶಸಂಪತ್ತು : ನವಿರೊಳ್ಪ ಹೊಗೆಯಲ್ಲಿ ತುಂಬಿ ತಲೆದೂಗಿ (ಕಾಲೂರ. ೧೮೪-೪೧೮). [ನವಿರ್ + ಒಳ್ಪು]

ನವಿರೋಳಿ (ನಾ). ಕೂದಲಿನ ಸಾಲು: ಮೇಂಗೊರಲ ನವಿರೋಳಿ ನೆಸೆಯೆ . . . ಭೀಕರಂಗಳಾಗಿರ್ಪ ಕಾಳ್ಕೋಣಂಗಳ ಗಡಣಂಗಳೊಳಂ (ಮರಾಜ. ೮-೨೪ ವ). [ನವಿರ್ + ಓಳಿ]

ನವಿರ್ಗುಡಿಗಟ್ಟುಹ (ನಾ). ನವಿರೇಳುವಿಕೆ ; ರೋಮಾಂಚನ ; ಪುಳಕ : ಎನಗಿದೆ ! ಉಂತೆ ಮೆಯ್ನಡುಕವೋವೋ ! ನವಿರ್ಗುಡಿಗಟ್ಟುಹಂ ಚಿಳಿಲ್ಲನೆ ಬೆಮರಶ್ರುಮಾಲೆ (ಸಂಸಪ. ೨೦-೩) [ನವಿರ್ + ಗುಡಿಗಟ್ಟು$_2$ + – ಹ$_2$]

ನವಿರ್ಗೆದಱ್ (ಕ್ರಿ). ಮೈನವಿರೇಳಿಸು ; ರೋಮಾಂಚನಗೊಳಿಸು : ಪುದಿದ ಹಿಮಂ ನವಿರ್ಗೆದಱ್ ಮೆಯ್ ಮಿಗೆ ಕೋಡೆ ಕಪಿವ್ರಜಂ . . . ಕೆಂಬೆಳಗಂ ಕೆದಱುತ್ತುಮಿರ್ಪ ರತ್ನದ ಪಿರಿದೆ ಾಂದು ಪಾಸಱ್ ದವಾಗ್ನಿಯ ದಳ್ಳುರಿಯೆಂದು ಪತ್ತೆಸಾರ್ವುದು ತಳಮಂ ನಿಮಿರ್ಚು[ರ್ಚಿ]ತೆನೆ ಮಾಗಿಯ ಶೀತಮದೇಂ ಪ್ರಭೂತವೋ (ಕುಸುಮಾ. ೭-೧೪).

[ನವಿರ್ + ಕೆದಱ್$_1$]

ನವಿರ್ಗೊಂಚಲ್ (ನಾ). ಕೂದಲಿನ ಗುಚ್ಛ ; ಕೇಶರಾಶಿ : ಆ ಗಡ್ಡವು ಅವನದೇ ಆಗಿದ್ದರೊ ? . . . ಆ ನವಿರ್ಗೊಂಚಲ ನರಕವು ನಿಜದಿಂದ ಗಲ್ಲಗ್ರಹಚಾರವಾಗಿರಬಾರದೆ ? (ಮಂತ್ರಶ. ೯೪-೩).

[ನವಿರ್ + ಗೊಂಚಲ್]

ನವಿರ್ತಱ್ (ಕ್ರಿ). ಅತಿಯಾಗಿ ರೋಮಾಂಚನವುಂಟಾಗು; ಅಧಿಕವಾಗಿ ಪುಳಕಗೊಳ್ಳು: ಬಗೆಯೊಳ್ಬಲ್ಪು ಕವಿಲ್ದೊಡಂ ನಡುಕದಿಂದಂಗಂ ನವಿರ್ತಳ್ತೊ[ಟ್ತೊ]ಡಂ (ಚಿಕವಿ. ೬-೨೫೧). [ನವಿರ್ + ತಱ್$_1$]

ನವಿರ್ಮುಡಿ (ನಾ). ಕೂದಲಿನ ಮುಡಿ ; ತುರಂಬು : ಗಿರಿಜಾತೆ ನವಿರ್ಮುಡಿಗೆ ತುರುಗಿರ್ದ ನರುಗಂಪಿನರಳ ಗಂಧಕ್ಕೆರಗಿ ಝೇಂಕರಿಪ ತರುಣ ಷಟ್ಚರಣಗಳ ಯಮಳಗಾನಂಗೇಳ್ದು (ನವಮೋ. ೧೮-೨).

[ನವಿರ್ + ಮುಡಿ$_3$]

ನವಿರ್ಮೂಡು (ಕ್ರಿ). = ನವಿರೇಱು : ಕೈವಿಡಿದ ನಲ್ಲಳ್ಗೆ ಸಂತಸವೆಕ್ಕಸಂಗಳ ನವಿರ್‌ಮೂಡುವಂತುಂ . . . ಎತ್ತಿವಂದ ಪಗೆಯಂ ಬಾರಿಸುವೆಂ (ರಾಮಾಶ್ವ. ೮೬-೨). [ನವಿರ್ + ಮೂಡು$_1$]

ನವಿಲ್, ನವಿಲು, ನವಿಲೆ$_1$ (ನಾ). ೧. ಉದ್ದವಾದ ತೋಕೆಯಲ್ಲಿ ಕಣ್ಣಿನಾಕಾರದ ಸಾಲು ಚಿತ್ರವಿರುವ, ತಲೆಯ ಮೇಲೆ ಕೊಟ್ಟುಳ್ಳ ನೀಲಿ ಬಣ್ಣದ ಒಂದು ಬಗೆಯ ಪಕ್ಷಿ ; ಮಯೂರ; P ಭಾರತದ ರಾಷ್ಟ್ರಪಕ್ಷಿ: "ಕೇಕೀ, ಶಿಖೀ, ಶಿಖಂಡೀ ... ಶಿಖಾವಳಃ, ಶ್ಯಾಮಕಂಠ(ಃ)– ಈ ೧೦ ನವಿಲ್" (ಹಲಾಯು. ೪೦-೮೮); ಧವಳಾಪಾಂಗಂ ಕೇಕಾರವಮುಖರಂ ಹರಿತಶಾಬಲಾಂಕಕಳಾಪಂ ನವಿಲಾದಂ[ಪಾಠಾಂ.ಟಂ] ಸೊಗಯಿಸುಗುಂ ಸುವಿ ನೀಲಾಯತಗಳಂ ಪಯೋದಾಗಮದೊಳೆ (ಕವಿರಾ. ೩-೭): ದೇವತೆ ನವಿಲ ರೂಪಿನಿಂದೆತ್ತಿಕೊಂಡು ಬೆನ್ನೊಳಿಟ್ಟು ... ಪೋದೊಡೆ (ವಡ್ಡಾರಾ. ೦೦೮-೩); ಕಾಮಕಾಂತೆ ಬಟಿಯಂ . . . ಬಣ್ಣವುರಂ ತೀವಿದ ಮಾಟ್ಕಿಯಾಯ್ತು ನವಿಲಿಂ ಕುಂದಂಗಳಿಂದಿಂದ್ರಗೋಪವಿಳಾಸಂಗಳಿನಾಲಿಕಲ್ಲ ಪರಲಿಂ ಕಾರೊಳ್ ಮಹೀಮಂಡಲಂ (ಪಂಪಭಾ. ೭-೨೪) ; ನೃತ್ಯವಿಭ್ರಮಹೀನಂ ನವಿಲಾತ ಪತ್ರಸದೃಶ್ಯಂ ಮಾಡಿತ್ತು ಪಿಂಛಾಳಿಯಂ (ಶಾಂತಿಪು. ೮-೯) ; ಅದಂ ಕೇಳ್ದು ಕಾರ ಮೊಟಗಂ ಕೇಳ್ದ ನವಿಲಂತೆ ನಲಿದು(ಅರ್ಧನೇ. ೧-೭೯ ವ). ೨. ನವಿಲಿನ ಚಿತ್ರವಿರುವ ನಾಣ್ಯ : ಆಯದೊಳಗೆ ಲೊಕ್ಕಿಯು ನವಿಲುಪೂಗಿ ಪೊನ್ನವಣ (ಸೌಇಇ. IX-1, ೧೬೪-೨೮; 1098). ನವಿಲು: ೧. "ಮಯೂರಃ, ಬರ್ಹಿಣಃ, ಬರ್ಹಿನ್, ನೀಲಕಂಠಃ, ಭುಜಂಗಭುಕ್, ಶಿಖಾವಲಃ, ಶಿಖಿನ್, ಕೇಕಿನ್, ಮೇಘನಾದಲಾಸಿನ್ – ಈ ೯ ನವಿಲು" (ನಾಚಿರಾ. ೧೧೫) ; ಗಿರಿಯಲ್ಲಲ್ಲದೆ ಹುಲ್ಲುಮೊರಡಿಯಲ್ಲಾಡುವುದೆ ನವಿಲು (ಮಹಾದೇ. ಕ. ೧೨೦-೨೮೫) ; ಘನಮೇಘಮಂ ಕಂಡ ನವಿಲಂತೆ (ಸಿದ್ಧರಾ. ೨-೨೭) ; ನವಿಲಿಂಗೆ ಚಿತ್ರಪತ್ರವನಾರು ಬರೆದವರು (ಪುರಂದ. ೨-೪೭-೨) ; ಪಾಡುವ ವೆಣ್ಡುಂಬಿ ನರ್ತಿಪ ನವಿಲು (ಮೋಹತ. ೫-೩೪) ; ನವಿಲನ್ನು ನೋಡಿ ಕೆಂಬೂತ ಪುಕ್ಕ ತೆರೆದುಕೊಂಡಿತು (ಗಾದೆ). ನವಿಲೆ$_1$: ೧. ಮಾಘಮಾಸದ ನವಿಲೆಯಂತೆ[ಪಾಠಾಂ. ನವಿಲಿನಂತೆ] ಅದೆ ನೋಡವ್ವಾ (ವಚಶಾ. II, ೩೬೨).

ನವಿಲ ಕೊಟ್ಟು = ನವಿಲಿನ ಜುಟ್ಟು : "ಶಿಖಾ, ಚೂಡಾ – ಈ ೨ ನವಿಲ ಕೊಟ್ಟು" (ಹಲಾಯು. ೪೦-೮೯) ; ನವಿಲ ಕೊಟ್ಟು ಕರಿಂಜ(ದ) ಪುಷ್ಪ ಫಳಂ ಘೃತಂ ಮಧು ಬೇವು ಸಾಸಿವೆಗಳೆಂಬಿವನಕ್ಕೆ . . . ತ್ರಿಶೂಲಿಯನಕ್ಕೆ ಸಂಭವಿಪುದಂ ಕುಡಿ ಪಿಂಗುಗುಂ ಕೊಟಿವಾವು ತಿಂದ ಮಹಾವಿಷಂ (ಲೋಕೋಪ. ೧೦-೨೨); ನವಿಲ ಕೊ [ಪಾಠಾಂ. ಕ]ಟ್ಟು ಕರಂಜ ಪುಷ್ಪ ಫಲಂ ಘೃತಂ ಮಧು ಬೇವು ಸಾಸಿವೆಗಳೆಂಬಿವನಕ್ಕೆ . . . ಕವಳಮಂ ಕುಡೆ ಪಿಂಗುಗುಂ ಕೊಟಿವಾವು ಕೊಂಡ ಮಹಾವಿಷಂ (ಐಮರ. ೦೦-೬೯). ನವಿಲ ಗಱಿ, ನವಿಲ ಗರಿ = ನವಿಲುಗರಿ : "ಮೇಚಕಃ – ಹೆಗ್ಗಳ್ಳಂಗಡಲೆ, ನವಿಲ ಗಱಿ" (ಓಷಧಿ. ೧೨೯) ; "ಪಿಂಛಂ–ನವಿಲ ಗರಿ" (ಕಾಶಕ್ಯ. ೨೫೮). ನವಿಲ ನುಡಿ = ನವಿಲಿನ ಕೂಗು : "ಕೇಕಾರವಂ ನವಿಲ ನುಡಿ" (ಮಂಗರಾ. ೫೦-೩). ನವಿಲ ಸೋಗೆ=ನವಿಲುಗರಿ: "ಶಿಖಂಡಃ, ಪಿಂಛಂ, ಬರ್ಹಂ -ಈ ಮೂಱು ನವಿಲ ಸೋಗೆ" (ನಾಚಿರಾ. ೧೦೫); "ಕಲಾಪಃ-ನವಿಲ ಸೋಗೆ" (ಓಷಧಿ. ೨೦). ನವಿಲುತುಪ್ಪ = ನವಿಲಿನ ಕೊಬ್ಬು : ವಾಯು ನೋವಿಗೆ ನವಿಲುತುಪ್ಪ ಒಳ್ಳೆಯದು (ರೂಢಿ). [ದೇಶಿ. ತಮಿ. ಞಮಲಿ ; ತುಳು. ನೆಯಿಲು ; ತೆಲು. ನಮಲಿ, ನೆಮಲಿ, ನೆಮಿಲಿ ; ಕೊಲಾ. ನಮ್ಲಿ, ನಮ್ಲಿ, ಲಮ್ನಿ; ನಾಯ್ಕಿ. ನಮ್ಲಿ, ಲಮ್ಲಿ]

ನವಿಲಗುಂದ 'ನವಿಲ್ಗುಂದ' ನೋ.

ನವಿಲಚ್ಚು (ನಾ). ನವಿಲಿನ ಮುದ್ರೆ,–ಗುರುತು : ಚಿಕ್ಕ ಮಾದೋಜನುಂ ಶ್ರೀಸ್ವಾಮಿದೇವರ ನವಿಲಚ್ಚಿನ ಪೊನ್ನಂ ಲೊಕ್ಕಿಯ ಪೊನ್ನಾಣಿಯು(ಂ) ಮಾಪೊನ್ನ ತೂಕಮುಮಾಗಿ ಪೊಯ್ದು ಸಲಿಸುವರು (ಸೌಇಇ. IX-1, ೧೬೪-೨೫ ; 1098). [ನವಿಲ್ + ಅಚ್ಚು$_3$]

ನವಿಲಡಿ, ನವಿಲಾಡಿ (ನಾ). ಒಂದು ಬಗೆಯ ಮರ: "ನವಿಲಡಿ ಮಯೂರ ಪದಿಯಕ್ಕು" (ಮಂಗರಾ. ೩೫-೧೫) : ನವಿಲಡಿ ಹೊನ್ನೆ (ರೇವಣ. ೩೭-೦೩). ನವಿಲಾಡಿ : ಮರಗಳು: ಹೆಸವ, ಹೆಬ್ಬಲಸು . . . ಅಳಲೆ, ಹುಲುವೆ, ಹುನ್ನಲು, ಮತ್ತಿ, ನವಿಲಾಡಿ, ಜಂಬೆ (ನಮ್ಮನು. ೨೩೬).

ನವಿಲಡಿಯ ಮರ = ನವಿಲಡಿ : "ಮಯೂರಜಂಘಃ – ನವಿಲಡಿಯ ಮರ ಹೆಮ್ಮರ." (ಓಷಧಿ. ೧೨೨). [ನವಿಲ್ + ಅಡಿ$_1$]

ನವಿಲಾಟ (ನಾ). ನವಿಲಿನ ಕುಣಿತ ; ಕೇಕಿನರ್ತನ : ನವಿಲಾಟಂ ಸೊಗಯಿಸುವುದು ವಿವೇಕಿಯಪ್ಪಂಗೆ ನಾಯ್ಗೆ ಸೊಗಯಿಸುವುದೆ (ಧರ್ಮಾಮ್ಯ. ೧-೪೭) ; ನವಿಲಾಟಂ ಹಂಸೆಯ ನಡೆ ತವೆ ಮಂದಾನಿಳನ ಸುಗತಿ . . . ತವತವಗಡಂಗುತಿರ್ದುವು ನವೀನಬಾಲಕಿಯ ಮಧುರಮೃದುಪದಗತಿಯೊಳ್ (ಗಿರಿಕ. ೩-೧೦೮). [ನವಿಲ್ + ಆಟ]

ನವಿಲಾಡಿ 'ನವಿಲಡಿ' ನೋ.

ನವಿಲು 'ನವಿಲ್' ನೋ.

ನವಿಲುಕೋಸು (ನಾ). ಅಡಿಗೆಗೆ ಉಪಯೋಗಿಸುವ ಒಂದು ಬಗೆಯ ಗಡ್ಡೆ; ನವಿಲುಕೋಲು: ಇದು ಕೋಸುಗಡ್ಡೆಯ ಜಾತಿಗೆ ಸೇರಿದ ತರಕಾರಿ . . . ಅರ್ಧ, ಮುಕ್ಕಾಲು ಅಡಿಗೊಂದರಂತೆ ನವಿಲುಕೋಸನ್ನು ಬೆಳೆಯಲಾಗುವುದು (ತರಬೆ. ೪೮). 'ನವಿಲ್ಕೋಲ್' ಪರಾ.

[←ಲ್ಯಾಟಿನ್. ಫ್ರೆಂಚ್. ಜರ್ಮನ್. Knol khol]

ನವಿಲುಗರಿ (ನಾ). ೧. ನವಿಲಿನ ಪುಕ್ಕ,–ಗರಿ; ಬರ್ಹ. ೨. ಸೋಗೆ: ನವಿಲುಗರಿ ಬೀಸಣಿಗೆಯನ್ನು ಉಪಯೋಗಿಸುವುದರಿಂದ ವಾತಹರವಾಗಿ ಬಲವಾಗಿ ಮಂಡೆಯ ಕೂದಲಿಗೆ ಹಿತವಾಗಿ ಉಷ್ಣಕರವಾಗಿರುವುದು (ಸಕಪ್ಯ. ೫೭). [ನವಿಲು (<ನವಿಲ್) + ಗರಿ (<ಗಱಿ)]

ನವಿಲುಗುಂದ 'ನವಿಲ್ಗುಂದ' ನೋ.

ನವಿಲುಜುಟ್ಟು (ನಾ). ನವಿಲಿನ ತಲೆಯ ಮೇಲಿರುವ ಕೊಟ್ಟು,–ತುರಾಯಿ,—ಶಿಖೆ: (ಕಿ). [ನವಿಲು (<ನವಿಲ್) + ಜುಟ್ಟು]

ನವಿಲುದೊಂದಿಹುಲ್ಲು (ನಾ). ಒಂದು ಬಗೆಯ ಹುಲ್ಲು: ನವಿಲುದೊಂದಿ ಹುಲ್ಲು, ಸಣ್ಣಹಂಚೀಹುಲ್ಲು, ದೊಡ್ಡಕರೇಕಂದಕಹುಲ್ಲು (ಮೈಜಿಗಿ. ೭೨-೦೪೬೯). [ನವಿಲುದೊಂದಿ$_0$ + ಹುಲ್ಲು (< ಪುಲ್)]

ನವಿಲುಪುಕ್ಕ (ನಾ). = ನವಿಲುಗರಿ ೧: (ಕಿ).

[ನವಿಲು (<ನವಿಲ್) + ಪುಕ್ಕ$_2$ (<ಪುಚ್ಛ$_2$)]

ನವಿಲುಬಣ್ಣದ ಹುಲ್ಲು (ನಾ). ಒಂದು ಬಗೆಯ ಹುಲ್ಲು: (ಮೈಜಿಗಿ. ೫೩-೧೦೭೬). [ನವಿಲು (<ನವಿಲ್) + ಬಣ್ಣ + ಹುಲ್ಲು (<ಪುಲ್)]

ನವಿಲುಬಾಲದ ಗಿಡ (ನಾ). ಒಂದು ಬಗೆಯ ಗಿಡ: ನವಿಲುಬಾಲದ ಗಿಡ, ಫೆರ್ನು (ಮೈಜಿಗಿ. ೩-೪೪).

[ನವಿಲು (<ನವಿಲ್) + ಬಾಲ$_1$ + ಗಿಡ (<ಗಿಡು)]

ನವಿಲುಮೆಟ್ಟಿನ ಪಲ್ಯ (ನಾ). ಅಡಿಗೆ ಮಾಡಲು ಬಳಸುವ ಒಂದು ಬಗೆಯ ಸೊಪ್ಪು: (ಕಿ). [ನವಿಲು (<ನವಿಲ್) + ಮೆಟ್ಟು ? + ಪಲ್ಯ$_1$]

ನವಿಲುಯಾಲೆ 'ನವಿಲುಯ್ಯಲ್' ನೋ.

ನವಿಲುಯ್ಯಲ್, ನವಿಲುಯಾಲೆ, ನವಿಲುಯ್ಯಲು, ನವಿಲುಯ್ಯಲೆ, ನವಿಲುಯ್ಯಾಲೆ (ನಾ). ನವಿಲಿನಾಕಾರದ ತೂಗುಮಣೆ,–ಉಯ್ಯಾಲೆ, – ಜೋಕಾಲಿ: ಮದನ ಮಂಗಳಾಗಾರದ್ವಾರಮಕರ ತೋರಣದಂತಿರ್ದ ನವಿಲುಯ್ಯಲ ಕೆಲಕ್ಕೆ ವಂದು (ಚಂದ್ರಪು. ೮-೪೫ ವ); ಅನೇಕ ನವೀನರತ್ನಮಯದರ್ಪಣಕನಕಕಳಶವಿಚಿತ್ರಪತ್ರಪರಿಶೋಭಿತಮಾಗಿ ನವೀನಕ್ರೀಡೆ ತವಿಲ್ಲದ ನವಿಲುಯ್ಯಲ ಮುಂದೊರ್ವ ವಿದಗ್ಧವನಿತೆ . . . ಮಂದಯ್ಸಿದ ಸತಿಯರ ಸಂದಣಿಯೊಳಾಂದೋಳಮನೇಱಿದಾಗಳ್ (ಗಿರಿಕ. ೪-೦೫೭ ವ). **ನವಿಲುಯಾಲೆ**: ಸೇನಬೋವ[ರ ಮಗ] ತಿಂಮಂಣ ಗ್ರಾಮದ ಸಮಸ್ತರು ದೇವರಿಗೆ ನವಿಲುಯಾಲೆಯ ಕಂಭವ ನಿಲಿಸಿದರು (ಕಇ. IV, ೭-೭; 16ನೆಯ ಶತ). **ನವಿಲುಯ್ಯಲು**: ಪೇಡಾಕುಳಿಯ ಕೆಲದೆ ಮಾಡುವೆಟ್ಟುಗಳಾಡುವ ನವಿಲುಯ್ಯಲುಗಳು . . . ಗಾನವ ಮಾಡುವ ಮಂದಿರವಿಹವು (ಅಂಜಚ. ೩-೩೭); ಮಾಡಿಸಿದ ದ್ಧರ್ಮ್ಮ ದೇವಲ್ಯದ ಮುಂದಣ ಅದಿಷ್ಟಣ ಮುಱುನೆಲೆಯ ಉಪ್ಪರಿಗೆ ಕಲ್ಲ ನವಿಲುಯ್ಯಲು ಮೇಲಣ ಸಿಖರವು (ಮೈಆರಿ. ೦೯೩೯, ೪-೬; 1355); ಆ ನಲ್ಲರಾಟವಿದ್ದುದು ನವಿಲುಯ್ಯಲ ತಾನೇಱಿ ತೂಗಾಡಿದಂತೆ (ಭರಚ. ೧೦-೦೩೭); ಬಾನೆಡೆಯೊಳಗಿಹ ಚಂದ್ರನೆನ್ನಯ ಮೊಗಕಾನಲಾಪನೆಯೆಂದು ಜಱೆದು ತಾನೊದೆವವೊಲು ನವಿಲುಯ್ಯಲನಾಡುವ ಮಾನಿನಿಯೊರ್ವ ಳೊಪ್ಪಿದಳು (ಕಂನವಿ. ೨-೯೩). **ನವಿಲುಯ್ಯಲೆ**: ಕಾಲಾಂತಕನ ದಂಷ್ಟ್ರಾಳಿಯಲಿ ನವಿಲುಯ್ಯಲೆಯ ನೀವಾಡಲಾಪಿರಲೆ (ಕುವ್ಯಾಸ. ೧೪-೩೮). **ನವಿಲುಯ್ಯಾಲೆ**: ಘನತರವಹ ನವಿಲುಯ್ಯಾಲೆಗಳಿಂದಲನಿಮಿಷಪುರವ ಪೋಲ್ತಿಹುದು (ಕಂನವಿ. ೨-೭೦); ಬಿತ್ತರವಹ ಮಿಸುನಿಯ ನವಿಲುಯ್ಯಾಲೆ ಯಿತ್ತುವು ಕಣ್ಗೆ ಕೌತುಕವ (ಕಂನವಿ. ೭-೮). [ನವಿಲ್ + ಉಯ್ಯಲ್]

ನವಿಲುಯ್ಯಲು 'ನವಿಲ್ಯುಯ್ಯಲ್' ನೋ.

ನವಿಲುಯ್ಯಲೆ 'ನವಿಲುಯ್ಯಲ್' ನೋ.

ನವಿಲುಯ್ಯಾಲೆ 'ನವಿಲುಯ್ಯಲ್' ನೋ.

ನವಿಲೂರ್, ನವಿಲೂರು (ನಾ) ಒಂದು ಊರಿನ ಹೆಸರು: ℙ ಈಗಿನ ಧಾರವಾಡಜಿಲ್ಲೆಯ ನವಲೂರು: ನವಿಲೂರ ನಾಟ್ಗಾಮುಣ್ಡರು ಬೆಳ್ಗೊಳದ ಗೋವಿಂದಪಾಡಿಯಉ (ಎಕ. II, ೩೫-೮; ಸು. 800); ನವಿಲೂರ ಸೀಮೆಯಿಂ ಬಡಗಲು (ಎಇ. XIII, ೩೦೯-೧೧೪; 1125). **ನವಿಲೂರು**: ಮೂಗುರು ಸೀಮೆಯ ತಾಯೂರ ಸ್ಥಳದ ತಾಯೂರ ಗ್ರಾ [ಮ] ೧ ಯಿಶ್ವರಗೊಂಡನ ಹಳ್ಳಿ ೧ . . . ನವಿಲೂರು ೧ ಬೆಳುಗುಂದ ೧ . . . ಯೆಲವನೂ ನಿನ್ನ ಮಗ ತಿರುಮಲರಾಜನಾಯಕಗೆ ಪಲಕಿಯ ಉಂಬಳಿಗೆ ಗೊಡಗೆಯಾಗಿ ಕೊಟೆವಾಗಿ (ಎಕ. III (R), ನಂಜನ. ೨೦೮-೧೩; 1586); ಯಲ್ಲೆಗೆ ತಾಗಿ ನವಿಲೂರೆಲ್ಲೆ ಯೆಡಕಿಕ್ಕಿ . . . ಈಶಾನ್ಯದಲ್ಲಿ ನೆಟ್ಟ ಕಲ್ಲ ಕೂಡಿತು (ಎಕ. III (R), ನಂಜನ. ೨೧೨-೧೪೨; 1639).

ನವಿಲೂರ ಗಣ = ಜೈನಯತಿಗಳ ಒಂದು ಶಾಖೆ: ನವಿಲೂರ ಗಣದ ಬಾಳಂಬಾ ಕನ್ತಿಯರ ಮಗಳ್ ವಿಜಕ್ಕಂ (ಎಕ. VI, ಕಡೂರು. ೦೫೯-೦೨; 961). [ನವಿಲ್$_0$ + ಊರ್]

ನವಿಲೂರು 'ನವಿಲೂರ್' ನೋ.

ನವಿಲೂರ್ಸಂಘ (ನಾ). ಜೈನಯತಿಗಳ ಒಂದು ಶಾಖೆ: ಸ್ವಸ್ತಿ ಶ್ರೀಮತ ನವಿಲೂರ್ಸಂಘದ ಪುಷ್ಪಸೇನಾಚಾರಿ × × × ಯ ನಿಸಿಧಿಗೆ (ಎಕ. II (R), ೧೦೮-೦; ?). [ನವಿಲೂರ್ + ಸಂಘ]

ನವಿಲೆ$_1$ 'ನವಿಲ್' ನೋ.

ನವಿಲೆ$_2$ (ನಾ). ೧. ಒಂದು ಊರಿನ ಹೆಸರು: ಆ ಕಂಪಣದ ಬಳಿಯ ನವಿಲೆಯಲೆ ಬೆಳ್ಳಲೆ ಮತ್ತರ್ ೨ . . . ಇನಿತುಮಂ ಪ್ರತಿಪಾಳಿಸುವರ್ (ಎಕ. VII, ಶಿಕಾರಿ. ೨೦-೨೨; 1032). ೨. ರಾಯಚೂರುಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಈಗಿನ 'ನವಲಿ' ಎಂಬ ಊರು: ನವಿಲೆಯ (ಜಟೆ)ಯ ಸಂಕರದೇವಾಲಯಮುಮಂ . . . ಪೊಸತಾಗೆ ಪಡಿ (ಸಲಿಸಿ) (ಸಾಇಇ. XI-1, ೦೦೩-೨೬; 1068 ?). [?]

ನವಿಲೆನಾಡು, ನವಲೆನಾಡು (ನಾ). ೧. ಒಂದು ಊರಿನ ಹೆಸರು: ನುಗುನಾಡಧಿಪತಿ ರವಿಗನ ಮಗಳಾಗಿಯುಮನ್ತೆ ನವಿಲೆನಾಡಧಿಪತಿಗಾಂ ನೆಗಳೆ ಸತಿಯಾಗಿ ಬಾಟ್ಟುದು ಬಗೆದರ್ಪ್ಪೆನೆ ಕೊಟ್ಟ ಕೊಣ್ಡ ಮನೆಯೆಸ ಮಱಿಯಲ್ ಎನ್ದು . . . ಕಯ್ಮುಗಿದುರಿವುರಿಯಂ ಪೊಕ್ಕು ದೇಕಬ್ಬೆ ತನ್ನಂ ಧರೆಯಲ್ಲಂ ಮೆಚ್ಚಿ ನಿಚ್ಚಂ ಪೊಗಳೆ ನೆಗಟುತುಂ ದೇವಲೋಕಕ್ಕೆ ಪೋದಳ್ (ಎಕ. III (R), ಹೆಗ್ಗಡ. ೬೦-೨೨; 1057). **ನವಲೆನಾಡು**: ೨. ಹೆಗ್ಗಡ ದೇವನ ಕೋಟೆಯ ಬಳಿ ಇರುವ ಒಂದು ಪ್ರಾಂತದ ಹೆಸರು: ಶ್ರೀಮದೆಱೆಪ್ಪೆರಸರ್ ನುಗುನಾಡು ನವಲೆನಾಡುಮಾನಾಳುತ್ತಮಿರೆ (ಎಕ. IV, ಹೆಗ್ಗಡ. ೧೦೩-೬; ಸು. 910); ವೀರಂ ನವಲೆನಾಡಧಿಪತಿ ಕುಱುವನ್ದಗಲದ ಪೆರ್ವ್ವಯಲಾತಂ (ಎಇ. VI, ೨೦೬-೧೮; 1057).

[ನವಿಲೆ$_2$ + ನಾಡು]

ನವಿಲ್ಕೋಲ್ (ನಾ). = ನವಿಲುಕೋಸು: (ಮೈಜಿಗಿ. ೧೪-೨೫೨).

[←ಲ್ಯಾಟಿನ್. ಫ್ರೆಂಚ್. ಜರ್ಮನ್. knol khol]

ನವಿಲ್ಗುಂಚ (ನಾ). ನವಿಲುಗರಿಯ ಕುಂಚ್ಚು. –ಕುಂಚ: ನವಿಲ್ಗುಂಚ ಚೌರಿಯ ಉಭಯಪಕ್ಷದೊಳು ನಿಂದು ಸೋವುತ್ತಿರಲು (ನವಮೋ. ೨೫-೩೦).

[ನವಿಲ್ + ಕುಂಚ]

ನವಿಲ್ಗುಂದ, ನವಿಲಗುಂದ, ನವಿಲುಗುಂದ (ನಾ). ಒಂದು ಊರಿನ ಹೆಸರು; P ಈಗಿನ ಧಾರವಾಡಜಿಲ್ಲೆಯ ನವಿಲ್ಗುಂದ : ಕೆಂಚನೆಂಬೋ ನಿಳಾ ಮಹಿತಂ ವೀರನರ್ಕ್ಕಸುತನಿನುದಾರ[ಂ] ಪಿಡಿದಡಸಿ ನವಿಲಕೊನ್ದಡಿಗಿ[ಡೆ] ತಳ್ತಿಕ್ಕಿ ಬೇಡವಡೆಯಂ ಬಲ್ಲಾಳ್ಪಡೆದಂ ಬೆಳ್ವಲಮಂ ನೋಳ್ವ[ಡೆ]ಮುನ್ನಂ ಬಳಿಕ್ಕೆ ನೆಲೆ ನವಿಲ್ಗುನ್ದಪುರಂ (ಸೌಇಇ. XI-1 ೪೫-೪ ; 980). **ನವಿಲಗುಂದ:** ಪುತ್ರೋ ನವಿಲಗುಂದ ಶ್ರೀತಿಮ್ಮಯೇಂದ್ರಸ್ಯ ನಂದನಃ (ಎಕ. XII, ತುಮಕೂ. ೧-೨೦೭ ; 1571). **ನವಿಲುಗುಂದ:** ದೊಡ್ಡವಾಡ ನವಿಲುಗುಂದ ನಾಲ್ವತ್ತು (ಇಆ. XII, ೯೭-೨೫ ; 1187). [< ನವಿಲ್$_2$ + ಕುಂದ್$_3$]

ನವಿಲ್ಗುಂದಗೋಲು (ನಾ). ನವಿಲುಗುಂದದ ಕಡೆಯ ಅಳತೆಯ ಕೋಲು : ನವಿಲ್ಗುಂದಗೋಲಿನಲಳೆದು ಸರ್ವ್ವನಮಸ್ಯವಾಗಿ ಕೊಟ್ಟ ಕೆಯಿ ಮತ್ತನ್ನಾರ್ಲ್ಕು (ಸೌಇಇ. XX, ೨೪೮-೭೭ ; 1228).

[ನವಿಲ್ಗುಂದ + ಕೋಲು$_1$ (<ಕೋಲ್$_1$)]

ನವಿಲ್ದೇರ (ನಾ). ನವಿಲನ್ನು ವಾಹನವಾಗಿ ಉಳ್ಳವನು ; ಷಣ್ಮುಖ : "ನವಿಲ್ದೇರಂ, ಮುಯ್ಯೊರ್ಮೊಗಂ, (ಅಱುಮೊಗಂ), ಮರಗೂಟಮಗಂ– ಈ ೪ ಕಾರ್ತಿಕೇಯಂಗೆ ಪೆಸರ್" (ಕಶಸಾ. ೪೭-೫) ; "ಕುವರಂ ಮರಗೂಟ ಮಗಂ ನವಿಲ್ದೇರಂ ಬಗೆಯಲಱುಮೊಗಂ ತಾನೆನ್ನಲ್ ... ಅಭಿಧಾನಂಗಳ್ ಕವಿವರರಿಂ ಷಣ್ಮುಖಂಗಮರ್ವ್ವು" (ಕವಿಕಂ. ೨೦). [ನವಿಲ್ದೇರು + – ಅ$_7$]

ನವಿಲ್ದೇರು (ನಾ). ನವಿಲಿನ ವಾಹನ. 'ನವಿಲ್ದೇರ' ಪರಾ.

[ನವಿಲ್ + ತೇರು$_2$ (<ತೇರ್$_2$)]

ನವಿಲ್ಮುಡಿ (ನಾ). ತುರುಬುಗಳಲ್ಲಿ ಒಂದು ವಿನ್ಯಾಸ ; ನವಿಲುಗರಿಯ ಆಕಾರದಂತೆ ಕೂದಲನ್ನು ಇಳಿಬಿಟ್ಟು ಕಟ್ಟಿದ ಮುಡಿ : ಜಟಾಗ್ರದೊಳು ವಿಧು ನವ್ಯಮೂರ್ತಿ ಮಂದಾಕಿನಿಯ ಷಟ್ಪದ ನವಿಲ್ಮುಡಿಯ ತೋಱಿಸಿದ (ಮೋಹತ. ೨೦-೬೧) ; ಬಳಲುಮುಡಿ ಬಲ್ಮುಡಿಯು ಸೋಲ್ಮುಡಿಯು ಜೋಲ್ಮುಡಿಯು ನಲಿವ ನವಿಲ್ಮುಡಿ ವಾರೆಮುಡಿ ಒಲು ಪಿನಮಳಮುಡಿಗಳಲಿ ಬರುತಿರ್ದರು (ನವಮೋ. ೨೪-೧೮).

[ನವಿಲ್ + ಮುಡಿ$_3$]

ನವಿಲ್ವಾಣತಿ (ನಾ). ಹೊಸ ಮರಿಗಳನ್ನುಳ್ಳ ನವಿಲು; ಬಾಣಂತಿಯಾದ ನವಿಲು: ನವಿಲ್ವಾಣತಿಯ ಬೆನ್ನನೇಱಿ ಮಂಡೆಯ ಚಂಡಿಕೆಯಂ ಕರ್ಚಿ ಸೆಳೆವ ಸೋಗೆಯ ಮಱಿಯ ಮುದ್ದುತನಮಂ (ಅರ್ಧನೇ. ೦-೯೨ ವ).

[ನವಿಲ್ + ಬಾಣತಿ]

ನವೀಕರಣ (ನಾ). (ಹಳೆಯದನ್ನು) ಹೊಸತು ಮಾಡುವುದು ; ಹೊಸ ಸತ್ತ್ವವನ್ನು ತುಂಬುವುದು: ಅತಿವೈದ್ಯದಿಂದ ಹೊಸರುಜಿನಕೆಡೆಯಾದೀತೊ ಮಿತಿಯಿಂ ನವೀಕರಣ (ಮಂಕುಕ. ೮೭೭); ಈ ಉತ್ಸವವು ಕನ್ನಡ ಭಾಷೆಯ ನವೀಕರಣ ಪ್ರಯತ್ನದ ಒಂದು ರೂಪ (ಸಾಹಿಶ. ೫೮). [ಸಂ.]

ನವೀಕರಿಸು (ಕ್ರಿ). ೧. "ಮೊದಲಿನ ಸ್ಥಿತಿಗೆ ತರು; ಹೊಸದು ಹೇಗೊ ಹಾಗೆ ಕಾಣುವಂತೆ ಮಾಡು ; ನವೀಕರಿಸು ; ಜೀರ್ಣೋದ್ಧಾರ ಮಾಡು . . . ಪುನರುಜ್ಜೀವನಗೊಳಿಸು" (Renew. ಇಂಕನಿ). ೨. ಹೊಸದಾಗಿ ಮಾಡಿಸು; ಹೊಸತುಗೊಳಿಸು : ಸಾಹಿತ್ಯಪರಿಷತ್ತಿನಲ್ಲಿ ನನ್ನ ಸದಸ್ಯತ್ವವನ್ನು ನವೀಕರಿಸಬೇಕು (ರೂಢಿ).

[ನವೀಕರಣ + – ಇಸು$_3$]

ನವೀಕೃತ (ಗು). ಜೀರ್ಣೋದ್ಧಾರ ಮಾಡಿದ: ನವೀಕೃತಮಪ್ಪ ಬಂದಣಿಕೆಯ ತೀರ್ತ್ಥ (ಎಕ. VII, ಶಿಕಾರಿ. ೨೨೦-೨೮ ; 1075). [ಸಂ.]

ನವೀನ (ಗು). ೧. ಹೊಸತಾದ ; ನೂತನವಾದ : "ನವ್ಯಂ, ನವಂ, ನವೀನಂ, ನೂತನಂ, ಅಭಿನವಂ, ನೂತ್ನಂ–ಈ ೬ ಪೊ(ಹೊ)ಸತು" (ಹಲಾಯು. ೧೧೮-೨೬); ಅಬ್ಜಮಂ ಬಿಸುಟತ್ಯುತ್ತಮಮಿಂತುಟೆಂದು ಪಿರಿದುಂ ಸಂತೋಷದಿಂ ವಾಣಿ ಬಂದು ಸಮಂತಿರ್ಕೆ ನವೀನಸೌರಭದವೋಲ್ ಜಿಹ್ವಾಗ್ರದೊಳ್ ರುದ್ರನಾ (ಜಗವಿ. ೧-೬) ; ಕಂಡಂ ಕೃಷ್ಣಾಜಿನ ದರ್ಭ ನವೀನ ವಿಷ್ಟರಾಸೀನರಂ (ವಿಷ್ಣುಪು. ೩-೩೯) ; ಹಂತಿಯ ಹಾಡುಗಳಲ್ಲಿ ಬರುವ ವರ್ಣನೆಗಳು ನವೀನವಾಗಿಯೂ ಅತ್ಯಂತ ಹೃದಯಂಗಮವಾಗಿಯೂ ಇವೆ (ಕನ್ನಬಾ. ೨೦೧). ೨. ಇತ್ತೀಚಿನ ; ಆಧುನಿಕ : ನಾಡಿನ ಪುಣ್ಯದ ಪೂರ್ವ ದಿಗಂತದಿ ನವ ಅರುಣೋದಯ ಹೊಮ್ಮುತಿದೆ ! ಚಿರನೂತನ ಚೇತನ ದುತ್ಸಾಹದಿ ನವೀನ ಜೀವನ ಚಿಮ್ಮುತಿದೆ ! (ಕನ್ನಬಾ. ೦೬೧): ನವೀನ ನಾಗರಿಕತೆಯೊಂದರ ಇರವು ಪ್ರಕಾಶಕ್ಕೆ ಬಂದಿತು (ದ್ರಾವಿವಿ. ೨೨). [ಸಂ.]

ನವೀನಚೀನ (ನಾ). ಹೊಸಬಗೆಯ ರೇಷ್ಮೆಯ ವಸ್ತ್ರ : ಪಡೆದನುಡಲ್ ನೃಪಂ ಸತಿಯ ಮೆಯ್ವೆಳಗೆಂಬ ನವೀನಚೀನಮಂ (ಚಂದ್ರಪು. ೭-೭೭).

[ನವೀನ + ಚೀನ$_1$]

ನವೀನತರ್ಕ (ನಾ). ತಾರ್ಕಿಕ ದರ್ಶನದಲ್ಲಿ ಹೊಸಪಂಥ : ಈ ತರ್ಕಶಾಸ್ತ್ರದಲ್ಲಿ ಪ್ರಾಚೀನತರ್ಕ ನವೀನತರ್ಕ ಎಂಬ ಎರಡು ವಿಭಾಗವಿರುವುದು (ಹಿಂದಸಾ. ೦೦೩). [ನವೀನ + ತರ್ಕ]

ನವೀನತೆ (ನಾ). ಹೊಸತನ ; ಆಧುನಿಕತೆ : ಜೀವನದ ವಿವಿಧ ಕ್ಷೇತ್ರಗಳಲ್ಲಿ ನವೀನತೆ ತಲೆದೋರಿದೆ (ಶಿಕ್ಷದ. ೬). [ಸಂ. ನವೀನತಾ]

ನವೀನಪ್ರಜ್ಞೆ (ನಾ). ಹೊಸಪ್ರಜ್ಞೆ ; ಆಧುನಿಕ ಪ್ರಜ್ಞೆ ; ಇತ್ತೀಚಿನ ಆಗುಹೋಗುಗಳ ಅರಿವು ; ಸಮಕಾಲೀನತೆಯ ಅರಿವು : ಇದು ನವೀನಪ್ರಜ್ಞೆಯಲ್ಲಿ ಬರೆದ ಶ್ರೇಷ್ಠಕತೆಗಳ ಪ್ರಾತಿನಿಧಿಕ ಸಂಗ್ರಹವೇನಲ್ಲ (ಹೊಸಕ್ಷಿ. ೨೯೭). [ನವೀನ + ಪ್ರಜ್ಞೆ]

ನವೀನವೇದಾಂತಿ (ನಾ). ವೇದಾಂತದರ್ಶನದಲ್ಲಿ ಹೊಸಪಂಥಕ್ಕೆ ಸೇರಿದವನು : ಈ ಮಾರ್ಗವನ್ನೇ ಪ್ರಾಯಶಃ . . . ಭರ್ತೃಪ್ರಪಂಚ, ಮೊದಲಾದ ಪ್ರಾಚೀನವೇದಾಂತಿಗಳೂ ಭಾಸ್ಕರ, ಯಾದವಪ್ರಕಾಶ ಮೊದಲಾದ ನವೀನವೇದಾಂತಿಗಳೂ ಆಶ್ರಯಿಸಿರುವರು (ಹಿಂದಸಾ. ೦೮೯).

[ನವೀನ + ವೇದಾಂತಿ]

ನವುಕರ 'ನೌಕರ' ನೋ.

ನವುಕರಿ 'ನೌಕರಿ' ನೋ.

ನವುಟು (ನಾ). (ಕರಾ). ೧. ಬತ್ತದ ಸಸಿಗೆ ತಗಲುವ ಒಂದು ಬಗೆಯ ಹುಳು. ೨. ಬಹಳ ಹುಳಿ. [?]

ನವುಬತ್ತು 'ನೌಬತ್ತು' ನೋ.

ನವುರು 'ನವಿರು$_3$' ನೋ.

ನವುರುಕಟ್ಟೆ (ನಾ). ಒಂದು ಬಗೆಯ ಗಿಡ : (ಮೃಜಿಗಿ. ೪೦-೭೮೪). [?]

ನವುಲಾದಿ (ನಾ). ಒಂದು ಬಗೆಯ ಗಿಡ : ನವುಲಾದಿ, ಮೈರೊಳೆ, ಭರಣಿಗೆ (ಮೃಜಿಗಿ. ೭೮-೧೫೯೬). [?]

ನವುಲೆ$_1$ (ನಾ). ಒಂದು ಬಗೆಯ ಗಿಡ ; ತಪಸೀಗಿಡ. 'ನವುಲೆಗಿಡ' ಪರಾ. [?]

ನವುಲೆ$_2$ (ನಾ). (?) : ಪಯೋನೀಲಗಂಗೆ ಅಂಬಟಗಂಗೆ ದೇವಕಿವಯನೈಸೆ ಸತಿ ನವುಲೆಗಳೂ (ದೇವಾಂಪು. ೯ ೩೦). [?]

ನವುಲೆಗಿಡ (ನಾ).=ನವುಲೆ$_1$: "ಪ್ರಕೀರ್ಯಃ, ಪೂತಿಕರಜಃ, ಪೂತಿಕಃ, ಕಲಿಕಾರಕಃ – ೪ ತಪಸೀಗಿಡದ ಹೆಸರು, ನವು [ಪಾಠಾಂ. ನೌ]ಲೇ ಗಿಡವೆಂದು ಕೆಲವರನ್ನುವರು" (ಸಿದ್ಧಾಂತಿ. ೦೦೮). [ನವುಲೆ$_1$ + ಗಿಡ (<ಗಿಡು)]

ನವೆ$_1$ 'ನಮೆ$_1$' ನೋ.

ನವೆ$_2$ 'ನಮೆ$_2$' ನೋ.

ನವೆತ (ನಾ). ಸೊರಗುವಿಕೆ ; ಕ್ಷಯಿಸುವಿಕೆ ; ಕ್ಷಯ : ಕ್ಷೀ – ಕ್ಷಯೇ, ನವೆತದೊಳ್ (ಕಾಶಕ್ಕ. ೦೪) ; ಸಣ್ಣಾಗುತ್ತ ನವೆಯುತ್ತ ನಡೆದಿದ್ದರು . . . ಇವರ ಅಭಯದಿಂದ ಅವರ ಚಿಂತೆ, ನವೆತ ಅಟ್ಟಿಸುವಂತಿರಲಿಲ್ಲ (ದೀಪಹ. II, ೪೬). [ನವೆ$_1$ (<ನಮೆ$_1$) + – ತ$_2$]

ನವೆಸು 'ನಮೆಯಿಸು' ನೋ.

ನವೋಢೆ (ನಾ). ನವವಧು : ಛಂದಾರೂಢಾ ನವೋಢಾ ಮುಗ್ಧಾ, ರಸಿಕಾ, ಅನೂನ ಧ್ವನಿತಪ್ರಾಣಾ (ಸೂರ್ಯಪಾ. ೬-೬); ನವಿಲುಗರಿಯ ಕರ್ಣಪೂರದಿಂದ ಶೋಭಿಸುವ ಮತ್ತು ನವೋಢೆಯಾದ ಬೇಡರ ಯುವತಿಯೊಬ್ಬಳ ಸೌಭಾಗ್ಯಾತಿಶಯವು ಧ್ವನಿತವಾಗುತ್ತದೆ (ಧ್ವನ್ಯಾಲೋ. ೧೨೪).

[ಸಂ. ನವೋಢಾ]

ನವೋತ್ಪಲ (ನಾ). ಹೊಸದಾಗಿ ಅರಳಿದ ಕನ್ನೈದಿಲೆ : ಪರಿಮಳಕೊಯ್ಯ ನಾವರಿಪ ತುಂಬಿ ಮುಗಿಲ್ಗಣಿಕಾವಿಲಾಸಮಂದಿರ ಚಲದಗ್ರಘಂಟೆಯುಲಿ ಮೇಘರವಂ ಪಣಭಾಮಿನೀವಿಲೋಲರುಚಿರಕರ್ಣಪತ್ರರುಚಿ ಮಿಂಚು ನವೋತ್ಪಲ ನಿರ್ಗಮತ್ಪ್ರಸೂನರಸ ರಸಕಣಾಳಿವೃಷ್ಟಿಯೆನೆ ಕಾರವೊಲೊಪ್ಪಿದು ದಲ್ಲಿ ತಣ್ಣೆಲರ್ (ಯಾದವಂ. ೩-೭೮). [ನವ್ಯ + ಉತ್ಪಲ]

ನವೋತ್ಪಲದಲ, ನವೋತ್ಪಳದಳ (ನಾ). ಹೊಸದಾಗಿ ಅರಳಿದ ಕನ್ನೈದಿಲೆಯ ಎಸಳು : ನವೋತ್ಪಲದಲೇ[ಪಾಠಾಂ. ಳದಳೇ]ಕ್ಷಣೇ ಮನದೊಳಾದ ನಿರ್ವೇಗಮೊಂದವಶ್ಯಮದು ಕೂರ್ಪರೊಳ್ ನುಡಿದೊಡ ಲ್ಲದೇಂ ಪೋಕಂಮೇ ನಿವೇದಿಸು ನಿಜಾಂತರಂಗಗತಮಪ್ಪುದಂ (ಆದಿಪು. ೩-೩೨).

ನವೋತ್ಪಳದಳ : ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ.

[ನವೋತ್ಪಲ + ದಲ]

ನವೋತ್ಪಳದಳ 'ನವೋತ್ಪಲದಲ' ನೋ.

ನವೋದಬಿಂದು (ನಾ). ನೀರಿನ ಹೊಸ ಹನಿ ; ಹೊಸ ಮಳೆಹನಿ : ಚಾದಗೆ ನವೋದಬಿಂದುಕಣ ಭಕ್ಷಣವ್ರತನುಜ್ಜಯಿಸಿಯುಂ (ಮಲ್ಲಿಪು. ೮-೧೦೨).

[ನವ್ಯ + ಉದಬಿಂದು]

ನವೋದಯ (ನಾ). ೧. ಉದಯದ ಹೊಸತು,-ಪ್ರಾರಂಭ : ಶಶಿಯೊಳ್ ಪ್ರಕಾಶ ಗುಣಮತಿವಿಶದಂ ಸೊಗಯಿಸುವವೊಲ್ ನವೋದಯದೊಳ ವಾಪ್ರಶಮಿತತಮನೊಳ್ ನೆಱೆದುದು ಶಿಶುತೆಯೊಳಂ ನಾಡೆ ರೂಢಿವೆತ್ತ ವಿವೇಕಂ (ಚಂದ್ರಪು. ೨-೦೯). ೨. ಭಾರತೀಯ ಬದುಕಿನಲ್ಲಾದ ಉತ್ಕ್ರಾಂತಿಯ ಪರಿಣಾಮವಾಗಿ ಸಾಹಿತ್ಯದಲ್ಲಿ ಉಂಟಾದ ಹೊಸತನದ ಆವಿರ್ಭಾವ,-ಹೊಸವಿಚಾರಗಳ ಕ್ರಾಂತಿ : ನಾನಾಮುಖವಾಗಿ ಹಿಂದೀ ಸಾಹಿತ್ಯದ 'ನವೋದಯ' ಕ್ಕೆ ಕಾರಣನಾದ ಸಾಹಿತಿ ಹರಿಶ್ಚಂದ್ರ (ಭಾರದ. ೪೬೩) ; ಶ್ರೀಯವರು . . . ಕನ್ನಡ ಕವನಗಳಿಗೆ ನವೋದಯದ ನಾಂದಿಯನ್ನು ಹಾಡಿದರು (ಭಾವಗೀ. ೨೩೬). [ನವ್ಯ + ಉದಯ]

ನವೋದಯಕಾವ್ಯ (ನಾ). ಕನ್ನಡ ಸಾಹಿತ್ಯದಲ್ಲಿ ಉಂಟಾದ ಕ್ರಾಂತಿಯ ಪರಿಣಾಮವಾಗಿ ಉಂಟಾದ ಕಾವ್ಯ : ರಮ್ಯಕಾವ್ಯ ; ಇಂಗ್ಲೀಷಿನ ರೊಮ್ಯಾಂಟಿಕ್ ಪದ್ಧತಿಯನ್ನು ಅನುಸರಿಸಿದ ಕಾವ್ಯ : ಕನ್ನಡದಲ್ಲಿ ಈ ಶತಮಾನದ ಮೊದಲಿನಲ್ಲಾದ ಪರಿವರ್ತನೆಯಿಂದ ಇದನ್ನು ಬೇರ್ಪಡಿಸುವುದಕ್ಕಾಗಿ, ಅದನ್ನು ನವೋದಯಕಾವ್ಯ ಎಂದು ಕರೆದಂತೆ ಇದನ್ನು ನವ್ಯಕಾವ್ಯ ಎಂದಿದ್ದಾರೆ (ಭಾವಗೀ. ೩೦೮). [ನವೋದಯ + ಕಾವ್ಯ]

ನವೋದಯಸಾಹಿತ್ಯ (ನಾ). ಕನ್ನಡ ಸಾಹಿತ್ಯದಲ್ಲಿ ಉಂಟಾದ ಕ್ರಾಂತಿಯ ಪರಿಣಾಮವಾಗಿ ಉಂಟಾದ ಸಾಹಿತ್ಯ; ಇಂಗ್ಲೀಷಿನ ರೊಮ್ಯಾಂಟಿಕ್ ಪದ್ಧತಿಯನ್ನು ಅನುಸರಿಸಿದ ಸಾಹಿತ್ಯ : ಭಾರತೀಯ ಬದುಕಿನಲ್ಲಾದ ಉತ್ಕ್ರಾಂತಿಯ ಪರಿಣಾಮವಾಗಿ ಸಾಹಿತ್ಯದಲ್ಲಿ ಉಂಟಾದ ಉತ್ಕ್ರಾಂತಿಯಿಂದ ಮೂಡಿದ (ಕನ್ನಡ) ಸಾಹಿತ್ಯವನ್ನು ನವೋದಯ ಸಾಹಿತ್ಯವೆಂದು ಕರೆದರು (ರೂಢಿ). [ನವೋದಯ + ಸಾಹಿತ್ಯ]

ನವೋದಿತ (ಗು). ಇತ್ತೀಚೆಗೆ ಪ್ರಸಿದ್ಧಿಗೆ ಬಂದ; ಉದಯೋನ್ಮುಖವಾದ: ನವೋದಿತಲೇಖಕರಾದ ದಿನೇಶರು, ತಮ್ಮ ಈ ಕಾದಂಬರಿಗೆ ನಾನೊಂದು ಮುನ್ನುಡಿ ಬರೆಯಬೇಕೆಂದು ಅಪೇಕ್ಷೆಪಟ್ಟಿದ್ದಾರೆ (ದೀಪದ. ೩).

[ನವ್ಯ + ಉದಿತ್ಯ]

ನವೋದ್ಧೃತ (ನಾ). ಆಗತಾನೇ ಕಡೆದು ತೆಗೆದ ಬೆಣ್ಣೆ : ನವನೀತ : "ನವನೀತಂ, ನವೋದ್ಧೃತಂ-೨ ಬೆಣ್ಣೆಯ ಪೆಸರುಗಳು" (ಸಿದ್ಧಾಂತಿ. ೨೮೯).

[ನವ್ಯ + ಉದ್ಧೃತ]

ನವೋನವ (ಗು). ಹೊಚ್ಚಹೊಸದಾದ ; ನಿತ್ಯನೂತನವಾದ : ಎಲ್ಲವೂ ದಿವ್ಯದೃಷ್ಟಿಯಲ್ಲಿ ನವೋನವವಾಗಿ ಕಾಣುವುವು (ಸಮಜೀ. ೧೧೦) ; ನನ್ನ ನವೋದಿತ ತಾರುಣ್ಯದ ನವೋನವಪ್ರೇಮ, ನಿಸ್ಸೀಮಭಕ್ತಿ (ಇಪ್ಪಳ. ೨೧೧); ವಿಶ್ವವನ್ನು ನವೋನವವಾದ ರಸೈಕದೃಷ್ಟಿಯಿಂದೊಮ್ಮೆ . . . ಎಷ್ಟೆಷ್ಟು ವಿವೇಚಿಸಿದರೂ . . . ಸೌಖ್ಯ ದೊರೆಯಲಿಲ್ಲ ! (ಧ್ವನ್ಯಾಲೋ. XXVII, ಪೀಠಿಕೆ). P ಸಂಸ್ಕೃತದಲ್ಲಿ 'ನವಃ ನವಃ' ಎಂಬಿವು ಭಿನ್ನ ಶಬ್ದಗಳು.

[<ನವ್ಯ]

ನವೋನವತೆ (ನಾ). ಹೊಚ್ಚಹೊಸತನ : ಹೊಸದೆನ್ನುವದು ಕೃತಿಯ ಗುಣಾವಗುಣದಲ್ಲಷ್ಟೇ ಸೀಮಿತವಾಗಿರುವದಿಲ್ಲ ; ಅಥವಾ ಅದು ಒಳ್ಳೆಯ ಕೃತಿಗಳ ನವೋನವತೆಯೂ ಅಲ್ಲ (ಹೊಸಕ್ಷಿ. ೨೭೮). [ನವೋನವ+ – ತೆ$_3$]

ನವ್ಯ (ಗು). ೧. ಹೊಸತಾದ; ನವೀನವಾದ : "ನವ್ಯಂ, ನವಂ, ನವೀನಂ, ನೂತನಂ, ಅಭಿನವಂ, ನೂತ್ನಂ – ಈ ೬ ಪೊ(ಹೊ)ಸತು" (ಹಲಾಯು. ೧೦೮-೨೬) ; ನವ್ಯಮೇಘನಿನದಂ ಪೊಣ್ಮಿತ್ತು ರೋದೋಂತದೊಳ್ (ಜಗವಿ. ೪-೮); ತಣ್ಗದಿರ ತೊಂಗಲ ತೋರ್ಕೆಯಡಂಗಿ ತಟ್ಟ ತಣ್ಗದಿರ ಪೊದಟ್ಕೆಯಂ ಕಱೆವ ನವ್ಯಕಳಾವಿಸರಂ ಮಸುಳ್ದು ಮಾಸಿದ ಮುಕುರಂದ [ರಾಂಧ] ದಂತೆ ಗಳಿತಪ್ರಭಮಾಯ್ತು ಮೃಗಾಂಕಮಂಡಲಂ (ಶಾಂತೀಶ್ವ. ೧೦-೮೮) ; ಶಚೀಪತಿಯುಂ . . . ದೇವಲೋಕದನೇಕ ನವ್ಯದಿವ್ಯಾರ್ಚನೆಗಳಿಂದರ್ಚಿಸಿ (ಪುಷ್ಪಪು. ೧೪-೪೯ ವ). ೨. ಇತ್ತೀಚಿನ ; ಆಧುನಿಕ. (ನಾ). ೩. ಹೊಸತನ ; ನವೀನತೆ : ಕೃತಿಯೊಳು ಕಾವ್ಯವು ಹೆಚ್ಚಾಗಿ ತೋರಲಿ ನವ್ಯವು ಕಡಿಮೆಯಾಗಿರಲಿ (ಇಂಜಾಪ. ೧೧೯-೮೨). ೪. ಆಧುನಿಕವಾದುದು; P ಪಾಶ್ಚಾತ್ಯರ ಸಾಹಿತ್ಯದಲ್ಲಿ Modernist Movement ಎಂದು ಕರೆಯಲಾಗುವ ಸಾಹಿತ್ಯಕ್ರಾಂತಿಯ ಪರಿಣಾಮವಾಗಿ, ಕನ್ನಡದ ನವೋದಯಕ್ಕೆ ಪ್ರತಿಕ್ರಿಯೆಯಾಗಿ ಬಂದ ಸಾಹಿತ್ಯರಚನೆ : ಸಾಹಿತ್ಯವು ರಾಜಕೀಯ ಪ್ರಚಾರ ಇಲ್ಲವೆ ಮತದ ತೊತ್ತಾಗಿ ನವ್ಯವಾಗಲಾರದು (ನವ್ಯಕಾ. ೧೬). [ಸಂ.]

ನವ್ಯಕ (ನಾ). ಹೊಸವಿಚಾರಗಳುಳ್ಳವನು; ಆಧುನಿಕ: ದಾರಿಗಾಣದ ಕಣ್ಗೆ ಹೆದ್ದಾರಿಯಾಗಿದ್ದೆ ಓ ಕವೀಂದ್ರ ! ಆಧುನಿಕನಿಗೆ ಗುರುವು, ನವ್ಯಕಗೆ ದೀಪದಾನಿ, ಓ ಋಷೀಂದ್ರ ! (ಚಂತನ. ೭೦-೩). [ಸಂ.]

ನವ್ಯಕತೆ (ನಾ). ಹೊಸಶೈಲಿಯಲ್ಲಿ ಬರೆದ ಕಥೆ; ಆಧುನಿಕ ಕಥೆ: ಯು. ಆರ್. ಅನಂತಮೂರ್ತಿಯವರ 'ಎಂದೆಂದೂ ಮುಗಿಯದ ಕತೆ' ನವ್ಯಕತೆಗಳ ಇನ್ನೊಂದು ಪ್ರಾತಿನಿಧಿಕ ಸಂಗ್ರಹವಾಗಿದೆ (ನಡದಾ. II, ೮೩೨). 'ನವ್ಯ' ಪರಾ. [ನವ್ಯ + ಕತೆ]

ನವ್ಯಕವಿ (ನಾ). ಹೊಸಶೈಲಿಯಲ್ಲಿ ಕಾವ್ಯವನ್ನು ರಚಿಸುವ ಕವಿ : ನವ್ಯಕವಿಯು ಕಾವ್ಯವಸ್ತುವನ್ನು ಹೃದಯದಿಂದಲೂ ಬುದ್ಧಿಯಿಂದಲೂ ಕೂಡಿಯೆ ಭೇದಿಸುತ್ತಾನೆ (ನವ್ಯಕಾ. ೩೦). 'ನವ್ಯ' ಪರಾ. [ನವ್ಯ + ಕವಿ$_5$]

ನವ್ಯಕವಿತೆ (ನಾ). ಹೊಸಬಗೆಯ ಕವಿತೆ : ಕನ್ನಡ ನವ್ಯಕವಿತೆಗೆ ಇಂಗ್ಲಿಷ್ ನವ್ಯಕವಿತೆ ಪ್ರೇರಣೆಯನ್ನೊದಗಿಸಿತು (ಛಂದೋವಿ. ೩೦೩). 'ನವ್ಯ' ಪರಾ.

[ನವ್ಯ + ಕವಿತೆ]

ನವ್ಯಕಾವ್ಯ (ನಾ). ೧. ಹೊಸಕಾವ್ಯ: ಮೇಳೈಸಿದಷ್ಟಾದಶಸ್ಥಳವಿವರ್ಣನಂ ಕೇಳಿಸಿನಿತುಳ್ಳ ಕೃತಿ ನವ್ಯಕಾವ್ಯಮೆನಿಕ್ಕವಿಲ್ಲದಿರೆ ದುರ್ಲಕ್ಷಣಂ (ಮಂಗರಾ. ೧೦೬-೧೭) ; ತನಗೆ ಕವಿತ್ವದೊಳ್ನುಡಿಗಳೊಳ್ ನುಡಿಯಾದ ರಸಂಗಳಿಂಪು ವೆತ್ತನುವಶಮಾದ ಭಾವಮತಿ ಬಂಧುರಮಾದ ಪೊದಳ್ದ ರೀತಿ... ಮನಂಬುಗೆ ಪೇಟ್ವುದು ನವ್ಯಕಾವ್ಯಮಂ (ಧರ್ಮನಾ. ೧-೪೪). ೨. = ನವ್ಯಕವಿತೆ :

ನವ್ಯಕಾವ್ಯವೆಂದರೆ ಆಧುನಿಕಕಾವ್ಯಕ್ಕಿಂತ ಬೇರೆಯಾದ ಕಾವ್ಯ. ವಿಶೇಷ ತಂತ್ರ-ವಿಧಾನಗಳನ್ನು ಪಡೆದ ಕಾವ್ಯವೆಂಬರ್ಥದಲ್ಲಿ ಆ ಶಬ್ದವನ್ನು ಉಪಯೋಗಿಸುತ್ತೇನೆ (ನವ್ಯಕಾ. ೫೪) : ನವ್ಯಕಾವ್ಯದ ಸುವರ್ಣ ಪಡುವಣದಿಂದ ಬೀಸಿದ ಗಾಳಿಯು ಒಂದು ತೆರೆಯೆಂಬುದು ನಿಜ (ನವ್ಯಕಾ. V ಮುನ್ನುಡಿ). 'ನವ್ಯ' ಪರಾ. [ನವ್ಯ + ಕಾವ್ಯ]

ನವ್ಯಗುಣ (ನಾ). ೧. ಹೊಸತನ. ೨. ಹೊಸ ಹೆದೆ. ೧, ೨ : ಕೊರ್ವಿ ಪೊಲಿಪೆಂಕ್ಕೆ ತನಿರಸಮುರ್ವೆ ಕರಂ ಕೊಂಕು ಕವಿವರಂ ನವ್ಯಗುಣಂ ಪರ್ವದಿಸುವ ಕಾವನ ಕರ್ವಿನ ಬಿಲ್ಲಾತೆ ಕಾವ್ಯವೇಂ ಮೋಹಿಸದೇ (ಧರ್ಮಾಭ್ಯು. ೧-೪೬). [ನವ್ಯ + ಗುಣ]

ನವ್ಯತೆ (ನಾ). ೧. ಹೊಸತನ; ನೂತನತೆ. ೨. (ಸಾಹಿತ್ಯದಲ್ಲಿ) ಹೊಸತನ,-ನೂತನತೆ : ಸಮುದ್ರಗಿತಗಳು. ಬಾಳದೇಗುಲದಲ್ಲಿ ಮತ್ತು ಉಗವು ಎಂಬ ಕವನಸಂಗ್ರಹಗಳನ್ನು ಓದಿದವರಿಗೆ ನಾನು ನವ್ಯತೆಯ ಪ್ರತಿಪಾದನೆಗೆ ಏಕೆ ಉದ್ಯುಕ್ತನಾದೆನೆಂಬುದು ಸಹಜವಾಗಿ ಹೊಳೆಯಬಹುದು (ನವ್ಯಕಾ. V ಮುನ್ನುಡಿ). 'ನವ್ಯ' ಪರಾ. [ಸಂ. ನವ್ಯತಾ]

ನವ್ಯದುಕೂಲ (ನಾ). ಹೊಸ ರೇಷ್ಮೆವಸ್ತ್ರ: ನವ್ಯದುಕೂಲಮಂ ತೆಗೆದುಟ್ಟು (ಬಸರ. ೨-೪೪). [ನವ್ಯ + ದುಕೂಲ]

ನವ್ಯಪಾಕ (ನಾ). ಹೊಸ ಅಡುಗೆ; ಹೊಸರುಚಿಯುಳ್ಳ ತಿನಿಸು : ಒಲೆ ಹೂಡಿದ ವೇಲೆ ಅದರ ಬಿಸಿ ತಾಗುವದು ಕುದ್ದು ಹಣ್ಣಾಗುವದ್ಯ ನೂರು ಅನುಭವದ ನವ್ಯಪಾಕ (ನಿಂಮು. ೫೩-೦೦). [ನವ್ಯ + ಪಾಕ$_1$]

ನವ್ಯಪ್ರಜ್ಞೆ (ನಾ). ೧. ಹೊಸತನದ ಅರಿವು; ಹೊಸಸ್ಥಿತಿಯ ತಿಳಿವಳಿಕೆ. ೨. ನವ್ಯಸಾಹಿತ್ಯಕ್ಕೆ ಸಂಬಂಧಿಸಿದಂತೆ ಇರುವ ಅರಿವು : ಆಧುನಿಕ ಇಲ್ಲವೆ ರೊಮ್ಯಾಂಟಿಕ್ ಕನ್ನಡಕಾವ್ಯದಲ್ಲಿ ನವ್ಯಪ್ರಜ್ಞೆ ಆನುಷಂಗಿಕವಾಗಿ ಹೇಗೆ ಮೂಡಿದೆಯೆಂಬುದನ್ನು . . . ತೋರಿಸಲಾಗಿದೆ (ನವ್ಯಕಾ. VI ಮುನ್ನುಡಿ). [ನವ್ಯ + ಪ್ರಜ್ಞೆ]

ನವ್ಯಪ್ರಸೂನ (ನಾ). ಆಗ ತಾನೇ ಅರಳಿದ ಹೂವು: ಶೀತಳಸಲಿಲನೂತನ ಮಳಯಜನವ್ಯಪ್ರಸೂನನಾನಾವಿಧ ಪೂಜಾಸಮರ್ಪಿತ . . . ಸರ್ವಾಂಗ ಶರೀರ ಪ್ರ(ಣ)ತನಾಗಿ (ಬಸರ. ೪-೩). [ನವ್ಯ + ಪ್ರಸೂನ]

ನವ್ಯಫಳ (ನಾ). ಹೊಸ ಹಣ್ಣು : ಬೆಳಿಸಿದವಿನೀ ಕಾವ್ಯವೃಕ್ಷವನು . . . ತುದಿವೊದಲ್ದನಕ ಹೇಱಿದ ನವ್ಯಫಳರಸಂ [ಪಾಣಾಂ. ಕಾವ್ಯರಸಫಲಂ. ನವ್ಯರಸಫಳಂ]ಗಳನು ಸವಿಸುವುದು ಲೋಕದ . . . ರಸಿಕರುತ್ತವರು ಸುಕಲಾವ್ಪ್ರೌಢರು (ಹಕಕಾ. ೧-೧೪). [ನವ್ಯ + ಫಳ$_1$ (= ಫಲ$_1$)]

ನವ್ಯಯುಗ (ನಾ). ಹೊಸತನದ ಕಾಲ : ಕನ್ನಡಕಾವ್ಯದಲ್ಲಿ 'ಆಧುನಿಕ' ಯುಗವು ಮುಗಿಯುವ ಸಮಯ ಬಂದಿದೆ; ನವ್ಯಯುಗ ಆರಂಭವಾಗಲಿದೆ (ನವ್ಯಕಾ. ೫೪). 'ನವ್ಯ' ಪರಾ. [ನವ್ಯ + ಯುಗ]

ನವ್ಯವೈನೋದಿಕಯುಗ (ನಾ). ಸುಖಾಂತನಾಟಕಗಳ ಹೊಸಯುಗ; ಪ್ರಹಸನಗಳ ಹೊಸಯುಗ : ನವ್ಯವೈನೋದಿಕಯುಗದ ವೇಳೆಗೆ ಕವಿಗಳು ತಾವೇ ಕಲ್ಪಿಸಿದ ಕಥೆಗಳನ್ನು ನಾಟಕದ ವಸ್ತುಗಳನ್ನಾಗಿ ಮಾಡತೊಡಗಿದರು (ಆರಿಕಾ. ೦೫೧). 'ನವ್ಯ' ಪರಾ.

[ನವ್ಯ + ವೈನೋದಿಕ + ಯುಗ]

ನವ್ಯಶೈಲಿ (ನಾ). ೧. ಬರವಣಿಗೆಯ ಹೊಸರೀತಿ. ೨. ಇಂದಿನ ನವ್ಯ ಕಾವ್ಯಮಾರ್ಗದಲ್ಲಿ ಬರೆಯುವ ರೀತಿ : ನವ್ಯಶೈಲಿಯಲ್ಲಿಯು ಇನ್ನೊಂದು ಪ್ರಕಾರವೆಂದರೆ ಇಂದಿನ ಬಳಕೆಯ ಮಾತನ್ನು ನೇರವಾಗಿ ಕಾವ್ಯಭಾಷೆಯಾಗಿಸುವದು (ನವ್ಯಕಾ. ೬೫). 'ನವ್ಯ' ಪರಾ. [ನವ್ಯ + ಶೈಲಿ]

ನವ್ಯಸಮಾಜ (ನಾ). ಹೊಸತತ್ತ್ವಗಳ ಮೇಲೆ ನಿರ್ಮಾಣವಾದ ಸಮಾಜ: ನವ್ಯಸಾಹಿತ್ಯವೂ ಈ ನವ್ಯಸಮಾಜದ ಶ್ರುತಿಯಾಗುವುದು . . . ಭಾವ್ಯವಾಗುವದು (ನವ್ಯಕಾ. ೬೫). [ನವ್ಯ + ಸಮಾಜ]

ನವ್ಯಸಾಹಿತಿ (ನಾ). ನವ್ಯಪ್ರಜ್ಞೆಯಿಂದ ಸಾಹಿತ್ಯ ನಿರ್ಮಾಣ ಮಾಡುವವನು : ನವ್ಯಸಾಹಿತಿಯು ಮಾನವತೆಯ ಉಚ್ಚಗುಣಗಳಲ್ಲಿ ದೃಢವಿಶ್ವಾಸವನ್ನು ತಾಳಬೇಕು (ನವ್ಯಕಾ. ೦೬). [ನವ್ಯ + ಸಾಹಿತಿ]

ನವ್ಯಸೇಸೆ (ನಾ). ಒಂದು ಬಗೆಯ ತೆರಿಗೆ : ಆ ನವ್ಯಸೇಸೆ ಗದ್ಯಾಣಂ ಹತ್ತು ಪಣವೊಂಭತ್ತು ಹಾಗವೊಂದು . . ಅಷ್ಟಭೋಗ ತೇಜಸ್ವಾಮ್ಯ ನಿಧಿನಿಕ್ಷೇಪ ಸಹಿತ ಧಾರಾಪೂರ್ವಕವಾಗಿ ಕೊಟ್ಟರು (ಎಕ. VI (R), ಕೃಷ್ಣರಾ. ೪೯-೪೭ : 1236). [ನವ್ಯ + ಸೇಸೆ]

ನವ್ಯೋದ್ಯೋದ (ನಾ). ೧. ಹೊಸ ಪರಿಮಳ,-ಸುವಾಸನೆ. ೨. (ಅಲಂ) ಹೊಸ ಮಕರಂದ : ಚಂದ್ರಕಾಂತವೊಸರ್ವಂತಿರೆ ಗೋರಿಕಲ್ಲೊಸರ್ಗಮೇ ಬಿಂಳ್ದಿಂಗಳೊಳ್ ತುಂಬಿ ಪೀರ್ವವೋಲೇಂ ಪೀರ್ದವುದೇ ಕಡಂದುಱು ತೆ ನವ್ಯೋದಂ ಪೂಗಳೊಳ್ (ಜಗವಿ. ೧-೦೩). [ನವ್ಯ + ಆಮೋದ]

ನಶನ (ನಾ). ೧. ಮರೆಯಾಗುವಿಕೆ; ೨. ಹಾಳಾಗುವಿಕೆ; ನಾಶವಾಗುವಿಕೆ. 'ನಶಿಸು' ಪರಾ. [ಸಂ.]

ನಶನಶೆ 'ನಸೆನಸೆ' ನೋ.

ನಶಿಸು (ಕ್ರಿ). ೧. ಮರೆಯಾಗು ; ಇಲ್ಲವಾಗು ; ಕ್ಷೀಣವಾಗು ; ಕ್ಷಯಿಸು : ನನ್ನ ಯುಕ್ತಾಯುಕ್ತಜ್ಞಾನವು ನಶಿಸಿಹೋಯಿತು (ಕಾವಿಜ. ೦೦೯) ; ನಿಮ್ಮ ದಾರಿಯ ಕಂಟಕಗಳು ಕೆಲವೇ ದಿನಗಳಲ್ಲಿ ನಶಿಸುವುವು (ಮುಕಥ. ೧೬೩) : ದಿನೇ ದಿನೇ ನಶಿಸತೊಡಗಿರುವ ಈ ಜನಾಂಗಗಳ ಭಾಷೆಗಳನ್ನು ಕುರಿತು ಹೆಚ್ಚು ಸಂಶೋಧನೆ ಶೀಘ್ರ ನಡೆಯುವುದು ಅಗತ್ಯ (ಡಾ.ವಿವಿ. ೫೦೩). ೨. ಕೆಡು ; ಹಾಳಾಗು : ಪುಳಿವೆರೆಯೆ ಕೊಡವಾಲು ಸಹಜವನುಳಿವುದಲ್ಲದೆ ಕ್ಷೀರಸಾಗರ ಮಳವುದೇ ಸುಜ್ಞಾನಿ ನಶಿಪನೆ ಪರರ ದೂಷಣದಿ (ಗಗಶಾ. ೧೬-೪೩).

[ನಶನ + -ಇಸು$_3$]

ನಶಿಹತ್ತು, ನಸೀಯತ್ತು (ನಾ). ಶಿಕ್ಷೆ ; ದಂಡನೆ : ರಶೀದಿಗಳನ್ನು ಕೊಡದೆ ಇದ್ದರೆ ಆ ಶೇಕದಾರ ಶ್ಯಾನುಭಾಗರಿಗೆ ನಶಿಹತ್ತು ಮಾಡಿ ಅವರಿಗೆ ಬದಲಿಯಿತಬಾರಿ ಶೇಕದಾರ ಶ್ಯಾನಭಾಗರನ್ನ ಮೊಕರರ್ಮಾಡಿಟ್ಟು ಮುಂದೆ ಸದರಿ ಬಸದ ಪ್ರಕಾರ ನಡೆದುಕೊಳ್ಳುವದು (ಮಹಾವಂ. II, ೬೬). **ನಸೀಯತ್ತು** : (ಕ). [← ಅರ. ನಸೀಹತ್ ; ಹಿಂ. ನಸೀಹತ್, ನಸೀತ್ ; ಮರಾ. ನಸೀಹತ್, ನಸೀಯತ್]

ನಶೀಬ 'ನಸೀಬು' ನೋ.

ನಶೀಬಗೇಡಿ (ನಾ). ದೈವಗೇಡಿ ; ದುರ್ದೈವಿ ; ನತದೃಷ್ಟ : "ಇಷ್ಟು ಸಣ್ಣ ವಯಸ್ಸಿನಲ್ಲಿ ತಂದೆ ತಾಯಿ ಇಬ್ಬರನ್ನೂ ಕಳೆದುಕೊಂಡಿತು ನಶೀಬಗೇಡಿ" ಎಂದು ಜನರಾಡುವುದನ್ನು ಹೇಗೆ ಸಹಿಸುವುದು ? (ವ್ಯನಿ. ೫೯).

[ನಶೀಬ (< ನಸೀಬು) + ಕೇಡಿ$_1$]

ನಶೀಬು 'ನಸೀಬು' ನೋ.

ನಶೆ, ನಿಶಾ, ನಿಶ್ಶೆ, ನಿಷಾ (ನಾ). (ಮಾದಕದ್ರವ್ಯಗಳ ಸೇವನೆಯಿಂದಾಗುವ) ಸೊಕ್ಕು;-ಮತ್ತು; ಅಮಲು : ಬಾಟ್ಲ ಬರಿದಾಯಿತು. ನಶೆ ತಲೆಗೇರಿತು (ಮಾಲತಿ. ೪೮) ; ಬೆಳಿಗ್ಗೆ ಹೊತ್ತು ನಶೆ ಇರಾಕಿಲ್ಲ ಬಾಬುಗಳಿಗೆ (ಸಾಹೇಕ್. ೩೦೪). **ನಿಶಾ** : 'ನಿಶಾಖೋರ' ಪರಾ. **ನಿಶ್ಶೆ** : ಜಹಾಂಗೀರನಿಗೆ ಹಗಲಲ್ಲಿಯೂ 'ನಿಶೆ' ಇರುತ್ತಿತ್ತು (ನೂರಜ. ೩೧) ; ಕುಡಿದು ನಿಶೇದಾಗ ನನ್ನ ಸೊಸಿಗೇನೋ ಅನ್ನಾಕ ಬಂದಿತ್ತಂತ (ಗ್ರಾಮಾಹು. ೩೬) ; ಕಾಳಪ್ಪನು ಸಂಜೆ ನಿಶೆಯಾಗಿ ಬಂದು ಬಿದ್ದುಕೊಂಡನು (ಡಾಸಹು. ೩೨); **ನಿಷಾ** : ನನಗೆ ಕೊಲೆ ಮಾಡುವುದೆಂಬುದು ಒಂದು ಬಗೆಯ 'ನಿಷಾ'. ಆ 'ನಿಷಾ' ಈಗ ಬಿಟ್ಟು ಹೋಯಿತೇ ? (ಮಾಯಾವಿ. ೨೮೩) ; ಗಾಂಜಾ ಸೇದುವವರಿಗೆ ಗಾಂಜಾದಿಂದ ನಿಷಾ ಏರದಿದ್ದರೆ, ಅದರಲ್ಲಿ ಎರಡು ದತ್ತೂರಬೀಜಗಳನ್ನು ಸೇರಿಸಿದ ರಾಯಿತು (ಕಮುಕ. ೦೭). 'ನಿಷಾಖೋರ' ಪರಾ.

[← ಅರ. ಹಿಂ. ನಶಾ ; ಮರಾ. ನಶಾ, ನಿಶಾ]

ನಶ್ಯ1, ನಸ್ಯ, ನೆಶ್ಯ (ನಾ). ೧. ಮೂಗಿಗೆ ಏರಿಸುವ ಔಷಧದ ಪುಡಿ: ಸುಷೇಣನು ಆ ಮೂಲಿಕೆಗಳಂ ನಶ್ಯಮಂ ಮಾಡಿ ಲಕ್ಷ್ಮಣನಿಗೆ ಕೊಡಲು ಅವನು ಯಚ್ಚತ್ತು ಸುಖದಿಂದಿರಲು (ಕೃಷ್ಣಾ. ೭-೯೦). ೨. ಮೂಗಿಗೆ ಏರಿಸುವ ತಂಬಾಕಿನ ಪುಡಿ: ತನ್ನ ನಶ್ಯದ ಬುರುಡೆಯಿಂದ ಒಂದಿಷ್ಟು ನಶ್ಯವನ್ನು ಮೂಗಿಗೇರಿಸಿ (ವಿಧಿವ್ಯ. ೦೮); ನಶ್ಯ, ತಂಬಾಕು, ಬೀಡಿ ಮತ್ತು ಸಿಗರೇಟುಗಳ ಅಭ್ಯಾಸ (ನಾಡಿಗೇ. ೫೭೭); ನಶ್ಯ ಹಾಕಿ ಹಾಕಿ ಮಂಜಾದ ಕಣ್ಣು (ಮಹಾಂ. ೮). **ನಸ್ಯ**: ೧. ನಸ್ಯ – ನಸಿ, ಮಾಣಿಕ್ಯ – ಮಾಣಿಕ (ಹೊನುಗ. ೧೦೮). ೨. ನಸಿಭ್ರಮೆ ಇದ್ದವ ನಸಿ ಆದರೂ ಹಾಕಿ ಕೊಂಡಾನು (ಗಾಡಿ). **ನೆಶ್ಯ**: ೨. ನೆಶ್ಯವು ಮೂಗಿನೊಳಕ್ಕೆ ಹೋದುದೇ ತಡ ಬುಳುಬುಳುಗುಟ್ಟಿ ಅಸಾಧ್ಯ ಫಜೀತಿ ಮಾಡಿಬಿಟ್ಟಿತು (ಕಳಹು. ೬೭); ಇವರು ಬಾಗಿಲಿನಲ್ಲಿ ಕುಳಿತು ನೆಶ್ಯವನ್ನು ತೀಡುತ್ತಿರುವಾಗ (ನವುಕ್ಕಿರ. ೨).

ನಶ್ಯ ಏರಿಸು = ನಶ್ಯ ಹಾಕು: ಹಿರಿಯರಾದ ಆಚಾರ್ರು ನಶ್ಯ ಕೊಟ್ಟರೆ ಅವರಿಗೆ ಕೈಮುಗಿದು ಅನಂತರ ಉಳಿದವರು ನಶ್ಯ ಏರಿಸಬೇಕು (ನನ್ನೂರು. ೧೮೪). **ನಶ್ಯ ತೀಡು** = (ಬೆಣ್ಣೆಯಲ್ಲಿ ಮಿದ್ದ ಉಂಡೆ ನಶ್ಯವನ್ನು ಪುಡಿ ಮಾಡಲು) ಅಂಗೈಯಲ್ಲಿ ಹಾಕಿ ಉಜ್ಜುವ: ನಶ್ಯ ತೀಡುವಾಗ ಆಚಾರ್ರ ಅಂಗಾಂಗಗಳೆಲ್ಲ ಕೆಲಸ ಮಾಡುತ್ತಿದ್ದುವು (ನನ್ನೂರು. ೧೮೩). **ನಶ್ಯದ ಬಣ್ಣ, ನಶ್ಯದ ಬಣ್ಣ = ಕಂದುಬಣ್ಣ**: ನಶ್ಯದ ಬಣ್ಣ ಬೀಡಿಯ ಬಣ್ಣ ಮುಂತಾದ ಅನೇಕ ಬಣ್ಣಗಳ ವಿವಿಧ ಮಾದರಿಗಳ ಸೀರೆಗಳು (ನಾಡಿಗೀ. ೨೩೧); ಅವಳ ಹತ್ತಿರ ನೆಶ್ಯದ ಬಣ್ಣದ ಸೀರೆ ಇದೆ (ಠೂಫಿ). **ನಶ್ಯ ಮಾಡು, ನೆಶ್ಯಮಾಡು** = ೧. ಮೂಗಿಗೇರಿಸುವ ಔಷಧವನ್ನು ತಯಾರಿಸು,–ಸಿದ್ಧಮಾಡು: ನಶ್ಯ ಮಾಡುವುದಕ್ಕೆ ತೈಲವನ್ನಾಗಲೀ ತುಪ್ಪವನ್ನಾಗಲೀ ವ್ಯಯಿಸುವಾದ ಪಾಕದಲ್ಲಿ ಇಳಿಸಬೇಕು (ಠೂಫಿ). ೨. ಹೊಗೆಸೊಪ್ಪಿನಿಂದ ನಶ್ಯದ ಪುಡಿಮಾಡು: ಅವನು ನೆಶ್ಯ ಮಾಡುತ್ತಿದ್ದಾನೆ (ಠೂಫಿ). **ನಶ್ಯಹಾಕು = ನಶ್ಯವನ್ನು ಮೂಗಿಗೆ ಏರಿಸು**: ಹಿರಿಯರು ಹೇಳುವವರೆಗೆ ಯಾರೂ ನಶ್ಯ ಹಾಕುವಂತಿಲ್ಲ. ಇದು ನಶ್ಯ ಹಾಕುವವರ ಮರ್ಯಾದೆ (ನನ್ನೂರು. ೧೮೩). [< ಸಂ. ನಸ್ಯ]

ನಶ್ಯ2 (ನಾ). ನಾಶವಾಗತಕ್ಕುದು; ಕ್ಷಣಿಕವಾದುದು: ಕಾಣಿಸಿಕೊಳುತ್ತಿಹುದು ನಶ್ಯ ಎಂಬುದು ನಿಜಂ (ವೀಕ್ಷಿಪು. ೪-೬-೩೩); ದೃಶ್ಯವೆಲ್ಲವು ನಶ್ಯವಾದೊಡಂ? ದೃಷ್ಟಿಗದು ವಶ್ಯವಿರುವನಕದನು ದೃಷ್ಟಿಪದೆ ಕಾರ್ಯಂ . . . ನಶ್ಯದಿಂದ ವಿನಶ್ಯ (ಪಾಂಕುಳ. ೪೦೦). [< ಸಂ. ನಾಶ್ಯ]

ನಶ್ಯಂಗೆಯ್ಯು (ಕ್ರಿ). = ನಸ್ಯಂಗೆಯ್ ೧: ಇಪ್ಪಕೆಚ್ಚು . . . ಹಿಪ್ಪರಿ ಸಹ ಸಪ್ತಾಸವಾಗಿ ಸಣ್ಣನಾಗರದು ನೀರಿನಲ್ಲಿ ನಶ್ಯಂಗೆಯ್ಕೆ ಅಭ್ಯಾಸ ಸನ್ನಿಯಿಂದಾದ ಮೂರ್ಛೆ ಆ ಕ್ಷಣವೆ ತಿಳಿಯುವುದು (ಸಳವ್ಯ. ೦೬೮).

[ನಶ್ಯ1 + ಗೆಯ್ಯು (< ಕೆಯ್1)]

ನಶ್ಯತ್ಪ್ರಸೂತಿ (ನಾ). ಮಕ್ಕಳು ಬಾಳದವಳು: "ನಶ್ಯತ್ಪ್ರಸೂತಿಃ, ಬಂದುಃ – ಈ ೨ ಮಕ್ಕಳ್ ಬಾಟದವಳು" (ಹಲಾಯು. ೮೦-೫೫೪).

[ಸಂ.]

ನಶ್ವರ (ನಾ). ನಾಶವಾಗತಕ್ಕುದು; ಕ್ಷಣಿಕವಾದುದು; ಶಾಶ್ವತವಲ್ಲದುದು: ನಶ್ವರಾನಶ್ವರಗಳೆಲ್ಲವು ಸ್ವಸ್ವರೂಪವಾದುದು (ಗಗತಾ. ೦೬-೩೦); ನಶ್ವರವನು ನಿಸ್ ಅವಿನಶ್ವರ ಮಾಡ (ಅನಿಕೇ. ೫೫-೦೪); ಶಾಶ್ವತವನರಿಯಲ್ಕೆ ನಶ್ವರದ ಹೃದಯಮಂ ಭೇದಿಸುವ ಕವಿಯ ದರ್ಶನದಂತೆ (ಶ್ರೀರಾಮಾ. ೫೭೭-೫೭೧); ದೇಹ ನಶ್ವರ, ಬಯಕೆ ನಶ್ವರ, ಆತ್ಮವೊಂದೇ ಶಾಶ್ವತ (ಚಂದ್ರಮಾ. ೧೮-೯). [ಸಂ.]

ನಶ್ವರತೆ (ನಾ). ಕ್ಷಣಿಕತೆ; ಅಶಾಶ್ವತತೆ: ಅತ್ಯತ್ಭವಿಲ್ಲಿ ಬಾಡಿದೊಡೇನು? ಬಿಗುರಲ್ಲಿ; ನಶ್ವರತೆ ವಿಟಪಪರ್ಣಾಂಗಗಳಲ್ಲಿ ಮಾತ್ರ (ಮಂಕುಳ. ೦೮೭).

[ಸಂ. ನಶ್ವರತಾ]

ನಷ್ಟ (ಗು). ೧. ಕೆಟ್ಟ; ಹಾಳಾದ; ನಾಶವಾದ. ೨. ಕಾಣದಂತಾದ; ಇಲ್ಲವಾದ; ಮರೆಯಾದ; ಕಳೆದುಹೋದ. ೩. ಓಡಿಹೋದ. (ನಾ). ೪. ಹಾನಿ; ಕೆಡಕು; ನಾಶ: ಕೊಲುವಾ ಕೂಟವು ನಷ್ಟಮಪ್ಪ ಕೆಲಸಂ . . . ಫಲದ ಭ್ರಾಂತಿಯ ತೋರ್ಪುದೈ (ಹೂಮಾಚ. ೨೩); ಪರ ಹೆಣ್ಣಿಗಾಗಿ ರಾವಣ ತಲೆ ಕೊಟ್ಟ ಇನ್ನೆಷ್ಟು ಹೇಳಲಾ ನಷ್ಟ ಪರಹೆಣ್ಣ ವೋಹಿಸಿದರೆ ಬರುವೋದು ಕಷ್ಟ (ಪುರಂದ. ೩-೧೦೨-೧); ಕಷ್ಟದಲಿ, ನಷ್ಟದಲಿ . . . ನಿನ್ನ ಮಂತ್ರಮಯಮಾತ್ಮವಕ್ಷಸ್ಸನ್ಯಧೈರ್ಯವನೀಟು ತಿರಲೆನ್ನ ಬಾಯಿ (ಅನಿಕೇ. ೪೮-೫); ಎಷ್ಟು ಮಾಡಿದರೂ ನಷ್ಟವಾಗದೇ ಬಿಡದು (ಗಾಡಿ). ೫. ಹೋಗುವಿಕೆ; ಮರೆಯಾಗು ವಿಕೆ: "ನಷ್ಟಂ. ನಷ್ಟಿಃ ... ಈ ಓ. ಹೋಕು" (ಕಾಶಕ್ಕ. ೦೮೯). ೬. ದಿಕ್ಕುಗೆಟ್ಟವನು; ಭಯದಿಂದ ಓಡಿಹೋಗುವವನು: "ನಷ್ಟಃ, ಗೃಹೀತದಿಕ್, ಕಾಂದೀಶಕಃ, ಭಯದ್ರುತಃ– ಈ ೪ ದೆಸೆಗಟ್ಟವಂ" (ಹಲಾಯು. ೭೯-೩೫೩). ೭. ವ್ಯಾಪಾರದಲ್ಲಿ ಹಾಕಿದ ಹಣ ಬರದಿರುವುದು; ಲುಕ್ಸಾನು: ಜವಳಿ ವ್ಯಾಪಾರದಲ್ಲಿ ತುಂಬಾ ನಷ್ಟವೇ ಆಯಿತು (ಠೂಫಿ). 'ಲಾಭ' ಹೋ. ೮. [ಛಂದ] ಷಟ್ಪ್ರತ್ಯಯಗಳಲ್ಲಿ ಒಂದು; ನವಂಗೆ ಬೇಕಾದ ವೃತ್ತದ ಸ್ವರೂಪವನ್ನು ಕಂಡುಹಿಡಿಯುವ ವಿಧಾನ; "ನವಂಗೆ ಬೇಕಾದ ವೃತ್ತದ ಸಂಖ್ಯೆಯನ್ನು ಆ ವೃತ್ತದ ಛಂದಸ್ಸು ಎಷ್ಟನೆಯದೋ ಅಷ್ಟು ಸಾರಿ ಅರ್ಧಿಸುವುದು. ಅರ್ಧಿಸಲ್ಪಡುವ ಸಂಖ್ಯೆಯಂ ವಿಷಮವಾದರೆ ಅದಕ್ಕೆ ಒಂದನ್ನು ಸೇರಿಸಿ ಅರ್ಧಿಸಬೇಕು. ಹಾಗೆ ಅರ್ಧಿಸುವಲ್ಲಿ ಒಂದನ್ನು ಸೇರಿಸಿದರೆ ಗುರುವೆಂದೂ, ಒಂದನ್ನು ಸೇರಿಸದಿರಲು ಲಘುವೆಂದೂ ತಿಳಿಯಬೇಕು. ಈ ಉಪಾಯಕ್ಕೆ ನಷ್ಟ ಪೆಂದು ಹೆಸರು" (ಕೃಬಿಡಿ. ೯೩) : ವೊದಲೊಳ್ ಛಂದದೀಯೆಡೆಯಲಿಕ್ಕದೆ ಕೆಟ್ಟುದು ವೃತ್ತಮೆಂದು ವೇಟ್ಟುದು ಬಗೆವಂದೊಡಾಗಳವಱಂಕಮನರ್ಧಿಸಿ ಬೆಳ್ಪ ನಿಟ್ಟುಕೊಳ್ವುದು ಸಮಭಾಗಮಿಯದೊಡೆ ರೂಪಯುತಾರ್ಧದ ಬಿಣ್ಪನಿಟ್ಟು ಕೊಳ್ವುದಂ ಗಡ ಸೂತ್ರಮಿ ತೆಱದೆ ಕಾಣ್ಬುದು ನಷ್ಟಮನಂಬುಜಾನನೇ (ಛಂದೋಂಬು. ೬-೩೬೨); ಅಸಮವಿರಲೊಂದು ಕೂಡರ್ಧಿಸಿಡು ಗುರುವ ಸಮವಸಿಸಲರ್ಧಿಸಿ ಲಘುವನಿಕ್ಕೆನಿತು ಛಂದದೊಳು ಪಸರಿಸಿದ ಸಂಖ್ಯೆಯಕ್ಕವಱವಱ ನಷ್ಟವೃತ್ತಕ್ಕುಳ್ಳ ಗಣದೆ ಬರ್ಕುಂ (ವಾಂಗರಾ. ೧೦೮-೩೪).

ನಷ್ಟ ಕಟ್ಟಿಕೊಡು = ಆದ ನಷ್ಟಕ್ಕೆ ಪರಿಹಾರವನ್ನು ತುಂಬಿಕೊಡು. ನಷ್ಟ ತುಂಬಿಕೊಡು = ನಷ್ಟಕಟ್ಟಿಕೊಡು. ನಷ್ಟ ಭರ್ತಿಮಾಡು = ನಷ್ಟ ಕಟ್ಟಿಕೊಡು. ನಷ್ಟವಾಗು = ೧. ಹಾನಿಯಾಗು; ಲುಕ್ಸಾನಾಗು; ಕಳೆ; ದಂಡವಾಗು: ಲಾಭ ಮಾಡಲು ಹೋಗಿ ನಷ್ಟವಾಗುವಂತಾಗಬಾರದು (ಅಡುಸಾ. ೦೨೩). ೨. ಇಲ್ಲವಾಗು; ಅಳಿ; ಮರೆಯಾಗು: ಪ್ರಸಾದಿಯೆಂತಯ್ಯಾ ಆಧಿವ್ಯಾಧಿ ನಷ್ಟವಾಗದನ್ನಕ್ಕ (ಬಸವ. ೩೦೦); ಭಾವ ನಿರ್ಭಾವಂಗಳ ಸುಳುಹ ನಷ್ಟವಾದ ಸದ್ಭಾವದ ಧೂಪವನಿಕ್ಕಿ (ಆದವ. ೨೮-೬೪); ಕ್ಷರ ಎಂದರೆ ನಷ್ಟವಾಗುವುದು . . . ಅಕ್ಷರ ಎಂದರೆ ನಷ್ಟವಾಗದುದು (ಡ್ರಾವಿವಿ. ೯೩); ಅಕ್ಕಿಯನ್ನು ಪಾಲಿಶ್ ಮಾಡಿದರೆ ಭ್ರೂಣ ಮತ್ತು ತವುಡು ನಷ್ಟವಾಗುತ್ತವೆ (ಅಡುಶಾ. ೬೨). [ಸಂ.]

ನಷ್ಟಕಾಲ (ನಾ). ಕಳೆದುಕೊಳ್ಳುವ ಕಾಲ; ಹಾಳಾಗುವ ಕಾಲ: ನಷ್ಟ ಕಾಲದಲ್ಲಿ ಎಷ್ಟಿದ್ದರೇನು? (ಗಾಡಿ). [ನಷ್ಟ + ಕಾಲ]

ನಷ್ಟಗ್ರಹ (ನಾ). ದುಷ್ಪರಿಣಾಮವನ್ನುಂಟುಮಾಡುವ ಗ್ರಹ; ಕೆಟ್ಟ ಗ್ರಹ; ದುಷ್ಟಗ್ರಹ: ಇಪ್ಪೊಂದು ದೊಡ್ಡ ಕಲಂಕದ ಗುರುತನ್ನು . . . ಯಾವ ನಷ್ಟಗ್ರಹ ಯಾಕೆ ತೊಡೆದುಬಿಟ್ಟಿತೋ ಕಾಣೆ(ಇಪ್ಪಳ. ೪೫೫).

[ನಷ್ಟ + ಗ್ರಹ]

ನಷ್ಟಚೇತನ (ನಾ). ಚೈತನ್ಯವಿಲ್ಲದವನು; ಬಲಹೀನ: ವ್ಯಸನಾಭಿಭೂತರು ಉತ್ಸಾಹಹೀನರು ದೀನರು ನಷ್ಟಚೇತನರು . . . ತಳಮಳಗೊಳುವರು

ಬರಿದೆ (ಇಂಜಾಪ. ೧೩೭-೭೩); ಆಕೆಯ ಕಾಣದ ಕಂಡವರಿಬ್ಬರು ಭಾವಿಸೆ ಸರಿಸಮರಹರು ಒಬ್ಬರು ವಿಫಲ ವಿಲೋಚನರಾದರು ಒಬ್ಬರು ನಷ್ಟ ಚೇತನರು (ಇಂಜಾಪ ೧೩೦-೩೮). [ನಷ್ಟ + ಚೇತನ]

ನಷ್ಟಚೇಷ್ಟತೆ (ನಾ). ಮೈಮರೆವು; ಮೂರ್ಛೆ; ಚೈತನ್ಯವಿಲ್ಲದಿರುವುದು. [ಸಂ. ನಷ್ಟಚೇಷ್ಟತಾ]

ನಷ್ಟಜಾತಕ (ನಾ). ೧. ಕಳೆದ ಜಾತಕ ; ಕಳೆದುಹೋದ ಜನ್ಮಪತ್ರಿಕೆ ; ಕಳೆದುಹೋದುದರಿಂದ ಮತ್ತೆ ಬರೆದ ಜಾತಕ : ಜನನಕಾಲವು ತಿಳಿಯದಿದ್ದಾಗ ಈ ಅಧ್ಯಾಯದಲ್ಲಿ ತಿಳಿಸಿರುವ ಕ್ರಮದಂತೆ ನಷ್ಟಜಾತಕವನ್ನು ಬರೆದು ಅದರಿಂದ ಆ ಜಾತಕನಿಗೆ ಫಲಗಳನ್ನು ಹೇಳಬೇಕು (ಜಾತಕ. ೨೪-೧ ಟೀಕು). ೨. ಜಾತಕವನ್ನು ಕಳೆದುಕೊಂಡವನು : ನಷ್ಟಜಾತಕನು ಬಂದು ಪ್ರಶ್ನೆಮಾಡಿದ ಲಗ್ನದಿಂದ ಚಂದ್ರನಿರುವ ರಾಶಿಯಿಂದ ಮುಂದಕ್ಕೆ ಕ್ರಮವಾಗಿ ಎಣಿಸಿ ಬರುವ ರಾಶಿಯೇ ಪೃಚ್ಛಕನ ಜನ್ಮರಾಶಿಯಾಗುತ್ತದೆ (ಜಾತಕ. ೨೪-೧೭ ಟೀಕು). [ನಷ್ಟ + ಜಾತಕ]

ನಷ್ಟಜೀವಿ (ನಾ). ೧. ಜೀವವನ್ನು ಕಳೆದುಕೊಂಡವನು ; ಸತ್ತವನು. ೨. ಮೇಲಿಂದ ಮೇಲೆ ನಷ್ಟವನ್ನು ಅನುಭವಿಸುವವನು. [ನಷ್ಟ + ಜೀವಿ$_1$]

ನಷ್ಟತೂಕ (ನಾ). ಕಡಮೆಯಾದ ತೂಕ (?): ೫೮೫ ಈ ೨೦೦ ರೊಳಗೆ ೧೫೫ ಕಳೆಯಲು ೪೫ ಈ ದಿಗಹಾರ ೫೮೫ ನ್ನು ೪೫ ರಿಂದ ಭಾಗಿಸಲು ನಷ್ಟತೂಕ ಬರುವದು (ಭಾಸ್ಕರ. ೩೮-೯). [ನಷ್ಟ + ತೂಕ]

ನಷ್ಟದಾಸ (ನಾ). ಕೆಟ್ಟ ಆಳು ; ನೀಚನಾದ ಸೇವಕ : ಸೃಷ್ಟಿಯೊಳಗೆ ಬಹುಧನವಂತರ ಮನೆಯ ಮೆಟ್ಟು ಕಂಡರೆ ಬಡದಿಪ್ಪ ದಾಸ ನಾನು ನಷ್ಟ(ನಷ್ಟೆ)ದಾಸನು ಕಷ್ಟದಾಸನು ನಾನು (ವೀರಕ್ಷದೀ. ೭೫-೮). [ನಷ್ಟ + ದಾಸ]

ನಷ್ಟದೃಷ್ಟಿ (ನಾ). ದೃಷ್ಟಿಯನ್ನು ಕಳೆದುಕೊಂಡವನು ; ಕುರುಡ. [ನಷ್ಟ + ದೃಷ್ಟಿ]

ನಷ್ಟದ್ರವ್ಯ (ನಾ). ಕಳೆದುಹೋದ ವಸ್ತು. [ನಷ್ಟ + ದ್ರವ್ಯ]

ನಷ್ಟಧನ (ನಾ). ಕಳೆದುಹೋದ ಸಂಪತ್ತು. [ನಷ್ಟ + ಧನ]

ನಷ್ಟಪರಿಹಾರ (ನಾ). ಆದ ನಷ್ಟವನ್ನು ತುಂಬಿ ಕೊಡುವುದು : ನಷ್ಟ ಪರಿಹಾರ (ದ್ರವ್ಯ); ದುಡ (Damage. ಇಂಇನಿ). [ನಷ್ಟ + ಪರಿಹಾರ]

ನಷ್ಟಪ್ಪ (ನಾ). ಒಬ್ಬಾತನ ಹೆಸರು : ಶನ್ತಪನ ಮಗ ದೇವೆಱಿಯಗೆ ನಷ್ಟಪ್ಪ ಗೊಣ್ಡು ಕೊಟ್ಟನ್ (ಎಕ. VIII, ಸಿರಂಬ. ೫೭೧-೨೯; 692). [? + ಅಪ್ಪ$_1$]

ನಷ್ಟಬಲ (ನಾ). ೧. ಶಕ್ತಿಹೀನ. ೨. ಸೈನ್ಯವನ್ನು ಕಳೆದುಕೊಂಡವನು: ಬಾಣ ವಿಧ್ವಂಸನವಾದ ಮೇಲೆ ನಷ್ಟಬಲನಾಗಿದ್ದ ನನ್ನಿಯ ಗಂಗನಿಂದ ರಾಚವಲ್ಲನು ಕಳೆದು ಹೋಗಿದ್ದ ರಾಜಧಾನಿಯನ್ನು ಕಿತ್ತುಕೊಂಡನು (ಕರ್ಣಅ. ೧೨೨). [ನಷ್ಟ + ಬಲ$_2$]

ನಷ್ಟಮೂಲ (ನಾ). ಬೇರಿಲ್ಲದ್ದು : ಬೇರು ಒಣಗಿದುದು : ಸಸಿಗೆ ನೀರೆಱೆದರೆ ಎಳಕುವುದಲ್ಲದೆ ನಷ್ಟಮೂಲಕ್ಕೆ ಹೊತ್ತು ನೀರ ಹೊಯ್ದರೆ ಎಳಕುವುದೆ ಮಾರಯ್ಯ (ವಚಸಂ. ೩೯೫-೧೮). [ನಷ್ಟ + ಮೂಲ]

ನಷ್ಟರಾಜ (ನಾ). ರಾಜನನ್ನು ಕಳೆದುಕೊಳ್ಳುವಿಕೆ; ರಾಜನೇ ಇಲ್ಲದಂತೆ ಆಗುವಿಕೆ : ಪರಲೋಕಪ್ರಾಪ್ತನಾದೊಡೆ . . . ಆತಂಗೆ ಪರಲೋಕಕ್ರಿಯೆಗಳಂ ಮಾಡಿ ರಾಜ್ಯಂ ನಷ್ಟರಾಜಮಾದುದರ್ಕೆ ಮಱುಗಿ ಯೋಜನಗಂಧಿ ಸಿಂಧುಪುತ್ರನನಿಂತೆಂದಳ್ (ಪಂಪಭಾ. ೧-೮೦ ವ). [ನಷ್ಟ + ರಾಜ]

ನಷ್ಟವೀರ್ಯ (ನಾ). ವೀರ್ಯವು ನಾಶವಾಗುವಿಕೆ ; ಧಾತುಕ್ಷಯ ; ಒಂದು ರೋಗ : ಏಲೇಯಾದಿ ಲೇಹ್ಯ . . . ಅಪಸ್ಮಾರ, ನಷ್ಟವೀರ್ಯ ಮೊದಲಾದ ಸಮಸ್ತ ಪಿತ್ತರೋಗಗಳೂ ಮಾಣುವುವು (ಸಕವೈ. ೪೧೩). [ನಷ್ಟ + ವೀರ್ಯ]

ನಷ್ಟಶತ್ರು (ನಾ). ಶತ್ರುಗಳನ್ನು ನಾಶಮಾಡಿದವನು. ಶತ್ರುಗಳಿಲ್ಲದವನು : ಜಯಶೀಲನಾಗಿ ನಷ್ಟಶತ್ರುವಾಗಿರುವ ನಿನಗೆ ಒಂದು ಯುಗ ಒಂದು ಕ್ಷಣದಂತೆ ಕಾಣುತ್ತಿರಬೇಕು (ಅಗ್ರಹ. ೮). [ನಷ್ಟ + ಶತ್ರು]

ನಷ್ಟಸಂತಾನ (ನಾ). ೧. ಪುನರ್ಜನ್ಮವಿಲ್ಲದವನು ; ಹುಟ್ಟಳಿದವನು : ಕಿಚ್ಚಿನ ದೇವನು ಕೊಡದ ದೇವನು ಮಾರಿಯ ದೇವನು ಮಸಣದ ದೇವನು ತಿರುಕಗೊರವನೆಂದು ಅಲ್ಲಲ್ಲಿ ಒಂದೊಂದನಾಡುತ್ತಿಪ್ಪರಯ್ಯ ನಾ ನಿಮ್ಮ ಪೂಜಿಸಿ ನಷ್ಟಸಂತಾನವಾ[ಪಾಣಾಂ. ನಾ]ಗಿ ಬಟ್ಟ ಬಯಲಲ್ಲಿ ಬಿದ್ದು ಕೆಟ್ಟೆನು (ಅವಚಂ. ೧೩೦-೩೪೫). ೨. ಮಕ್ಕಳನ್ನು ಕಳೆದುಕೊಂಡವನು ; ಮಕ್ಕಳಿಲ್ಲದವನು : ಮುಪ್ಪಿನ ವಯಸ್ಸಿನಲ್ಲಿ ನಷ್ಟಸಂತಾನನಾದ ಅವನನ್ನು ನೋಡಿ ಕೊಳ್ಳಲು ಯಾರೂ ಮುಂದೆ ಬರಲಿಲ್ಲ (ರೂಢಿ). [ನಷ್ಟ + ಸಂತಾನ]

ನಷ್ಟಸಮಾಸ (ನಾ). [ಕಾವ್ಯಮೀ] ಹದಿನೆಂಟು ಕಾವ್ಯದೋಷಗಳಲ್ಲಿ ಒಂದು ; ಪದಸಮುಚ್ಚಯದಲ್ಲಿ ಸಮಾಸವಾಗಬೇಕಾದ ಕಡೆ ಸಮಾಸ ಮಾಡದೆ ಇರುವುದು : ಅಸದರ್ಥಂ ವಿಪರೀತಕಲ್ಪನೆಯಭವ್ಯಂ ದುಷ್ಕರಂ ಗ್ರಾಮ್ಯನೀರಸಮಪ್ರೌಢತೆಯಪ್ರತೀತಿವಚನಂ ದುಸ್ಸಂಧಿವಿಶ್ಲೇಷ ನಷ್ಟ ಸಮಾಸಂ[ಪಾಣಾಂ. ನಂ] ನಯನಾಶನೀತಿವಿಫಲಂ ದುರ್ಲಕ್ಷಣಂ ಹಾಸ್ಯ ವಾಗ್ವಿಷಮಾಸೌಮ್ಯಮನೋಜ್ಞೆಯೆಂಬಿವಿನಿತುಂ ದೋಷಂಗಳಷ್ಟಾದಶಂ (ಛಂದೋಂಬು. ೧-೪೬ ಅಡಿಟಿ). [ನಷ್ಟ + ಸಮಾಸ]

ನಷ್ಟಾಂಬರ (ನಾ). ಉಡುಪನ್ನು ಕಳೆದುಕೊಂಡವನು ; ಬಟ್ಟೆಯಿಲ್ಲದವನು ; ಬತ್ತಲೆಯಾಗಿರುವವನು ; ದಿಗಂಬರ : ಎಲವೋ ನೀ ದಿಟ ವೀರ ತಪ್ಪದು. . . ಕಾದಿ ಬಳಲಿದೆ ತೊಲಗು ನಷ್ಟಾಂಬರನ ಕೊಲ್ಲೆನಕೀರ್ತಿ ಬಹುದು (ಶಾಶಿರಾ. ೨೨-೫೨). [ನಷ್ಟ + ಅಂಬರ]

ನಷ್ಟಾಗ್ನಿ (ನಾ). ಹೋಮಾಗ್ನಿಯು ನಂದಿಹೋದವನು : "ವೀರಹಾ, ನಷ್ಟಾಗ್ನಿಃ—ಉತ್ಸರ್ಗೇಷ್ಟಿಯನ್ನು ಮಾಡಿ ಗಾರ್ಹಪತ್ಯಾಗ್ನಿಯನ್ನು ಬಿಟ್ಟವನ ಹೆಸರುಗಳು" (ಸಿದ್ಧಾಂತಿ. ೨೪೨). [ನಷ್ಟ + ಅಗ್ನಿ]

ನಷ್ಟಾಯ (ನಾ). ಆದಾಯ ಹಾಳಾಗುವುದು ; ಕಡಮೆ ಆದಾಯ : ದುಡಿಯುತ್ತ ಹೋದಂತೆ ಅನುಭವದಿಂದ ಹದ, ಹಿಡಿತ ಒದಗುತ್ತ ಹೋದಂತೆ ಶ್ರಮದ ಉತ್ಪಾದನೆಯು ನಷ್ಟಾಯವಿಲ್ಲದೇ ಹೆಚ್ಚುವ ಸಫಲತೆಯು ಬೆಳೆಯುತ್ತ ಹೋಗುವುದು (ಮಾವಾದ. ೦೩೭). [ನಷ್ಟ + ಆಯ$_7$]

ನಷ್ಟಿ (ನಾ). ೧. ಕೇಡು ; ಹಾನಿ : "ನಷ್ಟಂ, ನಷ್ಟಿಃ, ನಾಶಃ, ನಶ್ಯಃ, ನಾಶ್ಯಃ, ನಷ್ಟವ್ಯಂ, ಈ ೬ ಹೋಕು" (ಶಾಶಕ್ಷ. ೧೮೯) ; ಅಲ್ಲಿಯ ನಷ್ಟಿ ತುಷ್ಟಿಗೆ ಆವುದಕ್ಕೆ ಅರಸು ನಾಡು ಆರು ಹಿಡಿಯ ಸಲ್ಲದೆಂದು (ಮೃಅರಿ. ೧೯೩೨, ೪೨-೩೦ ; 1418) ; ನಷ್ಟಿಯಲಿ ತುಷ್ಟಿಯಲಿ ಮಾನವನು ಬಿಟ್ಟು ಹಿಡಿಯದೆ ಕಾಲಕರ್ಮವ ಮೆಟ್ಟಿ ನಿಲೆ ಭಗವಂತನೆನಿಸುವೆ (ಕುವ್ಯಾಉ. ೪-೮); ನಷ್ಟಿಯಿದು ಸಂಸಾರದೊಳಗುತ್ಕೃಷ್ಟವಿದು . . . ಕಾಲಕರ್ಮದ ಕಟ್ಟಳೆಯಿದೆಂದಱಿದು ನಡೆವಂಗಿಟ್ಟಣಿಸುವುದದಾವುದೈ (ಕುವ್ಯಾಉ. ೪-೨೨) ; ಕಷ್ಟ ವಿಷಯದ ಧ್ಯಾನದಿಂ ಬಹ ನಷ್ಟಿಯನು ವರ್ಣಿಸುವೆ(ನಿಧಾಗ. ೧೦-೨೮-೦೬). ೨. ಕೆಡಿಸಿದುದು ; ಹಾಳುಮಾಡಿದುದು ; ವಿಶ್ರಮಾಡಿದುದು. 'ನಷ್ಟಿಗೈ' ಪರಾ. [ಸಂ.]

ನಷ್ಟಿಗೈ (ಕ್ರಿ). ಕೀಳುಹೊನ್ನಿನ ಬೆರಕೆಯಿಂದ ಹೀನಗೊಳಿಸು,—ವಿಶ್ರಮಣದಿಂದ ಬಣ್ಣಗೆಡಿಸು : ತುಷ್ಟಿಯನೈದಲ್ ವಿಶ್ರವರ್ಣದಿನೂರ್ತಾ ನಷ್ಟಿಗೈದಿರ್ದ ಪೊನ್ನಂ ಸೆಟ್ಟನೆ ತೆಗೆಯಲ್ಕೆ ಬಕ್ಕು ನಷ್ಟದ ಬಣ್ಣಂ (ವೃವಜಾ. ೪೬-೩೪). [ನಷ್ಟ + ಗೈ (< ಕೆಯ್$_1$)]

ನಷ್ಟೇಂದುಕಲೆ (ನಾ). ಚಂದ್ರಕಲೆ ಕಾಣದಿರುವ ಅಮಾವಾಸ್ಯೆ : "ನಷ್ಟೇಂದುಕಲಾ — ಕಾಣಸಲ್ಪಡದೆ ಇರುವ ಚಂದ್ರಕಲೆಯುಳ್ಳ . . . ಅಮಾವಾಸ್ಯೆಗೆ ಕುಹೂ ಎಂದು ಹೆಸರು"(ಸಿದ್ಧಾಂತಿ ೩೬).P ಅಮಾವಾಸ್ಯೆ

ಎರಡು ವಿಧವಾಗಿದೆ. (೧) ದೃಷ್ಟೇಂದು ಕಲೆ. (೨) ನಷ್ಟೇಂದುಕಲೆ. ಚತುರ್ದಶಿಯಿಂದ ಕೂಡಿದ ಅಮಾವಾಸ್ಯೆಯಲ್ಲಿ ಚಂದ್ರಕಲೆಯಿರುವುದರಿಂದ ಅದು ದೃಷ್ಟೇಂದುಕಲೆ. ಇದನ್ನು ಸಿನೀವಾಲೀ ಎಂದು ಕರೆಯುತ್ತಾರೆ. ಚಂದ್ರುಲೆಯಿಲ್ಲದಿರುವ ಅಮಾವಾಸ್ಯೆ ನಷ್ಟೇಂದುಕಲೆ. ಅದನ್ನು ಕುಹೂ ಎಂದು ಕರೆಯುತ್ತಾರೆ. ಎರಡು ದಿನಗಳಲ್ಲಿ ಅಮಾವಾಸ್ಯೆ ಇದರೆ ಮೊದಲನೆಯದು ಸಿನೀವಾಲಿ, ಎರಡನೆಯದು ಕೂಹೂ ಆಗುತ್ತದೆ ಎಂದು ವೇದದಲ್ಲಿ ಹೇಳಿದೆ. ಈ ತಿಥಿಗಳ ಅಧಿದೇವತೆಗಳಿಗೂ ಇದೇ ಹೆಸರಿದೆ. ಇವರಿಬ್ಬರೂ ಅಂಗೀರಸಮುನಿಯ ಮಕ್ಕಳು, ದೇವಪತ್ನಿಯರು ಎಂದು ರುಕ್ತದಲ್ಲಿದೆ. ಈ ಎರಡು ತಿಥಿಗಳಲ್ಲೂ ಜನನವಾ ಅನಿಷ್ಟವುಂಟಾಗುವುದರಿಂದ ಶಾಂತಿ ಮಾಡಿಕೊಳ್ಳಬೇಕೆಂದು ಶಾಸ್ತ್ರವಚನಗಳಿವೆ.

[ಸಂ. ನಷ್ಟೇಂದುಕಲಾ]

ನಷ್ಟೇಂದ್ರಿಯ (ನಾ). ೧. ಪಂಚಜ್ಞಾನೇಂದ್ರಿಯಗಳ ಶಕ್ತಿಯನ್ನು ಕಳೆದುಕೊಂಡವನು. ೨. = ನಷ್ಟವೀರ್ಯ : ಅಂತರದಾವರೆ : – ಈ ಎಲೆಯ ರಸವಂ ಸಕ್ಕರೆ ಬೆರೆಸಿ ತೆಗೆದುಕೊಳ್ಳಲು ನಷ್ಟೇಂದ್ರಿಯ ಗುಣ (ವಿಷ್ಣುವಿ. ೧). [ನಷ್ಟ + ಇಂದ್ರಿಯ]

ನಷ್ಟೋದ್ಧಾರ (ನಾ). ಶಿಥಿಲವಾದುದನ್ನು ಕಟ್ಟಿಸಿ ಸರಿಪಡಿಸುವುದು ; ಜೀರ್ಣೋದ್ಧಾರ : ಶ್ರೀರಾಮೇಶ್ವರದೇವರ ಗೋಪುರದೊಳಗಣ ನಷ್ಟೋದ್ಧಾರಕ್ಕಂ ಕೊಟ್ಟರು (ಕಇಅ. ೦-೧-೧೦ ; 1092). [ನಷ್ಟ + ಉದ್ಧಾರ]

ನಸಕು 'ನಸುಕ್ಕು$_3$' ನೋ.

ನಸನಸೆ 'ನಸೆನಸೆ' ನೋ.

ನಸಗುನ್ನಿ 'ನಸುಗುನ್ನಿ' ನೋ.

ನಸರ್ 'ನಜರು' ನೋ.

ನಸರಾಣಿ 'ನಸ್ರಾಣಿ' ನೋ.

ನಸರಿ (ನಾ). ಒಂದು ಬಗೆಯ ಜೇನು ; ಮರದ ಪೊಟರೆಗಳಲ್ಲಿ ಕಟ್ಟುವ ಜೇನು : ದತ್ತನು ಮಗನಲ್ಲ ಧಾವಳಿ ಮಡಿಯಲ್ಲ . . . ಚಾವಡಿ ನೆಲೆಯಲ್ಲ ನಸರಿಯು ಜೇನಲ್ಲ ಬಾಣಂತಿ ಚೆಲುವೆಯೇನಲ್ಲ (ಇಂಡಾಪ. ೦೭೦-೪೨). 'ನಸರಿಹುಳ' ಪರಾ. [←ಹಿಂ. ನಸರೀ]

ನಸರಿತುಪ್ಪ (ನಾ). = ನಸರಿ : ಪುತ್ತಿನೊಳಗಿರ್ದ ತುಡುವೆಜೇನಂ, ಮರದ ಬಿರುಕಿನೊಳಗಣ ನಸರಿತುಪ್ಪಮಂ ಬಂಡೆಯಿಂ ಜೋಲ್ವ ಹೆಜ್ಜೇನ್ಗಳಂ ಕಿಳ್ತರೊಪ್ಪಂಮಾಡಿ ಪಣ್ಪಲಂಗಳನೂಡಿ ಬನದೌತಣವನುಂಡರನಿಬರುಂ (ಶ್ರೀರಾಮಾ. ೩೬೬-೧೩೨). [ನಸರಿ + ತುಪ್ಪ]

ನಸರಿಹುಳ (ನಾ). ನಸರಿ ಎಂಬ ಜೇನನ್ನು ಕೂಡಿಡುವ ಜೇನ್ನೊಣ : (ಕ).

[ನಸರಿ + ಹುಳ (<ಪುಟು)]

ನಸರು 'ನಜರು' ನೋ.

ನಸರುಬಂದಿ, ನಸರ್ಬಂದಿ (ನಾ). ನಿರ್ದಿಷ್ಟಸ್ಥಳದಿಂದ ಹೋಗದಂತೆ ಹಿಡಿದು ಹಾಕುವ ಶಿಕ್ಷೆ.-ಬಂಧನ; ಸ್ಥಾನಬದ್ಧತೆ: ಕಂಪನಿ ಸರ್ಕಾರದವರು ವೆಂಕಟಪ್ಪಾಜಿ, ತಂಜಾವೂರ ನಾಯಕ ಮೊದಲಾದವರನ್ನು ಅಕಸ್ಮಾತ್ತಾಗಿ ಬೆಂಗಳೂರಿಗೆ ಸಾಗಿಸಿ ನಸರುಬಂದಿಯಲ್ಲಿಟ್ಟರು (ಕುರಾಚ. ೪೫). ನಸರ್ಬಂದಿ: ಅದಕ್ಕೆ ಸಂಬಂಧಪಟ್ಟ ಜನರನ್ನು . . . ಹಿಡಿದು ನಸರ್‌ಬಂದಿಯಲ್ಲಿಡುತಾ ಇದಾರೆಂದು ಅಲ್ಲಲ್ಲಿ ಜನರು ಹೇಳಿಕೊಳ್ಳುತಾ ಬಂದರು (ಮುಸುಗ. ೧೪೭). 'ನಜರುಕೈದು' ಪರಾ.

[ನಸರು (<ನಜರು) + ಬಂದಿ$_1$/ಹಿಂ. ನಜರ್ಬಂದೀ]

ನಸರ್ಬಂದಿ 'ನಸರುಬಂದಿ' ನೋ.

ನಸವೆ (ನಾ). (?) : ಕೊಟ್ಟ ನೆಲಂ ಮತ್ತರ್ಪ್ಪೇರೂರೊಳಯ್ನೂಱು ಮನೆಯಯ್ವತ್ತು ಪೂವಿನ ತೋಂಟ ಮತ್ತರೆರಡು ಚತುಸ್ಸೀಮೆ (ಪಾ ಪರ್ಯ್ಯಂತಮೆರಡುಂ ನಸವೆ ರಾಜಾ(ಜ) ರಕ್ಷಿತಂ ಧರ್ಮ್ಮ (ಇಅ. XVIII, ೨೬೪-೩೭ ; 1022). [?]

ನಸಿ$_1$ (ಕ್ರಿ). ೧. ಹಾಳಾಗು ; ನಾಶವಾಗು ; ಅಳಿದುಹೋಗು : "ನಸಿ – ಜೀರ್ಣೇ, ನಷ್ಟಚೇಷ್ಟಾಯಾಂ ಚ (ನಿಶ್ಚೇಷ್ಟಿತನಾಗು)" (ಶಮಧಾ) ; ಎಸೆವ ತ್ರಿಪುಂಡ್ರಾಂಕ ಭಸಿತ ರುದ್ರಾಕ್ಷೆ ಜಪ ಶಶಿಧರಾರ್ಚನೆ ಹೋಮ ತಪವನಿತುವುಂ ನಸಿದು ಹೋಹವು ದೀಕ್ಷೆವೊಸಗೆಯಿಲ್ಲದೆ ನರಂಗುಸುರ್ದ ಭೀಮಾಖ್ಯ ತಂತ್ರಾಗಮವದಂ (ಸಾನಂಚ. ೩-೧೩) ; ದುಷ್ಟಪ್ರಸರದೇಳಿಗೆ ಪಾಪಿಯೋಲಗ ಹುಸಿಯ ಬಾಳುವೆ ಹುದುವಿನಾರಂಭದ ಫಲೋದಯವು ನಸಿದು ಹೋಗದೆ ಲೋಕದೊಳಗವು ಹೆಸರುವಡೆವವೆ (ಕುಮ್ಯಾಅ. ೮-೪೮) ; ಝಳದ ಸುಯ್ಲಿನ ಮುಖದ ಮೋನದ ನೆನಹುಗಳ ಕಳಿದ ಕಡುಹಿನ . . . ನೃಪತಿಗಳನಗ್ಗಳೆಯ ರವಿಸುತ ಕಂಡು ಹೊಗಳಿದನಾ ಫಟೋತ್ಕಚನ (ಕುಮ್ಯಾದ್ರೋ. ೦೬-೨೦) ; ನಸಿಯದಿರದಿನ್ನಸುರವಂಶದ ಸಸಿಯ ಬೆಳಸೆನುತ (ತೊರರಾ. ೩-೮-೫೦) ; ನೋಡಲು ನಸಿದು ಪೋಪುದು ಪಾಪವೆಂದು ಕೊಂಡಾಡಿದರ್ ಕುಶಲಜ್ಞರೊಲಿದು (ಮೋಹತ. ೪೨-೩೩) ; ವಿಷಮವಹ ಮನಸಿನ ವಿಕಲ್ಪದಲೆಸೆದು ತೋಱುವ ನಾಮರೂಪಿನ ವಿಸರವಹ ಭೇದ ಸಸಿನೆ ಗುರುಮುಖದಿಂದ ತಿಳಿಯಲು ನಸಿದು ಪೋಪುದು ಸ್ವಪ್ನದಂದದಿ (ಅಮೃತ. ೮-೨೭). ೨. ನವೆ ; ಸೊರಗು ; ಕೃಶವಾಗು ; ಬಡವಾಗು : ಒಡಲುಳ್ಳನಿತುಂ ನಸಿದೊಡೆ ಬಿಡಲಾಱಂ (ಸಮಪ. ೩-೪) ; ನಸಿದು ಬೆಳೆಯದೆ ಕೊಬ್ಬಿ ಮೊಡ್ಡಿತಹ ತೆನೆಗಳೊಳು (ಸಿದ್ಧರಾ. ೨-೨೯) ; ನಸಿವ ಮುಪ್ಪಿನ ದೇಹ ತಾನದು (ಕುಮಾಅ. ಓರಿಇ. ಪರಿ. ೩೩೩) ; 'ನಸಿಗುತ್ತ', 'ನಸಿಬೇನೆ' ಪರಾ. ೩. ಮೈ ಮರೆ ; ನಿಶ್ಚೇಷ್ಟಿತನಾಗು : "ನಸಿ – ಜೀರ್ಣೇ" ನಷ್ಟಚೇಷ್ಟಾಯಾಂ ಚ (ನಿಶ್ಚೇಷ್ಟಿತನಾಗು)" (ಶಮಧಾ). ೪. (ಭಾರದಿಂದ) ಬಾಗು ; ಕುಗ್ಗು ; ಕುಸಿ : ಕೊರಲ್ ನಸೆ[ಸಿ]ಯೆ ನಟ್ಟು ನಿಲೆ ಕಿವಿ ಬಸಿಱಕ್ಕುಟಿಸೆ ದಡದಡಿಸಿ ಕಾಲ್ಗಳನೆಟ್ಟೆಯೆ ತುರಂಗಮದ ಕುತ್ತಮದು ಮೃಗಜಂಭದ (ಅಶ್ವಶಾ. ೧೩-೩೩) ; ಕುಸಿಯನೇ ಕೂರುಮನು ಭಾರಕ್ಕೆ ನಸಿಯನೇ ನಾಗೇಂದ್ರನಾನೆಗಳುಸುರು ಹದುಳವೆ ನೋಡೆನಲು ಬಂದುದು ನೃಪವ್ರಾತ (ಕುಮ್ಯಾಉ. ೨-೧೯) ; ಫಣೀಶ್ವರನ ಪೆಡೆಗಳ್ ಮಣಿದುವಾದಿ ಕೂರ್ಮಂ ನಸಿದ ಸರಸಿಜಭವಾಂಡ ಖರ್ಪರಮನುಱ್ ಕರ್ಚಿದ (ಜಿಬಪು. ೨೬-೧೧) ; ಭೋಗಿಪನ ಭೋಗಂ ನಸಿಯೆ ದೆಸೆಗೊಡೆಯರ್ ಸರಿಯೆ . . . ಸಬ್ಬನಬ್ಬರಂ ಕಡಿದಾಯ್ತು (ರಾಮಾಶ್ವ. ೦೩೧-೨೬). ೫. ಒಡೆ ; ಸೀಳು ; ಛಿದ್ರವಾಗು : ನಸಿದುದಾತನ ವರ್ಮ ಕರ್ಮವನುಸುರ್ವ ಬಲುಗೊಂಡೆಯ ತನವು ನಿಪ್ಪಸರದಲಿ ಜಡಿದಿಟ್ಟನೀತನಾತುಕೋಯೆನುತ (ತೊರರಾ.೬-೪೭-೦೦). ೬. ಬಳಲು ; ಆಯಾಸಗೊಳ್ಳು ; ಉತ್ಸಾಹಗುಂದು : ಹಸಿದವೆಂಬರು ಕೆಲರು ತೃಷೆಯೆಂಬವರ್ಕೆಲರು ನಸಿದವೆಂಬರ್ಕೆಲರು ಛಳಿಯೆಂಬವರ್ಕೆಲರು (ಸಾನಂಚ. ೪-೧೯೬ ರಗಳೆ) ; ನಂದಿಯ ನೋಡಿ ನೀಂ ತಪಕೆ ನಿಶ್ಚಲಚಿತ್ತನಾದ ಕಾರಣಮದೇನುಸಿರೆನಲ್ ನಸಿದ ಮಾನಸನುಸಿರ್ದನು (ನಂದಿಮಾ. ೯-೫೬). ೭. ಕಂಗೆಡು ; ದಿಕ್ಕುತೋಚದಂತಾಗು : ಘಾಯವಾಯ್ತರ್ಜುನಗೆ . . . ಬಾಯ ಬಿಟ್ಟುದು ಭೀತಿಯಲಿ ಕೌಂತೇಯಸುತರಿನ್ನುಳಿದ ಸುಭಟರ ನಾಯಕರ ಪಾಡೇನು ನಸಿದುದು ಪಾಂಡುಸುತಸೇನೆ (ಕುಮ್ಯಾದ್ರೋ. ೧೮-೪೯) ; ಕೂಡೆ ಹಱಿಹಂಚಾದ ಸುಭಟರು ಕೂಡಿಕೊಂಡುದು ನೊಂದು ನಸಿದವರೋಡಿದವರೊಗ್ಗಾಯ್ತು ಕುರುರಾಯನ ಪರೋಕ್ಷದಲಿ (ಕುಮ್ಯಾಗ. ೧-೬೬) ; ಮಬ್ಬಿನೊಳಗಾಚರಿಸಿ ಕೆಡೆವರಿಂ ಮಡಿವರಿಂ . . . ಒಬ್ಬೊಬ್ಬರಿಂತಾಗಿ ಬೀಳ್ವರಿಂ ದೇಳ್ವರಿಂದೆಬ್ಬಿಸಲ್ ದಿಕ್ಕಿಲ್ಲದಳಿವರಿಂ ಕೊಳೆವರಿಂ ಸಬ್ಬಲೋಕದೊಳೆ ಜಾನಿಸುವರಿಂ ನಸಿವರಿಂ ಪೇಳಲದ್ಭುತಮಾದುದು (ಜಿಬಪು. ೪೬-೨೦). ೮. (ಅಂತರಂಗದಲ್ಲಿ) ಮಾತ್ಸರ್ಯ ಪಡು ; ಕರುಬು : ಗೋಕದಂಬವ ನೋಡುವುದು ನೆವ ಕುರುಪತಿಯ ಗಾಢದ ಸಗಾಢಿಕೆಯ ನೋಡಿ ನಸಿಯಲಿ

ಪಾಂಡುಸುತರು (ಕುವ್ಯಾಅ. ೧೭-೨೦). ೯. ತಗ್ಗು ; ಕಡಮೆಯಾಗು ; ಇಳಿ : ನಸಿದ ಗರ್ವದ ನೆಗ್ಗಿದಾತ್ಮನದೆಸಕದೊಣಗಿಲಬಾಯ ಭೂಪನ ಕಂಡನಾ ದ್ರೋಣ (ಕುವ್ಯಾದ್ರೋ. ೫-೨೧) ; ಮುರಿಮುರಿದು ಕಬ್ಬೊಗೆಯ ಹೊದಱಿನ ಹೊರಳಿ ಹರೆದುದು ಸೂಸುಗಿಡಿಗಳ ನೆರವಿ ನಸಿದುದು ನಿಮಿರ್ದ ಹೊಂಗಱಿ ಯಂಬು ಹೊಳೆಹೊಳೆದು ಮುರಹರನ ಪಾದಾರವಿಂದದ ಹೊರೆಯೊಳಡಗಿತು (ಕುವ್ಯಾದ್ರೋ. ೧೯-೫೦); ನಸಿದ ಕಾಮವ ಪೆರ್ಚಿಸುವ ದಿವ್ಯಘುಟಿಕೆಯ ಹಸುರ್ಗರಡಿಗೆಯೊಳು ತುಂಬಿ ರಸೆಯೊಳು ಮೆಱಿಸಲು ಕಟ್ಟಿದಂದದಲಿ ಕಣ್ಗೆಸೆದುವು ಪೂಗವೃಕ್ಷಗಳು (ಪೋಪಚ. ೨೪-೪೩) ; ಹೇಮಂತ ಶೈಶಿರದ ಮಾಗಿ ಮಡಲಿಡೆ . . . ಬಸಿಲ್ ಬೆಳ್ದಿಂಗಳವೊಲಾಗೆ ತಾಮರಸರಾಜಿ ನಸಿದುವು ಕುಗ್ಗಿದುವು ಕೋಗಿಲೆಯ ಕಂಠಕಲರವಗಳು (ಶೃಮಿಧಾ. ೨೮-೦). ೧೦. ಕಳೆ ; ಮಂಗು ; ವ್ಯತೀತವಾಗು : ನಸಿದ ಯುಗದವಸಾನದ ಲಳಿ ಮಸಗಿ ಲಯಶಿಖಿ ಶಿಖಿಯೊಳಗೆ ಲಂಬಿಸುವವೊಲು ಹಳಚಿದವು ಬಲವೆರಡಳುಕಿ ಭುವನಚಯ (ತೊರರಾ. ೬-೧೩-೩೨) ; ಹುಸಿಯದೈ ನಾಲ್ವತ್ತು ವರುಷವು ನಸಿದುಪೋಪವುಯಪ್ಪಲಗ್ನದೊಳೆಸೆಯ ಮಂದಿಗಳಿಂದು ಸುತಸಂಬಂಧ ವಾಗಿರಲು (ಕೇರಪ್ರ. ೨-೩೦). ೧೧. ಹಾಳಾಗು ; ಕೊಳೆತುಹೋಗು ; ಕೆಡು : ಹಸಿಯ ಕಾಯ ಕೊಯ್ದು ತಂದು ಬಸಿಯ ತೋಱಿ ಮುಸುಕಿ ಇಡಲು ನಸಿದು ಕೆಡುವದಲ್ಲದದುವೆ ಪಕ್ವವಪ್ಪುದೆ (ಸುಸಾರ. ೭೩-೨) ; ನಸಿದ ಬೆಣ್ಣೆ ಗಸಿ ಹಾಗೆ (ಗಾದೆ).

ನಸಿದಾಡು = ಹಾಳಾಗು ; ಕೆಡು : ಹಸಿದುಂಬ ಅಣ್ಣಗಳೆಲ್ಲರು ಅಸುವಿನ ಘಾತಕ್ಕೊಳಗಾದರು ಹಸಿಯ ವಿಷಯಂಗಳಲ್ಲಿ ನಸಿದಾಡದೆ ಹುಸಿಯದೆ ಮರ್ತ್ಯರಂತೆ ಗಸಣಿಗೊಳ್ಳದೆ ದಯದೆಱಕದಲ್ಲಿರು ಬಂಕೇಶ್ವರಲಿಂಗವನಱಿ ವುದಕ್ಕೆ (ಸುಂಕಬಂ. ೬೫೮-೩೯).

[ದೇ.II ತಮಿ. ನಚೆ; ಕುರುಖ್. ನಸ್ರನಾ./ಸಂ. ನಶ್]

ನಸಿ₂ 'ನಸೆ₁' ನೋ.

ನಸಿ₃ 'ನಶ್ಯ' ನೋ.

ನಸಿಕ (ನಾ). ಸೊರಗಿದವನು ; ಬಡವಾದವನು ; ಕೃಶಾಂಗ : ನಸಿಕಂ, ನಸೆ ಇತಿ ವಯಸಾ ವ್ಯಾಧಿನಾ ಕೃತ್ರಿಮವಿಷೇಣ ವಾ ಜೀರ್ಣಂ ಗಾತ್ರಂ ತದ್ವಾನ್ (ಶಬ್ದಾನು. ೪೪೦ ವ್ಯಾಖ್ಯಾ) ; ಬಾರಿಕಂ, ನಸಿಕಂ, ಕುಸಿಕಂ (ಶಬ್ದಾನು. ೪೪೦ ಪ್ರಯೋ). [ನಸಿ₁ + – ಕ₃]

ನಸಿಗ (ನಾ). = ನಸೆಗಾಱಿ : ನಸಿಗನೊಳಗ್ಗದ ನಸಿಗಂ ಬಸನಿಗಳೊಳ್ಮಿಕ್ಕ ಬಸನಿಗಂ . . . ಸತ್ಪಳಮಂ ನಿಯಮಿಸಿ ಧರ್ಮಪಥಕ್ಕೆದಂದು ನಿಲಿಪರೆ ಲೋಗರ್ (ಸಮಪ. ೭-೩೦). [ನಸಿ₂ (<ನಸೆ₁) + – ಗ₂]

ನಸಿಗುತ್ತ (ನಾ). ಶರೀರ ನವೆಯುತ್ತ ಹೋಗುವ ಒಂದು ರೋಗ : ಎಸೆವಾ ವ್ರತಮಂ ಪ್ರತಿಪಾಳಿಸುತ್ತುಮಿರ್ದಂಗದೊರ್ಮೆ ಕರ್ಮದ ಬಸದಿಂ ನಸಿಗುತ್ತಂ ಪತ್ತಿ ವಿವರ್ಧಿಸುತಿರ್ದುದು ಬಂಧುಜನದ ಮನದುಮ್ಮಳಮಂ (ವರ್ಧಪು. ೦೬-೫೬). [ನಸಿ₁ + ಕುತ್ತ]

ನಸಿನಸಿನಗೆ (?). (?) : ಬಸವಳಿದು ಮಱುಗದಿರ್ ನಿರ್ನೆರಂ ಭರತ ನೋಯಿಸುವರಾರ್ ನೋವರಾರ್ . . . ಸುಖದುಃಖವಿರದೆ ಪಗಲಿರುಳಂತೆ ಸಹಜಮಿದು ಪುಟ್ಟಿದರ್ಗೆ ಬೆಸನವಿಂತೆಮಗೆ ನಾಣ್ಣುಡಿಗೆ ನಿನ್ನಿಂದೊದಗೆ ನಸಿನಸಿನಗೆಮ್ಮತ್ತಣಂ ತೋಱಿ ಲೋಕದಾಯಸಕೊರ್ವನೊರ್ವನಂ ದೂಱಿ ಮರುಳಾಗದೇಂ ಬಲ್ಲವರ್ಗಂದೊರೆದಳು (ಶ್ರೀರಾಮ. ೪-೩೫). 'ನಸೆನಸೆ' ಪರಾ. P ಇಲ್ಲಿ ಪಾಠದೋಷವಿರುವಂತೆ ತೋರುತ್ತದೆ. [?]

ನಸಿಬ 'ನಸೀಬು' ನೋ.

ನಸಿಬೇನೆ (ನಾ). = ನಸಿಗುತ್ತ : ಮೂರನೆಯ ಕಂಪೌಂಡಿನೊಳಗಿಂದ ನಸಿಬೇನೆ ಹತ್ತಿದ ಸಪ್ಪಗಿನ ಮುಖದ ಒಬ್ಬ ತರುಣನು . . . ಬರುತ್ತಿದ್ದನು (ಮುಳ್ಳುಬೇ. ೦೭). [ನಸಿ₁ + ಬೇನೆ]

ನಸಿಮೆಯ್ (ನಾ). ಸೊರಗಿದ ದೇಹ ; ಬಡವಾದ ಮೈ : ಮಿಸುನಿಯ ಮೆದೆಗಳಸಟ್ಟೆಯ ನಸಿಮೆಯ್ಯಂ ಸೊಬಗನೊಡಲ ಸೋಂಕಿದೆನ್ನಂ ಪಸ ಗೆಯ್ಮೆಯ ಚಳಕದೆ ಸಂತಸವಡೆದನುಪದಿಪ ಕೆಳೆಯನನುವಿಂ ತಣಿಸಾ (ಚಕವಿ. ೬-೧೧೩). [ನಸಿ₁ + ಮೆಯ್]

ನಸೀಬ 'ನಸೀಬು' ನೋ.

ನಸೀಬವಾನ (ನಾ). ಅದೃಷ್ಟಶಾಲಿ ; ಸಂದೈವಿ : ನಿನ್ನ ನಸೀಬ ಚೆನ್ನಾಗಿದೆ ಹಾಂ ! ನೀನು ನಿಜವಾಗಿಯೂ ನಸೀಬವಾನನು (ಜೀನಬಾ. ೦೩).

[← ಮರಾ. ನಸೀಬಾವಾನ, ನಶೀಬವಾನ]

ನಸೀಬು, ನಶೀಬ, ನಶೀಬು, ನಸಿಬ, ನಸೀಬ (ನಾ). ೧. ಹಣೆಬರಹ ; ದೈವ; ಅದೃಷ್ಟ: ಎಲ್ಲಾ ಅವರವರ ನಸೀಬು ಕಣ್ರಪ್ಪಾ (ಮಾಮನಿ. ೧೬); ಇನ್ನು ಅವನ ನಸೀಬಿನಲ್ಲಿದ್ದಂತಾಗಲಿ ಎಂದು ಅವಳೂ ಸುಮ್ಮನಾದಳು (ಮಸಕೂ. ೯); ನಿಮ್ಮ ನಸೀಬು ಗಟ್ಟಿಯಾಗಿತ್ತು ಬದುಕಿಕೊಂಡಿರಿ (ವಿದ್ಯಾರಿ. ೮೨). ನಶೀಬ: ೧. ಏನು ಮಾಡೋದು, ಆಕೆಯ (ದೀಪಹ. II,೦೩); ನಶೀಬ ಬೊಟ್ಟೆ ಅದ (ಕಾಗಿಕ. ೬೨) ; ಅವರವರ ನಶೀಬಾ ಅವರವರ ಸುತ್ತ "ಮಂದೀ ನಶೀಬ ಏನಾದನೋ ಏನೊ!" ಎಂದು ತಂದೆ-ತಾಯಿಗಳಿಬ್ಬರೂ ಚಿಂತೆಗೊಳಗಾದರು (ನಡದಾ.II,೧೨೭೭). ೨. ದುರದೃಷ್ಟ ; ದುರ್ದೈವ ; ದೌರ್ಭಾಗ್ಯ : ನನಗ ಒಬ್ಬಗ ಹಂಗ ಬರಿ ಕೈಲೆ ಕಳಸಬೇಕು ಅಂಥ ತಮ್ಮಂಥವರ ವಿಚಾರಮಾಡಿದರ, ಅದು ನನ್ನದ ನಶೀಬ ಅಂದು ಕೊಳ್ಳಲ್ಯೊ (ಗಂಮಾಯಿ. ೦೦೭) ; ನನ್ನ ನಶೀಬ ನೋಡು ನಾ ಹೋದಾಗಲೇ ಇಂತಹ ಪುರಾಣ ನಡೆಯಬೇಕೆ? (ಮೂರುದಾ. ೪೨) ; ಸಂಸಾರದಾಗಿಂದ ಹೀಂಗ ಏಕಾಏಕೀ ಎದ್ದು ಹೋಗಬೇಕೆಂದರ ದೈವ, ನಶೀಬ (ಕ್ಷತಿಜ. ೫೬). ೩. ಸಂದೈವ ; ಸೌಭಾಗ್ಯ : ಏನೋ ಯಾರ ಜೀವಕ್ಕೂ ಧಕ್ಕೆ ಆಗಲಿಲ್ಲ ನಶೀಬ (ಕಮ್ಮಟ. ೪೩). ನಶೀಬು : ೧. ಇವತ್ತಿನ ನಶೀಬು ಖರಾಬಾಯಿತು (ಜೀಂಗೂಲಿ. ೮೨) ; ಅವಳ ನಶೀಬಿನಲ್ಲಿ ಮದುವೆ ಬರೆದಿಲ್ಲವಾದುದರಿಂದ ಹೀಗೆಲ್ಲ ವಿಪರೀತವಾಯಿತು (ಸ್ವಪ್ನಹೊ. ೩೦೬) ; ಯಾವುದಕ್ಕೂ ಬೂದ ಮರಕಾಲನ ನಶೀಬೇ ಕಾರಣ (ಹೊಸಕ್ಷಿ. ೫೩). ನಸಿಬ : ೧. ಮುಖ್ಯ ನನ್ನ ಶೇಷನ ನಸಿಬ ಬಹಳ ಬೊಟ್ಟೆ(ಮುತ್ತೈದೆ. ೬); ನಸಿಬದಾಟದ ಮುಂದ ಯಾವ ಮಾಟವೂ ಏನ (ಕನ್ನಜಾ. ೩೪೬). ೩. ಕಾವೇರಮ್ಮನ ನಸಿಬ ದೊಡ್ಡದು (ರಂಗರೋ. ೬೭). ನಸೀಬ : ೧. ಯಾರ ನಸೀಬದಾಗ ಏನು ಬರೆದೈತ್ಯೋ ಯಾರಿಗ್ಗೊತ್ತು (ಜೀದಾನ. ೭೦) ; ನಸೀಬದಾಟವನ್ನು ಈ ಲಾವಣಿಯಲ್ಲಿ ಕಾಣಬಹುದಾಗಿದೆ (ಕನ್ನಜಾ. ೯೦) ; ನಿನ್ನ ನಸೀಬಾನೇ ಭಾಳ ಬೊಟ್ಟೆ (ಚಿವರಿ. ೦೭). ೨. ಒಂದು ಸಾಕುಮಾಗನನ್ನ ಮಾಡಿಕೊಂಡಿದ್ದರ ನಮ್ಮ ನಸೀಬಕ್ಕೆ ಅವನ್ನ ಮುಂಬಯಿ ಯಾಗ ತುಡುಗು ಮಾಡಿಕೊಂಡು ಹೋಗಬೇಕ (ಮೇದಿಮ. ೨೦೪) ; ನನ್ನ ನಸೀಬ (ಪಾರೂ ಅಳುಮುಖ ಮಾಡುವಳು) (ಕುಂಕುಮ. ೦೭); "ಮದುವೆ ಯಾಗುವುದಕ್ಕೆ ನಸೀಬ ಬೇಕು" ಎಂದು ತಿಳಿದ ಅನೇಕ ದುರ್ಭಾಗ್ಯ ಹುಡುಗಿ ಯರಲ್ಲಿ ಅವಳೂ ಒಬ್ಬಳಾಗಿದ್ದಳು (ಪಕ್ಷಿನ. ೨೭).

ನಶೀಬು ತೆಗೆ = ಅದೃಷ್ಟ ಖುಲಾಯಿಸು ; ದೈವ ಕಣ್ಣುಬಿಡು : ಪೆರೀ ಸಾಹೇಬರಿದ್ದರೆ ಪಾತ್ರೀಯಾಗಿ ಮಗನ ನಶೀಬು ತೆಗೆಯುತ್ತಿತ್ತು (ಗೀಕುಗೆ. ೨೦). [← ಅರ. ಹಿಂ. ನಶೀಬ್; ಮರಾ. ನಸೀಬ್, ನಶೀಬ್]

ನಸೀಯತ್ತು 'ನಶಿಹತ್ತು' ನೋ.

ನಸು₁ (ಗು). ೧. ತುಸು ; ಕೊಂಚ ; ಸ್ವಲ್ಪವಾದ : ದೀರ್ಘಾಕಾರಂ ಸುಬುದ್ಧಿ ಮೇದಸ್ಸಾರಂ ನಸು ಕೆಂಚತಲೆಯನಕ್ಕುಂ ಜೀವಂ (ಜಾತಕ. ೨-೨೩) ; ಬಲಿದ ತೂಪಿಕೆಗಳ ನಸು ಬೆದಱಿಂಲಹುಗಳ ಜವವೆದ್ದ ಝೊಮ್ಮಿನ ಬಲೆಗೆ ಸಿಲುಕಿದ ಬಲವಸರ್ಜನದೇವನೀಕ್ಷಿಸಿದ (ಕುವ್ಯಾದ್ರೋ. ೦೭-೪) ; ಪರಿಮಳದ ಪಸರಿಕೆಯ ಕುಸುಮೋತ್ಕರದ ನಸುಮಿಡಿಗಾಯಿ ಕಸುಗಾಯ್ ದೋರೆಗಾಯಿಗಳ . . . ಪ್ರಮುಖ ಭೂಜದಿನೆಸೆದುದುದ್ಯಾನ

(ತೊರರಾ.೦-೯-೦೨); ಭೂಗೋಲ ತಾರಾಂಬರಾದಿಗಳನಣವಾಡಿ ಬಿಗಿದು ನಸು ಸಡಿಲವನು ಮಿರಿಸಿ ಕುಣಿಸುತಿರುವನು . . . ಪರಬೊಮ್ಮ (ಮಂಕುಶ. ೮೪); ಕಣ್ಣಿಗೆ ನಸುಜಂಪು ಬಂದಂತಾಗಿತ್ತು (ಅಶೋಕ. ೩೭). ೨. ಮಂದವಾದ; ದಟ್ಟವಾದ. 'ನಸುಕಾಂತಿ' ಪರಾ. ೩. ಚಿಕ್ಕದಾದ; ಸಣ್ಣ. 'ನಸುಗಾಯ್', 'ನಸುದಱಿ' ಪರಾ. ೪. ತಿಳಿಯಾದ; ದಟ್ಟವಲ್ಲದ. 'ನಸುಗಾವಿ' ಪರಾ. [ದೇ.॥ ತಮಿ. ನಚ್ಚು; ಮಲ. ನನು]

ನಸು$_2$ (ಅ). ೧. ಸ್ವಲ್ಪವಾಗಿ; ಕೊಂಚವೆ: ಹೋಮಧೂಮದ ಗಂಧಂ ನಸುಮುಟ್ಟೆ ದಿವ್ಯಮ[ಖ]ಮಂ ಕೆಯ್ಯೊಂಡು ಸಗ್ಗಕ್ಕೆ ಪಾಱುವಾ ಪಾರಿವ ಜಕ್ಕವಕ್ಕಿಗಳದೇಂ ಪೆಂಪೋ ಮಹಾಯಜ್ಞದಾ (ಪಂಪಭಾ. ೬-೩೮); ಸೊಗಯಿಸುವ ಪಾಲೆಯಿಂ ನಸುಜಗುಳುತ್ತಿರೆ ಕರ್ಣಪೂರಪಲ್ಲವಂ (ಕಾದಂಪೂ. ೫೨); ನಸುಪೊಂಗಿರ್ದಳ್ಳಿಗಳ್ ತೋಱೆ (ಲೋಕೋಪ. ೦೧-೭); ನಡೆನಡೆದು ನಸುಬಳುಂಕುತ್ತೆಡಬಲನಂ ನೋಡಿ (ಗಿರಿಕ. ೦-೮೫); ಆ ಪುರದಜನವಱಿಯದಂತಿರೆ ಕಾವುರುಷನಳವಡಿಸಿದನು ನಸುದೀಪ ತಾಗಿದೊಡೇಕರೂಪಹ ರಾಜಧವನವನು (ಕುಮಾಅ. ೮-೬೬); ನೀನು ನೆರಹಿದ ಸುಕೃತ ಫಲವದನೇನ ಹೇಳುವೆನಿತ್ತಲುಗ್ಗಡದಾನೆ ಬಿದ್ದುದು ಕಾದಿ ನಸುಸೊಪ್ಪಾದುದರಿಸೆ:ನೆ (ಕುಮಾದ್ರೈ. ೪-೦); ನಸು ಕಣ್ತೆರೆದು ನಿಟ್ಟಿಸಿದರೆ ಮುಂದೆ ನಿಂತ ಗೌರಿ ಮೊರೆಯಿಡುತ್ತಿದ್ದಾಳೆ! (ಜಾಳಬ. ೦). ೨. ಮಂದವಾಗಿ. 'ನಸುಬೆಳಗು' ಪರಾ. ೩. ಮೆಲ್ಲನೆ. 'ನಸುತೇಂಕು' ಪರಾ.

ನಸುನಸು (ದ್ವಿರುಕ್ತಿ): ನಸುನಸು ನಾಣ್ಚುತೊಂದಿನಿಸು ಬಾಗಿದ ನುಣ್ಮೊಗಂ (ಅಪ್ರತಿ. ೦೯-೨೦). [< ನಸು$_1$]

ನಸು$_3$ (ನಾ). ಕತ್ತಿಕಾಳಗದ ಒಂದು ವರಸೆ (?): ಪುಸಿ ನಸು ವಂಚನೆ ನೋರ್ಪನುವಸಿದಗಲಿತು ತಕ್ಕುದಕ್ಕು ಪಗೆ ಕೆಯ್ಯಗೆ ಕೆಯ್ಯುಸುರಿ ನುಸುಳೆಂಬ ಕೇಣದ ಬಸುರಿಯನಱಿದಱಿದು ಮೆಱೆದು ನೆಱೆದುಱದರೆಬರ್ (ಪಂಪಭಾ. ೦೦-೮೦). P 'ನಸೆ' ಎಂಬುದು ಸರಿಯಾದ ರೂಪವಿರಬಹುದೇ? ಉದಾ:-ಎಕ. VI, ಚಿಕ್ಕಮ. ೯೪-೧೮; 1068ರ ಪ್ರಯೋಗವನ್ನು ನೋಡಿ. [?]

ನಸುಕತ್ತಲು 'ನಸುಗಟ್ಟಲೆ' ನೋ.

ನಸುಕಲಂಕು (ಕ್ರಿ). ಸ್ವಲ್ಪ ಕದಡು; ತುಸು ಚೆಲ್ಲಾಪಿಲ್ಲಿಯಾಗು: ಅಂಕುರಿಪ ತಮಂಧಂ . . . ಚೇತರಿಸುವ ಮಾರುತಂ ನಸುಕಲಂಕುವ ಸಾಂಧ್ಯಮಯೂಖಲೇಖೆಗಳ್ (ಗಿರಿಕ. ೪-೬೬). [ನಸು$_2$ + ಕಲಂಕು]

ನಸುಕಾಂತಿ (ನಾ). ಅಲ್ಪವಾದ ಪ್ರಕಾಶ; ಮಂದವಾದ ಪ್ರಕಾಶ: ದಳಿತಪ್ರಕಾಶ ಕೃಷ್ಣನ ಮುಂದೆ ಸೊಡರ್ಗಳು ಕಳಿತುವು ನಸುಕಾಂತಿವೆರಸಿ (ಮೋಹತ. ೧೫-೦೨). [ನಸು$_2$ + ಕಾಂತಿ]

ನಸುಕು$_1$ (ಕ್ರಿ). ಜಜ್ಜು; ಹಿಸುಕು: ಮನಸ್ಸಿನಲ್ಲಿ ಸಂಗ್ರಾಮ ಬಿರುಸಾಗಿಯೇ ಸಾಗಿತ್ತು . . . ಕಲ್ಲುಗಳೆರಡರ ನಡುವೆ ಸಿಕ್ಕಿದ ಹಸುರೆಲೆಯಂತೆ ನಸುಕಿ ಹೋಗುತ್ತಿದ್ದ (ಮುರುಳು. ೦೪); ಕಾಂಡವನ್ನು ಹಿಡಿದು ಕೀಳಹೋದರೆ ಹಿಡಿತದಲ್ಲಿಯೇ ನಸುಕಿ ಹೋಗುತ್ತದೆ (ಹಸುಹೊ. ೦೮೯).

[ದೇ.॥ ತಮಿ. ನಶುಕ್ಕು, ನಶುಜ್ಜು]

ನಸುಕು$_2$, ನಸಕು (ನಾ). ಬೆಳಗಿನ ಜಾವ; ಮುಂಜಾವ; ಉದಯಕಾಲ: ೧೨ನೆಯ ಶತಮಾನದ ಮಧ್ಯಕ್ಕೆ ಉದಯವಾಗಲಿರುವ ಬಸವಯುಗದ ನಸುಕಿನಂತೆ ವಚನಸಾಹಿತ್ಯ ಇದ್ದಿರಬೇಕೆಂದು ತೋರುತ್ತದೆ (ಕಸಾಪ. ೮೯); ಚುಮುಚುಮು ನಸುಕಿನಲಿ ಹೂವುಗಳರಳುವುವು (ಉಯ್ಯಾಲೆ. ೭೩-೦); ತೀರ ನಸುಕಿನಲ್ಲಿ ಕೋಳಿ ಕೂಗುತ್ತಲೇ ಎದ್ದು ಹೊರಡಬಹುದು (ಶ್ಯಾಮಶಾ. ೧೨); ಅವನು ನಸುಕು ಇರುವಾಗಲೇ ಏಳುವನು (ಮುಂಬಯಿ. ೫-೨೩೦); ಇನ್ನೂ ನಸುಕು ಇರುವಾಗಲೇ ಭೀಮಪ್ಪ . . . ಅಂಗಳ ಕಸಗುಡಿಸುವುದರಲ್ಲಿದ್ದ (ಪ್ರಜಸ ೭೯). ಇವರ ಕೃತಿಗಳಲ್ಲಿ ಪ್ರತಿಭೆಯ ನಸುಕು ಕಂಡುಬರುವುದಲ್ಲದೆ ಬಲವತ್ತರವಾದ ಕಲ್ಪನಾಶಕ್ತಿಯಿದೆ (ಗೊತ್ತುಗು. ೨೬). 'ನಸುಕುಹರಿ' ಪರಾ. ನಸಕು: ಮಾರನೇ ದಿನ ನಸಕಿನಲ್ಲಿ ವಿಜಯನಗರದಲ್ಲಿ ವಿಲಕ್ಷಣವಾದ ಕೋಲಾಹಲವೆದ್ದಿತು (ಸ್ಥೂಲಮಿ. ೨೨೦); ಹಬ್ಬವನು ಹೂಡಿದನು ಉಬ್ಬ ಊಳಿಗಕೆಲ್ಲ ಜಿಬ್ಬ ಕವಡೊಂದು ಬಳಿಯಿಲ್ಲ ಚೌಡನಿಗೆ ನಬ್ಬು ನಸಕಿನಲ್ಲಿ ಮನೆಬಿಟ್ಟ (ಕನ್ನಚಾ. ೨೯೩); ಮಸಕು ಹರಿಹರಿಯುತಲಿ ನಸಕು ಬರುಬರುತ್ತಿರಲು ಯಶವು ಬಂದಂತೆ ಅಂಗಳಕೆ (ಕನ್ನಚಾ. ೨೯೩); ರೈತರು ನಸಕಿನಲ್ಲಿ ಎದ್ದು ಹೊಲಗದ್ದೆಗಳ ಕಡೆ ಹೋಗುವುದು ಪದ್ಧತಿ (ರೂಧಿ). [ದೇ.॥ ತಳು. ನಸುಕು, ನಸ್ಕ್]

ನಸುಕುನ್ನಿ 'ನಸುಗುನ್ನಿ' ನೋ.

ನಸುಕುನ್ನಿಬೀಜ 'ನಸುಗುನ್ನಿಬೀಜ' ನೋ.

ನಸುಕುಹರಿ (ಕ್ರಿ). ಬೆಳಕು ಹರಿ; ಬೆಳಗಾಗು; ಸೂರ್ಯೋದಯವಾಗು: ನಸುಕುಹರಿಯದ ಮುನ್ನ ... ಸತಿಪತಿ ಬಂದು ಕವಾಟದ ತಳುಪನಗಲಿಸಲು (ನಂದಿಲೀ. ೬-೩೫); ನರಹರಿಯು ನಿಲ್ಮನೆಯನ್ನು ಮುಟ್ಟಿದಾಗ ನಸುಕು ಹರಿಯಲು ಇನ್ನೂ ಒಂದೆರಡು ತಾಸಿತ್ತು (ಸಮಜೀ. ೨೯೩); ದಿಗಂತದಲ್ಲಿ ನಸುಕುಹರಿದು ಹೊಂಬಣ್ಣದ ಹೊಸಹಗಲು ಮೂಡುತ್ತಿತ್ತು (ರೂಪಸ. ೮); ನಸುಕು ಹರಿಯಿತು (ನಾಕಥಿ. ೪೫). [ನಸುಕು$_2$ + ಹರಿ$_2$ (<ಪರಿ$_2$)]

ನಸುಕೆಂಚತಲೆಯ (ನಾ). ನಸುಗೆಂಪಾದ ಕೂದಲುಳ್ಳವನು: ಗೌರಚ್ಛಾಯಂ ಸ್ಥೂಲಶರೀರಂ ಮೃದುಲೋಚನಂ ಕಫಾತ್ಮಂ ದೀರ್ಘಾಕಾರಂ ಸುಬುದ್ಧಿ ಮೇದಸ್ವಾರಂ ನಸುಕೆಂಚತಲೆಯನಕ್ಕುಂ ಜೀವಂ (ಜಾತಕ. ೨-೨೩).

[ನಸು$_1$ + ಕೆಂಚ$_1$ + ತಲೆ$_1$ + – ಅ$_7$]

ನಸುಕೆರಳ್ (ಕ್ರಿ). ಸ್ವಲ್ಪ ರೇಗು; ನಸುಗೋಪವನ್ನು ತಾಳು: ಎಳೆನೆತ್ತರಲ್ತೆ ನಸುಕೆರಳ್ದನೇಕೇಟೆನಗೆ ತಿಳಿಯೆನೇಂ ದೂಸರೆನೆ ನೀಂ ಮರೆವುದರಿದೆ (ಕಾಲೂರ. ೦೬೩-೩೬೦).

[ನಸು$_2$ + ಕೆರಳ್ (<ಕೆಳರ್)]

ನಸುಗಂದು (ಕ್ರಿ). ೧. ಸ್ವಲ್ಪವೆ ಕಪ್ಪಾಗು; ನಸುಗಪ್ಪು ಬಣ್ಣವನ್ನು ತಾಳು: ನೆಗೆದೆತ್ತ ಧೂಪಧೂಮಂ ಪಸರಿಸೆ ನಸುಗಂದಿರ್ದ ಕೆಂಬಟ್ಟೆಯಿಂ ಗಂಟಿಗಳಿಂ ಮಯೂರಕಂಠಾವಳಿಯ ನೆಸೆದಿರಲ್ ತೋರಣಂ . . . ಚಂಡಿಕಾಗರ್ಭಗೃಹದ್ವಾರಪ್ರದೇಶಂ ಜನಪನ ಬಗೆಗಾಶ್ಚರ್ಯಮಂ ಮಾಡಿ ತಾಗಳ್ (ಕಾದಂಉ. ೨೭೦). ೨. ಸ್ವಲ್ಪವೆ ಮಾಸು,-ಬಾಡು: ಅತನುರಿಯಂಬಿನ ಪೊಗೆ ಮೊಗಸಿದಂತಧರಕಿಸಲಯಂ ನಸುಗಂದಿದುದು (ಕಾದಂಉ. ೭೭೦); ಕುಂದದ ಚಂದ್ರಲೇಖೆ ನಸುಗಂದದೆ ಧಂಜಿವ ಪುಷ್ಪಮಾಲೆ (ದಶಕು. ೧-೨೮). [ನಸು$_2$ + ಕಂದು$_1$]

ನಸುಗಡುಸು (ನಾ). ಸ್ವಲ್ಪ ಬಿರುಸು: ನಸುಗಡುಸಿನ ಹೆಣ್ಣನಿಯೊಂದು ಬಾಗಿಲಾಚೆಯಿಂದ ನುಡಿಯುತ್ತಿತ್ತು (ರೂಪಸಂ. ೮).

[ನಸು$_1$ + ಗಡುಸು]

ನಸುಗತ್ತಲು 'ನಸುಗಟ್ಟಲೆ' ನೋ.

ನಸುಗತ್ತಲೆ 'ನಸುಗಟ್ಟಲೆ' ನೋ.

ನಸುಗರ್ಪು (ನಾ). ತಿಳಿಗಪ್ಪು; ಗಾಢವಲ್ಲದ ಕಪ್ಪು: ನಿಶಾಮುಖಂ ನಸುಗರ್ಪಿಂದೆಸೆದುದು ಪಡುವಣದೆಶೆ ಕೆಂಪೆಸೆದುದು (ಕಾದಂಉ. ೦೪೦).

[ನಸು$_1$ + ಕರ್ಪು$_1$]

ನಸುಗಳ್ತಲೆ 'ನಸುಗಟ್ಟಲೆ' ನೋ.

ನಸುಗಟ್ಟಲೆ, ನಸುಕತ್ತಲು, ನಸುಗತ್ತಲು, ನಸುಗತ್ತಲೆ, ನಸುಗಳ್ತಲೆ (ನಾ). ದಟ್ಟವಲ್ಲದ ಕತ್ತಲೆ; ಮಬ್ಬುಗತ್ತಲೆ: ಸಂಶಯಲವಮೆಂಬ ನಸುಗಟ್ಟಲೆಯುಮಂ ತಲೆದೋಱಲೀಯದೆ ತೊಳಗಿ ಬೆಳಗುತ್ತುಂ . . . ಸಮ್ಯಗ್ದರ್ಶನಂ ಸರ್ವಾಂಗಶಕ್ತಿಯಂ ಕೊರ್ವಿಸುತ್ತಿರೆ (ವರ್ಧಪು. ೧೨-೩೫ ಪ). **ನಸುಕತ್ತಲು**: ನಸುಕತ್ತಲು ಹರಡಿತ್ತು (ದೇವಸಾ. ೧). **ನಸುಗತ್ತಲು**:

ನಸುಗತ್ತಲಿನಲ್ಲಿ ತೋಟವೆಲ್ಲಾ ಹಕ್ಕಿಗಳ ಹಾಡಿನಿಂದಲೂ ಕಾಗೆಗಳ ಕೂಗಿನಿಂದಲೂ ತುಂಬಿತ್ತು (ಯೋಧಪು. ೧೯); ಅಲ್ಲಿ ನಸುಗತ್ತಲಲ್ಲಿ . . . ಇವನನ್ನೇ ನೋಡುತ್ತ ಕುಳಿತ ವ್ಯಕ್ತಿಯೊಂದು ಕಾಣಿಸಿತು (ಗಂಮಾಯಿ. ೮೭). **ನಸುಗತ್ತಲೆ:** "ನಸುಗತ್ತಲೆ-ಧೂಳ ಸಂಜೆ" (ಜಾನಕೋ. ೧೦); ನಸುಗತ್ತಲೆಯಾಯಿತು. ರತ್ನವ್ವ . . . ಉಳಿದ ಜನರನ್ನು ಕರೆದು ಕರೆದು ಉಣಿಸುವುದರಲ್ಲಿದ್ದಳು (ನಿಸರ್ಗ. ೭೦). **ನಸುಗಳ್ತಲೆ:** ನಸುಗಳ್ತಲೆಯರೆಗಳ್ತಲೆ ಮುಸುಂಕುಗಳ್ತಲೆ ಪೊಗಳ್ದ ಪೆರ್ಗಳ್ತಲೆ ನಾಲ್ದೆಸೆಗಳ್ತಲೆ ಪೊಸಗಳ್ತಲೆ ರಸೆಗಳ್ತಲೆಯೆನಿಸಿ ಕೂಡೆ ತೀವಿತು ತಿಮಿರಂ (ಗಿರಿಕ. ೪-೭೩).

[ನಸು$_1$ + ಕಟ್ತಲೆ]

ನಸುಗಾಯ್ (ನಾ). ಸಣ್ಣ ಕಾಯಿ; ಚಿಕ್ಕ ಕಾಯಿ; ಎಳೆಯ ಕಾಯಿ; ಮಿಡಿಗಾಯಿ: ನಸುಗಾಯ್ ಕನರುಗಾಯ್ ಕಸುಗಾಯಿ ಹುಳಿಗಾಯ್ ತನಿರಸದ ಮಧುರಾಮ್ರ ಪೂರಿತ ಮಾಧುರೀಯಕದ . . . ಘನತರದ ಸಹಕಾರ ಸಹ ಸುರವನಕದಂಬಕವೆಸೆದುದಿದಿರಲಿ ಕಪಿಕುಲೇಶ್ವರನ (ತೊರಣಾ. ೫-೩-೧೪). [ನಸು$_1$ + ಕಾಯ್$_4$]

ನಸುಗಾವಿ (ನಾ). ತಿಳಿಯಾದ ಕಾವಿಬಣ್ಣದ ಬಟ್ಟೆ: ವಿಭೂತಿ ರುದ್ರಾಕ್ಷೋಜ್ವಲಾಂಗದಿಂ ನಸುಗಾವಿಯಿಂ ಮಿಱುಗುವುಷ್ಣೀಷ ಬೃಹತಿಕೆಗಳಿಂ ದೋತ್ರದಿಂ . . . ಶಾಂತಿರಸದೆರಕದಿಂ ಸಮೆದ ಪುತ್ಥಳಿಯೆನಲ್ (ಪದ್ಮಕಾ. ೫-೩೦). [ನಸು$_1$ + ಕಾವಿ]

ನಸುಗಾಳಿ (ನಾ). ಮೆಲ್ಲನೆ ತೀಡುವ ಗಾಳಿ; ಮೆಲುಗಾಳಿ; ಸುಳಿಗಾಳಿ; ಮಂದಮಾರುತ: ನಸುಗಾಳಿಗೊಡೆದೊಸರ್ವ ಮಂಜುಳಫಲಂಗಳಿಂ (ಉದ್ಯಟ. ೩-೯೦); ನಸುಗಾಳಿ ಸಂಧಿಸೆ ಕೆದರ್ದ ಪೊಂಬಾಳೆಗಳ ಕುಸುರಿಗಳ್ತಳಿ ವಕ್ಷತೆಗಳ್ (ಕೈಮಿಧಾ. ೩-೨೭). [ನಸು$_1$ + ಗಾಳಿ$_1$]

ನಸುಗಿಱಿದು (ನಾ). ಸ್ವಲ್ಪ ಸಣ್ಣದು,-ಕಡಮೆ: ನಸುಗಿಱಿದಯ್ದು ಮನುತ್ತರೆಯ ಸುಖಂ ಮೋಕ್ಷದ ಸುಖಕ್ಕೆ (ಚಂದ್ರಪು. ೦೦-೩೨).

[ನಸು$_1$ + ಕಿಱಿದು]

ನಸುಗುಂದು (ಕ್ರಿ). ಸ್ವಲ್ಪ ಕಡಮೆಯಾಗು: ರಸವಿಶೇಷದೊಳತಿವಿಮಲ ಸಿತವಸನವನು ತೋಯಿಸಿ ಅಗ್ನಿಯೊಳಗಿಡೆ ಪಸರಿಸುವುದು ಪ್ರಕಾಶ ನಸುಗುಂದದಲೆ ಸರ್ವತ್ರ (ಹಸಾರ. ೧೪-೨೮); ಶಶಿಮಂಡಲಕೆ ಸ್ವರ್ಭಾನು ತಾಮ್ಮುಸುಗಿದೊಡೆ ನಸುಗುಂದುವದೆ ಕಳೆ ಸುಧಾರಸಂ ಕಹಿಯಹುದೆ (ಸವಮೋ. ೯-೩೯). [ನಸು$_2$ + ಕುಂದು$_1$]

ನಸುಗುತ್ತು (ಕ್ರಿ). ಸ್ವಲ್ಪ ಸಂಕೋಚಗೊಳಿಸು,-ಕುಗ್ಗಿಸು: ಕತ್ತರಿಸಿ ಕಿವಿಗಳಂ ನಸುಗುತ್ತುತ್ತುಂ ಮೆಯ್ಯ ಖಂಡಮಂ ಘುರುಘುರೆನುತ್ತೊತ್ತರಿಸೆ ಘೋಣಪವನನುದಾತ್ತಂ ಮಸಗಿತ್ತು ವಾಜಿ ಪೆರ್ಮಾರಿಯಪೋಲ್ (ಪಂರಾಮಾ. ೪-೦೦೮). [ನಸು$_2$ + ಕುತ್ತು$_1$]

ನಸುಗುನ್ನಿ, ನಸಗುನ್ನಿ, ನಸುಕುನ್ನಿ, ನಸುಗುನ್ನೆ, ನೊಸಗೊನ್ನೆ (ನಾ). ೧. ಮೈಗೆ ತಾಗಿದರೆ ನವೆಯನ್ನುಂಟುಮಾಡುವ ಒಂದು ಬಗೆಯ ಗಿಡ; ಕಪಿತುರುಚೆ: "ಆತ್ಮಗುಪ್ತಾ, ಜಹಾ, ಅವ್ಯಂಡ, ಕಂಡುರಾ, ಪ್ರಾವೃಷಾಯಿಣೀ, ಶುಷ್ಕಪ್ರೋಕ್ತಾ, ಶೋಕಸಿಂಬಿ, ಕಪಿಕಾಚ್ಛಃ, ಮರ್ಕಟೀ ಈ ೯ ನಸುಗುನ್ನಿ" (ನಾಚಿಕಾ. ೧೦೯); ನಸುಗುನ್ನಿಯ ತಿ(ವಿ)ನಿಸ(ರ)ಂ ಮಾಣಿಸುಗುಂ ಘೃತವೊಂದೆ (ಲೋಕೋಪ. ೦೦-೪೦); ನಸುಗುನ್ನಿ ಮುಟ್ಟಿದಂತಿರೆ ಬಸವಮಲ್ಲದೆ ತಿಂಬ ಮೆಯ್ಯ ತಿನಿಸಿಂಗಂ ಸೈರಿಸಲಾಱದೆ (ಧರ್ಮಾಮೃ. ೦-೧೬೫); ಹಸಿದಡುಣಬಹುದೇ ನಸುಗು[ಪಾಕಾಂ. ಕು]ನ್ನಿ ತುಱುಚಿಯನು (ಅವಪಂ. ೭೦-೩೦೫); ಸುಂಕಿಗನು ಹುರಿಹ [ಹು]ಲ್ಲು ಬಿಂಕದ ಬೆಲೆವೆಣ್ಣು ಕಂಕಿಯು ಸುಂಕ ನಸುಗುನ್ನಿ ಇವು ಆಱು ಸೋಂಕಿದರೆ ಬಿಡವು (ಸರ್ವಜ್ಞ. ೦೫೦೦). ೨. (ಆಲಂ) ಕೀಟಲೆ ಸ್ವಭಾವದ ವ್ಯಕ್ತಿ: ಅವನೊಬ್ಬ ಮಹಾ ನಸುಗುನ್ನಿ (ರೂಢಿ). **ನಸಗುನ್ನಿ:** ೧. ನಸಗುನ್ನಿ, ನಾಯಿಸೊಂಕುಬಳ್ಳಿ, ತುರಚಿಅವರೆ (ಪ್ರೌಢಿಗಿ. ೫೫-೦೦೦೪). **ನಸುಕುನ್ನಿ:** ೧. "ಲೋಮಫಲಾ-ನಸುಕುನ್ನಿ" (ಓಷಧಿ. ೧೪೪); ಮನ್ನಿಸದ ನೃಪತಿಯಿಂ ನಸುಕುನ್ನಿಯ ತುರುಚೆಯನೆ ಸಾರಿ ಬಾಳ್ವುದು ಸೌಖ್ಯಂ (ನೀತಿಸಾ. ೧೪೫). **ನಸುಗುನ್ನೆ:** (ಕ). **ನೊಸಗೊನ್ನೆ:** ೧. ನೊಸಗೊನ್ನೆ, ರಾಸ್ನೆ . . . ಕಾಯಿಸಿ ಇದರಿಂ ಬಂದ ತೈಲವನ್ನು ಅಭ್ಯಂಜನಕ್ಕೆ ಉಪಯೋಗಿಸಲು ಶೀತಜ್ವರ . . . ಮೊದಲಾದವುಗಳು ನಾಶವಾಗುವುವು (ಸಕವೈ. ೭೨).

ನಸುಗುನ್ನಿಕಾಯಿ=ಕೀಟಲೆಸ್ವಭಾವದ ವ್ಯಕ್ತಿ: ಆ ನಸುಗುನ್ನಿಕಾಯಿಯನ್ನು ನಂಬಬೇಡ (ರೂಢಿ). **ನಸುಗುನ್ನಿಯ ಬೇರು** = ನಸುಗುನ್ನಿಗಿಡದ ಬೇರು: ನಸುಗುನ್ನಿಯ ಬೇರಂ ಗೋಮೂತ್ರದಿಂದ ಅರೆದು ಕಂಬಳಿಯ ಹುಳು ಮುಟ್ಟಿದ ಠಾವಿಗೆ ಪೂಸಲು ಅದಱ ವಿಷ ಶಮನವಹುದು (ವೈದ್ಯಸಾ. II, ೩೨೨). [?]

ನಸುಗುನ್ನಿಬೀಜ, ನಸುಕುನ್ನಿಬೀಜ (ನಾ). ನಸುಗುನ್ನಿಯ ಗಿಡದ ಬೀಜ: ಉಮ್ಮತ್ತದ ಬೀಜ, ನಸುಗುನ್ನಿಬೀಜ ... ಚಿತ್ರಮೂಲ ಈ ೫೦ ಬಗೆಯನ್ನು ಸಮಾನಂಗೊಂಡು ಚೆನ್ನಾಗಿ ಕುಟ್ಟಿ ಚೂರ್ಣವಂ ಮಾಡಿ ಇರಿಸಿಕೊಂಡು ತೆಗೆದುಕೊಂಬುದು (ವಿವೈವಿ. ೪೨); ಕುಂಕುಮಕೇಸರಿ ಭೂಸಕ್ಕರೆಗೆಡ್ಡೆ ನಸುಗುನ್ನಿಬೀಜ ಬಜೆ (ಶಾಮಶಾ. ೦೦-೨೪೬). **ನಸುಕುನ್ನಿಬೀಜ:** "ವಾರಪ್ರಸ್ಥ ೬-೩(ಹಿ)ಪ್ಪೆ, ನಸುಕುನ್ನಿಬೀಜ" (ಓಷಧಿ. ೧೫೦).

[ನಸುಗುನ್ನಿ + ಬೀಜ]

ನಸುಗುನ್ನೆ 'ನಸುಗುನ್ನಿ' ನೋ.

ನಸುಗೆಂಪು (ನಾ). ತಿಳಿಗೆಂಪು ಬಣ್ಣ; ಪಿಂಗಳವರ್ಣ: "ಹರಿಃ, (ಕ್ರಮಂ) ಕದ್ರುಃ, ಕಡಾರಃ, ಪಿಂಗಳಃ-ಈ ೪ ನಸುಗೆಂಪು" (ಹಲಾಯು. ೦೨೧-೩೦); ನಸುಗೆಂಪುವಡೆದ ದಶನದ ಮಿಸುಪಧರದ ಕೆಂಪು (ಧರ್ಮಾಮೃ ೭-೧೯೦); ನಸುಗೆಂಪಿನಂ ಬೀಗಿ ಬಾಗಿ ತೂಗುವ ಚೆಲುವ ಹೊಸಹಾಲ ಹನಿಗಳಡಸಿದ ತೆಱದ ತೆನೆಗಳಂ ತಿಱಿತಿಱಿದು (ಸಿದ್ಧಕಾ. ೨-೨೯); ಅವಳ ಮೋರೆಯು ನಸುಗೆಂಪುಬಣ್ಣವನ್ನು ತಾಳಿತು (ಸವನೀ. ೨೦). [ನಸು$_1$ + ಕೆಂಪು$_1$]

ನಸುಗೆತ್ತು (ಕ್ರಿ). ತುಸು ಸ್ಪಂದಿಸು; ಸ್ವಲ್ಪ ಅದಿರು,-ಮಿಡಿ: ಉಸಿರ್ವುಜ್ಜುಗದಿಂದಧರಂ ನಸುಗೆತ್ತಲ್ (ಕಾದಂಉಾ. ೨೯೬); ಬಿಟ್ಟ ಕುರುಳ್ ಪೊದಟ್ಟ ಕಿಸುಗಣ್ ನಸುಗೆತ್ತುವ ಮಿಸೆ (ಚಂದ್ರಪು. ೩-೭೦); ಪ್ರಿಯ ಸಂದು ಕಲ್ಪಿಸಿರ್ದಾ[ಳ]ಯನಂಗನೆ ಮಾನಯೋಗ್ಯೆಯಂ [ಮಾ]ಡಲ್ಕಂ ನಿಯತಂ ಭ್ರೂಕುಟಿ [ಕುಟಿ] ಜಿಹ್ಮಾಕ್ಷಿಯಾಗಿ ನಸು[ಗೆ]ತ್ತಲ[ಧ]ರಮಿಾಕ್ಷಿಸುತಿರ್ದಳ್ (ಮಾಧವಾ. ೨-೨೩೨); ನಸುಗೆತ್ತಲು ಮಿಸೆ ತೆಳುಗದವುಗಳೊಳು (ಚಂಪ್ರಸಾಂ. ೯-೯೦). [ನಸು$_2$ + ಕೆತ್ತು$_1$]

ನಸುಗೆರೆ (ನಾ). ಸಣ್ಣ ರೇಖೆ: ದಿನಮಣಿಯ ನಸುಗೆರೆ ಕೆಳಗಿಳಿದು ಮಾಸಿ ಹೋದುದನ್ನು ಹೊರಗಣ್ಣಿನಿಂದ ಕಂಡ ಬಂಕಿಯನ ಹೊ ಗಣ್ಣು ದೊರೆಯತ್ತ ತಿರುಗಿತು (ವೀರಬಂ. ೬). [ನಸು$_1$ + ಗೆರೆ (<ಗೆಱೆ^{3})]

ನಸುಗೇಳ್ (ಕ್ರಿ). ೧. ಸ್ವಲ್ಪ ಕೇಳಿಸು; ಅಸ್ಪಷ್ಟವಾಗಿ ಕೇಳಿಸು: ಅದೇ ದೂರಂ ನಸುಗೇಳಲಾಯ್ತು ಜಳದೇವೀನೊಪುರಾರಾವದಂದದೆ ಹಂಸಸ್ವನ (ಕಾದಂಪೂ. ೧೯೫). ೨. ಸ್ವಲ್ಪ ಕೇಳು; ಅಸ್ಪಷ್ಟವಾಗಿ ಕೇಳಿ ಬಂದುದನ್ನು ಆಲಿಸು: ಓರಂತೆ ಪಲಂಬಿ ಪಂಬಲಿಪ ದಾಸೀವೃಂದದಾಕ್ರಂದದೊಳ್ ನಸುಗೇಳುತ್ತ ನಿಜಾನುಜನ್ಮನ ಗುಣಪ್ರಖ್ಯಾತನಾಮಂಗಳಂ ತೊದಳಿಸಿ ತಮ್ಮನೇಯನುತೆ ಬಾಯ್ನೂಡಿ ಮಾಣ್ದರೆಮುಚ್ಚಿ ಕಿತ್ತುಸಿರ್ ಕೆದಱುತು ಮಾಱಿ ಮೆಯ್ಗರೆಯೆ ಕಳ್ಳಲರ್ಗಳ್ ಪೊಸನೀರ ಮಿಾಂಗಳಂದದಿನಿದರೇಱಿ ... ಮೂರ್ಛೆಗೆ ಸಂದು (ವರ್ಧಪು. ೯-೫೭). [ನಸು$_2$ + ಕೇಳ್]

ನಸುಗೊರಕೆ (ನಾ). ಸಣ್ಣದನಿಯ ಗೊರಕೆ: ನಿದ್ದೆಯ ಮುಸುಕನ್ನು ಕಣ್ಣ ಮೇಲೆ ಎಳೆದು ನಸುಗೊರಕೆಯನ್ನು ಹೊಡೆಯುತ್ತಿದ್ದನು (ಜಯಂತ. ೦).

[ನಸು$_1$ + ಗೊರಕೆ$_2$ (<ಗುಱುಕು)]

ನಸುಗೋಪ (ನಾ). ತುಸು ಕೋಪ: ಆರ ಸಂಭ್ರವಃವಿದಾರ ಮರುಳ್ತನವೆಂದು ನಂದಿಕೇಶ್ವರ ನಸುಗೋಪ [ಪಾಠಾಂ. ನತಿಕೋಪ]ದಿಂ ಮದನಸೇನೆಯ ನೀಕ್ಷಿಸಿದಾ ಕ್ಷಣಾರ್ಧದೊಳ್ (ಗಿರಿಕ. ೪-೪) ; ಕುಮುದಳ ಮೊಗದ ಮೇಲೆ ನಸುಗೋಪ ಮೂಡಿತು (ಹಾಡುಹು. ೦೧೧). [ನಸು₁ + ಕೋಪ]

ನಸುಜೋಲ್ (ಕ್ರಿ). ಸ್ವಲ್ಪ ಜಾರು : ನಘಜೋಲ್ದಳ್ಳುಡೆಯುಂ ತೆಱಂಬೊಳೆದು ಪಾಱುತ್ತಿರ್ಪ ಸಂವ್ಯಾನಮುಂ ... ಪೊಸತೊಂದೊವ್ವಪು ನೀಯೆ ವಿಷ್ವಳತೆಯುಂ ಬಂದತ್ತು ಗೋಪೀಜನಂ (ಜಗವಿ. ೩-೮೯) ; ಪೂಗಳಾ ಸಮದ ಮಾಲೆಯುಂ ಧರಿಸಿ ನಸುಜೋಲ್ದ ಮೇಲುದಾನಿಸು ಮುಸುಕುತ (ಶಬ್ಕಾಶಾ. ೪-೩೦). [ನಸು₂ + ಜೋಲ್₁]

ನಸುತೂಕಡಿಕೆ (ನಾ). ಸ್ವಲ್ಪ ತೂಕಡಿಕೆ,–ದೋಂಪು: ಔಕುವುದು ಬಲುನಿದ್ರೆ ನಿದ್ರೆಯ ನೂ ಕು ವ ನು ಕಣ್ಣಿವೆಗಳಲಿ ನಸುತೂಕಡಿಕೆ ತೋಱಿದೊಡೆ ವೈಗೆದಱುವನು ಕೈಯೊಡನೆ (ಋಷ್ಯಾಶ್ರ. ೯-೮). [ನಸು₁ + ತೂಕಡಿಕೆ (<ತೂಂಕಡಿಕೆ)]

ನಸುತೇಂಕು (ನಾ). ಮೆಲ್ಲನೆ ತೇಲುವಿಕೆ. 'ನಸುತೇಂಕುದೇಂಕು' ಪರಾ. [ನಸು₁ + ತೇಂಕು₁]

ನಸುತೇಂಕುದೇಂಕು (ಕ್ರಿ). ಮೆಲ್ಲನೆ ತೇಲು ; ನಿಧಾನವಾಗಿ ತೇಲು : ಬೆಳಗುವ ತಾರಕಾನಿಕರಮಾ ಕಡಲೊಳ್ ನಸುತೇಂಕುದೇಂಕಿ ಬೊಬ್ಬುಳಿಕೆಗಳಂತೆ ತೋಱಿದುವು (ಆದಿಪು. ೭-೯೮). [ನಸು₁ + ತೇಂಕು₁]

ನಸುದಗ್ಗು (ಕ್ರಿ). ಸ್ವಲ್ಪ ಕೆಳಕ್ಕೆಬರು ; ತುಸು ಕೆಳಗಿರು : ಅದಱಿರ್ದಿಲದೊಳ್ ನಸುದಗ್ಗಿ ದಲಿರೆ ಭದ್ರಾಸನಂಗಳುನ್ಮುಖರುಚಿಗಳ್ ಮುದದಿಂ ನೆಲಸಿದರದಱೊಳ್ ಪದುಳಂ ಪ್ರ ಥ ಮ ದ್ವಿತೀಯ ಕಲ್ಪಾಧೀಶರ್ (ಪುಷ್ಪಪು. ೦೦-೭೯). [ನಸು₂ + ತಗ್ಗು₁ (<ತಟ್ಟು)]

ನಸುದಱಿ (ನಾ). ಸಣ್ಣ ತುಂಡು ; ಚಿಕ್ಕ ಚೂರು.

ನಸುದಱಿಮಾಡು = ಸಣ್ಣ ತುಂಡುಗಳಾಗಿ ಮಾತು ; ಚೂರಾಗಿಸು : ಮಸೆಗಟ್ಟ ಕೊಡಲಿಯ ಹೊಯಲಂತೆ ಕರ್ಮವ ನಸುದಱಿ ಮಾಳ್ಪುದು ಧರ್ಮ ಮಸೆಯುಳ್ಳ ಕೊಡಲಿಯ ಹೊಯಿಲಂತೆ ಕರ್ಮವ ಕುಸುರಿದಟ್ಟಿವು ದೀಗ ಶುಕ್ಲ (ಧರಚ. ೬೯-೪೪). [ನಸು₁ + ತಱಿ₂]

ನಸುದಿಟ್ಟಿ (ನಾ). ಅರೆದೆರೆದ ಕಣ್ಣಿನ ನೋಟ ; ಓರೆನೋಟ : ಬಟ್ಟ ಮೊಲೆಗಳ ತುದಿಯೊಳಿಱಿದುಱಿ ನಸುದಿಟ್ಟಿಯಿಂದೀಕ್ಷಿಸುತಾಗ ಕಟ್ಟಿಱಕದೊಳಾತನ ಚರಣಕೆ ಪೊಡಮಟ್ಟು ಕೂಡೊಬಳಂದೊಲಿದು (ಕಂಸವಿ. ೯-೦೭೮). [ನಸು₁ + ದಿಟ್ಟಿ]

ನಸುದೆಱಹು (ನಾ). ಸ್ವಲ್ಪ ಅವಕಾಶ; ಕೊಂಚ ತೆರವು,–ಎಡೆ : ಮಱವೆಗೆ ನಸುದೆಱಹುಗೊಡದಾತ್ಮನಲಿ ಚೇಷ್ಟಿಸುವ ಕರುಣಾಂಗಳಿಗೆ ರವಿಯಂತಿದ್ದನವ ನೀಶ (ನಿಘಾಗ. ೪-೦೫-೩೩). [ನಸು₂ + ತೆಱಹು (<ತೆಱವು)]

ನಸುದೆಱಿ (ಕ್ರಿ). ಸ್ವಲ್ಪ ತೆಗೆ ; ಕೊಂಚ ಬಿರಿ : ನಸುದೆಱಿಯುತ್ತಮಿರ್ದ ಪೊಸಪಮುತ್ತಿನ ಸಿಂಪಿನ ಸಂಪುಟಂಗಳಂ ನುಸುಳ್ದು ಸುವಾಣೆಯಾಗಿ ಪೊಱ ಪೊಣ್ಮುವ ಮುತ್ತಿನ ಮಾಲೆಯಂದದಿಂ ಮಿಸುಗಿ . . . ಪಸರಿಸಿ ನೀಳ್ದು ಪೊಣ್ಮಿದುವು ಕಣ್ಬನಿಗಳ್ ತರಳಾಯತೇಕ್ಷಣೇ (ಕಾದಂಪೂ. ೩೩೦) ; ನಸುದೆಱಿದಿರ್ದ ಬಾಯ್ ನಿಮಿರ್ದ ಗೋಣೆಮೆಯಿಕ್ಕಿದ ದಿಟ್ಟಿ . . . ಕಣ್ಗೆಸೆದಿರೆ ಸುಯ್ಯ ಪೇಪಟ್ಟಿದು ಚಿತ್ರದ ವೆಣ್ಣಪೊಲಾಗಿ ಬಾಗಿಲೊಳ್ ಸಸಿಮುಖಿ ನಿಂದು ನೋಟ್ಪಳಿನಿಯಂ ತಡೆದೊಯ್ಯನೆ ಬರ್ಪ ಬಟ್ಟೆಯಂ (ಧಸಕ. ೪-೩೬೩) ; ನೊಸಲ ತಿಲಕದ ಕೆದಱಿದಳಕದ ನಸುದೆಱಿದ ಲೋಚನದ . . . ಮುನಿಪತಿ (ನಿಘಾಗ. ೦-೩-೦೨). [ನಸು₂ + ತೆಱಿ₁]

ನಸುದೆಱಿಬಾಯ್ (ನಾ). ಅರೆದೆರೆದ ಬಾಯಿ : ನಟ್ಟ ಕಣ್ ನಿಮಿರ್ದ ಕೊರಲು ನಸುದೆಱಿಬಾಯ್ ಬಿಟ್ಟ ಮೇಲುದು ಬೀಳ್ದ ಕೇಶ (ಶ್ರೀಪಾಶಾ. ೦೩-೩೭). [ನಸುದೆಱಿ + ಬಾಯ್]

ನಸುದೇಲ್ (ಕ್ರಿ). ಸ್ವಲ್ಪ ತೇಲು; ನಸುವೆ ಮೇಲಕ್ಕೆ ಏಳು : ನಸು ದೇಲ್ವಕ್ಷಿ ವಿಲುಪ್ತವರ್ಣವಚನಂ ರೋಮಾಂಚನಂ . . . ಕರಂ ಶೋಭಿಸಲ್ ಕುಸುಮಾಸ್ತ್ರೋನ್ಮತಕೇಳಿಯೊಳ್ಬಿಡದೆ ತಾಂ ಬೆಚ್ಚಿರ್ದರಾ ಕಾದಲರ್ (ಉದ್ಭಟ. ೯-೦೦೯). [ನಸು₂ + ತೇಲ್]

ನಸುದೋಯಲು (ನಾ). (?) : ಈ ಹೆಬ್ಬಟ್ಟಗಳಲ್ಲಿ ಹೋದರೆ ಎಂಬತ್ತು ನಾಲ್ಕುಲಕ್ಷ ಪ್ರಕಾರದ ಪರಮಾಂಡಲದಲ್ಲಿ ಸುಳಿವುದು ತಪ್ಪದೆಂದು ಆದಕ್ಕೆ ಹೇಹವಂ ಮಾಡಿ ತಮ್ಮವರು ಹೋದ ನಸುದೋಯ [ಪಾಠಾಂ. ತೋಯಲ] ಬೆಂಬಳಿವಿಡಿದು ಹೋಗಿ ಭಕ್ತಿವುರವುಂ ಕಂಡು (ಘನವ. ೪೯-೪೩) ; "ನಸುದೋಯಲು–ಆಸ್ಪತ್ರವಾದ ಜಾಡು ?" (ಘನವ. ಕೋಶ). [?]

ನಸುದೋರೆ (ನಾ). ಸ್ವಲ್ಪ ಹಣ್ಣಿಗೆ ಬರುತ್ತಿರುವ ಕಾಯಿ ; ಪಾಡು ಗಾಯಿ : ಅಲರ್ ಎಡಿಕಾಯ್ ನಸುದೋರೆ ದೋರೆಪಣ್ ಬಳಸಿರಲಾಗಳಾವ ಪರಿಯಿಂ ನಡೆ ನೋಲ್ಪೊಡಮಂತೆ ತಾನೆ ಕಣ್ಗಳ ಸಿರಿ . . ಅದುದು ಬಂದ ವಸಾನರಂ (ಜಗವಿ. ೦೪-೩೭) ; ತಳರಲರುಳ್ಳಲರ್ಮಿಡಿ ಪೊದಳ್ದಿಳಗಾಯ್ನಸುದೋರೆ ದೋರೆಪಣ್ಗಳಿತಸೆವಚ್ಚಪಣ್ಣಿಡಿದು ಬೀಗಿದ ಬಿಣ್ಗೊನೆ (ಶಲಶಂ. ೧-೩೧). [ನಸು₁ + ದೋರೆ₁]

ನಸುದೋರೆವಣ್ (ನಾ). ಸ್ವಲ್ಪ ದೋರೆಯಾದ ಹಣ್ಣು : ಸಣ್ಣಗಾಯು ಬಲುಗಾಯು ಪೊಬಲ್ ನಸುದೋರೆವಣ್ಣ ತಾಯ್ವನೆ ಪೊಸಪಣ್ಣ ಗೊತ್ತಿದೆನೆ ಕಣ್ಗೆಸೆದಿರ್ದುದೊಂದು ಮಾಮರಂ (ಕಬ್ಕಾಶಾ. ೦೧೧). [ನಸುದೋರೆ + ಪಣ್₃]

ನಸುದೋಱು (ಕ್ರಿ). ೧. ಸ್ವಲ್ಪ ಕಾಣಿಸು,–ಕಾಣು ; ತುಸುವೆ ವ್ಯಕ್ತವಾಗು : ನಸುದೋಱುತ್ತಿರ್ದ ನುಣ್ಮೀಸೆಗಳುಮತಿಮೃದುಸ್ನಿಗ್ಧಕೇಶಂಗಳುಂ ಕಣ್ಗೆಸೆಯಲ್ (ಕಾದಂಉ. ೩೪೭) ; ಎತ್ತಾನುವೊರ್ಮೆ ನಸುದೋಱುತ್ತುಂ ಜಿನಭಕ್ತಿ ಮಾಣ್ದುದುದೊಡಮಾಭವ್ಯೋತ್ತಮನಳಮುರಿತಾಗಿದ ಬಿತ್ತಿಂಗಣೆಯಕ್ಕುಂ (ವರ್ಧಪು. ೧೪-೦೭) ; ಕುಚಂಗಳೊತ್ತರಿಸೆ ಕಕ್ಷಪುಟಂ ನಸುದೋಱಿ . . . ಕರ್ಣಪೂರಿತೋತ್ಪಳಮೊರೆದಾಡೆ ಗಟ್ಟಿಗಳನಂದು ಮಗುೞ್ದಿದರಿಂದುವಕ್ತ್ರಿಯರ್ (ಗಿರಿಕ. ೪-೯೦) ; ನಸದೋಱುವ ಕಿಱುನಗೆಯ ಕದಪುಗಳ ಕುಂಡಲದ ಚೆಲ್ವಿನಿಂ ಮೆಱಿವ ಸದ್ವದನನಂ . . . ಕಂಡನವನೀಪಾಲನು (ಕ್ರಮಿಧಾ. ೪-೪೮). ೨. ತುಸುವೆ ತೋರಿಸು : ಕುಂಚಿತಕುಂತಳಾಳಿಗಳನೊಯ್ಯನೆ ನೇರ್ಪಡಿಪೊಂದು ಲಕ್ಷ್ಯದಿಂ ಕಾಂಚನ ಕುಂಭಮಂ ಪಟಿವ ಪೆರ್ಮೊಲೆಯಂ ನಸುದೋಱುತುಂ (ಉದ್ಭಟ. ೦೦-೬೮). [ನಸು₂ + ತೋಱು]

ನಸುನಗು₁ (ಕ್ರಿ). ೧. ಸ್ವಲ್ಪ ನಗು ; ಮುಂಗುಳುನಗೆ ನಗು : ಮಂದಹಾಸವನ್ನು ಬೀರು : ಆವರ್ತನಾಭಿ ನಸುನಕ್ಕಾ ವರನಿಂದತ್ತ ಪೋದಳ್ (ಶಾಂತಿಪು. ೫-೦೪೬) ; ಬಹ ಭೃಂಗಿಯಂ ಕಂಡು ನಸುನಕ್ಕರು (ಸಿಕ್ಕಾ. ೧-೩೪) ; ಸತಿ ನಸುನಗುತ್ತಕ್ಕನ್ನು . . . ನಾನಱಿದೆನಱಿದೆನು ನಿನ್ನ ಮಾಯವನು (ಬಸಪು. ೩೪-೬೩) ; ಧುರದ ಜಯವಹುದೊಂದು ಪರಿಯಲಿ ನಿರುತವಲ್ಲದ ನುಡಿಯ ನುಡಿದರೆ ಪರಿಹರಿಸಬಹುದೆಂದನಸುರಾರಾತಿ ನಸುನಗುತ (ಋಷ್ಯಾಶ್ರೃ. ೦೮-೩೯) ; ಮುಖದಲ್ಲಿ ಕಿಱುಬೆವರಿಟ್ಟಿದೆ ಹೊಸ ಹೊಸ ಪರಿ ಸುದ್ದಿ ಹುಟ್ಟಿದೆ ನಸುನಗುವೆಲ್ಲ ನಿನ್ನ ಕೀರ್ತಿ ಹೆಚ್ಚಿದೆ (ಪುರಂದ. ೫-೦೭-೦) ; ಅಪ್ಪಾಜಿಯು ನಸುನಗುತ್ತ ಕೇಳಿದರು (ಚಿದೇವ. ೦೭೦) ; ಹುಸಿನಗುತ ಬಂದೇವ ನಸುನಗುತ ಬಾಳೋಣ ತುಸುನಗುತ ತೆರಳೋಣ (ಗಿರಿ. ೦೦೩-೯). ೨. ಹೀಯಾಳಿಸು ; ಜರೆ ; ತಿರಸ್ಕರಿಸು : ಆರಿಗಳ್ ವೆಸರ್ಗೆಳ್ದಿರ್ದವೊಡೆವರೆಂಬ ಶೂದ್ರಕನ ವಿಕ್ರಮಾಡಂಬರಮಂದರೆವಾನಿಸಿಕೆಯೊಳೊಂದಿದ ನರಸಿಂಹಾಡಂಬರಕ್ಕೆ ನಸುನಗುತಿರ್ಕುಂ (ಕಾದಂಪೂ. ೦೦) ; ಪಗೆಗೊಂಡ ತುಂಬಿಯುಂ ನಸುನಗುವವೊಲುಳ್ಳಲರ್ದು ಪೊಂಗಿ ಕಂಪಾದು

ದೆನಲ್ ಸೊಗಯಿಸಿ ಕಾಮನ ಪಗೆಯಂ ಬಗೆಯಂ ತೀರ್ಚಿದುವು ಸುಗ್ಗಿಯೊಳ್ ಸಂಪಗೆಗಳ್ (ಮಲ್ಲಿಪು. ೫-೧೯) ; ತಾರೆಗಳತಿಶುಭ್ರವಿಡಿದಿರ್ದರೆಮ್ಮಂತೆ ಸೌರಭ್ಯವಿಲ್ಲೆಂದು ಜಱಿದು ಸೇರದೆ ನಸುನಗುವೊಲು ಬಿರಿಮುಗುಳ ಶೃಂಗಾರದ ಮಲ್ಲಿಗೆಯಿಹುವು (ಕಂನವಿ. ೭-೫೧). ೩. (ಆಲಂ). ಅರೆ ಬಿರಿ ; ತುಸು ಅರಳು : ಮಿಸುಪ ಕುವಲಯಚಲತ್ಪತ್ರಂಗಳೊಳ್ಸುಱಿದು ನಸುನಗುವ ನವನೀರಜಾತಂಗಳಂ ತುಱಿದು (ಉದ್ಯಟಿ. ೧೦-೧೨೩).

[ನಸು$_2$ + ನಗು$_1$]

ನಸುನಗು$_2$ (ನಾ). ತಿಳಿಯಾದ ನಗು ; ಮುಗುಳುನಗೆ ; ಮಂದಹಾಸ : ಸುಖಾರುವಿನ ಮುಖದಲ್ಲಿ ನಸುನಗು ತೋರಿತು (ಮಹಿಸ. ೫೬).

[ನಸು$_1$ + ನಗು$_2$]

ನಸುನಗೆ (ನಾ).=ನಸುನಗು$_2$: ನಸುನಗೆ ದಶನಪ್ರಭೆಯಿಂದ ಕೂಡಲಾ ದೆಸೆ ಧವಳಿಸಿದವೊಲಾಯ್ತು (ಕಾದಂಪೂ. ೪೮೨ ರಗಳೆ); ನಸುನಗೆ ಕಮಳದ ಸಿರಿಯಂ ನಸುನಗೆ ಜನನಿಯರ ಲೋಚನಭ್ರಮರಂಗಳ್ ಮುಸುಱಿದುವು ಮೋಹವಲ್ಲರಿ ಪಸರಿಸಿ ಪರ್ವಿದುದು ಸುತರ ಲಾಲಾಜಲದಿಂ (ಪಂರಾಮಾ. ೩-೧೩೯) ; ಶ್ರೀಮುಖದೊಳ್ ನಸುನಗೆ ಬೆಳ್ದಾವರೆಯೊಳಲರ್ಕೆಯೆಂಬವೊಲ್ ಪಸರಿಸೆ (ಚಂದ್ರಪು. ೧೩-೧) ; ಒಸೆದರಳ್ವ ನಸುನಗೆಯ ಶಶಿಮೌಳಿಯೊಪ್ಪಿದಂ (ವಾಗೀರ. ದೇ. ೨೮೦-೧೫) ; ಎಸೆವ ನಸುನಗೆ ದಶನರುಚಿ ದೆಸೆದೆಸೆಗೆ ಪಸರಿಸೆ ವೀಣೆಯಂ ಬಾಜಿಸುತ (ಬಸಪು. ೧-೫೩) ; ನಸುನಗೆ ಮೊಳೆಯೆ ನುಡಿದನು ಧರ್ಮನಂದನನು (ಕುವ್ಯಾಅ. ೨೩-೪೮) ; ಮೆಲ್ನಗೆ, ಮುಗುಳ್ನಗೆ, ನಸುನಗೆ ಇತ್ಯಾದಿ ನೂರುಬಗೆಯ ನಗೆಯನ್ನು ಮೊಗದ ಮೇಲೆ ನಲಿಸುತ್ತಲೇ ಇರಬಹುದು (ಶರಚ. ೪೮೫). [ನಸು$_1$ + ನಗೆ]

ನಸುನಗೆಮೊಗ (ನಾ). ಮುಗುಳುನಗೆಯಿಂದ ಕೂಡಿದ ಮುಖ : ನಸುನಗೆಮೊಗದ ಸೊಂಪಿನಲಾಹವಕ್ಕನುವಾದನಭಿಮನ್ಯು (ಕುವ್ಯಾದ್ರೋ. ೪-೪೯).

[ನಸುನಗೆ + ಮೊಗ]

ನಸುನಡುಗು (ಕ್ರಿ). ಸ್ವಲ್ಪ ಕಂಪಿಸು : ನಿಡುಸುಯ್ನಾರೋಡುವ ವದನಂ ನಸುನಡುಗುವ ಮೆಯ್ (ಜಯಕಾ ೩-೦೪). [ನಸು$_2$+ನಡುಗು$_1$]

ನಸುನನೆ (ನಾ). ಸಣ್ಣ ಮೊಗ್ಗು ; ಎಳೆಮೊಗ್ಗು ; ಕಸುಕಾದ ಮೊಗ್ಗು ; ಕರಲುಮೊಗ್ಗು : ನಸುನನೆಯೊಳಡಗಿರ್ದ ನವಸುಗಂಧದ ತೆಱದಿ ಉಸಿರೊಳಡಗಿರ್ದ ಚೈತನ್ಯದಂತೆ (ಶಿವಗೀ. ೧-೩) ; ನಸುನನೆಯನಪ್ಪಿದಳಿಕುಳದಂತೆ ಕಡುಹಸಿದು ಕಸುಗಾಯನಗಿದ ಗಿಳಿಗಳ ಬಳಗದಂತೆ (ಹಡಕಾ. ೮-೭೦). [ನಸು$_1$ + ನನೆ$_3$]

ನಸುನಳಿ (ಕ್ರಿ). ಸ್ವಲ್ಪ ಬಾಗು : ನಸುನಳಿದು ನಿಮಿರೆ ತೋಳ್ಗಳ್ ಲಸಿತ ತ್ರಿಪತಾಕದಿಂ ಲತಾಕರಮೆಸೆಯಲ್ ಪೊಸದಳಿರಂ ಪೊತ್ತೆಳಲತೆ ಮಿಸುಗುವ ಕುಡಿಯೆರಡನೆಟಲೆ ಬಿಟ್ಟವೊಲೆಸೆದಳ್ (ಲೀಲಾವ. ೪-೧೦೮).

[ನಸು$_2$ + ನಳಿ$_1$]

ನಸುನಾಚಿಕೆ (ನಾ). ತುಸು ಲಜ್ಜೆ : ಮುಂಜೆಱಗ ಸಂವರಿಸುತ್ತ ನಸುನಾಚಿಕೆಯ ಭಾರದಲಿ . . . ಮುಱುಕ ಮಿಗೆ ಕಾಣಿಸುತ ಬಂದಳು ರಾಮನಿದ್ದೆಡೆಗೆ (ತೊರರಾ. ೩-೪-೮). [ನಸು$_1$ + ನಾಚಿಕೆ (< ನಾಣ್ಚಿಕೆ)]

ನಸುನಾಚು 'ನಸುನಾಣ್ಚು' ನೋ.

ನಸುನಾಣ್ಚು, ನಸುನಾಚು (ಕ್ರಿ). ಸ್ವಲ್ಪ ಲಜ್ಜೆಪಡು : ಎಂದೊಡಾ ಮಾತಿಂಗೆ ನಸುನಾಣ್ಚೆ ಹೃದಯಾರವಿಂದದುಲ್ಲಾಸ ಪೂರಯಿಸಿ ಚಂದನ ಸೌರಭ್ಯವಡೆದ ವಿಗ್ರಹಜಾತ ಸಂದೋಹ ಗುಡಿಗಟ್ಟಿತವಳ(ಮೋಹತ. ೨೭-೩೮); ನಸುನಾಣ್ಚುತ ನಲವಿನೊಳು ಒಸೆದೊಲವಱಿತೊಯ್ಯನುಚಿತೋಪಚಾರವನೆಸಗುವುದೇಕಚಿತ್ತದೊಳು (ಹದಿಬ. ೩-೦೬). ನಸುನಾಚು : ಮಾಯಾ-(ನಸುನಾಚಿ) ನಾನು . . . ನಾನು . . . ನಾನೊಬ್ಬ ನರ್ತಕಿ (ತುಂಗಭ. ೮೪). [ನಸು$_2$ + ನಾಣ್ಚು$_1$]

ನಸುನಿದ್ದೆ (ನಾ). ಗಾಢವಲ್ಲದ ನಿದ್ದೆ ; ಲಘುನಿದ್ರೆ ; ಜೋಂಪು : ಎಸಟ್ಟಡಿಗೆತ್ತ ತಾವರೆಗಳೋವರಿಯೊಳ್ ನಸುನಿದ್ದೆ[ಪಾಠಾಂ. ಸುಖನಿದ್ರೆ] ಯಿಂದೆ ಜೋಂಪಿಸುವಳಿಯಂ . . . ಪ್ರಚಾರಿಸಿದುದು ಕಾಲಭೂಪನ ನಿಯೋಗದ ಸೂಳೆವಳಂಬೊಲೊಂದೆಲರ್ (ವರ್ಧಪು. ೮-೩೩).

[ನಸು$_1$ + ನಿದ್ದೆ]

ನಸುನಿದ್ರೆ (ನಾ).=ನಸುನಿದ್ದೆ : ಸಸಿಗಲ್ಲ ಬಟ್ಟಱೆಗಳ ಮೇಲೆರಳೆಗಳು ನಸುನಿದ್ರೆಯಿಂದೊಱಗಿರಲು (ಕುರಾಸಾಂ. ೪-೧೬). [ನಸು$_1$ + ನಿದ್ರೆ]

ನಸುನೀಡು (ಕ್ರಿ). ತುಸುವೆ ಮುಂದಕ್ಕೆ ಚಾಚು : ಪಣ್ಗಳ ಸದ್ರಸಬಿಂದು ವೃಂದಮಂ ... ತಂದಿದಿರೊಳ್ ನಸುನೀಡಿ ಗೋಣನಾಗಳೆ ನೆಱೆ ಚಂಚುವಂ ತೆಱೆದು ಮೆಲ್ಲನೆ ಲಲ್ಲೆಯೊಳಿಂತು ತನ್ನ ಪೆಣ್ಗಳಿಗೆಱೆಯುತ್ತುಮಿರ್ದುದೆನಸುಂ ನಲವಿಂ ಸುರತೋತ್ಸುಕಂ ಶುಕಂ (ಕುಸುಮಾ. ೫-೮೬). [ನಸು$_2$ + ನೀಡು$_1$]

ನಸುನೆನೆ (ಕ್ರಿ). ಸ್ವಲ್ಪ ತೋಯು; ತುಸುವೆ ಒದ್ದೆಯಾಗು: ನಸುನೆನೆದೊಯ್ಯನುಳ್ಳಲರೆ ಪೋಟ್ಟಿಲೆ ಕಂದದೆ ಕೂಡೆ ಕೆಂಪಿನಿಂ ರಸಮೊಸರ್ವಂತಿರೊಕ್ಕ ನಱುದಂಬುಲಕಂ . . . ಮದಾಳಿ ಮೊರೆದೆರ್ದೆಱಗುತ್ತಿರೆ ಬೀದಿಗಳ್ ಜನಕ್ಕಸತಿಯರೆರ್ದು ಪೋದುದನೆ ಪೇಟ್ಟವೊಲಿರ್ದುವು ಸುಪ್ರಭಾತದೊಳ್ (ಲೀಲಾವ. ೩-೦೭). [ನಸು$_2$ + ನೆನೆ$_2$ (< ನನೆ$_1$)]

ನಸುನೆಮ್ಮು (ಕ್ರಿ). ತುಸು ಒರಗು,-ಆಶ್ರಯಿಸು: ನಡುಗಿ ಬೆಮರ್ವ ಪೆಟ್ಟಳಿಸಿ ನೋಟ್ಪಿರ್ದೆ ಕಂಪಿಪ ತಲ್ಲಣಿಪ್ಪ ಕಾಲ್ ತಡತಡಮಾಗೆ ಕೆಯ್ಗುಡುವಳಂ ನಸುನೆಮ್ಮು [ಪಾಠಾಂ. ಮ್ರು]ವ ಮೇಲುದಂ ಕುಚಕ್ಕಡಿಗಡಿಗೇಱೆ ಸಾರ್ಚುವ . . . ವಿಕಾರಮಾಕೆಗಿದಿರೊಳ್ ಕರೆಗಣ್ಮೆದುದಂಬುಜಾಕ್ಷಸಾ (ವರ್ಧಪು. ೬-೧೪). [ನಸು$_2$ + ನೆಮ್ಮು$_1$]

ನಸುನೋ (ಕ್ರಿ). ಸ್ವಲ್ಪ ವ್ಯಥೆಪಡು,-ನೋಯು : ಉರಃಪ್ರದೇಶಮನಿಸೆ ನೆತ್ತರೊಕ್ಕು ಪತಿ ಮುಚ್ಚೆಯೊಳಿಚ್ಚೆಯೆಗೆಟ್ಟು ಜೋಲ್ದೊಡಾದಮೆ ನಸುನೊಂದು ನಂದಿಸದೆ ತನ್ನನೆ ನಿಂದಿಸಿದಂ ದಿನೇಶಜಂ (ಪಂಪಭಾ. ೦೨-೦೦೭).

[ನಸು$_2$ + ನೋ$_1$]

ನಸುನೋಟ (ನಾ). ಕಡೆಗಣ್ಣೋಟ ; ಕುಡಿನೋಟ ;ಓರೆನೋಟ : ನಸುನೋಟಂ ಜನವಶ್ಯಮಾಕೃತಿ ಗತಿಸ್ತಂಭಂ ವಚಃಪ್ರೌಢಿ ಭಾವಿಸೆ ಸಮ್ಮೋಹನಮಂತ್ರಂ (ಸೂಕ್ತಿಸು. ೮-೪೬೦) ; ಅಜ್ಞಾನದ ತಿಮಿರಮಂ ಕೆಡಿಸುವುದು ಗುರುವರ್ಯ ನಿನ್ನ ನಸುನೋಟ (ಅನುಸಾ. ೫-೪-೧) ; ತಾಳಿ ನಸುವರೆಯ ನಸುನೋಟ ನಸುಲಜ್ಜೆಯಿಂ ಬಾಲಕಿಯರಿರ್ವರು ವಿರಾಜಿಸಲು (ನವಮೋ. ೨೨-೩೪). [ನಸು$_1$ + ನೋಟ]

ನಸುಬಳಲ್ಕೆ (ನಾ). ಸ್ವಲ್ಪ ಆಯಾಸ ; ತುಸು ದಣಿವು : ನೋಟಂ ತವೆ ತಳೆದುವು ನಸುಬಳಲ್ಕೆಯಂ ಮೇನಕೆಯಾ (ಗಿರಿಕ. ೩-೩೭).

[ನಸು$_1$ + ಬಳಲ್ಕೆ (<ಬಟಲ್ಕೆ)]

ನಸುಬಾಗು 'ನಸುವಾಗು' ನೋ.

ನಸುಬಾಡು 'ನಸುವಾಡು' ನೋ.

ನಸುಬಾನಲ್ (ನಾ). ತುಸು ಮಸುಕಾದುದು; ಸ್ವಲ್ಪ ಬಣ್ಣವಳಿದುದು: ಚುಂಬಿಸಿ ಬೀಗಿ ಬೆಳ್ಪಡರ್ದ ಬಾಯ್ದೆಱೆ . . . ಉಣ್ಮೆ ಬೆಮರ್ ನಸುಬಾಲನಾ [ನಲಾ]ದ ಬೊಟ್ಟೆಂಬಿವು ಕೂಟದೊಂದು ಸವಿಯಂ ಪಿಸುಣಾಡುವುವೀ ಲತಾಂಗಿಯಾ (ಚಂದ್ರಪು. ೮-೭೨). [ನಸು$_1$ + ಬಾನಲ್]

ನಸುಬಿರಿ 'ನಸುವಿರಿ' ನೋ.

ನಸುಬಿಸಿ (ಗು). ೧. ಸ್ವಲ್ಪ ಬಿಸಿಯಾದ ; ಬೆಚ್ಚನೆಯ : ನಸುಬಿಸಿಯಪ್ಪ ನಲ್ಲುಣಿಸಿನಿಂ ಘಸೃಣಾರ್ದ್ರವಿಲೇಪದಿಂ ವಿರಾಜಿಸುವ ಕದಂಬದಂಬುಲದಿಂ . . . ಜನಮಾಗಳಿಂತು ಜೀವಿಸಿತಿನಿತಲ್ಲದಂದುಱಿವುದೇ ಹಿಮದಾಗರಮಾದ ಮಾಗೆಯೊಳ್ (ಕುಸುಮಾ. ೭-೨೩) ; ಬೆಳುನೊರೆ ಮಸಗಿ ನಸುಬಿಸಿರಕುತ ಹೊನಲಿಡಲು(ಕುವ್ಯಾದ್ರೋ. ೦೦-೬). (ನಾ). ೨. ಸ್ವಲ್ಪ ಬೆಚ್ಚಗಾದುದು

ಗಾಂಧಾರಿಸೊಪ್ಪಿನ ರಸವಂ ನಸುಬಿಸಿಯಂ ಮಾಡಿ ನೆತ್ತಿಗೊತ್ತೆ ವಾತಜ್ವರ ಪರಿಹಾರವಾಗುವುದು (ಸಕವೈ. ೭೦). [ನಸು$_1$ + ಬಿಸಿ]

ನಸುಬಿಸುಪೇಱು (ಕ್ರಿ). ಸ್ವಲ್ಪ ಬೆಚ್ಚಗಾಗು: ನಸುಬಿಸುಪೇಱ್ ಮೆಯ್ಮಗುಱ್ ಕೆತ್ತುವ ತಾಣಮೆ ಕೆತ್ತೆ . . . ಜಾನಕೀಯೆನುತ್ತುಸಿರ್ದುಸಿರ್ದೆಟ್ಟನಾ ರಘುಕುಲಾಂಬರಚಂಡಮರೀಚಿ ಮೂರ್ಛೆಯಿಂ (ಪಂರಾಮಾ. ೯-೧೦೭).

[ನಸು$_2$ + ಬಿಸುವು + ಏಱು$_1$ (< ಏಱ್$_1$)]

ನಸುಬಿಳಿದು (ನಾ). ತಿಳಿಯಾದ ಬಿಳಿ ; ಮಾಸಲು ಬಿಳಿ ; ಬೂದುಬಣ್ಣ; ಧೂಸರ : "ಧೂಸರಂ=ದೂಸರಂ, ದೂಸರಮೆಂದು ನಸುಬಿಳಿದು" (ಶಪುದ. ಕಿ. ೨೫೫ ಪ್ರಯೋ) ; ಕೋಠ = ನಸುಬಿಳಿದಾಗಿ ಮಿಂಚುಹ ಬಟ್ಟೆಹ ತೊನ್ನು (ನಾಚಿರಾ. ಕಿ). [ನಸು$_1$ + ಬಿಳಿದು]

ನಸುಬಿಳುಪು 'ನಸುವೆಳ್ಪು' ನೋ.

ನಸುಬೆಡಗು (ನಾ). ತುಸು ಒಯ್ಯಾರ : ನಡಿಗೆಯಲ್ಲಿ ಕಂಡೂ ಕಾಣದಂತಹ ನಸುಬೆಡಗು (ಆಲಹೂ. ೦೮). [ನಸು$_1$ + ಬೆಡಗು (< ಬೆಡಂಗು)]

ನಸುಬೆಳಕು 'ನಸುವೆಳಗು' ನೋ.

ನಸುಬೆಳಗು (ಕ್ರಿ). ಮಂದವಾಗಿ ಉರಿಸು : ನಸುಬೆಳಗುಗೆ ಸೊಡರಂ (ಮದತಿ. ೮-೨೮). [ನಸು$_2$ + ಬೆಳಗು$_1$]

ನಸುಬೆಳರ್ (ಕ್ರಿ). ಸ್ವಲ್ಪ ಬಿಳಿದಾಗು ; ಮಾಸಲುಬಿಳಿ ಬಣ್ಣವನ್ನು ತಾಳು: ಮಂದೈಸಿದ ಸಿಂಧುವಾರ ವನರಾಜಿಯಿಂ ನಸುಬೆಳರ್ತ ತಡಿಗಳುಮಂ . . . ಪಥಿಕರಱಲ್ಗೊಂಡು ತೋಡಿದಱುಂಬುನೀರ ಬಗರಗೆಗಳುಮನೊಳಕೆಯ್ದ ಬತ್ತಿದ ಪಳ್ಳಂಗಳೊಳಮತಿರೌದ್ರಮಾದ ಪೇರಡವಿಯೊಳಗೆ ಬರ್ಪಾಗಳ್ (ಕಾದಂಉ. ೨೬೬). [ನಸು$_2$ + ಬೆಳರ್$_1$]

ನಸುಬೇನೆ (ನಾ). ಅಲ್ಪವಾದ ಬೇನೆ ; ಘನವಲ್ಲದ ನೋವು : ಗರ್ಭಿಣಿಗೆ ನವಮಾಸ ಪೂರ್ಣಮಾದುದು ತದ್ವಿಲಾಸಿನಿಯ ಸಂತಸದ ಮುಂದೆ ನಸುಬೇನೆಯಂ ಪೇಳಲಹುದೇ (ಭಾವಚಿಂ. ೩-೫೬). [ನಸು$_1$ + ಬೇನೆ]

ನಸುಬೇ (ಕ್ರಿ). ಸ್ವಲ್ಪ ಬೇಯು ; ಅರ್ಧ ಬೇಯು : ಹುರಿದ ತೆಂಗಾಯ ನಸುಬೆಂದ ಬೇಳೆಯ ಹೆಸರು ಹುರಿದು ಬೇಯಿಸಿದ ಸೊಜ್ಜಿಗೆಯಿವನು ಕೂಡಿ ಸಕ್ಕರೆಯಿಕ್ಕಿ ಕರ್ಪೂರವನು ತಳಿದು (ಸೂಪಶಾ. ೦-೩೪). [ನಸು$_2$ + ಬೇ$_1$]

ನಸುಭಯ (ನಾ). ತುಸು ಅಂಜಿಕೆ ; ಸ್ವಲ್ಪ ಹೆದರಿಕೆ : ಬಾಣಧಿಯೊಳನ್ನ ಬರಡಗಿರೆಂದಸುರಾರಿ ನೇಮಿಸೆ ನುಡಿದನತ್ತಲು ರಾವಣನು ನಸುಭಯದ ಬೆಱಗಿನಲಿ (ತೊರರಾ. ೬-೯-೦೯). [ನಸು$_1$ + ಭಯ]

ನಸುಮರ್ಬು (ನಾ).=ನಸುಗಟ್ಟಿಲೆ : ಉಳಿವೆಳಗು ಸಂಜೆ ನಸುಮರ್ಬು ಳುರ್ದಂಬರದಂತೆ ತಿಳಿವು ರಾಗಂ ನೆಗಳ್ದುಮ್ಮಳಮನೊಳಕೊಂಡ ಬಗೆಯಿಂ ತಳವೆಳಗಾಗುತ್ತೆ ಪಾರ್ಥನಂದಿಂತೆಂದಂ (ಶಬಶಂ. ೪-೦೦೪).

[ನಸು$_1$ + ಮರ್ಬು (<ಮರ್ವು)]

ನಸುಮಸಿ (ನಾ). ಸ್ವಲ್ಪ ಕಪ್ಪು ; ತುಸು ಕಪ್ಪು : ನಸುಮಸಿಯಾದ ಕರ್ಪಡವನುಟ್ಟು (ಕಱಿಕಂ. ೦೭). [ನಸು$_1$ + ಮಸಿ]

ನಸುಮಸುಳ್ (ಕ್ರಿ). ಸ್ವಲ್ಪ ಕಳೆಗುಂದು ; ಮಂಕಾಗು ; ಮಸುಕಾಗು : ಪೊಸತಲರ್ದ ಬಿಳಿಯ ತಾವರೆಯೆಸಟ್ಗಳ ನಡುವಿರ್ಪ ಸಿರಿಯುಮಾಕೆಯ ಕೆಲದೊಳ್ ನಸುಮಸುಳ್ದು ತೋರ್ಪಳ್ (ಪಂಪಭಾ. ೦-೪೦) ; ಒರ್ಮೊದಲೆಱಗಿ ದೆಸೆಗಳೆಲ್ಲಮನೊಡನಾವರಿಸಿ ತರತರದೆ ನಸುಮಸುಳ್ದಿರೆ ಪುದಿದುವು ನಭವನಭವನಂಬುಗಳೆತ್ತಂ (ಕಾವ್ಯಾವ. ೧೯೪) ; ನಸುಮಸುಳ್ದಂಗಲೇಖೆ ಪೊಱಮಟ್ಟೆಡಗಾಲ್ . . . ಕಣ್ಗೆಸೆದಿರೆ ಪಾಱಿದಳ್ ಪೊಳೆದು ಖೇಚರಿ ಮಿಂಚಿನ ಬೊಂಬೆಯೆಂಬಿನಂ (ಅರ್ಧನೇ. ೩-೦೭).[ನಸು$_2$+ಮಸುಳ್]

ನಸುಮಾತು (ನಾ). ಸಣ್ಣ ಮಾತು : ವಿಷಯಾತುರಗೆ ವಿವೇಕವಿಲ್ಲೆಂಬುದು ಪುಸಿಯಲ್ಲ ಮಾಯಾವಿ ನುಡಿದ ನಸುಮಾತಿಗೆ ನಿಶ್ಚಯಿಸಿದ ಪಯಣವನುಷೆಯ ತಾತ್ಪರ್ಯದುಬ್ಬಿನಲಿ (ಮೋಹತ. ೩೦-೨೫). [ನಸು$_1$ + ಮಾತು$_1$]

ನಸುಮಾಸು (ಕ್ರಿ). = ನಸುಮಸುಳ್ : ನಸುಮಾಸಿ ಪಾಡಟಿದ ರೂಪಿನೊಳುಣ್ಮುವ ಗಾಡಿ ನಾಡೆ ಕಣ್ಗೆಡಱ್ (ಪಂಪಭಾ. ೦೩-೯೯) ; ನಸುಮಾಸಿದೆಱಂಕೆಗಳಿಂ ಕಲಹಂಸೆಗಳೆಂಬುದು (ಹಲಾಯು. ೪೨-೯೯) ; ಎಸೆದುದು ಧರಿತ್ರಿ ಪೊಗೆ ಪುಗೆ ನಸುಮಾಸಿದ ಪೊಗೆಯ ಚಿತ್ರಭಿತ್ತಿಯ ತೆಱದಿಂ (ಪುಷ್ಪಪು. ೫-೪೦).

[ನಸು$_2$ + ಮಾಸು$_1$]

ನಸುಮುಗಿ (ಕ್ರಿ). ಸ್ವಲ್ಪ ಮುಚ್ಚು ; ಅರೆಮುಚ್ಚು ; ಅರ್ಧ ನಿಮೀಲಿತವಾಗು : ನಸುಮುಗಿದಕ್ಷಿ ನಾಸಿಕದೊಳೊಂದಿರೆ (ದಶಕು. ೨-೬೩).

[ನಸು$_2$ + ಮುಗಿ]

ನಸುಮುಚ್ಚು (ಕ್ರಿ). ಅರ್ಧ ಮುಚ್ಚು ; ಅರೆಮುಗಿ : ನಸುಮುಚ್ಚುವ ಬಿಚ್ಚುವ ಪೊಳೆವ ಸುಟಿವ ಬಳಸುವ ಬಟಲ್ವ ತೆರೆಮಸಗಿ ಮರಲ್ದೆಸೆವ ರಸಭಾವದೃಷ್ಟಿಗಳಸದಳಮೆನಿಸಿದುವು ನೃತ್ಯದೊಳ್ ನರ್ತಕಿಯಾ (ಲೀಲಾವ. ೪-೧೨೬) ; ಬಿಗಿಯಪ್ಪಿ ಮೊಗಮನಿಟ್ಟಾಲಿಗಳಂ ನಸುಮುಚ್ಚೆ (ಗಿರಿಕ. ೨-೩೯).

[ನಸು$_2$ + ಮುಚ್ಚು$_1$]

ನಸುಮುಚ್ಚೆವೋಗು (ಕ್ರಿ). ಸ್ವಲ್ಪ ಮೈಮರೆ,-ಎಚ್ಚರ ತಪ್ಪು ; ಮೂರ್ಛೆಹೋಗು : ತನ್ನ ಚಿತ್ತದೊಳ್ ನೆಲಸಿದ ರಾಮನಂ ಬಯಸಿ ನೋಡಲಪೇಕ್ಷಿಸಿ ಬಾಹ್ಯದರ್ಶನಕ್ಕಲಸಿದಳೆಂಬಿನಂ ಮುಗಿಯೆ ಕಣ್ಮಲರ್ಗಳ್ ನಸುಮುಚ್ಚೆವೋಗಿ ತಣ್ಣೆಲರಲೆಪಿಂದೆ ಮೂರ್ಛೆದಿಳಿದಳ್ (ಪಂರಾಮಾ. ೯-೧೧೦). [ನಸು$_2$ + ಮುಚ್ಚೆ$_2$ + ಪೋಗು$_1$]

ನಸುಮುಟ್ಟು (ಕ್ರಿ). ಸ್ವಲ್ಪ ತಾಗು ; ಮೃದುವಾಗಿ ಸ್ಪರ್ಶಿಸು : ಮೃಗಧರನಂಶುಮಾಲೆ ನಸುಮುಟ್ಟುವುದುಂ ಜಲಸೂಕ್ಷ್ಮಬಿಂದುಗಳ್ನೆಗೆದಪುವಿಂದುಕಾಂತಮಣಿಪುತ್ರಿಕೆಯಿಂದೆನೆ (ಮಲ್ಲಿಪು. ೪-೨೯).

[ನಸು$_2$ + ಮುಟ್ಟು$_1$]

ನಸುಮುತ್ತು (ನಾ). ಹಗುರವಾದ ಚುಂಬನ; ಲಘುವಾದ ಚುಂಬನ : ನಸುಮುತ್ತ ಕೊಡುವಾಗ ಮೂರ್ಛೆ ಸಂಧಿಸಿತು ಸಾಹಸದಿ ಬೀಳದೆ ನಿಂದೆ ನಾನು (ಭರಚ. ೯-೧೦೦). [ನಸು$_1$ + ಮುತ್ತು$_4$]

ನಸುಮುರಿ (ಕ್ರಿ). ಸ್ವಲ್ಪ ತಿರುಗು ; ತುಸುವೆ ಹೊರಳು : ಪರಿದ ತಲೆಬಿಟ್ಟ ಬಾಯ ನಸುಮುರಿದ ಕೊರಲ್ಮಗುಟ್ಟ ಕಣ್ಗಳ್ (ಗದಾಯು. ೪-೨೫).

[ನಸು$_2$ + ಮುರಿ$_1$]

ನಸುಮುರುಟು (ಕ್ರಿ). ತುಸು ಮುದುಡು,-ಬಾಗು,-ತಿರಿಚಿಕೊಳ್ಳು, 'ನಸುಮುರುಟುಗಿವಿ' ಪರಾ.

[ನಸು$_2$ + ಮುರುಟು$_1$ (<ಮುರುಂಟು$_1$)]

ನಸುಮುರುಟುಗಿವಿ (ನಾ). ತುಸು ಮುದುಡಿದ ಕಿವಿ : ನೊರೆವಾಯ ಹಾವಸೆವರಿದ ಪಲ್ಗಳ ಜೋಲ್ದುಟಿಯ ನಸುಮುರುಟುಗಿವಿಗಳ ಹಱಿಕಗಡ್ಡದ ಕೆಂಪುಮೀಸೆಗಳ . . . ತೋರ ಕಾರೊಡಲ ಕುಱುಬನು (ಬಸಪು ೨೦-೧೧).

[ನಸುಮುರುಟು + ಕಿವಿ$_3$]

ನಸುಮುಸುಂಕು (ನಾ). ತೆಳುವಾದ ಮುಸುಕು,-ತೆರೆ : ಎಸೆವ ಸಭೆಯೊಳ್ ನಸುಮುಸುಂಕು ನಾಡೆ ಮೆಱೆಯೆ ಮಱೆಗೊಂಡು ಕುಳ್ಳಿರ್ಪಲ್ಲಿ (ಗಿರಿಕ. ೨-೧೦೫ ಪ). [ನಸು$_1$ + ಮುಸುಂಕು$_2$]

ನಸುಮೆಲ್ (ಕ್ರಿ). ಸ್ವಲ್ಪ ಜಗಿ; ತುಸು ಅಗಿ : ನಸುಮೆಲ್ದಚ್ಚಗಱುಂಕೆ ಸೂಸುತಿದೆ ಪೋದತ್ತಿಲ್ಲಿ ನಾನಾಮೃಗಂ (ಕಾದಂಪೂ. ೧೫೮).

[ನಸು$_2$ + ಮೆಲ್$_1$]

ನಸುಮೊಳೆ (ಕ್ರಿ). ತುಸು ಅಂಕುರಿಸು ; ಸ್ವಲ್ಪವೆ ಕಾಣಿಸಿಕೊಳ್ಳು : ಮುಗುಳುನಗೆ ನಸುಮೊ[ಪಾಠಾಂ. ಹೊ]ಳೆಯೆ ಭೀಮಾದಿಗಳಿಗೆಂದನು ಕೃಷ್ಣನು (ಕುವ್ಯಾಭೀ. ೭-೦೨). [ನಸು$_2$ + ಮೊಳೆ$_1$]

ನಸುಲಜ್ಜೆ (ನಾ).=ನಸುನಾಚಿಕೆ : ನಗೆ ನಸುಲಜ್ಜೆಯೊಳ್ ತೊಡರಲಿರ್ದುದೆ ಬಲ್ನಡೆ ಮಾಂದ್ಯಭಾವದೊಳ್ ಪುಗಲಿದೆ . . . ಯೌವನೋದಯವೊ

ಬಾಲ್ಯವಿಮೋಚನಮೋ . . . ಭವಾನಿಯಾ (ಗಿರಿಕ. ೪-೫) ; ನಸುಲಜ್ಜೆ ನಗೆಮೊಗದೊಳಂಕುರಿಸೆ (ಜೈಮಿಭಾ. ೨೯-೨೮). [ನಸು$_1$ + ಲಜ್ಜೆ]

ನಸುವಕ್ಕೆ (ನಾ). ತುಸು ಒರಗುವಿಕೆ; ಸ್ವಲ್ಪ ಬಾಗುವಿಕೆ: ಹರವಸಮೊಯ್ಯ ನಾಱ್ ಮುಗುಳ್ದಕ್ಷಿಗಳೆಟ್ಟಱ್ ಕೂಡೆ ಮೆಯ್ಯೊಳುಬ್ಬರಿಸಿದ ರೋಮರಾಜಿ ನಸುವಕ್ಕೆಗೆ ಸಾಱ್ ಬಱಲ್ದ ಮೆಯ್ಗೆ ಚೇತರಣೆಯಲರ್ಚೆ(ಚಂದ್ರಪು. ೮-೭೦).

[ನಸು$_1$ + ಪಕ್ಕೆ$_1$ (<ಪಱ್ಕೆ)]

ನಸುವರೆ (ಕ್ರಿ). (ಸಂದಣಿ) ಸ್ವಲ್ಪ ಚೆದರು : ನೂಕುತಾಕಂ ನಿರವಿಸಿ ಕಿಱಿದುಂ ಪೊಟ್ಟು ನಿಂದು ಅಲ್ಲಿಯ ಸಂದಣಿ ನಸುವ[ಪಾಠಾಂ. ಪ]ರೆವುದುಂ . . . ಪೊಂಬಾಗಿಲನೊಳಪೊಕ್ಕು (ಚಿಕವಂ. ೧೨೧-೨೨); "ಸ್ವಲ್ಪ ಹರಿ, ತುಸು ಕಮ್ಮಿಯಾಗು" (ಪ್ರಭಣ್ಣ). [ನಸು$_2$ + ಪರೆ$_1$]

ನಸುವರೆಯ (ನಾ). ಎಳೆಯ ಪ್ರಾಯ ; ಹರೆಯದ ಪ್ರಾರಂಭ ; ಏರುಂಜವ್ವನ : ತಾಳಿ ನಸುವರೆಯ ನಸುನೋಟ ನಸುಲಜ್ಜೆಯಿಂ ಬಾಲಕಿಯರೀರ್ವರು ವಿರಾಜಿಸಲು (ನವಮೋ. ೨೩-೩೪). 'ಎಳವರೆಯ' ಪರಾ.

[ನಸು$_1$+ ಪರೆಯ$_2$ (< ಪರಯ)]

ನಸುವಾಗು, ನಸುಬಾಗು (ಕ್ರಿ). ೧. ತುಸು ಬಾಗು; ಕೊಂಚ ಬಳುಕು,-ಬಗ್ಗು : ಮೇಲುದಿನೊಳ್ಪೊದಳ್ದ ಕುಚಭಾರದಿಂ ನಸುವಾಗಿದುಗಲತೆ (ಜೈಮಿಭಾ. ೬-೪೬). **ನಸುಬಾಗು** : ೧. ನಸುಬಾಗಿ ಕೊಂಬಿನೊಳ್ ಪೊಳೆವೆಳಗಾಯ ನುಣ್ಬೊಗರಿಯಿಂ ಸುಟಿತರ್ಪೆಲರಿಂದೆ ಬಿಟ್ಟ ಪೂಗಳ ಪುಡಿಯಿಂ ಕರಂ ಸೊಗಯಿಪೋಲಗಸಾಲೆಯೊಳಿರ್ದರೊಪ್ಪದಿಂ (ಕಬ್ಬಿಕಾ. ೧೨೬). ೨. ತುಸು ತಗ್ಗಿಸು,-ಬಾಗಿಸು : ಪರರು ಪತಿಕರಿಸಿದೊಡೆ ಲಜ್ಜೆಗೆ ಶಿರವ ನಸುಬಾಗುವರು ಗರುವರು (ಕುವ್ಯಾವಿ. ೭-೧೮). [ನಸು$_2$ + ಬಾಗು$_1$]

ನಸುವಾಡು, ನಸುಬಾಡು (ಕ್ರಿ). ತುಸು ಬಾಡು : ನಸುಗಂದು : ಮಿಸುಗುವ ಬಣ್ಣವಾಸಿಗದೆಸಱ್ ನಸುವಾ[ಪಾಠಾಂ. ಬಾ]ಡೆ ವಿಭೂಷಣಾಂಶುಗಳ್ ಮಸುಳೆ (ಸುಕುಮಾ. ೧೦-೫) ; ನೀರ್ಗುಡಿಯಲ್ ಗಡಣದಿಂ ಬಂದು ಬಱಲ್ದು ಕುಳ್ಳಿರ್ದ ಪಾಮರಿಯರ ಪೆರ್ಮುಡಿಯಿನಲ್ಲೊಕ್ಕು ನಸುವಾಡಿದ ನೆಲ್ಲ ನಿಡುವೊಡೆಗಳಿಂ (ಲೀಲಾವ. ೫-೬೭ ವ). **ನಸುಬಾಡು** : ಮೇಲಿನ 'ಸುಕುಮಾ' ಪ್ರಯೋಗದ ಪಾಠಾಂತರವನ್ನು ನೋಡಿ.

[ನಸು$_2$ + ಬಾಡು$_1$]

ನಸುವಿರಿ, ನಸುಬಿರಿ (ಕ್ರಿ). ತುಸು ಅರಳು ; ಅರೆಬಿರಿ : ನಸುವಿರಿದ ಸೇವಂತಿಗೆಯ ಕೇವಣದುಂಗುರಂಗಳುಮಂ. . .ನೋಡಿ (ಜಗವಿ. ೬-೧೬ವ) ; ನಸುವಿರಿದಿರ್ದ ಪದ್ಮವನದೊಳ್ ನಲಿವಂಚೆಗಳಿಂ . . ರಸಾಲದೊಳ್ ಪೊಸತನಿವಣ್ಗಳಿಂ ಸವಿದು ರಾಗಿಪ ರಾಜಶುಕಂಗಳಿಂ ನಿರೀಕ್ಷಿಸೆ ಸೆಱ್ಗೆಯ್ಯ ದೊರ್ಮೊದಲೊಳಾ ವನಮಾ ವನಲೋಚನಂಗಳಂ (ಧರ್ಮನಾ. ೨-೫೪). **ನಸುಬಿರಿ** : ಕುಸುಮಕುಳಕ್ಕೆ ನಿನ್ನರಸೆ ನಿನ್ನ ವಿಳಾಸಮೆ ನಿನ್ನ ಚೆಲ್ವೆ . . . ಎಂದಭಿಷೇಕಪುರಸ್ಸರಂ ಸ್ಮರಂ ನಸುಬಿರಿದಿರ್ದ ಮಲ್ಲಿಗೆಗೆ ಕಟ್ಟಿದನಂಕದ ರಾಜ್ಯಪಟ್ಟಮಂ (ಶಾಂತಿಪು. ೭-೧೪೨); ನಸುಬಿರಿವ ಕಮಲಮುಕುಳದ ನಸುಬಿರಿವುತ್ಪಲದ ಮುಗ್ಧ ಪರಿಮಳಗಂಧಂ (ಅಜಿಪು. ೬-೬೫) ; ನಸ ಬಿರಿವ ಕುಸುಮಕೆ ಸುಗಂಧ ರನ್ನಕೆ ರಂಗು ದೊರೆಕೊಂಡ ಮಾಳ್ಕೆಯಿಂ (ಸೌಂದಪು ೭-೨).

[ನಸು$_2$ + ಬಿರಿ$_1$]

ನಸುವಿರಿದು (ನಾ). ಸ್ವಲ್ಪ ದೊಡ್ಡದು : ಎಳದು + ಪೆಱ್ = ಎಳವೆಱ್ ಏವಂ ಬೆಳೆವೊಲಂ, ಮೂವಣ್ಣಂ. ನಸುವಿರಿದು, ಮರವಣೆ (ಶಬ್ದಾನು. ೯೦ ಪ್ರಯೋ). [ನಸು$_1$ + ಪಿರಿದು]

ನಸುವೆಸೆ (ಕ್ರಿ). ಸ್ವಲ್ಪ ಬಿಂಕವನ್ನು ತೋರು,-ಬೀಗು : ಪಸರಿಸಿದ ಕುಸುಮದೆಸಟ್ಗಳ ಮಸುಳಗೆಯಂ ಪಳುಕುವೆಸವ ಸೆಗಸವಸದಿಂ ಸಸಿವಸಿಯಿಸಿದವೊಲೆಸೆದುದನಸಿಯಳ್ ನಸುವೆಸೆದು ಪಸುಗೆಕುಡೆ ಕುಳ್ಳಿರ್ದಂ (ಅನಂಪು. ೮-೩೫). [ನಸು$_2$ + ಬೆಸೆ$_1$]

ನಸುವೆಳಗು, ನಸುಬೆಳಕು (ನಾ). ಮಂದವಾದ ಕಾಂತಿ; ಸ್ವಲ್ಪ ಬೆಳಕು ; ಮಬ್ಬು ಬೆಳಕು : ಕುಸುಮರಜದಿಂದೆ ಸೊಗಯಿಪ ವಸಂತವನರಾಜಿಯಂತೆ ಚಂದ್ರೋದಯಮಿನ್ನೆಸೆದಪುದೆನೆ ನಸುವೆಳಗಿಂ ಮಸಗಿದುದಿನಿಸಿಂದ್ರದಿಗ್ವಧೂಮುಖಬಿಂಬಂ (ಕಾದಂಪೂ. ೮೭೮). **ನಸುಬೆಳಕು** : ಇನ್ನೂ ನಸುಬೆಳಕು ಹರಿಯುತ್ತಿತ್ತಷ್ಟೆ (ರೂಪಸಂ. ೧೭). [ನಸು$_1$ + ಬೆಳಗು$_2$]

ನಸುವೆಳ್ದಿಂಗಳ್ (ನಾ). ತಿಳಿಯಾದ ಬೆಳದಿಂಗಳು : ನಸುವೆಳ್ದಿಂಗಳ ತಣ್ಗದಿರ್ಗೊನರ್ಗಳಂ ದಂತಾಂಶುಗಳ್ ಬೀಱ್ (ಮಹಾನೇ. ೮-೦೩).

[ನಸು$_1$ + ಬೆಳ್ದಿಂಗಳ್]

ನಸುವೆಳ್ಪು, ನಸುಬಿಳುಪು (ನಾ). ಸ್ವಲ್ಪ ಬಿಳುಪು ; ನಸುಕಾಂತಿ : ಒಸರ್ದಪುದು ನುಡಿಯೊಳೊಲವಿನ ರಸವೆನೆ ನಸುವೆಳ್ಪು ಮಂದಮಂದ ಸ್ಮಿತದಿಂ ಪಸರಿಸುತಿರೆ (ಕಾದಂಉ. ೧೮೬). **ನಸುಬಿಳುಪು** : "ಈಷತ್ಪಾಂಡು, ಧೂಸರ = ನಸುಬಿಳುಪು" (ನಾಚಿಠಾ. ಕಿ). [ನಸು$_1$ + ಬೆಳ್ಪು]

ನಸುಸಂಜೆ (ನಾ). ಸೂರ್ಯ ಮುಳುಗುವ ಸಮಯ ; (ರಾತ್ರಿಯಾಗಲು) ಸ್ವಲ್ಪ ಕಾಲವೆ ಉಳಿದಿರುವ ಸಂಜೆ ; ಗೋಧೂಳಿಕಾಲ : ನಸುಸಂಜೆಯಾಗಲುದೃಟನೊಸೆದರ್ಘ್ಯಮನಿತ್ತು ಚಂದ್ರಭೂಷಣನಂ ಪೂಜಿಸಿ ಮೆಲ್ಲನೆ ಮಗುಟ್ಟಾರೋಗಿಸಿದಂ ಶಿವಭದ್ರವೆರಸು ಮುದದಿಂದಾಗಳ್ (ಉದ್ಯಟ. ೮-೮೬). [ನಸು$_1$ + ಸಂಜೆ]

ನಸುಸವಿ (ಕ್ರಿ). ಸ್ವಲ್ಪ ರುಚಿ ನೋಡು ; ತುಸು ತಿನ್ನು : ನಸುಸವಿದಿತ್ತ ಪೊಚ್ಚಪೊಸಗಂಪಮರ್ದಿಂಪಿನ ತಂಬುಲಂ (ಉದ್ಯಟ. ೪-೩೮).

[ನಸು$_2$ + ಸವಿ$_1$]

ನಸುಸುಯ್ (ಕ್ರಿ). ಸ್ವಲ್ಪ ಉಸಿರುಬಿಡು : ಸುರಭಿಪರಿಮಳಸುಗಂಧೋತ್ಕರಮಂ ಪನ್ನೊಂದು ತಿಂಗಳಿಗೊರ್ಮೆ ಮನೋಹರಮಾಗಿರೆ ನಸುಸುಯ್ವಂ ನಿರುಪಮಮಹಿಮಾಪ್ರಭಾವನಂತಾ ದೇವಂ (ಸುಕುಮಾ. ೯-೩೪). 'ಬಿಸುಸುಯ್' ಪರಾ. [ನಸು$_2$ + ಸುಯ್$_1$]

ನಸುಸುರ್ಕು (ಕ್ರಿ). ಸ್ವಲ್ಪ ಕುಗ್ಗು : ಸುರ್ಕುಟಿದುರುಳಿಗುರುಳೆ ನಸುಸುರ್ಕಿದ ಕುಚಚೂಚುಕಂ (ಆದಿಪು. ೧೧-೧೪೫). [ನಸು$_2$ + ಸುರ್ಕು$_1$]

ನಸುಸುಳಿವು (ನಾ). ಮಂದವಾದ ಚಲನೆ : ಲಲಿತಮೃದುತರ ಹಂಸತೂಲದ ತಳಿತ ಮಂಚದ ತಂಬೆಲರ ನಸುಸುಳಿವಿನಲಿ ಥಳಥಳಿಪ ಜಾಳಕಪಂಕ್ತಿ ರಂಜಿಸಲು (ಬಸಪು. ೧೧-೧೪). [ನಸು$_1$ + ಸುಳಿವು (< ಸುಟಿವು)]

ನಸುಸೇಕ (ನಾ). ಸ್ವಲ್ಪ ಶಾಖ ; ಸುಖೋಷ್ಣ : ದಿಟ್ಟ ಪಾರ್ವಂ ಕಾಸಿ ತೆಗೆವುತ ಪೊಟ್ಟಣವನಂಗೈಯ್ಯೊಳೊಯ್ಯನೆ ಮುಟ್ಟಿಮುಟ್ಟಿ ಶರೀರದೊಳು ನಸುಸೇಕಮಂ ಮಾಡಿ ಅಟ್ಟ ವಾತದ ತೈಲವಂ ತಾಂ ಬೊಟ್ಟಿಡಿಸಿ ಲೇಪಿಸುತ ಪಥ್ಯಂಗೊಟ್ಟಿದಕೆ ತಕ್ಕನಿತು ಜೋಪಾಸನವನಾಚರಿಸಿ (ಬಸಪು. ೧೭-೮).

[ನಸು$_1$ + ಸೇಕ$_1$]

ನಸುಸೈರಣೆ (ನಾ). ಸ್ವಲ್ಪ ತಾಳ್ಮೆ,-ಸಹಿಷ್ಣುತೆ: ಪ್ರಣಯಕಲಹವನೊಡರ್ಚಿ ನಸುಸೈರಣೆಯ ಗೆಲವಂ ಕೊಟ್ಟು ಮೆಲ್ಲನೆ ಸೆಣಸಿ ಮುನಿದಡೆ ಸೋಲ್ತು ಮನವಲುಸುತೊಡನೆ ಸಾರ್ದು . . . ಮೇಳೈಸಿ (ಬಸಪು. ೪೨-೧೪).

[ನಸು$_1$ + ಸೈರಣೆ]

ನಸುಸೋಂಕು$_1$ (ಕ್ರಿ). ಸ್ವಲ್ಪ ತಗುಲು,-ತಾಗು : ಪೊಸ ಪೂವಿನ ಕಂಪಿನೊಳಟ್ಟು ಚಿತ್ತಜೋತ್ಪನ್ನವಿಳಾಸಮಂ ವಿರಹಿಗಿರ್ಮಡಿಮಾಡಿ ಶರದ್ಭವಂ ಸಮೀರ[ನ್ನ]ಸುಸೋಂಕಿ ಘರ್ಮಜಲಬಿಂದುವನಾಱಿಸಿದತ್ತು ನಲ್ಲರಾ (ಶಾಂತಿಪು. ೧೦-೧೩೨) ; ಅರಗಿಳಿವಿಂಡು ಪಾಱ್ ನಸುಸೋಂಕಿದೆಱಂಕೆಯ ಗಾಳಿಗೊಂದನೊಂದೊರಸೆ ನಿರಂತರಂ ಸುರಿವ ನುಣ್ದೆನೆವಾಲ್ಗಳ ಧಾರೆಗೊಡ್ಡಿ ಚಂಚುರ ನಿಜಚಂಚುವಿಂ ಸವಿದು (ಕಾವ್ಯಸಾ. ೧೦೪) ; ತಕ್ಕೆಯೊಳ್ಪರಿದು ನಸುಸೋಂಕಿ ವಿಟರಿಂ ಫಣಂದೆಗೆಯೆಂದು ಮುದಿಸೂಳೆ ಮಗುಳುಸುರ್ದಳು (ನಂದಿಮಾ. ೨೩-೪೩). [ನಸು$_2$ + ಸೋಂಕು$_1$]

ನಸುಸೋಂಕ್ಕು₂ (ನಾ). ಮೃದುವಾದ ಸ್ಪರ್ಶ : ಎನ್ನ ಕದಂಪಿನ ನಸುಸೋಂಕಿನೊಂದು ಸುಖದಿಂದಾದಂ ಕಂಪಿಸುತಿರೆ ಕರತಳದಿಂದಂ ಪೋದತ್ತಕ್ಷಮಾಲೆ ನಾಣ್ಬೆರಸಾಗಳ್ (ಶಾದಂಪೂ. ೭೭೦). [ನಸು₁ + ಸೋಂಕ್ಕು₂]

ನಸುಹೊಳೆ (ಕ್ರಿ). ಸ್ವಲ್ಪಕಾಣು.–ತೋರು : ನಗೆಯ ಮೊಳೆ ನಸುಹೊಳೆಯೆ ಬೊಮ್ಮನ ಮೊಗವ ನೋಡಿದನಭವ (ಕುಪ್ಯಾಕ. ೬-೨೩).

[ನಸು₂ + ಹೊಳೆ₁ (< ಪೊಳೆ₁)]

ನಸೆ₁, ನಸ್ಸಿ₂, ನೆಸೆ₃ (ನಾ). ೧. ಕಾಮಾತುರ ; ಕಾಮವಿಕಾರ ; ಬೆದೆ : "ನಸೆ ಕಾಮವಿಕಾರ ವೃದ್ಧಿಯೊಳ್" (ಕರ್ಣಾನಿ. ೯೦) ; ಪೊಸಮದದಾನೆಯಂ ನಸೆಯ ಪೆರ್ಬಿಡಿ ಜಂಗಮಕಲ್ಪವೃಕ್ಷಮಂ ಮಿಸುಗುವನಲ್ಪಕಲ್ಪಲತೆ ನೀರದಮಂ ಕುಡುಮಿಂಚು ಪೊರ್ದಿ ಶೋಭಿಸುವವೊಲಾ ಸುರಾಧಿಪನನಾಪರವೇಶ್ವರಿ ಪೊರ್ದಿ ನಾಡೆ ಕಣ್ಗೆಸೆದಳ್ (ಶಾಂತಿಪು. ೭-೨೯) ; ನಸೆಗನುವಶಮಾಗಿರ್ದುದಂದೊಂದಿಭೇಂದ್ರಂ (ಜಗವಿ. ೧೬-೧೦) ; ಹಸಿವಿಲ್ಲದೆ ಮುನ್ನ ಉಂಡೂಟವ ನಸೆಯಿಲ್ಲದೆ ಆಪ್ಯಾಯನವನಱಿಯರು (ಸರ್ವವ. ೩೨-೧೬೦) ; ಮಣಿಕದ ನಸೆಗಸವಸದಿಂದಣಿಯರಮಾಡುವ ಗವೇಂದ್ರನಂ ಸತಿ ಕಂಡಳ್ (ಅನಂಪು. ೪-೧೧೧) ; ಹಿಂಡಸಗಲಿದ ಹುಲ್ಲೆಯ ನಸೆಯೊಳಗಿಪ್ಪ ಗಂಡೇಣ ತನ್ನ ವಲ್ಲಭನ ಕಂಡುದುಂಟಾದಡೆ ತೋಱು ತೋಱೆನುತಲಿ ಪುಂಡರೀಕಾಕ್ಷಿ ಕೇಳಿದಳು (ಮೋಹತ. ೯-೩೪) ; ಆಕಳು ನಸೆಗೆ (ಬೆದೆಗೆ) ಬಂದಾಗ ಇಂದ್ರಿಯದಿಂದ ಸಣ್ಣಗೆ ಸ್ರಾವ ಜಿನುಗುವುದು (ಗೋಗ್ರಾಸ. ೨೪). ನಸ್ಸಿ₂ : ೧. ಅಳಿಗಳಪ್ಪುಗೆ ಸಿಂಗವಱಿಗಳ ಚೆಲ್ಲಾಟ ಕಳಹಂಸಗಳ ಬಾಯ್ಗೂಟ ತೊಳಗುವ ಹರಿಣಹುಲ್ಲೆಯ ನಸಿಯಿರ್ವರ ನೆಲೆಗೊಂಡು ಮೆಱೆದುವೇನೆಂಬೆ (ಕಂನವಿ. ೦೦-೪೪) ; ಕಡುಹಸಿದ ತೋಳನು ಮಾಂಸದ ಪಿಂಡವನ್ನು ನೋಡುವಂತೆ ನಸಿಯನ್ನೆಲ್ಲ ಕಣ್ಣಿಗೆ ತಂದು, ಇಳಿದು ಬರುತ್ತಿರುವ ಗೃಹಿಣಿಯನ್ನು . . . ನೋಡುತ್ತ ನಿಂತಿದ್ದಾರೆ (ಬೆಳುಮ. ೦೬೪). ನೆಸೆ₃ : ೨. (ಕರಾ) ಸಲಿಗೆ ; ಸದರ : ಮಕ್ಕಳಿಗೆ ನೆಸೆ ಕೊಡಬಾರದು (ಪುರಮ. ೧೮೦) ; ನೆಸೆ ಕೊಟ್ಟವ ಹಸೆ ಕದ್ದುಕೊಂಡುಹೋದ (ಗಾದೆ).

ನಸೆ ಮಾಡು = ಕಾಮಚೇಷ್ಟೆಗಳನ್ನು ಮಾಡು ; ರತಿಕ್ರೀಡೆಯಾಡು : ತನ್ನ ಹರೆಯದ ನಲ್ಲರೊಡನೆ ನಕ್ಕು ನಸೆ ಮಾಡುತಂ ಸಿಂಗರಕ್ಕೆ ಮನಮೆಳಸಿ . . . ಲೋಲೆಯರ್ ಮೆಱೆದರು (ಚಿಬಪು. ೧೦-೭೫).

[ದೇ. ॥ ತಮಿ. ನಚ್ಚೆ ; ತೆಲು. ನಸ ; ಕೊಲಾ. ನಸಮ್ = ತುರಿಕೆಯಾಗು, ನವೆಯಾಗು]

ನಸೆ₂ (ನಾ). ಒಂದು ಬಗೆಯ ಸಸ್ಯ : ಕಬ್ಬು, ನಸೇ, ಲಾವಂಚಿ, ಕಾಶಿ . . . ಜಂಡು, ಬಿದಿರು (ನಮ್ಮನು. ೨೩೯). [?]

ನಸೆಗಾರ 'ನಸೆಗಾಱ' ನೋ.

ನಸೆಗಾರ್ತಿ (ನಾ). ಕಾಮೋದ್ರೇಕವನ್ನುಂಟುಮಾಡುವವಳು ; ಬೆದೆಗಾತಿ : ನಸೆಗಾರ್ತಿ! ಇಂತು ದಮನಂ ಹಯಮಂ ಸೆಱೆವಿಡಿದು ನಿಜಪುರಕೆ ಕಳಿಪಲ್ (ರಾಮಾಶ್ವ. ೮೬-೧೦). [ನಸೆಗಾಱ + – ತಿ₁ (<–ಇತ್ತಿ)]

ನಸೆಗಾಱ, ನಸೆಗಾರ (ನಾ). ೧. ಕಾಮೋದ್ರೇಕವನ್ನುಂಟುಮಾಡುವವನು. ೨. ಕಾಮ ; ಮದನ ; ಮನ್ಮಥ : "ಕುಡುವಿಲ್ಲ ಪೂಪುಣಂಬಂ . . . ಕಾವ ಕೊಂಕುವಿಲ್ಲಂ ಒಡಲಿಚಂ ನಸೆಗಾಱ ಕಮ್ಮಂಗಣೆಯ ಜೊನ್ನೊಡಲನಳಿಯಂ ದಪ್ಪಕಂ ವಯಣನೆಂಬಿವಿಂತೊಡನೆ ಮನ್ಮಥ ನಾಮವು" (ಶಬ್ದಮಂ. ೮) ; ತನಗೆ ಬಿರಯಿಮಿಗಂಗಳ ಬೇಂಟೆಗೆ ಬೇಱೆವೇಱೆವಿಲ್ಗಳ್ ದೊರೆಕೊಳ್ವಂತು ನಸೆಗಾಱನೊಸೆದು ಬೆಳೆಯಿಸಿದನೆನಲ್ಕೆಸೆವ ಕರ್ಬಿನ ತೋಂಟ (ರಾಮಾಶ್ವ. ೦೦೧-೨೦). ನಸೆಗಾರ: ೧. "ನಸೆಗಾರ – ಬೆದೆಗಾರ, ಕಾಮ" (ಗಂಗಾಮ. ೦೬೯) ; ಸೈರಿಪೆನೆಂತು ಚೆನ್ನೆ ನಸೆಗಾರನ ರೂಪಮ ನೀನೆಯಲ್ತೆ ಪೇಳ್ಮಾರಸಮಾನರೂಪ ನಸೆಗಾರನೆ ಸುತ್ತಿಹಳೇಕೆ ಬಾರಳೊ (ನಳವಿ. ೩೮).

[ನಸೆ₁ + – ಗಾಱ (< – ಕಾಱ)]

ನಸೆಗೆಡು (ಕ್ರಿ). ಕಾಮೋದ್ರೇಕವಿಲ್ಲದಾಗು ; ಕಾಮಾತುರವನ್ನು ಕಳೆದಂಕೊಳ್ಳು ; ನೀರಸವಾಗು : ಅಲ್ಲಿಯೋದುವ ಶುಕಾವಳಿ ಮೂಗುವಟ್ಟಿರ್ದುವಲ್ಲಿ ಸಲಹಿದ ಹಂಸಮಾಲೆ ನಸೆಗೆಟ್ಟಿರ್ದುವು (ವೀರಶ. ಹ. ೪೯೦-೭).

[ನಸೆ₁ + ಕೆಡು₁]

ನಸೆದಿಟ್ಟಿ (ನಾ). ಕಾಮಾತುರತೆಯಿಂದ ಕೂಡಿದ ದೃಷ್ಟಿ ; ಕಾಮುಕನೋಟ : ಸಿಂಗಾರಮ್ಮ . . . ನಸೆದಿಟ್ಟಿಯ ಬಿಕ್ಕುಂದನಿಯಿಂದ (ಬೆಟ್ಟಅ. ೯೬-೨೦). [ನಸೆ₁ + ದಿಟ್ಟಿ]

ನಸೆನಸೆ, ನಶನಶೆ, ನಸನಸೆ (ನಾ). ಸಂಶಯ ; ಅನುಮಾನ ; ಅಪನಂಬಿಕೆ : ನಸೆನಸೆಯುಳ್ಳವನು ಹಸಿಯನೇ? (ಗಾದೆ). ನಶನಶೆ : ಆಡುವ ಮಾತನ್ನೆಲ್ಲಾ ಖಂಡಿತವಾಗಿ ಆಡುವುದು. ನಶನಶೆ ಇಲ್ಲ (ಮುಸುಗ. ೩೩). ನಸನಸೆ : (ಕಿ).

ನಸೆನಸೆ ಪಡು = ಅನುಮಾನ ಪಡು ; ಸಂಶಯಹೊಂದು : ಜೋಕೆಯಿಂದ ಆಯಿ ; ಆಯ್ಕೆಯಲ್ಲಿ (ಸುಲಭವಾಗಿ ಒಪ್ಪದೆ) ನಸೆನಸೆ ಪಡು (Pick and Choose. ಇಂಕನಿ). ನಸೆನಸೆ ಮಾಡು = ನಸೆನಸೆ ಪಡು : ನಮ್ಮ ದೇಶದ ಕಥಕರು . . . ಕೊಟ್ಟದ್ದಕ್ಕೆ ತಕ್ಕಷ್ಟು ತಿಳಿವು ಬಂತೇ ಇಲ್ಲವೇ ಎಂದು ತುಂಬ ನಸೆನಸೆ ಮಾಡಿ ನೋಡುವರು (ನಿಬಂಧ. II, ೫೯).

[ದೇ. ॥ ತಮಿ. ನಚುನಚು = (ಮಾತು ಅಥವಾ ಕೃತಿಗಳಲ್ಲಿ) ನಿರ್ಧಾರಕ್ಕೆ ಬರದಿರು, ಹೊಯ್ದಾಡು]

ನಸೆನೋಟ (ನಾ). ಕಾಮೋದ್ರೇಕವನ್ನುಂಟುಮಾಡುವ ನೋಟ ; ಕಾಮಾತುರದಿಂದ ಕೂಡಿದ ದೃಷ್ಟಿ : ಬೆಸುಗೆವಾತಿನ ವಿಟರಸುಗುಬ್ಬಸವ ಮಾಳ್ಪ ನಸೆನೋಟದೊಳು ಶಂಕಿನಿಯರು (ಭೈರಸೂ. ೨೬೯).

[ನಸೆ₁ + ನೋಟ]

ನಸೆಮಸಪು (ನಾ). ವಿರಹದ ಹೆಚ್ಚಳ : ನಸೆಮಸಪೊಂದೆ ನುಣ್ಬಸಲೆಯೊಳ್ ಸುಸಿಲಾಂತೆಸೆವೇಣನಂ ವಿಲಂಬಿಸದಿಸಲೆಂದು ಬಂದನ ಪುಳಿಂದನ ವಕ್ಷಮನುದ್ಗಮಾಸ್ತ್ರದಿಂದಿಸೆ ಕುಸುಮಾಸ್ತ್ರಂ (ರಾಜಶೇ. ೫-೧೦೫). [ನಸೆ₁ + ಮಸಪು]

ನಸೆಮಸೆ₁ (ನಾ). ಕಾಮೋದ್ರೇಕವನ್ನುಂಟುಮಾಡುವಂಥದು ; ಬಯಕೆಯನ್ನು ಹೆಚ್ಚಿಸುವಂಥದು : ಬೆಸುಗೆವಾತಿನ ವಿಟರಸುಗುಬ್ಬಸವ ಮಾಳ್ಪ ನಸೆಮಸೆಯ ನೋಟದ ಶಂಖಿನಿಯರು (ಭೈರವೇ. ೨-೧೭); ರಸಿಕದಂಪತಿಗಳು ಕೂಡಿದರೆನೆ ಸಾಕು ನಸೆಮಸೆ ಲಲ್ಲೆ ಕೊಲ್ಲಿಯೊಳು ಬೆಸುಗೆವಡೆದ ರಂತುಟಿಂತುಟಾಡಿದರೆಂದು ಹಸರವಿಕ್ಕುವುದಾವ ಜಾಣ್ಮೆ (ಭರಜ. ೧೦-೧೦೨).

[ನಸೆ₁ + ಮಸೆ₂]

ನಸೆಮಸೆ₂ (ನಾ). ಹರಿತವಾಗುವಂತೆ ಮಸೆಯುವಿಕೆ; ತೀಕ್ಷ್ಣವಾಗುವಂತೆ ತೀಡುವಿಕೆ (?) : ಕದಡಿದವು ಬಲವೆರಡು ಕಲ್ಪದೊಳುದಧಿಯುದಧಿಯನೊದೆವವೊಲು ತಾಗಿದರು ನೀಗಿದರಸುವ ನಸೆಮಸೆಗಕ್ಕುಡಿಸಿದವರು (ಕುಪ್ಯಾದ್ರೋ. ೧೭-೨೦) ; ಕಾಲನೇಮಿಯಂ ಜಡಿದುಂ ಬಡಿದುಂ ಸಂದ ತನ್ನ ಪನ್ನತಿಕೆಯಿಂ ಪೊಣರ್ದ ರಾಮಭೃತ್ಯಂ ನಸೆಮಸೆಯ ತಿಸುಳಂ ಬೆಳಬೆಳಗೆ ಉರಿಗಣ್ಣ ಜಾಲೆ ದಳ್ಳಿಸೆ ... ಮಾರುತಿಗೈಮೊಗಂ ಮುಮ್ಮೊಗನಾಗಿ ಜಡಿದಂ (ರಾಮಾಶ್ವ. ೧೩೨-೭) [ನಸೆ₀ + ಮಸೆ₂]

ನಸೆಯಳಿಪು (ನಾ). = ನಸೆಯಿಚ್ಚೆ : ನಸೆಯ [ಪಾಠಾಂ. ಮಸಪ, ಮಸುಪ] ಳಿಪಿಂ ಪ್ರಿಯಾನನಮನೀಕ್ಷಿಸಲುದ್ಯತೆಯಾಗಿ ತಾನೆ ಲಜ್ಜಿಸಿ ತಲೆವಾಗಿ (ಸೂಕ್ತಿಸು. ೬-೮೨) ; (ಚಂದ್ರಪು. ೬-೭೬ ನೋ). [ನಸೆ₁ + ಅಳಿಪು₂]

ನಸೆಯಿಚ್ಚೆ (ನಾ). ಕಾಮಾತುರ ; ಕಾಮೇಚ್ಛೆ ; ಸಂಭೋಗಾಪೇಕ್ಷೆ.

ನಸೆಯಿಚ್ಚೆಯಾಗು = ಕಾಮಾಪೇಕ್ಷೆಯುಂಟಾಗು ; ರತಿಯ ಬಯಕೆಯುಂಟಾಗು : ಪಸಿದೊಡೆ ಸಲ್ಲಕೀಕಿಸಲಯುಂಗಳನೊಯ್ಯನೆ ನೀಡಿ . . . ನಸೆಯಿಚ್ಚೆಯಾದೊಡಗೂಡಿ ಬಟಲ್ದೊಡೆ ಕರ್ಣವಾತಮಂ ಪಸರಿಸಿ ತನ್ನ ಕೈಪಿಡಿಯವೊಲ್ ಪಿಡಿಯಂ ಪಿಡಿದಿರ್ದುದೊಂದಿಭಂ (ಚಂದ್ರಪು. ೫-೬೪).

[ನಸೆ₁ + ಇಚ್ಚೆ]

ನಸೆಯೇಱಿಸು (ಕ್ರಿ). ಉದ್ರೇಕಿಸು : ತಗರ ತಲೆಗೆ ಜಂಬೀರದ ಪುಳಿಯಿಟ್ಟು ಎಮಗೆ ನಸೆಯೇಱಿಸಿ ನಗುತ ಜಗಳವ ಕಾದಿಸುತಿಹ ರಾಜವೃತ್ತರು ಸೊಗಸಿದರಾ ಬೀದಿಯೊಳಗೆ (ಕಂನವಿ. ೬-೧೧). [ನಸೆ$_1$ + ಏಱಿಸು]

ನಸೆವಣಕ 'ನಸೆವಣಿಕ' ನೋ.

ನಸೆವಣಿಕ, ನಸೆವಣಕ (ನಾ). ಕಾಮೇಚ್ಛೆಯಂಗಳ್ಳ ಪಶು ; ಬೆದೆಗೆ ಬಂದಿರುವ ಮಣಕ,-ಪಡ್ಡೆ : ನಸೆವಣ[ಪಾಠಾಂ. ಣ]ಕದೆ ಬೆನ್ನಂ ಸಂಧಿಸುವುದುಮಸವಸದಿನೆಡೆಗೆ ವುಗಲೊಡನಂತಾ ಬಸವಂ ಪಾಯ್ದೊಡೆ ಕೆಸಱಿಕೊಳ್ ಬಸವಟ್ಟಿದಿರ್ದೊಂದು ಗೊಂದೆ ಪೊಂದಿತ್ತಾಗಳ್ (ಹಂದ್ರಕ್ಷ. ೪-೩೯). **ನಸೆವಣಕ:** ಮೇಲಿನ ಪ್ರಯೋಗದ ಪಾಠಾಂತರವನ್ನು ನೋಡಿ. [ನಸೆ$_1$ + ಮಣಕ]

ನಸೆಹಚ್ಚು (ಕ್ರಿ). ಕಾಮದ ಬಯಕೆಯನ್ನುಂಟುಮಾಡು, – ಆಸೆ ತೋರಿಸು : ನಸೆಹಚ್ಚಿ, ವುಸಲಾಯಿಸಿ, ಹೊತ್ತುಗೊತ್ತುಗಳ ನೆವ ಹೇಳಿ, ತುಸುತುಸು ಎಳೆದುಕೊಳ್ಳಬೇಕು ... ಸ್ವಲ್ಪ ಸಹನೆಯಿಂದಿರು (ಕೃಹಿಕಾ. ೯೦). [ನಸೆ$_1$ + ಹಚ್ಚು$_1$ (< ಪಚ್ಚು$_3$)]

ನಸ್ತ (ನಾ). ಮೂಗು ; ನಾಸಿಕ. [ಸಂ.]

ನಸ್ತಿತ (ನಾ). ಮೂಗಿನಲ್ಲಿ ರಂಧ್ರವನ್ನು ಮಾಡಲ್ಪಟ್ಟುದು ; ಮೂಗು ದಾರವನ್ನು ಹಾಕಿರುವ ಎತ್ತು, ಹಸು, ಮೊದಲಾದುವು "ನಸ್ಯೋತಃ, ನಸ್ತಿತಃ –ಈ ೨ ಮೂಗಿಟ್ಟುದು" (ಹಲಾಯು. ೪೪-೦೨೩) ; "ಒತ್ತಿ ಮೂಗಂ ಚುರ್ಚಿ ನಸ್ತಿತಂ [ಪಾಠಾಂ. ಮೂಗುರ್ರಿ ಬೊಚ್ಚಿ] ನಸ್ಮಿರಂ" (ಮಂಗರಾ. ೩೩-೩). [ಸಂ.]

ನಸ್ಯ (ನಾ). ೧. ಮೂಗಿಗೆ ಸಂಬಂಧಿಸಿದುದು. ೨. (ಔಷಧದ್ರವ್ಯ ಮೊದಲಾದುವನ್ನು)ಮೂಗಿಗೇರಿಸುವಿಕೆ; ಮೂಗಿನಿಂದ ಸೇವಿಸುವಿಕೆ: ✱ ಆಯುರ್ವೇದದಲ್ಲಿ ರೋಗಗಳನ್ನು ಗುಣಪಡಿಸಲು ೧. ನಸ್ಯ= ಪುಡಿಯನ್ನು ಮೂಗಿಗೇರಿಸುವುದು. ೨. ಪಾನ=ನೀರಾಗಿರುವ ಔಷಧಿಯನ್ನು ಕುಡಿಸುವುದು. ೩. ಅಂಜನ=ಲೇಪನ ದ್ರವ್ಯವನ್ನು ಬಳಿಯುವುದು ಎಂಬ ಮೂರು ವಿಧದಲ್ಲಿ ಚಿಕಿತ್ಸೆಯನ್ನು ನಡೆಸುತ್ತಾರೆ: ನರಮೂತ್ರದಿಂದ ನಸ್ಯಮನಿರದಾಗಿಸೆ ಕಣ್ಗೆ ತೀದೆಸಲ್ ತದ್ವಿಷಮುಂ ಪರಿಗುಂ (ಜಮದ. ೬-೭); ಒಳ್ಳಿತ್ತಾಗಿ ಹಣ್ಣಾದ ಗದುಗಿನ ತಿರುಳಂ ಶುಂಠಿಯುಮಾನ ದಕದಲ್ಲರದು ನಸ್ಯಮಂ ಮಾಡಲ್ ಮುಂಕಿನಂತೆ ಇರ್ವುದುಂ, ಬಾಹುಗಂಟುಗಳುಂ ಮಾಣ್ಪುವು (ಲೋಕೋಪ. ೯-೦೦೦ ಟೀಕೆ) ; ಮಹಾ ಮಟ್ಟಲ ಘೃತವನಾದರೂ ... ಹಾಕಿ ಕಾಸಿ ಪಾಕದಲ್ಲಿ ಇಳುಹಿ ಹಿಂಡಿಕೊಂಡು ಪಾನ, ಅಭ್ಯಂಗ, ನಸ್ಯ ಮೊದಲಾದ ಕ್ರಿಯೆಗಳನು ಮಾಡಿಸಲು ಸಕಲ ನಾಸಿಕರೋಗಂಗಳು ಶಮನವಹವು (ವೈದ್ಯಸಾ. II, ೦೦೪). ೩. ಮೂಗಿಗೇರಿಸುವ ಔಷಧದ್ರವ್ಯ : ನಸ್ಯಂಗಳಿಂದೆ ತನುಸಾರಸ್ಯಂ ಪಿರಿದಕ್ಕುಂ (ಜಮದ. ೬-೨); ರಜನಿ ಬರಿವದಣಿ ಕಟುಕವ್ರಜಮಿನಿತುಮನರೆವುದಾಡವಾಲೊಳ್ ತುರಗವ್ರಜಕೆ ಕುಡೆ ನಸ್ಯಮು ವಾತಜ ಪಿತ್ತಜ ಕಫಜವೆನಿಪ ಸಿಂ(ಫಾ)ಹಾಣಹರಂ (ಅಶ್ವಶಾ. ೧೦-೩೦); ವಂದ್ದುಗಳನಿಡಿವ ಉರಿವ ಸೇಕದ ನಸ್ಯದೊಳು ಹದನಱಿವ ತುರಗದ ವೈದ್ಯತತಿಯೆಚ್ಚಱಿಕೆಯಲಿ ಸಂತೈಸಿದರು ವಾಜಿಗಳ ವೇದನೆಯ (ಕುಮ್ಮಭೀ. ೫-೩೯). ೪. ಹೊಗೆಸೊಪ್ಪಿನಿಂದ ತಯಾರಿಸಿದ, ಮೂಗಿಗೇರಿಸುವ ಪುಡಿ ; ನಾಸೀಪುಡಿ ; ತಂಬಾಕುಪುಡಿ ; ನಶ್ಯ : ಈ ಅರಸು ಬಾಲ್ಯದಿಂದಲೂ ನಸ್ಯವನ್ನು ಹಾಕಿಕೊಳ್ಳುತ್ತಾ ಇದ್ದನು (ನೀತಿಚಿಂ. II, ೨೦) ; ನೆರೆಮನೆ ಮಲ್ಲವ್ವ ಮುದುಕಿ ಕಲ್ಲವ್ವನ ಹತ್ತಿರ ನಸ್ಯ ಬೇಡಲು ಬಂದವಳು ...ಕೇಳಿದಳು (ಕನ್ನುಹಿಂ. ೭೨); ನಸ್ಯ ನೆತ್ತಿಗೆ ಮೂಲ ಗುಡಿಗುಡಿಗುಂಡಿಗೆಗೆ ಮೂಲ (ಗೂಢಿ).

ನಸ್ಯಂಮಾಡು, ನಸ್ಯ ಮಾಡು=೧.ನಸ್ಯಂಗೆಯ್ ೧: ಶುಂಠಿಯಂ.ಬೆಲ್ಲಮಂ ಉದಕದಲ್ಲಿ ತೀದು ನಸ್ಯಂಮಾಡಲ್ ತಲೆತಿರುಗುಹ ... ಶ್ಲೇಷ್ಮವಾತಂ, ಈ ರೋಗಂಗಳ್ ಕಿಡುವುವು (ಲೋಕೋಪ. ೯-೦೫ ಟೀಕೆ) : ಬಿಳಿಯ ಉಗನಿಯ ಬೇರಂ ಮೊಲೆಹಾಲಲ್ಲಿ ನಸ್ಯಂ ಮಾಡೆ ಮುಖರೋಗ ಮಾಣ್ಗುಂ (ವಿವೈವಿ. ೦೩೦) ; ತಾಳಕದ ಹಣ್ಣಂ ಮೊಲೆಹಾಲಲ್ಲಿ ತೀದು ನಸ್ಯ ಮಾಡೆ ಅರದಲೆಬೇನೆ ಮಾಣ್ಗುಂ (ವಿವೈವಿ. ೭೩). ೨. ಮೂಗಿಗೇರಿಸುವ ಔಷಧವನ್ನು ತಯಾರಿಸು,-ಸಿದ್ಧಮಾಡು. ೩. ಹೊಗೆಸೊಪ್ಪಿನಿಂದ ನಶ್ಯದ ಪುಡಿಯನ್ನು ಮಾಡು. **ನಸ್ಯ ಮಾಡಿಸು** = ಮೂಗಿಗೇರಿಸುವ ಔಷಧ ಮೊದಲಾದುವನ್ನು ತಯಾರುಮಾಡಿಸು,—ಸಿದ್ಧಗೊಳಿಸುವಂತೆ ಮಾಡು : ನಸ್ಯ ಮಾಡಿಸುವುದಕ್ಕೆ ತೈಲವನ್ನಾಗಲೀ ಘೃತವನ್ನಾಗಲೀ ಮೃದುಪಾಕದಲ್ಲಿ ಇಳಿಸಬೇಕು (ಸಳ್ವ. XIII ಶ್ರಶಾ. ೮೩). **ನಸ್ಯ ಹಾಕು** = ನಶ್ಯವನ್ನು ಮೂಗಿಗೇರಿಸು,–ಸೇದು : ವಿಠಾಯಿತಿಯಲ್ಲಿಯೂ ನಸ್ಯ ಹಾಕುವ ರೂಢಿಯಿತ್ತು (ಸಪಾಜೀ. ೬೧೭) : ಪುಷ್ಯಮಾಸವಾದರೆ ನಸ್ಯ ಹಾಕಿಕೊಳ್ಳಬಾರದೆ? (ಗಾಡ). [ಸಂ.]

ನಸ್ಯಂಗುಡು (ಕ್ರಿ). (ಔಷಧವನ್ನು) ಮೂಗಿನ ಮೂಲಕ ಏರಿಸು,–ಸೇವಿಸುವಂತೆ ಮಾಡಂ : ನರಮೂತ್ರದೆ ನಸ್ಯಂಗುಡು ಗುರುಗುಂಜೆಯ ಬಕುಳಮಂಚಿಯುಗ್ಮದ ಬಿತ್ತ್ರಂ ಪರಿಹರಿಕುಂ ಗರಳಭಯುಂ ನಿರುತಂ (ಜಮದ. ೬-೪೬). [ನಸ್ಯ + ಕುಡು$_1$ (<ಕೊಡು$_1$)]

ನಸ್ಯಂಗೆಯ್ (ಕ್ರಿ): ೧. (ಔಷಧ ಮೊದಲಾದುವನ್ನು) ಮೂಗಿಗೇರಿಸು,–ಸೇದು : ಬವಣೆ ತಲೆಬೇನೆಗಳ್ : . . ಕಫ ವಾತವಿಕಾರಂ ಪಿಂಗುಗು ವಾದವೆ ನಸ್ಯಂಗೆಯ್ಕೆ ಶುಂಠಿಯಂ ಬೆಲ್ಲಮುಮಂ (ಲೋಕೋಪ. ೯-೦೫) ; ಅರಿಸಿನಮಂ ನೀಲಿಯುಮಂ ಬೆರಸಲ್ಲವ ರಸದೊಳರೆದು ನಸ್ಯಂಗೆಯ್ಕುಲ್ಕುರಗೋಗ್ರವಿಷಂ ಕಿಡುಗುಂ (ಜಮದ. ೬-೦೪); ಅರದಗಸೆಯೆಲೆಗಳಂ ವಿಸ್ತರದಿಂ ಗಾಳಿಸಿ ಕಟುತ್ರಿಕಂ ತ್ರಿಫಲೆಗಳಂ ಬೆರಸಿ ತನಿರಸದೊಳೀಂಟಾಗಿರೆ ನಸ್ಯಂಗೆಯ್ದೊಡದುವೆ ಸಿಂಘಾ(ಹಾ)ಣಹರಂ (ಅಶ್ವಶಾ. ೧೦-೩೦) : ಯಷ್ಟಿ ಮಧುಕ, ಇಂಗು, ಇಪ್ಪೆಮರದ ಕೆಚ್ಚು ಇವಂ ನೀರಿಂ ತೀದು ನಸ್ಯಂಗೆಯ್ಕೆ ಭಗ್ನನೇತ್ರ, ಸನ್ನಿ ಗುಣಮಕ್ಕುಂ (ಸಳ್ವ. ೧೬೩). ೨. (ಔಷಧ ಮೊದಲಾದುವನ್ನು) ಮೂಗಿನ ಮೂಲಕ ಏರಿಸಂವಂತೆ ಮಾಡಂ.–ಸೇವಿಸುವಂತೆ ಮಾಡು : ಹಾಮೆಕ್ಕೆಯ ಹಣ್ಣೊಳ್ನಳತಿಕ್ಷೇಪುದೊಳಿರಿಸಿಟ್ಟ ಸುಂಟಿ ಹಿಪ್ಪಲಿ ಮೆಟಸೆಂಬೀ ಮೂಜನಾತ್ಮಜಲದಿಂ ಪ್ರೇಮದಿನಾತಂಗೆ ನಲಿದು ನಸ್ಯಂಗೆಯ್ದಿಂ (ದಶಕು. ೯-೦೦೦). [ನಸ್ಯ + ಕೆಯ್$_1$]

ನಸ್ಯಕರ್ಮ (ನಾ). (ಔಷಧ ಮೊದಲಾದುವನ್ನು) ಮೂಗಿನ ಮೂಲಕ ಸೇವಿಸುವ ಕ್ರಿಯೆ.–ಮೂಗಿಗೇರಿಸುವ ಕ್ರಿಯೆ : ಸಿರಿಸದ ಪೂವಂ ಹುಲಿಗಿಲ ವರಫಲ ಮಡುವಾಗಲಿಲೆ(ಳೆ)ಯ ಫಲಮಂ ಮೂತ್ರಂಬೆರಸರೆದು ನಸ್ಯಕರ್ಮಕ್ಕಿರದೊಡರಿಸಲಹಿಕಾಳೋಗ್ರವಿಷಮಂ ಕಳೆಗುಂ (ಜಮದ.೬-೫೬). [ನಸ್ಯ + ಕರ್ಮ]

ನಸ್ಯಮಿಗಿ (ಕ್ರಿ). =ನಸ್ಯಂಗೆಯ್ ೨ : ಏಟಿಸದಿಲುಮಿಚ್ಚಿಯ ಹುಳಿಬೇಟಿಯದಳ ಲಶುನ ಮರಿಚಮೆಂಬಿವನಿಂಬಿಂ ಮೇಳಯ್ಸಿ ನಸ್ಯಮಿಗಿಯಲ್ [ಪಾಠಾಂ. ನಸ್ಯನಾಳಿಸು] ಜಾಳಿಸುಗುಂ ಸರ್ವವಿಷಮಂ (ಜಮದ. ೬-೧೬). [ನಸ್ಯ + ಈ$_3$]

ನಸ್ಯವಿಧಿ (ನಾ). (ಔಷಧವನ್ನು)ಮೂಗಿನ ಮೂಲಕ ಸೇವಿಸುವ ಕ್ರಮ,–ರೀತಿ,–ಪದ್ಧತಿ : ಶ್ಲೇಷ್ಮ ರೋಗದಲ್ಲಿ ವಮನವಿಧಿಯನ್ನು ಪ್ರಯೋಗಿಸುವುದು. ಸನ್ನಿಪಾತರೋಗಗಳಲ್ಲಿ ನಸ್ಯವಿಧಿಯನ್ನು ಪ್ರಯೋಗಿಸುವುದು (ಸಳ್ವ. ೫೩). [ನಸ್ಯ + ವಿಧಿ]

ನಸ್ಯವೆಱಿ^{3} (ಕ್ರಿ). (ಔಷಧವನ್ನು) ಮೂಗಿನ ಮೂಲಕ ಏರಿಸು,–ಸೇವಿಸು : ಸಮಭಾಗೆಯಾಗಿ ವೊಸ ನಾಸಿವೆಯುಮನಂಕೋಲೆಯ ಬೀಜಮಂ ಕೂಡಿ ಬಟ್ಕಿಕ್ಕವನೆಣ್ಣೆಗೊಂಡು ಸಲೆ ನಸ್ಯವಱಿದೊಡಾಯುಷ್ಯವರ್ಧನಂ (ಲೋಕೋಪ. ೯-೪೦). [ನಸ್ಯ + ಎಱಿ$_1$]

ನಸ್ಯಸೇದು (ಕ್ರಿ). ನಶ್ಯಹಾಕು ; ನಶ್ಯವನ್ನು ಮೂಗಿಗೇರಿಸು : ಅವನಿಗೆ ನಸ್ಯ ಸೇದುವ ಅಭ್ಯಾಸವಿದೆ (ರೂಢಿ). [ನಸ್ಯ + ಸೇದು$_1$ (<ಸೇಂದು)]

ನಸ್ಯಾಂಗ (ನಾ). = ನಸ್ಯ ೨ : ಪಂಧ್ಯಾ ಕರ್ಕೋಟಕೀ ಕಂದದೊಳೆಱೆವುದಜಾ ಮೂತ್ರದಿಂ . . . ಬೇಱೇಂ ಧ್ಯಾನಂ ತದ್ಭಿಷಕ್ಸೂರಿಗೆ ವಿಷಧರದಷ್ಟಂಗೆ ನಸ್ಯಾಂಗ [ಪಾಶಾಂ. ನಸ್ಯಗ]ಮಾಗಲ್ ಸಂಧ್ಯಾಭ್ರಾರಕ್ತದಂತಾಗಳೆ ವಿಷ ಮಱಿಗುಂ (ಐಮದ. ೭-೯೧). [ಸಂ.]

ನಸ್ಯೋತ (ನಾ).=ನಸ್ತಿತ : "ನಸ್ಯೋತಃ, ನಸ್ತಿತಃ-ಈ ೨ ಮೂಗಿಟ್ಟುದು" (ಹಲಾಯು. ೪೪-೧೦೨). [ಸಂ.]

ನಸ್ರಾಣಿ, ನಸರಾಣಿ (ನಾ). ೧. ಕ್ಷುದ್ರವ್ಯಕ್ತಿ; ತುಚ್ಛನಾದ ಮನುಷ್ಯ ; ಅಲ್ಪಜೀವಿ : ಅವನಿಗೆ ಈಗ ಸಾರಥಿಯಾದ ಆ ನಸ್ರಾಣಿ ಸುಬ್ಬಭಟ್ಟ. ಆ ಗಾಣಿಗ ಸಂಕ . . . ಇವರೆಲ್ಲರ ದೆಸೆಯಿಂದ ಏನು ಹೇಳಿದರೂ ಗೋರ್ಕಲ್ಲ ಮೇಲೆ ಮಳೆ ಕರೆದಂತೆ ಸರ್ವಜ್ಞ ಎಂಬ ಹಾಗೆ ಆಗಿದೆ (ಹಹಸ. ೩೭). **ನಸರಾಣಿ** : ೨. ನಯವಾಗಿ ಮಾತನಾಡಿ ಮೋಸ ಮಾಡುವವನು ; ಚಾಣಾಕ್ಷ ; ಚಾಲಾಕಿ ; ಬೆರಕೆ : "ನಸರಾಣಿ=ಪಕ್ಕಾ, ಚಾಲಾಕು" (ಜಾನಕೋ. ೦೦). [←ಅರ. ನಸ್ರಾನೀ; ಮರಾ. ನಸರಾಣೀ./ತುಳು. ನಸ್ರಾಣಿ. ನಸರಾಣಿ]

ನಹಿ (ಅ). ನಿಷೇಧಾರ್ಥವನ್ನು ಸೂಚಿಸುವ ಸಂಸ್ಕೃತದ ಒಂದು ಅವ್ಯಯ ; ಇಲ್ಲ ;ನಾಸ್ತಿ : "ನಹಿ ನೋನ ಅ-ಈ ೪ ಅವ್ಯಯಗಳೂ . . . ಅಭಾವದಲ್ಲಿಯೂ ನಿಷೇಧದಲ್ಲಿಯೂ ಭೇದದಲ್ಲಿಯೂ ವರ್ತಿಸುವವು" (ಸಿದ್ಧಾಂತಿ. ೩೭೭) ; ವಿಶಾಲಮತಿಯೆ ನಿನ್ನ ಪೋಲುವ ಸತಿಯರು ಮೂಲೋಕದಿ ನಹಿ (ಯಾದವಾ. ೦೭).

ನಹಿನಹಿ (ದ್ವಿರುಕ್ತಿ) : ನಹಿನಹೀ ಎಂಬವ ಮಹಿಗೆ ಹೊರೆ (ಗಾದೆ). [P ಇದು ಸಂಸ್ಕೃತದ ಎರಡು ಅವ್ಯಯಗಳು ಸೇರಿ ಆಗಿರುವ ಕೂಡುನುಡಿ]

ನಳ$_1$ 'ನಲ$_2$' ನೋ.

ನಳ$_2$ (ನಾ). (ಉಕ) ೧. ನಾಳ ; ಕೊಳವೆ : ಮನೆಯ ಕೊಳಚೆನೀರು ಹೋಗಲು ನಳಗಳಿರುತ್ತವೆ (ರೂಢಿ). ೨. ನಲ್ಲಿ ; ಕೊಳಾಯಿ : ಸಮಾಜಸುಧಾರಕರೆಂಬುವರೆಲ್ಲ ಮೊದಲು ಬೀದಿಯ ನಳಕ್ಕೆ ಬಂದು ಅಲ್ಲಿ ನಡೆಯುವ ಕಾರ್ಯಕಲಾಪಗಳನ್ನು ನೋಡುವುದು ಒಳ್ಳೇದು ! (ಗಾಳಿಗು. ೭೦) ; ಚಾಳಿನ ಕೊನೆಗೆ ಇದ್ದ ನಳದಿಂದ ನೀರು ತರುವದೆಂದರೆ ಜೀವದ ಮೇಲೆ ಬರುತ್ತಿತ್ತು (ಕ್ಷಿತಿಜ. ೩೮) ; ಅತ್ತಿಕೊಳ್ಳದಲ್ಲಿ ದೊಡ್ಡದೊಂದು ಕೆರೆ ಕಟ್ಟಿ ಊರೊಳಗೆ ನಳ ತರುವ ಆಲೋಚನೆಯು ನಡಿದದೆ (ಕಥಾಗೆ. ೪೩೩). [←ಮರಾ. ನಳ./ ಸಂ. ನಾಲ]

ನಳಕ 'ನಲಕ' ನೋ.

ನಳಕೂಬರ 'ನಲಕೂಬರ' ನೋ.

ನಳದ್ವಯ (ನಾ). ಒಂದು ಬಗೆಯ ಸಸ್ಯ.-ಜೊಂಡು (?) : "ನಳಕಃ-ನಳದ್ವಯ, ಕಪ್ಪಲಿ" (ಓಷಧಿ. ೮೩). [ಸಂ. ನಲದ್ವಯ]

ನಳನಳ (ನಾ). ಕೋಮಲತೆ, ಮೃದುತ್ವ, ಸೌಂದರ್ಯ, ಕಾಂತಿಗಳನ್ನು ಸೂಚಿಸುವ ಒಂದು ಶಬ್ದ. 'ನಳನಳಿಕೆ', 'ನಳನಳಿಸು' ಪರಾ.

ನಳನಳನೆ (ಅ). ಮನೋಹರವಾಗಿ : ನೆಲ ಗಿರಿಯೆಲ್ಲವು ಕಂಪಾಗೆ ಗಗನ ಕುಚ್ಚಳಿಪ ಸುಗಂಧಕರ್ತಿಸುತ ನಳನಳನಿಳಿತಂದು ಗಿರಿಯ ಸಾರ್ದಾನೆಯಿಂದಿಳಿದನಂಗನೆಗೂಡಿ ಪಜ್ರಿ (ಭರಶ. ೭೩-೧೩೭). [ನಳನಳ + – ಅನೆ$_1$]

ನಳನಳಿಕೆ (ನಾ). ಕೋಮಲತೆ ; ಮೃದುತ್ವ : "ನಳನಳಿಕೆಯೆಂದು ಕೋಮಲಂ" (ಶಶಸಾ. ೭೦-೬೦೩) ; "ನಳನಳಿಕೆಯೆನೆ ಕೋಮಲಂ" (ಕಶರ. ೩೩) ; ತುಂಬುರದಂಡನಾಥಂ ನಂಬಿಯಣ್ಣನೇಱುಂಜವ್ವನದುರವಣೆಯುಮಂ ಸ್ವರೂಪಸೌಂದರ್ಯದ ನಳನಳಿಕೆಯುಮಂ . . . ದೃಷ್ಟಿಯ ದೈನ್ಯಮುಮನಱಿದು (ನಂಬಿರ. ೪-೦೦) ; ಸುಕುಮಾರಚೂಡಾಮಣಿಗೆ ಶೈಶವಂ ಕ್ರಮದೆ ಜಾಱೆ ಓತೆಸೆವ ಕೋಮಲಾಂಗದ ನಳನಳಿಕೆ . . . ಪೊಸಜವ್ವನಮನದೇಂ ಸೂಚಿಸಿದುವೊ (ಪದ್ಮರಾ. ೩-೨) ; ನಳನಳಿಕೆಯೊಳೊಡಗೂಡಿದರೆನೆ ಸಾಕು ಕೊಳರ್ವಕ್ಕಿಗಳ ಕೊರಳಂತೆ ಗಳರವ ತಾಡನ ಸೀತ್ಕಾರ ಭೂಷಣದುಲುಹು ಪೆರ್ಚಿಹುದೆನಲೇಕೆ (ಭರಶ. ೧೦-೧೦೪).

[ನಳನಳ + – ಇಕೆ]

ನಳನಳಿಕೆವೆಱು (ಕ್ರಿ). ಕೋಮಲತೆಯನ್ನು ಹೊಂದು ; ಮೃದುತ್ವವನ್ನು ಪಡೆ: ಪರಿಕಾಲ್ಗಳಿಂ ಬಳಸಿದ ಪರಮಕೈವಲ್ಯಕಲ್ಪತರುವೆಂಬಂತೆಸೆದು ನಳನಳಿಕೆವೆತ್ತ ವಿಮಳಕೋಮಳದಳತ್ರಯವಿಳಸಿತ ಸರಳಶಾಖಾನಿಕಾಯಾ ಕಲಿತಬಿಲ್ವವೃಕ್ಷ (ಶಬಕಂ. ೨-೭೮ವ). [ನಳನಳಿಕೆ + ಪೆಱು$_1$]

ನಳನಳಿಸು (ಕ್ರಿ). ೧. ಕೋಮಲವಾಗಿರು ; ಮೃದುವಾಗಿರು ; ನವುರಾಗಿರು : ವಿಳಸಿತಫಳಮಂಜರಿಯಂ ತಳೆದೊಪ್ಪುವ ಕಲ್ಪಲತೆಗೆ ಪಾಸಟಿಯಾದಳ್ ನಳನಳಿಸುವ ಜಿನಶಿಶುವಂ ತಳೆದು ತಳತ್ತಳಿಪ ಹರಿಯ ವರವಧುವಾಗಳ್ (ವರ್ಧಪು. ೧೩-೯೬) ; ನಳನಳಿಪಶೋಕೆಯ ತರುವಿನ ತಳಿರ ತೊಂಗಲು (ಹಡಕಾ. ೩-೧೬). ೨. ಕಾಂತಿಯುಕ್ತವಾಗು ; ಪ್ರಕಾಶಮಾನವಾಗು ; ತೇಜೋಮಯವಾಗು : ನಳನಳಿಸಿ ಬಳೆದು ವಿರಹಾನಳ ನಳುರ್ಗುಗುಮಾ ವಿಳಾಸರಸದ ತರುಗಾವಳಿಗಳನಿಱಿಸುವ ಮಧ್ಯದ ವಳಿಗಳ ನೀಕ್ಷಿಸಿದ ನೀಱರಂ ರುಕ್ಮಿಣಿಯಾ (ಜಗವಿ. ೧೦-೨೭) ; ಓರಂತೆ ನಳನಳಿಸಿ ತೊಳಗುತ್ತಿರ್ಪನೋರ್ವನೇ ರುದ್ರಂ (ಪದ್ಮರಾ. ೧೦-೪೭). ೩. ಸುಂದರವಾಗು ; ಚೆಲುವಾಗು ; ಸೊಂಪಾಗು : ನೆಱೆ ಬಣ್ಣಿಸಲಬ್ಜಭವಂ ನೆಱೆಯಂ ಪೆಱರಳವೆ ಪೊಳೆವ ತರುಗಳಿಂ ಪಣ್ವೊಱೆಗಳ ನೆಱವಿಂದು ಬಗೆಗಱಿಪೋಲ್ ನಳನಳಿಸುತೊಱಗಿ ತುಱುಗಿದ ಬನಮಂ (ಲೋಕೋಪ. ೬-೨೦) ; ತಿಳಿಗೊಳನ ಬಳಸಿ ನಳನಳಿಸಿ ಬೆಳೆದೆಳಮಾವುಗಳ ತಳದ ಮಲ್ಲಿಕಾ ಮಂಟಪದ . . . ಅಶೋಕೆಯ ತಳಿರ ತೊಂಗಲ ಗದ್ದುಗೆಯೊಳು . . . ಪಶುಪತಿಯಂತಿರಿರ್ದ ಮುನಿನಾಥ ಕಣ್ಗೆಸೆದಿರ್ದನು (ಹಡಕಾ. ೩-೬೬) ; ಮತ್ತದಱ ವಲಯದೊಳೋರಣದಿಂ ಕೀಲಿಸಿ ಪಜ್ಜಳಿಸುವ ಪಸುರ್ವಣೆಯೆಂಬ ತೆಱದಿ ನಳನಳಿಸುತೆ ತುಱುಗಿ ಬೆಳೆದ ಬಹಿರುದ್ಯಾನಂ ಕಣ್ಗೊಳಿಸಿದುದು (ಜಯಕಾ. ೦-೪೩). ೪. ಸೊಗಸಾಗು ; ರುಚಿಕರವಾಗು : ನಳನಳಿಪ ಬಹುವಿಧದ ಭಕ್ಷಾವಳಿಯ ಹೆಡೆಗೆಗಳೋರಣಿಸಿ ಮುಂಡಳಿಸಿ ಕೂಡಿದ . . . ಕೂಳ ರಾಶಿಯ ಬಂಡಿ ಜೋಡಿಸಿತು (ಕುವ್ಯಾಆ. ೦೦-೨೩).

[ನಳನಳ + – ಇಸು$_3$]

ನಳಪಾಕ (ನಾ). (ಆಲಂ) ಅತ್ಯಂತ ರುಚಿಕರವಾದ ಅಡುಗೆ ; P ನಳನು ರುಚಿಕರವಾದ ಅಡುಗೆ ಮಾಡುವುದರಲ್ಲಿ ತುಂಬಾ ಸಮರ್ಥನಾಗಿದ್ದನೆಂದು ಇತಿಹಾಸಪ್ರಸಿದ್ಧವಾಗಿದೆ : ಷಡ್ರಸಗಳನ್ನು ಸೇರಿಸಿ ನಳಪಾಕ-ಭೀಮಪಾಕಗಳನ್ನು ಇಳಿಸುವವರೇ ಪಾಕಕಲಾನಿಪುಣರು (ಜೀವಾತ್ಮ. ೧೭೨) ; ಚಂದ್ರಿಯ ಅಡಿಗೆ ಎಂದರೆ ನಳಪಾಕ (ನಿಶಉ. ೪೦) ; ಸೀತೆಯ ನಳಪಾಕದಿಂದ ಹೊಟ್ಟೆಯಲ್ಲಿನ ವೈಶ್ವಾನರವನ್ನು ತಣಿಸೋಣ (ಸೀತಾರ. ೨೯). 'ಭೀಮಪಾಕ' ಪರಾ. [ನಳ$_1$ (=ನಲ$_2$) + ಪಾಕ$_1$]

ನಳಮೀನ 'ನಲಮೀನ' ನೋ.

ನಳಯೋಗ (ನಾ). [ಜ್ಯೋತಿ] ಜಾತಕನ ಜನ್ಮಕಾಲದಲ್ಲಿ ಏಳುಗ್ರಹಗಳು ದ್ವಿಸ್ವಭಾವ ರಾಶಿಯಲ್ಲಿರುವುದು: P ಈ ನಳಯೋಗದಲ್ಲಿ ಹುಟ್ಟಿದ ವ್ಯಕ್ತಿ ಸಿರಿವಂತನಾಗಿ, ಸುಖಿಯಾಗಿ, ಚತುರನಾಗಿರುತ್ತಾನೆಯಾದರೂ ಅಂಗವಿಕಲನಾಗುತ್ತಾನೆಂದು ನಂಬಿಕೆಯಿದೆ : ಏಳುಗ್ರಹಂ . . . ದ್ವ್ಯಂಗರಾಶಿಯೊಳ್ ಕೂಡಿ ನಿಂದೊಡದು ನಳಯೋಗಂ (ಜಾತತಿ. ೧೩-೦) ; ದ್ವಿಸ್ವಭಾವರಾಶಿ (ಮಿಥುನ ಕನ್ಯಾ ಧನುಸ್ಸು ಮೀನ)ಗಳಲ್ಲಿ ಏಳುಗ್ರಹಗಳೂ ಇದ್ದರೆ ನಳಯೋಗ (ಜಾತತಿ. ೧೩-೧ ಟೀಕೆ).

[ನಳ$_1$ (=ನಲ$_2$) + ಯೋಗ]

ನಳಸಂಯುತ (ನಾ). ಜೊಂಡುಹುಲ್ಲಿನಿಂದ ತುಂಬಿದುದು : "ನಡ್ವಳಂ. ನಳಸಂಯುತಂ – ಈ ೨ ನಾ(ಣ)ನಲುಳ್ಳ ಭೂವಿ." (ಹರಿಹಾಯು. ೨೬-೪). [ನಳ$_1$ (=ನಲ್ಲ) + ಸಂಯುತ]

ನಳಸಂವತ್ಸರ (ನಾ). ಅರುವತ್ತು ಸಂವತ್ಸರಗಳಲ್ಲಿ ಐವತ್ತನೆಯದು : ನಳಸಂವತ್ಸರದೊಳ್ ಮಂ ಘಟಿಲೆನಿ ಮನುಜರ್ಗಮಧಿಕೃಪೆ ತಾನಕ್ಕುಂ (ಜಿಬ್ಬವು. ೬-೨೩). [ನಳ$_1$ (=ನಲ್ಲ) + ಸಂವತ್ಸರ]

ನಳಸಮುದ್ಭವ (ನಾ). [ಜ್ಯೋತಿ] ನಳಯೋಗದಲ್ಲಿ ಹುಟ್ಟಿದವನು : ಧನಪತಿ ಪದುಳಿದನೂನಾಂಗಿ ನಿಪುಣಮತಿ ನಳಸಮುದ್ಭವಂ (ಕಾಶಕೆ. ೦೩-೦೨). [ನಳ$_1$ (=ನಲ್ಲ) + ಸಮುದ್ಭವ]

ನಳಿ$_1$ (ಕ್ರಿ). ೧. ಬಾಗು; ಬಗ್ಗು; ಡೊಂಕಾಗು : "ನಳಿ–ನಮನೇ" (ಕಮಧಾ); ಪದುಳಂ ನಿಂದಿಡಗಯ್ಯೊಳಿತ್ತಿ ಘುಜಂ ಕೊಪ್ಪಂ ಪದಾಂಗುಷ್ಠ ಮೂಲದೊಳಿಟ್ಟೇಱಿಸೆ ಕಾಲದಂಡನಿಭಮಂ ಕೋದಂಡಮಂ . . . ಕೂರ್ಮೋನ್ನತ ಕರ್ಪರು ನಳಿದು ಬಿನ್ನಂ ಪತ್ತದೇಂ ಮಾಣ್ದುದೇ (ಪಂರಾಮಾ. ೫-೮೬); ಶರದ ನರೆ ಮೆಯ್ಯ ತೆರೆ ಕಯ್ಯ ಕೋಲಿಂದೆಸೆಯೆ ಸುರುಳ್ದ ತನು ನಳಿತ ಬೆನು ಜೋಲ್ದ ಪೂರ್ವಿಂದೆಸೆಯೆ (ಇಳಿರ. ದೀ. ೩೦-೦೬); ಕಿಱುಗೊಂಬು ನಳಿದ ಬಿನ್ನಂ ಕಿಱುಕಿದ ಕೊಡಗೆಚ್ಚಲಲೆವ ಬಾಲಂ ತಳುಮ್ಮೆ ಮೆಱಿಯೆ ಬಿಳಿದಾಗಿ ಮಾಣದ ಕಱಿವೆಮ್ಮೆಯ ಪಿಂಡು ಪಳ್ಕಿಪಳ್ಕಿಯೊಳೆಸೆಗುಂ (ಸೂಕ್ಸು. ೪-೬೦); ಕವಿದು ಹಳಚಿದುದುಭಯಬಲ ಶಿವಶಿವ ಮಹಾದೇವಮಮ ಪದರಜ ರವಿಯ ತಿವಿದುದು ದಿವವರಿದುದು ನಳಿದನಹಿರಾಯ (ಕುವಾಭೀ. ೪ ಸೂಚನೆ). ೨. ಮಣಿ; ನಮಸ್ಕರಿಸು; ಶರಣಾಗು : "ನಳಿಯಂಬ ನುಡಿ ನಮಸ್ಕಾರಾರ್ಥದಲ್ಲಿ ಕಾಡಿನ ಸರವಿನಲ್ಲಿ ಸಲ್ಗುಂ" (ಸಂಜೀವ. ೫೪); ಕದನದೊಳಂದು ನಿನ್ನ ತರವಾರಿಯ ಬಾರಿಗೆ ಮೆಯ್ಯ್ ನೊಡ್ಡಲಾಜಿದೆ ನಳಿದಿನ್ನುವಂತದನೆ ಜಾನಿಸಿ ಜಾನಿಸಿ ಗಂಗ ತನ್ನ ನಂಬಿದ ಸುದತೀಕದಂಬದೆರ್ದ ಪೌವನೆವೋಗಿರೆ ಪುಲ್ದೆಱೆಚ್ಚುವೆಚ್ಚದಪನಹನ್ನಿಶಂ ತಿಗುಳ ದಾಮನರಣ್ಯಶರಣ್ಯವೃತ್ತಿಯಿಂ (ಎಕ. II, ೩೪೦-೩೩; 1175). ೩. ಬಳುಕು; ತೊನೆದಾಡು : ಕಾಲ್ ಬಲೆಯೆ ನಡು ನಳಿಯೆ ಕಳಲುತುಂ ಬಟಲುತುಂ . . . ಬಾದರತಿವೇಗದಿಂ (ಲೀಲಾವ. ೦೦-೯); ಮುಡಿ ಜಡಿಯೆ ಕುಂತಳಂ ಕುಣಿಯೆ ಕಡಿಗಣು ಹೊಳಿಪೆ ನಡು ನಳಿ[ಪಾಠಾಂ. ಮಣಿ]ಯೆ . . . ನೇವುರ ರುಣುಂ ರುಣುಮೆನಲು ಪನಿತೆಯರ ನಡುವೆ ಚೆಂಡಂ ಹೊಯ್ಯುತಿರ್ದಳೊಬ್ಬಳು ಕಾಮನಂಕಮಾಲೆಯ ಪಾಡುತ (ಹಡಕಾ. ೪-೦೩).

ನಳನಳಿ (ದ್ವಿರುಕ್ತಿ) : ವಂದಸಿಂಧುರಭಾರಮನಾನಲಾಜದಳಿಂ ಬೆನ್ನಂ ನಳನಳಿದು ನಡೆವ ಹಯದಬ್ಬಾಯಳವಂ ಕಂಡು (ಆದಿಪು. ೦೫-೩೧).

[ದೇ.॥ ತಮಿ. ನಿಳಿ; ಮಲ. ಞಾಳಿ; ತೊದ. ನೊಳ್ಗಿ]

ನಳ್ಳಿ (ನಾ). ೧. ಸೊಬಗು; ಚೆಲುವು : ತೊಳಗುತಿವೆ ತೋಟದಲಿ ತೆರ ತೆರ ಗುಲಾಬಿಹೂ . . . ಎಳೆಬಿಸಿಲು, ತಿಳಿಗಾಳಿ; ನೋಡಿಕೊಳ್ಳಲು ಮಾಲಿ; ಏಳೆ ಹೇಳುವುದು ಆ ನಳಿಯ ? (ಸುನೀತ. ೬-೮). (ಗು). ೨. ಕೋಮಲವಾದ; ಮೃದುವಾದ. ೩. ಕಾಂತಿಯುಕ್ತವಾದ. 'ನಳಿದೊಳ್', 'ನಳಿಮೊಗ' ಪರಾ.

ನಳ್ಳಿ$_3$ 'ನಲ್ಲಿ$_1$' ನೋ.

ನಳ್ಳಿ$_4$ 'ನಲ್ಲಿ$_2$' ನೋ.

ನಳಿಕೆ (ನಾ). ೧. ಸಣ್ಣ ಕೊಳವೆಯಂಥ ಟೊಳ್ಳಾದ ಸಾಧನ; ನಾಳ : ವಿವಿಧ ಬಗೆಯ ಉದ್ದೀಪನಕಾಲಕ್ಕೆ ಸಸ್ಯಗಳ ನಳಿಕೆಗಳು ವ್ಯಕ್ತಪಡಿಸುವ ಪ್ರತಿಕ್ರಿಯೆಯು ಪ್ರಾಣಿಗಳ ನರಗಳ ಪ್ರತಿಕ್ರಿಯೆಯಂತೆಯೇ ಇರುವುದೆಂಬುದನ್ನು ಅವರು ಯಶಸ್ವಿಯಾಗಿ ತೋರಿಸಿದರು (ಸಸ್ಯಕ. ೦೦೩). ೨. ಕೊಳವೆಗಳಿಂದ ತಯಾರಿಸಿದ ಪಂಜರ: ಬಲಪಂತರೆಲ್ಲ ನಳಿಕೆಯ ಕೀರನಂತೆ ಅವರು ದಿಕ್ಕಾಗಲಱಿಯರು (ವೋಕಾಮಾ. ೬೬-೩೬೯). [ಸಂ. ನಲಿಕಾ]

ನಳಿಗೆ, ಲಳಿಗಿ, ಲಳಿಗೆ (ನಾ). ೧.=ನಳಿಕೆ ೧ : "ನಳಿಗ (ಲಳಿಗ)–ನಾಲಿಕಾ (ನಲಕ) = ಕೊಳವೆ" (ತದ್ಭಳೋ. ೫೧); ನಳಿಗೆಯೊಳ್ ನಾಯ ಬಾಲವನು ಕಟ್ಟಲ್ತನ್ನ ನಳುಹ ಬಿಡದು (ಸಮ್ಮಳಾ. ೧೦-೦೩); ನಾಯ ಬಾಲ ನಳಿಗೆಯಲ್ಲಿ ಹಾಕಿದ ಹಾಗೆ ಅವನ ಬುದ್ಧಿ ಎಂದಿಗಾದರೂ ಸರಿದಾರಿಗೆ ಬರುವುದಿದೆಯೇ ? (ತ್ಯಾಗವಿ. ೧೫೦); ಪಿಸ್ತೂಲಿನ ನಳಿಗೆಯೊಂದು ಗಂಗಾರಾಮನ ಎದೆಯ ಕಡೆಗೆ ಗುರಿ ನೋಡುತ್ತಿತ್ತು (ವಿಧಿವ್ಯ. ೦೦೪); ಇಬ್ಬರೂ ಹುಕ್ಕೆಯ ನಳಿಗೆಗಳನ್ನು ಬಾಯಲ್ಲಿಟ್ಟುಕೊಂಡು ತುಸುಹೊತ್ತು ಸುಮ್ಮನೆ ಈಚಿಚೆಯರುಗಳಲ್ಲಿ ಒರಗಿದರು (ನಿಜಾಮ. ೧); ನಾಯಿಯ ಬಾಲ ನಳಿಗೆಯಲ್ಲಿ ಹಾಕಿದರೆ ಡೊಂಕು ಬಿಟ್ಟೀತೆ ? (ಗಾಡ). ೨. ನೆಯ್ಗೆಯಲ್ಲಿ ಉಪಯೋಗಿಸುವ ಸಾಧನ; ಲಾಳಿ: ಊಕೆಯ ಮಾಡುವಾತನ ಕೆಯ್ಯ ಕುಂಚಿಗೆಯ ತುಂತುಱು ನುಂಗಿತ್ತು, ನೆಯ್ವ ಅಣ್ಣನ ಕಣ್ಣ ಕೆಯ್ಯ ನ[ಪಾಠಾಂ. ಲ]ಳಿಗೆ ನುಂಗಿತ್ತು (ಗುಪ್ರಮಂ. ೪). ೩. ಬಲಿತ ಬಿದಿರು; ಬೊಂಬು. ೪. ಬೊಂಬಿನಿಂದ ತಯಾರಿಸಿದ ಪಾತ್ರೆಯಂಥ ಸಾಧನ; ಅಂಡೆ : ಉಗ್ರಪಾತಂಗದಂತಗಳಂ ಚಮರಿವಿನಲಲಂ ಜೀನ ನಳಿಗೆಯಂ ಪೂತಿಬೆಕ್ಕಂ ಹರಿಶ್ಚಂದ್ರರಾಯಂಗೆ ಕಾಣಿಕೆಯನಿತ್ತಡಿಗೆಱಗುತಿರ್ದರಗ್ಗದ ಬೇಡವಡೆಯೊಡೆಯರು (ಹಜಕಾ. ೫-೩); ತೈಲವನೊಂದು ನಳಿಗೆಯೊಳು ತುಂಬಿ (ವೀಶಿಪು. ೮-೮-೪೦); ಪುಲಿದೊವಲೆತಲೆಯ ಮಱಿ ಪೀಲಿವೊಚಿ ಜೀನ ನಳಿಗೆ ಬಲ್ಪಂದಿದಾಡೆಗಳ ಒಲಿದಿತ್ತು ಕಾಣಿಕೆಯನು ಕೈಮುಗಿದರಾ ಬಲದ ನಾಯಕರು ಕಂಪಿಲಗೆ (ಕುರಾಸಾಂ. ೨೭-೩೮); ಪುಲಿದೊಗಲ ಪೊಱೆ ಜೀನುತುಪ್ಪದ ನಳಿಗೆ ಮೇಣದ ಮುದ್ದೆ (ಸಾಳ್ವಭಾ. ೧೬-೬). ೫. ಒಂದು ಬಗೆಯ ಸುಗಂಧದ್ರವ್ಯ : "ನಾಳಿಕಾ – ನಳಿಕೆ, ಬಳ್ಳಿ, ತೆಂಗು, ಸೂರ್ಯಭಕ್ತ" (ಓಷಧಿ. ೮೫). **ಲಳಿಗಿ**: ೧. ಶ್ವಾನನ ತಂದು ಬಾಲ ನೀವಿ ಲಳಿಗಿಯೊಳು ತಾನಿದಲದರಿಂದ ಮೇಣ್ ಸರಳಾಗುವದೇ (ವಿಸಾಸು. ೪೦-೦); ನಾಯಿಯ ಬಾಲವನ್ನು ಲಳಿಗಿಯಲ್ಲಿ ಹಾಕಿದರೂ ಅದರ ಡೊಂಕು ಹ್ಯಾಗೆ ಹೋದೀತು ? (ವೋಹಿನೀ. ೪೯). **ಲಳಿಗೆ** : ೧. "ನಾಳಃ = ಲಳಿಗೆ" (ಕಾಶಕೃ. ೫೧); ಬಿಳಿಯಕ್ಕಿವಿಟ್ಟ ಸೋದಿಸಿ ಮತ್ತೆ ಹರಿಯಣಕೆ ತಳಿದುಕೊಂಡು . . . ಲ[ಪಾಠಾಂ. ನ]ಳಿಗೆಯಂದದಿ ತಿರಿಹಿ ತಿರಿಹಿ ಮುಖಗೆಡದೆ ಹಪ್ಪಳವನೊತ್ತುವ ಹಾಗೆಯೊತ್ತಿ (ಸೂಪಣ. ೦-೪೫); ಹೊರಗೆ ಬಂದೂಕಿನ ಲಳಿಗೆಗಳು ಹಾಯ್ದಿವೆ (ಪ್ರಡಸ. ೧೪); ಶ್ವಾನದ ಬಾಲವ ಲಳಿಗೆಯೊಳಿಟ್ಟರೆ ಮಾಣದೆ ಸರಳವದಾಗೀತೆ ? (ಜನನಾ. ೦೦೩); ನಾಯಿಯ ಮನಸ್ಸು ಲಳಿಗೆಯಲ್ಲಿ ಹಾಕಿದ ನಾಯಿಯ ಬಾಲದಂತೆ ಇದ್ದಿತು (ನಾಡಿಗೀ. ೦೦೬). ೨. ಕಳಿಲೆಯ ನಖದಲ್ಲಿ ಚಿವುಟಲಹುದು ಮುಂದೆ ಲಳಿಗೆ ಕೂರುಗುರಿಗಂಜುವುದೇ (ವೋಚಕ. ೦೦-೦೩); ಕಳಿಲೆಯನ್ನಖದಿ ಚಿವುಟಲು ಸುಲಭಮದು ಬಲಿದು ಲಳಿಗೆಯಾದೊಡೆಯ [ಯಃ] ಗುರ್ಗಳಿಗೆ ಸಾಧ್ಯಮೆ (ನವವೋ. ೧೧-೦೭). ೪. ಧಾರುಣಿಯೊಳಗೆ ಹೇಱಿನಕ್ಕಿ ಲಳಿಗೆಯ ಎಣ್ಣೆ ಹೂವು ಕಾಯಿ ಹಣ್ಣು ವೊದಲಾದುದ ತಪ್ಪ ಸಾಧಿಸಿ ತರಿಸಿಕೊಂಡುಂಬ ಚಿಕ್ಕಮಕ್ಕಳಿಗೆಲ್ಲಿಯದೋ ನೆಟ್ಟನೆಯ ದೇವತ್ವ (ವೋಕಾಮಾ. ೧೦೪-೪೧೬); ತುಡುವೆಯ ಜೀನು ಕೋಲುಜೀನು ಹುತ್ತಜೀನು ಹೆಜ್ಜೇನು ಸಕ್ಕರೆಜೇನು ಯಿಂತಿವು ವೊದಲಾದ ಜೇನುತುಪ್ಪದ ಲಳಿಗೆಗಳ ಸಾಲುವೊಱಿಯಿಂ . . . ಕಾಣಿಕೆಯನಿಕ್ಕಿ (ನನ್ನಚಾ. ೪-೦೪ ವ). [<ಸಂ. ನಲಿಕಾ. / ತುಳು. ನಳಿಗೆ]

ನಳಿಗೊಂಬು (ನಾ). ಕೋಮಲವಾದ ಕೊಂಬೆ; ಎಳೆಯುಂದಾದ ರೆಂಬೆ : ಕವಲ್ತ ಕೊಂಬಿನ ಮಡವಡ್ಡಪಂದ ನಳಿಗೊಂಬಿನ ಪತ್ತುಗೆ ಜೋಲ್ತ ಬಳ್ಳಿಗೊಂಬಿನ ಬಳೆ ತೋರಗೊಂಬಿನ ನೊಗಂ ನಿಡುಗೊಂಬಿನ ಮೂಂಕು ಕಣ್ಗೆ ಚೆಲ್ವೆನೆ ನಡತೆಂದುವಂದಸುಗೆಯೆಂಬ ನೆಗಟ್ತಿಯ ತೇರ್ಗಳಿತ್ತಲುಂ (ಕಬ್ಕಾ. ೩೦೩). [ನಳ್ಳಿ$_2$ + ಕೊಂಬು$_1$]

ನಳಿತೋಳ್ 'ನಳಿದೋಳ್' ನೋ.

ನಳಿತೋಳು 'ನಳಿದೋಳ್' ನೋ.

ನಳಿದು (ನಾ). ಬಾಗಿದುದು ; ಡೊಂಕಾದುದು ; ವಕ್ರವಾದುದು. 'ಕಡುನಳಿದು' ಪರಾ. [<ನಳಿ$_1$]

ನಳಿದೋಳ್, ನಳಿತೋಳ್, ನಳಿತೋಳು (ನಾ). ಕೋಮಲವಾದ ತೋಳು ; ಮೃದುವಾದ ಬಾಹು : ನಳಿದೋಳ್ಗಳ್ ಶಾಖೆಯಂ ಕೆಂದಳ ವೆಳದಳಿರಂ . . . ಸುಯ್ಗಂಪು ಕಂಪಂ ಮಿಗೆ ಸೊಗಯಿಸಿತಂಗೋದ್ಭವ ಶ್ರೀ ಜಗನ್ಮಂಗಳಶೃಂಗಾರಾಬ್ಧಿವೇಳಾವನಲತೆಯೆನೆ ಶುದ್ಧಾಂತಕಾಂತಾಂದಂಬಂ (ಪುಷ್ಪಪು. ೭-೨೯). **ನಳಿತೋಳ್ :** ಕುಂತಿ . . . ನಿಧಾನಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳಿತ್ತ ಗಂಗಾದೇವಿಯುಮಾ ಕೂಸಂ ಮುಟುಗಲೀಯದೆ ತನ್ನ ತೆರೆಗಳೆಂಬ ನಳಿತೋಳ್ಗಳಿನೊಯ್ಯನೊಯ್ಯನೆ ತಟ್ಕೈಸಿ ತರೆ (ಪಂಪಭಾ. ೧-೯೫ ವ) ; ಮುಗುಳ್ಗಳಂ ಮಿಸುಗುವ ದಂತ ಪಂಕ್ತಿ ಲತೆಯಂ ನಳಿತೋಳ್ನೆಱೆ ಪೋಲ್ತು ನಾಡೆ ರಂಜಿಸುವ ವಿಳಾಸಿನೀ ನಿಕರದಿಂ ಪೊಸಸುಗ್ಗಿವೊಲಿರ್ದುದೋಲಗಂ (ಧರ್ಮಾಮೃ. ೪-೧೪೦) ; ತಾಮರಸಮುಖಿಯ ನಳಿತೋಳ್ ತಾಮರಸಬೆಡಂಗುವೆತ್ತು ಸಿರಿಸದ ಸುಮನೋದಾಮಕಮಂ ಗೆಲೆವಂದೆಸೆದಾ ಮಕರಧ್ವಜನ ಪಾಶಮೆನೆ ಸೊಗಯಿಸುಗುಂ (ಜಗವಿ. ೧೦-೩೨) ; ನಿಱಿಗುರುಳ್ ಸೋರ್ಮುಡಿ . . . ನಳಿತೋಳ್ ಕೆಂದಳಂ . . . ಸೊರ್ಕುಂಗೋಗಿಲೆ – ಇವು ಉಪಸರ್ಗಂ ಬೆರಸಿದ ಶಬ್ದಂಗಳ್ (ಕಶಸಾ. ೬೩-೪೦೬) ; ಕಂದನಾಡುವ ಬಾಲಲೀಲೆಯಂ ನೋಡಿ ತೊದಲೊಂದಿದಿನಿವಾತನುಱೆ ಕೇಳ್ದು ಮುದ್ದಿನ ಮುದ್ದೆಯಂದ ದಂಗವನೆತ್ತಿಕೊಂಡು ನಳಿತೋಳ್ಗಳಿಂದಪ್ಪಿ . . ಪಂಚೇಂದ್ರಿಯ ಪ್ರೀತಿಯಂ ಪಡೆವರಿನ್ನಾವ ಕೃತರೊ (ಕೃಮಿಭಾ. ೧೮-೨೦) ; ಮಲ್ಲಸಾಧನೆಯಂತೆ ನಳಿತೋಳ್ಗಳಿಂದಪ್ಪಿಯುಲ್ಲಾಸವನು ತೋಱೆ ವಿಟಗೆ (ಕಂನವಿ. ೬-೦೩೩). **ನಳಿತೋಳು:** ವನಿತೆ ಹೊರಳಿದಳು ಶೋಕವ ತಾಳ್ದು . . . ನಳಿತೋಳನು ಕೆದಱಿದಳವನಿಯಲಿ ಹಲುಬಿದಳಭಿಮನ್ಯುವಿನಳಲಿನಲಿ (ಕುವ್ಯಾದ್ರೋ. ೬೦ಇ. ಪರಿ ೨೮೪) ; ಶೂರ್ಪಣಖಿ . . . ಹೊಳಹೊಳವ ನಿಡುಗಂಗಳಿನ ಕೋಮಲದ ಕದಪಿನ . . . ನಳಿತೋಳುಗಳ ಮಾನವವಿಲಸಿತಾಂಗದ ರೂಪ ಕೈಕೊಂಡೆಸೆದಳಿದಿರಿನಲಿ (ತೊರರಾ. ೩-೪-೫) ; ಮಿಸುಪ ನದೀನಾರಿಯ ನಳಿತೋಳೆನಲೆಸೆವಿರ್ತಡಿಗಾಲುವೆ (ಜಯಕಾ. ೦-೩೮) ; ಕಂದರ್ಪ ನಗುತ ಲಾಲಿಸುತ ಸಂತಸದೊಳಂ ಚಂದದೆ ಪಿಡಿದು ರಾಜಿಸುವ ಇಂದೀವರವಾಂತ ಲತೆಯೆನೆ ತತ್ಕರದಿಂದೊಪ್ಪಿದುವು ನಳಿತೋಳು (ಕಂನವಿ. ೯-೨೯); ನಳಿತೋಳ ತಲೆಗಿಂಬ ಮಾಡಿ ಪದಗಳ ನೀಡಿ ಸುಳಿಗುರುಳ ಚದರಿ ಕೆದರಿದ ಲಲಾಮಂಗಳಿಂ ಲಲನೆಯರಿರಲು (ವಂಕಾರಾ. ೫-೪-೦೩). [ನಳಿ$_2$ + ತೋಳ್]

ನಳಿನ 'ನಲಿನ' ನೋ.

ನಳಿನಕೋರಕ (ನಾ). ತಾವರೆಯ ಮೊಗ್ಗು : ತಳಿರ ಕಕ್ಕಡದರುತ್ಪಳದ ತೋಮರದವರ್ ನಳಿನಕೋರಕದಿಟ್ಟಿಯವರು . . . ಬಳಸಿ ಕೈಮಾಡಿದರ್ ನೃಪನ (ಭೈರವೇ. ೨-೪೮). [ಸಂ. ನಲಿನಕೋರಕ]

ನಳಿನಗರ್ಭ 'ನಲಿನಗರ್ಭ' ನೋ.

ನಳಿನಗರ್ಭಾಂಡ 'ನಲಿನಗರ್ಭಾಂಡ' ನೋ.

ನಳಿನಜ 'ನಲಿನಜ' ನೋ.

ನಳಿನಜಾಂಡ (ನಾ). ಬ್ರಹ್ಮಾಂಡ ; ಪ್ರಪಂಚ : ನಳಿನಜಾಂಡ ತಲೆಯ ತೂಗಿ ಮೋಹಿಸುತಿರಲು ಕೊಳಲನೂದಿ ಭ್ರಾಜಿಸುವ ಚೆಲುವ ಕೃಷ್ಣರಾಯನ ನೋಡಿ (ಪುರಂದ. ೫-೪೬ ಪಲ್ಲವಿ). [ಸಂ. ನಲಿನಜಾಂಡ]

ನಳಿನದಳ 'ನಲಿನದಲ' ನೋ.

ನಳಿನದಳನಯನೆ (ನಾ). ಕಮಲದ ಎಸಳಿನಂತೆ ಕಣ್ಣುಳ್ಳವಳು ; ಕಮಲಾಕ್ಷಿ : ನಳಿನದಳನಯನೆ ತನಗಾಗುಟಿವರೆ ಕರತಳದೆ ವದನಮಂ ಮುಚ್ಚುತವಗ್ಗಲಿಸಿ ಪೊಱವಡುವ ಗೋತ್ರಸ್ಖಲನೆಯ ಭಯದಿಂದೆ ಮುಚ್ಚಿದಂತೆವೊಲಿರ್ದಳ್ (ಕಾದಂಉ. ೦೨೮). [ಸಂ. ನಲಿನದಲನಯನಾ]

ನಳಿನದಳಪುಟ (ನಾ). ಕಮಲದ ಎಲೆಯಿಂದ ಮಾಡಿದ ದೊನ್ನೆ : ನಳಿನದಳಪುಟದೆ ನೀರು ನಳಿನಿಗಳಿವು ರೂಪುಗೊಂಡು ಸುರಿದಪುವೆನೆ ಕಂಗೊಳಿಪ ಮರಕತದ ಕಳಶಂಗಳ ಜಲಮಂ ಸುರಿದರಮಳಕಮಳಾನನೆಯರ್ (ಕಾದಂಪೂ. ೭೩). [ನಳಿನದಳ (= ನಲಿನದಲ) + ಪುಟ$_3$]

ನಳಿನದಳಲೋಚನ 'ನಲಿನದಲಲೋಚನ' ನೋ.

ನಳಿನದಳಾಕ್ಷ (ನಾ). ೧. ಕಮಲದ ಎಸಳಿನಂತೆ ಕಣ್ಣುಳ್ಳವನು. ೨. ಕೃಷ್ಣ : ನಳಿನದಳಾಕ್ಷಂ ರುಕ್ಮಿಣಿ ಸಲೆ ಭಾಗ್ಯಸುಖಾನುಭಾವದಿಂದಂ ದಿನಮಂ ಕಳೆಯುತ್ತಿರೆ (ದಶಾವ. ೯-೧೬೮).

[ಸಂ. ನಲಿನದಲಾಕ್ಷ (ನಲಿನದಲ + ಅಕ್ಷಿ + –)]

ನಳಿನದಳಾಯತಾಕ್ಷ (ನಾ). ಕಮಲದ ಎಸಳಿನಂತೆ ವಿಶಾಲವಾದ ಕಣ್ಣುಳ್ಳವನು : ನಳಿನದಳಾಯತಾಕ್ಷನುರುವಕ್ಷನಿಭಾಹಿತಮಧ್ಯನಕ್ಷರಾಡ್ಗಳ ನಳಿಮಾಲಿಕಾಪ್ರಭನಹಿಪ್ರಭುಸನ್ನಿಭಬಾಹುಯುಗ್ಮಂ . . . ನಿಟ್ಟಿದಿರಾಗಿ ನಿಲ್ವುದುಂ (ಮಹಾನೇ. ೬-೩೮).

[ಸಂ. ನಲಿನದಲಾಯತಾಕ್ಷ (ನಲಿನದಲ + ಆಯತ + ಅಕ್ಷಿ + –)]

ನಳಿನದಳಾಯತಾಕ್ಷಿ (ನಾ). ಕಮಲದ ಎಸಳಿನಂತೆ ವಿಶಾಲವಾದ ಕಣ್ಣುಳ್ಳವಳು: ನಳಿನದಳಾಯತಾಕ್ಷಿ . . . ಪೊಳೆವವತಂಸಪುಷ ರಜದಿಂ ಪೊರೆದಿರ್ದ ಕಪೋಲಪಟ್ಟಮಂ ತೊಳೆದಳನಾರತಂ ಸುರಿವ ಚಂದನಶೀತಲ ಹರ್ಷವಾರಿಯಿಂ (ಕಾದಂಉ. ೨೩೬). [ನಳಿನದಳ (=ನಲಿನದಲ) + ಆಯತಾಕ್ಷಿ]

ನಳಿನದೃಶ (ನಾ). ೧ ಕಮಲದಂತೆ ಕಣ್ಣುಳ್ಳವನು. ೨ ಕೃಷ್ಣ : ಜಲಧಿಯಲಿ ನಿಜಯೋಗ ನಿದ್ರಾಲಲನೆಗಭಿಮುಖನಾಗಿ ಪವಡಿಸಿ ನಳಿನದೃಶನಿರೆ ನಾಭಿನಳಿನದಲುದಯಿಸಿದನಜನು (ನಿಭಾಗ. ೧-೨-೨). [ಸಂ. ನಲಿನದೃಶ್]

ನಳಿನದೃಶೆ (ನಾ). ಕಮಲದಂತೆ ಕಣ್ಣುಳ್ಳವಳು : ಎಳೆಯ ಮಿಂಚಿನ ಕುಡಿಯ ಸೂಸುವ ನಳಿನದೃಶೆಯರು [ಪಾಠಾಂ. ನಯನದ] ಶಶಿಯ ಬಿಂಬವ ಹಳಿವ ಹುರುಡಿಸುವಬುಜಮುಖಿಯರು . . . ಕುರುರಾಯ ನೆಡವಂಕದಲಿ ಮೋಹಿದರು (ಕುವ್ಯಾಉ. ೮-೪೪). [ನಳಿನದೃಶ + – ಎ$_2$]

ನಳಿನನಯನ (ನಾ). ೧. ಕಮಲದಂತೆ ಇರುವ ಕಣ್ಣು: ಎಳೆಯ ಮಿಂಚಿನ ಕುಡಿಯ ಸೂಸುವ ನಳಿನನಯನದ [ಪಾಠಾಂ. ದೃಶೆಯರು] ಶಶಿಯ ಬಿಂಬವ ಹಳಿವ ಹುರುಡಿಸುವಬುಜಮುಖಿಯರು (ಕುವ್ಯಾಉ. ೮-೪೪). ೨. ಕಮಲದಂತೆ ಕಣ್ಣುಳ್ಳವನು : ಶ್ಯಾಮಸುಂದರನೂ ಮಹಾಬಾಹುವೂ ನಳಿನನಯನನೂ ಆದ ಈತನು ನನಗೆ ತಕ್ಕ ಗಂಡ (ಪಚಧಾ. ೩೭). ೩. ವಿಷ್ಣು.

[ನಳಿನ (= ನಲಿನ) + ನಯನ]

ನಳಿನನಾಭ 'ನಲಿನನಾಭ' ನೋ.

ನಳಿನನಾಳ (ನಾ). ತಾವರೆಯ ದಂಟು ; ಕಮಲದ ಕಾಂಡ,–ದೇಟು : ನಳಿನನಾಳವು ಗಜದ ಕೈಯೊಡನಳವಿಗೊಡಲಂತರವೆ (ಕುವ್ಯಾದ್ರೋ. ೪-೪) ; ಬಳಿಕ ನೋಡುವೆ ದನುಜಗಿನುಜರ ಬಲುಹನೆನುತಾ ವೀರ ಲಂಕೆಯ ನಳಿನನಾಳವ ಭದ್ರಗಜ ಕೀಳ್ವಂತೆ ಕೀಳ್ಬಗೆದ (ಕೌಶಿರಾ. ೧೦-೪೮) ; ಜಲವೆಲ್ಲ ಹರಿಮಯ ಶಿಲೆಯೆಲ್ಲ ಶಿವಮಯ ಮಳಲುಮಿಟ್ಟೆಗಳೆಲ್ಲ ಮಣಿಯ ಮಯವು ಬೆಳೆದಿಪ್ಪ ದರ್ಭೆಗಳು ಸಾಕ್ಷಾತ್ತು ಬ್ರಹ್ಮಮಯ ನಳಿನನಾಳವು ಸರ್ವ ವಿಷ್ಣು ಮಯವು (ಪುರಂದ. ೪-೪೦-೨).

[ನಳಿನ (= ನಲಿನ) + ನಾಳ$_1$ (= ನಾಲ$_1$)]

ನಳಿನನಿಭ (ನಾ). ತಾವರೆಯಂತಿರುವುದು ; ಕಮಲಕ್ಕೆ ಸದೃಶವಾದುದು: ಕಾಂಚನಭಾಜನರತಮಭಿಕಾಂಚನಭಾಜನಮೆನಿಪ್ಪ ಸುರುಚಿರಚರುವಿಂ ಸಂಚಿತ ಗುಣನಡಿಗಳನಿನಸಂಚಿತಗುಣ ನಳಿನನಿಭಮನೊಸೆದರ್ಚಿಸಿದಂ (ಪುಷ್ಪಪು.೧೪-೭).

[ಸಂ. ನಲಿನನಿಭ]

ನಳಿನಪತ್ರ (ನಾ). ತಾವರೆಯ ಎಲೆ : ದಿವಿಜಕುಲವಿಳಯಕಾಲಾನಲಂ ಬಪ್ಪಂತೆ ಹಾಳಾಹಳ ಸುಡುತ ಬರಲು . . . ಶಂರಕನು ಕರತಳದೊಳದ

ತಳೆದು ನೋಡಲು ನಳಿನಪತ್ರದೊಳು ಜಲಬಿಂದುವಂತೆ ಶಲ್ಲಣಗೊಳಲು (ಲಕ್ಷಿಂ. ೧೨-೧೩). [ನಳಿನ(= ನಲಿನ) + ಪತ್ರ]

ನಳಿನಭವ 'ನಲಿನಭವ' ನೋ.

ನಳಿನಭವಾಂಗ (ನಾ). ಬ್ರಹ್ಮನ ದೇಹ.-ಶರೀರ: ಮತ್ತಮಾ ಘನ ಸಮಯಂ ಗದಾಧರಮೂರ್ತಿಯಂತೆ ಘನಶ್ಯಾಮನೋಜ್ಜ್ವಮುಂ ನಳಿನ ಭವಾಂಗದಂತೆ ಕಾದಂಬವಿತತಾವೋದವಾಹಮುಂ . . . ಎನಿಸಿರ್ದುದು (ರಾಜಶೇ. ೪-೧೧೬ ವ). [ನಳಿನಭವ (= ನಲಿನಭವ) + ಅಂಗ]

ನಳಿನಭವಾಂಡ 'ನಲಿನಭವಾಂಡ' ನೋ.

ನಳಿನಮುಖಿ 'ನಲಿನಮುಖಿ' ನೋ.

ನಳಿನರಿಪು (ನಾ). ಕಮಲದ ವೈರಿ; ಚಂದ್ರ : ಬೆಳಿವುತಿರ್ದರು ಹರಿಣಪಕ್ಷದ ನಳಿನರಿಪ್ಪವಿನವೊಲ್ ಕುಮಾರರು (ಕುವ್ಯಾಖ. ೩-೦೧); ಎಲೆ ಭಗೀರಥವಂಶ ವಾರುಧಿ ನಳಿನರಿಪು[ಪಾಠಾಂ. ಸಖಿ]ಸುತ ಕೇಳು ಕರುಣಾಜಲಧಿಯಲ್ಲಾ ಕಾಯ್ದುನನ್ನಯನಾಮಧಾರಕನ (ತೊರಣಾ. ೬-೩-೦).

[ನಳಿನ (= ನಲಿನ) + ರಿಪು]

ನಳಿನಲೋಚನ (ನಾ). ೧. ಕಮಲದಂಥ ಕಣ್ಣುಳ್ಳವನು. ೨. ವಿಷ್ಣು : ನಳಿನಲೋಚನನಾರ್ದು ಶಾರ್ಙ್ಗವ ಬಲಿದು ಜೇವೊಡಗೆಯ್ಕೆ ಲೋಕ ವನಳರಿಸುವ ದನಿ ಮಾಯವಾದುದು (ಸಾಳ್ವಭಾ. ೩೦-೬೫).

[ನಳಿನ (= ನಲಿನ) + ಲೋಚನ]

ನಳಿನಲೋಚನೆ 'ನಲಿನಲೋಚನೆ' ನೋ.

ನಳಿನವದನೆ (ನಾ). ಕಮಲದಂತೆ ಮುಖವುಳ್ಳವಳು; ಸುಂದರಿ : ಕಳಸಕನ್ನಡಿ ಸಹಿತ ನಡೆಯಲಿ ನಳಿನವದನೆಯರೆಂದು ನೇಮಿಸಿದನುಮಹೀಪಾಲ (ಕುವ್ಯಾಖಾ. ೬-೧೬). [ಸಂ. ನಲಿನವದನಾ]

ನಳಿನವನ (ನಾ). ಕಮಲಗಳ ಸಮೂಹ; ತಾವರೆಗಳ ಗುಂಪು : ನಳಿನ ವನಶ್ರೀನಿವಹಂ ಕಳಹಂಸಂಬೆರಸು ಬಂದುದೆನೆ ಲತಿಕಾಕೋವಳಿಯರ ನಡುವೊರ್ವಂ ನಿರ್ಮಳರೂಪಂ ದ್ವಿಜಕುಲೋತ್ತಮಂ ಬರುತಿರ್ದಂ (ಅನಂಪು. ೨-೪೯). [ನಳಿನ (= ನಲಿನ) + ವನ]

ನಳಿನವೈರಿ 'ನಲಿನವೈರಿ' ನೋ.

ನಳಿನಶರ (ನಾ). ಮನ್ಮಥ; ಅನಂಗ : ದೇವರಾಜೇಂದ್ರಭೂಪತಿಚಂದ್ರನು ನಳಿನಶರನಧಟ ಹರಪಾದಸರಸಿಜಭೃಂಗನೆಳೆಕೀರವಾಣಿ . . . ಶಚಿದೇವಿ ಯೆಂದೆಂಬ ಸತಿಸಹಿತ ರಾಜ್ಯವನಾಳುತ (ಪ್ರಾಥಕಾ. ೯-೩೭). [ನಳಿನ (= ನಲಿನ)+ ಶರ]

ನಳಿನಸಂಭವ 'ನಲಿನಸಂಭವ' ನೋ.

ನಳಿನಸಖ 'ನಲಿನಸಖ' ನೋ.

ನಳಿನಸಖನೇತ್ರ (ನಾ). ಸೂರ್ಯನನ್ನು ಕಣ್ಣಾಗಿ ಉಳ್ಳವನು; ಶಿವ : ನಳಿನಸಖನೇತ್ರನಿಹನುಮೆಯೊಳುಂ ಕ್ರೀಡಿಸುತ (ಲಕ್ಷಿಂ. ೦೭-೦೩). [ನಳಿನಸಖ (= ನಲಿನಸಖ) + ನೇತ್ರ]

ನಳಿನಸಖಿಸುತ (ನಾ). ಕಮಲದ ಗೆಳೆಯನ ಮಗ; ಸೂರ್ಯನ ಮಗ; ಯಮ : ನಳಿನಸಖಿಸುತ ಕೋಪದಿಂದೆ ಸೇನಾಧಿಪತಿಗಳನೆಲ್ಲ ಬೇಗದಿಂ ಬಲಗೂಡಿ ಕಳುಹಲ್ಕೆ ತಳುವದವ್ಯತಿಂದು ಕಾದಿ ಮುರಿದೋಡಲಾ ಯಮ ರಾಜ ತಾನೆ ಬಂದು ಮಲಹರನ ದೂತರೊಳು ಪಲಕಾಲ ಕಾದುತಿರೆ (ಪ್ರಾಥಕಾ. ೦೬-೩). [ನಳಿನಸಖಿ(= ನಲಿನಸಖಿ) + ಸುತ]

ನಳಿನಸಮಾಜ (ನಾ). = ನಳಿನವನ : ನಳಿನಸಮಾಜಮುಳ್ಳಲರೆ ತಣ್ಣೆಲರೊಯ್ಯನೆ ತೀಡೆ ಚಕ್ರಸಂಕುಳಮುರುಲೀಲೆಯಿಂ ನೆರೆಯೆ ಮೆಲ್ಲನೆ ಪಾಜಿ ವಿಹಂಗರಾಜಿ ಕೆಂಬೆಳಗುಬಿಲೋರ್ವಿಯಂ ಪರೆದು ತೆಕ್ಕನೆ ತೀವೆ ನಿಳಿಂಪರಾಟ್ ದಿಶಾಚಳಶಿಖರಾಗ್ರದೊಳ್ಪೆಳಗುತೊಪ್ಪಿದನಂದು ಕರಂ ದಿವಾಕರಂ (ಉದ್ಭಟ. ೦೦-೭). [ನಳಿನ (= ನಲಿನ) + ಸಮಾಜ]

ನಳಿನಳಿನಬಾಣ (ನಾ). ಕೋಮಲವಾದ ಕಮಲಪುಷ್ಪದ ಬಾಣವನ್ನುಳ್ಳವನು; ಪುಷ್ಪಬಾಣ; ಕಾಮ; ಮನ್ಮಥ : ನಳಿನಳಿನಬಾಣಂಗೆ ಕೂರ್ಸರಲಾಗಿ ತಾಗಿಯಾ ಲಲನೆಯರ ವಿರಹದಿಂ ನೋಯಿಸಲು ಮುನಿದವರು ಬಲುಗೋಪ್ಮದಿಂದೆ ಶಾಪಿಸಲು (ನಪಚೋ. ೫೬-೦೫).

[ನಳಿ$_2$ + ನಳಿನ (= ನಲಿನ) + ಬಾಣ]

ನಳಿನಾಂಬಕೆ (ನಾ). ಕಮಲದಂತೆ ಕಣ್ಣುಳ್ಳವಳು; ಸುಂದರಿ : ಉಳಿದು ಸುಮಶಯನಮಂ ಮೇಣ್ ನಳಿನೀದಳದಿಂದೆ ರಚಿಸಿದೆದೆಗುಪ್ಪಸಮಂ ಬಳಲಿಕೆಯಂ ತಳೆದಂಗದೆ ನಳಿನಾಂಬಕೆ ನೀನದೆಂತು ಪೋದಪೆ ಬಸಿಲೊಳ್ (ಶಾಕುಂತ. ೪೦-೭೩). [ಸಂ. ನಲಿನಾಂಬಕಾ]

ನಳಿನಾಕರ (ನಾ). ಕಮಲಗಳ ಆವಾಸಸ್ಥಾನ; ಕೊಳ; ಸರೋವರ : ನಳಿನಾಕರಮುಂ ರವಿಯುಂ ಜಳನಿಧಿಯುಂ ನಿರ್ಮಳೋರ್ವಿಯುಂ ಚಂದ್ರಮನುಂ ಕಳೆಯುಮೆಸೆವಂತೆ ಸಮಸಂದಿಳೇಶನುಂ ಕಾಂತೆಯುಂ ಕರಂ ಸೊಗಯಿಸುವರ್ (ಕಂದ್ರಪು. ೧೧-೧೧೪); ನಳಿನಾಕರಕ್ಕೆ ಬಂದು ಕೊಳ ದೊಳಲರ್ದಬ್ದದಲರಂ ನಳಿನೇಕ್ಷಣೆ ಮುಱಿವೆನೇದು ಪುಗೆ . . . ಕಣ್ಗದೇಂ ರಂಜಿಸಿತೊ (ರಾಜಶೇ. ೧೦-೪೩ ವ). [ನಳಿನ (= ನಲಿನ) + ಆಕರ$_3$]

ನಳಿನಾಕ್ಷ 'ನಲಿನಾಕ್ಷ' ನೋ.

ನಳಿನಾಕ್ಷಿ (ನಾ). ಕಮಲದಂತೆ ಕಣ್ಣುಳ್ಳವಳಂ; ಕಮಲಾಕ್ಷಿ : ಹಾ ತರುಣಿ ನಳಿನಾಕ್ಷಿ ನಯಸುಪ್ರೀತಿಪೂರ್ವಕದಿಂದ ಕನಸಲಿ ಮಾತುದೋಱಿದೆ ಬಂದು ನನ್ನಲಿ ಕರುಣದಿಂ ನೀನು (ನಳಚ. ೭-೯); ಕೆಳಗಣ ವೇಗಣ ಪಲ್ಲಂ ಫಳಿಲನೆ ತಾಗಲ್ಕೆ ಕುಟ್ಟನಾಖ್ಯಂ ಮತ್ತಂ ನಳಿನಾಕ್ಷಿ ಪಲವು ಸೂಳಂದೆಳೆಯುಳಿ ಸೋಂಕು ತ್ತಮಗಲೆ ಖಾದನಮಕ್ಕುಂ (ಶಾಸ್ಕರಂ. ೩-೮೯). [ಸಂ. ನಲಿನಾಕ್ಷೀ]

ನಳಿನಾನನೆ (ನಾ). ಕಮಲದಂತೆ ಮುಂಖವುಳ್ಳವಳು: ಗಳಿಯಿಸುತಿರೆ ನಯನ ವಾರಿ ನಿನ್ನಾನನದಿಂ ನಳಿನಾನನೆ ನೀನಿರೆ ಕುರುಕುಳಾಂತಕಂ ಗಳಿತಕೋಪನೇ [ಕಲಿ]ಭೀಮಂ (ಗದಾಯು. ೦-೬೩). [ಸಂ. ನಲಿನಾನನಾ]

ನಳಿನಾಭನಳಿನ (ನಾ). ಕೋಮಲವಾದ ನಾಭಿಯಲ್ಲಿರುವ ಕಮಲ; ವಿಷ್ಣುವಿನ ಹೊಕ್ಕಳಿನಲ್ಲಿರುವ ತಾವರೆ : ಹರಿಯ ನಳಿನಾಭನಳಿನಂ ವಿರಂಚಿಯುಂ ಪಡೆಮುದರ್ಕೆ ಪುರುಡಿಸಿ ತಾನಾ ಪರಿಯನೆ ಪಡೆದವೊಲೆಸೆದುದು ಸರೋವರಾವರ್ತನಳಿನಮೊಂದಳಿಗರ್ಭಂ (ಅರ್ಧನೇ. ೫-೧೦೩).

[ನಳಿ$_3$ + ನಾಭಿ + ನಳಿನ (= ನಲಿನ)]

ನಳಿನಾರಿ (ನಾ). = ನಳಿನರಿಪು. 'ನಳಿನಾರಿಧರ' ಪರಾ.

[ನಳಿನ (= ನಲಿನ) + ಅರಿ$_3$]

ನಳಿನಾರಿಧರ (ನಾ). ಚಂದ್ರನನ್ನು ಧರಿಸಿದವನು; ಶಿವ : ನಳಿನಾರಿಧರ ನಿಪ್ಪ ಕೈಲಾಸಗಿರಿಯಲ್ಲಿ . . . ಚಳಿವೆಟ್ಟವುಗಳರಸನಂ ಕೂರ್ತು ತವದಿ ಮುನಿಗಳ ಶ್ರೇಷ್ಠ ಮಾರ್ತಂಡ್ಯನಿರೆ (ಪ್ರಾಥಕಾ. ೦೦-೦೮). [ಸಂ. ನಲಿನಾರಿಧರ]

ನಳಿನಿ 'ನಲಿನಿ' ನೋ.

ನಳಿನೀಗರ್ಭ (ನಾ). ಕಮಲದಲ್ಲಿ ಹುಟ್ಟಿದವನು; ಬ್ರಹ್ಮ. 'ನಳಿನೀ ಗರ್ಭಾಂಡ' ಪರಾ. [ಸಂ. ನಲಿನೀಗರ್ಭ]

ನಳಿನೀಗರ್ಭಾಂಡ (ನಾ). ಬ್ರಹ್ಮಾಂಡ; ವಿಶ್ವ : ನಳಿನೀಗರ್ಭಾಂಡಮಾಲಾ ಫಲಿತಮೆನಿಪ ಪೃಥ್ವೀಮಹಾವಲ್ಲಿಯಂ ತಾಂ ಬಳಸಿರ್ದಾವಾಲದಂತಿರ್ದುದು ಜಲಚರಸಂಭೂತಸಂಪದ್ವಿಧಾನಂ . . . ಪ್ರಬಳಳುಳುಳುಳುದ್ಧ್ವನಮಂಭೋ ನಿಧಾನಂ (ಜಗವಿ. ೧-೩೩). [ಸಂ. ನಲಿನೀಗರ್ಭಾಂಡ]

ನಳಿನೀತೀರ (ನಾ). ಕಮಲಗಳಿಂದ ಕೂಡಿದ ಸರೋವರದ ತೀರ.-ದಡ: ನಳಿನೀತೀರಲತಾಗೃಹಂಗಳ ನೆಲಲ್ ನೇರ್ಪಟ್ಟರಲ್ . . . ಎಳನೀರೀಂಟ ಪಥಾರ್ತರಿರ್ಪರಳಿಕೀರಧ್ವಾನದುದ್ಧ್ವಾನದೊಳ್ (ಜಗವಿ. ೯-೮೮). [ಸಂ. ನಲಿನೀತೀರ]

ನಳಿನೀದಳ (ನಾ). ೧. ಕಮಲದಳ; ತಾವರೆಯ ಎಸಳು: ಉಳಿದು ಸುಮಶಯನಮಂ ಮೇಣ್ ನಳಿನೀದಳದಿಂದೆ ರಚಿಸಿದೆದೆಗುಪ್ಪಸಮಂ ಬಳಲಿಕೆಯಂ ತಳೆದಂಗದೆ ನಳಿನಾಂಬಕೆ ನೀನದೆಂತು ಪೋದಪೆ ಬಿಸಿಲೊಳ್ (ಶಾಕುಂತ. ೪೧-೭೩). ೨. ಕಮಲಪತ್ರ; ತಾವರೆಯ ಎಲೆ. 'ನಳಿನೀದಳತಾಳವೃಂತ' ಪರಾ. [ಸಂ. ನಲಿನೀದಲ]

ನಳಿನೀದಳತಾಳವೃಂತ (ನಾ). ಕಮಲಪತ್ರಗಳಿಂದ ತಯಾರಿಸಿದ ಬೀಸಣಿಗೆ: ಬಳಲಿಕೆ ಪಿಂಗುವಂತೆ ನಿನಗಾಂ ನಳಿನೀದಳತಾಳವೃಂತದಿಂ ಸುಳಿಯಿಪೆನೇಂ ಕುಳಿರ್ಮಸಪ ತಂಬೆಲರಂ (ಶಾಕುಂತ. ೪೧-೭೨).

[ನಳಿನೀದಳ + ತಾಳವೃಂತ (= ತಾಲವೃಂತ)]

ನಳಿನೀಪತ್ರ (ನಾ). = ನಳಿನೀದಳ ೨: ನಳಿನೀಪತ್ರಾಂಶುಕಾಚ್ಛಾದಿತಕುಚಯುಗಳಂ ಚಂದನಾಪಾಂಡುಗಂಡಸ್ಥಳಯುಗ್ಮಂ ... ಭೋಂಕನೆ ಪೊಱಮಡು ತಿರ್ದತ್ತು ಕಾಂತಾಕದಂಬಂ (ಕಾದಂಉ. ೨೦೦); ನಳಿನೀಪತ್ರಗತಾಂಬುವೋಲ್ ನಡುಗಿತೀ ವಿಶ್ವಾವನೀಮಂಡಲಂ ... ಭೂಭಾಗಮಂ ಬಳಸಿತ್ತಾ ವಿಜಯ ಪ್ರಯಾಣಜನಿತಂ ಪ್ರಸ್ಥಾನಭೇರೀರವಂ (ಸೂಕ್ತಿಸು. ೧೮-೧೩).

[ಸಂ. ನಲಿನೀಪತ್ರ]

ನಳಿನೀಮಿತ್ರ 'ನಲಿನೀಮಿತ್ರ' ನೋ.

ನಳಿನೀರೇಣು (ನಾ). ಕಮಲದ ಹೂವಿನ ಪರಾಗ,-ಧೂಳಿ: ನಳಿನೀರೇಣುಗಳಂ ಕಟಿಲ್ದಲರ್ಗಳಂ ಕೀರಾಳಿ ನಾದಂಗಳಂ ತಳೆದೆತ್ತಂ ಪಟವಾಸಮಂ ಕೆದಱುತುಂ ... ಇದಿರ್ವಂದತ್ತೊಂದು ಮಂದಾನಿಳಂ (ಜಗವಿ. ೧೪-೫೩).

[ಸಂ. ನಲಿನೀರೇಣು]

ನಳಿನೇಕ್ಷಣೆ (ನಾ).=ನಳಿನದೃಶೆ: ರಜನಿಗಳೈಂದವಬಿಂಬವ್ರಜದಿಂ ಜ್ಯೋತ್ಸ್ನಾ ಪ್ರವಾಹಮಂ ಪಸರಿಪವೋಲ್ ರಜತಕಳಶಂಗಳಿಂ ಮಳಯಜಜಳಮಂ ಸುರಿದರಸಿತನಳಿನೇಕ್ಷಣೆಯರ್ (ಕಾದಂಪೂ. ೭೪).

[ಸಂ. ನಲಿನೇಕ್ಷಣಾ]

ನಳಿನೋದರ (ನಾ). ಹೊಟ್ಟೆಯಲ್ಲಿ ತಾವರೆಯನ್ನು ಉಳ್ಳವನು; ವಿಷ್ಣು: ಜಲಧಿಶಯನ ರವಿಚಂದ್ರವಿಲೋಚನ ಜಲರುಹಭವನುತ ಚರಣಯುಗ ಬಲಿಬಂಧನ ಗೋವರ್ಧನೋದ್ಧಾರ ನಳಿನೋದರ ತೇ ನಮೋ ನಮೋ (ಪುರಂದ. ೩-೪೧-೨).

[ನಳಿನ (= ನಲಿನ) + ಉದರ]

ನಳಿಮೊಗ (ನಾ). ಕಾಂತಿಯುಕ್ತವಾದ ಮುಖ: ಎಳವಿದಿರ ಬಣ್ಣಮೊಳ್ಳಡು ಕಳಶಮನವ್ವಳಿಪ ಮೊಲೆ ಪೊದಟಿಳಸುವ ಬಾಯ್ ಬಳಸುವ ಕಣ್ ಮಿಳಿರ್ವ ಕುರುಳ್ ನಳಿಮೊಗಮೆನೆ ಸೊಬಗಿವಳ್ಗೆ ನಾಟ್ಯರ್ತನಮೇ (ಆದಿಪು. ೪-೪೪).

[ನಳಿ$_2$ + ಮೊಗ]

ನಳು (ನಾ). ತಗ್ಗಾದ ಪ್ರದೇಶ; ಹಳ್ಳ: ಇಡುಕುಱೊಳು ಕುಸಿದು ಹೊದಱಿನೊಳು ನುಸುಳಿ ನಳುವಿ[ಪಾತಾಂ. ಕಪ್ಪಿ]ನೊಳಡಗಿ ನಾಳಲೊಳು ಪೊಕ್ಕು ... ಅದಟುಗೆಟ್ಟು ಬೆಂಡಾದಸುಖಿಗಳನುಗ್ರದಳಲ ಬೇಸಱ ಬೇಗೆ ಗಿಚ್ಚು ವಿಶ್ವಾಮಿತ್ರಮುನಿಯನೆಯ್ದದೆ ಮಾಣದು (ಹಜಕಾ. ೯-೩೩).

[<ನಳಿ$_1$]

ನಳುರವಾಡಿ (ನಾ). ಒಂದು ಊರಿನ ಹೆಸರು: ನಳುರವಾಡಿಯ ಬಯಲೊಳ್ ಕೀರ್ತ್ತಿಮಾರ್ತ್ತಾಂಡದೇವರಿಗೆ ಪಡುವಣಪಡೆಯಿಂ ತೆಂಕಣ ತೆಂಬಡಗಣ ತೆವರಿಂ ಮೂಡಲೈವತ್ತೆರಡು ಗೇಣ ಗಳೆಯಲೊಂದು ಮತ್ತರುಮನ್ ... ಸರ್ವ್ವ ನಮಸ್ಕಂ ಮಾಡಿ ಕೊಟ್ಟನ್ (ಎಕ. VIII, ಸಾಗರ. ೧೦೯-೬೨; 1042). [? + ವಾಡಿ$_1$ (<ಪಾಡಿ$_2$)]

ನಳುಹು (ನಾ). ಬಾಗಿರುವಿಕೆ; ಡೊಂಕು; ವಕ್ರತೆ: ನಳಿಗೆಯೊಳ್ ನಾಯ ಬಾಲವನು ಕಟ್ಟಲ್ತನ್ನ ನಳುಹ ಬಿಡದಂತೆ (ಸಮ್ಯಕಾ. ೦೦-೧೨).

[<ನಳಿ$_1$ + -ಹು$_2$]

ನಳೆಯಿಸು (ಕ್ರಿ). ನಡೆಸು; ಮುಂದುವರಿಸು: ಈ ಶ್ರೀಧರ್ಮಂ ನಳೆಯಿಸಿದಾತಂ ತುಳಾಪುರುಷವಿಟ್ಟು ಅಸ್ವಮೇಧಂಗೆಯ್ವ ಫಲಮನೈದುವಂ (ಎಕ. XI, ಚಿತ್ರದು. ೭೪-೩೨; 968).

[P ಇದು 'ನಡೆಯಿಸು' ಎಂಬುದರ ಅಪಲಿಖಿತವಿರಬಹುದು]

ನಳ್ಗಿಸು 'ನೆಗ್ಗಿಸು' ನೋ.

ನಳ್ಗು 'ನಱುಂಕು' ನೋ.

ನಳ್ಳಿ$_1$ (ನಾ). ಹತ್ತುಕಾಲಿನ, ಗಡಸುಚರ್ಮದ ಒಂದು ಬಗೆಯ ಸಣ್ಣ ಜಲಚರ ಪ್ರಾಣಿ; ಎಸಡು; ಏಡಿ: "ಊರ್ಧ್ವದೃಕ್-ನಳ್ಳಿ" (ಓಷಧಿ. ೧೭); ಲಿಂಗನಿಷ್ಠಾಂಗಿ ವಚನವ ಹಾಡಿದರೆ ಒಪ್ಪುವರಲ್ಲದೆ ಲಿಂಗನಿಷ್ಠಾಹೀನರು ಓದಿ ಹಾಡಿದರೆ ನಳ್ಳಿ ಗುಳ್ಳೆಯ ತಿಂದ ನರಿ ಹಳ್ಳದ ತಡಿಯಲ್ಲಿ ಬಳ್ಳಿಟ್ಟು ಬಗುಳಿದಂತೆ ಏನೆಂದೂ ಪಾಟಮಾಡರಯ್ಯಾ (ಸಿದ್ಧೇವ. ೭೫-೨೧೯); ಭೂನುತ ಭುಜಬಲರಿದ್ದು ಗೆಲಲು ಬಾರದೀ ನಳ್ಳಿ ಗುಳ್ಳೆ ಮೀನುಗಳ ಸೇನೆ ವಿಡಿದು ಗೆಲ್ವೆನೆಂದು ಹೊಕ್ಕೆಯಲಾ ಈ ನೀರ ನಡುಮಡುವಿನೊಳು (ನೇಮಿಸಂ. ೩೦-೮೩); ತಾಯಿನಳ್ಳಿಯ ಒಡಲನ್ನು ಅದರ ಮರಿಗಳು ಸೀಳುವುದರ ಹಾಗೆ ಈ ಅಂಬುಗಳು ನನ್ನ ಪ್ರಾಣವನ್ನು ಸಂಕಟಪಡಿಸುತ್ತಿವೆ (ವ್ಯಾಸಜಿ. ೩೬೨); ಶೀಗಡಿ, ನಳ್ಳಿ, ಏಡಿ ಮತ್ತು ಅವುಗಳ ಸಂಬಂಧಿಗಳಿಗೆ ೫ ಜೊತೆ ಕಾಲುಗಳು (ಕೀಟಬೆ. ೦೫); ಸಮುದ್ರದ ನಳ್ಳಿಯ ಪಲ್ಯ ... ಬೆಣ್ಣೆ – ರುಚಿರುಚಿಯಾದ ಈ ಭಕ್ಷ್ಯಗಳು ಮೇಜಿನ ಮೇಲಿದ್ದುವು (ಪುನರು. ೦೦೮); ದೂರದರ್ಶಕದಲ್ಲಿ ನೋಡಿದರೆ ಈ ಗುಚ್ಛಗಳು ಅನೇಕ ವೇಳೆ ಕಿರೀಟಗಳಂತೆಯೂ ಮೀನುಗಳಂತೆಯೂ ನಳ್ಳಿಗಳಂತೆಯೂ ... ಮೆರೆಯುತ್ತಿರುವುವು (ಜ್ಯೋತಿರ್ವಿ. ೭೪); ನಳ್ಳೀ ರಾಗಕ್ಕೆ ನರಿ ತಲೆ ತೂಗಿದ ಹಾಗೆ (ಗಾದೆ).

[ದೇ.॥ ತಮಿ. ನಳ್ಳಿ, ನಳಿರ್, ಞಣ್ಟು, ಞಿಣ್ಟು, ನಣ್ಟು; ಮಲ. ಞಣ್ಟು, ನಣ್ಟು]

ನಳ್ಳಿ$_2$ 'ನಲ್ಲಿ$_1$' ನೋ.

ನಳ್ಳಿಕೈವಾರ (ನಾ). ಬಾಗಿರುವ ಕೈವಾರ; ಬಗ್ಗಿರುವ ವೃತ್ತರೇಖಕ: "ಕೀಲು ಹಾಕಿ ಅಳವಡಿಸಿರುವ ತೋಳುಗಳುಳ್ಳ ಕೈವಾರ; ಬಿಲ್ಲು ಕೈವಾರ; ನಳ್ಳಿಕೈವಾರ" (Bows, Bow-Compass(es). ಇಂಕನಿ).

[<ನಳ್ಳಿ$_1$ + ಕೈವಾರ$_2$ (<ಕೆಯ್ವಾರ$_2$)]

ನಳ್ಳಿಮೂಗು (ನಾ). ಡೊಂಕಾದ ಮೂಗು; ವಕ್ರವಾದ ನಾಸಿಕ: ಬಾತಕೆಕ್ಕೆಯ ಬಲುಮಕ್ಕರಿಹೊಟ್ಟೆಯ ಓತಿದಲೆಯ ಕೀನದನಿಯ ನಾತ ವಡೆದ ತನುವಿನ ನಳ್ಳಿಮೂಗಿನ ಭೂತವೆ ನಡೆತಪ್ಪಂತೆ ಮನೆಗೆ ಬರಲು (ನೇಮಿಸಂ. ೭-೦೦೫). [<ನಳ್ಳಿ$_1$ + ಮೂಗು$_1$]

ನಳ್ಳಿಸು (ಕ್ರಿ). ತಗ್ಗು; ಬಗ್ಗು; ಬಾಗು: ಪಡೆಯ ಭಾರವ ತಾಳಲಾಱದೆ ಘಣಿಪತಿ ಪೆಡೆಯ ಪಲ್ಲಟಿಸಿ ಕಮಠನ ನಡುಬೆನ್ನು ನಳ್ಳಿಸೆ ನಲವಿಂದ ಕುವರನಂದೊಡನಿಕ್ಕಿದನು ಧಾಳಿಯನು (ಕುರಾಸಾಂ. ೦೦-೩೦).

[<ನಳ್ಳಿ$_1$ + – ಇಸು$_3$]

ನಳ್ಳು (ನಾ). ಒಂದು ಬಗೆಯ ಜೊಂಡು; ನಾಣಲು. 'ನಳ್ಳುನೆಲ', 'ನಾನಲ್' ಪರಾ.

ನಳ್ಳುನೆಲ (ನಾ). ಜೊಂಡು ಬೆಳೆದಿರುವ ಪ್ರದೇಶ; ನಡ್ವಲ: "ನಡ್ವಳಂ ನಳಯುತಂ ನಳ್ಳುನೆಲನಕ್ಕು" (ಮಂಗರಾ. ೨೮-೨). [ನಳ್ಳು + ನೆಲ]

ನಳ್ಳುಶಿಲೆ (ನಾ). (?): ಅಲ್ಲಿಂದಂ ದಕ್ಷಿಣವಾಗಿ ಹೊಕ್ಕ ಓಲೇಹಳ್ಳಿ ಬೇವಿನ ಹಳ್ಳಿ ಪೊಂನಾಪುರ ಮುಗ್ಗಡ್ಡೆಯಲ್ಲಿ ವಾಮನಮುದ್ರೆ ನಳ್ಳುಶಿಲೆ (ಎಇ. XIV, ೨೨೯-೨೯೬; 1551). [? + ಶಿಲೆ]

ನಱಕು 'ನಱುಂಕು' ನೋ.

ನಱವಾಡಿ (ನಾ). ಒಂದು ನಾಡಿನ ಹೆಸರು: ಶ್ರೀಮನ್ಮಹಾಮಂಡಳೇಸ್ವರ ಬಿದ್ದಣಚೋಳಮಹಾರಾಜರು ಕನ್ನೆಮೂನೂಱುಂ ಪೆಡಕಲ್ಲೆಂಟುನೂಱು

ನಱವಾಡಿಯಯ್ನೂಱಮಯಜೆ ಮುನೂಱುಮಿನ್ತು ನಾಲ್ಕುಂ ನಾಡುಮಂ ದುಷ್ಟನಿಗ್ರಹಂ ವೀಶಿಷ್ಟಪ್ರತಿಪಾಳನಂ ಗೆಯ್ದು ಬಿಡವಿತ್ತಿಯಿನಾಳುತ್ತುಂ (ಕಇಅ. ೧೧೭-೨೨-೦೮ : 1073). [? + ವಾಡಿ$_1$ (<ಪಾಡಿ$_2$)]

ನಱಿಬ್ಬೆಗವುಂಡಿ (ನಾ). ಒಬ್ಬಾಕೆಯ ಹೆಸರು : ತವುದಟ್ಟಿಗೆ ನಱಿಬ್ಬೆಗವುಣ್ಡಿಯ ಮಗ ಅಮ್ಮನ್ನಗವುಣ್ಡ ತನ್ನೂರಟಿವ ಕಂಡು ಕೆಱೆಪಳೆ ತಱಿಸಂನ್ದು ಸ್ವರ್ಗ್ಗಕ್ಕೆ ಸಂದನ್ (ಎಕ VIII, ಸೊರಬ. ೨೬೪-೯ ; 999).
[? + ಗವುಂಡಿ (<ಗಾವುಂಡಿ)]

ನಱಿಲಕೆಱೆ (ನಾ). ಒಂದು ಕೆರೆಯ ಹೆಸರು : ಅಪ್ಪಣಭಟ್ಟರು ಪಾದ ಪೂಜೆಗೊಟ್ಟ ದೇಸಿಗ ಪ್ರವಾಸಿಗರಾಹಾರಸತ್ರಕ್ಕೆ ದೆವಸಲುಂ ಬ್ರಾಹ್ಮಣರುಣ್ಬಂತಾಗಿ ನಱಿಲಕೆಱೆಯ ಕೆಳಗೆ ಕಚ್ಚವಿಯ ಗಡಿಂಬದಲು ಬಿಟ್ಟ ಗಟ್ಟೆ ಕಮ್ಮ ಅಯ್ವತ್ತು ೫೦ (ಎಕ. VII, ಶಿಕಾರಿ. ೧೬-೨೨ ; 1085). [? + ಕೆಱೆ]

ನಱು, ನರು (ನಾ). ೧. ಕಂಪು ; ಪರಿಮಳ ; ಸುವಾಸನೆ ; ಸೌರಭ. "ನಱು ಸೊವಡು ಕಂಪು ನಾತಂ . . . ಸೌರಭ್ಯಮಕ್ಕು" (ಕವಿಕಂ. ೯೬) ; "ಸೌಸವಂ, ನಱು, ಕಮ್ಮಿತು, ಸೊವಡು, ಕಂಪು, ನಾತಂ, ಮಗಮಗಿಸು – ಈ ೭ ಪರಿಮಳಕ್ಕೆ ಪೆಸರ್" (ಕಶಸಾ. ೫೪-೧೬೭). 'ನಱುವಂಡು', 'ನಱುಸುಯ್' ಪರಾ. (ಗು). ೨. ಕಂಪಿನಿಂದ ಕೂಡಿದ ; ಪರಿಮಳಯುಕ್ತವಾದ : ಸುರಗಿ ಸುರಹೊನ್ನೆ . . . ಸರಸಿರುಹ ಕುಮುದ ಪಾದರಿ ನಱುಸೇವಂತಿಗೆಯ ಹೂವಿನಂಗಡಿಯೆಸೆಗುಂ (ದಶಾವ. ೫-೫೨). ೩. ರಸವತ್ತಾದ ; ರಸಪೂರ್ಣವಾದ. 'ನಱುಗಬ್ಬು' ಪರಾ. ನರು : ೧. "ನರು ಯೆನಲ್ಕೆ ಪರಿಮಳ" (ಕಶರ. ೫೩). ೨. 'ನರುಗಂಪು' ಪರಾ.
[ದೇ.॥ ತಮಿ. ನಱ, ನಱವು, ನಱಾ, ನಱೈ; ಮಲ. ನಱು]

ನಱುಂಕು, ನಗ್ಗು$_1$, ನರಿಕು, ನರುಕು, ನಳ್ಗು, ನಱಿಕು, ನಱುಕು, ನೆಕ್ಕು$_2$, ನೆಗ್ಗು$_1$, ನೆರ್ಗು, ನೆಳ್ಗು, ನೆಟ್ಗು (ಕ್ರಿ). ೧. ಬೆಳವಣಿಗೆ ಕುಂಠಿತವಾಗು ; ನರಚಲಾಗು : ತುಱುಗಿ ತಳಿರ್ತು ಪೂತು ಫಲಮಾದೆಲೆಯಿಕ್ಕಿ (ಕ್ಕ)ದ ಕೊಂಬುಗಳ್ ನೆಲಕ್ಕೊಱಗಿದ ನುಣ್ಬುವೆತ್ತ ಮರನುಳ್ಳೆಡೆಯೊಳ್ ಜಳಮಕ್ಕುಮಲ್ಲಿಯೆಂದಱಿವುದು ತಾಱಿದಂಕಿದ ನಱುಂಕಿದ ಕೊಂಬೊಣಗಿರ್ದ ಪೊಟ್ಟೆವೋದೊಱಗಿದ ವೃಕ್ಷದಿಂದಱಿವುದಾಯೆಡೆಯೊಳ್ ಜಳಮಾಗದೆಂಬುದಂ (ಲೋಕೋಪ. ೫-೪). ನಗ್ಗು$_1$: ೨. ಕುಗ್ಗು ; ಕುಸಿ : ಅಗ್ಗಿಸಿದೊಡೆ ದಿಟವೆಂದೆಗ್ಗಱಿಯದ ನಗ್ಗದ ಹೆಗ್ಗರು ನುಗ್ಗುಗಳಂ ಬಗ್ಗಿಸಿ (ವೀರೇಚ. ೨-೨೭) ; ನಗ್ಗಿದವು ದಿಗ್ಗಜಂ ಜರ್ಜಿದುದು ಕಚ್ಚಪಾಂಗಂ (ಜಿಬಪು. ೨೮-೦೧). ೩. (ಪಾತ್ರೆ ಮುಂತಾದುವು) ಜಜ್ಜಿ ತಗ್ಗಾಗು,–ತಗ್ಗುಬೀಳು : ನಗ್ಗಿಹೋಗಿರುವ ಪಾತ್ರೆಗಳನ್ನೆಲ್ಲಾ ಸರಿಮಾಡಿಸಬೇಕು (ರೂಢಿ). ೪. ಪೆಟ್ಟುಬೀಳು : "ನಗ್ಗು = ಪೆಟ್ಟು ಹತ್ತು ; ಹೊಡತ ಬೀಳು" (ಜಾನಕೋ. ೯). ೫. ಕೆಳಕ್ಕೆ ಹಾರು : "ಧುಮುಕು, ಬೀಳು, ನೆಗೆ, ನಗ್ಗು, ಹಾರು, ಜಿಗಿ, ಎಗರು, ಎರಗು" (ಕಂನುಹು. ೮೬). ನರಿಕು : ೬. ಅರೆ ; ಜಜ್ಜು ; ಕುಟ್ಟು ; ಚಚ್ಚು : ಯಾರೋ ತಿಪ್ಪಾರೆಡ್ಡಿಯೆಂಬುವನನ್ನು ಆ ಹಿಂದಿನ ದಿನ ಅಲ್ಲಿ ಹೇಗೆ 'ನರಿಕಿ' ಹಾಕಿದರೆಂಬ ಪ್ರಸಂಗಕ್ಕೆ ಮೊದಲಾಗುವುದರೊಳಗಾಗಿ ಮಳೆಯ ಜೋರು ಸ್ವಲ್ಪ ಕಡಿಮೆಯಾಯಿತು(ಪಂಯಾತ್ರೆ. ೪೩). ನರುಕು : ೭. ಅಗಿ ; ಜಗಿ ; ನುಣ್ಣಗೆ ಮಾಡು ; ಮೆಲುಕಾಡಿಸು : ಕೆಲವರು ಸೂರ್ಯಕಾಂತಿಯ ಬೀಜಗಳನ್ನು ನರುಕಿ ತಿನ್ನುತ್ತಿದ್ದರು (ಪುನರು. ೪೬೯). ೮. ಕತ್ತರಿಸು ; ಚೂರುಮಾಡು : ಅಡಕೆಯನ್ನು ನರುಕು (ರೂಢಿ). ನಳ್ಗು : ೯. ಇಲ್ಲವಾಗು ; ಕಾಣದಂತಾಗು. 'ನಳ್ಗಿಸು' ಪರಾ. ನಱಿಕು : ೧೦. ಒತ್ತು ; ಅದುಮು : ತೊರೆದ ಮೊಲೆಯ ನಱಿಕುತೆ ಚೆಲ್ಲೆಕಣ್ಣೊಳು ಸುರಿವ ಸಂತಸಗಂಬನಿಗಳ ಒರಸುತೆ. . . ತರಳನ ಬಿಗಿಯಪ್ಪಿದಳು ಮಾತೆ (ತ್ರಿಭುತಿ. ೨೬-೩೦). ನಱುಕು : ೨. ತೊಗಲು ಸಡಲಿದ ಗಲ್ಲ ಬತ್ತಿದ ಹೆಗಲು ನಱುಕಿದ [ಪಾಠಾಂ. ನಲುಗಿದ] ನರೆತ ಮೀಸೆಯ ಜಗುಳ್ದ ಹಲುಗಳ . . . ಮುಪ್ಪಿನ ಮುಗುದನೀತನ ಕಾದ ಹೇಳಿದು ನಗೆಯ ಸುರಿದೈ ರಾಯ (ಕುವ್ಯಾಭೀ. ೧-೩೫). ೭. ಅಱುಚುವ ಮೇಕೆಗಳಂಬೆಗರೆವ ಗೋವು ನಱುಕುತೆಯ್ದುವ ಮಹಿಷಿಗಳು (ನಾಗಕು. ೦೫-೫೫). ನೆಕ್ಕು$_2$: ೧೧. ಒಳಸೇರು ; ಗುಳಿಬೀಳು ; ಹಳ್ಳವಾಗು ; ತಗ್ಗಾಗು : ಮಕರಂ ಬಾಯ್ದೆಱೆದಂದದಿಂ ತೆಱದ ಬಾಯ್ ಪೇಟಿರ್ದ ಕೂರ್ದಾಡೆ ನೆಕ್ಕ ಕದಂಪೆತ್ತಿದ ಪುರ್ವು . . . ಭಯದಮಾಯ್ತಾ ರಾಕ್ಷಸೀ ರೂಪಕಂ (ಕಾವ್ಯಾವ. ೮೨೨) ; ಪೆಱೆ ನೊಸಲಾಗೆ ನೆ[ಪಾಠಾಂ. ನೊ]ಕ್ಕ ನೊಸಲೊಳ್ನಿಲೆಯಪ್ಪೊಡಲಾಗೆ ನಿಟ್ಟೊಡಲ್ನಿಱಿದಲೆಯಾಗೆಯೊಪ್ಪುದಲೆ. . . ಪೂತನಿ ಗೋಪಿಪೊಲಾಗೆ ಬೇಗದಿಂ ಬಂದು (ಅರ್ಧನೇ. ೭-೭೦); ನೆಕ್ಕ ಕದಂಪು ಕಂಪಿಪಧರಂ ಮಿಗೆ ಕೆಂಪಡರ್ದಕ್ಷಿ . . . ಮರುಳ್ವಕ್ಕದ ನಿಟ್ಟೊಡಲ್ ಮಸೆದ ಕತ್ತಿಗೆ ಕಣ್ಬೊಲನಾದುವೆತ್ತಲುಂ (ವರ್ಧಪು. ೦೫-೩೮). ನೆಗ್ಗು$_1$: ೨. ಬಲಭಾರಕ್ಕೆ ನೆಗ್ಗಿದುದಾ ರಣಭೂಮಿ (ತ್ರಿಪುಸಾಂ. ೩೦೫) ; ಕಚ್ಚಪಂ ನೆಗ್ಗಿದನುರಗಪತಿ ಕುಗ್ಗಿತು (ಬಸಪು. ೨೮-೫೬) ; ಆಳುಕಿತೀ ನಮ್ಮವಾಂ ಭೀಮನ ಸುಳಿವಿನಲಿ ಸೊಪ್ಪಾದೆವರ್ಜುನನೆಳತಟಕೆ ನಿಲವೆಂತೆನುತ ನೆಗ್ಗಿದುದು ದುಗುಡದಲಿ (ಕುವ್ಯಾಕ. ೦೮-೩೫) ; ವೆಗ್ಗಳವಾಗಿ ಸೇನೆಯ ಕೊಂಡು ಹೋಹುದು ಮೊಗ್ಗಾಗಿ ನಡೆದು ಗೆಲ್ಲುವುದು ನೆಗ್ಗಿಹುದವರಿಗಾಗಳೆ ಕಿಚ್ಚ ಕಂಡೆದೆ ಭೊಗ್ಗನಿನ್ನೆಯ್ದಿ ನೀವೆಂದ (ಧರಜ. ೩೦-೫) ; ಕರಿಘಟೆಯ ಮೊಗ್ಗರಂ ವರ ಸರೋವರ ಸಲಿಲಪಾನಕಿಳೆ ನಗ್ಗಿದಲ್ಲದೆ ಮಾಣದೆಂಬಿನಂ ಪೊಳಲ ಪೊಱಮಟ್ಟು ಬಂದವುದು (ಜೈಮಿಭಾ. ೩-೩೮) ; ನೆವವಿಲ್ಲದೆ ನೆಗ್ಗಿ ನೆಲಕಿಳಿದೊಱಲದೆ ಸವನಿಸುವುದು ಸಂತಸವನು (ಹದಿಬ. ೩-೨೪) ; ನಾಗೇಂದ್ರ ಕೂರ್ಮರ ಹೆಗಲುಗಳು ನೆಗ್ಗಿದವು (ಉತ್ತಕ. ೬-೪೭). ೩. ಬಂಗಾರದ ಪಾತ್ರೆಯನ್ನು ಒಮ್ಮೆ ಸಿಟ್ಟಿನಿಂದ ಎತ್ತಿ ಹಾಕಿದರೂ ಅದು ಒಡೆದು ಹೋಗುವದಿಲ್ಲ ; ಸ್ವಲ್ಪ ನೆಗ್ಗುವದು(ನೀಗಟ್ಟು. ೧೦೭). ೬. ಪಿಡಿದೊತ್ತಿಯೊದೆದೆಲುವ ನೆಗ್ಗಲಾ ಕಾಲದೊಳು (ವೀಶೈಪು. ೩-೧೪-೩೧) ; ನೆಗ್ಗಲೋ ಬ್ರಹ್ಮಾಂಡವುಂ ಬ್ರಹ್ಮನೆಲುಗಳಂ ನುಗ್ಗಮಾಡಲೋ (ಜಿಬಪು. ೩೦-೦೧) ; ಆ ಆನೆ ಭೀಮ ಸೇನನ ಮೇಲೆ ಹಾಯ್ದು ಅವನ ರಥವನ್ನು ಕುದುರೆಗಳನ್ನು ನೆಗ್ಗಿ ಪುಡಿ ಮಾಡಿಬಿಟ್ಟಿತು (ವ್ಯಾಸಜಿ. ೩೮೧) ; ಹಿಡಿಂಬಾಸುತನು ಅವರನ್ನು ಲೆಕ್ಕಕ್ಕೆ ತಾರದೆ ನುಚ್ಚುನುರಿಯಾಗಿ ನೆಗ್ಗಿ ನಾಶಮಾಡಿದನು (ಭಾಮಜಿ. ೧೮). ೯. ಕೃತಾಂತನ ದಾಳಿಗೆತ್ತಣ ವೀರವೋ ನೆಗ್ಗಿದವುನೆ ನಹುಗಳು (ಕುವ್ಯಾದ್ರೋ. ೨-೩೨) ; ಮನದ ಮದದಕ್ಕಱಿನ ವಿಷಯದ ನೆನಹು ನೆಗ್ಗಿತು . . . ಉದಿಸಿತವಳಾನನದಲಧಿಕಕ್ರೋಧಶಿಖಿ ಸಿಡಿದೊಗುವ ಕಿಡಿಗಳಲಿ (ತೊರರಾ. ೩-೪-೨೪) ; ಏಱಿದನೊಡನೆ ಮುಂದರತಿ ಶೋಕಾದಿಯಾದಾಱು ಕಷಾಯ ನೆಗ್ಗಿದುವು (ಧರಜ. ೭೭-೬೬). ೧೧. ಬಿಡೆ ಬಾದುಗೆಯ್ದೊಡರಿಸುವ ತಮ್ಮ ಕಡುಪಿಂದೆ ಓರೋರ್ವರಂ ತಿವಿಯೆ ನೆಗ್ಗಿರ್ದ ಕದಪಿಂದೆ ಹಾಸ್ಯ ಬೀಭತ್ಸಾದಿ ನಾನಾರಸಂಗಳಿಂದೊಂದಿದ ಜರದ್ದ್ರವಿಳ ಧಾರ್ಮಿಕ ಜನಂಗಳಿಂ (ಕಾದಂಉ. ೨೭೧) ; ದೌಡೆಗಳು ನೆಗ್ಗಿರೆ ದಂತಗಳುದುರಿವೊಡದು ರಕ್ತವು ತೋರುತಿರೆ (ಕೊಲ್ಲಿಮಾ. ೮೭-೧) ; ಮುಗ್ಗಿ ಬೀಳುತ ಮತ್ತೆ ನೆಲ ತಾಂ ನೆಗ್ಗಲೋಡುತ (ದೇವಪು. ೦೪-೧೦೦) ; ೧೨. ಪುಡಿಯಾಗು ; ಚೂರಾಗು : ಮೊದಲ ಲಗ್ಗೆಗೆ ಮೂಱುಸಾವಿರ ತೇರು ನೆಗ್ಗಿದವೊಂದು ನಿಮಿಷದಲಿ (ಕುವ್ಯಾಭೀ. ೮-೪೮) ; ಸೀಸಕ ಸಿಡಿಯಲು ವಜ್ರಕವಚ ನೆಗ್ಗಲು ವಾಹಕರು ಬವರದೊಳಿಱಿದಾಡಿ ಮಡಿದರು (ಕುರಾಸಾಂ. ೦೨-೧೦೦) ; ಸಿಡಿದ ಹುಬ್ಬಿನ ಕಡಿದ ತೋಳ್ಗಳ ನೆಗ್ಗಿದೆಲುಗಳ . . . ಒಡೆವ ನೆತ್ತಿಗಳಿಂದ ರಕುತದ ಮಡು ಹರಿಯೆ (ನಳಜ. ೯-೨೭) ; ಮಗ್ಗಿದುದು ಕುದುರೆ ಸಾರಥಿ ಮಡಿದನಾ ರಥಂ ನೆಗ್ಗಿದುದು (ಜೈಮಿಭಾ. ೭-೪೬). ೧೩. ಕುಂದು ; ಕಡಿಮೆಯಾಗು ; ಕ್ಷೀಣಿಸು : ನೆಗ್ಗಿದಾಳ್ತನ ದೆಸಕದೊಣಗಿಲ ಬಾಯ ಭೂಷನ ಕಂಡನಾ ದ್ರೋಣ (ಕುವ್ಯಾದ್ರೋ. ೫-೨೦);

ಕಾಮುಕತ್ವದ ನೆನಹು ನೆಗ್ಗದೆ ಪೂಣದೆಂದಸುರೇಂದ್ರನಳವಳಿದ (ತೊರಣಾ. ೬-೨೬-೯) ; ಸೆರೆ ಬಿಗಿದು ಗಂಟಲು ಗದುಗದಿಸಿ ನುಡಿ ನೆಗ್ಗಿ ತನು ನಡುಗಿ . . . ಕಣ್ಣಲಿ ನುಂಗುವಂತಿರಲಗನಿವಾಱದುನೀಕ್ಷಿಸುತ್ತಿಂತೆಂದನಾ ದಕ್ಷ (ನಿಧಾಗ. ೪-೪-೪) ; ಬಗ್ಗಿದ ತಲೆಯ . . . ನೆಗ್ಗಿದ ಧೈರ್ಯದ ನಿಜತನಯನ ಕಂಡು ಕುಗ್ಗಿದಳಿದೆಯೊಳು ಕುಂತಿ (ಕರ್ಣಪ. ೬-೨) ; ಅಂದವುಳ್ಳವನೆ ನಿನ್ನಧಟು ನೆಗ್ಗಿದವು (ಕಂಗ. ೮೨-೭). ೧೪. ಮುಂದುರಿಕೊಳ್ಳು ; ಸಂಕುಚಿಸು : ತಳಿತ ಚಿಂತೆಯ ಬಾದಿಪಾಸ್ಯದ . . . ನೆಗ್ಗಿದಂಗದ ನಟ್ಟ ದೃಷ್ಟಿಗಳ ಬಲಿದ ಭೀತಿಯ ಕುತ್ಕುದಲೆಗಳಲಿಳೆಯ ಪತಿಗಳು ಸತಿಯ ಬಯ್ಕುತ ಮುಳಿಯುತಿರ್ದರು ತತ್ಕುಮಾರನಿಗಧಿಕ ರೋಷದಲಿ (ಚೀವಂಚಿ. ೯-೦೮) ; ನೆಗ್ಗಿದವಯವದ ಅಗಿಯಲಲುಗುವ ತಲೆಯ ಮುಪ್ಪಿನ ಮುಗುದ ನೀತನ ಕಾದ ಹೇಳಿದು ನಗೆಯ ಸುರಿದೈ ರಾಯ ಕಟಕದೊಳೆಂದನಾ ದ್ರೋಣ (ಕುವ್ಯಾಭೀ. ೧-೩೫) : ಶಿವನ ವೆಲ್ಲಡಿ ಸೋಂಕಲೊಡನೆ ಕೌಂತೇಯ ನವಯವವೆಲ್ಲ ನೆಗ್ಗಿ ಮೈಮಱಿದು ಚೇತರಿಸಿ ಕಣ್ಣೆವೆದೆಱಿದು ನೋಡಿ (ಚಿಬಪು. ೩೩-೩೭). ೧೫. ಕಡಿಪೆಮಾಡು ; ತಗ್ಗಿಸು : ಬ್ರಿಟಿಷರ ಆಡಳಿತವು ಪ್ರಾರಂಭವಾದ ಮೇಲೆ ಗ್ರಾಮಪಂಚಾಯಿತಿಗಳ ಪ್ರಾಬಲ್ಯವನ್ನು ಆಗಲೇ ಸೂಚಿತವಾದಂತೆ – ನೆಗ್ಗಿದರು (ಕ್ರಿಯಾಶಿ. ೦೦೭) ; ಬನ್ನಿ ಕನ್ನಡ ನಾಡ ಗಡಿಮೂಲೆಯಿಂದ, ಹಳ್ಳಿಪಟ್ಟಣಗಳಿಂದ, ಸುಗ್ಗಿಗಾಳಿಗೆ ಹಿಗ್ಗಿ ಬೆಳ್ಗೊಡೆಗಳನ್ನು ನೆಗ್ಗಿ ನುಗ್ಗಿ ಬಹ ಬೂರಲದ ಮಾಲೆಯಂದ (ಪಡಬಂ. ೬೨-೪). ೧೬. ಇಲ್ಲವಾಗಿಸು ; ಇಲ್ಲದಂತೆ ಮಾಡು : ಮೃದ್ವಧುವಿತ್ತ ದಾಸೆಗಳ ನೆಗ್ಗಿದುದೆ ವೈರಾಗ್ಯಮೆಂಬರು (ಗಗಶಾ. ೦೬-೨೪). ೧೭. ಹಳ್ಳವಾಗಿಸು; ತಗ್ಗುಮಾಡು : ತುಳಿದರೆ ಭೂಮಿ ನೆಗ್ಗುವ ದಂತಿ ಹೊಸ ವಜ್ರ ಹಳಿವೆತ್ತ ರಥವಾಜನಿಚಯ ತಳಿತ ಕೋರಿತದ ಪೊಂಬೆಳಗಿನ ಭಟರು ಸಂದಳಿಸಿತು ಖಳರಾಯನೊಡನೆ (ಪೋಹತ. ೪೦-೬) ೧೮. ಬಾಗು ; ಬಗ್ಗು : ಮೊರೆದಿರಗುವ ಭೃಂಗಾವಳಿಯಡಿಯಿಂ ನೆಗ್ಗಿದ ಮಾವಿನ ಕೊನರಿದನೆ ಋತುಗೆ ಮಂಗಳಮೆಂಬಿಂ (ಶಾಕುಂತ. ೬೯-೦೬೩). ೧೯. ನಾಶಮಾಡು ; ಧ್ವಂಸಮಾಡು ; ಹಾಳುಮಾಡು : ಇಪ್ಪತ್ತೈದು ಸಾವಿರ ಬಾರ್ವಾಕರಂ ನೆಗ್ಗಲೊತ್ತಿ, ಆಪ್ರತಿಮ ಶಿವಗಣಂಗಳ ಮಹಾತ್ಮೈಯಂ ಮೆಱಿದಾತ ನಮ್ಮ ಬಸವಯ್ಯನು (ಸೀಲಶ. ೬-೪) ; ಮುಗ್ಗದಿರು ಮಾಯೆಯಲಿ ಮದದಲಿ ನೆಗ್ಗದಿರು . . . ಹಿಗ್ಗದಿರು ಹೊಗಳಿಕೆಗೆ ಮನದಲಿ ಪಾರ್ಥ ಕೇಳೆಂದ (ಕುವ್ಯಾಅ. ೪-೩೪); ದಾನವರ ಥಟ್ಟಣೆಯ ಕೀಲಣದಾ ನಗರಿಯನು ನೆಗ್ಗಿ [ಪಾಠಾಂ. ನುಂಗಿ] ದಂತಿರಲೀ ನಿಘಾತದ ಸೇನೆ ಮುಱಿದುದು ಭಟನ ಭಾರಣೆಗೆ (ಕುವ್ಯಾಕ. ೦೩-೦೩) : ಪೊಯ್ದಾಡಿ ರಿವುಸೈನ್ಯಕಾನನವನು ನೆಗ್ಗಿದ ರ್ನೆಲೆಗೆಡಿಸಿ (ಜೈಮಿಭಾ. ೪-೩೪) ; ಆದು ಸಕಲ ಸಚರಾಚರವನು ನೆಗ್ಗುತ್ತ ಬರಲ್ಬೆದರಿಯಾಲೋಕ ಶಿವಶಿವಯೆಂದು ಮೊರೆಯಿಡಲ್ (ಚಕುಪು. ೩-೩-೧೯) ; ಅವನನ್ನು ನೆಗ್ಗಬೇಕೆಂದು ದೃಢಸಂಕಲ್ಪ ಮಾಡಿದರು (ಹೃಮು.ಹ. ೪೮). ೨೦. ಒಡೆ ; ಮುರಿ : ಬಳಿಕ ಬಳೆಗಳನ್ನು ನೆಗ್ಗಿ ಹೆಣ್ಣುಡೆಯನ್ನು ತೊರೆದು (ಕಸಾಚಿ. ೯೦). ೨೧. ಪುಡಿಯಾಗು ; ಚೂರಾಗು: ಪಳುಕಿನಱಿ ನೆಗ್ಗಿದವು ವಜ್ರದ ಹಳಿಯ ಹೊಯ್ಲುಗೆ (ತೊರಣಾ. ೫-೭-೦೭) ; ತುಳಿದೊಡೆದ ಮಣ್ಣ ಕಪ್ಪರದಂತೆ ನೆಗ್ಗಿದುದು ಕೂರ್ಮ ಖರ್ಪರಂ (ಚಿಬಪು. ೪೮-೫). ೨೨. ಮುಂರಿದು ಬೀಳು ; ಕತ್ತರಿಸಿಹೋಗು: ಸವಡಿಮರ ನೆಗ್ಗಿದುವು ಗಡ (ಕುವ್ಯಾಸ. ೦೦-೦೩) ; ಭರದ ಬವರದಲಚ್ಚು ನೆಗ್ಗಲು ಕರವ ಸಲಿಸಿಯೆ ತೇರ ನಡೆಸಿದಳರಸಿ (ಕಾತಿರಾ. ೦-೩೬) ; ನೆಲೆವಾಡಗಳು ನೆಗ್ಗಿದವು ಮಾಳಿಗೆಗಳಂದೊಲೆದವು . . . ರಿವುಭವನದೊಳಾ ವಾಜವೊಲಿದು ರಾಮಗೆ ಕೈಸೇರೆ (ಕುರಾಸಾಂ. ೯-೦೦೮). ೨೩. ಹಾಳಾಗು ; ನಾಶವಾಗು: ದ್ಯೂತಮೃಗಯಾವ್ಯಸನ ಪಾರ್ಥಿವಜಾತಿಗಿವು ದುರ್ವಿಷಯ ವಿದಱಿ ನೆಗ್ಗಿದರು ನಳ ದಶರಥಾದಿಗಳು (ಕುವ್ಯಾಸ. ೦೦-೦೮). ೨೪. ಕೊಲ್ಲು ; ಸಾಯಿಸು : ನೆಗ್ಗಿದಸೊಂದು ಹಲಗೆಯಲೇಱಿದವರನು (ಕುವ್ಯಾಕ. ೦೩-೩೪). ೨೫. (?) : ಅಗ್ಗಳೆಯನೆಮ್ಮರಸ ಸಂಪ್ರತಿ ನೆಗ್ಗಿ ಕೆಟ್ಟರಿ ನೀವು ನಿಮಗೀ ಹುಗ್ಗಿಗರು ಹುರಿಗೂಡಿ ಗೆಲಿದಿನ್ನಿಳೆಯ ಕೊಡಿಸುವರೆ (ಕುವ್ಯಾಭೀ. ೦-೫೮). **ನೆಗ್ಗು** : ೨. ಭೂಮಿ ದಳಭಾರಣೆಯಿಂ ನಸುನೆಗ್ಗೆ ವೈರಿ ಮುಂಗೆಟ್ಟರೆ ಚಂಡವರ್ಮನರಪಂ ನಡೆಗೊಂಡನತೀವಕೋಪದಿಂ (ದಶಕು. ೭-೬೭) ; ದುರ್ಗದಿಂ ಕಂಪಿಲನೃಪತಿ ನಿರ್ಗಮಿಸಿದನು ಭೂಮಿಗೆ ಬಲಭಾರದಿಂ ನೆಗ್ಗೆ ಪೆಡೆಗಳು ಫಣಿಪನ (ಕುರಾಸಾಂ. ೨೭-೩೩). ೧೯. ಕೆತ್ತು ಪೊಡೆ ಸೀಳ್ಕಡಿ ಖಂಡಿಸು ನೆಗ್ಗು ನುಗ್ಗು ಕೊಯ್ ಕೊಚ್ಚಿ ಮುಚ್ಚು ಯೆಂದು ನಿನ್ನ ಭಟರಡ್ಡರಿಸಲ್ (ಅಪ್ರತಿ. ೨೬-೩೧) ; ಪುರದಿಂದಂ ಪೊಱವಟ್ಟು ಪೊಕ್ಕು ದಟಮಂ ನೆಗ್ಗುತ್ತೆ ನುಗ್ಗುತ್ತೆಯೊತ್ತರದೊಳ್ ಮಿಕ್ಕಿದಿರಾಗೆ ಮೂಗಱಿದು (ಚಕವಿ. ೫-೨೨) : ೨೬. ಬಗ್ಗಿಸು ; ಜಗ್ಗು : ನೆಗಟ್ಟುದ್ದಂಡದ ಪ್ರಪ್ಪಕಾಂಡನಲರಂಬಂ ನೆರ್ಗಿ ಕೋದಂಡಮಂ ತೆಗೆದಾರ್ದಿಂ ಮುಳಿದಿಕ್ಕಿ (ಧರ್ಮಪಾ. ೦-೫). ನೆಳ್ಗು : ೧೧. ನುಳ್ಗಿದ ಪಲ್ಗಳಿಂದೊಡೆದ ಮಂಡೆಗಳಿಂ ಮುಱಿದಿರ್ದ ಕಾಲ್ಗಳಿಂ ನೆಳ್ಗಿದ ಬಾಯ್ಗಳಿಂ . . . ಬಂದೆಱಗಿ ಕೀರ್ತಿಸುತಿರ್ದುದು ದೇವಸಂಕುಳಂ (ವೀಶಿವಿ. ೦೩-೦೦೦). ೧೩. " ನವೆ, ಸವೆ, ತವಿ (ತವ್ಗು), ಸೊರಗು, ಕೊರಗು, ನೆಳ್ಗು (ನೆಗ್ಗು)" (ಕಂನುಹು. ೦೬). △ **ನೆಟ್ಟುಗ** : ಪಿ. "ನೆಟ್ಟುಗ [ಪಾಠಾಂ. ನೆಗ್ಗು] ಅಂತರ್ಗೀನೇ (ಅಡಗಿ ಹೋಗು) " (ಕಪಾಧಾ) ; ಮೂಗು ನೆಟ್ಟಿಗ ಬಿಣ್ಪೆರೆಯೊಡೆದುರ್ಕಿ ಪಾಯ್ದು ಪೊನಲಿಟ್ಟುದು ಮಲ್ಲನ ನೆತ್ತರೆತ್ತಲುಂ (ಚಕವಿ.ಸಂ-೦೪೨).

ನೆಗ್ಗುನೆಗ್ಗು (ದ್ವಿರುಕ್ತಿ): ಅಗ್ಗಳೆಯೆಳೆತನದಿ ನಿಜದ ಹಗ್ಗದಿಂದ ಬಿಗಿದು ಕಟ್ಟಿ ನೆಗ್ಗಿನೆಗ್ಗಿ ಮಱಿವೆ ಜಡವ ನುಗ್ಗುಮಾಡಿ ಓಡಿಸುವೆನು (ಶಿವಗೀ.೭೫೪). 'ನುಱುಂಗು', 'ನೊರಕು' ಪರಾ.

[ದೇ.ಪ ತಮಿ. ನಱುಕ್ಕು, ನರುಕ್ಕು, ನೆರುಕ್ಕು ; ಮಲ. ನಱುಕ್ಕು, ಇರುಣ್ಣು ; ತುಳು. ನರ್ಗು ; ತೆಲ. ನಱುಕು, ನಱುಚು, ನರ್ಕು; ಪರ್ಜ. ಗಡಬು. ನೆನ್ತ್]

ನಱುಂಬು (ಕ್ರಿ). ಒತ್ತಿ ; ಇರಿಕಿಸು : ರಸೆಯೊಳ್ ಕಾರಸೆಗೊಂಡವೊಲ್ ತಳಮಳಂ[ತಿ]ರ್ವನ್ನೆಗಂ ತುಂಗಕೂಟಸಹಸ್ರಂ ದಿವಮಂ ನಱುಂಬಿದವೊಲಂ ತಿರ್ವನ್ನೆಗಂ ಸುತ್ತಲುಂ ದೆಸೆಗಳ್ ಪೊಂಗಳಸಂಗಳಂ ತೊಳಗುಗುಂ ತೋರ್ವನ್ನೆಗಂ ಮಾಡೆ ಮಾಡಿಸಿದಂ ಚೈತ್ಯನಿಕೇತನಾವಳಿಗಳಂ ತನ್ಮಾಳವಾಧೀಶ್ವರಂ (ವರ್ಧಮಾ. ೬-೩೮). 'ನಱುಂಕಂ' ಪರಾ. [?]

ನಱುಕು 'ನಱುಂಕು' ನೋ.

ನಱುಗಂಪು, ನರುಗಂಪು (ನಾ). ಒಳ್ಳೆಯ ವಾಸನೆ; ಸುವಾಸನೆ; ಪರಿಮಳ: ನೆಱಿದಾತನ ಪುಣ್ಮೆಯ ಕಣ್ಣಿಱಿದಂತಿರೆ ತೆಱಿದುವಾ ವಿಮಾನದ ಪಡಿಗಳ್ ನಱುಗಂಪು ಪೊಣ್ಮೆ ಸಗ್ಗದ ವಿಜಿಯನಿಯರ ಮನಮುಮೊಡನೆ ಪಡಿದೆಱಿವಿನೆಗಂ (ಕಂದ್ರಪು. ೪-೬೨) ; ಮುಗುಳ್ಗಳೆ ಮಾಲೆ ಸುಯ್ಯ ನಱುಗಂಪಿನೊಳಿರ್ಮಡಿ ಗಮ್ಮನಾಗೆ . . . ಕಾಮಿಗಳ ಮನಂಗಳೊಳ್ ಗಡಣದಿಂದಲರ್ಗಬ್ಬುವುದಂಗನಾಜನಂ (ವರ್ಧಪು. ೦-೬೪) ; ಅರ್ಕಮಂಡಲವಂ ಕಂಡ ಮರಾಳನಂತೆ ನಱುಗಂಪಂ ಕಂಡ ಮಱಿದುಂಬಿಯಂತೆ (ಉದ್ಭಟ. ೧೧-೫೫ ವ); ಕಣ್ಮಲರ್ಗೆ ಕಡುರಯ್ಯಮಾಗಿ ನಱಿಗಂಪು ನೆಱುಪೊಣ್ಮಲರಿವಿರಿದ ಪೊಂದಾವರೆಯ ಬಂಡ ನುಂಡುಣ್ಮುವಾನಂದದಿಂ ಮೈಮಱಿದು ಜಿನುಗುವಾಱಿಡಿವಱಿಯ ಲೀಲೆಯುಂತೆ (ಕಡ್ಡಣ. ೧-೪೦) ; ನಱುಗಂಪನೆಣ್ಪೆಸೆಗೆ ಬೀಱುವಲರ್ವಂಡುಣ್ಬ ಪಱವೆಗಳು (ಧಾವಚಂ. ೬-೩೦); ಕಿಱುಜವ್ವನದ ಬಾಲೆಯರ್ ... ಸುಯ್ಯಲರ ನಱುಗಂಪನೂಡಿ, ತಣ್ಣೀರಂ ಬಿದುಗಲ್ಗಂದಲೊಳಿೂಸರ್ವ ಪನಿನೀರನೆ ನೀರಡಿಸಿದರ್ಗೆಱಿದಪರ್ (ಣಾಮಾಶ್ವ. ೯-೦೬). ನರುಗಂಪು: ಅರೆವಿರಿದ ಕುಸುಮ ನರುಗಂಪಿನಿಂ ಯಿಂಪಿನಿಂ ತಣ್ಣೆಳಲ ತಂಪಿನಿಂದೆ . . . ಇಂತೊಪ್ಪುವಾ ಬನ (ನವಮೋ. ೯-೩೮) ; ದಿನದಿನದ ಬೆಳಗು ಹೊಂಗಿರಣದ

ಕಿರೀಟ ನೂರುಬಣ್ಣದ ಹೂವ ನರುಗಂಪನೊಮ್ಮೆಲೇ ಚಿಮ್ಮಿಸುವ ತೋಟ (ನೆಲಮು. ೫-೯); ಹೂಗಳು ನರುಗಂಪು ಸೂಸುತ್ತವೆ (ಧರ್ಮಸಾ. ೭); ನರುಗಂಪು ಬೀರುತ್ತಿರುವ ನವಕುಸುಮ (ಸುವಸಂ. ೧೬).

[ನಱು + ಕಂಪು]

ನಱುಗಂಪುವೊರೆ (ಕ್ರಿ). ಸುವಾಸನೆಯಿಂದ ಕೂಡಿರು; ಸುಗಂಧವನ್ನು ಹೊಂದಿರು: ತುಱುಗಿದ ತಾರಾಪುಂಜದೆ ಮಿಱುಗುತಿರ್ದಪುದೊ ಪಶ್ಚಿಮಾದ್ರೀಂದ್ರಮೆನಲ್ ನಱುಗಂಪುವೊರೆದ ಜಾದಿಯ ತುಱುಂಬು ಕಣ್ಗೊಳಿಸೆ ಶೂದ್ರಕಂ ಕರಮೆಸೆದಂ (ಕಾದಂಪೂ. ೩೨).

[ನಱುಗಂಪು + ಪೊರೆ$_2$]

ನಱುಗಬ್ಬು (ನಾ). ರಸವತ್ತಾದ ಕಬ್ಬು,-ಇಕ್ಷು: ನಱುಗಬ್ಬಿನೊಳಗಣ ರಸವ ಕಾಣದೆ ಪಶು ಹೊಱಗಣೆಲೆಯ ಸವಿವಂತೆ ಅಱಿದೊಳಗಾತ್ಮಸುಖ ವನುಣಲಱಿಯದೆ ಹೊಱಗೆಳಸುವರಂಗಸುಖಕೆ (ಭಂಜ. ೧-೧೦೫).

[ನಱು + ಕಬ್ಬು$_2$ (<ಕರ್ವು$_1$)]

ನಱುಗೋಲ (ನಾ). ೧. ಪುಷ್ಪಬಾಣವನ್ನು ಉಳ್ಳವನು; ಕಾಮ; ಮನ್ಮಥ: ನಱುಗೋಲನೊಲಿದು ತನ್ನಖಿಲರಾಣಿಯರೊಡವೆರಸಿ ಬಿನದವ ಮಾಳ್ಪವೊಲು ಸರಸಸಲ್ಲಾಪವಿನೋದದಿಂದರಸ ತನ್ನರಸಿಯರೊಡನಿರುತಿರಲು (ನಾಗಳು. ೩೨-೬೪). ೨. [ಜೈನ] ಬಾಹುಬಲಿ: ನಱುಗೋಲನೊತ್ತಿಂದ ದಕ್ಷಿಣಗಿದಿರಾಗಿ ಮಱಿಯೆರಳೆಗಳೋಡಿ ಬಂದು ದುಱುಮಱನೀಕ್ಷಿಸಿ ಹೊಸ ಗವಲಿಗೆ ಬೆಚ್ಚಿ ಬಿರಿತೋಡಿದುವು ಕಂಡ ಕಡೆಗೆ (ಭರಜ. ೪೭-೬೨); ಒಱಗು ಮೂಡೆಯ ನೆಮ್ಮಿ ಕುಳಿತನು ಚಕ್ರೇಶ ನಱುಗೋಲ ನಿಲೆ ಬಿಸಿಲಲ್ಲಿ ಮಱಿಸನ್ನೆಗೈದು ಸತ್ತಿಗೆವಿಡಿಸಿದನೇನು ಮಱುಕವೊ ತಮ್ಮನ ಮೇಲೆ (ಭರಜ. ೫೦-೦೨೯). [ನಱುಗೋಲು + – ಅ$_7$]

ನಱುಗೋಲು (ನಾ). ಪುಷ್ಪಬಾಣ: ನಱುಗೋಲ ತುಱುಗೆವೆದುಂಬಿದಿರುವ ಹೂಡಿಯುಱುವ ಕಬ್ಬಿನ ಬಿಲ್ಲುಗಳನು (ಚಂಪ್ರಸಾಂ. ೨೩-೭೨).

[ನಱು + ಕೋಲು$_1$ (<ಕೋಲ್$_1$)]

ನಱುಜವ್ವನ, ನಱುಜೌವನ (ನಾ). ಪೂರ್ಣಯೌವನ; ತುಂಬಿದ ಹರಯ: ಈ ಸಿರಿಯಿಾ ನಱುಜವ್ವನಮಿಾ ಸುಭಗತೆಯಿಾ ವಿಳಾಸಮಿಾ ಸಕಳಕಳಾಭ್ಯಾಸಂ ಸುತನಂ ಪಡೆಯದ ದೂಸಱಿನಿನಿತುಂ ನಿರರ್ಥಮಲ್ತೆ ಮೃಗಾಕ್ಷಿ (ವೃಷವಿ. ೨-೩೪). **ನಱುಜೌವನ**: ಅಂತೈದಿದ ನಱುಜೌವನದ ಸಿರಿಯಂ ಮೈಸಿರಿ ಯೊಡನೆ ಕೇಳಿಯಿಂ ಕೆಳೆಗೊಳಿಸಿ . . . ನರೇಂದ್ರಸೂನು ತಳೆದಂ ತಾರುಣ್ಯ ಲಾವಣ್ಯಮಂ (ರಾಜಶೇ. ೪-೧೦೬ ವ). [ನಱು + ಜವ್ವನ]

ನಱುಜೌವನ 'ನಱುಜವ್ವನ' ನೋ.

ನಱುದಂಬುಲ (ನಾ). ಸುಗಂಧಭರಿತವಾದ ತಾಂಬೂಲ; ಪರಿಮಳ ಯುಕ್ತವಾದ ತಾಂಬೂಲ: ಬಾಯೊಳೆ ಬಾಯನಿಟ್ಟು ನಱುದಂಬುಲ ಮಿಕ್ಕುವ ಮುಗ್ಧೆಯೊಂದುಮೊಟ್ಟಾಯತದಿಂದಮಾನಱಿದೆನಾಕೆಯ ವಲ್ಲಭ ನಾತನೆಂಬುದಂ (ಲೀಲಾವ. ೨-೯೩); ಮೊಱಿಯನುಳಿದ ಮೆಲ್ನುಡಿ ಮೊನೆ ಮಸೆವಕ್ಕಱು ಬಾಯ್ದೆಱಿಗೆಡೆವಿಡದೆಡೆಯಾಡುವ ನಱುದಂಬುಲ . . . ನೆಱಿ ಸೊಗಯಿಸಿದುವು ನವಸುರತಕ್ರೀಡೆಯೊಳಾ ದಂಪತಿಗೆ (ಜಯಕಾ. ೮-೫೫); ಸಸಿಯುದಯಂ ಮುಗಿಲ್ಮೊಟಗು . . . ನಱುದಂಬುಲಂ ಸುಗೀತಸರಸ ದೂತಿವಾಕ್ಪ್ರಭೃತಿ ಮುಂ ಪೆಸರ್ಗೊಂಡ ತಟಸ್ಥಮಲ್ಲದೇ (ರಸರ. ೧-೩೩); ಅತ್ತಮಿತ್ತ ಚೆಲ್ವಿಂಗೆಡೆಯಾಗಿ ಸೂಸಿದಲರುಂ ನಱುದಂಬುಲಮುಂ ಮೃಗೋದ್ಭವಂ ಸಂಗಳಿಸಿರ್ದ ಕುಂಕುಮಪರಾಗಮುಮಾರ್ದೆಱಪುನ್ಮ ದಾಳಿಯಂ ಪಿಂಗದೆ ದೇವದಂಪತಿಯ ಕೂಟಮನೇಂ ಪಿಸುಣಾಡಲಾರ್ತವೋ (ಶಬಶಂ. ೦-೫೦); ಈವುಪಚಾರದಿನಾತನ ಪಸಿವುಂ ಬಟಲ್ಕೆಯುಂ ಮುಡಿಯೆ ಕೆಳದಿ ನಱುದಂಬುಲಮಂ ಸವಿಯಲ್ಕೆಂದು ಮಡಿದೀಯುತುಮಿರೆ (ರಾಮಾಶ್ವ. ೪-೧೨). [ನಱು + ತಂಬುಲ]

ನಱುನಾಣು (ನಾ). ಆಕರ್ಷಕವಾದ ಲಜ್ಜೆ; ಮೋಹಕವಾದ ನಾಚಿಕೆ: ನಸುನಗೆ ನಱುನಾಣು ನೆಲೆಮೊಲೆ ನಳಿತೋಳು ಮಿಸುವ ಕಣ್ನೆಗಹಿದ ಕಳಸ ಪೊಸದೇಸಿಪಡೆಯೆ ನೀರೆಱಿವ ನೀಱಿಯರು ಕಣ್ಗೆಸೆದಿಹರಲ್ಲಿ ಪಥಿಕರ (ಕುರಾಸಾಂ. ೨-೪೨). [ನಱು + ನಾಣು$_1$ (<ನಾಣ್$_1$)]

ನಱುನೆಯ್, ನರುನೆಯ್ಯಿ (ನಾ). ಸುವಾಸನೆಯಿಂದ ಕೂಡಿದ ತುಪ್ಪ; ಪರಿಮಳಭರಿತವಾದ ಘೃತ: ಕುಱಿಯಂ ಕಳ್ಳಂ ಕೂಟಂ ನಱುನೆಯ್ಯಂ ಬೇಡಿ ತಿಂಬ ಪಿರುತಿನಿ ಬರವಂ ಪೆಱರ್ಗೆ ಕುಡಲಱಿಯಳೆಂಬುದನಱಿಯದ ಪಶು ಮನುಜನಲ್ಲ ಕುಱಿಗಳ ಭಾವಂ (ಸಮಪ. ೯-೧೧೧); ನಾಯ್ಗೆ ನಱುನೆಯ್ಯಟ್ಕದೆಂಬುತೆನ್ನ ಪೇಟ್ವ ಧರ್ಮಶ್ರವಣಮನೊಲ್ಲದೆ ಸುದಂತಿಯನೆ ಮನದೊಳ್ನೆನೆಯುತಿರ್ಪೆ (ಧರ್ಮಾಮೃ. ೭-೨೨೭ ವ); ನಱುನೆಯ್ಮಾಱಿದ ಸಿರಿಯಂ ಮೆಱಿಯಲೆ ಪೊಂಗಳನೆ ಗೋಪಿಯರ್ ಕೆದಱಿದವೋಲ್ ತುಱುವೆಯ ನೆಗ್ಗಿಲ ಪೂಗಳ್ ತುಱುಪಟ್ಟಿಯ ಪೊಱಗೆ ತುಱುಗಿ ಕರಮೆಸೆ ದಿರ್ಕುಂ (ಲೀಲಾವ. ೫-೯೯); ಪೊಸಸಕ್ಕರೆಯಂ ನವಮಧುರಸಮಂ ನಱು ನೆಯ್ಯನೆಸೆವ ಕದಳೀಫಲಮಂ ರಸನೆಯಳಸಿದುದನೆನ್ನೋಳ್ಬೆಸಸೀಗಳೆ ನಿನಗೆ ತಂದಪೇಂ ಶಶಿಮೌಳಿ (ವೃಷವಿ. ೯-೭೭); ನಱುನೆಯ್ಯಂ ಪಾಲನುಣುತೆ ಬಾಟ್ಟರೊಳಧಮರ್ ತುಱುಗಿದ ಕಱುಂಬಿನಿಂದಂ ಪೊಱಿಸಲ್ ಪಾರ್ದಿರ್ಪರ ಕ್ಕಟಲ್ಲದ ದೂಱಂ (ನೀತಿಮಂ. II, ೩೭೯). **ನರುನೆಯ್ಯಿ**: ನರುನೆಯ್ಯಿ, ಬಾಳೆಹಣ್ಣು . . . ಇವೆಲ್ಲ ಇವೆ ನಮ್ಮ ಮನೆಯಲ್ಲಿ (ಕಸಾಜಿ. ೧೦೬).

[ನಱು + ನೆಯ್$_2$]

ನಱುಮುಡಿ (ನಾ). ಸುವಾಸನೆಯಿಂದ ಕೂಡಿದ ಮುಡಿ; ಪರಿಮಳ ಯುಕ್ತವಾದ ಕೇಶ: ನಱುಮುಡಿಗೆ ಮುಡಿವೆನು ಕುಸುಮಮಾಲೆಯನು (ಸಾಳ್ವಭಾ. ೧೦-೩೫). [ನಱು + ಮುಡಿ$_2$]

ನಱುವಂಜಿ, ನರುವಂಜಿ (ನಾ). ಒಂದು ಬಗೆಯ ಹುಲ್ಲು: "ಶಂಖಿನೀ, ಚೋರಪುಷ್ಪೀ, ಕೇಶಿನೀ, ಹಗಱಿ = ನಱುವಂಜಿ" (ನಾಚಿರಾ. ೬); ನಱು ವಂಜಿ [ಪಾಠಾಂ. ನಱುವಲ್ಗೆ] ನೆಲಾ[ವಲ್ಗೆಲಾ]ವರೆಗಳ್ ತುಱುಚೆಯ ಕರಿಯಂ ಜಲಾನ್ವಿತಂ ಪೂಸುಗೆ ಮೇಣ್ ಪಱಿಗುಂ ಪಂಕದ ಲೇಪದಿನಱಿ ನಸುಗುನ್ನಿಯ ವಿಷಂ ಭಿಷಗ್ವರಮತದಿಂ (ಖಮದ. ೨-೯೯); ಮೂತ್ರ ರೋಗಕ್ಕೆ . . . ನರು[ಱು]ವಂಜಿ, ಕಳ್ಳಂಗಡಲೆ ಇವಂ ಅರೆದು ಬಹಿಗೆ ಪೂಸಿಇಳಿಯ ತೊಡೆಯುವುದು (ವಿಪ್ರವಿ. ೧೫೨); ನಱುವಂಜಿಯ ಬೇರು, ನೆಲಾವರೆಯ ಬೇರು, ಬಳ್ಳಿದುಱುಚೆಯ ಬೇರು ಇವಿಷ್ಟನು ಸುಟ್ಟು ಕರಿಯ ಮಾಡಿ ನೀರಲ್ಲಿ ಅರೆದು ಪೂಸಲು ನಸುಗುನ್ನಿಯ ವಿಷ ಶಮನವಹುದು (ಪೈದ್ಯಸಾ. II, ೨೩೪). **ನರುವಂಜಿ**: "ಅಲಕ್ಷ್ಮಿ-ನರುವಂಜಿ" (ಅಕಾನಿ. ೨-೧೬). [?]

ನಱುವಂಡು (ನಾ). ಸುವಾಸನೆಯಿಂದ ಕೂಡಿದ ಬಂಡು,-ಮಧು: ಸೊಪ್ಪುಸೊಪಡಾಗದೆಸಟಿಸಟ್ಟಿಪ್ಪದೆ ಮೊಗಮಿಱಿದು ಕಾರ್ದು ಚಪ್ಪಲರ್ವಿನೆಗಂ ಸಿಪ್ಪಿಟ್ಟು ಕಱಿದು ಕೊಂಡುವು ಸಪ್ಪದಮುಪ್ಪಳದಿನೊಱಿವ ನಱುವಂಡುಗಳಂ (ಲೀಲಾವ. ೯-೮೬). [ನಱು + ಬಂಡು$_2$]

ನಱುವಲ್, ನರವಲು, ನರುವಲ, ನರುವಲು, ನರ್ವಲ್, ನಱುವಲ, ನಱುವಲು (ನಾ). ೧. ಒಂದು ಬಗೆಯ ಮರ; ನೆಲ್ಲಿಗಿಡದಲ್ಲಿ ಒಂದು ಬಗೆ: "ಅಗ್ನಿಮಂಥನ ನಱುವಲ್" (ವಸ್ತುಕೋ. ೩೭-೨೭); "ಅಗ್ನಿ ಮಂಥಮೆನೆ ನರು[ಱು]ವಲೆನಿಸಿಕ್ಕು" (ಮಂಗರಾ. ೩೬-೧೬); ಲವಣಂ ನಱುವಲಬೇರ್ ಗುಳ್ಳವದಣೆ ಬರಿವದಣೆ ಲೊಕ್ಕಿ ಕಿಱುಮೆಕ್ಕೆಗಳೆಂ ಬಿವನಱಿದು ತಕ್ರದೊಳ್ ಪೂಸುವುದು (ಲೋಕೋಪ. ೯-೧೯೭); ನಱುವಲ್ ಮಗ್ಗಾರೆಯ ಕಾಯ್ . . . ಇವನಱಿಯಲ್ ಜಲದಿಂದೆ ಫಣಿಯ ವಿಷ ನಿರ್ಹರಣಂ (ಖಮದ. ೫-೧೦೪); ಬರಿವದಣೆ ಸುಣ್ಣಗಂದಿಗೆ ನಱುವಲ್‌ಗುಳ್ಳಂ ಮಣಿಸಿಲೆ ಸೀವನ್ನಿ (ಅಶ್ವಶಾ. ೧೦-೬೦). ೨. ಸೀಗೆಮರ:

ನರವಲು : (ಕ). ನರುವಲ : ೧. ನೆಲಬೇವು, ಭದ್ರಮುಸ್ತೆ, ಅಮರವವಳ್ಳಿ, ನರುವಲದ ಬೇರು . . . ಶುಂಠಿ ಇವುಗಳ ಕಷಾಯವಿಕ್ಕಿ ಸೇವಿಸಿದರೆ ವಾತಜ್ವರಂ ಕೆಡುಗುಂ (ಸಳವ್ಯ. ೬೫); ನರುವಲದ ಸೊಪ್ಪು, ಪುಳ್ಕಂಪುರಚಿ, ಒಂದೆಲಗ . . . ಈರುಳ್ಳಿ ಇವುಗಳೆಲ್ಲವೂ ಜ್ವರದವರಿಗೆ ಪಥ್ಯದ್ರವ್ಯಗಳು (ಸಳವ್ಯ. ೦೦೨). ನರುವಲು : "ಬಾನಲ–ನರುವಲು" (ಅಕಾನಿ. ೧೦-೩೨). ನರ್ವಲ್ : ೧. (ನಾಚಿಕಾ. ೬). ನಱುವಲ : ೧. "ಅರಿಣಕೇತುಃ – ನಱುವಲ" (ಓಷಧಿ. ೯). ನಱುವಲು : ೧. "ಶ್ರೀಪರ್ಣಂ, ಅಗ್ನಿಮಂಥಃ ಕಣಿಕಾ, ಗಣಕಾರಿಕಾ, ಜಯಃ – ಈ ೫ ನಱುವಲು" (ನಾಚಿಕಾ. ೦೦೮) ; ೩. ಒಂದು ಬಗೆಯ ಸೊಪ್ಪು : ಕೀರೆ ನಱುವಲು ಚಕ್ಕವತ್ತ ಸೊರೆ ಸಬ್ಬಸಿಗೆ ಮೊದಲಾದ ಸೊಪ್ಪುಗಳ ಬೆಂಱಿಬೇಱುಕ್ಕರಿಸಿ (ಸೂಪಶಾ. ೪-೦೬) ; ಹಾಲೆಯ ಸೊಪ್ಪು, ಚಕ್ಕೋತ, ಕೀರೆಸೊಪ್ಪು, ಕೆಂಪಿನ ಚಕ್ಕೊತ್ತ, ನರು[ಱು]ವಲ ಸೊಪ್ಪು . . . ಸೂರಣದ ಗೆಡ್ಡೆ– ಇವು ಜ್ವರ ಬಂದವರಿಗೆ ಪಥ್ಯ (ವೈದ್ಯಸಾ. I, ೫೫) ; ಬಜೆ, ಓಮ, ಔಡಲದ ಬೇರು, ನರು[ಱು]ವಲಬೇರು, ಹಿಪ್ಪಲಿ, ಚಿತ್ರ ಮೂಲ ಇವಿಷ್ಟನು ಸಮಾಂಶವಾಗಿ ಕೂಡಿಸಿ ನೀರಿಂದ ಅರೆದು ಕುಡಿಯ ಕೊಡಿಸಲು ಒಂಟೆಯ ವಿಷಗಳೆಲ್ಲವೂ ಪರಿಹರವಹವು (ವೈದ್ಯಸಾ. II, ೩೦೮). ೪. (?) : ನಱುವಲ ಮೊನೆಯಲ್ಲಿ ನಟ್ಟ ಕಲ್ (ಎಇ XIII, ೩೦-೩೦ : 1204). [ದೇ.ಕ ತುಳು. ನರುವೊಲು, ನರ್ವೊಲು]

ನಱುವಲ 'ನಱುವಲ್' ನೋ.

ನಱುವಲರು (ನಾ). ಸುಗಂಧಯುಕ್ತವಾದ ಪುಷ್ಪ ; ಸುವಾಸನೆಯ ಹೂವ್ : ತರುಣಿ . . . ಶಿವನರ್ಮಾಲ್ಯವೆನಿಪ ನಱುವಲರನೆಯ್ದೆ ಶಿರದೊಳ್ತುಱುಂಬಿ . . . ಶಿವವೇಷದಿಂ ತಣಿದು (ಪಾಶೋಪು. ೫-೩೦) : ನಱುವಲರುಗಳ ಪಿಡಿದು ಪುಷ್ಪಾಂಜಲಿಯನೆಸಗಿ . . . ಹರ್ಷದಿಂದಖಿಳ ಪುರಜನ ಪರಿಜನಂಗಳೆಲ್ಲಂ ತುಱುಗಿ ಬರುತಿರೆ (ಸಿಕ್ಕೇಪು. ೦೯-೩೦).

[ನಱು + ಅಲರ್ (<ಅಲರ್೨)]

ನಱುವಲು 'ನಱುವಲ್' ನೋ.

ನಱುವೂವಲಿ (ನಾ). ಸುವಾಸನೆಯ ಹೂವುಗಳನ್ನು ಹರಡುವಿಕೆ ; ಹೂವಿನ ಹಸೆ : ರಂಗವಲ್ಲಿಯಿಂದೈದು ರನ್ನದ ರಂಗಿಸಿದ ಪುಡಿಗಳ ಚದುರಿನಿಂ ಪಿಂಗದಾ ನಱುವೂವಲಿಗಳಿಂ ಚಿನ್ನಬೆಳ್ಳಿಗಳಾ ತುಂಗಘಟದೊಳ್ದಹಿಪ ಚೆಲ್ವದಶಾಂಗಮುಖ್ಯದ ನಱುವೊಗೆಗಳಿಂ ತೊಂಗಲಿಪ ಸುರಘಂಟೆಯಿಂ ಮೆಱಿವುದನರಸ ಕಂಡ (ಶಾಕೃಭಾ. ೪-೪೦). [ನಱು + ಪೂವಲಿ]

ನಱುವೊಗೆ (ನಾ). ಸುವಾಸನೆಯ ಹೊಗೆ ; ಧೂಪ : ಚಿನ್ನಬೆಳ್ಳಿಗಳಾ ತುಂಗಘಟದೊಳ್ದಹಿಪ ಚೆಲ್ವದಶಾಂಗಮುಖ್ಯದ ನಱುವೊಗೆಗಳಿಂ ತೊಂಗಲಿಪ ಸುರಘಂಟೆಯಿಂ ಮೆಱಿವುದನರಸ ಕಂಡ (ಶಾಕೃಭಾ. ೪-೪೦).

[ನಱು + ಪೊಗೆ]

ನಱುಸುಯಿರ್ (ನಾ). ಸುವಾಸನೆಯಿಂದ ಕೂಡಿದ ಉಸಿರು ; ಸುಗಂಧ ಪೂರಿತವಾದ ಶ್ವಾಸ : ಪೋಪ ಸಪ್ತಸಪ್ತಿಯ ವಿರಹಕ್ಕೆದಲ್ತು ಬಿಸುಸುಯಿರ್ ಪುಸಿಸುಯ್ಕೆನೆ ಸಾಯ್ದು ದಕ್ಷಿಣಾಶೆಯ ನಱುಸುಯ್ಯ ಗಾಳಿಯನೆ ಪೋಲ್ತುದು ಗಂಧವಹಂ ವಸಂತದೊಳ್ (ಶಾಂತಿಪು. ೬-೦೫೬) ; ನಱುಸುಯ್ದಂ ಮಾಲೆಗಂ ಸೂಬಱಿದೆಱಗುವಿನಂ ತುಂಬಿಗಳ್ ನೋಡಿದರ್ಮೆಯ್ಯಱಿವನ್ನಂ (ಪಂರಾಮಾ. ೦-೧೬೦) ; ಭರದಿಂದಂ ನವಕುಸುಮಾಭರಣಂಗಳನಭವನಂಗದೊಳ್ ಸಿಂಗರಿಸುತ್ತರಳುತ್ತುರ್ಬಾತೆ ಕೊರ್ಬುತೆ ಗಿರಿಸುತೆ ನಱುಸುಯ್ಯ ಧೂಪಮಂ ಪದೆದಿತ್ತಳ್ (ಗಿರಿಕ. ೫-೮೩) : ಮಗಮಗಿಸುತ್ತುಮಿರ್ಪ ನಱುಸುಯಿರ್ ಪೊಸವೂಗಳ ಕಂಪನೆತ್ತೆ . . . ಸುತ್ತಲುಂ ಸೊಗಯಿಸುತಿರ್ಪ ಬಾಸಿಗಮನೆತ್ತು ವರಗ್ಗದ ಮಾಲೆಗಾರ್ತಿಯರ್ (ಕಬ್ಕಾ. ೪೦) : ಮಾಲೆಗಟ್ಟುತೆ ನೋಟಕರ ಕಣ್ ಮಾಲೆಗಟ್ಟುವರೊರ್ಮೆ ತುಂಬಿಯ ಮಾಲೆಮಾಲೆಯು ಕಾಣಗುಡದಿರೆ ತಮ್ಮ ನಱುಸುಯ್ಯಾ ಮಾಲೆಮಾಲೆಯ ತೋಱಿ ಕಟ್ಟಿದ ಮಾಲೆಯುನೆ ವಿಟಮಾಲೆಗತಿಸಲ್ಲೀಲೆಯಿಂ ಮಾಱುವರದಲ್ಲಿಯು ಮಾಲೆಗಾರ್ತಿಯರು (ಶಾಕೃಭಾ. ೩-೦೩). [ನಱು + ಸುಯ್೨]

ನಱುಸುಯ್ಕೆಲರ್ (ನಾ). ಸುವಾಸನೆಯಿಂದ ಕೂಡಿದ ಉಸಿರಿನ ಗಾಳಿ; ಒಳ್ಳೆಯ ಕಂಪುಳ್ಳ ಶ್ವಾಸವಾಯು: ನಱುಸುಯ್ಕೆಲರಿಂಗೆಱಗುವ ಮಱಿದುಂಬಿಗಳಂ ಸಱಿಂಗಿನಿಂ ಸೋಪುತುಮಾ ತೆಱದೊಳೆ ಯುವರಾಜಸನಟ್ಟ ಱಿಂದಡಿಗಡಿಗೆ ಕಾಂತೆ ಕರೆವಂತಿರ್ದಳ್ (ಕಾರಣಂ. ೧೩೯) ; ಎಲೆ ತೀಡುವ ತೆಂಗಾಳಿಯೆ ನಲವಿಂ ಕಾಲ್ದಿಡಿದು ತಿಳಿಪಿ ತಳ್ವಿಲ್ಲದೆ ಕಾದಲನಂ ತಂದೊಡೆ ನಱುಸುಯ್ಕೆಲರಿಂದಂ ನಿನ್ನನಾಗಳುಂ ನೆಱಿ ಪೊರೆವೆಂ (ಕಬ್ಕಾ. ೭೧) ; ಕುರುಳೊಳ್ಕೆವಿದ ಕತ್ತುರಿಯ ರಜಂ ವೊಗರಸದೊಳುದಿರ್ದು ನಱುಸುಯ್ಕೆಲರಿಂ ಪರೆದು ತೆರೆಮಸಗಿ ನಿಂದಂತಿರೆ ಕೊಂಕಿಂ ಭೃಂಯುಗಂ ವಿರಾಜಿಪುದವಳಾ (ರಾಜಶೇ. ೭-೫೬). [ನಱುಸುಯ್ + ಎಲರ್]

ನಱುಸುಯ್ಲು (ನಾ). = ನಱುಸುಯ್ : ನಱುಸುಯ್ಲು[ಪಾತಾಂ. ಯ್ಕ] ಗಾಳಿಗೆ ತೇಲ್ವ ದುಕೂಲದ ಸೆಱಗು ಸೀರುವೆ ದೊರೆ ಹೊದೆದು ತೆಱಪಿ ನೆದೆಯ ಹೊನ್ನ ಜನ್ನಿವಾರದ ರೆ ಖೆ ಮೆಱಿಯೆ ರಾಜೇಂದ್ರ ಮೆಱಿದನು (ಭರಕ. ೧-೫೬). [ನಱು + ಸುಯ್ಲು]

ನಱುಹರೆಯ (ನಾ). ತುಂಬಿದ ಪ್ರಾಯ ; ಪೂರ್ಣಯೌವನ : ಹಿಂದಣುಗರಿಲ್ಲದಾಯಸವಟ್ಟು ಗುರುಕರುಣದಿಂದೆನ್ನ ಪೆತ್ತು ಬಾಲ್ಯದ ಮುದ್ದು ನಱು[ಪಾತಾಂ. ದು] ಹರೆಯದಿಂದೆಸೆವ ಸಿರಿಯ ನಡೆನೋಡಿ ದಣ್ಣನೆ ದಣವ ಕಾಲದೊಳು ನುಡಿದಪ್ಪಿಗೆ ತಂದೆ ತಾನೇ ಕೊರಲ್ಗೊಯಿಸಿದವನು (ಭಾವಜೀಂ. ೯-೦೫) ; ಪುಟ್ಟ ಲಾವಣ್ಯಲತೆ ಬೆಳೆವಂತೆ ನಱುಹರೆಯುವಿಟ್ಟಣಿಸಿ ದಿನ ದಿನಕೆ ಬಳೆದು ಮಿಗೆ ಸಾತಸಂಬಟ್ಟು (ಕೂಟ್ಕೃಬ. ೪-೦೦೩).

[ನಱು + ಹರೆಯ (<ವರಯ)]

ನಱೆ (ನಾ). ಒಗ್ಗರಣೆ. 'ನಱೆಗೊಡು' ಪರಾ.

ನಱೆಯಂ ಕೊಡು, ನಱೆಯ ಕೊಡು = ನಱೆಗೊಡು : ಪುಡಿಯಮಂ ವಾಡಿ . . . ಹುರುಳಿಯ ಹಾಲಿನೊಳಗಿಳಿಯ ಬಿಡುತವೊಗ್ಗರಿಸಿ ನರೆ[ಱೆ]ಯಂ ಕೊಟ್ಟು ನಸುಹುಳಿಯನಿಕ್ಕಿ ಪರಿಮಳವಿಡುವುದು (ಸೂಪಶಾ. ೫-೫೦); ಮೆತ್ತನುಕ್ಕರಿಸಿಕೊಂಡೆಳೆಯ ಕಳಿಲೆಯ ಕುಡಿಯನು . . . ಪೊಡ್ಡಣಿಗೆಯಿತ್ತು ನರೆ[ಱೆ]ಯುಂ ಕೊಟ್ಟು ಪರಿಮಳವನಿಕ್ಕಲದು ಚುಚ್ಚುಗಳಿಲೆ[ವೆಸರು] (ಸೂಪಶಾ. ೬-೨); ಹಸಿಯ ಕರಿಬೇವು ಕೊತ್ತುಂಬರಿಯನಿಕ್ಕಿ ತಾಳಿಸಿ ನರೆ[ಱೆ]ಯ [ಪಾತಾಂ. ಯಂ] ಕೊಟ್ಟು . . . ಮುದ್ದರಂಭಾಕುಸುಮಪಾಕಮೆಂದೆಂಬ ಹೆಸರಂ ಕರೆವುದು (ಸೂಪಶಾ. ೪-೫೩).

[← ತಮಿ. ನಱ್ಱೈ = ಮಸಾಲೆಪದಾರ್ಥ, ಸಂಬಾರದ್ರವ್ಯ]

ನಱೆಗೊಡು (ಕ್ರಿ). ಒಗ್ಗರಣೆಯನ್ನು ಕೊಡು,–ಹಾಕು ; ಒಗ್ಗರಿಸು : ಅಟ್ಟಿದಡು ಭಾಗೆಯಂ ಮಾಡುಳ್ಳ ಸಕ್ಕರೆಯನಿಟ್ಟು ವಸರಿಸಿದ ಹೋಳಿಗೊಳು ತುಂಬಿ ತುಪ್ಪದೊಳಗಟ್ಟು ಕೆಂಪಂ ಮಾಡಿ ನರೆ[ಱೆ] [ಪಾತಾಂ. ರೆಯಂ] ಗೊಡಲು ಗೌರಬದನೆಯಕಾಯಿವೆಸರಾದವು (ಸೂಪಶಾ. ೪-೫೪).

[ನಱೆ + ಕೊಡು೧]

ನಱೆಯಿಕ್ಕು (ಕ್ರಿ).=ನಱೆಗೊಡು : ಶೋಧಿಸಿದ ಕೊಣಬನೊಳು [ಬಾಳೆಯ] ಹೂವನು ಇಟ್ಟು . . . ಒಗ್ಗರಣೆಗೊಟ್ಟು ನರೆ[ಱೆ]ಯಿಕ್ಕಿ ಪರಿಮಳಗೊಡಲು ತಕ್ಕರಂಭಾಕುಸುಮಪಾಕಪಾಯ್ತು (ಸೂಪಶಾ. ೪-೫೬).

[ನಱೆ + ಇಕ್ಕು]

ನಱೆಯಿಸಾ (ಕ್ರಿ). = ನಱೆಗೊಡು : ಮತ್ತೊಂದು ಬೆಸಳಿಗೆಯ ತೊಳೆದು ಕೊಂಡದಕೆ ನ[ಪಾತಾಂ. ನೆ]ರೆ[ಱೆ]ಯಿತ್ತದಂ ಪೊಯ್ದು ಕರಿಬೇವುಮಾದಲಿಕ್ಕಿ(ಸೂಪಶಾ. ೫-೦೦); ಕೊತ್ತುಂಬರಿಯನಿಕ್ಕಿ ಚೆನ್ನಾಗಿ ನ[ಪಾತಾಂ.ನೆ, ಲ]ರೆ[ಱೆ]ಯಿತ್ತು [ಜಡಿದುಕೊಂಡು] (ಸೂಪಶಾ. ೫-೦೪). [ನಱೆ + ಈ೩]

ನಟ್ಟಿಣ್ಣಿಗ (?) (ನಾ). (?) : ಕಾಲ್ನಾಡಿಂ ನಟ್ಟಿಣ್ಣಿಗರಾರೆನ್ದೊಡೆ ತೊರೆ ಕಾವಗಾದನುಂ ಬೀವಗದನುಂ . . . ಇಲ್ಲಿಯ ಪುರದ ಒಕ್ಕಲಿವರು (ಎಕ. III, ನಂಜನ. ೧೩೯-೫ : 915 ?). [?]

ನಟುಳ್ಗುಂದ (ನಾ). ಒಂದು ಸ್ಥಳದ ಹೆಸರು : ಸ್ವಸ್ತಿಶ್ರೀ ನಟುಳ್ಗುಂದ ಚಾತಮ್ಮನ್ ತೊಱುಗೊಳ ಇರ್ವ್ವ ವೇಡರಾ ಕೊನ್ದು ತೊಱುವ ಇಕ್ಕಿಸಿ ಸುರಲೋಕಮ್ ಪುಕ್ಕ (ಎಕ. X, ಚಿಂತಾಮ. ೧೨೨-೧ ; ಸು. 1000). [P ಇದು 'ನವಿಲ್ಗುಂದ' ಎಂಬುದರ ಅಪಲಿಖಿತವಿರಬಹುದು]

ನಟ್ಗವುಂಡು 'ನಾಟ್ಗಾಮುಂಡು$_2$' ನೋ.

ನಟ್ಗವುಂಡುಗೆಯ್ 'ನಾಟ್ಗಾಮುಂಡುಗೆಯ್' ನೋ.

ನಾ$_1$ 'ನಾನ್$_2$' ನೋ.

ನಾ$_2$ 'ನಾಲ್' ನೋ.

ನಾಊದ (ನಾ) (?) : ಮುಡೆ ೧ ನಾಊದನ ಬಗುಳ ಗದೆ ಮೇಲೆ ಮುಡೆ ೨ (ಸೌಇಎ. ೧೯೩೨, ಉಡುಪಿ. ೩೦೬-೬ : ?). [?]

ನಾಂ 'ನಾನ್$_2$' ನೋ.

ನಾಂಗರು, ನಂಗರಿ, ನಾಕರ (ನಾ). ನೇಗಿಲು ; ಹಲ ; ಲಾಂಗಲ : ದರ ನಾಂಗರು ೧ಕ್ಕೆ ಗು ೪ ನಾಲ್ಕು ವರಹಾದ ಪ್ರಕಾರ (ಮಹಾವಂ. II, ೬೨). **ನಂಗರಿ :** ನಂಗರಿ ಹೊಡೆಯುವುದರಿಂದ ನೆಲ ಪೊಳ್ಳಾಗಿದೆ (ರೂಢಿ). **ನಾಕರ :** 'ನಾಕರಕಂಟೆ' ಪರಾ.

[←ಮರಾ. ನಾಂಗರ್, ನಾಗರ್. / ಪ್ರಾ. ಣಂಗಲ. / ಸಂ. ಲಾಂಗಲ]

ನಾಂಗಲಿಕ 'ನಾಂಗುಲಿಕ$_1$' ನೋ.

ನಾಂಗುರಿಕ 'ನಾಂಗುಲಿಕ$_1$' ನೋ.

ನಾಂಗುಲಿಕ$_1$, ನಾಂಗಲಿಕ, ನಾಂಗುರಿಕ, ನಾಂಗುಲೀಕ, ನಾಗುಲಿಕ (ನಾ). ಒಂದು ಬಗೆಯ ಗಿಡ ; ಕೋಳಿಕುಟುಮನ ಗಿಡ : ಜಲರುಹ ಕಂದಾನ್ವಿತಮಿರುಳೆಲೆಯೊಳ್ ಸಲೆ ಕಟ್ತಿಗಿರಿಯ ಬೂದಿಯ ತಳಿದೂಱ ಲೊಳಿಂಬಿನೆ ಕುದಿಯಿಸೆ ನಾಂಗುಲಿಕಮನಡುಗಾಜ್ಯದಿಂ ರಸಾಯನಮಕ್ಕುಂ (ಲೋಕೋಪ. ೮-೨೯) ; ದೃಷ್ಟಿ ದ್ರಾವಣಕ್ಕೆ – ಬಿದುರೆಲೆ . . . ನಾಂಗುಲಿಕ ಇವನ್ನು ಕೂಡಿ ಮರ್ದಿಸಿ ತಿಲಕವಿಡಲು ದೃಷ್ಟಿದ್ರಾವಣ ಮಾಣ್ಗುಂ (ವಿಸ್ತವಿ. ೨೦೦) : ವಿಷಮುಷ್ಟಿ ನಾಂಗುಲಿಕ ಶಶನಯನ ಪಿತ್ತವರರಸವು ತಾಂಬೂಲ ದೊಡಗೂಡೆ ಸ್ತ್ರೀವಶವು ಹುಸಿಯಲ್ಲ ನೋಡ (ಸರ್ವಜ್ಞ. ೧೯೭೯) **ನಾಂಗಲಿಕ :** ಮೂಲವ್ಯಾಧಿಗೆ–ನಾಂಗಲಿಕ, ಮೊಗನ ಹರುವೆ, ಚಿತ್ರಮೂಲ . . . ಕಲಸಿ ಗುದದಲ್ಲಿ ಪೂಸೆ ಎಲ್ಲಾ ಮೂಲವ್ಯಾಧಿ ಕೆಡುಗುಂ (ವಿಸ್ತವಿ. ೦೭೭). **ನಾಂಗುರಿಕ :** ವಿಷಮುಂಗುರಿಯಂ ಗುರು ನಾಂಗುರಿಕಂ ಬಜೆಯಿವನರೆದಿಂಬಿಂ ಪೂಸೆ ಕಂಟಕೋಗ್ರವಿಷಘ್ನಂ (ಖಮದ. ೨-೨೦೩). **ನಾಂಗುಲೀಕ :** ಬಯಸಿ ಚುಂಬಿಸಿದರ್ ಸ್ಮರನಿರ್ದು ನಾಂಗುಲೀಕದ ಕುಸುಮಂಗಳಂ ಪಱಿದು ಪತ್ತಿಸಿದಂತೆವೊಲೊಪ್ಪಿ ತೋರ್ಪಿನಂ (ಕಾವ್ಯಸಾ. ೬೬೬ ಶೂದ್ರಕ). **ನಾಗುಲಿಕ :** "ಲಾಂಗಳಿಃ, ಅಗ್ನಿಶಿಖಾ ಈ ೨ ನಾಗುಲಿಕಂ" (ನಾಚಿರಾ. ೧೦೦).

[<ಸಂ. ಲಾಂಗಲಿಕ]

ನಾಂಗುಲಿಕ$_2$ (ನಾ). ಒಂದು ಬಗೆಯ ಗಿಡ; ಸರ್ಪಾಕ್ಷಿ ಗಿಡ; ನಾಗದಾಳಿ; ಮುಂಗುಸಿಮೇವುಗಿಡ ; ನಾಗಸುಗಂಧ : "ವ್ಯಾಳಗಂಧಿಯೆನೆ ನಾಂಗುಲಿಕವಕ್ಕು" (ಮಂಗರಾ. ೪೦-೩೦). [< ಸಂ. ನಾಕುಲಿಕ]

ನಾಂಗುಲಿಕಬಳ್ಳಿ (ನಾ). ನಾಂಗುಲಿಕದ ಬಳ್ಳಿ,-ಲತೆ ; ಕೆಂಪು,ಹಳದಿ ಹೂವು ಬಿಡುವ ಸುಂದರವಾದ ಹಾಗೂ ಮೇಲಕ್ಕೆ ಹಬ್ಬಿಕೊಂಡು ಹೋಗುವ ಒಂದು ಬಗೆಯ ಬಳ್ಳಿ : (ಕ). [ನಾಂಗುಲಿಕ$_1$ + ಬಳ್ಳಿ]

ನಾಂಗುಲೀಕ 'ನಾಂಗುಲಿಕ$_1$' ನೋ.

ನಾಂಚಿಕೆ 'ನಾಣ್ಚಿಕೆ' ನೋ.

ನಾಂಚು 'ನಾಣ್ಚು$_1$' ನೋ.

ನಾಂಟಿಸು, ನಾಟಿಸ (ಕ್ರಿ). ೧. ಚುಚ್ಚುವಂತೆ ಮಾಡು ; ನಾಟಿಕೊಳ್ಳುವಂತೆ ಮಾಡು : ಚಿಗುರುದೋಱಿದ ತಳಿರ ತಱಿತಱಿದಗಲದಲಿ ಪಸರಿಸುತ ಪದಕಂಟಕವ ನಾಂಟಿಸದೆ [ಪಾಕಾಂ. ಪಂಟಿಸುತ]... ಜನಕನ ಮಗಳ ನಡೆಸುತ ತಂದರೊಂದು ಮಹಾಸರೋವರಕೆ (ತೊರರಾ. ೨-೪-೦೯); ಕುಂಟಣಿಯರೆಳೆವ ಕುಲಟೆಯರಂತೆ ಖುರಪುಟವ ನಾಂಟಿಸಂಗವನೆಳೆದು ಕಾಲಮಹಿಷಿಯು (ಜಿನಮು. ೫-೫೦). ೨. [ಗಣಿತ] ಗುಣಿಸು : ಒತ್ತಿಱಿ ನಾಂಟಿಸಷ್ಟು ? ಬಳಸೊತ್ತು . . . ಗುಣಿಸು ಪೆರ್ಚಿಸೆನಲಿವು ಗುಣಕಾರ ಭಾಷೆಗಳ್ ಪೇಟ್ ಗಣಕಾ (ವ್ಯವಹಾ. ೧೦-೧೨). **ನಾಟಿಸು :** ೩. ಉಂಟುಮಾಡು; ನೆಲೆಗೊಳಿಸು : ಮನದ ಬೆಚ್ಚ ಬಱಿಯಱಿವು ಬಱಿದು ಬೆಱಗನೆ ನೋಟದೊಳ್ ನಾಟಿಸೆ [ಪಾಕಾಂ. ನಾಂಟಿಸಿ] (ಅರ್ಧನೇ. ೨-೬೦ ಪ); ಬೇಟದ ಸೊಗಸಂ ಪ್ರಿಯರೊಳ್ ನಾಟಿಸುತುಂ . . . ಶಬರಿಯರ್ ನಡೆತಂದರ್ (ಉದ್ಯಟ.೨-೬೨) : ನಾಟಿಸುವೆನವರಱಿವಿಗಱಿವನು ಮಾಟವೆಲ್ಲವ ಮಾಣಿಸುವೆನೆನುತಿರ್ದ ಪ್ರಭುರಾಯ (ಪ್ರಭುಲೀ. ೨೦-೩೪) ; ಕೂಟದೊಳಗೆ ದಣಿವನು ಪೊರ್ದದಾ ಸತಿ ನಾಟಿಸಿದಳು ತನ್ನೊಳವನ (ಸೇಮಿಸಂ. ೧೦-೯೨) : ನಾಟ್ಯರಸದಲಸಿಕೆಯು ಪ್ರೇಕ್ಷಕರ ಕಣ್ಣು ಕಿವಿಗಳ ಮೂಲಕ ಹೃದಯದಲ್ಲಿ ನಾಟಿಸಲಾಗುವುದು (ಪ್ರಬಂಧ. ೨೫). ೪. ಊರು ; ಆಧಾರ ಕೊಡು : ಮಡದಿಯ ಪೀನ ಪಯೋಧರಭಾರಕೆ ನಡು ಮುಱಿದಪುದೆಂದಜನು ನಡುಗೆ ನಾಟಿಸಿ ನಟ್ಟ ಕಂಭಮೆನಲು ಬಾಸೆ ಕಡುಚೆಲುವಾಗೊಪ್ಪುತಿಹವು (ಅಂಜಚ. ೫-೧೨೩) : ಅವರುಗಳ ಪೊಡೆಯೊಳಗೊಂದಕೆಂಟೊಟ ನಾಟಿಸಿ ಬಂದ ಪಡೆಯನಿಕ್ಕಿದ ರಣಬಲಿಯ (ಮೋಹತ. ೩೫-೧೩). ೫. "ಸೃಷ್ಟಿಸು" (ತೊರರಾ. ಕೋಶ) : ನಾಟಿಸುವ ಜಗದವನನಣುವಿಗೆ ಪಾಟಿಮಾಡದ ಸುಪ್ರಸಿದ್ಧನ ಘಾಟಿ ರಣಸುಖವಲ್ಲೆನುತಲೊದಱಿದವು ಕಹಳೆಗಳು (ತೊರರಾ. ೬-೪೬-೩೫). ೬. (ಆಲಂ) ನಿರೂಪಿಸು ; ಹೇಳು : ಬೇಟೆಯ ನೆವದಿಂದರಸಿನ ಕೂಟದ ನಾಯಕರ್ ಬಂದುಮಿಾ ತಮನಂ ನಿರ್ದಾಟಿಸಿ ಕೊಂದರೆನುತ್ತಂ ನಾಟಿಸು ನೀನಿವನ ಪೆಂಡಿರೊಳ್ ಮಕ್ಕಳೊಳಂ (ನನ್ನಚಾ. ೨-೧೨೨) ; ರತಿಯ ಪ್ರಸಂಗವ ನಾಟಿಸಿದನು ಕಿವಿಯೊಳಗೆ (ಮೋಹತ. ೯-೪೬). ೭. ಚೆನ್ನಾಗಿ ಸೇರಿಕೊಳ್ಳು ; ಅಂಟಿಕೊಳ್ಳು ; ಗಂಟುಬೀಳು : ಕೂಟದಲಿ ಕೋಪ ಕೊನರಿಸುತ ಶಂಖಿನಿಯು ನಾಟಿಸದೆ ಬಿಡಳು (ಸರ್ವಜ್ಞ. ೦೬೪೩) : ನೋಜಕ್ಕೆ ಬಲು ಚೆಂದ ಕೂಟಕ್ಕೆ ಕಡುನರಕ ನಾಟಿಸಿ [ಸ]ಲು ಪ್ರಾಣಧನ ಹಾನಿ ಸೂಳೆ ಯೇಱೂಟವೇ ಬೇಡ(ಸರ್ವಜ್ಞ. ೧೯೫೫). [ನಾಂಟು + – ಇಸು$_3$]

ನಾಂಟು, ನಾಟು$_1$ (ಕ್ರಿ). ೧. (ಮುಳ್ಳು, ಬಾಣ ಮೊದಲಾದುವು) ಒಳ ಹೊಗು ; ಒಳಕ್ಕೆ ಚುಚ್ಚು : "ನಾಂಟು–ಅಂತರ್ಭೇದೇ (ನಾಟಿಕೊಳ್ಳು)" (ಶಮಧಾ) ; ಕಪೋಲಕಂಟಕನಿಕಾಯಾಗ್ರಂಗಳಿಂ ಕೂಡೆ ನಾಂಟಿದುದೋ ಮೇಣ್ ಸುಭಗತ್ವವೆಂಬ ಗುಣದಿಂ ಪೊಲ್ದತ್ತೊ ಮೇಣೆಂಬಿನಂ ಪದಪಿಂ ನಟ್ಟರೆ ದಿಟ್ಟಿಯಂ ತೆಗೆದೆನೆಂತೆಂತಾನುಮುದ್ವೇಗದಿಂ (ಕಾದಂಪೂ. ೭೭೩) ; ಜವನಾಳಂತಪ್ಪ ಕಣೆ ರೋಮರೋಮಂದಪ್ಪದೆ ನಾಂಟಿದುವು (ಪಂಠಾಮಾ. ೦೩-೭೦) : ನಾಂಟಿದುವರಿಭಟರಂಗಮಂ . . . ಶರಂಗಳ್ (ಜಗವಿ. ೮-೫೩); ಕಂಟಕಂಗಳ್ ನಾಂಟಿ ಬಿದ್ದು ಕಾಲೊಡೆದು ಬಾಯ್ ಗಂಟಲ್ಗಳೊಣಗಿ ಗತಿಗೆಟ್ಟು (ಜಿಬಪು. ೨೦-೨೧) ; ಸಲೆ ಪಜ್ಜೆಯನಿಡೆ ನಾಂಟುವ ಮೊ ಮುಳ್ಳಿನಿಂದೊಳುಗಾಡೆಸೆದುದೇನೆಂಬೆ (ಕಂನವಿ. ೧೮-೪೭). ೨. ತಗುಲು ; ಸಂಪರ್ಕ ಹೊಂದು; ಸೇರು ; ಕೂಡು ; ಅಂಟು : ಬೆಂಗೆ ನೀರ ಧಾರೆಗಳುಱಿ ನಾಂಟಲೀಂಟಿದುದು ನೇಹದೆ . . . ಚಾತಕಂ (ಗಿರಿಕ. ೯-೪೮) ; ಪಾಪಂಗಳಾಟಂ ನಾಂ[ಪಾಕಾಂ. ನಾ]ಟವನ್ನಾಯದ ಕಳೆಗೆ ತೆಕ್ಕವು . . . ಮುಕ್ತಿಯ ಮೂಲವೆನಿಸುವವು ಕಾಶಿ ಹಂಪೆಗಳು (ಹಚಕಾ. ೮-೫೯) ; ಗುರು ಕುಚಂಗಳಂ ನೋಳ್ಪ ಕಾಮುಕನಿಕರದ ದಿಟ್ಟಿ ನಾಂಟದ ತೆಱದಿ ಮಱಿಮಾಡಿದಂದದಿಂ (ಸೌಂದಪು. ೭-೨೮). ೩. (ಗಿಡ ಮೊದಲಾದುವನ್ನು) ಭೂಮಿ

ಯಲ್ಲಿ ನೆಡು.–ಊರು,–ಹಚ್ಚು : ಬಗೆ ಮುಟ್ಟಿರ್ದೆಡೆಯೊಳ್ ತಳಿರ್ತ ಮರನಂ ಹೇಮಂತದೊಳ್ ಕಿಟ್ಟು ನಾಂಟುಗೆ (ಲೋಕೋಪ ೬-೧೭) ; ಪಾಂಥರೀಂಟೆ ವಿಕಸತ್ತೃಷ್ಣಾತುರರ್ ಚಿತ್ತಭೂತಲದೊಳ್ ನಾಂಟಿದ ಬೇಂಟಮೇಂ [ಮೆಂ] ಬಗೆಗೆ ನೀರ್ಪೊಯ್ವಂತೆ ಭೃಂಗಾರಶೀತಲತೋಯಂ ಗಳನಾಂತು ಪಾಣಿತಳದೊಳ್ ಪೊಯ್ದರ್ ಪ್ರಪಾಕಾಂತೆಯರ್ (ಲೀಲಾವ. ೬-೧೨೯). ೪. ಮೊಳೆ ; ಮೊಳಕೆಯಾಗು : ಬಿತ್ತಿದಾಗಳಲ್ಲಿಗಪ್ಪನಿತೆ ಮಟ್ಟಿ ಕೊಂಡು ಕೆಸಱಾಗಿ ನಾಂಟಿ ಬೆಳದೆಱಗಿರ್ದಡಾಗಳ್ (ಬಂಹರಿ. ೯-೩೩ ವ). ನಾಟು$_1$: ೧. ನಾಟುವ ನನೆಗಣೆ ಚಿತ್ತಮನಾಟವಿಟಂಬರಿಸಿ ನೆನಹದಿಂ ಪೊಸವೇಟಂ ಕೋಟಿ ತೆಱನಾಗೆ (ಲೀಲಾವ. ೯-೧೨೦) ; ಉದ್ಭಟೇಂದ್ರನಿಟ್ಟ ಶೂಲವೈದೆ ಮುಂ ಕೊಂಡು ನಾಟಿ ವಕ್ಷಮಂ (ಉದ್ಭಟ. ೪-೧೦೮) ; ನೋಟದಲಿ ಮದನಾಸ್ತ್ರವೆದೆಯಲಿ ನಾಟಿದವು (ತೊರರಾ. ೧-೧೪-೨೪) ; ಹೊಂಗಳಸ ಚಂಡವುತ್ತರದಕ್ಷಿಣವೀಧಿಗೊಟ್ಟು ಬ್ರಹ್ಮಾಂಡವ ತುಡುಕೆ ನಾಟಿದುವು (ಮೋಹತ. ೨೦-೨೯) ; ಕೂರುಗುರು ನಾಟದೊಲ್ಪಿಡಿ ಕುಚಂಗಳ (ವಂಕಾರಾ. ೧-೨-೪೦) ; ರಣರಂಗದ ಮತ್ತೊಂದು ಕಡೆ ಭಾಮನು ಖಡ್ಗ ನಾಟಿ ಬಿದ್ದಿದ್ದಾನೆ (ಸಂಸಕ. ೧೦೦). ೩. ಪುಣ್ಯಾರ್ತ್ಥ ಕಲ್ನಾಟಿ ಬಿಟ್ಟಿದತ್ತಿ (ಎಕ. XIV, ಮೈಸೂರು. ೧೨೭-೧೦ ; 900) ; ನಾಟಿರ್ದ ಪಸುರ್ಗಿಡು ಪುಷ್ಪಲತೆಯ ವೃಕ್ಷ ವಾಟಿಯೊಳ್ ಕುಸುಮಸೌರಭಕೆ ಊಟೆವರಿವ ತುಂಬಿಗಳ ದೊಂಬಿ . . . ಒಪ್ಪಿದುವು (ಮೋಹತ. ೫-೨೫) ; ನೀರ ಕಡೆಗೆ ನಾಟಿದ ಮರ ಚಿಗುರದೆ ಬಿಟ್ಟೀತೆ ? (ಗಾದೆ). ೫. (ಮನಸ್ಸಿಗೆ) ಹತ್ತು ; ಹಿಡಿ ; ತಟ್ಟು : ಬಗೆಯೊಳ್ ನಾಟುವಿನಮಮರಿ ಸಂಸ್ಕೃತಿನಾಟಕಮುಮನೆನಗೆ ನೆಱೆಯೆ ತೋಱಿಡಳೀಗಳ್ (ಆದಿಪು. ೯-೪೫) ; ಭಯಂ ನಾಟಿ ಚಿತ್ತದೊಳ್ ದೂತರೈತಂದಾ ಕೃತಾಂತನೊಡನಿಂತೆಂದರು (ಜಿಬಪು. ೫೦-೨೪) ; ಈ ವಿಚಾರಗಳು ಶಂಕರಭಟ್ಟರ ಮನಸ್ಸಿಗೆ ನಾಟಿದವು (ಗಂಗಾಸಾ. ೩೦) ; ಅವಕಾಶವುಂಟಾದಾಗ . . . ಅವುಗಳ ಗುಣದೋಷಗಳನ್ನೂ ನಾಟುವಂತೆ ಬೋಧಿಸಬೇಕು (ಸಾಹಿಜೀ. ೭೮). ೬. ತೋರು ; ಉಂಟಾಗು : ಬೇಟಕ್ಕೆ ತವದ ಕೂಟಂ ಕೂಟಕ್ಕೆ ತನೂಜರಾ ತನೂಜರೊಳು ಮುದ್ದಾಟಂ ಫಲಮದೆ ತಮ್ಮೊಳ್ ನಾಟದು ಗಡ ಪೆಜವು ಸುಖಿಯಾಗಳೊಳೇನೋ (ಚಂದ್ರಪು. ೩-೪೨) ; ಕಿಡಿ ನಾ[ಪಾಠಾಂ. ದಾ]ಟಿದವು ಕಂಗಳಲಿ ಕಾಲಕರೋಟಿ ಮೂಲಾಧರನವೊಲು ಮುಳಿದೆದ್ದನಸುರೇಂದ್ರ (ತೊರರಾ. ೬-೧೭-೭). ೭. ಒಗ್ಗು ; ಹೊಂದಿಕೆಯಾಗು : ಈ ಔಷಧಿ ಅವರ ಮೈಗೆ ನಾಟುವುದಿಲ್ಲ (ರೂಢಿ). ೮. (ಆಲಂ) ಶಕ್ತವಾಗು ; ಸಮರ್ಥವಾಗು : ಫಣಿಪತಿಗೆ ನಾಲಗೆ ನಾಟದೆಣಿಸಲು ಗಣನೆಯಿಲ್ಲದ ರಾಮಸೈನಿಕವ (ತೊರರಾ. ೪-೭-೨೫).

[ದೇ.ಗಿ ತಮಿ. ಮಲ. ನಾಟ್ಟು ; ತುಳು. ತೆಲು. ನಾಟು]

ನಾಂಟುಗೊಳ್ (ಕ್ರಿ). ಬೇರೂರು ; ನಾಟಿಕೊಳ್ಳು ; ನೆಲಸು ; ಸ್ಥಿರವಾಗು : ಸಿರಿ [ಱೊಪ್ಪು]ಗೊಂಡುದು ನಯಂ ನೆಲೆಗೊಂಡು ನನ್ನಿ ನಾಂಟುಗೊಂಡುದು (ಸೌಇಇ XV, ೨೦೭-೧೪ ; 1205). [ನಾಂಟು + ಕೊಳ್$_1$]

ನಾಂಟ್ಯ (ನಾ). ನಾಟ್ಯ ; ನರ್ತನ : ನಂದಿಕೇಶ್ವರ ಭೃಂಗಿ ನಾಂಟ್ಯ ನಮ್ಮಲಿಂಗದ ಮುಂದೆ (ಬಸವ. ೫೬೩) ; ಬಂದ ಬಹುರೂಪಿ ನಿಂದ ಕೈಯೊಳು ಸಂದ ಪುರಾತನರು ಕೇಳಿ ಕಂದರ್ಪನ ಕೊಂದು ನಿಂದು ನಾಂಟ್ಯವನಾಡಿದಂದಂದಿನ ಬಹುರೂಪನಾಹೋ (ಶಿವಗೀ. ೧೭೯-೮೮೩) ; ನಾಂಟ್ಯ[ಪಾಠಾಂ. ನಾಟ್ಯ]ವಾಡುವ ಭೃಂಗಿಪನ ಕಂಡು ಪರಶಿವಂ ನಸುನಗುತಿರೆ (ಪ್ರಭುಪು. ೨-೬೯) ; ತಾಂಡವ ನಾಂಟ್ಯ ನೃತ್ಯ ಲಾಸ್ಯ ಗುಂಡಿಲ ಪಿಕ್ಕಣ ಲಚ್ಚಣ ಅಪರಿಪಾತ್ರ ಸುಪಾತ್ರ ಸರ್ವತೋಭದ್ರಯೆಂಬ ದಶಪಾತ್ರಂಗಳ ತೋಱಿ (ಭೈರಪು. ೧-೭೦ ವ). [<ಸಂ. ನಾಟ್ಯ]

ನಾಂಡರಸ 'ನಾಡರಸು' ನೋ.

ನಾಂಡು 'ನಾಡು' ನೋ.

ನಾಂಡೆಱೆಯ 'ನಾಡೆಱೆಯ' ನೋ.

ನಾಂತ (ಗು). ೧. ನಕಾರವು ಕೊನೆಯಲ್ಲಿರುವ: ನಾಂತಾವ್ಯಯಪದಕ್ಕಮನು ಕೃತಿಪದಕಂ (ಶಮದ. ೧೯೩). (ನಾ). ೨. ನಕಾರವು ಕೊನೆಯಲ್ಲಿರುವ ಪದ : ನೆಗೞ್ದಿರ್ದ ರೇಫ ಱಟ ನಾಂತ ಗಾಂತ ಸಾಂತೋತ್ವದಿದಿರ ವತ್ವಂ ಪತ್ವಂ (ಶಮದ. ೨೩೨). [ನ + ಅಂತ$_2$]

ನಾಂದ 'ನಾನ್$_1$' ಪರಾ.

ನಾಂದಿ$_1$ 'ನಾಂದು$_1$' ಪರಾ.

ನಾಂದಿ$_2$ (ನಾ). ೧. ವಿವಾಹ ಮೊದಲಾದ ಶುಭಕಾರ್ಯಗಳ ಅಂಗವಾಗಿ ಅವುಗಳ ಪ್ರಾರಂಭದಲ್ಲಿ ಪಿತೃದೇವತೆಗಳ ಪ್ರೀತ್ಯರ್ಥವಾಗಿ ಮಾಡುವ ಒಂದು ಸಾಂಪ್ರದಾಯಿಕ ವಿಧಿ : ನಾಂದಿಗೆ ಕೂಡಿದ ಮಂದಿ ಪ್ರಸ್ತಕ್ಕೆ ಕೂಡೀತೇ ? (ಗಾದೆ) ; ಕಟ್ಟಿದ ಲಗ್ನದಲ್ಲಿ ಧಾರೆಯಾಗಬೇಕು. ನಾಂದಿ, ನವಗ್ರಹ ಎಲ್ಲ ಬೇಗ ಆಗಿಬಿಡಬೇಕು ಗುರುಗಳೇ (ರೂಢಿ). ೨. [ಕಾವ್ಯಮೀ] ನಾಟಕ, ಕಾವ್ಯ ಮೊದಲಾದುವುಗಳ ಪ್ರಾರಂಭದಲ್ಲಿ ಬರುವ ಮಂಗಳ ಪದ್ಯ: "ನಾಂದಿ ದೇವತಾಸ್ತೋತ್ರರೂಪವಾಗಿಯೂ ರಾಜನ ಪ್ರಜೆ ಮುಂತಾದವರಿಗೆ ಆಶೀರ್ವಾದರೂಪವಾಗಿಯೂ ಇರತಕ್ಕ ವಚನ" (ಕೈಪಿಡಿ. ೨೦೨); P ಕಾವ್ಯಮೀಮಾಂಸೆಯಲ್ಲಿ ಈ ಬಗೆಗೆ ಅನೇಕ ಚರ್ಚೆಗಳು ನಡೆದಿವೆ. ನಾಂದೀಶ್ಲೋಕದ ಕಥಾಂಶ, ಪದನಿಯಮ ಇತ್ಯಾದಿಗಳಲ್ಲಿ ಭಿನ್ನಾಭಿಪ್ರಾಯವುಂಟು. ನಾಂದಿಯಲ್ಲಿ ಆಶೀರ್ವಚನ, ನಮಸ್ಕಾರ ಮತ್ತು ವಸ್ತುನಿರ್ದೇಶವೆಂಬ ಮೂರು ವಿಧಗಳಿವೆ : ನಾಂದಿಯಿನನಂತರಂ . . . ಬಲ್ಲಾಳದೇವನನ್ವಯಕಥನಂ (ಯಶೋಚ. ೧-೬); ತಾಳಮಾರ್ಗಗಳನ್ನನುಸರಿಸಿ ವಿಧಿಸಲ್ಪಟ್ಟ ನಾಂದಿಯನ್ನು ಕೂಡ ಸಂಸ್ಕೃತ ನಾಟಕಕರ್ತರು ಒಂದು ವೃತ್ತವಾಗಿ ಬದಲಾಯಿಸಿಕೊಂಡರು (ಸಾಹಿಜೀ. ೧೮). ೩. ಸಂತೋಷ; ಆನಂದ; ಸಂತೃಪ್ತಿ. ೪. (ಆಲಂ) (ಶುಭಕಾರ್ಯದ) ಆರಂಭ; ಮೊದಲು; ಪ್ರಾರಂಭ: ವಿಜಯಪ್ರಸ್ಥಾನನಾಂದೀನಿನದಾನಂದಿತ ದಿಕ್ಪಾಲಚಕ್ರನುಂ . . . ಮೇದಿನೀಚಕ್ರನುಂ (ಆದಿಪು. ೧೪-೯೧ ವ) ; ಭರತ ವಾಕ್ಯಮೀ ಐಹಿಕದ ನಾಟಕಕೆ ತಾನಾದೊಡಂ ಮೃತ್ಯು ತಾಂ ನಾಂದಿಯೈಸಲೆ ಪೇಳ್ ಅಲೌಕಿಕಕೆ ? (ಶ್ರೀರಾಮಾ. ೧೧೯-೨೦೬); ಜತೀಂದ್ರನ ಬಲಿದಾನವೇ ಭಾರತದ ಸ್ವಾತಂತ್ರ್ಯಘೋಷಣೆಗೆ ನಾಂದಿಯಾಯಿತು (ಆತ್ಮಾರ್ಪ. ೧೩೦) ; ಅನಾಗರಿಕ ದಾಸ್ಯಪದ್ಧತಿಯ ಅವನತಿಗೆ ಅದು ನಾಂದಿಯಾಗಿತ್ತು (ಪುನರು. ೨೬೨). [ಸಂ. ನಾಂದೀ]

ನಾಂದಿಸು, ನಾದಿಸು$_1$ (ಕ್ರಿ). ನೆನೆಸು ; ಒದ್ದೆಮಾಡು ; ತೋಯಿಸು : ಪ್ರೇಮಪೀಯೂಷದಿಂ ಪಿರಿದುಂ ನಾಂದಿಸುವಂತೆ ಮಾಣ[ದೊಲವಿಂದಾ ದೇವಿ] ಪೊಯ್ದಳ್ ಮಹೀವರಶೋಭಾಂಗದ ಮೇಲೆ ಲೀಲೆಯೊದವಿಂ ಕರ್ಪೂರಪೂರಾಂಬುವಂ (ಕುಸುಮಾ. ೫-೧೪೬). ನಾದಿಸು$_1$: ಎಲೆ ಮರುಳೆ ನಿನ್ನೊಡಲ ಸೀಳಿಯೆ ತಿಳಿರಕಂತದಲಿ ತಾಯ ತುಱುಬನು ನಾದಿಸುವೆನೆಂದ (ಕುವ್ಯಾದ್ರೋ. ೫-೪೪). [ನಾಂದು$_1$ + – ಇಸು$_3$]

ನಾಂದೀಕರ (ನಾ). ಮಂಗಳಪದ್ಯಗಳನ್ನು ಹಾಡುವವನು ; ಮಂಗಳ ಪಾಠಕ : "ನಾಂದೀವಾದೀ, ನಾಂದೀಕರಃ – ೨ ಆಶೀರ್ವಾದದಿಂದ ಕೂಡಿದ ದೇವತಾದಿಗಳ ಸ್ತೋತ್ರವನ್ನು ಮಾಡುವ ಪಾಠಕರು" (ಸಿದ್ಧಾಂತಿ. ೨೮೮).

[ಸಂ.]

ನಾಂದೀದೇವತೆ (ನಾ). ನಾಂದಿ ಎಂಬ ಶುಭಕಾರ್ಯದ ಪ್ರಾರಂಭದಲ್ಲಿ ಉದ್ದಿಷ್ಟರಾದ ಪಿತೃದೇವತೆಗಳ ವರ್ಗ; P ಪ್ರಪಿತಾಮಹಿ, ಪಿತಾಮಹಿ, ಮಾತೃ-ಪ್ರಪಿತಾಮಹ, ಪಿತಾಮಹ, ಪಿತೃ-ಮತ್ತು ಸಪತ್ನೀಕರಾದ ಮಾತಾಮಹವರ್ಗ–ಇವರೆಲ್ಲ ಈ ವರ್ಗಕ್ಕೆ ಸೇರುತ್ತಾರೆ : ನಾಂದೀದೇವತೆಗಳು ಮೊದಲು ತೃಪ್ತರಾದರೆ ಮುಂದಿನ ಕರ್ಮಕ್ಕೆ ಮಾರ್ಗವಾಗುತ್ತದೆ (ರೂಢಿ). [ಸಂ. ನಾಂದೀದೇವತಾ]

ನಾಂದೀಪದ (ನಾ). ಮಂಗಳಗೀತ; ಗ್ರಂಥಾರಂಭದಲ್ಲಿ ಬರುವ ಮಂಗಳ : ರಸಮಂ ಭಾವಮನರ್ಥಮಂ ರಚನೆಯಂ ಕಾವ್ಯಜ್ಞರಾರಯ್ದು ಭಾವಿಸಿ ನಾಂದೀಪದ ನಾಯಕಾಭ್ಯುದಯಪರ್ಯಂತಂಬರಂ ಕೂಡೆ ಶೋಧಿಸಿ ನೋಟ್ಕೀ ರಘವಂಶರಾಮಕೃತಿಯೊಳ್ ಪತ್ತೆಂಟು ಪದ್ಯಂಗಳಂ (ಪಂರಾಮಾ. ೧-೩೩); ನಾಂದೀಪದವ ಪಾಡಿದನು ನಂಬಿ ಶಂಭುವಿನಿದಿರೊಳು (ಸೌಂದಪು. ೫-೨೬). [ಸಂ.]

ನಾಂದೀಪದ್ಯ (ನಾ). = ನಾಂದೀಪದ : ನಾಟಕದ ಪ್ರಾರಂಭದಲ್ಲಿ ನಾಂದೀಪದ್ಯವನ್ನು ಹಾಡಿದರು (ರೂಢಿ). [ಸಂ.]

ನಾಂದೀಮುಖ (ನಾ). ೧. ವಿವಾಹವೇ ಮೊದಲಾದ ಶುಭಕಾರ್ಯಕ್ಕೆ ಮೊದಲು ಮಾಡುವ ನಾಂದೀಕರ್ಮದಲ್ಲಿ ಆವಾಹಿಸಲ್ಪಡುವ ಪಿತೃಗಳ ವರ್ಗ; ನಾಂದೀಶ್ರಾದ್ಧದಲ್ಲಿ ಉದ್ದಿಷ್ಟರಾದ ಪಿತೃಗಳು. ೨. = ನಾಂದೀಶ್ರಾದ್ಧ : ನಾಂದೀಮುಖಮಂ ನಿರ್ವರ್ತಿಸಿ ಶುಭಲಕ್ಷಣಲಕ್ಷಿತನುಂ ಸನ್ನಾಹಕರ್ಮನಿರ್ಮಿತನುಂ . . . ಭದ್ರಮನನುಮಪ್ಪ ವಿಜಯಗಜಮುಮಂ . . . ಅರ್ಚಿಸಿ (ಪಂಪಭಾ. ೧೦-೪೬ ವ) ಆಕೆಗೀ ಜಿನಕಥಾನಾಂದೀಮುಖಂ ಮುಖ್ಯಮಂಗಳಮರ್ಹತ್ಪತಿ ಮಂಗಳಂ . . . ಧರ್ಮಂ ಮಹಾಮಂಗಳಂ (ಅರ್ಧನೇ. ೧-೨೧); ಗೋವಿಂದ ನಾಂದೀಮುಖವನು ವಿರಚಿಸಿ ವಿಪ್ರರಿಂದ ತನುಜೆಯ ಶೃಂಗರಿಸುವುದೆಂದು ಕೆಳದಿ ಜನಕೆ ಪೇಳಲು (ಜೀವಸಾಂ. ೧೭-೩೧). [ಸಂ.]

ನಾಂದೀವಾದಿ (ನಾ). = ನಾಂದೀಕರ : "ನಾಂದೀವಾದೀ. ನಾಂದೀಕರಃ – ೨ ಆಶೀರ್ವಾದದಿಂದ ಕೂಡಿದ ದೇವತಾದಿಗಳ ಸ್ತೋತ್ರವನ್ನು ಮಾಡುವ ಪಾಠಕರು" (ಸಿದ್ಧಾಂತಿ. ೨೮೮). [ಸಂ. ನಾಂದೀವಾದಿನ್]

ನಾಂದೀವಿಧಿ (ನಾ). ೧. = ನಾಂದಿ$_2$. ೨. [ಕಾವ್ಯಮೀ] ಅಭಿನಯಕ್ಕೆ ಪೂರ್ವಭಾವಿಯಾಗಿ ಮಾಡುವ ಮಂಗಳಾಚರಣೆಗೆ ಸಂಬಂಧಪಟ್ಟ ಕಾರ್ಯಕಲಾಪ : ಶುದ್ಧಚಿತ್ರಮೆಂಬ ಪೂರ್ವರಂಗಪ್ರಸಂಗದೊಳ್ ಜರ್ಜರ ಪೂಜಾಮಂಗಳ ಪದೋಚ್ಚಾರಣಪುಷ್ಪಾಂಜಲಿ ವಿಕ್ಷೇಪಣಾದಿ ನಾಂದೀವಿಧಿಯಂ ನಿರ್ವರ್ತಿಸಿ (ಆದಿಪು. ೭-೧೧೪ ವ). [ಸಂ.]

ನಾಂದೀಶ್ರಾದ್ಧ (ನಾ). ಮಂಗಳಕಾರ್ಯಗಳಿಗೆ ಪೂರ್ವಭಾವಿಯಾಗಿ ನೆರವೇರಿಸುವ ಪಿತೃಕ್ರಿಯೆ : ಆಮೇಲೆ ನಾಂದೀಶ್ರಾದ್ಧವನ್ನು ಮಾಡಿಯಾವತ್ತು ಜಾತಕರ್ಮವಿಧಿಯನ್ನು ಮುಗಿಸಿದರು (ತುಳಸೀ. ೫೬). [ಸಂ.]

ನಾಂದೀಸ್ಥಾಪನೆ (ನಾ). ನಾಂದೀಕರ್ಮದಲ್ಲಿ ಮಾಡುವ ಪಿತೃದೇವತೆಗಳ ಆವಾಹನೆ : ಮುಂಜಿವಿಯ ನಾಂದೀಸ್ಥಾಪನೆಯ ಕಾಲಕ್ಕೆ ಟಳಕರಿಂದ ಮಾರುದ್ದದ ನಾಲ್ಕು ಪತ್ರಗಳು ಬಂದು ಸೇರಿದವು (ಸ್ಮೃತಿಚಿ. ೨೨೫).

[ಸಂ. ನಾಂದೀಸ್ಥಾಪನಾ]

ನಾಂದು$_1$, ನಾದು$_2$ (ಕ್ರಿ). ನಾಂದಿ$_1$ (ಭೂತನ್ಯೂ). ೧. ಒದ್ದೆಮಾಡು; ತೋಯಿಸು; ನೆನೆಸು : ಅತಿವಿಶದವಿಶಾಲೋರುಕ್ಷತದಿಂದೊಱೆದನಿತು ಜಡೆಯುಮಂ ನಾಂದಿ ಮನಃಕ್ಷತದೊಡನೆಟ್ಟಱಿಸಿದುದು . . . ಗಂಧಂ (ಪಂಪಭಾ. ೧-೧೦೫); ಪೊರೆದ ಪುಡಿಯನೊಡನೊಡನೆ ಬೆಮರ ಬಿಂದುಗಳ್ ನಾಂದೆ(ವರ್ಧಪು.೯-೬೦ ವ); ವಹ್ನಿಸಖ ನಾನೆಂಬೊಂದಹಂಕಾರಮಂ ತಳೆದಾ ಮಾರುತನಂ ಕರಂ ಪಿಡಿದು ತನ್ನೈಕಿಲ್ಗಳಿಂ ನಾಂದಿ ಸಂಚಳನಂ ಮಾಡಿ ತದಾಪ್ತನುರ್ಕ ಮುಱಿದೇಂ ಪರ್ಬಿತ್ತೊ ಹೈಮಾಗಮಂ (ರಾಜಶೇ. ೯-೭). ೨. ಒದ್ದೆಯಾಗಂ; ತೋಯಂ; ನೆನೆ : ಬಿಸಿಲಿಂ ಕಂದದ ಬೆಂಕಿಯಿಂ ಸುಡದ ನೀರಿಂ ನಾಂದದುಗ್ರಾಸಿ ಭೇದಿಸಲುಂ ಬಾರದ ಚಿನ್ಮಯಂ (ರತ್ನಾಶ. ೮). ೩. ಕರಗು; ದ್ರವರೂಪ ತಾಳು; ನೀರಾಗು: "ನಾಂದು–ದ್ರವೀಕರಣೇ" (ಶಮಧಾ); ನಿತ್ಯಬಿಂದುಗಳ್–ನಾಂದು. ಕಡುಂಬು (ಶಮದ. ೩೬ ಪ್ರಯೋ). ೪. (ಆಲಂ) ಆರ್ದ್ರಗೊಳಿಸು; ಮೃದುಗೊಳಿಸು : ಅರಸನ ಕಣ್ಣುಗಳಿಂದ ಚಿಮ್ಮಿದ ಅಶ್ರುಗಳು ವೀರಣ್ಣನ ಎದೆಯನ್ನು ನಾಂದಿದುವು (ಹಾಹುತ್ತ. ೧೦೦). **ನಾದು$_2$** : ೧. ಇನನಂದನನು . . . ಸರಳಮಂಚವ ಹೊದ್ದಿ ಭೀಷ್ಮನ ಚರಣಕಮಲವ ಹಿಡಿದು ನೊಸಲಿನೊಳೊರಸಿಕೊಂಡನು ನಾದಿದನು ಕಂಬನಿಯೊಳಂಘ್ರಿಗಳ (ಕುಪ್ಯಾದ್ರೋ. ೧-೨೧); ಕಡಲಿಡುವ ನಯನಾಮೃತಾನಂದಾಶ್ರುಪೂರದಲಿ ಅಡಿಗಳನು ನಾದಿದನು (ನಿಭಾಗ. ೬-೧೫-೬); ರುಧಿರದಿಂ ನಾದಿದಂ ಧರೆಯನುಸಿರ್ಗಾಳಿಯಿಂದಂ ಪಾಱಲೂದಿದಂ ರಣದೊಳ್ಪೆಣದ ರಾಶಿ ಮಾಡಿದಂ ಪರಬಲದೊಳಾ ಭೀಮನು (ಜೈಮಿಭಾ ೭-೪೭). ೫. ತೊಡೆ; ಪೂಸು; ಬಳಿ; ಲೇಪಿಸು : ಚಂದನಸೌರಭ ದೇಹಿಯ ಪದನಾರವಿಂದಕೆ ಪನಿನೀರ ನಾದಿ (ಮೋಹತ. ೯-೩೦).

[< ನಾನ್$_1$]

ನಾಂದು$_2$ 'ನಾನ್$_1$' ಪರಾ.

ನಾಂದೂರ್ (ನಾ). ಒಂದು ಊರಿನ ಹೆಸರು : ಖಣ್ಡಸ್ಫುಟಿತ ನವಕರ್ಮ್ಮ ದೇವಾರ್ಚ್ಚನಾಸತ್ರ ವೃತ್ತಿಗೆ ಸೀರೆನಾಡ ನಾನ್ದೂರನಿತ್ತಂ (ಎಕ. XII, ಶಿರಾ. ೩೮-೩೦; 878). [? +ಊರ್]

ನಾಂಬ$_1$ (ನಾ). ಆಲಸ್ಯಸ್ವಭಾವದವನು; ಸೋಮಾರಿ; ಅಲಸ : "ಸೋಂಬನೆಂದುಂ ನಾಂಬನೆಂದುಂ ಅಲಸುಗೆಕಾಱಂ" (ಕಶಸಾ. ೧೮-೩೬೦); "ನಾಂಬಂ ಸೋಂಬನುಮೆನಲ್ಕಮಲಸುಕೆಗಾಱಂ" (ಕವಿಕಂ. ೧೫೫); "ನಾಂಬನೆನೆ ಮೈಗಳ್ಳ" (ಕಶರ. ೫೩); ಕೆಲಸಮನೇನುಮನೊಡರಿಸದಲಸತೆಯಂ ಬಯಸಿ ಬಾಟ್ವ ನಾಂಬರ್ . . . ವಿಗರ್ಹಣಮನಾಲಿಪರ್ ಪ್ರಿಯಸಖರಿಂ (ನೀತಿಮಂ. II, ೩೨೭). [ನಾಂಬು + – ಅ$_6$]

ನಾಂಬ$_2$ 'ನಾನ್$_1$' ಪರಾ.

ನಾಂಬು (ಕ್ರಿ). ಸೋಮಾರಿಯಾಗು; ಜಡನಾಗು; ಅಲಸನಾಗು : "ನಾಂಬು– ಆಲಸ್ಯೇ" (ಶಮಧಾ); ಇರುಳ್ ತ್ರಿಯಾಮಮದರ ಮೊದಲಂ ಕಳೆ ಯೋಗದೊಳ್ ಮತ್ತಂ ಮಯ್ದಣುವಾರಲ್ಕೆ ಮಲಂಗಾದೊಡೆ ನಾಂಬದಿರ್ (ಸೌನಂದ. ೧೪-೩೨); "ನಿದ್ರಿಸು" (ಸೌನಂದ. ಕೋಶ).; ಕುಡು ನೀಂ ನಾಂಬದೆ ಹೇ ವಿಧಾತ್ರ (ಸಂಸಪ. ೧೬-೯).

[ದೇ.॥ ತಮಿ. ನಾಮ್ಪು = ತಳ್ಳಗಾಗು]

ನಾಕ (ನಾ). ೧. ದೇವತೆಗಳು ವಾಸಿಸುವ ಲೋಕ; ಸ್ವರ್ಗ; P ಪುಣ್ಯವಂತರು ಸತ್ತ ಮೇಲೆ ಪಡೆಯುವರೆಂದು ನಂಬಲಾದ ಊರ್ಧ್ವಲೋಕ : "ನಾಕಂ ತ್ರಿವಿಷ್ಟಪಂ ದಿವಮೆಂದಿಂತಿದು ತಾನಮರ್ತ್ಯಭವನಂ" (ವಸ್ತುಕೋ. ೬-೩೦); ನಾಕದಿನಿಳಿತಂದುದೊ ಫಣಿಲೋಕದಿನೊಗೆತಂದುದೊ ವಸುಂಧರೆಗಾಗೀ ಲೋಕ ಬಣ್ಣಿಸೆ ತಾರಕ ಶ್ರೀಕಣ್ಠ × × × ಮನ್ ಎಸೆವಿನಂ ಮಾಡಿಸಿದಂ (ಎಕ. VIII, ಸೊರಬ. ೨೮೬-೪೬; 1168); ನಾಕಮಂ ನಗುವ ನಗರಂಗಳಿಪ್ಪೋಜೆಯಿಂ ಎಮೆಯಿಕ್ಕಲಿಂಬಿಲ್ಲದಿರ್ಪ ಶಿವಭವನದಿಂ (ತಿರುರ. ದೇ. ೨-೪); ಯಶೋಧರಂ ಸುಖದಿಂದಿರ್ಕಾ ನಾಕದೊಳೆಂದೂಳ್ದಪರ್ (ಯಶೋಚ. ೩-೫೨); ತಂದೆಯೆಂದುದೆ ವೇದಸಮ್ಮತವೆಂದು ರಣದಲಿ ಕಾದಿ ಮಡಿದನು ಇಂದ್ರಜಿತು ನಾಕವನು ಹೊಕ್ಕನು ಸಕಲದಳ ಸಹಿತ (ಕೌಶಿರಾ. ೩೬ ಸೂಚನೆ); ಕಮಲದಂದದಿ ಶ್ರೀನಿಳಯ ನಾಕದವೊಲು ಸುಮನಸ ಮಾಲಾಭರಿತ ಕುಮುದವ ತಳೆದುದು ನಿರುತಿಯ ದೆಸೆಯೊಲು (ಜೀವಂಸಾಂ. ೯-೮೧); ನಾಕ ನರಕಂಗಳಂ ಏಕವೆನಿಪುವು ನಿನಗೆ (ಮಂಕುಕ. ೩೪೦); ಲೋಕ ಹಾಳಾದರೆ ನಾಕ ಹಾಳಾದೀತೆ? (ಗಾದೆ). ೨. ಬಾನು; ಆಕಾಶ. ೩. ಭೂಮಿ : "ನಭದಲ್ಲಿ ಅನಿಮಿಷಾಲಯದಲ್ಲಿ ಧರೆಯಲ್ಲಿ ನಾಕಮೆಂದೆನಿಸುವುದು" (ಮಂಗರಾ.೧೩೯-೭). ೪. ವಾಯುಮಂಡಲ; ವಾತಾವರಣ: (ಕ). ೫. [ಛಂದ] ಮೂರಂ ಲಘುಗಳಿಂದ ಕೂಡಿರುವ ಒಂದು ಅಕ್ಷರಗಣ; ನಗಣ (ಲ ಲ ಲ): ಮೂಱು ಲಘುವಿಂ ನಾಕಂ (ಛಂದೋಂಬು. ೧-೩೮).

[ಸಂ.]

ನಾಕಚಾಪು 'ನ್ಯಾಪ್‌ಚಾಕ್' ನೋ.

ನಾಕಚಿಕುರ (ನಾ). ಆಕಾಶವೇ ತಲೆಗೂದಲಾಗಿರುವವನು ; ವ್ಯೋಮಕೇಶ ; ಶಿವ : ಶ್ರೀಗುರು ಶಂಕರ ಶುಭಕರ ನಾಗಾಲಂಕಾರ ನಾಕಚಿಕುರ ಮಹೇಶಂ . . . ಇರ್ಕೆಮ್ಮ ಚಿತ್ರನಾಕದೊಳನಿಶಂ (ಹಮ್ಮಿಕ. ೪-೧).

[ನಾಕ + ಚಿಕುರ]

ನಾಕಚ್ಯುತ (ನಾ). ಸ್ವರ್ಗಲೋಕದಿಂದ ಹೊರಕ್ಕೆ ಬಂದವನು ; ಸ್ವರ್ಗಲೋಕದ ವಾಸ ಮುಗಿದ ಮೇಲೆ ಭೂಮಿಯಲ್ಲಿ ಹುಟ್ಟಿದವನು : ನಾಕಚ್ಯುತಂ ಶ್ರೀಕಂಠನಾಗಿ ತದಚ್ಯುತೇಂದ್ರುರ್ದರ್ಶನಜನಿತಜಾತಿಸ್ಮರಂ (ಪಂಡಾವ. ೧೦-೧೧೬ ವ). [ನಾಕ + ಚ್ಯುತ]

ನಾಕಜ (ನಾ). ಸ್ವರ್ಗಲೋಕದಲ್ಲಿ ಹುಟ್ಟಿದವನು ; ದೇವತೆ : ಸಂದಯದ ಮನದ ನಾಕಜಸಂದೋಹದ ಬಗೆಯನಫಹರಂ ಕಳೆಯಲ್ (ಶಾಂತಿಪು. ೧೦-೪೩) ; ನಾಕಜರಜನಿರ್ಕಲಂ ಬಿಡಿದದೇಂ ನಡೆಗೊಂಡರೊ ಮೇಘಮಾರ್ಗದೊಳ್ (ಜಗವಿ. ೧-೪೦). [ಸಂ.]

ನಾಕಜನಾಥ (ನಾ). ದೇವತೆಗಳ ಒಡೆಯ ; ಇಂದ್ರ : ಸ್ಫಟಿಕಕಳಶಮಂ ತೀವಿ ದಿವ್ಯಾಂಬುವಿಂ ನಾಕಜನಾಥಂ ವಜ್ರನಕ್ಕೆತ್ತಿದ ತೆಱದೆ ಸುಧಾಸೂತಿ ಕಣ್ಗೆಡ್ಡ ಮಾದಂ (ಆದಿಪು. ೧೨-೪). [ನಾಕಜ + ನಾಥ]

ನಾಕಜಮಂತ್ರಿ (ನಾ). ದೇವತೆಗಳ ಮಂತ್ರಿ ; ಬೃಹಸ್ಪತಿ ; ಗುರು : ನಾಕಜಮಂತ್ರಿ ಪ್ರಭೋದಯಂ ನೆಗಟ್ಟಿನಂ ತನ್ನುಚ್ಚದೊಳ್ ಪುಟ್ಟದಳ್ (ಆಜಿಪು. ೧೨-೫೨). [ನಾಕಜ + ಮಂತ್ರಿ]

ನಾಕಜಾಪಗೆ (ನಾ). ದೇವಲೋಕದಲ್ಲಿ ಹುಟ್ಟಿದ ನದಿ ; ಗಂಗಾನದಿ : ಹಿಮವತ್ಕುಕ್ಷೀಲದಿಂ ನಾಕಜಾಪಗೆಯಂ ತಾಪಿನಮಾಳ್ದಂ (ಅಜಿಪು. ೪-೦).

[ಸಂ. ನಾಕಜಾಪಗಾ]

ನಾಕಡಿ 'ನಾಲ್ಕಡಿ' ನೋ.

ನಾಕತರಂಗಿಣಿ (ನಾ). = ನಾಕಜಾಪಗೆ : ನಾಕತರಂಗಿಣೀಪ್ರವಾಹದೊಳ್ . . . ಪೊಳೆಯುತಿರ್ಪುದು ಚಂಡಮರೀಚಿಮಂಡಲಂ (ಜಗವಿ. ೪-೭೦).

[ನಾಕ + ತರಂಗಿಣಿ]

ನಾಕನಾಯಕ (ನಾ). ಸ್ವರ್ಗಲೋಕದ ಅಧಿಪತಿ ; ಇಂದ್ರ : ಆ ಜಂಬೂದ್ವೀಪದ ನಟ್ಟನಡುವೆ . . . ಅನೇಕ ನಾಕನಾಯಕಲೋಕಫಾಲಲೀಲಾಭವನಾಧ್ಯಾಸಿತಮುಂ (ಆದಿಪು. ೧-೪೯ ವ) ; ನಾಕನಾಯಕಂ ತ್ರಿಲೋಕಗುರು ಸವಿತ್ರಿಗೆ ಸೀಯನಪ್ಪ ಗೇಯದಿಂ ಪೊಟ್ಟುಗಳೆಯಲ್ ನಿಯಮಿಸಿದಂ (ಶಾಂತಿಪು. ೪-೦೬೬ ವ). [ನಾಕ + ನಾಯಕ]

ನಾಕನಾರಿ (ನಾ). ಒಂದು ಬಗೆಯ ಗಿಡ ; ಸಹದೇವಿ : "ನಾಕನಾರಿ [ಪಾಠಾಂ. ನಾಕರಿ]ಯೆನೆ ಸಹದೇವಿಯುಕ್ಕುಂ" (ಪಾಂಗರಾ. ೩೮-೨೩). [?]

ನಾಕನಿತಂಬಿನಿ (ನಾ). ಸ್ವರ್ಗಲೋಕದ ಮಹಿಳೆ; ದೇವತಾಸ್ತ್ರೀ; ಅಮರಿ: ಝೊಂಬಿಸಲಿ ಕೌರವರು ನಾಕನಿತಂಬಿನಿಯರೆಳಕವನು (ಕುಪಾ.ಗೆ. ೧೦-೫೦).

[ನಾಕ + ನಿತಂಬಿನಿ]

ನಾಕನಿವಾಸಿ (ಗು). ಸ್ವರ್ಗಲೋಕದಲ್ಲಿ ವಾಸಿಸುವ : ಆ ಸುರಾರಿಪ್ರಮುಖ ಯಕ್ಷರಿಗಾಸೆ ಕರ್ಣನ ಮೇಲೆ ನಾಕನಿವಾಸಿನಿರ್ಜರನಿಕರವಾದುದು ನರನ ಕೈವಾರ (ಕುವಾ.ಕ. ೨೨-೪). [ಸಂ. ನಾಕನಿವಾಸಿನ್]

ನಾಕನಿಳಯ (ನಾ). ಸ್ವರ್ಗವೇ ಮನೆಯಾಗಿರುವವನು ; ಸ್ವರ್ಗಲೋಕದಲ್ಲಿ ವಾಸಿಸುವವನು ; ದೇವತೆ : ನಾಕನಿಳಯರಿಗಂದು ನಿನಗೆ ವಿವೇಕ ವೆಳ್ಕನಿತಿಲ್ಲ ತೆಗೆತೆಗೆ ಸಾಕು ವಾಘೆಯ ಮರಳಿ ಹಿಡಿ ತೆಜಗಳ ತಿರುಹೆಂದ (ಕುವಾ.ವಿ. ೬-೧೧) : ಏಕೆ ಸಹಜವ ಬಿಸುಟು ತಾಳದೆ ಸೂಕರಾಕಾರವನು ಕೊಲ್ಲೆನು ನಾಕನಿಳಯರ ಪಕ್ಷಪಾತವನುಳಿದು ಮಱಿಯೊಗಲು (ನಿಘಾಗ. ೩-೪-೪೧). [ನಾಕ + ನಿಳಯ (= ನಿಲಯ)]

ನಾಕಪತಿ (ನಾ). ಸ್ವರ್ಗಲೋಕದ ಒಡೆಯ ; ಸ್ವರ್ಗದ ಅಧಿಪತಿ ; ಇಂದ್ರ : ಅಪರಾಜಿತೆ . . . ವೈಜಯಂತಿಯೆಂಬಿವರಂ ನಾಕಪತಿ ನಿಯೋಜಿಸಿದಂ ವಿಷ್ಣುಪತ್ರಯಾಧೀಶಜನನಿಗಿಸುವೆಸಗೆಯ್ಯಲ್ (ಶಾಂತಿಪು. ೪-೦೭೫) ; ಎಂತು ನಾಕಪತಿಗಂ ಪೌಲೋಮಿಗಂ ಪುಟ್ಟದೊಂ ವರಸೌಂದರ್ಯೈಜಯಂತನಂತೆ . . . ಪುಟ್ಟದೊಂ ಸ್ಥಿರವೀ ಪಟ್ಟಣಸಾಮಿ ವಿಶ್ವವಿನುತಂ ಶ್ರೀಮಲ್ಲಿದೇವಾಹ್ವಂ (ಎಕ. II(B), ೪೭೭-೪೦ ; 1195) ; ಲೋಕಹಿತಮಪ್ಪ ಕಥೆಯನುತ ನಂದೀಶ್ವರ ಏಕಪಾದದ ಮೂರ್ತಿಯಾದ ಶಿವನಂದಮಂ ನಾಕನಿಳಯರ್ ಮೆಚ್ಚಿ ಪೇಳಿದಂ ಬ್ರಹ್ಮಜಗೆ ಹರನ ಕಥನಾಮೃತವನು (ಲಿಕಿಂ. ೨೫-೯). [ನಾಕ + ಪತಿ]

ನಾಕಪ್ರಭವ (ಗು). ೧. ಸ್ವರ್ಗಲೋಕದಲ್ಲಿ ಹುಟ್ಟಿದ,–ಉತ್ಪನ್ನವಾದ : ನಾಕಪ್ರಭವೋದ್ಯನ್ಮಾಲೆಯಂ ಭೂಪತಿಯನೊಸೆದೊಱೆದ್ದರ್ಚಿಸಿರ್ದಂ ಸುರೇಂದ್ರಂ (ಶಾಂತಿಪು. ೪-೪೩). (ನಾ). ೨. ಸ್ವರ್ಗಲೋಕದಲ್ಲಿ ಹುಟ್ಟಿದವನಂ. [ನಾಕ + ಪ್ರಭವ]

ನಾಕಬಲಿ (ನಾ). ವಿವಾಹದ ಅಂಗವಾಗಿ ಮಾಡುವ ಒಂದು ವಿಧಿ ; ನಾಗೋಲಿ. [ನಾಕ + ಬಲಿ]

ನಾಕಬೋವ (ನಾ). ಒಬ್ಬಾತನ ಹೆಸರಂ : ಕೆಂಚಗೌಡ ನಾಕಬೋವಂಗೆ ಕೊಟ್ಟ ಉಂಬಳಿ ಕಂಬ ೪೦ ಕೆಯ (ಕಇ. IV, ೧೬-೧ ; ?). [?]

ನಾಕಭೂರುಹ (ನಾ). ೧. ಸ್ವರ್ಗದಲ್ಲಿರುವ ಮರ ; ಕಲ್ಪವೃಕ್ಷ. ೨. (ಅಲಂ) ಉದಾರಿ ; ದಾನಿ : ಅಂಬುಜಪ್ರಿಯಕುಲಲಲಾಮನು ನಂಬಿದವಂಗೆ ನಾಕಭೂರುಹ (ಕಾತಿಪ್ರಾ. ೨೫ ಸೂಚನೆ).

[ನಾಕ + ಭೂರುಹ]

ನಾಕಯ್ಯ (ನಾ). ಒಬ್ಬಾತನ ಹೆಸರು : ಸೇನಬೋವ ನಾಕಯ್ಯಂ ಬರೆದೊಂ (ಎಕ. VIII, ಸೊರಬ. ೪೭೨-೩೭ ; 954) : ಪಡುವ ಬಸದಿಯ ಕೆಯ್ಯಂ[ಂ] ನಾಕಯ್ಯನ ಕೆಯಿ (ಇಕ. XXVIII, ೩೯-೨೯ ; 1077).

[<ನಾಕ + ಅಯ್ಯ1]

ನಾಕರ 'ನಾಂಗರು' ನೋ.

ನಾಕರಕುಂಟೆ (ನಾ). (ಉಕ) ಒಂದು ಬಗೆಯ ವ್ಯವಸಾಯದ ಉಪಕರಣ : (ಚಿ).

[ನಾಕರ (<ನಾಂಗರು) + ಕುಂಟೆ1./ಮರಾ.ನಾಂಗರಖುಂಟಾ]

ನಾಕರಿಪು (ನಾ). ದೈತ್ಯ ; ರಾಕ್ಷಸ : ಭೀಕರಾಂಗವನಾಂತು ನಭದಲಿ ನಾಕರಿಪು ಕೊಂಡೊಯ್ಯುತಿರೆ . . . ಕೃಪಾಕರನು ದೈತ್ಯಾಪಹರಣಕೆ ಮಾಡಿದನು ಮನವ (ನಿಘಾಗ. ೧೦-೭-೧೧). [ನಾಕ + ರಿಪು]

ನಾಕಲೋಕ (ನಾ). ಸ್ವರ್ಗಲೋಕ : ತನಗೆ ತಾನೆ ಪೊಣ್ಮುವ ಭಯಮುಮಂ ಭೋಂಕನೆ ಕಂಡು ನಾಕಲೋಕಚ್ಯುತಿಯನಾಗಳಱಿದು ಮನದೊಳಳ್ಕಿ (ಆದಿಪು. ೩-೩ ವ) ; ದಿಗಂತಪರ್ಯಂತಮಾ ನಾಕಲೋಕಮೆಲ್ಲಂ ಕಿಟ್ಟಿಟ್ಟು ಬರೆ (ಶಾಂತಿಪು. ೧೦-೩೧ ವ) ; ನಾಕಲೋಕಸುಖಮಂ ಕೈಕೊಂಡಳೊ . . . ಎನುತ್ತೆ ಪದಪಿಂದಾನಾಕೆಯಂ ನೋಡಿದೆಂ (ಕಾದಂಪೂ. ೪೦೪) ; ಆ ಮಹಾರ್ಣವಂ . . . ನಾಕಲೋಕದಂತೆ ಅನಿಮಿಷಪ್ರಕೀರ್ಣಕಮುಂ (ಜಗವಿ. ೦-೪೪ ವ). [ನಾಕ + ಲೋಕ]

ನಾಕಲೋಕೇಶ (ನಾ). ಸ್ವರ್ಗಲೋಕದ ದೊರೆ,–ರಾಜ ; ಇಂದ್ರ : ನಾಕಲೋಕೇಶನೆನಿಸಿದ ಗಂಡು ಮನೋಭವನೆನಿಸಿದ ಸೊಬಗು ರೇಚ ಭೂಪಾಲಕನ (ಮುದಕ. ೦-೫೯). [ನಾಕಲೋಕ + ಈಶ]

ನಾಕವಿಭವ (ನಾ). ಸ್ವರ್ಗಲೋಕದ ಸಂಪತ್ತು : ದೇವರ್ ಪೊಯ್ಯದೋರಂತೆ ಪೊಣ್ಮುವ ಭೇರೀನಿನಾದಕ್ಕೆ ನಾಕವಿಭವಶ್ರೀ ವಿಸ್ಮಯಂಬಟ್ಟು (ಮಲ್ಲಿಪು. ೦೫-೦೪). [ನಾಕ + ವಿಭವ]

ನಾಕಸದನ (ನಾ). ಸ್ವರ್ಗವಾಸಿ ; ದೇವತೆ : "ಸುಪರ್ವ ನಾಕಸದನರ್ ನಿಳಿಂಪ ವಿಬುಧರು ಸುಮನಸರು ಲೇಖರೆನಲು ವಿಬುಧರ್ಗೆ ನಾಮಂ" (ಮುಂಗರಾ. ೩-೪). [ನಾಕ + ಸದನ]

ನಾಕಸದ್ಮ (ನಾ). = ನಾಕಸದನ : ತೆರಳಲುದ್ಯುಕ್ತರಾದರ್ ಸಭೂಭಾರ ವಿಷಾದರ್ ದೈತ್ಯಪೀಡಾಕುಪಿತನಿಜಮನಃಪದ್ಮರಾ ನಾಕಸದ್ಮರ್ (ಜಗವಿ ೧-೩೫). [ನಾಕ + ಸದ್ಮ]

ನಾಕಸುಖ (ನಾ). ಸ್ವರ್ಗಲೋಕದ ಸುಖ ; ಸ್ವರ್ಗಸೌಖ್ಯ : ನಾಕಸುಖ ಶೇಷಮಂ ನಾಕೌಕರ್ ಬಂದದಱೊಳನುಭವಿಪ್ಪುದಱಿಂದೇಕಾಕೃತಿ ಕುರುಜಾಂಗಲಮಂ ನಾಕಮುಮದು ಕಿಱುಕುಳಂಗೆ ಬಣ್ಣಿಸಲರಿದೇ (ಶಾಂತಿಪು. ೯-೧೩೭). [ನಾಕ + ಸುಖ]

ನಾಕಸ್ತ್ರೀ (ನಾ). ಸ್ವರ್ಗಲೋಕದ ಮಹಿಳೆ ; ಅಪ್ಸರೆ ; ರಂಭೆ, ಊರ್ವಶಿ ಮೊದಲಾದವರು : ನುಡಿಯಿಸಿದತ್ತಾ ನಾಕಸ್ತ್ರೀಯ ಗೇಯಮಾಸ್ಥಾಯಿಕೆಯೊಳ್ (ಆದಿಪು. ೭-೧೭). [ನಾಕ + ಸ್ತ್ರೀ]

ನಾಕಾಘದೂರ (ನಾ). ಭೂಲೋಕದ ಪಾಪವನ್ನು ನಾಶಮಾಡುವವನು ; ಲೋಕಪಾಪನಾಶಕ : ನಾಕಾಘದೂರ ಷಡ್ಲಿಂಗಾವರಣ ಸಚ್ಚಿದಾಕಾರ ವೇದಾಗಮಾದಿಬಹುಶಾಸ್ತ್ರಜ್ಞ (ಏಕೋಪು. ೧-೦).

[ನಾಕ + ಅಘ + ದೂರ]

ನಾಕಾಣೆ 'ನಾಲ್ಕಾಣೆ' ನೋ.

ನಾಕಾಧಿನಾಥ (ನಾ). = ನಾಕಲೋಕೇಶ : ಶ್ರೀಮನ್ನಾಕಾಧಿನಾಥಾನತ ಮಕುಟಮಣಿದ್ಯೋತಿತಾಂಘ್ರಿದ್ವಯಂ ... ಕುಡುಗೆಮಗಮೃತಾವಾಸಮಂ ವೀರನಾಥಂ (ಸುಕುಮಾ. ೧-೧). [ನಾಕ + ಅಧಿನಾಥ]

ನಾಕಾಧಿಪ (ನಾ). = ನಾಕಲೋಕೇಶ : ಆ ನಾಕಾಧಿಪನ ಸಿರಿಯ ಜಱೆದು ದಂದವರ ವಾಹಿನಿ ಸಕಲಜನವೋಹಿನಿ (ಭಾವಚಿಂ. ೮-೦೫). [ನಾಕ+ಅಧಿಪ]

ನಾಕಾನೀಕ (ನಾ). ದೇವತೆಗಳ ಸೈನ್ಯ ; ಅಮರರ ಸೇನೆ : ನಿಜವಾಹನವಿಹೀನ ವಿಸ್ಮಯಸ್ಮೇರವದನಸರಸಿರುಹದ್ವಾತ್ರಿಂಶನ್ನಾಕಾನೀಕಮುಂ ಕರವೊಪ್ಪೆ ... ಜಿನಚಂದ್ರನಘೌಘಶೇಷದೈನ್ಯದನಾದಂ (ಶಾಂತಿಪು. ೧೨-೦೯ ವ).

[ನಾಕ + ಅನೀಕ]

ನಾಕಾನೋಕಹ (ನಾ). ದೇವಲೋಕದ ಮರ ; ಕಲ್ಪವೃಕ್ಷ ಮೊದಲಾದವು : ನಾಕಾನೋಕಹಸುಮನಶ್ಶ್ರೀಕಂಠಾಭರಣಮಾಗೆ (ಪಂಠಾಮಾ. ೧೦-೧೧೫) ; ಅದು ಮುಕ್ತಿಪುರಕ್ಕೆ ಗೋಪುರಮದು ನಾಕಾನೋಕಹಕ್ಕೆ ಫಳಮಂಜರಿ (ಚಂದ್ರಪು. ೧೦-೨೯). [ನಾಕ + ಅನೋಕಹ]

ನಾಕಾಪಗಾಜೂಟ (ನಾ). ಜಟೆಯಲ್ಲಿ ಗಂಗಾನದಿಯನ್ನುಳ್ಳವನು ; ಗಂಗಾಧರ ; ಶಿವ : ನಾಕಾಪಗಾಜೂಟನಾಜ್ಞೆಯಿಂ ಬಂದೆಸೆವ ಲೋಕೈಕಪೂಜ್ಯರು ಕಂಡು (ದುರುಪು. ೩-೨೮). [ಸಂ.]

ನಾಕಾಪಗಾಧರ (ನಾ). ಗಂಗಾನದಿಯನ್ನು ತಲೆಯಲ್ಲಿ ಧರಿಸಿರುವವನು ; ಗಂಗಾಧರ ; ಶಿವ : ಹೃದಯಾಬ್ಜದೊಳಗೆ ನೆಲಸಿರ್ಪನೆನೆ ನಾಕಾಪಗಾಧರನೆ ತೋರ್ಪುದು (ದುರುಪು. ೨-೨೪). [ಸಂ.]

ನಾಕಾರಿಸು (ಕಿ.). ನಿರಾಕರಿಸು ; ಸಾಧ್ಯವಿಲ್ಲವೆಂದು ಹೇಳು : ಅವನಿಗೆ ಪರವಾನೇ ಕೊಡುವುದನ್ನು ನಾಕಾರಿಸಿದ್ದರೆ . . . ಅವನಿಗೆ ಅವಶ್ಯವಾಗದಂತೆ ಮಾಡಬಹುದು (ಕಥಾಗೆ. ೧೮ ಪರಿ).

[ನಾಕಾರ್$_0$ (P ← ಮರಾ. ನಾಕಾರಣೇ) + – ಇಸು$_3$]

ನಾಕಾವಾಸ (ನಾ). ಸ್ವರ್ಗದಲ್ಲಿ ವಾಸಿಸುವವನು ; ದೇವತೆ : ನಾಕಾವಾಸರಿಭಂ ಬಲಾಹಕಕುಜಂ ವೃಂದಾರಕಾಖ್ಯಂ (ನಾನಾರ. ೧೫೪).

[ನಾಕ + ಆವಾಸ]

ನಾಕಿ (ನಾ). ಸ್ವರ್ಗದಲ್ಲಿರುವವನು ; ದೇವತೆ ; ಅಮರ : ನಾಕಿಗಳಿಂದ್ರಾದ್ಯರ್ ಪರಮಾಕೃತಿದುರ್ಲಕ್ಷ್ಯವೆಂದೆನಲ್ ನಿನ್ನವತಾರಾಕೃತಿಯ ನರ್ಚಿಪರ್ (ಜಗವಿ. ೩-೦೦೭) ; ನಾಕಿಗಳನು ಕೂಡಿ ತ್ರಿಪುರಕೆ ನಡೆದೀ ಕಾಕುಮಾತ ಕೇಳಬಹುದೆ (ತ್ರಿಪುಸಾಂ. ೨೯) ; ನಾಕಿಗಳು ನಲಿದಾಡುತಿರಲಾ ಲೋಕಪಾಲರು ತುಷ್ಟಿವಡೆದರು (ಕಾಶಿರಾ. ೨-೫೦). [ಸಂ. ನಾಕಿನ್]

ನಾಕಿಗ (ನಾ). = ನಾಕಿ : ಸಾಕುಸಾಕೈ ಸುರಪ ಕೇಳ್ ಸುಧಾಕಲಶಮಿಾ ನಾಕಿಗರ ಜೀವನಾಧಾರಂ (ಚಿಬಪು. ೨೦-೦೦). [ನಾಕ + – ಇಗ]

ನಾಕಿಗಣ (ನಾ). ದೇವತೆಗಳ ಗುಂಪು,-ಸಮೂಹ : ಮಗನೊರ್ವಂ ಪುಟ್ಟಿ ದೋಷಾಕರನೆನಿಸಿದಂ . . . ನಾಕಿಗಣಂ ಸರ್ವಸ್ವಮಂ ಮೇಣ್ಕವರ್ದುದಕಟ ಭಂಗಕ್ಕೆ ಪಕ್ಕಾದೆನೆಂದಾತ್ಮಗತೌರ್ವಾಗ್ನಿಚ್ಛಲಂಬೆತ್ತಳಲುರಿಯೊಳಕೊಂಡಂತೆ ತೋರ್ಕುಂ ಸಮುದ್ರಂ (ಶಬಶಂ. ೧-೩೨). [ನಾಕಿ + ಗಣ]

ನಾಕಿತಿ (ನಾ). ಹೆಣ್ಣುದೇವತೆ : ದೇವಿ : ನಾಗರಿಗೆ ಮದ್ದ ಹೇಳಬಂದ ಅಯ್ಯಗಳು ನಾಕಿತಿಯ ನಟಣೆಯಲ್ಲಿ ಸಿಲುಕಿದರು (ಸಿದ್ಧೇವ. ೧೯೨-೫೮೪).

[ನಾಕ + – ಇತಿ$_1$ (< – ಇತ್ತಿ)]

ನಾಕಿನಾಯಕ (ನಾ). = ನಾಕಪತಿ : ಸಕಳೋರ್ವೀಶ್ವರ ನಾಕಿನಾಯಕ ಚಮೂ ಪರ್ಯಷ್ಟಿಪಾತ್ರಂ (ಶಾಂತಿಪು. ೮-೧೨೩). [ನಾಕಿ + ನಾಯಕ]

ನಾಕಿನಿಕರ (ನಾ). ದೇವತೆಗಳ ಗುಂಪು,-ಸಮೂಹ : ಓಲಗಸಾಲೆಯೊಳನೇಕ ನಾಕಿನಿಕರಪರಿವೃತನಾಗಿರ್ಪಲ್ಲಿ (ಚಂದ್ರಪು. ೪-೭೪ ವ). [ನಾಕಿ + ನಿಕರ$_1$]

ನಾಕಿನಿಕಾಯ (ನಾ). = ನಾಕಿನಿಕರ : ಅಂತು ಗಗನತಲದಿ ನವನೀತ ಲಕ್ಕವ ತರಿಸಿ ವಿವಿಧಮಣಿನಿಕೇತನಾಗ್ರಾವಲಗ್ನಕೇತುಮಾಲಾವಿಲಸಿತಸಾಕೇತಮಂ ಬಳಸಿ ನಾಕಿ[ಪಾಠಾಂ. ದೇವ]ನಿಕಾಯಮಿರೆ (ಆದಿಪು.೭-೪೩ ವ) ; ನುಡಿಯದೆ ಮೋನಗೊಂಡಿನಿಸಿರ್ದಧಿಪತಿಗೆ ನಿಚ್ಚಂ [ಮೆಚ್ಚಂ] ಪಡೆದು ನಚ್ಚಿನ ನಾಕಿನಿಕಾಯ ಮುಮಗಲದಹೋರಾತ್ರಮೋಲಗಿಕುಂ (ಶಾಂತಿಪು. ೧೦-೮೭).

[ನಾಕಿ + ನಿಕಾಯ]

ನಾಕಿನಿಳಯ (ನಾ). ದೇವತೆಗಳ ವಾಸಸ್ಥಾನ ; ಸ್ವರ್ಗ : ನಾಕಿನಿಳಯದಂತೆ ಅನೂನಾಪ್ಸರೋಗಣಪ್ರಣೂತಮುಮತರ್ಕ್ಯಗೋಚರಮುಂ (ಚಂದ್ರಪು. ೫-೫೨ ವ). [ನಾಕಿ + ನಿಳಯ (= ನಿಲಯ)]

ನಾಕಿಯಚಟ್ಟಯ್ಯ (ನಾ). ಒಬ್ಬಾತನ ಹೆಸರು : ಕ್ರಮಾಗತ ಪೆರ್ಗ್ಗಡೆ ನಾಕಿಯ-ಚಟ್ಟಯ್ಯಂ ಚಿತ್ತರಟಿಹಳ್ಳಿ ಓಟೂರ್ಗ್ಗೆ ಮೂಲಿಗನ್ (ಎಕ. VIII, ಸೊರಬ. ೭೦-೦೦ ; 938). [?]

ನಾಕಿವರ (ನಾ). ದೇವತೆಗಳಲ್ಲಿ ಶ್ರೇಷ್ಠನಾದವನು ; ಇಂದ್ರ : ಪವನಂ ಸೌರಭ್ಯಮಂ . . . ಅಮಲಮಂದಾರಮಾಲಾಳಿಯಿಂ ನಾಕಿವರಂ ಕೆಯ್ಗಾಣ್ಕೆಗೆಯ್ದಂಘ್ರಿಗೆ ಮಣಿದೊಲವಿಂ ಕೀರ್ತನಂಗೆಯ್ಯುತಿರ್ದರ್ (ಶಬಶಂ. ೦-೮೪). [ನಾಕಿ + ವರ$_3$]

ನಾಕು$_1$ 'ನಾಲ್ಕು' ನೋ.

ನಾಕು$_2$ (ನಾ). ಹಾವಿನ ಹುತ್ತ,-ಬಿಲ : "ನಾಕು ವಾಮಲೂರಾಹ್ವವಹಿ ಗೃಹಂ ವಲ್ಮೀಕಂ" (ವಸ್ತುಕೋ. ೧೯-೬) ; "ವಾಮಲೂರು ನಾಕು ವಲ್ಮೀಕ ಮೆನಲು ಹುತ್ತಿಂಗೆ ನಾಮಂ" (ಮಂಗರಾ ೧೧೯-೩). [ಸಂ.]

ನಾಕುಮೈ (ನಾ). ನಾಲ್ಕುದಿಕ್ಕು ; ಸುತ್ತಮುತ್ತು : ಆಕರಿಸಿ ಬೆಸಗೊಂಡು ಬಿಟ್ಟರನೇಕ ನೃಪರನು ಬೇಹು ಹರಿದುದು ನಾಕುಮೈಯಲಿ ತುಬ್ಬು ಕಾಱಂಗಿತ್ತು ಬಹುಧನವ (ತೊರರಾ. ೪-೯-೦೦).

[ನಾಕು$_1$ (<ನಾಲ್ಕು) + ಮೈ (<ಮೆಯ್)]

ನಾಕುಲಿ (ನಾ). ಒಂದು ಬಗೆಯ ಗಿಡ ; ಮುಂಗುಸಿಯ ಮೇವಿನ ಗಿಡ ; ಸರ್ಪಾಕ್ಷಿ : "ನಾಕುಲೀ . . . ಸುವಹಾ ರ ಸರ್ಪಾಕ್ಷಿಗಿಡದ ಹೆಸರು . . . ಮುಂಗೀಮೇವು ಗಿಡ" (ಸಿದ್ಧಾಂತಿ. ೧೩೮). [ಸಂ. ನಾಕುಲೀ]

ನಾಕೆ (ನಾ). ಸುಂಕವನ್ನು ವಸೂಲು ಮಾಡುವ ಸ್ಥಳ ; ಪರವಾನಿಗೆ ಕೊಡುವ ಕಚೇರಿ ; ಸುಂಕದ ಕಟ್ಟೆ ; ಉಕ್ಕಡ ; ಜಕಾತಿಕಟ್ಟೆ (ಉಕ) : ಗೊತ್ತುಮಾಡಿದ ಸರಹದ್ದಿನ ನಾಕೆಯಲ್ಲಿ ಅದನ್ನು ಕೊಟ್ಟು ಅಂಥದೇ ಬಿಳೇ ಕಾಗದದ ಪಾಸನ್ನು ತಕ್ಕೊಳ್ಳಬೇಕು (ಕಥಾಗೆ. ೧೭ ಪರಿ); ನಾಕೇದ ಮೇಲಿನ ಕಾರಕೂನನದು ಕೆಲಸ ಅದ (ಎತ್ತಿಕೈ. ೫).

[← ಹಿಂ. ನಾಕಾ ; ಮರಾ. ನಾಕೇ]

ನಾಕೆಬಂದಿ (ನಾ). ಮಾರ್ಗವನ್ನು ಜನಸಂಚಾರಕ್ಕೆ ಅವಕಾಶವಿಲ್ಲದಂತೆ ಮಾಡುವುದಂ; ರಸ್ತೆಗಳಲ್ಲಿ ಸಂಚಾರವನ್ನು ನಿಷೇಧಿಸುವುದು: ಎರಡು ತಾಲೂಕುಗಳಲ್ಲಿ ನಾಕೆಬಂದಿ ಮಾಡಲಾಯಿತು (ಕರವೀ. ೧೩೨).

[←ಮರಾ. ನಾಕೇಬಂದೀ]

ನಾಕೇಂದ್ರ (ನಾ). ದೇವಲೋಕದ ದೊರೆ; ದೇವೇಂದ್ರ: ಪುಟ್ಟತ್ತಾ ನಾಕೇಂದ್ರಂಗೆ ನಿರ್ವ್ಯಾಕುಲಮುಮಳಭವಪ್ರತ್ಯಯಜ್ಞಾನಮಾಗಳ್ (ಸುಳುವತ. ೯-೨೩). [ನಾಕ + ಇಂದ್ರ]

ನಾಕೇಶ$_1$ (ನಾ).=ನಾಕೇಂದ್ರ: ಲೋಕಾಪವಾದಕ್ಕೆ ಅಂಜಿ ನಡೆವುದು ವಿವೇಕ ಕೇಳಿಚ್ಚರಿಕೆ ನಾಕೇಶನಾದರೂ ಬಿಡದವವಾದ ಪರಾಕು ಕೇಳಿಚ್ಚರಿಕೆ (ನೀತಿಟಿಂ. XI, ೦೯). [ನಾಕ + ಈಶ]

ನಾಕೇಶ$_2$ (ನಾ). ಕೂದಲಂ ಇಲ್ಲದವನಂ; ಲುಂಚನ ಮಾಡಿಕೊಂಡವನಂ; ಸವಣ: ನಾಕೇಶನಾಗಲೊಡನೊಡನಾ ಕೇಶಮನಾಂತ ಶೋಣ ಮಣಿಪಟಳಕಮಾಲೋಕನದ ತಣಿವನಿತ್ತುದು (ಪುಷ್ಪಪು. ೧೩-೦೦೦).

[ಸಂ. (ನಾ + ಕೇಶ)]

ನಾಕೌಕ (ನಾ).=ನಾಕನಿಳಯಂ: ನಾಕಸುಖಶೇಷಮಂ ನಾಕೌಕರ್ ಬಂದದಱಿಂಬಳನುಭವಿಪ್ಪುದಱಿಂದ (ಶಾಂತಿಪು. ೯-೦೩೭).

[ನಾಕ + ಓಕ$_1$]

ನಾಕ್ಟಾಪ್ 'ನ್ಯಾಪ್‌ಚಾಕ್' ನೋ.

ನಾಕ್ಷತ್ರ (ಗು). ೧. ನಕ್ಷತ್ರಕ್ಕೆ ಸಂಬಂಧಪಟ್ಟ: ನಾಕ್ಷತ್ರ (Sidereal) ಪಂಚಾಂಗವನ್ನು ನಿರ್ಮಿಸಿ ಹಳೆಯ ಪಂಚಾಂಗವನ್ನು ಶಿದ್ದಿದರು (ಶಿಲ್ಪನಾ. ೩೩). ೨.=ನಾಕ್ಷತ್ರಮಾನ: ಆ ಸಂವತ್ಸರವೇ ಸೌರ ಚಾಂದ್ರ ಬಾರ್ಹಸ್ಪತ್ಯ ನಾಕ್ಷತ್ರ ಸಾವನ ಭೇದದಿಂದೈದುತೆಱನಾಗಿರ್ಪುದು (ವಿವೇಕ. ೩೪೨); ಶ್ರೀಪರಮಾತ್ಮನು ಮೇಲೆ ಹೇಳಿದ ಪ್ರಕಾರ, ಬಾರ್ಹಸ್ಪತ್ಯ, ಸೌರ, ಅನುಸೌರ, ನಾಕ್ಷತ್ರ, ಚಾಂದ್ರಮಾನಗಳೆಂಬ ಐದು ಬಗೆಯಾಗಿ ಗಣಿಸುವ ಪರಿವತ್ಸರಾದಿ ೫ ಹೆಸರುಗಳನ್ನು ಧರಿಸಿರುವನು (ಹಸಾಪ. ೫-೪೦ ಟೀಳ).

[ಸಂ.]

ನಾಕ್ಷತ್ರಮಾನ (ನಾ). ನಕ್ಷತ್ರಗಳ ಗತಿಯನ್ನು ಅನುಸರಿಸಿ ಮಾಸ, ವರ್ಷಗಳನ್ನು ಗಣಿಸುವ ಕಾಲಮಾನ; ☞ ಈ ಕಾಲಮಾನದಂತೆ ನಕ್ಷತ್ರಗಳು ಒಂದು ಸುತ್ತು ತಿರುಗುವುದಕ್ಕೆ ೨೭ ದಿನಗಳುಗಂವುದರಿಂದ, ೨೭ ದಿನಗಳಿಗೆ ಒಂದಂ ತಿಂಗಳಾಗುತ್ತದೆ. [ನಾಕ್ಷತ್ರ + ಮಾನ]

ನಾಖುಷಿ (ನಾ). ಸಂತೋಷವಿಲ್ಲದಿರುವುದು; ಅಸಂತೋಷ; ಅತೃಪ್ತಿ: ಅರಶಿನವರು ತಮ್ಮ ಮಾತ ಕೇಳಲಿಲ್ಲವೆಂದು ನಾಖುಷಿಯಿಂದ ಬರಕ್ಕೆ ಶ್ರೀನಿವಾಸರಾಯರು ಹೊರಟುಹೋಗಿ ಪಟ್ಣಕ್ಕೆ ದಾಖಲಾದರು (ಹೈದರ. ೦೦೬); ತುಸು ನಾಖುಷಿ ತೋರಿದರೂ ಹೇಳಿ ಒಪ್ಪಿಸಬಹುದು ಬಿಡ್ರಿ ಅದರಾಗೇನು (ಭಾಗ್ಯಶ್ರೀ. ೪೨). [← ಪಾರ. ಹಿಂ. ನಾಖುಶೀ]

ನಾಗ (ನಾ). ೧. ಹಾವು; ಸರ್ಪ: "ಅಹಿ ನಾಗಂ ವ್ಯಾಳನಾಶೀವಿಷಂ" (ವಸ್ತುಕೋ. ೦೯-೭); "ಉರಗಂ ಸರೀಸೃಪಂ . . . ನಾಗನಾಶೀವಿಷಂ . . . ವ್ಯಾಳನೆನಲು ಸರ್ಪಂಗೆ ನಾಮಂ" (ಮಂಗರಾ. ೧೧೬-೧). ೨. ನಾಗರ ಹಾವು: ನಾಗರ ನಾಗರಕನ್ನೆಯರ ರೂಪುಗಳಬ್ಬಳವಾಗೆ ಭೋಗಿಗಳ್ ಭೋಗಿಗಳೆಂಬ ಭೋಗಿಗಳೆ ಭೋಗಿಗಳಲ್ಲಿಯ ಭೋಗನಾಯಕರ್ (ಪಂಪಭಾ. ೪-೧೬); ನಾಗ ಬುದರೆ ಕೋಲ ಕಳೆದುಕೊಂಬರು (ಬಸವ. ೦೯೫) ; ನವಿಲು ನಾಗಂಗಳಡು ನಿಜವೈರಮಂ ಮಱೆದಿಪ್ಪವೆನೆ ಮುನಿಯ ಮಹಿಮೆಯಂ ಪೊಗಳ್ವರಾರು (ಹಪಕಾ. ೫-೩೭); ತಾನಲ್ಲಿ ಪೊಸಳೆಯಾದತ್ತಾ ನಾಗನುಮಾಗಿ ಬಳೆಯೆ (ಯಶೋಚ. ೩-೪೭); ಹಳದಿಯು ಹೆಡೆಯನು ಬಿಚ್ಚೋ ಬೇಗಾ ಹೊಳಹಿನ ಹೊಂದಲೆ ತೂಗೋ ನಾಗಾ! (ಕನ್ನಡಾ. ೦೨೨-೨೦). ೩. ಕಶ್ಯಪನ ಪತ್ನಿಯಾದ ಕದ್ರು ಎಂಬುವಳಲ್ಲಿ ಜನಿಸಿದ (ಪುರಾಣೋಕ್ತವಾದ) ಒಂದು ದೇವಸಂತತಿ; ಮನುಷ್ಯನ ಮುಖವೂ ಸರ್ಪದ ದೇಹವೂ ಇರುವ ಪಾತಾಳನಿವಾಸಿಯಾದ (ಅರ್ಧ ದೇವತಾಸ್ವರೂಪದ) ಜೀವ: ದೇವ ನಾಗ ನರ ಸುರ ಸೇವ್ಯ . . . ರಕ್ಷಪುದೆನ್ನ (ಪ್ರಾಥರಾ. ೨೦-೦). 'ಅಷ್ಟನಾಗ', 'ಅಷ್ಟಫಣಿ' ಪರಾ. ೪. ಆನೆ; ಗಜ: "ಆನೆಯಲ್ಲಿಯುಂ ನಾಗಮೆಂಬುದು" (ಹಲಾಯು. ೦೩೨-೦೧); ಮನಮಱಿದು ನಗೆಯೊಳಾ ನೃಪತನಯೆಯು ರಥಮುಂ ನೃಪಾಂತರಕ್ಕಯ್ದ್ವುದೋ ವೇಟ್ ಎನೆ ನೊಂದು ನಿಷಾದಿಗೆ ಮುಳಿದನಂಗ ನೃಪಯಾನನಾಗಮುಂ ವಧು ಪೋಲ್ತಳ್ (ಶಾಂತಿಪು. ೫-೦೫೯); ನಾಗಮೆ ನಾಗದಂತಿರೆ ಪಡಲ್ವಡೆ . . . ಸಡುಗಿತ್ತು ಚಂಚಲಾಂಭೋಗತಚಂದ್ರ ಮಂಡಲದವೋಲ್ ಜಿತಶತ್ರುಗೆ ಶತ್ರುಮಂಡಲಂ (ಅಜಿಪು. ೩-೪೯). 'ನಾಗಮುಖಿ' ಪರಾ. ೫. ಮೋಡ; ಮೇಘ: ನಾಗಮೆ ನಾಗದಂತಿರೆ ಪಡಲ್ವಡೆ . . . ನಡುಗಿತ್ತು ಚಂಚಲಾಂಭೋಗತಚಂದ್ರಮಂಡಲದ ವೋಲ್ ಜಿತಶತ್ರುಗೆ ಶತ್ರುಮಂಡಲಂ (ಅಜಿಪು. ೩-೪೯). 'ನಾಗಭೂಷಣ' ಪರಾ. ೬. ಮುಂಖಂಡ; ಮೊದಲಿಗ; ಪ್ರಧಾನ; ಸಚಿವ: "ನಾಗಂ ಪ್ರಧಾನಭೂತಂ" (ವಸ್ತುಕೋ. ೦೩೦-೮೩). ೭. ಶರೀರದಲ್ಲಿರುವ ಉಪವಾಯುಗಳಲ್ಲಿ ಒಂದು; ತೇಗು, ವಾಂತಿ, ಉದ್ಗಾರಗಳನ್ನು ಉಂಟುಮಾಡುವ ವಾಯು: "ದೇಹಮುಂ ತಾಳ್ದಿಹುದು ನಾಗಮುಕ್ಕುಂ" (ಮುಂಗರಾ. ೦೫-೦೨); ಉದ್ಗಾರವೆಂಬ ಕ್ರಿಯೆಯುಂ ಮಾಡುವದ್ದರಿಂದ ಆ ಅಂತರವಾಯು ನಾಗಸಂಜ್ಞೆಯನ್ನೂ . . . ಪಡೆದುಕೊಂಡಿರುವುದು (ಮುಮುಕ್ಷು. ೩). ೮. ಒಂದು ಲೋಹ; ಸೀಸ: "ಅನುಗೊಳಿಸೆ ನಾಗವಾ ಸೀಸಪತ್ರಂ ಸೀಸಮೆನಿಕು" (ಮಂಗರಾ. ೩೦-೫); "ಫಣಿಯೊಳು ಸೀಸದೊಳು ಸಚಿವನೊಳು ಗಜದೊಳು ಸಲೆ ನಾಗಮಕ್ಕುಂ" (ಮಂಗರಾ. ೦೪೯-೪೦). ೯. ಒಂದು ಬಗೆಯ ಸುವಾಸನೆಯ ಹೂಬಿಡುವ ಮರ; ಸುರಗಿ; ಸುರಹೊನ್ನೆ: "ನಾಗಂ ಪ್ರಧಾನಭೂತಂ ನಾಗಂ ಭೂರುಹವಿಶೇಷಮುಂ ಕುಂಜರಮುಂ" (ವಸ್ತುಕೋ. ೦೩೦-೭೩); "ನಾಗಮೆನೆ ಸುರಗಿಯೆನಿಸಿಕ್ಕುಂ" (ಮಂಗರಾ. ೩೯-೩೪); "ನಾಗಃ – ವತ್ಸನಾಭಿ, ಆನೆ, ಸರ್ಪ, ನಾಗದಂತಿ, ಸುರಹೊನ್ನೆ, ಮಗ್ಗಾರೆ" (ಓಷಧಿ. ೮೫). ೧೦. ಒಂದಂ ಬಗೆಯ ಹೂಬಿಡುವ ಮರ; ನಾಗಸಂಪಿಗೆ; ನಾಗಕೇಸರ: "ನಾಗಂ ಗಜಕೇಸರಂ" (ವಸ್ತುಕೋ. ೩೪-೭); ಷಷ್ಠೋಪವಾಸದಿಂ ಪುಷ್ಪಕೋದ್ಯಾನದೊಳ್ ನಾಗವೃಕ್ಷದಡಿಯೊಳ್ . . . ಕೇವಲಜ್ಞಾನ ಮಹಾಕಲ್ಯಾಣ ಮಹಾ ಪೂಜೆಯನೆಯ್ದಿ (ಚಾವುಂಪು. ೧೩೮); ಕೇದಗೆ ಸಂಪಗೆ ನಾಗಂ ಹಾದರಿ ಯದಿರ್ಗುಂತೆ ಸುರಯಿ ವಕುಳ ಲವಂಗಂ (ಎಕ. VIII, ಸಾಗರ. ೧೦೯-೫೧ ; 1042); ಕುರವಕ [ಚಂವ]ಕಾರ್ಜು[ನ] ತಮಾಳ ಕುಚಂದನ ಚಂದ ನಾಗ ಜಂಬಿರ ಪನಸಾಮ್ರ ನಿಂಬ ಕುಟಜಾದಿ ಮಹಾಕುಜಸಂಕುಳಂಗಳಂ (ಬಂಹರಿ. ೭-೭). ೧೧. ಬೆಂಕಿ; ಅಗ್ನಿ. ೧೨. ಕತ್ತಲೆ; ತಮಸ್ಸು. ೧೩. ನೀರಂ; ಜಲ: "ಸಿಂಧೂರ ಕುಜಾಹಿ ಮುಖ್ಯ ತಮ ಸೀಸ ಜಲಾನಲ ನಾಗವಾಚಕಂ" (ಪಾನಾರ. ೭೭). ೧೪. ಶಂಖ: "ಮತ್ತಗಜಂ ಮರ ಸರ್ಪಂ ಕತ್ತಲೆಯುಂದಕಾಗ್ನಿ ಸೀಸ ಮುಖ್ಯಂ ಶಂಖಂ ಬಿತ್ತರಮಾಗಿಹ ಪೆಸರೊಂಭತ್ತುಂ ನಾಗಾಭಿಧಾನವೆನಿಕುಂ ಜಗದೊಳ್" (ನಾನಾಳಂ. ೭). ೧೫. ಒಂದು ಜಾತಿಯ ವಿಮಾನು; ಪಾರ್ಶ್ವವಿಮಾನು. ೧೬. ಕ್ರೂರಿ; ದುಷ್ಟ. ೧೭. ದೀಪ ಮೊದಲಾದುವನ್ನು ತೂಗುಹಾಕಲು ಬಡಿದಿರುವ ಕೊಕ್ಕೆ. ೧೮. ನಾಗರಹಾವಿನ ವಿಗ್ರಹ.–ಪ್ರತಿಮೆ: ಈ ರಾಜನ ಮಗಳು . . . ನಾಗವನ್ನೂ, ಕೆರೆಯನ್ನೂ ಒಂದು ವಿಹಾರವನ್ನೂ ದಾನಮಾಡಿದಳೆಂದು ತಿಳಿದು ಬಂದಿದೆ (ಕರ್ಣಾಲಿ. ೩). 'ನಾಗಪ್ರತಿಷ್ಠೆ' ಪರಾ. ೧೯. ಒಬ್ಬಾತನ ಹೆಸರು: ಶ್ರೀ ಅಮ್ಮಿಆಚಾರಿಯರ ಮಗನ್ನಾಗನ್ ಮಾಡಿದ (ಎಕ. IX, ಚಿಂಗಳೂ. ೩೬-೫ : 750); ಮಾಧವಯ್ಯಂ ಬರೆದಂ

ನಾಗಂ ಬೆಸೆಗೆಯ್ದಂ (ಎಳ. VIII, ಸೊರಬ. ೫೩೦-೧೩ ; 979). ೨೦. ಭಾರತದ ನಾಗಾಲ್ಯಾಂಡ್ ಮತ್ತು ಅಸ್ಸಾಂ ಪ್ರಾಂತಗಳಲ್ಲಿ ನೆಲೆಸಿರುವ ಒಂದು ಜನಾಂಗ : ಇಷ್ಟೆಲ್ಲ ನಾಗರಿಕತೆಯುಳ್ಳ ಜನರ ಎಡೆಯಲ್ಲಿರುವ ನೀಲಗಿರಿಯ ತೋಡರೂ, ಅಸ್ಸಾಮಿನ 'ನಾಗ'ರೂ . . . ಹೊಸಸಂಸ್ಕೃತಿಗಳಿಗೆ ಸಿಗದವರು (ಬಾಲಪ್ರ. I, ೪೯೯). ೨೧.=ನಾಗವ : ಕರಣವೇಕಾದಶಗಳಲಿ ಚರಕರಣ ಶಕುನಿ ಚತುಷ್ಕ ವಣಿಜೆಯು ನಾಗ ಕಿಂಸ್ತುಘ್ನ (ಗಗತಾ. ೪-೭೦). 'ನಾಗವ' ಪರಾ. ೨೨. [ಛಂದ] ಒಂದು ಅರ್ಧಸಮವೃತ್ತ : ನಾಗ – ಒಂದು ಮೂರನೆಯ ಪಾದಗಳಲ್ಲಿ ಒಂದು ತಗಣವೂ ಒಂದೊಂದು ಗುರು ಲಘುಗಳೂ, ಎರಡು ನಾಲ್ಕನೆಯ ಪಾದಗಳಲ್ಲಿ ಒಂದು ತಗಣವೂ ಒಂದು ಗುರುವೂ ಇರುವುವು (ಕೈಪಿಡಿ. ೮೯). ೨೩. [ಗಣಿತ] ಎಂಟು ಎಂಬ ಸಂಖ್ಯೆಯ ಸಂಕೇತ : "ಕರ ನಾಗ ವಸುವೆಂಟು" (ಮಂಗರಾ. ೧೦೪-೮) ; ಯುಗ ಋತು ಗಜ ನಾಗಾಂಬರ ಮೃಗಧರವಗ ಷಟ್ಕಮೆನಿಪ ವೃತ್ತದ ಲೆಕ್ಕಂ ಸೊಗಯಿಸಿ ತೋರ್ಕಂ ಗಣಿಯಿಪುದಗಣಿತ ಗುಣನಿಲಯ ನಾಗವರ್ಮನ ಮತದಿಂ (ಛಂದೋಂಬು.೨-೨೦೧). ೨೪. [ಗಣಿತ] ಏಳು ಎಂಬ ಸಂಖ್ಯೆಯ ಸಂಕೇತ : "ನಾಗ ಶೈಲ ಸಪ್ತಂ" (ಭಾಸ್ಕರ.೪೪-೫).

ನಾಗನ ಹುಲ್ಲು = ಒಂದು ಬಗೆಯ ಹುಲ್ಲು ; ಶತ್ತೆಹುಲ್ಲು ; ದೇವನಾಳ : "ದೇವನಾಳಂ ಪಿರಿದಾಗಿರ್ಪ ಭೂಮಿ–ನಡ್ವತ್, ನಡ್ವಲ, ಒಪ್ಪಿಲೆ, ನಾಗನ ಹುಲ್ಲೆಂ[ಪಾಕಾಂ. ಟ್ಟೆಂ]ದೂ ಎಂಬರು" (ನಾಚಿರಾ. ೬). ನಾಗಪ್ಪ = ನಾಗರಹಾವು : ನಾಗಪ್ಪಗ್ಹಾಲ ಎರಿಯೋಣ (ಜನಗೀ. ೩) ; ನಾಗಪ್ಪನಿಗೆ ತನಿ ಎರೀತೀನಿ ಅಂತ ಹರಕೆ ಕಟ್ಟಿಕೊ (ರೂಢಿ). [ಸಂ.]

ನಾಗಂಡುಗ 'ನಾಲ್ಗಂಡುಗ' ನೋ.

ನಾಗಂದ (ನಾ). ಒಬ್ಬಾತನ ಹೆಸರು : ಶ್ರೀಗೋವಿನ್ದರ ವಲ್ಲಹನ್ಪೃಥಿವೀ ರಾಜ್ಯಂಗೆಯ ಮೆಡ ನಾಗನ್ದನ್ × × × ನಾಡಾಳೆ (ಎಳ. VIII, ಸೊರಬ. ೫೪೨-೧ ; ಸು. 800). [?]

ನಾಗಂದಿ 'ನಾಗಂದಿಗೆ' ನೋ.

ನಾಗಂದಿಗೆ, ನಾಗಂದಿ, ನಾಗವಂದಿ, ನಾಗವಂದಿಗೆ, ನಾಗೊಂದಿ, ನಾಗೊಂದಿಗೆ (ನಾ). ೧. ಮನೆಗಳಲ್ಲಿ ಸಾಮಾನುಗಳನ್ನು ಇಡಲು ಅನುಕೂಲವಾಗುವಂತೆ ಗೋಡೆಗಳಿಗೆ ಎತ್ತರದಲ್ಲಿ ಜೋಡಿಸಿರುವ ಮರದ ಹಲಗೆ ; ಬಡು. ೨. ಬಾಗಿಲುವಾಡದ ಮೇಲೆ ಅಥವಾ ಕಂಬದ ಸುತ್ತ ಇರುವ, ಸಾಮಾನಿಡುವ ಸ್ಥಳ : ಜಾನಕಿಯು ವಸೂಲುಮಾಡಿ ತಂದ ರೂಪಾಯಿಗಳನ್ನು ನಾಗಂದಿಗೆಯ ಮೇಲೆ ಇರಿಸಿ ಸ್ನಾನಕ್ಕೆ ಹೋಗಿದ್ದಳು (ಸರಸ. ೩) ; ನಾಗಂದಿಗೆ ಮೇಲಕೆ ಫೇಣಿಯನಿರಿಸಿ ಮರತೇ ಬಂದಿಹೆನು (ನಡೆದಾ. I, ೪೧೦) ; ನಾಗಂದಿಗೆಯಿಂದ ನಾಗಂದಿಗೆಗೆ ಅಡ್ಡಲಾಗಿ ಹಾಕಿದ್ದ ಬಿದಿರ ಗಳುವಿಗೆ ತೂಗುಹಾಕಿದ್ದ (ಮಲೆಮ. ೨೩೮). **ನಾಗಂದಿ** : ೨. ಕುಡುಗೋಲುಗಳು ನಾಗಂದಿಯ ಮೇಲೆ; ಜಂಗು ತಿನ್ನುತ್ತ ಬಿದ್ದಿದ್ದವು (ಜೀನಬಾ. ೨೩೮). **ನಾಗವಂದಿ** : ೧. ಹುಳಿತ ನಾಗವಂದಿಗಳೂ ಗೂಟಗಳೂ ಬೇಕಾದಷ್ಟಿವೆ (ಮೋಜೀವ. ೮). **ನಾಗವಂದಿಗೆ** : ೧. "ನಿರ್ಮ್ಯಹ . . . ನಾಗವಂದಿಗೆ" (ಗಂಗಾಮ. ೧೮೫) ; ಈ ಪುಸ್ತಕಗಳನ್ನು ಕಟ್ಟಿ ನಾಗವಂದಿಗೆಯ ಮೇಲಿಟ್ಟುಬಿಡು (ರೂಢಿ). **ನಾಗೊಂದಿ**: ೨. ಗೋದಾವರಿ ಮಾತನಾಡಲಿಲ್ಲ. ಕೈಯನ್ನೆತ್ತಿ ಪಡಸಾಲೆಯ ನಾಗೊಂದಿಯಲ್ಲಿಯ ಒಂದು ಕಾಗದವನ್ನು ಎತ್ತಿ ಬಾಬೂನ ಕೈಯಲ್ಲಿರಿಸಿದಳು (ರಕ್ತಧ್ವ. ೨೭೨). **ನಾಗೊಂದಿಗೆ** : ೧. ಸಾಬೂನು, ಬ್ರಶ್ ಮತ್ತು ಇತರ ತೊಳೆಯುವ ಸಾಧನಗಳನ್ನಿರಿಸಲು ಸಿಂಕಿನ ಮೇಲುಗಡೆಯಲ್ಲಿ ಒಂದು ಕಪಾಟು ಅಥವಾ ನಾಗೊಂದಿಗೆ (Shelf) ಇರಬೇಕು (ಅಡುಸೌ. ೦೩). ಪಕ್ಕದ ನಾಗೊಂದಿಗೆಯ ಮೇಲಿದ್ದ ಹಲ್ಲುಪುಡಿಯ ಡಬ್ಬವನ್ನು ತೆಗೆದು ಆಕೆಯ ಕೈಗಿತ್ತ (ವಾತ್ಸಲ್ಯ. ೧೭). [< ಸಂ. ನಾಗದಂತಕ]

ನಾಗಕಂಕಣ (ನಾ). ಹಾವುಗಳೇ ಕೈಕಡಗವಾಗಿರುವವನು ; ಸರ್ಪಗಳನ್ನು ಕಡಗದಂತೆ ಕೈಗೆ ಸುತ್ತಿಕೊಂಡಿರುವವನು ; ಶಿವ : ನಾಗಕಂಕಣಗೆ ಯತಿವರ ಮರುಳಾರ್ಯಂಗೆ ರಾಗದಿಂದೊಮ್ಮೆ ಶರಣೆಂಬೆ (ಆತ್ಮತ್ರಿ. ೧) ; ನಾಗಾಂಕನ ಅಱಿದು ತಾನಾಗದೆ ನಾಗಕಂಕಣನಾದ ನಾಗಾಯಿ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ (ಸಿದ್ಧವ. ೪೨೨-೧೩೬೧) ; ಗಿರಿಜೆ ತಪವಟ್ಟು ಮೆಚ್ಚಿಸಿ ರಜತಾದ್ರಿಯಲಿ ನಾಗಕಂಕಣನಿಂ ಪಡೆದಳನುರಾಗದಿಂದೀ ಲಾಂಛನವನು (ಬಸಪು. ೧೨-೨೫) ; ದಕ್ಷನಂ ಕೊಲಲೆಂದು ನಾಗಕಂಕಣನೆನ್ನನಟ್ಟಿದಂ (ವೀಶೈಪು. ೩-೪-೨೫) ; ನಾಗಕಂಕಣ ಕರಯಗದಿಂದೆ ಪಿಡಿದೆತ್ತಿ ಪೂಗೋಲ ನರ್ಧಾಂಗಿಗಾಗ ರಾಗದಿ ವಸ್ತ್ರಭೂಷಣವಿತ್ತು (ಮೋಹತ. ೮-೪೫).

[ನಾಗ + ಕಂಕಣ]

ನಾಗಕಟಕ (ನಾ) = ನಾಗಕಂಕಣ : ನಾಗಕಟಕಂಗಿತ್ತು ವಿಷಮಂ ರಾಗದಿಂ ನೀವುಂಡು ಸಾಯದಡಾ ಪ್ರಸಾದವನು ನೀವು ಕೈಕೊಂಡನುಭವಿಸುತಿರೆ ನಾವು ಬೇಡವು (ಬಸಪು. ೫೮-೪೬) ; ನಾಗಯಜ್ಞೋಪವೀತಂ ನಾಗಕುಂಡಲಂ ನಾಗಕಟಕಂ . . . ನಾಗವಿಷಧರನೊಪ್ಪುತಿರ್ದಂ (ಲಶಿಜಿಂ. ೨೭-೨೯).

[ನಾಗ + ಕಟಕ]

ನಾಗಕನ್ನಿಕೆ (ನಾ).=ನಾಗಕನ್ನೆ : ನಾಗಕನ್ನಿಕೆಯರು ನಾಥನ ಬೇಡಲು ನಾನಾ ವಿಧದಿ ಸ್ತುತಿಮಾಡಲು (ಪುರಂದ. ೨-೧೦೩-೩). [ನಾಗ + ಕನ್ನಿಕೆ]

ನಾಗಕನ್ನೆ (ನಾ). ನಾಗಲೋಕದ ಹೆಣ್ಣು : ಪಡೆಮೆಚ್ಚೆಗಂಡನ ಗಂಡ ಗಾಡಿಯಂ ಕಂಡು ಫಣೀಂದ್ರನ ಕನ್ನೆ ಮದನಲತೆಯೆಂಬ ನಾಗಕನ್ನೆ ಕಣ್ಬೇಟಂಗೊಂಡು ತನ್ನ ಲೋಕಕ್ಕೊಡಗೊಂಡು ಪೋಗಲ್ (ಪಂಪಭಾ. ೪-೧೫ ವ). [ನಾಗ + ಕನ್ನೆ]

ನಾಗಕನ್ಯೆ (ನಾ). = ನಾಗಕನ್ನೆ : ಮಧ್ಯಮಪಾಂಡವ ಅರ್ಜುನ ಉಲೂಪಿ, ಚಿತ್ರಾಂಗದೆ ಎಂಬ ನಾಗಕನ್ಯೆಯರ ಕೈಹಿಡಿದ ಕಥೆ ಪ್ರಸಿದ್ಧವಾಗಿಯೇ ಇವೆ (ಭಾಹಬೃ. ೧೦೦). [ನಾಗ + ಕನ್ಯೆ]

ನಾಗಕರಣ (ನಾ). ೧. = ನಾಗ ೨೧. ೨. [ಕಾಮಶಾ] ಸಂಭೋಗದಲ್ಲಿ ಒಂದು ಬಂಧ : ಆ ಕಾರಣಮಂ ಪುರುಷನ ಪುರುಷನ ತಿಕದಿಂ ಪೊರದೆ ಯೆರಡು ತೊಡೆಗಳನಿಕ್ಕಿದರೆ ನಾಗಕರಣ (ಕಾಮಶಾ. ೬-೧೩೬).

[ನಾಗ + ಕರಣ]

ನಾಗಕುಂಡಲ (ನಾ). ೧. ಸರ್ಪದ ಕರ್ಣಾಭರಣ ; ಹಾವಿನ ಕುಂಡಲ : ನಾಗಕುಂಡಲಂ ಪೊನ್ನೋಲೆಯೆಸೆವ ಕಱೆ ರನ್ನದಾಳಿ (ಹಚಕಾ. ೦-೬) ; ಬಲಗಿವಿಯಲ್ಲಿ ನಾಗಕುಂಡಲ ಎಡಗಿವಿಯಲ್ಲಿ ಮಕರಕುಂಡಲವೂ ಇವೆ (ಹೊಯ್ಸಪಾ. ೯೭). ೨. ಸರ್ಪವೇ ಕುಂಡಲವಾಗಿರುವವನು ; ಶಿವ : ನಾಗಕುಂಡಲನಱಿದೆವೆಂಬರು ನಾಗದೇವತೆಗಳಾದರು ನಾಗಾಯಿ (ಸಿದ್ಧವ. ಕ. ೪೨೨-೧೩೬೧) ; ನಾಗಯಜ್ಞೋಪವೀತಂ ನಾಗಕುಂಡಲಂ ನಾಗಕಟಕಂ . . . ನಾಗವಿಷಧರನೊಪ್ಪುತಿರ್ದಂ (ಲಶಿಜಿಂ.೨೭-೨೯) ; ನಾಗಕುಂಡಲ ನಾಗದನುಜ ಚರ್ಮಾಂಬರನೆ ನಾಗನರಲೋಕಕಧಿಕನೆ ರಕ್ಷಿಸುವುದೆಂದು ನುತಿಸೆ (ಪ್ರೌಢರಾ. ೨-೪೦). [ನಾಗ + ಕುಂಡಲ]

ನಾಗಕುಷ್ಠ (ನಾ). ಒಂದು ಬಗೆಯ ಕುಷ್ಠರೋಗ : ಹಾವಿನ ಮೈಮೇಲೆ ಚುಕ್ಕೆಗಳು ಇರುವಂತೆ ಮೈಮೇಲೆ ಚುಕ್ಕೆಗಳುಂಟಾಗುವ ಕುಷ್ಠ ರೋಗ : (ಕಿ). [ನಾಗ + ಕುಷ್ಠ]

ನಾಗಕೆ (ನಾ). = ನಾಗ ೭ : ಅವುಗಳ್ಗಿನ್ನು ಕರ್ಮಾದಿಗಳವೆಂತೆಂದೆನ್ನಲಿಕೆ ನಾಗಕೆಯು ಉದ್ಗಾರಾದಿ ಗುಣವಹುವು (ಗಗತಾ. ೯-೬೩). [ಸಂ. ನಾಗಕ]

ನಾಗಕೇಶರ (ನಾ). = ನಾಗಕೇಸರಿ ೧ : ಮುಂಬಯಿ ೨೧ ಮಣದ ಖಂಡಗದ ಮೇಲೆ ಕಿಮ್ಮತ್ತು ಆಗತಕ್ಕ ಜೀನಸಗಳು. ೧. ಬುಕ್ಕಿಟ್ಟು (ಅಬೀರ) ; ೨. ಅಂಬೆಹಳದಿ (ಗಂಟು ಅರಶಿಣ) . . . ೧೩ ನಾಗಕೇಶರ ಕೆಂದು; ೧೪ ಪತಂಗ, ಮಲಬಾರಿ (ಮುಂಬವ್ಯಾ. ೧೨೦). [ಸಂ.]

ನಾಗಕೇಸರ (ನಾ). ೧. ಒಂದು ಬಗೆಯ ಮರ ಮತ್ತು ಸುವಾಸನೆಯಿಂದ ಕೂಡಿದ ಅದರ ಹೂವು; ನಾಗಸಂಪಿಗೆ : "ಹೇಮಪುಷ್ಪಂ, ನಾಗಕೇಸರಂ –ಈ ೨ ನಾಗಕೇಸರಂ" (ಹಲಾಯು. ೩೪-೫೩) ; "ಚಾಂಪೇಯಃ, ಕೇಸರಃ, ನಾಗಕೇಸರಃ, ಕಾಂಚನಾಹ್ವಯಃ–೪ ನಾಗಸಂಪಿಗೇ ಮರದ ಹೆಸರುಗಳು. ಇದಕ್ಕೆ ನಾಗಕೇಸರವೆಂದು ಕೆಲವರು ಹೇಳುವರು" (ಸಿದ್ಧಾಂತಿ. ೧೨೬). ೨. ಒಂದು ಬಗೆಯ ಔಷಧಿ ಸಸ್ಯ : ತ್ರಿಕಟುಕ, ನಾಗಕೇಸರ, ಸೈಂಧವ ಇವಿಷ್ಟನು ಸಮಭಾಗದಲ್ಲಿ ಕೂಡಿ ಮೊಲೆವಾಲಿಂದರೆದು ಕೊಡಿಸಲು ಶ್ಲೇಷ್ಮ ಸನ್ನಿ ಶಮನವಹುದು (ಪೈದ್ಯಸಾ. I, ೧೦೯) ; ಮುಟ್ಟಿನ ನಾಲ್ಕನೇ ದಿನ ನಾಗಕೇಸರದ ರಜಮಂ ಆಕಳ ತುಪ್ಪದಿಂವರಸಿ ಕುಡಿದು ವಡನೆ ಹಾಲಂ ಕುಡಿದು ಪುರುಷನ ಸೇರಿ ರಮಿಸಲು ಗರ್ಭವತಿಯಹಳು (ಕಾಮಶಾ. ೧೧-೨೭೭). ೩. ವಕುಳದ ಮರ ; ಕೇಸರವೃಕ್ಷ : "ಬಕುಳಮದು ನಾಗ ಕೇಸರಂ ಕಾಂಚನಪ್ರಸವಮಕ್ಕುಂ" (ಮಂಗರಾ. ೩೮-೨೩). [ಸಂ.]

ನಾಗಕೇಸರಿ (ನಾ). = ನಾಗಕೇಸರ ೧ : ಸಂಪಿಗೆ ಕದಳಿ ನಾಗಕೇಸರಿ ಪಾರಿಜಾತ . . . ಮೊಲ್ಲೆ ಮಲ್ಲಿಗೆ ಜಾಜಿ ಪೂಗೊಂಚಲೆಸೆವ ಪೊಸವನದೊಳಗೆ ಬಿಟ್ಟನಾ ಮಲುಹಣನು ಮಲುಹಣೆಯೊಳು (ಗುಭಜ. ೨-೫೩) ; ಏಲಕ್ಕಿ, ನಾಗಕೇಸರಿ, ಲವಂಗಚಕ್ಕೆ . . . ಚೂರ್ಣವನ್ನು ಮಾಡಿ (ಸಕವೈ. ೮೪) : ನಾಗಕೇಸರಿ, ನಾಗಸಂಪಿಗೆ (ಮೃಜಿಗಿ. ೫೩-೧೦೭೨). [< ಸಂ. ನಾಗಕೇಸರ]

ನಾಗಗಾಂಧಾರಿ (ನಾ). [ಸಂಗೀತ] ಒಂದು ರಾಗದ ಹೆಸರು : ನಾಗ ಗಾಂಧಾರಿ . . . ಹಿಂದೋಲವಸಂತ, ಆಭೇರೀ ಎಂಬಿವು ಉಪಾಂಗಗಳು (ಚತುಪ್ರ. ೧೨೯). [ಸಂ. ನಾಗಗಾಂಧಾರೀ]

ನಾಗಗುಟ್ಟರಸ (ನಾ). ಒಬ್ಬಾತನ ಹೆಸರು : ನಾಗಗುಟ್ಟರಸಮ್ ತಮ್ಮ ಏಱಿದ ಕುದುರೆಯನ್ ಮಗುಱಿ ಅಟ್ಟಿ ಬಾಳಂ ಕಿಟ್ಟು ನಡದು ಪಲರನಿಱಿದು ಸತ್ತೊಡೆ (ಎಕ. X, ಕೋಲಾರ. ೨೦೦-೮ ; ಸು. 890).

[? + ಅರಸ$_1$]

ನಾಗಚಂಪಕ (ನಾ). = ನಾಗಕೇಸರ ೧ : ನಾಗಚಂಪಕಕುಟ್ಮಲಾನುಕಾರಿ ನಾಸಾಪುಟವಿಕಸಿತಮುಕುಲಶೋಭಿತಚಂಪಕಂಗಳಂ . . . ನೋಡುತ್ತಂ (ಸುಕುಮಾ. ೯-೧೦೭ ವ). [ಸಂ.]

ನಾಗಚತುರ್ಥಿ (ನಾ). ಒಂದು ಹಬ್ಬ ; ನಾಗಪೂಜೆಯನ್ನು ಮಾಡುವ ಚೌತಿ ; P ಶ್ರಾವಣಮಾಸದ ಶುಕ್ಲಪಕ್ಷದ ಚತುರ್ಥಿ : ಈವತ್ತು ನಾಗಚತುರ್ಥಿ, ನಾಳೆ ಗರುಡಪಂಚಮಿ (ರೂಢಿ). 'ನಾಗಪಂಚಮಿ' ಹೋ. [ನಾಗ + ಚತುರ್ಥಿ]

ನಾಗಚೌತಿ (ನಾ). = ನಾಗಚತುರ್ಥಿ : ನಾಗಚೌತಿ . . . ಅಂದು ಆಚಾರ ವಂತರಿಗೆ ಉಪವಾಸ ದಿವಸ (ಭಾಹಬ್ಯ. ೧೦೨). [ನಾಗ + ಚೌತಿ]

ನಾಗಜಾಲ (ನಾ). ನಾಗಲೋಕದ ವಿಭವಗಳಲ್ಲೊಂದಂ (?) : ನಾಗವಿಭೂಷಣಪ್ರತತಿ ನಾಗರಖಂಡಮಪೂರ್ವಮಪ್ಪ ಪುನ್ನಾಗದ ಬಾಸಿಗಂ ಬಗೆದ ಬಣ್ಣದ ಪುಟ್ಟಿಗೆ ನಾಗಜಾಲಮೆಂದಾಗಡೆ ನಾಗಲೋಕವಿಭವಂ ಗಳೊಳಾಟಿಸಿ ನಾಗಶಯ್ಯೆಯೊಳ್ ನಾಗಿಣಿ ನಾಗಬಂಧದೊಳೆ ತಳ್ತು ಗುಣಾರ್ಣವನಂ ಮರುಳ್ಚಿದಳ್ (ಪಂಪಭಾ. ೪-೧೭). [ಸಂ.]

ನಾಗಜಿಹ್ವಿಕೆ (ನಾ). (ಬೆಟ್ಟ ಮೊದಲಾದ ಕಡೆಗಳಲ್ಲಿ ದೊರಕುವ) ಒಂದು ಬಗೆಯ ಕೆಂಪುಬಣ್ಣದ ಧಾತು ; ಮಣ್ಣುಶಿಲೆ : ಮನಶ್ಶಿಲಾ, ಮನೋಗುಪ್ತ, ಮನೋಹ್ವಾ, ನಾಗಜಿಹ್ವಿಕಾ–೪ ಮಣಿಶಿಲೆಯ ಹೆಸರುಗಳು" (ಸಿದ್ಧಾಂತಿ. ೩೦೬). [ಸಂ. ನಾಗಜಿಹ್ವಿಕಾ]

ನಾಗಠಾಣ (ನಾ). ನಾಗರಕಲ್ಲುಗಳನ್ನು ಪ್ರತಿಷ್ಠೆ ಮಾಡಿದ ಸ್ಥಳ ; ನಾಗಸ್ಥಾನ : ನಾಗಠಾಣಕ್ಕೆ ಪೋಗಿ ನಾಗರನರ್ಚಿಸಿ ಪೊಡೆವಟ್ಟು ಸೂರ್ಯ ಮಿತ್ರಾಚಾರ್ಯರುಮಗ್ನಿಭೂತಿರುಷಿಯರಂ ಕಂಡು ಜಾತಿಸ್ಮರೆಯಾಗಿ (ವಡ್ಡಾರಾ. ೧೨-೨೨). [ನಾಗ + ಠಾಣ (<ತಾಣ)]

ನಾಗಣಂದ (ನಾ). ಒಬ್ಬಾತನ ಹೆಸರು : ಸೆಂಬನೂರ ನಾಗಣನ್ದಪಿರಿಯ ಯ್ಯಂಗಳುಂ ದುರ್ಮ್ಮೆಯ ನಾಗದೇವಭಟಾರರುಂ (ಎಕ. XI, ಚಿತ್ರದು. ೭೪-೩೦ ; 968). [< ಸಂ. ನಾಗಾನಂದ ?]

ನಾಗಣಂದಿ (ನಾ). ಒಬ್ಬಾತನ ಹೆಸರು : ಶ್ರೀ ನಾಗಣನ್ದಿ ಕಿತ್ತಯ್ಯ ದೇವರ ಬನ್ದಿಸಿದರ್ (ಎಕ. II (R), ೬೦ ; 9ನೆಯ ಶತ). [ನಾಗ+ನಂದಿ]

ನಾಗಣಿ (ನಾ). ಸುರಹೊನ್ನೆ ಮರ ; ಪುನ್ನಾಗ : ಸುರಹೊನ್ನೆ (ನಾಗಣಿ):– ಬಹು ಭವ್ಯವಾದ ವೃಕ್ಷವು . . . ಬೊಡ್ಡಿಯು ಗಡುತರವಾಗಿಯೂ ಸರಳವಾಗಿಯೂ ಬೆಳಿಯುವುದು (ಕಭಾಗೆ. ೪೯). [?]

ನಾಗಣೈಯ (ನಾ). ಒಬ್ಬಾತನ ಹೆಸರು : ಸರ್ವಾಧಿಕಾರಿ ಶ್ರೀನಾಗಣೈಯ ಸಂಧಿವಿಗ್ರಹಿಕ ಶ್ರೀ ಸೀಹಪೈಯ (ಇಆ. V, ೨೭೮-೭ ; 1026).

[< ನಾಗಣ್ಣ + ಐಯ (<ಅಯ್ಯ$_1$)]

ನಾಗಣ್ಣ (ನಾ). ೧. ನಾಗರಹಾವು : ಎಲೆ ನಾಗಣ್ಣ, ಹೇಳೆಲೋ ನಿನ್ನಾ ತಲೆಯಲಿ ರನ್ನವಿಹ ನಿಜವನ್ನಾ (ಕನ್ನಬಾ. ೧೩೩-೧). ೨. ಒಬ್ಬಾತನ ಹೆಸರಂ : ಶ್ರೀಕೊಡಲರಾ ನಾಗಂಣನಾ ಕೃತಮಿದಂ (ಮೈಆರಿ. ೧೯೩೦, ೩-೩೪; ಸು. 500). [ನಾಗ + ಅಣ್ಣ$_1$]

ನಾಗತಗರೆ (ನಾ). ಒಂದು ಬಗೆಯ ಗಿಡ : ಕಾಡುಹುರುಳಿ, ನಾಗತಗರೆ, ಟೆಲಿಗ್ರಾಫ್ ಗಿಡ (ಮೈಜಿಗಿ. ೩೦-೫೭೨). [ನಾಗ + ತಗರೆ]

ನಾಗತರ$_1$ (ನಾ). ಶ್ರೇಷ್ಠವಾದ ಆನೆ : ನಾಗತ ಂಗಳೊಂದೆ ಕಳಭಕ್ಕೆ ಮೊಗಂದಿರಿದತ್ತು (ಶಾಂತಿಪು. ೩-೧೦೪). 'ಅಶ್ವತರ' ಹೋ. [ಸಂ.]

ನಾಗತರ$_2$ 'ನಾಗತ್ತರ' ನೋ.

ನಾಗತಲ್ಪ (ನಾ). ೧. ಹಾವಿನ ಹಾಸಿಗೆ; ಸರ್ಪಶಯನ. ೨. ಸರ್ಪವನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡಿರುವವನಂ ; ನಾರಾಯಣ : ಬಲ್ಪಂಥಗಳ ಮಾಡಿ ಭೋಗಪಡದಿರು ನಾಗತಲ್ಪನ್ನ ಮೊರೆಹೋಗೆಲೋ ಪ್ರಾಣಿ (ವಿದಾಕೃ. ೪೮-೯). [ನಾಗ + ತಲ್ಪ]

ನಾಗತಿ$_1$ 'ನಾಯಕಿತ್ತಿ' ನೋ.

ನಾಗತಿ$_2$ (ನಾ). ಜೀವನಂ ಚರಿಸುವ ನಾಲ್ಕು ಬಗೆಯ ಸ್ಥಿತಿಗಳು ; ಅನಿಮಿಷಗತಿ, ಮಾನವಗತಿ, ನಾರಕಗತಿ ಮತ್ತು ತಿರ್ಯಗ್ಗತಿ ಎಂಬ ಗತಿಗಳು : ಅತಿಕಾಂಕ್ಷೆಯೆಂಬಗಳತಿ ವಿಸ್ಮಯವಾಗಿ ಕ್ಷಿತಿಯನೊಡೆದು ನಾಗತಿಯ ಧೃತಿಗೆಡಿಸುತ ಬಳಸಿಹುದಾ ಪುರದೊಳು (ತ್ರಿಪುಸಾಂ. ೪-೪೦).

[ನಾ$_2$ (< ನಾಲ್) + ಗತಿ]

ನಾಗತಿ$_3$ (ನಾ). ಒಬ್ಬಾತನ ಹೆಸರು : ದುಗ್ಗತಿಗವುಣ್ಡಿಯ ಮಗಂ ನಾಗತಿ ಸಾಲತ್ತಿಯ [ತು]ಱುಗೊಳ ಸತ್ತಂ (ಸೌಇಇ. XX, ೧೪-೪; 875) ; ಶ್ರೀನಾಗತಿ ಆಳ್ದನ ದಣ್ಣೆ (ಎಕ. II, ೪೫೨-೧ ; ಸು. 1000). [?]

ನಾಗತಿಯಮ್ಮ (ನಾ). ಒಬ್ಬಾತನ ಹೆಸರಂ : ಶ್ರೀ ನಾಗತಿಯಮ್ಮನ ಮಗಂ ಮಲಯ್ಯಂ (ಎಕ. XIV, ಎಳಂದೂ. ೯೬-೧; 1000).

[ನಾಗತಿ$_3$ + ಅಮ್ಮ$_1$]

ನಾಗತ್ತರ, ನಾಗತರ$_2$ (ನಾ). ಒಬ್ಬಾತನ ಹೆಸರು : ಸಾಮನ್ತಸಹಿತಂ ನಾಗತ್ತರನಂ (ಎಇ. I, ೩೫೦-೪ ; 900) ; ನಾಗತ್ತ ನಳುಮಙ್ಗಲ ಬೀವಣ್ಣ ನೆಂಬೋನು ನಾಗದೇವನೆಂಬೋನು . . . ಕದಂಬೂರೆ ತುಱುಗಳ್ನೊಳ ಕಾದಿ ಸತ್ತ (ಎಕ. IX, ಆನೇಕ. ೭೩-೫ ; 900). **ನಾಗತರ$_2$** : ಸತ್ಯವಾಕ್ಯ ಪೆರ್ಮಾಡಿಯ ಕಲಿಯುಗದಣುವ ನಾಗತರನೊಳ್ ಇರ್ವ್ವುಲಿಯೂರೊಡೆಯ ಇರುಗಮಯ್ಯನ ಮಗಂ ಸಿರಿಯಮಯ್ಯಂ . . . ಮೂಡಣ ಕೆಱೆಯಂ ಕಟ್ಟಿಸಿ ಮೂಱುಕೆಱೆಯ ಬಿತ್ತುವಟ್ಟವಂ ಪಡೆದಂ (ಎಕ. IX, ಬೆಂಗಳೂ. ೭೯-೩ ; 870); ಶ್ರೀಮತ್ ನಾಗತರನ ಮನೆವಗತಿ ಪೆರ್ವ್ವೊಣಶೆಟ್ಟಿ ಬೆಂಗಳೂರ ಕಾಳೆಗದೊಳ್ ನಾಗತರನ ಮಗಂ ಬುಟ್ಟಣಪತಿ ಸತ್ತಂ (ಮೈಆರಿ. ೧೯೧೫ ; ೨೦-೧ ; 900). [ನಾಗತಿ$_2$ + ಅರ$_4$]

ನಾಗದಂತಿ (ನಾ). ೧. ಸೂರ್ಯಕಾಂತಿಯ ಜಾತಿಗೆ ಸೇರಿದ ಒಂದು ಬಗೆಯ ಗಿಡ ಮತ್ತು ಅದರ ಹೂವು: "ಶ್ವೇತಗಂಧಿ-ನಾಗದಂತಿ" (ಓಷಧಿ. ೧೭೧) ;ನಾಗದಂತಿ, ಕಾಡುಹರಳು (ಮೈಜಿಗಿ. ೧೧-೧೯೧). ೨. ಮುಳ್ಳುಗಳಿಂದ ಕೂಡಿರುವ ಒಂದು ಬಗೆಯ ಬಳ್ಳಿ. -ಲತೆ. [ಸಂ. ನಾಗದಂತೀ]

ನಾಗದನುಜ (ನಾ). ಒಬ್ಬ ರಾಕ್ಷಸ ; ಗಜಾಸುರ : ನಾಗದನುಜಚರ್ಮಾಂಬರನೆ ನಾಗನರಲೋಕಕಧಿಕನೆ ರಕ್ಷಿಸುವುದೆಂದು ನುತಿಸೆ (ಪ್ರೌಢರಾ. ೨-೪೦).
[ನಾಗ + ದನುಜ]

ನಾಗದಮನಿ (ನಾ). ಒಂದು ಬಗೆಯ ಗಿಡ; ವಿಷವನ್ನು ಪರಿಹರಿಸುವ ಕಾರಸೆ ಎಂಬ ವನಸ್ಪತಿ : " ಕಾರಸೆ ನಾಗದಮನಿಯಕ್ಕುಂ " (ಮಂಗರಾ. ೪೫-೪೭). [ಸಂ. ನಾಗದಮನೀ]

ನಾಗದಾವರೆ (ನಾ). ಒಂದು ಬಗೆಯ ಗಿಡ ಮತ್ತು ಅದರ ಹೂವು : ಮಲ್ಲಿಗೆಯಿಂ ನಾಗದಾವರೆಯಿಂ ಚೂತಪಲ್ಲವದಿಂ ಪಚ್ಚೆಯಿಂದ . . . ಭೂವಲ್ಲಭ ಜಿನರನರ್ಚಿಸಿದ (ರಾಮವಿ. ೧೪-೧೭).
[ನಾಗ + ತಾವರೆ (<ತಾಮರೆ)]

ನಾಗದಾಸಯ್ಯ (ನಾ). ಒಬ್ಬಾತನ ಹೆಸರು : ನಾಗದಾಸಯ್ಯಂ ಬರೆದ (ಎಕ. VII, ಶಿಕಾರಿ. ೭೪-೨೭ ; 1010). [ನಾಗ + ದಾಸಯ್ಯ]

ನಾಗದಾಳಿ (ನಾ). ಕಟುವಾದ ವಾಸನೆಯಂಳ್ಳ, ಹಾವಿಗೆ ಅಪ್ರಿಯವಾದ ಒಂದು ಬಗೆಯ ಗಿಡ ; ಮೊಳೆಕಾಳಿಂಗನ ಗಿಡ ; ಸದಾಪು (ಉಕ) : ರಾಸ್ಮೆ, ಬೇಲದ ಹಣ್ಣು ... ಜಟಾಮಾಂಸಿ, ನಾಗದಾಳಿ, ಕೊನ್ನಾರಿಗೆಡ್ಡೆ ... ಇವಂ ಕಷಾಯಂ ಕಾಯಿಸಿ ಕೊಟ್ಟರೆ ವಾತಜ್ವರಂ ಕೆಡುಗುಂ (ಸಕವೈ. ೬೯) : ನಾಗದಾಳಿಸೊಪ್ಪು, ಸೀಮೆಸದಾಪು (ಮೈಜಿಗಿ. ೬೭-೧೩೬೬) ; ಜಾತಿಪಂಗಡಗಳು ನಾಗದಾಳಿಯಂತೆ ಹೊಲಗದ್ದೆಗಳನ್ನು ಆಕ್ರಮಿಸಿಕೊಂಡಿವೆ (ಭಕ್ತಿಲ. ೪೮) : ಹಾವುಗಳಿಗೆ ಅಪ್ರಿಯವಾದ ನಾಗದಾಳಿ ಗಿಡಗಳನ್ನು ಇವು ಸೇರಬಹುದಾದ ಎಡೆಗಳಲ್ಲಿ ಬೆಳೆಸಬೇಕು (ಗೃಹವಿ. ೧೯೨). P ಈ ಸೊಪ್ಪಿನ ವಾಸನೆಗೆ ಹಾವುಗಳು ಬರುವುದಿಲ್ಲವೆಂಬ ನಂಬಿಕೆಯಿದೆ. [?]

ನಾಗದಿವ್ಯ (ನಾ). [ಸಂಗೀತ] ಒಂದು ರಾಗದ ಹೆಸರು : ಮಧುಮಾಧವಿ . . . ನಾಗದಿವ್ಯ ಕರ್ಣಾಟ ಬಂಗಾಳವೆಂಬಿಪ್ಪತ್ತು ರಾಗಂಗಳೇ ರಾಗಾಂಗದಿಂದುದಿಸಿದವು (ವಿವೇಕ. ೨೫೦). P ಇತರ ಪಾಠಗಳಲ್ಲಿ 'ನಾಗದಿವಿ' ಎಂಬ ರೂಪ ಸಿಕ್ಕುತ್ತದೆ. ಆದರೆ ಶುದ್ಧ ಸಂಸ್ಕೃತ ರೂಪವಾದ 'ನಾಗದಿವ್ಯ' ಎಂಬುದೇ ಸರಿಯಾದ ರೂಪವಿರಬಹುದು. [ಸಂ.]

ನಾಗದೇವ (ನಾ). ಒಬ್ಬಾತನ ಹೆಸರು : ನಾಗತ್ತರನಳುಮಙ್ಗಲ ಬೀವಣ್ಣನೆಂಬೋನು ನಾಗದೇವನೆಂಬೋನು . . . ಕದಂಬೂರೆ ತುಱುಗಳ್ನೊಳ ಕಾದಿಸತ್ತ (ಎಕ. IX, ಆನೇಕ. ೭೩-೫ ; 900). [ನಾಗ + ದೇವ]

ನಾಗದೇವಭಟಾರ (ನಾ). ಒಬ್ಬಾತನ ಹೆಸರು : ಸೆಂಬನೂರ ನಾಗಣನ್ದ ಪಿರಿಯಯ್ಯಂಗಳುಂ ದುರ್ಮ್ಮೆಯ ನಾಗದೇವಭಟಾರರುಂ (ಎಕ. XI, ಚಿತ್ರದು. ೭೪-೩೦ ; 968). [ನಾಗದೇವ + ಭಟಾರ]

ನಾಗಧ್ವಜ (ನಾ). ಬಾವುಟದಲ್ಲಿ ಹಾವಿನ ಗುರುತುಳ್ಳವನು ; ಉರಗಪತಾಕ ; ದುರ್ಯೋಧನ : ಏಗೆಯ್ದುಮೆನ್ನ ಧರೆಯೊರ್ವಾಗಮುಮಂ ನೀಮೆ ಬೆಸಸೆಯುಂ ಕುಡದಿನಿತಂ ಮೇಗಿಲ್ಲದೆ ನೆಗೞ್ದಟಿದಂ ನಾಗಧ್ವಜನಯ್ಯ ನೀಮದರ್ಕಟಲದಿರಿಂ (ಪಂಪಭಾ. ೧೪-೬). [ನಾಗ + ಧ್ವಜ]

ನಾಗಧ್ವನಿ (ನಾ). [ಸಂಗೀತ] ಒಂದು ರಾಗದ ಹೆಸರು : ಕೌಶಿಕಿ ವೇಳಾವಳಿ . . . ನಾಗಧ್ವನಿ . . . ಎಂಬ ಮೂವತ್ತುನಾಲ್ಕು ರಾಗಂಗಳೇ ಭಾಷಾಂಗದಿಂದ ಪುಟ್ಟಿದವು (ವಿವೇಕ. ೨೫೦) ; ನಾಟ, ಸೌರಾಷ್ಟ್ರ . . . ನಾಗಧ್ವನಿ, ಸಾಮರಾಗ, ಹಾಗೆಯೇ ಸಾಮವರಾಲೀ, - ಈ ಮೂವತ್ತೊಂದು ರಾಗಗಳು ಷಡ್ಜವನ್ನು ನ್ಯಾಸ, ಗ್ರಹ, ಅಂಶವನ್ನಾಗಿ ಉಳ್ಳವುಗಳು (ಚತುಪ್ರ. ೫೬). [ಸಂ.]

ನಾಗನಗರಿ (ನಾ). ಕುರುವಂಶದ ರಾಜರುಗಳಿಗೆ ರಾಜಧಾನಿಯಾಗಿದ್ದ ಯಮುನಾ ನದಿಯ ದಡದಲ್ಲಿದ್ದ ಪಟ್ಟಣ ; ಹಸ್ತಿನಾಪುರ : ತಾಯೆನೀ ದಿಟ ನಾಗನಗರಿಯ ರಾಯನರಸಿಯೆ ನಿನ್ನ ಮಕ್ಕಳು ರಾಯರೆದೆದಲ್ಲಣರೆ (ಕುಪ್ಯಾಆ. ೯-೬) ; ನಾಗನಗರಿಯನಗಧರಂ ಪೊಕ್ಕು ಬರುತಿರ್ದನಾಗ (ಜೈಮಿಭಾ. ೭-೦೬). [ನಾಗ + ನಗರಿ]

ನಾಗನಾಥ (ನಾ). ೧. ಸರ್ಪಗಳ ಒಡೆಯ ; ಆದಿಶೇಷ : ಎಡೆಯ ಪಂಜುಗಳಿರ್ದುವು ನಾಗನಾಥನ ಹೆಡೆವಣಿಗಳ ದೀಪ್ತಿಯಂತೆ (ಮೋಹತ. ೧೫-೨೫). ೨. ಸರ್ಪಗಳ ಮೇಲೆ ಪ್ರಭುತ್ವವುಳ್ಳವನು ; ಸರ್ಪಗಳನ್ನು ಆಭರಣವನ್ನಾಗಿ ಮಾಡಿಕೊಂಡು, ಅವುಗಳ ಅಧಿಪತಿಯಾಗಿರುವವನು ; ಶಿವ : ಘಟಸರ್ಪನ ತುಡುಕಿ ನಾಗನಾಥನಾಗಿ ಇಪ್ಪತ್ತೇಳು ಬಸತಿಯನೊಡೆಯನೆ (ಬಸವ. ೬೨೫) ; ನಾಗನಾಥನು ಮುಂದೆಸೆಗೆ ನಸು ಬಾಗಿರಲು ಕಂಡವನಿಪಂ ಬೆಱಗಾಗಿ (ಬಸಪು. ೨೭-೧೧). 'ನಾಗೇಶ' ಪರಾ.
[ನಾಗ + ನಾಥ]

ನಾಗನಾಯಕ (ನಾ). ಒಬ್ಬಾತನ ಹೆಸರು: ನಾಗಸೇನಮನಘಂ ಗುಣಾಧಿಕಂ ನಾಗನಾಯಕ ಜಿತಾರಿಮಣ್ಡಲಂ ರಾಜಪೂಜ್ಯಮವಲಶ್ರೀಯಾಮ್ಪದಂ ಕಾಮದಂ ಹತಮದಂ ನಮಾಮ್ಯಹಂ (ಎಕ. II (R), ೩೭-೩ ; ಸು. 700).
[ನಾಗ + ನಾಯಕ]

ನಾಗನಿವಾಸ (ನಾ). = ನಾಗಠಾಣ : ನಾಗನಿವಾಸದ ಕೆಲದೊಳ್ ಪೂಗವನಾಂತದೊಳು ಜೈನಯೋಗಿಗಳಿರ್ವರ್ ಯೋಗನಿಯೋಗದೊಳಿರುತಿರೆ ನಾಗಶ್ರೀ ಕಂಡು ನಾಡೆ ಮುದಮಂ ತಳೆದಳ್ (ಪುಷ್ಯಾಸ್ರ. ೬-೫).
[ನಾಗ + ನಿವಾಸ]

ನಾಗನೃತ್ಯ (ನಾ). [ನಾಟ್ಯ] ಒಂದು ಬಗೆಯ ಜಾನಪದ ನೃತ್ಯ ; ನಾಗರ ಹಾವಿನ ಗಮನ, ಆಟ ಮುಂತಾದುವನ್ನು ಅನುಕರಿಸುವ ನೃತ್ಯ : ಎಳೆತನದಲ್ಲಿ ಕಂಡು ಮರವೆಯಾದ ವೈದ್ಯರ ಕುಣಿತ ಇಲ್ಲವೆ ನಾಗನೃತ್ಯ ಮತ್ತೊಮ್ಮೆ ಕಾಣಲು ಸಿಕ್ಕಿತು (ಯಕ್ಷಲ. III ಮುನ್ನುಡಿ). [ನಾಗ + ನೃತ್ಯ]

ನಾಗಪಂಚಮಿ (ನಾ). ನಾಗಗಳನ್ನು ಪೂಜಿಸುವ ಒಂದು ವ್ರತದ ದಿನ ; ಶ್ರಾವಣಶುದ್ಧಪಂಚಮಿ; ಗರುಡಪಂಚಮಿ; P ಇದು ತುಂಬ ಪ್ರಸಿದ್ಧವಾದ ಹಬ್ಬ. ಅಂದು ನಾಗರಿಗೆ ತನಿ ಎರೆದು ಎಲ್ಲರ ಮನೆಯಲ್ಲೂ ಕಾಯಿಕಡುಬು, ಉದ್ದಿನ ಕಡುಬು ಮಾಡಿ ದೇವರಿಗೆ ನೈವೇದ್ಯ ಮಾಡುವ ರೂಢಿಯಿದೆ : ಶ್ರಾವಣದ ಹಬ್ಬಗಳಲ್ಲಿ ನಾಗಪಂಚಮಿಯೇ ಮುಖ್ಯ (ಭಾಹಬ್ಬ. ೯೯). 'ಗರುಡಪಂಚಮಿ' ಪರಾ.
[ನಾಗ + ಪಂಚಮಿ]

ನಾಗಪತಿ (ನಾ). ನಾಗರೆಂಬ ದೇವತಾಗಣದ ಒಡೆಯ, - ಅಧಿಪತಿ : ನಾಗರಲ್ಲಿ ಶ್ರೇಷ್ಠನಾದವನು; P ಇವರುಗಳ ಹೆಸರುಗಳಲ್ಲಿ ವೈವಿಧ್ಯವಿದೆ. "ನಾಗ—೮ : (ಅ) ಅನಂತ, ವಾಸುಕಿ, ತಕ್ಷಕ, ಕಾರ್ಕೋಟಕ, ಪದ್ಮ, ಮಹಾಪದ್ಮ, ಶಂಖಪಾಲ, ಕುಳಿಕ (ಅಭಿನವಾಭಿಧಾನಂ-ಪಾತಾಳ ಖಂಡ ೧೧೯-೨-೪; ಖಮಂದ. ೧೩-೭೨). (ಆ) ಅನಂತ, ಶೇಷ, ವಾಸುಗಿ, ಕಾರ್ಕೋಟಕ, ತಕ್ಷಕ, ಶಂಖಪಾಲ, ಮಹಾಪದ್ಮ, ಪದ್ಮ (ಖಮಂದ. ೬೧-೧೪; ೧೫). (ಇ) ಅನಂತ, ತಕ್ಷಕ, ವಾಸುಕಿ, ಶಂಖಪಾಲ, ಪದ್ಮ, ಕರ್ಕೋಟಕ, ಕ್ರೋಡ, ಕಾಲ (ವಿಚಿಂ. ೧೭೭). (ಈ) ಅನಂತ, ಶೇಷ, ತಕ್ಷಕ, ಕರ್ಕೋಟಕ, ಶಂಖಪಾಲ, ಭೂಧರ, ಕುಳಿಕ, ಮಹಾಪದ್ಮ (ನಾಗಪ್ರತಿಷ್ಠಾಯೋಗ). (ಉ) ಸರ್ಪ, ಅನಂತ, ಶೇಷ, ಕಪಿಲ, ನಾಗ, ಕಾಲಿಕ, ಶಂಖಪಾಲ, ಭೂಧರ (ಧರ್ಮಸಿಂ. ೩ ಪೂ-೧೩೧) ; ನಾಗ—೯ : ಅನಂತ, ವಾಸುಕಿ, ಶೇಷ, ಪದ್ಮನಾಭ, ಕಂಬಲ, ಶಂಖಪಾಲ, ಧೃತರಾಷ್ಟ್ರ, ತಕ್ಷಕ, ಕಾಲಿಯ (ಪ್ರಾತಃಸ್ಮರಣಮ್. ೧೩-೨೫. ೨೬ ; ಸಂ. ೧೯೫)"

(ಶ್ರೀವತ್ಸ. ೩೬) : ನಾ ಗ ಭೂ ಷಣ ನಾಗವತಿವಂದಿತಾಂಘ್ರಿಯುಗ . . . ನಾಗನರಲೋಕಕಧಿಕನೆ ರಕ್ಷಿಸುವುದೆಂದು ನುತಿಸೆ (ಪ್ರಾಥರಾ. ೨-೪೧).

[ನಾಗ + ಪತಿ]

ನಾಗಪಾಶ (ನಾ). ೧. ಒಂದು ಮಂತ್ರಾಸ್ತ್ರ; ಮಂತ್ರದಿಂದ ಪ್ರಯೋಗಿಸಿ ಶತ್ರುವನ್ನು ಸರ್ಪದಂತೆ ಬಂಧಿಸುವ ಒಂದು ಬಗೆಯ ಅಸ್ತ್ರ : ದಿತಿಸುತನಣ್ಮುಟ್ಟಾಗೆ ಬಂದು ಕಡನಂ ಕೊಟ್ಟರ್ ಕೊಳ್ವಂತೆ ನಾಗಪಾಶದಿ ನಾಗಳ್ .. ಕಟ್ಟಿ(ಶಾಂತಿಪು. ೪-೪೯); ಪೂರ್ವಭವವೈರದಿನೊಂದು ಶಿಳಾತಳಮಂ ತಂದಾ ಸರೋವರದ ಮೇಲಿಕ್ಕಿ ನಾಗಪಾಶದೊಳಾತನಂ ಕಟ್ಟಿದೊಡೆ (ಜಾವುಂಪು. ೩೧೯) ; ದೇಹಿಯೆಂದೆನು ನಾಗಪಾಶವ ಮೋಹಿ ಕೊಡು ಕೋದಂಡ ಕವಚವ ದ್ರೋಹಿ ಕಪಿಗಳ ಪಡೆಯ ಗೆಲಲಿನ್ನುಳಿದ ವರ ಬೇಡ (ಕಾತಿಕಾ. ೧೯-೩೮). ೨. [ಸಂಗೀತ] ವೀಣೆಯ ತಂತಿಯನ್ನು ಬಿಗಿಗೊಳಿಸುವ ಒಂದು ಬಗೆಯ ಬಂಧ.–ಜೀರುಗುಣಿಕೆ ; ತಂತಿಗಳನ್ನು ಬಿಗಿಗೊಳಿಸುವ ಒಂದು ಬಗೆಯ ಬಂಧ.–ಜೀರಂಗುಣಿಕೆ; P ಇಂದಿನ ವೀಣೆಯ ಲಂಗರು ಎಂಬ ಪ್ರತ್ಯಂಗಕ್ಕೆ ಮಾತೃಪ್ರಾಯವಾಗಿದ್ದು ಪ್ರಾಚೀನ ವೀಣೆಗಳಲ್ಲಿ ಪರಸ್ಪರವಾಗಿದ್ದ ಭಾಗಕ್ಕೆ ದೋರಕವೆಂದು ಹೆಸರು. ಪ್ರಾಚೀನಕಾಲದ ವೀಣೆಗಳಿಗೆ ಆಧುನಿಕ ವೀಣೆಯಲ್ಲಿರುವಂತೆ ಗಡ್ಡವು ಇರುತ್ತಿರಲಿಲ್ಲ. ದಂಡದ ಅಗ್ರಭಾಗವನ್ನು ಬೀವೂ, ನಯವೂ ಆದ ಹುರಿ(ದೋರಕ)ಯಿಂದ ಸೋರೆಬುರುಡೆಯ ಮೇಲುಭಾಗವನ್ನು ಸೇರಿಸಿ ಇಪ್ಪರಿಯ ನಾಗಪಾಶದಿಂದ ಬಿಗಿದು ಕಟ್ಟಲಾಗುತ್ತಿತ್ತು. ದೋರಕದ ತುದಿಗೆ ನಯವಾದ ನರದ ತಂತಿಗಳನ್ನು ಕಟ್ಟಿ, ಇವುಗಳನ್ನು ರೇಕಿನ ಮೇಲೆ ಬಿಗಿಯಾಗಿ ಎಳೆದಂ ಕಟ್ಟಿ, ಕುದುರೆಯನ್ನು ದಂಡಕ್ಕೆ ನಾಗಪಾಶದಿಂದಲೇ ಬಿಗಿಯಂತ್ತಿದ್ದರಂ. ಪ್ರಾಚೀನ ಸಂಗೀತಶಾಸ್ತ್ರಗ್ರಂಥಸ್ಥವಾದ ನಾಗಪಾಶವನ್ನು ಸರಿಯಾಗಿ ತಿಳಿಯದ ಕೆಲವು ಆಧುನಿಕರು ಅದನ್ನು ವೀಣೆಯ ಒಂದು ಪರಿಕರವೆಂದೇ ತಿಳಿದು ಪ್ರಚಾರ ಮಾಡುತ್ತಿದ್ದಾರೆ. ಈ ಬಂಧವನ್ನು ವೀಣೆಯಲ್ಲಿ ಮಾತ್ರವಲ್ಲದೆ ಪಟಹ, ರಂಜಾ ಮೊದಲಾದ ಚರ್ಮವಾದ್ಯಗಳಲ್ಲಿಯೂ ಬಳಸಲಾಗುತ್ತಿತ್ತು : ವೀಣೆಯ ಮುಖ್ಯಪರಿಕರಗಳು . . . ಕುದುರೆ, ಗಡ್ಡ ಅಥವಾ ನಾಗಪಾಶ, ೨೪ ಕಂಟಿನ ಮೆಟ್ಟಲುಗಳು (ಸಂಗೀಚಂ. ೧೧೨). ೩. = ನಾಗಪಾಶಕರಣ. [ನಾಗ + ಪಾಶ]

ನಾಗಪಾಶಕರಣ (ನಾ). [ಕಾಮಶಾ] ಸಂಭೋಗದ ಒಂದು ಭಂಗಿ : ನಳಿನಮುಖಿ ಮಲಗಿ ಕೈದಳಮನಿರ್ತೋಡೆಯ ಕೆಳಗಿಳುಪಿ ಗಳರವದಿನಧರಮನೆ ಕರ್ದುಕಿ ಪುಳಕಿಸಲ್ ಕೊರಲ್ವಿಡಿದು ಬಳಿಕಿನೆಯನಪ್ಪಿ ದಳವುಳಿಸಲಂತದ ನಾಗಪಾಶ[ಪಾಠಾಂ. ವಾಸ] ಕರಣಂ (ಜಸವ. ೯-೩೪). [ಸಂ.]

ನಾಗಪಾಶಬಂಧನ (ನಾ). ೧. ನಾಗಪಾಶದಿಂದ ಕಟ್ಟುವಿಕೆ. ೨. (ಆಲಂ) ಬಿಡಿಸಿಕೊಳ್ಳಲು ಆಗದಂತೆ ಬಹಳ ಬಲವಾಗಿ ಕಟ್ಟುವಿಕೆ ; ಗಾಢಬಂಧನ : ನಾಲ್ಕೂ ದಿಕ್ಕಿನಿಂದ ಸುತ್ತುವರಿದಿದ್ದ ಒಂದು ನಾಗಪಾಶ ಬಂಧನವು ಸಂಪೂರ್ಣವಾಗಿ ಬಿಟ್ಟಹೋದಂತಾಯ್ತು (ಇಪ್ಪಕ. ೩೪೩).

[ನಾಗಪಾಶ + ಬಂಧನ]

ನಾಗಪಾಶವಿದ್ಯೆ (ನಾ). ನಾಗಪಾಶವನ್ನು ಪ್ರಯೋಗಿಸುವ ಮಂತ್ರವಿದ್ಯೆ : ಮುಖ್ಯನಾಯಕರ್ಕಳುಂ ನಾಗಪಾಶವಿದ್ಯೆಯುಂ ಕಟ್ಟುವಡೆದು ಪಟ್ಟೈರ್ವುದುಂ (ಪಂಭಾಮಾ. ೧೩-೧೪೬ ವ). [ನಾಗಪಾಶ + ವಿದ್ಯೆ]

ನಾಗಪುರ (ನಾ). ೧. ನಾಗಲೋಕ : ಪಾತಾಳ : ಅಂತು ನಾಗಪುರಮ ನಿಟ್ಟಿಸುವ ನಾಗಪುರಮನಾ ನಾಗಶಯನಂ ಪೊಕ್ಕು (ಪಂಪಭಾ. ೯-೨೭ ವ). ೨. ಕೌರವ ರಾಜ್ಯ ; ಹಸ್ತಿನಾವತಿ : ಮೇಲಿನ ಪ್ರಯೋಗವನ್ನು ನೋಡಿ. [ನಾಗ + ಪುರ]

ನಾಗಪುರಿ (ನಾ). ಒಂದು ಬಗೆಯ ವನಸ್ಪತಿ : (ಮೃಪಿಗಿ. ೨೨-೪೦೩).

[?]

ನಾಗಪುಲಿಗಾವುಂಡ (ನಾ). ಒಬ್ಬಾತನ ಹೆಸರು : ಚನ್ನಪ್ರಭಭಟಾರಾರ್ಪ್ಪ ಸಣ್ಣಿದುನಭ್ಯನ್ತರಸಿದ್ದಿಯಾಳುತ್ತಿರೆ ನಾಗಪುಲಿಗಾವುಣ್ಡಂ ಗಾವುಣ್ಡುಗೆಯ್ಮೆ ಸಾಇಇ. XI-I, ೪೪-೯ ; 935).

[ನಾಗಪುಲಿ + ಗಾವುಂಡ (<ಗಾಮುಂಡ)]

ನಾಗಪುಷ್ಪ (ನಾ). ೧. ಒಂದು ಬಗೆಯ ಹೂವು ; ನಾಗಸಂಪಿಗೆ : ಎರಡುಂ ಕ್ಷಾರಂ ಕೊತ್ತುಂಬರಿ ಸರಳಂ ನಾಗಪುಷ್ಪಮಿಂತಿವನೊಂದಾಗಿರೆ ಕೂಡಿ ಮಾಡಿ ಬೆರಸುಗೆ (ಅಶ್ವಶಾ. ೭-೪೩). ೨. ಸುರಗಿ ; ಸಂರಹೊನ್ನೆ : "ನಾಗ ಪುಷ್ಪಕಿಸುರ ಹೊನ್ನೆ" (೭೩ಧಿ. ೪೬). [ನಾಗ + ಪುಷ್ಪ]

ನಾಗಪೂಜೆ (ನಾ). ನಾಗರಿಗೆ ಮಾಡುವ ಪೂಜೆ.–ಆರಾಧನೆ : ವಸ್ತುತಃ ನಾಗಪೂಜೆ ದ್ರಾವಿಡಜನಾಂಗದ ಹಬ್ಬವಾಗಿರಬೇಕು (ಭಾಹಬ್ಬ. ೯೯).

[ನಾಗ + ಪೂಜೆ]

ನಾಗಪ್ರತಿಷ್ಠೆ (ನಾ). ಸರ್ಪದೇವತೆಯ ಶಿಲಾಪ್ರತಿಮೆಯನ್ನು ಆರಳಿಕಟ್ಟೆ ಮೊದಲಾದ ಸ್ಥಾನಗಳಲ್ಲಿ ವಿಧ್ಯುಕ್ತವಾದ ಕ್ರಮದಿಂದ ಸ್ಥಾಪಿಸುವುದು ; ನಾಗರ ಕಲ್ಲಿನ ಸ್ಥಾಪನೆ ; P ಇದು ಮಕ್ಕಳಿಲ್ಲದವರು, ಮಕ್ಕಳಾಗುವುದೆಂಬ ನಂಬಿಕೆಯಿಂದ ಅನುಸರಿಸುವ ಜನಸಾಧಾರಣವಾದ ಒಂದು ಪದ್ಧತಿ : ಅವರು ವಿದುರಾಶ್ವತ್ಥಕ್ಕೆ ಹೋಗಿ ನಾಗಪ್ರತಿಷ್ಠೆ ಮಾಡಿ ಬಂದರು (ಕೂಡಿ). [ನಾಗ + ಪ್ರತಿಷ್ಠೆ]

ನಾಗಫಣಿ (ನಾ). ನಾಗರಹಾವು : ನಾದವ ಲಾಲಿಸುವ ನಾಗಫಣಿ [ಪಾಠಾಂ. ಪಣಿ]ಯಂತೆ ಆಡುತ್ತಿದ್ದು ಹೋದ ಹೊಲಬೇಕೆಂದ (ಪೋಳಮಾ. ೬೨-೨೮೩).

[ಸಂ. ನಾಗಫಣಿನ್]

ನಾಗಬಂಧ (ನಾ). ೧. ಜಟ್ಟಿವರಸೆಗಳಲ್ಲಿ ಒಂದು : ಭೀಮ ಜರಾಸಂಧರು ಡೊಕ್ಕರವಟ್ಟು, ಲಗಡಿ, ಕತ್ತರಿಪಟ್ಟು, ನಾಗಬಂಧ ಮುಂತಾದ ಹಲವು ಪಟ್ಟುಗಳನ್ನೊಡ್ಡಿ ಕಾಳಗ ನಡೆಸಿದರು (ರಾಜಸೂ. ೩೩). ೨. (ಆಲಂ) ಬಲವಾದ ಕಟ್ಟು ; ಬಿಡಿಸಿಕೊಳ್ಳಲಾಗದ ತೊಡಕು: ಈ ನಾಗಬಂಧದಿಂದ ತನ್ನ ತಂದೆತಾಯಿಯನ್ನು ಮುಕ್ತಗೊಳಿಸಲೇಬೇಕೆಂಬ ಅವನ ಪ್ರತಿಜ್ಞೆ . . . ಮತ್ತಷ್ಟು ದೃಢಮೂಲವಾಗುತ್ತಿತ್ತು (ಇಪ್ಪಕ. ೩೭೯). ೩. [ಕಾಮಶಾ] (ಹಾವುಗಳಂತೆ ಹೆಣೆದುಕೊಳ್ಳುವ) ಒಂದು ಬಗೆಯ ಆಲಿಂಗನ ; ಗಾಢಾಲಿಂಗನ : ನಾಗಶಯ್ಯೆಯೊಳ್ ನಾಗಿಣಿ ನಾಗಬಂಧದೊಳೆ ತಳ್ತು ಗುಣಾರ್ಣವನಂ ಮರುಳ್ಚಿದಳ್ (ಪಂಪಭಾ. ೪-೦೭) ; ಕೋರಕರದಂ ತನಗೊಪ್ಪಿರೆ ನಾಗಬಂಧದಂತೊಂದಿರೆ ಸುತ್ತಿ ಪುಲ್ಲಿಗೆ ಮದಂ ಮಕರಂದಮುದಾಗೆ ಕರ್ಣಮಿಂದಿಂದಿರಬ್ಯಂಮೆಂದೆನಿಸಿ ದಂತಿಮುಖಂಗಣೆಯಾಯ್ತು ಮಾಮರಂ (ವೃಷವಿ. ೪-೪೦). ೪. [ಸಂಗೀತ] ಐದು ಬಗೆಯ ಹಸ್ತಪಾಟಗಳಲ್ಲಿ ಒಂದು ; ಗಾಢಬಂಧ ; ವರ್ಣಾಲಂಕಾರಗಳಲ್ಲಿ ಒಂದು ; ಹಾವಿನಂತೆ ಸುರುಳಿಯಾಗಿಯೂ ವಕ್ರಗತಿಯಲ್ಲಿಯೂ ಇರುವ ಸ್ವರಶ್ರೇಣಿ : ವೆಂಕಟರಮಣದಾಸರು ಈ ಕರುಹೊತ್ತಿಗೆಯಲ್ಲಿ . . . ಬಂಧ ತಾನಗಳ ವಿವಿಧ ರೂಪಗಳನ್ನು (ಗುಚ್ಛಬಂಧ ಮತ್ತು ನಾಗಬಂಧ) ವಿಸ್ತಾರವಾಗಿ ವರ್ಣಿಸಿದ್ದಾರೆ (ಸಂಗೀತ. ೭೦). ೫. [ನಾಟ್ಯ] ಇಪ್ಪತ್ತ್ರಮೂರು ದೇಶೀಯ ಸ್ಥಾನಗಳಲ್ಲಿ ಒಂದು ; "ಕುಳಿತುಕೊಂಡು ಎಡತೊಡೆಯಂ ಮೇಲೆ ಬಲ ಕಣಕಾಲನ್ನಿರಿಸುವುದು" (ಶಾಸ್ಕರಂ. ೩೩೧ ಗದ್ಯಾನುವಾದ) : ಒದವಿರ್ದ ಸ್ವಸ್ತಿಕಂ . . . ನಾಗಬಂಧ ವೃಷಭಂ ಸುಲಲಿತಮಿಪ್ಪತ್ತ್ರಮೂಱು ದೇಶೀ ಸ್ಥಾನಂ (ಶಾಸ್ಕರಂ. ೭-೪) ; ಅಭಿನಯದರ್ಪಣದಲ್ಲಿ – ೧. ಅಂಜಲಿ . . . ೨೧. ನಾಗಬಂಧ, ೨೨. ಖಟ್ವ, ೨೩. ಬೇರುಂಡ, ೨೪. ಅವಹಿತ್ಥ. (ಅಭಾನ್ಯ. ೪೪). [ನಾಗ + ಬಂಧ]

ನಾಗಬಲಿ 'ನಾಗವಲಿ' ನೋ.

ನಾಗಬಲೆ (ನಾ). ೧. ಒಂದು ಬಗೆಯ ಗಿಡ ; ಬೋಳಂಗಡಲೆ ಗಿಡ ; ಕಳ್ಳಂಗಡಲೆ : ನಾಗಬಲಾ ಘೃತ ಮಧುಗಳನಾಗಳುಮುಪಯೋಗಿಸುತ್ತು ಮಿರ್ದಂದು ಪಿಂಗುಗುಂ ಕ್ಷಯರೋಗಂ (ಲೋಕೋಪ. ೯-೩೭). ೨. ಹೀರೆಬಳ್ಳಿ: "ಗಾಂಗೇರುಕೀ, ನಾಗಬಲಾ, ಝಷಾ, ಹ್ರಷ್ಟಗವೇಧುಕಾ – ೪ ಹೀರೇಗಿಡದ ಹೆಸರು" (ಸಿದ್ಧಾಂತಿ ೧೩೮). [ಸಂ. ನಾಗಬಲಾ]

ನಾಗಬೆತ್ತ (ನಾ). ನಾಗರಹಾವಿನ ಆಕಾರದ ಬೆತ್ತ ; P ಇದನ್ನು ಸಾಮಾನ್ಯವಾಗಿ ಸಂನ್ಯಾಸಿಗಳು ಉಪಯೋಗಿಸುತ್ತಾರೆ : ಕಯ್ಯಲ್ಲೊಂದು ನಾಗಬೆತ್ತವೂ ಇತ್ತು (ರಕ್ತರೂ. ೩೫) ; ಕಮ್ತಿಗಳು ಒಂದು, ನಾಲ್ಕಡಿ ಉದ್ದದ ತೋರವಾದ ನಾಗಬೆತ್ತವನ್ನೂ ತಂದು ಮ್ಯೊದಿನಿಯ ಕೈಗೆ ಕೊಟ್ಟರು (ಒಡ್ಡಿಉ. ೨೩) ; ಕಾವೀ ಕಂತೇ ಕೊಡೆ ನಾಗಬೆತ್ತಾ ಕೊಡೆ ಹೋಗುತೀನಿ ನಾನು ವನದೇಶ (ನಾಪದ. ೧೦೪). [ನಾಗ + ಬೆತ್ತ]

ನಾಗಭಸ್ಮ (ನಾ). [ವೈದ್ಯ] ಒಂದು ಬಗೆಯ ಭಸ್ಮ : ಲೋಹಸಿಂಧೂರ, ನಾಗಭಸ್ಮ ಇವು ಪ್ರತ್ಯೇಕ ಗ ೧೦ ತೂಕ ಸಹ ಪುಡಿಮಾಡಿ ಹಾಕಿ (ಸಕವೈ. ೩೯೩). [ಸಂ.]

ನಾಗಭುಗ್ಗಮನ (ನಾ). ಗರುಡನ ಮೇಲೆ ಸಂಚರಿಸುವವನು ; ವಿಷ್ಣು : ನಾಗಭುಗ್ಗಮನ ಶ್ರೀಕೃಷ್ಣರಾಯನ ವಡನೆ ಪೋಗಿ ಪಿಡಿತರ್ಪೆಂ (ನವಮೋ. ೨೮-೬೯). [ಸು. (ನಾಗಭುಜ್ + ಗಮನ)]

ನಾಗಭೂಷಣ (ನಾ). ೧. ಸರ್ಪಗಳನ್ನು ಆಭರಣವಾಗಿ ಉಳ್ಳವನು ; ಸರ್ಪಭೂಷಣ ; ಶಿವ : ಜನಸಾಕ್ಷಿಯಾಗಿರೆ ನಾಗಭೂಷಣಭಕ್ತರೇ ಸತ್ಕುಲಜರು (ಬಸಪು. ೫೭-೫೫) ; ನಾಗವಲ್ಲಿಯ ಹಿಂದುಮುಂದನು ನೀಗಿ ಕಳೆಯದೆ . . . ಸವಿದು ಭೋಗಿಸುವೊಡಮರೇಂದ್ರನಾಗಲಿ ನಾಗಭೂಷಣನಾದೊಡವನನು ನೀಗಿ ಕಳೆವಳು ಭಾಗ್ಯವಧು (ಕುಪ್ಯಾಉ. ೩-೫೯); ನಾಗಭೂಷಣ ನಾಜ್ಞೆ ಯಿಾ ಪರಿಯಾಯ್ತು ಹಾಯೆಂದ (ತಿಮ್ಮಸ್ತೀ. ೧-೭). ೨. ಮೋಡಗಳಿಂದ ಅಲಂಕೃತವಾಗಿರುವುದು ; ಪರ್ವತ : ೧, ೨. ನಾಗಭೂಷಣನಾಗಿ ಶಿವನಲ್ಲ . . ಎನಿಸಿರ್ದುದಾಶ್ಚರ್ಯಸಾಂದ್ರಮಚಲೇಂದ್ರಮೆಸೆದು (ಜೈಮಿಭಾ. ೧೦-೬). [ಸಂ.]

ನಾಗಮಂಗಲ (ನಾ). ೧. ದುರ್ಗದ ಆಕಾರದಲ್ಲಿರುವ ಸೇನಾನಿವೇಶ : ವಾಸ್ತುಶಾಸ್ತ್ರದ ಪ್ರಕಾರ "ಮಂಗಲ" ಎಂದರೆ ದುರ್ಗರಕ್ಷಣಕ್ಕಾಗಿ ನಗರದ ಸೈನ್ಯವು ನೆಲೆಗೊಂಡಿರುವ ಸ್ಥಳವೆಂದರ್ಥ . . . ದುರ್ಗದ ಆಕಾರವನ್ನೋ ಸೈನ್ಯದ ಮಿತಿಯನ್ನೋ ಅನುಸರಿಸಿಕೊಂಡಿದ್ದರೆ ನಾಗಮಂಗಲವಾಗುತ್ತದೆ ಇಲ್ಲವೇ ಈಶ್ವರಮಂಗಲವಾಗುತ್ತದೆ (ತುಳುನಾ. ೨೦೪). ೨. ಒಂದು ಊರಿನ ಹೆಸರು : ನಾಗಮಂಗಲದ ಭಟರು ಸೋಬತಿಯ ಕಟ್ಟೆ ಬೇಗದಿಱಿದು ತುರುಕರನು ಬೇಗದೆ ಮೂಱುಸಾಸಿರ ಮೂಗರಿದಾಗ ರಾಗದೆ ಜಸವ ಬೀಱಿದರು (ಕಂನವಿ. ೧೩-೫೯). [ನಾಗ + ಮಂಗಲ]

ನಾಗಮಂಡಲ (ನಾ). ೧. (ಕರಾ) ನಾಗದೇವತೆಯ ಪ್ರೀತಿಗಾಗಿ ಮಾಡುವ ಒಂದು ಹಬ್ಬ : ನಾಗನ ಪ್ರೀತಿಗಾಗಿ ದಕ್ಷಿಣಕನ್ನಡ ಜಿಲ್ಲೆಯ . . . ತಾಲೂಕುಗಳಲ್ಲಿ 'ನಾಗಮಂಡಲ' ವೆಂಬ ಸೇವೆಯು ನಡೆಸಲ್ಪಡುತ್ತದೆ (ತುಳುನಾ. ೨೫೦) ; ಉಳ್ಳೂರು ಹೆಬ್ಬಾರರ ಮನೆಯಲ್ಲಿ ಸ್ವಲ್ಪ ದಿನದಲ್ಲೇ ನಾಗಮಂಡಲ ಉಂಟಂತೆ (ಸ್ವಪ್ನಹೊ. ೫೬) ; ಅದರಂತೆ ನಾಗಮಂಡಲ, ಧಕ್ಕೆಬಲಿಗಳನ್ನು ಹಿಂಬಾಲಿಸಿ . . . ಮರಳಿ ಬಂದ ಪ್ರಸಂಗಗಳೆಷ್ಟೋ (ಯಕ್ಷಬ. IV ಮುನ್ನುಡಿ). ೨. ಈ ಹಬ್ಬದಲ್ಲಿ ಪೂಜೆಗಾಗಿ ಸಿದ್ಧಪಡಿಸುವ ನಾಗರಹಾವಿನಾಕಾರದ ರಂಗೋಲೆಯ ಅಥವಾ ಹೂವಿನ ಆಕೃತಿ.– ಚಿತ್ರ. [ನಾಗ + ಮಂಡಲ]

ನಾಗಮತಿ (ನಾ). ಒಬ್ಬಾಕೆಯ ಹೆಸರು: ಮೋನಿ ಗುರವಡಿಗಳ ಶಿಷಿತ್ತಿಯರ್ ನಾಗಮತಿಗನ್ತಿಯರ್ ಮೂಱು ತಿಙ್ಗಳ್ ನೋನ್ತು ಮುಡಿಪ್ಪಿದರ್ (ಎಕ. II, ೨೦-೨ ; ಸು. 700). [ಸಂ.]

ನಾಗಮಯ್ಯ 'ನಾಗಮ್ಮಯ್ಯ' ನೋ.

ನಾಗಮಲ್ಲಿಗೆ (ನಾ). ಒಂದು ಬಗೆಯ ಮಲ್ಲಿಗೆ : ದೊಡ್ಡಪಟಕ, ನಾಗಮಲ್ಲಿಗೆ (ಮೃಜಿಗಿ. ೬೬-೧೩೪೫). 'ನಾಗಸಂಪಗೆ' ಪರಾ. [ನಾಗ + ಮಲ್ಲಿಗೆ]

ನಾಗಮುಖ (ನಾ). ಆನೆಯಂತೆ ಮುಖವುಳ್ಳವನು ; ಗಣಪತಿ : ಶ್ರೀಗುರು ಪರಂಜ್ಯೋತಿಲಿಂಗಂ ನಾಗಮುಖಮುಖನಳಿನಭೃಂಗಂ . . . ಒಲ್ದೆಮಗೀಗೆ ಬಸವನ ಕೃತಿಯನೊರೆವ ಸುಮತಿಯ ಸಮತೆಯನು (ಬಸಪು. ೧-೩).

[ನಾಗ + ಮುಖ]

ನಾಗಮುಖಪಿತ (ನಾ). ಗಣಪತಿಯ ತಂದೆ ; ಶಿವ ; ಪರಮೇಶ್ವರ : ನಾಗಮುಖಪಿತನೆ ನಲುವಿಂದ ರಕ್ಷಿಪುದೆನ್ನ ಸಂಗಮೇಶ್ವರಪ್ರಸನ್ನ (ಪೌಢರಾ. ೨೧-೧). [ನಾಗಮುಖ + ಪಿತ]

ನಾಗಮುತ್ತು (ನಾ). = ನಾಗರ ಮುಸ್ತೆ : ದುಂಪರಾಸ್ಮೆ, ನೀಲಿಬೇರು ... ನಾಗಮುತ್ತು, ಪುಲ್ಲಂಗದ ಬೇರು . . . ಕಷಾಯವಿಟ್ಟು ಕೊಡಲು ವಿಷಮ ಶೀತಜ್ವರ ಗುಣಮಕ್ಕುಂ (ಸಕವೈ. ೧೦೭). [?]

ನಾಗಮುರಿ (ನಾ). ೧. ಹಾವಿನಂತೆ ಸುರುಳಿ ಸುತ್ತಿರುವ ತೋಳುಬಂದಿ; ಹಾವಿನ ಹೆಡೆಯ ಆಕೃತಿಯನ್ನು ಅಳವಡಿಸಿರುವ ತೋಳುಬಳೆ,– ಕೇಯೂರ,–ಅಂಗದ : ಅರಳೆಲೆಯು ಮಾಗಾಯಿ . . . ನಾಗಮುರಿಯು (ನವಮೋ. ೧೫-೫೦); ರತ್ನದ ವಂಕಿ ನಾಗಮುರಿಗಳಂ ಧರಿಸಿ (ಸೌಗಂಧಿ. ೮೮-೧೪); ಅರಳೆಲೆ ಮಾಗಾಯಿ ವರನಾಗಮುರಿ . . . ಅಂದಿಗೆಗೆಜ್ಜೆ ಶಿರಗಯ್ಯ ಭಕ್ತ ಗೊಪ್ಪಿದವು (ಅಬ್ಬಲೂ. ೨-೫೨) ; ಅದು ತೆರೆತೆರೆಯಾಗಿ ಬರುತ್ತದೆ ಇಲ್ಲವೆ ನಾಗಮುರಿಯಂತಿರುತ್ತದೆ (ಗೊತ್ತುಗು. ೧೧೮) ; ಗೀರುಬಿಲ್ಲೆಯ ಅಂಚಿನಿಂದ ಕೇಂದ್ರದವರೆಗೆ ನಾಗಮುರಿಯಂತೆ ಸುರುಳಿಯಾಗಿರುತ್ತದೆ (ವಿಜ್ಞಾವಿ. ೨) ೨. ಒಂದು ಬಗೆಯ ಆಯುಧ : ಇವರು ಸೊನ್ನಲಾಪುರದ ಶ್ರೀಸಿದ್ಧರಾಮೇಶ್ವರರ ಅನುಗ್ರಹಕ್ಕೆ ಪಾತ್ರರಾಗಿ ನಾಗಮುರಿಯೆಂಬ ಆಯುಧವನ್ನು ಪಡೆದು ಆಶೀರ್ವಾದದೊಂದಿಗೆ ದಕ್ಷಿಣದೇಶಕ್ಕೆ ಬಂದರು (ನೊಳಂಬ. ೬೧).

[ನಾಗ + ಮುರಿ$_3$]

ನಾಗಮುರಿಗೆ (ನಾ). = ನಾಗಮುರಿ ೧ : "ಕೇಯೂರು, ಅಂಗದಂ–೨ ಬಾಹುಪುರಿ ಹೆಸರು, ನಾಗಮುರಿಗೆ, ತೋಳುತೊಡಿಗೆ, ಬಾಜೂಬಂದು, ವಂಕಿ" (ಸಿದ್ಧಾಂತಿ. ೨೦೧) ; ನಾಗಮುರಿಗೆ ಮಡಿಕೆಗಳ ಮೋಡಿಯಿದು ಮುಗಿಲಲಿ ವಿದ್ಯುತ್‌ಕಂಬಿ (ನವ್ಯಧ್ವ. ೯೦) ; ನಾಗಮುರಿಗೆ ವಂಕಿ . . . ಮೊದಲಾದ ಆಭರಣಗಳನ್ನು ಧರಿಸಿಕೊಂಡು (ಪುಲಿಮಂ. ೩೮). [ನಾಗ + ಮುರಿಗೆ]

ನಾಗಮುಷ್ಠಿ (ನಾ). ಒಂದು ಬಗೆಯ ವನಸ್ಪತಿ : (ಮೃಜಿಗಿ. ೭೨-೧೪೮೨).

[ಸಂ.]

ನಾಗಮೋಡಿ (ನಾ). ಹಾವಿನ ರೀತಿ,–ಭಂಗಿ ; ಸುತ್ತಿ ಸುತ್ತಿಕೊಂಡು ಹೋಗುವ ಕ್ರಮ ; ಬಳಸು ಬಳಸಾದ ರೀತಿ : ನಾಗಮೋಡಿಯು ಏರುತ್ತಿತ್ತು ಏನೋ ಪುರಾಣ ಶಕ್ತಿ (ಅರಳು. ೨೦೭-೩) ; ನಾಗಮೋಡಿಯಿಂದ ಸುತ್ತುಬಳಸಿ ಹೋಗುವ ಹಾದಿಗಳು (ಸಾಹಿಸಂ. ೧೯೭) ; ಗುಡ್ಡವನ್ನು ಮೇಲೆ ಮೇಲೆ ಸುತ್ತಿ ಸಾಗಿ ಶಿಖರಕ್ಕೆ ತಲ್ಪಿಸುವ ನಾಗಮೋಡಿಯ ದಾರಿ (ಮಾವಾದ. ೬೪). [ನಾಗ + ಮೋಡಿ]

ನಾಗಮ್ಮ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಅಯ್ಯಪಯ್ಯನ ಪೆರ್ಗ್ಗಡೆ ನಾಗಮ್ಮನ ಮಾಡಿಸಿದ ಮದಿಲು ದಾರವನ್ದ ಮಾಡಿದ ಚನ್ದಯ್ಯ (ಎಕ. III (R), ಹೆಗ್ಗಡ. ೩೧-೧ ; ?). [ನಾಗ + ಅಮ್ಮ$_1$]

ನಾಗಮ್ಮಯ್ಯ, ನಾಗಮಯ್ಯ (ನಾ). ೧. ಒಬ್ಬಾತನ ಹೆಸರು : ಗಾಮುಣ್ಡ ಸ್ವಾಮಿಗಳ ಮಗನ್ನಾಗಮ್ಮಯ್ಯ ಕಲ್ಲ ದೇಗುಲಮಮ್ಮಾಡಿಸಿದಡೆ (ಎಕ. III, ಮಂಡ್ಯ. ೧೩-೮ ; 895). **ನಾಗಮಯ್ಯ** : ೧. ಮಣ್ಣಂ ಬಳಸಿದ ಪ್ರಭುಗಳ್ ಪೆರ್ಮಾಡಿಗಾಮುಣ್ಡ ಮುಗುಳಿಯ ನಾಗಮಯ್ಯ ಬಸವನ ಹಳ್ಳಿಯ ಬಸವಯ್ಯ (ಎಕ. XV, ಬೇಲೂರು. ೩೦೮-೧೧ ; 971). ೨. ಒಬ್ಬಾತನ ಹೆಸರು ;

P ದಾನಚಿಂತಾಮಣಿಯೆಂದು ಪ್ರಸಿದ್ಧಳಾದ ಅತ್ತಿಮಬ್ಬೆಯ ತಾತ : ಅಗ್ಗಳಿಕೆಯ ಕಮ್ಮೆದೇಶಮನಲಂಕರಿಸಿರ್ದುದು ಪುಂಗನೂರ್ ಜಗತ್ತಿಲಕ ಮದರ್ಕೆ ಮುಖ್ಯವೆನೆ ಪೆಂಪೆಸೆದಿರ್ದುದು ನಾಗಮಯ್ಯನಾ (ಅಜಿಪು. ೧-೩೪).

[ನಾಗವ್ಮ + ಅಯ್ಯ1]

ನಾಗಯಬ್ಬೆ (ನಾ). ಒಬ್ಬಾಕೆಯ ಹೆಸರು : ನಾಗಯಬ್ಬೆಯ ಮಗ ಮಾರಿಯ್ಯ (ಎಕ. XI, ಚಿಕ್ಕ. ೪-೪ ; 974). [ನಾಗ + ಅಬ್ಬೆ1]

ನಾಗಯ್ಯ (ನಾ). ಒಬ್ಬಾತನ ಹೆಸರು : ತೊಮ್ಮುವ್ವೇಯನ ಮಕ್ಕಳ್ ನಾಗಯ್ಯನು ಕೊಣ್ಡಯ್ಯನು (ಎಕ. X, ಕೋಲಾರ. ೯-೫ ; ಸು. 928); ಬಂಗರಿ ಎಱಿಯಮ್ಮನ ಮಗ ನಾಗಯ್ಯಂ ತುಱುವನಿಕ್ಕಿಸಿ . . . ಕಾದಿ ಸ್ವರ್ಗಸ್ಥನಾದಂ (ಎಕ. V (R), ಪಾಂಡವ. ೫೧-೪ ; 1011); ಶ್ರೀ ನಾಗಯ್ಯಂ (ಎಕ. II, ೪೭೦ ; 1050). 'ನಾಗೆಯ' ಪರಾ.

[ನಾಗ + ಅಯ್ಯ1]

ನಾಗಯ್ಯನಾಯಕ (ನಾ). ಒಬ್ಬಾತನ ಹೆಸರು : ಶ್ರಿಮತ್ನಾಗಯ್ಯನಾಯಕಂ ಬೆಳ್ದನೂರುಂ ಬೆಲ್ತುಱುವದ ಪನ್ನಾಯ ಸುಂಕಮುಮವಾಳುತ್ತಮಿರ್ದು (ಎಕ. XI, ಡಾವಣ. ೨೦-೯ ; 1045). [ನಾಗಯ್ಯ + ನಾಯಕ]

ನಾಗರ1 'ನಾಗರು' ನೋ.

ನಾಗರ2 (ಗು). ೧. ನಗರಕ್ಕೆ ಸಂಬಂಧಿಸಿದ ; ಪಟ್ಟಣಕ್ಕೆ ಸೇರಿದ. (ನಾ). ೨. ಪಟ್ಟಣಿಗ ; ಪೌರ ; ನಾಗರಿಕ. ೩. ಚತುರ ; ಜಾಣ ; ಕುಶಲ ; ಮೇಧಾವಿ; ನಿಪುಣ. ೪. ನಮ್ರ ; ವಿನೀತ. ೫. ಕೆಟ್ಟವನು ; ಧೂರ್ತ ; ಅಧಮ ; ವಂಚಕ. ೬. ರಾಜನ ಶೃಂಗಾರ ಸಹಾಯಕ ; ನಾಗರಕ : ವಿಟ ವಿದೂಷಕ ಪೀಠಮರ್ದ ನಾಗರರು ಸಂಘಟಿಸಿರ್ದರರಸನೊತ್ತಿನೊಳು (ಭರಡ. ೧೫-೩೦). ೭. ಆಡ್ಡಿ ; ತಡೆ ; ಅಡಚಣೆ ; ಪ್ರತಿಭಟನೆ. ೮. ಆಯಾಸ; ಶ್ರಮ. ೯. ಪರಮಸುಖದ ಆಸೆ; ದಿವ್ಯಾನಂದದ ಇಚ್ಛೆ. ೧೦. ಶಾಂತಿ ; ಅಲ್ಲ : "ಶುಂಠೀ, ನಾಗರಂ, ಮಹೌಷಧಂ, ವಿಶ್ವಭೇಷಜಂ ವಿಶ್ವಾ–ಈ ೫ ಶುಂಠಿ" (ಹಲಾಯು. ೧೦೧-೪೬೧) ; "ಮಹೌಷಧಂ ನಾಗರಂ ವಿಶ್ವಮೆನಲು ಆರಯ್ಕೆ ಶುಂಠಿಯಕ್ಕುಂ" (ಪಾಂಗರಾ. ೪೧-೩೩) ; ಕ್ಷೀರ ದಧಿ ಮಧು ಘೃತಂ ಸಿತನಾಗರಂ ... ಲವಣವೆಲ್ಲಾ ದಶಾಮೃತಸಾರ ಪೂರ ಕಳಸ (ಸಿದ್ಧರಾ. ೫-೭); ಮರಿಚಂ ಸುಸ್ಯೆಂಧವಂ ನಾಗರಮೊಂದ(ಲ)ಂ ಲೊಕ್ಕಿ . . . ಬೆರಸಿಕ್ಕುಗೆಯಗ್ನಿದೀಪನೀಯಂ ಪಿಂಡಂ (ಅಶ್ವಶಾ. ೭-೪೦). ೧೧. ಒಂದು ಬಗೆಯ ಲಿಪಿ ; ದೇವನಾಗರಿ : ಏಜಾಂಕವಮಾಲೆಯುಂ ಮಾನವಮನ್ಮಥಂ ಬರೆದನಾದರದಿಂ ವಿಟಚಕ್ರವರ್ತ್ತಿ ಧಾತ್ರೀನುತಮಾಗಿ ತಿಲುತಿವಿಳಕಂನಡ ನಾಗರದಕ್ಕರಂಗಳ (ಸಾಇಇ. IX-1, ೧೧೯-೪೨ ; 1057). ೧೨. ಒಂದು ಬಗೆಯ ಗಡ್ಡ ; ಭದ್ರವಂಸ್ಯೆ : "ನಾಗರಂ–ಭದ್ರಮುಸ್ಯೆ, ಶೊಂಠಿ, ನಗರಸಂಬಂಧಿ" (ಸಿದ್ಧಾಂತಿ. ೩೬೧) ; "ನಾಗ(ರು)ಹಾ-ನಾಗರ, ಮುಸ್ಯೆ, ಲಕ್ಷಣಕಂದ" (ಓಷಧಿ. ೮೫). ೧೩. ಒಂದು ದೇಶದ ಹೆಸರು. 'ನಾಗರ ಖಂಡ1' ಪರಾ. ೧೪. [ವಾಸ್ತು] ವಾಸ್ತುಶಿಲ್ಪದ ಒಂದು ವಿಧಾನ,–ರೀತಿ : ಭರತಖಂಡದ ವಾಸ್ತುಶಿಲ್ಪವು ಮೂರು ತೆರದ್ದೆಂದು ಹೇಳಲ್ಪಟ್ಟಿದೆ. ಮೂಲದಿಂದ ಶಿಖರದವರೆಗೂ ಚತುರಸ್ರಾಕಾರವಾಗಿರುವ ದೇವಾಲಯವು "ನಾಗರ"ವೆಂದೂ . . . ಶಾಸ್ತ್ರಗಳಲ್ಲಿ ಹೇಳಿದೆ (ಪ್ರಾಪ್ತಾ. ೨೬).

ನಾಗರದ ಲಿಪಿ = ನಾಗರಲಿಪಿ : ತೆಲುಗ ಲಿಪಿ ನಾಗರದ ಲಿಪಿ . . . ಲಾಳಲಿಪಿ ಮೊದಲಾದ ಹಲವು ಲಿಪಿಗಳನೋದ ಬಲ್ಲಗ್ಗಳದ ಕರಣಿಕರಂ ಕರೆಸಿ (ಲಸಪು. ೫-೩೩). [ಸಂ.]

ನಾಗರಂಗ (ನಾ). ಒಂದು ಬಗೆಯ ಮರ ; ನಾರಂಗ ; ಕಿತ್ತಳೆ : ಕಿಸುವಣ್ ಮುಸುಕಿರ್ದ ನಾಗರಂಗಂ . . . ಕುಂದವು ನಂದನಂಗಳೊಳ್ (ಜಗವಿ. ೨-೧೫) ; ಕದಳಿ ಚೂತ ಲವಂಗ ಲುಂಗ ನಾಗರಂಗ . . . ಮೊದಲಾದ ಅನೇಕವೃಕ್ಷಗಳ ಸಮೂಹದಿಂದ (ಶೀಷಧ. ೫-೬). [ಸಂ.]

ನಾಗರಕ (ನಾ). ೧. ನಗರರಕ್ಷಕ ; ಪಟ್ಟಣದ ರಕ್ಷಣೆಯಂ ಹೊಣೆಯನ್ನು ಹೊತ್ತಿರುವ ಅಧಿಕಾರಿ ; ಕೊತವಾಲ ; ತಳವಾರ. ೨. ಶೃಂಗಾರ ವಿಷಯದಲ್ಲಿ ನಾಯಕನಿಗೆ ಸಹಾಯಕರಾಗಿ ಬರುವ ನಾಗರಕ, ವಿಟ, ವಿದೂಷಕ ಮತ್ತು ಪೀಠಮರ್ದರೆಂಬ ನಾಲ್ಕು ಮಂದಿ ಭೋಗಸಖರಲ್ಲಿ ಒಬ್ಬ : ತನ್ನೊಡನೆ ತೊಬಲ್ದ ನಾಗರ[ಪಾಣಾಂ. ೮]ಕ ವಿಟ ವಿದೂಷಕ ಪೀಠಮರ್ದಕರ್ಕಳನಿರಲ್ವೇಟ್ದು (ಪಂಪಭಾ. ೪-೧೧೦ ವ) ; ದೀನಜನತಾ ಕಲ್ಪಾಂಘ್ರಿಪಂ ನಾಗರಕ ವಿಟ ವಿದೂಷಕ ಪೀಠಮರ್ದಕರ್ಕಳ್ವೆರಸು . . . ಬರ್ಪೊಂ (ಶಾಂತಿಪು. ೪-೬೨ವ) ; ಸೊಬಗಿಲ್ಲದ ಗಣಿಕಾನೀರಮಿಲ್ಲ ಚದುರಿಲ್ಲದ ನಾಗರಕರ್ಕಳಿಲ್ಲ (ಪರ್ಮಾ. ೧-೪೬ಗದ್ಯ). ೩. [ಕಾಮಶಾ] ಒಂದು ಬಗೆಯ ಬಂಧ : ಮಗುಳ್ದು ಮಲಗಿ ರಮಣ . . . ತೆಕ್ಕೆಗೆಯ್ದು ನೆರೆಯ ಪೊಗುವ ಭಾವಮದುವೆ ನಾಗರಕ[ಪಾಣಾಂ. ತ] ಮೆನಿಪ್ಪುದು (ಜಸವ. ೪-೧೧). [ಸಂ.]

ನಾಗರಖಂಡ1 (ನಾ). ೧. (ಹಸಿ) ಶಂಠಿ ಚೂರು : ನಾಗರಖಂಡಂಗಳನಾ ನಾಗರಖಂಡದೊಳ್ ತೊಡರೆ ನರನಿಸುವುದುಮಾ ನಾಗರಖಂಡಂಗಳುಮಂ ನಾಗರಖಂಡಮುಮನಳರ್ದುಕೊಂಡಂ ದಹನಂ (ಪಂಪಭಾ. ೫-೪೪). ೨. ಒಂದು ನಾಡಿನ ಹೆಸರು : ಶ್ರೀಮತ್ ಬ್ರಹ್ಮದೇವರಸರ್ ನಾಗರಖಂಡ ವೆಬ್ಬತ್ತುವನಾಳುತ್ತಮಿರೆ (ಎಕ. VII, ಶಿಕಾರಿ. ೮೧-೯ ; 1030).

[ನಾಗರ2 + ಖಂಡ]

ನಾಗರಖಂಡ2 'ನಾಗರು' ಪರಾ.

ನಾಗರಜ್ಜು (ನಾ). = ನಾಗಪಾಶ ೧ : ನಿಱಿದಿರೆ ಸಂಕಲೆವಂದದ ತೆಱದಿಂ ಪೆಣೆದಿರ್ದ ನಾಗರಜ್ಜುಗಳೆಲ್ಲಂ . . . ಪಱಿದು (ಶಾಂತಿಪು. ೪-೫೧).

[ನಾಗ + ರಜ್ಜು]

ನಾಗರತೆ (ನಾ). = ನಾಗರಿಕತೆ : ವಿಕ್ರಮಂ ಸೌಭಾಗ್ಯಂ ನಾಗರತೆ ಕಳೆಗಳೊಂದೊಂದಾಗಿ ಕರಂ ಮೂರ್ತಿವೆತ್ತವೋಲವನೆಸೆವಂ (ಉದ್ಭಟ. ೧೧-೩೧) ; ಕೆಲವರನು ನಾಗಂತೆಗಾಗೊಲಿದೆನ್ (ಬಿಗಾಶಿ. ೫೭). [ಸಂ. ನಾಗರತಾ]

ನಾಗರತ್ನ (ನಾ). ನಾಗರ ಹಾವಿನ ಹೆಡೆಯಲ್ಲಿರುವುದೆಂದಂ ಹೇಳಲಾದ ರತ್ನ. [ನಾಗ + ರತ್ನ]

ನಾಗರಬಾವಿ (ನಾ). ಒಂದು ಊರಿನ ಹೆಸರು : ಆ ಕೇರಿಯಿಂ ಪಡುವಲು ಪೂದೋಂಟ ವಾಟುಮಮತ್ತ ಮೂಡಲು ನಾಗರಬಾವಿಯ ಕೆ × × × (ಎಕ. VII, ಶಿಕಾರಿ. ೨೬೨-೦೬ ; 1046). [ನಾಗರ2 + ಬಾವಿ]

ನಾಗರಮುಸ್ತೆ (ನಾ). ಒಂದು ಬಗೆಯ ಗಡ್ಡೆ ; ಕೊನ್ನಾರಿಗಡ್ಡೆ : "ಚೂಡಾಲ–ನಾಗರಮುಸ್ತೆ, ಉಚ್ಚಟಿಗೆ" (ಓಷಧಿ. ೫೮) ; ನಾಗರಮುಸ್ತೆ, ಆಷಾಢೀಗೆಣಸು ಇವೆರಡನು ಸಮಾನವಾಗಿ ತೆಗೆದುಕೊಂಡು ಚೂರ್ಣವ ಮಾಡಿ . . . ಸೇವಿಸಲು ವೀರ್ಯವೃದ್ಧಿಯಹುದು (ವೃಕ್ಷಾ. II, ೪೪೮).

[ನಾಗರ2 + ಮುಸ್ತೆ]

ನಾಗರಮೋತ 'ನಾಗರಮೋಢ' ನೋ.

ನಾಗರಮೋತಿ 'ನಾಗರಮೋಢ' ನೋ.

ನಾಗರಮೋಢ, ನಾಗರಮೋತ, ನಾಗರಮೋತಿ, ನಾಗರಮೋಢೆ (ನಾ). ಸುವಾಸನೆಯಿಂದ ಕೂಡಿರುವ ಒಂದು ಬಗೆಯ ವನಸ್ಪತಿ,–ಮೂಲಿಕೆ; ನಾಗರಮುಸ್ತೆ : ಅಮೃತಬಳ್ಳಿ, ಕಿರಾತಕಡ್ಡಿ, ಪಿತ್ತಪಾಪು, ನಾಗರಮೋಢ, ಶುಂಠಿ ಇವನ್ನು ಮುಕ್ಕಾಲು ತೊಲೆಯಂತೆ ಜಜ್ಜಿ ಹಾಕಿ . . . ಉಪಯೋಗಿಸುವುದು (ಮುನಿವ. ೨೫). **ನಾಗರಮೋತ :** ಜೇಕಿನಗಡ್ಡೆ (ನಾಗರಮೋತ) (ಮುಂಬಪ್ರಾ. ೧೫೬). **ನಾಗರಮೋತಿ :** ಹಾಲಮುಡ್ಡಿ ಕರ್ಪೂರ ಶಿಲಾರಸ ದೇವದಾರ ಲೋಲ ನಾಗರಮೋತಿ ಚಂದನ ಕರ್ಚೂರ ರಾಳ ಗುಗ್ಗುಳದ ದಶಾಂಗ (ಸಿದ್ಧಪು. ೧೯-೩). **ನಾಗರಮೋಢೆ :** ೧೨೧, ನಾಗರಮೋಢೆ (ಜೇಕಿನ ಗಡ್ಡೆ) ; ೧೨೨, ನೀಲಿ (ಮುಂಬಪ್ರಾ. ೧೫೬).

[←ಹಿಂ. ಮರಾ. ನಾಗರಮೋಢಾ./ಸಂ. ನಾಗರಮುಸ್ತಾ]

ನಾಗರಮೋಥೆ 'ನಾಗರಮೋಥ' ನೋ.

ನಾಗರಲಿಪಿ (ನಾ). ಹಿಂದಿ, ಮರಾಟಿ, ಸಂಸ್ಕೃತಭಾಷೆಗಳನ್ನು ಬರೆಯಲು ಬಳಸುವ ಅಕ್ಷರಮಾಲೆ ; ದೇವನಾಗರಿ. [ನಾಗರ$_2$ + ಲಿಪಿ]

ನಾಗರಸ್ತ್ರೀ (ನಾ). ಸೂಳೆ ; ವೇಶ್ಯೆ ; ಗಣಿಕೆ : ಬಿಂಬಸಾರನು ರಾಜಗೃಹದಲ್ಲಿ ಆಳುತ್ತಿದ್ದಾಗ, ವೈಶಾಲಿಯಲ್ಲಿ ಆಮ್ರಪಾಲಿ ಎಂಬುವಳು ಒಬ್ಬಳು ನಾಗರಸ್ತ್ರೀ, ಎಂದರೆ ಗಣಿಕೆ (ಹತ್ತುಮ. ೯೯) ; ನಾಗರಸ್ತ್ರೀ ಬಂದು ರಾಜರನು ಕರೆವುದೇ ಎಂದು ಶಂಕಿಸಬೇಡಿ (ಯಶೋಧ. ೨೯). [ಸಂ.]

ನಾಗರಾಜ (ನಾ). ನಾಗರ ಹಾವುಗಳ ಅಧಿಪತಿ ; ಆದಿಶೇಷ : ವಜ್ರಾಯುಧಮಹೀಪಾಲನೊಳ್ ಸಹಸ್ರಜಿಹ್ವನಪ್ಪ ನಾಗರಾಜನನೆ ಪೋಲ್ತು ನುಡಿಯೆ (ಶಾಂತಿಪು. ೮-೧೨೬ ಪ). [ನಾಗ + ರಾಜ]

ನಾಗರಿ (ನಾ). ೧. ಬುದ್ಧಿವಂತೆ ; ಕುಶಲೆ. ೨. ಕುಟಿಲಸ್ವಭಾವದ ಹೆಂಗಸು. ೩. ಒಂದು ಬಗೆಯ ಲಿಪಿ ; ದೇವನಾಗರಿ. [ಸಂ. ನಾಗರೀ]

ನಾಗರಿಕ (ಗು). ೧. ಪಟ್ಟಣಕ್ಕೆ ಸಂಬಂಧಿಸಿದ ; ನಗರದ : ನಾಗರಿಕ ಆಡಳಿತದ ಉಚ್ಚ ಅಧಿಕಾರಿಗಳಾಗಿದ್ದುದರಿಂದ ರಾಜನೊಂದಿಗೆ ನೇರ ಮನವಿಗಳನ್ನರ್ಪಿಸಲೂ ಅವರು ಅರ್ಹರಾಗಿದ್ದರು (ತುಳುನಾ. ೧೧೨). ೨. ನಗರದಲ್ಲಿರುವ ; ಪಟ್ಟಣದಲ್ಲಿ ವಾಸಿಸುವ : ನಿಜವಿಜಯಕಟಕದ ನಾಗರಿಕರಮಣರಮಣೀಜನಂಗಳ್ ಕೌಮುದೀಮಹೋತ್ಸವೋತ್ಸುಕರಾಗಿ ನೆರೆದಲ್ಲಿ (ಆದಿಪು. ೧೨-೧೦ ಪ). (ನಾ). ೩. ಪಟ್ಟಣದಲ್ಲಿರುವವನು ; ಪಟ್ಟಣದಲ್ಲಿ ವಾಸಿಸುವವನು : ಒಮ್ಮೆ ದೇವಣ್ಣನೆಂಬ ನಾಗರಿಕನೊಬ್ಬ, ಭಂಡಾರಿ ಆದಿಯಣ್ಣನೆಂಬಾತನಿಗೆ ತನ್ನ ಭೂಮಿಯನ್ನು ಕ್ರಯ ಮಾಡಿದ್ದ (ಶಾಂತಲಾ. ೧೫೫) ; ನಾಗರಿಕರ ಮಾತು ನಗರದಲ್ಲಿ ಚಂದ (ಗಾದೆ). ೪. ಪಟ್ಟಣದ ಸಂಬಂಧವುಳ್ಳವನು ; ಕುಶಲ ; ಚತುರ : ನಾಗರಿಕರು-ವ್ಯವಸಾಯ ಮತ್ತು ವ್ಯಾಪಾರ ಮಾಡುವುದಲ್ಲದೆ ನಾನಾವಿಧ ಶಾಸ್ತ್ರ ಕುಶಲವಿದ್ಯೆಗಳಲ್ಲಿ ಪ್ರವೀಣರಾಗಿರುವರು (ಭಾಗೋಳ. ೧೯). ೫. ಒಂದು ಪ್ರಭುತ್ವಕ್ಕೆ ಒಳಪಟ್ಟವನು ; ಪ್ರಜೆ : ನಿಜಮುಂದಿರಂಬೊಕ್ಕು ಸುಖದಿಂ ದಿರ್ಪಿನಂ ನಾಗರಿಕಾದಿ ನಾನಾ ಕಲಾಕೋವಿದ ಜಾತಿನಾಯಕರ್ ಬಂದು ವಂದಿಸಿ (ಹಮ್ಮೀರ. ೨-೫೫ ಪ) ; ಭಾರತದ ಸಮಸ್ತ ನಾಗರಿಕರಿಗೆ : ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವೂ . . . ದೊರೆಯುವಂತೆ ಮಾಡುವುದಕ್ಕಾಗಿಯೂ (ಭಾಧಾನ. ೦) ; ಕೆಲವರು ಸೆರೆಮನೆಯಿಂದ ಹೊರಬಂದ ಮೇಲೆ, ಅತ್ಯಂತಯೋಗ್ಯರಾದ ನಾಗರಿಕರಾಗಿ ಬಾಳುತ್ತಿದ್ದುದೂ ಉಂಟು (ಸನ್ಮಳ. ೯೪). ೬. = ನಾಗರಕ ೨ : ಮೇಳದ ನಾಗರಿಕ ವಿಟ ವಿದೂಷಕ ಪೀಠಮರ್ದಕರ್ಕಳ್ವೆರಸು ಕಾಮದೇವನೋಲಗಕ್ಕೆ ಬರ್ಪಂತೆ ಸೂಳೆಗೇರಿಯೊಳಗನೆ ಬರ್ಪುದುಂ (ಪಂಪಭಾ. ೪-೭೯ ಪ) ; ನಾಗರಿಕ ವಿಟ ವಿದೂಷಕಂ ಪೀಠಮರ್ದಕಪುರಸ್ಸರಂ ಪೌರವಿಹಾರಕ್ಕೆ ಪೊಱಮಡೆ (ಜಗವಿ. ೧೬-೧೦೯ ಪ) ; ನಾಗರಿಕನಂದದಲಿ ಲಲಿತಸರಸೋಚಿತ ವಚನಮಂ ಸಲಿಸುವಂ (ಬಸಪು. ೨೬-೨೦) ; ನಾಯಕನಿಚ್ಛೆಗೆ ಪದೆದು ಚಾತುರ್ಯಮಪ್ಪುದನೆಸಗಿ ತೊಲಗುವಂ . . . ನಾಗರಿಕನೆಂದೆಂಬವಂ (ಜನವ. ೮-೩೯) ; ಬಳಿಕ ವಿಟ ವಿದೂಷಕ ಪೀಠಮರ್ದನ ನಾಗರಿಕರೆಂಬ ಚತುರ್ವಿಧ ಭೋಗಸಖರಿಂ (ವಿವೇಕ. ೨೨೮) ; ಮೂಡಲದು ವಿಟನಿಂಗೆ ಬಡಗಲದು ವಿದೂಷಕಗೆ ಪಡುವಲದು ನಾಗರಿಕಗಂ ತೆಂಕಲದು ಪೀಠಮರ್ದನಗೆ (ಸರ್ವಜ್ಞ. ೧೬೩೧). ೭. ಧೂರ್ತ ; ವಂಚಕ. [ಸಂ.]

ನಾಗರಿಕತೆ (ನಾ). ನಗರವಾಸಿಗಳಲ್ಲಿ ಇರಬೇಕಾದ ಗುಣಧರ್ಮ,-ಸಭ್ಯತನ,-ಯೋಗ್ಯತೆ ; ಗ್ರಾಮ್ಯನಲ್ಲದಿರುವಿಕೆ ; ಸದಾಚಾರದಿಂದ ಕೂಡಿಕೊಂಡಿರುವಿಕೆ : ನಿಜವಾದ ಧರ್ಮ ಸಮಾಜದ ಅಡಿಗಲ್ಲು. ಅದರ ಮೇಲೆಯೇ ನಾಗರಿಕತೆಯ ಸರಕಾರ ನಿಂತಿದೆ (ಧರ್ಮಸಾ. ೩) ; ಸಂಸ್ಕೃತಿಗೂ ನಾಗರಿಕತೆಗೂ, ಆತ್ಮಕ್ಕೂ ಭೌತಿಕವಸ್ತುಗಳಿಗೂ ಇರುವ ಅಂತರವಿದೆ (ಭಾರದ. ೩) ; ಸ್ತ್ರೀ ಜಾತಿಯ ವಿಷಯದಲ್ಲಿ ಇಷ್ಟು ಅಧಿಕಾರವನ್ನು . . . ಚಲಾಯಿಸುವುದು ನಾಗರಿಕತೆಯ ಲಕ್ಷಣವಲ್ಲ (ಸಾಹಿಜೀ. ೪೦). P ಕೆಲವು ವೇಳೆ ಇದು 'ಸಂಸ್ಕೃತಿ' ಎನ್ನುವ ಅರ್ಥದಲ್ಲಿಯೂ ಬಳಕೆಯಾಗುತ್ತದೆ. [ಸಂ. ನಾಗರಿಕತಾ]

ನಾಗರಿಕಹಕ್ಕು (ನಾ). ಒಂದು ದೇಶದ ಪ್ರಜೆಗೆ ಆ ದೇಶದ ರಾಜ್ಯಾಂಗದಂತೆ ಸಲ್ಲಬೇಕಾದ ಅಧಿಕಾರ,-ಅವಕಾಶ : ನಾಗರಿಕ ಹಕ್ಕುಗಳು (Civil rights. ಪತ್ರಿನಿ. ೦೭). [ನಾಗರಿಕ+ಹಕ್ಕು$_2$]

ನಾಗರಿಗ, ನಾಗರೀಕ, ನಾಗಲಿಕ, ನಾಗಲೀಕ (ನಾ). ೧. = ನಾಗರಕ ೨ : ಸುರಭವನ ವಧುಗಳು ನಾಗರಿಗರಿವರೆತ್ತ ಭಾರತಭೂಗತರು ತಾವೆತ್ತ (ಕುಪ್ಯಾಅ. ೮-೪೪). **ನಾಗರೀಕ** : ೧. ವಿಟರ ಚೆಲ್ವಂ ವಿದೂಷಕರ ಘೋಷಣೆಯ ಮಹಾಪಟುವಾಕ್ಯ ನಾಗರೀಕರ ಪೀಠಮರ್ದನಂ ಸ್ಫುಟಗುರುತ್ವಗಳ ನಡೆನುಡಿ ನೋಟ ಮುಗುಳ್ನಗೆಗಳಿಂದೊಳಗು ಮಾಡಿಕೊಂಬ . . . ಚಂದನ ಗಂಧಿಯರು ಚಂದ್ರಶಾಲೆಯೊಳಗಿರೆ ಕಂಡರು (ಪ್ರಭುಪು. ೪-೧೨೭) ; ಪರಿರಂಭಣ ಕೂಟದೊಳು ಮನವ ಕೊನರಿಪ ನಾಗರೀಕನು ಪೀಠಮರ್ದನ ವಿಟ ವಿದೂಷಕಾದಿಗಳು ಬಹುಚಾಟು ಚಪಳತೆಯಿಂದೆ ಬರುತಿರ್ದರು (ನವಮೋ. ೦೭-೫೪). ೨. = ನಾಗರಿಕ ೪ : ಆ ಊರಿನ ಜನ ತುಂಬ ನಾಗರೀಕರಾಗಿದ್ದಾರೆ (ರೂಢಿ). **ನಾಗಲಿಕ** : ೧. ವಿಟ ವಿದೂಷಕ ಪೀಠವರ್ಧನರೆಂದೆಂಬ ನಟನೆಯ ನಾಗಲಿಕರಿಗೆ ಘಟಕ ಕಾಮನು ಕಾವಲಿರಿಸಿದನೆಂಬಂತೆ ಕುಟಿಲಾಕ್ಷಿಯರ ಮೊತ್ತವೆಸೆಯೆ (ಅಬ್ಬಲೂ. ೩-೮೪). ೩. ದರ್ಜೆ ; ಚಿಪ್ಪಿಗ : ಕರುಣನಿಧಿ ನಾಗಲಿಕ ವಂಶೋದ್ಧರಣ ಮಿತ್ರಾವರುಣ ಸತ್ಯಾಭರಣ . . . ಸದ್ಗುಣಿ ಚೆನ್ನ ವೀರನ ತನುಜ ಸಂಗಯ್ಯ (ಶಂಕದಾ. ೧-೨೨) ; ಚಟ್ಟೇರು . . . ಇವರು ನಾಗಲಿಕರೆಂಬ ಕುಲದವರ ವಳಭೇದವೆಂದು ತೋರುತ್ತದೆ (ಕಭಾಗೆ. ೧೦೦). ೪. ಒಂದು ಬಗೆಯ ಪಕ್ಷಿ : ಹುಟ್ಟದ ಮರದಲ್ಲಿ ಹಾಱದ ಪಕ್ಷಿ ತಲೆ ದೋಱುತ್ತದೆ . . . ಅದು ನಾಗಲಿಕಪಕ್ಷಿ ಹಾಱಿಹೋಯಿತ್ತು (ಕೋಲಶಾಂ. ೪೦-೩೧). **ನಾಗಲೀಕ** : ೧. ನಾಗಲೀಕನು ಈರ್ವರ್ಗುಂ ಚಾತುರ್ಯಂ ಪುಟ್ಟಿಸುವಂ ಇದು ನಾಗಲೀಕ ಕೃತ್ಯಂ (ಕಾಮಶಾ. ೬-೧೨೪) ; ನಾಗಲೀಕ ಪುರುಷಗೆ ಭೋಗವಿಲ್ಲದೆ ಹೋದೀತೇ ? (ಗಾದೆ). [<ಸಂ. ನಾಗರಿಕ]

ನಾಗರಿಪು (ನಾ). ಸರ್ಪಗಳ ಶತ್ರು ; ಗರುಡ. 'ನಾಗರಿಪುಗಮನ' ಪರಾ. [ನಾಗ + ರಿಪು]

ನಾಗರಿಪುಗಮನ (ನಾ). ಗರುಡನ ಮೇಲೆ ಸಂಚರಿಸುವವನು ; ವಿಷ್ಣು : ನಾಗರಿಪುಗಮನವಂದಿತ ಪಾದಪದ್ಮಯುಗ (ಪ್ರೌಢರಾ. ೨೧-೦). [ನಾಗರಿಪು + ಗಮನ]

ನಾಗರೀಕ 'ನಾಗರಿಗ' ನೋ.

ನಾಗರೀಕತೆ (ನಾ). = ನಾಗರಿಕತೆ : ಭೂಶೋಧನೆಗಳ ಅನಂತರ ನವೀನ ನಾಗರೀಕತೆಯೊಂದರ ಇರವು ಪ್ರಕಾಶಕ್ಕೆ ಬಂದಿತು (ದ್ರಾವಿವಿ. ೨೨). [<ಸಂ. ನಾಗರಿಕತಾ]

ನಾಗರೀಗಿಡ (ನಾ). ಒಂದು ಬಗೆಯ ಗಿಡ : ನಾಗರೀಗಿಡ, ನಕ್ಕರೀಗಿಡ, ಕಂದರಕ್ಕರೆ(ಮೃಜಿಗಿ. ೭೯-೦೬೦೭). [ನಾಗರಿ$_0$ + ಗಿಡ (<ಗಿಡು)]

ನಾಗರೀಲಿಪಿ (ನಾ). ಒಂದು ಬಗೆಯ ಲಿಪಿ ; ದೇವನಾಗರಿ. [ಸಂ.]

ನಾಗರು, ನಾಗರ$_1$ (ನಾ). ೧. ನಾಗರಹಾವು ; P 'ದೇವರು' ಎಂಬಂತೆ ನಾಗರುಗಳ ಬಹುತ್ವಭಾವನೆಯಿಂದ ಕನ್ನಡದಲ್ಲಿ ಬಹುವಚನಾಂತವಾದ ಈ ರೂಪವು ಏಕವಚನದಲ್ಲಿ ಬಳಕೆಯಲ್ಲಿದೆ : ಕಲ್ಲ ನಾಗರ ಕಂಡರೆ ಹಾಲನೆಱೆಯೆಂಬರು ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ (ಬಸವ. ೦೯೪) ; ಗರುಡನೂರವರೆಱೆವರೇ ನಾಗರಿಗೆ ತನಿಯನು (ಕುಪ್ಯಾದ್ರೋ. ೮-೫೪) ; ನಾಗರಿಗೆ ಮದ್ದ ಹೇಳ ಬಂದ ಅಯ್ಯಗಳು ನಾಕಿತಿಯ ನಟಣೆಯಲ್ಲಿ

ಸಿಲುಕಿದರು (ಸಿದ್ಧೇಶ ೧೯೨-೩೮೪). ೨. ನಾಗರ ಕಲ್ಲು.–ಪ್ರತಿಮೆ : ನಾಗಶಾಣಕ್ಕೆ ಪೋಗಿ ನಾಗರನರ್ಚಿಸಿ ಪೊಡೆಪಟ್ಟು (ವಡ್ಡಾರಾ. ೧೨-೨೨) ; ಒಂದು ದಿವಸಮಾ ಕನ್ನೆ ತನ್ನೊಡನಾಡಿಗಳಪ್ಪ ಕನ್ನೆಯರ್ವೆರಸು ಮಹಾ ವಿಭೂತಿಯಿನಾ ನಾಗಸ್ಥಾನಕ್ಕೆ ವಂದು ನಾಗರನರ್ಚಿಸುವಲ್ಲಿ (ಶುಕುಮಾ. ೩-೬೦ ವ) : ಪುರದ ಪೊಱಗಣ ನಂದನವನದೊಳ್ಗೊಂದು ನಾಗಾಲಯಮಿರಲಲ್ಲಿ ನಾಗರಂ ಪೂಜಿಸಲ್ಬೆರ್ಪುರಂ ಪೋಗಿ (ಪುಣ್ಯಾಸ್ರ. ೬-೪ ವ). ೩. ಹೆಂಗಸರು ತಲೆಯಲ್ಲಿ ಧರಿಸಿಕೊಳ್ಳುವ ನಾಗರಮೂರ್ತಿ ಇರುವ ಒಂದು ಬಗೆಯ ಆಭರಣ : ಅವನು ಹೆಂಡತಿಯ ನಾಗರು, ಜಡೆಬಿಲ್ಲೆ ಎಲ್ಲಾನೂ ಅಡವು ಹಾಕಿದ್ದಾನೆ (ಕೂಡಿ). **ನಾಗರ**$_1$: ೩. ಕತ್ತಿನಲ್ಲಿ ಮಂಗಳಸೂತ್ರವನ್ನೂ, ಅಡ್ಡಿಕೆಯನ್ನೂ . . . ತಲೆಯಲ್ಲಿ ಒಂಟಿನಕ್ಷತ್ರದಂತೆ ಶೋಭಿಸುವ ಒಂದು ನಾಗರವನ್ನೂ . . . ಹೊರತು ಇತರ ಭೂಷಣಗಳಾವುವನ್ನೂ ಆಕೆಯು ಹಾಕಿಕೊಂಡಿರಲಿಲ್ಲ (ಲಕ್ಷ್ಮೀಪ್ರ. ೧೧).

ನಾಗರ ಅಮಾವಾಸ್ಯೆ, ನಾಗರ ಅಮಾಸಿ = ನಾಗರಪಂಚಮಿ ಹಬ್ಬದ ಹಿಂದಿನ ಅಮಾವಾಸ್ಯೆ ; ಆಷಾಢಬಹುಳ ಅಮಾವಾಸ್ಯೆ : ದೀವಸಿ ಅಮಾವಾಸ್ಯೆ . . . ಮುಂಬರುವ ನಾಗಪಂಚಮಿಗೆ ಸವಿಾಪದ ದಿನವಾದುದರಿಂದ ಇದಕ್ಕೆ ನಾಗರ ಅಮಾವಾಸ್ಯೆ ಎಂದೂ ಉತ್ತರಕರ್ನಾಟಕದ ಹೆಸರು (ಧಾಹಬ್ಬ. ೯೯) ; ನಾಗರ ಅಮಾಸಿಗೆ ತಾನೆ ನಾವು ತೆಗೆದಿಟ್ಟ ಸಮೆ ತೆಗೆದು ತಿಕ್ಕಿ ಸ್ವಚ್ಛಗೊಳಿಸುವದು ? (ಸ್ಮತಿಚಿ. ೧೯೩). **ನಾಗರ ಕಲ್ಲು** = ಕಲ್ಲಿನಿಂದ ಮಾಡಿದ ನಾಗರಹಾವಿನ ಪ್ರತಿಮೆ : ತುಳುನಿಕಟ್ಟಿಯ ಮೇಲೆ ವ್ಯಂದಾವನಕ್ಕೆ ಹೊಂದಿಕೊಂಡು ಒಂದು ನಾಗರ ಕಲ್ಲು ಇನ್ನೊಂದು ಮಾಸ್ತಿ ಕಲ್ಲು ಯಾರ ಹಸ್ತಕ್ಷೇಪದಿಂದಲೋ ತಲೆಕೆಳಗಾಗಿ ನಿಂತಿವೆ (ಆಮಾನಿ. ೩೦). **ನಾಗರ ಕಾಟ** = ೧. (ನಾಗದೇವತೆಗಳಿಗೆ ಅಪಚಾರ ಮಾಡುವುದರಿಂದ ಒದಗುವುದೆಂದು ನಂಬಲಾದ) ಕಪ್ಪ,-ಪೀಡೆ: ಕಜ್ಜಿ, ಕುರು, ಹುಣ್ಣು ಮೊದಲಾದ ಚರ್ಮರೋಗ : ನಾಯ ಹಿಡಿದಿಪ್ಪ ಕರಿನಾಕಿತಿ ನಾಗರ ಕಾಟ ವಾಗಿ ಕಾಡುತಿಪ್ಪಳಯ್ಯ (ಸಿದ್ಧೇಶ. ೧೯೨-೩೮೪) ; ಇದು ಔಷಧಕ್ಕೆ ಹೋಗುವದಿಲ್ಲ. ಇದು ನಾಗರ ಕಾಟ, ತನಿ ಎರೆಯಬೇಕು (ಕೂಡಿ). ೨. (ನಾಗರಿಗೆ ಮಾಡಿದ ಅಪಚಾರದಿಂದ ಉಂಟಾಗುವುದೆಂದು ನಂಬಲಾದ) ಬಂಜೆತನ; ಮಕ್ಕಳಾಗದಿರುವಿಕೆ; ಅಪುತ್ರವಂತಿಕೆ : ವಿದುರಾಶ್ವತ್ಥಕ್ಕೆ ಹೋಗಿ ನಾಗಪ್ರತಿಷ್ಠೆ ಮಾಡಿದರೆ ನಾಗರ ಕಾಟ ಪರಿಹಾರವಾಗಿ ಮಕ್ಕಳಾಗುತ್ತೆ (ಕೂಡಿ). **ನಾಗರ ಕಾಯಿ**=ಹುಣಿಸೆಕಾಯಿ: ನಾಗಪೂಜೆಗೆ ನೆನೆಗಡಲೆಯೊಂದಿಗೆ ನಾಗರ ಕಾಯಿಯೂ ಬೇಕು (ಕೂಡಿ). **ನಾಗರ ಖಂಡ**$_1$=೧.ಹಾವಿನ ತಂಡು,–ಬೊರು : ನಾಗರ ಖಂಡಂಗಳನಾ ನಾಗರಖಂಡದೊಳೆ ತೊಡರೆ ನರನಿಸುವುದುಮಾ ನಾಗರ ಖಂಡಂಗಳುಮಂ ನಾಗರಖಂಡಮುಮುನೆಳರ್ದುಕೊಂಡಂದಹನಂ (ಪಂಪಭಾ. ೩-೮೯). ೨. ಒಂದು ಬಗೆಯ ಆಭರಣ (?) : ನಾಗವಿಭೂಷಣಪ್ರತತಿ ನಾಗರಖಂಡಮಪೂರ್ವಮಪ್ಪ ಪುನ್ನಾಗದ ಬಾಸಿಗಂ ಬಗದ ಬಣ್ಣದ ಪುಟ್ಟಗೆ ನಾಗಜಾಲಮೆಂದಾಗಡೆ ನಾಗಲೋಕವಿಭವಂಗಳೊಳಾಜಿಸಿ ನಾಗಶಯ್ಯೆಯೊಳ್ ನಾಗಿನಿ ನಾಗಬಂಧದೊಳಿ ತಳ್ದು ಗುಣಾರ್ಣವನಂ ಮರುಳ್ಚಿದಳ್ (ಪಂಪಭಾ. ೪-೦೭). **ನಾಗರ ಚೌತಿ** = ನಾಗಚತುರ್ಥಿ : ನಾಗರ ಚೌತಿಯು, ಆಚಾರವಂತರಿಗೆ ಉಪವಾಸದ ದಿವಸ (ಕೂಡಿ). **ನಾಗರ ಪಂಚಮಿ**=ನಾಗಪಂಚಮಿ : ನಾಗರ ಪಂಚಮಿ ಹೆಬ್ಬಾಗಿ ಹೆಣ್ಣುಮಕ್ಕಳ ಹಬ್ಬ (ಧಾಹಬ್ಬ. ೦೦೩) ; ನಾಗರ ಪಂಚಮಿ ನಾಡಿಗೆ ದೊಡ್ಡದು (ಕನ್ನಾಕಾ. ೧೪೬) ; ನಾಗರ ಪಂಚಮಿಯಾವರೆ ಹಾದರಗಿತ್ತಿಗೇನು ? (ಗಾಪದ). **ನಾಗರ ಪಣೆ**=ಹಾವಿನ ಹೆಡೆಯ ಆಕಾರದಲ್ಲಿರುವ,ಕವಿಗೆ ಹಾಕಿಕೊಳ್ಳುವ ಒಂದು ಬಗೆಯ ಆಭರಣ: ಕವಿಯೊಳೊಪ್ಪುವ ನಾಗರ ಪಣೆ ಹೊಸ ಹೊನ್ನ ಸವಡಿದಾರದ ಕೊರಳುಗಳ ... ಆಳ್ಗಳ ಮೇಳದೆ ಭುವನೇಶ್ವರನೈತಂದ(ಕಂನವಿ. ೦೨-೬೫) : ವರ ಕವಿಯಲ್ಲಿ 'ನಾಗರ ಪಣೆ'ಗಳದ್ದುವು (ಕರ್ಣಾಜ. ೦೪೯). **ನಾಗರ ಬಿಲ್ಲೆ** = ನಾಗರು ೩: ನಮ್ಮ ಮನೆಯಲ್ಲಿ ಹಳೆಯ ಕಾಲದ ಒಂದು ನಾಗರ ಬಿಲ್ಲೆ ಇದೆ (ಕೂಡಿ). **ನಾಗರ ಬೆತ್ತ** = ನಾಗಬೆತ್ತ : ಒಂದು ಕಾಲದಲ್ಲಿ ಆ ನಾಗರ ಬೆತ್ತವನ್ನು ಒಗ್ಗಾಲಿ ತಂದಿದ್ದನು (ಕಂಬಹು. ೦೩) ; ಎಲೆವಸ್ತ್ರ ಹೊದೆದು . . . ಕೈಯಲ್ಲಿ ನಾಗರ ಬೆತ್ತ ಹಿಡಿದು ಅರಸುಮರ್ಜಿಯಿಂದಲೇ ಹೊರಟಿದ್ದರು (ದೇವಹಿಂ. ೧೧೦). **ನಾಗರ ಮರಿ**= ೧. ನಾಗರ ಹಾವಿನ ಮರಿ. ೨. ಕೆಳದಿರಾಜರಲ್ಲಿದ್ದ ಕತ್ತಿಯ ಹೆಸರು: ನಾಗರಮರಿಯೆಂಬಸಿಯಂ ತೊಂಡಧಿಕಹರ್ಷದಿಂ ಪೊರಮಟ್ಟಂ (ಕೆಳನೃ. ೩-೧೧). **ನಾಗರ ಮಿಡಿ** = ನಾಗರಹಾವಿನ ಮರಿ ; ಮಿಡಿನಾಗರ : ಸಾಕಾಗುತನಕ ಕೂಡಿ ಜೋಕಾಲಿ ಜೀಕೂನ ನಾಗರ ಮಿಡಿಯಾಗಿ ಸುಳಿಯೋಣ (ಜನಗೀ. ೩). **ನಾಗರ ರಾಗಟಿ**=ನಾಗರು ೩: ಶಿರೋಭೂಷಣಗಳು–ಬೈತಲೆಸರ, ಬಾಸಿಂಗ, ಬೈತಲೆಪದಕ, ನಾಗರ ರಾಗಟಿ . . . ಗೊಂಡೆಹೂ ಇತ್ಯಾದಿ (ಕವಿಕೋ. I, ೮೩೧). **ನಾಗರವಕ್ಕೆಗ** = ಆದಿಶೇಷನನ್ನು ಹಾಸಿಗೆಯನ್ನಾಗಿ ಮಾಡಿಕೊಂಡಿರುವವನು ; ವಿಷ್ಣು : "ರಕ್ಕಸವಗೆಯಂ ನಾಗರವಕ್ಕೆಗಂ . . . ಹರಿಯಕ್ಕುಂ ಕಾರೊಡಲಂ" (ಪಚಮಿ. ೭) : ನಾಗರವಕ್ಕೆಗ ನೀಂ ಗತಿಯೆನ್ನದೆ [ಮೇಗನಃ] ಮಱಿತು ಜಱಿವರ ಪೋಗದಿರು (ಶಶಾಂ. ೦೬-೭೨). **ನಾಗರವಾಲಿ** (?) = (?) : ಸುತವಿನೋದದ ರಚನೆಯಲಿ ಸಾರಥಿಗೆಯಾ ವಾಸುಗಿಯ ಕೊಟ್ಟನು ಕ್ಷಿತಿಗೆ ನಾಗರವಾಲಿಯಾದುದು ನೃಪತಿ ಕೇಳೆಂದ (ಸಂಭಪ. ೩೭-೧೪). **ನಾಗರ ಸುತ್ತು**= ನಾಗಮುರಿ ೧ : ಮುಂಗೈಯ ಮುಂಭಾರಿ ಮೂರೇಣ ಕಡಗಾವ ಒಂಟ ನಾಗರ ಸುತ್ತ ಸಿರಪೇಟ (ಲೋಳಗೀ. ೩೦೧) ; ಕಿನ್ನುಡೀ ಕಿರುಗೆಜ್ಜೀ ಕಿರುಗೆ ನಾಗರ ಸುತ್ತು ಕಿನ್ನೂಡಿ ಮೇಲೆ ಕಿರುಗೆಜ್ಜಿ (ನಾಪದ. ೨೦). **ನಾಗರ ಹಾವು**= ಹೆಡೆಯಿರುವ ಒಂದು ಜಾತಿಯ ಹಾವು,-ಸರ್ಪ : ನಾಗರ ಹಾವೆ ಹಾವೊಳು ಹೂವೇ (ಕಪಪು. ೩-೩೦) ; ಆ ಮರದ ಪೊಟ್ಟರೆಯಲ್ಲಿ ಒಂದು ಕರೀ ನಾಗರ ಹಾವು ವಾಸಮಾಡುತ್ತಿತ್ತು (ನೀತಿಜಂ. VIII, ೧೦). **ನಾಗರ ಹೆಡೆ**=ನಾಗರ ಹಾವಿನ ಹೆಡೆ : ನಾಗವ್ಯಗ್ಘಾಲ ಹೊಯ್ಕೋಣ ನಾಗರ ಹೆಡಿಯ್ವಾಂಗ ಅಡೋಣ (ಕನ್ನಕಾ. ೧೪೫) ; ಹಾವಾಡಿಗನು ಹಾವಾಡಿಸುವಾಗ ನಾಗರ ಹೆಡೆ ನೋಡಲು ಚೆನ್ನ (ಕೂಡಿ).

[< ಸಂ. ನಾಗ]

ನಾಗಲತೆ (ನಾ). ವೀಳೆಯದೆಲೆಯ ಬಳ್ಳಿ : "ತಾಂಬೂಲಿಯೆನೆ ನಾಗಲತೆಯಕ್ಕು" (ಪುಂಗಕಾ. ೩೭-೨೧) ; ಆಗಳುವೆಸೆದಿರ್ಪುದು . . . ನಾಗಲತಾವನದಿಂ ಸಲೆ ನಾಗರಖಂಡಂ ವಿಳಾಸ ರತುನೇರಂದಂ (ಎಳ. XI, ದಾಪಡ. ೩೫-೪೨ ; ಸು. 1160) : ಮಿಸುಪ ಪೃಥ್ವೀಕಾಲತೆಯ ನಾಗಲತೆಯ . . . ಪಂಡಪಂಗಳುಂ ಮನೋಹರಂಗಳೆನಿಸಿರ್ದುವು (ಪಂದ್ರಪು. ೧-೧೦೬ ವ) ; ವಿಲಾವನ ಲವಲೀಬನ ಲವಂಗಬನಗಳಲಿ ನಾಗಲತಾಸಂಕುಲ ಬನವಾಸಿಯ ಜನಗಳಲಿ (ಗಂಗಾತ. ೧೦೬-೨). [ನಾಗ + ಲತೆ]

ನಾಗಲಾವಿ (ನಾ). ಒಂದು ಸ್ಥಳದ ಹೆಸರು : ಕಾ[ಶ್ಯ]ಪಗೋತ್ರದ ಕೊಟ್ಟ ಲಗೆಯ [ಮೂ]ಲಿಗ ನಾಗಲಾವಿಯನೂ . . . ಸತ್ಕಕ್ಕೆ ಬಿಟ್ಟ ಕೆಯಿ (ಕಇ II, ೬-೬ ; 1022). [?]

ನಾಗಲಿ (ನಾ). ಒಂದು ಬಗೆಯ ಧಾನ್ಯ ; ರಾಗಿ : ರಾಗಿಯು (ನಾಗಲಿ) ಕಾಳು ದೊಡ್ಡದಾಗಿದ್ದು ಕೆಂಪಾಗಿರಬೇಕು (ಮುಂಬಕಾ. ೪೩).

[←ಮರಾ. ನಾಗಲೀ]

ನಾಗಲಿಂಗ (ನಾ). ಲಿಂಗಾಕಾರವಾದ ಕರ್ಣಿಕೆಯ ಮೇಲೆ ನಾಗರ ಹಾವಿನ ಹೆಡೆಯಾಕಾರದ ವಿತಾನವಿರುವಂತಿರುವ ಒಂದು ಬಗೆಯ ಹೂವು ಮತ್ತು ಅದರ ಮರ : ಲಿಂಗದ ಹೂವಿನ ಮರ, ನಾಗಲಿಂಗ (ಮೃಶಿಗ. ೨೩-೪೭೪). [ಸಂ.]

ನಾಗಲಿಕ 'ನಾಗರಿಗ' ನೋ.

ನಾಗಲೀಕ 'ನಾಗರಿಗ' ನೋ.

ನಾಗಲೀಲೆ (ನಾ). ಹಾವುಗಳ ಆಟ; ಸರ್ಪಗಳ ವಿಲಾಸ: ತನ್ನ ತಾನೆ ಅಲ್ಲ ಈಸಿ ಇರಲು ಸಾಕೋ ಗಾನಲೋಲೆ ನಾಗಲೀಲೆಯಾಗಿ ಒಲಿವೆಯೋ (ಗಂಗಾಕ. ೬೪-೩). [ನಾಗ + ಲೀಲೆ]

ನಾಗಲೋಕ (ನಾ). ನಾಗರೆಂಬ ದೇವತಾವರ್ಗವು ವಾಸಿಸುವ ಸ್ಥಳ; ಭೂವಿಯಂ ಕೆಳಗಿರುವುದೆಂದುಂ ಹೇಳಲಾದ ಜಗತ್ತು; ಪಾತಾಳಲೋಕ: "ಪಾತಾಳಮೆನಲು . . . ನಾಗಲೋಕಮೆನಲೊಪ್ಪುವ ರಸಾತಲಮೆನಲ್ . . . ಪಾತಾಳಲೋಕಕ್ಕೆ ನಾಮಂ" (ಪಂಗರಾ. ೧೧೬-೧) ; ನಾಗಕನ್ನೆ ನಾಗಲೋಕದ ವಿಳಾಸಂಗಳಂ ತೋಱುತ್ತುಂ ತನ್ನ ಕೆ[ಬಗಣ] ನಾಗವಿಮಾನಕ್ಕೆ ಪಂದು (ಪಂಪಭಾ. ೪-೧೬); ಸಮವಸರಣಾಗತ ಗಣನಾತೀತ ದ್ವಾದಶಗಣ ವಿನೇಯಜನಂಗಳಂ ನರನಾಕನಾಗಲೋಕ ಗಮನಕ್ಕೆ ಪರಸಿ ವಿಸರ್ಜಿಸಿ (ಶಾಂತಿಪು. ೧೩-೩೯ ವ) ; ನಾಗಲೋಕದ ಮಲ್ಲಿಕಾಕಸುಮವಿವೆ ದೇವ (ನಂಚಿರ. ೯-೩೪); ನಾಗಲೋಕಕ್ಕೆ ಪುಗಲೊಂದಾಗಿಹುದಾ ದಾರಿ ಗಿರಿಯ ತಪ್ಪಲಿನೊಳ್ನೀಂ ಪೋಗುತ್ತರಾದಿಗಾ ಕಡೆ ಬೇಗಂ ಮಹದೇಶ ರಾಜವಾಹನ ಬವ್ಪಂ (ನನ್ನಕಾ. ೬-೧೩೦). [ನಾಗ + ಲೋಕ]

ನಾಗಲೋಕಮಂದಿರ (ನಾ). ದೈತ್ಯ; ರಾಕ್ಷಸ: "ಸುರವೈರಿಗಳು ದಾನವರು ನಾಗಲೋಕಮಂದಿರರು ದಿತಿಜರು ಶುಕ್ರಶಿಷ್ಯರಸುರರು ಪೂರ್ವಸುರರೆನಲು ದೈತ್ಯರು" (ಪಂಗರಾ. ೩-೯). [ನಾಗಲೋಕ + ಮಂದಿರ]

ನಾಗವ (ನಾ). [ಜ್ಯೋತಿ] ಹಿಂದೂಸಂಪ್ರದಾಯದಂತೆ ಕಾಲಗಣನೆ ಮಾಡುವಾಗ ಗಣಿಸುವ ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣ ಎಂಬ ಐದು ಅಂಗಗಳಲ್ಲಿ ಒಂದಾವ ಕರಣದ ಹನ್ನೊಂದು ಬಗೆಗಳಲ್ಲಿ ಹತ್ತನೆಯದು; ಒಂದು ಬಗೆಯ ಕಾಲಮಾನ: Pಹನ್ನೊಂದು ಕರಣಗಳಲ್ಲಿ ಮೊದಲಿನ ಏಳು ಚರಕರಣಗಳು ಮತ್ತು ಉಳಿದ ನಾಲ್ಕು ಸ್ಥಿರಕರಣಗಳು. ಒಂದೊಂದಕ್ಕೂ ಬೇರೆ ಬೇರೆ ಅಧಿದೇವತೆಗಳಿದ್ದಾರೆ. **ಕರಣಗಳ – ಅಧಿದೇವತೆಗಳು:** ೧. ಬವ – ಇಂದ್ರ, ೨. ಬಾಲವ–ಬ್ರಹ್ಮ. ೩. ಕೌಲವ–ಮಿತ್ರ, ೪. ತೈತಿಲ–ಅರ್ಯಮಾ. ೫. ಗರ–ಭೂಮಿ, ೬. ವಣಿಜ (ವಣಿಕ್)–ಲಕ್ಷ್ಮಿ, ೭. ವಿಷ್ಟಿ(ಭದ್ರ)–ಯಮ, ೮. ಶಕುನಿ–ಕಲಿ, ೯. ಚತುಷ್ಪದ (ಚತುಷ್ಪಾತ್)–ವೃಷಭ, ೧೦. ನಾಗ (ನಾಗವ, ನಾಗವಾನ್) – ಸರ್ಪ, ೧೧. ಕಿಂಸ್ತುಘ್ನ–ವಾಯು. ಒಂದು ತಿಂಗಳ ಕಾಲಮಾನದಲ್ಲಿ ಶುಕ್ಲಪಕ್ಷದ ಪಾಡ್ಯದ ಉತ್ತರಭಾಗದಲ್ಲಿ ಬವವು ಆರಂಭವಾಗುತ್ತದೆ. ಮರುದಿನದಿಂದ ದಿನಕ್ಕೆ ಎರಡರಂತೆ ಏಳು ಚರಕರಣಗಳೂ ಎಂಟು ಸಲ ಆವರ್ತಿಯಾದಗೆ ಐವತ್ತಾರು ಕರಣಗಳಾಗುತ್ತವೆ. ಕೊನೆಯ ನಾಲ್ಕಕ್ಕೆ ಆವರ್ತಿಯಿಲ್ಲ. ಆಗ(೫೬+೪) ಒಟ್ಟು ಅರುವತ್ತು ಕರಣಗಳಾದುವು. (ಮುಂದಿನ ಪಾಡ್ಯದ ಮೊದಲನೆಯ ಅರ್ಧವನ್ನೂ ಸೇರಿಸಿ ಲೆಕ್ಕ ಮಾಡಬೇಕು). ಹೀಗೆಯೇ ಪ್ರತಿ ತಿಂಗಳೂ ನಡೆಯುವುದು. ಹೀಗೆ ನಾಗವಾನ್ (ನಾಗವ) ಎಂಬುದು ಆವ್ಯಕ್ತಿಯನ್ನು ಹೊಂದದ ಒಂದು ಸ್ಥಿರಕರಣ: ಶಕುನಿ ಚತುಷ್ಪಾತ್ ನಾಗವ [ಪಾಕಾಂ. ನಾಗ] ಕಿಂಸ್ತುಘ್ನವೆಂಬ ನಾಲ್ಕು ಸ್ಥಿರಕರಣಂಗಳುಂ (ವಿವೇಕ. ೩೨೦). 'ನಾಗ' ಪರಾ. [<ಸಂ. ನಾಗವಾನ್]

ನಾಗವಂಗಲ (ನಾ). ಒಂದು ಊರಿನ ಹೆಸರು: ಬುವಗಾವುಣ್ಡ ಭಸವ ಗಾವುಣ್ಡನು × ಸತ್ಪಡೆದಂ ಕಲ್ಲ ನಟ್ಟುನ್ನಾಗವಂಗಲಂ (ಎಕ. IV, ಚಿಗ್ಮಡ. ೦೦೪-೧೧ ; 1037). [<ನಾಗಮಂಗಲ]

ನಾಗವಂದಿ 'ನಾಗಂದಿಗೆ' ನೋ.

ನಾಗವಂದಿಗೆ 'ನಾಗಂದಿಗೆ' ನೋ.

ನಾಗವಟ್ಟಣಿಗೆ 'ನಾಗವಟ್ಟಳಿಗೆ' ನೋ.

ನಾಗವಟ್ಟಳಿಗೆ, ನಾಗವಟ್ಟಣಿಗೆ (ನಾ). ನಾಗರ ಹಾವಿನ ಅಥವಾ ಆನೆಯ ಚಿತ್ರವ ಅಂಚುಳ್ಳ ಒಂದು ಬಗೆಯ ಸೀರೆ: ಪೊಳೆವೆಳವಾಳೆ ಚುಂಬಿಸಿ ಮುಬ್ಬುಂಕಿರಲಂಜದಳಿಬ್ದ ಮೆ[ಳೆ]ಯ್ದೆ ಮೆಂಪ್ಕೊಳಿಸಿದ ನಾಗವಟ್ಟಳಿಗೆ ನಾಣ್ದುಪಗಲ್ತಿರೆ ನಾಣ್ದಿದಳ್ (ಅನಂಪ. ೭-೩೭). **ನಾಗವಟ್ಟಣಿಗೆ:** ಸೊಗಯಿಪ ತೋರ ಮಲ್ಲಿಗೆಯ ವೆರ್ಮುಡಿ ಶೋಭಿಸೆ ರಾಗದಿಂದವಂಟ್ಟಗಲದ ನಾಗವಟ್ಟಣಿಗೆಯುಂ ಸುಲಿಪಲ್ ಕರವೊಪ್ಪೆ (ಬಂಹರಿ. ೩-೩೭) ; ಎಡೆ ನಾಣ್ಮುಚ್ಚಡ ನಾಗವಟ್ಟಣಿಗೆ ಹೊಕ್ಕೀಸಾಡೆ ಮೈ ನಾನದಿಂಗಡಲಾಸ್ಯಾದಿಸೆ ಹೊಟ್ಟಿ ತೀವದಮೃತಂ ಮೈಸಾರ್ಚಲ್ (ಸೂಕ್ತಸು. ೪-೩೮೪) ; ಉಪವನ ಮಹೀಜ ರಾಜಿಗಳ ಬಹಳ ಬರ್ಹವ್ರಜಾಚ್ಛ ಗುಚ್ಛಂಗಳಿಡೆಯಿಂದವಿಳಾತಳಕ್ಕಿಳಿದು ವನಲಕ್ಷ್ಮಿಯುಟ್ಟ ನಾಗವಟ್ಟಣಿಗೆಯ ನಿಱಿಯ ತುಜುಗಲಂತೆ ತೋಱಿಯುಂ (ಮಹಾನೇ. ೦೪-೩೭ ವ). [ನಾಗ + ಪಟ್ಟಳಿಗೆ]

ನಾಗವಟ್ಟಿಗೆ (ನಾ). ಮನೆಯಲ್ಲಿ ಕಂಬಗಳಿಗೆ ಹೊಂದಿಸಿರುವ ನಾಗಂದಿಗೆ. –ಬಡಿ: ಪಟ್ಟಿಯ ಕಂಬಂಗಳಿಂ ಚಂದ್ರಕಾಂತದ ಬೋದಿಗೆಗಳಿಂ ಇಂದ್ರನೀಲದ ನಾಗವಟ್ಟಿಗೆಯಿಂ . . . ಒಪ್ಪುವ ಕೃತ್ರಿಮಚೈತ್ಯಾಲಯಂಗಳಂ ಕಣ್ತಣಿವಿನಂ ನೋಡುತ್ತುಂ (ಧರ್ಮಾಮೃ. ೩-೧೪೪) : ಆ ಲಿಂಗವೆ ಭುಜಂಗನಾಗವಟ್ಟಿಗೆಯಾದ ಬಳಿಕ ಆ ಮಹಿಮನೆ ಪ್ರಾಣನಾಥನಾದ ಬಳಿಕ ಇದಿರಿಟ್ಟು ಕೇಳಲುಂಟೆ (ಪನ್ನವ. ೪. ೪೬೯-೦೦೦೦). [<ಸಂ. ನಾಗಪಟ್ಟಕಾ ?]

ನಾಗವಟ್ಟೆ (ನಾ). ಒಂದು ಬಗೆಯ ವಸ್ತ್ರ: "ದೋರಿಯ ನಾಗವಟ್ಟೆ ಪುಲ್ಲಿ [ಪಾಕಾಂ. ನಾಗವಲ್ಲಿವಟ್ಟೆ] ಸುವರ್ಣಪಳಿ ಮದವಿ ಮಂಜಿಷ್ಠೆ ದೇವಾಂಗ ಮೆಂದು ಪಟಭೇದಮಕ್ಕುಂ" (ಪಂಗರಾ. ೧೦೦-೩೪). [ನಾಗ + ಬಟ್ಟೆ]

ನಾಗವತ್ತಿಗೆ (ನಾ). [ವೀಶೈ] ವೀರಶೈವರಂ ಇಷ್ಟಲಿಂಗವನ್ನು ಧರಿಸುವ ಬೆಳ್ಳಿ ವಸ್ತ್ರ ಮೊದಲಾದಂವುಗಳಿಂದ ಮಾಡಿದ ಕರಡಿಗೆ; ಚೌಕ: ಲಿಂಗದಕಾಯಿ: ಕಾಯವೇ ಟೀಕ ಮನವೇ ಲಿಂಗವಾದರೆ ಕೊರಳಲ್ಲಿ ನಾಗವತ್ತಿಗೆಯೇಕೋ ಶರಣಂಗೆ (ಅವಚಂ. ೫೪-೩೩೨) ; ಸತಿಯ ಕೈಯಲ್ಲಿ ಕೊಟ್ಟುದು ಪ್ರಾಣಲಿಂಗವಲ್ಲ ಸುತನ ಕೈಯಲ್ಲಿ ಕೊಟ್ಟುದು ಪ್ರಾಣಲಿಂಗವಲ್ಲ ಅಲಸಿ ನಾಗವತ್ತಿಗೆಯಲಿರಿಸಿದುದು ಪ್ರಾಣಲಿಂಗವಲ್ಲ ತನು ಸೋಂಕಿ ವಜ್ರಲೇಪ ದಂತಿರಬೇಕು (ಪನ್ನವ. ೪. ೪೦೩-೪೫೪) : ತನುವೆ ನಾಗವತ್ತಿಗೆಯಾದೊಡೆ ಅರ್ಪಿತವ ಮಾಡಬೇಕು (ಪರಗೋ. ೯-೧೪೭). [?]

ನಾಗವರಾಲಿ, ನಾಗವರಾಳಿ (ನಾ). [ಸಂಗೀತ] ಒಂದು ಮೇಳರಾಗದ ಹೆಸರು: ನಾಗವರಾಲಿ(ಕಾ)ರಾಗವು (೧) ಆರೋಹ ಮತ್ತು ಅವರೋಹ ಗಳಲ್ಲಿ ಪ–ವನ್ನು ವಕ್ರವಾಗಿ ಉಳ್ಳದುದು; ಸರ್ವಕಾಲದಲ್ಲಿಯೂ (ಹಾಡುವಂತಹುದು) (ಪಕುಪ್ರ. ೧೬೬). **ನಾಗವರಾಳಿ:** ಶೋಕವರಾಳ ... ನಾಗವರಾಳಿಯೆಂಬ ವರಾಳೀಸಪ್ತಕವೇ ಶುದ್ಧವರಾಳಿಗೆ ವಿಶ್ರಂಗಳು (ವಿವೇಕ. ೩೩೨) ; ನಗವರಾಳಿಯನೊರ್ವನಾಲಾಪಿಸಲಾಗಳೆ ನೆರೆದು ಸರ್ಪಗಳು ರಾಗಿಸಿ ಪೆಡೆಯೆತ್ತಿ ಕೇಳುತಿರ್ದುವು (ಪಕಪ. ೬೪-೦೦). [ಸಂ. ನಾಗವರಾಲೀ]

ನಾಗವರಾಳಿ 'ನಾಗವರಾಲಿ' ನೋ.

ನಾಗವರ್ಮ (ನಾ). ೧. ಒಬ್ಬಾತನ ಹೆಸರು: [ಪೊ] ಮಬ್ಬುಬ್ಬದ ಮೇಲಟ್ಟು ಕೋಟೆಯ ಕೊಳ್ವನ್ದು ಬೆಸದೊಳ್ಕೆಟ್ಟ [ನಾ]ಗವ[ರ್ಮ್ಮ ನಿ] ಡಿಯಂಸೂರ ನಾಳುತ್ತಿರೆಯು (ಸೌಇ. XX. ೦೫-೭ ; 904) ; ನಾಗವರ್ಮ್ಮನ ಕಟ್ಟಿಸಿದ್ದ ದೇವಿಗೆಱಿಗಂ ಪಿರಿಯ ಕೆಱಿಗಂ ಬಿತ್ತುವಟ್ಟಪಂ ಕೊಟ್ಟದು (ಎಕ. III (R), ನಂಜನ. ೨೮೨-೭ ; 968) : ಶ್ರೀನಾಗವರ್ಮ್ಮ (ಎಕ. II, ೪೫೬; 1000). ೨. ಹತ್ತನೆಯ ಶತಮಾನದ ಕನ್ನಡನಾಡಿನ ಒಬ್ಬ ಉದ್ದಾಮ ಕವಿ; ಛಂದೋಂಬುಧಿ ಮತ್ತು ಕರ್ನಾಟಕ ಕಾದಂಬರಿ ಎಂಬ ಪ್ರೌಢಗ್ರಂಥಗಳ ಕರ್ತೃ: ಆ ಪೋಟಕಬ್ಬೆಗಂ ವಿದ್ಯಾವರಿಣತನೆನಿಪ ವೆಣ್ಣಮೆಯ್ಯಂಗಂ ವಾಕ್‌ಶ್ರೀವತಿ ಸತ್ಯವಿಮುಖ್ಯಗುಣೋಪೇತಂ ನಾಗವರ್ಮನಗ್ರತನೂಜಂ (ಛಂದೋಂಬು. ೦-೭೭) ; ಕಾದಂಬರಿ ಸೇವ್ಯಮಾದುದನಿತುಂ

ತಾನೆಯ್ದೆ ಭೂಭಾಗದೊಳ್ ವಿದಿತ ಶ್ರೀಕವಿ ನಾಗವರ್ಮನ ವಚಃಸಂದೋಹದಿಂ ದೋಷಮೊಂದದಲಂಕಾರದ ವಸ್ತುಬಂಧಮಿದು ತಾನೇಂ ಮಾಡದೇಂ ಗೆಯ್ಯದೋ (ಕಾದಂಉ. ೮೨೫). ೩. ಕಾವ್ಯಾವಲೋಕನ, ಕರ್ಣಾಟಕ ಭಾಷಾಭೂಷಣ, ವಸ್ತುಕೋಶ ಮೊದಲಾದ ಗ್ರಂಥಗಳನ್ನು ರಚಿಸಿದ ಹನ್ನೊಂದನೆಯ ಶತಮಾನದ ಒಬ್ಬ ಪ್ರಸಿದ್ಧನಾದ ಕನ್ನಡ ಕವಿ : ತತ್ಸಭೆಯೊಳಗ್ರಪೂಜೆವಡೆದೊಂದು ಮಹಾಮಹಿಮಾನುಭಾವದಿಂದ ಭಿನವಶರ್ವವರ್ಮನಿವನೆಂದವುದುರ್ವರೆ ನಾಗವರ್ಮನಂ (ಕಾವ್ಯಾವ. ೪೨೩) ; ಕರಮೆ ಜಡಮತಿಯುಮಱಿವಂತಿರೆ ಕನ್ನಡದಿಂ ಜಲಕ್ಕನಾಗಿರ್ಪಿನೆಗಂ ವಿರಚಿಸಿದಂ ಕವಿಕಂಠಾಭರಣನಿದಂ ನಾಗವರ್ಮನೆನೆ ಮೆಚ್ಚದರಾರ್ (ವಸ್ತುಕೋ. ೧-೪) ; ಎನಗನುಕೂಲಮಕ್ಕೆ ಗುಣವರ್ಮನ ಜಾಣ್ಣುಡಿ ಪಂಪನಿಂಪು ಪೊನ್ನನ ಬಗೆ ನಾಗವರ್ಮನ ಬಹುಜ್ಞತೆ . . . ಈ ಕವಿಗಳಲ್ತೆ ಜಿನೇಂದ್ರಪುರಾಣಕರ್ತೃಗಳ್ (ಅನಂಪು. ೧-೩೫). P ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಇನ್ನೂ ಕೆಲವು ನಾಗವರ್ಮರ ಉಲ್ಲೇಖಗಳಿವೆ.

[ನಾಗ + ವರ್ಮ]

ನಾಗವಲಿ, ನಾಗಬಲಿ, ನಾಗವಾಲಿ. ನಾಗೋಲಿ, ನಾಗೋಲೆ (ನಾ). ಮದುವೆಯಲ್ಲಿ ಮಾಡುವ ಕೊನೆಯ ಒಂದು ಸಾಂಪ್ರದಾಯಿಕ ವಿಧಿ ; ವಿವಾಹದ ಮುಕ್ತಾಯದ ಶಾಸ್ತ್ರ : ಅಂತು ಬೀಯಮಂ ಮೆಱೆದು ನಾಲ್ಕನೆಯ ದೆವಸದೊಳ್ ನಾಗವಲಿಯಂ ಮಾಡಿ ನಿರ್ವರ್ತಿತವಿವಾಹೋತ್ಸವಂ ಜ್ವಳನಜಟಿಮಹಾರಾಜನತ್ಯಂತಪ್ರಮೋದಾಧೀನಮಾನಸನಾಗಿ (ಪರ್ಧಮಾ. ೩-೯೭ ವ) ; ಆದುವು ನಾಗವಲಿಯು ಕಂಬವಲಿಯು ಮತ್ತಾದುವಂತೊಸಗೆಯೌತಣವು (ನಾಗಕು. ೩-೮೦) ; ನಾಗವಲಿಯಾದ ಮಱುದಿವಸ ನಗರಾಜನನುರಾಗದಿಂ ಬಂದ ನಿಬ್ಬಣಕೆ ವೃಷ್ಟಾನ್ನದಾರೋಗಣೆಯನೈದೆ ಮಾಡಿಸಿ ದಿವ್ಯಗಂಧ ತಾಂಬೂಲದಿಂ ತುಷ್ಟಿವಡಿಸಿ (ಜಿಬಪು. ೩೭-೬೨) ; ಕಂಸನು ತಂಗಿಯಲ್ಲಿ ವಿಶ್ವಾಸವಂ ತೋರಿಸಲೋಸುಗ ನಾಗವಲಿಯ ದಿವಸ ಮದವಣಿಗರಾದ ವಧೂವರರಂ ದಿವ್ಯರಥದಲ್ಲಿ ಕುಳ್ಳಿರಿಸಿಕೊಂಡು (ಕೃಷ್ಣರಾ. ೧-೭೯). **ನಾಗಬಲಿ :** ವರವಿಭವದಿ ಚತುರ್ಥದಿನದಲಿ ಪರುಟವಿಸಿದರು ನಾಗಬಲಿಯನು ಕರಿಯನೇಱಿಸಿ ನೃಪಸುತನ ಮೆಱಸಿದರು ರಾತ್ರಿಯಲಿ (ಸನತ್ಕು. ೯-೭೯). **ನಾಗವಾಲಿ :** ವರ ನಾಗವಾಲಿಯುಂ . . . ಸುರರ ತಲೆ ತೂಗಿಸಿತು (ಪರಶು. ೮-೨೯). **ನಾಗೋಲಿ :** ನಾಗೋಲಿ ದಿನದೊಳೆ ಮದುವೆಯ ಸೊಗವನು ಬಣ್ಣಿಪುದೇತಕೆ ತಾಳು (ಇಂಡಾಪ. ೧೦೮-೨೭) ; ಏನಿಲ್ಲಾ ಎಂದರೂ ಧಾರೆಯ ದಿನ ತಾಂಬೂಲಕ್ಕೆ ನಾಗೋಲಿಯ ದಿನ ಊಟಕ್ಕೆ ಕರೆಯಬೇಕಾಗುತ್ತೆ (ಬಾಡಿಬ. ೭೯) ; ನೀನು ನಾಗೋಲಿ ದಿವಸ ಹೇಳಿದ ಆ ಹಾಡು ಹೇಳು (ಉಮಾಶ. ೫೫). **ನಾಗೋಲೆ :** ಇನ್ನೇನು ಹೇಳು ? ಸುಪುತ್ರ, ವಿದ್ಯೆ . . . ಲಗ್ನಪತ್ರಿಕೆ ಮದುವೆ ನಾಗೋಲೆ (ಅವತಂ. ೨). 'ಕಂಭವಲಿ' ಪರಾ.

ನಾಗೋಲಿಜಡ = ನಾಗೋಲಿಯಂ ಜಡ್ಡು : ನಾಗೋಲಿಜಡ ಬಹಳವಾಗಿದೆ (ರೂಢಿ). **ನಾಗೋಲಿಯ ಜಡ್ಡು** = ಮದುವೆ ಕಳೆಯುತ್ತಿರುವಂತೆ ಉಂಟಾಗುವ ಆಲಸ್ಯ,– ಸೋಮಾರಿತನ: ನಾಗೋಲಿಯ ಜಡ್ಡು, ಮನೆಯಲ್ಲಿ ಎಲ್ಲರಿಗೂ ಆಯಾಸ (ರೂಢಿ). [< ನಾಕಬಲಿ]

ನಾಗವಲ್ಲಿ (ನಾ). ವೀಳೆಯದೆಲೆ ಮತ್ತು ಅದರ ಬಳ್ಳಿ,–ಹಂಬು : ಕರ್ಪೂರಪರೀತಮುಖವಾಸಂಗಳುಮಂ ಕರ್ಪೂರನಾಗವಲ್ಲೀಧವಳಲಲಿತಂಗಳುಮಂ . . . ನೀಡೆ (ಸುಕುಮಾ. ೦೦-೩೩ ವ); ನರನಾರೀಯೋಗದೀಕ್ಷಾಭವನಮಿದೆನಿಕುಂ ನಾಗವಲ್ಲೀಪಿನದ್ಧೋದ್ಧುರಪೂಗಂ (ಪುಷ್ಪಪು. ೨-೩೬) ; ನೇರ್ಪಿಂಗಡರ್ಪಾದ ನಾಗವಲ್ಲೀಪತ್ರಂಗಳಿಂದಂ ಕರ್ಪೂರಚೂರ್ಣಪರಿಮಿಶ್ರೀಕರಣದಿಂ ಸೆಜ್ಜಾನಿಶಾಂತಭ್ಯಂತರಮಂ ಸುಗಂಧೀಕರಿಸುತ್ತುಮಿರ್ದತಿ ಬಹಳ ಧವಳತೆಯನಾಂತು (ಬಾಧಪು. ೬-೧೧೮ ವ) ; ನಾಗವಲ್ಲಿಯ ಹಿಂದು ಮುಂದನು ನೀಗಿ ಕಳೆಯದೆ . . . ಸವಿದು ಭೋಗಿಸುವೊಡಮರೇಂದ್ರನಾಗಲಿ ನಾಗಭೂಷಣನಾದೊಡವನನು ನೀಗಿ ಕಳೆವಳು ಭಾಗ್ಯವಧು (ಕುಮ್ಯಾಉ. ೩-೫೯) ; ಮಂಜುಳಮುಂ ನಾಗವಲ್ಲಿನವಮಾಲಿಕೆಯುಂ ರಂಜಿಪ ಕುಂದ ಕದಂಬಂ ಮಂಜುಳದುದ್ಯಾನವನದೊಳರ್ಪುವು ಪೆಂಪಿಂ (ಹಮ್ಮೀರ. ೪-೧೫) ; ನಾಗವಲ್ಲೀ ಎಲೆಯಾದರೂ ಪೂಗೀಫಲವಿಲ್ಲದೆ ಸಲ್ಲದು (ಗಾದೆ).

[ಸಂ. ನಾಗವಲ್ಲೀ]

ನಾಗವಳ್ಳಿ (ನಾ). = ನಾಗವಲ್ಲಿ : ಅಂಬಟೆ ಅರೆನೆಲ್ಲಿ ಜಂಬನೇಱಿಲಮರ ಕುಂಭಿನಿಗಧಿಕ ಶ್ರಿಗಂಧ ಬೆಂಬಿಡದಡಕುವ ನಾಗವಳ್ಳಿಗಳಿಂದ ಗಂಭೀರವನವೆಸದಿಹುದು (ಅಮುಸಾಂ. ೩-೩೫) ; ಪೂಗತರು ವಿಟನಷ್ಟಿದೆಳೆಸತಿ ನಾಗವಳ್ಳಿಗಳಿಂದ ಶೃಂಗರವಾಗಿ ಇಹ ನಂದನವನಾವೃತಗೊಂಡು ಮಧ್ಯದಲಿ (ಬಿಜ್ಜಪು. ೨೦-೧೯); ನೆಮ್ಮಿ ಗಗನವ ತುಡುಕಿ ಪುನ್ನಾಗ ನಾಗವಳ್ಳಿಯವೊಲು ಕಂಗೆಸೆದುವು (ನವಮೋ. ೪-೩೦). [ನಾಗ + ಬಳ್ಳಿ]

ನಾಗವಾಡಿ (ನಾ). ಒಂದು ಊರಿನ ಹೆಸರು : ನಾಗವಾಡಿಯ ದೇವರಾಸಿ ಜೀಯಂ ಬರೆದ (ಎಕ. VII, ಶಿಕಾರಿ. ೨೬-೮ ; 1050).

[ನಾಗ + ಪಾಡಿ$_2$]

ನಾಗವಾಯು (ನಾ). = ನಾಗ ೭ : ನಾಗವಾಯು ಶ್ರೋತ್ರನಾಳ ಕೂರ್ಮವಾಯು ಕಂಠನಾಳ (ಪನ್ನವ. ಕ. ೪೧೦-೮೭೦) ; ಮತ್ತಮಾವುಪವಾಯುಗಳೊಳು ನಾಗವಾಯುವಿನಿಂ ಸೀನು ಕೆಮ್ಮು (ವಿವೇಕ. ೩೪).

[ನಾಗ + ವಾಯು]

ನಾಗವಾರ (ನಾ). ಒಂದು ಊರಿನ ಹೆಸರು. 'ನಾಗವಾರಯ್ಯ' ಪರಾ.

[< ನಾಗಪುರ]

ನಾಗವಾರಯ್ಯ (ನಾ). ಒಬ್ಬಾತನ ಹೆಸರು : ಸ್ವಸ್ತಿಶ್ರೀ ಕೊಟುವಣಿಯರ ನಾಗವಾರಯ್ಯಂ ಬೆಳ್ಳರ್ತ್ತದ ಗಾವುಣ್ಡಂ ತುಱುಪರಿಯಲೆ ಸತ್ತಂ (ಎಕ. XII, ತಿಪಟೂ. ೦೧-೧ ; ಸು. 930). [ನಾಗವಾರ + ಅಯ್ಯ$_1$]

ನಾಗವಾಲಿ 'ನಾಗವಲಿ' ನೋ.

ನಾಗವಾವಿ (ನಾ). ಒಂದು ಊರಿನ ಹೆಸರು ; P ಈಗಿನ ಗುಲ್ಬರ್ಗ ಜಿಲ್ಲೆಯ ನಾಗಾಯಿ : ಶ್ರೀಮದಗ್ರಹಾರಂ ನಾಗವಾವಿಯ ಅಶೇಷ ಮಹಾಜಾನಂ (ಕಇಆ. ೦-೧-೬ ; 1092). [?]

ನಾಗವಾಸ$_1$ (ನಾ). ನಾಗರಂಗಳ ವಾಸಸ್ಥಳ ; ಪಾತಾಳ ; ಸರ್ಪಲೋಕ; ನಾಗಲೋಕ. [ನಾಗ + ವಾಸ್ಯ]

ನಾಗವಾಸ್ಯ (ನಾ). ೧. "ಕೊಕ್ಕೆ. ಚಿಲಕ. ಮೊ.ನ್ನು ತಗುಲಿಸಲು ಅನುಕೂಲಿಸುವಂತೆ ಕಂಬ ಮೊ.ಕ್ಕೆ ಹೊಡೆಯುವುದಕ್ಕಾಗಿ ತುದಿಗಳನ್ನು ಮೊನಚುಮಾಡಿದ U ಅಥವಾ ⊔ ಆಕಾರದ ಸಲಾಕಿ ಅಥವಾ ಕಂಬಿ; ನಾಗವಾಸ; ಕೊಂಡಿ" (Staple. ಇಂಕನಿ). ೨. ಬಾಗಿಲ ಮೇಲುಗಡೆ ಹಾಕಿರುವ ಹಲಗೆಯ ಮೇಲಿನ ಖಾಲಿ ಜಾಗ ; ಉತ್ತರಾಸ : ಪಲಪು ಹಾಕಿದ ಹೊಸ ಹಗ್ಗ ನಾಗವಾಸದ ಮೇಲಿಟ್ಟಿದ್ದೀನಿ (ನನ್ನೂರು. ೨೪೬). [?]

ನಾಗವಾಸ್ಯ (ನಾ). ದೇವದಾಸಿಯರು ವಾಸಿಸುವ ಮಹಲು, –ಸ್ಥಳ : ಹೊಳೆಯ ತಳೆಯ ನಾರಸಿಂಗೇಶ್ವರದೇವರ ಅಂಘರಿಕರ ಆಳು ೩ಕ್ಕಂ ಗ ೧೨ ಆ ನಾಯಕಂಗೆ ಗ ೬ ರಂಗಭೋಗದ ನಾಗವಾಸದ ಮೊಖರಿಗೆ ಗ ೩೦ ಗೂಡಿ ಗ ೩೦೦ ದವಸಿಗರು ಆಳು ೧೨ ಕ್ಕಂ ಗ ೪೮ (ಎಕ. III, ತಿರುಮ. ೧೦೧-೮೬; 1270) ; ಅರಸನಱಿಕೆಯ ಮಾಡಿ ಮಿಗೆ ಬಳಿಕಿರಿಸಿಕೊಂಡಳು ನಾಗವಾಸದ ನೆರವಿ ಬಿಂದದ ಬೋವಗಾಱಿಕೆತನದಲಲ್ಲಮನ (ಪ್ರಭುಲೀ. ೫-೧೭) ; "ನರ್ತಕಿಯರ ಸ್ಥಾನ" (ಪ್ರಭುಲೀ. ಕೋಶ) ; ಸಾದರದ ನಾಗವಾಸದ ಮೇಳದೊಡತಿಯಹ ಮಾದೇವಿ ನಂಬಿಯಣ್ಣನ ರಗಳೆಯಂ ಕೇಳ್ದು (ರಾಘಚ. ೦೪-೯೫) ; ಅಲ್ಲಿರ್ಪ ನಾಗವಾಸಕ್ಕೆಯಧಿಪತಿಯಪ್ಪ ಸಲ್ಲಲಿತ ನಾಯಕನ ಸತಿಯ (ಆಪ್ರಭು. ೫). [?]

ನಾಗವಾಸಾದಿಘೃತ (ನಾ). [ವೈದ್ಯಶಾ] ವೀಳೆಯದೆಲೆಯ ಸುವಾಸನೆಯಿಂದ ಪಾಕಗೊಳಿಸಿದ ಒಂದು ಬಗೆಯ ಔಷಧಿ : ನಾಗವಾಸಾದಿಘೃತ–ವೀಳೇದೆಲೆ ರಸ, ಆಡುಸೋಗೆ ಎಲೆರಸ . . . ಹದದಲ್ಲಿಕ್ಕಿ ಸೇವಿಸಲು ಕಾಸ, ಶ್ವಾಸ, ಗುಲ್ಮ . . . ಇವೆಲ್ಲಾ ಮಾಣುವುವು (ಶಳವೈ. ಪರಿ೪೪).

[ಸಂ.]

ನಾಗವಾಸಿ (ನಾ). ನರ್ತಕಿ ; ದೇವದಾಸಿ : ಗುರುಪಯೋಧರೆಯ ಸತ್ಕವಿವಿನುತೆಯುಸಿತ ಧಮ್ಮಿಲ್ಲೆಯಳಿ ನಾಗವಾಸೀ (ನಲವೋ. ೪-೪).

[ನಾಗವಾಸ್ತ್ರ + – ಇ]

ನಾಗವಾಸಿಗ (ನಾ). ದೇವದಾಸಿಯರು ವಾಸಿಸುವ ಸ್ಥಳದ ಮೇಲ್ವಿಚಾರಕ : ನಾಗವಾಸಿಗರ ಪರಿಯಂಗರ ಪಲೊಡನೊಲಿದು ಬೇಗದಿಂ ಮಸುದಂಡಧಾರಿಯಂ ಕರೆದಟ್ಟಿ (ನವಮೋ. ೪೪-೪೩). [ನಾಗವಾಸ್ತ್ರ + – ಇಗ]

ನಾಗವಾಹನ (ನಾ). (ಐರಾವತವೆಂಬ) ಆನೆಯನ್ನು ವಾಹನವನ್ನಾಗಿ ಮಾಡಿಕೊಂಡಿರುವವನು ; ಇಂದ್ರ : ನಾಗವಾಹನಮುಖ್ಯನಿರ್ಜರಾವಳಿ ರಕ್ಷ . . . ರಕ್ಷಿಪುದೆನ್ನ ಸಂಗಮೇಶ್ವರಪ್ರಸನ್ನ (ಪ್ರಾಥಶಾ. ೩೧-೦).

[ನಾಗ + ವಾಹನ]

ನಾಗವಿಭೂಷಣ (ನಾ). ನಾಗಲೋಕದವರು ಧರಿಸುವ ಆಭರಣ (?) : ನಾಗವಿಭೂಷಣಪ್ರತತಿ ನಾಗ ಖಂಡಮಪೂರ್ವಮಪ್ಪ ಪುನ್ನಾಗದ ಬಾಸಿಗಂ (ಪಂಪಭಾ. ೪-೦೬). [ನಾಗ + ವಿಭೂಷಣ]

ನಾಗವಿಮಾನ (ನಾ). ನಾಗಕನ್ನಿಕೆಯರು ವಾಸಿಸುವ ಉಪ್ಪರಿಗೆ : ನಾಗಕನ್ನೆ ನಾಗಲೋಕದ ವಿಳಾಸಂಗಳಂ ಕೊಂಡುತ್ತುಂ ತನ್ನ ಕ[ಬಣ]ನಾಗವಿಮಾನಕ್ಕೆ ವಂದು (ಪಂಪಭಾ. ೪-೦೬ ವ); "ನಾಗವಿಮಾನಕ್ಕೆ=ಅಂತಃಪುರಸ್ತ್ರೀಯರಿರುವ ಉಪ್ಪರಿಗೆಗೆ" (ಪಂಪದೀ. ೦೩೭). [ನಾಗ+ವಿಮಾನ]

ನಾಗವೀಣ (ನಾ).=ನಾಗವೀಣೆ : ನಾಗವೀಣ (ಗೋಟುವಾದ್ಯ) : ನೃತ್ಯ ಯುವತಿಯು ನೃತ್ಯಮಾಡುತ್ತ ಪಿಡಿದಿರುವ ವಾದ್ಯ; ಸುಮಾರು ಮೂರು ಅಡಿ ಉದ್ದವಿದ್ದು ಅದರ ಕೆಳಭಾಗದಲ್ಲಿ ಮೆಟ್ಟುಗಳಿವೆ (ಹೊಯ್ಸಾವಾ. ೩೨).

[ಸಂ. ನಾಗವೀಣಾ]

ನಾಗವೀಣೆ (ನಾ). (ಹಾವಿನ ಆಕಾರದ) ಒಂದಂ ಬಗೆಯ ವೀಣೆ : ನಾಗವೀಣೆಯು ನಾಗರ್ಕಳಿಂದಂ ಕಚ್ಚಪವೀಣೆಯು ಕೋವಿದರಿಂ . . . ಒಪ್ಪಿದತ್ತಾ ಮಹಾಲಿಂಗದಾಸ್ಥಾನಂ (ಹಮ್ಮಿಶಿ. ೪-೪೦ ವ).

[ನಾಗ + ವೀಣೆ]

ನಾಗವೇಣಿ (ನಾ). ೧. ಸರ್ಪದಂತೆ ನೀಳವಾಗಿರುವ ಜಡೆ : ಸುಗಂಧತೈಲದಿಂದ ವಿಲೀನವಾದ ನಾಗವೇಣಿಬಂಧನವೇನು ! (ಜಯಂತ. ೩೪೩). ೨. ಸರ್ಪದಂತೆ ನೀಳವಾದ ಜಡೆಯುಳ್ಳವಳು : ನಾಗವೇಣಿ ನಗರಿಗೆ ನಾಂ ಪೋಗಿ ಬರುವೆನೆ (ಶಾಳುಂತ. ೪೪ ಅಡಿ೪). [ನಾಗ + ವೇಣಿ]

ನಾಗವೇದಿಗೆ (ನಾ). (?) : ಎನ್ನ ಪಾದವೇ ಪಾದಪೀಠಿಕೆಯಾಗಿ ಎನ್ನ ಕಾಲೇ ಕಡಹದ ಕಂಬಗಳಾಗಿ ಎನ್ನ ತೊಳೇ ನಾಗವೇದಿಗೆ [ಪಾಕಾಂ. ನಾಗವೇದಿ] ಯಾಗಿ (ಸರ್ವವ. ೧೪೦-೬೩೦). [?]

ನಾಗವೈರಿ (ನಾ). ಸರ್ಪಗಳ ಶತ್ರು ; ಗರುಡ. 'ನಾಗವೈರಿವಾಹನ' ಪರಾ. [ನಾಗ + ವೈರಿ]

ನಾಗವೈರಿವಾಹನ (ನಾ). ಗರುಡನನ್ನು ವಾಹನವನ್ನಾಗಿ ಮಾಡಿಕೊಂಡಿರುವವನು ; ನಾರಾಯಣ : ನಾಗವೈರಿವಾಹನ ವಿಜಯವಿಠಲ (ವಿಠಾಳ. ೪೪-೫). [ನಾಗವೈರಿ + ವಾಹನ]

ನಾಗವ್ರಜ (ನಾ). ೧. ಆನೆಗಳ ಗುಂಪು. ೨. ಹಾವುಗಳ ಗುಂಪು. ೩. ಕಪಿಗಳ ಗುಂಪು. ೧, ೨, ೩ : ಅರಿಕಾಮಧ್ವಂಸಿ ನಾಗವ್ರಜಮಯ ಕಟಕಂ . . . ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿನೇತ್ರಂ (ಜಗವಿ. ೧-೩). [ನಾಗ + ವ್ರಜ]

ನಾಗಶಯನ (ನಾ). ಸರ್ಪವನ್ನು ಹಾಸಿಗೆಯನ್ನಾಗಿ ಮಾಡಿಕೊಂಡಿರುವವನು ; ಆದಿಶೇಷನೇ ಹಾಸಿಗೆಯಾಗಿರುವವನು ; ನಾರಾಯಣ : ಅಂತು ನಾಗಪುರಮನಿಟ್ಟಿಸುವ ನಾಗಪುರಮನಾ ನಾಗಶಯನನಂ ಪೊಕ್ಕು (ಪುಪಥಾ. ೯-೩೬ ವ) ; ನಾಗಶಯನನ ತಂತ್ರದಲಿ ನೀ ನೀಗಿದೆಯಲಾ ತನುವ ಶಿವಶಿವ (ತಿಮ್ಮಸ್ತೋ. ೦-೭) ; ನಾಗಶಯನಮೂರುತಿಯ ಕಂಡೆ ಭೋಗಿಭೂಷಣಸುತನ ಕಂಡೆ (ಕನಕ. ೪೮-೫) ; ನಾರಾಯಣ ನಾಗಶಯನ ನಂದಾತ್ಮಜ ಮಾರಜನಕ ಮಂಜುಳಾಂಗ . . . ಸಲಹೆನ್ನನೊಲಿದು (ಶತಶಾಂ. ೬೧-೩). [ನಾಗ + ಶಯನ]

ನಾಗಶಯ್ಯೆ (ನಾ). ಹಾವಿನ ಹಾಸಿಗೆ : ನಾಗಶಯ್ಯೆಯೊಳ್ ನಾಗಿಣಿ ನಾಗ ಬಂಧದೊಳೆ ತಳ್ತು ಗುಣಾರ್ಣವನಂ ಮರುಳ್ಚಿದಳ್ (ಪಂಪಭಾ. ೪-೦೭) ; ಆವನಾನುವೊರ್ವ ಮಹಾಭಾಗನೀ ನಾಗಶಯ್ಯೆಯನೇಱುವನೀ ಶಾರ್ಙ್ಗಧನುವನೇಱಿಸುವನೀ ಪಾಂಚಜನ್ಯಮಂ ಪೂರೈಸುವನಾತನರ್ಧಚಕ್ರವರ್ತಿಯಾಗಿ ವೃಥ್ವೀರಾಜ್ಯಂಗೆಯ್ಗುಂ (ಅರ್ಧನೇ. ೪-೩೦ ವ). [ನಾಗ + ಶಯ್ಯೆ]

ನಾಗಶಾಯಿ (ನಾ). = ನಾಗಶಯನ. [ಸಂ. ನಾಗಶಾಯಿನ್]

ನಾಗಶ್ರುತಿಪುರನಯನ (ನಾ). ಎಂಟು, ನಾಲ್ಕು ಮತ್ತು ಮೂರು ಹೀಗೆ ಒಟ್ಟು ಹದಿನೈದು ಕಣ್ಣುಗಳುಳ್ಳವನು ; ಒಂದೊಂದು ಮುಖಕ್ಕೆ ಮೂರು ಕಣ್ಣುಗಳಂತೆ ಐದು ಮುಖಗಳುಳ್ಳ ಶಿವ ; ಪಂಚವಕ್ತ್ರ : ನಾಗಶ್ರ[ಶ್ರು]ತಿಪುರನಯನ . . . ಪೋರೆವುದೀ ಕ್ಷಣವೆನ್ನ ಸಂಗಮೇಶ್ವರ ಪ್ರಸನ್ನ (ಪ್ರಾಥಶಾ. ೦೩-೦). [ನಾಗ + ಶ್ರುತಿ + ಪುರ + ನಯನ]

ನಾಗಸಂಪಗೆ, ನಾಗಸಂಪಿಗೆ (ನಾ). ಸುವಾಸನೆಯ ಹೂವುಗಳನ್ನು ಬಿಡುವ ಒಂದು ಬಗೆಯ ಮರ ಮತ್ತು ಅದರ ಹೂವು : "ಚಾಂಪೇಯಃ, ಕೇಸರಃ, ನಾಗಕೇಸರಃ, ಕಾಂಚನಾಹ್ವಯಃ—ಈ ೪ ನಾಗಸಂಪಗೆ" (ನಾಚಿಶಾ. ೦೦೮) ; "ಕಾಂಚನಂ ನಾಗಸಂಪಗೆ" (ಪುಂಗರಾ. ೩೮-೨೩) ; ಮೂಗು ಸುರಭಿಕರ ಪರಿಮಳದಿಂದಮೆ ನಾಗಸಂಪಗೆಯ ಬಿರಿಮುಗುಳಂದಮೆ (ಸುಳುಮಾ. ೫-೩೦) ; ನೆಲೆದೊಪ್ಪುವಶೋಕೆ ನಾಗಸಂಪಗೆ ಹರಿಚಂದನಂ ಬಗೆಗೆ ವಂದುವು (ಧರ್ಮಾಮ್ಯ. ೨-೦೪೩) : ನಾಗಸಂಪಗೆಯನ್ನು ನಾಗಕೇಸರವೆಂದೂ ಕರೆದಿರುವುದುಂಟು (ಹಸುಹೂ. ೦೪೧). **ನಾಗಸಂಪಿಗೆ :** ತೂಗುಮಂಚದಿ ಹಂಸತೂಲದ ಹಾಸಿಗೆ ನಾಗಸಂಪಿಗೆ ಹೂವಿನ ಒಡಗು (ಪುರಂದ. ೩-೦೩೦-೨) ; ನಾಗಸಂಪಿಗೆ ಕೋಲಸಂಪಿಗೆ . . . ಇವುಗಳೆಲ್ಲ ಬೀಜಗಳಾಗಿವೆ (ಕೃಪಪ್ರ. ೩೦೦) ; ನಾಗಸಂಪಿಗೆ (ನಾಗಚಾಪಾ) . . . ಸುಂದರವಾದ ವೃಕ್ಷ ; ಹೂ ಬಹು ಸುಗಂಧ (ಕಥಾಗ. ೪೨) : ನಾಗಕೇಸರಿ. ನಾಗಸಂಪಿಗೆ (ಪ್ರಾಪಿಗಿ. ೩೩-೦೦೭). [<ಸಂ. ನಾಗಚಂಪಕ]

ನಾಗಸಂಪಿಗೆ 'ನಾಗಸಂಪಗೆ' ನೋ.

ನಾಗಸಂಪ್ರದಾಯ (ನಾ). [ಚಿತ್ರಶಾ] ಭಾರತೀಯ ಚಿತ್ರಕಲೆಯ ಒಂದು ಪರಂಪರೆ ; ದೇವಸಂಪ್ರದಾಯ, ಯಕ್ಷಸಂಪ್ರದಾಯ, ನಾಗಸಂಪ್ರದಾಯವೆಂಬ ಮೂರು ಸಂಪ್ರದಾಯಗಳಲ್ಲಿ ಒಂದು : ನಾಗಸಂಪ್ರದಾಯವು ... ನಾಗಾರ್ಜುನನ ಕಾಲದಲ್ಲೂ ರೂಢಿಯಲ್ಲಿತ್ತೆಂದೂ ಆತ ಹೇಳಿದ್ದಾನೆ (ಭಾರದ. ೩೨೩). [ನಾಗ + ಸಂಪ್ರದಾಯ]

ನಾಗಸತ್ವ (ನಾ). [ಕಾಮಶಾ] ಸ್ತ್ರೀಯರಲ್ಲಿರುವ ಹನ್ನೆರಡು ಬಗೆಯ ಮನೋಧರ್ಮಗಳಲ್ಲಿ ಒಂದು : ಮೃದು ಶೈತ್ಯಮಪ್ಪ ದೇಹದ ನಿದ್ದೆಗೆಯ್ದುರವಿನಧಿಕವೆಂದೆನಿಪ ವಸ್ತುಗಳನೊಲ್ಮೆ ಪುದುಗುವ ತೊಳ್ತು ಗೀತ ದೊಳಚ್ಚಿಯಿಡುವ ಸುಯ್ಯೊದವಿದವಳೇ ನಾಗಸ [ಪಾಕಾಂ. ತ]ತ್ವದವಳು (ಜನವ. ೫-೩೦) : ದೇವಸತ್ವ ಯಕ್ಷಸತ್ವ ಗಂಧರ್ವಸತ್ವ ನರಸತ್ವ ನಾಗಸತ್ವ ಕಾಕಸತ್ವ ವಾನರಸತ್ವ ಮುನಿಸತ್ವ ಪಿಶಾಚಸತ್ವ ರಾಕ್ಷಸಸತ್ವ ಕಿನ್ನರಸ ಖರಸತ್ವವೆಂಬ ದ್ವಾದಶಸತ್ವದ ಸತಿಯರಿಂ (ವಿಪೀಳ. ೩೧೫). 'ದ್ವಾದಶ ಸತ್ವ' ಪರಾ.

ನಾಗಸತ್ವದ ಸ್ತ್ರೀ = "ಹಿಂದಾಗಿ ಉಂಬುವಳು ಆಕಳಿಸುವಳು ಕಳಂವಳು ಭ್ರಮೆಯುಳ್ಳವಳು ಆವಾಗಲೂ ನಿದ್ರೆಗೈವಳು ವ್ಯಾಕುಲೆಯಾಗಿರ್ಪಳು ಇವಳು ನಾಗಸತ್ವದ ಸ್ತ್ರೀ" (ಕಾಮಶಾ. ೪-೬೦).

[ನಾಗ + ಸತ್ವ$_1$]

ನಾಗಸರ$_1$ (ನಾ). = ನಾಗಸ್ವರ ೨ : "ಸುನಾದಮಂ ತೋರ್ಪುದುದು ನಾಗಸರಂ" (ಮಂಗರಾ. ೧೧೫-೮) ; ಹೆಗ್ಗಾಳೆ ಬುರುಗು ಮದ್ದಳೆ ನಾಗಸರಗಳ ಮೊಗ್ಗ ವವು ಹತ್ತು ಹತ್ತು (ಕುರಾಸಾಂ. ೪೧-೬೮) ; ಜಾಗಟೆ ಕೈತಾಳ ನಾಗಸರವುಶಂಖು ಕೂಗುವ ಹೆಗ್ಗಾಳೆ ಬುರುಗು ಬೇಗದೊಳೊದಱಿತೊಂಬತ್ತು ಸಾವಿರ ಕಹಳೆಯಾಗಲೊದಗಿತೆಂಟು ದೆಸೆಗೆ (ಅಮುಸಾಂ. ೨-೮೨) ; ೯ ಹೊತ್ತಿನ ವೋಲಗದ ಡೋಳು ನಾಗಸರದವರ ಜನ ೪ (ಎಕ. VIII, ತೀರ್ಥಹ. ೧೬೬-೫೨ ; 1610) ; ಕೊಂಬು ಕೊಳಲು ನಾಗಸರ ಭೇರಿ ... ಡಿಂಡಿಮದ ಮುಂಬರಿದೆಸೆವ ರವಗಳಾಕಾಶವ ತುಂಬಿದವು (ಕಂನವಿ. ೮-೧೯) ; ನಾಗರಸ [ಸರ] ದಿಂಪಿಗೆವೊಳ್ಳೆಯು ತೂಗ ಬಲ್ಲುದೆ ಶಿರವ (ನಾಗಷ. ೧೬-೧೫) ; ನಾಗಸರಾ ಊದಿದರೆ ನಾಯಿ ಆಡೀತೆ ? (ಗಾದೆ). [ನಾಗ + ಸರ$_3$]

ನಾಗಸರ$_2$ (ನಾ). ಕೊರಳಿನ ಒಂದು ಬಗೆಯ ಆಭರಣ-ಹಾರ : ಪಚ್ಚಿತೆನೆಯಂತ ನಾಗಸರ ತಕ್ಕೊಂಡು ಎತ್ತೀನ ಜ್ಞಾನ ಮರೆತಾನು (ಹಳ್ಳಿಯ. ೫೦).

[ನಾಗ + ಸರ$_5$]

ನಾಗಸೇನ (ನಾ). ಒಬ್ಬಾತನ ಹೆಸರು : ಶ್ರೀಋಷಭಸೇನಗುರುವಡಿಗಳ ಶಿಷ್ಯರ್ ನಾಗಸೇನ ಗುರುವಡಿಗಳ್ ಸನ್ಯಾಸನವಿಧಿ ಇನ್ತು ಮುಡಿಪ್ಪಿದಾರ್ (ಎಕ. III, ೩೪-೧ ; ಸು. 700). [ಸಂ.]

ನಾಗಸ್ಥಾನ (ನಾ). ೧. ನಾಗರು ವಾಸಿಸುವ ಸ್ಥಳ ; ಪಾತಾಳ. ೨.=ನಾಗಠಾಣ : ಮಗುಟ್ಟು ಬಂದು ನಾಗಸ್ಥಾನಮಂ ಪೊಕ್ಕು (ಸುಕುಮಾ. ೪-೬೩ ವ). [ನಾಗ + ಸ್ಥಾನ]

ನಾಗಸ್ವರ (ನಾ). ೧. ಹಾವಾಡಿಗರು ಹಾವುಗಳನ್ನು ಆಕರ್ಷಿಸಲು ಬಳಸುವ ಒಂದು ಬಗೆಯ ವಾದ್ಯ ; ಪುಂಗಿ : ನಾಗಸ್ವರಮಂ ಕೇಳ್ದಾ ನಾಗಂ ಪೆಡೆಯೆತ್ತುವಂದಮಂ ಮೆಱೆಯಿಸುವೈ (ವಸ್ತವಂ. ೧೯). ೨. ಓಲಗ : ಕಹಳೆ ಹೆಗ್ಗಹಳೆ ಶಂಖ ವಾಸ ನಾಗಸ್ವರ ಉಪಾಂಗ ಮೊದಲಾದ ವಾದ್ಯ ವನವಱಿವುದು (ಆದವ. ೧೯೭-೩೫೦) ; ದೇವಲಾಪುರದ ವಸಂತ ಮಲ್ಲಿಕಾರ್ಜುನ ದೇವರಿಗೆ ಯೆರಡು ಡೋಳು ಯೆರಡು ನಾಗಸ್ವರವನು ನಡಸೂಯೆಂದು (ಸೌಇಇ. IX-II, ೬೪೭-೦೪ ; 1552) ; ದಕ್ಷಿಣದ ಸಂಗೀತ ಕಚೇರಿ ವಾದ್ಯಗಳಲ್ಲಿ ನಾಗಸ್ವರವೂ ಮುಖ್ಯವಾದುದು (ಸಂಗೀತ. ೧೧೫).

ನಾಗಸ್ವರಕಛೇರಿ= ನಾಗಸ್ವರವನ್ನು ಬಾರಿಸುವ ಸಂಗೀತಗೋಷ್ಠಿ : ಬೆಳಗಿನಿಂದಲೂ ನಾಗಸ್ವರ ಕಛೇರಿ ಪ್ರಾರಂಭವಾಗಿತ್ತು (ಮೂಲಾನ. ೧೨೫).

[ನಾಗ + ಸ್ವರ]

ನಾಗಹ (ನಾ). ಗೋದಾವರೀನದಿಯ ಒಂದು ಮಡುವಿನ ಹೆಸರು : "ನಾಗಹಂ-ಗೋದಾವರಿಯೊಳೊಂದು ಮಡು" (ಶಮದ. ಪರಿ. ೨) ; "ಬಿಡದೆ ನಾಗಹಮೆಂದು ಗೋದಾವರಿಯೊಳೊಂದು ಮಡು" (ಕಬ್ಬಿಕ್ಕೆ. ೯೦). 'ಕೊಳಹ' ಪರಾ. [?]

ನಾಗಹ್ರದ (ನಾ). ಹಾವಿನ ಮಡುವು ; ಯಮುನಾನದಿ : ತೊದಳೇನೊ ಮೆಚ್ಚಿದೆಂ ನಿನ್ನದಟಿಂಗೆಲೆ ಗೋಪ ತಪ್ಪುದೀ ಬಸದಿಗೆ ನೀನುದಯಕ್ಕೆ ಮುಂಚೆ ನಾಗಹ್ರದದೊಳಗಣ ಸಾವಿರೆಸಟ ತಾವರೆಯಲರಂ ತಂದು (ಅರ್ಧನೇ. ೮-೩೯). [ಸಂ.]

ನಾಗಳ 'ನಾಲ್ಗೊಳ' ನೋ.

ನಾಗಾಂಕ (ನಾ). ನಾಗಾಭರಣ ; ಶಿವ : ನಾಗಾಂಕನ ಅಱಿದು ತಾನಾಗದೆ ನಾಗಕಂಕಣನಾದ ನಾಗಾಯಿ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ (ಸಿದ್ಧವಕ. ೪೨೨-೦೩೬೧). [ಸಂ.]

ನಾಗಾಂಗನೆ (ನಾ). ೧. ನಾಗಲೋಕದ ಸ್ತ್ರೀ; ನಾಗಕನ್ಯೆ. ೨. ಹೆಣ್ಣಾನೆ: ರವವತ್ಸ್ರೋತಃ ಪಥೋತ್ತೋಯಮನಿಭಪತಿ ನಾಗಾಂಗನಾಂಗಂಗಳೊಳ್ ಸೂಸುವವೋಲ್ (ಶಾಂತಿಪು. ೮-೩೧). [ನಾಗ + ಅಂಗನೆ]

ನಾಗಾಂತಕ (ನಾ). ಸರ್ಪಗಳನ್ನು ನಾಶಮಾಡುವವನು ; ಗರುಡ : "ಗರುತ್ಮಾನ್, ಗರುಡಃ . . . ನಾಗಾಂತಕಃ, ವಿಷ್ಣುರಥಃ, ಸುಪರ್ಣಃ, ಪನ್ನಗಾಶನಃ- ೯ ವಿಷ್ಣುದೇವರ ವಾಹನವಾದ ಗರುಡನ ಹೆಸರುಗಳು" (ಸಿದ್ಧಾಂತಿ. ೦೮) ; ನಾಗಾಂತಕನೀ ಗರುಡಂ ನಾಗನದೈರಾವತಂ ಪರಾಜಿತವಂತಾ ನಾಗೇಂದ್ರನದಂ ಬಣ್ಣಿಸೆ ನಾಗಾರಿಯನಕಟ ಗೃಧ್ರನೆಂದೇಳಿಪುದೇ (ಜಗವಿ. ೦೩-೮೬) ; ನಾಗಾಂತಕನಂತೆ ಪಾಱಿದುದು ತುಂಗತುರಂಗಮಿಳಾಧಿನಾಥನಾ (ರಾಜಶೇ. ೧೩-೭೮). [ನಾಗ + ಅಂತಕ]

ನಾಗಾಜಿನ (ನಾ). ೧. ಆನೆಯ ತೊಗಲು ; ಗಜಚರ್ಮ : ನಾಗಯಜ್ಞೋಪವೀತಂ ನಾಗಕುಂಡಲಂ . . . ನಾಗಾಜಿನಾಂಬರಧರಂ ನಾಗಾರಿಮದಭುಜನಂ . . . ನಾಗವಿಷಧರನೊಪ್ಪುತಿರ್ದಂ (ಲಶಿಜಿಂ. ೨೭-೨೯). ೨. ಗಜಚರ್ಮವನ್ನು ಧರಿಸಿದವನು ; ಶಿವ. [ಸಂ.]

ನಾಗಾಣ (?) (ನಾ). (?) : ಕುತ್ತುವ ಕೊಱವ ಹಾಕುವ ನಾಗಾಣ ಮುಂತಾಗಿ ದೃಷ್ಟದಲ್ಲಿ ಕೊಲುವ ಕೈದ[ತ]ಮಾಡುತ್ತ ಮತ್ತೆ ಅವನತಿಯೆಂದಡೆ ಮೆಚ್ಚುವರೆ ಪರಮಶಿವೈಕ್ಯರು (ಐಲೇಶ್ವ. ೨೮). [?]

ನಾಗಾದಿಪಂಚಕ (ನಾ). ಶರೀರದ ಒಳಗಿರುವ ಐದು ವಾಯುಗಳು : ನಾಗಾದಿಪಂಚಕವೆಂದರೆ,ನಾಗ, ಕೈಕಳ, ಕೂರ್ಮ, ದೇವದತ್ತ, ಧನಂಜಯ ಹೀಗೆ ೫ (ಹಸಾರ. ೬-೯ ತಾತ್ಪರ್ಯ). 'ಪಂಚವಾಯು' ಪರಾ.

[ನಾಗ + ಆದಿ$_2$ + ಪಂಚಕ]

ನಾಗಾಧಿಪ (ನಾ). ೧. ನಾಗರ ಒಡೆಯ ; ನಾಗರಾಜ ; ಆದಿಶೇಷ : ನಡೆ ನೋಡಲ್ ದಿವಿಜೇಂದ್ರನೆಯ್ದೆ ಪೊಗಟಲ್ ನಾಗಾಧಿಪಂ ಭಾವದೊಂದೆಡೆಯಂ ಭಾವಕನಾಗಿ ಪೋಲೆ ಬರೆಯಲ್ಕಾ ವಿಶ್ವಕರ್ಮಂ ದಲಾರ್ಪೊಡೆ . . . ಬಣ್ಣಿಸುವರಾರೈರಾ ಮಹಾದೇವಿಯಂ (ಶಾಂತಿಪು. ೯-೧೫೬). ೨. ಆನೆಗಳ ನಾಯಕ ; ಸಲಗ. [ನಾಗ + ಅಧಿಪ]

ನಾಗಾಧೀಶ (ನಾ). = ನಾಗಾಧಿಪ ೧ : ಸುರವೃಂದಾರಕವೃಂದಮರ್ತ್ಯಪತಿ ನಾಗಾಧೀಶ ಚೇತೋಮುಖಾಂಬುರುಹಂಗಳ್ ಮುದಿತಂಗಳಾಗೆ (ಶಾಂತಿಪು. ೯-೨೦೬). [ನಾಗ + ಅಧೀಶ]

ನಾಗಾಪಸರ್ಪಿತ (ನಾ). [ನಾಟ್ಯ] ನೂರೆಂಟು ಕರಣಗಳಲ್ಲಿ ಒಂದು ; P "ಕೈಗಳನ್ನು ರೇಚಿತ ಮಾಡುವ ಸಮಯದಲ್ಲೇ ಪರಿವಾಹಿತ ಶಿರಸ್ಸನ್ನು [ಶಿರಸ್ಸು ೮] ಮಾಡಿ ಪಾದಗಳನ್ನು ಸ್ವಸ್ತಿಕದಂತಿರಿಸಿ ಪುನಃ ಸ್ವಭಾವವಾಗಿ ನಿಂತುಕೊಳ್ಳುವುದು" ((ಲಾಸ್ಯರಂ. ೩೦೬ ಗದ್ಯಾನುವಾದ) : ಕರಮೆರಡುಂ ರೇಚಿತಮಾಗಿರೆ ಪರಿವಾಹಿತಮದಾಗೆ ಶಿರವಡಿಗಳ್ ಮೇಣ್ ಉರು ಸ್ವಸ್ತಿಕಮಾಗುತ್ತುಂ ಸರಿಯಲ್ ನಾಗಾಪಸರ್ಪಿತಾಖ್ಯಮನಾಳ್ಗುಂ (ಲಾಸ್ಯರಂ. ೪-೧೬೪). 'ದಿಕ್ಸ್ವಸ್ತಿಕ' ಪರಾ.

[ಸಂ.]

ನಾಗಾಭರಣ (ನಾ). ಸರ್ಪಗಳನ್ನು ಒಡವೆಯನ್ನಾಗಿ ಮಾಡಿಕೊಂಡಿರುವವನು ; ಶಿವ : ನಾಗಾಭರಣಾಧರಪುಟಚುಂಬಿತೆ ಯೋಗಿನಿಚಯ ಹೃದ್ದರ್ಪಣಬಿಂಬಿತೆ (ಉದ್ಭಟ. ೭-೯೦). [ನಾಗ + ಆಭರಣ]

ನಾಗಾಯುತ (ನಾ). ಹತ್ತುಸಾವಿರ ಆನೆಗಳು : ಸತ್ವದಲಿ ನಾಗಾಯುತದ ಬಲವೆಂಬ ಡೊಂಬಿನ ವಾಯುವಿನ ಮಗನೆನ್ನೊಡನೆ ಮಾಱಾಂತಡಹುದೆಂದ (ಕುವ್ಯಾಗ. ೫-೪೭). [ನಾಗ + ಅಯುತ]

ನಾಗಾಯುತತ್ರಾಣಕ (ನಾ). ಹತ್ತುಸಾವಿರ ಆನೆಗಳ ಬಲವುಳ್ಳವನು ; ಭೀಮ : ವಿಕಟಮದ ನಾಗಾಯುತತ್ರಾಣಕನ ಸಾಹಸವಡಗಿತೇ (ಕುವ್ಯಾಅ. ಓರಿಇ. ೦೪-೪೦). [ಸಂ.]

ನಾಗಾಯ್ತ (ನಾ). ಮಾವಟಿಗ: ಇರದೊಗೆದುದಲ್ಲಿ ಸೂಟಾಯ್ತರ ಕಳಕಳ ವಚ್ಚಳಾಯ್ತರುಲಿಪುಂ ನಾಗಾಯ್ತರ ಗಳಗರ್ಜನೆ (ಜಗವಿ. ೧೦-೭೪).

[ನಾಗ + – ಆಯ್ತ]

ನಾಗಾರತಿ (ನಾ). ದೇವರ ಮಂಗಳಾರತಿಗೆ ಉಪಯೋಗಿಸುವ ಸರ್ಪಾಕಾರವನ್ನೊಳಗೊಂಡ ಆರತಿಯ ಉಪಕರಣ: ಬೆಳ್ಳಿಯ ನೀರಾಂಜನದ ಹಲಿಗೆ ೯ ಹಿರಿಯ ಆರತಿ ೮ ಪುರುಷಾಮ್ರಕದ ಆರತಿ ೩ ನಾಗಾರತಿ ೧ ಧೂಪಾರತಿ [೧] (ಸೌಇಇ. IV, ೨೭೩-೪೨ ; 1513).

[ನಾಗ + ಆರತಿ$_1$]

ನಾಗಾರಾಧನೆ (ನಾ). = ನಾಗಪೂಜೆ: ವಸ್ತುತಃ ನಾಗಪೂಜೆ ದ್ರಾವಿಡ ಜನಾಂಗದ ಹಬ್ಬವಾಗಿರಬೇಕು . . . ಆದರೆ ಆರ್ಯರು ಬಂದ ಮೇಲೂ ನಾಗಾರಾಧನೆ ಮುಂದುವರಿದಿದೆ (ಭಾಹಬ್ಯ. ೯೬).

[ಸಂ. ನಾಗಾರಾಧನಾ]

ನಾಗಾರಿ$_1$ (ನಾ). ೧. ಸರ್ಪಗಳ ವೈರಿ; ಗರುಡ: ನಾಗಾಂತಕನೀ ಗರುಡಂ ನಾಗನದೈರಾವತಂ ಪರಾಜಿತವಂತಾ ನಾಗೇಂದ್ರನದಂ ಬಣ್ಣಿಸೆ ನಾಗಾರಿಯನಕಟ ಗೃಧ್ರನೆಂದೇಳಿಪುದೇ (ಜಗವಿ. ೧೩-೮೬). 'ನಾಗಾರಿಕೇತು' ಪರಾ. ೨. ಆನೆಗಳ ಶತ್ರು; ಗಜವೈರಿ; ಸಿಂಹ: ಸಾಮಂತ ಗಜೇಂದ್ರಯೂಥವಿದಳನ್ನಾಗಾರಿ ನಾಗಾರಿಭೀಕರ ಸಾಮಂತನಾಗಾರ್ಜ್ಜುನಂ (ಎಕ. VI, ತರೀಕೆ. ೪೨-೩೯ ; 1206). [ನಾಗ + ಅರಿ$_6$]

ನಾಗಾರಿ$_2$ (ನಾ). ನಗಾರಿ ಬಾರಿಸುವವನು: ಹಡಪಿಗರು ಚಾಮರಿಗರೆಡೆಯಾಡುವವರು . . . ಕಾಳಂಜಿಯವರು ನಾಗಾರಿಗಳು ಕಥಿಕರು ಭಟಾಗ್ರಣಿಗಳು . . . ಸೊಗಯಿಸಿದರು (ಸೌಂದಪು. ೬-೫೯. [<ನಗಾರಿ$_2$]

ನಾಗಾರಿ$_3$ (ನಾ). ೧.=ನಾಗರಕ ೨ (?): ಎಯ್ದೆಮಂದು ಬಾಗಿಲೊಳ್ ನಿಂದಾಡುವ ವೈತಾಳಿಕರಂ ನಗಿಸುವ ಱೋಡಗರಂ ಪೊಗಟ್ಟ ನಾಗಾರಿಯ ರೊಗ್ಗಂ ನಿಲಿಸುತ್ತುಮೊಳಗಂ ಪೊಕ್ಕು (ಅನಂಪು. ೮-೩೩ ವ). ೨. (?): "ನಾಗಾರಿಯೆಂದ[ಡ]ಂಡೆಯವಂ" (ವಸ್ತುಕೋ. ೬೬-೮೬).

[?./ಮರಾ. ನಾಗಾರಿ = ಹೊಗಳುಭಟ್ಟ, ವಂದಿ]

ನಾಗಾರಿಕೇತು (ನಾ). ಗರುಡಧ್ವಜ; ಕೃಷ್ಣ: ಆ ಮರದಿಂ ನಾಗಾರಿಕೇತು ಕಾಳಿಯ ನಾಗಂಗೆಱಗಿದನಮರ್ತ್ಯರೀಕ್ಷಿಸೆ ನಭದೊಳ್ (ಜಗವಿ. ೩-೮೫).

[ನಾಗಾರಿ$_1$ + ಕೇತು]

ನಾಗಾರೋಹಕ (ನಾ). ಆನೆಯ ಸವಾರ: ಪ್ರಥಿತ ನಾಗಾ [ಪಾಠಾಂ. ನಾ] ರೋಹಕರ ಬಲಮಥನ ನಗರಿಗೆ ಕಳುಹಿ ಸುಮನೋರಥನು ಕಳುಹಿದನವರ ಬಳಿಯಲಿ ಬಹಳ ಪದಚರರ (ತೊರರಾ. ೬-೩೯-೪). [ಸಂ.]

ನಾಗಾರ್ಜುನಯ್ಯ (ನಾ). ಒಬ್ಬಾತನ ಹೆಸರು: ಸ್ವಸ್ತಿ ಶ್ರೀ ನಾಗಾರ್ಜುನಯ್ಯನನ್ ವಿಜ್ಜೆಯಡೆಯ ಮಗಳ್ ಸಾವಿನಿಮ್ಮಡಿ ಸರ್ವ್ವಶಾಸ್ತ್ರ ಪ್ರಸಿದ್ಧಿ ಶ್ರೀ (ಎಕ. X, ಬೌರಿಂಗ್. ೬೫-೦ ; ಸು. 900).

[ನಾಗಾರ್ಜುನ$_0$ + ಅಯ್ಯ$_1$]

ನಾಗಾರ್ಜುನಿ (ನಾ). ಒಂದು ಬಗೆಯ ವನಸ್ಪತಿ: "ಪಯಸ್ಯಾ–ನೆಲದಾವರೆ, ವೆಲ್ಲವಾಲೆ, ನಾಗಾರ್ಜುನಿ" (ಓಷಧಿ. ೯೦). [?]

ನಾಗಾಲಂಕಾರ (ನಾ). ಸರ್ಪಗಳನ್ನು ಆಭರಣಗಳಾಗಿ ಉಳ್ಳವನು: ಸರ್ಪಭೂಷಣ; ಶಿವ: ಶ್ರೀಗುರು ಶಂಕರ ಶುಭಕರ ನಾಗಾಲಂಕಾರ ನಾಕಚಿಕುರ ಮಹೇಶಂ . . . ರಾಗದೊಳರ್ಕೆಮ್ಮ ಚಿತ್ತನಾಕದೊಳನಿಶಂ (ಹಮ್ಮೀರ. ೪-೦). [ನಾಗ + ಅಲಂಕಾರ]

ನಾಗಾಲಯ (ನಾ). ೧. ನಾಗರ ವಾಸಸ್ಥಳ; ಪಾತಾಳ. ೨. ನಾಗರ ವಿಗ್ರಹಗಳನ್ನು ಪ್ರತಿಷ್ಠಿಸಿರುವ ಸ್ಥಳ; ನಾಗಠಾಣ: ಬುದ್ಧವಿಹಾರ ಮಹಾಭವನು ನಾಗಾಲಯಂ ಬಾವಿ[ದಿ]ಗ್ಗಿಗೆ ಶತ್ರಂ ಕೆಱ ದೀಪಮಾಲೆಯೆನೆ ನಾನಾಧರ್ಮಮಂ ಮಾಡಿಸಲ್ (ಸೌಇಇ. XX, ೪೯-೩೯ ; 1076); ಪುರದ ಪೊಱಗಣ ನಂದನವನದೊಳೊಂದು ನಾಗಾಲಯಮಿರಲಲ್ಲಿ ನಾಗರಂ ಪೂಜಿಸಲೆಲ್ಲರುಂ ಪೋಗಿ (ಪುಡ್ಯಾಸ್ರ. ೬-೪ ವ). ೩. ಹಾವಿನ ವಾಸಸ್ಥಾನ; ಹುತ್ತ: ಸಮೀಪದೊಳಿರ್ದ ನಾಗಾಲಯದ ಮುಂದಣ ತಾವರೆಗೊಳಕ್ಕೆ ನೀರ್ಗುಡಿಯಲೆಂದು ಪೋಗಿ (ಧರ್ಮಾಮ್ಯ. ೨-೧೯೦). [ನಾಗ + ಆಲಯ]

ನಾಗಾಲಿ$_1$ (ನಾ). (ಮರ, ಲೋಹಗಳಿಂದ ಮಾಡಿದ) ನಾಲ್ಕು ಕಾಲುಗಳುಳ್ಳ ಪೀಠ; ಸ್ಟೂಲು, ಕುರ್ಚಿ ಮೊದಲಾದ ಆಸನ: ಮೂರು ಅಥವಾ ನಾಲ್ಕು ಕಾಲುಗಳೂ ಮೇಲೆ ಮಣೆಯೂ ಇರುವ, ಒಬ್ಬನು ಕುಳಿತುಕೊಳ್ಳುವ, ಬೆನ್ನಿಲ್ಲದ ಪೀಠ; ಮುಕ್ಕಾಲುಮಣೆ; ನಾಗಾಲಿ; ಕಾಲುಮಣೆ; ಸ್ಟೂಲು (Stool. ಇಂಕನಿ): ಅಲ್ಲಿ ಹೋಗಿ ಅವರು ಮಾತಾಡುವುದಾದರೂ ಏನು? ನಾಗಾಲಿಗಳ ಮೇಲೆ ಒರಗಿಕೊಂಡು ಕೈಕಾಲು ಆಡಿಸುತ್ತ ಕುಳಿತಿರುವುದು (ಪ್ರತಾಪ. ೧೦೦).

[ನಾಗಾಲು + – ಇ$_3$]

ನಾಗಾಲಿ$_2$ (ನಾ). ನಾಲ್ಕು ಗಾಲಿಗಳನ್ನುಳ್ಳುದು; ನಾಲ್ಕು ಚಕ್ರದ ಬಂಡಿ: "ಎರಡು ಅಥವಾ ಮೂರು ವರ್ತುಲ ನಾಳಿಗಳ ಎಂಜಿನ್ನುಳ್ಳ ಬಹಳ ಹಗುರವಾದ ಮೋಟಾರು ಮೂಗಾಲಿ (ಕೆಲವು ಸಂದರ್ಭಗಳಲ್ಲಿ ನಾಗಾಲಿ)" (Cycle-car. ಇಂಕನಿ). [ನಾ$_2$ (<ನಾಲ್ಕು) + ಗಾಲಿ]

ನಾಗಾಲು (ನಾ). ನಾಲ್ಕು ಕಾಲುಗಳು; ಇಱುವೆ ಆನೆಯ ನುಂಗಿತ್ತು . . . ಮತ್ತೊಂದು ಗಜ ಒತ್ತಿ ಬರಲಾಗಿ ಕಚ್ಚಿತ್ತು ಕಚ್ಚಿದ ವಿಷ ತಾಗಿ ಮತ್ತನಾಗಿ ಬಿದ್ದಿತ್ತು ನಾಗಾಲಡಿಯಾಗಿ ಆನೆಯದೆ ತಾನುಳಿದ ಪರಿಯನೋಡಾ (ಮೋಳಿಮಾ. ೨೦೭-೭೬೨); ಯಕ್ಷರ ಪಕ್ಷವ ತಾಳಿ ಓಡುವೀ ಪಶು ನಾಗಾಲಾಗಿ ಹೊತ್ತಿದೆ ಮಾನಸ, ಹೊತ್ತಿದೆ ದೇಹ, ಎದೆ ಮೂರ್ಛಿತವಾಗಿ (ಅರಳು. ೨೦೭-೩); ನಾಗಾಲ ಹುರಿಗೆಜ್ಜೆ ನಾಗಾಲ ಕಿರುಗೆಜ್ಜೆ (ನಾಪದ. ೯೭).

[ನಾ$_2$ < ನಾಲ್ಕು) + ಕಾಲು$_1$ (< ಕಾಲ್$_1$)]

ನಾಗಾಲುನೆಗೆತ (ನಾ). (ಕುದುರೆ, ಜಿಂಕೆ ಮೊದಲಾದ ಪ್ರಾಣಿಗಳು) ನಾಲ್ಕು ಕಾಲುಗಳನ್ನು ಏಕಕಾಲದಲ್ಲಿ ಮೇಲಕ್ಕೆತ್ತಿ ಹಾರುವಿಕೆ: "ಕುದುರೆಯ ಒಂದು ತೆರದ ನೆಗೆತ (ಎರಡು ಮುಂಗಾಲುಗಳನ್ನೂ ಒಟ್ಟಿಗೆ ಎತ್ತಿ ಅವನ್ನು ಕೆಳಗಿಡುವುದಕ್ಕೆ ಮುಂಚೆಯೇ ಹಿಂಗಾಲುಗಳೆರಡನ್ನೂ ಎತ್ತಿ ಮುಂದಕ್ಕೆ ಕುಪ್ಪಳಿಸುವುದು): ನಾಗಾಲುನೆಗೆತ" (Curvet. ಇಂಕನಿ).

[ನಾಗಾಲು + ನೆಗೆತ]

ನಾಗಾಲೋಟ (ನಾ). ೧. (ಕುದುರೆ, ಜಿಂಕೆ ಮೊದಲಾದ ಪ್ರಾಣಿಗಳ) ಅತಿ ವೇಗವಾದ ಓಟ; ನೆಲವನ್ನು ಮುಟ್ಟಿಯೂ ಮುಟ್ಟದಂತೆ ಬಹಳ ರಭಸದಿಂದ ಓಡುವುದು: ಕೂಡಲೆ ಗಂಗಾರಾಮನು . . . ಕುದುರೆಯ ಮೇಲೆ ಏರಿ ನಾಗಾಲೋಟದಲ್ಲಿ ಅದನ್ನು ಓಡಿಸಿಕೊಂಡು ಹೋಗಿಬಿಟ್ಟನು (ಬಂಕಿಮ. ೩೦೨); ಆಲೋಚನೆಯ ಕುದುರೆ ನಾಗಾಲೋಟದಿಂದ ಓಡುತ್ತಿತ್ತು (ಮುಂಗಾಮು. ೦೭); ದನಕರುಗಳು ... ನಾಗಾಲೋಟದಿಂದ ಓಡುತ್ತಿದ್ದುವು (ರಾವಿಜ. ೨೪). ೨. ವೇಗ; ರಭಸ; ತೀವ್ರತೆ: ಪ್ರಪಂಚದಲ್ಲಿ ನಾಗಾಲೋಟದಲ್ಲಿ ಆಗುತ್ತಿರುವ ಪರಿವರ್ತನೆಗೆ ಹೊಂದಿಕೊಳ್ಳದ . . . ಗುಂಪಿಗೆ ಸೇರಿದವನು ಸೋಮು (ಅನಾಮಿ. ೫೩). ೩. (ಆಲಂ) ಬಹಳ ವೇಗವಾಗಿ ಓಡುವಿಕೆ; ರಭಸದಿಂದ ಸಾಗುವಿಕೆ: ರಭಸದಿಂದ ಗೋಡೆಯನ್ನೇರಿ, ನಾಗಾಲೋಟದಿಂದ ಮನೆಯನ್ನು ಸೇರಿ, ಶಿವನ್ ಮಲಗಿಕೊಂಡನು (ದೇವಸಾ. ೨೪).

ನಾಗಾಲೋಟ ಓಡು = ೧. ಬಹಳ ವೇಗದಿಂದ ಓಡು: ದಿಣ್ಣೆಯನ್ನು ಕಂಡ ಕೂಡಲೇ ಆನಂದದಿಂದ ನಾಗಾಲೋಟ ಓಡಿಬಿಡುತ್ತಿದ್ದ (ಮಲೆನಾ. ೨೦೩). ೨. ಶೀಘ್ರವಾಗಿ ಪ್ರಗತಿಯನ್ನು ಸಾಧಿಸು: ಅದುವರೆಗೂ ತೂಕಡಿಸುತ್ತಿದ್ದ ಬ್ರಿಟನ್ ಮೈಕೊಡವಿಕೊಂಡು ಎದ್ದು ನಾಗಾಲೋಟ ಓಡಿ ಒಂದೂವರೆ ಶತಮಾನಗಳಲ್ಲಿ ಮುಂದಾಳುತನವನ್ನು ಪಡೆಯಿತು

(ಶಿಲ್ಪನಾ. ೦೫೫). ನಾಗಾಲೋಟ ಬಿಡು = ನಾಗಲೋಟ ಓಡು೧ : ಅವ ಮೋಟರ ಹಾದೀ ನೋಡದೆ ನಾಗಾಲೋಟ ಬಿಟ್ಟ (ಪುನರ್ಮಿ. ೦೫೬).

[ನಾಗಾಲು + ಓಟ]

ನಾಗಾಶನ (ನಾ). ೧. ಹಾವುಗಳನ್ನು ತಿನ್ನುವ ಪಕ್ಷಿ; ಗರುಡ. ೨. ನವಿಲು. [ನಾಗ + ಅಶನ]

ನಾಗಾಶ್ರಯ (ನಾ). ೧. ಆನೆಗಳಿಗೆ ನೆಲೆಯಾಗಿರುವವನು, – ಆಶ್ರಯ ಸ್ಥಾನನಾಗಿರುವವನು : ತುಂಗಾಚಾರ ವಿಲೋಲಲುಬ್ಧಕ ಮಹಾದಾನಾಂಕ ನಾಗಾಶ್ರಯಂ (ಹಮ್ಮೀರ. ೦-೪೫). ೨. ಹಾವುಗಳಿಗೆ ಆಶ್ರಯವಾಗಿರುವುದು ; ಹುತ್ತ. ೩. ಪಾತಾಳಲೋಕ. [ನಾಗ + ಆಶ್ರಯ]

ನಾಗಾಸನ (ನಾ). [ಯೋಗ] ಆಸನಗಳಲ್ಲಿ ಒಂದು : ಸರ್ಪಾಸನ ; P "ಮುಖ್ಯವಾದ ಕೆಲವು ಆಸನಗಳು – ಅಷ್ಟವಿನ್ಯಾಸಗಳು ೧. ಉತ್ತಾನಾಸನ ೨. ಚತುರಂಗದಂಡಾಸನ ೩. ಊರ್ಧ್ವಮುಖ ಶ್ವಾನಾಸನ ೪. ಅಧೋಮುಖಶ್ವಾನಾಸನ ೫. ಸರ್ಪಾಸನ ೬. ಜಾನು ಶೀರ್ಷಾಸನ(ಎಡ–ಬಲ = ೨) ೭. ಪಶ್ಚಿಮೋತ್ತಾನಾಸನ ೮. ಮರೀಚಾಸನ ೯. ಉಪವಿಷ್ಟಕೋಣಾಸನ ೧೦. ಲೋಲಾಸನಂ ೧೧. ಭುಜಪೀಡಾಸನಂ ೧೨. ಬಕಾಸನ ೧೩. ಪದ್ಮಾಸನ ೧೪. ಬದ್ಧಪದ್ಮಾಸನ ೧೫. ಯೋಗಮುದ್ರಾಸನ ೧೬. ಮಯೂರಾಸನ ೧೭. ಪಿಂಛ ಮಯೂರಾಸನ ೧೮. ಪದ್ಮಪಿಂಛಮಯೂರಾಸನ ೧೯. ಶಲಭಾಸನ ೨೦. ಭೇಕಾಸನ ೨೧. ಧನುರಾಸನ ೨೨. ನಾವಾಸನ ೨೩. ಸರ್ವಾಂಗಾಸನ ೨೪. ನಿರಾಲಂಬಾಸನ ೨೫. ಹಲಾಸನ ೨೬. ಉಭಯಪಾದಾಂಗುಷ್ಠಾಸನ ೨೭. ಸುಪ್ತಪಾದಾಂಗುಷ್ಠಾಸನ ೨೮. ಕೂರ್ಮಾಸನ ೨೯. ಏಕಪಾದ ಶೀರ್ಷಾಸನಂ (ಎಡ–ಬಲ = ೨) ೩೦. ದ್ವಿಪಾದ ಶೀರ್ಷಾಸನ ೩೧. ಚಕೋರಾಸನ ೩೨. ಟಿಟ್ಟಿಭಾಸನ ೩೩. ಬದ್ಧಕೋಣಾಸನಂ ೩೪. ಅರ್ಧಬದ್ಧ ಪದ್ಮಪಶ್ಚಿಮತಾನಾಸನ ೩೫. ಊರ್ಧ್ವಪದ್ಮಾಸನಂ ೩೬. ಅರ್ಧಮತ್ಸ್ಯೇಂದ್ರಾಸನ ೩೭. ಮತ್ಸ್ಯೇಂದ್ರಾಸನ ೩೮. ಸುಪ್ತವಜ್ರಾಸನ ೩೯. ಕಂದಪಿಂಡಾಸನ ೪೦. ಪಿಂಡಾಸನ ೪೧. ಗರ್ಭಪಿಂಡಾಸನ ೪೨. ಗೋರಕ್ಷಾಸನ ೪೩. ಉಷ್ಟ್ರಾಸನ ೪೪. ಕುಕ್ಕುಟಾಸನ ೪೫. ಊರ್ಧ್ವ ಕುಕ್ಕುಟಾಸನ ೪೬. ಕೋಕಿಲಾಸನ ೪೭. ಆಕರ್ಣಧನುರಾಸನ ೪೮. ಸೇತುಬಂಧಾಸನ ೪೯. ಹನುಮಾನಾಸನ ೫೦. ಗರುಡಾಸನ ೫೧. ಅಷ್ಟಾವಕ್ರಾಸನ ೫೨. ಬುದ್ಧಾಸನ ೫೩. ದೂರ್ವಾಸಾಸನ. ೫೪. ವೃಕ್ಷಾಸನ ೫೫. ಸಿದ್ಧಾಸನ ೫೬. ಸಿಂಹಾಸನ ೫೭. ಗೋಮುಖಾಸನ ೫೮. ಉತ್ತಾನ ಕೂರ್ಮಾಸನ ೫೯. ವೃಶ್ಚಿಕಾಸನ ೬೦. ಸ್ವಸ್ತಿಕಾಸನ ೬೧. ವೀರಾಸನ ೬೨. ಉತ್ಕಟಾಸನ ೬೩. ಪಾರ್ಶ್ವಪಾದಾಸನ ೬೪. ವಿಪರೀತದಂಡಾಸನ ೬೫. ಅಂಗುಷ್ಠಾಸನ ೬೬. ಪಾರ್ಶ್ವಕೋಣಾಸನ ೬೭. ಪಾರ್ಶ್ವೋತ್ತಾನಾಸನ ೬೮. ಸುಪ್ತವಜ್ರಾಸನಂ ೬೯. ಕಪೋತಾಸನಂ ೭೦. ಗಂಡಭೇರುಂಡಾಸನ ೭೧. ತ್ರಿವಿಕ್ರಮಾಸನ ೭೨. ಅರ್ಧವೃಕ್ಷಾಸನ ೭೩. ತಾಡಾಸನ ೭೪. ಸುಪ್ತಕೋಣಾಸನ ೭೫. ಸುಪ್ತಪಾರ್ಶ್ವಪಾದಾಂಗುಷ್ಠಾಸನ ೭೬. ಸ್ಕಂದಾಸನ ೭೭. ಉತ್ಥಿತ ತ್ರಿಕೋಣಾಸನ ೭೮. ಅರ್ಧಬದ್ಧ ಪದ್ಮೋತ್ತಾನಾಸನ ೭೯. ಭೈರವಾಸನ ಇತ್ಯಾದಿಗಳನೇಕವಿವೆ" (ಭಾರದ.೦೬೭) ; ಆಸನಗಳ ಹೆಸರುಗಳು ಮತ್ತು ಸಂಖ್ಯೆಗಳಲ್ಲಿ ವ್ಯತ್ಯಾಸವುಂಟು : ಶುದ್ಧಾಸನ ಸಿಂಹಾಸನ . . . ನಾಗಾಸನ . . . ಅರ್ಧಾಸನಾದಿಯೆಂಭತ್ನಾಲ್ಕಾಸನ ಭೇದಂಗಳಂ (ವಿವೇಕ. ೦೫೯). [ನಾಗ + ಆಸನ]

ನಾಗಾಸ್ತ್ರ (ನಾ). ಸರ್ಪವೇ ಅಧಿದೇವತೆಯಾದ ಒಂದು ಮಂತ್ರಾಸ್ತ್ರ ; ಸರ್ಪಾಸ್ತ್ರ : ಹಿಂದೆ ನಾಗಾಸ್ತ್ರದಲಿ ಕಪಿಗಳ ಕೊಂದೆನದು ಹುಸಿಯಾಯ್ತು (ಕೌಶಿರಾ. ೨೮-೫) ; ಕನಸ ಕಂಡನು ಸಮರತಾಮಸಜನಿತಜಾಡ್ಯದಲಿಂದ್ರಜಿತು ರಾಮನನು ನಾಗಾಸ್ತ್ರದಲಿ ಕೆಡಹಿದೆನೆಂದು (ತೊರರಾ. ೬-೧೬-೨) ; ಬ್ರಹ್ಮಾಸ್ತ್ರ ನಾಗಾಸ್ತ್ರ . . . ವಾರುಣಾಸ್ತ್ರಗಳೆಂಬ ಪಂಚೋಪಾಸ್ತ್ರಮಂತ್ರಂಗಳಂ . . . ವಿವೇಕಿಸಿ ಶಿಳಿದಿರಲಕ್ಕುಂ (ವಿವೇಕ. ೮೬). 'ನಾಗಪಾಶ' ಪರಾ.

[ನಾಗ + ಅಸ್ತ್ರ]

ನಾಗಿ (ನಾ). = ನಾಗಿಣಿ. [ಸಂ. ನಾಗೀ]

ನಾಗಿಣಿ, ನಾಗಿನಿ (ನಾ). ೧. ನಾಗಲೋಕದ ಸ್ತ್ರೀ ; ನಾಗಕನ್ನಿಕೆ : ನಾಗಶಯ್ಯೆಯೊಳ್ ನಾಗಿಣಿ ನಾಗಬಂಧದೊಳೆ ತಳ್ತು ಗುಣಾರ್ಣವನಂ ಮರುಳ್ಚಿದಳ್ (ಪಂಪಭಾ. ೪-೧೭) ; ನಾಗವಲಿ ಮುಂತಾದ ವಿಭವಗಳಾಗಲಾ ಪೆಣ್ಮಣಿಯೊಳಹಿಸುತ ರಾಗರಸಲೀಲಾವಿನೋದವ ಸರಸಕಲೆಗಳಲಿ ನಾಗಿಣಿಯೊಳೊಡವೆರೆದನೆಂಬೊಲು ನಾಗನಂದನ ಸುರತಸುಖಮಯರಾಗರಸದೊಳೋಲಾಡಿದನು ಕರುಣಾಂಬುನಿಧಿಚಂದ್ರ (ನಾಗಷ. ೧೨-೮೭) ; ಶೀನೂ ಸುಶೀಲೆಯನ್ನು ಮದ್ದಿಸಿ ನಿಂತಾಗ ಒಬ್ಬ ನಾಗಿಣಿಯೋ ಜಕ್ಕಿಣಿಯೋ ಬಾಗಿಲಲ್ಲಿ ಕಾಣಿಸಿಕೊಂಡಳು (ಸಮಜೀ. ೮೭೩). ೨. ಹೆಣ್ಣು ಹಾವು. ೩. (ಆಲಂ) ಕ್ರೂರ ಹೆಂಗಸು ; ಹಾವಿನಂಥ ಹೆಣ್ಣು ; ವಿಷಕನ್ನಿಕೆ : ಆಕೆ, ಆ ನಾಗಿಣಿ ಮಾನವಳಲ್ಲ . . . ರಾಕ್ಷಸಿ (ಬರಹಾ. ೧೪). ೨, ೩ : ನಾಗಿಣಿವೊಲೀ ಭುಜಂಗನ ಭೋಗಕ್ಕೆ ತನುವಿತ್ತೆ (ರಾಜಶೇ. ೧೧-೧೬೮). ನಾಗಿನಿ : ೧. ಬಂಗಾಲದ 'ಮಣಿಪುರ' ಭಾಗದಲ್ಲಿ ನಾಗನ ತಂಗಿಯಾದ 'ಮನಸಾ' ಎಂಬ ನಾಗಿನಿಯನ್ನು ಪೂಜಿಸುತ್ತಾರೆ (ಭಾಹಬ್ಬ. ೯೭). ೪. ಸುಂದರಳಾದ ಸ್ತ್ರೀ : (ಕಿ). [<ಪ್ರಾ. ಣಾಇಣೀ./ಸಂ. ನಾಗೀ]

ನಾಗಿನಿ 'ನಾಗಿಣಿ' ನೋ.

ನಾಗಿಯಣ್ಣ, ನಾಗೆಣ್ಣ (ನಾ). ಒಬ್ಬಾತನ ಹೆಸರು : ಸಾಕ್ಷಿ ಪದಡಿಯ ಗಾವುಣ್ಡಂ ನಾಗಿಯಣ್ಣನುಂ (ಎಕ. XI, ದಾವಣ. ೦೨೪-೯೦ ; ಸು. 1042 ?). ನಾಗೆಣ್ಣ : ಸ್ವಸ್ತಿ ಶ್ರೀಮತ್ ಚಿತ್ರವಾಹನ ಪೊನ್ಬುಚ್ಚಾಳೆ ಕಿಳ್ಳಂ ನಾಗೆಣ್ಣ ನಧಿಕಾರಿಗಳಾಗೆ (ಎಕ. VI, ಕೊಪ್ಪ. ೩೭-೨ ; ಸು. 675 ?).

[ನಾಗಿ$_0$ + ಅಣ್ಣ$_1$]

ನಾಗಿಯಬ್ಬೆ (ನಾ). ಒಬ್ಬಾಕೆಯ ಹೆಸರು : ಶ್ರೀಮದಯ್ಯಪದೇವಂ . . . ತನ್ನ ಮನೋನಯನ ವಲ್ಲಭೆಯರಪ್ಪ ನಾಗಿಯಬ್ಬೆಗಂ ಹೆಲೆಯಬ್ಬೆಗ ಬರಗೂರು ಮೂಲಸ್ಥಾನದ ಎರಡು ದೇಗುಲಕ್ಕೆಂದು . . . ಕೊಟ್ಟುದು (ಎಕ. XII, ಶಿರಾ. ೩೯-೨೯ ; 920). 'ನಾಗಯಬ್ಬೆ' ಪರಾ.

[ನಾಗಿ + ಅಬ್ಬೆ$_1$]

ನಾಗುರಿಕನಗೆಡ್ಡೆ (ನಾ). ಒಂದು ಬಗೆಯ ಗೆಡ್ಡೆ : ಸಹದೇವಿ, ಬಜೆ, ದೇವದಾರು, ನಾಗುರಿಕನಗೆಡ್ಡೆ ಇವು ಪುಡಿಮಾಡಿ ಧೂಪವಿಕ್ಕಲು ವಿಷಮಜ್ವರ ಪರಿಹಾರವಾಗುವುದು (ಸಕಪ್ಪ. ೦೦೭). [? + ಗೆಡ್ಡೆ (< ಗಡ್ಡೆ)]

ನಾಗುಲಿಕ 'ನಾಂಗುಲಿಕ' ನೋ.

ನಾಗುಳ 'ನಾಲ್ಗುಳ' ನೋ.

ನಾಗೆ (ನಾ). ಒಂದು ಬಗೆಯ ವನಸ್ಪತಿ : (ಮೃಜಿಗಿ. ೭೩-೦೪೯೨) [?]

ನಾಗೆಣ್ಣ 'ನಾಗಿಯಣ್ಣ' ನೋ.

ನಾಗೆಯ (ನಾ). ಒಬ್ಬಾತನ ಹೆಸರು : ಇರ್ವ್ವರುಮನ್ದೊಡಿತ್ತ ನಾಗೆಯ ಎಟ್ಟದಿ × × × ದಲಾಗೆ ಪಡೆದದು (ಎಕ. III(R), ನಂಜನ. ೦೪೭-೩ ; ೩ನೆಯ ಶತ). [< ನಾಗಯ್ಯ]

ನಾಗೇಂದ್ರ (ನಾ). ೧. ನಾಗಲೋಕದ ಹಾವುಗಳ ಒಡೆಯ ; ಆದಿಶೇಷ. ಫಣಿರಾಜ : ಯಕ್ಷೇಂದ್ರನಿಂದ್ರನ ನಾಗೇಂದ್ರನ ನಚ್ಚಿನೋಲಗದವೋಲೊಪ್ಪಿರ್ದುದೊಡ್ಡೋಲಗಂ (ಶಾಂತಿಪು. ೩-೨೮) ; ಶ್ರೀಮನ್ನಾಗೇಂದ್ರ ಭೋಗಸ್ಫುರದರುಣಮಣಿದ್ಯೋತಿ ಸಂಧ್ಯಾನಿಬದ್ಧಪ್ರೇಮಂ . . . ತ್ರಿಭುವನಜನಕಾನಂದಮಂ ಮಾಡುಗೆಂದುಂ (ಕಾದಂಪ್ರ. ೦) ; ಧರೆ ಘನವೆಂಬೆನೆ ನಾಗೇಂದ್ರನ

ಫಣಾಮಣಿಯ ಮೇಲಡಗಿತ್ತು (ಬಸವ. ೮೭೬); ಅನ್ನೆಗಮತ್ತಲ್ ಪನ್ನಗ ಶಯನನವತರಣೋದ್ಯೋಗದಿಂ ನಾಗೇಂದ್ರನಂ ನೋಡಿ (ಜಗವಿ. ೨-೫೬ ವ); ನಾಗೇಂದ್ರಂಗಾದೊಡೆ ಮೇಣೀ ಗುರುಪಂಪಾಮಹಾಪುರದ ಮಹಿಮೆಯನಿಂ ಬಾಗಿ ವಚಿಸಲ್ಕೆ ಗೋಚರಮಾಗದು (ಉದ್ಯಟ. ೩-೭೯); ನಾಗೇಂದ್ರನಂ ಬಿಡದೆ ತಲೆವಾಗಿಸಿತ್ತಮರನಾಗೇಂದ್ರನಂ ಬುದ್ಧಿದೊಱಿಸಿತ್ತು . . ಅಮಲಧರ್ಮ ಜನ ಕೀರ್ತಿ (ಜೈಮಿಭಾ. ೨-೦೨) ೨. ನಾಗರಹಾವುಗಳಲ್ಲಿ ಶ್ರೇಷ್ಠ ವಾದುದು : ದೇಹ ರುಂಡಮಾಲೆಯ ಸ್ಥಾನ ಕರ್ಣ ನಾಗೇಂದ್ರನ ಸ್ಥಾನ ಇಂತೀ ಸ್ಥಾನಂಗಳ ನಾನೊಲ್ಲೆನಯ್ಯಾ (ಬಸವ. ೮೪೪). ೩. ಶೇಷ್ಠವಾದ ಆನೆ ; ಸಲಗ ; ಗಜರಾಜ : ಬಲಭಿನ್ನಾಗೇಂದ್ರನೊಳ್ ಮಾರ್ಮಲೆದು ಹರ ವೃಷಾಧೀಶನೊಳ್ ಪೋರ್ದ ಕೀನಾಶಲುಯ ಶ್ರೇಷ್ಠನೊಳ್ ತಾಗಿದ ರಣಗಣನಾರೇಖೆಯೆಂಬಂತು ರೇಖಾವಲಿ ಪೀನಸ್ಕಂಧದೊಳ್ ತಳ್ತಿರೆಯಿರೆ ಪೊಱಮಟ್ಟತ್ತು ಕಾಂತಾರದಿಂ ಶಾತಶೃಂಗಂ . . . ಗವೇಂದ್ರಂ (ಜಗವಿ. ೫-೩೫).

[ನಾಗ + ಇಂದ್ರ]

ನಾಗೇಂದ್ರಶಯನ (ನಾ). ಆದಿಶೇಷನು ಹಾಸಿಗೆಯಾಗಿರುವವನು ; ಶೇಷಶಾಯಿ ; ಮಹಾವಿಷ್ಣು. 'ನಾಗೇಂದ್ರಶಯನಾಲಯ' ಪರಾ.

[ನಾಗೇಂದ್ರ + ಶಯನ]

ನಾಗೇಂದ್ರಶಯನಾಲಯ (ನಾ). ವಿಷ್ಣುವಿನ ವಾಸಸ್ಥಾನ ; ಕ್ಷೀರ ಸಮುದ್ರ : ಅಮಲಧರ್ಮಜನ ಕೀರ್ತಿ ಬಳಿಕ ನಾಗೇಂದ್ರಶಯನಾಲಯವ ಜಡಧಿಯೆನಿಸಿ . . . ನೆಱೆ ರಾಜಿಸಿತು ಮೂಜಗದೊಳು (ಜೈಮಿಭಾ. ೨-೦೨).

[ನಾಗೇಂದ್ರಶಯನ + ಆಲಯ]

ನಾಗೇಶ (ನಾ). ೧. ನಾಗರುಗಳ ಒಡೆಯ ; ಆದಿಶೇಷ. ೨. ನಾಗರು ಗಳನ್ನು ಧರಿಸಿರುವವನು ; ಶಿವ : ನಾಗೇಶನ[ತಿಳಿದೆ]ವೆಂಬರು ಆನಾಗದೆ ಹೋದರು ನಾಗಾಯಿ ನಾಗಕುಂಡಲನಱಿದೆವೆಂಬರು ನಾಗದೇವತೆಗಳಾದರು ನಾಗಾಯಿ (ಸಿದ್ಧವ.ಕ. ೪೨೨-೧೩೬೦). ೩. ದ್ವಾದಶಜ್ಯೋತಿರ್ಲಿಂಗಗಳಲ್ಲಿ ಒಂದು. 'ಜ್ಯೋತಿರ್ಲಿಂಗ' ಪರಾ. [ನಾಗ + ಈಶ]

ನಾಗೇಶಿ, ನಾಗೇಸಿ (ನಾ). ಪ್ರಪಂಚ ವ್ಯವಹಾರದಲ್ಲಿ ಪುರುಷನಿಗಿಂತ ಪ್ರಕೃತಿಯೇ ಪ್ರಧಾನಭೂತವಾದುದೆಂದು ವಾದಿಸುವ ಪಕ್ಷ; ಪ್ರಕೃತಿ ಯನ್ನು ಮೇಲುಗಟ್ಟಿ ಹಾಡುವ ಪಂಗಡ ; ಗಂಡಸಿಗಿಂತ ಹೆಂಗಸೇ ಹೆಚ್ಚೆಂದು ಲಾವಣಿ ಕಟ್ಟಿ ಹಾಡುವವರ ತಂಡ: ಹರದೇಶಿ ಪಂಗಡದವರ ಹಾಡಿಗೆ ಉತ್ತರವಾಗಿ ನಾಗೇಶಿಪಂಗಡದವರು ಲಾವಣಿಗಳನ್ನು ಹಾಡಿದರು (ಕಪಪು. ೬-೦೮). ನಾಗೇಸಿ : ಹರದೇಸಿಗಳು ಪುರುಷನನ್ನು ಮೇಲುಗಟ್ಟಿ, ನಾಗೇಸಿಯು ಪ್ರಕೃತಿಯನ್ನು ಮೇಲುಗಟ್ಟಿ ಹಾಡುವರೆನ್ನಬೇಕು (ಸುವರ್ಣ. ೪೦). 'ಕಲ್ಗಿ', 'ಹರದೇಶಿ' ಪರಾ. [?./ಮರಾ. ನಾಗೇಶವಳ]

ನಾಗೇಶ್ವರ (ನಾ).=ನಾಗೇಂದ್ರ ೧ : ತಾರಕಜಿನ್ನಾಗೇಶ್ವರ ನೀರಜಭವ ದಶಕರಱಿದು ನುತಿಸಲಶಕ್ಯಂ (ಹಮ್ಮೀರ. ೧-೨೮). [ನಾಗ + ಈಶ್ವರ]

ನಾಗೇಸಿ 'ನಾಗೇಶಿ' ನೋ.

ನಾಗೊಂದಿ 'ನಾಗಂದಿಗೆ' ನೋ.

ನಾಗೊಂದಿಗೆ 'ನಾಗಂದಿಗೆ' ನೋ.

ನಾಗೊಮ್ಮೆ (ನಾ). ಬೀಜಗಳನ್ನು ತುಂಬುವ ನಾಲ್ಕು ಬುಟ್ಟಿ : ಇಂತು ತಾಗೇ ಮೂಱಡಿ ತೂಂಬುಂ ದೇವಭೋಗಂ ಈ ಕಟನಿ ಫಲಮಾ ಕೊಣ್ಡು ಬೆಳೆಸಿ ನಾಗೊಮ್ಮೆಯುಂ ಸಾಲೆ ಊಳುವದು (ಎಕ. X, ಕೋಲಾರ. ೧೧-೯ ; ಸು. 753). [ನಾ$_2$ (<ನಾಲ್ಕು) + ಕೊಮ್ಮೆ$_1$]

ನಾಗೊರಲ (ನಾ). ನಾಲ್ಕು ಕೊರಳುಳ್ಳವನು ; ನಾಲ್ಮೊಗ ; ಬ್ರಹ್ಮ : ನಾಗೊರಲನರಸಿ ನಾರದರು ವೀಣೆಯ ನುಡಿಸಿ ಭಾಗೀರಥೀಧರನ ನುಡಿಸಿದರು (ಗುರುಪಾ. ೭-೬೭). [ನಾ$_2$ (<ನಾಲ್ಕು) + ಕೊರಲ್ + – ಅ$_7$]

ನಾಗೊಳ 'ನಾಲ್ಗೊಳ' ನೋ.

ನಾಗೊಳಗ (ನಾ). ಒಂದು ಅಳತೆ ; ನಾಲ್ಕು ಕೊಳಗ : ದೋಣ = ನಾಗೊಳಗ, ದ್ರೋಣಾಚಾರ್ಯ (ಶಮದ. ೨೬೦ ಪ್ರಯೋ. ಅಡಿಟಿ).

[ನಾ$_2$ (<ನಾಲ್ಕು) + ಕೊಳಗ]

ನಾಗೋಜ (ನಾ). ಒಬ್ಬಾತನ ಹೆಸರು : ಈ ಕಲ್ಲ ಮಾಡಿಶಿ ಭಡಿಸಿದೊ ದಿವಾಕರಯ್ಯನು ನಾಗೋಜನಯ್ಯನುಂ (ಎಕ. X, ಬೌರಿಂಗ್. ೬೪-೭ ; ಸು. 900) ; ರೂವಾರಿ ಬುಪೋಜನ ಮಗ ರೂವಾರಿ ನಾಗೋಜ ಮಾಡಿದ (ಮೈಆರಿ. ೦೯೨೫, ೦೦೯-೫ ; ?). [ನಾಗ + ಓಜ$_1$ (<ಒವಝು)]

ನಾಗೋಲಿ 'ನಾಗವಲಿ' ನೋ.

ನಾಗೋಲೆ 'ನಾಗವಲಿ' ನೋ.

ನಾಗೋಷ್ಠ (ನಾ). [ಅಶ್ವಶಾ] ಕುದುರೆಯ ಒಂದು ಬಗೆಯ ಗಮನ,– ಗತಿ : ಹಾವು ನಡೆದಂತೆ ಡೊಂಕುಡೊಂಕಾಗಿ ಓಡಿಸುವುದು ನಾಗೋಷ್ಠ ವೆನಿಸಿಕೊಂಬುದು (ಅಶ್ವಟೀ. ೨೫-೮). [?]

ನಾಗ್ನ್ಯ (ನಾ). ಬತ್ತಲೆ; ನಗ್ನತೆ; ದಿಗಂಬರತ್ವ: ಮೆಱೆವ ಗುಂಡಿಗೆಯುಂ ವಿಕೃತಕ್ಕೆ ಸಂದ ನಾಗ್ನ್ಯಮುಮವಹಿಂಸೆಯೆಂಬ ಜನವಾದಮುಂ (ಶಾಂತಿಪು. ೮-೦೩೨) ; ನಾಗ್ನ್ಯ = ನಿರ್ಗ್ರಂಥಮುಂ (ತತ್ತ್ವಪ್ರ. ೩೩೩). [ಸಂ.]

ನಾಘಂಡುಗ 'ನಾಲ್ಗಂಡುಗ' ನೋ.

ನಾಚ್ 'ನಾಚು$_2$' ನೋ.

ನಾಚಗಾವುಂಡ (ನಾ). ಒಬ್ಬಾತನ ಹೆಸರು : ಮಲೆಏಱಿನ ಭೀಚಗಾವುಣ್ಡ ಪೈರಗೆಯ ನಾಚಗಾವುಣ್ಡ (ಎಕ. IV, ಹೆಗ್ಗಡ. ೦೦೪-೧೫ ; 1037).

[ನಾಚ$_0$ (<ನರಸಿಂಗ) + ಗಾವುಂಡ (<ಗಾಮುಂಡ)]

ನಾಚಾರ್ಲು 'ಲಾಚಾರು' ನೋ.

ನಾಚಿಕೆ 'ನಾಣ್ಚಿಕೆ' ನೋ.

ನಾಚಿಕೆಗಿಡ (ನಾ). ಮುಟ್ಟಿದ ಕೂಡಲೆ(ನಾಚಿಕೆಯಿಂದಲೋ ಎಂಬಂತೆ) ಮುದುರಿಕೊಳ್ಳುವ ಎಲೆಗಳುಳ್ಳ ಗಿಡ ; ಮುಟ್ಟಿದರೆ ಮುನಿ : ಮುಟ್ಟಿದರೆ ಮುನಿ, ಮುಡುಗುದಾವರೆ, ನಾಚಿಕೆಗಿಡ, ಲಜ್ಜಾವತಿ (ಮೃಜಿಗಿ. ೫೪-೦೦೭೯). [ನಾಚಿಕೆ (<ನಾಣ್ಚಿಕೆ) + ಗಿಡ (<ಗಿಡು)]

ನಾಚಿಕೆಗೆಡಿಸು (ಕ್ರಿ). ಅವಮಾನಪಡಿಸು : ತಡೆದು ಗೆದ್ದವರಿಲ್ಲ ನಾಚಿಕೆ ಗೆಡಿಸಿದವರಿಲ್ಲೀ ನೆಲೆಗೆ ಕೈವಿಡಿದುದಿಲ್ಲಪಜಯ ನಿತಂಬಿನಿ ನಮ್ಮನಾಜಿಯಲಿ (ತೊರರಾ. ೬-೨೮-೩). [ನಾಚಿಕೆಗೆಡು + – ಇಸು$_3$]

ನಾಚಿಕೆಗೆಡು, ನಾಚಿಗೆಗೆಡು (ಕ್ರಿ). ೧. ಅವಮಾನವನ್ನು ಹೊಂದು ; ಸಂಕೋಚಪಡು : ಆ ದ್ವಿಜನೆಂದ ಮಾತಿನ ಬಿನ್ನಣಕೆ ಮರುಳಾಗಿ ನಾಚಿಕೆ ಗೆಟ್ಟು ಬಂದೆನಲಾ (ನಳಚ. ೮-೪೦). ೨. ಲಜ್ಜೆಗೆಡು; ಲಜ್ಜಾಹೀನನಾಗು: ಬಿಟ್ಟೆನೆಲವೋ ನಿನ್ನ ನಾಚಿಕೆಗೆಟ್ಟವನೆ ಹೋಗಸುರವಂಶಘರಟ್ಟನಲಿ (ತೊರರಾ. ೬-೨೨-೨೮) ; ಒಮ್ಮೆ ತಾನೆನ್ನನು ವಂಚಿಸಿ ಹೋದರೆ ನಾಚಿಕೆ ಗೆಟ್ಟವನವನೆ (ಇಂದಾಪ. ೨೨೬-೦೮). ನಾಚಿಗೆಗೆಡು : ೨. ಚೆ ಚೆ ಚೆಯೆಂದು ಕಾಳೆಯನೂದಬೇಡಿಂದು ಛಿ ಛಿ ಛಿಯೆಂದೂದ ಹೇಳೊ ನಾಚಿಗೆಗೆಟ್ಟರ ನೋಡೆಂದು ಜಡಿಯೆ ಸೇನಾಚಕ್ರ ಸುಮ್ಮನಾಯ್ತಂಜಿ (ಭರಚ. ೪೯-೦೮).

[ನಾಚಿಕೆ (<ನಾಣ್ಚಿಕೆ) + ಕೆಡು$_1$]

ನಾಚಿಕೆಗೇಡಿ (ನಾ). ನಾಚಿಕೆಯಿಲ್ಲದವನು ; ಭಂಡ ; "ಮಾನಗೇಡಿ" (ಜಾನಕೋ. ೧೦) ; ಇಂದು ನಾಚಿಕೆಗೇಡಿಯಂತೆ ಹೋಗುವುದು ಹೇಗೆ ? (ನಿರಾಭ. ೯೪). [ನಾಚಿಕೆ (<ನಾಣ್ಚಿಕೆ) + ಕೇಡಿ$_1$]

ನಾಚಿಕೆಗೇಡಿತನ (ನಾ). ನಾಚಿಕೆಯಿಲ್ಲದಿರುವಿಕೆ ; ಲಜ್ಜಾಹೀನತೆ : ನಾಚಿಕೆಗೇಡಿತನದ ಹಾಗು ನಿರ್ದಯ ಅವಿವೇಕತನದ ಪತನಕ್ಕೆ ಚಪ್ಪಾಳೆ ಯಿಕ್ಕುವನು (ಪ್ರಬಂಧ. ೩೦) : ಅವಳನ್ನು ಭೆಟ್ಟಿಯಾಗಿ ಮುಖ ತಗ್ಗಿಸುವ ನಾಚಿಕೆಗೇಡಿತನಕ್ಕಿಂತಲೂ ಅವಳ ಕಣ್ಮರೆಯಾಗಿರುವುದು ಹೆಚ್ಚು ಲೇಸಾಗಿ ತೋರಿತ್ತು (ಹೇಮಂತ. ೨೭೪). [ನಾಚಿಕೆಗೇಡಿ + – ತನ]

ನಾಚಿಕೆಗೇಡು, ನಾಚಿಗೆಗೇಡು (ನಾ). ನಾಚಿಕೆ ಇಲ್ಲದಂತಿರುವುದು; ಲಜ್ಜಾಸ್ಪದವಾಗಿರುವುದು: ಇದೆಂಥಹದು ವೆಬ್‌ಸ್ಟರ! ಛಿ: ನಾಚಿಕೆಗೇಡು (ಮಹಾತ್ಮ. ೬೬); ಅದು ಇನ್ನೂ ನಾಚಿಕೆಗೇಡು ಎಂದರು ಹುಡುಗರು (ಶಾಲೆಮ. ೧೯೬); ಎಂಥ ನಾಚಿಕೆಗೇಡಿನ ಕೆಲಸ ಮಾಡಿದ್ದೇವೆ (ಪುನರು. ೧೦೯). **ನಾಚಿಗೆಗೇಡು:** ಈಚಲುಮರದ ಕೆಳಗೆ ಮಜ್ಜಿಗೆ ಕುಡಿದರೆ ನಾಚಿಗೆ ಗೇಡಾಗದೆ? (ಗಾದೆ). [ನಾಚಿಕೆ (<ನಾಣ್ಚಿಕೆ) + ಕೇಡು$_1$]

ನಾಚಿಕೆಗೊಳು, ನಾಚಿಕೆಗೊಳ್ಳು (ಕ್ರಿ). ೧. ಲಜ್ಜೆಯನ್ನು ಹೊಂದು: ನಾಚಿಕೆಗೊಳಬೇಡ ಮನದಲಿ ಯೋಚಿಸಿ ಕೆಡಬೇಡ (ಪುರಂದ. ೨-೭೭ ಪಲ್ಲವಿ). **ನಾಚಿಕೆಗೊಳ್ಳು:** ೧. ಹೊಸಬರನ್ನು ನೋಡಿ ಅವಳು ನಾಚಿಕೆಗೊಂಡಳು (ರೂಢಿ). ೨. ಅವಮಾನಹೊಂದು; ಸಂಕೋಚಪಡು: ಅವಿವೇಕದ ಕೆಲಸ ಮಾಡಿ ನಾಚಿಕೆಗೊಂಡರೆ ಏನಾಯ್ತು? (ರೂಢಿ).

[ನಾಚಿಕೆ (<ನಾಣ್ಚಿಕೆ) + ಕೊಳು (<ಕೊಳ್$_1$)]

ನಾಚಿಕೆಗೊಳ್ಳು 'ನಾಚಿಕೆಗೊಳು' ನೋ.

ನಾಚಿಕೆಪಡು 'ನಾಚಿಕೆವಡು' ನೋ.

ನಾಚಿಕೆಮುಳ್ಳು (ನಾ).=ನಾಚಿಕೆಗಿಡ.

[ನಾಚಿಕೆ (<ನಾಣ್ಚಿಕೆ) + ಮುಳ್ಳು (<ಮುಳ್)]

ನಾಚಿಕೆವಡು, ನಾಚಿಕೆಪಡು (ಕ್ರಿ). ಸಂಕೋಚಪಡು: ಹರಹರಾಯೆನುತಾ ಸೀರೆಯ ಸೆಱಗ ಹಱಿದಿತ್ತಳು ನೃಪಾಲಗೆ ಶಿರವ ನಸುಬಾಗಿದನು ನಾಚಿಕೆ ವಡುತ[ಪಾಠಾಂ. ಯಾಗ]ಲಿಂತೆಂದ (ನಳಚ. ೫-೬). **ನಾಚಿಕೆಪಡು:** ಆತನು ನಾಚಿಕೆಪಟ್ಟು ತಲೆಬಾಗಿಸಿಕೊಳ್ಳುವಷ್ಟು ಹೊಗಳಿದೆವು (ಸಾಹಿಜೀ. ೮೬).

[ನಾಚಿಕೆ (<ನಾಣ್ಚಿಕೆ) + ಪಡು$_1$]

ನಾಚಿಗೆ 'ನಾಣ್ಚಿಕೆ' ನೋ.

ನಾಚಿಗೆಗೆಡು 'ನಾಚಿಕೆಗೆಡು' ನೋ.

ನಾಚಿಗೆಗೇಡು 'ನಾಚಿಕೆಗೇಡು' ನೋ.

ನಾಚಿಯ (ನಾ). ಒಂದು ಮನೆತನದ ಹೆಸರು: ನಾಚಿಯರ ಬೆಂಬಿಸೆಟ್ಟಿಯ ಬೀಡಿನೊಳ್ ನಾಡು ನೆರಪಿ (ಕಇ. IV, ೫೫-೧೭; 1000 ?). [?]

ನಾಚಿಸು 'ನಾಣ್ಚಿಸು' ನೋ.

ನಾಚು$_1$ 'ನಾಣ್ಚು$_1$' ನೋ.

ನಾಚು$_2$, ನಾಚ್ (ನಾ). ೧. ಯಾವುದಾದರೂ ಒಂದು ಭಾವವನ್ನು ಅಭಿನಯಿಸುವುದು; ಆಂಗಿಕಾಭಿನಯ; ನೃತ್ಯ: ಸಿನಿಮಾ, ಟಾಕಿ, ನಾಚು ಮುಂತಾದವುಗಳಿಗೇ ಹೆಚ್ಚು ಪ್ರೊತ್ಸಾಹನವೇ ವಿನಹ, ಹಳೇ ಕಾಲದ ನಾಟಕಗಳನ್ನು . . . ನೋಡುವವರು ಯಾರು? (ರಾಯಕ. ೬೫); "ಚಾಂದನೀಚೌಕ"ದಲ್ಲಿ ಸೂಳೆಯರ ನಾಚು ಇತ್ತು (ಕೊತಕಾ. ೦೧); ಇಲ್ಲಿ ಯಾವಾಗಲೂ ವೇಶ್ಯಾಸ್ತ್ರೀಯರ ನಾಚು – ಗಾನಗಳು ನಡೆದಿರುವವು (ಮಂದಾಕಿ. ೦೨೩). ೨. ತಾಳಲಯಬದ್ಧವಾದ ಕುಣಿತ; ನೃತ್ತ. ೩. ಉತ್ತರ ಭಾರತದ ಕಥನನೃತ್ಯದ ಗತ್ತುಗಳಲ್ಲಿ ಒಂದು. **ನಾಚ್:** ೩. ಆತ ಹೇಳಿರುವ ಗತ್‌ಗಳಲ್ಲಿ ಇವು ಕೆಲವು: ಸಲಾಮಿ ಫರಿಯಾದ್ ಹುಸ್ನ ಮಹಬೂಬ ನಾಚ್ (ಭಾರದ. ೫೫೯); ಭಾರತೀಯ, ಪರ್ಶಿಯಾ ನೃತ್ಯಕಲೆಗಳ ಮಿಶ್ರಣದಿಂದ ನಾಚ್ ಸಂಪ್ರದಾಯ ಹುಟ್ಟಿಕೊಂಡಿತು (ಭಾರದ. ೫೭೯).

ನಾಚು ಮಾಡು=೧. ನೃತ್ಯವನ್ನು ಮಾಡು: ಕೋಣೆಯ ಒಳಗೊಳಗೇ ಕುಳಿತು ಗೊಣಗುಟ್ಟುತ್ತಿರುವಳಲ್ಲ, ಏಕಂತೆ? ಒಂದು ಇಷ್ಟು ನಾಚುಮಾಡಲಿ (ಕನ್ಯಾಬ. ೬೬). ೨. (ಸಂತೋಷ, ಉಲ್ಲಾಸಗಳಿಂದ) ಕುಣಿದಾಡು; ನಲಿದಾಡು: ಅವಳು ಸಮರನನ್ನು ನೋಡಿ ಸಂತೋಷಭರಿತಳಾಗಿ ನಾಚು ಮಾಡಿದಳು (ಆಗರ. ೦೩೩). ನಾಚುರಂಗು = ೧. ಕೇಲಿ; ವಿಲಾಸ; ಆನಂದೋತ್ಸವ; ಆಮೋದಪ್ರಮೋದ. ೨. ನೃತ್ಯಗೀತೆ; ಮೇಳ: ದಿನಂಪ್ರತಿ ನಾಚು ರಂಗು, ಬ್ರಾಹ್ಮಣ ಸಂತರ್ಪಣೆ ಮೊದಲಾದ ಅನೇಕ ಸಮಾರಂಭಗಳು ನಡದೇ ಇದ್ದವು (ಮಂಜುಕ. ೧೯೦); ನಾಚು – ರಂಗುಗಳಲ್ಲಿ ಕುಶಲೆಯರಾದ ಕಲಾವಂತಿನಿಯರ ನಾಮಾವಲಿಗಳನ್ನು ಇವರು ಮುಖೋದ್ಗತವಾಗಿ ಹೇಳಬಲ್ಲರು (ಜಿರಂಗ. ೧೬೨); ಈ ರಾಜರು ಸಂಗೀತ, ಸಾಹಿತ್ಯ, ನಾಚುರಂಗು ಮುಂತಾದುವುಗಳಲ್ಲಿಯೇ ಆಸಕ್ತರಾಗಿದ್ದರು (ಒಡಕ. ೫೫).

[←ಹಿಂ. ನಾಚ್./ಪ್ರಾ. ಣಚ್ಛ./ಸಂ. ನೃತ್ಯ]

ನಾಚುಗೆ (ನಾ). ನಾಚಿಕೆ; ಲಜ್ಜೆ: ಕಣ್ಣಲ್ಲಿ ಮಿಂಚು, ಮುಖದಲ್ಲಿ ನಾಚುಗೆ, ನಡಗೆಯಲ್ಲಿ ನಯ, ಮೈಯಲ್ಲಿ ಬೆಳೆವಣಿಗೆ ಹೀಗೆ ಗೌರಿ ಅಪೂರ್ವಳಾಗಿ ತೋರುಹತ್ತಿದ್ದಳು (ಬೆನ್ನುಹಿಂ. ೨೯); ನಾಚುಗೆಯೆಂದರೇನು ತೇಜಿನಿ (ಸುಗುಗಂ. ೧-೧೬). 'ನಾಣ್ಚಿಕೆ' ಪರಾ.

[ನಾಚು$_1$ (<ನಾಣ್ಚು$_1$) + – ಗೆ]

ನಾಚುಬುರುಕ (ನಾ). ನಾಚಿಕೆ ಸ್ವಭಾವದ ವ್ಯಕ್ತಿ; ಲಜ್ಜಾಶೀಲ ವ್ಯಕ್ತಿ: ಸಾರಮ್ಮನ ಲಕ್ಷ್ಯವೆಲ್ಲ ಜಾರ್ಜಿಯ ಈ ನಾಚುಬುರುಕ ಸ್ನೇಹಿತನ ಮರ್ಯಾದೆಯತ್ತ (ಗಂಮಾಯಿ. ೮೩).

[ನಾಚು$_1$ (<ನಾಣ್ಚು$_1$) + – ಪುರುಕ]

ನಾಚ್ಚಾರಮ್ಮ (ನಾ). ವಿಷ್ಣುವಿನ ಹೆಂಡತಿ; ಲಕ್ಷ್ಮಿ; ಆಂಡಾಳ್: ಆರಯ್ಯೆ ನಿನ್ನ ಮಗ ಬೊಮ್ಮ ಅಲ್ಲಾ ಚಂದ್ರಶೇಖರ ಮೊಮ್ಮ ನಿನ್ನ ಸೇರಿರೆ ಹರಿ ಪರಬೊಮ್ಮ ಅಮ್ಮ ಶ್ರೀರಂಗ ನಾಚ್ಚಾರಮ್ಮ (ಗೀತಗೋ. ೪೪-೪).

[ನಾಚ್ಚಾರ್$_0$ (P ← ತಮಿ. ನಾಚ್ಚಿಯಾರ್) + ಅಮ್ಮ$_2$]

ನಾಜರ್ 'ನಾಜಿರು' ನೋ.

ನಾಜರು 'ನಾಜಿರು' ನೋ.

ನಾಜಲು (ನಾ). ಒಂದು ಬಗೆಯ ತೆರಿಗೆ. 'ನಾಜಲುಹಣ' ಪರಾ.

[← ಅರ. ನುಜಲ್]

ನಾಜಲುಹಣ (ನಾ). 'ನಾಜಲು' ಎಂಬ ತೆರಿಗೆಯಿಂದ ಬರುವ ಹಣ: ಆವಾಗ್ಯೆ ದೊಡ್ಡಬಳ್ಳಾಪುರದ ಅಬ್ಬಾಸಕುಲ್ಲಿಃಖಾನರಿಗೆ ಯಿಾ ಅಲ್ಲಿಸಾಬರಿಂದ ೧೦೦೦ ವರಹಾ ನಾಜಲುಹಣಾ ಬರಬೇಕಾಗಿಯಿದ್ದದಕೆ (ಹೈದರ. ೩೦).

[ನಾಜಲು + ಹಣ]

ನಾಜಿ (ನಾ). ಎರಡನೆಯ ವಿಶ್ವಯುದ್ಧಕ್ಕೆ ಮೊದಲು ಜರ್ಮನಿಯಲ್ಲಿ ಸ್ಥಾಪಿತವಾಗಿದ್ದ ಒಂದು ರಾಜಕೀಯ ಪಕ್ಷ: ಭಯಂಕರವಾದವರು ಅಂದರೆ ಜರ್ಮನರು . . . ನಾಜಿಗಳು (ಯೋಧಪು. ೧೪).

[← ಇಂ. Nazi]

ನಾಜಿರ 'ನಾಜಿರು' ನೋ.

ನಾಜಿರು, ನಾಜರ್, ನಾಜರು, ನಾಜಿರ, ನಾಝುರ (ನಾ). ನ್ಯಾಯಾಲಯಗಳಲ್ಲಿ ವ್ಯವಹಾರಗಳನ್ನು ನೋಡಿಕೊಳ್ಳುವ ಅಧಿಕಾರಿ; ಕೋರ್ಟಿನ ಆಜ್ಞೆಯನ್ನು ಜಾರಿಮಾಡುವ ಅಧಿಕಾರಿ; ಶರೀಫ: ನಾಜಿರುಗಳು, ಪ್ರೋಸೆಸ್ ಸರ್ವರುಗಳು ಅಮೀನರು (ಇಡಿನೋ. ೧). **ನಾಜರ್:** (ರೈಸ್‌ಗೆ. II, ೫೫೭). **ನಾಜರು:** (ಕಿ). **ನಾಜಿರ:** ನಾನೋ ನಾಜಿರ, ಸಿರಸ್ತೆದಾರ ಆಗ ಬಂದಿದ್ದೆ (ಇಪ್ಪಕ. ೯). **ನಾಝುರ:** (ಕಿ).

[←ಅರ. ನಾಝುರ್; ಹಿಂ. ನಾಜಿರ್; ಮರಾ. ನಾಜರ್, ನಾಜೀರ್, ನಾಝುರ್]

ನಾಜೂಕದಾರ (ನಾ). ಒರಟುತನವಿಲ್ಲದೆ ನಯವಾಗಿ ವರ್ತಿಸುವವನು; ಒಪ್ಪ ಓರಣದಿಂದ ಇರುವವನು: ಮಲ್ಲಿಗೆಹಳ್ಳಿಯ ಬಯಲುನಾಟಕದ ಪಾತ್ರದಾರರನ್ನೆಲ್ಲಾ ನಾಜೂಕದಾರರನ್ನಾಗಿ ಮಾಡಿ ಅವರ ಸಹಾಯದಿಂದ ಒಂದು ನಾಟಕ ಕಂಪನಿಯನ್ನು ಸ್ಥಾಪಿಸಬೇಕೆಂಬುದೇ ಅವನ ಆಸೆಯಾಗಿತ್ತು (ಗರುದಾ. ೦೨೬). [<ನಾಜೂಕು + – ದಾರ$_4$]

ನಾಜೂಕು, ನಾಜೋಕು (ನಾ). ೧. ಕೋಮಲವಾದುದು; ಮೃದುವಾದುದು; ನಯವಾದುದು: ಗಂಗೆಗೆ ಕ್ರಮೇಣ . . . ನಾಜೂಕಾದ ಮಾತು ಸಹ ಮರೆತು ಹೋದವು (ಪುಟ್ಕರ. ೨೯); ವಸ್ತುಗಳಷ್ಟೇ ಅಮೂಲ್ಯವಾದವುಗಳೂ ಆಗಲಿ ವಯಸ್ಸು ಬಂದ ಮೇಲೆ ಮಕ್ಕಳು ತಮ್ಮ ಬಟ್ಟೆಗಳನ್ನು ತಾವೇ ಉಡಬೇಕು (ಗಲಿಪ್ರ. ೬೯); ಇನ್ನುಳಿದ ಪಕ್ಕಿಗಳಿಗೂ ನಾಜೂಕು ನಯ ಮಧುರತನ ಇದ್ದರೂ ಇರಬಹುದು (ಗಾಳಿಗು. ೮೦). ೨. ಚೆನ್ನಾಗಿರುವುದು; ರಮ್ಯವಾಗಿರುವುದು; ಆಕರ್ಷಕ: ತಾವು ನಾಜೂಕಾಗಿ ಅಲಂಕಾರ ಮಾಡಿಕೊಂಡದ್ದೆಲ್ಲಾ ಹೊಳೆಯಲ್ಲಿ ಬೆಲ್ಲ ಕದಡಿದಂತಾಯಿತು (ಸುವಸಂ. ೧೨); ನನ್ನ ಕವನಗಳು ಹೊಸ ಹೂವಿನಂತೆ . . . ಅದುವೆ ನಾಜೂಕು (ನಡಬಂ. ೭೫-೬). ೩. ಓರಣ; ಒಪ್ಪ; ಅಚ್ಚುಕಟ್ಟು: ಕರಾರುಪತ್ರವನ್ನು ಬರೆದುಕೊಂಡು ರಂಗಮ್ಮ ನಾಜೂಕಾಗಿ ಮಡಚಿ ಕೈಯಲ್ಲೆ ಇರಿಸಿಕೊಂಡರು(ರಂಗವ. ೬೬). ೪. ಥಳುಕು; ಬೆಡಗು; ಚಾಲೋಕು; ಜಾಣತನದಿಂದ ಕೂಡಿದುದು: ಎಷ್ಟು ನಾಜೂಕಾಗಿ ಮಾತನಾಡುತ್ತಿ. ಕೈಗೆ ಹಣ ಬಂದಿದೆ ಎಂದರೆ ನಿನಗೆ ಗಂಡನೆಂದರೆ ಪ್ರಾಣ (ಕಾವೇರಿ. ೪೩); ತೆಳ್ಳಗೆ, ಬೆಳ್ಳಗೆ, ನಾಜೂಕಾದ ಪಟ್ಟಿಣಗರಂತೆ ಕಂಡರು (ಮುನಿಮಾ. ೭). ೫. ತೊಡಕುಳ್ಳುದು; ಸರಳವಲ್ಲದುದು; ಗಹನವಾದುದು; ಜಟಿಲವಾದುದು: ನಾನು ತಂದಿರುವ ಕಾಗದ ಪತ್ರಗಳು ಬಹು ನಾಜೂಕಾದುವು (ಬಖ್ಕರು. ೨); ನಮ್ಮ ಸಮಾಜದಲ್ಲಿ ಸ್ತ್ರೀಯ ಸ್ಥಿತಿ ಎಷ್ಟು ನಾಜೂಕಾದುದೆಂಬುದು ನಿನಗೆ ಗೊತ್ತು(ಬರಬಾ. ೧೭). ೬. ಒಳ್ಳೆಯ ಜಾಣತನದಿಂದ ತಿಳಿದುಕೊಳ್ಳತಕ್ಕುದು; ಸೂಕ್ಷ್ಮವಾದುದು: ಅದರ ನಾಜೂಕಾದ ಸಂಸ್ಕೃತಿಯ ಕ್ಷೇತ್ರವನ್ನು . . . ಅಂತರಾತ್ಮನ ದೃಷ್ಟಿ ಅನುಭವಗಳಿಂದ ಹುಡುಕಿಕೊಳ್ಳಬೇಕಾಗಿದ್ದಿತು (ಪ್ರಬಂಧ. ೧೩೬); ಅದರೆ ಇಂತಹ 'ನಾಜೂಕು' ವಿಷಯವನ್ನು ಅರ್ಥ ಮಾಡಿಕೊಳ್ಳದ ಅನುಯಾಯಿಗಳೂ ಇದ್ದರು (ಸಾಸಮಾ. ೦೬೪); ತನ್ನ ಮಗನ ಭವಿತವ್ಯಕ್ಕೆ ಪ್ರತ್ಯರ್ಪಿತವಾದ ಅವಳ ಬದುಕಿನಲ್ಲಿ ಸ್ವಂತದ ಪಾಪ-ಪುಣ್ಯಗಳ ನಾಜೂಕಿನ ವಿಚಾರಕ್ಕೆ ಆಸ್ಪದವಿಲ್ಲ (ಹೊಸಕ್ಷಿ. ೨೮೨). ೭. ದುರ್ಬಲವಾದುದು; ಸುಲಭವಾಗಿ ಬಾಧೆಗೀಡಾಗುವಷ್ಟು ಕೋಮಲವಾದುದು,-ಸೂಕ್ಷ್ಮವಾದುದು: ಪೇಟೆಯಲ್ಲಿ ಕೆಲಸ ಮಾಡುವ ನಾಜೂಕಿನ ಜನಕ್ಕಾದರೆ ಮಳೆಗಾಲ ಆರಂಭವಾಯಿತೆಂದರೆ ಎದೆಯಲ್ಲಿ ಡವಡವಗುಟ್ಟಲು ಪ್ರಾರಂಭ (ವಿದ್ಯಾರ. ೧); ಅವನ ದೇಹಸ್ಥಿತಿಯು ಬಹಳ ನಾಜೂಕಾದುದರಿಂದ ಇದುವರೆಗೂ ಸಾವಕಾಶ ಮಾಡಿದೆನು (ಗುಣಸಾ. ೧೬); ಈ ಬೊಂಬೆ ತುಂಬ ನಾಜೂಕಾಗಿರುವುದರಿಂದ ಕೆಳಗೆ ಬಿದ್ದರೆ ಒಡೆದು ಹೋಗುತ್ತದೆ (ರೂಢಿ). ೮. (ಆಲಂ) ಕಷ್ಟಸಾಧ್ಯವಾದುದು; ಕಠಿಣವಾದುದು: ಈಗಿನ ಕಾಲ ಬಹಳ ನಾಜೂಕಾಗಿದೆ. ಬ್ರಾಹ್ಮಣಭೋಜನದ ಆಮಂತ್ರಣ ಸಿಕ್ಕುವುದು ಅಷ್ಟು ಸುಲಭವಾಗಿಲ್ಲ (ಕಮಳ. ೧೭೭). **ನಾಜೋಕು**: ೧. ಉದ್ದವಾದ ನಾರುಗಳಿಂದ . . . ನಾಜೋಕಾದ ಹೆಚ್ಚು ಬೆಲೆಬಾಳುವ ಬಟ್ಟೆಗಳನ್ನು ತಯಾರಿಸುವರು (ಗೃಹವಿ. ೬೯); ಮಾತಿನಲ್ಲೂ ಕೆಲಸದಲ್ಲೂ ನಾಜೋಕು. ರಸಿಕತೆ . . . ಗೋಚರಿಸುತ್ತವೆ (ಶಿಕ್ಷದ. ೧೦೪). ೨. ಅದ್ಭುತ ಶಿಲ್ಪಕಲೆಯನ್ನು ತೋರಿಸುವ ನಯ, ನಾಜೋಕುಗಳಿಗೆ ಪ್ರಸಿದ್ಧವಾಗಿದೆ ನಮ್ಮ ತಾಯ್ನಾಡು (ಪ್ರತಾಪ. ೯೭); ಘುಲ್ಲಮಣಿಯು . . . ಸ್ವಲ್ಪ ಚೆನ್ನಾಗಿ ನಾಜೋಕಾಗಿದ್ದಳೆಂತಲೇ ಹೇಳಬೇಕು (ಬೇವೀಜೌ. ೨೯); ನಾಜೋಕಾದ ಉಡುಗೆ ತೊಡೆಗೆಗಳನ್ನುಟ್ಟ . . . ಮಕ್ಕಳು ಸುತ್ತ ಮುತ್ತು ಓಡಾಡುತ್ತಿದ್ದರು (ಪುನರು. ೬೯). ೩. ಹೈಸ್ಕೂಲಿಗೆ ಕಾಲಿಟ್ಟು ಎರಡು ವರ್ಷವಾದರೂ ನಾಜೂಕಾಗಿರೋದನ್ನ ಕಲಿಯಬಾರದೆ? (ನಿಶಿಉ. ೩). ೯. ನಣುಪಾದುದು; ಹೊಳಪುಳ್ಳುದು: ಕೊಳದ ಗೋಡೆಗಳನ್ನು ಜಿಪ್ಪಂಗಾರೆಯನ್ನು ಉಪಯೋಗಿಸಿ ನಾಜೋಕಾದ ಇಟ್ಟಿಗೆಗಳಿಂದ ಕಟ್ಟಿದ್ದಾರೆ (ಶಿಲ್ಪನಾ. ೪೪).

ನಾಜೋಕು ಮಾಡು=ಒರಟಾದ, ಬಟ್ಟೆ ಚರ್ಮ ಮೊದಲಾದ ವಸ್ತುಗಳನ್ನು ಮೃದುವನ್ನಾಗಿ ಮಾಡು.-ನಯವಾಗುವಂತೆ ಮಾಡು: ಅಡಿಕೆ, ದಾರದ ಬಟ್ಟೆಗಳೂ ನಾಜೋಕುಮಾಡದ ರೇಷ್ಮೆ, ಇತರ ದೇಶಗಳಿಂದ ಬರುತ್ತವೆ (ಭೂಗೋಳ. ೧೧೩).

[←ಮರಾ. ನಾಜೂಕ್, ನಾಜುಕ್, ಪಾರಾ. ಹಿಂ. ನಾಜುಕ್]

ನಾಜೂಕುಗಾರ (ನಾ). ಆಕರ್ಷಕವಾಗಿರುವವನು. 'ನಾಜೂಕುಗಾರಿಕೆ' ಪರಾ. [ನಾಜೂಕು + - ಗಾರ(< - ಕಾಱ)]

ನಾಜೂಕುಗಾರಿಕೆ (ನಾ). ಆಕರ್ಷಣೆ: ಇವತ್ತು ನಾಟ್ಯವೊಂದು ನಾಜೂಕುಗಾರಿಕೆಯಾಗಿದೆ (ಭಾರದ. ೫೫೨). [ನಾಜೂಕುಗಾರ + - ಇಕೆ]

ನಾಜೂಕುತನ (ನಾ). ೧. ಆಕರ್ಷಕವಾಗಿರುವಿಕೆ: ಅಳಿಯನ ಪ್ರಪಂಚದ ನಾಜೂಕುತನ ಅವನಿಗೂ ಗೊತ್ತಾಗಿತ್ತು (ಅಕೋಳ. ೭೦). ೨. ಅಚ್ಚುಕಟ್ಟಾಗಿರುವಿಕೆ: ಓರಣ ನಾಜೂಕುತನ ಯಾವವೂ ಅವಳಿಗೆ ಗೊತ್ತಿರಲಿಲ್ಲ (ಫಲಸಂ. ೨೭). [ನಾಜೂಕು + - ತನ]

ನಾಜೋಕು 'ನಾಜೂಕು' ನೋ.

ನಾಝುರ 'ನಾಜಿರು' ನೋ.

ನಾಟ$_1$, ನಾಟ್ಯು$_3$(ನಾ). ಮರದ ದಿಮ್ಮಿ,-ತೊಲೆ,-ಮುಂಡಿಗೆ,-ಲಾಂಬಿ: ಘಾಟಿಯ ದಾರಿಯ ನಾಟದ ಲಾರಿಯ ನಡಸುವಂದಿರುಳಿನೊಳಿನಿಯ ಬೇಟದ ನಾರಿಯ ಮಾಟದ ಮಾರಿಯ ಮರೆವಂತೆ ನೀ ಬೇಡು ಉಮೆಯ(ಚಂದ್ರವೀ. ೧೦೮-೨೯); ರಾಯರು ತಮ್ಮ ಉಳಿದ ಆಳುಗಳಿಗೆ . . . ನಾಟ ಕಡಿಯುವ ಕೆಲಸ ಒಪ್ಪಿಸಿ, ಊರಿಗೆ ಹೊರಟು ಹೊಂದರು (ಕುಡಿಕೂ. ೦೦೭); ಅವು ನಾಟಗಳನ್ನೆಳೆದು ಕಂಗಾಲಾದರೆ, ಕೆಚ್ಚದೆಯ ಕೆಲಸಗಾರರು ಪಶುಬಲಕ್ಕೆ ಮನುಷ್ಯಬಲ ಸೇರಿಸುತ್ತಾರೆ (ಜಾರುದಾ. ೦೮೭). **ನಾಟ್ಯು$_3$**: ಲಾರಿಯಲ್ಲಿ ನಾಟುಗಳು ತುಂಬಿದ್ದುವು (ರೂಢಿ).

ನಾಟಾ ಕಡಿಸು = ದೊಡ್ಡಮರವನ್ನು ದಿಮ್ಮಿಗಳನ್ನಾಗಿ ತುಂಡರಿಸು; ಹಲಗೆ ಮೊದಲಾದ ಉಪಕರಣಗಳಿಗೆ ಅನುಕೂಲವಾಗುವಂತೆ ದೊಡ್ಡಮರವನ್ನು ತುಂಡುಗಳನ್ನಾಗಿ ಮಾಡಿಸು: ಕಾಡಿನಲ್ಲಿ ಒಂದು ಹೆಮ್ಮರವನ್ನು ನಾಟಾ ಕಡಿಸುತ್ತಿದ್ದಾಗ . . . ಅಪಘಾತವಾಗಿ ತೀರಿಕೊಂಡಿದ್ದರು (ಮಲೆಮ. ೩೪೮); ಯಾರೋ ಲೈಸೆನ್ಸ್ ಇಲ್ಲದೆ ನಾಟಾ ಕಡಿಸಿದ್ದಾರೆ (ಕಾನೂರು. ೪೭). **ನಾಟಾ ವ್ಯಾಪಾರ** = ಮರದ ದಿಮ್ಮಿಗಳ ಮಾರಾಟ: ಆಹಾರಪದಾರ್ಥಗಳ ಮಾರಾಟವ್ಯವಸ್ಥೆ, ನಾಟಾ ವ್ಯಾಪಾರ (Timber trade), ಅಕ್ಕಿ ಇತ್ಯಾದಿ ವಿವಿಧ ವಿಷಯಗಳ ಮೇಲೆ ವಿಶೇಷ ವ್ಯಾಸಂಗ ಏರ್ಪಡಿಸಿ (ಅಂತಸಂ. ೪೧). [←ತುಳು. ನಾಟ]

ನಾಟ$_2$ (ನಾ). [ಸಂಗೀತ] ಒಂದು ರಾಗದ ಹೆಸರು: ನಾಟ ಆಹರಿ ಸಾಳಗನಾಟ ಹಮ್ಮೀರನಾಟ ಘೂರ್ಝರನಾಟಿಯೆಂಬವೇ ಪಂಚವಿಧ ನಾಟಿಗಳು (ವಿವೇಳ. ೨೫೨); ನಾಟ, ಗೌಲ, ವರಾಲೀ . . . ರೀತಿಗೌಲ-ಎಂಬೀ ಎಂಟು ರಾಗಗಳು ಘನರಾಗಗಳೆಂದು ಹೇಳಲ್ಪಟ್ಟಿವೆ (ಚತುಪ್ರ. ೧೩೦); ಅವರ ವರ್ಣಗಳು ನಾಟ, ಗೌಳ, ಆರಭಿ . . . ಬೇಹಾಗ್ ಮತ್ತು ಬಿಲಹರಿ ರಾಗಗಳಲ್ಲಿವೆ (ಸಂಗೀತ. ೪೪). 'ನಾಟ್ಯೆ$_2$' ಪರಾ. [ಸಂ.]

ನಾಟಕ (ನಾ). ೧. ಅಭಿನಯ ಪ್ರಧಾನವಾದ ದೃಶ್ಯಪ್ರಬಂಧ; ರೂಪಕ: "ನಾಟಕ" ವೆಂಬುದು ಈ ಕೃತಿಜಾತಿಯಲ್ಲಿ ಒಂದು ಒಳಭೇದ . . ಆದರೂ ಅದಕ್ಕೆ ಇರುವ ಪ್ರಾಶಸ್ತ್ಯದಿಂದ "ನಾಟಕ" ವೆಂಬ ಹೆಸರನ್ನು ಸಾಮಾನ್ಯವಾಗಿ ಆ ಗುಂಪಿನ ಎಲ್ಲಾ ಜಾತಿಗೂ ಉಪಯೋಗಿಸುವುದು ರೂಢಿಯಾಗಿದೆ (ಸಂನಾಟ. ೩); ಭಾಸನ ನಾಟಕಗಳಲ್ಲಿ ಬರುವ ಹಾಸ್ಯ ವಿಧವಿಧವಾಗಿದೆ (ಸಂನಾಟ. ೧೦೦); ರೋಮನ್ ನಾಟಕಕ್ಕೂ . . . ಆ ಮೂಲಕ ಆಧುನಿಕ ಪಾಶ್ಚಾತ್ಯನಾಟಕಕ್ಕೂ ತವರಾದ ಗ್ರೀಕ್‌ನಾಟಕದ ಹುಟ್ಟು ಬೆಳವಣಿಗೆಗಳನ್ನು ಬಹು ಸ್ಥೂಲವಾಗಿ ಇಲ್ಲಿ ಗುರುತಿಸುತ್ತದೆ (ಅಂತಿಗೋ xiii, ಪೀಠಿಕೆ);

ನಮಗೆ ಗೊತ್ತಿದ್ದ ರೂಪದಲ್ಲಿ ನಮ್ಮ ಜನರ ನಾಟಕವು ಇಂತಹದೆ ಕಾಲದಲ್ಲಿ ಪ್ರಾರಂಭವಾಯಿತು ಎಂದು ಹೇಳಲು ಶಕ್ಯವಿಲ್ಲದಿದ್ದರೂ ಜನರ ಮನೋರಂಜನೆಯ ವಾಹಕವಾಗಿ ರಂಗಭೂಮಿ ಎಂಬುದು ವೈದಿಕಕಾಲದಿಂದಲೆ (ಎಂದರೆ ವೇದಗಳ ಕಾಲದಿಂದ) ಅಸ್ತಿತ್ವದಲ್ಲಿ ಬಂದಿರಬಹುದಾಗಿದೆ ಎಂದು ತಿಳಿಯಲು ಅಡ್ಡಿ ಇಲ್ಲ (ಭಾರದ. ೫೬೭). ೨. [ಕಾವ್ಯಮೀ] ಅಭಿನಯಿಸಲ್ಪಡುವ ರೂಪಕಗಳಲ್ಲಿ ಒಂದು; ನಟಿಸಿ ತೋರಿಸುವ ದೃಶ್ಯಕಾವ್ಯ; ದಶರೂಪಕಗಳಲ್ಲಿ ಮೊದಲನೆಯದು; P ನಾಟಕದ ಕಥೆಯು ಕಲ್ಪಿತವಾಗಿರದೆ, ಇತಿಹಾಸ ಪ್ರಸಿದ್ಧವಾಗಿರಬೇಕು. ಶೃಂಗಾರ ಅಥವಾ ವೀರರಸಪ್ರಧಾನವಾಗಿದ್ದು, ಇತರ ರಸಗಳು ಅಂಗವಾಗಿರಬೇಕು. ನಾಯಕನು ಧೀರೋದಾತ್ತನಾಗಿರಬೇಕು. ನಾಟಕಲಕ್ಷಣದಲ್ಲಿ ಹೇಳಿರುವ ಅಂಗಗಳಿಂದ ಕೂಡಿಕೊಂಡಿರುವ ಪಂಚಸಂಧಿಗಳಿರಬೇಕು. ಐದರ ಮೇಲೆ ಹತ್ತರವರೆಗೂ ಅಂಕಗಳಿರಬಹುದು. ಉದಾ: ಅಭಿಜ್ಞಾನಶಾಕುಂತಲ, ವೇಣೀಸಂಹಾರ ಮೊದಲಾದುವು: ವ್ಯಾಕರಣ ಕಾವ್ಯನಾಟಕ ಲೋಕಕಳಾಸಮಯಮಾದಳಂ ಕೃತಿಗಳೊಳಂ ವ್ಯಾಕುಳ ನಲ್ಲದನೇಕೆ ವಿವೇಕಬೃಹಸ್ಪತಿಯ ನಗರಮಂ ಪುಗುತರ್ಪಂ (ಕವಿರಾ. ೦-೬); ಸೌಧರ್ಮೇಂದ್ರಂ ತನ್ನ ದೇವಸಭೆಯ ನಡುವೆ ಸಿಂಹಾಸನ ಮಸ್ತಕಸ್ಥಿತಂದೇವರ್ಕಳಿಂ ಪರಿವೇಷ್ಟಿತನಾಗಿಸೌದಾ[ಮಿ]ನಿಯೆಂಬ ನಾಟಕಮಂ ನೋಡುತಿರ್ಪನ್ನೆಗಂ (ಪಡ್ಮಾರಾ. ೬೫-೨೯); ಮೊದಲೇ ಅಭಿಜ್ಞಾನಶಾಕುಂತಲವೆಂಬ ಅಪೂರ್ವ ನಾಟಕವನ್ನು ಕರ್ಣಾಟಕಭಾಷೆಯಿಂದಾಡುವಂತೆ ತಾವು ಅಪ್ಪಣೆಯಂ ಕೊಡಲಿಲ್ಲವೇ? (ಶಾಕುಂತ. ೩-೩); ನಾಟಕ, ಪ್ರಕರಣ, ಭಾಣ, ಪ್ರಹಸನ, ಡಿಮ, ವ್ಯಾಯೋಗ, ಸಮವಕಾರ, ವೀಥಿ, ಅಂಕ, ಈಹಾಮೃಗ – ಎಂದು ರೂಪಕಗಳು ಹತ್ತು ವಿಧ (ಸಂನಾಟ. ೨೯). ೩. ಪದಾರ್ಥಾಭಿನಯ; ಅವಸ್ಥಾನುಕರಣ; ನೃತ್ಯ; ನಾಟ್ಯ; ಭಾವಾಭಿನಯ: "ನೃತ್ಯದೊಳು ಹಸ್ತಾಂಗ ದೃಷ್ಟಿಗತಿ ಪದ್ಧತಿಯೊಳಾಡೆ ನಾಟಕಮೆನಿಕ್ಕುಂ" (ಮಂಗರಾ. ೨೫-೦೦); ತಾನುಮಾನಂದನಾಟಕಮನಾಡಲ್ಪಗೆದು ಕೃತಾನುಕರಣಮೆ ನಾಟಕಮಪ್ಪುದಱಿಂ . . . ಮಘವಂ . . . ತಾಂಡವಮನಾಡಲುದ್ಯೋಗಂಗೆಯ್ದು (ಆದಿಪು. ೨-೦೦೫ ಪ); ಸರ್ವಾಂಗ ಸುಂದರಿ ವಿದ್ಯಾನಟಿ ನಾಟಕಂನಲಿಗೆ ಮತ್ಕಾವ್ಯಸ್ಥಲೀರಂಗದೊಳ್ (ಪಂರಾಮಾ. ೧-೬); ಕಂಗಳಾಲಿಯ ಕರಿಯ ನಾಳದಲ್ಲಿ ಈರೇಳುಭುವನಂಗಳಡಗಿದವು ನಾಟಕ ನಾಟಕವ ನಟಿಸುತ್ತ ಆಡಿಸುವ ಸೂತ್ರದ ಪರಿ (ಅವಜಂ. ೩೪-೧೪೪); ಬೆಡಂಗಡರೆ ನೆಱೆ ದಿಟ್ಟಿ ನೀನೀ ನಾಟಕಕ್ಕಳವಟ್ಟು ರೀತಿಯೊಳೊಪ್ಪಿ ಸೋವಲದೇವಿ ನಡೆತಾರೌ (ಬಸಪು. ೦೨-೪೩). ೪. ಅಭಿನಯಿಸುವವನು; ನಟ; ಪಾತ್ರಧಾರಿ. ೫. ನರ್ತಿಸುವವನು; ನರ್ತಕ: "ನಟಃ, ನಟಕಃ, ನಾಟಕಃ, ನಟನ್, ಈ ೪ ಕುಣಿವಂ" (ಕಾಶಕ್ಕ. ೧೩೮). ೬. (ಆಲಂ) ವಾಸ್ತವಿಕವಲ್ಲದ ನಡವಳಿಕೆ; ನಟನೆ; ಲೀಲೆ; ವಿನೋದ; ವಿಲಾಸ: ಬರಲು ಕಂಡಸುರಾರಿ ಮುಂಚದೊಳಿರದೆ ಧಿಮ್ಮನೆ ನಿಂದು ನರರಾಚರಣೆಗಳ ನಾಟಕವ ತಾನೇ ನಟಿಸಿ ತೋಱಿದನು ಹಿರಿಯರಿಗೆ ತಾ ಹಿರಿಯನೆಂಬೀ ಗರುವತನವನು ಬಿಸುಟು ಕುಂತಿಗೆ ಕರವ ಮುಗಿದೆಱಗಿದನು (ಕುಪ್ಯಾಉ. ೮-೦೭); ನಾವು ಮಾಡುವುದೇನು ಸಲಹುವ ದೈವವೇ ಕೆಡಹುವೊಡೆ ಭುವನದಲಾವ ತಡೆವನು ನೋಡೆ ವಿಶ್ವಂಭರನ ನಾಟಕವು (ಕೌಶಿರಾ. ೨೩-೧೫); ಬೇಗಯೋಧಿಗೆ ತೆರಳು ನಾಟಕ ಸಾಕು ಸತಿಯನು ಕೂಡಿಕೊಳ್ಳೆಂದ (ಕೌಶಿರಾ. ೪೩-೪೯); ತೋಱಿಸಿದ ದೀವಿಗೆಗೆ ಕರುಣವ ತೋಱುತಿತ್ತನು ಬಾಲವನು ನಗೆಗಾಱರಿಗೆ ನಾಟಕವ ನಟಿಸುತ ವೀರಹನುಮಂತ (ತೊರರಾ. ೫-೭-೪೫); ನಾಟಕವ ನೋಡು ಬ್ರಹ್ಮಾಂಡರಂಗಸ್ಥಲದಿ ಕೋಟಿ ನಟರಾಂತಿಹರು ಚಿತ್ರಪಾತ್ರಗಳ (ಮಂಕುಕ. ೨೫೪). ೭. (ಆಲಂ) ಕೃತ್ರಿಮವಾದ ವ್ಯವಹಾರ; ತೋರಿಕೆಯ ವರ್ತನೆ; ಬೂಟಾಟಿಕೆ: ಅವನದೆಲ್ಲಾ ಬರಿಯ ನಾಟಕ. ಅವನನ್ನು ನಂಬಬೇಡ (ರೂಢಿ). 'ನಾಟಕವಾಡು' ಪರಾ. ೮. ತೋರಿಕೆಯ ವರ್ತನೆಯುಳ್ಳವನು; ಕೃತ್ರಿಮವಾದ ನಡವಳಿಕೆಯುಳ್ಳವನು; ಡಂಭಕ: ದುಡಕ್ಕಂಜಿ ಜಂಗಮಕ್ಕಿಕ್ಕುವ ದೋಷಕ್ಕಂಜಿ ಧರ್ಮವ ಮಾಡುವ ಬೇಡುವ ಕಾಟಕ್ಕಂಜಿ ತ್ರಿವಿಧವ ಕೊಡುವ ನಾಟಕರಿಗೇಕೋ ಸದ್ಭಕ್ತಿ (ಮೋಳಿಮಾ. ೩೪-೧೪೩).

ನಾಟಕದ ಕಂಪನಿ = ನಾಟಕಗಳನ್ನು ಪ್ರದರ್ಶಿಸುವ ಸಂಘ,-ಸಂಸ್ಥೆ: ಗುಬ್ಬಿವೀರಣ್ಣನವರ ನಾಟಕದ ಕಂಪನಿ ಒಂದು ಕಾಲಕ್ಕೆ ತುಂಬ ಪ್ರಸಿದ್ಧವಾಗಿದ್ದಿತು (ರೂಢಿ). ನಾಟಕ ಹೂಡು = ತೋರಿಕೆಯ ವರ್ತನೆಯನ್ನು ಮಾಡು; ಕೃತ್ರಿಮವಾದ ವ್ಯವಹಾರವನ್ನು ನಡೆಸು: ಸರ್ಕಾರ ಮತ್ತು ಕೋರ್ಟುಗಳು ತೋರಿಕೆಯ ನಾಟಕ ಹೂಡಿ, ಸ್ವತಂತ್ರವಾಗಿ ಬದುಕು ಸಾಗಿಸುತ್ತಿದ್ದ ಜನಸಮೂಹದಿಂದ ಕೆಲವರನ್ನು ಬೇರ್ಪಡಿಸುತ್ತಿದ್ದರು (ಪುನರು. ೫೫೦). ನಾಟಕಾಂತ ಸಾಹಿತ್ಯ = ನಾಟಕದ ಅಭ್ಯಾಸದಿಂದ ಮುಕ್ತಾಯ ಹೊಂದುವ ಸಾಹಿತ್ಯವ್ಯಾಸಂಗ; P ಹಿಂದೆ ಸಾಹಿತ್ಯವನ್ನು ಅಭ್ಯಾಸ ಮಾಡುವವರು ನಾಟಕವನ್ನು ಸಾಹಿತ್ಯದ ಕಡೆಯ ಹಂತವಾಗಿ ಅಭ್ಯಾಸಮಾಡುತ್ತಿದ್ದರು. ಹಾಗೆ ಅಭ್ಯಾಸಮಾಡುವವರನ್ನು 'ನಾಟಕಾಂತಸಾಹಿತ್ಯವಿದ್ವಾಂಸ' ಎಂದು ಕರೆಯುತ್ತಿದ್ದರು: ಚತುರ್ವೇದ–ಷಟ್‌ಶಾಸ್ತ್ರ–ನಾಟಕಾಂತಸಾಹಿತ್ಯ . . . ಜ್ಯೋತಿಷ್ಯ ಹೀಗೆ ಎಲ್ಲವುದರಲ್ಲಿಯೂ . . . ಗಣಪತಿಯಾಗ ಪರಿಣತನಾಗಿದ್ದ (ಹೊಸಕ್ಷಿ. ೩೭).

[ಸಂ.]

ನಾಟಕಕವಿ (ನಾ). ಪ್ರಧಾನವಾಗಿ ನಾಟಕಗಳನ್ನೇ ರಚಿಸುವ ಕವಿ; ನಾಟಕಕರ್ತೃ: ಸ್ವಾತಂತ್ರ್ಯದ ತೇಜಸ್ಸುಳ್ಳವರಾದ ಕಾಳಿದಾಸಾದಿ ನಾಟಕಕವಿಗಳ ನಾಟಕವೇ ಸಂಸ್ಕೃತದ ಉತ್ತಮನಾಟಕ (ಸಂನಾಟ. VII ಮುನ್ನುಡಿ).

[ನಾಟಕ + ಕವಿ$_5$]

ನಾಟಕಕಾರ (ನಾ). ನಾಟಕವನ್ನು ರಚಿಸುವವನು: ಅಶ್ವಘೋಷ, ಭಾಸ, ಕಾಳಿದಾಸ, ಭವಭೂತಿ ಮೊದಲಾದ ನಾಟಕಕಾರರ ನಾಟಕಗಳನ್ನು ನೋಡಿ ಪಾಶ್ಚಾತ್ಯರು . . . ಎಂದು ಅಭಿಪ್ರಾಯಪಟ್ಟಿದ್ದಾರೆ (ಭಾರದ. ೫೭೦); ಕಾಲೈಕ್ಯ . . . ತನ್ನ ಕಾಲದ ಕೆಲವು ನಾಟಕಕಾರರ ಸಂಪ್ರದಾಯವೆಂದು ಮಾತ್ರ ಹೇಳಿದ್ದಾನೆ (ಅರಿಕಾ. ೫೦ ಪೀಠಿಕೆ). [ನಾಟಕ + – ಕಾರ$_1$ (<–ಕಾಱ)]

ನಾಟಕಚಕ್ರ (ನಾ). ೧. ನಾಟಕಗಳ ಗುಂಪು. ೨. ಭಾಸನೆಂಬ ಕವಿ ಸಂಸ್ಕೃತಭಾಷೆಯಲ್ಲಿ ಬರೆದಿರುವ ನಾಟಕಗಳ ಸಮೂಹ: ನಾಟಕಚಕ್ರ ಎಂಬ ಮಾತು ಕನ್ನಡಕ್ಕೆ ಬಳಕೆಯಿಲ್ಲ. ಆದರೆ . . . ನಾಟಕಚಕ್ರ ಎಂದೊಡನೆಯೆ ಭಾಸಕವಿಯ ನೆನಪಾಗುವುದು ಖಂಡಿತ (ಕನ್ನನು. ೨೩-೭; 1938). ೩. ವರಸ್ಪರ ಸಂಬಂಧವುಳ್ಳ ಏಕಕರ್ತೃಕವಾದ ನಾಟಕಗಳ ಸಮೂಹ; P ಈಚೆಗೆ ಕೆಲವು ನಾಟಕಕಾರರು ತಮ್ಮ ನಾಟಕಗಳನ್ನೆಲ್ಲ 'ನಾಟಕಚಕ್ರ'ವೆಂಬ ಹೆಸರಿನಲ್ಲಿ ಸಂಕಲಿಸುತ್ತಿದ್ದಾರೆ: 'ಸಂಸ'ರ 'ನಾಟಕ ಚಕ್ರ' ಮೈಸೂರಿನ ರಾಜಒಡೆಯರ ಇತಿಹಾಸವನ್ನು ನಿರೂಪಿಸುತ್ತದೆ (ನಡದಾ. I, ೨೪೨). [ನಾಟಕ + ಚಕ್ರ$_1$]

ನಾಟಕತಂತ್ರ (ನಾ). ನಾಟಕರಚನೆಯ ಉಪಾಯ,-ತಾಂತ್ರಿಕ ಉಪಯೋಗ: ಮುಖ್ಯವಾಗಿ ಶ್ರೀರಂಗರ ನಾಟಕತಂತ್ರ ತನ್ನ ಉದ್ದೇಶ ಮುಗಿದ ಮೇಲೆ, ಮುಂದಿನ ಬೆಳವಣಿಗೆಯನ್ನು ಕಾಣಲಿಲ್ಲ (ನಡದಾ. I, ೨೨೮).

[ನಾಟಕ + ತಂತ್ರ]

ನಾಟಕಧರ (ನಾ). ನಾಟಕವಾಡುವವನು; ಲೀಲೆಯಾಡುವವನು; ಆಟಕಟ್ಟುವವನು: ಆಟಪಾಟಗಳೆಲ್ಲ ಅಂತರ್ಯಾಮಿಗೆ ಎನ್ನಿ . . . ಕೋಟಲೆ ಸಂಸಾರ ನಾಟಕಧರಗೆಯೆನ್ನಿ (ಪುರಂದ. ೦-೭೦-೩). [ಸಂ.]

ನಾಟಕಧಾರಿ (ನಾ). ೧. ಪಾತ್ರಧಾರಿ; ನಟ. ೨. ಸೂತ್ರಧಾರ.

[ಸಂ. ನಾಟಕಧಾರಿನ್]

ನಾಟಕಪ್ರಕರ (ನಾ). ದೃಶ್ಯಪ್ರಬಂಧಗಳ ಸಮೂಹ; ರೂಪಕಗಳ ಗುಂಪು: ಮತ್ತಮಾ ಮಹಾವನಂ . . . ನಾಟಕಪ್ರಕರದಂತೀಹಾ ಗೋಪಗೂಹಿತಮುಂ . . . ನಿರಂತರಚ್ಛಾಯಾಶೇಷವಾಗಿಯುಂ ಕೃತಾಂತರೂಪಮಲ್ತು (ಚಂದ್ರಪು. ೫-೫೨ ವ): ನಾಟಕಪ್ರಕರದಂತೆ ವಿಪುಳ ವೀಥೀವಿಭಾಸಿಯುಂ . . . ಎಂಬ ಮಹನೀಯಮಹಿಮೆಯಂ ತಳೆದು (ಪುಷ್ಪಪು. ೯-೩೦ ವ). [ನಾಟಕ + ಪ್ರಕರ್ಷ]

ನಾಟಕಪ್ರದರ್ಶನ (ನಾ). ನಾಟಕವನ್ನು ಅಭಿನಯಿಸುವಿಕೆ; ನಾಟಕ ವಾಡುವಿಕೆ: ನಮ್ಮಲ್ಲಿ ನಾಟಕಪ್ರದರ್ಶನಕ್ಕೆ ಏನೂ ಅನುಕೂಲತೆಗಳಿಲ್ಲದಿರುವದರ ಬಗ್ಗೆ ಟೀಕೆ-ಟಿಪ್ಪಣಿಗಳನ್ನು ನಾವು ಕೇಳುತ್ತಲೇ ಇದ್ದೇವೆ (ನಡದಾ. I, ೨೫೧). [ನಾಟಕ + ಪ್ರದರ್ಶನ]

ನಾಟಕಪ್ರಬಂಧ (ನಾ). ಅಭಿನಯಕ್ಕೆ ಅಳವಡಿಸುವ ಕೃತಿ; ದೃಶ್ಯಕಾವ್ಯ; ರೂಪಕ: ಪೂಜ್ಯನಾದ ವಾಲ್ಮೀಕಿಮುನಿಯು . . . ತನ್ನಿಂದ ರಚಿಸಲ್ಪಟ್ಟ ಈ ನಾಟಕಪ್ರಬಂಧವಂ ನೋಡುವುದಕ್ಕೋಸ್ಕರ ನಮ್ಮಂ ಸನ್ನಿಧಿಗೆ ಬರುವಂತೆ ಆಜ್ಞಾಪಿಸಿ ಇದ್ದಾನೆ (ಕಗವಿ. ೧೦೭ ಉತ್ತರರಾಮಚರಿತ್ರೆ ಕಥೆ).
[ನಾಟಕ + ಪ್ರಬಂಧ]

ನಾಟಕಪ್ರೇಮಿ (ನಾ). ನಾಟಕದ ಬಗ್ಗೆ ಅಭಿರುಚಿಯುಳ್ಳ ವ್ಯಕ್ತಿ,-ಆಸಕ್ತಿಯುಳ್ಳ ವ್ಯಕ್ತಿ: ನಾಟಕಪ್ರೇಮಿಗಳು ಸಾಧಾರಣವಾಗಿ ಪ್ರಪಂಚದ ಮೂರು ಮುಖ್ಯ ನಾಟಕಸಾಹಿತ್ಯಗಳನ್ನು ನೋಡಬೇಕು (ಸಂನಾಟ. iii ಮುನ್ನುಡಿ).
[ನಾಟಕ + ಪ್ರೇಮಿ]

ನಾಟಕಮಂದಿರ (ನಾ).=ನಾಟಕಶಾಲೆ ೧: ನಾಟಕಮಂದಿರದಿಂದ ಹೊರಬೀಳುವಾಗ, ಕಾವ್ಯಗ್ರಂಥವನ್ನು ಕೆಳಗಿಟ್ಟಾಗ, ರಸದ ಧಾರೆಯೂ ಕತ್ತರಿಸಿ ಹೋಗುವುದನ್ನು ಅನುಭವಶಾಲಿಗಳು ಬಲ್ಲರು (ಭಾರಮಿ. ೩೭೮).
[ನಾಟಕ + ಮಂದಿರ]

ನಾಟಕರಂಗ (ನಾ). ನಾಟಕವನ್ನು ಪ್ರದರ್ಶಿಸುವ ವೇದಿಕೆ; ರಂಗಸ್ಥಳ; ರಂಗಭೂಮಿ. [ನಾಟಕ + ರಂಗ$_2$]

ನಾಟಕವಾಡು (ಕ್ರಿ). ೧. ನಾಟಕವನ್ನು ಅಭಿನಯಿಸು; ದೃಶ್ಯಪ್ರಬಂಧವನ್ನು ಪ್ರದರ್ಶಿಸು: ದೊರೆತ ರಂಗಭೂಮಿಯ ಮೇಲೆ, ದೊರೆತ ಪ್ರೇಕ್ಷಕರೆದುರು ನಾಟಕವಾಡುವ ಧೈರ್ಯ ನಮ್ಮ ನಾಟಕಕಾರರಿಗಿರಬೇಕು (ನಡದಾ. I, ೨೫೨): ನಮ್ಮೂರಲ್ಲಿ ಪ್ರತಿವರ್ಷ ಶಿವರಾತ್ರಿಗೆ ನಾಟಕವಾಡುತ್ತಾರೆ (ರೂಢಿ). ೨. ಬೂಟಾಟಿಕೆ ಮಾಡು; ಸೋಗುಹಾಕು: ಆತನು ಏನೂ ತಿಳುವಳಿಕೆಯಿಲ್ಲದಿದ್ದರೂ ಪಂಡಿತನಂತೆ ನಾಟಕವಾಡುತ್ತಾನೆ (ರೂಢಿ).
[ನಾಟಕ + ಆಡು$_1$]

ನಾಟಕಶಾಲೆ (ನಾ). ೧. ನಾಟಕವನ್ನು ಪ್ರದರ್ಶಿಸುವ ಮಂಟಪ,-ಕಟ್ಟಡ; ಥಿಯೇಟರು: ನಾಟಕಶಾಲೆಯೊಳಭಿನವಹಾಟಕಮಣಿಘಟಿತ ಧೂಪಘಟಧೂಮಚಯೋದ್ಘಾಟಿತಘನಕೆ ನಲಿವ ನವಿಲಾಟಮನನುಂರಿಸೆ ವರ್ತಿಪರ್ ಸುರಸತಿಯರ್ (ಪಾರ್ಶ್ವಪು. ೧೬-೨೧). ೨. ನರ್ತನಶಾಲೆ: ಶ್ರೀಮನ್ಮಹಾಸಾಮನ್ತಂ ಮಾರ್ತ್ತಣ್ಡಯ್ಯಂ ತಮ್ಮ ಮುತ್ತಯ್ಯಂ ಮಾಡಿಸಿದ ಬಸದಿಯಂ ಪಡಿಸಲಿಸಿ ನಾಟಕಶಾಲೆಯಂ ಮಾಡಿಸಿ ತನ್ನ ಕೀರ್ತ್ತಿ ಶಿಳಾಸ್ತಂಭ ಮನಾಚನ್ದ್ರಾರ್ಕ್ಕತಾರಂಬರಂ ನಿಲಿಸಿದ (ಸೌಇಇ. XI-1, ೭೮-೮೬; 1045); ಚಕಚಕಿಸುತ ರನ್ನಗನ್ನಡಿಯಲ್ಲಲ್ಲಿ ಮಕರಿಸೆ ಸಾಲುಸಾಲಾಗಿ ಅಕಳಂಕಚಂದ್ರಲೋಕವೊಯೆನೆ ನೃಪನ ನಾಟಕಶಾಲೆ ಮೆಱೆವುದೇನೆಂಬೆ (ಭರಜ. ೧೨-೧೮); ಯಿಂಮಡಿ ಹಿರುಕೆಂಪಯಗೌಡರವರ ಪಟ್ಟದ ನಾಟಕಶಾಲೆಯ ಶೃಂಗಾರಮ್ಮನವರು ಮಾಡಿಸಿದ ಬಸವಳೆ ಮಂಡಪ (ಮೈಆರಿ. ೧೯೩೮, ೧೦೦-೫; ಸು. 1630). [ನಾಟಕ + ಶಾಲೆ$_3$]

ನಾಟಕಶಿಲ್ಪ (ನಾ). ನಾಟಕ ರಚನೆ,-ಸಂವಿಧಾನ: ನಾಟಕಶಿಲ್ಪದಲ್ಲಿ ಸಂಸರು ತಮ್ಮ ಕಲ್ಪನಾಸ್ವಾತಂತ್ರ್ಯವನ್ನು ನಿರ್ಬಾಧಿತವಾಗಿ ನಡಸಿಕೊಂಡಿದ್ದರೂ ಅವರ ಊಹೆಯ ನಾವೆ . . . ಸ್ವಚ್ಛಂದವಾಗಿ ನಡೆದದ್ದಲ್ಲ (ಚಿಟ್ಟಅ. ೩ ಅರಿಕೆ). [ನಾಟಕ + ಶಿಲ್ಪ]

ನಾಟಕಾಭಿನಯ (ನಾ). = ನಾಟಕಪ್ರದರ್ಶನ: ನಾಟಕಾಭಿನಯವನ್ನು ನೋಡುತ್ತಾ ಕುಳಿತಿರುವ ಸಾಮಾಜಿಕರು, ಪ್ರೇಕ್ಷಕರು (ಭಾರಮಿ. ೩೫೮): ಇಂದಿನ ಅವರ ನಾಟಕಾಭಿನಯ ಪ್ರೇಕ್ಷಣೀಯವಾಗಿದ್ದಿತು (ರೂಢಿ).
[ನಾಟಕ + ಅಭಿನಯ]

ನಾಟಕೀಕರಣ (ನಾ). ಕಥೆ, ನಿರೂಪಣೆಗಳನ್ನು ನಾಟಕವಾಗಿ ಪರಿವರ್ತಿಸುವುದು. 'ನಾಟಕೀಕರಿಸು' ಪರಾ. [ಸಂ.]

ನಾಟಕೀಕರಿಸು (ಕ್ರಿ). ಕಥೆ, ನಿರೂಪಣೆಗಳನ್ನು ನಾಟಕರೂಪಕ್ಕೆ ಪರಿವರ್ತಿಸಿ ಶಿಕ್ಷಣದಲ್ಲಿ ಉಪಯೋಗಿಸು: ಈಚೆಗೆ ಪಾಠಗಳನ್ನು ನಾಟಕೀಕರಿಸಿ ಬೋಧಿಸುವುದನ್ನು ನೋಡಿದರೆ ಅದರ ಪ್ರಭಾವ ಗೊತ್ತಾಗುತ್ತದೆ (ಶಿಕ್ಷದ. ೫೪). [ನಾಟಕೀಕರಣ + -ಇಸು$_3$]

ನಾಟಕೀಗಾಯಕಿ (ನಾ). ನಾಟಕದ ಸಂಗೀತ; ಶಾಸ್ತ್ರೀಯವಲ್ಲದ ಹಾಗೂ ಕೇವಲ ಪಾಮರರಂಜನೆಗಾಗಿ ಮಾತ್ರ ಬಳಸಲ್ಪಡುವ ಸಂಗೀತ: ನಾನು ಸಂಗೀತ ಹೆಚ್ಚು ಕಲಿತವನೇ ಅಲ್ಲ - ನನ್ನದೆಲ್ಲಾ ನಾಟಕೀಗಾಯಕಿ (ನಟಸಾ. ೬೩೩).
[ನಾಟಕಿ$_0$ (P ← ಮರಾ. ನಾಟಕೀ) + ಗಾಯಕಿ$_2$]

ನಾಟಕೀಜನ (ನಾ). ನಾಟಕಕಲೆಯಿಂದ ಜೀವಿಸುವ ಜನ; ನಾಟಕವನ್ನು ಉಪವೃತ್ತಿಯಾಗಿಟ್ಟುಕೊಂಡಿರುವ ಜನ: ಆಗಲೇ ಮೊದಲ ಬಾರಿಗೆ ನಾಟಕೀಜನರ ಜೀವನ ಕಾಣಲು ಸಿಕ್ಕಿತು (ಹುಮುಖ. ೦೫೬).
[ನಾಟಕಿ$_0$ (P ← ಮರಾ. ನಾಟಕೀ) + ಜನ]

ನಾಟಕೀಯ (ಗು). ೧. ನಾಟಕಕ್ಕೆ ಯೋಗ್ಯವಾದ; ಅಭಿನಯಕ್ಕೆ ಅನುಕೂಲವಾದ; ನಾಟಕವಾಡಲು ಹೊಂದುವ: ನಾಟಕಗಳಿಗೂ ನಾಟಕೀಯಗುಣವುಳ್ಳ ಶೂನ್ಯಸಂಪಾದನೆಗೂ ವ್ಯತ್ಯಾಸವೇನೆಂದರೆ (ಶೂನ್ಯಕು. ೨೬). ೨. ವಾಸ್ತವಿಕವಲ್ಲದ; ಕೃತ್ರಿಮವಾದ; ಸೋಗಿನ; ತೋರಿಕೆಯ: ಈ ನಾಟಕೀಯವ್ಯವಹಾರ ಬೇಡ, ನಿಜಸ್ಥಿತಿ ತಿಳಿಸಿಬಿಡು (ರೂಢಿ). (ನಾ). ೩. ಅಭಿನಯಪೂರ್ವಕವಾದುದು; ನಟನೆಯಿಂದ ಕೂಡಿದುದು. ೪. ನಾಟಕದ ಸ್ವರೂಪವುಳ್ಳುದು: ಈ ಸಂದರ್ಭಕ್ಕೆ ಹೊಂದಿಕೊಳ್ಳುವ ವಚನಗಳು ಎರಡನೆಯ ಶೂನ್ಯಸಂಪಾದನೆಕಾರನಿಗೆ ಸಿಕ್ಕು ಆತ ಈ ಸನ್ನಿವೇಶವನ್ನು ನಾಟಕೀಯವಾಗಿ ಚಿತ್ರಿಸಿರಬೇಕು (ಶೂನ್ಯಕು. ೯೭). [ಸಂ.]

ನಾಟಕೀಯತೆ(ನಾ). ೧. ನಾಟಕದ ಗುಣ; ಸಂಭಾಷಣೆಗಳು ಹೆಚ್ಚಾಗಿರುವ ಗುಣ: ಶೂನ್ಯಸಂಪಾದನೆಯ ವೈಶಿಷ್ಟ್ಯವೆಂದರೆ, ಅದರ ನಾಟಕೀಯತೆ (ಶೂನ್ಯಕು. ೨೬); ಪು. ತಿ. ನ. ಅವರ 'ಗೋಕುಲನಿರ್ಗಮನ' ಭಾವಗೀತದಂತೆ ಚಲುವಾಗಿದೆ ಆದರೆ ಅದರಲ್ಲಿ ನಾಟಕೀಯತೆ ಅಷ್ಟೊಂದು ಕಂಡುಬರುವದಿಲ್ಲ (ನಡದಾ. I, ೨೪೭). ೨. ಕೃತ್ರಿಮವ್ಯವಹಾರ; ಬೂಟಾಟಿಕೆ; ಅವಾಸ್ತವಿಕ ನಡವಳಿಕೆ: ಸ್ಟೂಅರ್ಟ್ ಲಿಟರ್‌ಬಾಕ್ಸ್ ಹತ್ತಿರ ಹೋಗಿ ತನ್ನ ಪೈಪನ್ನು ಎಸೆದು ಬಂದು - "ನನ್ನ ನಾಟಕೀಯತೆಯನ್ನು ಕ್ಷಮಿಸು" ಎಂದ (ಹೊಸಕ್ಷಿ. ೨೦೫). [ಸಂ. ನಾಟಕೀಯತಾ]

ನಾಟಕೀಯವ್ಯಂಗ್ಯ (ನಾ). ನಾಟಕದಲ್ಲಿ ತೋರುವ ವಾಚ್ಯಾರ್ಥಕ್ಕಿಂತ ಭಿನ್ನವಾದ ಅರ್ಥವಿಶೇಷ,-ಕವಿವಿವಕ್ಷಿತವಾದ ಅಂತರಾರ್ಥ; P ನಾಟಕದ ಸಂದರ್ಭಗಳಲ್ಲಿ ಕಂಡುಬರುವ ವಿಧಿಯ ಅಣಕ. ವ್ಯಕ್ತಿಯ ಅಥವಾ ಘಟನೆಯ ಪರಿಣಾಮವು ನಿರೀಕ್ಷಣೆಗೆ ವಿರುದ್ಧವಾಗಿರುವುದು: ಇನ್ನೊಂದು ಬಗೆಯ ವೈಷಮ್ಯವನ್ನು ಹೆಸರಿಸಬೇಕು - ಅದನ್ನು 'ನಾಟಕೀಯವ್ಯಂಗ್ಯ' (Dramatic-Irony) ಎಂದು ಸಾಮಾನ್ಯವಾಗಿ ಕರೆಯುತ್ತಾರೆ (ಸಾಹಿಪ್ರ. ೨೦೯). [ನಾಟಕೀಯ + ವ್ಯಂಗ್ಯ]

ನಾಟಕೀಹೃದಯ (ನಾ). ನಾಟಕವನ್ನು ಮೆಚ್ಚುವ ಹೃದಯ : ನಾಟ್ಯ ಸಾಕ್ಷೀನಾಟಕೀಹೃದಯವು ಸತ್ವವನ್ನು ಜೀವಂತಗೊಳಿಸುವುದು(ಪ್ರಬಂಧ. ೩೦).
[ನಾಟಕಿ$_0$ (P ←ಮರಾ. ನಾಟಕೀ) + ಹೃದಯ]

ನಾಟಕುರಂಜಿ (ನಾ). [ಸಂಗೀತ] ಒಂದು ರಾಗದ ಹೆಸರು : ಮಾಧವ ಮನೋಹರೀ, ಮಧ್ಯಮಾವತೀ, ದೇವಮನೋಹರೀ, ನಾಟಕುರಂಜೀ ಎಂಬಿವು ಭಾಷಾಂಗಲಕ್ಷಣಗಳನ್ನುಳ್ಳವುಗಳು (ಚತುಪ್ರ. ೧೩೦).
[ಸಂ. ನಾಟಕುರಂಜೀ]

ನಾಟಕೋತ್ಸವ (ನಾ).=ನಾಟ್ಯೋತ್ಸವ: ಈಚೆಗೆ ಅನೇಕ ಕಡೆ ನಾಟಕೋತ್ಸವಗಳು ನಡೆಯುತ್ತಿವೆ (ರೂಢಿ). [ನಾಟಕ + ಉತ್ಸವ]

ನಾಟಿ$_1$, ನಟ್ಟಿ$_1$, ನಟ್ಟು$_3$, ನಟ್ಟೆ$_1$, ನೆಟ್ಟೆ$_4$ (ನಾ). ೧. ಬತ್ತ, ರಾಗಿ ಮೊದಲಾದ ಪೈರುಗಳ ಸಣ್ಣ ಸಸಿ,-ಎಳೆಗಿಡ : ಅನುಭಾವವೆಂಬುದೊಂದೆತ್ತು . . . ನಿನ್ನೆ ಮೆಟ್ಟಿದ ನಾಟಿಯ ಮೊನ್ನೆ ಮೇವುದ ಕಂಡೆ (ಅವಚಂ. ೧೩೨-೬೯೬); ಭೂಗರ್ಭದೊಳಗಿರುವ ಬೀಜಗಳ ತೆರದಲ್ಲಿ ಚಡಪಡಿಸುತ್ತಿದೆ ನಾಟಿ ಮೇಲೆ ಸಿಡಿಯೆ! (ಕರುಶ್ರಾ. ೧೯-೪); ದೋಣಿ ನಡೆಸುವಾಗ, ನಾಟಿ ನಡುವಾಗ ತೆರತೆರನ ಹಾಡುಗಳನ್ನು ಹಾಡುತ್ತಾರೆ (ಜಾನಗೀ. ೩೦). ೨. ಅಗೆ ಹಾಕಿ ಮೇಲಕ್ಕೆದ್ದ ಸಸಿಗಳನ್ನು ಬೇರೆ ಕಡೆಯಲ್ಲಿ ನೆಡುವುದು; ಒಗ್ಗುಹಾಕಿದ ಬತ್ತ, ರಾಗಿ ಮುಂತಾದ ಗಿಡಗಳನ್ನು ಕಿತ್ತು ಬೇರೆ ನೆಲದಲ್ಲಿ ಸಾಲುಸಾಲಾಗಿ ನೆಡುವುದು : ನಾಟಿಯ ದಿನದೊಳು ಸಸಿಗಳ ನೂರುವೆ (ಚಂದ್ರವೀ. ೩೦-೨೩); ಬಿತ್ತನೆ, ನಾಟಿ, ಕುಯಿಲು ಮುಂತಾದವಕ್ಕೂ ಈ ತೆರನಾಗಿ ಮಾರ್ಗನಿರ್ದೇಶನ ಮಾಡಿದ್ದಾರೆ (ತತ್ಕಪ್ರಾ. ೫೦೮); ಶ್ರಾವಣಮಾಸ ಬರುವ ಹೊತ್ತಿಗೆ ಹೊಲಗಳಲ್ಲಿ ಗಿಡ್ಡರಾಗಿಯು ಬಂದು ದೊಡ್ಡರಾಗಿಯ ನಾಟಿಯನ್ನು ಹಾಕಿದ್ದರು (ಹುಟ್ಟಹ. ೭೦). ೩. [ವೈದ್ಯಶಾ] ಒಂದು ಅಂಗಾಂಶವನ್ನು ತೆಗೆದು ಅಗತ್ಯವಿರುವ ಇನ್ನೊಂದು ಅಂಗಕ್ಕೆ ಹಚ್ಚುವುದು,-ಕಸಿಮಾಡುವುದು : ಕೈ ಚರ್ಮ ಇಲ್ಲವೇ ಕಾಲಿನ ಮೇಲೆ ಮಂಜುಗಡ್ಡೆ ಇರಿಸಿ ಸುಮಾರು ೫° ಸಂ. ಗ್ರೇ. ಗೆ ತಂಪುಗೊಳಿಸಿ ಆ ಭಾಗವನ್ನು ಕತ್ತರಿಸಿ ಹಾಕಿದರೂ ತಿಳಿಯದುತೆ ಮಾಡಬಹುದು. ಹೀಗೆ ಚರ್ಮದ ನಾಟಿಗಳನ್ನು (ಗ್ರಾಫ್ಟ್ಸ್) ನೋವಿಲ್ಲದೆ ತೆಗೆದಿದ್ದಾರೆ (ಕವಿಕೋ. I, ೪೭೩). **ನಟ್ಟಿ$_1$** : ೨. ಮಳೆಗಾಲದ ನಟ್ಟಿ ಮುಗಿದರೆ ಮುಡೂರನ ಮುಂದಿನ ಮೊಕ್ಕಾಂ ಬಾಳೆಹೊನ್ನೂರು (ಹಹಸ. ೭೪); ನಟ್ಟಿ ಎಷ್ಟಾಯಿತು ? ಎಂದು ಶೀನಪ್ಪ ಕೇಳಿದ (ಅನಾಥ. ೧೧೭). **ನಟ್ಟು$_3$** : ೪. ವ್ಯವಸಾಯದ ಭೂಮಿಯಲ್ಲಿ ಬೆಳೆಯುವ ಅನಗತ್ಯವಾದ ಹುಲ್ಲು,-ಗಿಡ ; ಕಳೆ : ಭೂಮಿಯು ಹಸನಾಗಿರಬೇಕು. ಅದರಲ್ಲಿ ಕರಿಕೆ ಕಣಿಗೆ ನಟ್ಟುಗಳು ಇರಲಾಗದು (ಕೃಷಿಪ್ರ. ೨೫); ಆ ಕೆರೆಯ ಹೊಲದಲ್ಲಿ ನಟ್ಟು ಬಹಳ ಬೆಳೆದಿದೆಯೆಂದು ಕೇಳಿದ್ದೇನೆ (ಮಣ್ಣಮ. ೪೦); ಅಲ್ಲಲ್ಲಿ ಕರಿಕೆ, ನಟ್ಟು ಬೆಳೆದು ಹೊಲ ಕಾಡಿನಂತಾಗಿತ್ತು (ಜಿವರಿ. ೫೮); ಈ ಭೂಮಿಯಲ್ಲಿ ನಟ್ಟು ಬೆಳೆಯುವದು ಬಹಳ (ವಿಜಾಭೂ. ೦೮). **ನಟ್ಟೆ$_1$** : ೧. ಬೀಱಿದ ಬಿಱುಗೋಲುಗಳೆಂಬ ನಟ್ಟೆಯನೂಱಿದನೀರ್ಗೈಗಡೆಗೆ (ಮೋಹತ. ೩೮-೪೭). **ನೆಟ್ಟೆ$_4$** : ೨. ಇವತ್ತು ನೆಟ್ಟೆ ಎಂದು ಗೊತ್ತಿಲ್ಲವೇ ? (ಗಂಗಾಳ. ೧೩೨).

ನಟ್ಟ ಕಡಿ = ಕಳೆಗಳನ್ನು ನಾಶಪಡಿಸು : ನಟ್ಟ ಕಡೀತೀನಿ . . . ನೇಗಲಾ ಹೊಡೀತೀನಿ (ಬಾಬಲ. ೫). ನಟ್ಟ ಹೊಡೆ=ನಟ್ಟ ಕಡಿ : ಹೊಱೆಯ ಹೊಱುವೆನು ನಟ್ಟ ಹೊಡ [ಡೆ] ವೆನು ಹುರಿಯ ಬಿಡುವೆನು (ರೇವಕಾ.೧-೧೯). ನಟ್ಟಿನ ಭತ್ತ = ನಾಟಿಹಾಕಲು ಉಪಯೋಗಿಸುವ ಭತ್ತ ; ಬೀಜದ ಭತ್ತ : ನಟ್ಟಿನ ಭತ್ತ ಮೂಡೆ ೪೫ (ಮೈಆರಿ. ೧೯೪೩, ೪೭-೨೫ : 1406). ನಾಟಿಯ ಓಟ = "ನಾಟಿ ಹಾಕಿದ ಗದ್ದಯಲ್ಲಿ ಓಡುವ ಒಂದು ಓಟ ಸ್ಪರ್ಧೆ" (ಹುಲಿಹಾ. ಕೋಶ). ಈ ಮೂವರು ನಾಟಿಯ ಓಟವನ್ನು ನೋಡಲೆಂದು ಮುಂಜಾನೆಯೇ ಕುಟ್ಟಂಚಟ್ಟೀರ ಮನೆಗೆ ಹೋದರು (ಹುಲಿಹಾ. ೨೪). ನಾಟಿ ಹಾಕು = ೧. ಒಗ್ಗುಹಾಕಿದ ಸಸಿಗಳನ್ನು ಕಿತ್ತು ಬೇರೆ ಸ್ಥಳದಲ್ಲಿ ನೆಡು : ಇವತ್ತು ನಾವು ಒಬ್ಬನ ಗದ್ದೆಗೆ ಪೈರು ನಾಟಿ ಹಾಕುವುದಕ್ಕೆ ಹೋದರೆ ಅವನು ನಮಗೆ ದುಡ್ಡು ಕೊಡುವಂತಿಲ್ಲ (ಹುಟ್ಟಹ. ೭೧); ಒಂದು ಗೇಣು ಪೈರಾದ ನಂತರ ಅದನ್ನು ಕಿತ್ತು ಗದ್ದೆಯಲ್ಲಿ ನಾಟುವುದು ಹೆಚ್ಚು ಅನುಕೂಲವಾದದ್ದು. ಈ ಪದ್ಧತಿಗೆ ನಾಟಿಹಾಕುವುದು ಎಂದು ಹೆಸರು (ವ್ಯವಮ. ೪೬); ಓಟ ನೋಡಲು ಬಂದವರೆಲ್ಲ ಗದ್ದೆಗಿಳಿದು ನಾಟಿ ಹಾಕುವುದರಲ್ಲಿ ನೆರವಾಗುವುದು ರೂಢಿ (ಹುಲಿಹಾ. ೨೪). ೨. ಬೇರೂರಿಸು ; ಆರಂಭಿಸು ; ಮೊದಲುಮಾಡು : ಭಾರತದಲ್ಲಿ ಇಂಗ್ಲೆಂಡು ತನ್ನ ಶಿಕ್ಷಣ ಪದ್ಧತಿಯನ್ನು ನಾಟಿ ಹಾಕಿದಾಗ ವೃತ್ತಿಶಿಕ್ಷಣಶಾಲೆಗಳು . . . ಆರಂಭವಾದುವು (ಶಿಕ್ಷದ. ೧೯೪).
[< ನಾಂಟು. / ಕೊಡ. ನಾಟಿ; ತುಳು. ನಾಟಿ, ನಟ್ಟಿ, ನೆಟ್ಟಿ]

ನಾಟಿ$_2$ (ನಾ). [ಸಂಗೀತ] ಒಂದು ರಾಗದ ಹೆಸರು : ಬಳಿಕ ಸಮಸ್ತ ರಾಗಂಗಳೊಳಗೆ . . . ನಾಟಿ ಸಾರಂಗ . . . ಮಧ್ಯಮಾವತಿಯೆಂಬ ಮೂವತ್ತಾಱು ರಾಗಂಗಳೇ ಮುಖ್ಯವಾಗಿ . . . ಪ್ರಸಿದ್ಧಗೊಂಡಿರ್ಪವು (ವಿವೇಕ. ೨೫೦); ಸಾಳಂಗ ನಾಟಿ ಭೈರವಿ ದೇಶಿ . . . ವಸಂತಭೈರವಿ [ಯಱಿ] ದೊಳವನವನೊಲ್ದು ಪಾಡಿದ (ತ್ರಿಭುತಿ. ೬-೩೦); ಸಾಳಂಗಂ ನಾಟಿ ದೇಶಿ ಗುಜ್ಜರಿಯಾ . . . ವೀಣೆಯಲ್ಲಿ ಮುನಿ ಬಾಜಿಸಿದಂ (ವೀರವಿ. ೬-೮೯). [ಸಂ. ನಾಟೀ]

ನಾಟಿ$_3$ (ಗು). ನಾಡಿಗೆ ಸಂಬಂಧಪಟ್ಟ : ಒಂದು ದೇಶದಲ್ಲಿ ಹಿಂದಿನಿಂದ ಬಂದಿರುವ ; ವಿದೇಶೀಯವಲ್ಲದ ; ಸ್ವದೇಶಿ ; ದೇಶೀಯ. 'ನಾಟಿ ಔಷಧ' ಪರಾ. [← ಇಂ. Native]

ನಾಟಿಅಂಜೂರ (ನಾ). ಒಂದು ಬಗೆಯ ಅಂಜೂರದ ಗಿಡ : (ಮೈಜಿಗಿ. ೩೬-೭೨೨). [ನಾಟಿ$_3$ + ಅಂಜೂರ]

ನಾಟಿಔಷಧ (ನಾ). ಸ್ವದೇಶದ ಗಿಡಮೂಲಿಕೆಗಳಿಂದ ತಯಾರು ಮಾಡಿದ ಮದ್ದು ; ಸ್ವದೇಶೀಔಷಧ : ನಾಟಿಔಷಧಗಳಿಂದ ಕೇವಲ ತಾತ್ಕಾಲಿಕಗುಣ ಸಿಕ್ಕುತ್ತಿತ್ತು (ವಿದ್ಯಾರ. ೨೮). [ನಾಟಿ$_3$ + ಔಷಧ]

ನಾಟಿಕುರಂಜಿ (ನಾ). [ಸಂಗೀತ] ಒಂದು ರಾಗದ ಹೆಸರು ; ನಾಟಕುರಂಜಿ : ನಾಟಿಕುರಂಜಿ-೨೮ನೇ ಮೇಳಕರ್ತ ಹರಿಕಾಂಭೋಜಿಯಲ್ಲಿ ಜನ್ಯ. ಉಪಾಂಗ ರಕ್ತಿರಾಗ. ಘನರಾಗಗಳಲ್ಲೊಂದು (ಸಂಗೀಚಂ. ೦೪೮).
[< ಸಂ. ನಾಟಕುರಂಜೀ]

ನಾಟಿಕೆ$_1$, ನಾಟಿಗೆ (ನಾ). ೧. ನೆಡುವಿಕೆ : "ನಾಟಿಕೆ, ಮೊಳೆ, ಮೊಳಕೆ, ಕೊಂಬು, ಕುಡಿ" (ಕಂನುಹು. ೮೭); ಬೆಳೆಯಾದ ಮೇಲೆ ಹೊಲದಲ್ಲಿ ಒಂದಾದರೂ ಕಸದ ನಾಟಿಕೆ ಇಲ್ಲದ ಹಾಗೆ . . . ತೆಗೆದುಹಾಕುತ್ತೇವೆ (ಕೃಷಿಪ್ರ. ೨೦). ೨. ನೆಟ್ಟ ಸಸಿ : ಬಿತ್ತಿದ ಬಳಿಕ ನಾಟಿಕೆಯು ಸುಮಾರುವೊಂದು ಪೂಟುಯೆತ್ತರಾಗುವದರೊಳಗೆಯೆರಡು ಸಾರಿಯೆಡೆ ಹೊಡಿದರೆಂದರೆ ಗಳೆಯ ಕೆಲಸ ತೀರಿತು (ಕಥಾಗೆ. ೨೬೮). **ನಾಟಿಗೆ** : ೧. ಅದು ನಾಟಿಗೆಯ ಕಾಲವಾಗಿತ್ತು (ಚೀನಬಾ. ೦೨೭).
[ನಾಟು$_1$ (<ನಾಂಟು) + – ಇಕೆ]

ನಾಟಿಕೆ$_2$ (ನಾ). ನಾಟಕದಲ್ಲಿ ಒಂದು ಬಗೆ ; ಒಂದು ಬಗೆಯ ದೃಶ್ಯ ಪ್ರಬಂಧ ; ಹದಿನೆಂಟು ಬಗೆಯ ಉಪರೂಪಕಗಳಲ್ಲಿ ಒಂದು ; P ಶ್ರೀಹರ್ಷನ 'ರತ್ನಾವಳಿ'ಯು ನಾಟಿಕೆಗೆ ಒಂದು ಉದಾಹರಣೆಯಾಗಿದೆ : ನಾಟಿಕೆಯಲ್ಲಿ ವಸ್ತುವು ಕಲ್ಪಿತ. ನಾಯಕನು ಪ್ರಖ್ಯಾತನಾದ ಧೀರಲಲಿತ . . . ಶೃಂಗಾರರಸ ; ಕೈಶಿಕೀವೃತ್ತಿ; ಸಾಧಾರಣವಾಗಿ ನಾಲ್ಕು ಅಂಕಗಳು (ಕೃಪಿಡಿ. ೨೨೦) : ೧. ನಾಟಿಕಾ. ೨. ತ್ರೋಟಕ. ೩. ಗೋಷ್ಠೀ. ೪. ಸಟ್ಟಕ. ೫. ನಾಟ್ಯರಾಸಕ. ೬. ಪ್ರಸ್ಥಾನ. ೭. ಉಲ್ಲಾಪ್ಯ. ೮. ಕಾವ್ಯ. ೯. ಪ್ರೇಂಖಣ. ೧೦. ರಾಸಕ. ೧೧. ಸಂಲಾಪಕ. ೧೨. ಶ್ರೀಗದಿತ.

೧೩. ಶಿಲ್ಪಕ. ೧೪. ವಿಲಾಸಿಕಾ. ೧೫. ದುರ್ಮಲ್ಲಿಕಾ. ೧೬. ಪ್ರಕರಣೀ. ೧೭. ಹಲ್ಲೀಶ. ೧೮. ಭಾಣಿಕ ಎಂದು ಉಪರೂಪಕಗಳು ಹದಿನೆಂಟು ವಿಧ (ಸಂನಾಟ. ೬೨). [ಸಂ. ನಾಟಿಕಾ]

ನಾಟಗದ್ದೆ (ನಾ). ಅಗೆ ಹಾಕಿದ ಪೈರನ್ನು ಕಿತ್ತು ಸಾಲುಸಾಲಾಗಿ ನೆಡಲು ಸಿದ್ಧಪಡಿಸಿದ ಭೂಮಿ; ಕೆಸರುಗದ್ದೆ: ಚಿಂಗುಮಣಿ ಇಷ್ಟರ ತನಕ ಅಷ್ಟು ದೊಡ್ಡ ನಾಟಗದ್ದೆಯನ್ನು ನೋಡಿಯೇ ಇರಲಿಲ್ಲ (ಹುಲಿಹಾ. ೩೪). [ನಾಟು$_1$ + ಗದ್ದೆ (<ಗಜ್ಜಿ)]

ನಾಟಗೆ 'ನಾಟಿಕೆ$_1$' ನೋ.

ನಾಟರಾಗ (ನಾ). = ನಾಟ್ಯ$_2$: ನಾಟರಾಗವು ಲೇಸು ತೋಟವಲ್ಲಿಗೆ ಲೇಸು (ಸರ್ವಜ್ಞ. ೩೩೨). [ನಾಟ್ಯ$_2$ + ರಾಗ]

ನಾಟಸಮಯ, ನಟ್ಟಸಮಯ (ನಾ). ನಾಟಿ ಹಾಕುವ ಕಾಲ; ಒಗ್ಗು ಹಾಕಿದ ಪೈರುಗಳನ್ನು ಕಿತ್ತು ಹಸನು ಮಾಡಿರುವ ಕ್ಷೇತ್ರದಲ್ಲಿ ನೆಡುವ ಕಾಲ: ನಾಟಸಮಯದಲ್ಲಿ ಹೆಂಗುಸರು ಅಗೆ ತೆಗೆದು ಕಂತೆ ಕಟ್ಟುವರು (ಗಾರಳ. ೪೩). **ನಟ್ಟಸಮಯ**: ನಟ್ಟಸಮಯಕ್ಕೇನೆ ಮದುವ ಇರಿಸಿದರು (ಮಾರಮ. ೨). [ನಾಟು$_1$ + ಸಮಯ]

ನಾಟಸಿಪಾಯಿ (ನಾ). ಸ್ವದೇಶದ ದಂಡಾಳಿ; ವಿದೇಶಿಯನಲ್ಲದ ಯೋಧ: ದೇಸಿ ಸಿಪಾಯಿ: ಒಂದೊಂದು ಆನೆಯ ಮೇಲೆ ಸೊಂಟಕ್ಕೆ ಒಂದು ತುಂಡು ಬಟ್ಟೆ ಸುತ್ತಿಕೊಂಡ ನಾಲ್ಕು ಜನ ನಾಟೀಸಿಪಾಯಿಗಳಿರುತ್ತಾರೆ (ಪ್ರವಾಇ. II, ೧೮೭). [ನಾಟ್ಯ$_3$ + ಸಿಪಾಯಿ]

ನಾಟಸು 'ನಾಂಟಿಸು' ನೋ.

ನಾಟು$_1$ 'ನಾಂಟು' ನೋ.

ನಾಟು$_2$ (ನಾ). ೧. ನಾಟುವಿಕೆ; ನೆಡುವಿಕೆ: (೫). ೨. ನಾಟಿಕೊಂಡಿರುವುದು; ಆಳಕ್ಕೆ ಊರಿರುವುದು: ಆ ಮೇರು ೧೬ ಸಾವಿರ ಯೋಜನ ಪ್ರಮಾಣವು ಭೂಮಿಯೊಳಗೆ ನಾಟುಗಿಹುದು (ದಶಲೀ. ೫೭-೬). ೩. ಆಳ; ನಾಟಾಗಿ ತೋಡು (ಕೂಡಿ). [< ನಾಟು$_1$]

ನಾಟು$_3$ 'ನಾಟ್ಯ' ನೋ.

ನಾಟು$_4$ (ನಾ). [ನಾಟ್ಯ] ನಾಟ್ಯದಲ್ಲಿ ಬರುವ ಹತ್ತು ಬಗೆಯ ಅಡವುಗಳಲ್ಲಿ ಒಂದು: ಪ್ರಸಿದ್ಧ ನಾಟ್ಯಾಚಾರ್ಯರು ಈ ಅಡವುಗಳನ್ನು ಹತ್ತು ವಿಧವಾಗಿ ವಿಂಗಡಿಸಿದ್ದಾರೆ. (೧) ತಟ್ಟು, (೨) ಮೆಟ್ಟು, (೩) ನಾಟ್ಟು, (೪) ತಟ್ಟುವೆಟ್ಟು, (೫) ಕುದಿತವೆಟ್ಟು, (೬) ಮೈ, (೭) ಮುಡಿ, (೮) ಜಾತಿ, (೯) ಅರುಧಿ, (೧೦) ನಡೆ (ಅಭಾನ. ೬೨). [←ತಮಿ. ನಾಟ್ಟು]

ನಾಟುಕೋಲು (ನಾ). ನಾಟಿಕಾಲದಲ್ಲಿ ಗುಳಿಗಳನ್ನು ಮಾಡುವುದಕ್ಕಾಗಿ ಉಪಯೋಗಿಸುವ ಚೂಪಾದ ತುದಿಯುಳ್ಳ ಕೋಲು,-ದಂಡ: ನಾಟ ಹಾಕಬೇಕೂಂತ ಹೊರಟವನು ನಾಟುಕೋಲನ್ನೇ ಬಿಟ್ಟುಹೋಗಿದ್ದಾನೆ (ಕೂಡಿ). [ನಾಟು$_1$ (<ನಾಂಟು) + ಕೋಲು$_1$ (<ಕೋಲ್$_1$)]

ನಾಟುನುಡಿ (ನಾ). ಮನಸ್ಸಿಗೆ ತಟ್ಟುವಂತೆ ಹೇಳುವ ಮಾತು; ಹೃದಯಸ್ಪರ್ಶಿಯಾದ ನುಡಿ; ಮನಸ್ಸಿಗೆ ತಾಕುವಂತೆ ಹೇಳುವ ಮಾತು: "ಹುರುಳುನುಡಿ; ಚಟುಕನುಡಿ; ಚುಚ್ಚುನುಡಿ; ನಾಟುನುಡಿ" (Epigram. ೩೦೪೫); ಜೊತೆಗೆ ನನ್ನ ಮನಸ್ಸನ್ನೇ ಕನ್ನಡಿಸುವ ನನ್ನವೇ ಆದ . . . ಚಾಟೂಕ್ತಿಗಳೂ ನಾಟುನುಡಿಗಳೂ ಗಾದೆಗಳೂ ಸಾಮತಿಗಳೂ ಇಲ್ಲಿವೆ (ಇಂಜಾಪ. vi, ಅರಿಕೆ). [ನಾಟು$_1$ (<ನಾಂಟು) + ನುಡಿ$_2$]

ನಾಟುಮುದಿವೆ (ನಾ). ನಾಡಿನ ಮುಖಂಡತನ; ದೇಶದ ನಾಯಕತ್ವ: ಬೇಯ್ಗವರ್ಮರ ನಾಟುಮುದಿವೆಯುಳ್ (ಎಇ. IX, ೨೦-೫; 800). [←ತಮಿ. ನಾಟ್ಟುಮುತುಮೈ]

ನಾಟೇರ (ನಾ). ನಟಿಯ ಮಗ; ನರ್ತಕಿಯ ಪುತ್ರ. [ಸಂ.]

ನಾಟ್ಟು 'ನಡು$_1$' ಪರಾ.

ನಾಟ್ಯ (ನಾ). ೧. [ಕಾವ್ಯವಿಾ] ಸಾತ್ವಿಕ, ವಾಚಿಕ, ಆಂಗಿಕ ಮತ್ತು ಆಹಾರ್ಯವೆಂಬ ನಾಲ್ಕುಬಗೆಯ ಅಭಿನಯದಿಂದ ಧೀರೋದಾತ್ತನೇ ಮೊದಲಾದ ನಾಯಕರ ಅವಸ್ಥೆಯನ್ನು ರಸೋಚಿತವಾಗಿ ಅನುಕರಣ ಮಾಡುವುದು; ಅಭಿನಯ; ರೂಪಕ; ನಾಟಕವೇ ಮೊದಲಾದ ದೃಶ್ಯ: "ಅತ್ಯಲಂಕಾರದೊಳು ನಾಟ್ಯದೊಳು . . . ರೂಪಕವೆಂಬ ನಾಮಮಕ್ಕುಂ" (ಮಂಗಡಾ. ೧೫೩-೬೨); ಭಾವಾನುಭಾವಮೆಸೆವ ವಿಭಾವಂ ಸಾತ್ವಿಕಮನೇಕ ಸಂಚಾರಿಗಳಂ ಅವರಿಸಿ ತೋರ್ಪುದಿಂತಿವು ಕೋವಿದೆ ಕೇಳ್ ನಾಟ್ಯಮೆಂಬ ಪೆಸರಂ ಪಡೆಗುಂ (ಲಾಸ್ಯರಂ. ೧-೫೬); ಅಭಿನಯಪೂರ್ಣ ವಾದುದೇ ನಾಟ್ಯ (ಭಾರ್ದ. ೫೫೩); ಯಾವುದಾದರೂ ಒಂದು ವಿಷಯವನ್ನು . . . ಅಭಿನಯದಿಂದ ವ್ಯಕ್ತಪಡಿಸಿದರೆ ನಾಟ್ಯವಾಗುವುದು (ಕೃಬಿ. ೦೬೮). ೨. (ಶಾಸ್ತ್ರೀಯವಾದ) ನರ್ತನ; ನೃತ್ಯ: ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ ನಾನು ಚೈತನ್ಯನೆಂಬ ವಾಹನವಾಗಿರ್ದೆ ಕಾಣಾ (ಬಸವ. ೩); ಕಗ್ಗತ್ತಲೆಯ ಹುಬ್ಬುಗೆಯೊಳಗೆ ನಾಟ್ಯದ ನಿಳಯಮಧ್ಯದ ಮಣಿಯ ಮಂಜದ ಮೇಲೆ ಪವಡಿಸಿದ (ಕುವ್ಯಾವಿ. ೩-೯೦); ಫಣವ ಮೆಟ್ಟಿ ಬಾಲವ ಕೈಯಲಿ ಪಿಡಿದು ಫಳಫಳಿಸುತ್ತ ನಾಟ್ಯವನಾಡೆ (ಪುರಂದ. ೨-೦೦೩-೨) ೩. ಗೀತ, ನೃತ್ಯ ಮತ್ತು ವಾದ್ಯಗಳ ಮೇಳ. ೪. ಅಭಿನಯಕಾರ; ನಟ; ಪಾತ್ರಧಾರಿ.

ನಾಟ್ಯದ ಗರುಡಿ = ನೃತ್ಯವನ್ನು ಅಭ್ಯಾಸಮಾಡುವ ಸ್ಥಳ; ನಾಟ್ಯ ಶಾಲೆ: ಕೆಲಬಲನಱಿಯದಂದದಿ ಬಂದು ನಾಟ್ಯದ ಗರುಡಿಯೊಳಗಿಹುದು (ಕುವ್ಯಾವಿ. ೩-೭೭). [ಸಂ.]

ನಾಟ್ಯಕಲೆ (ನಾ). ೧. ನಾಟಕಕಲೆ: ನಾಟ್ಯಕಲೆಯಲ್ಲಿ ಸಾಮಾನ್ಯವಾಗಿ ಲಿಖಿತ(ಬರೆದ) ನಾಟಕ ಅರ್ಥಾತ್ ಶ್ರಾವ್ಯಕಾವ್ಯಕ್ಕೂ . . . ದೃಶ್ಯಕಾವ್ಯಕ್ಕೂ ಇರುಮಷ್ಟು ಮಹತ್ವವು ಬೇರೆ ಯಾವ ಅಂಗಗಳಿಗೂ ಇರುವುದಿಲ್ಲವೆಂಬು ದೊಂದು ನಂಬುಗೆಯು ರೂಢವಾಗಿದೆ (ಪ್ರಬಂಧ. ೩೬). ೨. ನರ್ತನಕಲೆ: ಬಲದೇವನು ತನ್ನ ಜೀವನದಲ್ಲಿ . . . "ನಾಟ್ಯಕಲೆಯು ಒಂದು ಉತ್ತಮ ಕಲೆ" ಎಂದು ಪ್ರಪಂಚಕ್ಕೇ ತೋರಿಸಿದ (ಕಲಾಸಾ. ೧೦೭). [ನಾಟ್ಯ + ಕಲೆ$_3$]

ನಾಟ್ಯಕೂಟ (ನಾ). ನಾಟ್ಯಪ್ರದರ್ಶನಕ್ಕಾಗಿ ಏರ್ಪಡಿಸಿರುವ ಮೇಳ: ನಾವು ನಾಟ್ಯಕೂಟಕ್ಕೆ ಸಿದ್ಧಮಾಡಬೇಕು ಬಾ (ಹುಲಿನಾ. ೧೯೯). [ನಾಟ್ಯ + ಕೂಟ$_1$]

ನಾಟ್ಯಗಾತಿ (ನಾ). ನಾಟ್ಯವಾಡುವ ಸ್ತ್ರೀ; ನಟಿ; ನರ್ತಕಿ: "ನರ್ತಕೀ, ಲಾಸಕೀ—ಎಂಬ ಕುಣಿಯುವ ನಾಟ್ಯಗಾತಿಯ ಹೆಸರುಗಳು" (ಸಿದ್ಧಾಂತಿ. ೫೫). [ನಾಟ್ಯ + – ಕಾತಿ$_2$]

ನಾಟ್ಯಗೃಹ (ನಾ). ೧. ನಾಟ್ಯವನ್ನು ಕಲಿಸುವ ಮನೆ. ೨. ನಾಟ್ಯವನ್ನು ಪ್ರದರ್ಶಿಸುವ ಕಟ್ಟಡ; ನಾಟ್ಯಶಾಲೆ: ನಟ-ಪ್ರೇಕ್ಷಕರ ಸಂಚಯವು ನಾಟ್ಯಗೃಹಕ್ಕೆಯೇ ಬೃಹದ್ದೇಹವೆನ್ನುವಂತೆ ಮನ್ನಣೆ ಪಡೆದು ವರ್ತಿಸುತ್ತಿರುತ್ತದೆ (ಪ್ರಬಂಧ. ೪೯). [ನಾಟ್ಯ + ಗೃಹ]

ನಾಟ್ಯಭಟ (ನಾ). ೧. ಅಭಿನಯದ ಸಮೂಹ,-ಪರಂಪರೆ. ೨. ಒಬ್ಬನೇ ನಟ ಅನೇಕ ಪಾತ್ರಗಳನ್ನು ಬೇರೆ ಬೇರೆ ಭಂಗಿಗಳಿಂದ ಅಭಿನಯಿಸುವುದು; ಏಕಪಾತ್ರಾಭಿನಯ: ಹೊಸದಾದ "ನಾಟ್ಯಭಟಾ" (ಏಕ-ಪಾತ್ರಾಭಿನಯ), ಬಾನುಲಿಯ "ಶ್ರವಣಕಾ" ಇತ್ಯಾದ್ಯನೇಕ ಹೊಸ ಪ್ರಕಾರಗಳೇ ಆಗಿರಲಿ, ಅವೆಲ್ಲವೂ "ನಾಟ್ಯ"ಗಳಾಗಿರುವುವು (ಪ್ರಬಂಧ. ೧೫); ನಾಟ್ಯಭಟದಂತೆ ಏಕಪಾತ್ರಾಭಿನಯದ ನಾಟಕಗಳೂ ಇರಬಹುದು; ಆದರೂ ಆ ಏಕಪಾತ್ರವೂ ಕೂಡ ಇತರ ಪಾತ್ರಗಳನ್ನು ಗೃಹೀತವೆಂದು ಹಿಡಿಯುತ್ತದೆ (ಪ್ರಬಂಧ. ೪೦). [<ಸಂ. ನಾಟ್ಯಚೇಟಾ]

ನಾಟ್ಯದಿಗ್ದರ್ಶಕ (ನಾ). ನಾಟ್ಯವನ್ನು ನಿರ್ದೇಶಿಸುವವನು; ನಾಟ್ಯ ಪ್ರಯೋಗದ ನಿರ್ವಾಹಕ : ಈ ನಟ ಪ್ರೇಕ್ಷಕರಂತೆಯೇ ನಾಟ್ಯದಿಗ್ದರ್ಶಕ ಹಾಗು ಅವನ ಕಲಾವಂತ ಜೊತೆಗಾರರೂ ಈ ಜ್ಞಾನಕರ್ಮಸಮುಚ್ಚಯವನ್ನು ಸಾಧಿಸುವರು (ಪ್ರಬಂಧ. ೩೯). [ನಾಟ್ಯ + ದಿಗ್ದರ್ಶಕ]

ನಾಟ್ಯಧರ್ಮ (ನಾ). ನಾಟ್ಯದ ಸಂಪ್ರದಾಯ; ನರ್ತನದಲ್ಲಿ ಹಿಂದಿನಿಂದ ಬಂದಿರುವ ಕ್ರಮ,-ರೀತಿ,-ನಡವಳಿಕೆ : ತನ್ನ ಅಭಿಪ್ರಾಯವನ್ನು ಗಾನಮಾಡಿ ತಿಳಿಸುವುದು, ನರ್ತನ ಮಾಡಿಕೊಂಡು ತಿರುಗಾಡುವುದು . . . ಇವೆಲ್ಲಾ 'ನಾಟ್ಯಧರ್ಮ' (ಕೈಪಡಿ. ೨೦೭ ಅಡಿಟಿ). [ನಾಟ್ಯ + ಧರ್ಮ]

ನಾಟ್ಯನಿಬಂಧನ (ನಾ). ನಾಟ್ಯಶಾಸ್ತ್ರ; ನಾಟಕ ಮೊದಲಾದ ದೃಶ್ಯ ಕಾವ್ಯ; ಅಭಿನಯಿಸುವುದಕ್ಕಾಗಿ ರಚಿಸಿರುವ ಕೃತಿ : ಅಂತು ನಾಟ್ಯ ನಿಬಂಧನಮೆ ಸುರೇಶ್ವರರೂಪದಿಂದಮಾಡುವಂತಾದೆ (ಶಾಂತಿಪು. ೧೦-೬೨ ವ)

[ನಾಟ್ಯ + ನಿಬಂಧನೆ]

ನಾಟ್ಯನಿಲಯ (ನಾ). = ನಾಟ್ಯಗೃಹ ೧ : ಭೀಮ ನಿಂದಿರು ನಾಟ್ಯ ನಿಲಯವನಾ ಮದಾಂಧಗೆ ನುಡಿದು ಬಂದೆನು (ಕುಪ್ಯಾವಿ. ೩-೭೯)

[ನಾಟ್ಯ + ನಿಲಯ]

ನಾಟ್ಯಪದ್ಧತಿ (ನಾ). ನಾಟ್ಯದ ಸಂಪ್ರದಾಯ : ನಾಟ್ಯವ್ಯಕ್ತಿಗಳ ಹಾವ ಭಾವಗಳನ್ನೂ, ನಾಟ್ಯಪದ್ಧತಿಗಳನ್ನೂ, ಭಾರತೀಯ ನೃತ್ಯತತ್ತ್ವವನ್ನರಿಯುವುದರಲ್ಲಿ ನಿರತನಾದನು (ಕಲಾಸಾ. ೯೦). [ನಾಟ್ಯ + ಪದ್ಧತಿ]

ನಾಟ್ಯಪೂರ್ಣ (ಗು). ನಾಟ್ಯದಿಂದ ತುಂಬಿರುವ; ಸಂಭಾಷಣ ರೂಪವಾಗಿಯೂ ಚಮತ್ಕಾರವಾಗಿಯೂ ಇರುವ : ಅವರ ಕಥೆಗಳಲ್ಲಿ ಒಮ್ಮೊಮ್ಮೆ ತೀವ್ರಪರಿಣಾಮ, ನಾಟ್ಯಪೂರ್ಣಸನ್ನಿವೇಶ, ಅನಿರೀಕ್ಷಿತ ಘಟನೆಗಳು ಅಪರೂಪವೆನಿಸಿದರೂ . . . ಯಾರೂ ಅನುಮಾನ ಪಡಲಾರರು (ಬಾಗಿನ. iv ಮುನ್ನುಡಿ). [ನಾಟ್ಯ + ಪೂರ್ಣ]

ನಾಟ್ಯಮಂಟಪ (ನಾ). = ನಾಟ್ಯಗೃಹ ೧: ಭರತನ ಮತದಲ್ಲಿ ನಾಟ್ಯಮಂಟಪ ಅಥವಾ ಪ್ರೇಕ್ಷಾಗೃಹವು ಜ್ಯೇಷ್ಠ, ಮಧ್ಯಮ, ಕನಿಷ್ಠ ಎಂದು ಮೂರುವಿಧ (ಸಂನಾಟ. ೨೩). [ನಾಟ್ಯ + ಮಂಟಪ]

ನಾಟ್ಯಮಂದಿರ (ನಾ). = ನಾಟ್ಯಗೃಹ ೧: ನಾಯಿಜಾರನ ಕರೆದು ಸಂಕೇತದಲಿ ಸೂಚಿಸು ನಾಟ್ಯಮಂದಿರವ (ಕುಪ್ಯಾವಿ. ೩-೭೦); ಪಸರಿಪ ಹೇಮರತ್ನ ರುಚಿಯಿಂ . . . ಧೂಪಧೂಮದಿಂದೆಸೆದಿರವೇಳ್ಕುಮಿಂತು . . . ನಾಟ್ಯ ಮಂದಿರಂ(ಲಾಸ್ಯರಂ. ೦-೩೦); ಮುಖ್ಯನಗರಗಳಲ್ಲಿನ ನಾಟ್ಯಮಂದಿರಗಳನ್ನೂ . . . ಭಾರತೀಯ ನೃತ್ಯತತ್ತ್ವವನ್ನರಿಯುವುದರಲ್ಲಿ ನಿರತನಾದನು (ಕಲಾಸಾ. ೯೦). [ನಾಟ್ಯ + ಮಂದಿರ]

ನಾಟ್ಯಮೀಮಾಂಸೆ (ನಾ). ನಾಟ್ಯದ ವಿಚಾರದಲ್ಲಿ ಮಾಡುವ ಮೇಲ್ಮಟ್ಟದ ಚರ್ಚೆ; ನಾಟ್ಯವಿಷಯದಲ್ಲಿ ತೋರುವ ಪರಿಶೀಲನೆ, – ಕೂಲಂಕಷವಾದ ವಿಚಾರ : ಸಮೀಕ್ಷಕನು . . . ಮನಸ್ಸಿನಲ್ಲಿ ಅಗತ್ಯವಾಗಿ ಬಿಂಬಿಸಬೇಕಾದ ನಾಟ್ಯಮೀಮಾಂಸೆಯನ್ನು ಮಾಡುವನು (ಪ್ರಬಂಧ. ೪೨).

[ನಾಟ್ಯ + ಮೀಮಾಂಸೆ]

ನಾಟ್ಯರಂಗ (ನಾ). ನಾಟ್ಯವನ್ನು ಪ್ರಯೋಗಿಸುವ ಸ್ಥಳ,-ವೇದಿಕೆ : ಅಲ್ಲಿಂದ ಮುಂದಕ್ಕೆ ೧೬×೩೨ ಹಸ್ತ, "ನಾಟ್ಯರಂಗ" (ಸಂನಾಟ. ೨೩); ನಾಟ್ಯರಂಗವು ಹಿಮವತ್ಪರ್ವತದಂತೆ ಕಾಣುತ್ತಿತ್ತು (ಕಲಾಸಾ. ೯೬).

[ನಾಟ್ಯ + ರಂಗ]

ನಾಟ್ಯರಸ (ನಾ). ೧. ನಾಟಕಗಳಲ್ಲಿ ತೋರುವ ಶೃಂಗಾರ, ವೀರ ಮೊದಲಾದ ರಸಗಳು : ವಿದ್ವಾಂಸರು 'ಭಾವ', 'ಅಭಿನಯ' ಇವುಗಳಿಂದ ಕೂಡಿದ ಸ್ಥಾಯಿಭಾವಗಳನ್ನು ಮನಸ್ಸಿನಲ್ಲಿ ಅನುಭವಿಸಿ ಸುಖಪಡುವುದರಿಂದ ಅವುಗಳಿಗೆ 'ನಾಟ್ಯರಸ'ಗಳೆಂಬ ಹೆಸರು ಬಂದಿದೆ (ಕೈಪಡಿ. ೦೯೦); ಭಾವಾಭಿನಯಗಳಿಂದ ಕೂಡಿದ ಸ್ಥಾಯಿಭಾವಗಳನ್ನು ವಿದ್ವಾಂಸರು ಮನಸ್ಸಿನಲ್ಲಿ ಆಸ್ವಾದಿಸುತ್ತಾರೆ; ಆದ ಕಾರಣ ಇವನ್ನು ನಾಟ್ಯರಸಗಳೆಂದು ಅರಿಯುತ್ತಾರೆ (ಭಾರಮೀ. ೩೫೪). ೨. ನೃತ್ಯಗಳನ್ನು ನೋಡುತ್ತಿರುವಾಗ ಸಹೃದಯರಾದ ಸಾಮಾಜಿಕರಿಗೆ ಉಂಟಾಗುವ ಮಾನಸಿಕ ಅನುಭವ : ಈ ನಾಟ್ಯರಸಂ ಸಮಸ್ತಸುರವೃಂದಾಧೀಶನಿಂದಂ ಪೊನಲ್ವರಿದತ್ತು (ಅದಿಪು. ೭-೧೨೦); ಮೃದುನೃತ್ಯದೊಳ್ ಪುದಿದು ನಾಟ್ಯರಸಂ ದ್ರುತತಾರದೊಳ್ ಪಳಂಚಲೆಯೆ (ಶಾಂತಿಪು. ೪-೬೮). [ನಾಟ್ಯ + ರಸ]

ನಾಟ್ಯರಾಸಕ (ನಾ). [ಕಾವ್ಯಮೀ] ಹದಿನೆಂಟು ಬಗೆಯ ಉಪರೂಪಕಗಳಲ್ಲಿ ಒಂದು : ನಾಟ್ಯರಾಸಕ – ಇದರಲ್ಲಿ ಒಂದೇ ಅಂಕ; ಉದಾತ್ತ ನಾಯಕ; ಪೀಠಮರ್ದನು ಉಪನಾಯಕ; ಹಾಸ್ಯಪ್ರಧಾನ; ಶೃಂಗಾರವೂ ಉಂಟು; ನಾಯಿಕೆ ವಾಸಕಸಜ್ಜಿಕೆ; ಮುಖನಿರ್ವಹಣಸಂಧಿಗಳು (ಕೆಲವರ ಮತದಲ್ಲಿ ಪ್ರತಿಮುಖಸಂಧಿ ಮಾತ್ರ ಇಲ್ಲ); ಹತ್ತು ಲಾಸ್ಯಾಂಗಗಳು. ಬಹುತಾಲಲಯಗಳನ್ನುಳ್ಳದ್ದು (ಸಂನಾಟ. ೩೩). [ಸಂ.]

ನಾಟ್ಯಲೋಲ (ಗು). ನಾಟ್ಯದಲ್ಲಿ ಆಸಕ್ತನಾದ : ನಾಟ್ಯಲೋಲ ಶಿವನೂ ಬೆಕ್ಕಸ ಬೆರಗಾಗಿರಬೇಕು ಆ ನಾಟ್ಯಮಯೂರಿಯರ ಮನಮೋಹಕನೃತ್ಯ ವಿಲಾಸಕ್ಕೆ! (ಹೇಮಕೂ. ೧). [ನಾಟ್ಯ + ಲೋಲ]

ನಾಟ್ಯವಾಡು (ಕ್ರಿ). ನೃತ್ಯವಾಡು; ನರ್ತನಮಾಡು: ಬಿಂಕದಿಂದೇಱಿರ್ದ ಪೆರ್ಬುಲಿ ಮಡಿದುದಿಲ್ಲಿ ಕರುಣದಿಂ ಶಶಿಧರಂ ನಾಟ್ಯವಾಡಿದನಿಲ್ಲಿ (ತಿರುರ. ದೇ. ೩-೦೮); ಮಲ್ಲಿಗೆಯರಳುವಾಸಿನ ಮಂಚಕೆ ಕರಪಲ್ಲವವನು ಪಿಡಿದೆಳೆದು ನಿಲ್ಲದೆ ಕೆಡಹಿಕೊಂಡೊಡನೆ ಮೋಹಿಸುತೆನ್ನ ಮೆಲ್ಲೆದೆಯೊಳು ನಾಟ್ಯವಾಡೊ (ಕಂನವಿ. ೯-೦೮೬). [ನಾಟ್ಯ + ಆಡು$_1$]

ನಾಟ್ಯವಿದ (ನಾ). ನಾಟ್ಯಕಲೆಯನ್ನು ಬಲ್ಲವನು; ನಾಟ್ಯಶಾಸ್ತ್ರಪ್ರವೀಣ; ನಾಟ್ಯವಿದ್ವಾಂಸ : ವಿವಿಧಾತೋದ್ಯಲಯಾನುಬಂಧವಿಳಸಲ್ಲಾಸ್ಯಂತಗುಳ್ದಲ್ಲಿ ನಾಟ್ಯವಿದರ್ ತಾಂಗೆಯುಮೇಱಿ ನೃತ್ಯಗೃಹಮಂ (ಅದಿಪು. ೧೦-೦೯); ನುಡಿದ ವರನಾಟ್ಯವಿದವೇಷವನು ಫಲುಗುಣನು(ಕುಪ್ಯಾವಿ.೦-೭).

[ಸಂ. ನಾಟ್ಯವಿದ್]

ನಾಟ್ಯವಿದ್ಯೆ (ನಾ). ನಾಟ್ಯಶಾಸ್ತ್ರ; ನೃತ್ಯಕಲೆ : ತತಾರ್ಯವೃತ್ತಕಮಪ್ಪ ನಾಟ್ಯವಿದ್ಯೆಯುಮಂ ಯೋಗಕ್ಷೇಮಾಧೀನಮಪ್ಪ ನೀತಿಶಾಸ್ತ್ರಮುಮಂ . . . ತ್ರಿದಶವರ್ಗಕ್ಕುಪದೇಶಂಗೆಯ್ಯುತ್ತುಂ (ಶಾಂತಿಪು. ೧೦-೯೦ ವ); ನಾಟ್ಯ ವಿದ್ಯೆಯಲ್ಲಿ ಒಬ್ಬರನ್ನೊಬ್ಬರು ಮೀರಿಸುತ್ತಾರೆ (ಕಲಾಸಾ. ೬೯).

[ನಾಟ್ಯ + ವಿದ್ಯೆ]

ನಾಟ್ಯವಿಲಾಸಿ (ನಾ). ನಾಟ್ಯಕಲೆಯನ್ನು ಆತ್ಮವಿನೋದಕ್ಕಾಗಿ ಅಭ್ಯಾಸ ಮಾಡುವವನು; ನಾಟ್ಯಹವ್ಯಾಸಿ; ಹವ್ಯಾಸಿನಟ : ಕ್ರಮೇಣ ಒಂದು ಸುಶಿಕ್ಷಿತರ ರಂಗಭೂಮಿ, ಒಂದು ಅಶಿಕ್ಷಿತರ ರಂಗಭೂಮಿ ಹೀಗೆ ಪ್ರತ್ಯೇಕವಾಗಿ ಬೆಳವಣಿಗೆ ನಡೆದಿದ್ದರೆ ಆಶ್ಚರ್ಯವಲ್ಲ (ನಾಟ್ಯವಿಲಾಸಿಗಳು, ನಾಟುವ್ಯವಸಾಯಿಗಳು ಎಂಬ ಇಂದಿನ ಪರಿಸ್ಥಿತಿಯಂತೆ) (ಭಾರದ. ೫೭೦).

[ಸಂ. ನಾಟ್ಯವಿಲಾಸಿನ್]

ನಾಟ್ಯವೇದ (ನಾ). = ನಾಟ್ಯವಿದ್ಯೆ: ತಾಂಡವಮನಾಡಲುದ್ಯೋಗಂಗೆಯ್ಯು ಮಂಗಲಾಲಂಕಾರಾಲಂಕೃತನಾಗಿ ನಾಟ್ಯವೇದಾವತಾರವನೆ [ಪಾಠಾಂ. ವಿದಾಚಾರ್ಯನಂ, ವೇದಾಚಾರ್ಯನಂ] ಪೋಲ್ತು ರಂಗಂಬೊಕ್ಕು (ಅದಿಪು. ೭-೧೦೫ ವ); ಒಲವಿಂದೆ ಕೂಡಿ ಮಿಗೆ ಪುಟ್ಟಿಸಿದಂ ಬಿದಿ ನಾಟ್ಯವೇದಮಂ (ಲಾಸ್ಯರಂ. ೧-೮); ದೈವೇಚ್ಛೆಯ ಪ್ರಕಾರ . . . ಬ್ರಹ್ಮನು ನಾಟ್ಯವೇದವನ್ನು ನಿರ್ಮಿಸುತ್ತಾನೆ (ಭಾರದ. ೫೫೦). [ನಾಟ್ಯ + ವೇದ]

ನಾಟ್ಯವೇದಮೂರ್ತಿ (ನಾ). ಆಕಾರವನ್ನು ತಳೆದಿರುವ ನಾಟ್ಯವೇದದಂತೆ ಇರುವವನು; ನಾಟ್ಯವಿದ್ಯಾಪಾರಂಗತ; ನಟರಾಜನಾದ ಶಿವ : ಭುಜಚಳನದ ಪರಿಣತಿಯಿಂ ನಾಟ್ಯವೇದಮೂರ್ತಿವೊಲೆಸೆದಂ (ಪುಷ್ಪಪು. ೦೨-೩೪). [ನಾಟ್ಯವೇದ + ಮೂರ್ತಿ]

ನಾಟ್ಯವ್ಯವಸಾಯಿ (ನಾ). ನಾಟ್ಯಕಲೆಯನ್ನು ಗಳಿಕೆಯ ಮಾರ್ಗವೆಂದು ಅದರಲ್ಲಿ ತೊಡಗಿದವನು ; ನಾಟ್ಯಕಲೆಯನ್ನು ವೃತ್ತಿಯಾಗಿಟ್ಟು ಕೊಂಡಿರುವವನು : ನಾಟ್ಯವಿಲಾಸಿಗಳು ನಾಟ್ಯವ್ಯವಸಾಯಿಗಳು ಎಂಬ ಇಂದಿನ ಪರಿಸ್ಥಿತಿಯಂತೆ (ಭಾರದ. ೫೭೦). [ಸಂ. ನಾಟ್ಯವ್ಯವಸಾಯಿನ್]

ನಾಟ್ಯಶಾಲೆ (ನಾ). = ನಾಟ್ಯಗೃಹ : ಸೊಗಯಿಪ ನಾಟ್ಯಶಾಲೆಗೆ . . . ಮಾಟ್ಟುದಕೃತ್ಯವಿಚಿತ್ರಶೋಭೆಯಂ (ಪುಷ್ಪಪು. ೨-೯೫) ; ಲೀಲೆಗೆಡೆಯೆನಿಪ್ಪ ಚಂದ್ರಶಾಲೆ ಸುರಭಿಶಾಲೆ ನಾಟ್ಯಶಾಲೆ ಭೋಗಶಾಲೆಯೆನಿಸುವಿವಱ ನಡುವಣ . . . ಗೃಹಾಧಿರಾಜಮೆಂಬ ಗೃಹದೊಳು . . . ಪಂಚಮಣಿಗಳಿಳಿದ ಗುಜ್ಜುಮಂಚಮೆಂಬಿವಲ್ಲಿಗಲ್ಲಿಗೊಪ್ಪಿ ತೋರ್ಪವು (ಜನವ. ೮-೦೩).

[ನಾಟ್ಯ + ಶಾಲೆ$_3$]

ನಾಟ್ಯಶಾಸ್ತ್ರ (ನಾ). ೧. = ನಾಟ್ಯವಿದ್ಯೆ : ಪತಂಜಲಿಯ ಕಾಲಕ್ಕಾದರೆ (ಕ್ರಿ. ಪೂ. ಸು. ೧೫೦) ಸಂಸ್ಕೃತನಾಟಕವು ಸರ್ವಾಂಗಪರಿಪೂರ್ಣವಾಗಿದ್ದಿತೆಂದು ನಂಬಬಹುದು. ನಾಟ್ಯಶಾಸ್ತ್ರಕ್ಕೂ ಹೆಚ್ಚು ಕಡಮೆ ಆ ಸಮಯದಲ್ಲೇ ಅಂಕುರಾರ್ಪಣವಾಗಿರಬೇಕು (ಭಾರಮೀ. ೧೧) ; ಮರಳಿ ಇಂಥದೇ ಅದ್ಭುತ ಕಾರ್ಯಕ್ಕಾಗಿ ಟೊಂಕಕಟ್ಟುವುದೇ ನಾಟ್ಯಶಾಸ್ತ್ರದ ಕರ್ಮಯೋಗವಾಗಿದ್ದರೆ ... ಉಪೇಕ್ಷೆಯಿಂದ ನೋಡುವುದೇ ಹೆಚ್ಚು ವಿಹಿತವಾದುದು (ಪ್ರಬಂಧ.೨೭). ೨. ಭರತಮುನಿಯು ರಚಿಸಿದನೆನ್ನಲಾದ, ಪ್ರಸಿದ್ಧವಾದ ಪ್ರಾಚೀನ ನಾಟ್ಯಶಾಸ್ತ್ರಗ್ರಂಥ : ಬ್ರಹ್ಮನು ದೇವತೆಗಳ ಕೋರಿಕೆಯಂತೆ ನಾಟ್ಯವನ್ನು ನಿರ್ಮಿಸಿ ಅದರ ಪ್ರಯೋಗವನ್ನು ಭರತನಿಗೂ ಆತನ ನೂರು ಮಂದಿ ಮಕ್ಕಳಿಗೂ ವಹಿಸಿದನೆಂದು 'ನಾಟ್ಯಶಾಸ್ತ್ರ'ದ ಮೊದಲನೆಯ ಅಧ್ಯಾಯವು ತಿಳಿಸುತ್ತದೆ (ಭಾರಮೀ. ೧೨). [ನಾಟ್ಯ + ಶಾಸ್ತ್ರ]

ನಾಟ್ಯಶ್ರುತಿ (ನಾ). = ನಾಟ್ಯವಿದ್ಯೆ : ಭರತನೊಲವಿಂ . . . ಗಂಧರ್ವಾ ಮರತತಿಗಿತ್ತನೊಲ್ದು ನಾಟ್ಯಶ್ರುತಿಯಂ (ಲಾಸ್ಕರಂ. ೦-೧೦).

[ನಾಟ್ಯ + ಶ್ರುತಿ]

ನಾಟ್ಯಾಂಗ (ನಾ). ೧. ನಾಟ್ಯದ ಅಂಗ, -ಭಾಗ ; ರಸ. ೨. [ಗಣಿತ] ಒಂಬತ್ತು ಎಂಬ ಸಂಖ್ಯೆಯ ಸಂಕೇತ : "ವಸುಧಾಭಾವಂ . . . ರಸ ನಾಟ್ಯಾಂಗಂ ಗ್ರಹಣಂ ಪೊಸತುಂ ನಿಧಿ ರತ್ನ ನವಮವೊಂಭತ್ತೆನಿಕುಂ" (ವ್ಯವಹಾ. ೯-೯). [ನಾಟ್ಯ + ಅಂಗ$_2$]

ನಾಟ್ಯಾಗಮ (ನಾ). = ನಾಟ್ಯವಿದ್ಯೆ : ನಯಂ ಪೊಸವೆ ಕರಣಂಗಳುಂ ನಿಪ್ಪೊಸವೆನೆ ಪೊಸಯಿಸಿದಳಾಕೆ ನಾಟ್ಯಾಗಮಮಂ (ಆದಿಪು. ೯-೨೫) ; ಭರತಂ . . . ಉಮೆಗೀಶರ್ಗಂ ಸುಗಮದೆ ತೋಱಿಸಿದನೊಲ್ದು ನಾಟ್ಯಾಗಮಮಂ (ಲಾಸ್ಕರಂ. ೧-೧೧). [ನಾಟ್ಯ + ಆಗಮ]

ನಾಟ್ಯಾಚಾರ್ಯ (ನಾ). ನಾಟ್ಯವನ್ನು ಕಲಿಸುವ ಗುರು ; ನಾಟ್ಯಶಿಕ್ಷಕ : ನಾಟ್ಯಾಚಾರ್ಯನ ಲಕ್ಷಣವಂ ಪೇಳೆನಲು (ಲಾಸ್ಕರಂ. ೧-೩೬).

[ನಾಟ್ಯ + ಆಚಾರ್ಯ]

ನಾಟ್ಯಾನಕ (ನಾ). ನಾಟ್ಯಕ್ಕೆ ಹಿನ್ನೆಲೆಯಾಗಿ ಬಳಸುವ ಒಂದು ಬಗೆಯ ವಾದ್ಯ : ಢಕ್ಕೆ ನಾಟ್ಯಾನಕ ಚಂಪೆ ಕಿಂಕಿಣಿ ಡೌಡೆ ಕುಕ್ಕುರು ತುಡುವಲು ರಿಂಚೆಯುವಾ ತಕ್ಕಿಟ ತೋಕೆಟ ತೋಂಗಿ ತೋಹಂಗಿ ತೋ ಧಿಕ್ಕಿಟಯೆನೆ ಕೇಳಿಸಿದರು (ಭರಚ. ೧೨-೪೦). [ನಾಟ್ಯ + ಆನಕ]

ನಾಟ್ಯಾಲಯ (ನಾ).=ನಾಟ್ಯಗೃಹ : ಧರೆ ರಂಗಂ ಗಗನಂ ಮನೋಹರತರಂ ನಾಟ್ಯಾಲಯಂ ನರ್ತಕಂ ಸುರರಾಜಂ (ಆದಿಪು. ೭-೧೨೭).

[ನಾಟ್ಯ + ಆಲಯ]

ನಾಟ್ಯೋತ್ಸವ (ನಾ). ನಾಟಕಗಳ ಹಬ್ಬ,-ಉತ್ಸವ ; ನಾಟಕಮಾಲೆಗಳ ಪ್ರದರ್ಶನ : ನಾಡಿನಲ್ಲೀಗ ನಾಟ್ಯೋತ್ಸವಗಳು ವರ್ಷಕ್ಕೊಂದರಂತೆ ನಡೆಯುತ್ತಿವೆ ; ಒಳ್ಳೆಯ ನಾಟಕಗಳಿಗೆ ಬಹುಮಾನಗಳಿವೆ (ನಡೆದಾ. I, ೨೩೮).

[ನಾಟ್ಯ + ಉತ್ಸವ]

ನಾಡಕರಣ 'ನಾಡು' ಪರಾ.

ನಾಡಕರಣಿ 'ನಾಡು' ಪರಾ.

ನಾಡಕರ್ಣ 'ನಾಡು' ಪರಾ.

ನಾಡಕರ್ಣಿ 'ನಾಡು' ಪರಾ.

ನಾಡಗ 'ನಾಡುಗ' ನೋ.

ನಾಡಚೀಲೈತ (ನಾ). ಒಂದು ಬಗೆಯ ಮರ ; "ಷಡಶ್ರ – ನಾಡಚೀಲೈತ. ನೆಲ್ಲಿ" (ಓಷಧಿ. ೧೭೩). [<ನಾಡು + ಚೀಲೈತ]

ನಾಡಣ್ಣ (ನಾ). ಒಬ್ಬಾತನ ಹೆಸರು : ನಾಡಣ್ಣನ ಮಗಳು ಬಿದಿಯಕನಿಱಿಸಿದಳು (ಮೈಆರಿ. ೧೯೨೬, ೫೭-೪ : ?). [ನಾಡು + ಅಣ್ಣ$_1$]

ನಾಡದು 'ನಾಳಿದು' ನೋ.

ನಾಡದೇವದಾರು (ನಾ). ದೇವದಾರು ಮರದಲ್ಲಿ ಒಂದು ಬಗೆ : "ಕಿರಾತಗಂಧಃ – ನಾಡದೇವದಾರು" (ಓಷಧಿ. ೩೩).

[< ನಾಡು + ದೇವದಾರು]

ನಾಡನೂರ್ (ನಾ). ಒಂದು ಊರಿನ ಹೆಸರು : ನಾಡನೂರಾ ಮಹಾಜನ ಮಾನ್ಕರೆದು ನೀಮು ನಿಮಗಪ್ಪಂದಿ ಹರಿಯಮೆನ್ದು ಬೇಡಿದೊಡೆ (ಸೌಇಇ. IX-1, ೪೬-೭ ; ಸು. 8ನೆಯ ಶತ). [? +ಊರು$_3$ (< ಊರ್)]

ನಾಡಬಾಳೆ (ನಾ). ಒಂದು ಬಗೆಯ ಬಾಳೆಗಿಡ ಮತ್ತು ಅದರ ಹಣ್ಣು : ರಸವಾಳೆ . . . ನಾಡಬಾಳೆ, ಮಧುರಂಗಬಾಳೆ ಮೊದಲಾದ ನಾನಾ ಜಾತಿಯ ಬಾಳೆಯ ಬನಗಳೂ ಅಲ್ಲಿ ಇದ್ದುವು (ಕರ್ಣಾಜ. ೦೫೫).

[< ನಾಡು + ಬಾಳೆ$_1$ (< ಬಾಱೆ)]

ನಾಡಯಿಸು (?). (?) : ಪುರಿಗೆಱೆ ನಾಡ ಸರಟವುರದಾಯ್ದುದಿಂ[ಬ] ರುಮಿಱ್ದು ನಾಡಯಿಸೆ ಮಾಸಿಗರ ಚಿದಾಣ್ಣಗೋಸಾಸ(ಂ)ಮಿಱ್ದೋಂ (ಸೌಇಇ. XI-1, ೨೦-೫ ; 383). [?]

ನಾಡರಸು, ನಾಂಡರಸ (ನಾ). ೧. ನಾಡಿನ ಅರಸ ; ದೇಶದ ರಾಜ ; ನಾಡೊಡೆಯ : ಶಬರನಾಯಕಂ . . . ನಾಡರಸಂ ತಗುಳ್ದು ಕಡೆಗಾಲದ ಮಾರಿಯ ಮೂರಿಯಂತೆ ಕಣ್ಗೋಡದೆ ಬಾಲವೃದ್ಧವನಿತಾವಧೆಗೆಯ್ದು (ಪಂರಾಮಾ. ೪-೩೮). ನಾಂಡರಸ : ೨. ಒಬ್ಬಾತನ ಹೆಸರು : ಶ್ರೀ ರಾಮ ರಾಜಾ ಮಡಿನಾಡು ಮೂನೂಱಱ ನಾಣ್ಡರಸಾ ಆಳೆ (ಎಕ. X, ಗೋರೀಬಿ. ೭೬-೨ ; 750). [ನಾಡು + ಅರಸು$_1$ (< ಅರಸ)]

ನಾಡಱಿಕೆ (ನಾ). ದೇಶಕ್ಕೆಲ್ಲ ತಿಳಿಯುವಿಕೆ; ಜನರಿಲ್ಲಗೆಲ್ಲ ಗೊತ್ತಿರುವಿಕೆ; ಲೋಕಪ್ರಸಿದ್ಧಿ ; ಸರ್ವವೇದ್ಯ : ಮಾಡಿದನೇಕೆಯೊ ಮೇಲಂ ನೋಡದೆ ಬಿದಿ ... ನಾಡಱಿಕೆಯ ದುರ್ಜನಂಗೆ ನಿಡುನಾಲಗೆಯಂ (ಧರ್ಮನಾ. ೦-೬೨); ನವಮೃದುತರಗಮನದ ಗಾಡಿಯ ಗರುವಿಕೆಯಂ . . . ಕುಡು ಕಾರುಣ್ಯ ದೊಳೆನುತರವಿಂದೋದ್ಭವನಂ ಮಿಗೆ ತುತಿಯಿಸಿಯುರವಣೆಯಿಂ ಪೊತ್ತ ಪುದಿನ್ನುಂ ನಾಡಱಿಕೆಯೊಳರಸಂಚೆ (ಜಯಕಾ. ೩-೫೫). [ನಾಡು+ಅಱಿಕೆ]

ನಾಡಾಡಿ (ನಾ). ೧. ಸಾಮಾನ್ಯವಾದುದು ; ಸಾಧಾರಣವಾದುದಂ ; ಅಪ್ರಸಿದ್ಧವಾದಂದಂ; ವಿಶೇಷವಲ್ಲದುದಂ: ಮೋಕ್ಷದ ದೀಕ್ಷೆಗೆ ನೋಂತ ಪೆಂಪು ನಾಡಾಡಿಯೆ ಶಾಂತಿನಾಥ ಜಿನಚಂದ್ರಮುನೀಂದ್ರನದೇಂಕೃತಾರ್ಥನೋ (ಶಾಂತಿಪು. ೧೨-೫೮); ನಾಡಾಡಿಯಲ್ತು ರೂಪಿನ ಗಾಡಿಯಿದೆಲ್ಲಿರ್ದು ಬಂದುದು (ಕಾದಂಪೂ. ೯೮೭) ; ನಾಡಾಡಿಯಲ್ಲದಂತಿರೆ ಮಾಡಿಸಿದಂ ದೇವನಿಲಯ ದೆರಡುಂ ಕೆಲದೊಳ್ ಕೂಡೆ ಧವಳಾರಮಂ (ಶಾಪಮಂ. ೧೫-೭೪ ; 1060) ; ನಾಡಾಡಿಯನಾಡುವರೊಳ್ ಕೂಡುವೊಡದು ದೋಷಮಲ್ಲಂ (ಧರ್ಮಾಮೃ. ೬-೯೫) ; ಇಂತು ಪಿರಿದಪ್ಪ ಸಿರಿಗಾಡುಂಬೊಲನಾಗಿ ಮಾಡಿದ ನೂರ್ಮಡಿ ಗಾಡಿಯೊಳ್ ಕೂಡಿದ ನಾಡಾಡಿಯಾಗಿರ್ದಾ ನಾಡಿನ ನಟ್ಟನಡುವೆ (ಬಾಧಪು. ೪-೨೩ ವ) ; ಸುದ್ದಿ ಪಿಸುಮಾತಿನ ಕುದುರೆಯ ಮೇಲೆ ಊರೂರು ಅಲೆಯುವ ನಾಡಾಡಿಯಾಗಿತ್ತು (ಮಲೆಮ. ೧೧). ೨. ಸಾಮಾನ್ಯ ವ್ಯಕ್ತಿ ;

ಸಾಧಾರಣ ವ್ಯಕ್ತಿ; ಅರಿಕೇಸರಿ ತೆಂಕನಾಡಂ ನಾಡಾಡಿಯಲ್ಲದೆ ಮೆಚ್ಚುತ್ತಂ (ಪಂಪಭಾ. ೪-೩೧ ವ); ಪುರುಹೂತನಜಿದಯೋಧ್ಯಾಪುರಮಂ ನಾಡಾಡಿಯಲ್ಲ ದಂತಿರೆ ಪಡೆದಂ (ಪಂರಾಮಾ. ೧-೫೯); ನಾಡಾಡಿಗಳಿಗೆ ನಾಡಾಡಿಗಳನು ಸರಿಮಾಡಬಹುದು ಕೂಡಬಹುದು (ಧಕಪ. ೯-೧೧); ಆಕೆ ನಾಡಾಡಿಯಲ್ಲ (ನವಮೋ. ೪-೧೩)· ೩. ಸ್ವಲ್ಪವೂ ಗಣನೆಗೆ ಬಾರದ ವ್ಯಕ್ತಿ; ಅಲ್ಪ; ಕ್ಷುದ್ರ: ನಾಡಾಡಿಗಳ ಒಡಿದು ಫಲವೇನೆಂದು ಕೂಡಿದ ತನ್ನೊಡೆಯ ನೊಳು (ಅಂಜಪ. ೪-೧೧); ಪುಣ್ಯವುಳ್ಳ ಮಗನಂ ಪೋಗಾಡಿವ ಜ್ರಹ್ಯದಯರಾಗಿ ಬದುಕಿರ್ದವರ್ ನೋಡಿರೆಯೆಂಬ ನಾಡಾಡಿಯ ಮಾತ ಕೇಳುತಂ (ಪುಣ್ಯಾಸ್ರ. ೧೩-೩೭ ವ); ನಾಡಾಡಿಗಳ ನಾಟಕದ ಫಣಿಯಲ್ಲಾರು ನೀನೆಂದ (ಶುಷ್ಕಾಭ. ೧೩-೪೧); ಎನ್ನ ನಾಡಾಡಿಯಂತೆ ನೋಡಿದನು (ಪಾಂಚಜ. ೬೩-೩೦). ೪. ದೇಶದಿಂದ ದೇಶಕ್ಕೆ ಹೋಗಿ ಬರುವವನು; ದೇಶಸಂಚಾರಿ; ಯಾತ್ರಿಕ. ೫. ಹಳ್ಳಿಗಾಡಿನಲ್ಲಿ ವಾಸಿಸುವವನು; ಹಳ್ಳಿಗ; ಗ್ರಾಮೀಣ: (ಕ). (ಗು). ೬. ಸಾಮಾನ್ಯ ಗುಣವುಳ್ಳ; ಸಾಧಾರಣವಾದ: ಅಳುತ್ತಳುತಲಂಜದವೊಲಾನನಕೊರಸಿ ಕೈವೆರಳ ಮಜ್ಜಿಯಲಿ ಜನನಿಯನು ನೋಡುತ್ತಲಾ ನಾಡಾಡಿ ಶಿಶುವಂತೆ ತನು ನಡುಗೆ ಕಾಡಿಗೆ ಸಹಿತ ಕಂಬನಿ ಮುಬ್ಬೇಂದು ಕಳಂಕವಾಗಲು ಮುನಿಗಳನು ನಗಿಸಿದನು ನರಶಿಶುತನದ ನಟನೆಯಲಿ (ವಿಭಾಗ. ೧೦-೯-೩೬); ನಾಡಾಡಿ ದ್ವಿಜರಿಂಗೆ ವಿತ್ತವ ಪುತ್ತವಂ ಬೇಡಿದಂತಿತ್ತು ಬೀಳ್ಕೊಟ್ಟು (ಮೋಹತ. ೨೨-೫೨); ಇರ್ವರುಂ ಬೇದಬಿಜ್ಜಗಂಗೆ ಸರಿಮಿಗಿಲಿನಿಪರ್ . . . ನಾಡಾಡಿ ಕೆತ್ತಡಿಗಳಲ್ತು (ಅದ್ಭುತ. ೧೦-೦೬); ಆ ನಾಡಾಡಿ ಬೀದಿ ಬಾಲಕನೆಮ್ಮ ನಾಡಿಂಗೆ ದೊರೆಯಪ್ಪನೆಂದು ? (ಪಂದ್ರಸ. ೦೩-೦೬). ೭. ದೇಶದಿಂದ ದೇಶಕ್ಕೆ ಹೋಗಿ ಬರುವ; ದೇಶಸಂಚಾರಿಯಾದ: ಚೀಣಾವು ಬೌದ್ಧಮತವನ್ನು ಅದೇ ನಾಡಾಡಿ ಜನಗಳ ಮೂಲಕ ಕ್ರಿ.ಪೂ. ಒಂದನೆಯ ಶತಮಾನದ ಅಂತ್ಯದಲ್ಲಿ ಪಡೆಯಿತು (ಶತ್ಕಪ್ರಾ. ೬೩೭).

ನಾಡಾಡಿ ದೈವ = ಸಾಮಾನ್ಯ ದೇವತೆ; ಕ್ಷುದ್ರದೇವತೆ: ನಾಡಾಡಿ ದೈವವನೋತಡೆ ಕೇಡಲ್ಲದೆ ಸುಖವಿಲ್ಲವಮ್ಮ (ಶಿವಗೀ. ೧೬೦-೪೦೦); ನಾಡಾಡಿ ದೈವವೇ ನೀನು ದೇವರ್ಗೆಲ್ಲ ಚೂಡಾಮಣಿ (ಸೌಂದಪು. ೦೪-೩೦); ನಾಡಾಡಿ ದೈವಗಳ ಚಿನ್ನಬೆಳ್ಳಿಗಳಿಂದ ಮಾಡಿಕೊಂಡದಱ ಪೂಜೆಯನು ಮಾಡಿ ಕಾಡ ಕಳ್ಳರು ಬಂದು ಅವುಗಳನು ಕೊಂಡೊಯ್ಯೆ ಮಾಡಿಕೊಂಡಿರ್ದುದಕೆ ಬಾಯ ಬಡಕೊಳ್ಳುವೆಯೊ (ಪುರಂದ. ೧-೪೪-೩). **ನಾಡಾಡಿ ನರ=ಸಾಮಾನ್ಯ ಮನುಷ್ಯ**: ಅನಾಮಧೇಯ: ಇವ ನಾಡಾಡಿ ನರನಲ್ಲ ನಾರಿ ಚಿತ್ತೈಸು (ಕಂನವಿ. ೯-೧೩೦). **ನಾಡಾಡಿಯವ = ಸಾಮಾನ್ಯಮನುಷ್ಯ**: ಓಡು ಮಾಡಿದಳಿನ್ನ ನೀ ನಾಡಾಡಿಯವನೆಂದೇ ವಿಭಾಡಿಸಿ (ವಿಭಾಗ. ೭-೪-೩೪).

[ನಾಡು + – ಆಡಿ1]

ನಾಡಾಡಿಕೆ (ನಾ). ೧. ಸಾಮಾನ್ಯವಾಗಿರುವಿಕೆ; ಸಾಧಾರಣವಾಗಿರುವಿಕೆ: ಹನುಮನ ವೊಗದ ವೋಡಿಯ ಧೂರ್ತವಚನದ ಬಗೆಯ ಭಂಗಿಯನಾ ಪ್ರಹಸ್ತ ವಿವೇಕದಿಂದಱಿದು ವಿಗಡಭಟನಿವ ಕುಟಿಲಶಾಖಾಮೃಗವಿವನು ನಾಡಾಡಿಕೆಯ ವನಮೃಗದ ಪರಿಯಲ್ಲಿವನ ನುಡಿಸಿದು ನೋಡಬೇಕೆಂದ (ತೊರಣ. ೩-೬-೩೬). ೨. ಒಂದು ದೇಶದಲ್ಲಿ ಹಿಂದಿನಿಂದ ಬಂದ ವ್ಯವಹಾರ,–ರೂಢಿ,–ಸಂಪ್ರದಾಯ: ಅವರು ಚಿಕ್ಕಂದಿನಲ್ಲಿ ಬಹಳ ಕ್ಷೀಣವಾಗಿದ್ದು . . . ಹಿರಿಯರು ಕೈಕೊಂಡ ಒಂದು ನಾಡಾಡಿಕೆಯ ವಿಧಿಯಿಂದಾಗಿ ಹೀಗೆ ಹೆಸರಿಡುವುದಕ್ಕೆ ಕಾರಣವಾಯಿತೆಂದು ತಿಳಿಯಿತು (ಕನ್ನಮು. ೧-೪೪೩).

[ನಾಡು + ಆಡು1 + – ಇಕೆ]

ನಾಡಾಡಿಗ (ನಾ). ೧. = ನಾಡಾಡಿ ೧: ಈ ಶ್ರೀರತ್ನಸಿಂಹಾಸನವನ್ನು ನಾಡಾಡಿಗ ಹುಗುಳಿಯೆಂದೆಣ್ಣೆ, ಉದಾಸೀನಭಾವಕ್ಕೆಡೆಗೊಟ್ಟು, ಕಯ್ಸೋಂಕುವಮ್ಮ ಅನಾಚಾರಕ್ಕೆ ಎರ್ದೆಮಾಡಿ ಉರವಣಿಸಿದರೆ . . . ದಣ್ಣೆಸದಿರವು (ಪಟ್ಟಿಅ. ೧೦೭-೦೪). ೨. = ನಾಡಾಡಿ ೩: ಚಿತ್ತಮಂ ಚೆನ್ನಾಗಿ ಬಂಧಿಸಿ ಬಳಿಕ್ಕ ದೇವೋತ್ತಂಸನಂಗಮಂ ನೆಜಿ ಕೆಡಿಸಿತಿಲ್ಲವೇ ಚಿತ್ರಭವನಂಗಿದ ನಾಡಾಡಿಗರನೇನ ಮಾಡುವನೆಂದು ಕಂದರಾರು (ಸಮ್ಯಕ್ಕಾ. ೫-೨೪); ವಿಗಡನಹೆನರ್ಜುನನು ನಾಡಾಡಿಗರ ಬಗೆಯನು ಸಾಕು ನಗಿಸದಿರು (ಕೋಗಹು. ೦೭-೪೧). [ನಾಡಾಡಿ + – ಗ್2]

ನಾಡಾಡಿಗಟ್ಟಿ (ಕ್ರಿ). ನಾಡಾಡಿತನವನ್ನು ಬಿಡು; ಸಾಮಾನ್ಯತೆಯನ್ನು ಬಿಡು; ಲೋಕೋತ್ತರವಾಗು: ನಾಡಾಡಿಗಟ್ಟಿದ ರೂಪುಂ ಗಾಡಿಯು ವೆಸೆದೊಪ್ಪೆ (ಅಜಪು. ೫-೨೨). [ನಾಡಾಡಿ + ಕಟ್ಟಿ1]

ನಾಡಾಡು (ಗು). ಅಲ್ಪವಾದ; ಕ್ಷುದ್ರವಾದ: ಯಾ ಗಜವು ಸಾಮಾನ್ಯವಾದ ನಾಡಾಡು ಗಜವಲ್ಲ (ಸೌಗಂಧಿ. ೫೭೦-೦೬). [<ನಾಡಾಡಿ]

ನಾಡಿ1 (ನಾ). ೧. ಸಸ್ಯಗಳ ಟೊಳ್ಳಾದ ಕಾಂಡ. ೨. ತಾವರೆಯ ದಂಟು,–ನಾಳ. ೩. ಶರೀರದಲ್ಲಿ ರಕ್ತಚಲನೆಗಾಗಿ ಇರುವ ಕೊಳವೆಯಾಕಾರದ ರಚನೆ; ರಕ್ತವಾಹಿನಿ; ಧಮನಿ: "ನಾಡೀ, ಧಮನೀ, ಸಿರಾ ಸಾಮಾನ್ಯವಾಗಿ ನರಗಳ ಹೆಸರು" (ಸಿದ್ಧಾಂತಿ. ೦೬೩); ನಾಡಿಯೊಳಂ ಕೆಬಗೊತ್ತಿ ಸೋಂಕಿ ಮಧ್ಯದೊಳಿಸಗುತ್ತುವಿರ್ವೊಡೆ ಶುಭಾವಹಂ (ಕೋಕೋಪ. ೧೦-೭); ಎನಿತು ನಾಡಿಗಳವಕೆ ಸ್ಥಾನಗಳೆನಿತು (ಗಗಶಾ. ೯-೩). ೪. ಕೈಯ ಮಣಿಕಟ್ಟು, ಎದೆ, ಕಪೋಲ ಮೊದಲಾದೆಡೆಗಳಲ್ಲಿ ಕಂಡುಬರುವ, ಬೆರಳಿಗೆ ತೋರುವ ಲಯಬದ್ಧವಾದ ರಕ್ತಚಲನೆಯ ಮಿಡಿತ,–ಸ್ಪಂದನ: ನಾ ಮೂಱು ನಾಡಿಯ ಬಲ್ಲೆ (ಸರ್ವಜ್ಞ. ೩೦-೮); ಬಿಸಿಯಂ ಸಂಹನನದಿ ಮೇಗುಸುರಂ ನಾಸಿಕದಿ ನಾಡಿಗಳನಾಗಳ್ವಾಣಿಸುತಂ ಗಳಿಳಂ ನಖದೊಳ್ ನಸುಗೆಪಂ ನೋಡಿ ಕಾಣದಳವಳಿದಳಿಂ (ನನ್ನಚಾ. ೬-೦೫೪); ಪುರುಷರ ಬಲದ ಕೈಯ ಹೆಬ್ಬೆರಳ ಮೂಲದಲ್ಲಿ . . . ಪಿಡಿದು ನಾಡಿಯನ್ನು ನಿದಾನಿಸಬೇಕು (ಸಳವ್ಯ. ೦೦); ರಕ್ತದ ಪ್ರಮಾಣ ಕಡಿಮೆಯಾಗಿ, ನಾಡಿಯಲ್ಲಿ (pulse) ರಕ್ತದ ಒತ್ತಡ ಕಡಿಮೆಯಾಗುತ್ತದೆ (ಕಂಕೋ. ೦೭). ೫. (ಯಾವುದಾದರೂ) ನೀಳವಾದ ಕೊಳವೆ; ನಾಳ. ೬. ಒಂದು ಬಗೆಯ ಕೊಳವೆಯಂತೆ ಉದ್ದವಾದ ವ್ರಣ; ನಾಳಿವ್ರಣ; ಭಗಂದರ. ೭. ಒಂದು ದಿನದ ಅರವತ್ತನೆಯ ಒಂದು ಭಾಗ; ಒಂದಂ ಗಳಿಗೆ; ಅರ್ಧ ಮುಹೂರ್ತ; ಇಪ್ಪತ್ತುನಾಲ್ಕು ನಿಮಿಷ: ನಾಡಿಯಱುವತ್ತಕ್ಕೆ ಒಂದು ತಿಥಿಯಕ್ಕುಂ (ಮಂಗಣಾ. ೫೦-೯); "ನಾಳಿಯೆನೆ ನಾಡಿಯೆನೆ ಗಳಿಗೆಯೆಂದಕ್ಕುಂ" (ಕಶಿರ. ೫೪); ಅನುರಾಧ ನಕ್ಷತ್ರದೊಡನೆ ಚಂದ್ರನ ಸಂಬಂಧ ೧೧ ನಾಡಿ ೪೧ ವಿನಾಡಿಗಳಲ್ಲಿ . . . ಬೆಳೆಯುತ್ತದೆ (ಆಕಾಶ. ೯೦). ೮. ಒಂದು ಬಗೆಯ ಬಟ್ಟಿಗಿದ ಹುಲ್ಲುಂ. ೯. ಸಂಚು; ಮೋಸ. ೧೦. [ಯೋಗ] ಶರೀರದಲ್ಲಿ ವಾಯುಂ ಸಂಚಾರವಾಗುವ ನಾಳ; ℙ ನಾಡಿಗಳ ಸಂಖ್ಯೆಗಳನ್ನು ಒಂದೊಂದು ಗ್ರಂಥದಲ್ಲಿ ಒಂದೊಂದಂ ಬಗೆಯಾಗಿ ಹೇಳಿದ್ದಾರೆ. ಕಾಠಕೋಪನಿಷತ್ತಿನಲ್ಲಿ ನೂರೊಂದುಂ ನಾಡಿಗಳಿವೆಯೆಂದೂ ಅವಕ್ಕೆಲ್ಲ ಹೃದಯವು ಮೂಲಸ್ಥಾನವೆಂದೂ ಹೇಳಿದೆ. 'ನಾಡೀಪ್ರಕಾಶ'ವೆಂಬ ಗ್ರಂಥದಲ್ಲಿ ನಾಡಿಗಳು ಮೂರೂವರೆಕೋಟಿಗಳಿವೆಯೆಂದು ಹೇಳಿದ್ದು, ಅವುಗಳಲ್ಲಿ ಹದಿನಾರು ನಾಡಿಗಳನ್ನು ಪ್ರಧಾನವಾಗಿ ಗಣನೆಮಾಡಿದೆ. ಅವುಗಳು ಯಾವುವೆಂದರೆ–೧. ಇಡಾ. ೨. ಪಿಂಗಲಾ. ೩. ಸುಷುಮ್ನಾ. ೪. ಗಾಂಧಾರೀ. ೫. ಹಸ್ತಿಜಿಹ್ವಾ. ೬. ಪೂಷಾ. ೭. ವಸುವಶಾ. ೮. ಅಲಂಬುಷಾ. ೯. ಕುಹೂ. ೧೦. ಶಂಖಿನೀ. ೧೧. ತಾಲಜಿಹ್ವಾ. ೧೨. ಇಭಜಿಹ್ವಾ. ೧೩. ವಿಜಯಾ. ೧೪. ಕಾಮದಾ. ೧೫. ಅಮೃತಾ. ೧೬. ಬಹಂಲಾ ಎಂಬುವು. ೧೧. (ಆಲಂ) ಪರಿಸ್ಥಿತಿ; ಆಗುಹೋಗು: ನೋಡಿ ಬಂದೊರೆ ರಣಸ್ಥಿತಿಯ ನಾಡಿಯಂ (ಶ್ರೀರಾಮಾ. ೬೫೦-೩೫೪).

ನಾಡಿ ಆಡು = ನಾಡಿ ಸ್ಪಂದಿಸು,-ಮಿಡಿ : ನಾಡಿ ಆಡದವ ಓಡಿ ಬಂದಾನೇ ? (ಗಾದೆ). ನಾಡಿ ನಿಲ್ಲು = ನಾಡಿ ಮಿಡಿಯುವುದು ನಿಂತು ಹೋಗು : ನಾಡಿ ನಿಂತ ಮೇಲೆ ಕಾಡ ಪಾಲು (ಗಾದೆ). ನಾಡಿ ನೋಡು= ನಾಡಿಯ ಮಿಡಿತವನ್ನು ಪರೀಕ್ಷಿಸು: ನಾಡಿ ನೋಡದೆ ಮದ್ದು ಕೊಟ್ಟರೆ ಕಾಡುರೋಗ ಬರುವುದು (ಗಾದೆ). ನಾಡಿ ಮಿಡಿ=ನಾಡಿಯು ಸ್ಪಂದಿಸು : ಆಯಾಸದಿಂದ ಅವನಿಗೆ ಜೋರಾಗಿ ನಾಡಿ ಮಿಡಿಯುತ್ತಿದೆ (ರೂಢಿ). ನಾಡಿ ಮಿಡಿತ=ನಾಡಿಯ ಸ್ಪಂದನ: ಅವರಿಗೆ ಉದ್ವೇಗದಿಂದ ನಾಡಿ ಮಿಡಿತ ಏರಿದೆ (ರೂಢಿ). ನಾಡೀ ಹುಣ್ಣು = ನಾಡೀವ್ರಣ : ನಾಡೀಷು ಚ=ನಾಡೀ ಹುಣ್ಣುಗಳೊಳು (ವಿವೃವಿ. ೧೬೩). [ಸಂ.]

ನಾಡಿ₂ (ನಾ). ಒಂದು ಬಗೆಯ ವಾದ್ಯ : ವೇದಗಳ ಕಾಲದಲ್ಲಿ ಉಪಯೋಗದಲ್ಲಿದ್ದ ಬಕುರ, ನಾಡಿ, ತುರುವ . . ಮೊದಲಾದ ವಾದ್ಯಗಳ ರೂಪ ರಚನೆಗಳನ್ನೂ . . . ಶಿಲ್ಪಕಲಾಭಿತ್ತಿಗಳಿಂದ ನಾವು ಗ್ರಹಿಸಬಹುದು (ಸಂಗೀಪಂ. ೧೯೫). [?]

ನಾಡಿಂಧಮ (ನಾ). ಊದುಗೊಳವೆಯ ಮೂಲಕ ಊದುವವನು ; ಅಕ್ಕಸಾಲೆ : "ನಾಡಿಂಧಮಃ, ಸ್ವರ್ಣಕಾರಃ, ಕಲಾದಃ, ರುಕ್ಮಕಾರಕಃ-೪ ಅಗಸಾಲಿಗನ ಪೆಸರು" (ಸಿದ್ಧಾಂತಿ. ೩೦೦). [ಸಂ.]

ನಾಡಿಕೆ (ನಾ). ೧. ಒಂದು ಘಳಿಗೆ ; ಇಪ್ಪತ್ತುನಾಲ್ಕು ನಿಮಿಷಗಳ ಕಾಲ : "ನಾಡಿಕೆಗೆ ನಾಟಿಗೆಯೆನಿಪ್ಪುದು" (ಸಂಜೀವ. ೨೨) ; ಸಮಯಾವಳಿ ಕೋಚ್ವಾಸಸ್ತೋಕನಿಮೇಷನಾಡಿಕಾಮುಹೂರ್ತ . . .ಗಣನಾನುಕ್ರಮದಿಂದಂ ಪೆರ್ಚಿದೆಣಿಕೆಯೊಳ್ (ಆದಿಪು. ೬-೪೮ ವ). ೨. ಜಾಗಟೆ, ಗಂಟೆ ಮೊದಲಾದುವು. ೩. [ಕಾಮಶಾ] ಒಂದು ನಾಡಿಯ ಹೆಸರು : ಒಂದು ನಾಡಿ ಅದು . . . ಕಾಮಾಂದೋಳಿಕೆಯಂಬುವದು ಮತ್ತೊಂದು ಚಿರಕಾಲಂ ಮುಟ್ಟಿಸಿದೊಡಂ ನಾಡಿಕೆಯಂ ಮುಖಂ ಬಿರಿದು ಕಾಮಜಲಂ ಸ್ರವಿಸುವದು (ಕಾಮಶಾ. ೬-೧೦೯). [ಸಂ. ನಾಡಿಕಾ]

ನಾಡಿಗ (ನಾ). ೧. ಒಂದು ದೇಶದಲ್ಲಿ ಹುಟ್ಟಿ ಬೆಳೆದು ವಾಸಮಾಡಿಕೊಂಡಿರುವವನು; ಒಂದು ದೇಶದ ಪ್ರಜೆ: ಮೃಗರಿಪುವಂ ಮೃಗಾವತಿಯ ನಂದನನೊರ್ವನೆ ನಿಂದು ಕೊಂದು ನಾಡಿಗರ ಮನಕ್ಕೆ ಮಿಕ್ಕ ಪರಿತೋಷಮನಿತ್ತು (ವರ್ಧಪು. ೩-೪೬) ; ನಾಡಿಗರೊಳೆಲ್ಲರುಂ ಭೋಗಿಗಳ್ ಕುಟಿಲಗಾಮಿಗಳಲ್ತು (ರಾಮಾಶ್ವ. ೭-೨೩) ; ನಮ್ಮ ನಾಡಿಗರು ತಮ್ಮ ತಮ್ಮ ಜಾತಿ, ಧರ್ಮ, ಮತಗಳ ಅಸುಷ್ಠಾನದಿಂದ ಮೋಕ್ಷಸಂಪಾದನಕಾರ್ಯದಲ್ಲಿ ಆಸಕ್ತರಾಗಿದ್ದಾಗ (ಯಕ್ಷಪ್ರ. ೨೧). ೨. ಗ್ರಾಮಾಧಿಕಾರಿ : ನಾಡಿಗ ಯಂಕಪನು ಅಡಬಿದ್ದು ವೇಡಿಕೊಂಡಾಗ (ಎಕ.VII, ಶಿವಮೊ. ೧೦೭-೨೬; 15767); ಶಾನುಭೋಗರು ನಾಡಿಗರು ಹನ್ನರಡು ಮಂದಿ ಆಯಗಾರು (ಎಕ. XI, ಮೊಳಕಾ. ೨೫-೬೩ ; 1665) ; ಪಟೇಲನ ಕೆಲಸಕ್ಕಾಗಲಿ ಶ್ಯಾನುಭೋಗ ನಾಡಿಗ ಕರಣೀಕನ ಕೆಲಸಕ್ಕಾಗಲಿ : . . . ವಹಿಸುವುದು ಅವಶ್ಯಕವಾಗಿ ಕಂಡು ಬರುವದಿಲ್ಲವು (ಗ್ರಾಮಾಕ. ೫). [ನಾಡು + – ಇಗ]

ನಾಡಿಗತನ (ನಾ). ನಾಡಿಗನ ಅಧಿಕಾರ ; ಗ್ರಾಮಾಧಿಕಾರ : ವಂಶಪಾರಂಪರ್ಯವಾಗಿ ನಮ್ಮ ಪರಗಣಿಯಲ್ಲಿ ಪ್ರತಿಗ್ರಾಮದಲ್ಲಿ ಭೂಮಿ, ಮನೆ, ಕಣ, ನಾಡಿಗತನ . . . ಇಷ್ಟನ್ನೂ ಮಾಡಿಕೊಡಬೇಕೆಂದು ಕೇಳಿದನು (ಕಥವಿ. II, ೩೦೫). [ನಾಡಿಗ + –ತನ]

ನಾಡಿಗವರ್ಯ (ನಾ). ಗ್ರಾಮಾಧಿಕಾರಿಗಳಲ್ಲಿ ಶ್ರೇಷ್ಠನಾದವನು : ನೀವು ಕುಳಿತುಕೊಳ್ಳಬೇಕು ನಾಡಿಗವರ್ಯ . . . ನಿಮ್ಮನ್ನು ಅವಜ್ಞೆ ಮಾಡುವುದು ಆಊರ ಎಲ್ಲ ನಾಡಿಗರನ್ನೂ ಅವಜ್ಞೆಗೈದಂತೆ (ಸವತಿ. ೧೬೨). [ನಾಡಿಗ + ವರ್ಯ]

ನಾಡಿಗಿತ್ತಿ (ನಾ). ೧. ಒಂದು ದೇಶದ ಸಾಮಾನ್ಯ ಸ್ತ್ರೀ. ೨. ಗ್ರಾಮಾಧಿಕಾರಿಯ ಹೆಂಡತಿ : (ಕಿ). [ನಾಡಿಗ + –ಇತ್ತಿ]

ನಾಡಿದು 'ನಾಳಿದು' ನೋ.

ನಾಡಿದ್ದು 'ನಾಳಿದು' ನೋ.

ನಾಡಿಪರೀಕ್ಷೆ (ನಾ). ರೋಗವನ್ನು ಕಂಡುಹಿಡಿಯುವುದಕ್ಕಾಗಿ ನಾಡಿಯನ್ನು ಹಿಡಿದು ಮಿಡಿತವನ್ನು ತಿಳಿದುಕೊಳ್ಳುವಿಕೆ : ನಾಡಿಪರೀಕ್ಷೆ . . . ಆ ನಾಡಿಯನ್ನು ಪರೀಕ್ಷಿಸುವ ಪ್ರಕಾರವೆಂತೆಂದೊಡೆ (ಸಕವೈ. ೦೦). [ನಾಡಿ₁ + ಪರೀಕ್ಷೆ]

ನಾಡಿಮೂಲ(ನಾ). ರಕ್ತಧಮನಿಯು ಪ್ರಾರಂಭವಾಗುವ ಸ್ಥಳ; ನಾಡಿಯ ನೆಲೆ : ಮೊಲೆ ಬದಿ ತಿಗ ಬೆನ್ನು ತಲೆಯೊಳುದಿಸಿ ತೋರ್ಪ ಸಲೆ ನಾಡಿ ಮೂಲವ ತಿಳಿದು ಗೆಲುವಿತ್ತು ಸುಸಿಲಿಂಪುಗಲಿಸಿ ಕಾಣಿಪರು ಪೂವಿಲುಗಾಱ ನಾಗಮಾರ್ಥವನು (ಭೈರಸೂ. ೨೯೭). [ನಾಡಿ₁ + ಮೂಲ]

ನಾಡೀಕೂಟ (ನಾ). [ಜ್ಯೋತಿ] ವಿವಾಹಕ್ಕೆ ಮೊದಲು ವಧೂವರರ ಜಾತಕದ ಆಧಾರದ ಮೇಲೆ ನೋಡುವ ಹನ್ನೆರಡು ಕೂಟಗಳಲ್ಲಿ ಒಂದು : ನಾಡೀಕೂಟವೇ ಕೂಡದಿದ್ದರೆ ಮದುವೆಯ ಮಾತು ಮುಂದು ವರಿಸುವುದು ಬೇಡ (ರೂಢಿ). P ನಕ್ಷತ್ರಗಳನ್ನು ಮೂರುವರ್ಗಗಳಾಗಿ ವಿಂಗಡಿಸಿದೆ. ವಧೂವರರ ನಕ್ಷತ್ರಗಳು ಒಂದೇ ವರ್ಗಕ್ಕೆ ಸೇರದೆ ಹೋದರೆ ನಾಡೀಕೂಟವಿದೆ ಎಂದು ತಿಳಿಯಬೇಕು. 'ದ್ವಾದಶ ಕೂಟ' ಪರಾ. [ಸಂ.]

ನಾಡೀಚಕ್ರ (ನಾ). ದೇಹದಲ್ಲಿರುವ ಎಲ್ಲ ನಾಡಿಗಳ ಸಮೂಹ : ಗಗನ ತುರ್ಯಾರೂಢ ಮಗನಿಗೆ ಮಿಗಿಲು ಪೇಳಿಯೆ ಬೋಧಿಸಿದನಾ ನಿಗಮ ಸಮ್ಮತಿಯಿಂದೆ ನಾಡೀಚಕ್ರ ವಿವರಣೆಯ (ಗಗಶಾ. ೯ ಸೂಚನೆ). [ಸಂ.]

ನಾಡೀಪರೀಕ್ಷೆ (ನಾ). ನಾಡಿಯ ಮಿಡಿತವನ್ನು ಕಂಡುಹಿಡಿಯುವಿಕೆ : ನಾಡೀಪರೀಕ್ಷೆ ಆಡು ಬಲ್ಲುದೇ ? (ಗಾದೆ). [ಸಂ. ನಾಡೀಪರೀಕ್ಷಾ]

ನಾಡೀಯಂತ್ರ (ನಾ). ಗಳಿಗೆಯನ್ನು ಕಂಡುಹಿಡಿಯುವ ಸಾಧನ; ಸಮಯವನ್ನು ಕಂಡುಹಿಡಿಯುವ ಉಪಕರಣ : ಅವರು ಉಪಯೋಗಿಸುತ್ತಿದ್ದ ಉಪಕರಣಗಳು ಇವು. (೧) ನಾಡೀಯಂತ್ರ (Sun-dial). (೨) ಗೋಳಯಂತ್ರ (Sphere) (ಶಿಲ್ಪನಾ. ೧೦೩). [ಸಂ.]

ನಾಡೀವ್ರಣ (ನಾ). ಗುದದ್ವಾರದಲ್ಲುಂಟಾಗುವ ಒಂದು ಬಗೆಯ ಹುಣ್ಣು ; ಭಗಂದರ ; ನಾರುಹುಣ್ಣು : ಹಾವುಮೆಕ್ಕೆಬೇರಂ ನೀರಲ್ಲಿ ಅರೆದು ಪೂಸೆ ನಾಡೀವ್ರಣ ಮೊದಲಾದುವು ಮಾಣ್ಗುಂ (ವಿವೃವಿ. ೦೦೫). 'ನಾಳಿವುಣ್' ಪರಾ. [ಸಂ.]

ನಾಡೀಶೋಧನ (ನಾ). [ಯೋಗ] ನಾಡಿಯ ಪರಿಶುದ್ಧಿ,-ಸ್ವಚ್ಛತೆ : ಸಾಧಕನು ಈ ಕ್ರಮವನ್ನು ಅನುಸರಿಸಿದರೆ ಉತ್ತಮಾಧಿಕಾರಿಯಾಗಿದ್ದ ಪಕ್ಷದಲ್ಲಿ ಮೂರುತಿಂಗಳಿಗೆ ಪ್ರಾಣಾಯಾಮಸಿದ್ಧಿಯಾಗಿ ನಾಡೀಶೋಧನವಾಗುತ್ತದೆ (ಭಾರದ. ೦೬೨). [ಸಂ.]

ನಾಡು, ನಾಂಡು (ನಾ). ೧. (ಕಾಡಲ್ಲದ) ಜನವಸತಿಯುಳ್ಳ ಪ್ರದೇಶ,-ಭೂಭಾಗ: "ನೀವೃತ್, ಜನಪದಃ, ದೇಶಃ, ಉಪವರ್ತನಂ-ಈ ೪ ನಾಡು" (ಹಲಾಯು. ೪೭-೦೩೯) ; "ಎಸೆವ ನೀವೃಜ್ಜನವದಂ ದೇಶಮೆನೆ ನಾಡ ಪೆಸರಕ್ಕು" (ಮಂಗರಾ. ೫೬-೨) ; ನಾಡ ಕಾಡ ಬೆಳಸಿಂಬೆಳಸಾ ವಿಷಯಾಂತರಾಳದೊಳ್ (ಪಂಪಭಾ. ೧-೫೪) ; ನಾಡುಗಳರಸನಿದೆಂಬೊಂದಾಡಂಬರದಿಂದೆ ಸತ್ತಿಗೆತ್ತಿದುವೆನೆ ಕಣ್ಗಾಡುಂಬೊಲನಾದುವು ಬೆಳ್ಗಾಡಿನೊಳಲರ್ದೆಸೆವ ಬಯಲ ಬೆಳ್ದಾವರೆಗಳ್ (ಪಂದ್ರಪ. ೧-೮೮) ; ಮುನ್ನಿರ್ದ ಕಾಡೆಲ್ಲಮೆಸೆವ ನಾಡಾಗಿರಲ್ಕೆ ಮನದೊಳ್ಕಱುಬನಾಂತು (ಜೈಮಿಭಾ. ೨೯-೩೨). ೨. ದೇಶ; ರಾಜ್ಯ ; ರಾಷ್ಟ್ರ : ಕಾವೇರಿಯಿಂದಮಾ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ (ಕವಿರಾ. ೧-೩೬) ; ಪನ್ನೆರಡು ವರ್ಷಂಬರೆಗಮಿಾ ನಾಡೆ..ಳನಾವೃಷ್ಟಿಯಾಗಿ ಮಹಾರೌದ್ರಪಸವಮಕ್ಕುಂ

(ವಡ್ಡಾರಾ. ೮೮-೯) ; ಆ ನಾಡೊಳಗ್ರಹಾರಂ ಭೂನಾರೀಕುಚತಟಾಗ್ರಹಾರಂ ವಿಪುಳಶ್ರೀನಿಲಯವೆನಿಸಿ (ಪಂಚತಂ. ೮-೧೫) ; ನಾಡುಂ ನಂಟರ್ಕಳುಂ ನಮ್ಮಯ ಪರಿಜನಮುಂ ನಾಮುಮಿಾ ಬುದ್ಧಿ ನಿಮ್ಮೊಳ್ ಕೂಡಲ್ ಸೈತಿರ್ಪ ಸೈಪಿನ್ನೊಡರಿಸದು (ಮಹಾನೇ. ೧೧-೮೩) ; ನಾಡಾಡಿಯಂತೆಯೇ ಮಾಡಿಬಿಟ್ಟರು ಇವಗೆ ನಾಡೆಲ್ಲ ಹುಡುಕಿದರು ಈಡಾರ ಕಾಣೆ (ಪುರಂದ. ೧-೨೦೫-೬) ; ಚೆನ್ನಾಗಿ ಒಣಗಿದ ಮೇಲೆ . . . ದೂರದೂರದ ನಾಡುಗಳಿಗೆ ಮಾರಾಟದ ಸಲುವಾಗಿ ಕಳುಹುತ್ತಾರೆ (ಮುಂಬಯಿ. ೪-೫೫); ಬಡವಗೆ ನಾಡ ಮಾತ್ಯಾಕೆ ? (ಗಾದೆ). ೩. ಗ್ರಾಮಾಂತರ ಪ್ರದೇಶ; ಹಳ್ಳಿಗಾಡು. ೪. ಭೂಮಿ ; ನೆಲ : ನಗಿಸಿದರು ನಾಡನು, ಕಡಿದು ಕಗ್ಗಾಡನು (ಕನ್ನಬಾ. viii ಪ್ರಸ್ತಾವನೆ). ೫. ಆಡಳಿತ ಸೌಕರ್ಯಕ್ಕಾಗಿ ಮಾಡಿರುವ ದೇಶದ ವಿಭಾಗ : ನರಿದಾವಿ[ಳ]ನಾಡುಳ್ ಮೃಗೇಶನಾಗೇನ್ದ್ರಾಭೀಳರ್ಭ್ಭಟಹರ ಪ್ಪೊರ್ (ಮೃಅರಿ. ೧೯೩೬, ೧೬-೩ ; ಸು. 450) ; ಇನ್ದಾಪಾಯ್ಯಂ ನಾಡಾ ನಾಳುತ್ತಿರೆ ಪುರಿಗೆಱೆನಾಡ ಸರಟವುರದಾಯ್ದದಿಮ್ಬರುಮಿಟ್ಟು ನಾಡಯಿಸೆ (ಎಇ. XXI, ೩೫-೪ ; 883) ; ಛೇರ ಮತ್ತು ಪಾಂಡಿಯ ರಾಜ್ಯಗಳು ನಾಡು ಎಂದರೆ ಪ್ರಾಂತ್ಯವಾಗಿ. . .ವಿಭಾಗಿಸಲ್ಪಟ್ಟಿದ್ದುವು(ದಭಾಇ. ೧೦೬) ; ನಾಡಿನೊಡೆಯ ಭರಮಹೆಗ್ಗಡೆ ರಾಜ್ಯದ ಮಹಾದಣಾಯಕನಿಗಾಗಿ ಸರ್ವ ಸಿದ್ಧತೆಗಳನ್ನೂ ಮಾಡಿದ್ದನು (ಸವತಿ. ೬೫). ೬. ಒಂದು ದೇಶದ ಆಡಳಿತ; ಸರ್ಕಾರ : ಆಹಾರ ವ್ಯವಸ್ಥೆ ಮುಂತಾದವುಗಳಿಗೆ ನಾಡು ಎಷ್ಟು ವ್ಯಯ ಮಾಡಿದರೂ ವ್ಯರ್ಥವಲ್ಲ(ಶಿಷ್ಟದ. ೩೮೨). ೭. ಸಾಮಾನ್ಯಜನ: ನಾಡ ಹಿಡಿದಾಡುವ ಕೇಡಿಗದೈವವ ಬಗೆಯದಿರಮ್ಮ (ಶಿವಗೀ. ೧೬೦-೮೦೦) ; ನಾಡ ಹಂತಿಯಲಳುಕುವರ್ಜುನನೆ (ಕುಪ್ಪಾಕ. ೪-೨೨); ನಾಲಿಗೆ ಒಳ್ಳೇದಾದರೆ ನಾಡೆಲ್ಲ ಒಳ್ಳೇದು (ಗಾದೆ). ನಾಂಡು : ೫. ಮೆಂಗೀನಾಣ್ಡುವಿಷಯ ನಿವಾಸಿನೋ ರಾಪ್ಪ(ಷ್ಟ) ಕು(ಕೂ)ಟಪ್ರಮುಖಾನ್ (ಇಆ. XIII, ೨೪೯-೨೦ ; ?). ೭. ನಾಂಡು ಬರದು ನಟ್ಟ ಸಿಲಾಸಾಸನ (ಸಾಇಇ. IX_ii, ೪೦೮-೪೦ ; 1864).

ನಾಡುನಾಡು(ದ್ವಿರುಕ್ತಿ) : ತಿಳಿವಡೆದು ಸುಕುಮಾರವೈವಾಹಮಂ ಬೀಱೆ ನಾಡುನಾಡೊಳಗೆಲ್ಲಮಿಾಯುತ್ಸವಂ ನೋಡೆ (ನಂಬಿರ. ೫-೯). ನಾಡ ಕಥೆ = ಒಂದು ದೇಶದಲ್ಲಿ ಪ್ರಚಲಿತವಾದ ಕಥೆ ; ಇತಿಹಾಸದ ಆಧಾರವಿಲ್ಲದಿದ್ದರೂ ಜನರು ಹಿಂದಿನಿಂದಲೂ ಹೇಳುತ್ತಾ ಬಂದಿರುವ ಕಥೆ; ಜಾನಪದ ಕಥೆ : ಇಂಥ ಅಲ್ಪ ಸ್ವಲ್ಪ ಸಾಮಗ್ರಿಯಿಂದ ಅಷ್ಟೇನೂ ಪರಿಣಾಮಕಾರಿಯಲ್ಲದ ನಾಡ ಕಥೆಯಿಂದ ಈಸ್ಕಿಲಸ್ ಏನು ಮಾಡಲು ಸಾಧ್ಯ ? (ಬದ್ಧಪ್ರ. vi ಟೀಕೆ). ನಾಡ ಕಬು = ಒಂದು ಬಗೆಯ ತೆರಿಗೆ (?) : ಎಲಗೂಡಿ ನಾಡ ಕಬು ಕಲವೆ ಕುಮರಿ ಕೋಹು ಮಕ್ಕಿ ಹಕ್ಕಲು ಬಾಲದೆರೆ (ಮೃಅರಿ. ೧೬೩೪, ೫೮-೨೦ ; 1434). ನಾಡಕರಣ, ನಾಡಕರಣೆ, ನಾಡಕರ್ಣ, ನಾಡಕರ್ಣೆ, ನಾಡ್ಕರ್ಣೆ = ೧. ಮುಖಂಡ ; ಮುಂದಾಳು : ದೇಶವಿಚಾರಿಗಳುಂ ನಾಡಕರಣಂಗಳುಂ (ಬೊಂಕಶಾ. ೧೯೨೯, ನವಿಲುಗುಂದ ೨೦೦-೫೫ ; 1157) ; (ಲೋಕಸ. ೪೪); ದೇಶಕುಲಕರ್ಣೆ ನಾಡಕರ್ಣೆ ಬಾಳಪ್ಪನ ಭಕ್ತಿ (ಇಎ. ೧೯೫೦, ಹಾನಗಲ್, ೧೨೬-೬ ; 1735). ೨. ಒಂದು ಮನೆತನದ ಹೆಸರು ; ಕುಲನಾಮ : ಕರಣಿ (ನಾಡ ಕರಣಿ), ಶ್ಯಾನುಭಾಗ . . . ಮೇಲಿತ್ತ ಹೆಸರುಗಳನ್ನು ಜಾತಿಗೆ . . . ಗೌರವಕ್ಕೆ ಸಂಬಂಧಿಸಿದವುಗಳೆಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು (ತುಳುನಾ. ೧೮೪) ; ನಾಡ್ಕರ್ಣೆ ರಾಮರಾಯರ ಹಿರಿಯ ಮಗಳು ಸುಮಿತ್ರೆಗೆ ನಾಳೆ ಮದುವೆ (ಮೂರುದಾ. ೨೧೫). ನಾಡ ಕಾಲುವೆ = ಜನರಿಗೆ ಉಪಯೋಗವಾಗದ ಕಾಲುವೆ,– ನಾಲೆ: ಮೂಢರಂದದೊಳೂರ ಗುದ್ದಲಿಯನ್ನು ಕೊಂಡು ನಾಡ ಕಾಲುವೆಯ ತಿದ್ದುವರೆ (ಮೋಹತ. ೬-೮). ನಾಡ ಕುದುರೆ,ನಾಡ ಗುದುರೆ = ನಾಡಿನಲ್ಲಿ ಹುಟ್ಟಿದ ಕುದುರೆ ; ದೇಶೀಯಾಶ್ವ ; ನಾಟಿ ಕುದುರೆ : ಹೊಲೆಯ ಕುದುರೆ ಪೆಡಿಲೆಯ ಕುದುರೆ ನಾಡ ಕುದುರೆಗೆ ಪ್ರತಿ ಗದ್ಯಾಣಂ ಒಂದಕ್ಕಂ ಬೇಳೆ (ಎಕ. V, ಬೇಲೂರು. ೭೫-೧೧೧ ; 1382) ; ಜಾತಿತುರಂಗಮವಿಳಿವ ಹೊಳೆಗಳೆಮ್ಮ ನೀತಿನಿಪುಣ ನರಪತಿಯ ಮಾತಿನೊಳಿಹವೆನೆ ನಾಡಗುದುರೆ ಯಾಳ್ವ ಭೂತಳಾಧಿಪರವರ್ಗೆಣೆಯೆ (ಕುರಾಸಾಂ. ೧೦-೧೯). ನಾಡ ಖೋಡಿ= ನಾಡಿಗೇ ತಿಳಿದ ಕೆಡುಕ ; ಮಹಾದುರುಳ ; ಎಲ್ಲರಿಗೂ ತಿಳಿದಂಥ ದುಷ್ಟ : ನಾಡ ಖೋಡಿಗಳು ವ್ಯಾಸನ ವಚನ ನಂಬದೆ ಮೂಢಗರ್ವರು ಗುರುವೆನಿಪ (ವೈಕುಂವ. ೧-೬೦). ನಾಡ ಗಾದೆ = ದೇಶದಲ್ಲಿ ಪ್ರಚಲಿತವಾದ ಗಾದೆ; ನಾಣ್ಣುಡಿ : ವಸುಧೆಯೊಳು ಪೊಡಮಡಲು ದೇಗುಲಂ ಬಿರ್ದ ನುಡಿ ಪಸರಿಸುವ ನಾಡ ಗಾದೆಯ ತೆಱದಿ ನಿಮ್ಮ ಸೇವಿಸ ಬಂದ ನಮಗಾಯ್ತು ನರಕವು (ಸಿದ್ಧರಾ. ೧-೨೭). ನಾಡಗಾರ = ದೇಶದ ಪ್ರಜೆ : ಬಳ್ಳಿ ನೀ ನಾಡಗಾರರಿಗೆ ನೆರವಾಗಿ (ಹಳ್ಳಿಯ. ೭೧). ನಾಡ ಗಾವುಂಡ = ನಾಡಿನ ಒಡೆಯ,–ಪ್ರಭು : ಇದಾಗವಱೆ ಗಲ್ಪಸೆಗುತ್ತನಾಡ ಗಾವುಣ್ಡನು ಎತ್ತಿಕೊಳ್ಳ (ಮೃಅರಿ. ೧೯೪೬, ೩೦ ; 1067). ನಾಡ ಗಾವುಂಡಿ = ಒಬ್ಬಾತನ ಹೆಸರು : ಚೆನ್ದಗಾವುಣ್ಡರ ಮಗ ನಾಡಗಾವುಣ್ಡ ಗಾವುಣ್ಡಗೆಯ್ವನ್ದು (ಎಕ. X, ಮಾಲೂರು. ೯೪-೮ ; ಸು. 950). ನಾಡ ಗೀತೆ = ೧. ನಾಡಿನ ಹಿರಿಮೆಯನ್ನು ಸಾರುವ ಹಾಡು, – ಪದ : ಅಂದಿನ ಕಾರ್ಯಕ್ರಮವು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ನಾಡ ಗೀತೆಯೊಂದಿಗೆ ಆರಂಭವಾಯಿತು (ರೂಢಿ). ೨. ದೇಶಭಕ್ತಿಗೀತೆ : 'ಜನಗಣಮನ' ಎಂಬ ನಾಡಗೀತೆಯ ನಂತರ ಅಂದಿನ ಸಭೆ ಮುಕ್ತಾಯವಾಯಿತು (ರೂಢಿ). ನಾಡ ಗುಡಿ = ರಾಷ್ಟ್ರಧ್ವಜ : ನಮ್ಮ ನಾಡ ಗುಡಿಯ ನೋಡ ನೋಡಿರಣ್ಣ ಹೇಗಿದೆ ! (ಕಪಪು. ೨-೩೬). ನಾಡ ಚಲ್ಲವತ್ತ= ಸುಳ್ಳುಗಾರನಾದ ವಂಚಕ; ನಂಬಿಸಿ ಮೋಸಮಾಡುವವನು : ಕೆಮ್ಮಗೆ ನಾಡ ಚಲ್ಲವತ್ತರ ನುಡಿಗೊಳ್ಳದಿರ್ (ಪಂಪಭಾ. ೯-೪೨). ನಾಡ ಜಂಬುಕ = ತುಚ್ಛ ವ್ಯಕ್ತಿ ; ದಡ್ಡ ; ಕೀಳು ಮನುಷ್ಯ : ಕಣ್ಣೀರವನನ್ನರಿಯಲಾರದ ನಾಡ ಜಂಬುಕ (ಬೆಟ್ಟಅ. ೦೯೫-೨೨). ನಾಡ ಜನ = ಸಾಮಾನ್ಯ ಜನ : ಹರಿಭಕ್ತರನ್ನು ಕುರಿತು ಕನಕದಾಸರು ನಾಡ ಜನರುಗಳಂತೆ ನಡೆಯರು, ನುಡಿಯರು . . ಎಂದಿದ್ದಾರೆ (ಭಾರದ. ೪೦೨). ನಾಡ ಜೂದು = ೧. ತುಚ್ಛವಾದ ಜೂಜು, – ಪಗಡೆಯಾಟ. ೨. ಮೋಸದ ಜೂಜು : ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾ ನಾಡ ಜೂದಿಂಗೆ . . . ಎಂದೋವದೆ ಪೊಯ್ದಂ (ಗದಾಯು. ೮-೦೯). ನಾಡಡವಿಗೋಡಗ = ಸಾಮಾನ್ಯವಾದ ಕಾಡುಕಪಿ : ಕಡಲ ಮಧ್ಯದ ಖಳನೊಡನೆ ಕೈಹೊಡೆದುದಲ್ಲಿಗೆ ತೆತ್ತಿಗರು ನಾಡಡವಿಗೋಡಗವಾಳು ಕುದುರೆಗಳಸುರವಿಗ್ರಹಕೆ (ಕುಪ್ಪಾಅ. ೨೨-೫೧). ನಾಡ ತಂದೆ = ದೇಶಕ್ಕೆ ತಂದೆಯಂತೆ ಇರುವವನು ; ರಾಷ್ಟ್ರಪಿತ : ಹರಿಜನರ ಬಳಗ ಉಳಿದವರ ಒಳಗೆ ಬಳಸಿದೆಯೊ ನಾಡ ತಂದೆ (ಸೂರ್ಯಪಾ. ೧೪-೩). ನಾಡ ತಕ್ಕ = ದೇಶಭಾಗದ ಮುಖಂಡ ; ಸುತ್ತುಮುತ್ತಿನ ಪ್ರದೇಶದ ಜನಕ್ಕೆ ಮುಖಂಡ : ನಾಡ ತಕ್ಕ ಸುಬ್ಬಯ್ಯಮೋಲಿಗೆ ಕುಲದ ಅಭಿಮಾನ ಹೆಚ್ಚು (ಹುಲಿಹಾ. ೭೮). ನಾಡ ತಕ್ಕಾಮೆ = ನಾಡಿನ ಮುಖಂಡ ಪದವಿ,–ಅಧಿಕಾರ : ಹಾಲೇರಿವಂಶದ ಅರಸರ ಆಡಳಿತ ಪ್ರಾರಂಭವಾಗುವ ಮುನ್ನ ರೂಢಿಯಲ್ಲಿದ್ದ ನಾಡ ತಕ್ಕಾಮೆ ಮತ್ತು ಗ್ರಾಮ ತಕ್ಕಾಮೆಗಳನ್ನು ಊರ್ಜಿತಕ್ಕೆ ತಂದರು (ಹುಲಿಹಾ. ೮೪). ನಾಡ ತೊತ್ತು = ದೇಶದ ಸೇವಕ ಸರ್ವರ ಕರುಣದ ಶಿಶು ನಾನು, ನಾಡ ತೊತ್ತು (ಕಒಸಾ. ೧೪೬). ನಾಡ ದೇವಿ = ೧. ನಾಡಿನ ಅಧಿದೇವತೆ. ೨. ಕನ್ನಡ ಭಾಷೆಯ ಅಭಿಮಾನಿ ದೇವತೆ ; ಭುವನೇಶ್ವರಿ : ಮುಂಜಾನೆ ನಾಡ ದೇವಿಯ ಮೆರವಣಿಗೆಯು ವೈಭವದಿಂದ ನಡೆಯುವುದು (ಕಪಪು. ೫-೧೨). ನಾಡ ದೈವ=ಕ್ಷುದ್ರದೇವತೆ: ದೆಸೆಗೆಟ್ಟು ನಾಡ ದೈವಂಗಳಿಗೆ ಹಲುಬಿದಡೆ ನೊಸಲ ಬರಹವ ತೊಡೆದು ತಿದ್ದಲಳವೆ (ಕನಕ. ೫೪-೩). ನಾಡ ಧಡ್ಡಿ = ಏನೂ ತಿಳಿಯದ ಮೂಢೆ ;

ಮಹಾಮೂರ್ಖಹೆಂಗಸರು : ಕಣ್ಣೀರು ಸುರಿಸಲಿಕ್ಕೆ ಈಗೇನು ಆಗೇದೆ ಧಡ್ಡಿ – ನಾಡ ಧಡ್ಡಿ (ದಾಸಕೂ. ೦೦೩). **ನಾಡ ನರಿ** = ಬಡನರಿ ; ಹೇಡಿ ನರಿ : ರಿಪುವಾಹಿನಿಯನಿಱಿಯದೆ ನಾಡ ನರಿಯವೋಲಿನಗೆ ನೀ ಹಲುಗಿರಿಯೆ ಬಿಡುವೆನೆ (ಕುವ್ಯಾವಿ. ೬-೦೯). **ನಾಡ ನಾಲಗೆ** = (?) : ಪಟ್ಟಣಸಾಮಿ ಮಹದೇವಸೆಟ್ಟಿ ನಾಡ ನಾಲಗೆ ಬಮ್ಮಿಸೆಟ್ಟಿಯೊಳಗಾದ ಸಮಸ್ತ ಸಖರಂಗಳುಂ ಸಂತೆಯ ಆಯವಂ ಸಲಿಸುವರು (ಎಕ. XII, ತಿಪಟೂ. ೪೮-೩೦ ; 1214). **ನಾಡ ನಾಲಗೆಗೆಳೆಯು** = ಸಾಮಾನ್ಯವಾಗಿ ಮಾತಿನಲ್ಲಿ ಮಾತ್ರ ಸ್ನೇಹಿತನಾಗಿರುವವನು ; ಕೆಲಸಕ್ಕೆ ಹಿಂದೆಗೆಯುವವನು : ಸವಿವಾತುಗಳ ನಿನಗಾಡುವವರಿಗೆ ಚಿತ್ತಗೊಡದಿರು ಹಿಸುಣ ಹೊಗಿಸಱಿರು ನಾಡ ನಾಲಗೆಗೆಳೆಯರೆಂಬುದ ಮಾಡದಿರು (ಕುವ್ಯಾಉ. ೯-೦೪). **ನಾಡ ಮುಡಿ** = ೧. ಗಾದೆ ; ಲೋಕೋಕ್ತಿ ; ನಾಣ್ಣುಡಿ : ಹಾಡಿ ಹಡದಾಡಿ ಹೋಗಾದಿಂ ಕಡಗೆಂಬ ನಾಡ ನುಡಿಯಂತೆ (ಸೋಮಶ. ೦-೬೭). ೨. ಕೀಳುಮಾತು : ಪೊಂದುವ ಸಂಧಿಯ ನುಡಿಗಳನಾದದೆ ಸಲ್ಲದ ನಿಲ್ಲದ ನಾಡ ನಂಡಿಗಳನೆಮ್ಮವರ್ ನೋವಂತಿರೆ ಸುಡುವಾತುಗಳಂ ಗಟಿವುವಯ್! (ರಾಮಾಶ್ವ. ೦೪೨-೩೯). **ನಾಡ ಪದ** = ನಾಡಿನಲ್ಲಿ ಪ್ರಚಲಿತವಾಗಿರುವ ಹಾಡು,–ಗೀತೆ ; ಜನಪದಗೀತೆ : ವಾಲ್ಮೀಕಿಯ ಕಾಲಕ್ಕೆ ರಾಮಾಯಣದ ಕಥೆಯು ದೇಶದಲ್ಲೆಲ್ಲ ನಾಡ ಪದಗಳ ರೂಪದಲ್ಲಿ ಹಬ್ಬಿ ಹರಡಿರಬೇಕೆಂದು ಪಾಶ್ಚಾತ್ಯವಿದ್ವಾಂಸರು ಊಹಿಸುತ್ತಾರೆ (ಭಾರದ. ೪೬). **ನಾಡ ಪಾಲ** = ನಾಡಿನ ಪ್ರಭು,–ಮುಖಂಡ: ಬೆಳ್ಳರೆಶೀಮೆ ಹೊಸೂರ ನಾಡ ಪಾಲ ಮೂಡಲ ದೈಲ ಗ್ರಾಮದಲ್ಲೂ . . . ಭೂಮಿಯಂನ್ನು ಮೂಲಕ್ಕೆ ಮಾಡಿಕೊಂಡು (ಮೈಅರಿ. ೦೯೩೪, ೯-೩ ; 1690). **ನಾಡ ಪೆರ್ಗಡೆ, ನಾಡ ಪೆಗ್ಗಡೆ** = ನಾಡ ಪಾಲ : ತೊಳಕಲೆಯ ಸಿರಿಯಮಸೆಟ್ಟಿಯುಂ ನಾಡ ಪೆರ್ಗಡೆ ಹಮ್ಮೆಸೆಟ್ಟಿ [ಯುಂ] (ಎಕ. XIX, ೩೭-೧೫ ; 1144) ; ನಾಡ ಹೆಗ್ಗಡೆ ತಡವಾಡದೆ ಕುದುರೆಯನ್ನೇರಿ ಹೋದನು (ಸವಚ. ೩೭). **ನಾಡ ಪ್ರಭು** = ನಾಡ ಪಾಲ : ನಾಡ ಪ್ರಭುಗಳ ಸನ್ನಿಧಾನದಲು . . . ಧಾರಾಪೂರ್ವ್ವಕಂ ಮಾಡಿ ಬಿಟ್ಟರು (ಎಕ. VII, ತಿಪಮೂ. ೯೭-೪೮ ; 1118) : ನಾಡ ಪ್ರಭುಗಳು ಸ್ಥಾನಮಾನ್ಯಳೊಳಗಾದ ಸಮಸ್ತಪ್ರಜೆಗಳ ಪುರಸ್ಸರದಿಂದವೂ . . . ಸಾಕಲ್ಯೇನ ಹಸ್ತಸ್ಥವಾಗಿ ಕೊಟ್ಟು (ಎಕ. XI, ಚಿಕ್ಕದು. ೧೨-೦೭ ; 1286). **ನಾಡ ಬಾವುಟ** = ನಾಡ ಗುಡಿ : ಸ್ವಾತಂತ್ರ್ಯ ದಿನದಂದು ಸರ್ಕಾರಿ ಕಟ್ಟಡಗಳ ಮೇಲೆ ನಾಡ ಬಾವುಟವನ್ನು ಏರಿಸುತ್ತಾರೆ (ಕೂಡಿ). **ನಾಡ ಬೇಂಟೆ** = ಸುತ್ತುಮುತ್ತಿನ ಗ್ರಾಮಸ್ಥರಂ ಒಟ್ಟುಗೂಡಿ ಆಡುವ ಬೇಟೆ : ಕಾಡ ಕಟ್ಟಳೆ ನಾಡ ಬೇಂಟೆಯಂ ಕೊರಲೊಂಕೆ (ಕಾಉಂರ. ೪೯-೭೨). **ನಾಡ ಮದ್ದು** = ಸ್ವದೇಶೀ ಔಷಧಿ ; ಜನರು ತಮ್ಮ ಅನುಭವದಿಂದ ಪ್ರಯೋಗಿಸುವ ಔಷಧ; ನಾಟಿ ಮದ್ದು : ನಾಡ ಮದ್ದಂ ತಿಂದು ಕುತ್ತ ಕೆಡದಿರಬಹುದೆ (ಹಜಕಾ. ೦೦-೨೪). **ನಾಡ ಮಾತು** = ೧. ದೇಶದ ವೃತ್ತಾಂತ ; ರಾಜಕೀಯಕ್ಕೆ ಸಂಬಂಧಪಟ್ಟ ಮಾತು : ನಾಡ ಮಾತುಗಳೇತಕೋ ಸಂಗೀತವು ಪಾಡುವ ಸಮಯವೇನೊ ಗಾಡಿಗಾಡಿ ಶ್ರೀಪುರಂದರವಿಠಲನ ಪಾಡಿ ಪಂಥಗಳೊಡಗೂಡುವ ಸಮಯಕ್ಕೆ (ಪುರಂದ. ೩-೩೨-೩) ; ಆಡಿಗಟ್ಟಾವೇಕೆ ಬೋಡಂಗೆ ಕಬ್ಬೇಕೆ ಕೋಡಗಪ ಕೈಗೆ ಬಳೆಯೇಕೆ ಬಡವಂಗೆ ನಾಡ ಮಾತೇಕೆ (ಸರ್ವಜ್ಞ. ೦೩೭೪). ೨. ಗಾದೆ ; ನಾಣ್ಣುಡಿ : (ಕ). ೩. ಜನಸಾಮಾನ್ಯರ ಮಾತು ; ಯೋಚನೆ ಮಾಡದೆ ಆಡುವ ಮಾತು ; ಅಪಲಾಪ : ನಾಡ ಮಾತು ಬೀಡ ಸೆಜಗೊಡ್ಡಿ ಬೇಡುಕೂಡಲ ಸಂಗನ ಶರಣರ (ಬಸವ. ೨೭೮) ; ನಾಡ ಮಾತೇನೊಲಿದೊಡಂ ಕೊಂಡಾಡು ಮೌನಲ್ಲದೆ ಲಘುವಂ ಮಾಡಿ ನುಡಿಯದಿರು (ಬಸಪು. ೪೪-೩೬); ಮತ್ತೆ ಮಾಣದೆ ನಾಡ ಮಾತನು ಕಲಿತು ನಮ್ಮೊಡನಾಡುತಿಹರೆ (ಕ್ರಪುಲೀ. ೧೩-೦೨) ; ನಾಡ ಮಾತು ಬೇಡ ನಾಲಿಗೆ ನಿನ್ನ ಬೇಡಿಕೊಂಬೆನು ಕಂಡ್ಯ ನಾಲಿಗೆ (ಪುರಂದ. ೫-೪೮ ಪಲ್ಲವಿ) ; ಕೇಡು ಬರಲದಕಂಜೆನಂಜೆಮ ನಾಡ ಮಾತುಗಳೇಕೆ (ವಿಧಾಗ. ೬-೭ ೨೦) : ಬಹುಜನದ ಮುಂದೆ ಸುಳಿವಳ್ನಾಡ ಮಾತಂಗಳಹುವವಳ್ . . . ನಿಲ್ವಳೇ ಶಿಕ್ಷಿಸಿದೊಡೆ (ಜೈಹಿಂಧಾ. ೫-೫೭) ; ನಾಡ ಮಾತೇಕೆ ! ಎನಗೆಂತೋ ಮೇಣುಂ ಮೇಣ್ ಕೇಳ್ವನೆಂಬೊಂದಾಸೆ ಪುಟ್ಟುಗುಂ (ರಾಮಾಶ್ವ. ೦೬೪-೦೭). **ನಾಡ ಮಾನಸ** = ಸಾಮಾನ್ಯಪಂನುಷ್ಯ ; ಅಲ್ಪ: ವರಿಸೆ ನಾಡಮಾನಸರದೇಂ ನೆರೆ ಪೋಲ್ವರೆ ಜಕ್ಕಿಸೆಟ್ಟಿಯ (ಕಾಪು. IV, ೦೨-೩೪ : 1121). **ನಾಡ ಮುಖ** = ದೇಶದ ಮುಖಂಡ. – **ಮುಖ್ಯಸ್ಥ** : ತಳಗೆಯ ನಾಡಾಳುವ ನಾಡ ಮುಖಗಳು ರಣಪಟುವಗವುಡನ ಮಗ ದಾಳಿಗವುಡ (ಎಕ. XIV, ತಿರುವಾ. ೭೪-೬೦ : 1277). **ನಾಡವರ್, ನಾಡವರು** = ೧. ದೇಶದ ಜನರಂ ; ಪ್ರಜೆಗಳು : ಪದನಱಿದು ನುಡಿಯಲುಂ ನುಡಿದುದನಱಿದಾರಯಲುಮಾರ್ವರಾ ನಾಡವರ್ಗಳ್ (ಕವಿರಾ. ೧-೩೮) ; ಮುನ್ನಿನ ದಿವಸಂ ನಾಡವರೆಲ್ಲಂ ಪೂಜಿಸಿ ಪೋದ ಪಟ್ಟಸೆತ್ತುಮಂ ಬಂಡಿಯುಮುಂ ತಂದು ತೋಱಿ (ಧರ್ಮಾಮ್ಯು. ೨-೦೯೦). ೨. ಸಾಮಾನ್ಯಜನ ; ಜನಸಾಮಾನ್ಯ : ವೇರೆಯಂ ತಪ್ಪುವ ಮಾನಿಸರಂ ಕಂಡೊಡೆ ಪಂಚಮಹಾಪಾತಕರೆಂದು ಬೈವ ನಾಡವರ ಬೈಗುಳ್ಗಳಿಂದವಂ (ಧರ್ಮಾಮ್ಯು. ೯-೬೮) ; ನಾಡವರು ಅವನಿಗೆ ನಂಬೇಟಿಗಾರಮಾದಪ್ಪ ಎಂದು ಗೌರವಸಂಬೋಧನೆಯನ್ನು ಬಳಸುತ್ತಿದ್ದರು (ಹುಲಿಹಾ. ೦೭). ೩. ನಾಡಿನ ಮುಖಂಡರು : ಮುಂದೆ ನಾಡವರು ಆ ಹೆಂಡ ಮುಂದಕೆ ಸಾಗಿ ಹೋಗುವಾಗ (ಎಕ. VII, ತಿಪಮೂ. ೦೦೭-೩೫ ; 1576 ?). ೪. (ಕರಾ) ಒಂದು ಜನಾಂಗದ ಹೆಸರು: ಕರಾವಳಿ ಪ್ರದೇಶದಲ್ಲಿ ವಾಸಿಸುವ ಜನರಲ್ಲಿ ನಾಡವರು, ಹಾಲಕ್ಕಿ ಒಕ್ಕಲರು . . . ಒಕ್ಕಲತನದಿಂದ ಜೀವಿಸುವವರು (ಕರವೀ. ೬) ; ನಾಡವರು ಯಾ ನಾಡ ಬಂಟರು – ಜಿಲ್ಲೆಯ ಉತ್ತರ ಭಾಗದಲ್ಲಿದ್ದು ಕನ್ನಡ ಮಾತನಾಡುವವರು (ತುಳುವಾ. ೫೦). **ನಾಡ ವಾರ್ತೆ** = ನಾಡಿನ ಮಾತು ; ಲೋಕಾಭಿರಾಮವಾದ ಮಾತು ; ಲೌಕಿಕವಾದ ಮಾತು : ರೂಢಿಯೊಳಗೆ ನಮ್ಮ ಪುರಂದರವಿಠಲನ್ನ ಪಾಡಿ ಪೊಗಳದೆ ನಾಡ ವಾರ್ತೆಯಾಡುವರು (ಅಗಡಾ. ೦೦೦). **ನಾಡವೊಪ್ಪ** = ನಾಡಿನ ಪರವಾಗಿ ಹಾಕುವ, ಒಬ್ಬ ಅಧಿಕೃತ ವ್ಯಕ್ತಿಯ ಸಹಿ,–ಹಸ್ತಾಂಕನೆ : ಸ್ವರುಚಿಯಿಂದ ಧಾರಾಪೂರ್ವ್ವಕವಾಗಿ ಬಿಟ್ಟ ಧರ್ಮ್ಮ ನಾಡವೊಪ್ಪ ಶ್ರೀಭೀಮನಾಥ ಮಲಪರೊಳು ಗಡ (ಎಕ. VII, ತಿಪಮೂ. ೦೪-೦೪ ; 1389). **ನಾಡ ಸೇನಬೋವ** = ನಾಡಿನ ಶಾನುಭೋಗ ; ನಾಡಕರಣಿ : ನಾಡ ಸೇನಬೋವ ಬಾಚಣ್ಣ (ಎಕ. XI, ಚಿಕ್ಕದು. ೦೨-೩೪ ; 1286). **ನಾಡ ಸ್ವಾಮಿ** = ನಾಡ ಪಾಲ : ನಾಡ ಸ್ವಾಮಿ ಶಂಕರೆಯ್ಯನು ಸೇನಬೋವ ಶಂಕರೆಯ್ಯನು (ಎಕ. VII, ತಿಕಾರಿ. ೪೪-೦೩ ; 1994) : **ನಾಡ ಹಬ್ಬ** = ಏಕೀಕರಣದ ದೃಷ್ಟಿಯಿಂದ ಪ್ರಾರಂಭಿಸಿದ ದಸರಾ ಮೊದಲಾದ ಹಬ್ಬ : ತಾವು ಮಾಡಿಕೊಂಡ ನಾಡ ಹಬ್ಬದ ಯೋಜನೆಯನ್ನು ಅವರಿಗೆ ತಿಳಿಸಲು ಆತುರಗೊಂಡಿದ್ದರು (ಕಪಪು. ೫-೦೨); ಅವರ ಭೆಟ್ಟಿಯ ಎರಡನೆಯ ಪ್ರಸಂಗವು ಕೂಡಿ ಬಂದುದು ಎಂದರೆ . . . ನಾಡ ಹಬ್ಬದ ಕಾಲಕ್ಕೆ (ಪ್ರಲಿಂದ. ೪೪) : ಆದು ಅಲ್ಲಿ ನಾಡ ಹಬ್ಬವನ್ನು ವಿವೃಂಭಣೆಯಿಂದ ಆಚರಿಸಲಾಯಿತು (ಆಜೋಲೀ. ೧೬೦). **ನಾಡ ಹಲವರು, ನಾಡಿನ ಹಲವರು** = ದೇಶದ ಮುಖಂಡರು ; ದೇಶದ ಪಂಚಾಯಿತಿಯವರು: ಶ್ರೀಮತು × × × ನಾಡ ಹಲವರು ಸ್ವಾಮಿತನವನು ಸೋಮೋಜರ ಸೆಟ್ಟಿಯ ಮಕ್ಕಳು ವೆಂಗಟಸೆಟ್ಟಿಗೆ . . . ಕೊಟ್ಟ ಸರ್ವಮಾನ್ಯ ಹೊಲ ಖಿ ೧ ಗದ್ದೆ (ಮೈಅರಿ. ೦೪೩೩. ೦೦೦-೨ ; ?) ; (ಕೋಳಸ. ೭೦). **ನಾಡ ಹಾಡು** = ನಾಡಗೀತೆ ೧ : ಕಾರ್ಯಕ್ರಮದ ಮೊದಲಿನಲ್ಲಿ ನಾಡ ಹಾಡು ಹಾಡುವುದು ವಾಡಿಕೆ (ಕೂಡಿ). ೨.=ನಾಡಗೀತೆ ೨ : ನಾಡ ಹಾಡು ಹೇಳುವಾಗ ಎದ್ದು ನಿಲ್ಲಬೇಕು ಎಂದು ಮಕ್ಕಳಿಗೆ ಹೇಳಿಕೊಡಬೇಕು (ಕೂಡಿ). **ನಾಡ ಹಾದಿ** = ಹಳ್ಳಿಯಿಂದ ಹಳ್ಳಿಗೆ ತಿರುಗಾಡಲು ಮಾಡಿಕೊಂಡಿರುವ ಕಾಲುದಾರಿ; ಹಳ್ಳಿಗಾಡಿನ ದಾರಿ : ನರ್ತನ ಮಾಡುವ ಕಾಲು ನಾಡ ಹಾದಿಯನ್ನು

ಮೆಟ್ಟೇತೆ! (ಶಾಂತಲಾ. ೧೨೨). ನಾಡ ಹಾನೆ = ಒಂದು ಅಳತೆ : ಶಾಸನಗಳಲ್ಲಿ ಬರುವ ನಾಣ್ಯಗಳೂ ಅಳತೆಗಳೂ:– ಗಡ್ಯಾಣ (ಗದ್ಯಾಣ) . . . ಹಾನೆ, ನಾಡ ಹಾನೆ, ಕಂಚಿನ ಹಾನೆ (ತುಳುನಾ. ೨೭೧). ನಾಡ ಹುಚ್ಚ = ಏನೇನೂ ತಿಳಿಯದವನು ; ಬಹಳ ದಡ್ಡ : ಹಾಗೆ ಕೇಳೋ ಹುಚ್ಚಾ, ನಾಡ ಹುಚ್ಚಾ (ಹನ್ನೊಂದ. ೧೬). ನಾಡ ಹೆಣ್ಣು = ಹಳ್ಳಿಯ ಹೆಂಗಸು : ಕಾವ ತಿಳಿಬಗೆಯಿರ್ಪ ನಾಡ ಹೆಣ್ಣಲ್ಲಿ (ಕಾಲೂರ. ೨೭-೧೫). ನಾಡಾಳ್ವೋನ್= ದೇಶವನ್ನು ಆಳುವವನು ; ನಾಡ ಪ್ರಭು : ಇದಾ ನಾಡಾಳ್ವೋನಾನುಂ ಊರಾಳ್ವೋನಾನುಂ ಊರಾ ಒಕ್ಕಲನುಂ ಅಟಿದೋರ್ ಪಂಚಮಹಾಪಾತಕ ... ಅಕ್ಕುಂ (ಎಕ. VI, ಚಿಕ್ಕಮ. ೯೨-೬; ಸು. 750 ?). ನಾಡುಗಳ್=ನಾಡಿನ ಅಧಿಕಾರ ನಡೆಸುವ ಮಹಾಜನರು: ಶ್ರೀಮಾಣಿಕೇಶ್ವರದೇವರ ಶ್ರೀಕಾರ್ಯ ನಡೆವಂತಾಗಿ ನಾಡುಗಳ್ ಕೊಟ್ಟ ಆಯದಾಯವಾವುದೆಂದಡೆ (ಮುಂಬರಾ. X, ೨೪೯-೭೩ ; 1219). ನಾಡು ಬೀಡು = ದೇಶ ಮತ್ತು ವಾಸಸ್ಥಳ ; ಅಖಂಡ ದೇಶ : ಸಂಪ್ರೀತಿಯನು ಸುಜನರಲಿ ನಿರ್ಮಳನೀತಿಯನು ಪರಿವಾರಪುರಜನ ನಾಡುಬೀಡಿನಲಿ . . . ಅಖಿಳಜ್ಞಾತಿಗಳಲೆಚ್ಚ ಱಿಕೆಯೊಳಗಿಹುದು (ಕುಪ್ಯಾಸ. ೧೦-೧೯) ; ನಾಡುಬೀಡೆನಗಾಯ್ತು ವಶ ಖಯಖೋಡಿಯಿಲ್ಲದೆ ಶಕ್ರಪದದಲಿ ಜಾಡಿಸುವೆನದನೇನ ಹೇಳುವೆನೆನುತ ಬಿಸುಸುಯ್ದ (ಕುಪ್ಯಾಅ. ೧೩-೬೪) : ಎಲ್ಲೆಗಳಿದಬ್ಧಿಯೆನಲ್ ಪಡೆಯೇಂ ಕಡಂಗಿತೋ ನಡೆದುದು ನಾಡುಬೀಡು ಗುಡಿಗೋಹುರಗಳ್ ಪುಡಿಯೇಟ್ ಭೋರೆನಲ್ (ಚಿಕವಿ. ೨-೧೦೫). ನಾಡುಬೀಡುಗ = ದೇಶದಲ್ಲಿ ವಾಸಮಾಡುವವನು; ದೇಶದ ಸಾಮಾನ್ಯ ಪ್ರಜೆ ; ನಾಡುಗ : ಕಾಣ್ಕೆ ಕೊಂಡು ಭಕ್ತಿಭರದಿಂ ಪುಗುವ ನಾಡುಬೀಡುಗರುಂ (ಚಿಕವಂ. ೧೨೧-೧೬).

[ದೇ.॥ ತಮಿ. ಮಲ. ನಾಟು; ತುಳು. ನಾಡ್, ನಾಡು; ತೆಲು. ನಾಡು; ಗೊಂಡಿ. ನಾರ್; ಕುಇ. ನಾಟೊ]

ನಾಡುಅಕ್ರೋಟು (ನಾ). ಒಂದು ಬಗೆಯ ಮರ : ನಾಡುಅಕ್ರೋಟು, ಅಲ್ಯೂರೈಟಸ್ ಗಿಡ (ಮೃಜಿಗಿ. ೪-೬೮).

[ನಾಡು + ಅಕ್ರೋಟು (< ಅಕ್ರೋಡ)]

ನಾಡುಗ, ನಾಡಗ (ನಾ). ೧. ಸಾಮಾನ್ಯ ಮನುಷ್ಯ ; ಸಾಧಾರಣ ವ್ಯಕ್ತಿ : ಆಡಿನ ಹಿಂಡಾನೆಯ ಹಿಡಿವಂತಾ ರೂಢಿವಡೆದ ಬಲಯುತನಂ ನಾಡುಗರೆಯ್ದಿ ಹಿಡಿಯೆ (ಪ್ರಭಂಜ. ೨-೧೫೦) ; ಎಂದನಾ ಫಣಿಭೂಷಣನು ಶೂಲವೇಱನೇ ಲೋಕರಕ್ಷಣದಕ್ಷ ಲಕ್ಷ್ಮಿಯಧಿಪತಿಯುಳಿದ ನಾಡುಗರ ಪಾಡೇನು ಕೇಳ್ನಂದನ (ಸಮ್ಯಕೌ. ೪-೩೧). ೨. ನಾಡನ್ನಾಳುವವನು ; ದೊರೆ : ನಾಡುಗರಿಗೆ ಸೇನೆದೋಱಿ ಗೆಲ್ದನು ಯುದ್ಧ ಮಾಡುವರಿವಗಿದಿರುಂಟೆ (ಭರಿಕ. ೪೯-೧೩೬). ೩. ದಡ್ಡ ; ಮೂಢ; ಅಜ್ಞ : ನಾಡುಗರೊಳು ವರ್ತಿಸದಿರು (ಯೋಗಾಂವಿ. ೫-೫). ನಾಡಗ : ೩. ಕೇಳು ನಾಡಗರೊಲಿದು ಗಾಜಿನ ಮಾಲೆಯನು ಕೊಳ್ವಂತೆ (ಸ್ವರೂಪಾ. ೨-೧೬). [ನಾಡು + – ಗ$_2$]

ನಾಡುಗವುಡ, ನಾಡುಗೌಡ (ನಾ). ಗ್ರಾಮದ ವ್ಯವಹಾರಗಳಲ್ಲಿ ತೀರ್ಪು ನೀಡುವ ಮುಖಂಡ ; ಹಳ್ಳಿಯ ಮುಖ್ಯಸ್ಥ ; ಪಟೇಲ : (ಕಿ). ನಾಡುಗೌಡ : ನಾಡುಗೌಡನ ಪಂಚಾಯ್ತಿಯಲ್ಲಿ ಫಿರ್ಯಾದಿ ಅಪರಾಧಿಗಳಿಬ್ಬರೂ ತಮ್ಮ ತಮ್ಮ ಪರವಾಗಿ ವಾದಿಸುವವರನ್ನು ನೇಮಿಸಿಕೊಳ್ಳುವ ಅಧಿಕಾರವಿತ್ತು (ಹುಟ್ಟಹ. ೧೬) ; ಪಟೇಲನಿಗೆ–ಪಟೇಲ, ಗೌಡ, ನಾಡುಗೌಡ ಎಜಮಾನ, ರಡ್ಡಿ, ಪೆದ್ದಕಾಪು, ಮಾನ್ಯಕರಣಂ, ಮಣೆಗಾರ ಅಥವಾ ಅಡಿಗಾರ, ನಾಯಿಡು ವಗೈರೆ ಹೆಸರುಗಳುಂಟು (ಗ್ರಾಮಾಕ. ೧).

[ನಾಡು +ಗವುಡ$_1$ (< ಗಾಮುಂಡ)]

ನಾಡುಗಾಣಿ (ನಾ). ಒಂದು ಊರಿನ ಹೆಸರು : ಸೂಱೋರುಮ್ ನಾಡುಗಾಣಿಮ್ ಪೃಥುತರ ಮಿಡಿಗೇ ಸೂಳಿಶೈಲೇಂದ್ರ ದುಗ್ಗೇನನ್ಯಾಮ್ (ಮೈಅರಿ. ೧೯೨೦, ೧೦-೬೭ ; 967). [?]

ನಾಡುಗಾದೆ (ನಾ). ಒಂದು ದೇಶದಲ್ಲಿ ಪ್ರಚಲಿತವಾಗಿರುವ ಮಾತು ; ಲೋಕೋಕ್ತಿ ; ನಾಣ್ಣುಡಿ : (ಚತುನಿ. ಕಿ. I, ೭೫).

[ನಾಡು + ಗಾದೆ]

ನಾಡುಗೌಡ 'ನಾಡುಗವುಡ' ನೋ.

ನಾಡುತಟ್ಟು (ನಾ). ಸಾಮಾನ್ಯವಾದ ಕುದುರೆ ; ಗಿಡ್ಡಕುದುರೆ : ಅವನು ತನ್ನ ಹೊಲದ ಹತ್ತಿರ ಮೇದುಕೊಂಡಿದ್ದ ನಾಡುತಟ್ಟಾದ ಒಂದು ಕುದುರೆಯನ್ನು ಹಿಡಿದುಕೊಂಡು ಬಂದು . . . ಕಾಣಿಕೆಯಾಗಿ ಒಪ್ಪಿಸಿದನು (ನಗೆಗ. ೫೦). [ನಾಡು + ತಟ್ಟು$_6$]

ನಾಡುನುಡಿ (ನಾ). ಜನಸಾಮಾನ್ಯರಲ್ಲಿ ಬಳಕೆಯಲ್ಲಿರುವ ಮಾತು : ಆಳ್ವಾರರ ಹಾಡುಗಳು ನಾಡುನುಡಿಯಲ್ಲಿದ್ದುದರಿಂದ ಇವು ಜನಸಾಮಾನ್ಯರಲ್ಲಿ ಹರಡುವುದಕ್ಕೆ ಅವಕಾಶವಾಯಿತು (ಭಾರದ. ೩೯೯).

[ನಾಡು + ನುಡಿ$_2$]

ನಾಡುನೇಗಿಲು (ನಾ). ಹಳ್ಳಿಗರು ಉಪಯೋಗಿಸುತ್ತಿದ್ದ ನೇಗಿಲು : ಈಗ ಸಾಮಾನ್ಯವಾಗಿ ಉಪಯೋಗದಲ್ಲಿರುವ ನಾಡುನೇಗಿಲು ಎಷ್ಟೋ ಶತಮಾನಗಳಿಂದ ಬಳಕೆಯಲ್ಲಿದೆ (ವ್ಯವಮ. ೮).

[ನಾಡು + ನೇಗಿಲು (<ನೇಗಿಲ್)]

ನಾಡುಪ್ಪು (ನಾ). ಸಾಮಾನ್ಯವಾದ ಉಪ್ಪು,–ಲವಣ : ಸಾವಿರಪಾಲಿಗೆ ಸಾಧಾರಣವಾಗಿ ಇರುವ ೩೪–೩೫ ಪಾಲು ಉಪ್ಪಿನಲ್ಲಿ ಕಲ್ಲುಪ್ಪು ಅಥವಾ ನಾಡುಪ್ಪು (ಸೋಡಿಯಂ ಕ್ಲೋರೈಡ್) ೨೭ ಭಾಗದಷ್ಟಿದೆ (ಭೂವಿವ. ೮೬).

[ನಾಡು + ಉಪ್ಪು$_1$]

ನಾಡುಬಾದಾಮಿ (ನಾ). ಒಂದು ಬಗೆಯ ಮರ : (ಮೃಜಿಗಿ. ೭೪-೧೫೦೨).

[ನಾಡು + ಬಾದಾಮಿ]

ನಾಡುಮಿಂಡ (ನಾ). ದುರಾಚಾರಿಯಾದ ವಿಟ ; ದುಷ್ಟವಿಟ ; ಅನೀತಿವಂತ : ತೊಂಡಿಲ ಮುಡಿದುಕೊಂಡು ತಮ್ಮ ತಮ್ಮ ಗಂಡರ ಹಿಂದುಗೊಂಡು ನಾಡುಮಿಂಡರ ನೋಡುತ್ತಲಿ ಇಂದು ನಮ್ಮ ಹುಲಿ ಹೋಯಿತ್ತು (ಬಸಹೆ. ೬೦-೧೬೭). [ನಾಡು + ಮಿಂಡ$_1$]

ನಾಡುವಟ್ಟ (ನಾ). ಒಂದು ಬಗೆಯ ತೆರಿಗೆ : ನಾಡೊಳಗಳ ಹಲವ × × × ಇಂತಹ × × ನಾಡುವಟ್ಟವಾಗಿ ನಾಉ (ಎಕ. XIV, ಮಂಡ್ಯ. ೧೩೭-೨೦ ; 1278). [ನಾಡು + ವಟ್ಟ$_2$]

ನಾಡುವಡೆ (ಕ್ರಿ). ನಾಡನ್ನು ಹೊಂದು ; ನಾಡಿನ ಒಡೆತನವನ್ನು ಪಡೆ : ಸಿರಿವಂತನ ಕಯ್ಯಂ ಪಿಡಿದ ಬಡವೆಯಂತೆ ನಾಡುವಡೆದ ಪಸಾಯಿತನಂತೆ (ಧರ್ಮಾಮೃ. ೫-೧೨೫). [ನಾಡು + ಪಡೆ$_1$]

ನಾಡುವಿಡಿ (ಕ್ರಿ). (ಆಕ್ರಮಣದಿಂದ) ದೇಶವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳು,–ವಶದಲ್ಲಿಟ್ಟುಕೊಳ್ಳು : ನಾಡುವಿಡಿಯದರಸುಗೆಯ್ವೆನೆಂಬಂತೆ ಘೃತಮಿಲ್ಲದೂರನೂಡುವೆನೆಂಬಂತೆ ಮದವಣಿಗನಿಲ್ಲದೆ ದಿಬ್ಬಣಂಬೋಪೆನೆಂಬಂತೆ (ಧರ್ಮಾಮೃ. ೪-೫೦). [ನಾಡು + ಪಿಡಿ$_1$]

ನಾಡುಶಾನಭೋಗ (ನಾ). ಹಲವಾರು ಹಳ್ಳಿಗಳ ಶಾನುಭೋಗ,–ಕರಣಿಕ : (ಕಿ). [ನಾಡು + ಶಾನಭೋಗ (<ಸೇನಬೋವ)]

ನಾಡೂರ್ (ನಾ). ನಾಡಿನಲ್ಲಿರುವ ಊರು,–ಗ್ರಾಮ : ಮುಂಚದೆ ಪಿಂಚದೆ ಬಳೆದು ವಿರಿಂಚಿಯು ಕೆಯ್ಪಿಡಿವೊಲಾದುವಾ ನಾಡೂರ್ಗಳ್ (ಪಂಪಭಾ. ೮-೫೧) ; ಚೆಲ್ವಿಂಗಾವಾಸಮೆನಿಪ್ಪುವೊಪ್ಪುವಾ ನಾಡೂರ್ಗಳ್ (ಮಲ್ಲಿಪು. ೨-೨೬) ; ಕಾಣಿಕೆಯಂ ತಂನಾಳ್ವ ನಾಡೂರ್ಗ್ಗಳೊಳು . . . ಕೊಟ್ಟರ್ (ಎಕ. VII, ಶಿವಪೂ. ೪-೯೨ ; 1122). [ನಾಡು + ಊರ್]

ನಾಡೆ (ಅ). ಹೆಚ್ಚಾಗಿ ; ಚೆನ್ನಾಗಿ ; ಬಹಳವಾಗಿ ; ವಿಶೇಷವಾಗಿ ; ಅತಿಶಯವಾಗಿ : "ನಾಡೆಯೆಡೆಯಾವಗಂ ನೆಱೆ ನೀಡುಂ . . . ಇವವ್ಯಯದೊಳಧಿಕಾರ್ಥಂ" (ಶಮದ. ೩೦೪) ; ಸದಭಿಸ್ತುತಮಪ್ಪೊಂಕುಂದದ

ನಡುವಣ ನಾಡೆ ನಾಡೆ ಕನ್ನಡದ ತಿರುಳ್ (ಕವಿರಾ. ೧-೩೭) ; ವಿಶ್ವಸೇನ ಮಹಾರಾಜನ ಮಹಾಸಾಮಂತರ್ಕಳುಂ ಪರಿವಾರಮುಮೆಲ್ಲಂ ಕುದುರೆ ವಡಿವಜ್ಜೆಯಂ ನೋಡಿ ನಾಡೆಗೆಟ್ಟುಪೋಗಿ (ವರ್ಧಾರಾ. ೫೩-೨೫) ; ಮಾಡುವ ಕಿಡಿಸುವ ಗಸಣಿಗೆ ನಾಡೆಯುಮದು ಪೊಱಗು (ಆದಿಪು. ೧-೪೫) ; ಚಿಂತಿಪ ಪಾರ್ವನ ಶೋಕದೊಂದು ಪೊಂಪುಟಿಯನೆ ನೋಡಿ ನಾಡೆ ಕರುಣಂ ತನಗಾಗಿರೆ (ಪಂಪಭಾ. ೩-೨೫) ; ಕರುಮಾಡಂ ನಾಡೆ ಚೆಲ್ವಂ ತಳೆದುದು ಪಲವುಂ ಬಳ್ಳಿಮಾಡಂಗಳಿಂದೆ (ಕಾದಂಪೂ. ೪೮೬) ; ನಾಡೆ ಸೊಗಯಿಪ್ಪ ಕೆಯ್ಯಿಂ . . . ಸುರದಂತಿಯಂತೆ ನಿಂದತ್ತಾಗಳ್ (ನೇಮಿಪು. ೧೧-೫೩) ; ಬೇಡು ವರವನು ಮಗನೆ ನುಡಿನುಡಿ ನಾಡೆ ಮೆಚ್ಚಿದೆನೆಂಬ ಹರಿಯನು ನೋಡಿ ನಕ್ಕನು (ನಿಭಾಗ. ೭-೮-೪೬) ; ಇಂತು ಭೂಜಾತೆ ಗರ್ಭಿಣಿಯಾದ ಳಾಗೆ, ನಾಡೆ ನಾಡೆ ಸಂತಸಗಡಲೊಳೋಲಾಡುತಿರ್ದುದು (ರಾಮಾಶ್ವ. ೨೧-೦೬).

ನಾಡೆಯುಂ = ನಾಡೆ : ಕೌರವರ್ಗಿದು ನಾಡೆಯುಂ ತಿಣುಕನಾಗಿಸದೇಂ ಗಳ ಸಯ್ತು ಪೋಕುಮೇ (ಪಂಪಭಾ. ೨-೮೭) ; ಇರುಳೆಲ್ಲಂ ಜಾಗರಮಿರ್ದು ನೇಸಱ್ ಮೂಡೆ ನಾಡೆಯುಂ ಪೊಱ್ತಿರ್ದು ಎಂತುಂ ಬರವಂ ಕಾಣದೆ (ಪಂಚತಂ. ೨೩೦-೧೯) ; ಬಾನೆಡೆ ನಾಡೆಯುಂ ಪೊಡವಿಯಂತಿರೆ (ಕಬ್ಬಿಕಾ. ೨೫೧). 'ನಡೆ$_3$' ಪರಾ. [P ತಮಿಳಿನಲ್ಲಿ 'ನಾಡು' ಎಂಬುದಕ್ಕೆ 'ಪರೀಕ್ಷಿಸು, ಆಲೋಚಿಸು, ಹುಡುಕು' ಎಂಬರ್ಥವಿದೆ]

ನಾಡೆಯ (ನಾ). (?) : ಆವಿನಹಳಿಯ ಬಲೆನಾಡವೆರಡುನಾಡನೂ ಕೂಡೆ ಕೊಂಡು ಅಂಕೆಯನಾಯಕನ ನಾಡೆಯನ ತೊಳಲೊಳಗೆ ಕೊಂಡುದುನಾ ದೇವಿ ತಂಮರಸ (ಎಕ. VIII, ಸಾಗರ. ೭೦-೨೨ ; 1276 ?). [?]

ನಾಡೆಱೆಯ, ನಾಂಡೆಱೆಯ (ನಾ). ನಾಡಿನ ಒಡೆಯ : ನಾಡೆಱೆಯಂ ಭರತಂ ಬೆಸಸಿದ ತೆಱನಂ ಕೇಳ್ (ಪಂರಾಮಾ. ೭-೪೯) ; ಎಱಗಿಸಿ ತನ್ನ ಚಾರು ಚರಣಾಂಬುರುಹದ್ವಿತಯಕ್ಕೆ ಮಿಕ್ಕ ನಾಡೆಱೆಯರನೆಲ್ಲರಂ (ವರ್ಧಪು. ೧-೦೦೪); ನಾಡೆಱೆಯನ ಕೆಲದೊಳ್ ತೀಡಿದತ್ತು ತೆಂಬೆಲರಾಗಳ್ (ಕಬ್ಬಿಕಾ. ೮೬) ; ಬೇಡುವರನು ಮನ್ನಿಪ ಬಿಡುಗಣ್ಣರ ನಾಡೆಱೆಯನ ಮಗನಂತೆ ಗಾಡಿವಡೆದ ರೂಪಿನ ಗರುವನ ನೀ ನೋಡು ಕಳಿಂಗನನಬಲೆ (ಜೀವಂಸಾಂ. ೧೦-೮೪) ; ಭುವನೇಶನೆಂಬೊರ್ವಂ ನಾಡೆಱೆಯರ . . . ಅರಸುಗೆಯ್ಯುತಿರ್ದಂ (ಅದ್ಭುತ. ೨೨-೦೬). **ನಾಂಡೆಱೆಯ** : ಸ್ವಸ್ತಿಶ್ರೀ ನಾಣ್ಡೆಱೆಯರಾ ಎರ್ಮೆಕೊಳ್ವಲ್ಲಿ ಸತ್ತೊನ್ ಕಾಸೂರನ್ (ಎಕ. X (S), ಚಿಂತಾಮ. ೩೪-೦ ; 8ನೆಯ ಶತ).

[ನಾಡು + ಎಱೆಯ]

ನಾಡೊಡೆಯ (ನಾ). ೧. = ನಾಡೆಱೆಯ : ಜನಪತಿಗೆ ನೀಡಲೆರಡುವಂನೀಸಿ ಕೊಂಡಾ ನಾಡೊಡೆಯನುರಿವುರಿಯೊಳಗೆ ಪತ್ರಂಗಳಂ ಹಾಯ್ಕಿ (ಬಸಪು. ೫೦-೩೬) ; ಮಾಡಿತಿಲ್ಲಪರಾಧವನು ಹರಿ ಕ್ರೋಡ ಖಡ್ಗಿ ಕುರಂಗಿಗಳಿರೆಲೆ ನಾಡೊಡೆಯ ರಾಮಂಗೆ ಹೇಳುವುದೆಂದಳಾ ಸೀತೆ (ತೊರರಾ. ೩-೦೦-೭) ; ಬಿಡುವರಲ್ಲ ಕುಮಾರಿಯನು ನಾಡೊಡೆಯರೆಂಬಾ ದೂತನಾ ಬಿಱುನುಡಿಗೆ ಕದಡದೆ (ಸಾಳ್ವಭಾ. ೧೮-೬೩) ; ನಾಡೊಡೆಯನಂಗನೆಯ ಕಾಣದೆ ಬಳಲುತ (ಆನಂರಾ. ೩-೬-೮) ; ಧರಣಿಸುತೆಯಂ ಕಂಡು ನಾಡೊಡೆಯನೆಡೆಗೆ ಪೋದವೆಂ (ವೆಂಕಾರಾ. ೫-೫-೬) ; ನಿನ್ನ ನಾಡೊಡೆಯ ನೀನ್ ; ವೈರಿಯನು ತೊರೆಯ್ಯೆ (ಕೋಗಿಲೆ. ೪೮-೩). ೨. ದೇಶವಿಭಾಗದ ಅಧಿಕಾರಿ ; ಪ್ರಾಂತಾಧಿಕಾರಿ : ಕನ್ನರದೇವನ ನಾಡೊಡೆಯರ್ಪ್ಪರಿಣತ[ರಾ]ರ್ಕ್ಕನ್ದುಕ[ಕ್ಕೆ] (ಸೌಇಇ. XI-i, ೪೫೮-೦೪ ; 980). [ನಾಡು + ಒಡೆಯ$_1$]

ನಾಡೊವಜ, ನಾಡೋಜ (ನಾ). ದೇಶದ ಗುರು ; ನಾಡಿನ ಜನರ ಮನ್ನಣೆಗೆ ಪಾತ್ರನಾದವನು ; ಲೋಕಮಾನ್ಯ : ಪುರಾಣಕವಿಯುಂ ಧರೆಗಾಗಿರೆಯುಣ್ಮೆ ಪೊಣ್ಮುವೀ ದೇಸಿಗಳುಂತೆ ನಾಡೊವಜನಾದನೊ ಪೇಟ್ ಕವಿತಾಗುಣಾರ್ಣವಂ (ಪಂಪಭಾ. ೧೪-೬೨). **ನಾಡೋಜ** : ರಾಜ್ಯಚಿಹ್ನಂ ಗಳ್ವೆರಸಿಂತು ನಡೆತಂದು ರಾಜ್ಯಲಕ್ಷ್ಮಿ ಬಳೆದ ಸಂತೋಷದಂತಮನೆಯ್ದೆ ಪತ್ತಿದಳ್ ಸಹಜಮನೋಜನಂ ನಾಡೋಜನಂ (ಪಂಪಭಾ. ೧೩-೧೦೮) ; 'ಸಕಳಾವನೀತಳಜನ'ವನ್ನು ಮೆಚ್ಚಿಸುವ 'ನಾಡೋಜ' ನವನು (ನಾಡೋಜ. ೩೩೭) ; ನಾಡೋಜನ ಮುಂದೆ ನಾನು ತಪ್ಪಾಡೇನೆ ? (ದಾನಚಿಂ. ೬೩).

[ನಾಡು + ಒವಜ (<ಒವಝು)]

ನಾಡೊಳ್ಳು (ನಾ). ದೇಶದ ಹಿತ-ಮೇಲ್ಮೆ ; ಪ್ರಜೆಗಳ ಕ್ಷೇಮ : (ಪೂರ್ವಕಾಲದಲ್ಲಿ) ಪ್ರಜಾಕ್ಷೇಮ; ಲೋಕಹಿತ; ನಾಡೊಳ್ಳು (Common-Wealth. ಇಂಕನಿ). [ನಾಡು + ಒಳ್ಳು]

ನಾಡೋಜ 'ನಾಡೊವಜ' ನೋ.

ನಾಡೋರ (ನಾ). (ಉಕ)ಉಪ್ಪುಮಾಡುವ ಕಸಬನ್ನು ಅವಲಂಬಿಸಿರುವ ಒಂದು ಜನಾಂಗ : ಉಪ್ಪುಮಾಡುವ ನಾಡೋರರು ಮುಂತಾದ ಜಾತಿ ಯವರು . . . ಎಕರೆಗೆ ಸುಮಾರು ೩ ರೂಪಾಯಿಯಂತೆ ತೆರಿಗೆಯನ್ನು ಕೊಡುತ್ತಾರೆ (ಕಭಾಗ. ೫೮೨). [?]

ನಾಡ್ಕರ್ಣಿ 'ನಾಡು' ಪರಾ.

ನಾಣ್$_1$, ನಾಣು (ನಾ). ೧. (ಹೆಂಗಸಿಗೆ ಗಂಡಸಿನ ಎದುರಿನಲ್ಲಿ ಒದಗುವ) ನಾಚಿಕೆ; ಸಿಗ್ಗು; ಲಜ್ಜೆ : "ಲಜ್ಜೆ ನಾಣ್" (ಕರ್ಣಾನಿ. ೬೨) ; ಲಲಿತಾಂಗಿಯ ಶಂಕೆಯಂ ಭಯಂ ಬೆರಸಿದ ನಾಣುಮಂ ಕ್ರಮದೆ ಪಿಂಗಿಸು ಬೇಸಱದಿರ್ ಗುಣಾರ್ಣವಾ (ಪಂಪಭಾ. ೩-೭೭); ಚುಂಬಿಸುವಾಗಳ್ ಶಬ್ದಮಿಲ್ಲ ವ್ರಣ ನಖ ಮುಖದಂತಕ್ಷತಂ ನಾಣ್ಗೆ ಪಕ್ಕಾಗಿಸದು . . . ಸಂಕಲ್ಪಸಮಾಯೋಗಂ ವಿಯೋಗಾಕುಲ ಕುಲಲಲನಾಜೀವನಾಧಾರಮಲ್ತೇ (ಕಾದಂಉ. ೩೧೯) ; ಜಡ ಜಾಂಬಕೆ ಮಂಡಿಸಿದಳ್ ನಡೆತಂದೆಡದಲ್ಲಿ ನಮ್ರಮುಖ ನಾಣಿಂದಂ (ಉದ್ಭಟ. ೮-೦೦೦); ನಾಣಂ ಪಿಂಗಿಸಿ ಮುಗ್ಧೆಗೆ ಜಾಣಂ ಕೈಗೊಳಿಸುವಂತೆ (ಶಮದ. ೬೯ ಪ್ರಯೋ); ನುಣ್ಮುಡಿ ಬಿಣ್ಪಾದುದು ಮೆಲ್ಲೆರ್ದೆಯೊಳ್ ನಾಣ್ಮೊಳೆತುದು (ಜಯಕಾ.೩-೨೫). ೨. ಅವಮಾನ ; ಸಂಕೋಚ. 'ನಾಣ್ಗೆಯ್' ಪರಾ. ೩. ಸ್ತ್ರೀಪುರುಷರ ಗುಹ್ಯೇಂದ್ರಿಯಂ : "ಗುಹ್ಯಂ=ಸ್ತ್ರೀ ಪುರುಷರ ನಾಣ್" (ಕಾಶಕ್ಕ. ೬೬) ; ಎಡೆವಿಡದ ದೆಯ್ವಧರ್ಮದೊಳಿಡದಘಮಂ ತಮ್ಮ ಮತ ದೊಳಂ ಕಂಡುಮದಂ ಕಡೆಗಣಿಸುವರಂತದೆ ದಲ್ಕಡೆಗಣಿಸರೆ ತಮ್ಮ ತಾಯ ನಾಣಂ ಕಂಡರ್ (ಸಮಪ. ೮-೨೨೭) ; ನಾಣ ಮಱೆಯ ನೂಲು ಸಡಿಲೆ ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿ (ಮಹಾದೇ. ಬ. ೭೪-೧೮೪) ; ಜುಗುಪ್ಸೆಯಾಂತ ನಾಣಡಿಗಡಿಗೆಲ್ಲರುಂ ಪೊರಳ್ವ ಮಯ್ಲಿಗೆವಾಸುಗುಟ್ಗುಪ್ಪೆ ಯಾದ ಮೆಯ್ ಬಿಡದಿರದೆಂತು ಸೂಳೆಯರ ಸಂಗಮನೊಲ್ವರೊ ಖೂಳ ಮಾನವರ್ (ಕಾವ್ಯಸಾ. ೧೦೦೪). **ನಾಣು** : ೧. "ನಾಣು, ನಾಚಿಕೆ, ಸಿಗ್ಗು, ಏವ(ಹೇವ), ಎಗ್ಗು" (ಕಂನುಹು. ೮೭) ; ನಾಣೆಂಬುದು ನಾರಿಯರಿಗಾಭರಣವು (ಕುರಾಸಾಂ. ೩೭-೧೭); ಜಾಣೆ ಮಗುವನೆತ್ತಿಕೊಂಡು ನಾಣ ಮರೆತು ಓಡಿಬಂದು (ಜೆಲುಪು. ೧೪-೧೨) ; ಹೊಸನಾಣು ಹೊಸಮುನಿಸು ಹೊಸದಾಗೆ ಸತಿಯು . . . ಹೊಸದೊಂದು ರತಿಯು (ಗರಿ. ೩೮-೭). 'ನಾಣುಗೆಡು' ಪರಾ. ೩. ಗಲ್ಲ ಪಲ್ಲು ಬಂಧುರದಧರ ನಾಣು ನಖ ವಸುರುತೆಳು ಪಾರು ಕಂಗಳು . . . ಮೆರೆದವು (ನವಮೋ. ೨೨-೩೩).

ನಾಣ ದಾಣ = ಯೋನಿ; ಭಗ : "ಪಚ್ಛೀ – ನಾಣ ದಾಣು" (ಕಾಶಕ್ಕ. ೨೫೮). ನಾಣ ನುಡಿ = ಅವಮಾನಕರವಾದ ಮಾತು: ಈಗಳೋ ಇಂತಪ್ಪ ನಿಲ್ಲಮೆಂದೇ ಆದೆನ್ ! ಪುಡಿಯೊಳಗೆ ಪುಡಿಯ ಪುಡಿಯಾದೆನ್ – ನಾಣ ನುಡಿಯಾದೆನ್ (ಅಶ್ವತ್ಥಾ. ೧೭-೩೬೮). ನಾಣನೊಗು = ನಾಚಿಕೆಯನ್ನು ಬಿಡು : ನಾಣನೊಕ್ಕು ಗತಭೀತಿಯಿನಪ್ಪುವ . . . ಅಸಿಯಳದೇಂ ಮನಂ ಬಿಡಿದಳೋ ಚದುರಿಂ ಸುದತೀಮನೋಜನ (ರಸರ. ೧-೩೫). ನಾಣ ಪುತ್ತು= ಲಜ್ಜಾಸ್ಪದವಾಗಿರುವಿಕೆ : ಪೇಸುಗೆಗೆಟ್ಟೀ ನಾಣ ಪುತ್ತಪ್ಪಟಿಜಗಳದೊಳೇ ನಮ್ಮ ತಕ್ಕೂರ್ಮೆಯುಂಟೇ (ಶಾಂತಿಪು. ೬-೮೭) ; ಅಱಿತಮುಳ್ಳರ್

ಕಲ್ಲೊಳ್ ಕಡೆದರ್ಜಿಪರೇಸುಚಿತಮೆ ಮೃಡಾನಿಯಂ ಕರಮೆ ನಾಣ ಪುತ್ತಿನ ರೂಪಂ (ಸಮಪ. ೧೦-೭೮) ; ದುರ್ಗಂಧಕ್ಕಿರಲಾಱದೆ ಲೆಂಕರ್ ದಂಡಂ ಗೊಂಡರಂತೆ ತಂಕಿಸುತ್ತುಂ ಪೆಱಪಿಂಗೆ . . . ಬಾಣಸಿಗರಿದೇನ್ನಾಣ ಪುತ್ತೆಂದು ಪೋಗೆ (ಧರ್ಮಾಮೃ. ೪-೧೫೯) ; ಕೇಣಕಾಱನನದೇಕೆಗ ಕಾವೈ ನಾಣ ಪುತ್ತ ನಗೆಯಂ ನೀಂ ಬಗೆಯ್ಯೆ (ಕಾವ್ಯಾವ. ೪೮೪). ನಾಣಿನ ವಲಯ = ನಾಚಿಕೆಯ ಭಾಗ ; ಯೋನಿ : ತುಸು ಕೆಲಕ್ಕೆ ಓಸರಿಸಿದ್ದ ಕಂಬಳಿಯನ್ನು ಅವಳಿಗೆ ಸರಿಯಾಗಿ ಹೊದಿಸಿ, ಇಣುಕುವಂತಿದ್ದ ನಾಣಿನ ವಲಯವನ್ನು ಮುಚ್ಚಿದನು (ಮಲಮ. ೬೮೨). ನಾಣೊಕ್ಕ = ನಾಚಿಕೆಗೇಡಿ ; ಲಜ್ಜಾಹೀನ ; ನಾಚಿಕೆ ಬಿಟ್ಟವನಂ: ವಿಕಳರಂ ನಾಣೊಕ್ಕರಂ ಮಿಕ್ಕರಂ ಪಡೆದಾ ದೋಷನಿವಾರಣಕ್ಕೆ (ಎಕ. VI, ಶರೀಕ. ೪೫-೬೨ ; 1196).

[ದೇ.॥ ತಮಿ. ನಾಣ್, ನಾಣ; ಮಲ. ನಾಣ; ತುಳು. ನಾಣ್, ನಾಣ, ನಾಣು = ಬೆತ್ತಲೆ; ಕೊಡ. ನಾಣ; ತೆಲು. ನಾನ]

ನಾಣ್$_2$ 'ನಾಟ್' ನೋ.

ನಾಣ$_1$ (ನಾ). ಸ್ನಾನ. 'ನಾಣಿಗೆ' ಪರಾ.

[<ಪ್ರಾ. ಣ್ಹಾಣ. / ಸಂ. ಸ್ನಾನ]

ನಾಣ$_2$ (ನಾ). ತಿಳಿವಳಿಕೆ ; ಜ್ಞಾನ ; ಬುದ್ಧಿ : ಏನು ಬರುವದೊ ದೇವ, ನಾಣ ನಮಗೇಟಲ್ಲ ಹಾನಿ ತಟ್ಟುವದು ಹೇಳೆನಗೆ ನಾಡೊಳಗೆ ಏನು ಶಾಂತಿಯನು ಮಾಡಿಸಲಿ (ಕನ್ನಜಾ. ೨) ; ಬಾಣ ಬಿಡು ಅಣ್ಣನ ನಾಣ ನಾನ್ಹೇಳಾಲೆ ರಾಗಿಯ ಕಾಳಟು ಕಸರಿಲ್ಲ ನಮ್ಮವರು ಈಡ್ಯಾಡಿ ಬಾಣ ಬಿಡತಾರ (ಲೋಕಗೀ. ೭೭). [<ಪ್ರಾ. ಣ್ಹಾಣ. / ಸಂ. ಜ್ಞಾನ]

ನಾಣಕ (ನಾ). ೧. ಮುದ್ರೆ; ಅಚ್ಚು : "ನಾಣಕ = ಪಲವು ಬಣ್ಣದಚ್ಚುಗಳುಂ . . . ವ್ಯಾವಹಾರಿಕ ನಾಣಕವಂಗಳೋಹವಾನ್ . . . ಕೋಶಗುಣಾಃ" (ನೀತಿವಾ. ೨೬-೨). ೨. ನಾಣ್ಯ. 'ನಾಣಕಪ್ರಚಾರ' ಪರಾ. [ಸಂ.]

ನಾಣಕಪ್ರಚಾರ (ನಾ). ನಾಣ್ಯವನ್ನು ಚಲಾವಣೆಗೆ ಕೊಡುವುದು : ಇಂದಿನ ಶ್ರೀನೃಸಿಂಹಜಯಂತಿಯ ಶ್ರೀಮನ್ಮಹಾರಾಜರ ವರ್ಷವರ್ಧಂತ್ಯುತ್ಸವದ ಶ್ರೀನಾಣಕಪ್ರಚಾರದ ಸಮಾರಂಭದ ಈ ಮುಮ್ಮಡಿಹಬ್ಬದ ದಿವಸ (ಸಂಸಕ. ೦೨೨). [ನಾಣಕ + ಪ್ರಚಾರ]

ನಾಣಯ, ನಾಣೆಯ, ನಾಣೆಯ, ನಾಣ್ಯ (ನಾ). ೧. ಚಲಾವಣೆಗಾಗಿ ಆಡಳಿತದ ಮುದ್ರೆಯೊತ್ತಿ ತಯಾರಿಸಿದ ಚಿನ್ನ, ಬೆಳ್ಳಿ ಮೊದಲಾದ ಲೋಹದ ಬಿಲ್ಲೆ ; ಕಾಸು, ರೂಪಾಯಿ ಮೊದಲಾದುವು ; ಹಣ : ಅಱುವತ್ತು ಬಿಂದಿಗೆಯೊಳು ನಾಣಯ[ಪಾಠಾಂ. ನಾಣ್ಯ]ವನು ಕುಱುಹಿನ ಭಂಗಾರಗಳನು . . . ಮಗಗೆ ಕಳುಪಿದನು (ಕುರಾಸಾಂ. ೪೨-೩೪) ; ಬೊಕ್ಕಸ ಭಂಡಾರದಿಕ್ಕೆಲದಲ್ಲಿ ಚೊಕ್ಕನಾಣಯ ವಸ್ತ್ರಗಳನು ಚೆಕ್ಕನೆ ಪಿಡಿದಿರ್ದರರಸು ಮೆಚ್ಚಿದೊಡಾಗ ದೊಕ್ಕನೆ ಕೊಡಲೆಂದಾಗ (ಅಪುಂದ. ೨-೩೪). ೨. ಅರ್ಥವತ್ತಾದ ನುಡಿ : ವೈದಿಕಬೌದ್ಧರಿಂದಾಗಿ ಸಂಸ್ಕೃತ ಪಾಲಿಗಳ ನಾಣಯಗಳು ಕನ್ನಡದಲ್ಲಿ ಬಳಕೆಗೆ ಬರತೊಡಗಿರಬೇಕು (ಕನ್ನಇ. ೦೩೮). ನಾಣೆಯ : ೧. "ಉಳಿಯಭಿಮಾನ ನಾಣೆಯಗಳೆಂಬವು ಟಂಕಮೆನಿಕ್ಕು" (ಪಾನಾರ. ೧೩೦) ; ಪರಿಪುರಜನಗಳುತ್ತಮನಾಡ[ಪಾಠಾಂ. ಣೆ]ಯವ ನೀಡಿದರು ದರುಶನ ಕವನಿಜೇಶ್ವರನ (ಶೊರರಾ. ೬-೫೫-೧೯). ೩. ಶ್ರೇಷ್ಠವಾದುದು ; ಬೆಲೆಯುಳ್ಳುದು ; ಸೊಗಸಾದುದು : ನಾಣೆಯದ ಪಟ್ಟೆ ಹಣಡ ೧೦ ಪಟ್ಟೆ ಸೀರೆ ೧೧ (ಸೌಇಇ. IX-ii, ೫೪೭-೩ ; 1532). ನಾಣೆಯ : ೧. ಬಳಿಯ ನಾಣೆಯಮಂ ಬಳಿಯಾಪ್ತವರ್ಗಮಂ . . . ಪದಪಿಂದವಳೋಕಿಸುತ್ತೆ . . . ನಡೆತಂದನೀಶ್ವರಂ (ಗಿರಿಕ. ೦೦-೯೯) ; ತೆಗೆಸಿದನು ಬಳಿಕಿನಕುಲದ ಪೀಳಿಗೆಯ ನೃಪರಾರ್ಜಿಸಿದ ನಾನಾಯುಗಯುಗಂಗಳ ನಾಣೆಯಂಗಳನಖಿಳವಸ್ತುಗಳ (ಶೊರರಾ. ೦-೬-೪) ; ತನ್ನಯದು ನಾಣೆಯವೆಂದು ಜಗವಱಿಯೆ (ನಿಭಾಗ. ೧೦-೨೫-೨೫) ; ಚಪ್ಪನ್ನದೇಶದ ನಾಣೆಯಂಗಳ ನೋಟ ತಪ್ಪದ ಚಪಲ ಸೆಟ್ಟಿಗಳು ಒಪ್ಪವಡೆದು ಕುಳಿತಿರ್ದರು (ಮೋಹತ. ೩-೨೭) ; ಬಿಡಲುಪಟ್ಟ ಬೇಂಟೆಯನುಳ್ಳ ಪುರುಷನು ಪಂಚರಂಗದ ವಸ್ತ್ರ ನಾಣೆಯ ಶಿಲೆ ಲೆಪ್ಪ ಕಾಷ್ಟ ಮೊದಲಾದವರಲ್ಲಿ ಸ್ಥಾಪಿಸಲ್ಪಟ್ಟ ಜೀವಂಗಳ ಭೇದ ಮೊದಲಾದವನು ಮಾಡಲಾಗದು (ಸಾಗಾಧ. ೩೪). ೩. ಬಂಧುಗಳಾನಂದದಿಯೊಂದೀತ ಮಾಯಣಸೆಟ್ಟಿ ಎಂದು ಕರೆಯಲಾ ಪೆಸರೀ ಧರೆಯೊಳು ಸಂದುದು ನಾಣೆಯವಾಗಿ (ತ್ರಿಪುಸಾಂ. ೨೪-೨೭೮). ನಾಣ್ಯ : ೧. ಬಾಹಿರವ ಕಳೆದು ಎಡೆನಾಣ್ಯವನುಳಿದು ಹಲವು ನಾಣ್ಯವ ಕಳೆದು ಸಲುವ ನಾಣ್ಯವ ಹಿಡಿದು ನೋಡುವೆನಯ್ಯ (ಅದವ. ೨೭-೭೭) ; ಹೀಗೆ ವಿಶಾಲ ವ್ಯಾಪಾರ ನಡೆಯುತ್ತಿದ್ದರೂ ನಾಣ್ಯಗಳೇ ಕಂಡುಬಂದಿಲ್ಲ (ಭಾರದ. ೧೫) ; ಸಹನಿಯು ೧೯೪೫ರಲ್ಲಿ ಪ್ರಾಚೀನ ಭಾರತದಲ್ಲಿ ನಾಣ್ಯಗಳನ್ನು ಎಸಗುವ ಒಂದು ಪದ್ಧತಿಯನ್ನು ಬೆಳಕಿಗೆ ತಂದು ಅದಕ್ಕೆ ಒಂದು ಪದಕವನ್ನು ಪಡೆದಿದ್ದನು (ಸಸ್ಕಕ. ೦೨೮). ೪. ಘನತೆ ; ಗೌರವ : ಇಂಥ ಆಂಗಡಿಯ ನಾಣ್ಯವನ್ನು ಕೆಡಿಸಿ ನಾನು ಬದುಕಿರಲೆ ? (ಅದೂಟ. ೮). ೫. ಸತ್ಯ; ಪ್ರಾಮಾಣಿಕತೆ : (ಕಿ). ೬. ನಯ; ಮೃದುತ್ವ: ಮಾನಿತಮಾದ ವಸ್ತ್ರದ ನಾಣ್ಯವಣಿಬದವೇನೆಂದು ಬಣ್ಣಿಸಬಹುದು (ಅನಂದ. ೧-೧೫೪) ; ಪೂರ್ಣಗುಣಸಂಪನ್ನೆ ಬಾರೆಂದು ನಾಣ್ಯದಿಂ ಗೊಲ್ಲ ಕರೆದನು (ಗೋಜಾಡು. ೮-೩೭). ೭. ನವಿರಾದ ಬಟ್ಟೆ ; ಬೆಲೆ ಬಾಳುವ ವಸ್ತ್ರ ; ತೊತ್ತು ಲಕ್ಷಣವಿರಲು ನಾಣ್ಯವನುಡಿಸಿ ನವರತ್ನಾಭರಣಂಗಳ ತೊಡಿಸಿ (ದನ್ನವ. ಕ. ೧೬೮-೩೬೭).

[ದೇ.॥ ತಮಿ. ನಾಣಯ, ನಾಣೆಯ; ಮಲ. ನಾಣೆಯ್ಯ; ತುಳು. ನಾಣ್ಯೊ ; ತೆಲು. ನಾಣೆ, ನಾಣ್ಯ. / ಪ್ರಾ. ಣಾಣಕ. / ಸಂ. ನಾಣಕ./ ಮರಾ. ನಾಣೇ; ಗುಜ. ನಾಣುಂ; ಸಿಂಧಿ. ನಾಣು]

ನಾಣಲ್ 'ನಾನಲ್' ನೋ.

ನಾಣಲು 'ನಾನಲ್' ನೋ.

ನಾಣಳ್ಕು (ನಾ). ನಾಚಿಕೆಯಿಂದ ಉಂಟಾದ ಭಯ ; ಲಜ್ಜೆಯಿಂದುಂಟಾದ ಹೆದರಿಕೆ : ಮಜ್ಜನಂಬುಗದಾರೋಗಿಸಲೊಲ್ಲದಿರ್ಪಿರವಿದೇಂ ನಾಣಳ್ಕಿದೇಂ (ಪಂಪಭಾ. ೪-೬೩). [ನಾಣ್$_1$ + ಅಳ್ಕು$_2$]

ನಾಣಟಿ (ಕ್ರಿ). ನಾಚಿಕೆಯಿಲ್ಲದಂತಾಗು; ಲಜ್ಜೆಯನ್ನು ಕಳೆದುಕೊಳ್ಳು : ಬಟಲದೆ ಪುಷ್ಪಬಾಣಹತಿಯಿಂ ಪುಳಕಂಗಳನಾನದುಣ್ಮೆ ನಾಣಟಿಯದೆ ಜಾಣನಿಕ್ಕದೆ ಬೆಮರ್ತಱುತಾಱದೆ ತೀರ್ದು ತಾನೆ ಮೆಯ್ಯಟಲೆ ಕಡಂಗಿ ಮುಕ್ತಿಯೊಡಗೂಡಿದ ಪೆಂಪಿನ ಸೌಖ್ಯದಿಂಪು ಪೊಂಪುಟಿಯೆನಿಸಿರ್ದ ಸಿದ್ಧರೆಮಗೀಗೆ ವಿಶುದ್ಧರಭೀಷ್ಟಸಿದ್ಧಿಯಂ (ಲೀಲಾವ. ೧-೪) ; ಕಾಣದ ಜನಂ ಬೈದು ನಾಣಟಿದು ಬಿಸುಸುಯ್ದು (ಜಗವಿ. ೦೭-೦೦೮ ರಗಳೆ) ; ಬಂದ ಳೊರ್ವಳ್ ನಡೆ ನೋಡಿದಳಾಗಳಂತೆ ನಾಣಟಿವಿನೆಗಂ (ಕಬ್ಬಿಕಾ. ೩೩೫) ; ನಾಣಟಿಯಲ್ ಮನಂ ಬೆಱಗಿನಿಂ ಮರವಟ್ಟಿರೆ (ದಶಕು. ೬-೧೯೯).

[ನಾಣ್$_1$ + ಅಟಿ$_1$]

ನಾಣಿ (ನಾ). ತಿಳಿವಳಿಕೆಯುಳ್ಳವನು ; ಜ್ಞಾನಿ : ದುಡುಕು ಮಾಡುವರೆ ಬಸವೇಶ ನಾಣಿಗಳು ಹುಡುಕುವರೆ ಕದನ ಜಗದೊಳಗೆ (ಕನ್ನಜಾ. ೨೫೯).

[<ಪ್ರಾ. ಣಾಣಿ. / ಸಂ. ಜ್ಞಾನಿನ್]

ನಾಣಿಗೆ (ನಾ). (ಕರಾ) ಸ್ನಾನ ಮಾಡುವ ಮನೆ ; ಬಚ್ಚಲುಮನೆ ; ಸ್ನಾನಗೃಹ : ಶಾಂತಾ ಹಾಗೂ ಅವಳ ನೆರೆಮನೆಯ ಆನಂದಿ ನಾಣಿಗೆಯ ಹಂಡೆಗೆ ನೀರು ತುಂಬಲೆಂದು ಹಿತ್ತಿಲದ ಬಾವಿಗೆ ಬಂದಿದ್ದರು (ಮೂರುದಾ. ೧೬೬) ; ನಾಣಿಗೆಯಲ್ಲಿ ನೀರು ಕಾದಿದೆ. ಮಿಂದು ಊಟಮಾಡಿ ಹೋಗಿರಿ (ರೂಢಿ).

ನಾಣಿಗೆ ಮನೆ = ಬಚ್ಚಲುಮನೆ : ಯಾರೇ ಅವನು-ನಾಣಿಗೆಮನೆಯಲ್ಲಿ ಹಾಗೆ ಕಾರಿಕೊಳ್ಳುವವನು ? (ಮೂರುದಾ. ೧೮೩). [ನಾಣ$_1$ + — ಇಗೆ$_0$]

ನಾಣಿಯ 'ನಾಣಯ' ನೋ.

ನಾಣಿಲ್ (ನಾ). ಒಂದು ಬಗೆಯ ಮರ ; ಆಲಿವ್ ಜಾತಿಗೆ ಸೇರಿದ ವೃಕ್ಷ : ಪಂಚಾದುಂಬರ ಜಂಬ್ವಾಮ್ರ ಗುಡಪುಷ್ಪಸಮನ್ವಿತಕಷಾಯದ್ರವ್ಯ ಕುಂಭಾಸ್ಯ ಜಂಬೂನೇಱಿಲ ಆಮ್ರಮಾವು ಗುಡಪುಷ್ಪ ನಾಣಿಲ ಹೂವು (ಪ್ರಕಟೀ. ೪೦-೧) ; ನಾಣಿರಾಯನೆಂಬವನು 'ನಾಣಿಲ್' ಮರದಡಿಯಲ್ಲಿ ವಾಸಿಸುತ್ತಿದ್ದಿರಬಹುದು (ತುಳುನಾ. ೧೫೪). [←ತುಳು. ನಾಣಿಲ್]

ನಾಣಿಲಿ (ನಾ). ೧. ನಾಚಿಕೆಯಿಲ್ಲದ ವ್ಯಕ್ತಿ ; ಲಜ್ಜೆಗೇಡಿ : "ನಾಣಿಲಿಯೆಂದು ಲಜ್ಜಾಹೀನಂ" (ಕಕಸಾ. ೧೮-೩೬೨) ; ನಾಣಿಲಿ ಪಾಣ್ಬಂ ಪಂದೆ . . . ನಿತ್ಯರೋಗಾಕುಳನೆಂಬೀ ನಾಮ ನಾಮಾವಳಿಗೆ ನಿಳಯನಕ್ಕುಂ ವ್ರತವ್ರಾತಹೀನಂ (ವಡ್ಡಾರಾ. ೦೦-೩೦) ; ಮಿಗೆ ನಾಣಿಲಿಯೆನಿಸುವ ವಧು ನಗೆಗೆಡೆಯಕ್ಕುಂ ಸಮಸ್ತಜಗತೀತಳದೊಳ್ (ಕಾವ್ಯಾವ. ೨೫೭) ; ನಾಣಿಲಿ ನಿಟ್ಟುರಂ ಸಿತಗನಾಟವಿಟಂ ತುದಿಗೋಡ ಪಾಱು ನಿನ್ನಾಣೆ ಗಡಾಗಡುಂ ನಿನಗೆ ಕೂರದರೊಳ್ ಬೆರಸಿರ್ಪನಾತಂ (ಲೀಲಾವ. ೨-೧೨೨) ; ತಲೆಗೆ ಪದರಕ್ಷೆಯಂ ನಾಣಿಲಿ ಕಟ್ಟಿಸಿಕೊಂಡ ತೆಱದೆ ಲೋಕವಿರುದ್ಧಂ ದಲದೆನಿಸಿ ನಡೆದ ಕೀರ್ತಿಗೆ ನೆಲೆಯಾದಂ ಪಾಪಕರ್ಮಕರ್ಮಂ ಕಮಠಂ (ಪಾರ್ಶ್ವಪು. ೩-೬೪) ; ನಾಣಿಲಿಯೊಳ್ ನಿಷ್ಠುರನೊಳ್ . . . ಸದ್ಗುಣಹೀನನೊಳ್ ನೆರೆವ ಕೂಟಂ ನಂಜಿನೂಟಂ (ರಾಜಶೇ. ೧೦-೦೫೦) ; ನಾಣಿಲಿಗಳ ತಲೆವಣಿ ಮಾಣ್ಮಾಣಲವೋ (ಚಿಕವಿ. ೬-೨೭೭). (ಗು). ೨. ನಾಚಿಕೆಯಿಲ್ಲದ ; ಲಜ್ಜೆಯಿಲ್ಲದ : ಈ ನಾಣಿಲಿ ಪಾರ್ವನನೆಟ್ಟಿದು ಕಳೆಯಿಂ (ಪಂಪಭಾ. ೨-೪೮ ಪ) ; ಮುಳಿದು ಪಿಡಿದೆಟ್ಟಿದು ನಿನ್ನಾಣ್ಮನಪ್ಪ ನಾಣಿಲಿ ಸವಣನನೊಡಗೊಂಡು ಬಾ ಪೋಗು (ಸುಕುಮಾ. ೫-೭ ವ). 'ನಾಣಿಲಿವಾನಸ', 'ನಾಣಿಲಿವೆಣ್' ಪರಾ. [ನಾಣ್$_1$ + – ಇಲಿ$_3$]

ನಾಣಿಲಿಗ (ನಾ). =ನಾಣಿಲಿ ೧ : ಮಹೀಪತಿಗಂ ದ್ವಿಜವಂಶಜಂಗಮೇತಱ ಕೆಳೆಯಿಂತು ನಾಣಿಲಿಗರಪ್ಪರೆ ಮಾನಸರ್ (ಪಂಪಭಾ. ೨-೪೮).

[ನಾಣಿಲಿ + – ಗ$_2$]

ನಾಣಿಲಿಗತನ (ನಾ). ನಾಚಿಗೆಗೇಡಿತನ ; ಲಜ್ಜಾಹೀನತೆ : ಒಳ್ಮನದಿ ನೀ ಪಿಡಿದ ಪಂಜು ನಿನ್ನ ನಾಣಿಲಿಗತನವನೆ ಸಾರುತಿಹುದೋ ಮರುಳೆ ! (ಕಗಪ್ಯ. ೭೫). [ನಾಣಿಲಿಗ + – ತನ]

ನಾಣಿಲಿತನ (ನಾ). =ನಾಣಿಲಿಗತನ: ತಾಂಗಿಗಟಲ್ವ ನಾಣಿಲಿತನಂ ಬೆಂಡೇಟ್ವ ಕಣ್ (ಚಂದ್ರಪು. ೮-೬೮) ; ಪಡೆವೊಡಿಂತಪ್ಪನಂ ಕೂಸನುಱ್ ಪಡೆಯದೊಡೆ ಪೊಡವಿಯೊಳ್ನಾಣಿಲಿತನಕ್ಕೆ ಪಕ್ಕಾಗರೇ (ಆರಾಚ. ೨-೫೭) ; ಸುಡು ನಾಣಿಲಿತನವಿದೆನುತೆ ಮಾನನಿಧಾನಂ ಮನದನ್ನೆಯೊಳು ಮಾಣದೆ ಮಾಱುತ್ತರವಿತ್ತಂ (ಉದ್ಯದೇ. ೩-೭೨) ; ಆಗಳಿಂತು ವಿಚಾರಿಸಿ ನಂಬುಗೆವೆತ್ತು ನಾಣಿಲಿತನಂ ಮಿಕ್ಕು (ವೃಷವಿ. ೦೨-೭೦ ವ). [ನಾಣಿಲಿ + – ತನ]

ನಾಣಿಲಿವಾನಸ (ನಾ). ನಾಚಿಕೆಯಿಲ್ಲದ ಮನುಷ್ಯ : ನಾಣಿಲಿವಾ[ಪಾಠಾಂ. ಮಾ]ನಸಂ, ಪಲ್ಲಿಲಿವಾಯಂ (ಭಾಷಾಭೂ. ೬-೧೫೦ ಉದಾ).

[ನಾಣಿಲಿ + ಮಾನಸ$_1$]

ನಾಣಿಲಿವೆಣ್ (ನಾ). ನಾಚಿಕೆಯಿಲ್ಲದ ಹೆಂಗಸು: ಕೂರಿಲಿ, ಕುಡುಗೋಲ್, ಬೆಳಗಿಲಿಗಣ್, ನಾಣಿಲಿವೆಣ್ (ಶಮದ. ೧೮೬ ಪ್ರಯೋ).

[ನಾಣಿಲಿ + ಪೆಣ್]

ನಾಣಿಸು (ಕ್ರಿ). ನಾಚುವಂತೆ ಮಾಡು ; ನಾಚಿಸು : ಆತನ ದಾದಿ ವಿನಯಮತಿಯೆಂಬೊಳ್ . . . ನೋಡಿದ ಜನಕ್ಕೆ ಭಯಮಂ ಪಡೆವೊಳ್ ನಾಣಿಸೆ [ಪಾಠಾಂ. ನಾಣ್ಚೆ, ನಾಣ್ಸೆ] ಪಡುವೊಳ್ (ವಡ್ಡಾರಾ. ೧೦೬-೨೩) ; ತಮವಱಿಯದರ ನಾಣಿಸಿಯೆನ್ನ ಮೊಮ್ಮಗೆ ತಕ್ಕ ಸತಿ ಕಟ್ಟಾಣಿರತ್ನವ ತಂದೆ ಜೀಯ (ಮೋಹತ. ೪೨-೫೫). [ನಾಣ್$_1$ + – ಇಸು$_3$]

ನಾಣು 'ನಾಣ್$_1$' ನೋ.

ನಾಣುಗೆಡಿಸು 'ನಾಣ್ಗೆಡಿಸು' ನೋ.

ನಾಣುಗೆಡು 'ನಾಣ್ಗೆಡು' ನೋ.

ನಾಣುಗೇಡಿಗ (ನಾ). ಲಜ್ಜೆಗೇಡಿ ; ನಾಚಿಕೆಗೆಟ್ಟವನು : ನಾಣುಗೇಡಿ ಗರಸುರರುಱ್ ಕಟ್ಟಾಣಿ ನೀನವರೊಳಗೆ (ತೊರರಾ. ೬-೨೨-೨೬).

[ನಾಣು (<ನಾಣ್$_1$) + ಕೇಡಿಗ]

ನಾಣುದಾಣ 'ನಾಣ್ದಾಣ' ನೋ.

ನಾಣುನಸಿಕ (ನಾ). ಅವಮಾನಕ್ಕೆ ಅಂಜುವವನು : ಭಂಡನಿವನೀ ಖಳನು ಲೋಕದ ಭಂತರಿಗೆ ಗುರು ನಾಣುನಸಿಕರ ಚಂಡಿಯಿವನಲೆ ಬಾಲವೇ ಸಾಕಿನ್ನು ಬೆಳೆಯದಿರು (ತೊರರಾ. ೫-೮-೨೩).

[ನಾಣು (<ನಾಣ್$_1$) + ನಸಿಕ]

ನಾಣುನುಡಿ$_1$ (ಕ್ರಿ). ನಾಚಿಕೆಯನ್ನುಂಟು ಮಾಡುವಂತೆ ಮಾತನಾಡು ; ಲಜ್ಜಾಹೀನವಾದ ಮಾತನಾಡು: ನಾಣುನುಡಿದು ನಗೆಗೆಡೆಯಾದೆನೆಂಬುದ ಕಾಣದೆ (ಅಂಜನ. ೭-೮೦). [ನಾಣು (<ನಾಣ್$_1$) + ನುಡಿ$_1$]

ನಾಣುನುಡಿ$_2$ (ನಾ). ನಾಚಿಕೆಯನ್ನುಂಟುಮಾಡುವ ಮಾತು ; ಲಜ್ಜಾರಹಿತವಾದ ಮಾತು : ರಜ್ಜೆಯ ನೆರವಿಗೆ ನಾಣುನುಡಿಯಿಲ್ಲದಿಹುದೆ (ಬಸವ. ೮೨೫). [ನಾಣು (<ನಾಣ್$_1$) + ನುಡಿ$_2$]

ನಾಣೆಡೆ (ನಾ). ನಾಚಿಕೆಯನ್ನುಂಟುಮಾಡುವ ಸ್ಥಳ ; ಗುಹ್ಯಾಂಗ : ತಲೆ ರೋಮದಂಚು ನಾಣೆಡೆ ಕುಚಮಧ್ಯಮುಂ . . . ಮಹಾಹಿ ಕೊಂಡೊಡೆ ಗರುಡಂಗಮತ್ತ(ಳ್ತ)ಲರಿದೆಂದೊಡೆ ಪೇಟುಱಿದರ್ಗೆ ಸಾಧ್ಯಮೇ (ಖಮದ. ೩-೪೨) ; ಸರಸದಿಂ ನಾಣೆಡೆಗೆಯೆರಡೊಂದೆನಿಸಲಪ್ಪಿ (ಜನವ. ೦೦-೬೦) ; ನಾಣೆಡೆ ದ್ರವಿಸುತಿದ್ದುದು ಮಱ್ ತೆಗೆಯೆ ತಾನೊಱಗಿ ದಳವಳು (ಭರಣ. ೪೦-೬೦) ; ಸವಿಲಲ್ಲೆನುಡಿಗೆ ಲವಲವಿಪ ನಾಲಗೆ ಕೂಟಕೆ ಕಾತರಿಸಿ ಮಿಡುಮಿಡುಕಲೊಸರ್ವ ನಾಣೆಡೆ . . . ಎಸೆಯಲೆಸೆದರ್ ಶಿವನ ಬೆಂಕೊಂಡು ಸುರಸತಿಯರು (ಜಿಬಪು. ೧೯-೩೨) ; ಉಟ್ಟುದು ಸರಿದು ಮದನಜಲ ನೆಱ್ ಪೊಱಮಱ್ಪುದು ನಾಣೆಡೆಯಿಂದ (ಕಂಪವಿ. ೯-೧೯೬).

[ನಾಣ್$_1$ + ಎಡೆ$_3$]

ನಾಣೆಯ 'ನಾಣಯ' ನೋ.

ನಾಣೆಱಕ (ನಾ). ಲಜ್ಜಾಭಾರ ; ನಾಚಿಕೆಯ ಆಧಿಕ್ಯ : ಅಂತತೀಂದ್ರಿಯ ಸೌಖ್ಯಪರಮಕೋಟಿಯನೆಯ್ದಿ ನಾಣೆಱಕದಿಂದಿನಿತುಬೇಗಂ ತಲೆಯಂ ಬಾಗಿರಲ್ (ಕಾದಂಪೂ. ೮೬೫). [ನಾಣ್$_1$ + ಎಱಕ$_1$]

ನಾಣೊಡೆಯ (ನಾ). ಮಿಂಡ ; ಜಾರ ; ವಿಟ ; ರಸಿಕ : ಪದನಱಿದೀವ ನಿತ್ತು ಮಱ್ವಂ ಕಡುಬಿಚ್ಚಡಮೆಂಬುದಿ[ಲ್ಲದಿ]ಲ್ಲದನಭಿಮಾನಿ ನಾಣೊಡೆಯನಿಂಬಱಿವಂ ಸುಭಗಂ ಪ್ರಿಯಂವದಂ (ವರ್ಧಮಾ. ೮-೯೫) ; ಕೇಣದಿಂ ನಾಣೊಡೆಯನವೆಡೆಯೊಳ್ ನಿರ್ಧನಂ ಮಾಟ್ಟಳ್ (ಲೀಲಾವ. ೨-೯೭). [ನಾಣ್$_1$ + ಒಡೆಯ$_1$]

ನಾಣ್ಗರೆ (ಕ್ರಿ). ನಾಚಿಕೆಯನ್ನು ಪಡೆ ; ಲಜ್ಜೆಹೊಂದು ; ನಾಚಿಕೆಯನ್ನು ತೋರಿಸು : ಕಾಯ್ವ ಬಯ್ವ ನಾಣ್ಗರೆವೆರೆವಿಂಬುಕೆಯ್ಯುವೊಳಪೊಯ್ಯುವನೇಕವಿಚಿತ್ರಚೀಷ್ಟೆಗಳ್ (ಪುಷ್ಪಪು. ೨-೨೭). [ನಾಣ್$_1$ + ಕರೆ$_1$]

ನಾಣ್ಗಾದೆ 'ನಾಟ್ಗಾದೆ' ನೋ.

ನಾಣ್ಗಾಪು (ನಾ). ಅವಮಾನವಾಗದಂತೆ ನೋಡಿಕೊಳ್ಳುವುದು ; ಮಾನರಕ್ಷಣೆ : ತನ್ನ ನಾಣ್ಗಾಪನೆ ಬಗೆದತನುಪರಿತಾಪಿತಶರೀರನುಮಾಗಿ ಶಂತನು ಕರಂಗರ್ದೆಗಿಡೆ (ಪಂಪಭಾ. ೦-೭೦ ವ). [ನಾಣ್$_1$ + ಕಾಪು]

ನಾಣ್ಗೆಡಿಸು 'ನಾಣ್ಗೆಡಿಸು' ನೋ.

ನಾಣ್ಗೆಡು 'ನಾಣ್ಗೆಡು' ನೋ.

ನಾಣ್ಗುಂದು (ಕ್ರಿ). ನಾಚಿಕೆಯಿಂದ ಕಂಗ್ಗು : ನುಡಿದುಂ ಮೆಯ್ಸಿರಿಗೆಟ್ಟು ಮಿಂತು ನೆಲದೊಳ್ ನಾಣ್ಗುಂದಿ ನಿಂದಿರ್ಪರ್ (ಕಬ್ಬಿಕಾ. ೦೭೨).

[ನಾಣ್$_1$ + ಕುಂದು$_1$]

ನಾಣ್ಗೆಡಿಕ (ನಾ). ಅವಮಾನ ಮಾಡುವವನು ; ನಿಂದಕ : ದುರ್ನೀತರಂ ನಾಣ್ಗೆಡಿಕರಂ ಸುಜನಾಹಿತರನಾಚಾರದೂರರನು . . . ವ್ಯಾಕುಳರನತಿ ಕೃಪೆವೆತ್ತು ಕಾಯ್ಮಾಯ್ (ಬಸಪು. ೩೮-೭೦). [ನಾಣ್[1] + ಕೆಡಿಕ]

ನಾಣ್ಗೆಡಿಸು, ನಾಣುಗೆಡಿಸು, ನಾಣ್ಗೆಡಿಸು (ಕ್ರಿ). ೧. ನಾಚಿಕೆಯನ್ನುಂಟುಮಾಡು ; ಲಜ್ಜಿತರು : ಏ ಸೊಬಗನೋ ರೂಪಮಾತ್ರದಿಂ ರಂಭಾದಿ ಭಾಸುರಸ್ತ್ರೀಯರಂ ನಾಣ್ಗೆಡಿಪನಿವನೆಂದು ಪುರಜನಂ ಬೆಱಗಾದುದು (ಚಬಪು. ೧೪-೪೫). ೨. ಅವಮಾನಗೊಳಿಸು ; ಅವಮಾನವನ್ನುಂಟುಮಾಡು : ಆನನಾಂಬುಜಂ ತನ್ನ ದಿರಂಗೆ ಸೋಲಮನೊಡರ್ಚಿ ವಿಭೂಷಣ ಕಾಂತಿ ಭಾನುವಂ ನಾಣ್ಗೆಡಿಪಂತೆ ಪರ್ಬಿರೆ . . . ಬಂದನಮಾತ್ಯನಂದನಂ (ಕಾಜಶೀ. ೦೩-೬೧). **ನಾಣುಗೆಡಿಸು** : ೨. ಬಲ್ಲಿದನೆಂಬವನ ಕೆಡಿಸಿತ್ತು, ವಿಧಿ . . . ದೇವೇಂದ್ರನ ಮೆಯ್ಯ ನಾಣುಗೆಡಿಸಿತ್ತು (ಬಸಹಿ. ೩೭-೯೩) ; ತ್ರಾಣಗಳು ನಾನಾವಿಧದಲತಿ ನಾಣುಗೆಡಿಸಲು ಹರಿಯ ನರರೊಳು ಕಾಣುತಲೆ ಲಕ್ಷ್ಮೀರಮಣನಾಜ್ಞೆಯಂಲ್ಲಿ ವರ್ತಿಸುತ (ನಿಘಾಗ. ೧೦-೦೩-೩೨). **ನಾಣ್ಗೆಡಿಸು** : ೧. ಕುಡಿದೊಡೆ ಸೊರ್ಕಿಸದವು ನಾಣ್ಗೆಡಿಸದವು ಮನಕ್ಕಲಂಪನೀವುವು . . . ಮಧುಗಳನೆಡೆಯುಡುಗದೆ ಕುಡುಗುಮುಚಿತಮದ್ಯಾಂಗಕುಜಂ (ಆದಿಪು. ೫-೩೨) ; ಕುವರನ ರೂಪೊಳ್ಪಿಣ್ಗಳನೀಕ್ಷಣಮಾತ್ರದೆ ನಾಣ್ಗೆಡಿಸಿದುದಾದವೆಂಸೆವ ಪ್ರಸಜವ್ವನದೊಳ್ (ಪಂದ್ರಪು. ೪-೪) ; ನೃಪನ ಮನಮಾರ್ದಿಸುತುಂ ನಾಣ್ಗೆಡಿಸಿ ಪಿಡಿದಸಂಗಜಚೋರಂ (ವರ್ಧಪು. ೬-೪).

[ನಾಣ್[1] + ಕೆಡಿಸು[1]]

ನಾಣ್ಗೆಡು, ನಾಣುಗೆಡಂ, ನಾಣ್ಗೆಡು (ಕ್ರಿ). ೧. ನಾಚಿಕೆಯನ್ನು ಬಿಡು ; ಲಜ್ಜೆಯಿಲ್ಲದಿರು : ಕೀಚಕಂ ಕಾಮದೇವಂ ಮಾಡಿದ ಯಾಚಕನಂತೆ ಕರಮೆ ನಾಣ್ಗೆಟ್ಟು ಮನಂಗಾಪಟ್ಟಿದಳಿಪ ನೋಡಿ ತನ್ನ ಮನದೊಳಿಂತೆಂದು ಬಗೆದಂ (ಪಂಪಭಾ. ೮-೫೯ ವ) : ತಾನಿತರ ಕನ್ಯಕೆಯಂತೆ ನಾಣ್ಗೆಟ್ಟು (ಕಾದಂಪೂ. ೮೭) ; ಮನ್ಮಥನ ಪುಟ್ಟದಾನೆಯೊಲೆಸೆವ ನಳಿನವದನೆಯ ಕಂಡು ನಾಣ್ಗೆಟ್ಟನಾ ವ್ಯಮುಖ ನನೆಯಂಬನುವಟಳದಲಿ (ಸನತ್ಕು. ೧೦-೨೩) ; ಕಣ್ಗೆಟ್ಟ ದಿಗ್ವಾಲವಾಲರಂ ಭೀತಿಯಿಂ ನಾಣ್ಗೆಟ್ಟ ಸರ್ವ ಗಂಧರ್ವರಂ ಪರಿದೆಯ್ದಿ (ಚಬಪು. ೩೦-೩೯). ೨. ಅಭಿಮಾನ ಕಳೆದಂಕೊಳ್ಳು ; ಅವಮಾನಕ್ಕೊಳಗಾಗು : ಇಲ್ಲದಿರೆ, ಎಂತಕ್ಕುಮ್ ಈ ಪೊಲ್ಲಗೆಯ್ಮೆ ? ಎಲ್ಲರುಂ ಕೂಗುವೀ ನಾಣ್ಗೆಟ್ಟ ಗೆಯ್ಮೆ ? (ಅಶ್ವತ್ಥಾ. ೪-೧೫೬). **ನಾಣುಗೆಡು** : ೨. ಕಾಯದ ಕರದಲ್ಲಿ ಲಿಂಗವ ಪಿಡಿದು ಬಾಯಾಜಿ ಭವಗೆಟ್ಟು ನಾ ಣು ಗೆ ಟ್ಟು ನಾನಾರಂಬುದನಱಿಯದೆ (ವೀರೇಶವ. ೩೪-೯೫) ; ಲಜ್ಜೆಗೆಟ್ಟಾದರೂ ಲಿಂಗವನೊಲಿಸುವೆ ನಾಣುಗೆಟ್ಟಾದರೂ ಲಿಂಗವನೊಲಿಸುವೆ (ಬಸವ. ೪೪೪) ; ಈರ್ವರು ಮುನಿಗಳು . . . ನಾಣುಗೆಡುತ ಬಂದರೇಣಾಕ್ಷಿಯೆಡೆಗವಸರದಿ (ಅಮುಸಾಂ. ೭-೯೫). **ನಾಣ್ಗೆಡು** : ೧. ನಾಣ್ಗೆಡುವಿನಮಿಾ ತೆಱದಿಂದೆನ್ನಂ ವಿಡಂಬಿಸಲ್ಕೊಡರಿಕುಮೆ (ಕಾದಂಉ. ೬೦). ೨. ಅವಂ ಗಡ ವಾರುಣಿಯಂ ಸೇವಿಸಿ ನಾಣ್ಗೆಡದಂ (ಪಂಂಪಾ. ೧೦-೧೭೯). [ನಾಣ್[1] + ಕೆಡು[1]]

ನಾಣ್ಗೆಯ್ (ಕ್ರಿ). ಅವಮಾನಪಡಿಸು ; ಅಗೌರವವನ್ನುಂಟುಮಾಡು : ಪೂಬದೆಯೆ ದೇಹಮನ್ ನಾಯ್ಗಳ್ಗಿ ಪರ್ದೆಗಳ್ಗಿರೆಯಾಗಿ, ನೋಟಕ್ಕೆ ಬಲ್ ಘೋರಮಾಗಿ, ನಾಣ್ಗೆಯ್ದು ತಾವ್ ಬಿಸುಡುಗೆ (ಆಂಪಗೊ. ೧೦-೦೪೯) ; ಅಪರಾಧದಿನ್ ಸ್ಯೂಸ್ ನಿನ್ನನೀ ಬಗೆಯಲ್ಲಿ ನಾಣ್ಗೆಯ್ದು . . . ಗೋಟ್ಪಿಡಿಸುತಿರ್ಪನ್ ? (ಲಕ್ಷ್ಮಪ್ರ. ೦೨-೨೩೬). [ನಾಣ್[1] + ಕೆಯ್[1]]

ನಾಣ್ಗೇಡಿ (ಗಂ). ನಾಚಿಕೆಯಿಲ್ಲದ ; ಲಜ್ಜೆಯಿಲ್ಲದ : ನೀನು ಬಹಳ ನಾಣ್ಗೇಡಿ ಹೆಣ್ಣಾದ ಎಂದಳು (ಕೋಹಿಸೂ. ೦೦೮) ; ಸೊರಣ, ನೀನು ಬಹಳ ನಾಣ್ಗೇಡಿ ಬ್ರಾಹ್ಮಣನಾದೆ (ಸುಗುಗಂ. ೬೩-೭). [ನಾಣ್[1] + ಕೇಡಿ[1]]

ನಾಣ್ಗೇಡು (ನಾ). ಅವಮಾನ : ಸ್ಯೂಸ್ಗೆ ಕೇಟ್ಪಟ್ಟ ನಾಣ್ಗೇಡು ನೋಟಿ ಮಾದೆನ್ (ಲಕ್ಷ್ಮಪ್ರ. ೦೪-೨೮೩). [ನಾಣ್[1] + ಕೇಡು]

ನಾಣ್ಕೊಳ್ (ಕ್ರಿ). ನಾಚಿಕೊಳ್ಳು ; ಸಿಗ್ಗಾಗು : ನೀವಿ ಜಾಜಿದೆ ಸುಸಿಲ್ ಗೈವಲ್ಲಿ ನಾಣ್ಕೊಂಡೊಡುತ್ತುಳಕಂ ಮೂಡದೆ (ರಾಜಶೇ. ೧೦-೦೫೪).

[ನಾಣ್[1] + ಕೊಳ್[1]]

ನಾಣ್ಚಿಕೆ, ನಾಂಚಿಕೆ, ನಾಚಿಕೆ, ನಾಚಿಗೆ (ನಾ). ೧. ಲಜ್ಜೆ ; ಸಿಗ್ಗು : ರಾಗದಿನಗಸುತೆಯೊಳ್ಸಂಭೋಗಿಸುತಿಪ್ಪಲ್ಲಿಗ್ಗಿ ಬರೆ ನಾಣ್ಚಿಕೆಯಿಂದಾ ಗಿರಿಜೆ ಪೋಗಿ (ಸಮುಪ. ೪-೫೪) ; ತಲೆವಾಗಿ ನಾಣ್ಚುತಿಪ್ಪಳುಕುತಿದ್ದವರ ನಾಣ್ಚಿಕೆ ಭಯವನೊಯ್ಯನೆ ಕಳೆದನು ಮುಟ್ಟಿ ನುಣ್ಣರದೋಱಿ ಮಾತಾಡಿ (ಧರಚ. ೩೦-೧೦೩). ೨. ಅವಮಾನ : ಪೊಯ್ವಳ್ಕೆಗಳ ಪೊತ್ತ ನಾಣ್ಚಿಕೆಯ ಸರ್ವ ದಿಕ್ಪಾಲರೋಟಂಗಾಣುತಜನಾಗ್ರಹಂದಾರ್ದನಾ ಕ್ಷಣದೊಳು (ಚಬಪು. ೪೯-೩೪). **ನಾಂಚಿಕೆ** : ೨. ಪರಿಕಿಸುವೊಡಪಂಗಮರವೆಸರಿನ ಕರಕರೆಯ ನಾಂಚಿಕೆಯವೊಳಗಿದು ಶರಣ ನೀವಱಿಯದುದೆಯೆಮ್ಮಯ ನಿತ್ಯತೆಯ ಹದನಂ (ಸಾನಂಕ. ೬-೨೩). **ನಾಚಿಕೆ** : ೧. ನುಡಿವೊಡೆ ನಾಚಿಕೆ ಗಡ ನಿನ ಗುಡಿನೂಲ್ ಬಿಗಿವಿನೆಗವಿಾ ವಳಿತ್ರಯಮಿಾಗಳ್ ಕಿಡುತಿರ್ಪುದು (ಕಾದಂಪೂ. ೪೦೩) ; ಮೊಲೆದುದಿ ಮೈದಿಲ ಮಱಿಯೊಳಿರುವುದೆಂದು ಸಲೆ ನಾಚಿಕೆಯನು ತೊಱಿದು (ಕಂನವಿ. ೬-೦೮೪). ೨. ಬೈತು ಬಿತ್ತನೊಲವಿಂ ಬೆಳೆಗೆಯ್ದಾ ವುದುಮಂ ಸತ್ಪಾತ್ರಕ್ಕೀವುದುಮಂ ದಾನವೆಂಬ ನಾಚಿ[ಪಾಣಾಂ. ೧೪] ಕೆಯುಂಟೀ (ಅರ್ಥನೀ. ೪-೪೮) ; ನುಸುಳಿದರು ನಾಚಿಕೆಯಲಾತನ ವಿಶಿಖ ಜಲದಲಿ ತೊಳೆದರತಿರಥರಸಮಸಂಗರವಾಯ್ತು (ಕುವಾ.ಪ್ರೋ. ೬-೪). **ನಾಚಿಗೆ** : ೧. ಮಾತೀಗು ಆಚಿಗೆ ವಿಾರಿದ್ದ ನಾಚಿಗೆ ಮುಸುಕ್ಕಾವ ಹೂವಿಗೆ (ಗಂಗಾತ. ೩೨-೦೬) ; ಅಪೂರ್ವನಿಗೆ ತುಂಬ ನಾಚಿಗೆಯಾಯಿತು (ಧಾರಶಿ. ೦೦). **ನಾಚಿಕೆಯ ಗೊತ್ತು = ನಾಣ್ದಾಣ** : ಬ ಡವ ಲ್ಲದು ಬ್ಬ ಲ್ಲದೊ ಡಲು ಕಿಜುದೊಡೆಯಯೆಡೆವಿಡದ ರೋಮದ ನಾಚಿಕೆಯ ಗೊತ್ತಿನ . . . ಅತಿ ಚದುರಿನವಳೆ ಶಂಖಿಣಿಯೆನಿಪಳು (ಜನವ. ೨-೦೪).

[ನಾಣ್ಚು[1] + – ಇಕೆ. / ತುಳು. ನಾಚಿಕೆ, ನಾಚಿಗೆ]

ನಾಣ್ಚಿಸು, ನಾಚಿಸು (ಕ್ರಿ). ೧. ನಾಚುವಂತೆ ಮಾಡು ; ಲಜ್ಜೆಯನ್ನುಂಟುಮಾಡು : ನಿಜಾಕಾರಮಂ ತೋಱಿ ನಾಣ್ಚಿಸಿ ಶಾಂತಿದಾಂತಿಯನುವಂ ಬೋಧಿಸಿ (ಪದ್ಮರಾ. ೨-೨೩) : ಎಂದವಳಂ ನಾಣ್ಚಿಸಿದಂ (ರಾಜಶೇ. ೧೦-೧೬೦ವ) : ಕಾಂಚನಸುಕಾಶ್ಮೀರಕರ್ನಿಕಾರಪ್ರಭೆಯು ನಾ ಣ್ಚಿ ಸು ವ ತತ್ಪುರಮುಖದೊತ್ತಿನೊಳ್ದೀರಕಾಂಚನಾದ್ರಿಯ ಪೋಲ್ವ ತನುಕಾಂತಿ (ಚತುಪು. ೦-೨-೪೧). ೨. ಅವಮಾನಮಾಡು. **ನಾಚಿಸು** : ೧. ಮಲ್ಲಿಯಂ ಸರವಿದೆ ಕೊಳ್ಳೆಂದು ಬೆರೆಗೊಂಡು ನಿಲ್ಲದವನ ನಾಚಿಸಿದಳು (ಕಂನವಿ. ೬-೮೪). ೨. ಓಡಿ ನಾಚಿಸುವವರು ನಲಿ ರಣಖೇಡರೀಗಳೆ ಮರಳೆ (ಕುವಾ.ಕ. ೮-೩೦) ; ನಮ್ಮ ಶಿಕ್ಷಣ ಶಿಕ್ಷಕರನ್ನೂ ನಾಚಿಸುತ್ತದೆ (ರಂಗರೋ. ೮೭).

[ನಾಣ್ಚು[1] + – ಇಸ್ಯ]

ನಾಣ್ಚು[1], ನಾಂಚು, ನಾಚ್ಚು[1] (ಕ್ರಿ). ೧. ನಾಚಿಕೆಪಡು ; ಲಜ್ಜೆಯಂನ್ನೆ ಹೊಂದಂ ; ಸಿಗ್ಗಾಗು : "ನಾಣ್ಚು-ಲಜ್ಜಾಯಾಂ" (ಕಮುಧಾ) ; ನೀಂ ಬಾ ಪೋಪಮೆಂದಂಗೆ ಮೆಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ ಎಂಬುದುಂ (ಪಂಪಭಾ. ೦-೭೦) ; ಅನಕ್ಕ ನಾಣ್ಚುವೆಂ ಪಿಡಿ ನೀನೆ ನೃಪಂಗಿಕ್ಕು ತಂಬುಲಮಂ (ಕಾದಂಉ. ೫೩) ; ಗಾಡಿಯಿಂದವಳು ನಾಣ್ಚರಲು ಬಿನ್ನಹವನು ಮಾಡಿದಳಾ ಚಿತ್ರಲೇಖೆ (ಮೋಹತ. ೨೫-೩) ; ಒಡೆಯ ನಿನ್ನೊತ್ತಿನೊಳಿರಲು ನಾಣ್ಚುವಳು (ಧರಚ. ೬-೨೩); ಅಲಸದೆ ನಾಣ್ಚದಂಜದೆ ಯಳುಕದೆ ಪೇಳು (ಹರಿಬ. ೧-೩೯). ೨. ಅವಮಾನ ಹೊಂದು ; ಅವಮರ್ಯಾದೆಗೊಳಗಾಗು : ಪಾದರಿಗನಂತೆ ಪಲರ ಮುಂದೆ ನಾಣ್ಚದೆ ಲೋಭಿಯಪ್ಪರಸಿನಂತವಿಚಾರಿಯಾಗದೆ (ಧರ್ಮಾಮ್ರ. ೪-೪೬). **ನಾಂಚು** :

೧. ಮಹಾದೇವಿಸೆಟ್ಟಿಯವರು ನಾಂಚಿ ತಲೆವಾಗಿರ್ದುದನಱಿದು (ಬಸರ. ೦೩-೫೬); ಕರ ನಾಂಚಿ ಶರನಿಧಿಯ ಮುಳುಗಿದನೊಯಂಬ ತತ್ಪರಿಯೊಳಂ ಚಂದ್ರ ಪಶ್ಚಿಮಗಿರಿಯ ಮರೆಗೊಳಲು (ನವಮೋ. ೧೪-೨೫). ನಾಚು₁ : ೧. ಆಂ ಮಾಡುವ ರುದ್ಧದೊಳ್ ಕಿಱಿದು ನಾಚುಗುಮೋ ವಧು (ಕಾದಂಉ. ೬೮೩). ೨. ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ (ಮಹಾದೇ.ಬ.೪೫-೦೦೬); ನಚ್ಚಿದಾಳಿನ ಬಿನ್ನಹಕೆ ಹರಿ ಮೆಚ್ಚಿ ಮನದಲಿ ನಾಚಿ ಚಕ್ರವ ಮುಚ್ಚಿದನು (ಕುಪ್ಯಾಭೀ. ೬-೪೬); ನುಡಿಗೆ ನಾಚಿದನರಸ ಹಂಸದ ನಡವಳಿಗೆ ಮೆಚ್ಚಿದನು (ನಳಚ. ೨-೨೦); ನನಗೆ ಬೇಕಾದದ್ದು ಬಿಡುಗಡೆ; ಅದನ್ನು ಕೋರುವುದಕ್ಕೆ ನಾಚುತ್ತೇನೆ (ಧರ್ಮಸಾ. ೮೩). [ನಾಣ್₁ + – ಚು₁]

ನಾಣ್ಚು₂ (ನಾ). = ನಾಣ್ಚೆಕೆ ೧ : ಅರಳೆಯಲಿ ರಸವಿಲ್ಲ ಕರುಳಿಗೆ ನಾಣ್ಚಿಲ್ಲ ಮರುಳನಿಗಾರು ಇದಿರಿಲ್ಲ ಸೂಳೆಯಲಿ ಸರಲವೆ ಇಲ್ಲ (ಸರ್ವಜ್ಞ. ೧೮೭೬).

[<ನಾಣ್ಚು₁]

ನಾಣ್ಣುಡಿ 'ನಾಟ್ನುಡಿ' ನೋ.

ನಾಣ್ದಂಡ (ನಾ). ಪುರುಷನ ಗುಹ್ಯಾಂಗ; ಶಿಶ್ನ : ಬಾಳೆಯೊಳು ಬಾಳೆ ನಾಣ್ದಾಣದೊಳು ನಾಣ್ದಂಡ . . . ಮತ್ತೆ ನಾಳಿಕಾವೈರಿಶಕಲದೊಳು ಶಕಲಗಳಮರ್ದು ಸ್ತ್ರೀಪುರುಷರಿರೆ ಕಂಡರು (ಪ್ರಭುಪು. ೪-೦೨೯).

[ನಾಣ್₁ + ದಂಡ]

ನಾಣ್ದಳೆ (ಕ್ರಿ). ನಾಚಿಕೆಯನ್ನು ಹೊಂದು; ನಾಚು : ಸಂಕ್ರಂದನಂ ಸದ್ಗುಣೋಜ್ವಳಸತ್ಯೇಂದ್ರನರೇಂದ್ರರುಂದ್ರಯಶಮಂ ಗಂಧರ್ವರಿಂ ಕೇಳ್ದು ನಾಣ್ದಳೆದು (ರಾಜಶೇ. ೩-೪). [ನಾಣ್₁ + ತಳೆ₁]

ನಾಣ್ದಾಣ, ನಾಣುದಾಣ (ನಾ). = ನಾಣ್₁ ೩: "ಭಗದೊಳ್ ನಾಣ್ದಾಣ ಮೆಂದುಂಟು" (ಕರ್ಣಾನಿ. ೮೮) ; ಮೊಱೆಯಂ ಮಿಱುವ ಮಾತು ಕೆಂದೆಸಪ ನಾಣ್ದಾಣಂ (ಚಂದ್ರಪು. ೮-೬೮); ಪಳ್ಕೆಯೊಳೆಕ್ಕಸರಂ ಪೊಂಗುತ್ತಿರೆ ನಾಣ್ದಾಣಂ ಸೂಳ್ವಡದಿಂಗೂಟಂ ಗಡಿಗೆಟ್ಟಿರಲ್ (ಉದ್ಯದೇ. ೪-೨೮); ಲಜ್ಜಿಸುವ ತಿಣ್ಣಮಂ ಬಿಡಿಸಿ ನಾಣ್ದಾಣಮಂ ತಡವಿ (ಜಿಬಪು. ೧೦-೫೯). ನಾಣುದಾಣ : ಹದನಾದ ನಾಣುದಾಣಕೆ ಲಿಂಗಯೋಗವ ಪದುಳಿಸುವಾಗ ಸ್ವರ್ಗವನು ಮಿದಿಯದೆ ಗೇಣು ಚೋಟೆನೆ ತೋಱುತಿದ್ದುದು (ಭರಚ. ೪೧-೬೨).

[ನಾಣ್₁ + ತಾಣ]

ನಾಣ್ದುಡುಕು (ಕ್ರಿ). ಗುಹ್ಯೇಂದ್ರಿಯವನ್ನು ಹಿಡಿದುಕೊಳ್ಳು; ಶಿಶ್ನವನ್ನು ಹಿಡಿ: ಚೆಲ್ಲದೊಳಾಕೆ ನಾಣ್ದುಡುಕಿ ನುಣ್ಗೊರಲಿಂದನಿ ಪೊಣ್ಮೆ ಚುಂಬಿಸುತ್ತೆಲ್ಲ ಸುಖಕ್ಕೆ ಸೀಮೆಯೆನಲಂಗಜಕೇಳಿಯನುಂಟುಮಾಡಿದಳ್ (ದಶಕು. ೮-೫೨).

[ನಾಣ್₁ + ತುಡುಕು₁(<ತೊಡಂಕು₁)]

ನಾಣ್ನುಡಿ 'ನಾಟ್ನುಡಿ' ನೋ.

ನಾಣ್ಪು (ನಾ). = ನಾಣ್ಚೆಕೆ ೧ : ಈಕೆಯ ಸಲ್ವ ಜಾಣ್ಣುಡಿಗಳಿಂಪಿನಿವಿಲ್ಲನ ಪೆಂಪಲಂಪು ಮೇಣೀಕೆಯ ನೋಟದೊಳ್ಪು ಮುನಿಜಾಲಮನಕ್ಕೆ ಬೆಗಟ್ಪು ನಾಣ್ಪು ತಾನೀಕೆಯ ಸುಯ್ಯ ಗಾಳಿ ಮಲಯಾನಿಲನೊಳ್ ಸಲೆ ಜೋಳಿಪಾಳಿ (ಉದ್ಯಟ. ೮-೪೪). [ನಾಣ್₁ + – ಪು₂]

ನಾಣ್ಪೋಗು (ನಾ). (ಪ್ರಾಣಿಗಳ) ಸಂಭೋಗ : ಮೂಱು ಕೊಂಬುಮ ನಾಱು ನಾಣ್ಪೋಗುಮನೆರಟ್ಟಜ್ಜೆಯುಮಂ . . . ಬಲ್ಲನಾಗಿ (ಪಂಪಭಾ. ೫-೪೩ ವ). [ನಾಣ್₁ + ಪೋಗು₂]

ನಾಣ್ಬಟ್ಟೆ 'ನಾಟ್ಬಟ್ಟೆ' ನೋ.

ನಾಣ್ಬಟ್ಟೆವೆಣ್ (ನಾ). ನಾಡಿನ ರಸ್ತೆಯಲ್ಲಿ ತಿರುಗಾಡುವ ಹೆಂಗಸು; ನಾಡ ದಾರಿಯಲ್ಲಿ ಓಡಾಡುವ ಹೆಣ್ಣು : ಪತ್ತನ ದ್ರೋಣಾಮುಖಂ ಗಳ್ಗೆ ಮಾಣದೆ ನಡೆವ ನಾಣ್ಬಟ್ಟೆವೆಣ್ಣ ಕಣ್ಣಪೂರವನಲಂಕರಿಸಿದ ಪಾನೀಯ ಕಾಯಮಾನನಿಕಾಯಾಭ್ಯಂತರಾಳದಲ್ಲಿ ಪಱಿಪಡೆ ಸೇದೆ (ಅನಂಪು. ೧-೮೨ ವ).

[ನಾಣ್ಬಟ್ಟೆ (<ನಾಟ್ಬಟ್ಟೆ) + ಪೆಣ್]

ನಾಣ್ಬದ (ನಾ). ಕಾಮಜಲ; ಯೋನಿದ್ರವ : ಊರುಯುಗಂಗಳಿಂದಿಟುವ ನಾಣ್ಬದನಂ ನಿಱಿಯಿಂದಮೊತ್ತುತುಂ ಜಾರೆಯರೆಯ್ದುತಿರ್ದರ್ (ಕುಸುಮಾ. ೪-೩೫); ನೀವಿ ನಸುಬೀಟ್ತರೆ ನಾಣ್ಬದನಂಗಜೌಕದಿಂದಿಟಿತರೆ ಘರ್ಮ ವಾಃಕಣಗಣಂ ನೆಗೆಯುತ್ತಿರೆ ನೋಡುತಿರ್ದಳಾಕುಳತೆಯಿನೊರ್ವೆ ಚಂದ್ರ ಮುಖಿ ಮೆಯ್ಮಱಿದಾ ನರನಾಥಪುತ್ರನಂ (ಶಾಂತೀಶ್ವ. ೩-೩೦).

[ನಾಣ್₁ + ಪದ₁]

ನಾಣ್ಬೆಡು (ಕ್ರಿ). ನಾಚಿಕೆಯನ್ನು ಬಿಡು,–ತ್ಯಜಿಸು: ಮೊಗಂಗುಡೆ ಪದವೆತ್ತು ಚುಂಬಿಸಿ ಭಯಂಗೆಯೆ ಬಲ್ವೆಣಸಂ ಪೊದಟ್ಟು ನಾಣ್ಬೆಡೆ ನೆರೆದೂಢೆಯಂ ಪ್ರಥಮಸಂಗಮದೊಳ್ ಕುವರಂ ಮರುಳ್ಚಿದಂ (ಚಂದ್ರಪು. ೬-೮೨); ತೋಳ್ಗಳಿಂ ಬಿಗಿದು ತಳ್ಕಿಸಿ ನಾಣ್ಬೆಡೆ ಜಾಣ್ಮೆದೋಱಿ . . . ತನ್ನಳ ಮನಮಂ ಮರಳ್ಚಿದನದೇಂ ರತಿಕೋವಿದನೋ ಕುಮಾರಕಂ (ರಾಜಶೇ. ೮-೮೫). [ನಾಣ್₁ + ಬಿಡು₁]

ನಾಣ್ಬೆದರು (ಕ್ರಿ). ಲಜ್ಜೆಯಿಂದ ಬೆದರು: ಭರದಿ ಮಲೆತುದು, ಮಹೇಂದ್ರ ಶಿಖರಂಗಳುಂ ನಾಣ್ಬೆದರಿ ಗೋಣ್ತಳ್ಗುವೋಲ್ (ಶ್ರೀರಾಮಾ. ೫೮೬-೬೬).

[ನಾಣ್₁ + ಬೆದರು₁ (<ಬೆದಱು₁)]

ನಾಣ್ಬೆರಸು 'ನಾಣ್ವೆರಸು' ನೋ.

ನಾಣ್ಬೆಳ್ಪೇರು (ಕ್ರಿ). ನಾಚಿಕೆಯಿಂದ ಬಿಳಿಚಿಕೊಳ್ಳು: ಮೇಘಸಂಧಿಗಳಿಂದೆ, ಮುಸುಕೆತ್ತಿ, ನಸುನಾಣ್ಚೆ, ಮೊಗಕೆ ನಾಣ್ಬೆಳ್ಪೇರಿದಪರಿಚಿತಳಂತೆವೋಲ್ ಇಣಿಕಿತು ಗತೋಷ್ಣಾತಪಂ (ಶ್ರೀರಾಮಾ. ೩೪೫-೧೫೦).

[ನಾಣ್₁ + ಬೆಳ್ಪು + ಏರು₁ (<ಏಱ್₁)]

ನಾಣ್ಮಸಗು (ಕ್ರಿ). ಅವಮಾನ ಹೆಚ್ಚಾಗು: (ನಾಣ್ಮಸಗಿ, ಅವನತವಕ್ತ್ರನಾಗಿ) (ಮಂತ್ರಶ. ೩೯-೨). [ನಾಣ್₁ + ಮಸಗು₁]

ನಾಣ್ಮಾತು 'ನಾಳ್ಮಾತು' ನೋ.

ನಾಣ್ಮೇಸಲು (ನಾ). ನಾಚಿಕೆಯಲ್ಲಿ ತೋರುವ ಪವಿತ್ರತೆ; ಪರಿಶುದ್ಧತೆಯುಳ್ಳ ನಾಚಿಕೆ : ನಾಣ್ಮೇಸಲಳಿಯದವಯವದ ಭೇದಮಂ ಮಱಿದು ಜಾಣ್ಮೆಗಳ ಬಂಧಂಗಳೊಳ್ಬಳಸಿ . . . ಲಲ್ಲೆಗೈದೊಲವನಾಣ್ಮಂಗೆ ಕಾಣಿಸಿದಳವಳ್ (ಚೈಮಿಭಾ. ೧೦-೨೨). [ನಾಣ್₁ + ಮಿಸಲು (<ಮಿಸಲ್)]

ನಾಣ್ಮುಚ್ಚು (ಕ್ರಿ). ಮಾನವನ್ನು ರಕ್ಷಿಸು: ಉಡೆ ನಾಣ್ಮುಚ್ಚದ ನಾಗವಟ್ಟಣಿಗೆ (ಮಲ್ಲಕಾ. ೮-೩೦೯). [ನಾಣ್₁ + ಮುಚ್ಚು₁]

ನಾಣ್ಮೆ (ನಾ). ನಾಚಿಕೆ; ಲಜ್ಜೆ : ಆದೊಡದನಾಡುತಿರ್ಪಾಗಳೇ ನಾಣ್ಮೆಯೊತ್ತಿ ಬರ್ಪುದು ಎನಗೆ (ಬದ್ಯಪ್ರ. ೩೪-೭೨೬); ಆಳವನ್ ಜ್ಞಾನಿಯಾಗಿರ್ದೊಡಂ, ತಾನ್ ಕಲ್ವುದದು ನಾಣ್ಮೆಯಲ್ಲಂ (ಅಂತಿಗೂ. ೩೨-೬೫೮).

[ನಾಣ್₁ + –ಮೆ₁./ತಮಿ. ನಾಣ್ಮೈ]

ನಾಣ್ಮೊಗ (ನಾ). ನಾಚಿಕೆಯನ್ನು ತೋರ್ಪಡಿಸುವ ಮುಖ : ಬಲವಂತರೆಲ್ಲ ನಳಿಕೆಯ ಕೀರನಂತೆ ಅವರು ದಿಕ್ಕಾಗಲಱಿಯರು ನಾಣ್ಮೊಗದಪ್ಪವರ ಒಪ್ಪವಿಟ್ಟುಕೊಳ್ಳ (ಮೋಳಿಮಾ. ೬೭-೨೬೯). [ನಾಣ್₁ + ಮೊಗ]

ನಾಣ್ಯ 'ನಾಣಯ' ನೋ.

ನಾಣ್ಯಗಾರ (ನಾ). ಗಣ್ಯ; ಗೌರವಸ್ಥ; ಮಾನ್ಯ : (ಕಿ).

[ನಾಣ್ಯ (<ನಾಣಯ) + – ಕಾರ₁ (<–ಕಾಱ)]

ನಾಣ್ಯಪದ್ಧತಿ (ನಾ). ನಾಣ್ಯಗಳನ್ನು ಚಲಾವಣೆ ಮಾಡುವ ವ್ಯವಸ್ಥೆ,–ನಿಯಮ : ಈ ಹದ ಬಹುಕಾಲದವರೆಗೆ ನಿಲ್ಲುವಂತೆಯೂ ಸಮಧಾತುವಾಗಿರುವಂತೆಯೂ ಏರ್ಪಡಿಸಬೇಕು–ಎಂಬುದೇ ಎಲ್ಲ ನಾಣ್ಯಪದ್ಧತಿಗಳ ಗುರಿ (ಹಡಪ್ರ. ೨೯). [ನಾಣ್ಯ (<ನಾಣಯ) + ಪದ್ಧತಿ]

ನಾಣ್ಯಪರೀಕ್ಷೆ (ನಾ). ನಾಣ್ಯಗಳ ಗುಣಾವಗುಣಗಳ ಪರಿಶೀಲನೆ: ಅವನು ನಾಣ್ಯಪರೀಕ್ಷೆಯಲ್ಲಿ ಖದೀಮ (ರೂಢಿ).

[ನಾಣ್ಯ (<ನಾಣಯ) + ಪರೀಕ್ಷೆ]

ನಾಣ್ಯವಂತ (ನಾ). = ನಾಣ್ಯಗಾರ : ಇಡೀ ಹಳ್ಳಿಯಲ್ಲೇ ಅವನು ನಾಣ್ಯ ವಂತನೆಂದು ಹೆಸರು ಗಳಿಸಿದ್ದಾನೆ (ರೂಢಿ).

[ನಾಣ್ಯ (<ನಾಣಯ)+-ವಂತ]

ನಾಣ್ಯವಟ್ಟ (ನಾ). ನಾಣ್ಯವಿನಿಮಯದ ಸಂದರ್ಭದಲ್ಲಿ ತೆರಬೇಕಾದ ಶುಲ್ಕ ; ಒಂದು ನಾಣ್ಯವನ್ನು ಮತ್ತೊಂದು ನಾಣ್ಯಕ್ಕೆ ಬದಲಾಯಿಸಿ ಕೊಳ್ಳುವಾಗ ಕೊಡಬೇಕಾದ ಹಣ,-ಶುಲ್ಕ : (ಕ).

[ನಾಣ್ಯ (<ನಾಣಯ) + ವಟ್ಟ$_2$]

ನಾಣ್ಯವಾರು (ನಾ). ಬೇರೆ ಬೇರೆಯಾದ ನಾಣ್ಯಗಳ ವಿವರವಾದ ಲೆಕ್ಕ ; ಬೇರೆ ಬೇರೆ ಬೆಲೆಯ, ಆಕಾರದ ನಾಣ್ಯಗಳನ್ನು ಪ್ರತ್ಯೇಕ ಪ್ರತ್ಯೇಕ ವಾಗಿ ವಿಂಗಡಿಸುವುದು : ತಿರುಪತಿಬೆಟ್ಟದಲ್ಲಿ ಪ್ರತಿನಿತ್ಯ ಹುಂಡಿಯ ಹಣವನ್ನು ನಾಣ್ಯವಾರಾಗಿ ವಿಂಗಡಿಸುತ್ತಾರೆ (ರೂಢಿ).

[ನಾಣ್ಯ (<ನಾಣಯ) + ವಾರು$_2$ (<ವಾರಿ$_3$]

ನಾಣ್ಯವಿದ್ಯೆ (ನಾ). ನಾಣ್ಯದ ವಿಷಯವನ್ನು ತಿಳಿಸುವ ವಿದ್ಯೆ; ನಾಣ್ಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ವಿವರಿಸುವ ಶಾಸ್ತ್ರ: "ನಾಣ್ಯ(ಪರಿಚಯ) ವಿದ್ಯೆ" (Numismatics. ಇಂಕನಿ). [ನಾಣ್ಯ(<ನಾಣಯ)+ವಿದ್ಯೆ]

ನಾಣ್ವೆರಸು, ನಾಣ್ಬೆರಸು (ಕ್ರಿ). ನಾಚಿಕೆಯಿಂದ ಕೂಡಿರು; ಲಜ್ಜೆಯನ್ನು ಹೊಂದು : ಆಕೆಯ . . . ಗಾಡಿವೆರಸಿದ ಹಾವಕ್ಕಂ ನಾಣ್ವೆರಸಿದ ಭಾವಕ್ಕ ಮೊಲ್ದುಮೊಱಲ್ದುಮಿರೆಯಿರೆ (ಪಂಪಭಾ. ೪-೦೭ ಪ). **ನಾಣ್ಬೆರಸು :** ಕಂಪಿಸುತಿರೆ ಕರತಳದಿಂದಂ ಪೋದತ್ತಕ್ಷಮಾಲೆ ನಾಣ್ಬೆರಸಾಗಳ್ (ಕಾದಂಪೂ. ೭೭೦). [ನಾಣ್$_1$ + ಬೆರಸು$_1$]

ನಾತ, ನಾತಂ (ನಾ). ೧. ಮೂಗಿನಿಂದ ಕಂಡುಹಿಡಿಯುವ ಒಂದು ದ್ರವ್ಯಗುಣ ; ವಾಸನೆ ; ಗಂಧ ; ಪರಿಮಳ : ಸವಿ ಬೆಳಗು ಕಡವು ದನಿ ನಾತಮೆಂಬೈದಱ ಬಗೆ ತಿಳಿವನೆಡೆಯದೇ ಲೋಕಂ (ಕುಟಳ್. ೦-೩-೭) ಆವನ ಸುತ್ತ ಕ್ಯಾದಿಗೀ ಹೊಡಿವಾಸ, ಪಲ್ಲೇದ ಕಂಪಾ, ಎಲಿಬಳ್ಳೀ ನಾತ (ಬಾಬಲ. ೫೩). ೨. ಸುವಾಸನೆ ; ಸುಗಂಧ : "ಸೌಸವಂ . . . ನಾತಂ, ಮಂಗಮಗಿಸು-ಈ ೭ ಪರಿಮಳಕ್ಕೆ ಪೆಸರ್" (ಕಶಸಾ. ೯-೦೬೭); "ನಾತಂ ನೆಱೆ ಸೌಸವ ಕಮ್ಮಿತೆಂದು ಮಗಮಗಿಸಿದುದೆಂದಿರದೆ . . . ಸೌರಭ್ಯಮಕ್ಕುಂ" (ಕವಿಕಂ. ೯೬) ; ಕಸವು ಹೊಡೆದ ಕೈಯು ಕಸ್ತೂರಿ ನಾತಾವ ಬಸವಣ್ಣ ನಿನ್ನ ಸೆಗಣೀಯ ಬಳೆದ ಕೈ ಎಸಳ ಯಾಲಕ್ಕಿ ಗೊನಿ ನಾತ (ಗಳಿತಿ. ೪೨). ೩. ದುರ್ವಾಸನೆ ; ದುರ್ಗಂಧ : "ನಾತಮೆನೆ ದುರ್ಗಂಧದೋಳ್" (ಕಶರ. ೫೪) ; ಪೊಂಗಳಂ ಸುರಿವೊಡಮಾರೊ ಸೈರಿಸುವರಾಜನ ಪಲ್ಲಿಲಿವಾಯ ನಾತಮಂ (ಪಂಪಭಾ. ೪-೦೦೦) ; ಶೂಲಿ ಹೊಲಸಿನ ನಾತದೊಳಗೆ ನಿಂದೈ ತಂದೆ (ಇಹರ. ದೇ. ೪೪-೨೨) ; ನಾತವಧಿಕ ಭಯಂಕರವು (ಬಸಪು. ೪೬-೫೯); ಇಡಿದ ಹೊಲಸಿನ ನಾತದುಬ್ಬರದೆಡಬಲದ ತಿನಿಸುಗಳ . . . ಕಂಡು ಹೇಸುತ ಹನುಮ ಹೊಱವಂಟ (ತೊರರಾ. ೫-೨-೩೬) ; ನಷ್ಟ ಬೀಳುವುದಲ್ಲ ನಾತ ಹುಟ್ಟುವುದಲ್ಲ (ಪುರಂದ. ೧-೨೦೬-೨) ; ನಡುಮನೇಲಿ ಹೇತು ನಾತ ಬರುತ್ತೆ ಎಂದ (ಗಾಡ). ೪. ಕಟುವಾಸನೆ ; ಉಗ್ರಗಂಧ; ಸಹಿಸಲಾಗದ ವಾಸನೆ : "ಹೆಸಲುನಾತಂ ಸೊವಡು ಸೊಗಡುದುಂದುಲಿಗ ಕೊರಿತ್ತಾದ ಗಂಧಕ್ಕೆ" (ಶಬ್ಧಮಂ. ೨೪) ; ಇಂಗಿನೊಳು ನಾತವನು ತೆಂಗಿನೊಳಗೆಳನೀರ ಭೃಂಗಕೋಕಿಲೆಯು ಕಂಠದೊಳು ಗಾಯನವ ತುಂಬಿದವರಾರು (ಸರ್ವಜ್ಞ. ೧೯೩). ೫. (ಆಲಂ) ಸುಳಿವು ; ಮುನ್ಸೂಚನೆ : ನೀಲವ್ವ ಮೊದಲ ಸಲ ಗರ್ಭಿಣಿಯಾದಳು, ಆ 'ನಾತ'ವನ್ನು ಮೊದಲು ಕಂಡುಹಿಡಿದವಳೂ ಬಸವ್ವನೇ (ಬರಹಾ. ೧೬) ; ನಯನ ನಿಗಿನಿಗಿ ಎದೆಯ ದೃಢಪಡೆ ಏನೊ ನಾತವ ಹಿಡಿದಿದೆ (ಕೈತ್ಯಾಲಂ. ೨೮-೩). **ನಾತು :** ೧. ನಾತು ಖವಟ ಇರದೆ ಬಣ್ಣ ಕೆಂಪದಿದ್ದು ತೇಜವುಳ್ಳದ್ದಿರಬೇಕು (ಮುಂಬವ್ಯಾ. ೩೬).

[ದೇ.॥ ತಮಿ. ಮಲ. ನಾಱ್ಱ; ತುಳು. ಕೊಡ. ನಾತ]

ನಾತಂಬಿಡಿ, ನಾತಹಿಡಿ (ಕ್ರಿ). ೧. ವಾಸನೆ ಹಿಡಿ ; ವಾಸನೆಯಿಂದ ಪತ್ತೆಹಚ್ಚು : ನೆತ್ತರ ಧಾರೆಯೊಳ್ ನಾದು ನನೆದಡಿವಜ್ಜೆಯನು ನಾತಂಬಿಡಿದು ಬಂದು (ಸುಕುಮಾ. ೧೨-೨೪ ವ). **ನಾತಹಿಡಿ :** ೨. ಕೆಟ್ಟ ವಾಸನೆ ಇಡುಗು ; ದುರ್ಗಂಧವಾಗು : ತಲೆ ನಾತಹಿಡಿದಿದೆ, ಸ್ನಾನ ಮಾಡದೇಕು (ರೂಢಿ). [ನಾತ + ಪಿಡಿ$_1$]

ನಾತವಡೆ (ಕ್ರಿ). = ನಾತಂಬಿಡಿ ೨: ನಾತವಡೆದ ತನುವಿನ ನಳ್ಳಿಮೂಗಿನ ಭೂತವೆ ನಡೆತಪ್ಪಂತೆ ಮನೆಗೆ ಬರಲು (ನೇಮಿಸಂ. ೭-೧೦೫).

[ನಾತ + ಪಡೆ$_1$]

ನಾತಹಿಡಿ 'ನಾತಂಬಿಡಿ' ನೋ.

ನಾತಹೂ, ನಾತಹೂವು (ನಾ). ಒಂದು ಬಗೆಯ ಗಿಡ ಮತ್ತು ಅದರ ಹೂವು : (ಕ). **ನಾತಹೂವು :** ಈ ಮಕರಗ್ರಂಥಿಗಳನ್ನು ನಾವು ತುಂಬೆ, ನಾತಹೂವು (Lantana) ಈ ಹೂವುಗಳಲ್ಲಿ ನೋಡಬಹುದು (ಸಸ್ಯಶಾ. ೫೩).

[ನಾತ + ಹೂ$_2$ (<ಪೂ$_2$)]

ನಾತಹೂವು 'ನಾತಹೂ' ನೋ.

ನಾತಾಳಿ (ನಾ). ಕ್ರಿಸ್‌ಮಸ್ ಹಬ್ಬ ; ಏಸುಕ್ರಿಸ್ತನ ಜನ್ಮದಿವಸ : ದತ್ತೂನ ಮದುವೆಯಾದ ಮೇಲೆ ಬಂದುದು ಅದೇ ಮೊದಲ ನಾತಾಳಿ (ಸ್ಮೃತಿಚಿ. ೪೩೪).

ನಾತಾಳಿ ದಿನ = ಕ್ರಿಸ್‌ಮಸ್ ಹಬ್ಬವನ್ನು ಆಚರಿಸುವ ದಿವಸ : ನಾತಾಳಿ ದಿನಗಳು, ಹತ್ತು ಗಂಟೆಯ ಹೊತ್ತು, ನಾನು ಮಲಗಿದ್ದೆ (ಸ್ಮೃತಿಚಿ. ೩೭೨). **ನಾತಾಳಿಯ ರಜೆ** = ಕ್ರಿಸ್‌ಮಸ್ ಹಬ್ಬದ ಬಿಡುವು,-ರಜೆ : ಇನ್ನೆರಡು ದಿನಗಳಲ್ಲಿ ಹೇಗಾದರೂ ನಿನ್ನ ನಾತಾಳಿಯ ರಜೆ ಸುರು (ಮೂರುದಾ. ೦೨೩). **ನಾತಾಳಿ ಸೂಟಿ**=ನಾತಾಳಿಯ ರಜೆ : ಉಮೇಶನಿಗೆ ನಾತಾಳಿ ಸೂಟಿ (ದಾಕೂಟ. ೦೦) ; ಈ ದುಡಿತದಲ್ಲಿ ನುಗ್ಗಾದ ಹುಡುಗರಿಗೆ ಹತ್ತುದಿನದ ನಾತಾಳಿ ಸೂಟಿಯೂ ಹಿಗ್ಗಿನ ಹುತ್ತವಾಯಿತು (ಅನ್ನ. ೦೦).

[←ಮರಾ. ನಾತಾಳ್, ನಾಥಾಳ್./ಇಂ. Natal./ಪೋರ್ಚ್. ನಾತಾಲ್]

ನಾತಿದೂರ (ನಾ). ಬಹಳ ದೂರವಲ್ಲದುದು ; ಹತ್ತಿರ ; ಸಮೀಪ : ನಾತಿದೂರಂ ಶ್ಲಾಘನೀಯಮಾ ಪಂಚವಟಿ (ಶ್ರೀರಾಮಾ. ೧೯೩-೪೫೩) ; ನಾತಿದೂರದೊಳೊಂದು ಪೊಣ್ಮಿದುದು ಸೀಳ್ವವೋಲ್ ವನ್ಯನಿಶ್ಶಬ್ದಮಂ ದೀರ್ಘಶ್ರುತಿಯ ಸೀಳ್ ! (ಶ್ರೀರಾಮಾ. ೨೯೦-೧೬೮). [ಸಂ.]

ನಾತಿನಿಕಟ (ನಾ). ಬಹಳ ಹತ್ತಿರವಲ್ಲದುದು ; ಸ್ವಲ್ಪದೂರ : ನಾತಿ ದೂರಂ ನಾತಿನಿಕಟಮದೊ ಕಾಳ್ಮಿಗಂ ಸುಳಿಯುತಿವೆ ಮನಮೋಹಕಂ (ಶ್ರೀರಾಮಾ. ೧೯೬-೫೪). [ಸಂ.]

ನಾತಿಮಾನಿತೆ (ನಾ). ಹೆಚ್ಚು ಅಹಂಕಾರವಿಲ್ಲದಿರುವಿಕೆ : ನಾತಿಮಾನಿತಾ ಎಂದರೆ ಅಹಂಕಾರರಾಹಿತ್ಯ (ಭಾತತ್ವ. ೧೪೦). [ಸಂ. ನಾತಿಮಾನಿತಾ]

ನಾತು 'ನಾತ' ನೋ.

ನಾತೆ (ನಾ). ೧. ನಂಟುತನ, ಅಧಿಕಾರ ಮೊದಲಾದುವುಗಳಿಂದ ಉಂಟಾದ ಸಂಬಂಧ,-ಬಾಂಧವ್ಯ : ನಮ್ಮ ಉಪೇಂದ್ರನ ಮಗನೆಂಬ ನಾತೆಯಿಂದಾದರೂ ನಿಜವಾದ ಸಂಗತಿಯನ್ನು ಇವರಿಗೆ ತಿಳಿಸಬೇಡವೆ ? (ಮೂರುದಾ. ೧೪೮). ೨. ಕಾರಣ ; ನಿಮಿತ್ತ : ಗಜೇಂದ್ರಸಿಂಹನಿಗೆ, ಕಿಶೋರಿಗೆ ಗೊತ್ತುಮಾಡಿದ ಸಂಬಂಧವನ್ನು ಚಿಕ್ಕಪ್ಪ ಈ ನಾತೆಯಿಂದ ಒಪ್ಪಲಿ (ಜಮೀನ್ದಾ. ೧೪೬) ; ಅದು ತಮಗೆ ಹಿರಿಯರಿಂದ ಬಂದ ವಿಶ್ವಸ್ಥ ರೆಂಬ ನಾತೆಯಿಂದ ತಾವು ಶಿರೋಧಾರಣ ಮಾಡಿದ ಶ್ರೀಮಂತರ ಘನ ಪೇಶ್ವೆಯರ ಅಮೂಲ್ಯ ದತ್ತಿ (ದೀಪಹ. I, ೧೬) ; ತಾವು ದೇವಸ್ಥಾನದ 'ಅರ್ಚಕ' ಎಂಬ 'ನಾತೆ'ಯಿಂದ ಮೇಲಿನವರಿಗೆ ಅರ್ಜೀ ಮಾಡುವ ಪ್ರಸಂಗ ಬರಬಹುದೆಂದೂ ಅವರಿಗೆ ತಿಳಿಸಿದರು (ಗಂಗಾಸಾ. ೧೧೪).

[←ಮರಾ. ನಾತೇ ; ಹಿಂ. ನಾತಾ]

ನಾಥ (ನಾ). ೧. ಒಡೆಯ ; ರಕ್ಷಕ ; ಪಾಲಕ ; ರಾಜ ; ಪ್ರಭು : "ಪ್ರಭು ಪರಿವೃಢನೀಶಂ ಸ್ವಾಮಿ ಭರ್ತೃ ಪತಿ ನಾಥನಧಿವನೀಶ್ವರನಿಂದ್ರಂ" (ಪಸ್ತುಕೋ. ೯೯-೯) ; "ನಾಯಕಂ ನಾಥನಿಂದ್ರಂ . . . ವಲ್ಲಭನೆನಲು ನೇತೃವೆನಲೊಡೆಯಂಗೆ ನಾಮಮಕ್ಕುಂ" (ಮಂಗರಾ. ೬೭-೬) ; ನಾಥರಿಲ್ಲದ ಶಿಶುಗಳಿಗೆ ನೀ ನಾಥನೈ ಗೋವಿಂದ (ಕುವ್ಯಾಸ. ೦೪-೦೨೧) ; ಯಾರೆ ಬಂದವರು ಮನೆಗೆ . . . ನಾರಾಯಣ ಕೃಷ್ಣ ನಾಥನಲ್ಲದೆ ಬೇಱೆ (ಪುರಂದ. ೩-೫೬ ಅನುಪಲ್ಲವಿ) ; ನಾಥನಾದರೂ ಭೂತ ಬಿಡದು (ಗಾದೆ). ೨. ಗಂಡ ; ಪತಿ : ಇರದೆ ಹೋಹರೆ ನನ್ನ ಬಿಟ್ಟೆಲೆ ನಾಥ ನೀನೀಗಾ (ತಿಮ್ಮಶಾಂ. ೫-೭೨) ; ನಾಥ ! ತಿಳಿದವನಾಗಿ, ಸಾಮಾನ್ಯಮನುಷ್ಯನಂತೆ, ಹೀಗೆ ಸಂತಪಿಸಬಹುದೆ (ವಚಭಾ. ೪೨) ; ನಾಥನಿಲ್ಲದ ತರುಣಿಯಾಂ . . . ಮಡಿದನೆನ್ನಾಣ್ಮನೆನ್ನಣ್ಣನಿಂ ತನ್ನ ಕಿರುವರೆಯದೊಳ್ (ಶ್ರೀರಾಮಾ. ೨೦೭-೩). ೩. ಅಂಕಿತನಾಮಗಳ ಕೊನೆಯಲ್ಲಿ ಸೇರುವ ಪದ. [ಸಂ.]

ನಾಥತ್ವ (ನಾ). ೧. ಒಡೆತನ ; ಪ್ರಭುತ್ವ ; ಯಜಮಾನಿಕೆ. ೨. [ಜೈನ] ಪಾರಿವ್ರಾಜಕ ಲಕ್ಷಣಗಳನ್ನು ತಿಳಿಸುವ ಇಪ್ಪತ್ತೇಳು ಸೂತ್ರಪದಗಳಲ್ಲಿ ಒಂದು ; P ಪಾರಿವ್ರಾಜ್ಯ ಲಕ್ಷಣಗಳು ಇಪ್ಪತ್ತೇಳು. ಅವು ಯಾವುವೆಂದರೆ ಜಾತಿ, ಮೂರ್ತಿ, ಲಕ್ಷಣ, ಸೌಂದರ್ಯ, ಪ್ರಭೆ, ಮಂಡಲ, ಚಕ್ರ, ಅಭಿಷೇಕ, ನಾಥತ್ವ, ಸಿಂಹಾಸನ, ಉಪಾದಾನ, ಛತ್ರ, ಚಾಮರ, ಘೋಷಣೆ, ಅಶೋಕವೃಕ್ಷ, ನಿಧಿ, ಗೃಹಶೋಭೆ, ಅವಗಾಹನ, ಕ್ಷೇತ್ರ, ಆಜ್ಞೆ, ಸಭೆ, ಕೀರ್ತಿ, ವಂದ್ಯತೆ, ವಾಹನ, ಭಾಷೆ, ಆಹಾರ ಮತ್ತು ಸುಖ. ಇಹಲೋಕದಲ್ಲಿ ಇವುಗಳನ್ನು ಸಂನ್ಯಾಸದಿಂದ ತ್ಯಾಗಮಾಡಿ, ಜಿನೋಪಾಸನೆ ಮಾಡಿದರೆ ಇವುಗಳೆಲ್ಲ ಪರಲೋಕದಲ್ಲಿ ಜೀವನಿಗೆ ದೊರಕುವುವು ಎಂಬ ನಂಬಿಕೆಯಿದೆ : ನಾಥತ್ವಮೆಂಬುದು ಜಗತ್ರಿತಯನಾಥನನುಪಾಸ್ತಿಗೆಯ್ದೈಹಿಕ(ಗೆಯಿದೈಕಸ್ವಾ) ಸಾಮ್ಯಮಂ ಪತ್ತುವಿಟ್ಟು ತಪದೊಳೆಸಗಿದೊಡೆ ದಿವ್ಯವಿಜಯಪರಮಸ್ವಾಮಿತ್ವಮಂ ಪಡೆಗುಂ (ಜಾಪುಂಪು. ೨೨೯). [ಸಂ.]

ನಾಥದೀಕ್ಷೆ (ನಾ). ಮಹಾರಾಷ್ಟ್ರದಲ್ಲಿ ಪ್ರಚಾರದಲ್ಲಿರುವ ನಾಥಸಂಪ್ರದಾಯದ ಆನುಯಾಯಿಗಳು ತಾಳುವ ದೀಕ್ಷೆ : ಜ್ಞಾನದೇವನ ಮನೆತನದಲ್ಲಿ ವಿಠ್ಠಲಭಕ್ತಿಯೂ ನಾಥದೀಕ್ಷೆಯೂ ಮೊದಲೇ ಹುರಿಗೊಂಡು ಬಂದಿದ್ದವು (ಮಸಾಹಿ. ೦೩). [ನಾಥ + ದೀಕ್ಷೆ]

ನಾಥವತಿ (ನಾ). ಒಡೆಯನನ್ನುಳ್ಳವಳು : ನೀನಾದೊಡಂ ಕಾಯಮ್ಮ ನಾಥವತಿಯಾದೀ ಅನಾಥೆಯಂ (ಶ್ರೀರಾಮಾ. ೫೦೨-೫೮).

[ಸಂ. ನಾಥವತೀ]

ನಾಥಸಂಪ್ರದಾಯ (ನಾ). ಮಹಾರಾಷ್ಟ್ರದಲ್ಲಿ ಪ್ರಚಾರದಲ್ಲಿರುವ ಒಂದು ಧಾರ್ಮಿಕ ಸಂಪ್ರದಾಯ ; P ಆದಿನಾಥರೆಂಬುವರಿಂದ ಪ್ರಾರಂಭವಾದ ಗೋಸಾಯಿಗಳ ಈ ಸಂಪ್ರದಾಯವನ್ನು ಮತ್ಸ್ಯೇಂದ್ರ ಮೊದಲಾದ ಒಂಬತ್ತು ಜನ ಬೆಳೆಸಿದ್ದಾರೆ. ಪ್ರಸಿದ್ಧ ಮರಾಟಿ ಗ್ರಂಥಕಾರನಾದ ಜ್ಞಾನದೇವನು ಈ ಪಂಥಕ್ಕೆ ಸೇರಿದವನು : ನಾಥಸಂಪ್ರದಾಯವು ಮಹಾರಾಷ್ಟ್ರದ ಮಥನವನ್ನು ನಡೆಸಿಯೇ ಇತ್ತು (ಮಸಾಹಿ. ೦೧). [ನಾಥ + ಸಂಪ್ರದಾಯ]

ನಾದ$_1$ (ನಾ). ೧. ಧ್ವನಿ ; ಶಬ್ದ ; ಸಪ್ಪಳ ; ಕೂಗು : "ಹ್ರಾದಃ, ನಾದಃ . . . ಘೋಷಃ – ಈ ರ ಧ್ವನಿ" (ಹಲಾಯು. ೨೩-೧೩೭) ; "ನಾದಂ ಸ್ವರಂ ಘೋಷಂ. . .ಆ ಧ್ವನಿಯೆನಿಕ್ಕುಂ" (ಮಂಗರಾ. ೯-೩೦) ; ಪ್ರಳಯಪಯೋಧಿ ನಾದಮನೆ ಪೋಲ್ತು ರಣಾನಕರಾವಮಿಗಳಗ್ಗಳಮೆಸೆದಪ್ಪುದು (ಪಂಪಭಾ. ೧೧-೧೧) ; ಕಹಳೆ ಮರ್ದಳೆ ಶಂಖ ಪಟಹ ನಾದಂಗಳೊಳು. . . ನಡೆತಂದು (ನಂಬಿರ. ೯-೭೭) ; ಕರ್ಬುರನಾದಂ ವೃತ್ತಕಾರಂ ಕುಸುಮಧವಳಮಂ ತೋಱೆ ಫೇನಂ ಕರಂ ಭೀಕರಮಾಗಲೊಪ್ಪುಗುಂ ಕಾನನದೊಳಿಭಸಮಾನಂ ಲುಲಾಯಪ್ರತಾನಂ (ಪುಲ್ಲಕಾ. ೩-೧೭೯) ; ತಾಮ್ರದ ಬಣ್ಣವು ನಸುಗೆಂಪು ಇರುತ್ತದೆ. ಆದಕ್ಕೆ ನಾದ ಬಹಳ(ಮುಂಡಯಿ. ೪-೧೩೬). ೨. ಒಂದು ನರಕದ ಹೆಸರು : ನಾದ ಪ್ರವಾಹ ಸುಪ್ರವಾಹ ರೂಕ್ಷ ಮೇಷವೆಂಬೈದು ಮಂತ್ರಿನರಕಂಗಳ ಮಧ್ಯದಲ್ಲಿ ಚಂಡವೆಂಬರಸುನರಕವಿಹುದು (ವಿವೇಕ. ೧೮೦). ೩. (ಆಲಂ) ಚಟ ; ಹವ್ಯಾಸ ; ಆಸಕ್ತಿ : ರಾಯರಿಗೆ ನಾಟಕದ ನಾದ ಬಹಳ (ದಾಸಹು. ೧೦) ; ಡೋಂಬರಿಗೆ ಕವಿತೆ ಹರಿದುಹಾಕುವುದೊಂದು ನಾದವೇ ಇತ್ತು (ಸ್ಮೃತಿಚಿ. ೩೭೬); ನಿನ್ನ ಗೆಳೆಯನ ತಂಗಿಯ ನಾದ ಬಿಟ್ಟಿರುವೆಯೋ ಇಲ್ಲವೋ (ಮುಕ್ತಿ. ೧೯೦) ; ನಾದವಿಲ್ಲದವನು ಓದಿದರೂ ಬಾರದು (ಗಾದೆ). ೪. [ಸಂಗೀತ] ನಿಯಮಿತ ತರಂಗಗಳನ್ನುಳ್ಳ ಧ್ವನಿ : ಮಹಾವೈದ್ಯನಾಥಅಯ್ಯರ್ ಅವರ ಶಾರೀರವು ಧ್ವನಿಸಂಪತ್ತಿನಿಂದ ಕೂಡಿತ್ತು. ಅದರ ನಾದದಲ್ಲಿಯೇ ಒಂದು ಮೋಹಕತೆ ಇತ್ತು (ಸಂಗೀತ. ೩) ; ಸಾಂಗತ್ಯವು ಹಾಡುವ ಮಟ್ಟು, ಅದರಲ್ಲಿ ಬರುವ ಅಂಶಗಣಗಳು ಆದಕ್ಕೆ ನಾದವನ್ನು ತುಂಬಿ, ಅದರ ಗೇಯಗುಣವನ್ನು ಹೆಚ್ಚಿಸುತ್ತವೆ (ಇಂಬಾಪ. III ಅರಿಕೆ) ; ಸಂಗೀತದ ಆಧಾರಸ್ತಂಭಗಳು ನಾದ ಮತ್ತು ಲಯ (ಭಾರದ. ೫೩೫). ೫. [ತತ್ತ್ವಶಾ] ಬ್ರಹ್ಮಸ್ವರೂಪವೆನಿಸಿರುವ ಧ್ವನಿವಿಶೇಷ : ಮೂಱು ತೆಱನಾಗಿ ಕಳೆ ನಾದ ವರಬಿಂದುವೆಂದು ಭೇದಿಸಿದಾದಿದೇಶಿಕನ ಚರಣಾಂಬುಜಕ್ಕೆ ಶರಣು (ಲಶಿಚಿಂ. ೫೦-೧೯); ತನು ನಾದಂ ಗುರು ಲಿಂಗಂ ಮನಮುಂ ವರಬಿಂದು . . . ಜಂಗಮ ಲಿಂಗಂ ಘನಕಳ ಸುಜ್ಞಾನಮಾಗಿ ಮೆಱೆದಂ ನಿಜದಿಂ (ಹಮ್ಮೀರ. ೫-೩೪) ; ನಾದ ಬಿಂದು ಕಳಾದಿಯಾಗಿಯೆ ವೇದಸಮ್ಮತವಾ ಚಿದ್ರೂಪಾದ ನಿಜಪರಮಾತ್ಮ ತತ್ವಹಕಾರವೆನಿಸುವುದು (ಗಗಶಾ. ೬-೧೧). 'ಬಿಂದು' ಪರಾ. ೬. [ವೀಶೈ] ನಾದ, ಬಿಂದು ಮತ್ತು ಕಳೆಗಳೆಂಬ ಮೂರು ಅವಸ್ಥೆಗಳಲ್ಲಿ ಒಂದು : ಮೊದಲನಿರ್ವಾಚ್ಯಮೆಂಬುದೆ ಕಣಾ ಚಿದ್ಬ್ರಹ್ಮವು . . . ಇದಱಿಂದಾದುದದಿರದಿರನೊಳ್ನಾದ ಹುದುಕದುವೆಶಿವಶಕ್ತಿಮಯವೆಂದಱಿ (ಮನೋವಿ. ೨-೦೮) ; ಇದರಿಂದ . . . ನಾದಪದದಿಂದ ಹೇಳಲ್ಪಡುವ ಪರಿಣಾಮವು, ಶಕ್ತಿತತ್ತ್ವವು ಉದಯಿಸುವುದು (ಹಿಂದಸಾ. ೨೯೮). [ಸಂ.]

ನಾದ$_2$ (ನಾ). ಒಂದು ಬಗೆಯ ವನಸ್ಪತಿ ; ಉಲಿಗ : "ಉಲಿಗನುಂ ನಾದವಕ್ಕುಂ" (ಮಂಗರಾ. ೩೬-೧೮) ; "ಅಂತರ್ಮಹಾ – ನಾದ" (ಓಷಧಿ. ೯).

[?]

ನಾದ$_3$ 'ನಾನ್$_1$' ಪರಾ.

ನಾದಕಟ್ಟು (ನಾ). ಸರಿಯಾದ ಧ್ವನಿಯನ್ನುಂಟುಮಾಡುವಿಕೆ : ಪ್ರಸೇವಕ–ನಾದಕಟ್ಟಿನ ಸಲುವಾಗಿ ವೀಣೆಯ ಕೆಳಗೆ ಇರುವ ಕುಂಬಳಕಾಯಿ (ಗಂಗಾಮ. ೨೨೩). [ನಾದ$_1$ + ಕಟ್ಟು$_2$]

ನಾದಗೈ (ಕ್ರಿ). ಶಬ್ದಮಾಡು ; ಧ್ವನಿಮಾಡು : ಕಿವಿ ಚಿಟ್ಟಾಗುವಂತೆ ನಾದಗೈಯುತ್ತಿದ್ದ ಹಕ್ಕಿಯ ಸಿಳ್ಳೆಯನ್ನೂ ಕೇಳಿಸಿಕೊಳ್ಳುತ್ತ ಅವನಲ್ಲಿಯೆ ಬಹಳ ಹೊತ್ತಿನ ತನಕ ಕಂಳಿತಿದ್ದನು (ಪುನರು. ೨೯೭).

[ನಾದ$_1$ + ಕೈ$_1$ (<ಕೆಯ್$_1$)]

ನಾದಚಕ್ರ (ನಾ). [ವೀಶೈ] ಚಕ್ರವು ರಥವನ್ನು ನಡೆಸುವಂತೆ ಪ್ರಾಪಂಚಿಕ ವ್ಯವಹಾರಕ್ಕೆ ಕಾರಣವಾದ ಶಿವಶಕ್ತಿ : ಕಾಲಚಕ್ರ ಕರ್ಮಚಕ್ರ ನಾದಚಕ್ರ ಬಿಂದುಚಕ್ರದೊಳಗೆ ಹುಟ್ಟದ ಯೋನಿಯಿಲ್ಲ ಮುಟ್ಟದ ನೆಲನಿಲ್ಲ ಉಣ್ಣದ ಆಹಾರವಿಲ್ಲ (ಚನ್ನವ. ಕ. ೫೩೪-೧೦೫೩). [ನಾದ$_1$ + ಚಕ್ರ$_1$]

ನಾದತ್ರಯ (ನಾ). [ವೇದಾಂತ] ಓಂಕಾರದಲ್ಲಿರುವ ಮೂರು ಧ್ವನಿಗಳು ; ಅ,ಉ,ಮ್ ಎಂಬ ಧ್ವನಿವಿಶೇಷ : ಮೂರು ಗುಣಗಳೆ ಹುಟ್ಟಿದವು ಆ ಚಾರು ಓಂಕಾರ ನಾದತ್ರಯದಲಿ ಮೂರು ಮೂರೊಳಗಾಗ ಬೆರಸುತ ನವವಿಧಗಳಾಗಿ . . . ಜಗವಾ ತೋರ್ಪುದು (ಜ್ಞಾನಸಿಂ. ೩೦-೩).

[ನಾದ$_1$ + ತ್ರಯ]

ನಾದದಂಡ (ನಾ). ನಾದವನ್ನುಂಟುಮಾಡಲು ಭೇರಿ, ತಮಟೆ ಮೊದಲಾದ ವಾದ್ಯಗಳನ್ನು ಬಾರಿಸುವ ಕೋಲು, – ದಂಡ: ದೊಡ್ಡಿಶ್ತಾದೊಂದು ನಿಸ್ಸಾಳಕ್ಕೆ ಬೆರಳಿನಲ್ಲಿ ಅಡಗಿದ ಕಟ್ಟಿಗೆ ಎಂಬ ನಾದದಂಡದಿಂದ ಅಬ್ಬರ ಹುಟ್ಟುವ ಹಾಗೆ (ಮೋಳಮಾ. ೧೦೯-೪೩ ಅರ್ಥ). [ನಾದ$_1$ + ದಂಡ]

ನಾದಧ್ವನಿ (ನಾ). ಕಾವ್ಯದಲ್ಲಿ ಪ್ರಯೋಗಗೊಂಡ ಶಬ್ದಗಳಿಂದ ಹೊರ ಹೊಮ್ಮುವ ವಿಶೇಷಾರ್ಥ: ಲಕ್ಷ್ಮೀಶನ ನಾದಧ್ವನಿಯು ಅರ್ಥಿಗೆ ಮುಟ್ಟಿಸುವುದು (ಸಾಹಿವಿ. ೩೪). [ನಾದ$_1$ + ಧ್ವನಿ]

ನಾದನಾಮಕ್ರಿಯೆ (ನಾ). [ಸಂಗೀತ] ಒಂದು ರಾಗದ ಹೆಸರು: ಪಲ್ಲವಿ ಶೇಷಯ್ಯಂಗಾರ್ ಅವರು ನಾದನಾಮಕ್ರಿಯಾ, ಭೈರವಿ . . . ಷಣ್ಮುಖಪ್ರಿಯ ರಾಗಗಳಲ್ಲಿ ರಚಿಸಿರುವ ಕೃತಿಗಳು . . . ಧ್ವನಿಪೂರ್ಣವಾಗಿವೆ (ಸಂಗೀತ. ೪೮). [ಸಂ. ನಾದನಾಮಕ್ರಿಯಾ]

ನಾದಪುಂಜ (ನಾ). [ಸಂಗೀತ] ಇಂಪಾದ ಧ್ವನಿ ಸಮುದಾಯ: ಅವರ ಒಂದು ಸಲದ ಬೃಗಗಳ ಸ್ವರಗಳನ್ನು ಇನ್ನೂ ಅರ್ಥಮಾಡಿಕೊಳ್ಳುವುದರಲ್ಲಿಯೇ ಇನ್ನೂ ಹಲವಾರು ನಾದಪುಂಜಗಳನ್ನು ಸೃಜಿಸಿಕೊಂಡು ಹಾಡಿಬಿಡುತ್ತಿದ್ದರು (ಸಂಗೀತ. ೪). [ನಾದ$_1$ + ಪುಂಜ$_4$]

ನಾದಪೂರ್ಣ (ಗು). ಇಂಪಾದ ಧ್ವನಿಯಿಂದ ತುಂಬಿರುವ; ವಿಶೇಷ ರೀತಿಯ ಸ್ವರದಿಂದ ಯುಕ್ತವಾದ: ಅವರ ಶಾರೀರದ ನಾದಪೂರ್ಣ ಮೋಹಕತೆ ಮತ್ತು ೬ ಕಾಲಗಳಲ್ಲಿಯೂ ಅವರಿಗೆ ಹಾಡಲಿದ್ದ ಸಾಮರ್ಥ್ಯ ಇವುಗಳಿಂದ ಎಲ್ಲರೂ ಅವರ ಈ ಸಂಗೀತಕ್ಕೆ ಮಾರುಹೋಗಿದ್ದರು (ಸಂಗೀತ. ೩). [ನಾದ$_1$ + ಪೂರ್ಣ]

ನಾದಪ್ರಪಂಚ (ನಾ). ಶಬ್ದರೂಪವಾದ ಜಗತ್ತು: ಜಗತ್ತು ರೂಪ ಪ್ರಪಂಚವಾಗಿದ್ದಂತೆ ನಾದಪ್ರಪಂಚವೂ ಆಗಿದೆ (ಧಂಡೋವಿ. ೧). [ನಾದ$_1$ + ಪ್ರಪಂಚ]

ನಾದಪ್ರಿಯ (ನಾ). ಸಂಗೀತದಲ್ಲಿ ಪ್ರೀತಿಯುಳ್ಳವನು: ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲಯ್ಯ (ಬಸವ. ೧೪೦); ವೇದಪ್ರಿಯನಲ್ಲ ಎನ್ನದೇವ ಶಾಸ್ತ್ರಪ್ರಿಯ ನಾದಪ್ರಿಯ ಸ್ತೋತ್ರಪ್ರಿಯನಲ್ಲ (ಸಿದ್ಧಪು. ೩೩-೬೭). [ನಾದ$_1$ + ಪ್ರಿಯ]

ನಾದಬ್ರಹ್ಮ (ನಾ). ಸಂಗೀತಸ್ವರೂಪನಾದ ಪರಬ್ರಹ್ಮ: ಆಗ ಅಲ್ಲಿದ್ದ ಸಮಸ್ತ ಭಕ್ತರ ಹೃದಯಗಳೂ ಆ ಮಧುರಲಯದಲ್ಲಿ ಮಧುರ ನಾದಬ್ರಹ್ಮದಲ್ಲಿ ಐಕ್ಯವಾದವು (ಶಾಂಕರಾ. ೧೩೧); ನಾದಬ್ರಹ್ಮನಲ್ಲಿ ಅಪರೂಪಭಕ್ತಿಯುಳ್ಳ ಇವರು ಕಲೆಯಲ್ಲಿ ಅತ್ಯುತ್ಕೃಷ್ಟವಾದುದನ್ನು . . . ಅಭ್ಯಾಸಮಾಡುತ್ತಿದ್ದರು (ಸಂಗೀತ. ೯೯). [ನಾದ$_1$ + ಬ್ರಹ್ಮ]

ನಾದಭರಿತ (ಗು). ರಾಗದಿಂದ ತುಂಬಿದ, –ಪೂರ್ಣವಾದ: ಸಂಗೀತದ ಕಚೇರಿಯ ಸಭಾಂಗಣಕ್ಕೆ ಹೋಗುವ ಮೊದಲು ಹೊರಗೆ ನಾದಭರಿತವಾದ ದನಿಯಲ್ಲಿ 'ರಾವಂಸ್ವಾಮಿ' ಎಂದು ಸಣ್ಣದಾಗಿ ಅಣ್ಣನನ್ನು ಕರೆಯುತ್ತಿದ್ದರು (ಸಂಗೀತ. ೨೩). [ನಾದ$_1$ + ಭರಿತ]

ನಾದಮಯಿ (ನಾ). ಶಬ್ದಸ್ವರೂಪಳು; ಸರಸ್ವತಿ: ನಾದಮಯಿ ಗಜಲಕ್ಷ್ಮಿ ಸತ್ವಗುಣಾಧಿದೇವತೆ . . . ಶಾರದೆಯೆ (ಕುಪ್ಪಾಅ. ೧-೬). [< ಸಂ. ನಾದಮಯಿ]

ನಾದಮಾಧುರ್ಯ (ನಾ). ದನಿಯ ಸವಿ, –ಇಂಪು: ಭಾವಸೌಂದರ್ಯವನ್ನು ಕವಿಗಳು ನಾದಲಯ ಹಾಗೂ ನಾದಮಾಧುರ್ಯಗಳಿಂದ ಹೇಗೆ ಪ್ರದರ್ಶಿಸುವರೆಂಬುದರ ಕಡೆಗೆ . . . ವಿವೇಚನೆ ಮಾಡಿದ್ದೇನೆ (ಧಂಡೋವಿ. ೧೪ ಬೀಠಿಕೆ). [ನಾದ$_1$ + ಮಾಧುರ್ಯ]

ನಾದಮೂರ್ತಿ (ನಾ). ಪ್ರಣವಸ್ವರೂಪ; ಓಂಕಾರರೂಪ; ಪರಮಾತ್ಮ; ಪರಮೇಶ್ವರ: ನಾದಮೂರ್ತಿಗೆ . . . ಶಂಕರಂಗೆ ನಂದೀಶಾದಿಗಣನಾಯಕರ್ ಸಿಂಗರಮಂ ಮಾಡಿ (ಗಿರಿಕ. ೧೦-೬೦ ವ); ನಾದಮೂರ್ತಿಯೆ ಚಿತ್ತವಿಸು (ಬಸಪು. ೩-೪). [ನಾದ$_1$ + ಮೂರ್ತಿ]

ನಾದರಾಮಕ್ರಿಯೆ (ನಾ). [ಸಂಗೀತ] ಒಂದೂ ರಾಗದ ಹೆಸರು: ಬಳಿಕಿವುಗಳಲ್ಲಿ ವಸಂತಭೈರವಿ ಶಾಂತಬಲಹರಿ ನಾದರಾಮಕ್ರಿಯೆಯೆಂಬ ಮೂಱಾಂ ರಾಮಕ್ರಿಯೆಯ ವಿಶ್ರರಾಗಂಗಳು (ವಿವೇಕ. ೩೫೧); ನಾದರಾಮಕ್ರಿಯಾ . . . ಸಾಯಂಕಾಲದಲ್ಲಿ ಹಾಡುವಂತಹದು (ಚತುಪ್ರ. ೧೩೪). [ಸಂ. ನಾದರಾಮಕ್ರಿಯಾ]

ನಾದಲಯ (ನಾ). ತಾಳದ ಅಂತರದಲ್ಲಿ ಹೊಮ್ಮುವ ನಾದವಿಶೇಷದ ಪರಿಣಾಮ: ಹಾರ್ಮೊನಿಯನ್ನು ಹಾಡುವಾಗ . . . ನಿಯತವಾಗುವ ಕಾಲದ ಅಂತರವಿರುವುದಷ್ಟೆ. ಆ ಅಂತರದಲ್ಲಿ ಹೊರಹೊಮ್ಮುವ ನಾದವಿಶೇಷದ ಪರಿಣಾಮವನ್ನು 'ನಾದಲಯ'ವೆನ್ನಬಹುದು (ಸಂಶೋಧ. ೧೫೩); ಭಾವ ಸೌಂದರ್ಯವನ್ನು ಕವಿಗಳು ನಾದಲಯ ಹಾಗೂ ನಾದಮಾಧುರ್ಯಗಳಿಂದ ಹೇಗೆ ಪ್ರದರ್ಶಿಸುವರೆಂಬುದರ ಕಡೆಗೆ . . . ವಿವೇಚನೆ ಮಾಡಿದ್ದೇನೆ (ಧಂಡೋವಿ. ೧೪, ಬೀಠಿಕೆ). [ನಾದ$_1$ + ಲಯ]

ನಾದವತಿ (ನಾ). [ಸಂಗೀತ] ನಿಷಾದದ ಮೊದಲನೆಯ ಶ್ರುತಿ: ನಾದವತಿ ಭದ್ರವತಿ . . . ಭೋಗವತಿಯೆಂಬೈದು ತೆಱದಿಂದಿಂಪುಗೊಳಿಸುವ ಪದಪದ್ಧತಿಯ ಕ್ರಮದ . . . ಗಾಯಕರಿಂ (ವಿವೇಕ. ೩೩೬); ಘಂಟಾರಾಗಂ ನಾದವತಿಯಾಗಿರ್ದಪುದು (ಹಮ್ಮೀರ. ೩-೯೦ ವ). [ಸಂ. ನಾದವತೀ]

ನಾದವಟಿ (ನಾ). ಅಧಿಕವಾದ ಧ್ವನಿಯನ್ನು ಹೊರಡಿಸುವ ತಮಟೆ, –ಹರೆ: ಸಟ್ಟಿಯ ಪೋಗಿನೊಳಿಂಬಾದುದೆಂದು ತನ್ನ ಪುಣ್ಯಕ್ಕೆ ತಾನೇ ನಾದವಟಿಯಂತೆ ಪೊಂಗಿ (ಧರ್ಮಾಮೃ. ೬-೬೮) [ನಾದ$_1$ + ಪಟಿ$_1$]

ನಾದವೇತ್ತ (ನಾ). ನಾದವನ್ನು ತಿಳಿದುಕೊಂಡಿರುವವನು; ಶಬ್ದಗಳಿಂದ ಹೊರಡುವ ಧ್ವನಿವಿಶೇಷವನ್ನು ಅರಿತವನು: ವರ್ಣಗಳಲ್ಲಿ ಸ್ವರ ಸಮೂಹವು ಭಾವಸೂಚಕವಾಗುವಂತೆ ನಾದವೇತ್ತನಾದ ಕವಿ ಗವುಕಿಯ ಕೈಯಲ್ಲಿ ವ್ಯಂಜನಗಳು ಅರ್ಥಸೂಚಕವಾಗುವವು (ಸಾಹಿಸಂ. ೭೮). [ಸಂ. ನಾದವೇತ್ತೃ]

ನಾದವೇದಿ (ನಾ). = ನಾದವೇತ್ತ: ಅಂತಹರಿಂದಲೇ ನಾದವೇದಿ ಲಕ್ಷ್ಮೀಶನ ನಾದಭಾವ್ಯವು ಉಸುರಲಾಗಬೇಕು (ಸಾಹಿಸಂ. ೭೩). [ಸಂ. ನಾದವೇದಿನ್]

ನಾದಶುದ್ಧಿ (ನಾ). ಸ್ವರದ ಪರಿಶುದ್ಧತೆ; ಸ್ವರವು ದೋಷರಹಿತವಾಗಿರುವಿಕೆ: ಅದರ ಅಂಚಿನಲ್ಲಿ ಒಂದೆಡೆಗೆ ಹೋದರೂ . . . ನಾದಶುದ್ಧಿಯು ಹೋಗಿಬಿಡುವುದು (ಸಂಗೀತ. ೧೦೨). [ನಾದ$_1$+ಶುದ್ಧಿ]

ನಾದಸಂಪುಟ (ನಾ). ಗ್ರಾಮಫೋನ್ ಎಂಬ ಧ್ವನಿಸಂಗ್ರಾಹಕ ಯಂತ್ರದ ಒಂದಂ ಭಾಗ; ದನಿಪೆಟ್ಟಿಗೆ: ಈ ಸೂಜಿಯನ್ನು ನಾದಸಂಪುಟವೆಂಬ ಭಾಗದಲ್ಲಿರುವ ಸನ್ನೆಯ ಕೆಳತುದಿಗೆ ಒಂದು ತಿರುಗಣಿಯಿಂದ ಜೋಡಿಸಿರುತ್ತಾರೆ (ವಿಜ್ಞಾವಿ. ೪). [ನಾದ$_1$ + ಸಂಪುಟ]

ನಾದಸ್ತಂಭ (ನಾ). ಕೆಲವು ವಾದ್ಯಗಳ ಮುಂಭಾಗಕ್ಕೂ ಹಿಂಭಾಗಕ್ಕೂ ಮಧ್ಯೆ ಇರುವ ಆನಿಕೆ: "(ಕೆಲವು ವಾದ್ಯಗಳಲ್ಲಿ) ಹೊಟ್ಟೆಯಲ್ಲಿಯ ರಂಧ್ರ, ಹೊಟ್ಟೆಗೂ ಬೆನ್ನಿಗೂ ಮಧ್ಯೆ ಇರುವ ಆನಿಕೆ: ನಾದರಂಧ್ರ, ನಾದಸ್ತಂಭ" (Sound-post. ಇಂಕನ); ಕುದುರೆಯ ಬಲಗಾಲಿನ ಹಿಂಭಾಗದ ಅಂಚಿಗೆ ಸಮವಾಗಿ, ಪೆಟ್ಟಿಗೆಯೊಳಗೆ, ಎದೆಹಲಗೆ ಮತ್ತು ಬೆನ್ನುಹಲಗೆಗಳಿಗೆ ಹಗುರವಾಗಿ ತಗಲುವಂತೆ ಮರದ ದುಂಡುತುಂಡು ನಿಲ್ಲಿಸಲ್ಪಟ್ಟಿದೆ. ಈ ತುಂಡು, ನಾದವನ್ನು ಬೆನ್ನುಹಲಗೆಗೆ ಒಯ್ದು, ನಾದಸ್ತಂಭ(Sound-post) ವೆಂದು ಕರೆಯಲ್ಪಟ್ಟಿದೆ (ಸಂಗೀಪಂ. ೧೧೩). [ನಾದ$_1$ + ಸ್ತಂಭ]

ನಾದಸ್ವರ (ನಾ). ಒಂದು ಬಗೆಯ ವಾದ್ಯ; ಓಲಗ: ಶೇಷನು ನಾದಸ್ವರ ಕೈಯಲ್ಲಿ ಹಿಡಿದು ಅದರ ವಾದನಾಯೋಗಕ್ಕೆ ನಿಲ್ಲುತ್ತಿದ್ದ (ಕಂಬಹು. ೧೦೨). [ನಾದ$_1$ + ಸ್ವರ]

ನಾದಾತ್ಮಕ (ನಾ). ಶಬ್ದದಿಂದ ಕೂಡಿದುದು ; ಶಬ್ದಮಯವಾದುದು: ಸಂಗೀತವು ಯಾವುದರಲ್ಲುಂಟು, ಯಾವುದರಲ್ಲಿಲ್ಲ ? ಸರ್ವವೂ ನಾದಾತ್ಮಕವೆಂದು ಹೇಳುತ್ತಾರೆ (ಭಾರದ. ೫೩೫). [ಸಂ.]

ನಾದಾನ (ನಾ). ತಿಳಿವಳಿಕೆ ಇಲ್ಲದವನು ; ಅಜ್ಞಾನಿ ; ದಡ್ಡ ; ಪೆದ್ದ : ನಾದಾನನ ಆದ ಮ್ಯಾಲೆ ಬ್ಯಾರೆ ಯಾಕ ವಾದ ಬೇಕು (ಅರಳು. ೨೭೪-೪).

[←ಪಾರ. ಹಿಂ. ಮರಾ. ನಾದಾನ್]

ನಾದಾನುಸಂಧಾನ (ನಾ). [ಯೋಗ] ಓಂಕಾರದ ಘೋಷದ ಮನನ ; ಆನಂದಾನುಭವ : ನಮ್ಮ ಭರತಖಂಡದ ಅನುಭವಿಗಳು ಮಾತ್ರವಲ್ಲದೆ ಪಶ್ಚಿಮದೇಶದ ಅನುಭವಿಗಳೂ ಕೂಡ ಈ ನಾದಾನುಸಂಧಾನದ ವಿಷಯದಲ್ಲಿ ಸಿದ್ಧಿಗಳನ್ನು ಪಡೆದಿರುವರು (ಭಾರದ. ೧೫೫). [ನಾದ$_1$+ಅನುಸಂಧಾನ]

ನಾದಾರ್, ನಾದಾರ, ನಾದಾರಿ, ನಾದಾರು (ನಾ). ೧. ಬಡವ ; ಗರೀಬ ; ನಿರಾಧಾರಿ ; ನಿರ್ಧನ : ಪ್ರಾಕಿನ ಬಾಕೀದಾರ ನಾದಾರ್ ಬೇಯಿತಬಾರಿ ಜನಕ್ಕೆ ಸಹ ಯಿಜಾರೆ ಕೊಡ ಕೆಲಸವಿಲ್ಲ (ಮಹಾವಂ. II,೬೦) ; ಈ ಸಾರೆ ನನ್ನ ಹಂತ್ಯಾಕ ಅವಾ ಬರುವ ಮೊದಲೇ ನಾದಾರ್ ಆಗಿದಾವ್ (ಮೋಹಿನೀ. ೪೦). **ನಾದಾರ** : ೧. 'ನಾದಾರಚೀಟಿ' ಪರಾ. **ನಾದಾರಿ** : ೧. ನಾನು ಬರಿಗೈಯ ನಾದಾರಿ ಎಂದು ತಿಳಿಯಬೇಡ (ಕುಡಿಕೂ. ೧೯೦). ೨. ಬಡತನ : ಈಗಿನ ಈ ಭಾರತದಲ್ಲಿ ಸಿರಿವಂತರ ಮಕ್ಕಳು ಶಾಲೆಗಳಲ್ಲಿ ಪುಕ್ಕಟೆ ಶಿಕ್ಷಣಕ್ಕಾಗಿ ನಾದಾರಿ (ದಾರಿದ್ರ್ಯ) ಅರ್ಜಿ ಮಾಡುತ್ತಾರೆ (ಭಾರಸಂ. ೨೫೪). **ನಾದಾರು** : (ಗು). ೩. ದಾರಿದ್ರ್ಯವುಳ್ಳ ; ಬಡತನದಿಂದ ಕೂಡಿದ : ನಾದಾರು ಕುಳಕ್ಕೆ ತಕಾವಿ ಕೊಡುವುದು (ಮಹಾವಂ. II, ೫೮).

[←ಪಾರ. ನಾದಾರ್, ನಾದಾರೀ ; ಹಿಂ. ಮರಾ. ನಾದಾರ್. / ಸಂ. ಅನಾಧಾರ]

ನಾದಾರ 'ನಾದಾರ್' ನೋ.

ನಾದಾರಚೀಟಿ (ನಾ). ದಿವಾಳಿ ಎಂದು ಉಲ್ಲೇಖಿಸಿ ಅಧಿಕೃತ ನ್ಯಾಯಸ್ಥಾನದಿಂದ ಕೊಡುವ ದಾಖಲೆಪತ್ರ : ಭುವನಮೋಹನದಾಸರು . . . ಸಾಲ ತೀರಿಸಲಶಕ್ತರಾಗಿ ನಾದಾರಚೀಟಿಯನ್ನು ಪರಿಗ್ರಹಿಸಿದರು (ಹೊಸಹು. ೮೦). [ನಾದಾರ(<ನಾದಾರ್) + ಚೀಟಿ$_2$ (<ಚೀಟು$_2$)]

ನಾದಾರಿ 'ನಾದಾರ್' ನೋ.

ನಾದಾರು 'ನಾದಾರ್' ನೋ.

ನಾದಾರ್ಥ (ನಾ). ಶಬ್ದವನ್ನು ಗ್ರಹಣಮಾಡುವುದು : ಕಂಪಿತ್ತು ಅಲ್ಲಿ ಮೂಗಾಯ್ತು ಇಲ್ಲಿ, ನಾದಾರ್ಥವಾಯ್ತು ಕಿವಿಯು (ಮಸಾಹಿ. ೧೮).

[ನಾದ$_1$ + ಅರ್ಥ]

ನಾದಿಕೆ (ನಾ). ಹಸಿ ; ಆರ್ದ್ರತೆ ; ತೇವ : ಸೀದವಾ ಮಗ್ಗುಲಿನ ಮೈಯಲಿ ನೈದಿಲಿನ ತಾವರೆಯ ಕದಳಿಯ ನಾದಿಕೆಯ ನಾಳಂಗಳುರಿನೊರೆ ಗುದಿಯ ಸಬುದದಲಿ (ತೊರಕಾ. ೩-೦೦-೪೬).

[ನಾದು$_2$ (< ನಾಂದು$_1$) + – ಇಕೆ]

ನಾದಿಗ 'ನಾವಿದ' ನೋ.

ನಾದಿನಿ 'ನಾದುನಿ' ನೋ.

ನಾದಿತಿ (ನಾ). (?) : ಗೊರತಿಯ ಕಂತಿಯ ಕುಂಟಣಿಯರ ಮುಂಡೆಯ ಮಾಲೆಗಾರ್ತಿಯಸಗಿತಿ ಯೋಗೀಶ್ವರಿಯರ ಕಿಡಿಕೆಯ ನಾದಿತಿಯರ ಮುಂದಂ ನುಡಿಯಲೀಯಲಾಗದು ವಧ್ಯುವಂ (ಮದತಿ. ೮-೨೬).

[ℙ ಇದು 'ನಾಪಿತಿ' ಎಂಬುದರ ಅಪಲಿಖಿತವಿರಬಹುದೆ ?]

ನಾದಿಷ್ಟ (ನಾ). ಚಟಗಳಲ್ಲಿ ಆಸಕ್ತಿಯುಳ್ಳವನು ; ಸುಖಾಭಿಲಾಷಿ : ಅವನು ಸಭ್ಯಸ್ವಭಾವದವನನಾದಾಗ್ಯೂ ನಾದಿಷ್ಟನೂ ಸುಖಪುರುಷನೂ ಆಗಿದ್ದನು (ಉತ್ತಗ್ಯ. ೩೨). [< ಸಂ. ನಾದಿಷ್ಟ]

ನಾದಿಸು$_1$ 'ನಾಂದಿಸು' ನೋ.

ನಾದಿಸು$_2$ (ಕ್ರಿ). ೧. ಧ್ವನಿಯನ್ನುಂಟುಮಾಡು ; ಶಬ್ದಮಾಡು : ನಾದಿಪಂಚೆಗೆ ಸರೋರುಹಮಂ . . . ಕಾದಿ ಕೇಗುವ ನವಿಲ್ಗಹಿಪೋಲಿಂ ಬಾದುದಂ ಕುಡುಗೆ ನೆಯ್ದಿಲ ಕಾವಂ (ಲೀಲಾವ. ೧೧-೨೦) ; ಊದಿದವು ಕಹಳೆಗಳು ಶಂಖವು ನಾದಿಸಿತು (ನಳಚ. ೯-೧೨) ; ನಾದಿಪ ವಾದ್ಯವ ನಿಲಿಸಿ ತನ್ನಯ ಬಿರುದೋದುವ ಭಟ್ಟರ ಜಡಿದು . . . ಖಾನ ಮೌನದೀಕ್ಷೆಯ ಕೊಂಡು ಹಾದಿದೆಗೆದ (ಕಂನವಿ. ೧೫-೧೨೫) ; ನಾದಿಸುವ ಜಯಘಂಟೆ (ಹಮಚ. ೨೪೮). ೨. (ವಾದ್ಯವನ್ನು) ನುಡಿಸು,-ಬಾರಿಸು : ಸೊಗಸುವ ಸಪ್ತಸ್ವರಗಳನಱಿದಾ ಸುಗುಣ ವೀಣೆಯ ನಾದಿಸಿದ (ಜೀವಂಸಾಂ. ೧೦-೨೫). ೩. ಹೇಳು ; ನುಡಿ ; ಹೊರಹೊಮ್ಮಿಸು : ಕಲಿತ ನಾನಾವಿದ್ಯಾನಿಚಯವ ನಾದಿಸಿದರು ನಾರಿಯರು (ಮೋಹತ. ೨೪-೬). ೪. ಧ್ವನಿಯಿಂದ ವ್ಯಾಪಿಸುವಂತೆ ಮಾಡು ; ಶಬ್ದಮಯವನ್ನಾಗಿ ಮಾಡು : ವಿರಮಿಸುವ ಕಾಳವದು, ಶ್ಯಾಮನೆನೆ ಹೆಸರದಕೆ ಅದರ ಕೈಯೊಳು ಜಗವ ನಾದಿಸುವ ಮುರಳಿ (ಮಲೆದೇ. ೧೫-೮). ೫. ಬೆನ್ನುತಟ್ಟು ; ಚಪ್ಪರಿಸು : ಜೋದರಾನೆಗಳನಂಕುಶವಿಕ್ಕಿ ನೂಂಕಿದರ್ ನಾದಿಸುತೆ ಕೈಮಾಡಿದರ್ ಹಯಾರೋಹಕರ್ (ಚಿಬಪು. ೧೬-೦೪). [ನಾದ$_1$ + – ಇಸು$_3$]

ನಾದು$_1$ (ಕ್ರಿ). ೧. ಹಿಟ್ಟನ್ನು ನೀರಲ್ಲಿ ಕಲಸಿ ಚೆನ್ನಾಗಿ ಮಿದಿ,-ಕಲಸು,-ಕುಟ್ಟು : ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೇ ಎನ್ನ ಮನ (ಬಸವ. ೨೬೦) ; ಬ್ರಾಹ್ಮಣರು ಹಿಟ್ಟು ಕಲಸಿ ನಾದಿದರು (ಝಾರಾಚಿ. ೩೮೮) ; ಆ ನಾದಿದ ಹಿಟ್ಟನ್ನು ಎಲೆಯ ಮೇಲೆ ಇಡಲಾಗಿತ್ತು (ನಾಕಥ. ೪) ; ಹದವಾಗುವವರೆಗೆ ನಾದಿಯೇ ನಾದಿದಳು (ಮೊಪಾಸ. ೫). ೨. ಸದೆಬಡಿ ; ಚೆನ್ನಾಗಿ ಥಳಿಸು : "ನಾದು–ತಿಕ್ಕು ; ತಿಕ್ಕಿ ಹೊಡಿ" (ಜಾನಕೋ. ೦೦) ; ಕಲ್ಗುಂಡುಗಳ ಮಳೆಯಂಲಿ ಹರನ ನಾದಿದನೇನನೆಂಬೆನು ಪಾರ್ಥನುರವಣೆಯ (ಕುಮ್ಯಾಅ. ೬-೨೨) ; ನಾದಿದಳು ಜಗದಾಂಬೆ ಶರಗಳೊಳಾ ದುರಾಗ್ರನ (ಅಂಬಿಕಾ. ೪೨-೦೦೨).

ನಾದು$_2$ 'ನಾಂದು$_1$' ನೋ.

ನಾದು$_3$ (ನಾ). ಒಲವು ; ಗುಂಗು : ಅವಳು ಮೊದಲು ತನ್ನ ಅಂಗಡಿಯ ಆಳುಹುಡುಗನೊಬ್ಬನ ನಾದಿಗೆ ಬಿದ್ದಳು (ಸ್ಮಶಾವೈ. ೮) ; ಸುರೇಂದ್ರ ಒಂದು ನಾದಿನವ. ಮರೆಗುಳಿ ಎಂಬುದು ಮಾಧವಿಗೆ ಮೊದಲು ತಿಳಿದು ಬರಲಿಲ್ಲ (ಅಕ್ಕಾಜಿ. ೨೧). [<ಸಂ. ನಾದ]

ನಾದು$_4$ 'ನಾನ್$_1$' ಪರಾ.

ನಾದುನಿ, ನಾದಿನಿ (ನಾ). ೧. ಗಂಡನ ಅಕ್ಕ ಅಥವಾ ತಂಗಿ ; ಪತಿಯ ಸಹೋದರಿ : ಸೀರ್ಕರಡಿಯನ್ನಳೆ ನಾದುನಿಯೊಲ್ದುಮೊಲ್ಲದನ್ನಳೆ ಗಡ ಸೂಳೆಯೆಂದೊಡಿನಿತಂ ತಲೆವೇಸಱನೆಂತು ನೀಗುವೆಂ (ಪಂಪಭಾ. ೪-೯೮) ; ಚೊಕ್ಕ ನೀನತ್ತಿಗೆ ನಾದುನಿಯೆಂದೆಂಬ ಲೆಕ್ಕವಿರಲಿ ನಿನಗೆನಗೆ (ಭರಚ. ೬-೫೯) ; ಮಗಳಕ್ಕ ತಂಗಿಯು ಮಿಗೆ ಸೊಸೆಯು ನಾದುನಿಯು ಇವರೊಳಗೆ ಜಗಕ್ಕೊಬ್ಬಳೈಸೆ (ಸರ್ವಜ್ಞ. ೧೬೪೬) ; ಅಲ್ಲದಂತತ್ತೀಗೆ ಬೆಲ್ಲದಂತ ನಾದೂನಿ . . . ಕೂಡಾಡಿ ಕಲ್ಯಾಣ ತವರ ಮರತೇನ (ಜನಗೀ. ೫೮). ೨. ಅಣ್ಣ ಅಥವಾ ತಮ್ಮನ ಹೆಂಡತಿ : "ಪ್ರಜಾವತೀ, ಭ್ರಾತೃವಧೂಃ – ಈ ೨ ನಾ(ದಿ)ದುನಿ" (ಹಲಾಯು. ೮೩-೩೫೦) ; ಜನನಿಗೆ ಬೆಸಕೆಯ್ವುದು ನಾದುನಿಯಿಂ ಬೆಸಕೆಯ್ಸಿಕೊಳ್ವುದನವರತಂ (ಪಾರ್ಶ್ವಪು. ೩-೧೨). ೩. ಸೋದರಮಾವನ ಮಗಳು : ಸೋದರಮಾವನ ಮಗಳೆನೆ ನಾದುನಿಯೆಂದಂದು ನಿನ್ನನಾಂ ಕಾಡಿದೆನಿಂತು (ಸುಕುಮಾ. ೬-೨೩) ; ಸೋದರವೆನಿಸಿದ ತನ್ನಯ ನಾದುನಿಯೊಳ್ ಮದುವೆ ಸಲ್ಲ (ಸಮಪ. ೩೬೬ ಅನುಬಂಧ ೦). **ನಾದಿನಿ** : ೧. ಮಗಳಕ್ಕಂ ತಂಗೆ ತಾಯ್ನಾದಿನಿ ಸೊಸೆ ಮದವಳ್ಳಜ್ಜಿ ಮುತ್ತಬ್ಬೆ ಮತ್ತತ್ತಿಗೆ . . . ತಾಮೆ ಗಡಂ ಬೇಱಾಗಿ ಪುಟ್ಟರ್ದು

(ಶಾಂತಿಪು. ೬-೮೭) ; ತಮ್ಮಯ ಗುರುವಿನತ್ತಿಗೆಯ ನಾದಿ[ಪಾಕಾಂ. ದ] ನಿಯ ವಂಚಿಸದೆ (ಬಸಪು. ೪೫-೨೪) ; ವೀರಸೈಂಧವನರಸಿ ರಾಜಕುಮಾರಿ ನೀ ನಾದಿನಿಯಲಾ ಖಳ ರೌರವದೊಳದ್ದುವನು ಬಿಡಿಸೆಂದೊಱಲಿದಳು ತರಳೆ (ಕುವ್ಯಾಸ. ೧೪-೧೦೫) ; ಅತ್ತೆ ನಾದಿನಿಯರೊಳಳುಕದೆ ಕಾದುವುನ್ಮತ್ತೆ ಯರೀ ಕೃತಿಗೇಳೆ ಉತ್ತಮಗುಣಗಳಿಂದೊಳಗುಗೈದವರೊಳು ಪತ್ತುಗೆವೆರಸಿ ಬಾಳುವರು (ಹದಿಬ. ೧-೫೮) ; ಚಂದವಲ್ಲೆಂಬತ್ತೆನಾದಿನಿಯರನು ತಾಂ ಮೀರಿ (ರಾಮಾಸಂ. ೩-೪-೪) ; ನಾದಿನಿಯಾದರೆ ಹಾದೀಲಿ ಬಿದ್ದೋಳೆ ? (ಗಾದೆ). ೨. "ನಾದಿನಿ ಪ್ರಜಾವತಿಯಕ್ಕು" (ಮಂಗರಾ. ೯೨-೧೨) ; ಎಲೆ ಕಪೀಶ್ವರ ಕೇಳು ಪರಸತಿಗಳುಪಿ ಹಾಯಿಕಿಕೊಂಡೆ ತಮ್ಮನ ಕೊಲೆಗೆಳಸಿ ಹೊಱವಡಿಸಿ ಹಾಯಿಕಿಕೊಂಡೆ ನಾದಿನಿಯ (ತೊರರಾ. ೪-೪-೫೧) ; ನಾದಿನಿ ತಮ್ಮಂದಿರ ಈ ಕಣ್ಣುಮುಚ್ಚಾಲೆಯಾಟ ಬಾಳಾಬಾಯಿಗೆ ತಿಳಿಯದೆ ಹೋಗುತ್ತಿರಲಿಲ್ಲ (ಅಶೋಕ. ೧೯) ; ತಮ್ಮ ನಮ್ಮವನಾದರೂ ನಾದಿನಿ ನಮ್ಮವಳಲ್ಲ (ಗಾದೆ). ೪. ಹೆಂಡತಿಯ ಅಕ್ಕ ಅಥವಾ ತಂಗಿ.- ಸಹೋದರಿ.

[ದೇ.॥ ತಮಿ. ನಾತ್ತಿ, ನಾತ್ತೂಣ್ ; ಮಲ. ನಾತ್ತೂನ್./ ಸಂ. ನನಾಂದೃ]

ನಾದುರಸ್ತ 'ನಾದುರಸ್ತು' ನೋ.

ನಾದುರಸ್ತಿ 'ನಾದುರಸ್ತು' ನೋ.

ನಾದುರಸ್ತು, ನಾದುರಸ್ತ, ನಾದುರಸ್ತಿ, ನಾದುರುಸ್ತ, ನಾದುರುಸ್ತಿ (ನಾ). ೧. ಕೆಟ್ಟು ಹೋಗಿರುವುದು ; ಸರಿಯಲ್ಲದುದು ; ದೋಷಗ್ರಸ್ತವಾದುದು : ಬೆಳಗ್ಗೆ ೮ಕ್ಕೆ ಅಲ್ಲಿಗೆ ಬರಬೇಕಾಗಿದ್ದ ಮೋಟಾರು ಬಂಡಿಯು ನಡುವೆ ನಾದುರಸ್ತಾದುದರಿಂದ ಮಧ್ಯಾಹ್ನ ೧೨ಕ್ಕೆ ಬಂದಿತು (ದೇವಅ. ೩೭). (ಗು). ೨. ಕೆಟ್ಟುಹೋಗಿರುವ ; ಸರಿಯಲ್ಲದ : ತನ್ನ ಮನೆಗೆ ಹೋಗಿ ನೋಡಿದಾಗ ಅದು ನಾದುರಸ್ತುಸ್ಥಿತಿಯಲ್ಲಿದ್ದುದು ಕಂಡುಬಂತು (ಮಹಾಗ. ೧೯೩). **ನಾದುರಸ್ತ** : ೧. ನಿಮ್ಮ ಕೈಗಡಿಯಾರ ನಾದುರಸ್ತ ಆಗಿದ್ದರೆ ಅಂಗಡಿಕಾರನಿಗೆ . . . ಅದನ್ನಿಷ್ಟೆ ತಿದ್ದಿರಿ ಎಂದು ಹೇಳಿರಿ (ಮುಂಗಾಪು. ೧೧೨). **ನಾದುರಸ್ತಿ** : ೧. ದೆವ್ವದ ಗುಡಿಗಳು ನಾದುರಸ್ತಿಯಲ್ಲಿದ್ದರೂ ವಿಗ್ರಹಗಳು ಇನ್ನೂ ತಲೆ ಎತ್ತಿ ನಿಂತಿವೆ (ಪದ್ಯಸ.೨೬). **ನಾದುರುಸ್ತ** : ೧. ನನ್ನ ಕೈಗಡಿಯಾರವು ನಾದುರುಸ್ತ ಆಯಿತು. ಅಂದರೆ ನಿಂತುಬಿಟ್ಟಿತು (ಸುಳವು. ೩೬) ; ಅದು ನಾದುರುಸ್ತ ಏನೂ ಇಲ್ಲ (ಗಂಪಾಯಿ. ೧೬೯). **ನಾದುರುಸ್ತಿ** : ೧. ಒಡೆದು ಅಥವಾ ನಾದುರುಸ್ತಿಯಾಗಿ ನಿರುಪಯೋಗಿಯಾಗಿ ಹೋಗುವಂಥ ಜೀನಸುಗಳನ್ನು ಹೊರಊರಿಗೆ ಕಳುಹಿಸುವದು (ಮುಂಬವ್ಯಾ. ೧೫).

[← ಪಾರ. ನಾದುರುಸ್ತ್, ನಾದುರುಸ್ತ ; ಹಿಂ. ನಾದುರುಸ್ತ್]

ನಾದುರುಸ್ತ 'ನಾದುರಸ್ತು' ನೋ.

ನಾದುರುಸ್ತಿ 'ನಾದುರಸ್ತು' ನೋ.

ನಾದೆ (ನಾ). = ನಾದಮಯೆ : ದ್ವಾದಶಾತ್ಮಜ್ಯೋತಿರೂಪಿಯೆ ನಾದೆ ಶಾರದೆಯೆ (ಕುವ್ಯಾಅ. ೧-೬). [ಸಂ. ನಾದಾ]

ನಾದೇಯ (ಗು). ೧. ನದಿಯ ; ನದಿಗೆ ಸಂಬಂಧಪಟ್ಟ : ನಾದೇಯಾಂಬುವೊಳರ್ದಿಕೊಂಡು . . . ಪೋದತ್ತು . . . ಗಂಧದ್ವಿಪಂ (ಲೀಲಾವ. ೮-೧೦). (ನಾ). ೨. ನದಿಯಲ್ಲಿ ಹುಟ್ಟಿದುದು ; ನದಿಗೆ ಸಂಬಂಧಪಟ್ಟುದು : ನಾದೇಯವಾಗಿ ದಿವ್ಯಾಮೋದಂ ತಳ್ಪೊಯ್ದು ಪೊಂಗೆ ಕಂಪಾಯ್ತೆಂಬಂತಾದುದು ಸುವರ್ಣಗಿರಿ ಗಂಧೋದಕದಿಂ (ಅನಂಪು. ೫-೭೯). ೩. = ನಾದೇಯಿ : ಜಂಬೂ ಜಂಭ . . . ನಾದೇಯ ಪ್ರಿಯಾಳ . . . ತಿಳಕಭೂರ್ಜಾದಿ ಭೂಜಾವಕೀರ್ಣಂ (ಅರ್ಧನೇ. ೩-೩೫). ೪. ಒಂದು ಬಗೆಯ ಉಪ್ಪು ; ಸೈಂಧವಲವಣ. [ಸಂ.]

ನಾದೇಯಿ (ನಾ). ೧. ನದೀತೀರದಲ್ಲಿ ವಿಶೇಷವಾಗಿ ಬೆಳೆಯುವ ಒಂದು ಬಗೆಯ ಗಿಡ ; ನೀರುಹಬ್ಬೆ : "ಪರಿವ್ಯಾಧಃ, ವಿದುಲಃ, ನಾದೇಯಿ, ಅಂಬುವೇತಸಃ – ೪ ನೀರುಹಬ್ಬೇಗಿಡ"(ಸಿದ್ಧಾಂತಿ. ೦೦೪). ೨. ಕಾಗೆನೇರಳೆ ಗಿಡ ; ನಾಯಿನೇರಳೆಗಿಡ : "ನಾದೇಯಿ, ಭೂಮಿಜಂಬುಕಾ – ೨ ನೆಲ ನೇರಳೆ ಹೆಸರುಗಳು. ನಾಯಿನೇರಳೆ ಹೆಸರುಗಳು" (ಸಿದ್ಧಾಂತಿ. ೦೦೫). ೩. ತಕ್ಕಿಲೆಗಿಡ ; ತಗ್ಗಿಸೊಪ್ಪಿನಗಿಡ: "ಜಯಾ, ಜಯಂತೀ, ತರ್ಕಾರೀ, ನಾದೇಯಿ, ವೈಜಯಂತಿಕಾ – ೫ ತಕ್ಕಿಲೆಗಿಡ ; ತಗ್ಗಿಸೊಪ್ಪಿನ ಗಿಡ" (ಸಿದ್ಧಾಂತಿ. ೦೦೦). ೪. ಕೆಂಪುದಾಸವಾಳ ; "ಜಪಾ" (ಪಂಡಿತ. ೨೫೬).

[ಸಂ. ನಾದೇಯಿ]

ನಾದೋತ್ತರಿ (ನಾ).[ಸಂಗೀತ]ಒಂದು ರಾಗದ ಹೆಸರು: ನೀಲೋತ್ಪಲಿನಿ . . . ನಾದೋತ್ತರಿ . . . ವಸಂತಬಂಗಾಳವೆಂಬಿಪ್ಪತ್ತೆರಡು ರಾಗಂಗಳುಂ ಕ್ರಿಯಾಂಗದಿಂದ ಪುಟ್ಟಿದವು (ವಿವೇಕ. ೨೩೪). [ಸಂ. ನಾದೋತ್ತರೀ]

ನಾದೋಪಾಸಕ (ನಾ).ಸಂಗೀತವನ್ನು ಸಾಧನೆ ಮಾಡಿದವನು ; ಸಂಗೀತ ಕಲೆಯಲ್ಲಿ ತೊಡಗಿದವನು : ಈ ನಾದೋಪಾಸಕರು ಎಲ್ಲರ ಮೇಲೂ ಪ್ರಭಾವಿಯಾಗಿದ್ದರು (ಸಂಗೀತ. ೯). [ನಾದ$_1$ + ಉಪಾಸಕ]

ನಾದೋಪಾಸನೆ (ನಾ). ಸಂಗೀತದಲ್ಲಿ ಸಾಧಿಸುವ ಸಾಧನೆ ; ಶ್ರದ್ಧೆಯಿಂದಮಾಡುವ ಸಂಗೀತಾಭ್ಯಾಸ: ನಾದೋಪಾಸನೆಯಿಂದ ಜೀವನ್ಮುಕ್ತಿ ಪಡೆಯಲು . . . ಗಾನಕಲೆಯನ್ನು ಅಗಾಧವಾಗಿ ಪಲ್ಲವಿಸಿ, ದೊಡ್ಡ ಶಾಸ್ತ್ರವನ್ನಾಗಿ ನಮ್ಮ ಹಿರಿಯರು ಪರಿವರ್ತಿಸಿದ್ದಾರೆ (ಸಂಗೀತಂ. ೪).

[ನಾದ$_1$ + ಉಪಾಸನೆ]

ನಾನ್$_1$, ನಾನು$_1$ (ಕ್ರಿ). ನಾಂಬ$_2$, ನಾನ್ಬ (ವರ್ತಕೃ). ನಾಂದ, ನಾದ$_3$ (ಭೂತಕೃ). ನಾಂದು$_2$, ನಾದು$_4$ (ಭೂತನ್ಯೂ). ೧. ತೋಯು ; ನೆನೆ ; ಒದ್ದೆಯಾಗು : "ನಾನ್ – ಆರ್ದ್ರಭಾವೇ" (ಶಮಧಾ) ; ಸಮಸಂದಟ್ಟಿಱಲಂಪನೀಯೆ ಶಯನಂ ಘರ್ಮಾಂಬುವಿಂ ನಾನೆ (ಪಂಪಭಾ. ೪-೧೦೯) ; ಆಕೆಯ ಕಣ್ಮಲರಿಂದಮುಣ್ಮೆ ಮಾಣದೆ ಸುರಿಯುತ್ತವಿರ್ಪ ಜಲಧಾರೆಗಳಿಂದಮೆ ನಾಂದದೊಂದು ಮೇಲುದಱ ಸೆಱಂಗಿನಿಂ ನಯದೆ ಬೀಸಿದನಾ ಮನುಜೇಂದ್ರಚಂದ್ರಮಂ (ಕಾದಂಪೂ. ೯೨೯) ; ಆ ಮಹಾಯೋಗೀಶ್ವರನ . . . ಸೂಸಿದ ನೆತ್ತರ ಧಾರೆಯೊಳ್ ನಾದು ನನೆದಡಿ ವಜ್ಜೆಯನು ನಾತಂಬಿಡಿದು ಬಂದು (ಸುಕುಮಾ. ೧೨-೨೪ ವ) ; ತಳಿರ್ಗಳ್ ನಾಂಬನ್ನೆಗಂ ದುಃಖದಿಂ ಗಡ ಕೀರಪ್ರಿಯಕಾಂತೆ ಸುಯ್ದು ಸುರಿದಳ್ ಭೋರೆಂದು ಬಾಷ್ಪಾಂಬುವಂ (ಲೀಲಾವ. ೬-೦೦೩) ; ತನುವಂ ನಾಂದು ಪತ್ತಿರ್ದ ಚೀನಾಂಬರವಿಂದಾಗಿರ್ಪಿನಂ ಬಾದುದು . . . ಪೆಂಡವಾಸಂ (ಜಗವಿ. ೧೪-೦೧೩) ; ಬೀಯದಟ್ಟಿಱೊಳಂ ಪಾಸಿಗೆ ನಾಂಬ ಮುಂಬದ ಮಳುಂಬಂ ಕೂಟದೊಳ್ ನಲ್ಲರಾ (ಚಂದ್ರಪು. ೮-೬೮) ; ಪೊಕ್ಕೀಸಾಚೆ ಮೈ ನಾನದಿಂಗಡಲ್ (ಪುಲ್ಲಕಾ. ೮-೩೦೯) ; ನೀರಲಿ ನಾದ ಕೆಂಡವನುಱುಹಿ ಮುಡಿದವರುಂಟೆ ಮುಂಡೆಯಲಿ (ಕುವ್ಯಾಅ. ೨೦-೩೨) ; ನಾನ್ಬಂ, ನಾನ್ಬಿನಂ ನಾನ್ಬನ್ನಂ (ಶಬ್ದಾನು. ೫೧೭ ಪ್ರಯೋ) ; ಸಳಿಳದೊಳೆ ನಾಂದ ವಲ್ಕಂದಳೆ ದಾಶ್ರಮತರುಗಳಲ್ಲಿ ಹಯಖುರಹತಿಯಿಂದಳುರ್ದೆಳ್ದ ಧೂಳಿ . . . ಪತಂಗತತಿವೊಲ್ ಬೀಳ್ಗುಂ (ಶಾಕುಂತ. ೧೭-೩೨). ೨. (ಆಲಂ) ಕರಗು; ದ್ರವೀಭೂತವಾಗು : ಚಂದ್ರಿಕೆಯಿಂದಂ ದ್ರವಿಯಿಪ ಚಂದ್ರೋಪಲದಂತೆ ನಿನ್ನ ಗುಣಗಣದಿಂದಂ ಚಂದ್ರಮಂಖಿ ನಾಂದನಾಗಿ ನರೇಂದ್ರಂ ನುಡಿಯಲ್ಕ ಮಱಿಯದಿರ್ದಪನೀಗಳ್ (ಕಾದಂಉ. ೧೭೩). **ನಾನು$_1$** : ೩. ತೋಯಿಸು; ನೆನೆಸು : ಹಾಲುಮಡ್ಡಿಯಂ ಘೃತದಿ ನಾನುತ್ತ ಕೆಂಡದ ಮೇಲೆ ಹಾಯ್ಕೆ (ಗುರುಜಾ. ೬-೩೮).

[ದೇ.॥ ತಮಿ. ನಾನ್ತು ; ಮಲ. ನಾನ್ದು ; ತೆಲು. ನಾನು ; ಗೊಂಡಿ. ನಾಂದಾನಾ]

ನಾನ್$_2$, ನಾ$_1$, ನಾಂ, ನಾನು$_3$ (ಸ). ೧. ಉತ್ತಮಪುರುಷ ಏಕವಚನ ಸರ್ವನಾಮ : ಮಾತನಾಡುವವನು ತನ್ನನ್ನು ನಿರ್ದೇಶಿಸುವುದಕ್ಕಾಗಿ ಬಳಸುವ ಮಾತು ; ಆತ್ಮಾರ್ಥಕ ಸರ್ವನಾಮ ; P ಕ್ರಮವಾಗಿ ಏಳು ವಿಭಕ್ತಿಗಳು : (ಏಕ) ನಾನ್, ನನ್ನಂ, ನನ್ನಿಂ, ನನಗೆ, ನನ್ನತ್ತಣಿಂ, ನನ್ನ, ನನ್ನೊಳ್ ; (ಬಹುವ) ನಾಮ್, ನಮ್ಮಂ, ನಮ್ಮಿಂ, ನಮಗೆ, ನಮ್ಮತ್ತಣಿಂ, ನಮ್ಮ, ನಮ್ಮೊಳ್ : ಎನ್ನ ಕನ್ನಿಕೆಯಾ ಕಾಲದೊಳ್ ನಾನೆನ್ನ ಮಾವಂ ಕುಂತಿಭೋಜನ ಮನೆಯೊಳ್ ಬಳೆವಂದು (ಪಂಪಭಾ. ೧-೧೦೮ ಪ); ಅದಱಿನಿನ್ನಾವುದುಮಂ ನಾನೆ ಬಲ್ಲೆಂ (ಪಂಚತಂ. ೧೬೦-೧). ನಾ$_1$: ೧. ನಾ ನಿನ್ನ ಧ್ಯಾನದೊಳಿರಲು ಮಿಕ್ಕ ಹೀನಮಾನವರೇನು ಮಾಡಬಲ್ಲರೊ ರಂಗ (ಪುರಂದ. ೦-೧೦೯ ಪಲ್ಲವಿ) ; ರೊಕ್ಕದಾಸೆಗಳಿಲ್ಲ ಮೋಹಕ್ಕೆ ನಾ ಸಿಕ್ಕಿ ದಕ್ಕಿದೆ ನಿನಗೆಂದಳು (ಕಂಸವಿ. ೨-೧೦೩) ; ಕೆಲವು ವೇಳೆ ನಾನ್ ಎಂಬುದರ ಅಂತ್ಯ ನಕಾರವು ಲೋಪವಾಗಿ ನಾ ಎಂಬುದು ಪ್ರಯೋಗವಾಗುತ್ತಿತ್ತು (ಕೈಪಿಡಿ. ೩೪೩). ನಾಂ : ೧. ಅವರಾರುಮಂ ನಾಂ ಮೆಚ್ಚದೆ ಕುಡದಿನ್ನೆಗಮಿಂತಿವರ್ಗಳು ತಾಂಗಿರ್ದೆನೀ ಕನ್ಯಾರತ್ನಂಗಳ್ಗೆ ನೀನೆ ಯೋಗ್ಯನಯ್ (ವಡ್ಡಾರಾ. ೦೩೦-೯) ; ಈಯವಸರದೊಳ್ ನಾಂ ಸ್ವಾಮಿಹಿತಮಹತ್ವಮಂ ಕೈಕೊಂಡು ನುಡಿವುದು ನಯಮಲ್ಲಂ (ಪಂಚತಂ. ೨೭-೧) ; ನಾಂ ಕುಡಗೂಸಪ್ಪೆನದು ಕಾರಣದಿನೆಮ್ಮ ತಾಯಲ್ಲಿಗೆ ಪೋಗಿ ಬೇಡಿಂ (ಪಂಚಾಮಾ. ೮-೬೦ ವ) ; ನಿರ್ಲಜ್ಜರಪ್ಪ ಸವಣರ ಸೊಲ್ಲಿಂಗೊಳಗಾದುದಕ್ಕೆ ನಾಂ ಬೆಱಗಾದೆಂ (ಧರ್ಮಾಮೃ. ೦-೧೦೦). ನಾನು$_2$: ೧. ಇಂತಪ್ಪ ಚೈತನ್ಯಜಂಗಮಕ್ಕೆ ನಾನು ನಮೋನಮೋ ಎನುತಿರ್ದೆನಯ್ಯಾ (ಅದಪ. ೨-೩) ; ಅಂದಿಂಗೆಳೆಯ ನೀನು ಹಳೆಯ ನಾನು (ಬಸವ. ೨) ; ದೇವಾ ನಾನೇವೆನೆಂದಂದಬಲೆಯಳುತೆ ಶಾಂ ಪೋಗೆ (ರಕ್ಷಾಶ. ೪೦) ; ಈ ನಪುಂಸಕರೊಡನೆ ಹುಟ್ಟಿದ ನಾನು ಮೂಗುಳ್ಳವನೆ (ಕುಪ್ಯಾವಿ. ೩-೪೮) ; ನಾನೇಕೆ ಬಡವನು ನಾನೇಕೆ ಪರದೇಶಿ ಶ್ರೀನಿಧೇ ಹರಿ ಎನಗೆ ನೀನಿರುವ ತನಕ (ಪುರಂದ. ೦-೧೪೬ ಪಲ್ಲವಿ) ; ದೀನ ನಾನು ಸಮಸ್ತಲೋಕಕೆ ದಾನಿ ನೀನು (ಹರಿಸಾ. ೪೯) ; ಸಿದ್ಧರ ಸತತವಿಶುದ್ಧರ ಬೋಧಸಮೃದ್ಧರ ನೆನೆದಂ ನಾನೀಗ . . . ಆತ್ಮಸಿದ್ಧಿಯಂ ಪಡೆವೆನು (ಭರಜ. ೧-೨) ; ನಾನು ಹುಲಿಯಾದರೆ ನನ್ನ ಅಣ್ಣ ಹೆಬ್ಬುಲಿ (ಗಾದೆ). ೨. (ಆಲಂ) ಅಹಂಕಾರ ; ತನ್ನ ಮೇಲಿರುವ ಮಮತೆ : ಎಳೆತನದಿನಿಂದುವರೆಗೀ ಜಗದ ಬೆರಗ ನಾನಳಿಯದಂತಿರಿಸಿಹವು ವಸ್ತು ವ್ಯಕ್ತಿ ಅಲ್ಪವಿವು (ಮಲೆದೇ. ೪೯-೧) ; ನಾನು ಹೋದರೆ ಎಲ್ಲಾ ಹೋದಂತೆ (ಗಾದೆ). ೩. ಜೀವ ; ಆತ್ಮ : 'ನಾನು' ಎಂದು ಹೇಳಲ್ಪಡುವವನೇ ಜೀವನು (ಭಾರದ. ೨೩೩).

ನಾಮ್, ನಾವ್, ನಾವು (ಬಹುವ) : ಅಲ್ಲದೆಯುಂ ಮತ್ತೊಂದಂ ಬಗೆ ನಾಮಂದೊಡವಂದಂಬರತಿಳಕಮೆಂಬ ವಿಶ್ರುತವನದೊಳ್ ... ಪಿಹಿತಾಸ್ರವ ಭಟ್ಟಾರಕರ ಕೇವಲಜ್ಞಾನೋತ್ಪತ್ತಿಯೊಸಗೆಯಂ ಮಾಡಿ ಬಂದೆವು (ಅಪಿಯ. ೩-೮೨) ; ನಾವೊಂದು ಪಾಪನಿವಾರಣಾರ್ಥವಾಗಿ ಗೋವಿನ ಜಠರಮಂ ಪೊಕ್ಕಿರ್ದೆವು (ಪಂಚತಂ. ೯-೮೩) ; ಮೃಷ್ಟಭೋಜನದಿಂದ ನಾವ್ ಸಂತುಷ್ಟರು (ಕುಪ್ಯಾಅ. ೧೬-೪೯) ; ನಾವು ಹೆಸಿದೈತಂದರೀ ಪರಿದೇವಿ ನಾನಾದೂಱ ದೂಱುವುದಾವುದುಚಿತವು (ಕುಪ್ಯಾಅ. ೧೬-೩೮) ; ನೀವು ನಾಗಲೋಕದವರಾದರೆ ನಾವು ನಾಕಲೋಕದವರಂ (ಗಾದೆ). ನನ್ನತನ = ಸ್ವಕೀಯತ್ವ ; ನನ್ನದು ಎಂಬ ಭಾವನೆ : ಆಗಾಗ ನನ್ನತನದ ಅರಿವು ಮರೆವನ್ನು ಭೇದಿಸಿ ಇಣುಕುತ್ತಿತ್ತು (ಮುಂಗಾಪು. ೬೯). ನನ್ನವಳ್, ನನ್ನವಳು = ೧. ನನಗೆ ಸಂಬಂಧಪಟ್ಟವಳು : ಅಕ್ಕ ನನ್ನವಳಾದರೆ ಭಾವ ನನ್ನವನೆ ? (ಗಾದೆ). ೨. ನನ್ನ ಹೆಂಡತಿ : ನನ್ನವಳ ತಂಗಿಯೊರ್ವಳ್ ಚಲುವೆ ಕಪ್ಪಿನಿಸು (ಕಾಲೂರ. ೫೬-೮೯). ನನ್ನಾಕೆ = ಹೆಂಡತಿ : ನನ್ನಾಕೆ ತಮ್ಮನು ಕೇಳಿ ಸಂಬಳವನ್ನು ಹೆಚ್ಚಿಸಿಕೊಳಿರೆಂದಳೊಡೆಯ (ಇಂಜಾಪ. ೦೬೯-೩೫). ನಮ್ಮಾಕೆ=೧. ನಮ್ಮ ಕಡೆಯವಳು ; ನಮಂಗೆ ಬೇಕಾದವಳು : ಆಕೆಯಿರಲು ಚಿಂತೆಯೇಕೆ ನಿನಗೆ ನಮ್ಮಾಕೆಯಲ್ಲವೆ ಪಂಪೆಯರಸಿ (ಕುರಾಸಾಂ. ೨೫-೫೭). ೨. = ನನ್ನಾಕೆ : ನಮ್ಮಾಕೆ ಊರಿಗೆ ಹೋಗಿರುವುದರಿಂದ ಎಲ್ಲ ಕೆಲಸವೂ ನನ್ನ ಮೇಲೆ ಬಿದ್ದಿದೆ (ರೂಢಿ). ನಮ್ಮವರು = ೧. ಬಂಧುಗಳು ; ನೆಂಟರು : ಚಿರಕಾಲವಿರ್ದುದೀವೂರು ನಮ್ಮವರ್ಗಳೆಲ್ಲರ ಜನನವಿಲ್ಲಿ (ಸೌಂದಪು. ೫-೭) ; ಇವರು ನಮ್ಮವರು, ಇವರು ನಮ್ಮ ಶತ್ರುಗಳು ಎಂಬುದಿಷ್ಟೇ ಅವಳಿಗೆ ಗೊತ್ತು (ಕವೀರ. ೦೨೫) ; ನಾನು ಪರದೇಶಕ್ಕೆ ಹೋಗಿದ್ದಾಗ ಅಲ್ಲಿ ನಮ್ಮವರು ಯಾರೂ ಇಲ್ಲದೆ ಬಹಳ ಕಷ್ಟಪಟ್ಟೆ (ರೂಢಿ). ೨. ಗಂಡ ; ಪತಿ : ನಮ್ಮವರು ಊರಿಗೆ ಹೋಗಿರುವುದರಿಂದ ಇಂದು ನಮ್ಮ ಮನೆಯಲ್ಲಿ ಅವರಿಲ್ಲದೂಟ (ರೂಢಿ). ನಮ್ಮುವನು = ನಮ್ಮನ್ನು : ಇಂದುಮುಖಿ ನಿಮ್ಮಂಗಸಂಗವ ಮಾಡಿ ನಮ್ಮುವನು (ಸಂಭಪ. ೩೩-೧೦) ; ನಾಚಿಸಬೇಡ ನಮ್ಮುವನೆಂದು ಮೌಳಿಯ ಚಾಚಿದ ಕೃಷ್ಣನಂಘ್ರಿಯೊಳು (ಮೋಹತ. ೪೦-೧೨). ನಮ್ಮೊಂದಿಗರು = "ನಮ್ಮವರು, ನಮ್ಮ ಜನರು" (ಜಾನಕೋ. ೯). 'ಆನ್$_2$' ಪರಾ.

[ದೇ.ಕ ತಮಿ. ನಾನ್ ; ಮಲ. ಞನ್ ; ತುಳು. ಯಾನು ; ಕೊಡ. ನಾ, ನಾನೀ ; ತೆಲು. ನೇನು , ಏನು ; ಕೊಲಾ. ನಾಯ್ಯಿ. ಪರ್ಜಿ. ಗಡಬ. ಆನ್ ; ಗೊಂಡಿ. ಆನಾ ; ಕುಇ. ಆನು ; ಕುವಿ. ನಾನು, ನಾನೂ]

ನಾನಡ್ಡಿಕೆ (ನಾ). ಒಂದಂ ಬಗೆಯ ಅಡ್ಡಿಕೆ ; ಚಿನ್ನದ ಪಟ್ಟಿಗಳನ್ನು ಅರ್ಧಚಂದ್ರಾಕಾರವಾಗಿ ಪೋಣಿಸಿ ಮಾಡಿದ ಕಂಠಾಭರಣ. 'ಅಡ್ಡಿಕೆ' ಪರಾ. [<ನಾಣ್ಯ + ಅಡ್ಡಿಕೆ]

ನಾನಲ್, ನಾಣಲ್, ನಾಣಲು, ನಾರಳು, ನಾಳಲು, ನಾಟಲ್ (ನಾ). ೧. ಉದ್ದವಾಗಿಯೂ ಒರಟಾಗಿಯೂ ಇರುವ ಒಂದಂ ಬಗೆಯ ಹುಲ್ಲುಗಿಡ ; ಜೊಂಡು : ಕೆಸಱಿಂ ಕುಟಿಯಿಂ ನಾನಲಿನಸಿದಾಗಿರೆ ಕೊಂಕಿ ಪೋದ ಬಟ್ಟೆಗಳೆಲ್ಲಂ ಪಸಲೆಗವಿದಂದು ಸೈತಿರೆ ವಸುಧೇಶನುಮಾರ್ಯ ಸುತನುಮೊಯ್ಯನೆ ನಡೆದರ್ (ಲೀಲಾವ. ೫-೪೦ ವ). ೨. ಲಾಳದ ಕಡ್ಡಿ ; ಗಲಗಂ : "ನಡ್ವಳಂ, ನಳಸಂಯುತಂ – ಈ ೨ ನಾ(ಣ)ನಲುಳ್ಳಭೂಮಿ" (ಹಲಾಯು. ೨೬-೪). ೩. ಜೊಂಡು ಬೆಳೆದಿರುವ ನೀರಿನ ಸ್ಥಳ : ನಾನಲ ಬಾನಲ ನೀರಂ ಮಿನೊಲ್ಗುಂ ರಾಜಹಂಸನೊಲ್ಗುಮೆ (ಮಲ್ಲಿಪು. ೦೩-೦೬೩); ಪಾಯ್ದು ಪೋಪ ಪೊಳ್ಳೆವಂದಿಯಂ ಕಂಡು . . . ಮಳೆಯುಮಂ ನಾನಲುಮಂ ಬಾನಲುಮಂ . . . ಕಳ್ಳಿಯುಮಂ ಕಳೆದು ಪೋಗಿ (ಲೀಲಾವ. ೬-೧೬ ವ) ; ಮೃಗಪ್ರಕರಮಿರ್ದುದು ಕಾನನದೊಂದು ನಾನಲೊಳ್ (ಕುಸುಮಾ. ೬-೩೮) ; ಕುತ್ತುಱು ನಾನಲ್ಗಳೊಳೆಡೆವಿಡಿದೋಡಿದತ್ತು ಪಂದಿ ಜವದಿಂದಾಗಳ್ (ಶಬಶಂ. ೪-೨೩). ನಾಣಲ್ : ೧. ದರ್ಭೆ, ನೊದೆ, ನಾಣ [ಣ]ಲ್ ಮುಂತಾದ ತೃಣವಿಶೇಷಂಗಳಂ (ಭಾರಶಾಂ. ೭೦-೪೪೪) ; ಆ ವೀರ ರಮಣಿ ಮರವಳ್ಳಿ ಪುಲ್ಪೊದರು ನಾಣಲ್ ಕುತ್ತುರೊಳ್ಪಾಯ್ದು ಪಾಯ್ದು (ಚಂದ್ರಭ್ಯು. ೫-೧೦೪). ನಾಣಲು : ೧. "ಕಾಶಃ – ನಾಣಲು" (ಓಷಧಿ. ೨೮) ; ಒಂದು ಕೊಳಗ ಶುದ್ಧಾಂಬು ಕಷಾಯದಲ್ಲಿ . . . ನಾಣಲ ಬೇರು . . . ಶ್ರೀಗಂಧ, ಇವಿಷ್ಟನೂ ಪ್ರತ್ಯೇಕ ನಾಲ್ಕು ವರಹ ತೂಕವ ಸೇವಿಸಲು (ವೈದ್ಯಸಾ. II, ೫೩). ನಾರಳು : ೧. "ಪುಷ್ಕರಪರ್ಣೀ–ನಾರಳು (ನಾಣಲು ?)" (ಓಷಧಿ. ೦೦೧) ; ಬೆರಳುದ್ದಮಾದ ನಾರಳ ದಂಟ ಕತ್ತರಿಸಿ . . . ಹೊಸ ಸಕ್ಕರೆಯ ಹಾಕಿ ಪರಿಮಳಗಳಂ ಪೊರೆಯಿಕ್ಕಿದದುವೆ ತುಪ್ಪದ ಪಾಯಸಂ (ಸೂಪಶಾ. ೩-೦೨). ನಾಳಲು : ೧. "ಇಂದ್ರಾ–ನಾಳ(ಣ)ಲು" (ಓಷಧಿ ೦೩) ; "ನಳ – ನಾಳಲು, ಹುಲಿಯುಗುರು" (ಓಷಧಿ. ೮೩) ; ನಳವಿನೊಳಡಗಿ ನಾಳಲೊಳು ಪೊಕ್ಕು . . . ಬೇಗೆಗಿಚ್ಚು ವಿಶ್ವಾಮಿತ್ರ ಮುನಿಯನೆಯ್ದದೆ ಮಾಣದು (ಹಡಕಾ. ೯-೩೩). △ ನಾಟಲ್ : ೧.

ನೆಟಲ್, ನಾಟಲ್, ಪೋಟಲ್ (ಕಜ್ಜಾನು. ೧೪೦ ಪ್ಯಾಖ್ಯಾ). 'ನಳ್ಳು' ಪರಾ. [ದೇ.ಕಿ ತಮಿ. ನಾಣಲ್ ; ಮಲ. ಞೌಣಲ್]

ನಾನಲ್ವಳ್ಳ (ನಾ). = ನಾನಲ್ ೩ : ತಲೆವೊಲದ ನಾನಲ್ವಳ್ಳದ ದರಿಯ ಕುತ್ತುಱಿಂಗೆ ಕೊಣಕಿಡುವ ಪುಲ್ಲೆಯೆರಲೆಯ ಜವಕ್ಕೆ ಪಕ್ಕುಗೊಟ್ಟುಂ . . . ಅಪರಸಾಂಧ್ಯ ಗಂಧವಹನೆಳಸೆ (ಮಲ್ಲಿಪು. ೭-೪ ಪ). [ನಾನಲ್ + ಪಳ್ಳ]

ನಾನಲ್ವಿಡಿ (ಕ್ರಿ). ಜೊಂಡು ಬೆಳೆದಿರುವ ಸ್ಥಳವನ್ನು ಆಶ್ರಯಿಸು : ನೆರೆ ದಿರ್ದತ್ತೊಂದು ನಾನಲ್ವಿಡಿದೀ ಮಹಿಷವೃಂದಂ ಯಥಾಸ್ವೇಚ್ಛೆಯಿಂದಂ (ಹಂದ್ರಪು. ೫-೬೧). [ನಾನಲ್ + ಪಿಡಿ$_1$]

ನಾನಾ (ಅ). ಬಗೆಬಗೆಯಾಗಿ ; ಅನೇಕ ರೀತಿಯಾಗಿ ; ನಾನಾವಿಧವಾಗಿ; ಪರಿಪರಿಯಾಗಿ : ದೂತನ ಚೇಷ್ಟೆಗಳಂ ನಾನಾತಱದಿಂದಱಿದು ಬಟಿಕೆ ಮಾಟ್ಟುದು ವಿದ್ಯಾಪೂತವಿಭೇಷಜಮಂತ್ರವ್ರಾತಮುಮಂ (ಖಮದ. ೩-೫೨); ನೆರವುತಿದೆ ನಾನಾ ದಿಗಂತದ ಧರಣಿವರು ಕನ್ಯಾರ್ಥಿಗಳು (ಕುಪ್ಯಾಅ. ೧೦-೧೮); ಪಾದರಸವ ಕೂಡಿಸಿಕೊಂಡು ಬೆಣ್ಣೆಯಲ್ಲಿ ತಳಿಗೆಯ ಮೇಲೆ ಜಾಱಿಸಿ ಫಿರಂಗಿ ಮೊದಲಾದ ನಾನಾಹುಣ್ಣುಗಳು ಮಾಣುವುವು (ವಿಪ್ರವಿ. ೬೪) : ನಾನಾ ಜಾತಿ ನೀತಿಯ ರೀತಿಗಳ ವಿಸ್ತರಿಸಿ (ಗಗತಾ. ೧೮-೧). P' ನಾನಾ' ಎಂಬುದು ಇತರ ಅನೇಕ ನಾಮಪದಗಳೊಡನೆ ಕೂಡಿ ಸಮಾಸಪದಗಳಾಗಿ ಭಾಷೆಯಲ್ಲಿ ಪ್ರಯೋಗವಾಗುತ್ತಿದೆ. [ಸಂ.]

ನಾನಾಕ (ನಾ). (?) : ಎಲ್ಲೆ ಓದನರಾಸಿ ಎಲ್ಲೆ ನಾನಾಕರಾಸಿ ಎಲ್ಲೆ ಘೃತದ ಮಡುವು ಎಲ್ಲೆಲ್ಲ ಇದ್ದವೆಲ್ಲಾ ಅಲ್ಲಿಗಲ್ಲಿಗೆ ಬಯಲು ನಿಲ್ಲದಡಗಿದವು (ತೀರ್ಥಮ. ೭೫-೯). [?]

ನಾನಾಜೀವ (ನಾ). ಅನೇಕ ಪ್ರಾಣಗಳು : ಬಹುಭೇದವಿಭಿನ್ನದಿನೇಕ ಜೀವಾಪೇಕ್ಷೆ ನಾನಾಜೀವಾಪೇಕ್ಷೆಯಿಂ ಯೋಜಿಸಿ (ಸುಳುಮಾ. ೩-೩೯ ಪ). [ನಾನಾ + ಜೀವ]

ನಾನಾತ್ವ (ನಾ). ಅನೇಕವಾಗಿರುವಿಕೆ ; ಬಗೆಬಗೆಯಾಗಿರುವಿಕೆ ; ವಿಧವಿಧವಾಗಿರುವಿಕೆ : "ನಾನಾತ್ವ, ವಿವಿಧತೆ, ವೈವಿಧ್ಯ, ವೈಚಿತ್ರ್ಯ, ಭಿನ್ನತೆ, ಬೇರೆ ರೀತಿ, ಅನೇಕತೆ, ಬಗೆಬಗೆಯಾಗಿರುವುದು" (Diversity. ಇಂಕನಿ) ; ಮೋಕ್ಷದಲ್ಲಿ ಜೀವಾತ್ಮನು ತನ್ನ ಸ್ವಾಭಾವಿಕಸ್ಥಿತಿಯಲ್ಲಿರುವನು. ಅದೆಂತೆಂದರೆ . . . ನಿರವಯವತ್ವ, ನಾನಾತ್ವ ಮೊದಲಾದ ಧರ್ಮಗಳೊಡನೆ ಯಾವ ತ್ಕಾಲ ನಿರ್ದುಃಖಿಯಾಗಿರುತ್ತಾನೆ (ಹಿಂದಸಾ. ೦೨೪). [ಸಂ.]

ನಾನಾದೇಶಿ (ನಾ).=ನಾನಾದೇಸಿ: ನಾಡ ಸಮಸ್ತ ನಾನಾದೇಶಿಗಳು (ಸೌಇಇ. IX-11, ೪೦೦-೦೦ ; 1366) ; ಅನೇಕ ಉಪಯುಂಕ್ತಸಂಗತಿಗಳನ್ನು ಒಮ್ಮೆಲೆ ಸಂಗ್ರಹಿಸಿದ 'ನಾನಾದೇಶಿ' ಎಂಬ ವಾಣಿಜ್ಯಸಂಘವು ಆಗ ಪ್ರಚಾರದಲ್ಲಿದ್ದಿತು (ದಭಾಇ. ೦೦೧). [ನಾನಾ + ದೇಶಿ$_2$]

ನಾನಾದೇಸಿ (ನಾ). ವರ್ತಕರ ಗುಂಪು, - ಪಂಗಡ ; ಕೊತ್ತಳಿ : ಕೂಳಿಯಾಗಿಱಿಯದೆ ನಾನಾದೇಸಿಬ್ರಮ್ಮಸೆಟ್ಟಿವುಡ್ಡೆ ಬನ್ದಡೆ ಇಱಿದರ್ (ಎಕ. IV, ಹೆಗ್ಗಡ. ೭೩-೨೦; 1007 ?) ; ಶ್ರೀಸಾಲೇಶ್ವರದೇವರ ಅಂಗಭೋಗರಂಗಭೋಗ ನಿವೇದ್ಯಕ್ಕಂ ಸಮಸ್ತಸೆಟ್ಟಿಕಾರರುಂ . . . ಉಭಯ ನಾನಾದೇಸಿಯುಂ ಕೂಡಿ ನೆರೆದು ಬಿಟ್ಟ ಧರ್ಮ್ಮವೆನ್ತೆಂದಡೆ (ಕಇಅ. ೩೦-೪೨-೧೭; 1116) ; ಸಮಸ್ತ ನಾನಾದೇಸಿಗಳುಂ ಸೆಟ್ಟಿಯರುಂ ಸೆಟ್ಟಿಗುರುತ್ತರು(ಂ) ವಿರ್ದು ರತ್ನಭೂಷಣವಿನಾಯಕದೇವರ ಪೂಜೆಗೆ ಅಱವಂಟಿಗೆಗಂ ಬಿಟ್ಟ ಧರ್ಮ್ಮವೆಂತೆಂದಡೆ (ಸೌಇಇ. IX-1, ೨೨೩-೪೩ ; 1127) ; ಬಣಜಮುಂ ನಾನಾದೇಸಿಯುಂ ಬಿಟ್ಟಯ × × × ಮಳವೆಗೆ ಹಾಗ ಹಂಜ ಹಾತ್ತಿಯ (ಮೃಆರಿ. ೦೯೩೩, ೩-೦೫ ; 1160). [ನಾನಾ + ದೇಸಿ]

ನಾನಾಪಾಯ (ನಾ). ಪರಿಪರಿಯ ಕೇಡು ; ಅನೇಕ ರೀತಿಯ ಹಾನಿ : ಹಿಂದೆ ನಾನಾಪಾಯದಿಱುಬಿನ ಬಂಧನವ ಬಿಡಿಸಿದೆಯಲೈ ಗೋವಿಂದ (ಕುಪ್ಯಾಅ. ೦೬-೨೫). [ನಾನಾ + ಅಪಾಯ]

ನಾನಾಭವ (ನಾ). ಅನೇಕ ಜನ್ಮ : ಎನಗಾ ಮೂವರುಂ ಮಗಳ್ದಿರಾದಂದ ಮುಮಂ ನಾನಾಭವದಿಂದಮತ್ತಣ ಭವದೊಳೆಲ್ಲಿ ಪುಟ್ಟಿ ಬಂದೆನೆಂಬುದುಮಂ ಬೆಸಸುವುದೆ[ನೆ] (ಶಾಂತಿಪು. ೬-೮೫ ಪ). [ನಾನಾ + ಭವ]

ನಾನಾಭಾಷಾತ್ಮಕ (ನಾ). ಅನೇಕ ಭಾಷಾರೂಪವಾದುದು : ನಾನಾಭಾಷಾತ್ಮಕಂ ಮಾನವ ದಿವಿಜ ಸದಃಕರ್ಣಪಾತ್ರಕ್ಕೆ ತದ್ವಿಜ್ಞಾನಂ ತಂತಮ್ಮ ಭಾಷಾರವದಿನೆಸೆಯೆ ಪೊಣ್ಮೆತ್ತು ದಿವ್ಯಧ್ವನಿ (ಶಾಂತಿಪು. ೬-೫೯). [ಸಂ.]

ನಾನಾಮುಖ (ನಾ). ೧. ಬೇರೆಬೇರೆ ರೀತಿ, - ವಿಧಾನ ; ಅನೇಕ ಬಗೆ : ವೇದ ಬಲ್ಲಿತ್ತೆಂಬೆನೆ ನಾನಾಮುಖದಲ್ಲಿ ಸ್ತುತಿಯಿಸಿತ್ತಲ್ಲದೆ ಲಿಂಗದ ನಿಲುಕಡೆಯ ಕಾಣದು (ಬಸವ. ೫೫೨) ; ಆಮೇಲೆ ಈ ಶಾಸ್ತ್ರವು ಪರ್ಕಿನ್, ಕೆಕ್ಯೂಲ್, ಬೇಯರ್ ಇವರ ಕೈಯಲ್ಲಿ ನಾನಾಮುಖವಾಗಿ ಬೆಳೆಯತು (ಶಿಲ್ಪನಾ. ೦೨೭). ೨. ಅನೇಕ ದಿಕ್ಕು, -ಪಕ್ಕ, -ಮಾರ್ಗ : ಚಿಲ್ಲಿತದು ನಾನಾಮುಖಕೆ ನಿಂದಲ್ಲಿ ನಿಲ್ಲದೆ (ಕುಪ್ಯಾಶ. ೩-೨೯). [ನಾನಾ + ಮುಖ]

ನಾನಾಯುಧ (ನಾ). ಬಗೆಬಗೆಯಾದ ಆಯುಧ, -ಶಸ್ತ್ರ: ಅರಿಕಟಕಭೇದಕನ ನಾನಾಯುಧವಿಶಾರದನ . . . ಸೇನಾಪತಿಯ ಮಾಡುವುದರಸ ಕೇಳೆಂದ (ಕುಪ್ಯಾಉ. ೩-೮೮). [ನಾನಾ + ಆಯುಧ]

ನಾನಾಯೋನಿ (ನಾ).ಅನೇಕ ಜನ್ಮ :ನಾನಾಯೋನಿಗಳೊಳ್ ಸುಟಿದೇನಾನುಂ ದುಷ್ಕೃತಂ ಸಡಿಲ್ದೊಡೆ ಪಡೆದುಂ ಮಾನುಷ್ಯಮನತಿದಾರುಣಮಾನಸಶಾರೀರ ದುಃಖಪೀಡಿತವಕ್ಕುಂ (ಆದಿಪು. ೯-೪೮); ವಿಷ್ಣು ನಾನಾಯೋನಿಯಲ್ಲಿ ಬಾರದ ಭವಂಗಳಲ್ಲಿ ಬರುತಿಪ್ಪ (ಬಸವ. ೫೪೫). [ನಾನಾ + ಯೋನಿ]

ನಾನಾರಶ್ಮಿ (ನಾ). ಅನೇಕ ವಿಧವಾದ ಕಾಂತಿ, -ಪ್ರಕಾಶ: ಕೋಟೀರಾದ್ಯಾಭರಣಚಕ್ರಮುಖ್ಯಾಯುಧ ನಾನಾರಶ್ಮಿಯನು ವಿಜೃಂಭಿಸೆ ರಾರಾಜಿಸಿದತ್ತು ಕೌಸ್ತುಭಂ ಪೇರುರದೊಳ್ (ಜಗವಿ. ೩-೦). [ನಾನಾ + ರಶ್ಮಿ]

ನಾನಾರಿ (ನಾ). ಅನೇಕ ಜನ ಶತ್ರುಗಳನ್ನು ಹೊಂದಿರುವವನು ; ಬಹುಜನರೊಂದಿಗೆ ವಿರೋಧ ಮಾಡಿಕೊಂಡಿರುವವನು : ಹಿಮಕರಂ . . . ಅರಾತಿಸ್ಥಾನದೊಳ್ ಕೂಡೆ ನಿಷ್ಠುರನಾಲಸ್ಯಸಮನ್ವಿತಂ ಮೃದುವಪುಃ ಕಾಮಾಗ್ನಿ ನಾನಾರಿ (ಜಾತತಿ. ೦೮-೭). [ನಾನಾ + ಅರಿ$_6$]

ನಾನಾರೂಪ (ನಾ). ಅನೇಕ ಆಕಾರ, -ಸ್ವರೂಪ : ದೇವರು ನಾನಾರೂಪಗಳನ್ನು ತಾಳುತ್ತಾನೆ (ರೂಢಿ). [ನಾನಾ + ರೂಪ]

ನಾನಾರೂಪು (ನಾ). = ನಾನಾರೂಪ: (ಕಿ) [ನಾನಾ + ರೂಪು]

ನಾನಾರ್ಥ (ನಾ). ೧ ಒಂದು ಪದದಿಂದ ಹೊರಡುವ ಬೇರೆಬೇರೆ ಅರ್ಥ; ಒಂದು ಪದಕ್ಕೆ ಇರುವ ಬೇರೆಬೇರೆ ಅರ್ಥ, -ಭಿನ್ನಭಿನ್ನಾರ್ಥ: "ಒಂದು ಶಬ್ದಕ್ಕೆ ಪಲವರ್ಥಮಂ ಪಲವರ್ಥಕೊಂದು ಶಬ್ದಂ ನುಡಿವ ಬೆಡಗುವಿಂ ನಾನಾರ್ಥಮೆಂದು ಪೇಟ್ವೆಂ" (ಮಂಗರಾ. ೦೩೮-೦) ; ನಾನಾರ್ಥಮೇಕರೂಪಾಧೀನವಚೋಚಿತಮಪ್ಪೊಡಕ್ಕುಂ ಶ್ಲೇಷಂ (ಕವಿರಾ. ೩-೦೦೮). ೨. ಬಗೆಬಗೆಯಾದ ವಸ್ತು, -ದ್ರವ್ಯ : ಪುರಮಂ ಕೆಯ್ಕೊಂಡು ನಾನಾರ್ಥಮಂ ಸೆಱೆಗೊಂಡಾಯ್ಕುಳಿಗೊಂಡನುದ್ಧಯಶಮಂ ವಿಕ್ರಾಂತ ಕಾಳಾನಳಂ (ಪುಷ್ಪಪು. ೫-೫೦). [ನಾನಾ + ಅರ್ಥ]

ನಾನಾಲಿಂಗ (ನಾ). [ಕಾವ್ಯಮೀ] ಒಂದು ಬಗೆಯ ಉಪಮಾದೋಷ ; ಉಪಮೇಯವು ಯಾವ ಲಿಂಗದಲ್ಲಿರುವುದೋ ಆ ಲಿಂಗವನ್ನು ಬಿಟ್ಟು ಉಪಮಾನವು ಬೇರೆ ಲಿಂಗದಲ್ಲಿರುವುದು ; ಉಪಮಾನೋಪಮೇಯಗಳು ಭಿನ್ನಭಿನ್ನ ಲಿಂಗವಾಗಿರುವುದು : ಪುರುಷಂಬೋಲೀಕೆ ಕರಂ ಪುರುಷಾಕೃತಿಯೆಂಬುದಿಂತು ನಾನಾಲಿಂಗಂ (ಕವಿರಾ. ೩-೮೯). [ನಾನಾ + ಲಿಂಗ]

ನಾನಾವಚನ (ನಾ). [ಕಾವ್ಯಮೀ] ಒಂದು ಬಗೆಯ ಉಪಮಾದೋಷ ; ಉಪಮೇಯವು ಒಂದು ವಚನದಲ್ಲಿಯೂ ಉಪಮಾನವು ಬೇರೆ ವಚನದಲ್ಲಿಯೂ ಇರುವುದು ; ಉಪಮಾನೋಪಮೇಯಗಳು ಬೇರೆ

ಬೇರೆ ವಚನದಲ್ಲಿರಂವುದಂ : ನಿರುತಂ ಪ್ರಾಣಂಗಳವೋಲ್ [ನ]ರಪಂ ಪ್ರಿಯನೆಂಬುದಿಂತು ನಾನಾವಚನಂ (ಕವಿಗಾ. ೩-೮೯). [ನಾನಾ + ವಚನ]

ನಾನಾವಿಧ (ನಾ). ಅನೇಕ ಬಗೆ : ಇವಂದಿರ್ನೆರೆದಿವನಿನಂತು ನಾನಾವಿಧದಿಂ ಕೊಂದವರಿದಾವ ಕಾರಣದಿಂದಮೊ (ಸುಳುಮಾ. ೬-೭). [ನಾನಾ + ವಿಧ]

ನಾನಾವಿಧ (ನಾ). ೧. ಅನೇಕ ನಿಯಮಂ ; ಬೇರೆ ಬೇರೆ ಕ್ರಮ : ದೇವರನ್ನು ಪೂಜೆ ಮಾಡಲು ನಾನಾವಿಧಿಗಳಿವೆ (ಡೂಢಿ). ೨. ಬೇರೆ ಬೇರೆ ದುರದೃಷ್ಟವುಳ್ಳವನಂ ; ಬಗೆಬಗೆಯಂ ಕಷ್ಟಗಳನ್ನು ಅನುಭವಿಸುವವನಂ : ಬ್ರಹ್ಮ ಬಲ್ಲಿದನೆಂಬೆನೆ ಶಿರ ಹೋಗಿ ನಾನಾವಿಧಿಯಾದ (ಬಸವ. ೫೫೨). [ನಾನಾ + ವಿಧಿ]

ನಾನು$_1$ 'ನಾನ್$_1$' ನೋ.

ನಾನು$_2$ 'ನಾನ್$_2$' ನೋ.

ನಾನೂರು 'ನಾಲ್ನೂಱು' ನೋ.

ನಾನೂಱು 'ನಾಲ್ನೂಱು' ನೋ.

ನಾನೆತ (ನಾ). ವೈವೇಲೆ ಪಟ್ಟಿಗಳಂಳ್ಳ, ಕಪ್ಪುಬಣ್ಣದ ಒಂದಂ ಬಗೆಯಂ ಹಾವು : ಬೇರೆ ವಿಷಯುಕ್ತಸರ್ಪಗಳು . . . ನಾನೆತ (ಮಣಿಯೂರ), ಸುಂಕಪಾಳ, ಜೋಗಿ, ಸುರ್ಗಂಡ, ಅಜಗರ ಮುಂತಾದವುಗಳು ಪ್ರಸಿದ್ಧ ಉಂಟು (ಕಥಾಗ. ೬೭). [←ಮರಾ. ನಾನೇಟಾ]

ನಾನೋಪಾಯ (ನಾ). ಬಗೆಬಗೆಯಾದ ಉಪಾಯಂ,–ಯಂಕ್ತಿ: ಸ್ವಾರ್ಥಪರಾಯಣನಾದ ವಾಗೀಶನೂ ಕಾರ್ಯೋದ್ಧಾರಕ್ಕಾಗಿ ನಾನೋಪಾಯಗಳನ್ನು ಹುಡುಕುವುದಕ್ಕೆ ಪ್ರಾರಂಭಿಸಿದನು (ಬಿನ್ನ ಬೇ. ೪೦) ; ನಾನೋಪಾಯಗಳಿಂದ, ಕೊನೆಗೆ ಹಿಂಸೆಯಿಂದಾದರೂ ಸರಿಯೆ, ಅಂಥ ಚರ್ಚ್‌ನ ಪ್ರತಿಷ್ಠೆಯನ್ನು ಕಾಪಾಡುವುದೇ ಅವನ ಪ್ರಮುಖಕರ್ತವ್ಯವಾಗಿತ್ತು (ಪುನರು. ೬೯೩). [ನಾನಾ + ಉಪಾಯ]

ನಾನ್ಕಾರ್ (ನಾ). ಹಿಂದೆ ಕಂದಾಯವನ್ನು ವಸೂಲು ಮಾಡುತ್ತಿದ್ದ ಅಧಿಕಾರಿಯಂ ಭೃತ್ಯ :ದೇಶಾಯಿಗೂ ದೇಶಮುಖಿನಿಗೂ ಹಣ ವಸೂಲ್ಮಾಡುವುದಕ್ಕಾಗಿ ನಾನ್‌ಕಾರ್ ಎಂಬ ಭೃತ್ಯವೂ . . . ಸಲ್ಲುತ್ತಿತ್ತು (ಪಾಳಗಾ. ೧೩). [←ಪಾರ. ಹಿಂ. ಮರಾ. ನಾನ್ಕಾರ್]

ನಾನ್ನುಡಿ 'ನಾಟ್ನುಡಿ' ನೋ.

ನಾನ್ಪರ್ವರಿಶ್ (ನಾ). ೧. ಸರ್ಕಾರದವರಂ ಯೋಗ್ಯತೆಯುಳ್ಳ ವಂಕ್ಯಳ ರಕ್ಷಣೆಗಾಗಿ ಕೊಡುವ ಭತ್ಯ : (ಮ್ಯಗೆಚಿ. IV, ೬೯೦). ೨. ಯುದ್ಧದಲ್ಲಿ ಮಡಿದ ಯೋಧನ ಹೆಂಡತಿಗೆ ಜೀವನ ನಿರ್ವಹಣೆಗಾಗಿ ಕೊಡುವ ಹಣ. [←ಪಾರ. ನಾನ್‌ಪರ್ವರಿಶ್ ; ಮರಾ. ನಾನ್‌ಪರ್ವರ್ತೀಶ್, ನಾನ್‌ಪರ್‌ವರ್ತೀ]

ನಾನ್ಸ 'ನಾನ್$_1$' ಪರಾ.

ನಾನ್ಯಥಾ (ಅ). ಬದಲಾವಣೆಯಾಗಂವುದಿಲ್ಲ, ವ್ಯತ್ಯಾಸವಾಗದಂ ಎಂಬ ಅರ್ಥದ ಸಂಸ್ಕೃತ ಪದಸವಂಚ್ಚಯಂ : ನಾನ್ಯಥಾ ಮುನಿಭಾಷಿತಮೆಂಬೀ ವಾಕ್ಯಮದೇಂ ಪುಸಿಯಾಕ್ಕುಮೇ (ಪಂಚಕಂ. ೫೫೬-೦೯). [ಸಂ.]

ನಾಪತ್ತೆ (ನಾ). ಕಾಣೆಯಾಗುವುದು; ಕಳೆದುಹೋಗಿ ಕಂಡುಹಿಡಿಯಲಂ ಆಗದಿರುವುದಂ : ಒಬ್ಬೊಬ್ಬರೂ ನುಡಿದು ಹೋದರಯ್ಯ ಇವರು ಪ್ರಳಯದ ಭವಿಷ್ಯ! ಹೋದರೋ ? ಇವರು ನಾಪತ್ತೆ (ನಂಮು. ೦೪-೩೪) ; ರಾಜಕುಮಾರನನ್ನು ಗುಪ್ತವಾಗಿ ಕೊಲ್ಲಿಸಿ, ಅವನು ಎಲ್ಲಿಯೋ ನಾಪತ್ತೆಯಾಗಿರಂವ ಸುದ್ದಿ ಹುಟ್ಟಿಸಿದನು (ಪ್ರಣಾಇ. II, ೪೯೨). [←ಹಿಂ. ಮರಾ. ನಾಪತಾ]

ನಾಪಾಸು, ನಪಾಸು (ನಾ). ತೇರ್ಗಡೆಯಾಗದಿರುವುದು; ಅನುತ್ತೀರ್ಣತೆ: ಏ ಕೃಷ್ಣಾ . . . ಪರೀಕ್ಷಾ ನಾಪಾಸಾದಿ, ಮನ್ಯಾಗ ಕಾತುರ ರಿಣಗೂಳು ತಿಂತೀದಿ (ಅಸ್ಕಿಕಂ. ೦೪೬). **ನಪಾಸು :** ಮಗನು ಶಾಲೆಯಲ್ಲಿ ನಪಾಸಾದರೆ . . . ಗಂಡನೆಂಬ ಸಾಧುಪ್ರಾಣಿಯಂ ತನ್ನ ಹೆಂಡತಿಯನ್ನಲ್ಲದೆ ಬೇರಾರನ್ನು ಹೊಡೆಯಲು ಸಾಧ್ಯ ? (ಹುಕ್ಕುಹು. ೦೪). [←ಹಿಂ. ಮರಾ. ನಾಪಾಸ್]

ನಾಪಿಕ (ನಾ). ಬೆಳೆ ಹಾಳಾಗುವುದಂ ; ಫಲವಿಲ್ಲದಾಗುವುದಂ. [←ಮರಾ. ನಾಪೀಕ]

ನಾಪಿತ (ನಾ). ಕ್ಷೌರ ಮಾಡುವವನಂ ; ನಾಯಿಂದ ; ಹಜಾಮಂ : "ಕ್ಷುರಿ ಮುಂಡಿ ನಾಪಿತಂ" (ಪಸ್ತು ಕೋ. ೬೬-೯೪) ; "ಕ್ಷುರೀ, ಮುಂಡೀ, ದಿವಾಕೀರ್ತಿಃ, ನಾಪಿತಃ, ಅಂತಾವಸಾಯಿ–ಶಿ ನಾಯಿಂದರವನ ಹೆಸರು" (ಸಿದ್ಧಾಂತಿ. ೩೧೦) ; ಬಿಸುಟು ಕಳೆವುದು ನೀತಿಶಾಸ್ತ್ರವನುಸುರದಾಚಾರಿಯನ . . . ನಾಪಿತನಿಂತಱುವರನು (ಕುವ್ಯಾಲಾ. ೩-೪೬) ; ನಾಪಿತನನ್ನು ಕರೆಸಿ ದೀಕ್ಷಾವಿಸರ್ಜನೆ ಮಾಡಿಕೊಂಡನು (ಕಥವಿ. II, ೩೦೪) ; ನಾಪಿತ ನಾಗಪ್ಪನ ಮನೆಯ ವಿಣಾಕುದೀವಿಗೆಯ ಬೆಳಕು ಕಾಲಿಗೆ ಬಿದ್ದಿತು (ಕನಕ. ೭೩) ; ಪುಣ್ಯಕ್ಷೇತ್ರಗಳಲ್ಲಿ ಪಿತೃಗಳು ಕೂಡ ನಾಪಿತನ ಸಂಸ್ಕಾರವಿಲ್ಲದವರ ಕೈಯಿಂದ ಪಿಂಡ ಮುಟ್ಟುವುದಿಲ್ಲ (ಡೀಕನ್ಸ. ೭೧). [ಸಂ.]

ನಾಪಿತಾನಿ (ನಾ). ಹಜಾಮನ ಪಂಗ ಅಥವಾ ವಂಗಳಂ : ಸುಂದರಿಯು ತನ್ನ ದೋಣಿಯನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ಕಾಲಿಗೆ ಅಲತಿಗೆಬಣ್ಣ ಬಳಿಯುವ ನಾಪಿತಾನಿಯ ವೇಷ ಧರಿಸಿ ಶೈವಲಿನಿಯಿದ್ದ ದೋಣಿಗೆ ಬಂದಳು (ಬಂಕಮ. ೦೯೩). [<ಸಂ. ನಾಪಿತಾಯನಿ, ನಾಪಿತಾಯನೀ]

ನಾಪಿತಿ (ನಾ). ೧. ಹಜಾಮನ ಹೆಂಡತಿ. ೨. ಹಜಾಮಜಾತಿಯಲ್ಲಿ ಹುಟ್ಟಿರುವ ಹೆಂಗಸು : (ಕ). [ಸಂ. ನಾಪಿತೀ]

ನಾಪಿತೆ (ನಾ).=ನಾಪಿತಿ ೨ : ಕುಲಟೆಯರೊಳ್ ಕೋಟಲೆಯರೊಳಸದೃಶ ಕುಲದವರೊಳ್ ನಾಪಿತೆಯರೊಳ್ . . . ಸಲೆ ನುಡಿಯದಳುತ್ತಮಚರಿತೆ (ಆಸವ. ೦೧-೭೦) ; ನರ್ತಕಿಯ ನಾಪಿತೆಯ ಪರ್ಣವಿಕ್ರಯಿಯು ಪ್ರವರ್ತಕಿಯ ದಾಸಿಯ . . . ಇನಿಬರೊಡನಾಡಿದೊಡೆ ಬಾಲೆಯರ್ತವೆ ದುರಾಚಾರಮಂ ಕಲಿವರು (ಶ್ರೀಮಿಭಾ. ೫-೫೮). [ಸಂ. ನಾಪಿತಾ]

ನಾಬತ್ತು 'ನವಾತು' ನೋ.

ನಾಬಾಯ್ (ನಾ). ನಾಲೆಯಂ ಬಾಯಿ (?) : ಬ್ರಾಹ್ಮಣವ್ಯತ್ತಿಯ ಸೂದ್ರ ನಾಳಲು ವರ್ಷಂಪ್ರತಿ ಎಸಕೆ ಮೂರು ಪಣವಿನ ತೆಱಿಕೆಯ ನಾಬಾಯಾಗೆ ೫೨ ಗದ್ಯಾಣ (ಸೌಇಇ. IX-1, ೦೩೨-೩೩ ; 1068). [<ನಾಲೆ$_1$? + ಬಾಯ್]

ನಾಭಸ (ಗು). ಆಕಾಶಕ್ಕೆ ಸಂಬಂಧಪಟ್ಟ; ಆಕಾಶಕ್ಕೆ ಸೇರಿದ: ತೀಡಿತ್ತಿರದೆ ವ್ಯಾಪ್ತವಿಶ್ವಂ ನಾಭಸಂ ಮಾತರಿಶ್ವಂ (ಶಂದ್ರಪು. ೪-೩೦). [ಸಂ.]

ನಾಭಸಯೋಗ (ನಾ). [ಜ್ಯೋತಿ] ಜಾತಕದಿಂದ ತಿಳಿಯಲ್ಪಡುವ ಒಂದಂ ವಿಶಿಷ್ಟರೀತಿಯ ಗ್ರಹಗಳ ಇರುವಿಕೆ.–ಸ್ಥಿತಿ : ಆಕೃತಿಯೋಗಗಳು ೨೦ ಸಂಖ್ಯಾಯೋಗಗಳು ೭ ಆಶ್ರಯಯೋಗಗಳು ೩ ದಲಯೋಗಗಳು ೨; ಒಟ್ಟು ಈ ನಾಲ್ಕುಯೋಗಗಳ ಮೊತ್ತ ೩೨. ಈ ಸಮುದಾಯಕ್ಕೆ ನಾಭಸಯೋಗವೆಂದು ಹೆಸರು . . . ನಾಭಸಯೋಗದ ಫಲಗಳು ಇತರ ಯೋಗಗಳಂತೆ ಯೋಗಪ್ರದಗ್ರಹಗಳ ದಶಾಕಾಲದಲ್ಲಿ ಮಾತ್ರ ಫಲಿಸದೆ ಸಾಮಾನ್ಯವಾಗಿ ಎಲ್ಲ ಕಾಲಗಳಲ್ಲೂ ಫಲಿಸುತ್ತವೆ (ಜಾತಕ. ೦೩-೦ ಟೀಕೆ). P ಯವನರಂ ಹೇಳಿರುವ ಸಾವಿರದ ಎಂಟುನೂರು ನಾಭಸಯೋಗಗಳನ್ನು ವರಾಹಮಿಹಿರರಂ ಮೂವತ್ತೆರಡಂ ಯೋಗಗಳಲ್ಲಿ ಸಂಗ್ರಹಿಸಿದ್ದಾರೆ:–ರಜ್ಜುಯೋಗ–ಚರರಾಶಿಯಲ್ಲಿ ಏಳಂ ಗ್ರಹಗಳಿರಂವುದು. ಇದರಿಂದ ಜಾತಕನು ಪರರಲ್ಲಿ ಆಸಹನೆ, ದಾರಿ ನಡೆಯಂವುದರಲ್ಲಿ ಇಷ್ಟ ವಂತ್ತು, ದೇಶಾಂತರವಾಸದಲ್ಲಿ ಅಪೇಕ್ಷೆಯಂಳ್ಳವನಾಗಂತ್ತಾನೆ. ವಂಸಲಯೋಗ–ಸ್ಥಿರರಾಶಿಯಲ್ಲಿ ಏಳಂ ಗ್ರಹಗಳೂ ಇದ್ದು ಜಾತಕನು ಧನಿಕ ಹಾಗೂ ಮಾನಿಷ್ಮನಾಗುತ್ತಾನೆ. ನಳಯೋಗ–ದ್ವಿಸ್ವಭಾವರಾಶಿಯಲ್ಲಿ ಏಳಂಗ್ರಹಗಳೂ ಇದ್ದು ಜಾತಕನಂ ಶ್ರೀವಂತ, ಸುಖಿ ಹಾಗೂ ಅಂಗಹೀನನಾಗಿರುತ್ತಾನೆ. ಗದಾ

ಯೋಗ–ಆಸನ್ನ. ಕೇಂದ್ರಗಳೆರಡರಲ್ಲಿ ಏಳುಗ್ರಹಗಳೂ ಇದ್ದು ಜಾತಕನು ಧನವಂತ ಮತ್ತು ಯಾಗಶೀಲನಾಗಿರುತ್ತಾನೆ. ಶಕಟ ಯೋಗ–ಇದರಲ್ಲಿ ಲಗ್ನ ಮತ್ತು ಸಪ್ತಮಕೇಂದ್ರದಲ್ಲಿ ಏಳುಗ್ರಹ ಗಳಿದ್ದು ಜಾತಕನು ಸಂಸಾರಿ ಹಾಗೂ ರೋಗಿಷ್ಠನಾಗಿರುತ್ತಾನೆ. ಶೃಂಗಾಟಕಯೋಗ–ಲಗ್ನ, ಪಂಚಮ, ನವಮರಾಶಿಗಳಲ್ಲಿ ಏಳು ಗ್ರಹಗಳಿದ್ದು ಜಾತಕನು ಸುಖಿಯಾಗಿರುತ್ತಾನೆ. ವಿಹಗಯೋಗ–ಏಳುಗ್ರಹಗಳೂ ದಶಮ ಚತುರ್ಥ ಕೇಂದ್ರಗಳಲ್ಲಿದ್ದು ಜಾತಕನು ಸೇವಕ, ಸ್ವೇಚ್ಛಾಚಾರಿ ಹಾಗು ಜಗಳಗಂಟಿಯಾಗಿರುತ್ತಾನೆ. ಹಲ ಯೋಗ–ಲಗ್ನವನ್ನು ಬಿಟ್ಟು ಉಳಿದ ಸ್ಥಾನಗಳಲ್ಲಿ ಏಳುಗ್ರಹಗಳಿದ್ದು ಜಾತಕನು ವ್ಯವಸಾಯವೃತ್ತಿಯವನಾಗಿರುತ್ತಾನೆ. ಚಕ್ರಯೋಗ–೧,೩,೫,೭,೯ ಮತ್ತು ೧೧–ಈ ೬ ಸ್ಥಾನಗಳಲ್ಲಿ ಏಳುಗ್ರಹಗಳಿದ್ದು ಜಾತಕನು ರಾಜಪೂಜ್ಯನಾಗುತ್ತಾನೆ. ಸಮುದ್ರಯೋಗ–೨,೪,೬,೮, ೧೦ ಮತ್ತು ೧೨ ನೆಯ ಸ್ಥಾನಗಳಲ್ಲಿ ಏಳುಗ್ರಹಗಳಿದ್ದು ಜಾತಕನು ರಾಜಸಮಾನನೂ ಭೋಗಿಯೂ ಆಗಿರುತ್ತಾನೆ. ಗೋಳ–ಏಳು ಗ್ರಹಗಳೂ ಒಂದೇ ರಾಶಿಯಲ್ಲಿರುವುದರಿಂದ ಜಾತಕನು ಬಡವ ಹಾಗೂ ಮೂರ್ಖನಾಗಿರುತ್ತಾನೆ. ಯುಗ–ಏಳುಗ್ರಹಗಳೂ ಎರಡು ರಾಶಿಗಳಲ್ಲಿರುವುದರಿಂದ ಜಾತಕನು ಅವಿದ್ಯಾವಂತ ಮತ್ತು ಬಡವನಾಗಿರುತ್ತಾನೆ. ಶೂಲ–ಏಳುಗ್ರಹಗಳೂ ಮೂರು ರಾಶಿ ಗಳಲ್ಲಿದ್ದು ಜಾತಕನು ದರಿದ್ರ, ಗುಣವಂತ ಮತ್ತು ಶೂರನಾಗಿರು ತ್ತಾನೆ. ಕೇದಾರ–ಏಳು ಗ್ರಹಗಳು ನಾಲ್ಕು ರಾಶಿಗಳಲ್ಲಿದ್ದು ಜಾತಕನು ಜನೋಪಕಾರಿಯಾಗಿರುತ್ತಾನೆ. ಪಾಶ–ಏಳುಗ್ರಹಗಳೂ ಐದು ರಾಶಿಗಳಲ್ಲಿದ್ದು ಜಾತಕನು ಬೇಸಾಯಗಾರನಾಗಿರುತ್ತಾನೆ. ದಾಮ–ಏಳುಗ್ರಹಗಳೂ ಆರು ರಾಶಿಗಳಲ್ಲಿದ್ದು ಜಾತಕನು ಧನಿಕನೂ ಸ್ನೇಹಪರನೂ ಆಗಿರುತ್ತಾನೆ. ವಲ್ಲಕಿ–ಏಳುಗ್ರಹಗಳೂ ಏಳುರಾಶಿ ಗಳಲ್ಲಿದ್ದು ಜಾತಕನು ಸಂಗೀತಗಾರನೂ ನರ್ತಕನೂ ಆಗಿರುತ್ತಾನೆ. ವಜ್ರ–ಲಗ್ನ ಮತ್ತು ಸಪ್ತಮಸ್ಥಾನಗಳಲ್ಲಿ ಶುಭಗ್ರಹಗಳೂ ಚತುರ್ಥ ಮತ್ತು ದಶಮಸ್ಥಾನಗಳಲ್ಲಿ ಪಾಪಗ್ರಹಗಳೂ ಇದ್ದು ಜಾತಕನು ತನ್ನ ಶೈಶವ ಮತ್ತು ಪಂಡಿತನದಲ್ಲಿ ಸುಖಿಯಾಗಿರು ತ್ತಾನೆ. ಯಮವ–ಲಗ್ನ ಮತ್ತು ಸಪ್ತಮಸ್ಥಾನಗಳಲ್ಲಿ ಪಾಪಗ್ರಹ ಗಳೂ ಚತುರ್ಥ ಮತ್ತು ದಶಮಸ್ಥಾನಗಳಲ್ಲಿ ಶುಭಗ್ರಹಗಳೂ ಇದ್ದು ಜಾತಕನು ಯೌವನದಲ್ಲಿ ಮಾತ್ರ ಸುಖಿಯಾಗಿರುತ್ತಾನೆ. ಕಮಲ–ಏಳುಗ್ರಹಗಳೂ ನಾಲ್ಕು ಕೇಂದ್ರಗಳಲ್ಲಿದ್ದು ಜಾತಕನು ಧನಿಕನಾಗಿರುತ್ತಾನೆ. ವಾಪೀ–ನಾಲ್ಕು ಕೇಂದ್ರಗಳಲ್ಲಿ ಯಾವ ಗ್ರಹವೂ ಇಲ್ಲದೆ ನಾಲ್ಕು ಫಣಪರಗಳಲ್ಲಿ ಅಥವಾ ನಾಲ್ಕು ಆಪೋಕ್ಲಿಮ ರಾಶಿಗಳಲ್ಲಿ ಎಲ್ಲ ಗ್ರಹಗಳೂ ಇದ್ದು ಜಾತಕನು ಅಲ್ಪಸುಖಿ ಮತ್ತು ಲೋಭಿಯಾಗಿರುತ್ತಾನೆ. ಯೂಪ–ಎಲ್ಲ ಗ್ರಹ ಗಳೂ ಲಗ್ನದಿಂದ ನಾಲ್ಕುಸ್ಥಾನಗಳೊಳಗೆ ಇದ್ದು ಜಾತಕನು ದಾನಿಯೂ ಉದಾರಿಯೂ ಆಗಿರುತ್ತಾನೆ. ಇಷು–ಎಲ್ಲ ಗ್ರಹಗಳೂ ೪,೫,೬,೭ ನೆಯ ಸ್ಥಾನಗಳಲ್ಲಿದ್ದು ಜಾತಕನು ಕೊಲೆಗಾರನಾಗಿರು ತ್ತಾನೆ. ಶಕ್ತಿ–ಎಲ್ಲ ಗ್ರಹಗಳೂ ೭,೮,೯, ಮತ್ತು ೧೦ ನೆಯ ಸ್ಥಾನ ಗಳಲ್ಲಿದ್ದು ಜಾತಕನು ಧನಹೀನನಾಗಿರುತ್ತಾನೆ. ದಂಡ–ಎಲ್ಲ ಗ್ರಹ ಗಳೂ ೧೦, ೧೧, ೧೨ ಮತ್ತು ೧೩ ನೆಯ ಸ್ಥಾನಗಳಲ್ಲಿದ್ದು ಜಾತಕನು ಬಂಧುಮಿತ್ರರಿಂದ ಬಿಡಲ್ಪಟ್ಟವನಾಗಿರುತ್ತಾನೆ. ನೌ–ಲಗ್ನದಿಂದ ಮೊದಲುಮಾಡಿ ಏಳುರಾಶಿಗಳಲ್ಲೂ ಗ್ರಹಗಳಿದ್ದು ಜಾತಕನು ಕೀರ್ತಿವಂತನಾಗುತ್ತಾನೆ. ಕೂಟ–ನಾಲ್ಕರಿಂದ ಹತ್ತರ ವರೆಗೂ ಎಂದರೆ ಏಳು ರಾಶಿಗಳಲ್ಲೂ ಗ್ರಹಗಳಿದ್ದು ಜಾತಕನು ಅನೃತವಾದಿಯಾಗಿರುತ್ತಾನೆ. ಛತ್ರ – ಏಳನೆಯ ರಾಶಿಯಿಂದ ಲಗ್ನದವರೆಗಿರುವ ಏಳುರಾಶಿಗಳಲ್ಲೂ ಗ್ರಹಗಳಿದ್ದು ಜಾತಕನು ಸ್ವಜನಪ್ರಿಯನಾಗಿರುತ್ತಾನೆ. ಚಾಪ–ಹತ್ತನೆಯ ರಾಶಿಯಿಂದ ನಾಲ್ಕನೆಯ ರಾಶಿಯವರೆಗಿರುವ ಏಳುರಾಶಿಗಳಲ್ಲೂ ಗ್ರಹಗಳಿದ್ದು ಜಾತಕನು ಪರಾಕ್ರಮಶಾಲಿಯಾಗಿರುತ್ತಾನೆ. ಸರ್ಪ–ಮೂರು ಪಾಪ ಗ್ರಹಗಳು ಮೂರು ಕೇಂದ್ರಸ್ಥಾನಗಳಲ್ಲಿದ್ದು ಜಾತಕನು ಅಸುಖಿ ಯಾಗಿರುತ್ತಾನೆ. ಮಾಲಾ–ಮೂರು ಶುಭಗ್ರಹಗಳು ಮೂರು ಕೇಂದ್ರಸ್ಥಾನಗಳಲ್ಲಿದ್ದು ಜಾತಕನು ಸುಖಿಯಾಗಿರುತ್ತಾನೆ. ಅರ್ಧ ಚಂದ್ರ–ಲಗ್ನಕ್ಕೆ ಎರಡನೆಯ ಸ್ಥಾನದಿಂದ ಏಳುಸ್ಥಾನಗಳಲ್ಲಾಗಲಿ ಮೂರರಿಂದ ಹಿಡಿದು ಏಳು ಸ್ಥಾನಗಳಲ್ಲಾಗಲಿ ಏಳುಗ್ರಹಗಳಿದ್ದು ಜಾತಕನು ಸರ್ವಪ್ರಿಯ, ಸುಂದರ ಹಾಗೂ ವೃಧಾನನಾ ಗಿರುತ್ತಾನೆ. [ನಾಭಸ + ಯೋಗ]

ನಾಭಿ (ನಾ). ೧. ಹೊಟ್ಟೆಯ ಮಧ್ಯಭಾಗದಲ್ಲಿರುವ ಸಣ್ಣ ಕುಳಿ, – ಹಳ್ಳ; ಹೊಕ್ಕುಳು: "ನಾಭಿ ಪೊರ್ಕುಬಿಂದಱಿವುದು" (ವಸ್ತು ಕೋ. ೬೪–೬); "ಪೊಕ್ಕುಟು ನಾಭಿಯಕ್ಕು" (ಮಂಗರಾ. ೯೭–೧೩); ಆಗಳಾ ಮದಗಜಾಂಕುಶದಿಂದೆ ಪೆರ್ಚಿಸಿ ನಾಭಿಯಂ (ಪಂಪಭಾ. ೦–೪೩); ಪ್ರಾಣದಲ್ಲಿ ವಾಯು ನಾಭಿಯಲ್ಲಿ ಅಂತರಿಕ್ಷವು (ಲಸವ. ೫೩೬); ನಯನಾಂಬುರುಹದಲಿ ರವಿ ನಾಭಿಯಲಭವ ವರಭುಜಾಗ್ರದೊಳವಿಳ ದಿಗುಪಾಲಕರು ರಂಜಿಸಿತು (ಕುಪ್ಪಾಳಾ. ೯–೫೮); ಪೂರ್ಣಚಂದ್ರವದನೆಯ ನಾಭಿಸರಸಿದೊಂದಮಲತ್ವ ಕೆಯಲ್ಲಿವೆಂದೆಸೆದಳಾ ಚೆಲ್ವ ಪೆಣ್ಣು (ಧಾವಚಿಂ. ೩–೪೩); ಕಲಕೀರವಾಣ ... ಪೊಸಜವ್ವನದ ಸುಳನಾಭಿಯಿಂದೆಸೆವ ಬಡಬಾಸೆ (ಪ್ರಾಥಕಾ. ೩–೩೬). ೨. ಮಧ್ಯಭಾಗ; ಕೇಂದ್ರ: ಜಳನಿಧಿಯನೆ ಪೋಲ್ವ ಶರಣಾಗತಜಳ ನಿಧಿಯ ನಿಮ್ಮನಾಭ ಚಿಲ್ವಿಂಗೆ ತಾನೆ ನಾಭಿಯಾದಂದು (ಪಂಪಭಾ. ೨–೪೯ ವ); ಖಚರಲೋಕಕ್ಕೆ ನಾಭಿಯವಾಗಿರ್ದುದು ಚಕ್ರವರ್ತಿಯ ರಾಜಧಾನಿ ಶಿವ ಮಂದಿರಪುರಂ (ಶಾಂತಿಪು. ೩–೨ ವ); ಒರ್ವ ತೇಜಸ್ವಿ ಋಷಿ ಧ್ಯಾನಸ್ಥ ನಾಗಿರ್ದನಾ ಗಿರಿತರಂಗಿಣಿಯ ನಾಭಿಯಿಂದುದ್ಭವಿಸಿದಂತಿರ್ದರೆಯ ಶಿರದಿ (ಶ್ರೀರಾಮಾ. ೦೩೩–೩೦೫). ೩. ಚಕ್ರದ ಮಧ್ಯಭಾಗ; ಗುಂಬ; ತುಂಬಿ: "ನಾಭಿಃ, ಪಿಂಡಿಕಾ – ಈ ೨ ತುಂಬು" (ಹಲಾಯು. ೭೩–೫೯೩); ಅನಂತ್ಯವೀ ಜಗಚ್ಚಕ್ರನಾಭಿಕ್ರಮತೆ ತಾನೊಂದೆ ಸತ್ಯವದು (ಪುಂಜುಳ. ೧೩೭). ೪. ಮಧ್ಯಬಿಂದು: "ಒಂದು ನಿರ್ದಿಷ್ಟ ವಕ್ರರೇಖೆಯಲ್ಲಿ ನೆಲಸಿರುವ ಬಿಂದುಗಳಿಗೆ ಯಾವ ಬಿಂದುವಿನಿಂದ ಇರುವ ದೂರಗಳು ಒಂದು ಗೊತ್ತಾದ ರೇಖಾಂಶಸಂಬಂಧವುಳ್ಳವಾಗಿರುವುವೋ ಆ ಬಿಂದು; ನಾಭಿ" (Focus. ಇಂಳಸಿ); ಸೂರ್ಯನು ಈ ಪಥದ ಒಂದು ನಾಭಿಯಲ್ಲಿ (Focus) ಇರುತ್ತಾನೆ (ಶಿಲ್ಪಸಾ. ೧೦೦). ೫. ಒಂದು ಬಗೆಯ ವಿಷವೃಕ್ಷ: "ವತ್ಸನಾಭಃ–ನಾಭಿ, ಜಾತಿಹಗಿನು" (ಓಷಧಿ. ೧೪೮); ನಾಭಿಯನ್ನು ಕೆಜುಕುಸಾಲೆಯ ರಸದಲ್ಲಿ ಮರ್ದಿಸಿ ... ನಸ್ಯವಂ ಮಾಡಲು ಸರ್ವಾಂಗಜ್ವರ ಹರ (ವಿವೃವಿ. ೦೯೩); ಆಂಕೋಲೆರಸದಲ್ಲಿ ಚಂಗಲ್ವಕೋಷ್ಟ, ನಾಭಿ ಸಹ ತೇದು ಮೈಗೆ ಲೇಪಿಸೆ ಸಕಲ ಸನ್ನಿಪಾತ ಹರ (ಹಳವೈ. ೦೬೦). ೬. ಬಹಳ ಸಮೀಪದ ಸಂಬಂಧ: ಹತ್ತಿರದ ದಾಯಾದಿತನ; ಏಳು ತಲೆಯ ಒಳಗೇ ಇರುವ ದಾಯಾದತ್ವ. ೭. ಸಾರ್ವಭೌಮ. ೮. ಕ್ಷತ್ರಿಯ. ೯. ಕಸ್ತೂರಿ; ಮೃಗನಾಭಿ. ೧೦. [ಜೈನ] ಆದಿತೀರ್ಥಂಕರನ ತಂದೆ: "ನಾಭಿ–ಪೊರ್ದಳುಂ, ವತ್ಸನಾಭಿಯುಂ, ಮೊದಲನೆಯ ಅರ್ಹಂತನ ತಂದೆಯುಂ" (ಕಾಶಕ್ಕ. ೦೩೭); ಸುಕದ ಕಣಯೆವಿಸಿ ಮೂವುಬ್ಬಕೋಟಿ ಪರಮಾಯು ನಾಭಿನಾಮಮುಮಾಯ್ತು (ಅಪಪು. ೬–೬೭). ೧೧. [ನಾಟ್ಯ] ಹಸ್ತಕ್ಷೇತ್ರ ಗಳಲ್ಲಿ ಒಂದು: ಪಾರ್ಶ್ವದ್ವಯ . . . ನಾಭಿ,ಕಟಿಶಿರ, ಊರುದ್ವಂದ್ವ – ಈ ಹದಿಮೂಱು ಹಸ್ತಕ್ಷೇತ್ರಂಗಳ್ (ಅಸ್ಮಾರಂ. ೪–೦೫ ವ). [ಸಂ.]

ಕರ್ನಾಟಕ ಸರ್ಕಾರದ ಉದಾರ ಧನಸಹಾಯದಿಂದ ಕನ್ನಡಿಗರ ಬಹುದಿನಗಳ ಬೇಡಿಕೆಯಾಗಿದ್ದ ಕನ್ನಡ ನಿಘಂಟಿನ ಎಂಟು ಸಂಪುಟಗಳು ಈಗ ಪುನರ್ಮುದ್ರಣಗೊಂಡು ನಿಮ್ಮ ಕೈಸೇರುತ್ತಿವೆ.

ಸಮಸ್ತ ಕನ್ನಡಿಗರಿಗೆ ಈ ಸಂಪುಟಗಳನ್ನು ಒಪ್ಪಿಸಲು ನೆರವು ನೀಡಿದ ಕರ್ನಾಟಕ ಸರ್ಕಾರವನ್ನು ನಾನು ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ.

ಡಾ. ನಲ್ಲೂರು ಪ್ರಸಾದ್ ಆರ್. ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು